ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three colours) ಬ್ಲಾಕುಗಳೂ ಮುದ್ರಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹುಮನೋಹರವಾಗಿ ಮುದ್ರಿಸಿಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್‌ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೬|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟೆ ದುಷ್ಪ್ರಶ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಒಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚಪಂಚಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೩ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್, **ಪಂಚಾಚಾರ್ಯಪ್ರಭಾ ಆಫೀಸ್,**

ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಪಮಠಿಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ, ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೬-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

ಪೋ. ಬಾ. ೫೧೦, ಮದರಾಸು.

[38]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಮಾರ್ಚಿ ೧೯೨೯ [ಸಂಚಿಕೆ ೪೮.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಬೇರೆ ಬೇರೆಯಾಗಿ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಶ್ರೀ ಜಗದ್ಗುರವಃ ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಶಿವಲಿಂಗಪ್ರತಿಷ್ಠಾಹ್ವಾನಪತ್ರಿಕಾ.

ಶಿವಮೊಗ್ಗ ಡಿ|| ತೀರ್ಥಹಳ್ಳಿ ತಾ|| ಮಳಲಿ ಮಠದ ಶ್ರೀಗುರು ನಾಗಾರ್ಜುನ ಸ್ವಾಮಿಗಳವರ ಸನ್ನಿಧಿಯಿಂದ ಸಮಸ್ತ ಶಿಷ್ಯ ಹಾಗೂ ಭಕ್ತಮಂಡಳಿಗೆ ಅಪ್ಪಣೆಕೊಡಿಸುವುದೇನಂದರೆ. ಶಕ ೧೮೫೧ನೇ ಶ್ರೀವಿಭವನಾಮ ಸಂ|| ರದ ಫಾಲ್ಗುಣ ಬಹುಳ ೫ (ತಾ|| 30-3-29) ಸ್ಥಿರವಾರ ಸೂರ್ಯೋದಯಾದಿ ೧೫ ಗಳಿಗೆಗೆ ಸಲ್ಲುವ ಕರ್ಕಾಟಕಲಗ್ನದಲ್ಲಿ ಶಿವಮೊಗ್ಗ ತಾ|| ಹಿರಿಯೂರಲ್ಲಿರುವ ನಮ್ಮ ಹಿಂದಿನ "ಶಿವೈಕ್ಯರಾದ" ಶ್ರೀ ನಾಗಾರ್ಜುನಸ್ವಾಮಿಗಳವರ ಗದ್ದುಗೆಯ ಮೇಲೆ ಶಿವಲಿಂಗಪ್ರತಿಷ್ಠೆಯೂ, ಮತ್ತು ವೀರಮಾಹೇಶ್ವರ ವಟುಗಳಿಗೆ ದೀಕ್ಷಾ ಸಂಸ್ಕಾರವೂ ನಡೆಯುವುದಾಗಿ ನಿರ್ಧರಿಸಿರುವದರಿಂದ ಸರ್ವರೂ ಈ ಕಾರ್ಯಕ್ಕೆ ಎರಡು ದಿವಸ ಮುಂಚಿತವಾಗಿ ಆಗಮಿಸಿ ಮಹಾಕಾರ್ಯವನ್ನು ಸಾಂಗಗೊಳಿಸಿ ಗುರುಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಮದ್ರಾಸ್ ಅಧಿಪತ್ಯದ ಜೈಲುಗಳಲ್ಲಿರುವ ಖೈದಿಗಳಿಗೆ ಇನ್ನು ಮುಂದೆ ಖಾದಿ ಬಟ್ಟೆಗಳನ್ನು ಉಪಯೋಗಿಸಬೇಕೆಂದು ಮದ್ರಾಸ್ ನ್ಯಾಯವಿಧಾಯಕಸಭೆಯಲ್ಲಿ ಮಿ|| ಎಸ್. ಸತ್ಯಮೂರ್ತಿಯವರು ತಂದಿದ್ದ ನಿರ್ಣಯವು ಸರ್ವಾನುಮತದಿಂದ ಪಾಸಾಯಿತು.

ಸ್ವೀಕಾರ.

ಧಾರವಾಡ ಡಿ|| ಕರ್ಜಗಿ ತಾ|| ಹಂದಿಗನೂರು ಸಂಸ್ಥಾನದ ಶ್ರೀಮಂತ ಸಣ್ಣಮುರಿಗಪ್ಪ ಬಸವಂತರಾವ್ ದೇಸಾಯಿ ವ ನಾಡಕರ್ಣಿ ಮಾಮಲೆ ಬಂಕಾಪುರ ಇವರು ತಮ್ಮ ಪುತ್ರಿ ಸೌ|| ಪಾರ್ವತೀದೇವಿಯನ್ನು ಶ್ರೀಮಂತ ಚನ್ನಗೌಡ ಬಹದ್ದೂರ್ ದೇಸಾಯಿ ಲಕ್ಷ್ಮೇಶ್ವರ ಇವರ ಪುತ್ರ ಚಿ|| ರಾ|| ಶಂಕರಗೌಡರಿಗೆ ಕೊಟ್ಟು ತಮ್ಮ ಅರಮನೆಯಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ತಮ್ಮ ವಂಶ ಗುರುಗಳಾದ ಶ್ರೀ|| ಷ|| ಬ್ರ|| ಮಳಲಿಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯಪ್ರಕಾರ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಿದ 10 ರೂ. ವಧುವಿನಕಡೆಯಿಂದ ತೆಗೆಯಿಸಿದ 8 ರೂ. ಒಟ್ಟು 18 ರೂ. ಗಳು ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿ ಮಾಮಲೆ ಬಂಕಾಪುರ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ರಾಯದುರ್ಗ ತಾ|| ಬಂಜಿರಮ್ಮನಹಳ್ಳಿಯಲ್ಲಿರುವ ಸಿರ್ಸಿ ಹಿರೇಮಠಕ್ಕೆ ಚರಪಟ್ಟಾಧಿಕಾರವಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂಪಾಯಿಗಳು ಶ್ರೀಶೈಲ ಸಂಸ್ಥಾನದ ಏಜಂಟರಾದ ವೇ|| ಹಾವಳಗಿ ಹಿರೇಮಠದ ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಗುಲ್ಬರ್ಗಾ ಡಿ|| ಚಿಂಚೋಳಿ ತಾ|| ಗಾರಂಪಳ್ಳಿ ಶ್ರೀಮತಿ ಶರಣಮ್ಮಾಬಾಯಿ ಸಾಹೇಬ್ ದೇಶಮುಖಿಣಿಯವರು ತಮ್ಮ ಮೊಮ್ಮಕ್ಕಳಾದ ಶ್ರೀಮಂತ ವೀರಭದ್ರರಾವ್ ಇವರಿಗೆ ತುಮಕೂರಿಟಿ ನಾಗನಗೌಡರ ಪುತ್ರಿ ಸೌ|| ಲಕ್ಷ್ಮೀಬಾಯಿಯನ್ನು ತಂದು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಜಂಬಗಿ ಸಂಸ್ಥಾನದ ಶ್ರೀಮಂತ ಶಂಕರರಾವ್ ದೇಶಮುಖ ಇವರ ದ್ವಾರಾ ತಲ್ಪಿರುತ್ತವೆ.

ಹಾಸನದ ಡಿ|| ಅರಸೀಕೆರೆ ತಾ|| ಹುಲ್ಲೇಕೆರೆ ಸಾಹುಕಾರ್ ವೀರಶೈವ ಧರ್ಮ ಧುರಂಧರ ಮ|| ರಾ|| ಮುರುಳಿ ಸಿದ್ಧಪ್ಪಶೆಟ್ಟರು ಶ್ರೀಶೈಲಕ್ಷೇತ್ರ ಯಾತ್ರೆಯನ್ನು ಕ್ಷೇತ್ರ ವಿಧಿಪೂರ್ವಕವಾಗಿ ನೆರವೇರಿಸಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಧಾರವಾಡ ಡಿ|| ಹುಬ್ಬಳ್ಳಿ ಟವನ್ನಿನಲ್ಲಿರುವ ಹದ್ಲಿಮಠದ ವೇ|| ಗುರುಪಾದಯ್ಯನವರ ಪುತ್ರ ಚಿ|| ಗುರುಸಿದ್ಧಯ್ಯನಿಗೆ ಚಿಕ್ಕವೀರಿಮಠದ ವೇ|| ಬಸವಲಿಂಗಯ್ಯನವರ ಪುತ್ರಿ ಸೌ|| ರಾಚವ್ವನನ್ನು ತಂದು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯಿಂದ ಸಮರ್ಪಿಸಿದ 2 ರೂ. ಸದರಿ ಟವನ್ನಿನಲ್ಲಿರುವ ಮ|| ರಾ|| ಚನ್ನಪ್ಪ ಬೆಳ್ಳೇರಿ ಇವರ ಪುತ್ರ ಚಿ|| ಗುರಪ್ಪನಿಗೆ ಮ|| ರಾ|| ಗುರಪ್ಪ ಕರದಾಳ ಇವರ ಪುತ್ರಿ ಸೌ|| ಸಾವಿತ್ರವ್ವನನ್ನು ಕೊಟ್ಟು ಹಳೆಹುಬ್ಬಳ್ಳಿ ಹಿರೇಮಠದಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಸದರಿ ಮಠದ ಶ್ರೀಗಳವರ ಅಪ್ಪಣೆಯಮೇರೆಗೆ ತೆಗೆಯಿಸಿದ 1 ರೂ. ಒಟ್ಟು 3 ರೂಪಾಯಿಗಳು ಶ್ರೀ|| ಷ|| ಬ್ರ|| ಹನ್ನೆರಡು ಮಠದ ಶ್ರೀ ಚರಮೂರ್ತಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ನಿಲವಂಜಿ ಗ್ರಾಮದಲ್ಲಿ ಮಹಾಶಿವರಾತ್ರಿಯ ದಿವಸ ನಡೆದ ಶ್ರೀಮದುಜ್ಜಯಿನೀ ಜಗದ್ಗುರುಗಳವರ ಮಹೋತ್ಸವದಲ್ಲಿ ತೆಗೆಯಿಸಿದ 2 ರೂಪಾಯಿಗಳು ಮ|| ರಾ|| ಬಣಕಾರ ಶಂಭುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾನಗಲ್ಲ ತಾ|| ಅಕ್ಕಿಆಲೂರು ಗ್ರಾಮದ ವೇ|| ಮಠದ ರಾಚಯ್ಯನವರ ಪುತ್ರ ಚಿ|| ಮಳಿಯಯ್ಯನವರಿಗೆ ಶಿರಗೋಡುಗ್ರಾಮದ ಕಂಬಳಿಮಠದ ವೇ|| ಸಿದ್ಧಬಸವಯ್ಯನವರ ಪುತ್ರಿ ಸೌ|| ಶಿವಲಿಂಗವ್ವನನ್ನು ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ತೆಗೆಯಿಸಿದ 1 ರೂಪಾಯಿಯು ವೇ|| ಬೂದಿಮಠದ ದಾನಯ್ಯನವರ ದ್ವಾರಾ ತಲ್ಪಿರುತ್ತದೆ.

ಸೊಲ್ಲಾಪುರ ಡಿ|| ಹೊಟಗಿ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿ ಸಮಯದಲ್ಲಿ ಮ|| ರಾ|| ತುಕಪ್ಪಗೌಡರು ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಪಾಟೀಲ ರೇವಣಸಿದ್ಧಪ್ಪನವರ ದ್ವಾರಾ ತಲ್ಪಿರುತ್ತದೆ.

ಸೊರಬ ತಾ|| ಕಡಗಣಕೊಪ್ಪದ ವೇ|| ಚನ್ನಬಸವಯ್ಯನವರ ಪುತ್ರಿ ಸೌ|| ಪಾರ್ವತಮ್ಮನನ್ನು ಮುಳವಳ್ಳಿ ಮಠದ ವೇ|| ವೀರಭದ್ರಯ್ಯನವರ ತಮ್ಮ ಚಿ|| ಷಡಕ್ಷರಯ್ಯನವರಿಗೆ ಕೊಟ್ಟು ನಿಶ್ಚಯಿಸಿದ ಕಾರ್ಯದಲ್ಲಿ ಸಮರ್ಪಿಸಿದ 1 ರೂಪಾಯಿಯು ವೇ|| ಹಿರೇಮಠದ ಹಾಲಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ.

ಸೊರಬ ತಾ|| ಚಿಕ್ಕಾವಲಿಗ್ರಾಮದ ಮ|| ರಾ|| ವಡಗಟ್ಟೆ ಚನ್ನಬಸಪ್ಪಗೌಡನ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಉಳವಿಮಠದ ಚನ್ನಬಸವಯ್ಯನವರ ದ್ವಾರಾ ತಲ್ಪಿರುತ್ತದೆ.

ಮೈಸೂರು ದೊಡ್ಡಪೇಟೆ ನೇಟೀವ್ ಡಾಕ್ಟರ್ ಮ|| ರಾ|| ಸಿದ್ಧಲಿಂಗಪ್ಪನವರ ತಮ್ಮ ಚಿ|| ಗುರುಸಿದ್ಧಪ್ಪನಿಗೆ ಚನ್ನಪಟ್ಟಣದ ತಾ|| ಎಲೆಕೋಟದಹಳ್ಳಿ ಮ|| ಮಲ್ಲಣ್ಣನವರ ಪುತ್ರಿ ಸೌ|| ರುದ್ರಮ್ಮನನ್ನು ತಂದು ಗುತ್ತಲುಮಠದಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಗುತ್ತಲುಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ—

ಶ್ರೀ ಜಗದ್ಗುರು ಪಂಡಿತಾರಾಧ್ಯರ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿ ಮಹೋತ್ಸವವು.

ಜಗಮಾಗಮಾದಿ ಪ್ರಸಿದ್ಧರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಶಕ್ತಿವಿಶಿಷ್ಟಾದ್ವೈತಮತವನ್ನು ಸ್ಥಾಪಿಸಿರುವದು ಪ್ರಸಿದ್ಧವಷ್ಟೆ? ಅಂಥ ಗುರು ಸಾರ್ವಭೌಮರ ಜಯಂತ್ಯುತ್ಸವಗಳನ್ನು ಮಾಡುವದು ಸರ್ವ ವೀರಶೈವ ಬ್ರಾಹ್ಮಣರ ಪ್ರಥಮ ಕರ್ತವ್ಯವಾಗಿರುವದು. ಈ ನಿಯಮಕ್ಕನುಸರಿಸಿ ನೈಜಾಮ ಸ್ಟೇಟ್ ಗುಲಬುರ್ಗಾ ಜಿ|| ಗೆ ಸೇರಿದ ಸೂಗೂರು ಬೃಹನ್ಮಠದಲ್ಲಿ ಸದರಿ ಮಠಾಧಿಕಾರಿಗಳ ಅಪ್ಪಣೆಯಮೇರೆಗೆ ಮಹಾಶಿವರಾತ್ರಿಯ ದಿವಸ ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯ ಈ ಉಭಯ ಜಗದ್ಗುರುಗಳ ಭಾವಚಿತ್ರಗಳನ್ನು ಸಿಂಹಾಸನದಲ್ಲಿ ಸ್ಥಾಪಿಸಿ ಷೋಡಶೋಪಚಾರಗಳಿಂದ ಪೂಜಿಸಿದನಂತರ ಸಮಸ್ತ ಗುರುಭಕ್ತರು ಲಿಂಗಾರ್ಚನ ಪಾದೋದಕ ಪ್ರಸಾದಾದಿಗಳನ್ನು ಸ್ವೀಕರಿಸಿದರು. ಆ ಮೇಲೆ ಪ್ರಾತಃಕಾಲದವರೆಗೆ ಆಚಾರ್ಯರ ಭಜನೆಯು ನೆರವೇರಿಸಲ್ಪಟ್ಟಿತು. ಆ ಮೇಲೆ ಸಿಂಗರಿಸಿದ ಪಲ್ಲಕ್ಕಿಯಲ್ಲಿ ಚಿತ್ರಪಟವನ್ನು ಸ್ಥಾಪಿಸಿ ಪಂಚಾಚಾರ್ಯರ ಭಜನೆಯಿಂದಲೂ ನಂದಿಧ್ವಜ ಮೊದಲಾದ ಬಿರುದಾವಳಿಗಳಿಂದಲೂ ನಾನಾ ತರಹದ ಮಂಗಲವಾದ್ಯಗಳಿಂದಲೂ ಉತ್ಸವವು ಹೊರಟಿತು. ಆಚಾರ್ಯರ ಭಾವಚಿತ್ರಗಳಿಗೆ ವೀರಶೈವರ ಪ್ರತಿಯೊಂದು ಮನೆಯವರೂ ಮಾಡಿದ ಪೂಜೆಯನ್ನು ನೋಡಿದ್ದಾದರೆ ಸಾಕ್ಷಾತ್ ಪೂರ್ವಾಚಾರ್ಯರೇ ದಯಮಾಡಿಸಿ ನಮ್ಮ ಸೇವೆಯನ್ನು ಸ್ವೀಕರಿಸುತ್ತಾರೆಯೋ ಎಂಬುವಂತೆ ಭಾಸವಾಗುತ್ತಿತ್ತು. ಉತ್ಸವವು ಪೂರೈಸಿದಮೇಲೆ ಸಭೆಯು ಪ್ರಾರಂಭವಾಯಿತು. ಸಭೆಗೆ ಜವಳಗಿ, ಸುಂಕಾಪ್ರ, ಕಡಸೂರು ಮೊದಲಾದ ಗ್ರಾಮಗಳ ಸಮಾಜಬಂಧುಗಳು ಆಗಮಿಸಿದ್ದಲ್ಲದೆ ಇಲ್ಲಿಯ ನೂರಾರು ಜನ ಬಂಧು ಭಗಿನಿಯರು ಆಗಮಿಸಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಸದರಿ ಮಠದ ಚನ್ನವೃಷಭಸ್ವಾಮಿಗಳು ಸ್ವೀಕರಿಸುವ ಬಗ್ಗೆ ಮಲ್ಲೇಶಪ್ಪಾ ರೆವೂಣೆ ಇವರು ಸೂಚಿಸಿದರು. ಶರಣಪ್ಪಾ ರುಸ್ತಾನಪೂರ ಇವರು ಅನುಮೋದವನ್ನಿತ್ತರು. ಸರ್ವ ಸಭಿಕರ ಕರತಾಡನೆಗಳ ಶಬ್ದದಲ್ಲಿ ಚನ್ನವೃಷಭಸ್ವಾಮಿಗಳು ಅಧ್ಯಕ್ಷಸ್ಥಾನವನ್ನು ವಹಿಸಿದರು. ಸಭೆಯಲ್ಲಿ ಶ್ರೀ|| ಷ|| ಬ್ರ|| ಶ್ರೀಶೈಲ ಶಿವಾಚಾರ್ಯರು ದಿಗ್ಗಾವಿ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಸೂಗೂರ ಮುಂತಾದವರು ವಿದ್ಯಾ, ಧರ್ಮ ಸುಧಾರಣೆ ಮುಂತಾದ ವಿಷಯಗಳಮೇಲೆ ಸರಸವಾಗಿ ಭಾಷಣಮಾಡಿದರು. ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳನ್ನು ಪ್ರತಿಯೊಬ್ಬ ವೀರಶೈವರು ಅವಶ್ಯವಾಗಿ ಆಚರಿಸಬೇಕೆಂಬದಾಗಿ ಸರ್ವರಿಗೂ ಬೋಧಿಸಿದರು. ಆ ಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪಂಚಾಚಾರ್ಯ ಸೇವಾಸಂಘ ಸೆಕ್ರೆಟರಿ.
ಸೂಗೂರ.

ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವ

ಕೂನಬೇವು.

ಚಿತ್ರದುರ್ಗ ತಾಲ್ಲೂಕು ಕೂನಬೇವು ಗ್ರಾಮದ ವೀರಶೈವ ಮಂಡಳಿಯವರು ಇಲ್ಲಿಯ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲ್ ಹೆಡ್ಮಾಸ್ಟರ್ ಜಿ. ವಿರೂಪಾಕ್ಷಯ್ಯನವರ ಯಾಜಮಾನ್ಯದಲ್ಲಿ ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರ ಜಯಂತಿಯನ್ನು ಅತಿ ವೈಭವದಿಂದ ನೆರವೇರಿಸಿದರು. ಶ್ರೀ ಶೈಲ ಸೂರ್ಯ ಸಿಂಹಾಸನದ ಏಜೆಂಟ್ ಲೇಟ್ ವಿ. ಎಂ. ಪಟ್ಟದ ಸ್ವಾಮಿಯವರಿಂದ ರಚಿಸಲ್ಪಟ್ಟ ಶ್ರೀ ರೇವಣಸಿದ್ಧೇಶ್ವರ ಪುರಾಣದಲ್ಲಿರತಕ್ಕ ಜಗದಾಚಾರ್ಯರ ಮಹತ್ವವು 2-3 ಯಾಮದವರೆಗೂ ಅನೇಕ ಭಕ್ತಮಂಡಲಿಗೆ ಮ|| ರಾ|| ಹೆಡ್ಮಾಸ್ಟರವರಿಂದ ಬೋಧಿಸಲ್ಪಟ್ಟು ಅನಂತರ ಶೃಂಗರಿಸಿದ ಆಂದೋಳಿಕೆಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ ಫೋಟೋಗಳನ್ನು ಪುಷ್ಪ ಮಾಲಿಕಾದಿಗಳಿಂದ ಅಲಂಕರಿಸಿ ಮಹಾರ್ಗೋಳಿ ನಂದಿಧ್ವಜಾದಿ ಬಿರುದಾವಳಿಗಳಿಂದ ವಾದ್ಯವೈಭವದೊಡನೆ ಮೆರವಣಿಗೆ ಹೊರಟು ಆಯಾಯ ಜಗದ್ಗುರು ವರ್ಯರ ಮಹಿಮಾತಿಶಯಗಳನ್ನೊಳಗೊಂಡ ಜಯಘೋಷದಿಂದ ಸಮಸ್ತ ಬೀದಿಗಳಲ್ಲಿ ವೈಭವದೊಡನೆ ಸಾಗಿತು. ಆ ರಾತ್ರಿ ಎಲ್ಲಾ ಗ್ರಾಮವು ಜಗದಾಚಾರ್ಯರ ಭಜನಾದಿಗಳಿಂದ ಶಿವಲೋಕದಂತೆ ಭಾಸವಾಗುತ್ತಿತ್ತು. ಈ ರೀತಿ ಉತ್ಸವವನ್ನು ಪ್ರತಿ ವರ್ಷವೂ ನಡೆಯಿಸಬೇಕೆಂಬ ನಿಬಂಧನೆಯು ಮಾಡಲ್ಪಟ್ಟು ಇದರ ಶಾಶ್ವತದ ಬಗ್ಗೆ ಮೂಲಧನವನ್ನು ಶೇಖರಿಸಿ ಒಂದು ಸಂಘವನ್ನು ಸ್ಥಾಪಿಸುವ ತರದೂದು ನಡೆದಿರುತ್ತದೆ. ಹೀಗಾಗುವಲ್ಲಿ ಅತ್ಯಂತ ಸ್ತೋತ್ರಾರ್ಹವೇ ಸರಿ; ಇದಲ್ಲವೇ ನಿಜವಾದ ಗುರುಭಕ್ತಿಯು?

ಈ ಮುಂಚೆ ಇಲ್ಲಿಯ ಪ್ರೈಮರಿಸ್ಕೂಲ್ ಹೆಡ್‌ಮಾಸ್ಟರಾಗಿದ್ದ ಮ|| ರಾ|| ಎಂ. ಗುರುಬಸಯ್ಯನವರು ಮತ್ತು ಬಸವಲಿಂಗಯ್ಯನವರುಗಳಿಂದ ಅಭಿವೃದ್ಧಿಗೆ ಬಂದು ಈಗ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲ್ ಹೆಡ್ಮಾಸ್ಟರ್ ಜಿ. ವಿರೂಪಾಕ್ಷಯ್ಯಸ್ವಾಮಿಯವರಿಂದ ಅತ್ಯಂತ ಫಲಕಾರಿಯಾಗಿ, ಈ ಸಾಲಿನ ಪರೀಕ್ಷೆಯಲ್ಲಿ ಮೈಸೂರು ದೇಶಕ್ಕೇನೇ ಫಸ್ಟ್ ಕ್ಲಾಸಿನಲ್ಲಿ ಪ್ಯಾಸಾಗಿರುವದು ಅವರ್ಣನೀಯವಾಗಿರುವುದು.

ಈ ಗ್ರಾಮದ ವಿಲೇಜ್ ಪಂಚಾಯಿತಿ ಛೇರ್‌ಮನ್ ಮ|| ರಾ|| ಕೊಂಚ ಶಿವಪ್ಪಯ್ಯನವರು ಮೆಂಬರುಗಳಾದ ಮ|| ರಾ|| ಆದರಾಳು ಬಸಪ್ಪನವರು ದೊಡ್ಡ ಹಚ್ಚಪ್ಪನವರು, ಆಕಾರಚಾರಿ ಹನುಮಂತಪ್ಪನವರು ಪಟೇಲ್ ಬಾಲಯ್ಯನವರು ಮ|| ರಾ|| ಶಾ|| ಶೇಷಪ್ಪನವರು ಮೊದಲಾದವರ ಉದಾರಾಶ್ರಯವೂ ವಿದ್ಯಾಭಿಮಾನವೂ ಗುರುಭಕ್ತಿಯೂ ವರ್ಣನಾತೀತವಾಗಿ ಅಭಿವೃದ್ಧಿಗೊಳ್ಳುತ್ತಿದೆ.

ಇಲ್ಲಿ ಪ್ರಸಿದ್ಧ ವಂಶೀಯರು ಶ್ರೀ ಗಿರಿರಾಜ ಸೂರ್ಯಸಿಂಹಾಸನದ ಖಾಸಾ ಕುಮಾರರಾಗಿರುವುದರಿಂದ ಇಂತಹ ಆಚಾರ್ಯ ವೈಭವಗಳಿಗೆ ಕೇವಲ ಅನುಕೂಲವಿದೆ.

ಇಂತಹ ನಿಜಗುರು ಸೇವಾಭಿಮಾನಿಗಳಾದ ಇಲ್ಲಿಯ ಸ್ಕೂಲ್ ಇಲಾಖೆ ಅಧಿಕಾರವರ್ಗಕ್ಕೂ ವಿದ್ಯಾರ್ಥಿ ಸಂಘಕ್ಕೂ ಆ ಬಾಲವೃದ್ಧರಿಗೂ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಳವನ್ನಿತ್ತು ರಕ್ಷಿಸಲಿ.

ಗುರುಪಾದಸೇವಕ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪಂಚಾಚಾರ್ಯ ಭಜನಾಸಂಘ ಸ್ಥಾಪನೆ.

ಕೊಕ್ಕರಚೇಡು.

ಬಳ್ಳಾರಿ ಜಿ|| ಆಲೂರು ತಾ|| ಕೊಕ್ಕರಚೇಡು ಗ್ರಾಮಕ್ಕೆ ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಮಹಾಸ್ವಾಮಿಗಳವರ ಅಧಿಕಾರಸ್ಥಾನದಿಂದ ಶ್ರೀ ರಾಜೋಳ ಅಡವಿಸ್ವಾಮಿಗಳವರ ಮರಿದೇವರು ಮಹಾಸಂಸ್ಥಾನದ ಕಾಣಿಕಾ ವಸೂಲಿಗಾಗಿ ಆಗಮಿಸಿದ್ದರು. ಈ ಗ್ರಾಮದ ಸಮಸ್ತ ದೈವದವರು ಅತ್ಯಂತ ಭಕ್ತಿಪೂರ್ವಕವಾಗಿ ಮಹಾ ಸಂಸ್ಥಾನಕ್ಕೆ ಕಾಣಿಕೆಯನ್ನು ಸಮರ್ಪಿಸಿದರು. ಈ ಸಮಯದಲ್ಲಿ ಶ್ರೀಗಳವರು ಪಂಚಾಚಾರ್ಯರ ಮಹತ್ವವನ್ನು ಸರ್ವರಿಗೂ ಬೋಧಿಸಿ ಆಚಾರ್ಯರ ಹೆಸರಿನಿಂದ ಒಂದು ಭಜನಾಸಂಘವನ್ನು ಸ್ಥಾಪಿಸಬೇಕೆಂದು ಅಪ್ಪಣೆಮಾಡಲು ಅದಕ್ಕೆ ಸರ್ವರೂ ಆತ್ಮಾನಂದದಿಂದ ಒಪ್ಪಿಗೆಯನ್ನಿತ್ತ [illegible] ಶ್ರೀ ವೀರಭದ್ರ ದೇವಾಲಯದಲ್ಲಿ ಸಂಘವು ಸ್ಥಾ[illegible] ಪ್ರಾರಂಭವಾಯಿತು. ಈ ಸಂಘಕ್ಕೆ ಮ|| ರಾ|| [illegible]ಗೌಡರು ಪ್ರೆಸಿಡೆಂಟರಾಗಿಯೂ ಮಠದ ಚನ್ನಬಸವಯ್ಯನ[illegible]ಮ್ಯಾನೇಜರಾಗಿಯೂ ಹಳ್ಳಿ ಬಸಪ್ಪನವರು ಸೆಕ್ರೆಟರಿಗಳಾಗಿಯೂ ಬಿ. ಪರ್ವತಪ್ಪನವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ ಇರುವಂತೆ ನಿಶ್ಚಯಿಸಲ್ಪಟ್ಟಿತು. ಆ ಮೇಲೆ ಮಹಾ ಸಂಸ್ಥಾನದ ಏಜೆಂಟ್ ಅಜ್ಜಂಪುರದ ಹಿರೇಮಠದ ಆರ್. ಚನ್ನಬಸವಾರಾಧ್ಯ ಸ್ವಾಮಿಯವರ ಪುತ್ರರಾದ ಸೋಮಶೇಖರಾರಾಧ್ಯರು ಪ್ರತಿ ಸೋಮವಾರವೂ ಆಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಭಜನೆಯೊಡನೆ ಗ್ರಾಮದಲ್ಲಿ ಉತ್ಸವ ಮಾಡಬೇಕೆಂದು ಸೂಚಿಸಲು ಸರ್ವರೂ ಅನುಮೋದವನ್ನಿತ್ತರು. ಅಸಾಧಾರಣ ಗುರುಭಕ್ತಿತತ್ಪರರಾದ ಈ ಗ್ರಾಮದವರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ,

ಪ್ರೆಸಿಡೆಂಟ್—ಎಸ್. ವೀರನಗೌಡ ಭಜನಾಸಂಘ.

ಶ್ರೀಮರುಲ ಸಿದ್ಧೇಶ್ವರ ರಥೋತ್ಸವ

ಅಳವುಂಡಿ.

ಕೊಪ್ಪಳ ತಾ|| ಅಳವುಂಡಿ ವೇ|| ಶ್ರೀ ಸಿದ್ಧಲಿಂಗಸ್ವಾಮಿಗಳ ಬೃಹನ್ಮಠದಲ್ಲಿ ಶ್ರೀ ಮರುಲಸಿದ್ಧೇಶ್ವರ ರಥೋತ್ಸವವು ಪ್ರತಿವರ್ಷ ಪದ್ಧತಿಯಂತೆ ಇದೇ ಮಾಘ ಶು|| ೧೩ ಬುಧವಾರ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಸುತ್ತುಮುತ್ತಲಿನ ಗ್ರಾಮಗಳಿಂದಲೂ ದೂರಪ್ರದೇಶಗಳಿಂದಲೂ ಬಹುಸಂಖ್ಯಾತಜನರು ಬಂದಿದ್ದರು. ೨-೩ ದಿವಸಗಳವರೆಗೆ ಅನ್ನ ಸಂತರ್ಪಣವು ನಡೆಯಿತು. ಈ ಸಮಯದಲ್ಲಿ ಸದರಿ ಗ್ರಾಮದೊಳಗೆ ಶ್ರೀ ಕೇದಾರಜಗದ್ಗುರುಗಳ ಮುಕ್ಕಾಂ ಇದ್ದುದರಿಂದ ಯಾತ್ರೆಯು ಅತ್ಯಂತಶೋಭಕವಾಗಿತ್ತು.

ಮಾಘ ಶು|| ೧೪ ಗುರುವಾರ ಹಗಲು ೬ ಘಂಟೆಗೆ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಚಿದ್ಘನಲಿಂಗಶಿವಾಚಾರ್ಯರ ಪಂಚಕಲಶಯುಕ್ತವಾದ ಆಂದೋಲಿಕೋತ್ಸವವೂ, ಶ್ರೀಸಿದ್ಧೇಶ್ವರಮೂರ್ತಿಯಮೆರವಣಿಗೆಯೂ ಬೃಹನ್ಮಠದಿಂದ ಹೊರಟಿತು. ಛತ್ರಚಾಮರಾದಿ ಬಿರುದಾವಳಿಗಳಿಂದ ಘಟ್ಟಿರಡ್ಡಿಹಾಳಗ್ರಾಮದವರ ಭಜನಾ ಮತ್ತು ಜಯಘೋಷಗಳಿಂದಲೂ ಝಗಝಗಿಸುವ ದಿವಟಿಗೆಗಳ ಪ್ರಕಾಶದಿಂದಲೂ ಬ್ಯಾಂಡಬಾಜಾ ಬಜಂತ್ರಿಕಹಳೆಗಳ ವಾದ್ಯಗಳಿಂದಲೂ ಗಜತುರಗಗಳಿಂದಲೂ ಮಹೋತ್ಸವವು ಒಳ್ಳೇ ಮನೋಹರವಾಗಿತ್ತು. ಗೊತ್ತಾದ ಸ್ಥಳದಲ್ಲಿ ಮದ್ದು ಸುಡುವ ಕಾರ್ಯವು ಪೂರ್ತಿಯಾದನಂತರ ಮರಳಿ ರಾತ್ರಿ 10-11 ಘಂಟೆಗೆ ಮಹೋತ್ಸವವು ಬೃಹನ್ಮಠವನ್ನು ಸೇರಿತು. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಒಡಪುಗಳನ್ನು ಕೇಳಬೇಕೆಂಬದಾಗಿ ಸರ್ವರಲ್ಲಿ ಕುತೂಹಲವು ತುಂಬಿ ತುಳುಕುತ್ತಿತ್ತು. ಆಗ್ಗೆ ಸರ್ವರೂ ಘಟ್ಟಿರಡ್ಡಿಹಾಳ ಗ್ರಾಮದವರ ಒಡಪುಗಳನ್ನು ಕೇಳಿ ಆತ್ಮಾನಂದಿತರಾಗಿ ಜಗದಾಚಾರ್ಯರ ಅಸಾಧಾರಣ ಮಹತ್ವಗಳನ್ನು ಕೊಂಡಾಡುತ್ತ ಕಡಬಿನ ಕಾಳಗದ ಕಾರ್ಯವಾದನಂತರ ಸರ್ವರೂ ಸ್ವಸ್ಥಾನವನ್ನು ಸೇರಿದರು.

ಮಾರನೇದಿನ ಶುಕ್ರವಾರ ಶ್ರೀ ಕೇದಾರ ಜಗದ್ಗುರುಗಳ ಮಹಾಸನ್ನಿಧಿಯಲ್ಲಿ ಹಗಲು 5 ಘಂಟೆ ಸುಮಾರಿಗೆ ಸಂಗೀತ ಸಭೆಯು ಸೇರಿತು. ಮೃದಂಗವಿದ್ಯೆಯಲ್ಲಿ ಮಿಗಿಲಾದಂಥ ಮ|| ರಾ|| ಖಾನಪ್ಪಗೌಡ ಪಾಟೀಲ ವೇ|| ಕಂಬಸಯ್ಯ ಹಿರೇಮಠ ಕಳಕಲ್ಲ ಗ್ರಾಮದವರು ವೇ|| ಷ|| ಬ್ರ|| ಅಬ್ಬಿಗೇರಿ ಅರಳೆಲಿ ಮಠದ ಶ್ರೀಗಳವರು ಮ|| ರಾ|| ಎಸ್. ಬಿ. ಸಿದ್ಧಲಿಂಗಪ್ಪ ಹೋಗುಂಡಿ, ಕೌಲೂರ ಕಾತಿರ್ಗ ಘಟ್ಟಿರಡ್ಡಿಹಾಲ ಲಕ್ಕಾಪುರ ಹೊಸೂರು ವಗೈರೆ ಸ್ಥಳಪರಸ್ಥಳದ ಜನರು ಆಗಮಿಸಿದ್ದರು. ಸದರಿ ಖಾನಪ್ಪಗೌಡರು ವೀರಶೈವರಾಗಿದ್ದು ಪರಧರ್ಮದ 4-8 ವಿದ್ಯಾರ್ಥಿಗಳಿಗೆ ಸ್ವಗ್ರಾಮದಲ್ಲಿ ವಿದ್ಯಾಮೃತಪಾನ ಮಾಡಿಸುತ್ತಿದ್ದಾರೆ. ಇದು ಸ್ತುತ್ಯವೇ ಸರಿ; ಸಭೆಯಲ್ಲಿ ಗಾಯನವೂ ಮತ್ತು ಮೃದಂಗ ಹಾರ್ಮೋನಿಯಂಗಳ ಬಾರಿಸುವಿಕೆಯೂ ಸುಗಮವಾಗಿ ನಡೆಯಿತು. ಸಭಿಕರೆಲ್ಲರೂ ಸಂತೋಷಚಿತ್ತರಾಗಿ ಮಂಗಲವನ್ನು ಪಾಡಿ ಶ್ರೀಮದ್ಭಗವತ್ಪಾದರ ಜಯಘೋಷದೊಡನೆ ಸಭೆಯು ಮುಕ್ತಾಯವಾದನಂತರ ಜಗದಾಚಾರ್ಯರಿಂದ ಫಲಾಶೀರ್ವಾದವನ್ನು ಹೊಂದಿ ಸ್ವಗೃಹಗಳಿಗೆ ತೆರಳಿದರು.

ಮಿ|| ರಾಜಾಸಾಹೇಬ ಕಲ್ಲೂರ ಇವರಿಂದ ಕಲಿಸಲ್ಪಟ್ಟ "ಪಾದುಕಾಪಟ್ಟಾಭಿಷೇಕ" ವೆಂಬ ಆಖ್ಯಾನವನ್ನು ಶ್ರೀಮಜ್ಜಗದ್ಗುರು ಪಂಚಾಚಾರ್ಯ ಸೇವಾಸಂಗೀತ ನಾಟಕಮಂಡಳಿಯವರು ಪ್ರೇಕ್ಷಕರಿಗೆ ಆಲ್ಹಾದವಾಗುವಂತೆ ಆಡಿತೋರಿಸಿದರು.

ಸ್ವಾಮಿಭಕ್ತ.

ಹುಟ್ಟಿಗಿ.

ಕಳೆದ ಮಹಾಶಿವರಾತ್ರಿಯ ದಿವಸ ಇಲ್ಲಿಯ ಶ್ರೀಗುರು ಚನ್ನವೀರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವೀರಶೈವ ಭಕ್ತಮಾಹೇಶ್ವರಾದಿಗಳೆಲ್ಲರೂ ಜಗದಾಚಾರ್ಯರ ಜಯಂತಿ ಮಹೋತ್ಸವವನ್ನು ಅತ್ಯಂತ ಉತ್ಸಾಹದಿಂದ ಆಚರಿಸಿದರೆಂಬ ವಿಷಯವನ್ನು ತಿಳಿಸಲು ತುಂಬಾ ಸಂತೋಷವಾಗುತ್ತದೆ.

ಜಗದಾಚಾರ್ಯರ ಜಯಂತಿ ಮಹೋತ್ಸವವು ಸಂಜೆಯ 6 ಘಂಟೆಯ ಸಮಯಕ್ಕೆ ಪ್ರಾರಂಭವಾಯಿತು. ಸಮಸ್ತ ವೀರಶೈವ ಭಕ್ತರು ಪರಿಶುದ್ಧ ಮನಸ್ಕರಾಗಿ ಮಡಿಯಿಂದ ರುದ್ರಾಭಿಷೇಕ, ಪಾದಪೂಜಾ ಇತ್ಯಾದಿ ಕಾರ್ಯಗಳನ್ನು ಆತ್ಮಾನಂದದಿಂದ ಮಾಡಿದರು. ಅನಂತರ ರಾತ್ರಿಯ 12 ಘಂಟೆಗೆ ಉಭಯಾಚಾರ್ಯರ ಸ್ಮಾರಕಸಭೆಯು ಪ್ರಾರಂಭವಾಯಿತು. ಸಭೆಯು ಸಮಸ್ತ ವೀರಶೈವಭಕ್ತರಿಂದ ನಿಬಿಡೀಕೃತವಾಗಿದ್ದಿತು. ಶ್ರೀ ಪಟ್ಟಾಧ್ಯಕ್ಷ ಚನ್ನವೀರಸ್ವಾಮಿಗಳವರು ಅಧ್ಯಕ್ಷಪೀಠದಲ್ಲಿ ವಿರಾಜಮಾನರಾಗಿದ್ದರು. ಮಿ|| ಬಾಪೂಗೌಡ, ಅಪ್ಪಾಪ್ಪಗೌಡ ಪಾಟೀಲ ಇವರು ವೀರಶೈವ ಮತಸ್ಥಾಪನಾಚಾರ್ಯರ ಬಗ್ಗೆ ಪ್ರಸಕ್ತೋಚಿತವಾದ ಭಾಷಣವನ್ನು ಮಾಡಿದರು. ತರುವಾಯ ಶ್ರೀಗಳವರು ಉಭಯ ಜಗದಾಚಾರ್ಯರ ಮಹತ್ವವು ಎಂತಹದು? ಭೂಮಿಯಲ್ಲಿ ಅವರ ಅವತಾರವು ಹೇಗೆ ಆಯಿತು? ಅವರು ಮಾಡಿದ ಅದ್ಭುತಗಳಾದ ಲೀಲೆಗಳು ಯಾವವು? ಅವರಿಂದ ವೀರಶೈವಮತಕ್ಕೆ ಆದ ಉಪಕೃತಿ ಯಾವುದು? ಇವೇ ಮೊದಲಾದ ಅನಂತ ಉದಾತ್ತತತ್ವಗಳನ್ನೊಳಗೊಂಡ ಭಾಷಣವನ್ನು ಮಾಡಿ ಸಮಸ್ತ ಭಕ್ತರ ಮನಸ್ಸಿನಲ್ಲಿ ಪರಿಣಾಮವನ್ನುಂಟುಮಾಡಿದರು. ತರುವಾಯ ಜಗದ್ಗುರು ಪಂಚಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು.

ಕೂಡಲೆ ಭಜನಾಸಂಘದ ಮುಖಂಡರೆನಿಸುವ 1. ಗುರುಸಿದ್ಧಪ್ಪ ದಿಂಡೂರೆ, 2. ಗುರುಸಿದ್ಧಪ್ಪ, ಕೋಟಾಗೆ, 3. ಶರಣಪ್ಪ ಕೋಟಾಗೆ, 4. ಗುರುಪಾದಪ್ಪ ಗಂಗದೆ 5. ಚನ್ನಬಸಪ್ಪ ಗಂಗದೆ 6. ಸಿದ್ರಾಮಪ್ಪ ಗಂಗದೆ ಇತ್ಯಾದಿ ಜನರು ಪಂಚಾಚಾರ್ಯರ ನಾಮಸಂಕೀರ್ತನೆಗೆ ಪ್ರಾರಂಭಮಾಡಿದರು. ಈ ಸಂಘವು ಪ್ರತಿನಿತ್ಯದಲ್ಲಿಯೂ, ತಮ್ಮ ಭಜನೆಯ ಕಾರ್ಯದಲ್ಲಿ ತತ್ಪರವಾಗಿರುತ್ತದೆ. ಅದಕ್ಕಾಗಿ ಮಿ|| ತುಕ್ಕಪ್ಪಗೌಡ, ರಾಚಪ್ಪಗೌಡ, ಪಾಟೀಲ ಇವರು "ಪಂಚಾಚಾರ್ಯರ ಜಯಘೋಷದ" ಒಂದು ಬೋರ್ಡನ್ನು ಒಳ್ಳೆ ಅಂದವಾಗಿ ಮಾಡಿಸಿಕೊಟ್ಟಿರುತ್ತಾರೆ. ಸ್ತುತ್ಯ.

ಬೆಳಗಿನ 5 ಘಂಟೆಯವರೆಗೆ ಈ ಭಜನೆಯು ನಡೆದು ಶ್ರೀ ಪರಮಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಭಾವಚಿತ್ರಗಳನ್ನು ಯಥಾವಿಧಿಯಾಗಿ ಪೂಜಿಸಿ ಮೆರವಣಿಗೆಯನ್ನು ಮಾಡಿದರು.

ಉತ್ಸವವು ಅತ್ಯಂತ ಸಂಭ್ರಮದಿಂದ ನಡೆದು ಸಮಾಪ್ತಿಯಾದ ಮಹದಾನಂದಕ್ಕಾಗಿಯೂ, ಅಂದಿನದಿವಸವೇ ಅವರಿಗೆ ಪುತ್ರೋತ್ಸವ ಪ್ರಾಪ್ತವಾದ ಆನಂದಕ್ಕೋಸ್ಕರವಾಗಿಯೂ, ಈ ಗ್ರಾಮದ ಮುಲಕೀಪಾಟೀಲರೂ, ಪಂಚಾಚಾರ್ಯ ಭಕ್ತಿಪರಾಯಣರೂ, ಆದ ಶ್ರೀಯುತ ತುಕ್ಕಪ್ಪಗೌಡ, ರಾಚಪ್ಪಗೌಡ, ಪಾಟೀಲ, ಇವರು ಭಕ್ತಿಪುರಸ್ಸರವಾಗಿ ಪಂಚಾಚಾರ್ಯ ಪ್ರಭೆಗೆ ಒಂದು ರೂಪಾಯಿಯನ್ನು ಅರ್ಪಿಸಿರುತ್ತಾರೆ.

ಹೆ|| ಬ|| ದೇಸಾಯಿ, ಹೆ|| ಮಾಸ್ತರ
ಸೆಟ್ಲಮೆಂಟ್ ಸ್ಕೂಲ್ ಹುಟ್ಟಿಗಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಉಜ್ಜಯಿನೀ ಜಗದ್ಗುರುಗಳವರ ಆಗಮನ.

ನಿಲವಂಜಿ.

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ತಾ|| 1-3-29 ನೇ ಶುಕ್ರವಾರ ಹರಪನಹಳ್ಳಿ ತಾ|| ನಿಲವಂಜಿ ಗ್ರಾಮಕ್ಕೆ ಪಾಠಶಾಲಾ ಫಂಡಿನ ವಸೂಲಿಗಾಗಿ ದಯಮಾಡಿಸಿದರು. ಈ ಗ್ರಾಮದ ದೈವದವರು ಅತ್ಯಂತ ವೈಭವದೊಡನೆ ಗುರುಸಾರ್ವಭೌಮರನ್ನು ಉತ್ಸವಪೂರ್ವಕವಾಗಿ ಕರೆದುಕೊಂಡುಬಂದರು.

ತಾ|| 2-3-29 ನೇ ಶನಿವಾರ ಪದ್ಧತಿಪ್ರಕಾರ ಶ್ರೀಗಳವರ ಅಪ್ಪಣೆಯಂತೆ ಕೊಟ್ಟೂರಲ್ಲಿ ಸ್ಥಾಪಿತವಾಗಿರುವ ಪಾಠಶಾಲೆಗೆ ಶಿರಸಾವಹಿಸಿ ೧೫ ಪಲ್ಲ ಧಾನ್ಯಗಳನ್ನು ಹಾಗೂ ಫಂಡನ್ನು ಸಹಪಾದಕ್ಕೆ ಒಪ್ಪಿಸಿ ಫಲಾಶೀರ್ವಾದಕ್ಕೆ ಪಾತ್ರರಾದರು.

ಮಹಾ ಸವಾರಿಯು ಇಲ್ಲಿಂದ ಮುಂದಕ್ಕೆ ದಿಗ್ವಿಜಯಮಾಡಬೇಕೆಂಬುವಷ್ಟರಲ್ಲಿಯೇ ಮಹಾ ಶಿವರಾತ್ರಿಯು 2-3 ದಿವಗಳು ಇದ್ದುದರಮೇಲೆ ಹೋದವರ್ಷ ಮಹಾಶಿವರಾತ್ರಿಯು ಇದೇ ಗ್ರಾಮದಲ್ಲೇ ನಡೆದುದರಿಂದ ಈ ವರ್ಷವೂ ಕೂಡ ಮಹಾ ಶಿವರಾತ್ರಿಯನ್ನು ಇದೇ ಗ್ರಾಮದಲ್ಲಿ ನಡೆಯಿಸಿ ನಮ್ಮಗಳನ್ನು ಧನ್ಯರನ್ನಾಗಿ ಮಾಡಬೇಕೆಂದು ಗ್ರಾಮದ ಪ್ರಮುಖರಾದ ವೇ|| ಮ|| ವೀರಬಸಯ್ಯನವರು, ವೇ|| ಮ|| ಚೆನ್ನಬಸಯ್ಯನವರು, ತೊಗರಿಕಟ್ಟೆಮಠದ ಸ್ಕೂಲು ಮಾಸ್ತರು ವೇ|| ವೀರಯ್ಯನವರು, ಕೆಟ್ರಬಸಪ್ಪನವರು ಬಣಕಾರು ಮಲ್ಲಪ್ಪನವರು, ಬಣಕಾರು ಕೊಟ್ರಪ್ಪನವರು, ಪಾ|| ಕನ್ನವೀರನಗೌಡರು ಅಂಗಡಿ ಸಿದ್ಧಲಿಂಗಪ್ಪನವರು ಪಟ್ಟೇನಹಳ್ಳಿ ಬಸಪ್ಪನವರು ಬಣಕಾರ ಶಂಭುಲಿಂಗಪ್ಪನವರು ಸಾ|| ಜಂಬಪ್ಪನವರು, ಬೆಣ್ಣೆಹಳ್ಳಿ ದೊಡ್ಡ ಚನ್ನವೀರಪ್ಪನವರು ಹುಲಿಚಿಕಟ್ಟೆ ಮುದುಕಪ್ಪಗಳ ಬಸಪ್ಪನವರು, ಕಲ್ಲಹಳ್ಳಿ ಬಸವಂತಪ್ಪನವರು ಪೂಜಾರಿ ಲಿಂಗಪ್ಪನವರು ಬಣಕಾರ ಕೊಟ್ರಪ್ಪನವರು ಇವರೇ ಮೊದಲಾದವರು ಪ್ರಾರ್ಥಿಸಿಕೊಳ್ಳಲು ಸ್ವಾಮಿಯವರು ಒಪ್ಪಿ ಇಲ್ಲಿಯೇ ಶಿವರಾತ್ರಿಪೂಜೆಯನ್ನು ನೆರವೇರಿಸಿದರು. ಆ ಸಮಯಕ್ಕೆ ಬೆಣ್ಣೆಹಳ್ಳಿ ಪಟ್ಟದ ಶ್ರೀಗಳು, ಕೊಂಗನಾಡದ ವೀರಭದ್ರಶಾಸ್ತ್ರಿಗಳು, ಗಡಿಗಿ ಚಿಕ್ಕವೀರಪ್ಪನವರು ಶಿರಗುಪ್ಪಿ ತಾ|| ಅರಳಿಗನೂರ ಸೂಗಪ್ಪನವರ ಮಕ್ಕಳು ಬಸಪ್ಪನವರು ಪೃಥ್ವೀಶ್ವರ ಪಾಟೀಲ ರುದ್ರಗೌಡರು ಬಾತಿ ಶಿವಪ್ಪನವರು ಮೊದಲಾದವರು ಪರಸ್ಥಳಗಳಿಂದ ಆಗಮಿಸಿದ್ದರು. ಮಾರನೆದಿನ ಸೋಮವಾರ ಉದಯ 7 ಘಂಟೆಯಿಂದ 10 ಘಂಟೆವರೆಗೆ ಶ್ರೀಗಳವರ ಉತ್ಸವವು ಸಕಲಬಿರುದಾವಳಿಗಳೊಡನೆ ಬಹುವೈಭವದಿಂದ ನೆರವೇರಿತು. ಮಹಾಶಿವರಾತ್ರಿಯ ದಿವಸ ಇಂಥ ವೈಭವವನ್ನು ಕಂಡ ಈ ಗ್ರಾಮದವರೇ ಧನ್ಯರು! ಧನ್ಯರು!

ಶಂಭುಲಿಂಗಪ್ಪ ಬಣಕಾರ.

ಶ್ರೀಚರ ಪಟ್ಟಾಧಿಕಾರ ಮಹೋತ್ಸವವು.

ಜುಂಜರಾಮನಹಳ್ಳಿ.

ಇದೇ ವಿಭವನಾಮ ಸಂ|| ಮಾಘ ಬ|| ಸೋಮವಾರ ದಿವಸ ಬಳ್ಳಾರಿ ಜಿಲ್ಲಾ ರಾಯದುರ್ಗದ ತಾಲ್ಲೂಕು ಜುಂಜರಾಮನಹಳ್ಳಿ ಶಿರಿ ಹಿರೇಮಠಕ್ಕೆ ವಂಶಪರಂಪರ ಬಾಧ್ಯರಾದ ಶ್ರೀ ಕಾಶೀಜ್ಞಾನ ಸಿಂಹಾಸನ ಶಾಖಾನುವರ್ತಿಗಳಾದ ಲೇಟ್ ನಾಗಭೂಷಣಸ್ವಾಮಿ ಕರಕಂಜಾತ ಸಂಜಾತ ಶ್ರೀ ರುದ್ರಮುನಿಸ್ವಾಮಿಗಳವರು ಅಧಿಕಾರ ನೋಹರು ಮುದ್ರಾಧಿಕ್ಯ ವಂಶ ಇವೆಲ್ಲವುಗಳನ್ನು ತಮ್ಮ ಅಣ್ಣ ತಿಪ್ಪೆಸ್ವಾಮಿ ಪುತ್ರ ಕರುವೀರ ಮರಿದೇವರಿಗೆ ಸರ್ವಸಮ್ಮತವಾಗಿ ಚರಪಟ್ಟಾಧಿಕಾರವನ್ನು ಒಪ್ಪಿಸಿದರು. ಆ ಸಮಯದಲ್ಲಿ ಶ್ರೀಮದುಜ್ಜಯಿನೀ ಸಂಸ್ಥಾನದ ಕುಮಾರ ಚರಪಟ್ಟಾಧ್ಯಕ್ಷ ಶಿವಪಂಚಾಕ್ಷರಿ ಶಿವಾಚಾರ್ಯರು ಯಾಟಕಲ್ಲು ಮಠದ ಪಟ್ಟದದೇವರು ಸಂಘಟದಲ್ಲಿ ರುಜುವು ಮಾಡಿ ಮಠ ಮಹತ್ತಿನವರು ಮಂಕಸ್ತರು ದೈವದವರು ಸುಮಾರು 40 ಜನರ ಸಮಕ್ಷಮ ಸದರಿ ಅಧಿಕಾರವನ್ನು ಕೊಟ್ಟರು. ಸದರಿಯವರಿಗೆ ಮುಕ್ತಿಮುನಿಸ್ವಾಮಿಗಳು ಎಂಬುದಾಗಿ ನಾಮಕರಣವನ್ನು ಮಾಡಿದರು.

ನೂತನ ಸ್ವಾಮಿಗಳವರ ಮಹೋತ್ಸವವು ಸಕಲ ಬಿರುದುಗಳಿಂದಲೂ ಅತಿವೈಭವದಿಂದ ನೆರವೇರಿತು. ಈ ಮಹಾಕಾರ್ಯಕ್ಕೆ ಆಗ ವಿ. ಸಿದ್ಧಪರ್ವತ ಸಿಂಹಾಸನದ ಏಜೆಂಟ್ ವಿ. ಕೆ. ಎಂ. ರುದ್ರಪ್ಪನವರು ರಾ|| ಸವಳಗಿ ಮತ್ತು ಕಣಕಲ್ಲು ಜಡೆವೀರಪ್ಪನವರು ಬಂದೊದಗಿದ್ದ ದ್ವೇಷಗಳನ್ನು ಹೋಗಲಾಡಿಸಿ ಐಕಮತ್ಯದಿಂದ ಈ ಕಾರ್ಯವನ್ನು ಸಾಂಗಗೊಳಿಸಿದರು. ಈ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳು ಕಳುಹಿಸಲ್ಪಟ್ಟವು.

ಕಾರ್ಯದರ್ಶಿಗಳು.
ಹಿರೇಮಠದ ಮುದ್ದೀರಪ್ಪ, ದೊಡ್ಡಕರವೀರಪ್ಪ.

ಕೇದಾರನಾಥನ ಯಾತ್ರೆ.

ಶ್ರೀಮಜ್ಜಗದ್ಗುರು ಹಿಮವತ್ಕೇದಾರ ಪಠೋನಾಮ ವೈರಾಗ್ಯಸಿಂಹಾಸನ ಮಹಾಸಂಸ್ಥಾನ ಓಖಿ ಮಠದಲ್ಲಿ ಮಹಾಶಿವರಾತ್ರಿಯದಿವಸ ದಕ್ಷಿಣ ವೀರಶೈವಬ್ರಾಹ್ಮಣ ಪೂಜಾರಿಗಳು, ಬ್ರಾಹ್ಮಣೇತರರು ಮತ್ತು ಅನೇಕ ಜನ ಮುಮುಕ್ಷುಗಳು ಸಭೆಸೇರಿ ಹಿಮಾಲಯದಲ್ಲಿ ಶೋಭಿಸುತ್ತಿರುವ ಶ್ರೀ ಕೇದಾರನಾಥನ ದೇವಾಲಯದ ಬಾಗಿಲನ್ನು ತೆಗೆಯುವದಕ್ಕೋಸ್ಕರ ಈ ಕೆಳಗೆ ಸೂಚಿಸಿರುವ ಶುಭಮುಹೂರ್ತವನ್ನು ನಿಶ್ಚಯಿಸಿದಾಯಿತು. ಶ್ರೀ ಕೇದಾರನಾಥನ ಪೂಜೆಯನ್ನು ೬ ತಿಂಗಳವರೆಗೆ ದಕ್ಷಿಣದೇಶದ ವೀರಶೈವಬ್ರಾಹ್ಮಣರು ಮತ್ತು ೬ ತಿಂಗಳವರೆಗೆ ದೇವತೆಗಳು ಮಾಡುತ್ತಾರೆಂದು ಈ ಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿರಬಹುದು. ಇದರಂತೆ ಇಷ್ಟು ದಿವಸಗಳು ಮುಚ್ಚಲ್ಪಟ್ಟು ಈಗ ೬ ತಿಂಗಳು ಕಳೆಯುತ್ತಬಂದದ್ದರಿಂದ ಇನ್ನು ಶುಕ್ಲನಾಮ ಸಂವತ್ಸರದ ಚೈತ್ರ ಬ|| ೯ ಶುಕ್ರವಾರ ೧೦ ಘಂಟೆಗೆ ಶ್ರೀ ಕೇದಾರನಾಥನ ದೇವಾಲಯದ ಬಾಗಿಲು ತೆಗೆಯಲ್ಪಡುತ್ತದೆ. ಈ ದಿವಸವನ್ನು ನಿರೀಕ್ಷಣಮಾಡಿಕೊಂಡಿದ್ದ ಅನೇಕಜನರು ಸಂಸ್ಥಾನಕ್ಕೆ ಶಿಷ್ಯತ್ವದಿಂದ ನಡೆದುಕೊಳ್ಳುವ ರಾಜಾಧಿರಾಜರುಗಳು, ಗೌರ್ನಮೆಂಟ್ ದೊಡ್ಡ ದೊಡ್ಡ ಅಧಿಕಾರಿಗಳು, ಸಾಹುಕಾರರು ದರ್ಶನಮಾಡಿಕೊಳ್ಳುವದಕ್ಕೋಸ್ಕರ ಬರುತ್ತಾರೆ. ಆ ದಿನ ಬಾಗಿಲನ್ನು ತೆಗೆದು ಒಳಕ್ಕೆ ಹೋದ ಸಮಯದಲ್ಲಿ ಶ್ರೀ|| ಶಿವಲಿಂಗವು ಆಗತಾನೆ ಪೂಜೆಗೊಂಡಿರುವುದೋ ಎಂಬುವಂತೆ ಕೋಮಲವಾಗಿರುವ ಪತ್ರಪುಷ್ಪಾದಿಗಳಿಂದಲೂ ಉರಿಯುತ್ತಿರುವ ನಂದಾದೀಪದಿಂದಲೂ ಕರ್ಪೂರ ದೀಪಧೂಪಾದಿಗಳ ಸುವಾಸನೆಯಿಂದಲೂ ದೇವತೆಗಳು ಪೂಜೆಮಾಡುತ್ತಾರೆಂದು ನಿರ್ಧರವಾಗುತ್ತದೆ. ಆದುದರಿಂದ ಸಾಕ್ಷಾತ್ ಭೂಕೈಲಾಸವೆನಿಸಿದ ಈ ಪವಿತ್ರ ಕ್ಷೇತ್ರಕ್ಕೆ ಸರ್ವರೂ ಬಂದು ಶ್ರೀ ಕೇದಾರನಾಥನ ದರ್ಶನವನ್ನು ಮಾಡಿಕೊಂಡು ಅಲ್ಲಿಂದ ಶ್ರೀ ಜಗದ್ಗುರುಗಳವರ ದರ್ಶನಮಾಡಿ ಧನ್ಯರಾಗಬೇಕೆಂದು ಆಶಿಸುತ್ತೇನೆ.

ಸಿದ್ಧಲಿಂಗಶರ್ಮ ಓಖಿಮಠ.

ವಿವಾಹ ಮಹೋತ್ಸವ.

ಗಾರಂಪಳ್ಳಿ.

ಗುಲ್ಬುರ್ಗಾ ಜಿ|| ಚಿಂಚೋಳಿ ತಾ|| ಗಾರಂಪಳ್ಳಿಯಲ್ಲಿರುವ ಶ್ರೀಮತಿ ಶರಣಮ್ಮಾಬಾಯಿ ಸಾಹೇಬ್ ದೇಶಮುಖಿಣಿಯವರು 90 ವರ್ಷದವರಿದ್ದು ತಮ್ಮ ದಾಸಪುತ್ರರಾದ ಶ್ರೀಮಂತ ಚಂದ್ರರಾವ್ ದೇಶಮುಖರವರ ಖಾಸ್ ನವಾಸಾಮುಖ ಬನ್ಸಾ ಪುತ್ರರಾದ ಶ್ರೀಮಂತ ವೀರಭದ್ರರಾವ್ ಇವರಿಗೆ ಮ|| ರಾ|| ಕುಮಕೋಟಿ ನಾಗನಗೌಡರ ಪುತ್ರಿ ಸೌ|| ಗುಂಡಮ್ಮ ಉರುಫ್ ಲಕ್ಷ್ಮೀಬಾಯಿ ಇವರನ್ನು ತಂದು ಇದೇ ವಿಭವನಾಮ ಸಂ|| ಮಾಘ ಬ|| ೧೧ ಗುರುವಾರ ತಾ|| ೩ ಅರ್ದಿಬೇಹಸ್ತ ೧೩೩೮ ನೆಯ ಫಸಲಿ ದಿವಸ ವಿವಾಹಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಮಂಗಲಕಾರ್ಯಕ್ಕಾಗಿ ಸುಪ್ರಸಿದ್ಧ ಸಂಸ್ಥಾನಿಕರಾದ ಶ್ರೀಯುತ ದೊಡ್ಡಪ್ಪ ಉರುಫ್ ಶರಣಬಸಪ್ಪ ಅಪ್ಪಾ ಸಾಹೇಬ, ಸಾಧು ಮಹಾರಾಜ ಗುಲ್ಬುರ್ಗಾ, ಮುಗಳನಾಗಾವಿ ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗಸ್ವಾಮಿಗಳು ಸೇಡಂ ಶ್ರೀ ಶಿವಶಂಕರದೇವರು, ಶ್ರೀಮಂತ ದಾದೇರಾವ್ ಉರುಫ್ ಸಂಗ್ರಾಮರಾವ್ ದೇಶಮುಖಚಿಂತಪಳ್ಳಿ, ಶ್ರೀಮಂತ ಮಹಾಂತರಾವ್ ಸರ್ ದೇಶಮುಖ ವ ಶಂಕರರಾವ್ ದೇಶಮುಖ ಸಂ|| ಜಂಬಗಿ, ಗದಿಗಪ್ಪಗೌಡ ಉರ್ಫ್ ಬಾಲಾಸಾಹೇಬ ಪೋ|| ಮಾ|| ಪಾ|| ಅವಾಬ, ಸುಲೇಪೇಟ, ಸೇಡಂ, ಚಿಂಚೋಳಿ, ಬೀರನಹಳ್ಳಿ, ಕುಮಕೋಟೆ ಮೊದಲಾದ ಗ್ರಾಮಗಳ ಶೆಟ್ಟಿ, ಸಾಹುಕಾರ, ಗೌಡ, ಕ್ಯಾಸುಭೋಗ ಮೊದಲಾದವರು ಆಗಮಿಸಿದ್ದರು. ಗುಲ್ಬುರ್ಗಾ ಸಂಸ್ಥಾನಿಕರಿಗೂ, ಮುಗಳ ನಾಗಾಂವಿ ಶ್ರೀಗಳಿಗೂ ಶಿವಶಂಕರದೇವರಿಗೂ ಉಡುಗೆರೆಗಳು ಸಮರ್ಪಿಸಲ್ಪಟ್ಟವು. ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಯಾವತ್ತು ಕಾರ್ಯಗಳು ಸಮಾಪ್ತಿಯಾದನಂತರ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳು ಸಮರ್ಪಿಸಲ್ಪಟ್ಟವು. ಅಸಾಧಾರಣ ಗುರುಭಕ್ತಿತತ್ಪರರಾದ ವೃದ್ಧದೇಶಮುಖಿಣಿಯವರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಾದಿಗಳನ್ನು ದಯಪಾಲಿಸಿ ರಕ್ಷಿಸಲೆಂದು ಪ್ರಾರ್ಥಿಸುವ,

ವೀರಭದ್ರಪ್ಪ ಗಂಧಿಗಾರಂಪಳ್ಳಿ.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ವಿವಾಹಮಹೋತ್ಸವ.

ಹಂದಿಗನೂರು.

ಈ ವಿಭವನಾಮಸಂವತ್ಸರ ಮಾಘ ಬ|| ೫ ಗುರುವಾರದಿವಸ ಧಾರವಾಡ ಜಿಲ್ಲಾ ಕಲಘಗಿ ತಾ|| ಹಂದಿಗನೂರ ಸಂಸ್ಥಾನದ ಶ್ರೀಮಂತ ಸಂಗ ಮುರಿಗೆಪ್ಪ ಬಸವಂತರಾವ ದೇಸಾಯಿ ವ, ನಾದಕರ್ಣೆ ಮಾಮಲೆ ಬಂಕಾಪುರ ಇವರು ತಮ್ಮ ಸುಪುತ್ರಿ ದ|| ಕುಂ|| ಸೋ|| ಸೌ|| ಪಾರ್ವತೀದೇವಿಯವರನ್ನು ಶ್ರೀಮಂತ ಪಾವಗೌಡ ಬಹದ್ದೂರ ದೇಸಾಯಿ ಲಕ್ಷ್ಮೇಶ್ವರ ಇವರ ಸುಪುತ್ರ ಶಂಕರಗೌಡರಿಗೆ ಕೊಟ್ಟು ತಮ್ಮ ಅರಮನೆಯಲ್ಲಿ ವಿವಾಹಕಾರ್ಯವನ್ನು ಅತಿವಿಜೃಂಭಣೆಯಿಂದ ನೆರವೇರಿಸಿದರು. ಆ ಕಾಲಕ್ಕೆ ದೇಸಾಯಿಯರು ತಮ್ಮ ವಂಶಗುರುಗಳಾದ ಶ್ರೀ|| ಷ|| ಬ್ರ|| ಮಳಲಿ ಬೃಹನ್ಮಠದ ಪಟ್ಟದ ಮಹಾಸ್ವಾಮಿಗಳವರನ್ನು ಸಕಲ ಬಿರುದಾವಳಿಗಳಿಂದಲೂ ಚತುರಂಗಬಲದಿಂದಲೂ ಸಕಲ ವಾದ್ಯ ನೃತ್ಯ ಗೀತಾ ಭಜನಾದಿ ವೈಭವದಿಂದಲೂ ಆಂದೋಳಿಕೋತ್ಸವದೊಡನೆ ತಮ್ಮ ಅರಮನೆಗೆ ದಯಮಾಡಿಸಿಕೊಂಡು ಬಂದರು. ಶ್ರೀಗಳವರು ಶೀಕಾರೋಹಣಮಾಡಿದ ಕೂಡಲೆ ಅನಂತಪೂಜೆಗಳಾದ ೨೧ ಗುಂಡುಗಳು ಹಾರಿಸಲ್ಪಟ್ಟವು. ಆಮೇಲೆ ದೀಕ್ಷಾ ವಿವಾಹ ಕಾರ್ಯಗಳು ಶ್ರೀಗಳವರ ಅಧ್ಯಕ್ಷತೆಯಲ್ಲಿ ಶ್ರೀ|| ಷ|| ಬ್ರ|| ಸಿಗ್ಗಾವಿ ಹಿರೇಮಠದ ಚರಮೂರ್ತಿಗಳಿಂದಲೂ ವೇ|| ಶಂಕರಿ ಹಿರೇಮಠದ ಕಲ್ಲಿನಾಥ ದೀಕ್ಷಿತರಿಂದಲೂ ವಿಧ್ಯುಕ್ತಪ್ರಕಾರ ನಡೆಯಿಸಲ್ಪಟ್ಟವು. ಈ ಶುಭಮುಹೂರ್ತಕ್ಕೆ ಅನೇಕ ಪ್ರಾಂತಗಳಿಂದ ದೇಸಾಯಿ, ದೇಶಪಾಂಡೆ? ತಾ|| ಮಾಮಲೇದಾರರು, ಬೋರ್ಡ ಮೆಂಬರರು, ಪಾಟೀಲ ಕುಲಕರ್ಣಿಯವರು, ರೈತರು ಸುಮಾರು ಮೂರು ನಾಲ್ಕು ಸಾವಿರದವರೆಗೆ ಆಗಮಿಸಿದ್ದರು. ವಧೂವರರು ವಿವಾಹ ಮಂಟಪದಲ್ಲಿ ಸಿದ್ಧಪಡಿಸಿದ ಉಚಿತಾಸನವನ್ನೇರಿದ ಕೂಡಲೆ ಸರ್ವರೂ ಅಕ್ಷತಾರೋಹಣ ಮಾಡಿದರು. ಆ ಸಮಯದಲ್ಲಿ ಶ್ರೀಗಳವರು ವರನಕಡೆಯಿಂದ ೧೦ ರೂಪಾಯಿಗಳನ್ನು ವಧುವಿನಕಡೆಯಿಂದ ೫ ರೂಪಾಯಿಗಳನ್ನು ಪಂಚಾಚಾರ್ಯಪ್ರಭೆಯ ಪೋಷಣೆಕ್ಕೋಸ್ಕರ ಕಳುಹಿಸಬೇಕೆಂದು ಅಪ್ಪಣೆಕೊಡಿಸಿದ ಮೇರೆಗೆ ಸದರಿ ರೂಪಾಯಿಗಳು ಶ್ರೀ ಮಲ್ಲಿಕಾರ್ಜುನಪ್ಪ ದೇಸಾಯಿ ಸಂಸ್ಥಾನ ಹಂದಿಗನೂರ ಮಾಮಲೆ ಬಂಕಾಪುರ ಇವರ ಕಡೆಗೆ ಕೊಡಲ್ಪಟ್ಟವು. ಅನಂತರ ನೆರೆದ ಸಭಾಸದರಿಗೆ ಭೂರಿದಕ್ಷಿಣೆ, ಗಂಧ, ಹಾರ, ತುರಾಯಿ, ಫಲ ತಾಂಬೂಲಗಳು ಸಮರ್ಪಿಸಲ್ಪಟ್ಟವು. ಶ್ರೀಮಂತರು ಯಾವತ್ತು ಜನರಿಗೆ ಅನ್ನಸಂತರ್ಪಣವನ್ನು ಅತ್ಯಂತ ಸಂತೋಷದಿಂದ ಕಾರ್ಯಸಮಾಪ್ತಿಯವರೆಗೆ ನಡೆಯಿಸಿದರು.

ಇಂಥ ಅಸಾಧಾರಣ ದಾನಶೀಲ ಗುರುಭಕ್ತಿಧುರೀಣರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಪುತ್ರಪೌತ್ರ ಭಾಗ್ಯಾದಿಗಳನ್ನು ದಯಪಾಲಿಸಲೆಂದು ಕೋರುವ,

ಓರ್ವ ಪ್ರತ್ಯಕ್ಷದರ್ಶಿ.

ಬಳ್ಳಾರಿ ಜಿಲ್ಲೆಯ ವೀರಶೈವಬಾಂಧವರಲ್ಲಿ ವಿಜ್ಞಾಪನೆ.

ಬಳ್ಳಾರಿ ಜಿಲ್ಲೆಯಲ್ಲಿ ವೀರಶೈವ ಸಂಘವನ್ನು ಸ್ಥಾಪಿಸುವ ಅವಶ್ಯಕತೆಯನ್ನು ಕುರಿತು ಈ ಹಿಂದೆ ಒಂದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದ್ದೆವಷ್ಟೆ. ಈ ಬಗ್ಗೆ ಸಮಾಲೋಚಿಸಲೂ ಜಿಲ್ಲೆಯ ವೀರಶೈವರೆಲ್ಲರು ಒಂದು ಸ್ಥಳದಲ್ಲಿ ಸಮಾವೇಶವಾಗಲೂ ಅನುಕೂಲವಾಗುವಂತೆ ಇದೇ ಮಾರ್ಚ ತಿಂಗಳು ೩೦ ನೇ ತಾರೀಖು ಶನಿವಾರ ಮಧ್ಯಾಹ್ನ ೨ ಘಂಟೆಗೆ ಹೊಸಪ್ಯಾಟೆಯಲ್ಲಿರುವ ವೇ|| ಪಾಲೂತ್ರು ಉದ್ದಾನಯ್ಯನವರು ಬಿ. ಎ., ಬಿ. ಎಲ್., ವಕೀಲರು ಇವರ ಆಫೀಸಿನಲ್ಲಿ ಸಭೆ ಸೇರಲು ನಿರ್ಧರಿಸಿರುತ್ತದೆ.

ಸಭೆಯ ಉದ್ದೇಶಗಳು.

(೧) ವೀರಶೈವ ರಾಜಕೀಯ ಸಂಘಸ್ಥಾಪನೆ ಸಭೆಯ ಉದ್ದೇಶಗಳನ್ನೂ ನಿಯಮಗಳನ್ನೂ ಗೊತ್ತುಪಡಿಸುವದು. ಮತ್ತು ಸಂಘದ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು, ಸೆಕ್ರೆಟರಿ, ಮ್ಯಾನೇಜಿಂಗು ಕಮಿಟಿ ಮೆಂಬರುಗಳು ಮುಂತಾದವರನ್ನು ಚುನಾಯಿಸುವದು.

(೨) ಮುಂದೆ ಅಕ್ಟೋಬರು ತಿಂಗಳಲ್ಲಿ ಜರುಗಲಿರುವ ಮದ್ರಾಸು ಶಾಸನನಿರ್ಮಾಣ ಸಭೆಯ ಸದಸ್ಯರುಗಳ ಚುನಾವಣೆಯಲ್ಲಿ ನಮ್ಮ ವೀರಶೈವರಲ್ಲಿ ಯಾರನ್ನಾದರೂ ಒಬ್ಬರನ್ನು ನಿಲ್ಲಿಸಲು ನಿರ್ಧರಿಸುವುದು. ಆದಕಾರಣ ವೀರಶೈವ ಮಹಾಶಯರೆಲ್ಲರೂ ದಯವಿಟ್ಟು ಸಭೆಗೆ ದಯಮಾಡಿಸಿ ಮೇಲ್ಕಂಡ ಮಹತ್ವದ ಅಂಶಗಳನ್ನು ಪರ್ಯಾಲೋಚಿಸಬೇಕಾಗಿ ಪ್ರಾರ್ಥನೆ.

೧. ತೊಗರಿ ವೀರಪ್ಪ. ೨. ಹೀರದ ಕರಿಬಸಪ್ಪ.
೩. ಶಿವಾ ಚನ್ನಬಸಪ್ಪ. ೪. ಹೆಚ್. ರಂಗನಗೌಡ.
೫. ಎನ್ ಮರಿಬಸವನಗೌಡ. ೬. ಅಗ್ಗನಡೋಣಿ ದೊಡ್ಡನಗೌಡ.

ಮದ್ಯಪಾನ ಪ್ರತಿಬಂಧಪತ್ರಿಕೆ ನಂಬರು ೧.

ದೇವಭೂಮಿಯೆಂಬ ಹಿಂದುಸ್ಥಾನವು ಕುಡುಕರದೇಶವಾಗಹತ್ತಿದೆ.
ಮದ್ಯಪಾನದಿಂದ ಸರಕಾರಕ್ಕೆ ಆದ ಉತ್ಪನ್ನವು :—

ವರ್ಷ—	1915-16	1916-17	1917-18	1918-19
ರೂಪಾಯಿ—	13 ಕೋಟಿ	14 ಕೋಟಿ	15	17
	1919-20	1920-21	1921-22	1922-23
	19 ಕೋಟಿ	20	17	19
	1923-24	1924-25		
	19 ಕೋಟಿ	19 ಕೋಟಿ ರೂಪಾಯಿಗಳು.		

ಟೀಪು :—1921-22 ರಲ್ಲಿ ಚಳವಳಿಯಮೂಲಕ ಉತ್ಪನ್ನ ಕಡಿಮೆ ಆದದ್ದನ್ನು ಲಕ್ಷ್ಯಕ್ಕೆ ತರಬೇಕು.

ಮೇಲೆ ತೋರಿಸಿದ ಅಂಕಿಗಳು ಸರಕಾರದ ಕರೆಯ ಉತ್ಪನ್ನದ ಲಾಭದ ಹೆಚ್ಚಳವನ್ನು ತೋರಿಸುತ್ತವೆ. ಅಬಕಾರೀಖಾತೆಯ ಉತ್ಪನ್ನವು ಅನೇಕ ಬಾಬುಗಳಿಂದ ಬರುತ್ತಿದ್ದರೂ ಮೇಲೆಕೊಟ್ಟ ಅಂಕಿಗಳು ಕರೆಯ ಅಂಗಡಿಗಳ ಮಾರಾಟದಿಂದ ಬರುವ ಗಣ ಮತ್ತು ಉಳಿದ ಚಿಲ್ಲರ ವಿಷಯಗಳಿಂದ ಬರುವ ಹಣವನ್ನಷ್ಟೇ ತೋರಿಸುತ್ತವೆ. ಕೇವಲ ಲಾಭದಮೇಲೆ ದೃಷ್ಟಿಯುಳ್ಳ ಅಂತಃಕರಣಹೀನವಾದ ಯಾವದೇ ಸರಕಾರವು ಕುಸುಬೊತ್ತಿನಲ್ಲಿಯೋ ದೇಶವನ್ನು ಈ ರೀತಿಯಿಂದ ಹಾಳುಮಾಡಿಬಿಡಬಹುದು. ಸುವ್ಯವಸ್ಥಿತವಾಗಿ ಒಟ್ಟುಗೂಡಿದ ಹಿಂದುಸ್ಥಾನವು ಇದನ್ನು ನಿಲ್ಲಿಸಿ ಮದ್ಯ ಮಗ್ನ ಪರಕೀಯ ಸರಕಾರದ ದಾಸ್ಯಗಳಿಂದ ಮುಕ್ತವಾಗಬಹುದು.

ಗದಗ,
15—3—29 } ಕೆಂಭಾವಿ ಮಧ್ವರಾಯರು ಕಾರ್ಯದರ್ಶಿ, ಕ. ಪ್ರ. ಕ. ಕಮಿಟಿ.

ಪಂಚಾಚಾರ್ಯ ಪ್ರಭಾ

೧೯೩೧ ನೇ ಮಾರ್ಚಿ ತಾ|| ೨೩ ನೇ ಸೋಮವಾರ

ಜಗದಾಚಾರ್ಯರ ಜಯಂತಿ.

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ |
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ ಕೃಪಾ ||

ಗುರುಮೂರ್ತಿಯೇ ಧ್ಯಾನಕ್ಕೆ ಮೂಲವೆಂದೂ, ಗುರುಚರಣವೇ ಪೂಜೆಗೆ ಮೂಲವೆಂದೂ, ಗುರುವಾಕ್ಯವೇ ಮಂತ್ರಕ್ಕೆ ಮೂಲವೆಂದೂ, ಗುರುಕೃಪೆಯೇ ಮೋಕ್ಷಕ್ಕೆ ಮೂಲವೆಂದೂ ಶಿವಾಗಮಗಳು ಸಾರುತ್ತಿರುವದರಿಂದ ವೀರಶೈವಮತಕ್ಕೆ ಮೂಲಗುರುಗಳಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು (ಗುರುಪೂಜಾಮಕೃತ್ವೈವ ಯಶ್ಯಾಸ್ತ್ರಂ ಶ್ರೋತುಮಿಚ್ಛತಿ | ನಕರೋತಿಚಶುಶ್ರೂಷಾಂ ಪೂಜಾಂ ಭಕ್ತ್ಯಾಂಚ ಭಾವತಃ) ಎಂಬುಕ್ತಿಯಂತೆ ಪೂಜಿಸದೆ ಸೇವಿಸದೆ ಇರುವ ಮಾನವರು ಎಂದಿಗೂ ವೀರಶೈವರೆನಿಸಿಕೊಳ್ಳುವುದಿಲ್ಲವು. ವೀರಶೈವಮತವನ್ನು ಭೂಲೋಕದಲ್ಲಿ ಸ್ಥಾಪಿಸಿ ಮತಾಚಾರ್ಯರೆನಿಸಿಕೊಂಡ ಜಗದಾಚಾರ್ಯರನ್ನು ಲಿಂಗಧಾರಿಯಾದ ಪ್ರತಿಯೊಬ್ಬ ಮಾನವನು ಪ್ರತಿನಿತ್ಯದಲ್ಲಿಯೂ ಸ್ಮರಿಸುತ್ತಿರಬೇಕಲ್ಲದೆ ಅವರ ಜಯಂತಿದಿವಸಗಳನ್ನು ದೊಡ್ಡ ಹಬ್ಬದಂತೆ ಮಾಡಬೇಕು. ಅವನೇ ಗುರುಪುತ್ರನೆನಿಸುವನು. ಆಚಾರ್ಯರಿಂದ ರಚಿತವಾದ ಈ ವೀರಶೈವಮತವೆಂಬ ಭವ್ಯಗೃಹದಲ್ಲಿ ವಾಸಮಾಡಿದ್ದಕ್ಕೆ ವರ್ಷಕ್ಕೊಂದಾವರ್ತಿ ಸರ್ವರೂ ತಮ್ಮ ಆಚಾರ್ಯರ ಪವಿತ್ರಜಯಂತ್ಯುತ್ಸವಗಳನ್ನು ಮಾಡಿ ಧನ್ಯರಾಗಲೆಂಬ ಉದ್ದೇಶದಿಂದ ಆಯಾಯ ಆಚಾರ್ಯರ ಜಯಂತಿಯ ಶುಭದಿವಸಗಳು ಸವಿಸ್ತಾರ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವವಷ್ಟೆ! ಲೋಕದಲ್ಲಿ ಯಾವ ಮನುಷ್ಯನು ಯಾವ ಮತವನ್ನು ಅವಲಂಬಿಸಿರುತ್ತಾನೆಯೋ, ಆ ಮತವು ಯಾರಿಂದ ಸ್ಥಾಪಿಸಲ್ಪಟ್ಟಿರುತ್ತದೆಯೋ ಆ ಮಹಿಮರನ್ನು ಉದ್ದೇಶಿಸಿ ವರ್ಷಕ್ಕೊಂದುಸಾರೆಯಾದರೂ ಮಹೋತ್ಸವವನ್ನು ಮಾಡುವುದು ಭರತಖಂಡದ ಆರ್ಯರ ಪವಿತ್ರಧರ್ಮವಾಗಿರುವುದಲ್ಲದೆ ಇತರ ಖಂಡಗಳಲ್ಲಿಯೂ ಈ ಪದ್ಧತಿಯು ವಿಶೇಷವಾಗಿ ಅನಾದಿಕಾಲದಿಂದಲೂ ಬಂದಿರುವುದು. ಈ ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ಮಾಡುವುದು ಅಖಿಲ ವೀರಶೈವರ ಪರಮಧರ್ಮವಾಗಿದ್ದರೂ ಅನೇಕರು ಮೂಲಾಚಾರ್ಯರ ಹಬ್ಬವನ್ನು ಮಾಡದೆ ಮತಕ್ಕೆ ಏನೂ ಸಂಬಂಧವಿಲ್ಲದಿದ್ದರೂ ಅವ ಪುರುಷಾರ್ಥವಿಲ್ಲದಿದ್ದರೂ "ಗತಾನುಗತಿಕೋ ಲೋಕಃ ನ ಲೋಕಃ ಪಾರಮಾರ್ಥಿಕಃ" ಎಂಬ ಲೋಕೋಕ್ತಿಯಂತೆ ಮನಸ್ವಿಯಾಗಿ ಹಬ್ಬಗಳನ್ನು ಮಾಡುತ್ತಲಿರುವುದನ್ನು ನೋಡಿದರೆ ಇವರ ಅಜ್ಞತಾದಶೆಯು ಎಷ್ಟು ಪರಾಕಾಷ್ಠತೆಯಲ್ಲಿರುವುದೆಂಬುದು ಇದರಿಂದ ವ್ಯಕ್ತವಾಗುತ್ತದೆ. ಒಂದುವೇಳೆ ತಿಳುವಳಿಕೆಯಿಲ್ಲದೆ ಮಾಡುವರೆಂದರೆ ಈ ವಿಷಯದಲ್ಲಿ ಆದಿ ಗುರುಗಳನ್ನು ಮರೆತು ಆಗಂತುಕರನ್ನು ಹಿಡಿಯುವುದು ಮರುಮರೀಚಿಕೆಯಂತೆ ವೃಥಾ ಭ್ರಾಂತಿಯಲ್ಲದೆ ಪ್ರಯೋಜನವಿಲ್ಲವೆಂದು ಅನೇಕ ವಿದ್ವಾಂಸರು ಶಾಸ್ತ್ರಾಧಾರಗಳೊಂದಿಗೆ ನಮ್ಮ ಪತ್ರಿಕೆಯೊಳಗೆ ಸಾರಿರುವರು. ಹೀಗಿದ್ದರೂ ಸುಮಾರು 30 ಲಕ್ಷ ಜನಗಳು ವೀರಶೈವರೆನಿಸಿಕೊಂಡು ಅಷ್ಟಾವರಣಯುಕ್ತರೆಂದು ಹೇಳಿಸಿಕೊಂಡು ಕೆಲವರು ಈ ಮೂಲಾಚಾರ್ಯರ ಜಯಂತಿಯನ್ನು ಮಾಡುವುದರಲ್ಲಿ ಅಲಸರಾಗಿರುವುದನ್ನು ನೋಡಿದರೆ ಇವರನ್ನು ಹೇಗೆ ವೀರಶೈವರೆಂದು ಕರೆಯಬೇಕೋ ತಿಳಿಯದಾಗಿದೆ. ಒಂದೊಂದು ಗ್ರಾಮದಲ್ಲಿ ಮಾರಿಯಜಾತ್ರೆಯು ಆದರೆ ಆಯಾಯ ಗ್ರಾಮದವರು ಆ ಮಾರಿಯ ಹೆಸರಿನಿಂದ ಹಬ್ಬವನ್ನು ಮಾಡುತ್ತಾರೆ. ಲೆಕ್ಕವಿಲ್ಲದಷ್ಟು ಕುರಿ ಕೋಣಗಳು ಹತವಾಗುತ್ತವೆ. ವೀರಶೈವರಿಗೆ ಸ್ವಪ್ನದಲ್ಲೂ ನೆನಸದ ಅಂತಹ ಸ್ವೇಚ್ಛೆಯಾದ ಹಬ್ಬಗಳನ್ನು ಬಹು ಆಟ್ಟಹಾಸದಿಂದ ಮಾಡುತ್ತಾರೆ. ಇದು ಪಾಪಕರ್ಮದ ಫಲವಲ್ಲದೆ ಬೇರೊಂದಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ತಾವು ಆಚಾರ್ಯರಿಂದ ಬಂದ ಲಿಂಗವನ್ನು ಧರಿಸಿ ಅವರ ಗೋತ್ರಸೂತ್ರಗಳನ್ನು ಹೇಳಿ ಅವರಿಂದ ಅಷ್ಟಾವರಣವೆಂಬ ನಿಧಿಯನ್ನು ಪಡೆದು ವರ್ಷಕ್ಕೊಂದು ಸಾರೆಯಾದರೂ ಆ ಮಹಾವಿಭೂತಿಗಳ ನಾಮಸ್ಮರಣವನ್ನು ಮಾಡದಿದ್ದರೆ ಅಂಥವರ ವಿಷಯದಲ್ಲಿ ಶಿವನು ಒಲಿಯುವನೇ? ಎಂದೂ ಒಲಿಯುವುದಿಲ್ಲ. ಆದುದರಿಂದ ನಿಜವಾದ ವೀರಶೈವರು ಇನ್ನಾದರೂ ತಮ್ಮ ಮೌಢ್ಯವನ್ನು ಬಿಟ್ಟು ಮಾರಿಮಸಣಿ ಮುಂತಾದ ಕ್ಷುದ್ರದೇವತೆಗಳನ್ನು ಸೇವಿಸದೆ ಪ್ರಾಣಿಹಿಂಸಾದಿ ನೀಚಕೃತ್ಯಗಳನ್ನು ಮಾಡದೆ "ಭಸ್ಮೋಪರಿ ನ ಕಿಂಚನ" ಎಂಬಂತೆ ತ್ರಿಲೋಕಪಾವನವೂ ವೇದೋಕ್ತವೂ ಆದ ಭಸ್ಮಧಾರಣದಮೇಲೆ ಕುಂಕುಮಭಂಡಾರಾದಿಗಳನ್ನು ಬಡಿದುಕೊಳ್ಳದೆ ಶಿವನ ರೂಪವಾದ ಲಿಂಗವನ್ನು ಪೂಜಿಸಿ ಈ ಲಿಂಗವನ್ನು ಹಸ್ತಪೀಠಕ್ಕೆ ತಂದಿರಿಸಿದ ಆ ಪಂಚಾಚಾರ್ಯರ ನಾಮಸ್ಮರಣವನ್ನು ವರ್ಷಕ್ಕೊಂದಾವರ್ತಿಯಾದರೂ ಜಯಂತೀ ಮಹೋತ್ಸವರೂಪದಿಂದ ಮಾಡಿ ತಮ್ಮ ಪವಿತ್ರವಾದ ವೀರಶೈವ ಎಂಬ ನಾಮವನ್ನು ಸಾರ್ಥಕವಮಾಡಿಕೊಳ್ಳಬಾರದೇ? ಸದ್ಯಃ ಅನೇಕ ಜನ ವೀರಶೈವರು ತಮ್ಮ ಮತದ ನಿಜತತ್ವವನ್ನು ತಿಳಿದುಕೊಂಡು ಅಲ್ಲಲ್ಲಿಯೇ ಶ್ರೀಮದಾಚಾರ್ಯರ ಜಯಂತಿಗಳನ್ನೂ ಆಚಾರ್ಯಭಜನಾಸಂಘಗಳನ್ನೂ ಏರ್ಪಡಿಸಿ ಶ್ರೀ ಪಂಚಾಚಾರ್ಯರ ಪವಿತ್ರನಾಮಸ್ಮರಣವನ್ನು ಮಾಡುತ್ತ ತಮ್ಮ ಗುರುಭಕ್ತಿಯನ್ನು ಪ್ರಕಾಶಪಡಿಸುತ್ತಿರುವದು ಸ್ತುತ್ಯವಾದ ಸಂಗತಿಯೇ ಆಗಿದೆ. ಆದರೆ 30 ಲಕ್ಷ ವೀರಶೈವಪ್ರಜಾಸಾಮಾನ್ಯದೃಷ್ಟಿಯಿಂದ ಪರಿಶೀಲಿಸಿದರೆ ಆಚಾರ್ಯರ ವಿಷಯದಲ್ಲಿ ಇನ್ನೂ ವಿಶೇಷವಾದ ಕಾರ್ಯವು ಆಗಬೇಕಾಗಿದೆಯೆಂದು ಹೇಳಬಹುದಾಗಿದೆ. ಆದರೆ ಇನ್ನೂ ಅಂಥ ಮಹನೀಯರ ದೃಷ್ಟಿಗೆ ವಿಚಾರಾಂಜನವು ಹಚ್ಚಲ್ಪಟ್ಟಿಲ್ಲವೆಂದು ತೋರುತ್ತದೆ. ಈ ವಿವೇಕಾಂಜನವು ಪ್ರತಿ ಒಬ್ಬ ವೀರಶೈವನ ದೃಷ್ಟಿಯನ್ನು ಪ್ರವೇಶಿಸಿ ಅಜ್ಞಾನಾಗತವಾದ ಕಶ್ಮಲಗಳೆಲ್ಲವೂ ಹೋಗಿ ಶ್ರೀಮದಾಚಾರ್ಯಸಂಜನಿತವಾದ ವೀರಶೈವಮತದಲ್ಲಿ ಜನ್ಮವಂ ತಾಳಿದ ಪ್ರತಿಯೊಬ್ಬ ಲಿಂಗಾಂಗಿಯೂ ಆಚಾರ್ಯರನ್ನು ತಮ್ಮ ತಮ್ಮ ಪಿತಾಮಹರಂತೆ ಅತ್ಯಂತಭಕ್ತಿಯಿಂದ ನೋಡುತ್ತ ಎಲ್ಲರೂ ಶುದ್ಧಸಂಪ್ರದಾಯದವರೆಂಬ ಪವಿತ್ರಪ್ರಶಸ್ತಿಗೆ ಭಾಗಿಗಳಾಗಿ ಶಿವಾನುಗ್ರಹಕ್ಕೆ ಪಾತ್ರರಾಗಬೇಕೆಂದು ಕನಿಕರದಿಂದ ಒತ್ತಿ ಒತ್ತಿ ಹೇಳಬೇಕಾಗಿದೆ.

ಈ ವರ್ಷದಲ್ಲಿ ನಡೆಯಬೇಕಾದ ಗುರುಗಳ ಜಯಂತಿಗಳಲ್ಲಿ ಮೂರು ಜಯಂತಿಗಳು ಕಳೆದುಹೋದುವು. ಇನ್ನು ಎರಡು ಜಯಂತಿಗಳು ಮಾತ್ರ ಉಳಿದಿವೆ. ಮುಂದೆ ಬರುವ ಅದ್ಭುತಮಹಿಮಾಶೀಲರಾದ ದಾರುಕಾಚಾರ್ಯರ ಮತ್ತು ಏಕೋರಾಮಶಿವಾಚಾರ್ಯರ ಜಯಂತಿಗಳನ್ನು ವೀರಶೈವನೆನಿಸಿಕೊಳ್ಳುವ ಪ್ರತಿಯೊಬ್ಬನೂ ಅಸಾಧಾರಣ ಭಕ್ತಿಯಿಂದ ನೆರವೇರಿಸಬೇಕು. ವೀರಶೈವಮತಸ್ಥಾಪಕರಾದ ಗುರುಗಳ ಜಯಂತಿಯನ್ನು ಮಾಡದಿದ್ದವನು ಖಂಡಿತವಾಗಿ ವೀರಶೈವನೆಂದು ಹೇಳಿಸಿಕೊಳ್ಳಲಾರನು. ಆಗಂತುಕವಾಗಿ ಬಂದಿರುವ ಲಿಂಗಾಯತ ಎಂಬ ಅಶಾಸ್ತ್ರೀಯನಾಮವೇ ಅಂಥವನಿಗೆ ಸಾಕಾಗಿದೆ. ಅವರು ಯಾವ ಜಯಂತಿಯನ್ನಾದರೂ ಮಾಡಿಕೊಳ್ಳಬಹುದು. ವಿಧಿನಿಷೇಧಗಳಲ್ಲಿ ತಪ್ಪು ತಿಳುವಳಿಕೆಯಿಂದ ನಿಷೇಧವನ್ನು ವಿಧಿಯನ್ನಾಗಿ ತಿಳಿದಿದ್ದರೂ ವಿವೇಕೋದಯವಾದ ಮೇಲೆ ಆ ನಿಷೇಧವನ್ನು ತ್ಯಜಿಸಿ ವಿಧಿಯನ್ನು ಅನುಸರಿಸುವುದೇ ವಿವೇಕಿಗಳ ಸ್ವಭಾವವಾಗಿರುವುದು. ಇದರಮೇಲೆ ಆಚಾರ್ಯಭಗವತ್ಪಾದರಿಂದ ಅಂಕಿತವಾದ ವೀರಶೈವ ಎಂಬ ನಾಮವನ್ನು ದ್ವೇಷಿಸುತ್ತ ಸ್ವೇಚ್ಛಾಕಲ್ಪಿತ ಲಿಂಗಾಯತನಾಮದಲ್ಲಿ ಪ್ರೀತಿಯುಳ್ಳವರಾಗಿ ವೇದಾಗಮ ಮಾರ್ಗಾನುಯಾಯಿಗಳಾದ ಗುರುಗಳ ವಿಷಯದಲ್ಲಿ ಇನ್ನು ಅಲ್ಪಬುದ್ಧಿಯನ್ನು ಯಾರು ಮಾಡುವರೋ ಅವರು ನಾಯಿಯ ಬಾಲವು ಕೊಳವಿಯಲ್ಲಿಟ್ಟು ಎಷ್ಟು ಸರಿಮಾಡುತ್ತಿದ್ದರೂ ಅದು ಯಾವಾಗಲೂ ಡೊಂಕೇ ಎಂಬಂತೆ ಅಂತಹ ವಕ್ರಸ್ವಭಾವವುಳ್ಳವರು ನಮ್ಮ ಮಾತಿನಲ್ಲಿ ಶ್ರದ್ಧೆ ಇಡದೆ ಇರಲಿ. ವೀರಶೈವರೆನಿಸಿಕೊಂಡ ಮಹೋದಯರು ಮಾತ್ರ ಏನನ್ನು ಬಿಟ್ಟರೂ ಬಿಡಲಿ, ತಮ್ಮ ವೀರಶೈವಮತಸ್ಥಾಪಕರಾದ ಗುರುಗಳನ್ನು ಬಿಟ್ಟರೆ ಪತಿಭಕ್ತಿಯನ್ನು ತೊರೆದು ಮಾಂಗಲ್ಯವನ್ನು ಬಿಟ್ಟ ಸ್ತ್ರೈಂಣೆಯಂತಾಗುತ್ತಾರೆ. ಆದ್ದರಿಂದ ಗುರುಶಿಷ್ಯನ್ಯಾಯಾನುಸಾರವಾಗಿ ಮತಸ್ಥಾಪಕರಾದ ಗುರುಗಳಲ್ಲಿ ಅಸಾಧಾರಣ ಭಕ್ತಿಯಿಂದ ನಡೆದು ಪತಿವ್ರತೆಯಾದ ಸ್ತ್ರೀಯು ತನ್ನ ಪತಿಯಲ್ಲಿ ಪೂಜ್ಯಭಾವವನ್ನಿಟ್ಟು ಸೇವಿಸುವಂತೆ ಆಚಾರ್ಯಜಯಂತಿಯ ವ್ಯಾಜದಿಂದಲಾದರೂ ಮತಸ್ಥಾಪಕರ ಸೇವೆಯಂಗೈದು ಧನ್ಯರಾಗಿ ತಮಗೆ ಪ್ರಾಪ್ತವಾಗಿರುವ ಪರಮಪವಿತ್ರವಾದ ವೀರಶೈವ ಎಂಬ ನಾಮವನ್ನು ಅನ್ವರ್ಥಕವನ್ನಾಗಿ ಮಾಡಿಕೊಳ್ಳಬೇಕೆಂದು ಇಚ್ಛಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ಬದನವಾಳ ಖಾದೀಕ್ಷೇತ್ರದ ಕಾರ್ಯಕ್ರಮಗಳು ಫಲದಾಯಕವಾಗಿ ಕಂಡುಬಂದುದರಿಂದ ಕೈಗಾರಿಕೆಯ ಶಾಖಾಧಿಕಾರಿಗಳು ಮುದ್ದೂರ ತಾಲೂಕಿನಲ್ಲೊಂದು ಕ್ಷೇತ್ರವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿರುವರು.

ಮೈಸೂರು ಸಂಸ್ಥಾನದಲ್ಲಿ ಪ್ರಕಟವಾಗುತ್ತಿದ್ದು ನಿಂತುಹೋದ ಅಥವಾ ಸರ್ಕಾರದ ಅಪ್ಪಣೆಯನ್ನು ಪಡೆದೂ ಪ್ರಕಟವಾಗದಿರುವ 31 ಪತ್ರಿಕೆಗಳ ಪ್ರಚಾರಕ್ಕಾಗಿ ಕೊಟ್ಟಿದ್ದ ಅಪ್ಪಣೆಯನ್ನು ಹಿಂದಕ್ಕೆ ತೆಗೆದುಕೊಂಡಿರುವದಾಗಿ ಸರ್ಕಾರದವರು ಅಪ್ಪಣೆಮಾಡಿರುವರು.

ರಾಜಧಾನಿಯ ಶ್ರೀಕೃಷ್ಣರಾಜೇಂದ್ರ ಮಿಲ್ಲಿನ ಮ್ಯಾನೇಜಿಂಗ್ ಏಜಂಟರಾಗಿದ್ದ ಬಿ. ಸೀತಾರಾಮಾಚಾರ್ಯರು ರಾಜೀನಾಮೆಯನ್ನು ಕೊಟ್ಟಿರುವದರಿಂದ ಮುಂದಿನ ಏರ್ಪಾಟನ್ನು ಕುರಿತು ಪರ್ಯಾಲೋಚಿಸುವುದಕ್ಕೋಸ್ಕರ ಮಿಲ್ಲಿನ ಛೇರ್ಮೆನ್ನರಾದ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಬಂಗಲೆಯಲ್ಲಿ ಡೈರೆಕ್ಟರುಗಳ ಮೀಟಿಂಗು ನಡೆಯುವದಾಗಿ ತಿಳಿದುಬರುತ್ತದೆ.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ತಯಾರಾದ ಎಣ್ಣೆಯ ಮಾರಾಟದ ಏಜನ್ಸಿಯನ್ನು ವಹಿಸಿಕೊಂಡಿದ್ದ ಮೈಸೂರು ಎಸೆನ್ಸ್ ಫ್ಲೋರ್ ಪ್ರಾಡಕ್ಟ್ಸ ಕಂಪನಿಯ ಮ್ಯಾನೇಜರಾದ ಬಿ. ಸೀತಾರಾಮಾಚಾರ್ಯರು ಸುಮಾರು 8-10 ಲಕ್ಷ ರೂಪಾಯಿಗಳನ್ನು ಅಪಹರಿಸಿಕೊಂಡು ಸರ್ಕಾರಕ್ಕೆ ಮೋಸಮಾಡಿರುವರೆಂದೂ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಲೆಕ್ಕಪತ್ರಗಳನ್ನು ಶೋಧಿಸುವದಕ್ಕೋಸ್ಕರ ಮೈಸೂರು ಸರಕಾರದವರು ಚೀಫ್ ಸೆಕ್ರೆಟರಿಗಳಾದ ಮ|| ರಾ|| ಎನ್. ಮಾಧವರಾಯರನ್ನು ಇಂಗ್ಲೆಂಡಿಗೆ ಕಳುಹಿಸುವವರಾಗಿರುವರೆಂದೂ ತಿಳಿದುಬರುತ್ತದೆ.

ರಾಜಧಾನಿಯ ಸುಪ್ರಸಿದ್ಧ ಜ್ಯೋತಿಷ್ಯವಿದ್ವಾಂಸರಾದ ಶ್ರೀಯುತ ಚಿಕ್ಕನಾಯ್ಕನಹಳ್ಳಿ ಡಿ. ಲಕ್ಷ್ಮೀನರಸಿಂಹ ಪಂಡಿತರವರು ಕಳೆದ ಸೋಮವಾರ ತಮ್ಮ ಜ್ಯೇಷ್ಠಪುತ್ರ ಚಿ|| ವೆಂಕಟರಾಮಯ್ಯನ ವಿವಾಹ ಮಹೋತ್ಸವವನ್ನು ದೊಡ್ಡಪೇಟೆಯಲ್ಲಿರುವ ತಮ್ಮ ಗೃಹದಲ್ಲಿ ಅತ್ಯಂತ ವೈಭವದಿಂದ ನೆರವೇರಿಸಿದರು. ಈ ಸಮಾರಂಭಕ್ಕೆ ಪಂಡಿತರು ರಾಜಧಾನಿಯ ಅನೇಕ ಅಧಿಕಾರಿಗಳನ್ನೂ, ದೊಡ್ಡಮನುಷ್ಯರನ್ನೂ ಪಂಡಿತರನ್ನೂ ಆಹ್ವಾನಿಸಿ ಅಪೂರ್ವವಾದ ಸಾನಾಯಿಯ ವಾದ್ಯವಾದನದಿಂದಲೂ ಸಂಗೀತದಿಂದಲೂ ಗಂಧಪುಷ್ಪತಾಂಬೂಲಾದಿಗಳಿಂದಲೂ ಸತ್ಕರಿಸಿದರು. ನೂತನ ವಧೂವರರಿಗೆ ದಯಾಮಯನಾದ ಪರಮಾತ್ಮನು ಚಿರಾಯುರಾರೋಗ್ಯೈಶ್ವರ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇವೆ.

ಮೈಸೂರು ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಮ್ಯಾನೇಜಿಂಗ್ ಏಜೆಂಟರೂ ಮೈಸೂರು ಎಸೆನ್ಸ್ ಫ್ಲೋರ್ ಕಂಪನಿಯ ಮ್ಯಾನೇಜರರೂ ಆದ ಮ|| ಬಿ. ಸೀತಾರಾಮಾಚಾರ್ಯರು ಮೈಸೂರು ಸರಕಾರದ ಗಂಧದೆಣ್ಣೆಯ ಏಜನ್ಸಿಯನ್ನು ವಹಿಸಿಕೊಂಡಿದ್ದು ಸರಕಾರಕ್ಕೆ ಸಲ್ಲಬೇಕಾಗಿದ್ದ ಸುಮಾರು 8 ಲಕ್ಷ ರೂಪಾಯಿಗೆ ಮೇಲ್ಪಟ್ಟು ಹಣವನ್ನು ದುರುಪಯೋಗಪಡಿಸಿಕೊಂಡಿರುವರೆಂಬ ಆರೋಪದ ಮೇಲೆ ಕಳೆದ ಗುರುವಾರ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಆಚಾರ್ಯರನ್ನು ಸೆರೆಹಿಡಿದು ಆಚಾರ್ಯರ ಮನೆ ಮತ್ತು

ಆಫೀಸುಗಳನ್ನು ಜಪ್ತಿಮಾಡಿದರು. ಮ|| ಸೀತಾರಾಮಾಚಾರ್ಯರು ಮೊದಲು ಮೈಸೂರ ಸರಕಾರದ ಇಂಜನಿಯರರಾಗಿದ್ದು ಅದಕ್ಕೆ ರಾಜೀನಾಮೆಯನ್ನು ಕೊಟ್ಟು ದಿವಂಗತ ಸಾಹುಕಾರ್ ಎಂ. ಎಲ್. ವರ್ಧಮಾನಯ್ಯನವರೊಡನೆ ಸೇರಿ ಕೃಷ್ಣರಾಜೇಂದ್ರ ಮಿಲ್ಲಿನ ಮ್ಯಾನೇಜಿಂಗ್ ಏಜಂಟರಾಗಿಯೂ, ಎಸೆನ್ಸ್ ಫ್ಲೋರ್ ಪ್ರಾಡಕ್ಟ್ಸ ಕಂಪನಿಯ ಮ್ಯಾನೇಜರಾಗಿಯೂ ಕೆಲಸ ಮಾಡುತ್ತಿದ್ದರು.

ವರ್ತಮಾನಸಂಗ್ರಹ.

ರಷ್ಯಾದೇಶದ ವಾಲ್ಗ ವಿವಾರ್ ಪ್ರಾಂತಕ್ಕೆ ಸೇರಿದ ಇಗಾಲ್ಕಿನೋ ಎಂಬ ಹಳ್ಳಿಯಲ್ಲಿ ಸಿನಿಮಾಮಂದಿರಕ್ಕೆ ಬೆಂಕಿ ಬಿದ್ದು 114 ಜನರು ಭಸ್ಮೀಭೂತರಾದರು.

ತುರ್ಕಿ ಸರಕಾರದವರು ಅವಿವಾಹಿತರಾದ ತರುಣ ತರುಣಿಯರಿಗೂ ವಿಧವೆಯರಿಗೂ ತಲೆಗಂದಾಯವನ್ನು ವಿಧಿಸಿ ಅದರಿಂದುತ್ಪನ್ನವಾದ ಹಣವನ್ನು 5 ಮತ್ತು ಅದಕ್ಕಿಂತ ಹೆಚ್ಚಾದ ಮಕ್ಕಳುಳ್ಳ ಸಂಸಾರಿಗಳಿಗೆ ಹಂಚಬೇಕೆಂದು ತೀರ್ಮಾನಿಸಿರುತ್ತಾರೆ.

ಕಳೆದ ಘೋರಯುದ್ಧದಲ್ಲಿ ಫ್ರೆಂಚ್ ಸೈನ್ಯಾಧಿಪತಿಯಾಗಿ ಅನೇಕ ಕಡೆಗಳಲ್ಲಿ ಜಯವನ್ನು ಹೊಂದಿ ಪ್ರಖ್ಯಾತರಾಗಿದ್ದ ಮಾರ್ಷಫೋಕ್‌ರವರು ಕಳೆದಬುಧವಾರ ಪ್ಯಾರಿಸ್‌ಪಟ್ಟಣದಲ್ಲಿ ಮೃತರಾದರು. ಇವರ ಶವಸಂಸ್ಕಾರವು ಸಕಲ ರಾಜಮರ್ಯಾದೆಯೊಡನೆ ನೆರವೇರಿಸಲ್ಪಟ್ಟಿತು.

ಮಹಾತ್ಮಾ ಗಾಂಧಿಯವರು ಬರ್ಮಾದೇಶದ ಸಂಚಾರವನ್ನು ಮುಗಿಸಿಕೊಂಡು ಕಳೆದ ಗುರುವಾರ ಮಧ್ಯಾಹ್ನ ರಂಗೂನಪಟ್ಟಣದಿಂದ ಅರೋಂಡಾ ಎಂಬ ಹಡಗಿನಲ್ಲಿ ಕುಳಿತು ಕಲ್ಕತ್ತೆಗೆ ಪ್ರಯಾಣಮಾಡಿದರು. ಬರ್ಮಾದೇಶದಲ್ಲಿ ಗಾಂಧಿ ನಿಧಿಗೆ ಒಟ್ಟು 1,55,000 ರೂಪಾಯಿಗಳು ಸೇರಿದವು.

ಅಮೇರಿಕಾದೇಶದ ಸಂಯುಕ್ತಸಂಸ್ಥಾನಗಳಲ್ಲಿ ಮದ್ಯಪಾನವನ್ನು ನಿರ್ಮೂಲಗೊಳಿಸುವದಕ್ಕೋಸ್ಕರ 50 ಸಾವಿರ ಡಾಲರುಗಳನ್ನು ಖರ್ಚುಮಾಡಿ ಪ್ರಸಿದ್ಧ ಪತ್ರಿಕೆ ಮತ್ತು ವಿನೋದ ಚಿತ್ರಗಳಮೂಲಕ ಜನರಿಗೆ ಮದ್ಯಪಾನದಿಂದುಂಟಾಗುವ ಕೆಡಕನ್ನು ತಿಳಿಯಪಡಿಸಿ ಆ ದುರಭ್ಯಾಸವನ್ನು ತೊಲಗಿಸಬೇಕೆಂದು ಅಲ್ಲಿಯ ಸರ್ಕಾರದವರು ನಿರ್ಧರಿಸಿರುತ್ತಾರೆ.

ಅನಂತಪುರ ಡಿಸ್ಟ್ರಿಕ್ಟಿಗೆ ಸೇರಿದ ವಜ್ರಕರೂರು ಗ್ರಾಮದ ಒಬ್ಬ ರೈತನು ಗದ್ದೆಯನ್ನು ಉಳುತ್ತಿರುವಾಗ ಒಂದು ಅಮೂಲ್ಯವಾದ ವಜ್ರವು ಸಿಕ್ಕಿತು. ಅವನು ಅದನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಿ 5000 ರೂಪಾಯಿಗೆ ಮಾರಿಬಿಟ್ಟನು. ಈಗ ಅದು 15 ಸಾವಿರ ರೂಪಾಯಿಗೆ ಖರೀದಿಯಾಗಿರುವದು. ಈ ವಿಚಾರವನ್ನು ಪೋಲೀಸರು ಶೋಧಮಾಡುತ್ತಿರುವರು.

ನಾಸಿಕ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನ ಅಧ್ಯಕ್ಷರೂ, ಚೀಫ್‌ಆಫೀಸರೂ ಮತ್ತೆ ಕೆಲವರೂ ಬೋರ್ಡಿನ ಹಣವನ್ನು ದುರುಪಯೋಗಪಡಿಸಿ ಸುಳ್ಳು ಲೆಖ್ಖವನ್ನು ಬರೆದದ್ದಕ್ಕೋಸ್ಕರ ಇವರಮೇಲೆ ಮೊಕದ್ದಮೆಯು ನಡೆದು ನಾಸಿಕದಜಡ್ಜರು ಅಧ್ಯಕ್ಷರಾದ ರಾ|| ಸಾ|| ಥೊರಾಟರಿಗೆ 3 ವರ್ಷ, ಚೀಫ್ ಆಫೀಸರಿಗೆ 1 ವರ್ಷ ಕಂಟ್ರಾಕ್ಟರನಿಗೆ 2 ವರ್ಷಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಬೊಂಬಾಯಿ ಪಟ್ಟಣದ ಕೂಲಿಕಾರರ ಮುಖಂಡರಾದ ಮಿ|| ಜಾಬ್‌ವಾಲಾರವರು ಕಮ್ಯೂನಿಸ್ಟ ಪಕ್ಷಾವಲಂಬಿಗಳೆಂದು ಅವರನ್ನು ಭಾರತಸರ್ಕಾರದವರು ಖೈದುಮಾಡಿದುದಕ್ಕೋಸ್ಕರ ಬೊಂಬಾಯಿ ಮಾಟುಂಗವರ್ಕ್‌ಷಾಪಿನ ಸುಮಾರು 5000 ಜನ ಕೆಲಸಗಾರರು ಮಿ|| ಗಿಣವಾಲಾರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸರ್ಕಾರದವರ ವರ್ತನೆಯನ್ನು ಖಂಡಿಸಿದರು. ಈ ಗುಂಪನ್ನು ಪೋಲೀಸರು ಲಾಠಿಗಳನ್ನು ಉಪಯೋಗಿಸಿ ಚದರಿಸಿದರು.

ಆಸ್ಟ್ರಿಯಾದೇಶದ ಡ್ಯಾನ್ಯೂಬ್ ನದಿಯಲ್ಲಿ ಕಳೆದ ತಿಂಗಳ ಚಳಿಯಿಂದ ಹೆಪ್ಪುಕಟ್ಟಿಕೊಂಡಿದ್ದ ನೀರು ಕಾವಿನಿಂದ ಬದಲಾಯಿಸಿದ ಉಷ್ಣತೆಯಿಂದ ಕರಗಿ ದೊಡ್ಡ ದೊಡ್ಡ ಮಂಜಿನಗಡ್ಡೆಗಳು ನದಿಯಲ್ಲಿ ತೇಲುತ್ತ ಇಕ್ಕಟ್ಟಾದ ಒಂದು ಸ್ಥಳದಲ್ಲಿ ನದಿಗೆ ಅಡ್ಡಗಟ್ಟೆಯನ್ನು ಹಾಕಿದಂತೆ ನಿಂತು ಬಿಟ್ಟಿದ್ದರಿಂದ ನದಿಯ ನೀರೆಲ್ಲಾ ಬೇರೆ ಮಾರ್ಗವಾಗಿ ಪ್ರವಹಿಸಿ ಎದುರಾಗಿ ಸಿಕ್ಕಿದ ಅನೇಕ ಗ್ರಾಮಗಳನ್ನು ಮರಗಳನ್ನು ಕೊಚ್ಚಿಕೊಂಡು ಹೋಗಿ ವಿಶೇಷ ನಷ್ಟವನ್ನುಂಟುಮಾಡಿದೆ.

ಸಿಲಹಟ್‌ಪ್ರಾಂತದಲ್ಲಿ ಜಾರ್ಜಿಶೇಕ್ ಎಂಬ ಮಹಮ್ಮದೀಯನು ತನ್ನ ಸಹೋದರನ ಮಗಳಾದ ಸಮುಜಾಬೀಬಿ ಎಂಬವಳನ್ನು ಬಲಾತ್ಕಾರದಿಂದ ತನ್ನ ಮನೆಯಲ್ಲಿಟ್ಟುಕೊಂಡು ಆಕೆಯೊಡನೆ ಅತ್ಯಾಚಾರನಡೆಯಿಸಲುದ್ಯುಕ್ತನಾಗಲು ಆಕೆಯು ತನ್ನ ಪಾತಿವ್ರತ್ಯ ರಕ್ಷಣಕ್ಕೋಸ್ಕರ ಧೂರ್ತನಾದ ತನ್ನ ಚಿಕ್ಕಪ್ಪನನ್ನು ಕೊಡಲಿಯಿಂದ ಕತ್ತರಿಸಿ ಕೊಂದುಬಿಟ್ಟಳು. ಸಮುಜೀಯ ಮೇಲೆ ಮೊಕದ್ದಮೆಯಾಗಿ ವಿಚಾರಣೆಯು ನಡೆಯಿಸಲ್ಪಟ್ಟಾಗ ನಿರ್ದೋಷಿಯೆಂದು ಬಿಡುಗಡೆಮಾಡಲ್ಪಟ್ಟಳು.

ಭಾರತಸರ್ಕಾರದವರು ಭಾರತದೇಶದಲ್ಲಿ ಉಪಯೋಗಿಸುವ ಉಪ್ಪಿನಮೇಲೆ ಮಣ 1 ಕ್ಕೆ 1—4—0 ರೂಪಾಯಿಯಂತೆ ಸುಂಕವನ್ನು ವಸೂಲುಮಾಡುವರು. ಇದರಿಂದ ಬಡವರಿಗೆ ಬಹಳ ತೊಂದರೆಯಾಗುವದರಿಂದ ಈ ಸುಂಕವನ್ನು 0—8—0 ಗೆ ಇಳಿಸಬೇಕೆಂದು ಮ|| ದೊರೆಸ್ವಾಮಿಅಯ್ಯಂಗಾರ್ಯರು ಭಾರತನ ವ್ಯವಸ್ಥಾಪಕಸಭೆಯಲ್ಲಿ ಒಂದು ಠರಾವನ್ನು ತಂದರು. ಈ ವಿಷಯವಾಗಿ ಅನೇಕರು ಚರ್ಚಿಸಿದಮೇಲೆ ಸುಂಕವನ್ನು 1 ರೂಪಾಯಿಗೆ ಇಳಿಸಬೇಕೆಂದು ಸರ್ವಾನುಮತದಿಂದ ಪಾಸಾಯಿತು.

ಹಿಂದುಸ್ಥಾನದಲ್ಲಿ ಖಾದೀಪ್ರಚಾರವು ಹಬ್ಬುತ್ತಿರುವದನ್ನು ಕಂಡು ಹಿಂದುಸ್ಥಾನದಲ್ಲಿಯೂ ಪರದೇಶಗಳಲ್ಲಿಯೂ ಇರತಕ್ಕ ಮಿಲ್ಲುಗಳಲ್ಲಿ ಆದೇಶದ ಬಟ್ಟೆಯನ್ನು ತಯಾರಿಸಿ ಅದನ್ನು ಹಿಂದೂಸ್ಥಾನದಲ್ಲಿ ಕೈನೂಲು ಮತ್ತು ಕೈಮಗ್ಗಗಳಿಂದ ತಯಾರಿಸಿದ ಖಾದೀಬಟ್ಟೆಯೆಂದು ಹೇಳಿ ಕೆಲವರು ಮಾರುತ್ತಿರುವರು. ಆದುದರಿಂದ ಇನ್ನುಮುಂದೆ ಈ ರೀತಿಯಾದಮೋಸಗಳು ನಡೆಯದಂತೆ ಮಾಡುವದಕ್ಕೋಸ್ಕರ ಪಂ|| ಮೋತೀಲಾಲ ನೆಹರೂರವರು ಖಾದೀರಕ್ಷಣಾಮಸೂದೆಯೊಂದನ್ನು ಭಾರತನ್ಯಾಯವಿಧಾಯಕಸಭೆಯ ಮುಂದಿಡುವರು.

ಹಿಂದುಸ್ಥಾನದ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಇಂಡಿಯಾ ಸ್ಟೇಟ್ ಸೆಕ್ರೆಟರಿಗಳ ಆಹ್ವಾನವನ್ನು ಸ್ವೀಕರಿಸಿ ಮುಂದಿನ ಜೂನ್ ತಿಂಗಳ ಮಧ್ಯಭಾಗದಲ್ಲಿ ಇಂಗ್ಲೆಂಡಿಗೆ ಪ್ರಯಾಣಮಾಡಿ 4 ತಿಂಗಳು ಕಾಲ ಅಲ್ಲಿದ್ದು ಭಾರತವರ್ಷಕ್ಕೆ ಸಾರ್ವಭೌಮ ಸರಕಾರವು ಕೊಡಬೇಕೆಂದಿರುವ ರಾಜಕೀಯ ಸುಧಾರಣೆಗಳ ವಿಷಯವಾಗಿ ತಮ್ಮ ಸಲಹೆಗಳನ್ನು ಕೊಡಲಿಚ್ಛಿಸಿರುವರು. ಇವರು ಹಿಂದಿರುಗಿ ಬರುವವರೆಗೂ ಮದ್ರಾಸ್ ಗವರ್ನರಾದ ಲಾರ್ಡ್ ಗೋಶ್ಚೆನ್‌ರವರು ವೈಸರಾಯರಾಗಿ ಕೆಲಸಮಾಡಬೇಕೆಂದು ಸಾರ್ವಭೌಮರು ಅಪ್ಪಣೆಮಾಡಿರುತ್ತಾರೆ.

ಭರತಶಾಸ್ತ್ರದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಹೊಂದಿರುವ ಒಬ್ಬ ಆಂಗ್ಲಸ್ತ್ರೀಯಳು "ರಾಗಿಣಿದೇವಿ" ಎಂಬ ಹೆಸರನ್ನಿಟ್ಟುಕೊಂಡು ಭಾರತನೃತ್ಯ ಮತ್ತು ಸಂಗೀತವನ್ನು ಅಮೇರಿಕಾದೇಶದಲ್ಲಿ ವಿಶೇಷವಾಗಿ ಪ್ರಚಾರಮಾಡುತ್ತಿರುವಳು. ಇವಳು ಭಾರತೀಯನೃತ್ಯಾಂಜಲಿ ಎಂಬ ಗ್ರಂಥವನ್ನು ಬರೆದು ಅದರಲ್ಲಿ ಭಾರತೀಯ ಮತ್ತು ಪಾಶ್ಚಾತ್ಯನೃತ್ಯಕಲೆಗಳ ಭೇದಭಾವವನ್ನೂ, ಭರತಶಾಸ್ತ್ರದ ಶ್ರೇಷ್ಠತ್ವವನ್ನೂ ವಿಶದವಾಗಿ ವಿವರಿಸಿರುವಳು. ಇದನ್ನೋದಿ ಆ ದೇಶದ ರಸಿಕರು ಭಾರತೀಯನೃತ್ಯಪದ್ಧತಿಯನ್ನೇ ವಿಶೇಷವಾಗಿ ಕಲಿಯತೊಡಗಿರುವರು.

ಆಫ್ರಿಕಾಖಂಡದ ಟ್ರಾನ್ಸ್‌ವಾಲ್ ಪ್ರಾಂತದಲ್ಲಿ ಬಹುದೊಡ್ಡದಾದ ಒಂದು ಕಾಡುಕೋಣದ ಅಸ್ಥಿಪಂಜರವೂ ಅದರ ಸಮೀಪದಲ್ಲಿಯೇ ಅದರಂತೆಯೇ ದೊಡ್ಡದಾದ ಆಕೃತಿಯುಳ್ಳ ಮನುಷ್ಯನ ಮೂಳೆಗಳೂ ದೊರೆತಿರುತ್ತವೆ. ಕಾಡುಕೋಣದ ತಲೆಯ ಅಗಲವು ಸುಮಾರು 12 ಅಡಿಯಷ್ಟಿರುತ್ತದೆ. ಮನುಷ್ಯನಿಗೂ ಕಾಡುಕೋಣಕ್ಕೂ ಹೊಡೆದಾಟವಾಗಿ ಎರಡೂ ಅಲ್ಲಿ ಸತ್ತುಹೋಗಿರಬೇಕೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿರುವರು. ಪೂರ್ವದಲ್ಲಿ ಇಂತಹ ಭಯಂಕರ ಕಾಡುಮೃಗಗಳೊಡನೆ ಹೋರಾಡುವಷ್ಟು ಶಕ್ತರಾದ ರಾಕ್ಷಸಾಕಾರದಮನುಷ್ಯರು ಆಫ್ರಿಕಾದೇಶದಲ್ಲಿ ವಾಸಿಸುತ್ತಿದ್ದರಂತೆ!

ಅಹಮ್ಮದಾಬಾದ್ ಪಟ್ಟಣದ ಪುರುಷೋತ್ತಮ ರತನಚಂದನೆಂಬ 53 ವರ್ಷ ವಯಸ್ಸಿನ ಜೈನ ಶ್ರೀಮಂತನು 15 ವರ್ಷ ವಯಸ್ಸಿನ ರಮಾಬಾಯಿ ಎಂಬ ಹುಡುಗಿಯನ್ನು ಮದುವೆಯಾಗಲು ಸಿದ್ಧನಾಗಿದ್ದುದನ್ನು ನೋಡಿ ಅಲ್ಲಿಯ ಸಮಾಜ ಸುಧಾರಕ ತರುಣರು ವಧುವಿನ ತಂದೆಗೂ ವರನಿಗೂ ಎಷ್ಟು ವಿವೇಕವನ್ನು ಹೇಳಿದರೂ ಕೇಳದೆಹೋದುದರಿಂದ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದುಮಾಡಿ ಆ ವಿಷಮವಿವಾಹವನ್ನು ನಿಲ್ಲಿಸುವಂತೆ ಆರ್ಡರ್ ಮಾಡಿಸಿ ವಧೂವರರ ಗೃಹಗಳನ್ನು ನೂರಾರು ಜನ ತರುಣರು ಕಾಯ್ದುಕೊಂಡಿದ್ದರು. ಕೊನೆಗೆ ಆ ವೃದ್ಧವರನಿಗೆ ಜ್ಞಾನೋದಯವಾಗಿ ತನ್ನ ಕೃತಿಗೆ ಪಶ್ಚಾತ್ತಾಪಪಟ್ಟು ವಿವಾಹವಾಗುವದಿಲ್ಲವೆಂದು ಒಪ್ಪಿಕೊಂಡನು.

ಅಫ್ಘಾನಿಸ್ಥಾನದ ಅಮಾನುಲ್ಲಾಖಾನರ ಸಹಾಯಕ್ಕೋಸ್ಕರ ಡಾಕ್ಟರ್ ಅಲಿನ್‌ರವರು ಉತ್ತರಹಿಂದುಸ್ಥಾನದಲ್ಲಿ ಹಣವನ್ನು ಶೇಖರಿಸುತ್ತಿರುವರು. ಜನರಲ್ ನಾದಿರ್‌ಖಾನನು ಹಾಡಾ ಎಂಬಲ್ಲಿ ನೇಮಿಸುವ ಜಿರ್ಗಾ ಎಂಬ ಸಭೆಗೆ ಬಚ್ಚಾಯಿಸಕೋನು ಇಬ್ಬರು ಮೌಲ್ವಿಗಳನ್ನು ಕಳುಹಿಸಿಕೊಟ್ಟಿದ್ದನು. ಅದೃಷ್ಟವಶಾತ್ ಇವರೀರ್ವರನ್ನು ತೆಗೆದುಕೊಂಡುಹೋಗುತ್ತಿದ್ದ ವಿಮಾನವು ದಾರಿಯಲ್ಲಿ ಕೆಳಗೆ ಬಿದ್ದು ಇಬ್ಬರೂ ಮೃತರಾದರು. ಜನರಲ್ ನಾದಿರ್‌ಖಾನನು ಬಚ್ಚಾಯಿಸಕೋನಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಬಚ್ಚಾಯಿಸಕೋನು ಪ್ರಭು ಪದವಿಗೆ ಬೇಕಾದ ಯೋಗ್ಯತೆ ಇಲ್ಲದಿದ್ದರೂ ಕಾಬೂಲ್ ಸಿಂಹಾಸನವನ್ನು ಆಕ್ರಮಿಸಿರುವದು ಅಪಾಯಕರವೆಂದೂ, ತಾನು ಕೂಡಿಸುವ ಜಿರ್ಗಾಕ್ಕೆ ಸರ್ವರೀತಿಯಿಂದಲೂ ಸಹಾಯಮಾಡಿ ಯೋಗ್ಯನಾದ ಪ್ರಭುವನ್ನು ಆರಿಸಲು ಪ್ರಯತ್ನಿಸಬೇಕೆಂದೂ, ಇದಕ್ಕೆ ವಿರುದ್ಧವಾಗಿ ವರ್ತಿಸುವದಾದರೆ ಸಕಲ ಪ್ರಜೆಗಳೂ ಆತನ ಮೇಲೆ ತಿರುಗಿಬೀಳುವಂತೆ ಮಾಡುವೆನೆಂದೂ ಎಚ್ಚರಿಸಿರುತ್ತಾನೆ.

ಹಿಂದುಸ್ಥಾನದ ಆದ್ಯಂತದಲ್ಲಿಯೂ ಸಂಘಗಳನ್ನು ಸ್ಥಾಪಿಸಿಕೊಂಡು ವ್ಯಾಪಾರಾದಿಗಳನ್ನು ನಡೆಯಿಸುತ್ತಿರುವ ಕೂಲಿಕಾರಸಂಘ, ಯುವಕಸಂಘ ಮೊದಲಾದ ಸಂಘದವರು ಕಮ್ಯೂನಿಸ್ಟ ಪಕ್ಷಾವಲಂಬಿಗಳಾಗಿ ಸಾರ್ವಭೌಮ ಸರ್ಕಾರಕ್ಕೆ ವಿರುದ್ಧವಾಗಿ ಚಳವಳಿಯನ್ನು ನಡೆಯಿಸುತ್ತಿರುವರೆಂಬ ಆರೋಪದಮೇಲೆ ಸಂಘಗಳ ಚಾಲಕರನ್ನು ಖೈದುಮಾಡಿ ಅವರ ಮನೆಗಳನ್ನು ಶೋಧಿಸುವಂತೆ ಭಾರತಸರ್ಕಾರದವರು ಅಪ್ಪಣೆಮಾಡಿರುತ್ತಾರೆ. ಆ ಪ್ರಕಾರ ಮಿಯಾರತ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಹಿಂದುಸ್ಥಾನದ ಬೇರೆ ಬೇರೆ ಪಟ್ಟಣಗಳಲ್ಲಿರುವ 31 ಜನರಮೇಲೆ ವಾರಂಟನ್ನು ಹೊರಡಿಸಿ ಸುಮಾರು 300ಮನೆಗಳನ್ನು ಶೋಧಿಸಬೇಕೆಂದು ಅಪ್ಪಣೆಮಾಡಿರುತ್ತಾರೆ. ಇದುವರೆಗೆ ಪೋಲೀಸರು ಬೊಂಬಾಯಿ, ಪೂನಾ, ಕಲ್ಕತ್ತಾ, ಚಾಂದಪುರ, ಮುಜ್ಫರಿಯಾ, ಡಾಕಾ, ಕಾನಪುರ, ಲಖನೌ, ಬನಾರಸ್, ಲಾಹೋರ್, ಅಮೃತಸರ್, ಅಲಾಹಾಬಾದ್, ಮಿಯಾರಟ್ ಮೊದಲಾದ ಕಡೆಗಳಲ್ಲಿ ಅನೇಕ ಜನರನ್ನು ಹಿಡಿದು ಇಂಡಿಯನ್ ಪೆನಲ್ ಕೋಡ್ 121 ಎ. ಸೆಕ್ಷನ್ ಪ್ರಕಾರ ಅವರ ಮನೆಗಳನ್ನು ಶೋಧಿಸಿ ಅಲ್ಲಿ ದೊರೆತ ಕಾಗದಪತ್ರಗಳನ್ನು ವಶಪಡಿಸಿಕೊಂಡು ಅವರೆಲ್ಲರನ್ನು ವಿಚಾರಣೆಗೋಸ್ಕರ ಮಿಯಾರಟ್ ಪಟ್ಟಣಕ್ಕೆ ಸಾಗಿಸುತ್ತಿರುವರು. ಸೆರೆಹಿಡಿಯಲ್ಪಟ್ಟವರಲ್ಲಿ ಸ್ವರಾಜ್ಯವಾದಿಗಳೂ, ನ್ಯಾಯವಿಧಾಯಕ ಸಭಾಸದಸ್ಯರೂ, ವಿದ್ಯಾರ್ಥಿಗಳೂ ಸೇರಿರುತ್ತಾರೆ. ಇದರಿಂದ ದೇಶದಲ್ಲೆಲ್ಲಾ ವಿಶೇಷವಾದ ಕಳವಳವುಂಟಾಗಿದೆ.

ಅಷ್ಟಪ್ರಕರಣ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯರು ಹಿರೇಮಠ ವಿಜಾಪುರ.

ವೇದದಂತೆ ಪ್ರಮಾಣಭೂತಗಳಾದ ಕಾಮಿಕಾದಿ ೨೮ ಮೂಲಾಗಮಗಳಲ್ಲಿಯೂ ಉಪಾಗಮಗಳಲ್ಲಿಯೂ ಪ್ರತ್ಯೇಕವಾಗಿ ವಿದ್ಯಾ, ಯೋಗ, ಚರ್ಯಾ, ಕ್ರಿಯಾ ಎಂಬ ನಾಲ್ಕು ಪಾದಗಳು ಇರುವುವು. ಅವುಗಳ ಪ್ರಚಾರವು ಕಡಿಮೆಯಾಗಿದ್ದುದರಿಂದಲೂ, ಅವುಗಳ ಅರ್ಥವು ಬಹು ಗೂಢವಾಗಿರುವುದರಿಂದಲೂ, ನಮ್ಮಂಥವರಿಗೆ ಅವುಗಳಿಂದಲೇ ಅರ್ಥಗ್ರಹಿಕೆಯಾಗುವುದು ಅಶಕ್ಯವೆಂದೇ ಪರಮೇಶ್ವರನ ಅವತಾರಭೂತರಾದ ಕೆಲ ಮಹಾತ್ಮರಿಂದ ಆ ಆಗಮೋಪಾಗಮಗಳಿಗೆ ಸುಸ್ಪಷ್ಟಾರ್ಥ ಪ್ರತಿಪಾದಕಗಳಾದ ಅನೇಕವೃತ್ತಿಗಳು ರಚಿಸಲ್ಪಟ್ಟಿರುವವು.

ಮತ್ತು, ಆ ಆಗಮೋಪಾಗಮಗಳಲ್ಲಿಯೂ ವಿದ್ಯಾಪಾದದೊಳಗಣ ಪದಾರ್ಥಗಳನ್ನು ಅರಿತುಕೊಳ್ಳಬೇಕೆಂಬುವವರಿಗೆ ಅವುಗಳ ಜ್ಞಾನವು ಆಯಾಸವಿಲ್ಲದೆ ಉಂಟಾಗಲೆಂಬ ಹೇತುವಿನಿಂದ ಸಂಪ್ರದಾಯಶುದ್ಧರೂ ಪಂಡಿತಪ್ರಕಾಂಡರೂ ಶಿವಾನುಭವಿಗಳೂ ಆದ ಕೆಲಜನ ಆಚಾರ್ಯರು ಶಿವಾಗಮಗಳ ತತ್ವಾರ್ಥಗಳನ್ನು ಕಾರಿಕಾರೂಪದಿಂದ ಬರೆದಿದ್ದಾರೆ; ಅವೇ '**ಅಷ್ಟಪ್ರಕರಣ**' ಗಳೆಂದು ಪ್ರಸಿದ್ಧಗಳಾಗಿವೆ. ಅವು— ೧ ತತ್ವಪ್ರಕಾಶಿಕಾ ೨ ತತ್ವಸಂಗ್ರಹಃ ೩ ತತ್ವತ್ರಯನಿರ್ಣಯಃ ೪ ಭೋಗಕಾರಿಕಾ ೫ ನಾದಕಾರಿಕಾ ೬ ಮೋಕ್ಷಕಾರಿಕಾ ೭ ಪರಮೋಕ್ಷನಿರಾಸಕಾರಿಕಾ ೮ ರತ್ನತ್ರಯಮ್ ಎಂಬುದಾಗಿವೆ. ಪ್ರಕೃತದಲ್ಲಿ ಶಿವಾನುಭವಪ್ರೇಮಿಗಳಿಗೆ ಅವುಗಳ ಪರಿಚಯಮಾಡಿಕೊಡುವುದೇ ಈ ಲೇಖನದ ಉದ್ದೇಶವು.

ತತ್ವಪ್ರಕಾಶಿಕಾ.

ಅಷ್ಟಪ್ರಕರಣಗಳೊಳಪಟ್ಟ ಈ ಗ್ರಂಥವು **ಆರ್ಯಾ** ಎಂಬ ವೃತ್ತಜಾತಿಯ ಎಪ್ಪತ್ತೈದು ಪದ್ಯಗಳುಳ್ಳದ್ದಾಗಿದೆ. ಇದರಲ್ಲಿ ಶಿವಾಗಮಗಳಲ್ಲಿಯ ವಿದ್ಯಾಪಾದದಲ್ಲಿ ಪ್ರತಿಪಾದಿತಗಳಾದ ಮೂವತ್ತಾರು ತತ್ವಗಳು ಬಹುವಿಶದವಾಗಿ ಹೇಳಲ್ಪಟ್ಟಿವೆ.

ಈ ಪ್ರಕರಣವನ್ನು ರಚಿಸಿದ ಭೋಜನೃಪತಿಯು ಯಾವನು? ಯಾವಸಮಯದಲ್ಲಿದ್ದನು? ಎಂಬುದು ಮೊದಲಾದುದರಬಗ್ಗೆ ಬಲ್ಲಿ ಹೇಳಲಿಕ್ಕೆ ಅನುಕೂಲವಾದ ಸಾಧನೆಗಳುಸಿಕ್ಕಿಲ್ಲ. ಆದರೆ ಇಷ್ಟುಮಾತ್ರಹೇಳಬಹುದು; ಏನಂದರೆ—**ಅಘೋರಶಿವಾಚಾರ್ಯರು** ಬರೆದ '**ಪದ್ಧತಿ**' ಎಂಬಗ್ರಂಥದಲ್ಲಿ ಉಕ್ತವವಿಧಿಯನ್ನು ನಿರೂಪಿಸುವ ಗೋತ್ರವಿಧಿನಿರ್ಣಯಪಟಲದಲ್ಲಿ ಹೇಳಲ್ಪಡುವ.

> ಶತೋಽಭೂಲ್ಲಾಟ ಉತ್ತುಂಗಶಿವೋ ವಿಶ್ವೇಶ್ವರ ತೀಶ್ವರಃ| ಕಲ್ಯಾಣ ನಗರೀವಾಸೀ ಗುರುಃಪದ್ಧತಿಕೃತ್ಸುಧೀಃ ||
> ಸರ್ವವಿದ್ಯಾಧಿಪೋಽಯಸ್ಯ ಕನೀಯಾನಾರ್ಯ ದೇಶಜಃ| ಸರ್ವಾಗಮಾರ್ಥ ನಿರ್ಣೇತುಃ ಶ್ರೀ ಭೋಜನೃಪತೇರ್ಗುರುಃ ||

ಎಂಬ ಈ ಎರಡು ಪದ್ಯಗಳಿಂದ, ಈಭೋಜನೃಪತಿಯ ಗುರುಗಳಿಗೆ **ಉತ್ತುಂಗ ಶಿವಾಚಾರ್ಯರು** ಎಂದೂ, ಅವರಿಂದ ಬರೆಯಲ್ಪಟ್ಟ '**ಪದ್ಧತಿ**' ಎಂಬ ಒಂದು ಗ್ರಂಥವಾದರೂ ಇದೆ ಎಂದೂ ಸಿದ್ಧವಾಗುವುದು. ಈ ಮೇಲಿನ ಎರಡನೆಯ ಪದ್ಯದಲ್ಲಿಯೂ '**ಸರ್ವಾಗಮಾರ್ಥನಿರ್ಣೇತುಃ**' ಎಂಬ ವಿಶೇಷಣವಾಕ್ಯದಿಂದ ಉತ್ತುಂಗ ಶಿವಾಚಾರ್ಯರಿಗೆ ಸರ್ವಶಿವಾಗಮಗಳ ರಹಸ್ಯಾರ್ಥವನ್ನು ಇದ್ದಕಿದ್ದಹಾಗೆ ವಿಶದವಾಗಿ ಬೋಧಿಸುವುದರಲ್ಲಿ ಅಪ್ರತಿಹತವಾದ ಪಾಂಡಿತ್ಯವಿದ್ದಿತೆಂದು ನಿಶ್ಚಯಿಸಲ್ಪಡುವುದು.

ಈ ಭೋಜರಾಜನು ಮಾಹೇಶ್ವರನಾದುದರಿಂದ ಸಂಸ್ಕೃತದಲ್ಲಿಯೂ ಪ್ರಾಕೃತದಲ್ಲಿಯೂ ಉದ್ದಾಮ ಗ್ರಂಥಗಳನ್ನು ಬರೆದ ಪ್ರಾಚೀನ ವೀರಶೈವ ಕವಿಗಳು ಇವನನ್ನು ಬಹಳವಾಗಿ ಹೊಗಳಿದ್ದಾರೆ. ಮತ್ತು **ವಿದ್ಯಾರಣ್ಯಯತಿಗಳು ಸೂತಸಂಹಿತೆಯ** ವ್ಯಾಖ್ಯಾನದಲ್ಲಿ ಸಂದರ್ಭಾನುಸಾರವಾಗಿ ಈ ಪ್ರಕರಣದಲ್ಲಿಯ (ತತ್ವಪ್ರಕಾಶಿಕೆಯ) ಅನೇಕ ಶ್ಲೋಕಗಳನ್ನು ಪ್ರಮಾಣರೂಪವಾಗಿ ಎತ್ತಿ ಬರೆಯುವಾಗ, ಇವನನ್ನು '**ಆಚಾರ್ಯ**'-'**ಆಗಮಿಕ**' ಮೊದಲಾದ ಗೌರವವಿಶೇಷಣಗಳಿಂದ ಸ್ಮರಿಸುತ್ತಾರೆ.

ಈ ಗ್ರಂಥಕ್ಕೆ ಶ್ರೀಕುಮಾರದೇವನೂ ಶ್ರೀಅಘೋರಶಿವಾಚಾರ್ಯನೂ ಬರೆದ ಎರಡು ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ಶ್ರೀಕುಮಾರದೇವನು, ಶಿವಾಗಮ ಸಂಗ್ರಹಭೂತಗಳಾದ ಕೆಲವು '**ಪದ್ಧತಿ**'ಗ್ರಂಥಗಳಲ್ಲಿ '**ತದುಕ್ತಂ-ಕುಮಾರದೇವೇನ**' ಎಂದು ಪ್ರಾಮಾಣಿಕರೂಪವಾಗಿ ಸ್ಮರಿಸಲ್ಪಡುತ್ತಾನೆ.

ಶ್ರೀಮದಘೋರಶಿವಾಚಾರ್ಯನು ತತ್ವಪ್ರಕಾಶಾದಿ ಅಷ್ಟಪ್ರಕರಣಗಳಿಗೂ ವ್ಯಾಖ್ಯಾನವನ್ನು ಮಾಡಿರುವನಲ್ಲದೆ ಕೆಲ ಶಿವಾಗಮಗಳಿಗೆ ವೃತ್ತಿಯನ್ನೂ ಸಹ ಬರೆದಿರುವನು. ಇವನು ಬರೆದ '**ಪದ್ಧತಿ**' ಎಂಬ ಗ್ರಂಥದ ಉಕ್ತವಪ್ರಕರಣದಲ್ಲಿಯ ಗೋತ್ರಸಂತತಿ ನಿರ್ಣಯಪ್ರಸಂಗದಲ್ಲಿ ಸುಕ್ಷೇಪವಾಗಿ ಪರಶಿವನಿಂದ ಮೊದಲುಮಾಡಿ ಸಂತಾನ ಕ್ರಮವಿಡಿದು ತನ್ನ ಸಂತತಿಯುವರನ್ನು ಹೇಳಿಕೊಡಿಸಿಗ ತನ್ನ ಗುರುಗಳು **ಸರ್ವಾತ್ಮಶಿವಾಚಾರ್ಯ**ರೆಂದೂ ವಾಸಸ್ಥಳವು **ಚೋಳದೇಶ**ವೆಂದೂ ಗ್ರಂಥವು **ಶಾಲಿವಾಹನಶಕೆ ೧೦೭೦ರಲ್ಲಿ** ಬರೆಯಲ್ಪಟ್ಟಿತೆಂದೂ ಹೇಳಿದ್ದಾನೆ. ಇವನು **ಪಾಷಣ್ಡಾಪಜಯ-ಕಾವ್ಯತಿಲಕ-ಭಕ್ತಪ್ರಕಾಶ** ಮೊದಲಾದ ಅನೇಕ ಗ್ರಂಥಗಳನ್ನು ಸ್ವತಂತ್ರವಾಗಿ ರಚಿಸಿದ್ದಾನೆಂಬ ಸಂಗತಿಯನ್ನು ಮೃಗೇಂದ್ರಾಗಮ ವಿದ್ಯಾಪಾದದ ವೃತ್ತಿಯನ್ನು ಅಭಿವ್ಯಕ್ತಗೊಳಿಸುವ **ದೀಪಿಕೆಯ** ಕೊನೆಯಲ್ಲಿ ತಾನೇ ಹೇಳಿದ್ದಾನೆ. ಆ ವಾಕ್ಯವು ಹೀಗಿದೆ.—

> ಪಾಷಣ್ಡಾಪಜಯಂ ಸ ಕಾವ್ಯತಿಲಕಂ ಭಕ್ತಪ್ರಕಾಶಾದಿಕಂ ಚಕ್ರೇ ವಾಕ್ಯಪದಪ್ರಮಾಣನಿಪುಣಃ ಶ್ರೀಚೋಳಭೂಪಾಶ್ರಯಮ್ | ಸೋಽಯಂ ವಿಪ್ರಶಿಖಾಮಣಿಃ ಶ್ರುತಿನಿಧಿಃ ಶ್ರೀಮಾನಘೋರಃ ಶಿವಃ ಪಾದೇಸ್ಮಿನ್ನಕರೋನ್ಮೃಗೇನ್ದ್ರವಿವೃತೇರ್ವಿದ್ಯಾಭಿಧೇದೀಪಿಕಾಂ ||

ಇವನು ತತ್ವಪ್ರಕಾಶಿಕೆಗೆ ಬರೆದ ವ್ಯಾಖ್ಯಾನವನ್ನು ಅನುಸರಿಸಿಯೇ ಪರ್ವತೇಶನು ಕನ್ನಡದಿಂದ ಟೀಕೆಮಾಡಿದ್ದಾನೆ.

ತತ್ವಸಂಗ್ರಹ.

ಇದನ್ನು ರಚಿಸಿದವರು ಕಾಶ್ಮೀರ ಮಾಹೇಶ್ವರ ವಂಶೀಯರಾದ ಸದ್ಯೋಜ್ಯೋತಿ ಶಿವಾಚಾರ್ಯರು. ಇವರು **ರೌರವ** ಎಂಬ ಆಗಮಕ್ಕೆ ವೃತ್ತಿಯನ್ನು ಬರೆದಿದ್ದಾರೆ. ಇವರ ಗುರುಗಳು **ಉಗ್ರಜ್ಯೋತಿ ಶಿವಾಚಾರ್ಯರು.** ಈ ವಿಷಯವಾಗಿ ಸದ್ಯೋಜ್ಯೋತಿ ಶಿವಾಚಾರ್ಯರು ಈ ಗ್ರಂಥದ ಕೊನೆಯಲ್ಲಿ '**ಇತ್ಯವದತ್ತತ್ವಾನಿ ತು ಸದ್ಯೋಜ್ಯೋತಿಃ ಸುವೃತ್ತಿಕೃತ್**' ಎಂದು ನಿರೂಪಿಸಿದ್ದಾರೆ. ಈ ಪದ್ಯದ ವ್ಯಾಖ್ಯಾನದಲ್ಲಿ ಶ್ರೀ ಅಘೋರ ಶಿವಾಚಾರ್ಯನು—'**ಸುವೃತ್ತಿಃ ಸದ್ವೃತ್ತಿರಿತಿ, ರೌರವ ವೃತ್ತೇರ್ನಾಮ: ತತ್ಕರ್ತ್ರೇದಂ ನಿರ್ಮಿತಮಿತ್ಯರ್ಥಃ**' ಎಂದು ಸ್ಪಷ್ಟಪಡಿಸಿದ್ದಾನೆ. ಸದ್ಯೋಜ್ಯೋತಿ ಶಿವಾಚಾರ್ಯರ ಕಾಲವಾವುದು? ಮುಂತಾದುದರ ಬಗ್ಗೆ ಸದ್ಯಃ ಚೆನ್ನಾಗಿ ಅರಿತುಕೊಳ್ಳಲು ಶಕ್ಯವಿಲ್ಲ.

ಈ ಪ್ರಕರಣದಲ್ಲಿ '**ವ್ಯತ್ಯಸ್ತಮೇತದೋಪನೇಯೋಽಸೌ ಶಿವಾಯ ಗಮನಂ ಪ್ರತಿ**' ಎಂಬ ಶ್ರೀಮತ್ಸ್ವಾಯಂಭುವ ಶ್ರುತ್ಯನುರೋಧವಾಗಿ, ದೀಕ್ಷೆಯಲ್ಲಿ ಸಂಹಾರಕ್ರಮದಿಂದ ಮೂವತ್ತಾರು ತತ್ವಗಳ ಶುದ್ಧಿಯ ಕ್ರಮವಿರುವುದರಿಂದ ಆಕ್ರಮವನ್ನು ಅನುಸರಿಸಿ ಮೂವತ್ತಾರು ತತ್ವಗಳು ಪ್ರತಿಪಾದಿಸಲ್ಪಟ್ಟಿವೆ.

ಈ ಗ್ರಂಥಕ್ಕೆ ಅಘೋರ ಶಿವಾಚಾರ್ಯನು ವ್ಯಾಖ್ಯಾನಮಾಡಿದ್ದಾನೆ. ಮತ್ತು, ಶ್ರೀ ನಾರಾಯಣಕಂಠನಿಂದ ರಚಿಸಲ್ಪಟ್ಟ ಅತಿವಿಸ್ತೃತವಾದ ಟೀಕೆಯೊಂದಿರುವುದೆಂದೂ ಅಲ್ಪಮತಿಗಳಿಗೋಸುಕ ನಾನು ಲಘುಟೀಕೆಯನ್ನು ಬರೆಯುವೆನೆಂದೂ ಅಘೋರಶಿವಾಚಾರ್ಯನು ಈ ಪ್ರಕರಣದ ಟೀಕಾರಂಭದಲ್ಲಿ—

> ತತ್ವಸಂಗ್ರಹಜಸ್ಯಾಸ್ಯ ಪ್ರಕಾಶಾಯವಿತಾನಿತಾ| ಶ್ರೀನಾರಾಯಣಕಂಠೇನ ಬೃಹಟ್ಟೀಕಾಶರನ್ನಿಶಾ ||
> ತಥಾಪಿ ಖಿನ್ನಬುದ್ಧೀನಾಂ ಬೃಹಟ್ಟೀಕಾ ಪ್ರವಿಸ್ತರೇ | ಹಿತಾಯ ಲಘುಟೀಕಾತ್ರ ಮಯೇಯಮುಪರಚ್ಯತೇ ||

ಎಂದು ಹೇಳಿದ್ದಾನೆ.

ತತ್ವತ್ರಯ ನಿರ್ಣಯ.

ಇದಾವರೂ ಅಷ್ಟಪ್ರಕರಣಾಂತರ್ಗತವಾದುದೇ; ಇದನ್ನೂ ಶ್ರೀ ಸದ್ಯೋಜ್ಯೋತಿ ಶಿವಾಚಾರ್ಯರೇ ರಚಿಸಿದ್ದಾರೆ. ಅವರು ರೌರವಾಗಮದಲ್ಲಿ ಹೇಳಿದ ಅರ್ಥವನ್ನೇ '**ತತ್ವಸಂಗ್ರಹ**'ವೆಂಬ ಪ್ರಕರಣದಿಂದ ಪ್ರತಿಪಾದಿಸಿ ಸ್ವಾಯಂಭುವಾಗಮ ಸಿದ್ಧವಾದ ಅರ್ಥವನ್ನು ಈ ಪ್ರಕರಣದಿಂದ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಈ ಸಂಗತಿಯು ಈ ಪ್ರಕರಣದ ಉಪಸಂಹಾರದಲ್ಲಿ ಅವರೇ

> ಉಕ್ತಃ ಸಮಾಸತೋಽಯಂ ತತ್ವತ್ರಯ ನಿರ್ಣಯಶ್ಚ ವೃತ್ತಿಕೃತಾ | ಸ್ವಾಯಮ್ಭುವಸ್ಯ ಜಡತಾಮಸನೇಽಸುಮನಾದಿಕಾಂ ಪುಂಷ್ಯಃ ||

ಎಂದು ಹೇಳಿರುವ ನುಡಿಯಿಂದ ತಿಳಿದು ಬರುವುದು. ಇದಕ್ಕಾದರೂ ಶ್ರೀ ಅಘೋರಶಿವಾಚಾರ್ಯನೇ ವೃತ್ತಿಯನ್ನು ಬರೆದಿದ್ದಾನೆ. ಈ ಪ್ರಕರಣದಲ್ಲಿ **ಪತಿ, ಪಶು-ಪಾಶ** ಎಂಬ ಮೂರು ತತ್ವಗಳು ವಿಶದವಾಗಿ ಹೇಳಲ್ಪಟ್ಟಿವೆ.

ಭೋಗಕಾರಿಕಾ.

ಇದರಲ್ಲಿ ಪಶುಗಳ (ಆತ್ಮರ) ಮಲಪರಿಪಾಕಕ್ಕಾಗಿಯೂ ಕರ್ಮಪಾಕಕ್ಕಾಗಿಯೂ ಭೋಗವಾದರೂ ಪರಂಪರೆಯಿಂದ ಮೋಕ್ಷಕ್ಕೆ ಸಾಧನವಾಗಿರುವದರಿಂದ ಅಂತಹ ಭೋಗವೂ ಭೋಕ್ತೃ ಭೋಗ್ಯಗಳೂ ನಿರೂಪಿಸಲ್ಪಡುತ್ತವೆ.

ಮೋಕ್ಷಕಾರಿಕೆಯ ಉಪಸಂಹಾರದಲ್ಲಿಯೂ **ಶಿವಾತ್ಪರಂ ಪರಾಯಾತಾ ಭೋಗಮೋಕ್ಷೌ ಸಸಾಧನೌ** ಎಂದು ಮೊದಲಾಗಿ ಮೂರನೆಯ ಪದ್ಯದ ಕೊನೆಯವರೆಗೆ ಪಂಥಾವಿಸಿದರೆ ಈ ಪ್ರಕರಣವಾದರೂ ಶ್ರೀ ಸದ್ಯೋಜ್ಯೋತಿ ಶಿವಾಚಾರ್ಯರಿಂದಲೇ ರಚಿತವಾಗಿರುವುದೆಂದು ಹೇಳಬಹುದಾಗಿದೆ. ಇದಕ್ಕೆ ಶ್ರೀ ಅಘೋರ ಶಿವಾಚಾರ್ಯನ ವ್ಯಾಖ್ಯಾನವಿದೆ.

ನಾದಕಾರಿಕಾ

ಇದರಲ್ಲಿ ವೈಯಾಕರಣರೇ ಮೊದಲಾದವರಿಂದ ಅಂಗೀಕೃತನಾದ ಸ್ಫೋಟಾದಿಗಳ ನಿರಸನಪೂರ್ವಕವಾಗಿ ನಾದಸಿದ್ಧಿಯು ನಿರ್ಣಯಗೊಳಿಸಲ್ಪಟ್ಟಿದೆ.

ಇದನ್ನು ರಚಿಸಿದವನು **ರಾಮಕಂಠನು**; ಇವನು ಕಾಶ್ಮೀರ ಮಹೇಶ್ವರ ವಂಶೀಯನು; ಶ್ರೀಮೃಗೇಂದ್ರಾಗಮಕ್ಕೆ ವೃತ್ತಿಯನ್ನು ಬರೆದ ನಾರಾಯಣಕಂಠನ ಪುತ್ರನಾದ ಈ ರಾಮಕಂಠನು ಶ್ರೀಮತಂಗ ಪಾರಮೇಶ್ವರಾಗಮಕ್ಕೆ ವೃತ್ತಿಯನ್ನು ಬರೆದಿದ್ದಾನೆ. ಸ್ಪಂದಕಾರಿಕೆಗೆ ವೃತ್ತಿಯನ್ನು ಬರೆದ ಶ್ರೀ ಉತ್ಪಲಾಚಾರ್ಯನ ಶಿಷ್ಯನಾದ ಶ್ರೀ ರಾಮಕಂಠನು ಇವನೇ ಇರಬಹುದು! ಈ ನಾದಕಾರಿಕೆಗೆ ಅಘೋರ ಶಿವಾಚಾರ್ಯನ ವ್ಯಾಖ್ಯಾನವಿದೆ.

ಮೋಕ್ಷಕಾರಿಕಾ.

ಇದರಲ್ಲಿ ಶಿವಸಿದ್ಧಾಂತದಲ್ಲಿಯ ಮೋಕ್ಷದ ಸ್ವರೂಪವೂ ಅದಕ್ಕೆ ಉಪಾಯವೂ ಎಂಬೀ ವಿಷಯಗಳೇ ಪ್ರಾಮುಖ್ಯವಾಗಿ ಹೇಳಲ್ಪಟ್ಟಿವೆ.

ಶ್ರೀ ಸದ್ಯೋಜ್ಯೋತಿ ಶಿವಾಚಾರ್ಯರು ಈ ಗ್ರಂಥವನ್ನು ರಚಿಸಿದ್ದಾರೆ. ಇದಕ್ಕೆ ರಾಮಕಂಠನ ವ್ಯಾಖ್ಯಾನವಿದೆ.

ಪರಮೋಕ್ಷನಿರಾಸಕಾರಿಕಾ.

ಇದರಲ್ಲಿ, ಅನ್ಯಮತದವರು ಹೇಳುವ ಮೋಕ್ಷಪ್ರಕ್ರಿಯೆಗಳು ಚೆನ್ನಾಗಿ ಪರಿಶೀಲಿಸಿದವುಗಳಾಗಿ, ಅವುಗಳಲ್ಲಿ ಕಂಡುಬರುವ ದೋಷಗಳನ್ನು ತೋರಿಸುವ ಪೂರ್ವಕ ನಿರಸನಗೊಳಿಸಲ್ಪಟ್ಟಿವೆ. ಹಾಗೂ ಶಿವಸಿದ್ಧಾಂತದಲ್ಲಿಯ ಮೋಕ್ಷಸ್ವರೂಪವು ವಿಶದವಾಗಿ ಹೇಳಲ್ಪಟ್ಟಿದೆ.

ಇದನ್ನು ರಚಿಸಿದವರೂ ಇದರ ವ್ಯಾಖ್ಯಾನಕಾರರೂ ಮೇಲಿನ ಪ್ರಕರಣದಲ್ಲಿ ನಿರ್ದೇಶಿಸಲ್ಪಟ್ಟವರೇ ಎಂದು ತಿಳಿವುದು.

ರತ್ನತ್ರಯ.

ಈ ಪ್ರಕರಣದಲ್ಲಿ **ವಿಶ್ವಕರ್ತೃ ಶಿವನು, ವಿಶ್ವೋಪಾದನವು ಮಾಯೆಯು, ವಿಶ್ವೋತ್ಪತ್ತಿಗೆ ಕಾರಣವು ಚಿಚ್ಛಕ್ತಿಯು** ಎಂಬಿವು ಮೂರು, ಚಿಂತಾಮಣಿ ಮೊದಲಾದ ರತ್ನಗಳಂತೆ ಆರಾಧಕರಿಗೆ ಅಭೀಷ್ಟಪ್ರದಗಳಾದ್ದರಿಂದ ರತ್ನಗಳಿಗೆ ಹೋಲಿಸಿ ನಿರ್ದೇಶಮಾಡುವಪೂರ್ವಕವಾಗಿ ಚೆನ್ನಾಗಿ ವಿವೇಚಿಸಲ್ಪಡುತ್ತವೆ.

ಇದನ್ನು ರಚಿಸಿದವನು **ಶ್ರೀಕಂಠಸೂರಿಯು**; ಇವನು ರಾಮಕಂಠನ ಶಿಷ್ಯನೆಂದು ಹೇಳಲು ಸಾಧನಗಳಿವೆ. ಇದಕ್ಕೆ ಅಘೋರ ಶಿವಾಚಾರ್ಯನ ವ್ಯಾಖ್ಯಾನವಿದೆ.

ಈ ಮೇಲಿನ ಅಷ್ಟಪ್ರಕರಣಗಳು ಶೈವಾಗಮಗಳಲ್ಲಿಯ ವಿದ್ಯಾಪಾದಾಂತರ್ಗತ ವಿಷಯಗಳನ್ನು ಅರಿತುಕೊಳ್ಳಲು ಬಹು ಉಪಯುಕ್ತಗಳಾಗಿರುವುವೆಂಬ ಸಂಗತಿಯನ್ನು ಮೊದಲೇ ಸೂಚಿಸಿದ್ದೇವೆ.

ಇವುಗಳ ಮತ್ತು ಆಗಮೋಪಾಗಮಗಳ ಪಠನ ಪಾಠನಾದಿಕವು ಕಾಶ್ಮೀರದೇಶದಲ್ಲಿರುವ ಮಾಹೇಶ್ವರ ಸಾಂಪ್ರದಾಯಿಕರಲ್ಲಿಯೂ, ದಕ್ಷಿಣದೇಶದಲ್ಲಿ ಶ್ರೀಕ್ಷೇತ್ರ ರಾಮೇಶ್ವರ ದೇವಸ್ಥಾನದ ಶಿವಾಗಮ ಪಾಠಶಾಲೆಯಲ್ಲಿಯೂ ತಿವಲ್ಲೂರ್ ಅಗ್ರಹಾರ ಮೊದಲಾದ ಸ್ಥಳಗಳಲ್ಲಿಯೂ ಇಂದಿಗೂ ನಡೆದೇ ಇದೆ. ಆದರೆ ಶಿವಸಿದ್ಧಾಂತಾಭಿಮಾನಿಗಳೆನಿಸುವ ವೀರಮಾಹೇಶ್ವರರ ಮಠಮಠದಲ್ಲಿಯಾಗಲಿ, ಸಾರ್ವಜನಿಕ ಪಾಠಶಾಲೆಗಳಲ್ಲಿಯಾಗಲಿ ಶಿವಾಗಮಗಳ ಅಥವಾ ಅವುಗಳಿಗೆ ಸಂಬಂಧಿಸಿದ '**ಪದ್ಧತಿ**' '**ಪ್ರಕರಣ**' ಮುಂತಾದವುಗಳ ಪಾಠಪ್ರವಚನಾದಿಗಳು ನಡೆದವೆಯೋ? ನಡೆದೇಇವೆ ಎಂದರೆ, ಪರಮಸಂತೋಷ!

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮೇಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಖಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [2]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಪರೀಕ್ಷಿಸಿನೋಡಿರಿ! ತ್ವರೆಮಾಡಿರಿ!!

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನಲೇಹ್ಯ

ಇದರ ಸೇವನೆಯಿಂದ ಧಾತುಸ್ರಾವ, ಅಜೀರ್ಣ, ಸೂತಿಕಾವಾತ, ಮೇಹವಾಯು, ಗರ್ಭವಾತ, ನಿದ್ರಾಭಂಗ, ನರಗಳ ದೌರ್ಬಲ್ಯ, ಮೂತ್ರೋಪಾಧಿಗಳು, ಕ್ಷಯ, ಉಬ್ಬಸ, ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಅಸದೃಶವಾದುದು, ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯೆಂದು ಹೇಳದೆ ಕೆಲವುಕಾಲ ಉಪಯೋಗಿಸಿನೋಡಿದರೆ ನೀವೇ ಹೆಚ್ಚು ಹೊಗಳುವಿರಿ.

"ರತ್ನ ಕಟು ಜರ್ಜರೋ"

ಕ್ರಯ 12 ತೊಲ ಡಬ್ಬಿ 1 ಕ್ಕೆ ರೂ. 2—0—0
(ಭಸ್ಮ, ಸಿಂಧೂರಗಳು ಸೇರಿರುವ) 4—0—0
[ii]

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ, ಸನ್ನಿಪಾತಜ್ವರ, ಇನ್ಫ್ಲೂಯೆಂಜಾ, ನಿಮೋನಿಯಾ, ವಿಷಮಜ್ವರ, ಪ್ಲೇಗು, ಮೂರರ ಜ್ವರ, ಛಳಿಜ್ವರ, ಮಕ್ಕಳ ಎಳವು, ಶೀತ, ನೆಗಡಿ, ಕೆಮ್ಮುಜ್ವರ, ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣವಾದುದು. ಬಹುಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ. ಖಂಡಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1 ಕ್ಕೆ 0—8—0
,, 40 ,, ,, 0—4—0

ವಿ. ಪಿ. ಛಾರ್ಜು ಪ್ರತ್ಯೇಕ, ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ, ಲೇಹ್ಯ, ಮಾತ್ರೆ, ಚೂರ್ಣ, ಭಸ್ಮ, ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—
ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರು,
ಆಯುರ್ವೇದಾಶಯ, ಹಳೆಅಗ್ರಹಾರ, ಮೈಸೂರು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣವು.

ಪುನಃ ಮುದ್ರಿತವಾಗಿದೆ.

ವೀರಶೈವ ಮತದ ಪ್ರಾಚೀನತ್ವವನ್ನೂ, ಹಾಗೂ ಪ್ರಶಸ್ತ್ಯವನ್ನೂ ಅನೇಕ ಶಾಸನಗಳ ದ್ವಾರಾ ಸಿದ್ಧಪಡಿಸಿರುವ ವಿಷಯಗಳಿಂದ ಕೂಡಿದ ಪಂಡಿತರ ಭಾಷಣವು ಈ ಸಾರೆ ಅತಿಮನೋಹರವಾಗಿ ಪ್ರಿಂಟಾಗಿದೆ. ಅಭಿಲಾಷಿಗಳು ಕೂಡಲೆ ತರಿಸಿಕೊಳ್ಳಬಹುದು.

ಬೆಲೆ 2 ಆಣೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವಮತಮೀಮಾಂಸಾ.

ಈ ಗ್ರಂಥವನ್ನು ಕಾಶೀಕ್ಷೇತ್ರನಿವಾಸಿಗಳಾದ ಜಂಗಮವಾಡಿ ಬೃಹನ್ಮಠಾಧ್ಯಕ್ಷ ಶ್ರೀ ಚಿದ್ಘನಶಿವಾಚಾರ್ಯರು ರಚಿಸಿರುವರು. ಗ್ರಂಥಕರ್ತರು ವೀರಶೈವಮತದ ಶಾಸ್ತ್ರತತ್ವಗಳನ್ನು ಸರ್ವರೂ ಸುಲಭವಾಗಿ ತಿಳಿಯಲೆಂಬ ಸದುದ್ದೇಶದಿಂದ ಅತ್ಯಂತ ಶ್ರಮವಹಿಸಿ ಸುಗಮವಾದ ಕನ್ನಡ ಭಾಷೆಯಿಂದ ಬರೆದಿದ್ದಾರೆ. ಸದರಿ ಗ್ರಂಥವು ಪ್ರತಿಯೊಬ್ಬ ವೀರಶೈವನಿಗೂ ಸಂಗ್ರಾಹ್ಯವಾಗಿದೆ. ಬೆಲೆ ೨ ಆಣೆ.

ಒಂದೊಂದು ಪ್ರತಿಯನ್ನು ತರಿಸಿಕೊಳ್ಳುವವರು ಆಣೆ ಪೋಸ್ಟು ಸ್ಟಾಂಪುಗಳನ್ನು ಕಳುಹಿಸಬೇಕು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್. ಮೈಸೂರು.

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

ಅಮೂಲ್ಯವಾದ ಗುಣಗಳನ್ನುಳ್ಳ ಈ ಕಂಪನಿಯ ಪಾಲಿಸಿಗಳಲ್ಲೊಂದಾದ ಗ್ಯಾರಂಟೀಡ್ ಇನ್‌ವೆಸ್ಟ್‌ಮೆಂಟ್ ಪಾಲಿಸಿ.

ಈ ಪಾಲಿಸಿಯಲ್ಲಿ ವಿಮೆದಾರನು 5 ವರ್ಷಗಳು ಮಾತ್ರ ಕಂತುಗಳನ್ನು ಕೊಟ್ಟು ನಂತರ ಸೇಕಡ ರೂ. 6 ರಂತೆ ಬಡ್ಡಿ ಕೊಡುತ್ತಾ ಬಂದರೆ ಮಿಗತಕ್ಕ 10 ಅಥವಾ 15 ಕಂತುಗಳನ್ನೆಲ್ಲಾ ಕಂಪೆನಿಯವರೇ ಸಾಲವಾಗಿ ಕಟ್ಟಿಕೊಳ್ಳುತ್ತಾರೆ. ಸದರಿ ವಿಮೆಯು 10 ವರ್ಷಗಳನಂತರ ಮೃತಪಟ್ಟರೆ ಆಗಬಾಕಿ ಆಗುವ ಕಂತುಗಳನ್ನೆಲ್ಲಾ ವಜಾ ಮಾಡುತ್ತಾರೆ. ಅಥವಾ ಕಂತುಗಳನ್ನು ಕೊಡುತ್ತಾ ಬಂದಿದ್ದರೂ ಸದ್ಯೂಲಿನಂತೆ ಕಂತುಗಳನ್ನು ವಿಮೆಯ ಮೊಬಲಗಿನ ಜೊತೆಯಲ್ಲಿ ವಾಪಸು ಮಾಡುತ್ತಾರೆ. ಒಂದು ವರ್ಷವಾದರೂ ವಿಮೆಯು ಜಾರಿಯಲ್ಲಿದ್ದು ಮೃತಪಟ್ಟರೆ ಆ ವರ್ಷದ ಲಾಭವನ್ನು ಸೇರಿಸಿಕೊಡುತ್ತಾರೆ (Interim Bonus).

ರೂ. 10,000 ಗಳಿಗೆ ವಿಮೆಮಾಡಿ ಮೊದಲನೆ 10 ವರ್ಷಗಳಲ್ಲಿ ಮೃತಪಟ್ಟರೆ ವಿಮೆಯ ರೂ. 10,000

11 ನೇ ವರ್ಷದಲ್ಲಿ	1 ಕಂತು	ರೂ. 10,600	16 ನೇ ವರ್ಷದಲ್ಲಿ	6 ಕಂತು	ರೂ. 13,600
12 ನೇ ವರ್ಷದಲ್ಲಿ	2 ,,	,, 11,200	17 ನೇ ವರ್ಷದಲ್ಲಿ	7 ,,	,, 14,200
13 ನೇ ವರ್ಷದಲ್ಲಿ	3 ,,	,, 11,800	18 ನೇ ವರ್ಷದಲ್ಲಿ	8 ,,	,, 14,800
14 ನೇ ವರ್ಷದಲ್ಲಿ	4 ,,	,, 12,400	19 ನೇ ವರ್ಷದಲ್ಲಿ	9 ,,	,, 15,400
15 ನೇ ವರ್ಷದಲ್ಲಿ	5 ,,	,, 13,000	20 ನೇ ವರ್ಷದಲ್ಲಿ	10 ,,	,, 16,000

[39]

ಏಜಂಟರು ಬೇಕಾಗಿದೆ.

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ.
ಅಥವಾ
ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು, **ಯುಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ಚಿಕ್ಕಹರದನಹಳ್ಳಿ, ಮೈಸೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇಸು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿಗ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಹಿಕ್ಕರಿಂದರೆ ಕ್ಷೀಣತೆಯನು ಕಾಯ್ದು ಕೊಳ್ಳುವಿರಿ.

ರುಚಿ] ವಜ್ರಾಂಗ ಸುಂದರಪಾಕ. [ಸ್ವರ್ಣ

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಸಾಕ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವ ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಾಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಷ್ಟಪುಷ್ಪ, ಕಾಲಿಮುಕಂದ, ಮಧುಕಂದ, ಜಪಾಕಂದ, ಕಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಕಾಪತ್ರಿ, ಮುರಮುಕ್ತ, ರಸನಪುರುಷ, ಕಮರಕಸ, ಕಪಿಲ್ಯಾಗೊಂದ, ಪಂಚಾಬಮಿಶ್ರಿ, ಸಾಲಾಮಿಶ್ರಿ, ಸಫೇತಮುಶ್ರಿ, ಕಾಲೀಮುಚಾಪಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಾಜೀಕಟ್ಟಿಗೆ, ರತಾವರಿ, ಸಕೀಮಗಜ, ಆಲದಹಾಲು, ವಾಕೇರಿಛಾತಾ, ಗೋಖರು, ಅಡವಿಬೆಂಡಿಬೇರು, ಅಮೃತಸತ್ವ, ಇಸಬಗೋಳ ಭೂಸಾ, ಅನಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಪಮುಕ್ತಿ, ವಂಶಲೋಚನ, ವರಘಾರಾ, ಕೇಸರಿ ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯಬಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಜಾಳ, ಪಿಕ್ಕ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದಿರೋಣ, ಮೆಟ್ಟನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಭರಣಿಗೆ 3 ರೂಪಾಯಿಗಳು. [10]

ಪತ್ತೆ—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗನ್ನೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅಮೃತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗನ್ನೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಹಚ್ಚಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—೪ ಡಿಬ್ಬಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಥರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [34]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹುಮನೋಹರವಾಗಿ ಮುದ್ರಿಸಿಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್‌ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೭|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ದುಷ್ಪ್ರತ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೩ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್, ಪಂಚಾಚಾರ್ಯಪ್ರಭಾ ಆಫೀಸ್,

ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-00
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-80
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-04

ವಿಳಾಸ:—ವೇ|| ಚನ್ನಯ್ಯ ಹೊಸಮಠ,

ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪಿನಿ…ಒಂಟಿತಲೆ ನೋವು… ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸಿ ಪುಗಸಟ್ಟೆ ಕಳುಹಿಸಲಾಗಬೇಕು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪…

ಡಜ಼ು ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆ…

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ … ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[39] ಪೋ. ಬಾ. ೫೧೦. ಮದರಾಸು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಷ್ಟ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ ನೇ ಏಪ್ರಿಲ್ ೧೯೨೯ [ಸಂಚಿಕೆ ೪೯.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಬೇರೆ ಬೇರೆಯಾಗಿ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಅನ್ನದಾನ.

ಈ ಜಗತ್ತಿನಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಮಾನವರು ಪುಣ್ಯಭಾಗಿಗಳಾಗಬೇಕಾದರೆ ಷೋಡಶ ಮಹಾದಾನಗಳನ್ನು ಮಾಡಬೇಕಾಗಿದೆ. ಈ ದಾನಗಳಲ್ಲಿ ಅನ್ನದಾನವೇ ಶ್ರೇಷ್ಠವಾಗಿದೆ. ಆದುದರಿಂದಲೇ ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ "ನಾನ್ನತೋಯಸಮಂದಾನಂ" ಅಂದರೆ ಅನ್ನ ಮತ್ತು ನೀರು ಇವುಗಳಿಗೆ ಸಮಾನವಾದ ದಾನವು ಯಾವದೂ ಇಲ್ಲವೆಂದು ಅಪ್ಪಣೆಕೊಡಿಸಿದ್ದಾರೆ. ಈ ವಿಷಯವನ್ನು ತಿಳಿದು ಕೊಟ್ಟೂರು ನಿವಾಸಿಯಾದ ಅಕ್ಕಸಾಲಿ ಮಠದ ನಾಯಕಾಚಾರಿ ಗೋಣಪ್ಪನು ಇದೇ ವಿಭವನಾಮ ಸಂವತ್ಸರದ ಮಾಘ ಬ|| ೧೦-೧೧-೧೨ ಈ ಮೂರು ದಿನಗಳಲ್ಲಿ ಅನ್ನಛತ್ರ… ಶ್ರೀ ನಾಮಕನಾದ ಅನ್ನಸತ್ರವನ್ನೇರ್ಪಡಿಸಿ ತಮ್ಮ ಮತಸ್ಥರನ್ನು ಭೋಜನಾದ್ಯುಪಚಾರಗಳಿಂದ ತೃಪ್ತಿಪಡಿಸಿದನು. ಅಲ್ಲದೆ ಪ್ರತಿ ವರ್ಷ ಇದೇ ರೀತಿ ನಡೆಯಿಸಬೇಕೆಂದು ಪೂರ್ಣ ಸಂಕಲ್ಪವನ್ನು ಮಾಡಿಕೊಂಡಿರುವನು. ಪುಣ್ಯಕಾರ್ಯನಿರತನಾದ ಸದರಿ ನಾಯಕಾಚಾರಿ ಗೋಣಪ್ಪನಿಗೆ ಶ್ರೀ ಕಾಳೇಶ್ವರಿಯು ಸಕಲ ಸನ್ಮಂಗಳಗಳನ್ನುಂಟುಮಾಡಲೆಂದು ಕೋರುತ್ತೇನೆ.

ಯು. ಹೆಚ್. ಅಜ್ಜಪ್ಪ ಅಕ್ಕಸಾಲಿ.

ಕೊಟ್ಟೂರು.

ಸ್ವೀಕಾರ.

ಅರಸೀಕೆರೆ ತಾ|| ಬಾಣಾವರ ಹಿರೇಮಠದ ಪಟ್ಟಾಧಿಕಾರದ ನಿರ್ಣಯಕ್ಕಾಗಿ ನೆರವೇರಿಸಿದ ಸ್ಪೆಷಲ್‌ಮೀಟಿಂಗಿನಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ|| ಹಿರೇಮಠದ ವೀರಭದ್ರಸ್ವಾಮಿಯವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ನೆಟ್ಟಿಗ್ರಾಮದ ಮ|| ರಾ|| ಅಂಗಡಿ ದೊಡ್ಡಪ್ಪನವರ ಪುತ್ರನ ಲಿಂಗಧಾರಣಾಸಮಯದಲ್ಲಿ ತೆಗೆಯಿಸಿದ 1 ರೂಪಾಯಿ, ಸಿರಗುಪ್ಪ ತಾ|| ಅರಳಿಗನೂರು ಮ|| ರಾ|| ವೀರಬಸಪ್ಪನವರು ತಮ್ಮ ಸೊಸೆಯ ಲಗ್ನದಲ್ಲಿ ತೆಗೆಯಿಸಿದ 1 ರೂ. ಮ|| ರಾ|| ತೆಂಕನಕಲ್ಲು ಶಿವಬಸಪ್ಪನವರು ತಮ್ಮ ಲಗ್ನದಲ್ಲಿ ತೆಗೆಯಿಸಿದ 1 ರೂ. ವೇ|| ಹುಂಡಿಹಾಳಮಠದ ಮಹಾದೇವಯ್ಯನವರು ತಮ್ಮ ಮನೋಭಿಲಾಷೆಯು ಪೂರ್ತಿಯಾದ ಸಂತೋಷಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ಒಟ್ಟು 5 ರೂಪಾಯಿಗಳು ವೇ|| ಮಹಾದೇವಯ್ಯನವರ ದ್ವಾರಾ ತಲ್ಪಿರುತ್ತವೆ.

ತುಮ್ಮಿನಕಟ್ಟೆ ಮ|| ರಾ|| ಐರಣಿ ಮರಿಕೊಟ್ರಪ್ಪನಿಗೂ ನೀಲಮತಿ ಮ|| ರಾ|| ಬಳಗಿ ವೀರಬಸಪ್ಪನವರ ಪುತ್ರಿ ಸೌ|| ಬಸವಮ್ಮನಿಗೂ, ನೀಲಮತಿ ಮ|| ರಾ|| ಬಳಗಿ ಚನ್ನಬಸಪ್ಪನವರ ಪುತ್ರ ಚಿ|| ಸ|| ಶರಭಪ್ಪನಿಗೂ ಬಸವಾಪಟ್ಣದ ಮ|| ವೀರಪ್ಪಶೆಟ್ಟರ ಪುತ್ರಿ ಸೌ|| ಬಸವಮ್ಮನಿಗೂ, ಮ|| ರಾ|| ಹೊನ್ನಾಳಿ ದುಂಡಪ್ಪಶೆಟ್ಟರ ಪುತ್ರ ಚಿ|| ಹಾಲಪ್ಪನಿಗೂ ಬೇಲೂರು ಮ|| ರಾ|| ರುದ್ರಪ್ಪಶೆಟ್ಟರ ಪುತ್ರಿ ಸೌ|| ಗೌರಮ್ಮನಿಗೂ, ಸದರಿ ರುದ್ರಪ್ಪಶೆಟ್ಟರ ಪುತ್ರ ಚಿ|| ವೀರಪ್ಪನಿಗೂ ಹೊನ್ನಾಳಿ ಮ|| ವೀರಪ್ಪಶೆಟ್ಟರ ಪುತ್ರಿ ಸೌ|| ಗುರುಬಸಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಸಮರ್ಪಿಸಿದ 4 ರೂಪಾಯಿಗಳು ಮ|| ರಾ|| ಹಾರ್ನಹಳ್ಳಿ ಡಿ|| ಎಸ್. ಗುರುಶಾಂತಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾ|| ಮಲೆಗ್ರಾಮದಲ್ಲಿ ನೆರವೇರಿದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ಮ|| ರಾ|| ಚಿಕ್ಕಮಗಳೂರು ಎಂ. ಪಿ. ಚಂದಯ್ಯನವರ ದ್ವಾರಾ ತಲ್ಪಿರುತ್ತವೆ.

ಹೂವಿನಹಡಗಲಿ ನಿವಾಸಿಗಳಾದ ಮ|| ರಾ|| ಶ್ರೀಮಂತ ಗುಗ್ರಿ ಹುಚ್ಚಪ್ಪನವರು ತಮ್ಮ ಪುತ್ರ ಚಿ|| ಶಿವಾನಂದನ ಚೌಲ ಕಾರ್ಯವನ್ನು ರಂಭಾಪುರೀ ಪೀಠದಲ್ಲಿ ನೆರವೇರಿಸಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಪಂ|| ಹರೀಶ್ವರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ರಾಣೆಬೆನ್ನೂರಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ವೇ|| ಗದಗಿಮಠದ ಸೋಮಯ್ಯನವರ ದ್ವಾರಾ ತಲ್ಪಿರುತ್ತವೆ.

ಚನ್ನರಾಯಪಟ್ಟಣದ ತಾ|| ಪುರದ ಗ್ರಾಮದ ಮ|| ರಾ|| ಸಿದ್ಧಲಿಂಗದೇವರ ಪುತ್ರ ಚಿ|| ಸಂಗಪ್ಪನಿಗೆ ಮ|| ರಾ|| ಪುರದಪ್ಪನವರ ಪುತ್ರಿ ಸೌ|| ವೀರರಾಜಮ್ಮನನ್ನು ಕೊಟ್ಟು ನಡೆಯಿಸಿದ ವಿವಾಹ ಸಮಯದಲ್ಲಿ ಹಿರೇಸಾವೆ ಮ|| ರಾ|| ರಾ|| ಇ|| ನಂ|| ಸಿದ್ಧಲಿಂಗಪ್ಪನವರು ಪ್ರೋತ್ಸಾಹಿಸಿ ವಧೂವರರಿಂದ 2 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಮೊಳಕಾಲ್ಮೂರು ತಾ|| ಅನೆಸಿದ್ದಾಪುರದ ಮ|| ಗೊಂಚಿಗಾರ ಬಸಪ್ಪನವರ ಪುತ್ರಿ ಸೌ|| ಗಂಗಮ್ಮನನ್ನು ಓಬಳಾಪುರ ಮ|| ಗೊಂಚಿಗಾರ ಚನ್ನಬಸಪ್ಪನವರ ಪುತ್ರ ಚಿ|| ಚನ್ನಬಸಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 2 ರೂ. ಗಳು ವೇ|| ಅನೆಸಿದ್ದಾಪುರ ಮಠದ ದೊಡ್ಡವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಯಾದಗಿರಿ ತಾ|| ಕರಣಿಗಿ ಪಟೇಲ್ ಮ|| ಗೌಡಪ್ಪನವರ ಪುತ್ರ ಚಿ|| ಸಿದ್ಧರಾಮಪ್ಪನ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಮಕ್ತಲ ಬಸವಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾ|| ರಾಂಪುರ ಗ್ರಾಮದಲ್ಲಿ ನೆರವೇರಿದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಬಿ. ಕೆ. ಸಿದ್ಧಲಿಂಗಾರ್ಯರ ದ್ವಾರಾ ತಲ್ಪಿರುತ್ತದೆ.

ಅರಸೀಕೆರೆ ತಾ|| ಬಾಣಾವರದ ವೇ|| ಕೊಂಡಜ್ಜಿ ಮಠದ ಬಸವಯ್ಯನವರು ತಮಗೆ ಪ್ರಾಪ್ತವಾದ ಕಾಯಿಲೆಯು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಾರ್ಥವಾಗಿ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಬಾಣಾವರ ಹಿರೇಮಠದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯ ಭಜನಾ ಸಂಘವು ಸ್ಥಾಪಿಸಲ್ಪಟ್ಟ ಸಮಯದಲ್ಲಿ ವೇ|| ವೀರಭದ್ರಸ್ವಾಮಿಯವರು 1 ರೂಪಾಯಿಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮಹಾಶಯರುಗಳ್ಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ತುರ್ಕಿದೇಶದ ಕಾನ್‌ಸ್ಟಾಂಟಿನೋಪಲ್‌ಪಟ್ಟಣದಲ್ಲಿರುವ ಸೇಂಟ್‌ಸೋಫಿಯಾಮಸೀದಿಯು ಯಾವಾಗಲೂ ಸುವಾಸನೆಯನ್ನು ಬೀರುತ್ತಾ ಇರುತ್ತದೆ. ಅಲ್ಲಿ ವಾಸನಾದ್ರವ್ಯಗಳೇನೂ ಇಲ್ಲದಿದ್ದರೂ ಆ ರೀತಿಯಾದ ವಾಸನೆಗೆ ಕಾರಣವೇನೆಂದು ಪರೀಕ್ಷಿಸಿದಾಗ ಆ ಮಸೀದಿಯ ಕಟ್ಟಡದ ಕಲ್ಲು, ಇಟ್ಟಿಗೆ ಮತ್ತು ಗಾರೆಗಳಿಗೆ ಪುನುಗನ್ನು ಸೇರಿಸಿ ಕಟ್ಟಿರುವರೆಂದು ಕಂಡುಬಂದಿರುತ್ತದೆ. ಈ ಮಸೀದಿಯು 9 ನೆಯ ಶತಮಾನದಲ್ಲಿ ಕಟ್ಟಲ್ಪಟ್ಟಿತೆಂದು ತಿಳಿದುಬರುತ್ತದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.——

ಜಯಂತಿಮಹೋತ್ಸವಗಳು.

ರಾಮಪುರ.

ಅರಸೀಕೆರೆ ತಾ|| ಕಣಕಟ್ಟೆ ಹೋಬಳಿ ರಾಂಪುರದ ಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವು ಅತಿ ವೈಭವದಿಂದ ನೆರವೇರಿತು.

ಗ್ರಾಮಪಂಚಾಯತಿ ಮೆಂಬರರಾದ ವೇ|| ಜಿ. ಕೆ. ಸಿದ್ಧಲಿಂಗಾರ್ಯರೂ, ಪೋ|| ಪ|| ಸಿದ್ಧರಾಮೇಗೌಡರೂ, ರೆ|| ಪ|| ಶಿವಪೂಜೆಗೌಡರೂ, ಪಟೇಲ್ ರಾಮಜ್ಜೇಗೌಡರೂ, ಸೀತಾಪುರದ ಮರುಳಯ್ಯನವರೂ, ಹರಿಯಣ್ಣನವರ ಮರುಳಪ್ಪನವರೂ, ಚೊ|| ಲಿಂಗಣ್ಣನವರೂ, ಲಿಂ|| ಸಣ್ಣ ರಾಮೇಗೌಡರು, ಸ್ಕೂಲು ಮಾಸ್ಟರ್ ವೆಂಕೋಬರಾಯರು ಸಹ ಸೇರಿ ಜಯಂತ್ಯುತ್ಸವವನ್ನು ಬಹು ಭಕ್ತಿಯಿಂದ ನೆರವೇರಿಸಿದರು.

ಈ ಜಯಂತ್ಯುತ್ಸವಕ್ಕೆ ಹಲ್ಲೂರು ಶ್ರೀ ಚರಪಟ್ಟಾಧ್ಯಕ್ಷರು ವೇ|| ಶಂಭುಲಿಂಗಯ್ಯನವರು, ಮುರಡಿ ಮರುಳಯ್ಯನವರು ಜಡೆಯಯ್ಯನವರು, ಮ|| ರಾ|| ಹೊನ್ನೇಗೌಡರು, ಸಣ್ಣ ರಾಮೇಗೌಡರು, ಸೋ|| ಮರುಳಪ್ಪನವರು, ಮೂ|| ರಾಮಲಿಂಗಯ್ಯನವರೂ, ಅರಿಯಜ್ಜಿ ಸಿದ್ಧಪ್ಪನವರು ಸಹ ಬಂದು ಭಾಗಿಗಳಾಗಿದ್ದರು.

ಶ್ರೀ ಜಗದಾಚಾರ್ಯರ ಮೂರ್ತಿಯನ್ನು ಅಲಂಕರಿಸಿದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಸಮಸ್ತ ಬಿರುದಾವಳಿಗಳಿಂದಲೂ ವಾದ್ಯವೈಭವದಿಂದಲೂ ಗುರುಭಜನೆಯಿಂದಲೂ ಅತಿ ವಿಜೃಂಭಣೆಯಿಂದ ಉತ್ಸವವು ನೆರವೇರಿಸಲ್ಪಟ್ಟಿತು. ಪರಮಪಾವನನೂ ಗುರುಸಾರ್ವಭೌಮನೂ ಭಕ್ತೋದ್ಧಾರಪ್ರದನೂ ಕಲಿಂಭೋದ್ಭವ ... ಮುನಿಜನವಂದ್ಯನೂ ಆದ ಶ್ರೀ ರೇಣುಕಾಚಾರ್ಯನೆ ... ಗುರುಭಕ್ತಿಯನ್ನು ಉದ್ಧರಿಸಲೋಸುಗ ಶ್ರೀ ಕಾಶೀನಾಥನೆಂಬ ಅಭಿಧಾನದಿಂದ ತನ್ನ ಅಂಶವನ್ನೇ ಭೂಮಿಗೆ ಕಳುಹಿಸಿರುವನು. ಹಾಗಿಲ್ಲದೆ ಇದ್ದರೆ ದಶದಿಕ್ಕುಗಳಲ್ಲಿ ಮನೋವೇಗದಂತೆ ಇಷ್ಟು ಶೀಘ್ರವಾಗಿ ಜಗದಾಚಾರ್ಯರ ಕೀರ್ತಿಯು ಎಲ್ಲಿ ವ್ಯಾಪಿಸುತ್ತಿತ್ತು? ಎಂದು ನೆರೆದಿದ್ದವರೆಲ್ಲರೂ ಜಯಜಯಕಾರ ಮಾಡುತ್ತ ಆನಂದಪಡುತ್ತಿದ್ದರು. ಉತ್ಸವವು ಶ್ರೀ ವೃಷಭೇಶ್ವರನ ಆಲಯಕ್ಕೆ ಪ್ರವೇಶಿಸಿತು. ಆಚಾರ್ಯಮೂರ್ತಿಯನ್ನು ಅಲಂಕರಿಸಿದ್ದ ಭದ್ರಪೀಠದಲ್ಲಿ ಮೂರ್ತಮಾಡಿಸಿದರು. ಪಂಚಾಚಾರ್ಯರ ಮಹತ್ವವನ್ನು ಕುರಿತು ದರ್ಜೆಯ ಮತದವರಾದ ಸ್ಕೂಲು ಮಾಸ್ಟರ್ ಮ|| ರಾ|| ವೆಂಕೋಬರಾಯರು ಸ್ತೋತ್ರಾರ್ಹವೂ ಅನುಕರಣೀಯವೂ ಆದ ಉಪನ್ಯಾಸಮಾಡಿ ನೆರೆದಿದ್ದವರಲ್ಲಿ ತಮ್ಮ ಗುರುಭಕ್ತಿಯನ್ನು ಪ್ರಕಾಶಗೊಳಿಸಿದರು.

ಬಳಿಕ ವೇ|| ಜಿ. ಕೆ. ಸಿದ್ಧಲಿಂಗಾರ್ಯರು ಪಂಚಾಚಾರ್ಯರ ಪ್ರಾಚೀನತ್ವ, ಅವರು ಮಾಡಿದ ಲೋಕೋದ್ಧಾರ, ಅವರ ಮಹಿಮಾಪ್ರಭಾವ ಮೊದಲಾದುವುಗಳ ಮೇಲೆ ಭಾಷಣಮಾಡಿ ನಮ್ಮ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ 1 ರೂಪಾಯಿಯನ್ನೂ ಬೆಂಗಳೂರು ಮಹಾಂತಿನಮಠದಲ್ಲಿ ಸ್ಥಾಪಿಸಿರುವ ವೀರಶೈವ ಗ್ರಂಥಭಾಂಡಾರದ ಫಂಡಿಗೆ 2 ರೂಪಾಯಿಗಳನ್ನೂ ತೆಗೆಯಬೇಕೆಂದು ಸೂಚಿಸಿದ ಪ್ರಕಾರ 3 ರೂಪಾಯಿಗಳು ತೆಗೆಯಲ್ಪಟ್ಟು ಜಿ. ಕೆ. ಸಿದ್ಧಲಿಂಗಾರ್ಯರ ವಶಕ್ಕೆ ಕೊಡಲ್ಪಟ್ಟವು. ಆ ಮೇಲೆ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಂದಿಗೆ ಗುರುಸಾರ್ವಭೌಮರ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಭಕ್ತ
ಮೈಲನಹಳ್ಳಿ ಪ|| ಹೊನ್ನೇಗೌಡ.

ರಾಣೆಬೆನ್ನೂರು.

ವಿಭವನಾಮ ಸಂವತ್ಸರದ ಫಾಲ್ಗುಣ ಶು|| ೧೧ ಗುರುವಾರದಿಂದ ಶು|| ೧೩ ಶನಿವಾರದವರೆಗೆ ಈಶ್ವರಮೂರ್ತಿಗಳಿಗೆ ರುದ್ರಾಭಿಷೇಕ ಹಾಗೂ ಅನ್ನಸಂತರ್ಪಣೆ ಶುಕ್ರವಾರ ಪ್ರಾತಃಕಾಲ ೭|| ಘಂಟೆಯಿಂದ ಶನಿವಾರ ಪ್ರಾತಃಕಾಲ ೭|| ಘಂಟೆವರೆಗೆ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಭಜನೆಯೂ ಮಧ್ಯಾಹ್ನಕ್ಕೆ ಗಣಸಮಾರಾಧನೆಯೂ, ಸಾಯಂಕಾಲ ೫ ಘಂಟೆಗೆ ಭಗವತ್ಪಾದರ ಭಾವಚಿತ್ರದ ಪುಷ್ಪಾಂದೋಲಿಕೋತ್ಸವವು ಅತಿವೈಭವದಿಂದ ನೆರವೇರಿದವು. ಶು|| ೧೪ ರವಿವಾರ ಸಾಯಂಕಾಲ ವೇ|| ಷಡಕ್ಷರೀಮಠದ ಸದಾಶಿವಶಾಸ್ತ್ರಿಗಳವರು ಧರ್ಮಬೋಧೆ ಹಾಗೂ ಶಿವಭಕ್ತಿಸಾರ ಈ ವಿಷಯಗಳ ಮೇಲೆಯೂ ಮತ್ತು ಸೋಮವಾರ ಸಾಯಂಕಾಲ ಶ್ರೀಜಗದ್ಗುರುಪಂಚಾಚಾರ್ಯರ ಅವತಾರವಿಷಯದಮೇಲೆಯೂ ಬಹುಮನೋಹರವಾಗಿ ಕೀರ್ತನಮಾಡಿದರು. ಈ ಯಾವತ್ತು ಕಾರ್ಯಗಳು ಕೆಳಗೆ ಕಾಣಿಸಿದ ಮೆಂಬರಜನರಿಂದಲೂ ಮತ್ತು ಊರೊಳಗಿನ ಪ್ರಮುಖರಿಂದಲೂ ಬಹುಭಕ್ತಿಯಿಂದ ನೆರವೇರಿಸಲ್ಪಟ್ಟವು. ಈ ಮಹೋತ್ಸವಕ್ಕೆ ಧಾರವಾಡ, ಹುಬ್ಬಳ್ಳಿ, ಬ್ಯಾಡಗಿ, ಹರಿಹರ, ತೆಲಗಿ, ಲಿಂಗದಹಳ್ಳಿ, ಮಾಗೋಡ, ಮುಂತಾದ ಗ್ರಾಮಗಳ ಭಕ್ತಮಾಹೇಶ್ವರರು ಆಗಮಿಸಿದ್ದರು. ಶ್ರೀ. ಜ|| ಪಂ|| ಭ|| ಸಂ ಪ್ರೆಸಿಡೆಂಟ, ಮಿ|| ಗುಡ್ಡಪ್ಪಣ್ಣ ತಾಸಿಲ್‌ದಾರ ಮ್ಯುನ್ಸಿಪಾಲಿಟಿ ಚೇರಮನ್, ರಾಣೆಬೆನ್ನೂರ ವೈ|| ಪ್ರೆ|| ವೇ|| ಷಡಕ್ಷರಿಮಠದ ಸದಾಶಿವಶಾಸ್ತ್ರಿಗಳು ಚೇರ್‌ಮನ್ ಸಿದ್ಧಲಿಂಗಯ್ಯನವರು ಹನಗೋಡಿಮಠ ಮೆಂಬರರು:—— ವೇ|| ರೇವಯ್ಯ, ಚರಂತಿಮಠ. ವೇ|| ರುದ್ರಯ್ಯನವರು ಹಿರೇಮಠ ವೇ|| ಕೊಟ್ರಯ್ಯನವರು ಕರಡಿಮಠ ಶಿವಲಿಂಗಪ್ಪ ಗಾಣಿಗರ. ಮಹಾರುದ್ರಪ್ಪ ಶಿವಶಿಂಪಿಗರ. ಮಡಿವಾಳಪ್ಪ ಬಣಗಾರ. ರೇವಣಪ್ಪ ಪಾಟೀಲ. ಚನ್ನಬಸವಗೌಡ ಬಡ್ನಿಗೌಡರ. ಹೊಳೆಯಪ್ಪಗೌಡ ಪಾಟೀಲ. ಮಿ|| ತಿರಕಪ್ಪನವರು ಕುಲಕರ್ಣಿ. ಸಿದ್ದಪ್ಪ ಮರಾಠಾ. ಮರಿಬಸಪ್ಪಾ ಮರಾಠಾ. ರಾಜಪ್ಪ ಮರಾಠಾ. ಧರಮಪ್ಪ ಕಂಟ್ರ್ಯಾಕ್ಟರ್. ಮಲ್ಲಪ್ಪ ನೇಕಾರ. ಹನುಮಂತಪ್ಪ ನೇಕಾರ. ಶಿವಪ್ಪ ನೇಕಾರ. ಬಸಪ್ಪ ನೇಕಾರ. ಬುಳ್ಳಪ್ಪ ವಿಭೂತಿ. ಹೇಮಪ್ಪಗೌಡರು ಶಿವಣ್ಣನವರ. ಯಮನಪ್ಪ ಬಾರಾಟಕ್ಕೆ. ತಿಮ್ಮಪ್ಪ ತಳವಾರ. ಬಸಪ್ಪ ತಳವಾರ ವೀರಪ್ಪ ಕಡೂರ. ಹಾಸೀಮಸಾಹೇಬ ಬಟ್ಟೂರ. ಬಸಪ್ಪ ಬಣಕಾರ. ಪಂ|| ಭ|| ಸ|| ಸೆಕ್ರೆಟರಿ. ಈ ಯಾವತ್ತು ಮೆಂಬರರಿಂದಲೂ ಹಾಗೂ ಊರೊಳಗಿನ ಪ್ರಮುಖರಿಂದಲೂ ಜಯಂತಿಕಾರ್ಯವು ವೈಭವದಿಂದ ನೆರವೇರಿತು.

ವೇ|| ಕೀರ್ತನಕಾರ ಷಡಕ್ಷರೀಮಠದ ಸದಾಶಿವಶಾಸ್ತ್ರಿಗಳವರು ಪ್ರಭಾಪೋಷಣಕ್ಕೆ ಸಮರ್ಪಿಸಿದ ೧ ರೂಪಾಯಿಯು ಜಯಂತಿಮಹೋತ್ಸವದಲ್ಲಿ ಸಮರ್ಪಿಸಿದ ೧ ರೂಪಾಯಿಯು ಒಟ್ಟು ೨ ರೂಪಾಯಿಗಳು ವೇ|| ಸೋಮಯ್ಯನವರು ಗದಗಿಮಠ, ಇವರ ವಶಕ್ಕೆ ಕೊಡಲ್ಪಟ್ಟವು. ಅಸಾಧಾರಣವಾದ ಗುರುಭಕ್ತಿಯಿಂದ ಗುರುಸಾರ್ವಭೌಮರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಕಲರಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ.

ಸೋಮಯ್ಯ, ಗದಗಿಮಠ.
ಶ್ರೀಜ ಪಂ|| ಭ|| ಸಂ|| ಚಾಲಕ.

ಲಕ್ಷ್ಮೇಶ್ವರ.

ವಿಭವನಾಮಸಂವತ್ಸರದ ಫಾಲ್ಗುಣ ಶು|| 13 ಶನಿವಾರ ದಿವಸ ಜಗದ್ಗುರು ರೇಣುಕ ಶಿವಾಚಾರ್ಯರ ಜಯಂತ್ಯುತ್ಸವ ಲಕ್ಷ್ಮೇಶ್ವರ ಇಲ್ಲಿಯ ಶ್ರೀಮಂತ ಶಂಕರಗೌಡರು ಬಹದ್ದೂರ ದೇಸಾಯಿ ಇವರು ತಮ್ಮ ವಾಡೇದಲ್ಲಿ ಮಹಾಚಾರ್ಯರ ಪಟವನ್ನು ಪರಮಭಕ್ತಿಯೊಡನೆ ವಿವಿಧೋಪಚಾರಗಳಿಂದ ಸತ್ಕರಿಸಿ ಗಣಾರಾಧನೆಯನ್ನು ಪೂರೈಸಿ ಸಂಜೆಯ 7 ಘಂಟೆ ಸಮಯಕ್ಕೆ ಅನೇಕ ವಾದ್ಯವೈಭವದೊಡನೆಯೂ ಭಜನಾಸಂಘದವರ ಇಂಪಾದ ಭಜನೆಯೊಡನೆಯೂ, ಛತ್ರಚಾಮರಾದಿ ಗುರುಮರ್ಯಾದೆಗಳೊಡನೆಯೂ, ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಭಾವಮೂರ್ತಿಯನ್ನು ವಿನ್ಯಾಸಮಾಡಿ ಉತ್ಸವವನ್ನು ನಡೆಸಿದರು. ಈ ಉತ್ಸವಕ್ಕೆ ಊರೊಳಗಿನ ಪ್ರಮುಖರೂ ಸಮೀಪದ ಗ್ರಾಮಗಳ ಗುರುಭಕ್ತರು ಆಗಮಿಸಿದ್ದರಿಂದ ಉತ್ಸವವು ವಿಶೇಷ ಶೋಭಾಯಮಾನವಾಗಿದ್ದಿತು. ಅನಂತರ ಮುಖ್ಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯು ಹೊರಟು ರಾತ್ರಿ 8 ಘಂಟೆಗೆ ಮ|| ರಾ|| ಬೆಂಡಿಗೇರಿ ನಿಜಲಿಂಗಪ್ಪನವರ ಅಂಗಡಿಗೆ ಬಂದೊಡನೆಯೇ ಸರ್ವರೂ ಜಗದಾಚಾರ್ಯರ ಜಯಜಯಘೋಷದೊಡನೆ ಮಂಗಳಾರತಿಯನ್ನು ಮಾಡಿ ಶ್ರೀ ರೇಣುಕಭಾವಮೂರ್ತಿಯನ್ನು ಸುಶೋಭಿತವಾದ ಸಿಂಹಾಸನದಲ್ಲಿ ಮೂರ್ತಗೊಳಿಸಿದರು ಬಳಿಕ ಇಲ್ಲಿಯ ಇಂಗ್ರೇಜಿಶಾಲಾ ಹೆಡ್‌ಮಾಸ್ತರರಾದ ವಿ. ಆರ್. ಕೊಪ್ಪಳ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಶ್ರೀ|| ಅಡಿವಯ್ಯನವರು ಲಿಂಬಯ್ಯಸ್ವಾಮಿಮಠ ಇವರು ಬಹುಸಂಖ್ಯಾಯುತವಾದ ನಮ್ಮ ಸಮಾಜವು ವಿದ್ಯೆಯಲ್ಲಿ ಬಹಳ ಹಿಂದುಳಿದದ್ದರಿಂದ ವೀರಶೈವತತ್ವಗಳನ್ನು ತಿಳಿಯಲು ಅಶಕ್ತವಾಗಿ ಗುರುಗಳ ಮಹತ್ವವನ್ನೂ ಸಹ ಅರಿಯದಂತಾಗಿರುವುದರಿಂದ ಗುರುಗಳ ಜಯಂತ್ಯುತ್ಸವಗಳು ಇನ್ನೂ ಸಾಕಷ್ಟು ಆಮಲಿನಲ್ಲಿ ತೀವ್ರವಾಗಿ ಬಾರದೆ ಇರಲಿಕ್ಕೆ ಮುಖ್ಯಕಾರಣವೆಂದು ಒಳ್ಳೇ ಕಳಕಳಿಯಿಂದ ಭಾಷಣಮಾಡಿದರು. ಆ ಮೇಲೆ ಕುರುಬರಲ್ಲಿ ಮುಖ್ಯಸ್ಥನಾದ ಹಳವಳ್ಳಿ ಬಸವಣ್ಣಪ್ಪ ಈತನು ಶ್ರೀ ರೇವಣಸಿದ್ಧೇಶ್ವರರು ನಮ್ಮ ಹಾಲುಮತಕ್ಕೆ ಆದಿಗುರುಗಳಾಗಿ ನಮ್ಮ ಜನಾಂಗವನ್ನು ಉದ್ಧರಿಸಿದಕಾರಣ ಈ ಗುರುಸಾರ್ವಭೌಮರ ವಿಷಯದಲ್ಲಿ ನಮ್ಮ ವಂಶಪಾರಂಪರ್ಯವಾಗಿ ಅಭಾರಿಗಳಾಗಿರುವದರಿಂದ ನಮ್ಮ ಸಮಾಜವು ತ್ರಿಕರಣಪೂರ್ವಕವಾದ ಭಕ್ತಿಯಿಂದ ಇಂಥ ಗುರುಗಳ ಜಯಂತಿಗಳನ್ನು ಮಾಡುವದೇ ನಮ್ಮ ಕರ್ತವ್ಯವೆಂದೂ. ಬೇರೆಹಬ್ಬಗಳಿಗಿಂತ ಈ ಗುರುಗಳ ಜಯಂತಿಗಳೇ ನಮಗೆ ಮುಖ್ಯವಾಗಿರುತ್ತವೆಂದೂ ತಮ್ಮ ಸಮಾಜದಲ್ಲಿರುವ ಗುರುಭಕ್ತಿಯನ್ನು ಭಾಷಣದಮೂಲಕ ತೋರಿಸಿದನು. ಅನಂತರ ವೇ|| ಕಾಶಯ್ಯನವರು ಹಿರೇಮಠ ಇವರು ಪಂಚಾಚಾರ್ಯರ ಜಗದ್ಗುರುತ್ವವು ಅನ್ವರ್ಥಕವಾದುದೆಂದೂ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಕ್ಕನುಸರಿಸಿ ಅಸಾಧಾರಣ ಧರ್ಮವಾದ ಅನುಗ್ರಹಕರ್ತೃತ್ವಶಕ್ತಿಯು ಪರಶಿವನೊಬ್ಬನಿಗಲ್ಲದೆ ಬೇರೆ ಯಾರಿಗೂ ಇಲ್ಲವೆಂದೂ, ಆ ಅನುಗ್ರಹಶಕ್ತಿಯೇ ಗುರುಸ್ವರೂಪವೆಂದೂ ಆ ಗುರುಗಳೇ ಪಂಚಾಚಾರ್ಯರೆಂದೂ, ಆ ಪರಶಿವನೇ ಈ ಮತವನ್ನು ಶಿವಾಗಮಗಳ ದ್ವಾರಾ ಬೋಧಿಸಿದ್ದರಿಂದ ಈ ಮತವು ಅನಾದಿಸಂಸಿದ್ಧವೆಂದೂ, ಧರ್ಮಿಗೂ ಧರ್ಮಕ್ಕೂ ಅಭೇದವಿರುವುದರಿಂದ ಶಿವನ ಅನುಗ್ರಹಶಕ್ತಿಯೂ ಹಾಗೂ ಪಂಚಾಚಾರ್ಯರೂ ಭಿನ್ನವಲ್ಲೆಂದೂ, ಅವರೇ ಈ ಭೂಲೋಕದಲ್ಲಿ ಲಿಂಗಧಾರಿಗಳಾದ ಸಮಸ್ತರಿಗೂ ಮುಖ್ಯಗುರುಗಳಿರುವರೆಂದೂ ಶಾಸ್ತ್ರಾಧಾರದೊಡನೆ ಹೃದಯಂಗಮವಾಗಿ ಪ್ರತಿಪಾದಿಸಿದರು. ಆ ಮೇಲೆ ಅಧ್ಯಕ್ಷರು ವೀರಶೈವ ಮತೀಯರು ಅಪ್ರಾಕೃತರೆಂದೂ ಪಂಚಭೂತಸೃಷ್ಟಿಗೆ ನಿಯಾಮಕರಿದ್ದರಿಂದ ೩.೪.೬. ವಗ್ಯೆರೆ ಹೆಸರುಗಳನ್ನು ಹೊಂದದೆ ಪಂಚಾಚಾರ್ಯರೆಂದೇ ಹೆಸರ್ಗೊಂಡರೆಂದೂ ಯುಕ್ತಿಯುಕ್ತವಾಗಿ ಭಾಷಣವನ್ನು ಮಾಡಿದಮೇಲೆ ಸಭಿಕರಿಗೆ ಪ್ರಸಾದವು ಹಂಚಲ್ಪಟ್ಟು ಜಗದಾಚಾರ್ಯರ ಜಯಘೋಷದೊಡನೆ ಸಭಾಕಾರ್ಯವು ಉಪಸಂಹರಿಸಲ್ಪಟ್ಟಿತು.

ರಾಚಪ್ಪನವರು, ಕುಮುಸಿ.

ಶಿರೋಳ.

ಶ್ರೀ ಜಗದ್ಗುರು ರೇಣುಕಾಚಾರ್ಯ ಶಾಖಾಸ್ಥಿತ ಶಿರೋಳ ಬೃಹನ್ಮಠದಲ್ಲಿ ವಾರ್ಷಿಕಪದ್ಧತಿಯಂತೆ ಇದೇ ವಿಭವನಾಮಸಂವತ್ಸರ ಫಾಲ್ಗುಣ ಶು|| ೧೩ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆ ದಿವಸ ಬೆಳಿಗ್ಗೆ ಜಗದ್ಗುರುಗಳವರ ಲೀಲಾವೇಷ ಭಾವಪಟಕ್ಕೆ ವಿದ್ಯಾರ್ಥಿಗಳಿಂದ ವೇದೋಕ್ತಪೂಜೆಯು ನೆರವೇರಿಸಲ್ಪಟ್ಟು ಅನಂತರ ಗಣಾರಾಧನೆಯು ಜರಗಿಸಲ್ಪಟ್ಟಿತು. ಸಾಯಂಕಾಲಕ್ಕೆ ಇಲ್ಲಿಯ ಪ್ರಾಥಮಿಕಶಾಲಾ ಮತ್ತು ಇಂಗ್ಲಿಷಶಾಲಾ ವಿದ್ಯಾರ್ಥಿಗಳು ಆಗಮಿಸಿದ್ದರು. ಶ್ರೀ ಜಗದ್ಗುರು ಪಂಚಾಚಾರ್ಯಧರ್ಮಾರ್ಥಜ್ಯೋತಿಷವೈದಿಕಪಾಠಶಾಲೆಯ ವಿದ್ಯಾರ್ಥಿಗಳಿಂದ ಯಜುರ್ವೇದಾಧ್ಯಯನಪೂರ್ವಕ ಪೂಜೋಪಚಾರಗಳು ಮುಗಿದನಂತರ ಜಗದ್ಗುರುಗಳ ಮಂಗಲಸ್ತೋತ್ರಗಳಿಂದ ನೀರಾಜನಂಗೈದು ಸರ್ವರಿಗೂ ಫಲಪ್ರಸಾದವು ಹಂಚಲ್ಪಟ್ಟಿತು. ಅನಂತರ ವೇ|| ಪಂಚಾಕ್ಷರಶಾಸ್ತ್ರಿಗಳವರು ಶ್ರೀ ಜಗದ್ಗುರು ರೇಣುಕಾಚಾರ್ಯರು ವೀರಶೈವಮತಸ್ಥಾಪನಮಾಡಿ ಚತುರಾಶ್ರಮದವರಿಗೂ ಗುರುಗಳಾಗಿ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ನೆಲೆಗೊಳಿಸಿ ಅನಂತಾನಂತ ಲೀಲೆಗಳನ್ನು ತೋರಿ ೧೧೦೦ ವರುಷಗಳವರೆಗಿದ್ದು ಕಡೆಗೆ ತಾವು ಅವತರಿಸಿದ ಕೊಲ್ಲೀಪಾಕಿ ಸೋಮನಾಥಲಿಂಗದಲ್ಲಿ ದಿವ್ಯದೇಹಧಾರಿಗಳಾಗಿ ಐಕ್ಯರಾದ ವಿಷಯಗಳನ್ನು ಬೋಧಿಸಿದರು. ಯಾವತ್ತರೂ ಈ ವಿಷಯವನ್ನು ಕೇಳಿ ಸಂತುಷ್ಟರಾಗಿ ಆಚಾರ್ಯರ ಜಯಘೋಷದೊಡನೆ ಶ್ರೀ ಜಗದ್ಗುರು ರೇಣುಕರ ಆಶೀರ್ವಾದವನ್ನು ಹೊಂದಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಶಿರೋಳ ಬೃಹನ್ಮಠ ಶಿಷ್ಯಶಾಖಾಸ್ಥಿತವಾದ ಹೊಸಮಠದಲ್ಲಿಯೂ ಸಹ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಆಚಾರ್ಯ ಸೇವಕ.

ಬಳ್ಳಾರಿ.

ಪ್ರತಿವರ್ಷ ಪದ್ಧತಿಪ್ರಕಾರ ಫಾಲ್ಗುಣ ಶು|| 13 ತಾರೀಖು 23-3-29 ನೆಯ ದಿವಸ ವೇ|| ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ಶ್ರೀಜಗದಾಚಾರ್ಯರ ಭಾವಪಟವನ್ನು ಸ್ಥಾಪಿಸಿ ಪೂಜೆಗೈದು ತದನಂತರ ಶ್ರೀಪಂಚಾಚಾರ್ಯ ಸೇವಾಸಂಘದವರು ಜಾಹೀರ ಪಡಿಸಿದಮೇರೆಗೆ ತರೀಕೆರೆ ಹಿರೇಮಠದ ಸ್ವಾಮಿಗಳು, ಶ್ರೀ ಆನೆಸಿದ್ದಾಪುರದ ಶ್ರೀಪಟ್ಟದ ಸ್ವಾಮಿಗಳು, ಮ|| ರಾ|| ಪವಾಡ ಶೆಟ್ಟಿ ಮಲಕಾಜಪ್ಪನವರು, ಕೊಂಡಕುಂದಿ ಭೋಗಪ್ಪನವರು, ಕೌದ್ರಿ ಪಣ್ಯಪ್ಪನವರು, ತೊಗರಿ ವೀರಪ್ಪನವರು, ರಾಜಾಪುರದ ಸಿದ್ದಪ್ಪನವರು, ಹೊಸಪೇಟೆ ವಕೀಲರಾದ ವೇ|| ನಂಜುಂಡಯ್ಯನವರು ಮುಂತಾದ ಅನೇಕ ಮಂದಿ ದೊಡ್ಡಮನುಷ್ಯರು, ಹಾಸ್ಟಲ್ ವಿದ್ಯಾರ್ಥಿಗಳು ಸಭೆಗೆ ಆಗಮಿಸಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ವೇ|| ಸದಾಶಿವಯ್ಯ, ಯಂ.ಎ., ಬಿಯಲ್., ಇವರು ವಹಿಸಿದ್ದರು. ಮ||ರಾ|| ಕೌದ್ರಿ ಪಣ್ಯಪ್ಪನವರು, ವೀರಶೈವ ಮತದ ಪ್ರಾಶಸ್ತ್ಯವನ್ನೂ ಶ್ರೀ ಜಗದಾಚಾರ್ಯರ ಮಹಿಮೆಯನ್ನೂ ಕುರಿತು ಬಹು ಚನ್ನಾಗಿ ಉಪನ್ಯಾಸ ಮಾಡಿದರು. ತದನಂತರ ಅಧ್ಯಕ್ಷರು ಜಗದಾದಿಯಿಂದ ಈವರೆಗೆ ವೀರಶೈವ ಮತದ ಸ್ಥಿತಿಗತಿಯನ್ನು ವಿವೇಚನೆಮಾಡಿ ಶ್ರೀಪಂಚಾಚಾರ್ಯರು ಸ್ಥಾಪಿಸಿದ ಸಿದ್ಧಾಂತಕ್ಕೂ ಇತರ ವೈದಿಕ ಮತಗಳ ಸಿದ್ಧಾಂತಕ್ಕೂ ಇರುವ ಭೇದಾಭೇದಗಳನ್ನು ವಿಮರ್ಶಿಸಿದರು. ಆಮೇಲೆ ಶ್ರೀಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಆ ಮೇಲೆ ಪೂಜ್ಯರಾದವರ ಭಾವಪಟವು ಬೆಳ್ಳಿಯ ಪ್ರಭಾವಳಿಯ ಪಲ್ಲಕ್ಕಿಯಲ್ಲಿರಿಸಲ್ಪಟ್ಟು ಭಜನಾಸಂಘದವರ ಭಜನೆಯಿಂದಲೂ ಬ್ಯಾಂಡು ಮುಂತಾದ ವಾದ್ಯವೈಭವದಿಂದಲೂ, ವೈದಿಕರ ವೇದಘೋಷದಿಂದಲೂ ಮಹಾವೈಭವದೊಡನೆ ರಾಜಬೀದಿಗಳಲ್ಲಿ ಉತ್ಸವಗೊಳಿಸಲ್ಪಟ್ಟಿತು. ದಾರಿಯುದ್ದ ಭಕ್ತರು ಫಲಪುಷ್ಪಾದಿಗಳನ್ನು ಸಮರ್ಪಿಸಿ ಮಂಗಳಾರತಿಯನ್ನು ಮಾಡುತ್ತಿದ್ದರು. ಈ ಕಾರ್ಯದಲ್ಲಿ ಭಾಗಿಗಳಾದ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಕೋರುವ,

ಗುರುಭಕ್ತಕಿಂಕರ.

ಚಿಕ್ಕಮಗಳೂರು.

ಈ ಟವನ್ನಿನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಇದೇ ವಿಭವಸಂವತ್ಸರದ ಫಾಲ್ಗುಣ ಶುದ್ಧ ೧೩ ಶನಿವಾರ (ತಾ|| 23-3-29) ದಿವಸ ಆಚರಿಸಲ್ಪಟ್ಟಿತು, ಶ್ರೀಮಜ್ಜಗದ್ಗುರು ರಂಭಾಪುರೀ (ಬಾಳೆಹೊನ್ನೂರು) ವೀರಸಿಂಹಾಸನಪೀಠದ ತಾಲ್ಲೋಕು ಏಜಂಟ್ ಆಫೀಸ್ ಹಾಲಿನಲ್ಲಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಭಾವಚಿತ್ರಗಳು ಉಚಿತವಾದ

ಪೀಠದಲ್ಲಿ ವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದವು. ಕಾರ್ಯಕ್ರಮದಂತೆ ಆ ದಿವಸ ಸಾಯಂಕಾಲ 7-30 ಘಂಟೆಗೆ ಸಮಸ್ತ ಭಕ್ತಾದಿಗಳು ಸೇರಿದ್ದರು. ಪ್ರಾರಂಭದಲ್ಲಿ ವೇ|| ಬಿ. ನಂಜುಂಡಾರಾಧ್ಯರು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಸ್ತೋತ್ರಗಳನ್ನು ಪಾಡಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವಿಷಯಕವಾದ ಉಪನ್ಯಾಸವನ್ನು ಸರ್ವರಿಗೂ ಮನನವಾಗುವಂತೆ ಮಾಡಿ ಸರ್ವರನ್ನು ಸಂತೋಷಗೊಳಿಸಿದರು. ಅನಂತರ ಮಹಾಮಂಗಳಾರತಿಯು ನಡೆದು ಸಮಸ್ತರಿಗೂ ಪ್ರಸಾದವು ವಿನಿಯೋಗಿಸಲ್ಪಟ್ಟು, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

Mr. Chandiah Taluk agent,
Chikmagalur.

ಮರ್ಲೆ.

ಚಿಕ್ಕಮಗಳೂರು ತಾಲ್ಲೂಕು ಅಂಬಳೆಹೋಬಳಿ ಮರ್ಲೆಗ್ರಾಮದಲ್ಲಿ ಪದ್ಧತಿಮೇರೆಗೆ ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಪೀಠದ ಚಿಕ್ಕಮಗಳೂರು ತಾಲ್ಲೂಕು ಅಸಿಸ್ಟೆಂಟ್ ಏಜಂಟ್ ಜಿ. ಚೆಂಬಸವಯ್ಯನವರ ಸೂಚನೆಯಮೇರೆಗೆ ಆಫೀಸ್ ಮನೆಯಲ್ಲಿ ಇದೇ ಫಾಲ್ಗುಣ ಶುದ್ಧ ೧೩ ಶನಿವಾರ ಜಗದಾಚಾರ್ಯರ ಪಟವನ್ನು ಷೋಡಶೋಪಚಾರಗಳಿಂದ ಪೂಜಿಸಿ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಪುರವಾಸಿಗಳು ಮತ್ತು ಸಮೀಪದಗ್ರಾಮಗಳಿಂದ ಆಗಮಿಸಿದ್ದ ನೂರಾರುಜನ ಭಕ್ತರು ಸೇರಿ ಅತಿ ಭಕ್ತಿಯಿಂದ ಭಜನೆಯನ್ನು ಮಾಡುತ್ತ ವಾದ್ಯವೈಭವದೊಡನೆ ಗ್ರಾಮದ ಯಾವತ್ತು ಬೀದಿಗಳಲ್ಲಿ ಉತ್ಸವ ಪೂರೈಸಿಕೊಂಡು ಸುಮಾರು 10—11 ಗಂಟೆಗೆ ಸ್ವಸ್ಥಾನಸೇರಿ ಮಂಗಳಾರತಿಯಾದನಂತರ ಸದರಿ ಅಸಿಸ್ಟೆಂಟ್ ಏಜಂಟ್ ಜಿ. ಚೆಂಬಸವಯ್ಯನವರು ಏಕಮತ್ಯ ಹಾಗೂ ಭಕ್ತಿವಿಷಯದಲ್ಲಿ ಉಪನ್ಯಾಸವನ್ನು ಮಾಡಿದರು. ಆಮೇಲೆ ಶ್ರೀಗಂಧಪ್ರಸಾದವನ್ನು ಹಂಚಿ ಪೂರೈಸಿದೊಡನೆ ಶ್ರೀ ರೇಣುಕಭಗವತ್ಪಾದರವರ ಉತ್ಸವವನ್ನು ಈ ಗ್ರಾಮದಲ್ಲಿ ಅತಿ ಭಕ್ತಿಯಿಂದ ನೆರವೇರಿಸಿದ ಜ್ಞಾಪಕಾರ್ಥವಾಗಿ ಶ್ರೀ ಪಂಚಾಚಾರ್ಯಪ್ರಭೆಗೆ 3—0—0 ರೂಪಾಯಿಗಳನ್ನು ಕಳುಹಿಸಿಕೊಡಬೇಕೆಂದು ಏಜಂಟರು ಸೂಚಿಸಿದ ಮೇರೆಗೆ ಗ್ರಾಮದ ಮುಖಂಡರಾದ ಮ|| ರಾ|| ಪಟೇಲ್ ದೊಡ್ಡಬಸವೇಗೌಡರು, ಗಂಗಣ್ಣಗೌಡರ ಬಸವೇಗೌಡರು, ರುದ್ರೇಗೌಡರ ಮಲ್ಲೇಗೌಡರು, ಪುಟ್ಟರಾಮಶೆಟ್ಟರು, ಚನ್ನಶೆಟ್ಟರು ರಾಮಭದ್ರಶೆಟ್ಟರು, ಚನ್ನೇಗೌಡರು ಇನ್ನೂ ಮುಂತಾದವರು ಅನುಮೋದಿಸಿ ೨ ರೂಪಾಯಿಗಳನ್ನು ಏಜಂಟರವಶ ಪಾವತಿ ಮಾಡಿದರು. ಮ|| ರುದ್ರೇಗೌಡರ ಮಕ್ಕಳು ಮಲ್ಲೇಗೌಡರು ಸ್ವಂತವಾಗಿ ೧ ರೂಪಾಯಿಯನ್ನು ಸಮರ್ಪಿಸಿದರು. ಅನಂತರ ಮಂಗಳಾರತಿಯಾಗಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯ ಜಯಘೋಷದೊಡನೆ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಗುರುಭಕ್ತ.

ಘಟರಡ್ಡಿಹಾಳ.

ಕೊಪ್ಪಳ ತಾ|| ಘಟರಡ್ಡಿಹಾಳ ಗ್ರಾಮದಲ್ಲಿ ಫಾಲ್ಗುಣ ಶು|| 13 ಶನಿವಾರ ಸಾಯಂಕಾಲ 7 ಘಂಟೆಗೆ ಸದರಿ ಗ್ರಾಮದ ಹಿರೇಮಠದ ಪಂಚಾಚಾರ್ಯ ಭಜನಾಸಂಘದ ನಿಲಯದಲ್ಲಿ ಜಗದ್ಗುರು ರೇಣುಕಾಚಾರ್ಯರ ಭಾವಪಟವನ್ನು ಶೃಂಗರಿಸಿದ ಭದ್ರಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಅಷ್ಟೋತ್ತರ ಶತನಾಮಗಳನ್ನು ಪಠಿಸಿದನಂತರ ಗುರುಸಾರ್ವಭೌಮರ ಜಯಜಯಕಾರದೊಡನೆ ಮೆರವಣಿಗೆಯು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ರಾಜಬೀದಿಗಳಲ್ಲಿ ಹೊರಟಿತು. ಈ ಗ್ರಾಮದ ಸರ್ವರೂ ಅಸಾಧಾರಣವಾದ ಭಕ್ತಿಯಿಂದ ಮಹೋತ್ಸವವನ್ನು ನೆರವೇರಿಸಿದರು. ಉತ್ಸವವು ಮಠಕ್ಕೆ ಬಂದಕೂಡಲೆ ಭಾವಚಿತ್ರವನ್ನು ಭದ್ರಪೀಠದಲ್ಲಿ ಮೂರ್ತಿಗೊಳಿಸಿ ಸರ್ವರೂ ಮಂಗಲಾರತಿಯನ್ನು ಮಾಡಿ ಫಲಾಶೀರ್ವಾದವನ್ನು ಪಡೆದು ಪಂಚಾಚಾರ್ಯರ ಜಯಘೋಷದೊಡನೆ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಈ ಪ್ರಕಾರ ಕೇವಲ ತನುಮನಧನಗಳಿಂದ ಸೇವೆಮಾಡತಕ್ಕಂಥ ಸರ್ವಭಕ್ತವೃಂದಕ್ಕೆ ಜಗದ್ಗುರುಗಳಾದ ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಗುರುಪದಕಿಂಕರ.

ಬಾಸಿಗ.

ಪ್ರತಿವರ್ಷ ಪದ್ಧತಿಯಂತೆ ಸೊಲ್ಲಾಪುರ ಡಿ|| ಬಾರ್ಶಿ ಪಟ್ಟಣದಲ್ಲಿ ವಿರಾಜಿಸುತ್ತಿರುವ ಶ್ರೀ|| ಷ|| ಬ್ರ|| ರಾಚಲಿಂಗಸ್ವಾಮಿ ಪರಾಂಡೆಕರ ಇವರ ಮಠದಲ್ಲಿ ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವಗಳು ಅತಿ ವೈಭವದಿಂದ ನೆರವೇರಿದವು. ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರ ಜಯಂತಿ ಮಹೋತ್ಸವವು ನೆರವೇರಿತು. ಪ್ರಾತಃಕಾಲ ಆಚಾರ್ಯರ ಭಾವಪಟಕ್ಕೆ ರುದ್ರಾಭಿಷೇಕಾದಿಗಳು, ಮಧ್ಯಾಹ್ನ ೩ ರಿಂದ ೫ ರವರೆಗೆ ಸೌ|| ತ್ರಿವೇಣೀಬಾಯಿ ಇಟಾಪುರೆ ಇವರ ಕೀರ್ತನ, ಸಾಯಂಕಾಲ ೮ ರಿಂದ ೯ ರವರೆಗೆ ಮ|| ರಾ|| ಡಿ. ಜಿ. ಗಾವಡಾನೆ, ಬಿ.ಎ., ಎಲ್‌ಎಲ್.ಬಿ., ವಕೀಲ ಇವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಅನೇಕರ ಭಾಷಣಗಳಾದವು. ಆ ಮೇಲೆ ಮ|| ರಾ|| ಸದಾನಂದಬುವಾ ಕೀರ್ತನಕಾರ ಇವರು ಮಹಾರಾಷ್ಟ್ರ ಭಾಷೆಯಲ್ಲಿ ಸುಶ್ರಾವ್ಯವಾದ ಆಚಾರ್ಯರ ಕೀರ್ತನವನ್ನು ಮಾಡಿದರು. ಈರೀತಿಯಾಗಿ ಆ ದಿವಸ ಜಯಂತಿಕಾರ್ಯಗಳು ಕ್ರಮವಾಗಿ ನಡೆದವು. ಪುನಃ ಫಾಲ್ಗುಣ ಶು|| ೧೩ ಶನಿವಾರ ದಿವಸ ಸದರಿ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಆದಿವಸ ಸರ್ವರೂ ಆಗಮಿಸಿ ಜಗದಾಚಾರ್ಯರ ಪೂಜೆಯನ್ನು ಮಾಡಿ ಧನ್ಯರಾದರು. ಇದರಂತೆಯೇ ಮಹಾರಾಷ್ಟ್ರದೇಶ ನಿವಾಸಿಗಳಾದ ಸಕಲ ವೀರಶೈವರು ಪ್ರತಿ ವರ್ಷದಲ್ಲಿ ಮತಸ್ಥಾಪನಾಚಾರ್ಯರ ಜಯಂತಿಮಹೋತ್ಸವಗಳನ್ನು ಮಾಡಿ ವೀರಶೈವರೆಂಬ ತಮ್ಮ ನಾಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಆಶಿಸುತ್ತೇವೆ.

ತಾ|| 26-3-29 ಶ್ರೀ ರಾಚಲಿಂಗಸ್ವಾಮಿ ಪರಾಂಡೆಕರಮಠ.

ಬೆಂಗಳೂರು.

ಈ ನಗರವಾಸಿಗಳಾದ ವೀರಶೈವಮಂಡಲಿಯವರು ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಮಹೋತ್ಸವವನ್ನು ತಾ|| 23 ನೇ ಶನಿವಾರ ಸಿಟಿ ಚಿಕ್ಕಪೇಟೆ ಶ್ರೀ ಮಹಂತಿನಮಠದಲ್ಲಿ ಅತಿವಿಜೃಂಭಣೆಯಿಂದ ಜರುಗಿಸಿದರು. ಆದಿನ ಪ್ರಾತಃಕಾಲ ಜಗದಾಚಾರ್ಯರ ಉತ್ಸವಮೂರ್ತಿಗೆ ವಿಧ್ಯುಕ್ತವಾಗಿ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆಯು ಮಧ್ಯಾಹ್ನ ಮಾಹೇಶ್ವರ ಸಂತರ್ಪಣೆಯು, ಬಳಿಕ 4 ರಿಂದ 5 ಗಂಟೆವರೆಗೆ "ಕೀರ್ತನ ಕಂಠೀರವೇತ್ಯಾದಿ" ಬಿರುದಾಂಕಿತರಾದ ದೊಡ್ಡಬಳ್ಳಾಪುರದ ಪಂ|| ಶಿವದೇವಶಾಸ್ತ್ರಿಗಳಿಂದ ಗುರೂತ್ಕರ್ಷರೂಪ ಕೀರ್ತನವು ನಡೆಯಿಸಲ್ಪಟ್ಟವು. ಸಾಯಂಕಾಲ 5 ಗಂಟೆಯಿಂದ ವಿಸ್ತಾರವಾದ ಮಠದ ಮೇಲ್ಭಾಗದಲ್ಲಿ ಶ್ರೀಮನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಕೆ. ಟಿ. ಸಿ. ಐ. ಇ. ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಸಭೆಗೆ ರಾಜಧರ್ಮಪ್ರವೀಣರಾದ ಮೈಸೂರು ಸೀಮೆಯ ಚೀಫ್ ಕೋರ್ಟ್ ಜಸ್ಟಿಸ್ ಮಿ|| A. ಎಸ್. ದೊರೆಸ್ವಾಮಿಅಯ್ಯರವರೂ, ಅಡ್ವೊಕೇಟ್ ಮಿ|| ಎಂ. ವಿ. ನರಸಿಂಹಯ್ಯಂಗಾರ್ಯರು, ಅಡ್ವೊಕೇಟ್ ಮಿ|| ಯಂ. ಬಿ. ವರದರಾಜಯ್ಯಂಗಾರ್ಯರು ಮ|| ರಾ|| ಮಂಡಿ ಹರಿಯಣ್ಣನವರೇ ಮೊದಲಾದ ವರ್ತಕಮಂಡಲಿಯವರೂ ಪುರಪ್ರಮುಖರೂ ಆಗಮಿಸಿದ್ದರು. ಪ್ರಾರಂಭದಲ್ಲಿ ಶಿವಕಥಾ ವಿದ್ವಾನ್ ಶಿವದೇವಶಾಸ್ತ್ರಿಗಳಿಂದ ಪಿಟಿಲ್ ತಬಲಾ ಮಂಜುಲ ವಾದ್ಯಗಳೊಡನೆ ಶ್ರೀಮತ್ಪಂಚಾಚಾರ್ಯಸ್ತೋತ್ರರೂಪಮಂಗಳಾಚರಣವೂ, ವೈದಿಕ ವಿದ್ಯಾರ್ಥಿಗಳಿಂದ ಏಕಕಂಠದಿಂದ ವೇದಘೋಷವೂ ಮಾಡಲ್ಪಟ್ಟು ಬಳಿಕ ಅಡ್ವೊಕೇಟ್ ಮಿ|| ಜಿ. ಹೆಚ್. ಚನ್ನಬಸಪ್ಪನವರು ಶ್ರೀ ಜಗದ್ಗುರು ರೇಣುಕಾದಿ ಶ್ವಪಾಪೋಷಿತ ವೀರಶೈವಗ್ರಂಥ ಭಾಂಡಾರದ ವರದಿಯನ್ನು ಓದಿ ಹೇಳಿದರು. ಮಹಂತಿನಮಠದ ಶ್ರೀ ಜಗದ್ಗುರು ಪಂಚಾಚಾರ್ಯ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವ್ಯಾಕರಣಸಿದ್ಧಾಂತಭೂಷಣ ವೇ|| ವಿಶ್ವನಾಥಶಾಸ್ತ್ರಿಗಳು ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮತಗಳ ತಾರತಮ್ಯವನ್ನೂ ಶ್ರೀಮತ್ಪಂಚಾಚಾರ್ಯರು ಸ್ಥಾಪಿಸಿರುವ ಶಕ್ತಿವಿಶಿಷ್ಟಾದ್ವೈತ ಮತದಲ್ಲುಳ್ಳ ತತ್ವ ಮಹತ್ವವನ್ನೂ ಕುರಿತು ಪ್ರಮಾಣಗಳೊಡನೆ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ತದನಂತರ ಮ|| ರಾ|| ಜಿ. ಗಂಗಪ್ಪನವರು ಸಂಸ್ಕೃತ ಪಾಠಶಾಲೆಯ ಫ್ರೀ ಬೋರ್ಡಿಂಗ್ ವರದಿಯನ್ನು ಓದಿಹೇಳಿದರು. ಚಾಮರಾಜಪೇಟೆ ಅಕ್ಕಿಮಂಡಿ ಎಸ್. ರುದ್ರಯ್ಯನವರು ಹಿಂದಿನವರುಷದ ರೇಣುಕಜಯಂತಿಯ ಜನಾರ್ಜನ ವರದಿಯನ್ನು ಈ ಸಂವತ್ಸರದ ಡಬ್ಬಿಗಳ ಹಾಗೂ ಬೆನಿಫಿಟ್ ನಾಟಕಗಳ ಮತ್ತು ಚಂದಾವಸೂಲಿ ವಿಷಯವನ್ನೂ ಓದಿಹೇಳಿ, ಕ್ರೈಸ್ತ, ಮಹಮ್ಮದೀಯ, ಸ್ಮಾರ್ತ, ವೈಷ್ಣವ, ಶ್ರೀವೈಷ್ಣವರು ತಮ್ಮ ಗುರುಗಳ ಜಯಂತಿವೊದಲಾದವುಗಳನ್ನು ಮಾಡುವುದಕ್ಕಾಗಿ ಸರ್ಕಾರದಿಂದ ರಜಾ ಪಡೆದುಕೊಂಡಿರುವರಷ್ಟೆ? ಈ ನಮ್ಮ ವೀರಶೈವಮತಸ್ಥಾಪಕರಾದ ಶ್ರೀ ರೇಣುಕಾಚಾರ್ಯ ಭಗವತ್ಪಾದರ ಜಯಂತಿ ಹಬ್ಬದ ಸುದಿನದಲ್ಲಿ ಸರ್ಕಾರದಿಂದ ರಜಾ ಮಂಜೂರ್ಮಾಡಿಸಬೇಕೆಂಬ ರೆಜ್ಯುಲೇಷನ್ನು ಅಧ್ಯಕ್ಷರವರು ಅನುಮೋದಿಸಿ ಇದನ್ನು ಜಾರಿಗೆ ತರಿಸಬೇಕೆಂದು ಗೌರ್ನಮೆಂಟಿನವರನ್ನು ಕೇಳಬೇಕೆಂದು ಸೂಚಿಸಿಗರು (ಸಭಿಕರೆಲ್ಲರು ಕರತಾಳವನ್ನು ಮಾಡಿದರು) ಇದಾದಮೇಲೆ ಮ|| ರಾ|| ಮಾಡಲ್‌ಪ್ರೆಸ್ ಪ್ರೊ|| ಚನ್ನಪ್ಪನವರು ಅನಾದಿಸಂಸಿದ್ಧನಾದ ಶ್ರೀಮತ್ಪಂಚಾಚಾರ್ಯರ ಪೀಠಗಳ ಗೌರವಗಳನ್ನೂ ಪುರಾತನ ನಾಡುಗಳ ಶಾಸನಾದಿಗಳನ್ನು ಶ್ರೀ ರೇಣುಕ ಪೂಜ್ಯರಾದರು ಶ್ರೀ ಶಂಕರಾಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರಸ್ವಾಮಿಯನ್ನು ಕೊಟ್ಟಿರುವುದಕ್ಕೆ ಶ್ರೀ ರಂಭಾಪುರೀ ಧರ್ಮಪೀಠದಲ್ಲಿ ಅದ್ಯಾಪಿ ಇರುವ ಚಿಹ್ನಾದಿಗಳನ್ನೂ ಆಚಾರ್ಯರಿಗಿರುವ ಬಿರುದಾವಳಿಗಳನ್ನೂ, ಇವರಿಗೆ ರಾಜಾಧಿರಾಜರಿಂದ ಕೊಡಲ್ಪಟ್ಟಿರುವ ಕ್ಷೇತ್ರ ಮಾನ್ಯಾದಿಗಳ ವಿಷಯವನ್ನೂ ಸರ್ವರಿಗೂ ಹೃದಯಂಗಮವಾಗುವಂತೆ ಸಮಾಚೀನವಾಗಿ ಓದಿ ತಿಳಿಸಿದರು. ಶಿವದೇವಶಾಸ್ತ್ರಿಗಳು ರೇಣುಕ ದೇಶಿಕ ಸಾರ್ವಭೌಮರ ಅಭೂತಪೂರ್ವವಾದ ಲೀಲೆಗಳನ್ನೂ ಪಂಚಾಚಾರ್ಯರ ಅಸಾಧಾರಣ ಪ್ರಭಾವವನ್ನೂ ಸಂಕ್ಷೇಪಿಸಿ ಕೀರ್ತನರೂಪವಾಗಿ ಬೋಧಿಸಿ ತಮ್ಮಿಂದ ರಚಿತವಾದ ಪಂಚಾಚಾರ್ಯ ಸ್ತೋತ್ರಮಾಲೆಯನ್ನು ಪಠಿಸಿ ಆನಂದಗೊಳಿಸಿದರು. ಅಧ್ಯಕ್ಷರು ಶ್ರೀರೇಣುಕಾಚಾರ್ಯರ ಜಯಂತಿಸುದಿನವನ್ನು ತಮ್ಮ ಭಾಷಣಾರಂಭದಲ್ಲಿ ಸೂಚಿಸಿ ವೀರಶೈವ ಮತವನ್ನು ಪ್ರತಿ ಯುಗದಲ್ಲಿ ಸ್ಥಾಪಿಸಿದ ಶಿವಸ್ವರೂಪವಾದ ಶ್ರೀಮತ್ಪಂಚಾಚಾರ್ಯರ ವಿಷಯದಲ್ಲಿ ತಮಗಿರುವ ಸಹಜಭಕ್ತಿಯನ್ನು ವ್ಯಕ್ತಗೊಳಿಸಿ ಈ ದಿನ ತಮ್ಮನ್ನು ಈ ಸಭೆಗೆ ಅಧ್ಯಕ್ಷರಾಗಬೇಕೆಂದು ಕೋರಿ ಆಹ್ವಾನಿಸಿ ಇಲ್ಲಿ ಜರುಗಬೇಕಾದ ಕಾರ್ಯಗಳನ್ನು ಸಕ್ರಮವಾಗಿ ನೆರವೇರಿಸಿದ ವೀರಶೈವ ಮಂಡಲಿಯವರಿಗೆ ತಮ್ಮ ಸಂತೋಷವನ್ನು ಅಭಿವಂದನದೊಡನೆ ಸಮರ್ಪಿಸಿದರು. ವೀರಶೈವ ಗ್ರಂಥಭಾಂಡಾರದ ಮೂಲಧನವನ್ನು ವೃದ್ಧಿಪಡಿಸುವ ವಿಷಯದಲ್ಲಿ ಸಾಧಕವಾದ ಸಲಹೆಗಳನ್ನು ಮೃದೂಕ್ತಿಗಳಿಂದ ತಿಳುಹಿಸಿದರು. ವೀರಶೈವಮತಸಿದ್ಧಾಂತವನ್ನು ಬೋಧಿಸುವ ಸಿದ್ಧಾಂತಶಿಖಾಮಣಿಯೆಂಬ ಗ್ರಂಥವು ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿ ದೊರೆತು ಗ್ರಂಥಭಾಂಡಾರದವತಿಯಿಂದ ಮುದ್ರಿತಗೊಳಿಸಿರುವದು ಸರಿಯಷ್ಟೆ? ಸರ್ವರಿಗೂ ಅನುಕೂಲವಾಗುವಂತೆ ಇದಕ್ಕೆ ಭಾಷ್ಯವನ್ನು ಬರೆಯಿಸಬೇಕೆಂದೂ, ಇದರಂತೆ ಉಪಯುಕ್ತಗ್ರಂಥಗಳನ್ನು ಮುದ್ರಣಗೊಳಿಸುವ ವಿಷಯದಲ್ಲಿ ಹೆಚ್ಚು ಪ್ರೋತ್ಸಾಹಕೊಡುವುದು ಮುಖ್ಯ ಕರ್ತವ್ಯವೆಂಬಿವೇ ಮೊದಲಾದ ಪ್ರಯೋಜನಕರವಾದ ವಿಷಯಗಳನ್ನು ಸೂಚಿಸಿ ಶಿವಕಥಾ ಪಂ|| ಶಿವದೇವಶಾಸ್ತ್ರಿಗಳ ಸುಧಾರಿಸಿದ ವಕ್ತೃತ್ವ, ಕವಿತ್ವ ಕಲಾ ಮೊದಲಾದವುಗಳನ್ನು ಶ್ಲಾಘಿಸಿ ತಮ್ಮ ಭಾಷಣವನ್ನು ವಿರಮಿಸಿದರು. ಬಿಡದಿ ಶ್ರೀ|| ರೇವಣ್ಣಶಾಸ್ತ್ರಿಗಳು ರೇಣುಕಜಯಂತಿಯ ಶುಭದಿನದಲ್ಲಿ ಸರ್ಕಾರಿ ರಜಾ ಮಂಜೂರ್ಮಾಡಿಸಬೇಕೆಂದು ಎಸ್. ರುದ್ರಯ್ಯನವರು ತಂದ ಸಲಹೆಯನ್ನು ಅಧ್ಯಕ್ಷರು ಚಿತ್ತಕ್ಕೆ ತಂದು ಸಾರ್ಥಕಪಡಿಸಬೇಕೆಂಬುದನ್ನು ಮತ್ತೊಮ್ಮೆ ಸೂಚಿಸುವುದರಲ್ಲಿ ಸದ್ವರೊಡನೆ ನಾನು ಕೇವಲ ಕುತೂಹಲವುಳ್ಳವನಾಗಿರುವೆನೆಂದು ಸೂಚಿಸಿದರು. ಅಧ್ಯಕ್ಷರು ಈ ವಿಷಯದಲ್ಲಿ ಸರ್ವ ಸಭಿಕರ ಕರತಾಳದ ಸೂಚನೆಯನ್ನಪೇಕ್ಷಿಸಿದರು. ಸಭ್ಯರು ಕರತಾಡನಗಳನ್ನು ಮಾಡಿ ಕೈಗಳನ್ನೆತ್ತಿ ತಮ್ಮ ಅಭಿಮತವನ್ನು ಪ್ರದರ್ಶನಮಾಡಿದರು. ಇದನ್ನು ಕಂಡು ಅಧ್ಯಕ್ಷರು ಸಂತೋಷಿಸಿ ರೇಣುಕಜಯಂತಿ ದಿನದ ಸರ್ಕಾರಿ ರಜಾ ಮಂಜೂರ್ಮಾಡಿಸುವ ಪ್ರಯತ್ನವಾಗುವುದೆಂದು ತಿಳುಹಿಸಿದರು. ಬಳಿಕ ಸಭಿಕರಿಗೆ ಗಂಧಪುಷ್ಪಹಾರಗಳು ಸಮರ್ಪಿಸಲ್ಪಟ್ಟವು. ಅಧ್ಯಕ್ಷರು ಮ|| ಚೀಫ್‌ಜಸ್ಟರವರು ಈ ದಿನ ಸಭೆಗೆ ದಯಮಾಡಿಸಿದ್ದಕ್ಕಾಗಿ ತಮ್ಮ ಸಂತೋಷವನ್ನು ಸೂಚಿಸಿದರು. ಮ|| ಚೀಫ್‌ಕೋರ್ಟ್‌ಜಸ್ಟರವರು ಈ ದಿನ ನಡೆದ ಕಾರ್ಯಭಾಗಗಳನ್ನೂ ವಿಷಯಗಳನ್ನು ಕೇಳಿ ಬಹಳ ಸಂತೋಷವಾಯಿತೆಂದು ಸೂಚಿಸಿ ಸಂತೋಷಪಟ್ಟರು. ಅನಂತರ ಮ|| ದೇಶದ ಸಿದ್ಧಬಸಪ್ಪಶೆಟ್ಟರು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡುವುದರೊಡನೆ ಪಂಚಾಚಾರ್ಯರ ಜಯಘೋಷವಾಗಿ ಮುಕ್ತಾಯವಾಯಿತು. ಅನಂತರ ಮಲ್ಲಿಕಾಪುಷ್ಪಾಲಂಕೃತವಾದ ಭವ್ಯಾಂದೋಲಿಕೆಯಲ್ಲಿ ರೇಣುಕಪೂಜ್ಯಪಾದರ ಉತ್ಸವವಿಗ್ರಹವನ್ನು ಮೂರ್ತಗೊಳಿಸಿ ರಾತ್ರಿ 8 ಗಂಟೆಗೆ ಉತ್ಸವವಾರಂಭವಾಯಿತು. ಮುಂಭಾಗದಲ್ಲಿ ವೈದಿಕವಿದ್ಯಾರ್ಥಿಗಳ ವೇದಘೋಷವೂ, ಸುಶ್ರಾವ್ಯವಾದ ಕಂಬೀವಾಲಗವೂ, ಬ್ಯಾಂಡ್ ವಾದ್ಯನಾದವೂ ಪರಮೇಶ್ವರನ ಪ್ರಥಮಸಂಖ್ಯೆಯ ಸದ್ಯೋಜಾತಮುಖದ ಕಳೆಯನ್ನು ಹೊಂದಿದ ಆದ್ಯಾಚಾರ್ಯರಾದ ರೇಣುಕದೇಶಿಕಸಾರ್ವಭೌಮರ ದಿವ್ಯಸ್ವಯಶೋವೈಭವ ಎಂಬಂತೆ ಅಲಂಕೃತವಾದ ಸಂದಿದ್ಧವು ವೀರಭಕ್ತರಿಂದ ನೆರೆಸಲ್ಪಡುತ್ತಿದ್ದಿತು. ವೀರಪೀಠದಲ್ಲಿ ರೇಣುಕಾಚಾರ್ಯಮೂರ್ತಿಯು ಮಂಡಿಸಿರುವಂತೆಯೂ ಸನ್ನಿಧಿಯಲ್ಲಿ ಅಗಸ್ತ್ಯರೇ ಮೊದಲಾದ ಶಿಷ್ಯರು ಅಂಜಲೀಬದ್ಧರಾಗಿ ನಿಂತಿರುವಂತೆ ಶಿಲ್ಪಕೃತವಾದ ಭಾವಚಿತ್ರಗಳೂ ಪಲ್ಲಕ್ಕಿಯ ಮೇಲ್ಭಾಗದಲ್ಲಿ ಗೋಪುರಾಕಾರವಾದ ಪುಷ್ಪಗುಚ್ಛವೂ ಶುಕಮಯೂರ ಚಿತ್ರಬಧಾಕಾರಗಳೂ ನರ್ತಿಸುತ್ತ ಅಲ್ಲಲ್ಲಿ ಪ್ರಜ್ವಲಿಸುತ್ತಿದ್ದ ವಿದ್ಯುದ್ದೀಪಗಳು ನಕ್ಷತ್ರಮಾಲೆಯ ಪಾಂಗವನ್ನು ಹೊಂದಿದ್ದಿತು. ಇದು ವೀರಶೈವಮತಸಿಂಧುಚಂದ್ರ ರೇಣುಕಾಚಾರ್ಯರು ನಕ್ಷತ್ರಮಾಲೆಯಿಂದ ಆವೃತರಾಗಿರುವಂತೆ ತೋರುತ್ತಿದ್ದಿತು. ಈ ಮಹೋತ್ಸವಕ್ಕಾಗಿ ಅನೇಕರು ಪರಸ್ಥಳಗಳಿಂದ ಬಂದಿದ್ದರು. ಸಹಸ್ರಾರು ಸಂಖ್ಯೆ ಭಕ್ತಮಂಡಲಿಯು ಮುಂಭಾಗದಲ್ಲಿ ಸಮುದ್ರತರಂಗದಂತೆ ಚಲಿಸುತಿದ್ದಿತು. ಉತ್ಸವವು ಚಿಕ್ಕಪೇಟೆ ಬಳ್ಳಾಪುರಪೇಟೆ ದೊಡ್ಡಪೇಟೆ ನಾಮಮಂಡಿಪೇಟೆ, ಅಕ್ಕಿಪೇಟೆ ಅರಳೆಪೇಟೆ ಮುಂತಾದಕಡೆಗಳಲ್ಲಿ ಪದ್ಧತಿಯಂತೆ ನಡೆಯಿತು. ಮತಭೇದವಿಲ್ಲದೆ ಸರ್ವರೂ ಆಚಾರ್ಯಭಗವತ್ಪಾದರಿಗೆ ಅಲ್ಲಲ್ಲಿ ಫಲಪುಷ್ಪಕರ್ಪೂರಾದಿಗಳನ್ನು ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ಸಮರ್ಪಿಸುತ್ತಿದ್ದರು. ಮಾರ್ಗದ ಉಭಯಪಾರ್ಶ್ವಗಳಲ್ಲಿ ನಿಕ್ಕಿರಿದು ನಿಂತಿದ್ದ ಸ್ತ್ರೀ ಪುರುಷರು ಈ ಮಹೋತ್ಸವವನ್ನು ನೋಡಿ ಆನಂದವನ್ನು ಹೊಂದುತ್ತಿದ್ದರು. ಮಹಿಮಾನಿಧಿಗಳಾದ ರೇಣುಕಾಚಾರ್ಯರ ಉತ್ಸವಮೂರ್ತಿಕಳೆಯು ಈಶ್ವರ ಕಣ್ಣನಗಳನ್ನು ಆಕರ್ಷಿಸಿದಲು ಉತ್ಸವಭಾಗಿಗಳು ಎಷ್ಟುಬಾರಿನೋಡಿದರೂ ಪುನಃ ಪುನಃ ನೋಡುವ ಕುತೂಹಲವು ಉಂಟಾಗಿದ್ದಿತೆಂದರೆ ಅತಿಶಯೋಕ್ತಿಯಾಗಲಾರದು. ಉತ್ಸವವು ಮಹಂತಿನಮಠವನ್ನು ಸೇರಿದ ಬಳಿಕ ಷೋಡಶೋಪಚಾರ, ರಾಜೋಪಚಾರ, ಪೂಜಾನಂತರ ಮಂಗಳಾರತಿಯಾಗಿ ಪ್ರಸಾದಗಳು ಹಂಚಲ್ಪಟ್ಟವು. ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಿದ ಭಕ್ತಮಂಡಲಿಗೆ ಶ್ರೀಮತ್ಪಂಚಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಪಂಚಾಚಾರ್ಯ ಪ್ರಭಾ

೧೯೨೯ ನೇ ಏಪ್ರಿಲ್ ತಾ|| ೧ ನೇ ಸೋಮವಾರ

ಜಗದಾಚಾರ್ಯರ ಜಯಂತಿ.

ಭಸ್ಮ ರುದ್ರಾಕ್ಷ್ಕಲಿಂಗಂ ಗುರುರ್ಮಂತ್ರಂತಥಾಚರಃ|
ಪಾದೋದಕಂಪ್ರಸಾದಶ್ಚ ಶೈವಾಷ್ಟಾವರಣಾನಿಹಿ ||

ಎಂಬೀ ಶಿವಾಗಮೋಕ್ತಿಗನುಸಾರವಾಗಿ ಬ್ರಹ್ಮವಿದ್ಯಾಕಾಂಕ್ಷಿಗಳಾದ ವೀರಶೈವರಿಗೆ ಭಸ್ಮ, ರುದ್ರಾಕ್ಷಿ, ಲಿಂಗ, ಗುರು, ಮಂತ್ರ, ಚರ, ಪಾದೋದಕ, ಪ್ರಸಾದಗಳೆಂಬ ಎಂಟು ಪದಾರ್ಥಗಳು ಮುಖ್ಯ ಸಾಧನಗಳಾಗಿರುವುದರಿಂದ ಈ ಪದಾರ್ಥಗಳು ಪ್ರತಿಯೊಬ್ಬ ವೀರಶೈವನಿಗೂ ಮುಕ್ತಿಯೆಂಬ ರಾಜಧಾನಿಯನ್ನು ಪ್ರವೇಶಮಾಡಲು ರಾಜಮಾರ್ಗಗಳಂತಿರುವುವು. ಈ ಎಂಟು ಪದಾರ್ಥಗಳನ್ನು ಬಿಟ್ಟು ಯಾರು ಮೋಕ್ಷವನ್ನು ಬಯಸುವರೋ ಅವರ ಬಯಕೆಯು ತಿರುಕನ ಬಯಕೆಯಂತಾಗುವುದು. ಈ ಅಷ್ಟಾವರಣಗಳು ಬ್ರಹ್ಮವಿದ್ಯೆಗೆ ಅಂಗಭೂತಗಳೆಂದು ವೀರಶೈವ ಸಿದ್ಧಾಂತದಲ್ಲಿ ಘಂಟಾಘೋಷವಾಗಿ ಸಾರಲ್ಪಡುತ್ತಿರುವುವು. ಯಾರು ವರ್ಣಾಶ್ರಮಶೂನ್ಯರಾಗಿರುವರೋ ಅವರಲ್ಲಿ ಈ ಅಷ್ಟಾವರಣಗಳು ಸಂಭವಿಸಲಾರವು. ಏಕೆಂದರೆ; ಅಷ್ಟಾವರಣಗಳು ಶ್ರೌತಗಳಾದುದರಿಂದ ಇವು ವರ್ಣಾಶ್ರಮಾಂಗೀಕಾರವುಳ್ಳವರಿಂದಲೇ ಅನುಷ್ಠಿಸಲ್ಪಡತಕ್ಕವುಗಳೇ ವಿನಾ ವರ್ಣಾಶ್ರಮರಹಿತರಿಂದ ಅನುಷ್ಠಿಸಲ್ಪಡತಕ್ಕವುಗಳಲ್ಲವು. ವರ್ಣಾಶ್ರಮ ಶೂನ್ಯರಿಂದ ಅನುಷ್ಠಿಸಲ್ಪಡತಕ್ಕ ಅಷ್ಟಾವರಣಗಳು ಅಶ್ರೌತಾಷ್ಟಾವರಣಗಳೆನಿಸುವುವಲ್ಲದೆ ಶ್ರೌತಾಷ್ಟಾವರಣಗಳೆನಿಸುವುದಿಲ್ಲ. ಅವು ಅಶ್ರೌತಗಳಾದರೂ ಆಗಲಿ ಅಂದರೆ ಅಂತಹ ಅಶ್ರೌತಗಳಾದ ಅಷ್ಟಾವರಣಗಳ ಉಪಾಸನೆಯನ್ನು ಮಾಡುವುದರಿಂದ ಯಾವುದೊಂದೂ ಫಲವಿಲ್ಲದೆ ಜಲತಾಡನಾದಿಗಳಂತೆ ನಿಷ್ಪ್ರಯೋಜನವಾಗುವುದು. "ಬ್ರಾಹ್ಮಣೋವೈಸರ್ವಾದೇವತಾಃ" ಎಂಬ ಶ್ರುತಿಯಿಂದಲೂ "ವರ್ಣಾನಾಂ ಬ್ರಾಹ್ಮಣೋಗುರುಃ" ಎಂಬ ಸ್ಮೃತಿಯಿಂದಲೂ ಗುರುವೇ ಈ ಅಷ್ಟಾವರಣಗಳನ್ನು ಉಪದೇಶಿಸಿ ತಾನೂ ಈ ಅಷ್ಟಾವರಣಗಳಲ್ಲಿ ಸೇರಿರುವುದರಿಂದಲೇ ಅಷ್ಟ ಎಂಬ ಸಂಖ್ಯೆಯು ಪೂರ್ಣವಾಗಿರುತ್ತದೆ. ಇದಕ್ಕೆಲ್ಲ ಮೂಲಗುರುಗಳೆಂದರೆ ವೀರಶೈವಮತವನ್ನು ಭೂಲೋಕದಲ್ಲಿ ವೇದಮಾರ್ಗಾನುಸಾರವಾಗಿ ಸ್ಥಾಪಿಸಿ ಮೋಕ್ಷಮಾರ್ಗವೆನಿಸಿದ ಅಷ್ಟಾವರಣಗಳನ್ನು ಭಕ್ತರಿಗೆ ಅನುಗ್ರಹಿಸಿ ಮಹಾಬ್ರಾಹ್ಮಣರೆನಿಸಿದ ಜಗದ್ಗುರು ಪಂಚಾಚಾರ್ಯರೇ ಹೊರತು ಇನ್ನಾರೂ ಅಲ್ಲವು. ಕಲಿಕಾಲ ಸ್ವಭಾವದಿಂದ ಇಂತಹ ಬ್ರಹ್ಮವಿದ್ಯಾಂಗಗಳಾದ ಅಷ್ಟಾವರಣಗಳನ್ನು ಬೋಧಿಸಿದ ಜಗದಾಚಾರ್ಯರಲ್ಲಿ ಕೆಲವರು ಭಕ್ತಿಯನ್ನಿಡದೆ ಸ್ವೇಚ್ಛಾವಿಹಾರಿಗಳಾಗುತ್ತ ನಡೆದಿರುವರು. ಇಂಥವರಿಗೆ ಎಂದಿಗೂ ಅಷ್ಟಾವರಣ ಸಿದ್ಧಿಯುಂಟಾಗಲಾರದು. ಈ ಅಷ್ಟಾವರಣಗಳಲ್ಲಿ ಭಸ್ಮವು ಮಂತ್ರಪೂತವಾಗಿ ಗುರುವಿನಿಂದಲೇ ಅನುಗ್ರಹಿಸಲ್ಪಡುವುದು. ಶಿವಲಿಂಗವು ಗುರುವಿನಿಂದಲೇ ಅನುಗ್ರಹಿಸಲ್ಪಡುವುದು. ರುದ್ರಾಕ್ಷಿಯು ಗುರುವಿನಿಂದಲೇ ಅನುಗ್ರಹಿಸಲ್ಪಡುವುದು. ಪಾದೋದಕ ಪ್ರಸಾದಗಳು ಗುರುವಿನಿಂದಲೇ ಅನುಗ್ರಹಿಸಲ್ಪಡುವುವು. ಮಂತ್ರವು ಗುರುವಿನಿಂದಲೇ ಉಪದೇಶಿಸಲ್ಪಡುವುದು. ಹೀಗೆ ಯಾವ ಯಾವ ವಸ್ತುಗಳು ಹೇಗೆಹೇಗೆ ಪವಿತ್ರಗೊಳಿಸಲ್ಪಡಬೇಕೋ ಹಾಗೆಹಾಗೆ ಸಂಸ್ಕರಿಸಲ್ಪಟ್ಟು ಉಪನಯನ ಸಂಸ್ಕಾರದಿಂದ ಪರಿಶುದ್ಧಿಗೊಳಿಸಲ್ಪಟ್ಟ ಭಕ್ತನಿಗೆ ಕೊಡಲ್ಪಟ್ಟರೆ ಅವುಗಳು ಶ್ರೌತಾಷ್ಟಾವರಣಗಳೆನಿಸುವವು. ಅನಾದಿಸಂಸಿದ್ಧವಾದ ಗುರುಪರಂಪರೆಯಿಂದ ತನ್ನ ಗೋತ್ರಾನುಸಾರವಾಗಿ ಶಿವಸಂಸ್ಕಾರಪೂರ್ವಕ ಅಷ್ಟಾವರಣಗಳನ್ನು ಪಡೆಯದೆ ಗುರುಗಳೆಂದು ಕರೆದುಕೊಳ್ಳುವ ಕಂಡಕಂಡ ಜಾತಿಯವರಲ್ಲಿ ಅಷ್ಟಾವರಣಗಳನ್ನು ಪಡೆಯುವುದು ಸಿದ್ಧಾಂತ ಮಾರ್ಗವನ್ನು ವಿಚಾರಿಸದ ಉನ್ಮಾರ್ಗಿಗಳ ಉಚ್ಛೃಂಖಲವೃತ್ತಿಯಲ್ಲದೆ ಬೇರೆಯಲ್ಲವು. ಕ್ರಮವಾಗಿ ತನ್ನ ವಂಶಗುರುವಿನಿಂದ ಸಂಸ್ಕಾರಪೂರ್ವಕವಾಗಿ ಅಷ್ಟಾವರಣಗಳನ್ನು ಪಡೆಯದಿದ್ದವನಲ್ಲಿ ಸ್ವೇಚ್ಛಾಕಲ್ಪಿತಗಳಾದ ಲೌಕಿಕಾಷ್ಟಾವರಣಗಳಿದ್ದರೂ ಇವುಗಳಿಂದ ಪರಶಿವತಾದಾತ್ಮ್ಯವುಂಟಾಗಲಾರದು. ಅಂಥವರು ಎಂದಿಗೂ ವೀರಶೈವರೆಂದು ಹೇಳಿಸಿಕೊಳ್ಳಲಾರರು. ಒಂದು ಪಕ್ಷ ಅಧ್ಯಾಹಾರ್ಯಯುಕ್ತಾಗಿ ತಮಗೆ ತಾವೇ ವೀರಶೈವರೆಂದು ಹೇಳಿಕೊಂಡರೂ ಸಿದ್ಧಾಂತದಲ್ಲಿ ಆಚಾರ್ಯ ಭಗವತ್ಪಾದರಿಂದ ಹೇಳಲ್ಪಟ್ಟ ವೀರಶೈವತ್ವವು ಅಂಥವರಲ್ಲಿ "ತುಪ್ಪವಿಲ್ಲದಿದ್ದರೂ ತುಪ್ಪದ ಹಿರೇಕಾಯಿಯೆನಿಸಿಕೊಳ್ಳುವಂತೆಯೂ, ಸುವರ್ಣವಿಲ್ಲದಿದ್ದರೂ ಸುವರ್ಣಕಾರ್ಪಾಸವೆನಿಸಿಕೊಳ್ಳುವಂತೆಯೂ ಕೇವಲ ವ್ಯಾವಹಾರಿಕವಾದ ಶಬ್ದವಾಗುವುದಲ್ಲದೆ ವೀರಶೈವ ಸಿದ್ಧಾಂತಾನುಸಾರವಾಗಿ ಬಂದ ಅನ್ವರ್ಥಕಾರಿಯಾದ ಶಬ್ದವಾಗುವುದಿಲ್ಲವು. ಇದೇ ಅಭಿಪ್ರಾಯವನ್ನು ಶ್ರೀಕರ ಭಾಷ್ಯಕಾರರು ಒಂದೆಡೆಯಲ್ಲಿ "**ಘೃತಕೋಶಾತಕೀಸುವರ್ಣಕಾರ್ಪಾಸಾದೌ ಘೃತತ್ವ ಸುವರ್ಣತ್ವಾಭಾವೇಪಿ ಪ್ರತೀತಿಮಾತ್ರವದತ್ರಾಪಿ ವೀರಶೈವತ್ವಂ ಪ್ರತೀಯತೇ**" ಎಂದು ಶ್ರೌತಾಷ್ಟಾವರಣರಹಿತರಾದ ವೀರಶೈವರನ್ನು ತಿರಸ್ಕರಿಸಿರುತ್ತಾರೆ. ಕೆಲವರು ವೀರಶೈವಮತವನ್ನು ಅವಲಂಬಿಸಿದ್ದರೂ ಕಲಿಕಾಲದ ಮಹಿಮೆಯಿಂದ ವೀರಶೈವಮತಸ್ಥಾಪಕರಾದ ಜಗದ್ಗುರು ಪಂಚಕವನ್ನು ಆರಾಧಿಸದೆ ಇರುವುದನ್ನು ನೋಡಿದರೆ ಇಂಥವರ ಪಾಪಮಯವಾದ ಬುದ್ಧಿಯನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಕೆಲವರು ಮತಸ್ಥಾಪನಾಚಾರ್ಯರಲ್ಲಿ ನಮಗೆ ಕೇವಲ ಪೂಜ್ಯಭಾವವುಂಟೆಂದು ಮುಖದಿಂದ ಮಾತ್ರ ನುಡಿಯುವದುಂಟು. ಕೃತಿಯಲ್ಲಿಲ್ಲದೆ ಮುಖದಿಂದ ನುಡಿಯುವದು ಕೇವಲ ಔಪಚಾರಿಕವೇ ಹೊರತು ವಾಸ್ತವವಲ್ಲ. ಜಗದಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದಲ್ಲಿ ತಾವು ಜನ್ಮವನ್ನು ಧರಿಸಿ ಆಚಾರ್ಯ ಭಗವತ್ಪಾದರಿಂದಲೇ ಸಂಸ್ಕಾರಪೂರ್ವಕ ಬ್ರಹ್ಮವಿದ್ಯಾಂಗಗಳಾದ ಅಷ್ಟಾವರಣಗಳನ್ನು ಪಡೆದುಕೊಂಡ (ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ) ಗಳ ರೋಮನಾಳಗಳಲ್ಲೆಲ್ಲ ಆಚಾರ್ಯರ ಸಂಬಂಧವಿರುವುದರಿಂದ ಪ್ರತಿಕ್ಷಣದಲ್ಲಿಯೂ ಸರ್ವರೂ ಆ ಗುರುಸಾರ್ವಭೌಮರ ನಾಮವನ್ನು ಸ್ಮರಿಸಬೇಕಾಗಿದೆ. ಅಥವಾ ವರ್ಷಕ್ಕೊಂದಾವರ್ತಿ ಆಚಾರ್ಯ ಭಗವತ್ಪಾದರ ಜಯಂತಿ ಮಹೋತ್ಸವವನ್ನಾದರೂ ಮಾಡಿ ತಮ್ಮ ಕೃತಜ್ಞತೆಯನ್ನು ತೋರಿಸದೆ ಇದ್ದರೆ ಅಂಥವರನ್ನು ಹೇಗೆ ತಾನೇ ಪಂಚಾಚಾರ್ಯ ಮತೀಯರನ್ನಾಗಿ ಹೇಳಬೇಕು? ಪ್ರಕೃತದಲ್ಲಿ ವೀರಶೈವಮತದಲ್ಲಿರುವ ಚತುರಾಶ್ರಮಿಗಳೊಳಗೆ ಬ್ರಹ್ಮಚರ್ಯಾಶ್ರಮ ಸ್ವೀಕಾರಕ್ಕಾಗಲಿ, ಗೃಹಸ್ಥಾಶ್ರಮ ಸ್ವೀಕಾರಕ್ಕಾಗಲಿ, ಸನ್ಯಾಸಾಶ್ರಮ ಸ್ವೀಕಾರಕ್ಕಾಗಲಿ ಆಚಾರ್ಯರ ಸಾಕ್ಷಿಯು ಬೇಕೇ ಬೇಕು. ಹೀಗೆ ಸರ್ವಾಶ್ರಮಿಗಳಿಗೂ ಪರಮಪೂಜ್ಯರಾದ ಮೂಲಗುರುಗಳ ಜಯಂತಿಯನ್ನು ವೀರಶೈವಮತದ ಸನ್ಯಾಸಾಶ್ರಮಿಗಳು ಮಾಡದಿರುವದು ಬಹು ಶೋಚನೀಯವಾಗಿದೆ. ಸಕಲಾಶ್ರಮಿಗಳು ಮೂಲಗುರುಗಳ ಹಬ್ಬವನ್ನು ಎಲ್ಲಿಲ್ಲೂ ಎಂದು ಆಚರಿಸುತ್ತಾರೆಯೋ ಅಂದೇ ಗುರುಭಕ್ತ್ಯಂಕುರವು ಪಲ್ಲವಿತವಾಯಿತೆಂದು ಹೇಳಬೇಕು. ತಮ್ಮ ತಮ್ಮ ಮತದ ಮೂಲಗುರುಗಳನ್ನು ವರ್ಷಕ್ಕೊಂದಾವರ್ತಿಯಾದರೂ ಸ್ಮರಿಸದ ಪೂಜಿಸದ ಮಾನವರು ಪ್ರಪಂಚದಲ್ಲಿ ದೊರೆಯುವುದೇ ದುರ್ಲಭವೆಂದು ಹೇಳಬಹುದು. ಆದರೆ ವೀರಶೈವರಲ್ಲಿ ಮಾತ್ರ ಅಂತಹ ವ್ಯಕ್ತಿಗಳು ದೊರಕಿದರೂ ದೊರಕಬಹುದು. ಅದ್ವೈತಮತವನ್ನು ಸ್ಥಾಪಿಸಿದ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಮಾಡದ ಸ್ಮಾರ್ತರೇ ಇಲ್ಲ; ಶ್ರೀ ರಾಮಾನುಜ ಜಯಂತಿಯನ್ನು ಮಾಡದ ಶ್ರೀ ವೈಷ್ಣವರೇ ಇಲ್ಲ; ಶ್ರೀಮಧ್ವಾಚಾರ್ಯ ಜಯಂತಿಯನ್ನು ಮಾಡದ ವೈಷ್ಣವರೇ ಇಲ್ಲ. ಪ್ರತಿಯೊಂದು ಮತದ ಬ್ರಹ್ಮಚರ್ಯಾದಿ ಸಕಲಾಶ್ರಮಿಗಳೂ ತಮ್ಮ ತಮ್ಮ ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುತ್ತಿದ್ದರೂ ವೀರಶೈವಮತಾಚಾರ್ಯರ ಜಯಂತಿಗಳನ್ನು ಮಾತ್ರ ಕೆಲವಾಶ್ರಮಿಗಳು ಮಾಡುವುದು ಕೆಲವರು ಮಾಡದೇ ಇರುವುವನ್ನು ನೋಡಿದರೆ ಅಷ್ಟಾವರಣಗಳನ್ನು ಉಪದೇಶಮಾಡಿ ಮೋಕ್ಷಮಾರ್ಗವನ್ನು ತೋರಿಸಿದ ಗುರುಗಳಲ್ಲಿ ಭಕ್ತಿಯು ಎಷ್ಟರಮಟ್ಟಿಗೆ ಸ್ಥಿರಗೊಂಡಿರುವುದೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇನ್ನಾದರೂ ಶ್ರೌತಾಷ್ಟಾವರಣಯುಕ್ತನಾದ ಪ್ರತಿಯೊಬ್ಬ ಆಶ್ರಮಧಾರಿಯೂ ಬ್ರಹ್ಮವಿದ್ಯಾಂಗಗಳಾದ ಅಷ್ಟಾವರಣಗಳನ್ನು ಅನುಗ್ರಹಿಸಿ ಲಿಂಗಾಂಗಸಾಮರಸ್ಯವನ್ನೀ ಭಾಷ್ಯಮೂಲಕ ಭೂಲೋಕದಲ್ಲಿ ಹರಡಿ ಲೋಕವಿಖ್ಯಾತರಾದ ಜಗದ್ಗುರು ಶ್ರೀ ಪಂಚಾಚಾರ್ಯರ ಹಬ್ಬಗಳನ್ನು ವೇದವಿರುದ್ಧಮಾರ್ಗಾವಲಂಬಿಗಳಾದ ಮಿತ್ರ ಜನಗಳಿಂದ ಬೋಧಿಸಲ್ಪಟ್ಟ ವಚನಕ್ಕೆ ಮರುಳಾಗಿ ಆಚರಿಸುವುದನ್ನು ಬಿಡದೆ ಗುರುಭಕ್ತಿಯೆಂಬ ಪಾಶದಿಂದ ಬಿಗಿಯಲ್ಪಟ್ಟವರಾಗಿ ಜಗದಾಚಾರ್ಯರ ಜಯಂತ್ಯುತ್ಸವಗಳನ್ನು ಮಾಡಿ ವೀರಶೈವ ಮತದಲ್ಲಿ ಜನ್ಮವನ್ನು ಧರಿಸಿದುದಕ್ಕೆ ಗುರುಗಳಲ್ಲಿ ಕೃತಜ್ಞತೆಯನ್ನು ತೋರಿಸಿ "ವೀರಶೈವ" ಎಂಬ ಹೆಸರನ್ನು ಅನ್ವರ್ಥವಾಡಿಕೊಂಡು ಶ್ರೌತಕೋಟಿಸಮಾವಿಷ್ಟರಾಗಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗುವುದೇ ವೀರಶೈವಮತದಲ್ಲಿರುವ ಸಮಸ್ತ ಆಶ್ರಮಿಗಳ ಪ್ರಥಮ ಕರ್ತವ್ಯವಾಗಿದೆ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿ.

ಈ ಮೊದಲು ನಮ್ಮಾ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದ ಪ್ರಕಾರ ಭರತಖಂಡದಲ್ಲಿರುವ ಗುರುಭಕ್ತಿಧುರೀಣರಾದ ಅನೇಕಾನೇಕ ಜನ ವೀರಶೈವರು ತಮ್ಮ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶು|| ೧೩ ದಿವಸ ಅತ್ಯಂತ ವೈಭವದಿಂದ ನೆರವೇರಿಸಿದ ವಿಷಯವು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಅನೇಕ ಗ್ರಾಮಾನುಗ್ರಾಮಗಳಿಂದ ಬಂದ ಮಹೋತ್ಸವ ವಿಷಯಕಗಳಾದ ಲೇಖಗಳಿಂದ ವೇದ್ಯವಾಗುವುದು. ಸಣ್ಣಸಣ್ಣ ಗ್ರಾಮಗಳಲ್ಲಿಯೂ, ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಗುರುಭಕ್ತರು ಅಸಾಧಾರಣವಾದ ಭಕ್ತಿಯನ್ನು ವಹಿಸಿ ತನುಮನಧನಗಳನ್ನು ಸೂರೆಗೈದು ಜಯಂತಿ ಮಹೋತ್ಸವಗಳನ್ನು ಮಾಡುವುದನ್ನು ನೋಡಿ ಸಂತೋಷವೆನಿಸುತ್ತದೆ. ಫಾಲ್ಗುಣ ಶು|| ೧೩ ದಿವಸ ಭರತಖಂಡದ ನಾನಾ ಭಾಗಗಳಲ್ಲಿ ಈ ಭಗವತ್ಪಾದರ ಜಯಂತಿ ಮಹೋತ್ಸವಗಳು ಅತ್ಯಂತ ವೈಭವದಿಂದ ನೆರವೇರಿರಬಹುದು. ಆದರೆ ಎಲ್ಲ ಪಟ್ಟಣಗಳಿಗಿಂತಲೂ ಬೆಂಗಳೂರು ಪಟ್ಟಣದಲ್ಲಿ ನೆರವೇರಿದ ಮಹೋತ್ಸವವೇ ಅಭೂತಪೂರ್ವವಾದುದೆಂದು ತಿಳಿದುಬರುತ್ತದೆ. ಬೆಂಗಳೂರು ಪಟ್ಟಣದಲ್ಲಿ ನೆರವೇರಿದ ಮಹೋತ್ಸವ ವಿಷಯಕವಾದ ವಿಸ್ತೃತ ಲೇಖವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟವಾಗಿದೆ. ವಾಚಕರು ಆಮೂಲಾಗ್ರವಾಗಿ ಓದಿ ಆನಂದಕಂದಿಲಹೃದಯರಾಗಬೇಕೆಂದು ಆಶಿಸುತ್ತೇವೆ. ಆ ದಿವಸ ಬೆಂಗಳೂರು ಪಟ್ಟಣದಲ್ಲಿ ರಾರಾಜಿಸುವ ಶ್ರೀ ಮಹಾಂತಿನ ಮಠದಲ್ಲಿ ಲೋಕವಿಖ್ಯಾತರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆಟಿ, ಸಿ.ಐ.ಇ., ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿ ಮೈಸೂರು ದೇಶದ ಚೀಫ್ ಕೋರ್ಟ್ ಜಡ್ಜರಾದ ರಾಜಧರ್ಮಪ್ರವೀಣ ಮ|| ದೊರೆಸ್ವಾಮಿ ಅಯ್ಯರವರೇ ಮೊದಲಾದವರಿಂದ ಅಲಂಕೃತವಾಗಿದ್ದಿತೆಂದೂ ಸದರಿ ಸಭೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಈ ಭೂಮಂಡಲದಲ್ಲವತರಿಸಿ ಮಾಡಿದ ಅದ್ಭುತಲೀಲೆಗಳ ವಿಷಯವಾಗಿ ಉಪನ್ಯಾಸಗಳು ನಡೆದವೆಂದೂ, ಕ್ರೈಸ್ತ, ಮಹಮದೀಯ, ಸ್ಮಾರ್ತ, ವೈಷ್ಣವ, ಶ್ರೀವೈಷ್ಣವಾದಿ ಮತಸ್ಥಾಪಕರಾದ ಯೇಸುಕ್ರಿಸ್ತ, ಮಹಮ್ಮದ್ ಪೈಗಂಬರ, ಶ್ರೀ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯಾದಿಗಳ ಜಯಂತಿ ದಿನಗಳನ್ನು ಘನಸರಕಾರದವರು ರಜಾ ದಿವಸಗಳನ್ನಾಗಿ ಅಂಗೀಕರಿಸಿದಂತೆ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿದಿನವನ್ನು ರಜಾದಿವಸವನ್ನಾಗಿ ಅಂಗೀಕರಿಸಬೇಕೆಂಬ ವಿಷಯವನ್ನು ಚರ್ಚಿಸಿ ಈ ವಿಷಯವನ್ನು ಸರ್ವಾನುಮತದಿಂದ ಪಾಸುಮಾಡಿದರೆಂದೂ ಕೇಳಿ ಸಂತೋಷಿಸುತ್ತೇವೆ. ಸರ್ ಶೆಟ್ಟರವರು ಇದುವರೆಗೆ ಅನೇಕಾನೇಕ ಧಾರ್ಮಿಕ ಕಾರ್ಯಗಳನ್ನೂ ಲೋಕಹಿತಕಾರ್ಯಗಳನ್ನೂ ಮಾಡಿ ಜಗನ್ಮಾನ್ಯರಾಗಿರುವರು. ಆದರೆ ಮತಸ್ಥಾಪನಾಚಾರ್ಯರ ಜಯಂತಿ ದಿನದ ರಜಾವಿಷಯವನ್ನು ಪೂರ್ಣಮನಸ್ಸಿನಲ್ಲಿ ತಂದುಕೊಂಡು ಈ ಕಾರ್ಯವನ್ನು ಸಫಲಗೊಳಿಸಿ ಭಗವತ್ಪಾದರ ಕೃಪೆಗೆ ಪಾತ್ರರಾಗಬೇಕೆಂದೂ, ಮುಂದೆ ನಡೆಯುವ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆಗಳಲ್ಲಿ ಸ್ವಮತಪರಮತೀಯಸದಸ್ಯ ಮಹಾಶಯರೆಲ್ಲರೂ ಏಕಾಭಿಪ್ರಾಯದೊಡನೆ ಈ ವಿಷಯವನ್ನು ಚರ್ಚಿಸಿ ಪಾಸ್ ಮಾಡಿಸಬೇಕೆಂದೂ, ದಯಾಳುಗಳಾದ ಘನ ಸರಕಾರದವರು ವೀರಶೈವಮತಸ್ಥಾಪನಾಚಾರ್ಯರ ಜಯಂತಿ ರಜಾ ದಿನದ ವಿಷಯವಾಗಿ ತಮ್ಮ ಪೂರ್ಣ ಸಹಾನುಭೂತಿಯನ್ನು ತೋರಿಸಿ ಇತರಮತಾಚಾರ್ಯರ ಜಯಂತಿ ದಿನಗಳನ್ನು ರಜಾದಿನಗಳನ್ನಾಗಿ ಅಂಗೀಕರಿಸಿರುವಂತೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ದಿವಸವಾದ ಫಾಲ್ಗುಣ ಶು|| ೧೩ ದಿವಸವನ್ನು ರಜಾದಿವಸವನ್ನಾಗಿ ಅಂಗೀಕರಿಸಿ ಭರತಖಂಡದಲ್ಲಿರುವ ಸಮಸ್ತ ವೀರಶೈವರ ಚಿರಕೃತಜ್ಞತೆಗೆ ಪಾತ್ರರಾಗಬೇಕೆಂದೂ ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸರ್ಕಾರದವರು ಗಂಧದೆಣ್ಣೆಯ ವಿಚಾರಿಯ ಸಂಬಂಧವಾಗಿ ಖೈದುಮಾಡಿದ್ದ ಮಿ. ಸೀತಾರಾಮಾಚಾರ್ಯರ ವಿಚಾರಣೆಯು ಕಳೆದ ಗುರುವಾರ ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಪ್ರಾರಂಭವಾಯಿತು. ಆದರೆ ಪೋಲೀಸರು ಲೆಖ್ಖಪತ್ರಗಳ ಶೋಧನೆಗೋಸ್ಕರ ಮ|| ಆಚಾರ್ಯರನ್ನು ಇನ್ನೂ ಒಂದುವಾರದವರೆಗೆ ರಿಮ್ಯಾಂಡಿನಲ್ಲಿರಿಸಬೇಕೆಂದು ಕೇಳಿಕೊಂಡದ್ದರಿಂದ ವಿಚಾರಣೆಯನ್ನು ಏಪ್ರಿಲ್ 4ನೆಯ ತಾರೀಖಿಗೆ ಮುಂದುವರಿಸಿ ಆಚಾರ್ಯರನ್ನು ಕಾರಾಗೃಹಕ್ಕೆ ಕಳುಹಿಸಿದರು.

ಹೈದರಾಬಾದ ನೈಜಾಂ ಸಾಹೇಬರವರು ಬುಧವಾರ ರಾತ್ರಿ 10ಘಂಟೆಗೆ ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಹೊರಟು ಗುರುವಾರ ಪ್ರಾತಃಕಾಲ 6-35 ಘಂಟೆಗೆ ರಾಜಧಾನಿಗೆ ದಯಮಾಡಿಸುವರು. ಶ್ರೀಮನ್ ಮಹಾರಾಜರವರೂ ಶ್ರೀಮದ್ಯುವರಾಜರವರೂ ಪರಿವಾರಸಮೇತ ಸ್ಟೇಷನ್ನಿನಲ್ಲಿ ನೈಜಾಂ ಸಾಹೇಬರವರನ್ನು ಸ್ವಾಗತಿಸುವರು. ನೈಜಾಂರವರು ಸಕಲ ರಾಜಮರ್ಯಾದೆಯೊಡನೆ ಸ್ಟೇಷನ್ನಿನಿಂದ ರೈಲ್ವೆ ಸ್ಟೇಷನ್ ರೋಡು ಸಯ್ಯಾಜಿರಾವ್ ರೋಡುಗಳ ಮಾರ್ಗವಾಗಿ ಉತ್ಸವದೊಡನೆ ಹೊರಟು ಕರ್ಜನ್ ಪಾರ್ಕನ್ನು ಪ್ರವೇಶಿಸಿ ಪ್ರಿನ್ಸ್ ಏಕ್ಟರ್ ರಸ್ತೆಯಲ್ಲಿ ಹಾಕಿರುವ ಚಪ್ಪರದಲ್ಲಿ ಮುನಿಸಿಪಲ್ ಕೌನ್ಸಿಲರುಗಳು ಅರ್ಪಿಸುವ ಸುಸ್ವಾಗತಪತ್ರಿಕೆ ಮತ್ತು ಹಾರ ತುರಾಯಿಗಳನ್ನು ಸ್ವೀಕರಿಸಿ ಹಾರ್ಡಿಂಜ್ ಸರ್ಕಲ್ ಮಾರ್ಗವಾಗಿ ಗೌರ್ನಮೆಂಟ್ ಹೌಸನ್ನು ಸೇರುವರು. ನೈಜಾಮರವರಿಗೆ 3 ದಿವಸಗಳವರೆಗೆ ರಾಜಧಾನಿಯಲ್ಲಿಯೂ ಅರಮನೆಯಲ್ಲಿಯೂ ಸತ್ಕಾರ ಸಮಾರಂಭಗಳು ನಡೆಸಲ್ಪಡುವವು. ತಾ|| 6ನೆಯ ಶನಿವಾರ ಅವರು ಸ್ಪೆಷಲ್ ರೈಲು ಹತ್ತಿ ಬೆಂಗಳೂರು ಮಾರ್ಗವಾಗಿ ಹೈದರಾಬಾದಿಗೆ ಪ್ರಯಾಣ ಮಾಡುವರು.

ಚನ್ನಪಟ್ಟಣದ ಸಮೀಪದಲ್ಲಿರುವ ಬೈರವ ಪಟ್ಟಣಕ್ಕೆ ಚನ್ನಪಟ್ಟಣದ ಕೆಲವು ಮಹಮ್ಮದೀಯ ಜನರು ಹೋಗಿ ತೆಂಗಿನಕಾಯಿ ಮತ್ತು ಕಬ್ಬಿನ ಜಲ್ಲೆಗಳನ್ನು ಕೊಂಡುಕೊಳ್ಳುವಾಗ ಒಂದು ಸಣ್ಣ ಕಬ್ಬಿನ ತುಂಡಿಗೋಸ್ಕರ ಇವರಿಗೂ ಅದನ್ನು ಮಾರುತ್ತಿದ್ದವರಿಗೂ ಜಗಳವುಂಟಾಗಿ ಆ ಗ್ರಾಮದ ಕೆಲವುಜನ ಒಕ್ಕಲಿಗರು ಈ ಮಹಮ್ಮದೀಯರನ್ನು ಹೊಡೆದರೆಂಬ ಸಂಗತಿಯು ಚನ್ನಪಟ್ಟಣದಲ್ಲಿ ಹರಡಲು, ಬೈರವಪಟ್ಟಣದಿಂದ ಚನ್ನಪಟ್ಟಣಕ್ಕೆ ಬಂದವರನ್ನೆಲ್ಲ ಮಹಮ್ಮದೀಯರು ಹೊಡೆಯಲುಪಕ್ರಮಿಸಿದರು. ಕಳೆದ ಮಂಗಳವಾರ ಬೈರವಪಟ್ಟಣದಲ್ಲಿ ಕೆಲವುಜನ ಮಹಮ್ಮದೀಯರು ಪೆಟ್ಟುತಿಂದರೆಂಬ ಸುದ್ದಿಯು ಹರಡಿ ಮಹಮ್ಮದೀಯರು ಗುಂಪುಗುಂಪಾಗಿ ದೊಣ್ಣೆಗಳ ಸಮೇತ ಬೈರವಪಟ್ಟಣದ ಕಡೆಗೆ ಹೊರಟರೆಂದೂ, ಬೈರವಪಟ್ಟಣದ ಜನರೂ ಸಹ ಕದನಕ್ಕೋಸ್ಕರ ಚನ್ನಪಟ್ಟಣದ ಕಡೆಗೆ ಹೊರಟರೆಂದೂ ಅಷ್ಟರಲ್ಲಿಯೇ ಈ ವಿಚಾರವು ಪೋಲೀಸಿನವರಿಗೆ ತಿಳಿಯಲು ಅಲ್ಲಿಯ ಅ|| ಪೋ|| ಸೂಪರಿಂಟೆಂಡೆಂಟರಾದ ಮ|| ಎಲ್. ಕೇಶವರಾಯರು ಪೋಲೀಸರೊಡನೆ ಹೊರಟು ಉಭಯಪಂಗಡದವರಿಗೂ ವಿವೇಕವನ್ನು ಹೇಳಿ ಶಾಂತಿಗೊಳಿಸಿದರೆಂದೂ ಇಲ್ಲದಿದ್ದರೆ ಭಯಂಕರವಾದ ಹೊಡೆದಾಟವು ನಡೆದು ವಿಶೇಷ ಅಪಾಯಗಳು ಸಂಭವಿಸುತ್ತಿದ್ದವೆಂದೂ ತಿಳಿದುಬರುತ್ತದೆ.

ಬೆಂಗಳೂರು ವಿದ್ಯಾರ್ಥಿಗಳ ಮುಷ್ಕರದ ಸಂಬಂಧವಾಗಿ ಸರಕಾರದವರು ನಿವೃತ್ತ ಪ್ರಥಮಸಚಿವರಾದ ಮ|| ರಾ|| ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ನಿಯಮಿಸಿದ್ದ ವಿಚಾರಣಾಸಮಿತಿಯವರು ಆ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ವರದಿಯನ್ನು ತಯಾರಿಸಿ ಸರಕಾರಕ್ಕೆ ಒಪ್ಪಿಸಿರುತ್ತಾರೆ. ಸಮಿತಿಯವರು ಇನ್ನು ಮುಂದೆ ವಿದ್ಯಾರ್ಥಿಗಳು ಮುಷ್ಕರಮಾಡದಂತೆ ತಪ್ಪಿಸುವದಕ್ಕೋಸ್ಕರ ಪಾಠಶಾಲೆಗಳಿಗೂ ವಿದ್ಯಾರ್ಥಿಗಳ ತಂದೆತಾಯಿಗಳಿಗೂ ಸಂಬಂಧವುಂಟಾಗುವಂತೆ ಪಾಠಶಾಲೆಯ ಉಪಾಧ್ಯಾಯರು ಆಗಾಗ ವಿದ್ಯಾರ್ಥಿಗಳ ವಾಸಸ್ಥಳಗಳನ್ನು ಸಂದರ್ಶಿಸಿ ವಿದ್ಯಾರ್ಥಿಗಳ ತಂದೆತಾಯಿಗಳೊಡನೆ ಅವರ ಮಕ್ಕಳ ಅಭಿವೃದ್ಧಿಯ ವಿಷಯವಾಗಿ ಪ್ರಸ್ತಾಪಿಸಿ ಯೋಗ್ಯಸಲಹೆಗಳನ್ನು ಕೊಡಬೇಕೆಂದೂ. ಪ್ರತಿಯೊಂದು ಹೈಸ್ಕೂಲಿಗೂ ಒಂದೊಂದು ಭೋಜನಶಾಲೆಯನ್ನೇರ್ಪಡಿಸಿ ಸ್ವಂತ ಮನೆಯಿಲ್ಲದೆ ಇರುವ ವಿದ್ಯಾರ್ಥಿಗಳು ಸ್ಕೂಲಿಗೆ ಸಂಬಂಧಪಟ್ಟ ಭೋಜನಶಾಲೆಯಲ್ಲಿಯೇ ವಾಸಿಸುವಂತೆ ಏರ್ಪಡಿಸಬೇಕೆಂದೂ ಇದಕ್ಕೋಸ್ಕರ ಬಡ ವಿದ್ಯಾರ್ಥಿಗಳಿಗೆ ಅನುಕೂಲಿಸುವಂತೆ ಭೋಜನಶಾಲೆಯ ಆಹಾರವಸತಿಗಳ ಛಾರ್ಜನ್ನು ಕಡಿಮೆಮಾಡಬೇಕೆಂದೂ, ಯೋಗ್ಯರೂ, ದಕ್ಷರೂ, ನಿಷ್ಪಕ್ಷಪಾತಿಗಳೂ ಆದ ಉಪಾಧ್ಯಾಯರನ್ನು ಆರಿಸುವ ವಿಷಯದಲ್ಲಿ ಜೆಚ್ಚಾಗಿ ನಿಗಾ ತೆಗೆದುಕೊಂಡು ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಿ ಸ್ಕೂಲು ಮತ್ತು ಕಾಲೇಜುಗಳ ಮುಖ್ಯಾಧಿಕಾರಿಗಳಿಗೆ ಹೆಚ್ಚಾದ ಸ್ವಾತಂತ್ರ್ಯವನ್ನು ಕೊಡಬೇಕೆಂದೂ, ಮುಷ್ಕರಗಳು ಸಂಭವಿಸಿದಾಗ ಸ್ಕೂಲ್ ಮತ್ತು ಕಾಲೇಜುಗಳ ಮುಖ್ಯಾಧಿಕಾರಿಗಳು ವಿದ್ಯಾರ್ಥಿಗಳ ತೊಂದರೆಗಳನ್ನು ಸಾವಧಾನವಾಗಿ ಪರಿಶೀಲಿಸಿ ಅವುಗಳನ್ನು ಪರಿಹರಿಸಿಕೊಡಬೇಕೆಂದೂ ಸೂಚಿಸಿರುತ್ತಾರೆ.

ವರ್ತಮಾನಸಂಗ್ರಹ.

ಮಹಮ್ಮದ್ ಪೈಗಂಬರರ ಗೋರಿಗೆ ನವರತ್ನಗಳನ್ನು ಕೆತ್ತಿರುವರು. ಗೋರಿಯ ಬೆಲೆ ಸುಮಾರು 3,00,00,000 ರೂಪಾಯಿಗಳು.

ಇಂಗ್ಲೀಷು ಭಾಷೆಯಲ್ಲಿ 2,50,000 ಶಬ್ದಗಳಿವೆ. ದೀರ್ಘ ವರ್ಣಮಾಲೆಯೆಂದರೆ ಜಗತ್ತಿನಲ್ಲೆಲ್ಲ ಚೀಣದ್ದೇ. ಆದರೆ ಅದರಲ್ಲಿ 15,000 ಶಬ್ದಗಳ ಮೇಲಿಲ್ಲ.

ಯಾರ್ಕ್‌ಮಿನಿಸ್ಟರ್ ಭವನದ ಕಿಟಿಕಿಗಳೇ (ಇಂಗ್ಲೆಂಡ್) ಜಗತ್ತಿನಲ್ಲೆಲ್ಲ ದೊಡ್ಡವು. ಅದರ ಬಣ್ಣದ ಗಾಜುಗಳ ಬೆಲೆಯೇ ಸುಮಾರು 7,30,00,000 ಪೌಂಡುಗಳು! ಕೆಲವು ಗಾಜುಗಳು ಒಂದು ಸಣ್ಣಮೈದಾನದಷ್ಟಗಲವಿವೆ!

ಕಲ್ಕತ್ತಾಪಟ್ಟಣದ ಶ್ರದ್ಧಾನಂದಪಾರ್ಕಿನಲ್ಲಿ ಪೋಲೀಸ್ ಕಮೀಷನ್ನರ ಅಪ್ಪಣೆಗೆ ವಿರುದ್ಧವಾಗಿ ವಿದೇಶೀಯ ವಸ್ತ್ರದಹನವನ್ನು ಮಾಡಿದರೆಂಬ ಆರೋಪದ ಮೇಲೆ ಕಲ್ಕತ್ತಾಪಟ್ಟಣದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಮಹಾತ್ಮಾ ಗಾಂಧಿಯವರಿಗೆ ಒಂದು ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು.

ಬೊಂಬಾಯಿ ದಂಗೆಯ ಸಂಬಂಧವಾಗಿ ನವಾಕಾಳ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಒಂದಾನೊಂದು ಲೇಖವು ಸರಕಾರವನ್ನು ದೂಷಿಸಿತೆಂಬ ಆರೋಪದಮೇಲೆ ಹೈಕೋರ್ಟಿನ ಜಸ್ಟಿಸ್ ಬ್ಲಾಕ್‌ವೆಲ್‌ರವರು ಆ ಪತ್ರಿಕೆಯ ಸಂಪಾದಕರಿಗೆ 1 ವರ್ಷ ಸಾಧಾರಣ ಶಿಕ್ಷೆ ಮತ್ತು 2000 ರೂಪಾಯಿಗಳ ದಂಡವನ್ನು ವಿಧಿಸಿದರು.

ಕಲ್ಕತ್ತಾಪಟ್ಟಣದಿಂದ ಬುಖ್ಖಾ ಎಂಬಲ್ಲಿಗೆ ಪ್ರಯಾಣಮಾಡುತ್ತಿದ್ದ ಚಾರ್ಲಿಕಿಂಬರ್ಲಿ ಎಂಬ ಪೋರ್ಟ್ ಹಡಗವು ಹುಗ್ಲಿ ನದಿಯಲ್ಲಿ ಡೈಮಂಡ್ ಹಾರ್ಬರಿಗೆ ಸಮೀಪದಲ್ಲಿ ಹೋಗುತ್ತಿರುವಾಗ ಪ್ರಚಂಡವಾದ ಬಿರುಗಾಳಿಯೆದ್ದು ಅಲೆಗಳ ಹೊಡೆತದಿಂದ ಬಂಡೆಗೆ ತಗಲಿ ಮುಳುಗಿಹೋಯಿತು. ಹಡಗಿನಲ್ಲಿದ್ದ 15 ಜನರು ಆಸ್ತಾ ಎಂಬ ಮತ್ತೊಂದು ಹಡಗಿನಿಂದ ರಕ್ಷಿಸಲ್ಪಟ್ಟರು.

ಜರ್ಮನೀದೇಶದ ಹ್ಯಾಂಬರ್ಗ್ ಪಟ್ಟಣದಲ್ಲಿ 20 ಲಕ್ಷ ಪೌಂಡುಗಳವೆಚ್ಚದಿಂದ ಹೊಸದಾಗಿ ಕಟ್ಟಿಸಿದ್ದ 46000 ಟನ್ನುಗಳ ತೂಕದ "ಯುರೋಪಾ" ಎಂಬ ಅತ್ಯಂತ ಸುಂದರವಾದ ವ್ಯಾಪಾರೀ ಹಡಗಿಗೆ ಬೆಂಕಿಬಿದ್ದು ಭಯಂಕರವಾದ ಜ್ವಾಲೆಯುಕ್ತನ್ನವಾಗಿ ಲಕ್ಷಾಂತರ ಜನರು ಆರಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಸಾರ್ಥಕವಾಗದೆ ಸುಟ್ಟುಹೋಯಿತು. ಈ ಹಡಗವನ್ನು ಜರ್ಮನಿ ಮತ್ತು ಬ್ರಿಟಿಷ್ ದೇಶದಲ್ಲಿ ಇನ್‌ಷೂರ್ ಮಾಡಿದ್ದುದರಿಂದ ಈ ಎರಡೂ ದೇಶದ ಕಂಪನಿಗಳಿಗೆ ವಿಶೇಷ ನಷ್ಟವುಂಟಾಗಿದೆ.

ಭರತಪುರದ ಮಹಾರಾಜರವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಬುಧವಾರ ಪ್ರಾತಃಕಾಲ 4 ಗಂಟೆಗೆ ದೈವಾಧೀನರಾದರು. ಕೈ|| ವಾ|| ಮಹಾರಾಜರವರು ಕೆಲವು ವಿಷಯಗಳಲ್ಲಿ ಸಾರ್ವಭೌಮಸರಕಾರಕ್ಕೆ ವಿರುದ್ಧವಾಗಿ ಸ್ವರಾಜ್ಯ ಚಳವಳಿಗೆ ಪ್ರೋತ್ಸಾಹ ಕೊಡುತ್ತಿದ್ದರೆಂಬ ಆರೋಪದಮೇಲೆ ಭಾರತಸರಕಾರದವರು ಅವರನ್ನು ಪದಚ್ಯುತರನ್ನಾಗಿ ಮಾಡಿ ಡೇಹರಿಯಲ್ಲಿ ವಾಸಮಾಡಬೇಕೆಂದು ನಿಯಮಿಸಿದ್ದರು. ಮಹಾರಾಜರವರ ಕಳೇಬರವನ್ನು ಡಿಲ್ಲಿಯಿಂದ ಸಕಲಮರ್ಯಾದೆಯೊಡನೆ ಭರತಪುರಕ್ಕೆ ಶವಸಂಸ್ಕಾರಕ್ಕೋಸ್ಕರ ಸಾಗಿಸಿದರು.

ಕರ್ನಲ್ ಬಾರ್ಕರ್ ಎಂಬ ಹೆಸರಿನಿಂದ ಪುರುಷವೇಷವನ್ನು ಧರಿಸಿಕೊಂಡಿದ್ದ ಮಿಸ್ ವಾಲ್ಟೆರಿಸ್ಮಿತ್ ಎಂಬವಳ ಮೇಲೆ ಈಕೆಯನ್ನು ಪುರುಷನೆಂದು ನಂಬಿ ಮದುವೆಯಾಗಿದ್ದ ಮಿಸ್. ಹಾವರ್ಡ್ ಎಂಬವಳು ಮೊಕದ್ದಮೆಯನ್ನು ಮಾಡಿ ಕೋರ್ಟಿನಲ್ಲಿ ತಾನು ಈಕೆಯೊಡನೆ ಸಂಸಾರವನ್ನು ಮಾಡುತ್ತಿದ್ದ ಸ್ಥಿತಿಯನ್ನು ವಿವರಿಸುವಾಗ ಅಪರಾಧಿಯು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಕುರಿತು ನೀನು ಏನು ಹೇಳುವೆ ಎಂದು ಕೇಳಿದ್ದಕ್ಕೆ ಆಕೆಯು ಮುಖವನ್ನು ಮುಚ್ಚಿಕೊಂಡು ನಾನು ಏನನ್ನೂ ಹೇಳಲಾರೆನೆಂದು ಅಳತೊಡಗಿದಳು. ಈ ವಿಚಿತ್ರವಾದ ವಿಚಾರಣೆಯನ್ನು ನೋಡುವದಕ್ಕೋಸ್ಕರ ಲಂಡನ್ ಪಟ್ಟಣದ ಅನೇಕ ಸ್ತ್ರೀ ಪುರುಷರು ಕೋರ್ಟಿನ ಒಳಗೂ ಹೊರಗೂ ಕಿಕ್ಕಿರಿಯುವಂತೆ ತುಂಬಿದ್ದರು.

ಅಫ್ಘಾನಿಸ್ಥಾನದ ಹುಜರತ್ ಪಂಗಡಕ್ಕೆ ಸೇರಿದ 12000 ಸೈನಿಕರು ಗರ್ಡೆಜ್ ಪಟ್ಟಣದಿಂದ ಕಾಬೂಲಿನ ಮೇಲೆ ಹೊರಟಿರುವರು. ಅಮಾನುಲ್ಲರ ಸೈನ್ಯದವರು ಘಜ್ನಿಯನ್ನು ಬಿಟ್ಟು 25 ಮೈಲುಗಳದೂರ ಹೋಗಿ ಅಲ್ಲಿ ಪಾಳೆಯವನ್ನು ಮಾಡಿಕೊಂಡಿರುವರು. ಬಚ್ಚಾಯಿಸಾಕೋನು ತಾನು ಗೆಲ್ಲುವ ಭರವಸೆಯಿಲ್ಲವೆಂದು ತಿಳಿದುಕೊಂಡು ತಾನು ಲೂಟಿಮಾಡಿದ ಪದಾರ್ಥವನ್ನೆಲ್ಲ ಕೋಹಿಡೀಮನ್ ಎಂಬಲ್ಲಿಗೆ ಸಾಗಿಸುತ್ತಿರುವನು. ಪೆಡ್ಡಾ ಎಂಬಲ್ಲಿ ಸೇರಿದ್ದ ಸಭೆಯಲ್ಲಿ ಮಹಮಂಡ್ ಜನರು ಅಮಾನುಲ್ಲರ ಪಕ್ಷವನ್ನು ವಹಿಸಿದ್ದರಿಂದ ಶಿನ್‌ವಾರಿಗಳೂ ಖುಗಿಯಾನಿಗಳೂ ಆರುತಿಂಗಳಕಾಲ ಪರಸ್ಪರವಾಗಿ ಜಗಳವಾಡಬಾರದೆಂದು ಕಟ್ಟುಮಾಡಿಕೊಂಡಿರುತ್ತಾರೆ. ಜನರಲ್ ನಾದಿರ್ ಖಾನರು ಬಚ್ಚಾಯಿಸಕೋನಿಗೆ ವಿರುದ್ಧವಾಗಿ ಜಗಾಜಿ ಮತ್ತು ಮಂಗಲ್ ಪಂಗಡಗಳ ಒಂದು ಸೈನ್ಯವನ್ನು ಸಿದ್ಧಪಡಿಸಿರುವರು. ಅಮಾನುಲ್ಲರು ನಾದಿರ್ ಖಾನರಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ತಾವು ಕೇಳುಹಿಸಿರುವ ಸೈನ್ಯದಿಂದಲೇ ಕಾಬೂಲನ್ನು ಜಯಿಸಲು ಸಾಧ್ಯವಿರುವುದರಿಂದ ದಕ್ಷಿಣಪ್ರಾಂತದ ಶಾಂತತೆಯನ್ನು ಭಂಗಗೊಳಿಸಬಾರದೆಂದು ಸೂಚಿಸಿರುತ್ತಾರೆ. ಇದುವರೆಗೆ ಪೆಷಾವರದಲ್ಲಿದ್ದ ಅಲಿ ಅಹಮದ್‌ಖಾನರವರು ಲಾಹೋರಿನ ಮಾರ್ಗವಾಗಿ ಕಾಂದಹಾರಿಗೆ ಪ್ರಯಾಣಮಾಡಿದರು. ರಷ್ಯಾದೇಶದ ಸೋವಿಯಟ್ ಸರ್ಕಾರದವರು ಅಮಾನುಲ್ಲರಿಗೆ ಸಹಾಯಮಾಡುತ್ತಿರುವರೆಂದು ಬಚ್ಚಾಯಿಸಕೋನು ರಷ್ಯಾ ಪ್ರಜೆಗಳನ್ನು ಬಂಧನದಲ್ಲಿರಿಸಿರುತ್ತಾನೆ. ಇದನ್ನು ತಿಳಿದು ರಷ್ಯಾ ಸರ್ಕಾರದವರು ವಿಮಾನಗಳನ್ನು ಕಾಬೂಲಿಗೆ ಕಳುಹಿಸಿ ತಮ್ಮ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳುತ್ತಿರುವರು.

ಬನ್ನಹಟ್ಟಿ.

ಸಂಸ್ಥಾನ ಜಮಖಂಡಿ ಪೈಕಿ ಬನ್ನಹಟ್ಟಿಯಲ್ಲಿ ಫಾಲ್ಗುಣ ಶು|| ೧೩ ದಿವಸ ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವವು ಅತಿ ವೈಭವದಿಂದ ನೆರವೇರಿತು. ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಉತ್ಸವವು ನಗಾರಿ, ನೌಬತ್ತು, ಕರಡಿ, ಬಾಜಾ, ಬಜಂತ್ರಿ ಮುಂತಾದ ವಾದ್ಯಘೋಷದಿಂದಲೂ ಭಜನಾಸಂಘದಿಂದಲೂ ಶ್ರೀ ಕೊಣ್ಣೂರಪಟ್ಟದಸ್ವಾಮಿಗಳವರ ಮಠದಿಂದ ಹೊರಟು ಸಾಯಂಕಾಲ ೭ಕ್ಕೆ ಶ್ರೀ ವೀರಸಂಗಯ್ಯಸ್ವಾಮಿ ಇವರ ಮಠಕ್ಕೆ ಬಂದು ತಲ್ಪಿತು. ಆ ವೇಳೆ ಮಠದಲ್ಲಿ ಸಭೆಯು ಸೇರಿ ಶ್ರೀ ಕೊಣ್ಣೂರು ಪಟ್ಟದ ಸ್ವಾಮಿಗಳು ವೀರಸಂಗಯ್ಯನವರು, ಶಂಕರಯ್ಯಸ್ವಾಮಿ ಸಾವಳಗಿ, ಶ್ರೀ ಶಿವಮೂರ್ತಯ್ಯಸ್ವಾಮಿ ಬಗಳಿ ಇವರೆಲ್ಲರು ಶ್ರೀಜಗದ್ಗುರು ರೇಣುಕಾಚಾರ್ಯರು ಭೂಮಂಡಲದಲ್ಲಿ ಮಾಡಿದ ಅದ್ಭುತಲೀಲೆಗಳ ವಿಷಯದಲ್ಲಿ ಭಾಷಣಮಾಡಿದರು. ಕಡೆಗೆ ಮಂಗಲವಾಗಿ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀ ಶೈಲ ಮಹಾಕ್ಷೇತ್ರಯಾತ್ರೆ.

ಹಾಸನ ಡಿ|| ಅರಸಿಕೆರೆ ತಾ|| ಹಲ್ಕೂರು ಗ್ರಾಮವಾಸಿಗಳಾದ ಮ|| ರಾ|| ವೀರಶೈವ ಧರ್ಮಧುರಂಧರ ಸಾಹುಕಾರ ಮುರುಲಸಿದ್ಧಪ್ಪಶೆಟ್ಟರು ಕಾಶೀರಾಮೇಶ್ವರಾದಿ ಮಹಾಯಾತ್ರೆಗಳನ್ನು ಈ ಮೊದಲೇ ವಿಧಿಪ್ರಕಾರವಾಗಿ ಮಾಡಿ ತಮ್ಮ ಜನ್ಮವನ್ನು ಸಫಲಗೊಳಿಸಿಕೊಂಡಿರುವುದು ಸರಿಯಷ್ಟೆ! ಆದರೆ ಈ ವರ್ಷ ಸಾಕ್ಷಾತ್ಕೈಲಾಸವೆನಿಸಿದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಯ ನಿತ್ಯನಿವಾಸಸ್ಥಾನವಾದ ಶ್ರೀ ಶೈಲ ಮಹಾಕ್ಷೇತ್ರವನ್ನು ಸಂದರ್ಶಿಸಬೇಕೆಂಬ ಉತ್ಕಟೇಚ್ಛೆಯಿಂದ ತಾ|| 4-3-29 ನೆಯ ದಿವಸ ತಮ್ಮ ಧರ್ಮಪತ್ನಿಯವರಾದ ಸೌ|| ಸಿದ್ಧಮ್ಮನವರೊಡನೆ ಪರಿವಾರ ಸಮೇತರಾಗಿ ಹಲ್ಕೂರಿಂದ ಹೊರಟು ಬೆಂಗಳೂರು, ಗುಂತಕಲ್ಲು ಮಾರ್ಗವಾಗಿ ನಂದ್ಯಾಲ ಸ್ಟೇಷನ್ನಿಗೆ ಇಳಿದು ಅಲ್ಲಿಂದ ಆತ್ಮಕೂರು ಎಂಬ ಸ್ಥಳಕ್ಕೆ ಸೇರಿದರು. 6ನೆಯ ತಾರೀಖಿನ ದಿವಸ ಆತ್ಮಕೂರಿಂದ ನಾಗಲೂಟಿ ವೀರಭದ್ರದೇವರ ದರ್ಶನಕ್ಕೋಸ್ಕರ ಹೊರಟು ಅಲ್ಲಿ ಸ್ವಾಮಿಗೆ ರುದ್ರಾಭಿಷೇಕಾದಿಸೇವೆಯನ್ನು ಸಮರ್ಪಿಸಿ ಅಲ್ಲಿಂದ ಗಂಗನಪಲ್ಲಿಗೆ ಪ್ರಯಾಣಮಾಡಿ ಅಲ್ಲಿಂದ ಭೀಮನಕೊಳ್ಳಮಾರ್ಗವಾಗಿ ಕೈಲಾಸದ್ವಾರವನ್ನು ಪ್ರವೇಶಿಸಿ ಶ್ರೀ ಮಲ್ಲಿಕಾರ್ಜುನಮಹಾಸ್ವಾಮಿಯ ಸನ್ನಿಧಿಯನ್ನು ಸೇರಿದರು. ಮಹಾಶಿವರಾತ್ರಿಯ ದಿವಸ ಪಾತಾಳಗಂಗೆಗೆ ಹೋಗಿ ಕಾಶೀಕ್ಷೇತ್ರದಿಂದ ತಂದಿದ್ದ ಗಂಗಾತೀರ್ಥದೊಡನೆ ವಿಧಿಪ್ರಕಾರವಾಗಿ ಸ್ನಾನಮಾಡಿ ಪಾತಾಳಗಂಗಾದೇವಿಯನ್ನು ಪೂಜಿಸಿ ಅಲ್ಲಿಂದ ಸ್ವಾಮಿಯ ದೇವಸ್ಥಾನಕ್ಕೆ ಬಂದು ವಿಧ್ಯುಕ್ತವಾಗಿ ಪೂಜಿಸಿ ಮಾಹೇಶ್ವರರಿಗೆ ವಸ್ತ್ರ, ವಿಭೂತಿ, ದಕ್ಷಿಣಾದಿಗಳನ್ನು ಸಮರ್ಪಿಸಿ ಅವರ ಆಶೀರ್ವಾದವನ್ನು ಪಡೆದು ಸ್ವಾಮಿಯ ದೇವಸ್ಥಾನದ ಶಿಖರಕ್ಕೆ ಮುಂಡಾಸಸುತ್ತುವದನ್ನು ನೋಡಿಕೊಂಡು ಕಲ್ಯಾಣಮಂಟಪಕ್ಕೆ ಹೋಗಿ ಅಲ್ಲಿ ಶಿವಧ್ಯಾನದೊಡನೆ ರಾತ್ರಿಯನ್ನೆಲ್ಲ ಕಳೆದರು. ೧೧ ನೆಯ ತಾರೀಖಿನದಿವಸ ಸ್ವಾಮಿಗೆ ಮಹಾರುದ್ರಾಭಿಷೇಕವನ್ನೂ ಭ್ರಮರಾಂಬಿಕೆಗೆ ಸಹಸ್ರನಾಮಪಠನಪೂರ್ವಕ ಕುಂಕುಮಾರ್ಚನೆಯನ್ನೂ ಮಾಡಿಸಿದರು. ೧೩ ನೆಯ ತಾರೀಖಿನದಿವಸ ಶ್ರೀ ಶೈಲದಿಂದ ಹೊರಟು ಮಹಾನಂದಿಕ್ಷೇತ್ರಕ್ಕೆ ಹೋಗಿ ಮಹಾನಂದೀಶ್ವರನಿಗೆ ಅಭಿಷೇಕಾದಿಗಳನ್ನು ಮಾಡಿಸಿ ಅಲ್ಲಿಂದ ಹಂಪಾಕ್ಷೇತ್ರಕ್ಕೆ ಬಂದು ವಿರೂಪಾಕ್ಷಸ್ವಾಮಿಯ ದರ್ಶನವನ್ನು ತೆಗೆದುಕೊಂಡು ೧೩ ನೆಯ ತಾರೀಖಿನದಿವಸ ಹಲ್ಕೂರಿಗೆ ಸುಖರೂಪವಾಗಿ ತಲ್ಪಿದರು. ಸದರಿ ಶೆಟ್ಟರವರು ಸದಾ ಕ್ಷೇತ್ರಯಾತ್ರಾದಿಗಳಲ್ಲಿ ಮನಸ್ಸನ್ನಿಟ್ಟು ವರ್ತಿಸುವದು ಕೇವಲ ಸ್ತೋತ್ರಾರ್ಹವಾದ ವಿಷಯವಾಗಿದೆ. ಇವರು ತಮ್ಮ ಜೀವಿತಕಾಲದಲ್ಲಿ ಅನೇಕಾನೇಕ ಧರ್ಮಕಾರ್ಯಗಳನ್ನು ಮಾಡಿದ್ದಾರೆ. ಅವೆಲ್ಲವುಗಳನ್ನು ಒಂದುಸಾರೆ ವಿಸ್ತಾರವಾಗಿ ಬರೆದು ಪ್ರಭಾಪತ್ರಿಕೆಯಲ್ಲಿಯೇ ಪ್ರಕಟಿಸುವದಾಗುವದು.

ಓರ್ವ ಹಿತಚಿಂತಕ.

ಶ್ರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ.

ಶ್ರೀ ಹಿಮವತ್ಕೇದಾರ ವಿಕೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸ್ವಾರಿಯು ರಾಯಚೂರು ತಾಲೂಕಿಗೆ ಸೇರಿದ ದೇವಸೂಗೂರು ಗ್ರಾಮಕ್ಕೆ ವಿಭವ ಸಂವತ್ಸರದ ಮಾಘ ಬ|| ೧೩ ಶನಿವಾರ ಹಗಲು ೧೦ ಗಂಟೆಗೆ ಆಗಮಿಸಿತು. ಗ್ರಾಮದ ಸಮಸ್ತ ವೀರಶೈವ ಮತ್ತು ಇತರ ಮತಸ್ಥರೆಲ್ಲರೂ ಅತಿ ಸಂಭ್ರಮದಿಂದ ಎದುರುಗೊಂಡು ಸೂಗೂರೇಶ್ವರ ದೇವಾಲಯದ ಮಂಟಪಕ್ಕೆ ಬಿಜಮಾಡಿಸಿಕೊಂಡು ಬಂದರು. ಆದಿನ ಶಿವರಾತ್ರಿಯ ಪುಣ್ಯದಿವಸವಾದುದರಿಂದ ಶ್ರೀ ಪೂಜೋತ್ಸವವು ನೆರವೇರಿದುದಲ್ಲದೆ ಮಾಹೇಶ್ವರ ವಟುಗಳ ಹಾಗೂ ಭಕ್ತರ ದೀಕ್ಷಾಕರ್ಮಗಳು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು. ಮಾರನೆಯ ದಿವಸ ಜಗದ್ಗುರುಗಳವರ ಅಡ್ಡಪಲ್ಲಕ್ಕಿಯುತ್ಸವವು ಪಂಚಕಲಶ, ನಂದೀಧ್ವಜ, ವ್ಯಾಸಹಸ್ತ ಮುಂತಾದ ಸಕಲ ಬಿರುದಾವಳಿಗಳಿಂದ ಅನಂತ ವಾದ್ಯವೈಭವದೊಡನೆ ಸದರಿ ದೇವಾಲಯದಿಂದ ಹೊರಟಿತು. ರಾಯಚೂರು ಮೊದಲಾದ ಗ್ರಾಮಗಳ ವೀರಶೈವರಾದಿಯಾಗಿ ಸಮಸ್ತ ಜಾತಿಯ ಪ್ರಮುಖರು ಉತ್ಸವದಲ್ಲಿ ಭಾಗಿಗಳಾಗಿದ್ದರು. ನಮ್ಮೀ ದೇಶಕ್ಕೆ ಬಹುದೂರದಲ್ಲಿರುವ ಹಿಮವತ್ಕೇದಾರ ಪೀಠದ ಮಹಾಸ್ವಾಮಿಯವರ ದರ್ಶನವು ಅಭೂತಪೂರ್ವವಾದುದೆಂದು ಆನಂದದಿಂದ ಜನರು ತಮ್ಮತಮ್ಮೊಳಗೆ ಮಾತನಾಡುತ್ತ ಉತ್ಸವದೊಡನೆ ಭಕ್ತಿಭಾವಗಳಿಂದ ಸಾಗುತ್ತಿದ್ದರು. ಮಹಾಶ್ರೀಗಳವರು ತಮ್ಮ ಅಪಾರವಾದ ಕೃಪಾಕಟಾಕ್ಷದಿಂದೀಕ್ಷಿಸುತ್ತ ಸಮಸ್ತ ಭಕ್ತರ ಸಂತೋಷವನ್ನು ಇಮ್ಮಡಿಗೊಳಿಸುತ್ತಿದ್ದರು. ಹೀಗೆ ಉತ್ಸವವು ೫ ಗಂಟೆಗೆ ದೇವಾಲಯದ ಮಂಟಪಕ್ಕೆ ಬಂದಿತು. ಸಕಲರ ಜಯಜಯಕಾರದೊಡನೆ ಶ್ರೀಗಳು ಸಿಂಹಾಸನದಲ್ಲಿ ಮಂಡಿಸಲು, ಉಪನ್ಯಾಸಕರು ಶ್ರೀಗಳ ಅಧ್ಯಕ್ಷತೆಯಲ್ಲಿ ವಿದ್ಯಾ, ಗುರುವರ್ಗದವರ ಕರ್ತವ್ಯ, ಸ್ವಾಸ್ಥ್ಯಸಂರಕ್ಷಣ, ಲಿಂಗಧಾರಣ ಮಹಿಮೆ, ಕನ್ಯಾವಿಕ್ರಯನಿಷೇಧ, ಮುಂತಾದ ವಿಷಯಗಳನ್ನು ಕುರಿತು ಭಾಷಣ ಮಾಡಿದರು. ನಾಯಕಲ್ಲು ವೇ|| ಬಸವರಾಜಶಾಸ್ತ್ರಿಗಳು, ರಾಯಚೂರು ಸಂಸ್ಕೃತ ಶಾಲಾಧ್ಯಾಪಕರಾದ ವೇ|| ಬಸವಲಿಂಗಶಾಸ್ತ್ರಿಗಳು, ಹಮದರ್ದ ಸ್ಕೂಲ್ ಮಾಸ್ತರರು ಇನ್ನೂ ಕೆಲವು ಇಂಗ್ಲೀಷ್ ವಿದ್ಯಾರ್ಥಿಗಳು ಒಳ್ಳೇ ಸ್ಫೂರ್ತಿಯಿಂದ ಭಾಷಣ ಮಾಡಿದರು. ಆಮೇಲೆ ಮಹಾಸ್ವಾಮಿಗಳವರು ತಮ್ಮ ಅಸ್ಖಲಿತವಾದ ಮಧುರವಾಣಿಯಿಂದ ಅನಂತವಿಷಯಗಳಮೇಲೆ ಸಭಿಕರಿಗೆ ಸಂತೋಷವಾಗುವಂತೆ ಭಾಷಣಮಾಡಿದರು. ಅವುಗಳಲ್ಲಿ ಲಿಂಗಧಾರಣಮಹಿಮೆ ಕನ್ಯಾವಿಕ್ರಯನಿಷೇಧ ಇವೆರಡು ವಿಸ್ತೃತವಾಗಿ ಹೇಳಲ್ಪಟ್ಟವು. ಕೇಳಿದ ಜನಗಳಲ್ಲಿ ಆಗಿಂದಾಗಲೇ ಪರಿಣಮಿಸಿತೆಂಬುವದಕ್ಕೆ ವೀರಶೈವರಾದಿಯಾಗಿ ಸರ್ವರೂ ಇನ್ನುಮೇಲೆ ಕನ್ಯಾವಿಕ್ರಯಮಾಡಲಾಗದೆಂದು ನಿರ್ಣಯಿಸಿದ್ದೇ ಚಿಹ್ನವಾಗಿದೆ. ಆ ಮೇಲೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪಂಚಾಕ್ಷರಶರ್ಮಾ.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಜೀವದಯಾ ಮತ್ತು ಜಾಹೀರವಿನಂತಿ.

"ಅಹಿಂಸಾಪರಮೋಧರ್ಮಃ" ಎಂಬೀ ತತ್ವವನ್ನು ಯಾವನು ಅಕ್ಷರಶಃಪಾಲನಮಾಡುತ್ತಿರುವನೋ ಅವನ ಧರ್ಮವೇ ಶ್ರೇಷ್ಠವೆಂದೂ, ಅವನ ಜನ್ಮವೇ ಪಾವನವೆಂದೂ, ಅವನ ಇರುವಿಕೆಯೇ ಸಾರ್ಥಕವೆಂದೂ, ಅವನ ಆಚರಣೆಯೇ ಸರ್ವರಿಗೂ ಮಾರ್ಗದರ್ಶಕವೆಂದೂ ಆರ್ಯೋಕ್ತಿಗಳು ಸ್ಫುಟವಾಗಿ ಸಾರುತ್ತಿರುವವು. ಈ ವಿಷಯದಲ್ಲಿ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರು **"ನಾನ್ಯತೋಯಸಮಂದಾನಂ ನಚಾಹಿಂಸಾಪರಂತಪಃ"** ಅಂದರೆ ಅಹಿಂಸಾತತ್ವವನ್ನು ಪಾಲಿಸುವುದು ಶ್ರೇಷ್ಠತರವಾದ ತಪಸ್ಸೆಂದು ಬೋಧಿಸಿರುವರು. ಹೀಗಿದ್ದು ಯಾವ ಹಿಂದೂದೇಶವು ಒಕ್ಕಲತನದ ಹಾಗೂ ಸೌಭಾಗ್ಯದಾಗರವಾಗಿ ಪರರಾಷ್ಟ್ರದವರ ಕಣ್ಣುಗಳಲ್ಲಿ ಕೋಲ್ಮಿಂಚಿನಂತೆ ಹೊಳೆಯುತ್ತಿರುವದೋ ಹಾಗೂ ಯಾವದೇಶವು ಅತ್ಯುದಾತ್ತತತ್ವಗಳಿಂದೊಡಗೊಂಡು ಅನಂತಧರ್ಮಗಳಿಗಾವಸಸ್ಥಾನವಾಗಿ ಆರ್ಯಾವರ್ತವೆಂದು ಪ್ರಖ್ಯಾತಿಗೊಂಡಿರುವದೋ ಅಂಥ ಹಿಂದೂಸ್ಥಾನ ನಿವಾಸಿಗಳಿಗೆಲ್ಲರೂ ಪೂಜ್ಯ ಮತ್ತು ಸೌಖ್ಯಪ್ರದಾಯಕವಾದ ಗೋವುಗಳನ್ನು ಮುಪ್ಪಾದಕೂಡಲೆ ಪಾಪದಭೀತಿಯಿಲ್ಲದೆ ನಿಷ್ಕರುಣೆಯಿಂದ ಜಾತ್ರೆಗಳಲ್ಲಿ ಹಿಡಿದುತಂದು ಕಟುಗರಿಗೆ ಮಾರುತ್ತಿರುವದನ್ನು ನೋಡಿದರೆ ಯಾರಿಗೆತಾನೇ ಪಶ್ಚಾತ್ತಾಪವಾಗಲಿಕ್ಕಿಲ್ಲ? ಈ ತರದ ದನಗಳ ಮಾರಾಟವು ನಮ್ಮ ಧಾರವಾಡ ಜಿಲ್ಲಾ ಗದಗ ತಾ|| ಮುಂಡರಗಿಪೇಠಾ ಪೈಕಿ ಪ್ರತಿವರುಷ ಚೈತ್ರ ಶುಕ್ಲಪಕ್ಷ ದಶಮಿ ತಿಥಿಗೆ ನಡೆಯುವ **ಗುಮ್ಮಗೋಳ ಜಾತ್ರೆ**ಯಲ್ಲಿ ವಿಶೇಷವಾಗಿ ನಡೆಯುತ್ತಿರುವದು. ಇಂಥ ಭಯಂಕರವಾದ ಉಪಹತಿಯನ್ನು ಅತ್ಯಾಚಾರವನ್ನು ಸಾಧ್ಯವಾದಮಟ್ಟಿಗೆ ನಿಲ್ಲಿಸುವದು ಸರ್ವರ ಪ್ರಥಮ ಕರ್ತವ್ಯವಾಗಿದೆ. ಆದಕಾರಣ ಜೀವರಕ್ಷಾಜ್ಞಾನಪ್ರಚಾರಕ ಸಂಸ್ಥೆಯವರು ಮೇಲೆಕಂಡ ಜಾತ್ರೆಯಕಾಲಕ್ಕೆ ಆಗಮಿಸಿ ಅನಂತಸೌಖ್ಯಕ್ಕೆ ಸಾಧನೀಭೂತಗಳಾದ ಎತ್ತು ಮತ್ತು ಆಕಳುಗಳ ಉಪಯೋಗ ಹಾಗೂ ಪಾಲನಾದಿ ವಿಷಯಗಳನ್ನು ಆಯಾ ಸಾಧನಗಳಿಂದ ಪ್ರತಿಯೊಬ್ಬರ ಮನಸ್ಸಿನಲ್ಲಿ ಬಿಂಬಿಸುವಂತೆ ಬೋಧಿಸಿ ಈ ಘೋರರಾಕ್ಷಸೀಕೃತಿಯನ್ನು ದೂರಮಾಡಬೇಕೆಂತಲೂ ಈ ವರುಷ ಜಾತ್ರೆಯಲ್ಲಿ ದನಗಳನ್ನು ಮಾರಲಿಕ್ಕೆ ತರುವ ಜನರು ದಯಮಾಡಿ **ಅಂಗಹೀನ ಮತ್ತು ಮುಪ್ಪಾದ ದನಗಳನ್ನು ತಂದು ಕಟುಗರಿಗೆ ಮಾರಲಿಕ್ಕೆ ಕೊಡಬಾರದೆಂತಲೂ** ಪ್ರಾರ್ಥಿಸುವೆನಲ್ಲದೆ ಭಗವದ್ರೇಣುಕಾಚಾರ್ಯರ ಉಕ್ತಿಯಂತೆ ತಪೋರೂಪವಾದ ಅಹಿಂಸಾತತ್ವವನ್ನು ಸರ್ವರೂ ಪಾಲಿಸಬೇಕೆಂದು ಕರಜೋಡಿಸಿ ಬೇಡಿಕೊಳ್ಳುವೆನು.

ವಿರೂಪಾಕ್ಷಗೌಡ ಪೋಲೀಸ ಪಾಟೀಲ ಹಮ್ಮಿಗಿ.

ಜಾಹೀರವಿನಂತಿ.

ಧಾರವಾಡ ಜಿಲ್ಲಾ ಗದಗ ತಾಲೂಕು ಶಿಂಗಟಾಲೂರು ಶ್ರೀ ವೀರಭದ್ರದೇವರ ರಥೋತ್ಸವವು ಪ್ರತಿ ವರುಷ ಚೈತ್ರ ಶು|| ೫ ತಿಥಿಗೆ ನಡೆಯುತ್ತಿರುವದು ಸರ್ವಶ್ರುತವಿರುವದಷ್ಟೆ? ಅದರಂತೆ ಈ ಶುಕ್ಲ ಸಂ|| ರದ ಚೈತ್ರ ಶು|| ೫ ತಿಥಿಗೆ ದೇವತಾಕಾರ್ಯಗಳು ಜರಗುವವು. ಈ ದೇವಸ್ಥಾನಕ್ಕೆ ಅಲಂಕಾರಯುಕ್ತವಾದ ತೇರು ಇಲ್ಲದಿರೋಣದರಿಂದ ಈಗ ಮೂರು ವರುಷಗಳ ಹಿಂದೆ ಜಾತ್ರೆಯ ಕಾಲಕ್ಕೆ ಕೂಡಿದ ಯಾವತ್ತು ದೇವಭಕ್ತರ ಮನಸ್ಸಿನಲ್ಲಿ ಒಂದು ಗಡ್ಡಿಯ ತೇರನ್ನು ಮಾಡಿಸಬೇಕೆಂಬ ಸಂಕಲ್ಪವು ಕುರಿಸಲು ಕೂಡಲೆ ವರ್ಗಣಿಯನ್ನು ಕೂಡಿಸಲು ಪ್ರಾರಂಭವಾಯಿತು. ಆಗ್ಯೆ ಎಷ್ಟೋ ಜನ ಸದ್ಗೃಹಸ್ಥರು ಸ್ವಸಂತೋಷದಿಂದ ಶಕ್ತ್ಯನುಸಾರ ಹಣವನ್ನು ಕೊಡಲು ವಾಗ್ದಾನಮಾಡಿದರು. ಆ ಕಾಲದಲ್ಲಿದ್ದ ಜನರ ಉತ್ಸುಕತೆಯನ್ನು ಕಂಡು, ಕೂಡಲೆ ಹಣವು ಕೈಸೇರಬಹುದೆಂದು ಸರ್ವರಗ್ರಹಿಕೆಯಾಯಿತು. ಈ ದೇವಸ್ಥಾನವು ಅರಣ್ಯಪ್ರದೇಶದಲ್ಲಿರುವದರಿಂದ ಇಲ್ಲಿಯೇ ತೇರನ್ನು ಮಾಡಿಸಲಿಕ್ಕೆ ಪ್ರಾರಂಭಮಾಡಿದುದಾದರೆ ವಿಶೇಷ ಖರ್ಚಿಗೆ ಕಾರಣವಾದೀತೆಂದು ಸರ್ವಜನ ಸಮ್ಮತಿಯಮೇರೆಗೆ ಗದಗಿನ ಶ್ರೀ ದೇವಭಕ್ತಜನರು ವಾಗ್ದಾನದ ಲಿಸ್ಟನ್ನು ತಮ್ಮ ಕಡೆಗೆ ತೆಗೆದುಕೊಂಡು ಹೋಗಿ ತೇರುಮಾಡಿಸಲಿಕ್ಕೆ ಪ್ರಾರಂಭಿಸಿದರು. ಇವರ ಕಾರ್ಯಕ್ರಮವನ್ನು ಕಂಡು ಕೇಳಿ ವಾಗ್ದಾನಮಾಡಿದ ಮಹಾಶಯರಲ್ಲಿ ಎಷ್ಟೋ ಜನರು ತಮ್ಮ ವಾಗ್ದತ್ತ ಹಣವನ್ನು ಕೂಡಲೇ ಸಲ್ಲಿಸಿದರು. ಇನ್ನು ಕೆಲವರು ವಾಗ್ದತ್ತ ಹಣವನ್ನು ಇದುವರೆಗೂ ಕೊಟ್ಟಿರುವದಿಲ್ಲ. ತೇರಿನ ಕೆಲಸವು ಅರ್ಧಕ್ಕರ್ಧ ತಯಾರಾಗಿ ದ್ರವ್ಯಾಭಾವದಿಂದ ತಟಸ್ಥವಾಗಿದೆ. ಇಷ್ಟಕ್ಕೆ ಕಾರ್ಯಕ್ರಮವನ್ನು ಕೈಕೊಂಡ ಗದಗಿನ ಮಹಾಜನರ ಕೈಯಿಂದ ಅಧಿಕಾಂಶ ದ್ರವ್ಯವು ಈ ಕೆಲಸಕ್ಕೆ ಬಿದ್ದಿರಬಹುದಾಗಿ ತೋರುತ್ತದೆ. ವಾಗ್ದಾನಮಾಡಿದ ಮಹಾಶಯರೆಲ್ಲರು ತಮ್ಮ ತಮ್ಮ ಹಣವನ್ನು ಮುಟ್ಟಿಸಿದ್ದರೆ ಇದೇ ವರುಷ ಜಾತ್ರೆಗೆ ತೇರು ತಯಾರಾಗಿ ಬರಬಹುದಾಗಿತ್ತು. ಮೂರು ವರುಷಗಳಾದಾಗ್ಯೂ ಈ ಕಾರ್ಯವು ಕೊನೆಗಾಣದೆ ಇರತಕ್ಕ ಅಪವಾದವು ವಿಶೇಷವಾಗಿ ವಾಗ್ದಾನಮಾಡಿ ಈವರೆಗೂ ಹಣವನ್ನು ಸಲ್ಲಿಸದೆ ಇರತಕ್ಕ ಸದ್ಗೃಹಸ್ಥರನ್ನೇ ಅವಲಂಬಿಸಿರುತ್ತದೆ. ಆದಕಾರಣ ಇನ್ನುಮೇಲಾದರೂ ವಾಗ್ದಾನಮಾಡಿದ ಮಹಾಶಯರು ವಾಗ್ದತ್ತ ಹಣವನ್ನು ಕೂಡಲೆ ಸಲ್ಲಿಸಿ ಮುಂದಿನ ವರುಷಕ್ಕಾದರೂ ತೇರು ದೇವಸ್ಥಾನಕ್ಕೆ ಬರುವಂತೆ ಮಾಡಿ ಸ್ಥಾನಾಧಿಪತಿಯಾದ ಶ್ರೀ ವೀರೇಶನ ಕೃಪೆಗೂ ಲೋಕೋತ್ತರವಾದ ಕೀರ್ತಿಗೂ ಪಾತ್ರರಾಗಬೇಕೆಂದು ಸರ್ವರಿಗೂ ನನ್ನ ಸವಿನಯಸೂಚನೆ.

ಶ್ರೀ ದೇವಸ್ಥಾನದ ಪಂಚಕಮಿಟಿ ಪ್ರೆಸಿಡೆಂಟ
ಗುರುಭಕ್ತಕೇಸರಿ, ಹಮ್ಮಿಗಿ.

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ
ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ
ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮಶಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖದಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ, ಶಕ್ತಿವೈಶಿಷ್ಟ್ಯ, ಹಂಚರಿಗಿರುವ ಶಕ್ತಿಶಕ್ತಿಮದ್ವ್ಯಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಭಾಲಾಕ್ಷಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುಗಿರಿ ಶ್ರೀ ಚಿದ್ಘನ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮಹಾಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇನೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು 3 ಅಕ್ಷಯತೃತೀಯಾ (ತಾ|| 11-5-29) ನೆಯ ದಿವಸ ಪ್ರಕಾಶವಾಗುವದು. ಈ ದಿನದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.
ಶ್ರೀ ಶಿವತತ್ವಗ್ರಂಥಮಾಲಾಮಂದಿರ
ಜಂಗಮವಾಡಿಮಠ ಬನಾರಸ್ ಸಿಟಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಡಿಸ್ಕೌಂಟ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [3]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಪರೀಕ್ಷಿಸಿನೋಡಿರಿ! ತ್ವರೆಮಾಡಿರಿ!!

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನಲೇಹ್ಯ

ಇದರ ಸೇವನೆಯಿಂದ ಧಾತುಸ್ರಾವ, ಅಜೀರ್ಣ, ಸೂತಿಕಾವಾತ, ಮೇಹವಾಯು, ಗರ್ಭವಾತ, ನಿದ್ರಾಭಂಗ, ನರಗಳ ದೌರ್ಬಲ್ಯ, ಮೂತ್ರೋಪಾಧಿಗಳು, ಕ್ಷಯ, ಉಬ್ಬಸ, ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಅಸದೃಶವಾದುದು, ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯೆಂದು ನೇಳದೆ ಕೆಲವುಕಾಲ ಉಪಯೋಗಿಸಿನೋಡಿದರೆ ನೀವೇ ಮೆಚ್ಚಿ ಹೊಗಳುವಿರಿ.

"ರತ್ನೇಶು ಬಕ್ಷಕರೋ"

ಕ್ರಯ 12 ತೊಲ ಡಬ್ಬಿ 1ಕ್ಕೆ ರೂ. 2—0—0
(ಭಸ್ಮ, ಸಿಂಧೂರಗಳು ಸೇರಿರುವ) 4—0—0
[23]

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ, ಸನ್ನಿಪಾತಜ್ವರ, ಇನ್‌ಫ್ಲೂಯೆಂಜಾ, ನಿಮೋನಿಯಾ, ವಿಷಮಜ್ವರ, ಪ್ಲೇಗು, ಮೂರರ ಜ್ವರ, ಛಳಿಜ್ವರ, ಮಕ್ಕಳ ಎಳವು, ಶೀತ, ನೆಗಡಿ, ಕೆಮ್ಮುಜ್ವರ. ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣವಾದುದು. ಬಹುಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ. ಖಂಡಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1ಕ್ಕೆ 0—8—0
" 40 " " 0—4—0

ವಿ. ಪಿ. ಛಾರ್ಜು ಪ್ರತ್ಯೇಕ, ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ, ಲೇಹ್ಯ, ಮಾತ್ರೆ, ಚೂರ್ಣ, ಭಸ್ಮ, ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—
ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರು,
ಆಯುರ್ವೇದಾಶಯ, ಹಳೆಅಗ್ರಹಾರ, ಮೈಸೂರು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣವು.

ಪುನಃ ಮುದ್ರಿತವಾಗಿದೆ.

ವೀರಶೈವ ಮತದ ಪ್ರಾಚೀನತ್ವವನ್ನೂ, ಹಾಗೂ ಶಾಸ್ತ್ರೀಯತ್ವವನ್ನೂ ಅನೇಕ ಶಾಸನಗಳ ದ್ವಾರಾ ಸಿದ್ಧಪಡಿಸಿರುವ ವಿಷಯಗಳಿಂದ ಕೂಡಿದ ಪಂಡಿತರ ಭಾಷಣವು ಈ ಸಾರೆ ಅತಿಮನೋಹರವಾಗಿ ಪ್ರಿಂಟಾಗಿದೆ. ಅಭಿಲಾಷಿಗಳು ಕೂಡಲೆ ತರಿಸಿಕೊಳ್ಳಬಹುದು.

ಬೆಲೆ 2 ಆಣೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವಮತಮೀಮಾಂಸಾ.

ಈ ಗ್ರಂಥವನ್ನು ಕಾಶೀಕ್ಷೇತ್ರನಿವಾಸಿಗಳಾದ ಪುಗಿರಿ ಬೃಹನ್ಮಠಾಧ್ಯಕ್ಷ ಶ್ರೀ ಚಿದ್ಘನಶಿವಾಚಾರ್ಯರು ರಚಿಸಿರುವರು. ಗ್ರಂಥಕರ್ತರು ವೀರಶೈವಮತದ ಮಹತ್ತತ್ವಗಳನ್ನು ಸರ್ವರೂ ಸುಲಭವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ಅತ್ಯಂತ ಶ್ರಮವಹಿಸಿ ಸುಗಮವಾದ ಕನ್ನಡ ಭಾಷೆಯಿಂದ ಬರೆದಿದ್ದಾರೆ. ಸದರಿ ಗ್ರಂಥವು ಪ್ರತಿಯೊಬ್ಬ ವೀರಶೈವನಿಗೂ ಸಂಗ್ರಾಹ್ಯವಾಗಿದೆ. ಬೆಲೆ ೨ ಆಣೆ.

ಒಂದೊಂದು ಪ್ರತಿಯನ್ನು ತರಿಸಿಕೊಳ್ಳುವವರು ೨ ಆಣೆ ಪೋಸ್ಟು ಸ್ಟಾಂಪುಗಳನ್ನು ಕಳುಹಿಸಬೇಕು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

ಅಮೂಲ್ಯವಾದ ಗುಣಗಳನ್ನುಳ್ಳ ಈ ಕಂಪನಿಯ ಪಾಲಿಸಿಗಳಲ್ಲೊಂದಾದ ಗ್ಯಾರಂಟೀಡ್ ಇನ್‌ವೆಸ್ಟ್‌ಮೆಂಟ್ ಪಾಲಿಸಿ.

ಈ ಪಾಲಿಸಿಯಲ್ಲಿ ವಿಮೆದಾರರು 5 ವರ್ಷಗಳು ಮಾತ್ರ ಕಂತುಗಳನ್ನು ಕೊಟ್ಟು ನಂತರ ಶೇಕಡ ರೂ. 6 ರಂತೆ ಬಡ್ಡಿ ಕೊಡುತ್ತಾ ಬಂದರೆ ಮಿಗತಕ್ಕ 10 ಅಥವಾ 15 ಕಂತುಗಳನ್ನೆಲ್ಲಾ ಕಂಪೆನಿಯವರೇ ಸಾಲವಾಗಿ ಕಟ್ಟಿಕೊಳ್ಳುತ್ತಿರುತ್ತಾರೆ. ಸದರಿ ವಿಮೆಯು 10 ವರ್ಷಗಳನಂತರ ಮೃತಪಟ್ಟರೆ ಆಗಬಾಕಿ ಆಗುವ ಕಂತುಗಳನ್ನೆಲ್ಲಾ ವಜಾ ಮಾಡುತ್ತಾರೆ. ಅಥವಾ ಕಂತುಗಳನ್ನು ಕೊಡುತ್ತಾ ಬಂದಿದ್ದರೂ ಹೆಚ್ಚಾದಂತೆ ಕಂತುಗಳನ್ನು ವಿಮೆಯ ಮೊಬಲಗಿನ ಜೊತೆಯಲ್ಲಿ ವಾಪಸು ಮಾಡುತ್ತಾರೆ. ಒಂದು ವರ್ಷವಾದರೂ ವಿಮೆಯು ಜಾರಿಯಲ್ಲಿದ್ದು ಮೃತಪಟ್ಟರೆ ಆ ವರ್ಷದ ಲಾಭವನ್ನು ಸೇರಿಸಿಕೊಡುತ್ತಾರೆ (Interim Bonus).

ರೂ. 10,000 ಗಳಿಗೆ ವಿಮೆಮಾಡಿ ಮೊದಲನೆ 10 ವರ್ಷಗಳಲ್ಲಿ ಮೃತಪಟ್ಟರೆ ವಿಮೆಯು ರೂ. 19,000

11 ನೇ ವರ್ಷದಲ್ಲಿ	1 ಕಂತು	ರೂ. 10,600	16 ನೇ ವರ್ಷದಲ್ಲಿ	6 ಕಂತು	ರೂ. 13,600
12 ನೇ ವರ್ಷದಲ್ಲಿ	2 "	" 11,200	17 ನೇ ವರ್ಷದಲ್ಲಿ	7 "	" 14,200
13 ನೇ ವರ್ಷದಲ್ಲಿ	3 "	" 11,800	18 ನೇ ವರ್ಷದಲ್ಲಿ	8 "	" 14,800
14 ನೇ ವರ್ಷದಲ್ಲಿ	4 "	" 12,400	19 ನೇ ವರ್ಷದಲ್ಲಿ	9 "	" 15,400
15 ನೇ ವರ್ಷದಲ್ಲಿ	5 "	" 13,000	20 ನೇ ವರ್ಷದಲ್ಲಿ	10 "	" 16,000

[40]

ಏಜಂಟರು ಬೇಕಾಗಿದೆ.

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ. ಅಥವಾ ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು **ಯಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ದೀವಾನ್ಸ್‌ರೋಡ್, ಮೈಸೂರು.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕ್ಕಾಗಿ ಶ್ರೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜೆ] ### ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಿಕ್ಕರಿಸದರೆ ಶ್ರೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನ[illegible]ಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮು[illegible]ಯೇ ಪದರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ತಾಲಿಮಕಂದ, ಮಧುಕಂದ, ಜಪಾಕಂದ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಏಲಾಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಶಮುಪತ್ರಿ, ಸಿತಾಪತ್ರಿ, ಮದನಮಸ್ತ್ರ, ಲಕಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮುರ್ದಾಶಿಕಟ್ಟಿಗೆ, ಸಕಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂ. ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14 ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನದಕ್ಕೆ—ಈ ವಿಕಾರಕ್ಕೆ ೭ ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕೆ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಬ್ಬಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [11]

ಪತ್ತ—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೇಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುವಾಗಿ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ಸಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಹಚ್ಚಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಬುಡ್ಡಿಗೆ 1-8-0, ಅರ್ಧ ಡಜನ್ 8-8-0. ಡಜನ್ 16-8-0.

ಟಿಕ್ಕು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಫರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [35]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷಿನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷಿನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷಿನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹುಮನೋಹರವಾಗಿ ಮುದ್ರಿಸಿಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾತರಹದ ಜಾಬ್‌ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನ ಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೭|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟೆ ದುಷ್ಟ್ರಪ್ರಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೩ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್, **ಪಂಚಾಚಾರ್ಯಪ್ರಭಾ ಆಫೀಸ್,**

ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,

ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

"ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[40] ಪೋ. ಬಾ. ೫೧೦, ಮದರಾಸು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ ನೇ ಏಪ್ರಿಲ್ ೧೯೨೯ [ಸಂಚಿಕೆ ೫೦.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ವೀರಶೈವಮತಮೀಮಾಂಸಾ.

ಈ ಗ್ರಂಥವನ್ನು ಕಾಶೀಕ್ಷೇತ್ರನಿವಾಸಿಗಳಾದ ಪುರಗಿರಿ ಬೃಹನ್ಮಠಾಧ್ಯಕ್ಷ ಶ್ರೀ ಚಿದ್ಘನಶಿವಾಚಾರ್ಯರವರು ರಚಿಸಿರುವರು. ಗ್ರಂಥಕರ್ತರು ವೀರಶೈವಮತದ ಉದಾತ್ತತತ್ವಗಳನ್ನು ಸರ್ವರೂ ಸುಲಭವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ಅತ್ಯಂತ ಶ್ರಮವಹಿಸಿ ಸುಗಮವಾದ ಕನ್ನಡ ಭಾಷೆಯಿಂದ ಬರೆದಿದ್ದಾರೆ. ಸದರಿ ಗ್ರಂಥವು ಪ್ರತಿಯೊಬ್ಬ ವೀರಶೈವನಿಗೂ ಸಂಗ್ರಾಹ್ಯವಾಗಿದೆ. ಬೆಲೆ ೨ ಆಣೆ.

ಒಂದೊಂದು ಪ್ರತಿಯನ್ನು ತರಿಸಿಕೊಳ್ಳುವವರು ೨|| ಆಣೆ ಪೋಸ್ಟು ಸ್ಟಾಂಪುಗಳನ್ನು ಕಳುಹಿಸಬೇಕು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣವು.

ಪುನಃ ಮುದ್ರಿತವಾಗಿದೆ.

ವೀರಶೈವ ಮತದ ಪ್ರಾಚೀನತ್ವವನ್ನೂ, ಹಾಗೂ ಪ್ರಾಶಸ್ತ್ಯವನ್ನೂ ಅನೇಕ ಶಾಸನಗಳ ದ್ವಾರಾ ಸಿದ್ಧಪಡಿಸಿರುವ ವಿಷಯಗಳಿಂದ ಕೂಡಿದ ಪಂಡಿತರ ಭಾಷಣವು ಈ ಸಾರೆ ಅತಿಮನೋಹರವಾಗಿ ಪ್ರಿಂಟಾಗಿದೆ. ಅಭಿಲಾಷಿಗಳು ಕೂಡಲೆ ತರಿಸಿಕೊಳ್ಳಬಹುದು.

ಬೆಲೆ 2 ಆಣೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವೀಕಾರ.

ಶಿವಮೊಗ್ಗ ತಾ|| ಹಿರಿಯೂರು ಗ್ರಾಮದಲ್ಲಿದ್ದ ಕೈ|| ಮಳಲಿಮಠದ ಶ್ರೀ ನಾಗಾರ್ಜುನಸ್ವಾಮಿಗಳ ಗದ್ದುಗೆಯ ಮೇಲೆ ಶಿವಲಿಂಗಪ್ರತಿಷ್ಠೆಯನ್ನು ನೆರವೇರಿಸಿದ ಸಮಯದಲ್ಲಿ ಮಳಲಿಮಠದ ಈಗಿನ ಶ್ರೀ|| ಷ|| ಬ್ರ|| ನಾಗಾರ್ಜುನಸ್ವಾಮಿಗಳು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 6 ರೂಪಾಯಿಗಳು ವೇ|| ತರೀಕೆರೆ ಹಿರೇಮಠದ ಕಲ್ಲಿನಾಥಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದ ಮೂಲಿಮನಿ ಚಾಮಕೋಟಿಮಠದ ಒಪ್ಪೆತ್ತೆಪ್ಪನವರ ಬಸವಯ್ಯನ ಲಗ್ನದಲ್ಲಿ ತೆಗೆಯಿಸಿದ 2 ರೂ. ಕಡ್ಲಬಾಳು ವೀರಾತಯ್ಯನ ಲಗ್ನದಲ್ಲಿ ತೆಗೆಯಿಸಿದ 2 ರೂ. ಉಪ್ಪಾರಗಟ್ಟಿ ಗಂಗನಹಳ್ಳಿ ಸಿದ್ದಯ್ಯನವರ ಪುತ್ರಿ ಸೌ|| ಚಂದ್ರಪ್ಪನ ಲಗ್ನದಲ್ಲಿ ತೆಗೆಯಿಸಿದ 2 ರೂ. ಒಟ್ಟು 6 ರೂಪಾಯಿಗಳು ವೇ|| ಮಿ|| ಮ|| ಜಾಗಟಗೇರಿ ಚನ್ನವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೊಸಪೇಟೆ ತಾ|| ನಾಗೇನಹಳ್ಳಿ ಗ್ರಾಮದ ಮ|| ರಾ|| ಪಿಚ್ಚರೆಡ್ಡಿ ಮುದಕಪ್ಪನವರ ಪುತ್ರ ಚಿ|| ತಿಪ್ಪಣ್ಣನಿಗೂ ಗದಗ ತಾ|| ಡಂಬಳಗ್ರಾಮದ ಮ|| ರಾ|| ರಾಜೂರು ಹುಚ್ಚಪ್ಪನವರ ಪುತ್ರಿ ಸೌ|| ಗುರುಬಸವನ್ನನಿಗೂ ಹಾಗೂ ಸದರಿ ಮುದುಕಪ್ಪನವರ ಪುತ್ರಿ ಸೌ|| ನೀಲಮ್ಮನಿಗೂ ಹಡಗಲಿ ತಾ|| ಹಿರೇಮಲ್ಲನಕೇರಿ ಮ|| ರಾ|| ಕುಷ್ಟಗಿ ಫಕೀರಪ್ಪನವರ ಪುತ್ರ ಚಿ|| ಶಿವಪ್ಪನಿಗೂ ನೆರವೇರಿದ ವಿವಾಹಮಹೋತ್ಸವದಲ್ಲಿ ಮ|| ರಾ|| ಮುದಕಪ್ಪನವರು ತಮ್ಮ ವಂಶಗುರುಗಳಾದ ಶ್ರೀ|| ಷ|| ಬ್ರ|| ಮಂಡಲಗೇರಿಹೊಸ್ಪೆಮಠದ ಪಟ್ಟದ ಸ್ವಾಮಿಗಳವರ ಅಪ್ಪಣೆಯಮೇರೆ ತೆಗೆಯಿಸಿದ 6 ರೂಪಾಯಿಗಳು ವೇ|| ಚಿತ್ರವಾಡಿಗಿ ಮಠದ ಕೋಟ್ರಯ್ಯನವರ ಮತ್ತು ಹೊಸಪೇಟೆ ಶಾಲಿ ವೇ|| ದೊಡ್ಡಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೊಸಪೇಟೆ ಮ|| ರಾ|| ಜಾಲಿಸಣ್ಣಮಹಂತಪ್ಪನವರ ಪುತ್ರಿ ಸೌ|| ಶಾಂತಮ್ಮನನ್ನು ಮ|| ರಾ|| ಬಳ್ಳಾರಿ ಜವಳಿ ಶಿವಸಂಗಪ್ಪನವರ ಪುತ್ರ ಚಿ|| ಸಿದ್ಧರಾಮಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 4 ರೂಪಾಯಿಗಳು ಶ್ರೀ|| ಷ|| ಬ್ರ|| ಯಲಬುರ್ಗಿ ಧರಮುರಡಿ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ಡಿ|| ಕವಲೂರು ಗ್ರಾಮದ ಮ|| ರಾ|| ಉಪ್ಪಾರ ತಿಮ್ಮಣ್ಣನು ಹೊಸಕೆರೆಯನ್ನು ಕಟ್ಟಿಸಿ ನೆರವೇರಿಸಿದ ಗಣಾರಾಧನಾಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ವೇ|| ಗೊಂಡಬಾಳ ಸಿದ್ಧರಾಮಯ್ಯನವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಅರಳೇಪೇಟೆ ಘಂಟಾಮಠದ ವೇ|| ರಾಚಯ್ಯನವರ ಪುತ್ರಿ ಸೌ|| ಲಲಿತಾಂಬೆಯನ್ನು ತುಮಕೂರು ಅರಳೇಪೇಟೆ ಷಾಪ್ ಗುಬ್ಬಿ ಹುಚ್ಚಯ್ಯನವರ ಚನ್ನಬಸವಾರಾಧ್ಯರ ಪುತ್ರ ಚಿ|| ಸುಬ್ಬಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ಸೊಲಿಬೆಲೆ ರೆವಿನ್ಯೂ ಇನ್‌ಸ್ಪೆಕ್ಟರ್ ವೇ|| ಪ್ರಭುವಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಟವನ್‌ನಿವಾಸಿಗಳಾದ ಮ|| ರಾ|| ಕಲ್ಗಿನೆ ಮರಿಬಸಪ್ಪನವರು ತಮಗೆ ಫಾಲ್ಗುಣ ಬ|| ೧ ದಿವಸ ಪುತ್ರನು ಜನಿಸಿದ ಸಂತೋಷಕ್ಕಾಗಿ 2 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಗದುಗಪಟ್ಟಣದಲ್ಲಿರುವ ಗುರುಸ್ವಾಮಿಮಠದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಸಮಯದಲ್ಲಿ ದಾವಣಗೆರೆ ಮ|| ರಾ|| ವಾಲಿಶೆಟ್ಟರ ಅಡಿವಪ್ಪನವರು ತಮ್ಮ ಗುರುಗಳಾದ ವೇ|| ಶಿವಲಿಂಗಾರ್ಯರ ಅಪ್ಪಣೆಯಂತೆ ಸಮರ್ಪಿಸಿದ 1-4-0 ವೇ|| ಬುಗತಿಮಠದ ಅಯ್ಯಪ್ಪಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಹುಬ್ಬಳ್ಳಿಪಟ್ಟಣದ ಹನ್ನೆರಡುಮಠದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವದಲ್ಲಿ ವೇ|| ಗಂಜಿಗಟ್ಟಿ ಹಿರೇಮಠದ ಚನ್ನಯ್ಯನವರು ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಹನ್ನೆರಡು ಮಠದ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಹಾನಗಲ್ ತಾ|| ಆಲೂರು ಗ್ರಾಮದ ಕೇತಕೀ ಸಂಘದ ಚೇರ್‌ಮನ್ನರಾದ ಮ|| ರಾ|| ಚೌಷಮ್ಮಿ ಪುಟ್ಟಪ್ಪನವರು ತಮ್ಮ ತೃತೀಯ ಪುತ್ರ ಚಿ|| ಶಿವಯೋಗಪ್ಪನ ಚೌಲಕಾರ್ಯದಲ್ಲಿ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ

ಹುಬ್ಬಳ್ಳಿ.

ಈ ಪಟ್ಟಣದಲ್ಲಿ ಶೋಭಿಸುವ ಹನ್ನೆರಡು ಮಠದಲ್ಲಿ ಫಾಲ್ಗುಣ ಶು|| ೧೩ ದಿವಸ ಶ್ರೀ ಜಗದಾಚಾರ್ಯರ ಜಯಂತಿಯು ಅತಿ ವೈಭವದಿಂದ ನೆರವೇರಿಸಲ್ಪಟ್ಟಿತು. ಜಗದಾಚಾರ್ಯರ ಭಾವಚಿತ್ರಕ್ಕೆ ಷೋಡಶೋಪಚಾರಪೂಜೆಯೂ, ಅಷ್ಟೋತ್ತರಶತನಾಮಪೂಜೆಯೂ ವಿಧ್ಯುಕ್ತವಾಗಿ ನಂದಿಕೇಶ್ವರ ಮಠದ ವಿರೂಪಾಕ್ಷಾರ್ಯರಿಂದ ನೆರವೇರಿಸಲ್ಪಟ್ಟಿತು. ಸಾಯಂಕಾಲ ೬ ಘಂಟೆಯಿಂದ ೮ ಘಂಟೆಯವರೆಗೆ ಮ|| ರಾ|| ಬ್ಯಾಳಿಸಿದ್ಧಪ್ಪನವರು ಬಾಲಕರೊಡನೆ ಆಚಾರ್ಯರ ಸ್ತೋತ್ರಗಳನ್ನು ಪಾಡಿದರು. ಆ ಮೇಲೆ ಇಲ್ಲಿಯ ವೇ|| ಶಿವಯ್ಯಶಾಸ್ತ್ರಿಗಳು, ಹಳೆಹುಬ್ಬಳ್ಳಿ ಹಿರೇಮಠದ ವೇ|| ಮುದುಕಯ್ಯನವರು ಹಾಗೂ ಮ|| ರಾ|| ಬಂಕಾಪುರದ ಕುಂಬಾರಮಹಾದೇವಪ್ಪನವರು ಶ್ರೀ ಜಗದಾಚಾರ್ಯರ ಚರಿತ್ರವನ್ನು ಸಂಕ್ಷೇಪವಾಗಿ ಹೇಳಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಸಮಯದಲ್ಲಿ ವೇ|| ಗಂಜಿಗಟ್ಟಿ ಹಿರೇಮಠದ ಚೆನ್ನಯ್ಯನವರು ಪ್ರಭಾಪೋಷಣೆಕ್ಕೋಸ್ಕರ ೧ ರೂಪಾಯಿಯನ್ನು ಸಮರ್ಪಿಸಿದರು.

ಪ್ರತ್ಯಕ್ಷದರ್ಶಿ.

ಕಾತರಕಿ.

ಕೊಪ್ಪಳಜಿಲ್ಲಾ ಗೊಂಡಬಾಳ ಸಾಲಿಮಠದ ವೇ|| ಗುರುಯ್ಯನವರು ಕಾತರಕಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ವೇ|| ಹಿರೇಮಠದ ಪಟದಯ್ಯನವರ ನೇತೃತ್ವದಲ್ಲಿ ವೈಭವದಿಂದ ನೆರವೇರಿಸಿದರು. ಉನ್ನತವಾದ ಪೀಠದಲ್ಲಿ ಶ್ರೀ ಮಜ್ಜಗದ್ಗುರು ರೇಣುಕಶಿವಾಚಾರ್ಯರ ಭಾವಚಿತ್ರವನ್ನಿಟ್ಟು ಅನೇಕ ಜನ ಭಕ್ತಮಾಹೇಶ್ವರರ ಸಮ್ಮುಖದಲ್ಲಿ ವಿಧ್ಯುಕ್ತವಾಗಿ ಅರ್ಚಿಸಿ ಮಂಗಲನೀರಾಜನಗಳನ್ನು ಮಾಡಿ ಜಗದಾಚಾರ್ಯರ ಪೂಜಾವಿಧಿಯನ್ನು ಜಯಘೋಷದೊಡನೆ ಪೂರೈಸಿದರು. ಅನಂತರ ದೊಡ್ಡಬಸವಪ್ಪ ಲಕ್ಕುಂಡಿ, ಬಸಪ್ಪ ಹೊಂಬಳ, ಕೊಟ್ರಪ್ಪ ಹತ್ತಿ, ಶಾಂತಪ್ಪ ಹುರಕಡ್ಲಿ ಇವರು ಜಗದ್ಗುರುಗಳ ನಾಮಸಂಕೀರ್ತನದೊಡನೆ ೩ ರೂಪಾಯಿಯನ್ನು ವಂದನಾಪುರಸ್ಸರವಾಗಿ ಅರ್ಪಿಸಿ ತಮ್ಮ ಗುರುಭಕ್ತಿಯನ್ನು ವ್ಯಕ್ತಪಡಿಸಿದರು. ಅದಿವಪ್ಪ ಹೊಳೆಯಪ್ಪನವರ, ದಾನಪ್ಪ ಲಕ್ಕುಂಡಿ, ಹೊಳೆಬಸವಪ್ಪ ನಾರದ, ವೀರಪ್ಪ ಹುರಕಡ್ಲಿ, ಗವಿಸಿದ್ಧಪ್ಪ ಹಂದ್ರಾಳ, ಕುಷ್ಟಿಗಿಗ್ರಾಮದ ಸಂಗಪ್ಪ ಶಿವಶಿಂಪಿಗರ ಮೊದಲಾದವರು ಕಾರ್ಯಸಹಾಯಕರಾಗಿದ್ದರು. ಇಂಥ ಸತ್ಕಾರ್ಯದಲ್ಲಿ ಲೋಲಾಡುವ ಈ ಗುರುಭಕ್ತರೇ ಧನ್ಯರು! ಸಮಸ್ತರಿಗೆ ಮೃಷ್ಟಾನ್ನಸಂತರ್ಪಣೆಮಾಡಿ ಜಂಗಮಮೂರ್ತಿಗಳಿಗೆ ಭೂರಿದಕ್ಷಿಣೆಯನ್ನಿತ್ತು ವೇ|| ಗುರುಯ್ಯನವರು ಕೃತಕೃತ್ಯರಾದರು. ಸಕಲರು ಜಗದ್ಗುರುವಿನ ಪ್ರಸಾದವನ್ನು ಹೊಂದಿ ಮುಂದಿನವರ್ಷ ಮಹದಾಚಾರ್ಯರ ಜಯಂತಿಯನ್ನು ಒಳ್ಳೇವಿಜೃಂಭಣೆಯಿಂದ ನೆರವೇರಿಸಬೇಕೆಂಬ ಕಳಕಳಿಯುಳ್ಳವರಾಗಿ ಸ್ವಗೃಹಗಳಿಗೆ ತೆರಳಿದರು. ಇದೇ ಪ್ರಕಾರ ನಮ್ಮ ಗ್ರಾಮದ ವೀರಶೈವರು ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಜಯಂತ್ಯುತ್ಸವಗಳನ್ನು ಆಯಾಯ ಮಂಗಲದಿನಗಳಲ್ಲಿ ನೆರವೇರಿಸಿ ಭಗವತ್ಪಾದರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ,

ಓರ್ವ ಕಾತರಕಿ ವೀರಶೈವ.

ಉಪ್ಪಿನಬಟಿಗೇರಿ.

ಕೊಪ್ಪಳಜಿಲ್ಲಾ ಉಪ್ಪಿನಬಟಿಗೇರಿಯಲ್ಲಿ ಶ್ರೀ ಮಜ್ಜಗದ್ಗುರು ರೇಣುಕರ ಜಯಂತಿಯನ್ನು ಯುಗಾದಿ ಮೊದಲಾದ ದೊಡ್ಡಹಬ್ಬದಂತೆ ಆಚರಿಸಬೇಕೆಂದು ಫಾಲ್ಗುಣ ಶು|| ೧೨ ಶುಕ್ರವಾರ ಡಂಗುರವನ್ನು ಸಾರಿಸಲು ಆಪ್ರಕಾರ ಸರ್ವರು ಫಾಲ್ಗುಣ ಶು|| ೧೩ ಶನಿವಾರ ದಿವಸ ಜಯಂತಿಯನ್ನು ವೈಭವದಿಂದ ನೆರವೇರಿಸಿದರು. ಇದೇ ದಿವಸ ಹಗಲು ೪|| ಗಂಟೆಸುಮಾರಿಗೆ ಕೇದಾರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯರ ಸನ್ನಿಧಾನದಲ್ಲಿ ಗ್ರಾಮಪ್ರಮುಖಾದಿಗಳು ಮಿಳಿತರಾದರು. ಉನ್ನತಾಸನದಲ್ಲಿರಿಸಲ್ಪಟ್ಟ ಶ್ರೀಮಜ್ಜಗದ್ಗುರುಗಳ ಲಿಂಗೋದ್ಭವ ಭಾವಪಟವನ್ನು ವಿಧಿಪ್ರಕಾರವಾಗಿ ಅರ್ಚಿಸಿ ಅಂದೋಲಿಕೆಯಲ್ಲಿ ಭಾವಚಿತ್ರವನ್ನು ಮೂರ್ತಗೊಳಿಸಿ ಮಹೋತ್ಸವವನ್ನು ಬಾಜಾಬಜಂತ್ರಿಗಳಿಂದಲೂ ಗಜತುರಗಾದಿಗಳಿಂದಲೂ ಸಕಲಬಿರುದಾವಳಿಗಳಿಂದಲೂ, ಭಜನಾಸಂಘದವರ ಭಜನಾಜಯಘೋಷಒಡಪುಗಳಿಂದಲೂ ಹೊರಡಿಸಿದರು. ಅಲ್ಲಲ್ಲಿ ಸುಮಂಗಲೆಯರು ಗುರುಸಾರ್ವಭೌಮಮೂರ್ತಿಗೆ ಮಂಗಳಾರತಿಯನ್ನೆತ್ತುತ್ತಿದ್ದರು. ಈ ಪ್ರಕಾರ ಉತ್ಸವವು ಒಳ್ಳೇ ವಿಜೃಂಭಣೆಯಿಂದ ನಡೆದು ಮಹಾಸನ್ನಿಧಾನವನ್ನು ಹಗಲು ೬ ಗಂಟೆ ಸುಮಾರಿಗೆ ಸೇರಿತು. ಅನಂತರ ಪಂ|| ವಿಶ್ವೇಶ್ವರಶಾಸ್ತ್ರಿಗಳು ಲಿಂಗಧಾರಣ ವಿಷಯವಾಗಿ ಉಪನ್ಯಾಸವನ್ನು ಮಾಡಿದರು. ಆಮೇಲೆ ಭಗವತ್ಪಾದರು ತಮ್ಮ ಅಮೃತಮಯವಾಣಿಯಿಂದ "ಅಷ್ಟಾವರಣ.ಸತ್ಪವಾಸಫಲ" ಈ ವಿಷಯಗಳಮೇಲೆ ಮನೋಹರವಾಗಿ ಅಪ್ಪಣೆಕೊಡಿಸಿದರು. ಆ ಮೇಲೆ ಸರ್ವರು ಫಲಾಶೀರ್ವಾದವನ್ನು ಪಡೆದು ಮಂಗಲಧ್ವನಿಗಳೊಡನೆ ಗುರುಮಹತ್ವವನ್ನು ಕೊಂಡಾಡುತ್ತ ಸಂತೋಷಿತರಾಗಿ ಸ್ವಗೃಹಗಳಿಗೆ ತೆರಳಿದರು. ಇಂತಪ್ಪ ಗುರುಭಕ್ತರೇ ಧನ್ಯರು! ಇವರಿಗೆ ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸನ್ಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಓರ್ವಗುರುಭಕ್ತ.

ಆಲೂರು ಹಾನಗಲ್ಲ.

ಮೊದಲೇ ಗೊತ್ತಾದಮೇರೆಗೆ ಮಹಾಶಿವರಾತ್ರಿಯು ದಿವಸ ಸಾಯಂಕಾಲ 4 ಘಂಟೆಗೆ ಶ್ರೀ ಜಗದ್ಗುರುಗಳವರ ಭಾವಚಿತ್ರದ ಮೆರವಣಿಗೆಯು ಶ್ರೀ ಚರಮೂರ್ತಿಸ್ವಾಮಿಗಳವರ ಮಠದಿಂದ ಮಂಗಳವಾದ್ಯದೊಡನೆ ಹೊರಟಿತು. ಆರಂಭದಲ್ಲಿ ಈ ಊರ ಚರಪಟ್ಟಾಧ್ಯಕ್ಷರೇ ಮೊದಲಾದ ಕೆಲವು ಶಿಷ್ಯಮಂಡಳಿಯು ಕೂಡಿತ್ತು. ಅನಂತರ ವಿರಕ್ತಮಠದಲ್ಲಿರುವ ಪಾಠಶಾಲೆಯ ಅಧ್ಯಾಪಕರಾದ ಪಂ|| ಬಸವರಾಜಶಾಸ್ತ್ರಿಗಳು ತಮ್ಮ ವಿದ್ಯಾರ್ಥಿಗಳೊಡನೆ ಉತ್ಸವಕ್ಕೆ ಬಂದು ಮಿಳಿತರು. ಇದಲ್ಲದೆ ಊರ ಕೆಲವು ಸಭ್ಯಜನರೂ ಶಾಲೆಯ ವಿದ್ಯಾರ್ಥಿಗಳೂ ಒಳ್ಳೇ ಉತ್ಸುಕತೆಯಿಂದ ಬಂದು ಸೇರಿದ್ದರಿಂದ ಮೆರವಣಿಗೆಯು ಬಹು ಶೋಭಾಯಮಾನವಾಗಿತ್ತು. ಮೆರವಣಿಗೆಯು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ಚನ್ನವೀರಪ್ಪಶೆಟ್ಟರಮನೆಗೆ ಬಂದು ತಲ್ಪಿತು. ಆ ಮೇಲೆ ಸಭೆಯು ಪ್ರಾರಂಭವಾಗಿ ಇಲ್ಲಿಯ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷರು ಅಧ್ಯಕ್ಷಸ್ಥಾನವನ್ನಂಗೀಕರಿಸಿದರು. ಕನ್ನಡಶಾಲೆಯ ಮಾಸ್ತರರಾದ ಮ. ಗು. ಹಿರೇಮಠ ಇವರು ಈ ದಿವಸ ಮಾಡಿದ ಉತ್ಸವದ ಕಾರಣವನ್ನೂ ಸಭೆಯು ಕೂಡಿದ ಉದ್ದೇಶವನ್ನೂ ಹೇಳಿದರು. ಆ ಮೇಲೆ ಪಂ|| ಬಸವರಾಜಶಾಸ್ತ್ರಿಗಳ ವ್ಯಾಖ್ಯಾನವಾಯಿತು. ಅದರಲ್ಲಿ ಅವರು ಪಂಚಾಚಾರ್ಯರೇ ವೀರಶೈವ ಮತಸ್ಥಾಪಕರೆಂದೂ, ಶ್ರೀ ಜಗದ್ಗುರು ರೇಣುಕಾಚಾರ್ಯರು ಅನೇಕ ಮಹತ್ತರವಾದ ಕಾರ್ಯಗಳನ್ನು ಮಾಡಿರುವರೆಂದೂ ಅಂಥ ಮಹನೀಯರ ಜಯಂತ್ಯುತ್ಸವಗಳನ್ನು ವೀರಶೈವರಾದವರೆಲ್ಲರೂ ಮಾಡಲೇಬೇಕೆಂದೂ, ಶ್ರೀ ಜಗದ್ಗುರು ಪಂಚಾಚಾರ್ಯರ ಮಹಿಮೆಗಳನ್ನು ಸಣ್ಣ ಸಣ್ಣ ಪುಸ್ತಕಗಳಲ್ಲಿ ವಿವರಿಸಿ ಅವುಗಳನ್ನು ದೇಶದಲ್ಲೆಲ್ಲ ಪಸರಿಸಬೇಕೆಂದೂ, ಅವಕ್ಕೆ ತೀರ ಕಡಿಮೆ ಬೆಲೆಯನ್ನು ಇಡಬೇಕೆಂದೂ, ಈ ಸಂಗತಿಯನ್ನು ಪ್ರಭಾಚಾಲಕರಿಗೆ ತಿಳುಹಿಸಬೇಕೆಂದೂ ಸಭೆಯಲ್ಲಿ ಸರ್ವಾನುಮತದಿಂದ ಪಾಸಾಯಿತು. ಆ ಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪುನಃ ಫಾಲ್ಗುಣ ಶು|| 13 ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಅತಿ ವೈಭವದಿಂದ ನೆರವೇರಿಸಲ್ಪಟ್ಟಿತು. ಆ ದಿವಸ ಹಾವೇರಿ ನಡುವಿನಮಠದ ವೇ|| ಚನ್ನಬಸವಯ್ಯನವರು ಸಭೆಗೆ ಅಧ್ಯಕ್ಷರಾದರು. ಸಭೆಯಲ್ಲಿ ಮ|| ರಾ|| ಚನ್ನವೀರಪ್ಪಶೆಟ್ಟರ ಹಾಗೂ ಚೌಸಷ್ಟಿ ಪುಟ್ಟಪ್ಪನವರ ಭಾಷಣಗಳಾದವು. ಆ ಮೇಲೆ ಸೋಮಯ್ಯ ಹಿರೇಮಠ ಎಂಬ ವಿದ್ಯಾರ್ಥಿಯು ಭಾಷಣಮಾಡಿದನು. ಜಯಂತಿ ಮಹೋತ್ಸವ ನಿಮಿತ್ತವಾಗಿ ಸಭೆಗಳಲ್ಲಿ ಭಾಷಣಮಾಡತಕ್ಕ ವಿದ್ಯಾರ್ಥಿಗಳಿಗೆ ಮುಂದಿನ ವರ್ಷದಿಂದ ಇನಾಮು ಕೊಡುವ ಏರ್ಪಾಟುಮಾಡಲಾಗುವದೆಂದು ಮ|| ರಾ|| ಚನ್ನವೀರಪ್ಪಶೆಟ್ಟರು ಹೇಳಿದರು. ಇದು ಸ್ತುತ್ಯವಾದ ಕಾರ್ಯವಾಗಿದೆ. ಇತ್ಯಾದಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪುಟ್ಟಪ್ಪ ಚೌಸಷ್ಟಿ. ಆಲೂರು ಪೇಠಕಿ
ಸಂಘದ ಚೇರಮನ್

ಶ್ರೀ ಶಿವಲಿಂಗಪ್ರತಿಷ್ಠಾಮಹೋತ್ಸವ.

ಶಿವಮೊಗ್ಗಾ ಡಿ|| ತೀರ್ಥಹಳ್ಳಿ ತಾ|| ಮಳಲಿಮಠದ ಶ್ರೀ ಗುರು ನಾಗಾರ್ಜುನಸ್ವಾಮಿಗಳವರು ಶಿವಮೊಗ್ಗಾ ತಾ|| ಹಿರಿಯೂರಲ್ಲಿರುವ ಹಿಂದಿನ (ಶಿವೈಕ್ಯರಾದ) ಶ್ರೀ ನಾಗಾರ್ಜುನಸ್ವಾಮಿಗಳವರ ಗದ್ದುಗೆಯಮೇಲೆ ನೂತನವಾಗಿ ಕಲ್ಲು ಇಟ್ಟಿಗೆ ಗಾರೆ ಮುಂತಾದ್ದರಿಂದ ಮಠವನ್ನು ಕಟ್ಟಿಸಿ ತಾ|| 30-3-29 ನೆ ಸ್ಥಿರವಾರ ಶುಭಮೂಹೂರ್ತದಲ್ಲಿ ಶ್ರೀ ಜಗದ್ಗುರು ರೇಣುಕಶಾಖಾನುವರ್ತಿಗಳಾದ ಬಳಚಿ ಬೃಹನ್ಮಠದ ಷ|| ಬ್ರ|| ಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಶ್ರೀ ಜಗದ್ಗುರು ಕೇದಾರ ಶಾಖಾನುವರ್ತಿಗಳಾದ ಚನ್ನಗಿರಿ ಬೃಹನ್ಮಠದ ಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಇದೇ ಶಾಖಾನುವರ್ತಿಗಳಾದ ದುಮ್ಮಹಳ್ಳಿ ಬೃಹನ್ಮಠದ ಷ|| ಬ್ರ|| ಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಪುದೇಪುಮಠದ ದೊಡ್ಡಸ್ವಾಮಿಗಳವರನ್ನು ಸಹ ದಯಮಾಡಿಸಿಕೊಂಡು ಹೋಗಿ ಸದರಿ ಗದ್ದುಗೆಯ ಮೇಲೆ ಶಿವಲಿಂಗ ಪ್ರತಿಷ್ಠೆಯು ತರೀಕೆರೆ ಹಿರೇಮಠದ ಕಲ್ಲಿನಾಥ ದೀಕ್ಷಿತರ ಮತ್ತು ನಂದಿಮಠದ ನಂಜುಂಡಾರಾಧ್ಯರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ನೆರವೇರಿತು. ಅನಂತರ ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವೂ ಸಹ ವಿಧ್ಯುಕ್ತಪ್ರಕಾರ ನೆರವೇರಿಸಲ್ಪಟ್ಟಿತು. ಆ ಮೇಲೆ ಮಹಾಗಣಾರಾಧನೆಯು ನೆರವೇರಿ ದಕ್ಷಿಣಾದಿಗಳು ಕೊಡಲ್ಪಟ್ಟವು. ಈ ಮಹಾಕಾರ್ಯಕ್ಕೆ ಅನೇಕ ಕಡೆಗಳಿಂದ ಭಕ್ತಮಾಹೇಶ್ವರರು ಬಹಳವಾಗಿ ಆಗಮಿಸಿದ್ದರು.

ತಾ|| 31-3-29 ನೇ ಭಾನುವಾರ ಮಠದ ಸಮೀಪದಲ್ಲಿರುವ ಗ್ರಾಮಗಳ ಭಕ್ತಾದಿಗಳಿಗೆ ಅನ್ನಸಂತರ್ಪಣವು ಸರಿಯಾಗಿ ನಡೆಯಿತು. ಅನಂತರ ವೇ|| ಶಿವಕಥಾಭೂಷಣ ಹುಣಸಗಟ್ಟದ ಮಠದ ನಂಜುಂಡಾರಾಧ್ಯರವರು ದೈವಭಕ್ತಿ ಗುರುಭಕ್ತಿಗಳನ್ನಿಟ್ಟುಕೊಂಡು ಆಚಾರನಿಷ್ಠರಾಗಿ ತಮ್ಮ ಕೀರ್ತನಮೂಲಕ ಮಹಾಜನಗಳ ಸಭೆಯಲ್ಲಿ ಭಕ್ತಿಜ್ಞಾನ ವೈರಾಗ್ಯವುಂಟಾಗುವಂತೆಯೂ ದೇಶಸುಧಾರಣಾ ವಿಚಾರವಾಗಿಯೂ ಪ್ರಾಣಿದಯಾ ವಿಚಾರವಾಗಿಯೂ ಗುರುಭಕ್ತಿ ರಾಜಭಕ್ತಿಗಳುಂಟಾಗುವಂತೆ ಸಪ್ರಮಾಣವಾಗಿ ಬೋಧಿಸಿ ಸರ್ವರನ್ನು ಸಂತೋಷಪಡಿಸಿದರು. ಇವರು ಹೇಳತಕ್ಕ ನವೀನಪದ್ಧತಿಗೂ ಶೀಲಸ್ವಭಾವಗಳಿಗೂ ಸಂತೋಷಪಟ್ಟು ಮಹಾಜನರೆಲ್ಲರೂ ಇಂಥ ಮಹನೀಯರು ನಮ್ಮ ದೇಶದಲ್ಲಿ ಅಲ್ಲಲ್ಲಿ ಸಂಚರಿಸಿ ಕೀರ್ತನಮೂಲಕ ಬೋಧ ಮಾಡುತ್ತ ಬಂದರೆ ಸುಧಾರಣೆಯಾಗುವದೆಂದು ನುಡಿದರು. ಅನಂತರ ಅನೇಕರ ಭಾಷಣಗಳಾದುವು. ಈ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ 6 ರೂಪಾಯಿಗಳನ್ನು ಶ್ರೀ ಗುರು ನಾಗಾರ್ಜುನ ಮಹಾಸ್ವಾಮಿಗಳವರು ವೇ|| ತರೀಕೆರೆ ಹಿರೇಮಠದ ಕಲ್ಲಿನಾಥ ದೀಕ್ಷಿತರ ಕಡೆಗೆ ಕೊಟ್ಟರು. ಅನಂತರ ಸಭಿಕರಿಗೆ ಫಲತಾಂಬೂಲ ವಿನಿಯೋಗವಾಯಿತು. ಹಿರಿಯೂರು ಮಠದ ಚನ್ನಬಸವಾರಾಧ್ಯರು ಈ ಮಹಾಕಾರ್ಯವನ್ನು ತಮ್ಮ ಗ್ರಾಮದ ಮಠಸ್ಥರು ಶೆಟ್ಟರು ಗೌಡರು ಮುಂತಾದವರನ್ನು ಸೇರಿಸಿಕೊಂಡು ದಕ್ಷತೆಯಿಂದ ಸಾಂಗಗೊಳಿಸಿ ಗುರುಕೃಪೆಗೆ ಪಾತ್ರರಾದರು. ಇವರಿಗೆ ಜಗದಾಚಾರ್ಯರು ಸಕಲಸನ್ಮಂಗಲಗಳನ್ನೀಯಲಿ.

ಪ್ರತ್ಯಕ್ಷದರ್ಶಿ.

ಶ್ರೀ ರಂಭಾಪುರೀ ಜಗದ್ಗುರು ಪೀಠಕ್ಕೆ ಭೂದಾನ.

ಕಳೆದ ಡಿಸೆಂಬರು ತಿಂಗಳಲ್ಲಿ ಚಿಕ್ಕಮಗಳೂರು ತಾಲ್ಲೂಕು ವಸುಧಾರೆ ಹೋಬಳಿ ಕೋಟೆಪುರು ಪಟೇಲರು ಕೈ|| ಮ|| ಬಸವೇಗೌಡರ ಎರಡನೆಯ ಮಕ್ಕಳು ಮ|| ಸಂಭೇಗೌಡರವರು ತಮ್ಮ ಸ್ವಾರ್ಜಿತವಾದ ಇದೇ ಹೋಬಳಿ ಹೆಡಬಾಳು ಗ್ರಾಮದಲ್ಲಿರುವ ಸರ್ವೆ ನಂಬರು ೪೪ ನೇ ತರಿಭೂಮಿ ಆರು ಎಕರೆ ಮುವತ್ತುಮೂರು ಗುಂಟೆಯನ್ನು ಶ್ರೀ ರಂಭಾಪುರೀ ಜಗದ್ಗುರು ಪೀಠಕ್ಕೆ ಕಾಣಿಕೆ ಸಹಿತ ದಾನವಾಗಿ ಸಮರ್ಪಿಸಿ, ತತ್ಸಂಬಂಧವಾದ ದಾನಪತ್ರವನ್ನು ಬರೆಯಿಸಿ ರಿಜಿಸ್ಟರುಮಾಡಿಸಿಕೊಟ್ಟುದಲ್ಲದೆ ಶ್ರೀ ಮಹಾಸಂಸ್ಥಾನದ ಸರ್ವಾಧಿಕಾರಿಗಳನ್ನು ಬರಮಾಡಿಕೊಂಡು ಈ ಭೂಮಿಯ ವರ್ಗವನ್ನೂ ಸಹ ಮಹಾಸಂ|| ದ ಹೆಸರಿಗೆ ಬದಲಾಯಿಸಿಕೊಟ್ಟು ದಾನಭೂಮಿಯನ್ನು ಪೀಠದ ಪರವಾಗಿ ಸರ್ವಾಧಿಕಾರಿಗಳವರಿಗೆ ಸ್ವಾಧೀನಕೊಟ್ಟಿರುತ್ತಾರೆ. ಇವರ ಈ ದಾನವು ಶ್ಲಾಘ್ಯವಾದುದಾಗಿಯೂ, ಸತ್ಪಾತ್ರವನ್ನರಿತ ಇತರ ಗುರುಭಕ್ತರಿಗೆ ಮಾರ್ಗದರ್ಶಕವಾಗಿಯೂ ಇರುತ್ತದೆಂದು ಹೇಳಿದರೆ ಅತಿಶಯೋಕ್ತಿಯಾಗದು. ದಯಾಮಯರಾದ ಶ್ರೀ ರೇಣುಕಭಗವತ್ಪಾದರು ದಾತೃವಿನ ಆಪ್ತಬಂಧುವರ್ಗಕ್ಕೂ ದಿವಂಗತರಾದ ಪಿತೃಸಮುದಾಯಕ್ಕೂ ಸುಖವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ನೋಡಿದವ.

ಶಿವಾದ್ವೈತಸಿದ್ಧಾಂತ ಪ್ರಚಾರಕಸಂಘ.

ಬನ್ನಟ್ಟಿ.

ನಮ್ಮಾ ಗ್ರಾಮದಲ್ಲಿ ಶಿ|| ವೀರಸಂಗಯ್ಯನವರು ಧರ್ಮತತ್ಪರರಾಗಿ ತಮ್ಮ ತನು, ಮನ, ಧನಗಳನ್ನು ಸೂರೆಮಾಡುತ್ತಿರುವರು ಹೋಳಿಹುಣ್ಣಿಮೆಯ ದಿವಸ ತಮ್ಮ ಮಠಕ್ಕೆ ಯಾವತ್ತು ಶಿವಭಕ್ತರನ್ನು ಬರಮಾಡಿಕೊಂಡು ಶಿವಸ್ಮೃತಿಯಿಂದ ಕಾಮದಹನ ವಿಷಯವನ್ನು ಬೋಧಿಸಿದರು. ನಮ್ಮಲ್ಲಿರತಕ್ಕ ದುರಾಚಾರವೆಂಬ ಕಾಮನನ್ನು ದಹಿಸಿ ಶಿವಾಚಾರವೆಂಬ ಸತ್ಯಮಾರ್ಗವನ್ನು ನೆಲೆಗೊಳಿಸಬೇಕೆಂದು ಹೇಳಿ ಸಂತೋಷಪಡಿಸಿದರು. ಈ ಹುಣ್ಣಿಮೆಯಲ್ಲಿ ಓಕಳಿ, ರಾಡಿ, ಕಠೋರವಾಣಿ ಇವೆಲ್ಲವುಗಳನ್ನು ಬಿಡುವಂತೆ ತತ್ವೋಪದೇಶವನ್ನು ಮಾಡಿದರು. ಈ ರೀತಿ ಬೋಧಿಸಿ ಉತ್ತಮ ಮಾರ್ಗವನ್ನು ತೋರಿಸಿಕೊಟ್ಟದ್ದು ನಮ್ಮ ಪುಣ್ಯವೇ ಸರಿ! ಆ ಮೇಲೆ ಠರಾವುಗಳು ಪಾಸಾದವು.

ವೀರಶೈವರಲ್ಲಿ ಪ್ರತಿಯೊಬ್ಬರು ಶಿವದೀಕ್ಷೆಯನ್ನು ಹೊಂದಬೇಕು.

ಪ್ರತಿಯೊಂದು ಗ್ರಾಮದ ಮಠಾಧಿಕಾರಿಗಳು ದುರಾಚಾರ, ದುಷ್ಟಧರ್ಮವನ್ನು ದೂರೀಕರಿಸಿ ಸದ್ಧರ್ಮವನ್ನು ಆಚರಿಸಬೇಕು.

ಧರ್ಮಸುಧಾರಣೆ ಮಾಡತಕ್ಕಂಥವರ ಸಂಖ್ಯೆಯನ್ನು ಹೆಚ್ಚಿಸಬೇಕು.

ಪಟ್ಟಚರಾಧಿಕಾರಿಗಳು ತಮ್ಮ ಕರ್ತವ್ಯವನ್ನು ಬಹುದಕ್ಷತೆಯಿಂದ ಮಾಡಬೇಕು.

ನಮ್ಮ ಧರ್ಮಗುರುಗಳನ್ನು ಧಿಕ್ಕರಿಸಿ ಪರಧರ್ಮದಲ್ಲಿ ಉಪದೇಶಪಡೆದ ಜನರನ್ನು ಬಹಿಷ್ಕಾರದಲ್ಲಿಡಬೇಕು.

ವೀರಶೈವಸಮಾಜಸೇವಕಮಂಡಲಿ.

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ

ಶ್ರೀ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ.

ಉಪ್ಪಿನ ಬೆಟಗೇರಿ.

ನಿಜಾಮು ಇಲಾಖಾ ಕೊಪ್ಪಳ ತಾಲೂಕು ಉಪ್ಪಿನ ಬೆಟಗೇರಿ ಗ್ರಾಮಕ್ಕೆ ತಾ|| 17-3-29 ನೆಯ ದಿವಸ ರಾತ್ರಿ 7 ಗಂಟೆಗೆ ಮಹಾ ಸವಾರಿಯು ದಯಮಾಡಿಸಿತು. ಗ್ರಾಮಪ್ರಮುಖರಾದ ಶ್ರೀಮಂತ ಜಾಗಟಗೇರಿ ವೇ|| ಬಸವಲಿಂಗಪ್ಪಯ್ಯನವರು, ಶ್ರೀಮಂತ ಬಳ್ಳೊಳ್ಳಿ ಮಡಿವಾಳಪ್ಪನವರು, ವೇ|| ಬಸವಲಿಂಗಯ್ಯನವರು ಹಿರೇಮಠ, ವೇ|| ಕರಿಬಸವಯ್ಯನವರು ಹಿರೇಮಠ ಬೇಲೇರಿ, ವೇ|| ಕೊಟ್ರಯ್ಯನವರು ಸಾಲಿಮಠ, ವೇ|| ಹಡಗಲಿ ಹಿರೇಮಠದ ಕೊಟ್ರಯ್ಯನವರು, ಮ|| ರಾ|| ನಾರಾಯಣಗೌಡ್ರು ಮಾಲೀಪಾಟೀಲ, ಮ|| ರಾ|| ವೆಂಕನಗೌಡ್ರು ಪೋಲೀಸ ಪಾಟೀಲ ಮೊದಲಾದ ಸ್ಥಲ ಪರಸ್ಥಲದ ಸಮಸ್ತ ದೈವದವರು ವಾದ್ಯವೈಭವಗಳಿಂದ ಶ್ರೀಗಳವರ ಪಾದದರ್ಶನಾಶೀರ್ವಾದ ಫಲವನ್ನು ಪಡೆದು ಸಕಲ ಬಿರುದಾವಳಿಗಳೊಡನೆ ಮಹೋತ್ಸವವನ್ನು ನೆರವೇರಿಸಿದರು. ಆ ಸಮಯದಲ್ಲಿ 2 ಸಾವಿರಕ್ಕಿಂತ ಹೆಚ್ಚು ಜನರು ಮಿಳಿತರಾಗಿದ್ದರು. ಸ್ತ್ರೀ ಪುರುಷರಾದಿಯಾಗಿ ಸರ್ವರೂ ತಮಗುಂಟಾದ ಅಪೂರ್ವ ದರ್ಶನಲಾಭದಿಂದ ನಾವೇ ಧನ್ಯರೆಂದು ಸಂತೋಷಪಡುತ್ತಿದ್ದರು. ಶ್ರೀ ಜಗದಾಚಾರ್ಯರು ಸಿಂಹಪೀಠದ ಮೇಲೆ ಮಂಡಿಸಲು ಸರ್ವರೂ ಜಯಘೋಷದೊಡನೆ ದೀರ್ಘದಂಡಪ್ರಣಾಮಗಳನ್ನು ಮಾಡಿ ಕುಳಿತರು. ಶ್ರೀಗಳವರು ಸರ್ವರ ಭಕ್ತ್ಯುತ್ಸುಕತೆಯನ್ನು ಕಂಡು ಹರ್ಷಿತರಾಗಿ ತಮ್ಮ ಅಮೃತಮಯವಾದ ವಾಣಿಯಿಂದ "ಮನುಷ್ಯ ಜನ್ಮದ ಸಾರ್ಥಕ್ಯ ಮತ್ತು ಪಂಚಾಚಾರ್ಯರ ಕರ್ತವ್ಯ" ಎಂಬ ವಿಷಯಗಳನ್ನು ಅಪ್ಪಣೆಕೊಟ್ಟು ಸರ್ವರನ್ನು ಸಂತುಷ್ಟರನ್ನಾಗಿಮಾಡಿದರು. ಅಪ್ಪರೊಳಗೆ ರಾತ್ರಿ 10 ಗಂಟೆಯಾಗಲು ಮಂಗಲವಂಮಾಡಿ ಪಂಚಾಚಾರ್ಯರ ಜಯಘೋಷದೊಡನೆ ಸರ್ವರೂ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ವಾಚಕರೇ? ಯಜಮಾನ ಬಳ್ಳೊಳ್ಳಿ ಮಡಿವಾಳಪ್ಪನವರ ಭಕ್ತಿಯನ್ನೂ ಗ್ರಾಮದಲ್ಲಿ ಐಕ್ಯಮತ್ಯವುಂಟಾಗದಂತೆ ನಡೆದುಕೊಂಡುಹೋಗುವ ಈ ಯಜಮಾನರ ಚಾತುರ್ಯವನ್ನೂ ಸಮಸ್ತ ಭಕ್ತಮಾಹೇಶ್ವರರ ಭಕ್ತಿಯನ್ನೂ ಮತ್ತು ಸರ್ವರೂ ಪರಸ್ಪರವಾಗಿ ಒಕ್ಕಟ್ಟಿನಿಂದ ನಡೆಯುವ ಗುಣವನ್ನೂ ನೋಡಿ ಮಹದಾಚಾರ್ಯರು ಪರಮಾನಂದಭರಿತರಾದರು. ಸರ್ವ ಗ್ರಾಮದವರು ಈ ಗ್ರಾಮದ ರೀತಿಯನ್ನು ಹಿಡಿದಲ್ಲಿ ಸಮಾಜವು ಅತ್ಯುನ್ನತ ಸ್ಥಿತಿಗೆ ಬೇಗನೆ ಬರಬಹುದೆಂದು ನಿಸ್ಸಂದೇಹವಾಗಿ ಹೇಳಬಹುದು. ಪ್ರತಿಯೊಂದು ಗ್ರಾಮದವರು ಧರ್ಮಪೀಠಕ್ಕೆ ಕಾಣಿಕೆಯನ್ನು ಸಮರ್ಪಿಸಿ ಧನ್ಯರಾಗಬೇಕೆಂದು ಪ್ರಾರ್ಥಿಸುವ.

ಓರ್ವ ಉತ್ಸವಭಾಗಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ

ಬಾಣಾವರ.

ಹಾಸನ ಡಿ|| ಅರಸೀಕೆರೆ ತಾ|| ಬಾಣಾವರದ ಹಿರೇಮಠದಲ್ಲಿ ಭಜನಾಸಂಘವು ಅತಿವೈಭವದಿಂದ ಸ್ಥಾಪಿಸಲ್ಪಟ್ಟಿತು. ಈ ಸಂಘಕ್ಕೆ ಕೆಳಗೆ ಕಾಣಿಸಿದ ಜನರು ಆರಿಸಲ್ಪಟ್ಟರು.

ಪ್ರೆಸಿಡೆಂಟ್ ವೇ|| ಬಸವಾರಾಧ್ಯ ಕೊಂಡಜ್ಜಿ ಬೃಹನ್ಮಠ. ವೈಸ್‌ಪ್ರೆಸಿಡೆಂಟ್ ಮಾಡ್ನಹಳ್ಳಿ ಮಠದ ಬಿ. ಕರಿಬಸವಶಾಸ್ತ್ರಿಗಳು ಸಿದ್ಧಾಂತಿ. ಟ್ರೆಜರರ್ ವೇ|| ಜಿ|| ವೀರಭದ್ರಸ್ವಾಮಿ ಬಿ.ಎ. ಗುರುಪಾದದೇವರು ಹಿರೇಮಠ. ಸೆಕ್ರೆಟರಿ ಎನ್. ಮಾದಯ್ಯಸೆಟ್ಟರು. ಮತ್ತು ವೇ|| ಗಂಗಾಧರಪ್ಪಯ್ಯನವರು ಕೊಂಡಜ್ಜಿ ಮಠ ಮೆಂಬರುಗಳು.

ಮ|| ರಾ|| ಎ. ಬಿ. ಪೇಟೆ ಯಜಮಾನ್ ನಂಜುಂಡಸೆಟ್ಟರು, ಬಿ. ಮಾದಯ್ಯಸೆಟ್ಟರು, ಅಂಗಡಿಬೀದಿ ಮಾದಯ್ಯಸೆಟ್ಟರು, ಸ್ವಾಟೆ ಸೆಟ್ಟರು ಚನ್ನವೀರಪ್ಪನವರು, ವಿರುಪಾಕ್ಷಪ್ಪ ಸಜ್ಜನಸೆಟ್ಟರು, ವಿರೂಪಾಕ್ಷಪ್ಪ ವಿಭೂತಿ, ಎಸ್. ಪುಟ್ಟಪ್ಪಸೆಟ್ಟಿ ಬೆಂಗಳೂರು, ಜಿ. ನಂಜುಂಡಪ್ಪ ಕಟ್ಟೇಮನೆ, ಬಿ. ಯಂ. ಮಲ್ಲಯ್ಯ, ಜಿ. ಗಂಗಯ್ಯಶೆಟ್ಟಿ, ಎ. ಎಸ್. ನಂಜುಂಡಸೆಟ್ಟಿ, ಜಿ. ನಂಜಪ್ಪ, ಬಿ. ಗಂಗಸೆಟ್ಟಿ, ಜಿ. ರಾಮೇಗೌಡ, ಜಿ. ಗುರುಬಸವೇಗೌಡ, ಬಿ. ಕೊಟ್ರಪ್ಪ ಬೆಳ್ಳಿರೆ, ಸಿದ್ಧಪ್ಪಲಿಂಗಸೆಟ್ಟರ ಬಿ. ಯಂ. ರುದ್ರಸೆಟ್ಟಿ, ಬಿ. ಎಂ. ಚನ್ನಪ್ಪಸೆಟ್ಟಿ, ಬಿ. ವೇ|| ನಂಜಯ್ಯನವರು ಮಾದನಹಳ್ಳಿಮಠ ಮರುಳಪ್ಪ ಬಿನ್ ನಾಗಣ್ಣ ಕರಣಂ, ಮಲ್ಲಪ್ಪ ಸ್ವಾಟೆ, ರುದ್ರಪ್ಪ ಜೋಯಿಸರು, ಕೊತ್ತಲಯ್ಯ ಜೋಯಿಸರು.

ಶ್ರೀ ಜಗದ್ಗುರು ಪಂಚಾಚಾರ್ಯರ ಬೆಳ್ಳಿಯ ವಿಗ್ರಹಗಳನ್ನು ತರಿಸಿ ಭಜನಾಸಂಘದ ಮಂದಿರದಲ್ಲಿ ಸ್ಥಾಪಿಸಬೇಕೆಂದು ನಿಶ್ಚಯಿಸಲ್ಪಟ್ಟಿತು.

ಜಗದ್ಗುರು ಪರ್ವತಸಂಸ್ಥಾನದ ಕಾರ್ಬಾರಿಯವರು ವೇ|| ಶಿವಾನಂದಯೋಗಿಯವರು, ಏಜಂಟರು, ಆರ್. ಸಿ. ಆರಾಧ್ಯಸ್ವಾಮಿ ಹಿರೇಮಠ ಇವರು ಈ ಸಂಘದ ಮಹತ್ವವನ್ನು ಕುರಿತು ಉಪನ್ಯಾಸಮಾಡಿ ಪ್ರತಿಮಾಸದಲೂ ಸರ್ವರು ಭಜನಾಸಂಘಕ್ಕೆ ಸೇರಿ ಗುರುಭಕ್ತಿನಿಷ್ಠರಾಗಬೇಕೆಂತಲೂ ವಿದ್ವಜ್ಜನರಿಂದ ಧರ್ಮಸಂಬಂಧಿ ಉಪನ್ಯಾಸಗಳನ್ನು ಕೊಡಿಸಬೇಕೆಂತಲೂ ಸೂಚಿಸಿದ್ದಕ್ಕೆ ಸರ್ವರೂ ಅಂಗೀಕರಿಸಿದರು. ಆಮೇಲೆ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಕೆ. ಯಂ. ಬಸವಾರಾಧ್ಯ ಪ್ರೆ||

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯವರ ರಥೋತ್ಸವ.

ತುಮಕೂರು ಡಿ|| ಕುಣಿಗಲ್ ತಾಲೂಕು ಎಡೆಯೂರುಕ್ಷೇತ್ರದಲ್ಲಿ ನೆಲೆಗೊಂಡಿರುವ ಶ್ರೀಮದಷ್ಟಾದಿಕೋಟಿದ ಸಿದ್ಧಲಿಂಗೇಶ್ವರಮಹಾಸ್ವಾಮಿಯವರ ರಥೋತ್ಸವವು ಪದ್ಧತಿಯಂತೆ ಚೈತ್ರಶುದ್ಧ ೧ (ಯುಗಾದಿಹಬ್ಬ) ಲಾಗಾಯ್ತು ಶುದ್ಧ ೧೫ ಪೌರ್ಣಿಮಾವರೆಗೆ ನಡೆಯುವ ಧ್ವಜಾರೋಹಣ, ವೃಷಭವಾಹನ, ಪುಷ್ಪರಥ, ಚಂದ್ರಮಂಡಲೋತ್ಸವ, ತಾ|| ೧೬-೪-೨೯ ನೇ ಮಂಗಳವಾರ ಮಧ್ಯಾಹ್ನ ೧೧ ಘಂಟೆಗೆ ಶ್ರೀಮಹಾರಥಾರೋಹಣ, ರುದ್ರಾಕ್ಷಿಮಂಟಪೋತ್ಸವ, ಶೇಷವಾಹನ, ಚೌಕಟ್ಟಿನ ಪಲ್ಲಕ್ಕಿ ಉತ್ಸವ, ನವಿಲುವಾಹನ, ಹುಲಿವಾಹನ, ಆನೆವಾಹನ, ತೆಪ್ಪೋತ್ಸವ, ಶತಪಥ, ವಿಹಾರೋತ್ಸವ ಮುಂತಾದ ಉತ್ಸವಗಳು ಸರ್ಕಾರಿಯಿಂದಲೂ ಭಕ್ತಾದಿಗಳಿಂದಲೂ ನಡೆಯಿಸಲ್ಪಡುವುದರಿಂದ ಸಮಸ್ತ ಆಸ್ತಿಕಮಹಾಶಯರೆಲ್ಲರೂ ದಯಮಾಡಿ ಶ್ರೀ ಗುರುದೇವತಾಸೇವೆಯಿಂದ ಧನ್ಯರಾಗಬೇಕಾಗಿ ಪ್ರಾರ್ಥಿಸುವ,

N. B. ದನಮೂಲಿನಂತೆ ದನಗಳ ಜಾತ್ರೆಯೂ ಸೇರುತ್ತದೆ. ನೀರು ನೆಳಲುಗಳಿಗೆ ಸೌಕರ್ಯವಿರುತ್ತೆ. ಕೊಳ್ಳುವವರಿಗೂ ಮಾರುವವರಿಗೂ ತುಂಬಾ ಅನುಕೂಲ.

ತಮ್ಮಗಳ ವಿಧೇಯ

ತಾ|| 1-4-29 ಕೆ. ಎಸ್. ರುದ್ರಪ್ಪ ಧರ್ಮದರ್ಶಿ,
ಯಡೆಯೂರು. (ಕಮಿಷನರ್)

ಓಂನಮಃ ಶ್ರೀ ಜಗದ್ಗುರುಸಿದ್ಧಲಿಂಗಾಯ.

ಶ್ರೀಜಗದ್ಗುರು ಸಿದ್ಧಲಿಂಗಪಂಚಕಂ.

ನಂದಿಗೋತ್ರನಾಯಕಂ ನರೇಂದ್ರಸೌಖ್ಯದಾಯಕಂ |
ವೃಷ್ಟಿಸೂತ್ರಬೋಧಕಂ ಜನೇಷ್ಟಪೂರ್ತಿಕಾರಕಂ ||
ಯೋಗಿಪುಂಗವಾಲಕಂ ಸುಯೋಗತತ್ವಧಾರಕಂ |
ಸಿದ್ಧಲಿಂಗನಾಮಕಂ ಜಗದ್ಗುರುಂ ಭಜೇ ಸದಾ ||೧||
ಸಿದ್ಧಸಂಘಪೋಷಕಂ ಸುಸಿದ್ಧಿಸಂಘಭಾಸಕಂ |
ಬೌದ್ಧತತ್ವಭಂಜಕಂ ವಿಶುದ್ಧತತ್ವರಂಜಕಂ ||
ಸಿದ್ಧನಾಥಪೂಜಕಂ ಪ್ರಬುದ್ಧಲೋಕಪಾಲಕಂ |
ಸಿದ್ಧಲಿಂಗನಾಮಕಂ ಜಗದ್ಗುರುಂ ಭಜೇ ಸದಾ ||೨||
ಅಕ್ಷಮಾಲಿಕಾಂಕಿತಂ ಜಟಾಕ್ಷಮೌಳಿಧಾರಿಣಂ |
ಅಕ್ಷಯಾದ್ವಗಾಮಿನಂ ವಿಪಕ್ಷಮಾನಹಾರಿಣಂ ||
ಮೋಕ್ಷಮಾರ್ಗದರ್ಶಿನಂ ಮಹೋಕ್ಷವಾಹರೂಪಿಣಂ |
ಸಿದ್ಧಲಿಂಗನಾಮಕಂ ಜಗದ್ಗುರುಂ ಭಜೇ ಸದಾ ||೩||
ಪಾಪಲೋಪಕಾರಿಣಂ ತಪಃಪ್ರಭಾಪ್ರಕಾಶಿನಂ |
ರೂಪಲೋಪಹಾರಿಣಂ ಕೃಪಾಪಯೋಲಸೋಪಿನಂ ||
ತಾಪಯುಕ್ತಭಾಷಣಂ ಶಿವಾಪಶಿಪ್ರಮೋದಿನಂ |
ಸಿದ್ಧಲಿಂಗನಾಮಕಂ ಜಗದ್ಗುರುಂ ಭಜೇ ಸದಾ ||೪||
ಭಕ್ತಭಕ್ತಿನಂದಿತಂ ವಿರಕ್ತವೃಂದವಂದಿತಂ |
ಮುಕ್ತಿತತ್ವಪೂರಿತಂ ಸಶಕ್ತಿತತ್ವಶೋಭಿತಂ ||
ಮುಕ್ತಸಂಘಮಂಡಿತಂ ವಿರಕ್ತಿಭಾಗ್ಯಭೂಷಿತಂ |
ಸಿದ್ಧಲಿಂಗನಾಮಕಂ ಜಗದ್ಗುರುಂ ಭಜೇ ಸದಾ ||೫||

ಬೃಹನ್ಮಠಾಧ್ಯಕ್ಷ ಹೋಟಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಅಖಿಲ ವೀರಶೈವಮಹಾಜನರಲ್ಲಿ ವಿಜ್ಞಾಪನೆ.

ಪರಮ ಪವಿತ್ರವಾದ ನಮ್ಮಾ ವೀರಶೈವಮತವನ್ನು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸೋಮೇಶ್ವರಾದಿಪಂಚಲಿಂಗಗಳಿಂದ ಭೂಲೋಕದಲ್ಲವತರಿಸಿ ದೇವದಾನವ ಮಾನವಾದಿಗಳಿಗೆಲ್ಲ ವೀರಶೈವದೀಕ್ಷೆಯನ್ನಿತ್ತು ಪಂಚಾಕ್ಷರೀಮಂತ್ರೋಪದೇಶವನ್ನು ಮಾಡಿದ ಸಂಗತಿಯು ಶಾಸ್ತ್ರಸಮ್ಮತವೂ ಲೋಕಪ್ರಸಿದ್ಧವೂ ಆಗಿದೆಯಷ್ಟೆ? ಇಂಥ ಜಗದ್ವಂದ್ಯರ ಜಯಂತಿಯ ದಿವಸವನ್ನು ಸರಕಾರದವರು ರಜಾದಿವಸವನ್ನಾಗಿ ಮಾಡಿ ಕೋರ್ಟು ಕಚೇರಿ ಶಾಲಾ ಕಾಲೇಜು ಹೈಸ್ಕೂಲುಗಳಿಗೆ ಸೂಟಿಕೊಟ್ಟಾದರೆ ನಮ್ಮ ಆಚಾರ್ಯವರ್ಯರ ಜಯಂತಿಯ ಶುಭದಿವಸದ ಸ್ಮಾರಕವು ಚಿರಕಾಲದವರೆಗೆ ಉಳಿಯುವದು. ಆದುದರಿಂದ ಸದ್ಯಃ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿದಿನವಾದ ಫಾಲ್ಗುಣ ಶು|| ೧೩ ದಿವಸವನ್ನು ಗವರ್ನಮೆಂಟನವರು ರಜಾದಿವಸವನ್ನಾಗಿ ಮಂಜೂರು ಮಾಡಲು ವೀರಶೈವಮಹಾಸಭೆಯವರು, ಪ್ರಾಂತಿಕಸಭೆಯವರು, ಗ್ರಾಮಸಭೆಯವರು ಆಯಾ ಸರಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂತಲೂ ಈ ಬಗ್ಗೆ ನಮ್ಮ ಸಮಾಜದ ರಾಜಕೀಯ ಧುರೀಣರುಗಳು ಮನಃಪೂರ್ವಕ ಪ್ರಯತ್ನಿಸಿ ಜಗದಾಚಾರ್ಯರ ಜಯಂತಿಯ ಬಗ್ಗೆ ಒಂದು ದಿವಸವನ್ನಾದರೂ ಗವರ್ನಮೆಂಟಿನಿಂದ ರಜಾಮಂಜೂರುಮಾಡಿಸಿ ಜಗದಾಚಾರ್ಯರ ಕೃಪೆಗೂ ಲೋಕೋತ್ತರವಾದ ಕೀರ್ತಿಗೂ ಪಾತ್ರರಾಗಿ ಸಮಾಜದ ಗೌರವವನ್ನು ಸ್ಥಿರಗೊಳಿಸಬೇಕೆಂದು ಅಖಿಲವೀರಶೈವಮಹಾಜನಗಳಲ್ಲಿ ವಿಜ್ಞಾಪನೆ.

ಗುರುಭಕ್ತ ಶೇಸಂ ಹಮ್ಮಿಗಿ.

ಶ್ರೀ ಗುರುಭ್ಯೋನಮಃ

ಖಾದಿಪ್ರಸಾರಕಸಂಘ ಚಿತ್ರವಾಡಿಗಿ.

ಈ ಸಂಘವು ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕಿನ್ನಕಿ ಚಿತ್ರವಾಡಿಗಿ ಗ್ರಾಮದಲ್ಲಿ ಶಕೆ ೧೮೫೦ ನೇ ವಿಭವನಾಮ ಸಂ|| ರದ ಫಾಲ್ಗುಣ ಬ|| ೩ ಗುರುವಾರ ಸ್ಥಾಪಿಸಲ್ಪಟ್ಟಿತು. ರಾಷ್ಟ್ರೋನ್ನತಿಯ ಬಗ್ಗೆ ಮಹಾತ್ಮಾ ಗಾಂಧಿಯವರ ಆಜ್ಞೆಯನ್ನು ಅಕ್ಷರಶಃ ಪಾಲಿಸುವದು ಪ್ರತಿಯೊಬ್ಬ ಭಾರತೀಯನ ಪ್ರಥಮ ಕರ್ತವ್ಯವಾಗಿದೆ. ಸರ್ವರೂ ಖಾದಿಬಟ್ಟೆಯನ್ನು ಉಪಯೋಗಿಸಬೇಕೆಂಬುವದು ಮಹಾತ್ಮರ ಮೊದಲನೆಯ ಆಜ್ಞೆಯಾಗಿರುವದು. ತದನುಸಾರವಾಗಿ ವರ್ತಿಸುವದು ಹಾಗೂ ದೇಶಮಧ್ಯದಲ್ಲಿ ತಯಾರಿಸಿರತಕ್ಕ ಪ್ರಸಿದ್ಧ ಖಾದಿವಸ್ತ್ರಾಲಯಗಳಿಂದ ಬಟ್ಟೆಗಳನ್ನು ತರಿಸಿ ಅಸಲುಧಾರಣೆಗೆ ಮಾರಾಟಮಾಡುವದು ಈ ಸಂಘದ ಉದ್ದೇಶವಾಗಿದೆ. ಸದ್ಯಃ ಅಲ್ಪಪ್ರಮಾಣದಿಂದ ಖಾದಿಯನ್ನು ತರಿಸಿ ಜನರಲ್ಲಿ ಅಭಿರುಚಿಯನ್ನೂ, ಅಭಿಮಾನವನ್ನೂ ಹುಟ್ಟಿಸಿ ಕ್ರಮೇಣ ಸಂಘವನ್ನು ಅಭಿವೃದ್ಧಿಗೆ ತರಲು ಪ್ರಯತ್ನಿಸುವಂತೆ ನಿರ್ಧರಿಸಿರುತ್ತದೆ.

ವ್ಯಾಪಾರಿಜನರಲ್ಲಿ ಶುದ್ಧಖಾದಿಯು ದೊರೆಯುವದಿಲ್ಲ. ಅಲ್ಲದೆ ಅವರು ಹೆಚ್ಚು ಹೆಚ್ಚು ಲಾಭವನ್ನು ಸೇರಿಸಿ ಮಾರುತ್ತಿರುವರು. ಆದುದರಿಂದ ಅವರಲ್ಲಿ ತೆಗೆದುಕೊಳ್ಳುವದು ಸಂಬಂಧವಿಲ್ಲವೆಂದು ತಿಳಿದು ಸುಲಭಕ್ರಯಕ್ಕೆ ಶುದ್ಧಖಾದಿಯು ದೊರೆಯಬೇಕೆಂಬ ಸದುದ್ದೇಶದಿಂದ ಈ ಸಂಘವು ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಸೇರಬೆಚ್ಚೆಯುಳ್ಳ ದೇಶಾಭಿಮಾನಿಗಳು ವ್ಯಾಪಾರದ ಲಾಭ ಬಡ್ಡಿಯ ಆಶೆ ಇಲ್ಲದಂತೆ ಹತ್ತತ್ತು ರೂಪಾಯಿಗಳಿಗೊಂದು ಷೇರಿನಂತೆ ತಮ್ಮ ತಮ್ಮ ಇಷ್ಟಾನುಸಾರ ಷೇರುಗಳನ್ನು ಹಾಕಿ ಸಂಘಕ್ಕೆ ಉದಾರಾಶ್ರಯವನ್ನು ಕೊಡತಕ್ಕದ್ದು. ಈ ರೀತಿಯಾಗಿ ಕೂಡಿದ ಹಣದಿಂದ ಮೇಲೆ ತೋರಿಸಿದ ನಿಯಮಾನುಸಾರವಾಗಿ ಮೂರು ವರುಷಪರಿಯಂತ ಖಾದಿಪ್ರಚಾರಕಾರ್ಯವನ್ನು ಸಾಗಿಸಿ ತದನಂತರ ಸಂಘದ ಉನ್ನತಿ ಹಾಗೂ ಆವಶ್ಯಕ ಪರಿಸ್ಥಿತಿಯನ್ನು ಕಂಡುಕೊಂಡು ಷೇರುದಾರರ ಹಣವನ್ನು ಮರಳಕೊಡುವುದು. ಅಥವಾ ಕ್ರಮೇಣ ಇದೇರೀತಿಯಾಗಿ ಸಾಗಿಸುವದು. ಇತ್ಯಾದಿ ವಿಷಯಗಳ ಬಗ್ಗೆ ಕಮಿಟಿಯಲ್ಲಿ ಚರ್ಚಿಸಿ ನಿರ್ಧರಿಸಲ್ಪಡುವದು. ಷೇರುದಾ[illegible]ರು ಸಂಘದ ಮೆಂಬರರು ಷೇರುದಾರರ ಹಣವನ್ನೇ ಮೂಲಧನವನ್ನಾಗಿಟ್ಟುಕೊಂಡು ಕಾಲಕಾಲಕ್ಕೆ ಖಾದಿಯನ್ನು ತರಿಸುವದು ಮತ್ತು ಮಾರುವದು ಸಂಘದ ಲೆಖ್ಖಪತ್ರಗಳನ್ನು ಕಾಯುವದು ಸೆಕ್ರೆಟರಿಯವರ ಕೆಲಸವಾಗಿರುವುದರಿಂದ ಈ ಯಾವತ್ತು ಭಾರವನ್ನು ನಿರ್ವಹಿಸಿಕೊಂಡು ಹೋಗಲು ಮ|| ರಾ|| ಚನ್ನಪ್ಪ ಬೆಲ್ಲದ ಇವರು ಲಾಭದ ಆಶೆಯಿಲ್ಲದೆ ಪರಿಭವದಿಂದ ಒಪ್ಪಿರುತ್ತಾರೆ.

ಷೇರುದಾರರು (ಕಮಿಟಿಯವರು)

ಷೇರು	ಮೊತ್ತ	ಹೆಸರು
೨	೨೦	ಸೋಮಪ್ಪ ಶೆಟ್ರು (ಪ್ರೆಸಿಡೆಂಟ್)
೨	೨೦	ಚನ್ನಪ್ಪ ಬೆಲ್ಲದ (ಸೆಕ್ರೆಟರಿ)
		ಮೆಂಬರರು
೨	೨೦	ಬಂಡೆನವಸಿಂಗಪ್ಪ
೧	೧೦	ಮಠದ ಕೋಟಯ್ಯನವರು
೧	೧೦	ಹೊಸಳ್ಳಿಮಠದ ಸಿದ್ಧಯ್ಯನವರು
೧	೧೦	ಗುರುಭಕ್ತ ಕೇಸರಿ ಶಾಂತಪ್ಪ
		ಕುಬುಸದ ಹಮ್ಮಿಗಿ
೧	೧೦	ಬೋಂಬಾಡೆ ಪರಸಪ್ಪ
೧	೧೦	ಪಾಟೀಲ ಗುರುಬಸಗೌಡರು
೧	೧೦	ಅಖಿಲಾಂಡ ಮೊದಲಿಯಾರು
೧	೧೦	ಕಮ್ಮಾರಗೌಡೇಸಾಹೇಬ
೧	೧೦	ಬಂಡಿಹೊಸೂರ ಸಾಹೇಬ
೧	೧೦	ಅರೀರಕ್ಕಸ್ಸೋಬರಾವ

ಈ ಪ್ರಕಾರ ಕಮಿಟಿಯು ನಿಯಾಮಕವಾಗಿ ಷೇರುದಾರರ ಹಣವು (೧೫೦ ರೂಪಾಯಿ) ಕೂಡಿಸಿ ಇದೇ ದಿವಸವೇ ಕೊಯಮತ್ತೂರ ಜಿಲ್ಲಾ ತಿರುಪುರ ಪ್ರಸಿದ್ಧಖಾದಿವಸ್ತ್ರಾಲಯಕ್ಕೆ ಖಾದಿಯನ್ನು ತರಿಸಲು ಆರ್ಡರ ಕೊಡೋಣವಾಯಿತು. ಇದೇ ಮೇರೆಗೆ ಪ್ರತಿಯೊಂದು ಗ್ರಾಮದವರು ಖಾದಿಪ್ರಸಾರಕಾರ್ಯವನ್ನು ಕೈಕೊಂಡು ದೇಶೋನ್ನತಿಯ ಮಾರ್ಗದಲ್ಲಿ ನಿರತರಾಗಿ ಮಹಾತ್ಮರ ಪ್ರಯತ್ನವನ್ನು ಸಾರ್ಥಕಗೊಳಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದು ಸಂಘದವರ ಸವಿನಯಸೂಚನೆ.

ಖಾದಿಪ್ರಸಾರಕ ಸಂಘ
ಚಿತ್ರವಾಡಿಗಿ.

ಪಂಚಾಚಾರ್ಯ ಪ್ರಭಾ

೧೯೨೯ನೇ ಏಪ್ರಿಲ್ ತಾ|| ೮ನೇ ಸೋಮವಾರ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಗೆ ರಜಾ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯ ಪುಣ್ಯದಿನವಾದ ಫಾಲ್ಗುಣ ಶುದ್ಧ ೧೩ ದಿವಸ ಬೆಂಗಳೂರು ಪಟ್ಟಣದಲ್ಲಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರು, ಕೆ.ಟಿ., ಸಿ.ಐ.ಇ., ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ವೀರಶೈವಮತಸ್ಥಾಪಕರಾದ ಶ್ರೀ ರೇಣುಕಾಚಾರ್ಯರ ಜಯಂತಿದಿನವೆನಿಸಿಕೊಂಡ ಫಾಲ್ಗುಣ ಶು|| ೧೩ ದಿನವನ್ನು ರಜಾದಿವಸವನ್ನಾಗಿ ಮಾಡುವದಕ್ಕೋಸ್ಕರ ಸರಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಗಿರುವದೆಂಬ ವಿಷಯವು ಕಳೆದವಾರದ ಸವಿಸ್ತಾರ ಪತ್ರಿಕೆಯಿಂದ ಸಕಲರಿಗೂ ತಿಳಿದದ್ದೇ ಆಗಿದೆ. ಈ ವಿಷಯದಲ್ಲಿ ಮೈಸೂರು ದೇಶನಿವಾಸಿಗಳಾದ ಸಕಲ ವೀರಶೈವರು ಅತ್ಯಂತ ಶ್ರದ್ಧೆಯನ್ನು ವಹಿಸಿ ಕಾರ್ಯವನ್ನು ಮಾಡಬೇಕಾಗಿದೆ. ಮೈಸೂರು ರಾಜ್ಯದಲ್ಲಿರತಕ್ಕ ಪ್ರತಿಯೊಂದು ಗ್ರಾಮದ ವೀರಶೈವರು ತಮ್ಮಲ್ಲಿ ಸಭೆಗೂಡಿಸಿ ಸ್ಮಾರ್ತ, ವೈಷ್ಣವ, ಶ್ರೀವೈಷ್ಣವ, ಮುಸಲ್ಮಾನ, ಕ್ರೈಸ್ತ ಮೊದಲಾದ ಮತಾವಲಂಬಿಗಳಿಗೆ ದಯಾಳುಗಳಾದ ಶ್ರೀಮನ್ಮಹಾರಾಜರವರ ಸರಕಾರದವರು ಆಯಾಯ ಮತಸ್ಥಾಪನ ಮಾಡಿದ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ಮಹಮ್ಮದ್ ಪೈಗಂಬರ್, ಏಸುಕ್ರಿಸ್ತ ಮೊದಲಾದ ಮಹನೀಯರ ಜಯಂತಿಗಳಿಗೆ ರಜಾ ಮುಂಜೂರುಮಾಡಿ ಆಯಾಯ ಮತೀಯರನ್ನು ಸಂತೋಷಪಡಿಸಿರುವಂತೆ ನಮ್ಮ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿದಿನವಾದ ಫಾ|| ಶು|| ೧೩ ದಿನವನ್ನು ರಜಾದಿವಸವನ್ನಾಗಿ ಅಂಗೀಕರಿಸಿ ಸಕಲ ವೀರಶೈವರನ್ನು ಸಂತೋಷಗೊಳಿಸಬೇಕೆಂಬ ವಿಷಯವನ್ನು ಪಾಸ್‌ಮಾಡಿ ಸಾಕ್ಷಾದ್ಧರ್ಮಾವತಾರಿಗಳಾದ ಶ್ರೀಮನ್ಮಹಾರಾಜರವರ ಸನ್ನಿಧಿಗೂ ಮತ್ತು ಮೆ|| ದಿವಾನ್‌ಸಾಹೇಬರವರ ಸನ್ನಿಧಿಗೂ ಬರೆದುಕೊಂಡು ಪ್ರಾರ್ಥಿಸಿಕೊಳ್ಳಬೇಕಾಗಿದೆ. ಈ ವಿಷಯವನ್ನು ಪ್ರತಿಯೊಬ್ಬ ವೀರಶೈವರೂ ಮನಸ್ಸಿಗೆ ತಂದುಕೊಂಡು ಆದಷ್ಟು ಬೇಗನೆ ಮಹಾಪ್ರಭುಗಳವರ ಮತ್ತು ದಿವಾನ್‌ಸಾಹೇಬರವರ ಸನ್ನಿಧಿಗೆ ಪ್ರಾರ್ಥನಾರೂಪಗಳಾದ ಅರ್ಜಿಗಳನ್ನು ಕಳುಹಿಸುವ ಪ್ರಯತ್ನವನ್ನು ಕೈಕೊಳ್ಳಬೇಕೆಂದು ಕೋರುತ್ತೇವೆ. ಅಲ್ಲದೆ ಮೈಸೂರು ಪ್ರಜಾಪ್ರತಿನಿಧಿಸಭೆಯ ಹಾಗೂ ನ್ಯಾಯವಿಧಾಯಕಸಭೆಯ ಸದಸ್ಯಮಹಾಶಯರೆಲ್ಲರೂ ಈ ವಿಷಯವನ್ನು ಸರಕಾರದ ಗಮನಕ್ಕೆ ತಂದು ಏಕಾಭಿಪ್ರಾಯದಿಂದ ವೀರಶೈವಮತಸ್ಥಾಪನಾಚಾರ್ಯರ ಈ ಪುಣ್ಯದಿನವನ್ನು ರಜಾದಿನವನ್ನಾಗಿ ಮಾಡುವಂತೆ ಪ್ರಯತ್ನಮಾಡಿ ಅಶೇಷ ವೀರಶೈವರ ಕೃತಜ್ಞತೆಗೆ ಪಾತ್ರರಾಗಬೇಕೆಂದು ಆಶಿಸುತ್ತೇವೆ. ಕಳೆದ ನವರಾತ್ರಿ ಮಹೋತ್ಸವ ಸಮಯದಲ್ಲಿ ನೆರವೇರಿದ ಪ್ರಜಾಪ್ರತಿನಿಧಿಸಭೆಯಲ್ಲಿ ಈ ಆಚಾರ್ಯರ ಜಯಂತಿದಿನವನ್ನು ರಜಾದಿನವನ್ನಾಗಿ ಅಂಗೀಕರಿಸುವ ವಿಷಯದಲ್ಲಿ ಕೆಲವು ಜನ ಸದಸ್ಯರು ತಮ್ಮ ಅಭಿಪ್ರಾಯವನ್ನು ಗೌರ್ನ್ಮೆಂಟಿನವರಿಗೆ ತಿಳುಹಿಸಿದ್ದುದರಮೇಲೆ ಸರಕಾರದವರು ಈ ವಿಷಯವನ್ನು ಸಭೆಯಲ್ಲಿ ವಿಮರ್ಶಿಸುವದಕ್ಕೋಸ್ಕರ ಅರಿಕೆಗಳ ಪಟ್ಟಿಯಲ್ಲಿ ಸೇರಿಸಿ ಮುದ್ರಿಸಿದ ವಿಷಯವು ಸರ್ವರಿಗೂ ವೇದ್ಯವೇ ಆದೆ. ದಯಾಳುಗಳಾದ ಸರಕಾರದವರು ಈ ವಿಷಯವನ್ನು ವಿಮರ್ಶಿಸುವದಕ್ಕಾಗಿ ಅವಕಾಶವನ್ನು ಕೊಟ್ಟಿರುವದನ್ನು ನೋಡಿ ಸರ್ವರೂ ಸಂತೋಷಪಡಬೇಕಾಗಿದೆ. ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ವಿಷಯಬಾಹುಳ್ಯದಿಂದ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಅವಕಾಶವು ದೊರೆಯದೆ ಅಷ್ಟಕ್ಕೆ ನಿಂತುಹೋಯಿತು. ಆದುದರಿಂದ ಜ್ಯೇಷ್ಠ ಶುಕ್ಲಪಕ್ಷದಲ್ಲಿ ಪ್ರಾಪ್ತನಾಗುವ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ ಸಮಯದಲ್ಲಿ ಪ್ರಜಾಪ್ರತಿನಿಧಿಸಭೆಗೆ ಸೇರುವ ಸದಸ್ಯಮಹಾಶಯರು ಈ ವಿಷಯವನ್ನು ಚರ್ಚಿಸಿ ಮುಂಜೂರುಮಾಡಿಸಬೇಕೆಂದು ಕೋರುತ್ತೇವೆ. ಬೊಂಬಾಯಿ ನ್ಯಾಯವಿಧಾಯಕಸಭೆಯಲ್ಲಿ ಸದರಿ ಸಭೆಯ ಡೆಪ್ಯುಟಿಪ್ರೆಸಿಡೆಂಟರಾದ ರಾವ್ ಬಹದ್ದೂರ್ ಕಂಬಳಿಯವರು ಈ ವಿಷಯವನ್ನು ಚರ್ಚಿಸಿ ಆಚಾರ್ಯರ ಜಯಂತಿದಿನವನ್ನು ರಜಾದಿನವನ್ನಾಗಿ ಮಂಜೂರುಮಾಡಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ. ವೀರಶೈವಮತಕ್ಕೆ ಐದುಜನ ಆಚಾರ್ಯರಿದ್ದು ಅವರೆಲ್ಲರ ಜಯಂತಿದಿನಗಳನ್ನು ರಜಾದಿನಗಳನ್ನಾಗಿ ಮಾಡುವಂತೆ ಪ್ರಾರ್ಥಿಸಿಕೊಳ್ಳದೆ ಕೇವಲ ರೇಣುಕಾಚಾರ್ಯರೊಬ್ಬರ ಜಯಂತಿದಿನವನ್ನು ಮಾತ್ರ ರಜಾದಿನವನ್ನಾಗಿ ಮಾಡಬೇಕೆಂದು ಏಕೆ ಕೇಳುತ್ತಿರಬಹುದೆಂದು ಕೆಲವರಿಗೆ ಸಂಶಯವು ಪ್ರಾಪ್ತವಾಗಬಹುದು; ಆದರೆ ಉಳಿದ ಆಚಾರ್ಯರ ಜಯಂತಿದಿನಗಳು ಸರಕಾರದವರಿಂದ ರಜಾದಿವಸಗಳಾಗಿಯೇ ಪರಿಗಣಿಸಲ್ಪಟ್ಟಿವೆ. ಹೇಗೆಂದರೆ ಮಹಾಶಿವರಾತ್ರಿಯದಿವಸ ಶ್ರೀ ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿಗಳು ಪ್ರಾಪ್ತವಾಗುವವಷ್ಟೆ! ಮಹಾಶಿವರಾತ್ರಿಯದಿವಸವು ರಜಾದಿವಸವೇ ಆಗಿದೆ. ವೈಶಾಖ ಶುದ್ಧ ೩ ದಿವಸ ಶ್ರೀಮದೇಕೋರಾಮಾರಾಧ್ಯರ ಜಯಂತಿಯು ಪ್ರಾಪ್ತವಾಗುವದಷ್ಟೆ! ಈ ದಿನವು ಅಕ್ಷಯತೃತೀಯಾ ಎಂದು ರಜಾದಿವಸವಾಗಿ ಪರಿಗಣಿಸಲ್ಪಟ್ಟಿದೆ. ಶ್ರೀ ದಾರುಕಾಚಾರ್ಯರ ಜಯಂತಿದಿನವಾದ ವೈಶಾಖ ಶು|| ೫ ದಿವಸ ಶ್ರೀ ಶಂಕರಾಚಾರ್ಯರ ಜಯಂತಿಯು ಪ್ರಾಪ್ತವಾಗುವದರಿಂದ ಆ ದಿವಸವೂ ಕೂಡ ರಜಾದಿವಸವಾಗಿ ಪರಿಗಣಿಸಲ್ಪಟ್ಟಿದೆ. ಆದುದರಿಂದ ಉಳಿದೊಬ್ಬ ಆಚಾರ್ಯರ ಜಯಂತಿದಿನವನ್ನೇ ರಜಾದಿನವನ್ನಾಗಿ ಅಂಗೀಕರಿಸುವಂತೆ ಸರಕಾರದವರನ್ನು ಪ್ರಾರ್ಥಿಸಬೇಕಾಗಿರುವದರಿಂದ ಸಕಲ ವೀರಶೈವರು ಈ ವಿಷಯದಲ್ಲಿ ನಾನಾರೀತಿಯಿಂದ ಪ್ರಯತ್ನಪಟ್ಟು ಈ ಕಾರ್ಯವನ್ನು ನೆರವೇರಿಸಿ ಗುರುಕೃಪೆಗೆ ಪಾತ್ರರಾಗಬೇಕೆಂದು ಆಶಿಸುತ್ತೇವೆ.

ನೈಜಾಮರವರ ಆಗಮನ

ಹೈದರಾಬಾದ್ ಸಂಸ್ಥಾನದ ನೈಜಾಂ ಸಾಹೇಬರವರು ಸುಮಾರು 500 ಜನಗಳನ್ನೊಳಗೊಂಡ ಪರಿವಾರದೊಡನೆ ಕಳೆದ ಗುರುವಾರ ಪ್ರಾತಃಕಾಲ 8-30 ಘಂಟೆಗೆ ರಾಜಧಾನಿಯ ರೈಲ್ವೆ ಸ್ಟೇಷನ್ನಿಗೆ ಬಂದಿಳಿದರು. ಶ್ರೀಮನ್ಮಹಾರಾಜರವರು ರಾಜಬಂಧುಗಳ ಮತ್ತು ಸಚಿವರ ಸಮೇತ ನೈಜಾಮರವರನ್ನು ಇದಿರ್ಗೊಂಡು ಕುಶಲಪ್ರಶ್ನಾನಂತರ ನೈಜಾಮರವರಿಗೆ ರಾಜಕುಮಾರ ದೇಶರಾಜ ಅರಸ್ ಮೊದಲಾದ ಬಂಧುವರ್ಗದವರ ಮತ್ತು ಅಧಿಕಾರಿಗಳ ಪರಿಚಯವನ್ನು ಮಾಡಿಸಿದರು. ನೈಜಾಂ ಸಾಹೇಬರವರು ಅರಮನೆ ಸಿಪಾಯಿಗಳು ಸಮರ್ಪಿಸಿದ ಸೈನಿಕ ಮರ್ಯಾದೆಯನ್ನಂಗೀಕರಿಸಿ ಶ್ರೀಮನ್ಮಹಾರಾಜರವರಿಗೆ ತಮ್ಮ ಮಂತ್ರಿಶ್ರೇಷ್ಠರಾದ ಮಹಾರಾಜಾ ಸರ್. ಕೃಷ್ಣಪ್ರಸಾದ ಸಿಂಗ್‌ರವರ ಮತ್ತು ತಮ್ಮ ನಾಲ್ವರು ಪುತ್ರರ ಪರಿಚಯವನ್ನು ಮಾಡಿಸಿದರು. ಅನಂತರ ನಾಲ್ಕು ಕುದುರೆಗಳನ್ನು ಹೂಡಿದ್ದ ಒಂದು ರಥದಲ್ಲಿ ಶ್ರೀಮನ್ಮಹಾರಾಜರವರು, ನೈಜಾಂಸಾಹೇಬರವರು, ದಿವಾನ್ ಮಿರ್ಜಾಸಾಹೇಬರವರು ಮತ್ತು ನೈಜಾಂಸಾಹೇಬರವರ ಅಂಗರಕ್ಷಕರೊಬ್ಬರು; ಎರಡನೆಯ ರಥದಲ್ಲಿ ನೈಜಾಂಸಾಹೇಬರವರ ಇಬ್ಬರು ಮಕ್ಕಳು, ಮಹಾರಾಜಾ ಸರ್ ಕೃಷ್ಣಪ್ರಸಾದ್‌ಸಿಂಗ್ ಮತ್ತು ಸರ್ದಾರ್ ಗೋಪಾಲರಾಜಅರಸರವರು; ಮೂರನೆಯ ರಥದಲ್ಲಿ ನೈಜಾಂಸಾಹೇಬರವರ ಇನ್ನಿಬ್ಬರು ಮಕ್ಕಳು, ನೈಜಾಂಸಾಹೇಬರವರ ಭಾವಂದಿರು ಮತ್ತು ಸರ್ದಾರ್ ಎಂ. ಗೋಪಾಲಕೃಷ್ಣೇಅರಸರವರು ಕುಳಿತುಕೊಂಡು ಸಕಲ ರಾಜಮರ್ಯಾದೆಯೊಡನೆ ಉತ್ಸವಪೂರ್ವಕವಾಗಿ ರೈಲ್ವೆ ಸ್ಟೇಷನ್ ರೋಡ್, ಸಯ್ಯಾಜಿರಾವ್ ರೋಡುಗಳ ಮಾರ್ಗವಾಗಿ ಹೊರಟರು. ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ಅಸಂಖ್ಯ ಪ್ರಜೆಗಳು ನಿಂತುಕೊಂಡು ಉತ್ಸವವನ್ನು ನೋಡಿ ಸಂತೋಷಪಟ್ಟರು. ಉತ್ಸವವು ಕರ್ಜನ್ ಪಾರ್ಕಿನ ಚಪ್ಪರವನ್ನು ತಲುಪಿದಕೂಡಲೆ ಮ್ಯುನಿಸಿಪಲ್ ಕೌನ್ಸಿಲರುಗಳು ಮತ್ತು ಪೌರವೃದ್ಧರು ಪ್ರಭುದ್ವಯರಿಗೆ ಪುಷ್ಪಹಾರಗುಚ್ಛಗಳನ್ನರ್ಪಿಸಿದರು. ಅನಂತರ ಉತ್ಸವವು ಹಾರ್ಡಿಂಜ್ ಸರ್ಕಲ್ ಮಾರ್ಗವಾಗಿ ಗೌರ್ನಮೆಂಟ್ ಹೌಸನ್ನು ತಲ್ಪಿತು. ಕೂಡಲೆ ಮರ್ಯಾದಾರ್ಥವಾಗಿ 21 ಗುಂಡುಗಳು ಹಾರಿಸಲ್ಪಟ್ಟವು. ನೈಜಾಂಸಾಹೇಬರವರು ಕಳೆದ ಶುಕ್ರವಾರ ರಾತ್ರಿ ಅರಮನೆಗೆ ದಯಮಾಡಿಸಿ, ಅರಮನೆ ಸಿಪಾಯಿಗಳು ಪ್ರದರ್ಶಿಸಿದ ದೀವಟಿಗೆ ಕವಾಯಿತನ್ನು ಪರಾಮರ್ಶಿಸಿದರು. ನೆನ್ನೆಯದಿನ ರಾತ್ರಿ ಸ್ಪೆಷಲ್‌ರೈಲಿನಿಂದ ಬೆಂಗಳೂರಿಗೆ ಪ್ರಯಾಣಮಾಡಿದರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಮಿನರ್ವಾಮಿಲ್ಲಿನ ಕೆಲಸಗಾರರನ್ನು ಅಧಿಕಾರಿಗಳು ರಜಾದಿವಸಗಳಲ್ಲಿಯೂ ಕೆಲಸ ಮಾಡುವಂತೆ ಬಲಾತ್ಕರಿಸಿದುದರಿಂದ ಕೆಲಸಗಾರರು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವರು.

ಮೈಸೂರು ಸರಕಾರದ ಲಾ ಸೆಕ್ರೆಟರಿಗಳಾದ ಮ|| ರಾ|| ಪಿ. ಮಹಾದೇವಯ್ಯನವರು ಡಾ|| ಉಸ್ಮಾನರಿಗೆ ಬದಲಾಗಿ ಮೈಸೂರುವಿಶ್ವವಿದ್ಯಾನಿಲಯದ ಫೆಲೋ ಆಗಿ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ಸರಕಾರಿ ಗಂಧದೆಣ್ಣೆ ಕಾರ್ಖಾನೆಯ ಡೈರೆಕ್ಟರಾದ ಮ|| ರಾ|| ವೈ. ನರಸಿಂಗರಾಯರು ಗಂಧದೆಣ್ಣೆಯ ವ್ಯಾಪಾರದ ಲೆಖ್ಖಾಚಾರದಲ್ಲಿ ಆಲಸ್ಯರಾಗಿದ್ದುದರಿಂದ ಸರ್ಕಾರಕ್ಕೆ ನಷ್ಟಸಂಭವಿಸಿದಕಾರಣ ಸರ್ಕಾರದವರು ಅವರನ್ನು ಡಿಗ್ರೇಡ್‌ಮಾಡಿದರೆಂದೂ ಅದರಮೇಲೆ ರಾಯರು ರಾಜೀನಾಮೆಯನ್ನು ಕೊಟ್ಟಿರುವರೆಂದೂ ತಿಳಿಯಬರುತ್ತದೆ.

ಚನ್ನಪಟ್ಟಣದ ಹಿಂದೂ ಮುಸಲ್ಮಾನರಲ್ಲಿ ಇನ್ನೂ ಸಮಾಧಾನವು ನೆಲೆಗೊಂಡಿಲ್ಲ. ಟವುನ್ ಮತ್ತು ಸುತ್ತಮುತ್ತಲಹಳ್ಳಿಗಳಲ್ಲಿ ಗೊಂದಲಗಳು ನಡೆಯುತ್ತಲೇ ಇವೆ. ಶಾಂತಿಸ್ಥಾಪನೆಗೋಸ್ಕರ ಚನ್ನಪಟ್ಟಣದಲ್ಲಿ ಎರಡೆರಡು ಮನೆಗೆ ಒಬ್ಬೊಬ್ಬ ಪೋಲೀಸರು ನಿಯಮಿಸಲ್ಪಟ್ಟಿರುವರು. ಈ ಗಲಭೆಯು ಕೋಲಾರ್‌ಪೇಟೆಗೂ ವ್ಯಾಪಿಸಿ ಅಲ್ಲಿಯೂ ಸಹ ಹಿಂದೂ ಮುಸಲ್ಮಾನರಲ್ಲಿ ಕಲಹವಾದಂತೆ ತಿಳಿದುಬರುತ್ತದೆ.

ರಾಜಧಾನಿಯ ಮುನಿಸಿಪಾಲಿಟಿಯಲ್ಲಿ ಈಗ್ಗೆ 23 ವರ್ಷಗಳಿಂದ ಒಳ್ಳೆ ದಕ್ಷತೆಯಿಂದ ಕೆಲಸವನ್ನು ಮಾಡುತ್ತ 30 ರಿಂದ 150 ರ ವರೆಗೆ ಸಂಬಳವನ್ನು ಸಂಪಾದಿಸಿ ಸರಕಾರದ ಮತ್ತು ಪ್ರಜೆಗಳ ಪ್ರೀತಿಗೆ ಪಾತ್ರರಾಗಿದ್ದ ಮ|| ರಾ|| ಸಿ. ಬಸವಲಿಂಗಶೆಟ್ಟರವರು ಸದ್ಯಃ ಶಿವಮೊಗ್ಗಾ ಮುನಿಸಿಪಾಲಟಿಯ ಚೀಫ್ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆಂದು ಕೇಳಿ ಸಂತೋಷಿಸುತ್ತೇವೆ. ಇದು ಇವರ ಕಾರ್ಯಕರ್ತೃತ್ವಶಕ್ತಿಯ ಫಲವಾಗಿದೆ.

ಚೀಫ್ ಸೆಕ್ರೆಟರಿಗಳಾದ ಮ|| ರಾ|| ಎನ್. ಮಾಧವರಾಯರು ಗಂಧದೆಣ್ಣೆಯ ಲೆಖ್ಖದ ಶೋಧನಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡುವದರಿಂದ ಜನರಲ್ ಸೆಕ್ರೆಟರಿಗಳಾದ ಮ|| ಆರ್. ರಂಗರಾಯರು ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿಗಳಾಗಿಯೂ, ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಬಿ. ನಾರಾಯಣಸ್ವಾಮಯ್ಯಂಗಾರ್ಯರು ಜನರಲ್ ಸೆಕ್ರೆಟರಿಗಳಾಗಿಯೂ ರೆವಿನ್ಯೂಕಮಿಷನರ ಅ|| ಸೆಕ್ರೆಟರಿಗಳಾದ ಮ|| ಎಂ. ಚನ್ನರಾಜಅರಸರವರು ಮೈಸೂರುಸಿಟಿ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಪಟ್ಟಣದ ಮಹಾಜನರು ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಆಗಮಿಸಿದ್ದ ನೈಜಾಂಸಾಹೇಬರವರ ಸನ್ಮಾನಾರ್ಥವಾಗಿ ಕಳೆದ ಸೋಮವಾರ ಸಾಯಂಕಾಲ ಬೆಂಗಳೂರು ಲಾಲಬಾಗ್ ಉದ್ಯಾನವನ್ನು ತಳಿರುತೋರಣಪತಾಕಾದಿಗಳಿಂದಲೂ ವಿದ್ಯುದ್ದೀಪಾವಳಿಗಳಿಂದಲೂ ಶೃಂಗರಿಸಿ ನೈಜಾಂಸಾಹೇಬರವರನ್ನು ಅಲ್ಲಿಗೆ ಬರಮಾಡಿಕೊಂಡು ಅವರನ್ನು ಸಂಗೀತ ಫಲಾಹಾರಾದಿಗಳಿಂದ ಸತ್ಕರಿಸಿದರು. ಈ ಸನ್ಮಾನಸಮಾರಂಭಕ್ಕೆ ಸಾವಿರಾರು ಜನ ಐರೋಪ್ಯ ಮತ್ತು ದೇಶೀಯ ದೊಡ್ಡ ಮನುಷ್ಯರುಗಳೂ, ದಿವಾನಸಾಹೇಬರು, ಕೌನ್ಸಿಲರುಗಳು ಮೊದಲಾದ ಸರಕಾರಿ ಅಧಿಕಾರಿಗಳೂ ಸೇರಿದ್ದರು. ನೈಜಾಂ ಸಾಹೇಬರವರು ತಮ್ಮ ಪುತ್ರೀ ಪುತ್ರಾದಿಗಳೊಡನೆ ದಯಮಾಡಿಸಿದ್ದರು. ಫಲಾಹಾರವು ಮುಗಿದನಂತರ ಬೆಂಗಳೂರು ಮಿಸ್ ನಾಗರತ್ನಂರವರ ಸಂಗೀತವೂ ಅಮೇಚೂರ್ ನಾಟಕ ಕಂಪನಿಯವರ "ಕಬೀರ್" ಎಂಬ ಹಿಂದೀ ನಾಟಕದ ಕೆಲವು ದೃಶ್ಯಗಳೂ ನಡೆದವು. ಅನಂತರ ಮದ್ದಿನಕಮಾನಿಯು ನಡೆಯಿಸಲ್ಪಟ್ಟು ಸಮಾರಂಭವು ಮುಕ್ತಾಯವಾಯಿತು.

ವರ್ತಮಾನಸಂಗ್ರಹ.

ಅಖಿಲಭಾರತ ಹಿಂದೂಮಹಾಸಭೆಯ 12 ನೆಯ ಅಧಿವೇಶನವು ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ಸುರತಪಟ್ಟಣದಲ್ಲಿ ಪ್ರಾರಂಭವಾಯಿತು.

ಬೊಂಬಾಯಿಪಟ್ಟಣದ ಇರಕ್ಷಾಮೆಹತಾ ಎಂಬ ಯುವಕನು 85 ವರ್ಷ ವಯಸ್ಸಿನ ತನ್ನ ವೃದ್ಧಮಾತೆಯನ್ನು ಕೊಂದುದಕ್ಕೋಸ್ಕರ ಬೊಂಬಾಯಿ ಹೈಕೋರ್ಟ ಜಡ್ಜರು ಅವನಿಗೆ ಮರಣಶಿಕ್ಷೆಯನ್ನು ವಿಧಿಸಿದರು.

ಚೈನಾದೇಶದ ಪೂರ್ವಪ್ರಾಂತದ ಗೌರ್ನರರು ರಾಷ್ಟ್ರೀಯ ಸರಕಾರಕ್ಕೆ ವಿರುದ್ಧವಾಗಿ ದಂಗೆಯನ್ನೆಬ್ಬಿಸಿರುವದರಿಂದ ಉಭಯಪಂಗಡಗಳ ಸೈನ್ಯಗಳಿಗೂ ಯುದ್ಧವು ನಡೆಯುತ್ತಿರುವದು. ಇದುವರೆಗೆ ನಡೆದ ಕದನಗಳಲ್ಲಿ ರಾಷ್ಟ್ರೀಯ ಸರಕಾರದ ಸೈನಿಕರೇ ಜಯವನ್ನು ಪಡೆದಿರುವರು.

ಶ್ರೀಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಕೇದಾರನಾಥ ದೇವಾಲಯದ ದ್ವಾರವನ್ನು ತೆರೆಯುವ ಸಮಾರಂಭಕ್ಕೋಸ್ಕರ ಮಾನ್ವಿ ತಾಲೂಕು ಕೌತಾಳ ಗ್ರಾಮದಿಂದ ಹಿಮಾಲಯಕ್ಕೆ ದಯಮಾಡಿದರು.

ದಕ್ಷಿಣಆಫ್ರಿಕಾದೇಶದ ಟ್ರಾನ್ಸ್‌ವಾಲಿನ ಜಾಕ್ ನ್ಯಾಪ್ಟೆ ಎಂಬ ಒಬ್ಬ ಆಂಗ್ಲ ರೈತನು ತನ್ನಲ್ಲಿ ಕೆಲಸಮಾಡುತ್ತಿದ್ದ ಒಬ್ಬ ದೇಶೀಯ ಕೂಲಿಯವನನ್ನು ಮೈಮುರಿಯುವಂತೆ ಹೊಡೆದು ಅಷ್ಟಕ್ಕೂ ತೃಪ್ತನಾಗದೆ ಆತನನ್ನು ತಲೆಕೆಳಗಾಗಿ ಒಂದು ಮರಕ್ಕೆ ನೇತುಹಾಕಿ ಚಿತ್ರಹಿಂಸೆಯನ್ನು ಮಾಡಿಕೊಂಡುಬಿಟ್ಟನು. ಜಾಕ್‌ನ್ಯಾಪ್ಟೆಯು ವಿಚಾರಣೆಗೆ ಗುರಿಪಡಿಸಲ್ಪಟ್ಟು ಐದುವರ್ಷಗಳ ಕಠಿಣಶಿಕ್ಷೆಗೆ ಗುರಿಯಾದನು.

ಆಕ್ಸಫರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಎಫ್. ಎಂ. ಅಂಡರ್ಸನ್ ಎಂಬವರು ಬಬೂನ್ ಎಂಬ ಜಾತಿಯ ಎರಡು ಕಪಿಗಳನ್ನು ಸಾಕಿರುವರು. ಇವುಗಳು ಮನೆಯ ಕಸವನ್ನು ಗುಡಿಸುವದು, ಸಾಮಾನುಗಳನ್ನು ಎತ್ತಿಡುವದು, ಪಂಪುಗಳ ಸಹಾಯದಿಂದ ನೀರನ್ನೆತ್ತುವದು, ಪೋಸ್ಟಾಫೀಸಿಗೆ ಹೋಗಿ ಅಂಚೆಯನ್ನು ತರುವುದು ಮೊದಲಾದ ಕೆಲಸಗಳನ್ನು ಚಟುವಟಿಕೆಯಿಂದ ಮಾಡುತ್ತವೆ. ಈ ಕಪಿಗಳಿಗೆ ಬಾಲವಿಲ್ಲ. ಮನುಷ್ಯರಂತೆ ಎರಡೇ ಕಾಲುಗಳಿಂದ ಓಡಾಡುತ್ತವೆ.

ಕಳೆದ ಮಂಗಳವಾರ ಭಾರತ ನ್ಯಾಯವಿಧಾಯಕ ಸಭೆಯಲ್ಲಿ ಪಬ್ಲಿಕ್ ಸೇಫ್ಟಿ ಬಿಲ್ಲು ಚರ್ಚೆಗೆ ಬಂದಾಗ ಸಭೆಯ ಅಧ್ಯಕ್ಷರಾದ ಮಿ|| ವಿ. ಜೆ. ಪಟೇಲರವರು ಮೀರತ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ರಾಜದ್ರೋಹದ ಆರೋಪದಮೇಲೆ ಕೈದುಮಾಡಿರುವ 31 ಜನರ ವಿಚಾರಣೆಯು ಪೂರೈಸುವವರೆಗೂ ಬಿಲ್ಲನ್ನು ಮುಂದಕ್ಕೆ ಹಾಕಬೇಕೆಂದೂ, ಇಲ್ಲವಾದರೆ ವಿಚಾರಣೆಯನ್ನು ಸರಕಾರದವರು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಸೂಚಿಸಿದರು. ಹೋಂ ಮೆಂಬರರಾದ ಮಿ|| ಕ್ರರರ್‌ರವರು ಈ ವಿಚಾರವನ್ನು ಸರ್ಕಾರದ ಮುಂದಿಟ್ಟು ಅನಂತರ ತಿಳುಹಿಸುವದಾಗಿ ಉತ್ತರಕೊಟ್ಟರು.

ರಂಗೂನ್ ಪಟ್ಟಣದ ಡಾಲಿಯಮ್ ರಹಿಮಾನ್ ಎಂಬ ಹದಿನಾರುವರ್ಷ ವಯಸ್ಸಿನ ಹುಡುಗನು ಪರಚಿತ್ತುಗಳನ್ನು ಮಾರುತ್ತಿರುವಾಗ ಸುಮಾರು ನಾಲ್ಕು ವರ್ಷ ವಯಸ್ಸಿನ ಡಾಪ್ನೆ ಎಂಬ ಕ್ರಿಶ್ಚಿಯನ್ ಹೆಣ್ಣುಮಗುವು ಇವನಿಂದ ಪರಚಿತ್ತನ್ನು ತೆಗೆದುಕೊಂಡು ರಸ್ತೆಯನ್ನು ದಾಟುತ್ತಿದ್ದಾಗ ಒಂದು ಮೋಟಾರ್ ಲಾರಿಯು ಥಟ್ಟನೆ ಬಂದುಬಿಟ್ಟಿತು. ಇದನ್ನು ನೋಡಿ ರಹಿಮಾನನು ಆ ಹುಡುಗಿಯನ್ನು ಬದುಕಿಸಲು ರಸ್ತೆಗೆ ಹಾರಿಬಂದು ಆ ಹುಡುಗಿಯನ್ನು ಮುಂದಕ್ಕೆ ನೂಕಿ ಪ್ರಾಣಾಪಾಯದಿಂದ ತಪ್ಪಿಸಿದನು. ಆದರೆ ಲಾರಿಯು ಈ ಹುಡುಗನಮೇಲೆ ಹರಿದು ಕೊಂದುಬಿಟ್ಟಿತು. ರಂಗೂನ್ ಪೋಲೀಸರು ಮೃತನ ತಂದೆತಾಯಿಗಳಿಗೆ 150 ರೂಪಾಯಿಗಳನ್ನು ಕೊಟ್ಟರು.

ಕಲ್ಕತ್ತಾಪಟ್ಟಣದ ಷೇರ್‌ಖಾನ್ ಎಂಬ ಒಬ್ಬ ಅಡಿಗೆಯವನು ಆಹಾರಕ್ಕೋಸ್ಕರ ಒಂದು ಕಾಗೆಯನ್ನು ಹಿಡಿದು ಅದರ ಕೊಕ್ಕನ್ನು ಮುರಿದು ಅದರ ಕಾಲಿಗೆ ಹಗ್ಗವನ್ನು ಕಟ್ಟಿ ತೂಗುಹಾಕಿ ಚಿತ್ರಹಿಂಸೆಯನ್ನು ಮಾಡುತ್ತಿರುವದನ್ನು ನೋಡಿ ಮಿಸೆಸ್. ಮೂರ್ ಎಂಬಾಕೆಯು ಪ್ರಾಣಿದಯಾಜ್ಞಾನ ಪ್ರಸಾರಕ ಸಂಘದವರಿಗೆ ತಿಳುಹಿಸಲು ಅವರು ಆ ಕಾಗೆಯನ್ನು ಆಸ್ಪತ್ರೆಗೆ ತೆಗೆದುಕೊಂಡುಹೋಗಿ ಚಿಕಿತ್ಸೆ ಮಾಡಿಸಿ ಅದು ಗುಣಹೊಂದಿದಮೇಲೆ ಬಿಟ್ಟುಬಿಟ್ಟರು. ಕಾಗೆಯನ್ನು ಹಿಂಸಿಸಿದ ಷೇರ್‌ಖಾನನನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲು ಮ್ಯಾಜಿಸ್ಟ್ರೇಟರು ಅವನಿಗೆ 25 ರೂಪಾಯಿಗಳ ದಂಡ ತಪ್ಪಿದರೆ 2 ವಾರಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಪ್ರಪಂಚದ ರೈಲುರಸ್ತೆಗಳಲ್ಲೆಲ್ಲಾ ಅತ್ಯಂತ ದೀರ್ಘವಾದುದೆಂದು ಪರಿಗಣಿಸಲ್ಪಟ್ಟಿರುವ ಮಂಗಳೂರು ಪೆಷಾವರ್ ಎಕ್ಸ್‌ಪ್ರೆಸ್ ಲೈನಿನ ರೈಲುಗಾಡಿಯ ಪ್ರಾರಂಭೋತ್ಸವವು ಕಳೆದ ಸೋಮವಾರ ನೆರವೇರಿಸಲ್ಪಟ್ಟಿತು. ಈ ಹೊಸರೈಲು ಮಂಗಳೂರಿನಿಂದ ಹೊರಟು ಈರೋಡ್, ಮದ್ರಾಸ್, ಬೆಜವಾಡ, ಓರಂಗಲ್, ಚಾಂದಾ, ನಾಗಪುರ, ಇಟಾರ್ಸಿ, ಭೂಪಾಲ್, ಝಾನ್ಸಿ, ಆಗ್ರಾ, ದೆಹಲಿ, ಅಂಬಾಲಾ ಮೊದಲಾದ ಪಟ್ಟಣಗಳ ಮಾರ್ಗವಾಗಿ ಪೆಷಾವರನ್ನು ತಲ್ಪುತ್ತದೆ. ಈ ನೂತನ ರಸ್ತೆಯ ನಿರ್ಮಾಣದಿಂದ ಭಾರತವರ್ಷದ ರಾಜಧಾನಿಯಾದ ಡೆಲ್ಲಿನಗರಕ್ಕೂ ದಾಕ್ಷಿಣಾತ್ಯದೇಶಗಳಿಗೂ ಹೆಚ್ಚು ಸಂಬಂಧವುಂಟಾಗಲು ಅವಕಾಶವಾಯಿತು. ಇದುವರೆಗೆ ಮದ್ರಾಸಿನಿಂದ ಹೊರಟವರು ಅತ್ಯಂತ ಸಮೀಪದರಸ್ತೆಯಾಗಿದ್ದ ಬೊಂಬಾಯಿ ಮಾರ್ಗವಾಗಿ ಡೆಲ್ಲಿಯನ್ನು ತಲುಪಲು 71 ಘಂಟೆಗಳ ಕಾಲವು ಬೇಕಾಗುತ್ತಿದ್ದಿತು. ಈ ಹೊಸರಸ್ತೆಯಲ್ಲಿ 53 ಘಂಟೆಯಲ್ಲಿ ಡೆಲ್ಲಿಯನ್ನು ಸೇರಬಹುದು.

ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಆಕಾಶಯಾನ ಸಂಚಾರವು ಕಳೆದತಿಂಗಳು 30 ನೆಯ ತಾರೀಖಿನದಿವಸ ಪ್ರಾರಂಭಿಸಲ್ಪಟ್ಟಿತು. ಈ ವಿಮಾನವು ಪ್ರತಿವಾರವೂ ಲಂಡನ್ ಪಟ್ಟಣದಿಂದ ಹೊರಟು ಸ್ವಿಟ್ಜರ್‌ಲೆಂಡ್‌ದೇಶದ ಬಾಸೆಲ್ ಇಟಲಿದೇಶದ ಜಿನೀವಾ, ಆಫ್ರಿಕಾಖಂಡದ ಅಲೆಕ್ಸಾಂಡ್ರಿಯಾಗಳನ್ನು ತಲ್ಪಿ ಅಲ್ಲಿಂದ ಬಾಗದಾದ್, ಬಾಸ್ರಾಗಳಲ್ಲಿ ಹಾಯ್ದು ಪರ್ಶಿಯನ್‌ಕೊಲ್ಲಿಯ ಮಾರ್ಗವಾಗಿ ಕರಾಚಿಗೆ ಬಂದು ಸೇರಲು ಏಳುದಿವಸಗಳಾಗುವವು. ಈ ಮಾರ್ಗವಾಗಿ ಕರಾಚಿಯಿಂದ ಲಂಡನ್ ಪಟ್ಟಣಕ್ಕೆ 5000 ಮೈಲುಗಳ ದೂರವಿರುವದು. ಈ ವಿಮಾನಗಳನ್ನು ಕ್ರಮವಾಗಿ ನಡೆಯಿಸುವದಕ್ಕೋಸ್ಕರ ಅಲ್ಲಲ್ಲಿ ವಿಮಾನಗಳು ಇಳಿಯಲು ಸ್ಟೇಷನ್ನುಗಳೂ ತಂತಿರಹಿತ ವಾರ್ತಾವಾಹಿ ಸ್ಟೇಷನ್ನುಗಳೂ ಏರ್ಪಡಿಸಲ್ಪಟ್ಟಿವೆ. ಈ ಮಾರ್ಗವಾಗಿ ಸಂಚರಿಸುವ ಪ್ರಯಾಣಿಕರಿಗೆ ಲಂಡನ್ ಪಟ್ಟಣದಿಂದ ಕರಾಚಿಗೆ ಊಟದಛಾರ್ಜು ಸೇರಿ 130 ಪೌಂಡುಗಳ ವೆಚ್ಚವೂ ಈ ಮಾರ್ಗವಾಗಿ ಕಳುಹಿಸುವ ಕಾಗದಗಳಿಗೆ 6 ಪೆನ್ನುಗಳ ವೆಚ್ಚವೂ ಬೀಳುವದು.

ಅಮೇರಿಕಾದೇಶದ ಡಾ|| ಹಿಲ್ಟನ್‌ಜೋನ್ಸ್ ಎಂಬ ಪ್ರಸಿದ್ಧ ಶಾಸ್ತ್ರಶೋಧಕರು ತಾವು ನೂತನವಾಗಿ ಕಂಡುಹಿಡಿದಿರುವ ಕೆಲವು ವಿಷಯಗಳನ್ನು ಚಿಕಾಗೋ ಪಟ್ಟಣದ ವಿದ್ವಾಂಸರಿಗೆ ತೋರಿಸುವಾಗ ಒಂದು ಹೊಸತರದ ಧಾತುವಿನ ತುಂಡನ್ನು ತೋರಿಸಿ "ಈ ತುಂಡು ಮತ್ತು ಇದರಿಂದುತ್ಪನ್ನವಾಗುವ ವಿಷವಾಯುವು ಪ್ರಪಂಚವನ್ನೇ ಸುಟ್ಟುಬಿಡಬಲ್ಲದು. ಕ್ಯಾಕೊಡಿಲ್ ಐಸೊನ್ಯಾಸಿಡ್ ಎಂಬ ಹವೆಯು ಲಕ್ಷಾಂತರ ಸೈನ್ಯವನ್ನು ಕ್ಷಣಮಾತ್ರದಲ್ಲಿ ಸುಡಬಲ್ಲದು. ಬೆರಿಲಿಯಮ್ ಎಂಬ ಧಾತುವು ಆಕಾಶಯಾನ ರಚನೆಗೆ ಅತ್ಯಂತ ಉಪಯುಕ್ತವಾಗಿದೆ. ಇದರ ಸಹಾಯದಿಂದ 400 ಅಶ್ವಶಕ್ತಿಯ ಇಂಜಿನನ್ನು ಕಟ್ಟಿದ ವಿಮಾನವು ಒಬ್ಬ ಮನುಷ್ಯನು ಎತ್ತಿಕೊಂಡು ಹೋಗುವಷ್ಟು ಹಗುರವಾಗುತ್ತದೆ." ಅಲ್ಲದೆ ಒಂದು ಸಣ್ಣ ಕೊಳವೆಯನ್ನು ತೋರಿಸಿ "ಈ ಕೊಳವೆಯ ಸಹಾಯದಿಂದ 20 ಅಡಿ ದೂರದಲ್ಲಿರುವ ಮನುಷ್ಯನನ್ನು ಅರ್ಧಘಂಟೆಯ ಕಾಲ ಮಾತ್ರ ಕುರುಡನನ್ನಾಗಿ ಮಾಡಬಹುದು" ಎಂದು ಹೇಳಿದರು.

ನೇಪಾಳದೇಶದ ರಾಣಾವಂಶಕ್ಕೆ ಸೇರಿದ ರಾಜಕುಮಾರಿ ಎಂಬ ತರುಣಿಯನ್ನು ಪದ್ಮಪ್ರಸಾದನೆಂಬವನು ಬಲಾತ್ಕಾರದಿಂದ ಕಲ್ಕತ್ತೆಗೆ ಕರೆದುಕೊಂಡು ಬಂದು ಹೀರಾಲಾಲ ಅಗರ್‌ವಾಲಾ ಎಂಬವನಿಗೆ ಮಾರಿಬಿಟ್ಟನು. ಹೀರಾಲಾಲನೂ ಅವನ ಸ್ನೇಹಿತರೂ ರಾಜಕುಮಾರಿಯನ್ನು 5 ತಿಂಗಳಕಾಲ ಬಹಳವಾಗಿ ಹಿಂಸಿಸುತ್ತಿರಲು ಈ ವಿಷಯವು ರಾಜಕುಮಾರಿಯ ಸಂಬಂಧಿಯಾದ ಖಿರಗಬಹದ್ದೂರ್‌ಸಿಂಗನಿಗೆ ತಿಳಿಯಲು ಆತನು ಧೂರ್ತನಾದ ಹೀರಾಲಾಲನನ್ನು ಕೊಂದು ರಾಜಕುಮಾರಿಯನ್ನು ಕಷ್ಟದಿಂದ ಪಾರಗಾಣಿಸಿದನು. ಇದಕ್ಕಾಗಿ ಈತನು ವಿಚಾರಣೆಗೆ ಗುರಿಪಡಿಸಲ್ಪಟ್ಟು 1927 ನೆಯ ಮಾರ್ಚಿ ತಿಂಗಳಲ್ಲಿ 8 ವರ್ಷಗಳ ಕಠಿಣಶಿಕ್ಷೆಗೆ ಗುರಿಯಾದನು. ಇದರಮೇಲೆ ಭರತಖಂಡದ ಅನೇಕಜನ ಪ್ರಮುಖರು ಖಿರಗಬಹದ್ದೂರ್‌ಸಿಂಗನ ಕಾರ್ಯವನ್ನು ಸ್ತುತಿಸಿ ಅವನನ್ನು ಕೂಡಲೇ ಬಿಡುಗಡೆಮಾಡಬೇಕೆಂದು ವೈಸರಾಯರನ್ನು ಪ್ರಾರ್ಥಿಸಿಕೊಂಡಿದ್ದರು. ಈ ವಿಷಯವನ್ನು ವೈಸರಾಯರು ಸಾವಧಾನವಾಗಿ ಪರ್ಯಾಲೋಚಿಸಿ ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ಅವನನ್ನು ರಾಜಷಾಹೀಜೈಲಿನಿಂದ ಬಿಡುಗಡೆ ಮಾಡಿದರು.

ಅಫ್ಘಾನಿಸ್ಥಾನದಲ್ಲಿ ಅಮಾನುಲ್ಲಾಖಾನರ ಸೈನ್ಯಕ್ಕೂ ಬಚ್ಚಾಯಿಸಕೋನ ಸೈನ್ಯಕ್ಕೂ ಯುದ್ಧವು ನಡೆಯುತ್ತಿದೆ. ಅಮಾನುಲ್ಲಾಖಾನರು ಕಳೆದ ಮಂಗಳವಾರ 35000 ಸೈನಿಕರೊಡನೆ ಕಾಂದಹಾರಿನಿಂದ ಕಾಬೂಲಿನ ಮೇಲೆ ಹೊರಟರು. ದಾರಿಯುದ್ದಕ್ಕೂ ಅಮಾನುಲ್ಲರಿಗೆ ಇದುವರೆಗೆ ವಿರೋಧಿಗಳಾಗಿದ್ದವರೆಲ್ಲರೂ ಶರಣಾಗತರಾಗುತ್ತ ಸೈನ್ಯಕ್ಕೆ ಸೇರುತ್ತಿರುವರು. ಕಾಬೂಲಿನ ಜನರು ಬಚ್ಚಾಯಿಸಕೋನ ನಿರಂಕುಶ ಪ್ರಭುತ್ವದಿಂದ ಬೇಸತ್ತು ಅಮಾನುಲ್ಲರ ಬರುವಿಕೆಯನ್ನೇ ಎದುರುನೋಡುತ್ತಿರುವರು. ಅಮಾನುಲ್ಲರ ದಳಪತಿಯೊಬ್ಬನು ವಾಡರ್ಾಕ್‌ಪಂಗಡದ ಸೈನಿಕರ ಸಹಾಯದಿಂದ ಕಾಬೂಲಿಗೆ 10 ಮೈಲುಗಳದೂರದಲ್ಲಿರುವ ಟಿಟ್ರಂಗಿ ಎಂಬ ದುರ್ಗವನ್ನು ವಶಪಡಿಸಿಕೊಂಡನು. ಬಚ್ಚಾಯಿಸಕೋನು ವಾಡರ್ಾಕ್ ಜನರಿಗೆ ಲಂಚವನ್ನು ಕೊಟ್ಟು ತನ್ನ ಕಡೆಗೆ ಮಾಡಿಕೊಂಡು ಅಮಾನುಲ್ಲನನ್ನು ತಡೆಯುವದಕ್ಕೋಸ್ಕರ ತನ್ನ ಸೈನ್ಯವನ್ನು ಮುಕರ್ ಎಂಬಲ್ಲಿಗೆ ಕಳುಹಿಸಿರುವನು. ಜನರಲ್ ನಾದಿರ್‌ಖಾನನು ಅಮಾನುಲ್ಲರಿಗೂ ಬಚ್ಚಾಯಿಸಕೋನಿಗೂ ರಾಜಿಮಾಡಿ ಕಾಬೂಲಿನಲ್ಲಿ ಒಂದು ಸಭೆಯನ್ನು ಸೇರಿಸಿ ಜನರು ಯಾರನ್ನು ಆರಿಸುವರೋ ಅವರಿಗೆ ಕಾಬೂಲ್ ಸಿಂಹಾಸನವನ್ನು ಕೊಡಬೇಕೆಂದು ನಿರ್ಧರಿಸಿ ಕಾಬೂಲಿಗೆ ಪ್ರಯಾಣಮಾಡುತ್ತಿರುವನು.

ಸೂಚನೆ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ೧೦೮ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಬಳ್ಳಾರಿ ಡಿ|| ಹರಪನಹಳ್ಳಿ ತಾ|| ನೀಲಗುಂದ ಗ್ರಾಮಕ್ಕೆ ದಯಮಾಡಿಸಿರುತ್ತದೆ. ಅದಕಾರಣ ಭಕ್ತಾದಿಗಳು ಈ ಮುಕ್ಕಾಮಿಗೆ ಪತ್ರ ಕಳುಹಿಸಿಕೊಳ್ಳತಕ್ಕದ್ದು.

(ಮಹಾಸಂಸ್ಥಾನ ಮುಕಾಮ್)

ತಾ|| 4-4-29. ವಿರೂಪಾಕ್ಷಶಾಸ್ತ್ರಿ: ಹಿರೇಮಡಗಲಿ.

(೨೫)

ವೀರಶೈವಸಿದ್ಧಾಂತ.

(ಶಿವಾಗಮಸ್ವತಃ ಪ್ರಾಮಾಣ್ಯವಾದ.)

ಲೇಖಕರು:—ಸಂ|| ಶಂಕರಶಾಸ್ತ್ರಿಗಳು, ಉಮಚಗಿ ಮಳೆಮಠ.

(ಹಿಂದಿನಿಂದ ಮುಂದೆಸಾಗುವದು.)

ಪ್ರ—ಶಿವಾಗಮಗಳ ಪ್ರಾಮಾಣ್ಯವೆಂದರೇನು?

ಉ—ವೇದಗಳಿಗೆ ಯಾವ ಪ್ರಾಮಾಣ್ಯವನ್ನು ಹೇಳುವಿಯೋ ಅದೇ ಆಗಿರುವುದು.

ಪ್ರ—ವೇದಗಳಲ್ಲಿ ಹೇಳಲ್ಪಡುವ ಕೆಲವು ಕರ್ಮಗಳನ್ನು ವಿಧಿವತ್ತಾಗಿ ಆಚರಿಸಿದ್ದಾದರೆ ಆ ಕರ್ಮದ ಫಲವು ಪ್ರತ್ಯಕ್ಷವಾಗಿ ಕಂಡುಬರುವುದು. ಆದುದರಿಂದ ಅದೃಷ್ಟಸ್ವರ್ಗಾದಿ ಫಲಸಾಧಕನಾದ ಅಗ್ನಿಷ್ಟೋಮಾದಿಗಳಲ್ಲಿ ವಿಶ್ವಾಸವು ಹುಟ್ಟುವುದು. ಅದು ಕಾರಣ ವೇದಗಳಲ್ಲಿ ಹೇಳುವ ಕರ್ಮಗಳ ಫಲೋದಯವೇ ವೇದಗಳ ಪ್ರಾಮಾಣ್ಯವೆಂದು ಹೇಳುವೆವು. ಪುತ್ರಾದಿ ಫಲೋದಯವು ವೈದಿಕ ಪುತ್ರೇಷ್ಟ್ಯಾದಿ ಕರ್ಮಗಳಿಂದ ಪ್ರತ್ಯಕ್ಷಸಿದ್ಧವಾಗಿದೆಯಷ್ಟೆ? ಒಂದೊಂದು ಕಡೆಯಲ್ಲಿ ಆ ಪ್ರತ್ಯಕ್ಷ ಫಲವು ಕಾಣದಿದ್ದರೆ ಆ ಪ್ರತ್ಯಕ್ಷ ಫಲಕ್ಕೆ ಕಾರಣವಾದ ಕರ್ಮದ ಲೋಪವೆಂದು ತಿಳಿಯಬೇಕೇ ಹೊರತು ಇಂಥ ಕರ್ಮದಿಂದ ಇಂಥ ಫಲವಾಗುತ್ತದೆಂದು ಹೇಳುವ ವೇದಕ್ಕೆ ಅಪ್ರಾಮಾಣ್ಯವನ್ನು (ವೇದವು ಸುಳ್ಳು ಹೇಳುತ್ತದೆಂಬುದನ್ನು) ಹೇಳಕೂಡದು. ಒಟ್ಟಿಗೆ ವೈದಿಕಕರ್ಮಗಳ ಫಲೋದಯವೇ ವೇದಪ್ರಾಮಾಣ್ಯವೆಂದು ನಾವು ಹೇಳುವಂತ ಆಗಮಗಳಿಗೆ ಪ್ರಾಮಾಣ್ಯವನ್ನು ಹೇಳುವಿಯೇನು?

ಉ—ಹೇಳುವೆನು. ಆಗಮಗಳಲ್ಲಿ ಹೇಳಲ್ಪಡುವ "ಲಿಂಗಪ್ರತಿಷ್ಠೆ" ಮೊದಲಾದ ದೇವತೆಗಳ ಪ್ರತಿಷ್ಠೆಯು ವಿಧಿಗನುಸರಿಸಿ ಆಗಿದ್ದರೆ ಆ ಮೂರ್ತಿಗಳಲ್ಲಿ ಕಲಾಭಿವ್ಯಕ್ತಿಯಾಗಿ ಅದರಿಂದ ಭಕ್ತರಿಗೆ ಇಷ್ಟಾರ್ಥಸಿದ್ಧಿಯು ಪ್ರತ್ಯಕ್ಷವಾಗಿ ಕಂಡುಬರುತ್ತದೆ. ಆ ಪ್ರಕಾರವಾಗಿ ಪ್ರತಿಷ್ಠಿತವಾದ ಮೂರ್ತಿಯ ಅವಯವಗಳಲ್ಲಿ ಸ್ವಲ್ಪ ನ್ಯೂನತೆಯಾಗಿದ್ದರೂ ನಿತ್ಯಪೂಜಾದಿಗಳ ಲೋಪವಾದರೂ ಬಹಳ ಹಾನಿಯು ಕಂಡುಬರುತ್ತದೆ. ಆದ್ದರಿಂದ ಕರ್ಷಣಾದಿ ಪ್ರತಿಷ್ಠಾಂತಕರ್ಮಗಳನ್ನು ಹೇಳುವ ಆಗಮಗಳಿಗಾದರೂ ಪ್ರಮಾತೃಪುರುಷನಿಗೆ ಫಲಪ್ರಾಪ್ತಿಯೇ ಪ್ರಾಮಾಣ್ಯವೆಂದು ನಾವಾದರೂ ಹೇಳುತ್ತೇವೆ ಅಂದಮೇಲೆ ವೇದಾಗಮಗಳ ಪ್ರಾಮಾಣ್ಯವು ವಿಲಕ್ಷಣವಾದುದಲ್ಲವು. ಕಿಂತು ಸಮಾನವಾದುದಾಗಿದೆ. ಆದುದರಿಂದಲೇ ಶ್ರೀ ರೇಣುಕಶಿವಾಚಾರ್ಯರು ಶ್ಲೋ|| "**ಪ್ರಾಮಾಣ್ಯಂಸದೃಶಂ ಜ್ಞೇಯಂ ಪಂಡಿತೈರೇತಯೋಸ್ಸದಾ**" ಎಂದು ಅಪ್ಪಣೆಕೊಡಿಸಿರುವರು.

ಪ್ರ—ವೀರಶೈವನೇ? ದೇವಾಲಯ, ರಥೋತ್ಸವ, ಪ್ರತಿಷ್ಠಾ ಮೊದಲಾದ ಕರ್ಮಾಂಶದಲ್ಲಿ ಮಾತ್ರ ಶಿವಾಗಮಗಳು ಪ್ರಮಾಣಗಳಾಗುವವಲ್ಲದೆ ಉಳಿದ ವೈದಿಕಕರ್ಮಗಳಲ್ಲಿ ಪ್ರಮಾಣಗಳಾಗುವದಿಲ್ಲ.

ಉ—ಶ್ರೀಪತಿಪಂಡಿತರು ಇದೇ ವಿಷಯವನ್ನು ತಮ್ಮ ಭಾಷ್ಯದಲ್ಲಿ "**ಗಾಯತ್ರ್ಯಾದಿಸರ್ವಮಂತ್ರಾಂಗನ್ಯಾಸ ಕರನ್ಯಾಸ ಧ್ಯಾನಮುದ್ರಾ ಕುಂಡಮಂಟಪಾದೀನಾಮಾಗಮಪ್ರಮಾಣವಿಧೇಯತ್ವಾತ್ ತದಸ್ವೀಕಾರೇ ಸರ್ವಯಾಗಮಂತ್ರಫಲಸಾಧನತ್ವಾಯೋಗಾಚ್ಚ**" ಅಂದರೆ ಗಾಯತ್ರ್ಯಾದಿ ಸರ್ವಮಂತ್ರಗಳ ಅಂಗನ್ಯಾಸ, ಕರನ್ಯಾಸ, ಧ್ಯಾನಮುದ್ರಾ, ಕುಂಡಮಂಟಪಾದಿಗಳ ವಿಧಾನವು ಆಗಮಗಳಲ್ಲಿ ಹೇಳಲ್ಪಟ್ಟಿರುವುದರಿಂದಲೂ, ಈ ವಿಧಾನವನ್ನು ವೈದಿಕರು ಸ್ವೀಕಾರಮಾಡದಿದ್ದ ಪಕ್ಷದಲ್ಲಿ ಸರ್ವಯಾಗಮಂತ್ರಗಳಿಗೆ ಫಲಸಾಧಕತ್ವವು ಸಂಭವಿಸುವುದಿಲ್ಲವಾದ್ದರಿಂದಲೂ ಆಗಮಗಳು ಆಲಯೋತ್ಸವ ಪ್ರತಿಷ್ಠಾದಿ ಕೆಲವು ಕರ್ಮಗಳಲ್ಲಿ ಪ್ರಮಾಣಗಳಾಗಿರುವುವಲ್ಲದೆ ಸರ್ವ ವೈದಿಕಕರ್ಮಗಳಲ್ಲಿಯೂ ಸಹ ಪ್ರಮಾಣಗಳಾಗಿರುವುವೆಂದು ಪ್ರತಿಪಾದಿಸಿರುವರು.

ಪ್ರ—"**ಪತ್ಯುರಸಾಮಂಜಸ್ಯಾತ್**" ಎಂಬ ಸೂತ್ರದಿಂದ ವ್ಯಾಸಮಹರ್ಷಿಗಳು ತಾಂತ್ರಿಕಪಾಶುಪತಾದಿ ಮತಗಳನ್ನೇ ದೂಷಿಸಿರುವಾಗ ಆ ಮತಗಳನ್ನು ಹೇಳುವ ಆಗಮಗಳು ವೇದಗಳಂತೆ ಸ್ವತಃ ಪ್ರಮಾಣಗಳು ಹೇಗೆ ಆಗುವುವು?

ಉ—ವ್ಯಾಸಮಹರ್ಷಿಗಳು ಪಶುಪತಿಯು ಕೊಡಕ್ಕೆ ಕುಂಬಾರನಂತೆ ಕೇವಲ ನಿಮಿತ್ತ ಕಾರಣನೂ ಉಪಾದಾನ ಕಾರಣನೂ ಅಲ್ಲವೆನ್ನುವ ಪಾಶುಪತಾದಿ ಮತಗಳನ್ನು ದೂಷಿಸಿರುವರೇ ಹೊರತು, ಪಶುಪತಿಯಾದ ಶಿವನೊಬ್ಬನೇ ಜಗದುಪಾದಾನ ಕಾರಣನೂ ನಿಮಿತ್ತ ಕಾರಣನೂ ಎಂದು ಹೇಳುವ ಮಹಾಪಾಶುಪತವೆನಿಸುವ ವೀರಶೈವಮತವನ್ನು ದೂಷಿಸಿರುವುದಿಲ್ಲ. **ಪತ್ಯುಃ** ಎಂದರೆ ಪಶುಪತಿಯಾದ ಶಿವನಿಗೆ "**ಅಸಾಮಂಜಸ್ಯಾತ್**" ಅಸಮಂಜಸವಾಗುವದರಿಂದ ಅಂದರೆ ಪಶುಪತಿಯು ಕೇವಲ ನಿಮಿತ್ತಕಾರಣನೆಂದು ಹೇಳುವ ಪಕ್ಷದಲ್ಲಿ ಊರ್ಣನಾಭಿ (ಜೇಡಹುಳ) ಮೊದಲಾದ ದೃಷ್ಟಾಂತಗಳಿಂದ ಶಿವನೊಬ್ಬನೇ ಜಗತ್ತಿಗೆ ಉಭಯಕಾರಣನೆಂದು ಹೇಳುವ ಅನೇಕ ಶ್ರುತಿವಾಕ್ಯಗಳು ಸಮಂಜಸಗಳಾಗುವುದಿಲ್ಲವಾದ್ದರಿಂದ ಕೇವಲ ನಿಮಿತ್ತಕಾರಣನೆಂದು ಹೇಳುವ ಪಾಶುಪತಾದಿಮತಗಳು ವೇದವಿರುದ್ಧಗಳಾಗಿರುವವು. ಅಂಥ ಮತಗಳನ್ನು ಹೇಳುವ ಆಗಮಗಳೂ ಕೂಡ ವೇದವಿರುದ್ಧಗಳಾದುದರಿಂದ ವೇದಗಳಂತೆ ಅವು ಪ್ರಮಾಣಗಳಲ್ಲವೆಂಬುದನ್ನು ಸೂಚಿಸುವದಕ್ಕಾಗಿ ಆ ಸೂತ್ರವನ್ನು ಹೇಳಿರುವರಲ್ಲದೆ ವೇದಾರ್ಥವನ್ನೇ ಹೇಳುವ ಕಾಮಿಕಾದಿ ವಾತುಲಾಂತಗಳಾದ 28 ಶಿವಾಗಮಗಳಲ್ಲಿ ಅಪ್ರಾಮಾಣ್ಯವನ್ನು ಸೂಚಿಸುವುದಕ್ಕಾಗಿ ಹೇಳಿರುವುದಿಲ್ಲ.

ಪ್ರ—ಹಾಗಾದರೆ ಕಾಮಿಕಾದ್ಯಾಗಮಗಳಲ್ಲಿ ಶಿವನೊಬ್ಬನೇ ನಿಮಿತ್ತಕಾರಣನೂ ಉಪಾದಾನಕಾರಣನೂ ಎಂದು ಎಲ್ಲಿ ಹೇಳಿರುವುದು?

ಉ—"**ಶಿವ ಏವ ಹಿ ದೇವೋಂತಃಸ್ಥಿತಮಿಚ್ಛಾವಶಾದ್ಬಹಿಃ । ಯೋಗೀವ ನಿರುಪಾದಾನಮರ್ಥಜಾತಂ ಪ್ರಕಾಶಯೇತ್**" ಹೀಗೆಂದು ಕಾಮಿಕಾಗಮದಲ್ಲಿ ಹೇಳಲ್ಪಟ್ಟಿರುವುದು. ಅಂದರೆ ಯೋಗಿಯು ತನಗನ್ಯವಾದ ಮತ್ತೊಂದು ಉಪಾದಾನಕಾರಣವನ್ನಪೇಕ್ಷಿಸಿಕೊಳ್ಳದೆ ಕೇವಲ ತನ್ನ ಇಚ್ಛೆಯಿಂದಲೇ ಪದಾರ್ಥಗಳನ್ನು ಪ್ರಕಟಗೊಳಿಸುವಂತೆ ಶಿವನೊಬ್ಬನೇ ತನಗನ್ಯವಾದ ಮತ್ತೊಂದು ಉಪಾದಾನಕಾರಣವನ್ನು ತೆಗೆದುಕೊಳ್ಳದೆ ಕೇವಲ ತನ್ನ ಇಚ್ಛಾಶಕ್ತಿಯಿಂದ ಪದಾರ್ಥಜಾತವನ್ನು ಪ್ರಕಟಗೊಳಿಸುವನೆಂಬ ತಾತ್ಪರ್ಯವುಳ್ಳ ಈ ಕಾಮಿಕಾಗಮವಾಕ್ಯವು ಯಾವ ವೇದವಾಕ್ಯಾರ್ಥಕ್ಕೆ ವಿರುದ್ಧವಾಯಿತು? "**ಯಥೋರ್ಣನಾಭಿಃ ಸೃಜತೇಗೃಹ್ಣತೇಚ**" ಎಂಬ ವೇದವಾಕ್ಯದಲ್ಲಿ ಜೇಡಹುಳವು ತನ್ನಲ್ಲಿ ಸಂಕುಚಿತಗಳಾಗಿದ್ದ ತಂತುಗಳನ್ನೇ ಬಾಹ್ಯದಲ್ಲಿ ಜಾಲರೂಪವಾಗಿ ಪ್ರಕಟಗೊಳಿಸುವಂತೆ ಪರಶಿವಬ್ರಹ್ಮವು ತನ್ನಲ್ಲಿ ಸೂಕ್ಷ್ಮರೂಪವಾಗಿದ್ದ ಜಗತ್ತನ್ನೇ ಬಾಹ್ಯದಲ್ಲಿ ಸ್ಥೂಲರೂಪವಾಗಿ ಪ್ರಕಟಗೊಳಿಸುವದೆಂಬರ್ಥವು ಹೇಳಲ್ಪಟ್ಟಿತಷ್ಟೇ? ಒಟ್ಟಿನಮೇಲೆ ಶಿವನೊಬ್ಬನೇ ನಿಮಿತ್ತಕಾರಣನೂ ಉಪಾದಾನಕಾರಣನೂ ಎಂದು ಮೇಲಿನ ವೇದಾಗಮವಾಕ್ಯಗಳರ್ಥವಿರುವುದರಿಂದ ವೇದಾಗಮಗಳಿಗೆ ಏಕಾರ್ಥವು ಸಂಗತವಾಯಿತು. ಅಲ್ಲದೆ ಸಿದ್ಧಾಂತಾಗಮ ಹಾಗೂ ಸಿದ್ಧಾಂತ ಶಿಖಾಮಣಿಗಳಲ್ಲಿ "**ಪತ್ರಪುಷ್ಪಾದಿರೂಪೇಣ ಯಥಾತಿಷ್ಠತಿ ಪಾದಪಃ । ತಥಾಭೂಮ್ಯಾದಿರೂಪೇಣ ಶಿವಏಕೋ ವಿರಾಜತೇ ॥ ಯಥಾತಂತುಭಿರುತ್ಪನ್ನಃ ಪಟಸ್ತಂತುಮಯಃಸ್ಮೃತಃ । ತಥಾ ಶಿವಾತ್ಸಮುತ್ಪನ್ನಂ ಶಿವಏವಚರಾಚರಂ । ಆತ್ಮಶಕ್ತಿವಿಕಾಸೇನ ಶಿವೋವಿಶ್ವಾತ್ಮನಾಸ್ಥಿತಃ । ಕುಟೀಭಾವಾದ್ಯಥಾಭಾತಿಪಟಸ್ಸ್ವಸ್ಯ ಪ್ರಸಾರಣಾತ್**" ಇತ್ಯಾದಿ ಶ್ಲೋಕಗಳು ಶಿವನಿಗೆ ವೇದವು ಜಗದುಭಯಕಾರಣತ್ವವನ್ನು ಹೇಳುವಂತೆ ಹೇಳುತ್ತವೆ. ಆದ್ದರಿಂದ ವೇದಾನುಕೂಲವಾದ ಶುದ್ಧಸಾತ್ವಿಕವಾದ ವೀರಶೈವಮತದ ನಿರಸನದಲ್ಲಿ ಶ್ರೀ ವ್ಯಾಸಮಹರ್ಷಿಗಳಿಗೆ ತಾತ್ಪರ್ಯವಿಲ್ಲವು. ಕಿಂತು ತಪ್ತಲಿಂಗಮುದ್ರಾಂಕಿತವಾದ ರೌದ್ರಮತವೂ ಮತ್ತು ತಪ್ತಶೂಲಡಮರುಗಮುದ್ರಾಂಕಿತವಾದ ಪಾಶುಪತಮತ ಮೊದಲಾದ ಕೇವಲ ನಿಮಿತ್ತಕಾರಣತ್ವವನ್ನು ಹೇಳುವ ಮತಗಳೂ ಶ್ರೌತವಾಕ್ಯಗಳಿಗೆ ವಿರುದ್ಧಗಳಾಗಿರುವುದರಿಂದ ಅವುಗಳ ನಿರಸನದಲ್ಲಿ ತಾತ್ಪರ್ಯವಿದೆ ಎಂದು ಸ್ಪಷ್ಟವಾಗುತ್ತದೆ.

ಪ್ರ—ಮೃತನಾದ ಬ್ರಾಹ್ಮಣನಿಗೆ ದಹನಕ್ರಿಯೆಯು ವೇದಗಳಲ್ಲಿ ವಿಧಿಸಲ್ಪಟ್ಟಿದ್ದರೂ ಅದನ್ನು ಬಿಟ್ಟು ಖನನಕರ್ಮವನ್ನಾಚರಿಸುವುದು ಯಾವ ವೇದದಲ್ಲಿ ಹೇಳಲ್ಪಟ್ಟಿರುವುದು? ಆ ಖನನಕರ್ಮವು ಕೇವಲ ತಾಂತ್ರಿಕವಲ್ಲವೇ? ಕೇವಲ ತಾಂತ್ರಿಕವೆಂದರೆ ವೇದಾಗಮಗಳಿಗೆ ಏಕಾರ್ಥವು ಸಂಭವಿಸುವುದಿಲ್ಲ. ಏಕಾರ್ಥವು ಸಂಭವಿಸದಿದ್ದರೆ ವೇದಗಳಂತೆ ಆಗಮಗಳಿಗೆ ಸ್ವತಃ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ.

ಉ—ಆಮೂಲಾಗ್ರವಾಗಿ ವೇದವೇದಾಂತಗಳನ್ನು ನೋಡದ ನೀನು ಹೀಗೆ ಆಕ್ಷೇಪಿಸುವುದು ಯುಕ್ತವೇ ಆಗಿದೆ. ನೋಡು? "**ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ**" "**ಮಹೀಂ ದೇವೀಂ ವಿಷ್ಣುಪತ್ನೀಂ**" ಇಂತೆಂಬುವ ಋಗ್ವೇದದ ಎರಡು ಮಂತ್ರಗಳಿಂದಲೂ ಖನನ ಕರ್ಮವು ಹೇಳಲ್ಪಡುತ್ತದೆ. ಇದು ಅಲ್ಲದೆ ಸದಾನಂದೋಪನಿಷತ್ತಿನಲ್ಲಿ "**ಶಿವಾತನೂರಚಿತಾದ್ವಿಲೇ ನಿಕ್ಷಿಪೇತ್**" ಲಿಂಗರೂಪ ಶಿವಸಂಬಂಧಿಶರೀರಗಳನ್ನು ಮರಣಾನಂತರದಲ್ಲಿ ಸಮಾಧಿಯಲ್ಲಿ ಹೂಳಬೇಕೆಂಬುವ ಖನನ ವಿಧಾನವೂ ಕೂಡ ಕಂಡುಬರುತ್ತದೆ. ಅಂದಮೇಲೆ ಖನನವು ವೇದೋಕ್ತವಾಗಲಿಲ್ಲವೇನು? ಆದುದರಿಂದ ವೇದಾಗಮಗಳಿಗೆ ಏಕಾರ್ಥವು ಸಂಭವಿಸುವುದು. ಏಕಾರ್ಥವಿರುವುದರಿಂದಲೇ ವೇದಗಳಂತೆ ಆಗಮಗಳಿಗೆ ಸ್ವತಃ ಪ್ರಾಮಾಣ್ಯವು ಸಿದ್ಧಿಸುವುದು. ಇದೂ ಅಲ್ಲದೆ ಶರೀರವು ಪಾರ್ಥಿವವಾಗಿರುವುದರಿಂದಲೂ ಆ ಪಾರ್ಥಿವಶರೀರದಲ್ಲಿರುವ ಲಿಂಗವು ಪಾರ್ಥಿವವಾಗಿರುವುದರಿಂದಲೂ ಅವೆರಡನ್ನೂ ಪೃಥಿವಿಯಲ್ಲಿ ಗೋಪನಮಾಡತಕ್ಕದ್ದೇ ಯೋಗ್ಯವಾಗಿದೆ.

ಪ್ರ—ಶರೀರವು ಪಾಂಚಭೌತಿಕವಲ್ಲವೇ? ಆ ಪಂಚಭೂತಗಳಲ್ಲಿ ತೇಜಸ್ಸು ಅಂದರೆ ಅಗ್ನಿಯೂ ಒಂದಾಗಿರುವದು. ಆದುದರಿಂದ ಅಗ್ನಿಯಲ್ಲಿ ಶರೀರವನ್ನು ದಹಿಸಬಾರದೇಕೆ?

ಉ—ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚಭೂತಗಳಲ್ಲಿ ಪೃಥ್ವಿಯು ಸರ್ವಾಧಾರವಾಗಿರುವುದರಿಂದಲೂ, ಅದೇ ಮೊದಲನೆಯದಾಗಿರುವುದರಿಂದಲೂ ಅದನ್ನು ಬಿಟ್ಟು ಮುಂದಿನ ಅಗ್ನಿತತ್ವದಲ್ಲಿ ದಹಿಸುವುದು ಯುಕ್ತವಾಗಿಲ್ಲವು. ಪೃಥ್ವಿಪ್ರಧಾನವಾದ ಶರೀರವನ್ನು ಪೃಥಿವಿಯಲ್ಲಿಯೇ ಸಂಬಂಧಿಸುವುದು ಯುಕ್ತವಾಗಿದೆ. "**ದಗ್ಧಸ್ಯ ದಹನಂ ನಾಸ್ತಿ ಪಕ್ವಸ್ಯ ಪಚನಂಯಥಾ**" ಇವೇ ಮೊದಲಾದ ಶಿವಾಗಮವಚನಾನುಸಾರವಾಗಿ ದಹನಕ್ಕಿಂತಲೂ ಖನನವೇ ಯುಕ್ತವಾಗಿದೆ. ಲಿಂಗಾಂಗಿಯ ಶರೀರವನ್ನು ದಹಿಸಿದರೆ ಪ್ರತ್ಯವಾಯವೂ ಕೂಡ ಹೇಳಲ್ಪಟ್ಟಿರುವುದು. ಶರೀರವನ್ನು ದಹಿಸಿದಮೇಲೆ ಉಳಿದ ಅಸ್ಥ್ಯಾದಿಗಳನ್ನು ಭೂಮಿಯಲ್ಲಿ ಹೂಳುವುದಕ್ಕಿಂತಲೂ ಮೊದಲೇ ಆ ಶರೀರವನ್ನು ಭೂಮಿಯಲ್ಲಿ ಹೂಳಿಬಿಡುವುದು ಜಾಣರ ಕರ್ತವ್ಯವಾಗಿದೆ. ಆದ್ದರಿಂದ ಯುಕ್ತಿಯುಕ್ತವೂ ವೈದಿಕವೂ ಆಗಿರುವ [illegible]ವಂ ಖನನಕರ್ಮವನ್ನು ವಿಧಿಸುವ ಶಿವಾಗಮಗಳು ಸ್ವತಃ [illegible].

ಪ್ರ—**ಶ್ರುತಿಪಥಗಲಿತಾನಾಂ ಮಾನವಾನಾಂಹಿ ತಂತ್ರಂಶ್ರುತಿಪಥನಿರತಾನಾಂತತ್ಸದಾನ್ಯೈವಸೇವ್ಯಂ** ಇತ್ಯಾದಿ ಪುರಾಣವಾಕ್ಯಗಳಿಂದ ಆಗಮಗಳು ನಿಂದಿಸಲ್ಪಡುತ್ತವೆ. ಯಾರು ವೈದಿಕಮಾರ್ಗಕ್ಕೆ ದೂರರಾಗಿರುವರೋ ಅವರಿಗೆ ಮಾತ್ರ ಆಗಮಗಳು ಪ್ರಮಾಣಗಳಲ್ಲದೆ ವೈದಿಕಮಾರ್ಗದಲ್ಲಿ ನಿರತರಿಗೆ ಪ್ರಮಾಣಗಳಲ್ಲವು. ಆದ್ದರಿಂದ ವೈದಿಕರು ಆಗಮಗಳನ್ನು ಪ್ರಮಾಣಗಳನ್ನಾಗಿ ಸ್ವೀಕರಿಸುವುದು ಹೇಗೆ?

ಉ—ಪುರಾಣಗಳು ಎಲ್ಲ ಆಗಮಗಳನ್ನೂ ನಿಂದಿಸುವುದಿಲ್ಲ. ಹಾಗೆ ನಿಂದಿಸುವುದಾದರೆ ಗಾಯತ್ರ್ಯಾದಿ ಮಹಾ ಮಂತ್ರಗಳ ನಿತ್ಯಾನುಷ್ಠಾನ ಪುರಶ್ಚರಣಾದಿಗಳು ಸಂಭವಿಸುವುದಿಲ್ಲವು. ಯಾಕೆಂದರೆ ಆ ಮಂತ್ರಗಳ ಋಷಿ ದೇವತಾ ಛಂದಸ್ಸು ಲಿಂಗ ಆವಾಹನಾದಿಗಳು ಆಗಮಗಳಲ್ಲಿಯೇ ಹೇಳಲ್ಪಟ್ಟಿರುವವಷ್ಟೆ! ಆದ್ದರಿಂದ ಕೆಲವು ಆಗಮಗಳನ್ನು ಮಾತ್ರ ನಿಂದಿಸುತ್ತವೆಂದು ಹೇಳಬೇಕು.

ಪ್ರ—ಕೆಲವು ಆಗಮಗಳೆಂದರೆ ಯಾವ ಆಗಮಗಳು?

ಉ—ಶಿವನಿಂದ ಹೇಳಲ್ಪಟ್ಟ ಕಾಮಿಕಾದಿ ವಾತುಲಾಂತಗಳಾದ 28 ಆಗಮಗಳನ್ನು ಬಿಟ್ಟು ಉಳಿದ ಆಗಮಗಳನ್ನು ನಿಂದಿಸುತ್ತವೆಂದು ತಿಳಿಯಬೇಕು.

ಪ್ರ—ಅದು ಏಕೆ?

ಉ—ಶಿವೇಕ್ಯವಾಗಮೇ ಶೈವೇ ಧರ್ಮೇ ಶಿವಪರಿಗ್ರಹೇ | ಜಂಗಮೇ ಪ್ರಾಣಲಿಂಗೈಕ್ಯೇ ಶಿವಲಿಂಗಾರ್ಚನೇ ಗುಹ || ಶಿವನ್ಯಾಸೇಷು ಸರ್ವೇಷು ವಾರಾಣಸ್ಯಾದಿಕೇಷು ಚ | ವಿಪರೀತಾ ಭವೇದ್ಬುದ್ಧಿರ್ಯಸ್ಯ ಸ್ಯಾತ್ಸ ಬಹಿರ್ನರಃ || ಇತ್ಯಾದಿ ಸ್ಕಂದಾದಿ ಪುರಾಣವಾಕ್ಯಗಳಿಂದ ಶಿವಾಗಮಗಳಲ್ಲಿ ಪ್ರಾಮಾಣ್ಯ ಬುದ್ಧಿಯನ್ನಿಡದೆ ವಿಪರೀತಬುದ್ಧಿಯನ್ನಿಟ್ಟವನಿಗೆ ಪ್ರತ್ಯವಾಯವು ಹೇಳಲ್ಪಡುವದರಿಂದ ಈ ಪುರಾಣವ್ಯಾಖ್ಯಾನುಸಾರವಾಗಿ 28 ಶೈವಾಗಮಗಳನ್ನು ಬಿಟ್ಟು ಬಾಕಿ ಆಗಮಗಳನ್ನು ನಿಂದಿಸುತ್ತವೆಂದು ಹೇಳಬೇಕು. ಆದ್ದರಿಂದಲೇ ಶ್ರೀಮನ್ನೀಲಕಂಠ ಶಿವಾಚಾರ್ಯರ ಭಾಷ್ಯದಲ್ಲಿ "**ಸರ್ವಜ್ಞತಾತೃಪ್ತಿಃ**" ಇತ್ಯಾದಿ ಶೈವಾಗಮ ವಚನಗಳಿಂದಲೇ ಅಂಗಾವಯವಾದಿಗಳು ನಿರೂಪಿಸಲ್ಪಟ್ಟಿವೆ. ಇದು ಅಲ್ಲದೆ ಶ್ರೀ ಶಂಕರಾಚಾರ್ಯರೂ ಕೂಡ ತಮ್ಮ ಪ್ರಪಂಚಸಾರಾದಿಗ್ರಂಥಗಳಲ್ಲಿ ತ್ರ್ಯಂಬಕಪದಾಕ್ಷರೀ ಮೊದಲಾದ ಮಂತ್ರಗಳ ಅನುಷ್ಠಾನ ಪುರಶ್ಚರಣ ಪ್ರಯೋಗಾದಿಗಳಿಗೆ ಉಪಯೋಗಿಗಳಾದ ಅಂಗಾವರಣಾದಿಗಳನ್ನು ಶಿವಾಗಮವಚನಗಳಿಂದಲೇ ನಿರೂಪಿಸಿರುವರು. "ಶ್ರುತಿಪಥಗಲಿತಾನಾಂ" ಇತ್ಯಾದಿ ಪುರಾಣವಾಕ್ಯಗಳಿಂದ ಶೈವಾಗಮಗಳೂ ಕೂಡ ಅಪ್ರಮಾಣಗಳೆಂದು ಹೇಳಿದರೆ ಅಂಥ ಅಪ್ರಾಮಾಣಿಕಾಗಮವಚನಗಳನ್ನು ಭಾಷ್ಯಕಾರರು ಎಂದೂ ಉದಾಹರಿಸಲಾರರು. ಆದ್ದರಿಂದ ಶಿವಾಗಮಗಳು ಪ್ರಮಾಣಗಳೇ ಆಗಿರುವುವು.

ಪ್ರ—ಹಾಗಾದರೆ ಆ ಆಗಮನಿಂದಾವಾಕ್ಯಗಳು ಯಾವ ಆಗಮಗಳನ್ನು ನಿಂದಿಸುತ್ತವೆನ್ನಬೇಕು?

ಉ—ವೇದವಿರುದ್ಧಾಗಮಗಳನ್ನು ನಿಂದಿಸುತ್ತವೆನ್ನಬೇಕು. ಶೈವಾಗಮಗಳು ವೇದಾನುಕೂಲಗಳಾಗಿರುವುದರಿಂದ ಅವುಗಳನ್ನು ನಿಂದಿಸುವುದಿಲ್ಲ. ಶೈವಾಗಮಗಳು ಪೂರ್ವೋಕ್ತಗಳಾದ "ಸರ್ವಲಿಂಗಂಸ್ಥಾಪಯತಿ" ಇತ್ಯಾದ್ಯನೇಕ ಶ್ರುತಿಗಳಿಂದ ವಿಹಿತವಾದ ಲಿಂಗಧಾರಣವನ್ನು ವಿಧಿಸುವುದರಿಂದಲೂ, ಗೌತಮ ಮನು ಮೊದಲಾದವರ ಆಚಾರಕ್ಕೆ ವಿಷಯವಾದ ಸ್ಥಾವರಲಿಂಗಪ್ರತಿಷ್ಠೆಯನ್ನು ವಿಧಿಸುವುದರಿಂದಲೂ, "**ತತ್ತ್ವಮಸಿ**" ಮೊದಲಾದ ಅನೇಕ ಶ್ರುತಿಗಳಿಂದ ಬೋಧಿಸಲ್ಪಡುವ ಲಿಂಗಾಂಗ ಸಾಮರಸ್ಯವನ್ನು ಬೋಧಿಸುವುದರಿಂದಲೂ ಶಿವಾಗಮಗಳು ವೇದಗಳಂತೆ ಸ್ವತಃ ಪ್ರಮಾಣಗಳೇ ಆಗಿರುವುವು.

(ಸಶೇಷ.)

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [4]

ಎಂ. ಎಸ್. ಗಂಗಂಣ ಮತ್ತು ಲೋಕಂಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!
ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು "**ಗೃಹಮಾತೆ**"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಿಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲುಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಆದ್ದರಿಂದ "ಅಷ್ಟವರ್ಗೌಷಧಾಲಯ"ವೆಂದು **ಈ ಔಷಧಾಲಯಕ್ಕೆ** ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟಿ ಪೂನಾ ಸಿಟಿ
Himalayan Ashtawarg Medical Hall
[1] **848. Ganjipet Poona City.**

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತ ಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರಸಬಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿ ಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿಯುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖಿನಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ, ಶಕ್ತಿವೈಶಿಷ್ಟ್ಯ, ಜಂಗಮಾರಾಧನ ಶಕ್ತಿ ಶಕ್ತಿಮುದ್ರಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಭಾಲಾಕ್ಷಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುರಗಿರಿ ಶ್ರೀ ಚಿದ್ಘನ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| 3 ಅಕ್ಷಯತೃತೀಯಾ (ತಾ|| 11-5-29) ನೆಯ ದಿವಸ ಪ್ರಕಾಶವಾಗುವದು. ಈ ದಿವಸದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.

ಶ್ರೀ ಶಿವತತ್ವಗ್ರಂಥಮಾಲಾಮಂದಿರ
[2] **ಜಂಗಮವಾಡಿಮಠ ಬನಾರಸ್ ಸಿಟಿ.**

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

ಅಮೂಲ್ಯವಾದ ಗುಣಗಳನ್ನುಳ್ಳ ಈ ಕಂಪನಿಯ ಪಾಲಿಸಿಗಳಲ್ಲೊಂದಾದ ಗ್ಯಾರಂಟೀಡ್ ಇನ್‌ವೆಸ್ಟ್‌ಮೆಂಟ್ ಪಾಲಿಸಿ.

ಈ ಪಾಲಿಸಿಯಲ್ಲಿ ವಿಮೆದಾರನು 5 ವರ್ಷಗಳು ಮಾತ್ರ ಕಂತುಗಳನ್ನು ಕೊಟ್ಟು ನಂತರ ಕೇವಲ ರೂ. 6 ರಂತೆ ಬಡ್ಡಿ ಕೊಡುತ್ತಾ ಬಂದರೆ ಮಿಗತಕ್ಕ 10 ಅಥವಾ 15 ಕಂತುಗಳನ್ನೆಲ್ಲಾ ಕಂಪೆನಿಯವರೇ ಸಾಲವಾಗಿ ಕಟ್ಟಿಕೊಳ್ಳುತ್ತಿರುತ್ತಾರೆ. ಸದರಿ ವಿಮೆಯು 10 ವರ್ಷಗಳನಂತರ ಮೃತಪಟ್ಟರೆ ಆಗದಾತಿ ಆಗುವ ಕಂತುಗಳನ್ನೆಲ್ಲಾ ವಜಾ ಮಾಡುತ್ತಾರೆ. ಅಥವಾ ಕಂತುಗಳನ್ನು ಕೊಡುತ್ತಾ ಬಂದಿದ್ದರೂ ಪಡ್ಯೂಲಿನಂತೆ ಕಂತುಗಳನ್ನು ವಿಮೆಯ ಮೊಬಲಗಿನ ಜೊತೆಯಲ್ಲಿ ವಾಪಸು ಮಾಡುತ್ತಾರೆ. ಒಂದು ವರ್ಷವಾದರೂ ವಿಮೆಯು ಜಾರಿಯಲ್ಲಿದ್ದು ಮೃತಪಟ್ಟರೆ ಆ ವರ್ಷದ ಲಾಭವನ್ನು ಸೇರಿಸಿಕೊಡುತ್ತಾರೆ (Interim Bonus).

ರೂ. 10,000 ಗಳಿಗೆ ವಿಮೆಮಾಡಿ ಮೊದಲನೆ 10 ವರ್ಷಗಳಲ್ಲಿ ಮೃತಪಟ್ಟರೆ ವಿಮೆಯು ರೂ. 10,000

11 ನೇ ವರ್ಷದಲ್ಲಿ	1 ಕಂತು	ರೂ. 10,600	16 ನೇ ವರ್ಷದಲ್ಲಿ	6 ಕಂತು	ರೂ. 13,600
12 ನೇ ವರ್ಷದಲ್ಲಿ	2 ,,	,, 11,200	17 ನೇ ವರ್ಷದಲ್ಲಿ	7 ,,	,, 14,200
13 ನೇ ವರ್ಷದಲ್ಲಿ	3 ,,	,, 11,800	18 ನೇ ವರ್ಷದಲ್ಲಿ	8 ,,	,, 14,800
14 ನೇ ವರ್ಷದಲ್ಲಿ	4 ,,	,, 12,400	19 ನೇ ವರ್ಷದಲ್ಲಿ	9 ,,	,, 15,400
15 ನೇ ವರ್ಷದಲ್ಲಿ	5 ,,	,, 13,000	20 ನೇ ವರ್ಷದಲ್ಲಿ	10 ,,	,, 16,000

[41]

ಏಜಂಟರು ಬೇಕಾಗಿದೆ.

ಬೊಂಬಾಯಿಗೆ ಬರೆಯಬೇಕಾದರೆ, ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು

ಬ್ರಾಂಚ್ ಆಫೀಸು, ಅಥವಾ **ಯಸ್. ರಾಮಸ್ವಾಮಿ,**
ಫೋರ್ಟ್, ಬೊಂಬಾಯಿ. ರೆಸಿಡೆಂಟ್ ಏಜಂಟ್, ಶಿವರಾಂಪೇಟೆ, ಮೈಸೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ## ವಜ್ರಾಂಗ ಸುಂದರಪಾಕ. [ಸ್ಪರ್ಧ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ರೌಚಕ್ಕೆ ಸಾಧ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂಧ, ಶಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಘೋಕರೀ ಬೀಜ, ಏವಳೀಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಜಾಯಿಪತ್ರಿ, ಪಿಶಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ನಾಲಾಮಿಶ್ರಿ, ಸಫೇತಮಿಶ್ರಿ, ಶಾಲೀಮಪಾನಾ, ಬೀಜಬಂದ, ಹರಣಬೋರಿ, ಮುಂಗಲೀ ಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾಜಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [12]

ಪತ್ತೆ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳೆಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ!

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟಿನಿಂದ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಹಚ್ಚಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜ಼ನ್ 8-8-0, ಡಜ಼ನ್ 16-8-0.

ಟಕ್ಕು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಿತ್ರಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಫರಂಗಿಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [36]

ಮಲೇರಿಯಾನ ಕಂಪೆನಿ, ನಂಬ್ರ ೫೧ ಮಂಗಳೂರು. ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹುಮನೋಹರವಾಗಿ ಮುದ್ರಿಸಿಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್‌ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನ ಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	ರೂ. ಆ. ಪೈ.	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೬॥ ಬೆಲೆ ೧ಕ್ಕೆ		೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ		೦—೦—೬
ಸಮ್ಯಃ ಪಂಚಸೋಪಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ		೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ		೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ಕ್ಕೆ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ		೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟೆ ದುಷ್ಕೃತ್ಯ ಖಂಡನ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಶನ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೩ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್, **ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ॥ ಪಂ॥ ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ॥ ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ॥ ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ನರವ್ಯಾಧಿಗಳೂ ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ನೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ನಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[41] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರಂ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ ನೇ ಏಪ್ರಿಲ್ ೧೯೨೯ [ಸಂಚಿಕೆ ೫೧.

ಸ್ವೀಕಾರ.

ಶಿವಮೊಗ್ಗಾ ಡಿ॥ ಹೆಬ್ಬಂಡಿಗ್ರಾಮದಲ್ಲಿ ನೆರವೇರಿದ ವೃಷಭೇಶ್ವರ ಪ್ರತಿಷ್ಠಾಮಹೋತ್ಸವಸಮಯದಲ್ಲಿ ಸದರಿ ಗ್ರಾಮದ ವೀರಶೈವಮಂಡಲಿಯವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 8 ರೂ. ಮತ್ತು ಭದ್ರಾವತೀ ಮ॥ ರಾ॥ ಅಂಗಡಿ ಸಂಜಪ್ಪನವರ ಬಸಪ್ಪನವರು ತಮ್ಮ ಪುತ್ರಿ ಸೌ॥ ಸಂಜಮ್ಮನನ್ನು ಹರಪನಹಳ್ಳಿ ಮ॥ ರಾ॥ ಫಕೀರಪ್ಪನವರ ಮೊಮ್ಮಗ ಚಿ॥ ಸಿದ್ದಪ್ಪನಿಗೆ ಕೊಟ್ಟು ಕನ್ಯಾದಾನಮಾಡಿದ ಸಮಯದಲ್ಲಿ ಸಮರ್ಪಿಸಿದ 5 ರೂ. ಒಟ್ಟು 13 ರೂಪಾಯಿಗಳು ವೇ॥ ಎಸ್. ಎಂ. ಸಿದ್ಧಾಂತಿ ಗುರುಬಸವಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಕಡೂರು ಡಿ॥ ಬೀರೂರು ಟವನ್ ನಿವಾಸಿಗಳಾದ ವೇ॥ ಕೋಟಿ ಚಿಕ್ಕಯ್ಯದೇವರ ಮೊಮ್ಮ ವೀರಭದ್ರಯ್ಯನವರ ಪುತ್ರ ಚಿ॥ ಸೋಮನಾಥಾರಾಧ್ಯರಿಗೆ ತರೀಕೆರೆ ತಾ॥ ಹುಣಸಘಟ್ಟದಮಠದ ವೇ॥ ಶಂಕರಯ್ಯನವರ ಮಕ್ಕಳು ಮರುಳಯ್ಯನವರ ಪುತ್ರಿ ಸೌ॥ ಸಂಜಮ್ಮನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಪರವಾಗಿ ವೇ॥ ಎಂ. ವಿ. ಮರುಲಸಿದ್ಧಯ್ಯನವರು ಸಮರ್ಪಿಸಿದ 5 ರೂ. ವಧುವಿನಪರವಾಗಿ ವೇ॥ ಶಂಕರಯ್ಯನವರ ಮಕ್ಕಳು ರುದ್ರಯ್ಯನವರು ಸಮರ್ಪಿಸಿದ 2 ರೂ. ಒಟ್ಟು 7 ರೂಪಾಯಿಗಳು ವೇ॥ ಟಿ. ಎಚ್. ಆರ್. ಆರಾಧ್ಯರದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ॥ ಗುಳೇದಗುಡ್ಡ ಗ್ರಾಮದ ಬೆಂಚ್ ಮ್ಯಾಜಿಸ್ಟ್ರೇಟ್ ಮ॥ ರಾ॥ ರಾಜನಾಳ ದಾನಪ್ಪನವರ ಪುತ್ರಿ ಸೌ॥ ಶಿವಮ್ಮನನ್ನು ಬಳ್ಳಾರಿ ಮ॥ ರಾ॥ ಕಲಗಣೆ ಗೂಳಪ್ಪನವರ ಪುತ್ರ ಚಿ॥ ಒಡೆದ್ಯಾಳ ಬಸಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಬಳ್ಳಾರಿ ಕಲ್ಲುಮಠದ ವೇ॥ ಪಂಪಯ್ಯನವರ ಹೇಳಿಕೆಯಪ್ರಕಾರ ವರನಕಡೆಯಿಂದ ಸಮರ್ಪಿಸಿದ 5 ರೂ. ವಧುವಿನ ಕಡೆಯಿಂದ 2 ರೂ. ಒಟ್ಟು 7 ರೂಪಾಯಿಗಳು ವೇ॥ ಶಿರೋಳ ಬೃಹನ್ಮಠದ ಪಂಚಾಕ್ಷರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರ ಡಿ॥ ವಾಂಗಿ ಹಿರೇಮಠದ ವೇ॥ ಪಂಪಾಡಪ್ಪನವರ ಪುತ್ರ ಚಿ॥ ಗಂಗಾಧರಯ್ಯನಿಗೆ ವಿಜಾಪುರ ಡಿ॥ ಜೈನಾಪುರ ಹಿರೇಮಠದ ವೇ॥ ಸಿದ್ಧರಾಮಪ್ಪಯ್ಯನವರ ಪುತ್ರಿ ಸೌ॥ ಗಂಗೂಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿದ 4 ರೂ. ಹಾಗೂ ಸದರಿ ಕನ್ಯೆಯ ಶಿವದೀಕ್ಷಾ ಸಂಸ್ಕಾರದಲ್ಲಿ ತೆಗೆಯಿಸಿದ 2 ರೂ. ಒಟ್ಟು 6 ರೂಪಾಯಿಗಳು ಜೈನಾಪುರ ಹಿರೇಮಠದ ವೇ॥ ಮಲ್ಲಿಕಾರ್ಜುನಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವ ಡಿ॥ ಸವದತ್ತಿ ತಾ॥ ಸುತ್ತಗಟ್ಟಿಯಲ್ಲಿರುವ ಹೂಲಿ ಬೃಹನ್ಮಠ ಶಾಖಾಮಠದ ವೇ॥ ಸಂಗಯ್ಯನವರು ಮತ್ತು ಸಿದ್ಧರಾಮಯ್ಯನವರು ಇವರ ಪುತ್ರರಾದ ಚಿ॥ ಸಿದ್ಧಲಿಂಗಯ್ಯ ಮತ್ತು ಸಿದ್ಧಬಸವಯ್ಯ ಈ ಉಭಯರ ಮಾಹೇಶ್ವರದೀಕ್ಷಾ ಮಹೋತ್ಸವವು ಹೂಲಿ ಬೃಹನ್ಮಠದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ॥ ರಾ॥ ಕರಬಸವಪ್ಪ ದೇಸಾಯಿ ಇವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ॥ ಗುಳೇದಗುಡ್ಡ ಗ್ರಾಮದ ಬೆಂಚ್ ಮ್ಯಾಜಿಸ್ಟ್ರೇಟ್ ಮ॥ ರಾ॥ ವಿರೂಪಾಕ್ಷಪ್ಪನವರು ಭಾವಿ ಇವರ ಪುತ್ರಿ ಸೌ॥ ಗೌರಮ್ಮನನ್ನು ಬಳ್ಳಾರಿ ಮ॥ ರಾ॥ ಸಿಂದಿಗಿ ಚರಮುಪ್ಪನವರ ಪುತ್ರ ಚಿ॥ ಸಿದ್ಧಬಸಪ್ಪನಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವಧುವಿನಿಂದ ಸಮರ್ಪಿಸಿದ 2 ರೂ. ವರನಿಂದ 1 ರೂ. ಒಟ್ಟು 3 ರೂ. ಗಳು ವೇ॥ ಹಂಜಿಗಿಮಠದ ಗುರುಪಾದಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಹಾವೇರಿ ನಿವಾಸಿಗಳಾದ ಮ॥ ರಾ॥ ಗಂಗಪ್ಪನವರ ಪುತ್ರ ಚಿ॥ ಗುರುಪಾದಪ್ಪನಿಗೆ ಲಕ್ಷ್ಮೇಶ್ವರದ ಹೂವಿನ ಮ॥ ರಾ॥ ಸಂಗಪ್ಪನವರ ಪುತ್ರಿ ಸೌ॥ ವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನಕಡೆಯಿಂದ ತೆಗೆಯಿಸಿದ 2 ರೂ. ವಧುವಿನಕಡೆಯಿಂದ 1 ರೂ. ಒಟ್ಟು 3 ರೂಪಾಯಿಗಳು ವೇ॥ ಹಿರೇಮಠದ ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಗುಳೇದಗುಡ್ಡದ ಮ॥ ರಾ॥ ಮುಂಡಾಸದ ಸಂಗಪ್ಪನವರ ಪುತ್ರ ಚಿ॥ ದಾನಪ್ಪನಿಗೂ ಮ॥ ರಾ॥ ಉಂಕಿ ಸಂಗಪ್ಪನವರ ಪುತ್ರಿ ಸೌ॥ ಶಿವಸಂಗವ್ವನಿಗೂ, ಮ॥ ರಾ॥ ಚಿಂದಿಪಿರುಪಣ್ಣನವರ ಪುತ್ರ ಚಿ॥ ವಿರೂಪಾಕ್ಷಪ್ಪನಿಗೂ ಮ॥ ಉಂಕಿ ಚನ್ನಬಸವಪ್ಪನವರ ಪುತ್ರಿ ಸೌ॥ ಚನ್ನಬಸವ್ವನಿಗೂ, ಮ॥ ರಾ॥ ಪರಪ್ಪನವರ ಪುತ್ರರಾದ ಚಿ॥ ಶಿವಪ್ಪ ಮತ್ತು ನೀಲಪ್ಪ ಇವರಿಗೆ ಕ್ರಮವಾಗಿ ಹಿರೇಕೇರೂರು ಮ॥ ರಾ॥ ಅಂಬಲಿ ಬಸವಲಿಂಗಪ್ಪನವರ ಪುತ್ರಿ ಸೌ॥ ನಾಗವ್ವ ಮತ್ತು ಗಜೇಂದ್ರಗಡದ ಮ॥ ಮಾಮನಿ ಅಮರಪ್ಪನವರ ಪುತ್ರಿ ಸೌ॥ ಗಂಗವ್ವ ಇವರಿಗೂ ನಡೆದ ವಿವಾಹ ಸಮಯದಲ್ಲಿ ಸಮರ್ಪಿಸಿದ 3 ರೂಪಾಯಿಗಳು ವೇ॥ ಸಾಲಿಮಠದ ಗುರುಬಸವಯ್ಯನವರ ದ್ವಾರಾ ತಲ್ಪಿರುತ್ತವೆ.

ರಾಜಧಾನಿಯ ನಿವಾಸಿಗಳಾದ ಮ॥ ರಾ॥ ಬೆಂಗಳೂರು ರುದ್ರಪ್ಪನವರ ಪುತ್ರ ಚಿ॥ ಯಲ್ಲಪ್ಪನಿಗೆ ಬೆಂಗಳೂರು ಹುಲಸೊರುಪೇಟೆ ಮ॥ ರಾ॥ ಚಿಕ್ಕಲಿಂಗಪ್ಪಶೆಟ್ಟರವರ ಪುತ್ರಿ ಸೌ॥ ವಿಶಾಲಾಕ್ಷಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವಧೂವರರಿಂದ ಸಮರ್ಪಿಸಿದ 2 ರೂ. ಗಳು ಮ॥ ರಾ॥ ಬಿ. ರುದ್ರಪ್ಪನವರದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ॥ ಕೊಟ್ಟೂರು ನಿವಾಸಿಗಳಾದ ಮ॥ ರಾ॥ ಕಂಬಿ ಅಜ್ಜಪ್ಪನವರ ಪುತ್ರಿಯ ಲಗ್ನದಲ್ಲಿ ಸಮರ್ಪಿಸಿದ 2 ರೂ. ಗಳು ವೇ॥ ಮಿ॥ ಮ॥ ಜಾಗಟಗೇರಿ ಚನ್ನವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರುಸಿಟಿ ಅರಳೀಪೇಟೆಯಲ್ಲಿರುವ ಸುಮತಿ ವೈದ್ಯಶಾಲಾ ಪ್ರೊಪ್ರೈಟರ್ ಪಂ॥ ರೇವಣಾರಾಧ್ಯರು ನೂತನ ಗೃಹವನ್ನು ಕಟ್ಟಿಸಿ ಪ್ರವೇಶೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ವೇ॥ ಎಚ್. ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಗುಳೇದಗುಡ್ಡಗ್ರಾಮದ ಮ॥ ತೊಗರಿ ವೀರಪ್ಪನವರ ಪುತ್ರ ಚಿ॥ ನಾಗಪ್ಪನಿಗೆ ಮ॥ ರಾ॥ ವಣಕೊಟ್ಟಿ ಸಿದ್ಧಪ್ಪನವರ ಪುತ್ರಿ ಸೌ॥ ನಾಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವಧೂವರರಿಂದ ಸಮರ್ಪಿಸಿದ 2 ರೂ. ಗಳು ಮ॥ ರಾ॥ ಮೂಲೆಮನಿ ಅನ್ನದಾನಪ್ಪನವರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾ॥ ಬಾಣಾವರ ಕೊಂಡಜ್ಜಿಮಠದ ವೇ॥ ಗಂಗಾಧರಪ್ಪಯ್ಯನವರು ತಮ್ಮ ಚಿ॥ ರೇಣುಕೇಶ್ವರನಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಶ್ರೀ ಜಗದ್ಗುರು ರೇಣುಕನ ಕೃಪೆಯಿಂದ ಗುಣವಾದ ಸಂತೋಷಾರ್ಥವಾಗಿ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಹರಿಹರದಲ್ಲಿರುವ ಮ॥ ರಾ॥ ಗೌಡಗೆರೆ ಬಸಪ್ಪನ ತಮ್ಮ ಹನುಮಂತಪ್ಪನಿಗೆ ಪುತ್ರನು ಜನಿಸಿದ ಸಂತೋಷಕ್ಕಾಗಿ ವೇ॥ ಗಜಾಪುರ ಮಠದ ಗುರುಸಿದ್ಧಯ್ಯನವರು ಮತ್ತು ಅಣಜಿಮಠದ ಚನ್ನಬಸವಯ್ಯನವರು ತೆಗೆಯಿಸಿದ 1 ರೂ. ಬ್ರ॥ ಪಂ॥ ಭುಜನಾಸಂಘದವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಮ॥ ರಾ॥ ಕಲ್ಲಗಣೆ ಮರಿಬಸಪ್ಪನವರ ಪುತ್ರನ ಲಿಂಗಧಾರಣ ಸಮಯದಲ್ಲಿ ಸಮರ್ಪಿಸಿದ 1 ರೂ. ವೇ॥ ಶೀಲವಂತಮಠದ ಬಸವರಾಜಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ದಕ್ಷಿಣ ಆಫ್ರಿಕಾದೇಶದ ಸ್ವೈರೋಬಿಯ ರಾಬರ್ಟ ಓಕ್ಲಿ ಎಂಬ ಐರೋಪ್ಯ ಜಮೀನ್‌ದಾರನು ತನ್ನಲ್ಲಿ ಕೆಲಸಮಾಡುತ್ತಿದ್ದ ಒಬ್ಬ ನಿಗ್ರೋ ಕೂಲಿಗಾರನನ್ನು ವಿಚಿತ್ರ ಹಿಂಸೆಗೆ ಗುರಿಪಡಿಸಿ ಕೊಂದುಬಿಟ್ಟನು. ಅಲ್ಲಿಯ ಮ್ಯಾಜಿಸ್ಟ್ರೇಟರು ಓಕ್ಲಿಯನ್ನು ವಿಚಾರಣೆಗೆ ಗುರಿಪಡಿಸಲು ಅವನು ಅಲ್ಲಿಂದ ತಲೆತಪ್ಪಿಸಿಕೊಂಡು ಓಡಿಹೋದನು. ಮೃತನ ಸಂಬಂಧಿಗಳಾದ ನಿಗ್ರೋಜನರು ಓಕ್ಲಿಯ ಮನೆಗೆ ನುಗ್ಗಿ ಅವನ ಆಸ್ತಿಯನ್ನೆಲ್ಲಾ ಲೂಟಿಮಾಡಿ, ತಮ್ಮ ಸೇಡನ್ನು ತೀರಿಸಿಕೊಂಡರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಶ್ರೀಕ್ಷೇತ್ರಕಾಶೀ.

ತಾ|| 23-3-29 ರಲ್ಲಿ ಭೂಕೈಲಾಸ ಕಾಶೀಕ್ಷೇತ್ರ ಪ್ರವಿರಾಜಮಾನವಾದ ಜಂಗಮವಾಡೀಮಠ ವಿಶ್ವಾರಾಧ್ಯ ಮಹಾಸಂಸ್ಥಾನ ಕೈಲಾಸಮಂಟಪದ ಊರ್ಧ್ವಭಾಗದಲ್ಲಿ ಜಗದಾಚಾರ್ಯರ ಜಯಂತಿಯು ವೈಭವದಿಂದ ನೆರವೇರಿತು. ಇಲ್ಲಿಯ ವೀರಮಾಹೇಶ್ವರರು ಪ್ರಾತಃಕಾಲದಲ್ಲಿ ಜಗದಾಚಾರ್ಯರ ಭಾವಪಟವನ್ನು ಪೂಜಿಸಿ ಮಧ್ಯಾಹ್ನದಲ್ಲಿ ಫಲಭಕ್ಷ್ಯಭೋಜ್ಯಾದಿಗಳಿಂದ ನೈವೇದ್ಯವಂ ಮಾಡಿ ಬಳಿಕ ಸರ್ವರೂ ಪ್ರಸಾದಸೇವನೆಯಂ ಮಾಡಿದರು. ಮಧ್ಯಾಹ್ನ ಮೂರುಘಂಟೆಗೆ ಸೆಂಟ್ರಲ್ ಹಿಂದೂಕಾಲೇಜ ಪ್ರಿನ್ಸಿಪಾಲ್ ಎ. ಅನಂತರಾಮಶರ್ಮಾ ಶಾಸ್ತ್ರಿಗಳವರು, ಪಂ|| ಕೇದಾರನಾಥಶಾಸ್ತ್ರಿಗಳು, ಪಂ|| ಕಾಶೀನಾಥಶಾಸ್ತ್ರಿಗಳು ಮುಂತಾದ ಪಂಡಿತರೊಡನೆ ಆಗಮನಮಾಡಿದರು. ಮಹಾಸಂಸ್ಥಾನ ಏಜೆಂಟ ಶಾಸಗಾಂವ ಶ್ರೀಗುರುಪಟ್ಟಾಧೀಶ್ವರ ಶ್ರೀ ಪಂಚಾಕ್ಷರಶಿವಾಚಾರ್ಯಸ್ವಾಮಿಗಳವರು ವಿದ್ಯಾರ್ಥಿಮಂಡಲಿಯೊಡನೆ ಸಿದ್ಧರಾಗಿದ್ದು ಸ್ವಾಗತವಂಮಾಡಿ ಕೈಲಾಸಮಂಟಪದಲ್ಲಿ ವಿರಾಜಿಸುವ ಶ್ರೀ ಜಗದ್ಗುರು ವಿಶ್ವಾರಾಧ್ಯಸಿಂಹಾಸನ (ಶ್ರೀ ಶಶ್ಯ ಮಲ್ಲಿಕಾರ್ಜುನಮಹಾಸ್ವಾಮಿ ಗಾದಿಸ್ವಾಮಿಯು) ಸನ್ನಿಧಿಯಲ್ಲಿಗೆ ಕರೆದೊಯ್ದರು. ಮಹಾಸಂಸ್ಥಾನ ಆಸ್ಥಾನವಿದ್ವಾನ್ ಪಂಡಿತ ಭಾಲಾಕ್ಷಶಾಸ್ತ್ರಿಗಳವರು ಪ್ರಿನ್ಸಿಪಾಲ್ ಮಹೋದಯರಿಗೆ ಶ್ರೀ ವಿಶ್ವಾರಾಧ್ಯಪೀಠದ ಇತಿಹಾಸವನ್ನು ಸಂಕ್ಷೇಪತಃ ತಿಳುಹಿಸಿದರು. ಬಳಿಕ ಶ್ರೀ|| ಪ್ರಸಾದಪ್ರದಾನವು ಮಾಡಲ್ಪಟ್ಟಿತು. ಅನಂತರ ಮಹಾಸಂಸ್ಥಾನ ಸಭಾಮಂಟಪ (ಚಿತ್ರಶಮರಾ) ದಲ್ಲಿ ಪ್ರಿನ್ಸಿಪಲ್ ಮಹೋದಯರು ಆಗಮನಮಾಡಿ ಹಿಂದುಮುಸಲ್ಮಾನ ಮಹಾರಾಜ ಬಾದಶಹರಿಂದ ಕೊಡಲ್ಪಟ್ಟಿರುವ ದಾನಶಾಸನಗಳನ್ನು ಅವಲೋಕಿಸಿದರು. ಬಳಿಕ ಕೈಲಾಸಮಂಟಪದ ಮೇಲುಭಾಗದಲ್ಲಿ ಸ್ಥಾಪಿಸಲ್ಪಟ್ಟಿದ್ದ ಶ್ರೀ ರೇಣುಕಾಚಾರ್ಯ ಮೂರ್ತಿ ಸನ್ನಿಧಾನದಲ್ಲಿ ಬಿಜಯಂಗೈಸಿ ವಿಶ್ವಾರಾಧ್ಯಪೀಠಸಂದರ್ಶನ ಶ್ರೀ ರೇಣುಕಾಚಾರ್ಯ ಮೂರ್ತಿ ಸಂದರ್ಶನದಿಂದ ನಾನು ಇಂದಿಗೆ ಧನ್ಯನಾದೆನು, ಇತ್ಯಾದಿ ಭಾಷಣಮಾಡಿದರು. ಬಳಿಕ ಶ್ರೀ ಪುರಗಿರಿ ಚಿದ್ಘನಶಿವಾಚಾರ್ಯರು ಶ್ರೀ ರೇಣುಕಾಚಾರ್ಯರ ಜಯಂತಿಯ ಶುಭದಿವಸದಲ್ಲಿ ತಮ್ಮಗಳ ಆಗಮನವಾದದ್ದು ನಮ್ಮೆಲ್ಲರಿಗೆ ಪರಮಾನಂದವಾಗಿದೆ. ಶ್ರೀ ರೇಣುಕಾದ್ಯಾಚಾರ್ಯರು ಶ್ರೀ ಪಂಚಮುಖನ ಪಂಚಮುಖಗಳಿಂದ ಕೈಲಾಸದಲ್ಲಿ ಅವಿರ್ಭವಿಸಿ ಭೂಲೋಕದಲ್ಲಿ ಕೊಲ್ಲಿಪಾಕಿ ಸೋಮೇಶ್ವರಾದಿ ಲಿಂಗಗಳಿಂದ ಪ್ರಕಾಶರಾಗಿ ಮುನಿಗಣ ಮಹಾರಾಜವೃಂದಕ್ಕೆ ಶಿವಶಕ್ತ್ಯುಪದೇಶವಂ ಮಾಡಿ ಶಕ್ತಿವಿಶಿಷ್ಟಾದ್ವೈತಸ್ಥಾಪನಾಚಾರ್ಯರಾಗಿರುವರೆಂದು ಸಂಸ್ಕೃತದಲ್ಲಿ ಹೇಳಿದರು. ಬಳಿಕ ಶ್ರೀ ರೇಣುಕಾಚಾರ್ಯರ ಪ್ರಸಾದವಂ ಸ್ವೀಕರಿಸಿ ಸಂತೋಷಚಿತ್ತದಿಂದ ತಮ್ಮ ಮಂದಿರಕ್ಕೆ ತೆರಳಿದರು.

ಸಾಯಂಕಾಲ ೬|| ಘಂಟೆಯ ಸಮಯಕ್ಕೆ ಸಭೆಯು ಸೇರಿತು ವೇ|| ಪಂ|| ಭಾಲಾಕ್ಷಶಾಸ್ತ್ರಿಗಳವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಶ್ರೀ ಮಹಾಲಿಂಗಸ್ವಾಮಿ ಕಾಶೀಕರ ಇವರು ಸಭಾವ್ಯವಸ್ಥಾಕಾರ್ಯಕರ್ತ್ಯರಾಗಿದ್ದರು. ಅವರಾದಿ ಶ್ರೀ|| ಮ|| ರಾ|| ಸಂಗಪ್ಪನವರು, ತುಳಜಾಪೂರದವರು ಮುಂತಾದ ಭಕ್ತವರ್ಗದವರು ಭಕ್ತಿಯಿಂದ ಆಗಮಿಸಿದ್ದರು. ಮೊದಲು ಶ್ರೀ ರೇಣುಕಾಚಾರ್ಯರ ಭಜನವು ಪ್ರಾರಂಭವಾಯಿತು. ಗಬ್ಬೂರು ಶ್ರೀ ವೃಷಭೇಂದ್ರ ಶಿವಾಚಾರ್ಯ ಚರಮೂರ್ತಿಸ್ವಾಮಿಗಳವರು ಹಾರ್ಮೋನಿಯಂ ಚನ್ನಾಗಿ ನುಡಿಸುತ್ತ ಮಂಗಲವನ್ನು ಮಾಡಿದರು. ಅನಂತರ ಸಭಿಕರ ಪ್ರಾರ್ಥನೆಯ ಮೇರೆಗೆ ಶ್ರೀ ಪುರಗಿರಿ ಚಿದ್ಘನಶಿವಾಚಾರ್ಯ ಪಟ್ಟಾಧ್ಯಕ್ಷಸ್ವಾಮಿಗಳು "ಶ್ರೀ ರೇಣುಕವಿಜಯ" ಗ್ರಂಥದ್ವಾರಾ ಶ್ರೀ ರೇಣುಕಾಚಾರ್ಯರು ಶ್ರೀಭವಾನೀಪತಿಯ ಆಜ್ಞಾನುಸಾರವಾಗಿ ಕೊಲ್ಲಿಪಾಕಿ ಮಹಾಕ್ಷೇತ್ರದಲ್ಲಿರುವ ಶ್ರೀ ಸೋಮೇಶ್ವರ ಮಹಾಲಿಂಗದಿಂದ ಆವಿರ್ಭವಿಸಿ ಭೂಲೋಕದಲ್ಲಿ ೭೦೦ ಏಳುನೂರು ವರ್ಷ ಪ್ರಕಟವಾಗಿಯೂ ೭೦೦ ಏಳುನೂರು ವರ್ಷ ಗುಪ್ತವಾಗಿಯೂ ಸಂಚರಿಸಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಸ್ಥಾಪಿಸಿದ ವಿಷಯವನ್ನೂ ಹಾಗೂ ಜಯಂತಿಯ ವಿಷಯವನ್ನೂ ವ್ಯಾಸಪೀಠವನ್ನಲಂಕರಿಸಿ ಬೋಧಿಸಿದರು. ಶ್ರೀ ಮಹಾಲಿಂಗಸ್ವಾಮಿ ಕಾಶೀಕರ್ ಇವರು ಶ್ರೀ ರೇಣುಕ ಜಯಂತಿಯನ್ನು ಚಿರಸ್ಥರನೀಯವಾಗುವಂತೆ ಸರ್ವತ್ರ ಪ್ರಸಾರಗೊಳಿಸಬೇಕೆಂದೂ ನಮ್ಮಲ್ಲಿ ಪಂಡಿತರಾದವರು ಶ್ರೀಮದಾಚಾರ್ಯ ಸಿದ್ಧಾಂತ ಶ್ರೀಮದಾಚಾರ್ಯರಲ್ಲಿ ಭಕ್ತಿಗಳನ್ನು ಪ್ರಸಾರಗೊಳಿಸದೆ ಇರುವದರಿಂದ ಅವರಮೇಲೆ ದೋಷವನ್ನು ಕೊಡಬೇಕಾಗಿದೆಯೆಂದೂ ಭಾಷಣಮಾಡಿದರು. ತರುವಾಯ ಅವರಾದಿ ಸಂಗಪ್ಪನವರು ಶ್ರೀ ರೇಣುಕಾಚಾರ್ಯರ ಗೋತ್ರಸೂತ್ರಗಳನ್ನು ನಾವು ಹೇಳುತ್ತಿರುವೆವು. ವೇದಾಗಮಗಳಲ್ಲಿ ಅವಶ್ಯವಾಗಿ ಶ್ರೀ ರೇಣುಕಾದ್ಯಾಚಾರ್ಯರ ಪ್ರಭಾವವು ಇದ್ದಿರಬೇಕೆಂದು ಊಹಿಸಿದ್ದೆವು ಆದರೆ ನಾವು ವಿದ್ಯಾವಿಹೀನರಾದ್ದರಿಂದ ಇದುವರೆಗೂ ಯಾವುದೂ ತಿಳಿಯಲಿಲ್ಲ. ಈಗ ಶ್ರೀ ರೇಣುಕಾಚಾರ್ಯರ ಚರಿತ್ರವನ್ನು ಕೇಳಿ ಧನ್ಯನಾದೆನು. ಈ ಚರಿತ್ರವನ್ನು ದೇವನಾಗರೀಲಿಪಿಯಲ್ಲಿ ಮುದ್ರಿಸಲು ಧನಸಹಾಯಮಾಡುವೆನೆಂದು ಹೇಳಿ ಕೂಡಲೆ ಧನಸಹಾಯವನ್ನು ಮಾಡಿದರು. ಈ ಗುರುಪುತ್ರರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ಅನಂತರ ಧರ್ಮಶಾಸ್ತ್ರಜ್ಞಾನವಿಲ್ಲದ ಒಬ್ಬಿಬ್ಬ ವಿದ್ಯಾರ್ಥಿಗಳು ನಾಸ್ತಿಕವಾದರೂಪವಾದ ವಕ್ರಮಾರ್ಗವನ್ನು ಪ್ರವೇಶಿಸಿದರು. ಆಗ ಪುರಗಿರಿ ಚಿದ್ಘನಶಿವಾಚಾರ್ಯರು ಅವರಿಗೆ ಧರ್ಮಶಾಸ್ತ್ರೀಯ ವಿಷಯವನ್ನು ಉತ್ತಮರೀತಿಯಿಂದ ಬೋಧಿಸಿ ಸನ್ಮಾರ್ಗಕ್ಕೆ ತಂದರು. ಪೂರ್ವಾಚಾರ್ಯರ ವಿಷಯದಲ್ಲಿ ವಿರುದ್ಧಾಭಿಪ್ರಾಯವನ್ನು ತೋರಿಸುವದು ವಿಜಾತೀಯತ್ವವನ್ನು ವ್ಯಕ್ತಪಡಿಸುವದು. ಲಿಂಗಧಾರಿಗಳಾದ ಸರ್ವಸದ್ವಂಶೀಯರು ಆಚಾರ್ಯಪಾದರಲ್ಲಿ ನಿರತಿಶಯವಾದ ಭಕ್ತಿಯುಳ್ಳವರಾಗಿ ಮುಕ್ತಿಸುಖವನ್ನನುಭವಿಸಿ ಧನ್ಯರಾಗಲೆಂದು ಪ್ರಾರ್ಥಿಸುವ,

ಆಚಾರ್ಯಪಾದಸೇವಕ.

ತುಮಕೂರು.

ಶ್ರೀ ಪರಶಿವನ ಪಂಚಮುಖೋದ್ಭೂತರೂ ವೀರಶೈವ ಧರ್ಮಸ್ಥಾಪಕರೂ ಅಷ್ಟಾವರಣ ಪಟ್ಸ್ಥಲ ದೀಕ್ಷಾ ಶಿಕ್ಷಾ ಮೋಕ್ಷಾದಿಗಳಿಗೆ ಕಾರಣೀಭೂತರೂ ಆಗಿರುವ ಶ್ರೀ ಜಗದ್ಗುರು ಪಂಚಕದಲ್ಲೊಬ್ಬರಾದ ಶ್ರೀ ರೇಣುಕ ಶಿವಾಚಾರ್ಯರ ಜಯಂತಿ ಮಹೋತ್ಸವವನ್ನು 23.3-29ನೇ ಸ್ಥಿರವಾರ ಈ ಪಟ್ಟಣದ ಸಕಲ ವೀರಶೈವ ಮಹಾಜನಗಳು ಅಸಾಧಾರಣವಾದ ವೈಭವದಿಂದ ನೆರವೇರಿಸಿದರು. ಫಾಲ್ಗುಣ ಶುದ್ಧ ೩ ಯಿಂದ ಪ್ಲೀಡರ್ ಗುರುಸಂಗಾರ್ಯರು ಶ್ರೀ ಸಾಂಬಮೂರ್ತಿಗೂ ಶ್ರೀಮದಾಚಾರ್ಯರ ಲಿಂಗೋದ್ಭವ ಲೀಲಾ ಮೂರ್ತಿಗೂ ಪ್ರತಿದಿನವೂ ಪ್ರಭಾತಸಮಯದಲ್ಲಿ ಶ್ರೀ ರುದ್ರ ಪುರುಷಸೂಕ್ತ ಪಾರಾಯಣ ಪೂರ್ವಕವಾಗಿ ಮಹಾಭಿಷೇಕವನ್ನೂ ಅಷ್ಟವಿಧಾರ್ಚನೆಯನ್ನೂ ನೆರವೇರಿಸಿ ಜಯಂತಿಯ ವ್ರತವನ್ನು ಪೂರೈಸಿ ಜಂಗಮಾರಾಧನೆಯನ್ನು ಮಾಡಿ ಶ್ರೀ ಗುರುಕೃಪೆಗೆ ಪಾತ್ರರಾದರು. ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿಯವರು 3-4 ದಿನಗಳಿಂದಲೂ ಗ್ರಾಮಾನುಗ್ರಾಮಗಳಿಗೆಲ್ಲಾ ಕರಪತ್ರಗಳನ್ನು ಹಂಚಿಸಿ ಮಹಾಜನಗಳ ಸಹಾಯಸಂಪತ್ತಿಯನ್ನು ಪಡೆದು ಪೂರ್ವಭಾವಿಯಾಗಿಯೇ ನಿರ್ಧರಿಸಿದ ಕ್ರಮದಂತೆ ಆ ದಿನದ ಅರುಣೋದಯದೊಳಗಾಗಿ ತಳಿರುತೋರಣ ರಂಭಾಸ್ತಂಭಸಾರಣೆಕಾರಣೆ ರಂಗವಲ್ಲಿಗಳಿಂದ ಸಕಲ ದೇವಾಲಯಗಳು ಪುರವೀಧಿಗಳು ಅಲಂಕರಿಸಲ್ಪಟ್ಟು ಎಲ್ಲೆಲ್ಲಿಯೂ ಶ್ರೀಮದಾಚಾರ್ಯರ ಜಯಧ್ವಾನವೂ ದೇವಾಲಯಗಳಲ್ಲಿ ಮಂತ್ರಘೋಷವೂ ಕೇಳಿ ಬರುತ್ತಿತ್ತು. ಶ್ರೀ ನೀಲಕಂಠೇಶ್ವರ ದೇವಾಲಯದಲ್ಲಿ ಸುವಾಸಿತ ಪುಷ್ಪಮಾಲಿಕೆಗಳಿಂದ ಶೋಭಾಯಮಾನವಾಗಿ ಶೃಂಗರಿಸಲ್ಪಟ್ಟಿದ್ದ ಗುರುಸಾರ್ವಭೌಮ ಶ್ರೀ ರೇಣುಕನ ನವಲೀಲಾಭಾವಚಿತ್ರವನ್ನು ಎಡಬಲಗಳಲ್ಲಿ ರಮ್ಯವಾಗಿ ಪರಿಶೋಭಿಸುತ್ತಿದ್ದ ಶ್ರೀಮದುಜ್ಜಯಿನೀ ಸದ್ಧರ್ಮಪೀಠಾಧಿಪತಿಗಳಾದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಮತ್ತು ವೀರಸಿಂಹಾಸನಾಧ್ಯಕ್ಷರಾದ ಜಗದ್ಗುರು ಶಿವಾನಂದ ರಾಜದೇಶಿಕೇಂದ್ರ ಶಿವಾಚಾರ್ಯರ ಮತ್ತು ಶ್ರೀಮದಾಚಾರ್ಯ ಚಿತ್ಕಲಾಸ್ತರೂಪರೂ ಸನಾತನ ಧರ್ಮೋದ್ಧಾರಕರೂ ಲೋಕಮಾನ್ಯರೂ ಗುರುಕುಲತಿಲಕರೂ ಆದ ಶ್ರೀ ನಾಗನೂರು ಬೃಹನ್ಮಠಾಧ್ಯಕ್ಷ ಪಂಡಿತ ವೇ|| ಬ್ರ|| ಶ್ರೀ|| ಕಾಶೀನಾಥಶಾಸ್ತ್ರಿಗಳವರ ಭಾವಚಿತ್ರಗಳೊಂದಿಗೆ ಶ್ವೇತಛತ್ರ ಪತಾಕಾದಿಗಳಿಂದೊಡಗೂಡಿ ಪ್ರೇಕ್ಷಕರನ್ನು ಭಕ್ತಿಪರವಶರನ್ನಾಗಿ ಮಾಡುತ್ತಿದ್ದ ಪುಷ್ಪರಥದಲ್ಲಿ ಬಿಜಮಾಡಿಸಿ 8 ಘಂಟೆಗೆ ನಾನಾವಿಧ ವಾದ್ಯವೈಭವಂಗಳಿಂದಲೂ ಅಸಂಖ್ಯ ಭಕ್ತಮಾಹೇಶ್ವರ ಶ್ರೇಣಿಯಿಂದಲೂ ಸಬಿಡೀಕೃತನಾಗಿದ್ದ ಮಹೋತ್ಸವವು ವದ್ಧತಿಯಂತೆ ದೇವಾಲಯದಿಂದ ಹೊರಟು ಪುರವೀಧಿಗಳಲ್ಲಿ ಹಾದು ಸೆಲೆವೆಡೆಗೆ ಚಿತ್ತೈಸುವಲ್ಲಿ ಮಧ್ಯಾಹ್ನ 2 ಘಂಟೆಯಾಯಿತು. ಉತ್ಸವದ ಮುಂಭಾಗದಲ್ಲಿ ಗುರುಸೇವಾಧುರೀಣರಾದ ಬಾಲಕರು ವೀರಶೈವ ಕವಿವರ್ಯ ವೇ|| ಅಮರನಾಥ ಕವೀಂದ್ರರಿಂದ ನೂತನವಾಗಿ ರಚಿಸಲ್ಪಟ್ಟ ಶ್ರೀ ಜಗದ್ಗುರು ಸ್ತೋತ್ರಮಾಲಿಕೆಯನ್ನು ಹಾಡುತ್ತ ನಡೆಯುತ್ತಿರಲು, ಅವರ ಹಿಂಭಾಗದಲ್ಲಿ ಅತ್ಯಂತಸುಂದರ ವಾದ್ಯನಿನಾದವು ಭಕ್ತರ ಚಿತ್ತಾಕರ್ಷವಂ ಗೈಯ್ಯುತ್ತಿರಲು, ಶಿವಾಂಶೀಭೂತರಾದ ಶ್ರೀ ಜಗದ್ಗುರು ಪಂಚಕದ ಅಸಾಧಾರಣ ಲೀಲಾಮಹತ್ವವಂ ದಶದಿಕ್ಕುಗಳಲ್ಲೂ ಪ್ರಸಾರಗೊಳಿಸುತ್ತ ಮಹಾಚಾರ್ಯಕೀರ್ತಿಪ್ರಭಾವವಂ ನಭೋಮಂಡಲದೊಳ್ ಸೂಚಿಸುತ್ತಿರುವ ಜಯಲಕ್ಷ್ಮಿಯ ಜಯಪತಾಕೆಯೋ ಎಂಬಂತೆ ಸಂದಿಗ್ಧವು ಭಕ್ತಿಯುತರಾದ ವೀರಪುತ್ರರಿಂ ಮೆರೆಯುತ್ತಿರಲು, ವೀಧಿಗಳ ಇಕ್ಕೆಲದಲ್ಲೂ ಸುಮಂಗಲೆಯರು ಬಾಲಬಾಲಿಕೆಯರು ಶ್ರೀ ಜಗದಾಚಾರ್ಯರುಗಳಿಗೆ ಅತಿಭಕ್ತಿಯಿಂ ಫಲಪುಷ್ಪ [illegible] ಸಮರ್ಪಿಸಿ ಧನ್ಯರಾಗುತ್ತಿದ್ದರು. ಇಂತು ಶ್ರೀ [illegible] ವು ಸಾಂಗವಾಗಲು ಶ್ರೀ ನಂದೀಶ್ವರಾಲಯ [illegible] 4 ಗಂಟೆಗೆ ಪಾನಕಪೂಜಾ ವಿನಿಯೋಗವಾಗಿ [illegible] ಸೇವೆಯು ನಡೆಯಿಸಲ್ಪಟ್ಟಿತು. ಅಂದಿನ ರಾತ್ರಿ [illegible] ಗಾಯಿತು 3 ಘಂಟೆಗಳವರೆಗೆ ಶ್ರೀ ನೀಲಕಂಠೇಶ್ವರಾಲಯದಲ್ಲಿ "ಶ್ರೀ ರೇಣುಕವಿಜಯ" ಕೀರ್ತನವು ಅನುವಾದಮಾಡಲ್ಪಡಲು ಶ್ರೀ ಜಗದಾಚಾರ್ಯರ ಅಸಾಧಾರಣಲೀಲಾಮಹತ್ವವನ್ನು ಕೇಳಿ ಸರ್ವರೂ ಶ್ರೀ ಗುರುಧ್ಯಾನಲೀನಮಾನಸರಾಗಿದ್ದರು. ಸೋಮವಾರ ರಾತ್ರಿ ಕೀರ್ತನವು ಸಮಾಪ್ತವಾಗಲು ಮಹಾಮಂಗಲ ನೀರಾಜನವೂ ಪುಷ್ಪಾಂಜಲಿಯೂ ನೆರವೇರಿ ಪ್ರಸಾದವಿನಿಯೋಗವಾಯಿತು. ಅನಂತರ ಕಾಲೋಚಿತ ಭಾಷಣದಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ವೇ|| ಪಂ|| ಶ್ರೀ|| ಕಾಶೀನಾಥಶಾಸ್ತ್ರಿಗಳವರ ಪವಿತ್ರನಾಮಸಂಕೀರ್ತನದಿಂದಲೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದಲೂ ಧಾರ್ಮಿಕಸಭೆಯು ವಿರಮಿಸಲ್ಪಟ್ಟಿತು. ಈ ಜಯಂತಿಮಹೋತ್ಸವವನ್ನು ನಿರತಿಶಯಭಕ್ತಿಯಿಂ ನೆರವೇರಿಸಿದ ವೀರಶೈವಮಹಾಜನಗಳಿಗೂ ಮತ್ತು ಆ ದಿನ ಉದ್ಯೋಗವನ್ನು ನಿಲ್ಲಿಸಿ ತ್ರಿಕರಣಪೂರ್ವಕವಾಗಿ ಗುರುಸೇವಾನಿರತರಾಗಿದ್ದ ಶ್ರೀ ಜಗದ್ಗುರು ಪಂಚಾಚಾರ್ಯಸೇವಾಮಂಡಲಿಯವರಿಗೂ ಶ್ರೀ ಸಾಂಬಮೂರ್ತಿಯೂ ಶ್ರೀ ಜಗದಾಚಾರ್ಯರೂ ಸಕಲ ಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಗುರುಧ್ಯಾನಲೀನಮಾನಸ,

ತುಮಕೂರು ದೇಶಪಾಂಡೆ ಜವರ್ ಭೋಜಪ್ಪಾಡಪ್ಪ.

ಕುರುಗೋಡು.

ವಿಭವನಾಮ ಸಂ|| ಫಾಲ್ಗುಣ ಶು|| ೧೩ ತಾ|| 23-3-29 ಶನಿವಾರ ದಿವಸ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಜಯಂತ್ಯುತ್ಸವಕ್ಕೋಸ್ಕರ ಇಲ್ಲಿಯ ಭಜನಾಸಂಘದ ಅಧ್ಯಕ್ಷರಾದ ಮೇಲುಮಠದ ಬಸವಲಿಂಗಯ್ಯನವರು ಸಂಘದ ವ್ಯವಸ್ಥಾಪಕರಾದ ಶ್ರೀಮಂತ ನಾಡಗೌಡ್ರ ಮಲ್ಲಿಕಾರ್ಜುನಗೌಡ್ರು ಇಮ್ಮಡಿಗೌಡ್ರ ಚಂದ್ರಶೇಖರಗೌಡ್ರು ಭಜನಾಸಂಘದ ಸೆಕ್ರೆಟರಿಗಳು ಇವರೆಲ್ಲರು ವೇ|| ಬಸಲಿಂಗಯ್ಯನವರ ಭಜನಾಮಂದಿರದಲ್ಲಿ ಅಲಂಕರಿಸಿದ್ದ ಮಹಾಚಾರ್ಯರ ಭಾವಚಿತ್ರವನ್ನು ಭಕ್ತಿಪೂರ್ವಕವಾಗಿ ವಿವಿಧೋಪಚಾರಗಳಿಂದ ಪೂಜಿಸಿ ಸಂಜೆಯ 7 ಗಂಟೆಯ ಸಮಯಕ್ಕೆ ವಾದ್ಯವೈಭವಗಳೊಡನೆಯೂ, ಭಜನಾಸಂಘದ ಭಜನೆಯೊಡನೆಯೂ ಛತ್ರಚಾಮರಾದಿ ಸಕಲಮರ್ಯಾದೆಗಳೊಡನೆಯೂ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಭಾವಮೂರ್ತಿಯನ್ನು ವಿನ್ಯಾಸಮಾಡಿ ಉತ್ಸವವನ್ನು ನಡೆಯಿಸಿದರು. ಈ ಉತ್ಸವಕ್ಕೆ ಸಮೀಪದ ಗ್ರಾಮಗಳ ಗುರುಭಕ್ತರೆಲ್ಲರೂ ಆಗಮಿಸಿದ್ದರು. ಮುಖ್ಯಮುಖ್ಯ ಬೀದಿಗಳಲ್ಲಿ ಮೆರವಣಿಗೆಯು ಹೊರಟು ರಾತ್ರಿ 9 ಘಂಟೆಗೆ ಉತ್ಸವವು ಶ್ರೀ ವೃಷಭೇಶ್ವರಾಲಯವನ್ನು ತಲುಪಿದ ಬಳಿಕ ವೃಷಭೇಶ್ವರನಿಗೆ ಮಂಗಲಾರತಿಯನ್ನು ಮಾಡಿಸಿ ಶ್ರೀ ಆಚಾರ್ಯರ ಜಯಘೋಷದೊಡನೆ ಉತ್ಸವವು 9½ ಘಂಟೆಗೆ ವೇ|| ಬಸವಲಿಂಗಯ್ಯನವರ ಭಜನಾಮಂದಿರಕ್ಕೆ ಪ್ರವೇಶಿಸಿತು. ಆಚಾರ್ಯರ ಭಾವಮೂರ್ತಿಯನ್ನು ಭದ್ರಪೀಠದಲ್ಲಿ ಮೂರ್ತಮಾಡಿಸಿದ ತರುವಾಯ ವೇ|| ಬಸವಲಿಂಗಯ್ಯನವರು ಪಂಚಾಚಾರ್ಯರಮಹತ್ವದ ಮೇಲೆ ಉಪನ್ಯಾಸವನ್ನು ಮಾಡಿ ಗುರುಭಕ್ತಿಯನ್ನು ಪ್ರಕಾಶಗೊಳಿಸಿದರು. ಅನಂತರ ಪ್ರಸಾದವನ್ನು ಸ್ವೀಕರಿಸಿ ಆಚಾರ್ಯಭಗವತ್ಪಾದರ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಮೂಲೆಮಠದ ದೊಡ್ಡಯ್ಯನವರು.

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ

ಚಿದ್ಘನಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಆಗಮನ.

ಘಟಪ್ರಭಾ ಹಾಳ.

ಶ್ರೀಯುತ ಶಿವಲಿಂಗಪ್ಪಾ ದಂಬಳ ಇವರ ಪ್ರಾರ್ಥನೆಯ ಮೇರೆಗೆ ಅಳವಂಡಿ ಮುಕ್ಕಾಮಿನಿಂದ ಪ್ರಾತಃಕಾಲ 7 ಘಂಟೆಗೆ ಊರಬಳಿಯ ಕಮಾನುಮಂಟಪಕ್ಕೆ ಮಹಾಸನ್ನಿಧಿಯು ಬಿಜಯಂಗೈಸುವ್ವದರೊಳಗಾಗಿ ಗ್ರಾಮದ ಸಮಸ್ತ ಭಕ್ತಮಂಡಳಿಯು ವಾದ್ಯವೈಭವದೊಡನೆ ಎದುರುಗೊಂಡು ಜಗದ್ಗುರುಗಳನ್ನು ಅಂದೋಲಿಕೆಯಲ್ಲಿ ಆರೋಹಣಮಾಡಿಸಿ ಜಗದಾಚಾರ್ಯರ ಜಯಘೋಷದೊಡನೆಯೂ ಪಂಚಾಚಾರ್ಯ ಭಜನಾಸಂಘದವರ ಭಜನೆಯೊಡನೆಯೂ ತಳಿರುತೋರಣಗಳಿಂದ ಅಲಂಕೃತವಾದ ರಾಜಬೀದಿಗಳಲ್ಲಿ ಸಕಲ ಬಿರುದಾವಳಿಯೊಂದಿಗೆ ವಿಜೃಂಭಣೆಯಿಂದ ಉತ್ಸವವನ್ನು ಮಾಡಿಸಿ 10 ಘಂಟೆಯ ಸುಮಾರಕ್ಕೆ ಸದರಿಯವರ ಗೃಹಕ್ಕೆ ಸ್ವಾಮಿಯು ಬಿಜಯಂಗೈಸಿ ಅಲಂಕರಿಸಿದ್ದ ಭದ್ರಾಸನದಲ್ಲಿ ಮೂರ್ತಮಾಡಿಸಿತು. ಬಳಿಕ ಶ್ರೀಗಳವರ ಶಿವಾರ್ಚನೆಯಾದನಂತರ ಪಾದಪೂಜೆಯು ನೆರವೇರಿತು. ಭಕ್ತಮಂಡಲಿಯವರು ಜಗದಾಚಾರ್ಯರ ಆಶೀರ್ವಾದವನ್ನು ಪಡೆದರು. ವೇ|| ಅಳವಂಡಿ ಕಟ್ಟಿಮನಿ ಹಿರೇಮಠದ ಸ್ವಾಮಿಗಳು ಹಾಗೂ ಆಜೂಬಾಜೂ ಗ್ರಾಮದ ಅನೇಕ ಭಕ್ತಮಾಹೇಶ್ವರರೂ ಬಂದಿದ್ದರು. ಅವರೆಲ್ಲರಿಗೂ ಅನ್ನಸಂತರ್ಪಣೆಯು ನಡೆದು ಮಾಹೇಶ್ವರರಿಗೆ ದಕ್ಷಿಣೆ ತಾಂಬೂಲಾದಿಗಳ ವಿನಿಯೋಗವು ನಡೆದ ಬಳಿಕ ಪಂಚಾಚಾರ್ಯಪ್ರಭಾ ಆಫೀಸಿನಲ್ಲಿ ದೊರೆಯತಕ್ಕ ಕೆಲವು ಪುಸ್ತಕಗಳೂ ಲಾಕೆಟ್ಟುಗಳೂ ಉಚಿತವಾಗಿ ಕೊಡಲ್ಪಟ್ಟವು. ಶಿವಲಿಂಗಪ್ಪನವರು ತಮ್ಮ ಸಹೋದರರಾದ ಮಲ್ಲಪ್ಪ ವ ಶರಣಪ್ಪ ವ ಸಾಂತಪ್ಪ ಇವರೊಂದಿಗೆ ವ್ಯಾಪಾದ ನಾಲ್ಕು ಕಲಶಗಳಿಗೆ ಬೇಕಾಗುವ 80 ತೊಲಿ ಬೆಳ್ಳಿಯನ್ನು ಸಮರ್ಪಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರು. ಇದಲ್ಲದೆ ಸರ್ವಭಕ್ತವೃಂದವೆಲ್ಲಾ ಶ್ರೀ ಜಗದ್ಗುರುಗಳ ದರ್ಶನದಿಂದ ಧನ್ಯರಾದೆವೆಂದು ಕೊಂಡಾಡಿತು. ಸಾಯಂಕಾಲ 7 ಘಂಟೆಗೆ ಸದರಿಯವರ ಗೃಹದಲ್ಲಿ ವೇ|| ಶಿವಪ್ಪಶಾಸ್ತ್ರಿ ಪುರಾಣಿಕ ಹಡಗಲಿ ಇವರು ಬ್ರಹ್ಮೋತ್ತರಖಂಡದಲ್ಲಿಯ ಪಂಚಾಕ್ಷರೀ ಮಹಿಮೆಯನ್ನು ಸುಶ್ರಾವ್ಯವಾಗಿ ಬೋಧಿಸಿದರು. ಜಗದ್ಗುರುಗಳು ತಮ್ಮ ಅಮೃತವಾಣಿಯಿಂದ ಅಷ್ಟಾವರಣದ ವಿಷಯವಾಗಿ ಜನರ ಮನಸ್ಸಿಗೆ ಬಿಂಬಿಸುವಂತೆ ಭಾಷಣಮಾಡಿದರು. ಕಡೆಗೆ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ನಮ್ಮನ್ನಾಳುವ ಮಹಾಪ್ರಭುಗಳಾದ ನವಾಬ ಸರ್‌ಸಾಲಾರಜಂಗಬಹದ್ದೂರರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯು ವಿಸರ್ಜಿಸಲ್ಪಟ್ಟಿತು. ಮರುದಿವಸ ಪ್ರಾತಃಕಾಲಕ್ಕೆ ಶ್ರೀಗಳವರ ಸವಾರಿಯು ದಯಮಾಡಿಸುವಾಗ್ಗೆ ಪಂಚಾಚಾರ್ಯ ಭಜನಾಸಂಘದ ಸೇವಕಮಂಡಳಿಯವರಿಗೆ ಸಂಘಕ್ಕೆ ಉಪಯುಕ್ತಗಳಾದ ವಸ್ತುಗಳನ್ನು ಸಂಗ್ರಹಿಸುವುದಕ್ಕಾಗಿ 20 ರೂಪಾಯಿಗಳನ್ನು ಆಶೀರ್ವದಿಸಿದರು.

ಕೇವಲ ಹೊಲಮಠದವರ ವಾಸಸ್ಥಾನವಾದ ಹಟ್ಟಿಯೆಂಬ ಗ್ರಾಮದಲ್ಲಿ ಪ್ರತಿವರ್ಷ ಪುಷ್ಯಮಾಸದಲ್ಲಿ ಗ್ರಾಮದೇವತೆಯಾದ ಲಕ್ಷ್ಮಾದೇವಿಯ ಜಾತ್ರೆಯಲ್ಲಿ ಎರಡು ಮೂರುನೂರು ಕುರಿಗಳ ಪ್ರಾಣಹಿಂಸೆಯು ಆಗುತ್ತಿದ್ದ ಮಹಾ ಅನರ್ಥವನ್ನು ಸನ್ನಿಧಿಯವರು ಕೇಳಿ ಸರ್ವರನ್ನು ಕರೆಯಿಸಿಕೊಂಡು ಪ್ರಾಣಹಿಂಸೆಯು ಪಾಪವುಯನ್ನುಂಟುಮಾಡುದೆಂಬ ವಿಷಯದ ಮೇಲೆ ಸರ್ವರಿಗೂ ಮನಸ್ಸಿನಲ್ಲಿ ಬಿಂಬಿಸುವಂತೆ ಬೋಧಮಾಡಲಾಗಿ ಇನ್ನು ಮೇಲೆ ಈ ಹಿಂಸೆಯನ್ನು ಮಾಡುವದಿಲ್ಲ. ಮತ್ತು ಮಾಂಸವನ್ನು ತಿನ್ನುವದಿಲ್ಲವೆಂದು ಗ್ರಾಮದ ಮುಖ್ಯಮುಖ್ಯ 20-30 ಜನರು ಸನ್ನಿಧಿಗೆ ಸಾಷ್ಟಾಂಗನಮಸ್ಕಾರಗಳನ್ನು ಮಾಡಿದರು. ಇದಲ್ಲದೆ ಇಲ್ಲಿಯ ಆಜೂಬಾಜೂ ಸರ್ವಗ್ರಾಮಗಳ ಹೊಲಮಠದವರಿಗೆ ಬೋಧಮಾಡಿ ಹಿಂಸಾಕಾರ್ಯದಿಂದ ಮುಕ್ತರನ್ನಾಗಿಮಾಡಿ ಉದ್ಧಾರಮಾಡಿದರು. ಇದರಂತೆ ಸರ್ವಗುರುವರ್ಗದವರು ಬೋಧೆಮಾಡುತ್ತಬಂದಲ್ಲಿ ತೀವ್ರದಲ್ಲಿಯೇ ಈ ಪ್ರಾಣಹಿಂಸೆಯು ದೂರವಾಗುವದರಲ್ಲಿ ಸಂದೇಹವಿಲ್ಲ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ವೃಷಭೇಶ್ವರಪ್ರತಿಷ್ಠಾಮಹೋತ್ಸವ.

ಶಿವಮೊಗ್ಗಾ ಡಿ|| ಭದ್ರಾವತಿ ಸಂಮತು ಹೆಬ್ಬಂಡಿ ಗ್ರಾಮದಲ್ಲಿ ತಾ|| 4-4-29 ನೇ ಗುರುವಾರ ವೇ|| ಹಿರೇಮಠದ ನವಲಯ್ಯನವರು ಪಾ|| ರುದ್ರೇಗೌಡರು, ಶಾಂತವೀರೇಗೌಡರು, ವೀರಪ್ಪಗೌಡರು, ಚನ್ನಬಸವೇಗೌಡರು, ಬುದ್ಧಿವಂತ ನಂಜಪ್ಪನವರು, ವೀರಾಪುರದ ಸಿದ್ದಪ್ಪನವರು, ಘಟ್ಟಿನಂಜಪ್ಪನವರ ಮಹದೇವಪ್ಪನವರು, ಕಡದಕಟ್ಟೆ ಮಲ್ಲಪ್ಪನವರು, ಅರಕೆರೆ ಗೂಡೇರಿ ಕರಿಯಪ್ಪನವರು ಇನ್ನೂ ಮುಂತಾದ ವೀರಶೈವಮಹಾಜನರು ಮಳಲಿಮಠದ ಷ|| ಬ್ರ|| ಶ್ರೀ ಪಟ್ಟಾಧ್ಯಕ್ಷ ಗುರುನಾಗಾರ್ಜುನಸ್ವಾಮಿಗಳನ್ನೂ ಬಿಳಕಿಗ್ರಾಮದ ಮಠದ ಶ್ರೀ ಷ|| ಬ್ರ|| ಪಟ್ಟದ ಶ್ರೀಗಳವರನ್ನೂ, ಕುಪ್ಪೂರುಗದ್ದುಗೆ ಶ್ರೀ ಮರುಳಸಿದ್ಧ ಯತೀಂದ್ರರವರ ಮಠದ ಬ್ರಹ್ಮಶ್ರೀ ವೀರಪ್ಪದೇವರನ್ನೂ ಮತ್ತು ಶ್ರೀ ಚರಪಟ್ಟಾಧ್ಯಕ್ಷರಾದ ಶ್ರೀ ಚಂದ್ರಶೇಖರಸ್ವಾಮಿಗಳನ್ನೂ ಬರಮಾಡಿಕೊಂಡು ಪ್ರತಿಷ್ಠಾಕಾರ್ಯವನ್ನು ತಿಪಟೂರಲ್ಲಿರುವ ಸಾಸಲು ಮಠದ ವೇ|| ಬ್ರಹ್ಮಶ್ರೀ ಸಿದ್ಧಾಂತಿ ಗುರುಬಸವಶಾಸ್ತ್ರಿಗಳವರಿಂದ ವಿಧಿವತ್ತಾಗಿ ನಡೆಯಿಸಿ ಗಣಸಂತರ್ಪಣವನ್ನು ನೆರವೇರಿಸಿದನಂತರ ಮಳಲಿಮಠದ ಶ್ರೀ ಗುರುನಾಗಾರ್ಜುನಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಅಧ್ಯಕ್ಷರು ಶ್ರೀ ರೇಣುಕಾದಿ ಪಂಚಾಚಾರ್ಯರು ಮಾಡಿದ ಲೀಲೆಗಳ ವಿಷಯವಾಗಿಯೂ ಅಷ್ಟಾವರಣಪಂಚಾಚಾರಗಳ ವಿಷಯವಾಗಿಯೂ ಶ್ರೀ ಪಂಚಾಚಾರ್ಯರ ಭಜನಾಸಂಘವನ್ನು ಸ್ಥಾಪನಮಾಡುವಂತೆಯೂ, ಪಂಚಾಚಾರ್ಯರ ಜಯಂತಿಗಳನ್ನೂ ನಡೆಯಿಸುವಂತೆಯೂ ಅಪ್ಪಣೆಕೊಡಿಸಿದರು. ಆ ಮೇಲೆ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಸಮಾಪ್ತಿಗೊಳಿಸಲ್ಪಟ್ಟಿತು. ಮಾರನೆಯ ದಿವಸ ಮಳಲಿಮಠದ ಶ್ರೀ ಗುರುನಾಗಾರ್ಜುನಸ್ವಾಮಿಗಳವರ ಉತ್ಸವವು ಹಾಗೂ ಅದೇರಾತ್ರಿ ಆಜೂಬಾಜೂ ಗ್ರಾಮಗಳ ದೇವರುಗಳ ಉತ್ಸವವೂ ಸಹ ಜರಗಿತು. ತಾ|| 5-4-29ನೆ ಶುಕ್ರವಾರ ಮೇಲ್ಕಂಡ ವೃಷಭೇಶ್ವರ ದೇವಸ್ಥಾನದಲ್ಲಿ ಭದ್ರಾವತಿ ಗ್ರಾಮದ ಮ|| ರಾ|| ಅಂಗಡಿ ನಂಜಪ್ಪನವರ ಬಸಪ್ಪನವರು ತಮ್ಮ ಪುತ್ರಿ ಚಿ|| ಸೌ|| ನಂಜಮ್ಮನೆಂಬ ಕನ್ಯೆಯನ್ನು ಹರವನಹಳ್ಳಿ ಗ್ರಾಮದಲ್ಲಿರುವ ಮ|| ರಾ|| ರಾ|| ಘಕೀರಪ್ಪನವರ ಮೊಮ್ಮಗ ಸಿದ್ದಪ್ಪನೆಂಬವರಿಗೆ ಕೊಟ್ಟು ಕನ್ಯಾದಾನವನ್ನು ಮಾಡಿದರು. ವೃಷಭೇಶ್ವರಪ್ರತಿಷ್ಠಾ ಸಮಯದಲ್ಲಿ ಪ್ರಭಾವೋತ್ಸವಕ್ಕಾಗಿ 8 ರೂ. ಕನ್ಯಾದಾನಮಾಡಿದಸಮಯದಲ್ಲಿ ಮ|| ರಾ|| ಬಸಪ್ಪನವರಿಂದ 5 ರೂ. ಒಟ್ಟು ಹದಿಮೂರು ರೂಪಾಯಿಗಳನ್ನು ಕುಪ್ಪೂರು ಗದ್ದುಗೆ ಶ್ರೀ ಮಠದ ವೇ|| ವೀರಪ್ಪದೇವರ ಸ್ವಾಧೀನಕ್ಕೆ ಕೊಡಲಾಯಿತು. ಈ ಮೇಲ್ಕಂಡ ಸಕಲ ಕಾರ್ಯಗಳನ್ನು ತರೀಕೆರೆ ಸಂಮತು ಬೇಲೇನಹಳ್ಳಿಗ್ರಾಮದಲ್ಲಿರುವ ಮ|| ರಾ|| ಪರಮೇಶ್ವರಪ್ಪಗೌಡರು 2 ತಿಂಗಳುಗಳಿಂದ ತಮ್ಮ ಸ್ವಂತಕಾರ್ಯಗಳನ್ನು ತ್ಯಜಿಸಿ ಸ್ವಾಮಿಕಾರ್ಯವೇ ಸ್ವಕಾರ್ಯವೆಂದು ಭಾವಿಸಿ ತಮ್ಮ ದೇಹಶ್ರಮವನ್ನು ಸಹಿಸಿಕೊಂಡು ಸಕಲ ಜನರಿಗೂ ಸದ್ಬೋಧಮಾಡಿ 20 ವರುಷಗಳಿಂದ ಅರ್ಧಕ್ಕೆ ನಿಂತುಹೋಗಿದ್ದ ದೇವಸ್ಥಾನದ ಕಾರ್ಯವನ್ನು ಪೂರ್ಣ ಜವಾಬ್ದಾರಿಯಿಂದ ಪೂರ್ತಿಗೊಳಿಸಿದ್ದಕ್ಕಾಗಿ ಸದರಿಯವರಿಗೂ ಹಾಗೂ ಈ ಗ್ರಾಮದ ಮಹಾಜನರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ದೀರ್ಘಾಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ರೇಣುಕಶಿವಾಚಾರ್ಯಃ ಪ್ರಸೀದತು.

ಶ್ರೀ ರಥೋತ್ಸವವು.

ವೀರಶೈವರಿಗೆ ಮುಖ್ಯಕ್ಷೇತ್ರವಾದ ಶ್ರೀಮದ್ರಂಭಾಪುರೀ ಜಗದ್ಗುರು ವೀರಸಿಂಹಾಸನಸಂಸ್ಥಾನದಲ್ಲಿ ಅನಾದಿಯಿಂದ ನಡೆದು ಬಂದಿರುವ ಶ್ರೀ ಮಹಾ || || ರಥೋತ್ಸವವು ಪದ್ಧತಿಯಂತೆ ಇದೇ ವಿಭವ ಸಂವತ್ಸರದ ಫಾಲ್ಗುಣ ಶುದ್ಧ ೧೩ ಶನಿವಾರ ಮಧ್ಯಾಹ್ನ ಅಭಿಜನ್ಮುಹೂರ್ತದಲ್ಲಿ ವೈಭವದಿಂದ ಜರುಗಿತು. ಆ ದಿವಸ ಪ್ರಾತಃಕಾಲದಲ್ಲಿ ಪೀಠದ ಗೋತ್ರಪುರುಷನಾದ ಶ್ರೀ ವೀರೇಶನಿಗೆ ಏಕಾದಶರುದ್ರಾಭಿಷೇಕವೂ, ಸಹಸ್ರ ಬಿಲ್ವಾರ್ಚನೆಯೂ ನಡೆದು ಶ್ರೀ ಸ್ವಾಮಿಯನ್ನು ಸುಂದರತರವಾದ ಬೃಹದ್ರಥವನ್ನು ಆರೋಹಣಮಾಡಿಸಿದ ಬಳಿಕ ರಥದ ಕಾಣಿಕೆಯು ನಡೆಯಿತು. ಆ ಮೇಲೆ ಸಕಲ ಬಿರುದಾವಳಿಗಳೊಡನೆಯೂ ವಾದ್ಯವೈಭವದೊಡನೆಯೂ ಉತ್ಸವವು ಸಂಭ್ರಮದಿಂದ ನಡೆಯಿತು. ಸಮಸ್ತ ಭಕ್ತಮಂಡಲಿಯವರು ಶ್ರೀ ಸ್ವಾಮಿಯ ಪ್ರಸಾದವನ್ನು ಸ್ವೀಕರಿಸಿ ಧನ್ಯಜೀವಿಗಳಾದರು. ಉತ್ಸವಕ್ಕೆ ಆಜೂಬಾಜು ಗ್ರಾಮಗಳಿಂದಲ್ಲದೆ ಹೂವಿನಹಡಗಲಿ ಚಿತ್ರದುರ್ಗ ಕಾಲದಿ ಅಲ್ಲೂರು ಮೊದಲಾದ ಗ್ರಾಮಗಳಿಂದ ಅನೇಕ ಜನ ಭಕ್ತಮಾಹೇಶ್ವರರು ಆಗಮಿಸಿ ಶ್ರೀ ಸ್ವಾಮಿಯ ಸೇವೆಯಲ್ಲಿ ಭಾಗಿಗಳಾಗಿದ್ದರು. ಶುದ್ಧ ೮ ಯಿಂದ ಶು|| ೧೩ ವರೆಗೂ ನಿತ್ಯೋತ್ಸವಗಳು ನಡೆಯುತ್ತಿದ್ದಂತೆ ಬ|| ೮ ವರೆಗೂ ಪುಷ್ಪತೋತ್ಸವ, ಶಯನೋತ್ಸವ, ಸುಪ್ರಭಾತೋತ್ಸವ, ಕುಂಕುಮೋತ್ಸವ, ವಸಂತೋತ್ಸವ, ಅವಭೃತಸ್ನಾನ, ಭದ್ರಾನದಿಯಲ್ಲಿ ತೆಪ್ಪೋತ್ಸವ ಮೊದಲಾದ ನಿತ್ಯೋತ್ಸವಗಳೂ ಉತ್ಸವಸಮಾಪ್ತಿ ಸೂಚಕವಾದ ಕುರಗಿಸವಾರಾಧನೆಯೂ ಸಹ ಕ್ರಮವಾಗಿ ನಡೆದುವು. ಭಕ್ತಾದಿಗಳು ಶ್ರೀ ಮುದಿಗಂಧಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಓರ್ವ ಉತ್ಸವಭಾಗಿ.

ಶ್ರೀ ರುದ್ರಾಭಿಷೇಕವೂ ಪುತ್ರಸ್ವೀಕಾರವೂ.

ಇದೇ ವಿಭವನಾಮ ಸಂವತ್ಸರದ ಫಾಲ್ಗುಣ ಬಹುಳ ನವಮಿ ತಾ|| [illegible] 29 ನೇ ದಿವಸ ಸಾಯಂಕಾಲ ಸೊರಬ ತಾಲೂಕು ಫಳವಿಹೋಬಳಿ ಶ್ಯಾನೂರು ಪಂಡಿತ ಶ್ರೀ ಗುರುವೃಷಭರಾಜೇಂದ್ರ ಶಿವಾಚಾರ್ಯ ಸ್ವಾಮಿಗಳವರು ಮಹೋಪದ್ಘಾತಪೂರ್ವಕ ಧಾರವಾಡ ಜಿಲ್ಲಾ ಹಿರೇಕೇರೂರು ತಾಲೂಕು ಮಾದಾಪುರದ ಹಿರೇಮಠದ ಪರಮೇಶ್ವರಪ್ಪಯ್ಯನವರು ಇಲ್ಲಿ ಕೂಡಿದ ರಟ್ಟೀಹಳ್ಳಿ ಶ್ರೀ ಪಟ್ಟಾಧ್ಯಕ್ಷ ಸ್ವಾಮಿಗಳವರು ಗೌಂಕೆರೆ ಶ್ರೀ ಪಟ್ಟಾಧ್ಯಕ್ಷ ಸ್ವಾಮಿಗಳವರು ಮತ್ತು ಈ ಮಠದ ಶಿಷ್ಯರಾದ ಹೆಗ್ಗೋಡುಶರಣಪ್ಪಯ್ಯಗೌಡರು ಮ|| ರಾ|| ಶಿವಪ್ಪಗೌಡರು ಮಳಲಗದ್ದೆ ಶ್ರೀಮಂತ ಮ|| ರಾ|| ಬಸವಣ್ಣೆಪ್ಪಗೌಡರು ಮರೂರ ಮ|| ರಾ|| ಗುರುಬಸಪ್ಪಗೌಡರು ಕುಪ್ಪೆ ಮ|| ರಾ|| ಬಸಪ್ಪಗೌಡರು ಮಾಸೂರು ಯಜಮಾನ ಮಲ್ಲಿ ಲಿಂಗಪ್ಪಗೌಡರು ಮಾಸೂರು ಪ್ರಾ. ಟ ಹೋರಿ ಹೊಳೆಯಪ್ಪಶೆಟ್ಟಿ ಮಾಸೂರು ಯಜಮಾನ್ ಖಾನ್‌ಸಾಹೇಬರವರು ಮೊದಲಾದ ಅನೇಕ ಮಹಾಜನಗಳ ಸಮ್ಮುಖದಲ್ಲಿ ಸಪತ್ನೀಕರಾಗಿ ತಮ್ಮ ಎರಡು ಜನ ಮಕ್ಕಳುಗಳನ್ನು ಗುರುಕಾಣಿಕೆಯೊಂದಿಗೆ ಸದರಿ ಶ್ಯಾನೂರು ಶ್ರೀಗಳ ಸನ್ನಿಧಿಗೆ ಒಪ್ಪಿಸಿ ಸಾಷ್ಟಾಂಗಪ್ರಣಾಮಂಗೈದರು. ಅನಂತರ ಶ್ರೀಗಳವರು ತಮ್ಮ ಸಹೋದರರ ಮಕ್ಕಳಾದ ಕೈ|| ಮುರಗೇಶಶಾಸ್ತ್ರಿಗಳವರ ಹೆಂಡತಿ ಗಿರಿಜಮ್ಮನವರ ಉಡಿಯಲ್ಲಿ ಹಾಕಿ ಈ ಮಕ್ಕಳನ್ನು ನಿನಗೆ ದತ್ತಕರೂಪವಾಗಿ ಆಶೀರ್ವದಿಸ್ತೇನೆ ಇವರನ್ನು ಸಂರಕ್ಷಣಮಾಡಿಕೊಂಡು ವಯಸ್ಸಿಗೆ ಬಂದಮೇಲೆ ಒಬ್ಬ ಹುಡುಗನನ್ನು ಈ ಮಠಕ್ಕೆ ಅಧಿಕಾರಿಯನ್ನಾಗಿಯೂ ಮತ್ತೊಬ್ಬ ಹುಡುಗನನ್ನು ವಂಶಾಭಿವೃದ್ಧಿಗಾಗಿ ಗೃಹಸ್ಥಾಶ್ರಮಿಯನ್ನಾಗಿಯೂ ಮಾಡಿ ಮಠದ ಸಾಂಪ್ರದಾಯಪ್ರಕಾರ ಕಾರ್ಯಭಾರವನ್ನು ನೆರವೇರಿಸಿಕೊಂಡು ಹೋಗಬೇಕೆಂದು ಅಪ್ಪಣೆಕೊಡಿಸಲು ವಿಧ್ಯುಕ್ತವಾಗಿ ದತ್ತಕಮಾಡಿಕೊಂಡರು. ಇದರಂತೆ ಮೇಲ್ಕಂಡ ಪರಮೇಶ್ವರಪ್ಪಯ್ಯನವರು ಹಿರಳೆ ಹಾಲಪ್ಪಯ್ಯನವರಿಗೆ ಸಂತಾನಾಭಿವೃದ್ಧಿಗಾಗಿ ಒಂದು ಹುಡುಗನನ್ನು ದತ್ತಕಕೊಟ್ಟರು. ಬಾಲಪ್ಪಯ್ಯ ದಂಪತಿಗಳಿಂದ ಮೇಲ್ಕಂಡ ಕ್ರಮವು ಜರುಗಿಸಲ್ಪಟ್ಟಿತು. ಇದೇ ದಶಮಿ ಗುರುವಾರ ತಾ|| 4-4-29 ನೇ ಪ್ರಾತಃಕಾಲಕ್ಕೆ ಈ ವಟುಗಳಿಗೂ ಇತರ ಭಕ್ತಮಾಹೇಶ್ವರರಿಗೂ ವರ್ಣಾಶ್ರಮ ಧರ್ಮಪ್ರಕಾರ ಗೌಂಕೆರೆ ಶ್ರೀಗಳವರಿಂದ ದೀಕ್ಷಾಸಂಸ್ಕಾರವು ನಡೆಯಿಸಲ್ಪಟ್ಟಿತು. ಅನಂತರ ಶ್ರೀ ಗುರುಮಠದ ಪೀಠದ ಗುರುವೃಷಭಪಾಣಿಸದ್ಯೋಜ್ಯಾತಭದ್ರ ಗುರುಬಸವಮಹಾಸ್ವಾಮಿಗಳವರ ಶಿಷ್ಯರಾದ ಶ್ರೀ ಪಟ್ಟಾಧ್ಯಕ್ಷಗುರುಬಸವಮಹಾಸ್ವಾಮಿಗಳವರ ಗದ್ದುಗೆಗೆ ಗೌಂಕೆರೆ ಶ್ರೀಗಳವರಿಂದ ವಿಧ್ಯುಕ್ತವಾಗಿ ಏಕಾದಶ ರುದ್ರಾಭಿಷೇಕವು ನಡೆಯಿಸಲ್ಪಟ್ಟು ಮಧ್ಯಾಹ್ನ 12 ಘಂಟೆಗೆ ಗಣಾರಾಧನೆಯೂ ಆಚರಿಸಲ್ಪಟ್ಟಿತು. ಈ ಕಾರ್ಯಕ್ಕೆ ಈ ಪ್ರಾಂತ್ಯದ ಸರ್ವಭಕ್ತಮಾಹೇಶ್ವರರೂ ಸೇರಿದ್ದರು. ಮಧ್ಯಾಹ್ನ ಮೂರು ಘಂಟೆಗೆ ಸಭೆಸೇರಿ ರಟ್ಟೀಹಳ್ಳಿ ಮಹಾಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ವೃತ್ತರೂ ಪಂಡಿತರೂ ಆದ ಈ ಮಠದ ಶ್ರೀಗಳವರು ಮಠದ ಸಂಕ್ಷಿಪ್ತಚರಿತ್ರವನ್ನು ತಿಳುಹಿಸಿದರು. ಅಧ್ಯಕ್ಷ ಪೂಜ್ಯಪಾದರು ಬ್ರಹ್ಮಚರ್ಯವಿಷಯವಾಗಿಯೂ ಸಂಸ್ಕೃತವಿದ್ಯಾವಿಷಯವಾಗಿಯೂ ಗೌಂಕೆರೆ ಶ್ರೀಗಳವರು ಸದಾಚಾರ ಮತ್ತು ದೀಕ್ಷೆಯಿಂದ ಮೋಕ್ಷಸಿದ್ಧಿಯಾಗುತ್ತದೆಂದು ಬಹು ಸ್ವಾರಸ್ಯವಾಗಿ ಅಪ್ಪಣೆಕೊಡಿಸಿದರು. ಈ ಸಭೆಗೆ ಶ್ಯಾನೂರು ಗ್ರಾಮದ ಹಾಲಭಟ್ಟರು ರಾಮಭಟ್ಟರು ತಿಮ್ಮಯ್ಯನವರು ತಲಕಾಲ ಕೊಪ್ಪದ ಪಾಟೀಲ್ ನಾರಾಯಣಪ್ಪನವರು ಅನಂತಪ್ಪನವರು ಯಲಸಿ ರಾಮಯ್ಯನವರು ಇನ್ನೂ ಮೊದಲಾದ ಅನ್ಯಮತೀಯ ಬಂಧುಗಳು ಆಹ್ವಾನಿಸಲ್ಪಟ್ಟಿದ್ದರು. ಗಿರಿಜಮ್ಮನವರು ಸ್ವೀಕರಿಸಿದ ಪುತ್ರರುಗಳಿಗೆ ಶ್ರೀಕಂಠಾರಾಧ್ಯನೆಂದೂ ಶ್ರೀ ಜಯಗುರುಬಸವಮರಿದೇವರೆಂದೂ ನಾಮವು ಕೊಡಲ್ಪಟ್ಟಿತು. ಮರುದಿನ ತಾ|| 5-4-29 ನೇ ದಿವಸ ಯಜಮಾನ ಗಿರಿಜಮ್ಮನವರು ಆಗಮಿಸಿದ ಮಹಾಸ್ವಾಮಿಗಳ ಸನ್ನಿಧಿಗೆ ಗುರುಕಾಣಿಕೆಯನ್ನು ಸಮರ್ಪಿಸಿದ್ದಲ್ಲದೆ ಬಂದ ಸಕಲ ಮಾಹೇಶ್ವರರನ್ನೂ ಬಂಧುಬಾಂಧವರನ್ನೂ ಫಲತಾಂಬೂಲವಸ್ತ್ರಾದಿಗಳಿಂದ ಸನ್ಮಾನಿಸಿದರು.

ಜೆ. ಕೊಟ್ರಪ್ಪಶೆಟ್ಟಿ ಪಾಟೀಲ,
ಸೊರಬ.

ಶ್ರೀ ಜಗದ್ಗುರು ಪಂಚಕಾಯನಮಃ.

ವಿವಾಹಮಹೋತ್ಸವ.

ಗುಳೇದಗುಡ್ಡ.

ವಿಜಾಪೂರ ಡಿ|| ಗುಳೇದಗುಡ್ಡ ಗ್ರಾಮದಲ್ಲಿ ಮುನ್ಸಿಪಲ್ ಕೌನ್ಸಿಲರೂ ಮತ್ತು ಬೆಂಚಮ್ಯಾಜಿಸ್ಟ್ರೇಟರೂ ಆದ ಮ|| ದಾನಪ್ಪನವರು ರಾಜನಾಳ ಇವರು ತಮ್ಮ ಸುಪುತ್ರಿ ಚಿ|| ಸೌ|| ಶಿವಮ್ಮನನ್ನು ಬಳ್ಳಾರಿ ಗ್ರಾಮದ ಮ|| ರಾ|| ಗೋಳಪ್ಪನವರು ಕಲಗಣೆ ಇವರ ಸುಪುತ್ರ ಬಸಪ್ಪನವರಿಗೆ ಕೊಟ್ಟು ಇದೇ ವಿಭವ ಸಂವತ್ಸರ ಫಾಲ್ಗುಣ ಬ|| ೫ ಶನಿವಾರ ದಿವಸ ವಿವಾಹಮಹೋತ್ಸವವನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ವಿವಾಹಾಂಗಭೂತಗಳಾದ ಪಂಚಕಲಶಸ್ಥಾಪನೆ ಮಧುಪರ್ಕಾದಿಯಾಗಿ ಸಪ್ತಪದ್ಯಂತವಾಗಿ ಸಕಲ ಶಾಸ್ತ್ರೀಯ ಕ್ರಿಯೆಗಳು ಜೋತಿಷ್ಯವಿದ್ವಾನ್ ಶಿರೋಳ ಬೃಹನ್ಮಠದ ವೇ|| ಪಂಚಾಕ್ಷರಶಾಸ್ತ್ರಿಗಳವರಿಂದ ನೆರವೇರಿಸಲ್ಪಟ್ಟವು. ಮ|| ದಾನಪ್ಪನವರು ಧಾರ್ಮಿಕರಾದುದರಿಂದ ಸಮಾಜದಲ್ಲಿ ನೆಲೆಗೊಂಡ ಅಶಾಸ್ತ್ರೀಯ ಪದ್ಧತಿಗಳನ್ನು ದೂರಮಾಡಿ ವೈದಿಕಮಾರ್ಗವನ್ನು ಪ್ರಚಾರಮಾಡುವುದರಲ್ಲಿ ಬಹು ಉತ್ಸುಕರಾಗಿರುವದರಿಂದಲೂ "ಕನ್ಯಾಶುಲ್ಕ"ವೆಂಬ ಪಿಶಾಚಿಯನ್ನೋಡಿಸುವದರಲ್ಲಿ ಬಹು ಪ್ರಯತ್ನಶೀಲರಾಗಿರುವುದರಿಂದಲೂ ಷೋಡಶಮಹಾದಾನಾಂತರ್ಭೂತವಾದ ಕನ್ಯಾದಾನವನ್ನು ಮಾಡಿ ಸರ್ವರಿಗೂ ಮಾರ್ಗದರ್ಶಿಗಳಾಗಿದ್ದಾರೆ. ಈ ಸಮಯದಲ್ಲಿ ಮ|| ದಾನಪ್ಪನವರು ವಿಶೇಷ ದಾನವನ್ನು ಮಾಡಿ ತಮ್ಮ ನಾಮವನ್ನು ಅನ್ವರ್ಥಕವನ್ನಾಗಿ ಮಾಡಿಕೊಂಡರು. ಈ ಮಂಗಲಮಹೋತ್ಸವಕ್ಕೆ ಸರ್ಕಾರಿ ಅಧಿಕಾರಿಗಳೂ, ಮುನ್ಸಿಪಲ್ ಕೌನ್ಸಿಲರೂ, ವಕೀಲರೂ, ಮೊದಲಾದ ಮಹಾಜನಗಳೂ, ಪಂಡಿತಸಮುದಾಯವೂ ವಿಶೇಷವಾಗಿ ಕೂಡಿತ್ತು. ಬಡವರಾದಿಯಾಗಿ ಸರ್ವರನ್ನೂ ಅನ್ನಸಂತರ್ಪಣೆ ಫಲಪುಷ್ಪ ತಾಂಬೂಲ ಧೂಪದಕ್ಷಿಣೆಗಳಿಂದ ತೃಪ್ತಿಗೊಳಿಸಿದರು. ಶ್ರೀ ಗುರುಕೃಪೆಯಿಂದ ವಿವಾಹಮಹೋತ್ಸವವು ಅಭೂತಪೂರ್ವವಾಗಿ ನೆರವೇರಿತು. ಈ ಮಂಗಲಕಾರ್ಯದಲ್ಲಿ ವೀರಶೈವ ಧರ್ಮೋದ್ಧಾರಕ್ಕಾಗಿ ಜನ್ಮವೆತ್ತಿದ ಪಂಚಾಚಾರ್ಯಪ್ರಭೆಗೆ ಮ|| ರಾ|| ಗೋಳಪ್ಪನವರು ಕಲಗಣೆ ಇವರು 5 ರೂಪಾಯಿಗಳನ್ನು ಮ|| ದಾನಪ್ಪನವರು 2 ರೂಪಾಯಿಗಳನ್ನು ತಮ್ಮ ತಮ್ಮ ಗುರುಗಳ ಮುಖಾಂತರವಾಗಿ ಕಳುಹಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರು ನೂತನದಂಪತಿಗಳಿಗೆ ದೀರ್ಘಾಯುರಾರೋಗ್ಯಭಾಗ್ಯ ಪುತ್ರಾದಿಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಓರ್ವ ಕಾರ್ಯಭಾಗಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ನೂತನವರ್ಷಾರಂಭ ಮಹೋತ್ಸವ.

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನದಲ್ಲಿ ಪ್ರತಿವರ್ಷ ಪದ್ಧತಿಯಂತೆ ನೂತನವರ್ಷಾರಂಭವಾದ ಶುಕ್ಲಸಂವತ್ಸರದ ಚೈತ್ರ ಶು|| ೧ ಬುಧವಾರ (10-4-29) ಉದಯಕ್ಕೆ ಶ್ರೀ ವೀರೇಶನಿಗೆ ಏಕಾದಶರುದ್ರಾಭಿಷೇಕವು ಸಹಸ್ರಬಿಲ್ವಾರ್ಚನೆಯಾಗಿ ಮಹಾಮಂಗಲಾರತಿ ಮಾಡಲ್ಪಟ್ಟು ನೂತನವರ್ಷದಲ್ಲಿ ಘನವನ್ನೈದಿದ ಶ್ರೀಮದಿಂಡಿಯಾಚಕ್ರವರ್ತಿಗಳೂ ಧರ್ಮಪ್ರಭುಗಳಾದ ಮೈಸೂರು ಶ್ರೀಮನ್ಮಹಾರಾಜಾಸಾಹೇಬ ಬಹದ್ದೂರರವರೂ ಹಾಗೂ ಅವರವರ ರಾಜಕುಟುಂಬವರ್ಗವೂ ಇತೋಪ್ಯತಿಶಯವಾಗಿ ಸಕಲ ಸಂಪತ್ಸೌಭಾಗ್ಯಾದಿಗಳಿಂದ ಸುಖಿಗಳಾಗಲೆಂದೂ ದೇಶವು ಅತಿವೃಷ್ಟಿ ಅನಾವೃಷ್ಟಿಗಳಿಲ್ಲದೆ ಸುಭಿಕ್ಷೆಯನ್ನು ಹೊಂದಿ ಸಮಸ್ತ ಬಾಲವೃದ್ಧ ಸ್ತ್ರೀಪುರುಷರಿಗೂ ಪಶುಪಕ್ಷ್ಯಾದಿಗಳಿಗೂ ಸಹ ಆನಂದದಾಯಕವಾಗಲೆಂದು ಪ್ರಾರ್ಥಿಸಿ, ಶ್ರೀಮದಿಂಡಿಯಾಚಕ್ರವರ್ತಿಗಳವರ ಹಾಗೂ ಧರ್ಮಪ್ರಭುಗಳವರ ಹೆಸರಿನಿಂದ ಜಯಘೋಷವು ಮಾಡಲ್ಪಟ್ಟಿತು. ಸಾಯಂಕಾಲಕ್ಕೆ ಮಹಾಸಂಸ್ಥಾನ ಪದ್ಧತಿಪ್ರಕಾರ ಸಕಲ ಬಿರುದಾವಳಿಗಳೊಡನೆ ಶ್ರೀ ಸ್ವಾಮಿಯವರ ಉತ್ಸವವು ಸಹ ಸಾಂಗವಾಗಿ ಜರಗಿಸಲ್ಪಟ್ಟಿತು.

ವೇ|| ಪರಮೇಶ್ವರಶಾಸ್ತ್ರೀ ಧರ್ಮಭೂಷಣ
ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ
ಆಸ್ಥಾನವಿದ್ವಾನ್

ಪಂಚಾಚಾರ್ಯ ಪ್ರಭಾ

೧೯೨೯ ನೇ ಏಪ್ರಿಲ್ ತಾ|| ೧೫ ನೇ ಸೋಮವಾರ

ಪಟ್ಟಚರಾಧಿಕಾರಿಗಳ ಕರ್ತವ್ಯ.

ಪ್ರಪಂಚದಲ್ಲಿ ಮತಾಚಾರ್ಯರ ಯಶೋವೈಭವವು ವ್ಯಾಪಿಸಬೇಕಾದರೆ ಆಯಾಯ ಮತಾಚಾರ್ಯರು ಬರೆದ ಗ್ರಂಥಗಳೂ ಅವರು ತಿಳುಹಿಸಿದ ನಿಯಮಗಳೂ ಅವರ ಮಹಿಮೆಗಳೂ ವಿಶೇಷವಾಗಿ ಪ್ರಚಾರದಲ್ಲಿ ಬರಬೇಕು. ಮತ್ತು ಮತಾಚಾರ್ಯರ ಪ್ರತಿನಿಧಿಗಳಾದ ಪಟ್ಟಚರಾಧಿಪತಿಗಳು ಶ್ರೀ ಮತಾಚಾರ್ಯರ ಕೀರ್ತಿಧ್ವಜವನ್ನು ಎಲ್ಲೆಲ್ಲೂ ಮೆರೆಯಿಸುತ್ತಿರುವುದಲ್ಲದೆ ತಮ್ಮ ಸಿದ್ಧಾಂತಗ್ರಂಥಗಳನ್ನು ಗುರುಮುಖದಿಂದ ಅಭ್ಯಾಸಮಾಡಿ ಅವುಗಳ ಅರ್ಥವನ್ನು ಚನ್ನಾಗಿ ತಿಳಿದು ಅದರಂತೆ ಅನುಷ್ಠಾನವಂ ಮಾಡಿ ಶಿಷ್ಯರಲ್ಲಿ ಪ್ರಚಾರಮಾಡುತ್ತ ಸ್ವಾರ್ಥತ್ಯಾಗಬುದ್ಧಿಯಿಂದ ಆಚಾರ್ಯಭಗವತ್ಪಾದರಲ್ಲಿ ಅಸಾಧಾರಣವಾದ ಭಕ್ತಿಯನ್ನಿರಿಸಿ ಯಾವಾಗಲೂ ಶಿಷ್ಯೋದ್ಧಾರಕಾರ್ಯದಲ್ಲಿ ಕಾಲವನ್ನು ಕಳೆಯುತ್ತಿರಬೇಕು. ನಮ್ಮ ವೀರಶೈವಮತದಲ್ಲಿ ಪಟ್ಟಚರಾಧಿಕಾರಿಗಳ ಕರ್ತವ್ಯವು ಅತ್ಯಂತ ಜವಾಬ್ದಾರಿಯುಳ್ಳದ್ದಾಗಿದೆ. ಇವರು ಮಾಡುವ ಪಾರಮಾರ್ಥಿಕ ಕಾರ್ಯದಲ್ಲಿ ಸ್ವಲ್ಪ ವ್ಯತಿಕ್ರಮಬಂದರೂ ಎಷ್ಟೋ ಅನರ್ಥಗಳಾಗುವವು. ವೀರಶೈವಮತವೆಂಬ ಸಾಮ್ರಾಜ್ಯದ ಪರಿಪಾಲನೆಯ ವಿಶಿಷ್ಟ ಸ್ವಾತಂತ್ರ್ಯವು ಶ್ರೀ ಪಂಚಾಚಾರ್ಯರಿಂದ ಪಟ್ಟಚರಾಧಿಕಾರಿಗಳಿಗೆ ವಹಿಸಲ್ಪಟ್ಟಿರುವುದರಿಂದ ಕೇವಲ ಸ್ವಾಮಿಭೃತ್ಯನ್ಯಾಯಾನುಸಾರವಾಗಿ ಆಚಾರ್ಯಭಗವತ್ಪಾದರ ಆಜ್ಞಾರೂಪವಾದ ಪುಷ್ಪಮಾಲೆಯನ್ನು ಭಕ್ತಿಪೂರ್ವಕವಾಗಿ ಶಿರಸ್ಸಿನಲ್ಲಿ ಧರಿಸಿ ವೀರಶೈವಮತದ ಧರ್ಮಕರ್ಮಗಳ ನಿಬಂಧನವನ್ನು ಚನ್ನಾಗಿ ಮಾಡಿ ಆಚಾರ್ಯರ ಅನುಗ್ರಹವನ್ನು ಸಂಪಾದಿಸುವುದೇ ಪಟ್ಟಚರಾಧಿಪತಿಗಳ ಪ್ರಥಮಕರ್ತವ್ಯವಾಗಿದೆ. ಪ್ರಪಂಚದಲ್ಲಿರುವ ಪ್ರತಿಯೊಬ್ಬ ಲಿಂಗಾಂಗಿಯ ಹುಟ್ಟಕಟ್ಟುಕರ್ಮಗಳಾಗಲಿ ಬ್ರಹ್ಮಚರ್ಯಾಶ್ರಮ ಸ್ವೀಕಾರವಾಗಲಿ ಗೃಹಸ್ಥಾಶ್ರಮ ಸ್ವೀಕಾರವಾಗಲಿ ವಾನಪ್ರಸ್ಥಾಶ್ರಮ ಸ್ವೀಕಾರವಾಗಲಿ ಸನ್ಯಾಸಾಶ್ರಮ ಸ್ವೀಕಾರವಾಗಲಿ ಇತರ ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳಾಗಲಿ ಎಲ್ಲವೂ ಮೂಲಾಚಾರ್ಯರ ಪ್ರತಿನಿಧಿಗಳಾದ ಪಟ್ಟಚರಾಧಿಪತಿಗಳ ಆಧಿಪತ್ಯದಿಂದಲೇ ನಡೆಯಬೇಕಾದುದರಿಂದ ಇವರನ್ನು ಬಿಟ್ಟು ಧಾರ್ಮಿಕಕಾರ್ಯಗಳಾವುವೂ ನಿರ್ವಹಿಸಲ್ಪಡುವಂತಿಲ್ಲವು. ಆದುದರಿಂದ ಪಟ್ಟಚರಾಧಿಪತಿಗಳೆಂಬವರ ಉಪಕಾರವನ್ನು ವೀರಶೈವಮತದ ಸಕಲ ವರ್ಣಾಶ್ರಮಿಗಳೂ ಎಷ್ಟು ಸ್ಮರಿಸಿದರೂ ತೀರದಾಗಿದೆ. ಲಿಂಗಾಂಗಿಗಳಾದ ಯಾವತ್ತು ಮಾನವರು ತಮ್ಮ ಮನೆಯಲ್ಲಿ ನಡೆಯಬೇಕಾದ ಶುಭಶೋಭನ ಕರ್ಮಗಳನ್ನು ತಮ್ಮ ತಮ್ಮ ವಂಶಗುರುಗಳನ್ನು ಬಿಟ್ಟು ಸ್ವತಂತ್ರಿಸಿ ಮಾಡುವುದಿಲ್ಲವು. ತಿಳಿಯದೆ ಹಾಗೆ ಯಾರಾದರೂ ಮಾಡಿದರೆ ಅದು ವೀರಶೈವಧರ್ಮಕ್ಕೆ ವಿರೋಧವಾಗುವದಲ್ಲದೆ ಆ ರೀತಿ ಸ್ವೇಚ್ಛೆಯಿಂದ ವರ್ತಿಸುವವರು ಅಧೋಗತಿಗೀಡಾಗುವರು. ಆಚಾರ್ಯ ಪ್ರತಿನಿಧಿಗಳಾದ ಪಟ್ಟಚರಾಧಿಪತಿಗಳು ತಾವು ಪಂಡಿತರಾಗಿ ತ್ರಿಕರಣಪೂರ್ವಕವಾಗಿ ಶಿಷ್ಯೋದ್ಧಾರವನ್ನೇ ಕೋರಬೇಕಾಗಿರುವದು. ಮಹಾರಾಜನು ತನ್ನ ಮುಖ್ಯಪ್ರತಿನಿಧಿಗಳಾದ ಮಂತ್ರಿಗಳ ಮೇಲೆ ಸಮಸ್ತಭಾರವನ್ನು ಹೊರಿಸಿರುವುದರಿಂದ ತಮ್ಮ ಪ್ರಭುವಿನ ಆಜ್ಞೆಯನ್ನು ಎಳ್ಳಷ್ಟೂ ಮೀರದೆ ಸ್ವಾರ್ಥವನ್ನು ಬಿಟ್ಟು ರಾಜ್ಯದ ಯೋಗಕ್ಷೇಮವನ್ನು ನೋಡುತ್ತ ಸಮಸ್ತ ರಾಜತಂತ್ರವನ್ನು ತಿಳಿದು ಪ್ರಜಾಹಿತಕಾರ್ಯಗಳನ್ನು ಮಾಡುತ್ತ ಪ್ರಭುಗಳಲ್ಲಿಯೂ ಪ್ರಜೆಗಳಲ್ಲಿಯೂ ವಿಶೇಷಾನುರಾಗಿಗಳಾಗಿರಬೇಕಾದುದೇ ಮಂತ್ರಿಗಳ ಮುಖ್ಯಧರ್ಮವಾಗಿದೆ. ಇದನ್ನೆಲ್ಲ ಬಿಟ್ಟು ಅಂತಃಶುದ್ಧಿಯಿಲ್ಲದೆ ಕೇವಲ ಸ್ವಾರ್ಥಿಗಳಾಗಿ ರಾಜಾಜ್ಞೆಗೆ ವಿರೋಧವಾಗಿ ನಡೆಯುತ್ತ ಬಂದರೆ ಅವರು ಪ್ರಭುದ್ರೋಹಿಗಳೆನಿಸಿಕೊಳ್ಳುವರು. ಪ್ರಜಾನೆಮ್ಮದಿಗೂ, ರಾಜ್ಯಾಭಿವೃದ್ಧಿಗೂ ಮಂತ್ರಿಗಳೇ ಮೂಲಕಾರಣೀಭೂತರಾದುದರಿಂದ ಮಂತ್ರಿಪದವಿಯಲ್ಲಿರುವವರು ನೈತಿಕ ಧರ್ಮರಹಸ್ಯವನ್ನೆಲ್ಲ ತಿಳಿದು ಸಮಯವರಿತು ಪ್ರಜಾಪಾಲನವನ್ನು ಮಾಡುತ್ತ ಬಂದರೆ ತಾವು ವಹಿಸಿದ ಮಂತ್ರಿಪದವಿಯು ಸಾರ್ಥಕವಾದಂತಾಗುವುದು. ಅದರಂತೆ ಆಚಾರ್ಯ ಭಗವತ್ಪಾದರಿಂದ ವೀರಶೈವ ಮತವೆಂಬ ರಾಜ್ಯಭಾರವು ಶ್ರೀ ಪಟ್ಟಚರಾಧಿಪತಿಗಳಿಗೆ ವಹಿಸಲ್ಪಟ್ಟಮೇಲೆ ಇವರು ಈ ಮತದ ಧಾರ್ಮಿಕ ಸಂಬಂಧದ ಕ್ರಿಯೆಗಳನ್ನು ಎಷ್ಟರಮಟ್ಟಿಗೆ ನಿರ್ವಹಿಸಬೇಕೆನ್ನುವದನ್ನೂ, ವೀರಶೈವ ಸಿದ್ಧಾಂತವನ್ನು ಎಷ್ಟರಮಟ್ಟಿಗೆ ತಿಳಿದಿರಬೇಕೆನ್ನುವದನ್ನೂ, ಎಷ್ಟರಮಟ್ಟಿಗೆ ವೈರಾಗ್ಯವನ್ನವಲಂಬಿಸಿರಬೇಕೆನ್ನುವದನ್ನೂ ಪ್ರತಿಯೊಬ್ಬ ಪಟ್ಟಚರಾಧಿಪತಿಗಳು ಪರ್ಯಾಲೋಚಿಸಿ ಶಿಷ್ಯೋದ್ಧಾರವೇ ತಮ್ಮ ಸರ್ವಸ್ವವೆಂದು ತಮ್ಮ ತಮ್ಮ ಕರ್ತವ್ಯಗಳನ್ನು ಮಾಡುತ್ತ ಬಂದಿದ್ದರೆ ಮಹಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತ ಸಾಮ್ರಾಜ್ಯವು ಇಷ್ಟು ಶೈಥಿಲ್ಯವನ್ನು ಹೊಂದುತ್ತಿದ್ದಿಲ್ಲವು. ಇವರು ತಮ್ಮ ಕರ್ತವ್ಯದಲ್ಲಿ ಪರಾಙ್ಮುಖರಾದುದರಿಂದ ಧರ್ಮವಿರುದ್ಧಗಳೂ ನಿಷ್ಪ್ರಯೋಜನಗಳೂ ಆದ ಎಷ್ಟೋ ದುರಾಚಾರಗಳು ಕಾಲಿಡುವುದಕ್ಕೆ ಪ್ರಾರಂಭಿಸಿದವು. ಯಜಮಾನನು ಸಮರ್ಥನಾದರೆ ಭೃತ್ಯನು ಹೆದರಿ ಕೆಲಸಮಾಡುವನು. ಯಜಮಾನನು ಅಸಮರ್ಥನಾಗಿ ಭೃತ್ಯನು ಧೂರ್ತನಾಗಿದ್ದರೆ ಆ ಯಜಮಾನನ ಆಧಿಪತ್ಯವನ್ನು ಅಪಹರಿಸುವನು. ಭೃತ್ಯನು ಸೌಮ್ಯನಾಗಿದ್ದರೆ ಆಧಿಪತ್ಯವು ಪರಾಧೀನವಾಗುವದು. ಕೆಲವೆಡೆಯಲ್ಲಿ ಪಟ್ಟಚರಾಧಿಪತಿಗಳು ಸಮರ್ಥರಾಗಿ ಸ್ವಾರ್ಥತ್ಯಾಗವನ್ನು ಮಾಡಿ ಮತೋದ್ಧಾರ ಕಾರ್ಯದಲ್ಲಿ ಆಸಕ್ತರಾಗಿದ್ದರೂ ಕೆಲವೆಡೆಯಲ್ಲಿ ಈಗೀಗ ನಿದ್ರೆಯಿಂದೆದ್ದು ಕಣ್ಣನ್ನು ಒರಸಿಕೊಳ್ಳುತ್ತಿದ್ದಾರೆ. ಅಂತಹ ಸ್ಥಳದಲ್ಲಿ ಈಗಲೇ ಧಾರ್ಮಿಕರಾಜ್ಯವು ಪರಾಕ್ರಾಂತವಾಗಲು ಪ್ರಾರಂಭಿಸಿದೆ. ಮಹಾಚಾರ್ಯರಿಂದ ಮುಖ್ಯಾಧಿಕಾರವಂ ವಹಿಸಿ ಕೇವಲ ಮತದಪೋಷಣವೇ ತಮಗೆ ಸಂಬಂಧಪಟ್ಟಿದ್ದರೂ ಅದನ್ನೆಲ್ಲ ಮರೆತು ತಮ್ಮ ತಮ್ಮ ರಕ್ತಸಂಬಂಧಿಗಳ ಪೋಷಣದಲ್ಲಿ ಆಸಕ್ತರಾಗಿರುವುದನ್ನು ಪರಿಶೀಲಿಸಿದರೆ ಇವರು ತಾವು ವಹಿಸಿದ ಅಧಿಕಾರದ ವ್ಯಾಪ್ತಿಯಸ್ವರೂಪವನ್ನು ಇನ್ನೂ ತಿಳಿದಿಲ್ಲವೆಂದೇ ಹೇಳಬೇಕಾಗಿದೆ. ಸತ್ವವನ್ನು ಕಳೆದುಕೊಂಡಮೇಲೆ ಜಾಗರೂಕರಾದರೆ ಪ್ರಯೋಜನವೇನು? ಕೆಲವೆಡೆಯಲ್ಲಿ ವೀರಶೈವಮತದ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ಅತ್ಯಂತ ವ್ಯಸನವುಂಟಾಗುವದು. ಗುರುತ್ವವೆಂಬುವುದು ಕೇವಲ ಕಾಷಾಯ ಭಸ್ಮ ಇವೆರಡರಲ್ಲಿಯೇ ಉಳಿದಂತೆ ತೋರುತ್ತದೆ. ಯಾರು ಕಾಷಾಯವನ್ನು ಧರಿಸಿ ಹಣೆಗೂ ಕಣ್ಣಿಗೂ ಮೂಗಿಗೂ ಮುಖಕ್ಕೂ ಅ[illegible]ತವಾದ ಭಸ್ಮವನ್ನು ಬಡಿದುಕೊಂಡಿರುತ್ತಾರೆ[illegible] ನಿರ್ಭಯವಾಗಿ ಗುರುತ್ವವನ್ನು ಮಾಡ[illegible]ಪ್ರಾರಂಭಿಸಿದ್ದಾರೆ. ಇವರು ಕುಂಡರೋ ಗೋಳಕರೋ [illegible]ಸಂತ್ಯರೋ ಎಂಬುದು ಒಂದೂ ಗೊತ್ತಿಲ್ಲದೆ ಮೂಢಭಕ್ತರು ಇವರಿಂದ ಉಪದೇಶವನ್ನು ಪಡೆಯುತ್ತ ಮುಕ್ತಿಯನ್ನು ಹೊಂದುವೆವೆಂದು ಭ್ರಮಿಸಿರುತ್ತಾರೆ. ವೀರಶೈವಮತದ ಪರಮಪವಿತ್ರವಾದ ಶಿವದೀಕ್ಷೆಯಲ್ಲಂತೂ ಇವರೇ ಆಚಾರ್ಯಪದವಿಯನ್ನು ಹೊಂದುವುದಕ್ಕೆ ತವಕಪಡುತ್ತಲಿರುವರು. ಗೋತ್ರಸೂತ್ರಗಳೆಲ್ಲವೂ ಅರಣ್ಯಪಾಲಾದವು. ವೀರಶೈವಬ್ರಾಹ್ಮಣ್ಯದ ಮುಖ್ಯಲಕ್ಷಣವೆನಿಸಿದ ಶ್ರೌತ ಭಸ್ಮ ಶ್ರೌತ ಲಿಂಗಧಾರಣಾದಿ ಷಡ್ವಿಧಧರ್ಮಗಳೊಳೊಂದಾದ ಶಿಖೆಯ ವಿಷಯದಲ್ಲಿ ಈ ಅಮಂಗಲರು "ಎತ್ತು ಎಮ್ಮೆಗೆ ಬಾಲ ಕತ್ತೆಕುದುರೆಗೆಬಾಲ ನೆತ್ತಿಯಲ್ಲಿ ತುದಿಬಾಲ" ಎಂದು ಭ್ರಷ್ಟವಚನಗಳನ್ನು ಹೇಳಿ ಜನಗಳನ್ನು ಮರುಳುಮಾಡಿ ತಮ್ಮ ಅಶಾಸ್ತ್ರೀಯವಾದ ಉಪದೇಶಕ್ಕೆ ಪ್ರಾರಂಭಮಾಡಿದ್ದಾರೆ. ಈ ಕಲಿಕಾಲದಲ್ಲಿ ಪ್ರಾಯಶಃ ಪುರುಷರಲ್ಲಿ ಧರ್ಮಗ್ಲಾನಿಯು ವಿಶೇಷವಾಗಿ ಆಗುತ್ತ ಬಂದರೂ ಸ್ತ್ರೀಯರಲ್ಲಿ ಮಾತ್ರ ಅನೂಚಾನವಾದ ತಮ್ಮ ತಮ್ಮ ಮತಧರ್ಮಗಳು ಅಲ್ಪವಾಗಿ ಉಳಿದಿರುತ್ತವೆ. ಈ ಘೋರವಾದ ದುರುಳವೇದಾಂತಿಗಳು "ಅಕ್ಕರವು ಲೆಕ್ಕಕ್ಕೆ ಮಿಕ್ಕ ಓದು ತಿರುಪಕ್ಕೆ ಮೋಕ್ಷಕ್ಕೆರಡಕ್ಷರವೆ ಸಾಕಯ್ಯ" ಎಂದು ತಾವು ಕಲಿತ ಶಾಸ್ತ್ರವನ್ನು ಅಸ್ತಿಕಸಂಪ್ರದಾಯಿಗಳಾದ ಅಂತಹ ಸ್ತ್ರೀಯರಿಗ ಬೋಧಿಸಿ ಶಾಸ್ತ್ರಪುರಾಣಗಳಲ್ಲಿಯೂ ನಿತ್ಯನೈಮಿತ್ತಿಕಾದಿ ಕರ್ಮಗಳಲ್ಲಿಯೂ ಅಶ್ರದ್ಧೆಯನ್ನು ಹುಟ್ಟಿಸಿ ಶರಣೆಯರೆಂಬ ಪ್ರಶಸ್ತಿಯನ್ನು ಅವರಿಗೆ ಕೊಟ್ಟು ಅವರನ್ನು ತಮ್ಮ ತಮ್ಮ ಹಸ್ತಿಕರನ್ನಾಗಿ ಮಾಡಿಕೊಂಡು ಜೀವಬ್ರಹ್ಮೈಕ್ಯವನ್ನು ಬೋಧಿಸುವ ಸಿದ್ಧಾಂತಶಿಖಾಮಣಿಯಲ್ಲಿರುವ ಏಕಭಾಜನ ಎಂಬ ಶಬ್ದಕ್ಕೆ ಎಲ್ಲರೂ ಒಂದು ಪಾತ್ರೆಯಲ್ಲಿ ಊಟಮಾಡುವುದೆಂದು ಅರ್ಥವನ್ನು ಕಲ್ಪಿಸಿ ಸ್ವೇಚ್ಛಾಚಾರಿಗಳನ್ನಾಗಿ ಮಾಡುತ್ತಿರುವುದನ್ನು ನೋಡಿದರೆ ಕಲಿಮಹಾರಾಜನ ಸಾಮರ್ಥ್ಯವನ್ನು ಎಷ್ಟು ಶ್ಲಾಘಿಸಿದರೂ ತೀರದಾಗಿದೆ. ಮೋಕ್ಷಾಂಗವೂ ಶಾಸ್ತ್ರೀಯವೂ ಮಾಂಸಪಿಂಡನಿವೃತ್ತಿಪೂರ್ವಕ ಮಂತ್ರಪಿಂಡತ್ವಜನಕವೂ ಶಿವಪೂಜಾಯೋಗ್ಯತಾಪಾದಕವೂ ಆದ ಮಹಾದೀಕ್ಷೆಯನ್ನು ವಹಿಸಿದ್ದ ಮೇಲೆ ಇನ್ನು ಬೇರೆ ಉಪದೇಶವನ್ನು ಎಲ್ಲಿ ಹುಡುಕಿದರೂ ವೀರಶೈವ ಸಿದ್ಧಾಂತದಲ್ಲಿ ಸಿಗುವಂತಿಲ್ಲವು. ಪಟ್ಟಚರಾಧಿಕಾರಿಗಳು ಶಮದಮಗುಣಸಂಪನ್ನರಾಗಿ ಸಿದ್ಧಾಂತವನ್ನು ತಮ್ಮ ತಮ್ಮ ಶಿಷ್ಯರಿಗೆ ಕಾಲವರಿತು ಬೋಧಿಸುತ್ತ ಬಂದಿದ್ದರೆ ಶಿಷ್ಯರೆಂದೂ ಈ ವಿಧವಾದ ಅನಾರ್ಗದಲ್ಲಿ ಕಾಲಿಟ್ಟು ಮುಳ್ಳುಕೊಳ್ಳಗಳಲ್ಲಿ ಸಿಕ್ಕು ನರಳುತ್ತಿದ್ದಿಲ್ಲ. ಆದರೆ ಇದಕ್ಕೆ ಇವರ ಕರ್ತವ್ಯಪರಾಙ್ಮುಖತೆಯೇ ಮೂಲಕಾರಣವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಆದುದರಿಂದ ಮಠದ ಸರ್ವಭಾರವನ್ನು ವಹಿಸಿಕೊಂಡ ಪಟ್ಟಚರಾಧಿಕಾರಿಗಳು ಈ ಯಾವತ್ತು ವಿಷಮಾವಸ್ಥೆಯನ್ನು ಲಕ್ಷ್ಯಕ್ಕೆ ತಂದುಕೊಂಡು ತಾವು ಅಸಾಧಾರಣಪಂಡಿತರೂ ಕರ್ತವ್ಯದಕ್ಷರೂ ಆಗಿ ತಮ್ಮ ತಮ್ಮ ಶಿಷ್ಯರನ್ನುದ್ಧರಿಸುವ ಕಾರ್ಯದಲ್ಲಿ ತೊಡಗಿ ನಾನಾರೀತಿಯಿಂದ ದುಃಖಕ್ಕೀಡಾಗಿರುವ ವೀರಶೈವಮತವನ್ನುದ್ಧರಿಸಿ ಮೂಲಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ಶ್ರೀಮನ್ಮಹಾರಾಜರವರು ಕಳೆದ ಗುರುವಾರ ರಾಜಧಾನಿಯಿಂದ ನೀಲಗಿರಿಗೆ ದಯಮಾಡಿಸಿದರು.

1921 ನೆಯ ವರ್ಷದಲ್ಲಿ ಜನಸಂಗಣತಿಯಪ್ರಕಾರ ಭರತಖಂಡದಲ್ಲಿ 10,2000 ಜನರು ಕುಷ್ಠರೋಗದಿಂದ ನರಳುತ್ತಿರುವರಾಗಿ ಪ್ರಕಟವಾಗಿದೆ.

ಶ್ರೀಮದ್ಯುವರಾಜರವರು ಕಳೆದವಾರ ನೀಲಗಿರಿಯಿಂದ ಬೊಂಬಾಯಿಗೆ ಪ್ರಯಾಣಮಾಡಿ ಅಲ್ಲಿಂದ ಜಹಜುಹತ್ತಿ ಆಂಗ್ಲದೇಶಕ್ಕೆ ಚಿತ್ತೈಸಿದರೆಂದು ತಿಳಿದುಬರುತ್ತದೆ.

ಕಲ್ಕತ್ತಾಪಟ್ಟಣದ ಮೇಯರ್ ಪದವಿಗೆ ಸ್ವರಾಜ್ಯಪಕ್ಷದ ಪ್ರಮುಖರಾದ ಮಿ|| ಜೆ. ಎಂ. ಸೇನಗುಪ್ತರವರೂ ಡೆಪ್ಯುಟಿ ಮೇಯರ ಸ್ಥಾನಕ್ಕೆ ಮಿ|| ಎಂ. ಎ. ರಜಾಕ್‌ರವರೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು.

ಬಂಗಾಲದೇಶದ 24 ಪರಗಣಗಳಿಗೆ ಸೇರಿದ ಗಾರಿಘಾ ಎಂಬ ಹಳ್ಳಿಗೆ ಬೆಂಕಿಬಿದ್ದು 15 ನಿಮಿಷಗಳೊಳಗಾಗಿ ಊರೆಲ್ಲ ಸಂಪೂರ್ಣವಾಗಿ ಸುಟ್ಟುಹೋಗಿ ಸಾವಿರಾರು ಜನರು ಮನೆಮಠಗಳನ್ನು ಕಳೆದುಕೊಂಡು ಅಲೆಯುತ್ತಿರುವರು.

ಕಳೆದವರ್ಷ ಇಂಗ್ಲೆಂಡ್‌ದೇಶದಲ್ಲಿ ಮೋಟಾರುಗಳ ಅನಾಹುತದಿಂದ 6,000 ಜನರು ಸತ್ತುದಲ್ಲದೆ 1,65,000 ಜನರು ಅಪಾಯಕ್ಕೆ ಗುರಿಯಾದರು. ಲಂಡನ್ ಪಟ್ಟಣವೊಂದರಲ್ಲಿಯೇ 50 ಸಾವಿರ ಅನಾಹುತಗಳು ಸಂಭವಿಸಿ 1,223 ಜನರು ಮೃತಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾದ ಸರ್. ಬ್ರಜೇಂದ್ರನಾಥಶೀಲರವರು ಅನಾರೋಗ್ಯನಿಮಿತ್ತ 5 ತಿಂಗಳ ರಜಾ ತೆಗೆದುಕೊಂಡು ಸ್ವದೇಶಕ್ಕೆ ಹೋಗಿದ್ದರು. ಈಗ ಅವರು ಹಿಂದಿರುಗಿ ಬಂದಿರುವರು. ಇಷ್ಟರಲ್ಲಿಯೇ ತಮ್ಮ ಉದ್ಯೋಗವನ್ನು ವಹಿಸಿಕೊಳ್ಳುವರೆಂದು ಕೇಳುತ್ತೇವೆ.

ಅಮೇರಿಕಾದೇಶಕ್ಕೆ ಅಧ್ಯಕ್ಷರಾಗಿದ್ದ ಕೂಲಿಡ್ಜರವರು ಅಧಿಕಾರದಿಂದ ನಿವೃತ್ತರಾದಮೇಲೆ ವರ್ತಮಾನಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವ ಕೆಲಸವನ್ನು ಕೈಕೊಂಡಿದ್ದಾರೆ. ಇವರು ಬರೆಯುವ ಪ್ರತಿಯೊಂದು ಶಬ್ದಕ್ಕೂ 25 ಶಿಲಿಂಗು (೧೮|| ರೂಪಾಯಿ) ಗಳಂತೆ ಸಂಬಳವು ದೊರೆಯುತ್ತಿರುವದಂತೆ!

ಆಂಗ್ಲದೇಶದ ಒಂದು ಭಾಗವಾದ ಸ್ಕಾಟ್ಲೆಂಡ್ ದೇಶವನ್ನು ಬ್ರಿಟಿಷ್‌ಚಕ್ರಾಧಿಪತ್ಯದಿಂದ ಪ್ರತ್ಯೇಕಿಸಿ ಅದನ್ನು ಒಂದು ಸ್ವತಂತ್ರರಾಷ್ಟ್ರವನ್ನಾಗಿ ಮಾಡಬೇಕೆಂದು ಆದೇಶಿಯರು ಪ್ರಯತ್ನಿಸುತ್ತಿರುವರು. ಅದಕ್ಕಾಗಿ ಅವರು ಒಂದು ಸ್ವರಾಜ್ಯಸಂಘವನ್ನು ಸ್ಥಾಪಿಸಿಕೊಂಡಿರುತ್ತಾರೆ.

ಬೊಂಬಾಯಿಪಟ್ಟಣದ ಬೋರೀಬಂದರವು ಪ್ರಪಂಚದ ದೊಡ್ಡ ಬಂದರುಗಳಲ್ಲೆಲ್ಲಾ 3 ನೆಯದಾಗಿ ಪರಿಗಣಿಸಲ್ಪಟ್ಟಿದೆ. 1980 ರಲ್ಲಿ ಈ ಬಂದರಿನಿಂದ 21,20,000 ಜನ ಪ್ರಯಾಣಿಕರು ಸಂಚರಿಸಿದ್ದರು. 1928 ರಲ್ಲಿ ಇದೇ ಬಂದರಿನ ಮಾರ್ಗವಾಗಿ 1,75,15,000 ಜನ ಪ್ರಯಾಣಿಕರು ಸಂಚಾರಮಾಡಿರುವರಂತೆ!

ಟರ್ಕೀದೇಶದಲ್ಲಿ ಪರದೇಶದ ಬಟ್ಟೆಗಳ ಮಾರಾಟವನ್ನು ಕಡಿಮೆಮಾಡುವದಕ್ಕೋಸ್ಕರ ಅಲ್ಲಿಯ ಸರಕಾರದವರು ಅವುಗಳ ಮೇಲೆ ಶೇಕಡಾ 25ರಂತೆ ಸುಂಕವನ್ನು ಹಾಕಿರುತ್ತಾರೆ. ಈ ವಿಷಯವಾಗಿ ಆ ದೇಶದ ವಿದ್ಯಾರ್ಥಿಗಳೆಲ್ಲರೂ ಸಭೆಗೂಡಿಸಿ ಪರದೇಶದ ವಸ್ತ್ರಗಳನ್ನು ಧರಿಸುವದಿಲ್ಲವೆಂದು ಶಪಥಮಾಡಿಕೊಂಡಿರುತ್ತಾರೆ.

ದಮ್ಮು (ಉಬ್ಬಸ) ಈ ರೋಗಕ್ಕೆ ರಾಮಬಾಣದಂತಿರುವ ಚಿತ್ರಕೂಟ ಮಹಾಂತರವರ ಔಷಧವು ರಾಜಧಾನಿಯಲ್ಲಿ ಚೈತ್ರ ಶು|| ಪೂರ್ಣಿಮಾ ಮಂಗಳವಾರ ರಾತ್ರಿ ಚಂದ್ರನ ಪ್ರಕಾಶದಲ್ಲಿ ಕೊಡಲ್ಪಡುವದು. ಹೆಚ್ಚಿನವಿಷಯಗಳನ್ನು ರಾಜಧಾನಿಯ ವಾಣೀವಿಲಾಸ ರೋಡಿನಲ್ಲಿರುವ ಮ|| ರಾ|| ಡಾ|| ಟಿ. ಎಸ್. ಸಿದ್ದಪ್ಪನವರನ್ನು ವಿಚಾರಿಸಿ ತಿಳಿದುಕೊಳ್ಳಬಹುದು.

ಮುಂದಿನತಿಂಗಳ ಎರಡನೆಯವಾರದಿಂದ ಬೆಳಗಾಂವ ಪಟ್ಟಣದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು, ಕರ್ನಾಟಕ ಸಾಹಿತ್ಯ ಸಮ್ಮೇಲನ, ಕರ್ನಾಟಕ ಕವಿಸಮ್ಮೇಲನ, ಐತಿಹಾಸಿಕ ವಸ್ತು ಪ್ರದರ್ಶನ ಮೊದಲಾದವುಗಳು ನೆರವೇರುವವು. ಈ ಸಮಯದಲ್ಲಿ ಹೈದರಾಬಾದ ಕರ್ನಾಟಕ ನಾಟಕ ಸಂಘದವರು ಬಂದು ನಾಟಕಗಳನ್ನಾಡುವರು.

ಕಳೆದವಾರ [illegible] ಪ್ರಾಂತ್ಯದ ಮಿಡ್ನಾಪುರ ಡಿಸ್ಟ್ರಿಕ್ಟಿನಲ್ಲಿ [illegible]ವಾದ ಸುಂಟರಗಾಳಿಯು ಬೀಸಿ ದೇವಸ್ಥಾನ[illegible] ಮಸೀದಿಗಳ ಗೋಪುರಗಳೂ ಮನೆಯ ಮೇಲ್ಛಾವಣಿಗಳೂ ಬಹಳದೂರದವರೆಗೆ ಎಸೆಯಲ್ಪಟ್ಟಿವೆ. ಟಾಮಲೂಕ್ ಎಂಬ ಹಳ್ಳಿಯಲ್ಲಿ ಒಂದು ಮನೆಯು ಮುರಿದು ಬಿದ್ದು ಇಬ್ಬರು ಮನುಷ್ಯರು ಸತ್ತುಹೋದರು.

ಪಶ್ಚಿಮ ಸಮುದ್ರತೀರದಲ್ಲಿರುವ ಕನ್ನಾನೂರಿನಲ್ಲಿ ಒಬ್ಬ ತೀಯಜಾತಿಯ ಕೂಲಿಯವನು ಒಂದು ಹೆಂಡದ ಅಂಗಡಿಯಲ್ಲಿ ವಿಪರೀತವಾಗಿ ಪಾನಮಾಡಿ ಮದವೇರಿ ಮತ್ತೊಬ್ಬನ ಕೈಲಿದ್ದ ಚೂರಿಯನ್ನು ಕಿತ್ತುಕೊಂಡು ಕೈಗೆಸಿಕ್ಕಿದವರನ್ನೆಲ್ಲಾ ಇರಿದು ಗಾಯಪಡಿಸಿದನು. 13 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಪೋಲೀಸರು ಇವನನ್ನು ಕೈದುಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಆಫ್ರಿಕಾದೇಶದ ಕ್ಯಾಮರೂನ್ ಪ್ರಾಂತದಲ್ಲಿ ಒಬ್ಬ ಜರ್ಮನ್‌ದೇಶೀಯನು ಬೇಟೆಯಾಡುತ್ತಿರುವಾಗ ಒಂದು ಕಪಿಗಳ ಗುಂಪಿಗೆ ಗುಂಡುಹಾರಿಸಿದನು. ಕೂಡಲೆ ಒಂದು ಕಪಿಯು ಕೆಳಗೆ ಬಿದ್ದಿತು. ಅವನು ಹತ್ತಿರಕ್ಕೆ ಹೋಗಿ ನೋಡಿದಾಗ ಆ ಪ್ರಾಣಿಯು ಕಪಿಯಾಗಿರದೆ ಒಬ್ಬ ನಿಗ್ರೋ ಸ್ತ್ರೀಯಾಗಿದ್ದಿತು. ಆ ಸ್ತ್ರೀಯನ್ನು ಬಾಲ್ಯದಿಂದ ಕಪಿಗಳೇ ಸಾಕಿದ್ದುದರಿಂದ ಆಕೆಯು ಕಪಿಗಳ ಜೊತೆಯಲ್ಲಿ ವಾಸಮಾಡುತ್ತ ತಾನೂ ಒಂದು ಕಪಿಯಂತೆ ಆಚರಿಸುತ್ತಿದ್ದಳೆಂದು ತಿಳಿದುಬಂದಿದೆ.

ಅಮೇರಿಕಾದೇಶದ ಕರ್ನಲ್ ವಿಲಿಯಮ್ ಇ. ಈಸ್ಟರ್‌ವುಡ್ ಎಂಬ ಕೋಟ್ಯಧೀಶ್ವರನು, ಇಟಲಿದೇಶದ ರೋಮ್ ಪಟ್ಟಣದಿಂದ ಆಕಾಶಯಾನದಲ್ಲಿ ಹೊರಟು ಎಲ್ಲಿಯೂ ನಿಲ್ಲದೆ ಅಮೇರಿಕಾದೇಶದ ನ್ಯೂಯಾರ್ಕ್‌ಪಟ್ಟಣವನ್ನು ಮೊದಲು ತಲ್ಪುವ ವೈಮಾನಿಕನಿಗೆ 25,000 ಡಾಲರುಗಳ ಬಹುಮಾನವನ್ನು ಕೊಡುವದಾಗಿಯೂ ಯಾವ ಜನಾಂಗದವರು ಬೇಕಾದರೂ ಪ್ರಯತ್ನಿಸಬಹುದಾಗಿಯೂ ಪ್ರಕಟಿಸಿರುತ್ತಾನೆ. ಈ ಬಹುಮಾನವನ್ನು ಸಂಪಾದಿಸಲು ಇಟಲಿ ಮತ್ತು ಜರ್ಮನಿ ದೇಶದ ವೈಮಾನಿಕರು ಪ್ರಯತ್ನಿಸುತ್ತಿರುವರು.

ಹೈದರಾಬಾದ್ ಸಂಸ್ಥಾನದ ನೈಜಾಂಸಾಹೇಬರವರು ಇಲ್ಲಿಂದ ಹೈದರಾಬಾದಿಗೆ ಪ್ರಯಾಣಮಾಡಿದರು. ಇವರು ನಮ್ಮ ಸಂಸ್ಥಾನಕ್ಕೆ ಆಗಮಿಸಿದ್ದರ ಜ್ಞಾಪಕಾರ್ಥವಾಗಿ ಸಂಸ್ಥಾನದ ಧಾರ್ಮಿಕ ಸಂಸ್ಥೆಗಳಿಗಾಗಿ ಹಂಚುವದಕ್ಕೋಸ್ಕರ 10 ಸಾವಿರ ರೂಪಾಯಿಗಳನ್ನು ಮಂಜೂರುಮಾಡಿ ಆಹಣವನ್ನು ಜಾತಿಮತಭೇದವನ್ನೆಣಿಸದೆ ಎಲ್ಲಾ ಸಂಸ್ಥೆಗಳಿಗೂ ಹಂಚಬೇಕೆಂದು ಹೇಳಿ ಒಂದು ಸಮಿತಿಯನ್ನೇರ್ಪಡಿಸಿರುವರು. ಅದಕ್ಕೆ ದಿವಾನ್ ಮಿರ್ಜಾಸಾಹೇಬರವರು ಅಧ್ಯಕ್ಷರಾಗಿಯೂ ಸರ್. ಚಾರಲ್ಸ್ ಟಾಡ್‌ಹಂಟರ್ ಮತ್ತು ದಿವಾನ್‌ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಚೆಟ್ಟಿರವರು ಸದಸ್ಯರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಡೆಲ್ಲಿಪಟ್ಟಣದಲ್ಲಿ ಕೂಚ್‌ಬಿಹಾರ್ ಮಹಾರಾಣಿಯವರ ಸುಮಾರು ನಾಲ್ಕುಲಕ್ಷ ರೂಪಾಯಿಗಳ ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿದ್ದ 6 ಜನ ಅಪರಾಧಿಗಳ ವಿಚಾರಣೆಯು ದಿಲ್ಲಿ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದು ಮ್ಯಾಜಿಸ್ಟ್ರೇಟರು ಡಕಾಯಿತರ ಗುಂಪಿಗೆ ಸೇರಿದ ಪೋಕ ಎಂಬವನಿಗೆ 7 ವರುಷಗಳ ಕಠಿಣಶಿಕ್ಷೆಯನ್ನೂ, ಇದೇ ಗುಂಪಿಗೆ ಸೇರಿದ ಕರಮಸಿಂಗ್ ಮತ್ತು ಭೂದೇವ ಎಂಬಿಬ್ಬರಿಗೆ 5 ವರ್ಷಗಳ ಕಠಿಣಶಿಕ್ಷೆಯನ್ನೂ, ದ್ವಾರಕಾಪ್ರಸಾದ ಮತ್ತು ಕಾಳೀಚರಣ ಎಂಬ ಆಲಿಘರಿನ ಇಬ್ಬರು ಅಕ್ಕಸಾಲಿಗರಿಗೂ ರಾಮಕಿಶನ್ ಎಂಬ ಡೆಲ್ಲಿ ಅಕ್ಕಸಾಲಿಗನಿಗೂ 3 ವರ್ಷಗಳ ಕಠಿಣಶಿಕ್ಷೆ ಮತ್ತು 500 ರೂಪಾಯಿಗಳ ದಂಡವನ್ನೂ ವಿಧಿಸಿದರು.

ಅಫ್ಘಾನಿಸ್ಥಾನದ ಅಮಾನುಲ್ಲಾಖಾನರ ಸೈನಿಕರು ಇದುವರೆಗೆ ಬಚ್ಚಾಯಿಸಕೋನ ವಶದಲ್ಲಿದ್ದ ಘಜ್ನಿಯನ್ನು ವಶಪಡಿಸಿಕೊಂಡರು. ಇದರಿಂದ ಕುಪಿತನಾದ ಬಚ್ಚಾಯಿಯು 3400 ಜನ ಯೋಧರನ್ನು ಘಜ್ನಿಯನ್ನು ವಶಪಡಿಸಿಕೊಳ್ಳಲು ಕಳುಹಿಸಿರುವನು. ಸದ್ಯ! ಬಚ್ಚಾಯಿಸಕೋನ ಸೈನ್ಯದಲ್ಲಿ 8000 ಜನರಿರುತ್ತಾರೆ. ಕಾಬೂಲಿನ ಮೇಲೆ ಹೊರಟಿರುವ ಅಮಾನುಲ್ಲಾಖಾನರು ಪ್ರತಿದಿನವೂ ಸಾಯಂಕಾಲ ವಿಮಾನದಲ್ಲಿ ಕುಳಿತು ಕಾಂದಹಾರಿಗೆ ಹೋಗಿ ರಾತ್ರಿಯೆಲ್ಲಾ ಅಲ್ಲಿಯ ಕಾರ್ಯಗಳನ್ನು ಮಾಡಿಕೊಂಡು ಬೆಳಗಾಗುವದರೊಳಗಾಗಿ ಪುನಃ ಸೈನ್ಯಕ್ಕೆ ಬರುತ್ತಾರೆ. ಜನರಲ್ ನಾದಿರಖಾನರು ಅಮಾನುಲ್ಲರ ಸಹಾಯಕ್ಕೋಸ್ಕರ ಗಾರ್ಡೆಜ್ಜಿನಿಂದ ಹೊರಟಿರುವರು. ಕಾಬೂಲಿನಲ್ಲಿ ಆಹಾರಸಾಮಗ್ರಿಗಳು ಕಡಿಮೆಯಾಗಿ ಒಂದು ರೊಟ್ಟಿಗೆ 2 ರೂಪಾಯಿಗಳನ್ನು ಕೊಟ್ಟರೂ ದೊರೆಯುವದು ಕಷ್ಟವಾಗಿದೆ.

ಲಾಹೋರ್‌ಪಟ್ಟಣದ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಾದ ಮಿ|| ರಾಜಪಾಲ್ ಎಂಬವರು ಕಳೆದ ತಾ|| 7 ನೆಯ ಭಾನುವಾರ ತಮ್ಮ ಅಂಗಡಿಯಲ್ಲಿ ಒಂದು ಆರಾಮಕುರ್ಚಿಯಮೇಲೆ ಮಲಗಿ ನಿದ್ರಿಸುತ್ತಿರುವಾಗ ಹಾಮ್‌ದೀನ್ ಎಂಬ ಮಹಮ್ಮದೀಯ ತರುಣನು ಅಂಗಡಿಯೊಳಕ್ಕೆ ಪ್ರವೇಶಿಸಿ ಹರಿತವಾದ ಚೂರಿಯಿಂದ ಅವರನ್ನು ಇರಿದು ಕೊಂದುಬಿಟ್ಟನು. ಮಿ|| ರಾಜಪಾಲರು ರಂಗೀಲ ರಸೂಲ್ ಎಂಬ ಪುಸ್ತಕವನ್ನು ಬರೆದು ಅದರಲ್ಲಿ ಮಹಮ್ಮದೀಯರ ಧರ್ಮಗುರುಗಳನ್ನು ನಿಂದಿಸಿದ್ದರೆಂಬುದೇ ಈ ಕೊಲೆಗೆ ಕಾರಣ. ಕೊಲೆಗಡುಕನು ಕೂಡಲೆ ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಪಡಿಸಲ್ಪಟ್ಟಿರುವನು. ರಾಜಪಾಲರ ಕಳೇವರವನ್ನು ಮೆರವಣಿಗೆ ಮಾಡುವ ವಿಷಯವಾಗಿ ಶಾಂತಿಭಂಗವುಂಟಾಗಬಹುದೆಂಬ ಸಂಶಯದಿಂದ ಪೋಲೀಸರಿಗೂ ಆರ್ಯಸಮಾಜದವರಿಗೂ ಭಿನ್ನಾಭಿಪ್ರಾಯವುಂಟಾಗಿದ್ದು ಕೊನೆಗೆ ಹಿಂದೂ ಮಹಮ್ಮದೀಯರು ಒಟ್ಟಾಗಿ ಕೇಳಿಕೊಂಡದ್ದರಿಂದ ಪೋಲೀಸರು ಶವವನ್ನು ಆರ್ಯಸಮಾಜದವರ ವಶಕ್ಕೆ ಕೊಟ್ಟುಬಿಟ್ಟರು. ಅನಂತರ ಶವವು 25 ಸಾವಿರ ಜನಗಳೊಂದಿಗೆ ಉತ್ಸವಪೂರ್ವಕವಾಗಿ ರುದ್ರಭೂಮಿಗೆ ಒಯ್ಯಲ್ಪಟ್ಟು ಸಂಸ್ಕರಿಸಲ್ಪಟ್ಟಿತು.

ಕಳೆದ ಸೋಮವಾರ ಭಾರತನ್ಯಾಯವಿಧಾಯಕ ಸಭೆಯಲ್ಲಿ ಸಭಾಧ್ಯಕ್ಷರಾದ ಮಿ|| ವಿ. ಜೆ. ಪಟೇಲರವರು ಪಬ್ಲಿಕ್‌ಸೇಫ್ಟೀಬಿಲ್ಲಿನ ವಿಷಯವಾಗಿ ತಮಗೂ ಸರಕಾರಕ್ಕೂ ಉಂಟಾಗಿದ್ದ ಭಿನ್ನಾಭಿಪ್ರಾಯದ ವಿಷಯವಾಗಿ ತಮ್ಮ ತೀರ್ಮಾನವನ್ನು ತಿಳುಹಿಸುವದಕ್ಕೋಸ್ಕರ ಎದ್ದು ನಿಂತಾಗ ಪ್ರೇಕ್ಷಕರ ಗುಂಪಿನಿಂದ ಎರಡು ಸಿಡಿಮದ್ದಿನ ಗುಂಡುಗಳು ಎಸೆಯಲ್ಪಟ್ಟು ಸರ್. ಜಾರ್ಜ್‌ಸ್ಟಚರ್, ಸರ್. ಬೊಮಾನ್ಜಿದಲಾಲ್, ಮ|| ವಿ. ರಾಘವೇಂದ್ರರಾವ್ ಮತ್ತು ಮ|| ಶಂಕರರಾವ್ ಇವರುಗಳು ಗಾಯಹೊಂದಿದರು. ಕೂಡಲೆ ಸಭೆಯು ನಿಲ್ಲಿಸಲ್ಪಟ್ಟು ಪ್ರೇಕ್ಷಕರ ಗುಂಪನ್ನು ಶೋಧಿಸಿದಾಗ ಸಾಯುಧರಾದ ಇಬ್ಬರು ತರುಣರು ತಾವೇ ಈ ಕೃತ್ಯವನ್ನು ಮಾಡಿದೆವೆಂದು ಒಪ್ಪಿಕೊಂಡು ಪೋಲೀಸರ ವಶರಾದರು. ಬಂಗಾಳಾದಿಂದ ಬಂದು ಕಾನ್‌ಪುರದಲ್ಲಿ ವಾಸಿಸುತ್ತಿರುವ ಬುದಕೇಶ್ವರದತ್ತ ಮತ್ತು ಪಂಜಾಬಿನ ಭಗತ್‌ಸಿಂಗ್ ಇವೇ ಅವರ ಹೆಸರುಗಳು. ಬಾಂಬುಗಳು ಹಾರಿದ ಸಮಯದಲ್ಲಿಯೇ ಕೆಂಪುಕಾಗದದ ಮೇಲೆ ಅಚ್ಚಾದ "ಹಿಂದುಸ್ಥಾನ ಸೋಸಿಯಲಿಸ್ಟ್ ರಿಪಬ್ಲಿಕನ್ ಆರ್ಮಿಯ ಪ್ರಕಟನೆ" ಎಂಬ ಹಸ್ತಪತ್ರಿಕೆಗಳು ಸಭೆಯಲ್ಲಿ ಎಸೆಯಲ್ಪಟ್ಟಿದ್ದವು. ಆ ಹಸ್ತಪತ್ರಿಕೆಯಲ್ಲಿ "ಸಾರ್ವಭೌಮ ಸರ್ಕಾರದವರು ಭಾರತವರ್ಷಕ್ಕೆ ರಾಜಕೀಯ ಸುಧಾರಣೆಯನ್ನು ಕೊಡುವನೆಪದಿಂದ ಪಬ್ಲಿಕ್‌ಸೇಫ್ಟೀಬಿಲ್, ಟ್ರೇಡ್ಸ್ ಡಿಸ್ಪ್ಯೂಟ್ ಬಿಲ್, ಮೊದಲಾದ ಶಾಸನಗಳಿಂದ ಭಾರತೀಯರನ್ನು ನಿರ್ವೀರ್ಯರನ್ನಾಗಿ ಮಾಡಲು ಯತ್ನಿಸುತ್ತಿರುವರು. ಸರಕಾರದವರ ಈ ನಿರಂಕುಶ ವರ್ತನವನ್ನು ತಡೆಯುವದಕ್ಕೋಸ್ಕರ ಹಿಂದುಸ್ಥಾನ ಸೋಸಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ನಿನವರು ಈ ಕೃತ್ಯವನ್ನು ಮಾಡಲು ತಮ್ಮ ಸೈನ್ಯಕ್ಕೆ ಅಪ್ಪಣೆಕೊಟ್ಟಿರುವರು. ಸರ್ಕಾರದವರು ಮನುಷ್ಯರನ್ನು ಕೊಲ್ಲಬಲ್ಲರೇ ಹೊರತು ಅವರ ಅಭಿಪ್ರಾಯಗಳನ್ನು ಕೊಲ್ಲಲಾರರು. ದೊಡ್ಡ ದೊಡ್ಡ ಸಾಮ್ರಾಜ್ಯಗಳು ನಾಶವಾದವು ಆದರೆ ಅಭಿಪ್ರಾಯಗಳುಮಾತ್ರ ಅಚ್ಚಳಿಯದಂತೆ ಉಳಿದಿವೆ. ಇವೇ ಮೊದಲಾದ ಅಭಿಪ್ರಾಯಗಳು ಸೂಚಿಸಲ್ಪಟ್ಟಿವೆ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ४ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

(೬)

ವೀರಶೈವಸಿದ್ಧಾಂತ.

(ಶಿವಾಗಮಸ್ವತಃ ಪ್ರಾಮಾಣ್ಯವಾದ.)

ಲೇಖಕರು:—ಪಂ|| ಶಂಕರಶಾಸ್ತ್ರಿಗಳು, ಉಮಚಿಗಿ ಮಳೆಮಠ.

(ಹಿಂದಿನಿಂದ ಮುಂದೆಸಾಗುವದು.)

ಪ್ರ—ವೇದಗಳು (ಸ್ವಯಂಭೂ) ಯಾರಿಂದಲೂ ಹುಟ್ಟಿಲ್ಲವೆಂತಲೂ ಅವು ನಿತ್ಯಗಳೆಂತಲೂ **"ವಾಚಾ ನಿರೂಪಾ ನಿತ್ಯಾ" ಶ್ಲೋ|| ಅನಾದಿನಿಧನಾನಿತ್ಯಾವಾಗುತ್ಸೃಷ್ಟಾಸ್ವಯಂಭುವಾ ||** ಇತ್ಯಾದಿ ಶ್ರುತಿ ಸ್ಮೃತಿಗಳಿಂದ ಸಿದ್ಧವಾಗುತ್ತಿರಲು ವೇದಾಗಮಗಳಿಗೆ ಶಿವನೊಬ್ಬನೇ ಕರ್ತೃವಾಗಿರುವುದರಿಂದ ಅವೆರಡೂ ಸ್ವತಃ ಪ್ರಮಾಣಗಳೆಂದು ಹೇಗೆ ಹೇಳುವೆ?

ಉ—ವೇದಗಳು ಶಬ್ದರೂಪಗಳಾಗಿರುವುದರಿಂದಲೂ, ಶಬ್ದವು ಆಕಾಶಗುಣವಾಗಿರುವುದರಿಂದಲೂ ಅಂಥ ಶಬ್ದಾದಿಗುಣವಿಶಿಷ್ಟಗಳಾದ ಆಕಾಶಾದಿಪಂಚಭೂತಗಳು ಶಿವನಿಂದಲೇ ಹುಟ್ಟಿದವೆಂದು **"ಆತ್ಮನ ಆಕಾಶಃ ಸಂಭೂತಃ"** ಇತ್ಯಾದಿ ಶ್ರುತಿಗಳಿಂದ ವೇದ್ಯವಾಗುವದು. ಆದುದರಿಂದಲೇ ಶ್ಲೋ|| ಅಷ್ಟಾದಶಾನಾಮೇತಾಸಾಂವಿದ್ಯಾನಾಂ ಭಿನ್ನವರ್ತ್ಮನಾಂ | ಆದಿಕರ್ತಾ ಕವಿಸ್ಸಾಕ್ಷಾಚ್ಛೂಲಪಾಣಿರಿತಿ ಶ್ರುತಿಃ ||" ಇವೇ ಮೊದಲಾದ ವಾಕ್ಯಗಳಿಂದ 18 ವಿದ್ಯೆಗಳಿಗೆ ಶಿವನೇ ಆದಿಕರ್ತನೆಂತಲೂ ಸದ್ಯೋಜಾತಮುಖದಿಂದ ಋಗ್ವೇದವನ್ನೂ, ವಾಮದೇವಮುಖದಿಂದ ಯಜುರ್ವೇದವನ್ನೂ, ಅಘೋರಮುಖದಿಂದ ಸಾಮವೇದವನ್ನೂ, ತತ್ಪುರುಷಮುಖದಿಂದ ಅಥರ್ವಣವೇದವನ್ನೂ, ಈಶಾನಮುಖದಿಂದ ಕಾಮಿಕಾದ್ಯಾಗಮಗಳನ್ನೂ ಹುಟ್ಟಿಸಿದನೆಂದೂ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಹಾಗೂ ಈ ಸ್ಮೃತಿವಾಕ್ಯಗಳಂತೆಯೇ ಪಂಚಬ್ರಹ್ಮೋಪನಿಷತ್ತಿನಲ್ಲಿಯೂ ಸಿದ್ಧಾಂತ ಶಿಖೋಪನಿಷತ್ತಿನಲ್ಲಿಯೂ ವೇದಾಗಮಗಳು ಸದ್ಯೋಜಾತಾದಿಮುಖಗಳಿಂದಲೇ ಜನ್ಮಿಸಿದವೆಂದು ಉಕ್ತವಾಗಿದೆ. ಆದ್ದರಿಂದ ಶಿವನಿಂದ ಹುಟ್ಟಿದ ವೇದಾಗಮಗಳೆರಡೂ ಸ್ವತಃ ಪ್ರಮಾಣಗಳಾಗಿರುವವು.

ಪ್ರ—ಹಾಗಾದರೆ ವೇದಗಳು ನಿತ್ಯಗಳೆನ್ನುವ ಶ್ರುತಿಸ್ಮೃತಿಗಳಿಗೆ ಗತಿಯೇನು?

ಉ—ಸೃಷ್ಟಿಯ ಪೂರ್ವದಲ್ಲಿ ಪರಶಿವನು ತನ್ನಲ್ಲಿ ಲೀನವಾದ ಸ್ವಶಕ್ತಿಯ ಸ್ವರೂಪವಾಗಿರುವ ವೇದಗಳನ್ನು ನಿಶ್ವಸಿತನ್ಯಾಯದಿಂದ ಅನಾಯಾಸವಾಗಿ ಪೂರ್ವಪೂರ್ವ ವೇದವರ್ಣಾನುರೂಪದಿಂದ ಧಾರಾಪ್ರವಾಹರೂಪವಾಗಿ ಹೊರಗೆ ಪ್ರಕಟಗೊಳಿಸಿರುವನು ಎಂದು ಹೇಳಿದರೆ ವೇದನಿತ್ಯತ್ವವನ್ನು ಹೇಳುವ ಶ್ರುತಿಸ್ಮೃತಿಗಳಿಗೂ ವೇದಜನ್ಯತ್ವವನ್ನು ಹೇಳುವ ಶ್ರುತಿಸ್ಮೃತಿಗಳಿಗೂ ವಿರೋಧವಿಲ್ಲ.

ಪ್ರ—ವೇದಾಗಮಗಳು ಶಿವನಿಂದ ನಿರ್ಮಿಸಲ್ಪಟ್ಟಿರುವಪಕ್ಷದಲ್ಲಿ ಅವು ಪೌರುಷೇಯಗಳಾಗಲಿಲ್ಲವೇ? **"ಪುರುಷೋವೈರುದ್ರಃ" "ಪುರುಷಂ ಕೃಷ್ಣಪಿಂಗಲಂ"** ಇತ್ಯಾದಿ ಶ್ರುತಿಗಳಿಂದ ಶಿವನಿಗೆ ಪುರುಷನೆಂಬ ನಾಮವಿರುವುದರಿಂದ ಅವನಿಂದ ಹುಟ್ಟಿದ ವೇದಾಗಮಗಳು ಪೌರುಷೇಯಗಳೇ ಆದವು. ಅಂದಮೇಲೆ ಯಾವುದು ಪೌರುಷೇಯವೋ ಅದು ಅಪ್ರಮಾಣವೆಂಬ ನಿಯಮದಿಂದ ವೇದಾಗಮಗಳೆರಡೂ ಅಪ್ರಮಾಣಗಳಾಗಬೇಕಲ್ಲವೇ?

ಉ—ಆ ನಿಯಮವು ರಾಗದ್ವೇಷಾದಿ ಪಾಶಬದ್ಧರಾದ ಮನುಷ್ಯರ ವಿಷಯದಲ್ಲಿಯೇ ಇರುತ್ತದೆಂದು ತಿಳಿಯಬೇಕು. ರಾಗದ್ವೇಷಾದಿ ಪ್ರೇರಿತರಾದ ಮನುಷ್ಯರು ಸತ್ಯಾಸತ್ಯಗಳನ್ನು ಹೇಳುವುದುಂಟು; ಅಂಥವರ ಮಾತುಗಳು ಅಪ್ರಮಾಣಗಳಾದರೂ, ಪರಮಾಪ್ತನೂ ಶುದ್ಧನೂ ನಿತ್ಯಮುಕ್ತನೂ ಸ್ವತಃ ಪ್ರಮಾಣಭೂತನೂ ಆದ ಸುಹೇತ್ವರನ ವೇದಾಗಮರೂಪಗಳಾದ **ವಾಕ್ಯಗಳು** ಅಪ್ರಮಾಣಗಳಾಗಲಾರವು.

ಪ್ರ—**"ಪ್ರಜಾಪತಿರಿದಂ ಸರ್ವಮುತ್ಸೃಜತ ಋಚೋ ಯಜೂಂಷಿಸಾಮಾನಿ"** ಎಂಬುವ ಶ್ರುತಿಯಿಂದ ವೇದಗಳನ್ನು ಚತುರ್ಮುಖ ಬ್ರಹ್ಮನು ನಿರ್ಮಿಸಿದನೆಂದು ತಿಳಿದು ಬರುವುದರಿಂದ ಪಂಚಮುಖ ಪರಮೇಶ್ವರನು ನಿರ್ಮಿಸಿದನೆಂದು ಹೇಳುವುದು ಹೇಗೆ?

ಉ—**"ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈವೇದಾಂಶ್ಚ ಪ್ರಹಿಣೋತಿತಸ್ಮೈ"** ಇತ್ಯಾದಿ ಶ್ರುತಿಯಿಂದ ಚತುರ್ಮುಖನ ಉತ್ಪತ್ತಿಗಿಂತಲೂ ಪೂರ್ವದಲ್ಲಿ ವೇದಗಳಿದ್ದವೆಂದೂ ಶಿವನು ಆ ವೇದಗಳನ್ನು ಚತುರ್ಮುಖನಿಗೆ ಉಪದೇಶಮಾಡಿದನೆಂದೂ ತಿಳಿದುಬರುವುದರಿಂದ ಚತುರ್ಮುಖನು ವೇದಗಳಿಗೆ ಕರ್ತನಲ್ಲವು. ಕಿಂತು ಶಿವನೇ ಆದಿಕರ್ತನಾಗಿರುವನು. ಆದ್ದರಿಂದ ಶಿವನೊಬ್ಬನಿಂದ ಹುಟ್ಟಿದ ವೇದಾಗಮಗಳೆರಡೂ ಸ್ವತಃ ಪ್ರಮಾಣಗಳಾಗಿವೆ. ಶ್ರೀ ಶಿವಭಾಷ್ಯದ ಉತ್ತರಾಧಿಕರಣದಲ್ಲಿ ಶ್ಲೋ|| ಅಷ್ಟಾದಶಾನಾಮೇತಾಸಾಂ ವಿದ್ಯಾನಾಂ ಭಿನ್ನವರ್ತ್ಮನಾಂ | ಆದಿಕರ್ತಾ ಕವಿಸ್ಸಾಕ್ಷಾಚ್ಛೂಲಪಾಣಿರಿತಿ ಶ್ರುತಿಃ || ಸದ್ಯೋಜಾತೇನ ಋಗ್ವೇದಂ ವಾಮದೇವೇನಯಾಜುಷಂ | ಅಘೋರೇಣತಥಾ ಸಾಮ ಪುರುಷೇಣಾಥರ್ವಣಂ || ಈಶಾನೇನಮುಖೇನೈವ ಕಾಮಿಕಾದ್ಯಾಗಮಾಂಸ್ತಥಾ | ಜನಯಾಮಾಸ ವಿಶ್ವೇಶಸ್ಸರ್ವಸಿದ್ಧಿಪ್ರದಾಯಕಃ || ವಿಮರ್ಶರೂಪಿಣೀಶಕ್ತಿಃ ಶಿವಸ್ಯಪರಮಾತ್ಮನಃ | ನಿಗಮಾಗಮರೂಪಾಸ್ಯಾತ್ ಸರ್ವತತ್ವಪ್ರಕಾಶಿನೀ || ತಸ್ಮಾದ್ವೇದಾಗಮಾರ್ಥೇಷು ಯಃಕುರ್ಯಾದ್ಭೇದಭಾವನಾಂ | ಸಯಾತಿ ಕಲಂ ಘೋರೇ ನರಕೇಪತತಿಧ್ರುವಂ ||

ಇತ್ಯಾದಿ ಸ್ಮೃತಿವಾಕ್ಯಗಳು ಉದಾಹರಿಸಲ್ಪಟ್ಟಿರುವುವು. ಅಂದರೆ ಶಿವನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮುಖಗಳಿಂದ ಹುಟ್ಟಿದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳರ್ಥವೇ ಈಶಾನಮುಖದಿಂದ ಹುಟ್ಟಿದ ಕಾಮಿಕಾದ್ಯಾಗಮಗಳ ಅರ್ಥವೆಂದು ತಿಳಿಯದೆ ಆ ಅರ್ಥಗಳಿಗೆ ಪರಸ್ಪರ ಭೇದವನ್ನು ಯಾವನು ಭಾವಿಸುವನೋ ಅವನು ಘೋರವಾದ ನರಕಯಾತನೆಯನ್ನು ಭೋಗಿಸುವನೆಂದು ಸ್ಪಷ್ಟವಾಯಿತು. ಆದುದರಿಂದ ವೇದಾಗಮಾರ್ಥಗಳಲ್ಲಿ ಯಾರೂ ಭಿನ್ನಾಭಿಪ್ರಾಯವುಳ್ಳವರಾಗದೆ ಶಿವನ ಆಜ್ಞಾರೂಪಗಳಾದ ವೇದಾಗಮಗಳನ್ನನುಸರಿಸಿ ಅವುಗಳಲ್ಲಿ ಅಧಿಕಾರಾನುಗುಣವಾಗಿ ಹೇಳಲ್ಪಡುವ ಧರ್ಮಗಳನ್ನು ಆಚರಿಸಿ ಅಸ್ತಿಕರೆನಿಸಿಕೊಂಡು ಗುರುಕೃಪೆಗೂ ತನ್ಮೂಲಕ ಶಿವಕೃಪೆಗೂ ಪಾತ್ರರಾಗಿ ನಿತ್ಯಸುಖಿಗಳಾಗಬೇಕೆಂಬುವುದೇ ನನ್ನ ಕೋರಿಕೆಯು.

ಉಪಸಂಹಾರ.

ವೇದಾಗಮಗಳಿಗೆ ಶಿವನೊಬ್ಬನೇ ಕರ್ತೃವಾಗಿರುವುದರಿಂದಲೂ ಅವುಗಳು ಪರಸ್ಪರ ವಿರುದ್ಧಾರ್ಥಗಳನ್ನು ಹೇಳದೆ ವೇದಾರ್ಥವನ್ನು ಆಗಮಗಳೂ ಆಗಮಾರ್ಥವನ್ನು ವೇದಗಳೂ ಹೇಳುವುದರಿಂದಲೂ ಅವೆರಡೂ ಸ್ವತಃ ಪ್ರಮಾಣಗಳೆಂಬುವುದೇ ಸಿದ್ಧಾಂತವು. ಈ ಸಿದ್ಧಾಂತವೇ ಸಿದ್ಧಾಂತಶಿಖಾಮಣಿಯಲ್ಲಿ ಶ್ರೀ ರೇಣುಕ ಭಗವತ್ಪಾದಾಚಾರ್ಯರಿಂದ ತೋರಿಸಲ್ಪಟ್ಟಿರುವುದು. ಮತ್ತು ಶ್ರೀಮನ್ನೀಲಕಂಠ ಶಿವಾಚಾರ್ಯರಿಂದ ಕ್ರಿಯಾಸಾರದಲ್ಲಿಯೂ ತೋರಿಸಲ್ಪಟ್ಟಿರುವುದು. ಅಲ್ಲದೆ ಲಿಂಗಧಾರಣಚಂದ್ರಿಕೆ ವೇದಾಂತಸಾರ ವೀರಶೈವಚಿಂತಾಮಣಿ ಮೊದಲಾದ ಅನೇಕ ವೀರಶೈವ ಗ್ರಂಥಗಳಲ್ಲಿಯೂ ಸಹ ಹೇಳಲ್ಪಟ್ಟಿರುವುದು. ಅಂದಮೇಲೆ ಆಗಮಗಳಲ್ಲಿ ಹೇಳಲ್ಪಡುವ ವರ್ಣಾಶ್ರಮ ಧರ್ಮಗಳೂ, ದೀಕ್ಷಾ ಅಷ್ಟಾವರಣಗಳೂ ಷಟ್‌ಸ್ಥಲಗಳೂ, ದೀಕ್ಷಾಗುರುವಿನ ಲಕ್ಷಣವೂ ದೀಕ್ಷೆಗೆ ಯೋಗ್ಯನಾದ ಶಿಷ್ಯನ ಲಕ್ಷಣವೂ, ಗುರುಶಿಷ್ಯರ ಕರ್ತವ್ಯಕರ್ಮವೂ ಮೊದಲಾದುವುಗಳೆಲ್ಲವೂ ವೈದಿಕಗಳೇ ಆಗಿರುವುದರಿಂದಲೂ ವೀರಶೈವರ ಗರ್ಭಾಧಾನಾದಿ ಸಮಸ್ತಸಂಸ್ಕಾರಗಳು ಸಮಂತ್ರಕಗಳಾಗಿಯೇ ನಡೆಯಬೇಕಾದ್ದರಿಂದಲೂ ವೀರಶೈವರು ವೇದಗಳನ್ನು ಮಾನಿಸದಿದ್ದರೆ ಇವರ ಶಿವಾರ್ಚನಾದಿ ನಿತ್ಯನೈಮಿತ್ತಿಕಾದಿ ಕ್ರಿಯೆಗಳೊಂದೂ ಸಾಂಗವಾಗಿ ಸಾಗಲಾರವಾದ್ದರಿಂದಲೂ ವೇದಗಳು ವೀರಶೈವರಿಗೆ ಪರಮಮಾನ್ಯಗಳೇ ಆಗಿರುವವು. ಶಿವಾಗಮಗಳನ್ನು ಬಿಟ್ಟರೆ ದೀಕ್ಷಾಭೇದ, ಲಿಂಗಸಂಸ್ಕಾರ, ಅಂಗಸಂಸ್ಕಾರ ಮೊದಲಾದ ವಿಧಿಗಳು ನಡೆಯಲಾರವು. ಆದ್ದರಿಂದಲೇ ಸಿದ್ಧಾಂತಾಗಮದಲ್ಲಿ ವೇದಾಗಮಗಳು ಶರೀರಜೀವಾತ್ಮರಂತೆ ಪರಸ್ಪರ ಸಂಬಂಧಗಳಾಗಿರುವುವೆಂದು ಹೇಳಲ್ಪಟ್ಟಿದೆ. ಅಂದರೆ ಜೀವನಿಲ್ಲದ ಶರೀರದಿಂದಲೂ ಶರೀರವಿಲ್ಲದ ಜೀವನಿಂದಲೂ ಏನೂ ಕೆಲಸವಾಗದಿರುವಂತೆ, ವೇದಗಳನ್ನು ಬಿಟ್ಟು ಕೇವಲ ಆಗಮಗಳಿಂದಲೂ ಆಗಮಗಳನ್ನು ಬಿಟ್ಟು ಕೇವಲ ವೇದಗಳಿಂದಲೂ ಯಾವ ಕರ್ಮವೂ ನಡೆಯಲಾರದೆಂಬುದೇ ಸಿದ್ಧಾಂತಾಗಮದ ತಾತ್ಪರ್ಯವು. ಮತ್ತು ಸಿದ್ಧಾಂತಶಿಖೋಪನಿಷತ್ತಿನಲ್ಲಿ ಶೈವಾಗಮಕ್ಕೆ ಲಿಂಗವೆಂದು ರೂಪಕಮಾಡಿಕೊಂಡು ಆ ಆಗಮವೆಂಬ ಲಿಂಗರಕ್ಷಣೆಗೆ ಸಾಧನವಾದ ಸಂಪುಟ ಅಂದರೆ ಸಜ್ಜಿಕೆಯಲ್ಲಿ ಲಿಂಗವೇಷ್ಟನದ ವಸ್ತ್ರಾದಿಗಳೇ ಋಗ್ವೇದಾದಿಗಳಾಗಿರುವುವೆಂದು ಹೇಳಲ್ಪಟ್ಟಿರುವದು. ಅಂದಮೇಲೆ ನಿಗಮಾಗಮವಚನಗಳಲ್ಲಿ ಶ್ರದ್ಧೆಯನ್ನಿಡದೆ ಆ ನಿಗಮಾಗಮವಚನಗಳಿಂದಲೇ ಶಿವಾರ್ಚನೆ ಶಿವಾರ್ಪಣ ಶಿವಾನುಭವಗಳನ್ನು ನಿರ್ವಹಿಸದೆ ಅನ್ಯಥಾ ನಿರ್ವಹಿಸಿದರೆ ತಮ್ಮ ಇಷ್ಟಲಿಂಗಸಜ್ಜಿಕಾದಿಗಳಿಗೆ ಬದಲಾಗಿ ಬೇರೆ ರೀತಿಯಿಂದ ನಿರ್ವಹಣಮಾಡಿಕೊಳ್ಳುವ ಪ್ರಸಂಗವು ಬರುತ್ತದೆ. ಆದ್ದರಿಂದ ವೀರಶೈವರಾದ ನಾವುಗಳಂತೂ ನಿಗಮಾಗಮಗಳಲ್ಲಿ ಅಚಲವಾದ ನಂಬಿಕೆಯನ್ನಿಟ್ಟು ನಡೆಯಲೇಬೇಕು, ಗುರುದತ್ತವಾದ ಇಷ್ಟಲಿಂಗದಲ್ಲಿಯೂ ಇದರ ರಕ್ಷಣೆಗೆ ಸಾಧನವಾದ ಸಜ್ಜಿಕಾದಿಗಳಲ್ಲಿಯೂ ನಂಬಿಕೆಯನ್ನಿಡದೆ ಅವುಗಳನ್ನು ಪೂಜ್ಯಬುದ್ಧಿಯಿಂದ ಕಾಣದೆ ಇರುವ ಮಾನವರು ವೀರಶೈವರೇ ಆಗಲಾರರು. ಆದ್ದರಿಂದ ಲಿಂಗಸಜ್ಜಿಕಾದಿರೂಪಗಳಾಗಿರುವ ನಿಗಮಾಗಮಗಳಲ್ಲಿ ಅತಿ ಶ್ರದ್ಧೆಯನ್ನು ವಹಿಸಿ ಅವುಗಳಲ್ಲಿ ಪೂಜ್ಯಬುದ್ಧಿಯನ್ನಿರಿಸಿ ಅವುಗಳು ಸ್ವತಃ ಪ್ರಮಾಣಗಳೆಂದು ಅವಶ್ಯವಾಗಿ ಅಂಗೀಕರಿಸಲೇ ಬೇಕು. ವೀರಶೈವರಿಗೆ ಅತ್ಯವಶ್ಯಕಗಳಾದ ನಿಗಮಾಗಮಗಳ ಅಧ್ಯಯನಾಧ್ಯಾಪನ ಪ್ರಚಾರಕ್ರಮವು ಇತ್ತೀಚಿಗೆ ಕಡಿಮೆಯಾಗುತ್ತಾ ಕಡೆಗೆ ನಾಮಾವಶೇಷವಾಗುವದೋ ಏನೋ ಎಂಬುವದಾಗಿರುವಾಗ ಕೆಲವು ಮಹನೀಯರು ಅಲ್ಲಲ್ಲಿ ವೈದಿಕಪಾಠಶಾಲೆಗಳನ್ನು ಸ್ಥಾಪಿಸಿ ಮಹೋಪಕಾರವನ್ನು ಮಾಡಿದರು. ಆ ಸತ್ಪುರುಷರಿಗೆ ಎಷ್ಟು ಧನ್ಯವಾದಗಳನ್ನು ಮಾಡಿದರೂ ಅಲ್ಪವೇ ಆಗಿದೆ.

ಇತಿ ಶಿವಾಗಮಸ್ವತಃಪ್ರಾಮಾಣ್ಯವಾದಃ ಸಮಾಪ್ತಃ।

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಅ.

ರೇಷ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಅ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಅ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಚಾರ್ಜು ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [5]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಪ್ರಸಿದ್ಧಪತ್ರಿಕೆ.

ಚಿತ್ರದುರ್ಗ ಡಿಸ್ಟ್ರಿಕ್ಟು ಜಗಲೂರು ತಾಲೂಕು ಕಲ್ಲೇದೇವರಪುರದ ಗ್ರಾಮದಲ್ಲಿರುವ ಮುಜರಾಯಿ ಮ್ಯಾನೇಜ್‌ಮೆಂಟಿಗೆ ಒಳಪಟ್ಟ ಪುರಾತನವಾದ ಶ್ರೀ ಕಲ್ಲಿನಾಥಸ್ವಾಮಿಯ ರಥೋತ್ಸವವು ಇದೇ ಶುಕ್ಲನಾಮಸಂವತ್ಸರದ ಚೈತ್ರ ಬಹುಳ ೫ ಭಾನುವಾರ ಮೂಲಾನಕ್ಷತ್ರ ತಾ|| 28-4-1929 ರಲ್ಲಿ ಕೆಳಗೆ ಕಂಡ ಪ್ರೋಗ್ರಾಂ ಪ್ರಕಾರ ದೇವಸ್ಥಾನದ ಧರ್ಮದರ್ಶಿಗಳಿಂದಲೂ ಮತ್ತು ಗ್ರಾಮಸ್ಥರು ಭಕ್ತಾದಿಗಳಿಂದಲೂ ನಡಿಸಲ್ಪಡುತ್ತಾದ್ದರಿಂದ ಸದರಿ ರಥೋತ್ಸವಕಾಲಕ್ಕೆ ದೇವರ ಭಕ್ತಾದಿಗಳು ವ್ಯಾಪಾರಿಗಳು ದಯಮಾಡಿಸಿ ರಥೋತ್ಸವವನ್ನು ಸಾಂಗೋಪಾಂಗವಾಗಿ ನಡೆಯಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಕೋರುವ,

ತಾ|| 10-4-1929.

ತಮ್ಮ ವಿಧೇಯ,
ಕೆ. ದೊಡ್ಡಲಿಂಗಪ್ಪ,
ದೇವಸ್ಥಾನದ ಧರ್ಮದರ್ಶಿ.

ಪ್ರೋಗ್ರಾಂ.

ತಾ|| 24-4-1929 ನೇ ಬುಧವಾರ ಅಂಕುರಾರ್ಪಣ, ಧ್ವಜಾರೋಹಣ, ಕಂಕಣಬಂಧನ.
ತಾ|| 25-4-1929 ನೇ ಗುರುವಾರ ಅಶ್ವಾರೋಹಣ ಉತ್ಸವ.
ತಾ|| 26-4-1929 ನೇ ಶುಕ್ರವಾರ ಗಜಾರೋಹಣ ಉತ್ಸವ.
ತಾ|| 27-4-1929 ನೇ ಶನಿವಾರ ವೃಷಭವಾಹನೋತ್ಸವ, ಕಲ್ಯಾಣೋತ್ಸವ.
ತಾ|| 28-4-1929 ನೇ ಭಾನುವಾರ ರಥೋತ್ಸವ.
ತಾ|| 29-4-1929 ನೇ ಸೋಮವಾರ ಅವಭೃತಸ್ನಾನ.

ಅನಂತರ ಕುಸ್ತಿ—ಕಾಳಗ

30-4-1929 ದನಗಳ ಪ್ರದರ್ಶನ ಉತ್ತಮರಾಸುಗಳಿಗೆ ಬಹುಮಾನ ಕೊಡುವಿಕೆ.

ಈ ಮೇಲ್ಕಂಡ ಪ್ರೋಗ್ರಾಂನಂತೆ ಈ ಉತ್ಸವಕಾಲಕ್ಕೆ ತಾಲೂಕ್ ಅಮಲ್‌ದಾರ್ ಸಾಹೇಬರವರು ದಯಮಾಡಿಸುತ್ತಾರಾದ್ದರಿಂದ ಅವರ ಅಧ್ಯಕ್ಷತೆಯಲ್ಲಿ ನಡಿಸಲ್ಪಡುತ್ತೆ.

ಕೆ. ದೊಡ್ಡಲಿಂಗಪ್ಪ, ಛೇರ್‌ಮೆನ್.

ಪರೀಕ್ಷಿಸಿನೋಡಿರಿ! ತ್ವರೆಮಾಡಿರಿ!!

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನಲೇಹ್ಯ

ಇದರ ಸೇವನೆಯಿಂದ ಧಾತುಸ್ರಾವ, ಅಜೀರ್ಣ, ಸೂತಿಕಾವಾತ, ನೇತ್ರವಾಯು, ಗರ್ಭವಾತ, ನಿದ್ರಾಭಂಗ, ನರಗಳ ದೌರ್ಬಲ್ಯ, ಮೂತ್ರೋಪಾಧಿಗಳು, ಕ್ಷಯ, ಉಬ್ಬಸ, ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಅಸದೃಶವಾದುದು, ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವುದು. ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯೆಂದು ಹೇಳದೆ ಕೆಲವುಕಾಲ ಉಪಯೋಗಿಸಿನೋಡಿದರೆ ನೀವೇ ಹೆಚ್ಚು ಹೊಗಳುವಿರಿ.

"ರಜಿಸ್ಟರು ಟ್ರೇಡ್ಮಾರ್ಕು"

ಕ್ರಯ 12 ತೊಲ ಡಬ್ಬಿ 1ಕ್ಕೆ ರೂ. 2—0—0
(ಭಸ್ಮ, ಸಿಂಧೂರಗಳು ಸೇರಿರುವ) 4—0—0

[24]

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ, ಸನ್ನಿಪಾತಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ, ವಿಷಮಜ್ವರ, ಪ್ಲೇಗು, ಮೂರರ ಜ್ವರ, ಛಳಿಜ್ವರ, ಮಕ್ಕಳ ಎಳವು, ಶೀತ, ನೆಗಡಿ, ಕೆಮ್ಮುಜ್ವರ, ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣವಾದುದು. ಬಹುಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ. ಖಂಡಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1ಕ್ಕೆ 0—8—0
" 40 " " 0—4—0

ವಿ. ಪಿ. ಛಾರ್ಜು ಪ್ರತ್ಯೇಕ, ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ, ಲೇಹ್ಯ, ಮಾತ್ರೆ, ಚೂರ್ಣ, ಭಸ್ಮ, ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರು,
ಆಯುರ್ವೇದಾಶ್ರಮ, ತಳೆಅಗ್ರಹಾರ, ಮೈಸೂರು.

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರುಗಳು **"ಗೃಹಮಾತೆ"**ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಸಾಧ್ಯವೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಅಮ್ಲವಾತ, ಅಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲುಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಆದ್ದರಿಂದ ಈ ಔಷಧಾಲಯಕ್ಕೆ **"ಅಷ್ಟವರ್ಗೌಷಧಾಲಯ"**ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೩ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
848. Ganjipet Poona City.

[2]

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖನಿಯಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ, ಶಕ್ತಿವೈಶಿಷ್ಟ್ಯ, ಘನತರವಾಗಿರುವ ಶಕ್ತಿಶಕ್ತಿಮದ್ಭಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಛಾಲಾಕ್ಷಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುರಗಿರಿ ಶ್ರೀ ಚಿನ್ಮಯ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| ೩ ಅಕ್ಷಯತೃತೀಯಾ (ತಾ|| 11-5-29) ನೆಯ ದಿವಸ ಪ್ರಕಾಶವಾಗುವದು. ಈ ದಿವಸದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.

ಶ್ರೀ ಶಿವತತ್ವಗ್ರಂಥಮಾಲಾಮಂದಿರ
ಜಂಗಮವಾಡಿಮಠ ಬನಾರಸ್ ಸಿಟಿ.

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

ಅಮೂಲ್ಯವಾದ ಗುಣಗಳನ್ನುಳ್ಳ ಈ ಕಂಪನಿಯ ಪಾಲಿಸಿಗಳಲ್ಲೊಂದಾದ ಗ್ಯಾರಂಟೀಡ್ ಇನ್‌ವೆಸ್ಟ್‌ಮೆಂಟ್ ಪಾಲಿಸಿ.

ಈ ಪಾಲಿಸಿಯಲ್ಲಿ ವಿಮೆದಾರನು 5 ವರ್ಷಗಳು ಮಾತ್ರ ಕಂತುಗಳನ್ನು ಕೊಟ್ಟು ನಂತರ ಶೇಕಡ ರೂ. 6 ರಂತೆ ಬಡ್ಡಿ ಕೊಡುತ್ತಾ ಬಂದರೆ ಬಿಗಡಕ್ಕೆ 10 ಅಥವಾ 15 ಕಂತುಗಳನ್ನೆಲ್ಲಾ ಕಂಪೆನಿಯವರೇ ಸಾಲವಾಗಿ ಕಟ್ಟಿಕೊಳ್ಳುತ್ತಿರುತ್ತಾರೆ. ಸದರಿ ವಿಮೆಯು 10 ವರ್ಷಗಳನಂತರ ಮೃತಪಟ್ಟರೆ ಆಗಬಾಕಿ ಆಗುವ ಕಂತುಗಳನ್ನೆಲ್ಲಾ ವಜಾ ಮಾಡುತ್ತಾರೆ. ಅಥವಾ ಕಂತುಗಳನ್ನು ಕೊಡುತ್ತಾ ಬಂದಿದ್ದರೂ ಹೆಡ್ಯೂಲಿನಂತೆ ಕಂತುಗಳನ್ನು ವಿಮೆಯ ಮೊಬಲಗಿನ ಜೊತೆಯಲ್ಲಿ ವಾಪಸು ಮಾಡುತ್ತಾರೆ. ಒಂದು ವರ್ಷವಾದರೂ ವಿಮೆಯು ಜಾರಿಯಲ್ಲಿದ್ದು ಮೃತಪಟ್ಟರೆ ಆ ವರ್ಷದ ಲಾಭವನ್ನು ಸೇರಿಸಿಕೊಡುತ್ತಾರೆ (Interim Bonus).

ರೂ. 10,000 ಗಳಿಗೆ ವಿಮೆಮಾಡಿ ಮೊದಲನೆ 10 ವರ್ಷಗಳಲ್ಲಿ ಮೃತಪಟ್ಟರೆ ವಿಮೆಯ ರೂ. 10,000

11 ನೇ ವರ್ಷದಲ್ಲಿ	1 ಕಂತು	ರೂ. 10,600	16 ನೇ ವರ್ಷದಲ್ಲಿ	6 ಕಂತು	ರೂ. 13,600
12 ನೇ ವರ್ಷದಲ್ಲಿ	2 ,,	,, 11,200	17 ನೇ ವರ್ಷದಲ್ಲಿ	7 ,,	,, 14,200
13 ನೇ ವರ್ಷದಲ್ಲಿ	3 ,,	,, 11,800	18 ನೇ ವರ್ಷದಲ್ಲಿ	8 ,,	,, 14,800
14 ನೇ ವರ್ಷದಲ್ಲಿ	4 ,,	,, 12,400	19 ನೇ ವರ್ಷದಲ್ಲಿ	9 ,,	,, 15,400
15 ನೇ ವರ್ಷದಲ್ಲಿ	5 ,,	,, 13,000	20 ನೇ ವರ್ಷದಲ್ಲಿ	10 ,,	,, 16,000

[42]

ಏಜಂಟರು ಬೇಕಾಗಿದೆ.

ಬೊಂಬಾಯಿಗೆ ಬರೆಯಬೇಕಾದರೆ,
ಬ್ರಾಂಚ್ ಆಫೀಸು,
ಫೋರ್ಟ್, ಬೊಂಬಾಯಿ.

ಅಥವಾ

ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು
ಯಸ್. ರಾಮಸ್ವಾಮಿ,
ರೆಸಿಡೆಂಟ್ ಏಜಂಟ್, ಹೀವರ್ಗ್ಲೆನ್, ಮೈಸೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ತಾಲಿಮಖಂಡ, ಮಧುಕಂದ, ಜಪಾಕಂಥ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಗಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶಪಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮುಖಾನಾ, ಬೀಜಬಂದ, ಹರಣಜೋರಿ, ಮುಂಗಲೀ ಬೇದಾಣೆ, ಮರ್ದಾನೀಕಟ್ಟಿಗೆ, ತತಾವರಿ, ಸಕೀಣಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಪಾಮುಕ್ತಿ, ಪಂಕಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸಕ್ಕರೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು.

[13]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರರೋಗಕ್ಕೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವಹಿ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0

ಟಿಮ್ಮು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮುಕೇಸುಗಳೂ, ಇತರ ಪ್ರಸಿದ್ಧ ಫರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ.

[37]

ಮಲೇರಿಯಾನ ಕಂಪೆನಿ, ನಂಬ್ರ ೩೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹುಮನೋಹರವಾಗಿ ಮುದ್ರಿಸಿಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾತರಹದ ಜಾಬ್‌ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ ಕ್ಕೆ	ರೂ. ಅ. ಪೈ. ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೬|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ದುಷ್ಕೃತ್ಯಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೩ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್, **ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ನೆಗಡಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿನೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುಬುಬಸವ ಅಂಡ್ ಕಂಪನಿ ಲಿಮಿಟೆಡ್,
[42] ಪೋ. ಬಾ. ೫೧೦, ಮದರಾಸು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಖ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶರತ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ ನೇ ಏಪ್ರಿಲ್ ೧೯೨೯ [ಸಂಚಿಕೆ ೫೨.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸ್ವೀಕಾರ.

ನಾಲಿ ಹಿರೇಮಠದ ವೇ|| ರುದ್ರಮೂರ್ತಯ್ಯನವರ ಪುತ್ರ ಚಿ|| ರಾಜಶೇಖರಯ್ಯನಿಗೂ ಚಂದನಹಳ್ಳಿ ಹಿರೇಮಠದ ವೇ|| ಚನ್ನವೀರಯ್ಯನವರ ಪುತ್ರಿ ಸೌ|| ಬಸವಮ್ಮನಿಗೂ, ಸದರಿ ರುದ್ರಮೂರ್ತಯ್ಯನವರ ದ್ವಿತೀಯ ಪುತ್ರ ಚಿ|| ಮಲ್ಲಿನಾಥಯ್ಯನಿಗೂ ಚಂ|| ಹಿ|| ವೇ|| ಸಂಗನಬಸವಯ್ಯನವರ ಪುತ್ರಿ ಸೌ|| ಅಕ್ಕನಾಗಮ್ಮನಿಗೂ, ಗಂಗಾವತಿ ತಲೆಖಾನಮಠದ ವೇ|| ಅರ್ಧನಾರೀಶ್ವರಯ್ಯನವರ ಪುತ್ರ ಚಿ|| ಶಾಂತಯ್ಯನಿಗೂ ಚಂ|| ಹಿ|| ವೇ|| ಬಸವಯ್ಯನವರ ಪುತ್ರಿ ಸೌ|| ಭೋಜಮ್ಮನಿಗೂ, ಸಿದ್ಧಾಪುರ ವೇ|| ಮಹಾದೇವಯ್ಯನವರ ಪುತ್ರ ಚಿ|| ವೀರಪ್ಪಯ್ಯನಿಗೂ ಸಾಸಬಾಳು ವಸ್ತ್ರದ ಕೋಟಯ್ಯನವರ ಪುತ್ರಿ ಸೌ|| ಚನ್ನಬಸವಮ್ಮನಿಗೂ ಚಂದಹಳ್ಳಿಯಲ್ಲಿ ನಡೆದ ವಿವಾಹ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 10 ರೂಪಾಯಿಗಳು ಚಿಕ್ಕಮಣ್ಣೂರು ಹಿರೇಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ಡಿ|| ಗುಡ್ಡಾನೂರು ಗ್ರಾಮದ ಮ|| ರಾ|| ಶ್ರೀಮಂತ ಉಳ್ಳೆಗಡ್ಡಿ ಸಿದ್ಧಲಿಂಗಪ್ಪನವರು ತಮ್ಮ ಪುತ್ರರ ವಿವಾಹ ಸಮಯದಲ್ಲಿ ಶ್ರೀ ಜಗದ್ಗುರು ಕೇದಾರಪೀಠಾಧಿಪತಿಗಳನ್ನು ದಯಮಾಡಿಸಿಕೊಂಡು ಬಂದು ಅತಿ ವೈಭವದಿಂದ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ತಮ್ಮ ವಂಶಗುರುಗಳಾದ ಯಲಬುರ್ಗಿ ಧರಮುರಡಿ ಹಿರೇಮಠದ ಪಟ್ಟದ ವೃಷಭಲಿಂಗಸ್ವಾಮಿಗಳವರ ಆಜ್ಞೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 5 ರೂ. ವಧುವಿನ ಕಡೆಯವರಾದ ಮ|| ರಾ|| ಕಿನ್ನಾಳ ಕೋರಿ ಗುದ್ನೆಪ್ಪನವರು ಸಮರ್ಪಿಸಿದ 2 ರೂ. ಮ|| ರಾ|| ಪಂಪಣ್ಣ ಸಾ|| ಕಾತರಕಿ ಇವರು ಸಮರ್ಪಿಸಿದ 2 ರೂ. ಒಟ್ಟು 9 ರೂಪಾಯಿಗಳು ಶ್ರೀ ಯಲಬುರ್ಗಿ ಧ|| ಹಿ|| ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ತರೀಕೆರೆ ತಾ|| ಉಡೇವುಮಠದ ಚರಪಟ್ಟಾಧ್ಯಕ್ಷ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳವರು ತಮ್ಮ ಮಠದಲ್ಲಿ ನೆರವೇರಿಸಿದ ಶಿವದೀಕ್ಷಾ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 7 ರೂಪಾಯಿಗಳು, ತರೀಕೆರೆ ಹಿರೇಮಠದ ವೇ|| ಕಲ್ಲಿನಾಥಯ್ಯನವರ ದ್ವಾರಾ ತಲ್ಪಿರುತ್ತವೆ.

ಕಡೂರು ಡಿ|| ತರೀಕೆರೆ ಟರ್ವನಿವಾಸಿಗಳಾದ ಮ|| ರಾ|| ಗುರುಶಾಂತಪ್ಪನವರ ದಾನಪ್ಪನವರ ಪುತ್ರಿ ಸೌ|| ಚನ್ನವೀರಮ್ಮನಿಗೂ ಮ|| ರಾ|| ನೇಮತಿ ಮರವಣಿಗೆ ಪ್ರಭಣ್ಣನವರ ಪುತ್ರ ಚಿ|| ನಾಗಪ್ಪನಿಗೂ ನಡೆದ ಗರ್ಭಾದಾನ ಮಹೋತ್ಸವ ಸಮಯದಲ್ಲಿ ವಧುವಿನಿಂದ ಸಮರ್ಪಿಸಿದ 3 ರೂ. ವರನಿಂದ 2 ರೂ. ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಸಮಯದಲ್ಲಿ ತೆಗೆಯಿಸಿದ 2 ರೂ. ಒಟ್ಟು 7 ರೂಪಾಯಿಗಳು ಮ|| ರಾ|| ದಾನಪ್ಪನವರ ಗಟ್ಟಪ್ಪನವರ ದ್ವಾರಾ ತಲ್ಪಿರುತ್ತವೆ.

ಬಿಜಾಪುರ ಡಿ|| ಬಾಗಲಕೋಟೆ ತಾ|| ಶಿರೂರು ಗ್ರಾಮದ ಮ|| ರಾ|| ಶ್ರೀಮಂತ ಅನ್ನದಾನಪ್ಪ ಶೆಟ್ಟರವರು ಶಿವಾಧೀನರಾದ ಸಮಯದಲ್ಲಿ ಅವರ ವಂಶಗುರುಗಳಾದ ಸೊಡಿಬುಕ್ತಿ ಹಿರೇಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ಅಪ್ಪಣೆಯಮೇರೆಗೆ ಸದರಿ ಶೆಟ್ಟರ ಪುತ್ರರಾದ ಮ|| ರಾ|| ಚನ್ನಮಲ್ಲಪ್ಪಶೆಟ್ಟರು ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಕೋಡ ತಾ|| ನಾಗವಂದ ಗ್ರಾಮದ ಮ|| ರಾ|| ಅಂಗಡಿ ಶಾಂತವೀರಪ್ಪನವರ ಪುತ್ರ ಚಿ|| ವೀರಪ್ಪನಿಗೂ ನ್ಯಾಮತಿ ಹೊಸಕಟ್ಟಿ ಮ|| ರಾ|| ಶಿವಲಿಂಗಪ್ಪನವರ ಪುತ್ರಿ ಸೌ|| ಬಸವಮ್ಮನಿಗೂ, ಮ|| ರಾ|| ಅಂಗಡಿ ಶಿವರುದ್ರಪ್ಪನವರ ಪುತ್ರ ಚಿ|| ವೀರಭದ್ರಪ್ಪನಿಗೂ ಮಾಸೂರು ಕೊಡಲಿ ಮ|| ಹಾಲಪ್ಪನವರ ಪುತ್ರಿ ಸೌ|| ಹಾಲಮ್ಮನಿಗೂ, ಮ|| ರಾ|| ಹುಲಿವಾಗಲು ಚನ್ನಬಸವಪ್ಪನವರ ಪುತ್ರ ವೀರಪ್ಪನಿಗೂ ಸರಿಪಂಡ ಹೊಸಂಗಡಿ ಮ|| ರಾ|| ಚನ್ನಬಸಪ್ಪನವರ ಪುತ್ರಿ ಸೌ|| ಸೋಮವ್ವನಿಗೂ ನಡೆದ ವಿವಾಹಮಹೋತ್ಸವದಲ್ಲಿ ವೇ|| ಹಳ್ಳೂರು ಹಿರೇಮಠದ ಓಂಕಾರಶಾಸ್ತ್ರಿಗಳು ಹಾಗೂ ತುಮ್ಮಿನಕಟ್ಟೆ ಮ|| ಅರಣೆ ಶಂಕರಪ್ಪನವರು ಇವರ ಹೇಳಿಕೆಪ್ರಕಾರ 3 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಸೊರಬ ತಾ|| ಕ್ಯಾಸನೂರು ಮಠದಲ್ಲಿ ನೆರವೇರಿದ ದತ್ತಸ್ವೀಕಾರ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜಿ ಕೊಟ್ರಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಶಿರಾಳಕೊಪ್ಪದ ಸಂಗೀತವಿದ್ವಾನ್ ವೇ|| ಗದಿಗಯ್ಯನವರ ಮೊಮ್ಮಗ ಮತ್ತು ಸೊಸೆ ಇವರಿಗೆ ಬಹುದಿವಸಗಳಿಂದ ಕಾಯಿಲೆಯು ಪ್ರಾಪ್ತವಾಗಿದ್ದು ಜಗದಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕೋಸ್ಕರ 2 ರೂ. ಗಳನ್ನು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಕಳೆದವಾರ ರಂಗೂನ್‌ಪಟ್ಟಣದ ಅನೇಕಭಾಗಗಳಲ್ಲಿ ಬೆಂಕಿಬಿದ್ದು ಲಕ್ಷಾಂತರ ರೂಪಾಯಿಗಳ ನಷ್ಟವು ಸಂಭವಿಸಿದೆ. ಕಳೆದ ತಾ|| 14 ನೆಯ ಭಾನುವಾರ ಡಾಲ್‌ಹೌಸಿಸ್ಟ್ರೀಟಿನ ಒಂದು ಚೀನಾ ಅಂಗಡಿಗೆ ಬೆಂಕಿಬಿದ್ದು ಸುಮಾರು 23,000 ರೂಪಾಯಿಗಳ ನಷ್ಟವುಂಟಾಯಿತು. ಮರುದಿವಸ ಪ್ರಾತಃಕಾಲ ಯುಗ್‌ಯೂ ಎಂಬ ಬೀದಿಯಲ್ಲಿ ಬೆಂಕಿ ಬಿದ್ದು 15 ಮನೆಗಳು ಸಂಪೂರ್ಣವಾಗಿ ಸುಟ್ಟುಹೋಗಿ ಅನೇಕರು ನಿರ್ಗತಿಕರಾಗಿ ಅಲೆಯುತ್ತಿರುವರು. ಕಳೆದ ಮಂಗಳವಾರ ಫ್ರೋಮ್ ರಸ್ತೆಯಲ್ಲಿರುವ ಒಂದಾನೊಂದು ಹಗ್ಗದ ಕಾರ್ಖಾನೆಯ ಉಗ್ರಾಣಕ್ಕೆ ಬೆಂಕಿಬಿದ್ದು ಸುಮಾರು ಎರಡು ಲಕ್ಷರೂಪಾಯಿಗಳ ಮೇಲ್ಪಟ್ಟು ನಷ್ಟಸಂಭವಿಸಿದೆ. ಪೋಲೀಸರು ಈ ವಿಚಾರವಾಗಿ ಶೋಧಮಾಡುತ್ತಿರುವರು.

ಬರ್ಮಾದೇಶದ ಮಾಂಡಲೆ ಪಟ್ಟಣದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಥಾದೀನ್ ಎಂಬುವನೂ ಇವನ ಸ್ನೇಹಿತರಿಬ್ಬರೂ ಸೇರಿ 5,000 ರೂಪಾಯಿಗಳನ್ನು ಅಪಹರಿಸಿದರೆಂಬ ಆರೋಪದಮೇಲೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿದ್ದರು. ಕಳೆದ ಮಂಗಳವಾರ ಮಧ್ಯಾಹ್ನ ಮ್ಯಾಜಿಸ್ಟ್ರೇಟರು ಇನ್ಸ್‌ಪೆಕ್ಟರನ ಇಬ್ಬರು ಸ್ನೇಹಿತರನ್ನು ನಿರ್ದೋಷಿಗಳೆಂದು ಬಿಡುಗಡೆಮಾಡಿ ಇನ್ಸ್‌ಪೆಕ್ಟರನನ್ನು ಮಾತ್ರ ಒಂದು ವರ್ಷ 3 ತಿಂಗಳುಗಳ ಕಠಿಣಶಿಕ್ಷೆಗೆ ಗುರಿಪಡಿಸಿರುವುದಾಗಿ ತೀರ್ಮಾನವನ್ನು ಹೇಳಿದರು. ಕೂಡಲೆ ಥಾದೀನನು ಮ್ಯಾಜಿಸ್ಟ್ರೇಟರ ಹಿಂಭಾಗಕ್ಕೆ ಹೋಗಿ ಅವರಮೇಲೆ ಮೂರುಸಾರಿ ಪಿಸ್ತೋಲನ್ನು ಹಾರಿಸಿ ಮ್ಯಾಜಿಸ್ಟ್ರೇಟರನ್ನು ಕೊಂದುದಲ್ಲದೆ ತಾನೂ ಸಹ ಬಾಯಿಗೆ ಪಿಸ್ತೋಲನ್ನು ಹಾರಿಸಿಕೊಂಡು ಮೃತಪಟ್ಟನು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ

ತರೀಕೆರೆ.

ಪಶ್ಚಿಮ ಶಿಷ್ಯಕಾರ ವಿಭವ ಸಂ|| ದ ಫಾಲ್ಗುಣ ಶು|| ೧೩ ಶನಿವಾರ ಪೇಟೆಯ ಶ್ರೀ ವೃಷಭೇಶ್ವರ ದೇವಾಲಯದಲ್ಲಿ ಶೃಂಗರಿಸಿದ ಮಂಟಪದಲ್ಲಿ ಶ್ರೀ ಜಗದ್ಗುರುಗಳ ಭಾವಚಿತ್ರವನ್ನಿರಿಸಿ ಷೋಡಶೋಪಚಾರ, ಅಷ್ಟೋತ್ತರಶತನಾಮಪಠನ, ಮಂಗಳಾರತಿ ಪೂರ್ವಕ ಪೂಜೆಯು ನಡೆದು ಅಲಂಕರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನಿರಿಸಿ, ಶ್ರೀ ಪಂಚಾಚಾರ್ಯ ಭಜನಾಸಂಘದವರ ಮಂಜುಳವಾದ ಭಜನೆಯಿಂದಲೂ ಬ್ಯಾಂಡು ವಗೈರೆ ವಾದ್ಯವೈಭವದಿಂದಲೂ ಉತ್ಸವವು ತಳಿರುತೋರಣಗಳಿಂದ ಅಲಂಕೃತವಾದ ರಾಜವೀಧಿಗಳಲ್ಲಿ ಹೊರಟು ಪ್ರತಿಯೊಬ್ಬ ಸ್ವಮತ ಪರಮತದವರೂ ಕೂಡ ಭಕ್ತಿಯಿಂದೊಪ್ಪಿಸುವ ಮಂಗಳಾರತಿಯನ್ನು ಸ್ವೀಕರಿಸುತ್ತ ಶ್ರೀ ಬೂದಿಬಸವೇಶ್ವರ ದೇವಸ್ಥಾನದ ವರೆಗೂ ಹೋಗಿ 12 ಘಂಟೆಗೆ ಸ್ವಸ್ಥಾನವನ್ನು ಸೇರಿದ ಮೇಲೆ ವಸಂತವು ಸಾಯಂಕಾಲಕ್ಕೆ ಮಹಾಮಂಗಲಾರತಿಯೂ ನಡೆದು ಸರ್ವರಿಗೂ ಪ್ರಸಾದವು ಹಂಚಲ್ಪಟ್ಟನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಸ್ಥಿರಚರಪಟ್ಟಾಭಿಷೇಕ ಮಹೋತ್ಸವ.

ದಿಗ್ಗಾವಿ.

ಗುಲಬುರ್ಗಾ ಜಿಲ್ಲಾ ಸೇಡಂ ತಾಲೂಕಿಗೆ ಸೇರಿದ ಈ ಗ್ರಾಮದಲ್ಲಿ ಶಿವಭಕ್ತರ ಸಂಖ್ಯೆಯು ವಿಶೇಷವಾಗಿದ್ದು ಇಲ್ಲಿ 360 ಶಿವದೇವಾಲಯಗಳೂ ದೇವಾಲಯಕ್ಕೆ ಒಂದರಂತೆ 360 ಭಾವಿಗಳೂ ಹಾಗೂ ಅನೇಕ ಬಿಲ್ವವೃಕ್ಷಗಳೂ ಇರುವುದರಿಂದ ದ್ವಿತೀಯ ಶಿವಲೋಕದಂತೆ ವಿರಾಜಿಸುತ್ತಿರುವದು. ಈ ಗ್ರಾಮದ ಮಠವು ಕೆಲವು ಕಾಲದಿಂದ ಅನಾಯಕವಾಗಿತ್ತು. ಆದರೆ ಈಶ್ವರ ಸಂಕಲ್ಪಾನುಸಾರವಾಗಿ ಸದರಿ ಮಠದ ಅಧಿಕಾರವು ಇದೇ ಫಾಲ್ಗುಣ ಬಹುಳ 9 ಬುಧವಾರ ತಾ|| 3-4-29 ಈ ದಿವಸ ವಿಜಾಪೂರ ಜಿಲ್ಲಾ ಬಬಲೇಶ್ವರ ಪುರಾಣಿಕಮಠದ ವೇ|| ಅನುವೀರಯ್ಯನವರ ಜೇಷ್ಠಪುತ್ರರಾದ ಶ್ರೀಶೈಲಶರ್ಮಾ ಇವರಿಗೆ ಶ್ರೀರುದ್ರಮುನಿ ಶಿವಾಚಾರ್ಯರೆಂಬ ಅಭಿಧಾನದೊಡನೆ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಗಂಗಾಧರಸ್ವಾಮಿಗಳವರು ಬೃಹನ್ಮಠ ಪಾಲೀಕೊಪ್ಪ ಇವರ ಕಡೆಯಿಂದ ಒಳ್ಳೇ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಈ ಕಾರ್ಯಕ್ಕೆ ಶ್ರೀ ಹೊಟಗಿ ಅಳ್ಳೊಳ್ಳಿ, ಚುಂಚುನಸೂರು, ಕಲ್ಯಾಣ, ಸೂಗೂರು, ಹಾಗರಿಗಿ, ಮುತ್ತನಾಳ ಇತ್ಯಾದಿ ಗ್ರಾಮಗಳ ಶ್ರೀ ಪಟ್ಟಾಧಿಕಾರಿಗಳು ಹಾಗೂ ಅನೇಕ ಜನ ದೇಶಿಕಮೂರ್ತಿಗಳೂ ಹಾಜರಿದ್ದರು. ಅಲ್ಲದೆ ಅನೇಕ ಗ್ರಾಮಗಳಿಂದ ಭಕ್ತಮಾಹೇಶ್ವರರು ವಿಶೇಷವಾಗಿ ಆಗಮಿಸಿದ್ದರು. ಫಾ|| ಬ|| ೮|| ಮಂಗಳವಾರ ದಿವಸ ಹೊಸದಾಗಿ ಕಟ್ಟಿಸಲ್ಪಟ್ಟ ಈ ಮಠದ ಪೂರ್ವಾಧಿಕಾರಿಗಳಾದ ಶ್ರೀ ಸಿದ್ಧವೀರಸ್ವಾಮಿಗಳ ಶಿಲಾವೇದಿಕೆಗೆ ವೇ|| ರೇವಣಸಿದ್ಧಶರ್ಮಾ ಸೊಪ್ಪಿಮಠ ಇವರ ಕಡೆಯಿಂದ ಏಕಾದಶ ರುದ್ರಾಭಿಷೇಕವು ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟಿತು. ಈ ಸಮಯದಲ್ಲಿ ದಲ್ಲಿ ಗುರುಭಕ್ತಿ ಪರಾಯಣರಾದ ಸರ್ವಭಕ್ತರು ಮಂಗಲಸ್ನಾನವನ್ನಾಚರಿಸಿ ಫಲತಾಂಬೂಲಾದಿಗಳನ್ನು ಕೊಂಡು ಬದ್ಧಾಂಜಲಿಗಳಾಗಿ ಸದರಿ ವೇದಿಕೆಯ ಮುಂಭಾಗದಲ್ಲಿ ಪಂಚಪಲ್ಲವ, ರಂಭಾಸ್ತಂಭಾದಿಗಳಿಂದ ಸುಂದರವಾಗಿ ರಚಿಸಲ್ಪಟ್ಟ ಮಂಟಪದಲ್ಲಿ ಭಕ್ತಿಪರವಶರಾಗಿ ಜಗದಾಚಾರ್ಯರ ಮಂಗಳಕರವಾದ ನಾಮಸಂಕೀರ್ತನವನ್ನು ಮಾಡುತ್ತಿದ್ದರಲ್ಲದೆ ನಗಾರಿ, ನೌಬತ್ತು, ಜಯಘಂಟಾ, ಕಹಳೆ ಮೊದಲಾದ ಮಂಗಲವಾದ್ಯಗಳು ಬಲವಾಗಿ ಮೊಳಗುತ್ತಿದ್ದವು. ಅಲ್ಲದೆ ಜಗದಾಚಾರ್ಯರ ಜಯಘೋಷಧ್ವನಿಯು ಸರ್ವಜನರ ಮೈಮೇಲೆ ರೋಮಾಂಚಗಳನ್ನೆಬ್ಬಿಸುತ್ತಿತ್ತು. ಹೀಗೆ ಒಳ್ಳೇ ಸುವ್ಯವಸ್ಥೆಯಿಂದ ಸ್ವಾಮಿಯ ಗದ್ದುಗೆಯ ಪೂಜೆಯು ಮುಗಿದನಂತರ ಮಂಗಳಾಚರಣವಾಗಿ ಅನೇಕ ಜನ ಮಾಹೇಶ್ವರರಿಗೆ ಮೃಷ್ಟಾನ್ನದೊಡನೆ ಭೂರಿದಕ್ಷಿಣೆಯು ಸಮರ್ಪಿಸಲ್ಪಟ್ಟಿತು. ಫಾ|| ಬ|| 9 ದಿವಸದ ಬ್ರಾಹ್ಮೀಮುಹೂರ್ತದಲ್ಲಿ ಅಧಿಕಾರಿಗಳು ನಿತ್ಯವಿಧಿಯನ್ನು ತೀರಿಸಿಕೊಂಡು ಶುದ್ಧವಸ್ತ್ರಾಲಂಕೃತರಾಗಿ ಸದರಿ ಮಠದಲ್ಲಿಯೇ ಸುಂದರವಾಗಿ ರಚಿಸಲ್ಪಟ್ಟ ಅಭಿಷೇಕಮಂಟಪದಲ್ಲಿ ಅಧಿಕಾರಾರ್ಹನಾದ ವಟುವಿನೊಡನೆ ಸ್ವಸ್ತಿಸೂಕ್ತವನ್ನು ಪಠಿಸುತ್ತ ಆಗಮಿಸಿ ತಮ್ಮ ತಮ್ಮ ಆಸನಗಳನ್ನಲಂಕರಿಸಿದರು. ಆ ಮೇಲೆ ಮೊದಲು ಜಗದಾಚಾರ್ಯರ ಮಂಗಲವಾದನಂತರ ವೇ|| ಸಿದ್ಧಲಿಂಗಶರ್ಮಾ ರಾಂಪೂರ, ವೇ|| ತ್ರಿಲೋಚನಶಾಸ್ತ್ರಿ ಯಾದಗಿರಿ ವೇ|| ವಿಶ್ವಾರಾಧ್ಯಶರ್ಮಾ ಹಲಕರಟಿ ಇವರ ವೈದಿಕತ್ವದಲ್ಲಿ ಸ್ವಸ್ತಿ ವಾಚನ ಪುಣ್ಯಾಹ ಮೊದಲಾದ ಕರ್ಮಗಳಾದ ಮೇಲೆ ವಟುವಿಗೆ ಯಥಾಶಾಸ್ತ್ರವಾಗಿ ಮುದ್ರಾದಾನ ಮೊದಲಾದ ವಿಶೇಷ ವಿಧಿಗಳು ಜರುಗಿಸಲ್ಪಟ್ಟವು. ಅನಂತರ ಆಚಾರ್ಯರು ತಮ್ಮ ತಮ್ಮ ಭಾಗಗಳನ್ನು ಸ್ವೀಕರಿಸಿದ ತರುವಾಯ ಪಟ್ಟಾಭಿಷಿಕ್ತರಾದ ಸ್ವಾಮಿಗಳ ಸಿಂಹಾಸನಾರೋಹಣವಾಯಿತು. ಮತ್ತು ಸರ್ವಜನರು ಕಾಣಿಕೆಯನ್ನರ್ಪಿಸಿದರು. ಇದೇ ಸಮಯದಲ್ಲಿ ಪಾಲೀಕೊಪ್ಪದ ಶ್ರೀಗಳು ಅಧಿಕಾರ ಅಂದರೇನು? ಅಧಿಕಾರಿಗಳ ವರ್ತನವು ಹೇಗಿರಬೇಕು? ಎಂಬೀ ವಿಷಯಗಳ ಮೇಲೆ ಬಹು ಸರಸವಾಗಿ ಭಾಷಣಮಾಡಿದರು. ಅಷ್ಟಕ್ಕೆ 12 ಘಂಟೆಯ ಸಮಯವಾದ್ದರಿಂದ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಆಮೇಲೆ ಗಣಾರಾಧನೆಯು ಅಭೂತಪೂರ್ವವಾಗಿ ನೆರವೇರಿತು. ತಾ|| 4-4-29ನೆಯ ದಿವಸ ಪ್ರಾತಃಕಾಲದ 7 ಘಂಟೆಗೆ ನೂತನಾಧಿಕಾರಿಗಳ ಅಂದೋಲಿಕೋತ್ಸವವು ಹೊರಟಿತು. ಈ ಸಮಯದಲ್ಲಿ ಪೋಲೀಸ ಸಿಬ್ಬಂದಿಯು ವ್ಯವಸ್ಥೆಗಾಗಿ ಬಂದಿತ್ತು. ಅನೇಕ ವಾದ್ಯಗಳಲ್ಲದೆ ಭಜನಾಸಂಘದವರ ಭಕ್ತಿರಸಭರಿತಗಳಾದ ಪದ್ಯಗಳು ಎಂಥ ನಾಸ್ತಿಕನಿಗಾದರೂ ಭಕ್ತಿಯನ್ನು ಹುಟ್ಟಿಸದೆ ಇರಲಿಲ್ಲ. ಜಗದಾಚಾರ್ಯರ ಜಯಘೋಷಕ್ಕಂತೂ ಎಣಿಕೆಯೇ ಇದ್ದಿಲ್ಲ. ಭಕ್ತಿಪರಾಯಣರಾದ ಸುವಾಸಿನಿಯರು ಆರತಿಗಳನ್ನು ಹಿಡಿದುಕೊಂಡು ಪಲ್ಲಕ್ಕಿಯ ಹಿಂಭಾಗದಲ್ಲಿದ್ದು ಇಂಪಾದಸ್ವರದಿಂದ ಮಂಗಳವನ್ನು ಹಾಡಿ ಸರ್ವಜನರಿಗೆ ಭಕ್ತಿಯನ್ನು ಹುಟ್ಟಿಸುತ್ತಿದ್ದರು. ಉತ್ಸವವು ಹೊರಟಸಮಯದಲ್ಲಿ ಸಮಸ್ತ ಭಕ್ತರು ಶುಚಿಯಾಗಿ ಪಲ್ಲಕ್ಕಿಯು ತಂತಮ್ಮ ಮನೆಯ ಮುಂದೆ ಬಂದಕೂಡಲೇ ಮಡಿನೀರಿನ ಕೊಡದಿಂದ ಉತ್ಸವಮೂರ್ತಿಯ ಪಾದಪೂಜೆಯಂಗೈದು ಫಲತಾಂಬೂಲ ಪುಷ್ಪಮಾಲಾದಿಗಳನ್ನರ್ಪಿಸಿ ಮಂಗಲವಂಮಾಡಿ ಆಶೀರ್ವಾದವಂ ಹೊಂದಿ ಸದರಿ ಸ್ವಾಮಿಯಲ್ಲಿದ್ದ ತಮ್ಮ ಅಸಾಧಾರಣ ಭಕ್ತಿಯನ್ನು ವ್ಯಕ್ತಗೊಳಿಸುತ್ತಿದ್ದರು. ಹೀಗೆ ಉತ್ಸವವು ಊರ ಮುಖ್ಯಬೀದಿಗಳಲ್ಲಿ ಸಂಚರಿಸಿ ಮಠಕ್ಕೆ 11 ಘಂಟೆ ಸಮಯಕ್ಕೆ ತಲ್ಪಿತು. ಆ ಮೇಲೆ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಗಂಗಾಧರಸ್ವಾಮಿಗಳು ಪಾಲೀಕೊಪ್ಪ ಇವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ ಹೊಟಗಿ ಇವರು "ಗುರುವರ್ಗದ" ವಿಷಯದಲ್ಲಿ 1 ಘಂಟೆಯ ವರೆಗೆ ಒಳ್ಳೇ ಆವೇಶಪೂರಿತವಾಗಿ ಭಾಷಣಮಾಡಿದರು. ಅನಂತರ, ವೇ|| ರಾಚೋಟಿಶರ್ಮಾ ಬೃಹನ್ಮಠ ನಿಡಗುಂದಿ ಸಿದ್ಧಲಿಂಗಶರ್ಮಾ ರಾಂಪೂರ ಈ ಉಭಯರು ಸತ್ಸಂಗ ಮತ್ತು ಲಿಂಗ ಈ ವಿಷಯವಾಗಿ ಮಾತನಾಡಿದರು. ಅನಂತರ ಅಧ್ಯಕ್ಷಮಹಾಶಯರು ಸಮಾಜಸುಧಾರಣಾ ವಿಷಯದ ಮೇಲೆ ಬಹುಮನೋಹರವಾಗಿ ಭಾಷಣಮಾಡಿದರು. ಆ ಮೇಲೆ ವೇ|| ತ್ರಿಲೋಚನಶಾಸ್ತ್ರಿಗಳು ಯಾದಗಿರಿ ಇವರಿಂದ ಅಧ್ಯಕ್ಷರ ಆಭಾರಮನ್ನಿಸಲ್ಪಟ್ಟು ಸರ್ವ ಅಧಿಕಾರವೃಂದಕ್ಕೆ ಕಾಣಿಕಾಸಮರ್ಪಿಸಿದನಂತರ ಜಗದಾಚಾರ್ಯರ ಜಯಘೋಷದೊಡನೆ ಸದರಿ ಮಠಾಧಿಕಾರಿಗಳಾದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯರು ತಮ್ಮ ಮೂಲಪೀಠವಾದ ರಂಭಾಪುರೀ ಜಗದ್ಗುರು ಪೀಠಕ್ಕೆ 21 ರೂಪಾಯಿ ಗುರುಕಾಣಿಕೆಯನ್ನು ಸಮರ್ಪಿಸಿದ್ದಲ್ಲದೆ ಪ್ರಭಾಪೋಷಣಕ್ಕಾಗಿ 5 ರೂಪಾಯಿಗಳನ್ನು ಸಮರ್ಪಿಸಿದರು. ವೀರಶೈವಮತ ಬಾಂಧವರೇ? ಎಲ್ಲಿ ಗುರುವರ್ಗದ ಮಠಗಳು ಅನಾಯಕವಾಗಿರುವವೋ ಅಲ್ಲಿ ವಿದ್ಯಾವಂತರಾದ ಸುಶೀಲವಟುಗಳನ್ನು ನಿಯಮಿಸಿರಿ. ಹಾಗೂ ನಿಮ್ಮ ಮಠದ ತತ್ವಗಳನ್ನು ತಿಳಿಯಿರಿ "ಉತ್ತಿಷ್ಠತಜಾಗ್ರತಪ್ರಾಪ್ಯವರಾನ್ನಿಬೋಧತ" ಎಂಬ ವಾಕ್ಯವನ್ನು ಸ್ಮರಿಸಿರಿ.

ಮಡಿವಾಳಪ್ಪ ಹೆಡ್‌ಮಾಸ್ತರ, ದಿಗ್ಗಾವಿ.

ಸಾರ್ವಜನಿಕಸಭಾ, ಆಲ್ದೂರು.

ಚಿಕ್ಕಮಗಳೂರು ತಾಲ್ಲೋಕು ಆಲ್ದೂರಿನಲ್ಲಿ ಇದೇ ಏಪ್ರಿಲ್ 6 ನೆಯ ತಾರೀಖಿನ ದಿವಸ ಕಾಫಿಪ್ಲಾಂಟರೂ ಮತ್ತು ನ್ಯಾಯವಿಧಾಯಕಸಭೆಯ ಸದಸ್ಯರೂ ಆದ ಮ|| ಬಾಗಮನೆ ದೇವೇಗೌಡರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯು ಸೇರಿತ್ತು. ಈ ಸಭೆಗೆ ಅನೇಕ ದೊಡ್ಡಮನುಷ್ಯರು ದಯಮಾಡಿಸಿದ್ದರು. ಅವರಲ್ಲಿ ಸುಪ್ರಸಿದ್ಧ ಕಾಫಿಪ್ಲಾಂಟರುಗಳಾದ ಮ|| ಆಲ್ದೂರು ಅಬ್ದುಲ್‌ಕರೀಂ ಸಾಹೇಬರು, ಕರೀಂಮೊಗದುಂ ಸಾಹೇಬರು, ಬಿ. ಪುಟ್ಟಣ್ಣಶೆಟ್ಟರು, ಖಾದರ್‌ವಲ್ಲಿ ಸಾಹೇಬರು, ಬಿ. ಪಿ. ಮಲ್ಲಪ್ಪಶೆಟ್ಟರು, ಅಬ್ಬಾಸ್‌ಸಾಹೇಬರು, ಹೈದರ್‌ಸಾಹೇಬರು, ದೊಡ್ಡಜಮಿನ್ದಾರರೂ ಮತ್ತು ಕಾಫಿಪ್ಲಾಂಟರೂ ಆದ ಅಣ್ಣೆಗೌಡರು, ಕಂಟ್ರಾಕ್ಟರ್ ಹುಸೇನ್‌ಸಾಹೇಬರು, ಮತ್ತು ದೊಡ್ಡಜಮಿನ್ದಾರರಾದ ವಾಸೀನ್‌ಕಾನ್ ಮಂಜೇಗೌಡರು ಮೊದಲಾದ ಮಲೆನಾಡಿನ ಪ್ರಮುಖರು ಆಗಮಿಸಿದ್ದರು. ಸಭೆಗೆ ದಯಮಾಡಿಸಿದ್ದ ಬಹುಮಂದಿ ಸದಸ್ಯರುಗಳು ಈ ಕೆಳಗೆ ಕಂಡ ನಿರ್ಣಯಗಳ ಸಾಧಕಬಾಧಕಬಾಧಕಗಳನ್ನು ವಿಶದವಾಗಿ ಚರ್ಚಿಸಿದಮೇಲೆ, ಅಧ್ಯಕ್ಷರೂ ಸಹ ಸಭಿಕರಿಂದ ತಿಳಿಸಲ್ಪಟ್ಟ ಪ್ರತಿಯೊಂದು ನಿರ್ಣಯವು ಎಷ್ಟು ಮಹತ್ತರವಾದದ್ದು ಮತ್ತು ಬೆಲೆಯುಳ್ಳದ್ದು ಎಂಬುದನ್ನು ದೃಢೀಕರಿಸಿ ಮಾತನಾಡಿದರು. ತರುವಾಯ ಈ ಕೆಳಗೆ ಕಂಡ ನಿರ್ಣಯಗಳು ಸರ್ವಾನುಮತದಿಂದ ಪಾಸಾದುವು. ಈ ನಿರ್ಣಯಗಳ ಪ್ರತಿಯೊಂದನ್ನು ಘನ ಸರ್ಕಾರದವರ ಶೀಘ್ರವಾದ ಆಲೋಚನೆಗೂ ಮತ್ತು ಅನುಕೂಲವಾದ ತೀರ್ಮಾನದ ಬಗ್ಗೆ ಕಳುಹಿಸಿಕೊಡಬೇಕೆಂದು ಸಭಿಕರು ಅಧ್ಯಕ್ಷರನ್ನು ಪ್ರಾರ್ಥಿಸಿಕೊಂಡನಂತರ ಅಧ್ಯಕ್ಷರಿಗೆ ವಂದನೆಗಳು ಅರ್ಪಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಪಾಸಾದ ನಿರ್ಣಯಗಳು.

1. ಪ್ರತಿವರ್ಷವೂ ರೈತರಿಂದ ಉತ್ಪತ್ತಿಯಾಗುತ್ತಲಿರುವ ಭೂಕಂದಾಯದಲ್ಲಿ ಶೇಕಡಾ 25 ರಷ್ಟು ಹಣವನ್ನು ವಿಲೇಜುಪಂಚಾಯಿತಿಗಳಿಗೆ ಗ್ರಾಂಟುಕೊಡುವುದಕ್ಕಾಗಿ ತೆಗೆದಿಡುವುದಕ್ಕೋಸ್ಕರ ಘನ ಸರ್ಕಾರದವರನ್ನು ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

2. ಕಾಫಿತೋಟಗಳ ರಿಸರ್ವ್ ಸಂಬಂಧದಲ್ಲಿ ಸಂಭವಿಸಬಹುದಾದ ಯಾವ ವಿಧವಾದ ಖರ್ಚುಗಳನ್ನು ಹಿಡುವಳಿದಾರರಮೇಲೆ ಹೊರಿಸಬಾರದಾಗಿಯೂ, ಹಾಗೇನಾದರೂ ಇದ್ದಲ್ಲಿ ಅದನ್ನು ಘನ ಸರ್ಕಾರದವರೇ ವಹಿಸಿಕೊಳ್ಳಲು ಕೇಳಿಕೊಳ್ಳಬೇಕಾಗಿಯೂ ಏಕವಾಕ್ಯತೆಯಿಂದ ನಿರ್ಣಯಿಸಲಾಯಿತು.

3. ಮೊನ್ನೆ ತಾನೆ ತಿದ್ದುಪಾಟಾಗಿ ಜಾರಿಗೆ ತರಲ್ಪಟ್ಟಿರುವ ಷಿಕಾರಿ ಲೈಸೆನ್ಸ್ ರೆಗ್ಯುಲೇಷನ್ನು ಪ್ರಜೆಗಳಿಗೆ ತೊಂದರೆಯನ್ನುಂಟುಮಾಡುತ್ತಿರುವುದರಿಂದ ಅದರಲ್ಲೂ ತಕ್ಕಾಪಿ ಮಲೆನಾಡಿಗೆ ಹೆಚ್ಚಾದ ವ್ಯಾಘಾತವನ್ನುಂಟುಮಾಡುತ್ತಿರುವುದರಿಂದ ಘನಸರ್ಕಾರದವರು ಈ ರೆಗ್ಯುಲೇಷನ್ ತಿದ್ದುಪಡಿಯನ್ನು ವಜಾಮಾಡಲು ಕೇಳಿಕೊಳ್ಳಬೇಕಾಗಿ ಈ ಸಭೆಯವರು ಏಕವಾಕ್ಯತೆಯಿಂದ ತೀರ್ಮಾನಮಾಡಿರುತ್ತಾರೆ.

4. ಕಡೂರು ಡಿಸ್ಟ್ರಿಕ್ಟಿನಲ್ಲಿ ಬಹಳ ಕಾಲದಿಂದಲೂ ವಸೂಲು ಮಾಡುತ್ತಿರುವ ರೈಲ್ವೆಸೆಸ್ಸನ್ನು ವಜಾಮಾಡಿಸಲು ಘನಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿ ತೀರ್ಮಾನಿಸಲಾಯಿತು.

5. ಈಗ ರೆವೆನ್ಯೂ ಆಫೀಸರುಗಳಿಗೆ ಕಾಫಿದರಖಾಸ್ತು ಅಪ್ಸೆಟ್ ಬೆಲೆಗನ್ನು ಜಾಸ್ತಿಮಾಡಲು ಕೊಟ್ಟಿರುವ ಅಧಿಕಾರವನ್ನು ವಜಾಮಾಡಬೇಕಾಗಿಯೂ ಮತ್ತು ಮೊದಲಿದ್ದಂತೆ ಎಕರೆ 1ಕ್ಕೆ ಹತ್ತುರೂಪಾಯಿಯನ್ನೇ ಕಾಯಂಮಾಡಿಸಿ ಕೊಡಬೇಕಾಗಿಯೂ ಘನಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿ ಏಕವಾಕ್ಯತೆಯಿಂದ ತೀರ್ಮಾನಿಸಲಾಯಿತು.

6. ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಪ್ರಾವಿನ್ಷಿಯಲ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡುಗಳ ಸುಂಕದ ಕಟ್ಟೆಗಳನ್ನು ವಜಾಮಾಡಿಸಲು ಘನಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿ ತೀರ್ಮಾನಿಸಲಾಯಿತು.

ಬಿ. ಪಿ. ಬಸಪ್ಪಶೆಟ್ಟಿ,
ಪ್ರಜಾಪ್ರತಿನಿಧಿಸಭೆಯ ಮೆಂಬರ.

ಶ್ರೀ ದಕ್ಷಿಣಕಾಶೀಕ್ಷೇತ್ರ ಪೂವಳ್ಳಿ (ಹೂಲಿ) ಪಂಚವರ್ಣಬೃಹನ್ಮಠ.

ಶ್ರೀವೀರಶೈವ ಧರ್ಮೋತ್ತೇಜಕಸಂಸ್ಥೆಯ ೧೬ ನೆಯ ವಾರ್ಷಿಕಕಮಿಟಿಯು.

ಪ್ರತಿವರ್ಷದಂತೆ ಇದೇ ಚೈತ್ರಶುದ್ಧ || ಪ್ರತಿಪದ ತಾ|| ೧೦—೪—೧೯೨೯ ನೇ ಇಸ್ವಿ ಬುಧವಾರ ಶ್ರೀ ಸಿದ್ಧನಂಜೇಶ್ವರ ರುದ್ರಾಭಿಷೇಕವು ಇಲ್ಲಿಯ ಧರ್ಮಾರ್ಥ ಪಾಠಶಾಲೆಯ ವಿದ್ಯಾರ್ಥಿಗಳಿಂದ ಜರುಗಿ ಸಾಯಂಕಾಲ 3 ಘಂಟೆ ಸುಮಾರಕ್ಕೆ ತಳಿರುತೋರಣಗಳಿಂದಲಂಕರಿಸಲ್ಪಟ್ಟ ಶ್ರೀಜಗದ್ಗುರುವಿಶ್ವಾರಾಧ್ಯವಾಚನಾಲಯದಲ್ಲಿ ೧೬ ನೆಯ ವಾರ್ಷಿಕಕಮಿಟಿಯು ನೆರೆಯಿತು.

ಮೊದಲು ವಾರ್ಷಿಕ ರಿಪೋರ್ಟು ಓದಲ್ಪಟ್ಟನಂತರ ಕಾರ್ಯಕ್ರಮದ ಅಂದಾಜುಪತ್ರಿಕೆಯ ವಿವರವು ಯಾವತ್ತರಿಗೂ ತಿಳಿಯುವಂತೆ ಬೋಧಿಸಲ್ಪಟ್ಟಿತು. ಮತ್ತು ಈ ಸಂಸ್ಥೆಗೆ ಹೊಸದಾಗಿ ಧನಸಹಾಯಮಾಡಿದ, ಬೈಲಹೊಂಗಲ, ಯರಗಟ್ಟಿ, ಗುಳೇದಗುಡ್ಡ, ನರಗುಂದ, ಸವದತ್ತಿ, ಉಗರಗೋಳ, ಸುತಗಟ್ಟಿ, ಮೋಟಹಳ್ಳಿ, ಮುನವಳ್ಳಿ ಇತ್ಯಾದಿ ಊರುಗಳ ಸದ್ಭಕ್ತವರ್ಯರ ಆಭಾರವು ಮನ್ನಿಸಲ್ಪಟ್ಟಿತು.

ಹಿಂದಿನ ಹದಿನೈದನೇ ವಾರ್ಷಿಕ ಕಮಿಟಿಯಲ್ಲಿ ನಿರ್ಧರಿಸಿದಂತೆ ಹಳೇತಾಡವಾಲೆಯ ಗ್ರಂಥಗಳನ್ನೂ ಕರ್ನಾಟಕ ಇತಿಹಾಸಕ್ಕೆ ಸಹಕಾರಿಯಾದ ಹಳೇಶಾಸನಗಳನ್ನು ಒದಗಿಸಿಕೊಟ್ಟ ಮುನವಳ್ಳಿ ಶ್ರೀಚಂದ್ರಶೇಖರಸ್ವಾಮಿಗಳ ಹಾಗೂ ಶ್ರೀಮಂತ ದುಂಡಪ್ಪನವರು ಬಾಳಿ ಇವರ ಮತ್ತು ಬೈಲಹೊಂಗಲ ಶಿವಸಂಗಪ್ಪನಮಠದ ಶಿವಪುತ್ರಯ್ಯನವರ ಆಭಾರವು ಸಹ ಮನ್ನಿಸಲ್ಪಟ್ಟಿತು.

ಈ ಸಂಸ್ಥೆಯ ನಿಯಮದಂತೆ ಶ್ರೀಜಗದ್ಗುರು ವಿಶ್ವಾರಾಧ್ಯವಾಚನಾಲಯವೂ ಜ್ಯೋತಿಷ್ಯ ವೈದಿಕ ಪಾಠಶಾಲೆಯೂ ಸ್ಥಾಪಿಸಿದ್ದು ಸದರಿ ಸಂಸ್ಥೆಯವತಿಯಿಂದ ಹಿಂದೆ ಪ್ರಸಾರಮಾಡಲ್ಪಟ್ಟ ವೀರಶೈವವಿವಾಹವಿಧಿ, ಸಂಕ್ಷಿಪ್ತ ಶಿವಪೂಜಾವಿಧಿ, ಸಂಕ್ಷಿಪ್ತದೇವೀಪೂಜಾವಿಧಿ, ಶ್ರೀರುದ್ರಪುರುಷಸೂಕ್ತ, ಶ್ರೀಸಿದ್ಧನಂಜೇಶ್ವರಕೃತ ಅದ್ಭುತಕಾಲಜ್ಞಾನ, ಶ್ರೀರೇಣುಕಾಕವಚ, ಶ್ರೀದೂರ್ವಾಸಮುನಿಕೃತ ದೇವೀಅಷ್ಟೋತ್ತರ ಶತನಾಮಾವಳಿ, ಶ್ರೀವರದಶಂಕರ ಇತ್ಯಾದಿ ಗ್ರಂಥಗಳ ಪ್ರಿಂಟಿನವಿಷಯದಲ್ಲಿ ಧನಸಹಾಯಮಾಡಿದ ಮೇ|| ಸಟ್-ಇನಸ್ಪೇಕ್ಟರ ಸಿದ್ಧಪ್ಪನವರು ಕೆಲಗೇರಿ, ಶ್ರೀಮಂತ ಬಸವಪ್ರಭಪ್ಪನವರು ಹಂಪಣ್ಣನವರ ಸವದತ್ತಿ, ಮು|| ಪ್ರ|| ಶ್ರೀಮಂತ ಗೋವಿಂದಗೌಡರು ಶಿವರಾಶಿ, ಉಗರಗೋಳ, ಮು|| ವಾ|| ಪ್ರ|| ಕೈ|| ವಾ|| ವಿರುಪಾಕ್ಷಪ್ಪನವರು ಬೆಳ್ಳುಬ್ಬಿ ಸವದತ್ತಿ, ಶ್ರೀಮಂತ ದುಂಡಪ್ಪನವರು ಆಳ್ವಕನವರ, ಮುನವಳ್ಳಿ, ಕೋ.|| ಅಪ, ಸೊ|| ಚೇರಮನ್ ಶ್ರೀಯುತ ಶೆಟ್ಟಪ್ಪಗೌಡರು ಸಾವಕ್ಕನವರ ಶ್ರೀರೇಣುಕಾದೇವೀ ಅಭಿಷೇಕ ಫಂಡಕಮಿಟೀ ಇವರ ಹಾಗೂ ಪ್ರತಿವರ್ಷ ಮಾಡುತ್ತಿರುವ ಸಿದ್ಧಾಂತಪಂಚಾಂಗದ ಪ್ರಿಂಟಿನವಿಷಯದಲ್ಲಿ ಸಹಾಯ ಮಾಡಿದ ಬೆಳಗಾಂವ ನಗರ ವಾಸಿಗಳಾದ ಶ್ರೀಮಂತ ದತ್ತಾಜಿರಾವ ಸಾವಂತ ಶ್ರೀರಾಮುಕುಂತ ಪ್ರಕಾಶಪ್ರೆಸ್ ಇವರೆಲ್ಲರ ಸುಕೃತಕಾರ್ಯದಂತೆ ಇನ್ನು ಇದ ಸದ್ಭಕ್ತವರ್ಯರು ನಮ್ಮ ಸಂಸ್ಥೆಯವತಿಯಿಂದ ತಯಾರಿಸಲ್ಪಡುವ ಮುಂದಿನಗ್ರಂಥಗಳ ಪ್ರಿಂಟಿನ ವಿಷಯದಲ್ಲಿ ಬೇಕಾಗುವ ಧನಸಹಾಯವನ್ನು ಮಾಡುವಂತೆ ಜಗದ್ಗುರುವರ್ಯರು ಅವರಿಗೆ ಶುಭಾಶೀರ್ವಾದಸಂಪತ್ತನ್ನು ದಯಪಾಲಿಸಲೆಂದೂ ಮತ್ತೂ ಇಲ್ಲಿಯ ಪಂಚವರ್ಣಬೃಹನ್ಮಠದ ಹಿಂದಿನ ಶ್ರೀ ಚರಪಟ್ಟಾಧ್ಯಕ್ಷ ಶಿವಾನುಭವಶಿವಾಚಾರ್ಯಮಹಾಸ್ವಾಮಿಗಳು ಬರೆದಿಟ್ಟ ಶಿವಾದ್ವೈತದರ್ಪಣಯೆಂಬ ವೀರಶೈವಸಿದ್ಧಾಂತಗ್ರಂಥವು ಸದ್ಯಃ ಪ್ರಿಂಟಿನಲ್ಲಿದ್ದು ಈ ಕಾರ್ಯದಲ್ಲಿ ಧನಸಹಾಯಮಾಡಿದ ಶ್ರೀಮಂತ ಗೋವಿಂದಗೌಡರು ಶಿವರಾಶಿ ಉಗರಗೋಳ ಈ ಸದ್ಭಕ್ತವರ್ಯರ ಭಾವಪಟವನ್ನು ಆಗ್ರಂಥದಲ್ಲಿ ಇಡುವಂತೆ ನಿರ್ಧರಿಸಿದನಂತರ ಶ್ರೀಜಗದ್ಗುರು ವಿಶ್ವಾರಾಧ್ಯರಹಾಗೂ ಶ್ರೀಸಿದ್ಧನಂಜೇಶ್ವರಮಹಾಸ್ವಾಮಿಗಳ ಮಂಗಲಪದ್ಯದೊಡನೆ ಕಮಿಟಿಯು ವಿಸರ್ಜಿಸಲ್ಪಟ್ಟಿತು.

ಸೆಕ್ರೆಟರಿ ಜಗದ್ಗುರು ವಿಶ್ವಾರಾಧ್ಯವಾಚನಾಲಯ
ಹೂಲಿ.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ವಿವಾಹಮಹೋತ್ಸವ.

ಧಾರವಾಡ.

ವಿಭವನಾಮಸಂವತ್ಸರ ಫಾಲ್ಗುಣ ಬ|| ೭ ಸೋಮವಾರ ದಿವಸ ಧಾರವಾಡ ಜಿಲ್ಲಾ ಕರ್ಜಗಿ ತಾಲೂಕು ಹಂದಿಗನೂರು ಸಂಸ್ಥಾನದ ಶ್ರೀಮಂತ ದೊಡ್ಡಮುರಿಗೆಪ್ಪ ಬಸವಂತರಾವ ದೇಸಾಯಿ ವ. ನಾಡಕರ್ಣಿ ಮಾಮಲೆ ಬಂಕಾಪೂರ ಇವರು ತಮ್ಮ ಸುಪುತ್ರಿ ಹ|| ಕುಂ|| ಕೋ|| ಸೌ|| ಅವ್ವ ಬಸವ್ವ ಉರ್ಫ ತಾಯಿಬಾಯಿಯವರನ್ನು ಶ್ರೀ ಮಲ್ಲಪ್ಪ ಉರ್ಫ ಅಣ್ಣಾಸಾಹೇಬ ದೇಸಾಯಿ, ವ ನಾಡಗೌಡ ಇನಾಮದಾರ ರುದ್ರಾಪೂರ ಮಹಾಲಮುರಗೋಡ ಜಿಲ್ಲಾ ಬೆಳಗಾಂವ ಇವರ ದ್ವಿತೀಯಪುತ್ರ ಚಿ|| ರಾ|| ರಾ|| ವೀರಭದ್ರಪ್ಪ ಉರ್ಫ ನಾನಾಸಾಹೇಬ ಇವರಿಗೆ ಕೊಟ್ಟು ಧಾರವಾಡ ಮುಕ್ಕಾಮಿನಲ್ಲಿ ಅತಿ ವಿಜೃಂಭಣೆಯಿಂದ ವಿವಾಹಕಾರ್ಯವನ್ನು ನೆರವೇರಿಸಿದರು. ಆ ಕಾಲಕ್ಕೆ ದೇಸಾಯರು ತಮ್ಮ ವಂಶಗುರುಗಳಾದ ಶ್ರೀ|| ಷ|| ಬ್ರ|| ಮಳಲಿ ಬೃಹನ್ಮಠದ ಮಹಾಸ್ವಾಮಿಗಳವರನ್ನು ಸಕಲ ಬಿರುದಾವಳಿಗಳಿಂದಲೂ ಚತುರಂಗ ಬಲಸಹಿತ ಸಕಲ ವಾದ್ಯ ನೃತ್ಯ ಗೀತ ಭಜನಾದಿ ವೈಭವದಿಂದಲೂ ಅಂದೋಳಿಕೋತ್ಸವದೊಡನೆ ತಮ್ಮಲ್ಲಿಗೆ ದಯಮಾಡಿಸಿಕೊಂಡು ಬಂದರು. ಶ್ರೀಗಳವರು ಸಿಂಹಾಸನಾರೋಹಣಮಾಡಿದಕೂಡಲೆ ಆನಂದಸೂಚಕಗಳಾದ 21 ಗುಂಡುಗಳು ಹಾರಿಸಲ್ಪಟ್ಟವು. ದೀಕ್ಷಾ ವಿವಾಹ ಕಾರ್ಯಗಳು ಶ್ರೀಗಳವರ ಅಧ್ಯಕ್ಷತೆಯಲ್ಲಿ ಶ್ರೀ|| ಷ|| ಬ್ರ|| ಸಿಗ್ಗಾವಿ ಹಿರೇಮಠದ ಚರಮೂರ್ತಿಗಳಿಂದಲೂ ವೇ|| ತಂಕೆರೆ ಹಿರೇಮಠದ ಕಲ್ಲಿನಾಥ ದೀಕ್ಷಿತರಿಂದಲೂ ವಿಧ್ಯುಕ್ತಪ್ರಕಾರ ನಡೆಸಲ್ಪಟ್ಟವು. ಈ ಶುಭಮುಹೂರ್ತಕ್ಕೆ ಮಿ|| ಜೆ. ಎ. ಬಾಟ ಡಿ. ಡಿ. ಕಲೆಕ್ಟರ ಸಾಹೇಬ ಧಾರವಾಡ ಇವರು ದಂಪತಿ ಯುಕ್ತರಾಗಿ. ಆಗಮಿಸಿದ್ದರು. ಹಾಗೂ ಚಚಡಿ, ತಲ್ಲೂರು, ಅಣ್ಣಿಗೇರಿ, ಮುಮ್ಮಿಗಟ್ಟಿ, ಲಕ್ಷ್ಮೇಶ್ವರ ಕುಂದುಗೋಳ ಈ ಗ್ರಾಮಗಳ ದೇಸಾಯಿ ದೇಶಪಾಂಡೆಯವರು ಮತ್ತು ದಿವಾನಬಹದ್ದೂರ ರೊದ್ದ ಸಿ. ಐ. ಇ. ದಿವಾನಬಹದ್ದೂರ ಶಾಂತವೀರಪ್ಪ ಮೆಣಸಿನಕಾಯಿ ರಿಟೈರ್ಡ್ ಡಿ. ಡಿ. ಕಲೆಕ್ಟರ ಮೊದಲಾದವರು ಧಾರವಾಡ ಡಿ|| ಲೋ|| ಮೆಂಬರ ತಾಲೂಕು ಮೆಂಬರರು ಪಾಟೀಲ ಕುಲಕರ್ಣಿಯರು ವಕೀಲರೂ ನಾನಾ ಗ್ರಾಮಗಳ ರೈತರೂ ವ. ಸ್ನೇಹಿತರೂ, ಸುಮಾರು 2-3 ಸಾವಿರ ಜನರು ಬಂದಿದ್ದರು. ತಾ|| 1-4-29 ನೆಯ ಸೋಮವಾರ ಮಧ್ಯಾಹ್ನ 4-15 ಕ್ಕೆ ಸಲ್ಲುವ ಶುಭಸಿಂಹಲಗ್ನದಲ್ಲಿ ಅಕ್ಷತಾರೋಪಣವಾಯಿತು. ಆ ಸಮಯದಲ್ಲಿ ಶ್ರೀಗಳವರು ವರನ ಕಡೆಯಿಂದ 15 ರೂಪಾಯಿಗಳನ್ನೂ ವಧುವಿನ ಕಡೆಯಿಂದ 10 ರೂಪಾಯಿಗಳನ್ನೂ ಪಂಚಾಚಾರ್ಯಪ್ರಭೆಯ ಪೋಷಣೆಕ್ಕೋಸ್ಕರ ಕಳುಹಿಸಬೇಕೆಂದು ಅಪ್ಪಣೆಕೊಡಿಸಿದಮೇರೆಗೆ ಸದರಿ ರೂಪಾಯಿಗಳು ಶ್ರೀಮಂತ ಮಲ್ಲಿಕಾರ್ಜುನಪ್ಪ ಬಸವಲಿಂಗಪ್ಪ ದೇಸಾಯಿ ವ ನಾಡಕರ್ಣಿ ಸಂಸ್ಥಾನ ಹಂದಿಗನೂರು ಮಾಮಲೆ ಬಂಕಾಪೂರ ಇವರಕಡೆಗೆ ಕೊಡಲ್ಪಟ್ಟವು. ಅನಂತರ ನೆರೆದ ಸಭಾಸದರಿಗೆ ಗಂಧ, ಹಾರ, ತುರಾಯಿ ಫಲತಾಂಬೂಲಗಳು ಸಮರ್ಪಿಸಲ್ಪಟ್ಟವು. ಶ್ರೀಮಂತರು ಯಾವತ್ತೂ ಜನರಿಗೆ ಅನ್ನಸಂತರ್ಪಣವನ್ನು ಅತ್ಯಂತ ಸಂತೋಷದಿಂದ ಕಾರ್ಯಸಮಾಪ್ತಿಯವರೆಗೆ ನಡೆಯಿಸಿದರು. ಇಂಥ ಅಸಾಧಾರಣ ಗುರುಭಕ್ತಿಧುರೀಣರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಪುತ್ರ ಪೌತ್ರಾದಿ ಸಕಲ ಭಾಗ್ಯಗಳನ್ನು ದಯಪಾಲಿಸಲೆಂದು ಕೋರುವ,

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ದೀಕ್ಷಾ ವಿವಾಹಮಹೋತ್ಸವ, ಚಂದನಹಳ್ಳಿ.

ಸಿಂಧನೂರು ತಾಲೂಕ ಪೈಕಿ ಚಂದನಹಳ್ಳಿ ಹಿರೇಮಠದ ವೇ|| ಬಸಯ್ಯನವರು ಶ್ರೀ|| ಷ|| ಬ್ರಂ|| ಸಿರಗುಂಪಿ ಪಂಚಾಚಾರ್ಯ ಸಂಸ್ಕೃತಪಾಠಶಾಲಾಧ್ಯಕ್ಷ ಶ್ರೀ ರೇವಣಸಿದ್ಧಶಿವಾಚಾರ್ಯರು ತೆಕ್ಕಲಕೋಟಿ ಶ್ರೀಗಳು, ಸಿರಿಗೇರಿ ಸಂಸ್ಕೃತ ಪಾಠಶಾಲಾಧ್ಯಕ್ಷ ವಿರೂಪಾಕ್ಷ ಶಿವಾಚಾರ್ಯರು ಹಿರೇಹಾಳ ಇವರುಗಳಿಗೆ ಬಿನ್ನಹವನ್ನು ಮಾಡಿ ಅತ್ಯಂತ ಭಕ್ತಿಯಿಂದ ಮಹೋತ್ಸವದೊಡನೆ ಮಠಕ್ಕೆ ಕರೆದುಕೊಂಡು ಬಂದರು. ಮಠವು ತಳಿರುತೋರಣಗಳಿಂದಲೂ ರಂಭಾಸ್ತಂಭಾದಿಗಳಿಂದಲೂ ಅಲ್ಲಲ್ಲಿಗೆ ಕಟ್ಟಿರುವ ಆಚಾರ್ಯರ ಭಾವಪಟಗಳಿಂದಲೂ ನೋಡುವವರಿಗೆ ಧಾರ್ಮಿಕಬುದ್ಧಿಯನ್ನುಂಟುಮಾಡುತ್ತಿತ್ತು. ಸದರಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ದೀಕ್ಷಾ ಉಪನಯನಗಳು ನಡೆದವು. ಮರುದಿವಸ ವಿವಾಹಕಾರ್ಯವೂ ಕೂಡ ನಡೆಯಿತು. 3 ದಿವಸಪರ್ಯಂತ ಸಾವಿರಾರು ಭಕ್ತಮಾಹೇಶ್ವರರು ಭೋಜನವನ್ನು ಮಾಡುತ್ತ ಸಂತೋಷಭರಿತರಾಗಿ ಹೋಗುತ್ತಿದ್ದರು. ಶುಕ್ರವಾರ ದಿವಸ ಮೊಟ್ಟಿ ರಾಚಯ್ಯಶಾಸ್ತ್ರಿಗಳು ಶಿವಕೀರ್ತನವನ್ನು ಮಾಡಿದರು. ಸದರಿ ಮಠದ ಬಸವಯ್ಯನವರು ಬೆಂಗಳೂರಲ್ಲಿ ವೈದಿಕವನ್ನು ಅಭ್ಯಾಸಮಾಡಿದ ರಾಯದುರ್ಗ ತಾಲೂಕ ಪೈಕಿ ಬಿನಹಳ್ಳಿ ಹಿರೇಮಠದ ಗುರುಬಸವಶಾಸ್ತ್ರಿಗಳನ್ನು ಕರೆಯಿಸಿದ ಕಾರಣ ಇವರು ವೇದೋಕ್ತ ಕ್ರಮವಾಗಿ ಮಾಡಿಸಿದ್ದಕ್ಕಾಗಿ ಸದರಿ ಬಸವಯ್ಯನವರು "ವೈದಿಕಶಿರೋಮಣಿ" ಎಂಬ ಹೆಸರಿನಿಂದ ಸದರಿ ಶಾಸ್ತ್ರಿಗಳಿಗೆ ಸಭೆಯಲ್ಲಿ ಸುವರ್ಣಪದಕವನ್ನು ಕೊಟ್ಟರು. ಕೊಟ್ಟಕೂಡಲೆ ಸರ್ವಸಭಿಕರು ಕರತಾಡನವನ್ನು ಮಾಡಿದರು. ದೀಕ್ಷಾ ವಟುಗಳು ಮತ್ತು ವಧೂವರರ ಮಹೋತ್ಸವವು ಚನ್ನಾಗಿ ನಡೆಯಿತು. ಈ ಯಾವತ್ತೂ ಮಹತ್ತರವಾದ ಕಾರ್ಯಗಳನ್ನು ಕಾರ್ಯದಕ್ಷರೂ ಉದಾರಮತಿಗಳೂ ಆಚಾರ್ಯರ ಪಕ್ಷದವರೂ ಆದ ವೇ|| ಬಸವಯ್ಯನವರು ಹನ್ನುಮಪ್ಪನವರು ಸಿರಗುಂಪಿ ದೊಡ್ಡಬಸಪ್ಪನವರು ಕಲ್ಲಪ್ಪನವರು ಚನವೀರಗೌಡರು ಶ್ರೀನಿವಾಸರಾವ್ ಕುಲಕರ್ಣಿಯವರು ಇವರುಗಳು ಕೇವಲ ಕಾರ್ಯದರ್ಶಿಗಳಾಗಿ ನಿಂತು ಕಾರ್ಯವನ್ನು ನಡಿಸಿದರು. ಇವರುಗಳಿಗೆ ಜಗದಾಚಾರ್ಯರು ಜಯಾಶೀರ್ವಾದವನ್ನುಂಟುಮಾಡಲೆಂದು ಹಾರೈಸುವ,

ಸುಳುವಾಯಿಮಠದ ದಾನಯ್ಯನವರು.

ಸಂತೋಷವಾರ್ತೆ.

ಶಿವಮೊಗ್ಗಾ ಡಿವಿಜನ್ ಶೆಷನ್ಸ್ ಜಡ್ಜರವರ ಕೋರ್ಟು.

ಕ್ರಿಮಿನಲ್ ಮಿಸ್‌ಲೆನ್ಸ್ ಅಪ್ಪೀಲ್ ನಂಬರು $\frac{1}{28\text{-}29}$

ಅಪ್ಪೀಲೇಂಟ್ ಆರ್. ಚೆನ್ನಬಸವಾರಾಧ್ಯಸ್ವಾಮಿ.	Vs	ರೆಸ್ಪಾಂಡೆಂಟ್ ಗಾರ್ನ್ಮೆಂಟ್.

ಲೋವರ್ ಕೋರ್ಟ್.

ಚಿಕ್ಕಮಗಳೂರು ಸ್ಪೆಷಲ್ I ನೇ ಕ್ಲಾಸ್ ಮೇಜಿಸ್ಟ್ರೇಟ್‌ರವರ ಕೋರ್ಟು.

ಕ್ರಿಮಿನಲ್ ಮಿಸ್ ನಂ. $\frac{50}{27\text{-}28}$

ಕೆಳಕೋರ್ಟಿನವರು ಆರ್. ಚೆನ್ನಬಸವಾರಾಧ್ಯಸ್ವಾಮಿ ಇವರಿಗೆ ತಾ|| 28-4-28 ರಲ್ಲಿ ಮಾಡಿದ ಆರ್ಡರಿನಲ್ಲಿ—

ಸಕ್ಕರಾಯಪಟ್ಟಣದ ಹಾಲುಸ್ವಾಮಿ ಮಠದ ಸಂಬಂಧ ಕೆಂಚುಗಲ್ ಬಿದ್ರೆ ತೋಟದ ವಿಚಾರದಲ್ಲಿ ಒಂದು ಸ್ವಂತ ಮುಚ್ಚಳಿಕೆ 200 ರೂಪಾಯಿಗೆ ಆರುತಿಂಗಳವರೆಗೂ ಆ ತೋಟದ ತಂಟೆಗೆ ಹೋಗದಂತೆ ಬರೆದುಕೊಡಬೇಕೆಂದು ಕೆ. ನಂಜೇಗೌಡರ ಸಾಕ್ಷಿ ನಂಬುತ್ತೇವೆಂದು ಆರಡರ್ ಮಾಡಿದ್ದರು.

ಈ ಆರ್ಡರ್ ಮೇಲೆ ಚೀಫ್‌ಕೋರ್ಟಿಗೆ ರಿವಿಜನ್‌ಗೆ $\frac{245}{28\text{-}29}$ ನೆ ನಂಬರಾಗಿ ದಾಖಲಾದ್ದು.

ಅಮೆಂಡ್‌ಮೆಂಟ್ ರೂಲ್ಸ್—ಕ್ರಿ. ಪ್ರೊ. ಕೋಡ್ 406 ನೆ ಸೆಕ್ಷನ್ ರೀತ್ಯಾ, ಶೆಷನ್ ಜಡ್ಜ ಕೋರ್ಟಿಗೆ ಅಪ್ಪೀಲ್ ಹಿಡಿಯುವ ಅಧಿಕಾರವಿರುತ್ತೆಂದು ಮಿ|| ಸಿ. ಎಸ್. ದೊರೆಸ್ವಾಮಯ್ಯರ್. B.A., B.L. ಚೀಫ್‌ಜಡ್ಜರವರು ಆರ್ಡರ್ ಮಾಡಿದ್ದರಲ್ಲಿ ಘನವನ್ನು ಹೊಂದಿದ ಶೆಷನ್ಸ್ ಕೋರ್ಟಿನವರು ಅಪ್ಪೀಲೆಂಟರ ಪರ ಮಿ|| H. ಶ್ರೀನಿವಾಸರಾವ್, B.A., B.L. ಅಡ್ವೋಕೇಟರ ಅಪ್ಪೀಲ್ ಗ್ರೌಂಡ್ಸ್ ಲಾ ಪರಿಶೀಲನೆಯಿಂದ ಆರ್ಗ್ಯುಮೆಂಟ್ ಲಾಲಿಸಿ ತಾ|| 11-4-29 ರಲ್ಲಿ ಜಡ್ಜ್‌ಮೆಂಟ್ ಹೇಳಿದ್ದರಲ್ಲಿ ಕೆಳಕೋರ್ಟಿನವರು ಮಾಡಿದ ಆರ್ಡರನ್ನು (ಡಿಸ್ಚಾರ್ಜಿನಿಂದ) ಕ್ಯಾನ್ಸಲ್ ಮಾಡಿರುವದಾಗಿ ಅಪ್ಪೀಲೆಂಟರಿಗೆ ಶೀದಾ ಕೋರ್ಟಿನಿಂದ ಬಂದಿರುವ ನಂಬರ್ $\frac{3158}{588}$ ನೆ ತಾ|| 11-4-29 ರ ಆರ್ಡರ್ ಸಂಗತಿಯನ್ನು ತಿಳುಹಿಸಲು ಸಂತೋಷಪಡುತ್ತದೆ.

19-4-29.

H. Srikanthasharma
and
M. C. Marularadhya.

ಬೆಂಕಿಯ ಅನಾಹುತ.

ತಾ|| 7-3-29 ರಲ್ಲು ಸೊರಬ ತಾಲೂಕ ಕ್ಯಾಸನೂರು ಮಠಕ್ಕೆ ಹಗಲು ಸುಮಾರು ಒಂದು ಘಂಟೆ ಸಮಯದಲ್ಲಿ ಉತ್ತರ ದಿಕ್ಕಿನಿಂದ ಕಾಡುಬೆಂಕಿ ಹಾರಿಬಂದು ಮಠದ ಸಮೀಪದಲ್ಲಿರುವ ತೆಂಗಿನಮರಕ್ಕೆ ಬಿದ್ದು ಅದರ ಕಿಡಿಗಳು ಮಠಕ್ಕೆ ಹೊಂದಿರುವ ಅಡಿಕೆ ಚಪ್ಪರದ ಮೇಲೆ ಬಿದ್ದು ಗಾಳಿಯ ಹೊಡತದಿಂದ ಮಠಕ್ಕೆ ಬಿದ್ದು ಮೂರು ಅಂತಸ್ತುಗಳುಳ್ಳ 120 ಅಂಕಣದ ಗರ್ಭಮಠವು ಪೂರ್ತಿಯಾಗಿ ಸುಟ್ಟುಹೋಯಿತು. ಅಷ್ಟರಲ್ಲಿ ಜನರು ಬಂದು ಮಠದ ಮುಂಭಾಗದ ಮಹಾದ್ವಾರ ನಗಾರಖಾನೆ ಧಾನ್ಯದ ಪಣಜ ಇಷ್ಟನ್ನು ಮಾತ್ರ ಬಹಳ ಪ್ರಯತ್ನದಿಂದುಳಿಸಿಕೊಂಡರು. ಒಳಗಿದ್ದ ಅನೇಕ ಕನ್ನಡ ಸಂಸ್ಕೃತಗ್ರಂಥಗಳು, ಚಾಲುಕ್ಯವಂಶದ ಬಿಜ್ಜಳನು ಕೊಟ್ಟ ಹಾಲುಮಠದವರ ಶಿಷ್ಯವರ್ಗದ ಸಂಬಂಧವಾದ ಸನದು, ಚಂದ್ರಗುತ್ತಿ ಬೊಮ್ಮರಸರು, ಸೋದೆ ಸಂಸ್ಥಾನದ ವಗೈರೆ ರಾಜರುಗಳು ಕೊಟ್ಟ ಸನದುಗಳು ಸಂಸ್ಥಾನದ ಅನೇಕ ಏಕಾರ್ಡುಗಳು ಬಿರುದು ಬಾವಲಿಗಳು ಸಹ ನಾಶವಾಗಿಹೋದವು. ಮಠದ ಶ್ರೀಗಳವರಿಗೆ ಮೈಮೇಲೆ ಹೊದ್ದಬಟ್ಟೆ ವಿನಾ ಏನೂ ಉಳಿಯಲಿಲ್ಲ. ಆ ಕಾಲದಲ್ಲಿ ಸ್ವಕೀಯ ಪರಮತದ ಬಂಧುಗಳು ಶ್ರೀಗಳವರಿಗೆ ಮಾಡಿದ ಆದರಾತಿಥ್ಯ ಶಾಂತಿಬೋಧೆಯು ವರ್ಣಿಸಲಶಕ್ಯವಾಗಿತ್ತು. ಮಾರನೇ ದಿವಸ ಸರ್ಕಾರದವರು ಬಂದು ಕಿಚ್ಚನ್ನಾರಿಸಿ ಒಳಗಿದ್ದ ಟ್ರೇಜರಿಯನ್ನು ಹೊರಗೆ ತೆಗೆಯಿಸಿನೋಡುವಲ್ಲಿ 75 ಸಾವಿರಕ್ಕೆ ಮೇಲ್ಪಟ್ಟು ನೋಟುಗಳು ಕರಿಯಾಗಿದ್ದವು. ಮತ್ತು ರಿಜಿಸ್ಟ್ರು ಆಗಿದ್ದ ಆಗದೇ ಇದ್ದ ಕಾಗದಪತ್ರಗಳು ಹತ್ಯಾರ ಬಂದೂಕ ಲೈಸನ್ಸುಗಳು ಮಠದ ಮುದ್ರೆ ಮೊಹರುಗಳು ಬೆಳ್ಳಿ ಬಟ್ಟಲಗಳು ಸುಟ್ಟು ಕರಗಿಹೋಗಿದ್ದವು. ಬೆಳ್ಳಿ ಬಂಗಾರದ ಸಾಮಾನುಗಳು ರೂಪಾಯಿಗಳು ಸಹ ಕೆಲವು ಕರಗಿದ್ದವು. ಮಠದ ಶ್ರೀಗಳವರು ಬಹಳ ವ್ಯಸನಾಕ್ರಾಂತರಾಗಿರುತ್ತಾರೆ. ಈ ಮುಂದೆ ಮಠದ ಶಿಷ್ಯರೂ, ಭಕ್ತಜನರೂ ದಯಾಳುಗಳಾದ ಘನಸರ್ಕಾರದವರೂ ಪ್ರಸಿದ್ಧವಾದ ಈ ಮಠದ ಕಟ್ಟಡಕ್ಕೆ ಸ್ವಹಸ್ತ ಪರಹಸ್ತಗಳಿಂದ ಸಹಾಯಮಾಡಲಿಕ್ಕೆ ಪ್ರೇರಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಹೆಗ್ಗೋಡು ಶಿವಪ್ಪಯ್ಯಗೌಡ, ವೀರಶೈವಭಕ್ತ ಶ್ರಿಯ.

ದುಃಖವಾರ್ತೆ.

ವಿಜಾಪೂರಜಿಲ್ಲಾ ಶಿರೂರಗ್ರಾಮದ ಶೆಟ್ಟರ ಅನ್ನದಾನಪ್ಪನವರು ಶಿವಸಾಯುಜ್ಯವನ್ನು ಹೊಂದಿದರು. ಇವರಲ್ಲಿ ಧೈರ್ಯ ಚಾತುರ್ಯ ಕಾರ್ಯಕುಶಲತೆ ಸತ್ಪಾತ್ರದಾನ ವಿದ್ಯಾಭಿಮಾನ ಮೊದಲಾದ ಗುಣಗಳು ಮನೆಮಾಡಿಕೊಂಡಿದ್ದವು. ಈ ಧೈರ್ಯಶೀಲರನ್ನು ನಮ್ಮ ಪ್ರಾಂತದೊಳಗೆ ಯಾರೂ ಅರಿಯದವರಿಲ್ಲೆಂದರೆ ಅತಿಶಯೋಕ್ತಿಯಾಗಲಾರದು. ಇವರು ಕಾಶಿ ರಾಮೇಶ್ವರ ಮೊದಲಾದ ಕ್ಷೇತ್ರಗಳಲ್ಲಿ ಶಿವಲಿಂಗಪ್ರತಿಷ್ಠಾದಿ ಕಾರ್ಯಗಳನ್ನು ವಿಧ್ಯುಕ್ತವಾಗಿಮಾಡಿ ಪುಣ್ಯಭಾಜನರಾಗಿ ಗುರುಭಕ್ತಿಪರಾಯಣರಾಗಿದ್ದರು. ಇದಲ್ಲದೆ ಸ್ವಕೀಯಗ್ರಾಮದಲ್ಲಿ ತಮ್ಮ ಯಜಮಾನರಿಂದ ಸ್ಥಾಪಿತವಾದ ನಂದೀಶ್ವರ ದೇವಾಲಯಕ್ಕೆ ನಾಲ್ಕೈದು ಸಹಸ್ರ ರೂಪಾಯಿಗಳನ್ನು ಖರ್ಚುಮಾಡಿ ಸುಂದರವಾದ ಶಿಖರವನ್ನು ಕಟ್ಟಿಸಿದರು. ಈ ಮಹಾಶಯರು ತಮ್ಮ ವಂಶೀಯಗುರುಗಳು ಚಿತ್ತರಗಿ ಎಂಬ ಗ್ರಾಮದಲ್ಲಿ ಶಿವೈಕ್ಯರಾದ್ದರಿಂದ ಗುರುಗಳ ಗದ್ದುಗೆಯ ಪೂಜಾವಿನಿಯೋಗಕ್ಕೋಸ್ಕರ ೧೫೦೦ ರೂಪಾಯಿಗಳ ಭೂಮಿಯನ್ನು ಕೊಂಡು ಭಕ್ತಿಪುರಸ್ಸರವಾಗಿ ಸಮರ್ಪಿಸಿ ಆ ಗದ್ದುಗೆಯ ಗೋಪುರವನ್ನು ಕಟ್ಟಿಸುವುದರೊಳಗಾಗಿ ಪ್ರಕೃತಿಯು ಸ್ವಲ್ಪ ವಿಕಾರವನ್ನು ಹೊಂದಿದ್ದರಿಂದ ಇನ್ನು ಮುಂದೆ ತಾನು ನಿಶ್ಚಯವಾಗಿ ಜೀವಿಸುವುದಿಲ್ಲವೆಂದು ತಿಳಿದು ತಮ್ಮ ವಂಶೀಯ ಗುರುಗಳಾದ ಸೂಡಿಜುಕ್ತಿಹಿರೇಮಠದ ಶ್ರೀ ಪಟ್ಟದಸ್ವಾಮಿಗಳನ್ನು ಬರಮಾಡಿಕೊಂಡು ಮುಂದಿನಸುಖಕ್ಕೋಸ್ಕರ ಸಶಾಸ್ತ್ರವಾಗಿ ಉತ್ತರಕ್ರಿಯೆಗಳನ್ನು ಹೊಂದಿ ಶ್ರೀಜಗದ್ಗುರು ಪಂಚಪೀಠಾಧಿಪತಿಗಳಿಗೆ ೨೫ ರೂಪಾಯಿಗಳಂತೆ ಕಾಣಿಕೆಯನ್ನು ಸಮರ್ಪಿಸಿ ಕಾಶಿಯಲ್ಲಿ ಅಭ್ಯಾಸಮಾಡತಕ್ಕ ಒಬ್ಬ ವಿದ್ಯಾರ್ಥಿಗಳಿಗೂ ಒಬ್ಬ ಪಂಡಿತರಿಗೂ ೨೦ ರೂಪಾಯಿಗಳಂತೆಯೂ ಮತ್ತು ಪಂಚಾಚಾರ್ಯಪ್ರಭೆಗೆ ೫ ರೂಪಾಯಿಗಳನ್ನೂ ಪಂಚಾಕ್ಷರಗವಾಯಿಗಳೆಂಬವರಿಗೆ ೨೦ ರೂಪಾಯಿಗಳನ್ನೂ ಮನಿಯಾರ್ಡರ್ ಮೂಲಕ ಕಳುಹಿಸಿ ಈ ಕಾರ್ಯಕ್ಕಾಗಿ ಬಂದ ಕಮತಗಿ ಚನ್ನವೀರಶಾಸ್ತ್ರಿಗಳಿಗೆ ಸವತ್ಸಗೋದಾನವನ್ನು ಮಾಡಿ ಗುರುಗಳಿಗೆ ಭೂರಿಕಾಣಿಕೆಯನ್ನು ಕೊಟ್ಟು ಮಕ್ಕಳು ಮೊಮ್ಮಕ್ಕಳು ಮೊದಲಾದ ಕುಟುಂಬದ ಜನಗಳಿಗೆ ನಾಲ್ಕು ಲೋಕೋಕ್ತಿಗಳನ್ನು ಉಪದೇಶಮಾಡಿ ನನ್ನ ಅಭಿಪ್ರಾಯದಂತೆ ಗುರುಗಳ ಗೋಪುರವನ್ನು ಕಟ್ಟಿಸಬೇಕೆಂದು ಹೇಳಿ ತಮ್ಮ ನಿತ್ಯಕ್ರಿಯೆಗಳನ್ನು ತೀರಿಸಿಕೊಂಡು ಫಾಲ್ಗುಣ ಬಹುಳ ಅಮಾವಾಸ್ಯಾ ಮಂಗಳವಾರ ರಾತ್ರಿ ೧೨ ಘಂಟೆಗೆ ತಮ್ಮ ೬೫ ನೆ ವರ್ಷದ ವಯಸ್ಸಿನಲ್ಲಿ ಗುರುಗಳ ಸಮಕ್ಷಮ ಶಿವಶಿವ ಎನ್ನುತ್ತ ಶಿವಧ್ಯಾನಪರಾಯಣರಾಗಿ ಶಿವಲೋಕವನ್ನೈದಿದರು. ಪರಮೇಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಒಬ್ಬ ಬಂಧು.

ಪ್ರಕಟಣೆ.

ಅನಾಥ ವೀರಶೈವ ಹಾಸ್ಟೆಲ್ ಹೊಳಲಕೆರೆ.

ಈ ಹಾಸ್ಟಲಿನಲ್ಲಿ ಇಂಗ್ಲೀಷು ಮಿಡಲ್-ಸ್ಕೂಲ್ ತರಗತಿಗಳಲ್ಲಿ ಅಭ್ಯಾಸಮಾಡತಕ್ಕ ಕೇವಲ ಬಡವರಾದ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾದಕ್ಕಳದ ಮತ್ತು ಭೋಜನದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಇಲ್ಲಿಸೇರಿ ಅಭ್ಯಾಸಮಾಡಲು ಅಪೇಕ್ಷಿಸುವ ವಿದ್ಯಾರ್ಥಿಗಳು ಮೇ ತಿಂಗಳು 15 ನೇ ತಾರೀಖಿನೊಳಗಾಗಿ ತಲುಪುವಂತೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದಲ್ಲದೆ ಮೇ ತಿಂಗಳು 20 ನೇ ತಾರೀಖಿನೊಳಗೆ ರೂಬರೂ ಬರತಕ್ಕದ್ದು.

ಕಾಲಾತೀತವಾಗಿ ಬರತಕ್ಕ ಅಪ್ಲಿಕೇಷನ್‌ಗಳು ಗಮನಿಸಲ್ಪಡುವದಿಲ್ಲ.—

ಅಪ್ಲಿಕೇಷನ್ ಫಾರಂಗಳನ್ನು ಹಾಸ್ಟಲ್-ಸೆಕ್ರೆಟರಿಯವರಿಗೆ ಬರೆದು ತರಿಸಿಕೊಳ್ಳತಕ್ಕದ್ದು.—

C. N Dikshit. B. A.
Educational--supervisor.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಎರಡುವರ್ಷಗಳಾಗುವವು. ಕರ್ನಾಟಕ ರಾಜ್ಯದಲ್ಲಿರತಕ್ಕ ಅನೇಕಜನ ಸತ್ಪುರುಷರು ಈ ಪತ್ರಿಕೆಗೆ ನಾನಾರೀತಿಯಿಂದ ಸಹಾಯಮಾಡುತ್ತಿರುವದು ಸರ್ವರಿಗೂ ವೇದ್ಯವೇ ಆದೆ. ಈ ಪತ್ರಿಕೆಯಲ್ಲಿ ಪ್ರಕಟಿಸತಕ್ಕ ಅಮೂಲ್ಯಗಳಾದ ಧರ್ಮವಿಷಯಗಳನ್ನು ನೋಡಿ ಸಂತೋಷಪಟ್ಟು ಅನೇಕರು ಚಂದಾದಾರರಾಗುತ್ತಿರುವರು. ಚಂದಾದಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವದು. ಚಂದಾದಾರರೆಲ್ಲರೂ ಇದೇ ಪ್ರಕಾರ ನಿರಂತರವೂ ಈ ಪತ್ರಿಕೆಯ ವಿಷಯದಲ್ಲಿ ಪ್ರೇಮವನ್ನು ಬೆಳೆಯಿಸುತ್ತ ಹೋಗಬೇಕೆಂದು ಕೋರುತ್ತೇವೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ. ಪಿ.** ಮಾಡುವದರಿಂದ ನಮಗೂ ತೊಂದರೆಯಾಗುವದು ಹಾಗೂ ಚಂದಾದಾರರಿಗೂ ೪ ಆಣೆ ಹೆಚ್ಚಿಗೆ ಬೀಳುವದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮಣಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ. ಪಿ.** ಮಾಡಿದರೆ ೨ ರೂ. ೧೨ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮಣಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮಣಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೆ ಬರೆದು ತಿಳಿಹಿಸಬೇಕೆಂದು ಕೋರುತ್ತೇವೆ. ಸಂ.—

ಪಂಚಾಚಾರ್ಯ ಪ್ರಭಾ

೧೯೨೯ ನೇ ಏಪ್ರಿಲ್ ತಾ|| ೨೨ ನೇ ಸೋಮವಾರ

ಭಸ್ಮಧಾರಣ.

ಭಸ್ಮತ್ರಿಪುಂಡ್ರಂಮತಿಮಾನ್ಮನಸಾಪಿ ನಲಂಘಯೇತ್ |
ಶ್ರುತ್ಯಾವಿಧೀಯತೇ ತಸ್ಮಾತ್ತತ್ತ್ಯಾಗೀಪತಿತೋಭವೇತ್ ||

ತ್ರಿಲೋಕಪಾವನವಾದ ಭಸ್ಮತ್ರಿಪುಂಡ್ರವನ್ನು ಮನಸ್ಸಿನಿಂದಲೂ ಸಹ ನಿರಾಕರಿಸಲಾಗದು. ಯಾರು ಭಸ್ಮತ್ರಿಪುಂಡ್ರಧಾರಣವನ್ನು ನಿರಾಕರಿಸುವರೋ ಅವರು ಪತಿತರಾಗುತ್ತಾರೆ. "ಧೂರ್ತ್ಯೈನಪ್ರಮದಿತವ್ಯಂ" ಎಂದು ಯಜುರ್ವೇದವೂ ಸಹ ಇದೇ ಅಭಿಪ್ರಾಯವನ್ನು ಸಾರುತ್ತದೆ. ಮತ್ತು ವೀರಶೈವಸಿದ್ಧಾಂತದಲ್ಲಿ "ತ್ರಿಪುಂಡ್ರೇಣವಿನಾವಿಪ್ರೋನಾಧಿಕಾರೀ ಶಿವಾರ್ಚನೇ" ಎಂದು ಸಿದ್ಧಾಂತಗೊಳಿಸಲ್ಪಟ್ಟಿರುವುದರಿಂದ ಭಸ್ಮಧಾರಣವು ಲಿಂಗಾರ್ಚನಾತತ್ಪರರಾದ ಸಕಲ ಮಾನವರಿಂದ ಉಪಾದೇಯವಾಗಿರುವುದು. ಇಂತಹ ಪರಮಪವಿತ್ರವಾದ ಭಸ್ಮದ ವಿಷಯದಲ್ಲಿ ಈ ಕಾಲದಲ್ಲಿ ಅನೇಕರಿಗೆ ಅಶ್ರದ್ಧೆಯುಂಟಾಗಿರುವುದು. ಆಂಗ್ಲಭಾಷಾಕೋವಿದರಾದ ಕೆಲವರ ಹೃದಯದಲ್ಲಿ ಭಸ್ಮವೆಂಬುವುದನ್ನು ಏಕೆ ಧರಿಸಬೇಕು? ಹಿಂದಿನವರು ವ್ಯರ್ಥವಾಗಿ ಇದೊಂದು ಮತದ ಗುರುತನ್ನಾಗಿ ಇಟ್ಟಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಬೂದಿಯನ್ನು ಹಚ್ಚಿಕೊಳ್ಳುವುದರಿಂದೇನಾಗುವುದು? ಎಂದು ನಾಸ್ತಿಕಮಾರ್ಗದಲ್ಲಿ ಪ್ರವೇಶಮಾಡಿ ಭಸ್ಮಧಾರಿಗಳಾದ ಶ್ರೋತ್ರಿಯರನ್ನು ಕಂಡು ಅವರನ್ನು ಘೋರರಾದಾಕಾರವುಳ್ಳವರನ್ನಾಗಿ ಭಾವಿಸಿ ಸಿಡಿಮಿಡಿಗುಟ್ಟುತ್ತಿರುವದನ್ನು ನೋಡಿದರೆ ಇದು ಅವರ ದುಸ್ಸಂಸರ್ಗದ ಫಲವೆಂದೇ ಹೇಳಬೇಕಾಗಿದೆ. ಇಂಥವರ ಮೇಲ್ಪಂಕ್ತಿಯನ್ನೇ ಈಗಿನ ಕೆಲವು ವಿದ್ಯಾರ್ಥಿಗಳು ಮಾತಾಪಿತೃಗಳ ಆಜ್ಞೆಯನ್ನು ಮೀರಿ ಅನುಕರಿಸುತ್ತಲಿದ್ದಾರೆ. ಲೋವರ್‌ಸೆಕೆಂಡರಿ ಅಥವಾ ಮೆಟ್ರಿಕ್ ಆಗುವವರೆಗೂ ಬಾಲ್ಯಾವಸ್ಥೆಯ ಪ್ರಭಾವದಿಂದಲೋ ಅಥವಾ ಗುರುಹಿರಿಯರ ಭಯದಿಂದಲೋ ಅಲ್ಪಸ್ವಲ್ಪ ತಮ್ಮ ತಮ್ಮ ಮತದ ಚಿನ್ಹೆಗಳು ತೋರಿದರೂ ಪ್ರೌಢತರಗತಿಗೆ ಪ್ರವೇಶಮಾಡಿದೊಡನೆಯೇ ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಿದ್ದರೆ ಶಾಲೆಗಳಲ್ಲಿ ಇವರನ್ನು ಗೌರವಿಸುವುದಿಲ್ಲವೆಂದು ಭ್ರಮಿಸಿ ಶಾಲೆಗೆ ಹೋಗುವ ಸಮಯಕ್ಕೆ ಸರಿಯಾಗಿ ಡ್ರೆಸ್‌ಮಾಡಿಕೊಂಡು ಹಣೆಯಲ್ಲಿ ಏನಾದರೂ ಸ್ವಲ್ಪವಿಭೂತಿ ಹತ್ತಿದ್ದರೆ ಪ್ರಯತ್ನಪೂರ್ವಕವಾಗಿ ಒದ್ದೆಬಟ್ಟೆಯಿಂದ ಒರೆಸಿಕೊಂಡು ಕೆಲವರು ಹೋಗುವುದುಂಟು. ಇನ್ನು ಕೆಲವರು ಕಾಡಿಗೆಯ ಅಥವಾ ಇಂಕಿನ ಚುಕ್ಕೆಯನ್ನು ಅಥವಾ ಕುಂಕುಮದ ಬಟ್ಟನ್ನು ಅಥವಾ ಇಜ್ಜಿಲುಕಪ್ಪನ್ನು ಹಚ್ಚಿಕೊಂಡು ಶಾಲೆಗೆ ಹೋಗುವ ರೂಢಿಯನ್ನು ಇಟ್ಟುಕೊಂಡಿದ್ದಾರೆ. ಹೀಗೇಕೆ ಮಾಡುವಿರೆಂದು ನೋಡಿದವರು ಯಾರಾದರೂ ಪ್ರಶ್ನೆಮಾಡಿದರೆ ಸಾರ್! ವಿಭೂತಿ ಹಚ್ಚಿಕೊಂಡುಹೋದರೆ ನಮ್ಮನ್ನು ಶಿವಾಚಾರದವರೆಂದು ಕರೆಯುತ್ತಾರೆ. ಮತ್ತು ಅಸಹ್ಯಪಡುತ್ತಾರೆಂದು ಉತ್ತರ ಹೇಳುತ್ತಾರೆ. ಇದನ್ನೆಲ್ಲ ಪರಿಶೀಲಿಸಿದರೆ ಈಗಣ ಅಭ್ಯಾಸದಿಂದ ವಿದ್ಯಾರ್ಥಿಗಳ ಮೇಲೆ ಆಗುವ ಪರಿಣಾಮವನ್ನು ನೋಡಿ ವ್ಯಸನವೆನಿಸುತ್ತದೆ. ಕಾಲೋಚಿತವಾಗಿ ತಾವು ಯಾವ ವಿದ್ಯೆಯನ್ನೋದಿದರೂ ಆ ವಿದ್ಯೆಯಿಂದ ವಿಶೇಷವಾದ ಐಹಿಕಪ್ರಯೋಜನವನ್ನು ಹೊಂದುವುದರಲ್ಲಿ ತವಕಪಡುವುದನ್ನು ಬಿಟ್ಟು ಆ ಪಾಂಡಿತ್ಯವನ್ನೆಲ್ಲ ಪಾರಮಾರ್ಥಿಕಸಾಧನಗಳಾದ ವೈದಿಕಕ್ರಿಯೆಗಳ ಮೇಲೆ ಉಪಯೋಗಿಸುತ್ತ ಬಂದರೆ ಇಂಥವರಿಂದ ಮತವಾಗಲಿ ಮತದ ನಿತ್ಯನೈಮಿತ್ತಿಕಾದಿ ಕ್ರಿಯೆಗಳಾಗಲಿ ಅಥವಾ ಈ ಕ್ರಿಯೆಗಳಿಂದುಂಟಾಗುವ ಪಾರಮಾರ್ಥಿಕಜ್ಞಾನವಾಗಲಿ ಹೇಗೆತಾನೇ ಸಿದ್ಧಿಸುವುದು? ಲೌಕಿಕವೈದಿಕವಿದ್ಯೆಗಳಲ್ಲಿ ಮುಂದುವರಿದು ಈ ಮತಕ್ಕೆ ಬಂದಿರುವ ಮೌಢ್ಯವು ದೂರವಾಗಿ ಮತದ [illegible]ಕ್ಕೆ ಬರಲೆಂಬ ಉದಾತ್ತ ತತ್ವದಿಂದ ವೀರಶೈವ[illegible]ರು ಅಲ್ಲಲ್ಲಿಯೇ ಎಷ್ಟೋ ಕಷ್ಟಪಟ್ಟು ದೊಡ್ಡದೊಡ್ಡ ಫಂಡುಗಳನ್ನು ಕೂಡಿಸಿ ಬಡವಿದ್ಯಾರ್ಥಿಗಳಿಗೆ ವಿದ್ಯಾಸಹಾಯವನ್ನು ಮಾಡುತ್ತಿರುವರು. ಮತ್ತು ಎಷ್ಟೋ ಜನರು ಕಷ್ಟಾರ್ಜನ ಮಾಡಿ ಹಣವನ್ನು ಸಂಪಾದಿಸಿ ತಮ್ಮ ಮತವು ವಿದ್ಯೆಯಲ್ಲಿ ಮುಂದುವರೆಯಲಿ ಎಂಬ ಕಾಂಕ್ಷೆಯಿಂದ ಅಲ್ಲಲ್ಲಿಯೇ ಉಚಿತಗಳಾದ ಆಶ್ರಮಗಳನ್ನು ಏರ್ಪಡಿಸಿದ್ದಾರೆ. ಇವುಗಳ ಸಹಾಯವನ್ನು ಹೊಂದಿ ಆಧುನಿಕವಿದ್ಯಾಪಾಂಡಿತ್ಯವನ್ನು ಸಂಪಾದಿಸಿದ ಮೇಲೆ ಎಷ್ಟರಮಟ್ಟಿಗೆ ಈ ಮತದ ಧಾರ್ಮಿಕಕ್ರಿಯೆಗಳನ್ನು ಅನುಸರಿಸಬೇಕೆಂಬುವುದು ಇದರಿಂದ ಸ್ಪಷ್ಟವಾಗುವುದು. ತನ್ನ ದೇಶ, ತನ್ನ ಗ್ರಾಮ, ತನ್ನ ಮತ, ತನ್ನ ಕ್ರಿಯೆ, ತನ್ನ ಗುರು ಇವುಗಳ ಅಭಿಮಾನವು ಬಿಡದೆ ಇರುವುದೇ ಪ್ರತಿಯೊಬ್ಬನ ಧರ್ಮವಾಗಿದ್ದರೂ ತಾವು ಆರ್ಜಿಸಿದ ಜ್ಞಾನವನ್ನೆಲ್ಲ ದುರುಪಯೋಗಗೊಳಿಸಿ ಮತಭ್ರಷ್ಟರೂ ಕ್ರಿಯಾಭ್ರಷ್ಟರೂ ಆಗುತ್ತಬಂದರೆ ಇಂಥವರಿಗೆ ಭಗವಂತನ ಒಲಿಮೆಯಾಗಲಿ ಅಥವಾ ಸೌಖ್ಯವಾಗಲಿ ಹೇಗೆ ದೊರೆಯುವುದು?

ಗುರುವಿನಿಂದ ಮಂತ್ರಪೂತವಾಗದ ಲೌಕಿಕಭಸ್ಮವನ್ನು ಶರೀರಕ್ಕೆ ಹಚ್ಚುವುದರಿಂದಲೇ ಅನೇಕವಿಧವಾದ ದೇಹಾರೋಗ್ಯವುಂಟಾಗುವುದೆಂದು ಸಕಲ ವೈದ್ಯರ ಅಭಿಪ್ರಾಯವಿರುವಲ್ಲಿ ಮಂತ್ರಪೂತವಾಗಿಯೂ ಗುರುದತ್ತವಾಗಿಯೂ ಇರುವ ಭಸ್ಮಲೇಪನದಲ್ಲಿ ಲೌಕಿಕ ಹಾಗೂ ಪಾರಮಾರ್ಥಿಕ ವೈಭವವು ಎಷ್ಟರಮಟ್ಟಿಗಿರಬಹುದೆಂ[illegible] ಅರ್ಥಾಪತ್ತಿಯಿಂದಲೇ ಸಿದ್ಧವಾಗುವುದು. ಸ[illegible]ೂ ಮಹಾತ್ಮರೂ ಆದ ನಮ್ಮ ಹಿಂದಣ ಮತಾಚಾರ್ಯರು ಒಂದೊಂದು ಪದಾರ್ಥದಲ್ಲಿ ಒಂದೊಂದು ಪಾರಮಾರ್ಥಿಕ ಶಕ್ತಿಯನ್ನು ಕಂಡುಹಿಡಿದು ಸಕಲ ಜೀವರುದ್ಧಾರಕ್ಕಾಗಿ ಒಂದೊಂದು ನಿಯಮಗಳನ್ನು ಕಲ್ಪಿಸಿರುವರು. ಆದರೆ ಯಾರು ಯಾವ ಮತವನ್ನು ಅನೂಚಾನವಾಗಿ ಅವಲಂಬಿಸಿರುವರೋ ಅವರೆಲ್ಲರೂ ತಮ್ಮ ತಮ್ಮ ಮತದ ಪೂರ್ವಾಚಾರ್ಯರು ವಿಧಿಸಿರುವ ಕ್ರಿಯಾಮಾರ್ಗವನ್ನು ಬಿಡದೆ ಅವರವರು ಹೇಳಿದ ಉಪಾಸನೆಯನ್ನು ಮಾಡುತ್ತ ಬರುವವರನ್ನೇ ಆಯಾಮತದವರೆಂದು ಹೇಳಬೇಕಲ್ಲದೆ ಪೂರ್ವಾಚಾರ್ಯರ ನಿಯಮೋಲ್ಲಂಘನ ಮಾಡುವವರನ್ನು ಆ ಮತಸ್ಥರೆಂದು ಎಂದೂ ಹೇಳಲಾಗದು. ಪೂರ್ವಾಚಾರ್ಯರು ಹೇಳಿದ ನಿಯಮಗಳಮೇಲೆ ಯಾರೂ ಆಕ್ಷೇಪಮಾಡಬಾರದು. ಅವರು ಹೇಳಿದ ನಿಯಮಗಳನ್ನು ಅನುಸರಿಸಬೇಕೆಂಬ ದೃಢಾನುರಾಗವು ಮಾತ್ರ ಇರಬೇಕಲ್ಲದೆ ಅವುಗಳ ಮೇಲೆ ಪೂರ್ವಪಕ್ಷವನ್ನು ಮಾಡಬಾರದು. ಏಕೆಂದರೆ ಪೂರ್ವಾಚಾರ್ಯರು ತ್ರಿಕಾಲಜ್ಞಾನಿಗಳೂ, ವೇದಶಾಸ್ತ್ರಗಳನ್ನೆಲ್ಲ ತಿಳಿದವರೂ, ಸ್ವಾರ್ಥತ್ಯಾಗಿಗಳೂ, ಲೋಕೋದ್ಧರಣೇಚ್ಛುಗಳೂ ಆದುದರಿಂದ ಅವರು ಹೇಳಿದ ಆಜ್ಞಾವಾಕ್ಯಗಳೆಲ್ಲವೂ ಪೂರ್ವಪಕ್ಷಸ್ಥಾನಾಪನ್ನಗಳಾಗುವುದಿಲ್ಲವು. ಲೋಕದಲ್ಲಿ ತಂದೆತಾಯಿಗಳು ಮಕ್ಕಳಿಗೆ ವಿಧಿಸುವ ಮಾರ್ಗಗಳೆಲ್ಲವೂ ಸುಖದಾಯಕಗಳಾಗಿರುತ್ತವೆಯಲ್ಲದೆ ದುಃಖದಾಯಕಗಳಾಗಿರುವುದಿಲ್ಲ. ಅದ್ದರಿಂದಲೇ ಪಿತೃವಾಕ್ಯೋಲ್ಲಂಘನವನ್ನು ಮಾಡಲಾಗದೆಂದು ಹಿರಿಯರು ಹೇಳುತ್ತಿರುವರು. ಅಂದಮೇಲೆ ಮತಕ್ಕೆಲ್ಲ ಪಿತೃಸ್ವರೂಪರಾದ ಪೂರ್ವಾಚಾರ್ಯರಿಂದ ವಿಧಿಸಲ್ಪಟ್ಟ ನಿಯಮಗಳ ಉಲ್ಲಂಘನವನ್ನು ಮಾಡಿದರೆ ಆತನನ್ನು ಮತದ್ರೋಹಿಯೆಂದು ಹೇಳುವುದರಲ್ಲಿ ಸಂಶಯವೇನೂ ತೋರಲಾರದು. ಪೂರ್ವಾಚಾರ್ಯರು ತಾವು ತಮ್ಮ ದೇಹವನ್ನೇ ತ್ಯಾಗಮಾಡಿ ತಾವು ಪ್ರತ್ಯಕ್ಷವಾಗಿ ಆಯಾಯ ಪದಾರ್ಥಗಳ ಸ್ವರೂಪವನ್ನು ಕಂಡು ಅದರ ಪ್ರಯೋಜನವನ್ನು ತಾವು ಅನುಭವಿಸಿ ಪ್ರಪಂಚೋದ್ಧಾರಕ್ಕಾಗಿ ವಿಧಿರೂಪವಾಗಿ ಆಚರಿಸತಕ್ಕ ಧರ್ಮಗಳನ್ನು ಸಿದ್ಧಾಂತಗೊಳಿಸಿರುವರು. ಆದುದರಿಂದ ಅಲ್ಪಜ್ಞರಾದ ನಾವು ಅವರ ನಿಯಮಗಳನ್ನು ಎಂದೂ ಮೀರಬಾರದು. ಪೂರ್ವಾಚಾರ್ಯರು ವಿಧಿಸಿರುವ ನಿಯಮಗಳೆಲ್ಲವೂ ಸ್ವಕಪೋಲಕಲ್ಪಿತಗಳಾಗದೆ ಪರಮೇಶ್ವರನ ಉಚ್ಛ್ವಾಸರೂಪ ವೇದಗಳಲ್ಲಿ ಹೇಳಲ್ಪಡುವುದರಿಂದ ಅವರ ನಿಯಮಗಳು ಎಂದೂ ಮಿಥ್ಯಾರೂಪಗಳಾಗಲಾರವು. ಪ್ರಕೃತದಲ್ಲಿ ಭಸ್ಮದ ಪಾವಿತ್ರ್ಯವು ಮತ್ತು ಭಸ್ಮಧಾರಣದಿಂದಾಗುವ ಪಾರಮಾರ್ಥಿಕ ಪ್ರಯೋಜನವು ವೇದಾಗಮಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದು. ಪೂರ್ವಾಚಾರ್ಯರು ವೇದಾಗಮಗಳಲ್ಲಿ ಹೇಳಿದ ಪ್ರಕಾರ ಆಚರಿಸಿ ಮಹಾಫಲವನ್ನು ತಮ್ಮ ದೃಷ್ಟಿಯಿಂದ ಕಂಡುಹಿಡಿದು ತಾವು ವೇದಾಗಮಪ್ರಮಾಣಮೂಲಕವಾಗಿ ಸ್ಥಾಪಿಸಿದ ವೀರಶೈವಸಿದ್ಧಾಂತದಲ್ಲಿ ವಿಭೂತಿ ವಿಧಾನ ರುದ್ರಾಕ್ಷವಿಧಾನ ಮೊದಲಾದ ವಿಧಿಗಳನ್ನು ವಿಧಿಸಿ "ಧಿಗ್ಭಸ್ಮರಹಿತಂ ಫಾಲಂ" ಭಸ್ಮವಿಲ್ಲದ ಹಣೆಗೆ ಧಿಕ್ಕಾರವಿರಲೆಂದು ಭಸ್ಮವನ್ನು ಧರಿಸದಿದ್ದವನ ಮೇಲೆ ತಮ್ಮ ಕೋಪೋದ್ಗಾರವಂ ತೋರಿಸಿ "ಭಸ್ಮಚ್ಛನ್ನೋ ಭಸ್ಮಶಯ್ಯಾಶಯಾನೋ ವಾ ರುದ್ರಾಧ್ಯಾಯೀ ಮುಚ್ಯತೇ ಸರ್ವಪಾಪೈಃ"

ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ |
ತತ್ಫಲಂ ಕೋಟಿಗುಣಿತಂ ಭಸ್ಮಸ್ನಾನಾನ್ನ ಸಂಶಯಃ ||
ಶ್ರಾದ್ಧೇ ಯಜ್ಞೇ ಜಪೇಹೋಮೇ ವೈಶ್ವದೇವೇ ಸುರಾರ್ಚನೇ |
ಧೃತತ್ರಿಪುಂಡ್ರಪೂತಾತ್ಮಾ ಮೃತ್ಯುಂ ಜಯತಿ ಮಾನವಃ ||

ಎಂದು ಭಸ್ಮಧಾರಿಗಳಾದ ಆಸ್ತಿಕಮಹೋದಯರ ವಿಷಯದಲ್ಲಿ ತಮ್ಮ ಸಂಪೂರ್ಣ ಕರುಣಾಮೃತವನ್ನು ಬೀರಿರುವರು. ಆದ್ದರಿಂದ ವೀರಶೈವರಿಗೆ ಮುಖ್ಯಚಿಹ್ನವೆನಿಸಿದ ಶ್ರೌತ ಭಸ್ಮಧಾರಣ ವಿಷಯದಲ್ಲಿ ವಿದ್ಯಾರ್ಥಿಗಳೇ ಆಗಲಿ ಪದವೀಧರರೇ ಆಗಲಿ ವೈದಿಕರೇ ಆಗಲಿ ಎಲ್ಲರೂ ಭಕ್ತಿಯನ್ನಿಟ್ಟು ಹಣೆಗೆ ಕಾಡಿಗಿ, ಇಂಕು (ಮಸಿ) ಮೊದಲಾದ ಅಮಂಗಲವಸ್ತುಗಳನ್ನು ಹಚ್ಚಿಕೊಳ್ಳುವದನ್ನು ಬಿಟ್ಟು ವೀರಶೈವಮತಸ್ಥಾಪನಾಚಾರ್ಯರು ವಿಧಿಸಿರುವ ಅಷ್ಟಾವರಣಾಂತರ್ಗತ ಪವಿತ್ರಭಸ್ಮದಿಂದ ಹಣೆಯನ್ನು ಅಲಂಕರಿಸಿಕೊಂಡು ಪರಮಾತ್ಮನ ಕೃಪೆಗೆ ಪಾತ್ರರಾಗಿ ಇಹಪರಸುಖಗಳನ್ನನುಭವಿಸಲೆಂದು ಕೋರುತ್ತೇವೆ.

ಹಿಂದೂಸ್ಥಾನ ರಿಪಬ್ಲಿಕ್ ಆರ್ಮಿ ಎಂಬ ಗುಪ್ತ ಸಂಘದವರು ಲಾಹೋರ್ ಪಟ್ಟಣದ ಗೋಡೆಗೆ ಕೆಂಪು ಕಾಗದದಮೇಲೆ ಮುದ್ರಿಸಲ್ಪಟ್ಟ ಒಂದು ಪ್ರಕಟನೆಯನ್ನು ಅಂಟಿಸಿ ಅದರಲ್ಲಿ "ಕಳೆದ 7 ತಾರೀಖಿನ ದಿವಸ ನಡೆದ ಲಾಹೋರ್ ಪೋಲೀಸರ ದುರ್ವರ್ತನೆಯ ಪ್ರತೀಕಾರಕ್ಕೋಸ್ಕರ ಸಿಮ್ಲಾ ಪಟ್ಟಣದ ರಿಪಬ್ಲಿಕ್ ಅಸೋಸಿಯೇಷನ್ ಆರ್ಮಿಯ ಅಧಿಪತಿಗಳು ಲಾಹೋರ್ ಪಟ್ಟಣದ ಪೋಲೀಸ್ ಮುಖ್ಯಾಧಿಕಾರಿಗಳನ್ನು ಸಾಂಡರ್ಸ್‌ಸಾಹೇಬನನ್ನು ಕೊಲೆಮಾಡಿದಂತೆ ಕೊಂದುಬಿಡಬೇಕೆಂದು ಅಪ್ಪಣೆಮಾಡಿರುತ್ತಾರೆ" ಎಂದು ಪ್ರಸಿದ್ಧಮಾಡಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸರ್ಕಾರದವರು ಸಂಸ್ಥಾನದಲ್ಲಿರುವ ಆಯುರ್ವೇದ ಮತ್ತು ಯುನಾನಿ ವೈದ್ಯಶಾಲೆಗಳನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ತಿಂಗಳಿಗೆ ೩೦ ರೂಪಾಯಿಗಳಂತೆ ಸಹಾಯ ಮಾಡಬೇಕೆಂದೂ ಅದನ್ನು ಕ್ರಮೇಣ ೫೦ ರೂಪಾಯಿಗಳಿಗೆ ಹೆಚ್ಚಿಸಬೇಕೆಂದೂ ತೀರ್ಮಾನಿಸಿರುತ್ತಾರೆ.

ಕರ್ನಾಟಕಪ್ರಾಂತಿಕ ಕಾಂಗ್ರೆಸ್‌ಕಮಿಟಿಯ ಅಧ್ಯಕ್ಷರಾದ ಮ|| ರಾ|| ಶ್ರೀನಿವಾಸರಾವ್ ಕೌಜಲಗಿಯವರೂ, ಹಿಂದೂಸ್ಥಾನೀ ಸೇವಾದಳದ ಅಧಿಪತಿಗಳಾದ ಮ|| ರಾ|| ನಾ. ಸು. ಹರ್ಡೀಕರ್‌ರವರೂ ರಾಜಧಾನಿಗೆ ಆಗಮಿಸಿ ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ರಾಷ್ಟ್ರೀಯ ಸಭೆಯ ಸಂದೇಶವನ್ನು ಕುರಿತು ಭಾಷಣಮಾಡಿದರು.

ರಾಜಧಾನಿಯ ಮ|| ರಾ|| ಅಂಬಳೆ ಅಣ್ಣಯ್ಯಪಂಡಿತರು ನವರಾತ್ರಿ ಮತ್ತು ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವಗಳಿಗೋಸ್ಕರ ರಾಜಧಾನಿಗೆ ಬರತಕ್ಕ ಪರಸ್ಥಳದ ಜನರು ಇಳಿದುಕೊಳ್ಳುವದಕ್ಕೋಸ್ಕರ ತಮ್ಮ ಹೆಸರಿನಿಂದ ಒಂದು ಧರ್ಮಶಾಲೆಯನ್ನು ಕಟ್ಟಿಸಬೇಕೆಂದು 8,000 ರೂಪಾಯಿಗಳನ್ನು ದಾನಮಾಡಿರುವರು. ಇದರ ಜೊತೆಗೆ ಸರ್ಕಾರದವರು 15,000 ರೂಪಾಯಿಗಳನ್ನು ಕೊಡಲೊಪ್ಪಿರುವರು. ಸ್ತುತ್ಯ!

ಮೈಸೂರು ಸರ್ಕಾರಿ ಗಂಧದೆಣ್ಣೆಯ ಸಂಬಂಧವಾದ ಹಣವನ್ನು ಅಪಹರಿಸಿರುವರೆಂಬ ಆರೋಪದಮೇಲೆ ಖೈದುಮಾಡಲ್ಪಟ್ಟಿರುವ ಬಿ. ಸೀತಾರಾಮಾಚಾರ್ಯರ ವಿಚಾರಣೆಯು ಕಳೆದ ಗುರುವಾರ ನಡೆಯಿತು. ಅಪಾದಿತರನ್ನು ಜಾಮೀನಿನಮೇಲೆ ಬಿಡಬೇಕೆಂದು ಅವರ ಲಾಯರ್ ಮ|| ಎಂ. ಕೃಷ್ಣಮೂರ್ತಿಯವರು ವಾದಿಸಿದರು. ಪಬ್ಲಿಕ್ ಪ್ರಾಸಿಕ್ಯೂಟರು ಕೂಡದು ಎಂದು ವಾದಿಸಿದರು. ಈ ಮೊಕದ್ದಮೆಯ ವಿಚಾರಣೆಗೋಸ್ಕರ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟು ತೆರೆಯಲ್ಪಡುವದಾಗಿಯೂ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರ್‌ರವರು ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವದಾಗಿಯೂ ತಿಳಿದುಬರುತ್ತದೆ. ಮೊಕದ್ದಮೆಯು ಈ ತಿಂಗಳು ತಾ|| 25ಕ್ಕೆ ಮುಂದುವರಿಸಲ್ಪಟ್ಟಿದೆ.

ಮೈಸೂರು ಸಂಸ್ಥಾನದ ಯುವಕರ ಸಮ್ಮೇಳನದ ಪ್ರಥಮಾಧಿವೇಶನವು ಮುಂದಿನ ತಿಂಗಳು 5 ಮತ್ತು 6 ನೆಯ ತಾರೀಖುಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ಸೇರುವದೆಂದೂ, ಸಂಸ್ಥಾನದ ಸಮಸ್ತಯುವಕರೂ ಸಮ್ಮೇಳನದಲ್ಲಿ ಭಾಗ ತೆಗೆದುಕೊಳ್ಳಲೆಂಬ ಅಭಿಪ್ರಾಯದಿಂದ ಸ್ವಾಗತಸಮಿತಿಯು ಸದಸ್ಯರಿಗೆ ರೂ. 1-0-0, ಪ್ರತಿನಿಧಿಗಳಿಗೆ 0-4-0 ಯಂತೆ ಚಂದಾ ನಿರ್ಧರಿಸಲ್ಪಟ್ಟಿರುವದೆಂದೂ, ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಲು ಭರತಖಂಡದ ಉಜ್ವಲ ದೇಶಭಕ್ತರೂ, ಯುವಕರ ಮುಂದಾಳುಗಳೂ ಆದ ಪಂಡಿತ ಜವಾಹಿರಲಾಲ್ ನೆಹರೂರವರು ಆಹ್ವಾನಿಸಲ್ಪಟ್ಟಿರುವರೆಂದೂ, ಸಂಸ್ಥಾನದ ಯುವಕ ಮತ್ತು ವಿದ್ಯಾರ್ಥಿಸಂಘಗಳ ಕಾರ್ಯದರ್ಶಿಗಳು ತಮ್ಮ ಸಲಹೆಗಳನ್ನು ತಿಳುಹಿಸಬೇಕೆಂದೂ, ಸಕಲರೂ ಸಮ್ಮೇಳನಕ್ಕೆ ಆಗಮಿಸಿ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡಬೇಕೆಂದೂ ಸಂಘದ ಕಾರ್ಯದರ್ಶಿಗಳಾದ ಮೆ|| ವಿ. ಎಸ್. ನಾರಾಯಣರಾವ್, ಸಿ. ಎಚ್. ಶಂಭುಲಿಂಗಪ್ಪ ಮತ್ತು ಬಿ. ಕೆ. ಸಂಪತ್‌ರವರು ತಿಳುಹಿಸಲಪೇಕ್ಷಿಸುತ್ತಾರೆ.

ವರ್ತಮಾನಸಂಗ್ರಹ.

ದಾನಶೂರ ಸರ್. ರಾಜಾ ಅಣ್ಣಾಮಲೆಚೆಟ್ಟಿಯಾರ್‌ರವರಿಂದ ಚಿದಂಬರದಲ್ಲಿ ಸ್ಥಾಪಿಸಲ್ಪಟ್ಟಿರುವ ಅಣ್ಣಾಮಲೆ ವಿಶ್ವವಿದ್ಯಾನಿಲಯಕ್ಕೆ ಮ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರು ವೈಸ್‌ಛಾನ್ಸಲರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಯೂರೋಪು ಖಂಡದಲ್ಲಿರುವ ಯಾವತ್ತು ರಾಜರ ಅರಮನೆಗಳಿಗಿಂತಲೂ ಮ್ಯಾಡ್ರಿಡ್ ಪಟ್ಟಣದಲ್ಲಿರುವ ಸ್ಪೇಯಿನ್‌ದೇಶದ ರಾಜನ ಅರಮನೆಯು ಬಹಳ ದೊಡ್ಡದಾಗಿದೆ. ಈ ಅರಮನೆಯ ಪ್ರತಿಯೊಂದು ಕೊಠಡಿಯನ್ನು ನೋಡಬೇಕಾದರೆ 4 ದಿವಸಗಳ ಕಾಲವು ಬೇಕಾಗುವದಂತೆ!

ಅಮೇರಿಕಾದೇಶದ ಅರ್ಕನ್ಸಾಸ್ ಎಂಬಲ್ಲಿ ಪ್ರಚಂಡವಾದ ಬಿರುಗಾಳಿಯುತ್ಪನ್ನವಾಗಿ ಮನೆಮಠಗಳನ್ನು ಉರುಳಿಸಿಬಿಟ್ಟದ್ದಲ್ಲದೆ ಅನೇಕಜನ ಮನುಷ್ಯರನ್ನು ಬಹಳ ದೂರದವರೆಗೆ ಹಾರಿಸಿಕೊಂಡು ಹೋಗಿ 29 ಜನರನ್ನು ಕೊಂದುಬಿಟ್ಟಿತು. ಅನೇಕರು ವಿಶೇಷವಾದ ಅಪಾಯಕ್ಕೆ ಗುರಿಯಾಗಿರುತ್ತಾರೆ.

ರಾಜದ್ರೋಹದ ಆರೋಪದಮೇಲೆ ಖೈದುಮಾಡಿ ಮೀರಟ್ ಜೈಲಿನಲ್ಲಿ ಇಡಲ್ಪಟ್ಟಿರುವ ಮಿ|| ಪಿ. ಸಿ. ಜೋಸಿಯವರು ಅಲಹಾಬಾದ್‌ಕಾಲೇಜಿನ ಲಾ ಪರೀಕ್ಷೆಗೆ ಕುಳಿತುಕೊಳ್ಳುವದಕ್ಕೋಸ್ಕರ ಅವರನ್ನು ಅಲಹಾಬಾದ್ ಜೈಲಿಗೆ ಕಳುಹಿಸಲು ಮೀರಟ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಒಪ್ಪಿರುತ್ತಾರೆ.

ಸೈಮನ್ ಸಮಿತಿಯವರು ಹಿಂದುಸ್ಥಾನದ ವಿಚಾರಣಕಾರ್ಯವನ್ನು ಮುಗಿಸಿಕೊಂಡು ಕಳೆದವಾರ ಬೊಂಬಾಯಿ ಪಟ್ಟಣದಿಂದ ರಾಮ್‌ಪುರ ಎಂಬ ಹಡಗವನ್ನು ಹತ್ತಿ ಇಂಗ್ಲೆಂಡಿಗೆ ಪ್ರಯಾಣಮಾಡಿದರು. ಈ ಸಮಿತಿಯಸಂಗಡ ಇಂಡಿಯನ್ ಸೆಂಟ್ರಲ್ ಸಮಿತಿಯ ಅಧ್ಯಕ್ಷರಾದ ಸರ್. ಶಂಕರನ್ ನಾಯರ್‌ರವರು ಪ್ರಯಾಣಮಾಡಿದರು. ಸೆಂಟ್ರಲ್ ಸಮಿತಿಯ ಇತರ ಸದಸ್ಯರು ಮುಂದಿನ ತಿಂಗಳು 4 ನೆಯ ತಾರೀಖಿನ ದಿವಸ ಹೊರಡುವರೆಂದು ತಿಳಿದುಬರುತ್ತದೆ.

ಕೊಚ್ಚಿ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ತಮ್ಮ ಸಂಸ್ಥಾನದಲ್ಲಿ ಯಾರಾದರೂ ಗೋವಧೆಯನ್ನು ಮಾಡಿದರೆ ಅವರಿಗೆ 2 ವರ್ಷಗಳ ಕಠಿಣಶಿಕ್ಷೆ ಮತ್ತು 1,000 ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಬೇಕೆಂಬ ಶಾಸನ ವಿಷಯವಾಗಿ ಬಹಳ ಚರ್ಚೆ ನಡೆದು ಅದನ್ನು ಸಂಸ್ಥಾನದ ಸಕಲ ಮತಾನುಯಾಯಿಗಳಿಗೂ ಅನುಕೂಲವಾಗುವಂತೆ ಪರಿಷ್ಕರಿಸಿ ತೀರ್ಮಾನಿಸುವದಕ್ಕೋಸ್ಕರ ಸಮಸ್ತ ಮತಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಸಮಿತಿಯು ನಿಯಮಿಸಲ್ಪಟ್ಟಿತು.

ಭರತಖಂಡದ ರಾಷ್ಟ್ರೀಯ ಮಹಾಸಭೆಯವರು ಪ್ರಾರಂಭಿಸಿದ ವಿದೇಶವಸ್ತ್ರ ಬಹಿಷ್ಕಾರದ ಚಳವಳಿಯಿಂದ ಇಂಗ್ಲೆಂಡಿನಿಂದ ಭರತಖಂಡಕ್ಕೆ ಬರುತ್ತಿದ್ದ ಬಟ್ಟೆಯ ಪ್ರಮಾಣವು ಕಡಿಮೆಯಾಗಿ ಆ ದೇಶದ ವರ್ತಕರಿಗೆ ವಿಶೇಷವಾದ ನಷ್ಟವುಂಟಾಗಲಾರಂಭಿಸಿದೆ. ಕಳೆದ ಮಾರ್ಚಿ ತಿಂಗಳಲ್ಲಿ ಹಿಂದಿನ ತಿಂಗಳಿಗಿಂತ 4 ಲಕ್ಷ ರೂಪಾಯಿಗಳ ವಸ್ತ್ರವು ಕಡಿಮೆಯಾಗಿ ಬಂದಿದೆ. ಏಪ್ರಿಲ್ ತಿಂಗಳ ಪ್ರಾರಂಭದಿಂದ ಇಂಗ್ಲೆಂಡ್ ದೇಶದ ಬ್ಲ್ಯಾಕ್‌ಬರ್ನ್ ಎಂಬಲ್ಲಿದ್ದ 48 ಬಟ್ಟೆಯ ಮಿಲ್ಲುಗಳು ಮುಚ್ಚಲ್ಪಟ್ಟಿವೆ.

ಈ ತಿಂಗಳು ತಾ|| 14ನೆಯ ಭಾನುವಾರ ಕಲ್ಕತ್ತಾ ಪಟ್ಟಣದ ಉತ್ತರಭಾಗದಲ್ಲಿರುವ ಹಿಂದೂ ಮಿಷನ್ ಹೌಸಿನ ಮುಂಭಾಗದಲ್ಲಿ ಕೆಲವು ಜನ ಪೋಲೀಸರು ಗಲಭೆಮಾಡುತ್ತಿದ್ದು ವಿವೇಕವನ್ನು ಹೇಳುವದಕ್ಕೆ ಬಂದ ಮಿಷನ್ನಿನ ಜನರನ್ನು ಖೈದುಮಾಡಿ ಅವರನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹಿಂಸೆಪಡಿಸಿದ್ದಕ್ಕೋಸ್ಕರ ಅಲ್ಲಿಯ ಡೆಪ್ಯುಟಿ ಕಮಿಷನರವರು ಸದರಿ ಪೋಲೀಸರನ್ನು ವಿಚಾರಣೆಗೆ ಗುರಿಪಡಿಸಿ 9 ಜನ ಪೋಲೀಸರನ್ನೂ ಅವರ ಮುಖ್ಯಾಧಿಕಾರಿಯನ್ನೂ ಕೆಲಸದಿಂದ ವಜಾಮಾಡಿರುತ್ತಾರೆ.

ಸಾರ್ವಭೌಮಸರ್ಕಾರದವರು ಭಾರತ ನ್ಯಾಯವಿಧಾಯಕ ಸಭೆಯಲ್ಲಿ ತಂದಿದ್ದ ಸಾರ್ವಜನಿಕ ರಕ್ಷಣಾ ಮಸೂದೆಯನ್ನು ಅದಕ್ಕಾಗಿ ನಿಯಮಿಸಲ್ಪಟ್ಟಿದ್ದ ಸಮಿತಿಯವರ ತೀರ್ಮಾನದೊಡನೆ ಸಭೆಯಲ್ಲಿ ಚರ್ಚೆಗಿಟ್ಟು ಪಾಸುಮಾಡುವ ವಿಷಯವಾಗಿ ಅಧ್ಯಕ್ಷ ಪಟೇಲರಿಗೂ ಸರ್ಕಾರದವರಿಗೂ ಮತಭೇದವುಂಟಾಗಿ ಕೊನೆಗೆ ಅಧ್ಯಕ್ಷರು ಮೀರಟ್ಟಿನ ರಾಜದ್ರೋಹದ ಮೊಕದ್ದಮೆಯು ತೀರ್ಮಾನವಾಗುವವರೆಗೂ ಈ ಮಸೂದೆಯನ್ನು ಚರ್ಚೆಗೆ ತರಕೂಡದೆಂದೂ, ಇಲ್ಲವಾದರೆ ಮೀರಟ್ಟಿನ ಕೇಸನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕೆಂದೂ ಹೇಳಿ ಮಸೂದೆಯನ್ನು ಚರ್ಚಿಸಕೂಡದೆಂದು ತೀರ್ಮಾನಿಸಿಬಿಟ್ಟರು. ಇದರ ಮೇಲೆ ವೈಸರಾಯರವರು ತಮಗೆ ಸಾರ್ವಭೌಮರಿಂದ ಕೊಡಲ್ಪಟ್ಟಿರುವ ವಿಶೇಷಾಧಿಕಾರವನ್ನು ಉಪಯೋಗಿಸಿ ಸೆಲೆಕ್ಟ್ ಕಮಿಟಿಯವರ ಸಲಹೆಗಳಿಂದ ಕೂಡಿದ ಮಸೂದೆಯನ್ನು ಕಾನೂನಾಗಿ ತೀರ್ಮಾನಿಸಿ ಅದನ್ನು ಪ್ರಸಿದ್ಧಮಾಡಿರುತ್ತಾರೆ.

ಹಿಂದುಸ್ಥಾನದ ದೇಶೀಯ ಸಂಸ್ಥಾನಗಳಿಗೂ ಸಾರ್ವಭೌಮ ಸರಕಾರಕ್ಕೂ ಇರುವ ಸಂಬಂಧಗಳನ್ನು ಪರಿಷ್ಕರಿಸಿ ನಿರ್ಧರಿಸುವದಕ್ಕೋಸ್ಕರ ನಿಯಮಿಸಲ್ಪಟ್ಟಿದ್ದ ಬಟ್ಲರ್ ಸಮಿತಿಯವರು ಹಿಂದುಸ್ಥಾನಕ್ಕೆ ಆಗಮಿಸಿ ಭರತಖಂಡದ ದೇಶೀಯ ಸಂಸ್ಥಾನಗಳಲ್ಲಿ ಪ್ರಾಮುಖ್ಯಗಳಾದ 15 ಸಂಸ್ಥಾನಗಳನ್ನು ಸಂದರ್ಶಿಸಿ ಸುಮಾರು 48 ಜನ ಪ್ರತಿನಿಧಿಗಳ ಹೇಳಿಕೆಗಳನ್ನು ಸ್ವೀಕರಿಸಿ ಅವುಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ಒಂದು ವರದಿಯನ್ನು ತಯಾರಿಸಿ ಬ್ರಿಟಿಷ್ ಪಾರ್ಲಿಮೆಂಟಿಗೆ ಒಪ್ಪಿಸಿರುತ್ತಾರೆ. ಸಮಿತಿಯವರು ವರದಿಯಲ್ಲಿ ದೇಶೀಯ ಸಂಸ್ಥಾನಗಳಿಗೂ ಸಾರ್ವಭೌಮ ಸರ್ಕಾರಕ್ಕೂ ಆಗಿರುವ ಕೌಲು ಕರಾರುಗಳನ್ನೂ, ಮಧ್ಯೆ ಮಧ್ಯೆ ನಡೆದಿರುವ ಬದಲಾವಣೆಗಳನ್ನು ದೇಶೀಯ ಸಂಸ್ಥಾನಗಳ ಆಯವ್ಯಯ, ಕೈಗಾರಿಕೆ, ಬ್ರಿಟಿಷ್ ಹಿಂದುಸ್ಥಾನಕ್ಕೂ ಇವುಗಳಿಗೂ ಇರುವ ಸಂಬಂಧ ಮೊದಲಾದವುಗಳನ್ನು ವಿವರಿಸಿ ದೇಶೀಯ ಸಂಸ್ಥಾನಗಳು ಯಾವಾಗಲೂ ವೈಸರಾಯರ ದ್ವಾರಾ ಬ್ರಿಟಿಷ್ ಸಾರ್ವಭೌಮರ ಅಧೀನದಲ್ಲಿರಬೇಕೆಂದೂ, ಸಾರ್ವಭೌಮ ಸರ್ಕಾರಕ್ಕೂ ದೇಶೀಯ ಸಂಸ್ಥಾನಗಳಿಗೂ ಇರುವ ಸಂಬಂಧವು ಸಾರ್ವಭೌಮರ ಪ್ರತಿನಿಧಿಯಾದ ವೈಸರಾಯರ ಮುಖಾಂತರವಾಗಿರಬೇಕೇ ಹೊರತು ಆ ಅಧಿಕಾರವನ್ನು ದೇಶೀಯ ಸಂಸ್ಥಾನಾಧಿಪತಿಗಳ ಅನುಮತಿಯಿಲ್ಲದೆ ಹಿಂದುಸ್ಥಾನದಲ್ಲಿ ಮುಂದೆ ಸ್ಥಾಪಿಸಲ್ಪಡಬಹುದಾದ ಹೊಸ ಸರಕಾರಕ್ಕೆ ಕೊಡಕೂಡದೆಂದು ಸೂಚಿಸಿರುತ್ತಾರೆ.

ಅಫ್ಘಾನಿಸ್ಥಾನದಲ್ಲಿ ನಡೆಯುತ್ತಿರುವ ಯುದ್ಧಗಳಲ್ಲಿ ಪ್ರತಿಯೊಂದುಕಡೆಯಲ್ಲಿಯೂ ಅಮಾನುಲ್ಲರವರೇ ಜಯವನ್ನು ಹೊಂದುತ್ತಿರುವರು. ಅಮಾನುಲ್ಲರು ಘಜ್ನಿಯನ್ನು ಸ್ವಾಧೀನಪಡಿಸಿಕೊಂಡು ಸಕಲರಾಜಮರ್ಯಾದೆಯೊಡನೆ ಪ್ರವೇಶಿಸಿದರು. ಅಮಾನುಲ್ಲರ ಸಹೋದರರಾದ ಇನಾಯಿತುಲ್ಲಾ ಖಾನರು ಹಜಾರಿ ಜನಗಳೊಡನೆ ಕಾಬೂಲನ್ನು ಮುತ್ತಿ ಬಚ್ಚಾಯಿಸಾಕೋನ ಸೈನ್ಯದೊಡನೆ ಯುದ್ಧಮಾಡುತ್ತಿರುವರು. ಘಜ್ನಿಯಲ್ಲಿರುವ ಅಮಾನುಲ್ಲರ ಸೈನ್ಯಕ್ಕೆ ಅನೇಕರು ಬಂದು ಸೇರುತ್ತಿರುವರು. ಅಮಾನುಲ್ಲರು ಇದುವರೆಗೆ ತಮಗೆ ವಿರೋಧವಾಗಿ ಯುದ್ಧಮಾಡಿದವರನ್ನು ಸಂಪೂರ್ಣವಾಗಿ ಕ್ಷಮಿಸಿಬಿಡುವುದಾಗಿಯೂ ಜಲಾಲಾಬಾದ್ ಅನಾಹುತದಲ್ಲಿ ನಿರ್ಗತಿಕರಾದವರ ಸಹಾಯಾರ್ಥವಾಗಿ ಲಕ್ಷಾಂತರ ರೂಪಾಯಿಗಳನ್ನು ಕೊಡುವದಾಗಿಯೂ ಪ್ರಸಿದ್ಧಮಾಡಿರುತ್ತಾರೆ. ಹೆಯಿಕಾಬಾದ್ ಕಣಿವೆಯಲ್ಲಿ ವಾರ್ಡಕ್ ಪಂಗಡಕ್ಕೆ ಸೇರಿದ ಅಮಾನುಲ್ಲರ ಸೈನ್ಯಕ್ಕೂ ಬಚ್ಚಾಯಿಸಕೋನ ಸೈನ್ಯಕ್ಕೂ ಯುದ್ಧವು ನಡೆದು ವಾರ್ಡಕ್ [illegible] ಬಚ್ಚಾಯಿಸಕೋನ ತಂದೆಯನ್ನು ಸೆರೆಹಿಡಿದಿರ[illegible] ಶರ್ಜೆಜಿನಲ್ಲಿ ಸೈನ್ಯವನ್ನು ಶೇಖರಿಸುತ್ತಿರುವ ಜ[illegible] ನಾದಿರ್‌ಖಾನರಿಗೆ ಅಮಾನುಲ್ಲರು ದಕ್ಷಿಣಪ್ರಾಂತದಲ್ಲಿರುವ ಮದ್ದುಗುಂಡು ತೋಪು ಮೊದಲಾದ ಆಯುಧಗಳನ್ನು ನಾದಿರಖಾನರು ಶೇಖರಿಸುತ್ತಿರುವ ಸೈನ್ಯಗಳಿಗೆ ಹಂಚಿ ಕಾಬೂಲಿನ ಮೇಲೆ ದಾಳಿಯಿಡಬೇಕೆಂದು ಅಪ್ಪಣೆಮಾಡಿರುತ್ತಾರೆ. ನಾದಿರಖಾನರು ಬಚ್ಚಾಯಿಸಕೋನಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಆತನ ಸಾಹಸವನ್ನು ಕೊಂಡಾಡಿ ಇಸಕೋನ ಮತ್ತು ಅವನ ಸೈನಿಕರಿಂದ ರಾಷ್ಟ್ರಕ್ಕೆ ಸಂಭವಿಸಿದ ವಿಪತ್ತು ಮತ್ತು ನಷ್ಟಗಳನ್ನು ವರ್ಣಿಸಿ ಈಗಲೂ ಸಹ ಆತನು ಅಮಾನುಲ್ಲರಿಗೆ ಶರಣಾಗತನಾಗುವದಾದರೆ ಆತನನ್ನೂ ಆತನ ಹಿಂಬಾಲಕರನ್ನೂ ಅಮಾನುಲ್ಲರು ಯಾವಶಿಕ್ಷೆಗೂ ಗುರಿಪಡಿಸದೆ ಕ್ಷಮಿಸಿ ಸನ್ಮಾನಿಸುವರೆಂದೂ ಆದುದರಿಂದ ಖಜಾನೆಯ ಹಣವನ್ನೂ ಆಯುಧಾದಿಗಳನ್ನೂ ವೃಥಾ ಖರ್ಚುಮಾಡದೆ ಅಮಾನುಲ್ಲರಿಗೆ ಒಪ್ಪಿಸಿ ಮುಂದೆ ಸಂಭವಿಸಬಹುದಾದ ಅನಾಹುತಗಳನ್ನು ತಪ್ಪಿಸಿ ಚಕ್ರವರ್ತಿಯ ಅನುಗ್ರಹಕ್ಕೆ ಪಾತ್ರನಾಗಬೇಕೆಂದೂ ಸೂಚಿಸಿರುವರು.

ವೈದಿಕವಾಙ್ಮಯರಹಸ್ಯವು
ಅಥವಾ
ಪ್ರಭಾಭರಣವು.

(ಲೇಖಕರು— ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ವಿಜಾಪುರ).

ಜಗತ್ತಿನಲ್ಲಿರುವ ಪ್ರಾಣಿಸಮೂಹದಲ್ಲಿ ಮನುಷ್ಯನು ಪೂರ್ಣಾವಸ್ಥೆಯನ್ನು ಹೊಂದಿರುವನೆಂದು ಹೇಳುವಂತೆ, ಆರ್ಯಜನಾಂಗವು ಬಹಳ ದಿಂದಲೂ ಅಧ್ಯಾತ್ಮವಿಚಾರದಲ್ಲಿ ಪೂರ್ಣಾವಸ್ಥೆಯನ್ನು ಹೊಂದಿದೆಯೆಂದು ಪಾಶ್ಚಾತ್ಯ ಪಂಡಿತರಾದವರೂ ಒಪ್ಪುವರು. ಆರ್ಯರ ಅಧ್ಯಾತ್ಮವಿದ್ಯೆಗೆ ವೈದಿಕವಾಙ್ಮಯವು ಮೂಲಭೂತವಾಗಿದೆ ಈ ವಾಙ್ಮಯದಲ್ಲಿ ಪ್ರವೃತ್ತಿ ಹಾಗೂ ನಿವೃತ್ತಿ ಎಂಬ ಧರ್ಮದ್ವಯ ಬೋಧಕಗಳಾದ ಎರಡು ಭಾಗಗಳಿವೆ. ಇವುಗಳಿಗೇನೇ ಅನುಕ್ರಮವಾಗಿ ಪೂರ್ವಕಾಂಡ, ಉತ್ತರಕಾಂಡಗಳೆಂಬ ಸಂಜ್ಞೆಯಿದೆ. ಇವೆರಡು ಧರ್ಮಗಳ ಸ್ವರೂಪವನ್ನು ಸಂಕ್ಷಿಪ್ತವಾಗಿಯೂ ವಿಶದವಾಗಿಯೂ ಪ್ರತಿಪಾದಿಸತಕ್ಕ [illegible]ರುಷೇಯ ಗ್ರಂಥ ಸಮೂಹವಾದರೂ ಬಹಳವಾಗಿದೆ. ಅತ್ರಿ[illegible] ಋಷಿ, ವಸಿಷ್ಠ, ಮನು, ವ್ಯಾಸಾದಿಗಳಿಂದ ಬರೆಯಲ್ಪಟ್ಟ ಸೂತ್ರ, ಸ್ಮೃತ್ಯಾದಿಗಳೂ ಶ್ರುತಿಸಾರಮಯಗಳಾದ ಶಿವಾಗಮಗಳೂ ಪೂರ್ವೋತ್ತರ ವಿಚಾರಗಳನ್ನು ನಿರೂಪಿಸುವ ಗ್ರಂಥಗಳು. ಅವುಗಳಲ್ಲಿ ಇತರ ಯಾವ ವಾಕ್ಯಗಳ ಹಂಗಿಲ್ಲದೆ ವೇದಾರ್ಥವನ್ನು ವಿಶದೀಕರಿಸುವಲ್ಲಿ ಏಕವಾಕ್ಯತೆಯುಳ್ಳ ಶಿವಾಗಮಗಳಾದರೋ ವೇದದ ಹಾಗೆ ಸ್ವತಂತ್ರವಾಙ್ಮಯರೂಪಗಳಾಗಿರುವದರಿಂದ ಅವುಗಳಿಗೆ ಶಿವಸಂಹಿತೆಗಳೆಂಬುದಾಗಿ ವ್ಯಾಸಾದಿಮಹರ್ಷಿಗಳು ಹೇಳುವರು.

ಪ್ರವೃತ್ತಿಧರ್ಮವನ್ನೇ ವಿಶೇಷವಾಗಿ ಹೇಳಲು ಪ್ರವೃತ್ತಗಳಾದ ಸೂತ್ರ ಸ್ಮೃತ್ಯಾದಿಗಳಿಂದ ಮುಮುಕ್ಷುಜನರಿಗೆ ಅವರಿಷ್ಟಾನುಸಾರವಾದ ತತ್ವವಿಚಾರವು ಲಭಿಸುವುದಿಲ್ಲ. ಏಕೆಂದರೆ, ವೇದದ ಮಂತ್ರ ಬ್ರಾಹ್ಮಣಗಳ ಅರ್ಥವಿಚಾರವೇ ಅವುಗಳ ಮುಖ್ಯೋದ್ದೇಶವಾಗಿದೆ. ವಸಿಷ್ಠಾದಿಗಳಿಂದ ಉಪದಿಷ್ಟಗಳಾದ ಧರ್ಮಸೂತ್ರಗಳಲ್ಲಿಯೂ ಮನ್ವಾದಿಸ್ಮೃತಿಗಳಲ್ಲಿಯೂ ನಿವೃತ್ತಿ ಧರ್ಮಪರ ವಿಚಾರಗಳು ಇಲ್ಲವೆಂದು ನಾವು ಹೇಳುವ ಭಾವವಲ್ಲ; ಆದರೆ ವಿದ್ಯಾವಿಷಾದಚತುಷ್ಟಯ ರೂಪದಿಂದ ವೇದದ ಉತ್ತರಕಾಂಡದ ಸಾರವನ್ನು ವಿವರಿಸಲು ಪ್ರವೃತ್ತಗಳಾದ ಶಿವಾಗಮಗಳು ಮುಮುಕ್ಷುಗಳಿಗೆ ಪರಮಪ್ರಯೋಜನಕಾರಿಗಳಾಗಿರುವುವೆಂದು ಹೇಳುತ್ತೇವೆ.

ವ್ಯಾಸಮಹರ್ಷಿಯು ಪ್ರವೃತ್ತಿನಿವೃತ್ತಿಧರ್ಮಗಳ ಸ್ವರೂಪವನ್ನು ಮಹಾಭಾರತದಲ್ಲಿ (ಶಾಂತಿಪರ್ವ ೧೪೭) ಹೀಗೆ ಹೇಳಿದ್ದಾನೆ—

ದ್ವಾವಿಮಾವಥ ಪನ್ಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ | ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೌ ಚ ವ್ಯವಸ್ಥಿತಃ ||೬||

ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ಚ ವಿಮುಚ್ಯತೇ | ತಸ್ಮಾತ್ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ ||೭||

ಕರ್ಮಣಾ ಜಾಯತೇ ಪ್ರೇತ್ಯ ಮೂರ್ತಿಮಾನ್ ಷೋಡಶಾತ್ಮಕಃ | ವಿದ್ಯಯಾ ಜಾಯತೇ ನಿತ್ಯಮವ್ಯಯೋऽವ್ಯಕ್ತಾತ್ಮಕಃ ||೮||

ಕರ್ಮತ್ವೇಕೇ ಪ್ರಶಂಸನ್ತಿ ಸ್ವಲ್ಪಬುದ್ಧಿತಯಾ ನರಾಃ | ತೇನ ತೇ ದೇಹಜಾಲಾನಿ ರಮಯನ್ತ ಉಪಾಸತೇ ||೯||

ಯೇ ತು ಬುದ್ಧಿಂ ಪರಾಂ ಪ್ರಾಪ್ತಾ ಧರ್ಮನೈಪುಣ್ಯದರ್ಶಿನಃ | ನ ತೇ ಕರ್ಮ ಪ್ರಶಂಸನ್ತಿ ಕೂಪಂ ನದ್ಯಾಂ ಪಿಬನ್ನಿವ ||೧೦||

ಕರ್ಮಣಾಃ ಫಲಮಾಪ್ನೋತಿ ಸುಖದುಃಖೇ ಭವಾಭವೌ | ವಿದ್ಯಯಾ ತದವಾಪ್ನೋತಿ ಯತ್ರಗತ್ವಾ ನಶೋಚತಿ ||೧೧||

ಯತ್ರ ತದ್ಬ್ರಹ್ಮ ಪರಮಮವ್ಯಕ್ತಮಜರಂ ಧ್ರುವಂ | ಅವ್ಯಾಹತಮನಾಯಾಸಮಮೃತಂ ಚಾವಿಯೋಗಿಚ ||೧೨||

ದ್ವನ್ದ್ವೈರ್ನ ಯತ್ರ ಬಾಧ್ಯನ್ತೇ ಮಾನಸೇನ ಚ ಕರ್ಮಣಾ | ಸಮಾಃ ಸರ್ವತ್ರಮೈತ್ರಾಶ್ಚ ಸರ್ವಭೂತಹಿತೇ ರತಾಃ ||೧೩||

ಪ್ರವೃತ್ತಿ ಮತ್ತು **ನಿವೃತ್ತಿ** ಎಂಬ ಈ ಎರಡು ಮಾರ್ಗಗಳಲ್ಲಿ ವೇದಗಳು ಪ್ರತಿಷ್ಠಿತಗಳಾಗಿವೆ. ಪ್ರಾಣಿಯು ಕರ್ಮದಿಂದ ಬದ್ಧನಾಗುವನು; ವಿದ್ಯೆಯಿಂದ ಮುಕ್ತನಾಗುವನು; ಆದುಕಾರಣವೇ ತತ್ವಸಾಕ್ಷಾತ್ಕಾರಕ್ಕಾಗಿ ಯತ್ನಿಸುವವರು ಅಗ್ನಿಷ್ಟೋಮಾದಿ ಕರ್ಮಗಳನ್ನು ಅನುಷ್ಠಿಸುವುದಿಲ್ಲ. ಪ್ರಾಣಿಯು ಮೃತನಾದ ಬಳಿಕ ಕರ್ಮಾನುಸಾರವಾಗಿ ಹದಿನಾರು ಇಂದ್ರಿಯಗಳೂ ಪಂಚಪ್ರಾಣಗಳೂ ಎಂಬ ಷೋಡಶಾತ್ಮಕವಾದ ಶರೀರವುಳ್ಳವನಾಗುವನು. ವಿದ್ಯೆಯ (ಪರಾವಿದ್ಯೆಯ) ಯೋಗದಿಂದಾದರೋ ನಿತ್ಯವೂ ಅವ್ಯಕ್ತವೂ ಅಕ್ಷರಾತ್ಮಕವೂ ಆದ ಬ್ರಹ್ಮವೇ ಆಗುವನು. ಅಲ್ಪಬುದ್ಧಿಯ ಮೂಲಕವಾಗಿ ಜನರು ಯಾವಾಗಲೂ ಪ್ರಾಕೃತಕರ್ಮವನ್ನೇ ಹೊಗಳುತ್ತಾರೆ. ಆ ಕರ್ಮದಿಂದ ಅವರು ಅನೇಕ ದೇಹಗಳನ್ನು ಧರಿಸಿ ಅವುಗಳಲ್ಲಿಯೇ ವಿಹರಿಸುವವರಾಗಿ ಮತ್ತೆ ಆ ಕರ್ಮಗಳನ್ನು ಮಾಡಿ ತನ್ಮೂಲಕ ಅಂತಹ ದೇಹಗಳನ್ನೇ ಪಡೆಯಲು ಹಾತೊರೆಯುವರು. ನದಿಯ ನೀರನ್ನು ಕುಡಿಯತಕ್ಕವರು ಬಾವಿಯ ನೀರನ್ನು ಹೊಗಳದಿರುವಂತೆ, ಪರಾರೂಪಬುದ್ಧಿಯನ್ನು ಪಡೆದವರಾದ ಧರ್ಮನೈಪುಣ್ಯದರ್ಶಿಗಳು ಕರ್ಮವನ್ನು ಪ್ರಶಂಸಿಸರು. ಕರ್ಮದ ಫಲಗಳು ಸುಖದುಃಖಗಳೂ ಹುಟ್ಟುಸಾವುಗಳೂ ಆಗಿವೆ. ಜೀವನು ಯಾವುದನ್ನು ಹೊಂದಿ ದುಃಖಿಯಾಗುವುದಿಲ್ಲವೋ ಅಂತಹ ಸ್ಥಾನವು ವಿದ್ಯೆಯಿಂದ (ಪರಾವಿದ್ಯೆಯಿಂದ) ದೊರಕುವುದು. ಯಾವುದು ಹುಟ್ಟು, ಬೆಳವಣಿಗೆ, ಸಾವುಗಳಿಲ್ಲದೆ ಪರಮ ಅವ್ಯಕ್ತವೂ ಅಚ್ಯುತವೂ ಧ್ರುವವೂ ಅವ್ಯಾಹತವೂ ಅನಾಯಾಸವೂ ಅಮೃತವೂ ಜೀವರೊಡನೆ ವಿಯೋಗವಿಲ್ಲದುದೂ ದ್ವಂದ್ವಪೀಡೆಯ ಸೋಂಕಿಲ್ಲದುದೂ ಚಿಂತೆ ಮುಂತಾದ ಮನೋಮಯಕರ್ಮದ ತ್ರಾಸಿಲ್ಲದುದೂ ಆಗಿದೆಯೋ, ಅಂತಹ ನಿಷ್ಕಲಬ್ರಹ್ಮರೂಪವನ್ನು ಪಡೆದವರು ಸರ್ವತ್ರ ಸಮಭಾವವುಳ್ಳವರೂ ಸರ್ವರ ಮಿತ್ರರೂ ಸರ್ವಪ್ರಾಣಿದಯಾಪರರೂ ಆಗುತ್ತಾರೆ.

ಈ ಮೇಲಿನ ವಾಕ್ಯಗಳಲ್ಲಿ ಪ್ರವೃತ್ತಿ ನಿವೃತ್ತಿ ಧರ್ಮಗಳನ್ನು ಅನುಷ್ಠಿಸತಕ್ಕ ಅಧಿಕಾರಿಗಳು ಬೇರೆಬೇರೆಯಾಗಿದ್ದಾರೆಂಬ ಭಾವವು ತೋರಿಸಲ್ಪಟ್ಟಿದೆ. ಪ್ರಕೃತಿಯು ಪ್ರವೃತ್ತಿರೂಪವಾದುದು. ಪ್ರಕೃತ್ಯತೀತವಾದುದು ನಿವೃತ್ತ್ಯಾತ್ಮಕವು. ಪ್ರಕೃತಿಯು ತ್ರಿಗುಣಾತ್ಮಕವಾಗಿದೆ, ನಿಸ್ತ್ರೈಗುಣವು ಅಪ್ರಾಕೃತವೆನಿಸುವುದು. ವೇದದ ಪೂರ್ವಕಾಂಡೋಕ್ತ ಧರ್ಮಗಳು ಗುಣತ್ರಯಾತ್ಮಕಗಳಾದ್ದರಿಂದ ಅವುಗಳಿಗೆ ಪ್ರಾಕೃತ ಕರ್ಮಗಳೆನ್ನುತ್ತಾರೆ. ಅವುಗಳನ್ನು ಅನುಷ್ಠಿಸುವಾತನಿಗೆ ಇಹಪರಗಳಲ್ಲಿ ಎಡೆಯಾಟವೂ ಸುಖದುಃಖಮಯಭೋಗವೂ ಬೆಂಬಿಡವು. ಪ್ರಾಕೃತಧರ್ಮಗಳು ಅಭ್ಯುದಯವೇ ಫಲವುಳ್ಳವುಗಳಾಗಿವೆ. ಅಭ್ಯುದಯವಾದರೋ ಆಯಾ ಪ್ರಾಕೃತಕರ್ಮಗಳ ಅನುಷ್ಠಾನ ತಾರತಮ್ಯಾನುಗುಣವಾಗಿ ನ್ಯೂನಾಧಿಕವಾಗಿರುವುದು. ಇದಕ್ಕೆ ವಿಪರೀತವಾದ ನಿಸ್ತ್ರೈಗುಣ್ಯಪಥವು (ಅಪ್ರಾಕೃತಧರ್ಮವು) ವೇದದ ಉತ್ತರಕಾಂಡದಲ್ಲಿ ನಿರೂಪಿಸಲ್ಪಡುವುದು. ಇದರ ಫಲವು ಅಭ್ಯುದಯದಂತೆ ಉತ್ಕರ್ಷಾಪಕರ್ಷವುಳ್ಳದ್ದಲ್ಲವಾದ್ದರಿಂದ ನಿಜವಾದ ಮೋಕ್ಷರೂಪವಾಗಿರುವುದು. ಇದೇ ಅರ್ಥವನ್ನು ಶ್ರೀಕೃಷ್ಣನು.

ಯಾಮಿಮಾಂ ಪುಷ್ಪಿ[illegible] ಪ್ರವದನ್ತ್ಯವಿಪಶ್ಚಿತಃ | ವೇದವಾದರ[illegible] ನಾನ್ಯದಸ್ತೀತಿ ವಾದಿನಃ ||

ಕಾಮಾತ್ಮಾನಃ [illegible] ಪರಾ ಜನ್ಮಕರ್ಮಫಲಪ್ರದಾಮ್ | ಕ್ರಿಯಾ[illegible]ಶೇಷಬಹುಲಾಂ ಭೋಗೈಶ್ವರ್ಯಗತಿಂಪ್ರತಿ ||

ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಮ್ | ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನವಿಧೀಯತೇ ||

ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ | ನಿರ್ದ್ವಂದ್ವೋ ನಿತ್ಯಸತ್ವಸ್ಥೋ ನಿರ್ಯೋಗಕ್ಷೇಮಆತ್ಮವಾನ್ ||

X ~~[illegible]~~ ಕರ್ಮಕಾಂಡಾತ್ಮಕಗಳಾದ ವೇದಗಳು ತ್ರೈಗುಣ್ಯವಾದ ವಿಷಯಗಳಿಂದ ತುಂಬಿಕೊಂಡಿರುವುವು. ನೀನು ತ್ರಿಗುಣಾತೀತನೂ ನಿತ್ಯಸತ್ವಸ್ಥನೂ ಸುಖದುಃಖಾದಿದ್ವಂದ್ವಗಳಿಂದ ಅಲಿಪ್ತನೂ ಯೋಗಕ್ಷೇಮದ ಚಿಂತೆಯಿಲ್ಲದವನೂ ಆತ್ಮಸ್ವರೂಪನಿಷ್ಠೆಯುಳ್ಳವನೂ ಆಗಿರು" (ಗೀ. ೨—೪೫) ಎಂದು ಹೇಳುವ ವ್ಯಾಜದಿಂದ ಪ್ರಾಕೃತಕರ್ಮಗಳು ಅಪ್ರಾಕೃತಧರ್ಮಗಳಿಗಿಂತಲೂ ಸ್ವಲ್ಪ ಕೀಳೆಂಬ ಭಾವವನ್ನು ತೋರಿಸಿದ್ದಾನೆ.

ಮಿ (ಸಶೇಷ.)

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—೬೨ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಶ್ರಿಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಖಾತೇ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್— [6]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶಿವದೀಕ್ಷಾಮಹೋತ್ಸವ.

ಕಡೂರ ಡಿ|| ತರೀಕೆರೆ ತಾಲ್ಲೋಕು ಉಡೇವಮಠದ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು ವಿಭವಸಂ|| ದ ಫಾಲ್ಗುಣ ಬ|| ೧೦ ಗುರುವಾರ (ತಾ|| 4-4-1929) ಶುಭಲಗ್ನದಲ್ಲು ಶಿವೋದ್ಧಾರಕ್ಕಾಗಿ ಶ್ರೀ|| ಜ|| ಪಂಚಬ್ರಹ್ಮ ಕಲಶಸ್ಥಾಪನಾಪೂರ್ವಕ ಶಿವದೀಕ್ಷೆಯನ್ನು ನಡೆಯಿಸುವದಾಗಿ ನಿರ್ಧರಪಡಿಸಿ ತನ್ನ ಹೂತಕ್ಕೆ ಸರಿಯಾಗಿ ಶಿವಮೊಗ್ಗಾ ಡಿ|| ದುಮ್ಮಳ್ಳಿ ಮಠದ ಪಟ್ಟಾಧ್ಯಕ್ಷ ಶಿವಲಿಂಗಶಿವಾಚಾರ್ಯಸ್ವಾಮಿಗಳನ್ನೂ, ತರೀಕೆರೆ ತಾ|| ಅಣ್ಣೆಮಠದ ಶ್ರೀ|| ಷ|| ಬ್ರ|| ರುದ್ರಮುನಿಶಿವಾಚಾರ್ಯಸ್ವಾಮಿಗಳನ್ನೂ ಅನೇಕ ಜನ ಭಕ್ತಮಾಹೇಶ್ವರರನ್ನೂ ಬರಮಾಡಿಕೊಂಡು ಅನೇಕ ವೀರಮಾಹೇಶ್ವರ ವಟುಗಳಿಗೆ ಧರ್ಮಾರ್ಥವಾಗಿ ಶಿವದೀಕ್ಷಾಸಂಸ್ಕಾರವನ್ನು ಮಾಡಿಸಿದರು. ವೈದಿಕಭಾಗವು ವಿಧ್ಯುಕ್ತವಾಗಿ ತರೀಕೆರೆ ಹಿರೇಮಠದ ವೇ|| ಕಲ್ಲಿನಾಥದೀಕ್ಷಿತರಿಂದ ನಡೆಯಿಸಲ್ಪಟ್ಟಿತು. ಆ ದಿನ ಶಿವಗಣಾರಾಧನೆಯು ನಡೆದನಂತರ ವಟವೃಕ್ಷಪೂಜೆಯು ನಡೆದು ಸಾಯಂಕಾಲಕ್ಕೆ ಧರ್ಮಸಂಬಂಧವಾದ ಸಭೆಯು ನಡೆಯಿತು, ಮೇಲ್ಕಂಡ ದುಮ್ಮಳ್ಳಿ ಅಣ್ಣೆಮಠಗಳ ಶ್ರೀಗಳು ಅಷ್ಟಾವರಣ ಮತ್ತು ಆಚಾರವಿಷಯವಾಗಿ ಬಹಳ ಯುಕ್ತಿಯುಕ್ತವಾಗಿ ಅಪ್ಪಣೆಕೊಡಿಸಿದರು. ಕಾರ್ಯಾಧ್ಯಕ್ಷರಾದ ಉಡೇವು ಮಠದ ಶ್ರೀಗಳವರು ಈ ಮಹಾಕಾರ್ಯ ನಡೆದ ಸಂತೋಷಾರ್ಥವಾಗಿ ಶ್ರೀ ಪಂಚಾಚಾರ್ಯಪ್ರಭಾಪೋಷಣೆಗಾಗಿ ಕಳುಹಿಸುವದಕ್ಕಾಗಿ 7 ರೂಪಾಯಿಗಳನ್ನು ವೇ|| ಕಲ್ಲಿನಾಥದೀಕ್ಷಿತರ ವಶಕ್ಕೆ ಕೊಟ್ಟರು. ಅನಂತರ ಸಮಸ್ತರಿಗೂ ಫಲತಾಂಬೂಲಾದಿಗಳು ಹಂಚಲ್ಪಟ್ಟು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಆಗಾಗ್ಯೆ ಶಿವೋದ್ಧಾರಕ್ಕಾಗಿ ಇಂಥ ಮಹಾಕಾರ್ಯಗಳನ್ನು ನಡೆಯಿಸುತ್ತಿರುವ ಉಡೇವ ಮಠದ ಶ್ರೀಗಳವರಿಗೆ ಆಯುರಾರೋಗ್ಯಾದಿಗಳನ್ನು ಹೆಚ್ಚಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ಪರೀಕ್ಷಿಸಿನೋಡಿರಿ! ತ್ವರೆಮಾಡಿರಿ!!

ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರ
ಜಗತ್ಪ್ರಸಿದ್ಧವಾದ

ಪ್ರಾಣಸಂಜೀವನಲೇಹ್ಯ

ಇದರ ಸೇವನೆಯಿಂದ ಧಾತುಸ್ರಾವ, ಅಜೀರ್ಣ, ಸೂತಿಕಾವಾತ, ಮೇಹವಾಯು, ಗರ್ಭವಾತ, ನಿದ್ರಾಭಂಗ, ನರಗಳ ದೌರ್ಬಲ್ಯ, ಮೂತ್ರರೋಗಾದಿಗಳು, ಕ್ಷಯ, ಉಬ್ಬಸ, ಸ್ತ್ರೀಯರ ರಕ್ತಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದರಲ್ಲಿ ಈ ಲೇಹ್ಯವು ಅಸದೃಶವಾದುದು. ಎಂತಹ ಅಲ್ಪವೀರ್ಯನಿಗೂ ಧಾತುವೃದ್ಧಿಯನ್ನು ಕೊಟ್ಟು ರತಿಸುಖಕ್ಕೆ ಗುರಿಮಾಡುವದು. ಹೀಗೆ ಸೇವಿಸಿದವರನೇಕರು ದೃಢಸಂತಾನವನ್ನು ಪಡೆದಿರುವರು. ಇದು ವೈದ್ಯಸ್ವಭಾವದ ಹೊಗಳಿಕೆಯೆಂದು ಹೇಳದೆ ಕೆಲವುಕಾಲ ಉಪಯೋಗಿಸಿನೋಡಿದರೆ ನೀವೇ ಹೆಚ್ಚು ಹೊಗಳುವಿರಿ.

"ರತ್ನಾಕು ಜರ್ಜಾಕರೊ"

ಕ್ರಯ 12 ತೊಲ ಡಬ್ಬಿ 1ಕ್ಕೆ ರೂ. 2—0—0
(ಭಸ್ಮ, ಸಿಂಧೂರಗಳು ಸೇರಿರುವ) 4—0—0

[24]

ಜ್ವರಕೇಸರೀ ಮಾತ್ರೆ

ಇದು ಮಲೇರಿಯಾ, ಸನ್ನಿಪಾತಜ್ವರ, ಇನ್ಫ್ಲುಯೆಂಜಾ, ನಿಮೋನಿಯಾ, ವಿಷಮಜ್ವರ, ಪ್ಲೇಗು, ಮೂರರ ಜ್ವರ, ಛಳಿಜ್ವರ, ಮಕ್ಕಳ ಏಳವು, ಶೀತ, ನೆಗಡಿ, ಕೆಮ್ಮುಜ್ವರ, ಅಜೀರ್ಣ ಮುಂತಾದವುಗಳನ್ನು ನಿರ್ಲಕ್ಷ್ಯವಾಗಿ ಗುಣಪಡಿಸುವುದರಲ್ಲಿ ಅತಿ ನಿಪುಣವಾದುದು. ಬಹುಕಾಲದಿಂದಲೂ ಅನೇಕರಿಂದ ಹೊಗಳಿಸಿಕೊಂಡಿದೆ. ಖಂಡಿತವಾಗಿಯೂ ಬಹು ಜಾಗ್ರತೆ ಗುಣಪಡಿಸುವುದು.

ಬೆಲೆ 80 ಮಾತ್ರೆಗಳ ಸೀಸೆ 1ಕ್ಕೆ 0—8—0
„ 40 „ „ 0—4—0

ವಿ. ಪಿ. ಛಾರ್ಜು ಪ್ರತ್ಯೇಕ, ವ್ಯಾಪಾರಸ್ಥರಿಗೆ ಮತ್ತು ವೈದ್ಯರಿಗೆ ಧಾರಾಳವಾದ ಕಮಿಷನ್. ನಮ್ಮಲ್ಲಿ ಅನೇಕ ವಿಧ ತೈಲ, ಲೇಹ್ಯ, ಮಾತ್ರೆ, ಚೂರ್ಣ ಭಸ್ಮ, ಆಸವಗಳು ಸಿದ್ಧವಾಗಿದೆ. ಕ್ಯಾಟಲಾಗು ಉಚಿತ.

ನಮ್ಮ ವಿಳಾಸ—
ಪಂಡಿತ ಮುದ್ಗಲ್ ರಾಮಚಂದ್ರಾಚಾರ್ಯರು,
ಆಯುರ್ವೇದಾಶಯ, ಹಳೆಅಗ್ರಹಾರ, ಮೈಸೂರು.

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!
ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ
ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರುಗಳು **"ಗೃಹಮಾತೆ"**ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಿಗಳು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಸ್ಪಷ್ಟವೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಅಮ್ಲವಾತ, ಅಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಆದ್ದರಿಂದ ಈ ಔಷಧಾಲಯಕ್ಕೆ **"ಅಷ್ಟವರ್ಗೌಷಧಾಲಯ"**ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[3] **848 Ganjipet Poona City.**

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ
ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ
ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತ ಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖನಿಯಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ, ಶಕ್ತಿವೈಶಿಷ್ಟ್ಯ, ಹರಿಹರರಿಗಿರುವ ಶಕ್ತಿಶಕ್ತಿಮದ್ಭಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಭಾ[illegible]ಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ [illegible] ಶ್ರೀ ಚೆನ್ನಬಸವ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| 3 ಅಕ್ಷಯತೃತೀಯಾ (ತಾ|| 11-5-29) ನೆಯ ದಿವಸ ಪ್ರಕಾಶವಾಗುವದು. ಈ ದಿನದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.
ಶ್ರೀ ಶಿವತತ್ವಗ್ರಂಥಮಾಲಾಮಂದಿರ
[4] **ಜಂಗಮವಾಡಿಮಠ ಬನಾರಸ್ ಸಿಟಿ.**

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷೂರೆನ್ಸ್ ಕಂಪೆನಿ, ಕಾನಡಾ.

1928—ಈ ವರ್ಷದಲ್ಲಿ ನಡೆದಿರತಕ್ಕಷ್ಟು ವಿಮೆಗಳು ಕಂಪೆನಿಯ ಚರಿತ್ರೆಯಲ್ಲೇ ಇರಲಿಲ್ಲ!!

ಈಗ ಜಾರಿಯಲ್ಲಿರುವ ನೊಬಲಗು	ರೂ.	1 36,00,00,000
ಹೊಸದಾಗಿ ಆಗಿರುವದು	ರೂ.	26,20,00,000
ಹಂಚಿರುವ ಲಾಭ	ರೂ.	58,62,400
ಕೊಟ್ಟಿರುವ ವಾರಸು	ರೂ.	87,27,300

ಈ ಕಂಪೆನಿಯನ್ನೇ ಚುನಾಯಿಸಬೇಕಾದ ಕಾರಣಗಳು—

1. ಪ್ರಪಂಚದ 5 ಖಂಡಗಳಲ್ಲಿಯೂ ಇರತಕ್ಕ ಈ ಕಂಪೆನಿಯ ವಿಮೆದಾರರ ಜೊತೆಯಲ್ಲಿ ಇಂಡಿಯಾ ದೇಶದಲ್ಲೇ 5 ಲಕ್ಷ ಜನಗಳುಳ್ಳ (ವಿಮೆದಾರರು) ಭಾಗಿಸಂಸಾರದಲ್ಲಿ ಸೇರಿ ಭಾಗಿಗಳಾದಂತಾಗುತ್ತೆ.
2. ಎಷ್ಟೇ ಕಡಿಮೆಯೆಂದರೂ ರೂ. 1,000 ಗಳ ವಿಮೆಗೆ ರೂ. 500 ರಿಂದ 600 ರ ವರೆಗೂ ಲಾಭವನ್ನು ಪಡೆಯಬಹುದು. ಇನ್ನೂ ಜಾಸ್ತಿಯಾಗುವ ಸಂಭವವೂ ಉಂಟು.
3. ಈ ರಾಕ್ಷಸಶಕ್ತಿಯನ್ನುಳ್ಳ ಮತ್ತು ಅನುಕೂಲಗಳನ್ನುಳ್ಳದ್ದು ಮತ್ತಾವದೂ ಇಲ್ಲ.
4. ಗಂಡಸರು, ಹೆಂಗಸರು, ಮಕ್ಕಳು ಯಾರು ಬೇಕಾದರೂ ವಿಮೆ ಮಾಡಬಹುದು.

[43] **ಏಜಂಟರು ಬೇಕಾಗಿದೆ.**

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ.
ಅಥವಾ
ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು **ಯಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ಫೀವರ್ಸ್ ಲೈನ್, ಮೈಸೂರು.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಪ್ರೇಮರಾಗ ಬೇಡಿರಿ. | ಧಿಕ್ಕರಿಸಿದರೆ ಕ್ಷೀಣತೆಯನು ಕಾಯ್ದು ಕೊಳ್ಳುವಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧ

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ನರ್ಮ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂಧ, ಶಾಲೀಮಲೀಕಂದ, ಅಶ್ವಕಂದ ಕ್ರೌಷ್ಠಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ಶಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ತಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರಕ್ತಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀ ಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಆವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಕಬಾರದಿರೋಣ, ದಬ್ಬಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [14]

ಪತ್ತ—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಪಟ್ಟಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವಹಿ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚರು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಫರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [38]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಿಗಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ ಕ್ಕೆ		ರೂ. ಆ. ಪೈ. ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ		೦—೦—೬
ಪಂಚಪೀಠಾರೋಹಣ … ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ರುದ್ರಮುನಿ … ಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರ… ಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣ… ರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ		೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ		೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ದುಷ್ಪ್ರಶ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ಪ್ರಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಸಿದ್ಧಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[43] ಪೋ. ಬಾ. ೫೧೧. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೯ ನೇ ಏಪ್ರಿಲ್ ೧೯೨೯ [ಸಂಚಿಕೆ ೫೩.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [7]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಬೇಕಾಗಿದೆ.

ಸೊಂಡೂರು ಸಂಸ್ಥಾನಕ್ಕೆ ಸೇರಿದ ಕಣ್ವಿಹಳ್ಳಿಯಲ್ಲಿ ಸ್ಥಾಪಿತವಾಗಿರುವ ಚಿತ್ರಿಕೆ ಕರಿಬಸವಪ್ಪನವರ ಎಲಿಮೆಂಟರಿ ಸ್ಕೂಲಿಗಾಗಿ ಲೋಯರ್ ಸೆಕೆಂಡರಿ (Lower Grade or III Form) ಪಾಸಾದ ಒಬ್ಬ ಟ್ರೇನಿಂಗ್ ಟೀಚರು ಬೇಕಾಗಿದೆ. ಕನ್ನಡ ಮತ್ತು ಇಂಗ್ಲೀಷು ಈ ಎರಡೂ ಭಾಷೆಗಳನ್ನು ಬಲ್ಲವರಾಗಿರಬೇಕು. ಸಂಬಳ ೨೦ ರಿಂದ ೨೫ ರ ವರೆಗೆ. ಇಷ್ಟವುಳ್ಳವರು ಯೋಗ್ಯತಾಪತ್ರಗಳೊಂದಿಗೆ ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು.

ಚಿತ್ರಿಕೆ ತೋಟಪ್ಪ, ಕಣ್ವಿಹಳ್ಳಿ
ಸೊಂಡೂರು ಸಂಸ್ಥಾನ ಬಳ್ಳಾರಿ ಡಿ||

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಎರಡುವರ್ಷಗಳಾಗುವವು. ಕರ್ನಾಟಕ ರಾಜ್ಯದಲ್ಲಿರತಕ್ಕ ಅನೇಕಜನ ಸತ್ಪುರುಷರು ಈ ಪತ್ರಿಕೆಗೆ ನಾನಾರೀತಿಯಿಂದ ಸಹಾಯಮಾಡುತ್ತಿರುವದು ಸರ್ವರಿಗೂ ವೇದ್ಯವೇ ಇದೆ. ಈ ಪತ್ರಿಕೆಯಲ್ಲಿ ಪ್ರಕಟಿಸತಕ್ಕ ಅಮೂಲ್ಯಗಳಾದ ಧರ್ಮವಿಷಯಗಳನ್ನು ನೋಡಿ ಸಂತೋಷಪಟ್ಟು ಅನೇಕರು ಚಂದಾದಾರರಾಗುತ್ತಿರುವರು. ಚಂದಾದಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವದು. ಚಂದಾದಾರರೆಲ್ಲರೂ ಇದೇ ಪ್ರಕಾರ ನಿರಂತರವೂ ಈ ಪತ್ರಿಕೆಯ ವಿಷಯದಲ್ಲಿ ಪ್ರೇಮವನ್ನು ಬೆಳೆಯಿಸುತ್ತ ಹೋಗಬೇಕೆಂದು ಕೋರುತ್ತೇವೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ. ಪಿ.** ಮಾಡುವದರಿಂದ ನಮಗೂ ತೊಂದರೆಯಾಗುವದು. ಹಾಗೂ ಚಂದಾದಾರರಿಗೂ ೪ ಆಣೆ ಹೆಚ್ಚಿಗೆ ಬೀಳುವದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮಣಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ. ಪಿ.** ಮಾಡಿದರೆ ೬ ರೂ. ೧೨ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮಣಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮಣಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೆ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ. ಸಂ.—

ಸ್ವೀಕಾರ.

ಧಾರವಾಡ ಡಿ|| ಕಜಗಿ ತಾ|| ಹುಂಡಿಗನೂರು ಸಂಸ್ಥಾನದ ಮ|| ರಾ|| ಶ್ರೀಮಂತ ದೊಡ್ಡಮುರಿಗಪ್ಪ ಬಸವಂತರಾವ್ ದೇಸಾಯಿ ವ ನಾಡಗರ್ ಮಾಮಲೆ ಬಂಕಾಪುರ ಇವರು ತಮ್ಮ ಪುತ್ರಿ ಸೌ|| ಅಪ್ಪಾಬಸವ್ವ ಉರ್ಫ್ ತಾಯಾಬಾಯಿಯವರನ್ನು ಮ|| ರಾ|| ಮಲ್ಲಪ್ಪ ಉರ್ಫ್ ಅಣ್ಣಾಸಾಹೇಬ ದೇಸಾಯಿ ವ ನಾಡಗೌಡ ಇನಾಮದಾರ್ ರುದ್ರಾಪುರ ಮಹಾಲ್ ಮುರಗೋಡ ಇವರ ದ್ವಿತೀಯ ಪುತ್ರ ಚಿ|| ರಾ|| ವೀರಭದ್ರಪ್ಪ ಉರ್ಫ್ ನಾನಾಸಾಹೇಬ ಇವರಿಗೆ ಕೊಟ್ಟು ಧಾರವಾಡದಲ್ಲಿ ಅತ್ಯಂತ ವೈಭವದಿಂದ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ತಮ್ಮ ವಂಶಗುರುಗಳಾದ ಶ್ರೀ|| ಷ|| ಬ್ರ|| ಮುಳಲಿ ಬೃಹನ್ಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ವರನಿಂದ ಸಮರ್ಪಿಸಿದ 15 ರೂ. ವಧುವಿನಿಂದ 10 ರೂ. ಒಟ್ಟು 25 ರೂಪಾಯಿಗಳು ಮ|| ರಾ|| ಶ್ರೀಮಂತ ಮಲ್ಲಿಕಾರ್ಜುನಪ್ಪ ಬಸವಲಿಂಗಪ್ಪ ದೇಸಾಯಿ ವ ನಾಡಗರ್ ಸಂ|| ಹುಂಡಿಗನೂರು ಮಾಮಲೆ ಬಂಕಾಪುರ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ರಾಯದುರ್ಗ ತಾ|| ಗೋವಿಂದವಾಡಗ್ರಾಮದ ವೇ|| ಮಠದ ಗುಂಡಯ್ಯನವರು ತಮ್ಮ ಮೊಮ್ಮಗನ ಹಾಗೂ ಮೊಮ್ಮಗಳ ಜನನಸಮಯದಲ್ಲಿ ಸಮರ್ಪಿಸಿದ 2 ರೂ. ಮ|| ರಾ|| ದೇವಶೆಟ್ಟಿ ಸಿದ್ಧಪ್ಪನವರು ಅಪ್ಪಾವರಣ ತಿಲಕಪುರಾಣವನ್ನು ಪ್ರಾರಂಭಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಮ|| ರಾ|| ಹರ್ಪನಹಳ್ಳಿ ನಾಗಪ್ಪನವರ ಪುತ್ರಿ ಸೌ|| ನಾಗಮ್ಮನನ್ನು ಮ|| ರಾ|| ಭೀಮನಗೌಡರ ಪುತ್ರ ಚಿ|| ಹನುಮಂತಗೌಡನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನಕಡೆಯಿಂದ ಸಮರ್ಪಿಸಿದ 2 ರೂ. ವಧುವಿನಿಂದ 1 ರೂ. ಒಟ್ಟು 6 ರೂಪಾಯಿಗಳು ವೇ|| ಬೊಮ್ಮನಾಳು ಕಲ್ಲುಹೊಳೆಮಠದ ಕೆಂಚಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಆದವಾನಿ ತಾ|| ಕೋಸಿಗಿಗ್ರಾಮದ ಮ|| ರಾ|| ಶೆಟ್ಟಿ ರಾಚಪ್ಪನವರ ಪುತ್ರ ಶರಣಪ್ಪನವರಿಗೆ ಪ್ರಾಪ್ತವಾಗಿದ್ದ ಕಾಲುಬಾಧೆಯು ಆದ್ಯಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕೋಸ್ಕರ 5 ರೂಪಾಯಿಗಳನ್ನು ಕಳುಹಿಸಿಕೊಟ್ಟಿರುತ್ತಾರೆ.

ಚಳ್ಳಕೆರೆ ತಾ|| ನಾಯ್ಕನಹಟ್ಟಿಯಲ್ಲಿ ನೆರವೇರಿದ ಶಿವಕೀರ್ತನ ಸಮಾರಂಭ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ವೇ|| ಗೌಡರ ಶಿವಯ್ಯಸ್ವಾಮಿಯವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೊಳಗುಂದಿ ಗ್ರಾಮದಲ್ಲಿರುವ ಮ|| ರಾ|| ಶ್ರೀಮಂತ ಹುಲಗಪ್ಪನವರ ದೊಡ್ಡ ಹಾಲಪ್ಪನವರು ತಾಲೂಕು ಬೋರ್ಡ ಮೆಂಬರರಾಗಿ ಆರಿಸಿ ಬಂದ ಸಂತೋಷಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಪಾಟೀಲ ಗುರುಬಸವನಗೌಡರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೊಳಗುಂದಿ ಗ್ರಾಮದ ಮ|| ರಾ|| ಕಾಮಭೋಗರ ಭದ್ರಪ್ಪನವರ ಸಿದ್ಧಲಿಂಗಪ್ಪನವರ ಗೃಹದಲ್ಲಿ ನೆರವೇರಿದ ಗಣಾರಾಧನಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಶಾ|| ಭ|| ಸಣ್ಣತೋಟಪ್ಪನವರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ಡಿ|| ಹುಟಗಿ ಗ್ರಾಮದಲ್ಲಿ ನೆರವೇರಿದ ಧಾರ್ಮಿಕ ಸಭೆಯು ಅತ್ಯಂತ ವೈಭವದಿಂದ ನೆರವೇರಿದ ಸಂತೋಷಕ್ಕೋಸ್ಕರ ಮ|| ರಾ|| ಪಾಟೀಲ ತುಕಪ್ಪನವರು 1 ರೂಪಾಯಿಯನ್ನು ಕಳುಹಿಸಿದ್ದಾರೆ.

ಧಾರವಾಡ ಡಿ|| ಹಾವೇರಿ ತಾ|| ಇಜಾರಿ ಲಕ್ಕಾಪುರದಲ್ಲಿ ನೆರವೇರಿದ ನಂದೀಶ್ವರ ರಥೋತ್ಸವ ಸಮಯದಲ್ಲಿ ವೇ|| ಮಠದ ಸಾವಳಗಯ್ಯನವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ನಂದೀಶ್ವರ ರಥೋತ್ಸವ.

ಇಜಾರಿಲಕಮಾಪುರ.

ಕಜಗಿ ತಾ|| ಇಜಾರಿಲಕ್ಕಾಪುರದಲ್ಲಿ ಪದ್ಧತಿಯಂತೆ ಶುಕ್ಲ ಸಂ|| ಚೈತ್ರ ಶು|| ೧೪ ಸೋಮವಾರ ಶ್ರೀ ದುಂಡಿ ನಂದೀಶ್ವರ ರಥೋತ್ಸವವು ಸಾಂಗವಾಗಿ ನೆರವೇರಿತು. ಚೈತ್ರ ಶು|| ೧ ದಿವಸ ವಾದ್ಯವೈಭವಗಳೊಡನೆ ಹಾವೇರಿ ಚಂದ್ರಶೇಖರಪ್ಪ ಯಲೀಶೀಮೆ ಇವರು ರಥದ ಗಾಲಿಗಳನ್ನು ಶುಭಮುಹೂರ್ತದಲ್ಲಿ ಗ್ರಾಮದ ಭಕ್ತಮಾಹೇಶ್ವರ ಸಮೂಹದೊಡನೆ ಹೊರಗೆ ತೆಗೆದರು. ಶು|| ೧೨ ಶನಿವಾರ ಶುಭಮುಹೂರ್ತದಲ್ಲಿ ಪಂಚಕಲಶಸ್ಥಾಪನಾಪೂರ್ವಕ ಕಂಕಣಧಾರಣಕಾರ್ಯವು ಮಾಹೇಶ್ವರರಿಂದ ನಡೆಯಲ್ಪಟ್ಟಿತು. ಶು|| ೧೩ ರವಿವಾರ ಮಧ್ಯಾಹ್ನ 11 ಘಂಟೆಯಿಂದ ಗಣಾರಾಧನೆ ಸುರುವಾಗಿ ರಾತ್ರಿ 10 ಘಂಟೆವರೆಗೆ ಬಡಬಗ್ಗರಿಗೆ ಅನ್ನಸಂತರ್ಪಣವು ನಡೆಯಿತು. ರಾತ್ರಿ 11 ಘಂಟೆಯಿಂದ ವಾದ್ಯವೈಭವಗಳೊಡನೆ ಪುಷ್ಪರಥೋತ್ಸವವು ನಡೆಯಿತು. ಶು|| ೧೪ ಸೋಮವಾರ ರಾತ್ರಿ 9 ಘಂಟೆಗೆ ಇಲ್ಲಿಯ ಪಂಚಾಚಾರ್ಯ ಭಜನಾಸಂಘದವರ ಭಜನಾಮೇಳದಿಂದಲೂ ಸಕಲ ವಾದ್ಯವೈಭವದಿಂದಲೂ ದೊಡ್ಡ ರಥೋತ್ಸವವು ದೇವಸ್ಥಾನದಿಂದ ಕಳಶತೋರಣ ರಂಭಾಸ್ತಂಭಗಳಿಂದಲಂಕೃತವಾದ ಪುರವೀಧಿಯಲ್ಲಿ ಹೊರಟು ಮಾರನೇ ದಿವಸ ಮುಂಜಾನೆ 8 ಘಂಟೆಗೆ ದೇವಸ್ಥಾನವನ್ನು ತಲ್ಪಿತು. ಈ ಉತ್ಸವಕ್ಕೆ ಗ್ರಾಮದ ಭಕ್ತರು ಹಾವೇರಿ ಕೆಳಗಿನಪೇಟೆ ಸಮಸ್ತಭಕ್ತರು ಸಂಪೂರ್ಣ ಸಹಾಯಕರಾದರು. ಮೇಲಿನ ಪೇಟೆಯಲ್ಲಿ ಮ|| ರಾ|| ವಿರೂಪಾಕ್ಷಪ್ಪ ಹುಚ್ಚದ, ಮಡಿವಾಳಪ್ಪ ಮಾಸೂರು, ಚನಬಸಪ್ಪ ಚೂರಮರಿ, ಶಿವಪ್ಪ ಹೇರೂರು ಇಷ್ಟು ಜನರು ಸಹಾಯಕರಾದರು. ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ. ಈ ಸಮಯದಲ್ಲಿ ಈ ಗ್ರಾಮದ ಮಠಾಧಿಕಾರಿಗಳಾದ ವೇ|| ಸಾವಳಗಯ್ಯನವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿದರು. ಹಾಗೂ ವೇ|| ಮಠದ ಸಾವಳಗಯ್ಯನವರು, ವೇ|| ನಡುವಿನಮಠದ ಕರಿಬಸಯ್ಯನವರು, ಮ|| ರಾ|| ಅಂದಾನಗೌಡರ ಲಿಂಗನಗೌಡರು, ಮ|| ರಾ|| ಕರಿಬಸವನಗೌಡರ ಬಸವನಗೌಡ ಉರ್ಫ ಮೂಕನಗೌಡರು ಚಂದಾದಾರರಾದರು. ಉತ್ಸವಕ್ಕೆ ಆಗಮಿಸಿದ ಸರ್ವರೂ ಮಠದ ಸಾವಳಗಯ್ಯನವರು ವ ಕರಿಬಸಯ್ಯನವರು ನಡುವಿನಮಠ ಹಾಗೂ ಚನಬಸಯ್ಯನವರು ಇವರಿಂದ ಆಶೀರ್ವಾದ ಪಡೆದುಕೊಂಡು ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಚನ್ನಯ್ಯ ಚನಬಸಯ್ಯ, ನಡುವಿನಮಠ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೈದಿಕವಾಙ್ಮಯರಹಸ್ಯವು
ಅಥವಾ
ಪ್ರಭಾಭರಣವು.

(ಲೇಖಕರು—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ವಿಜಾಪುರ).

[ಕಳೆದವಾರದ ಶೇಷ.]

ವೇದಗಳೊಳಗಿನ ತತ್ತ್ವಜ್ಞಾನವಿಷಯಕನಾದ ಉಪನಿಷದ್ಭಾಗಕ್ಕಿಂತಲೂ ಕರ್ಮಕಾಂಡ ವಿಷಯಕವಾದ ಪೂರ್ವಭಾಗವು ಕಡಿಮೆಯುತದ್ದೆಂಬ ಸಂಗತಿಯು ಉತ್ತರಕಾಂಡದ ವಾಕ್ಯಗಳಿಂದ ಸ್ಪಷ್ಟವಾಗುವದು. ಹೇಗೆಂದರೆ, ಮುಂಡಕೋಪನಿಷತ್ತಿನಲ್ಲಿ—

ಪ್ಲವಾಹ್ಯೇತೆ ಅದೃಢಾ ಯಜ್ಞರೂಪಾ।
ಅಷ್ಟಾದಶೋಕ್ತಮವರಂ ಯೇಷುಕರ್ಮ॥
ಏತಚ್ಛ್ರೇಯೋ ಯೇಽಭಿನಂದಂತಿ ಮೂಢಾ।
ಜರಾಮೃತ್ಯುಂತೇ ಪುನರೇವಾಪಿ ಯಾನ್ತಿ॥

ಎಂದು ಹೇಳಲ್ಪಟ್ಟಿರುವುದು. ವೇದಾಂತರ್ಗತಗಳೇ ಆದ ಜ್ಞಾನಕರ್ಮಕಾಂಡ ವಿಷಯಕಗಳಾದ ಎರಡು ವಿಭಾಗಗಳಲ್ಲಿ ಜ್ಞಾನಕಾಂಡ ವಿಷಯಕ ವಿಭಾಗಕ್ಕೇ ಸೇರಿದ ಉಪನಿಷತ್ತುಗಳು ಹೇಗೆ ಮಹತ್ವವನ್ನು ಕೊಡುತ್ತಿರುವವೆಂಬುದು ಈಮೇಲೆ ಉದ್ಧೃತಗಳಾದ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಮತ್ತು ಉಪನಿಷತ್ತುಗಳು ಜ್ಞಾನಕರ್ಮವಿಷಯಕ ವಿಭಾಗಗಳನ್ನನುಸರಿಸಿ ವೇದವಾಙ್ಮಯವನ್ನು **ಪರಾ, ಅಪರಾ** ಎಂಬ ಹೆಸರಿನಿಂದ ಬೇರೆಮಾಡಿ ತೋರಿಸುತ್ತವೆ. ಮುಂಡಕೋಪನಿಷತ್ತಿನ ಒಂದು ಠಾವಿನಲ್ಲಿ ಶೌನಕನು ಅಂಗಿರಸನನ್ನು ಕುರಿತು ಪ್ರಶ್ನಮಾಡಿದನು—

ಕಸ್ಮಿನ್ನು ಭಗವತೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂಭವತೀತಿ॥

'ಎಲೈ ಭಗವಂತನೇ! ಯಾವುದರ ಜ್ಞಾನವಾಗುವುದರಿಂದ ಸರ್ವವೂ ತಿಳಿಯಲ್ಪಡುವುದು? (ಮುಂಡ ೧-೧-೩).

ಎಂಬೀ ಪ್ರಶ್ನೆಗೆ '**ಅಪರಾ**' ಮತ್ತು '**ಪರಾ**' ಎಂಬ ಈ ಎರಡು ವಿದ್ಯೆಗಳ ಜ್ಞಾನವಾಗಲು ಎಲ್ಲಾ ಅರಿಯಲ್ಪಡುವುದು; ಎಂಬುತ್ತರವು ಆಗಲೆ ದೊರೆಯುವುದು.

ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವವೇದಃ ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂಛಂದೋಜ್ಯೋತಿಷಮಿತಿ॥

'ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಎಂಬಿವುಗಳಿಗೆ ಅಪರಾವಿದ್ಯಾ ಎಂಬ ಸಂಜ್ಞೆಯಿರುವುದು. (ಮುಂಡ ೧-೧-೫).

ಅಥ ಪರಾ ಯಯಾ ತದಕ್ಷರಮಧಿಗಮ್ಯತೆ॥

'ಯಾವುದರಿಂದ ಅವಿನಾಶಿಯಾದ ನಿತ್ಯವಸ್ತುವಿನ (ಪರಮಾತ್ಮನ) ಜ್ಞಾನವಾಗುವುದೋ ಅದು (ಉಪನಿಷದ್ಭಾಗವು) ಪರಾವಿದ್ಯೆಯು (ಮುಂಡ ೧-೧-೫).

ಈಮೇಲಿನ ವಾಕ್ಯಗಳಲ್ಲಿ ವೇದದೊಳಗಿನ ಕರ್ಮಕಾಂಡಕ್ಕಿಂತಲೂ ಜ್ಞಾನಕಾಂಡಕ್ಕೆ ಕೊಡಲ್ಪಟ್ಟಿರುವ ವೈಶಿಷ್ಟ್ಯವು ಮನನೀಯವಾಗಿದೆ. ಛಾಂದೋಗ್ಯೋಪನಿಷತ್ತಿನಲ್ಲಿ ನಾರದನು ಅಪರಾವಿದ್ಯಾ ನಿಷ್ಣಾತನು ತಾನಾಗಿದ್ದರೂ ನಿಜವಾದ ಸುಖಶಾಂತಿಯನ್ನು ಹೊಂದದೆ ಸನತ್ಕುಮಾರನ ಬಳಿಗೆ ಹೋಗಿ ಪರಾವಿದ್ಯೆಯನ್ನು ಸಂಪಾದಿಸಿ ಕೃತಾರ್ಥನಾದ ಸಂಗತಿಯು ವರ್ಣಿಸಲ್ಪಟ್ಟಿದೆ. ಹೀಗೆಯೇ ಎಷ್ಟೋ ಉಪನಿಷತ್ತುಗಳಲ್ಲಿಯು ವಿಷಯವಿಚಾರವೆಲ್ಲವೂ ಈ ವಿಧವಾದ ಪರಾವಿದ್ಯೆಯ ಆಧಿಕ್ಯವನ್ನು ಲಕ್ಷೀಕರಿಸಿರುವುದು ಕಂಡುಬರುತ್ತದೆ.

ಅಪರಾ ಹಾಗು ಪರಾವಿದ್ಯಾರೂಪಗಳಾದ ಪ್ರವೃತ್ತಿ ನಿವೃತ್ತಿ ಧರ್ಮಗಳೇ ಅನುಕ್ರಮವಾಗಿ **ಪಶುಧರ್ಮ ಪತಿಧರ್ಮ** ಎಂಬ ಹೆಸರುಗಳಿಂದ ಶಿವಾಗಮಗಳಲ್ಲಿ ನಿರೂಪಿಸಲ್ಪಡುತ್ತಿವೆ.

ಪ್ರಕೃತಿಯು ಪಾಶವೆನಿಸುವುದು. ಅದರಿಂದ ಬಂಧಿಸಲ್ಪಟ್ಟ ಆತ್ಮರು ಪಶುಗಳಾಗಿ ಪತಿಯಾದ ಶಿವನಿಂದ ನಿಯಮ್ಯರಾಗಿದ್ದಾರೆ. ಪತಿಯ ಆಜ್ಞೆಯಂತೆ ನಡೆದು ಅವನ ಪ್ರಸನ್ನತೆಗೆ ಪಾತ್ರರಾದ ಆತ್ಮರೂಪ ಪಶುಗಳು ತಮಗೆ ಬಂಧನಕಾರಿಯಾದ ಪಾಶದಿಂದ ಬಿಡುಗಡೆಯನ್ನು ಹೊಂದುತ್ತಾರೆ. ಪಾಶ ನಿವೃತ್ತಿಗುಪಾಯಭೂತವಾದ ಧರ್ಮವೇ ನಿವೃತ್ತಿಧರ್ಮವು. ಕಬ್ಬಿಗೆ ಅಂಟಿದ ಬೇನೆ ಜಿಡ್ಡು ಮತ್ತೆಮತ್ತೆ ಅದನ್ನೇ ಪೂಸಿಕೊಳ್ಳುವದರಿಂದ ನುಸ್ತಿಸ್ಟು ಹೆಚ್ಚಾಗುವಂತೆ, ಪ್ರವೃತ್ತಿರೂಪಗಳಾದ ವ್ಯಾಕೃತಾಚಾರಗಳಿಂದ ಪಾಶಬಂಧನವು ಬಲವಾಗುವುದು. ಬೇನೆ ಜಿಡ್ಡಿಗೆ ನೀರಿನಂತೆ ಪಶುತ್ವವು ಪತಿಧರ್ಮಾಚರಣೆಗಳಿಂದಲೇ ತೊಲಗುವುದು.

ಪತಿಯ ಮತ್ತು ಪಶುಗಳ ಸ್ವರೂಪವು ಜಾಬಾಲೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ. ಹೇಗೆಂದರೆ—

ಸರ್ವಜ್ಞಃ ಪಂಚಕೃತ್ಯಸಂಪನ್ನಃ ಸರ್ವೇಶ್ವರ ಈಶಃ ಪಶುಪತಿಃ। ಕೇ ಪಶವಃ, ಇತಿ ಪುನಃ ಸ ತಮುವಾಚ। ಜೀವಾಃ ಪಶವಉಕ್ತಾಃ। ತತ್ಪತಿತ್ವಾತ್ಪಶುಪತಿಃ।

'ಸರ್ವಜ್ಞನೂ, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳನ್ನು ಮಾಡುವಾತನೂ ಸರ್ವೇಶ್ವರನೂ ಆದ ಈಶನೇ ಪಶುಪತಿಯು; ಎಂದು ಜಾಬಾಲಿಯು ಹೇಳಲು, ಪೈಪ್ಪಲಾದಿಗಳು ಪಶುಗಳ ಸ್ವರೂಪವೇನು? ಎಂಬುದಾಗಿ ಮತ್ತೆ ಪ್ರಶ್ನೆಮಾಡಲು, ಜೀವರೇ ಪಶುಗಳು ಅಂತಹ ಪಶುಗಳಿಗೆ ಈತನು ಸ್ವಾಮಿಯಾದ್ದರಿಂದ ಪಶುಪತಿಯಾಗಿದ್ದಾನೆ ಎಂದು ಬೋಧಿಸಿದನು.

ಇದೇ ಮೇರೆಗೆ ಪತಿ-ಪಶು-ಪಾಶಗಳ ನಿರ್ದೇಶವು ತೈತ್ತಿರೀಯ ಸಂಹಿತೆಯ ಮೂರನೆಯ ಕಾಂಡದಲ್ಲಿ—'**ಯೇಷಾಮೀಶೇ ಪಶುಪತಿಃ ಪಶೂನಾಂ ಚತುಷ್ಪದಾಮುತ ಚ ದ್ವಿಪದಾಮ್**' (ಪ್ರ ೧. ಅನು ೪) ಎಂಬುದಾಗಿ ಮಾಡಲ್ಪಟ್ಟಿದೆ. ಹಾಗೂ '**ಜ್ಞಾತ್ವಾ ದೇವಂ ಮುಚ್ಯತೆ ಸರ್ವ ಪಾಶೈಃ**' (ಶ್ವೆ. ಅ-೧. ಮ-೮.)—'**ಪಾಶಂದಹತಿ ಸಂದಿತಃ**' (ಕೈ. ೧೧) ಇತ್ಯಾದ್ಯುಪನಿಷತ್ತುಗಳಲ್ಲಿಯೂ ಕಂಡುಬರುವುದು.

ವೇದದ ಪೂರ್ವಕಾಂಡದಲ್ಲಿ ಅಗ್ನಿ ಮುಂತಾದ ತತ್ವಶಕ್ತಿಗಳಿಗೆ ದೇವತಾಸ್ವರೂಪವನ್ನು ಕೊಟ್ಟು ಹೊಗಳಿದ್ದಾರೆ. ಆ ಪದ್ಧತಿಯು ಧರ್ಮದ ಬಹಿರಂಗಭಕ್ತಿಯ ದ್ಯೋತಕವಾಗಿದೆ. ಉಪನಿಷತ್ತುಗಳಲ್ಲಿಯಾದರೋ ಅಗ್ನಿ-ವರುಣ ಮುಂತಾದ ದೇವತೆಗಳ ತಳಹದಿಯು ಶಾಸ್ತ್ರದೃಷ್ಟಿಯಿಂದ ಶೋಧಿಸಲ್ಪಟ್ಟಿದೆ. ಈ ಶೋಧನಾತ್ಮಕವಾದ ದೇವರ ಕಲ್ಪನೆಯು ಪ್ರತಿಯೊಬ್ಬ ಆತ್ಮನ ಸ್ವರೂಪವನ್ನೂ, ಪಶ್ವದಿರವನ್ನೂ, ಇವುಗಳ ಪಾರಸ್ಪರಿಕ ಸಂಬಂಧವನ್ನೂ ಚೆನ್ನಾಗಿ ವಿಚಾರಿಸತಕ್ಕ ಮಾರ್ಗವನ್ನು ತೋರಿಸುವುದು. ಅದು ಕಾರಣವೇ ಭರತಭೂಮಿಯಲ್ಲಿ ಈಗ ಕಂಡುಬರುವ ದ್ವೈತಾದಿ ಮತಗಳು ಉಪನಿಷದ್ವಿಚಾರಸರಣಿಯನ್ನೇ ಅನುಸರಿಸಿರುವುವು.

ಉಪನಿಷತ್ತುಗಳಲ್ಲಿಯ ಅಧ್ಯಾತ್ಮವಿಚಾರವು ಮಂತ್ರವರ್ಗಗಳಲ್ಲಿ ಬೀಜರೂಪವಾಗಿದ್ದಿತು. ಇದು ಋಗ್ವೇದಕಾಲದಿಂದ ಬ್ರಾಹ್ಮಣಕಾಲದಲ್ಲಿ ಹೊರಹೊಮ್ಮಿ ಉಪನಿಷತ್ಕಾಲಕ್ಕೆ ಹಬ್ಬಿತು. ಈ ವಿಷಯಕವಾದ ಕೆಲವು ವಾಕ್ಯಗಳನ್ನು ಇಲ್ಲಿ ನಿರ್ದೇಶಿಸುವೆವು.

'**ಅಗ್ನಿಃ ಪೂರ್ವೇಭಿರ್ಋಷಿಭಿರೀಡ್ಯೋನೂತನೈರುತ**' ಅಗ್ನಿಯು ಪ್ರಾಚೀನಋಷಿಗಳಿಂದ ಪೂಜಿಸಲ್ಪಟ್ಟು ಮೇಲೆಗೆ ಹೊಸಬರಿಂದಲೂ ಪೂಜಿಸಲ್ಪಡತಕ್ಕವನಾಗಿದ್ದಾನೆ (ಋ-ಮಂ—೧—೧—೨).

'**ಇನ್ದ್ರಂ ಮಿತ್ರಂ ವರುಣಮಗ್ನಿಮಾಹುರಥೋದಿವ್ಯಃ ಸಪರ್ಣೋ ಗರುತ್ಮಾನ್। ಏಕಂ ಸದ್ವಿಪ್ರಾಬಹುಧಾ ವದನ್ತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ**'—ಇವನನ್ನು ಇಂದ್ರ—ವರುಣ—ಮಿತ್ರ (ಸೂರ್ಯ) ಅಗ್ನಿ ಎಂದೂ ಮತ್ತು ಇವನೇ (ಸುಪರ್ಣ) ಸುಪತನ ಎಂದರೆ ಚೆನ್ನಾಗಿ ಹಾರಾಡುವ ದಿವ್ಯಪಕ್ಷಿಯಾಗಿದ್ದಾನೆಂದೂ ಹೇಳುತ್ತಾರೆ. ಇವನು ಒಬ್ಬನೇ ಇದ್ದಾನೆ ಇವನನ್ನೇ ವಿಪ್ರರು ಅಗ್ನಿ-ಯಮ-ಮಾತರಿಶ್ವಾ (ವಾಯು) ಎಂಬ ನಾನಾವಿಧಗಳಾದ ಹೆಸರುಗಳಿಂದ ಕರೆಯುತ್ತಾರೆ. (ಋ. ಮಂ-೧-೧೬೪-೪೬).

'**ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್। ಸದಾಧಾರ ಪೃಥಿವೀಂ ದ್ಯಾಮುತೇಮಾ ಕಸ್ಮೈದೇವಾಯಹವಿಷಾ ವಿಧೇಮ**' ವಿಶ್ವವಿಸ್ತಾರಕರ್ತೃವಾದ ಪತಿಯು ಮೊದಲು ಒಬ್ಬನೇ ಇದ್ದನು; ಅವನೇ ಸಮಸ್ತಚರಾಚರಭುವನಗಳಿಗಾಧಾರರೂಪನಾಗಿದ್ದಾನೆ; ಹೀಗೆ ಸರ್ವಾಂತರ್ಯಾಮಿಯಾದ ಒಬ್ಬನೇ ದೇವರಿದ್ದಾನೆಂಬ ಅರಿವು ಉಂಟಾದ ಬಳಿಕ ನಾವಿನ್ನು ಬೇರೆ ಯಾವ ದೇವತೆಗೋಸುಗ ಹವಿಯ ಯೋಗದಿಂದ ಸೇವೆಮಾಡುವಾ! (ಋ. ೧೦—೧೨೧—೧).

'**ದ್ಯಾವಾ ಭೂಮೀಜನಯನ್ ದೇವಏಕಃ**'—ಸ್ವರ್ಗ ಹಾಗೂ ಪೃಥ್ವಿ ಇವುಗಳ [illegible] ಕಾರಣವಾದ ಒಬ್ಬ ದೇವರು ಯಾವಾಗಲೂ ವಿರಾಜ[illegible]ಗಿದ್ದಾನೆ (ಯಜು. ಅ. ೧೭, ಕಂ-೧೮).

'**ಯೇನ ಸೂರ್ಯಸ್ತಪತಿ ತೇಜಸೇದ್ಧಃ**'—ಯಾವ ಚಿತ್ಸ್ವರೂಪ ಪರಮಾತ್ಮನ ತೇಜೋದ್ವಾರಾ ದೀಪ್ತನಾದ ಸೂರ್ಯನು ಸರ್ವಜಗತ್ತನ್ನು ಬೆಳಗುವನೋ; (ತೈ. ಬ್ರಾ. ೩-೧೨-೯-೭).

'**ಏತಂ ಹ್ಯೇವ ಬಹ್ವೃಚಾ ಮಹತ್ಯುಕ್ಥೇ ಮೀಮಾಂಸನ್ತ ಏತಮಗ್ನಾವಧ್ವರ್ಯವ ಏತಂ ಮಹಾವ್ರತೆ ಛನ್ದೋಗಾಃ**'—ಈ ಪರಮೇಶ್ವರನನ್ನು ಬಹ್ವೃಚರು (ಋಗ್ವೇದಿಗಳು) ಉಕ್ಥಸಂಜ್ಞಕವಾದ ಮಹಾಶಾಸ್ತ್ರದಲ್ಲಿಯೂ, ಯಜುರ್ವೇದಿಗಳು '**ತಮೇ ತಮಗ್ನಿರಿತ್ಯಧ್ವರ್ಯವ ಉಪಾಸತೆ**' ಎಂಬಂತೆ ಅಗ್ನಿಯಲ್ಲಿಯೂ, ಸಾಮವೇದಿಗಳು ಮಹಾವ್ರತಯಾಗದಲ್ಲಿಯೂ ಉಪಾಸಿಸುತ್ತಾರೆ. (ಐ. ಆ. ೩-೨-೩-೧೨).

'**ನಾವೇದವಿನ್ಮನುತೆ ಬೃಹನ್ತಮ್**'—ವೇದದ ರಹಸ್ಯಾರ್ಥಪರಿಜ್ಞಾನವಿಲ್ಲದವನು ಪರವಸ್ತುವನ್ನು ಅರಿಯನು (ತೈ. ಬ್ರಾ. ಕಾಂ-೩-ಪ್ರ-೧೧-ಅನು. ೯.)

ಈ ಮೇಲೆ ಉದಾಹೃತವಾಕ್ಯಗಳ ತಾತ್ಪರ್ಯವೇ ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಕಂಡುಬರುವುದು. ಹೇಗೆಂದರೆ—

'**ಯತೋ ವಾ ಇಮಾನಿ ಭೂತಾನಿ ಜಾಯನ್ತೆ। ಯೇನ ಜಾತಾನಿ ಜೀವನ್ತಿ। ಯತ್ಪ್ರಯನ್ತ್ಯಭಿಸಂವಿಶನ್ತಿ, ತದ್ವಿಜಿಜ್ಞಾಸಸ್ವ ತದ್ಬ್ರಹ್ಮ।**'—ಯಾವದರಿಂದ ಚಿದಚಿದಾತ್ಮಕವಾದ ಈ ಭೂತಗಳು ಹುಟ್ಟುವವೋ, ಹುಟ್ಟಿದವುಗಳು ಯಾವದರಿಂದ ಜೀವಿಸುವವೋ, ಅಂತ್ಯದಲ್ಲಿ ಯಾವುದನ್ನು ಹೊಂದುವವೋ ಅದನ್ನು ಚೆನ್ನಾಗಿ ತಿಳಿದುಕೊಳ್ಳಲು ಬಯಸುವವನಾಗು; ಅದೇ ಬ್ರಹ್ಮವು (ತೈ. ಉ. ೩-೧-೧).

"**ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್**" ಎಲೈ ಪ್ರಿಯರೂಪನೇ, ಸೃಷ್ಟಿಗೆ ಪೂರ್ವದಲ್ಲಿ ಸಮಾನವೂ ಅಧಿಕವೂ ಆದ ಬೇರೆಯೇನೂ ಇಲ್ಲದೆ ಒಂದು ವಸ್ತುವೇ ಇದ್ದಿತು. (ಛಾ. ಉ. ೬-೨-೧)

"**ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂದೈವತಾನಾಂ ಪರಮಂಚ ದೈವತಮ್, ಪತಿಂ ಪತೀನಾಂ ಪರಮಂ ಪರಸ್ತಾತ್, ವಿದಾಮದೇವಂ ಭುವನೇಶಮೀಡ್ಯಮ್**" ಈಶ್ವರ ಶಬ್ದವಾಚ್ಯರುಗಳಿಗೆಲ್ಲಾ ಶ್ರೇಷ್ಠನಾದ ಮಹೇಶ್ವರನೂ, ದೇವತೆಗಳೆಲ್ಲರಿಗೂ ಶ್ರೇಷ್ಠನಾದ ದೇವರೆನಿಸಿಕೊಳ್ಳಲ್ಪಡುವವನೂ, ಪತಿಶಬ್ದದಿಂದ ಕರೆಯಿಸಿಕೊಳ್ಳುವವರಿಗೆ ಪತಿಯಾದವನೂ, ಶ್ರೇಷ್ಠವಾದುದರೊಳಗೆ ಶ್ರೇಷ್ಠವಾಗಿರುವವನೂ ಪೂಜಾರ್ಹನೂ ವಿಶ್ವೇಶನೂ ಆದ ಪರಮೇಶ್ವರನನ್ನು ನಾವು ಅರಿಯುತ್ತೇವೆ. (ಶ್ವೆ. ಉ. ೬-೭)

ಈ ರೀತಿಯಾಗಿ, ಸಕಲ ಚಿದಚಿದಾತ್ಮಕ ಪ್ರಪಂಚಕ್ಕೆ ಮೂಲಭೂತವಾದ ಪರಮೇಶ್ವರನ ಸದ್ಭಾವವು ಸಪ್ರಮಾಣವಾಗಿ ಸಿದ್ಧಿಸುವುದು. ಇಂತಹ ಪರಮೇಶ್ವರನ ಲಕ್ಷಣಬೋಧಕಗಳಾದ ನಾಮಗಳು ವೈದಿಕವಾಙ್ಮಯದಲ್ಲಿ ಬಹು ವಿಧವಾಗಿ ನಿರ್ದೇಶಿಸಲ್ಪಟ್ಟಿವೆ. ಹೇಗೆಂದರೆ—

ಅಗ್ನಿ—(ಋ. ಸಂ-೧-೧-೨ ; ೧-೧೬೪-೪೬)
ಆಕಾಶ—(ಛಾ. ಉ-೧-೯-೧ ; ೮-೧೪-೧).
ಪುರುಷ—(ಋ. ಸಂ-೧೦-೯೦-೨ ; ಕಠ. ಉ. ೨-೪-೧೩).
ಭೂಮಾ—(ಛಾ. ಉ-೭-೨೩-೧).
ಬ್ರಹ್ಮ—(ತೈ. ಉ-೩-೧-೧ ; ಛಾ. ಉ. ೩-೧೪-೧)
ಆತ್ಮಾ—(ಕಠ. ಉ-೧-೨-೨೩ ; ಐ. ಉ. ೧-೧-೧)
ಜ್ಯೋತಿ—(ಬೃ. ಉ-೬-೪-೧೬)
ಹಂಸ—(ಮೈ. ಉ-೬-೮ ; ಶ್ವೆ. ಉ-೩-೧೮)
ಅಕ್ಷರ—(ಮುಂಡ. ಉ-೧-೨-೭ ; ಬೃ-ಉ-೫-೮-೬)
ಭೂತಯೋನಿ—(ಮುಂಡ. ಉ-೧-೧-೫ ; ಶ್ವೆ. ಉ-೭)
ದೇವ—(ಶ್ವೆ. ಉ. ೧-೪-೧೦ ; ಶ್ವೆ. ಉ-೧-೩)
ರುದ್ರ—(ಮಹಾ. ನಾ. ಉ. ಅನು-೧೪ ; ತೈ. ಸಂ-೫-೪-೩)
ಪತಿ—(ಋ. ಸಂ-೧೦-೧೨೧-೧ ;)
ಪಶುಪತಿ—(ತೈ. ಸಂ-೩-೧-೪)
ಈಶ—(ಶ್ವೆ. ಉ-೩-೭)
ಈಶಾನ—(ಕಠ. ಉ-೨-೪-೧೩ ; ಮಹಾ. ನಾ. ಅನು-೨೪)
ಹರ—(ಶ್ವೆ. ಉ-೧-೧೦)
ಶಿವ—(ಋ. ಸಂ-೧೦-೯೨-೯)
ಮಹೇಶ್ವರ—(ಶ್ವೆ. ಉ-೪-೧ ; ಮಹಾ. ನಾ. ಅನು-೧೨)
ತ್ರ್ಯಂಬಕ—(ಋ. ಸಂ-೭-೫೯-೧೨)
ಮಹಾದೇವ—(ಶ್ವೆ. ಉ-೧-೯)
ಶಮ್ಭು—(ಮೈತ್ರಾ. ಉ-೬-೮ ;
ಲಿಙ್ಗ—(ಮಹಾ. ನಾ. ೧೦-೧೬ ; ಹಂ. ೯. ಉ-೨)

ಈ ಮೇಲಿನ ಒಂದೊಂದು ನಾಮವನ್ನೇ ವೇದಗಳಲ್ಲಿ ಹಲವು ಕಡೆ ಕಾಣಬಹುದು. ಇವುಗಳಲ್ಲದೆ ಇನ್ನೂ ಅನೇಕ ನಾಮಗಳು ಪರಮೇಶ್ವರನ ವಾಚಕಗಳಾಗಿವೆ. ಈ ನಾಮಗಳು ಬೇರೆಬೇರೆಗಳಾಗಿರುವುದರಿಂದ ಅವು ಬೇರೆ ಬೇರೆ ವಸ್ತುವಾಚಕಗಳಾಗಿರುವವೆಂದು ತಿಳಿಯಬಾರದು; ಮತ್ತೇನೆಂದರೆ ಅವೆಲ್ಲಾ ಒಂದೇ ವಸ್ತುವಿನ ಪರ್ಯಾಯವಾಚಕಗಳಾಗಿವೆ. "**ಅಗ್ನಿಮೀಳೆ**" (ಋ. ಸಂ-೧-೧-೧) "**ರುದ್ರೋವಾ ಏಷ ಯದಗ್ನಿ**" (ತೈ. ಸಂ-೫-೪-೩) "**ಪುರುಷೋ ವೈ ರುದ್ರಃ**" (ಮಹಾ. ನಾ. ೨೩-೨೪)" "**ಪುರುಷಏವೇದಂ ಸರ್ವಮ್**" (ಋ. ಸಂ-೧೦-೯೦-೨). "**ಯೇನಾಕ್ಷರಂ ಪುರುಷಮ್**" (ಮುಂಡ. ಉ-೧-೨೭) "**ತಸ್ಮಾದ್ರುದ್ರ ಪಶೂನಾಮಧಿಪತೆ**" (ಋ. ಸಂ-೧-೪೩-೯) ಎಂಬಿವೇ ಮೊದಲಾದ ಅನೇಕ ವಾಕ್ಯಗಳು ನಾವು ಹೇಳುವ ಅಭಿಪ್ರಾಯವನ್ನು ಬಲಪಡಿಸುತ್ತವೆ.

ಮತ್ತು, ವಾಜಸನೇಯ ಸಂಹಿತೆಯಲ್ಲಿ ಕಂಡುಬರುವ ರುದ್ರನ ಅನೇಕ ಹೆಸರುಗಳಲ್ಲಿ **ಶರ್ವ-ಭವ** ಎಂಬ ಎರಡು ಹೆಸರುಗಳಿವೆ. ಆ ಸಂಹಿತೆಯಲ್ಲಿಯೇ (೩೯-೮) ಅಗ್ನಿ-ಅಶನಿ-ಪಶುಪತಿ-ಭವ-ಶರ್ವ-ಈಶಾನ-ಮಹಾದೇವ ಮುಂತಾದ ದೇವತೆಗಳೆಂದರೆ ಒಂದೇ ದೇವತೆಯ ಬೇರೆ ಬೇರೆ ರೂಪಗಳೆಂದು ಹೇಳಿದೆ.

ಋಗ್ವೇದದೊಳಗಿನ ವಾಕ್ಯಗಳನ್ನು ಪರಿಶೀಲಿಸಿದರೆ ರುದ್ರನ ಸಂಬಂಧವು ಯಾವದಾದರೊಂದು ಸಾಮಾನ್ಯವಾದ ಭೌತಿಕ ಚಮತ್ಕಾರದೊಡನಿದ್ದುದು ಕಂಡುಬರುವುದಿಲ್ಲ; ಮತ್ತೇನೆಂದರೆ ಅವನು (ರುದ್ರನು) ಎಲ್ಲರಿಗಿಂತ ಹೆಚ್ಚಿನವನೂ (ಋ. ೭-೧೦-೪) ಬಲಿಷ್ಠರಿಗಿಂತ ಬಲಿಷ್ಠನೂ (ಋ. ೨-೩೩-೩) ಆಗಿದ್ದಾನೆ; ಅವನು ವಿಶ್ವದ ಈಶಾನ (ಒಡೆಯ)ನು (ಋ. ೨-೩೩-೯), ಎಲ್ಲ ಮಾನವರೂ ದೇವತೆಗಳೂ ತಾವು ಯಾವ ಯಾವ ಕೃತ್ಯಗಳನ್ನು ಮಾಡುತ್ತಾರೆಯೋ ಅವೆಲ್ಲವನ್ನೂ ಅವನು ತಿಳಿಯುತ್ತಾನೆ (ಋ. ೭-೪೬-೨); ಅವನು ಬೇಗನೆ ಪ್ರಸನ್ನನಾಗತಕ್ಕವನು (ಋ. ೧೦-೯೨-೯); ಅವನು ಶಿವನು (ಋ. ೧೦-೯೨-೯); ಎಂಬೀ ಋಕ್ಕುಗಳು ಗುಣಮೂರ್ತಿಗಳಲ್ಲಿ ಪರಿಗಣಿಸಲ್ಪಡುವ ರುದ್ರನಿಗಿಂತಲೂ ಅಧಿಕನೆನಿಸುವ ಈಶ್ವರ ಸದಾಶಿವನಿಗೂ ಸಹ ಅಧಿಷ್ಠಾನಭೂತನಾದ ಪರಮಶಿವನನ್ನೇ ರುದ್ರಾಭಿಧಾನದಿಂದ ಸ್ತುತಿಸುತ್ತವೆ.

ಈ ಮೇಲೆ ನಿರ್ದೇಶಿಸಲ್ಪಟ್ಟ ಪರಶಿವಚೈತನ್ಯವು ಶಕ್ತಿವಿಶಿಷ್ಟಾದ್ವೈತರೂಪವಾಗಿದ್ದುದರ ಬಗ್ಗೆಯೂ ಋಗ್ವೇದದಲ್ಲಿ ಹತ್ತನೆಯ ಮಂಡಲದ ೧೨೯ ನೆಯ ಸೂಕ್ತದಲ್ಲಿ

ನ ಮೃತ್ಯುರಾಸೀದಮೃತಂ ನತರ್ಹಿ।
ನ ರಾತ್ರ್ಯಾ ಅಹ್ನ ಆಸೀತ್ಪ್ರಕೇತಃ॥
ಆನೀದವಾತಂ ಸ್ವಧಯಾ ತದೇಕಂ।
ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ॥೨॥

'ಸೃಷ್ಟಿಯ ಮೂಲಾರಂಭದಲ್ಲಿ ಮೃತ್ಯು ಎಂದರೆ, ಮೃತ್ಯುಗ್ರಸ್ತವೂ ನಾಶವಂತವೂ ಆದ ದೃಶ್ಯಸೃಷ್ಟಿಯು ಇದ್ದಿಲ್ಲ; ಅದು ಕಾರಣವೇ (ಬೇರೆ) ಅಮೃತ ಎಂದರೆ, ಅವಿನಾಶಿಯಾದ ನಿತ್ಯಪದಾರ್ಥ (ಭೇದವೂ) ಇದ್ದಿಲ್ಲ; ರಾತ್ರಿ ಹಗಲುಗಳ ಭೇದ ತಿಳಿಯುವ ಸಾಧನವೂ ಇದ್ದಿಲ್ಲ ಇದ್ದದ್ದೆಲ್ಲ ಒಂದೇ ಒಂದಾಗಿತ್ತು; ಅದು (ಆ ಪರಶಿವ ಚೈತನ್ಯವು) ಸ್ವಧೆಯಿಂದ ಎಂದರೆ ತನ್ನ ಶಕ್ತಿಯಿಂದ ಸ್ಫುರಿಸುತ್ತಿತ್ತು; ಅದರ ಹೊರತು ಅಥವಾ ಅದರಾಚೆಗೆ ಅನ್ಯದಾವುದೂ ಇದ್ದಿಲ್ಲ.

ಎಂದು ಹೊಗಳಲ್ಪಟ್ಟಿದೆ. ಇದೇ ಆಶಯವು ಉಳಿದ ವೇದಗಳಲ್ಲಿಯೂ ಆಯಾ ವೇದದ ಬ್ರಾಹ್ಮಣ ಆರಣ್ಯಕ ಉಪನಿಷದ್ಭಾಗಗಳಲ್ಲಿಯೂ ವಿಶದವಾಗಿದೆ.

(ಸಶೇಷ.)

ಶ್ರೀಮಜ್ಜಗದ್ಗುರು ರೇಣುಕಾಚಾರ್ಯೋ ವಿಜಯತಾಂ.

ವೀರಶೈವಮತಪ್ರಾಶಸ್ತ್ಯ.

ಜಗದಾದಿಯಲ್ಲಿ ಪರಮೇಶ್ವರನಿಂ ನಿರ್ಮಿತವಾದೀ ವೀರಶೈವ ಮತವು ಅನಾದಿಸಂಸಿದ್ಧವಾದುದೆಂಬುವದಕ್ಕೆ ಈ ಜಗತ್ತೇ ಸಾಕ್ಷಿಯಾಗಿರುವದು. ಹೇಗೆಂದರೆ—ಸ್ವಶಾಸ್ತ್ರದಿಯಲ್ಲಿ ಪರಮೇಶ್ವರನು ಬ್ರಹ್ಮನಿಗೆ ಸೃಷ್ಟಿಕಾರ್ಯವಂ ರಚಿಸೆಂದಾಜ್ಞಾಪಿಸಲು, ಬ್ರಹ್ಮನು ಸೃಷ್ಟಿಕಾರ್ಯವನ್ನರಿಯೆನು ಮೊದಲು ಸೃಷ್ಟಿಸಿ ತೋರಿಸಿದಲ್ಲಿ ಸೃಷ್ಟಿಯಂ ಮಾಡುವೆನೆಂದು ವಿಜ್ಞಾಪಿಸಿಕೊಳ್ಳಲು, ಆಗ್ಗೆ ಪರಮೇಶ್ವರನು ತನ್ನ ಪಂಚಮುಖಗಳಿಂದ ಪಂಚ ಗಣವರರನ್ನು ಪುಟ್ಟಿಸಿ, ತದ್ಗಣವರರಿಂದ ಶಕ್ತಿವಿಶಿಷ್ಟಾದ್ವೈತವಾದೀ ವೀರಶೈವ ಮತವನ್ನು ರಚಿಸಿ ತೋರಿಸಿದನೆಂದು ಸಕಲ ವೇದಾಗಮಗಳು ಪ್ರತಿಪಾದಿಸಲ್ಪಡುತ್ತಿರುವದು ಸುಪ್ರಸಿದ್ಧವಾದುದಾಗಿದೆ. ಸೃಷ್ಟಿಕಾರ್ಯವನ್ನರಿಯದ ಬ್ರಹ್ಮನು "**ಯಥಾ ವೀರಶೈವಮತೋತ್ಪತ್ತಿಃ ತಥಾ ಜಗದುತ್ಪತ್ತಿಃ**" ಎಂಬಂತೆ ಹೇಗೆ ವೀರಶೈವಮತವು ಉತ್ಪತ್ತಿಯಾಯಿತೋ ಹಾಗೆ ಜಗದುತ್ಪತ್ತಿಯನ್ನುಂಟುಮಾಡಿದನೆಂಬುವದು ಈ ಕೆಳಗಿನ ವಿಷಯಗಳಿಂದ ವಿದಿತವಾಗುತ್ತದೆ.—

ಈ ವೀರಶೈವಮತಕ್ಕೆ ರೇಣುಕ, ದಾರುಕ, ಏಕೋರಾಮ, ಪಂಡಿತ, ವಿಶ್ವಾರಾಧ್ಯರೆಂಬ ಪಂಚಾಚಾರ್ಯರೇ ಕರ್ತೃಗಳು. ಈ ಜಗತ್ತಿಗಾದರೂ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರೆಂಬ ಪಂಚಬ್ರಹ್ಮರೇ ಕರ್ತೃಗಳಾಗಿದ್ದಾರೆ. ಈ ಮತವು ಪದ್ವಿಡಿ, ವೃಷ್ಟಿ, ಲಂಬನ, ಮುಕ್ತಾಗುಚ್ಛ, ಪಂಚವರ್ಣಗಳೆಂಬ ಪಂಚ ಮಹಾಸೂತ್ರಗಳಿಂದ ಯುಕ್ತವಾಗಿದೆ. ಈ ಜಗತ್ತು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳಿಂದ ಯುಕ್ತವಾಗಿದೆ. ವೀರಶೈವಮತವು ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳೆಂಬ ಅಷ್ಟಾವರಣಗಳಿಂದ ರಕ್ಷಿಸಲ್ಪಟ್ಟಿರುತ್ತದೆ. ಈ ಜಗತ್ತು ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಆತ್ಮ, ಸೂರ್ಯ, ಚಂದ್ರರೆಂಬ ಈ ಎಂಟು ತತ್ವಗಳಿಂದ ರಕ್ಷಿಸಲ್ಪಟ್ಟಿದೆ. ಶಿವನ ದೇಹವಾದರೂ ಈ ಎಂಟು ತತ್ವಗಳಿಂದ ಕೂಡಿದ್ದಾಗಿದೆ. ವೀರಶೈವಮತವು ಪ್ರತಿಯೊಂದು ವಿಷಯದಲ್ಲಿಯೂ ಪಂಚತತ್ವಗಳನ್ನೊಳಕೊಂಡಿರುತ್ತದೆಂಬ ವಿಷಯವು ಈ ಕೆಳಗೆ ವಿವರಿಸಲ್ಪಡುತ್ತದೆ.—

ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳೆಂಬ ಪರಮೇಶ್ವರನ ಪಂಚಮುಖಗಳು. ತತ್ಪಂಚಮುಖೋದ್ಭವರಾದ ರೇಣುಕ, ದಾರುಕ, ಏಕೋರಾಮ, ಪಂಡಿತ, ವಿಶ್ವಾರಾಧ್ಯರೆಂಬ ಪಂಚಗುರುಗಳು. ಪದ್ವಿಡಿ, ವೃಷ್ಟಿ, ಲಂಬನ, ಮುಕ್ತಾಗುಚ್ಛ, ಪಂಚವರ್ಣಗಳೆಂಬ ಪಂಚಸೂತ್ರಗಳು. ವೀರ, ನಂದಿ, ಭೃಂಗಿ, ವೃಷಭ, ಸ್ಕಂದರೆಂಬ ಪಂಚಗೋತ್ರಪುರುಷರು. ಪೀಠ, ವೃತ್ತ, ಗೋಳಕ, ಮಸ್ತಕ, ಗೋಮುಖಗಳೆಂಬ ಪಂಚ ಸೂತ್ರಗಳಿಗನುಸರಿಸಿದ ಲಿಂಗವು. ಕಂಥಾ, ಕೌಪೀನ, ಕಮಂಡಲು, ದಂಡ, ಭಸ್ಮಪುಟಿಕೆಗಳೆಂಬ ಪಂಚಮುದ್ರೆಗಳಿಂ ಕೂಡಿದ ಗುರುಮೂರ್ತಿಯು. ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯತೀತಗಳೆಂಬ ಪಂಚಕಲೆಗಳು. ತತ್ಪಂಚಕಲೆಗಳಿಂದುದಯಿಸಿದ ನಂದೆ, ಭದ್ರೆ, ಸುರಭಿ, ಸುಶೀಲೆ, ಸುಮನೆ ಎಂಬ ಪಂಚ ಧೇನುಗಳು. ತತ್ಪಂಚಗೋಮಯದಿಂದಾದ ಭೂತಿ, ಭಸಿತ, ಭಸ್ಮ, ಕ್ಷಾರ, ರಕ್ಷೆ ಎಂಬ ಪಂಚವಿಭೂತಿಗಳು, ಗ್ರಹಣ, ಕಲಶನ, ಶೋಷಣ, ದಹನ, ಶೋಧನಗಳೆಂಬ ಪಂಚಕೃತ್ಯಗಳು. ಪಂಚ ಮುಖರುದ್ರಾಕ್ಷಿಗಳು.

ಪ್ರಸಾದಪಂಚಾಕ್ಷರ, ಮಾಯಾಪಂಚಾಕ್ಷರ, ಸೂಕ್ಷ್ಮಪಂಚಾಕ್ಷರ, ಸ್ಥೂಲಪಂಚಾಕ್ಷರ, ಮೂಲಪಂಚಾಕ್ಷರಗಳೆಂಬ ಪಂಚ ಪಂಚಾಕ್ಷರೀ ಮಂತ್ರಗಳು. ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರಗಳೆಂಬ ಪಂಚಾಚಾರಗಳು. ಇನ್ನು ಈ ಜಗತ್ತಿನ ವಿಚಾರವಾದರೂ ಪ್ರತಿಯೊಂದು ವಿಷಯದಲ್ಲಿಯೂ ಪಂಚತತ್ವಗಳನ್ನೊಳಕೊಂಡಿರುವ ಈ ವೀರಶೈವಮತವನ್ನೇ ಹೋಲುತ್ತದೆಂಬುವದು ಈ ಕೆಳಗೆ ವಿವರಿಸಲ್ಪಡುತ್ತದೆ.—

ಪರಬ್ರಹ್ಮವು ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣಗಳೆಂಬ ಪಂಚಮಹಾಲಕ್ಷಣಗಳಿಂದ ಕೂಡಿದ್ದಾಗಿದೆ. ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳು. ತಪಸ್ಸು, ಕರ್ಮ, ಜಪ, ಧ್ಯಾನ, ಜ್ಞಾನಗಳೆಂಬ ಪಂಚಕ್ರಿಯೆಗಳು. ಮಂತ್ರ, ಹಠ, ರಾಜ, ಲಯ, ಶಿವಯೋಗವೆಂಬೀ ಪಂಚಯೋಗಗಳು. ಜ್ಞಾನರಕ್ಷೆ, ತಪಸ್ಸು, ಸರ್ವಸಂವಾದ, ದುಃಖಸಂಕ್ಷಯ, ಸುಖಾವಿರ್ಭಾವವೆಂಬ ಪಂಚಪ್ರಯೋಜನಗಳು. ಕರ್ಮಿ, ಮುಮುಕ್ಷು, ಅಭ್ಯಾಸಿ, ಅನುಭವಿ, ಆರೂಢರೆಂಬ ಪಂಚಾಧಿಕಾರಿಗಳು. ಲೌಕಿಕ, ವೈದಿಕ, ಆಧ್ಯಾತ್ಮಿಕ, ಅತಿಮಾರ್ಗಿಕ, ಮಂತ್ರಗಳೆಂಬ ಪಂಚಶಾಸ್ತ್ರಗಳು. ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯ, ತುರೀಯಾತೀತಗಳೆಂಬ ಪಂಚಾವಸ್ಥೆಗಳು. ತಮಸ್ಸು, ಮಾಯಾ, ಮೋಹ, ಅವಿದ್ಯೆ, ಅವ್ಯಕ್ತಾಕೃತಿಗಳೆಂಬ ಪಂಚಮಾಯೆಗಳು. ಅಸತ್ತು, ಜಡ, ದುಃಖ, ಅನಿತ್ಯ, ಖಂಡಿತಗಳೆಂಬ ಮಾಯಾ ಪಂಚಲಕ್ಷಣಗಳು. ಅವಿದ್ಯೆ, ಅಸ್ಮಿತ, ರಾಗ, ದ್ವೇಷ, ಅಭಿನಿವೇಶಗಳೆಂಬ ಪಂಚಕ್ಲೇಶಗಳು. ಅಂತಃಕರಣ, ಮನ, ಬುದ್ಧಿ, ಚಿತ್ತ, ಅಹಂಕಾರವೆಂಬ ಅಂತಃಕರಣಪಂಚಕವು. ವ್ಯಾನ, ಸಮಾನ, ಉದಾನ, ಪ್ರಾಣ, ಅಪಾನಗಳೆಂಬ ಪಂಚಪ್ರಾಣಗಳು. ಅನ್ನಮಯಕೋಶ, ಪ್ರಾಣಮಯಕೋಶ, ಮನೋಮಯಕೋಶ, ವಿಜ್ಞಾನಮಯಕೋಶ, ಆನಂದಮಯಕೋಶಗಳೆಂಬ ಪಂಚಕೋಶಗಳು. ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣಗಳೆಂಬ ಪಂಚಜ್ಞಾನೇಂದ್ರಿಯಗಳು. ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚವಿಷಯಗಳು. ಪೀತ, ಶ್ವೇತ, ರಕ್ತ, ಹರಿತ, ನೀಲಗಳೆಂಬ ಪಂಚವರ್ಣಗಳು. ವಿಶೇಷಣ, ವಿಶೇಷ್ಯ, ಕರ್ತೃ, ಕರ್ಮ, ಕ್ರಿಯೆಗಳೆಂಬ ಪಂಚ ಅನ್ವಯಗಳು. ಮಂದಾರ, ಪಾರಿಜಾತ, ಸಂತಾನ, ಕಲ್ಪ, ಹರಿಚಂದನಗಳೆಂಬ ಪಂಚಕಲ್ಪವೃಕ್ಷಗಳು. ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಪಂಚಾಂಗಗಳು. ಇತ್ಯಾದ್ಯನೇಕ ವಿಷಯಗಳಿಂದ ಕೂಡಿದ ಬ್ರಹ್ಮಮಾಯಾ ಸಂಯೋಗದಿಂದಾದೀ ಜಗತ್ತು ಮತ್ತು ಶಕ್ತಿವಿಶಿಷ್ಟಾದ್ವೈತವಾದೀ ವೀರಶೈವಮತವೂ ಪಂಚತತ್ವಗಳಿಂದ ನಿರ್ಮಿತವಾಗಿರುವದಾದ್ದರಿಂದ "ಯಥಾ ವೀರಶೈವಮತೋತ್ಪತ್ತಿಃ ತಥಾ ಜಗದುತ್ಪತ್ತಿಃ" ಎಂಬುವದು ಸಿದ್ಧಾಂತವು.

ಬೀಜದಲ್ಲಿ ವೃಕ್ಷವು ಹೇಗೆ ಅಡಗಿಕೊಂಡಿರುವದೋ ಹಾಗೆ ಪರಬ್ರಹ್ಮಸ್ವರೂಪವಾದೀ ಇಷ್ಟಲಿಂಗದಲ್ಲಿ ಜಗತ್ತು ಲೀನವಾಗಿರುವದು. ಬೀಜವು ಪಂಚತತ್ವಗಳ ಆಶ್ರಯಹೊಂದಿತೆಂದರೆ ವಿಕಸಿತವಾಗಿ ಮೊಳಕೆನಡೆದು ರೂಪಾಂತರಹೊಂದುತ್ತ (ಬೆಳೆಯುತ್ತ) ಹೋಗಿ ಶಾಖೋಪಶಾಖೆಗಳಿಂದ ಕೂಡಿ ಪುಷ್ಪಫಲಗಳಾಗಿ ಮೊದಲು ತಾನು ಯಾವ ಬೀಜರೂಪದಿಂದಿತ್ತೋ ಆ ಬೀಜರೂಪವನ್ನು ತಳೆಯೊಳ್ ಧರಿಸಿದ ಮೇಲೆ ರೂಪಾಂತರಹೊಂದುವದು ನಿಂತಿತು. ಹಾಗೆ ಪ್ರಾಣಿಗಳಲ್ಲಿಯಾದರೂ, ಕ್ರಿಮಿಕೀಟ ಪಶು ಮುಂತಾದ ಅನಂತಜನ್ಮವನ್ನು ತಾಳಿ (ರೂಪಾಂತರವನ್ನು ಹೊಂದುತ್ತ) ಕಡೆಗೆ ಮಾನವಜನ್ಮಕ್ಕೆ ಒಂದು ಬೀಜರೂಪವಾದೀ ಇಷ್ಟಲಿಂಗವನ್ನು ಧಾರಣಮಾಡಿದಮೇಲೆ ರೂಪಾಂತರಹೊಂದುವದು (ಜನ್ಮವನ್ನು ತಾಳುವದು) ಮುಕ್ತಾಯವಾಗಿ ಪುನರ್ಜನ್ಮವಿಲ್ಲದೆ ಪರಬ್ರಹ್ಮಸ್ವರೂಪಿಯಾಗಿ ಹೋಗುವನು. ಆದ್ದರಿಂದ ಈ ವೀರಶೈವಮತವು ಅನಾದಿಸಂಸಿದ್ಧವಾದುದೆಂಬುವದಕ್ಕೆ ಈ ಸೃಷ್ಟಿಯೇ ಸಾಕ್ಷಿಯಾಗಿರುವದು. ಇಂಥ ಮಹತ್ವವಾದೀ ವೀರಶೈವಮತತತ್ವವನ್ನು ತಿಳಿಯದೆ ಅಜ್ಞರು ಕಲಿಪ್ರಾಬಲ್ಯದಿಂದ ದೂಷಿಸುವದು ಅಧಃಪಾತಕ್ಕೆ ಕಾರಣವಾಗಿರುವದು. ಪ್ರಿಯಮಹಾಶಯರೇ? ಈ ಪವಿತ್ರವಾದ ವೀರಶೈವಮತವನ್ನು ನಂಬಿ ಕೃತಕೃತ್ಯರಾಗುವಿರೆಂದು ನಂಬಿರುವೆನು.

ಗುರುಕಾಂತಾರ್ಯ ಹಿರೇಮಠ,
ಸೀರಲಕೆರೆ ಮುಷ್ಟಿ.

ಶ್ರೀ ಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಪಂಚಾಚಾರ್ಯ ಧರ್ಮಾರ್ಥ ವಾಚನಾಲಯದ ಮೂರನೆಯ ಅಧಿವೇಶನದ ಸಮಾರಂಭವು ಮಧುವನಹಳ್ಳಿ.

ಶ್ರೀಮತ್ಶುಕ್ಲನಾಮಸಂವತ್ಸರದ ಪ್ರಥಮದಿವಸವಾದ (ತಾ|| 10-4-29) ಬುಧವಾರ ಈ ಶುಭದಿವಸ ಮಧುವನಹಳ್ಳಿಯಲ್ಲಿ ಕೆಲ ದಿನಗಳ ಹಿಂದೆ ಆಚಾರ್ಯರ ಹೆಸರಿನಿಂದ ಸ್ಥಾಪಿತವಾಗಿರುವ ವಾಚನಾಲಯದ ವಾರ್ಷಿಕಸಭೆಯು ಮ|| ರಾ|| ಎಸ್. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಆದಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರವೂ, ಅವರ ಮಹಿಮಾಪ್ರಭಾವಪಠನವೂ ಆದ ನಂತರ ಕೆಳಗೆ ಕಂಡ ವಿಷಯಗಳು ಚರ್ಚೆಗೆ ಬಂದು ನಿರ್ಧರಿಸಲ್ಪಟ್ಟವು.

1. ವಾಚನಾಲಯದ ಆವಶ್ಯಕತೆ—ಈ ವಿಚಾರವಾಗಿ ಅನೇಕ ವಿದ್ಯಾರ್ಥಿಗಳು ರಸಭರಿತವಾದ ಉಪನ್ಯಾಸಮಾಡಿದರು. ಅನಂತರ ಇದು ಉತ್ತರೋತ್ತರ ಅಭಿವೃದ್ಧಿಹೊಂದಲು ಮೂಲಧನವು ಆವಶ್ಯಕವೆಂದು ಸಭೆಯಿಂದ ನಿರ್ಧಾರವಾದ ಮೇಲೆ ಕೆಲವು ಮಹನೀಯರು ಉತ್ಸಾಹದಿಂದ ಧನಸಹಾಯವನ್ನು ಮಾಡಿದರು. ಧನಸಹಾಯಕರ ಹೆಸರು—1. ಮ|| ರಾ|| ಯಜಮಾನ್ ಬಸವಲಿಂಗಪ್ಪನವರು 5 ರೂ. 2. ಮ|| ರಾ|| ಶೆಟ್ಟರು ಜಡೆಬಸಪ್ಪನವರು 5 ರೂ. 3. ಮ|| ರಾ|| ಯಂ. ಬಿ. ಬಸವಣ್ಣನವರು 5 ರೂ. 4. ಮ|| ರಾ|| ಮಣಿಯಂ ಜಿ. ಗುರುಶಾಂತಪ್ಪನವರು 5 ರೂ. 5. ಕರ್ಣಂ ಮ|| ರಾ|| ಅನಂತಪದ್ಮನಾಭಯ್ಯನವರು 5 ರೂ. 6. ಕಲ್ಲುಣಿ ಸಾಹುಕಾರ್ ಮ|| ರಾ|| ನಾಗಣ್ಣನವರು 5 ರೂ. 7. ಮ|| ರಾ|| ಮಂಡಿ ಎಂ. ಮಲ್ಲಪ್ಪನವರು 5 ರೂ. 8. ಸಾಹುಕಾರ್ ಮ|| ರಾ|| ಚನ್ನಬಸಪ್ಪನವರು 5 ರೂ. 9. ಮ|| ರಾ|| ಎಸ್. ರುದ್ರಪ್ಪನವರು 3 ರೂ. 10. ಮ|| ರಾ|| ಹಲುಗೂರು ಮಲ್ಲಿಕಾರ್ಜುನಪ್ಪನವರು 2-8-0 ರೂ. 11. ಸ್ಕೂಲ್‌ಮಾಸ್ಟರ್ಸ್ ಮ|| ರಾ|| ಸಿ. ಬಸವಣ್ಣ, ಜಿ. ಶಿವಣ್ಣ, ಎಂ. ಗುರುಶಾಂತಪ್ಪ ಇವರುಗಳಿಂದ 3-12-0 ರೂ. ಜುಮ್ಲಾ 53-4-0 ರೂಪಾಯಿಯು ವಸೂಲಾಯಿತು.

2. ಶ್ರೀ ಪಂಚಾಚಾರ್ಯಪ್ರಾಸಾದಿಕ ಧರ್ಮಾರ್ಥ ಸಂಸ್ಕೃತ ಪಾಠಶಾಲಾ ವಿಚಾರ—ಈಗ್ಗೆ 5 ತಿಂಗಳ ಹಿಂದೆ ಶ್ರೀ ಚಾಲಿಕಂಥಾಮಠದ ಪಟ್ಟದ ಬಸವಲಿಂಗಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು 20 ವಿದ್ಯಾರ್ಥಿಗಳುಳ್ಳ ಈ ಪಾಠಶಾಲೆಯ ಅಭಿವೃದ್ಧಿಯ ವಿಚಾರವಾಗಿ ವಿದ್ಯಾರ್ಥಿಗಳ ಉಪನ್ಯಾಸವಾದನಂತರ ಶಾಲೆಯ ಮೇಲ್ವಿಚಾರಣಾ ಸಂಘವೊಂದನ್ನೇರ್ಪಡಿಸಿ ಯೋಗ್ಯವ್ಯವಸ್ಥೆ ಮಾಡಬೇಕೆಂತಲೂ, ಶಾಲೆಗೆ ಅಭ್ಯಾಸಕ್ಕಾಗಿ ಪರಸ್ಥಳದಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಪಾತ್ರಾಪಾತ್ರತೆಯನ್ನರಿತು ಅಶನವಸನಾದಿಗಳಿಗೆ ಅನುಕೂಲಪಡಿಸಬೇಕೆಂತಲೂ ವಿದ್ಯಾರ್ಥಿಗಳನ್ನು ಆಗಾಗ್ಗೆ ಪರೀಕ್ಷಿಸುವುದರ ಮೂಲಕ ಉತ್ತೇಜನಕೊಡಬೇಕೆಂತಲೂ ನಿರ್ಧರಿಸಲ್ಪಟ್ಟಿತು.

3. ಖಾದಿಪ್ರಚಾರ—ಇದರ ಮಹತ್ವವನ್ನು ಕುರಿತು ಅನೇಕರ ಸ್ವಾರಸ್ಯವಾದ ಭಾಷಣಗಳು ನಡೆದನಂತರ ಸಭೆಯಲ್ಲಿ ನೆರೆದಿದ್ದವರೆಲ್ಲರೂ ಇನ್ನು ಮುಂದೆ ಸಾಧ್ಯವಾದಮಟ್ಟಿಗೂ ಖಾದಿಯನ್ನೇ ಧರಿಸುವುದರ ಮೂಲಕ ಇತರರಿಗೆ ಆದರ್ಶರಾಗಬೇಕೆಂದು ಸರ್ವಾನುಮತದಿಂದ ಪಾಸಾಗಲು ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಳಪಠನ ಹಾಗೂ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಸೆಕ್ರೆಟರಿ—ಎಂ. ಮಹದೇವಪ್ಪ, ಬಿ.ಎ.,
ಮಧುವನಹಳ್ಳಿ.

ವೀರಶೈವ ತರುಣರ ಸಂಘ. ತರೀಕೆರೆ.

ಈಗಿನ ಪ್ರಗತಿ ಪ್ರಪಂಚದಲ್ಲಿ ವೀರಶೈವ ಸಮಾಜವು ಏಳಿಗೆ ಬರಬೇಕಾದರೆ ಆ ಸಮಾಜದಲ್ಲಿ ತರುಣರ ಜಾಗ್ರತೆಯಾಗಬೇಕಾಗುವುದವಶ್ಯಕ. ಕೆಲಸಗಳ ಜವಾಬ್ದಾರಿಯು ಬಾಲಕರಿಗಿಂತ ವೃದ್ಧರಿಗಿಂತ ತರುಣರಮೇಲೆ ಬಹಳವಾಗಿರುವುದೆಂಬುದು ನಿರ್ವಿವಾದವು. ನಾನಾದರೂ ಒಂದು ವೀರಶೈವ ತರುಣರ ಸಂಘವನ್ನು ಸ್ಥಾಪಿಸಬೇಕೆಂದು ಬಹುದಿನದಿಂದ ಹವಣಿಸುತ್ತಿದ್ದೆವು. ಹುಮಚದಿಂದ ಇಲ್ಲಿಗೆ ಕೀರ್ತನಕ್ಕಾಗಿ ಆಹ್ವಾನಿಸಲ್ಪಟ್ಟಿದ್ದ ಬಿ. ಶಿವಮೂರ್ತಿಶಾಸ್ತ್ರಿಗಳು ಕೀರ್ತನಕೇಸರಿ ಇವರ ಪ್ರೋತ್ಸಾಹದಿಂದ ತಾ|| ೧೪-೪-೧೯೨೯ನೇ ದಿನ ಭಾನುವಾರ ಸಾಯಂಕಾಲ ಶ್ರೀ ಅಮೃತೇಶ್ವರ ಬಸವೇಶ್ವರ ದೇವಾಲಯದಲ್ಲಿ ಕೈಲ್ಸಿ ಡಾಕ್ಟರ್ ಮ|| ಮಲ್ಲಪ್ಪ, ಎಂ.ಏ., ಅವರ ಅಧ್ಯಕ್ಷತೆಯಲ್ಲಿ ಇಲ್ಲಿಯ ತರುಣವೀರಶೈವರು ಸಭೆ ಸೇರಿದರು. ಶಿವಮೂರ್ತಿಶಾಸ್ತ್ರಿಗಳವರು "ತರುಣರ ಕರ್ತವ್ಯ" ಎಂಬ ವಿಷಯದಮೇಲೆ ಸ್ವಾರಸ್ಯವಾದ ಭಾಷಣ ಮಾಡಿದರು. ಮ|| ಮಲ್ಲಪ್ಪನವರು ಸಹ ಸ್ಫೂರ್ತಿದಾಯಕವಾಗಿ ಮಾತನಾಡುತ್ತ ತರುಣರ ದೇಹಾರೋಗ್ಯ, ದಿನಚರ್ಯ ವಿಷಯವನ್ನು ಒತ್ತಿಹೇಳಿ ನೆರೆದಿದ್ದ ಸಭಿಕರಲ್ಲಿ ಉತ್ಸಾಹವನ್ನುಂಟು ಮಾಡಿದರು. ಈ ಉಪನ್ಯಾಸಗಳಿಂದ ಉತ್ಸಾಹಿಗಳಾದ ತರುಣರೆಲ್ಲರೂ ಈ ಶುಭದಿನದಲ್ಲಿಯೇ ಮ|| ಡಾಕ್ಟರ್ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿಯೇ ಒಂದು ವೀರಶೈವ ತರುಣರ ಸಂಘವನ್ನು ಸ್ಥಾಪಿಸಿದರು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಜಯಘೋಷಮಾಡಿ ಅಧ್ಯಕ್ಷರನ್ನೂ ಉಪನ್ಯಾಸಕರನ್ನೂ ಮರ್ಯಾದಿಸಿದ ಮೇಲೆ, ಸಭೆಯು ಮುಕ್ತಾಯಗೊಂಡಿತು. ಇದರಂತೆಯೇ ಎಲ್ಲೆಲ್ಲಿಯೂ ಸಂಘಗಳಾಗಿ ತಮ್ಮ ಮೂಲಕ ವೀರಶೈವಸಮಾಜವು ಏಳಿಗೆಗೆ ಬರಲೆಂದು ಕೋರುವ,

ಓರ್ವ ಉತ್ಸಾಹಿತರುಣ.

ಓಂ

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀ ಜಗದ್ಗುರು ದಾರುಕಾಚಾರ್ಯರ

ಜಯಂತಿಮಹೋತ್ಸವಗಳು.

ವೈಶಾಖ ಶು|| ೩ ವೈಶಾಖ ಶು|| ೫

ಶ್ರೀ ದ್ರಾಕ್ಷಾರಾಮರಾಮನಾಥಲಿಂಗದಿಂದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಅವತಾರವು.

ಶ್ರೀ ವಟಕ್ಷೇತ್ರ ಸಿದ್ಧೇಶ್ವರಲಿಂಗದಿಂದ ಶ್ರೀ ಜಗದ್ಗುರು ದಾರುಕಾಚಾರ್ಯರ ಅವತಾರವು.

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀ ಹಿಮವತ್ಕೇದಾರ, ಉಜ್ಜಯಿನೀ ಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀ ರಾಮನಾಥ, ಶ್ರೀ ಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶ ದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗಿರುವದರಿಂದ ಸರ್ವ ಗುರುಭಕ್ತರೂ ಈ ಜಯಂತಿಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸತಕ್ಕದ್ದಾಗಿದೆ. ವೈಶಾಖ ಶು|| ೩ ಶನಿವಾರ ತಾ|| ೧೧-೫-೨೯ ನೆಯ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವವನ್ನೂ, ವೈಶಾಖ ಶು|| ೫ ಸೋಮವಾರ ತಾ|| ೧೩-೫-೨೯ ನೆಯ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಾಂಪ್ರದಾಯದ ವೀರಶೈವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತಿಮಹೋತ್ಸವಗಳನ್ನು ಆಯಾಯ ಪವಿತ್ರತಿಥಿಗಳಲ್ಲಿ ಅತ್ಯಂತ ಭಕ್ತಿಯಿಂದಲೂ ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಈಗಲಾದರೂ ಶುದ್ಧಸಾಂಪ್ರದಾಯದ ವೀರಶೈವರು ಈ ಮೊದಲು ಮೂವರು ಆಚಾರ್ಯರ ಜಯಂತಿಗಳನ್ನು ಅತಿ ವೈಭವದಿಂದ ನೆರವೇರಿಸಿದಂತೆ ಈಗ ಪ್ರಾಪ್ತವಾಗಿರುವ ಆಚಾರ್ಯರ ಜಯಂತಿಮಹೋತ್ಸವಗಳನ್ನಾದರೂ ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನು ಹೊಂದಿ ನಿತ್ಯಸುಖಿಗಳಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರುಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯು ಜೂನ್ ತಾ|| 12 ಕ್ಕೂ, ನ್ಯಾಯವಿಧಾಯಕಸಭೆಯು ಜೂನ್ ತಾ|| 20 ಕ್ಕೂ ರಾಜಧಾನಿಯಲ್ಲಿಯೇ ಪ್ರಾರಂಭವಾಗಿ ನಡೆಯುವವು.

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಬಡವರಾದ ರೈತರುಗಳಿಗೆ ವ್ಯವಸಾಯದ ಉಪಕರಣಗಳನ್ನು ಉಚಿತವಾಗಿ ಕೊಡಿಸಿಕೊಡುವದಕ್ಕೋಸ್ಕರ 2000 ರೂಪಾಯಿಗಳನ್ನು ತೆಗೆದಿಟ್ಟಿರುತ್ತಾರೆ.

ಮದರಾಸ್ ಗವರ್ನರಾದ ಲಾರ್ಡ್ ಗೋಷ್ಚೆನ್‌ರವರು ಕಳೆದ ಸೋಮವಾರ ಮಧ್ಯಾಹ್ನ ರಾಜಧಾನಿಗೆ ಆಗಮಿಸಿ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಮರುದಿವಸ ಮೃಗಯಾವಿಹಾರಾರ್ಥವಾಗಿ ಕಾರಾಪುರಕ್ಕೆ ಪ್ರಯಾಣಮಾಡಿದರು.

ಈ ತಿಂಗಳು ತಾ|| 18 ನೆಯ ಗುರುವಾರ ಮದ್ದೂರಿನ ಹತ್ತಿರ ಶಿಂಷಾನದಿಯಲ್ಲಿ ಆಕಸ್ಮಾತ್ ಪ್ರವಾಹವು ಹೆಚ್ಚಾಗಿ ಹೊಳೆಯನ್ನು ದಾಟುತ್ತಿದ್ದ ಒಂದು ಗಾಡಿಯು ಕೊಚ್ಚಿಹೋಗಿ ಗಾಡಿಯೂ ಎತ್ತುಗಳೂ ಹಾಗೂ ಗಾಡಿಯವನೂ ಜಲಸಮಾಧಿಯನ್ನು ಹೊಂದಿದರು.

ದಯಾಳುಗಳಾದ ನಮ್ಮ ಸರಕಾರದವರು ೫ ವರ್ಷಕ್ಕಿಂತ ಕಡಮೆಯಿಲ್ಲದೆ ಮೈಸೂರು ಸರಕಾರದ ಸೇವೆಯನ್ನು ಮಾಡಿ ಮೃತರಾಗುವ ನೌಕರರ ಕುಟುಂಬ ಸಂರಕ್ಷಣಾರ್ಥವಾಗಿ ಅವರೆಷ್ಟುವರ್ಷ ಕೆಲಸದಲ್ಲಿದ್ದರೋ ಆ ವರ್ಷಗಳಲ್ಲಿ ಒಂದೊಂದು ತಿಂಗಳ ಸಂಬಳವನ್ನು 1000 ರೂಪಾಯಿಗಳಿಗೆ ಮೀರದಂತೆ ಆಯಾ ಕುಟುಂಬದವರಿಗೆ ಕೊಡುವುದಾಗಿ ನಿಶ್ಚಯಮಾಗಿರುತ್ತಾರೆ.

ಮೈಸೂರು ಗಂಧದೆಣ್ಣೆಯ ಸಂಬಂಧವಾದ ಮೊಕದ್ದಮೆಯು ಕಳೆದ ಗುರುವಾರ ನಡೆಯಬೇಕಾಗಿದ್ದಿತು. ಆದರೆ ಆ ದಿವಸ ಸರ್ಕಾರೀ ವಕೀಲರು ಬರಲಿಲ್ಲವಾದ್ದರಿಂದ ಮೊಕದ್ದಮೆಯು ಈ ದಿವಸ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ರಾ|| ಟಿ. ಜಿ. ರಾಮಯ್ಯರವರ ಕೋರ್ಟಿನಲ್ಲಿ ಪ್ರಾರಂಭವಾಗುವುದು. ಅಪರಾಧಿಯ ಪರವಾಗಿ ವಾದಿಸಲು ಮದ್ರಾಸಿನ ಮಿ|| ನ್ಯೂಜೆಂಟ್ ಗ್ರಾಂಟ್‌ರವರು ಬರುವರೆಂದು ತಿಳಿದುಬರುತ್ತದೆ.

ಮೈಸೂರು ಸಿಟಿ ಮುನಿಸಿಪಲ್ ಪ್ರೆಸಿಡೆಂಟರಾದ ಮ|| ರಾ|| ಟಿ. ಜಿ. ರಾಮಅಯ್ಯರವರು ಮೈಸೂರು ಸರಕಾರ ಗಂಧದೆಣ್ಣೆಯ ಮೊಕದ್ದಮೆಯ ವಿಚಾರಣೆಗೋಸ್ಕರ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವದರಿಂದ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಮತ್ತು ಮುನಿಸಿಪಲ್ ಇಂಜನಿಯರರಾದ ಮ|| ರಾ|| ರಾಮಸ್ವಾಮಿಯವರು ಪ್ರೆಸಿಡೆಂಟರಾಗಿಯೂ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್‌ಮನ್ ರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಉತ್ತರದಿಕ್ಕಿನಲ್ಲಿರುವ ವೀರಶೈವರ ಸ್ಮಶಾನಭೂಮಿಯ ವಿಷಯದಲ್ಲಿ ಮುನಸಿಪಾಲಿಟಿ ಪ್ರೆಸಿಡೆಂಟರು ಆ ಸ್ಥಾನದಲ್ಲಿ ಇನ್ನುಮುಂದೆ ಯಾರನ್ನೂ ಹೂಳಬಾರದೆಂದೂ ಹೂಳಿದ್ದಾದರೆ ಪ್ರಾಸಿಕ್ಯೂಷನ್ ಮಾಡಲಾಗುವದೆಂದೂ ಆರ್ಡರ್‌ಕೊಟ್ಟಿದ್ದುದರ ಮೇಲೆ ಮ||ರಾ|| ಯಂ. ಪಿ. ಭೋಗಯ್ಯ ಬಿ.ಎ., ಬಿ.ಎಲ್. ರವರು ಮತದಮೇಲೆ ದೃಷ್ಟಿಯನ್ನಿಟ್ಟು ಪ್ರೆಸಿಡೆಂಟರವರಿಗೂ ಹಾಗೂ ಹೆಲ್ತ್-ಆಫೀಸರವರಿಗೂ ಸರಿಯಾದ ಸಮಜಾಯಿಷಿಕೊಟ್ಟು ಆ ಆರ್ಡರನ್ನು ರದ್ದುಪಡಿಸಿದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಸಾರಾಸಾರವಿಚಾರಶೀಲರಾದ ಪ್ರೆಸಿಡೆಂಟರು ಮತ್ತು ಹೆಲ್ತ್-ಆಫೀಸರರು ಸರಿಯಾದ ಆರ್ಡರನ್ನು ಮಾಡಿ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುವರು.

ಬೆಂಗಳೂರು ಸುಲ್ತಾನಪೇಟೆ ಎ. ವಿ. ಸ್ಕೂಲಿನ ಗಣಪತಿಪೂಜೆಯ ದಿವಸ ಪತ್ರಿಕಾ ಪ್ರತಿನಿಧಿಗಳಾದ ಮ|| ರಾ|| ವಿ. ಎಸ್. ಸಂಜೀವರಾಯರು ಆ|| ಪೊ|| ಸೂ|| ಮ|| ಮರಿಯಪ್ಪನವರಮೇಲೆ ಬಿದ್ದು ಬಲಾತ್ಕಾರದಿಂದ ಸ್ಕೂಲಿನೊಳಗೆ ಪ್ರವೇಶಿಸಿದರೆಂಬ ಆರೋಪದಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದರು. ಮ್ಯಾಜಿಸ್ಟ್ರೇಟರು ಕಳೆದ ಶುಕ್ರವಾರ ವಿಚಾರಣೆಯನ್ನು ಪೂರೈಸಿ ಮ|| ಸಂಜೀವರಾಯರಿಗೆ 400 ರೂಪಾಯಿಗಳ ಜುಲ್ಮಾನೆ ತಪ್ಪಿದರೆ 3 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಮತ್ತೊಂದು ಮೊಕದ್ದಮೆಯಲ್ಲಿ ಮ|| ಸಂಜೀವರಾಯರು ವಿಶ್ವೇಶ್ವರಯ್ಯ ಸಮಿತಿಯ ವಿಚಾರಣಾಸಮಯದಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ಲಿನ ಮೇಲೆ ಕೈಮಾಡಿದರೆಂಬ ಆರೋಪದಮೇಲೆ 25 ರೂಪಾಯಿ ಜುಲ್ಮಾನೆ ತಪ್ಪಿದರೆ ಒಂದುವಾರ ಸಜಾ ಶಿಕ್ಷೆಗೆ ಗುರಿಯಾದರು.

ಕಳೆದವಾರ ಬೀರೂರಿನಿಂದ ಶಿವಮೊಗ್ಗಾಕ್ಕೆ ಹೊರಟ ರೈಲಿನಲ್ಲಿ ರೈಲು ಬೀರೂರಿಗೂ ಶಿವಮೊಗ್ಗಾಕ್ಕೂ ಮಧ್ಯದಲ್ಲಿ ಹೋಗುತ್ತಿದ್ದಾಗ್ಯೆ ಯಾವನೋ ಒಬ್ಬನು ಯುರೋಪಿಯನ್ ವೇಷವನ್ನು ಹಾಕಿಕೊಂಡು ಟಪ್ಪಾಲು ಬಂಡಿಯೊಳಗೆ ನುಗ್ಗಿ ತಾನು ಪೋಸ್ಟಲ್ ಸೂಪರಿಂಟೆಂಡೆಂಟನೆಂದೂ ಟಪ್ಪಾಲ್ ಚೀಲಗಳನ್ನು ಪರೀಕ್ಷಿಸಬೇಕೆಂದೂ ಚೀಲಗಳನ್ನು ಕೇಳುತ್ತಿರಲು, ಅಲ್ಲಿದ್ದ ಪೋಸ್ಟಲ್-ಅಧಿಕಾರಿಗೆ ಅನುಮಾನವುಂಟಾಗಿ ರೈಲನ್ನು ನಿಲ್ಲಿಸುವದಕ್ಕೋಸ್ಕರ ಸರಪಣಿಯನ್ನು ಎಳೆಯಲು ಪ್ರಯತ್ನಿಸಲು, ಆ ಚತುರಕಳ್ಳನು ಪಿಸ್ತೋಲನ್ನು ತೋರಿಸಿ ಅವನನ್ನು ಬಲವಿಸರ್ಜನೆಯ ಕೊಠಡಿಗೆ ನೂಕಿ ಲಕ್ಷಾಂತರ ರೂಪಾಯಿಗಳ ಇನ್ಶೂರನ್ನು ಅಪಹರಿಸಿಕೊಂಡು ಹೋದನಂತೆ! ಇಂತಹ ನಾಗರಿಕ ಕಳ್ಳರು ಇದುವರೆಗೆ ಈ ದೇಶದಲ್ಲಿ ಹುಟ್ಟಿರಲಿಲ್ಲ. ಈ ವಿಚಿತ್ರಕಳ್ಳನ ಜಾಡಿಗೆ ಈ ತಿಂಗಳು 18 ನೆಯ ತಾರೀಖಿನ ದಿವಸ ನಮ್ಮ ಆಫೀಸಿನಿಂದ ಸ್ವಾಮಿಪೋಷ್ಟಿಗೆ ಕಳುಹಿಸಿದ ಒಂದು ವಿ. ಪಿ. ಯು ತುತ್ತಾಯಿತು. ಸರಕಾರದವರು ಈ ಧೂರ್ತನನ್ನು ಹಿಡಿದು ಸರಿಯಾದ ಶಿಕ್ಷೆಯನ್ನು ವಿಧಿಸಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ತಿರುವಾಂಕೂರು ಸಂಸ್ಥಾನದ ದಿವಾನರಾದ ಮಿ|| ವಾಟ್ಸರವರ ಉದ್ಯೋಗದ ಅವಧಿಯು ಬರುವ ಜೂನ್ ತಾ|| 23 ಕ್ಕೆ ಮುಗಿಯುವದರಿಂದ ಮದ್ರಾಸ್ ಹೈಕೋರ್ಟ್‌ಜಡ್ಜರಾದ ಮ|| ರಾ|| ವಿ. ಎಸ್. ಸುಬ್ರಹ್ಮಣ್ಯ ಅಯ್ಯರವರು ಮುಂದಿನ ದಿವಾನರಾಗಿ ನಿಯಮಿಸಲ್ಪಡುವರೆಂದು ತಿಳಿದುಬರುತ್ತದೆ.

ತಂಜಾವೂರು ಸಂಸ್ಥಾನದ ಕನಿಷ್ಠ ರಾಜಕುಮಾರನ ಸೋದರ ಸೊಸೆಯೊಬ್ಬಳು ಬಡತನದ ದುಃಖವನ್ನೂ ಗಂಡನ ಹಿಂಸೆಯನ್ನೂ ಸಹಿಸಲಾರದೆ ತನ್ನಿಬ್ಬರು ಮಕ್ಕಳನ್ನು ಭಾವಿಗೆ ತಳ್ಳಿ ತಾನೂ ಧುಮುಕುವಷ್ಟರಲ್ಲಿ ನೆರೆಯವರು ಕಂಡುಹಿಡಿದು ಇವಳನ್ನು ವಿಚಾರಣೆಗೆ ಗುರಿಪಡಿಸಲು ನ್ಯಾಯಾಧೀಶರು ಇವಳಿಗೆ ಮರಣಶಾಸನವನ್ನು ವಿಧಿಸಿದ್ದರು. ಆದರೆ ಮದರಾಸು ಗೌರ್ನರರು ಈಕೆಯ ಪರಿಸ್ಥಿತಿಯನ್ನು ವಿಚಾರಿಸಿ ಕನಿಕರದಿಂದ ಈಕೆಯನ್ನು ಬಿಡುಗಡೆಮಾಡಿದರು. ಸ್ತುತ್ಯ!

ಭಾರತಕವಿಸಾರ್ವಭೌಮರಾದ ಡಾ|| ರವೀಂದ್ರನಾಥ ಟಾಗೋರರವರು ಅಮೇರಿಕಾಖಂಡದ ಕಾನಡಾ ದೇಶದಲ್ಲಿ ನೆರವೇರಿದ ವಿದ್ಯಾಪರಿಷತ್ತನ್ನು ಮುಗಿಯಿಸಿಕೊಂಡು ಸಂಯುಕ್ತಮಹಾಸಂಸ್ಥಾನಗಳಿಗೆ ಹೋಗುವದಕ್ಕೋಸ್ಕರ ಲಾಸ್ ಆಂಗಲೀಸ್ ಎಂಬ ದ್ವೀಪಕ್ಕೆ ಹೋದಾಗ್ಯೆ ಅಲ್ಲಿದ್ದ ಸಂಯುಕ್ತಸಂಸ್ಥಾನಗಳ ಇಮಿಗ್ರೇಷನ್ ಅಧಿಕಾರಿಯು ಇವರನ್ನು ತಿರಸ್ಕಾರಭಾವದಿಂದ ಕಂಡದ್ದಕ್ಕೋಸ್ಕರ ಡಾ|| ರವೀಂದ್ರನಾಥರು ಕುಪಿತರಾಗಿ ಆ ದೇಶದ ಪ್ರಯಾಣವನ್ನೇ ನಿಲ್ಲಿಸಿ ಜಪಾನಿಗೆ ಹಿಂದಿರುಗಿರುತ್ತಾರೆ.

ಅಲಿಪುರ ಡಿಸ್ಟ್ರಿಕ್ಟಿಗೆ ಸೇರಿದ ಚಂದ್ರಕೋಣ ದೇವಾಲಯದ ಮಹಂತನಾದ ಗೋವಿಂದ ರಾಮಾನುಜದಾಸನೆಂಬ ಸನ್ಯಾಸಿಯು ತನ್ನ ಬಳಿಗೆ ಯಾಚನೆಕ್ಕೋಸ್ಕರ ಬಂದ ಸತೀದಾಸಿ ಎಂಬ 12 ವರ್ಷದ ಹುಡುಗಿಯನ್ನು ಬಲಾತ್ಕಾರದಿಂದ ಮನೆಯೊಳಗೆ ಎಳೆದೊಯ್ದು ಆಕೆಯಲ್ಲಿ ಅತ್ಯಾಚಾರವನ್ನು ನಡೆಯಿಸಿ ಕಳುಹಿಸಿಬಿಟ್ಟನು. ಆ ಹುಡುಗಿಯು ಯಾತನೆಯನ್ನು ತಾಳಲಾರದೆ ಸ್ವಲ್ಪಹೊತ್ತಿನಲ್ಲಿಯೇ ಮೃತಳಾದಳು. ಅಲಿಪುರದ ಸೆಷನ್ಸ್‌ಜಡ್ಜರು ... ಒಂದು ವರ್ಷ ಕಠಿಣಶಿಕ್ಷೆಯ...

ಯಾವಾಗಲೂ ದಿಗಂಬರರಾ... ಕ್ಕೆ ಬಹಳ ಒಳ್ಳೆಯದೆಂದು ಜರ್ಮ... ಪ್ರಾಯವಾಗಿದೆ. ಈ ಅಭಿಪ್ರಾಯ... ದಲ್ಲಿಯೂ ಹರಡಿ ಅಲ್ಲಿಯ ಕೆಲ ತಜ್ಞ... ಸ್ಟೈನ್ ನದಿಯ ಒಂದು ದ್ವೀಪದಲ್ಲಿ... ವೊಂದನ್ನು ಸ್ಥಾಪಿಸಿಕೊಂಡು ಅಲ್ಲಿ... ವಾಸಮಾಡುತ್ತಿರುವರು. ಅಲ್ಲಿ ಈ ಸ... ಸ್ತ್ರೀ ಪುರುಷರು ಬತ್ತಲೆಯಾಗಿ ಓಡಾಡು... ನೋಡುವದಕ್ಕೋಸ್ಕರ ನದಿಯದಂಡೆಯಲ್ಲಿ... ವಾಗಲೂ ಕಾದಿರುವರು. ಇದೊಂದು ನೂತ...

ಪೂರ್ವ ಆಫ್ರಿಕಾದೇಶದ ಹಿಂದೂಪ್ರಜೆಗ... ಗಳನ್ನು ವಿಚಾರಿಸುವದಕ್ಕೋಸ್ಕರ ನಿಯಮಿಸ... ಹಿಲ್ಟನ್‌ಯಂಗ್ ಸಮಿತಿಯ ವರದಿಯ ಸಂಬಂಧ... ಅಲ್ಲಿಯ ಹಿಂದೂಪ್ರಜೆಗಳ ಅಭಿಪ್ರಾಯಗಳನ್ನು ಯಾಗೌರ್ನರಾದ ಸರ್. ಸಾಮ್ಯುಯಲ್ ವಿಲ್ಸನ್‌ರವ... ತಿಳಿಸುವದಕ್ಕೋಸ್ಕರ ಭಾರತ ಸರ್ಕಾರದವರು ಮ... ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರನ್ನು ಆಫ್ರಿಕಾಖಂಡಕ್ಕೆ ಹೋಗಬೇಕೆಂದು ಅಪ್ಪಣೆಮಾಡಿರುತ್ತಾರೆ. ಮ|| ಶಾಸ್ತ್ರಿಗಳವರು ಮುಂದಿನ ತಿಂಗಳು 1 ನೆಯ ತಾರೀಖಿನದಿವಸ ಬೊಂಬಾಯಿಪಟ್ಟಣದಿಂದ ಆಫ್ರಿಕಾಕ್ಕೆ ಪ್ರಯಾಣಮಾಡುವರು.

ಕಳೆದ ತಾ|| 20ನೆಯ ಶನಿವಾರ ಕಲ್ಕತ್ತಾಪಟ್ಟಣದ ಓರ್ವ ಬಂಗಾಳೀಸ್ತ್ರೀಯಳು ಹುಗ್ಲಿನದಿಯ ಸ್ನಾನಘಾಟಿನಲ್ಲಿ ಸ್ನಾನಪೂಜಾದಿ ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದಾಗ 4 ಜನ ಐರೋಪ್ಯಸೈನಿಕರು ದೋಣಿಯಿಂದಿಳಿದು ಬಂದು ಆಕೆಯನ್ನು ಅಡ್ಡಗಟ್ಟಿ ಅವಳ ಕೈಯಲ್ಲಿದ್ದ ಪೂಜಾಸಾಮಗ್ರಿಗಳನ್ನು ಕಿತ್ತೆಸೆದು ಬಲಾತ್ಕಾರದಿಂದ ಎಳೆದುಕೊಂಡು ಹೋಗುತ್ತಿರಲು, ಆಕೆಯ ಆರ್ತಧ್ವನಿಯನ್ನು ಕೇಳಿದ ಕೆಲವು ಜನ ಹಿಂದುಗಳು ಆ ಧೂರ್ತರ ಮೇಲೆ ಬಿದ್ದು ಆಕೆಯ ಮಾನರಕ್ಷಣೆಯನ್ನು ಮಾಡಿದ್ದಲ್ಲದೆ ಒಬ್ಬನನ್ನು ಹಿಡಿದು ಪೋಲೀಸರ ವಶಮಾಡಿದರು. ಉಳಿದ ಮೂವರು ಓಡಿಹೋಗಿ ದೋಣಿಯನ್ನು ಹತ್ತಿ ಹೊರಟುಹೋದರು.

ಬೊಂಬಾಯಿಪಟ್ಟಣದ ಸುಮಾರು 21 ವರ್ಷ ವಯಸ್ಸಿನ ಓರ್ವ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ತೇರ್ಗಡೆಯಾಗದೆಹೋದುದರಿಂದ ಹತಾಶನಾಗಿ ಕಳೆದ ಸೋಮವಾರ ರಾತ್ರಿ ರೈಲುರಸ್ತೆಯಲ್ಲಿ ಅಡ್ಡವಾಗಿ ಮಲಗಿಕೊಂಡು ಆತ್ಮಹತ್ಯೆಮಾಡಿಕೊಂಡನು. ಪೋಲೀಸರು ಆತನ ಶರೀರವನ್ನು ಶೋಧಿಸಿದಾಗ ಆತನ ಜೇಬಿನಲ್ಲಿ "ನಾನು ಎಷ್ಟು ಪ್ರಯತ್ನಿಸಿದರೂ ಸಹ ತೇರ್ಗಡೆಯಾಗುವ ಸುಯೋಗವು ನನಗೆ ಲಭಿಸಲಿಲ್ಲ. ನನ್ನ ಪೋಷಕರ ಮತ್ತು ಮಾತಾಪಿತೃಗಳ ಎದುರಿಗೆ ನಿಲ್ಲಲು ನನಗೆ ಧೈರ್ಯವಿಲ್ಲ. ಆದುದರಿಂದ ಈ ಪ್ರಾಪಂಚಿಕ ದುಃಖಗಳಿಂದ ಪಾರಾಗುವ ಈ ಸುಲಭವಾದ ಉಪಾಯವನ್ನು ನಾನು ಪ್ರತ್ಯಕ್ಷಪೂರ್ವಕವಾಗಿ ಅನುಸರಿಸುತ್ತೇನೆ. ಬಾಲ್ಯವಿವಾಹವೇ ಈ ನನ್ನ ಕಷ್ಟಗಳಿಗೆ ಮುಖ್ಯಕಾರಣ. ನನ್ನ ಹೆಂಡತಿಗೆ ಆಕೆಯ ಇಚ್ಛಾನುಸಾರವಾಗಿ ಜೀವಿಸಲು ಅವಕಾಶಕೊಡಬೇಕು." ಎಂಬೀ ವಾಕ್ಯಗಳನ್ನೊಳಗೊಂಡ ಒಂದು ಕಾಗದವು ದೊರತಿದೆ.

ಕಳೆದ ತಿಂಗಳು ಕರಾಚಿಗೆ ಸಮೀಪದಲ್ಲಿರುವ ಜಾಕೋಬಾದ್ ಎಂಬಲ್ಲಿ ಕೆಲವು ಜನ ಹಿಂದು ಮತ್ತು ಮುಸಲ್ಮಾನ್ ಬಾಲಕರಲ್ಲಿ ಕಲಹವುಂಟಾಗಿ ಮುಸಲ್ಮಾನ್ ಬಾಲಕನೊಬ್ಬನನ್ನು ಕಿಟಿಕಿಯಿಂದ ಕೆಳಕ್ಕೆ ತಳ್ಳಿ ಕೊಂದುಬಿಟ್ಟರು. ಇದರಿಂದ ಉದ್ರೇಕಗೊಂಡ ಕೆಲವು ಜನ ಮಹಮ್ಮದೀಯರು ಒಂದು ಸಭೆಯನ್ನು ಮಾಡಿ ಒಬ್ಬ ಮುಸಲ್ಮಾನನ ಪ್ರಾಣಕ್ಕೆ ಪ್ರತಿಯಾಗಿ 10 ಜನ ಹಿಂದುಗಳ ಪ್ರಾಣಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಮಾಡಿಕೊಂಡರು. ಅದರಂತೆ ಕಳೆದ ತಾ|| 26 ನೆಯ ಮಂಗಳವಾರ ಓರ್ವ ಮಹಮ್ಮದೀಯನು ಖಾದರ್ ಕ್ವಾರ್ಟರ್ ಎಂಬಲ್ಲಿಗೆ ಪ್ರವೇಶಿಸಿ ಅಲ್ಲಿ ಹತ್ತು ಜನಗಳ ಮೇಲೆ ಗುಂಡುಹಾರಿಸಿ ಓಡಿಹೋದನು. ಇಬ್ಬರು ಗಂಡಸರೂ ಒಬ್ಬ ಹೆಂಗಸೂ ಕೂಡಲೆ ಮೃತಪಟ್ಟರು. ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟರು. 3 ಜನರು ವಿಶೇಷವಾದ ಅಪಾಯಸ್ಥಿತಿ...

...ರರ್ಸ್ ಲೈಫ್ ಇನ್‌ಷ್ಯೂರೆನ್ಸ್ ಕಂಪೆನಿ, ಕಾನಡಾ.

...ದಲ್ಲಿ ಪಡೆದಿರತಕ್ಕಷ್ಟು ವಿಮೆಗಳು ಕಂಪೆನಿಯ ಚರಿತ್ರೆಯಲ್ಲೇ ಇರಲಿಲ್ಲಾ !!

...ರುವ ಮೊಬಲಗು	ರೂ.	1,36,00,00,000
...ರುವದು	ರೂ.	26,20,00,000
	ರೂ.	58,62,400
	ರೂ.	87,27,300

...ರಣಗಳು—

...ರತಕ್ಕ ಈ ಕಂಪೆನಿಯ ವಿಮೆದಾರರ ಜೊತೆಯಲ್ಲಿ ಇಂಡಿಯಾ ದೇಶದಲ್ಲೇ 5 ಲಕ್ಷ ... ಸೇರಿ ಭಾಗಿಗಳಾದಂತಾಗುತ್ತೆ.

...ಗಳ ವಿಮೆಗೆ ರೂ. 500 ರಿಂದ 600 ರ ವರೆಗೂ ಲಾಭವನ್ನು ಪಡೆಯಬಹುದು.

...ಟಕಾಲಗಳನ್ನು ಕೃದ್ದು ಮತ್ಯಾವದೂ ಇಲ್ಲಾ. ...ಬೇಕಾದರೂ ವಿಮೆ ಮಾಡಬಹುದು.

...ಟರು ಬೇಕಾಗಿದೆ.

ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು

ಅಥವಾ

ಯಸ್. ರಾಮಸ್ವಾಮಿ,

ರೆಸಿಡೆಂಟ್ ಏಜಂಟ್, ಬೀವರ್‌ಗಲ್ಲೆ, ಮೈಸೂರು.

...ಮಿ ಇನಾಮು [ಅದೇನು ನೋಡೋಣ!

...ವೈದ್ಯ ವಿ. ಎಸ್. ಕಾಪಸೆ.

...ತ್ತಿ ಶಕ್ತಿವರ್ಧಕ

...ಸುದರಪಾಕ. [ಸ್ವರ್ಣ...

ಧಿಕ್ಕರಿಸಿದರೆ ಕ್ಷೀಣತೆಯನು ಕಾಯ್ದು ಕೊಳ್ಳುವಿರಿ.

...ಮರಳಿ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆಯ ಬರ್ಹಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ದಿಂದ ಶಿಶ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತುನನ್ನು ಬಹಳ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಅಲ್ಲಿಯ ನಿ. ಬಯಸುವಂಥವರು ತಕ್ಕೊಂಡು ಅನುಭವಿಸಿರಿ. ದ್ರವ್ಯ. ಅಲ್ಲಿಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದಯಲ್ಲಿ ರಾಧ್ರ್ಯಬೀಜ, ನಾಗಬೀಜ, ಬಾಳಬೀಜ, ಭೋಕರೀಬಂದನು. ಇದುತ್ರಿ, ಮದನಮಸ್ತ, ರತನಪುರುಷ, ಕಮರನನ್ನು ಬಿಸ್ತಟ್ಟೀ ಬೀಜಬಂದ, ಹರಣಬೋರಿ, ಮುಂಗಲೀ ಬಿದ್ದು ಅಲ್ಲಿ ಕಪಂಟಗೋಖರು, ಅಡಮೀಚೆಂಡಿಬೇರು, ಅಮೃತಶರ ತಪ್ಪಿಸಿಕೊಂಡು ವಂಶಲೋಚನ, ವರಧಾರಾ, ಕೇಸರಿ, ಬಗರ, ಕೆವಾಲ್‌ವಾಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟ ಪುರುಷರನ್ನು ಸಂದೀಜನಾನಂತರ 2 ತೊಲಿಯ ಒಂದು ತರುಣನು ಇಂಗ್ಲೆಂಡಿನಕಳ ಹಾಲನ್ನು ಕುಡಿಯಬೇಕು ಸಂಘಕ್ಕೆ ಸದಸ್ಯನಾಗಿ ರೂ. 3 ಡಬ್ಬಿಗೆ 14, ರೂ. ಆಫ್ರಿಕಾಖಂಡವನ್ನು ಉತ್ತ... ಬೇಕೆಂದು ಪ್ರಯತ್ನಿಸುತ್ತಿರು... ಸೀಸೆ 1 ಕ್ಕೆ 3 ರೂಪಾ

ಅಫ್ಘಾನಿಸ್ಥಾನದ ಅಂತಃ... ...ಗಳಲ್ಲಿ ಗುಣ. 5 ದಿವಸ ಅನೇಕ ವರ್ತಮಾನಗಳು ಬರುತ್ತಿ... ಅಮಾನುಲ್ಲಾರವರು ಘಜ್ನಿಯ... ಕೋರಿಗರೆಂದು ಪ್ರಕಟವಾಗಿದ್ದಿತು. ...ಫ. ಮುಣ್ಣು, ದುರ್ಗಂ... ಬಂದ ಸಮಾಚಾರಗಳಿಂದ ಘಜ್ನಿಯ... ...ನಾಶಾಗುವದಷ್ಟು ನುಲ್ಲರ ಸ್ವಾಧೀನವಾಗಿಲ್ಲವೆಂದೂ ಆ... [15] ಗಿಲ್ಜಿ ಪಂಗಡದವರು ಅಮಾನುಲ್ಲರಿಗೆ ... ...ಮಿರಜ.

ದರೆಯನ್ನು ಕೊಡುತ್ತಿರುವರೆಂದೂ ಬಚ್ಚಾಯಿಸಕೋನು ಅಮಾನುಲ್ಲರ ಮಕ್ಕ... ...ನೋಡಿ !! ನನ್ನೂ ನಾಲ್ವರು ರಾಜಸಂಬಂಧಿಗಳನ್ನೂ ಬಂಧನದಲ್ಲಿಟ್ಟಿರುವನು ಕಳೆದ ತಾ|| 19 ನೆ... ವಾರ ಬಚ್ಚಾಯಿಸಕೋನು ಪ್ರಾರ್ಥನೆಯನ್ನು... ಕೊಂಡು ತನ್ನ ಸ್ಥಾನವನ್ನು ಪರೀಕ್ಷಿಸುತ್ತಿದ್ದಾಗ... ಡಮಾನ್ ಸೈನಿಕನೊಬ್ಬನು ಆತನಮೇಲೆ ಗುಂ... ರಿಸಿದನೆಂದೂ, ಬಚ್ಚಾಯಿಸಕೋನು ಕೂಡಲೆ ಮೂ... ತನಾಗಿ ಬಿದ್ದನೆಂದೂ, ಈಗ ಅರಮನೆಯಲ್ಲಿ ಚಿ... ಹೊಂದುತ್ತಿರುವನೆಂದೂ, ಕೊಲೆಗಡುಕನು ಬೈದುದಲ್ಪಟ್ಟು ಮುಲ್ಲಾ ಸಾಹೇಬರಮುಂದೆ ವಿಚಾರಣೆಗೆ ಗುರಿಪಡಿಸಲ್ಪಡಲು ಅವರು ಆತನನ್ನು ಚಿತ್ರಹಿಂಸೆಗೆ ಗುರಿಪಡಿಸಿ ಕುದಿಯುವ ಎಣ್ಣೆಯೊಳಕ್ಕೆ ತಲೆಕೆಳಗು ಮಾಡಿ ಮುಳುಗಿಸಿ ಕೊಂದುಬಿಟ್ಟರೆಂದೂ ತಿಳಿದುಬರುತ್ತದೆ. ಅಮಾನುಲ್ಲರಿಗೆ ನಾನಾಕಡೆಯಿಂದಲೂ ಸಹಾಯವು ದೊರೆಯುತ್ತಿರುವದು. ಅಮಾನುಲ್ಲರ ಆಕಾಶಯಾನಗಳು ನಿತ್ಯವೂ ಕಾಬೂಲ್ ಪ್ರಾಂತದಲ್ಲಿ ಸಂಚರಿಸುತ್ತಿರುವುವು.

ಓಂ

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀ ಜಗದ್ಗುರು ದಾರುಕಾಚಾರ್ಯರ

ಜಯಂತಿಮಹೋತ್ಸವಗಳು.

ವೈಶಾಖ ಶು|| ೩ ವೈಶಾಖ ಶು|| ೫

ಶ್ರೀ ದ್ರಾಕ್ಷಾರಾಮರಾಮನಾಥಲಿಂಗದಿಂದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಅವತಾರವು.

ಶ್ರೀ ವಟವೃಕ್ಷ ಸಿದ್ಧೇಶ್ವರಲಿಂಗದಿಂದ ಶ್ರೀ ಜಗದ್ಗುರು ದಾರುಕಾಚಾರ್ಯರ ಅವತಾರವು.

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀ ಹಿಮವತ್ಕೇದಾರ, ಉಜ್ಜಯಿನೀ ಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀ ರಾಮನಾಥ, ಶ್ರೀ ಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶ ದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗಿರುವದರಿಂದ ಸರ್ವ ಗುರುಭಕ್ತರೂ ಈ ಜಯಂತಿಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸತಕ್ಕದ್ದಾಗಿದೆ. ವೈಶಾಖ ಶು|| ೩ ಶನಿವಾರ ತಾ|| ೧೧-೫-೨೯ ನೆಯ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವವನ್ನೂ, ವೈಶಾಖ ಶು|| ೫ ಸೋಮವಾರ ತಾ|| ೧೩-೫-೨೯ ನೆಯ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಾಂಪ್ರದಾಯದ ವೀರಶೈವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತಿಮಹೋತ್ಸವಗಳನ್ನು ಆಯಾಯ ಪವಿತ್ರತಿಥಿಗಳಲ್ಲಿ ಅತ್ಯಂತ ಭಕ್ತಿಯಿಂದಲೂ ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಈಗಲಾದರೂ ಶುದ್ಧಸಾಂಪ್ರದಾಯದ ವೀರಶೈವರು ಈ ಮೊದಲು ಮೂವರು ಆಚಾರ್ಯರ ಜಯಂತಿಗಳನ್ನು ಅತಿ ವೈಭವದಿಂದ ನೆರವೇರಿಸಿದಂತೆ ಈಗ ಪ್ರಾಪ್ತವಾಗಿರುವ ಆಚಾರ್ಯರ ಜಯಂತಿಮಹೋತ್ಸವಗಳನ್ನಾದರೂ ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನು ಹೊಂದಿ ನಿತ್ಯಸುಖಿಗಳಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರುಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯು ಜೂನ್ ತಾ|| 12 ಕ್ಕೂ, ನ್ಯಾಯವಿಧಾಯಕಸಭೆಯು ಜೂನ್ ತಾ|| 20 ಕ್ಕೂ ರಾಜಧಾನಿಯಲ್ಲಿಯೇ ಪ್ರಾರಂಭವಾಗಿ ನಡೆಯುವವು.

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಬಡವರಾದ ರೈತರುಗಳಿಗೆ ವ್ಯವಸಾಯದ ಉಪಕರಣಗಳನ್ನು ಉಚಿತವಾಗಿ ಕೊಡಿಸಿಕೊಡುವದಕ್ಕೋಸ್ಕರ 2000 ರೂಪಾಯಿಗಳನ್ನು ತೆಗೆದಿಟ್ಟಿರುತ್ತಾರೆ.

ಮದರಾಸ್ ಗವರ್ನರಾದ ಲಾರ್ಡ್ ಗೋಷೆನ್‌ರವರು ಕಳೆದ ಸೋಮವಾರ ಮಧ್ಯಾಹ್ನ ರಾಜಧಾನಿಗೆ ಆಗಮಿಸಿ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಮರುದಿವಸ ಮೃಗಯಾವಿಹಾರಾರ್ಥವಾಗಿ ಕಾರಾಪುರಕ್ಕೆ ಪ್ರಯಾಣಮಾಡಿದರು.

ಈ ತಿಂಗಳು ತಾ|| 18 ನೆಯ ಗುರುವಾರ ಮದ್ದೂರಿನ ಹತ್ತಿರ ಶಿಂಷಾನದಿಯಲ್ಲಿ ಅಕಸ್ಮಾತ್ ಪ್ರವಾಹವು ಹೆಚ್ಚಾಗಿ ಹೊಳೆಯನ್ನು ದಾಟುತ್ತಿದ್ದ ಒಂದು ಗಾಡಿಯು ಕೊಚ್ಚಿಹೋಗಿ ಗಾಡಿಯೂ ಎತ್ತುಗಳೂ ಹಾಗೂ ಗಾಡಿಯವನೂ ಜಲಸಮಾಧಿಯನ್ನು ಹೊಂದಿದರು.

ದಯಾಳುಗಳಾದ ನಮ್ಮ ಸರಕಾರದವರು ೫ ವರ್ಷಕ್ಕಿಂತ ಕಡಮೆಯಿಲ್ಲದೆ ಮೈಸೂರು ಸರಕಾರದ ಸೇವೆಯನ್ನು ಮಾಡಿ ಮೃತರಾಗುವ ನೌಕರರ ಕುಟುಂಬ ಸಂರಕ್ಷಣಾರ್ಥವಾಗಿ ಅವರೆಷ್ಟುವರ್ಷ ಕೆಲಸದಲ್ಲಿದ್ದರೋ ಆ ವರ್ಷಗಳಲ್ಲಿ ಒಂದೊಂದು ತಿಂಗಳ ಸಂಬಳವನ್ನು 1000 ರೂಪಾಯಿಗಳಿಗೆ ಮೀರದಂತೆ ಆಯಾ ಕುಟುಂಬದವರಿಗೆ ಕೊಡುವುದಾಗಿ ನಿಶ್ಚಯಮಾಡಿರುತ್ತಾರೆ.

ಮೈಸೂರು ಗಂಧದೆಣ್ಣೆಯ ಸಂಬಂಧವಾದ ಮೊಕದ್ದಮೆಯು ಕಳೆದ ಗುರುವಾರ ನಡೆಯಬೇಕಾಗಿದ್ದಿತು. ಆದರೆ ಆ ದಿವಸ ಸರ್ಕಾರೀ ವಕೀಲರು ಬರಲಿಲ್ಲವಾದ್ದರಿಂದ ಮೊಕದ್ದಮೆಯು ಈ ದಿವಸ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ|| ರಾ|| ಟಿ. ಜಿ. ರಾಮಯ್ಯರವರ ಕೋರ್ಟಿನಲ್ಲಿ ಪ್ರಾರಂಭವಾಗುವುದು. ಅಪರಾಧಿಯ ಪರವಾಗಿ ವಾದಿಸಲು ಮದ್ರಾಸಿನ ಮಿ|| ನ್ಯೂಜೆಂಟ್ ಗ್ರಾಂಟ್‌ರವರು ಬರುವರೆಂದು ತಿಳಿದುಬರುತ್ತದೆ.

ಮೈಸೂರು ಸಿಟಿ ಮುನಸಿಪಲ್ ಪ್ರಸಿಡೆಂಟರಾದ ಮ|| ರಾ|| ಟಿ. ಜಿ. ರಾಮಅಯ್ಯರವರು ಮೈಸೂರು ಸರಕಾರ ಗಂಧದೆಣ್ಣೆಯ ಮೊಕದ್ದಮೆಯ ವಿಚಾರಣೆಗೋಸ್ಕರ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವದರಿಂದ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಮತ್ತು ಮುನಸಿಪಲ್ ಇಂಜನಿಯರರಾದ ಮ|| ರಾ|| ರಾಮಸ್ವಾಮಿಯವರು ಪ್ರಸಿಡೆಂಟರಾಗಿಯೂ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್‌ಮನ್‌ರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಉತ್ತರದಿಕ್ಕಿನಲ್ಲಿರುವ ವೀರಶೈವರ ಸ್ಮಶಾನಭೂಮಿಯ ವಿಷಯದಲ್ಲಿ ಮುನಸಿಪಾಲಿಟಿ ಪ್ರಸಿಡೆಂಟರು ಆ ಸ್ಥಾನದಲ್ಲಿ ಇನ್ನುಮುಂದೆ ಯಾರನ್ನೂ ಹೂಳಬಾರದೆಂದೂ ಹೂಳಿದ್ದಾಗರೆ ಪ್ರಾಸಿಕ್ಯೂಷನ್ ಮಾಡಲಾಗುವದೆಂದೂ ಆರ್ಡರ್ ಕೊಟ್ಟಿದ್ದುದರ ಮೇಲೆ ಮ||ರಾ|| ಯಂ. ಪಿ. ಭೋಗಯ್ಯ ಬಿ.ಎ., ಬಿ.ಎಲ್. ರವರು ಮತದಮೇಲೆ ದೃಷ್ಟಿಯನ್ನಿಟ್ಟು ಪ್ರೆಸಿಡೆಂಟರವರಿಗೂ ಹಾಗೂ ಹೆಲ್ತ್-ಆಫೀಸರವರಿಗೂ ಸರಿಯಾದ ಸಮಜಾಯಿಷಿಕೊಟ್ಟು ಆ ಆರ್ಡರನ್ನು ರದ್ದುಪಡಿಸಿದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಸಾರಾಸಾರವಿಚಾರಶೀಲರಾದ ಪ್ರೆಸಿಡೆಂಟರು ಮತ್ತು ಹೆಲ್ತ್-ಆಫೀಸರರು ಸರಿಯಾದ ಆರ್ಡರನ್ನು ಮಾಡಿ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುವರು.

ಬೆಂಗಳೂರು ಸುಲ್ತಾನಪೇಟೆ ಎ. ವಿ. ಸ್ಕೂಲಿನ ಗಣಪತಿಪೂಜೆಯ ದಿವಸ ಪತ್ರಿಕಾ ಪ್ರತಿನಿಧಿಗಳಾದ ಮ|| ರಾ|| ವಿ. ಎಸ್. ಸಂಜೀವರಾಯರು ಆ|| ಪೊ|| ಸೂ|| ಮ|| ಮರಿಯಪ್ಪನವರಮೇಲೆ ಬಿದ್ದು ಬಲಾತ್ಕಾರದಿಂದ ಸ್ಕೂಲಿನೊಳಗೆ ಪ್ರವೇಶಿಸಿದರೆಂಬ ಆರೋಪದಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದರು. ಮ್ಯಾಜಿಸ್ಟ್ರೇಟರು ಕಳೆದ ಶುಕ್ರವಾರ ವಿಚಾರಣೆಯನ್ನು ಪೂರೈಸಿ ಮ|| ಸಂಜೀವರಾಯರಿಗೆ 400 ರೂಪಾಯಿಗಳ ಜುಲ್ಮಾನೆ ತಪ್ಪಿದರೆ 3 ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು. ಮತ್ತೊಂದು ಮೊಕದ್ದಮೆಯಲ್ಲಿ ಮ|| ಸಂಜೀವರಾಯರು ವಿಶ್ವೇಶ್ವರಯ್ಯ ಸಮಿತಿಯ ವಿಚಾರಣಾಸಮಯದಲ್ಲಿ ಒಬ್ಬ ಪೋಲೀಸ್ ಕಾನ್ಸ್ಟೇಬಲ್ಲಿನ ಮೇಲೆ ಕೈಮಾಡಿದರೆಂಬ ಆರೋಪದಮೇಲೆ 25 ರೂಪಾಯಿ ಜುಲ್ಮಾನೆ ತಪ್ಪಿದರೆ ಒಂದುವಾರ ಸಜಾಶಿಕ್ಷೆಗೆ ಗುರಿಯಾದರು.

ಕಳೆದವಾರ ಬೀರೂರಿನಿಂದ ಶಿವಮೊಗ್ಗಾಕ್ಕೆ ಹೊರಟ ರೈಲಿನಲ್ಲಿ ರೈಲು ಬೀರೂರಿಗೂ ಶಿವಮೊಗ್ಗಾಕ್ಕೂ ಮಧ್ಯದಲ್ಲಿ ಹೋಗುತ್ತಿದ್ದಾಗ್ಯೆ ಯಾವನೋ ಒಬ್ಬನು ಯುರೋಪಿಯನ್ ವೇಷವನ್ನು ಹಾಕಿಕೊಂಡು ಟಪ್ಪಾಲು ಬಂಡಿಯೊಳಗೆ ನುಗ್ಗಿ ತಾನು ಪೋಸ್ಟಲ್ ಸೂಪರಿಂಟೆಂಡೆಂಟನೆಂದೂ ಟಪ್ಪಾಲ್ ಚೀಲಗಳನ್ನು ಪರೀಕ್ಷಿಸಬೇಕೆಂದೂ ಚೀಲಗಳನ್ನು ಕೇಳುತ್ತಿರಲು, ಅಲ್ಲಿದ್ದ ಪೋಸ್ಟಲ್-ಅಧಿಕಾರಿಗೆ ಅನುಮಾನವುಂಟಾಗಿ ರೈಲನ್ನು ನಿಲ್ಲಿಸುವದಕ್ಕೋಸ್ಕರ ಸರಪಣಿಯನ್ನು ಎಳೆಯಲು ಪ್ರಯತ್ನಿಸಲು, ಆ ಚತುರಕಳ್ಳನು ಪಿಸ್ತೋಲನ್ನು ತೋರಿಸಿ ಅವನನ್ನು ಜಲವಿಸರ್ಜನೆಯ ಕೊಠಡಿಗೆ ನೂಕಿ ಲಕ್ಷಾಂತರ ರೂಪಾಯಿಗಳ ಇನ್ಶೂರನ್ನು ಅಪಹರಿಸಿಕೊಂಡು ಹೋದನಂತೆ! ಇಂತಹ ನಾಗರಿಕ ಕಳ್ಳರು ಇದುವರೆಗೆ ಈ ದೇಶದಲ್ಲಿ ಹುಟ್ಟಿರಲಿಲ್ಲ. ಈ ವಿಚಿತ್ರ ಕಳ್ಳನ ಬಾಯಿಗೆ ಈ ತಿಂಗಳು 18 ನೆಯ ತಾರೀಖಿನ ದಿವಸ ನಮ್ಮ ಆಫೀಸಿನಿಂದ ನ್ಯಾಮತಿಪೋಸ್ಟಿಗೆ ಕಳುಹಿಸಿದ ಒಂದು ವಿ. ಪಿ. ಯು ತುತ್ತಾಯಿತು. ಸರಕಾರದವರು ಈ ಧೂರ್ತನನ್ನು ಹಿಡಿದು ಸರಿಯಾದ ಶಿಕ್ಷೆಯನ್ನು ವಿಧಿಸಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ತಿರುವಾಂಕೂರು ಸಂಸ್ಥಾನದ ದಿವಾನರಾದ ಮಿ|| ವಾಟ್ಸರವರ ಉದ್ಯೋಗದ ಅವಧಿಯು ಬರುವ ಜೂನ್ ತಾ|| 23 ಕ್ಕೆ ಮುಗಿಯುವದರಿಂದ ಮದ್ರಾಸ್ ಹೈಕೋರ್ಟ್‌ಜಡ್ಜರಾದ ಮ|| ರಾ|| ವಿ. ಎಸ್. ಸುಬ್ರಹ್ಮಣ್ಯ ಅಯ್ಯರವರು ಮುಂದಿನ ದಿವಾನರಾಗಿ ನಿಯಮಿಸಲ್ಪಡುವರೆಂದು ತಿಳಿದುಬರುತ್ತದೆ.

ತಂಜಾವೂರು ಸಂಸ್ಥಾನದ ಕನಿಷ್ಠ ರಾಜಕುಮಾರನ ಸೋದರ ಸೊಸೆಯೊಬ್ಬಳು ಬಡತನದ ದುಃಖವನ್ನೂ ಗಂಡನ ಹಿಂಸೆಯನ್ನೂ ಸಹಿಸಲಾರದೆ ತನ್ನಿಬ್ಬರು ಮಕ್ಕಳನ್ನು ಭಾವಿಗೆ ತಳ್ಳಿ ತಾನೂ ಧುಮುಕುವಷ್ಟರಲ್ಲಿ ನೆರೆಯವರು ಕಂಡುಹಿಡಿದು ಇವಳನ್ನು ವಿಚಾರಣೆಗೆ ಗುರಿಪಡಿಸಲು ನ್ಯಾಯಾಧೀಶರು ಇವಳಿಗೆ ಮರಣಶಾಸನವನ್ನು ವಿಧಿಸಿದ್ದರು. ಆದರೆ ಮದರಾಸು ಗೌರ್ನರು ಈಕೆಯ ಪರಿಸ್ಥಿತಿಯನ್ನು ವಿಚಾರಿಸಿ ಕನಿಕರದಿಂದ ಈಕೆಯನ್ನು ಬಿಡುಗಡೆಮಾಡಿದರು. ಸ್ತುತ್ಯ!

ಭಾರತಕವಿಸಾರ್ವಭೌಮರಾದ ಡಾ|| ರವೀಂದ್ರನಾಥ ಟಾಗೋರರವರು ಅಮೇರಿಕಾಖಂಡದ ಕಾನಡಾ ದೇಶದಲ್ಲಿ ನೆರವೇರಿದ ವಿದ್ಯಾಪರಿಷತ್ತನ್ನು ಮುಗಿಯಿಸಿಕೊಂಡು ಸಂಯುಕ್ತಮಹಾಸಂಸ್ಥಾನಗಳಿಗೆ ಹೋಗುವದಕ್ಕೋಸ್ಕರ ಲಾಸ್ ಆಂಗಲೀಸ್ ಎಂಬ ದ್ವೀಪಕ್ಕೆ ಹೋದಾಗ್ಯೆ ಅಲ್ಲಿದ್ದ ಸಂಯುಕ್ತಸಂಸ್ಥಾನಗಳ ಇಮಿಗ್ರೇಷನ್ ಅಧಿಕಾರಿಯು ಇವರನ್ನು ತಿರಸ್ಕಾರಭಾವದಿಂದ ಕಂಡದ್ದಕ್ಕೋಸ್ಕರ ಡಾ|| ರವೀಂದ್ರನಾಥರು ಕುಪಿತರಾಗಿ ಆ ದೇಶದ ಪ್ರಯಾಣವನ್ನೇ ನಿಲ್ಲಿಸಿ ಜಪಾನಿಗೆ ಹಿಂದಿರುಗಿರುತ್ತಾರೆ.

ಆಲಿಪುರ ಡಿಸ್ಟ್ರಿಕ್ಟಿಗೆ ಸೇರಿದ ಚಂದ್ರಕೋಣ ದೇವಾಲಯದ ಮಹಂತನಾದ ಗೋವಿಂದ ರಾಮಾನುಜದಾಸನೆಂಬ ಸನ್ಯಾಸಿಯು ತನ್ನ ಬಳಿಗೆ ಯಾಚನೆಕ್ಕೋಸ್ಕರ ಬಂದ ಸತೀದಾಸಿ ಎಂಬ 12 ವರ್ಷದ ಹುಡುಗಿಯನ್ನು ಬಲಾತ್ಕಾರದಿಂದ ಮನೆಯೊಳಗೆ ಎಳೆದೊಯ್ದು ಆಕೆಯಲ್ಲಿ ಅತ್ಯಾಚಾರವನ್ನು ನಡೆಯಿಸಿ ಕಳುಹಿಸಿಬಿಟ್ಟನು. ಆ ಹುಡುಗಿಯು ಯಾತನೆಯನ್ನು ತಾಳಲಾರದೆ ಸ್ವಲ್ಪಹೊತ್ತಿನಲ್ಲಿಯೇ ಮೃತಿಹೊಂದಿದಳು. ಆಲಿಪುರದ ಸೆಷನ್ಸ್‌ಜಡ್ಜರು ಆ ದುರುಳ ಮಹಂತನಿಗೆ ಒಂದು ವರ್ಷ ಕಠಿಣಶಿಕ್ಷೆಯನ್ನು ವಿಧಿಸಿದರು.

ಯಾವಾಗಲೂ ದಿಗಂಬರರಾಗಿರುವದು ಆರೋಗ್ಯಕ್ಕೆ ಬಹಳ ಒಳ್ಳೆಯದೆಂದು ಜರ್ಮನ್ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವು ಫ್ರಾನ್ಸ್ ದೇಶದಲ್ಲಿಯೂ ಹರಡಿ ಅಲ್ಲಿಯ ಕೆಲ ತರುಣ ತರುಣಿಯರು ಸೈನ್ ನದಿಯ ಒಂದು ದ್ವೀಪದಲ್ಲಿ ಪ್ರಕೃತಿ ಪಟ್ಟಣವೊಂದನ್ನು ಸ್ಥಾಪಿಸಿಕೊಂಡು ಅಲ್ಲಿ ದಿಗಂಬರರಾಗಿ ವಾಸಮಾಡುತ್ತಿರುವರು. ಅಲ್ಲಿ ಆ ಸಂಸ್ಥೆಗೆ ಸೇರಿದ ಸ್ತ್ರೀ ಪುರುಷರು ಬತ್ತಲೆಯಾಗಿ ಓಡಾಡುತ್ತಿರುವದನ್ನು ನೋಡುವದಕ್ಕೋಸ್ಕರ ನದಿಯದಂಡೆಯಲ್ಲಿ ಜನರು ಯಾವಾಗಲೂ ಕಾದಿರುವರು. ಇದೊಂದು ನೂತನಶೋಧ!

ಪೂರ್ವ ಅಫ್ರಿಕಾದೇಶದ ಹಿಂದೂಪ್ರಜೆಗಳ ಕಷ್ಟಗಳನ್ನು ವಿಚಾರಿಸುವದಕ್ಕೋಸ್ಕರ ನಿಯಮಿಸಲ್ಪಟ್ಟಿದ್ದ ಹಿಲ್ಟನ್‌ಯಂಗ್ ಸಮಿತಿಯ ವರದಿಯ ಸಂಬಂಧವಾಗಿ ಅಲ್ಲಿಯ ಹಿಂದೂಪ್ರಜೆಗಳ ಅಭಿಪ್ರಾಯಗಳನ್ನು ಕೆನಿಯಾಗೌರ್ನರಾದ ಸರ್. ಸಾಮ್ಯುಯಲ್ ವಿಲ್ಸನ್‌ರವರಿಗೆ ತಿಳಿಸುವದಕ್ಕೋಸ್ಕರ ಭಾರತ ಸರ್ಕಾರದವರು ಮ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರನ್ನು ಆಫ್ರಿಕಾಖಂಡಕ್ಕೆ ಹೋಗಬೇಕೆಂದು ಅಪ್ಪಣೆಮಾಡಿರುತ್ತಾರೆ. ಮ|| ಶಾಸ್ತ್ರಿಗಳವರು ಮುಂದಿನ ತಿಂಗಳು 1 ನೆಯ ತಾರೀಖಿನದಿವಸ ಬೊಂಬಾಯಿಪಟ್ಟಣದಿಂದ ಆಫ್ರಿಕಾಕ್ಕೆ ಪ್ರಯಾಣಮಾಡುವರು.

ಕಳೆದ ತಾ|| 20ನೆಯ ಶನಿವಾರ ಕಲ್ಕತ್ತಾಪಟ್ಟಣದ ಓರ್ವ ಬಂಗಾಳೀಸ್ತ್ರೀಯಳು ಹುಗ್ಲಿನದಿಯ ಸ್ನಾನಘಾಟಿನಲ್ಲಿ ಸ್ನಾನಪೂಜಾದಿ ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದಾಗ 4 ಜನ ಪಠಾಣ ಸೈನಿಕರು ದೋಣಿಯಿಂದಿಳಿದು ಬಂದು ಆಕೆಯನ್ನು ಅಡ್ಡಗಟ್ಟಿ ಅವಳ ಕೈಯಲಿದ್ದ ಪೂಜಾಸಾಮಗ್ರಿಗಳನ್ನು ಕಿತ್ತೆಸೆದು ಬಲಾತ್ಕಾರದಿಂದ ಎಳೆದುಕೊಂಡು ಹೋಗುತ್ತಿರಲು, ಆಕೆಯ ಆರ್ತಧ್ವನಿಯನ್ನು ಕೇಳಿದ ಕೆಲವು ಜನ ಹಿಂದುಗಳು ಆ ಧೂರ್ತರ ಮೇಲೆ ಬಿದ್ದು ಆಕೆಯ ಮಾನರಕ್ಷಣೆಯನ್ನು ಮಾಡಿದ್ದಲ್ಲದೆ ಒಬ್ಬನನ್ನು ಹಿಡಿದು ಪೋಲೀಸರ ವಶಮಾಡಿದರು. ಉಳಿದ ಮೂವರು ಓಡಿಹೋಗಿ ದೋಣಿಯನ್ನು ಹತ್ತಿ ಹೊರಟುಹೋದರು.

ಬೊಂಬಾಯಿಪಟ್ಟಣದ ಸುಮಾರು 21 ವರ್ಷ ವಯಸ್ಸಿನ ಓರ್ವ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ತೇರ್ಗಡೆಯಾಗದೆಹೋದುದರಿಂದ ಹತಾಶನಾಗಿ ಕಳೆದ ಸೋಮವಾರ ರಾತ್ರಿ ರೈಲುರಸ್ತೆಯಲ್ಲಿ ಅಡ್ಡವಾಗಿ ಮಲಗಿಕೊಂಡು ಆತ್ಮಹತ್ಯೆಮಾಡಿಕೊಂಡನು. ಪೋಲೀಸರು ಆತನ ಶರೀರವನ್ನು ಶೋಧಿಸಿದಾಗ ಆತನ ಜೇಬಿನಲ್ಲಿ "ನಾನು ಎಷ್ಟು ಪ್ರಯತ್ನಿಸಿದರೂ ಸಹ ತೇರ್ಗಡೆಯಾಗುವ ಸುಯೋಗವು ನನಗೆ ಲಭಿಸಲಿಲ್ಲ. ನನ್ನ ಪೋಷಕರ ಮತ್ತು ಮಾತಾಪಿತೃಗಳ ಎದುರಿಗೆ ನಿಲ್ಲಲು ನನಗೆ ಧೈರ್ಯವಿಲ್ಲ. ಆದುದರಿಂದ ಈ ಪ್ರಾಪಂಚಿಕ ದುಃಖಗಳಿಂದ ಪಾರಾಗುವ ಈ ಸುಲಭವಾದ ಉಪಾಯವನ್ನು ನಾನು ಹೃತ್ಪೂರ್ವಕವಾಗಿ ಅನುಸರಿಸಿರುತ್ತೇನೆ. ಬಾಲ್ಯವಿವಾಹವೇ ಈ ನನ್ನ ಕಷ್ಟಗಳಿಗೆ ಮುಖ್ಯಕಾರಣ. ನನ್ನ ಹೆಂಡತಿಗೆ ಆಕೆಯ ಇಚ್ಛಾನುಸಾರವಾಗಿ ಜೀವಿಸಲು ಅವಕಾಶಕೊಡಬೇಕು." ಎಂಬೀ ವಾಕ್ಯಗಳನ್ನೊಳಗೊಂಡ ಒಂದು ಕಾಗದವು ದೊರತಿದೆ.

ಕಳೆದ ತಿಂಗಳು ಕರಾಚಿಗೆ ಸಮೀಪದಲ್ಲಿರುವ ಜಾಕೋಬಾಬಾದ್ ಎಂಬಲ್ಲಿ ಕೆಲವು ಜನ ಹಿಂದು ಮತ್ತು ಮುಸಲ್ಮಾನ ಬಾಲಕರಲ್ಲಿ ಕಲಹವುಂಟಾಗಿ ಮುಸಲ್ಮಾನ ಬಾಲಕನೊಬ್ಬನನ್ನು ಕಿಟಕಿಯಿಂದ ಕೆಳಕ್ಕೆ ತಳ್ಳಿ ಕೊಂದುಬಿಟ್ಟರು. ಇದರಿಂದ ಉದ್ರೇಕಗೊಂಡ ಕೆಲವು ಜನ ಮಹಮ್ಮದೀಯರು ಒಂದು ಸಭೆಯನ್ನು ಮಾಡಿ ಒಬ್ಬ ಮುಸಲ್ಮಾನನ ಪ್ರಾಣಕ್ಕೆ ಪ್ರತಿಯಾಗಿ 10 ಜನ ಹಿಂದುಗಳ ಪ್ರಾಣಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಮಾಡಿಕೊಂಡರು. ಅದರಂತೆ ಕಳೆದ ತಾ|| 26 ನೆಯ ಮಂಗಳವಾರ ಓರ್ವ ಮಹಮ್ಮದೀಯನು ಸಾದರ್ ಕ್ವಾರ್ಟರ್ ಎಂಬಲ್ಲಿಗೆ ಪ್ರವೇಶಿಸಿ ಅಲ್ಲಿ ಹತ್ತು ಜನಗಳ ಮೇಲೆ ಗುಂಡುಹಾರಿಸಿ ಓಡಿಹೋದನು. ಇಬ್ಬರು ಗಂಡಸರೂ ಒಬ್ಬ ಹೆಂಗಸೂ ಕೂಡಲೆ ಮೃತಪಟ್ಟರು. ಇಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟರು. 3 ಜನರು ವಿಶೇಷವಾದ ಅಪಾಯಸ್ಥಿತಿಯಲ್ಲಿರುವರು. ಪೋಲೀಸರು ಕೊಲೆಗಡುಕನನ್ನು ಹುಡುಕುತ್ತಿರುವರು.

ಕಳೆದ ವರ್ಷದ ಜುಲೈ 8 ನೆಯ ತಾರೀಖಿನ ದಿವಸ ಸಂಭವಿಸಿದ ಬಂಗಾಳದೇಶದ ಬೇಲೂರು ಟ್ರೈನಿನ ಅಪಾಯದ ಸಂಬಂಧವಾಗಿ ಕಲ್ಕತ್ತಾಪಟ್ಟಣದ "ಫಾರವರ್ಡ್" ಪತ್ರಿಕೆಯಲ್ಲಿ ಪ್ರಕಟವಾದ ಲೇಖಗಳಿಂದ ತನಗೆ ಮಾನ ಮತ್ತು ಧನಗಳ ಹಾನಿಯುಂಟಾಯಿತೆಂದು ಸದರಿ ಪತ್ರಿಕಾಕರ್ತರ ಮೇಲೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು 10 ಲಕ್ಷ ರೂಪಾಯಿಗಳ ಮಾನನಷ್ಟಕ್ಕೂ, ಈಸ್ಟ್ ಇಂಡಿಯನ್ ರೈಲ್ವೆ ಕಂಪನಿಯವರು 5 ಲಕ್ಷ ರೂಪಾಯಿಗಳ ಮಾನನಷ್ಟಕ್ಕೂ ಕಲ್ಕತ್ತಾ ಹೈಕೋರ್ಟಿನಲ್ಲಿ ವ್ಯವಹಾರವನ್ನು ನಡೆಯಿಸಿದ್ದರು. ವಾದಿಗಳ ಪರವಾಗಿ ಅಡ್ವೋಕೇಟ್ ಜನರಲ್‌ರವರು ವಾದಿಸಿದರು. ಜಸ್ಟಿಸ್ ಬಕ್‌ಲಾಂಡ್‌ರವರು ವಿಚಾರಣೆಯನ್ನು ನಡೆಯಿಸಿ ಫಾರ್ವರ್ಡ್ ಪ್ರಕಟನ ಸಂಘದವರು ಮೊದಲನೆಯ ವಾದಿಗಳಿಗೆ 50 ಸಾವಿರ ರೂಪಾಯಿಗಳ ಮತ್ತು ಎರಡನೆಯ ವಾದಿಗಳಿಗೆ 1 ಲಕ್ಷ ರೂಪಾಯಿಗಳ ಪರಿಹಾರದ್ರವ್ಯವನ್ನು ಕೊಡಬೇಕೆಂದು ತೀರ್ಮಾನಿಸಿದರು.

ವಿಮಲಮುಕರ್ಜಿ ಎಂಬ ಬಂಗಾಳೀ ಯುವಕನು ಬೈಸ್‌ಕಲ್ ಮೇಲೆ ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬರಲು ಹೊರಟು, ಈಗ ಆಂಗ್ಲದೇಶದ ಅಬರ್ಡಿನ್ ಪಟ್ಟಣದಲ್ಲಿರುವನು. ಆತನು ಈಗಾಗಲೇ ಅಫ್ಘಾನಿಸ್ಥಾನ, ಟರ್ಕಿ, ರಷ್ಯಾದೇಶದ ಮಾರ್ಗವಾಗಿ 11 ಸಾವಿರ ಮೈಲುಗಳ ಪ್ರಯಾಣಮಾಡಿರುವನು. ಸಿರಿಯಾದೇಶದ ಮರಳುಗಾಡಿನಲ್ಲಿ ಹೋಗುತ್ತಿರುವಾಗ ಒಂದು ಹುಲಿಯ ಬಾಯಿಗೆ ತುತ್ತಾಗುವದರಲ್ಲಿದ್ದನಂತೆ! ದೈವಯೋಗದಿಂದ ಒಂದು ಮೋಟಾರು ಗಾಡಿಯು ಬಂದು ಆತನನ್ನು ಬದುಕಿಸಿತು. ಈತನು ತುರ್ಕಿದೇಶದಲ್ಲಿದ್ದಾಗ ಅಲ್ಲಿಯ ಸರಕಾರದವರು ಈತನನ್ನು ಕಾರಾಗೃಹದಲ್ಲಿಟ್ಟಿದ್ದರು. ಅಲ್ಲಿ ಏಳುದಿವಸಗಳವರೆಗೆ ಶ್ರಮಪಟ್ಟು ಗೋಡೆಯಲ್ಲಿ ರಂಧ್ರವನ್ನು ಕೊರೆದು ತಪ್ಪಿಸಿಕೊಂಡು ಹೊರಗೆ ಬಂದನು. ಇದನ್ನು ತಿಳಿದು ಅಲ್ಲಿಯ ಸೈನಿಕರು ಇವನನ್ನು ಬೆನ್ನಟ್ಟಲು ಒಂದು ಕಡಿದಾದ ಕೊನ್ನದಲ್ಲಿ ಬಿದ್ದು ಅಲ್ಲಿ ಕಘಂಟೆಗಳ ವರೆಗೆ ನಿಶ್ಚೇತನನಾಗಿದ್ದು, ಅನಂತರ ತಪ್ಪಿಸಿಕೊಂಡು ಬಂದನು. ದಾರಿಯಲ್ಲಿ ಹಿಂಡೆನ್‌ಬರ್ಗ, ಕೆಮಾಲ್‌ಪಾಷಾ, ಕೈಸರ್ ಮೊದಲಾದ ಪ್ರಸಿದ್ಧಪುರುಷರನ್ನು ಸಂದರ್ಶಿಸಿರುವನು. ಈಗ ಈ ವೀರತರುಣನು ಇಂಗ್ಲೆಂಡಿನ ಭೂಗೋಳ ಪರಿಶೋಧಕ ಸಂಘಕ್ಕೆ ಸದಸ್ಯನಾಗಿ ತೆಗೆದುಕೊಳ್ಳಲ್ಪಟ್ಟಿರುವನು. ಆಫ್ರಿಕಾಖಂಡವನ್ನು ಉತ್ತರದಿಂದ ದಕ್ಷಿಣಕ್ಕೆ ದಾಟಬೇಕೆಂದು ಪ್ರಯತ್ನಿಸುತ್ತಿರುವನು.

ಅಫ್ಘಾನಿಸ್ಥಾನದ ಅಂತಃ ಕಲಹದವಿಷಯವಾಗಿ ಅನೇಕ ವರ್ತಮಾನಗಳು [illegible]ತ್ತಿರುವವು. ಕಳೆದವಾರ ಅಮಾನುಲ್ಲಾರವರು ಘ[illegible]ಯನ್ನು ಸ್ವಾಧೀನಪಡಿಸಿಕೊಂಡರೆಂದು ಪ್ರಕಟವಾಗಿದ್ದಿತು. ಆದರೆ ಇತ್ತೀಚೆಗೆ ಬಂದ ಸಮಾಚಾರಗಳಿಂದ ಘಜ್ನಿಯು ಇನ್ನೂ ಅಮಾನುಲ್ಲರ ಸ್ವಾಧೀನವಾಗಿಲ್ಲವೆಂದೂ ಆ ಪ್ರಾಂತದಲ್ಲಿರುವ ಗಿಲ್ಜಿ ಪಂಗಡದವರು ಅಮಾನುಲ್ಲರಿಗೆ ವಿಶೇಷವಾದ ತೊಂದರೆಯನ್ನು ಕೊಡುತ್ತಿರುವರೆಂದೂ ತಿಳಿಯುಬಂದಿದೆ. ಬಚ್ಚಾಯಿಸಕೋನು ಅಮಾನುಲ್ಲರ ಮಲತಮ್ಮನೊಬ್ಬನನ್ನೂ ನಾಲ್ವರು ರಾಜಸಂಬಂಧಿಗಳನ್ನೂ ಸೆರೆಹಿಡಿದು ಬಂಧನದಲ್ಲಿಟ್ಟಿರುವನು. ಕಳೆದ ತಾ|| 19 ನೆಯ ಶುಕ್ರವಾರ ಬಚ್ಚಾಯಿಸಕೋನು ಪ್ರಾರ್ಥನೆಯನ್ನು ಮುಗಿಸಿಕೊಂಡು ತನ್ನ ಸೈನ್ಯವನ್ನು ಪರೀಕ್ಷಿಸುತ್ತಿದ್ದಾಗ ಕೊಹಿಸ್ತಾನ ಸೈನಿಕನೊಬ್ಬನು ಈತನಮೇಲೆ ಗುಂಡುಹಾರಿಸಿದನೆಂದೂ, ಬಚ್ಚಾಯಿಸಕೋನು ಕೂಡಲೆ ಮೂರ್ಛಿತನಾಗಿ ಬಿದ್ದನೆಂದೂ, ಈಗ ಅರಮನೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ, ಕೊಲೆಗಡುಕನು ಬೈದುಮಾಡಲ್ಪಟ್ಟು ಮುಲ್ಲಾಸಾಹೇಬರಮುಂದೆ ವಿಚಾರಣೆಗೆ ಗುರಿಪಡಿಸಲ್ಪಡಲು ಅವರು ಆತನನ್ನು ಚಿತ್ರಹಿಂಸೆಗೆ ಗುರಿಪಡಿಸಿ ಕುದಿಯುವ ಎಣ್ಣೆಯೊಳಕ್ಕೆ ತಲೆಕೆಳಗು ಮಾಡಿ ಮುಳುಗಿಸಿ ಕೊಂದುಬಿಟ್ಟರೆಂದೂ ತಿಳಿದುಬರುತ್ತದೆ. ಅಮಾನುಲ್ಲರಿಗೆ ನಾನಾಕಡೆಯಿಂದಲೂ ಸಹಾಯವು ದೊರೆಯುತ್ತಿರುವದು. ಅಮಾನುಲ್ಲರ ಆಕಾಶಯಾನಗಳು ನಿತ್ಯವೂ ಕಾಬೂಲ್ ಪ್ರಾಂತದಲ್ಲಿ ಸಂಚರಿಸುತ್ತಿರುವವು.

ಪ್ರಭಾವಿಜಯ.

ಪೂಜ್ಯಪ್ರಭಾಮೂರ್ತಿಯೇ ? ನಿನ್ನ ಪವಿತ್ರ ಜೀವಮಾನದಲ್ಲಿ ವರ್ಷದ್ವಯವು ಕಳೆದುಹೋಯಿತು. ನೀನು ಈಗ ತಾನೇ ನೂತನ ವರ್ಷವನ್ನು ಪಾದಸ್ಪರ್ಶದಿಂದ ಪುನೀತವನ್ನಾಗಿಮಾಡಲು ಅನುವಾಗಿದ್ದೀಯೆ. ನೀನು ವಿಭವಸಂವತ್ಸರದಲ್ಲಿ ಬಹು ವೈಭವದಿಂದ ಸ್ವಧರ್ಮಪ್ರಚಾರವನ್ನು ಅತ್ಯಂತವಾಗಿ ನೆರವೇರಿಸಿದೆ. ನಿನ್ನ ಜನನದಿಂದ ಗುಹಾಂತರ್ಗತವಾಗಿದ್ದ ಧರ್ಮ ಗ್ರಂಥಗಳ ಸತ್ವವು ಬೆಳಕಿಗೆ ಬರಲು ಅನುಕೂಲವಾಯಿತು. ವೀರಶೈವ ಧರ್ಮಸಾಮ್ರಾಜ್ಯ ಸ್ಥಾಪನಾಚಾರ್ಯರ ಅಪಾರ ಮಹಿಮಾತಿಶಯಗಳನ್ನು ನಿನ್ನ ಗಂಭೀರವಾಣಿಯಿಂದ ಸಮಾಜದಲ್ಲಿ ಪ್ರಜ್ವಲಗೊಳಿಸಿದೆ. ಮೂಲಗುರುಸಾರ್ವಭೌಮರ, ಧರ್ಮಸಿಂಹಾಸನಗಳ ಭಾವಚಿತ್ರಗಳನ್ನು ಪ್ರಕಾಶಗೊಳಿಸಿ, ಜಗದ್ವಂದ್ಯೆಯಾದೆ. ಸದಾ ಸದಾಚಾರಗಳನ್ನು ಬೋಧಿಸುತ್ತ, ವೀರಶೈವ ತತ್ವಾಮೃತವನ್ನು ಸಮಾಜಬಂಧುಗಳಿಗೆ ಪಾನಮಾಡಿಸಿ ಮಾನ್ಯೆಯಾದೆ. ಪ್ರತಿಯೊಬ್ಬ ಅಭಿಮಾನಿ ವೀರಶೈವನ ಹೃದಯಮಂದಿರದಲ್ಲಿಯೂ ಧ್ಯಾನರೂಪದಿಂದ ವಾಸಿಸಿರುವೆ. ನಿನ್ನ ಮುದ್ದಾದ ಆಕಾರವೂ, ಸುಲಲಿತವಾದ ಭಾಷಾಶೈಲಿಯೂ, ಇಂಪಾದ ಗುರುಧ್ಯಾನವೂ, ಸಮಾಜಕಲ್ಯಾಣಸೂಚನಾಬುದ್ಧಿಯೂ ಅಖಿಲ ವೀರಶೈವ ಜಗತ್ತನ್ನೇ ಆನಂದಸಾಗರದಲ್ಲಿ ಮುಳುಗಿಸಿತು. ಸಮಾಜಮಾತೆಯರೂ ಸಹ ನಿನ್ನ ಆಗಮನದಿಂದ ಹರ್ಷಿತರಾಗಿ, ನಿನ್ನನ್ನು ಮುದ್ದಿಸಿ, ಪ್ರೀತಿಸಿ ತಣಿಯುವಂತಾದರು. ಹಿರಿಯ ಬಂಧುಗಳು ನಿನ್ನ ಧರ್ಮಮಾರ್ಗವನ್ನು ನೋಡಿ ಮರ್ಮವಿಲ್ಲದೆ ಸ್ತುತಿಸಿದರು. ಆಂಗ್ಲಭಾಷಾಧ್ಯಯನದಲ್ಲಿ ನಿರತರಾದ ವಿದ್ಯಾರ್ಥಿಗಳು ನಿನ್ನಿಂದ ಸ್ವಧರ್ಮ ಮಹತ್ವವನ್ನು ತಮಗೆ ದೊರಕಿದ ಅಲ್ಪ ವಿರಾಮಕಾಲದಲ್ಲಿಯೇ ತಿಳಿದುಕೊಂಡು ಧನ್ಯರಾದರು. ಪಂಚಾಚಾರ್ಯರ ಜಯಂತ್ಯುತ್ಸವಗಳು ಜಗತ್ತಿನಲ್ಲಿ ಅತ್ಯುತ್ಸಾಹದಿಂದ ನಡೆಯಲು ಪ್ರಾರಂಭವಾದುವು. ಭರತಖಂಡದ ನಾನಾ ಭಾಗಗಳಲ್ಲಿಯೂ ಶ್ರೀ ಪಂಚಾಚಾರ್ಯರ ಹೆಸರಿನಿಂದ ಭಜನಾ ಮಂದಿರಗಳೂ, ತರುಣಸಂಘಗಳೂ, ಸಂಸ್ಕೃತ ಪಾಠಶಾಲೆಗಳೂ, ವಾಚನಾಲಯಗಳೂ ಆವಿರ್ಭವಿಸಿದುವು. ನೀನು ಲೋಕವ್ಯವಹಾರಕ್ಕೆ ಉಪಯುಕ್ತವಾದ ರಾಜಕೀಯ ವಿಚಾರಗಳನ್ನೂ ಸಹ ಕಾಲವರಿತು ತಿಳಿಸಿದೆ. ಪ್ರಭಾಮೂರ್ತಿಯೇ ? ನಿನ್ನ ವಿಜಯವನ್ನು ಹೇಳಬಯಸಲು ಅಳವಲ್ಲ. ಪರಶಿವ ಲಿಂಗೋದ್ಭವರಾದ ಶ್ರೀ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತವು ತನ್ನ ಪೂರ್ವಾಸ್ತಿತ್ವವನ್ನು ಕಾಲಗತಿಯಿಂದ ಮರೆತು, ಮೂಲಸ್ಥಾಪಕರ ಪವಿತ್ರನಾಮಕ್ಕೆ ಕಳಂಕಬರಬಹುದಾಗಿದ್ದ ಸಮಯದಲ್ಲಿ ನೀನು ಅವತರಿಸಿ ಸ್ವಪ್ರಭೆಯಿಂದ ಧರ್ಮ ಜಾಗೃತಿಯನ್ನುಂಟುಮಾಡಿದೆ. ಶ್ರೀ ಪರಮೇಶ್ವರನು ಕೈಲಾಸದಲ್ಲಿ ಪಾರ್ವತೀ ಸಹಿತನಾಗಿ ಮೆರೆಯುತ್ತಿರುವನಾದರೂ ಭೂಲೋಕದಲ್ಲಿ ತನ್ನ ಭಕ್ತರ ರಕ್ಷಣಾರ್ಥವಾಗಿ ಕಾಶೀವಿಶ್ವೇಶ್ವರ ರೂಪದಿಂದ ಅವತರಿಸಿರುವನು. ಅವನ ಪಂಚಮುಖಗಳೇ ಪಂಚಪೀಠಾಧಿಪತಿಗಳು. ಆ ವಿಶ್ವೇಶ್ವರನಾದರೂ "**ಕಾಶೀನಾಥ**" ಎಂದು ಪ್ರಸಿದ್ಧನಾಗಿರುವನು. ಶಾಂತಚಿತ್ತವೃತ್ತಿಯ ಪಂಚಸಿಂಹಾಸನಗುರುಗಳು "**ಗುರುಶಾಂತ**" ಎಂಬ ಪ್ರಶಸ್ತಿಗೆ ಅನುರೂಪರಾಗಿರುವ ಆಸ್ಥಾನ ವಿದ್ವಾನ್ ಪಂ|| ಗುರುಶಾಂತಶಾಸ್ತ್ರಿಗಳಾಗಿ ನಿನ್ನ ಪುರೋಭಿವೃದ್ಧಿಗೆ ಸಹಾಯಕರಾಗಿರುವರು. ಮಹಾಶಕ್ತಿಯಾದ ಪಾರ್ವತೀದೇವಿಯ ಮುಖದಿಂದ ಹೊರಡುತ್ತಿರುವ ಸಕಲ ಶಾಸ್ತ್ರಪ್ರಭೆಯು "**ಪ್ರಭಾ**" ಮೂರ್ತಿಯೆಂದು ನೀನಾಗಿರುವೆ. ನಿನ್ನ ಜನ್ಮವೃತ್ತಾಂತವು ಈ ತೆರನಾಗಿರುವಲ್ಲಿ ನಿನ್ನ ಪ್ರಭಾವವನ್ನು ವರ್ಣಿಸಲು ಸಾಧ್ಯವೇ ? ವಿಭವಸಂವತ್ಸರದಲ್ಲೆಲ್ಲಾ ವಿಜಯದಿಂದ ಮೆರೆದೆ. ಶುಕ್ಲಸಂವತ್ಸರದಲ್ಲಿ ನಿನ್ನ ಕೀರ್ತಿಯು ನಿನಗೆ ಶುಭವಾಗಲಿ; ಪಂಚಾಚಾರ್ಯರ ಕೃಪಾಬಲವು ನಿನಗೊದಗಲಿ; ಮಠದ ವೈಭವವು ಹೆಚ್ಚಲಿ; ನಿನ್ನ ಗ್ರಾಹಕರಿಗೆ ಶುಭವಾಗಲಿ; ಶ್ರೀ ಪಾರ್ವತೀಪತಿಯು ನಿನಗೆ ನಿತ್ಯ ಮಂಗಳವನ್ನುಂಟುಮಾಡಲಿ.

ನಿನ್ನ ಅಭ್ಯುದಯೇಚ್ಛು
ಮುದಗೆರೆ ಓ. ಎಸ್. ಲಿಂಗಯ್ಯ. ಮೈಸೂರು

ನಮಃ ಶ್ರೀ ಜಗದ್ಗುರು ಪಂಚಕಾಯ.

ಧಾರ್ಮಿಕಸಭಾ.

(ಸೋಟಗಿ)

ಇದೇ ತಾ|| 10-4-29 ಕ್ಕೆ ಬೃಹನ್ಮಠದಲ್ಲಿ ಸಾಯಂಕಾಲ 6 ಘಂಟೆಗೆ ಸಮಾಜಸುಧಾರಕರೂ, ನಿಸ್ಪೃಹಿಗಳೂ, ಲೋಕವಿಖ್ಯಾತರೂ ಆದ ಕಲಘಟಗಿ ತಾ|| ಹಿರೇಹೊನ್ನಿಹಳ್ಳಿ "ಪಂಚಾಚಾರ್ಯ ಶ್ರೀ ಬೋರ್ಡಿಂಗ್" ಅಧ್ಯಕ್ಷರಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿ ಗಂಗಾಧರ ಶಿವಾಚಾರ್ಯರು ಬೃಹನ್ಮಠ ಪಾಲೀಕೊಪ್ಪ ಈ ಮಹನೀಯರ ಅಧ್ಯಕ್ಷತೆಯಲ್ಲಿ ಸಭೆಕೂಡಿ ಆದಿಯಲ್ಲಿ ಇಲ್ಲಿಯ ಪಟ್ಟಾಧಿಕಾರಿಗಳು ಸೂಚನೆಯನ್ನಿತ್ತ ಮೇಲೆ ಅಧ್ಯಕ್ಷ ಮಹಾಶಯರು ಧರ್ಮದ ಬಗ್ಗೆ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಇಲ್ಲಿಯ ಪಟ್ಟಾಧಿಕಾರಿಗಳು ಸರ್ವರ ಆಭಾರವನ್ನು ಮನ್ನಿಸಿದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆದಿವಸ ಹನುಮಂತ ದೇವಾಲಯ ಬಲಭಾಗದಲ್ಲಿ ಸದರಿ ಶ್ರೀಗಳವರ ಅಧ್ಯಕ್ಷತೆಯಲ್ಲಿಯೇ ಸಭೆಯು ಕೂಡಿ ಸೆಟ್ಟಿಮೆಂಟಿ ಇರ್ಪಿಶ್ವರು ಸೂಚನೆಯನ್ನಿತ್ತ ಮೇಲೆ ಸದರಿ ಮಹಾಸ್ವಾಮಿಗಳು "**ಧರ್ಮ**" ಅಂದರೇನು, ಈ ವಿಷಯವನ್ನು ಸಪ್ರಮಾಣವಾಗಿ ತಿಳುಹಿಸಿದರು. ಸರ್ವಧರ್ಮಗಳೂ ಈಶ್ವರನಿರ್ಮಿತಗಳಾಗಿರೂ ಕೆಲವರು ನನ್ನ ಧರ್ಮ ಹೆಚ್ಚು ನನ್ನ ಧರ್ಮ ಹೆಚ್ಚು ಎಂದು ಹೆಮ್ಮೆಯಲ್ಲಿ ಬಿದ್ದು ಬಳಲುವದನ್ನು ಕಂಡು ಪರಮಾಶ್ಚರ್ಯವೆನಿಸುತ್ತದೆ. ವೀರಶೈವ, ಸ್ಮಾರ್ತ, ವೈಷ್ಣವ, ಮಹಮ್ಮದೀಯ ಮೊದಲಾದ ಧರ್ಮಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು, ಶಂಕರಾಚಾರ್ಯರ, ಮಧ್ವಾಚಾರ್ಯ, ಪೈಗಂಬರ ಮೊದಲಾದ ಮತಾಚಾರ್ಯರು ಮಾನವರುದ್ಧಾರಕ್ಕಾಗಿ ಅನೇಕ ಧರ್ಮಗಳನ್ನು ಪ್ರಕಾಶಗೊಳಿಸಿ ಆಯಾ ಧರ್ಮಗಳಿಗೆ ತಕ್ಕ ಅನುಕೂಲಗಳನ್ನೂ ಕಲ್ಪಿಸಿದರು. ತಮ್ಮ ಮತಾಚಾರ್ಯರ ಆಜ್ಞಾನುಸಾರವಾಗಿ ವರ್ತಿಸುವದೇ ಮುಖ್ಯ ಮಾನವಧರ್ಮವಾಗಿದೆ ಎಂದು ಅನೇಕ ಶಾಸ್ತ್ರಪ್ರಮಾಣಗಳಿಂದಲೂ, ಲೌಕಿಕೋದಾಹರಣೆಗಳಿಂದ ಊರಪಂಡಿತಪಾಮರರಿಗೂ ತಿಳಿಯುವಂತೆ ಸಮಸ್ತರ ಚಿತ್ತಭಿತ್ತಿಯಲ್ಲಿ ವಿಷಯಚಿತ್ರಗಳನ್ನು ಚಿತ್ರಿಸಿದ ಬಳಿಕ ಹೋಟಗಿ ಶ್ರೀಗಳು ಉಪಸಂಹಾರವನ್ನು ಮಾಡಿದರು. ಸಭೆಗೆ ಬಂದಿದ್ದ ದ್ವಿಜರು, ಕುರುಬರು, ಮುಸಲ್ಮಾನರು ಮೊದಲಾದವರು ಇವರ ಭಾಷಣದಿಂದ ಆನಂದಭರಿತರಾಗಿ ಧನ್ಯವಾದವನ್ನಿತ್ತರು. ಸಭಾಕಾರ್ಯವು ವೈಭವದಿಂದ ನೆರವೇರಿದ ಸಂತೋಷಕ್ಕಾಗಿ ಮ|| ತುಕಪ್ಪಾ ರಾಚಪ್ಪಾ ಪಾಟೀಲ ಇವರು ಪ್ರಭೆಗೆ 1 ರೂಪಾಯಿಯನ್ನು ಭಕ್ತಿಪುರಸ್ಸರವಾಗಿ ಅರ್ಪಿಸಿದರು. ಪಾಲೀಕೊಪ್ಪ ಶ್ರೀಗಳಿಗೂ ಸದರಿ ತುಕಪ್ಪಗೌಡರಿಗೂ ಆಚಾರ್ಯವರ್ಯರು ನಿತ್ಯಸುಖವನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಸಭಾಭಾಗಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಆಂದೋಲಿಕೋತ್ಸವಾಹ್ವಾನಪತ್ರಿಕೆ

ಸಮಸ್ತ ವೀರಶೈವ ಮಂಡಲಿಯವರಲ್ಲಿ ವಿಜ್ಞಾಪನೆ.—

ಚಿತ್ರದುರ್ಗ ಡಿ|| ದಾವಣಗೆರೆ ಪಟ್ಟಣದ ಮಠಸ್ಥರು, ಶೆಟ್ಟರು, ಯಜಮಾನರು, ಗೌಡರು, ಶಾನುಭೋಗರು, ಬಣಕಾರರು, ಬುದ್ಧಿವಂತರು ಮುಂತಾದ ದೈವದವರ ಪ್ರಾರ್ಥನೆಯ ಮೇರೆಗೆ ಮಹಾ|| || ಸ್ವಾರಿಯು ಶುಕ್ಲ ಸಂ|| ವೈಶಾಖ ಶು||೧೧ (ತಾ|| ೧೯-೫-೨೯) ಭಾನುವಾರ ಪ್ರಾತಃಕಾಲ ೮ ಘಂಟೆಗೆ ದಯಾಳುಗಳಾದ ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಮಹೋತ್ಸವಪೂರ್ವಕ ದಯಮಾಡಿಸುವದರಿಂದ ತಾವು ತಮ್ಮ ಆಪ್ತಮಿತ್ರರೊಡನೆ ಆಗಮಿಸಿ ಶ್ರೀಗುರುದರ್ಶನಾಶೀರ್ವಾದಗಳಿಗೆ ಪಾತ್ರರಾಗಿ ಧನ್ಯರಾಗಬೇಕೆಂದು ಕೋರುವ,

ಬಿ. ಎಂ. ಓಂಕಾರಪ್ಪಯ್ಯ,
ಸ್ವಾಗತಸಂಘಾಧ್ಯಕ್ಷ.

[ಈ ಮೊದಲು ಪ್ರಭಾಪತ್ರಿಕೆಯಲ್ಲಿ ಕೆಳಗಿರುವ ಸ್ತುತಿಯು ಮುದ್ರಿತವಾಗಿತ್ತು. ಅದರಲ್ಲಿ ಇನಿಯ ಶ್ಲೋಕದ ಅರ್ಧಚರಣವು ಬಿಟ್ಟುಹೋದುದರಿಂದ ಪುನಃ ಮುದ್ರಿಸಬೇಕಾಗಿದೆ. ಇದರಂತೆಯೇ ಸರ್ವರೂ ಪಠಿಸಬೇಕು.]

ಪ್ರತಿದಿವಸ ಉದಯಕಾಲದಲ್ಲಿ ಪಠಿಸತಕ್ಕ ಶ್ರೀ ಜಗದ್ಗುರು ರೇಣುಕಾಚಾರ್ಯರ ಸ್ತುತಿಯು.

[ಹರನಾಮವನು ಬಿಡದೆ ಜಪಿಸಬಲ್ಲವರು: ಎಂಬಂತೆ]

ವಾರ್ಧಕಷಟ್ಪದಿ.

ಗುರುನಾಮವನು ಮನದೊಳವಿರತಂ ಜಪಿಸುತಿಹ |
ನರನಾಣವಾದಿ ದುರ್ಮಲಪಾಶಬಂಧನಂ |
ದುರಿತಮಯಮಾದ ಸಂಸಾರಸಂತಾಪಮದು
ನೆರೆನೀಗಿ ಮೋಕ್ಷವಹುದು ||

ಏಕಾತ್ಮ್ಯ ಕವಹುಕ ರೇಣುಕಾರ್ಯ ಭೂ |
ಲೋಕಸಂಚಾರಿ ರೇವಣಸಿದ್ಧ ಗಣವೃಧ್ಧ |
ನಾಕಶಾಸನನತಪದಾಂಭೋಜ ಯತಿರಾಜ ಜಿತಮಾಜ ನುತಭೂಭುಜ ||

ಲೋಕೇಶ ಕೊಲ್ಲಿಪಾಕೇಶ ಸೋಮೇಶಭವ |
ನಾಕಪ್ರಯಾಣ ರಂಭಾಪುರೀಸದನ ಮಾ |
ಯಾಕಲಿತಭವನಾಶ ವೀರಮಾಹೇಶ ವಿಭುಮಹಿಮಾಂಬುರಾಶಿಯೆಂದು ||೧||

ವೀರಗೋತ್ರೇಶ ಪಡ್ಡಿಡಿಸೂತ್ರಕರ್ತ ಗಂ |
ಭೀರ ದುರಿತಧ್ವಂಸಿ ದುಷ್ಟಸಮಯಧ್ವೇಷಿ |
ಗೋಲಕಸ್ತನಾಥಮದಲೋಪಭಸಿತಾಲೇಪ ರುದ್ರಾಕ್ಷಮಣಿ ವೀರಸನಮಯಸ್ವಾಪಕಾರ್ಯ ಗಿರಿಧೈರ್ಯ ನಿಗ | [ಕಲಾಪ ||
ಮಾರಾಮ ಸುದಿಸೋದಿ ನಿರುಪಾಧಿ ದುರ್ವಾದಿ |
ನೀರದಮಹಾನಿಲಾಮಲ ಸಕಲ ನಿಷ್ಕಲ ಕೈವಲ್ಯಗಲದಾಯಿ ಯೆಂದು ||೨||

ಈಶ್ವರಪ್ರಭವಾನಸೋದ್ಭವ ಶ್ರೀಭಾರ |
ತೀಶ್ವರಾದಿತ್ರಿದಶಲಿಂಗಪ್ರದಾಮೃತದ |
ಶಾಶ್ವತಾನಂದಮಯ ದಾನವಧ್ವಂಸಿಯ ಭಾಸ್ವದೈಶ್ವರ್ಯನಿಲಯ ||

ಅಶ್ವತ್ಥದಂಡಕರ ಶೀರ್ಷಶಿವಲಿಂಗಧರ |
ವಿಶ್ವಗುರು ವಿಶ್ವಚೈತನ್ಯ ವಿಶ್ವಾತ್ಮ ವಿಭು |
ವಿಶ್ವಂಭರಸ್ತುತ್ಯ ವಿಜಯ ವಿನಯ ವಿರಾಗಿ ವಿಜ್ಞಾನಿ ವರ್ಮಾನಿಯೆಂದು ||೩||

ಭದ್ರಾನದೀತೀರವಾಸಿ ಸನ್ಯಾಸಿಗುರು |
ರುದ್ರಮುನಿತಾತ ದುರುಪದ್ರವಮದೂರ ಧೃತ |
ಮುದ್ರಾನಿಕರ ಸುಖಸಮುದ್ರ ಪ್ರಚುರ ವೀರ ಭದ್ರಾಂಕಶ್ರೀಕರ ||
ನಿದ್ರಾವಿಭಂಗ ಸದಪಾಂಗ ಹರಿದಂಗ ಮಲ |
ಯಾದ್ರಿಪೂತಕರ ದಾರಿದ್ರ್ಯಸಂಹಾರ ಭೂ |
ರುದ್ರ ದೀಕ್ಷಾಗುರು ಕ್ಷುದ್ರಪಿಶರಮದಮಹಾದ್ರಿದಂಭೋಳಿಯೆಂದು ||೪||

ಚಂದ್ರಮೌಳೀಶಲಿಂಗಪ್ರದಾವಂತೀಶ |
ಚಂದ್ರಹಾಸದ ಮಂತ್ರಬೋಧ ಸುಜನಾಮೋದ |
ಚಂದ್ರವದನಾಕನ್ಯಕಾಬಂಧಹರ ರುಚಿರ ಹರಿಮಸ್ತಕನ್ಯಸ್ತಕರ ||
ಚಂದ್ರಧರ ಬಹುಲೀಲ ಕರುಣಾಲವಾಲ ಪರ |
ಚಂದ್ರರವಿವಂಶಜನೃಪಾಲಪಾಲ ಸುಶೀಲ |
ಚಂದ್ರಕೀರ್ತಿ ಪ್ರಭಾಮೂರ್ತಿ ವಿಸ್ಫೂರ್ತಿ ವಿಹತಾರ್ತಿ ಗುರುಮೂರ್ತಿಯೆಂದು ||೫||

ವರ್ಣಾಶ್ರಮಸ್ಥಾಪಕಾರ್ಯ ಷಟ್ಸ್ಥಲಾರ್ಯ |
ನಿರ್ಣಯಾಗಮಕುಶಲ ವರ್ಣಿತಶ್ರುತಿಜಾಲ |
ಪರ್ಣಾಲಯಸ್ಫಟಿಕಜಾದಿಬೋಧಕ ಲಲಾಟಾಕ್ಷ ಶಿವಪಕ್ಷ ದಕ್ಷ ||
ಸ್ವರ್ಣಮಯಲಂಕಾತ್ರಿಕೋಟಿಲಿಂಗಸ್ಥಾಪ |
ಕಾರ್ಣವಕ್ಷಮ ಸುಗಮ ಭೀಮ ನಿಸ್ಸೀಮ ಚಿ ||
ತ್ಪೂರ್ಣ ಪದತೀರ್ಥಾಳಿಧಾರಿ ಸದುಪಾರಿ ಸುವಿಚಾರಿ ಶಮನಾರಿಯೆಂದು ||೬||

ಗುರುವರನ ನೂರೆಂಟುಪುಣ್ಯನಾಮಂಗಳನು |
ಪರಮಾನುರಾಗದಿಂದುದಯಾಸ್ತಕಾಲದೊಳು |
ಪಿರಿದೋದಿಕೇಳಿಪರಿಯುಸುವರ್ಗೆ ಪಮಿಪುರೀವರನಕಾರುಣ್ಯದಿಂದೆ ||
ಕೊರತೆಯಿಲ್ಲದೆ ಸಕಲಸಂಪದಾಚಾರಕಂ |
ಕರಭಕ್ತಿವಿರತಿಪ್ರಮೋದಗಳುಕ್ಕೆನಾಂ |
ಪರತರಾನಂದಮಯಕೈವಲ್ಯಪದಮಪ್ಪುದೋರಂತೆಜಪಿಪುದೆಂದು ||

ಇಂತಮರನಾಥಕವಿವಿರಚಿತಮಾದ
ಶ್ರೀ ಜಗದ್ಗುರು ರೇಣುಕಾಚಾರ್ಯಸ್ತುತಿಯು ಸಂಪೂರ್ಣವು.

ಶ್ರೀಮಜ್ಜಗದ್ಗುರು ಪಂಡಿತಾಚಾರ್ಯ ಪ್ರಸೀದತು.

ಶಾಂತಿಪಂಚಕಂ.

ಭಾ. ಷ|| ಕಮಲಕಲ್ಯಾರಾದಿಗಳ ಬಹು |
ಘಮಘಮಿಪ ವಾಸನೆಯಸಿರಿಯಿಂ |
ಬಮಿತ **ಶಾಂತಿಯು** ಬಪ್ಪದೆನೆ ಬರದಾಯ್ತು ಪರಿಕಿಸಲು ||
ವಿಮಲಶೀತಲಜಲಧಿ ತನುವಂ |
ಶಮವಯಾಚಿಸಿ ತೊಳೆಯಲದರಿಂ |
ದಮಿತ **ಶಾಂತಿಯು** ಬಪ್ಪದೆನೆಬರದಾಯ್ತು ಪರಿಕಿಸಲು ||೧||

ತರತರದಪಕ್ವಾನ್ನ ಭೋಜನ |
ದುರುತರಾನಂದದೊಳು ಮನಮಿರೆ |
ಪರಮ **ಶಾಂತಿಯು** ಬಪ್ಪದೆನೆ ಬರದಾಯ್ತು ಪರಿಕಿಸಲು ||
ವರತರುವಿನಡಿಗೆರಗಿ ನೂರ್ಮಣ |
ಕಿರಣಗಳಗೀತನುವನೊಡ್ಡುದ |
ಲಿರಲು **ಶಾಂತಿಯು** ಬಪ್ಪದೆನೆಬರದಾಯ್ತು ಪರಿಕಿಸಲು ||೨||

ಸಕಲತಾರಾಕುಲಕಧಿಪನಹ |
ಸುಕಲಪತಿರಸ್ಮಿಪ್ರಭೆಯೊಳಂ |
ಗಿಕಿಸಿತೋನ್ನುಖದಿಂದಲಿರೆ **ಶಾಂತಿಯದು** ಬರದಿರಲು ||
ಸುಕವಿಗಳು ರಚಿಸಿಪ್ಪ ಕಾವ್ಯಗ |
ಳಖಿಳವನುಗ್ರಹಿಸಲ್ಕೆ ಮನಮದು |
ವಿಕಸಮಾಯ್ತದರಿಂದಲುಂ **ಶಾಂತಿಯದು** ಬರದಿರಲು ||೩||

ವಾತಪಿತ್ತಶ್ಲೇಷ್ಮಗಳಗೀ |
ಖ್ಯಾತತನುವಾಗಾದವದರಿಂ |
ದೀಶರದರೋಗಗಳು ಪೋಗಲ್ಕಗದವನುಕೊಳ್ಳೆ ||
ವೀತಸೋಕತೆಯಿಂದ **ಶಾಂತಿಯ** |
ದಾತುರದಿಬಹುದೆನಲುನೋದ |
ಲ್ಯಾತುಕೊಂಡಿದೆ ನಾಮದಿಂ **ಶಾಂತಿ** ಬರದಾಯ್ತು ||೪||

ಈಪರಿಯೊಳತಿಕಾರಣಗಳಿಂ |
ದಾಪರಾತ್ಪರ **ಶಾಂತಿ** ಬರದಿರೆ |
ಶ್ರೀಪರತ್ಪರರೂಪ **ಪಂಚಾಚಾರ್ಯಪ್ರಭೆಯಿಂದಾ** ||
ತಾಪಪಾಪಗಳೆಲ್ಲ ಪೋಗುಗು |
ಮಾಪರಿಯ ನಿಜ್ಜಯದೊಳೋದಿರಿ |
ಭಾಪು **ಶಾಂತಿಯು** ದೇಶಕಾಲದೊಳಿಮಗುಣಮಗಳ್ಕಂ ||೫||

ಮುದೇನೂರು ಬೃಹನ್ಮಠಾಧೀಶನಾಗೀಶಶಿವಾಚಾರ್ಯ
ಶ್ರೀಕ್ಷೇತ್ರಕಾಶೀ ವಿಶ್ವಾರಾಧ್ಯಗುರುಕುಲವಾಸೀ.

ಬೆಲೆಯಲ್ಲಿ ಕಡಿಮೆಯಾದದ್ದು !
ಗುಣದಲ್ಲಿ ಮೇಲಾದದ್ದು !
ಶೀಘ್ರಗುಣಕಾರಿಯಾದದ್ದು !

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು "**ಗೃಹಮಾತೆ**"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಎಪ್ಪತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಆದ್ದರಿಂದ ಈ ಔಷಧಾಲಯಕ್ಕೆ "**ಅಷ್ಟವರ್ಗೌಷಧಾಲಯ**"ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[4] **848. Ganjipet Poona City.**

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿ ಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖದಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ, ಶಕ್ತಿವೈಶಿಷ್ಟ್ಯ, ಹುಡುಕಲಿರುವ ಶಕ್ತಿಪಕ್ಷ ಮುದ್ರಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಭಾರಾಕ್ಷ ಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುರಗಿರಿ ಶ್ರೀ ಚನ್ನಬಸವ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅನರ್ಘ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| 3 ಅಕ್ಷಯತೃತೀಯಾ (ತಾ|| 11-5-29) ನೆಯ ದಿವಸ ಪ್ರಕಾಶವಾಗುವದು. ಈ ದಿನದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.

ಶ್ರೀ ಶಿವತತ್ವಗ್ರಂಥಮಾಲಾಮಂದಿರ
[5] **ಜಂಗಮವಾಡಿಮಠ ಬನಾರಸ್ ಸಿಟಿ.**

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

1928—ಈ ವರ್ಷದಲ್ಲಿ ನಡೆದಷ್ಟು ವಿಮೆಗಳು ಕಂಪೆನಿಯ ಚರಿತ್ರೆಯಲ್ಲೇ ಇರಲಿಲ್ಲ !!

ಈಗ ಜಾರಿಯಲ್ಲಿರುವ ಪಾಲಿಸುಗಳು	ರೂ.	1,36,00,00,000
ಹೊಸದಾಗಿ ಆಗಿರುವದು	ರೂ.	26,20,00,000
ಹಂಚಿರುವ ಲಾಭ	ರೂ.	58,62,400
ಕೊಟ್ಟಿರುವ ವಾರಸು	ರೂ.	87,27,300

ಈ ಕಂಪೆನಿಯನ್ನೇ ಚುನಾಯಿಸಬೇಕಾದ ಕಾರಣಗಳು—

1. ಪ್ರಪಂಚದ 5 ಖಂಡಗಳಲ್ಲಿಯೂ ಇರತಕ್ಕ ಈ ಕಂಪೆನಿಯ ವಿಮೆದಾರರ ಜೊತೆಯಲ್ಲಿ ಇಂಡಿಯಾ ದೇಶದಲ್ಲೇ 5 ಲಕ್ಷ ಜನಗಳನ್ನುಳ್ಳ (ವಿಮೆದಾರರು) ಭಾಗಿಸಂಸಾರದಲ್ಲಿ ಸೇರಿ ಭಾಗಿಗಳಾದಂತಾಗುತ್ತೆ.

2. ಎಷ್ಟೇ ಕಡಿಮೆಯೆಂದರೂ ರೂ. 1,000 ಗಳ ವಿಮೆಗೆ ರೂ. 500 ರಿಂದ 600 ರ ವರೆಗೂ ಲಾಭವನ್ನು ಪಡೆಯಬಹುದು. ಇನ್ನೂ ಜಾಸ್ತಿಯಾಗುವ ಸಂಭವವೂ ಉಂಟು.

3. ಈ ರಾಕ್ಷಸಶಕ್ತಿಯನ್ನುಳ್ಳ ಮತ್ತು ಅನುಕೂಲಗಳನ್ನುಳ್ಳದ್ದು ಮತ್ಯಾವದೂ ಇಲ್ಲ.

4. ಗಂಡಸರು, ಹೆಂಗಸರು, ಮಕ್ಕಳು ಯಾರು ಬೇಕಾದರೂ ವಿಮೆ ಮಾಡಬಹುದು.

[44] **ಏಜಂಟರು ಬೇಕಾಗಿದೆ.**

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ. ಅಥವಾ ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು **ಯಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ಶಿವರಾಂಪೇಟೆ, ಮೈಸೂರು.

ಸತ್ಯದ ಜಗತ್ತು.] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂದ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಪಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಪವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ತಮಪತ್ರಿ, ಪಿಠಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಳಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಬೋಗಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀಮಗಜ, ಅಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸು ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ ಸಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬೂರದಿರೋಣ, ದಪ್ಪಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [15]

ಪತ್ತೆ:—**ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ !!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೇರಿಯಾವನ್ನೂ ಇತರ ಜ್ವರಗಳನ್ನೂ ಖಚಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೆ ?

ಮಲೇರಿಯಾಕ್ಕೆ ಗದ್ದೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೇ? ... ಇದೇ ಮಲೇರಿಯಾನವನ್ನೇ ಹೆಗಲಿಗೆತ್ತಿ ... ಕ್ರಯ—8 ಡ್ರೆಗೆ 1-8-0, ಅರ್ಧ ಡಜ಼ 8-8-0, ಡಜ಼ 16-8-0.

ಟಿಕ್ಕು, ಹೆಮಯಿನಾಧ ಮದ್ದುಗಳೂ, ಪರೀಕ್ಷಿಸಿಕೊಂಡ ವೈದ್ಯಕೀಯ, ಪ್ರೇಮಳೇಹಗಳೂ, ಇತರ ಪ್ರಸಿದ್ಧ ಥರದ ಈ ಸವಾಲುಗಳು ಇರುತ್ತವೆ. ಸ್ಪಷ್ಟ ಕಳಗಿನ ಬರೆಯಿರಿ. [೩೮]

ಮಲೇರಿಯಾನ ಕಂಪೆನಿ, ನಂಬ್ರ ೩೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮಾ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನರೀತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವಹರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ ದಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನ ಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೧ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೧ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾಪಟಿ ದುಷ್ಪ್ರಶ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೧ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೬-೦
ಡಜ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪಂಚಾಚಾರ್ಯಪ್ರಭಾ.

೧೯೩೬ ನೆಯ ಆಗಸ್ಟ್ ತಾ|| ೩ ನೇ ಸೋಮವಾರ

~~ವಿವಿಧದೇವತೋಪಾಸನೆಯ ಫಲ~~

ವೈದಿಕಮತಾನುಯಾಯಿಗಳಾದ, ಶೈವರಾಗಲಿ ವೀರಶೈವರಾಗಲಿ, ವೈಷ್ಣವರಾಗಲಿ, ಶ್ರೀವೈಷ್ಣವರಾಗಲಿ, ವೇದೋಕ್ತ ಕರ್ಮಗಳೆಲ್ಲವನ್ನೂ ಅನುಷ್ಠಿಸಲಾರರು. ವೇದಗಳು ವಿಷ್ಣು, ಬ್ರಹ್ಮ, ಶಿವ, ಗಣಪತಿ, ಶಕ್ತಿ, ಇಂದ್ರ, ಅಗ್ನಿ, ಯಮಾದಿ ಸಕಲದೇವತೆಗಳನ್ನೂ ಸ್ತುತಿಸಿರುತ್ತವೆ. ಆಯಾಯ ಪ್ರಕರಣಾನುಸಾರವಾಗಿ ವಿಷ್ಣುವೇ ಮುಖ್ಯದೇವರೆಂದೂ ಶಿವನೇ ಮುಖ್ಯದೇವರೆಂದೂ ಶಕ್ತಿಯೇ ಮುಖ್ಯದೇವತೆಯೆಂದೂ ಹೀಗೆ ಆಯಾಯ ದೇವತೆಗಳ ಮಹತ್ವವನ್ನು ವರ್ಣಿಸಿರುತ್ತವೆ. ಶಿವನನ್ನು ಆರಾಧಿಸುವವರಿಗೆ ವಿಷ್ಣುವಿನಲ್ಲಿ ಪ್ರವೃತ್ತಿ ಹುಟ್ಟುವುದಿಲ್ಲ. ವಿಷ್ಣುವನ್ನು ಆರಾಧಿಸುವವರಿಗೆ ಶಿವನಲ್ಲಿ ಪ್ರವೃತ್ತಿ ಹುಟ್ಟುವುದಿಲ್ಲ. ಶಕ್ತಿಯನ್ನಾರಾಧಿಸುವವರಿಗೆ ಶಿವ ವಿಷ್ಣುಗಳೀರ್ವರಲ್ಲಿಯೂ ಪ್ರವೃತ್ತಿಹುಟ್ಟುವುದಿಲ್ಲ. ಅನೂಚಾನವಾಗಿ ಒಂದೊಂದು ಮತೀಯರಿಗೆ ಒಬ್ಬೊಬ್ಬ ದೇವರಲ್ಲಿ ವಿಶೇಷವಾದ ಭಕ್ತಿಯು ನೆಲೆಗೊಂಡಿರುವುದರಿಂದ ಸರ್ವಸಾಕ್ಷಿಯಾದ ದೇವರೊಬ್ಬನೇ ಆಯಾಯ ಉಪಾಸಕರ ಇಚ್ಛಾನುಸಾರವಾಗಿ ನಾಮರೂಪಕ್ರಿಯಾಭೇದಗಳನ್ನು ಹೊಂದಿ ಅವರವರ ಧ್ಯೇಯಾಕಾರವಾಗಿ ಪರಿಣಮಿಸಿ ಜೀವರಿಗುಂಟಾದ [illegible] ಧವನ್ನು ನಿವೃತ್ತಿಗೊಳಿಸುವದು ದೇವರ ಸ[illegible] ಶೈವರಿಗೆ ಶಿವಾಕಾರನಾಗಿಯೂ ವೀರಶೈ[illegible] ನಾಗಿಯೂ ವೈಷ್ಣವನಿಗೆ ವಿಷ್ಣ್ವಾಕಾರನಾ[illegible] ಯರಿಗೆ ಶಕ್ತ್ಯಾಕಾರನಾಗಿಯೂ ಕಾಣಿಸುವ[illegible] ರಮಕಾರುಣಿಕನಾದ ಆನಂದಮಯನಾದ ಚಿದು[illegible] ಪನಾದ ಆ ಪರಮಾತ್ಮನ ಕಲ್ಯಾಣಗುಣವಾಗಿರುತ್ತದೆ. ಆದುದರಿಂದ ಆ ಪರಮಾತ್ಮನನ್ನು ಶಿವಾಕಾರದಿಂದ ಪೂಜಿಸುವವರಿಗೂ ವಿಷ್ಣ್ವಾಕಾರದಿಂದ ಪೂಜಿಸುವವರಿಗೂ ಶಕ್ತ್ಯಾಕಾರದಿಂದ ಪೂಜಿಸುವವರಿಗೂ ಕಲ್ಪವೃಕ್ಷ ಚಿಂತಾಮಣಿಗಳಂತಿರುವ ದೇವರು ಆಯಾಯ ರೂಪದಿಂದವತರಿಸಿ ಅವರವರ ಕರ್ಮಾನುಸಾರವಾಗಿ ಫಲಗಳನ್ನೀಯುತ್ತಾನೆಂಬುದರಲ್ಲಿ ಸಂಶಯವೇನೂ ಇಲ್ಲ.

ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ।

ಗಂಗಾ, ಗೋದಾವರಿ, ಯಮುನಾ ಮುಂತಾದ ನದಿಗಳು ಒಂದೊಂದು ಸ್ಥಾನದಲ್ಲಿ ಹುಟ್ಟಿ ಒಂದೊಂದು ದಿಕ್ಕುಗಳಲ್ಲಿ ಹರಿದು ಕೊನೆಯಲ್ಲಿ ಸಮುದ್ರದಲ್ಲಿ ಸಮರಸವಾಗಿ ಹೋಗುವಂತೆ ಶೈವವೈಷ್ಣವಾದಿಸಕಲಮತೀಯರೂ ತಮ್ಮ ಮಹಾಚಾರ್ಯರ ಉಪದೇಶಾನುಸಾರವಾಗಿ ಸಂಸ್ಕಾರಗಳನ್ನು ಪಡೆದು ಆಯಾಯ ಮತದ ಧ್ಯೇಯವಸ್ತುವನ್ನಾರಾಧಿಸಿದರೆ ಇವೆಲ್ಲಕ್ಕೂ ಆಧಾರನಾದ ಪರಮೇಶ್ವರನಲ್ಲಿ ಸೇರಿಯೇ ಸೇರುತ್ತಾರೆ. ಆದುದರಿಂದ ದೇವರಿಲ್ಲ, ಪರಲೋಕವಿಲ್ಲ, ಬಂಧಮೋಕ್ಷಗಳಿಲ್ಲ ಅವರವರ ಬಲಾಬಲಗಳೇ ಸುಖದುಃಖಗಳನ್ನೀಯುತ್ತವೆ ಯೆಂಬ ನಾಸ್ತಿಕಮತಗಳನ್ನು ಮಾತ್ರ ಬಿಟ್ಟು ಉಳಿದ ಆಸ್ತಿಕಮತಗಳೆಲ್ಲವೂ ವಿವೇಕಶಾಲಿಗಳಿಗೆಲ್ಲ ಸುಖಪ್ರದಗಳೇ ಆಗಿವೆ. ವಿವೇಕಶೂನ್ಯರು ಮಾತ್ರ ಈ ಮತದಲ್ಲಿ ಸ್ವಾರಸ್ಯವುಂಟು. ಆ ಮತದಲ್ಲಿ ಸ್ವಾರಸ್ಯವಿಲ್ಲವೆಂದು ಒಂದು ಮತವನ್ನು ಬಿಟ್ಟು ಮತ್ತೊಂದು ಮತವನ್ನು ಅವಲಂಬಿಸಲು ಹವಣಿಸುತ್ತಾರೆ. ಅಂಥವರು ಯಾವ ಮತದಲ್ಲೂ ಸ್ಥಿರವಾಗಿ ನಿಲ್ಲದೆ ತ್ರಿಶಂಕುಸ್ವರ್ಗದಂತೆ ನಿರಾಧಾರಿಗಳಾಗಿ ಅಲೆಯಬೇಕಾಗುತ್ತದೆ. ಆದುದರಿಂದಲೇ ಗೀತಾಕಾರರು,

ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ।

ಕಷ್ಟಪಟ್ಟರೂ ತಾನು ಪೂರ್ವದಲ್ಲಿ ಹಿಡಿದ ಮತಧರ್ಮವೇ ಶ್ರೇಷ್ಠವಾದುದು. ಪರಧರ್ಮಕ್ಕೆ ಕೈಯೊಡ್ಡುವುದು ಸರಿಯಲ್ಲವೆಂದು ಹೇಳಿರುತ್ತಾರೆ.

ಹೀಗಿದ್ದರೂ ಅನೇಕರಿಗೆ ಈಗಿನ ನೂತನ ವಾತಾವರಣದಲ್ಲಿ ಒಂದು ಮತವನ್ನು ಬಿಟ್ಟು ಮತ್ತೊಂದು ಮತಕ್ಕೆ ಪ್ರವೇಶಮಾಡಲಿಚ್ಛೆಯು ಬಹಳವಾಗಿ ಹಾತೊರೆಯುತ್ತಲಿದೆ. ಅನೇಕರು ಅದಕ್ಕೆ ಬದ್ಧಕಂಕಣರಾಗಿ ಹಣದ ಆಶೆಯನ್ನೂ ಇತರ ಭೋಗ್ಯವಸ್ತುಗಳ ಆಶೆಯನ್ನೂ ತೋರಿಸಿ ವಿವೇಕಶೂನ್ಯರಾದ ಮೂಢರನ್ನು ತಮ್ಮ ಮತಕ್ಕೆ ಕೆಳೆದೊಯ್ಯಹತ್ತಿದ್ದಾರೆ. ಇದನ್ನು ನೋಡಿ ಸ್ವಮತೀಯರು ಸಹಿಸದೆ ಆ ಮೂಢರ ಬಳಿಗೆ ಹೋಗಿ ಪುನಃ ತಮ್ಮಮತಕ್ಕೆ ಎಳೆಯಹತ್ತಿರುತ್ತಾರೆ. ಆ ಮತದಲ್ಲಿರುವ ಸ್ವಾರಸ್ಯವೇನು? ಈಮತದಲ್ಲಿರುವ ಅಸ್ವಾರಸ್ಯವೇನು? ಎಂಬ ವಿಚಾರಶಕ್ತಿಯು ಆ ಮೂಢನಿಗೆ ಹುಟ್ಟುವಂತಿಲ್ಲ. ಯಾರಬೋಧೆಯು ಹೇಗೆ ಆಗುತ್ತದೆಯೋ ಹಾಗೆ ಅವನ ಬುದ್ಧಿಯು ಸುತ್ತಲಿಕ್ಕೆ ಹತ್ತುವದು. ಇದರಿಂದ ಪರಸ್ಪರ ಮತಗಳಿಗೆ ವೈಷಮ್ಯವು ಪ್ರಾಪ್ತವಾಗಿ ಕಾಮಕ್ರೋಧಾದಿಗಳಿಂದ ಪೀಡಿತರಾಗಿ ವಿರೋಧದಲ್ಲಿ ಪರಿಣಮಿಸುವುದೊಂದೇ ಫಲವಲ್ಲದೆ, ಇನ್ನಾವಫಲವೂ ಕಂಡುಬರುವುದಿಲ್ಲ. ಮತವು ಯಾವಾಗಲೂ ಮೋಕ್ಷವೆಂಬ ಮಹಾಸೌಖ್ಯವನ್ನು ಹೊಂದುವುದಕ್ಕಾಗಿಯೇ ಇರುವುದಲ್ಲದೆ, ವೈಷಯಿಕ ಆನಂದಕ್ಕಾಗಿ ಇರುವುದಿಲ್ಲ. ಕ್ರಮತಪ್ಪದೆ ಇಂದ್ರಿಯ ಸಂಯಮನಮಾಡಿ ಆಯಾಯ ಮತದ ರೀತಿಯಾಗಿ ಆಯಾಯ ದೇವರನ್ನು ಆರಾಧಿಸುವವನಿಗೆ ದೇವರು ಅಭಯ ಹಸ್ತವನ್ನು ನೀಡಿರುವಲ್ಲಿ ಮತ್ತೊಂದು ಮತಕ್ಕೆ ಹೋಗಿ ಮುಕ್ತಿ ಪಡೆಯುತ್ತೇನೆಂಬುವನು ತನ್ನ ಮನಸ್ಸಿನ ದೌರ್ಬಲ್ಯವನ್ನು ವ್ಯಕ್ತಪಡಿಸುವದಕ್ಕಾಗಿಯೇ ಹೊರತು ಬೇರೆ ಯಾವುದಕ್ಕೂ ಅಲ್ಲವೆಂಬುದು ಸ್ಪಷ್ಟವಾಗಿ ತೋರುತ್ತದೆ. ಈಗ ಪ್ರಪಂಚದಲ್ಲಿ ಕೆಲ ಕಾಮಿಪುರುಷರು ಸ್ತ್ರೀಯರಿಗಾಗಿ ತಮ್ಮಮತವನ್ನು ಬಿಟ್ಟು ಬೇರೆ ಮತವನ್ನು ಪ್ರವೇಶಿಸುವುದುಂಟು. ಕೆಲ ಕಾಮಿನಿಯರು ಪುರುಷರಿಗಾಗಿ ತಮ್ಮಮತವನ್ನು ಬಿಟ್ಟು ಬೇರೆ ಮತವನ್ನು ಪ್ರವೇಶಿಸುವುದುಂಟು. ಕೆಲವು ಸ್ತ್ರೀಪುರುಷರೀರ್ವರೂ ಎಲ್ಲಿಯಾದರೂ ದೊಡ್ಡ ಅಧಿಕಾರವಾಗಲಿ ವಿಶೇಷವಾದ ಸೌಕರ್ಯವಾಗಲಿ ಸಿಗುತ್ತದೆಯೆಂದರೆ ಈರ್ವರೂ ತಮ್ಮ ಮತವನ್ನು ತ್ಯಜಿಸಿ ಆ ಮತದ ಸಂಸ್ಕಾರಪಡೆಯಲು ಹೊರಡುತ್ತಾರೆ. ಹೀಗೆ ಕ್ಷಣಿಕವಾದ ಲೌಕಿಕವಾದ ವಿಷಯಭೋಗಗಳಲ್ಲಿ ಲಾಲಸರಾಗಿ ತಾವೇ ಆತ್ಮಕ್ಕೆ ನಿತ್ಯಾನಂದವನ್ನುಂಟುಮಾಡುವ, ತಮ್ಮ ಮತಗುರುಗಳ ಪರಂಪರಾಗತವಾಗಿ ಅಭ್ಯಾಸಕ್ಕೆ ಬಂದಿರುವ ಧ್ಯೇಯವಸ್ತುವಿನ ಸ್ವರೂಪವನ್ನೇ ಹಾಳುಮಾಡಿ ಬೆಂಕಿಯಿಂದ ಎದ್ದ ಕಿಡಿಗಳಂತೆ ಪರಮಾತ್ಮನ ಅಂಶಭೂತರಾದ ಜೀವಾತ್ಮರನ್ನು ತಿರುತಿರುಗಿ ಹೀನಾವಸ್ಥೆಗೆ ತರುತ್ತಿರುವರು. ಒಂದುವೇಳೆ ವೈಷಯಿಕ ಸುಖಗಳನ್ನೇ ತ್ಯಜಿಸಿ ಪರಮಾತ್ಮ ಸಾಕ್ಷಾತ್ಕಾರಪಡೆದ ಮಹಾನುಭಾವರಿರುವರೆಂದರೆ ಅಂಥವರು ಈ ಕಲಿಯುಗದಲ್ಲಿ ದುರ್ಲಭರೇ ಸರಿ. ತಮ್ಮ ಮತಕ್ಕೆ ಇತರರನ್ನು ಸೇರಿಸಿಕೊಳ್ಳಬೇಕೆಂಬುವವರೆಲ್ಲಾ ಪ್ರಾಯಶಃ ತಮ್ಮ ತಮ್ಮ ಜೀವನವ್ಯಾಪಾರವನ್ನು ನಡೆಸಿಕೊಳ್ಳುವ ಧ್ಯೇಯವುಳ್ಳವರಾಗಿರುವರಲ್ಲದೆ ಪತಿತರಾದ ಆತ್ಮರನ್ನು ಉದ್ಧರಿಸಬೇಕೆಂಬ ಸಂಕಲ್ಪವುಳ್ಳವರಾಗಿಲ್ಲ. ಗೋಮುಖವ್ಯಾಘ್ರನಂತೆ ಮೇಲೆಮಾತ್ರ ಪಾರಮಾರ್ಥಿಕ ವೇಷಭೂಷೆಗಳನ್ನು ಅಭಿನಯಿಸುತ್ತಾರೆ. ಅಂಥವರ ಮಾತನ್ನು ಕೇಳಿ ನಮ್ಮ ಮಾತಾಪಿತೃಗಳ ವಂಶಪರಂಪರಾಗತವಾಗಿ ಬಂದ ಮತಗಳನ್ನು ಬಿಟ್ಟು ಕ್ಷಣಿಕವಾದ ಪ್ರಾಪಂಚಿಕ ಸುಖಕ್ಕಾಗಿ ಮತ್ತೊಂದು ಮತಕ್ಕೆ ಹೋಗಿ ಪರಿಣಾಮದಲ್ಲಿ ದುಃಖಪಡುವುದಕ್ಕಿಂತಲೂ ತಮ್ಮ ಮತದಲ್ಲಿಯೇ ಇದ್ದು ಸುಖಪಡುವುದು ಮೇಲು. ವೇದದಲ್ಲಿ ಸಕಲ ದೇವತೆಗಳೂ ಉಕ್ತವಾಗಿರುವುದರಿಂದ ಯಾವ ಹೆಸರಿನ ದೇವರನ್ನು ಧ್ಯಾನಿಸಿದರೂ ಆ ಹೆಸರಿನಿಂದಲೇ ಆ ದೇವರು ಪ್ರತ್ಯಕ್ಷನಾಗಿ ಜೀವನ ಕೊರಳಿಗೆ ಬಿದ್ದಿರುವ ಮಾಯಾಪಾಶವನ್ನು ಹರಿದುಹಾಕಿ ಆತನನ್ನು ತನ್ನಂತೆ ಸರ್ವಸ್ವತಂತ್ರನನ್ನಾಗಿ ಮಾಡಿಕೊಡುತ್ತೇನೆಂದು ಭಗವಂತನ ಆಜ್ಞಾರೂಪವಾದ ವೇದವೇ ಘೋಷಿಸುತ್ತಿರುವಲ್ಲಿ ತನ್ನ ವಂಶಾನುಕ್ರಮವಾಗಿ ಬಂದ ತನ್ನ ಅಭ್ಯಾಸದಲ್ಲಿರುವ ತನ್ನ ಮತದ ದೇವರನ್ನು ಬಿಟ್ಟು ಅನಭ್ಯಸ್ತವಾದ ಮತ್ತೊಂದು ದೇವರನ್ನು ಆರಾಧಿಸುವ ಮತಕ್ಕೆ ಹೋಗಿ ಬಳಲುವದು ಕೇವಲ ಮಂದಮತಿಗಳ ಲಕ್ಷಣವಲ್ಲದೆ ವಿವೇಕಶಾಲಿಗಳ ಲಕ್ಷಣವಲ್ಲ. ಆದುದರಿಂದ ಅನೂಚಾನವಾಗಿ ಬಂದ ತಮ್ಮ ತಮ್ಮ ಮತಗಳಲ್ಲಿದ್ದು ಭಗವಂತನನ್ನಾರಾಧಿಸಿ ಮುಕ್ತಿ ಪಡೆವುದು ಸತ್ಪುರುಷರಮಾರ್ಗವಾಗಿದೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನರೀತಿಯು ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಆ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವದಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳು ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾಪಟಿ ದುಸ್ತರ್ಕ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ಸಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತನಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತದೆ.

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟ್ ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಸಿಸ್ಟೆಂಟ್ ವೇ|| ಬ್ರಂ|| ಪಂಡಿತ ಶಿರ್ಸಿ ಗುರುಬಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

[illegible] ವೀರಶೈವ ಸಂಸ್ಕೃತಿ.

17-1-55

[illegible]

ಇತ್ತ ಕಡೆಗೆ ವೀರಶೈವ ಸಂಸ್ಕೃತಿಯು ಮುಳುಗಿತೆಂಬ ನಾದವು ನಾಲ್ಕೂ ಕಡೆಯಿಂದ ಕೇಳಬರುತ್ತಿರುವುದಲ್ಲದೆ ಅದರಸಲುವಾಗಿ ಸೂಚನೆಗಳೂ ನಾನಾಮುಖವಾಗಿ ಬರುತ್ತಿರುವವು. ಆದರೆ ಸಂಸ್ಕೃತಿಯು ಯಾರಿಂದ ಮುಳುಗಿತು? ಹೇಗೆ ಮುಳುಗಿಸಿದರು? ಅದರ ಪುನರುಜ್ಜೀವನವು ಹೇಗೆ ಆಗುವುದು? ಇದರ ವಿಚಾರವನ್ನು ಯಾರೂ ಮಾಡುತ್ತಿಲ್ಲ. ಒಂದು ಸಮಯದಲ್ಲಿ ವೀರಶೈವಧರ್ಮದಮೇಲೆ ಪರಧರ್ಮದ ಆಘಾತವು ಪ್ರಾಪ್ತವಾಗಿತ್ತು. ಆ ಕಾಲದಲ್ಲಿ ಗುರುಗಳು ವಿರಕ್ತರು ಮತ್ತು ಶಿವಶರಣಭಕ್ತರು ಬಲವತ್ತರವಾಗಿ ವಿರೋಧಿಸಿ ವೀರಶೈವಧರ್ಮದಮೇಲೆ ಒದಗಿದ್ದ ವಿಪತ್ತನ್ನು ದೂರಮಾಡಿದರು. ಆದರೆ ಸದ್ಯಃ ಒಂದುಮನೆಯ ಕಟ್ಟಡಕ್ಕೆ ಹುಳುಹತ್ತಿ ಅದು ಸಮೂಲವಾಗಿ ಪೊಳ್ಳಾಗಿ ಬೀಳುವ ಸಮಯವು ಬಂದರೂ ಯಜಮಾನರು ಅಲಕ್ಷ್ಯ ಮಾಡುವ ಪರಿಸ್ಥಿತಿಯು ಪ್ರಾಪ್ತವಾಗಿರುವದು. 'ವೀರಶೈವ ಸಂಸ್ಕೃತಿ' ಇದಿಷ್ಟೇ ಹೆಸರು ಮಾತ್ರ ಉಳಿದಿದೆ. ಧರ್ಮದ ಆಚಾರವಿಚಾರ ಕಟ್ಟುಪಾಡುಗಳು ನಾಶವಾಗಿ, ತಮ್ಮತಮ್ಮ ಮನಸ್ಸಿಗೆ ಬಂದಂತೆ ಭಸ್ಮಧಾರಣ ಮಾಡುವದು ಶಿವಪೂಜೆ ಮಾಡುವದು ಇದು ಒಂದೇ ವಿಚಾರವು ವೀರಶೈವರಲ್ಲಿ ಉಳಿದಿರುವದು. ಧರ್ಮ ಅಥವಾ ಸಂಸ್ಕೃತಿ ಅಂದಮೇಲೆ ಅದಕ್ಕೆ ಆಚಾರವಿಚಾರಗಳು, ಉದಾತ್ತ ತತ್ತ್ವದ ಸಂಘಟನೆಗಳು, ಮತ್ತು ಅದರ ಕಟ್ಟುಪಾಡುಗಳು ಪವಿತ್ರತೆಯು ಜೊತೆಯಾಗಿದ್ದರೆ, ಅದಕ್ಕೆ ಸಂಸ್ಕೃತಿಯೆನ್ನಬಹುದು. ಮತ್ತು ಅದು ಬಹಳ ದಿವಸವೂ ಬಾಳುವದು. ಬೌದ್ಧಧರ್ಮದಿಂದೊದಗಿದ ವಿಪತ್ತು ದೂರಾದ ನಂತರ ಗುರುಗಳು, ವಿರಕ್ತರು, ಭಕ್ತರು ತಮ್ಮ ವೈಭವದಲ್ಲಿ ಮಗ್ನರಾಗಿ, ತಮ್ಮತಮ್ಮ ಕರ್ತವ್ಯದಿಂದ ದೂರಾಗಹತ್ತಿದರು. ಅಪಾರವಾದ ಭಕ್ತಿಯಿಂದ ಭಕ್ತರು ಗುರುವಿರಕ್ತರಿಗೆ ಆದಾಯದ ಅನುಕೂಲತೆಗಳನ್ನು ಮಾಡಿಟ್ಟರು. ಅದರಿಂದ ಗುರು, ವಿರಕ್ತರು, ಭಕ್ತರಿಗೆ ಧಾರ್ಮಿಕ ಆಚಾರ ವಿಚಾರಗಳ ಕಟ್ಟುಪಾಡುಗಳನ್ನು ಇಡಬೇಕಾಗಿತ್ತು. ಆದರೆ ಯಾವುದೂ ಇಲ್ಲದಂತಾಯಿತು. ಇಂತಹ ಸಮಯದಲ್ಲಿ ಪರರಾಜರು ನಮ್ಮ ಹಿಂದೂಸ್ಥಾನಕ್ಕೆ ಪ್ರವೇಶಮಾಡಿದರು. ಅವರು ಯಾವ ಧರ್ಮದಮೇಲೂ ಯಾವ ಆಘಾತವನ್ನು ಮಾಡದಿದ್ದರೂ ಧರ್ಮಸಂಬಂಧವಾದ ಉದಾತ್ತಕಲ್ಪನೆಗಳೂ, ಆಚಾರವಿಚಾರಗಳೂ, ಅಭಿಮಾನವೂ ನಾಶವಾಗುವಂತೆ ಮಾಡಿದರು. ಪಾಶ್ಚಿಮಾತ್ಯ ರಾಷ್ಟ್ರಗಳೂ ಅದಿಭೌತಿಕ ಶಿಖರಕ್ಕೆ ಮುಟ್ಟಿದ್ದಕ್ಕಾಗಿ ಸುಖಸಾಧನೆಗಳು ಹೆಚ್ಚಾದವು. ಮತ್ತು ಅದರ ಸಹವಾಸದಿಂದ, ಶಿಕ್ಷಣದಿಂದ ಇದೇ ಜೀವನದ ನಿಜವಾದ ಸಾಧನೆ ಮತ್ತು ಸಹಾಯವೆಂಬುವ ವಿಚಾರ ಪರಂಪರೆಯು ತರುಣಜನರ ಮನಸ್ಸಿನಮೇಲೆ ಪ್ರತಿಬಿಂಬಿಸಿತು. ಗುರುವಿರಕ್ತರ ಆಧ್ಯಾತ್ಮಿಕ ವಿಚಾರವು ನಷ್ಟವಾಗಿ, ಸ್ಥಿರವಾದ ಆದಾಯದ ಅನುಕೂಲತೆಗಳು ಇದ್ದ ಕಾರಣ ಅದಿಭೌತಿಕ ಸುಖದಕಡೆಗೆ ಅವರ ಮನಸ್ಸು ಹೊರಳಿತು. ಅವರು ಮತಸುಧಾರಣೆಯ ಕಡೆಗೆ ಲಕ್ಷ್ಯವನ್ನು ಕೊಡಲಿಲ್ಲ. ಮನುಷ್ಯನಿಗೆ ಕಷ್ಟಬಂದಾಗ ಹೇಗೆ ಅವನು ಪರಮಾತ್ಮನ ಸ್ತೋತ್ರ ಮಾಡುವನೋ ಹಾಗೆಯೇ ವೀರಶೈವ ಸಂಸ್ಕೃತಿಯು ನಾಶವಾಗುವ ಸಮಯವು ಬಂದಾಗ ಮಾತ್ರ ಎಲ್ಲರ ನೋಟವು ಆಕಡೆಗೆ ತಿರುಗಿತು. ಎಲ್ಲಿಯವರೆಗೆ ಅನ್ಯಸಂಸ್ಕೃತಿಯ ಬೆನ್ನುಹತ್ತುವಜನರು ಸ್ವಲ್ಪ ಇದ್ದರೋ ಅಲ್ಲಿಯವರೆಗೆ ಅದರ ಬೆನ್ನುಹತ್ತಿದ ಜನರಿಗೆ ಸುಖವಾಯಿತು. ಆದರೆ ಆ ಸಂಖ್ಯೆಯು ಹೆಚ್ಚಾದುದರಿಂದ ಆ ಸುಖವು ದೂರವಾಯಿತು. ಆದುಕಾಗಣ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಸಮರಸವಾಗಿರುವ ಅನೇಕಜನ ದುರ್ಮಾರ್ಗಪ್ರವಿಷ್ಟ ತರುಣರಿಗೆ ಧರ್ಮದ ವಿಚಾರವು ಸ್ಮರಣೆಗೆ ಬಂದು ಆ ಸಂಬಂಧದ ವಿಚಾರ ಮಾಡುವ ಬುದ್ಧಿಯು ಉಂಟಾಗಿ ಉಪನ್ಯಾಸಗಳ ಮೂಲಕ ಲೇಖಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ಪ್ರಕಾಶಮಾಡಲು ತೊಡಗಿದರು.

ಆದರೆ ಹೀಗೆ ಮಾಡುವಾಗ್ಗೆ ಮೂಲಸಂಸ್ಕೃತಿಯು ಮತ್ತು ಅದರ ಆಚಾರವಿಚಾರಗಳು ಹೇಗಿರುವವು? ಎಂಬ ವಿಚಾರವನ್ನು ಮಾಡದೆ ಅದಕ್ಕಾಗಿ ತಮ್ಮ ಬುದ್ಧಿಯನ್ನು ಉಪಯೋಗಿಸದೆ ಪಾಶ್ಚಿಮಾತ್ಯ ಸಂಸ್ಕೃತಿಯಂತೆ ತಮಗೆ ಅನುಕೂಲವಾಗಿರುವ ಕೆಲವು ವಚನಗಳನ್ನು ಆಧಾರವಾಗಿಟ್ಟುಕೊಂಡು ಇವೇ ಧರ್ಮದ ಮೂಲತತ್ವಗಳೆಂದು ಪ್ರತಿಪಾದನೆಮಾಡುವ ಪ್ರಯತ್ನಗಳನ್ನು ಮಾಡುತ್ತಿರುವರು. ಆದರೆ ವಚನಗಳು ನಿಜವಾದ ವೀರಶೈವ ಧರ್ಮಾಭಿಮಾನಿಗಳು ಬರೆದಿರುವರೆಂದು ತಿಳಿದರೂ ಆದರಲ್ಲಿ ಧರ್ಮದ ಸರ್ವನಿಬಂಧನೆಗಳನ್ನು ಶಿಥಿಲಮಾಡುವ ಪ್ರಯತ್ನಗಳು ವಿಶೇಷವಾಗಿವೆ. ~~ಬಸವಾದಿ ಧರ್ಮದ ಕೆಲವು ಸಾಧು ಸತ್ಪುರುಷರು ಭಾಗ~~ವತ ಧರ್ಮವನ್ನು ನಿರ್ಮಾಣ ಮಾಡಿ, ಎಲ್ಲಾ ಭಕ್ತರೂ ಜಾತಿಯ ವಿಚಾರವನ್ನು ಮಾಡದೆ ಪರಮಾತ್ಮನಲ್ಲಿ ಭಕ್ತಿಮಾಡುವಾಗ್ಗೆ ಎಲ್ಲರೂ ಒಂದೇ ಇದ್ದೇವೆಂಬ ಭಾವದಿಂದಿರಬೇಕೆಂದು ಹೇಗೆ ಬೋಧಿಸಿದರೋ ಹಾಗೆಯೇ ಶಿವಶರಣರ ಪಂಥವು ಇದ್ದು ವೀರಶೈವಸಂಸ್ಕೃತಿಯು ಒಂದೇಂಗನೆಂದು ಅಭಿಪ್ರಾಯವು ಇದ್ದದ್ದಾದರೆ, ಇದು ಗ್ರಾಹ್ಯವೆಂದು ಹೇಳಲಿಕ್ಕಾಗುವದಿಲ್ಲ. ಕೆಲವು ಶರಣರು ಇಂದಿನವರೆಗೂ ಯಾರಮನಸ್ಸಿಗೂ ಬಾರದ ಧರ್ಮಬಾಹ್ಯಕೃತ್ಯಗಳನ್ನು ಮಾಡಿದರು. ಉದಾಹರಣಾರ್ಥವಾಗಿ ಬಸವನು ಬ್ರಾಹ್ಮಣರ ಕನ್ಯೆಯನ್ನು ಅಸ್ಪೃಶ್ಯರಿಗೆ ಕೊಡಿಸಿ ಲಗ್ನಮಾಡಿಸಿದನು. ಆ ಕಾಲದಲ್ಲಿ ಬಸವನಿಂದ ಉಪಕಾರವನ್ನು ಪಡೆದವರು ವಿರೋಧ ಮಾಡದಿದ್ದರೂ, ಈ ವಿಚಾರವು ವೀರಶೈವಸಂಸ್ಕೃತಿಗೆ ಮಾನ್ಯವೆಂದು ಯಾರೂ ನಂಬಲಿಲ್ಲ ಮತ್ತು ತಾವು ಹಾಗೆ ನಡೆಯಲಿಲ್ಲ. ಈ ವಿಚಾರವನ್ನು ಆಧಾರವಾಗಿಟ್ಟುಕೊಂಡು ಈಗಿನ ಸಮಯದಲ್ಲಿ ಅದರ ಅನುಸಾರಣೆಯನ್ನು ಮಾಡಹತ್ತಿದರೆ ಅಥವಾ ಉಪದೇಶವನ್ನು ಮಾಡತೊಡಗಿದರೆ ಇದನ್ನು ಯಾರೂ ನಂಬಲಾರರು.

ಈಗಿನಕಾಲದಲ್ಲಿ ನಾವು ವೀರಶೈವರಿದ್ದೇವೆಂಬ ಅಭಿಮಾನವು ನಿರಂತರ ತರುಣರ ಹೃದಯದಲ್ಲಿ ಪ್ರತಿಬಿಂಬಿಸುವಂಥ ಆಚಾರವು ತರುಣಪರಂಪರೆಯ ಮುಂದೆ ಒಂದೂ ಉಳಿದಿಲ್ಲ. ಭಸ್ಮಧಾರಣಮಾಡುವದು, ಇಷ್ಟಲಿಂಗಕ್ಕೆ ಅಭಿಷೇಕಮಾಡುವದು ಇಷ್ಟೇ ಮಾತ್ರ ಸ್ಥಿರವಾಗಿ ಉಳಿದಿರುವದು. ಭಸ್ಮಧಾರಣದ ರೇಖೆಗಳು ಇಷ್ಟು ಆಗಿರುವವರಲ್ಲಿ ಅದರ ಸ್ವರೂಪವೇ ನಾಶವಾಗಿ, ವೀರಶೈವ ಸಂಸ್ಕೃತಿಯು ಒಂದು ಭಸ್ಮದ ಗಟ್ಟಿಯಾಗಿದೆ ಎಂಬ ವಿಚಾರವು ಉಂಟಾಗಿರುವದು. ಇದಕ್ಕೆ ಅನ್ಯಜಾತಿಯವರು ಹಾಸ್ಯಮಾಡಿದರೆ, ಅದರ ದೋಷವು ಅವರದಾಗದೆ ನಮ್ಮದೇ ಆಗಿರುವದೆಂದು ಹೇಳಬೇಕಾಗಿಲ್ಲ. ನಮಗೆ ಸುಧಾರಣೆಯು ಬೇಕಾದರೆ, ಧರ್ಮದ ನಿಜವಾದ ವಿಚಾರಗಳು ಜನರ ಮನಸ್ಸಿನಮೇಲೆ ಪ್ರತಿಬಿಂಬಿಸುವಂತೆ ಮಾಡಬೇಕಾದರೆ ಮತ್ತು ಅದರ ವಿಷಯವಾಗಿ ಅಭಿಮಾನ ಉಂಟಾಗಬೇಕಾದರೆ, ಚಿಕ್ಕಂದಿನಿಂದಲೂ ಕೋಮಲಾಂತಃಕರಣದಮೇಲೆ ಧರ್ಮದ ನಿಜವಾದ ಆಚಾರವಿಚಾರಗಳು ಕೇವಲ ಸತ್ಯಾಗ್ರಹದಿಂದ ಬಿಂಬಿಸುವದು ಅವಶ್ಯಕವಾಗಿರುವದು. ಏಕೆಂದರೆ "ಆಚಾರಃಪರಮೋಧರ್ಮಃ" ಈ ತತ್ವವು ಅಬಾಧಿತವಾಗಿ[illegible] ಧರ್ಮವಿಘಾತವಾದ ಮಾರ್ಗವು ಪ್ರವೇಶ[illegible]ದರೆ ಅದನ್ನು ನಾಶಮಾಡಬೇಕು. ಬಾಲಕ[illegible]ಪ್ರಾರಂಭದಿಂದಲೇ ಪ್ರಯತ್ನಮಾಡಲ್ಪಟ್ಟರೆ ನಿಜವಾದ ಧರ್ಮಸಂಬಂಧದ ಕಲ್ಪನೆಗಳು ಉಂಟಾಗುವ ವಿಚಾರಗಳು ಮತ್ತು ಅದನ್ನು ಪಾಲನೆಮಾಡುವ ಆಚಾರಗಳು ಭಾವಿಸಂತತಿಗೆ ಉಪಯೋಗವಾಗುವವು. ಇಲ್ಲವಾದರೆ ಹುಳುಹತ್ತಿದ ತಮ್ಮ ಧರ್ಮಸಂಸ್ಕೃತಿಯ ಕಟ್ಟಡವು ಬೀಳದೆ ಎಂದಿಗೂ ಇರಲಾರದು. ~~ಎಂಬ ಆಲೋಚನೆಯನ್ನು ಮಾಡಿ ನನ್ನ ಲೇಖನವನ್ನು ವಿರಾಮಗೊಳಿಸುವೆನು.~~

[illegible]

~~ಮರಾಠೀಭಾಷೆಯಿಂದ ಅನುವಾದಮಾಡಿದವರು,~~
~~[illegible], ಕಟಾವ್, ಸೋಲಾಪುರ~~

Returned m 3/5/52

Ex V

DIST & SESS. COURT MYSORE

CS NO. 18 OF

FILED BY

ON

EXHIBIT

MARKED ON

i.e.s.j.

3

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ ನೇ ಮೇ ೧೯೨೯ [ಸಂಚಿಕೆ ೧.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೫ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೫ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಜಾಹೀರ ಪತ್ರಿಕೆ ನಂಬರು ೪.

ಮದ್ರಾಸು ವೀರಶೈವ ಮಹಾಜನಸಂಘ.

ಈ ಸಂಘದ ಸಾರ್ವಜನಿಕಸಭೆಯು (Generai Body meeting) ಈ ತಿಂಗಳು 27-5-29 ನೆಯ ಸೋಮವಾರ ಮಧ್ಯಾಹ್ನ 2 ಘಂಟೆ ಸಮಯದಲ್ಲಿ ಹೊಸಪ್ಯಾಟೆಯಲ್ಲಿ ಮುನ್ಸಿಪಲ್ ಆಫೀಸು ಭವನದಲ್ಲಿ ಸೇರಲು ನಿರ್ಧರಿಸಿರುತ್ತದೆ.

ವಿಷಯಗಳು.

1. ಈ ಸಂಘದ ಕಾರ್ಯನಿರ್ವಾಹಕರನ್ನು ಆರಿಸುವಿಕೆ.
2. ಸಂಘದ ಮುಂದಿನ ಕಾರ್ಯಕ್ರಮಗಳನ್ನು ನಡೆಯಿಸಲು ತಕ್ಕ ಏರ್ಪಾಟುಗಳ ಬಗ್ಗೆ ಆಲೋಚಿಸುವಿಕೆ.
3. ಮದ್ರಾಸು ಶಾಸನಸಭೆಗೆ ಒಬ್ಬ ಅಭ್ಯರ್ಥಿಯನ್ನು ನಿಲ್ಲಿಸಲು ಆಲೋಚಿಸುವಿಕೆ.
4. ಸದ್ಯಃ ಬರುವ ಇತರ ವಿಷಯಗಳು.

ಮೇಲ್ಕಂಡ ಮಹತ್ತರವಾದ ವಿಷಯಗಳನ್ನು ಪರ್ಯಾಲೋಚಿಸಬೇಕಾಗುತ್ತದಾದಕಾರಣ ಸಭ್ಯರೆಲ್ಲರೂ ತಪ್ಪದೆ ದಯೆಮಾಡಿ ಬರಬೇಕೆಂದು ಪ್ರಾರ್ಥನಾ.

ತೊಗರಿ ವೀರಪ್ಪ,
ಬಳ್ಳಾರಿ, ಮ. ವೀ. ಮ. ಸಂಘದ ಚಾಲಕಸಮಿತಿ,
10-5-29. ಅಧ್ಯಕ್ಷ.

ಸೇವಾಸಮಾಜಸ್ಥಾಪನೆ.

ಬೀರೂರು.

ಏಪ್ರಿಲ್ ತಾ|| ೧೪ ರಲ್ಲು ಇಲ್ಲಿರುವ ಹಿಂದಿಯವರ ಛತ್ರದಲ್ಲಿ ನೆರೆನೆರಿಸಿ ಸೇವಾಸಮಾಜದ ಪರವಾಗಿ ಭಗವತ್ಕೀರ್ತನೆ ಮತ್ತು ವ್ಯಾಖ್ಯಾನಗಳಾದವು. ಈ ಗ್ರಾಮದಲ್ಲಿ ಪ್ರಸಿದ್ಧ ಶ್ರೀಮಂತರಾದ ಕೆ. ಟಿ. ಸತ್ಯನಾರಾಯಣ ಶೆಟ್ಟರವರು ಮ|| ರಾ|| ವರೋಗರು ನರಸೋಜಿರಾವ್ ಈ ಉಭಯ ಮಹನೀಯರುಗಳ ಪ್ರಯತ್ನವಿಶೇಷದಿಂದ ಗ್ರಾಮದ ಎಲ್ಲಾ ಜನರನ್ನು ಬರಮಾಡಿಕೊಂಡು ಸಭೆಯನ್ನು ಏರ್ಪಡಿಸಿ ಶ್ರೀ|| ವೇ|| ಶಿವಕಥಾಭೂಷಣ ಜಿ. ನಂಜುಂಡಾರಾಧ್ಯಶಾಸ್ತ್ರಿಗಳು ಹುಣಸಗಟ್ಟೆ ಬ್ರಹನ್ಮಠ ಇವರಿಂದ ಸಮಯೋಚಿತವಾದ ಕೀರ್ತನೆಯನ್ನು ಮಾಡಿಸಿದರು. ವೇದಮೂರ್ತಿಯವರು ಮಾಡಿದ ಕೀರ್ತನದಿಂದ ಜನಗಳಲ್ಲಿ ಆನಂದವೂ ಶ್ರದ್ಧೆಯೂ ಉಂಟಾಯಿತೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಶ್ರೀಮಾನ್ ಕೆ. ಟಿ. ಸತ್ಯನಾರಾಯಣ ಶೆಟ್ಟರವರು ಮ|| ರಾ|| ವರೋಚರವರು ಬಹಳ ಯುಕ್ತಿಯುಕ್ತವಾಗಿ ಭಾಷಣಮಾಡಿದರು. ಸಭೆಯಲ್ಲಿ ಕೆಲವು ನಿರ್ಧಾರಗಳಾಗಿ ಈ ಸೇವಾಸಮಾಜವು ನಿರಾತಂಕವಾಗಿ ನಡೆದುಕೊಂಡು ಬರಲು ಒಂದು ಕಾರ್ಯನಿರ್ವಾಹಕ ಕಮಿಟಿಯನ್ನು ಏರ್ಪಡಿಸಿ ಆ ಮುಖೇನ ಒಂದು ಫಂಡನ್ನು ಸೇರಿಸಲಾಯಿತು. ಈ ಸೇವಾಸಮಾಜಕ್ಕೆ ಆ|| ವೈ|| ಶ್ರೀ|| ಮ|| ರಾ|| ಸಾ|| ಹಾಲಪ್ಪನವರನ್ನು ಅಧ್ಯಕ್ಷರನ್ನಾಗಿಯೂ ಶ್ರೀಮಾನ್ ಸತ್ಯನಾರಾಯಣ ಶೆಟ್ಟರವರನ್ನು ಸೆಕ್ರೆಟರಿಯವರನ್ನಾಗಿಯೂ ಮ|| ರಾ|| ವರೋಗರನ್ನು ಕೋಶಾಧ್ಯಕ್ಷರನ್ನಾಗಿಯೂ ಮಾಡಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಲಾಯಿತು. ಅನಂತರ ಮಂಗಲವಾಗಲು ಶ್ರೀಮನ್ ಮಹಾರಾಜರವರ ಶ್ರೇಯಸ್ಸಾಘೋಷಣೆಯಮೂಲಕ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಧರ್ಮನಿರತರಿಗೆ ಜಗದೀಶ್ವರನು ಸಕಲ ಸನ್ಮಂಗಳಗಳನ್ನುಂಟುಮಾಡಲೆಂದು ಕೋರುವ.

K. M. ಬಸಪ್ಪಶೆಟ್ಟಿ.

ಶ್ರೀ ಶಾರದಾಪತ್ರಿಕೆ.

ಜಗದ್ಗುರು ಪಂಚಾಚಾರ್ಯರ ಪ್ರೋತ್ಸಾಹ.

ಶ್ರೀ ೧೦೮ ಏಕೋರಾಮಪೀಠಾಧೀಶ ಜಗದ್ಗುರು ಪಟ್ಟಾಧ್ಯಕ್ಷ ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರನ್ನು ನೋಡುವ ಸುಸಂದರ್ಭವು ನೈಜಾಂ ಸ್ಟೇಟಿನ ಕೃಷ್ಣಾ ಸಮೀಪದಲ್ಲಿರುವ ಚಿಕ್ಕನೂಗೂರಿನಲ್ಲಿ ವಿಭವಸಂವತ್ಸರದ ಪುಷ್ಯ ಶುದ್ಧ ೫ ಭಾನುವಾರ ದೊರೆಕಿತು. ಶ್ರೀ ಕೇದಾರಸಂಸ್ಥಾನದ ಮುಖ್ಯಾಧಿಕಾರಿಗಳಾದ ಶ್ರೀಯುತ ಶ್ರೀ ಸಿದ್ಧರಾಮಸ್ವಾಮಿಗಳವರು ನಮ್ಮ ಪರಿಚಯವನ್ನು ಮಾಡಿಸಿ ಪ್ರಕೃತ ಕರ್ನಾಟಕದ ಆಯುರ್ವೇದ ಸೇವಾ ವಿವರವನ್ನು ವಿವರಿಸಿದರು. ಆಯುರ್ವೇದ ವಿಷಯವಾಗಿ ನಮಗೂ ಶ್ರೀಗಳವರಿಗೂ ಅನೇಕ ಸಂಭಾಷಣೆಗಳು ನಡೆದುವು. ಶ್ರೀಗಳವರು ಹಿಮಾಲಯದಲ್ಲಿ ಅಪೂರ್ವವಾಗಿ ಬೆಳೆಯುವ ಔಷಧಗಳನ್ನು ಸಂಗ್ರಹಿಸಿ ಅಲ್ಲಲ್ಲಿ ಶಾಖೆಗಳನ್ನಿಡಿಸಿರುವುದಲ್ಲದೆ ಈಗ ಎಲ್ಲಿಯೂ ದೊರಕದ ಜೀವನೀಯ ವರ್ಗಗಳನ್ನು ಹುಡುಕಿ ತೆಗೆದಿರುವರು. ಶ್ರೀಗಳವರ ವೈದ್ಯಶಾಸ್ತ್ರಾನುಭವವು ನಮಗೆ ಬಹಳ ಸಂತೋಷವನ್ನುಂಟುಮಾಡಿತು.

ನಮ್ಮ ಶ್ರೀ ಶಾರದಾಪತ್ರಿಕೆಯನ್ನು ನೋಡಿ ತುಂಬಾ ಸಂತೋಷಪಟ್ಟು ಈ ಪತ್ರಿಕೆಗೆ ಉತ್ತಮಪೋಷಕ ಧನವನ್ನು ಕೊಟ್ಟು ಪ್ರೋತ್ಸಾಹಿಸಿರುವುದಲ್ಲದೆ, ಶ್ರೀ ಧನ್ವಂತರಿ ಪತ್ರಿಕೆಗೆ ಉತ್ತಮ ಲೇಖನಗಳನ್ನು ಕಳುಹಿಸಿ ಪ್ರೋತ್ಸಾಹಿಸುವುದಾಗಿ ವಾಗ್ದಾನಮಾಡಿದ್ದಾರೆ. ಶ್ರೀಗಳವರ ಶಾಂತತೆಯೂ ವಿಚಾರಶಕ್ತಿಯೂ ಅತ್ಯಮೂಲ್ಯಗಳಾಗಿವೆ. ಶ್ರೀಗಳವರು ಸದ್ಯಃ ಕರ್ನಾಟಕ ರಾಷ್ಟ್ರಕ್ಕೆಲ್ಲಾ ಒಂದು ವನಸ್ಪತಿಗಳ ಶಾಖೆಯನ್ನು ಸ್ಥಾಪಿಸುವ ಸಲಹೆಯನ್ನು ಮಾನ್ಯಮಾಡಿರುವರೆಂದು ತಿಳಿಸಲು ಸಂತೋಷಿಸುತ್ತೇವೆ.

ಈ ರೀತಿಯಾಗಿ ಶ್ರೀ ಕೇದಾರಪೀಠಾಧಿಪತಿಗಳವರ ಮೇಲ್ಪಂಕ್ತಿಯನ್ನನುಸರಿಸಿ ಅವರ ಶಿಷ್ಯವರ್ಗವೆಲ್ಲವೂ ಸಂಸ್ಕೃತಭಾಷಾ ಮತ್ತು ಆಯುರ್ವೇದದ ಅಭ್ಯುದಯಕ್ಕಾಗಿ ತಕ್ಕ ಪ್ರೋತ್ಸಾಹವನ್ನು ಮನಃಪೂರ್ತಿಯಾಗಿ ಮಾಡುವರೆಂದು ನಂಬಿದ್ದೇವೆ.

ವಿದ್ವಾನ್ ಕೆ. ಶೇಷಶಾಸ್ತ್ರೀ,
ಶ್ರೀ ಶಾರದಾ ಮತ್ತು ಶ್ರೀ ಧನ್ವಂತರಿ
ಪತ್ರಿಕಾ ಕಾರ್ಯಾಲಯ, ಶೃಂಗೇರಿ.

ಸ್ವೀಕಾರ.

ದಾವಣಗೆರೆಯ ಶ್ರೀ ಜಯಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಕಂಪನಿಯ ಮ್ಯಾನೇಜರರಾದ ಮ|| ರಾ|| ಕೊಟ್ರಬಸವಪ್ಪನವರು ಶಿಂಗಟಾಲೂರು ಕ್ಷೇತ್ರದಲ್ಲಿ ತಮ್ಮ ಕಂಪನಿಯ ಅಭಿನೇತೃಗಳ ದ್ವಾರಾ ಶ್ರೀ ಜಗದ್ಗುರು ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರು ಕೋಟಿ ಗುರುರೂಪವನ್ನು ಧರಿಸಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ಪವಿತ್ರಚರಿತ್ರವನ್ನು ಆಡಿ ತೋರಿಸಿದ ಸಮಯದಲ್ಲಿ ಗುರು ಸಾರ್ವಭೌಮರ ನಾಮಸ್ಮರಣಪೂರ್ವಕ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಗುರುಭಕ್ತಕೇಸರಿಯವರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—

ಕಳೆದ ೩೮ ನೆಯ ತಾರೀಖಿನ ದಿವಸ ಮುಂಬಯಿ ಪಟ್ಟಣದ ದಿಲ್ಲಿರಸ್ತೆಯಲ್ಲಿ ಪಲ್ಲಕ್ಕಿಜೊತೆಯಲ್ಲಿ ಹೋಗುತ್ತಿದ್ದ ಹಿಂದುಗಳಮೇಲೆ ಮಹಮ್ಮದೀಯರು ಅತ್ಯಾಚಾರವನ್ನು ನಡೆಯಿಸಿದರು. ಒಬ್ಬಹಿಂದುವು ಸತ್ತುಹೋಗಿರುವನಲ್ಲದೆ 13 ಜನಗಳಿಗೆ ವಿಶೇಷ ಗಾಯಗಳಾಗಿರುತ್ತವೆ. ಮರುದಿವಸವೇ ಸವಾರಿಬಾಗ್ ರಸ್ತೆಯಲ್ಲಿ ಮಹಮ್ಮದೀಯರು ಶವವನ್ನು ಹೊತ್ತುಕೊಂಡು ಹೋಗುತ್ತಿರುವಾಗ್ಗೆ ಹಿಂದುಗಳು ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ ಅವರಮೇಲೆ ಬಿದ್ದು ಇಬ್ಬರು ಮಹಮ್ಮದೀಯರನ್ನು ಕೊಂದರು.

...ಗೆದ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೈದಿಕವಾಙ್ಮಯರಹಸ್ಯವು
ಅಥವಾ
ಪ್ರಭಾಭರಣವು.

(ಲೇಖಕರು—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ವಿಜಾಪುರ).

[ಕಳೆದವಾರದ ಶೇಷ.]

ವಾಚಕಮಹಾಶಯರು ನೆನಪಿನಲ್ಲಿಡತಕ್ಕ ಸಂಗತಿಯೊಂದನ್ನು ನಾವು ಇಲ್ಲಿ ಹೇಳುತ್ತೇವೆ; ಏನೆಂದರೆ—ಸದ್ಯಃ ಋಗ್ವೇದಸಂಹಿತಾ-ಯಜುರ್ವೇದಸಂಹಿತಾ-ಸಾಮವೇದಸಂಹಿತಾ-ಅಥರ್ವವೇದಸಂಹಿತಾ ಎಂಬುದಾಗಿ ನಾಲ್ಕೇ ಸಂಹಿತೆಗಳು ಉಪಲಬ್ಧಗಳಾಗಿವೆ; ಆದರೆ, ಪೂರ್ವಕಾಲದಲ್ಲಿ ಸಂಹಿತೆಗಳು, ಈ ನಾಲ್ಕೇ ಆಗಿರದೆ ಬಹಳವಾಗಿದ್ದವೆಂದು ವಿದ್ವಾಂಸರು ಹೇಳುತ್ತಾರೆ; ಋಗ್ವೇದದ **ಬಾಷ್ಕಲಸಂಹಿತೆಯು** ಎಂದೋ ನಷ್ಟವಾಗಿ ಹೋಗಿದೆ, ಇದುವರೆಗೂ ಅದೆಂತಹುದಿದ್ದಿತೆಂಬುದು ಯಾರಿಗೂ ತಿಳಿದಿಲ್ಲ; ಅದರ ಹೆಸರು ಮಾತ್ರ ಕೇಳಿಕೆಯಲ್ಲಿದೆ. ಈಗ ಋಗ್ವೇದವೆಂದು ಯಾವ ಸಂಹಿತಾಗ್ರಂಥವನ್ನು ನಾವು ಹೇಳುತ್ತೇವೆಯೋ ಅದರ ಐತಿಹಾಸಿಕ ಹಾಗೂ ಶಾಸ್ತ್ರೀಯವಾದ ಹೆಸರು **ಶಾಕಲಸಂಹಿತೆಯು** ಎಂದಿದೆ; ಇದಾದರೂ ಪೂರ್ಣವಾಗಿದೆಯೇ? ಇಲ್ಲ. ಬುನಾದಿಯಿಂದ ವೈದಿಕವಾಙ್ಮಯವನ್ನು ರಕ್ಷಿಸುವ ಉದ್ದೇಶದಿಂದ ಬಹುವಿಧಪ್ರಯತ್ನಗಳು ನಡೆದೇ ಇದ್ದರೂ ಅದರಲ್ಲಿಯ ಎಷ್ಟೋ ಭಾಗಗಳು ಕಾಲನ ಹೊಟ್ಟೆಯೊಳಗೆ ಜೀರ್ಣವಾಗಿವೆ; ಸಂಹಿತೆಗಳಲ್ಲಿ ಅಲ್ಲಲ್ಲಿ ತ್ರುಟಿತವೂ ಸಂದರ್ಭರಹಿತವೂ ಆದ ಭಾಗಗಳನ್ನು ನೋಡಿದೊಡನೆಯೇ ಎಂತಹವರಿಗಾದರೂ ಶಂಕೆಯುಂಟಾಗದಿರದು. ಈಗಣ ಶಾಕಲಸಂಹಿತೆಯೊಂದರಲ್ಲಿಯೇ ಸಾವಿರಾರು ಸೂಕ್ತಗಳು ನಷ್ಟವಾಗಿಹೋಗಿರುವವೆಂಬ ಸಂಗತಿಯು ಅದರ ಸರ್ವಾನುಕ್ರಮಣಿಯಿಂದ ಸಿದ್ಧಿಸುವುದು. ಇದನ್ನೆಲ್ಲ ವಿಚಾರಮಾಡಿನೋಡಿದರೆ, ಎಷ್ಟೋ ಸಂಹಿತೆಗಳೊಂದಿಗೆ ಅಪ್ರಾಕೃತ ತತ್ತ್ವಬೋಧಕಗಳಾದ ಅನೇಕ ಸೂಕ್ತಗಳೂ ಸಹ ನಷ್ಟವಾಗಿರಬಹುದೆನ್ನಲು ಅಡ್ಡಿಯಿಲ್ಲ. ಇದರಿಂದ ಆ ಸೂಕ್ತಗಳ ಪ್ರವರ್ತಕರಾದ ಬೇರೆ ಬೇರೆ ಮಹರ್ಷಿಗಳ (ಪ್ರಮಥಗಣರ) ಹೆಸರುಗಳಾದರೂ ಅಡಗಿವೆ. ಆದರೂ ಅವರ ಅನುಯಾಯಿಗಳಾದ ಬೇರೆ ಕೆಲ ಋಷಿಗಳು ತಮ್ಮ ಸೂಕ್ತಗಳಲ್ಲಿ ತಮಗೆ ಮಾರ್ಗದರ್ಶಕರಾದ ಆ ಪ್ರಮಥಗಣರನ್ನು **‘ಪ್ರಥಮಜರು’ ‘ಪುರಾತನ ಮಹರ್ಷಿಗಳು’—‘ಶಿವನ ಪುತ್ರರು’** ಎಂಬುದಾಗಿ ಹೊಗಳುತ್ತಾರೆ. ಈ ವಿಷಯವಾಗಿ ಋಗ್ವೇದೀಯ ಪ್ರಥಮಮಂಡಲದ **‘ಅಸ್ಯವಾಮೀಯ’** (೧೬೪) ಸೂಕ್ತವೇ ಸಾಕ್ಷಿಯಾಗಿದೆ. ತತ್ತ್ವಜ್ಞಾನದೃಷ್ಟಿಯಿಂದ ಈ ಸೂಕ್ತವು ಬಹಳ ಮಹತ್ವವುಳ್ಳದ್ದಾಗಿರುವುದು. ಈ ಹಿಂದೆ ನಾವು ಉಲ್ಲೇಖಿಸಿರುವ **‘ನವಿಜಾನಾಮಿ’** ಎಂಬ ಮಂತ್ರವು ಈ ಸೂಕ್ತದೊಳಗಿನದೇ ಆಗಿದೆ. ಈ ಸೂಕ್ತದಲ್ಲಿ ಇದು ೫೦ ನೆಯ ಮಂತ್ರವು ‘ಆತ್ಮನು ಶಿವನಾಗಿ ಶಿವನನ್ನು ಪೂಜಿಸುವುದೇ ಪೂರ್ವಕಾಲದಲ್ಲಿ ಮುಖ್ಯಧರ್ಮವಾಗಿದ್ದಿತು’ ಎಂಬುದಾಗಿ ಶಿವಸಿದ್ಧಾಂತದ ಪದ್ಧತಿಯನ್ನು ಸಂಕ್ಷೇಪವಾಗಿ ಸೂಚಿಸುವುದು. ಈ ಸೂಕ್ತದೊಳಗಣ ಎಷ್ಟೋ ಮಂತ್ರಗಳು ಸ್ಪಷ್ಟವಾಗಿ ಅರ್ಥವಾಗದೆ ಉಳಿದಿವೆಯೆಂಬ ಬೊಬ್ಬಾಟವು ವಿಪಶ್ಚಿದಪಶ್ಚಿಮರಲ್ಲಿಯೇ ಇದೆ. ಇಂತಹ ಸೂಕ್ತಗಳಿಗೆ ಭಾಷ್ಯವನ್ನು ಬರೆಯಲು ಹವಣಿಸಿದ ಸಾಯಣಾದಿ ಪ್ರಾಕೃತರು ಅಲ್ಲಲ್ಲಿ ಹುದುಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೆಯೇ ಋಗ್ವೇದೀಯ ೧೦ ನೆಯ ಮಂಡಲದಲ್ಲಿಯ ೧೨೯ ನೆಯ ಸೂಕ್ತವಾದರೂ ಪ್ರಾಕೃತರ ಬುದ್ಧಿಶಕ್ತಿಗೆ ನಿಲುಕದಂತಹ ತತ್ತ್ವಜ್ಞಾನವನ್ನೊಳಗೊಂಡಿದೆ; ಇದೇ ಸುಪ್ರಸಿದ್ಧವಾದ **ನಾಸದೀಯ ಸೂಕ್ತವು.** ಇದರಲ್ಲಿಯ ತಾತ್ತ್ವಿಕವಿಚಾರಸರಣಿಯು ಬಹು ಗಹನವಾಗಿದೆ; ಈ ಹಿಂದೆ ನಾವು ಶಕ್ತಿವಿಶಿಷ್ಟಾದ್ವೈತ ಪ್ರತಿಪಾದನವನ್ನು ಮಾಡುವಾಗ ಇದರೊಳಗಣ ಮಂತ್ರವನ್ನೇ ಉದ್ಧರಿಸಿದ್ದೇವೆ. ಉಚ್ಚತರ ವಿಚಾರಸರಣಿಯುಳ್ಳವುಗಳಾದ ಇಂತಹ ಸೂಕ್ತಗಳಿಂದಲೇ ವೈದಿಕವಾಙ್ಮಯಕ್ಕೆ ಅದ್ವಿತೀಯ ಮಹತ್ವವು ಪ್ರಾಪ್ತವಾಗಿದೆ. ಈ ಬಗೆಯ ವಿಚಾರದ ಉತ್ಕೃಷ್ಟಮಾದರಿಯು ಉಪನಿಷತ್ತುಗಳಲ್ಲಿದ್ದುದು ಕಂಡುಬರುವಂತೆ ಉಪನಿಷತ್ತುಗಳ ಪೂರ್ವಕಾಲೀನ ವೈದಿಕವಾಙ್ಮಯದಲ್ಲಿಯೂ ಬೇಕಾದಷ್ಟು ಉಂಟು.

ಆದುಕಾರಣವೇ, ಆರಣ್ಯಕ ಉಪನಿಷತ್ತುಗಳ ಕಾಲದಲ್ಲಿ ಪಲ್ಲವಿಸಿದ ತಾತ್ತ್ವಿಕವಿಚಾರವು ಮಂತ್ರಭಾಗದಲ್ಲಿ ಬೀಜಭೂತವಾಗಿದ್ದಿತೆಂದು ನಾವು ಮೊದಲೇ ಸೂಚಿಸಿದ್ದೇವೆ. ಒಟ್ಟಿನ ಮೇಲೆ ಸ್ಕಂದ, ನಂದ್ಯಾದಿ ಪ್ರಥಮಜರು ಈಶ್ವರನಿಂದ ಸಾಕ್ಷಾದುಪದಿಷ್ಟರಾದ ಮಹರ್ಷಿಗಳಾದ್ದರಿಂದ ಅವರೇ ಮೊದಲು ಸನಕ, ಸನಂದನ, ಸನತ್ಕುಮಾರಾದಿ ಪ್ರಾಕೃತ ಋಷಿಗಳಿಗೆ ತಾತ್ತ್ವಿಕ ವಿಚಾರಗಳನ್ನು ಬೋಧಿಸಿದರು; ಶಿವತುಲ್ಯರಾದ ಆ ಪ್ರಮಥಗಣರು ಪತಿಧರ್ಮ (ಅಪ್ರಾಕೃತಧರ್ಮ) ಬೋಧಕಗಳಾದ ಬೇರೆ ಬೇರೆ ವೇದಶಾಖೆಗಳ ಪ್ರವರ್ತಕರಾಗಿದ್ದಾರೆಂಬಲ್ಲಿ ಸಂದೇಹವೇ ಇಲ್ಲ. ಅವರು ಜಗತ್ತಿನಲ್ಲಿ ನಿವೃತ್ತಿಧರ್ಮವನ್ನು ಸ್ವತಃ ಪ್ರಚುರಗೊಳಿಸಿದುದಲ್ಲದೆ ತಮ್ಮ ವರ್ಗದವರಿಂದ ಪರಂಪರೆಯ ಮೂಲಕವಾಗಿಯೂ ಸಹ ಹಬ್ಬುವಂತೆ ಪ್ರೇರಣೆಮಾಡಿದರು. ಯಜ್ಞಕ್ರಿಯಾವಿಷಯದಲ್ಲಿ ಹೇಗೆ ಬ್ರಾಹ್ಮಣಗ್ರಂಥಗಳೋ ಹಾಗೆಯೇ ಅಧ್ಯಾತ್ಮವಿದ್ಯಾವಿಷಯದಲ್ಲಿ ಉಪನಿಷದ್ಗ್ರಂಥಗಳು ಪರಮಪ್ರಮಾಣಗಳಾಗಿವೆ. ಆಯಾ ಶಾಖೆಯವರೇ ಆಯಾ ಉಪನಿಷತ್ಪ್ರವರ್ತಕರಾಗಿದ್ದಾರೆಂಬುದು ನಿರ್ವಿವಾದ ಸಂಗತಿಯು; ಎಂದ ಮೇಲೆ ಸದ್ಯಃ ಉಪಲಬ್ಧಗಳಾದ ಪ್ರಾಚೀನೋಪನಿಷತ್ತುಗಳಲ್ಲಿ ಅಪ್ರಾಕೃತ ತಾತ್ತ್ವಿಕ ವಿಚಾರವೇ ಸ್ಪಷ್ಟವಾಗಿರುವುದರಿಂದ ಆ ಉಪನಿಷತ್ತುಗಳ ಪ್ರಕಾಶಕರು ಯಾವ ಯಾವ ಶಾಖೆಯವರೋ ಆಯಾ ವೇದಶಾಖೆಗಳ ಪ್ರವರ್ತಕರು ಪ್ರಥಮಜರೆಂದೇ ಸಿದ್ಧವಾಗುವುದು; ಅಸ್ಯವಾಮೀಯ, ನಾಸದೀಯಾದಿ ಸೂಕ್ತಗಳ ಪ್ರವರ್ತಕರು ಆ ಪ್ರಮಥಗಣರ ವರ್ಗದವರೇ ಎಂಬ ಬಗ್ಗೆ ಆ ಸೂಕ್ತಗಳಲ್ಲಿಯ ಮಂತ್ರಗಳೇ ಸಾಕ್ಷಿಯಾಗಿವೆ; ಮತ್ತು—

ಅತ್ಯಾಶ್ರಮಿ ಪ್ರವರ್ತಕಃ ಶ್ರೀಮಾನ್ ಶ್ವೇತಾಶ್ವತರಪುತ್ರಕಃ । ಶ್ವೇತಾಶ್ವತರ ಶಾಖಾಯಾಃ ಶ್ರದ್ಧಯೈವ ಪ್ರವರ್ತಕಃ ॥೨೩॥

ಶತರುದ್ರಸಮಾಖ್ಯಸ್ಯ ಶತರುದ್ರೀಯಭಕ್ತಿಮಾನ್ । ಪಂಚಪ್ರಸ್ಥಾನಹೇತುಜ್ಞಃ ಶ್ರೀಮತ್ಪಂಚಾಕ್ಷರಪ್ರಿಯಃ ॥೨೪॥

ಶಿವಸಂಕಲ್ಪಭಕ್ತಶ್ಚ ಶಿವಸೂಕ್ತಪ್ರವರ್ತಕಃ । ಲಿಂಗಸೂಕ್ತಪ್ರಿಯಃ ಕೈವಲ್ಯೋಪನಿಷತ್ಪ್ರವರ್ತಕಃ ॥೨೫॥

ಎಂದು (ಸೂತಸಂ-೩, ೧ :) ವ್ಯಾಸಮುನಿಯು ಹೇಳುವ ಮೇರೆಗೆ ಇನ್ನು ಬೇರೆ ಬೇರೆ ಸೂಕ್ತಗಳ ಹಾಗೂ ಉಪನಿಷತ್ತುಗಳ ಪ್ರವರ್ತಕರಾದರೂ ಪ್ರಮಥರ ಶಾಖಾನುವರ್ತಿಗಳೇ ಆಗಿದ್ದಾರೆ. ಅನಾದಿಕಾಲದಿಂದ ಆ ಪ್ರಮಥರೆಂಬ ಮಹರ್ಷಿಗಳ ಗೋತ್ರೀಯರಾದ ಬ್ರಾಹ್ಮಣರು **‘ಗೋತ್ರೇಣ ಸ್ಕಂದೋಽಸ್ಮಿ’—‘ಗೋತ್ರೇಣ ನಂದಿಕೇಶ್ವರೋಽಸ್ಮಿ’** ಎಂದು ಮೊದಲಾಗಿ ಹೇಳುತ್ತಿರುವುದಲ್ಲದೆ ಅವಿಚ್ಛಿನ್ನವಾಗಿ ತಮ್ಮ ತಮ್ಮ ವೇದಶಾಖೆಗಳ ಅಧ್ಯಯನ ಅಧ್ಯಾಪನಗಳಲ್ಲಿಯೂ ನಿರತರಾಗಿದ್ದಾರೆ.

ಪ್ರಾಚೀನಕಾಲದ ಇತಿಹಾಸವನ್ನು ಅರಿತುಕೊಳ್ಳಲು ಕೆಲವೆಡೆ ಪೌರಾಣಿಕಗ್ರಂಥಗಳೂ ನಮಗೆ ಸಾಹಾಯ್ಯಕಾರಿಗಳಾಗಿವೆ. ಪ್ರಕೃತದಲ್ಲಿ ಋಷಿಗಳಿಗೂ ಪ್ರಮಥರಿಗೂ ಇರುವ ಬೋಧ್ಯ ಬೋಧಕರೂಪ ಸಂಬಂಧವನ್ನು ತೋರಿಸುವುದಕ್ಕಾಗಿ ಶಿವಪುರಾಣಾಂತರ್ಗತವಾದ ವಾಯವೀಯಸಂಹಿತೆಯ ಉತ್ತರಭಾಗದ ೩೦ ನೆಯ ಅಧ್ಯಾಯದಲ್ಲಿಯ ಒಂದು ಇತಿವೃತ್ತವನ್ನಿಲ್ಲಿ ಸಂಕ್ಷೇಪವಾಗಿ ಕೊಡುವೆವು.

ಬ್ರಹ್ಮನ ಹಿರಿಯಮಗನೆನಿಸುವ ಸನತ್ಕುಮಾರನು ಅಜ್ಞಾನದಿಂದ ಈಶ್ವರನಲ್ಲಿ ಅನಾದರ ಬುದ್ಧಿಯುಳ್ಳವನಾಗಲು, ಅವನ ಆ ಗರ್ವನಿರಸನಕ್ಕೋಸ್ಕರ ನಂದಿಯು ತನ್ನ ಗಣಾಚಾರಕ್ಕೆ ಸರಿಯಾಗಿ ಶಪಿಸಿದ್ದರಿಂದ ಸನತ್ಕುಮಾರನು ಒಂಟೆಯ ದೇಹವನ್ನು ತಾಳಿ ಬಳಲುತ್ತಿರುವುದನ್ನು ಅವನ ತಂದೆಯಾದ ಬ್ರಹ್ಮದೇವನು ಅರಿತು, ಆ ಕಷ್ಟವನ್ನು ತೊಲಗಿಸುವುದಕ್ಕಾಗಿ ಈಶ್ವರನನ್ನೂ ನಂದಿಯನ್ನೂ ಪರಿಪರಿಯಿಂದ ಆರಾಧಿಸಿ, ಅವರ ಪ್ರಸನ್ನತೆಗೆ ಪಾತ್ರನಾದುದರಿಂದೇ ಸನತ್ಕುಮಾರನು ಒಂಟೆಯ ಶರೀರವನ್ನು ನೀಗಿ ಮರಳಿ ಮೊದಲಿನ ನಿಜಸ್ವರೂಪವನ್ನು ಪಡೆದು ನಂದಿಯು ತನಗೆ ಅನುಗ್ರಹಿಸುವ ಕಾಲವನ್ನು ನಿರೀಕ್ಷಿಸುತ್ತ ಮೇರುಶಿಖರದಲ್ಲಿ ವಾಸಿಸುತ್ತಿದ್ದನು; ಅತ್ತ ಈಶ್ವರನು ನಂದಿಯನ್ನು ಕುರಿತು—

ಅತಸ್ತಸ್ಯೈವ ಯಾಥಾತ್ಮ್ಯಂ ಮಮಾಸ್ತ್ವಿತಿ ಕಥಯಾಸಹ । ಬ್ರಹ್ಮಣಃ ಪೂರ್ವಜಃ ಪುತ್ರೋ ಮಾಭೂನ್ಮೂಢ ಇತಿಸ್ಮರನ್ ॥೪೪॥

ಮಯ್ಯೈವ ಶಿಷ್ಯಸ್ತೇ ದತ್ತೋ ಮಮ ಜ್ಞಾನಸಪ್ರವರ್ತಕಃ ।

‘ಎಲೈ ನಂದಿಯೇ! ಇವನಿಗೆ (ಸನತ್ಕುಮಾರನಿಗೆ) ನನ್ನ ನಿಜಸ್ವರೂಪಜ್ಞಾನವನ್ನು ಬೋಧಿಸು; ಬ್ರಹ್ಮನ ಹಿರಿಯಮಗನು ಅಜ್ಞಾನಿಯಾಗಿರುವುದು ಸರವಲ್ಲವೆಂಬುದು ನಿನಗಾದರೂ ತಿಳಿದ ವಿಷಯವಾದ್ದರಿಂದ, ನನ್ನ ಜ್ಞಾನಪ್ರವರ್ತಕನಾದ ಈ ಸನತ್ಕುಮಾರನನ್ನು ನಿನ್ನ ಶಿಷ್ಯನನ್ನಾಗಿ ಮಾಡಿರುವೆನು’ ಎಂದು ಆಜ್ಞಾಪಿಸಲು ಆಗ ನಂದಿಯು ತನ್ನ ಸ್ವಾಮಿಯ ಅನುಜ್ಞೆಯನ್ನು ಶಿರಸಾವಹಿಸಿ ಗಣಪತಿವ್ರತನಾದ ಈಶ್ವರನೊಡನೆ ತಾನೂ ಸಹ ದಕ್ಷಿಣ ಮೇರುಶಿಖರದಲ್ಲಿ ಅನೇಕ ಋಷಿಗಳೊಂದಿಗೆ ವಾಸಿಸುತ್ತಿದ್ದ ಸನತ್ಕುಮಾರನಿದ್ದೆಡೆಗೆ ಹೋಗಿ—

ಶ್ರುತ್ವಾ ವಾಕ್ಯಂ ಬ್ರಹ್ಮಪುತ್ರಸ್ಯ ನಂದೀ ಛಿತ್ವಾ ಪಾಶಾನ್ ದೃಷ್ಟಿಪಾತೇನ ಸದ್ಯಃ । ಶೈವಂ ಧರ್ಮಂ ಚೈಶ್ವರಂ ಜ್ಞಾನಯೋಗಂ ದತ್ವಾ ಭೂಯೋ ದೇವಪಾರ್ಶ್ವಂ ಜಗಾಮ ॥೮೫॥

“ಆ ಸನತ್ಕುಮಾರನ ಪ್ರಾರ್ಥನೆಯಮೇರೆಗೆ ಅವನಿಗೆ ಶಿವದೀಕ್ಷೆಯನ್ನಿತ್ತು ಪಾಶಗಳನ್ನು ತೊಲಗಿಸಿ ಶಿವಧರ್ಮಾಚರಣಗಳನ್ನೂ ಶಿವಜ್ಞಾನಾನುಸಂಧಾನದ ಇಂಗಿತವನ್ನೂ ಬೋಧಿಸಿ ಶಿವನು ಒಳಗೆ ತೆರಳಿದನು.”

ಈ ಮೇಲಿನ ಕಥೆಯು ಸ್ವಾರಸ್ಯದಿಂದ, ವೇದಗಳಲ್ಲಿಯ ಉಚ್ಚತರ ತಾತ್ತ್ವಿಕವಿಚಾರಸರಣಿಯ ಆದ್ಯಪ್ರವರ್ತಕರು ನಂದಿಸ್ಕಂದಾದಿ ಪ್ರಥಮಜರೇ ಆಗಿರುವರೆಂದು ಸಿದ್ಧಿಸುವುದು. ನಂದಿಕೇಶ್ವರನ ಶಿಷ್ಯನಾದ ಆ ಸನತ್ಕುಮಾರನು ತನ್ನ ಶಿಷ್ಯರಾದ ನಾರದ ಗೌತಮ ಮೊದಲಾದ ಮುನಿವೃಂದಕ್ಕೆ ಶಿವದೀಕ್ಷೆಯನ್ನಿತ್ತು ಶಿವಧರ್ಮಾಚರಣಗಳನ್ನೂ ಶಿವಜ್ಞಾನಯೋಗ (ಶಿವಯೋಗ)ವನ್ನೂ ಬೋಧಿಸಿದವನಾಗಿ, ಜಗತ್ತಿನಲ್ಲಿ ವೈದಿಕವಾಙ್ಮಯದಲ್ಲಿಯ ಪರಾವಿದ್ಯಾಪ್ರಕಾಶಕಗಳಾದ ಶೈವ ಶಾಖೆಗಳ ಪ್ರವರ್ತಕರಲ್ಲಿ ಪರಿಗಣಿಸಲ್ಪಡತಕ್ಕವನಾದನು. ಈ ವಿಷಯವು ಛಾಂದೋಗ್ಯ, ಹಂಸ ಮುಂತಾದ ಉಪನಿಷತ್ತುಗಳಿಂದಲೂ ಸ್ಪಷ್ಟವಾಗಿ ಮನವರಿಕೆಯಾಗುವುದು; ಛಾಂದೋಗ್ಯೋಪನಿಷತ್ತಿನ ಏಳನೆಯ ಪ್ರಪಾಠಕದಲ್ಲಿ ಪ್ರಕೃತಕ್ಕೆ ಸಂಬಂಧಿಸಿದ ಪ್ರಸ್ತಾಪವೇನೆಂದರೆ: ಅಪರಾ (ಪ್ರಾಕೃತ) ವಿದ್ಯೆಯಲ್ಲಿ ಬಹುಪರಿಶ್ರಮಪಟ್ಟು ಕೊನೆಗೆ ಅದರಿಂದ ಲೇಶವೂ ಸುಖಶಾಂತಿಯು ಲಭಿಸದೆಂದು ಮನಗಂಡು ತಾನಾಗಿಯೇ ಶರಣಾಗತನಾದ ನಾರದನಿಗೆ ಸನತ್ಕುಮಾರನು **“ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ” ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಮ್ ಯದ್ಯಥೇಹ ಕರ್ಮಜಿತೋ ಲೋಕಃ ಕ್ಷೀಯತ ಏವಮೇವಾಮುತ್ರ ಪುಣ್ಯಜಿತೋ ಲೋಕಃ ಕ್ಷೀಯತೇ”** ಎಂಬೀ ಮುಂತಾದವಾಕ್ಯಗಳಿಂದ ಪರಶಿವ ಚೈತನ್ಯದಿರವನ್ನೂ, ನಿಜಾನಂದರೂಪವಾದ ಆ ಪರವಸ್ತುವನ್ನು ಬಾಹ್ಯಾಭ್ಯಂತರಗಳಲ್ಲಿ ಅನುಸಂಧಾನಿಸತಕ್ಕ ಬಗೆಯನ್ನೂ, ಅದಕ್ಕಾಗಿ ಪ್ರಾಕೃತಧರ್ಮಾಚರಣಗಳು ಅನುಪಾದೇಯವಾದವುಗಳೆಂಬುದನ್ನೂ ಬೋಧಿಸಿ ಪರಾವಿದ್ಯೆಯ ಸಾಕ್ಷಾತ್ಕಾರಮಾಡಿಕೊಟ್ಟನು.

ಇದೇ ಮೇರೆಗೆ, ಹಂಸೋಪನಿಷತ್ತಿನಲ್ಲಿಯೂ ಸನತ್ಕುಮಾರನು ಗೌತಮನಿಗೆ ಪರಾವಿದ್ಯೆಯನ್ನು ಬೋಧಿಸಿದ ಸಂಗತಿಯನ್ನು ಅಥರ್ವಶಾಖಾನುವರ್ತಿಗಳು ಪ್ರಸ್ತಾಪಿಸಿದ್ದಾರೆ; ಹೇಗೆಂದರೆ: ಮೋಕ್ಷಾರ್ಥಿಯಾದ ಗೌತಮನು ಶಿಷ್ಯಭಾವದಿಂದ ಸನತ್ಕುಮಾರನಿಗೆ ಶರಣಾಗತನಾಗಿ ಜಿಜ್ಞಾಸಾಬುದ್ಧಿಯಿಂದ ಪರಾವಿದ್ಯೆಯ ವಿಷಯಕವಾಗಿ ಪ್ರಶ್ರಯಭಾವದಿಂದ ಪ್ರಶ್ನಿಸಲು, ಆಗ ಸನತ್ಕುಮಾರನು ಆ ವಿಷಯವನ್ನು ಉಪದೇಶಮಾಡಲುದ್ಯುಕ್ತನಾಗಿ ತಾನು ಬೋಧಿಸುವ ವಿಷಯವು ಸರ್ವವೇದಸಮ್ಮತವಾದುದೆಂದೂ ಶಿವನು ಪಾರ್ವತಿಗೆ ಬೋಧಿಸಿದುದು (ಶಿವಾಗಮಗಳಲ್ಲಿಯ [illegible] ನಂದಿಯು ತನಗುಪದೇಶಿಸಿದ ರಹಸ್ಯವು) ಎಂದೂ ಪ್ರಾರಂಭದಲ್ಲಿಯೇ ಅದರ ಮಾಹಾತ್ಮ್ಯವನ್ನು ಹೇಳಿ ನಡುವೆ **‘ಲಿಂಗೇಸುಷುಪ್ತಿಃ’** ಎಂಬ ನುಡಿಯಿಂದ ನಿಜಾನಂದದ ಮೆಟ್ಟನ್ನು ತೋರಿಸಿಕೊಟ್ಟು, ಅದರಲ್ಲಿ ಮನಸ್ಸು ಲೀನವಾದರೆ ಅದರಿಂದ ಜೀವನಿಗೆ ಸ್ವಸ್ವರೂಪಭೂತವಾದ ಶಿವತ್ವದ ಎಂದರೆ **‘ಸದಾಶಿವಃ ಶಕ್ತ್ಯಾತ್ಮಾ ಸರ್ವತ್ರಾವಸ್ಥಿತಃ ಸ್ವಯಂಜ್ಯೋತಿಃ’** ಎಂಬ ಶಕ್ತಿವಿಶಿಷ್ಟಾದ್ವೈತವಸ್ತುವಿನ ಅಭಿವ್ಯಕ್ತರೂಪವೇ ಕಡೆಗೆ ಎಂದು ಕೊನೆಯಮಾತನ್ನು ತಿಳುಹಿ ಗೌತಮನನ್ನು ಉದ್ಧರಿಸಿದನು.

ಈ ಮೇಲಿನ ಎರಡು ಉಪನಿಷತ್ತುಗಳಲ್ಲಿಯ ಪ್ರಸ್ತಾಪಗಳು, ಪರಾವಿದ್ಯೆಯ ಅನೂಚಾನಪದ್ಧತಿಯ ಸೂಚಕಗಳಾಗಿವೆ. ಮತ್ತು ಬ್ರಹ್ಮಮೀಮಾಂಸೆಯಲ್ಲಿ (ವೇದಗಳ ಉತ್ತರಕಾಂಡವಿಚಾರದಲ್ಲಿ) ಮುಂದುವರಿದವನಾದ ವ್ಯಾಸಮುನಿಯೂ ಸಹ ಸನತ್ಕುಮಾರನಿಂದೇ ಶಿವಜ್ಞಾನವನ್ನು ಪಡೆದು ಕೃತಾರ್ಥನಾದನೆಂದು ಅವನ ಶಿಷ್ಯನಾದ ಸೂತನು

ಸನತ್ಕುಮಾರೇಣ ಚ ತತ್ಸಮಸ್ತಂ ವ್ಯಾಸಾಯ ಸಾಕ್ಷಾದ್ಗುರವೇ ಮಮೋಕ್ತಂ । ವ್ಯಾಸೇನ ಚೋಕ್ತಂ ಮಹಿತೇನ ಮಹ್ಯಂ ಮಯಾ ಚ ತದ್ವಃ ಕಥಿತಂ ಸಮಾಸಾತ್ ॥

“ಎಲೈ ನೈಮಿಷಾರಣ್ಯವಾಸಿಗಳಾದ ಮುನಿಗಳಿರಾ? ನಂದಿಕೇಶ್ವರನಿಂದ ಶಿವದೀಕ್ಷೆಯನ್ನು ಪಡೆದು ಶಿವಜ್ಞಾನಿಯಾದ ಸನತ್ಕುಮಾರ ಋಷಿಯು ನಂದಿಕೇಶ್ವರನಿಂದ ತನಗೆ ಪ್ರಾಪ್ತವಾದ ಶಿವಜ್ಞಾನ, ಶಿವಧ್ಯಾನ, ಶಿವವ್ರತ, ಶಿವಪೂಜೆ, ಶಿವಭಕ್ತಿ ಎಂಬೀ ಎಲ್ಲ ವಿಷಯಗಳನ್ನೂ ನನ್ನಗುರುವಾದ ವ್ಯಾಸನಿಗೆ ಬೋಧಿಸಿದನು; ಬಳಿಕ ಪೂಜ್ಯನಾದ ಆ ವ್ಯಾಸನು ನನಗೆ ಉಪದೇಶಿಸಿದನು. ಅದನ್ನೇ ನಾನು ಈಗ ನಿಮಗೆ ಸಂಕ್ಷೇಪವಾಗಿ ನಿರೂಪಿಸಿದೆನು.” (ವಾಯವೀ. ಸಂ-ಉ-ಅ. ೩೦; ೮೬.).

ಎಂದು ಹೇಳಿದ್ದಾನೆ. ಇದರಿಂದಲೂ ಪ್ರಮಥರ ಅನುಗ್ರಹಕ್ಕೆ ಪಾತ್ರರಾದ ಋಷಿಗಳು ಮೊದಲಾಗಿ ಮನುಷ್ಯರವರೆಗೆ ಜಗತ್ತಿನಲ್ಲಿ ಜೀವರ ಅಂತಿಮಧ್ಯೇಯ ಸಾಧಕವಾದ ಅಪ್ರಾಕೃತಧರ್ಮವು ಹೇಗೆ ಪಸರಿಸಿತೆಂಬುದು ಸ್ಪಷ್ಟವಾಗುವುದು. ಮಹಾಭಾರತದಲ್ಲಿ ಅನುಶಾಸನ ಪರ್ವದ ೪೫ ನೆಯ ಅಧ್ಯಾಯದಲ್ಲಿಯ—

ಯಾಜ್ಞವಲ್ಕ್ಯ ಇತಿ ಖ್ಯಾತ ಋಷಿಃ ಪರಮಧಾರ್ಮಿಕಃ । ಆರಾಧ್ಯ ಸ ಮಹಾದೇವಂ ಪ್ರಾಪ್ತವಾನಸತುಲಂ ಯಶಃ ॥೭೩॥ ವೇದವ್ಯಾಸಶ್ಚ ಯೋಗಾತ್ಮಾ ಪರಾಶರಸುತೋ ಮುನಿಃ । ಸೋಽಪಿ ಶಂಕರಮಾರಾಧ್ಯ ಪ್ರಾಪ್ತವಾನಸತುಲಂಯಶಃ ॥೭೪॥ ನಾರದೇನ ತು ಭಕ್ತ್ಯಾಸೌ ಭವ ಆರಾಧಿತಃ ಪುರಾ ॥

ಎಂಬೀ ನುಡಿಗಳು ವೇದದ ಒಂದು ಶಾಖಾಪ್ರವರ್ತಕನಾದ ಉಪಮನ್ಯು ಎಂಬ ಅಪ್ರಾಕೃತಮುನಿಯ ಮುಖದಿಂದ ಹೊರಟವುಗಳು; ಈ ನುಡಿಗಳಿಂದ ವ್ಯಾಸನೂ ನಾರದನೂ ಶಿವಧರ್ಮಪರಾಯಣರಾಗಿದ್ದರೆಂದು ತಿಳಿದು ಬರುವುದಲ್ಲದೆ, ಯಾಜ್ಞವಲ್ಕ್ಯನಾದರೂ ಶಕ್ತಿವಿಶಿಷ್ಟಾದ್ವೈತವಾದಿಯಾಗಿದ್ದನೆಂಬುದೂ ಸಹ ಸಿದ್ಧವಾಗುವುದು. ಈ ಮಾತಿನ ಸತ್ಯತೆಯನ್ನು ಯಾಜ್ಞವಲ್ಕ್ಯನ ಬಾಯಿಂದ ಹೊರಹೊಮ್ಮಿದ ನುಡಿಗಳೇ ದೃಢಪಡಿಸುತ್ತವೆ; ಎಂದರೆ, ಬೃಹದಾರಣ್ಯಕದ ನಾಲ್ಕನೆಯ ಬ್ರಾಹ್ಮಣದಲ್ಲಿ—

**ಸ ವೈ ನೈವ ರೇಮೆ ತಸ್ಮಾದೇಕಾಕೀ ನ ರಮತೇ
ಸ ದ್ವಿತೀಯಮೈಚ್ಛತ್, ಸ ಹೈತಾವಾನಾಸ
ಯಥಾ ಸ್ತ್ರೀಪುಮಾಂಸೌ ಸಂಪರಿಷ್ವಕ್ತೌ
ಸ ಇಮಮೇವಾತ್ಮಾನಂ ದ್ವೇಧಾ ಪಾತಯತ್
ತತಃ ಪತಿಶ್ಚ ಪತ್ನೀ ಚಾಭವತಾಂ ತಸ್ಮಾದಿದ
ಮರ್ಧ ಬೃಗಲಮಿವ ಸ್ವ ಇತಿ ಹಸ್ಮಾಹಯಾಜ್ಞವಲ್ಕ್ಯಃ**

‘ಆ ಪರಮಶಿವನು ರಮಿಸಲು (ಕ್ರೀಡಿಸಲು, ವಿನೋದಿಸಲು) ತೊಡಗಲಿಲ್ಲ; ಆದುಕಾರಣವೇ ಈಗಲೂ ಒಂದೇ ಪ್ರಾಣಿ ರಮಿಸದು (ದ್ವೈತಭಾವವಿಲ್ಲದ ಹೊರತು ವಿನೋದವು ಘಟಿಸದು) ಅವನು ಮತ್ತೊಂದು ವಸ್ತುವಿನ ಇಚ್ಛೆಯುಳ್ಳವನಾದನು (ಆದರೆ-ಏಕಮೇವಾದ್ವಿತೀಯಮ್, ನತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೆ) ಎಂಬಂತೆ ತನಗನ್ಯವಾದ ಬೇರೊಂದು ವಸ್ತುವೇ ಇಲ್ಲದಿರುವುದರಿಂದ, ಆಗ ಏನುತಾನೇ ಮಾಡಬೇಕು?) ತಾನೇ ಸ್ತ್ರೀಯಿಂದಾಲಿಂಗಿತನಾದವನಂತೆ ತೋರಿದನು; (ಶರಣಂತೆ ನ ಶಕ್ತಿ [illegible] ಎಂಬ ವ್ಯಾಗೇಂದ್ರವಚನದಂತೆ ಅವನ ವಿಶ್ವವಿನೋದಕ್ಕೆ [illegible] ಯ ಶಕ್ತಿಯ ಹೊರತು ಬೇರೊಂದು ಸಾಧನವಿಲ್ಲದ್ದರಿಂದ, ಶಕ್ತಿಯ ಪ್ರಭಾವದಿಂದ ಸ್ತ್ರೀ ಪುರುಷರೆಂಬ ದ್ವೈಧೀಭಾವವು ಎಂದರೆ ಶಕ್ತಿ ಶಿವರೆಂಬ ದ್ವೈತವನ್ನು ತಳೆದನು; ಆದರೂ [illegible] ಸಿದ್ಧವಾದ ತಮ್ಮ ಅವಿನಾಭಾವದಲ್ಲಿ ಆ ಶಿವಶಕ್ತಿಯರಿಗೆ [illegible] ಜಾಗರೂಕತೆಯುಂಟು. ಅದಕ್ಕೆ ಸ್ವಲ್ಪ ಧಕ್ಕೆ ತಗಲುವ ವಾದರೂ ಸಹ ಅವರೀರ್ವರಿಗೆ ಸಹನವಿಲ್ಲ; ಆದರೆ ಒಬ್ಬ [illegible] ನನು ಸ್ತ್ರೀಯಿಂದ ಅಪ್ಪಿಕೊಂಡವನಾದರೆ ಹೇಗೆ ಕಾಣುವನೋ ಹಾಗೆ ಶಿವನು ತನ್ನ ಶಕ್ತಿಯಿಂದಾಲಿಂಗಿತನಾಗಿ ಬೇರೆ ರೂಪದಿಂದ ವಿನೋದಿಸತೊಡಗಿದನು) ಈ ದ್ವೈಧೀಭಾವ [illegible] ಯೇ ಒಂದೇ ಬಿದುರಿನ ಕಂಬಿಗಳಂತೆ ಪತಿಪತ್ನಿಗಳೆಂಬ [illegible] ರೂಪವನ್ನು ತಳೆಯದು; ಎಂದು ಯಜ್ಞವಲ್ಕ್ಯನು ಹೇಳಿ[illegible]

ಗುಣಗ್ರಾಹಕರಾದ ವಾಚಕಮಹಾಶಯರೇ? ಯಾಜ್ಞವಲ್ಕ್ಯನು ಶಕ್ತಿವಿಶಿಷ್ಟಾದ್ವೈತವಾದಿಯೆಂಬುದು ಈಗಲಾದರೂ ಮನವರಿಕೆಯಾದಿತೇ? ನೋಡಿದಿರಾ? ವೈದಿಕವಾಙ್ಮಯ[illegible] ಹೇಗಿದೆ? ವಾಜಸನೇಯ (ಈಶಾವಾಸ್ಯ) ಉಪನಿಷತ್[illegible] ದರೂ ಈ ಯಾಜ್ಞವಲ್ಕ್ಯನೇ ಎಂಬುದನ್ನು ಬೇರೆ ಹೇಳಬೇಕಿಲ್ಲ ಮತ್ತು ಈಶಾವಾಸ್ಯೋಪನಿಷತ್ತಿಗೆ ದೂರ್ವಾಸಮುನಿಯು [illegible] ಕ್ರರವೆಂಬ ಭಾಷ್ಯವನ್ನು ಬರೆದಿರುವನೆಂಬುದೂ ನಿಮ್ಮ [illegible] ಯಲ್ಲಿರಬಹುದು. ಈಗ ಆ ಉಪನಿಷತ್ತಿನ ಮೊದಲಿನ [illegible] ವನ್ನೂ ಅದರ ಭಾಷ್ಯವನ್ನೂ ಈ ಕೆಳಗೆ ಕೊಡುತ್ತೇವೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಮ್ ॥

ದೂರ್ವಾಸಭಾಷ್ಯಮ್—ಈಶಸ್ಯ-ಶಾಂಭವಾಸ್ಯಂ-ನಿವಾಸಸ್ಥಾನಂ, ಇದಂ-ಪಕ್ಷ್ಯಮಾಣತಯಾ ಪುರಸ್ಫೂರ್ತಂ ಲಿಂಗಂ, ಸರ್ವಂ-ಸಶಿವಾಧಿಷ್ಠಿತತ್ವಾದಿತಿಭಾವಃ । ಜಗತ್ಯಾಂ ಪೃಥಿವ್ಯಾಂ ಉಪಾಸನಾರ್ಥತಯಾ ಅಧಿ[illegible] ಕ್ರಿಯಾಸಮುಭಿವ್ಯಾಹಾರೇಣ ಗಚ್ಛತ್[illegible] ಚ್ಛಿಲಾಮೃದ್ದಾರುಧಾತ್ವಾದಿವಿಧತ್ತೇ[illegible] ಗೇನ. ತ್ಯಕ್ತೇ ಪ್ರಮಾದಾದಿನಾ ಪರಿತ್ಯಕ್ತೇ[illegible] ಭುಂಜೀಥಾಃ-ಮಾಭುಂಕ್ಷ್ವ । ಉಚ್ಛಯನಾಮಿ[illegible] ಗಾಲಾರ್ಥೇ ಅನಶನಾದಿನಾ ಶರೀರಮೇವ[illegible] ಸತ್ವಸ್ವಲಿಂಗಂಧಾರ್ಯಮಿತ್ಯಾತು ಕಸ್ಯ[illegible] ಧನಂ-ಲಿಂಗಂ, ಮಾಗೃಧಃ ಮಾಭಿಲಷೇ[illegible]

ನ್ಯೈ ಲಿಙ್ಗಂ ತಸ್ಮಾನ್ನಾನ್ಯೇಷಾಂ ಲಿಙ್ಗಂ ಗೃಹ್ಣೀತೇತಿ’ ಕೌಷೀತಕೀ ಶ್ರುತೇಃ ॥

ಈ ಮಂತ್ರದಲ್ಲಿ ಮೋಕ್ಷಾರ್ಥಿಗೆ ಶಿವಲಿಂಗಧಾರಣವು ಆವಶ್ಯಕವಾದುದೆಂದೂ ಲಿಂಗಲೋಪವಾದರೆ ಪ್ರಾಣ[illegible] ಬೇಕಲ್ಲದೆ ಅನ್ಯರ ಲಿಂಗವನ್ನು ಬಯಸಬಾರದೆಂದ[illegible] ಗನಿಷೇಧವು ವಿಧಿಸಲ್ಪಟ್ಟಿದೆ.

ಸತ್ಪಾತ್ರದಾನವೂ ಸನ್ಮಾನಸಮಾರಂಭವೂ

ದಾವಣಗೆರೆ ಶ್ರೀ ಜಯಲಕ್ಷ್ಮೀ [illegible] ನಾದಿಕ[illegible] ಮಂಡಲಿಯವರು ನಮ್ಮ ಪ್ರಾಂತಕ್ಕೆ ಬಂದು ಶಿಂಗ[illegible] ವೀರಭದ್ರದೇವರ ಹಾಗೂ ಗುಮ್ಮಗೋಳ ಶ್ರೀ ಗ[illegible] ರದೇವರ ಜಾತ್ರೆಗಳಲ್ಲಿ ಶ್ರೀ ಜಗದ್ಗುರು ರೇಣುಕ[illegible] ವಿಭೀಷಣನ ಪ್ರಾರ್ಥನಾನುಸಾರವಾಗಿ ಲಂಕಾ[illegible] ಮಾಡಿಸಿ ತ್ರಿಕೋಟಿ ಲಿಂಗಗಳನ್ನು ಸ್ಥಾಪಿಸಿದ್ದ[illegible] ರಾಮಚಂದ್ರನು ಕೇವಲ ಶಿವಭಕ್ತಿವಿಶಿಷ್ಟರಾ[illegible]

ದಿಲ್ಲಿಯಲ್ಲಿ ಭನ್ನಮಾಲ್ ಎಂಬ ಹೆಸರಿನ ಒಬ್ಬ ಮನುಷ್ಯನು ತನ್ನ ತಂದೆಯು ತನಗೆ ದ್ರವ್ಯವನ್ನು ಕೊಡಲಿಲ್ಲವೆಂಬ ಆಗ್ರಹದಿಂದ ಒಂದಾನೊಂದು ದಿವಸ ನಿದ್ರೆಯಲ್ಲಿದ್ದ ತಂದೆಯನ್ನು ಕೊಂದುಬಿಟ್ಟನು. ಈ ಪಿತೃಘಾತುಕನನ್ನು ಪೋಲೀಸಿನವರು ಹಿಡಿದಿರುತ್ತಾರೆ. ಇದ್ದರೆ ಇಂಥ ಮಕ್ಕಳೇ ಇರಬೇಕು.

ಭಾಷಣ ಕಲೆಯಲ್ಲಿ ಅಸಾಧಾರಣವಾದ ಕೀರ್ತಿಯನ್ನು ಸಂಪಾದಿಸಿಕೊಂಡಿರುವ ಶ್ರೀಮತಿ ಸರೋಜಿನಿ ದೇವಿಯವರು ಹಿಂದುಸ್ಥಾನದಿಂದ ಅಮೇರಿಕಾಖಂಡಕ್ಕೆ ಪ್ರಯಾಣಮಾಡಿ, ಇಲ್ಲಿಯವರೆಗೆ ಆ ದೇಶದ ನಾನಾ ಭಾಗಗಳಲ್ಲಿ ನೆರವೇರಿದ 200 ಮಹಾಸಭೆಗಳಲ್ಲಿ ಶ್ಲಾಘನೀಯಗಳಾದ ಭಾಷಣಗಳನ್ನು ಮಾಡಿ ತದ್ದೇಶೀಯರ ಪರಮಪ್ರೀತಿವಿಶ್ವಾಸಗಳಿಗೆ ಕಾರಣರಾಗಿರುವರು.

ಇಗ್ಲಂಡಿನಲ್ಲಿ ಈವರೆಗೆ ವಿವಾಹವಾಗತಕ್ಕ ಗಂಡಸರಿಗೆ 14 ವರ್ಷಗಳಾಗಿರಬೇಕೆಂದೂ ಹೆಂಗಸರಿಗೆ 12 ವರ್ಷಗಳಾಗಿರಬೇಕೆಂದೂ ಇದ್ದ ನಿರ್ಬಂಧವನ್ನು ತೆಗೆದುಹಾಕಿ, ಗಂಡಸು ಹೆಂಗಸರಿಬ್ಬರೂ ಹದಿನಾರು ವರ್ಷಕ್ಕಿಂತ ಮೊದಲು ಮದುವೆಯಾಗಕೂಡದೆಂಬ ನೂತನ ಕಾನೂನು ಪಾರ್ಲಿಮೆಂಟಿನಲ್ಲಿ ಪಾಸಾಗಿರುತ್ತದೆ. ಸಾರ್ವಭೌಮರ ರುಜುವಾದನಂತರ ಈ ಕಾನೂನು ಜಾರಿಗೆ ಬರುವದು.

ಅಮೇರಿಕೆಯ ಫಾಕ್ಸ್ ಫಿಲ್ಮ್ ಕಾರ್ಪೊರೇಷನ್, ಮತ್ತು ಕೊಲಂಬಿಯ ಫಿಕ್ಚರ್ಸ್ ಕಾರ್ಪೊರೇಷನ್ನವರು ಸದ್ಯಃ ಮಾತಾಡುವ ಚಲನಚಿತ್ರಗಳನ್ನು ತಯಾರಿಸುತ್ತಲಿದ್ದಾರೆ. ಇದುವರೆಗೂ ಯಾವ ಬಯಾಸ್ಕೋಪುಗಳನ್ನು ನೋಡಿದರೂ ಚಲಿಸುವಚಿತ್ರಗಳನ್ನು ನೋಡುತ್ತಿದ್ದೆವು. ಇನ್ನು ಮುಂದೆ ಚಲನದೊಂದಿಗೆ ಮಾತಾಡುವ ಚಿತ್ರಗಳನ್ನೂ ಸಹ ನೋಡುವ ಸಮಯವು ಇಷ್ಟರಲ್ಲಿಯೇ ಒದಗಬಹುದು.

ಬೆಳಗಾಂವ ಜಿಲ್ಲೆಗೆ ಸೇರಿದ ಮುಗುಟಖೇಡ ಎಂಬ ಗ್ರಾಮದಲ್ಲಿ ಒಂದು ಘಂಟೆಯ ಕಾಲದವರೆಗೆ ಅದ್ಭುತವಾದ ಆಣೆಕಲ್ಲುಗಳ ವೃಷ್ಟಿಯಾಯಿತು. ಈ ವೃಷ್ಟಿಯಲ್ಲಿ 24 ಅಡಿ ಉದ್ದ 22 ಅಡಿ ಅಗಲವುಳ್ಳ ಆಣೆಕಲ್ಲುಗಳು ಬಿದ್ದು 3-4 ದಿವಸಗಳವರೆಗೆ ಒಂದೇ ಸಮನೆ ಚಿಕ್ಕನದಿಯ ಪ್ರವಾಹದಂತೆ ಪ್ರವಹಿಸಿದವೆಂದೂ ಅದ್ಭುತವಾದ ಈ ತರದ ಈಶ್ವರೀಕೃತಿಯನ್ನು ನೋಡುವುದಕ್ಕಾಗಿ ಸಾವಿರಾರು ಜನರು ಗುಂಪುಗುಂಪಾಗಿ ಹೋಗುತ್ತಿದ್ದರೆಂದೂ ತಿಳಿದುಬರುತ್ತದೆ.

ಚಕ್ರವರ್ತಿಗಳಿಗೆ ಸಂಭವಿಸಿದ್ದ ಅಸ್ವಸ್ಥತೆಯು ದೇವರ ಕೃಪೆಯಿಂದ ಪರಿಹಾರವಾದ ಸಂತೋಷಕ್ಕಾಗಿ ಒಂದು ಫಂಡನ್ನು ಕಾಯಿಡಿಸಬೇಕೆಂದು ಪ್ರಯತ್ನವು ನಡೆದು ಈಗ 30 ಲಕ್ಷ ರೂಪಾಯಿಗಳ ಚಂದಾವಸೂಲಾಗಿದೆ. ಹೆಚ್ಚಿಗೆ ದ್ರವ್ಯವು ಕೇಬರವಾದರೆ “ರೇಡಿಯಂ” ವಸ್ತುವನ್ನು ತರಿಸಿ ಆಸ್ಪತ್ರೆಗಳಲ್ಲಿ ಇಡುವ ವಿರ್ಪಾಡು ಮಾಡಲ್ಪಡುವದಂತೆ! ಆ ರೇಡಿಯಮ್ಮಿನ ಕಿರಣಗಳನ್ನು ಪ್ರಯೋಗಿಸುವುದರಿಂದ ಅನಂತರೋಗಗಳು ಗುಣವಾಗುವವಂತೆ! ಈ ಫಂಡಿಗೆ ಬ್ರಿಟಿಷ್ ಗವರ್ನಮೆಂಟಿನವರು 15 ಲಕ್ಷ ರೂಪಾಯಿಗಳನ್ನು ಸಹ ಕೊಡಲೊಪ್ಪಿರುತ್ತಾರೆ

ಮಿ|| ಡಂಕನ್ ಎಂಬವರು ರಿಂಟಿ ಎಂಬ ನಾಯಿಯೊಂದನ್ನು ಸಾಕಿರುವರಂತೆ! ಈ ನಾಯಿಯು ಸಿನಿಮಾದಲ್ಲಿ ಅತ್ಯದ್ಭುತಗಳಾದ ಸಾಹಸವನ್ನು ಮಾಡುತ್ತದಂತೆ! ಈ ನಾಯಿಗೋಸ್ಕರ ಡಂಕನ್ನರು ಒಂದು ಸುಂದರವಾದ ಮನೆಯನ್ನು ಕಟ್ಟಿಸಿರುವರಂತೆ! ಈ ಮನೆಯೊಳಗೆ ಆ ನಾಯಿಯು ತನ್ನ ಸಂಸಾರಸಮೇತವಾಗಿ ವಾಸಮಾಡಿರುವುದಂತೆ! ಇದಕ್ಕೆ ಪ್ರಾತಃಕಾಲದಲ್ಲಿ ಹಾಸಿಗೆಯಿಂದ ಏಳುತ್ತಲೇ ಅಲ್ಪಾಹಾರವಾಗಬೇಕಂತೆ! ಬಳಿಕ ಸ್ವಲ್ಪ ಹೊತ್ತು ವ್ಯಾಯಾಮವೂ ನಡೆಯಬೇಕಂತೆ! ವ್ಯಾಯಾಮ ತೀರಿಸಿ ಮನೆಗೆ ಬಂದೊಡನೆಯೇ ಪುನಃ ಅಲ್ಪಾಹಾರವು ನಡೆಯಬೇಕಂತೆ! ಈ ನಾಯಿಯ ಪುಣ್ಯವೇ ಪುಣ್ಯವು.

ಪಂಡಿತ ಮದನಮೋಹನಮಾಲವೀಯರವರು ಕಾಶೀಕ್ಷೇತ್ರದಲ್ಲಿ ತಾವು ಸ್ಥಾಪಿಸಿದ ಹಿಂದೂ ವಿಶ್ವವಿದ್ಯಾಲಯಕ್ಕೆ ಸಹಾಯವನ್ನು ಕೋರುವದಕ್ಕೋಸ್ಕರ ಹೈದರಾಬಾದ ನಿಜಾಮುಸಾಹೇಬರವರ ಹಾಗೂ ಅವರ ರಾಜ್ಯದಲ್ಲಿರತಕ್ಕ ಜಹಾಗೀರದಾರರ ಕಡೆಗೆ ಹೋಗುವದನ್ನು ನಿಶ್ಚಯಿಸಿದ್ದರೆಂದೂ, ಆದರೆ ನೈಜಾಮರವರ ಮುಕ್ಕಾಂ ಸದ್ಯಃ ಅಲ್ಲಿಲ್ಲದಿರೋಣದರಿಂದ ತಮ್ಮ ಪ್ರಯಾಣವನ್ನು ನಿಲ್ಲಿಸಿರುವರೆಂದೂ, ಮಾಲವೀಯರವರು ಹೈದರಾಬಾದ ರಾಜ್ಯಕ್ಕೆ ಬಂದದ್ದಾದರೆ ರಾಜಕೀಯ ವಿಷಯದಲ್ಲಾಗಲಿ ಅಥವಾ ಶುದ್ಧಿ ಸಂಘಟನದ ವಿಷಯದಲ್ಲಾಗಲಿ ಪ್ರವೇಶಮಾಡಬಾರದೆಂಬ ವಿಷಯವನ್ನು ನಿಜಾಮರವರ ಮಂತ್ರಿಗಳು ಮಾಲವೀಯರವರಿಗೆ ತಿಳುಹಿಸಿರುವರೆಂದೂ ತಿಳಿದುಬರುತ್ತದೆ.

ನಿಜಾಮ ಇಲಾಖಾ ಜೋಗೂರು ಹಿರೇಮಠದ ವೇ|| ಸಿದ್ಧಾಂತಿ ನಾಗಭೂಷಣಶಾಸ್ತ್ರಿಗಳವರು ಶುಕ್ಲಸಂವತ್ಸರದ ಪಂಚಾಂಗವನ್ನು ಮುದ್ರಿಸಿ ಒಂದು ಪ್ರತಿಯನ್ನು ನಮ್ಮ ಕಡೆಗೆ ಕಳುಹಿಸಿರುತ್ತಾರೆ. ಸದರಿ ಪಂಚಾಂಗದಲ್ಲಿ ಜನೋಪಯುಕ್ತಗಳಾದ ಅನೇಕ ವಿಷಯಗಳು ಗರ್ಭೀಕೃತವಾಗಿರುವದರಿಂದ ಇದು ಸರ್ವಜನಸಂಗ್ರಾಹ್ಯವಾಗಿದೆ. ಜಗದಾಚಾರ್ಯರ ಜಯಂತಿಗಳನ್ನು ಸರಿಯಾದ ತಿಥಿಗಳಲ್ಲಿ ಸ್ಪಷ್ಟವಾಗಿ ತೋರಿಸದೆ ಒಂದೊಂದು ಸಂಜ್ಞೆಯನ್ನು ಮಾಡಿ ಸಂದುಗೊಂದುಗಳಲ್ಲಿ ಸೇರಿಸಿರುವದರಿಂದ ಹಾಕಿಯೂ ಹಾಕದಂತಾಗಿದೆ. ಮುಂದಿನ ಸಂವತ್ಸರದ ಪಂಚಾಂಗದಲ್ಲಿ ಇದನ್ನು ಸರಿಪಡಿಸಿಕೊಳ್ಳಬಹುದೆಂದು ಪೂರ್ಣ ನಂಬಿದ್ದೇವೆ. ಪಂಚಾಂಗ ದೊರೆಯುವ ಸ್ಥಳ—ಧಾರವಾಡ ಡಿ|| ಗದಗ ಸಿಟಿಯಲ್ಲಿರುವ ಮ|| ರಾ|| ಹುಬ್ಬಳ್ಳಿ ಗುರಪ್ಪನವರ ಮನೆಯಲ್ಲಿ.

ಹೈದಾರಾಬಾದಿನಲ್ಲಿ ಕೆಲ ಹಿಂದುಗಳು ಸರದಾರ್ ಪೋಲೀಸ್ ಥಾಟ್ ಎಂಬವರ ಮೇಲೆ ಕಲ್ಲುಗಳನ್ನೆಸೆದರೆಂದು ಮಹಮ್ಮದೀಯರಲ್ಲೊಬ್ಬನು ಕೋಪಾವಿಷ್ಟನಾಗಿ ಒಂದು ವಿಲ್ಲಿನಲ್ಲಿ ಕೈಟರಾಗಿದ್ದ ಮಿ|| ಮಾರ್ಟಿನ್ ಎಂಬುವನನ್ನೂ ಹಾಗೂ ಇಬ್ಬರು ಹಿಂದುಗಳನ್ನೂ ಒಬ್ಬ ಹೆಂಗಸನ್ನೂ ಪಿಸ್ತೂಲಿನಿಂದ ಹೊಡೆದು ಯಮಪುರಿಗೆ ಕಳುಹಿಸಿದನಲ್ಲದೆ, ಸಮೀಪದಲ್ಲಿ ಒಂದು ಮನೆಯೊಳಗಿನ ಕಿಟಕಿಯಿಂದ ಈ ಗಲಾಟೆಯನ್ನು ನೋಡುತ್ತಿದ್ದವನೊಬ್ಬನನ್ನೂ ಸಹ ಕೊಂದು ಅಲ್ಲಿಗೂ ಶಾಂತನಾಗದೆ ತಿರುಗಾಡುತ್ತಿದ್ದ ಹಿಂದುಗಳ ಮೇಲೆಲ್ಲಾ ಗುಂಡುಗಳ ಮಳೆಯನ್ನು ಸುರಿಸಿದನು. ಇದರಿಂದ 7-8 ಜನ ಹಿಂದುಗಳು ಮೃತರಾದರಲ್ಲದೆ ಹತ್ತಾರು ಜನಗಳು ಅಪಾಯಕ್ಕೀಡಾಗಿರುವರು. ಅಷ್ಟಕ್ಕೆ ಕೆಲ ಮಹಮ್ಮದೀಯರು ಆ ಘಾತುಕನನ್ನು ತಡೆಯಲು ಆರಂಭಿಸಲಾಗಿ ಅಲ್ಲಿಗೂ ಶಾಂತನಾಗದೆ ನಾನು ಹಿಂದುಗಳ ಮರಣಹೋಮಕ್ಕೆ ಹೊರಟಿರುತ್ತೇನೆ. ನೀವು ತಡೆಯಬೇಡಿರೆಂದು ವೀರಾವೇಶದಿಂದ ಸಾರುತ್ತಿದ್ದನಂತೆ! ಈ ಮಧ್ಯದಲ್ಲಿ ಕೆಲ ಜನ ದುಷ್ಟ ಮುಸಲ್ಮಾನರು ಹಿಂದುಗಳ ಮೇಲೆ ಇರುವ ನಮ್ಮ ವ್ಯಾಕೋಪವು ಇಷ್ಟರಲ್ಲೇ ತೀರುವಂತಿಲ್ಲವು: ಹಿಂದುಗಳು ಇನ್ನೂ ನಮಗೆ ವಿಶೇಷವಾಗಿ ಆಹುತಿಯಾಗಬೇಕಾಗಿದೆ. ಎಂಬ ಕ್ರೂರಾಭಿಪ್ರಾಯಗರ್ಭಿತವಾದ ಲೇಖಗಳನ್ನು ಬರೆದು ಮನೆಬಾಗಿಲುಗಳಿಗೆ ಹಚ್ಚಿರುವರಂತೆ! ಅಲ್ಲಿ ನಡೆಯುತ್ತಿರುವ ಭಯಾನಕಸ್ಥಿತಿಯನ್ನು ಕಂಡು ಸಿಟಿಮ್ಯಾಜಿಸ್ಟ್ರೇಟರು ಅಂಗಡಿಗಳು ಪ್ರಾತಃಕಾಲ 9 ಘಂಟೆಗೆ ತೆರೆದು ಸಾಯಂಕಾಲ 6 ಘಂಟೆಯೊಳಗೆ ಮುಚ್ಚಲ್ಪಡಬೇಕೆಂದು ಕಟ್ಟಪ್ಪಣೆಯನ್ನು ಮಾಡಿರುವುದಲ್ಲದೆ ಪೋಲೀಸರನ್ನು ಮಹಮ್ಮದೀಯರಮೇಲೆ ಉಸ್ತುವಾರಿ ಇಟ್ಟಿರುವರು. ಅನೇಕ ಜನರನ್ನು ಕೊಂದ ಆ ಕೊಲೆಗಡುಕನು ಅಬ್ದುಲ್ ಕರೀಂ ಮುಗಲಸಂ ಮಹೋ ಎಂಬವನೇ ಇರಬಹುದೆಂದು ತಿಳಿದು ಸದರಿಯವನನ್ನು ಹಿಡಿದು ತುರಂಗದಲ್ಲಿಟ್ಟಿರುವರು.

ವಿಜ್ಞಾಪನೆ.

ರಂಭಾಪುರೀ ಜಗದ್ಗುರುಗಳು ದಾವಣಗೆರೆ ಪಟ್ಟಣಕ್ಕೆ ಈ ತಿಂಗಳು ೧೯ ನೆಯ ತಾರೀಖಿನ ದಿವಸ ಬೆಳಗ್ಗೆ ೮ ಘಂಟೆಗೆ ದಯೆಮಾಡಿಸುವರು. ಇಲ್ಲಿ ಹವಾ ವಗೈರೆ ಚನ್ನಾಗಿದೆ. ಆದುದರಿಂದ ದೂರದೇಶನಿವಾಸಿಗಳು ಯಾವ ಯೋಚನೆಯಿಲ್ಲದೆ ಬಂದು ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುವ,

ಟಿ. ಎಂ. ಓಂಕಾರಪ್ಪಯ್ಯ,
ದಾವಣಗೆರೆ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೈದಿಕವಾಙ್ಮಯರಹಸ್ಯವು
ಅಥವಾ
ಪ್ರಭಾಭರಣವು.

(ಲೇಖಕರು—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ವಿಜಾಪುರ).

[ಕಳೆದವಾರದ ಶೇಷ.]

ವಾಚಕಮಹಾಶಯರು ನೆನಪಿನಲ್ಲಿಡತಕ್ಕ ಸಂಗತಿಯೊಂದನ್ನು ನಾವು ಇಲ್ಲಿ ಹೇಳುತ್ತೇವೆ; ಏನೆಂದರೆ—ಸದ್ಯಃ ಋಗ್ವೇದಸಂಹಿತಾ-ಯಜುರ್ವೇದಸಂಹಿತಾ-ಸಾಮವೇದಸಂಹಿತಾ-ಅಥರ್ವವೇದಸಂಹಿತಾ ಎಂಬುದಾಗಿ ನಾಲ್ಕೇ ಸಂಹಿತೆಗಳು ಉಪಲಬ್ಧಗಳಾಗಿವೆ; ಆದರೆ, ಪೂರ್ವಕಾಲದಲ್ಲಿ ಸಂಹಿತೆಗಳು, ಈ ನಾಲ್ಕೇ ಆಗಿರದೆ ಬಹಳವಾಗಿದ್ದವೆಂದು ವಿದ್ವಾಂಸರು ಹೇಳುತ್ತಾರೆ; ಋಗ್ವೇದದ **ಬಾಷ್ಕಲಸಂಹಿತೆಯು** ಎಂದೋ ನಷ್ಟವಾಗಿ ಹೋಗಿದೆ, ಇದುವರೆಗೂ ಅದೆಂತಹುದಿದ್ದಿತೆಂಬುದು ಯಾರಿಗೂ ತಿಳಿದಿಲ್ಲ; ಅದರ ಹೆಸರು ಮಾತ್ರ ಕೇಳಿಕೆಯಲ್ಲಿದೆ. ಈಗ ಋಗ್ವೇದವೆಂದು ಯಾವ ಸಂಹಿತಾಗ್ರಂಥವನ್ನು ನಾವು ಹೇಳುತ್ತೇವೆಯೋ ಅದರ ಐತಿಹಾಸಿಕ ಹಾಗೂ ಶಾಸ್ತ್ರೀಯವಾದ ಹೆಸರು **ಶಾಕಲ ಸಂಹಿತೆಯು** ಎಂದಿದೆ; ಇದಾದರೂ ಪೂರ್ಣವಾಗಿದೆಯೇ? ಇಲ್ಲ. ಬುನಾದಿಯಿಂದ ವೈದಿಕವಾಙ್ಮಯವನ್ನು ರಕ್ಷಿಸುವ ಉದ್ದೇಶದಿಂದ ಬಹುವಿಧಪ್ರಯತ್ನಗಳು ನಡೆದೇ ಇದ್ದರೂ ಅದರಲ್ಲಿಯ ಎಷ್ಟೋ ಭಾಗಗಳು ಕಾಲನ ಹೊಟ್ಟೆಯೊಳಗೆ ಜೀರ್ಣವಾಗಿವೆ; ಸಂಹಿತೆಗಳಲ್ಲಿ ಅಲ್ಲಲ್ಲಿ ತ್ರುಟಿತವೂ ಸಂದರ್ಭರಹಿತವೂ ಆದ ಭಾಗಗಳನ್ನು ನೋಡಿದೊಡನೆಯೇ ಎಂತಹವನಿಗಾದರೂ ಶಂಕೆಯುಂಟಾಗದಿರದು. ಈಗಣ ಶಾಕಲಸಂಹಿತೆಯೊಂದರಲ್ಲಿಯೇ ಸಾವಿರಾರು ಸೂಕ್ತಗಳು ನಷ್ಟವಾಗಿಹೋಗಿರುವವೆಂಬ ಸಂಗತಿಯು ಅದರ ಸರ್ವಾನುಕ್ರಮಣಿಯಿಂದ ಸಿದ್ಧಿಸುವುದು. ಇದನ್ನೆಲ್ಲ ವಿಚಾರಮಾಡಿನೋಡಿದರೆ, ಎಷ್ಟೋ ಸಂಹಿತೆಗಳೊಂದಿಗೆ ಅಪ್ರಾಕೃತ ತತ್ತ್ವಬೋಧಕಗಳಾದ ಅನೇಕ ಸೂಕ್ತಗಳೂ ಸಹ ನಷ್ಟವಾಗಿರಬಹುದೆನ್ನಲು ಅಡ್ಡಿಯಿಲ್ಲ. ಇದರಿಂದ ಆ ಸೂಕ್ತಗಳ ಪ್ರವರ್ತಕರಾದ ಬೇರೆ ಬೇರೆ ಮಹರ್ಷಿಗಳ (ಪ್ರಮಥಗಣರ) ಹೆಸರುಗಳಾದರೂ ಅಡಗಿವೆ. ಆದರೂ ಅವರ ಅನುಯಾಯಿಗಳಾದ ಬೇರೆ ಕೆಲ ಋಷಿಗಳು ತಮ್ಮ ಸೂಕ್ತಗಳಲ್ಲಿ ತಮಗೆ ಮಾರ್ಗದರ್ಶಕರಾದ ಆ ಪ್ರಮಥಗಣರನ್ನು **‘ಪ್ರಥಮಜರು’ ‘ಪುರಾತನ ಮಹರ್ಷಿಗಳು’-‘ಶಿವನ ಪುತ್ರರು’** ಎಂಬುದಾಗಿ ಹೊಗಳುತ್ತಾರೆ. ಈ ವಿಷಯವಾಗಿ ಋಗ್ವೇದೀಯ ಪ್ರಥಮಮಂಡಲದ **‘ಅಸ್ಯವಾಮೀಯ’** (೧೬೪) ಸೂಕ್ತವೇ ಸಾಕ್ಷಿಯಾಗಿದೆ. ತತ್ತ್ವಜ್ಞಾನದೃಷ್ಟಿಯಿಂದ ಈ ಸೂಕ್ತವು ಬಹಳ ಮಹತ್ತ್ವವುಳ್ಳದ್ದಾಗಿರುವುದು. ಈ ಹಿಂದೆ ನಾವು ಉಲ್ಲೇಖಿಸಿರುವ **‘ನವಿಜಾನಾಮಿ’** ಎಂಬ ಮಂತ್ರವು ಈ ಸೂಕ್ತದೊಳಗಣದೇ ಆಗಿದೆ. ಈ ಸೂಕ್ತದಲ್ಲಿ ಇದು ೫೦ ನೆಯ ಮಂತ್ರವು ‘ಆತ್ಮನು ಶಿವನಾಗಿ ಶಿವನನ್ನು ಪೂಜಿಸುವುದೇ ಪೂರ್ವಕಾಲದಲ್ಲಿ ಮುಖ್ಯಧರ್ಮವಾಗಿದ್ದಿತು’ ಎಂಬುದಾಗಿ ಶಿವಸಿದ್ಧಾಂತದ ಪದ್ಧತಿಯನ್ನು ಸಂಕ್ಷೇಪವಾಗಿ ಸೂಚಿಸುವುದು. ಈ ಸೂಕ್ತದೊಳಗಣ ಎಷ್ಟೋ ಮಂತ್ರಗಳು ಸ್ಪಷ್ಟವಾಗಿ ಅರ್ಥವಾಗದೆ ಉಳಿದಿವೆಯೆಂಬ ಬೊಬ್ಬಾಟವು ವಿಪಶ್ಚಿದಪಶ್ಚಿಮರಲ್ಲಿಯೇ ಇದೆ. ಇಂತಹ ಸೂಕ್ತಗಳಿಗೆ ಭಾಷ್ಯವನ್ನು ಬರೆಯಲು ಹವಣಿಸಿದ ಸಾಯಣಾದಿ ಪ್ರಾಕೃತರು ಅಲ್ಲಲ್ಲಿ ಹುದುಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೆಯೇ ಋಗ್ವೇದೀಯ ೧೦ ನೆಯ ಮಂಡಲದಲ್ಲಿಯ ೧೨೯ ನೆಯ ಸೂಕ್ತವಾದರೋ ಪ್ರಾಕೃತರ ಬುದ್ಧಿಶಕ್ತಿಗೆ ಸಿಲುಕದಂತಹ ತತ್ತ್ವಜ್ಞಾನವನ್ನೊಳಗೊಂಡಿದೆ; ಇದೇ ಸುಪ್ರಸಿದ್ಧವಾದ **ನಾಸದೀಯ ಸೂಕ್ತವು.** ಇದರಲ್ಲಿಯ ತಾತ್ತ್ವಿಕವಿಚಾರಸರಣಿಯು ಬಹು ಗಹನವಾಗಿದೆ; ಈ ಹಿಂದೆ ನಾವು ಶಕ್ತಿವಿಶಿಷ್ಟಾದ್ವೈತ ಪ್ರತಿಪಾದನವನ್ನು ಮಾಡುವಾಗ ಇದರೊಳಗಣ ಮಂತ್ರವನ್ನೇ ಉದ್ಧರಿಸಿದ್ದೇವೆ. ಉಚ್ಚತರ ವಿಚಾರಸರಣಿಯುಳ್ಳವುಗಳಾದ ಇಂತಹ ಸೂಕ್ತಗಳಿಂದಲೇ ವೈದಿಕವಾಙ್ಮಯಕ್ಕೆ ಅದ್ವಿತೀಯ ಮಹತ್ವವು ಪ್ರಾಪ್ತವಾಗಿದೆ. ಈ ಬಗೆಯ ವಿಚಾರದ ಉತ್ಕೃಷ್ಟವಾದರಿಯು ಉಪನಿಷತ್ತುಗಳಲ್ಲಿದ್ದುದು ಕಂಡುಬರುವಂತೆ ಉಪನಿಷತ್ತುಗಳ ಪೂರ್ವಕಾಲೀನ ವೈದಿಕವಾಙ್ಮಯದಲ್ಲಿಯೂ ಬೇಕಾದಷ್ಟು ಉಂಟು.

ಅದುಕಾರಣವೇ, ಆರಣ್ಯಕ ಉಪನಿಷತ್ತುಗಳ ಕಾಲದಲ್ಲಿ ಬೆಳವಿಗೆ ಹೊಂದಿದ ತಾತ್ತ್ವಿಕವಿಚಾರವು ಮಂತ್ರಭಾಗದಲ್ಲಿ ಬೀಜಭೂತವಾಗಿದ್ದಿತೆಂದು ನಾವು ಮೊದಲೇ ಸೂಚಿಸಿದ್ದೇವೆ. ಒಟ್ಟಿನ ಮೇಲೆ ಸ್ಕಂದ, ನಂದ್ಯಾದಿ ಪ್ರಥಮಜರು ಈಶ್ವರನಿಂದ ಸಾಕ್ಷಾದುಪದಿಷ್ಟರಾದ ಮಹರ್ಷಿಗಳಾದ್ದರಿಂದ ಅವರೇ ಮೊದಲು ಸನಕ, ಸನಂದನ, ಸನತ್ಕುಮಾರಾದಿ ಪ್ರಾಕೃತ ಋಷಿಗಳಿಗೆ ತಾತ್ತ್ವಿಕ ವಿಚಾರಗಳನ್ನು ಬೋಧಿಸಿದರು; ಶಿವಕುಲ್ಯರಾದ ಆ ಪ್ರಮಥಗಣರು ಪತಿಧರ್ಮ (ಅಪ್ರಾಕೃತಧರ್ಮ) ಬೋಧಕಗಳಾದ ಬೇರೆ ಬೇರೆ ವೇದಶಾಖೆಗಳ ಪ್ರವರ್ತಕರಾಗಿದ್ದಾರೆಂಬಲ್ಲಿ ಸಂದೇಹವೇ ಇಲ್ಲ. ಅವರು ಜಗತ್ತಿನಲ್ಲಿ ನಿವೃತ್ತಿಧರ್ಮವನ್ನು ಸ್ವತಃ ಪ್ರಚುರಗೊಳಿಸಿದುದಲ್ಲದೆ ತಮ್ಮ ವರ್ಗದವರಿಂದ ಪರಂಪರೆಯ ಮೂಲಕವಾಗಿಯೂ ಸಹ ಹಬ್ಬುವಂತೆ ಪ್ರೇರಣೆಮಾಡಿದರು. ಯಜ್ಞಕ್ರಿಯಾವಿಷಯದಲ್ಲಿ ಹೇಗೆ ಬ್ರಾಹ್ಮಣಗ್ರಂಥಗಳೋ ಹಾಗೆಯೇ ಅಧ್ಯಾತ್ಮವಿದ್ಯಾವಿಷಯದಲ್ಲಿ ಉಪನಿಷದ್ಗ್ರಂಥಗಳು ಪರಮಪ್ರಮಾಣಗಳಾಗಿವೆ. ಆಯಾ ಶಾಖೆಯವರೇ ಆಯಾ ಉಪನಿಷತ್ಪ್ರವರ್ತಕರಾಗಿದ್ದಾರೆಂಬುದು ನಿರ್ವಿವಾದ ಸಂಗತಿಯು; ಎಂದ ಮೇಲೆ ಸದ್ಯಃ ಉಪಲಬ್ಧಗಳಾದ ಪ್ರಾಚೀನೋಪನಿಷತ್ತುಗಳಲ್ಲಿ ಅಪ್ರಾಕೃತ ತಾತ್ತ್ವಿಕ ವಿಚಾರವೇ ಸ್ಪಷ್ಟವಾಗಿರುವುದರಿಂದ ಆ ಉಪನಿಷತ್ತುಗಳ ಪ್ರಕಾಶಕರು ಯಾವ ಯಾವ ಶಾಖೆಯವರೋ ಆಯಾ ವೇದಶಾಖೆಗಳ ಪ್ರವರ್ತಕರು ಪ್ರಥಮಜರೆಂದೇ ಸಿದ್ಧವಾಗುವುದು; ಅಸ್ಯವಾಮೀಯ, ನಾಸದೀಯಾದಿ ಸೂಕ್ತಗಳ ಪ್ರವರ್ತಕರು ಆ ಪ್ರಮಥಗಣರ ವರ್ಗದವರೇ ಎಂಬ ಬಗ್ಗೆ ಆ ಸೂಕ್ತಗಳಲ್ಲಿಯ ಮಂತ್ರಗಳೇ ಸಾಕ್ಷಿಯಾಗಿವೆ; ಮತ್ತು—

ಅತ್ಯಾಶ್ರಮಿ ವಿನಿಸ್ತಾರಕಃ ಶ್ರೀಮಾನ್ ಶ್ವೇತಾಶ್ವತರಪುತ್ರಕಃ | ಶ್ವೇತಾಶ್ವತರ ಶಾಖಾಯಾಃ ಶ್ರದ್ಧಯೈವ ಪ್ರವರ್ತಕಃ ||೩೩||

ಶತರುದ್ರಸಮಾಖ್ಯಶ್ಚ ಶತರುದ್ರೀಯಭಕ್ತಿಮಾನ್ | ಪಂಚಪ್ರಸ್ಥಾನಹೇತುಜ್ಞಃ ಶ್ರೀಮತ್ಪಂಚಾಕ್ಷರಪ್ರಿಯಃ ||೩೪||

ಶಿವಸಂಕಲ್ಪಭಕ್ತಶ್ಚ ಶಿವಸೂಕ್ತಪ್ರವರ್ತಕಃ | ಲಿಂಗಸೂಕ್ತಪ್ರಿಯಃ ಕೈವಲ್ಯೋಪನಿಷತ್ಪ್ರವರ್ತಕಃ ||೩೫||

ಎಂದು (ಸೂತಸಂ-೩, ೧೧) ವ್ಯಾಸಮುನಿಯು ಹೇಳುವ ಮೇರೆಗೆ ಇನ್ನು ಬೇರೆ ಬೇರೆ ಸೂಕ್ತಗಳ ಹಾಗೂ ಉಪನಿಷತ್ತುಗಳ ಪ್ರವರ್ತಕರಾದರೂ ಪ್ರಮಥರ ಶಾಖಾನುವರ್ತಿಗಳೇ ಆಗಿದ್ದಾರೆ. ಅನಾದಿಕಾಲದಿಂದ ಆ ಪ್ರಮಥರೆಂಬ ಮಹರ್ಷಿಗಳ ಗೋತ್ರೀಯರಾದ ಬ್ರಾಹ್ಮಣರು **‘ಗೋತ್ರೇಣ ಸ್ಕಂದೋಽಸ್ಮಿ’-‘ಗೋತ್ರೇಣ ನಂದಿಕೇಶ್ವರೋಽಸ್ಮಿ’** ಎಂದು ಮೊದಲಾಗಿ ಹೇಳುತ್ತಿರುವುದಲ್ಲದೆ ಅವಿಚ್ಛಿನ್ನವಾಗಿ ತಮ್ಮ ತಮ್ಮ ವೇದಶಾಖೆಗಳ ಅಧ್ಯಯನ ಅಧ್ಯಾಪನಗಳಲ್ಲಿಯೂ ನಿರತರಾಗಿದ್ದಾರೆ.

ಪ್ರಾಚೀನಕಾಲದ ಇತಿಹಾಸವನ್ನು ಅರಿತುಕೊಳ್ಳಲು ಕೆಲವೆಡೆ ಪೌರಾಣಿಕಗ್ರಂಥಗಳೂ ನಮಗೆ ಸಹಾಯ್ಯಕಾರಿಗಳಾಗಿವೆ. ಪ್ರಕೃತದಲ್ಲಿ ಋಷಿಗಳಿಗೂ ಪ್ರಮಥರಿಗೂ ಇರುವ ಬೋಧ್ಯಬೋಧಕರೂಪ ಸಂಬಂಧವನ್ನು ತೋರಿಸುವುದಕ್ಕಾಗಿ ಶಿವಪುರಾಣಾಂತರ್ಗತವಾದ ವಾಯವೀಯಸಂಹಿತೆಯ ಉತ್ತರಭಾಗದ ೩೦ ನೆಯ ಅಧ್ಯಾಯದಲ್ಲಿಯ ಒಂದು ಇತಿವೃತ್ತವನ್ನಿಲ್ಲಿ ಸಂಕ್ಷೇಪವಾಗಿ ಕೊಡುವೆವು.

ಬ್ರಹ್ಮನ ಹಿರಿಯಮಗನೆನಿಸುವ ಸನತ್ಕುಮಾರನು ಅಜ್ಞಾನದಿಂದ ಈಶ್ವರನಲ್ಲಿ ಅನಾದರ ಬುದ್ಧಿಯುಳ್ಳವನಾಗಲು, ಅವನ ಆ ಗರ್ವನಿರಸನಕ್ಕೋಸ್ಕರ ನಂದಿಯು ತನ್ನ ಗಣಾಚಾರಕ್ಕೆ ಸರಿಯಾಗಿ ಶಪಿಸಿದ್ದರಿಂದ ಸನತ್ಕುಮಾರನು ಒಂಟೆಯ ದೇಹವನ್ನು ತಾಳಿ ಬಳಲುತ್ತಿರುವುದನ್ನು ಅವನ ತಂದೆಯಾದ ಬ್ರಹ್ಮದೇವನು ಅರಿತು. ಆ ಕಷ್ಟವನ್ನು ತೊಲಗಿಸುವುದಕ್ಕಾಗಿ ಈಶ್ವರನನ್ನೂ ನಂದಿಯನ್ನೂ ಪರಿಪರಿಯಿಂದ ಆರಾಧಿಸಿ, ಅವರ ಪ್ರಸನ್ನತೆಗೆ ಪಾತ್ರನಾದುದರಿಂದೇ ಸನತ್ಕುಮಾರನು ಒಂಟೆಯ ಶರೀರವನ್ನು ನೀಗಿ ಮರಳಿ ಮೊದಲಿನ ನಿಜಸ್ವರೂಪವನ್ನು ಪಡೆದು ನಂದಿಯು ತನಗೆ ಅನುಗ್ರಹಿಸುವ ಕಾಲವನ್ನು ನಿರೀಕ್ಷಿಸುತ್ತ ಮೇರುಶಿಖರದಲ್ಲಿ ವಾಸಿಸುತ್ತಿದ್ದನು; ಅತ್ತ ಈಶ್ವರನು ನಂದಿಯನ್ನು ಕುರಿತು—

ಅತಸ್ತ್ವಮೇನ ಯಾಥಾತ್ಮ್ಯಂ ಮಮಾಸ್ಯೈ ಕಥಯಾನಘ | ಬ್ರಹ್ಮಣಃ ಪೂರ್ವಜಃ ಪುತ್ರೋ ಮಾಭೂನ್ಮೂಢ ಇತಿಸ್ಮರನ್ ||೪೪||

ಮಯೈಷ ಶಿಷ್ಯಸ್ತೇ ದತ್ತೋ ಮಮ ಜ್ಞಾನಪ್ರವರ್ತಕಃ |

‘ಎಲೈ ನಂದಿಯೇ? ಇವನಿಗೆ (ಸನತ್ಕುಮಾರನಿಗೆ) ನನ್ನ ನಿಜಸ್ವರೂಪಜ್ಞಾನವನ್ನು ಬೋಧಿಸು; ಬ್ರಹ್ಮನ ಹಿರಿಯಮಗನು ಅಜ್ಞಾನಿಯಾಗಿರುವುದು ಸರಿಯಲ್ಲವೆಂಬುದು ನಿನಗಾದರೂ ತಿಳಿದ ವಿಷಯವಾದ್ದರಿಂದ. ನನ್ನ ಜ್ಞಾನಪ್ರವರ್ತಕನಾದ ಈ ಸನತ್ಕುಮಾರನನ್ನು ನಿನ್ನ ಶಿಷ್ಯನನ್ನಾಗಿ ಮಾಡಿರುವೆನು’ ಎಂದು ಅಜ್ಞಾಪಿಸಲು ಆಗ ನಂದಿಯು ತನ್ನ ಸ್ವಾಮಿಯ ಅಪ್ಪಣೆಯನ್ನು ಶಿರಸಾವಹಿಸಿ ಗಣಪುಂಗವನಾದ ಈಶ್ವರನೊಡನೆ ತಾನೂ ಸಹ ದಕ್ಷಿಣ ಮೇರುಶಿಖರದಲ್ಲಿ ಅನೇಕ ಋಷಿಗಳೊಂದಿಗೆ ವಾಸಿಸುತ್ತಿದ್ದ ಸನತ್ಕುಮಾರನೆಡೆಗೆ ಹೋಗಿ—

ಕೃತ್ವಾ ವಾಕ್ಯಂ ಬ್ರಹ್ಮಪುತ್ರಸ್ಯ ನಂದೀ ಛಿತ್ವಾ ಪಾಶಾನ್ ದೃಷ್ಟಿಪಾತೇನ ಸದ್ಯಃ | ಶೈವಂ ಧರ್ಮಂ ಜ್ಞೈಶ್ವರಂ ಜ್ಞಾನಯೋಗಂ ದತ್ವಾ ಭೂಯೋ ದೇವಪಾರ್ಶ್ವಂ ಜಗಾಮ ||೮೫||

“ಆ ಸನತ್ಕುಮಾರನ ಪ್ರಾರ್ಥನೆಯಮೇರೆಗೆ ಅವನಿಗೆ ಶಿವದೀಕ್ಷೆಯನ್ನಿತ್ತು ಪಾಶಗಳನ್ನು ತೊಲಗಿಸಿ ಶಿವಧರ್ಮಾಚರಣಗಳನ್ನೂ ಶಿವಜ್ಞಾನಾನುಸಂಧಾನದ ಇರವನ್ನೂ ಬೋಧಿಸಿ ಶಿವನು ಒಳಗೆ ತೆರಳಿದನು.”

ಈ ಮೇಲಿನ ಕಥೆಯ ಸ್ವಾರಸ್ಯದಿಂದ, ವೇದಗಳಲ್ಲಿಯ ಉಚ್ಚತರ ತಾತ್ತ್ವಿಕವಿಚಾರಸರಣಿಯ ಆದ್ಯಪ್ರವರ್ತಕರು ನಂದಿಸ್ಕಂ

...ಳದೇಶದ ವೃತ್ತಾಂತಗಳು.

ಕೃಷ್ಣರಾಜಸಾಗರಕಟ್ಟೆಯ ನೀರು ೧,೨೦,೦೦೦ ಯಷ್ಟು ಜಮೀನುಗಳಿಗೆ ಉಪಯೋಗವಾಗುವ...!

...ನ್ನೊಂದುತಿಂಗಳಿಂದ ಕೋಲಾರದ ಚಿನ್ನದಗಣಿ ೧,೯೪,೩೫,೫೦೮ ರೂಪಾಯಿಗಳ ಬೆಲೆಬಾಳು ಸುವರ್ಣವು ದೊರೆತಿರುವದು.

...ಕಾವೇರಿಯ ನೀರಿನ ಸಂಬಂಧವಾದ ಪಂಚಾಯಿತಿ... ಮುಂಬೈ ಸರ್ ಚಿಮ್ಮನಲಾಲ್‌ಸೆಟಲವಾಡರು ಭೂರಿನಪರವಾಗಿ ವಕಾಲತ್ತನ್ನು ವಹಿಸಿಕೊಂಡಿರುಯಿ.

...ರಿಗೂ ಶಿವಮೊಗ್ಗಕ್ಕೂ ತಿರುಗಾಡುವ ...ಯಲ್ಲಿ ಕೆಲವು ದಿವಸಗಳ ಹಿಂದೆ ಕಳುವಾದ 9 ...ರರೂಪಾಯಿಗಳ ಕರೆನ್ಸಿನೋಟುಗಳಿದ್ದ 27 ಇ... ...ಕೌರುಗಳು ಶಿಕ್ಕಿಲ್ಲವೆಂತಲೂ ಇದನ್ನು ಪತ್ತೆ... ಕೊಟ್ಟವರಿಗೆ 1000 ರೂಪಾಯಿಗಳ ಬಹು... ...ವು ಕೊಡಲ್ಪಡುವುದೆಂತಲೂ ಪ್ರಕಟವಾಗಿದೆ.

ಇರುಮುಕೂಡಲಸರಸೀಪುರದಲ್ಲಿ ಹರಿಯುವ ಕಾವೇ... ...ಶಿಲಾ ಸೇತುಬಂಧನಕಾರ್ಯಕ್ಕೆ 8,75000 ...ಯಿಗಳೂ ಅಕ್ಕಿಹೆಬ್ಬಾಳ ಸಮೀಪದಲ್ಲಿರುವ ...ವತೀನದೀಸೇತುಬಂಧನಕಾರ್ಯಕ್ಕೆ 2,000,000 ...ಯಿಗಳು ಶಿವನಸಮುದ್ರದ ಕಾವೇರಿಸೇತುಬಂಧ... ಕ್ಕೆ 3,50,000 ರೂಪಾಯಿಗಳೂ ಮುಂಜೂ... ...ತ್ತವೆ.

...ಜನಗೂಡು ಮ್ಯಾಜಿಸ್ಟ್ರೇಟರು ಗುಂಡ್ಲುಪೇಟೆ ...ಕು ಬೆರಂಬಾಡಿ ಫಾರೆಸ್ಟಿನಲ್ಲಿ 300 ರೂಪಾ... ...ಬೆಬಾಳುವ ಗಂಧದಮರವನ್ನು ಕಳುಮಾಡಿದ ...ರ್ ಡಿಸ್ಟ್ರಿಕ್ಟ್ ಪೈಕಿ ಬದವಾಡಿಗ್ರಾಮದ ...ರ ಕುಳ್ಳ, ಕರಿಯ, ಬೊಳ್ಳಾ, ಎಂಬ ಮೂರುಜ... ಪ್ರತಿಯೊಬ್ಬರಿಗೂ ಹದಿನೆಂಟುತಿಂಗಳ ಕಠಿಣ... ...ನ್ನು ವಿಧಿಸಿದರು.

...ಕೊನೆಯಗಳೂರಲ್ಲೇ ಆಗಲಿ ಇತರ ಸ್ಥಳಗಳಲ್ಲೇ ಆಗಲಿ ಈ ೨ ಎರಡು ತಿಂಗಳವರೆಗೂ ಕೂಲಿಕಾರರ ಸಭೆಗ... ...ಕೂಡದೆಂದು ಬೆಂಗಳೂರುಸಿಟಿ ಮ್ಯಾಜಿಸ್ಟ್ರೇ... ...ಸಿದ್ಧಗೊಳಿಸಿರುವರು, ಮತ್ತು ಬೆಂಗಳೂರಿನ ...ಶ್. ವಿ. ಸುಬ್ರಹ್ಮಣ್ಯಂ. ಲಕ್ಷ್ಮೀಪತಿನಾಯ್ಡು ...ಸ್ವಾಮಿ ಅಯ್ಯಂಗಾರ್ ಮುಂತಾದವರನ್ನು ...ನೀವು ಸರ್ಕಾರಿ ಅಜ್ಞೆಯನ್ನು ಮೀರಿ ವಿಶಾ... ...ನ್ನು ನಡೆಯಿಸಿದುದರಿಂದ ನಿಮ್ಮಮೇಲೆ ವಿಕೆ... ...ಯನ್ನು ನಡೆಯಿಸಕೂಡದೆಂದು ಸಿಟಿಮ್ಯಾಜಿ... ...ನೋಟೀಸಿನದ್ವಾರಾ ಕೇಳಿರುವರು.

“ಎಪಿನಸೆಟ್ಟಿಗಳೆಂದು ಕರೆಯಿಸಿಕೊಳ್ಳಲು ಬೇರೀಶ್ವರನಿಜನಗಳು ಮಾತ್ರ ಅರ್ಹರಾಗಿರುತ್ತಾರೆ. ಕೊ... ಅಥವಾ ಕೊರಚರೆಂದು ಹೇಳಿಸಿಕೊಳ್ಳುವ ಜನೆ... ಕುರುಹಿನ ಶೆಟ್ಟಿಗಳೆಂದು ಹೇಳಿಸಿಕೊಳ್ಳ... ...ಕಾಶದೊರೆತದ್ದಾದರೆ ಈ ಎರಡು ಪಂಗಡ... ...ದೇ ಇರಬಹುದೆಂದು ತಿಳಿದುಕೊಳ್ಳಲು ... ...ವುದಲ್ಲದೆ ಬಿಳೀಮಗ್ಗದ ಜನಗಳನ್ನು ತಕ್ಕೀ... ಎಂದು ಗಳ ರೆಗ್ಯುಲೇಷನಿಗೆ ಸಂಬಂಧಪಟ್ಟ ಕೊ... ...ಕೆಳಗಿನ ತಂಗತಿಗೆ ಶೇರಿಸಿದಂತಾಗುವು... ...ಪ್ರಾಯದಿಂದೊಡಗೂಡಿದ ಅರ್ಜಿಯನ್ನು ...ವರು ಬರೆದುಕೊಂಡದ್ದಕ್ಕೆ ಸರ್ಕಾರದವ... ...ಷಯವನ್ನು ವಿಚಾರಮಾಡಿ “ಕುರುಹಿನ ...ಬ ವ್ಯವಹಾರವು ಬಿಳಿಮಗ್ಗದವರಿಗೆ ಮಾತ್ರ... ...ದು ಅಜ್ಞೆಯನ್ನಿತ್ತಿರುವರು.

...ಮುಂತಿಯ ಬಗ್ಗೆ ಮೈಸೂರು ರಾಜಧಾನಿ... ...ಂಗಾಯತರಲ್ಲಿ (ಒಂದುಕಡೆ ಸ್ವಾಮಿರ್ ಪತ್ರಿ... ...ಮೊದಲಾದವರು, ಮತ್ತೊಂದುಕಡೆ ಮ|| ...ಸಿ. ಭೋಗಯ್ಯನವರು, ಬಿ. ಎ., ಬಿ. ಎಲ್., ...ರು) ವ್ಯಾಜ್ಯವುತ್ಪನ್ನವಾಗಿ ಕಡೆಗೆ ಮ್ಯಾ... ...ರ ಕೋರ್ಟನ್ನು ಕಂಡು ವಿಚಾರವು ನಡೆ... ...ಯಣರಾಯರು ನಡೆಯಕೂಡದೆಂದು ಅರ್ಜಿದಾರ... ...ರಿಗಳಲ್ಲಿ ಭೇದವನ್ನೆಣಿಸಕೂಡದೆಂದು ಪ್ರ... ...ೂ ಪ್ರಕಟಿಸುತ್ತಿರುವ ಸ್ವಾರಪತ್ರಿಕಾ

ಕರ್ತರು ಈ ತಿಂಗಳು 10 ನೆಯ ತಾರೀಖಿನ ದಿವಸ ಮ್ಯಾಜಿಸ್ಟ್ರೇಟಕೋರ್ಟಿನಲ್ಲಿ ನಡೆದ ತಮ್ಮ ಸಾಕ್ಷಿಯಲ್ಲಿ ಲಿಂಗಧಾರಿಗಳಲ್ಲಿ ಭೇದವುಂಟೆಂದೂ, ಸಜ್ಜನರಲ್ಲಿ ನಾವು ಊಟಮಾಡುವುದಿಲ್ಲವೆಂದೂ, ಅವರನ್ನು ಪಂಕ್ತಿಯಲ್ಲಿ ಸಹ ಸೇರಿಸಿಕೊಳ್ಳುವುದಿಲ್ಲವೆಂದೂ ಹೇಳಿದರಂತೆ! ಹೀಗೆ ನುಡಿಯುವುದು ಬಸವಪಂಥಿಗಳಾದ ಇವರಿಗೆ ಭೂಷಣವೇ? ಲಿಂಗಧಾರಿಗಳಾದ ಅಂತ್ಯಜರಲ್ಲಿಯೂ ಸಹ ಪೂಜ್ಯಭಾವವನ್ನು ತೋರಿಸಬೇಕೆಂದು ಇವರ ಪತ್ರಿಕೆಯಲ್ಲಿ ಬರೆಯುವದೇನು? ನಡೆಯುವದೇನು? ಹೀಗೆ ನಡೆಯುವದು ಬಸವದ್ರೋಹವಲ್ಲವೇ?

ಶೃಂಗಗಿರಿ (ಶೃಂಗೇರಿ) ನಗರ ನಿವಾಸಿಗಳಾದ ಆಯುರ್ವೇದ ಕಲಾವಿಭೂಷಣ ವಿದ್ವಾನ್ ಶೇಷಶಾಸ್ತ್ರಿಗಳವರು ಪ್ರತಿಪಕ್ಷದಲ್ಲಿ ಸಂಸ್ಕೃತ ಭಾಷೆಯಿಂದ ಶ್ರೀ ಶಾರದಾಪತ್ರಿಕೆಯನ್ನೂ, ಪ್ರತಿಮಾಸದಲ್ಲಿ ಕನ್ನಡಭಾಷೆಯಿಂದ ಧನ್ವಂತರಿ ನಾಮಕವಾದ ಪತ್ರಿಕೆಯನ್ನೂ ಪ್ರಕಟಿಸುತ್ತಿರುವರು. ಈ ಎರಡೂ ಪತ್ರಿಕೆಗಳಲ್ಲಿ ಆಯುರ್ವೇದಶಾಸ್ತ್ರದ ಮಹತ್ವದ ವಿಷಯಗಳು ಪ್ರತಿಪಾದಿಸಲ್ಪಡುವದರಿಂದ ಇವು ಸರ್ವ ಜನ ಸಂಗ್ರಾಹ್ಯಗಳಾಗಿವೆ. ಈ ಪತ್ರಿಕೆಗಳಿಗೆ ಶ್ರೀ ಕೇದಾರಪೀಠದ ಜಗದ್ಗುರುಗಳವರು ಪ್ರೋತ್ಸಾಹವನ್ನಿತ್ತಿರುವರೆಂಬ ವಿಷಯವು ಈ ಪತ್ರಿಕೆಯ ಬಂದೆಡೆಯಲ್ಲಿ ಪ್ರಕಟವಾಗಿರುವ ವಿದ್ವಾನ್ ಶೇಷಶಾಸ್ತ್ರಿಗಳವರ ಲೇಖದಿಂದ ವೇದ್ಯವಾಗುವದು.

ಪತ್ರಿಕೆಗಳು ದೊರೆಯುವಸ್ಥಳ—ಪೋಸ್ಟ ಶೃಂಗೇರಿ ಮೈಸೂರು ಸ್ಟೇಟ್.

ವರ್ತಮಾನಸಂಗ್ರಹ.

ಇಂಗ್ಲೆಂಡಿನ ಕಾಮನ್ಸ ಸಭೆಯಲ್ಲಿ ಒಬ್ಬ ಇಂಗ್ಲಿಷ್ ಪುರುಷನೂ ಮತ್ತು ಸ್ತ್ರೀಯಳೂ ಸೈಮನ್ನನನ್ನು ಕೊಲ್ಲಿರೆಂದು ಕೂಗಿದರಂತೆ!

ಪುಣೆಯಲ್ಲಿ ಬೈರಾಮಜಿರುಸ್ತುಂಜೀ ಎಂಬ ಜೂಜುಕುದುರೆಶಿಕ್ಷಕನಮೇಲೆ ಕೊಲ್ಹಾಪುರದ ಮಹಾರಾಜರು 17,120 ರೂಪಾಯಿಗಳಿಗೆ ದಾವಾಮಾಡಿರುತ್ತಾರೆ.

ಬ್ರಿಟಿಷ್ ಸಾರ್ವಭೌಮರಾದ ಪಂಚಮ ಜಾರ್ಜ್ ಪ್ರಭುಗಳವರ ಪ್ರಕೃತಿಯು ಗುಣವಾಗಲಿಕ್ಕೆ 6 ಲಕ್ಷ ರೂಪಾಯಿಗಳ ವ್ಯಯವಾಯಿತೆಂದು ಪ್ರಸಿದ್ಧವಾಗಿದೆ.

ಅಮೇರಿಕೆಯಲ್ಲಿ ವಿದ್ಯುಚ್ಛಕ್ತಿಯಿಂದ ಒಂದು ಮೋಟಾರನ್ನು ತಯಾರಿಸಿರುವರು. ಆ ಮೋಟಾರಿನ ಬಳಿಯಲ್ಲಿ ನಿಂತುಕೊಂಡು ಮುಂದಕ್ಕೆ ಹೋಗು ಅಂದರೆ ಹೋಗುವುದಂತೆ! ಹಿಂದಕ್ಕೆ ಬರಬೇಕೆಂದು ಹೇಳಿದರೆ ಬರುವದಂತೆ!

ಬಳ್ಳಾರಿಜಿಲ್ಲೆಯನ್ನು ಆಂಧ್ರವಿಶ್ವವಿದ್ಯಾನಿಲಯದ ಆಡಳಿತದಿಂದ ಬೇರ್ಪಡಿಸಬೇಕೆಂದು ನಿರ್ಧರಿಸಿದ್ದ ವಿಷಯವು ವೈಸರಾಯರಿಂದಲೂ ಸಹ ಅಂಗೀಕರಿಸಲ್ಪಟ್ಟಿತು. ಇದೊಂದು ಕರ್ನಾಟಕಮಾತೆಯ ಸೌಭಾಗ್ಯವೆಂದೇ ಹೇಳಬೇಕಾಗಿದೆ.

ಅಮೇರಿಕಾದೇಶದಲ್ಲಿ ಒಂದುವರ್ಷಕ್ಕೆ 9 ಸಾವಿರದವರೆಗೆ ಕೊಲೆಗಳಾಗುತ್ತವೆ. ಇವುಗಳಲ್ಲಿ ನೂರರಲ್ಲಿ 25 ರಷ್ಟು ಜನಗಳು ಪತ್ತೆಯಾಗಿ ಶಿಕ್ಷೆಗೆ ಗುರಿಯಾಗುವರು. ಮಿಕ್ಕವರು ಪತ್ತೆಯೇ ಆಗುವದಿಲ್ಲವಂತೆ! ಸುಧಾರಿಸಿದ ರಾಷ್ಟ್ರದ ಲಕ್ಷಣ!

ಯುರೋಪ್‌ಖಂಡದಲ್ಲಿರುವ ಒಂದಾನೊಂದು ಪಟ್ಟಣದಲ್ಲಿ ಒಂದು ಕುಟುಂಬವಿರುವುದು. ನಾಲ್ಕುತಲೆಗಳಾದರೂ ಆ ಮನೆಯಲ್ಲಿ ಈವರೆಗೆ ಒಂದಾದರೂ ಹೆಣ್ಣುಕೂಸು ಹುಟ್ಟಿಲ್ಲವಂತೆ! ಇದುವರೆಗೆ 35 ಗಂಡುಮಕ್ಕಳು ಹುಟ್ಟಿರುವರು. ಇದೊಂದು ವಿಚಿತ್ರವಿಷಯವೇ ಸರಿ!

ತ್ರಾವಣಕೋರಿನಲ್ಲಿ ಕ್ರೈಸ್ತಧರ್ಮವನ್ನು ಪ್ರಚಾರಮಾಡುತ್ತಿದ್ದ ವ್ಹಿ. ಟಿ. ಥಾಮಸ್ ಎಂಬವರು ಪತ್ನೀಸಮೇತರಾಗಿ ಹಿಂದೂ ಧರ್ಮವನ್ನವಲಂಬಿಸಿದರು. ಇವರು ಚಂದ್ರವರ್ಮ ಎಂಬ ಹೆಸರನ್ನೂ, ಇವರ ಪತ್ನಿಯವರು ಶಾಂತಿದೇವಿ ಎಂಬ ಹೆಸರನ್ನೂ ಇಟ್ಟುಕೊಂಡಿರುವರು.

ದಿಲ್ಲಿಯಲ್ಲಿ ಧನ್ನಮಾಲ್ ಎಂಬ ಹೆಸರಿನ ಒಬ್ಬ ಮನುಷ್ಯನು ತನ್ನ ತಂದೆಯು ತನಗೆ ದ್ರವ್ಯವನ್ನು ಕೊಡಲಿಲ್ಲವೆಂಬ ಆಗ್ರಹದಿಂದ ಒಂದಾನೊಂದು ದಿವಸ ನಿದ್ರೆಯಲ್ಲಿದ್ದ ತಂದೆಯನ್ನು ಕೊಂದುಬಿಟ್ಟನು. ಈ ಪಿತೃಘಾತುಕನನ್ನು ಪೋಲೀಸಿನವರು ಹಿಡಿದಿರುತ್ತಾರೆ. ಇದ್ದರೆ ಇಂಥ ಮಕ್ಕಳೇ ಇರಬೇಕು.

ಭಾಷಣ ಕಲೆಯಲ್ಲಿ ಅಸಾಧಾರಣವಾದ ಕೀರ್ತಿಯನ್ನು ಸಂಪಾದಿಸಿಕೊಂಡಿರುವ ಶ್ರೀಮತಿ ಸರೋಜಿನಿದೇವಿಯವರು ಹಿಂದುಸ್ಥಾನದಿಂದ ಅಮೇರಿಕಾಖಂಡಕ್ಕೆ ಪ್ರಯಾಣಮಾಡಿ, ಇಲ್ಲಿಯವರೆಗೆ ಆ ದೇಶದ ನಾನಾ ಭಾಗಗಳಲ್ಲಿ ನೆರವೇರಿದ 200 ಮಹಾಸಭೆಗಳಲ್ಲಿ ಶ್ಲಾಘನೀಯಗಳಾದ ಭಾಷಣಗಳನ್ನು ಮಾಡಿ ತದ್ದೇಶೀಯರ ಪರಮಪ್ರೀತಿವಿಶ್ವಾಸಗಳಿಗೆ ಕಾರಣರಾಗಿರುವರು.

ಇಂಗ್ಲೆಂಡಿನಲ್ಲಿ ಈವರೆಗೆ ವಿವಾಹವಾಗತಕ್ಕ ಗಂಡಸರಿಗೆ 14 ವರ್ಷಗಳಾಗಿರಬೇಕೆಂದೂ ಹೆಂಗಸರಿಗೆ 12 ವರ್ಷಗಳಾಗಿರಬೇಕೆಂದೂ ಇದ್ದ ನಿರ್ಬಂಧವನ್ನು ತೆಗೆದುಹಾಕಿ, ಗಂಡಸು ಹೆಂಗಸರಿಬ್ಬರೂ ಹದಿನಾರು ವರ್ಷಕ್ಕಿಂತ ಮೊದಲು ಮದುವೆಯಾಗಕೂಡದೆಂಬ ನೂತನ ಕಾನೂನು ಪಾರ್ಲಿಮೆಂಟಿನಲ್ಲಿ ಪಾಸಾಗಿರುತ್ತದೆ. ಸಾರ್ವಭೌಮರ ರುಜುವಾದನಂತರ ಈ ಕಾನೂನು ಜಾರಿಗೆ ಬರುವದು.

ಅಮೇರಿಕೆಯ ಫಾಕ್ಸ್ ಫಿಲ್ಮ್ ಕಾರ್ಪೊರೇಷನ್, ಮತ್ತು ಕೊಲಂಬಿಯ ಫಿಕ್ಚರ್ಸ್ ಕಾರ್ಪೊರೇಷನ್‌ದವರು ಸದ್ಯಃ ಮಾತಾಡುವ ಚಲನಚಿತ್ರಗಳನ್ನು ತಯಾರಿಸುತ್ತಲಿದ್ದಾರೆ. ಇದುವರೆಗೂ ಯಾವ ಬಯಾಸ್ಕೋಪುಗಳನ್ನು ನೋಡಿದರೂ ಚಲಿಸುವಚಿತ್ರಗಳನ್ನು ನೋಡುತ್ತಿದ್ದೆವು. ಇನ್ನುಮುಂದೆ ಚಲನದೊಂದಿಗೆ ಮಾತಾಡುವ ಚಿತ್ರಗಳನ್ನೂ ಸಹ ನೋಡುವ ಸಮಯವು ಇಷ್ಟರಲ್ಲಿಯೇ ಒದಗಬಹುದು.

ಬೆಳಗಾಂವ ಜಿಲ್ಲೆಗೆ ಸೇರಿದ ಮುಗುಳಖೇಡ ಎಂಬ ಗ್ರಾಮದಲ್ಲಿ ಒಂದು ಘಂಟೆಯ ಕಾಲದವರೆಗೆ ಅದ್ಭುತವಾದ ಆಣೆಕಲ್ಲುಗಳ ವೃಷ್ಟಿಯಾಯಿತು. ಈ ವೃಷ್ಟಿಯಲ್ಲಿ 24 ಅಡಿ ಉದ್ದ 22 ಅಡಿ ಅಗಲವುಳ್ಳ ಆಣೆಕಲ್ಲುಗಳು ಬಿದ್ದು 3-4 ದಿವಸಗಳವರೆಗೆ ಒಂದೇ ಸಮನೆ ಚಿಕ್ಕನದಿಯ ಪ್ರವಾಹದಂತೆ ಪ್ರವಹಿಸಿದವೆಂದೂ ಅದ್ಭುತವಾದ ಈ ತರದ ಈಶ್ವರೀಕೃತಿಯನ್ನು ನೋಡುವುದಕ್ಕಾಗಿ ಸಾವಿರಾರು ಜನರು ಗುಂಪುಗುಂಪಾಗಿ ಹೋಗುತ್ತಿದ್ದರೆಂದೂ ತಿಳಿದುಬರುತ್ತದೆ.

ಚಕ್ರವರ್ತಿಗಳಿಗೆ ಸಂಭವಿಸಿದ್ದ ಅಸ್ವಸ್ಥತೆಯು ದೇವರ ಕೃಪೆಯಿಂದ ಪರಿಹಾರವಾದ ಸಂತೋಷಕ್ಕಾಗಿ ಒಂದು ಫಂಡನ್ನು ಕಾಯಿಡಿಸಬೇಕೆಂದು ಪ್ರಯತ್ನವು ನಡೆದು ಈಗ 30 ಲಕ್ಷ ರೂಪಾಯಿಗಳ ಚಂದಾವಸೂಲಾಗಿದೆ. ಹೆಚ್ಚಿಗೆ ದ್ರವ್ಯವು ಶೇಖರವಾದರೆ “ರೇಡಿಯಂ” ವಸ್ತುವನ್ನು ತರಿಸಿ ಆಸ್ಪತ್ರೆಗಳಲ್ಲಿ ಇಡುವ ಏರ್ಪಾಡು ಮಾಡಲ್ಪಡುವದಂತೆ! ಈ ರೇಡಿಯಮ್ಮಿನ ಕಿರಣಗಳನ್ನು ಪ್ರಯೋಗಿಸುವುದರಿಂದ ಅನಂತರೋಗಗಳು ಗುಣವಾಗುವವಂತೆ! ಈ ಫಂಡಿಗೆ ಬ್ರಿಟಿಷ್ ಗಾರ್ನಮೆಂಟಿನವರು 15 ಲಕ್ಷ ರೂಪಾಯಿಗಳನ್ನು ಸಹಾಯಿಸಲೊಪ್ಪಿರುತ್ತಾರೆ

ಮಿ|| ಡಂಕನ್ ಎಂಬವರು ರಿಂಟಿ ಎಂಬ ನಾಯಿಯೊಂದನ್ನು ಸಾಕಿರುವರಂತೆ! ಈ ನಾಯಿಯು ಸಿನಿಮಾದಲ್ಲಿ ಅತ್ಯದ್ಭುತಗಳಾದ ಸಾಹಸವನ್ನು ಮಾಡುತ್ತದಂತೆ! ಈ ನಾಯಿಗೋಸ್ಕರ ಡಂಕನ್ನರು ಒಂದು ಸುಂದರವಾದ ಮನೆಯನ್ನು ಕಟ್ಟಿಸಿರುವರಂತೆ! ಈ ಮನೆಯೊಳಗೆ ಆ ನಾಯಿಯು ತನ್ನ ಸಂಸಾರಸಮೇತವಾಗಿ ವಾಸಮಾಡಿರುವುದಂತೆ! ಇದಕ್ಕೆ ಪ್ರಾತಃಕಾಲದಲ್ಲಿ ಹಾಸಿಗೆಯಿಂದ ಏಳುತ್ತಲೇ ಅಲ್ಪಾಹಾರವಾಗಬೇಕಂತೆ! ಬಳಿಕ ಸ್ವಲ್ಪ ಹೊತ್ತು ವ್ಯಾಯಾಮವೂ ನಡೆಯಬೇಕಂತೆ! ವ್ಯಾಯಾಮ ತೀರಿಸಿ ಮನೆಗೆ ಬಂದೊಡನೆಯೇ ಪುನಃ ಅಲ್ಪಾಹಾರವು ನಡೆಯಬೇಕಂತೆ! ಈ ನಾಯಿಯ ಪುಣ್ಯವೇ ಪುಣ್ಯವು.

ಪಂಡಿತ ಮದನಮೋಹನಮಾಲವೀಯರವರು ಕಾಶೀಕ್ಷೇತ್ರದಲ್ಲಿ ತಾವು ಸ್ಥಾಪಿಸಿದ ಹಿಂದೂ ವಿಶ್ವವಿದ್ಯಾಲಯಕ್ಕೆ ಸಹಾಯವನ್ನು ಕೋರುವದಕ್ಕೋಸ್ಕರ ಹೈದರಾಬಾದ ನಿಜಾಮಸಾಹೇಬರವರ ಹಾಗೂ ಅವರ ರಾಜ್ಯದಲ್ಲಿರತಕ್ಕ ಜಹಾಗೀರದಾರರ ಕಡೆಗೆ ಹೋಗುವದನ್ನು ನಿಶ್ಚಯಿಸಿದ್ದರೆಂದೂ, ಆದರೆ ನೈಜಾಮರವರ ಮುಕ್ಕಾಂ ಸದ್ಯಃ ಅಲ್ಲಿಲ್ಲದಿರೋಣದರಿಂದ ತಮ್ಮ ಪ್ರಯಾಣವನ್ನು ನಿಲ್ಲಿಸಿರುವರೆಂದೂ, ಮಾಲವೀಯರವರು ಹೈದರಾಬಾದ ರಾಜ್ಯಕ್ಕೆ ಬಂದದ್ದಾದರೆ ರಾಜಕೀಯ ವಿಷಯದಲ್ಲಾಗಲಿ ಅಥವಾ ಶುದ್ಧಿ ಸಂಘಟನದ ವಿಷಯದಲ್ಲಾಗಲಿ ಪ್ರವೇಶಮಾಡಬಾರದೆಂಬ ವಿಷಯವನ್ನು ನಿಜಾಮರವರ ಮಂತ್ರಿಗಳು ಮಾಲವೀಯರವರಿಗೆ ತಿಳುಹಿಸಿರುವರೆಂದೂ ತಿಳಿದುಬರುತ್ತದೆ.

ನಿಜಾಮ ಇಲಾಖಾ ಜೋಗೂರು ಹಿರೇಮಠದ ವೇ|| ಸಿದ್ಧಾಂತಿ ನಾಗಭೂಷಣಶಾಸ್ತ್ರಿಗಳವರು ಶುಕ್ಲಸಂವತ್ಸರದ ಪಂಚಾಂಗವನ್ನು ಮುದ್ರಿಸಿ ಒಂದು ಪ್ರತಿಯನ್ನು ನಮ್ಮ ಕಡೆಗೆ ಕಳುಹಿಸಿರುತ್ತಾರೆ. ಸದರಿ ಪಂಚಾಂಗದಲ್ಲಿ ಜನೋಪಯುಕ್ತಗಳಾದ ಅನೇಕ ವಿಷಯಗಳು ಗರ್ಭೀಕೃತವಾಗಿರುವದರಿಂದ ಇದು ಸರ್ವಜನ ಸಂಗ್ರಾಹ್ಯವಾಗಿದೆ. ಜಗದಾಚಾರ್ಯರ ಜಯಂತಿಗಳ ಸರಿಯಾದ ತಿಥಿಗಳಲ್ಲಿ ಸ್ಪಷ್ಟವಾಗಿ ತೋರಿಸದೆ ಒಂದೊಂದು ಸಂಜ್ಞೆಯನ್ನು ಮಾಡಿ ಸಂದುಗೊಂದುಗಳಲ್ಲಿ ಸೇರಿಸಿರುವದರಿಂದ ಹಾಕಿಯೂ ಹಾಕದಂತಾಗಿದೆ. ಮುಂದಿನ ಸಂವತ್ಸರದ ಪಂಚಾಂಗದಲ್ಲಿ ಇದನ್ನು ಸರಿಪಡಿಸಿಕೊಳ್ಳಬಹುದೆಂದು ಪೂರ್ಣ ನಂಬಿದ್ದೇವೆ. ಪಂಚಾಂಗ ದೊರೆಯುವ ಸ್ಥಳ—ಧಾರವಾಡ ಡಿ|| ಗದಗ ಸಿಟಿಯಲ್ಲಿರುವ ಮ|| ರಾ|| ಹುಬ್ಬಳ್ಳಿ ಗುರಪ್ಪನವರ ಮನೆಯಲ್ಲಿ.

ಹೈದರಾಬಾದಿನಲ್ಲಿ ಕೆಲ ಹಿಂದುಗಳು ಸರದಾರ್ ಪೋಲೀಸ್‌ಥಾಟ್ ಎಂಬವರ ಮೇಲೆ ಕಲ್ಲುಗಳನ್ನೆಸೆದರೆಂದು ಮಹಮ್ಮದೀಯರಲೊಬ್ಬನು ಕೋಪಾವಿಷ್ಟನಾಗಿ ಒಂದು ವಿಲ್ಲಿನಲ್ಲಿ ರೈಟರಾಗಿದ್ದ ಮಿ|| ಮಾರ್ಟಿನ್ ಎಂಬುವನನ್ನೂ ಹಾಗೂ ಇಬ್ಬರು ಹಿಂದುಗಳನ್ನೂ ಒಬ್ಬ ಹೆಂಗಸನ್ನೂ ಪಿಸ್ತೂಲಿನಿಂದ ಹೊಡೆದು ಯಮಪುರಿಗೆ ಕಳುಹಿಸಿದನಲ್ಲದೆ, ಸಮೀಪದಲ್ಲಿ ಒಂದು ಮನೆಯೊಳಗಿನ ಕಿಟಕಿಯಿಂದ ಈ ಗಲಾಟೆಯನ್ನು ನೋಡುತ್ತಿದ್ದವನೊಬ್ಬನನ್ನೂ ಸಹ ಕೊಂದು ಅಲ್ಲಿಗೂ ಶಾಂತನಾಗದೆ ತಿರುಗಾಡುತ್ತಿದ್ದ ಹಿಂದುಗಳ ಮೇಲೆಲ್ಲಾ ಗುಂಡುಗಳ ಮಳೆಯನ್ನು ಸುರಿಸಿದನು. ಇದರಿಂದ 7-8 ಜನ ಹಿಂದುಗಳು ಮೃತರಾದರಲ್ಲದೆ ಹತ್ತಾರು ಜನಗಳು ಅಪಾಯಕ್ಕೀಡಾಗಿರುವರು ಅಷ್ಟಕ್ಕೆ ಕೆಲ ಮಹಮ್ಮದೀಯರು ಆ ಘಾತುಕನನ್ನು ತಡೆಯಲು ಆರಂಭಿಸಲಾಗಿ ಅಲ್ಲಿಗೂ ಶಾಂತನಾಗದೆ ನಾನು ಹಿಂದುಗಳ ಮರಣಹೋಮಕ್ಕೆ ಹೊರಟಿರುತ್ತೇನೆ. ನೀವು ತಡೆಯಬೇಡಿರೆಂದು ವೀರಾವೇಶದಿಂದ ಸಾರುತ್ತಿದ್ದನಂತೆ! ಈ ಮಧ್ಯದಲ್ಲಿ ಕೆಲ ಜನ ದುಷ್ಟ ಮುಸಲ್ಮಾನರು ಹಿಂದುಗಳ ಮೇಲೆ ಇರುವ ನಮ್ಮ ವ್ಯಾಕೋಪವು ಇಷ್ಟರಲ್ಲೇ ತೀರುವಂತಿಲ್ಲವು; ಹಿಂದುಗಳು ಇನ್ನೂ ನಮಗೆ ವಿಶೇಷವಾಗಿ ಆಹುತಿಯಾಗಬೇಕಾಗಿದೆ. ಎಂಬ ಕ್ರೂರಾಭಿಪ್ರಾಯಗರ್ಭಿತವಾದ ಲೇಖಗಳನ್ನು ಬರೆದು ಮಸೀದಿಗಳ ಬಾಗಿಲುಗಳಿಗೆ ಹಚ್ಚಿರುವರಂತೆ! ಅಲ್ಲಿ ನಡೆಯುತ್ತಿರುವ ಭಯಾನಕಸ್ಥಿತಿಯನ್ನು ಕಂಡು ಸಿಟಿಮ್ಯಾಜಿಸ್ಟ್ರೇಟರು ಅಂಗಡಿಗಳು ಪ್ರಾತಃಕಾಲ 9 ಘಂಟೆಗೆ ತೆರೆದು ಸಾಯಂಕಾಲ 6 ಘಂಟೆಯೊಳಗೆ ಮುಚ್ಚಲ್ಪಡಬೇಕೆಂದು ಕಟ್ಟಪ್ಪಣೆಯನ್ನು ಮಾಡಿರುವುದಲ್ಲದೆ ಪೋಲೀಸರನ್ನು ಮಹಮ್ಮದೀಯರಮೇಲೆ ಉಸ್ತುವಾರಿ ಇಟ್ಟಿರುವರು. ಅನೇಕ ಜನರನ್ನು ಕೊಂದ ಆ ಕೊಲೆಗಡುಕನು ಅಬ್ದುಲ್‌ಕರೀಂ ಮೊಲಸರ್‌ಮಿಯೋ ಎಂಬವನೇ ಇರಬಹುದೆಂದು ತಿಳಿದು. ಸದರಿಯವನನ್ನು ಹಿಡಿದು ತುರಂಗದಲ್ಲಿಟ್ಟಿರುವರು.

ವಿಜ್ಞಾಪನೆ.

ರಂಭಾಪುರೀ ಜಗದ್ಗುರುಗಳು ದಾವಣಗೆರೆ ಪಟ್ಟಣಕ್ಕೆ ಈ ತಿಂಗಳು ೧೯ ನೆಯ ತಾರೀಖಿನ ದಿವಸ ಬೆಳಗ್ಗೆ ೮ ಘಂಟೆಗೆ ದಯಮಾಡಿಸುವರು. ಇಲ್ಲಿ ಹವಾ ವಗೈರೆ ಚನ್ನಾಗಿದೆ. ಆದುದರಿಂದ ದೂರದೇಶನಿವಾಸಿಗಳು ಯಾವ ಯೋಚನೆಯಿಲ್ಲದೆ ಬಂದು ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುವ,

ಟಿ. ಎಂ. ಓಂಕಾರಪ್ಪಯ್ಯ,
ದಾವಣಗೆರೆ.

ಇಂಡಿಯಾದೇಶದಲ್ಲಿ ಭೋಜನ ಪದ್ಧತಿಗಳು.

ಇಂಡಿಯಾದೇಶದ ಜನರು, ತಮ್ಮ ದಾರಿದ್ರ್ಯದ ದೆಸೆಯಿಂದ ಅನೇಕ ಕಷ್ಟಗಳನ್ನು ಅನುಭವಿಸಿ, ಆ ಮೂಲಕವೇ ತಮ್ಮ ಜೀವನವಿಷಯದಲ್ಲಿ ಅನುಕೂಲವಾದ ಹಲವು ಸಂಗತಿಗಳನ್ನು ತಿಳಿದುಕೊಳ್ಳಬಹುದಾಯಿತು. ಪ್ರತಿದಿನವೂ ದುಡಿದು ಕೆಲಸಮಾಡಿ, ಅದರಿಂದ ಬರುವ ಎಂಟು ಹತ್ತು ಆಣೆಗಳನ್ನು ತಾವು ದೊಡ್ಡ ದೊಡ್ಡ ಕುಟುಂಬಭರಣಕ್ಕಾಗಿ ಉಪಯೋಗಿಸುವುದರಲ್ಲಿ, ಮಿತವಿರಬೇಕಾದುದು ಅವರಿಗೆ ಅತ್ಯವಶ್ಯಕವಾಗಿರುವುದರಿಂದ, ಪ್ರಾಣಧಾರಣೆಗೂ, ಕಾರ್ಯಸಾಮರ್ಥ್ಯವನ್ನುಳಿಸುವುದಕ್ಕೂ ಎಷ್ಟು ಆಹಾರವನ್ನು ಸೇವಿಸಬೇಕೆಂಬುದು ಅವರಿಗೆ ಚೆನ್ನಾಗಿ ತಿಳಿದಿದೆ. ಹೀಗೆ ಸ್ವಂತ ಅನುಭವಗಳಿಂದ ತಿಳಿದುಬಂದಿರುವ ಜ್ಞಾನವು, ಇಂಡಿಯಾದೇಶದಲ್ಲೆಲ್ಲಾ ಚೆನ್ನಾಗಿ ಹರಡಿರುವುದು. ಇದರಿಂದ ನಮ್ಮ ದೇಶದ ಯಾವ ಸ್ತ್ರೀಯನ್ನಾಗಲಿ ಪುರುಷನನ್ನಾಗಲಿ ಕೇಳಿದರೂ, ಪ್ರತಿಯೊಬ್ಬರ ಆಹಾರಕ್ಕೆ ಬೇಕಾದ ಅಕ್ಕಿ, ಬೇಳೆ ಹಾಲು, ತರಕಾರಿಗಳು, ಎಣ್ಣೆ ಮತ್ತು ತುಪ್ಪ ಇವುಗಳ ಪ್ರಮಾಣಗಳನ್ನು ಇಷ್ಟಿಷ್ಟೆಂದು ಹೇಳುವುದರಿಂದಲೇ, ದೇಹಪೋಷಣೆಗೆ ಬೇಕಾದ ಕಾರ್ಬೋಹೈಡ್ರೇಟುಗಳು, ಪ್ರೋಟೀನ್ ಮತ್ತು ಕೊಬ್ಬಿನ ಪ್ರಮಾಣಗಳನ್ನು ಇಷ್ಟೆಂದು ತಿಳಿಸುವರು.

ಮೇಲೆ ಹೇಳಿದ ಆಹಾರಪದಾರ್ಥಗಳ ಪ್ರಮಾಣವು, ಭರತಖಂಡದ ಬೇರೆಬೇರೆ ಭಾಗಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ಆದರೆ ಅವುಗಳನ್ನು ಈ ಕೆಳಗಿನ ಪಟ್ಟಿಯಲ್ಲಿರುವಂತೆ ಸ್ವಲ್ಪ ಹೆಚ್ಚು ಕಡಮೆಯಾಗಿ ಸರ್ವಸಾಧಾರಣವೆಂದು ಗ್ರಹಿಸಬಹುದು.

ಬೇಳೆಯ ಜಾತಿಗಳು 8 ಔನ್ಸು, ಅಕ್ಕಿ 1 ಪೌಂಡು, ಗೋಧಿಹಿಟ್ಟು $1\frac{1}{2}$ ಪೌಂಡು, ತುಪ್ಪ ಅಥವಾ ಎಣ್ಣೆ 3 ಔನ್ಸುಗಳು, ಹಾಲು 8 ಔನ್ಸುಗಳು, ತರಕಾರಿಗಳು 4 ರಿಂದ 8 ಔನ್ಸುಗಳು.

ಕೆಲವರು (ಮಹಮ್ಮದೀಯರು) ಬೇಳೆಗಳಿಗೆ ಪ್ರತಿಯಾಗಿ 6 ಔನ್ಸಿನಷ್ಟು ಮಾಂಸವನ್ನು ಸೇವಿಸುವುದುಂಟು.

ಈ ಪ್ರಮಾಣದ ಆಹಾರವನ್ನೇ ಎರಡು ಭಾಗವಾಗಿ ವಿಂಗಡಿಸಿ, ಹಗಲೂ, ರಾತ್ರಿಯೂ ಸೇವಿಸುವರು. ಈ ಆಹಾರವನ್ನು ಸೇವಿಸಿ ರೈತರು ದಿನವೆಲ್ಲಾ ಹೊಲಗಳಲ್ಲಿ ದುಡಿದು ಕೆಲಸ ಮಾಡುವರು. ಕೂಲಿಗಳು ಅನೇಕಸಂದರ್ಭಗಳಲ್ಲಿ 2-3 ಮಣ ತೂಗುವ ಪದಾರ್ಥಗಳನ್ನು ಕೂಡ ಹೊರುತ್ತ ದಿನವೆಲ್ಲಾ ಕೆಲಸಮಾಡುವರು.

ಇಂಡಿಯಾದೇಶದಲ್ಲಿ ಸಸ್ಯಾಹಾರಿಗಳೇ ಹೆಚ್ಚು ಮಂದಿ; ಕೆಲವರು ವಿಶೇಷಸಂದರ್ಭಗಳಲ್ಲಿ ಮಾತ್ರ ಮಾಂಸವನ್ನು ಸೇವಿಸುವರು. ಮೇಲಿನ ಸಸ್ಯಾಹಾರದ ಪ್ರಮಾಣಗಳು ನಾನಾಭಾಗಗಳಲ್ಲಿ ವ್ಯತ್ಯಾಸವಾಗಿರುವುದಕ್ಕೆ ಅನುಸಾರವಾಗಿ, ಅಲ್ಲಲ್ಲಿ ವಾಸಮಾಡುವ ಜನರ ದೇಹದಾರ್ಢ್ಯವೂ, ಜೀವನಕಾಲವೂ ವ್ಯತ್ಯಸ್ತವಾಗಿರುವುದು.

ಇಂಡಿಯನ್ ಮೆಡಿಕಲ್ ಸರ್ವಿಸಿನಲ್ಲಿ ಪ್ರಸಿದ್ಧರಾದ ಲೆಫ್ಟಿನೆಂಟ್ ಕರ್ನಲ್ ರಾಬರ್ಟ್ ಮೆಕ್‌ಕಾರಿಸನ್ ಎಂಬವರು ಹೀಗೆ ಬರೆಯುವರು. "ಇಂಡಿಯಾದೇಶದಲ್ಲೆಲ್ಲಾ ಪ್ರಯಾಣಮಾಡಿರುವವರಿಗೆ ಇಲ್ಲಿಯ ನಾನಾಕಡೆಗಳಲ್ಲಿರುವ ಬೇರೆಬೇರೆ ಜಾತಿಯ ಜನರ ದೇಹದಾರ್ಢ್ಯವೂ, ಸಾಮರ್ಥ್ಯವೂ ಬೇರೆಬೇರೆಯಾಗಿದೆಯೆಂದು ಚೆನ್ನಾಗಿ ತಿಳಿದುಬಂದೇ ಇದೆ. ಶೂರರೂ, ಸಾಹಸಿಗಳೂ, ಬಲಿಷ್ಠರೂ ಆದ ಉತ್ತರದೇಶದ ಜನರನ್ನು, ಬಹಳ ಬಲಹೀನರೂ, ಹೇಡಿಗಳೂ ಆದ ದಕ್ಷಿಣದೇಶದ ಅಥವಾ ಪೂರ್ವದೇಶದ ಕೆಲವು ಜಾತಿಯ ಜನರೊಡನೆ ಹೋಲಿಸಿ ನೋಡಿದರೆ, ಒಂದು ಜನಾಂಗಕ್ಕೂ, ಮತ್ತೊಂದು ಜನಾಂಗಕ್ಕೂ ಇಷ್ಟು ವ್ಯತ್ಯಾಸಗಳಿರಲು ಕಾರಣವೇನೆಂಬ ಸಂದೇಹವು ತೋರಬಹುದು"

ಆದರೆ, ಇಂಡಿಯಾದೇಶದ ಆಹಾರವಿಚಾರದಲ್ಲಿ ವಿಶೇಷ ಶೋಧನೆಗಳನ್ನು ಮಾಡಿ, ಬಹಳ ಪ್ರಯೋಜನಕಾರಿಗಳಾದ ವಿಷಯಗಳನ್ನು ನಿರ್ಧರಿಸಿದ ಒಂದು ದೊಡ್ಡ ಶೋಧನಾಗೃಹವಾಗಿ ಏರ್ಪಟ್ಟಿದೆ. ಇಂಡಿಯಾದೇಶದಲ್ಲಿ ವಾಸಮಾಡುತ್ತಿರುವ ಕೋಟ್ಯಂತರ ಜನರು, ಅಕ್ಕಿ, ಗೋಧಿ, ಬಾರ್ಲಿ, ಜೋಳ, ನವಣೆ, ಬೇಳೆಗಳು, ತರಕಾರಿಗಳು, ಹಣ್ಣುಗಳು ಮುಂತಾದುವುಗಳನ್ನು ಮುಖ್ಯಾಹಾರವಾಗಿ ಸೇವಿಸುತ್ತಿರುವರು. ಜನರು ಬಹಳ ಮಿತವಾಗಿ ಉಪಯೋಗಿಸುತ್ತಿರುವ ಆಹಾರಪದಾರ್ಥಗಳಲ್ಲಿ ಹಾಲು, ಮೊಸರು, ಬೆಣ್ಣೆ, ಮೊಟ್ಟೆ, ಮಾಂಸ, ಇವೆಲ್ಲ ಸೇರುವುವು. ಅನೇಕರಿಗೆ ಇವೂ ದುರ್ಲಭವೇ!

ಧಾನ್ಯಗಳು, ದ್ವಿದಳಧಾನ್ಯಗಳು, ಮತ್ತು ಕೊಬ್ಬು, ಈ ಪದಾರ್ಥಗಳೇ ಇಂಡಿಯಾದೇಶದವರ ಆಹಾರದಲ್ಲಿ ಹೆಚ್ಚಾಗಿ ಸೇರುವುದು. ಆಹಾರವಿಚಾರಗಳಲ್ಲಿ ಈಚೆಗೆ ಮಾಡಿದ ಶೋಧನೆಗಳಿಂದ ಈ ಪದಾರ್ಥಗಳಲ್ಲಿ ಪ್ರೋಟೀನ್‌ಭಾಗವು ಕಡಿಮೆಯಾಗಿರುವುದೆಂದು ತಿಳಿದುಬಂದಿರುವುದು. ಇದಕ್ಕಾಗಿ, ಅಡಿಗೆಮಾಡಿದ ಕೆಲವು ತರಕಾರಿಗಳನ್ನೂ, ಹಣ್ಣುಗಳನ್ನೂ ಸೇರಿಸಿ ಸೇವಿಸುವುದುಂಟು. ಆದರೆ, ಆ ಲೋಪವನ್ನು ಭರ್ತಿಮಾಡುವುದಕ್ಕೆ ಅದೂ ಸಾಲದು.

ಬಂಗಾಳದ ಕೆಲವು ಭಾಗಗಳಲ್ಲಿಯೂ, ದಕ್ಷಿಣ ಇಂಡಿಯಾದೇಶದಲ್ಲಿಯೂ ವಿಶೇಷವಾಗಿ ಉಪಯೋಗಿಸುತ್ತಿರುವ ಧಾನ್ಯವು, ಯಂತ್ರಗಳಲ್ಲಿ ಕುಟ್ಟಿದ ಬಿಳಿಯ ಅಕ್ಕಿಯಾದುದರಿಂದ, ಮೆಕ್‌ಕಾರಿಸನ್‌ರವರು ತೋರಿಸಿರುವಂತೆ ಅದರಲ್ಲಿ ಕಾಲ್‌ಸಿಯಮ್, ಸೋಡಿಯಮ್, ಕ್ಲೋರಿನ್ ಮುಂತಾದ ಸೋಡಿಯಮ್ ಸಂಬಂಧವಾದ ಪದಾರ್ಥಗಳು ಕಡಿಮೆಯಾಗಿರುವುವು. ಆ ಆಹಾರಪದಾರ್ಥಗಳಲ್ಲಿ ವಿಟಮಿನ್ ಭಾಗವೂ ಕಡಿಮೆಯೇ!

ಬೀಹಾರ್, ಒರಿಸ್ಸಾ, ಬಂಗಾಳ, ದಕ್ಷಿಣ ಇಂಡಿಯಾ ಮುಂತಾದ ಭಾಗಗಳ ಜನರು ಬಲಹೀನರಾಗಿ ರೋಗಾದಿಗಳಿಗೆ ಬಹು ಸುಲಭವಾಗಿ ಗುರಿಯಾಗುವುದಕ್ಕೆಲ್ಲ ಅವರ ಆಹಾರದಲ್ಲಿರುವ ನ್ಯೂನತೆಯೇ ಕಾರಣವು.

ಉತ್ತರ ಇಂಡಿಯಾದಲ್ಲಿ ಆಹಾರಪದಾರ್ಥಗಳು ಇಲ್ಲಿಗಿಂತ ಬೇರೆಯೆಂಬುದು ಅಲ್ಲಿಗೆ ಹೋದವರಿಗೆ ಚೆನ್ನಾಗಿ ತಿಳಿಯುವುದು. ಅಲ್ಲಿ ಅಕ್ಕಿಗೆ ಪ್ರತಿಯಾಗಿ ಗೋಧಿಯನ್ನು ಉಪಯೋಗಿಸುವರು. ಹಣ್ಣುಗಳನ್ನೂ, ತರಕಾರಿಗಳನ್ನೂ ಬೇಯಿಸಿಯೂ, ಬೇಯಿಸದೆಯೂ ಧಾರಾಳವಾಗಿ ಉಪಯೋಗಿಸುವರು. ಹಾಲು ಮತ್ತು ಅದರಿಂದ ತಯಾರಾದ ಪದಾರ್ಥಗಳು ಅಲ್ಲಿ ಅಧಿಕವಾಗಿ ಉಪಯೋಗಿಸಲ್ಪಡುತ್ತಿವೆ. ಮಹಮ್ಮದೀಯರೂ, ಸಿಕ್ಕರೂ ಮಿತವಾಗಿ ಮಾಂಸವನ್ನು ಸೇವಿಸುವರು.

ಕರ್ನಲ್ ಮೆಕ್‌ಕಾರಿಸನ್‌ರವರು "ಪ್ರಾಕ್ಟೀಷನರ್" (The Practitioner) ಎಂಬ ಪತ್ರಿಕೆಯಲ್ಲಿ, ಈ ಆಹಾರಭೇದಗಳಿಂದ ಉತ್ತರ ಇಂಡಿಯಾದೇಶದಲ್ಲಿರುವ ಜನರಲ್ಲಿ ತೋರುವ ಉತ್ತಮ ಗುಣಗಳನ್ನು ಸೂಚಿಸಿರುವರು. ಸಿಕ್ಕರು, ಪಠಾಣರು ಮತ್ತು ಬೇರೆ ಕೆಲವು ಹಿಮಾಲಯಪರ್ವತ ವಾಸಿಗಳಾದ ಜನರಿಗಿಂತ ದೇಹದಾರ್ಢ್ಯವೂ, ಕಷ್ಟಸಹಿಷ್ಣುತ್ವವೂ ಇರುವ ಜನಾಂಗಗಳು, ಪೂರ್ವ ಪಾಶ್ಚಾತ್ಯದೇಶಗಳಲ್ಲಿ ಎಲ್ಲಿಯೂ ದೊರಕಲಾರವು. ಮೆಕ್‌ಕಾರಿಸನ್‌ರವರ ತೀರ್ಮಾನಕ್ಕೆ ಇವರೇ ನಿದರ್ಶನಭೂತರು.

"ಸಿಪ್ಪೆ ಸಹಿತವಾದ ಗೋಧಿಯಿಂದ ತಯಾರಿಸಿದ ರೊಟ್ಟಿ, (legume) ದ್ವಿದಳಧಾನ್ಯಗಳು, ದಂಟು, ಗಡ್ಡೆಗೆಣಸುಗಳು, ಹಸು, ಎಮ್ಮೆ ಅಥವಾ ಆಡುಗಳ ಹಾಲು, ಬೆಣ್ಣೆ, ತುಪ್ಪ, ಮೊಸರು ಮುಂತಾದುವುಗಳನ್ನು ಸೇವಿಸುವುದರಿಂದಲೇ ಸಿಕ್ಕರು ಬಹಳ ಬಲಿಷ್ಠರಾಗಿರುವರು. ಗೋಮಾಂಸವನ್ನು ಅವರು ಸೇವಿಸುವುದಿಲ್ಲ. ಆದರೆ, ಆಡಿನ ಮಾಂಸವನ್ನೂ ಬೇಟೆಯಲ್ಲಿ ಕೊಂದ ಇತರ ಪ್ರಾಣಿಗಳ ಮಾಂಸಗಳನ್ನೂ ಆಡಿಗಡಿಗೆ ಮಿತವಾಗಿ ಸೇವಿಸುವುದು" ಎಂದು ಮೆಕ್‌ಕಾರಿಸನ್‌ರವರು ಬರೆದಿರುವರು. ಬಹಳಮಟ್ಟಿಗೆ ಸಸ್ಯಾಹಾರಿಗಳೇ ಆಗಿರುವ ಇಂಡಿಯಾದೇಶಸ್ಥರಿಗೆ, ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ [illegible] ಅಪಾರವಾದ ಶಕ್ತಿಯನ್ನು ಕುರಿತು ಅಮೃತ[illegible] ಸರ್ಜನರಾದ ಲೆಫ್ಟಿನೆಂಟ್ ಕರ್ನಲ್ ಹೆಚ್. ಡಿ. [illegible]ವರ್, ಎಸ್. ಎಂಬವರು ಕೂಡ ಈ ರೀತಿ ಬರೆದಿ[illegible]......

"ನಾನು ಕಳೆದ ಇಪ್ಪತ್ತುನಾಲ್ಕು ವರ್ಷಗಳಿಂದ ಶಸ್ತ್ರಚಿಕಿತ್ಸೆ ಮಾಡುತ್ತಿರುವೆನು. ಮತ್ತು ಕಳೆದ ಘೋರಯುದ್ಧದಲ್ಲಿ, ಮಾಂಸಾಹಾರಿಗಳಿಗೂ, ಸಸ್ಯಾಹಾರಿಗಳಿಗೂ ಶಸ್ತ್ರಚಿಕಿತ್ಸೆಯನ್ನು ತಡೆದುಕೊಳ್ಳುವುದರಲ್ಲಿರುವ ಶಕ್ತಿಯನ್ನು ಹೋಲಿಸಿ ನೋಡುವುದಕ್ಕೂ ನನಗೆ ಹೆಚ್ಚು ಅವಕಾಶವು ದೊರೆಯಿತು. ಇದರಿಂದ ಈ ವಿಷಯದಲ್ಲಿ ನನ್ನ ಅನುಭವಸಿದ್ಧವಾದ ಸಿದ್ಧಾಂತವನ್ನು ಪ್ರಮಾಣವಾಗಿ ತೆಗೆದುಕೊಳ್ಳಬಹುದು. ಕಳೆದ ಜರ್ಮನಿ ಯುದ್ಧದಲ್ಲಿ ಬಹಳ ಕಾಲ ಭಾರತದೇಶದ ಸೈನ್ಯಗಳಿಗೆ ಪ್ರಧಾನ ಶಸ್ತ್ರಚಿಕಿತ್ಸಕರ ವಿಚಾರಕನಾಗಿಯೂ ಇದ್ದೆನು.

ಬಿಳೀಜನರ ಸೈನ್ಯಕ್ಕೂ, ಭಾರತದೇಶೀಯರ ಸೈನ್ಯಕ್ಕೂ ಚಿಕಿತ್ಸೆಮಾಡಿದ ವೈದ್ಯರು ನನ್ನಲ್ಲಿ ಬಂದು "ಗಾಯಪಟ್ಟ ಹಿಂದೂ ಸೈನಿಕರು ಶೀಘ್ರವಾಗಿ ಗುಣವನ್ನು ಹೊಂದುತ್ತಿದ್ದರೆಂದೂ, ಅವರಲ್ಲಿ ಸಾಂಕ್ರಾಮಿಕರೋಗಗಳ ಬಾಧೆಯೂ ವಿಶೇಷವಾಗಿರಲಿಲ್ಲವೆಂದೂ, ಫ್ರಾನ್ಸ್, ಬ್ರಿಟನ್ ಮತ್ತು ಆಸ್ಟ್ರೇಲಿಯಾದೇಶದ ಸೈನಿಕರಿಗಿಂತ ಇವರ ಗಾಯಗಳು ಶೀಘ್ರವಾಗಿ ಗುಣವಾದುವೆಂದೂ ಹೇಳುತ್ತಿದ್ದರು. ಹೊಟ್ಟೆ, ಕರುಳು, ಜಠರ ಇವುಗಳಲ್ಲಿ ಹುಟ್ಟುವ ವ್ರಣಗಳು, ಪಿತ್ತಕೋಶಸಂಬಂಧವಾದ ವ್ಯಾಧಿ, ಮತ್ತು ಅಪೆಂಡಿಸೈಟೀಸ್ ಎಂಬ ಮೂತ್ರಕೋಶವ್ರಣ ಮುಂತಾದ ವ್ಯಾಧಿಗಳು ಹಿಂದೂದೇಶೀಯರಲ್ಲಿ ಪ್ರಾಯಶಃ ಕಂಡುಬರುತ್ತಲೇ ಇರಲಿಲ್ಲ.

ಇಂಡಿಯಾದೇಶದಲ್ಲಿರುವ ಭಾರತೀಯ ಸೈನಿಕರಲ್ಲಿಯೂ, ಆಂಗ್ಲೇಯ ಸೈನಿಕರಲ್ಲಿಯೂ ಅಪೆಂಡಿಸೈಟೀಸ್ ಎಂಬ ವ್ಯಾಧಿಯಿಂದ ಬಾಧೆಪಡುವವರ ಸಂಖ್ಯೆಯನ್ನು ಹೋಲಿಸಿ ನೋಡಿದುದರಲ್ಲಿ ದೇಶೀಯ ಸೈನ್ಯಕ್ಕಿಂತ ಆ ವ್ಯಾಧಿಯು ಆಂಗ್ಲೇಯಸೈನಿಕರಲ್ಲಿ 10 ಪಾಲು ಹೆಚ್ಚಾಗಿರುವುದು. ಪಿತ್ತಹುಣ್ಣಿನ ಬಾಧೆಯು ಇಂಡಿಯಾದೇಶೀಯರಲ್ಲಿ ಇಲ್ಲವೇ ಇಲ್ಲವೆಂದೂ ಹೇಳಬಹುದು. ಅನೇಕ ವರ್ಷಗಳಕಾಲ ವೈದ್ಯರಾಗಿದ್ದರೂ ಇಂಡಿಯಾದೇಶದಲ್ಲಿ ಪಿತ್ತಹುಣ್ಣಿನ ಬಾಧೆಯಿಂದ ನರಳತಕ್ಕ ರೋಗಿಯೊಬ್ಬನನ್ನು ಕಾಣಲಾರೆನು. ಪಂಜಾಬ್ ಪ್ರಾಂತ್ಯದ ವಿಚಾರವಾಗಿ ಮಾತ್ರ ಇದನ್ನು ನಾನು ಬರೆಯುತ್ತಿರುವೆನೇ ಹೊರತು, ಒಟ್ಟು ಇಂಡಿಯಾದೇಶಕ್ಕಲ್ಲ. ಪಂಜಾಬಿಯರ ಮುಖ್ಯಾಹಾರವೇನೆಂದರೆ, ಸಿಪ್ಪೆಸಹಿತವಾದ ಗೋಧಿಯ ಹಿಟ್ಟಿನಿಂದ ಮಾಡಿದ ರೊಟ್ಟಿ, ದ್ವಿದಳ ಧಾನ್ಯಗಳು, ತರಕಾರಿಗಳು, ಹಾಲು ಮತ್ತು ಹಣ್ಣು ಇವುಗಳೇ!

ಅವರ ದೇಹಶಕ್ತಿಯು ಪ್ರಪಂಚದಲ್ಲಿರುವ ಯಾವ ಜನಾಂಗದವರ ಶಕ್ತಿಗೂ ಕಡಿಮೆಯಾದುದಲ್ಲವೆಂದು ಧಾರಾಳವಾಗಿ ಹೇಳಬಲ್ಲೆನು. ಬಕ್ಸಾರ್‌ನಲ್ಲಿ ದಂಗೆಯಾದಾಗ, ಹಾಂಗ್‌ಕಾಂಗ್ ಪ್ರಾಂತ್ಯದಲ್ಲಿ ಯುದ್ಧಕ್ಕಾಗಿ ಪಂಜಾಬಿಯರ ಸೈನ್ಯವೊಂದನ್ನು ಜಮಾಯಿಸುವುದಕ್ಕೆ ಪ್ರಯತ್ನಪಡಲು, ನಲವತ್ತು ಅಂಗುಲಗಳ ಸುತ್ತಳತೆಯುಳ್ಳ ಎದೆಯೂ 5 ಅಡಿ 11 ಅಂಗುಲಗಳ ಎತ್ತರವೂ ಉಳ್ಳ ಸಾವಿರ ಜನರನ್ನು ಬಹು ಸುಲಭವಾಗಿ ಚುನಾಯಿಸುವುದಕ್ಕೆ ನನಗೆ ಸಾಧ್ಯವಾಯಿತು.

ಹಿಂದೂದೇಶದ ಸ್ತ್ರೀಯರು ಕೂಡ ಬಲವಾದ ಶಸ್ತ್ರಚಿಕಿತ್ಸೆಗಳನ್ನು ತಡೆದುಕೊಳ್ಳಬಲ್ಲರು. ಅಷ್ಟಾಗಿ ಬಾಧೆಪಡುವುದಿಲ್ಲ. ಮತ್ತು ಮಾಂಸವನ್ನೇ ಸೇವಿಸದಿರುವ ಹಿಂದೂಗಳೂ ಮಹಮ್ಮದೀಯರಂತೆಯೇ ಚಿಕಿತ್ಸೆ ಮಾಡಿಸಿಕೊಳ್ಳಬಲ್ಲರು. ನಾವು ವರ್ಷಂಪ್ರತಿ ಸುಮಾರು 250 ಮಂದಿಗೆಮೇಲೆಯೇ ಕಿಬ್ಬೊಟ್ಟೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುತ್ತಿರುವೆವು. ಆದರೆ ಆ ಶಸ್ತ್ರಘಾತದಿಂದ ಸಾಯುವವರೇ ಅಪೂರ್ವವು. ಕೆಲವು ಸಮಯಗಳಲ್ಲಿ ಆ ವ್ಯಾಧಿಗಳಿಂದ ಸತ್ತೇಹೋಗುವರೆಂದು ನಿರ್ಧರವಾಗಿದ್ದವರು ಕೂಡ ಗುಣಹೊಂದುವುದನ್ನು ನೋಡಿ ಪರಮಾಶ್ಚರ್ಯವಾಗುವುದು" ಎಂದು ಲೂಧಿಯಾನಾ ನಗರದ ಮೆಡಿಕಲ್‌ಕಾಲೇಜಿನ ಮುಖ್ಯೋಪಾಧ್ಯಾಯಿನಿಯೂ, ಭಾರತದೇಶದಲ್ಲಿ ಪ್ರಖ್ಯಾತರಾದ ಶಸ್ತ್ರಚಿಕಿತ್ಸಕಿಯರಲ್ಲೊಬ್ಬಳೂ ಆದ ಡಾಕ್ಟರ್ ಎಡಿತ್‌ಬ್ರೌನ್ ಎಂಬಾಕೆಯು ಬರೆದಿರುವಳು.

ಇವುಗಳಿಂದ ತಿಳಿದುಬರುವುದೇನೆಂದರೆ, ಜನರ ಬಲಹೀನತೆಗೆ ಆಹಾರದಲ್ಲಿ ಮಾಂಸವು ಸೇರದಿರುವುದು ಕಾರಣವಲ್ಲ. ಇಂಡಿಯಾದೇಶದಲ್ಲಿ ಸೇವಿಸುವ ಸಸ್ಯಾಹಾರಗಳಲ್ಲಿ ವಿಶೇಷವಾಗಿ ದೊರಕುವ ಬಲವರ್ಧಕ ಪದಾರ್ಥಗಳು ಸರಿಯಾದ ಪ್ರಮಾಣಗಳಲ್ಲಿ ಸೇರದಿರುವುದೂ, ಬಹುಜನರು ತಮ್ಮ ದೇಹಕ್ಕೆ ಬೇಕಾದ ವಸ್ತುಗಳು ತಕ್ಕ ಪ್ರಮಾಣದಲ್ಲಿ ದೊರಕುವಂತೆ ಏರ್ಪಡಿಸಿಕೊಳ್ಳದಿರುವುದೂ ಕಾರಣಗಳು.

ಉತ್ತರ ಇಂಡಿಯಾದ ಆಹಾರದಲ್ಲಿ ದೇಹಪುಷ್ಟಿಗೆ ಬೇಕಾದ ಆಹಾರಪದಾರ್ಥಗಳು ತಕ್ಕ ಪ್ರಮಾಣದಲ್ಲಿ ಶರೀರಕ್ಕೆ ಸೇರಿ [illegible]ನ್ನು ಹೆಚ್ಚಿಸಲು ಸಹಕಾರಿಗಳಾಗಿವೆ. ಆಗನ್ನೇ ಎಲ್ಲರೂ [illegible]ವುದಕ್ಕೆ ಯೋಗ್ಯವಾದ ಆಹಾರವನ್ನಾಗಿ ಭಾವಿಸಿ, ಹೊಟ್ಟುಸಹಿತವಾದ ಗೋಧಿಯ ಹಿಟ್ಟಿನಿಂದ ತಯಾರಿಸಿದ ರೊಟ್ಟಿ, ಒಳ್ಳೆಯ ಹಾಲು, ಹಣ್ಣುಗಳು, ಸೊಪ್ಪಿನ ಜಾತಿಯ ತರಕಾರಿಗಳು, ಮುಂತಾದ ಪದಾರ್ಥಗಳನ್ನು ವಿಶೇಷವಾಗಿ ಸೇವಿಸದೆ ಇರುವವರು ಇವುಗಳನ್ನು ಉಪಯೋಗಕ್ಕೆ ತರುವಂತೆ ಬೋಧಿಸುತ್ತ ಬರಬೇಕು.

ಆಹಾರಪದಾರ್ಥಗಳು ತಕ್ಕ ಪ್ರಮಾಣದಲ್ಲಿ ದೇಹಕ್ಕೆ ಸೇರದಿರುವುದರಿಂದುಂಟಾಗುವ ಬಾಧೆಗಳನ್ನು ನಿವಾರಣೆಮಾಡಲು ಯಾವಯಾವ ಪದಾರ್ಥಗಳನ್ನು ಒದಗಿಸಬೇಕೋ, ಅವುಗಳನ್ನು ಉಪಯೋಗಿಸುವಂತೆ ಪ್ರೋತ್ಸಾಹಿಸುವುದರಮೂಲಕ ಇಂಡಿಯಾದೇಶದ ಕ್ಷೇಮಕ್ಕೆ ಅವಶ್ಯವಾದ ಅನುಕೂಲಗಳನ್ನು ಏರ್ಪಡಿಸಿದಂತಾಗುವುದು. ಈ ವಿಷಯವನ್ನು ಭಾರತದೇಶೀಯ ಸಂಸ್ಥೆಗಳು ಗಮನಕ್ಕೆ ತಂದುಕೊಂಡು ಅದಕ್ಕಾಗಿ ಪ್ರಯತ್ನಪಡಬೇಕು.

ಆರೋಗ್ಯಚಂದ್ರಿಕೆ.

ಶ್ರೀ ವೀರೇಶನ ರಥೋತ್ಸವ.

ಶ್ರೀ ವೀರಭದ್ರಸ್ವಾಮಿ ದೇವಾಲಯ ಹಿಂಗಬಾಲೂರು.

ಸದರಿ ದೇವಸ್ಥಾನದ ರಥೋತ್ಸವವು ಪದ್ಧತಿಪ್ರಕಾರ ಇದೇ ಚೈತ್ರ ಶು|| ೫ ಮಿತಿಗೆ ವಿಧ್ಯುಕ್ತವಾಗಿ ನೆರವೇರಿತು. ಚೈತ್ರ ಶು|| ೭ ದಿವಸ, ದಾವಣಗೆರೆ ನಾಟಕಕಂಪೆನಿಯವರ ಭವ್ಯವಾದ ಮಂದಿರದಲ್ಲಿ ಮುಂಡರಗಿ ಲೋಕಲ್‌ಬೋರ್ಡ್ ಮೆಂಬರ ಶ್ರೀ|| ವೇ|| ಕಾಗನೂರು ಸಂಗಯ್ಯನವರ ಅಧ್ಯಕ್ಷತೆಯಲ್ಲಿ ಜನರಲ್‌ಕಮಿಟಿಯು ಕೂಡಿತು. ಕಮಿಟಿಗೆ ಶ್ರೀ|| ಷ|| ಬ್ರ|| ಅಬ್ಬಿಗೇರಿ ಅರಳೆಲೆಮಠದ ಪಟ್ಟದಸ್ವಾಮಿಗಳು ದಯಮಾಡಿಸಿದ್ದಲ್ಲದೆ ಗದಗ ಮುಂಡರಗಿ, ಹಡಗಲಿ, ರಾಣೆಬೆನ್ನೂರ, ಬ್ಯಾಡಗಿ ವಗೈರೆ ಪರಸ್ಥಳಗಳಿಂದ ಅನೇಕಜನರು ಆಗಮಿಸಿದ್ದರು. ಜನರಲ್‌ಕಮಿಟಿಯಲ್ಲಿ ದೇವಸ್ಥಾನದ ಪಂಚಕಮಿಟಿಯ ಪ್ರೆಸಿಡೆಂಟ ಗುರುಭಕ್ತೇಶಯ್ಯನವರು ಒಂದುವರ್ಷದ ಆದಾಯ-ವೆಚ್ಚದ ಲೆಖ್ಖವನ್ನೂ ಶ್ರೀ ದೇವಸ್ಥಾನದ ಪುರೋಭಿವೃದ್ಧಿಯ ವಿಷಯದಲ್ಲಿ ರಥಕ್ಕೆ ಕಮಿಟಿಯವರ ಅಭಿಪ್ರಾಯವನ್ನೂ ತಿಳುಹಿಸಿದರು. ಜನರಲ್‌ಕಮಿಟಿಯವರು ಲೆಖ್ಖಪತ್ರವನ್ನು ಶೋಧನಮಾಡಿ ಕಮಿಟಿಯವರು ಒಕ್ಕಟ್ಟಿನಿಂದ ಮಾಡುತ್ತಿರುವ ಕಾರ್ಯಕ್ರಮದ ಬಗ್ಗೆ ಸಂತೋಷಿಸಿ ಶ್ರೀ ದೇವಸ್ಥಾನದ ಪುರೋಭಿವೃದ್ಧಿಯ ವಿಷಯಕವಾಗಿ ಕೆಲ ಕೆಲವು ನಿರ್ಧಾರಗಳನ್ನು ಪಾಸಮಾಡಿ ಸ್ವಾನಾಧಿಪತಿಯಾದ ಶ್ರೀ ವೀರೇಶನ ಜಯಘೋಷದೊಡನೆ ಸಭೆಯನ್ನು ಮುಕ್ತಾಯಗೊಳಿಸಿದರು.

ಪ್ರತ್ಯಕ್ಷದರ್ಶಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ಸೇ. ನಂ. ತೊಲ ೧೬ಕ್ಕೆ ೮ ಆ.

ರೇಶ್ಮೆಮುಗುಟ—೧ ಸೇ. ನಂ. ತೊಲ ೧೬ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ತ್ರಿಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [7]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರ ಗುಣಕಾರಿಯಾದದ್ದು!

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೇಗೆಂದರೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು **"ಗೃಹಮಾತೆ"**ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಅಮ್ಲವಾತ, ಅಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಎಪ್ಪತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಅದ್ದರಿಂದ ಈ ಔಷಧಾಲಯಕ್ಕೆ **"ಅಷ್ಟವರ್ಗೌಷಧಾಲಯ"**ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[6] **848 Ganjipet Poona City.**

ಶ್ರೀ ಕಾಶೀವಿದ್ಯಾಪೀಠ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮಶಿವಾಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟ[illegible] ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳ[illegible]ತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂ[illegible]ದರಮೇಲೆ ಗೊತ್ತಾಗುವದಲ್ಲದೆ ಲೇಖದಿಂದ [illegible]ವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ಕೃಷ್ಟ[illegible] ಹರಿಹರರಿಗಿರುವ ಶಕ್ತಿಶಕ್ತಿಮದ್ಭಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಭಾಲಾಕ್ಷಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುರಗಿರಿ ಶ್ರೀ ಚನ್ನಬಸವ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ಪಡಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| 3 ಅಕ್ಷಯತೃತೀಯಾ (ತಾ|| 11-5-29) ಸೇಯ ದಿವಸ ಪ್ರಕಾಶವಾಗುವದು. ಈ ದಿನದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.

ಶ್ರೀ ಶಿವತತ್ವಗ್ರಂಥಮಾಲಾಮಂದಿರ
[7] **ಜಂಗಮವಾಡಿಮಠ ಬನಾರಸ್ ಸಿಟಿ.**

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ, ಕಾನಡಾ.

1928—ಈ ವರ್ಷದಲ್ಲಿ ನಡೆದಿರತಕ್ಕಷ್ಟು ವಿಮೆಗಳು ಕಂಪೆನಿಯ ಚರಿತ್ರೆಯಲ್ಲೇ ಇರಲಿಲ್ಲ!!

ಈಗ ಜಾರಿಯಲ್ಲಿರುವ ವೊಬಲಗು	ರೂ.	1,36,00,00,000
ಹೊಸದಾಗಿ ಆಗಿರುವದು	ರೂ.	26,20,00,000
ಹಂಚಿರುವ ಲಾಭ	ರೂ.	58,62,400
ಕೊಟ್ಟಿರುವ ವಾರಸು	ರೂ.	87,27,300

ಈ ಕಂಪೆನಿಯನ್ನೇ ಚುನಾಯಿಸಬೇಕಾದ ಕಾರಣಗಳು—

1. ಪ್ರಪಂಚದ 5 ಖಂಡಗಳಲ್ಲಿಯೂ ಇರತಕ್ಕ ಈ ಕಂಪೆನಿಯ ವಿಮೆದಾರರ ಜೊತೆಯಲ್ಲಿ, ಇಂಡಿಯಾ ದೇಶದಲ್ಲೇ 5 ಲಕ್ಷ ಜನಗಳನ್ನುಳ್ಳ (ವಿಮೆಗಾರರು) ಭಾರಿಸಂಸಾರದಲ್ಲಿ ಸೇರಿ ಭಾಗಿಗಳಾದಂತಾಗುತ್ತೆ.
2. ಎಷ್ಟೇ ಕಡಿಮೆಯೆಂದರೂ ರೂ. 1,000 ಗಳ ವಿಮೆಗೆ ರೂ. 500 ರಿಂದ 600 ರ ವರೆಗೂ ಲಾಭವನ್ನು ಪಡೆಯಬಹುದು. ಇನ್ನೂ ಜಾಸ್ತಿಯಾಗುವ ಸಂಭವವೂ ಉಂಟು.
3. ಈ ರಾಕ್ಷಸಶಕ್ತಿಯನ್ನುಳ್ಳ ಮತ್ತು ಅನುಕೂಲಗಳನ್ನುಳ್ಳದ್ದು ಮತ್ಯಾವದೂ ಇಲ್ಲ.
4. ಗಂಡಸರು, ಹೆಂಗಸರು, ಮಕ್ಕಳು ಯಾರು ಬೇಕಾದರೂ ವಿಮೆ ಮಾಡಬಹುದು.

[46] **ಏಜಂಟರು ಬೇಕಾಗಿದೆ.**

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ. ಅಥವಾ ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು **ಯಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ಫಿಷರ್‌ಸ್ಕ್ವೇರ್, ಮೈಸೂರು.

ಸತ್ಯದ ಜಗತ್ತು] # ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕರಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ## ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಿಕ್ಕರಿಸದಿರಿ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಿ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಪೂಷ್ಟ, ಕಾಲಿಮುಕಂದ, ಮಧುಕಂದ, ಜಪಾಕಂಧ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಪಿವಳೀಬೀಜ, ಚಿಕಣಪಂಚಾಂಗ, ಅಡವೀ ಎಳ್ಳಿನಪಂಚಾಂಗ ಜಪಿಪತ್ರಿ, ಪಿಂಪಪತ್ರಿ, ಮುದನಮುಸ್ತ, ರಕ್ತಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಚಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸರೀಮಗಜ, ಆಲದಹಾಲು, ವಾಕೇರಿಭಾತಾ, ಗೋಕ್ಷುರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಸಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಜಾಳ, ಸಿಕ್ಕ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಕಬಾರರೋಗ, ದಟ್ಟರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [17]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು [illegible]ವಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸು[illegible] ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಹಚ್ಚಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಥರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [41]

ಮಲೇರಿಯಾನ ಕಂಪೆನಿ, ನಂಬ್ರ ೩೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ ದಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ ಕ್ಕೆ	ರೂ. ಆ. ಪೈ. ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾಪಚಿ ದುಸ್ವಪ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚಸಂಕಲ್ಪ ಪ್ರಶ್ನ ಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**

ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,

ಪೋಸ್ಟ್ ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವಲ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಿಳಿದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವನಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

ಬುದ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೮-೦
ಡಬ್ಬ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[46] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ ನೇ ಮೇ ೧೯೩೫ [ಸಂಚಿಕೆ ೨.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವೀಕಾರ.

ಹುಬ್ಬಳ್ಳಿ ತಾ|| ಪಾಲಿಕೊಪ್ಪದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿ ಮಹೋತ್ಸವ ಸಮಯದಲ್ಲಿ ಅಲ್ಲಿಯ ಭಜನಾಸಂಘದವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಸಿಗ್ಗಾವಿ ತಾ|| ಹೊಸಕಟ್ಟಿಯಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿ ಮಹೋತ್ಸವದಲ್ಲಿ ವೇ|| ಫಕೀರಯ್ಯ ಜಕನೂರು, ಕಾಲಾವಮಾಸ್ತರ್ ಇವರು ಸಮರ್ಪಿಸಿದ 1 ರೂ. ಮ|| ರಾ|| ಚನ್ನಪ್ಪ ಪಾಲೀಕಾರ ಇವರು ಸಮರ್ಪಿಸಿದ 1 ರೂ. ಮ|| ರಾ|| ಶಿವಪ್ಪ ಕಾಟಿ ಇವರು ಸಮರ್ಪಿಸಿದ 1 ರೂ. ದೈವದವರು ಸಮರ್ಪಿಸಿದ 2 ರೂ. ಒಟ್ಟು 6 ರೂ. ಗಳು ಶ್ರೀ|| ಷ|| ಬ್ರ|| ಪಾಲೀಕೊಪ್ಪ ಬೃಹನ್ಮಠಾಧೀಶ ಪಟ್ಟಾಧ್ಯಕ್ಷರವರ ದ್ವಾರಾ ತಲ್ಪಿರುತ್ತವೆ.

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ ಟೌನ ನಿವಾಸಿಗಳಾದ ಮ|| ರಾ|| ಪಟ್ಟಣಶೆಟ್ಟರ ಕೊಟ್ರಪ್ಪನವರ ಪುತ್ರ ಚಿ|| ವೀರಪ್ಪನಿಗೆ ಮ|| ರಾ|| ಹುಬ್ಬಳ್ಳಿ ಅಕ್ಕಿ ಉಳವಪ್ಪನವರ ಪುತ್ರಿ ಸೌ|| ಚನ್ನವ್ವನನ್ನೂ, ಸದರಿಯವರ ಪುತ್ರ ಚಿ|| ಕೋರಾಣಪ್ಪನಿಗೆ ಮ|| ರಾ|| ಮಂಟೂರು ಗ್ರಾಮದ ಬಳುವಟಗಿ ಸಿದ್ದಪ್ಪನವರ ಪುತ್ರಿ ಸೌ|| ಸೋಲಬನ್ನನನ್ನೂ, ಎಲಿವಾಳಗ್ರಾಮದ ಮ|| ರಾ|| ಸೆಟ್ಟರ ಚನ್ನಬಸಪ್ಪನವರ ಪುತ್ರ ಚಿ|| ಮುರಿಗಪ್ಪನಿಗೆ ಮೇಲ್ಕಂಡ ಪಟ್ಟಣಶೆಟ್ಟರ ಕೊಟ್ರಪ್ಪನವರ ಪುತ್ರಿ ಸೌ|| ಸಂಗವ್ವನನ್ನೂ, ಸದರಿ ಗ್ರಾಮದ ಚೆನ್ನಬಸಪ್ಪಶೆಟ್ಟರವರ ಪುತ್ರ ಚಿ|| ವೀರಪ್ಪನಿಗೆ ಪಟ್ಟಣಶೆಟ್ಟರ ಕೊಟ್ರಪ್ಪನವರ ಪುತ್ರಿ ಸೌ|| ಪಾರ್ವತವ್ವನನ್ನೂ ಕೊಟ್ಟು ನೆರವೇರಿಸಿದ, ವಿವಾಹಸಮಯದಲ್ಲಿ, ಹಿರೇಬೆಂಡಿಗೇರಿ ಕೋರಧಾನ್ಯಮಠದ ಶ್ರೀ ಪಟ್ಟದಸ್ವಾಮಿಗಳ ಆಜ್ಞೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 6 ರೂಪಾಯಿಗಳು ಮ|| ರಾ|| ಪಟ್ಟಣಶೆಟ್ರ ಕೊಟ್ರಪ್ಪನವರ ದ್ವಾರಾ ತಲುಪಿರುತ್ತವೆ.

ರಾಜಧಾನಿಯ ಶ್ರೀ ಕಪಿಲಮಲ್ಲಿಕಾರ್ಜುನಸ್ವಾಮಿ ಮಠದಲ್ಲಿ ನೆರವೇರಿದ ಶ್ರೀ ದಾರುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ವೀರಶೈವಮಂಡಲಿಯವರು ಪ್ರಭಾಪೋಷಣಕ್ಕೋಸ್ಕರವಾಗಿ 5 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ವಿಜಾಪುರ ಪಟ್ಟಣದಲ್ಲಿರುವ ಬೃಹನ್ಮಠದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಹಾಗೂ ಮ|| ರಾ|| ಸಂಗಪ್ಪ ಕಾಡಪ್ಪ ಲೇಣಿ ಇವರು ತಮ್ಮ ಮನಸ್ಸಿನಲ್ಲಿ ಮಾಡಿಕೊಂಡ ಕಾರ್ಯವು ಕೈಗೊಂಡ ಸಂತೋಷಕ್ಕೋಸ್ಕರ ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ವೇ|| [illegible] ಮಠದ ದುಂಡಯ್ಯನವರ ದ್ವಾರಾ ತಲ್ಪಿರುತ್ತವೆ.

ಮೈಸೂರು ರಾಜಧಾನಿಯಲ್ಲಿರುವ ಹೊಸಮಠದ ಶ್ರೀಮನ್ನಿರಂಜನ ಶ್ರೀ ಬಸವಲಿಂಗಸ್ವಾಮಿಗಳವರು ತಮ್ಮ ಮಠದಲ್ಲಿ ವೈಶಾಖ ಶು|| ೩ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಶ್ರೀಕಂಠದೇವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹೊಸಪೇಟೆ ಟೌನಿನ ಸಮಸ್ತ ಸದ್ಭಕ್ತರು ವೇ|| ರುದ್ರಾರಾಧ್ಯ ಶಾಸ್ತ್ರಿಗಳವರಿಂದ ಒಂದು ವಾರದವರೆಗೆ ಶಿವಕೀರ್ತನವನ್ನು ನಡೆಯಿಸಿ ಪೂರ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ವೇ|| ಸಂ|| ಜಗದೀಶಶಾಸ್ತ್ರಿಗಳ ದ್ವಾರಾ ತಲುಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—

ಹಿಂದೂ ಮುಸಲ್ಮಾನರ ಜಗಳದ ವಿಷಯದಲ್ಲಿ ಬೊಂಬಾಯಿ ಸರಕಾರದವರು ಇನ್ನು ಒಂದು ತಿಂಗಳವರೆಗೆ ಶೀಖರು "ಕರಪನ್" ಎಂಬ ಆಯುಧವನ್ನು ಉಪಯೋಗಿಸಕೂಡದೆಂದು ಆಜ್ಞಾಪಿಸಿರುವರು. ಇದರಿಂದ ಶೀಖರು ಕ್ಷೋಭೆಗೊಂಡು, ಸರಕಾರದ ಆಜ್ಞೆಯನ್ನು ತಪ್ಪಿಸಲು ಪ್ರಯತ್ನಿಸಿ ವಿಫಲರಾಗಿ ಸತ್ಯಾಗ್ರಹವನ್ನು ಮಾಡುವ ಪ್ರಯತ್ನದಲ್ಲಿರುವರು. ಶೀಖರಲ್ಲಿ ಸ್ತ್ರೀಪುರುಷರಾದಿಯಾಗಿ ಸರ್ವರೂ "ಕರಪನ್" ಗಳನ್ನು ಧರಿಸಬೇಕೆಂದು ಆ ಮತದ ಮೂಲ ಗುರುವಾದ ಗುರುಗೋವಿಂದಸಿಂಗನು ಧರ್ಮಕಟ್ಟಳೆಯನ್ನಾಗಿ ಮಾಡಿರುವನಂತೆ!

ಜಾಕೋಬಾಬಾದಿನ ಉನ್ಮತ್ತನಾದ ಒಬ್ಬ ಮಹಮ್ಮದೀಯನು ಹಿಂದೂ ಮುಸಲ್ಮಾನರ ದ್ವೇಷದಿಂದ ಕೋಪಗೊಂಡವನಾಗಿ, ತನ್ನಲ್ಲಿದ್ದ ಬಂದೂಕದಿಂದ 10 ಜನ ಹಿಂದುಗಳನ್ನು ಹೊಡೆದನು. ೯ ಜನರು ಸತ್ತರು. ಈ ಪಾಪಿಯು ತಪ್ಪಿಸಿಕೊಂಡಿರುವನು. ಈ ಮೊದಲು ಇಲ್ಲಿ ಮಹಮ್ಮದೀಯ ಬಾಲಕರಿಗೂ ಹಿಂದೂ ಬಾಲಕರಿಗೂ ಜಗಳವುಂಟಾಗಿ, ಹಿಂದೂ ಬಾಲಕರು ಮಹಮ್ಮದೀಯ ಬಾಲಕನೋರ್ವನನ್ನು ಒಂದು ಮಹಡಿಯ ಮೇಲಿಂದ ತಳ್ಳಿ ಕೊಂದಿದ್ದರಂತೆ! ಇದನ್ನು ಕೇಳಿ ಮಹಮ್ಮದೀಯರು ಉದ್ರೇಕಗೊಂಡು ಸಭೆಮಾಡಿ ಒಬ್ಬ ಮುಸಲ್ಮಾನನನ್ನು ಕೊಂದುದಕ್ಕೆ ಹತ್ತು ಜನ ಹಿಂದುಗಳ ಪ್ರಾಣವನ್ನು ತೆಗೆಯಬೇಕೆಂದು ನಿರ್ಧರಿಸಿದರಂತೆ! ಅದರಂತೆ ಈ ನೀಚನು ನಿರಪರಾಧಿಗಳಾದ ಹಿಂದುಗಳಮೇಲೆ ಗುಂಡುಹಾರಿಸಿ ಕೊಂದಿರುವನು. ಜಾಕೋಬಾಬಾದಿನ ಹಿಂದುಗಳು ಭಯಗ್ರಸ್ತರಾಗಿರುವರು. ಸೈನಿಕರು ಪಟ್ಟಣದ ಮುಖ್ಯ ಮುಖ್ಯ ಭಾಗಗಳನ್ನು ಕಾಯುತ್ತಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವಗಳು.

ಮೈಸೂರು.

ರಾಜಧಾನಿಯ ದೊಡ್ಡಪೇಟೆ ಚರ್ಮ ಮಠದ ಬೀದಿಯಲ್ಲಿರುವ ಶ್ರೀ ಕಪಿಲಮಲ್ಲಿಕಾರ್ಜುನಸ್ವಾಮಿಮಠದಲ್ಲಿ, ವೈಶಾಖ ಶುದ್ಧ ಪಂಚಮಿಯ ದಿವಸ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನು ರಾಜಧಾನಿಯ ವೀರಶೈವರು ಅರಮನೆ ಜಪದಕಟ್ಟೆಮಠದ ಶ್ರೀ ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ಅತ್ಯಂತವಿಜೃಂಭಣೆಯಿಂದ ನೆರವೇರಿಸಿದರು. ಪ್ರಾತಃಕಾಲ ಜಗದಾಚಾರ್ಯರ ಭಾವಚಿತ್ರಕ್ಕೆ ಶ್ರೀರುದ್ರಪಠನಪೂರ್ವಕ ಷೋಡಶೋಪಚಾರಪೂಜೆಯು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಮಧ್ಯಾನ್ಹ ಅನ್ನಸಂತರ್ಪಣ ಸಮಾರಂಭವು ವಿಶೇಷವೈಭವದಿಂದ ನಡೆಯಿತು. ಸಾಯಂಕಾಲ ಸಭೆಯು ಕೂಡಿತು. ಸಭೆಗೆ ರಾಜಧಾನಿಯ ನಿವಾಸಿಗಳಾದ ಸಕಲಪ್ರಮುಖವೀರಶೈವರೂ, ಸ್ಮಾರ್ತ, ವೈಷ್ಣವ, ಶ್ರೀವೈಷ್ಣವಮತೀಯ ಅನೇಕಜನ ವಕೀಲರೂ, ಅಧಿಕಾರಿಗಳೂ ಆಗಮಿಸಿದ್ದರು. ಸದರಿಸಭೆಯು ಕೇವಲ ಸುಧಾರಕಜನರಿಂದ ಯುಕ್ತವಾಗಿದ್ದುದರಿಂದ ಈ ಸಭೆಗೆ ಅಭೂತಪೂರ್ವವಾದ ಶೋಭೆಯುಂಟಾಗಿದ್ದಿತೆಂದು ಆನಂದದಿಂದ ಹೇಳಬೇಕಾಗಿದೆ. ಪ್ರಾರಂಭದಲ್ಲಿ ಆಸ್ಥಾನಸಂಗೀತವಿದ್ವಾನ್ ಬೆಳಕವಾಡಿ ಶ್ರೀನಿವಾಸಯ್ಯಂಗಾರ‍್ಯರ ಗಾನಕಚೇರಿಯು ಹೃದಯಂಗಮವಾಗಿ ನೆರವೇರಿತು. ಅನಂತರ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂ|| ಕಾಶೀನಾಥಶಾಸ್ತ್ರಿಗಳವರು ಸಕಲ ವೀರಶೈವರ ಪ್ರಾರ್ಥನೆಯ ಮೇರೆಗೆ ಭಾಷಣವನ್ನು ಮಾಡಲಿಕ್ಕೆ ಉಪಕ್ರಮಿಸಿದರು. ಇವರು ತಮ್ಮ ಭಾಷಣದಲ್ಲಿ ಅನ್ಯಮತೀಯರು ವೀರಶೈವಮತವಿಷಯದಲ್ಲಿ ಭಾವಿಸಿರುವ ತಪ್ಪು ಅಭಿಪ್ರಾಯವನ್ನು ಪೂರ್ವಪಕ್ಷವನ್ನಾಗಿಟ್ಟುಕೊಂಡು, ಅದಕ್ಕೆ ವೇದ, ಉಪನಿಷತ್ತು, ಸ್ಮೃತಿ, ವ್ಯಾಸೋಕ್ತ ಪುರಾಣ, ಮಹಾಭಾರತಾದೀತಿಹಾಸಗಳ ಪ್ರಮಾಣಗಳನ್ನು ಕೊಟ್ಟು, ಈ ಮತದ ಪ್ರಾಶಸ್ತ್ಯವನ್ನೂ ಹಾಗೂ ಪ್ರಾಚೀನತ್ವವನ್ನೂ ಸ್ಥಿರಗೊಳಿಸಿ, ಸರ್ವರನ್ನೂ ಆನಂದ ತುಂದಿಲ ಹೃದಯರನ್ನಾಗಿ ಮಾಡಿದರು. ಅಲ್ಲದೆ ವೀರಶೈವಮತದ ಪ್ರಾಶಸ್ತ್ಯವನ್ನು ಪ್ರತಿಪಾದಿಸತಕ್ಕ ವ್ಯಾಸೋಕ್ತ ಪುರಾಣಾದಿಗಳಲ್ಲಿರತಕ್ಕ ಪ್ರಮಾಣವಾಕ್ಯಗಳು ಕೇವಲಸಾಧುವಾದವುಗಳೆಂದು ಭರತಖಂಡದಲ್ಲಿರತಕ್ಕ ಅನೇಕ ಪ್ರಾಚೀನ ದೇವತಾವಿಗ್ರಹಗಳ ದೃಷ್ಟಾಂತವನ್ನು ಕೊಟ್ಟು ಆವಾಕ್ಯಾಭಿಪ್ರಾಯವನ್ನು ಪುಷ್ಟೀಕರಿಸಿದರು. ಆಮೇಲೆ ವೀರಶೈವಮತಸಿದ್ಧಾಂತ ಮತ್ತು ಶ್ರೀವೈಷ್ಣವಮತಸಿದ್ಧಾಂತಗಳೆರಡೂ ಒಂದೇವಿಧವಾಗಿರುವುವೆಂದೂ, ಶ್ರೀಮತ್ಪಂಚಾಚಾರ್ಯರ ಸಿದ್ಧಾಂತವನ್ನೇ ಶ್ರೀರಾಮಾನುಜಾಚಾರ್ಯರು ಅನುಕರಿಸಿದರೆಂದೂ ಹೇಳಿ ಈ ಎರಡೂ ಮತಗಳಿಗಿರುವ ಸಾಮ್ಯವನ್ನು ಅನೇಕೋದಾಹರಣೆಗಳದ್ವಾರಾ ಸ್ಪಷ್ಟೀಕರಿಸಿದರು. ವೇ|| ಪಂಡಿತರ ಈ ತೆರದಭಾಷಣದಿಂದ ಅನ್ಯಮತೀಯರಲ್ಲಿದ್ದ ಸಂಶಯವು ದೂರವಾಗಿ ಸರ್ವರೂ ಈ ಮತದ ಪ್ರಾಶಸ್ತ್ಯವನ್ನು ಕೊಂಡಾಡಿದರೆಂಬ ವಿಷಯವನ್ನು ಆನಂದದಿಂದ ಉಲ್ಲೇಖಿಸಬೇಕಾಗಿದೆ. ಪಂಡಿತರಭಾಷಣವು ಸಮಾಪ್ತಿಯಾದೊಡನೆ, ಜಗದಾಚಾರ್ಯರ ಜಯಘೋಷ ಪೂರ್ವಕ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ಸಭೆಗೆ ಆಗಮಿಸಿದ್ದ ಸರ್ವರೂ ಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಈ ಗುರುಕಾರ್ಯವನ್ನು ಅಸಾಧಾರಣವಾದ ಭಕ್ತಿವಿಶೇಷದಿಂದ ಕೈಕೊಂಡು ಬಹು ವೈಭವದಿಂದ ನೆರವೇರಿಸಿದ ಮ|| ರಾ|| ಎಂ. ಪಿ. ಭೋಗೆಯ್ಯನವರು ಬಿ.ಎ. ಬಿ.ಎಲ್. ಮ|| ರಾ|| ಸಾ|| ಎನ್. ಸಂಗಪ್ಪನವರು ಮ|| ಕಾ|| ಮ|| ರಾ|| ಯಜಮಾನ ಚಂದ್ರಪ್ಪನವರು, ಮ|| ರಾ|| ಮಲ್ಲಣ್ಣ ಪುಟ್ಟಸ್ವಾಮಯ್ಯನವರು ಮ|| ರಾ|| ಸಾ|| ಅಂಗಡಿಮನೆ ಬಸವಣ್ಣನವರು ಮ|| ರಾ|| ಬಿ. ಎಸ್. ಸುಬ್ಬಣ್ಣನವರೇ ಮೊದಲಾದ ಭಕ್ತಮಂಡಳಿಗೆ ಜಗದಾಚಾರ್ಯರು ಆಯುರಾರೋಗ್ಯ, ಭಾಗ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ.

ಜಿ. ಸಿ. ಶಂಕರಪ್ಪ.

ಹುಬ್ಬಳ್ಳಿ.

ಈ ವೈಶಾಖ ಶುದ್ಧ ೫ ಸೋಮವಾರ ಈ ಶುಭದಿವಸ ಈ ಪಟ್ಟಣದಲ್ಲಿರುವ ಹನ್ನೆರಡುಮಠದಲ್ಲಿ ಶ್ರೀ ಜಗದಾಚಾರ್ಯರ ಜಯಂತಿಯ ಮಹೋತ್ಸವವು ಗುರುಪೀಠಾಭಿಮಾನಿಗಳಾದ ಪ್ರಮುಖರಾದ ಭಕ್ತಮಂಡಲಿಯವರಿಂದ ಅತ್ಯಂತ ಮನೋಹರವಾಗಿ ನೆರವೇರಿಸಲ್ಪಟ್ಟಿತು. ಮಧ್ಯಾಹ್ನ 12 ಘಂಟೆಗೆ ರಂಭ ಸ್ತಂಭಕಲಶ ತೋರಣಗಳಿಂದಲಂಕೃತವಾದ ದಿವ್ಯಮಂಟಪದಲ್ಲಿ ಮೂರ್ತಗೊಳಿಸಿದ ಶ್ರೀ ದಾರುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಯು ವೇದೋಕ್ತವಾಗಿ ಮಾಡಲ್ಪಟ್ಟಿತು. ಸಾಯಂಕಾಲ 6 ಘಂಟೆಗೆ ಸದರಿ ಮಠದ ಚಲಪಟ್ಟಾಧ್ಯಕ್ಷ ಸ್ವಾಮಿಗಳವರ ಸನ್ನಿಧಿಯಲ್ಲಿ ಸಭೆಯು ಪ್ರಾರಂಭವಾಯಿತು. ದಾವಣಗೆರೆ ಜಂಗಮಮಠದ ವೇ|| ಶಾಂತವೀರಾರ್ಯರು ಪ್ರಾತಃಸ್ಮರಣೀಯರಾದ ಶ್ರೀ ದಾರುಕಾಚಾರ್ಯರು ಮಾಡಿದ ಅಮಾನುಷಲೀಲಾಮಯಚರಿತ್ರವನ್ನು ಬಹು ವಿಶದವಾಗಿ ಬೋಧಿಸಿದರು. ಮತಸ್ಥಾಪಕರಾದ ಶ್ರೀ ಜಗದಾಚಾರ್ಯರ ಮಹತ್ವಾತಿಶಯವನ್ನು ಸಕಲ ವೀರಶೈವರು ಕೇಳಿ ಗುರುಭಕ್ತಿಪರವಶರಾಗಿ ಕಲಿಯುಗ ತಮಗಾದ ಆನಂದವನ್ನು ಚಪ್ಪಾಳೆಯಿಂದ ಸೂಚಿಸುತ್ತಿದ್ದರು. ಧನ್ಯ ! ಧನ್ಯ !! ಗುರುಭಕ್ತರೇ ಧನ್ಯರಲ್ಲಿ ನೀವೇ ಧನ್ಯತಮರು !!!

ಬಳಿಕ ವೇ|| ವಿರೂಪಾಕ್ಷಯ್ಯನವರು ನಂದೀಕೇಶ್ವರಮಠ ಇವರು ಜಗದಾಚಾರ್ಯರ ಮಹತ್ವಾತಿಶಯವನ್ನು ಜನರಿಗೆ ತಿಳುಹಿಸಿದರು. ಆಮೇಲೆ ಪೂಜ್ಯರಾದ ಅಧ್ಯಕ್ಷಮಹಾಸ್ವಾಮಿಗಳವರು ಶ್ರೀ ದಾರುಕಾಚಾರ್ಯರ ಪವಿತ್ರಚರಿತ್ರವನ್ನು ಸುಗಮವಾಗಿ ಬೋಧಿಸಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆಯ ದಿನ ಸಾಯಂಕಾಲ 7 ಘಂಟೆಗೆ ಸದರಿ ಮಠದಲ್ಲಿ ಕರ್ನಾಟಕ ಕವಿಚಂದ್ರ ಪಂಡಿತ ನಲವಡಿಶ್ರೀಕಂಠಶಾಸ್ತ್ರಿಗಳವರ ಕೀರ್ತನವು ಆಗುವದೆಂದು ಊರಲ್ಲಿ ಡಂಗುರಮೂಲಕವಾಗಿ ಪ್ರಸಿದ್ಧಪಡಿಸಲಾಗಿ ಆ ದಿನದ ಕೀರ್ತನವನ್ನು ಕೇಳುವದಕ್ಕಾಗಿ ಬಹುಜನರು ಸಮ್ಮಿಳಿತರಾದರು. ಶಾಸ್ತ್ರಿಗಳವರು ಶ್ರೀ ಜಗದ್ಗುರು ದಾರುಕರ ಅದ್ಭುತಲೀಲೆಗಳನ್ನು ಹೇಳಿ ಸರ್ವರನ್ನು ಸಂತೋಷಪಡಿಸಿದರು. ಈ ಗುರುಸಾರ್ವಭೌಮರ ಅತ್ಯದ್ಭುತಲೀಲೆಗಳನ್ನು ಕೇಳಿದವರೆಲ್ಲರೂ ಶ್ರೀ ಗುರುವಿನ ದಿವ್ಯಚರಿತ್ರ ಶ್ರವಣದಿಂದ ಮೈಮರೆದವರಾಗಿ ಕೀರ್ತನಮಧ್ಯಮಧ್ಯದಲ್ಲಿ “ ಶ್ರೀ ಜಗದ್ಗುರು ದಾರುಕಾಚಾರ್ಯ, ಹರಹರಮಹಾದೇವ ” ಎಂದು ಉದ್ಘೋಷಿಸುತ್ತಿದ್ದರು. ಹೀಗೆ ಆಚಾರ್ಯರ ಮಂಗಲಧ್ವಾನದೊಡನೆ ಕೀರ್ತನವು ಸಮಾಪ್ತವಾಯಿತು. ಮತಸ್ಥಾಪಕರ ಜಯಂತ್ಯುತ್ಸವಗಳನ್ನು ನಿರತಿಶಯ ಭಕ್ತಿಯಿಂದ ನೆರವೇರಿಸುವದು ವೀರಶೈವರ ಪವಿತ್ರ ಕರ್ತವ್ಯವಾಗಿದ್ದು ವಿವೇಕವಿಲ್ಲದೆ ಧರ್ಮಲಂಪಟರಾದ ಕೆಲವರು ಇಂತಹ ಸುಪ್ರಸಂಗವನ್ನು ಕಳೆದುಕೊಂಡದ್ದಲ್ಲದೆ ಜಗದಾಚಾರ್ಯರ ವಿಷಯದಲ್ಲಿ ತಿರಸ್ಕಾರಭಾವವನ್ನು ವ್ಯಕ್ತಪಡಿಸುವರಂತೆ! ಇವರಲ್ಲವೇ ನರಕಕ್ರಿಮಿಗಳು ? ಈ ಕ್ರಿಮಿಗಳಿಗೆ ಜಗನ್ನಿಯಾಮಕನು ಸದ್ಬುದ್ಧಿಯನ್ನುಂಟುಮಾಡಲೆಂದು ಕೋರುವ.

C. V. Janjigatti
Hiremath, Hubli.

ಗದಗ.

ಗದಗ ಶಹರದ ಅರಳಿ ಬಜಾರದಲ್ಲಿ ಈ ಮೊದಲು ಸ್ಥಾಪಿತವಾದ “ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಸೇವಾಸಂಘ ಮತ್ತೂ ವಾಚನಾಲಯ ” ದ ಭವ್ಯಮಂಟಪದಲ್ಲಿ ತಾ|| 11-5-29 ಶನಿವಾರ ದಿವಸ ಶ್ರೀಮದೇಕೋರಾಮಾರಾಧ್ಯರ ಭಾವಪಟವನ್ನು ಶೃಂಗರಿಸಿದ ಸಿಂಹಪೀಠದಲ್ಲಿಟ್ಟು ಪುಷ್ಪಮಾಲೆಗಳಿಂದಲಂಕರಿಸಿ ಷೋಡಶೋಪಚಾರಗಳಿಂದ ಪೂಜಿಸುವದರಲ್ಲಿ ಬಂದಿತು. ಸಾಯಂಕಾಲ 6 ಘಂಟೆಗೆ ಪುರಪ್ರಮುಖರೂ ಮುನಸಿಪಲ್ ಕೌನ್ಸಿಲರೇ ಮೊದಲಾದ ಸಭ್ಯಗೃಹಸ್ಥರ ಸಮುದಾಯವು ಕೂಡಿತು. ವೇ|| ಶಿರೋಳ ಬೃಹನ್ಮಠದ ಪಂಚಾಕ್ಷರಶಾಸ್ತ್ರಿಗಳವರ ಸೂಚನೆಯ ಪ್ರಕಾರ ವೇ|| ಪಂಡಿತ ವ್ಯಾಕರಣತೀರ್ಥ ನಾಗಭೂಷಣಶಾಸ್ತ್ರಿಗಳವರು ಶ್ರೀಮದೇಕೋರಾಮಾರಾಧ್ಯರ ಚರಿತ್ರರೂಪವಾದ ಕೀರ್ತನವನ್ನು ಪ್ರಾರಂಭಿಸಿದರು. ಅದರಲ್ಲಿ ಪಾಂಡವರು ಕುಟುಂಬಯುಕ್ತರಾಗಿ ಹಿಮಾಚಲಕ್ಕೆ ಪ್ರಯಾಣಬೆಳಿಸಿ ಮಧ್ಯಮಾರ್ಗದಲ್ಲಿ ಶೀತಾಧಿಕ್ಯದಿಂದ ಅನೇಕ ಕಷ್ಟಗಳನ್ನನುಭವಿಸುತ್ತ ನಕುಲ ಸಹದೇವ ಅರ್ಜುನ ದ್ರೌಪದಿ ಕುಂತೀದೇವಿ ಮುಂತಾದವರು ಮರಣಹೊಂದಲಾಗಿ ಧರ್ಮರಾಜ ಮತ್ತು ಭೀಮಸೇನ ಇವರಿಬ್ಬರೇ ಮುಂದಕ್ಕೆ ಪ್ರಯಾಸದಿಂದ ಹೋಗಲು ಭೀಮನೂ ಕೂಡ ಹವೆಯು ಮಾನಸದೆ ಮೃತಿಹೊಂದಲು ಅಜಾತಶತ್ರುವಾದ ಧರ್ಮರಾಜನು ತಮ್ಮನ ಶವವನ್ನು ವ್ಯಾಮೋಹದಿಂದ ಹೊತ್ತುಕೊಂಡು ಕೈಲಾಸನಾಥನನ್ನು ಕಾಣುವ ಲವಲವಿಕೆಯಿಂದ ಹೋಗುತ್ತಿರುವಾಗ, ಇವನ ವೃಥಾಸಾಹಸವನ್ನು ದೂರಮಾಡುವ ಕುರಿತು ಭಗವತ್ಪಾದರು ಬೇರೆ ವಿಧದಿಂದ ದರ್ಶನಕೊಟ್ಟು ಶಾಸ್ತ್ರೀಯ ವಿಷಯಗಳಿಂದ ಅವನ ಭ್ರಾಂತಿಯನ್ನು ದೂರಮಾಡಿದ ವಿಷಯವನ್ನೂ, ಹಾಗೂ ಬಾಣಾಸುರನ ಮಗಳಾದ ಉಷಾದೇವಿಯು ಜಗದ್ಗುರುಗಳ ದರ್ಶನೋತ್ಕಂಠಿತಳಾಗಿ ಬಂದು ಅಲ್ಲಿ ತನ್ನ ನಾಮವು ಲಕಿಂದ್ರಾಕೇವಿರಲೆಂದು ಮಹಾಭಕ್ತಿಯಿಂದ ತನ್ನ ಹೆಸರಿನ ಮಠವನ್ನು ಕಟ್ಟಿಸಿ ಅದಕ್ಕೆ ಕೆಲವು ಉಂಬಳಿ ಗ್ರಾಮಗಳನ್ನು ಕೊಟ್ಟ ಇತಿಹಾಸವನ್ನೂ, ಆ ಮಠದಲ್ಲಿ ಅನೇಕ ಶಿಲಾಶಾಸನಗಳಿರುವ ಸಂಗತಿಯನ್ನೂ ಆ ಮಠಕ್ಕೆ ಈಗ ಊಖೀಮಠವೆಂದು ಜಗತ್ಪ್ರಸಿದ್ಧವಿರುವದನ್ನೂ ಬಹು ಸರಸಾಗಿ ವರ್ಣಿಸಿ ಹೇಳುವಾಗ ಗುರುಭಕ್ತರ ಹೃದಯದಲ್ಲಿ ಆನಂದರೂಪ ಭಕ್ತಿಯು ಸಸಂಸಿ ನೇತ್ರಗಳ ದ್ವಾರಾ ಆನಂದಾಶ್ರುಗಳು ಹೊರಚಲ್ಲಿದವೆಂದು ಸಾರಿ ಸಾರಿ ಹೇಳಬಹುದು. ಮಹಿಮರ ಲೀಲಾವಿನೋದಗಳು ಕೇಳುವವರ ಚಿತ್ತಾಕರ್ಷಣಗಳಾಗಿ ಮಧ್ಯಮಧ್ಯದಲ್ಲಿ “ ಶ್ರೀಮತ್‌ಪಂಚಾಚಾರ್ಯಮಹಾರಾಜಕೀ ಜೈ ” ಎಂಬ ಆನಂದಘೋಷವು ತಡೆಯಿಲ್ಲದೆ ಹೊರಸೂಸುತ್ತಿತ್ತು. 10½ ಘಂಟೆಗೆ ಕೀರ್ತನವು ಮುಗಿಯಲು ಸರ್ವರೂ ಭಜನಾಪುರಸ್ಸರವಾಗಿ ಜಯಜಯಕಾರ ಮಾಡುತ್ತ ತಮ್ಮ ಸ್ಥಳಗಳಿಗೆ ತೆರಳಿದರು. ತಾ|| 12-5-29 ರವಿವಾರ ವೇ|| ಹಿಡಿಕಿ ಮಠದ ಚನ್ನವೀರಾರ್ಯರ ಅಧ್ಯಕ್ಷತೆಯಲ್ಲಿ ಸಂಜೆಯ 7ಘಂಟೆಗೆ ಪುನಃ ಸಭೆಯು ಕೂಡಿತು. ಡಾ|| ಚಂದ್ರಶೇಖರಸ್ವಾಮಿ ಇಳಕಲ್ಲ ಇವರು ತಮ್ಮ ರಸಾಳವಾಣಿಯಿಂದ ಸರ್ವಸರ್ವಜನಸಮ್ಮತವಾಗುವಂತೆ ಅನೇಕ ದೃಷ್ಟಾಂತಗಳನ್ನು ಕೊಟ್ಟು ನಮ್ಮ ಮತಸ್ಥಾಪನಾಚಾರ್ಯರಾದ ಪಂಚಾಚಾರ್ಯರ ಜಯಂತಿಗಳನ್ನು ಅವಶ್ಯವಾಗಿ ನೆರವೇರಿಸಬೇಕೆಂತಲೂ ಇವೇ ನಮ್ಮ ಧರ್ಮದ ಮುಖ್ಯ ಹಬ್ಬಗಳೆಂತಲೂ ವಿವರವಾಗಿ ಬೋಧಿಸಿದರು. ಅಲ್ಲಿಗೆ ರಾತ್ರಿ 9½ ಘಂಟೆಯಾದ್ದರಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ತಾ|| 13-5-29 ಸೋಮವಾರ ಶ್ರೀಮದ್ದಾರುಕಾಚಾರ್ಯರ ಜಯಂತಿಯು ವಿಶೇಷ ವೈಭವದಿಂದ ನೆರವೇರಿತು. ಸಾಯಂಕಾಲ 6½ ಘಂಟೆಗೆ ಪುನಃ ಸಭೆಯು ಕೂಡಿತು. ಮ|| ರಾ|| ಮುರಿಗಪ್ಪನವರು ಹಂಚಿನಾಳ ಕಮೀಶನ್ ಏಜಂಟ ಮತ್ತು ಮರ್ಚಂಟ್ ಗದಗ ಇವರು ಈ ದಿನದ ಸಭೆಗೆ ಸದಾಚಾರಪರರೂ ಸುಪ್ರತಿಷ್ಠಿತರಾದ ವೇ|| ಅರಳೆಲೆ ಮಠದ ಸಿದ್ಧಲಿಂಗಾರ್ಯರು ಅಧ್ಯಕ್ಷರಾಗಬೇಕೆಂಬ ಸೂಚನೆಯನ್ನು ತಂದರು. ಅದಕ್ಕೆ ಸರ್ವರ ಅನುಮೋದನವಿರುತ್ತದೆಂದು ಶಿ|| ಪುರದಯ್ಯನವರು ಹಿರೇಮಠ ಮುಳಗುಂದ ಇವರು ಒಪ್ಪಿಗೆಯನ್ನು ಕೊಟ್ಟದ್ದರಿಂದ ಸದರಿಯವರು ಸಮಯೋಚಿತ ಭಾಷಣವನ್ನು ಮಾಡಿ ಸರ್ವರ ಕರತಾಡನಧ್ವನಿಯ ಜಯಜಯಕಾರದಲ್ಲಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಅನಂತರ ಶಿರೋಳ ಬೃಹನ್ಮಠಾಧ್ಯಕ್ಷರಾದ ವೇ|| ಪಂಚಾಕ್ಷರಶಾಸ್ತ್ರಿಗಳವರು “ ಶಾಂತಿ ” ಎಂಬ ವಿಷಯದಲ್ಲಿ ಅನೇಕರು ವರ್ತಿಸಬೇಕಾದ ಮಾರ್ಗವನ್ನು ಸುಲಭವಾದ ಉದಾಹರಣೆಗಳಿಂದ ಲೌಕಿಕ ಮತ್ತು ಪಾರಮಾರ್ಥಿಕ ವಿಷಯಕ್ಕೆ ಸರಿಯಾಗಿ ಹೊಂದಿಸಿ ಹೇಳಿದ್ದಲ್ಲದೆ ನಮ್ಮ ಮತಸ್ಥಾಪನಾಚಾರ್ಯರು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದಿರುವದನ್ನೂ, ಅನೇಕ ಋಷಿಪುಂಗವರಿಗೂ ದೇವದಾನವರಿಗೂ ಬ್ರಹ್ಮೋಪದೇಶಮಾಡಿರುವದನ್ನೂ ಸಮಂಜಸವಾಗಿ ಹೇಳಿ ಇಂಥ ಮತಸ್ಥಾಪನಾಚಾರ್ಯರ ಜಯಂತಿಗಳೇ ಶುದ್ಧ ಸಾಂಪ್ರದಾಯದ ವೀರಶೈವರ ಮುಖ್ಯ ಹಬ್ಬಗಳೆಂಬುದನ್ನೂ, ಇವುಗಳನ್ನು ತಪ್ಪದೆ ಆಚರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಮುಕ್ತಿಭಾಗಿಗಳಾಗಬೇಕೆಂಬುದನ್ನೂ ವಿವರಿಸಿ ಹೇಳಿದರು. ಬಳಿಕ ವೇ|| ವ್ಯಾಕರಣತೀರ್ಥ ನಾಗಭೂಷಣಶಾಸ್ತ್ರಿಗಳವರು “ ದಾರುಕವಿಜಯ ” ವೆಂಬ ಕೀರ್ತನವನ್ನು ಪ್ರಾರಂಭಿಸಿದರು. ಈ ಮಹಿಮಾಶಾಲಿಗಳು ಮಾಡಿದ ಅನಂತಲೀಲೆಗಳನ್ನು ವಿಸ್ತಾರವಾಗಿ ಹೇಳುವವರಿದ್ದರು. ಅಲ್ಲಿಗೆ ರಾತ್ರಿ 10½ ಘಂಟೆ ಸಮಯವಾದ ಪ್ರಯುಕ್ತ ಸಭೆಯವರ ಸೂಚನೆಯಂತೆ ಸಂಕ್ಷಿಪ್ತವಾಗಿ ಮುಗಿಸಿದರು. ಅಧ್ಯಕ್ಷರು ಸಮಾರೋಪಣ ಭಾಷಣಮಾಡಲು ಸರ್ವರೂ ಪುನಃ ದಾರುಕಾಚಾರ್ಯರ ಭಜನೆ ಸ್ತೋತ್ರ ಮಂಗಳಾರತಿಗಳನ್ನು ಮಾಡಿ “ ಶ್ರೀಮತ್‌ಪಂಚಾಚಾರ್ಯಮಹಾರಾಜಕೀ ಜೈ ” “ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾರಾಜಕೀ ಜೈ ” ಎಂಬ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ನಿರರ್ಥಕವಾದ ಆಡಂಬರದಿಂದಲೂ ಖರ್ಚಿನಿಂದಲೂ ಮಾಡುವ ಜಯಂತಿಗಳು ಸದ್ಯಃ ಪರಿಸ್ಥಿತಿಗೆ ಅನುರೂಪವಾದದ್ದಲ್ಲೆಂದು ಭಾವಿಸಿ ನಮ್ಮ ಪ್ರಿಯಬಂಧುಗಳು ವೈದಿಕಪದ್ಧತಿಗನುಸರಿಸಿ ಈ ವರ್ಷದಲ್ಲಿ ಆಚಾರ್ಯದ್ವಯರ ಜಯಂತಿಗಳನ್ನು ನೆರವೇರಿಸಿದಂತೆ ಸರ್ವ ನಮ್ಮ ಬಂಧುಗಳು ಆಚರಿಸಬೇಕೆಂಬ ಸದ್ಬುದ್ಧಿಯನ್ನು ಶ್ರೀ ಜಗದಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸುವದಲ್ಲದೆ ನಮ್ಮ ಈ ಜಯಂತಿಗಳ ಮೂಲಕ ಸಮಾಜೋದ್ಧಾರವನ್ನು ಮಾಡಿಕೊಳ್ಳುವ ಸುಸಂಧಿಯನ್ನು ಒದಗಿಸಿಕೊಟ್ಟ ವಿಭೂತಿಗೂ ಮತ್ತು ನಮ್ಮ ಬ್ರಿಟಿಷ್ ಸಾರ್ವಭೌಮರಿಗೂ ನಿರಂತರ ಸಕಲಸಂಪತ್‌ಸಮೃದ್ಧಿಯನ್ನೂ ಆಯುರಾರೋಗ್ಯವನ್ನೂ ದಯಪಾಲಿಸಲೆಂದು ಗುರುಪುಂಗವರನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುವ.

ಗುರುಕಿಂಕರ.

ಬಳಗಾನೂರು.

ಶ್ರೀ ಕೇದಾರ ಜಗದ್ಗುರು ಮಹಾಸ್ವಾಮಿಗಳವರ ಸಕೀಟು ರಾಯಚೂರು ಜಿಲ್ಲಾ ಮಾಸ್ಕಿತಾಲೂಕು ಕವಿತಾಳ ಗ್ರಾಮದಿಂದ ತಾ|| ೨೭-೪-೨೯ ಕ್ಕೆ ರಾಯಚೂರು ಜಿಲ್ಲಾ ಸಿಂಧನೂರು ತಾಲೂಕು ಬಳಗಾನೂರಿಗೆ ದಯಮಾಡಿಸಲು ಪದ್ಧತಿಪ್ರಕಾರ ಗ್ರಾಮದ ಭಕ್ತಮಾಹೇಶ್ವರ ಮುಂತಾದ ಸಮಸ್ತ ದೈವದವರು ಸಂಭ್ರಮದೊಡನೆ ಇದಿರ್ಗೊಂಡು ಮಹೋತ್ಸವಪೂರ್ವಕ ಗ್ರಾಮಪ್ರವೇಶ ಮಾಡಿಸಿದರು. ಪ್ರತಿನಿತ್ಯದಲ್ಲಿ ವೇ|| ಪಂಡಿತ ಅಮರನಾಥಶಾಸ್ತ್ರಿಗಳವರಿಂದ ಪುರಾಣಶ್ರವಣವು ನಡೆಯುತ್ತಿರುವುದು. ಗ್ರಾಮಾನುಗ್ರಾಮಗಳ ಭಕ್ತಮಾಹೇಶ್ವರರು ತಂಡೋಪತಂಡವಾಗಿ ಆಗಮಿಸಿ ಸನ್ನಿಧಿಯ ದರ್ಶನದಿಂದಲೂ ಧಾರ್ಮಿಕ ಸದ್ಬೋಧೆಯಿಂದಲೂ ಧನ್ಯಾತ್ಮರಾಗಿ ತಮ್ಮ ತಮ್ಮ ಯೋಗ್ಯತಾನುಸಾರ ಕಾಣಿಕೆಯನ್ನು ಸಲ್ಲಿಸುತ್ತಿರುವರು. ಇದಲ್ಲವೇ ಇವರ ಗುರುಭಕ್ತಿ ಧುರೀಣತೆಯು ? ಈ ಉಕಸ್ಸುಹೆಯಮೇರೆಗೆ ಇದೇ ವೈಶಾಖ ಶು|| ೩ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯೂ ಮತ್ತು ವೈಶಾಖ ಶು|| ೫ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯೂ ಬಹು ವೈಭವದಿಂದ ನೆರವೇರಿದವು. ಈ ಪುಣ್ಯತಿಥಿಗಳಲ್ಲಿ ಉಭಯ ಮೂಲಾಚಾರ್ಯರ ಭಾವಪಟಗಳನ್ನು ಭವ್ಯಸಿಂಹಾಸನಗಳಲ್ಲಿ ಸ್ಥಾಪಿಸಿ ವಿಧ್ಯುಕ್ತವಾಗಿ ಷೋಡಶೋಪಚಾರಗಳಿಂದ ಮಹಾಪೂಜೆಯನ್ನೂ ಮಹಾಗಣಾರಾಧನೆಯನ್ನೂ ನೆರವೇರಿಸುವದರಲ್ಲಿ ಬಂದಿತು. ಅನಂತರ ಪುಷ್ಪಮಾಲಾದಿಗಳಿಂದ ಶೃಂಗರಿಸಲ್ಪಟ್ಟ ಸುಂದರವಾದ ಅಂದೋಲಿಕೆಯಲ್ಲಿ ಉಭಯ ಮೂಲಾಚಾರ್ಯರ ಭಾವಪಟಗಳು ಪಂಚಾಚಾರ್ಯರ ಜಯಘೋಷದೊಡನೆ ಮೂರ್ತಗೊಳಿಸಲ್ಪಟ್ಟವು. ಆ ದಿನದಲ್ಲಿ ಬಿಡದಿಯು ಗಟ್ಟಿ

ಸಮಠವೂ ಪುರವೀಧಿಯೂ ರಂಭಾಸ್ತಂಭಗಳಿಂದಲೂ ವಿಚಿತ್ರತರ ಜಯಪತಾಕೆಗಳಿಂದಲೂ ನಾನಾವಿಧತಳಿರುತೋರಣಗಳಿಂದಲೂ ಸುಗಂಧಮಯಸ್ವಾದಪೇತಾರಣಗಳಿಂದಲೂ ಶೃಂಗರಿಸಲ್ಪಟ್ಟಿದ್ದಿತು. ಈ ಅಪೂರ್ವವಾದ ಉತ್ಸವವನ್ನು ನೋಡಲಿಕ್ಕಾಗಮಿಸಿದ ಮಸ್ಕಿ ಮೇದಿಕಿನಾಳ ಮುಂತಾದ ಗ್ರಾಮಾನುಗ್ರಾಮಗಳ ಭಕ್ತವೃಂದವು ಎಲ್ಲೆಲ್ಲಿಯೂ ನಿಬಿಡೀಕೃತವಾಗಿತ್ತು. ಅನಂತರ ವಗ್ಗೆಶಾಂದೋಲನ ಮಹೋತ್ಸವವು ಸಾಯಂಕಾಲ ೬ ಘಂಟೆಗೆ ಹೊರಟಿತು. ಮುಂಭಾಗದಲ್ಲಿ ಪಂಡಿತರ ವೇದಘೋಷ ಮತ್ತು ಪರಾಕುಗಳೂ ಭಜನಾಸಂಘದವರ ಭಜನೆಗಳೂ ಮಂಜುಲವಾಗಿದ್ದವು. ನಾನಾವಿಧ ಸುನಾದವಾದ್ಯ ಮತ್ತು ಹಾಲುಮತದವರ ಡೋಲುಗಳೆಂಬ ವೀರನಾದ್ಯಧ್ವನಿಗಳು ಆಕಾಶದಲ್ಲಿ ಪ್ರತಿಧ್ವನಿಯನ್ನುಂಟುಮಾಡುತ್ತಿದ್ದವು. ಉತ್ಸವವು ಸಮಸ್ತ ರಾಜಬೀದಿಗಳ ಸಮೇತವಾಗಿ ಪ್ರಜ್ವಲಿಸುವ ದೀವಟಿಗೆಭಾವುಂಜದೊಡನೆ ಗ್ರಾಮದ ಕಡೆಯ ಬಜಾರದ ನಾಗನಾಥೇಶನ ದೇವಾಲಯದವರೆಗೂ ಅತಿ ವಿಜೃಂಭಣೆಯಿಂದ ಹೋಗುತ್ತಿರಲು ಶ್ರೀ ಷ|| ಬ್ರಹ್ಮಿಗಳಾದ ಸ್ಥಲಪರಸ್ಥಲದ ಚರಪಟ್ಟಾಧಿಕಾರಿಗಳ ಪಂಚಾಚಾರ್ಯಪರವಾದ ವೈದಿಕ ಜಯಘೋಷವು ಉತ್ಸವಕ್ಕೆ ವಿಶೇಷ ಶೋಭೆಯನ್ನುಂಟುಮಾಡಿದ್ದಿತು. ಮಾರ್ಗಮಧ್ಯದಲ್ಲಿ ಸ್ವಮತ ಪರಮತೀಯರ ಪ್ರತಿಗೃಹದ್ವಾರಗಳಲ್ಲಿ ಸೀಮಂತಿನಿಯರು ಬೆಳಗುವ ಮಂಗಳಾರತಿಗಳು ಅಸಾಧಾರಣವಾದ ಆಚಾರ್ಯಭಕ್ತಿಯನ್ನು ವ್ಯಕ್ತಗೊಳಿಸುತ್ತಿದ್ದುವು. ಉತ್ಸವವು ಗ್ರಾಮದ ಪೋಲೀಸರಿಂದ ಸಮಾಧಾನಕರವಾಗಿಯೂ ಶ್ರೀ ಷ|| ಬ್ರಹ್ಮಿಗಳಾದ ಕುಡತಿನಿ ಪಟ್ಟಾಧ್ಯಕ್ಷನಯನಸ್ವಾಮಿಗಳ ಮತ್ತು ಸಂಸ್ಥಾನದ ಮುಸಿಪಿ ವೀರಾನಂದತರ್ವ ಕುರುಡಿಗಿ ಮಳೆಮಠ ಇವರ ಸುವ್ಯವಸ್ಥೆಯಿಂದಲೂ ಮಹಾಸಂಭ್ರಮದೊಡನೆ ನಡೆದು ಪುನಃ ರಾತ್ರಿ ೯ ಘಂಟೆಗೆ ಬಿಡದಿಯನ್ನು ಸೇರಿತು. ಬಿಡದಿಯು ಗಟ್ಟಿಸಮಠದ ವಿಶಾಲವಾದ ಮೈದಾನದಲ್ಲಿ ಕಿಕ್ಕಿರಿದು ಕುಳಿತಿದ್ದ ಸ್ಥಲ ಪರಸ್ಥಲದ ಸ್ವಮತ ಪರಮತೀಯರಾದ ಸಭಿಕರಿಗೆ ಆಸ್ಥಾನಪಂಡಿತ ವೇ|| ಅಮರನಾಥಶಾಸ್ತ್ರಿಗಳು ಹಿರೇಮಠ ಬನ್ನಿಗೋಳ ಇವರು ಆಚಾರ್ಯರ ಜಯಂತಿಯ ಆವಶ್ಯಕತೆಯನ್ನೂ ಪಂಚಾಚಾರ್ಯರ ಲಿಂಗೋದ್ಭವಾದಿ ದಿವ್ಯಮಹಿಮೆಗಳನ್ನೂ ೧ ಘಂಟೆಯವರೆಗೆ ತಮ್ಮ ಅಸ್ಖಲಿತವಾಣಿಯಿಂದ ಪಂಡಿತಪಾಮರರು ಒಪ್ಪುವಂತೆ ಹೇಳಿದರು. ಅನಂತರ ಜಗದಾಚಾರ್ಯರಿಗೆ ಮಂಗಲವಂ ಮಾಡಲು ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಉತ್ಸವಭಾಗಿಗಳು :—ವೇ|| ಪಂಪಯ್ಯನವರು, ನಡವಲಮಠ ಮಾ|| ಪಾ|| ಸಿದ್ಧಲಿಂಗಪ್ಪಗೌಡರು ಬಳಗಾನೂರು.

ಜಾಲವಾಡಿಗಿ.

ಇಲ್ಲಿಯ ಭಕ್ತಮಾಹೇಶ್ವರರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತ್ಯುತ್ಸವವನ್ನೂ, ಫಾಲ್ಗುಣಶುದ್ಧ ೧೩ ದಿವಸ ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನೂ ಶುಕ್ಲನಾಮ ಸಂವತ್ಸರದ ವೈಶಾಖ ಶುದ್ಧ ೩ ದಿವಸ ಏಕೋರಾಮಾರಾಧ್ಯರ ಜಯಂತಿಯನ್ನೂ ಹಾಗೂ ವೈಶಾಖ ಶುದ್ಧ ೫ ದಿವಸ ದಾರುಕಾಚಾರ್ಯರ ಜಯಂತಿಯನ್ನೂ ಬಹು ವೈಭವದೊಡನೆ ನೆರವೇರಿಸಿದರು. ಜಗದಾಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿದೊಡನೆ ಉತ್ಸವವು ಪಂಚಾಚಾರ್ಯಭಜನಾಸಂಘದವರ ಮಂಗಲಸ್ತೋತ್ರಗಳೊಡನೆಯೂ ಜಯಘೋಷದೊಡನೆಯೂ ವೈಭವದಿಂದ ಹೊರಟಿತು. ಪಲ್ಲಕ್ಕಿಯ ಸುತ್ತುಮುತ್ತ ಸುಮಂಗಲೆಯರು ಪಂಚಕಲಶಗಳಿಂದ ಯುಕ್ತವಾದ ಆರತಿಗಳನ್ನು ಹಿಡಿದು ಹಾಡುಗಳನ್ನು ಹಾಡುತ್ತಿದ್ದರು. ಸೆಕ್ರೆಟರಿಗಳಾದ ಕೊಟ್ರಗೌಡರು ಭಜನಾಸಂಘದಲ್ಲಿ ಮುಂದಾಳುಗಳಾಗಿದ್ದರು. ಬಸವನಗೌಡರು ಸರ್ವರಿಂದಲೂ “ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾರಾಜಕಿ ಜೈ ” ವೀರಶೈವಮತೋದ್ಧಾರಕ ಪಂಡಿತ ಶ್ರೀ ಕಾಶೀನಾಥ ಮಹಾರಾಜಕೀ ಜೈ ” ಎಂದು ಅಲ್ಲಲ್ಲಿಗೆ ಜಯಘೋಷವನ್ನು ಮಾಡಿಸುತ್ತಿದ್ದರು. ಭಗವತ್ಪಾದರು ಅಲ್ಲಲ್ಲಿಯೇ ಭಕ್ತಾದಿಗಳಿಂದ ಪೂಜೆಗೊಳ್ಳುತ್ತಿದ್ದರು. ಮೇಘರಾಜನು ಭಗವತ್ಪಾದರ ಆಗಮನವನ್ನು ಕಂಡು ತುಷಾರವೃಷ್ಟಿಯಿಂದ ಸೇಚನರೂಪವಾದ ತನ್ನ ಸೇವೆಯನ್ನು ಸಮರ್ಪಿಸಿದನು. ಈ ಪ್ರಕಾರವಾಗಿ ಉತ್ಸವವು ವೈಭವದಿಂದ ನೆರವೇರಿ ಸ್ವಸ್ಥಾನಕ್ಕೆ ಬಂದು ತಲ್ಪಿತು. ಆಮೇಲೆ ಸರ್ವರೂ ಫಲಾಶೀರ್ವಾದಗಳನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಭರತಖಂಡದಲ್ಲಿರುವ ಸಕಲ ವೀರಶೈವರು ಜಗದಾಚಾರ್ಯರ ಜಯಂತಿಗಳನ್ನು ನೆರವೇರಿಸಿ ಧನ್ಯರಾಗಬೇಕೆಂದು ಕೋರುವ

ಬಸವನಗೌಡ ಪಾಟೀಲ, ಜಾಲವಾಡಿಗಿ.

ಮೆಣಸಿಗಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳನ್ನು ಮಾಡುವುದು ಸರ್ವ ವೀರಶೈವರ ಆದ್ಯಕರ್ತವ್ಯವಾಗಿರುವದೆಂದೇ ತಿಳಿದು ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮೆಣಸಿಗಿ ಗ್ರಾಮದ ಸಕಲ ವೀರಶೈವರು ಬೃಹನ್ಮಠದಲ್ಲಿ ಇದೇ ವೈಶಾಖ ಶುದ್ಧ ೫ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವನ್ನು ಅತಿ ವಿಜೃಂಭಣೆಯಿಂದ ಭಕ್ತಿಪೂರ್ವಕವಾಗಿ ನೆರವೇರಿಸಿದರೆಂದು ತಿಳುಹಿಸಲು ಪರಮಾನಂದವಾಗುತ್ತದೆ. ಈ ದಿವಸ ಊರೊಳಗಿನ ಜನರೆಲ್ಲರು ರಾಜಬೀದಿಗಳನ್ನು ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಮನೋಹರವಾಗಿ ಶೃಂಗರಿಸಿದ್ದರು. ಉತ್ಸವವು ಬ್ಯಾಂಡ್ ಮೊದಲಾದ ವಾದ್ಯವಿಶೇಷದಿಂದಲೂ, ಭಜನಾಸಂಘದವರ ಮಂಜುಳವಾದ ಸ್ತೋತ್ರಗಳಿಂದಲೂ ಜಗದಾಚಾರ್ಯರ ಘೋಷದಿಂದಲೂ ಪುರವೀಧಿಗಳಲ್ಲಿ ಅತ್ಯಂತ ವೈಭವದಿಂದ ಹೊರಟು ಪುನಃ ಬೃಹನ್ಮಠಕ್ಕೆ ಬಂದು ತಲುಪಿತು. ಅನಂತರ ಓರ್ವ ವೀರಶೈವ ವಿದ್ಯಾರ್ಥಿಯಾದ ಅಮೃತಪ್ಪ ಗೂಳಪ್ಪ ಅಣ್ಣಿಗೇರಿ ಈತನು ಪಂಚಾಚಾರ್ಯರ ವಿಷಯವಾಗಿ ಭಾಷಣಮಾಡಿದನು. ವೇ|| ಸೂರಕೋಡದ ಬಸಯ್ಯಶಾಸ್ತ್ರಿಗಳು ಮತ್ತು ಮ|| ರಾ|| ಕೆ. ಬಿ. ಅಂಗಡಿಮಾಸ್ತರ ಇವರು ಪಂಚಾಚಾರ್ಯರು ಆರು? ಅವರ ಅವ್ಯಕರ್ತವ್ಯವೇನು ? ಅವರಿಂದಾದ ಮತೋದ್ಧಾರ ಕೆಲಸಗಳಾವುವು ? ಎಂಬ ವಿಷಯವನ್ನು ಸವಿಸ್ತಾರವಾಗಿ ತಿಳುಹಿಸಿದರು ಆ ದಿವಸ ವಿಶೇಷವಾಗಿ ಅನ್ನಸಂತರ್ಪಣವನ್ನು ಮಾಡಿ, ಬಡಬಗ್ಗರಾದಿಯಾಗಿ ಸರ್ವರನ್ನೂ ಸಂತೋಷಗೊಳಿಸಿದರು. ಈ ಜಯಂತಿಮಹೋತ್ಸವವನ್ನು ಅತ್ಯಂತ ದಕ್ಷತೆಯಿಂದ ನೆರವೇರಿಸಿದ ವೇ|| ಮುದಿಯಯ್ಯಸ್ವಾಮಿ ಬೃಹನ್ಮಠ, ನಾಗಯ್ಯಸ್ವಾಮಿ ಸಾಲಿಮಠ, ಕೋಟಿದಸ್ವಾಮಿ ವಿರಕ್ತಮಠ, ಇವರೂ ಹಾಗೂ ಮ|| ರಾ|| ವೀರನಗೌಡಾ ಪೋಲೀಸ ಪಾಟೀಲ ಇವರೂ, ಈ ಗ್ರಾಮದ ಪುರಪ್ರಮುಖರಾದ ಮ|| ರಾ|| ಭರಮಗೌಡಾ ಸ್ವಾಮಿನಗೌಡರ, ಬಸಪ್ಪಾ ಬಾಣದ, ಬಸೆಟ್ಟೆಪ್ಪಾ ಅಂಗಡಿ, ಶಿವಪ್ಪಾ ಅರಳಿ, ರುದ್ರಪ್ಪಾ ಸೀಲಗುಂದ, ದೊಡ್ಡಮಲ್ಲಪ್ಪಾ ಗುರಮ್ಮನವರ, ಶಿವಬಸಪ್ಪ ಕೆಲವದಿ, ಸಿದ್ಧಪ್ಪ ಕಲ್ಯಾಣಿ ಮೊದಲಾದ ಗುರುಭಕ್ತರು ಇನ್ನು ಮುಂದೆ ಯಾವತ್ತು ಆಚಾರ್ಯರ ಜಯಂತ್ಯುತ್ಸವಗಳನ್ನು ಮಾಡುವದನ್ನು ಠರಾಯಿಸಿದರು. ಆ ಮೇಲೆ “ ಪಂಚಾಚಾರ್ಯ ಮಹಾರಾಜಕಿ ಜಯ ” ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಸಮಯದಲ್ಲಿ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ಮ|| ರಾ|| ಶಿವಪ್ಪ ಅರಳಿ ಇವರು ಒಂದು ರೂಪಾಯಿಯನ್ನು ಸಮರ್ಪಿಸಿದರು.

ಅಮೃತಪ್ಪ ಗೂಳಪ್ಪ ಅಣ್ಣಿಗೇರಿ.

ಲಕ್ಷ್ಮೇಶ್ವರ.

ಈ ಶುಕ್ಲಸಂವತ್ಸರದ ವೈಶಾಖ ಶುದ್ಧ ೫ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಮ|| ರಾ|| ರುದ್ರಪ್ಪಾ ಉಪ್ಪಿನ ಇವರೇ ಮೊದಲಾದ ಪೇಟೆಯವರ್ತಕಮಂಡಲಿಯಿಂದ, ವೇ|| ಲಿಂಬಯ್ಯಸ್ವಾಮಿ ಶ್ರೀ ಚನ್ನಬಸವಸ್ವಾಮಿಗಳ ಮಠದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಒಂದು ದಿವಸದ ಪೂರ್ವದಲ್ಲಿ ಈ ಗ್ರಾಮದಲ್ಲಿ ಎರಡು ಜಯಂತಿಗಳು ನಡೆದು ಹೋಗಿದ್ದುವು. ಆದರೆ ಈ ಜಯಂತಿಯ ವಿಷಯದಲ್ಲಿ ಜನರಲ್ಲಿ ಉತ್ಸುಕತೆಯು ಉಂಟಾಗುವುದೋ ಇಲ್ಲವೋ ಎಂದು ಸಂಶಯವು ಪ್ರಾಪ್ತವಾಗಿದ್ದಿತು. ಆದರೆ, ಗುರುಭಕ್ತರು ಹಾಗೆ ಮಾಡದೆ ಮತ್ತಿಷ್ಟು ಉತ್ಸಾಹಪೂರಿತ ಹೃದಯರಾಗಿ ಈ ಮಹಾಚಾರ್ಯರ ಜಯಂತಿಯನ್ನು ‘ ನ ಭೂತೋ ನ ಭವಿಷ್ಯತಿ ’ ಎಂಬಂತೆ ನೆರವೇರಿಸಿದರು. ಇದಕ್ಕೆಲ್ಲಾ ಆ ಗುರುಪರಮಾತ್ಮನ ಅನುಗ್ರಹವೇ ಮೂಲಕಾರಣವೆಂದು ಭಾವಿಸಬೇಕಾಗಿದೆ. ಗುರುಸಾರ್ವಭೌಮರ ಜಯಂತಿಗಳನ್ನು ಆಚರಿಸುವುದಾಗಲಿ ಅಥವಾ ಲಿಂಗಪೂಜೆಯನ್ನು ಮಾಡುವುದಾಗಲಿ, ಇವು ಮುಕ್ತಿಗೆ ಮೂಲಕಾರಣವಾದ ಶ್ರೀ ಗುರುವಿನ ಪ್ರಸನ್ನತೆಗೋಸ್ಕರವಲ್ಲದೆ ಬೇರೆಯಲ್ಲ. ಶ್ರೀ ಗುರುವು ಪ್ರಕೃತಿಸಂಬಂಧ ಶೂನ್ಯವಾಗಿ, ಸಾಕ್ಷಾತ್ ಪರಬ್ರಹ್ಮರೂಪಿಯಾಗಿರುವುದರಿಂದ ಲಿಂಗೋದ್ಭವನೆಂದು ಪೆಸರ್ಗೊಂಡು, ದೀಕ್ಷಾತ್ರಯದ್ವಾರಾ ಮಲತ್ರಯವನ್ನು ದೂರಮಾಡಿ, ಶಕ್ತಿವಿಶಿಷ್ಟಾದ್ವೈತವನ್ನು ಸರ್ವತ್ರ ಸ್ಥಾಪಿಸಿ, ಜಗದ್ವ್ಯಾಪ್ತನಾದ ವಿಷಯವು ಶಿವಾಗಮಾದಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವುದು ಸುಪ್ರಸಿದ್ಧವೇ ಆದೆ. ಅಗಾಧಮಹಿಮಾಶಾಲಿಗಳಾದ ಇಂತಹ ಗುರುವರ್ಯರ ಜಯಂತಿಮಹೋತ್ಸವಗಳನ್ನು ತನ್ನ ತಾವಲಂಬಿಗಳಾದ ಸಕಲ ವೀರಶೈವರು ಅಸಾಧಾರಣವಾದ ಭಕ್ತಿವಿಶೇಷದಿಂದ ಪ್ರತಿವರ್ಷದಲ್ಲಿಯೂ ಎಡಬಿಡದೆ ಆಚರಿಸುವುದು ಅವರ ಪ್ರಥಮ ಕರ್ತವ್ಯವಾಗಿದೆ. ವೀರಶೈವರ ಕರ್ತವ್ಯವು ಈ ರೀತಿಯಾಗಿದ್ದರೂ, ವಿಶ್ರಸಂಪ್ರದಾಯದ ಲಿಂಗಾಯತರ ಸಂಸರ್ಗದಿಂದ ಶುದ್ಧಸಂಪ್ರದಾಯದ ವೀರಶೈವರೂ ಸಹ ದುರ್ಮಾರ್ಗಿಗಳಾಗುತ್ತಿರುವುದನ್ನು ನೋಡಿ ಬಹುವಿಷಾದಪಡಬೇಕಾಗಿದೆ. ಗುರುಭಕ್ತಿಶೂನ್ಯರಾದ ಕೆಲವು ಧರ್ಮಲಂಪಟರು ಗುರುಗಳ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಮಾತನಾಡುವರು. ಇವರಿಗೆ ತಾಯಿಯೂ ಹೆಂಡತಿಯೂ ಒಂದೇ ವಿಧವಾಗಿರುವಂತೆ ಕಾಣುತ್ತದೆ. ಗುರುಗಳನ್ನು ತಿರಸ್ಕರಿಸುವ ಈ ಧೂರ್ತರು ಗುರುದತ್ತವಾದ ಇಷ್ಟಲಿಂಗವನ್ನು ತಮ್ಮ ದೇಹದಿಂದ ತೆಗೆದುಹಾಕಿ, ಅವರ ಗೋತ್ರಸೂತ್ರಗಳನ್ನು ಮಾರೀಕರಿಸಿ, ಅವರು ಸ್ಥಾಪಿಸಿದ ಧರ್ಮರಾಜ್ಯದಲ್ಲಿ ವಾಸಮಾಡದೆ, ಯಾವುದಾದರೊಂದು ಅನ್ಯಮತವನ್ನು ಅಗ್ರಿಯಿಸುವುದು ಲೇಸು. ಇಂತಹ ವ್ಯಕ್ತಿಗಳು ಸಾವಿರಕ್ಕೊ ಅಥವಾ ಲಕ್ಷಕ್ಕೊ ಎಲ್ಲಿಯೋ ಒಂದೊಂದು ದೊರೆಯುವುವು. ಇಂತಹವರಿಂದ ಆ ಗುರುಸಾರ್ವಭೌಮರಿಗೆ ಬರುವ ಚ್ಯುತಿಯಾದರೂ ಏನು ? ನಮ್ಮ ಗ್ರಾಮದಲ್ಲಿ ಮಾತ್ರ ಈತರದ ವ್ಯಕ್ತಿಗಳಿರದೆ, ಸರ್ವರೂ ಅಸಾಧಾರಣವಾದ ಗುರುಭಕ್ತಿಯಿಂದ ಏಕತ್ರ ಸಮ್ಮಿಳಿತರಾಗಿ ಜಗದಾಚಾರ್ಯರ ಜಯಂತಿಮಹೋತ್ಸವಗಳನ್ನು ನೆರವೇರಿಸಿದ್ದನ್ನು ನೋಡಿ ಸಂತೋಷಪಡಬೇಕಾಗಿದೆ. ಈ ಗುರುಭಕ್ತರಿಗೆ ಶ್ರೀ ಪರಮೇಶ್ವರನು ಸಕಲ ಸೌಭಾಗ್ಯಗಳನ್ನುಂಟುಮಾಡಲೆಂದುಪ್ರಾರ್ಥಿಸುವ.

ಗಂಗಪ್ಪಾ ಹೂವಿನ, ಲಕ್ಷ್ಮೇಶ್ವರ.

ಶಿರಾಳಕೊಪ್ಪ.

ಜಗದಾಗಮಪ್ರಸಿದ್ಧರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಶಕ್ತಿವಿಶಿಷ್ಟಾದ್ವೈತ ಮತವನ್ನು ಸ್ಥಾಪಿಸಿರುವುದು ಪ್ರಸಿದ್ಧವಷ್ಟೆ. ಆ ಗುರುಸಾರ್ವಭೌಮರ ಜಯಂತ್ಯುತ್ಸವವನ್ನು ಮಾಡುವುದು ಶುದ್ಧವೀರಶೈವರ ಕರ್ತವ್ಯವಾಗಿರುವುದರಿಂದ ಈ ನಿಯಮಕ್ಕನುಸರಿಸಿ ಶಿಕಾರಿಪುರತಾಲೂಕು ಶಿರಾಳಕೊಪ್ಪದ ಭಕ್ತಮಾಹೇಶ್ವರರು ವೈ|| ಶುದ್ಧ|| ೫ ಸೋಮವಾರ ಶ್ರೀ ದಾರುಕಾಚಾರ್ಯರ ಜಯಂತ್ಯುತ್ಸವವನ್ನು ಬಹುವೈಭವದಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ತಡಗಣಿ, ಮಾವಲಿ ಗ್ರಾಮಗಳ ಭಜನಾಸಂಘದವರನ್ನು ಬರಮಾಡಿಕೊಂಡು ಶ್ರೀಜಗದ್ಗುರುಗಳ ಲಿಂಗೋದ್ಭವಮೂರ್ತಿಯನ್ನು ಸಾವಿರಾರು ತಾವರೆಪುಷ್ಪಗಳಿಂದ ಪರಿಶೋಭಿಸುವ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಮಂಗಳವಾದ್ಯದೊಡನೆ ಅತಿವೈಭವದಿಂದ ಬೆಳಗಿನ ೯ ಗಂಟೆಗೆ ಸದರಿ ಗ್ರಾಮದ ಹಿರೇಮಠದಿಂದ ಶ್ರೀವೃಷಭೇಶ್ವರ ದೇವಸ್ಥಾನಕ್ಕೆ ಬಿಜಯಂಗೈಸಿಕೊಂಡು ಬಂದು ಷೋಡಶೋಪಚಾರಗಳಿಂದ ಪೂಜಿಸಿ ಶ್ರೀ ದಾರುಕಾಚಾರ್ಯರ ಅಷ್ಟೋತ್ತರಶತನಾಮಾವಳಿಯನ್ನು ಸರ್ವರೂ ಪಠಿಸಿ ಮಂಗಳವಾದನಂತರ ೧೧ ಗಂಟೆಗೆ ಅನ್ನಸಂತರ್ಪಣವು ನಡೆಯಿತು. ಸಾಯಂಕಾಲ ೬ ಗಂಟೆಗೆ ಅನೇಕಾಭರಣಗಳಿಂದಲಂಕೃತವಾಗಿ ರಚಿಸಿದ ಆನೆಯ ಅಂಬಾರಿಯಮೇಲೆ ಜಗದ್ಗುರುಗಳ ಲಿಂಗೋದ್ಭವಚಿತ್ರವನ್ನೂ ಹಾಗೂ ಸದ್ಯಃ ಪೀಠಾರೋಹಣಮಾಡಿದತಕ್ಕ ಶ್ರೀಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಚಿತ್ರವನ್ನು ಪುಷ್ಪಮಾಲಿಕೆಗಳಿಂದ ಅಲಂಕರಿಸಿ ಮೂರ್ತಗೊಳಿಸಿ ಪಂಚಬಣ್ಣದ ಧ್ವಜಗಳಿಂದಲೂ ಭಜನಾಸಂಘದವರ ಮಂಗಲಭಜನೆಯಿಂದಲೂ ನೃತ್ಯಗೀತವೈಭವದಿಂದಲೂ ತಳಿರುತೋರಣಗಳಿಂದಲಂಕೃತಗಳಾದ ಪುರಬೀದಿಗಳಲ್ಲಿ ಆಯಾಯ ಜಗದ್ಗುರುಗಳ ಮಹಿಮಾತಿಶಯಂಗಳನ್ನೊಡಗೊಂಡ ಜಯಘೋಷದೊಡನೆ ಉತ್ಸವವು ಹೊರಟು ಬಹು ಅಟ್ಟಹಾಸದಿಂದ ನೆರವೇರಿತು. ಉತ್ಸವವು ಪೂರ್ತಿಯಾದ ಮೇಲೆ ಸರ್ವರೂ ಶ್ರೀಜಗದ್ಗುರುಗಳ ಭಾವಪಟಕ್ಕೆ ಮಂಗಲವನ್ನು ಮಾಡಿ ಫಲಾಶೀರ್ವಾದವನ್ನು ಪಡೆದು ಜಯಘೋಷದೊಡನೆ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಈ ಉತ್ಸವಕ್ಕೆ ಅಜುಬಾಜು ಗ್ರಾಮಗಳಿಂದ ಸಾವಿರಾರು ಜನಗಳು ಸೇರಿದ್ದರು. ಆಕಾಲದಲ್ಲಿ ಸದರಿ ಗ್ರಾಮವು ಶಿವಲೋಕದಂತೆ ಪ್ರಕಾಶಿಸುತ್ತಿತ್ತು. ಈ ಗುರುಕಾರ್ಯದಲ್ಲಿ ನಿರತರಾದ ಸಮಸ್ತ ಭಕ್ತಮಾಹೇಶ್ವರರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನು ಕೊಟ್ಟು ಕಾಪಾಡಲೆಂದು ಬೇಡಿಕೊಳ್ಳುವ.

ಗುರುಸೇವಾತತ್ಪರರು.

ಸಾಲಿಕೊಪ್ಪ.

ಜಿಲ್ಲಾ ಧಾರವಾಡ ಹುಬ್ಬಳ್ಳಿ ತಾಲೂಕಿನಪೈಕಿ ಸಾಲೀಕೊಪ್ಪದಲ್ಲಿ ಪದ್ಧತಿಯಪ್ರಕಾರ ಉಭಯ ಜಗದ್ಗುರುಗಳವರ ಜಯಂತಿಯನ್ನು ಸಕಲ ಭಕ್ತಮಾಹೇಶ್ವರರು ಒಳ್ಳೇಭಕ್ತಿಯಿಂದ ನೆರವೇರಿಸಿದರೆಂದು ತಿಳುಹಿಸಲು ಬಹು ಆನಂದವಾಗುತ್ತದೆ. ಇದೇ ವೈ|| ಶು|| ೩ (ತಾ||-೧೧-೫-೨೯) ಈ ದಿವಸ ಸದರೀ ಗ್ರಾಮದ ಬೃಹನ್ಮಠದಲ್ಲಿ ಜಗದ್ಗುರುಗಳ ಭಾವಚಿತ್ರಕ್ಕೆ ವಿಧ್ಯುಕ್ತರುದ್ರಾಭಿಷೇಕವು ಬ್ರಾಹ್ಮೀಮುಹೂರ್ತದಲ್ಲಿ ಪ್ರಾರಂಭವಾಗಿ ೮|| ಗಂಟೆಗೆ ಸಮಾಪ್ತಿಗೊಂಡಿತು. ಅನಂತರ ಮಧ್ಯಾನ್ಹಕ್ಕೆ ಗಣಾರಾಧನೆಯು ಪ್ರಾರಂಭವಾಗಿ ಸಂಜೆಯ ೫ ಘಂಟೆಯಪರ್ಯಂತ ನಡೆಯಿತು. ಆಮೇಲೆ ಸಾಯಂಕಾಲದ ೭ ರಿಂದ ೧೦ ರ ವರೆಗೆ ಜಗದ್ಗುರುಗಳ ಭಾವಚಿತ್ರದ ಪಲ್ಲಕ್ಕಿ ಮೆರವಣಿಗೆಯು ಬಹು ಮನೋಹರವಾಗಿ ನಡೆದು ಊರಲ್ಲಿ ಸರ್ವತ್ರ ಸಂಚರಿಸಿ ಹಿರೇಮಠಕ್ಕೆ ತಲ್ಪಿತು. ಸದರಿ ಮಠಾಧಿಕಾರಿಗಳಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರು ಜಯಂತಿ ಹಾಗೂ ಗುರುಮಹತ್ವ ಈ ವಿಷಯಗಳಮೇಲೆ ಭಾಷಣಮಾಡಿದರು. ಅನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಂಗಲಕಾರ್ಯಕ್ಕೆ ಹೊಸಕಟ್ಟಿಯ ಭಜನಾಸಂಘದವರು ಆಗಮಿಸಿ ತಮ್ಮ ಸೇವೆಯನ್ನು ಗುರುಗಳಿಗೆ ಮನಸಾಅರ್ಪಿಸಿದಬಗ್ಗೆ ಶ್ರೀಗಳಿಗೆ ಬಹಳ ಆನಂದವಾಗಿ ಭಜನಾಸಂಘದವರಿಗೆ ಒಂದುಆಚಾರ್ಯನಾಮಾಂಕಿತವಾದ ರಜತಪದಕವನ್ನಾಶೀರ್ವದಿಸಿ ಪ್ರೋತ್ಸಾಹವನ್ನಿತ್ತರು. ಇಷ್ಟಕ್ಕೆ ರಾತ್ರಿ ೧ ಘಂಟೆಯ ಸಮಯವಾದ್ದರಿಂದ ಸರ್ವರೂ ಶ್ರೀಗಳವರ ಆಶೀರ್ವಾದವನ್ನು ಹೊಂದಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಮರುದಿವಸ ಶ್ರೀಗಳು ಹೊಸಕಟ್ಟಿಜನರ ಬಿನ್ನಹದ ಮೇರೆಗೆ ಹೊಸಕಟ್ಟಿಗೆ ಬಿಜಮಾಡಿದರು. ತಾ|| ೧೩ ನೆಯ ಸೋಮವಾರ ಪ್ರಾತಃಕಾಲದಲ್ಲಿ ಪುನಃ ಭಾವಪಟಕ್ಕೆ ಅಭಿಷೇಕ ಮಂಗಲಾದಿಗಳನ್ನರ್ಪಿಸಿ ಶ್ರೀ ಜಗದ್ಗುರು ದಾರುಕಾಚಾರ್ಯರ ಮೆರವಣಿಗೆಯಂಮಾಡಿ ಮಂಗಲ ಮಾಡಲ್ಪಟ್ಟಿತು. ಈ ಕಾರ್ಯದಲ್ಲಿ ಬಸಪ್ಪಾ ಕತ್ತಿ, ವೀರಬಸವಪ್ಪಾ ಕತ್ತಿ, ರಾಚಪ್ಪಾ ಪಾವಡಶೆಟ್ಟಿ, ಸಂಗಪ್ಪಾ ಪಾವಡಶೆಟ್ಟಿ, ದಾನಪ್ಪ ಪಾವಡಶೆಟ್ಟಿ, ಚನ್ನಪ್ಪಾ, ಹನುಮಂತಪ್ಪ, ಬಸವಂತಪ್ಪ, ಪುಟ್ಟಪ್ಪಾ, ಸಾಕಪ್ಪ ಜೈನರ, ಬಸವಪ್ಪ ಕುಸುಗಲ್ಲ ಇವರೆಲ್ಲರೂ ಒಳ್ಳೆಭಕ್ತಿಯಿಂದ ಕಾರ್ಯಮಾಡಿದ್ದಕ್ಕಾಗಿ ಇವರಿಗೆಲ್ಲ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂತಲೂ ಜಯಂತಿಮಹೋತ್ಸವವನ್ನು ಸರ್ವಶುದ್ಧವೀರಶೈವರೂ ಆಚರಿಸುವಂತೆ ಗುರುವರ್ಗದವರು ಭಕ್ತರಿಗೆ ಬೋಧಿಸಿ ಜಗದಾಚಾರ್ಯರ ತತ್ವಗಳನ್ನು ಪ್ರಕಟೀಕರಿಸಬೇಕೆಂತಲೂ ಗುರುಪಾದಯುಗಲವನ್ನು ಮನಸಾಸ್ಮರಿಸುವ.

ಜಗದಾಚಾರ್ಯಪಾದಸೇವಕ.
ಗುರುಸಿದ್ಧಯ್ಯ ಹಿರೇಮಠ, ಸಾಲೀಕೊಪ್ಪ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಮೇ ತಾ|| ೨೬ ನೇ ಸೋಮವಾರ

ಭಸ್ಮಧಾರಣ.

ವಿಭೂತಿರ್ಯಸ್ಯನೋಫಾಲೇ ಕಂಠೇರುದ್ರಾಕ್ಷಮಾಲಿಕಾ |
ಮುಖೇಪಂಚಾಕ್ಷರೋಮಂತ್ರಸ್ತಂತ್ಯಜೇದಂತ್ಯಜಂಯಥಾ ||

ಯಾವನ ಹಣೆಯಲ್ಲಿ ಭಸ್ಮವಿಲ್ಲವೋ, ಕಂಠದಲ್ಲಿ ರುದ್ರಾಕ್ಷಮಾಲಿಕೆಯಿಲ್ಲವೋ, ಮುಖದಲ್ಲಿ ಪಂಚಾಕ್ಷರ ಮಂತ್ರವಿಲ್ಲವೋ ಅವನನ್ನು ಅಂತ್ಯಜನಂತೆ ದೂರೀಕರಿಸತಕ್ಕದ್ದೆಂದು ಶಿವಾಗಮಗಳು ನಿಷೇಧಿಸಿರುವುವು. ತ್ರಿಪುಂಡ್ರಂಭಸ್ಮನಾ ಕರೋತಿ ಯೋ ವಿದ್ವಾನ್ ಬ್ರಹ್ಮಚಾರೀ ಗೃಹೀ ವಾನಪ್ರಸ್ಥೋ ಯತಿರ್ವಾ | ಸಮಸ್ತಪಾತಕೋಪಪಾತಕೇಭ್ಯಃ ಪೂತೋಭವತಿ || ಸ ಸರ್ವಾನ್ ದೇವಾನ್ ಧ್ಯಾತೋಭವತಿ | ಸಸರ್ವೇಷು ತೀರ್ಥೇಷು ಸ್ನಾತೋಭವತಿ || ಯಾವನು ಭಸ್ಮತ್ರಿಪುಂಡ್ರವನ್ನು ಅನವರತವೂ ಧರಿಸುತ್ತಲಿರುವನೋ ಅವನು ವಿದ್ವಾಂಸನಾಗಿರಲಿ, ಬ್ರಹ್ಮಚಾರಿಯಾಗಿರಲಿ, ಗೃಹಸ್ಥನಾಗಿರಲಿ, ವಾನಪ್ರಸ್ಥನಾಗಿರಲಿ, ಸನ್ಯಾಸಿಯಾಗಿರಲಿ ಪ್ರತಿಯೊಬ್ಬನೂ ಸಮಸ್ತಪಾಪಗಳಿಂದಲೂ ಉಪಪಾಪಗಳಿಂದಲೂ ಬಿಡಲ್ಪಡುವನಲ್ಲದೆ ಸರ್ವದೇವತೆಗಳ ಧ್ಯಾನವನ್ನು ಮಾಡಿದವನಾಗಿಯೂ, ಸರ್ವತೀರ್ಥಗಳಲ್ಲಿ ಸ್ನಾನಮಾಡಿದವನಾಗಿಯೂ ಆಗುತ್ತಾನೆಂದು ಕಾಲಾಗ್ನಿರುದ್ರೋಪನಿಷತ್ತಿನಲ್ಲಿ ಭಸ್ಮಧಾರಣದ ಫಲವು ಹೇಳಲ್ಪಟ್ಟಿರುತ್ತದೆ. ಹೀಗೆ ವೇದೋಕ್ತವಾದ ವಿಭೂತಿಧಾರಣವೆಂಬ ವಿಧಿಯು ನಿತ್ಯವಿಧಿಯಾಗಿರುವುದರಿಂದ ವೀರಶೈವಮತಾವಲಂಬಿಗಳೆಲ್ಲರೂ ಶಿರಸ್ಸು, ಹಣೆ, ಶ್ರೋತ್ರದ್ವಯ, ಕಂಠ, ಭುಜದ್ವಯ, ಹೃದಯ, ನಾಭಿ, ಪೃಷ್ಠ, ಬಾಹುದ್ವಯ, ಹೆಕ್ಕತ್ತು, ಮುಂಗೈಗಳೆರಡು ಹೀಗೆ ಹದಿನೈದುಸ್ಥಾನಗಳಲ್ಲಿ ವಿಧಿಯಲ್ಲಿ ಹೇಳಿದ ಪ್ರಕಾರ ಆಯಾಯ ಮಂತ್ರಗಳಿಂದ ವಿಭೂತಿಯನ್ನು ಧರಿಸತಕ್ಕದ್ದು. "ಮಧ್ಯಾಂಗುಲಿತ್ರಯೇಣೈವ ಸ್ವದಕ್ಷಿಣಕರಸ್ಯತು | ಷಡಂಗುಲಾಯತಂ ಮಾನಮಪಿನಾಳಿಕಮಾನಕಂ || ನೇತ್ರಯುಗ್ಮಪ್ರಮಾಣೇನ ಫಾಲೇ ದದ್ಯಾತ್ತ್ರಿಪುಂಡ್ರಕಂ || ಹೆಬ್ಬೆರಳು, ಕಿರಿಬೆರಳುಗಳನ್ನು ಬಿಟ್ಟು ಮಿಕ್ಕ ಮೂರು ಬೆರಳುಗಳಿಂದ ಆರು ಅಂಗುಲದಷ್ಟು ಉದ್ದವಾಗಿ ಭಸ್ಮವನ್ನು ಧರಿಸಬೇಕೆಂದು ರೇಣುಕಭಗವತ್ಪಾದರು ಭಸ್ಮಧಾರಣವಿಧಿಯನ್ನು ಸಿದ್ಧಾಂತಶಿಖಾಮಣಿಯಲ್ಲಿ ಅಗಸ್ತ್ಯಮಹರ್ಷಿಗಳಿಗೆ ವಿಶದವಾಗಿ ಬೋಧಿಸಿದ್ದಾರೆ. ಪ್ರಕೃತದಲ್ಲಿ ವೀರಶೈವಜನಾಂಗವು ಭಸ್ಮಧಾರಣದಲ್ಲಿ ಆಸಕ್ತಿಯುಳ್ಳುದಾಗಿದ್ದರೂ ಅನೇಕರು ಯಾವ ಯಾವ ಬೆರಳುಗಳಿಂದ ವಿಭೂತಿಯನ್ನು ಧರಿಸಬೇಕೋ ಯಾವ ಸ್ಥಳದಲ್ಲಿ ಧರಿಸುವಾಗ ಯಾವ ಮಂತ್ರಗಳನ್ನುಚ್ಚರಿಸಬೇಕೆಂಬುದೊಂದೂ ಗೊತ್ತಿಲ್ಲದೆ ಮೂಢಭಕ್ತಿಯಿಂದ ಸ್ವೇಚ್ಛೆಯಾಗಿ ಭಸ್ಮವನ್ನು ಧರಿಸಿಕೊಳ್ಳುತ್ತಿರುವರು. ಹೀಗೆ ಶಾಸ್ತ್ರನಿಯಮವನ್ನು ಮೀರಿ ಭಸ್ಮಧಾರಣವನ್ನು ಮಾಡುವುದರಿಂದ ಲಾಭವಿಲ್ಲದ ವ್ಯಾಪಾರದಂತೆ ಪ್ರಯೋಜನವಿಲ್ಲದಂತಾಗುವುದು. ಮತ್ತು ವೀರಶೈವಸ್ತ್ರೀಯರಲ್ಲಿ ಅನೇಕರು ಅಶಿಕ್ಷಿತರಿರುವುದರಿಂದ ತಾವು ಭಸ್ಮವನ್ನು ಹೇಗೆ ಧರಿಸಬೇಕೆಂಬುದನ್ನು ತಿಳಿಯದೆ ಅಂಗುಲಿಗಳ ನಿಯಮವಿಲ್ಲದೆ ಎರಡು ಬೆರಳುಗಳಿಂದಲೂ ಒಂದು ಬೆರಳಿನಿಂದಲೂ ವಿಭೂತಿಯಂ ಧರಿಸುತ್ತಿರುವರು. ಕ್ರಮವರಿತು ಸ್ನಾನಾದಿಗಳಿಂದ ಪರಿಶುದ್ಧರಾಗದೆ ಆಸನದ ಮೇಲೆ ಕುಳಿತುಕೊಳ್ಳದೆ ನಿಂತಲ್ಲಿಯೇ ಕುಳಿತಲ್ಲಿಯೇ ಮಂತ್ರಶೂನ್ಯವಾಗಿ ಕ್ರಮದಪ್ಪಿ ವಿಭೂತಿಯನ್ನು ಧರಿಸುವುದೂ ಉಂಟು. ಶಾಸ್ತ್ರನಿಯಮಗಳಿಗನುಸಾರವಾಗಿ ಭಸ್ಮವಂ ಪೂಜಿಸಿ ಅದಕ್ಕೆ ಪ್ರಣವಸಂಬಂಧವಂ ಮಾಡಿ ಪ್ರಥಮತಃ ಭಸ್ಮಸ್ನಾನವನ್ನು ಮಾಡಿ ಬಳಿಕ ಭಸ್ಮೋದ್ಧೂಳನವನ್ನು ಮಾಡಿ ತರುವಾಯ 15 ಸ್ಥಾನಗಳಲ್ಲಿ ತ್ರಿಪುಂಡ್ರವನ್ನು ಧರಿಸತಕ್ಕದ್ದು. ಇವುಗಳಲ್ಲಿ ಭಸ್ಮಸ್ನಾನಕ್ಕಿಂತಲೂ ಭಸ್ಮೋದ್ಧೂಳನವು ವಿಶೇಷ ಫಲಪ್ರದವಾಗಿದೆ. ಅದಕ್ಕಿಂತಲೂ ಭಸ್ಮತ್ರಿಪುಂಡ್ರಧಾರಣವು ವಿಶೇಷ ಫಲಪ್ರದವೆಂದು ಸಿದ್ಧಾಂತದಲ್ಲಿ ಹೇಳಲ್ಪಟ್ಟಿರುವುದರಿಂದ ವಿಭೂತಿಯ ತ್ರಿಪುಂಡ್ರವನ್ನು ಪ್ರಾತಃಕಾಲ ಮಧ್ಯಾಹ್ನ ಸಂಧ್ಯಾ ಈ ಮೂರು ಕಾಲಗಳಲ್ಲಿಯೂ ಕ್ರಮದಿಂ ಧರಿಸುತ್ತಿರುವುದು ವೀರಶೈವರಿಗೆ ಮುಖ್ಯ ಧರ್ಮವಾಗಿರುವುದು. ಹೀಗಿದ್ದರೂ ಕೆಲವೆಡೆಯಲ್ಲಿ ಅರ್ಧಸುಧಾರಕರಾದ ಸ್ತ್ರೀಪುರುಷರು ವಿಭೂತಿಯನ್ನು ಹಣೆಯಲ್ಲಿ ಧರಿಸುವುದೆಂದರೆ ಬಹಳ ಅಸಹ್ಯಪಡುತ್ತಲಿರುವುದನ್ನು ನೋಡಿದರೆ ಕಲಿಧರ್ಮದ ಪ್ರಾಬಲ್ಯವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಮೋಕ್ಷದಾಯಕವೂ ಪಾಪಸಂಹಾರಕವೂ ಅಲಂಕಾರಜನಕವೂ ಆರೋಗ್ಯಸಾಧಕವೂ ಆದ ಇಂತಹ ವಿಭೂತಿಯ ವಿಷಯದಲ್ಲಿ ಯಾರಿಗೆ ಆಲಸ್ಯಬುದ್ಧಿಯುಂಟಾಗಿರುವುದೋ ಅದು ಅವರ ಪಾಪಕರ್ಮದ ಫಲವೆಂದೇ ಹೇಳಬೇಕಾಗಿದೆ. ಇದಲ್ಲದೆ ವೀರಶೈವರು ತಮ್ಮ ತಮ್ಮ ಮಕ್ಕಳನ್ನು ಬಟ್ಟೆಬರೆಗಳಿಂದ ಅಲಂಕಾರಮಾಡಿ ತಮ್ಮ ಮತದ ಮುಖ್ಯ ಚಿಹ್ನವೆನಿಸಿದ ಭಸ್ಮತ್ರಿಪುಂಡ್ರದಿಂದ ಹಣೆಯನ್ನು ಅಲಂಕರಿಸದೆ ಧಾರಣಾನರ್ಹವಾದ ಕಾಡಿಗೆ ಮೊದಲಾದ ಲೌಕಿಕ ವಸ್ತುಗಳಿಂದ ಅಲಂಕರಿಸುವದು ತಲೆಯಮೇಲಿರುವ ಚಿನ್ನವನ್ನು ತೆಗೆದುಹಾಕಿ ಕಸವನ್ನು ಹಾಕಿಕೊಂಡಂತಾಗುವುದು. ನಮ್ಮ ಭರತಖಂಡದಲ್ಲಿ ಅನೇಕ ಪೂರ್ವಾಚಾರ್ಯರು ವೇದಾಗಮಪ್ರಮಾಣಗಳ ಆಧಾರದ ಮೇಲೆ ಅನೇಕ ಮತಗಳನ್ನು ಸ್ಥಾಪಿಸಿರುತ್ತಾರೆ. ಪ್ರತಿಯೊಬ್ಬ ಪೂರ್ವಾಚಾರ್ಯರೂ ತಾವು ಸ್ಥಾಪಿಸಿದ ಮತಗಳನ್ನು ಅವಲಂಬಿಸಿದ ಮಾನವರಲ್ಲಿ ಒಂದೊಂದು ಹೆಗ್ಗುರುತನ್ನು ಕಲ್ಪಿಸಿರುವರು. ಆಯಾಯ ಹೆಗ್ಗುರುತುಗಳನ್ನು ನೋಡಿದಮಾತ್ರದಿಂದಲೇ ಇವರು ಶಿವಾರಾಧಕರೆಂದೂ ಇವರು ವಿಷ್ಣುವಿನಾರಾಧಕರೆಂದೂ ಯಾರಿಂದಲೂ ಹೇಳಲ್ಪಡದಿದ್ದರೂ ತಾನಾಗಿಯೇ ಒಡೆದು ಕಾಣುತ್ತದೆ. ಊರ್ಧ್ವತ್ರಿಪುಂಡ್ರವು ಶ್ರೀವೈಷ್ಣವ ಮತಸ್ಥಾಪಕರಾದ ರಾಮಾನುಜಾಚಾರ್ಯರ ಯಶೋಧ್ವಜವನ್ನು ಸೂಚಿಸುತ್ತದೆ. ಶಂಖಾದಿ ಮುದ್ರೆಗಳು ವೈಷ್ಣವಮತಸ್ಥಾಪಕರಾದ ಮಧ್ವಾಚಾರ್ಯರ ಕೀರ್ತಿಧ್ವಜವನ್ನು ಸೂಚಿಸುತ್ತವೆ. ಭಸ್ಮತ್ರಿಪುಂಡ್ರವು ಶೈವಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರ ಕೀರ್ತಿಪತಾಕೆಯನ್ನು ಸೂಚಿಸುತ್ತದೆ. ಪೂರ್ವಾಚಾರ್ಯರು ಜಗನ್ನಿಯಾಮಕನಾದ ಪರಮೇಶ್ವರನಲ್ಲಿ ಮಾನವರೆಲ್ಲರೂ ಸೇರುವುದೊಂದೇ ಮುಖ್ಯ ಧ್ಯೇಯವಾಗುಳ್ಳವರಾಗಿರುವುದರಿಂದಲೂ ಧ್ಯೇಯವಸ್ತ್ವೈಕ್ಯವಿದ್ದರೂ ಮುಕ್ತಿಮಾರ್ಗಗಳು ಅನಂತವಿಧಗಳಾಗಿರುವುದರಿಂದಲೂ, ಆಯಾಯ ಪ್ರಾಣಿಗಳ ಸಂಸ್ಕಾರಾನುಗುಣವಾಗಿ ಅಭ್ಯಾಸ ಸಾಮರ್ಥ್ಯದಿಂದ ಒಂದೊಂದು ಮಾರ್ಗದಲ್ಲಿ ಒಬ್ಬೊಬ್ಬರಿಗೆ ವಿಶೇಷ ಅಭಿರುಚಿಯಿರುವದರಿಂದಲೂ ಒಬ್ಬೊಬ್ಬ ಪೂರ್ವಾಚಾರ್ಯರು ಒಂದೊಂದು ಉಪಾಸನಾಮಾರ್ಗವನ್ನು ಸ್ಥಾಪಿಸಿ ತಮ್ಮ ತಮ್ಮ ಮತಗಳಿಗೆ ಒಂದೊಂದು ಹೆಗ್ಗುರುತನ್ನು ಮಾಡಿರುವರು. ಆ ಹೆಗ್ಗುರುತನ್ನು ನೋಡಿದೊಡನೆಯೇ ಇವರು ಇಂತಹ ಆಚಾರ್ಯ ಸಾಂಪ್ರದಾಯಕರೆಂದು ಕಂಡುಹಿಡಿಯಬಹುದಾಗಿದೆ. ಒಬ್ಬೊಬ್ಬ ಮಹಾರಾಜನು ಅಖಂಡವಾದ ಪ್ರಪಂಚದಲ್ಲಿ ಒಂದೊಂದು ಭಾಗವನ್ನು ಆಳುತ್ತಿರುವನು. ಆಯಾಯ ಮಹಾರಾಜನ ಪ್ರತಿನಿಧಿಗಳೆನಿಸಿದವರೆಲ್ಲರೂ ತಮ್ಮ ತಮ್ಮ ಪ್ರಭುಗಳಿಂದ ಕಲ್ಪಿಸಲ್ಪಟ್ಟ ಒಂದೊಂದು ವಿಶೇಷವಾದ ಗುರುತನ್ನು ಧರಿಸಿಕೊಂಡಿರಬೇಕು. ಹಾಗೆ ಯಾರು ಆ ಮಹಾರಾಜನ ಗುರುತನ್ನು ಧರಿಸುವುದಿಲ್ಲವೋ ಅವರನ್ನು ಇಂಥ ಪ್ರಭುಗಳ ಕಡೆಯವರೆಂದು ಗುರ್ತಿಸಲು ಶಕ್ಯವಿಲ್ಲವು. ಆಯಾಯ ಪ್ರಭುಚಿಹ್ನವನ್ನು ನೋಡಿ ಆಯಾಯ ಪ್ರಭುಗಳ ಶಾಸನಕ್ಕೆ ಸೇರಿದವರೆಂದು ತಿಳಿಯುವಂತೆ, ಪೂರ್ವಾಚಾರ್ಯರು ತಮ್ಮ ತಮ್ಮ ಮತೀಯರು ಹಣೆಯಲ್ಲಿ ಇಂಥ ಚಿಹ್ನವನ್ನೇ ಧರಿಸತಕ್ಕದ್ದು, ಹೀಗೆ ಧರಿಸುವವರೇ ಇಂತಹ ಮಾರ್ಗಾನುಯಾಯಿಗಳೆಂದು ಒಂದು ನಿಯಮಿತ ಮಾರ್ಗವನ್ನು ಹಾಕಿಕೊಟ್ಟಿರುವದರಿಂದ ಆಯಾಯ ಸಾಂಪ್ರದಾಯಕರೆಲ್ಲರೂ ತಮ್ಮ ತಮ್ಮ ಪೂರ್ವಾಚಾರ್ಯರ ಆಜ್ಞೆಯನ್ನುಲ್ಲಂಘಿಸದೆ ತಮ್ಮ ತಮ್ಮ ಮತದ ಮುಖ್ಯ ಚಿಹ್ನವನ್ನು ಹಣೆಯಲ್ಲಿ ಧರಿಸತಕ್ಕದ್ದು ಆಸ್ತಿಕಸಂಥಾನುಯಾಯಿಗಳ ಧರ್ಮವಾಗಿರುವುದರಿಂದ ವೀರಶೈವಮತಸ್ಥಾಪನಾಚಾರ್ಯರು ಫಾಲದಲ್ಲಿ ಭಸ್ಮತ್ರಿಪುಂಡ್ರವನ್ನೇ ಇರಿಸಬೇಕೆಂದೂ, ಯಾರು ಭಸ್ಮತ್ರಿಪುಂಡ್ರವನ್ನು ಧರಿಸುವರೋ ಅವರೇ ಶಿವೋಪಾಸನೆಗೆ ಅಧಿಕಾರಿಗಳೆಂದೂ, ಭಸ್ಮತ್ರಿಪುಂಡ್ರವು ಅಭ್ಯಂತರೀಯವಾದ ಲಿಂಗಾಂಗಸಾಮರಸ್ಯವೈಭವದ್ಯೋತಕವೆಂದೂ ನಿಯಮವನ್ನು ಮಾಡಿರುವುದರಿಂದ ಪ್ರತಿಯೊಬ್ಬ ವೀರಶೈವಮತದ ಬಾಲಿಕೆಯಾಗಲಿ ಬಾಲಕನಾಗಲಿ ಪುರುಷನಾಗಲಿ ಸ್ತ್ರೀಯಾಗಲಿ ಎಲ್ಲರೂ ಫಾಲದೊಳ್ ಭಸ್ಮತ್ರಿಪುಂಡ್ರವನ್ನು ಕ್ರಮದಪ್ಪದೆ ಅನವರತವೂ ಧರಿಸಿ ಶ್ರೀ ಭಗವತ್ಪಾದರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಮುಂದಿನ ತಿಂಗಳು 17 ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವು ಅತಿ ವೈಭವದಿಂದ ನೆರವೇರುವದು.

ಬೆಂಗಳೂರಿನಲ್ಲಿ ಬರುವ ಜೂನ್ ತಿಂಗಳಲ್ಲಿ ಅಖಿಲ ಭಾರತೀಯ ಚಿತ್ರಕಲಾಪ್ರದರ್ಶನವು ಶ್ರೀಮನ್ಮಹಾರಾಜರವರ ಉದಾರಾಶ್ರಯದಲ್ಲಿ ನಡೆಯುವುದು.

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ಕಾರಂಜೀಕೆರೆಯ ಏರಿಯ ಮೇಲೆ ಹೋಗುತ್ತಿದ್ದ ಒಬ್ಬ ತರುಣನು ವಿದ್ಯುದ್ದೀಪಸ್ತಂಭಕ್ಕೆ ಒರಗಿನಿಂತುಕೊಳ್ಳಲು ವಿದ್ಯುಚ್ಛಕ್ತಿಯು ಅವನ ದೇಹಕ್ಕೆ ವ್ಯಾಪಿಸಿ ಮೃತಪಟ್ಟನು.

ಶ್ರೀನಿವಾಸರಾವ್ ಕೌಜಲಗಿಯವರೂ ಹಾಗೂ ಡಾ|| ಎನ್. ಎಸ್. ಹಾರ್ಡಿಕರ್‌ರವರೂ ಕೊಡಗು ಪ್ರಾಂತಕ್ಕೆ ಹೋಗಿದ್ದು ಭರತಖಂಡದ ಈಗಿನ ಪರಿಸ್ಥಿತಿ, ವಿದೇಶೀಯವಸ್ತ್ರಬಹಿಷ್ಕಾರ, ರಾಷ್ಟ್ರೀಯ ಮಹಾಸಭೆಯ ಕಾರ್ಯಕ್ರಮ, ಕರ್ನಾಟಕೈಕೀಕರಣ ಇವುಗಳ ವಿಷಯವಾಗಿ ಉಜ್ವಲ ಭಾಷಣಮಾಡಿದರು.

ಚನ್ನಪಟ್ಟಣದಲ್ಲಿ ಹಿಂದೂ ಮುಸಲ್ಮಾನರ ದ್ವೇಷವು ಇನ್ನೂ ಶಾಂತವಾಗಿಲ್ಲ. ಬೆಂಗಳೂರು ಜಿಲ್ಲಾಧಿಕಾರಿಗಳೂ ಮತ್ತು ಪೋಲೀಸ್ ಸೂಪರಿಂಟೆಂಡೆಂಟರೂ ಮಹಮ್ಮದೀಯರೇ ಆಗಿರುವುದರಿಂದ ಹಿಂದೂ ಪ್ರಜೆಗಳು ಕಳವಳಗೊಂಡು ಶ್ರೀಮನ್ಮಹಾರಾಜರವರಿಗೆ ಒಂದು ವಿಜ್ಞಾಪನಾಪತ್ರವನ್ನು ಬರೆದುಕೊಂಡಿದ್ದಾರಂತೆ!

ಮೈಸೂರು ಪ್ರಾಂತಿಕ ಯುವಕರ ಪ್ರಥಮಸಮ್ಮೇಳನವು ಬೆಂಗಳೂರು ನಗರದಲ್ಲಿ ಅಸೆಂಬ್ಲಿ ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ಲುಗಳ ಸದಸ್ಯರಾದ ಮ|| ರಾ|| ಪಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ರಾಷ್ಟ್ರಭಕ್ತರಾದ ಮ|| ರಾ|| ವೆಂಕಟಪ್ಪನವರು ತರುಣರ ಕರ್ತವ್ಯವನ್ನು ಕುರಿತು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು.

ಗಿರಣಿಯ ಯಜಮಾನರು ಕೆಲವು ಜನ ಕೆಲಸಗಾರರನ್ನು ತೆಗೆದುಹಾಕಿದುದನ್ನು ನಿಮಿತ್ತಮಾಡಿಕೊಂಡು ಬೆಂಗಳೂರಿನ ಮಿನರ್ವಾ ಮಿಲ್ಲಿನಕೂಲಿಯವರು ೬ ನೇ ತಾರೀಖಿನಿಂದ ಕೆಲಸಕ್ಕೆ ಹೋಗದೆ ನಿಂತುಬಿಟ್ಟಿರುವರು. ಇದನ್ನು ನೋಡಿ ಮಹಾರಾಜಾಮಿಲ್ಲಿನ ಕೆಲಸಗಾರರೂ ಸಹ ಮುಷ್ಕರಹಿಡಿದಿರುವರು. ಅಲ್ಲಲ್ಲಿ ಕೂಲಿಯವರ ಮುಖಂಡರ ಭಾಷಣಗಳಾಗುತ್ತಿವೆ. ಸರ್ಕಾರದವರು ಮೇಲೆಹೇಳಿದ ಗಿರಣಿಗಳಹತ್ತಿರ ಪೋಲೀಸರ ಕಾವಲನ್ನಿಟ್ಟಿರುವರು.

ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟರು ಕೂಲಿಯವರ ಮುಖಂಡರಲೊಬ್ಬರಾದ ಮ|| ರಾ|| ರಾಮಶರ್ಮರವರಿಗೆ 2 ತಿಂಗಳವರೆಗೆ ಭಾಷಣಮಾಡಕೂಡದೆಂದು ಅಪ್ಪಣೆಮಾಡಿರುವರು. ರಾಮಶರ್ಮರವರು ಕೂಲಿಯವರ ಮುಂದೆ ಭಾಷಣಮಾಡಿ, ಅವರನ್ನು ಎತ್ತುಗಟ್ಟಿ ಗಲಾಟೆಮಾಡುವಂತೆ ಪ್ರೇರೇಪಿಸುತ್ತಿರುವರೆಂದೂ, ಪೋಲೀಸ್ ಅಧಿಕಾರಿಗಳನ್ನು ತುಚ್ಛವಾಗಿ ಕಾಣುತ್ತಿರುವರೆಂದೂ ಪೋಲೀಸರಿಂದ ಮಾಡಲ್ಪಟ್ಟ ಆರೋಪಣೆಯೇ ಈ ಹುಕುಮಿಗೆ ಕಾರಣವಾಗಿದೆ.

ಮೈಸೂರು ಸಂಸ್ಥಾನದ ಕಾಂಗ್ರೆಸ್ ಮಹಾಸಭೆಯ ಎರಡನೆಯ ಅಧಿವೇಶನವು ಬೆಂಗಳೂರು ನಗರದಲ್ಲಿ ಈ ತಿಂಗಳು 29 ನೆಯ ತಾರೀಖಿನಿಂದ ಪ್ರಾರಂಭವಾಗಿ ಬಹು ವಿಜೃಂಭಣೆಯಿಂದ ನಡೆಯಿತು. ಮೈಸೂರಿನ ವೃದ್ಧಪಿತಾಮಹರೂ, ಕರ್ನಾಟಕ ಪತ್ರಿಕಾಪ್ರಪಂಚದಲ್ಲಿ ಬಹುಮಾನ್ಯರೂ ಆದ ಮ|| ರಾ|| ಎಂ.

ವೆಂಕಟಕೃಷ್ಣಯ್ಯನವರು ಅಧ್ಯಕ್ಷರಾಗಿದ್ದರು. ಉತ್ತರವಾದಿಪ್ರಭುತ್ವ, ವೃತ್ತಪತ್ರಿಕೆಗಳ ಶಾಸನನು, ಬಟ್ಲರ್ ಕಮಿಟಿಯ ವರದಿ, ವ್ಯಕ್ತಿಸ್ವಾತಂತ್ರ್ಯ ಇವುಗಳ ಮೇಲೆ ಬಹಳ ಚರ್ಚೆಯು ನಡೆದು ಕೆಲವು ಮುಖ್ಯ ನಿರ್ಧಾರಗಳು ಮಾಡಲ್ಪಟ್ಟುವು.

ಸರ್ಕಾರಿ ಗಂಧದೆಣ್ಣೆ ಮೋಸದ ವ್ಯವಹಾರವು ಕಳೆದ 14-15 ನೇ ತಾರೀಖುಗಳಲ್ಲಿ ರಾಜಧಾನಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯಿತು. ಪ್ರಾಸಿಕ್ಯೂಷನ್ ಪರವಾಗಿ 2 ನೆಯ ಸಾಕ್ಷಿ ಸುಂದರರಾಯರ ಕೈಫಿಯತ್ತು ನಡೆಯಿತು. ಇವರು ಎಸ್ಸೆನ್ಸ್‌ಫ್ಲೋರ್ ಕಂಪೆನಿಯಲ್ಲಿ ಅಪರಾಧಿ ಸೀತಾರಾಮಾಚಾರ್ಯರ ಗುಮಾಸ್ತರಾಗಿದ್ದು ಕೈ|| ವರ್ಧಮಾನಯ್ಯನವರಿಗೂ ಸೀತಾರಾಮಾಚಾರ್ಯರಿಗೂ, ಇಂಗ್ಲೆಂಡಿನಲ್ಲಿರುವ ಕಂಪೆನಿ ಏಜೆಂಟ್ ಮ|| ರಾ|| ಮೌಲಾಂಕರವರಿಗೂ ನಡೆದಿದ್ದ ಕಾಗದಪತ್ರಗಳನ್ನೂ, ಮೈಸೂರು ಬ್ಯಾಂಕ್ ಮತ್ತು ಎಸ್ಸೆನ್ಸ್‌ಫ್ಲೋರ್ ಕಂಪೆನಿಗಳಿಗೆ ನಡೆದ ಲೇವಾದೇವಿ ಲೆಖ್ಖಗಳನ್ನೂ, ಸೀಮೆಯಿಂದ ತರಿಸಿದ ಭಾರಿ ಪೀಪಾಯಿಗಳು ಯಾವ ರೀತಿಯಾಗಿ ಉಪಯೋಗಿಸಲ್ಪಟ್ಟುವು ಎಂಬುದನ್ನು ತೋರಿಸುವ ಕಂಪೆನಿಯ ಲೆಕ್ಕದ ಪುಸ್ತಕ ಕಾಗದಪತ್ರಗಳನ್ನೂ ಹಾಜರ್ಮಾಡಿದರು. 15ನೆಯ ತಾರೀಖಿನ ದಿವಸ 3ನೆಯ ಸಾಕ್ಷಿ ಅ|| ಕಂಟ್ರೋಲರ ವಿಚಾರಣೆಯು ನಡೆಯಿತು.

ವರ್ತಮಾನಸಂಗ್ರಹ.

ಶ್ರೀಮತೀ ಬಿ. ಆನಂದಾಬಾಯಿ ಎಂಬ ದಕ್ಷಿಣಕನ್ನಡಜಿಲ್ಲೆಯ ಯುವತಿಯು ಎಲ್‌ಎಲ್.ಬಿ., ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಮದ್ರಾಸು ಹೈಕೋರ್ಟಿನಲ್ಲಿ ವಕೀಲಳಾಗಿ ಕೆಲಸಮಾಡುತ್ತಿರುವಳು.

ಮೀರತ್ತಿನಲ್ಲಿ ರಾಜದ್ರೋಹಿಗಳೆಂದು ಆಪಾದಿತರಾಗಿರುವವರನ್ನು ವಿಚಾರಿಸುತ್ತಿರುವ ಮ್ಯಾಜಿಸ್ಟ್ರೇಟರನ್ನು ಕೊಲೆಮಾಡುವುದಾಗಿ ಕ್ರಾಂತಿಕಾರಕರು ಪತ್ರಗಳನ್ನು ಬರೆದಿರುವರಂತೆ!

ಹೈದರಾಬಾದ ನೈಜಾಮರವರು ತಮ್ಮ ಮುಖ್ಯಮಂತ್ರಿಯಾದ ರಾಜಾ ಸರ್ ಕೃಷ್ಣಪ್ರಸಾದರವರ ಮಕ್ಕಳಾದ ಬಾಜಾ ನಸ್ರುಲ್ಲಾಖಾನ ಎಂಬವರಿಗೆ ವೇತನವನ್ನು ಕೊಟ್ಟು ಓದಲು ಇಂಗ್ಲೆಂಡಿಗೆ ಕಳುಹಿಸಿಕೊಟ್ಟಿರುವರು.

ಲೋರೆನ್ಸ್ ಮಾರ್ಕ್ವೆಸ್ ಎಂಬ ಸ್ಥಳದಿಂದ ಅಂಟ್ವರ್ಪಿಗೆ ಕಳುಹಿಸಲ್ಪಟ್ಟಿದ್ದ 25 ಸಾವಿರ ಪೌಂಡು ಬೆಲೆಬಾಳುವ ವಜ್ರದ ಪಾರ್ಸಲನ್ನು ಒಡೆದು ನೋಡುವಲ್ಲಿ, ಅದರೊಳಗೆ ಕಲ್ಲುಗಳು ತುಂಬಿದ್ದವಂತೆ! ವಿಚಿತ್ರ ಕಳವು!!

ಕಲಕತ್ತೆಯ ಹುಗಲಿ ಮುನಸಿಪಾಲಟಿಯವರು ಪರದೇಶೀಯ ವಸ್ತ್ರಬಹಿಷ್ಕಾರ ಮತ್ತು ಖಾದೀಪ್ರಸಾರದ ನಿರ್ಧಾರಗಳನ್ನು ಮಾಡಿ, ನೂಲುವುದನ್ನು ಕಲಿಸುವ ಶಾಲೆಗಳಿಗೆ ಗ್ರ್ಯಾಂಟು ಕೊಡಬೇಕೆಂದು ಗೊತ್ತುಮಾಡಿರುವರು.

ಪ್ರಪಂಚದ ಮಹಿಳಾ ಪ್ರತಿನಿಧಿಗಳ ಸಭೆಯು ಜಿನೀವಾನಗರದಲ್ಲಿ ಕೂಡುವದರಿಂದ ಈ ಮಹಾಸಭೆಗೆ ಹಿಂದೂದೇಶದ ಮಹಿಳೆಯರ ಪರವಾಗಿ ಶ್ರೀಮತೀ ಕಮಲಾದೇವಿ ಚಟ್ಟೋಪಾಧ್ಯಾಯ ಇವರು ಪ್ರಯಾಣಮಾಡುವರು.

ಬೊಂಬಾಯಿಯಲ್ಲಿ ಹಿಂದೂ ಮುಸಲ್ಮಾನರ ದ್ವೇಷವು ಇನ್ನೂ ಕಡಿಮೆಯಾಗಿಲ್ಲ. ಅಲ್ಲಲ್ಲಿ ಹಿಂದುಗಳು ಮುಸಲ್ಮಾನರ ಮೇಲೂ, ಮುಸಲ್ಮಾನರು ಹಿಂದುಗಳ ಮೇಲೂ ಬಿದ್ದು ಕಾದಾಡಿ ಸಾಯುತ್ತಿರುವರು. ಸರ್ಕಾರದವರು ಉಭಯಪಕ್ಷದ ಅನೇಕ ಜನ ಪುಂಡರನ್ನು ಹಿಡಿದಿರುವರು.

ಕೃಷ್ಣಾಯಪೇಲಮ್ ಗ್ರಾಮದ ಪಂಚಾಯಿತಿಯವರು, ಮಹಾತ್ಮಾಗಾಂಧಿಯವರ ತಿಲಕ್‌ಸ್ವರಾಜ್ ಫಂಡಿಗೆ 5 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರಲು, ಪಶ್ಚಿಮಗೋದಾವರಿ ಜಿಲ್ಲೆಯ ಕಲೆಕ್ಟರರು ಹಾಗೆ ಪಂಚಾಯಿತಿ ಸಭೆಯ ಫಂಡಿನಿಂದ ಗಾಂಧಿಯವರಿಗೆ ಹಣವನ್ನು ಕೊಡುವುದು ರೂಲ್ಸಿಗೆ ವಿರೋಧವೆಂದು ಆಕ್ಷೇಪಿಸಿರುವರು.

ಲಂಡನ್ನಿನಿಂದ ಕರಾಚಿಗೆ ವಿಮಾನದ್ವಾರಾ ಬಹುವೇಗವಾಗಿ ಬರಬೇಕೆಂದು ವೈಮಾನಿಕರು ಬಹಳ ಸಾಹಸಮಾಡುತ್ತಿರುವರು. ಇದುವರೆಗೆ ಏವರು ಪ್ರಯತ್ನಿಸಿದರು. ಈಗ ಆರನೆಯವನೊಬ್ಬನು ಎಲ್ಲರಿಗಿಂತಲೂ ಶೀಘ್ರವಾಗಿ ಬಂದು ವಿಖ್ಯಾತನಾಗಿರುವನು. ಒಬ್ಬ ಭಾರತೀಯ ವೈಮಾನಿಕನೂ ಸಹ ಈ ಸಾಹಸಕಾರ್ಯದಲ್ಲಿ ತೊಡಗಿರುವನು.

ಕಲಾಹರಿ ಮರಳುಕಾಡುಗಳಲ್ಲಿ ಉಷ್ಟ್ರಪಕ್ಷಿಗಳ ಹೊಟ್ಟೆಯಲ್ಲಿ ವಜ್ರಗಳು ದೊರೆಯುವವಂತೆ! ಇದನ್ನು ತಿಳಿದು ಅನೇಕ ಜನರು ಈ ಪಕ್ಷಿಗಳನ್ನು ಬೇಟೆಯಾಡತೊಡಗಿರುವರು. ಹಿಂದೆ ಪ್ರಿಟೋರಿಯಾ ದೇಶದ ಬೇಡರು ಒಂದೆರಡು ಉಷ್ಟ್ರಪಕ್ಷಿಗಳನ್ನು ಹಿಡಿದು ಅವುಗಳನ್ನು ಕೊಯ್ದು ಪರೀಕ್ಷೆಮಾಡಲು ಅವುಗಳಹೊಟ್ಟೆಯಲ್ಲಿ ವಜ್ರಗಳು ದೊರೆತಿದ್ದವಂತೆ!

ಸಾಂಡರ್ಸ್‌ನೆಂಬ ಪೋಲೀಸಧಿಕಾರಿಯನ್ನು ಕೊಂದವನನ್ನು ಸರಕಾರದವರು ಗೊತ್ತುಹಚ್ಚಿರುವರು. ತಪ್ಪಿತಸ್ಥರೆಂದು ಗಣಿಸಲ್ಪಟ್ಟು ಕೈದುಮಾಡಲ್ಪಟ್ಟಿದ್ದವರಲ್ಲಿ ಒಬ್ಬನು ತನ್ನ ತಪ್ಪನ್ನು ಒಪ್ಪಿಕೊಂಡು, ತನ್ನ ಸಂಗಡಿಗರ ಹೆಸರುಗಳನ್ನು ತಿಳುಹಿಸಿದ್ದಲ್ಲದೆ ಅವರು ತಪ್ಪಿಸಿಕೊಂಡು ಹೋದ ರೀತಿಯನ್ನೂ ಸಹ ಹೇಳಿದುದರಿಂದ ಸಕಲರನ್ನೂ ಹುಡುಕುತ್ತಿರುವರು.

ಬಂಗಾಳದ ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಸದಸ್ಯರ ಚುನಾವಣೆಯು ಬಹು ಹುರುಪಿನಿಂದ ನಡೆಯುತ್ತಿದೆ. ಇದುವರೆಗೆ ಬಹುಜನ ಕಾಂಗ್ರೆಸ್ ಪಕ್ಷದವರೇ ಜಯಶಾಲಿಗಳಾಗಿರುತ್ತಾರೆ. ಈ ಸಾರೆಮುಸಲ್ಮಾನ ಸದಸ್ಯರಲ್ಲಿ ಬಹಳ ಭಿನ್ನಭಾವಗಳುಂಟಾಗಿರುವುದರಿಂದ ಅವರು ಹಿಂದಿನಂತೆ ಕಾಂಗ್ರೆಸ್ ಪಕ್ಷದವರಿಗೆ ವಿರೋಧಿಗಳಾಗಿ ನಿಲ್ಲಲಾರರು.

ಲಾಹೋರಿನಲ್ಲಿಯೂ, ಮೀರತ್ತಿನಲ್ಲಿಯೂ ಪೋಲೀಸರು ಬಾಂಬುಗಳ ಕಾರ್ಖಾನೆಗಳನ್ನು ಕಂಡುಹಿಡಿದು ಅನೇಕರನ್ನು ದಸ್ತಗಿರಿ ಮಾಡಿರುವರು. ಇದರಿಂದ ಅನೇಕ ಕಡೆ ಭಯೋತ್ಪಾದನೆಯುಂಟಾಗಿರುವುದು. ದೆಹಲಿಯ ಬಾಂಬಿನ ಪ್ರಕರಣವು ಮುಗಿಯುವುದಕ್ಕೆ ಮುಂಚೆಯೇ "ಹಿಂದುಸ್ಥಾನ್ ಸೋಷಿಯಲ್ ರಿಪಬ್ಲಿಕನ್ ಆರ್ಮಿ" ಎಂಬ ಅರಾಜಕರ ಸಂಸ್ಥೆಯ ಗುಟ್ಟೆಲ್ಲವೂ ಬಯಲಾಗುವುದರಲ್ಲಿದೆ.

ಚೀನಾದೇಶದ ನ್ಯಾಂಕಿಂಗ್ ಪ್ರಭುತ್ವದಮೇಲೆ ದಂಗೆಯೆದ್ದಿದ್ದ 'ಕ್ವಾಂಗ್ಸಿ' ಪಂಗಡದವರು ಪರಾಜಿತರಾಗಿ ಓಡಿ ಹೋಗುತ್ತಿರುವರು. ಚೀನಾದ ನೌಕಾಸೇನೆಯೆಲ್ಲವೂ ಕ್ವಾಂಗ್ಸಿಗಳ ಕಡೆಗೆ ಸೇರಿಕೊಂಡು ಬಿಟ್ಟಿದ್ದಿತು. ಆದರೆ ರಾಷ್ಟ್ರೀಯಪ್ರಭುತ್ವದವರ ಕೈಕೆಳಗೆ ಬಹಳ ಆಕಾಶಯಾನಗಳೂ, ಮಿಷನ್‌ಗನ್‌ಗಳೂ ಇದ್ದುದರಿಂದ ನೌಕಾಸೇನೆಯು ಸೋತು ರಾಷ್ಟ್ರೀಯ ಪ್ರಭುತ್ವದವರ ವಶವಾಯಿತು.

ಪರ್ಷಿಯಾದೇಶದಲ್ಲಿ ದೊಡ್ಡ ಭೂಕಂಪವಾಗಿರುವುದು. 'ಕುಛಾನ್' ಮತ್ತು 'ಷಿರ್‌ವಾನ್' ಎಂಬ ಪಟ್ಟಣಗಳ ಮಧ್ಯದಲ್ಲಿರತಕ್ಕ ಹಳ್ಳಿಗಳೆಲ್ಲವೂ ಹಾಳಾಗಿರುವುವು. ಈ ಭಯಂಕರ ಪರಿಣಾಮದಿಂದ ಪಾರಾದ ಜನರೆಲ್ಲರೂ ಆಶ್ರಯಸ್ಥಳಗಳಿಲ್ಲದೆ ಅಲೆದಾಡುವಂತಾಗಿದೆ. 'ಷಿರ್‌ವಾನ್' ಪಟ್ಟಣವು ಸಂಪೂರ್ಣನಾಶವಾದುದರಿಂದ ಅಲ್ಲಿಯ ನಿವಾಸಿಗಳು ಹೊಲಗದ್ದೆಗಳಲ್ಲಿ ವಾಸಮಾಡುತ್ತಿರುವರು.

ಜರ್ಮನಿದೇಶದ ಡಾ|| ಬಿಸೇಲರ್ ಎಂಬ ವೈಜ್ಞಾನಿಕನು ರೈಲುಗಾಡಿಗಳನ್ನು ನಿಲ್ಲಿಸಲು ಒಂದು ನೂತನೋಪಾಯವನ್ನು ಕಂಡುಹಿಡಿದಿರುವನು. ಈತನು ನಿರ್ಮಿಸಿರುವ ಒಂದು ವಿಧವಾದ ಕನ್ನಡಿಯನ್ನು ದೂರದಿಂದ ತೋರಿಸಿದೊಡನೆಯೇ ಆ ಕನ್ನಡಿಯಿಂದ ತೀಕ್ಷ್ಣವಾದ ಕಿರಣಗಳು ಹೊರಟು, ಸಂಬಂಧಿಸಲು ರೈಲುಗಾಡಿಯು ಆ ಕ್ಷಣದಲ್ಲಿಯೇ ನಿಲ್ಲುವುದಂತೆ! ಇದೊಂದು ವಿಚಿತ್ರಶೋಧನವೇ ಸರಿ!

ಮುಲ್ತಾನ್ ಪಟ್ಟಣದ ಒಬ್ಬ ಯುವಕನು ಕುಷ್ಠರೋಗದಿಂದ ನರಳುತ್ತಿದ್ದ ತನ್ನ ತಾಯಿಯ ಸಂಕಟವನ್ನು ನೋಡಲಾರದೆ ಆಕೆಗೆ ಪ್ರಜ್ಞೆ ತಪ್ಪುವಂತೆ ಔಷಧವನ್ನು ಕೊಟ್ಟು ಬಂದೂಕಿನಿಂದ ಹೊಡೆದು ಕೊಂದನು. ಅನಂತರ ತಾನೂ ಗುಂಡು ಹಾರಿಸಿ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿದಾಗ ಪೋಲೀಸರು ಅವನನ್ನು ಹಿಡಿದುಕೊಂಡುಹೋದರು. ಆ ಯುವಕನಿಗೆ ಪ್ರಾಣಾಪಾಯವೇನೂ ಆಗದಿದ್ದುದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿಸಿ ಅವನನ್ನು ಮಾತೃಹತ್ಯೆಯ ಆಪಾದನೆಗೆ ಗುರಿಪಡಿಸಿರುವರು.

ಪ್ರತಿವರ್ಷವೂ ಹಿಂದೂಸ್ಥಾನದಿಂದ ವಿದೇಶೀಯ ಪದಾರ್ಥಗಳೊಳಗೆ ಬಟ್ಟೆಗಾಗಿ 66 ಕೋಟಿ ರೂಪಾಯಿಗಳೂ, ಸಕ್ಕರೆಗಾಗಿ 18 ಕೋಟಿ ರೂಪಾಯಿಗಳೂ, ಉಪ್ಪಿಗಾಗಿ 14 ಕೋಟಿ ರೂಪಾಯಿಗಳೂ, ಮೋಟಾರುಗಳಿಗಾಗಿ 5 ಕೋಟಿ ರೂಪಾಯಿಗಳೂ, ಸಾರಾಯಿಗಾಗಿ 3 ಕೋಟಿ ರೂಪಾಯಿಗಳೂ, ಸಿಗರೇಟು ಚುಟ್ಟಾ ವಗೈರೆಗಳಿಗಾಗಿ 2 ಕೋಟಿ ರೂಪಾಯಿಗಳೂ, ಒಟ್ಟು 108 ಕೋಟಿ ರೂಪಾಯಿಗಳು ಪರದೇಶಿಯರ ಜೇಬಿನೊಳಗೆ ಬೀಳುತ್ತಿರುವುವು. ಹೀಗಾದಮೇಲೆ ಭರತಖಂಡವು ಉದ್ಧಾರವಾಗುವ ಬಗೆಯಂತು?

ಅಮೇರಿಕಾದೇಶದವರು ಹೊಸದಾಗಿ ಒಂದು ನಾಣ್ಯಪರೀಕ್ಷೆಯ ಯಂತ್ರವನ್ನು ಕಂಡುಹಿಡಿದಿರುವರು. ಅದನ್ನು ಒಂದು ವೈದ್ಯಶಾಲೆಯಲ್ಲಿಟ್ಟಿದ್ದಾಗ್ಯೆ ಯಾವನೋ ಒಬ್ಬನು ಖೋಟ್ಟಿನಾಣ್ಯವನ್ನು ಹಾಕಲು ಅದು "ಒಳ್ಳೆಯ ನಾಣ್ಯವನ್ನು ಮಾತ್ರ ಉಪಯೋಗಿಸು" ಎಂದು ಕೂಗಿತಂತೆ! ಈ ಯಂತ್ರವನ್ನು ತರಿಸಿಟ್ಟುಕೊಂಡರೆ ಖಜಾನೆಗಳಲ್ಲಿಯೂ ಅಂಗಡಿಗಳಲ್ಲಿಯೂ ಪಡುತ್ತಿರುವ ಶ್ರಮವು ಬಹುಮಟ್ಟಿಗೆ ಕಡಿಮೆಯಾಗುವುದು. ವೈಜ್ಞಾನಿಕರ ಬುದ್ಧಿಶಕ್ತಿಯನ್ನು ವರ್ಣಿಸುವದು ಅಸಾಧ್ಯವಾಗಿದೆ.

ಸೂರ್ಯಗ್ರಹಣವನ್ನು ನೋಡಲು ಅಮೇರಿಕಾದ ಕೆಲ ವೈಜ್ಞಾನಿಕರು 'ಮ್ಯಾನಿಲಾ' ಎಂಬ ಸ್ಥಳಕ್ಕೆ ಹೋಗಿದ್ದರು. ಅಲ್ಲಿ ಅವರು ಗ್ರಹಣದ ಫೋಟೋ ತೆಗೆದು ಸೂರ್ಯನ ಪರಿವೇಷ ಮತ್ತು ಗ್ರಹಣವು ಹಿಡಿದಾಗ ಭೂಮಿಯಮೇಲೆ ಉಂಟಾಗುವ ಪರಿಣಾಮ ಇವುಗಳ ವಿಷಯವಾಗಿ ಪರಿಶೋಧನಗಳನ್ನು ನಡೆಯಿಸಿದರು. ಮ್ಯಾನಿಲಾ ನಕ್ಷತ್ರಶಾಲೆಯ ಅಧಿಕಾರಿಯು, ಗ್ರಹಣಸಮಯದಲ್ಲಿ ಸೂರ್ಯನಸುತ್ತಲೂ ಬಹಳ ಸುಂದರವಾದ ಪರಿವೇಷವು ಕಂಡುಬಂದಿತೆಂತಲೂ, ಸೂರ್ಯನ ಸಮೀಪದಲ್ಲಿ ಅನೇಕ ಗ್ರಹಗಳೂ, ನಕ್ಷತ್ರಗಳೂ ಗೋಚರವಾದುವೆಂತಲೂ ಹೇಳಿರುವನು.

ಅಸೆಂಬ್ಲಿಯಲ್ಲಿ ಸಿಡಿಗುಂಡನ್ನು ಎಸೆದ ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತ ಎಂಬಿಬ್ಬರ ವಿಚಾರಣೆಯು ದಿಲ್ಲಿಯ ಸೆಂಟ್ರಲ್ ಜೈಲಿನಲ್ಲಿ ನಡೆಯಿತು. ಕೆಲವು ಜನರನ್ನು ಮಾತ್ರ ಪೋಲೀಸರು ಕೋರ್ಟಿನೊಳಗೆ ಬಿಟ್ಟಿದ್ದರು. ಆರೋಪಿಗಳು ಕೋರ್ಟಿಗೆ ಬಂದಕೂಡಲೆ "ಸಾಮ್ರಾಜ್ಯಸರ್ಕಾರಕ್ಕೆ ಧಿಕ್ಕಾರವಿರಲಿ" "ಕ್ರಾಂತಿಕಾರರಿಗೆ ಜಯವಾಗಲಿ" ಎಂದು ಗಟ್ಟಿಯಾಗಿ ಕೂಗಿದರು. ಅಷ್ಟರಲ್ಲಿಯೇ ನ್ಯಾಯಾಧಿಪತಿಗಳು ಅಪರಾಧಿಗಳ ಕೈಗಳಿಗೆ ಬೇಡಿಗಳನ್ನು ಹಾಕುವಂತೆ ಅಜ್ಞಾಪಿಸಿದರು. ಕೋರ್ಟಿನ ಕೆಲಸವು ಮುಗಿಯುವವರೆಗೆ ಇವರಿಬ್ಬರೂ ಹಸನ್ಮುಖಿಗಳಾಗಿ ಕುಳಿತಿದ್ದರು. ಭಗತ್‌ಸಿಂಗನ ತಾಯಿ ತಂದೆ ಮತ್ತು ಅಜ್ಜಿ ಇವರು ಕೋರ್ಟಿನಲ್ಲಿ ಕಣ್ಣೀರನ್ನು ಸುರಿಸುತ್ತ ಕುಳಿತಿದ್ದರಂತೆ!

ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆಗೆ 1,700 ಜನರು ಉಮೇದುವಾರರಾಗಿ ನಿಂತಿರುವರು. ನಾನಾಪಕ್ಷಗಳ ಮುಖಂಡರು ಮತ್ತು ಸದಸ್ಯರು ಎಲ್ಲಾ ಕಡೆಗಳಲ್ಲಿಯೂ ರಾಜಕೀಯ ಭಾಷಣಗಳನ್ನು ಮಾಡುತ್ತಿರುವರು. ಸ್ತ್ರೀಯರ ಓಟಿನ ಸಂಖ್ಯೆಯು ಪುರುಷರ ಓಟಿನ ಸಂಖ್ಯೆಗಿಂತಲೂ ಹೆಚ್ಚಾಗಿರುವುದು. ಕಾರ್ಮಿಕ ಪಕ್ಷ (ಲೇಬರ್-ಪಾರ್ಟಿ) ದ ಅನೇಕ ಜನರು ಚುನಾವಣೆಯಲ್ಲಿ ಜಯಶೀಲರಾಗುವುದಾಗಿ ಆಪಕ್ಷದ ನಾಯಕರಾದ ರಾಮ್ಸೆ ಮೆಕ್ಡೋನಾಲ್ಡ್‌ರವರು ಹೇಳುತ್ತಿರುವರು. ಭಾರತೀಯರಾದರೂ ಅದನ್ನೇ ಬಯಸುತ್ತಿರುವರು. ಯಾಕಂದರೆ, ಲೇಬರ್ ಪಾರ್ಟಿಯು ಪ್ರಭುತ್ವಕ್ಕೆ ಬಂದರೆ ಭರತಖಂಡಕ್ಕೆ ವಸತಿರಾಜ್ಯಗಳ ಸ್ವಾತಂತ್ರ್ಯವನ್ನು (ಡೊಮಿನಿಯನ್ ಸ್ಟೇಟಸ್) ದಯಪಾಲಿಸುವುದಾಗಿ ಹೇಳುತ್ತಿರುವ ಆಪಾರ್ಟಿಯ ಮುಖಂಡರ ಹುರುಳು ಆಗ ಚೆನ್ನಾಗಿ ವ್ಯಕ್ತವಾಗುವುದು.

ವಿಜಾಪುರ.

ವೈಶಾಖ ಶುದ್ಧ ೫ ದಿವಸ ಇಲ್ಲಿಯ ಹಿರೇಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನು ಅತ್ಯುತ್ಸಾಹದಿಂದ ನೆರವೇರಿಸಿದರು. ಜಗದಾಚಾರ್ಯರ ಭಾವಚಿತ್ರವು ಪಲ್ಲಕ್ಕಿಯಲ್ಲಿರಿಸಲ್ಪಟ್ಟು ಸಕಲ ರಾಜಬಿರುದಾವಳಿಗಳೊಂದಿಗೆ, ವಾದ್ಯವೈಭವದಿಂದಲೂ, ಜಗದಾಚಾರ್ಯರ ದಿವ್ಯಸ್ತುತಿಗಳಿಂದಲೂ ಯುಕ್ತವಾಗಿ ಉತ್ಸವವು ಸಾಯಂಕಾಲ ೭ ಗಂಟೆಗೆ ಹಿರೇಮಠದಿಂದ ಹೊರಟು ಯಾವತ್ತೂ ಪೇಟೆಗಳಲ್ಲಿ ಸಂಚರಿಸಿ, ರಾತ್ರಿ ೧೦ ಗಂಟೆಗೆ ಬೃಹನ್ಮಠವನ್ನು ಸೇರಿತು. ಪೇಟೆಗಳಲ್ಲಿ ಗುರುಭಕ್ತಿಶೀಲರಾದ ಜನರು, ಜಗದಾಚಾರ್ಯರ ಭಾವಚಿತ್ರಕ್ಕೆ ಕಾಯಿ, ಕರ್ಪೂರ ಮಂಗಳಾರತಿಗಳನ್ನು ಅತ್ಯಂತ ಭಕ್ತಿಯಿಂದ ಸಮರ್ಪಿಸಿ ಧನ್ಯರಾಗುತ್ತಿದ್ದರು. ಈ ಸಮಯದಲ್ಲಿ ಇಲ್ಲಿಯ ಬೃಹನ್ಮಠಾಧೀಶ ಶ್ರೀ ಶಂಭುಲಿಂಗ ಶಿವಾಚಾರ್ಯಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ, ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳನ್ನು ಸಮರ್ಪಿಸಿದರು.

ಭಜನಾಸಂಘದ ಸೆಕ್ರೆಟರಿ.

ಶ್ರೀ ರೇಣುಕಾಚಾರ್ಯರ ಸತ್ಕಥಾ ಶ್ರವಣವು.

ಚೀರನಳ್ಳಿ, ತರೀಕೆರೆ ತಾ||

ಈ ಗ್ರಾಮದಲ್ಲಿ ಹಾಲುಮಠದ ಮ|| ರಾ|| ಶಿರಣ್ಣನವರು, ತಿಮ್ಮಣ್ಣನವರು, ದಾಸಣ್ಣನವರು, ಹನುಮಯ್ಯನವರು, ಕೆಂಬಯ್ಯನವರೇ ಮೊದಲಾದ ಪ್ರಮುಖರು ಶ್ರೀ ಜಗದ್ಗುರು ರೇಣುಕಾಚಾರ್ಯರ ಪವಿತ್ರ ಚರಿತ್ರವನ್ನು ಶ್ರವಣಮಾಡಬೇಕೆಂಬ ಅಪೇಕ್ಷೆಯುಳ್ಳವರಾಗಿ ತಾ|| 6-5-29 ನೇ ಸೋಮವಾರ ಶಿವಕೀರ್ತನ ಗ್ರಂಥಮಾಲಾ ಲೇಖಕರಾದ ಮ|| ರಾ|| ಎಸ್. ಕರಿಬಸವಪ್ಪನವರು ನಾರಣಾಪುರ ಇವರಿಂದ ಶ್ರೀ ಜಗದಾಚಾರ್ಯರ ಕಥೆಯನ್ನು ಶ್ರವಣಮಾಡಿಸಿದರು. ಸದರಿ ಸತ್ಕಥಾಶ್ರವಣಕ್ಕೆ ಸ್ಥಳ ಮತ್ತು ಪರಸ್ಥಳದ ಸರ್ವಮತೀಯರೂ ಆಗಮಿಸಿದ್ದರು. ಜಗದ್ಗುರುವಿನ ಚರಿತ್ರದಲ್ಲಿ ತೋರಿಬಂದ ಮಹತ್ವ, ಭಕ್ತಿ, ಜ್ಞಾನ, ರಾಜಧರ್ಮ, ನೀತಿ ಮೊದಲಾದ ವಿಷಯಗಳು ಶ್ರೋತೃಗಳ ಮನಸ್ಸನ್ನಾಕರ್ಷಿಸಿ ಆನಂದಾಶ್ಚರ್ಯಗಳನ್ನುಂಟುಮಾಡುತ್ತಿದ್ದುದರಿಂದಲೇ ಆನಂದಸೂಚಕವಾದ ಜಯಘೋಷವೂ, ಕರತಾಡನವೂ ಆಯಾ ಕಾಲಗಳಲ್ಲಿ ಮೊಳಗುತ್ತಿದ್ದುವು.

ಮಾರನೆಯ ದಿನ ಬೆಳಗ್ಗೆ ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಭಗವತ್ಪಾದರು ಸೋಮನಾಥಲಿಂಗದಿಂದ ಅವತರಿಸಿದ ಭಾವಚಿತ್ರವನ್ನಿರಿಸಿ ಪಟ್ಟವಸ್ತ್ರರುದ್ರಾಕ್ಷಿ ಪುಷ್ಪಹಾರಗಳಿಂದ ಅಲಂಕರಿಸಿ ವಾದ್ಯಘೋಷದಿಂದಲೂ, ಭಜನಾಸಂಘದವರ ಭಜನೆಯಿಂದಲೂ, ತಳಿರುತೋರಣಗಳಿಂದಲಂಕೃತವಾದ ಪುರವೀಧಿಗಳಲ್ಲಿ ಉತ್ಸವವು ಹೊರಟು ಗ್ರಾಮದಲ್ಲಿ ಸಮಸ್ತ ವರ್ಣದವರಿಂದಲೂ ಭಕ್ತಿಪೂರ್ವಕವಾಗಿ ಅರ್ಪಿಸುವ ಮಂಗಳಾರತಿ ಫಲಪುಷ್ಪ ನಮಸ್ಕಾರಾದಿಗಳನ್ನು ಸ್ವೀಕರಿಸುತ್ತ ಬಹಳ ವಿಜೃಂಭಣೆಯಿಂದ ಮಧ್ಯಾಹ್ನ ಒಂದು ಘಂಟೆಗೆ ದೇವಾಲಯವನ್ನು ಸೇರಿತು. ಅನಂತರ ಸ್ತ್ರೀ ಪುರುಷರಾದಿಯಾಗಿ ಜನ ಬಾಹುಳ್ಯದಿಂದ ಕೂಡಿದ್ದ ಸಭೆಯಲ್ಲಿ ಮ|| ರಾ|| ಎಸ್. ಕರಿಬಸವಪ್ಪನವರು "ನಗುರೋರಧಿಕಂ" ಎಂಬ ವಾಕ್ಯದ ಮೇಲೆ ಶ್ರೀಗುರುವಿನ ಮಹಿಮೆಯನ್ನು ಕುರಿತು ಸ್ವಾರಸ್ಯವಾದ ಭಾಷಣವನ್ನು ಮಾಡಿದರಲ್ಲದೆ ಈ ಮಹತ್ಕಾರ್ಯವನ್ನು ಶ್ರೀ ರೇಣುಕಜಯಂತಿದಿನವಾದ ಫಾಲ್ಗುಣ ಶು|| ೧೩ ದಿವಸ ಪ್ರತಿವರ್ಷವೂ ಆಚರಿಸಬೇಕೆಂದು ತಿಳುಹಿಸಿದರು. ಅನಂತರ ಮಂಗಳವೂ ಬಾಲಕರ ಜಗದ್ಗುರು ಪ್ರಾರ್ಥನೆಯೂ ನಡೆದು ಸಭಿಕರಿಗೆ ತೀರ್ಥಪ್ರಸಾದ ಪಾನಕ ಫಲಾಹಾರಗಳು ವಿನಿಯೋಗಿಸಲ್ಪಟ್ಟು ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಈ ಮಹತ್ಕಾರ್ಯಕ್ಕೆ ವೇ|| ಮಠದ ರುದ್ರಪ್ಪಯ್ಯನವರು ಮ|| ರಾ|| ಪಟೇಲ ಸಿದ್ದೇಗೌಡರು, ಜಿ. ಬಸವಲಿಂಗಪ್ಪನವರು, ಲಿಂ|| ಮಹಾದೇವಪ್ಪನವರು, ಬಸಪ್ಪನವರು, ಡಿ. ಮಲ್ಲಪ್ಪನವರು, ಚನ್ನವೀರಪ್ಪನವರು, ಬಸವಪ್ಪಾಚಾರ್ಯರೇ ಮೊದಲಾಗಿ ಸರ್ವರೂ ಭಾಗಿಗಳಾಗಿ ನೆರವೇರಿಸಿದುದು ಕೇವಲ ಶ್ಲಾಘನೀಯವಾಗಿದೆ. ಇವರಿಗೆಲ್ಲಾ ಶ್ರೀ ಜಗದ್ಗುರುವು ಸಕಲ ಸನ್ಮಂಗಲಗಳನ್ನೀಯಲೆಂದು ಬಯಸುವ

ಓರ್ವ ಉತ್ಸವಭಾಗಿ.

ಶ್ರೀ ಕೇದಾರೇಶ್ವರನ ಅರ್ಚಕರ ಪ್ರಸ್ಥಾನ.

ತಾ|| 28-4-29 ರಲ್ಲಿ ಜಗದ್ಗುರು ಕೇದಾರಸಂಸ್ಥಾನ ಉಷಾಮಠದಲ್ಲಿ ಶ್ರೀ ಕೇದಾರನಾಥನ ಅರ್ಚಕರ ಪ್ರಸ್ಥಾನವು ಮುಂದೆ ಬರೆದಂತೆ ನೆರವೇರಿತು.

ಶ್ರೀ ಜಗದ್ಗುರು ರಾವಲ್ ಮಹಾಸ್ವಾಮಿಗಳು ....ಸನದಲ್ಲಿ ಮಂಡಿಸಿದ್ದರು, ಅಲ್ಲಿ ಅಲ್ಲಿ ಅನೇಕ ಗ್ರಾಮಗಳ ಜನಗಳು ಸೇರಿದ್ದರು. ಮಹಾವಿದ್ಯಾಲಯದ ಅಧ್ಯಾಪಕರೂ ಹಾಗೂ ಪಂ|| ಪುರಗಿರಿ ಚಿದ್ಘನಶಿವಾಚಾರ್ಯರೂ, ಜ್ಯೋತಿಷ್ಯರೂ, ವೈದಿಕರೂ, ಪುರೋಹಿತರೂ ಮುಂತಾದ ವಿದ್ವನ್ಮಂಡಲಿಯೂ, ಮಿಡಲ್ ಸ್ಕೂಲು ಹೆಡ್ಮಾಸ್ತರ ಮುಂತಾದವರೂ ಮಹಾಸನ್ನಿಧಿಯಲ್ಲಿ ಸಮ್ಮಿಲಿತರಾಗಿದ್ದರು. ಬಳಿಕ ಪುರೋಹಿತರು ಶ್ರೀ ಮಹಾಚಾರ್ಯರ ಪೂಜೆಯನ್ನು ಮಾಡಿದನಂತರ ಸಿದ್ಧಲಿಂಗದೇವನೆಂಬ ಅರ್ಚಕನಿಗೆ ಜಗದಾಚಾರ್ಯರಿಂದ ಪ್ರಸಾದರೂಪವಾದ ವಸ್ತ್ರಾಭರಣಗಳು ಕೊಡಲ್ಪಟ್ಟವು. ಬಳಿಕ ಅರ್ಚಕನು ಭಗವತ್ಪಾದರಿಗೆ ಮೂರುಸಾರೆ ದಂಡವತ್ಪ್ರಣಾಮಗಳನ್ನು ಮಾಡಿ ಸ್ವಸ್ಥಾನದಲ್ಲಿ ಮಂಡಿಸಿದನು. ಬಳಿಕ ಸಮ್ಮಿಲಿತ ಸಭಾಸದರಿಗೆ ಗಂಧಾಕ್ಷತ ಪ್ರಸಾದಗಳು ಹಂಚಲ್ಪಟ್ಟವು. ಅನಂತರ ಅರ್ಚಕರು, ಚೋಪದಾರರು, ವಾದ್ಯದವರು ಉತ್ಸವಪೂರ್ವಕ ಶ್ರೀ ಕೇದಾರೇಶ್ವರನ ಸನ್ನಿಧಿಗೆ ತೆರಳಿದರು.

ವಾಚಕಮಹಾಶಯರೇ ? ಈ ಕೇದಾರಕ್ಷೇತ್ರದಲ್ಲಿ ದಾಕ್ಷಿಣಾತ್ಯ ಮಾಹೇಶ್ವರಮೂರ್ತಿಗಳಿಂದಲೇ ಶ್ರೀ ಸ್ವಾಮಿಯ ಪೂಜಾದಿವಿನಿಯೋಗವು ನಡೆಯಿಸಲ್ಪಡುವದು ಹಾಗೂ ಆರು ತಿಂಗಳುಗಳವರೆಗೆ ಸಾಕಾಗುವ ವಿಶಿಷ್ಟ ಸಾಮಾನುಗಳು ಶ್ರೀ ಸಂಸ್ಥಾನ ಮಠದಿಂದಲೇ ಸಾಗಿಸಲ್ಪಟ್ಟವು. ಸುಮಾರು 30-40 ಜನರು ಅರ್ಚಕರಕೂಡ ಪ್ರಯಾಣಮಾಡಿದರು.

ಪ್ರತ್ಯಕ್ಷ ದರ್ಶಿ.

ಶ್ರೀ ಕೇದಾರೇಶ್ವರ ಮಹಾದ್ವಾರ ಕಪಾಟೋತ್ಘಾಟನೋತ್ಸವವು.

ತಾ|| 3-5-29 ರಲ್ಲಿ ಶ್ರೀ ಕೇದಾರಮಹಾಸಂಸ್ಥಾನ ಉಷಾಮಠದಿಂದ ಪ್ರಸ್ಥಾನಮಾಡಿದ ಮಹಾಜನವು ಶ್ರೀ ಕೇದಾರೇಶ್ವರನ ಸನ್ನಿಧಿಗೆ ತಲುಪಿತು. ಶ್ರೀ ಸಿದ್ಧಲಿಂಗದೇವನೆಂಬ ಅರ್ಚಕನು ಶ್ರೀ ಕೇದಾರೇಶ್ವರ ಮಹಾದ್ವಾರದ ಪೂಜೆಯನ್ನು ವೈದಿಕವಿಧಿಪ್ರಕಾರ ನಡೆಯಿಸಿದನು. ಅನಂತರ ಶ್ರೀ ಕಪಾಟಗಳು ತೆಗೆಯಲ್ಪಟ್ಟವು. ಈ ದೇಶದಲ್ಲಿ ಈ ಕ್ರಿಯೆಗೆ "ಫಟ್ ಖುಲನಾ" ಎಂದು ಹೇಳುವರು. ಅನಂತರ ಶ್ರೀ|| || ಧ್ವಜಾರೋಹಣವಾಯಿತು. ಬಳಿಕ ಅರ್ಚಕ ಸಿದ್ಧಲಿಂಗದೇವನು ಶ್ರೀ ರುದ್ರಾಭಿಷೇಕಾದಿ ಕ್ರಿಯೆಗಳನ್ನು ಯಥಾವಿಧಿಯಾಗಿ ಸಮಾಪ್ತಗೊಳಿಸಿದನು. ಶ್ರೀ|| || ಮಹಾದೇವ ಕೇದಾರೇಶ್ವರನ ಪೂಜಾದರ್ಶನಾದಿಗಳಿಗಾಗಿ ಮೈಸೂರು, ನೈಜಾಮ, ಕಾಶ್ಮೀರ, ನೇಪಾಳ ಮತ್ತು ಮುಂಬಯಿ ಪ್ರಾಂತೀಯ ಯಾತ್ರಿಕಜನಸ್ತೋಮವು ಕಿಕ್ಕಿರಿದಿದ್ದಿತು. ಎಲ್ಲ ದರ್ಶನಾರ್ಥಿ ಜನಸಮೂಹವೂ ಕಿಕ್ಕಿರಿದು ದೇವಾಲಯದಲ್ಲಿ ಶ್ರೀ|| || ಮಹಾಕೇದಾರೇಶ್ವರನ ಪೂಜಾದರ್ಶನಾದಿಗಳನ್ನು ಮಾಡುತ್ತಿದ್ದಿತು. ಮತ್ತು ಈ ಮಹೋತ್ಸವದ ವ್ಯವಸ್ಥೆಗಾಗಿ ಮಹಾಸಂಸ್ಥಾನದ ಮ್ಯಾನೇಜರರು ಚಪರಾಶಿಗಳು, ಮತ್ತು ಗಾರ್ನಮೆಂಟ್ ಪೋಲೀಸ ಇನ್ಸ್ಪೆಕ್ಟರರು ಹಾಗೂ ಪೋಲಿಸರೂ ಬಂದಿದ್ದರು. ಈರೀತಿ ಉತ್ಸವಪೂರ್ವಕವಾಗಿ ಶ್ರೀ ಪೂಜೋತ್ಸವಾದಿಗಳು ಭಾದ್ರಪದಮಾಸದವರೆಗೂ ನಡೆಯುವವು. ಈ ವರ್ಷ ಬರ್ಫವು ಕಡಿಮೆಯಾಗಿಬಿದ್ದಿದೆ. ಬೀದಿಯು ಚನ್ನಾಗಿದೆ. ಜಲವಾಯುಗಳು ಶುದ್ಧವಾಗಿವೆ. ಆದ್ದರಿಂದಲೇ ಅನೇಕಾನೇಕ ರಾಜರೂ, ಮಹಾರಾಜರೂ, ಶ್ರೀಮಂತರೂ, ಸಾಧುಸತ್ಪುರುಷರೂ ಯಾತ್ರಾಮಾರ್ಗದಲ್ಲಿ ಎಲ್ಲಿ ನೋಡಿದರೂ ಕಾಣಿಸಿಕೊಳ್ಳುತ್ತಿರುವರು. ಯಾತ್ರಿಕರು ಹರದ್ವಾರ ಮಾರ್ಗವಾಗಿ ಬಂದರೆ ಬಹಳ ಅನುಕೂಲವಾಗಿ ಶ್ರೀ|| || ಕೇದಾರೇಶ್ವರನ ಸನ್ನಿಧಿಗೆ ತಲ್ಪುವರು. ಜಯಕೇದಾರೇಶ್ವರ!

ಗುರವಾಜಿ ಹಿರೇಮಠ,
ಶ್ರೀ ಪಂಚಾಚಾರ್ಯ ಲೈಬ್ರರಿ ಸೆಕ್ರೆಟರಿ, ಬೆಳವಣಿಕಿ.

ಶ್ರೀ ಜಗದ್ಗುರು ದಾರುಕಾಚಾರ್ಯ ಪ್ರಾರ್ಥನಾಪಂಚಕಂ.

ಸೋಮಶೇಖರ ವಾಮದೇವಮುಖಾಂಬುಜಾತ ಸಮುದ್ಭವ | ಭೀಮದುಷ್ಕೃತದಾವದಾವ ಸುಮೋದ ಸಂಗತಮಾನಸ || ಕಾಮುಕದರ್ಪಮಹೋಷಭಾನುಶತ ಪ್ರತಾಪದಯಾನಿಧೇ | ದಾರುಕಾರ್ಯಜಗದ್ಗುರೋ ಮಮ ದೇಹಿ ಮುಕ್ತಿಮಹಾಸುಖಂ ||೧||

ಭಕ್ತಸಂಚಯ ಮುಕ್ತಿದಾನವಿಲೋಲ ಕೃತ್ತಮಹಾಮದ | ಭಕ್ತಿಭಿಕ್ಷುಕ ಭಕ್ತಪಾಲಕ ಶೈವತತ್ತ್ವವಿಬೋಧಕ || ತ್ಯಕ್ತಕೋಪವಿಕಾರ ಭೀಕರ ಮೃತ್ಯುಗರ್ವನಿರಾಸಕ | ದಾರುಕಾರ್ಯಜಗದ್ಗುರೋ ಮಮ ದೇಹಿ ಮುಕ್ತಿಮಹಾಸುಖಂ ||೨||

ಕ್ಲೇಶಪಂಚಕದೂರ ಮೋಕ್ಷಮುಖಾಮರಸ್ತುತ ಪಾದಭೋ | ಭಾಸಮಾನಕಲೇವರೇಶಸಮಾನರೂಪ ಶಮಾಲಯ || ಆಶುಗಾಧ್ವಚರಪ್ರಸಿದ್ಧಮಹತ್ವರತ್ನ ಸರಿತ್ಪತೇ | ದಾರುಕಾರ್ಯಜಗದ್ಗುರೋ ಮಮ ದೇಹಿ ಮುಕ್ತಿ ಮಹಾಸುಖಂ ||೩||

ಯೋಗಿಸಂಕುಲಮೌಲಿಮಂಡನ ಶಾಪದಂಡಿತ ದುರ್ಮತ | ಭೋಗಜಾತವಿರಾಗಸಂಚಿತಪೂಗಮಂಡಿತ ಮಾಕರ || ತ್ಯಾಗಿವರ್ಗವರೇಣ್ಯ ಖಂಡಿತ ದುಷ್ಟದುರ್ವಿಧಿನಾಶಕ | ದಾರುಕಾರ್ಯಜಗದ್ಗುರೋ ಮಮ ದೇಹಿಮುಕ್ತಿ ಮಹಾಸುಖಂ ||೪||

ಧರ್ಮಪೀಠವಿರಾಜಮಾನ ಸುಕರ್ಮಸಂಸ್ಕೃತಿ ಮರ್ಮವಿತ್ | ಶರ್ಮಶಾಸನಮಾಧವ ಪ್ರಿಯಯುಗಸ್ಥಲೋದ್ಭವಕಾರಣ || ಸ್ವರ್ಮಹೀಜಸುಮನ್ನೃಣಾಂ ಪ್ರಿಯಭಾಷಣೈಕಪರಾಯಣ | ದಾರುಕಾರ್ಯಜಗದ್ಗುರೋ ಮಮ ದೇಹಿಮುಕ್ತಿಮಹಾಸುಖಂ ||೫||

ದಾರುಕಾರ್ಯಜಗದ್ಗುರೋರ್ನುತಿಪಂಚಕಂ ಪ್ರಪಠಂತಿಯೇ | ಸಾರಭಕ್ತಿಯುತಾತ್ಮನಃ ಪರಿಮುಕ್ತ ಬಾಹ್ಯಲಘುಕ್ರಿಯಾಃ || ಕ್ರೂರಜನ್ಮಜರಾಂತಕಾಹಿತ ಮುತ್ತರಂತಿ ಭವಾಮಯಂ | ಶೀರಕೇ ಶಿವಸನ್ನಿಧಿಂ ಸುಖಮಾಪ್ನುವಂತಿಚ ಶಾಶ್ವತಂ ||೬||

ಶ್ರೀ ಪಟ್ಟಾಧೀಶ ಬೃಹನ್ಮಠ,
ಪಾಲೀಕೊಪ್ಪ.

ಸಕ್ಕರೆಯನ್ನು ಹೆಚ್ಚಾಗಿ ಉಪಯೋಗಿಸುವುದರಲ್ಲಿ ಕೆಡಕೇನು ?

ಬರೀ ಹೊಟ್ಟೆಯಲ್ಲಿ ಸಕ್ಕರೆಯನ್ನು ತಿಂದಪಕ್ಷದಲ್ಲಿ, ಅದು ಬೇಗನೆ ಜೀರ್ಣವಾಗಿ ರಕ್ತದೊಡನೆ ಕಲೆಯುವುದು. ಆ ಸಕ್ಕರೆಯು ಹುಳಿತು ನೊರೆಯಾಗುವುದಕ್ಕೆ ಮೊದಲೇ ಜೀರ್ಣಿಸಿ ರಕ್ತಗತವಾಗುವುದರಿಂದ, ಅದು ದೇಹದ ಶಕ್ತಿವೃದ್ಧಿಗೆ ಉಪಯೋಗಪಡುವುದು. ಆದುದರಿಂದ ಮಕ್ಕಳಿಗೂ, ಮೈದುಡಿದು ಕೆಲಸಮಾಡತಕ್ಕವರಿಗೂ, ಬಹುಬೇಗನೆ ರಕ್ತಕ್ಕೆ ಹೊಂದಿಕೊಳ್ಳುವಂತಿರುವ ಕಾರ್ಬೋಹೈಡ್ರೇಟು ಅತ್ಯವಶ್ಯಕವಾಗಿರುವುದರಿಂದ, ಭೋಜನಕಾಲಗಳನ್ನು ಬಿಟ್ಟು ಮಧ್ಯಕಾಲಗಳಲ್ಲಿ ಸಕ್ಕರೆಯನ್ನು ಉಪಯೋಗಿಸುವುದು ಒಳ್ಳೆಯದು. ಹೀಗೆ ಉಪಯೋಗಿಸುವುದರಿಂದ ಸಕ್ಕರೆಯು ಅವರ ದೇಹಶ್ರಮವನ್ನು ತಗ್ಗಿಸಿ, ಸ್ನಾಯುಗಳಿಗೆ ಅಥವಾ ಮಾಂಸಗ್ರಂಥಿಗಳಿಗೆ ಪುಷ್ಟಿಯನ್ನೂ, ಬಲವನ್ನೂ ಕೊಡುವುದು. ಮತ್ತು ಸ್ನಾಯುಗಳ ರಚನಾ ತಂತುಗಳಿಗೆ ಪೋಷಕವಾಗುವುದು.

ಹಾಗಿಲ್ಲದೆ ಸಕ್ಕರೆಯನ್ನು ಭೋಜನಕಾಲದಲ್ಲಿ ಯಾವ ರೂಪದಿಂದ ಸೇವಿಸಿದರೂ ಅದರಿಂದ ಕೆಡುಕುಂಟು. ಏಕೆಂದರೆ ? ಆಹಾರಪದಾರ್ಥಗಳೊಡನೆ ಮಿಳಿತವಾಗಿ ಹೊಟ್ಟೆಗೆ ಹೋಗುವ ಸಕ್ಕರೆಯು, ಆಯಾ ಆಹಾರಗಳೊಡನೆ ಬಹಳ ನಿಧಾನವಾಗಿ ಜೀರ್ಣವಾಗಬೇಕಾದುದರಿಂದ, ಬಹಳ ಹೊತ್ತು ಹೊಟ್ಟೆಯಲ್ಲಿ ತಂಗಿ, ಹುಳಿತು ನೊರೆಯಾಗಲು ಅವಕಾಶವು ಏರ್ಪಡುವುದು, ಈ ವಿಧವಾಗಿ ಹೊಟ್ಟೆಗೆ ಸಕ್ಕರೆಯು ಎಷ್ಟು ಹೆಚ್ಚಾಗಿ ಸೇರಿದರೆ, ಅಷ್ಟು ಹೆಚ್ಚಾಗಿ ಮತ್ತು ಅಷ್ಟು ಶೀಘ್ರವಾಗಿ ನೊರೆಗಟ್ಟುವುದು.

ಕಬ್ಬು ಅಥವಾ ಗೆಣಸುಗಳಿಂದ ತೆಗೆದ ಸಕ್ಕರೆಯನ್ನು ತಿಂದರೆ, ಅದು ಹುಳಿಯನ್ನುಂಟುಮಾಡುವ ಕ್ರಿಮಿಗಳಿಗೆ ಬಹಳ ಉತ್ತೇಜಕವಾದ ಆಹಾರವಾಗುವುದು. ಮತ್ತು ಅದು ಜಠರಕೋಶದಲ್ಲಿಯೂ, ಕರುಳುಗಳಲ್ಲಿಯೂ, ಕೆಟ್ಟ ವಾಯುವನ್ನೂ, ಕೆಟ್ಟ ಆಮ್ಲವನ್ನೂ ಉಂಟುಮಾಡುವುದು. ಪ್ರಾಯಿಕವಾಗಿ ಸಣ್ಣವಯಸ್ಸಿನವರಿಗಾಗಲಿ, ದೊಡ್ಡವರಿಗಾಗಲಿ ಸಂಭವಿಸುವ ಅಜೀರ್ಣದ ಬಾಧೆಗಳಿಗೆಲ್ಲ ಹೊಟ್ಟೆಯಲ್ಲಿ ಸಕ್ಕರೆಯು ಹುಳಿತು ಹೋಗುವುದೇ ಕಾರಣವಾಗಿದೆ. ಹೊಟ್ಟೆಯಲ್ಲಿ ಹೆಚ್ಚು ನೊರೆಗಟ್ಟುವುದು, ವಾಯು ಸೇರುವುದು, ಮಲಬದ್ಧತೆ, ಭೇದಿ ಮೊದಲಾದ ಬಾಧೆಗಳಿಂದ ನರಳುತ್ತಿದ್ದ ರೋಗಿಗಳನ್ನು ವಿಚಾರಿಸಿ ನೋಡಿದುದರಲ್ಲಿ, ಅವರೆಲ್ಲ ಪ್ರಾಯಿಕವಾಗಿ ಮಧುರಪದಾರ್ಥಗಳನ್ನು ಹೆಚ್ಚಾಗಿ ತಿಂದುದಾಗಿ ತಿಳಿದು ಬರುತ್ತಿದೆ. ಇಂಥವರು ಆಹಾರಗಳಲ್ಲಿ ಸಿಹಿಪದಾರ್ಥಗಳನ್ನು ತಗ್ಗಿಸುವುದವಶ್ಯವು.

ಜಿ. ಡಂ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ !!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [8]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಬೆಲೆಯಲ್ಲಿ ಕಡಿಮೆಯಾದದ್ದು !
ಗುಣದಲ್ಲಿ ಮೇಲಾದದ್ದು !
ಶೀಘ್ರಗುಣಕಾರಿಯಾದದ್ದು !

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು "**ಗೃಹಮಾತೆ**"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಿಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲುಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಆದ್ದರಿಂದ ಈ ಔಷಧಾಲಯಕ್ಕೆ "**ಅಷ್ಟವರ್ಗೌಷಧಾಲಯ**"ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[7] **848. Ganjipet Poona City.**

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖಿನಿಯಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ, ಶಕ್ತಿವೈಶಿಷ್ಟ್ಯ, ಹರಿಹರರಿಗಿರುವ ಶಕ್ತಿಶಕ್ತಿಮದ್ಭಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾವಿದ್ವಾನ್ ಪಂಡಿತ ಭಾಲಾಕ್ಷಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುರಗಿರಿ ಶ್ರೀ ಚಿದ್ಘನ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| 3 ಅಕ್ಷಯತೃತೀಯಾ (ತಾ|| 11-5-29) ನೆಯ ದಿವಸ ಪ್ರಕಾಶವಾಗುವದು. ಈ ದಿನದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.

[8] **ಶ್ರೀ ಶಿವತತ್ವಗ್ರಂಥಮಾಲಾಮಂದಿರ**
ಜಂಗಮವಾಡಿಮಠ ಬನಾರಸ್ ಸಿಟಿ.

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

1928—ಈ ವರ್ಷದಲ್ಲಿ ನಡೆದಿರತಕ್ಕಷ್ಟು ವಿಮೆಗಳು ಕಂಪೆನಿಯ ಚರಿತ್ರೆಯಲ್ಲೇ ಇರಲಿಲ್ಲ !!

ಈಗ ಜಾರಿಯಲ್ಲಿರುವ ಮೊಬಲಗು	ರೂ.	1,36,00,00,000
ಹೊಸದಾಗಿ ಆಗಿರುವದು	ರೂ.	26,20,00,000
ಹಂಚಿರುವ ಲಾಭ	ರೂ.	58,62,400
ಕೊಟ್ಟಿರುವ ವಾರಸು	ರೂ.	87,27,300

ಈ ಕಂಪೆನಿಯನ್ನೇ ಚುನಾಯಿಸಬೇಕಾದ ಕಾರಣಗಳು—

1. ಪ್ರಪಂಚದ 5 ಖಂಡಗಳಲ್ಲಿಯೂ ಇರತಕ್ಕ ಈ ಕಂಪೆನಿಯ ವಿಮೆದಾರರ ಜೊತೆಯಲ್ಲಿ, ಇಂಡಿಯಾ ದೇಶದಲ್ಲೇ 5 ಲಕ್ಷ ಜನಗಳನ್ನುಳ್ಳ (ವಿಮೆದಾರರು) ಭಾರಿಸಂಸಾರದಲ್ಲಿ ಸೇರಿ ಭಾಗಿಗಳಾದಂತಾಗುತ್ತೆ.
2. ಎಷ್ಟೇ ಕಡಿಮೆಯೆಂದರೂ ರೂ. 1,000 ಗಳ ವಿಮೆಗೆ ರೂ. 500 ರಿಂದ 600 ರ ವರೆಗೂ ಲಾಭವನ್ನು ಪಡೆಯಬಹುದು. ಇನ್ನೂ ಜಾಸ್ತಿಯಾಗುವ ಸಂಭವವೂ ಉಂಟು.
3. ಈ ರಾಕ್ಷಸಶಕ್ತಿಯನ್ನುಳ್ಳ ದುಡ್ಡು ಅನುಕೂಲಗಳನ್ನುಳ್ಳದ್ದು ಮತ್ತ್ಯಾವದೂ ಇಲ್ಲ.
4. ಗಂಡಸರು, ಹೆಂಗಸರು, ಮಕ್ಕಳು ಯಾರು ಬೇಕಾದರೂ ವಿಮೆ ಮಾಡಬಹುದು.

[47] **ಏಜಂಟರು ಬೇಕಾಗಿದೆ.**

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ. ಅಥವಾ ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು **ಯಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ಪೀಪರ್ಸ್‌ಲೈನ್, ಮೈಸೂರು.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹುಮೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಪಪುಷ್ಪ, ಕಾಲಿಮಕಂದ, ಮಧುಕಂದ, ಜಪಾಕಂಧ, ಶಾಲೀಮಲೀಕಂದ, ಅಶ್ವಕಂದ ಕ್ರೌಷ್ಟ ಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಪಬೀಜ, ನಾಗಬೀಜ, ಬಾಳಬೀಜ, ಭೋಕರೀ ಬೀಜ, ನವಲೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಶಮಿಪತ್ರಿ, ಶಿಕಾಪತ್ರಿ, ಮದನಮಸ್ತ, ರತಿಪುರುಷ, ಕಮರಕಸ, ಕಪಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಮಿಶ್ರಿ, ಸಫೇತಮುಶ್ರಿ, ತಾಲೀಮಖಾನಾ, ಬೀಜಬಂದ, ಹರಣಖೋರಿ, ಮುಂಗಲೇ ಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸರೀಮುಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವಿಬೆಂಡಿಬೇರು, ಅಮೃತಸತ್ವ, ಇಸಬಗೋಲ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [18]

ಪತ್ತೆ—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ !!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಬ್ಬಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವಹಿ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಡೋಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಸ್ಸು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿ ಚಶ್ಮಗಳೂ, ಪ್ರೀಮಸ್‌ಗಳೂ, ಇತರ ಪ್ರಸಿದ್ಧ ಫರಂಗಳೂ ನಮ್ಮಲ್ಲಿ ಇರುತ್ತವೆ. ಕ್ಯಾಟಲಾಗಿಗೆ ಬರೆಯಿರಿ. [42]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಿಂದಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನ ಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು, ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪		ರೂ. ಆ. ಪೈ.
	ಬೆಲೆ ೧ ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦	ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮||	ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪	ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦	ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ	೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ	ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ	೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ	೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟೆ ದುಷ್ಪ್ರಶ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟ್ ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ಧಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[47] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಷ್ಟ್ವಿದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ ನೇ ಮೇ ೧೯೨೯ [ಸಂಚಿಕೆ ೩.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮೂರ್ಖತನದ ಭಾಷಣ.

ದಾವಣಗೆರೆಯಲ್ಲಿ ನೆರವೇರಿದ ಬಸವನಜಯಂತಿ ಸಮಯದಲ್ಲಿ ಹುಬ್ಬಳ್ಳಿಯಲ್ಲಿ ವಕೀಲತನದಿಂದ ಹೊಟ್ಟೆ ಹೊರಕೊಳ್ಳುತ್ತಿರುವ ಲಿಂಗಾಯಿತ ಸಿಂಪಿಗಜಾತಿಯ ಪಾವಟೆ ಸಿದ್ಧರಾಮಪ್ಪನೆಂಬಾತನು ಶತಮೂರ್ಖತನದ ಭಾಷಣವನ್ನು ಮಾಡಿ ಅದನ್ನು 18 ನೆಯ ತಾರೀಖಿನ ಸ್ಟಾರ್ ಪತ್ರಿಕೆಯಲ್ಲಿ ಎರಡನೆಯವರ ದ್ವಾರಾ ಪ್ರಸಿದ್ಧಪಡಿಸಿಕೊಂಡು, ನಾನು ಇಷ್ಟು ಮೂರ್ಖನಿದ್ದೇನೆನ್ನುವುದನ್ನು ಜಗತ್ತಿನ ಜನರಿಗೆಲ್ಲಾ ತೋರಿಸಿರುತ್ತಾನೆ. ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ಈತನ ಭಾಷಣದ ಸಾರಾಂಶವು ಕೆಳಗೆ ಕೊಟ್ಟಂತಿರುತ್ತದೆ.—

"ರೇಣುಕನು ಲಿಂಗೋತ್ಪತ್ತಿಯಾದುದು ಆತನ ದುರ್ಬಲತ್ವವನ್ನು ವ್ಯಕ್ತಪಡಿಸುತ್ತದೆ. ಬಸವನು ಯೋನಿಜನಾಗಿ ಹುಟ್ಟಿ, ಧರ್ಮಸ್ಥಾಪನೆ ಮಾಡಿದ್ದು ಆತನ ಪ್ರಬಲತ್ವವನ್ನು ವ್ಯಕ್ತಪಡಿಸುತ್ತದೆ. ಇವರಿಬ್ಬರಿಗೂ ಬಲಿಷ್ಠ ಬಲಹೀನ ಜಟ್ಟಿಗಳ ಉದಾಹರಣೆಯು ಸರಿಹೋಗುತ್ತದೆ. ಬಲಹೀನ ಜಟ್ಟಿಯು ಗಟ್ಟಿ ನೆಲದ ಮೇಲೆ ಲಗಾಟ ಹೊಡೆಯಲು ಹೆದರಿ ಅರಳೆ ಅಂಡಿಗೆಯ ಮೇಲೆ ಹೊಗೆಯುವಂತೆ ರೇಣುಕನು ಭವಬಂಧದಲ್ಲಿ ಸಿಲುಕಿ ನರಳಲು ಹೆದರಿ ಲಿಂಗೋದ್ಭವನಾದನು....ಇತ್ಯಾದಿ"

ಈತನ ಅಭಿಪ್ರಾಯವನ್ನು ನೋಡುವಲ್ಲಿ ಲಿಂಗೋದ್ಭವರಾದವರಿಗಿಂತಲೂ ಯೋನಿಯಿಂದ ಹುಟ್ಟಿಬಂದು ಅಹಂಕಾರಾದಿಗುಣಗಳನ್ನು ದೂರಮಾಡಿದವರೇ ಶ್ರೇಷ್ಠರೆಂದು ತೋರಿಬರುತ್ತದೆ. ಹಾಗಾದರೆ ಮನುಷ್ಯಯೋನಿಯಲ್ಲಿ ಜನಿಸಿ ಅಹಂಕಾರಾದಿಗುಣಗಳನ್ನು ಅಳಿದಿರುವವರಿಗಿಂತಲೂ ಪಶುಯೋನಿಯಲ್ಲಿ ಜನಿಸಿ ಪಶುಧರ್ಮವನ್ನು ಕಳೆದುಕೊಂಡು ಮಾನವರಿಗೂ ಸಹ ಅಸಾಧ್ಯಗಳಾದ ಕಾರ್ಯಗಳನ್ನು ಮಾಡುತ್ತಿರುವ ಪಶುಗಳೇ ಶ್ರೇಷ್ಠವೆಂದು ಧಾರಾಳವಾಗಿ ಹೇಳಬಹುದಲ್ಲವೇ? ಪಾಶ್ಚಿಮಾತ್ಯದೇಶದಲ್ಲಿ ಡಂಕನ್ ಎಂಬವರು ಸಾಕಿರುವ "ರಿಂಟಿ" ಎಂಬ ನಾಯಿಯು ಅದ್ಭುತಗಳಾದ ಕಾರ್ಯಗಳನ್ನು ಮಾನವರಿಗಿಂತಲೂ ಹೆಚ್ಚಾಗಿ ಮಾಡುತ್ತಿರುವದು. ಅದರಲ್ಲಿ ನಾಯಿಯ ಸ್ವಭಾವವೇ ಇಲ್ಲ. ಈ ನಾಯಿಯು ತನ್ನಲ್ಲಿರತಕ್ಕ ಲೋಕೋತ್ತರ ಗುಣಗಳಿಂದ ಯೂರೋಪ್, ಆಫ್ರಿಕಾ, ಅಮೆರಿಕಾ, ಏಸಿಯಾ ಈ ನಾಲ್ಕು ಖಂಡಗಳಲ್ಲಿಯೂ ಕೀರ್ತಿಯನ್ನು ಹೊಂದಿರುವದು. ಇಷ್ಟು ಕೀರ್ತಿಯನ್ನು ಸಿದ್ಧರಾಮಪ್ಪನ ಇಷ್ಟವಸ್ತುವು ಹೊಂದಿರುವದೇ? ಅಂದ ಮೇಲೆ ಈತನ ಕುಟಿಲಾಭಿಪ್ರಾಯಕ್ಕನುಸಾರವಾಗಿ ಈಗ ಬಲಿಷ್ಠ ಮತ್ತು ಬಲಹೀನ ಜಟ್ಟಿಗಳು ಯಾರು ಯಾರು ಆಗಬಹುದೆನ್ನುವದನ್ನು ಸಿದ್ಧರಾಮಪ್ಪನು ಯೋಚಿಸುವನೇನು? ಪೂರ್ವಾಪರ ಪರಿಜ್ಞಾನವಿಲ್ಲದೆ ಮೂಲಾಚಾರ್ಯರ ವಿಷಯದಲ್ಲಿ ಮನಸ್ಸಿಗೆ ಬಂದಂತೆ ದೃಷ್ಟಾಂತವನ್ನು ಕೊಟ್ಟು ಉಪನ್ಯಾಸಮಾಡುವದು ಉನ್ಮತ್ತತನದ ಪ್ರಭಾವವಲ್ಲದೆ ಬೇರೊಂದಲ್ಲ; ಜಗದುದ್ಧಾರಕನೂ ಜಗದ್ವಂದ್ಯನೂ ಅರಿಷಡ್ವರ್ಗದೂರನೂ ಆದ ಶ್ರೀ ರೇಣುಕನು ಬಲಹೀನ ಜಟ್ಟಿಯಂತೆ! ಕಾಮಕ್ರೋಧಾದಿಗಳಿಗೀಡಾಗಿ ತನ್ನನ್ನು ಸಾಕಿ ಸಲಹಿದ ತನ್ನ ಸ್ವಾಮಿಯಾದ ಬಿಜ್ಜಳಭೂಪಾಲನನ್ನೇ ಕೊಲ್ಲಿಸಿದ ಬಸವನು ಬಲಿಷ್ಠ ಜಟ್ಟಿಯಂತೆ! ಆಹುದು ಇವನು ಜಟ್ಟಿಯೇ ಜಟ್ಟಿಯು! ಇವನ ಕಾಲದಲ್ಲಿ ಜಟ್ಟಿಯ ಕೆಲಸಗಳೇ ಬಹಳವಾಗಿವೆ. ಇರಲಿ; ಗುರುಸಾರ್ವಭೌಮರನ್ನು ಬಸವನಿಗಿಂತಲೂ ಕಡೆಯಾಗಿ ಮಾಡಿ ಬರೆದಿರುವ ಇಂಥ ಗುರುದ್ರೋಹದ ಲೇಖಗಳನ್ನು ಸ್ಟಾರ್ ಪತ್ರಿಕಾಕರ್ತರು ಪ್ರಕಟಿಸುತ್ತ ಪುನಃ ಸಮಾಜದಲ್ಲಿ ಕಲಹಾಗ್ನಿಯನ್ನು ಪ್ರಜ್ವಲಿಸಲಿಕ್ಕೆ ಪ್ರಾರಂಭಿಸಿರುವದನ್ನು ನೋಡಿ ವಿಷಾದಪಡಬೇಕಾಗಿದೆ. ಇಷ್ಟು ದಿವಸ ಸ್ಟಾರ್ ಪತ್ರಿಕೆಯಲ್ಲಿ ಗುರುದ್ರೋಹಾತ್ಮಕ ಲೇಖಗಳು ಬರುತ್ತಿರಲಿಲ್ಲವಾದುದರಿಂದ ಸಮಾಜದಲ್ಲಿ ಶಾಂತಿಯು ನೆಲೆಗೊಂಡಿತ್ತು. ಹೀಗೆ ಶಾಂತಿಯು ನೆಲೆಗೊಳ್ಳುವದು ಯೋಗ್ಯವಾದುದಲ್ಲವೆಂದೋ ಏನೋ ಭಾವಿಸಿ ಪುನಃ ಮೊದಲಿನ ಉದ್ಯೋಗವನ್ನು ಕೈಕೊಂಡಂತೆ ಕಾಣುತ್ತದೆ. ಆದುದರಿಂದ ಈ ಪತ್ರಿಕಾಕರ್ತರು ಗುರುನಿಂದಾರೂಪ ಮಾರ್ಗದಲ್ಲಿ ಪ್ರವೇಶಿಸದೆ ಸಕಲರ ಪ್ರೀತಿಗೆ ಪಾತ್ರರಾಗಬೇಕೆಂದು ಆಶಿಸುತ್ತೇನೆ.

ಪಂಚಾಕ್ಷರಶರ್ಮಾ.

ಸ್ವೀಕಾರ.

ಸೊಲ್ಲಾಪುರ ಡಿ|| ದರ್ಗನಹಳ್ಳಿಯಲ್ಲಿ ಪ್ರತಿವರ್ಷ ನೆರವೇರುವ ಲಕ್ಷ್ಮಾದೇವಿಯ ಜಾತ್ರೆಯಲ್ಲಿ ಅನೇಕ ಮೂಕಪ್ರಾಣಿಗಳು ಹತವಾಗುತ್ತಿದ್ದು ಈ ವರ್ಷ ಮಾತ್ರ ಆಕಸ್ಮಿಕತೆಯು ಹೋಟಗಿ ಶ್ರೀ ಪಟ್ಟದ ಸ್ವಾಮಿಗಳವರ ಬೋಧೆಯಿಂದ ತಪ್ಪಿದ ಸಂತೋಷಕ್ಕೋಸ್ಕರ ಮ|| ರಾ|| ಈಶ್ವರಪ್ಪ ಬಿರಜದಾರ, ಮೋಲಗಿರಿಯಪ್ಪ ಬಿರಜದಾರ, ರಾಮಪ್ಪ ಬಿರಜದಾರ ಇವರು ಪ್ರಭಾಪೋಷಣಕ್ಕಾಗಿ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಹೊಸಪೇಟೆ ತಾ|| ಕೋರಣಗಲ್ಲು ಗ್ರಾಮದ ಹಿರೇಮಠದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 4 ರೂಪಾಯಿಗಳು ವೇ|| ಹಿರೇಮಠದ ನಂಜುಂಡಯ್ಯನವರ ದ್ವಾರಾ ತಲ್ಪಿರುತ್ತವೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮೊಣಸಿಗಿ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಸಮಯದಲ್ಲಿ ಮ|| ರಾ|| ಅರಳಿ ಶಿವಪ್ಪನವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ತೆಗೆದು ಕಳುಹಿಸಿರುತ್ತಾರೆ.

ನಂಜನಗೂಡು ತಾ|| ಹೊಸಪುರದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಸಮಯದಲ್ಲಿ ಪ್ರಭಾಪೋಷಣಕೋಸ್ಕರ ತೆಗೆಯಿಸಿದ 1 ರೂಪಾಯಿಯು ಮ|| ರಾ|| ಟಿಂಬರ್ ಕಂಟ್ರಾಕ್ಟರ್ ಪುಟ್ಟಲಿಂಗಪ್ಪನವರ ದ್ವಾರಾ ತಲ್ಪಿರುತ್ತದೆ.

ಸೊಲ್ಲಾಪುರ ಡಿ|| ಹೋಟಗಿ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯ ಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಬಾಪೂರಾವ ಪಾಟೀಲ ಇವರ ದ್ವಾರಾ ತಲ್ಪಿರುತ್ತದೆ.

ಬೆಳಗಾಂವ ಡಿ|| ತೀರದಾಳ ಗ್ರಾಮದ ಬಸವರಪ್ಪ ಶೀಲವಂತ ಇವರ ಮನೆಯಲ್ಲಿ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಹಿರೇಮಠದ ಪಟ್ಟದ ಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಸಂ—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವಗಳು.

ಹೊಸಕಟ್ಟಿ.

ಮಹಾಶಯರೇ ? ಭರತಖಂಡದಲ್ಲಿ ರತಕ್ಕ ಸರ್ವಮತಸ್ಥಾಪಕರಾದ ಆಚಾರ್ಯರು ತಮ್ಮ ತಮ್ಮ ಮತದ ಧರ್ಮಾಧಿಕಾರವನ್ನು ಸರಿಯಾಗಿ ಪರಿಪಾಲಿಸುತ್ತ ಶಿಷ್ಯಕೋಟಿಯನ್ನುದ್ಧಾರ ಮಾಡುತ್ತಿರುವದು ಸರ್ವರಿಗೂ ವಿದಿತವೇ ಅದೆ. ಪ್ರತಿಯೊಂದು ಮತದವರು ತಮ್ಮ ಮತಸ್ಥಾಪಕರ ಆಜ್ಞೆಯನ್ನು ಅನುಸರಿಸಿ ಅದರಂತೆ ಆಚರಿಸಿ ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳಬೇಕಾಗಿದೆ. ಪ್ರತಿಯೊಬ್ಬನಿಗೂ ನಿಜಾನಂದದಾಯಕವಾದ ಮುಕ್ತಿಸುಖವು ದೊರೆಯಬೇಕಾದರೆ ಗುರುವಿನಿಂದಲ್ಲದೆ ಅನ್ಯರಿಂದ ಸರ್ವಥಾ ದೊರೆಯುವದಿಲ್ಲ. ವೇದಾಂಗವೇದೋಪನಿಷತ್ತುಗಳು "ನಗುರೋರಧಿಕಂ ನಾಸ್ತಿ ತತ್ತ್ವಂ ಗುರೋಃಪರಂ" ಎಂದು ಗುರುವಿಗಿಂತಲೂ ಅಧಿಕವಾದ ವಸ್ತುವು ತ್ರಿಲೋಕದಲ್ಲಿಲ್ಲವೆಂದು ಸಾರುತ್ತಿರುವವು. ವಿಷ್ಣು ಬ್ರಹ್ಮ ಮೊದಲಾದ ದೇವತೆಗಳೂ ಕೂಡ ಗುರುಸೇವೆಯಿಂದಲೇ ಕೃತಾರ್ಥರಾದರೆಂದು ಎಷ್ಟೋ ಸ್ಥಳಗಳಲ್ಲಿ ಕಂಡುಬರುತ್ತದೆ. ಯಾವ ಗುರುವರ್ಯನು ಚಿತ್ಸ್ವರೂಪನಾಗಿ ಸರ್ವಜನ ಹೃದಯಾಕಾಶದಲ್ಲಿ ಅವಕಾಶವಿಲ್ಲದೆ ವ್ಯಾಪಿಸಿಕೊಂಡಿರುವ ಅಜ್ಞಾನಾಂಧಕಾರವನ್ನು ದೂರೀಕರಿಸಿ ಜ್ಞಾನಸೂರ್ಯೋದಯವನ್ನುಂಟುಮಾಡಿ ಸಕಲೇಷ್ಟಸಿದ್ಧಿಗಳನ್ನು ಕರತಲಾಮಲಕಗಳನ್ನಾಗಿ ಮಾಡುತ್ತಿರುವನೋ ಅಂಥ ಕರುಣಾರಸಭರಿತಾಂತರಂಗನಾದ ಗುರುಪುಂಗವನ ಉಪಕಾರವು ಎಷ್ಟು ಕೋಟಿ ಜನ್ಮವನ್ನು ತಾಳಿ ತನುಮನೋಧನಗಳನ್ನರ್ಪಿಸಿ ಜನನಾದಾರಭ್ಯ ದೇಹಾವಸಾನಪರ್ಯಂತ ಸಕಲ ವಿಷಯಗಳನ್ನು ತೊರೆದು ಅಹೋರಾತ್ರ ಆತನ ಸೇವೆಯನ್ನು ಮಾಡಿದರೂ ತೀರಲು ಸಾಧ್ಯವಿಲ್ಲ. ಹೀಗಿದ್ದರೂ ಕೆಲ ಜನ ಮೂಢರು ಆ ಗುರುಮಹಿಮೆಯನ್ನರಿಯದೆ ಮನಸ್ಸಿಗೆ ಬಂದಂತೆ ವರ್ತಿಸುತ್ತಿರುವದನ್ನು ಕಂಡು ವ್ಯಸನವೆನಿಸುತ್ತದೆ. ಇರಲಿ; ಯಾವ ಮಹಾತ್ಮರು ದಿವ್ಯದೇಹಧಾರಿಗಳಾಗಿ ಲಿಂಗಮುಖದಿಂದವತರಿಸಿ ಈ ಭೂಮಂಡಲದಲ್ಲಿ ಶಿವಸಿದ್ಧಾಂತವನ್ನು ನೆಲೆಗೊಳಿಸಿ ಎಲ್ಲೆಲ್ಲಿಯೂ ಶಿವಭಕ್ತಿಯ ವಿಜಯಪತಾಕೆಯನ್ನು ಸ್ಥಿರಗೊಳಿಸಿದರೋ ಅಂಥ ವೀರಶೈವಮತಸ್ಥಾಪನಾಚಾರ್ಯರ ಜಯಂತಿಹಬ್ಬಗಳನ್ನು ಮಾಡುವದು ಗುರುಭಕ್ತಿಪರಾಯಣರಾದ ಶುದ್ಧವೀರಶೈವರ ಕರ್ತವ್ಯವಾದ್ದರಿಂದ ಜಿಲ್ಲಾ ಧಾರವಾಡ ಶಿಗ್ಗಾವಿ ತಾಲೂಕ ಪೈಕಿ ಹೊಸಕಟ್ಟಿಗ್ರಾಮದಲ್ಲಿ ವೈಶಾಖ ಶುದ್ಧ ಪಂಚಮಿ ತಾರೀಖು ೧೩-೫-೨೯ ಸೋಮವಾರ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಸರ್ವಭಕ್ತಮಾಹೇಶ್ವರರಿಂದ ಮಹಾ ವೈಭವದೊಡನೆ ಜರಗಿಸಲ್ಪಟ್ಟಿತು. ಈ ಕಾರ್ಯಕ್ಕೋಸ್ಕರ ಸದರಿ ಗ್ರಾಮದವರ ಪ್ರಾರ್ಥನೆಯ ಮೇರೆಗೆ ಹುಬ್ಬಳ್ಳಿ ತಾಲೂಕ ಪೈಕಿ ಪಾಲೀಕೊಪ್ಪದ ಬೃಹನ್ಮಠಾಧ್ಯಕ್ಷರಾದ ಷ|| ಬ್ರ|| ಶ್ರೀ|| ಗಂಗಾಧರಶಿವಾಚಾರ್ಯರವರು ಆಗಮಿಸಿದ್ದರು. ಶು|| ೫ ಸೋಮವಾರ ದಿವಸ ಈಶ್ವರ ಮಂದಿರದಲ್ಲಿ ಪ್ರಾತಃಕಾಲದ ಆರುಗಂಟೆಗೆ ಜಗದಾಚಾರ್ಯರ ಭಾವಚಿತ್ರಕ್ಕೆ ಶಾಸ್ತ್ರೋಕ್ತ ಏಕಾದಶರುದ್ರಾಭಿಷೇಕವು ವೇ|| ವೀರಬಸವಶರ್ಮಾ ಹಿರೇಮಠ ಪಾಲೀಕೊಪ್ಪ, ವೇ|| ಫಕೀರಯ್ಯಾ ಜಕನೂರ ನಾಗರಹಳ್ಳಿ ಈ ಉಭಯರಿಂದ ಆರಂಭಿಸಲ್ಪಟ್ಟು ನಾಲ್ಕೈದು ಘಂಟೆಗಳವರೆಗೆ ವಿಧ್ಯುಕ್ತವಾಗಿ ನಡೆದು ಸಮಾಪ್ತಿಗೊಂಡಿತು. ಈ ಶುಭಸಮಯದಲ್ಲಿ ಮಂಗಲವಾದ್ಯಗಳು ಭೋರ್ಗರೆಯುತ್ತಿದ್ದವಲ್ಲದೆ ಅನೇಕಜನ ಭಕ್ತರು ಆಚಾರ್ಯರ ಭಜನೆಯನ್ನು ಮಾಡುತ್ತಿದ್ದರು. ಮಧ್ಯಾಹ್ನದ ೧೨ ಗಂಟೆಗೆ ಅಭಿಷೇಕಕರ್ಮವು ಮುಗಿದನಂತರ ನಾಲ್ಕುಗಂಟೆಯವರೆಗೆ ಭೂರುದ್ರ ಸಂತರ್ಪಣೆಯು "ನ ಭೂತೋನ ಭವಿಷ್ಯತಿ" ಎಂಬಂತೆ ಸಾಗಿತು. ಅನಂತರ ಅನೇಕ ಯಾಚಕವೃಂದಕ್ಕೆ ಅನ್ನಪ್ರಸಾದ ಪ್ರದಾನವಾದನಂತರ ಸದರಿ ದೇವಾಲಯದಲ್ಲಿ ರಮ್ಯವಾಗಿ ನಿರ್ಮಿಸಲ್ಪಟ್ಟ ಸಿಂಹಾಸನದ ಮೇಲೆ ಪ್ರತಿಷ್ಠೆಗೊಳಿಸಿದ ಜಗದಾಚಾರ್ಯರ ಪಾದಸನ್ನಿಧಿಯಲ್ಲಿ ಸರ್ವರ ಅನುಮತಿಯ ಮೇರೆಗೆ ಪಾಲೀಕೊಪ್ಪದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಮೊದಲು ಮ|| ರಾ|| ಮುದಿಗೌಡ್ರ ಪಾಟೀಲ ಕನ್ನಡಶಾಲಾ ಹೆಡ್‌ಮಾಸ್ತರ ಅರಳೀಕಟ್ಟಿ ಇವರು ೧ ಘಂಟೆಯವರೆಗೆ ಹರಗುರುಗಳ ವಿಷಯದಲ್ಲಿ ಭಾಷಣವನ್ನು ಮಾಡಿ ಸರ್ವರಿಗೂ ಆನಂದವನ್ನುಂಟುಮಾಡಿದರು. ... ಲೆ ಅಧ್ಯಕ್ಷ ಮಹಾಶಯರು ಜಯಂತಿ, ಜಗದ್ಗುರತ್ವ, ಗುರು... ಈ ವಿಷಯಗಳನ್ನು ಕುರಿತು ೨ ಘಂಟೆಗಳವರೆಗೆ ಸುಶ್ರಾವ್ಯವಾದ ಭಾಷಣವನ್ನು ಮಾಡಿ ಸಕಲರಿಗೂ ಮಹದಾನಂದವನ್ನುಂಟುಮಾಡಿದರು. ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಆಮೇಲೆ ಅಲಂಕರಿಸಲ್ಪಟ್ಟ ಪಾಲಕಿಯಲ್ಲಿ ಜಗದಾಚಾರ್ಯರ ಭಾವಚಿತ್ರದ ಮೆರವಣಿಗೆಯೂ ಹಾಗೂ ಸದರಿ ಸ್ವಾಮಿಗಳ ಮೆರವಣಿಗೆಯೂ ನಡೆಯಿತು. ಸಕಲಜನರು ತಮ್ಮ ತಮ್ಮ ಮನೆಯ ಮುಂದೆ ಉತ್ಸವವು ಬಂದ ಕೂಡಲೆ ಉತ್ಸವಮೂರ್ತಿಯ ಪಾದಕ್ಕೆ ಶುದ್ಧನೀರಿನ ಕೊಡವನ್ನು ಸುರಿದು ಫಲತಾಂಬೂಲಾದಿಗಳನ್ನರ್ಪಿಸಿ ಮಂಗಲಾರತಿಯನ್ನು ಮಾಡುತ್ತ ತಮ್ಮ ನಿರತಿಶಯಭಕ್ತಿಯನ್ನು ಪ್ರಕಟೀಕರಿಸುತ್ತಿದ್ದರು. ಸದರಿ ಗ್ರಾಮದ ಎರಡು ಭಜನಾಸಂಘದವರ ಮತ್ತು ಪಾಲೀಕೊಪ್ಪದ ಭಜನಾಸಂಘದವರ ಚಿತ್ತಾಕರ್ಷಕ ಭಜನೆಯನ್ನು ಕೇಳಿ ಗುರುನಾಮವನ್ನುಚ್ಚರಿಸದ ಗುರುಮಹಿಮೆಯನ್ನು ಕೊಂಡಾಡದ ಮುಖಗಳೇ ಉಳಿಯಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹೀಗೆ ಬಹು ವೈಭವದಿಂದ ಮೆರವಣಿಗೆಯು ಈಶ್ವರ ದೇವಾಲಯಕ್ಕೆ ಮುಟ್ಟಿದಮೇಲೆ ಸರ್ವಜನರ ಪ್ರಾರ್ಥನೆಯ ಮೇರೆಗೆ ಸ್ವಾಮಿಗಳವರು ಆಚಾರವಿಷಯಕವಾಗಿ ಉಪದೇಶಿಸಿ ಸರ್ವರೂ ಗುರುಸ್ಮರಣೆಯನ್ನು ಮಾಡಿರೆಂದು ಹೇಳಿದ್ದಲ್ಲದೆ "ಜಗದ್ಗುರು ದಾರುಕಾಚಾರ್ಯಪ್ರಾರ್ಥನಾ ಪಂಚಕ" ವನ್ನು ಅಂದವಾಗಿ ಪಠಿಸಿ ತೋರಿಸಿದರು. ಆಮೇಲೆ ದೇಶವಿಘಾತಕಗಳಾದ ಚಹಾ, ಚುಟ್ಟಾ, ಸಿಗರೇಟು, ಮದ್ಯ ಮೊದಲಾದವುಗಳಿಂದಾಗುವ ದುಷ್ಪರಿಣಾಮವನ್ನು ಬಹು ಸರಸವಾಗಿ ಬಣ್ಣಿಸಿದ್ದಲ್ಲದೆ ದೇಶಭಕ್ತಿ, ಖಾದೀಪ್ರಸಾರ ಇವುಗಳ ಪರಿಣಾಮವನ್ನೂ ಇವುಗಳಿಂದಾಗುವ ದೇಶೋನ್ನತಿಯನ್ನೂ ಚೆನ್ನಾಗಿ ವಿವರಿಸಲು ಎಷ್ಟೋ ಜನರು ಚಹಾ ಮೊದಲಾದವುಗಳನ್ನೂ ಬಿಡಲಿಕ್ಕೂ ಖಾದೀ ಧರಿಸಲಿಕ್ಕೂ ಮನಃಪೂರ್ವಕವಾಗಿ ಗುರುಪಾದಸ್ಪರ್ಶದ್ವಾರಾ ಸಭೆಯಲ್ಲಿಯೇ ಪ್ರಮಾಣವನ್ನು ಮಾಡಿದರು. ಅನಂತರ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮರುದಿವಸ ಸಮಾಜಸುಧಾರಣೆಯ ಅರ್ಧಭಾರವನ್ನು ವಹಿಸಿದ ಸ್ತ್ರೀಯರ ಸಭೆಯು ಸ್ವಾಮಿಗಳ ಸನ್ನಿಧಿಯಲ್ಲಿ ಸಾಂಗವಾಗಿ ಜರುಗಿತು. ತಾ|| ೧೫ ನೆಯ ದಿವಸ ಹಾಲುಮತದವರೆಲ್ಲರೂ ತಮ್ಮ ದುರ್ದೆಸೆಯನ್ನೂ, ಇತರರ ಉನ್ನತಿಯನ್ನೂ ಚೆನ್ನಾಗಿ ವಿಮರ್ಶಿಸಿ ನಾವು ಶಿವಾಚಾರಕ್ಕೆ ನಡೆದುಕೊಳ್ಳುವರಾಗಿದ್ದರೂ ಎಷ್ಟು ಹೀನಾವಸ್ಥೆಯಲ್ಲಿರುವೆವಲ್ಲ ? ಎಂದು ಆಲೋಚಿಸಿ ಸ್ವಾಮಿಗಳಿಗೆ ಬಿನ್ನಹವನ್ನು ಮಾಡಿ ತಮ್ಮಲ್ಲಿಗೆ ಬರಮಾಡಿಕೊಂಡು ನಮ್ಮನ್ನು ಉಪದೇಶದ್ವಾರಾ ಉದ್ಧರಿಸಬೇಕೆಂದು ಬೇಡಿಕೊಳ್ಳಲು ಅದಕ್ಕೆ ಶ್ರೀಗಳು ಒಪ್ಪಿ ಬೋಧಿಸಲಾಗಿ ಈ ಊರಲ್ಲಿಯ ಹಾಲುಮತದವರಲ್ಲಿ ಮುಂದಾಳುಗಳಾದ ಬಸಪ್ಪ ಕುರುಬರ, ಯಲ್ಲಪ್ಪ ಜೋಗೇರ, ಗೂಳಪ್ಪ ಮತ್ತೀಕಟ್ಟಿ, ಕರಿಯಪ್ಪ ಕುರಿ, ಬಸಪ್ಪ ಗೂಳಪ್ಪ ಕುರುಬರ, ಚನ್ನಪ್ಪ ವಾಲೀಕಾರ ಈ ಜನರೆಲ್ಲರೂ ಮಾಂಸಾಹಾರವನ್ನು ಬಿಡುವದಕ್ಕೂ, ವೀರಶೈವರಲ್ಲದವರ ಸಂಗಡ ಬೀಗೆ ಭೋಜನಗಳನ್ನು ದೂರೀಕರಿಸುವುದಕ್ಕೂ ಕಟಿಬದ್ಧರಾಗಿ ಶ್ರೀಗಳವರ ಚರಣಕಮಲಗಳಲ್ಲಿ ಸಾಷ್ಟಾಂಗ ಪ್ರಣಾಮದೊಡನೆ ತಮ್ಮ ಮಸ್ತಕಗಳನ್ನಿಡಲಾಗಿ ಉಳಿದ ಹಾಲುಮತದ ಆಬಾಲವೃದ್ಧ ಸ್ತ್ರೀಪುರುಷರು ಪ್ರಮಾಣಗೈದು ಆಶೀರ್ವಾದವನ್ನು ಹೊಂದಿ ಪುನೀತರಾದರು. ಈ ಮಹನೀಯರ ಆಗಮನವು ನಮ್ಮ ದೇಶದ ಭಾಗ್ಯಕ್ಕಾಗಿಯೇ ಆಗಿದೆ. ಈ ಊರ ಜನರು ಸರ್ವರ ಮನಸ್ಸಿಗೂ ಬರುವಂತೆ ಎರಡುಮೂರುದಿವಸಗಳ ಪರ್ಯಂತವಾಗಿ ಸಮಾಜಸುಧಾರಣೆಯ ವಿಷಯಗಳನ್ನೊಡಗೊಂಡು ಜಯಂತಿಯನ್ನು ಸಮರ್ಪಕವಾಗಿ ಮಾಡಿದ್ದಕ್ಕೋಸ್ಕರ ಜಗದಾಚಾರ್ಯರು ಈ ಜನರಿಗೆ ನಿತ್ಯಮಂಗಲವನ್ನೀಯಲೆಂದು ಗುರುವರ್ಗವು ಸಮಾಜಸುಧಾರಣೆಯಬಗ್ಗೆ ಶಾಂತಿಯುಕ್ತ ಸಮೇತವಾದ ವೀರವ್ರತವನ್ನು ಧರಿಸಲೆಂದು ಹಾರೈಸುತ್ತೇನೆ. ಈ ಕಾರ್ಯವು ನಿರಂತರವಾಗಿ ಸಮಾಪ್ತಿಗೊಂಡಬಗ್ಗೆ ವೇ|| ಫಕೀರಯ್ಯ ಜಕನೂರು 1 ರೂ. ರಾ|| ಶಿವಪ್ಪ ಕಾಟಿ 1 ರೂ. ರಾ|| ಚನ್ನಪ್ಪ ವಾಲೀಕಾರ 1 ರೂ. ದೈವದವರು 2 ರೂಪಾಯಿಗಳನ್ನು ಪ್ರಭಾಸೇವೆಗೋಸ್ಕರ ಭಕ್ತಿಯಿಂದ ಸಮರ್ಪಿಸಿದರು. ಈ ಕಾರ್ಯದಲ್ಲಿ ಸಮಾಜಹಿತಕ್ಕೋಸ್ಕರ ತನುಮನೋಧನಗಳನ್ನರ್ಪಿಸಿ ಮನಸಾ ಪ್ರಯತ್ನಮಾಡಿದ ಮುಂದಾಳುಗಳ ನಾಮನಿರ್ದೇಶವು ಕೆಳಗೆ ಬರೆದ ಪ್ರಕಾರವಿದೆ. ರಾ|| ಅಡಿವೆಪ್ಪಗೌಡ್ರು ಪಾಟೀಲ, ಗೂಳಪ್ಪ ಮಲ್ಲಿಗವಾಡ, ಗೂಳಪ್ಪ ಬೊಗೇರಿ, ಸಣ್ಣಗೂಳಪ್ಪ ಮಲ್ಲಿಗವಾಡ, ಚನ್ನಬಸಪ್ಪ ನವಲಗುಂದ, ವೀರಪ್ಪ ಅಣ್ಣಿಗೇರಿ, ಬಸಪ್ಪ ಮೇಗುಂಡಿ, ಗೂಳಪ್ಪ ಮಜ್ಜಿಗುಡ್ಡ, ಚನ್ನಪ್ಪ ವಾಲೀಕಾರ, ಭರಮಪ್ಪ ಗೋಣಪ್ಪನವರ, ಹಿಂದುಳಿದ ವೀರಶೈವ ಬಾಂಧವರೇ ? ಇನ್ನಾದರೂ ಎಚ್ಚರಗೊಳ್ಳಿರಿ; ನಾವು ಯಾರೆಂದು ವಿಚಾರಿಸಿರಿ, ನಿಮ್ಮ ಹೀನಸ್ಥಿತಿಯನ್ನು ಲೀನಗೊಳಿಸಿರಿ; ಹರ, ಗುರುಗಳ ಸೇವೆಯಂ ಮಾಡಿರಿ; ನಿಜವಾದ ಭಕ್ತಿಪತಾಕೆಯನ್ನು ಧರ್ಮದ ಯಶೋದುಂದುಭಿಯ ದಿವ್ಯಧ್ವನಿಯೊಡನೆ ದಶದಿಕ್ಕುಗಳಲ್ಲಿ ಮೆರೆಯಿಸಿರೆಂದು ಹಾರೈಸುವ,

ಓರ್ವ ಗುರುಪಾದಕಿಂಕರ.

ಧಾರವಾಡ.

ವೈಶಾಖ ಶುದ್ಧ ತೃತೀಯಾ ಶನಿವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ವೈಶಾಖ ಶುದ್ಧ ಪಂಚಮಿ ಸೋಮವಾರ ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಯನ್ನೂ ಧಾರವಾಡ ಪಟ್ಟಣದ ಸಮಸ್ತ ವೀರಶೈವರು ಅತ್ಯಂತ ವೈಭವದಿಂದಾಚರಿಸಿದರು. ಶುಕ್ರವಾರಪೇಟೆ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಾತಃಕಾಲ 8 ಘಂಟೆಗೆ ಜಗದ್ಗುರುಗಳ ಲಿಂಗೋದ್ಭವ ಭಾವಚಿತ್ರವನ್ನು ರುದ್ರಾಭಿಷೇಕ ಷೋಡಶೋಪಚಾರಗಳಿಂದ ಪೂಜಿಸುವದರಲ್ಲಿ ಬಂದಿತು. ಆಮೇಲೆ ಭಾವಚಿತ್ರನನ್ನು ಶೃಂಗರಿಸಿದ ಸಿಂಹಾಸನದ ಮೇಲೆ ಇರಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆಯೂ ಪಂಚಾಚಾರ್ಯರ ಭಜನಾಸಂಘದವರ ಸ್ತುತಿಪಾಠದೊಡನೆಯೂ ಜಂಗಿನ ಮೇಳವ ಅನೇಕ ವಾದ್ಯವೈಭವದೊಡನೆಯೂ ಹಿರೇಮಠದಿಂದ ಉತ್ಸವವು ಹೊರಟು ತಳಿರುತೋರಣಗಳಿಂದಲಂಕರಿಸಲ್ಪಟ್ಟ ಮುಖ್ಯ ಮುಖ್ಯ ರಾಜಬೀದಿಗಳಲ್ಲಿ ಸ್ವಮತ ಪರಮತೀಯರಿಂದ ಅತ್ಯಂತ ಭಕ್ತಿವಿಶ್ವಾಸಪೂರ್ವಕವಾಗಿ ಅರ್ಪಿಸುವ ಕಾಯಿ, ಕರ್ಪೂರ, ಫಲಪುಷ್ಪಾದಿಗಳನ್ನು ಸ್ವೀಕರಿಸುತ್ತ ಪುನಃ ಹಿರೇಮಠಕ್ಕೆ ಮಧ್ಯಾಹ್ನ 12 ಘಂಟೆಗೆ ಬಂದು ತಲ್ಪಿತು. ಶ್ರೀಯುತ ಉಳವನಗೌಡ ಬಸವನಗೌಡ ಪಾಟೀಲ, ಹೊಸಯಲ್ಲಾಪುರ, ಮ್ಯುನಿಸಿಪಲ್ ಕೌನ್ಸಿಲರ ಇವರು ಪ್ರಭಾಪೋಷಣಾರ್ಥವಾಗಿ ನಾಲ್ಕು ರೂಪಾಯಿಗಳನ್ನು ಶ್ರೀಯುತ ಶಿವಬಸಪ್ಪ ಬೆಟಗೇರಿ, ವಕೀಲ ಧಾರವಾಡ ಇವರ ಕಡೆಗೆ ಒಪ್ಪಿಸಿದರು. ಬಳಿಕ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣದ ಬುಕ್ಕುಗಳು ಸರ್ವರಿಗೂ ಉಚಿತವಾಗಿ ಹಂಚಲ್ಪಟ್ಟವು. ಸಮಸ್ತ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯು ರಾತ್ರಿ 9 ಘಂಟೆಯವರೆಗೂ ನಡೆಯಿತು. ಆಮೇಲೆ ಮೂರು ದಿವಸಗಳವರೆಗೆ ಕೀರ್ತನ, ಭಜನೆ ಭಾಷಣಗಳು ನಡೆದವು. ಶ್ರೀ ಜಗದ್ಗುರುಗಳ ಜಯಂತಿಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಿದ ಸಮಸ್ತ ಭಕ್ತಮಂಡಲಿಗೆ ಶ್ರೀಮತ್ಪಂಚಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಹಾರೈಸುವ.

ಬಿ. ವ್ಹಿ. ಮುಮ್ಮಿಗಟ್ಟಿ, ಸೆಕ್ರೆಟರಿ.
ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ.
ಧಾರವಾಡ.

ಬಳ್ಳಾರಿ.

ಈ ನಗರನಿವಾಸಿಗಳಾದ ವೀರಶೈವಮಂಡಳಿಯವರು ಪದ್ಧತಿ ಮೇರೆಗೆ ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ವೈ|| ಶು|| ೩ ತಾ|| 11-5-29 ರಲ್ಲು ಶ್ರೀ ಏಕೋರಾಮಾರಾಧ್ಯರ ಭಾವಪಟವನ್ನು ಸ್ಥಾಪಿಸಿ ವೇದೋಕ್ತವಾಗಿ ಪೂಜೆಯನ್ನು ನೆರವೇರಿಸಿದರು. ಮತ್ತು ವೈ|| ಶು|| ೫ ತಾ|| 13-5-29 ರಲ್ಲು ಶ್ರೀ ದಾರುಕಾಚಾರ್ಯರ ಭಾವಪಟವನ್ನು ಸ್ಥಾಪಿಸಿ ಪೂಜೆಯನ್ನು ವೇದೋಕ್ತವಾಗಿ ನೆರವೇರಿಸಿದರು. ಅನಂತರ ರಜತದ ಪ್ರಭಾವಳಿಯ ಪಲ್ಲಕ್ಕಿಯಲ್ಲಿ ಉಭಯ ಶ್ರೀ ಜಗದ್ಗುರುಗಳ ಭಾವಪಟಗಳನ್ನು ಮೂರ್ತಗೊಳಿಸಿ ರಾತ್ರಿ 8 ಘಂಟೆಗೆ ಉತ್ಸವವು ಆರಂಭವಾಯಿತು. ಮುಂಭಾಗದಲ್ಲಿ ವೈದಿಕವಿದ್ಯಾರ್ಥಿಗಳ ವೇದಘೋಷವು ಸುಶ್ರಾವ್ಯವಾದ ವಾಲಗ ಬ್ಯಾಂಡು ಮುಂತಾದ ವಾದ್ಯನಿನಾದವು ಮೊಳಗುತ್ತಿದ್ದಿತು. ಈ ಮಹೋತ್ಸವಕ್ಕಾಗಿ ಶ್ರೀ ಪಂಚಾಚಾರ್ಯ ಸೇವಾಸಂಘದವರು ಸ್ಥಳಸ್ಥಳಗಳಲ್ಲಿ ಜಾಹೀರುಮಾಡಿದ ಮೇರೆಗೆ ಅನೇಕಜನ ಪರಸ್ಥಳದವರು ಬಂದಿದ್ದರು. ಈ ಗ್ರಾಮದ ಶೆಟ್ರು, ಯಜಮಾನರು, ಮ|| ರಾ|| ಶಿವಾಚನ್ನಬಸಪ್ಪನವರು, ಮ|| ರಾ|| ಕೋರಿ ಸೂಗೂರಪ್ಪನವರು, ಮ|| ರಾ|| ಪವಾಡಶೆಟ್ಟಿ ಮಲ್ಲಾಜಪ್ಪನವರು, ಮ|| ರಾ|| ಕೊಂಡಕುಂದಿ ಭೋಗಪ್ಪನವರು ಮುಂತಾದ ದೈವದವರು ಕಾಲೇಜು ಹೈಸ್ಕೂಲು ವಿದ್ಯಾರ್ಥಿಗಳು ಈ ಉತ್ಸವದಲ್ಲಿ ಭಾಗಿಗಳಾಗಿದ್ದರು. ಉತ್ಸವವು ಕೇರು, ಬಜಾರು, ಬೆಂಗಳೂರು ರೋಡು, ಬ್ರಾಹ್ಮಣರ ವೀದಿ, ಸಕ್ಕರಿ ಕರಡಪ್ಪನವರ ವೀದಿ ಮುಂತಾದ ಕಡೆಯಲ್ಲಿ ಪದ್ಧತಿಯಂತೆ ನಡೆಯಿತು. ಮತಭೇದವಿಲ್ಲದೆ ಸರ್ವಜನಾಂಗದವರು ಆಚಾರ್ಯಭಗವತ್ಪಾದರಿಗೆ ಫಲಪುಷ್ಪಮಾಲಿಕಾದಿಗಳನ್ನು ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ಸಮರ್ಪಿಸುತ್ತಿದ್ದರು. ಉತ್ಸವವು ಶ್ರೀ|| ವೇ|| ಮರಿಸ್ವಾಮಿಗಳವರ ಮಠವನ್ನು ರಾತ್ರಿ 11 ಘಂಟೆಗೆ ಸೇರಿದ ಬಳಿಕ ಮಂಗಳಾರತಿಯಾಗಿ ಪ್ರಸಾದವು ಹಂಚಲ್ಪಟ್ಟಿತು. ಆ ಸಮಯದಲ್ಲಿ ತಡಕಲ್ಲು ಶಾಸ್ತ್ರಿಗಳವರು ಕೀರ್ತನವನ್ನು ಮಾಡಿ ಸರ್ವರನ್ನೂ ಆನಂದಗೊಳಿಸಿದರು. ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಿದ ಭಕ್ತಮಂಡಳಿಗೆ ಶ್ರೀ ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಕೋರುವ,

ಗುರುಭಕ್ತಕಿಂಕರ,
ಬಳ್ಳಾರಿ.

ಸಿಂಗಟಾಲೂರು.

ಪದ್ಧತಿಪ್ರಕಾರ ಈ ಗ್ರಾಮದ ಹಿ|| ಮಠದ ವೃಷಭಲಿಂಗಯ್ಯನವರು ಮ|| ರಾ|| ಪಾಟೀಲಕಾದ ಸಿದ್ಧಪ್ಪನವರು ಹಾಗೂ ಮುದಕನಗೌಡ್ರ ಹೇಮರಡ್ಡಿ ಇವರು ಸದರಿ ಮೇಲ್ಕಂಡ ಮಠಕ್ಕೆ ನಮ್ಮ ವಿದ್ಯಾಗುರುಗಳಾದ ವೇ|| ಸಿ. ಗಂಗಾಧರಶಾಸ್ತ್ರಿಗಳು ಪ್ರಸನ್ನದೇವರ ಮಠ ಮಾಗಳ ಇವರನ್ನು ಬರಮಾಡಿಕೊಂಡು ಸದರಿ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ದಾರುಕಾಚಾರ್ಯರ ಭಾವಚಿತ್ರವನ್ನು ವಿಧಿಪ್ರಕಾರ ಅರ್ಚಿಸಿ ವಿದ್ಯಾರ್ಥಿಗಳೆಲ್ಲರೂ ಪುಷ್ಪಾಂಜಲಿಯನ್ನು ಮಾಡಿ ಜಗದಾಚಾರ್ಯರ ಜಯಜಯಕಾರದೊಡನೆ ವಿರಾಮ ಮಾಡಿದರು. ಇದೇ ಪ್ರಕಾರವಾಗಿ ವೀರಶೈವಗುರುಭಕ್ತರೆಲ್ಲರೂ ಮತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನೂ ಸಹ ಆಯಾಯ ಶುಭದಿವಸಗಳಲ್ಲಿ ಆಚರಿಸಿ ಮೂಲ ಪಂಚಾಚಾರ್ಯಗುರುಗಳ ಕೃಪೆಗೆ ಪಾತ್ರರಾಗಬೇಕೆಂದೂ ಅತ್ಯುತ್ತಮಧಾರ್ಮಿಕವಿಷಯಾದಿಗಳಿಂದೊಡಗೂಡಿದ ಪ್ರಭಾಪತ್ರಿಕೆಯು ಆಚಂದ್ರಾರ್ಕವಾಗಿ ನಡೆಯಲೆಂದೂ ಪ್ರಾರ್ಥಿಸಿದ ಬಳಿಕ ಫಲಪ್ರಸಾದವನ್ನು ಹಂಚಿ ಯಾವತ್ತರೂ ಜಗದಾಚಾರ್ಯರ ಜಯಧ್ವನಿಗಳೊಡನೆ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ನವಲಿಮಠದ ಶಿವಯ್ಯ,
ಶ್ರೀ ಜಗದ್ಗುರು ರೇಣುಕಾಚಾರ್ಯ ಜ್ಯೋತಿಷ್ಯಪಾಠಶಾಲಾ.

ದೇಶನೂರು.

ಬೆಳಗಾಂ ಜಿಲ್ಲಾ ದೇಶನೂರು ಗ್ರಾಮದಲ್ಲಿ ವೇದಮೂರ್ತಿ ಪಂಡಿತ ಶ್ರೀಶೈಲನಾಥಶಾಸ್ತ್ರಿಗಳ ಬೃಹನ್ಮಠದಲ್ಲಿ ಇದೇ ವೈಶಾಖ ಶು|| ೩-೫ ತಿಥಿಗಳಲ್ಲಿ ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರವರ ಮತ್ತು ದಾರುಕಾಚಾರ್ಯರ ಜಯಂತಿಗಳು ಕ್ರಮದಿಂದ ಜರುಗಿದವು. ಶಾಸ್ತ್ರೋಕ್ತಪೂರ್ವಕ ಪೂಜೆಯು ನಡೆದ ಬಳಿಕ ಅತ್ಯಂತ ವೈಭವದಿಂದ ಉತ್ಸವಕಾರ್ಯವು ನೆರವೇರಿಸಲ್ಪಟ್ಟಿತು. ತರುವಾಯ ಸಭೆಗೂಡಿ ಶ್ರೀಶೈಲನಾಥಶಾಸ್ತ್ರಿಗಳವರು ಚತುರಾಶ್ರಮಗಳಿಗೆ ಮುಖ್ಯಗುರುಗಳಾದ ಶ್ರೀ ಜಗದ್ಗುರು ಪಂಚಾಚಾರ್ಯರ ಮಹತ್ವವನ್ನೂ ಆಚಾರ್ಯರ ಜಯಂತಿಮಹತ್ವವನ್ನೂ ಬಹು ಸುಲಭಶೈಲಿಯಿಂದ ಭಕ್ತರಿಗೆ ತಿಳಿಯುವಂತೆ ಉಪನ್ಯಾಸವಂ ಮಾಡಿದರು. ಭಗವತ್ಪಾದರ ಜಯಘೋಷವಾದ ತರುವಾಯ ಜಗದಾಚಾರ್ಯರ ಪ್ರಸಾದವು ಹಂಚಲ್ಪಟ್ಟಿತು.

ಓರ್ವ ಭಕ್ತ.

ಕುರುಗೋಡು.

ಶ್ರೀ ಪರಶಿವನ ಪಂಚಮುಖೋದ್ಭೂತರೂ ವೀರಶೈವಧರ್ಮಸ್ಥಾಪಕರೂ ಅಷ್ಟಾವರಣ ಷಟ್‌ಸ್ಥಲ ದೀಕ್ಷಾ ಮೋಕ್ಷಾದಿಗಳಿಗೆ ಕಾರಣೀಭೂತರೂ ಆಗಿರುವ ಶ್ರೀ ಏಕೋರಾಮಾರಾಧ್ಯರ ಜಯಂತಿಮಹೋತ್ಸವವು 11-5-29 ನೇ ತೇದಿ ಶನಿವಾರವೂ, ಶ್ರೀ ದಾರುಕಾರಾಧ್ಯರ ಜಯಂತಿಮಹೋತ್ಸವವು 13-5-29 ನೇ ತೇದಿ ಸೋಮವಾರವೂ ಶ್ರೀ ದೊಡ್ಡ ವೃಷಭೇಶ್ವರಾಲಯದಲ್ಲಿ ಈ ಪಟ್ಟಣದ ಸಕಲ ವೀರಶೈವ ಮಹಾಜನಗಳಿಂದ ಅಸಾಧಾರಣವಾದ ವೈಭವದೊಡನೆ ನೆರವೇರಿಸಲ್ಪಟ್ಟವು. 11-5-29 ಮತ್ತು 13-5-29ನೇ ಎರಡು ದಿವಸವು ಶ್ರೀಮಂತ ನಾಡಗೌಡ್ರ ಮರಿಬಸವನಗೌಡ್ರು ಶ್ರೀ ವೃಷಭೇಶ್ವರಾಲಯದಲ್ಲಿರುವ ಸಾಂಬಮೂರ್ತಿಗೂ ಶ್ರೀ ಏಕೋರಾಮಾರಾಧ್ಯ ಮತ್ತು ದಾರುಕಾರಾಧ್ಯರ ಲಿಂಗೋದ್ಭವ ಮೂರ್ತಿಗಳಿಗೂ ಮಹಾಭಿಷೇಕವನ್ನೂ ಅಷ್ಟವಿಧಾರ್ಚನೆಯನ್ನೂ ನೆರವೇರಿಸಿ ಜಯಂತಿಯ ವ್ರತವನ್ನು ಪೂರೈಸಿ ಭೂರಿ ಭೋಜನಾದಿಗಳಿಂದ ಮಾಹೇಶ್ವರರನ್ನು ತೃಪ್ತಿಗೊಳಿಸಿ ಶ್ರೀ ಗುರುಕೃಪೆಗೆ ಪಾತ್ರರಾದರು. ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘದ ಅಧ್ಯಕ್ಷರಾದ ವೇ|| ಮೇಲುಮಠದ ಬಸವಲಿಂಗಯ್ಯನವರು ಮೂಲೆಮಠದ ದೊಡ್ಡಯ್ಯನವರು ಹಿರೇಮಠದ ಕುಮಾರಯ್ಯನವರು ಮೇಲುಮಠದ ದೊಡ್ಡಬಸಯ್ಯನವರು ವ್ಯವಸ್ಥಾಪಕರಾಗಿಯೂ ಕಾರ್ಯದರ್ಶಿಗಳಾಗಿಯೂ ಇದ್ದರು. ಶ್ರೀ ವೃಷಭೇಶ್ವರಾಲಯದಲ್ಲಿ ಸುವಾಸಿತ ಪುಷ್ಪಮಾಲಿಕೆಗಳಿಂದ ಶೋಭಾಯಮಾನವಾಗಿ ಶೃಂಗರಿಸಲ್ಪಟ್ಟಿದ್ದ ಗುರುಸಾರ್ವಭೌಮರ ಪಂಚಲಿಂಗೋದ್ಭವ ಭಾವಚಿತ್ರಗಳನ್ನೂ ಎಡಬಲಗಳಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಮತ್ತು ಶ್ರೀ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರಗಳೊಂದಿಗೆ ಶ್ವೇತಛತ್ರ ಧ್ವಜಯುಕ್ತವಾದ ಪುಷ್ಪಮಯ ವಾಹನಾಂದೋಳಿಕೆಯಲ್ಲಿ ಬಿಜಮಾಡಿಸಿ ಮೇಲುಮಠದ ಬಸವಲಿಂಗಯ್ಯನವರ ಕಡೆಯ ಭಜನಾಸಂಘದವರ ಭಜನೆಯೊಡನೆಯೂ ಅನೇಕ ವಾದ್ಯಗಳೊಡನೆಯೂ ಜಗದಾಚಾರ್ಯರ ಜಯಜಯಕಾರದೊಡನೆಯೂ 9 ಘಂಟೆಗೆ ಮಹೋತ್ಸವವು ವೃಷಭೇಂದ್ರಾಲಯದಿಂದ ಹೊರಟಿತು. ಪುರಬೀದಿಗಳಲ್ಲಿ ಸ್ವಮತ ಪರಮತೀಯರೆಲ್ಲರೂ ಜಗದಾಚಾರ್ಯರಿಗೆ ಫಲಪುಷ್ಪಗಳನ್ನರ್ಪಿಸಿ ಧನ್ಯರಾಗುತ್ತಿದ್ದರು. ಹೀಗೆ ಉತ್ಸವವು ನಡೆದೆಡೆಗೆ ಸೇರುವುದರೊಳಗಾಗಿ 11½ ಘಂಟೆ ಆಯಿತು. ಅನಂತರ ಜಗದಾಚಾರ್ಯರಿಗೆ ಮಂಗಲವಾದ ಬಳಿಕ ಆಚಾರ್ಯಭಗವತ್ಪಾದರ ಜಯಜಯಕಾರದೊಡನೆ ಜಯಂತ್ಯುತ್ಸವವು ಪರಿಸಮಾಪ್ತಿಗೊಳಿಸಲ್ಪಟ್ಟಿತು. ಭಕ್ತಿಪೂರ್ವಕವಾಗಿ ಈ ಜಯಂತಿಮಹೋತ್ಸವವನ್ನು ನೆರವೇರಿಸಿದ ಶ್ರೀಮಂತ ನಾಡಗೌಡರ ಸಣ್ಣಮರಿಗೌಡರೇ ಮೊದಲಾದ ವೀರಶೈವಮಹಾಜನಗಳಿಗೆ ಶ್ರೀ ಜಗದಾಚಾರ್ಯರು ಸಕಲ ಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುವ.

ಭಜನಾಸಂಘದ ಸೆಕ್ರೆಟರಿ.
ಇಮ್ಮಡಿಗೌಡ್ರ ಚಂದ್ರಶೇಖರಪ್ಪ.

ಹೋಟಗಿ.

ಇದೇ ವೈ|| ಶು|| ೫ ಸೋಮವಾರ ದಿವಸ ಶ್ರೀಮಜ್ಜಗದ್ಗುರು ದಾರುಕಾಚಾರ್ಯಜಯಂತ್ಯುತ್ಸವವು ವೈಭವದಿಂದ ನೆರವೇರಿಸಲ್ಪಟ್ಟಿತು. ಭಕ್ತರೆಲ್ಲರೂ ಸೇರಿ ಜಯಂತ್ಯುತ್ಸವವನ್ನು ನೆರವೇರಿಸಬೇಕೆಂದು ಸನ್ನಾಹಗೊಳಿಸುತ್ತಿರುವಷ್ಟರಲ್ಲಿ ವೀರಪ್ಪಾ ಥಬ್ಬೆ ಇವರು ಆಚಾರ್ಯ ಭಗವತ್ಪಾದರ ಜಯಂತಿಯ ಖರ್ಚು ಬಾಬುಗಳನ್ನು ನಾನೊಬ್ಬನೇ ವಹಿಸುತ್ತೇನೆಂದು ಒಪ್ಪಿಕೊಂಡ ಮೇರೆಗೆ ಸದರಿಯವರು ಜಯಂತಿಮಹೋತ್ಸವವನ್ನು ಸಂಭ್ರಮದಿಂದ ನೆರವೇರಿಸಿದರು. ಜಗದಾಚಾರ್ಯರ ಭಾವಚಿತ್ರಕ್ಕೆ ಚನ್ನಬಸಯ್ಯ ತಳವಾರಗೇರಿ ಹಿರೇಮಠ ಇವರಿಂದ ಸಾಂಗಪೂಜೆಯು ನಡೆಯಿಸಲ್ಪಟ್ಟಿತು. ಅನಂತರ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯು ನಡೆದುದಲ್ಲದೆ ಬಂದ ಅತಿಥಿಜನಗಳಿಗೆಲ್ಲಾ ಗುರುಪ್ರಸಾದವು ವಿನಿಯೋಗವಾಗಲ್ಪಟ್ಟಿತು. ಮಾರನೇದಿವಸ ಪ್ರಾತಃಕಾಲ ೭ ಘಂಟೆಗೆ ಸದರಿ ಜಗದ್ಗುರುವರ್ಯರ ಆಂದೋಲಿಕೋತ್ಸವವು ಬೃಹನ್ಮಠದಿಂದ ಹೊರಟು ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ಬೀದಿಗಳಲ್ಲಿ ಭಕ್ತರ ಪೂಜೆಗಳಿಂದಲೂ, ಭಜನಾಸಂಘದ ಜಯಜಯಕಾರಧ್ವನಿಗಳಿಂದಲೂ, ನಮ್ಮ ಬೃಹನ್ಮಠಾಧೀಶರಿಂದ ಆಚಾರ್ಯರಪರವಾಗಿ ರಚಿತವಾದ, ಜೋಗುಳಪದ, ಕೋಲಿನಪದ ಇತ್ಯಾದಿ ಸ್ತ್ರೀಯರಿಗೆ ಯೋಗ್ಯಗಳಾದ ಪದ್ಯಗಳನ್ನು ಸುಸ್ವರದಿಂದ ಹಾಡುವ ಕುಂ|| ಕೌ|| ಮುಲಕವ್ವಾಬಾಯಿ ಗಂಗಡೆ, ಸಂಗವ್ವಾಬಾಯಿ ಗಂಗಡೆ, ರತ್ನವ್ವಾಬಾಯಿ ಗಂಗಡೆ ಇವರೇ ಮೊದಲಾದ ಬಾಲಿಕೆಯರ ಸ್ತೋತ್ರಾವಳಿಯಿಂದಲೂ, ಉತ್ಸವವು ಸರ್ವಬೀದಿಗಳಲ್ಲಿ ಚರಿಸಿ ೯|| ಘಂಟೆಗೆ ಬೃಹನ್ಮಠಕ್ಕೆ ತಲ್ಪಿತು. ಅದೇ ಸಮಯದಲ್ಲಿಯೇ ಬೃಹನ್ಮಠಾಧೀಶರು ಪ್ರಶ್ನೋಚಿತವಾಗಿ, ಸರ್ವರೂ ಇದೇ ಪ್ರಕಾರ ಯಾವಾಗಲೂ ತಪ್ಪದೆ ಜಗದ್ಗುರುವರ್ಯರ ಜಯಂತಿಗಳನ್ನು ಮಾಡುವದೇ ನಿಜವಾದ ವೀರಶೈವರ ಮುಖ್ಯಕರ್ತವ್ಯವಾಗಿದೆ. ಎಂದು ಬೋಧಿಸಿದರು. ಅದಕ್ಕೆ ಸರ್ವರೂ ತಮ್ಮ ಅಭಿಪ್ರಾಯವನ್ನು ಕರತಾಡನಗಳಿಂದ ತಿಳಿಸಿದರು. ಅಲ್ಲದೆ ಸದರಿ ವೀರಪ್ಪಾ ಥಬ್ಬೆ ಇವರ ಮೇಲ್ಪಂಕ್ತಿಯನ್ನು ಎಲ್ಲರೂ ಅನುಸರಿಸತಕ್ಕದ್ದು. ಜಯಂತ್ಯುತ್ಸವ ಪೂರೈಸಿದ ಸಂತೋಷಕ್ಕಾಗಿ ಪ್ರಭೆಗೆ ೧ ರೂಪಾಯಿಯನ್ನು ವೀರಪ್ಪಾ ಥಬ್ಬೆ ಇವರು ಅರ್ಪಿಸಿರುತ್ತಾರೆ. ಸರ್ವ ವೀರಶೈವವೃಂದಕ್ಕೂ ಸದರೀ ವೀರಪ್ಪ ಥಬ್ಬೆಯವರಿಗೆ ಆಚಾರ್ಯವರ್ಯರು ನಿತ್ಯಸುಖವನ್ನು ಕೊಡಲೆಂದು ಕೋರುವ

ಮಲಯ್ಯಸ್ವಾಮಿ ಬೃಹನ್ಮಠ ಕಿಂಕರ
ಮು. ಹೋಟಗಿ.

ದಿಗ್ಗಾವಿ.

ಈ ಮುಂಚಿತವಾಗಿ ಗೊತ್ತುಪಡಿಸಿದಂತೆ ಜಗದಾಚಾರ್ಯರ ಜಯಂತ್ಯುತ್ಸವಗಳು ಎಲ್ಲಾ ಭಾಗಗಳಲ್ಲಿ ನಡೆದಿರುತ್ತವೆ. ಅದೇ ಪ್ರಕಾರ ನಮ್ಮ ಗ್ರಾಮದ ... ಸತ್ಸಂಪ್ರದಾಯದ ವೀರಶೈವರೆಲ್ಲರೂ ವೈ|| ಶು|| ೩ ಶನಿವಾರದಿವಸ ಸದ್ಭಕ್ತಶಿರೋಮಣಿಗಳಾದ ಶಿವಪ್ಪನವರು ಗಾಣಿಗೇರ ಇವರ ಗೃಹದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರಮೂರ್ತಿಗೆ ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ ಇವರಕಡೆಯಿಂದ ರುದ್ರಾಭಿಷೇಕವು ವಿಧ್ಯುಕ್ತವಾಗಿ ಜರುಗಿಸಿದನಂತರ ಅನೇಕ ಮಾಹೇಶ್ವರರಿಗೆ ಅನ್ನಸಂತರ್ಪಣೆಯು ಮಾಡಲ್ಪಟ್ಟಿತು. ಆಮೇಲೆ ಯಾವತ್ತು ಭಕ್ತಸಮೂಹ ಭಜನಾಸಂಘ ಹಾಗೂ ಅನೇಕ ವಾದ್ಯಗಳಿಂದೊಡಗೂಡಿ ಸದರಿ ಆಚಾರ್ಯರ ಭಾವಪಟದ ಮೆರವಣಿಗೆಯು ಬೃಹನ್ಮಠಕ್ಕೆ ತಲ್ಪಿತು. ಅ|| ರಾ|| ಶರಭಣ್ಣನವರು ಸಭಿಕರ ಇಚ್ಛಾನುಸಾರವಾಗಿ ಸೂಚಿಸಿದ ಪ್ರ... ರ ಶ್ರೀ ಪಟ್ಟಾಧ್ಯಕ್ಷರವರು ಸಭಾಧ್ಯಕ್ಷತೆಯನ್ನು ವಹಿಸಿದರು. ವೇ|| ರೇವಣಸಿದ್ಧಶರ್ಮರವರು ಮತ್ತು ಪಡಶ್ಲ ರಕವಿಗಳು ಗುಂಜಹಳ್ಳಿ ಈ ಉಭಯರು ಭಕ್ತಿ ಮತ್ತು ಗುರು ಈ ವಿಷಯವಾಗಿ ಭಾಷಣಮಾಡಿದರು. ತರುವಾಯ ಅಧ್ಯಕ್ಷ ಮಹಾಶಯರು ಶ್ರೀ ದಾರುಕಾಚಾರ್ಯರು ದಧೀಚ್ಯಾದಿ ಮಹಾಮುನಿಗಳಿಗೆ ಉಪದೇಶಮಾಡಿರುವುದಲ್ಲದೆ ಸಾರ್ವಭೌಮರಿಗೆ ಒದಗಿದ ದುಃಖಗಳನ್ನು ಪರಿಹರಿಸಿ ಉದ್ಧರಿಸಿದ ವಿಷಯವನ್ನು ಹೃದಯಂಗಮವಾಗುವಂತೆ ಬೋಧಿಸಿದರು. ಅನಂತರ ಸ್ವಹಸ್ತದಿಂದ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿದರು. ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶಿವಪ್ಪ ಪಾಟೀಲ, ಶಂಭುಲಿಂಗಪ್ಪಾ ಪಾಟೀಲ.

ತೊಂಡಿಹಾಳು.

ತೊಂಡಿಹಾಳಗ್ರಾಮದಲ್ಲಿ ವಿರಾಜಮಾನವಾದ ಮಣ್ಣೂರು ಮಠದಲ್ಲಿ ಪ್ರಾತಃಕಾಲ 6 ಘಂಟೆಗೆ ಸರ್ವ ಭಕ್ತಮಾಹೇಶ್ವರರು ತಮ್ಮ ತಮ್ಮ ನಿತ್ಯಕರ್ಮವಂ ತೀರಿಸಿ ಶ್ರೀ ವಾಮದೇವ ಮುಖೋದ್ಭೂತನಾದ ಶ್ರೀ ಜಗದ್ಗುರು ದಾರುಕನ ಭಾವಚಿತ್ರವನ್ನು ಉನ್ನತಾಸನದಲ್ಲಿ ಇರಿಸಿ ವಿಧ್ಯುಕ್ತ ಪೂಜಾದಿಗಳಿಂ ಸತ್ಕರಿಸಿದರು. ರೇಣುಕಾದ್ಯಾಚಾರ್ಯರಂತೆ ದಾರುಕಾಚಾರ್ಯರ ಚರಿತೆಯು ನಮಗೆ ಇನ್ನೂ ಗೊತ್ತಿಲ್ಲವೆಂದು ಭಕ್ತರುಗಳು ಮಾತಾಡಿಕೊಳ್ಳುತ್ತಿರುವಷ್ಟರೊಳಗಾಗಿ ಕಾಶೀಕ್ಷೇತ್ರದಲ್ಲಿ ವಿರಾಜಮಾನವಾದ ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲವಾಸಿ ಶ್ರೀ ಪಟ್ಟಾಧ್ಯಕ್ಷ ಗುರುದೇವ ಶಿವಾಚಾರ್ಯ ಚಿಕ್ಕಮಣ್ಣೂರು ಹಿರೇಮಠ ಇವರು ಎದ್ದುನಿಂತು ಭಕ್ತಿಯಿಂದ "ಶ್ರೀ ದಾರುಕಗಣೇಶಾಖ್ಯಂ ದಾರುಕಾಚಾರ್ಯದೇಶಿಕಂ | ವಾಮದೇವಮುಖೋದ್ಭೂತಂ ವಂದೇಹಂ ದಾರುಕಂ ಗುರುಂ ||" ಎಂದು ಗುರುಧ್ಯಾನವಂ ಮಾಡಿ ಶ್ರೀ ಜಗದ್ಗುರು ದಾರುಕಾಚಾರ್ಯರು ಈಶ್ವರನ ಅಪ್ಪಣೆಯ ಮೇರೆಗೆ ವಟವೃಕ್ಷ ಸಿದ್ಧೇಶಲಿಂಗದಿಂ ಉದಯಿಸಿದ ಕಾರಣವನ್ನೂ ಮತ್ತು ಅವರು ಮಾಡಿದ ಮಹಾಲೀಲೆಗಳನ್ನೂ ಬೋಧಿಸಿದರು. ಅಲ್ಲಿಗೆ ಆಚಾರ್ಯಜಯಘೋಷದೊಡನೆ ಪ್ರಸಾದವು ವಿನಿಯೋಗವಾಯಿತು. ಸಾಯಂಕಾಲ 6 ಘಂಟೆಗೆ ರಂಭಾಸ್ತಂಭ ತೋರಣಾದಿಗಳಿಂದಲಂಕೃತವಾದ ಗ್ರಾಮದಲ್ಲಿ ಅನೇಕ ವಾದ್ಯಗಳೊಂದಿಗೆ ಆಚಾರ್ಯಮಹೋತ್ಸವವು ಹೊರಟು ದೇವಮಂದಿರಕ್ಕೆ ಆಗಮಿಸಿ ಅಲ್ಲಿ ಸಭೆಸೇರಿತು. ಈ ಸಭೆಗೆ ಕಲ್ಲಯ್ಯನವರು ಕೊಣ್ಣೂರ ಕಟ್ಟೀಮಠ, ಲಿಂಗನಗೌಡರು ವಕೀಲರು, ಭೀಮರಾವ್ ಕುಲಕರ್ಣಿ, ಕಳಕನಗೌಡ ವಕೀಲರು, ವಾಸುದೇವರಾವ್ ದೇಸಾಯಿ ಕರೋಡಗಿರಿ ಶಾನಭೋಗರು, ಇನ್ನೂ ಅನೇಕ ಮುಖ್ಯಸ್ಥರು ಆಗಮಿಸಿದ್ದರು. ಅನಂತರ ಗುರುಕೀರ್ತನಕೇಸರಿ ವೇ|| ಚನ್ನಯ್ಯನವರು ಚಿಕ್ಕಮಣ್ಣೂರು ಹಿರೇಮಠ ಇವರು ದಾರುಕಜಯಂತಿ ಗುರುಮಹಿಮೆ ಮತ್ತು ಲಿಂಗ, ಭಸ್ಮ, ರುದ್ರಾಕ್ಷ ಮೊದಲಾದ ವಿಷಯಗಳಿಂದಲೂ ಗಾಯನದಿಂದಲೂ ಪೂರಿತವಾದ ಕೀರ್ತನವನ್ನು ಮಾಡಿ ಜನರ ಹೃದಯಾಕರ್ಷಣೆಯನ್ನು ಮಾಡಿದರು. ಅನಂತರ ಶ್ರೀ ಗುರುಕುಲವಾಸಿ ಗುರುದೇವಶಿವಾಚಾರ್ಯ ಇವರು ಅಷ್ಟಾವರಣ, ಈ ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಬೋಧೆಯಂ ಮಾಡಿ ಗ್ರಾಮಸುಧಾರಣೆಯ ಬಗ್ಗೆ ಸ್ಫೂರ್ತಿದಾಯಕವಾದ ಭಾಷಣದಿಂದ ಸರ್ವರ ಮನಾನಂದವನ್ನುಂಟುಮಾಡಿದರು. ಸದರಿ ಶ್ರೀಗಳವರು ಚಿಕ್ಕವಯಸ್ಕರಾದಾಗ್ಯೂ ಇವರ ಸದ್ಬೋಧದ ವಾಕ್ಯಗಳನ್ನು ಕೇಳಿ ಧನ್ಯವಾದಗಳನ್ನು ಕೊಡುತ್ತಾ ಇವರಂತೆ ಉಳಿದ ಗುರುವರ್ಗದವರು ಧಾರ್ಮಿಕಸುಧಾರಣೆಯಲ್ಲಿ ನಿರತರಾಗಬೇಕೆಂಬ ಸದ್ಬುದ್ಧಿಯನ್ನು ಪೂಜ್ಯಪಾದರಾದ ಶ್ರೀ ಜಗದ್ಗುರು ಪಂಚಾಚಾರ್ಯರು ದಯಪಾಲಿಸಲೆಂಬ ಪ್ರಾರ್ಥನೆಯನಂತರ ಸಭೆಯು ವಿಸರ್ಜಿತವಾಯಿತು.

ಗುರುಸೇವಕ,
ಬಸಪ್ಪಾ ಪಾರಿಗೊಂಡದ, ತೊಂಡಿಹಾಳ.

ಹೊಸಪುರ.

ನಂಜನಗೂಡು ತಾ|| ಹೊಸಪುರದಲ್ಲಿ ಇದೇ ವೈಶಾಖ ಶುದ್ಧ ಪಂಚಮಿ ಸೋಮವಾರ ಪ್ರಾತಃಕಾಲ ಶ್ರೀ ಜಗದ್ಗುರು ದಾರುಕಾಚಾರ್ಯರ ಪೂಜಾದಿಕಾರ್ಯಗಳೂ ಸಾಯಂಕಾಲ ಆಚಾರ್ಯಭಗವತ್ಪಾದರ ಭಾವಚಿತ್ರಮಹೋತ್ಸವವೂ, ನಡೆಯಿತು. ರಾತ್ರಿ ಮ|| ರಾ|| ಬಿದರಗೂಡು ದೇವಣ್ಣನವರು ತಾವು ಸ್ವತಃ ರಚಿಸಿದ್ದ ರೇಣುಕವಿಜಯವೆಂಬ ಕೀರ್ತನವೂ ಬ್ರ|| ಶ್ರೀ|| ವೇ|| ರೇಮನಾರಾಧ್ಯಶಾಸ್ತ್ರಿಗಳ ಶಿವಸಂಕೀರ್ತನೆಯೂ ಸಹ ನಡೆಯಿತು. ತರುವಾಯ ಆಚಾರ್ಯಭಗವತ್ಪಾದರ ಭಾವಚಿತ್ರಕ್ಕೆ ಮಹಾಮಂಗಳಾರತಿಯಾಗಿ ಸಭೆಯವರಿಗೆ ಮಹಾಪ್ರಸಾದ ವಿನಿಯೋಗಮಾಡಲ್ಪಟ್ಟು ಶ್ರೀ ಆಚಾರ್ಯಭಗವತ್ಪಾದರ ಜಯಧ್ವಾನದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಗುರುಕಾರ್ಯಕ್ಕೆ ಗುರುಭಕ್ತರಾದ ಇದೇ ಊರು ಗೌ|| ವೀರಭದ್ರಪ್ಪ ಮರಪ್ಪ ಮತ್ತು ಟಿಂಬರ್ ಕಂಟ್ರಾಕ್ಟರ್ ಪುಟ್ಟಲಿಂಗಪ್ಪ ಮುಂತಾದ ಗ್ರಾಮಸ್ಥರು ಮುತವರ್ಜಿ ವಹಿಸಿ ಈ ಜಯಂತಿಮಹೋತ್ಸವ ಕಾರ್ಯವನ್ನು ನೆರವೇರಿಸಿದುದರಿಂದ ಈ ಮಹಾಶಯರಿಗೆ ಶ್ರೀ ದಾರುಕಾಚಾರ್ಯರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನೀಯಲೆಂದು ಹಾರೈಸುವ.

ಓರ್ವ ಪ್ರತ್ಯಕ್ಷದರ್ಶಿ.

ನ್ಯಾಮತಿ.

ತಾ|| 11—5—1929 ನೆಯ ದಿವಸ ಕಲ್ಯಾಣದಲ್ಲಿ ಬಿಜ್ಜಳನ ಮಂತ್ರಿಯಾಗಿದ್ದ ಬಸವನ ಜಯಂತ್ಯುತ್ಸವವನ್ನು ನ್ಯಾಮತಿಯಲ್ಲಿ ನಡೆಯಿಸಬೇಕೆಂದು ಬಸವನ ಪಕ್ಷದ ಜನರು ಒಳ್ಳೇ ಹುರುಪಾಗಿ ನಿಂತಿದ್ದರು. ಈ ಸಂದರ್ಭದಲ್ಲಿ ಊರಲ್ಲಿ ಪಾರ್ಟಿ ಇದ್ದುದರಿಂದ ಏನಾದರೂ ಗಲಭೆ ನಡೆದೀತೆಂಬ ಮುಂದಾಲೋಚನೆಯಿಂದ ಇಲ್ಲಿಯ ಪೋಲೀಸ ಸಬ್-ಇನಸ್ಪೆಕ್ಟರ್ ಸಾಹೇಬರವರು ಲೈಸೆನ್ಸ್ ಪಡೆಯದೆ ಯಾವ ಉತ್ಸವವನ್ನೂ ಮಾಡಕೂಡದೆಂದು ಡಂಗುರ ಹೊಡಿಸಿದರು. ಆದಾಗ್ಯೂ ಬಸವನ ಪಾರ್ಟಿಯವರು ಡಂಗುರ ಹೊಡೆಯುವವರನ್ನು ಒಡಿಸಿದರು. ದೊಣ್ಣೆಗಳನ್ನು ಹಿಡಿದುಕೊಂಡು ಲಕ್ಕರೀ ಸಿಸ್ತಿನಿಂದ ಉತ್ಸವವನ್ನು ನಡೆಯಿಸಬೇಕೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿದ ಮೇರೆಗೆ ಪ್ರತಿಯೊಬ್ಬರೂ ಕೈಯಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡಿದ್ದರು. ದೊಣ್ಣೆ ಉತ್ಸವಕ್ಕೆ ಪ್ರಾರಂಭವಾಯಿತು. ಭಜನಾಸಂಘವು ಭಜನೆಮಾಡತೊಡಗಿತು. ಊರಲ್ಲಿ ಎತ್ತನೋಡಿದಡತ್ತ ಹಾಹಾಕಾರವು ಸುರುವಾಯಿತು. ಇದನ್ನರಿತ್ತಾ ಸಬ್‌ಇನ್ಸ್ಪೆಕ್ಟರ್ ಸಾಹೇಬರವರು ಪರಾಮರ್ಶಿಸಿ, ಗಲಭೆಯಾಗುವುದು ನಿಶ್ಚಯವೆಂದು ತಿಳಿದು ಅದನ್ನು ಪ್ರಯತ್ನದಿಂದ ನಿಲ್ಲಿಸಲು ಯತ್ನಿಸಿದರು. ಇಷ್ಟರಲ್ಲಿ ಕೆಲವರು ಎತ್ತುಗಳನ್ನು ಹೊರಡಿಸಿಕೊಂಡು ಬಲಾತ್ಕಾರವಾಗಿ ಮುಂದಕ್ಕೆ ನುಗ್ಗಿಬಂದರು. ಆದರೆ ಇನಸ್ಪೆಕ್ಟರವರೂ ಪೋಲೀಸಿನವರೂ ಸಹ ಜನಹಿತಕರವಾದ ಆಲೋಚನೆಯಿಂದ ಕಲ್ಯಾಣ ಬಸವನ ಫೋಟೋ ಸಹಿತ ಶೃಂಗರಿಸಿದ ಪಲ್ಲಕ್ಕಿಯನ್ನೂ ಹಾಗೂ ವಿರಕ್ತಭಜನಾಸಂಘವನ್ನೂ ನಿಲ್ಲಿಸಿಬಿಟ್ಟು ಎತ್ತುಗಳ ಉತ್ಸವವು ಮಾತ್ರ ನಡೆಯುವಂತೆ ಅಜ್ಞೆಮಾಡಿದರು. ಅನಂತರ ರೈತರು ನಂದೀಶಾಪತಾರಿಗಳಾದ ಎತ್ತುಗಳನ್ನು ಹಿಡಿದುಕೊಂಡು ಉತ್ಸವವನ್ನು ಪೂರ್ತಿಗೊಳಿಸಿದರು.

ಓರ್ವಪ್ರತ್ಯಕ್ಷದರ್ಶಿ.

ಪಂಚಾಚಾರ್ಯ ಪ್ರಭಾ

೧೯೨೫ ನೇ ಮೇ ತಾ|| ೨೫ ನೇ ಸೋಮವಾರ

ಜಗದಾಚಾರ್ಯರ ಜಯಂತಿ.

ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ಆಯಾಯ ಪವಿತ್ರ ತಿಥಿಗಳಲ್ಲಿ ಮಾಡಿ ವೀರಶೈವಮತದಲ್ಲಿ ಜನ್ಮಿಸಿದ್ದುದಕ್ಕೆ ಕೃತಜ್ಞತೆಯನ್ನು ತೋರಿಸುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಧ್ಯೇಯವಾಗಿರುವುದೆಂದು ಭಾವಿಸಿ ಅನೇಕ ಜನ ವಿವೇಕಿಗಳು ಗುರುಜಯಂತಿಮಹೋತ್ಸವ ದ್ವಾರಾ ಗುರುಭಕ್ತಿಯನ್ನು ವ್ಯಕ್ತಗೊಳಿಸುತ್ತಿರುವರೆಂಬುದಕ್ಕೆ ಈ ವರ್ಷ ಭರತಖಂಡದಲ್ಲೆಲ್ಲ ವಿಶೇಷ ವೈಭವದಿಂದ ನೆರವೇರಿದ ಜಯಂತಿಮಹೋತ್ಸವಗಳೇ ನಿದರ್ಶನಗಳಾಗಿವೆ. ವೀರಶೈವರು ತಾವು ಪರಮಪವಿತ್ರವಾದ ವೀರಶೈವಮತದಲ್ಲಿ ಜನ್ಮವನ್ನು ಧರಿಸಿದ್ದರೂ ತಾವು ಅವಲಂಬಿಸಿದ ಮತವಾವುದು? ಆ ಮತಸ್ಥಾಪಕರಾರು? ತಾವು ಹೇಳುವ ಗೋತ್ರವಾವುದು? ಸೂತ್ರವಾವುದು? ತಾವು ಧರಿಸಿದ ಲಿಂಗವು ಯಾರಿಂದ ಬಂದಿತು? ತಾವು ಆಚರಿಸುವ ಷಟ್‌ಸ್ಥಲಗಳಾಗಲಿ, ಅಷ್ಟಾವರಣಗಳಾಗಲಿ, ಪಂಚಾಚಾರಗಳಾಗಲಿ, ಯಾರಿಂದ ಉಪದೇಶಿಸಲ್ಪಟ್ಟುವು? ಇವೇ ಮೊದಲಾದ ವಿಷಯಗಳನ್ನು ಪೂರ್ವಾಪರ ಪರ್ಯಾಲೋಚಿಸದೆ ಕೆಲ ಕಳಂಕಿಗಳ ದುರುಪದೇಶಕ್ಕೆ ಒಳಗಾಗಿ ತಮ್ಮ ಮತದ ಮೂಲ ಗುರುಪೀಠಗಳನ್ನೇ ಮರೆತು ಸ್ವೇಚ್ಛಾಕಲ್ಪಿತ ಗುರುದೇವತಾರಾಧನೆಯಲ್ಲಿ ಆಸಕ್ತರಾಗಿರುವುದನ್ನು ಪರಿಶೀಲಿಸಿದರೆ ಇವರ ಅಜ್ಞತನಕ್ಕೆ ಬೆಲೆಯೇ ಇಲ್ಲವೆಂದು ಹೇಳಬೇಕಾಗಿದೆ. ಬಹುಕಾಲದಿಂದ ಮುಸುಕಿದ್ದ ಇಂತಹ ಅಜ್ಞಾನವು ಸೂರ್ಯೋದಯದಿಂದ ಕತ್ತಲೆಯು ಮೆಲ್ಲಮೆಲ್ಲನೆ ನಾಶವಾಗುವಂತೆ ಪ್ರಬೋಧೋದಯವಾದಂದಿನಿಂದ ನಾಶವಾಗುತ್ತಿರುವುದು ಶುಭಸೂಚನೆಯೆಂದು ಹೇಳಬೇಕಾಗಿದೆ. ಆದಾಗ್ಯೂ ಈಚೆಗೆ ವೀರಶೈವಮತವನ್ನವಲಂಬಿಸಿದ ಕೆಲ ಜನ ಶೂದ್ರರು "ನೇವೇಶ ಪರಮಾಚಾರ್ಯಂ ಶಿಷ್ಯೋ ಭಕ್ತಿಭಯಾನ್ವಿತಃ" ಎಂಬೀ ಆಚಾರ್ಯ ಭಗವತ್ಪಾದರ ಮಹಾವಾಕ್ಯವನ್ನೂ "ಆಚಾರ್ಯದೇವೋಭವ" ಎಂಬೀ ಶ್ರುತಿದೇವಿಯ ವಾಕ್ಯವನ್ನೂ ತಿಳಿದು ಅದರಂತೆ ವರ್ತಿಸದೆ ತದ್ವಿರುದ್ಧವಾಗಿ ವರ್ತಿಸುತ್ತಿರುವರು. ಇದು ಇವರ ನೀಚಜಾತಿತ್ವವನ್ನೂ ಹಾಗೂ ಪಾಪಪ್ರಕೃಷ್ಟತ್ವವನ್ನೂ ತೋರಿಸುವದಲ್ಲದೆ ಬೇರೊಂದಿಲ್ಲ. ಇರಲಿ; ಈ ವೀರಶೈವಮತ ರಾಜ್ಯವನ್ನು ಶ್ರೀ ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದ್ದು ಈ ರಾಜ್ಯಕ್ಕೆ ಅವರು ಪ್ರಭುಗಳಾಗಿರುವರಷ್ಟೆ! ಲೋಕದಲ್ಲಿ ಪ್ರಭುಚಿಹ್ನವನ್ನು ಧರಿಸಿದವರೆಲ್ಲರೂ ಆಚಿಹ್ನವನ್ನು ದಯಪಾಲಿಸಿದ ಪ್ರಭುಗಳಲ್ಲಿ ಅವ್ಯಾಜಭಕ್ತಿಯನ್ನು ತೋರಿಸುವಂತೆ, ಲಿಂಗಧಾರಣರೂಪವಾದ ಚಿನ್ಹವು ಯಾರದೇಹದಲ್ಲಿರುವುದೋ ಅವರೆಲ್ಲರೂ ಆ ಲಿಂಗವನ್ನನುಗ್ರಹಿಸಿದ ಆಚಾರ್ಯಭಗವತ್ಪಾದರಲ್ಲಿ ಭಕ್ತಿಯನ್ನು ತೋರಿಸುವುದು ಪರಮಧರ್ಮವಾಗಿದೆ. ಹೀಗಿದ್ದರೂ ಕೆಲವರು ಪ್ರತಿಷ್ಠಾಕಾಮಿಗಳಾಗಿ ಸ್ವಯಮಾಚಾರ್ಯತ್ವವನ್ನು ಬಯಸಿ ಶಾಸ್ತ್ರೀಯವಾದ ಗುರುಜಯಂತ್ಯಾದ್ಯವಶ್ಯಕರ್ತವ್ಯಗಳನ್ನು ಬಿಟ್ಟು ಮನಬಂದಂತೆ ನಡೆಯುವದರಿಂದಾಗುವ ಪ್ರಯೋಜನವೇನೋ ತಿಳಿಯದಾಗಿದೆ. ಪತಿವ್ರತಾಸ್ತ್ರೀಯಳ ಕೊರಳಿನಲ್ಲಿ ಎಲ್ಲಿಯವರೆಗೆ ಮಂಗಲಸೂತ್ರವಿರುವುದೋ ಅಲ್ಲಿಯವರೆಗೂ ಮಾಂಗಲ್ಯವನ್ನು ಕಟ್ಟಿದ ಪತಿಯ ಅಧಿಕಾರವು ಅವಳಮೇಲೆ ಇದ್ದೇ ಇರುವದು. ಆದರೆ ಅವಳು ವ್ಯಭಿಚಾರಿಣಿಯಾಗಿ ಪತಿಯನ್ನುಲ್ಲಂಘಿಸಿ ಮಾಂಗಲ್ಯವನ್ನು ಕಿತ್ತು ಬಿಸಾಡಿದರೆಮಾತ್ರ ಅವಳ ಮೇಲೆ ಪತಿಗೆ ಅಧಿಕಾರವಿರುವುದಿಲ್ಲ. ಅದರಂತೆ ಮಾಂಗಲ್ಯಸ್ವರೂಪವಾದ ಇಷ್ಟಲಿಂಗವನ್ನು ಯಾವ ಗುರುಗಳು ಧರಿಸುವರೋ ಅವರ ಗುರುತ್ವವು ಪ್ರತಿಯೊಬ್ಬ ಲಿಂಗಧಾರಿಗಳ ಮೇಲುಂಟು. ಲಿಂಗವನ್ನು ಕಿತ್ತೊಗೆದರೆ ಮಾತ್ರ ಅವರ ಮೇಲೆ ಇಲ್ಲ. ಗುರುವಿನಿಂದ ಧರಿಸಲ್ಪಟ್ಟ ಲಿಂಗವು ಇರುವವರೆಗೂ ಗುರುಸೇವೆಯನ್ನು ಮಾಡಿ "ಪತಿವ್ರತಾಸ್ವಭಾವೇನ ವಿಹಿಯಾಸ್ಯತ್ತು ದೈವತಂ" ಎಂಬ ಪ್ರಮಾಣೋಕ್ತಿಯಂತೆ ಇತರ ಕ್ಷುದ್ರಸೇವೆಯಿಂಗೆಯ್ಯದಿರುವುದೇ ನಿಜವಾದ ವೀರಶೈವನ ಕರ್ತವ್ಯವಾಗಿರುವುದು. "ಸಂಸರ್ಗಜಾದೋಷಗುಣಾ ಭವಂತಿ" ಎಂಬುಕ್ತಿಯಂತೆ ಸಂಪ್ರದಾಯ ಶುದ್ಧವೀರಶೈವರೂ ಸಹ ಕೆಲ ಆಗಂತುಕರ ಸಂಸರ್ಗದಿಂದ ಪರಿಶುದ್ಧಚರಣೆಯಮೇಲೆ ಉದ್ಗಾರವನ್ನು ತೆಗೆಯುತ್ತಿದ್ದಾರೆ. ಈ ಉದ್ಗಾರವು "ಕಾಚಃ ಕಾಚೋ ಮಣಿರ್ಮಣಿಃ" ಎಂಬುಕ್ತಿಯಂತೆ ವಿಚಾರಾಂತ್ಯದಲ್ಲಿ ಎಂದಿಗೂ ಉಳಿಯಲಾರದು. ಯಾರು ಮತಸ್ಥಾಪಕರಲ್ಲಿ ಪೂಜ್ಯಬುದ್ಧಿಯನ್ನಿಟ್ಟಿರುವುದಿಲ್ಲವೋ ಅವರು ಆ ಮತಸ್ಥರೆಂದು ಎಂದೂ ಹೇಳಿಸಿಕೊಳ್ಳಕೂಡದು. ಅದ್ವೈತಮತಸ್ಥಾಪಕರಾದ ಶ್ರೀ ಶಂಕರಾಚಾರ್ಯರಲ್ಲಿ ಪೂಜ್ಯಬುದ್ಧಿಯಿಲ್ಲದವನು "ಅದ್ವೈತಿ" ಎಂದು ಹೇಳಿಕೊಳ್ಳುವುದು ಎಷ್ಟು ಅಭಾಸಕರವೋ ವೀರಶೈವ ಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರಲ್ಲಿ ಪೂಜ್ಯಬುದ್ಧಿಯಿಲ್ಲದವನು ವೀರಶೈವನೆಂದು ಹೇಳಿಕೊಳ್ಳುವುದು ಅಷ್ಟು ಆಭಾಸಕರವು; ತನ್ನ ಕುಲಗುರುವಾದ ಶಂಕರನ ಜಯಂತಿಯಲ್ಲಿ ಪ್ರವೃತ್ತಿಯಿಲ್ಲದ ಅದ್ವೈತಿಯು ಇತರ ಜಯಂತಿಗಳಲ್ಲಿ ಎಷ್ಟು ಅನುರಾಗವುಳ್ಳವನಾಗಿದ್ದರೂ ಆತನು ಅದ್ವೈತಮತವಿರೋಧಿಯೆಂದೆನಿಸುವಂತೆ ತಮ್ಮ ಕುಲಗುರುಗಳಾದ ಆಚಾರ್ಯರ ಜಯಂತಿಯಲ್ಲಿ ಅಲಸರಾಗಿ ಇತರ ಜಯಂತಿಗಳಲ್ಲಿ ಅನುರಕ್ತರಾದರೆ ಅವರಿಗೆಂದಿಗೂ ವೀರಶೈವರೆಂದು ಹೇಳಲು ಆಗುವದಿಲ್ಲವು. ವೀರಶೈವರಿಗೆ ಗುರುವೇ ಮೋಕ್ಷದಾಯಕನಾಗಿರುವನು. ಮುಕ್ತಿದಾಯಕನೂ ಮಹಾಚಾರ್ಯನೂ ಆದ ಗುರುವಿನಲ್ಲಿ ಭಕ್ತಿಯಿಲ್ಲದವನು ಪತಿತನೆಂದು ಹೇಳಿಸಿಕೊಳ್ಳಲ್ಪಡುವನು. ಬಾಯಿಯಲ್ಲಿ ಮಾತ್ರ ನಾವು ಗುರುಗಳನ್ನು ಬಿಟ್ಟಿಲ್ಲವೆಂದು ಹೇಳುತ್ತ ಕಾರ್ಯದಲ್ಲಿ ಮಾತ್ರ ಗುರುಗಳ ಜಯಂತಿಯ ಗೋಜಿಗೆ ಹೋಗದೆ ನಟಿಸುವವರನ್ನು ವೇಶ್ಯಾಪುತ್ರರೆಂದೇ ಕರೆಯಬೇಕಾಗುವುದು. ಮುಖ್ಯವಾಗಿ ಹೋದವರ್ಷಕ್ಕಿಂತಲೂ ಈ ವರ್ಷ ಜಯಂತಿ ಮಹೋತ್ಸವಗಳು ಭರತಖಂಡದಲ್ಲೆಲ್ಲ ವಿಶೇಷ ವೈಭವದಿಂದ ನೆರವೇರಿದ್ದುದನ್ನು ಕಂಡು ಸಂತೋಷಪಡಬೇಕಾಗಿದೆ. ಭರತಖಂಡದಲ್ಲಿರತಕ್ಕ ಗುರುಭಕ್ತಿ ಧುರೀಣರಾದ ಸಮಸ್ತ ಗುರುಭಕ್ತರಿಗೆಲ್ಲ ಶ್ರೀ ಜಗದಾಚಾರ್ಯರು ಆಯುರಾರೋಗ್ಯಾದಿ ಭಾಗ್ಯಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬರುವ ಜೂನ್ 10 ನೆಯ ತಾರೀಖಿನಿಂದ ಪ್ರಜಾಪ್ರತಿನಿಧಿಸಭೆಯ ವರ್ಧಂತಿಯ ಅಧಿವೇಶನವು ಮೈಸೂರಿನ ಜಗನ್ಮೋಹನ ಪ್ರಾಸಾದದಲ್ಲಿ ಪ್ರಾರಂಭವಾಗುವುದು.

ಕೆಲವು ದಿವಸಗಳ ಹಿಂದೆ ಶಿವಮೊಗ್ಗಾ ಬೀರೂರು ರೈಲಿನಲ್ಲಿ ಕಳುವಾಗಿದ್ದ ಪೋಸ್ಟ್ ಇಲಾಖೆಯ ಹಣಕಾಸುಗಳ ವಿಷಯವಾಗಿ ಪೋಲೀಸರು ಶೋಧವನ್ನು ನಡೆಯಿಸುತ್ತಿದ್ದರು. ಈಗ ಅವರು ಗುಮಾನಿಯಮೇಲೆ ನಾಲ್ಕು ಜನರನ್ನು ಅರೆಸ್ಟುಮಾಡಿರುವರು.

ಬೆಂಗಳೂರು ದೊಂಬಿಕಲಹದಲ್ಲಿ ಪೆಟ್ಟುಬಿದ್ದು ಕಾಲುಗಳನ್ನು ಕಳೆದುಕೊಂಡಿದ್ದ ಮೈಲಾರಯ್ಯ ಮತ್ತು ರಾಮಯ್ಯ ಎಂಬ ಯುವಕರಿಗೆ, ಕೃತಕಕಾಲುಗಳನ್ನು ಮಾಡಿಸಿಕೊಡುವಂತೆಯೂ ಮತ್ತು ಅವರಿಬ್ಬರಿಗೂ ಜೀವಾವಧಿ ತಿಂಗಳಿಗೆ 15 ರೂಪಾಯಿಗಳಂತೆ ಜೀವನದ್ರವ್ಯವನ್ನು ಕೊಡುವಂತೆಯೂ ಸರ್ಕಾರದವರು ನಿರ್ಧರಿಸಿರುತ್ತಾರೆ.

ಮ|| ರಾ|| ಟಿ. ಪಿ. ಎ. ಅಪ್ಪನ್‌ರವರು ಸಾಗರದ ಸಬ್‌ಡಿವಿಜನ್ ಆಫೀಸರರಾಗಿಯೂ, ಮ|| ರಾ|| ರಣಜೋಧ್‌ಸಿಂಗ್, ಬಿ.ಎ., ಯವರು ಬೆಂಗಳೂರು ಸಿಟಿ ಸೂಪರಿಂಟೆಂಡೆಂಟರಾಗಿಯೂ, ಮ|| ರಾ|| ಸಿದ್ಧರಾಜೆ ಅರಸಿನವರು ಮೈಸೂರು ಸಿಟಿಯಿಂದ ಮೈಸೂರು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾಗಿಯೂ, ಮ|| ರಾ|| ಇ. ಲಕ್ಷ್ಮಣರಾಯರು ಮೈಸೂರು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಿಂದ 400 ರೂ. ಗಳ ದಂಡಕ್ಕೆ ಗುರಿಮಾಡಲ್ಪಟ್ಟಿದ್ದ ಪತ್ರಿಕಾಪ್ರೇಷಕ (ಪ್ರೆಸ್ ಕರೆಸ್‌ಪಾಂಡೆಂಟ್) ರಾದ ಮ|| ರಾ|| ಸಂಜೀವರಾಯರು ಸೆಷನ್ಸ್ ಕೋರ್ಟಿಗೆ ಅಪ್ಪೀಲು ಮಾಡಿಕೊಂಡಿರುವರು. ಅಪ್ಪೀಲಿನ ಫಲಿತಾಂಶವು ತಿಳಿಯುವವರೆಗೆ ಕೆಳಕೋರ್ಟಿನವರು ವಿಧಿಸಿದ ಅರ್ಥದಂಡವನ್ನು ಕೊಡದಂತೆ ಮಾಡಿಕೊಡಬೇಕೆಂದು ಅವರು ಪ್ರಾರ್ಥಿಸಿಕೊಳ್ಳಲು, ಸೆಷನ್ಸ್ ಜಡ್ಜರು ಹಾಗೆಯೇ ಮಾಡಿ ವಿಚಾರಣೆ ನಡೆಸುತ್ತಿರುವರು.

ರಾಜಧಾನಿಯ ಸಂತೇಪೇಟೆಯ ಕೆಲ ವರ್ತಕರ ಬಳಿ ಕೆಲಸಮಾಡುತ್ತಿದ್ದ ಪುಟ್ಟಯ್ಯ, ಜವರಯ್ಯ, ಅಣ್ಣಯ್ಯ, ರಂಗಪ್ಪ ಎಂಬ ನಾಲ್ವರು ಯುವಕರು ದೇವರಾಜ ಮಾರ್ಕೆಟ್ಟಿನ ಹಿಂಭಾಗದಲ್ಲಿ ವಾಸಮಾಡುತ್ತಿರುವ ಪ್ರಹ್ಲಾದಶೆಟ್ಟಿ ಎಂಬುವನ ಮಗಳಾದ ನಾಗರತ್ನ ಎಂಬ ಹೆಸರಿನ 16 ವರ್ಷದ ಹುಡುಗಿಯನ್ನು ಅಪಹರಿಸಿದರೆಂಬ ಆಪಾದನೆಗೆ ಗುರಿಯಾಗಿ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟಿರುವರು. ಮೈಸೂರುಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯು ನಡೆಯುತ್ತಿದೆ.

ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಓದುತ್ತಿದ್ದ ವೀರಶೈವ ವಿದ್ಯಾರ್ಥಿಗಳಲ್ಲಿ (1) ಜಿ. ನರಸಪ್ಪನವರು, (2) ಮುರಿಗಪ್ಪಶಾಸ್ತ್ರಿಯವರು, (3) ಕೊಟ್ಟೂರು ಬಸಪ್ಪನವರು, (4) ಎಸ್. ಜವಳಿಯವರು, (5) ಎಸ್. ಎಂ. ರುದ್ರಪ್ಪನವರು, (6) ಪಿ. ಎನ್. ಎಸ್. ಆರಾಧ್ಯರು, (7) ಎಚ್. ಎಸ್. ಮುರಿಗಪ್ಪನವರು, (8) ಎಂ. ಲಿಂಗಪ್ಪಯ್ಯನವರು, ಈ 8 ಜನರು ಬಿ. ಎ. ಪರೀಕ್ಷೆಯಲ್ಲೂ ಎ. ಸಿ. ದೇವೇಗೌಡರು ಬಿ. ಟಿ. ಪರೀಕ್ಷೆಯಲ್ಲೂ ಉತ್ತೀರ್ಣರಾಗಿರುತ್ತಾರೆ.

ಈ ವರ್ಷದ ವರ್ಧಂತ್ಯುತ್ಸವ ಸಮಯದಲ್ಲಿ ಕುದುರೆ ಜೂಜಿನ ಆಟಗಳು ಬಹು ಸಂಭ್ರಮದಿಂದ ನಡೆಯುವುವೆಂದು ತಿಳಿದುಬಂದಿದೆ. ಈ ಆಟಕ್ಕಾಗಿ ಕೊಲ್ಲಾಪುರದ ಮಹಾರಾಜರ, ಬನಗಾನಪಲ್ಲಿಯ ನವಾಬರ, ಹಾಜಿ ಸರ್ ಇಸ್ಮಾಯಿಲ್‌ಸೇಟರ, ಪರ್ಲಾಕಿಮಿಡಿರಾಜರ, ವೆಂಕಟಗಿರಿರಾಜರ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಸಂಧ್ಯಾದಕುದುರೆಗಳು ಸೇರುವುವು. ಶ್ರೀಮನ್ಮಹಾರಾಜರವರು ದಯಪಾಲಿಸುವ ಚಿನ್ನದ ಕಪ್ಪಿಗಾಗಿ 25 ಕುದುರೆಗಳು ಸ್ಪರ್ಧಿಸುವುವು. ಕುದುರೆಗಳ ಚುನಾವಣೆಯು ತೃಪ್ತಿಕರವಾಗಿದೆ. ಹಿಂದಿನಂತೆ ಈ ಸಾರೆಯೂ ಸಹ ಹಲವು ಅರಬ್ಬೀದೇಶೀಯರು ಬಂದಿರುವರು.

ಬೆಂಗಳೂರಿನ 'ತಾತಾರೀಸರ್ಚ್ ಇನ್ಸ್ಟಿಟ್ಯೂಟ್' ಎಂಬ ಪರಿಶೋಧನಾಲಯದಲ್ಲಿ ಕೆಲಸಮಾಡುತ್ತಿದ್ದ ಪೂನಾಪಟ್ಟಣದ ಮಿ|| ಸಿಂತ್ರೆ, ಎಂ. ಎಸ್‌ಸಿ., ಎಂಬ ಮೇಧಾವಿಯಾದ ವಿದ್ಯಾರ್ಥಿಯು ಕಳೆದ 13 ನೆಯ ತಾರೀಖಿನ ಬೆಳಿಗ್ಗೆ ಸಂಕೇರಿಗೆ ಈಜುವುದಕ್ಕಾಗಿ ಹೋಗಿದ್ದು ನೀರಿನಲ್ಲಿ ಮುಳುಗಿ ಸತ್ತುಹೋದನು. ಇವನ ಸಹೋದರನೊಬ್ಬನು ಪೂನಾಪಟ್ಟಣದಲ್ಲಿ ವಿಜ್ಞಾನಶಾಸ್ತ್ರದ ಯಾವುದೋ ಪ್ರಯೋಗ (ಎಕ್ಸ್ಪರಿಮೆಂಟ್) ವನ್ನು ನಡೆಯಿಸುತ್ತಿದ್ದಾಗ ಅನಾಹುತವು ಸಂಭವಿಸಿ ಮೃತನಾದನಂತೆ! ಬುದ್ಧಿಶಾಲಿಗಳಾದ ಇಬ್ಬರು ಮಕ್ಕಳೂ ದುರ್ಮರಣಕ್ಕೀಡಾದುದು ತಾಯಿತಂದೆಗಳ ದುರದೃಷ್ಟವು.

ಭಕ್ತವರ್ಗಕ್ಕೆ ಸೇರಿದ ಮೈಸೂರು ಸ್ಟಾರ್ ಪತ್ರಿಕಾಕರ್ತರು ಬಸವಜಯಂತಿಯ ಬಗ್ಗೆ ಇಲ್ಲಿಯ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಸಾಕ್ಷಿಯನ್ನು ನುಡಿಯುತ್ತಿದ್ದಾಗ್ಗೆ ಸದಾಚಾರಸಂಪನ್ನರಾದ ಕೆಲ ಜನ ವೀರಶೈವರ ಹೆಸರುಗಳನ್ನು ತೆಗೆದುಕೊಂಡು ಅವರನ್ನು ಸಮಾಜದಿಂದ ಬಹಿಷ್ಕರಿಸಿದ್ದೇವೆಂದು ಧರ್ಮಪೀಠಾಧಿಪತಿಗಳು ನುಡಿದಂತೆ ನುಡಿದರೆಂದೂ, ಆದುದರಿಂದ ಅವರಲ್ಲಿ ಇಬ್ಬರು ಇವರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟಕ್ಕಾಗಿ ಮೊಕದ್ದಮೆಗಳನ್ನು ಮಾಡಿರುವರೆಂದೂ, ಆ ಎರಡೂ ಮೊಕದ್ದಮೆಗಳು ಇದೇ ತಿಂಗಳು 29ಕ್ಕೆ ವಿಚಾರಣೆಗಿಡಲ್ಪಟ್ಟಿರುವವೆಂದೂ ತಿಳಿದು ಬರುತ್ತದೆ.

ಮೈಸೂರು ಸಿಟಿ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದ ಮ|| ರಾ|| ಸಿದ್ಧರಾಜ ಅರಸರವರ ಕಾರ್ಯದಕ್ಷತೆ, ಶಾಂತಸ್ವಭಾವ, ಬುದ್ಧಿಕೌಶಲ್ಯ, ಸಾರಾಸಾರವಿಚಾರಶಾಲಿತ್ವಾದಿಗುಣಗಳನ್ನು ಕಂಡು, ಘನಸರಕಾರದವರು ಅವರಿಗೆ ಮೈಸೂರು ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟ ಪದವಿಯನ್ನು ಅನುಗ್ರಹಿಸಿರುವದನ್ನು ನೋಡಿ ಸರ್ವರೂ ಸಂತೋಷಪಡುತ್ತಿರಲು, ಸ್ಟಾರ್ ಪತ್ರಿಕಾಕರ್ತರು ಸರ್ವರಂತೆ ಸಂತೋಷಪಡದೆ ಅಥವಾ ಸುಮ್ಮನಿರದೆ ಅದಕ್ಕೆ ವಿರುದ್ಧವಾಗಿ ಅಸೂಯಾಬುದ್ಧಿಯಿಂದ ಟೀಕಿಸಿರುವದನ್ನು ನೋಡಿ ವಿಷಾದಪಡಬೇಕಾಗಿದೆ. ಬಸವಜಯಂತಿಯ ವಿಷಯದಲ್ಲಿ ಪೋಲೀಸರ ಅಭಿಪ್ರಾಯವು ತಮ್ಮ ಕಾರ್ಯಕ್ಕೆ ವಿಘ್ನವನ್ನುಂಟುಮಾಡಿತೋ ಏನೋ ಎಂದು ಭಾವಿಸಿ ಈ ರೀತಿಯಾಗಿ ಬರೆದಿರಬಹುದೆಂದು ಅನೇಕರು ತರ್ಕಿಸುತ್ತಾರೆ.

ವರ್ತಮಾನಸಂಗ್ರಹ.

ಭರತಖಂಡದ ಅನೇಕ ಪೌರಸಭೆಗಳು (ಮ್ಯುನಿಸಿಪಾಲಿಟಿಗಳು) ಇನ್ನು ಮುಂದೆ ಕೈಯಿಂದ ನೂತು, ಕೈಯಿಂದ ನೆಯ್ದ ಬಟ್ಟೆಗಳನ್ನೇ ಉಪಯೋಗಿಸಬೇಕೆಂದು ನಿರ್ಧರಿಸುತ್ತಿರುವುವು.

ಬ್ರಿಟಿಷ್ ಪಾರ್ಲಿಮೆಂಟಿನ "ಲಿಬರಲ್ ಪಾರ್ಟಿ" ಯ ಮುಖಂಡರೂ, ಮಾಜಿ ಮಂತ್ರಿಗಳೂ ಆದ ಲಾಯಿಡ್ ಜಾರ್ಜರವರನ್ನು ಕೂಲಿಕಾರಪಕ್ಷದ ಒಬ್ಬ ಕುರುಡನು ಬರುವ ಚುನಾವಣೆಯಲ್ಲಿ ಎದುರಿಸುವನಂತೆ!

ಪರದೇಶದ ಬಟ್ಟೆಗಳನ್ನು ಮಾರಕೂಡದೆಂದೂ, ಹಾಗೆ ದೇಶಾಭಿಮಾನಕ್ಕೆ ವಿರೋಧವಾಗಿ ಮಾರಿದರೆ ಅವರನ್ನು ಕೊಂದುಬಿಡುವೆವೆಂದೂ ಕ್ರಾಂತಿಕಾರರು ಕರಾಚಿಯ ಕೆಲಜನ ವರ್ತಕರಿಗೆ ಗುಪ್ತಪತ್ರಗಳನ್ನು ಬರೆದಿರುವರಂತೆ!

ಬಾಗ್ದಾದಿನ ಓರ್ವಹೆಂಗಸು ಒಂದೇ ಬಾರಿಗೆ ಮೂರುಮಕ್ಕಳನ್ನು ಹೆತ್ತಿರುವಳು. ಅವುಗಳಲ್ಲಿ ಎರಡು ಬಹಳ ಬೆಳ್ಳಗೂ, ಒಂದು ಇದ್ದಲಿಯ ಹಾಗೆ ಕಪ್ಪಗೂ ಇವೆಯಂತೆ! ಪರ್ಷಿಯಾದೇಶದ ವೈದ್ಯರು ಇದನ್ನು ನೋಡಿ ಅಚ್ಚರಿಗೊಂಡಿರುವರು.

ಲಾಹೋರಿನ ಸಾಂಡರ್ಸ್ ಎಂಬ ಪೋಲೀಸ್ ಅಧಿಕಾರಿಯನ್ನು ಕೊಂದ ಕ್ರಾಂತಿಕಾರಕನು ತನ್ನನ್ನು ಹಿಡಿಯುವವರಿಗೆ 10,000 ರೂ. ಗಳನ್ನು ಕೊಡುವುದಾಗಿ ದಿಲ್ಲಿಯ ಹಿಂದೂಸ್ಥಾನ್ ಟೈಮ್ಸ್ ಪತ್ರಿಕಾಕರ್ತರಿಗೆ ಗುಪ್ತಪತ್ರವನ್ನು ಬರೆದಿರುವನಂತೆ!

ಮನಮಾಡಬಾಂಬ ಕೇಸಿನ ವಿಚಾರಣೆಯು ನಾಸಿಕದ ಸೆಷನ್ ಕೋರ್ಟಿನಲ್ಲಿ ನಡೆಯುತ್ತಿದೆ. ಹರೀಂದ್ರ ಭಟ್ಟಾಚಾರ್ಯ ಮತ್ತು ಮನಮೋಹನಗುಪ್ತ ಎಂಬ ಇಬ್ಬರು ಯುವಕರು ಈ ಕಾರ್ಯವನ್ನು ಮಾಡಿದರೆಂಬ ಆರೋಪದ ಮೇಲೆ ಹಿಡಿಯಲ್ಪಟ್ಟಿರುತ್ತಾರೆ.

ಶ್ರೀಕೃಷ್ಣಬರ್ಕ ಮತ್ತು ಪಿಯಾರಿಲಾಲ್‌ಅವಸ್ಥಿ ಎಂಬ ಇಬ್ಬರು ಹಿಂದೂತರುಣರು ಸೈಕಲ್ಲಿನ ಮೇಲೆ ಪ್ರಪಂಚವನ್ನೆಲ್ಲಾ ತಿರುಗಿಕೊಂಡುಬರಲು ಹೊರಟು ಕಾನ್ಪುರದಿಂದ ಬೆನಾರಸ್ (ಕಾಶಿ) ಪಟ್ಟಣಕ್ಕೆ ಬಂದಿರುವರು. ಮುಂದೆ ಅವರು ಪಾಟ್ನಾಕ್ಕೆ ಹೋಗುವರು.

18 ವರ್ಷದ ವಯಸ್ಸಿನೊಳಗೆ ಮದುವೆಯಾಗಿರುವ ವಿದ್ಯಾರ್ಥಿಗಳನ್ನು ಮೆಟ್ರಿಕ್ಯುಲೇಷನ್ ಮತ್ತು ಎಸ್. ಎಸ್. ಎಲ್.ಸಿ. ಪರೀಕ್ಷೆಗಳಿಗೆ ಸೇರಿಸಕೂಡದೆಂಬ ವಿಷಯವಾಗಿ ಪಂಜಾಬ ವಿಶ್ವವಿದ್ಯಾಲಯದವರು ತಮ್ಮ ಪ್ರಾಂತದ ಎಲ್ಲಾ ಹೈಸ್ಕೂಲುಗಳ ಅಭಿಪ್ರಾಯವನ್ನು ಕೇಳಿರುವರು.

ಗೋವಧೆಯನ್ನು ಮಾಡಿದವರಿಗೆ 2 ವರ್ಷಗಳ ಶಿಕ್ಷೆಯನ್ನೂ 100 ರೂಪಾಯಿಗಳ ದಂಡವನ್ನೂ ವಿಧಿಸಬೇಕೆಂಬ ಗೋರಕ್ಷಣೆಯ ಕಾನೂನಿನ ಮಸೂದೆಯು ಕೊಚ್ಚಿ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುತ್ತದೆ. ನಿರ್ಣಯವಾದ ಈ ಸಂತೋಷವಾರ್ತೆಯನ್ನು ಎಂದು ಕೇಳುವೆವೋ!

ಇತ್ತೀಚೆಗೆ ಮದರಾಸು ಪ್ರಾಂತದ ಸ್ವರಾಜ್ಯಪಕ್ಷದ ಕೆಲ ಮುಖಂಡರು, ರಾಷ್ಟ್ರೀಯ ಸಭೆಯಧ್ಯೇಯವನ್ನು ಬದಲಾಯಿಸಿ ಸರ್ಕಾರಿ ಉದ್ಯೋಗಗಳನ್ನು ಕೈಗೊಳ್ಳಬೇಕೆಂದು ಹೇಳುತ್ತಿರುವರು. ಸರ್ಕಾರಿ ಉದ್ಯೋಗಕ್ಕೆ ಹೋದಮೇಲೆ ಹಿಂದಿನಂತೆ ದೇಶಾಭಿಮಾನವು ನಿಲ್ಲುವುದು ಮಾತ್ರ ಸಂಶಯಾಸ್ಪದವೇ ಸರಿ!

ಮಹಾತ್ಮಾ ಗಾಂಧಿಯವರ ಆಂಧ್ರದೇಶದ ಸಂಚಾರವು ಕಳೆದ 21ನೆಯ ತಾರೀಖಿಗೆ ಮುಗಿಯಿತು. ಇದುವರೆಗೆ ಹೈದರಾಬಾದಿನಲ್ಲಿ ಬಂದ 10000 ರೂ. ಗಳನ್ನು ಬಿಟ್ಟು 2 ಲಕ್ಷದ 42 ಸಾವಿರ ರೂಪಾಯಿಗಳನ್ನು ಆಂಧ್ರರು ಮಹಾತ್ಮರಿಗೆ ಸಮರ್ಪಿಸಿರುವರು. ಅಂದರೆ ದಿನಕ್ಕೆ ಹೆಚ್ಚುಕಡಿಮೆ 6000 ರೂ. ಗಳು ಬಂದಂತಾಯಿತು.

ತರುಣನಾಯಕರು ತಮ್ಮ ವಿಷಯದಲ್ಲಿ ಅಸಮಾಧಾನವನ್ನು ಪ್ರಕಟಗೊಳಿಸಿದುದರಿಂದ ಮ|| ರಾ|| ಎಸ್. ಶ್ರೀನಿವಾಸಯ್ಯಂಗಾರರು ಮುದುಕರಾದ ತಾವು ಬೇರೆ ಇರುವುದು ಉತ್ತಮವೆಂದು ಹೇಳಿ 'ಭಾರತಸ್ವಾತಂತ್ರ್ಯಸಂಘದ' (ಇಂಡಿಪೆನ್ಡೆನ್ಸ್ ಆಫ್ ಇಂಡಿಯಾ ಲೀಗ್) ಅಧ್ಯಕ್ಷಪದವಿಗೆ ರಾಜೀನಾಮೆಯನ್ನು ಕೊಟ್ಟಿರುವರು.

ಮಧುರೆಯಲ್ಲಿ ನಡೆದ ಮೊದಲನೆಯ ವರ್ಣಾಶ್ರಮ ಧರ್ಮಸಭೆಯಲ್ಲಿ ಅಧ್ಯಕ್ಷರಾಗಿದ್ದ ಟಿ. ಆರ್. ರಾಮಚಂದ್ರಅಯ್ಯರವರು ಇನ್ನೂ ಶೀಘ್ರದಲ್ಲಿಯೇ ಜಾರಿಗೆ ಬರದಿರುವ ವೈವಾಹಿಕಶಾಸನವನ್ನು ಬ್ರಾಹ್ಮಣರೆಲ್ಲರೂ ವಿರೋಧಿಸಬೇಕೆಂದೂ, ಹಾಗೆ ಮಾಡುವುದರಿಂದ ಅರ್ಥದಂಡ ಅಥವಾ ಕಾರಾಗೃಹವಾಸ... ಪ್ರಾಪ್ತಿಯಾದರೂ ಸಹ ಹೆದರದೆ ಎಲ್ಲಕ್ಕೂ ಸಿದ್ಧರಾಗಿರಬೇಕೆಂದೂ ಹೇಳಿದರು. ಸ್ವಸ್ತಿ!

ಕಲಾಂಬೂರಿಗೆ ಹತ್ತಿರಿರುವ ಐಯ್ಯಂಪೇಟೆಯ ಓರ್ವ ಗರ್ಭವತಿಯಾದ ಹೆಂಗಸಿಗೆ ಸರಿಯಾಗಿ ಹೆರಿಗೆಯಾಗದಿರಲು, ಅವಳು ವೆಲ್ಲೂರಿನ ಆಸ್ಪತ್ರೆಗೆ ಒಯ್ಯಲ್ಪಟ್ಟಳು. ಅಲ್ಲಿ ಡಾಕ್ಟರರು ಹೊಟ್ಟೆಗೆ ಶಸ್ತ್ರಹಾಕಿನೋಡಲು ಮಗುವಿನ ಬದಲು ಹೊಟ್ಟೆಯಲ್ಲಿ ಮುತ್ತುಗಳು ಇದ್ದುವಂತೆ! ಈ ಮುತ್ತುಗಳು ಪರೀಕ್ಷೆಗಾಗಿ ಕಳುಹಿಸಲ್ಪಟ್ಟಿವೆಯಂತೆ!

ಕಲ್ಕತ್ತಾಪಟ್ಟಣದ ಟಿ. ಸಿ. ದತ್ತ ಎಂಬವನ ಹೆಂಡತಿಯಾದ 16 ವರ್ಷ ವಯಸ್ಸಿನ ಯಮುನಾ ಎಂಬ ಯುವತಿಯು ಗಂಡ ಮತ್ತು ಅತ್ತೆಯ ಕಾಟವನ್ನು ತಡೆಯಲಾರದೆ ಮೈಗೆ ಬೆಂಕಿಯನ್ನು ಹಚ್ಚಿಕೊಂಡು ಸತ್ತುಹೋದಳು. ಗಂಡನ, ಅತ್ತೆಯ ಮತ್ತು ಅತ್ತಿಗೆಯ ವಿಚಿತ್ರಹಿಂಸೆಗಳಿಂದ ಪಾರಾಗಲು ಈ ಬಡಪ್ರಾಣಿಯು ಹೀಗೆ ಮಾಡಬೇಕಾಯಿತೆಂದು ಕೋರ್ಟಿನವರು ನಿರ್ಧರಿಸಿರುವರು.

ಟೆಕ್ಸಾಸ್ ಎಂಬಲ್ಲಿಯ ವಿಶ್ವವಿದ್ಯಾಲಯದಲ್ಲಿ ಒಬ್ಬ ಜಡ್ಜಿಯ ಮಗಳು ಓದುತ್ತಿರಲು, ಅವಳ ಸಹಪಾಠಿಯಾಗಿದ್ದ ಯುವಕನೋರ್ವನು ಅವಳನ್ನು ಗುಪ್ತವಾಗಿ ಮದುವೆಮಾಡಿಕೊಂಡು ಮಾವನ ಬಳಿಗೆ ಹೋಗಿ ನಿಜಾಂಶವನ್ನು ತಿಳುಹಿಸಲು, ಮಾವನು ಕ್ರುದ್ಧನಾಗಿ, ಅವನನ್ನು ಪಿಸ್ತೂಲಿನಿಂದ ಹೊಡೆದು ಕೊಂದು, ಪೋಲೀಸರ ವಶನಾಗಿ "ತನ್ನ ಸಂಸಾರದ ಗೌರವರಕ್ಷಣೆಗಾಗಿ ಕೊಲೆಮಾಡಿದೆ" ನೆಂದು ಹೇಳಿರುವನಂತೆ! ಈ ಜಡ್ಜಿಯ ಬುದ್ಧಿಯೇ ಬುದ್ಧಿಯು!

ಅಮೇರಿಕೆಯ ಸರ್ ಹೆನ್ರಿ ಸೀಗ್ರೇವ್‌ರವರು ಗಂಟೆಗೆ 231 ಮೈಲುಗಳ ವೇಗದ ಮೋಟಾರನ್ನು ಬಿಟ್ಟು ಲೋಕವಿಖ್ಯಾತರಾಗಿರುವರು. ಈಗ ಬ್ರಿಟನ್ನಿನ ಕ್ಯಾಪ್ಟನ್ ಕ್ಯಾಂಬೆಲ್ ಎಂಬವರು ಮೋಟಾರ್ ಸ್ಪೀಡಿನಲ್ಲಿ ಸೀಗ್ರೇವರವರನ್ನು ವಿಜಾರಿಸಬಹುದಾದ ಕೆಲಸಗಳನ್ನು ಮಾಡಿ ತೋರಿಸುತ್ತಿರುವರು. ಇಷ್ಟರಲ್ಲಿಯೇ ಮೋಟಾರ್‌ಸ್ಪೀಡಿನಲ್ಲಿ ತಮ್ಮಿಂದ ಅಮೇರಿಕಾಕ್ಕೆ ಬಂದಿದ್ದ ಕೀರ್ತಿಯನ್ನು ಕ್ಯಾಂಬೆಲ್‌ರವರು ಕಸುಕೊಂಡು ಬ್ರಿಟನ್ನಿಗೆ ಕೊಡುವರೆಂಬುದಾಗಿ ಸೀಗ್ರೇವ್‌ರವರು ಕ್ಯಾಂಬೆಲ್‌ರವರನ್ನು ಶ್ಲಾಘಿಸಿರುವರು.

ಸೂರತ್ತಿನ ಹಿಂದೂಸಭೆಯ ಅಧ್ಯಕ್ಷರಾದ ಡಾ|| ರೇಯಚಿಯವರು ಜಾತಿದ್ವೇಷಕರವಾದ ಭಾಷಣಮಾಡಿದರೆಂಬ ಆಪಾದನೆಗೆ ಗುರಿಯಾಗಿ ಅವರಿಗೆ ಸೂರತ್ತಿನ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು 6 ತಿಂಗಳ ಕಠಿನ ಶಿಕ್ಷೆಯನ್ನು ವಿಧಿಸಿದ್ದರು. ಸೆಷನ್ಸ್ ಕೋರ್ಟಿನಲ್ಲಿಯೂ ಇದೇ ಶಿಕ್ಷೆಯೇ ಒಪ್ಪಿತವಾಗಿ ಹೈಕೋರ್ಟಿನಲ್ಲಿ ಅಪ್ಪೀಲು ನಡೆಯಲು ನ್ಯಾಯಮೂರ್ತಿಗಳಾದ ಜಸ್ಟಿಸ್ ಕೆಂಪ್ ಮತ್ತು ಜಸ್ಟಿಸ್ ಬೇಕರ್‌ರವರು ಸದರಿಯವರ ಶಿಕ್ಷೆಯನ್ನು 500 ರೂಪಾಯಿಗಳ ಅರ್ಥದಂಡ ಅಥವಾ 3 ತಿಂಗಳ ಕಾರಾಗೃಹವಾಸಕ್ಕೆ ಇಳಿಸಿರುತ್ತಾರೆ.

ಮದ್ರಾಸಿನ ಬ್ರಾಹ್ಮಣೇತರ ಪಕ್ಷವಾದ 'ಜಸ್ಟಿಸ್' ಪಾರ್ಟಿಯ ಕಟ್ಟು ಒಡೆದಿದೆ. ನಮ್ಮ ದೇಶಕ್ಕೆ ಉಪಕಾರ ಮಾಡಲು ನೇಮಿಸಲ್ಪಟ್ಟಿರುವ ಸೈಮನ್‌ಕಮಿಷನ್ನಿಗೆ ಸಂಬಂಧಪಟ್ಟ ರಾಜಕೀಯ ವಿಷಯಗಳೇ ಇದಕ್ಕೆ ಕಾರಣ. ಜಸ್ಟಿಸ್ ಪಾರ್ಟಿಯ ಕೆಲ ಮುಖಂಡರು ಸೈಮನ್‌ಸಮಿತಿಯನ್ನು ಬಹಿಷ್ಕರಿಸಬೇಕೆನ್ನುವರು. ಮತ್ತೆ ಕೆಲವರು ಅದಕ್ಕೆ ಸಹಾಯ ಮಾಡಬೇಕೆನ್ನುವರು. ಅಂತೂ ಅಭಿಪ್ರಾಯಭೇದದಿಂದ ಪಾರ್ಟಿಯು ಒಡೆದುಹೋಗಿದೆ. ಈಚೆಗೆ "ಜಸ್ಟಿಸ್" ಪಾರ್ಟಿಯವರೆಲ್ಲರನ್ನೂ ಒಂದುಗೂಡಿಸುವ ಪ್ರಯತ್ನಗಳು ನಡೆಯುತ್ತಿವೆ.

ಮುಸಲ್ಮಾನರ ಗುರುವಾದ ಮಹಮ್ಮದನ ನಡೆನುಡಿಗಳವಿಷಯವಾಗಿ "ರಂಗೀಲರಸೂಲ್" ಎಂಬ ಗ್ರಂಥವನ್ನು ಪ್ರಕಟಗೊಳಿಸಿದ್ದ ಮಹಾಶಯ ರಾಜಪಾಲ್ ಎಂಬ ಆರ್ಯಸಮಾಜದ ಮುಖಂಡನನ್ನು ಕೊಂದ ಮುಸಲ್ಮಾನಯುವಕನ ವಿಚಾರಣೆಯು ಲಾಹೋರ್ ಸೆಷನ್ಸ್ ಕೋರ್ಟಿನಲ್ಲಿ ನಡೆಯಿತು. ನಿಯಮಿತರಾಗಿದ್ದ ನಾಲ್ಕುಜನ ಅಸೆಸರಲ್ಲಿ ಇಬ್ಬರು ಮುಸಲ್‌ಮಾನರು ಆರೋಪಿಯು ತಪ್ಪಿತಸ್ಥನಲ್ಲವೆಂದೂ, ಶೀಖ ಮತ್ತು ಹಿಂದುವಾದ ಮತ್ತಿಬ್ಬರು ತಪ್ಪಿತಸ್ಥನೆಂದೂ ಅಭಿಪ್ರಾಯಪಟ್ಟರು. ನ್ಯಾಯಾಧಿಪತಿಗಳು ಅಪರಾಧಿಗೆ ಮರಣದಂಡನವನ್ನು ವಿಧಿಸಿದರು. ಯೋಗ್ಯಶಾಸನ!

ಅಗಾಧವಾದ ವೈಮಾನಿಕಸಾಹಸಕೃತ್ಯವನ್ನು ಕೈಗೊಂಡ ಭಾರತೀಯರಲ್ಲಿ ಮೊದಲನೆಯವನಾದ ಕಬಾಲಿ ಎಂಬ ತರುಣನು ಲಂಡನ್ನಿನಿಂದ ಹೊರಟು, ಪ್ಯಾರಿಸ್, ಮರ್‌ಸೇಲ್ಸ್, ರೋಮ್, ಟ್ರಿಪೋಲಿ, ಬಸ್ರಾ, ಜಾಸ್ಕ ಎಂಬ ಪಟ್ಟಣಗಳ ಮಾರ್ಗವಾಗಿ ಸುಮಾರು 6.700 ಮೈಲುಗಳನ್ನು ದಾಟಿ ಕರಾಚಿಗೆ ಬರುವನು. ಕಬಾಲಿಗೆ ಸುಖಾಗಮನವನ್ನು ಬಯಸುವ ಸಮಾರಂಭದಲ್ಲಿ ಲಂಡನ್ನಿನಲ್ಲಿರುವ ಕುಚ್‌ಬಿಹಾರಿನ ಮಹಾರಾಣಿಯವರು "ಹಿಂದಿನಕಾಲದಲ್ಲಿ ಭಾರತೀಯರಿಗೆ ಆಕಾಶಯಾನದ ಪರಿಚಯವಿದ್ದಿತೆಂಬುದು ರಾಮಾಯಣಾದಿಗಳಿಂದ ಗೊತ್ತಾಗುತ್ತದೆ. ಇನ್ನು ಕೆಲವು ... ಗಳಲ್ಲಿಯೇ ಯೂರೋಪ್, ಅಮೇರಿಕಾ, ಆಸ್ಟ್ರೇಲಿಯಾ ಖಂಡಗಳ ವೈಮಾನಿಕರಂತೆ ಅದ್ಭುತಕಾರ್ಯಗಳನ್ನೆಸಗುವ ತರುಣರು ನಮ್ಮ ದೇಶದಲ್ಲಿಯೂ ಸಹ ಹುಟ್ಟುವರೆಂದು ನಂಬುತ್ತೇನೆ" ಎಂದು ಹೇಳಿ, ಕಬಾಲಿಯವರ ಕೈಯಲ್ಲಿ ಇಂಗ್ಲೆಂಡಿನ ಸ್ತ್ರೀಯರ ಸುಖವಾರ್ತೆಗಳನ್ನು ಭಾರತಸ್ತ್ರೀಯರಿಗೆ ತಿಳುಹಿಸುವ ಕಾಗದವನ್ನು ಕೊಟ್ಟುಕಳುಹಿಸಿರುವರು.

ಬಚಾ ಏ ಸಾಕೊ ಎಂಬ ಕಳ್ಳದೊರೆಯ ಮೇಲೆ ಯುದ್ಧವನ್ನು ಹೂಡಿದ್ದ ಅಫ್ಘಾನಿಸ್ಥಾನದ ಮಾಜಿ ಅಮೀರರಾದ ಅಮಾನುಲ್ಲಾಖಾನರು ಪೂರ್ಣವಾಗಿ ಸೋತುಹೋದರು. ಘಜನಿಯ ಹತ್ತಿರ ನಡೆದ ಯುದ್ಧದಲ್ಲಿ ಅಮಾನುಲ್ಲರ ಕಡೆಯ 2500 ಜನರು ಮರಣಹೊಂದಿದರು. ಅಮಾನುಲ್ಲರು ಜಯದಾಶೆಯನ್ನು ಬಿಟ್ಟು ತಮ್ಮ ಪತ್ನಿಯಾದ ಸೌರಿಯಾ, ಸಹೋದರನಾದ ಇನಯತುಲ್ಲಾಖಾನ್ ಮತ್ತು ಇತರ ಪರಿವಾರದೊಡನೆ ತಮ್ಮ ದೇಶವನ್ನು ಬಿಟ್ಟು ಈ ತಿಂಗಳು 23 ನೆಯ ತಾರೀಖಿನ ದಿವಸ ಇಂಡಿಯಾದೇಶದ ಗಡಿಯನ್ನು ದಾಟಿದರು. ಅವರ ಪ್ರಾರ್ಥನೆಯಮೇರೆಗೆ ಇಂಡಿಯಾ ಸರ್ಕಾರದವರು ತಮ್ಮ ದೇಶದ ಸರಹದ್ದಿನಿಂದ ಬೊಂಬಾಯಿಗೆ ಬರಲು ಬೇಕಾದ ಪ್ರಯಾಣ ಸೌಕರ್ಯಗಳನ್ನು ಅವರಿಗೆ ಒದಗಿಸಿಕೊಟ್ಟಿರುವರು. ಅವರ ವಶದಲ್ಲಿ ಒಂದು ಸ್ಪೆಷಲ್ ಟ್ರೈನ್ ಇಡಲ್ಪಟ್ಟಿರುವುದು. ಅಮಾನುಲ್ಲರೂ ಅವರ ಪರಿವಾರದವರೂ ಕಾಂದಹಾರಿನಿಂದ 20 ಮೋಟಾರುಕಾರುಗಳಲ್ಲಿ ಕುಳಿತು ಹೊರಟರೆಂದೂ, ಅವರ ಸಂಗಡ 20 ಹಣದ ಚೀಲಗಳೂ, ಒಂದು ಚಿನ್ನದ ಹಿಡಿಯ ಕತ್ತಿಯೂ ಇರುವವೆಂದೂ ಪ್ರಕಟವಾಗಿದೆ. ಬಚಾ-ಯಿ-ಸಾಕನ ಸೈನ್ಯದವರು ಅಮಾನುಲ್ಲಾಖಾನರ 40 ಮೋಟಾರು ಲಾರಿಗಳನ್ನು ವಶಪಡಿಸಿಕೊಂಡು ಬಿಟ್ಟುದರಿಂದ ಅವರಿಗೆ ಪ್ರಯಾಣದ ಸೌಲಭ್ಯವು ತೀರಕಡಿಮೆಯಾಗಿರುವುದು. ಅಮಾನುಲ್ಲಾಖಾನರು ಕರಾಚಿಯ ಮಾರ್ಗವಾಗಿ ಇಟಲಿಗೆ ಹೋಗುವರಂತೆ! ಅಫ್ಘಾನಿಸ್ಥಾನದ ವಿದ್ಯಮಾನಗಳು ಈ ರೀತಿ ಪರಿಣಮಿಸುವುವೆಂದು ಯಾರೂ ತಿಳಿದಿರಲಿಲ್ಲ! ದೈವಗತಿಯು ವಿಚಿತ್ರವಾದುದು!

ಶ್ರೀ ಕೇದಾರಮಹಾಸಂಸ್ಥಾನ ಉಖಾಮಠ.

ಶ್ರೀ ಕೇದಾರನಾಥಸನಾತನಸಂಸ್ಕೃತಮಹಾವಿದ್ಯಾಲಯದಲ್ಲಿ ಏಕೋರಾಮಾಚಾರ್ಯರ ಜಯಂತಿಯ ಸಮಾರಂಭವು ಅತ್ಯುತ್ಸಾಹದಿಂದ ನೆರವೇರಿತು. ಆಮೇಲೆ ಸಭೆಯು ಪ್ರಾರಂಭವಾಯಿತು. ಪ್ರಥಮದಲ್ಲಿ ಮಂಗಲಪದಗಳನ್ನು ಬಾಲಕರು ಮನೋರಂಜಕವಾಗುವಂತೆ ಗಾನರೂಪದಿಂದ ಪಠಿಸಿದರು. ತರುವಾಯ ಭಾಸ್ಕರಾನಂದ ಶರ್ಮನು ಸನಾತನಧರ್ಮದ ಮೇಲೆ ಭಾಷಣ ಮಾಡಿದನು. ತದನಂತರದಲ್ಲಿ ಕೆಲವು ವಿದ್ಯಾರ್ಥಿಗಳು "ವರ್ಣಾಶ್ರಮವ್ಯವಸ್ಥಾ" ವಿಷಯವಾಗಿ ಉಪನ್ಯಾಸಮಾಡಿದರು. ಬಳಿಕ ನಂದಪ್ರಯಾಗಾಂಬದಲ್ಲಿರುವ ಶ್ರೀ ಕೇದಾರನಾಥ ಸನಾತನ ಸಂಸ್ಕೃತ ಮಹಾವಿದ್ಯಾಲಯದ ಶಾಖಾವಿದ್ಯಾಲಯದ ಅಧ್ಯಾಪಕರಾದ ಲಾಹೋಹಶಾಸ್ತ್ರಿಗಳವರು ಸನಾತನಧರ್ಮದಮೇಲೆ ವ್ಯಾಖ್ಯಾನಮಾಡಿದರು. ಅನಂತರ ಮಹಾವಿದ್ಯಾಲಯ ಜ್ಯೋತಿಷಾಧ್ಯಾಪಕ ಮುಕುಂದರಾಮ ಶಾಸ್ತ್ರಿಗಳು ಗುರುಶಿಷ್ಯಲಕ್ಷಣವನ್ನು ಬೋಧಿಸಿದರು. ಬಳಿಕ ಮಹಾವಿದ್ಯಾಲಯ ವ್ಯಾಕರಣಾಧ್ಯಾಪಕ ಪಂ|| ಮಹಿಮಾನಂದ ಶಾಸ್ತ್ರಿಗಳು ಬ್ರಾಹ್ಮಣಾದಿ ವರ್ಣಗಳು ಅನಾದಿಕಾಲದಿಂದಲೇ ಅನೂಚಾನವಾಗಿ "ಬ್ರಾಹ್ಮಣೋಸ್ಯಮುಖಮಾಸೀತ್" ಇತ್ಯಾದಿ ಪುರುಷಸೂಕ್ತೋಕ್ತರೀತ್ಯಾ ಜನ್ಮತಃ ಬಂದಿರುವುವಲ್ಲದೆ ಕರ್ಮತಃ ಬಂದಿರುವುದಿಲ್ಲವು. ಮಹೇಶ್ವರನ ಮುಖದಿಂದ ಶ್ರೀಮದೇಕೋರಾಮಾಚಾರ್ಯಪಾದರು ಆವಿರ್ಭವಿಸಿ ಕೇದಾರಮಂಡಲದಲ್ಲಿ ಶ್ರೀ ಕೇದಾರಸಿಂಹಾಸನವನ್ನು ಸ್ಥಾಪಿಸಿರುವ ಇತಿಹಾಸವೇ ಇದಕ್ಕೆ ಸಾಕ್ಷೀಭೂತವಾಗಿದೆ. ಎಂದು ಸ್ಮೃತಿಪುರಾಣೇತಿಹಾಸಗಳ ನಿದರ್ಶನಪೂರ್ವಕವಾಗಿ ಮಹತ್ವದ ಭಾಷಣವನ್ನು ಮಾಡಿದರು. ಅನಂತರ ಪುರಗಿರಿ ಬದ್ರಿನಶಿವಾಚಾರ್ಯರವರು ಲಿಂಗಧರ ವೀರಮಾಹೇಶ್ವರ ಮತಸಿದ್ಧಾಂತಪ್ರತಿಷ್ಠಾಪನಾಚಾರ್ಯರಾದ ಏಕೋರಾಮ ಶಿವಾಚಾರ್ಯರು ಕಲಿಯುಗಾದಿಯಲ್ಲಿ ದ್ರಾಕ್ಷಾರಾಮ ರಾಮನಾಥ ಲಿಂಗದಿಂದಾವಿರ್ಭವಿಸಿದ ಈ ದಿನವು ಅಕ್ಷಯತೃತೀಯಾತಿಥಿಯೆಂಬ ಭಾರತೀಯರ ದೊಡ್ಡ ಹಬ್ಬದ ದಿನವೆಂದು ಪರಿಗಣಿಸಲ್ಪಟ್ಟಿರುತ್ತೆ. ವ್ಯಾಸಪ್ರಭೃತಿಮಹರ್ಷಿಗಳು ಈ ಪೀಠಸ್ಥಾಪಕರಲ್ಲಿ ಉಪದೇಶವಂ ಪಡೆದುದಲ್ಲದೆ ಪಾಂಡವಾದಿ ಚಕ್ರವರ್ತಿಗಳೂ ಸಹ ಈ ಪೀಠಾಚಾರ್ಯರ ಸದುಪದೇಶದಿಂದಲೇ ಸದ್ಗತಿಯನ್ನು ಪಡೆದಿರುವರು. ಈಗಲೂ ಆರ್ಯಕುಲ, ಕಮಲ, ದಿನಾ [illegible]

[illegible]

ಸಂವಾದದಾತಾ
Gurooji Beivanki,
Hiremath.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ದಾವಣಗೇರಿಯಲ್ಲಿ ರಂಭಾಪುರೀ ಪೀಠಾಧಿಪತಿಗಳ ಆಂದೋಲಿಕೋತ್ಸವವು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದ ರಾಜ ದೇಶಿಕೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು 19 ನೆಯ ತಾರೀಖಿನದಿವಸ ದಾವಣಗೆರೆಗೆ ದಯಮಾಡಿಸಿದರು. ಅಷ್ಟರೊಳಗೆ ಪುರಪ್ರಮುಖರು ಇಸ್ತಕವಾಲದೊಡನೆ ಹಾಜರಿದ್ದರು. ಡಿ|| ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬ ಬಹದ್ದೂರ್‌ರವರು ಅ|| ಸೂಪರಿಂಟೆಂಡೆಂಟ್ ಸಾಹೇಬ ಬಹದ್ದೂರ್‌ರವರು ಸಬ್‌ಡಿವಿಜನ್ ಸಾಹೇಬ ಬಹದ್ದೂರ್‌ರವರು ಅಮಲ್ದಾರ ಸಾಹೇಬರವರು ಇನ್‌ಸ್ಪೆಕ್ಟರ್ ಸಾಹೇಬರವರು ಸಬ್-ಇನ್‌ಸ್ಪೆಕ್ಟರ್ ಸಾಹೇಬರವರು ಮೊದಲಾದ ಸರಕಾರಿ ಅಧಿಕಾರಿಗಳು ಪೋಲೀಸ್ ರಿಜರ್ವ್‌ಪೋಲೀಸ್ ಸಿಬ್ಬಂದಿಯೊಡನೆ ಸಿದ್ಧರಾಗಿದ್ದರು. ಸರ್ವರ ಪ್ರಾರ್ಥನೆಯಂತೆ ಶ್ರೀಗಳವರು ಸುವರ್ಣ ರಜತಾಂದೋಲಿಕೆಯಲ್ಲಿ ಮಂಡಿತರಾದರು. ಉತ್ಸವವು ತಳಿರು ತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ಮಧ್ಯಮಧ್ಯದಲ್ಲಿ ಶೃಂಗರಿಸಿದ ಚಪ್ಪರಗಳಿಂದಲೂ ಶೋಭಾಯಮಾನವಾಗಿದ್ದ ಪಟ್ಟಣದಲ್ಲೆಲ್ಲ ಚತುರಂಗಬಲಸಮೇತವಾಗಿ ಸಕಲಬಿರುದಾವಳಿಗಳೊಡನೆ ಹೊರಟಿತು. ಸದ್ಭಕ್ತರು ಭಕ್ತಿಯಿಂದ ಮಹಾ ಸನ್ನಿಧಿಗೆ ಕಾಯಿಕರ್ಪೂರಗಳನ್ನು ಒಪ್ಪಿಸಿ ಅಸಾಧಾರಣವಾದ ಗುರು [illegible]

[illegible]

ಸ್ಥಾಪಿಸಿಕೊಂಡು ಉತ್ಸವಕ್ಕೆ ಆಗಮಿಸಿದ ಹುಲಿಗಿನಹೊಳೆ, ದೋಣಿಹೊಳೆ, ಅವರಗೊಳ್ಳ, ಯಕ್ಕನಳ್ಳಿ, ಹೊಳಗುಂದಿ, ಹಾವೇರಿ, ಲಕ್ಷ್ಮೀಪುರ ಮೊದಲಾದ ಜಗದ್ಗುರು ಪಂಚಾಚಾರ್ಯ ಭಜನಾ ಸಂಘಗಳಿಗೆ ರಜತ ಮೆಡಲ್ಲುಗಳು ಕೊಡಲ್ಪಟ್ಟವು. ಪ್ರತಿದಿವಸ ಧಾರ್ಮಿಕೋಪನ್ಯಾಸಗಳು ನಡೆಯುತ್ತಿರುವವು. ದಾವಣಗೆರೆಯ ವೀರಶೈವರು ತಮ್ಮ ಸತ್ಸಂಕಲ್ಪವನ್ನು ನೆರವೇರಿಸಿಕೊಂಡು ಧನ್ಯರಾದರು. ಈ ಗುರುಪುತ್ರರಿಗೆಲ್ಲ ಶ್ರೀ ರೇಣುಕನು ಸಕಲ ಸನ್ಮಂಗಲಗಳನ್ನುಂಟುಮಾಡಿ ರಕ್ಷಿಸಲೆಂದು ಪ್ರಾರ್ಥಿಸುವ.

ಓರ್ವ ಉತ್ಸವಭಾಗಿ.

ನೋಟೀಸ್.

ಸಮಸ್ತ ವೀರಶೈವರಿಗೆ ಈ ಮೂಲಕ ಪ್ರಸಿದ್ಧಪಡಿಸುವದೇನಂದರೆ—

ಈ ಒಳಗಾಗಿ ಕೇದಾರಸಂಸ್ಥಾನದಿಂದ ರದ್ದುಪಡಿಸಿದ ಮುಕ್ತಿಯಾರ್ ಅನಂತರಾಮನೆಂಬವನು ಆಕಸ್ಮಾತ್ ಸಿಕ್ಕನು. ಅವನ ಮೇಲೆ ಮಹಾಸಂಸ್ಥಾನದ ಧನವು ಹನ್ನೆರಡುಸಾವಿರ ರೂಪಾಯಿಗಳವರೆಗೂ ಲೆಖ್ಖವಾಗಿದೆ. ಈ ದಿವಸ ಅವನು ಓರ್ವ ಜಾಮೀನದಾರ ರೋಷನಲಾಲ ಇವರ ಜಾಮೀನಿನ ಮೇಲೆ ಬಿಡಲ್ಪಟ್ಟಿರುವನು. ಮತ್ತು ಅಂಬಾದತ್ತನೆಂಬ ಮುಕ್ತಿಯಾರನ ಮೇಲೆ ಮಹಾಸಂಸ್ಥಾನದ [illegible]

ಈ ಜನರು || ಮಹಾಸಂಸ್ಥಾನದ ಹೆಸರಿನ ಮೇಲೆ [illegible]

ಕೇದಾರ ಮಹಾಸಂಸ್ಥಾನದ ಉಖಾಮಠ
ಮ್ಯಾನೇಜರ ಚಟ್ಕರ್ ಡಿ|| ಕಲೀಶ್ವರ.
ವಿಶ್ವೇಶ್ವರಪ್ರಸಾದ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೧ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಅ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಅ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಅ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ತ್ರೀ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಸಾಹಿತ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [9]

ಎಂ. ಎಸ್. ಗಂಗಂಣ ಮತ್ತು ಲೋಕಂಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಬೆಲೆಯಲ್ಲಿ ಕಡಿಮೆಯಾದದ್ದು! ಗುಣದಲ್ಲಿ ಮೇಲಾದದ್ದು! ಶೀಘ್ರಗುಣಕಾರಿಯಾದದ್ದು!

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರೆಗಳು "ಗೃಹಮಾತೆ"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅನ್ನಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂತ್ರವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. [illegible]

ಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಕ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಅದ್ದರಿಂದ ಈ ಔಷಧಾಲಯಕ್ಕೆ "ಅಷ್ಟವರ್ಗೌಷಧಾಲಯ"ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟ ಪೂನಾ ಸಿಟಿ
Himalayan Ashtawarg Medical Hall
848. Ganjipet Poona City.
[8]

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತಕೋಲಾಹಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರನಖಾರಾಧ್ಯ, ಚಂಡಭೈರವಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಕಾಂಡ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿದ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖನಿಯಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ಕರ್ಷ ಮತ್ತು, ಶಕ್ತಿವೈಶಿಷ್ಟ್ಯ, ಹಂಚಪರಿಗಿರುವ ಶಕ್ತಿ ಶಕ್ತಿ [illegible]

[illegible]

ವ್ಯವಸ್ಥಾಪಕ,
ಶ್ರೀ ಶಿವತತ್ವಗ್ರಂಥಮಾಲಾಮಂದಿರ
ಜಂಗಮವಾಡಿಮಠ ಬನಾರಸ್ ಸಿಟಿ.
[9]

ದಿ ಮ್ಯಾನುಫ್ಯಾಕ್ಚರರ್ಸ್ ಲೈಫ್ ಇನ್ಷ್ಯೂರೆನ್ಸ್ ಕಂಪೆನಿ, ಕಾನಡಾ.

1928—ಈ ವರ್ಷದಲ್ಲಿ ನಡೆದಿರತಕ್ಕಷ್ಟು ವಿಮೆಗಳು ಕಂಪೆನಿಯ ಚರಿತ್ರೆಯಲ್ಲೇ ಇರಲಿಲ್ಲ.

ಈಗ ಜಾರಿಯಲ್ಲಿರುವ ಮೊಬಲಗು	ರೂ.	1,36,00,00,000
ಹೊಸದಾಗಿ ಆಗಿರುವದು	ರೂ.	26,20,00,000
ಹಂಚಿರುವ ಲಾಭ	ರೂ.	58,62,400
ಕೊಟ್ಟಿರುವ ವಾರಸು	ರೂ.	87,27,300

ಈ ಕಂಪೆನಿಯನ್ನೇ ಚುನಾಯಿಸಬೇಕಾದ ಕಾರಣಗಳು—

1. ಪ್ರಪಂಚದ 5 ಖಂಡಗಳಲ್ಲಿಯೂ ಇರತಕ್ಕ ಈ ಕಂಪೆನಿಯ ವಿಮೆದಾರರ ಜೊತೆಯಲ್ಲಿ, ಇಂಡಿಯಾ ದೇಶದಲ್ಲೇ 5 ಲಕ್ಷ ಜನಗಳನ್ನುಳ್ಳ (ವಿಮೆದಾರರು) ಭಾರಿಸಂಸಾರದಲ್ಲಿ ಸೇರಿ ಭಾಗಿಗಳಾದಂತಾಗುತ್ತೆ.
2. ಎಷ್ಟೇ ಕಡಿಮೆಯೆಂದರೂ ರೂ. 1,000 ಗಳ ವಿಮೆಗೆ ರೂ. 500 ರಿಂದ 600 ರ ವರೆಗೂ ಲಾಭವನ್ನು ಪಡೆಯಬಹುದು. ಇನ್ನೂ ಜಾಸ್ತಿಯಾಗುವ ಸಂಭವವೂ ಉಂಟು.
3. ಈ ರಾಕ್ತ ಸಕ್ತಿಯನ್ನುಳ್ಳ ಮತ್ತು ಅನುಕೂಲಗಳನ್ನುಳ್ಳದ್ದು ಮತ್ಯಾವದೂ ಇಲ್ಲ.
4. ಗಂಡಸರು, ಹೆಂಗಸರು, ಮಕ್ಕಳು ಯಾರು ಬೇಕಾದರೂ ವಿಮೆ ಮಾಡಬಹುದು.

[48] **ಏಜಂಟರು ಬೇಕಾಗಿದೆ.**

ಬೊಂಬಾಯಿಗೆ ಬರೆಯಬೇಕಾದರೆ, **ಬ್ರಾಂಚ್ ಆಫೀಸು,** ಫೋರ್ಟ್, ಬೊಂಬಾಯಿ.

ಅಥವಾ

ಮೈಸೂರು ಸಂಸ್ಥಾನ ಮತ್ತು ಕೊಡಗಿಗೆ ಏಜಂಟರು **ಯಸ್. ರಾಮಸ್ವಾಮಿ,** ರೆಸಿಡೆಂಟ್ ಏಜಂಟ್, ಶಿವರಾಂಪೇಟೆ, ಮೈಸೂರು.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋದು, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋದು, ಪಿತ್ತವಿಕಾರ ನಿದ್ದೆಯು ಬಾರದೆ ಇರೋದು ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) [illegible]

[illegible]

5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [19]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಬ್ಬಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ತಿಳಿಸಿ, ಔಷಧ್ಯಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಕು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಥರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [43]

ಮಲೇರಿಯಾನ ಕಂಪೆನಿ, ನಂಬ್ರ ೩೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವನಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪		ರೂ. ಆ. ಪೈ.
	ಬೆಲೆ ೧ ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦	ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮॥	ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪	ಬೆಲೆ ೧ ಕ್ಕೆ	೦—೦—೬
ಷಡ್ಯುಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦	ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ	೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ	ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ	೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ	೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ.
ಪಾವಟೆ ದುಷ್ಪ್ರವೃತ್ತಿ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಒಸನಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚಸಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್,

ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ॥ ಪಂ॥ ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ॥ ಚನ್ನಯ್ಯ ಹೊಸಮಠ,

ಪೋಸ್ಟು ಹರಿಹರ, ಡಿ॥ ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:— ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ... ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ

[48] ಪೋ. ಬಾ. ೫೧೦. ಮದರಾಸು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಷ್ಯುರೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ ನೇ ಜೂನ್ ೧೯೨೯ [ಸಂಚಿಕೆ ೪.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಗೊಂಡಬಾಳ.

ನಿಜಾಮ ಇಲಾಖಾ ಕೊಪ್ಪಳ ತಾಲೂಕ ಗೊಂಡಬಾಳ ಗ್ರಾಮಕ್ಕೆ ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀಗುರು ಚರಪಟ್ಟಾಧ್ಯಕ್ಷ ಶ್ರೀ ಜಗದ್ಗುರು ಬಿದ್ರುವಲಿಂಗಶಿವಾಚಾರ್ಯಮಹಾಸ್ವಾಮಿಗಳ ಸವಾರಿಯು ಸಕಲ ರಾಜಬಿರುದಾವಳಿಗಳೊಡನೆ ದಯಮಾಡಿಸೋಣವಾಗಿದೆ. ಇದೇ ಸಮಯದೊಳಗೆ ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಅವತಾರದಿನವಾದ ವೈಶಾಖ ಶು॥ ೩ ಶನಿವಾರವು (ತಾ॥ 11-5-29) ಪ್ರಾರಂಭವಾದುದರಿಂದ ಮಹಾಸಂಸ್ಥಾನದಲ್ಲಿ ಗಣತೃಪ್ತಿ ಕಾರ್ಯವು ಆಗಿ ಮಾರನೇ ದಿನ ಕಳೆದ ಕೂಡಲೆ ಶ್ರೀಮಜ್ಜಗದ್ಗುರು ದಾರುಕಾಚಾರ್ಯರ ಅವತಾರದಿನವಾದ ವೈಶಾಖ ಶು॥ ೫ ಸೋಮವಾರವು (ತಾ॥ 13-5-29) ಬಂದೊದಗಿದ್ದರಿಂದ ಸದರಿ ಮಹಾಸಂಸ್ಥಾನದ ಕಾರಭಾರಿಗಳಾದ ಕಾಮನೂರಿ ಪಟ್ಟದ ಶ್ರೀ ಚನ್ನವೀರಸ್ವಾಮಿಗಳು ಗುರುಭಕ್ತಿಯನ್ನು ವ್ಯಕ್ತಪಡಿಸುವದಕ್ಕಾಗಿ ತಮ್ಮ ಸ್ವಂತ ಖರ್ಚಿನಿಂದ ಪರಮೋತ್ಸವವನ್ನು ಮೃಷ್ಟಾನ್ನ ದಾನಾದಿಗಳಿಂದ ಸಂತುಷ್ಟಗೊಳಿಸಿ ಈ ಕಾರ್ಯಜ್ಞಾಪಕಾರ್ಥವಾಗಿ "ಶ್ರೀಮತ್ಪಂಚಾಚಾರ್ಯಪ್ರಭಾ ಪತ್ರಿಕೆಗೆ ೨ ರೂಪಾಯಿಗಳನ್ನ ಕಳಿಸಿದರು. ವೈಶಾಖ ಶು॥ ೩ ಮತ್ತು ವೈಶಾಖ ಶು॥ ೫ ಈ ಪ್ರಯುಕ್ತ ಉತ್ಸವ ದಿನಗಳು ದೊಡ್ಡ ಹಬ್ಬಗಳಾಗಿ ಈ ಗ್ರಾಮದಲ್ಲಿ ಜರುಗಿದವು. ಮತ್ತು ಆಯಾ ದಿನಗಳಲ್ಲಿ ಭಗವತ್ಪಾದ ಜಗದಾಚಾರ್ಯರ ಭಾವಪಟಗಳನ್ನು ಪಂಚಕಲಶಾದಿಗಳಿಂದ ಶೃಂಗರಿಸಿ ಅಂದೊಂದಿ... ಕೆಯಲ್ಲಿರಿಸಿ ಉತ್ಸವಗಳು ನೆರವೇರಿಸಲ್ಪಟ್ಟವು. ಈ ಮಹೋತ್ಸವಗಳು ಛತ್ರಚಾಮರಾದಿ ಸಕಲ ರಾಜಬಿರುದಾವಳಿಗಳೊಡನೆ ಭಜನಾ-ನಗಾರಿ-ಡೊಳ್ಳು-ಕರಡಿಮಜಲುಗಳ ಮೇಳದೊಡನೆ ಪುರದ ಬೀದಿಗಳಲ್ಲಿ ಹಾಯ್ದು ಒಳ್ಳೇ ವಿಜೃಂಭಣೆಯಿಂದ ಮಹಾಸಂಸ್ಥಾನವನ್ನು ಸೇರಿದವೆಂದು ತಿಳುಹಿಸಲು ಅತ್ಯಂತ ಆನಂದವಾಗುತ್ತದೆ. ಈ ಕಾರ್ಯಗಳಿಂದ "ಶ್ರೀಮತ್ಪಂಚಾಚಾರ್ಯರ" ಜಯಂತಿಗಳ ಜ್ಞಾಪಕವು ಸರ್ವರಲ್ಲಿ ಉಂಟಾಯಿತೆಂದು ಹೇಳಬಹುದಾಗಿದೆ. ವೈಶ್ಯಧರ್ಮದ ಶ್ರೀಮಂತ ಮ॥ ರಾ॥ ರಾಮಚಂದ್ರಪ್ಪನವರು ಪೂರ್ಮಾಬೇಳೂರು ಮಾಲಿಪಾಟೀಲ ಮ॥ ರಾ॥ ಅಡಿವಪ್ಪಗೌಡರು, ಮ॥ ರಾ॥ ಮಾಲಿಪಾಟಿಲ ಚನ್ನಪ್ಪಗೌಡರು, ವೇ॥ ಶ್ರೀ॥ ನಾಯಕಲ್ ಸಿದ್ಧಲಿಂಗಯ್ಯನವರು, ವೇ॥ ವಸ್ತ್ರದ ಬಸವಯ್ಯನವರು, ಮ॥ ರಾ॥ ಶಂಕರಪ್ಪನವರು ಲಕ್ಕುಂಡಿ, ಮ॥ ರಾ॥ ಮಾ॥ ಪಾಟೀಲ ಬಸವನಗೌಡರು, ಮ॥ ರಾ॥ ಹಳ್ಳಿಕೇರಿ ಬಸಪ್ಪನವರು, ಮ॥ ರಾ॥ ಸಜ್ಜನ ವೀರೇಶಪ್ಪನವರು ಇತ್ಯಾದಿ ಸ್ವಮತಪರಮತಸ್ಥರು ಗುರುಕಾರ್ಯಕ್ಕಾಗಿ ಹೆಣಗಾಡುತ್ತಿರುವರು. ಇದು ಸ್ತುತ್ಯವೇ ಸರಿ! ಆದರೆ ಸರ್ವರಲ್ಲಿ ನಾನು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವದೇನಂದರೆ—ತಮ್ಮ ತಮ್ಮ ಮತಾಚಾರ್ಯರ ಜಯಂತಿಗಳನ್ನು ಆಚರಿಸಿ ವೈದಿಕವಿತಾನುಯಾಯಿಗಳೆಂಬ ಸತ್ಕೀರ್ತಿಯನ್ನು ಹೊಂದಿ ಜನ್ಮಸಾರ್ಥಕ್ಯ ಮಾಡಿಕೊಳ್ಳಬೇಕೆಂದು ಆಶಿಸುತ್ತೇನೆ.

ಓರ್ವಗುರುಭಕ್ತ.

ಸ್ವೀಕಾರ.

ಧಾರವಾಡ ಪಟ್ಟಣದ ಶುಕ್ರವಾರಪೇಟೆ ಹಿರೇಮಠದಲ್ಲಿ ನೆರವೇರಿದ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾಪೋಷಣ ಕೋಶಕ್ಕಾಗಿ ತೆಗೆಯಿಸಿದ 4 ರೂಪಾಯಿಗಳು ಮ॥ ರಾ॥ ಶಿವಬಸಪ್ಪ ವಕೀಲ ಧಾರವಾಡ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಪಟ್ಟಣನಿವಾಸಿಗಳಾದ ಮ॥ ರಾ॥ ಗಾಳಿ ಕರಿಬಸಪ್ಪನವರ ಗೃಹದಲ್ಲಿ ನೆರವೇರಿದ ಲಿಂಗಧಾರಣ ಸಮಯದಲ್ಲಿ ವೇ॥ ಕಲ್ಲುಮಠದ ಸಂಪಯ್ಯನವರ ಪ್ರೋತ್ಸಾಹದಮೇರೆಗೆ ಪ್ರಭಾಪೋಷಣಕೋಶಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ವೇ॥ ತೋರಣಗಲ್ಲು ಮಠದ ನಂಜುಂಡಯ್ಯನವರ ದ್ವಾರಾ ತಲ್ಪಿರುತ್ತವೆ.

ಕೇದಾರಸಂಸ್ಥಾನದ ಸೇವಾಧಿಕಾರಿಗಳಾದ ಶ್ರೀ ಕಾಮನೂರು ಪಟ್ಟಾಧಿಕಾರಿಗಳು ಕೊಪ್ಪಳ ಡಿ॥ ಗೊಂಡಬಾಳಗ್ರಾಮದಲ್ಲಿ ನೆರವೇರಿಸಿದ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕೋಶಕ್ಕಾಗಿ ತೆಗೆಯಿಸಿದ 2 ರೂ. ಹಾಗೂ ಉಪ್ಪಿನಬೇಟಗೇರಿಯಲ್ಲಿರುವ ಮ॥ ರಾ॥ ಅಂಗಡಿ ಚನ್ನಪ್ಪನವರಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಒಟ್ಟು 3 ರೂಪಾಯಿಗಳು ಮ॥ ರಾ॥ ವೀರಭದ್ರಪ್ಪ ಶಿವಶಿಂಪಿಗಾರ ಇವರದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ—

ಒಳದೇಶದ ವೃತ್ತಾಂತಗಳು.

ಬಾಳೆಹೊನ್ನೂರಿನಲ್ಲಿ ಮಿ॥ ಕ್ರಾಫರ್ಡರಿಗೆ ಸೇರಿದ್ದ 90 ಎಕರೆ ಕಾಫಿತೋಟವನ್ನು ಮೈಸೂರು ಸರ್ಕಾರದವರು 20000 ರೂ. ಗಳಿಗೆ ಕೊಂಡುಕೊಂಡರೆಂದು ಕೇಳುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ॥ ತಾಜ್‌ಪೀರಾನ್, ಬಿ. ಎ., ಯವರು ರಾಜದ್ರೋಹದ ವ್ಯವಹಾರವನ್ನು ಸೆಷನ್‌ಕೋರ್ಟಿಗೆ ಹಾಕಬೇಕೆಂದು ಅಪಾದಿತರು ತಂದಿದ್ದ ಅರ್ಜಿಯನ್ನು ತಿರಸ್ಕರಿಸಿದರು. ಅಪಾದಿತರು ಮ್ಯಾಜಿಸ್ಟ್ರೇಟರ ಹುಕುಮಿನಮೇಲೆ ಪುನರ್ವಿಚಾರಣೆಯ ಅರ್ಜಿಯನ್ನು ಹಾಕುವವರಿದ್ದಾರೆ.

ಸ್ವರಾಜ್ಯಪತ್ರಿಕಾಕರ್ತರಾದಿಗಳ ಮೇಲೆ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆದಿರುವ ಧರ್ಮಸಂಬಂಧಿ ಮಾನನಷ್ಟದ ೨ ಮೊಕದ್ದಮೆಗಳಲ್ಲಿ ಕಳೆದ ತಿಂಗಳು 29ನೆಯ ತಾರೀಖಿನ ದಿವಸ ಸಿಟಿಮ್ಯಾಜಿಸ್ಟ್ರೇಟರವರು ಅಪರಾಧಿಗಳನ್ನು ಎರಡೆರಡುನೂರು ರೂಪಾಯಿಗಳ ಜಾಮೀನು ಮತ್ತು ಸ್ವಂತ ಮುಚ್ಚಳಿಕೆಯ ಮೇಲೆ ಬಿಟ್ಟಿರುವದಾಗಿಯೂ ಜುಲೈ 6 ಕ್ಕೆ ವಿಚಾರಣೆಯಿರುವದಾಗಿಯೂ ತಿಳಿದುಬರುತ್ತದೆ.

ಮ॥ ರಾ॥ ತಗಡೂರು ರಾಮಚಂದ್ರರಾಯರು ಪ್ರೆಸ್ ಕಾನೂನನ್ನು ಮುರಿಯಬೇಕೆಂದು ಜನರಿಗೆ ಬೋಧಿಸುವಪಟವನ್ನು ಬೆಂಗಳೂರು ಸಿಟಿಯ ಬೀದಿಗಳಲ್ಲಿ ಮೆರೆಯಿಸುತ್ತಿದ್ದುದರಿಂದ ಹಾಗೆ ಮಾಡುವುದು ಸರ್ಕಾರದಮೇಲೆ ಜನರನ್ನು ಉದ್ರೇಕಗೊಳಿಸಿ ಶಾಂತಿಗೆ ಭಂಗತಂದಂತಾಗುವುದೆಂದು ತಿಳಿದು, ಬೆಂಗಳೂರು ಡಿ॥ ಮ್ಯಾಜಿಸ್ಟ್ರೇಟರಾದ ಮಿ॥ ತಾಜ್‌ಪೀರಾನ್‌ರವರು ಪೋಲೀಸ್ ರೆಗ್ಯುಲೇಷನ್ನಿನ 39ನೆಯ ವಿಧಿಯನ್ನು ಅನುಸರಿಸಿ ಸದರಿ ರಾಮಚಂದ್ರರಾಯರಿಗೆ 6 ತಿಂಗಳ ಶಿಕ್ಷೆಯನ್ನು ವಿಧಿಸಿರುವರು.

ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಭದ್ರಾ ಕಾಲುವೆಯನ್ನು ಉಪಯೋಗಿಸಿ ಒಂದು ವ್ಯವಸಾಯಕ್ಷೇತ್ರವನ್ನು ಸ್ಥಾಪಿಸಬೇಕೆಂದು ಮೈಸೂರು ಸರ್ಕಾರದವರು ನಿಶ್ಚಯಿಸಿರುತ್ತಾರೆ. ಈ ವ್ಯವಸಾಯಕ್ಷೇತ್ರದಲ್ಲಿ ಸದ್ಯಃ ಹತ್ತು ಜನರಿಗೆ ಮಾತ್ರ ಪ್ರತಿಯೊಬ್ಬರಿಗೆ 20 ಎಕರೆ ತರಿ, 40 ಎಕರೆ ಖುಷ್ಕಿ ಜಮೀನನ್ನು ಕೊಡುವರು. ಅದರ ಖರೀದಿಯನ್ನು ಸಲ್ಲಿಸುವವರೆಗೂ ಅಥವಾ 20 ವರ್ಷಗಳ ಕಾಲ ಭೂಮಿಯನ್ನು ಯಾರಿಗೂ ಮಾರಲಾಗದು. ಇದರ ಮೇಲ್ವಿಚಾರಣೆಯನ್ನು ಮೈಸೂರು ವ್ಯವಸಾಯ ಇಲಾಖೆಯ ಡೈರೆಕ್ಟರು ನೋಡಿಕೊಳ್ಳುವರು. ಈ ಭೂಮಿಯನ್ನು ಪಡೆಯುವ ಪ್ರತಿಯೊಬ್ಬನಿಗೂ 10250 ರೂ. ಗಳು ಖರ್ಚಾಗುವುವು. ಮೊದಲು ಅರ್ಜಿದಾರರು 1500 ರೂ. ಗಳನ್ನು ಕೊಡಬೇಕು. ಉಳಿದ ಹಣವನ್ನು ಸರ್ಕಾರದವರು ಸಾಲವಾಗಿ ನಾಲ್ಕು ವರ್ಷಕಾಲ ಬಡ್ಡಿಯಿಲ್ಲದೆ ಕೊಡುವರು. ಬೇಕಾದವರು ಈ ಸುಸಮಯವನ್ನು ಕಳೆದುಕೊಳ್ಳಲಾಗದೆಂದು ಸೂಚಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೈದಿಕವಾಙ್ಮಯರಹಸ್ಯವು

ಅಥವಾ

ಪ್ರಭಾಭರಣವು.

(ಲೇಖಕರು—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ವಿಜಾಪುರ).

[ಕಳೆದವಾರದ ಶೇಷ.]

ಯಾಜ್ಞವಲ್ಕ್ಯನೂ ಅವನ ಅನುಯಾಯಿಗಳೂ ಶಿವಧರ್ಮ ಪರಾಯಣರಾಗಿದ್ದ ಹಾಗೇ ಕಾಲಾಗ್ನಿರುದ್ರ, ಬೃಹಜ್ಜಾಬಾಲ, ಜಾಬಾಲ, ವಾಮದೇವ, ಅತ್ರಿ, ಭಾರದ್ವಾಜ, ವಸಿಷ್ಠ, ವಿಶ್ವಾಮಿತ್ರಾದಿ ಋಷಿಗಳಾದರೂ ಪತಿಧರ್ಮಾಚರಣೆಗಳನ್ನು ಅನುಷ್ಠಿಸಿಯೇ ಕೃತಾರ್ಥರಾದರೆಂದು ಹೇಳಬಹುದು.

ಏನಿದು? ಪೂರ್ವಕಾಂಡ ಪ್ರಸಿದ್ಧರಾದ ವಸಿಷ್ಠ, ವಿಶ್ವಾಮಿತ್ರಾದಿಗಳು ಪತಿಧರ್ಮ (ಅಪ್ರಾಕೃತ ಶತ್ತ್ವಾಚರಣ) ಪರಾಯಣರಾಗಿದ್ದರೇ? ಓಹೋ! ಆಶ್ಚರ್ಯ! ಎನ್ನುವುದು "ಭ್ರಮಾಲೋಭಾನ್ಮೋಹಾನ್ಮತದುರಭಿಮಾನಾದಪಿ" ಎಂಬ ವಾಕ್ಯಾನ್ವರ್ಥಕರಿಗೆ ಸಾಹಜಿಕವಾಗಿರುವುದು. ಆದರೆ, ಆ ವಸಿಷ್ಠ ವಿಶ್ವಾಮಿತ್ರಾದಿಗಳ ಸ್ಥಿತಿಯು ಯಾವಜ್ಜೀವವೂ ಹೇಗಿದ್ದಿತು? ಋಕ್ಸಂಹಿತೆಯ ೩ನೆಯ ಮಂಡಲದ ೫೩ನೆಯ ಸೂಕ್ತದಲ್ಲಿ—

ನ ಸಾಯಕಸ್ಯ ಚಿಕಿತೆ ಜನಾಸೋ ಲೋಧಂ ನಯನ್ತಿ ಪಶುಮನ್ಯಮಾನಾಃ।
ನಾ ವಾಜಿನಂ ವಾಜಿನಾ ಹಾಸಯನ್ತಿ ನ ಗರ್ದಭಂ ಪುರೋ ಅಶ್ವಾನ್ನಯನ್ತಿ ||೨೩||

ತನ್ನ ಕಡೆಯಜನರಿಂದ ಕಟ್ಟಿ ತರಲ್ಪಟ್ಟ ವಸಿಷ್ಠನನ್ನು ನೋಡಿ ವಿಶ್ವಾಮಿತ್ರನು ನುಡಿವನು. ಎಲೈ ಜನರೇ? ನನ್ನ ಬಲವು ಹೇಗಿದೆ ಎಂಬುದು ನಿಮಗೆ ಗೊತ್ತೇ ಇದೆ; ನೀವು ಲುಬ್ಧನಾದ ಈ ವಸಿಷ್ಠನನ್ನು ಪಶುವೆಂದೇ ತಿಳಿದು ಕಟ್ಟಿತಂದಿರಲ್ಲವೇ? ಕತ್ತೆಯು ಕುದುರೆಯ ಬಳಿಯಲ್ಲಿ ಮೂಗ (ವಿಗೌಣ) ವಾಗಿಯೇ ನಿಲ್ಲುವುದು (ಅಶ್ವವು ಹೇಷಾ ಶಬ್ದವನ್ನು ಮಾಡುವಂತೆ ಗರ್ದಭವು ಮಾಡದು); ಕುದುರೆಯ ಮುಂದೆ ಕತ್ತೆಯನ್ನು ಒಯ್ದು ನಿಲ್ಲಿಸುವುದುಂಟೆ? (ಇಲ್ಲಿ ವಿಶ್ವಾಮಿತ್ರನು ಕುದುರೆಗೂ ವಸಿಷ್ಠನು ಕತ್ತೆಗೂ ಹೋಲಿಸಲ್ಪಟ್ಟಿರುವುದರಿಂದ, ಈ ಋಕ್ಕು ವಸಿಷ್ಠ ವಿಶ್ವಾಮಿತ್ರರ ಪಾರಸ್ಪರಿಕ ದ್ವೇಷವನ್ನು ಸೂಚಿಸುವುದು).

ಎಂಬುದಾಗಿ ಕಂಡುಬರುವ ರಜೋಗುಣಮಯಸ್ಥಿತಿಯೇ ಇದ್ದಿತೇ? ಛೇ! ಹಾಗೆ ತಿಳಿಯಬಾರದು. ಅವರ ಜೀವಿತಚರಿತ್ರವಾದರೂ ಪ್ರಗತಿಗೊಳಪಟ್ಟಿದ್ದಿತೆನ್ನುವುದೇ ನ್ಯಾಯವು. ಇಲ್ಲವಾದರೆ ಅವರು ಬ್ರಹ್ಮರ್ಷಿಗಳು ಎಂಬ ಮಾತೇ ಭೇಕರಸನಾಯಿತವೆನಿಸಬಹುದಲ್ಲವೆ? ಬ್ರಹ್ಮರ್ಷಿಗಳೇನೋ ಅಹುದು; ಆದರೆ ಅವರು ಶಿವಧರ್ಮಪರಾಯಣರಾಗಿದ್ದರೆಂದು ಹೇಳುವುದನ್ನು ಮಾತ್ರ ನಾನೆಂದೂ ಒಪ್ಪೆನು; ಎಂಬ ಮಾತು "ಹುಚ್ಚು ಬಿಟ್ಟು ಹೋಯಿತು ಕಾಣೇ? ಇನ್ನು ಒನಕೆಯನ್ನು ಬೇಗನೆ ಕೊಡು" ಎಂಬವನ ನುಡಿಯನ್ನು ಹೋಲುವುದು. ಪಂಚಿವತ್ತ್ವತತ್ತ್ವದ ಯಾಥಾತ್ಮ್ಯಜ್ಞಾನವೇ ಇಲ್ಲದೆ, ಕೇವಲ ರಾಗದ್ವೇಷಾದಿ ದೋಷದೂಷಿತಾಂತಃಕರಣರಲ್ಲಿ ಬ್ರಹ್ಮರ್ಷಿತ್ವವು ಸಂಭವಿಸುವುದೇ? ಶಿವಯೋಗಾನುಸಂಧಾನದ ಗಂಧವನ್ನೂ ಸಹ ಆಘ್ರಾಣಿಸದವರಲ್ಲಿ ಇರುವ ಬ್ರಹ್ಮರ್ಷಿತ್ವವಾದರೂ ಎಂತಹದು? ಬ್ರಹ್ಮರ್ಷಿಯೆಂಬ ಅಭಿಧಾನವು ನಿಜವಾಗಿ ಬ್ರಹ್ಮಜ್ಞಾನಿಯಲ್ಲಿಯೇ ಸಾರ್ಥಕವಾಗುತ್ತಹುದು. ಬ್ರಹ್ಮಶಬ್ದದ ಪರ್ಯವಸಾನಾರ್ಥವು ಪರಮಶಿವನನ್ನೇ ಲಕ್ಷಿಸುತ್ತದೆ. ಅಂತಹ ಪರಮಶಿವನ ಯಥಾರ್ಥಜ್ಞಾನ ಸಂಪಾದನೆಗಾಗಿ ಆ ಋಷಿಗಳು ತಮ್ಮ ಜೀವಮಾನದಲ್ಲಿ ಯತ್ನಮಾಡದೆ ಅಂಧತಮಃಪ್ರಾವೃತರೇ (ಪಾತಬದ್ಧರೇ) ಆಗಿದ್ದರೇನು? ಹಾಗಿದ್ದಿಲ್ಲವೆಂದೇ ಉಪನಿಷದ್ವಾಕ್ಯಗಳಲ್ಲಿಯೂ ಅವರ ಪ್ರಸ್ತಾಪಗಳಿವೆ. ವಸಿಷ್ಠನಾಗಲಿ, ವಿಶ್ವಾಮಿತ್ರನಾಗಲಿ, ಯಾರಾದರೇನು? ಸರ್ವಜೀವರಿಗೂ ಅಂತಿಮಧ್ಯೇಯವಾದುದು ಶಿವಜ್ಞಾನವೇ ಎಂಬುದನ್ನು ಯಾರೂ ಅಲ್ಲಗಳೆಯಲಾರರು; ಎಂದ ಮೇಲೆ ಬ್ರಹ್ಮರ್ಷಿಗಳೆಂಬುವವರು ತಮ್ಮ ಆತ್ಮೋದ್ಧಾರಕ್ಕಾಗಿ ಅಂತಿಮಧ್ಯೇಯರೂಪವಾದ ಶಿವಜ್ಞಾನಪ್ರಾಪ್ತಿಗೋಸುಗ ಅಪ್ರಾಕೃತ ಪಥವನ್ನು ಅನುಸರಿಸಿದರೆಂದೇ ತಿಳಿಯತಕ್ಕದ್ದು. ಶಿವಜ್ಞಾನವು ಉಪಾದೇಯವಾಗಿದ್ದಲ್ಲಿ, ಶಿವಧ್ಯಾನದ ಆವಶ್ಯಕತೆಯುಂಟು; ಅಂತರಂಗಿಕ ಧ್ಯಾನದ ದೃಢತೆಗಾಗಿ ಶಿವವ್ರತ, ಶಿವಪೂಜೆ, ಶಿವಭಕ್ತಿಯೆಂಬಿವುಗಳು ಬೇಕೇ ಬೇಕು. ಈ ವಿಷಯದಲ್ಲಿ ವಸಿಷ್ಠ ವಿಶ್ವಾಮಿತ್ರಾದಿಗಳಿಗಾಗಲಿ, ಮೋಕ್ಷದ ಉತ್ಕಟೇಚ್ಛೆಯುಳ್ಳ ಅನ್ಯರಿಗಾಗಲಿ ಅವರ ಆತ್ಮೋದ್ಧಾರದ ಸಲುವಾಗಿ ಬೇರೆ ಜನರು ಒತ್ತಿ ಹೇಳುವುದೇ ಬೇಡ; ಪರಪ್ರತ್ಯಯನೇಯಬುದ್ಧಿಗಳಲ್ಲದ ವಿವೇಕಿಗಳು **'ಭಕ್ತಿಧ್ಯಾನಯೋಗಾದವೇಹಿ'** ಎಂಬಂತೆ, ವೇದಾಗಮ ಪ್ರತಿಪಾದ್ಯಗಳಾದ ಪರಮ ಮುಮುಕ್ಷುಜನಗ್ರಾಹ್ಯಗಳೆನಿಸುವ **ಶಿವಭಕ್ತಿ, ಶಿವಪೂಜೆ, ಶಿವವ್ರತ, ಶಿವಧ್ಯಾನ, ಶಿವಜ್ಞಾನ**ಗಳೆಂಬ ಶಿವಯೋಗಾನುಸಂಧಾನರೂಪಗಳಾದ ಅಪ್ರಾಕೃತ ಧರ್ಮಾಚರಣೆಗಳನ್ನು ಅನುಷ್ಠಿಸಿದ ಹೊರತು ಗತ್ಯಂತರವಿಲ್ಲವೆಂಬುದನ್ನು ಚೆನ್ನಾಗಿ ಅರಿತವರಾಗಿರುತ್ತಾರೆ. ಹಾಗೆಯೇ ವೇದಾಗಮರಹಸ್ಯಾರ್ಥ ಪರಿಜ್ಞಾನಿಗಳಾದ ವಸಿಷ್ಠಾದಿ ಬ್ರಹ್ಮರ್ಷಿಗಳಾದರೂ ಪರಮಮುಮುಕ್ಷುಗಳಾದ್ದರಿಂದ ಶಿವಧರ್ಮಪರಾಯಣತೆಯಿಂದ ಕೃತಾರ್ಥರಾದರೆಂದೇ ಸಿದ್ಧವಾಗುವುದು.

ಮತ್ತು ಪೂರ್ವಕಾಂಡದಲ್ಲಿಯೂ ಅಪ್ರಾಕೃತ ಧರ್ಮಾಚರಣೆಗಳು ವಿಶೇಷವಾಗಿ ಪುರಸ್ಕರಿಸಲ್ಪಡುತ್ತವೆ; ಈ ಬಗ್ಗೆ ಋಕ್ಸಂಹಿತೆಯ ೮ನೆಯ ಮಂಡಲದ ೧೫ನೆಯ ಸೂಕ್ತದಲ್ಲಿ, ಜೀವರಿಗೆ ಶಿವನನ್ನು ಪೂಜಿಸದ ಹೊರತು ನಿಜವಾದ ಮೋಕ್ಷವು ದೊರೆಯುವುದಿಲ್ಲ; ಶಿವನನ್ನು ಪೂಜಿಸದವರು ಮನುಷ್ಯರೆನಿಸಿಕೊಳ್ಳುವದಕ್ಕೂ ಸಹ ತಕ್ಕವರಲ್ಲ. ಮನುಷ್ಯರಾಗಿ ಹುಟ್ಟಿದ ಬಳಿಕ ಶಿವನನ್ನೇ ಪೂಜಿಸಬೇಕು; ಎಂಬ ಭಾವಗರ್ಭಿತವಾದ ಋಕ್ಕು ಹೀಗಿದೆ—

ಅನ್ತರಿಚ್ಛನ್ತಿ ತಂ ಜನೇ ರುದ್ರಂಪರೋ ಮನೀಷಯಾ ಗೃಭ್ಣನ್ತಿ ಜಿಹ್ವಯಾಸಸಂ ||

ಜನೇ-ಜನರಲ್ಲಿ (ಜಾತಾವೇಕವಚನಮ್). **ಸ್ಥಿತಂ**-'ಯ ಏಷೊ ಹೃದ್ಯನ್ತರ್ಜ್ಯೋತಿಃ ಪುರುಷಃ' ಎಂಬುಪನಿಷದ್ವಚನಾನುಸಾರವಾಗಿ, ಪ್ರಾಣಲಿಂಗರೂಪನಾಗಿ ಬೆಳಗುತ್ತಿರುವ, **ಪರಃ**-ಸರ್ವೋತ್ಕೃಷ್ಟನಾದ (ವಚನವ್ಯತ್ಯಯಶ್ಛಾಂದಸಃ), **ತಂ ರುದ್ರಂ**-ಆ ಶಿವನನ್ನು, **ಅನ್ತಃ**-ಒಳಗೆ, ಹೃತ್ಪುಂಡರೀಕದಲ್ಲಿ, **ಯೇ**-ಯಾರು, **ಮನೀಷಯಾ**-ಶಿವಸಂಸ್ಕಾರವನ್ನು ಪಡೆದ ಸುಬುದ್ಧಿಯಿಂದ, **ಇಚ್ಛನ್ತಿ**-ಉಪಾಸಿಸುವ ಉತ್ಕಟೇಚ್ಛೆಯುಳ್ಳವರಾಗಿದ್ದಾರೆಯೋ, ಎಂದರೆ ವೃತ್ತಿಯ ಅನ್ಯಾಕಾರದ ಬಯಕೆಯನ್ನು ದೂರಮಾಡಿ, ಶಿವಾಕಾರವೃತ್ತಿಯನ್ನು ಬಲಿಸಿ ತದೇಕಧ್ಯಾನಚಿತ್ತರಾಗುವರೋ, **ತೇಜನಾಃ**-ಆ ಜನರು (ಶಿವಸಂಸ್ಕಾರಿಗಳು), **ಸಸಂ**-ಸಸ್ಯ ವಿಕಾರಭೂತವಾದ ಅನ್ನವನ್ನು, **ಜಿಹ್ವಯಾ**-ನಾಲಿಗೆಯಿಂದ, **ಗೃಭ್ಣನ್ತಿ**-ಗ್ರಹಿಸುವರು, ಸ್ವೀಕರಿಸುವರು, (ಇಲ್ಲಿ ಶಿವೋಪಾಸಕರಲ್ಲದವರು ಅನ್ನವನ್ನು ಗ್ರಹಿಸತಕ್ಕ ಪ್ರಾಣಿಗಳಲ್ಲ; ಅವರ ಆಹಾರವು ಅನ್ನವಲ್ಲವೆಂಬ ತಾತ್ಪರ್ಯವಿದೆ.)

ಹರದತ್ತಾಚಾರ್ಯರು ಈ ಮಂತ್ರದಲ್ಲಿಯ **'ಅನ್ತಃ'** ಎಂಬ ಪ್ರತೀಕವನ್ನು ತೆಗೆದುಕೊಂಡು, ಮಂತ್ರದ ಅರ್ಥವನ್ನ—

ಮನ್ತ್ರೇಣ ಚಾನ್ತರಿತಿ ಯುಷ್ಮದುಪಾಸಕಾನಾಮಾಗ್ನೇಯಿಕಾ ಯದಶನಂ ತದವೋಘಮಾಹುಃ ||೯೨||

'ಎಲೈ ಶಿವನೇ, ಋಕ್ಸಂಹಿತೆಯ ಪ್ರವರ್ತಕರು **'ಅನ್ತರಿಚ್ಛನ್ತಿ'** ಎಂಬ ಮಂತ್ರದಿಂದ ನಿನ್ನನ್ನು ಹೃತ್ಪುಂಡರೀಕದಲ್ಲಿ ಧ್ಯಾನಿಸುವವರ (ಅಂತರ್ಲಿಂಗಾನುಸಂಧಾನಮಾಡುವವರ) ಭಕ್ಷ್ಯಭೋಜ್ಯರೂಪ ಅಶನವು ಸಫಲವಾಗುವುದು ಎಂದು ಹೇಳುತ್ತಾರೆ;' ಎಂಬುದಾಗಿ ನಿರೂಪಿಸಿ, ಶಿವನನ್ನು ಬಾಹ್ಯದಲ್ಲಿ ಅರ್ಚಿಸುವುದಾದರೂ ಈ ಮಂತ್ರದಿಂದೇ ಸಿದ್ಧಿಸುವುದೆಂಬ ಗೂಢವಾದ ಆಶಯವನ್ನು ಹೀಗೆ ಸ್ಪಷ್ಟಗೊಳಿಸಿದ್ದಾರೆ—

ಭಾವೋಪಪನ್ನಮನಸಾಂ ತ್ವದುಪಾಸಕಾನಾಂ ಪುಂಸಾಮಮೋಘಮಶನಂ ಭಗವನ್ ಬ್ರುವಾಣಃ | ಮನ್ತ್ರೋಯಮನ್ತರಿತಿ ನಃ ಪ್ರತಿಭಾತಿ ಮೂಲಂ ಪ್ರಾಗ್ಭುಕ್ತಮರ್ಚನವಿಧೇರನುಪಾಸರಂ ತೇ ||೯೩||

'ಎಲೈ ಶಿವನೇ? ಸದ್ಭಾವದಿಂದ ಕೂಡಿದ ಮನಸ್ಸುಳ್ಳವರಾದ ನಿನ್ನ ಉಪಾಸಕರು (ಭಕ್ತರು) ಭುಂಜಿಸುವ ಅನ್ನವೇ ಸಫಲವಾದುದೆಂದು ಹೇಳುವ **'ಅನ್ತರಿಚ್ಛನ್ತಿ'** ಎಂಬ ಮೂಲವು (ಋಕ್ಕು), ಪ್ರತಿದಿನವೂ ಭೋಜನಕ್ಕಿಂತ ಮುಂಚೆಯೇ ನಿನ್ನನ್ನು ಬಾಹ್ಯದಲ್ಲಿಯೂ ಪೂಜಿಸಬೇಕೆಂದು ವಿಧಿಸುವುದು; (ಮೊದಲು ಶಿವಪೂಜೆಯನ್ನು ಮಾಡಿ ಶಿವನಿಗೆ ನೈವೇದ್ಯವಾದ ಬಳಿಕ ಆ ಶಿವಪ್ರಸಾದವನ್ನು ಭುಂಜಿಸಬೇಕೆಂದು ಆಜ್ಞಾಪಿಸುವುದು) ಈ ರೀತಿಯಾಗಿ ಬಾಹ್ಯಾಭ್ಯಂತರಗಳಲ್ಲಿ ನಿನ್ನನ್ನು ಪೂಜಿಸಬೇಕೆಂಬ ನಿಷಯದಲ್ಲಿ ಈ ಮಂತ್ರವು ನಮಗೆ ಪ್ರಮಾಣಭೂತವಾಗಿದೆ.'

ಈ ರೀತಿಯಾಗಿ, ವೇದಗಳ ಮಂತ್ರಭಾಗದಲ್ಲಿ ಉಟ್ಟಂಕಿತಗಳಾದ ಅಪ್ರಾಕೃತ ಧರ್ಮಾಚರಣೆಗಳು ಉಪನಿಷದ್ಭಾಗದಲ್ಲಿ ವಿಶದವಾಗಿ ನಿರೂಪಿತಗಳಾಗಿವೆ.

ಇನ್ನು, ಶಿವಧರ್ಮಾಚರಣೆಗಳನ್ನು ಅನುಷ್ಠಿಸುವವರೆಲ್ಲ ಶೈವರೇ ಎಂದು ಸಾಮಾನ್ಯವಾಗಿ ಸರ್ವತ್ರ ಹೇಳುವ ವಾಡಿಕೆಯಿದೆ. ಆದರೆ ಪರಮೋಕ್ಷಪ್ರದನು ಜೀವರ ಚಿತ್ತಪರಿಪಾಕ ತಾರತಮ್ಯವನ್ನು ಅನುಲಕ್ಷಿಸಿ ವೇದಾಗಮಗಳ ಮೂಲಕವಾಗಿ ಬೋಧಿಸಿದ ಅಪ್ರಾಕೃತಧರ್ಮಾಚರಣೆಗಳಲ್ಲಿಯೂ ಸಾಮಾನ್ಯ ವಿಶೇಷತೆಯುಂಟು. ಪ್ರಾಕೃತಕರ್ಮಗಳನ್ನು ಬಿಡದೆ, ಸಾಮಾನ್ಯವಾದ ಶಿವಸಂಸ್ಕಾರಕ್ಕೆ ಪಾತ್ರರಾಗಿ ಭಸ್ಮ ರುದ್ರಾಕ್ಷಧಾರಣ ಶಿವಲಿಂಗಪೂಜೆ ಮುಂತಾದುದನ್ನು ಅನುಷ್ಠಿಸುವ ದ್ವಿಜರಿಗೆ ಶೈವರೆಂದೂ, ಪ್ರಾಕೃತಕರ್ಮಗಳ ಗಾಳಿಯು ಸಹ ಸೋಂಕದ ಪರಿಶುದ್ಧಿಪೂರ್ವಕವಾಗಿ ವಿಶೇಷ ಶಿವಸಂಸ್ಕಾರವನ್ನು ಪಡೆದು ಅಷ್ಟಾವರಣ ಪಂಚಾಚಾರಾದಿ ಚತ್ಕ್ರಿಯೆಗಳನ್ನೇ ಅನುಷ್ಠಿಸುವ ಪ್ರಮಥಗೋತ್ರೀಯದ್ವಿಜರಿಗೆ ಮಾಹೇಶ್ವರರೆಂದೂ ಪ್ರಮಾಣಸಿದ್ಧಗಳಾದ ಹೆಸರುಗಳಿವೆ. ವಾಯುವೀಯ ಸಂಹಿತೆಯ ಉತ್ತರಭಾಗದ ೨೦ನೆಯ ಅಧ್ಯಾಯದಲ್ಲಿ **"ಶೈವೈರ್ಮಾಹೇಶ್ವರೈಶ್ಚೈವ ಶ್ರೀಮದ್ಭಿಃಸೇವಿತಂದ್ವಿಜೈಃ"** ಎಂಬುದಾಗಿ, ಶೈವದ್ವಿಜರಿಗಿಂತ ಮಾಹೇಶ್ವರದ್ವಿಜರು ಪೃಥಕ್ಕಾಗಿ ನಿರ್ದೇಶಮಾಡಲ್ಪಟ್ಟಿದ್ದಾರೆ. ಕಾಶ್ಮೀರದೇಶದಲ್ಲಿರುವ ಪ್ರತ್ಯಭಿಜ್ಞಾ ಮಾಹೇಶ್ವರರು ವೀರಮಾಹೇಶ್ವರರಿಗಿಂತಲೂ ಬೇರೆಯಾಗಿದ್ದಾರೆ. ವಾಮಾಚರಣೆಗೊಳಪಟ್ಟ 'ವೀರಸಂತತ' ಮೊದಲಾದ ಕೆಲವು ಅಶ್ರೌತಾಚಾರಗಳು ಅವರಲ್ಲಿ ಬಳಕೆಯಲ್ಲಿದ್ದುದು ಅಮೃತೀಯ ತಂತ್ರಸಾರ ಮುಂತಾದ ಪ್ರಕರಣಗ್ರಂಥಗಳಿಂದ ತಿಳಿದುಬರುವುದರಿಂದಲೂ ಇತರ ಬೇರೆ ಕಾರಣಗಳಿಂದಲೂ ಅವರು ವೀರಮಾಹೇಶ್ವರರಿಗಿಂತ ತೀರ ಭಿನ್ನರೇ ಆಗಿದ್ದಾರೆಂಬಲ್ಲಿ ಸಂದೇಹವೇ ಇಲ್ಲ. **"ನಾಯಮಾತ್ಮಾ ಬಲಹೀನೇನ ಲಭ್ಯಃ ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್"** ಎಂಬೀ ಮುಂತಾದ ಉಪನಿಷದ್ವಾಕ್ಯಗಳು ಸಾರುವ 'ಬಲವಾನನು' 'ಧೀರನು' ಎಂಬೀ ವಿಶೇಷಣಗಳು ಅಧ್ಯಾತ್ಮವೀರನನ್ನೇ ಅನುಲಕ್ಷಿಸಿವೆ. ಬ್ರಹ್ಮವಿದ್ಯಾಂಗಭೂತಗಳಾದ ಅಷ್ಟಾವರಣಗಳು ವೀರ್ಯವತ್ತರಗಳಾದ್ದರಿಂದ ಅವುಗಳನ್ನು ಅನುಷ್ಠಿಸುವುದು ಬಲಹೀನರೆನಿಸುವ ಪ್ರಾಕೃತರಿಗೆ ಸಾಧ್ಯವಲ್ಲ; ಅದುಕಾರಣವೇ ಚತ್ಕ್ರಿಯಾರೂಪಗಳಾದ ಆ ಅಷ್ಟಾವರಣಗಳನ್ನು ದೃಢನುಡಿ ಮನಗಳಿಂದ ಆಚರಿಸುವವರಾದ, **ವೀರ-ನಂದಿ-ಸ್ಕಂದಾದಿ** ಮಾಹೇಶ್ವರ ವರ್ಗದವರೇ ವೀರಮಾಹೇಶ್ವರರೆಂದು ಸುಪ್ರಸಿದ್ಧರಾಗಿರುವರು. ಇವರೇ ವೈದಿಕವಾಙ್ಮಯದಲ್ಲಿ **ಅತ್ಯಾಶ್ರಮಿಗಳು-ಶಿರೋವ್ರತಿಗಳು-ಸ್ಥಿತಪ್ರಜ್ಞರು-ಆತ್ಮಯಾಜಿಗಳು-ನಿವೃತ್ತಿಧರ್ಮನಿಷ್ಠರು-ಅಪ್ರಾಕೃತರು-ವೀರಶೈವರು** ಎಂಬೀ ಮುಂತಾದ ಹೆಸರುಗಳಿಂದ ಹೊಗಳಿಸಿಕೊಳ್ಳಲ್ಪಡುತ್ತಾರೆ. ಮನುಸ್ಮೃತಿಯ ೩ನೆಯ ಅಧ್ಯಾಯದಲ್ಲಿ—

ಜ್ಞಾನನಿಷ್ಠಾ ದ್ವಿಜಾಃ ಕೇಚಿತ್ತಪೋನಿಷ್ಠಾಸ್ತಥಾಪರೆ | ತಪಃಸ್ವಾಧ್ಯಾಯನಿಷ್ಠಾಶ್ಚ ಕರ್ಮನಿಷ್ಠಾಸ್ತಥಾಪರೆ ||೧೩೪||

'ಬ್ರಾಹ್ಮಣರಲ್ಲಿ ಅನೇಕಪಂಗಡಗಳಿವೆ; ಕೆಲವರು ಕೇವಲ ಬ್ರಹ್ಮ (ಶಿವ) ಜ್ಞಾನನಿಷ್ಠೆಯುಳ್ಳ ಬ್ರಾಹ್ಮಣರಿದ್ದಾರೆ; ಬೇರೆ ಕೆಲವರು ಪ್ರಾಜಾಪತ್ಯತಪೋನಿರತರೂ, ತಪೋಧ್ಯಾನಪರಾಯಣರೂ, ಯಾಗಾದಿಕರ್ಮನಿಷ್ಠೆಯುಳ್ಳವರೂ ಆದ ಬ್ರಾಹ್ಮಣರು ಇದ್ದಾರೆ.' ಎಂದು ಹೇಳಿರುವ ಮೇರೆಗೆ ವೀರಮಾಹೇಶ್ವರರು ಕೇವಲ ಶಿವಜ್ಞಾನನಿಷ್ಠೆಯುಳ್ಳ ಬ್ರಾಹ್ಮಣರು. ಈ ಲೇಖನದ ಆರಂಭದಲ್ಲಿಯೇ 'ಪ್ರವೃತ್ತಿಧರ್ಮ ಮತ್ತು ನಿವೃತ್ತಿಧರ್ಮ ಎಂಬೆರಡು ಮಾರ್ಗಗಳಲ್ಲಿ ವೇದಗಳು ಪ್ರತಿಷ್ಠಿತಗಳಾಗಿವೆ' ಎಂದು ಹೇಳಿರುವಂತೆ ಇವೆರಡನ್ನೂ ಆಚರಿಸತಕ್ಕ ಅಧಿಕಾರಿಗಳಾದರೂ ಬೇರೆ ಬೇರೆಯಾಗಿರುವರೆಂಬುದನ್ನೂ ಈ ಮೇಲೆ ತೋರಿಸಿದ್ದೇವೆ. ಮತ್ತು—

ಪ್ರವೃತ್ತಿಲಕ್ಷಣೋ ಧರ್ಮೋ ಫಲಮಭ್ಯುದಯೋ ಮತಃ | ನಿವೃತ್ತಿಸಂಜ್ಞಕೇ ಧರ್ಮೇ ಫಲಂ ನಿಃಶ್ರೇಯಸಂ ಮತಮ್ ||

ಎಂಬ ಅಭಿಯುಕ್ತೋಕ್ತಿಯಂತೆ, ಪ್ರವೃತ್ತಿಧರ್ಮದಲ್ಲಿ ನಿಷ್ಠೆಯುಳ್ಳವರಿಗೆ ಅಭ್ಯುದಯ (ಕಾಮ್ಯ) ಫಲವು ಮಾತ್ರ ದೊರಕುವುದು; ನಿವೃತ್ತಿಧರ್ಮದಲ್ಲಿ ನಿಷ್ಠೆಯುಳ್ಳವರಾದರೂ ಆತ್ಯಂತಿಕ ಸುಖರೂಪವಾದ ಮೋಕ್ಷವನ್ನು ಪಡೆವರು. ಹೀಗೆ ಅಭ್ಯುದಯ ನಿಃಶ್ರೇಯಸರೂಪ ಫಲಗಳು ಪ್ರವೃತ್ತಿ ನಿವೃತ್ತಿಧರ್ಮಗಳಿಂದ ಸಿದ್ಧಿಸುವುವು. 'ಅಯನ್ತು ಪರಮೋ ಧರ್ಮೋ ಯದ್ಯೋಗೇನಾತ್ಮದರ್ಶನಮ್' ಎಂಬ ಯಾಜ್ಞವಲ್ಕ್ಯಸ್ಮೃತಿವಚನಾನುಸಾರವಾಗಿ, ಶಿವಜ್ಞಾನ, ಶಿವಧ್ಯಾನಾದಿರೂಪ ಶಿವಯೋಗಾನುಸಂಧಾನದಿಂದ ಸ್ವಸ್ವರೂಪಭೂತವಾದ ಶಿವಾಭಿವ್ಯಕ್ತಿಯೆಂಬ ಆತ್ಮಸಾಕ್ಷಾತ್ಕಾರವನ್ನು ಪಡೆವುದೇ ಪರಮಧರ್ಮವು. ಪ್ರವೃತ್ತಿಧರ್ಮದಲ್ಲಿ ಅಧಿಕೃತರಾದ ಸಕಾಮನಾವೃತ್ತಿಯುಳ್ಳ ಅರ್ಥಾರ್ಥಿಗಳು, ಅಭ್ಯುದಯರೂಪ ಫಲವನ್ನು ಪಡೆವರಾದರೂ ಮೋಕ್ಷಕ್ಕೆ ಎರವಾಗುವರು; ಆದ್ದರಿಂದ ಅದು ಸಾಮಾನ್ಯ (ಪ್ರಾಕೃತ) ಧರ್ಮವೆನಿಸುವುದು. ನಿವೃತ್ತಿಧರ್ಮವೇ ಪರಮಧರ್ಮವು. ಅದು ಶಿವಾರ್ಪಣ ಬುದ್ಧಿಪೂರ್ವಕವಾಗಿ ಪ್ರಾಕೃತಭಾವವನ್ನು ನೀಗಿ **'ದೇವೋ ಭೂತ್ವಾ ದೇವಮಪ್ಯೇತಿ'** (ಬೃ. ೪.೧-೨) ಎಂಬಂತೆ ಅನನ್ಯಚಿಂತನದೊಂದಿಗೆ ಅನುಷ್ಠಿಸಲ್ಪಡುವುದಾಗಿದೆ; ಅದುಕಾರಣವೇ ಅದಕ್ಕೆ ಮೋಕ್ಷಾರ್ಥಿಗಳೇ ಅಧಿಕಾರಿಗಳು, ಅವರಿಗೆ ನಿಃಶ್ರೇಯಸವೆಂಬ ಮುಖ್ಯ ಫಲವು ಸಿದ್ಧವಾಗುದಾದರೂ **'ಅನನ್ಯಾಶ್ಚಿನ್ತಯನ್ತೋ ಮಾಮ್'** ಎಂಬ ಭಗವದ್ವಾಕ್ಯದಂತೆಯೇ ವರ್ತಿಸುವವರಾದ ಅವರ ಯೋಗಕ್ಷೇಮಗಳ ಭಾರವನ್ನೆಲ್ಲ ಪರಶಿವನೇ ವಹಿಸುವನಾದುದರಿಂದ ಅವರ ಅ[illegible]ಕ್ಕೂ ಕೊರತೆಯೇ ಇಲ್ಲ. ಒಟ್ಟಿನ ಮೇಲೆ, ಪರಮಧ[illegible] ನಿವೃತ್ತಿ (ಅಪ್ರಾಕೃತ) ಧರ್ಮವು, ಈ ನಿವೃತ್ತಿಧ[illegible]ದ ಬ್ರಾಹ್ಮಣರು, ಪ್ರವೃತ್ತಿಧರ್ಮನಿರತರಾದ ಪ್ರಾಕೃತಬ್ರಾಹ್ಮಣರಿಗಿಂತಲೂ ಅಧಿಕರು; ಏಕೆಂದರೆ, ಶ್ರುತಿ ಮಸ್ತಕದಲ್ಲಿ ಬೆಳಗುವ ಬ್ರಹ್ಮವಿದ್ಯೆಯ ಅಭ್ಯಾಸದಲ್ಲಿ ಇವರೇ ಮುಖ್ಯಾಧಿಕಾರಿ (ಮುಂದಾಳು) ಗಳು; ಅದುಕಾರಣವೇ ಇವರಲ್ಲಿ ಬ್ರಹ್ಮವಿದ್ಯಾಂಗಭೂತಗಳಾದ ಅಷ್ಟಾವರಣಗಳ ಆಚರಣಗಳು ನೈಜತಃ ಬಳಕೆಯಲ್ಲಿರುವುದನ್ನು ಸರ್ವತ್ರ ಕಾಣಬಹುದಾಗಿದೆ; ಉಳಿದವರಾದರೋ ಬ್ರಹ್ಮವಿದ್ಯೆಯಲ್ಲಿ ತಾರತಮ್ಯಾನುಸಾರವಾಗಿ ಅಧಿಕಾರಿಗಳಾಗಿರುವರು. ಇದೇ ಅಭಿಪ್ರಾಯವನ್ನು ಸಮರ್ಥನಗೊಳಿಸತಕ್ಕ ಈಶ್ವರವಾಕ್ಯವು ಸೂತಸಂಹಿತೆಯಲ್ಲಿ (ಮು ೨-೧-೫. ೭)—

ನಿವೃತ್ತಿಧರ್ಮನಿಷ್ಠಾಸ್ತು ಬ್ರಾಹ್ಮಣಾಃ ಪಂಕಜೇಕ್ಷಣ ||೧೮|| ಉಕ್ತೋ ಮುಖ್ಯಾಧಿಕಾರೀತಿ ಜ್ಞಾನಾಭ್ಯಾಸೇ ಮಯಾ ಪುರೇ | ಅನ್ಯೇಚ ಬ್ರಾಹ್ಮಣಾಃ

ವರ್ತಮಾನಸಂಗ್ರಹ.

ಬರುವ ಸೆಪ್ಟಂಬರ್ ತಿಂಗಳಲ್ಲಿ ಮಹಾತ್ಮಾ ಗಾಂಧಿಯವರು ಸಂಯುಕ್ತಪ್ರಾಂತದಲ್ಲಿ ಸಂಚಾರಮಾಡುವವರಾಗಿರುವರು. ಈ ಜೂನ್ ತಿಂಗಳಲ್ಲಿ ಮಾತ್ರ ಅಪ್ರಾಂತ್ಯದ ಮಲೆನಾಡುಗಳಲ್ಲಿ ಸಂಚರಿಸುವರಂತೆ!

ದೆಹಲಿಯ ಡೆಪ್ಟಿಗಂಜ್‌ಮೊಹಲ್ಲೆಯಲ್ಲಿ ಒಂದೇ ವಾರದಲ್ಲಿ ನಾಲ್ಕುಸಾರೆ ಬೆಂಕಿಬಿದ್ದು ಬಹಳ ಅನರ್ಥವಾಯಿತು. ನಾಲ್ಕನೆಯಸಾರೆ ಬೆಂಕಿಬಿದ್ದಾಗ 8 ಅಂಗಡಿಗಳು ಸುಟ್ಟು ಬೂದಿಯಾದವು; 20000 ರೂ. ಗಳವರೆಗೆ ನಷ್ಟಸಂಭವಿಸಿತು.

ಎಂ. ಕನಕಸಬಾಯ್ ಮತ್ತು ಪಿಳ್ಳಾಯ್ ಎಂಬ ಇಬ್ಬರು ಭಾರತೀಯರು ಮೋಟಾರಿನಿಂದ 8 ತಿಂಗಳುಗಳವರೆಗೆ ಅನೇಕಕಡೆ ಸಂಚರಿಸಿ ಈಗ ಲಂಡನ್ನಿಗೆ ಬಂದಿರುವರು. ಮಂಜನ್ನೂ ಮಳಲನ್ನೂ ಲೆಕ್ಕಿಸದೆ ಇದುವರೆಗೆ ಇವರು 11,000 ಮೈಲು ಸಂಚರಿಸಿರುವರಂತೆ.

ನ್ಯೂಯಾರ್ಕ್ ಪಟ್ಟಣದಲ್ಲಿ ಈಗ ಎಪ್ಪತ್ತೈದು ಅಂತಸ್ತುಗಳುಳ್ಳ ಒಂದು ಕಟ್ಟಡವು ತಯಾರಾಗುತ್ತಿದ್ದು ಈ ಕಟ್ಟಡಕ್ಕೆ ೭|| ಕೋಟಿ ರೂಪಾಯಿಗಳು ವೆಚ್ಚವಾಗುವುವಂತೆ! ಇದರ ಕೆಳಭಾಗದಲ್ಲಿ ಇಲಿನಾಯಿಸ್ ಸೆಂಟ್ರಲ್-ರೈಲ್ವೆಯು ಹಾಯ್ದು ಹೋಗುವಹಾಗೆ ಮಾಡುವರಂತೆ.

ಸೆಪ್ಟಂಬರ್ ತಿಂಗಳಿನ ಅಂತರರಾಷ್ಟ್ರೀಯಸಭೆಯ (ಲೀಗ್ ಆಫ್ ನೇಷನ್ಸ್) ಅಧಿವೇಶನಕ್ಕೆ ಭರತಖಂಡದ ಪರವಾಗಿ ಸರ್ ಮಹಮ್ಮದ್ ಹಬೀಬುಲ್ಲರೂ, ಕಪುರ್ತಲ ಮಹಾರಾಜರೂ, ಸರ್ ವಿಲಿಯಂ ಈವರ್ನ್ ಗ್ರೀವ್ಸರೂ, ಸರ್ ಬೆಸಾಫ್ರಿಕಾಕ್ಸೆಟ್ಟರೂ, ಮಿ|| ಸ್ಯೆದ್‌ರಜಾ ಅಲಿಯವರೂ ಸದಸ್ಯರಾಗಿ ಹೋಗುವರು.

ಬೆನಾರಸ್ ಯೂನಿವರ್ಸಿಟಿಯಲ್ಲಿ ತತ್ವಶಾಸ್ತ್ರಬೋಧಕ (ಪ್ರೊಫೆಸರ್ ಆಫ್ ಫಿಲಾಸಫಿ) ರಾಗಿರುವ ಮ|| ರಾ|| ಫಣಿಭೂಷಣ ಅಧಿಕಾರಿಯವರ ಮಗಳು ಭಕ್ತಿಅಧಿಕಾರಿ ಎಂಬಾಕೆಯು ಬೆನಾರಸ್ ಯೂನಿವರ್ಸಿಟಿಯ ಈ ವರ್ಷದ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆಹೊಂದಿದವರೊಳಗೆ ಪ್ರಥಮಸ್ಥಾನವನ್ನು ಪಡೆದಿರುತ್ತಾಳೆ.

ಹೀರಾಸಿಂಗ್ ಎಂಬ ವಿದ್ಯಾರ್ಥಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಯೋಗ್ಯತಾಪತ್ರ (ಸರ್ಟಿಫಿಕೇಟ್) ವನ್ನು ಕೊಟ್ಟರೆ ಅದಕ್ಕಾಗಿ 1500 ರೂಪಾಯಿಗಳನ್ನು ಕೊಡುವೆನೆಂದು, ಪಂಜಾಬು ವಿಶ್ವವಿದ್ಯಾಲಯದ ರೆಜಿಸ್ಟ್ರಾರರಿಗೆ ಲಂಚಸಲ್ಲಿಸುವ ಪ್ರಯತ್ನವನ್ನು ಮಾಡಿದ ಅಪರಾಧಕ್ಕೆ ಗುರಿಯಾಗಿರುವನು. ವಿಚಾರವುನಡೆಯುತ್ತಿದೆ.

ಕಲಕತ್ತಾ ಪೌರಾಸ್ಟೇಷನ್ನಿನ ಗೂಡ್‌ಷೆಡ್ಡಿನ 2,000 ಜನ ಗಾಡಿಯವರು ಮುಷ್ಕರಹಿಡಿದಿರುವುದರಿಂದ ಷೆಡ್ಡಿನಿಂದ ಸಾಮಾನುಗಳನ್ನು ಸಾಗಿಸುವುದಕ್ಕೂ ಷೆಡ್ಡಿಗೆ ಸಾಮಾನುಗಳನ್ನು ತರುವುದಕ್ಕೂ ತುಂಬಾ ಅಡಚಣೆಯಾಗಿದೆ. ಗೂಡ್ಸ್‌ಷೆಡ್ಡಿನ ಇಬ್ಬರು ಆಂಗ್ಲೋ-ಇಂಡಿಯನ್ ಅಧಿಕಾರಿಗಳು ಗಾಡಿಯವರಿಗೆ ಅಲ್ಪಮಾತುಗಳನ್ನಾಡಿದುದರಿಂದ ಗಾಡಿಯವರು ಹೀಗೆ ಮುಷ್ಕರಹಿಡಿದಿರುವರಂತೆ!

ಮೈಸೂರು ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಬರುವ ಅಗಸ್ಟು ತಿಂಗಳ ಕೊನೆಯವಾರ ರಾಜಧಾನಿಯಲ್ಲಿ ನಡೆಯುವುದು.

ಬೆಂಗಳೂರಿನ ಮಿನರ್ವಾಮಿಲ್ಲು ಮತ್ತು ಮೈಸೂರು ಸ್ಪಿನ್ನಿಂಗ್ ಮಿಲ್ಲುಗಳ ಕೂಲಿಯವರ ಮುಷ್ಕರವು ಇನ್ನೂ ಕೊನೆಗಂಡಿಲ್ಲ. 4000 ಜನ ಕೂಲಿಕಾರರು ಮುಷ್ಕರದಲ್ಲಿ ಭಾಗಿಗಳಾಗಿರುವರು. ಗಿರಣಿಗಳ ಅಧಿಕಾರಿಗಳು ಹಟತೊಟ್ಟು ತಮ್ಮ ಕೂಲಿಯವರ ಪ್ರಾರ್ಥನೆಗಳಿಗೆ ಕಿವಿಗೊಡದೆ ಇರುವುದರಿಂದ, ಅವರಲ್ಲಿ ಕೆಲವರು ಊರನ್ನು ಬಿಟ್ಟು ಹೋಗುತ್ತಲೂ, ಕೆಲವರು ಬೇರೆ ಬೇರೆ ವೃತ್ತಿಗಳನ್ನು ಕೈಗೊಳ್ಳುತ್ತಲೂ ಇರುವರಂತೆ!

ಇಂಗ್ಲೆಂಡಿನ ರಾಜಕೀಯಪಕ್ಷಗಳು ತಮ್ಮ ತಮ್ಮೊಳಗೆ ಎಷ್ಟು ವಿಧವಾಗಿ ಬಡಿದಾಡುತ್ತಿದ್ದರೂ ಭರತಖಂಡದ ವಿಷಯವಾಗಿ ಮಾತ್ರ ಒಮ್ಮನಸ್ಸಿನಿಂದ ಕೂಡಿರುವರೆಂದೂ, ಅವರ ಚುನಾವಣೆಯ ಕೂಗಿನಲ್ಲಿ ಭರತಖಂಡದ ಪ್ರಸ್ತಾಪನೇ ಇಲ್ಲವೆಂದೂ, ಸದ್ಯಃ ಲಂಡನ್ನಿನಲ್ಲಿರುವ, ಶ್ರೀಮತಿ ಸರೋಜಿನೀದೇವಿಯವರು ತಿಳುಹಿಸುತ್ತಾರೆ. ನಮ್ಮ ಕಾರ್ಯವನ್ನು ನಾವೇ ಸಾಧಿಸಿಕೊಳ್ಳಬೇಕು; ಬೇರವರ ಸಹಾಯವನ್ನು ಕೋರುವುದು ಹುಚ್ಚುತನವೆಂದು ಅವರು ಅಭಿಪ್ರಾಯಪಟ್ಟಿರುವರು.

ಮದರಾಸು ನ್ಯಾಯವಿಧಾಯಕ ಸಭೆಯ ಕಾಲಾವಧಿಯು ಮುಂದಿನ ಏಪ್ರಿಲ್‌ವರೆಗೆ ಹಾಕಲ್ಪಡುವುದಾಗಿ ವದಂತಿಯಿದೆ. ಅಲ್ಲಿಯವರೆಗೂ ಚುನಾವಣೆಗಳು ನಡೆಯುವಹಾಗಿಲ್ಲ. ಹೀಗೆಯೇ ಇತರ ಕೆಲ ಪ್ರೆಸಿಡೆನ್ಸಿಗಳಲ್ಲಿಯೂ ಸಹ ಚುನಾವಣೆಯು ಮುಂದಕ್ಕೆ ಇಡಲ್ಪಟ್ಟಿದೆ. ಅಸೆಂಬ್ಲಿಯ ಚುನಾವಣೆಯೂ ಸಹ ಸದ್ಯಃ ನಿಲ್ಲಿಸಲ್ಪಡುವಹಾಗೆ ವೈಸರಾಯರವರಿಂದ ಅನುಜ್ಞೆಯಾಗಿದೆ. ಸೈಮನ್ ಸಮಿತಿಯ ವರದಿಯು ಪ್ರಕಟಗೊಳಿಸಲ್ಪಟ್ಟು ಮುಂದಿನ ರಾಜಕೀಯ ಸುಧಾರಣೆಯಕ್ರಮವು ತಿಳಿಸಲ್ಪಟ್ಟಮೇಲೆಯೇ ಹೊಸ ಚುನಾವಣೆಗಳು ನಡೆಯಬೇಕಾಗಿ ಆಳರಸರ ಅಭಿಪ್ರಾಯವಂತೆ!

ಸಂಯುಕ್ತ ಪ್ರಾಂತದ ಡಾ|| ಬಲವಂತಸಿಂಗನೆಂಬ ವೈದ್ಯನು ತನ್ನಲ್ಲಿಗೆ ಚಿಕಿತ್ಸೆಗಾಗಿ ಬಂದಿದ್ದ ಮಿಸ್. ಕ್ಯಾತಲೀನ್ ಬ್ಯಾರ್‌ನೆಟ್ ಎಂಬ 18 ವರ್ಷದ ಇಂಗ್ಲೀಷ್ ಹುಡುಗಿಯಮೇಲೆ ಅತ್ಯಾಚಾರಮಾಡಲು ಯತ್ನಿಸಿದನೆಂದು ಡೆಹರಾಡೂನಿನ ಸೆಷನ್ಸ್‌ಕೋರ್ಟಿನಲ್ಲಿ ವಿಚಾರಣೆಯು ನಡೆಯಿತು. ಜಡ್ಜಿಯವರು ಜ್ಯೂರಿಯವರಲ್ಲಿ ಬಹುಪಕ್ಷದವರ ಅಭಿಪ್ರಾಯವನ್ನನುಸರಿಸಿ ಅಪರಾಧಿಯನ್ನು ಬಿಡುಗಡೆ ಮಾಡಿದರು. ಅಲಹಾಬಾದಿನ ಹೈಕೋರ್ಟಿಗೆ ಅಪ್ಪೀಲು ಹೋಗಲು ಅಲ್ಲಿ ಡಾ|| ಬಲವಂತಸಿಂಗರು ತಪ್ಪಿತಸ್ಥರೆಂದು ನಿರ್ಧರಿಸಲ್ಪಟ್ಟು ಅವರಿಗೆ 6 ತಿಂಗಳ ಸಾದಾಸಜವು ವಿಧಿಸಲ್ಪಟ್ಟಿತು.

ಸೈಮನ್ ಸಮಿತಿಯವರು ರೈಲುಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದಾಗ ಬಾಂಬುಗಳನ್ನೆಸೆದರೆಂಬ ಆರೋಪಣೆಗೆ ಗುರಿಯಾಗಿದ್ದ ಹರೀಂದ್ರ ಭಟ್ಟಾಚಾರ್ಯ ಮತ್ತು ಮನಮೋಹನ ಎಂಬ ಇಬ್ಬರು ತರುಣರ ವಿಚಾರಣೆಯು ನಾಸಿಕದ ಸೆಷನ್ಸ್ ಕೋರ್ಟಿನಲ್ಲಿ ನಡೆದು, ಜ್ಯೂರಿಯವರೆಲ್ಲರೂ ಮೊದಲನೆಯ ಅಪರಾಧಿಯಾದ ಹರೀಂದ್ರಭಟ್ಟಾಚಾರ್ಯನು ತಪ್ಪಿತಸ್ಥನೆಂದು ನಿರ್ಧರಿಸಿದರು. ಆದರೆ ಎರಡನೆಯ ಅಪರಾಧಿಯಾದ ಮನಮೋಹನನ ವಿಷಯದಲ್ಲಿ ಮಾತ್ರ ಇಬ್ಬರು ತಪ್ಪಿತಸ್ಥನಲ್ಲವೆಂದೂ, ಉಳಿದವರು ಅವನು ತಪ್ಪಿತಸ್ಥನೆಂದೂ ಅಭಿಪ್ರಾಯಪಟ್ಟಿರುವರು. ತೀರ್ಮಾನವು ನಾಳಿನ ದಿವಸ ತಿಳುಹಿಸಲ್ಪಡುವುದು.

ತಮಿಳುನಾಡಿನ ರಾಷ್ಟ್ರೀಯಮುಖಂಡರಲ್ಲಿ ಕೆಲವರು ಸರ್ಕಾರದಲ್ಲಿ ಮಂತ್ರಿ ಮೊದಲಾದ ಅಧಿಕಾರಗಳನ್ನು ದೇಶನಾಯಕರು ಕೈಗೊಳ್ಳುವ ವಿಷಯದಲ್ಲಿ ಆಯಾ ಪ್ರಾಂತಗಳಿಗೆ ಸ್ವಾತಂತ್ರ್ಯವಿರುವಂತೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಬೇಕೆಂಬ ವಾದವನ್ನು ತಂದೊಡ್ಡಿದ್ದರು. ಆದರೆ ಚುನಾವಣೆಯು ಮುಂದೆ ಬಿದ್ದುದರಿಂದ ಹೊಸಚುನಾವಣೆಗಳು ನಡೆಯುವವರೆಗೆ ಆ ವಿಷಯವಾ[illegible] ನಡೆಸಬೇಕಾಗಿಲ್ಲವೆಂದು ಅವರು [illegible]ವರು. ಸದ್ಯಃ ಇನ್ನು ಒಂದುವರ್ಷದ ವರೆಗಾದರೂ ಅಧಿಕಾರದ ಹುಚ್ಚು ತಪ್ಪಿದಂತಾಯಿತು. ಮುಂದೇನಾಗುವುದೋ ನೋಡಬೇಕು.

"ಮೋಟಾರು ದೊರೆ" ಯೆಂದು ಪ್ರಪಂಚದಲ್ಲೆಲ್ಲ ಕೀರ್ತಿ ಪಡೆದಿರುವ ಹೆನ್ರಿಫೋರ್ಡರವರು ತಮ್ಮ ಮೋಟಾರು ಕಾರಖಾನೆಗಳಲ್ಲಿ ಕೆಲಸಮಾಡುವವರೆಲ್ಲರೂ ಕುಡಿತವನ್ನು ಬಿಟ್ಟುಬಿಡಬೇಕೆಂದು ಕಟ್ಟುಮಾಡಿರುವರು. ಅಮೇರಿಕಾ ಸಂಯುಕ್ತಸಂಸ್ಥಾನದ ಕಾನೂನನ್ನು ಅನುಸರಿಸಿ ಅವರು ಹಾಗೆ ಮಾಡಿಲ್ಲ. ಕೂಲಿಯವರು ಕುಡಿಯುವುದನ್ನು ಬಿಟ್ಟರೆ ಚೆನ್ನಾಗಿ ಕೆಲಸಮಾಡುವಂತಾಗುವುದೆಂದು ತಿಳಿದು ಮದ್ಯಪಾನವನ್ನು ನಿಷೇಧಿಸಿರುವರು. ಇದೇ ಫೋರ್ಡರು ಇಂಗ್ಲೆಂಡಿನಲ್ಲಿರುವ ಡೇಗನ್ಹ್ಯಾಂ ಎಂಬಲ್ಲಿ ಒಂದು ನೂತನ ಕಾರ್ಖಾನೆಯನ್ನು ತೆಗೆದಿರುವರು. ಅಲ್ಲಿ ಸುಮಾರು 15 ಸಾವಿರ ಜನರು ಕೆಲಸಮಾಡುತ್ತಿರುವರು. ಈ ಕೆಲಸಗಾರರೂ ಸಹ ಕುಡಿಯಕೂಡದೆಂದು ಆಜ್ಞೆಮಾಡಿದ್ದಾರೆ. ಇತರ ಕಾರಖಾನೆಗಳ ಯಜಮಾನರು ಫೋರ್ಡರ ಸ್ತೋತ್ರಾರ್ಹ ಪದ್ಧತಿಯನ್ನು ಅನುಕರಿಸಿದರೆ ದೇಶೋದ್ಧಾರವಾಗುವಲ್ಲಿ ತಡವೇ?

ಮಿಸ್. ರೂಬಿರಾಜರ್ಸ್ಸ್ ಎಂಬ 18 ವರ್ಷ ವಯಸ್ಸಿನ ಓರ್ವ ಐರೋಪ್ಯದಾದಿಯು ಬೊಂಬಾಯಿಯಲ್ಲಿ ವೇಗವಾಗಿ ಮೋಟಾರುನಡಿಯಿಸುತ್ತಿದ್ದಾಗ ಮಿಸೆಸ್. ಡಿಸೌಜ ಎಂಬವಳ ಮೇಲೆ ಮೋಟಾರು ಬಿಡಲು ಅವಳು ಸತ್ತುಹೋದಳು. ಈ ಬಗ್ಗೆ ಮಿಸ್. ರೂಬಿರಾಜರ್ಸ್ಳ ವಿಚಾರಣೆಯು ಕಳೆದ 30 ನೆಯ ತಾರೀಖಿನಲ್ಲಿ ನಡೆಯಿತು. ಕೋರ್ಟಿಗೆ ಬಂದಕೂಡಲೇ ಅವಳು "ಜೈಲಿಗಲ್ಲ! ನಾನು ಜೈಲಿಗೆ ಹೋಗಕೂಡದು! ನಾನು ಜೈಲಿಗೆ ಹೋಗಕೂಡದು!!" ಎಂದು ಹೇಳಿ ಅತ್ತಳು. ಮ್ಯಾಜಿಸ್ಟ್ರೇಟರು ಅವಳು ತಪ್ಪಿತಸ್ಥಳೆಂದು ನಿರ್ಧರಿಸಿ ಅವಳಿಗೆ ಒಂದುದಿವಸದ ಸಾದಾ ಶಿಕ್ಷೆಯನ್ನು ವಿಧಿಸಲು ಅವಳು ದುಃಖದಿಂದ ಕುಗ್ಗಿಹೋಗಿ ನೆಲದ ಮೇಲೆ ಬಿದ್ದುಬಿಟ್ಟಳು. ಕೊನೆಗೆ ಮ್ಯಾಜಿಸ್ಟ್ರೇಟರು ಕನಿಕರಗೊಂಡು ಅವಳು 450 ರೂ. ಗಳ ದಂಡವನ್ನು ಮಾತ್ರ ಕೊಡುವಂತೆ ಆಜ್ಞಾಪಿಸಿದರು. ಆದರೂ ಅವಳು ಅಳುತ್ತಲೇ ಕೋರ್ಟನ್ನು ಬಿಟ್ಟು ತೆರಳಿದಳು.

ಈಗ ಮಿರಾಠ್‌ನಲ್ಲಿ ವಿಚಾರಣೆಗೆ ಗುರಿಯಾಗಿರುವ ಆಪಾದಿತರ ಪೈಕಿ ಶೌಕತ್ ಉಸ್ಮಾನಿ ಎಂಬಾತನು ಇಂಗ್ಲೆಂಡಿನಲ್ಲಿ ನಡೆಯುವ ಚುನಾವಣೆಯಲ್ಲಿ ಸ್ಪೆನ್ ವ್ಯಾಲಿ ಎಂಬ ಸ್ಥಳದ ಪ್ರತಿನಿಧಿಯಾಗಿ ನಿಂತಿರುವನು. ಅದೇ ಸ್ಪೆನ್‌ವ್ಯಾಲಿಗೆ ನಮ್ಮ ದೇಶಕ್ಕೆ ವಿಚಾರಣೆಗಾಗಿ ಬಂದಿದ್ದ ಸೈಮನ್ ಸಮಿತಿಗೆ ಅಧ್ಯಕ್ಷರಾಗಿದ್ದ ಸರ್ ಜಾನ್‌ಸೈಮನ್‌ರವರೂ ಪ್ರತಿನಿಧಿಯಾಗಿ ನಿಂತಿರುವರು. ಸ್ಪೆನ್‌ವ್ಯಾಲಿಯ ಮತದಾರರಲ್ಲಿ ಕೂಲಿಯವರೇ ಹೆಚ್ಚಾಗಿರುವುದರಿಂದಲೂ, ಶೌಕತ್ ಉಸ್ಮಾನಿಯು ಕೂಲಿಯವರ ಪಕ್ಷದ ನಾಯಕರಲ್ಲಿ ಒಬ್ಬನಾಗಿರುವದರಿಂದಲೂ, ಬ್ರಿಟಿಷ್ ಕಮ್ಯೂನಿಸ್ಟ್ ಪಾರ್ಟಿಯವರು ಅವನು ಅಲ್ಲಿಗೆ ಪ್ರತಿನಿಧಿಯಾಗಿ ನಿಲ್ಲುವ ಹಾಗೆ ಮಾಡಿರುವರು. ಸರ್ ಸೈಮನ್ನರಿಗೆ ಅವಮಾನಪಡಿಸಬೇಕೆಂಬುದೂ ಹಾಗೆ ಮಾಡುವುದಕ್ಕೆ ಸಾಧಕವಾದ ಉದ್ದೇಶಗಳ ಪೈಕಿಯೊಂದಂತೆ. ಸದರಿ ಶೌಕತಾಲಿ ಉಸ್ಮಾನಿಯು ಬ್ರಿಟಿಷ್ ಚುನಾವಣೆಯಲ್ಲಿ ಭಾಗ ತೆಗೆದುಕೊಳ್ಳಲು ತನ್ನನ್ನು ಜಾಮೀನಿನ ಮೇಲೆ ಬಿಡಬೇಕೆಂದು ಮಿರಾಠ್‌ನ ಡಿ|| ಮ್ಯಾಜಿಸ್ಟ್ರೇಟರನ್ನು ಕೇಳಿಕೊಳ್ಳಲು ಅವರು ಕೂಡದೆಂದರು.

ಸಿಂಧುದೇಶದ ಸುಕ್ಕೂರು ಡಿಸ್ಟ್ರಿಕ್ಟಿನ ರ್ಹೋರಿ ತಾಲೂಕಿನ ಪೀರ್‌ಘಾಟ್ ಎಂಬ ಹಳ್ಳಿಯಲ್ಲಿ ಇಬ್ಬರು ಮುಸಲ್ಮಾನ ಮೋಚಿಯವರು ತಮಗೆ ಸೇರಿದ್ದ ಒಂದು ಮನೆಯನ್ನು ಒಬ್ಬ ಹಿಂದುವಿಗೆ ಮಾರಿದರು. ಆದರೆ ಕೆಲವು ದಿನಗಳನಂತರ ಅವರು ತಾವು ಮಾರಿದ ಮನೆಯಲ್ಲಿ ಒಂದು ಸಣ್ಣ ಮಶೀದಿಯಿದೆಯೆಂದು ಹೇಳಿ ಮನೆಯನ್ನು ಹಿಂದುವಿನ ವಶ ಪಡಿಸದೆ ಹೋದರು. ಈ ವಿವಾದವು ಕೋರ್ಟಿಗೆ ಹೋಗಿ ಅಲ್ಲಿ ಹಿಂದುವಿನ್ಪತೆ ತೀರ್ಮಾನವಾಯಿತು. ಹಿಂದುವು [illegible]ಯನ್ನು ವಶಪಡಿಸಿಕೊಂಡು ಅದನ್ನು ಒಡೆಯಿಸಿ ಹೊಸದಾಗಿ ಕಟ್ಟಿಸಲಾರಂಭಿಸಿದನು. ಈ ಇಬ್ಬರು ಮೋಚಿಗಳು ನಿರ್ವಾಹವಿಲ್ಲದೆ ಸುಮ್ಮನಾದರೂ, ಇವರ ಮನೆಯಲ್ಲಿಯೇ ವಾಸಮಾಡುತ್ತಿದ್ದ ಮತ್ತೊಬ್ಬ ಮುಸಲ್ಮಾನ ಮೋಚಿಯನು, ಹಿಂದುವು ಮುಸಲ್ಮಾನನ ಮನೆಯನ್ನು ಅದಕ್ಕೆ ಸೇರಿದ ಪ್ರಾರ್ಥನಾಮಂದಿರ (ಮಸೀದಿ) ವನ್ನೂ ಒಡೆಯಿಸತೊಡಗಿರುವುದು. ಇತರ ಹಿಂದುಗಳ ಪ್ರೇರಣೆಯಿಂದಲೇ ಎಂದು ಭಾವಿಸಿ, ಒಂದು ಹರಿತವಾದ ಕೊಡಲಿಯನ್ನು ಎತ್ತಿಕೊಂಡು ಉನ್ಮತ್ತನಂತೆ ಓಡಾಡುತ್ತ ಸಿಕ್ಕಿದ ಹಿಂದುಗಳನ್ನು ಹೊಡೆಯಲಾರಂಭಿಸಲು ನಾಲ್ವರು ಹಿಂದುಗಳು ಸತ್ತರು. ಪೋಲೀಸರು ಈ ಮಂಧನನ್ನು ಹಿಡಿಯಲು ಹೋಗಿ ಕೊನೆಗೆ ಸಾಧ್ಯವಾಗದೆ ಅವನನ್ನು ಗುಂಡಿನಿಂದ ಸುಟ್ಟು ಕೊಂದುಬಿಟ್ಟರೆಂದು ಕೇಳುತ್ತೇವೆ.

ಶ್ರೀಜಗದ್ಗುರುರೇಣುಕಾಚಾರ್ಯರ ವಿಗ್ರಹಸ್ಥಾಪನೆ.

ಕೋಲಂ ಟವನ್ನಿಗೆ 3 ಮೈಲು ಸಮೀಪದಲ್ಲಿರುವ ಸ್ತಲಮಲೈ ಎಂಬ ಬೆಟ್ಟದಮೇಲೆ ಒಂದು ತೀರ್ಥವಿದೆ. ಈ ತೀರ್ಥದ ಹತ್ತಿರ ಕೋಲವಿನ್ನ ಮ|| ರಾ|| ಗುರುಸ್ವಾಮಿ ಅಯ್ಯರವರು ಒಂದು ಕಲ್ಲಿನ ಬಂಡೆಯ ಮೇಲೆ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಮಾಡುವಂತೆ ಚಿತ್ರವನ್ನು ಕೆತ್ತಿಸಿ, ಅಗಸ್ತ್ಯ ಪತ್ನಿಯಾದ ಲೋಪಾಮುದ್ರೆ, ಶಿವಲಿಂಗ, ನಂದಿ ಮೊದಲಾದ ವಿಗ್ರಹಗಳನ್ನೂ ಸಹ ಕೆತ್ತಿಸಿ, ಅದಕ್ಕೆ "ಅಗಸ್ತ್ಯಾಶ್ರಮ" ಎಂಬ ಹೆಸರನ್ನಿಟ್ಟು ಆತ್ತೂರು ತಾಲೂಕು ಆರ್ರ್ಯಾಯಿ ಗ್ರಾಮದ ಮಠಾಧಿಪತಿಗಳಾದ ಶ್ರೀ ಗುರುಸಿದ್ಧದೇಶಿಕೇಂದ್ರ ಸುಬ್ರಹ್ಮಣ್ಯ ಸ್ವಾಮಿಗಳಿಂದಲೂ ಮತ್ತೆ ಕೆಲವು ಶಾಸ್ತ್ರಿಗಳಿಂದಲೂ ಪ್ರಾಣಪ್ರತಿಷ್ಠೆ, ಅಭಿಷೇಕ, ಷೋಡಶೋಪಚಾರ ಪೂಜೆಗಳನ್ನು ಶಾಸ್ತ್ರೋಕ್ತವಾಗಿ ಕಳೆದ ತಾ|| 23-5-29 ರಲ್ಲಿ ನೆರವೇರಿಸಿದರು. ಮ|| ರಾ|| ಗುರುಸ್ವಾಮಿಅಯ್ಯರವರು ಮೇಲ್ಕಂಡ ತೀರ್ಥದ ಬಳಿ ಒಂದು ಗುಹಾಶ್ರಮವನ್ನೂ ಒಂದು ಮಂಟಪವನ್ನೂ ಸ್ವಂತ ದ್ರವ್ಯದಿಂದ ಕಟ್ಟಿಸಿರುವರು. ಗುರುಭಕ್ತರಾದ ಸದರಿ ಅಯ್ಯರವರಿಗೆ ಜಗದಾಚಾರ್ಯರು ಸಕಲಮಂಗಲಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ಓಂನಮಃಶ್ರೀಮದೇಕೋರಾಮಾಚಾರ್ಯಾಯ.

ಸಮಾಲೋಚನಾಸಮಿತಿ.

ತಾ|| 9-5-29 ರಲ್ಲಿ ಶ್ರೀ ಜಗದ್ಗುರು ಕೇದಾರಸಿಂಹಾಸನ ಮಹಾಸಂಸ್ಥಾನ ಊಖೀಮಠದಲ್ಲಿ ಸಮಾಲೋಚನಾ ಸಮಿತಿಯು ನಡೆಯಿತು. ಅದರಲ್ಲಿ ನಡೆದ ಕಾರ್ಯಕ್ರಮವಿಚಾರವೇನಂದರೆ 1928 ನೇ ಇಸವಿ ಮೇ ತಿಂಗಳಲ್ಲಿ ಮಹಾಸಂಸ್ಥಾನ ಏಜಂಟಾಗಿದ್ದ ಅಂಬಾದತ್ತನು ಬಹಳವಾಗಿ ಸಂಸ್ಥಾನಕ್ಕೆ ಲುಕ್ಸಾನಮಾಡಿದ್ದರಿಂದ ಏಜಂಟ್ ಪದದಿಂದ ಚ್ಯುತನಾದನು. 1928 ನವಂಬರಲ್ಲಿ ಅನುಕರಾಮನೆಂಬ ಮುಖ್ತಿಯಾರನು ದೇಹರಾದೂನದಲ್ಲಿ ಮನಬಂದಂತೆ ಮಹಾಸಂಸ್ಥಾನಕಾರ್ಯಗಳನ್ನು ಮಾಡಿದ್ದರಿಂದ ಮುಖ್ತಿಯಾರ್ ಸ್ಥಾನದಿಂದ ಚ್ಯುತನಾಗಿರುವನು. ಈ ವಿಷಯಗಳು ಪ್ರಭಾಪತ್ರಿಕೆಯಲ್ಲಿ ಪ್ರಸಿದ್ಧವೇ ಆಗಿದೆ. ಈ ರೀತಿ ಮಹಾಸಂಸ್ಥಾನಕ್ಕೆ ಲುಕ್ಸಾನಮಾಡುವವರನ್ನು ತೆಗೆದು ಶ್ರದ್ಧಾಭಕ್ತಿಗಳಿಂದ ಮಹಾಸಂಸ್ಥಾನ ಕಾರ್ಯ ಮಾಡುವವರನ್ನು ನಿಯಮಿಸತಕ್ಕದ್ದು ಇತ್ಯಾದಿ ವಿಷಯಗಳು ಚರ್ಚಿಸಲ್ಪಟ್ಟು ಈ ಕೆಳಗೆ ಕಂಡ ಮೇರೆಗೆ ನಿರ್ಣಯಗಳು ಪಾಸಾದವು.

1. ಪ್ರತಾಪಗಡಜಿಲ್ಲೆಯಲ್ಲಿರುವ ಮಾಹೀಮುಚಿಯಾ ಎಂಬ ಮಹಾಸಂಸ್ಥಾನ ಜಹಗೀರಗ್ರಾಮದ ಮುಕ್ತಿಯಾರ ದ್ವಾರಕಪ್ರಸಾದ ಅವಸ್ಥಿ ಎಂಬವನು 1929 ನೇ ಫೆಬ್ರುವರಿಯಲ್ಲಿ ರದ್ದುಪಡಿಸಲ್ಪಟ್ಟಿರುವನು.

2. ಗಢವಾಲ ಡಿ|| ಡೆ|| ಕಲೆಕ್ಟರ ಪದವಿಯಿಂದ ನಿವೃತ್ತರಾದ [illegible] ರಾವಬಹದ್ದೂರ ವಿಶ್ವೇಶ್ವರಪ್ರಸಾದರು ಮಹಾಸಂಸ್ಥಾನ [illegible] ಪಟೆನ್‌ದಾತರಾಗಿದ್ದು ವ್ಯಾನೇಜರರಾಗಿ ನಿಯಮಿಸ[illegible]ರುವರು.

3. ಶ್ರೀ ಜಗದ್ಗುರು ಮಹಾಸನ್ನಿಧಿಯವರು ದಕ್ಷಿಣದೇಶದ ಸಂಚಾರಕ್ಕೆ ಪದೇ ಪದೇ ದಯಮಾಡಿಸುವದರಿಂದ ಮಹಾಸಂಸ್ಥಾನದ ಕಾರ್ಯಗಳು ಕೆಟ್ಟುಹೋಗುವವು. ಆದಕಾರಣ ದಕ್ಷಿಣದೇಶದ ಸಂಚಾರಕ್ಕೆ ಈ ವರ್ಷ ದಯಮಾಡಿಸಕೂಡದು. ಅವಶ್ಯಕಾರ್ಯವಿದ್ದಲ್ಲಿ ಒಂದು ತಿಂಗಳುಮಟ್ಟಿಗೆ ದಯಮಾಡಿಸಬಹುದು.

4. ನೈಜಾಮ ಇಲಾಖಾ ರಾಯಚೂರಜಿಲ್ಲೆಯಲ್ಲಿ ಮಹಾಸಂಸ್ಥಾನ ಸಂಚಾರದ ಸರ್ವಾಧಿಕಾರಿ ಉಜ್ಜಯಿನೀ ನುತಾಧ್ಯಕ್ಷ ಶಿ.ಶಿ. ಶ್ರೀ ಚರಮೂರ್ತಿಸ್ವಾಮಿಗಳು ಪೌರಾಪಟನ್ ಪದವಿಯಿಂದ ನಿವೃತ್ತಿಮಾಡಲ್ಪಟ್ಟಿರುವರು.

5. ನೈಜಾಮ ಇಲಾಖಾ ಕೊಪ್ಪಳಜಿಲ್ಲೆಯಲ್ಲಿ ಸಂಚರಿಸುವ ಮಹಾಸಂಸ್ಥಾನ ಚರಪಟ್ಟಾಧ್ಯಕ್ಷ ಶ್ರೀ ಜಗದ್ಗುರು ಚಿದ್ಘನಲಿಂಗಶಿವಾಚಾರ್ಯಮಹಾಸ್ವಾಮಿಗಳವರು ದಕ್ಷತೆಯಿಂದ ಸರ್ಕೀಟು ನಡೆಯಿಸುತ್ತ ಮಹಾಸಂಸ್ಥಾನಕ್ಕೆ ಪ್ರತಿಮಾಸಿಕ ಆಯವ್ಯಯ ದೈನಿಕಾಚಾರವಿಚಾರ ಕಾರ್ಯಕ್ರಮ ಪತ್ರಿಕೆಯನ್ನು ಕಳುಹಿಸುತ್ತಿರಬೇಕು.

6. ಮಹಾಸಂಸ್ಥಾನ ಕಾಶೀಪತ್ರಿಮೀಯ ಧಾರ್ಮಿಕ ಕಾರ್ಯಗಳಲ್ಲಿ ಆದಾಯಕ್ಕಿಂತಲೂ ಅಪರಿಮಿತದ್ರವ್ಯವು ವ್ಯಯವಾಗುತ್ತಿರುವುದರಿಂದ ಯೋಗ್ಯಮಿತವ್ಯಯವನ್ನು ಮಾಡುತ್ತ ಆದಾಯವರ್ಧನಕ್ಕಾಗಿ ಪ್ರಯತ್ನಮಾಡಬೇಕು.

ಪ್ರತ್ಯಕ್ಷದರ್ಶಿ, ಊಖೀಮಠ.

ನಿವೇದನ.

ವೈದಿಕವೀರಮಾಹೇಶ್ವರ ಪ್ರಾಚೀನಾಚಾರ್ಯರು ವಿರಚಿಸಿರುವ ಎಷ್ಟೋ ಉತ್ತಮೋತ್ತಮ ಗ್ರಂಥರತ್ನಗಳು ಕಲಿರಾಜನ ಪ್ರಭಾವದಿಂದಲೋ ಅಥವಾ ವಿರಕ್ತರ ಉದ್ಯೋಗವಿಮುಖತೆಯಿಂದಲೋ ಇದೂವರೆಗೂ ಮುದ್ರಿತವಾಗದೆ ಇರುವದು ಅತಿ ಶೋಚನೀಯವಾದ ವಿಚಾರವೆಂದು ಭಾವಿಸಿ, ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳಾದ ಪುರಗಿರಿ ಬೃಹನ್ಮಠಾಧೀಶ ಶಿ|| ಚಿದ್ಘನಶಿವಾಚಾರ್ಯರು ವಿದ್ಯಾರ್ಥಿದಶೆಯಲ್ಲಿದ್ದರೂ ಬಹು ಪರಿಶ್ರಮದಿಂದ ಅನೇಕ ಪ್ರಾಚೀನ ಗ್ರಂಥಗಳನ್ನು ಸಂಶೋಧನಪೂರ್ವಕ ಸ್ವಹಸ್ತದಿಂದಲೇ ಬರೆದು ಮುದ್ರಣಮಾಡಿಸಲು ಅಹೋರಾತ್ರಿ ಪ್ರಯತ್ನಿಸುತ್ತಿರುವರು. ಆದರೆ ಕೆಲವು ಮಹನೀಯರು ಗ್ರಂಥ ಮುದ್ರಣಕ್ಕೆ ವಾಗ್ದಾನಮಾಡಿದ್ದು, ಶ್ರೀ ಪಂಚಾಚಾರ್ಯಪ್ರಭೆಯಲ್ಲಿ ಕಾಶಿಯಲ್ಲಿ "ಮಹಾನಾರಾಯಣೋಪನಿಷದ್ಶೈವಭಾಷ್ಯ"ವೆಂಬ ಗ್ರಂಥವು ಪ್ರಕಾಶವಾಗುತ್ತಲಿದೆ ಎಂಬ ಜಾಹೀರನಾಮೆಯನ್ನು ಕಂಡೂ ಕೇಳಿಯೂ, ಶಿವಾಚಾರ್ಯರು ಸ್ವತಃ ಪತ್ರಗಳನ್ನು ಕಳುಹಿಸಿದರೂ ತಮ್ಮ ವಾಗ್ದಾನವನ್ನು ಸಾರ್ಥಕಗೊಳಿಸಿಕೊಳ್ಳಲಿಲ್ಲವೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ಖೇದವೆನಿಸುತ್ತದೆ. ಈ ಭಾಷ್ಯವು ಒಂದೇ ರೂಪಾಯಿ ಕಿಮ್ಮತ್ತುಳ್ಳದ್ದಾದರೂ 8-10 ಜನ ಮಹನೀಯರು ಅದರಲ್ಲಿಯೂ ಪರಮತೀಯರೂ ಪರದೇಶೀಯರೂ ಗ್ರಾಹಕರಾಗಿ ರೂಪಾಯಿಗಳನ್ನು ಮನಿಯಾರ್ಡರ್ ಮಾಡಿರುವರು. ಕೆಲವರು ವಿ[illegible]ಸಬೇಕೆಂದು ಬರೆದಿರುವರು. ಅಂದಬಳಿಕ ವೀರಶೈವರಲ್ಲಿ ಗ್ರಂಥಾಭಿಮಾನವು ಎಷ್ಟರಮಟ್ಟಿಗಿರುವದೆನ್ನುವದನ್ನು ವಾಚಕರೇ ಊಹಿಸಬಹುದಾಗಿದೆ. ವೀರಶೈವರೇ! ಇನ್ನಾದರೂ ಜಾಗರೂಕರಾಗಿರಿ! ಶಿವಧರ್ಮಗ್ರಂಥಗಳನ್ನು ಹಸ್ತದಿಂದಾದರೂ ಸ್ಪರ್ಶಿಸಿ ಶಿವಕೃಪೆಗೆ ಪಾತ್ರರಾಗಿರಿ! ಮುದ್ರಣಕಾರ್ಯದಲ್ಲಿ ತೊಡಗಿದ ಚಿದ್ಘನಶಿವಾಚಾರ್ಯರು ದ್ರವ್ಯಾಭಾವದಿಂದ ಅನುತ್ಸಾಹಿಗಳಾಗಿ, ಶ್ರೀ ಕೇದಾರ ಸಿಂಹಾಸನ ಮಹಾಕ್ಷೇತ್ರಯಾತ್ರಾರ್ಥಿಗಳಾಗಿ ಕೇದಾರಕ್ಕೆ ದಯಮಾಡಿಸುವಷ್ಟರಲ್ಲಿ: ಖಿನ್ನಮನಸ್ಕರಾದ ಇವರಿಗೆ ಸಾಕ್ಷಾತ್ ಶ್ರೀ ಕೇದಾರೇಶ್ವರನೇ ಶ್ರೀ ಜಗದ್ಗುರು ನೀಲಕಂಠಶಿವಾಚಾರ್ಯರೂಪದಿಂದ ಪ್ರಸನ್ನನಾಗಿ, ಶಿವಭಕ್ತಿ ಜ್ಞಾನಧರ್ಮಬೋಧಕಗ್ರಂಥಗಳೂ ಬೇಕಾದಷ್ಟು ಇದ್ದರೂ ಧನಸಹಾಯಮಾಡುತ್ತೇನೆಂದು ತ್ರೇತಾಯುಗಾರಂಭದಿನವಾದ ಶುಕ್ಲಸಂವತ್ಸರ, ಅಕ್ಷಯತೃತೀಯಾ ತಿಥಿ ಶ್ರೀ ಮದೇಕೋರಾಮ ಜಗದಾಚಾರ್ಯ ಜಯಂತಿಮಹೋತ್ಸವದ ಸಮಯದಲ್ಲಿ ಅಭಯವಂ ಕೊಟ್ಟಿರುವದರಿಂದ: ಈ ಹೊತ್ತಿನಿಂದ ಶ್ರೀ ಕೇದಾರನಾಥ ಶಿವತತ್ತ್ವಗ್ರಂಥಮಾಲೆಯೆಂಬ ನಾಮದಿಂದ ಈ ಸಂಸ್ಥೆಯು ಪ್ರತಿಷ್ಠಿತವಾಗಿದೆ ಎಂದು ತಿಳುಹಿಸಲು ಪರಮಾನಂದವಾಗಿದೆ. ಈ ಕಾರಣದಿಂದ ಪ್ರಥಮಪುಷ್ಪವು ಸಾವಕಾಶವಾಗಿ ಗ್ರಾಹಕರ ಹಸ್ತಗತವಾಗುವದು. ಈ ಒಳಗಾಗಿ ಮನಿಯಾರ್ಡರ್ ಕಳುಹಿಸಿದವರೂ ಮುಂದೆ ಕಳುಹಿಸುವವರೂ ಮನಸಂಕೋಚಮಾಡಿಕೊಳ್ಳಲಾರರೆಂದು ಕೋರುತ್ತೇನೆ.

ವ್ಯವಸ್ಥಾಪಕ,
ಶ್ರೀ ಕೇದಾರನಾಥ ಶಿವತತ್ತ್ವ ಗ್ರಂಥಮಾಲಾ ಮಂದಿರ, ಪೋಸ್ಟ್ ಊಖೀಮಠ,
ಡಿ|| ಗಢವಾಲ.

ಕೆಲವು ತರಕಾರಿಗಳಲ್ಲಿರುವ ಗುಣವಿಶೇಷಗಳು.

ಬೇಯಿಸದೆ ಉಪಯೋಗಿಸಲು ಯೋಗ್ಯವಾದ ತರಕಾರಿಗಳಲ್ಲಿ ಪುಷ್ಟಿಜನಕವಾದ ವಸ್ತುವು ಹೆಚ್ಚಾಗಿಲ್ಲದಿದ್ದರೂ, ಅವುಗಳಲ್ಲಿ ಮತ್ತೊಂದು ವಿಶೇಷ ಪದಾರ್ಥವುಂಟು. ಈಚೀಚೆಗೆ ಕಂಡುಹಿಡಿದಿರುವ "ವಿಟಮಿನ್"ಗಳೆಂಬ ಆಹಾರಸತ್ವಗಳು ಆ ತರಕಾರಿಗಳಲ್ಲಿ ವಿಶೇಷವಾಗಿರುವುದೆಂದು ಕಂಡುಬಂದಿದೆ. ಆದುದರಿಂದ ಕಾಳುಗಳು, ಕೋಸ್‌ಗೆಡ್ಡೆ, ಸೌತೇಕಾಯಿ ಮುಂತಾದ ಬೇಯಿಸದೆ ಉಪಯೋಗಿಸಬಹುದಾಗಿರುವ ತರಕಾರಿಗಳನ್ನು ಪ್ರತಿ ಊಟದಲ್ಲಿಯೂ ಸೇವಿಸಬೇಕು. ಅವುಗಳಲ್ಲಿ ಪೊಟಾಷ್, ಕಬ್ಬಿಣ, ಸುಣ್ಣ ಮತ್ತು ಬೇರೆ ಕೆಲವು ಖನಿಜಗಳು ಹೆಚ್ಚು ಪ್ರಮಾಣದಲ್ಲಿರುವುವು.

ದಂಟು, ಕೋಸ್‌ಗೆಡ್ಡೆ ಮುಂತಾಗಿ ದಿಂಡುಗಳ ರೂಪದಿಂದುಪಯೋಗಿಸುವ ಜಾತಿಯ ತರಕಾರಿಗಳ ಸೇವನೆಯಿಂದ ಮಲಬದ್ಧತೆಯು ನಿವಾರಣೆಯಾಗುವುದು.

ತರಕಾರಿಗಳಲ್ಲಿರುವ ಕ್ರಿಮಿದೋಷಗಳನ್ನು ನಿವಾರಿಸುವುದು.

ಉಷ್ಣದೇಶಗಳಲ್ಲಿ ವಾಸಮಾಡುತ್ತಿರುವವರು, ಹಣ್ಣುಗಳನ್ನೂ ಹಸಿಯ ತರಕಾರಿಗಳನ್ನೂ ವಿಶೇಷವಾಗಿ ಉಪಯೋಗಿಸಬೇಕು. ಆದರೆ, ಹೊಟ್ಟೆಯಲ್ಲಿ ಕ್ರಿಮಿಗಳು ಸೇರಬಹುದೆಂಬ ಭೀತಿಯಿಂದ ಅನೇಕರು ಅವುಗಳನ್ನು ವಿಶೇಷವಾಗಿ ಸೇವಿಸುವುದಿಲ್ಲ. ಪರ್ಮಾಂಗನೇಟ್ ಆಫ್ ಪೊಟಾಷನ್ನು ಕರಗಿಸಿದ ನೀರಿನಲ್ಲಾಗಲಿ, ಕಾಂಡಿಯವರ ದ್ರಾವಕದಲ್ಲಾಗಲಿ ಮೊದಲು ಆ ತರಕಾರಿಗಳನ್ನು ಅದ್ದಿ, ಕುದಿಸಿ ತಣ್ಣಗೆ ಮಾಡಿದ ನೀರಿನಲ್ಲಿ ತೊಳೆದರೆ, ಮೇಲಿನ ದೋಷಗಳಿಗೆ ಅವಕಾಶವಿಲ್ಲದಂತಾಗುವುದು.

ಆರೋಗ್ಯಕರವಾದ ಒಳ್ಳೆಯ ಜಾತಿಯ ಹಣ್ಣುಗಳನ್ನು ಆರಿಸುವುದರಲ್ಲಿ ಬಹಳ ಜಾಗರೂಕರಾಗಿರಬೇಕು. ಕೊಳೆಯುತ್ತ ಬರುವ ಹಣ್ಣುಗಳನ್ನಾಗಲಿ, ಅನೇಕದಿವಸಗಳವರೆಗೆ ಇಟ್ಟಿದ್ದು ಬಹಳ ಮಾಗಿದ ಹಣ್ಣುಗಳನ್ನಾಗಲಿ ಉಪಯೋಗಿಸಲೇ ಕೂಡದು.

ಆಲೂಗಡ್ಡೆಗಳು.

ತರಕಾರಿಗಳಲ್ಲಿ ಆಲೂಗಡ್ಡೆಯು ಅತ್ಯುತ್ತಮವಾದುದರಿಂದ, ಅದರ ಗುಣವಿಶೇಷಗಳನ್ನು ತಿಳಿಯಬೇಕಾದುದು ಮುಖ್ಯವು. ಎಲ್ಲಾ ತರಕಾರಿಗಳಿಗಿಂತಲೂ ಇದು ಸದಾ ಸುಲಭವಾಗಿ ಸಿಕ್ಕುವುದು. ಮತ್ತು ಇದನ್ನು ಕೆಡದಂತೆ ಬಹಳಕಾಲ ಇಟ್ಟಿರಬಹುದು. ಸರಿಯಾದ ಕ್ರಮದಲ್ಲಿ ಅದನ್ನು ಅಡಿಗೆಮಾಡಿದರೆ, ಅದು ಸುಲಭವಾಗಿ ಜೀರ್ಣಿಸಿ ರಕ್ತಗತವಾಗುವುದು. ಅದರಲ್ಲಿ ಕಾರ್ಬೋಹೈಡ್ರೇಟುಗಳೂ, ಲವಣಗಳೂ, ಹೆಚ್ಚಾಗಿರುವುದರಿಂದ ದೇಹದ ಬೆಳವಣಿಗೆಗೂ ಬಹಳಮಟ್ಟಿಗೆ ಸಹಕಾರಿಯಾಗುವುದು.

ಆಲೂಗಡ್ಡೆಯಲ್ಲಿ ಪ್ರೋಟೀನ್ ಭಾಗವು ಬಹಳ ಕಡಿಮೆಯಾಗಿರುವುದೆಂಬ ಭಾವನೆಯುಂಟು. ಹಿಂಡ್‌ಹೆಡ್ ಎಂಬ ಡೆನ್ಮಾರ್ಕಿನ ಪ್ರಖ್ಯಾತ ಶಾಸ್ತ್ರಜ್ಞನು "ಬಹಳ ಕಷ್ಟಪಟ್ಟು ಕೆಲಸಮಾಡಿದ ಮೇಲೆ ಸವೆಯುವ ಪದಾರ್ಥಗಳನ್ನು ದೇಹಕ್ಕೆ ಒದಗಿಸಲು ಬೇಕಾದ ಆಹಾರಪದಾರ್ಥಗಳೆಲ್ಲವೂ ಆಲೂಗಡ್ಡೆಯಲ್ಲಿರುವುವೆಂದು" ಹೇಳಿರುವನು. ಡೆನ್ಮಾರ್ಕಿನ ಸರಕಾರದ ಪರವಾಗಿ ಅನೇಕವರ್ಷಗಳ ಕಾಲ ಆತನು ಶೋಧನೆಮಾಡಿರುವನು.

ಬಹಳಮಂದಿಗೆ ಅನೇಕ ತಿಂಗಳುಗಳವರೆಗೆ ಆಲೂಗಡ್ಡೆಯನ್ನೂ, ಕೊಬ್ಬನ್ನೂ ಮಾತ್ರ ಆಹಾರವಾಗಿ ಕೊಟ್ಟು, ಆವರಿಂದ ಬಹಳ ಶ್ರಮಕರವಾದ ಕೆಲಸಗಳನ್ನು ಮಾಡಿಸಿರುವನು. ಅನೇಕಶೋಧನೆಗಳಿಂದಲೂ, ಅನುಭವದಿಂದಲೂ ತರಕಾರಿಗಳು, ಹಣ್ಣುಗಳು, ಬೆಣ್ಣೆ ಅಥವಾ ಕೆನೆ, ರೊಟ್ಟಿ, ಕೋಳಿಮೊಟ್ಟೆ ಅಥವಾ ಹಾಲು ಇವುಗಳನ್ನು ಆಲೂಗಡ್ಡೆಯೊಡನೆ ಸೇರಿಸಿ ಸೇವಿಸುವುದರಿಂದ, ಅದು ಅತ್ಯುತ್ತಮವಾದ ಆಹಾರಪದಾರ್ಥವಾಗುವುದೆಂದು ನಿರ್ಧರವಾಗಿ ತಿಳಿದುಬಂದಿರುವುದು. ಮೂತ್ರಕೋಶಗಳಲ್ಲಿ ತೋರುವ ವ್ಯಾಧಿಗಳಿಗೆ ಆಲೂಗಡ್ಡೆಯಿಂದ ಬಹಳ ಗುಣವುಂಟಾಗುವುದೆಂದೂ ನಿರ್ಧರವಾಗಿದೆ. ಅಂತಹ ಸಂದರ್ಭಗಳಲ್ಲಿ ಅವುಗಳನ್ನು ಧಾರಾಳವಾಗಿ ಉಪಯೋಗಿಸುತ್ತಿರುವರು. ಈ ವ್ಯಾಧಿಗಳಲ್ಲಿ ವ್ಯಾಧಿಗ್ರಸ್ತರಿಗೆ ಆಲೂಗಡ್ಡೆ, ಬೆಣ್ಣೆ ಮತ್ತು ಸ್ವಲ್ಪ ತರಕಾರಿಗಳನ್ನು ಮಾತ್ರ ಆಹಾರವಾಗಿ ಕೊಡುವರು. ಆ ರೋಗಿಗಳು ಆಲೂಗಡ್ಡೆಯನ್ನು ಧಾರಾಳವಾಗಿ ಉಪಯೋಗಿಸುವುದರಿಂದ, ಮೂತ್ರದ್ರಾವಕವು ಸರಿಯಾದ ಪ್ರಮಾಣದಲ್ಲಿ ಉತ್ಪತ್ತಿಯಾಗಿ, ಅದರಲ್ಲಿರುವ ದೋಷಗಳೂ ಬೇಗ ಸುಲಭ ವಿಸರ್ಜನೆಯಾಗುವುದು.

ಸರಿಯಾದ ರೀತಿಯಲ್ಲಿ ತಯಾರಿಸಿದ ಆಲೂಗಡ್ಡೆಯು ತಿನ್ನುವುದಕ್ಕೆ ಬಹಳ ರುಚಿಯಾಗಿರುವುದು. ಅದನ್ನು ಪಕ್ವಮಾಡಿ, ಎಂದರೆ ನೀರಿನಲ್ಲಿ ಬೇಯಿಸಿ ಅಥವಾ ಸುಟ್ಟು ಉಪಯೋಗಿಸಬೇಕು. ಎಣ್ಣೆ ಅಥವಾ ತುಪ್ಪದಲ್ಲಿ ಹುರಿಯುವುದರಿಂದ ಇದು ಸುಲಭವಾಗಿ ಜೀರ್ಣಿಸಲಾರದು. ಆಲೂಗಡ್ಡೆಯಿಂದ ತಯಾರಿಸಿದ ಪದಾರ್ಥಗಳನ್ನು ಬಹಳ ಭದ್ರವಾಗಿ ಮುಚ್ಚಿದ ಪಾತ್ರೆಗಳಲ್ಲಿಟ್ಟಲ್ಲಿ ಅದು ಬಹಳ ಗಟ್ಟಿಯಾಗಿ ಹೋಗುವುದು. ಆದುದರಿಂದ ಅದರ ಮೇಲೆ ಬಟ್ಟೆಯನ್ನು ಮುಚ್ಚಿಟ್ಟು, ಅದರಲ್ಲಿನ ಆವಿಯು ಹೊರಗೆ ಹೋಗಲು ಅವಕಾಶವನ್ನೇರ್ಪಡಿಸಬೇಕು.

ಸೀಮೇ ಬದನೇಕಾಯಿ.
(Tomatoes)

ಅನೇಕರು ಈ ತರಕಾರಿಯನ್ನು ಸೇವಿಸುವುದರಿಂದ ವ್ರಣರೋಗಗಳಿಗೆ ಕಾರಣವಾಗುವುದೆಂಬ ತಪ್ಪು ತಿಳುವಳಿಕೆಯುಳ್ಳವರಾಗಿರುವುದರಿಂದ, ಇಲ್ಲಿ ಅದರ ಗುಣವಿಮರ್ಶೆಯನ್ನು ಸ್ವಲ್ಪಮಟ್ಟಿಗೆ ಮಾಡುವುದವಶ್ಯವು. ಅಂಥವರು ಮಾಂಸವನ್ನು ಕಡಿಮೆಯ ಪ್ರಮಾಣದಲ್ಲಿ ಸೇವಿಸಿ, ಈ ಸೀಮೆ ಬದನೆಯನ್ನು ಹೆಚ್ಚಾಗಿ ಸೇವಿಸುತ್ತಿದ್ದರೆ, ವ್ರಣರೋಗಬಾಧೆಯಿಂದ ಸಾಯುವವರ ಸಂಖ್ಯೆಯು ಬಹಳ ಕಡಿಮೆಯಾಗುತ್ತಿದ್ದಿತು.

ಪ್ರೋಟೀನ್ ಭಾಗವು ವಿಶೇಷವಾಗಿ ಸೇರಿರುವ ಆಹಾರಪದಾರ್ಥಗಳನ್ನು ಸೇವನೆಮಾಡುವವರಲ್ಲಿ ಈ ಹುಣ್ಣಿನ ವ್ಯಾಧಿಯು ಬಹಳ ಪ್ರಬಲವಾಗಿರುವುದುಂಟು. ಮಾಂಸಾಹಾರದ ಉಪಯೋಗವು ಹೆಚ್ಚಿದಂತೆಲ್ಲಾ, ಈ ವ್ಯಾಧಿಯೂ ವೃದ್ಧಿಯಾಗುತ್ತಿರುವುದು. ಆಹಾರಯೋಗ್ಯವಾದ ಪ್ರಾಣಿಗಳಲ್ಲಿ ಈ ಹುಣ್ಣಿನ ವ್ಯಾಧಿಯು ಹೆಚ್ಚಿದಾಗ ಅವುಗಳ ಮಾಂಸವನ್ನು ಸೇವಿಸುವ ಮನುಷ್ಯರಿಗೂ ಈ ವ್ಯಾಧಿಯು ವ್ಯಾಪಿಸುವುದೆಂಬುದು ಸ್ವಭಾವವೇ.

ಸೀಮೆಬದನೆಕಾಯಿಯಲ್ಲಿ ದೇಹದ ಬೆಳವಣಿಗೆಗೆ ಅವಶ್ಯವಾದ ಎಲ್ಲಾ ಪದಾರ್ಥಗಳ ಭಾಗವೂ, ದೇಹರಕ್ಷಣೆಗೆ ಅವಶ್ಯವಾದ ಭಾಗಗಳೂ ಇರುವುದರಿಂದ, ಉಷ್ಣದೇಶಗಳಲ್ಲಿ ವಾಸಮಾಡುತ್ತಿರುವವರಿಗೆ ಇದು ಬಹಳ ಆರೋಗ್ಯಕರವಾದ ಆಹಾರಪದಾರ್ಥವು.

ಆ. ಚಂ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾಸ್ತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [9]

ಎಂ. ಎಸ್. ಗಂಗಂಣ ಮತ್ತು ಲೋಕಂಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!
ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು "ಗೃಹಮಾತೆ"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂತ್ರವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲುಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಅದ್ದರಿಂದ ಈ ಔಷಧಾಲಯಕ್ಕೆ "ಅಷ್ಟವರ್ಗೌಷಧಾಲಯ"ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೩ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟ ಪೂನಾ ಸಿಟಿ
Himalayan Ashtawarg Medical Hall
848. Ganjipet Poona City.
[9]

ಶ್ರೀ ಕಾಶೀವಿದ್ವದ್ವೀರ ಮಾಹೇಶ್ವರ ಸಭೆಯಿಂದ ಆವಿರ್ಭವಿಸುವ ಶಿವತತ್ವ ಗ್ರಂಥಮಾಲೆಯ ಪ್ರಥಮಪುಷ್ಪವಾದ

"ಮಹಾನಾರಾಯಣೋಪನಿಷಚ್ಛೈವಭಾಷ್ಯ"

ಈ ಉದ್ದಾಮಗ್ರಂಥವು ವ್ಯಪಗಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರಿಂದ ರಚಿಸಲ್ಪಟ್ಟಿರುವದು. ಈ ಗ್ರಂಥವು ಶ್ರೀ ಜಗದ್ಗುರು ರೇವಣಸಿದ್ಧಾದಿ ಪಂಚಾಚಾರ್ಯರ ಹಾಗೂ ಪರಮತಕಾಲಾನಲಾರಾಧ್ಯ, ಪರವಾದಿ ಭಯಂಕರಾರಾಧ್ಯ, ವಜ್ರಮಾರಾಧ್ಯ, ಚಂದ್ರಶೇಖರಾರಾಧ್ಯ, ಭವಾನೀಶಂಕರಾರಾಧ್ಯ, ಶ್ರೀಪತಿಪಂಡಿತಾರಾಧ್ಯಾದಿಪ್ರಾಚೀನ ಪಂಡಿತರ ಗ್ರಂಥಾಭಿಪ್ರಾಯದ ಮೇರೆಗೆ ರಚಿಸಲ್ಪಟ್ಟಿರುವದೆಂದು ಅವರು ಅಲ್ಲಲ್ಲಿ ಉಲ್ಲೇಖಿಸಿರುವ ವಾಕ್ಯಗಳಿಂದ ವೇದ್ಯವಾಗುತ್ತದೆ. ಈ ಗ್ರಂಥಕರ್ತರ ಪಾಂಡಿತ್ಯವು ಗ್ರಂಥವನ್ನು ಓದಿನೋಡಿದಮೇಲೆ ಗೊತ್ತಾಗುವದಲ್ಲದೆ ಲೇಖದಿಂದ ವರ್ಣಿಸಲು ಸಾಧ್ಯವಿಲ್ಲ. ಈ ಗ್ರಂಥದಲ್ಲಿ ಶಿವಸರ್ವೋತ್ಕರ್ಷತ್ವ, ಶಕ್ತಿವೈಶಿಷ್ಟ್ಯ, ಹರಿಹರರಿಗಿರುವ ಶಕ್ತಿಶಕ್ತಿಮದ್ಭಾವಾದಿ ವಿಷಯಗಳು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಗ್ರಂಥರತ್ನವು ಶ್ರೀ ಕಾಶೀಪೀಠದ ಆಸ್ಥಾನ ಮಹಾಮಹೋಪಾಧ್ಯಾಯ ಪಂಡಿತ ಭಾಲಾಕ್ಷಶಾಸ್ತ್ರಿಗಳವರಿಂದ ಲಬ್ಧವಾಗಿದ್ದು ಶಿವಸಿದ್ಧಾಂತತತ್ವಜ್ಞ ಪುರಗಿರಿ ಶ್ರೀ ಚಿದ್ಘನ ಶಿವಾಚಾರ್ಯರಿಂದ ಸಂಶೋಧಿತವಾಗಿದೆ. ಆದುದರಿಂದ ಈ ಅಮೂಲ್ಯ ಮತಗ್ರಂಥವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಈ ಗ್ರಂಥವು ಶುಕ್ಲಸಂವತ್ಸರದ ವೈಶಾಖ ಶು|| ಅಕ್ಷಯತೃತೀಯಾ (ತಾ|| 11-5-29) ನೇಯ ದಿವಸ ಪ್ರಕಾಶವಾಗುವದು. ಈ ದಿನದೊಳಗಾಗಿ ಗ್ರಾಹಕರಾಗಿ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆ ಮಾತ್ರ ಸದರಿ ಗ್ರಂಥವು 1 ರೂಪಾಯಿಗೆ ಕೊಡಲ್ಪಡುವದು.

ವ್ಯವಸ್ಥಾಪಕ.
ಶ್ರೀ ಶಿವತತ್ವಗ್ರಂಥಮಾಲಾಮಂದಿರ
ಜಂಗಮವಾಡಿಮಠ ಬನಾರಸ್ ಸಿಟಿ.
[10]

ಸಿದ್ಧಾಂತಶಿಖೋಪನಿಷತ್.

ವೇದಗಳ ಶಾಖೆಗಳೇ ಉಪನಿಷತ್ತುಗಳ ರೂಪದಿಂದ ಪ್ರಕಾಶಿಸುತ್ತಿರುವವು. ಉಪನಿಷತ್ತುಗಳು ಒಂದಲ್ಲ, ಎರಡಲ್ಲ ಸಾವಿರಾರು ಇರುವವು. ಅದರಲ್ಲಿ ಕಾಲವೈಚಿತ್ರ್ಯದಿಂದ ಎಷ್ಟೋ ಉಪನಿಷತ್ತುಗಳು ಲುಪ್ತಗಳಾಗಿವೆ. ನಿರ್ಣಯಸಾಗರ ಮುದ್ರಣಾಲಯದಲ್ಲಿ ಮಾತ್ರ 120 ರ ವರೆಗೆ ಮಾತ್ರ ಉಪನಿಷತ್ತುಗಳು ಮುದ್ರಿಸಲ್ಪಟ್ಟಿವೆ. ಈ ಉಪನಿಷತ್ತುಗಳು ವೈದಿಕಸಿದ್ಧಾಂತವನ್ನು ಸ್ಥಿರಗೊಳಿಸುವವು. ಸದ್ಯಃ ದೊರೆಯುವ ಕೆಲವು ಉಪನಿಷತ್ತುಗಳಲ್ಲಿ ವೀರಶೈವ ಸಿದ್ಧಾಂತವು ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟಿರುವದು. ಆದರೆ ಈ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಉಪನಿಷತ್ತುಗಳು ಅನೇಕವಿದ್ದಾಗ್ಯೂ ಆ ಉಪನಿಷತ್ತುಗಳ ಹೆಸರುಗಳನ್ನು ನಮ್ಮ ಪ್ರಾಚೀನ ಗ್ರಂಥಕಾರರು ತೆಗೆದುಕೊಂಡಿದ್ದಾಗ್ಯೂ ಅವು ಇಲ್ಲಿಯವರೆಗೂ ಉಪಲಬ್ಧವಾಗಿರಲಿಲ್ಲ. ವೀರಶೈವಮತದ ಸುದೈವದಿಂದ ಸದ್ಯಃ ಸಿದ್ಧಾಂತಶಿಖೋಪನಿಷತ್ ಎಂಬ ಹೆಸರಿನ ಉಪನಿಷತ್ತು ಲಬ್ಧವಾಗಿರುವದು. ಈ ಉಪನಿಷತ್ತಿನಲ್ಲೆಲ್ಲಾ ವೀರಶೈವ ಸಿದ್ಧಾಂತವೇ ತುಂಬಿ ತುಳುಕುತ್ತಿರುವದು. ಇದರ ಯೋಗ್ಯತೆಗೆ ಎಷ್ಟು ಬೆಲೆ ಕೊಟ್ಟರೂ ತೀರದ್ದಾಗಿದೆ. ಗ್ರಂಥವು ಚಿಕ್ಕದಾದರೂ ಯೋಗ್ಯತೆಯು ಬಹು ದೊಡ್ಡದಾಗಿದೆ. ಈ ಗ್ರಂಥವನ್ನು ದೇವನಾಗರಿ, ಕನ್ನಡ ಈ ಎರಡು ಲಿಪಿಗಳಲ್ಲಿಯೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾಗಾರದವತಿಯಿಂದ ಪ್ರಿಂಟುಮಾಡಿಸಿದ್ದಾಗಿದೆ. ವೀರಶೈವರೆನಿಸುವ ಪ್ರತಿಯೊಬ್ಬರ ಮನೆಯಲ್ಲಿಯೂ ಈ ಗ್ರಂಥವು ಪ್ರಕಾಶಿಸುತ್ತಿರಬೇಕು. ಬೆಲೆ 4 ಆಣೆ. 4 ಪ್ರತಿಗಳಿಗಿಂತಲೂ ಕಡಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು 5 ಆಣೆ ಸ್ಟ್ಯಾಂಪನ್ನು ಕಳುಹಿಸಬೇಕು.

ಅಧ್ಯಾಪಕ,
ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ,
ಮಹಾಂತಮಠ, ಬಳೇಪೇಟೆ ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರುಚಿ] ವಜ್ರಾಂಗ ಸುಂದರಪಾಕ. [ಸ್ವರ್ಣ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಶಾಂತ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಕಾಲಿಮುಕಂದ, ಮಧುಕಂದ, ಜವಾಕಂದ, ಸಾಲೀಮುಲೀಕಂದ, ಅಶ್ವಕಂದ ಕ್ಷೀರಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಪಬೀಜ, ನಾಗಬೀಜ, ಬಾಳಬೀಜ, ಭೋಕರಿಬೀಜ, ಏವಲೀಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಪಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಪಾನಾ, ಬೀಜಬಂದ, ಹರಣಮೋರಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀರಮಗಜ, ಅಲವಹಾಲು, ವಾಕೇರಿಭಾಜಾ, ಗೋಖರು, ಅದವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಪೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಶರಿ, ಯಾಲಕ್ಕಿ, ಕಲ್ಲುಸಕ್ಕರಿ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಪೇಶಾಬಂಧ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ ೪ ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳೀ, ಪಿತ್ತ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದಿರೋಣ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [20]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಆರೋಗ್ಯವೆಂಬ ಸಂಪತ್ತನ್ನು ಕಳೆಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಫ್ರೇಮುಕೇಸುಗಳೂ, ಇತರ ಪ್ರಸಿದ್ಧ ಫರಂಗಿಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [44]

ಮಲೇರಿಯಾನ ಕಂಪೆನಿ, ನಂಬ್ರ ೩೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಿಗೆಲ್ಲಾ ಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವು. ಇದಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಐಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ ಕ್ಕೆ		ರೂ. ಆ. ಪೈ. ೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ		೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ [illegible]ರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ [illegible]ಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ [illegible] ೧ ಕ್ಕೆ		೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ		೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಪಾವಟಿ ದುಷ್ಪ್ರಶ್ನ ಪರಾಭವ	೬ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾತ್ರಯ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾತ್ರಯ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಒಸವಧ್ವಾಂತ ದಿವಾಕರ	೮ ಆಣೆ
ಒಸವಾದ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚಸೂತಕ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಸಯ್ಯಾಜಿರಾವ್ ರೋಡ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,
ಪೋಸ್ಟ್ ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಬಹು ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-[illegible]
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆ[illegible]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
ಪೋ. ಬಾ. ೫೧೦. ಮದರಾಸ್

[49]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪವಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ ನೇ ಜೂನ್ ೧೯೨೯ [ಸಂಚಿಕೆ ೫.

[illegible] ದೊರೆಯಬಹುದು; ಆದುದರಿಂದ ನಾವು ಗುರುಕೃಪೆಯನ್ನು ಮೊದಲು ಸಂಪಾದಿಸಬೇಕಾಗಿದೆ. ಗುರುಕೃಪೆಯಾಗಬೇಕಾದರೆ ಗುರುಭಜನಾ, ಕೀರ್ತನೆ, ಮೊದಲಾದವುಗಳನ್ನು ಅವಶ್ಯವಾಗಿ ಮಾಡಬೇಕು. ಈ ಉದ್ದೇಶದಿಂದಲೇ ನಮ್ಮ ಗ್ರಾಮದಲ್ಲಿ ತಾ. 8-5-29. ಈ ದಿವಸ ಮೈಲಾರಲಿಂಗ ದೇವಸ್ಥಾನದಲ್ಲಿ ವೇ|| ಚನ್ನಯ್ಯನವರು ಚಿಕ್ಕಮಣೂರು ಹಿರೇಮಠ ಇವರು ಗುರು ಮತ್ತು ಲಿಂಗ ಈ ಉಭಯವಿಷಯಗಳನ್ನು ಕೀರ್ತನಾರೂಪದಿಂದ ಸರ್ವರಿಗೂ ವ್ಯಕ್ತಪಡಿಸಿದರು. ಕೀರ್ತನಶ್ರವಣಕ್ಕೆ ಸುತ್ತುಮುತ್ತಿನ ಗ್ರಾಮಸ್ಥರೂ ಸಹ ಬಂದಿದ್ದರು. ಕೇಳತಕ್ಕ ಜನರು ಭಿತ್ತಿಯಲ್ಲಿ ಬರೆದ ಚಿತ್ರಗಳಂತೆ ಸ್ತಬ್ಧರಾಗಿ ಕುಳಿತಿದ್ದರು. ಗುರುಮಹಿಮೆಯೇ ಅಂಥದು; ಆಮೇಲೆ ಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳಾದ ಷಟ್ಶಾಸ್ತ್ರ್ಯಧ್ಯಕ್ಷ ಗುರುದೇವಶಿವಾಚಾರ್ಯಸ್ವಾಮಿಗಳು ಚಿಕ್ಕಮಣೂರು ಹಿರೇಮಠ ಇವರು ಗುರು, ಮತ್ತು ಲಿಂಗ ಈ ವಿಷಯವನ್ನು ಸ್ಫೂರ್ತಿದಾಯಕವಾದ ಭಾಷಣದ್ವಾರಾ ಸರ್ವರೂ ಮನಾನಂದವಾಗುವಂತೆ ತಿಳುಹಿಸಿದರು. ವೇ|| ಚನ್ನಯ್ಯನವರು ಚಿಕ್ಕವಯಸ್ಸಿನಲ್ಲಿಯೇ ಸಮಾಜಸುಧಾರಣೆಗೋಸ್ಕರ ಪ್ರಯತ್ನ ಪಡುತ್ತಿರುವುದನ್ನು ನೋಡಿ ಶ್ರೀ ಮಲ್ಲಿಕಾರ್ಜುನ ಸ್ಥಾಪಿತವಾದ ಭಜನಾಸಂಘದಿಂದ ಸದರಿ ಶ್ರೀಗಳ ಅಪ್ಪಣೆಯಮೇರೆಗೆ ಕೀರ್ತನಕೇಸರಿಯೆಂಬ ಪದವಿಯು ರಜತಪದಕದಲ್ಲಿ ಕೆತ್ತಿಸಿ ಕೊಡಲ್ಪಟ್ಟಿತು. ಆಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಲಿಂಗಪ್ಪ ಶಿವಪ್ಪ ಗಡಾದ
ವೀರಪ್ಪ ಅರಳಿ.

ಶ್ರೀ ಜಗದ್ಗುರುಗಳ ಜಯಂತಿ.

ಅಲದಾಯ ತಾ|| ಹಾನಗಲ್ಲ.

ಇದೇ ವೈಶಾಖ ಶು|| 3 ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ಶು|| 5 ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನೂ ಆಲದಗ್ರಾಮದ ಸಮಸ್ತ ವೀರಶೈವರು ಅತ್ಯಂತ ವೈಭವದಿಂದ ಆಚರಿಸಿದರು. ....

It has been brought to the notice of the undersigned that certain individuals under different names and designations have been collecting monies for the renovation and improvement of the Sreesailam Temple. No one has yet been authorised by the Management of the Sreesailam Temple or by the Trustee of the temple to collect funds. Bhaktas are particularly requested not to pay any person till a proper authority is produced.

To appraise the public of the exact authorities now constituted a short account of the present condition is given below:—

The management of the affairs of the Sreesailam Temple has been entrusted to a Board consisting of 5 members styled 'The Sreesailam Management Board.'

The renovation and improvement of the Sreesailam temple has to be undertaken by another committee to be appointed by the Trustee. That committee is in process of formation. That committee would ere long issue their own appeals for funds for the purposes of renovation and improvement. Until such time as that, Bhaktas are warned that monies paid to unauthorised persons will not reach Sree Mallikarjunaswamy.

P. RAMAIYA
President, Sreesailam
Management Board.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ಈ ದಿವಸದಿಂದ ಪ್ರಾರಂಭವಾಗುವುದು.

ಅಮಲ್ದಾರಿ ಕೆಲಸಕ್ಕೆ ಸೇರಲಿಚ್ಛಿಸುವ ಪದವೀಧರರು ಅರ್ಜಿಗಳನ್ನು ಹಾಕಿಕೊಳ್ಳಬಹುದೆಂದು ಪ್ರಭುತ್ವದವರು ಪ್ರಕಟಿಸಿದ್ದಾರೆ.

ನಮ್ಮ ದಿವಾನ್ ಸಾಹೇಬರ ಜ್ಯೇಷ್ಠಪುತ್ರರಾದ ಮಿ|| ಹುಮಾಯೂನ್ ಮಿರ್ಜಾರವರು, ನ್ಯಾಯಶಾಸ್ತ್ರವನ್ನು ಕಲಿಯಲು ಕಳೆದ ಭಾನುವಾರ ಬೊಂಬಾಯಿಯ ಮಾರ್ಗವಾಗಿ ಇಂಗ್ಲೆಂಡಿಗೆ ಪ್ರಯಾಣಮಾಡಿದರು.

ಧರ್ಮದ ಕೆಲಸಗಳಿಗೋಸ್ಕರ ಸರ್ಕಾರದಲ್ಲಿ ಇಡಲ್ಪಟ್ಟಿರುವ ಹಣಕ್ಕೆ 1929 ನೆಯ ಜುಲೈ ತಾ|| 30 ರಿಂದ 3 ವರ್ಷಗಳಕಾಲ ಶೇಕಡಾ 5 ರಂತೆ ಬಡ್ಡಿಯನ್ನು ಕೊಡುವುದಾಗಿ ಸರ್ಕಾರದವರು ಪ್ರಸಿದ್ಧಪಡಿಸಿರುತ್ತಾರೆ.

ಯೂರೋಪ್ ದೇಶಕ್ಕೆ ಹೋಗಿ ವೈದ್ಯಪರೀಕ್ಷೆಗಳಲ್ಲಿ ಉತ್ತಮ ಪ್ರಶಸ್ತಿಗಳನ್ನು ಪಡೆದು ಬಂದಿರುವ, ವೀರಶೈವ ಮಹಿಳೆಯಾದ ಡಾ|| ಕೃಷ್ಣಾಬಾಯಿ ಪಾಟೀಲ ಇವರನ್ನು, ಕಳೆದ 29 ನೆಯ ತಾರೀಖಿನ ದಿವಸ ಬೆಂಗಳೂರಿನ ವೀರಶೈವರು ದಿ|| ಬ|| ರಾಜಸಭಾಭೂಷಣ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸತ್ಕರಿಸಿದರೆಂದು ತಿಳಿಯಬರುತ್ತದೆ.

ಮ|| ರಾ|| ತಗಡೂರು ರಾಮಚಂದ್ರರಾಯರು ಪ್ರೆಸ್ ಕಾನೂನುಗಳನ್ನು ಮುರಿಯಬೇಕೆಂದು ಬೋಧಿಸುವ ಪಟಗಳನ್ನು ಇನ್ನು 6 ತಿಂಗಳುಗಳವರೆಗೆ ಮೆರೆಯಿಸಬಾರದೆಂದು ಬೆಂಗಳೂರು ಡಿ|| ಮ್ಯಾಜಿಸ್ಟ್ರೇಟರು ಆಜ್ಞಾಪಿಸಿದ್ದರಷ್ಟೆ! ಅದರಮೇಲೆ ಸದರಿ ರಾಮಚಂದ್ರರಾಯರು ಪಟಗಳನ್ನು ಬಿಟ್ಟು ತಮ್ಮ ಟೋಪಿ ಮತ್ತು ಹೊದ್ದುಕೊಳ್ಳುವ ಕಂಬಳಿಗಳಮೇಲೆಯೇ "ಅನ್ಯಾಯಕರವಾದ ಈ ಪ್ರೆಸ್ ಕಾನೂನನ್ನು ಮುರಿಯಲು ಎಲ್ಲರೂ ಸಿದ್ಧರಾಗಿರಬೇಕು" ಎಂದು ಬರೆದುಕೊಂಡು ತಿರುಗಲು ಆರಂಭಿಸಿದುದರಿಂದ ಬೆಂಗಳೂರು ಸಿಟಿ ಪೋಲೀಸರು ಅವರನ್ನು ಅರೆಸ್ಟುಮಾಡಿರುತ್ತಾರೆ.

ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದಿರುವ ಫಿಲ್ಮ್ ತಯಾರಿಕಂಪನಿಯ ಡೈರೆಕ್ಟರುಗಳ ಬೋರ್ಡಿಗೆ ಶ್ರೀಮತಿ ಸರೋಜಿನಿದೇವಿ, ಸರ್. ಎಂ. ಸಿ. ಟಿ. ಮುತ್ತಯ್ಯಚೆಟ್ಟಿಯಾರ್, ಹಾಜಿ ಸರ್ ಇಸ್ಮಾಯಿಲ್‌ಸೇಟ್ ಮೊದಲಾದವರು ಸೇರಿರುತ್ತಾರೆ. ಮದ್ರಾಸಿನ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಬೋರ್ಡಿನ ಅಧ್ಯಕ್ಷರಾಗಿರಲು ಒಪ್ಪಿರುತ್ತಾರೆ. ಮಿ|| ಡಬ್ಲ್ಯು ಎಚ್. ಆರ್. ಮರ್ರೆ ಮತ್ತು ಮ|| ರಾ|| ವಿ. ವಿ. ಸುಬ್ಬರಾವ್ ಇವರು ಮ್ಯಾನೇಜಿಂಗ್ ಡೈರೆಕ್ಟರುಗಳಾಗಿ ಕೆಲಸಮಾಡುವರು. ಸೀಮೆಯಲ್ಲಿ ಫಿಲ್ಮ್ ತಯಾರಿಯಲ್ಲಿ ವಿಶೇಷ ಅನುಭವವನ್ನು ಸಂಪಾದಿಸಿರುವ ಮಿ|| ನಿರಂಜನಪಾಲರವರು ಇಷ್ಟರಲ್ಲಿ [illegible] ಭರತಖಂಡಕ್ಕೆ ಒಂದು ಕಂಪನಿಯ ಮೊದಲನೆ[illegible]ನ್ನು ತಯಾರಿಸುವರು. ಭಾರತಸರ್ಕಾರದವರೂ ಮತ್ತು ಮೈಸೂರು ಪ್ರಭುತ್ವದವರೂ ಈ ಕಂಪನಿಯ ಕಾರ್ಯಗಳ ವಿಷಯದಲ್ಲಿ ಸಹಕರಿಸುವುದಾಗಿ ಮಾತುಕೊಟ್ಟಿರುವರು.

ಗಂಧದೆಣ್ಣೆ ಕಾರ್ಖಾನೆಯ ಮೋಸದ ವ್ಯವಹಾರವು ರಾಜಧಾನಿಯಲ್ಲಿ ಅ|| ಡಿ|| ಮ್ಯಾಜಿಸ್ಟ್ರೇಟರಾದ ಮ|| ರಾ|| ಟಿ. ಜಿ. ರಾಮಅಯ್ಯರವರ ಸಮ್ಮುಖದಲ್ಲಿ ನಡೆಯುತ್ತಿದೆ. ಗಂಧದೆಣ್ಣೆಯ ಮಾರಾಟಕ್ಕೆ ಏಜಂಟರಾಗಿದ್ದ 'ಎಕ್ಸ್‌ಪ್ಲೋರರ್ ಪ್ರಾಡಕ್ಟ್ಸ್ ಲಿಮಿಟೆಡ್' ಕಂಪನಿಯಪರವಾಗಿ ಇಂಗ್ಲೆಂಡಿನಲ್ಲಿ ಕೆಲಸಮಾಡುತ್ತಿದ್ದ ಮ|| ರಾ|| ಮೌಲಾಂಕರವರು ಇಂಗ್ಲೆಂಡಿನಿಂದ ಬಂದಿದ್ದು, ತಮ್ಮ ಹೇಳಿಕೆಯನ್ನು ಪ್ರಾರಂಭಿಸಿರುವರು. ಅವರು ತಮ್ಮ ಹೇಳಿಕೆಯಲ್ಲಿ "ನಾನು 7000 ಮೈಲುಗಳ ದೂರದಿಂದ ಬಂದಿದ್ದೇನೆ. ನನ್ನ ಜೀವಮಾನದಲ್ಲಿ ಅನೇಕ ದೊಡ್ಡ ದೊಡ್ಡ ಉದ್ದೇಶಗಳನ್ನಿಟ್ಟುಕೊಂಡು ನಾನು ಕೆಲಸಮಾಡಿದ್ದೇನೆ. ಪತ್ರಗಳನ್ನಾಗಲಿ ಅಥವಾ ಲೆಖ್ಖಗಳನ್ನಾಗಲಿ ಸ್ವತಃ ನಾನು ಬರೆದಿಲ್ಲ; ಅವುಗಳನ್ನು ಇಡುವ ಪದ್ಧತಿಯೇ ನನಗೆ ತಿಳಿಯದು. ನಾನು ಬರೆಯದೆ ಇರುವ ಕಾಗದಪತ್ರಗಳನ್ನು ಹಾಜರ್ಮಾಡುವುದೆಂದರೆ ಬಹುಕಷ್ಟಕರವಾದುದು' ಎಂದು ನುಡಿದಿರುವರು. ಅವರು ಫಿರ್ಯಾದಿಗಳ ಕಡೆಗೂ ಅಪರಾಧಿಗಳ ಕಡೆಗೂ ಸಾಕ್ಷಿಯನ್ನು ಹೇಳಬೇಕಾಗಿದೆಯಂತೆ! ಅವರ ವಿಚಾರಣೆಯು ಇನ್ನೂ ನಡೆಯುತ್ತಿರುವದು.

ಹಿಂದೂ ಮಹಾಸಭೆಯ ಅಧ್ಯಕ್ಷರೂ, "ಮಾಡರನ್ ರೆವ್ಯೂ" ಎಂಬ ಇಂಗ್ಲೀಷು ಮಾಸಪತ್ರಿಕೆಯ ಸಂಪಾದಕರೂ ಆದ ಮ|| ರಾ|| ರಾಮಾನಂದ ಚಟರ್ಜಿಯವರು ರಾಜದ್ರೋಹದ ಅಪವಾದಕ್ಕೆ ಗುರಿಯಾಗಿ ಸೆರೆಹಿಡಿಯಲ್ಪಟ್ಟಿದ್ದು ಸ್ವಂತ ಜಾಮೀನು ಮುಚ್ಚಳಿಕೆಯ ಮೇಲೆ ಬಿಡಲ್ಪಟ್ಟಿರುವರು. ಭರತಖಂಡದ ಹಿತಚಿಂತಕರಾದ ಅಮೇರಿಕಾದೇಶದ ಡಾ|| ಸಂಡರ್‌ಲೆಂಡರವರು ಬರೆದಿರುವ 'ಇಂಡಿಯಾ ಇನ್ ಬಾಂಡೇಜ್' (ದಾಸ್ಯ ಬದ್ಧ ಭಾರತ) ಎಂಬ ಪುಸ್ತಕವನ್ನು ಪ್ರಕಟಗೊಳಿಸುದುದೇ ಚಟರ್ಜಿಯವರ ಅರೆಸ್ಟಿಗೆ ಕಾರಣವಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವಥಾ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಕೇದಾರ ಮಹಾಕ್ಷೇತ್ರಯಾತ್ರೆ.

ಲೇಖಕರು—ಶ್ರೀ ಘರಗಿಂ ಚಿದ್ಘನಶರ್ಮ ಶಿವಾಚಾರ್ಯ ಪಂಡಿತರು

ಶ್ರೀ ಕಾಶೀಕ್ಷೇತ್ರದಿಂದ ತಾ|| 19-4-29 ನೆಯ ಪ್ರಾತಃಕಾಲ 9 ಘಂಟೆಯ ಸುಮಾರು ಸಮಯದಲ್ಲಿ ಹೊರಟು ಬನಾರಸ ಕ್ಯಾಂಟನ್ಮೆಂಟ್ ಸ್ಟೇಶನದಲ್ಲಿ ಡೆಹರಾಡೂನ ಎಕ್ಸಪ್ರೆಸ್ ಗಾಡಿಯಲ್ಲಿ ಕುಳಿತು ಲಖನೌ ಮಾರ್ಗವಾಗಿ ನಜಿಬಾಬಾದ ಸ್ಟೇಶನಕ್ಕೆ ...

... ಪುಕ್ತಪಕ್ಷವಾಗಿದ್ದರೂ ನೋಡಬಹುದಾಗಿತ್ತು. ಅಲ್ಲಿ ಕೂಲಿಯವನು ಸ್ವಲ್ಪ ಹಿಂದುಳಿದನು. ಆದರೆ ಕಳ್ಳಕಾಕರ ಭಯವುಮಾತ್ರ ಈ ದೇಶದಲ್ಲಿ ಇರುವದಿಲ್ಲ. ನಾವು ಈರ್ವರು ಮುಂದಕ್ಕೆ ಹೊರಟೆವು. ದಾರಿಯಲ್ಲಿ ನೀರಿನಲ್ಲಿಯು ಸಿಕ್ಕಿತು. ಅಲ್ಲಿ ಮುಖವನ್ನು ತೊಳೆದುಕೊಂಡು ಅಲ್ಲಿಂದ ಮುಂದೆ ಹೋಗಲು ಮಾರ್ಗದಲ್ಲಿ ಗಢವಾಲ ಡಿ|| ಬೋರ್ಡ ಮಿಡಲ್ ಸ್ಕೂಲು ಸಿಕ್ಕಿತು. ಅಲ್ಲಿ ಹೊತ್ತು ವಿಚಾರಿಸಲು ಮುಂದೆ ಒಂದು ಫರ್ಲಾಂಗಿನೊಳಗಾಗಿಯೇ (ಚಟ್ಟಿಯು) ಮುಕ್ಕಾಂಗ್ರಾಮವಿದೆ ಹೋಗಿರೆಂದು ಮಾಸ್ತರನೊಬ್ಬನು ಹೇಳಿದನು. ಅಲ್ಲಿಗೆ ಹೋಗಲು ಎಲ್ಲರೂ ಮಲಗಿದ್ದರು. ಎಚ್ಚರಿಸಿದ ಮೇಲೆ ಒಬ್ಬ ಅಂಗಡಿಕಾರನು ಎದ್ದು ನಮಗೆ ಬೇಕಾಗುವ ಯಾವತ್ತು ವ್ಯವಸ್ಥೆಯನ್ನು ಮಾಡಿದನು. ಆದರೆ ನೀರನ್ನು ಮಾತ್ರ ಕೆಳಗೆ ಕೊಳದಲ್ಲಿ ಹೋಗಿ ತರುವ ಪ್ರಸಂಗವು ಬಂದಿತು. ಆದರೂ ತೃಪ್ತಿ ಪಾಸಾಬಾಧಿತರಾಗಿದ್ದರಿಂದ ಕೊಳದೊಳಗೆ ಹೋದೆವು. ಅಲ್ಲಿ ಒಂದು ಭಾವಿಯು ಗವಿಯಾಕಾರವಾಗಿತ್ತು, ಸ್ನಾನಮಾಡಿದೆವು. ಅತ್ಯಂತ ಚಳಿಯು ಇತ್ತು. ಹಾಗೆ ...

... ಯೇ ಬಂದಿದ್ದರು. ಜಗದ್ಗುರುಗಳಿಗೆ ಇಲ್ಲಿ ಕೇದಾರನಾಥ ರಾವಲ್ ಜಗದ್ಗುರುಗಳೆಂದು ಅನ್ನುತ್ತಾರೆ. ಶ್ರೀಗಳವರ ದರ್ಶನಕ್ಕೆ ತಂಡೋಪತಂಡವಾಗಿ ಜನರು ಬರುತ್ತಿರುವರು. ದರ್ಶನ ಮಾಡಬೇಕಾದರೆ ಕಾಣಿಕಾದಿಗಳನ್ನೂ ದಂಡಪ್ರಣಾಮಗಳನ್ನೂ ಮಾಡಿದ ಹೊರತು ಯಾರೂ ದರ್ಶನಮಾಡುತ್ತಿರಲಿಲ್ಲ. ಹಿಂಬ ಹುನಾ? ಪೀಠದ ಗೌರವಕ್ಕೆ ಕೀಳ್ಮೆಯೇ ಇರುವದಿಲ್ಲ. ಶ್ರೀಗಳವರು ಶಾಂತಚಿತ್ತದಿಂದ ಸರ್ವರೊಡನೆ ಸಂಭಾಷಣಮಾಡುತ್ತಿದ್ದರು, ಸಂಸ್ಥಾನದಲ್ಲಿ ದರಬಾರ್ ಮಂದಿರವು ಪ್ರತ್ಯೇಕವಾಗಿದೆ. ಅಲ್ಲಿ ಅನೇಕ ವೇದೋಪನಿಷದ್ಧರ್ಮಶಾಸ್ತ್ರೀಯ ವಾಕ್ಯಗಳು ಸರ್ವತ್ರ ವಿರಾಜಿಸುತ್ತಲಿರುವವು. ಒಟ್ಟೆರ ಡಿ. ಡಿ. ಕಲೇಶ್ವರ ವಿಶ್ವೇಶ್ವರ ಪ್ರಸಾದರೆಂಬವರು ಮ್ಯಾನೇಜರರಾಗಿರುವರು. ಕ್ಯಾಶೀಯರು ಎಷ್ಟು ಜನರಿರುವದು ತಿಳಿಯುವಂತಿಲ್ಲ. ಪೀಠದಲ್ಲಿ ನಾನಾ ಪ್ರಕಾರವಾದ ಕಾರ್ಯಕ್ರಮಗಳು ನಡೆದಿರುತ್ತವೆ. ಜಗದ್ಗುರುಗಳು ಪೂಜಾರ್ಚನಾದಿಗಳನ್ನು ಪೂರೈಸಿಕೊಂಡು ಅಲ್ಲಿಯೇ ಮೂರ್ವಮಾಡಿ ಸಂಸ್ಥಾನಕಾರ್ಯಗಳನ್ನು ... (ಸಶೇಷ.)

... ಅದ ವೇ|| ಶಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ, ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :— ...

M. P. Chandaiya,
Taluk Agent

... ಭಸಿ ವಗೈರೆ ಕಾಣಿಕೆ ವಸೂಲಿ ವಿಷಯದಲ್ಲಿ ರೂಲ್ಸನಲ್ಲಿ ನಂಬರ 3 ನೇ ಬಿ. 1 ರಲ್ಲಿ ನಮೂದಿಸಿರುವ ಪ್ರಕಾರ ಅಸಿಸ್ಟೆಂಟ ಪಿಬಂಟರಾಗಲಿ ಸಂದರ್ಭಾನುಸಾರ ತಾಲೂಕು ಪಿಬಂಟರೇ ಆಗಲಿ ಈಗಿನ ಹಾಲಿ ವಸೂಲಿ ಕ್ರಮ ನಡೆಸುತ್ತಿರುವದು ಸರಿಯಷ್ಟೆ. ಆದರೆ ಇವರಿಂದ ಅತಿ ಜಾಗ್ರತೆಯಾಗಿ ವಸೂಲಿ ಕ್ರಮ ನಡೆಯಲು ಅವಕಾಶವಿಲ್ಲದೆ ವೃಥಾ ಹೆಚ್ಚು ಖರ್ಚಿಗೆ ಆಸ್ಪದವಾಗುವ ... ಪ್ರಯುಕ್ತ ಸಮಸ್ತ ಮಾನ್ಯರೂ ಈ ವಿಷಯದಲ್ಲಿ ... ತೋರಬಂದಂತೆ ತಮ್ಮ ತಮ್ಮ ಅಭಿಪ್ರಾಯವನ್ನು ...

ಶ್ರೀ ಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಗುರುಕೀರ್ತನೆ.

ಈ ಜಗತ್ತಿನಲ್ಲಿ ಮಾನವಪ್ರಾಣಿಯು ಸತ್ಪಥವನ್ನು ಹೊಂದಿ ಶಿವಪ್ರೀತಿಗೆ ಪಾತ್ರನಾಗಬೇಕಾದರೆ ಗುರುಕೃಪೆಯು ಮುಖ್ಯವಾಗಿರುವುದು. ನಮ್ಮಲ್ಲಿರತಕ್ಕ ಅಜ್ಞಾನಾಂಧಕಾರವು ಎಲ್ಲಿಯವರೆಗೆ ನಿವಾರಣೆಯಾಗುವದಿಲ್ಲವೋ ಅಲ್ಲಿಯವರೆಗೂ ನಮಗೆ ಶಿವಪ್ರೀತಿಯು ದೊರಕುವದಿಲ್ಲ. ಇಂಥ ಅಜ್ಞಾನಾಂಧಕಾರವನ್ನು ನಿವಾರಣೆಮಾಡಲಿಕ್ಕೆ ಗುರುವು ಸಮರ್ಥನಲ್ಲದೆ ಬೇರೊಂದು ವಸ್ತುವಿಲ್ಲೆಂದು ನಿಸ್ಸಂಶಯವಾಗಿ ಹೇಳಬಹುದು. "ಗುರು ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವಃ ಸದಾಶಿವಃ|ಬ್ರಹ್ಮ, ವಿಷ್ಣು, ಮಹೇಶ" ಈ ತ್ರಿಮೂರ್ತಿಗಳಲ್ಲಿ, ಸೃಷ್ಟಿ, ಸ್ಥಿತಿ ಲಯ, ಎಂಬ ಮೂರು ಕರ್ತವ್ಯಗಳಿರುವವು. ಆದರೆ ಮೂರೂ ಕಾರ್ಯಗಳು ಒಬ್ಬ ಗುರುವಿನಲ್ಲಿರುವವು. ಸೃಷ್ಟಿಯು ಬ್ರಹ್ಮನ ಕರ್ತವ್ಯವಾಗಿರುವಂತೆ ಗುರುವು ವಾಣಿಪಿಂಡವನ ಳಿದು ಮಂತ್ರಪಿಂಡವನ್ನು ...

... ಮೇಲೆ ಅಧ್ಯಕ್ಷರು ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿಯುಂಟಾಗುವಂತೆ ಭಾಷಣಮಾಡಿದರು.

ಅಂದಿನ ಸಭೆಗೆ ಶ್ರೀ|| ಷ|| ಬ್ರ|| ಗಂಜ್ಯಾರ ಪಟ್ಟಾಧ್ಯಕ್ಷರ ಹಾಗೂ ಶ್ರೀ|| ಷ|| ಬ್ರ|| ಕಾಗಿನೆಲ್ಲಿ ಚರಮೂರ್ತಿಸ್ವಾಮಿಗಳವರ ಅಕಸ್ಮಿಕವಾದ ಆಗಮನವಾದ್ದರಿಂದ ಶ್ರೀ ಜಗದ್ಗುರುಗಳೇ ಉಭಯಸ್ವಾಮಿಗಳವರನ್ನು ಅಲ್ಲಿಗೆ ಬರಮಾಡಿದಂತೆ ಜನರ ಮನಸ್ಸಿನಲ್ಲಿ ಭಾಸವಾಯಿತು. ಉಭಯ ಶ್ರೀಗಳ ಆಭಾರಮನ್ನಿಸಿದ ಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಟಿ. ರು. ವಿರುಪಣ್ಣನವರ, ಆಲೂರ ಶೇ|| ಸಂ|| ಮ್ಯಾ. ಮೆಂಬರ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುಭಕ್ತನೆನ್ನಬೇಕು ಮಾರುತಿಗಲ್ಲವೇ ?

...

ಯುಮೋರಿಗೆ ಕೀರ್ತನಕೇಸರಿಯೆಂಬ ಪದವಿಯು ರಜತಪದಕದಲ್ಲಿ ಕೆತ್ತಿಸಿ ಕೊಡಲ್ಪಟ್ಟಿತು. ಆಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಲಿಂಗಪ್ಪ ಶಿವಪ್ಪ ಗಡಾದ
ವೀರಪ್ಪ ಅರಳಿ.

ಶ್ರೀ ಜಗದ್ಗುರುಗಳ ಜಯಂತಿ.

ಆಲೂರು ತಾ|| ಹಾನಗಲ್ಲ.

ಇದೇ ವೈಶಾಖ ಶು|| 3 ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ಶು|| 5 ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನೂ ಆಲೂರಗ್ರಾಮದ ಸಮಸ್ತ ವೀರಶೈವರು ಅತ್ಯಂತ ವೈಭವದಿಂದ ಆಚರಿಸಿದರು. ಮುತ್ತಿನ ಕಂಥೆಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ಅಪ್ಪಣೆಯಮೇರಿಗೆ ಪ್ರಾತಃಕಾಲದ 8 ಘಂಟೆಗೆ ಜಗದ್ಗುರುಗಳ ಲಿಂಗೋದ್ಭವ ಭಾವಚಿತ್ರವನ್ನು ವೇದೋಕ್ತವಾಗಿ ಪೂಜಿಸುವದರಲ್ಲಿ ...

... ಗವನ್ನು ನೋಡಲು ಲಿಂಗವು ಮಾಯವಾಗಿತ್ತು. ಆಗ ಅವನು ಭಯಭ್ರಾಂತನಾಗಿ ತಮ್ಮ ಗುರುಗಳ ಸನ್ನಿಧಿಗೆ ಬಿನ್ನೈಸಲು ಗುರುಗಳು ತಮ್ಮ ಫಾಲನೇತ್ರದಿಂದ ಮರಳಿ ಇಷ್ಟಲಿಂಗವನ್ನು ತರಿಸಿಕೊಟ್ಟರು. ನಮ್ಮ ವೀರಶೈವಸದ್ಭಕ್ತರು ಮಾರುತಿಯ ಗುರುಭಕ್ತಿಯಂತೆ ನಡೆದು ಮುಕ್ತಿಭಾಜನರಾಗಬೇಕೆಂದು ನನ್ನ ಕೋರಿಕೆ.

ಕಪ್ಪತ್ತಿಗೌಡ ಗುರುಪಾದಗೌಡ, ಪಾಟೀಲ,
ಬ್ಯಾಲವಾಡಿಗಿ.

ಶ್ರೀ ಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಸ್ನೇಹದ ಫಲ.

ವಾಚಕ ಮಹಾಶಯರೇ ? ಈ ವರ್ಷ ವಿಜಾಪುರ ಜಿಲ್ಲಾ ಬದಾಮಿ ತಾಲೂಕ ಗೋವನಕೊಪ್ಪ ಗ್ರಾಮದ ಮಿ|| ಸಂಗಪ್ಪ ಸಂಗನಬಸಪ್ಪ ಮಾಳವಾಡ ಈತನು ವಿಜಾಪುರ ಹೈಸ್ಕೂಲಿನಲ್ಲಿ ...

ಯುಗಳನ್ನು ಸಮರ್ಪಿಸಿರುವರು. ಸಂಗಪ್ಪನಿಗೂ ಆತನ ಪ್ರಿಯಸ್ನೇಹಿತರಿಗೂ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯವಿದ್ಯಾದಿಗಳನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ.

ಎಮ್. ಎಮ್. ಸರಗಣಾಚಾರ್ಯ,
ಕುಂಟೋಜಿ ಗೋವನಕೊಪ್ಪ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವ.

ಜಂಬಗಿ

ವಿಜಾಪುರ ತಾಲೂಕು ಜಂಬಗಿ ಗ್ರಾಮದಲ್ಲಿ ವೈಶಾಖ ಶು|| 3 ಶನಿವಾರ ಯಾವತ್ತು ಸದ್ಭಕ್ತರು ಸೃಷ್ಟಿ ...

... ಪ್ರೋತ್ಸಾಹಿಸಿದರು. ಮಂಗಲವಾದಮೇಲೆ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸರ್ವರೂ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಈಶ್ವರಯ್ಯ ಕೊಪ್ಪಳ.

ಶ್ರೀ ಮರುಲಾರಾಧ್ಯಸ್ತೋತ್ರ.

ಈ ಗ್ರಂಥದಲ್ಲಿ ಮರುಲ ಜಗದಾಚಾರ್ಯರ ಸ್ತುತಿಯು ಭಾಮಿನಿ ಷಟ್ಪದಿಯಲ್ಲಿ ಮನೋಹರವಾದ ಶೈಲಿಯಿಂದ ರಚಿಸಲ್ಪಟ್ಟಿದ್ದು ಪ್ರತಿಯೊಬ್ಬ ವೀರಶೈವನೂ ಪಾರಾಯಣಮಾಡಲು ತುಂಬಾ ಯೋಗ್ಯವಾಗಿದೆ. ಇದರಲ್ಲಿ ಮರುಲಾಚಾರ್ಯರ ಮತ್ತು ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರಗಳಿವೆ. ಬೆಲೆ 1 ಕ್ಕೆ 2 ಆಣೆ.

1 ರೂಪಾಯಿ ಮನಿಯಾರ್ಡರಮಾಡಿ ಕಳುಹಿಸುವವರಿಗೆ 12 ಬುಕ್ಕುಗಳನ್ನು ಪೋಸ್ಟು ಚಾರ್ಜ ಇಲ್ಲದೆ ಕಳುಹಿಸುವದಾಗುವದು. 5 ಆಣೆ ಪೋಸ್ಟು ಸ್ಟ್ಯಾಂಪು ಕಳುಹಿಸಿದವರಿಗೆ 3 ಬುಕ್ಕುಗಳನ್ನು ಕಳುಹಿಸುವದಾಗುವದು.

ವಿರೂಪಾಕ್ಷಶಾಸ್ತ್ರೀ ಪುರಾಣಿಕಮಠ,
ಪೋಸ್ಟು ಹಿರೇಹಡಗಲಿ. ಜಿಲ್ಲಾ ಬಳ್ಳಾರಿ.

ಪಂಚಾಚಾರ್ಯ ಪ್ರಭಾ

೧೯೨೯ನೇ ಜೂನ್ ತಾ|| ೧೦ನೇ ಸೋಮವಾರ

ಶ್ರೀ ಶೈಲ ಮಲ್ಲಿಕಾರ್ಜುನ ಸ್ವಾಮಿಯ ದೇವಾಲಯ.

ಭರತಖಂಡದಲ್ಲಿರತಕ್ಕ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಶ್ರೀ ಶೈಲಕ್ಷೇತ್ರದಲ್ಲಿರತಕ್ಕ ಮಲ್ಲಿಕಾರ್ಜುನ ಮಹಾಲಿಂಗವೂ ಕೂಡ ಒಂದಾಗಿರುವದು ಶಾಸ್ತ್ರಪ್ರಸಿದ್ಧವಾಗಿರುವದಷ್ಟೆ! ಈ ಮಲ್ಲಿಕಾರ್ಜುನ ಮಹಾಲಿಂಗದಿಂದೊಪ್ಪುತ್ತಿರುವ ಶ್ರೀಶೈಲಕ್ಷೇತ್ರವು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರಗಳಲ್ಲಿ ಅಗ್ರಸ್ಥಾನವನ್ನು ಹೊಂದಿರುವುದು. ಆದುದರಿಂದಲೇ ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು "ಶ್ರೀ ಶೈಲಶಿಖರಂ ದೃಷ್ಟ್ವಾ ಪುನರ್ಜನ್ಮ ನವಿದ್ಯತೇ" ಎಂದು ತಮ್ಮಿಂದ ಬರೆಯಲ್ಪಟ್ಟ ಸ್ಕಂದಪುರಾಣಾಂತರ್ಗತ ಶ್ರೀ ಶೈಲಖಂಡದಲ್ಲಿ ಉಲ್ಲೇಖಿಸಿರುವರು. ಸಾಕ್ಷಾದ್ಭೂಕೈಲಾಸವೆನಿಸಿದ ಈ ಕ್ಷೇತ್ರದಲ್ಲಿ ರಾರಾಜಿಸುತ್ತಿರುವ ಮಲ್ಲಿಕಾರ್ಜುನ ಮಹಾಲಿಂಗದಿಂದ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಡಿತಾರಾಧ್ಯರು ಅವತರಿಸಿದರು. ಈ ವಿಷಯವು ಸ್ವಯಂಭುವಾದಿ ಶಿವಾಗಮಗಳಲ್ಲಿ ವಿಶದವಾಗಿ ಹೇಳಲ್ಪಟ್ಟಿರುವುದು.

ಸುಧಾಕುಂಡಾಬ್ಧ್ಯಸುಕ್ಷೇತ್ರೇ ಮಲ್ಲಿಕಾರ್ಜುನಲಿಂಗತಃ | ಪಂಡಿತಾರಾಧ್ಯನ್ಯಜನನಂ ನಿವಾಸಃ ಶ್ರೀಗಿರಾ ಶಿವೇ ||

ಇತ್ಯಾದಿ ಶಿವಾಗಮಗಳ ವಾಕ್ಯಗಳಿಂದ ಶ್ರೀ ಪಂಡಿತಾರಾಧ್ಯರು ಮಲ್ಲಿಕಾರ್ಜುನಲಿಂಗದಿಂದವತರಿಸಿ ಅಲ್ಲಿಯೇ ತಮ್ಮ ಧರ್ಮಪೀಠವನ್ನು ಸ್ಥಾಪಿಸಿದರೆಂದು ಸಿದ್ಧವಾಗುವುದು. ಈ ಕ್ಷೇತ್ರವಾದರೂ ಅನಾದಿಕಾಲದಿಂದ ಈ ಪೀಠಾಧಿಪತಿಗಳ ಸ್ವಾಧೀನದಲ್ಲಿಯೇ ಇತ್ತು. ಆದರೆ ಕೆಲವು ಕಾಲದಿಂದೀಚೆಗೆ ಸ್ಮಾರ್ತಮತೀಯರಾದ ಪುಷ್ಪಗಿರಿಮಠದವರ ಸ್ವಾಧೀನವಾಗಿತ್ತು. ಆದರೆ ಈಗ ಆ ಕ್ಷೇತ್ರವು ಅವರ ಆಧಿಪತ್ಯದಿಂದಲೂ ಸಹ ದೂರಾಗಿ ಬೋರ್ಡಿನವರ ವಶವಾಗಿರುವದು. ಈ ಕ್ಷೇತ್ರವು ಬಹು ಪುರಾತನವಾದುದರಿಂದ ಯಾವತ್ತು ದೇವಾಲಯಗಳು ಬಹು ಶಿಥಿಲಗಳಾಗಿಹೋಗಿವೆ. ಇದನ್ನು ಕಂಡು ಈ ಕ್ಷೇತ್ರದ ಜೀರ್ಣೋದ್ಧಾರಕ್ಕೋಸ್ಕರ ತಾ|| ೫-೬-೨೯ ರಲ್ಲಿ ಕರ್ನೂಲು ಸಬ್ ಜಡ್ಜ್ ಕೋರ್ಟಿನಿಂದ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ. ಈ ಕಮಿಟಿಗೆ **"ಶ್ರೀ ಶೈಲಂ ಮಾನೇಜಮೆಂಟ್ ಬೋರ್ಡ್"** ಎಂಬ ಹೆಸರುಕೊಡಲ್ಪಟ್ಟಿದೆ. ಈ ಕ್ಷೇತ್ರದ ಯಾವತ್ತು ಅಧಿಕಾರವು ಈ ಬೋರ್ಡಿನವರಿಗೆ ವಹಿಸಲ್ಪಟ್ಟಿದೆ. ಈ ಬೋರ್ಡಿಗೆ ಜಾತಿಗೊಬ್ಬೊಬ್ಬರಂತೆ ನಾಲ್ಕು ಜನರನ್ನು ಮೆಂಬರರನ್ನಾಗಿ ತೆಗೆದುಕೊಳ್ಳುವಂತೆ ಏರ್ಪಾಟಾಗಿರುವುದು. ಒಂದು ಸಾರೆ ಚುನಾಯಿಸಿದ ಮೆಂಬರರು 3 ವರ್ಷಗಳವರೆಗೆ ಇರುವರು. ಈ ಸಾರೆ ಸ್ಮಾರ್ತರ ಪತಿಯಿಂದ ಗಾಡೆಸಲ್ಲ ಶೇಷಯ್ಯ, ವೈಶ್ಯರ ಪತಿಯಿಂದ ನಂದ್ಯಾಲಯಲ್ಲೂರು ಎಲ್ಲಯ್ಯಶೆಟ್ಟಿ, ವೀರಶೈವರ ಪತಿಯಿಂದ ಕರ್ನೂಲು ಬಿದುರುಕೋಟಿ ಸರಸಪ್ಪ, ನಾಯಿಡುಗಳ ಪತಿಯಿಂದ ಪಿ. ನಾರಾಯಣಸ್ವಾಮಿನಾಯಿಡು ಈ ನಾಲ್ವರು ಮೆಂಬರರಾಗಿದ್ದಾರೆ. ಕರ್ನೂಲು ಡಿ|| ಕೊಯಿಲಕುಂಟ ಗ್ರಾಮದ ಮ|| ರಾ|| ಪಿ. ರಾಮಯ್ಯ ವಕೀಲ ಎಂಬವರು ಈ ಕಮಿಟಿಗೆ ಪ್ರೆಸಿಡೆಂಟರಾಗಿದ್ದಾರೆ. ಸದ್ಯಃ ಪರ್ವತಪೀಠದ ಹೆಸರಿನಿಂದ ದೇಶಮಧ್ಯದಲ್ಲಿ ಸಂಚರಿಸುತ್ತಿರುವ ಕಾದಲೂರರವರು ಈ ದೇವಸ್ಥಾನವು ತಮ್ಮ ಸ್ವಾಧೀನವಾಯಿತೆಂದು ಜನರ ಮುಂದೆ ಹೇಳುತ್ತಿರುವರಂತೆ! ಇದೇ ಅರ್ಥಗರ್ಭಿತವಾದ ಕೆಲವು ಲೇಖಗಳೂ ಸಹ ಬೇರೆಯವರಿಂದ ಲೋಕಮತ ಸ್ಟಾರ್ ಮೊದಲಾದ ಪತ್ರಿಕೆಗಳಲ್ಲಿ ಈ ಮೊದಲು ಹೊರಟಿರುವವು. ಇದು ಎಷ್ಟೂ ನಿಜವಾದುದಲ್ಲ. ಹೀಗೆ ಹೇಳುವದರಿಂದ ಅರಿಯದ ಜನರು ವಿಶೇಷವಾಗಿ ದುಡ್ಡನ್ನು ಸಹಾಯಮಾಡುತ್ತಾರೆಂದು ಭಾವಿಸಿ ಹೀಗೆ ಹೇಳುವಂತೆ ತೋರುತ್ತದೆ. ಮಲ್ಲಿಕಾರ್ಜುನಸ್ವಾಮಿಯ ದೇವಾಲಯಕ್ಕೆ ಹಣವನ್ನು ಸಲ್ಲಿಸತಕ್ಕ ಭಕ್ತರು ಹಣವನ್ನು ಸೀದಾ ಸರಕಾರದಿಂದ ನಿಯಮಿಸಲ್ಪಟ್ಟಿರುವ ಬೋರ್ಡಿನ ಪ್ರೆಸಿಡೆಂಟರಕಡೆಗೆ ಕಳುಹಿಸಬೇಕಲ್ಲದೆ ಯಾರುಬೇಡಿದರೂ ಕೊಡಕೂಡದು. ಯಾರಾದರೂ ಮಲ್ಲಿಕಾರ್ಜುನಸ್ವಾಮಿಯ ಹೆಸರಿನಿಂದ ದುಡ್ಡನ್ನು ಬೇಡಿದರೆ ಕೂಡಲೆ ಬೋರ್ಡಿನವರಿಗೆ ತಿಳುಹಿಸಬೇಕು. ಅವರು ಸರಕಾರದಿಂದ ತಕ್ಕ ಶಾಸನವನ್ನು ಮಾಡಿಸುವರು. ಮಲ್ಲಿಕಾರ್ಜುನದೇವಾಲಯದ ಹೆಸರಿನಿಂದ ದ್ರವ್ಯವನ್ನು ವಸೂಲು ಮಾಡಲಿಕ್ಕೆ ಯಾರಿಗೂ ಅಧಿಕಾರವಿರುವುದಿಲ್ಲ. ಇದೇ ವಿಷಯದಲ್ಲಿ ಶ್ರೀ ಶೈಲಂ ಮ್ಯಾನೇಜಮೆಂಟ ಬೋರ್ಡಿನ ಪ್ರೆಸಿಡೆಂಟರು ಇಂಗ್ಲೀಷಿನಲ್ಲಿ ಒಂದು ನೋಟಿಸನ್ನು ನಮ್ಮ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದನ್ನು ಮೊದಲನೆಯ ಪುಟದಲ್ಲಿಯೇ ಪ್ರಸಿದ್ಧಿಸಿದ್ದೇವೆ—ಸರ್ವರೂ ಓದಿನೋಡಿ ಅದರಂತೆ ವರ್ತಿಸಬೇಕು. ಈ ವಿಷಯದಲ್ಲಿ ಇನ್ನೊಂದು ಕಮಿಟಿಯು ಕೂಡಲೆ ಏರ್ಪಾಟಾಗತಕ್ಕದ್ದಿದೆ. ಅಲ್ಲಿಯವರೆಗೂ ದೇವರ ಭಕ್ತರು ಯಾರಿಗೂ ಹಣವನ್ನು ಸಲ್ಲಿಸಕೂಡದು. ಸಲ್ಲಿಸುವ ಅಭಿಲಾಷೆಯುಳ್ಳವರು "ಮ|| ರಾ|| ಪಿ. ರಾಮಯ್ಯ ಶ್ರೀಶೈಲಂ ಮ್ಯಾನೇಜಮೆಂಟ ಬೋರ್ಡ್‌ಪ್ರೆಸಿಡೆಂಟ ಪೋ|| ಕೊಯಿಲಕುಂಟ ಡಿ|| ಕರ್ನೂಲ" ಇವರಕಡೆಗೆ ಮನಿಯಾರ್ಡರ ದ್ವಾರಾ ಕಳುಹಿಸಿ ಅವರಿಂದ ರಶೀದಿಯನ್ನು ಪಡೆಯತಕ್ಕದ್ದು. ಈ ಬಗ್ಗೆ ಹೆಚ್ಚಿನ ವಿಷಯಗಳನ್ನು ಇನ್ನು ಮೇಲೆ ಆಗಿಂದಾಗ್ಗೆ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸುತ್ತೇವೆ. ಸಮಸ್ತರೂ ಆ ಪವಿತ್ರ ಕ್ಷೇತ್ರದ ಕಡೆಗೆ ದೃಷ್ಟಿಯನ್ನಿಟ್ಟು ಸಹಾಯಮಾಡಿ ಮಲ್ಲಿಕಾರ್ಜುನ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಅಫ್ಘಾನಿಸ್ಥಾನ.

ಅಫ್ಘಾನಿಸ್ಥಾನದ ಪರಿಸ್ಥಿತಿಯು ಬಹಳ ವಿಷಮಕರವಾಗಿದೆ. ಹಿಂದೆ ಅಲ್ಲಿಯ ಅಮೀರರಾಗಿದ್ದು ಭರತಖಂಡದಲ್ಲಿಯೂ, ಪಾಶ್ಚಾತ್ಯ ರಾಜ್ಯಗಳಲ್ಲಿಯೂ ವಿಶೇಷವಾದ ಆದರಸತ್ಕಾರಗಳನ್ನು ಪಡೆದು ಅಸಾಧಾರಣ ವೈಭವದಿಂದ ಮೆರೆಯುತ್ತಿದ್ದ ಅಮಾನುಲ್ಲಾಖಾನರು ಪದಚ್ಯುತರಾಗಿ ಕೊನೆಗೆ ತಮ್ಮ ಜನರ ಅಂತಃಕಲಹಗಳನ್ನು ನೋಡಿ ಸೈರಿಸಲಾರದೆ ತಮ್ಮ ದೇಶವನ್ನೇ ತ್ಯಜಿಸಿ, ಇಟಲಿಗೆ ಹೋಗುವ ಉದ್ದೇಶದಿಂದ ಪರಿವಾರಸಮೇತರಾಗಿ ಬೊಂಬಾಯಿಗೆ ಬಂದಿರುವರು. ಇಂಡಿಯಾ ಸರ್ಕಾರದವರು ಹಿಂದಿನಂತೆಯೇ ಇವರಿಗೆ ಅತ್ಯಂತ ವಿಶ್ವಾಸಪೂರ್ವಕವಾಗಿ ಬೇಕಾದ ಸೌಲಭ್ಯಗಳನ್ನೆಲ್ಲ ಮಾಡಿಕೊಟ್ಟಿರುವರು. ಅಮಾನುಲ್ಲಾಖಾನರು ಬೊಂಬಾಯಿಯಲ್ಲಿ ತಾಜಮಹಲ್ ಹೋಟಲಿನಲ್ಲಿಳಿದುಕೊಂಡು ಬೊಂಬಾಯಿ ಗೌವರ್ನರ ಆತಿಥ್ಯದಲ್ಲಿರುವರು. ಭಾರತೀಯರು ಅವರಿದ್ದೆಡೆಗೆ ತಂಡತಂಡವಾಗಿ ಹೋಗಿ ಅವರಿಗೂ ಅವರ ಪತ್ನಿಯಾದ ಸೌರಿಯಾರಾಣಿಗೂ ಮರ್ಯಾದಾಪೂರ್ವಕವಾಗಿ ವಿಶೇಷ ಸಹಾನುಭೂತಿಯನ್ನು ತೋರುತ್ತಿರುವರು. ಮೈಸರಾಯರೂ ಸಹ ಅವರಿಗೆ ತಂತೀ ವರ್ತಮಾನವನ್ನು ಕಳುಹಿಸಿ ಅವರ ವಿಷಯದಲ್ಲಿ ತಮಗುಂಟಾದ ಪರಿತಾಪವನ್ನು ಸೂಚಿಸಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿರುವರು. ಅಮಾನುಲ್ಲಾಖಾನರು ನನ್ನ ಸೈನ್ಯಕ್ಕೂ ಬಚ್ಚಾ ಇಸಾಕನ ಸೈನ್ಯಕ್ಕೂ ಯುದ್ಧವು ಸಂಘಟಿಸಲೇ ಇಲ್ಲವೆಂದೂ, ಯುದ್ಧವು ಸಂಘಟಿಸಿದ್ದರೆ ನನ್ನವರು ಸೋಲುವಹಾಗಿರಲಿಲ್ಲವೆಂದೂ, ಅಫ್ಘಾನಿಸ್ಥಾನದಲ್ಲಿ ಒಳಪಂಗಡಗಳು ಹೆಚ್ಚಿ ಅಂತಃಕಲಹದಿಂದ ದೇಶವೆಲ್ಲವೂ ಅಲ್ಲೋಲಕಲ್ಲೋಲವಾಗಿರುವುದರಿಂದ ನಾನು ಸ್ವಾರ್ಥಕ್ಕೋಸ್ಕರ ಒಬ್ಬರಮೇಲೊಬ್ಬರನ್ನು ಎತ್ತಿಕಟ್ಟಿ ರಕ್ತಪ್ರವಾಹವನ್ನುಂಟುಮಾಡಲು ಇಷ್ಟಪಡದೆ ಸರ್ವಪ್ರಜೆಗಳು ಸುಖಿವಾಗಿರಲೆಂದು ಭಾವಿಸಿ ಆ ರಾಜ್ಯವನ್ನೇ ತ್ಯಜಿಸಿ ಹೊರಟುಬಂದಿರುವೆನೆಂದೂ, ಈ ವಿಷಮಪರಿಸ್ಥಿತಿಗೆ ಮುಲ್ಲಾಜನರೇ ಕಾರಣರೆಂದೂ, ಸದ್ಯಃ ನಾನು ಜಯಶಾಲಿಯಾಗದಿದ್ದರೂ ಈ ಮೊದಲು ನಾನು ಕಷ್ಟಪಟ್ಟು ಅಲ್ಲಿಯ ತರುಣರಲ್ಲಿ ಉಂಟುಮಾಡಿರುವ ಭಾವಪರಿವರ್ತನವು ಸ್ವಾರ್ಥಪರರನ್ನೂ ಹಾಗೂ ಕಸಟಿಗಳನ್ನೂ ಬಯಲಿಗೆ ತಂದು ಶಿಕ್ಷಿಸಿ ಸುಧಾರಣೆಯ ಪಥವನ್ನು ಹತ್ತದೆ ಇರಲಾರದೆಂದೂ ಪತ್ರಿಕಾ ಪ್ರತಿನಿಧಿಗಳೊಂದಿಗೆ ಹೇಳಿ ತಮ್ಮ ನಿರ್ಮಲಸ್ವಭಾವವನ್ನು ವ್ಯಕ್ತಪಡಿಸಿರುವರು. ಅವರ ಪತ್ನಿಯೂ ಹಾಗೂ ಅವರ ಸಹೋದರರಾದ ಇನಾಯತುಲ್ಲಾಖಾನರ ಪತ್ನಿಯೂ ಸಹ ಪೂರ್ಣ ಗರ್ಭಿಣಿಯರಾಗಿದ್ದುದರಿಂದ ಅವರು ಯೂರೋಪ ಪ್ರಯಾಣವನ್ನು ಸದ್ಯಃ ನಿಲ್ಲಿಸಿ ಬೊಂಬಾಯಿಯಲ್ಲಿಯೇ ವಾಸವಾಗಿರುವರು. ಸೌರಿಯಾರಾಣಿಯವರು ತಾಜಮಹಾಲ್ ಹೋಟಲಿನಲ್ಲಿ ಗಂಡುಮಗುವನ್ನು ಪ್ರಸವಿಸಿರುವರೆಂದು ನೂತನ ವರ್ತಮಾನವು ಬಂದಿದೆ. ಅತ್ತ ಅಫ್ಘಾನಿಸ್ಥಾನದಲ್ಲಿ ಬಚ್ಚಾ ಇಸಾಕನು ಕಾಬೂಲಿಗೆ ದೊರೆಯಾಗಿ ನಿರಂಕುಶವಾಗಿ ವರ್ತಿಸುತ್ತಿರುವನು. ಈಗೀಗ ಅನೇಕ ಪಂಗಡದವರು ಇವನಿಗೆ ವಿರೋಧಿಗಳಾಗಿರುವರು. ಅಮಾನುಲ್ಲಾಖಾನರು ದೇಶವನ್ನು ಬಿಟ್ಟುಹೋದ ಮೇಲೆ ಅವರ ಬಂಧುವಾದ ಸರದಾರ ಅಲಿ ಅಹಮ್ಮದ್‌ಖಾನನೆಂಬವನು ತಾನೇ ಕಾಂದಹಾರಿಗೆ ಅಮೀರನೆಂದು ಪ್ರಕಟಿಸಿದನು. ಆದರೆ ಅಮಾನುಲ್ಲಾಖಾನರನ್ನು ಹತಾಶರನ್ನಾಗಿ ಮಾಡಿದ ಪ್ರಬಲರಾದ ಗಿಲ್‌ಜಾಯಿ ಪಂಗಡದವರು ಇವನನ್ನೂ ಸಹ ವಿರೋಧಿಸಿದುದರಿಂದ ಇವನು ಬಚ್ಚಾ ಇಸಾಕನ ಕಡೆಯ ಸೈನ್ಯದೊಡನೆ ಹೋರಾಡಿ ಸೋತು ಅವರಿಂದ ಸೆರೆಹಿಡಿಯಲ್ಪಟ್ಟು ಕಾಬೂಲಿಗೆ ಒಯ್ಯಲ್ಪಟ್ಟಿರುವನಂತೆ! ಕಾಂದಹಾರವೂ ಸಹ ಬಚ್ಚಾ ಇಸಾಕನ ವಶವಾದಂತೆ ವರ್ತಮಾನವಿದೆ. ಇತ್ತ ಜನರಲ್ ನಾದಿರ್‌ಖಾನನು ಅಮಾನುಲ್ಲಾಖಾನರು ರಣರಂಗವನ್ನು ಬಿಟ್ಟು ಹಿಂದಿರುಗಿದ ಮೇಲೆ ತಾನೇ ಅಫ್ಘಾನಿಸ್ಥಾನದ ಅಮೀರನೆಂದು ಪ್ರಸಿದ್ಧಪಡಿಸಿ, ದಂಡನ್ನು ಕೂಡಿಸಿಕೊಂಡು ಕಾಬೂಲಿನ ಮೇಲೆ ನುಗ್ಗುವ ಪ್ರಯತ್ನದಲ್ಲಿರುವನು. ಹಣದ ಅಭಾವದಿಂದ ಅವನ ಕಾರ್ಯವು ಕುಂಠಿತವಾಗಿದೆಯಂತೆ! ಬಚ್ಚಾ ಇಸಾಕನು, ನಾದಿರ್‌ಖಾನನು ದೇಶದ್ರೋಹಿಯೆಂದೂ ಹಿಂದಿನ ಅಮೀರ್ ಹಬೀಬುಲ್ಲಾಖಾನರ ವಧೆಗೆ ಕಾರಣರಾದವರಲ್ಲಿ ಇವನೊಬ್ಬನೆಂದೂ ಆದುದರಿಂದ ಇವನನ್ನು ಹಿಡಿದರೆ ಅಥವಾ ಇವನ ತಲೆಯನ್ನು ತಂದುಕೊಟ್ಟರೆ 40000 ರೂ. ಗಳನ್ನು ಕೊಡುವೆನೆಂದೂ, ಇವನ ಸಹೋದರರಲ್ಲಿ ಯಾರನ್ನು ಹಿಡಿದುಕೊಟ್ಟರೂ 10000 ರೂ. ಗಳನ್ನು ಕೊಡುವೆನೆಂದೂ ಪ್ರಕಟಿಸಿರುವನು. ಒಂದುಕಡೆಗೆ ಗಿಲ್‌ಜಾಯಿ ಜನರೂ, ಇನ್ನೊಂದುಕಡೆಗೆ ನಾದಿರ್‌ಖಾನನೂ ಕಾಬೂಲಿನ ಮೇಲೆ ಹೊರಟಿರುವರು. ಜನರಲ್ ಗುಲಾಂ ನಬೀಖಾನನೆಂಬವನು ಬಚ್ಚಾ ಇಸಾಕನನ್ನು ವಿರೋಧಿಸಿ ನಿಂತು ಕಾಬೂಲು ವಶವಾದರೆ ಪುನಃ ಅಮಾನುಲ್ಲಾಖಾನರನ್ನೇ ಬರಮಾಡಿಕೊಂಡು ಅವರಿಗೆ ಆ ಸಿಂಹಾಸನವನ್ನು ಒಪ್ಪಿಸುವುದಾಗಿ ನಿರ್ಧರಿಸಿರುವನು. ಇವನ ರಾಜಭಕ್ತಿಯು ಸ್ತುತ್ಯವಾಗಿದೆ. ಸದ್ಯಃ ಅಫ್ಘಾನಿಸ್ಥಾನವು ಅನಾಯಕವಾಗಿಹೋಗಿದೆ. ವೀರಹೃದಯರೂ, ಸ್ವಾತಂತ್ರ್ಯಾಭಿಲಾಷಿಗಳೂ, ಸುಧಾರಕರೂ ಆದ ಅಮಾನುಲ್ಲಾಖಾನರನ್ನು ಕಳೆದುಕೊಂಡ ಅಫ್ಘಾನ ಜನಾಂಗದವರು ದುರ್ದೈವಿಗಳೆಂದೇ ಹೇಳಬಹುದಾಗಿದೆ.

ಬ್ರಿಟಿಷ್ ಚುನಾವಣೆಗಳ ಫಲಿತಾಂಶ.

ಇಂಗ್ಲೆಂಡಿನಲ್ಲಿ ಈಗ ಲೇಬರ್ ಪಾರ್ಟಿ (ಕಾರ್ಮಿಕ ಪಕ್ಷ) ಯವರು ಪ್ರಭುತ್ವಕ್ಕೆ ಬಂದಿರುವರು. ಇದುವರೆಗೆ ತಾವೇತಾವಾಗಿದ್ದ ಕನ್‌ಸರ್‌ವೇಟಿವ್ ಪಾರ್ಟಿ (ಸಾಂಪ್ರದಾಯಿಕಪಕ್ಷ) ಯವರು ಈ ಸಾರೆಯ ಚುನಾವಣೆಯಲ್ಲಿ ಉರುಳಿಬಿದ್ದರು. ಇದರಿಂದ ಇಂಗ್ಲೆಂಡಿನ ರಾಜಕಾರಣದಲ್ಲಿ ಒಂದು ಬಗೆಯ ಪರಿವರ್ತನವಾಗದೆ ಇರದು: ಲೇಬರ್ ಪಾರ್ಟಿಯವರು ಕೂಲಿಯವರ ಹಿತಚಿಂತಕರಾಗಿರುವರು. ಕನ್‌ಸರ್‌ವೇಟಿವ್ ಪಾರ್ಟಿಯವರು ಧನಿಕರ ಯೋಗಕ್ಷೇಮವನ್ನೇ ಹೆಚ್ಚಾಗಿ ನೋಡುವವರಾಗಿರುವರು. ಈ ಎರಡೂ ಪಕ್ಷಗಳ ಮನೋವೃತ್ತಿಯಲ್ಲಿ ಬಹಳ ವ್ಯತ್ಯಾಸವಿದೆ. ಪೂರ್ವಾಚಾರ ಪರಾಯಣರಾಗಿದ್ದ ಕನ್‌ಸರ್ವೆಟೀವ್ ಪಕ್ಷದವರಲ್ಲಿ ಬೇಜಾರುಹೊಂದಿ ಹೆಚ್ಚು ಜನ ಬ್ರಿಟಿಷ್ ಮತದಾರರು ಲೇಬರ್‌ಪಕ್ಷದವರಿಗೆ ತಮ್ಮ ಸಮ್ಮತಿಯನ್ನು ಕೊಟ್ಟಿರುವರು. ಇದರಿಂದ ಬ್ರಿಟಿಷ್ ಜನರ ಮನೋಗತವು ಈಗೀಗ ಬದಲಾಯಿಸುತ್ತಿರುವುದರ ಕುರುಹು ಒಡೆದು ಕಾಣುವುದು. ಪ್ರಪಂಚದ ಅನೇಕ ರಾಜ್ಯಗಳ

ಜನರು ಬ್ರಿಟಿಷ್ ಚುನಾವಣೆಗಳ ಫಲಿತಾಂಶವನ್ನು ಆತುರದಿಂದ ಎದುರುನೋಡುತ್ತಿದ್ದರು. ಯಾಕೆಂದರೆ ದೊಡ್ಡ ಸಾಮ್ರಾಜ್ಯಕ್ಕೆ ಅಧಿಕಾರಿಗಳಾಗಿರುವ ಬ್ರಿಟಿಷ್‌ಪ್ರಭುತ್ವದವರ ಸಹಕಾರವು ಅಂತರ ರಾಷ್ಟ್ರೀಯ ಉದ್ಯಮಗಳಿಗೆ ಅತ್ಯವಶ್ಯವಾಗಿ ಬೇಕು. ಲೇಬರ್ ಪ್ರಭುತ್ವದವರು ಪ್ರಪಂಚದ ಶಾಂತಿಸ್ಥಾಪನೆಯ ವಿಷಯದಲ್ಲಿ ಮನಮುಟ್ಟಿ ಕೆಲಸಮಾಡುವುದರಲ್ಲಿ ಸಂದೇಹವಿಲ್ಲ. ಇದು ಅನೇಕರಿಗೆ ಸಂತೋಷಕರವಾದುದಾಗಿದೆ. ಆದರೆ ಭಾರತೀಯರು ಮಾತ್ರ ಲೇಬರ್‌ಪಾರ್ಟಿಯವರು ಪ್ರಭುತ್ವಕ್ಕೆ ಬಂದುದನ್ನು ನೋಡಿ ಹಿಗ್ಗುವಹಾಗಿಲ್ಲ. ಯಾಕಂದರೆ ಲೇಬರ್‌ಪಾರ್ಟಿಯವರು ಅಧಿಕಾರ ವಹಿಸಿಕೊಂಡಿದ್ದರೂ ತಮ್ಮ ಮನೋಗತಗಳನ್ನು ನಡೆಯಿಸುವಷ್ಟು ಶಕ್ತಿಯನ್ನು ಇನ್ನೂ ಸಂಪಾದಿಸಿಲ್ಲ. ಕನ್‌ಸರ್‌ವೇಟಿವ್ ಪಕ್ಷದವರ ಕೂಡ ಲಿಬರಲ್‌ಪಾಟಿ (ಉದಾರಪಕ್ಷ) ಯವರು ಸೇರಿಕೊಂಡುಬಿಟ್ಟರೆ ಲೇಬರ್‌ಪಾರ್ಟಿಯವರನ್ನು ಸೋಲಿಸಿಬಿಡುವರು. ಲೇಬರ್‌ಪಾರ್ಟಿಯವರಲ್ಲಿ ಹಲವರಿಗೆ ಭರತಖಂಡಕ್ಕೆ ವಸಾಹತಿ ಪದ್ಧತಿಯ ಸ್ವರಾಜ್ಯವನ್ನು ಕೊಡಬೇಕೆಂಬ ಮನಸ್ಸಿದ್ದರೂ, ಅವರಲ್ಲಿ ಕೆಲವರಿಗೂ ಮತ್ತು ಕನ್‌ಸರ್‌ವೇಟಿವ್ ಲಿಬರಲ್ ಪಾರ್ಟಿಗಳಲ್ಲಿ ಕೆಲವರಿಗೂ ಸದ್ಯಃ ಸ್ವಾತಂತ್ರ್ಯವನ್ನು ಕೊಡಲು ಮನಸ್ಸಿಲ್ಲ. ಅಂದರೆ ಬಹುಪಕ್ಷವು ಭಾರತೀಯರಿಗೆ ವಿರೋಧವಾಗಿರುವದು. ಆದುದರಿಂದ ಪ್ರಭುತ್ವಾಕಾಂಕ್ಷಿಗಳಾಗಿ ಕೂಲಿಕಾರರ ಹಿತಚಿಂತನೆಯನ್ನು ಮಾತ್ರ ಸಾಧಿಸುವುದರಲ್ಲಿ ಆತುರವುಳ್ಳವರಾದ ಲೇಬರ್ ಪಾರ್ಟಿಯವರು, ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡಲು ಹೋಗಿ ಬಹುಪಕ್ಷದವರ ವಿಟಿಗೆ ಸಿಲುಕಿ ತಮ್ಮ ಸ್ಥಾನವನ್ನು ಕಳೆದುಕೊಳ್ಳುವುದಕ್ಕೆ ಎಂದಿಗೂ ಇಷ್ಟಪಡಲಾರರು. ಭಾರತೀಯರು ಇಂಗ್ಲೆಂಡಿನ ನೂತನ ಪ್ರಭುತ್ವದ ಆಶ್ರಯವನ್ನು ಕಾರ್ಯತಃ ಪರೀಕ್ಷಿಸಬೇಕಾಗಿದೆ.

ವರ್ತಮಾನಸಂಗ್ರಹ.

ಕ್ರಾಂತಿಕಾರಕರ ವಿಷಯದಲ್ಲಿ ವಿಚಾರತ್ತಿನಲ್ಲಿ ನಡೆಯತಕ್ಕ ರಾಜದ್ರೋಹದ ಖಟ್ಲೆಯ ಖರ್ಚಿಗಾಗಿ ಹಿಂದೂಸ್ಥಾನ ಸರಕಾರದವರು ೧ ಕೋಟಿ ರೂಪಾಯಿಗಳನ್ನು ಮುಂಜೂರು ಮಾಡಿರುವರಂತೆ! ಇನ್ನು ೧ ಕೋಟಿ ರೂಪಾಯಿಗಳನ್ನು ಮುಂಜೂರು ಮಾಡಿದ್ದರೆ ಚನ್ನಾಗಿತ್ತು. ಕೇಳುವರಾರು?

ಶ್ರೀಮತಿ ಸರೋಜಿನೀದೇವಿಯವರು ಇಂಗ್ಲೆಂಡನ್ನು ಬಿಟ್ಟು ಜರ್ಮನಿಗೆ ತೆರಳಿ ಅಲ್ಲಿ ಈ ದಿವಸ ನೆರವೇರುವ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಲನದಲ್ಲಿ ಭಾಗಿಗಳಾಗಿದ್ದು, ಪ್ರೇಗ್, ವಿಯನ್ನಾ, ಬ್ಯುಡಪೆಸ್ಟ್, ಕಾನ್ಸ್ಟಾಂಟಿನೋಪಲ್ ಮತ್ತು ಡೆಮಾಸ್ಕಸ್ ಎಂಬ ಪಟ್ಟಣಗಳ ಮಾರ್ಗವಾಗಿ ಕೈರೋವಿಗೆ ತಲುಪಿ ಸ್ವದೇಶಕ್ಕೆ ಬರುವವರಾಗಿರುವರು.

ಕಳೆದ ಮೇ ತಿಂಗಳು 27 ರಲ್ಲಿ ಇಂಗ್ಲೆಂಡಿನ ನಿರುದ್ಯೋಗಿಗಳ ಸಂಖ್ಯೆಯು 1132300 ಕ್ಕೆ ಏರಿತು. ಅದೇ ತಿಂಗಳು 13 ರಲ್ಲಿ ಅವರ ಸಂಖ್ಯೆಯು 1104662 ಇದ್ದಿತಂತೆ! ಅಂದರೆ ಎರಡು ವಾರಗಳಲ್ಲಿ ನಿರುದ್ಯೋಗಿಗಳ ಸಂಖ್ಯೆಯು 27638 ಹೆಚ್ಚಿದಂತಾಯಿತು. ಆದರೇನು? ಭರತಖಂಡವಿರುವವರೆಗೆ ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದು ಬ್ರಿಟಿಷರಿಗೆ ಅಷ್ಟೇನೂ ಕಷ್ಟಕರವಲ್ಲ.

ದಿಲ್ಲಿಯಲ್ಲಿ ಒಬ್ಬ ಮನುಷ್ಯನು ತನ್ನ ಮನೆಯ ಮಹಡಿಯ ಮುಂಭಾಗದಲ್ಲಿ ಮಲಗಿದ್ದಾಗ ಒಂದು ಕೋತಿಯು ಬಂದು ಅವನನ್ನು ಹೆದರಿಸಲು, ಅವನು ಗಾಬರಿಯಿಂದ ಓಡಿಹೋಗುತ್ತಿರುವಲ್ಲಿ ಕಾಲುಜಾರಿ ಮಹಡಿಯಿಂದ ಕೆಳಗೆ ಬಿದ್ದು ಮೃತನಾದನಂತೆ! ಅವನು ಒಂದೆರಡು ದಿನಗಳಲ್ಲಿಯೇ ಮದುವೆಯಾಗುವುದರಲ್ಲಿದ್ದನಂತೆ! ಕೋತಿಯ ಚೇಷ್ಟೆಯಿಂದ ಒಂದು ಸಂಸಾರವೇ ನಷ್ಟವಾದಂತಾಯಿತು.

ಕುಂಭಕೋಣದ ಪೋಲೀಸ್ ಸ್ಟೇಷನ್ನಿಗೆ ಸಂಬಂಧಪಟ್ಟ ಒಬ್ಬ ಸಬ್‌ಇನ್ಸ್ಪೆಕ್ಟರನು ಮತ್ತು ೫ ಜನ ಪೋಲೀಸರು ಒಬ್ಬ ಅಪರಾಧಿಯನ್ನು ತಪ್ಪಿಗೆ ಒಪ್ಪಿಕೊಳ್ಳುವ ಹಾಗೆ ಮಾಡಲು ಚಿತ್ರಹಿಂಸೆಗೆ ಗುರಿಪಡಿಸಿ ಕೊಂದುಹಾಕಿದರೆಂಬ ಅಪವಾದನೆಗೆ ಗುರಿಯಾಗಿರುವರು. ಸೀನಿಯರ್ ಅಸಿಸ್ಟೆಂಟ್ ಸರ್ಜನರವರು ಇವರ ಮರಣವು ಶರೀರದ ಅಪಾಯಕರವಾದ ಭಾಗಗಳಮೇಲೆ ಮಾಡಿದ ಹಿಂಸೆಯಿಂದಾಗಿದೆಯೆಂದು ಹೇಳಿರುವರು. ಇಂಥವರಿಗೆ ಸರಕಾರದವರು ಕಠಿಣ ಶಾಸನವನ್ನು ಮಾಡುವದೊಳ್ಳೆಯದು.

ವಿದೇಶೀಯ ಬಟ್ಟೆಗಳ ಬಹಿಷ್ಕಾರದ ಚಳವಳಿಯಿಂದ ಇಂಗ್ಲೆಂಡಿನಲ್ಲಿ ಒಂದು ಬಗೆಯ ಪರಿಣಾಮವುಂಟಾಗಿರುವದೆಂದು ಡಾ|| ಅನಿಬೆಜಂಟಮ್ಮನವರು ತಿಳುಹಿಸುತ್ತಾರೆ. ಲಾಂಕಾಷೈರಿನ ವ್ಯಾಪಾರವು ತೀರ ಕುಗ್ಗಿಹೋಗಿ ಬ್ರಿಟಿಷ್ ವ್ಯಾಪಾರಸ್ಥರು ಭಯಗ್ರಸ್ತರಾಗಿರುವರಂತೆ! ಹಿಂದೂದೇಶಕ್ಕೆ ವಸಾಹತಿ ರಾಜ್ಯಗಳ ಕ್ರಮವನ್ನು ಅನುಸರಿಸಿ ಸ್ವಾತಂತ್ರ್ಯವನ್ನು ಕೊಟ್ಟು, ಹಿಂದೂ ದೇಶೀಯರ ಪ್ರೀತಿವಿಶ್ವಾಸಗಳನ್ನು ಸಂಪಾದಿಸಿ ತಮ್ಮ ಗಿರಾಕಿಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಇಂಗ್ಲೀಷು ಶೆಟ್ಟರುಗಳು ಈಗೀಗ ಹೇಳಲಾರಂಭಿಸಿರುವರಂತೆ!

ಬೊಂಬಾಯಿಯಲ್ಲಿ ಹೊರಡುತ್ತಿರುವ 'ಅಫ್‌ತಾಬ್' ಎಂಬ ಉರ್ದೂ ಪತ್ರಿಕೆಯ ಸಂಪಾದಕರಾದ ಮಿ|| ಗುಲಾಮ್ ಮಹಮ್ಮದ್ ಕೈಸರ್ ಎಂಬವರು ಮುಸಲ್ಮಾನ ಮತಸ್ಥಾಪಕನಾದ ಮಹಮ್ಮದ್ ಪೈಗಂಬರನ ಮೂವರು ಜತೆಗಾರರನ್ನು ದೂಷಿಸಿ ಬರೆದರೆಂಬ ತಪ್ಪಿಗೆ ಒಳಗಾಗಿ ಅರೆಸ್ಟುಮಾಡಲ್ಪಟ್ಟಿರುವರು. ಅವರ ವಿಚಾರಣೆಯು ಮುಂದೆ ನಡೆಯುವುದಾಗಿದೆ. ಹೀಗೆಯೇ ಹಿಂದುಗಳಲ್ಲಿ ಮತಸ್ಥಾಪನಾಚಾರ್ಯರನ್ನು ಕೆಲವು ಭ್ರಷ್ಟರು ನಿಂದಿಸಿ ಬರೆಯುತ್ತಿರುವರು. ಸರಕಾರದವರು ಇಂಥ ದ್ರೋಹಿಗಳಿಗೆ ಶಾಸನವನ್ನು ಮಾಡುವದು ಒಳ್ಳೆಯದಲ್ಲವೇ?

ಸ್ವದೇಶೀ ಮೋಟಾರ್‌ಕಾರುಗಳನ್ನು ತಯಾರಿಸುವಲ್ಲಿ ಪ್ರಥಮಸ್ಥಾನವನ್ನು ಗ್ವಾಲಿಯರ್ ಸಂಸ್ಥಾನವು ಪಡೆದಿರುತ್ತದೆ. ಗ್ವಾಲಿಯರಿನ ಜೀವಾಜಿರಾವ್ ಕಾಟ್ಸ ಮಿಲ್ಲಿನ ವರ್ಕ್‌ಷಾಪಿನಲ್ಲಿ ಒಂದು ಕಾರನ್ನು ತಯಾರಿಸಿರುವರು. ಮ್ಯಾಗ್ನೆಟೊ, ಡೈನ್ಯಾಮೊ, ಮತ್ತು ಕಾರ್‌ಬ್ಯೂರೇಟರ್ ಟ್ಯೂಬುಗಳು ಮತ್ತು ಟೈರುಗಳ ಹೊರತು ಉಳಿದ ಎಲ್ಲಾ ಭಾಗಗಳನ್ನೂ ಕೈಗೆಲಸದಿಂದಲೇ ಮಾಡಿರುವರು. ಈ ಗಾಡಿಯನ್ನು ಮಾಡಲು 11 ತಿಂಗಳುಗಳಾಗಿ 7000 ರೂ. ಗಳು ವೆಚ್ಚವಾದುವಂತೆ! ಇದರಲ್ಲಿ 5 ಜನರು ಕುಳಿತುಕೊಂಡು ಘಂಟೆಗೆ 40 ಮೈಲುಗಳ ಮೇರೆಗೆ ಪ್ರಯಾಣಮಾಡಬಹುದಂತೆ!

ಇಂಗ್ಲೆಂಡಿನಲ್ಲಿ ಕೆಲವು ಕಂಪನಿಯವರು ಮಾತಾಡುವ ಚಲಚ್ಚಿತ್ರಗಳಿಂದೊಡಗೂಡಿದ ಸಿನಿಮಾಪ್ರದರ್ಶನವನ್ನು ಪ್ರಾರಂಭಿಸಿದ್ದಾರೆ. ಈ ಸಿನಿಮಾಗಳನ್ನು ನೋಡಲಿಕ್ಕೆ ಜನರು ವಿಶೇಷವಾಗಿ ಹೋಗುವದರಿಂದ ಸ್ಥಳವು ದೊರೆಯುವದೇ ದುರ್ಲಭವಾಗಿದೆಯಂತೆ! ಒಂದು ದಿನ ಜಾರ್ಜ ಸಾರ್ವಭೌಮರವರ ದ್ವಿತೀಯ ಪುತ್ರರು ನೋಡಲಿಕ್ಕೆಂದು ಹೋಗಿ ಟಿಕಿಟನ್ನು ಬೇಡಲು ದೊರೆಯಲಿಲ್ಲವಂತೆ! ಆ ಮೇಲೆ ನಾವು ಸಾರ್ವಭೌಮರ ಪುತ್ರರೆಂದು ಹೇಳಿದರಂತೆ! ಆದರೂ ಸಹ ದೊರೆಯದೆ ತಿರುಗಿ ಮನೆಗೆ ಹೋದರಂತೆ! ದುಡ್ಡು ಹಾಳುಮಾಡಿಕೊಳ್ಳಲಿಕ್ಕೆ ಇದೊಂದು ಕಾಲವು ಪ್ರಾಪ್ತವಾಯಿತೆಂದು ಹೇಳಬಹುದಾಗಿದೆ. ಮೇಲ್ಕಂಡ ಸಿನಿಮಾಗಳು ಭರತಖಂಡಕ್ಕೆ ಬಂದರಂತೂ ಇಲ್ಲಿಯ ಸರ್ವಸ್ವವನ್ನೇ ಹೀರಿಬಿಡುತ್ತವೆ.

ಇಟಲೀದೇಶದ "ವೆಸೂವಿಯಸ್" ಎಂಬ ಹೆಸರಿನ ಅಗ್ನಿಪರ್ವತವು ಬಹು ರಭಸದಿಂದ ಬೆಂಕಿಯನ್ನು ಸ್ರವಿಸಲು ಪ್ರಾರಂಭಿಸಿದೆ. ಒಂದು ದಿನದೊಳಗಾಗಿ ಲಕ್ಷಾಂತರ ಘನಅಡಿಗಳ ಪ್ರಮಾಣದ ಶಿಲಾಸ್ರವಾಹವು ಬಂದು ಕೆಲವು ಹಳ್ಳಿಗಳನ್ನು ಹಾಳುಮಾಡಿಬಿಟ್ಟಿತು. ಪರ್ವತ ಸಾನು ಪ್ರದೇಶವೆಲ್ಲವೂ ಪುರಾಣಪ್ರಸಿದ್ಧವಾದ ನರಕದ ಗುಂಡಿಯಂತಿರುವುದು. ಧೂಳು ಮತ್ತು ಗಂಧಕದ ಕಣಗಳಿಂದ ಕೂಡಿದ ಹೊಗೆಯು ಭೂಮಿಗೂ ಆಕಾಶಕ್ಕೂ ಏಕಾಕಾರವಾಗಿ ನಿಂತಿರುವುದು. ಅಗ್ನಿಪರ್ವತದ ಭಯಂಕರವಾದ ಗರ್ಜನೆಯ ಮಧ್ಯದಲ್ಲಿ ಆಗಾಗ್ಗೆ ಬೀಳುತ್ತಿರುವ ಮನೆಗಳ ಶಬ್ದವೂ, ಭೂಗರ್ಭದ ಧ್ವನಿಯೂ ಕೇಳಬರುತ್ತಿರುವುವು. ಪರ್ವತದ ಹತ್ತಿರುವ ಗ್ರಾಮಗಳ ಜನರು ಪ್ರಾಣಭಯದಿಂದ ಸಿಕ್ಕಕಡೆಗೆ ಓಡುತ್ತಿರುವರು. ಪರ್ವತ ಶಿಖರದಿಂದ ಹೊರಟ ಹೊಗೆಯು ಉರಿಯುತ್ತಿರುವ ಬೆಂಕಿಯ ಪ್ರಕಾಶದಿಂದ ಕೆಂಪಗೆ ಕಾಣಿಸುತ್ತ ಸುಮಾರು ನೂರು ಮೈಲು ಎತ್ತರವಾದ ಒಂದು ದೊಡ್ಡಸ್ತಂಭದೋಪಾದಿಯಲ್ಲಿರುವುದಂತೆ! ಜ್ವಾಲೆಯು 15,000 ಅಡಿಗಳ ಎತ್ತರವಾಗಿದೆಯಂತೆ!

ಅಸೆಂಬ್ಲಿಯಲ್ಲಿ ಬಾಂಬನ್ನು ಒಗೆದ ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತರ ವಿಚಾರಣೆಯು ದಿಲ್ಲಿಯಲ್ಲಿ ನಡೆಯುತ್ತಿದೆ. ಬ್ಯಾರಿಷ್ಟರ್ ಅಸಾಫ್ ಅಲಿಯವರು ಅಪರಾಧಿಗಳ ಪರವಾಗಿ ವಕಾಲತ್ತನ್ನು ನಡೆಯಿಸುತ್ತಿರುವರು. ಅಪರಾಧಿಗಳು ಕೋರ್ಟಿಗೆ ಬಂದಕೂಡಲೆ "ಕ್ರಾಂತಿಯು ಚಿರಜೀವಿಯಾಗಿರಲಿ" "ಸಾರ್ವಭೌಮಪ್ರತಿಷ್ಠೆಯು ಹಾಳಾಗಲಿ" ಎಂದು ಕೂಗಿಕೊಂಡರಂತೆ! ಪಂಡಿತ ಮದನಮೋಹನಮಾಲವೀಯರೂ, ಡಾ|| ಮುಂಜೆಯವರೂ ಅಪರಾಧಿಗಳಪರ ಸಾಕ್ಷಿ ಹೇಳಲು ಬರುವರಂತೆ! ಭಗತ್‌ಸಿಂಗನೂ ಮತ್ತು ದತ್ತನೂ ಒಂದು ದೊಡ್ಡಸ್ಟೇಟಮೆಂಟನ್ನು ಬರೆದು ಕೋರ್ಟಿಗೆ ಒಪ್ಪಿಸಿರುವರು. ಅದರಲ್ಲಿ ಅವರು, "ನಾವು ಯಾರನ್ನೂ ಕೊಲ್ಲಲು ಉದ್ದೇಶಿಸಿರಲಿಲ್ಲ. ಈಗಿನ ಪ್ರಭುತ್ವದಿಂದ ಮುಂದೆ ಉಂಟಾಗುವ ಅಪಾಯದ ಸೂಚನೆಯನ್ನು ಕೊಡುವ ಅಭಿಪ್ರಾಯದಿಂದಲೇ ನಾವು ಬಾಂಬನ್ನು ಎಸೆದುದು. ಭರತಖಂಡದಲ್ಲಿರತಕ್ಕ ಜನರು ಸಾಮಾನ್ಯವಾಗಿ ದಾರಿದ್ರ್ಯದುಃಖಕ್ಕೀಡಾಗಿ ನರಳುತ್ತಿರುವರು. ಇದಕ್ಕೆ ಈಗಿನ ಅಧಿಕಾರವರ್ಗವೂ ಸ್ವಾರ್ಥಪರರಾದ ಐಶ್ವರ್ಯವಂತರೂ ಕಾರಣರು. ಈಗಿನ ಸಾಮಾಜಿಕ ಪರಿಸ್ಥಿತಿಯು ಪೂರ್ಣವಾದ ಪರಿವರ್ತನೆಯನ್ನು ಹೊಂದಿದಹೊರತು ಗತ್ಯಂತರವಿಲ್ಲ: ಆದುದರಿಂದ ಒಂದು ದೊಡ್ಡಕ್ರಾಂತಿಯನ್ನೇ ಉಂಟುಮಾಡಿ ಕೂಲಿಯವರ ಮತ್ತು ಬಡಜನರ ಪ್ರಭುತ್ವವನ್ನು ಸ್ಥಾಪಿಸುವುದೇ ನಮ್ಮ ಧ್ಯೇಯವು. ಇದರಲ್ಲಿ ನಮ್ಮ ಪ್ರಾಣವನ್ನಾದರೂ ಬಲಿಗೊಟ್ಟು ಕಾದಾಡುವೆವು. ಇತರರನ್ನು ಹಿಂಸಿಸುವುದು ನಮ್ಮ ಕೆಲಸವಲ್ಲ. ಆದರೆ ಒಂದು ಒಳ್ಳೆಯ ಕಾರ್ಯಸಾಧನೆಗಾಗಿ ಹಿಂಸೆಯನ್ನು ಕೊಡುವುದು, ಪಾಪಕರವೆಂದು ನಾವು ಎಣಿಸುವದಿಲ್ಲ. ಈಗಿನ ನಾಗರೀಕತೆಗೆ ಪರಿವರ್ತನ ಭೂತವಾದ ಕ್ರಾಂತಿಯು ಶಾಶ್ವತವಾಗಿ ನಿಲ್ಲಲೆಂಬುವುದೇ ನಮ್ಮ ಆಶಯವು" ಎಂದು ಹೇಳಿರುವರು.

ಸ್ವೀಕಾರ.

ಬಳ್ಳಾರಿ ಡಿ|| ಕೊಟ್ಟೂರು ನಿವಾಸಿಗಳಾದ ಮ|| ರಾ|| ಶಂಕರಶೆಟ್ಟಿ ನಾಗಪ್ಪನವರ ಪುತ್ರಿ ಸೌ|| ಸುಂದರಮ್ಮನನ್ನು ದಾವಣಗೆರೆ ನಿವಾಸಿಗಳಾದ ಮ|| ರಾ|| ಕಾರಡಿಗಿ ಬಸೆಟ್ಟೆಪ್ಪನವರ ತಮ್ಮ ಚಿ|| ಬಸವಲಿಂಗಪ್ಪನಿಗೆ ಕೊಟ್ಟು ನೆರವೇರಿಸಿದ ನಿಶ್ಚಯಕಾರ್ಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯವರಿಂದ ಸಮರ್ಪಿಸಿದ **2** ರೂ. ವಧುವಿನ ಕಡೆಯವರಿಂದ ಸಮರ್ಪಿಸಿದ **1** ರೂ. ಒಟ್ಟು **3** ರೂಪಾಯಿಗಳು ವೇ|| ಮಿ|| ಮ|| ಜಾಗಟಗೇರಿ ದೊಡ್ಡವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಬಾದಾಮಿ ತಾ|| ಗೋವನಕೊಪ್ಪ ಗ್ರಾಮದ ಮ|| ರಾ|| ಮಾಳವಾಡ ಸಂಗನಬಸವಪ್ಪನವರು ತಮ್ಮ ಚಿ|| ಸಂಗಪ್ಪನು ಕಾಯಿಲೆಯಿಂದ ಗುಣವಾದ ಮತ್ತು ಪರೀಕ್ಷೆಯಲ್ಲಿ ಪಾಸಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ **2** ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ವಿಜಾಪುರ ಶಹರನಿವಾಸಿಗಳಾದ ಮ|| ರಾ|| ಹುಚ್ಚಬಸಪ್ಪ ಮೀಳಗಿ ಇವರ ಚಿರಂಜೀವಿಗೆ ಜ್ವರಬರುತ್ತಿದ್ದು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂಪಾಯಿಯು ವೇ|| ಕಪ್ಪರಮಠದ ದುಂಡಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ—

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶಿವಕೀರ್ತನ ಸಮಾರಂಭ, ಬಿಡದಿ.

ಬೆಂಗಳೂರು ಡಿಸ್ಟ್ರಿಕ್ಟ್ ಬಿಡದಿ ಭಕ್ತಮಂಡಲಿಯವರು ತಾರೀಖು 4-6-29 ನೇ ಮಂಗಳವಾರ ಈಶ್ವರಭವನದ ಮುಂಭಾಗದಲ್ಲಿ, ಸುಪ್ರಸಿದ್ಧ ಕೀರ್ತನಕಾರರಾದ ದೊಡ್ಡಬಳ್ಳಾಪುರದ ಸರಸ ಶಿವಕಥಾ ವಿದ್ವಾನ್, ಶಿವಕೀರ್ತನಕವಿಕೇಸರಿ ಶಿವಕೀರ್ತನಕಂಠೀರವ ಕವಿಭೂಷಣ ಇತ್ಯಾದ್ಯನೇಕ ಬಿರುದಾಂಕಿತರಾದ ಶ್ರೀ ಶಿವದೇವ ಶಾಸ್ತ್ರಿಗಳಿಂದ "ಅಂಧಕಾಸುರ ವಧೆ" ಎಂಬ ಮಹಾಶಿವಕಥೆಯನ್ನು ಮಾಡಿಸಿದರು. ಶಾಸ್ತ್ರಿಗಳಿಂದ ನಡೆಯಿಸಲ್ಪಟ್ಟ ಕಥೆಯು, ಶಿವಭಕ್ತಿ, ಗುರುಪ್ರಭಾವ, ನರಜನ್ಮ ಸಾರ್ಥಕತೆ, ಇವುಗಳನ್ನೊಳಕೊಂಡಿತ್ತು. ಸಭೆ ಸೇರಿದ್ದ ಜನಸ್ತೋಮವು, ನವರಸಾಲಂಕಾರಯುಕ್ತವಾದ ಮಹಾಶಿವಕಥಾಮೃತವನ್ನು ಪಾನಮಾಡಿ ಭಗವತ್ಪಾದರ ಜಯಜಯಕಾರದೊಡನೆ ಶಾಸ್ತ್ರಿಗಳವರನ್ನು ನಾನಾ ರೀತಿ ಕೊಂಡಾಡುತ್ತ ತೆರಳಿತು. ಶ್ರೀಜಗದ್ಗುರು ಪಂಚಾಚಾರ್ಯ ಭಗವತ್ಪಾದರು ಇವರಿಗೆ ಚಿರಾಯುವನ್ನೂ ಕೀರ್ತಿಯನ್ನೂ ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ.

ಪ್ರತ್ಯಕ್ಷದರ್ಶಿ.
ಬಿ. ವಿ. ಪ್ರಸನ್ನಯ್ಯ, ಬಿಡದಿ

ನಿದ್ರೆಯ ವಿಷಯದಲ್ಲಿ ಕೆಲವು ಸೂಚನೆಗಳು.

~~([illegible])~~

ದೇಹಶಕ್ತಿಯನ್ನು ಕಾಪಾಡಿಕೊಳ್ಳುವುದಕ್ಕಾಗಲಿ, ಹೆಚ್ಚಿಸುವುದಕ್ಕಾಗಲಿ ನಿದ್ರೆಯು ಅತ್ಯವಶ್ಯವು. ಅವರವರ ದೇಹಾರೋಗ್ಯರಕ್ಷಣೆಗೆ ಬೇಕಾದ ನಿದ್ರೆಯ ಪ್ರಮಾಣದ ವಿಷಯದಲ್ಲಿ ಭಿನ್ನಾಭಿಪ್ರಾಯವಿರಬಹುದು [illegible] ದೇಹದ ಶಕ್ತಿಯನ್ನು ಚೆನ್ನಾಗಿ ಕಾಪಾಡಿಕೊಳ್ಳ[illegible] ನಿದ್ರೆಯು ಅವಶ್ಯವೆಂಬುದರಲ್ಲಿ ಯಾವ ಸಂದೇಹವೂ [illegible]

ಬೇಕಾದಲ್ಲಿ ಹಲವು ದಿವಸಗಳ ಅಥವಾ ವಾರಗಳ ಕಾಲ ಊಟಮಾಡದೆ ಇರಬಹುದು. ಆದರೆ, ಕೆಲವು ದಿನಗಳವರೆಗೆ ನಿದ್ರಾಭಂಗವಾದರೂ ದೇಹದಲ್ಲಿ ಯಾವುದಾದರೂ ಆಯಾಸವು ತೋರದೆ ಬಿಡದು. ಪುರಾತನ ಆಂಗ್ಲೇಯ ಇತಿಹಾಸದಲ್ಲಿ ದೊಡ್ಡ ತಪ್ಪುಗಳನ್ನು ಮಾಡಿದವರಿಗೆ ನಿದ್ರೆಗೆ ಅವಕಾಶಕೊಡದೆ ಕೊಲ್ಲುತ್ತಿದ್ದರೆಂದು ತಿಳಿದುಬರುವುದು. ಚೈನಾದಲ್ಲಿ ಈಗಲೂ ನಿದ್ರಾಭಂಗ ಮಾಡುವುದೇ ಒಂದು ದೊಡ್ಡ ಶಿಕ್ಷೆಯಾಗಿರುವುದು. ಎಲ್ಲಕ್ಕಿಂತಲೂ ಜನರಿಗೆ ಇದರಲ್ಲಿ ಭೀತಿಯೂ ಹೆಚ್ಚಾಗಿರುವುದು.

ಇದರಿಂದ ನಮ್ಮ ವಾಚಕರಿಗೆ ನಿದ್ರೆಯ ಅವಶ್ಯಕತೆಯು ಚೆನ್ನಾಗಿ ತಿಳಿಯಬಹುದು. ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವ ಜನರೂ, ಅವರಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳೂ ಸಾಧಾರಣವಾಗಿ ರಾತ್ರಿ ಬಹಳ ಹೊತ್ತಾದಮೇಲೆ ಮಲಗುವರು. ನಿದ್ರೆ ಮಾಡದೆಯೇ ಇದ್ದರೆ ಹೇಗೆ ಮರಣಕ್ಕೆ ಗುರಿಯಾಗಬೇಕಾಗುವುದೋ, ಹಾಗೆಯೇ ಬಹಳ ಹೊತ್ತಾದಮೇಲೆ ಮಲಗುವುದರಿಂದಲೂ, ತಕ್ಕ ಪ್ರಮಾಣದಲ್ಲಿ ನಿದ್ರೆಮಾಡುವುದರಿಂದಲೂ ದೇಹದಲ್ಲಿ ಯಾವುದಾದರೂ ಬಾಧೆಯು ಕಾಣಿಸುವುದು. ನ್ಯೂರಾಸ್ಥೀನಿಯಾ (Neursthenia) ಮುಂತಾದ ವ್ಯಾಧಿಗಳಿಗೆ ಪಟ್ಟಣವಾಸದ ಜನರು ಬಹಳ ಹೊತ್ತಾದಮೇಲೆ ನಿದ್ರೆಮಾಡುವುದೂ, ಹೆಚ್ಚುಕಾಲ ನಿದ್ರೆಮಾಡದಿರುವುದೂ ಮುಖ್ಯಕಾರಣಗಳಾಗಿವೆ. ಮನುಷ್ಯಸೃಷ್ಟಿಯಲ್ಲಿ ಕಂಡುಬರುತ್ತಿರುವ ನೂತನವಾದ ದೀಪಗಳೂ, ರಾತ್ರಿಕಾಲಗಳಲ್ಲಿ ಹೊತ್ತುಹೋದಮೇಲೆ ನಿದ್ರೆಮಾಡುವುದಕ್ಕೆ ಅವಕಾಶಕೊಡುತ್ತಿರುವುದೂ ಇದರಿಂದ ನರಗಳ ಶಕ್ತಿಯೂ ಕಡಿಮೆಯಾಗುತ್ತಿರುವುದು. ಹಾಗಿಲ್ಲದೆ, ಈಗಿನ ನಾಗರೀಕ ಪ್ರಪಂಚದ ಪೂರ್ವಕಾಲದವರಂತೆಯೂ, ಮತ್ತು ಪಶುಪಕ್ಷಿಗಳಂತೆಯೂ ರಾತ್ರಿಯು ಪ್ರಾರಂಭವಾದೊಡನೆ ಮಲಗಿ, ಸೂರ್ಯೋದಯಕ್ಕೆ ಮುಂಚೆ ಏಳುವ ಅಭ್ಯಾಸವನ್ನು ಆಚರಣೆಗೆ ತಂದರೆ ಪಟ್ಟಣದಲ್ಲಿ ಎಲ್ಲರ ದೇಹಾರೋಗ್ಯವೂ ಹೆಚ್ಚುವುದು.

ನಿಮಗೆ ಅವಶ್ಯವಾದ ನಿದ್ರೆಯ ಪ್ರಮಾಣವೇನು? ಈ ವಿಷಯದಲ್ಲಿ ಸಾಮಾನ್ಯವಾದ ನಿಯಮವಾವುದನ್ನೂ ಹೇಳಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಒಬ್ಬರಿಗೊಬ್ಬರಿಗೆ ವ್ಯತ್ಯಾಸವಿರುವುದು. ಕೆಲವರಿಗೆ ಹೆಚ್ಚುಕಾಲ ನಿದ್ರೆಯು ಅವಶ್ಯವು. ಗ್ರಾಮಫೋನ್ ಮುಂತಾದ ತನ್ನ ನೂತನನಿರ್ಮಾಣಗಳಿಂದ ಪ್ರಪಂಚವನ್ನೇ ವಿಸ್ಮಯಗೊಳಿಸಿರುವ ಥಾಮಸ್ ಎ. ಎಡಿಸನ್ ಎಂಬ ಮಹಾಪುರುಷನು, ಆರೋಗ್ಯಶಾಲಿಯಾಗಿಯೂ, ಬಲಶಾಲಿಯಾಗಿಯೂ ಇರುವನು. ಆತನು ಹೇಳುವುದೇನೆಂದರೆ, "ಈ ಕಾಲದಲ್ಲಿ ಸಾಮಾನ್ಯವಾಗಿ ಪುರುಷರೂ, ಸ್ತ್ರೀಯರೂ ಹೆಚ್ಚುಕಾಲ ನಿದ್ರೆಮಾಡುತ್ತಿರುವರು. ನಾನು ಸುಮಾರು ಮೂರರಿಂದ ಐದು ಘಂಟೆಗಳಕಾಲ ಮಾತ್ರ ನಿದ್ರೆಮಾಡಿ ನನ್ನ ದೇಹಾರೋಗ್ಯವನ್ನು ರಕ್ಷಿಸಿಕೊಂಡಿರುವೆನು." ಅಂಥವರ ವಿಷಯಗಳಲ್ಲಿ ಈ ಅಲ್ಪಕಾಲನಿದ್ರೆಯೇ ಸಾಕಾಗಿರಬಹುದು. ಅದಕ್ಕೆ ಅವರು ವಿಶೇಷ ಶಕ್ತಿಯುಳ್ಳ ಅಂಗಗಳನ್ನು ಹೊಂದಿರುವುದೇ ಮುಖ್ಯಕಾರಣವೆಂದು ಊಹಿಸಬೇಕಾಗುವುದು.

ನಿದ್ರೆಯ ವಿಷಯದಲ್ಲಿ ಸಕಲರಿಗೂ ಅನ್ವಯಿಸುವ ಸಾಮಾನ್ಯನಿಯಮವನ್ನು ವಿಧಿಸುವುದು ಅಸಾಧ್ಯವು. ಒಳ್ಳೆಯ ದೇಹಶಕ್ತಿಯೂ, ಶರೀರ ಸೌಖ್ಯವೂ ವಿಶೇಷವಾಗಿರತಕ್ಕವರಿಗೆ ಇತರರಿಗಿಂತ ಕಡಿಮೆಯಕಾಲದ ನಿದ್ರೆಯೇ ಸಾಕಾಗುವುದು. ಇಂತಹ ಬಲಾಢ್ಯರಿಗೆ ಸಣಿಸಿದ ಭಾಗವು ಬಹಳ ಶೀಘ್ರದಲ್ಲಿಯೇ ಕೂಡಿ, ದುರ್ಬಲರಾದ ಇತರರಿಗಿಂತ ವೇಗವಾಗಿ ಶಕ್ತಿಯು ಬರುವುದು.

ಆದುದರಿಂದ ಒಟ್ಟಿನಲ್ಲಿ ನೋಡಿದರೆ, ಅನೇಕರು ಬಹಳ ಕಡಿಮೆಕಾಲ ನಿದ್ರೆಮಾಡುತ್ತಿರುವರು. ನೀವು ಇಷ್ಟೇ ಘಂಟೆಗಳ ಕಾಲ ನಿದ್ರೆಮಾಡಬೇಕೆಂದು ನಾನು ವಿಧಿಸತಕ್ಕವನಲ್ಲ. ಆದರೆ ಪ್ರತಿಯೊಬ್ಬರೂ ನಿಮ್ಮ ನಿಮ್ಮ ದೇಹಶಕ್ತಿಗೆ ಬೇಕಾದಷ್ಟುಕಾಲ ಸುಖವಾಗಿ ನಿದ್ರೆಮಾಡಬೇಕು. ಬಹಳ ಹೆಚ್ಚುಕಾಲ ನಿದ್ರೆಮಾಡಬೇಕು. ಬಹಳ ಹೆಚ್ಚುಕಾಲ ನಿದ್ರೆಮಾಡಿದವರು ದಡ್ಡರಾಗುವರೆಂದು ಜನರು ಸಾಮಾನ್ಯವಾಗಿ ಹೇಳುವರು. ಆದರೆ ಚೆನ್ನಾಗಿ ಗಾಳಿ ಬೀಸುವ ಪ್ರದೇಶಗಳಲ್ಲಿ ದೀರ್ಘಕಾಲ ನಿದ್ರೆಮಾಡಿದವರು ಯಾರೂ ಎಂದಿಗೂ ಮಡ್ಡಿಗಳಾಗುವುದಿಲ್ಲವೆಂದು ಸಮರ್ಥಿಸುವೆನು. ನಿಮ್ಮ ಮನಸ್ಸಿಗೆ ಏಳಬೇಕೆಂಬ ಆಸೆಯು ತೋರುವವರೆಗೂ ಮಲಗಿದ್ದರೆ, ನಿದ್ರೆಯು ಹೆಚ್ಚುವುದರಿಂದಾಗಲಿ, ಕಡಿಮೆಯಾಗುವುದರಿಂದಾಗಲಿ ತೋರಬಹುದಾದ ಬಾಧೆಗಳಿಗೆ ಗುರಿಯಾಗಬೇಕಾದುದಿಲ್ಲ.

ನಿದ್ರೆಮಾಡುವ ಕಾಲಪ್ರಮಾಣಕ್ಕಿಂತ ನಿದ್ರೆಮಾಡುವ ರೀತಿ ಮುಖ್ಯವು. ಚೆನ್ನಾಗಿ ನಿದ್ರೆಬರಬೇಕಾದರೆ ದೇಹಕ್ಕೆ ವಿಶೇಷ ಆಯಾಸವಾಗಿರಬೇಕು. ನರಗಳಿಗೆ ಆಗುವ ಆಯಾಸಕ್ಕೂ, ದೇಹದಲ್ಲಿ ತೋರುವ ಆಯಾಸಕ್ಕೂ ವ್ಯತ್ಯಾಸವಿರುವುದು. ಸಾಧಾರಣವಾಗಿ ನರಗಳ ಬಾಧೆಯಿರುವಾಗ ನಿದ್ರೆ ಇರುವುದಿಲ್ಲ. ಚೆನ್ನಾಗಿ ನಿದ್ರೆ ಬಾರದಿರುವವರು ಸಾಯಂಕಾಲಗಳಲ್ಲಿ ವೇಗವಾಗಿ ಗಾಳಿಯಲ್ಲಿ ಸಂಚಾರಮಾಡಿದರೆ ಒಳ್ಳೇದು. ಆ ನಡಿಗೆಯ ವೇಗದಿಂದ ದೇಹದಲ್ಲಿ ಆಯಾಸವು ತೋರಬೇಕು.

ಮೂರುನಾಲ್ಕು ಘಂಟೆಗಳಕಾಲ ಚೆನ್ನಾಗಿ ನಿದ್ರೆಮಾಡಿದರೂ, ಸುಖನಿದ್ರೆಯಿಲ್ಲದೆ ಎಂಟುಘಂಟೆಗಳಕಾಲ ಮಲಗಿರುವುದಕ್ಕಿಂತ ಫಲವು ಹೆಚ್ಚು. ಗಾಢನಿದ್ರೆಯಲ್ಲಿ ಮನಸ್ಸಿಗೆ ಪೂರ್ಣವಿಶ್ರಾಂತಿಯುಂಟು. ಸಾಮಾನ್ಯವಾಗಿ ಯಾವ ಬಾಧೆಗಳೂ ತೋರುವುದಿಲ್ಲ. ಚೆನ್ನಾಗಿ ನಿದ್ರೆಯು ಬಾರದಿದ್ದಲ್ಲಿ ಮಿದುಳಿನ ಕೆಲವು ಭಾಗಗಳು ತಮ್ಮ ಕೆಲಸವನ್ನು ಮಾಡುತ್ತಲೇ ಇರುವುವು. ಕನಸು ಕಾಣುವ ಸಂದರ್ಭಗಳಲ್ಲಿ ದೇಹದ ಎಲ್ಲಾ ಭಾಗಗಳೂ ಸಂಪೂರ್ಣವಿಶ್ರಾಂತಿಸುಖವನ್ನನುಭವಿಸುವುದಿಲ್ಲ.

ದೇಹದಲ್ಲಿ ಸಣಿಸಿದ ಭಾಗಗಳು ಪುನಃ ಕೂಡಲು ನಿದ್ರೆಯಲ್ಲದೆ, ಇತರವಿಧಗಳಲ್ಲಿಯೂ ವಿಶ್ರಾಂತಿಯನ್ನು ಹೊಂದಬೇಕು. ಮುಂಸಖಂಡಗಳನ್ನೂ, ಕೈಕಾಲುಗಳನ್ನೂ ಸಡಿಲವಾಗಿ ಸ್ವಾಭಾವಿಕವಾದ ಸ್ಥಿತಿಯಲ್ಲಿಟ್ಟು, ವಿಶ್ರಾಂತಿಸುಖವನ್ನನುಭವಿಸಿದಲ್ಲಿ ಕಡಿಮೆಯ ಕಾಲ ನಿದ್ರೆಮಾಡಿದರೂ ಬಾಧಕವೇನೂ ಇಲ್ಲ.

ನೀವು ಮಲಗುವಸ್ಥಳದಲ್ಲಿ ನಿರ್ಮಲವಾದ ಗಾಳಿಯು ಧಾರಾಳವಾಗಿ ಬೀಸುತ್ತಿರಬೇಕು. ಮಲಗಿರುವಾಗ ಧಾರಾಳವಾಗಿ ಗಾಳಿಯನ್ನು ಎಳೆದುಕೊಂಡು ಬಿಡುವುದಕ್ಕೆ ಅವಕಾಶವಿಲ್ಲದಿರುವುದರಿಂದ, ಆಗ ಗಾಳಿಯು ನಿರ್ಮಲವಾಗಿ ಬೀಸುತ್ತಿರುವುದು ಬಹಳ ಅವಶ್ಯವು. ಕೊಠಡಿಯಲ್ಲಿ ಮಲಗುವ ಅಭ್ಯಾಸವಿದ್ದಲ್ಲಿ ಕೊಠಡಿಯ ಕಿಟಕಿಗಳೆಲ್ಲವನ್ನೂ ಚೆನ್ನಾಗಿ ತೆರೆದು ಮಲಗಬೇಕು. ಮೇಲುಭಾಗವುಮಾತ್ರ ಮುಚ್ಚಿರುವ ಹಜಾರದಲ್ಲಿ ಯಾವಾಗಲೂ ಮಲಗುವ ಅಭ್ಯಾಸವನ್ನು ಮಾಡುವುದುತ್ತಮ. ಅದರಿಂದ ಸ್ವಲ್ಪ ತೊಂದರೆಯಾಗಬಹುದಾದರೂ, ನಿಮ್ಮ ದೇಹದ ಶಕ್ತಿ ಸಾಮರ್ಥ್ಯಗಳು ಹೆಚ್ಚುವುದರಿಂದ ಕ್ರಮಕ್ಕೆ ತಕ್ಕ ಪ್ರತಿಫಲವು ದೊರಕುವುದು.

ಮುಖ್ಯವಾಗಿ ನರಗಳು ಬಲಹೀನವಾಗಿರುವವರು, ಮಲಗಿರುವಾಗ ತಮ್ಮ ದೇಹದಲ್ಲಿ ರಕ್ತಸಂಚಾರವು ಸರಿಯಾಗಿ ನಡೆಯುವಂತೆ ಅವಕಾಶವನ್ನೇರ್ಪಡಿಸಬೇಕು. ಅನೇಕ ಸಂದರ್ಭಗಳಲ್ಲಿ ಚೆನ್ನಾಗಿ ನಿದ್ರೆಬಾರದಿರುವುದಕ್ಕೆ ಮಿದುಳಿನಲ್ಲಿ ರಕ್ತವು ಕಟ್ಟಿಕೊಳ್ಳುವುದು ಕಾರಣವು. ಆ ಬಾಧೆಗಳನ್ನನುಭವಿಸುವವರಿಗೆ ಸಾಮಾನ್ಯವಾಗಿ ಕೈಕಾಲುಗಳು ತಣ್ಣಗಾಗುವುವು. ಆದುದರಿಂದ ಕಾಲುಗಳನ್ನು ಬೆಚ್ಚಗೆಮಾಡಿದರೆ, ಆ ಬಾಧೆಯು ನಿವಾರಣೆಯಾಗಬಹುದು. ಕೆಲವು ಸಮಯಗಳಲ್ಲಿ ಮಲಗುವುದಕ್ಕೆ ಮುಂಚೆ ಒಂದು ಬಟ್ಟಲು ಬಿಸಿ ಹಾಲನ್ನು ಕುಡಿದರೆ, ಸುಖವಾಗಿ ನಿದ್ರೆಯು ಬರುವುದು. ಕಾಲಿನಮೇಲೆ ಬಿಸಿನೀರನ್ನು ಸುರಿದುಕೊಂಡರೂ ಒಳ್ಳೆಯದು. ಮಲಗುವುದಕ್ಕೆ ಅರ್ಧ ಘಂಟೆಗಳಕಾಲ ಮುಂಚೆ ಬಿಸಿನೀರಿನಲ್ಲಿ ಸ್ನಾನಮಾಡುವುದರಿಂದ, ಮಿದುಳಿಗೆ ಹಿತವಾಗುವುದು. ಮತ್ತು ನರಗಳ ಸಂಬಂಧವಾದ ವ್ಯಾಧಿಗಳಿಂದ ನರಳತಕ್ಕವರಿಗೂ ಸುಖವಾಗಿ ನಿದ್ರೆಯು ಬರುವುದು. ನರಗಳು ಬಲಹೀನವಾಗಿರುವವರಿಗೆ ರಾತ್ರಿಯೆಲ್ಲಾ ಗಾಳಿಯ ಸ್ನಾನಮಾಡುವುದರಿಂದ ಗುಣವುಂಟು. ಹೊದ್ದುಕೊಳ್ಳುವ ಬಟ್ಟೆಯನ್ನು ಹಾಸಿಗೆಯಮೇಲೆ ಡೇರಾ ಹಾಕಿದ ರೀತಿಯಲ್ಲಿ ಮೇಲಕ್ಕೆ ಎತ್ತಿ ಕಟ್ಟಬೇಕು. ನರಗಳು ಬಲಹೀನವಾಗಿರುವವರು ಆ ಹಾಸಿಗೆಯ ಮೇಲೆ ಬತ್ತಲೆ ಮಲಗಿಸಿದರೆ, ಆ ಹೊದಿಕೆಬಟ್ಟೆಯ ಭಾರವು ಮೈಮೇಲೆ ಬೀಳದೆ, ಗಾಳಿಯು ಧಾರಾಳವಾಗಿ ಬೀಸಲು ಅವಕಾಶವಾಗುವುದು. ಆ ಬಟ್ಟೆಯು ತಲೆಹೊರತು ಬೇರೆ ಎಲ್ಲಾ ಭಾಗಗಳನ್ನೂ ಮುಚ್ಚುವಂತಿರಬೇಕು.

ಆ ಹೊದಿಕೆಯ ಬಟ್ಟೆಯು ವಿಶೇಷವಾಗಿ ಭಾರವಿಲ್ಲದೆ ಇರಬೇಕು. ಉಣ್ಣೆಯ ಬಟ್ಟೆಗಳು ಹಗುರವಾಗಿದ್ದು ದೇಹವನ್ನು ಶಾಖವಾಗಿಡುವುದರಿಂದ ಅವೇ ಉತ್ತಮವಾದವು. ಹತ್ತಿಯ ಬಟ್ಟೆಗಳು ಸಾಮಾನ್ಯವಾದುವು. ಗರಿಯ ಹಾಸಿಗೆಯೂ, ತಲೆದಿಂಬು ಪ್ರಯೋಜನಕಾರಿಗಳಲ್ಲ. ಶೀತಕಾಲದಲ್ಲಿ ಮೈಗೆ ಬೇಕಾಗದಂತೆ ಸಾಧ್ಯವಾದಷ್ಟು ಕಡಿಮೆಯ ಬಟ್ಟೆಗಳನ್ನೇ ಉಪಯೋಗಿಸಬೇಕು.

ಮಲಗುವಾಗಲೆಲ್ಲಾ ತಲೆದಿಂಬುಗಳನ್ನು ಉಪಯೋಗಿಸುವುದು ಅವಶ್ಯವು. ಮೇಲುಮುಖವಾಗಿ ಮಲಗಿರುವಾಗ ಮಾತ್ರ ತಲೆದಿಂಬನ್ನುಪಯೋಗಿಸುವುದರಿಂದ, ದೇಹವು ಮೇಲಕ್ಕೆತ್ತರಿಸಿ, ಹೆಗಲು ಜೋಲುವಂತಾಗುವುದು. ಮಗ್ಗುಲಾಗಿ ಮಲಗಿದಾಗಲಿ, ಸ್ವಲ್ಪ ಕೆಳಮುಖವಾಗಿ ಮಲಗಿದರಾಗಲಿ ತಲೆದಿಂಬು ಬಹಳ ಪ್ರಯೋಜನಕಾರಿಯು.

ಸುಖವಾಗಿ ನಿದ್ರೆಮಾಡಲು ಈ ಕೆಳಗೆ ಸೂಚಿಸಿದ ರೀತಿಯಲ್ಲಿ ಮಲಗುವುದೊಳ್ಳೆಯದು. ನಿಮ್ಮ ಎದೆಯನ್ನು ಸ್ವಲ್ಪ ಕೆಳಮುಖವಾಗಿ ಚಾಚಿ, ಎದೆಯಮೇಲೆ ಮತ್ತು ಮೊಳಕೈಮೇಲೆ ಭಾರವಿಟ್ಟು ಇನ್ನೊಂದು ಕೈಯನ್ನು ಸೊಂಟದ ಕೆಳಗೆ ಇಟ್ಟುಕೊಳ್ಳಿರಿ. ಮೊಳಕಾಲನ್ನು ಮಾತ್ರ ಸ್ವಲ್ಪ ಮೇಲಕ್ಕೆಟ್ಟುಕೊಳ್ಳಬೇಕು. ಈ ರೀತಿಯಲ್ಲಿ ಮಲಗುವದರಿಂದ, ಮೈಯ ಕೆಳಭಾಗವೆಲ್ಲವೂ ಸಡಿಲವಾಗಿ ನೇತುಹಾಕಿದಂತಾಗುವುದು. ಹೊಟ್ಟೆಮುಂತಾದ ಭಾಗಗಳು ತಮ್ಮ ಭಾರದಿಂದ ಸ್ವಲ್ಪ ಕೆಳಕ್ಕಿಳಿದು, ಶ್ವಾಸಕೋಶವು ವಿಸ್ತರಿಸಿ, ಗಾಳಿಯು ತುಂಬಿಕೊಳ್ಳಲು ಅವಕಾಶವನ್ನು ಕಲ್ಪಿಸುವುದು. ಇದರಿಂದ ಮಲಗಿದವರು ರಾತ್ರಿಯೆಲ್ಲಾ ವಿಶೇಷವಾಗಿ ಗಾಳಿಯನ್ನು ಸೇವಿಸಲು ಅವಕಾಶವಾಗುವುದು. ಸ್ವಲ್ಪವೂ ತೊಂದರೆಯಿಲ್ಲದೆ ಪಕ್ಕಗಳನ್ನು ಬದಲಾಯಿಸಿಕೊಳ್ಳಬಹುದು. ಹೃದಯಕೋಶವು ದುರ್ಬಲವಾಗಿರತಕ್ಕವರಿಗೆ, ಆ ಪಕ್ಕವಾಗಿ ಮಲಗಿದರೆ ಸ್ವಲ್ಪ ನೋವಾಗಬಹುದು. ಅಂಥವರು ಎಡಭಾಗವಾಗಿ ಮಲಗಬಾರದು.

"ಅರ್ಧರಾತ್ರಿಗೆ ಮುಂಚೆ ಒಂದು ಘಂಟೆಯಕಾಲ ನಿದ್ರೆಮಾಡುವುದು, ಅರ್ಧರಾತ್ರಿಯು ಕಳೆದಮೇಲೆ ಎರಡು ಘಂಟೆಗಳ ಕಾಲ ನಿದ್ರೆ ಮಾಡುವುದಕ್ಕೆ ಸಮಾನವು." ಎಂಬೀವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವುವು. ಸುಖವಾಗಿ ನಿದ್ರೆ ಬಂದಲ್ಲಿ ಯಾವಾಗ ನಿದ್ರೆಮಾಡಿದರೂ ಒಂದೇ ಫಲವನ್ನು ಕೊಡುವುದೆಂದು ಹಲವರು ಹೇಳುವರು. ಇದು ಸರಿಯಾದ ಅಭಿಪ್ರಾಯವೆಂದು ತೋರುವುದಿಲ್ಲ. ರಾತ್ರಿ ಹೊತ್ತಿಗೆಮುಂಚೆ ಮಲಗುವುದರಿಂದ ದೇಹದ ಆರೋಗ್ಯವು ಹೆಚ್ಚಿ, ದೇಹಸೌಂದರ್ಯವು ವೃದ್ಧಿಯಾಗುವದೆಂದು ನಮ್ಮ ಪೂರ್ವಿಕರು ಹೇಳುವ ಅಭಿಪ್ರಾಯವೇ ಸಾಧುವಾದುದೆಂದೂ ತೋರುವುದು.

ಒಟ್ಟಕ್ಕೆ ಆಲೋಚಿಸಿ ನೋಡಿದರೆ ಅರ್ಧರಾತ್ರಿಗೆ ಮುಂಚೆ ಒಂದು ಘಂಟೆಯ ಕಾಲವು ಅರ್ಧರಾತ್ರಿಯು ಕಳೆದಮೇಲೆ ಎರಡು ಘಂಟೆಗಳ ಕಾಲಕ್ಕೆ ಸಮಾನವು. ಅರ್ಧರಾತ್ರಿಯು ಕಳೆದಮೇಲೆ ಮಲಗಿದರೆ ನಿದ್ರೆಯ ಫಲವು ಸಂಪೂರ್ಣವಾಗಿ ದೊರಕಲಾರದು. ಪ್ರಾತಃಕಾಲಕ್ಕಿಂತ ರಾತ್ರಿಯ ಕಾಲದಲ್ಲಿ ನಿದ್ರೆಮಾಡುವುದರಿಂದ ಹೆಚ್ಚು ವಿಶ್ರಾಂತಿ ತೋರುವುದು. ಇದಕ್ಕೆ ನಿದರ್ಶನವಾಗಿ ರಾತ್ರಿ ಬಹಳಹೊತ್ತು ಕಳೆದಮೇಲೆ ಮಲಗತಕ್ಕವರು, ಹಗಲುಹೊತ್ತು ಬಹಳಕಾಲ ನಿದ್ರೆಮಾಡಿ ಆ ನಿದ್ರಾಭಂಗದ ಬಾಧೆಯನ್ನು ತೀರಿಸಿಕೊಳ್ಳುವರು. ಪ್ರಾಣಿಗಳಲ್ಲಿ ರಾತ್ರಿಚರ ಪ್ರಾಣಿಗಳಿರುವುವು. ಮನುಷ್ಯಜಾತಿಯೂ ಸ್ವಲ್ಪಮಟ್ಟಿಗೆ ಆ ರಾತ್ರಿಸಂಚಾರದ ಅಭ್ಯಾಸಗಳನ್ನು ಮಾಡಿಕೊಂಡಿರುವುದು. ಆದರೆ ಸಾಮಾನ್ಯವಾಗಿ ಎಲ್ಲಾ ಪ್ರಾಣಿಗಳೂ, ಮನುಷ್ಯರೂ, ಪುರಾತನಕಾಲದಿಂದ ನಿದ್ರೆಮಾಡುವ ಪದ್ಧತಿಗಳನ್ನಿಟ್ಟುಕೊಂಡಿರುವರು. ಆ ಪದ್ಧತಿಗಳನೆಲ್ಲ ಸಂಪೂರ್ಣವಾಗಿ ಬದಲಾಯಿಸುವುದರಿಂದ ನಿಮ್ಮ ನಿದ್ರೆಯಿಂದಾಗುವ ಪ್ರಯೋಜನವೂ ಬಹಳಮಟ್ಟಿಗೆ ಕಡಿಮೆಯಾಗಬಹುದು. ಅದಕ್ಕೆ ಬೆಳಕೇ ಕಾರಣವಾಗಿದ್ದರೂ ಇರಬಹುದು. ಬೆಳಕಿನಲ್ಲಿ ಉದ್ಯೋಗಶಕ್ತಿಯನ್ನೂ, ಅಭಿಲಾಷೆಯನ್ನೂ ಹೆಚ್ಚಿಸುವ ಶಕ್ತಿಯಿರುವುದು. ಕತ್ತಲೆಯಲ್ಲಿ ವಿಶ್ರಾಂತಿಗನುಕೂಲವಾದ ಗುಣವಿರುವುದು. ಬೆಳಕಿನಲ್ಲಿರುವ ಈ ಗುಣವೇ ಅರ್ಧರಾತ್ರಿಗೆ ಮುಂಚೆ ಮಾಡುವ ನಿದ್ರೆಯ ಗುಣವು ಹೆಚ್ಚುವುದಕ್ಕೆ ಕಾರಣವಾಗಿದೆಯೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. "ಹೊತ್ತಿಗೆಮುಂಚೆ ಮಲಗಿ ಹೊತ್ತಿಗೆ ಮುಂಚೆ ಏಳುವವರಿಂದ ಆರೋಗ್ಯವೂ, ಐಶ್ವರ್ಯವೂ, ಬುದ್ಧಿಯೂ ಹೆಚ್ಚುವವೆಂಬ" ವಾಕ್ಯವನ್ನು ಎಲ್ಲರೂ ಕೇಳಿರುವಿರಿ. ಆ ನಿಯಮದಂತೆ ಐಶ್ವರ್ಯವೂ, ಬುದ್ಧಿಯೂ, ಹೆಚ್ಚದಿದ್ದರೂ, ಆರೋಗ್ಯವೂ ಸೌಂದರ್ಯವೂ ಹೆಚ್ಚುವವು ಖಂಡಿತ.

ಆರೋಗ್ಯ ಚಂದ್ರಿಕೆ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮನಸಿನಲ್ಲಿ ಮಿಸ್ತಿಲ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸ್ ಕೊಡುವೆವು. ನಮ್ಮ ಅಡ್ರೆಸ್:— [10]

ಎಂ. ಎಸ್. ಗಂಗಂಣ ಮತ್ತು ಲೋಕಂಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!

ಹಿಮಾಲಯನ್ ಅಷ್ಟವರ್ಗ ಔಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಪೋಷಣ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರ್ಯರುಗಳು "ಗೃಹಮಾತೆ" ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಿಯುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಅಮ್ಲವಾತ, ಅಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲುಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಅದ್ದರಿಂದ ಈ ಔಷಧಾಲಯಕ್ಕೆ "ಅಷ್ಟವರ್ಗೌಷಧಾಲಯ" ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[10] 848. Ganjipet Poona City.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ಕ್ಕೆ ೩ ಆಣೆ. ೫೦ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಶಿಖೋಪನಿಷತ್.

ವೇದಗಳ ಶಾಖೆಗಳೇ ಉಪನಿಷತ್ತುಗಳ ರೂಪದಿಂದ ಪ್ರಕಾಶಿಸುತ್ತಿರುವವು. ಉಪನಿಷತ್ತುಗಳು ಒಂದಲ್ಲ, ಎರಡಲ್ಲ ಸಾವಿರಾರು ಇರುವವು. ಅದರಲ್ಲಿ ಕಾಲವೈಚಿತ್ರ್ಯದಿಂದ ಎಷ್ಟೋ ಉಪನಿಷತ್ತುಗಳು ಲುಪ್ತಗಳಾಗಿವೆ. ನಿರ್ಣಯಸಾಗರ ಮುದ್ರಣಾಲಯದಲ್ಲಿ ಮಾತ್ರ 120 ರ ವರೆಗೆ ಮಾತ್ರ ಉಪನಿಷತ್ತುಗಳು ಮುದ್ರಿಸಲ್ಪಟ್ಟಿವೆ. ಈ ಉಪನಿಷತ್ತುಗಳು ವೈದಿಕಸಿದ್ಧಾಂತವನ್ನು ಸ್ಥಿರಗೊಳಿಸುವವು. ಸದ್ಯಃ ದೊರೆಯುವ ಕೆಲವು ಉಪನಿಷತ್ತುಗಳಲ್ಲಿ ವೀರಶೈವ ಸಿದ್ಧಾಂತವು ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟಿರುವದು. ಆದರೆ ಈ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಉಪನಿಷತ್ತುಗಳು ಅನೇಕವಿದ್ದಾಗ್ಯೂ ಆ ಉಪನಿಷತ್ತುಗಳ ಹೆಸರುಗಳನ್ನು ನಮ್ಮ ಪ್ರಾಚೀನ ಗ್ರಂಥಕಾರರು ತೆಗೆದುಕೊಂಡಿದ್ದಾಗ್ಯೂ ಅವು ಇಲ್ಲಿಯವರೆಗೂ ಉಪಲಬ್ಧವಾಗಿರಲಿಲ್ಲ. ವೀರಶೈವಮತದ ಸುದೈವದಿಂದ ಸದ್ಯಃ ಸಿದ್ಧಾಂತಶಿಖೋಪನಿಷತ್ ಎಂಬ ಹೆಸರಿನ ಉಪನಿಷತ್ತು ಲಬ್ಧವಾಗಿರುವದು. ಈ ಉಪನಿಷತ್ತಿನಲ್ಲೆಲ್ಲಾ ವೀರಶೈವ ಸಿದ್ಧಾಂತವೇ ತುಂಬಿ ತುಳುಕುತ್ತಿರುವದು. ಇದರ ಯೋಗ್ಯತೆಗೆ ಎಷ್ಟು ಬೆಲೆ ಕೊಟ್ಟರೂ ತೀರದ್ದಾಗಿದೆ. ಗ್ರಂಥವು ಚಿಕ್ಕದಾದರೂ ಯೋಗ್ಯತೆಯು ಬಹು ದೊಡ್ಡದಾಗಿದೆ. ಈ ಗ್ರಂಥವನ್ನು ದೇವನಾಗರಿ, ಕನ್ನಡ ಈ ಎರಡು ಲಿಪಿಗಳಲ್ಲಿಯೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾಗಾರದವತಿಯಿಂದ ಪ್ರಿಂಟ್ ಮಾಡಿಸಿದ್ದಾಗಿದೆ. ವೀರಶೈವರೆನಿಸುವ ಪ್ರತಿಯೊಬ್ಬರ ಮನೆಯಲ್ಲಿಯೂ ಈ ಗ್ರಂಥವು ಪ್ರಕಾಶಿಸುತ್ತಿರಬೇಕು. ಬೆಲೆ 4 ಆಣೆ. 4 ಪ್ರತಿಗಳಿಗಿಂತಲೂ ಕಡಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು 5 ಆಣೆ ಸ್ಟ್ಯಾಂಪನ್ನು ಕಳುಹಿಸಬೇಕು.

ಅಧ್ಯಾಪಕ,
ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ,
ಮಹಾಂತಿನಮಠ, ಚಿಕ್ಕಪೇಟೆ ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಸಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ, ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಳಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂಧ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಶಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಣೀಕಟ್ಟಿಗೆ, ಶತಾವರಿ, ಸಕೀಲಮಗಜ, ಅಲದಹಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಪಿಶ್ಯಾ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [21]

ಪತ್ತ—ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅಮೃತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯ ಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಚ್ಚಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವಹಿ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚು, ಹೋಮಿಯಾಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಶ್ಮಗಳೂ, ಪ್ರೇಮಕೇಸುಗಳೂ, ಇತರ ಪ್ರಸಿದ್ಧ ಫರಂಗಳೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [45]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನರ ಭಾಷಣ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಆಯವ್ಯಯದ ಅಧಿವೇಶನವು ಕಳೆದ ೧೦ ನೇ ತಾರೀಖು ಸೋಮವಾರ ಮೈಸೂರು ಜಗನ್ಮೋಹನ ಪ್ರಾಸಾದದಲ್ಲಿ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ದಿವಾನ್ ಸಾಹೇಬರು ಮಾಡಿದ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಟ್ಟಿರುವೆವು.

ಮೈಸೂರು ಸಂಸ್ಥಾನದ ಆಡಳಿತದಲ್ಲಿ ಕಳೆದ ಮೂರು ವರ್ಷಗಳು ಸ್ಮರಣೀಯವಾಗಿವೆ. ಏಕೆಂದರೆ ಈ ಅವಧಿಯಲ್ಲಿ ನಮ್ಮ ಸಂಕುಚಿತಾವಸ್ಥೆಯು ಕಳೆದು, ಅಭಿವೃದ್ಧಿ ಮತ್ತು ಸಮಾಧಾನದ ದಾರಿಯನ್ನು ನಾವು ಸೇರಿರುವೆವು. ನಾನೀ ಕೆಲಸವನ್ನು ಕೈಕೊಂಡಾಗ ಅನೇಕ ಅಭಿವೃದ್ಧಿ ಕಾರ್ಯಗಳು ಹಾಗೆಯೇ ಉಳಿದಿತ್ತು; ಇಲಾಖೆಗಳು ಬಡಾವಣೆಯಾಗಬೇಕಾಗಿತ್ತು; ಖಜಾನೆಯು ಬರಿದಾಗಿತ್ತು; ರೆವಿನ್ಯೂ ಹುಟ್ಟುವಳಿಯು ತೃಪ್ತಿಕರವಾಗಲಿಲ್ಲ. ಆದಾಗ್ಯೂ, ನಾನು ಸಭೆಯ ಮುಂದಿಟ್ಟ ಆಯವ್ಯಯಗಳ ಅಂದಾಜಿನ ವಿಷಯವಾಗಿ ಸಂಪೂರ್ಣವಾದ ಆಶಾಭರವಸೆಯಿಂದ ಕೂಡಿದ್ದೆನು. ಒಂದುವೇಳೆ ಅದರಲ್ಲಿ ವಿಫಲನಾಗುವೆನೋ ಎಂಬ ಭಯದಿಂದ ಅನೇಕವೇಳೆ ನಾನು ಕಾತರನಾಗಿರುವೆನು. ನೀವೂ ಕೂಡಾ ಈ ವಿಷಯವಾಗಿ ನನಗೆ ಸಹಾನುಭೂತಿಯನ್ನು ತೋರಿಸಿ ನನ್ನ ಒಪ್ಪಿಗೆಯನ್ನು ಕೊಟ್ಟಿರುವಿರಿ.

ಈಗಲೂ ನಾನು ಆಶಾಭರವಸೆಗಳಿಂದ ಕೂಡಿದವನಾಗಿದ್ದೇನೆ. ಮುಂದಿನ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಹಾಯಕವಾದ ಕೆಲವು ಏರ್ಪಾಟುಗಳನ್ನು ಶಾಶ್ವತ ಮಾಡುವುದರಿಂದ ಆ ಭರವಸೆಯನ್ನು ಸ್ಥಿರಮಾಡುತ್ತೇನೆ. ಇದರಿಂದ ಸ್ವಲ್ಪಮಟ್ಟಿಗೆ ನಿಮ್ಮ ಮತ್ತು ಸರ್ಕಾರದ ಕೈಕಟ್ಟಿದಂತಾಗಬಹುದು. ಆದರೂ ಪ್ರತಿವರ್ಷವೂ ಒಂದು ಗೊತ್ತಾದ ಆದಾಯವಿಲ್ಲದೆ ಯಾವ ಇಲಾಖೆಯೇ ಆಗಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದಿಲ್ಲ.

ಈ ವಿಚಾರವನ್ನು ಪರ್ಯಾಲೋಚಿಸುವ ಪೂರ್ವ, ಸಂಸ್ಥಾನದ ನಿವ್ವಳ ಆಸ್ತಿ ಮತ್ತು ದೇಣಿಯನ್ನು ಗೊತ್ತುಮಾಡಿಕೊಳ್ಳಬೇಕು. ೧೯೩೬ ರಲ್ಲಿ ಸಂಸ್ಥಾನದ ಒಟ್ಟು ಆಸ್ತಿಯು ೧೧.೪ ಕೋಟಿ ರೂಪಾಯಿಯಾಗಿದ್ದಿತು. ೧೯೪೦ ನೇ ಇಸ್ವಿಯ ಜೂನ್ ಅಖೈರಿನಲ್ಲಿ ಈ ಆಸ್ತಿಯ ಬೆಲೆಯು ೧೪.೧ ಕೋಟಿಯಾಗುವುದೆಂದು ನಿರೀಕ್ಷಿಸಲಾಗಿದೆ. ಇದಲ್ಲದೆ ಮೂರುವರ್ಷಗಳ ಕೆಳಗೆ ಸರ್ಕಾರವು ಆರುಕೋಟಿ ನಗದು ಠೇವಣಾತಿಯನ್ನಿಟ್ಟಿತ್ತು. ೪೦ ನೇ ಇಸ್ವಿಯ ಅಂತ್ಯದಲ್ಲಿ ಈ ಮೊಬಲಗು ಹಾಗೆಯೇ ಉಳಿಯುವುದು. ಇದಕ್ಕೆ ಪ್ರತಿಯಾಗಿ ನಮಗೆ ೩ ವರ್ಷಗಳ ಕೆಳಗೆ ೧೧.೧೬ ಕೋಟಿ ದೇಣಿಯಿದ್ದದ್ದು ೧೯೪೦ ಜೂನ್ ತಿಂಗಳಲ್ಲಿ ೧೩.೯೪ ಕೋಟಿಯಾಗಿರುವುದು. ಈ ಲೆಕ್ಕಾಚಾರದಿಂದ ನಗದು ಮತ್ತು ಠೇವಣಾತಿಗಳನ್ನು ಕಡಿಮೆಮಾಡದೆ ಸಂಸ್ಥಾನದ ನಿವ್ವಳ ಆಸ್ತಿಯನ್ನು ೩ ಕೋಟಿ ಹೆಚ್ಚಿಸಿದೆವೆಂಬುದು ವ್ಯಕ್ತವಾಗುವುದು.

ಮುಂದೆ ಮಾಡಲಿರುವ ಬಡಾವಣೆ ಶಾಶ್ವತ ಏರ್ಪಾಟುಗಳು

ಕಳೆದ ಮೂರುವರ್ಷಗಳಿಂದ ಆಯವ್ಯಯಗಳು ಸಮನಾಗಿದ್ದರೂ, ಬಡಾವಣೆ ಕಾರ್ಯಗಳಿಗೆ ಒಂದೇ ರೀತಿಯಾಗಿ ಹಣವನ್ನು ಒದಗಿಸುತ್ತಿರುವುದು ಗೊತ್ತಾಗುತ್ತದೆ. ಈ ಬಡಾವಣೆ ಕಾರ್ಯಗಳು ತಡೆಯಿಲ್ಲದೆ ನಡೆಯಲು ಆಯಾ ಇಲಾಖೆಗಳು ಪ್ರತಿವರ್ಷವೂ ತಪ್ಪದೆ ಎಷ್ಟು ಹಣವನ್ನು ಹೊಂದಬಹುದೆಂಬುದನ್ನು ಕೂಡಲೇ ನಿಖರವಾಗಿ ತಿಳಿಸಲು ಮಾಡಿರುವ ಏರ್ಪಾಟುಗಳನ್ನು ಇಲ್ಲಿ ತಿಳಿಸುತ್ತೇನೆ.

(೧) ಸರ್ಕಾರದವರು ಈಗಾಗಲೇ ಏರ್ಪಡಿಸಿರುವ ರಸ್ತೆ ನಿಧಿಗೆ ಟೋಲ್‌ಗೇಟುಗಳ ಆದಾಯವನ್ನು ಸೇರಿಸುವುದಲ್ಲದೆ ರಸ್ತೆ ಮತ್ತು ಸೇತುವೆಗಳ ಖರ್ಚಿಗೆ ಪ್ರತಿವರ್ಷವೂ ೧೧ ಲಕ್ಷ ಹಣವು ಸಿಗಲು ಬೇಕಾದ ಗ್ರಾಂಟನ್ನು ಸರ್ಕಾರವು ಕೊಡುತ್ತದೆ. ಈ ವಾರ್ಷಿಕ ಗ್ರಾಂಟುಗಳು ಆಯಾ ವರ್ಷದಲ್ಲಿ ಖರ್ಚಾಗದೆ ಉಳಿದರೆ ಅದನ್ನು ವಾಪಸು ತೆಗೆದುಕೊಳ್ಳದೆ ಮುಂದಿನ ಸಾಲಿನ ಖರ್ಚಿಗೆ ಕಾದಿಡಲಾಗುವುದು.

(೨) ನೀರಾವರಿ ಬಡಾವಣೆ ಕಾರ್ಯಗಳಿಗಾಗಿ ಹೆಚ್ಚು ಹಣವು ಕೊಡಲಾಗಿರುವುದು. ಆದರೂ ರೈತನ ಅಭಿವೃದ್ಧಿಗೆ ಅದು ಸಾಲದೆಂದು ಕಾಣುವುದರಿಂದ, ಮುಖ್ಯ ಕೆಲಸಗಳಿಗೆ ಕೊಡಲ್ಪಡುವ ಮೂಲಧನವಲ್ಲದೆ, ಪ್ರತಿವರ್ಷವೂ ಜನರಲ್ ರೆವಿನ್ಯೂ ಬಾಬಿನಿಂದ ೧೦ ಲಕ್ಷ ರೂ. ಗ್ರಾಂಟು ಕೊಡಲಾಗುವುದು. ನೀರಾವರಿ ಬಡಾವಣೆ ಕಾರ್ಯಗಳು ಸಮರ್ಪಕವಾಗಿ ನಡೆಯಲು ಆಲೆಕ್ಕಾಚಾರಕ್ಕೆ ಬೇರೊಂದು ಅಂದಾಜು ಪಟ್ಟಿಯನ್ನು ಈ ಸಾಲಿನಲ್ಲಿ ಕೊಟ್ಟಿರುವೆವು.

(೩) ಒಳ್ಳೆ ಲಾಭವನ್ನು ಕೊಡುತ್ತಿರುವ ಗಂಧದೆಣ್ಣೆ ಕಾರ್ಖಾನೆಗಳ ಹಿತದೃಷ್ಟಿಯಿಂದ, ಅವುಗಳಿಂದ ಉತ್ಪನ್ನವಾಗುವ ೫ ವರ್ಷಗಳ ಆದಾಯದ ಸರಾಸರಿಗಿಂತ ಹೆಚ್ಚಾಗಿ ಬರುವ ಲಾಭವನ್ನು ಆಡಳಿತದ ಸಾಮಾನ್ಯ ಖರ್ಚುಗಳಿಗೆ ವಿನಿಯೋಗಿಸದೆ, ಅದಕ್ಕೆ ಬೇರೊಂದು ವಿಶೇಷ ನಿಧಿಯನ್ನು ಮಾಡಿ ಠೇವಣಿಸುವುದು. ಇದಕ್ಕೆ ನೀವು ಒಪ್ಪುವಿರೆಂದು ನಂಬುತ್ತೇನೆ.

(೪) ವಿಶ್ವವಿದ್ಯಾನಿಲಯದ ಕೆಲಸಗಳು ತೃಪ್ತಿಕರವಾಗಿ ನಡೆಯುವಂತೆ ಪ್ರತಿವರ್ಷವೂ ಇಷ್ಟೇ ಗ್ರಾಂಟು ಕೊಡಬೇಕೆಂಬುದನ್ನು ಮೂರು ವರ್ಷಗಳಿಗೊಂದಾವರ್ತಿ ನಿರ್ಧರಿಸುವುದು. ಅದರಂತೆ ಮುಂದಿನ ಸಾಲಿಗೆ ೧೦॥ ಲಕ್ಷ ನಿಖರವಾದ ಗ್ರಾಂಟು ಮೆಡಿಕಲ್ ಕಾಲೇಜ್ ಕಟ್ಟಡಕ್ಕೆ ೧॥ ಲಕ್ಷ ರೂಪಾಯಿಯೂ ಕೊಡಲ್ಪಟ್ಟಿರುವುದು.

೧೯೩೮—೩೯ ಇಸ್ವಿಯ ಆದಾಯ.

ಈ ಸಾಲಿನ ಅಂದಾಜುಪಟ್ಟಿಯನ್ನು ತಯಾರಿಸುವಾಗ ೩೫೫.೯೧ ಲಕ್ಷ ಆದಾಯವು ಬರುವುದೆಂದು ನಿರೀಕ್ಷಿಸಿ ೩೬೫.೪೮ ಲಕ್ಷವನ್ನು ಖರ್ಚುಮಾಡಬೇಕೆಂದೂ, ಅದರಲ್ಲಿ ೧೦ ಲಕ್ಷವನ್ನು ನೀರಾವರಿ ರಿಸರ್ವ್ ಹಣದಿಂದ ತೆಗೆದುಕೊಳ್ಳಬೇಕೆಂದೂ ಯೋಚಿಸಲ್ಪಟ್ಟಿತು. ಈಗ ಆದಾಯವು ವರ್ಷಾಂತ್ಯದೊಳಗಾಗಿ ನಿರೀಕ್ಷಿಸಿದ್ದಕ್ಕಿಂತ ೧೪ ಲಕ್ಷ ರೂ. ಹೆಚ್ಚುವುದರಿಂದ ೪॥ ಲಕ್ಷ ರೂ. ಸಿಲ್ಕು ಉಳಿಯುವುದು. ಇದರಲ್ಲಿ ನಾಲ್ಕು ಲಕ್ಷವು ಸ್ಪೆಷಲ್ ರಿಜರ್ವ್ ಫಂಡಿಗೆ ಸೇರಿಸಲ್ಪಡುವುದು. ಅರಣ್ಯ, ಅಬ್ಕಾರಿ, ರಸ್ತೆ ಬಡ್ತಿ, ಸ್ಟ್ಯಾಂಪು ಮತ್ತು ರಿಜಿಸ್ಟ್ರೇಷನ್ ಇಲಾಖೆಗಳಿಂದ ಈ ಹೆಚ್ಚು ಆದಾಯವು ಬಂದಿರುತ್ತದೆ.

ಗಂಧದೆಣ್ಣೆ ಬಾಬಿನಲ್ಲಿ ನಿರೀಕ್ಷಿಸಿದ್ದಕ್ಕಿಂತ ೫೦ ಸಾವಿರ ಪೌಂಡ್ ಎಣ್ಣೆಯು ಹೆಚ್ಚಿಗೆ ಖರ್ಚಾಗಬಹುದಾಗಿದೆ. ಇದರ ಬೆಲೆ ೭ ಲಕ್ಷ ರೂ.ಗಳು. ಅಬ್ಕಾರಿ ಇಲಾಖೆಯಲ್ಲಿ ಕಳೆದ ವರ್ಷ ನಡೆದ ಹರಾಜಿನಿಂದ ೪ ಲಕ್ಷ ಹೆಚ್ಚಿಗೆ ಆದಾಯವು ಬರುವುದು. ಸ್ಟ್ಯಾಂಪು ಮತ್ತು ರಿಜಿಸ್ಟ್ರೇಷನ್ ಇಲಾಖೆಯಿಂದ ೩॥ ಲಕ್ಷ ರೂ. ಹೆಚ್ಚಿಗೆ ಬಂದಿದೆ. ಇದಕ್ಕೆ ಪ್ರತಿಯಾಗಿ ಮಿಸಲೇನಿಯಸ್ ಮತ್ತು ಎಲೆಕ್ಟ್ರಿಕ್ ಇಲಾಖೆಯ ಆದಾಯವು ಸ್ವಲ್ಪ ಕಮ್ಮಿಯಾಗುವ ಸಂಭವವಿದೆ. ಬೆಂಗಳೂರು ಸೆಂಟ್ರಲ್ ಜೈಲ್ ಹಿಂಭಾಗದಲ್ಲಿನ ಗೃಹನಿವೇಶನಗಳಿಂದ ೧॥ ಲಕ್ಷ ರೂಪಾಯಿ ಬರಬಹುದೆಂದು ನಿರೀಕ್ಷಿಸಲ್ಪಟ್ಟಿತ್ತು. ಆಗ ಸರಿಯಾದ ಬೆಲೆಯು ಬಾರದಿದ್ದುದರಿಂದ ಹರಾಜು ವಜಾಮಾಡಿ ಈ ವರ್ಷ ಪುನಃ ಹರಾಜು ಹಾಕಲ್ಪಡುವುದು. ಮೆಟ್ಟೂರಿನಲ್ಲಿ ನಿರೀಕ್ಷಿಸಿದ್ದಷ್ಟು ವಿದ್ಯುಚ್ಛಕ್ತಿಯು ಖರ್ಚಾಗದಿದ್ದುದೇ ಎಲೆಕ್ಟ್ರಿಕ್ ಇಲಾಖೆಯ ಆದಾಯವು ಕಡಿಮೆಯಾಗಲು ಕಾರಣ.

೧೯೩೮—೩೯ ನೇ ಇಸ್ವಿಯ ವ್ಯಯ.

ಖರ್ಚುಬಾಬಿನಲ್ಲಿ ೩೬೫.೪೮ ಲಕ್ಷ ರೂ. ವ್ಯಯವಾಗಬೇಕಾಗಿತ್ತು. ಆದರೆ ಈಗ ಆ ಖರ್ಚು ೩೮೦.೧೯ ರೂ. ಇದರ ಪೈಕಿ ೧೦.೪೧ ಲಕ್ಷವು ರಿಜರ್ವ್ ಫಂಡಿಗೂ, ೩೬೯.೭೮ ಲಕ್ಷವು ರೆವಿನ್ಯೂ ಬಾಬಿಗೂ ಖರ್ಚು ಹಾಕಲ್ಪಡುತ್ತದೆ. ಅರಣ್ಯ, ಆಡಳಿತ, ನ್ಯಾಯ, ಸಿವಿಲ್ ಕಾಮಗಾರಿಗಳು, ವಿದ್ಯಾಭ್ಯಾಸ, ವ್ಯವಸಾಯ ಮತ್ತು ಪೋಲೀಸ್ ಇಲಾಖೆಗಳಲ್ಲಿ ಗೊತ್ತಾಗಿದ್ದಕ್ಕಿಂತ ಹೆಚ್ಚು ಖರ್ಚಾಗಿರುತ್ತದೆ. ರಸ್ತೆ ನಿಧಿಯನ್ನು ಏರ್ಪಡಿಸಿದ್ದರಿಂದ ಆ ಬಾಬಿನಲ್ಲಿ ೩॥ ಲಕ್ಷ, ಸೀರಂ ತಯಾರಿಕೆಗಾಗಿ ವ್ಯವಸಾಯದ ಇಲಾಖೆಗೆ ೨ ಲಕ್ಷ ಹೆಚ್ಚಾಗಿ ಖರ್ಚಾಗಿರುತ್ತದೆ. ರೆವಿನ್ಯೂ ಬಾಬಿಗೆ ಸೇರದಿರುವ ನೀರಾವರಿ ಕಾಮಗಾರಿಗಳಿಗೆ ಈ ವರ್ಷ ೮೯॥ ಲಕ್ಷ ಹಣವನ್ನು ತೆಗೆದಿಟ್ಟಿತ್ತು. ಇರ್ವಿನ್ ಕಾಲುವೆಯ ಕೆಲಸವು ಚುರುಕಾಗಿ ನಡೆಯಲು ೬ ಲಕ್ಷ ರೂ. ಹೆಚ್ಚಿಗೆ ಸ್ಯಾಂಕ್ಷನ್ ಮಾಡಲಾಯಿತು. ವರ್ಷಾಂತ್ಯದಲ್ಲಿ ನೀರಾವರಿ ಕೆಲಸಗಳಿಗೆ ಒಟ್ಟಿಗೆ ೯೫ ಲಕ್ಷ ರೂಪಾಯಿ ಖರ್ಚು ಮಾಡಿದಂತಾಗುವುದು. ಈ ಸಾಲಿನಲ್ಲಿ ಸಿಲ್ಕು ೪೩ ಲಕ್ಷ ರೂ. ಸಾಲಿನಕೊನೆಯಲ್ಲಿ ವಿಶೇಷ ನಿಧಿಗಳಲ್ಲಿರುವ ಹಣ.

ವಿಶೇಷ ಖರ್ಚುಗಳಿಗೆ ರಿಜರ್ವ್	೧೦.೫೧
ಇರಿಗೇಷನ್ ಮೂಲಧನದ ರಿಜರ್ವ್	೪.೦೪
ಇರಿಗೇಷನ್ ಸೆಸ್ ಫಂಡು	೪.೦೦
ಒಟ್ಟು	೧೮.೫೫

೧೯೩೯—೪೦ ರ ಅಂದಾಜುಪಟ್ಟಿ

ಈಗ ನಿರೀಕ್ಷಿಸಿರುವಂತೆ ಬರುವ ಆದಾಯ ೩೭೦.೯೯ ಲಕ್ಷ; ಖರ್ಚು ಸುಮಾರು ೩೮೫.೭೦ ಲಕ್ಷ. ಇದರಲ್ಲಿ ೧೫ ಲಕ್ಷ ರಿಜರ್ವ್ ಹಣದಿಂದ ತೆಗೆದುಕೊಳ್ಳಲ್ಪಡುವುದು. ವರ್ಷದ ಆಯವ್ಯಯಗಳು ಸಮತೂಕದಲ್ಲಿದ್ದು ೫೦ ಸಾವಿರ ರೂಪಾಯಿ ಸಿಲ್ಕು ಉಳಿಯಬಹುದೆಂದು ನೆನಸಲಾಗಿದೆ.

ನಂಜನಗೂಡು ತಾ॥ ಹೊರತು ಉಳಿದ ತಾ॥ ಗಳಲ್ಲಿ ರಿಸೆಟಲ್‌ಮೆಂಟ್ ಕೆಲಸವು ಪೂರೈಸಿದೆ. ಅದ್ದರಿಂದ ಬರುವ ವರ್ಷದ ರೆವಿನ್ಯೂ ಆದಾಯವು ಹೊಸ ಲೆಕ್ಕದ ಆಧಾರದ ಮೇಲೆ ಮಾಡಲಾಗಿದೆ. ರೈಲ್ವೆ ಮತ್ತು ಎಲೆಕ್ಟ್ರಿಕ್ ಇಲಾಖೆಗಳಿಂದ ಹೆಚ್ಚು ಆದಾಯ ಬರಬಹುದು.

ಖರ್ಚು ಬಾಬುಗಳು

ಈ ಸಾಲಿನ ಯಥಾರ್ಥ ಖರ್ಚುಗಳಿಗಿಂತ ಬರುವ ಸಾಲಿನಲ್ಲಿ ೫ ಲಕ್ಷ ಹೆಚ್ಚು ಖರ್ಚಾಗುವುದು. ನೀರಾವರಿ, ವಿದ್ಯಾಭ್ಯಾಸ, ಮತ್ತು ವ್ಯವಸಾಯದ ಬಡಾವಣೆಗಾಗಿ ಈ ಹಣವು ಉಪಯೋಗಿಸಲ್ಪಡುವುದು. ನೀರಾವರಿ ಕಾಮಗಾರಿಗಳಿಗೆ ೧೫ ಲಕ್ಷವನ್ನು ಒದಗಿಸಲಾಗಿರುವುದು. ಈ ಬಾಬಿಗೆ ಇನ್ನೂ ಹೆಚ್ಚಿಗೆ ಹಣ ಬೇಕಾಗಿದ್ದರೂ ಒದಗಿಸಲಾಗುವುದು.

ಜನರಿಗೆ ಉಪಯುಕ್ತವಾಗುವಂತೆ ಅಪಾರ ಹಣವನ್ನು ಖರ್ಚುಮಾಡಲು ವಿಶ್ವವಿದ್ಯಾನಿಲಯದಲ್ಲಿ ಅವಕಾಶವಿರುವುದು. ಆದರೆ ಸರ್ಕಾರದ ಆದಾಯವೆಷ್ಟಿರುವುದೆಂಬುದನ್ನು ನೋಡಿಕೊಂಡು ಆ ಖರ್ಚನ್ನು ಗೊತ್ತುಮಾಡಬೇಕಾಗಿದೆ. ಅದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಇಷ್ಟು ಹಣವನ್ನು ಇಷ್ಟು ವರ್ಷಗಳಕಾಲ ಕೊಡುವೆವೆಂದು ಮೊದಲೇ ನಿರ್ಧರಿಸಿ ಅದಕ್ಕನುಗುಣವಾದ ಅಭಿವೃದ್ಧಿ ಕಾರ್ಯಗಳನ್ನು ಆ ಇಲಾಖೆಯು ತಡೆಯಿಲ್ಲದೆ ನಡೆಸುವಂತೆ ಏರ್ಪಡಿಸಿದೆ. ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ತರಗತಿಯ ಮತ್ತು ಪರೀಕ್ಷೆಯ ಸಂಬಳವನ್ನು ಇತರ ವಿಶ್ವವಿದ್ಯಾನಿಲಯಗಳ ಸಂಬಳದೊಡನೆ ಹೋಲಿಸಿ ಸ್ವಲ್ಪಮಟ್ಟಿಗೆ ಹೆಚ್ಚಿಸುವುದು ಯುಕ್ತವೆಂದು ನಾನು ಭಾವಿಸುತ್ತೇನೆ.

ವ್ಯವಸಾಯ—ದನಗಳ ತಳಿ

ದನಗಳ ತಳಿಯನ್ನು ಉತ್ತಮಪಡಿಸುವುದು ವ್ಯವಸಾಯಾಭಿವೃದ್ಧಿಗೆ ಅಗತ್ಯ. ಈ ವಿಷಯವನ್ನೇ ಅತ್ಯಂತವಾಗಿ ಪರ್ಯಾಲೋಚಿಸಲು ಒಂದು ಕಮಿಟಿಯನ್ನು ಈ ವರ್ಷ ಸರ್ಕಾರದವರು ನೇಮಿಸಿರುತ್ತಾರೆ. ದನಗಳ ಅಂಟುರೋಗಗಳನ್ನು ತಡೆಯಲು ಏರ್ಪಡಿಸಿದ ಸೀರಂ ಕಾರ್ಖಾನೆಯು ಒಳ್ಳೆ ಕೆಲಸ ಮಾಡಿದೆ. ಹೋದ ವರ್ಷ ೫ ಲಕ್ಷ ಡೋಸುಗಳು ಸೀರಂ ಮಾತ್ರ ತಯಾರಿಸಲ್ಪಟ್ಟಿತು. ಈ ವರ್ಷದ ಸೀರಂ ತಯಾರಿಕೆಯು ೧೮ ಲಕ್ಷ ಡೋಸುಗಳಾಗಿದೆ. ಇದರಿಂದ ೩॥ ಲಕ್ಷ ರಾಸುಗಳಿಗೆ ದೇವೀಹಾಕಬಹುದು. ಆದರೆ ಇದರೊಡನೆ ದನಗಳ ತಳಿಯನ್ನೂ ಉತ್ತಮಪಡಿಸುವುದು ಅಗತ್ಯ. ಅದಕ್ಕಾಗಿ ಈ ವರ್ಷ ವ್ಯವಸಾಯದ ಇಲಾಖೆಗೆ ೧ ಲಕ್ಷ ರೂ. ಹೆಚ್ಚು ಗ್ರಾಂಟನ್ನು ಕೊಡಲಾಗಿದೆ.

ಇತರ ಬಡಾವಣೆಗಳು

ಇತರ ಇಲಾಖೆಗಳ ಬಡಾವಣೆಗೆ ಕೊಟ್ಟಿರುವ ಹೆಚ್ಚುವರಿ ಗ್ರಾಂಟುಗಳ ವಿಷಯವಾಗಿ ಸಂಕ್ಷೇಪವಾಗಿ ಹೇಳುತ್ತೇನೆ. ರೆವಿನ್ಯೂ ಇಲಾಖೆಯ ಸಿಬ್ಬಂದಿ ಬಡಾವಣೆಗೆ ೧೫ ಸಾವಿರ; ವಿದ್ಯುಚ್ಛಕ್ತಿ ಬಡಾವಣೆಗೆ ಬಲಗಿ ಮರಗಳನ್ನು ಒದಗಿಸಲು ಅರಣ್ಯದ ಇಲಾಖೆಗೆ ೧ ಲಕ್ಷ; ಸೆಂಟ್ರಲ್ ಡಿಸ್ಟಿಲರಿಗೆ ಬೇಕಾದ ಯಂತ್ರಗಳನ್ನು ತೆಗೆದುಕೊಳ್ಳಲು ಎಕ್ಸೈಜ್ ಇಲಾಖೆಗೆ ೧॥ ಲಕ್ಷ; ಸಾರ್ವಜನಿಕ ಠೇವಣಾತಿಗಳು ಹೆಚ್ಚಿದ್ದರಿಂದ ಬಡ್ಡಿ ಬಾಬಿಗಾಗಿ ೨ ಲಕ್ಷ; ಪೋಲೀಸ್ ಇಲಾಖೆಯ ಬಡಾವಣೆಗೆ ೫೦ ಸಾವಿರ.

ನೀರಾವರಿ ಮತ್ತು ವರಮಾನದ ಕೆಲಸಗಳು

ನೀರಾವರಿ ಕೆಲಸಗಳಿಗೆ ಈ ವರ್ಷ ೧೫ ಲಕ್ಷ ರೂಪಾಯಿ ಕೊಡಲಾಗುವುದು. ಇದರಲ್ಲಿ ೧೦ ಲಕ್ಷ ಜನರಲ್ ರೆವಿನ್ಯೂ ಬಾಬಿನಿಂದಲೂ, ೫ ಲಕ್ಷವು ನೀರಾವರಿ ರಿಸರ್ವಿನಿಂದಲೂ ತೆಗೆದುಕೊಳ್ಳಲ್ಪಡುವವು.

ವರಮಾನದ ಕಾಮಗಾರಿಗಳಿಗೆ ಬರುವ ವರ್ಷ ೯೩.೭೩ ಲಕ್ಷ ರೂಪಾಯಿಗಳು ಕೊಡಲಾಗುವುದು. ಅದರ ವಿವರವೇನಂದರೆ:—

	ಲಕ್ಷ ರೂ.
ರೈಲ್ವೆ ಮತ್ತು ಟ್ರಾಂವೇಗಳಿಗೆ	೧೮
ಇರ್ವಿನ್ ಕಾಲುವೆ ಕಾಮಗಾರಿ	೪೧.೮೬
ಕೃಷ್ಣರಾಜಸಾಗರ	೮.೯೬
ವಿದ್ಯುಚ್ಛಕ್ತಿಯ ಇಲಾಖೆಗೆ	೧೫
ಕೈಗಾರಿಕೆ ಇತ್ಯಾದಿ	೧.೫೫
ಭದ್ರಾವತಿ ಕಬ್ಬಿಣದ ಕಾರ್ಖಾನೆ	೭.೩೬
ಜುಮ್ಲಾ	೯೩.೭೩

ಶಿವಮೊಗ್ಗ ಅರಸಾಳು ರೈಲ್ವೆ ಕೆಲಸವು ಈ ವರ್ಷದ ಅಖೈರೊಳಗಾಗಿ ರಾಗಿಹೊಸಳ್ಳಿವರೆಗೆ ಮುಗಿಯುವುದು. ಇರ್ವಿನ್ ಕಾಲುವೆ ಕೆಲಸವು ಜಾಗ್ರತೆಯಾಗಿ ನಡೆಯುತ್ತಿರುವುದು. ೧೯೪೧ ನೆ ಇಸ್ವಿ ಜೂನ್ ಒಳಗಾಗಿ ೩೦ ಸಾವಿರ ಎಕರೆಗೆ ಅದರಿಂದ ನೀರುಹಾಯಿಸಬಹುದೆಂದು ನಿರೀಕ್ಷಿಸಲಾಗಿರುವುದು. ಕೃಷ್ಣರಾಜಸಾಗರದಲ್ಲಿ ೧೨೪ ಅಡಿಗಳವರೆಗೆ ನೀರನ್ನು ಕಾಪಿಡಲು ಕಟ್ಟೆಯನ್ನು ಬಲಪಡಿಸುವ ಕೆಲಸವು ಇನ್ನು ಮೇಲೆ ಪ್ರಾರಂಭಿಸಲ್ಪಡುವುದು. ಈ ಎಲ್ಲಾ ಕೆಲಸಗಳಿಗಾಗಿ ೫೦ ಲಕ್ಷ ರೂಪಾಯಿ ಮಂಜೂರುಮಾಡಿರುವೆವು.

ಬೆಂಗಳೂರು ನೀರು ಸರಬರಾಯಿಗೆ ಹೊಸದಾಗಿ ಮಾಡಿರುವ ಏರ್ಪಾಟುಗಳು ಸರ್ಕಾರದವರ ಆಲೋಚನೆಯಲ್ಲಿದೆ. ಅದು ಭಾರೀ ಕಾಮಗಾರಿಯಾದ್ದರಿಂದ ಆರ್ಥಿಕ ಮತ್ತು ಉಪಯೋಗಿತ ದೃಷ್ಟಿಯಿಂದ ನಿಧಾನವಾಗಿ ಪರ್ಯಾಲೋಚಿಸಬೇಕಾಗಿದೆ. ಇದಕ್ಕಾಗಿ ಏರ್ಪಡಿಸಿರುವ ವಿಶೇಷ ಕಮಿಟಿಯ ವರದಿಯು ಕೈಸೇರಿದ ಮೇಲೆ ಅದನ್ನು ಯೋಚಿಸುವೆವು.

ಬಟ್ಲರ್ ಕಮಿಟಿಯ ವರದಿ

ಬಟ್ಲರ್ ಕಮಿಟಿಯ ವರದಿಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಪೂರೈಸುವೆನು. ಆಡಳಿತ ವಿಚಾರದಲ್ಲಿ ವರದಿಯು ಏನನ್ನೂ ಹೇಳಿಲ್ಲ. ಆದರೂ ಕಾಲಸ್ಥಿತಿಗತಿಗಳಿಂದ ಬ್ರಿಟಿಷ್ ಮತ್ತು ಸಂಸ್ಥಾನಿಕ ಹಿಂದೂಸ್ಥಾನವು ಭವಿಷ್ಯದಲ್ಲಿ ಆರ್ಥಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಒಟ್ಟುಗೂಡುವ ಸಂಭವವು ಹೆಚ್ಚಾಗಿರುತ್ತದೆ. ರಾಜಕೀಯ ಸಂಯುಕ್ತ ಸರ್ಕಾರವೇ ಈಗಿನ ಸ್ಥಿತಿಗತಿಗಳ ಮುಂದಿನ ಧ್ಯೇಯವಾಗಿದೆ. ಆದರೆ ಆ ಸಂಯುಕ್ತಾಡಳಿತವು ಶಾಶ್ವತವಾಗಬೇಕಾದರೆ ಪರಸ್ಪರ ಸಹಾನುಭೂತಿ ಮತ್ತು ಆತ್ಮೀಯ ಭಾವವೆಂಬ ಭದ್ರವಾದ ತಳಹದಿಯಿರಬೇಕು. ಸಾಮಾನ್ಯ ವಿಚಾರಗಳ ನಿರ್ಧಾರದಲ್ಲಿ ತನ್ನ ಹಕ್ಕು ಬಾಧ್ಯತೆಗಳಿಗೆ ಕುಂದುಬಾರದಂತೆ ಯಾವ ಸಂಯುಕ್ತ ಘಟನೆಗಾದರೂ ಮೈಸೂರು ದೇಶವು ಸಮ್ಮತಿಸಲು ಸಿದ್ಧವಾಗಿದೆ. ಆದರೆ ಈ ವಿಚಾರದಲ್ಲಿ ನಾವು ಇನ್ನೂ ಸ್ವಲ್ಪಕಾಲ ನಿರೀಕ್ಷಿಸುವುದು ಉತ್ತಮ. ಸಧ್ಯದಲ್ಲಿ ಬ್ರಿಟಿಷ್ ಹಿಂದೂಸ್ಥಾನ ಮತ್ತು ನಮ್ಮ ಸಂಸ್ಥಾನದ ಆರ್ಥಿಕ ಮತ್ತು ಸಾಂಪತ್ತಿಕ ಸಂಬಂಧವನ್ನು ಸರ್ವ ಸಮ್ಮತಿಯಿಂದ ಕೂಡಲೇ ನಿರ್ಧರಿಸುವುದು ಅಗತ್ಯವಾಗಿದೆ. ನಾವು ಕಮಿಟಿಯನ್ನು ನೇಮಕಮಾಡಬೇಕೆಂದು ಕೇಳಿಕೊಂಡದ್ದು ಅದೇ ಉದ್ದೇಶದಿಂದ. ಈ ವಿಚಾರವಾಗಿ ವರದಿಯ ಅಭಿಪ್ರಾಯ ಮತ್ತು ಸಲಹೆಗಳು ಸರ್ವರಿಗೂ ತೃಪ್ತಿಕರವಾಗಿವೆ. ಆ ಸಲಹೆಗಳು ಕಾರ್ಯದಲ್ಲಿ ಪರ್ಯವಸಾನ ಹೊಂದಿದರೆ ಮೈಸೂರಿಗೆ ಲಾಭವಾಗುವುದರಲ್ಲಿ ಸಂಶಯವಿಲ್ಲ.

ಬ್ರಿಟಿಷ್ ಹಿಂದೂಸ್ಥಾನದ ಆಮದು ಪದಾರ್ಥಗಳ ಸುಂಕವನ್ನು ೫ ಕೋಟಿಯಿಂದ ೫೦ ಕೋಟಿಗೆ ಹೆಚ್ಚಿ[illegible] ಅದರಿಂದ ಸಂಸ್ಥಾನಗಳ ಪ್ರಜೆಗಳಿಂದ ವಸೂಲ್ ಮಾಡ[illegible] ತೆರಿಗೆಯ ಮಾನವು ಕಡಿಮೆಯಾಗಿರುವುದೆಂಬುದನ್ನು ಕ[illegible]ಸು ತಲೆದೂ ಒಪ್ಪಿಕೊಂಡು, ಈ ವಿಷಯವನ್ನು ಪರ್ಯಾಲೋಚಿಸಿ[illegible]ಯೊಂದು ಸಂಸ್ಥಾನ ಮತ್ತು ಸಂಸ್ಥಾನಗಳಿಗೂ ಮತ್ತು [illegible]ನು. ಹಿಂದೂಸ್ಥಾನಕ್ಕೂ ಯಾವರೀತಿ ಲೆಕ್ಕಾಚಾರವು ಪೈಸಲ್[illegible]ಯುದನ್ನು ನಿರ್ಧರಿಸಲು ಒಂದು ವಿಶೇಷಜ್ಞರ ಕಮಿಟಿ[illegible]ಯುಸಬೇಕೆಂದು ಸಲಹೆ ಕೊಟ್ಟಿರುತ್ತಾರೆ.

ಇನ್‌ಕಂಟ್ಯಾಕ್ಸ್, ಸುಂಕ, [illegible]ಸ್ಟು ಮತ್ತು [illegible] ಇಲಾಖೆಗಳ ಲೆಕ್ಕವನ್ನು ಪರಿಶೋಧಿಸಿ, ಅದರಿಂದ ಬರ[illegible]ದಲ್ಲಿ ಉಚಿತ ಭಾಗವನ್ನು ಆಯಾ ಸಂಸ್ಥಾನಗಳಲ್ಲೇ [illegible]ಡಲು ವರದಿಯು ಸಲಹೆ ಕೊಟ್ಟಿರುತ್ತದೆ.

ಸಂಯುಕ್ತ ಸಂಬಂಧದ ಗತಿಯನ್ನು ಜಾಗ್ರತೆ[illegible] ಉಚಿತವಲ್ಲವೆಂದು ನಾನು ಹಿಂದೆಯೇ ಹೇಳಿದ್ದೇ[illegible] ಮತ್ತು ಸಂಸ್ಥಾನಗಳ ಆರ್ಥಿಕ ಸಂಬಂಧವು ಮೊದ[illegible]ಬೇಕು. ನಂತರ ರಾಜಕೀಯ ಸಂಬಂಧವು ತಾನಾ[illegible]ದು. ಸಾಂಪತ್ತಿಕ ಮತ್ತು ಸಾಂಸ್ಕೃತಿಕ ದೃಷ್ಟಿಯ[illegible] ದೇಶವು ಕರ್ನಾಟಕದ ಕೇಂದ್ರಸ್ಥಾನವಾಗುವ[illegible] ನಾನು ಆತುರದಿಂದ ನಿರೀಕ್ಷಿಸುವೆನು. ಆರ್ಥಿಕ ನ್ಯಾಯ ಸಮ್ಮತವಾಗಿ ನಡೆಯುವಂತೆ ಬಟ್ಲರ್ ಸ[illegible] ಮಾಡಿಕೊಟ್ಟಿರುವುದರಿಂದ ಆ ಸುದಿನವು ಸಮೀಪವಾ[illegible]ವಾಗಿರುವುದೆಂದು ನಾನು ನೆನೆಸುತ್ತೇನೆ.

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯ[illegible] ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂ[illegible]ನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರ[illegible]

ಶ್ರೀ ಜಗದ್ಗುರು ರೇವಣಸಿದ್ಧೇಶ್ವ[illegible] ರಥೋತ್ಸವ.

ಕೋ[illegible]ಪೇಟೆ ತಾಲೂಕಿಗೆ ಸೇರಿದ ಶ್ರೀ [illegible] ಬೆಟ್ಟದಲ್ಲಿ, ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ರಥೋತ್ಸವವು ಮಾಮೂಲಿನ ಮೇರೆಗೆ ವೈಶಾ[illegible]ಮಾ ದಿವಸ, ಅತಿವಿಜೃಂಭಣೆಯಿಂದ ನೆರವೇ[illegible] ಬೆಳಿಗ್ಗೆ ಗಿರಿಪ್ರದಕ್ಷಿಣೆಯೂ, ಸಾಯಂಕಾಲ [illegible] ಮತ್ತು ರಾವಣೇಶ್ವರ ವಾಹನವೂ, ಬಹು ವೈ[illegible]ದವು. ಅನೇಕ ಕಡೆಗಳಿಂದ ಸಹಸ್ರಾರು ಜನ [illegible]ದ್ದರು. ನೆರೆದಿದ್ದ ಜನರಿಗೆಲ್ಲಾ ಬೆಟ್ಟದ ಕೆ[illegible] ಪುರದ ಮಠದಲ್ಲೂ ಮತ್ತು, ಅನೇಕ ಭಕ್ತರ[illegible] ಸ್ಥಲುಗಳಲ್ಲೂ ಅನ್ನಸಂತರ್ಪಣವು ಜಾತ್ರೆಯ[illegible]ರು ದಿವಸಗಳ ವರೆಗೂ ನಡೆಯಿತು. ಸಮೀಪ[illegible] ದರೆಯಾಗಿದ್ದರೂ ಸಹ ಸುಮಾರು ಎರಡು ಮ[illegible] ಲಿಯಿರುವ ಗುನ್ನೂರು ಹತ್ತಿರ ಅರ್ಕಾವತಿ [illegible] ಗಾಡಿಗಳಿಂದ ತಂದು ನೀರಿತ್ತ ಭಕ್ತರಿಗೆಲ್ಲಾ [illegible] ನಡೆಯಿಸಿ ಶ್ರೀಜಗದ್ಗುರು ಕೃಪೆಗೆ ಪಾತ್ರರಾದ[illegible] ಮುಜರಾಯಿ ಇಲಾಖೆಗೆ ಒಳಪಟ್ಟಿದ್ದು ಕಂ[illegible]ರಿಂದಲೂ ಕೆಳಗಿನಬೆಟ್ಟ, ಮೇಲಿನಬೆಟ್ಟ ಎರಡರ ಕಂಟ್ರಾಕ್ಟುದಾರರು ಸಿಂಹ, ಸ್ವಾಮಿಯ ಮೂರು ಪೈಸೆಯಂತೆ ವಸೂಲು ಮಾಡುತ್ತಾರೆ [illegible] ಕಾಯಿಗೆ ಮೂರುಪೈಸೆಯಂತೆ ಬೇರೆ ಕೊಡಬೇಕ[illegible] ವ ಅನೇಕ ಭಕ್ತರು ಹೊರಗಡೆಯೇ ಕರ್ಪೂ[illegible] ಹೊರಟುಹೋದಂತೆ ವರ್ತಮಾನವಿದೆ. ವ[illegible] ಒದೆಸಪ್ಪಕ್ಕೆ ವಸೂಲ್ ಮಾಡುವವರಲ್ಲದೆ ಹೊ[illegible] ಸವಾಡುವ ಮಕ್ಕಳುಮರಿಗಳಾದಿಯಾಗಿ ಸ[illegible] ರುಪೈನಂತೆ ಕೊಡಬೇಕೆಂದು ನಿರ್ಬಂಧಪಡಿಸ[illegible]ಯೇ? ಇದನ್ನು ಸರ್ಕಾರದವರೂ ಮುಜ[illegible] ಪರ್ಯಾಲೋಚಿಸಿ, ಯಾವದಾದರೊಂದು ವಿಧ[illegible]ಲ್‌ಮಾಡುವಂತೆ ಮುಂದೆ ಏರ್ಪಾಡು ಮಾಡ[illegible] ಲಿಚ್ಛಿಸುತ್ತಾರೆ. ಈ ಪವಿತ್ರವಾದ ಜಾತ್ರೆಗೆ [illegible] ದೊಡ್ಡ ಮನುಷ್ಯರು ಪ್ರಮುಖ[illegible] ಇಂಥ ಸುಸಮಯದಲ್ಲಿ ಒಂದು ವೀರಶೈ[illegible] ತನ್ನೂಲಕ ಮಠದ ಏಳಿಗೆ ಸಂಬಂಧ[illegible] ಚಿಂತಿಸಿ ಮಹಾಭಿವೃದ್ಧಿ ಕಾರ್ಯಗಳನ್ನು ನೋಡದಿರುವದು ತುಂಬಾ ವ್ಯಸನವಾಗುತ್ತದೆ. ಪ್ರಯತ್ನಪಟ್ಟರೂ ಮತ್ತು ಎಷ್ಟು ದ್ರವ್ಯವ[illegible] ಇಷ್ಟೊಂದು ಜನರನ್ನು ಏಕಕಾಲದಲ್ಲಿ [illegible] ಸಾಧ್ಯವಿಲ್ಲ. ಶ್ರೀ ಗುರುಸೇವಾ ನಿಮಿತ್ತ [illegible] ಸಮಯದಲ್ಲಿ ಮಹೋದ್ಧಾರಕವಾದ [illegible] ಇನ್ನು ಮುಂದಾದರೂ ಮಹನೀಯರು [illegible]ತ್ತೇನೆ. ಪರ್ವತಮೂಲದಲ್ಲಿರುವ ರಾಜಾ[illegible]ರು ರಂಭಾಪುರೀ ಮಹಾ ಸಂಸ್ಥಾನದ [illegible]ವಾಗಿದೆ. ಈ ಮಠದ ಅಧ್ಯಕ್ಷರಾದ ಶ್ರೀ[illegible]

[illegible] ಕಾಲದಾ
[illegible]ತ್ರದೆಂದು
[illegible]ಪ್ರಯಸಟ್ಟ
[illegible]ಳ್ಳಿರುವ ಒಂ
ಬೆಂಕಿಬಿದ್ದು
ಎಂಬಿಬ್ಬರು
ಮಿಸೆಸ್ ಸಾ
ಯು ಮೊನ್ನೆ
36 ಮೊಮ್ಮ
ಲ್ಲಿ ಒಬ್ಬನ
ಕಲು ಆ ಕು
ನೋಡುತ್ತಿ
ಲೆಯೇ ?
ಲ್ಲಾ ಖಾನರು
ಗಾಗಿ ಪುನಃ
ಾದದ ಮುನ
ಹೇಳಿರುವ
ತ್ ಎಂಬ
ವ್ಯವಸ್ಥೆಯ
ರಿಗೆ ಒಂದು
ವನ್ನು ನಿಶ್ಚಯಿ
ಎಂಬ 17
ಷ್ನನ್ನು ಕಾತಿ
ಗೆ ವಿದ್ಯಾಭ್ಯಾ
ಸಿಲುಕಿ ಮೃತ
ಕು ತನ್ನ ದೇ
ಶಸ್ತ್ರಚಿಕಿತ್ಸೆಯ
ಒಬ್ಬನನ್ನು ತೆಗಿ
ನೊದಲಿಗಿಂತಲೂ
ಸರಲ್ಲಿ ಜಗಳವು
ಗಿದ್ದ ನಾಲ್ವರು
ಹಿಂದೂ ಹುಡು
ನಿಸಿಂದ ತಿವಿದು
ಮೂಲಕ ಬಂದ
ವಿಳಾಸದವರಿಗೆ
ಸಾಪತಿಮಾಡಿದಾ
ಯುಗಳ ಕರ್ಶಿಸಿ
ರಾದ ಡ್ಯೂಕ್
ಲೋ ಪಂದ್ಯದ
ದ ಕೆಳಕ್ಕೆ ಬಿದ್ದು
ಮೂಳೆಗೆ ಬಲವಾದ
ರು.
ರಿಯಾ ಪಟ್ಟಣ
ತಕ್ಕ ಪ್ಯಾನ್‌ಗಳು
ತಿಂದುಬಿಟ್ಟಿರುವವು.
ವನ್ನು ಬಿಟ್ಟು
ವಂತೆ!
ಹಿಂಸಾಹೇಬ ಎಂಬ
ಸುರಾಪಾನಮಾಡಿ,

ತನ್ನನ್ನು ಬೆದರಿಸಲು ಬಂದ ಕಾನ್ಸ್ಟೇಬಲ್ಲನೊಬ್ಬನ ಮೇಲೆ ಹಾರಿ ಅವನ ಕಿವಿಯನ್ನು ಕಚ್ಚಿ, ತನ್ನ ಹಲ್ಲುಗಳಿಗೆ ಸಿಕ್ಕಿದಷ್ಟು ಕಿವಿಯನ್ನು ಕಡಿದು ನುಂಗಿದನಂತೆ!

ಜರ್ಮನಿಯ ವೈಸ್‌ಬರ್ಗ್ ಎಂಬ ಪತ್ರಿಕೆಯು ವಿಷಯಾಂಧವಾದ ಇಂಗ್ಲೆಂಡ್‌ದೇಶವು ಬೇಗನೆ ಸಮುದ್ರದಲ್ಲಿ ಮುಳುಗಿಹೋಗುವದೆಂದೂ ಅದರೊಂದಿಗೆ ಐರ್ಲೆಂಡ್, ಅಮೇರಿಕಾ, ಮತ್ತು ಯೂರೋಪಿನ ಕೆಲವು ಭಾಗಗಳೂ ಮುಳುಗುವವೆಂದೂ ಸಹ ಪ್ರಕಟಿಸಿರುವದು.

ದೇಹಲಿಯ ಅಸೆಂಬ್ಲಿಯಲ್ಲಿ ಬಾಂಬುಗಳನ್ನೆಸೆದ ಭಗತ್‌ಸಿಂಗ್ ಮತ್ತು ದತ್ತ ಈ ಉಭಯರಿಗೆ ಆಮರಣಾಂತ ದ್ವೀಪಾಂತರವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಜಡ್ಜ್‌ಮೆಂಟನ್ನು ಕೇಳಿದ ಕೂಡಲೆ ಅಪರಾಧಿಗಳಿಬ್ಬರೂ "ಕ್ರಾಂತಿಯು ಬಹುಕಾಲ ಬಾಳಲಿ" ಎಂದು ಕೂಗಿದರಂತೆ!

ಮುಸಮಾಡದಲ್ಲಿ ನಡೆದ ಸಿಡಿಮದ್ದಿನ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟರು ಇಬ್ಬರು ಅಪರಾಧಿಗಳಿಗೆ ಏಳುವರ್ಷಗಳ ಕಠಿಣಶಿಕ್ಷೆಯನ್ನು ವಿಧಿಸಿದರು. ಮನಮೋಹನಗುಪ್ತನೆಂಬ ಅಪರಾಧಿಯು "ಸೆರೆಮನೆಯಿಂದ ಹಿಂತಿರುಗಿ ಬಂದಮೇಲೆ ಪುನಃ ಇಂತಹ ಕೃತ್ಯವನ್ನೇ ಮಾಡುವೆನು" ಎಂದು ನುಡಿದನಂತೆ!

ಮುಂದಿನ ತಿಂಗಳು 2 ನೆಯ ತಾರೀಖಿನ ದಿನ ನಡೆಯುವ ಪಾರ್ಲಿಮೆಂಟಿನ ಸಭೆಗೆ ಚಕ್ರವರ್ತಿಯವರು ದಯಮಾಡಿಸಿ ಸಾರ್ವಭೌಮರ ಪ್ರತಿನಿಧಿಯಾಗಿ ಸಭೆಯಲ್ಲಿ ಭಾಷಣವನ್ನು ಓದುವರೆಂದೂ, ಚಕ್ರವರ್ತಿಯವರ ಸಂಗಡ ಪ್ರಿನ್ಸ್‌ಆಫ್‌ವೇಲ್ಸ್‌ರವರು ದಯಮಾಡಿಸುವರೆಂದೂ ತಿಳಿದುಬರುತ್ತದೆ.

ಅನಮಾನುಲ್ಲಾಖಾನರ ಪತ್ನಿಯವರಾದ ಸೌರಿಯಾರಾಣಿಯವರು ಕಳೆದ 7ನೆಯ ತಾರೀಖಿನದಿನ ಬೊಂಬಾಯಿಯ ಸೆಂಟಜಾರ್ಜ್ ಆಸ್ಪತ್ರೆಯಲ್ಲಿ ಒಂದು ಹೆಣ್ಣು ಶಿಶುವನ್ನು ಪ್ರಸವಿಸಿದರು. ಇಂಡಿಯಾ ದೇಶದಲ್ಲಿ ಜನಿಸಿದುದರ ಸ್ಮಾರಕವಾಗಿ ಆ ಶಿಶುವಿಗೆ "ಹಿಂದಿಯಾ" ಎಂದು ನಾಮಕರಣಮಾಡಿರುವರು. ಸ್ತುತ್ಯ!

ರಂಗೂನಿನ ಸೆಂಟ್ರಲ್ ಜೈಲಿನಲ್ಲಿ ಖೂನಿಯನ್ನು ಮಾಡಿದನೆಂಬ ಅಪಾದನೆಯ ಮೇಲೆ ಕಾರಾಗೃಹವಾಸವನ್ನು ಅನುಭವಿಸುತ್ತಿರುವ ಒಬ್ಬ ಚೀನದೇಶದವನು ಜೈಲಿನ ಮುದ್ರಣಾಲಯದ ಡಿಪಾರ್ಟ್‌ಮೆಂಟಿನಲ್ಲಿ ತನ್ನ ಜೊತೆಯಲ್ಲಿ ಕೆಲಸಮಾಡುತ್ತಿದ್ದ ಇನ್ನೊಬ್ಬ ಚೀನದೇಶದವನನ್ನು ಉಳಿಯಿಂದ ಹೊಡೆದು ಕೊಂದುಹಾಕಿರುವನು.

ಹಿಂದೂದೇಶದಲ್ಲಿ ವಿದೇಶಿಯರು ಸೀಮೆಯೆಣ್ಣೆ ಮತ್ತು ಪೆಟ್ರೋಲ್ ವ್ಯಾಪಾರದಿಂದ ವಿಶೇಷ ಲಾಭವನ್ನು ಹೊಂದುತ್ತಿರುವರು. ಬರ್ಮಾ ಆಯಿಲ್ ಕಂಪೆನಿಯ 100 ಪೌಂಡಿನ ಶೇರಿನ ಬೆಲೆಯು ಈಗ 2400 ಪೌಂಡು ಆಗಿರುವದು. 25 ವರ್ಷಗಳಲ್ಲಿ 1600 ಪೌಂಡುಗಳ ನಫೆಯನ್ನು ಹಂಚಿರುವರಂತೆ! ಭಾರತೀಯರಿಂದ ದುಡ್ಡನ್ನು ಸೆಳೆಯುವ ಕಸಬು ವಿದೇಶೀಯರಿಗೆ ಗೊತ್ತು!

ಮಾಂಟ್ರೀಲಿನ ಡಾಲ್‌ಹೌಸಿ ಯೂನಿವರ್ಸಿಟಿಯ ಪ್ರೊಫೆಸರರಾದ ಡಾಕ್ಟರ್ ಗಿಬ್ ಎಂಬವರು ಕೆಲವು ಬೆಕ್ಕುಗಳ ಹೃದಯವನ್ನು ತೆಗೆದು ಅದಕ್ಕೆ ಬದಲಾಗಿ ವಿದ್ಯುಚ್ಛಕ್ತಿಯಿಂದ ಚಲಿಸುವ ರಬ್ಬರ್ ಹೃದಯನ್ನಿಟ್ಟು ಪರೀಕ್ಷಿಸುವಲ್ಲಿ 4 ಬೆಕ್ಕುಗಳು ಕೆಲವು ಘಂಟೆಗಳವರೆಗೆ ಜೀವಿಸಿದ್ದುವಂತೆ! ಹೀಗೆ ಕೃತ್ರಿಮಹೃದಯದಿಂದ ರಕ್ತಚಲನೆಯು ನಡೆದದ್ದು ಇದೇ ಮೊದಲು. ಇವನು ನವೀನಬ್ರಹ್ಮನೇ ಸರಿ!

ಫ್ರೆಂಚ್ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಗಳು ಮಿತಿಮೀರಿ ಮಾತನಾಡಿದರೆ, ಪ್ರೆಸಿಡೆಂಟರು ಬಟನ್ ಒತ್ತುವರಂತೆ! ಆ ಕೂಡಲೆ "5 ನಿಮಿಷಗಳು ಮಾತ್ರ" ಎಂದು ಬರೆಯಲ್ಪಟ್ಟ ಕನ್ನಡಿಯು ಭಾಷಣಮಾಡುವವರ ಎದುರಿಗೆ ಕಾಣಿಸುವದಂತೆ! ಅದನ್ನು ಗಮನಿಸದಿದ್ದರೆ "ನಿಲ್ಲಿಸು" ಎಂಬುದಾಗಿಯೂ, ಅದನ್ನೂ ಮೀರಿ ಮಾತನಾಡಿದರೆ "ಹೊರಟುಹೋಗು" ಎಂಬುದಾಗಿಯೂ ಕನ್ನಡಿಯಲ್ಲಿ ಅಕ್ಷರಗಳು ಕಾಣಿಸುವವಂತೆ!

ಜಗದ್ಗುರು ಈಶ್ವರಾವತಾರಿಯೆಂದು ಹೇಳಿಸಿಕೊಳ್ಳುತ್ತಿರುವ ಜೆ. ಕೃಷ್ಣಮೂರ್ತಿಗಳು ಕ್ಯಾಲಿಫೋರ್ನಿಯಾ (ಅಮೆರಿಕಾ)ದಲ್ಲಿ ಮೋಟಾರ್ ನಡೆಯಿಸಿಕೊಂಡು ಹೋಗುತ್ತಿರುವಾಗ್ಗೆ ಬಿಸಲಿನ ಝಳದಿಂದ ಎದುರಿಗೆ ಬರುತ್ತಿದ್ದ ಮತ್ತೊಂದು ಮೋಟಾರು ಇವರ ಕಣ್ಣಿಗೆ ಕಾಣಿಸದೆ ಎರಡು ಮೋಟಾರುಗಳೂ ಒಂದಕ್ಕೊಂದು ತಗಲಿ ಕೃಷ್ಣಮೂರ್ತಿಗಳ ಮುಖದಮೇಲೆ ಕೆಲವು ಗಾಯಗಳಾಗಿರುವವಂತೆ! ಅಯ್ಯೋ ಪಾಪ! ದೇವರಿಗೂ ಕಷ್ಟತಪ್ಪಲಿಲ್ಲವಲ್ಲ?

ಪ್ಯಾರಿಸ್ಸಿನಲ್ಲಿ "ಪ್ಯಾರಿಸ್ಸಿನರಾಣಿ" ಎಂದು ಹೆಸರು ಪಡೆದ ಬಹು ಸುಂದರಿಯಾದ "ಸಿಮೊನೆಗುಜಾರ್ಡ" ಎಂಬಾಕೆಯು ಅಲ್ಲಿಯ ಒಂದು ಥೀಯೇಟರಿನಲ್ಲಿ ನರ್ತನ ಮಾಡಲು ಒಪ್ಪಂದಮಾಡಿಕೊಂಡಳು. ನರ್ತನಮಾಡಿಸುವವರು ಅವಳಿಗೆ ತನ್ನ ದೇಹದ ಸೌಂದರ್ಯವು ಜನರಿಗೆ ಚೆನ್ನಾಗಿ ಕಾಣುವಂತೆ ಅಲ್ಪವಾದ ಉಡುಪನ್ನು ಧರಿಸಿ ನರ್ತನಮಾಡಬೇಕೆಂದು ಹೇಳಿದರು. ಅದಕ್ಕೆ ಅವಳು ಒಪ್ಪದಿರಲು ನಾಟಕಶಾಲೆಯವರು ಅವಳಮೇಲೆ ದಾವಾಮಾಡಿರುವರಂತೆ!

ಲಾಹೋರಿನಲ್ಲಿ ಮಹಮುದ್ ಅಜಾಂಖಾನೆಂಬುವನು ತನ್ನ ತಾಯಿಯ ಶವವನ್ನು ಟ್ರಂಕಿನೊಳಗೆ ಹಾಕಿಕೊಂಡು ಹೋಗುತ್ತಿದ್ದುದು ಪತ್ತೆಯಾಗಿ ಪೋಲೀಸಿನವರು ವಿಚಾರಣೆಮಾಡುವಲ್ಲಿ "ನನ್ನ ತಾಯಿಯು ಜೈಲಿನಲ್ಲಿ ಸತ್ತಳು; ಶವವನ್ನು ಕೊಡಿ ಎಂದು ಕೇಳಿದೆನು; ಅವರು ಕೊಡಲಿಲ್ಲ. ಅವನ್ನು ಹೂಳಿದಮೇಲೆ ನಾನು ನೆಲದಿಂದ ಕಿತ್ತುಕೊಂಡು ತಂದು ಈ ಟ್ರಂಕಿನಲ್ಲಿಟ್ಟು ಪೂಜೆಮಾಡುತ್ತಿದ್ದೇನೆ." ಎಂದು ಜವಾಬು ಕೊಟ್ಟನಂತೆ! ಪೋಲೀಸ್ ವಿಚಾರಣೆಯು ನಡೆಯುತ್ತಿದೆ.

ಅಮೇರಿಕೆಯ ಚಿಪ್ಪ ಎಂಬಲ್ಲಿ ಇಬ್ಬರು ರೈತರು ತಮ್ಮ ಹೆಂಡರುಮಕ್ಕಳನ್ನು ಬದಲಾಯಿಸಿಕೊಂಡರಂತೆ! ಒಬ್ಬನಿಗೆ 5 ಜನ ಮಕ್ಕಳು, ಇನ್ನೊಬ್ಬನಿಗೆ 6 ಜನ ಮಕ್ಕಳು. ಸಾಮಾನು ಮೊದಲುಗೊಂಡು ಹೆಂಡರು ಮಕ್ಕಳು ಎಲ್ಲರೂ ಬದಲಾಗಿರುವರು. ಈಗ ಹೆಂಡರು ವಿವಾಹ ವಿಚ್ಛೇದನಕ್ಕಾಗಿ ಕೋರ್ಟಿನಲ್ಲಿ ದಾವಾ ಮಾಡಿರುವರು. ಇದು ಮಂಜೂರಾದಮೇಲೆ ಅವರಿಗೆ ಬದಲಾಯಿಸಿದ ಪತಿಗಳಲ್ಲಿ ಪುನಃ ವಿವಾಹವಾಗುವದಂತೆ! ಸುಧಾರಿಸಿದ ರಾಷ್ಟ್ರ! ಇದು ಮೇಯೋ ತರುಣಿಗೆ ಗೊತ್ತಿರಲಾರದು! ಗುಲಗಂಜಿಯ ಕಪ್ಪು ಗುಲಗಂಜಿಗೆ ಕಾಣಿಸುವದೇ?

ಸಿಲೋನಿನ "ಎಪಿಸ್ವಿಮೊ" ಎಂಬ ಗ್ರಾಮದಲ್ಲಿ ನಾಲ್ಕುಜನರು ಜೂಜಾಡುತ್ತಿದ್ದಾಗ್ಗೆ ಜಗಳವಾಗಿ ಒಬ್ಬನು ಇನ್ನೊಬ್ಬನ ಕಾಲಿಗೆ ಚೂರಿಯಿಂದ ತಿವಿದನು. ತಿವಿಸಿಕೊಂಡ ಯುವಕನು ಬೇರೆ ಇಬ್ಬರ ಸಹಾಯದಿಂದ ಅವನನ್ನು ಕೊಂದುಬಿಟ್ಟನು. ಕೂಡಲೆ ಆ ಮೂವರೂ ಸತ್ತುಬಿದ್ದವನ ರಕ್ತವನ್ನು ಕುಡಿದರಂತೆ! ಕೋರ್ಟಿನಲ್ಲಿ ವಿಚಾರಮಾಡುವಾಗ್ಗೆ ಮೊದಲು ತಿವಿಸಿಕೊಂಡವನು ತಾನು ಕಳೆದುಕೊಂಡ ರಕ್ತವನ್ನು ಭರ್ತಿಮಾಡಿಕೊಳ್ಳುವದಕ್ಕೋಸ್ಕರ ತನ್ನ ವಿರೋಧಿಯ ರಕ್ತವನ್ನು ಎರಡು ಬಟ್ಟಲಿನಷ್ಟು ಕುಡಿದೆನೆಂದು ಹೇಳಿದನಂತೆ! ಇವನಲ್ಲವೇ ನರರಾಕ್ಷಸನು?

ಫಾಕ್‌ಲೆಂಡ್ ದ್ವೀಪದ ಬಳಿಯಲ್ಲಿ ಬೆಸ್ತರು ಎರಡು ದೋಣಿಗಳಲ್ಲಿ ಕುಳಿತು ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದಾಗ್ಗೆ ಒಂದು ದೋಣಿಯು ತಿಮಿಂಗಿಲದಿಂದ ಮುಳುಗಿಸಲ್ಪಡಲು ಅದರಲ್ಲಿದ್ದವರೆಲ್ಲರೂ ನೀರಿನಲ್ಲಿ ಮುಳುಗಿ ಪುನಃ ಸಾಹಸದಿಂದ ದೋಣಿಯನ್ನು ಹತ್ತಿದರು. ಅಗ್ಗೆ ಅವರಲ್ಲೊಬ್ಬನು ಕಾಣಬರಲು ತಿಮಿಂಗಿಲವು ಅವನನ್ನು ನುಂಗಿತೆಂದು ತಿಳಿದು ಅವನ ಆಶೆಯನ್ನು ಬಿಟ್ಟು ಉಳಿದವರು ಮುಂದಕ್ಕೆ ಹೊರಟರು. ಮರುದಿನ ಅದೇ ಬೆಸ್ತರು ಮೀನು ಹಿಡಿಯುವದಕ್ಕೆ ಹೋಗಿ ಒಂದು ತಿಮಿಂಗಿಲವನ್ನು ಕಂಡು ಬಹು ಸಾಹಸದಿಂದ ಅದನ್ನು ಕೊಂದು ಕತ್ತರಿಸಿ ನೋಡುವಲ್ಲಿ ಹಿಂದಿನ ದಿನ ನುಂಗಲ್ಪಟ್ಟಿದ್ದ ಮನುಷ್ಯನು ಅದರ ಹೊಟ್ಟೆಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದನಂತೆ! ದೇವರ ಲೀಲೆಯು ಅದ್ಭುತವಾದುದು!

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನರ ಭಾಷಣ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಆಯವ್ಯಯದ ಅಧಿವೇಶನವು ಕಳೆದ ೧೨ ನೇ ತಾರೀಖು ಸೋಮವಾರ ಮೈಸೂರು ಜಗನ್ಮೋಹನ ಪ್ರಾಸಾದದಲ್ಲಿ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ದಿವಾನ್ ಸಾಹೇಬರು ಮಾಡಿದ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಟ್ಟಿರುವೆವು.

ಮೈಸೂರು ಸಂಸ್ಥಾನದ ಆಡಳಿತದಲ್ಲಿ ಕಳೆದ ಮೂರು ವರ್ಷಗಳು ಸ್ಮರಣೀಯವಾಗಿವೆ. ಏಕೆಂದರೆ ಈ ಅವಧಿಯಲ್ಲಿ ನಮ್ಮ ಸಂಕುಚಿತಾವಸ್ಥೆಯು ಕಳೆದು, ಅಭಿವೃದ್ಧಿ ಮತ್ತು ಸಮಾಧಾನದ ದಾರಿಯನ್ನು ನಾವು ಸೇರಿರುವೆವು. ನಾನೀ ಕೆಲಸವನ್ನು ಕೈಕೊಂಡಾಗ ಅನೇಕ ಅಭಿವೃದ್ಧಿಕಾರ್ಯಗಳು ಹಾಗೆಯೇ ಉಳಿದಿತ್ತು; ಇಲಾಖೆಗಳು ಬಡಾವಣೆಯಾಗಬೇಕಾಗಿತ್ತು; ಖಜಾನೆಯು ಬರಿದಾಗಿತ್ತು; ರೆವಿನ್ಯೂ ಹುಟ್ಟುವಳಿಯು ತೃಪ್ತಿಕರವಾಗಲಿಲ್ಲ. ಆದಾಗ್ಯೂ, ನಾನು ಸಭೆಯ ಮುಂದಿಟ್ಟ ಆಯವ್ಯಯಗಳ ಅಂದಾಜಿನ ವಿಷಯವಾಗಿ ಸಂಪೂರ್ಣವಾದ ಆಶಾಭರವಸೆಯಿಂದ ಕೂಡಿದ್ದೆನು. ಒಂದುವೇಳೆ ಅದೆಲ್ಲಿ ವಿಫಲವಾಗುವುದೋ ಎಂಬ ಭಯದಿಂದ ಅನೇಕವೇಳೆ ನಾನು ಕಾತರನಾಗಿರುವೆನು. ನೀವೂ ಕೂಡಾ ಈ ವಿಷಯವಾಗಿ ನನಗೆ ಸಹಾನುಭೂತಿಯನ್ನು ತೋರಿಸಿ ನಿಮ್ಮ ಒಪ್ಪಿಗೆಯನ್ನು ಕೊಟ್ಟಿರುವಿರಿ.

ಈಗಲೂ ನಾನು ಆಶಾಭರವಸೆಗಳಿಂದ ಕೂಡಿದವನಾಗಿದ್ದೇನೆ. ಮುಂದಿನ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಅಭಿವೃದ್ಧಿಕಾರ್ಯಗಳಿಗೆ ಸಹಾಯಕವಾದ ಕೆಲವು ಏರ್ಪಾಟುಗಳನ್ನು ಶಾಶ್ವತ ಮಾಡುವುದರಿಂದ ಆ ಭರವಸೆಯನ್ನು ಸ್ಥಿರಮಾಡುತ್ತೇನೆ. ಇದರಿಂದ ಸ್ವಲ್ಪಮಟ್ಟಿಗೆ ನಿಮ್ಮ ಮತ್ತು ಸರ್ಕಾರದ ಕೈಕಟ್ಟಿದಂತಾಗಬಹುದು. ಆದರೂ ಪ್ರತಿವರ್ಷವೂ ಒಂದು ಗೊತ್ತಾದ ಆದಾಯವಿಲ್ಲದೆ ಯಾವ ಇಲಾಖೆಯೇ ಆಗಲಿ ಅಭಿವೃದ್ಧಿಕಾರ್ಯಗಳನ್ನು ಮಾಡಲಾಗುವುದಿಲ್ಲ.

ಈ ವಿಚಾರವನ್ನು ಪರ್ಯಾಲೋಚಿಸುವ ಮೊದಲು, ಸಂಸ್ಥಾನದ ನಿವ್ವಳ ಆಸ್ತಿ ಮತ್ತು ದೇಣೆಯನ್ನು ಗೊತ್ತುಮಾಡಿಕೊಳ್ಳಬೇಕು. ೧೯೩೬ ರಲ್ಲಿ ಸಂಸ್ಥಾನದ ಒಟ್ಟು ಆಸ್ತಿಯು ೧೧.೪ ಕೋಟಿ ರೂಪಾಯಿಯಾಗಿದ್ದಿತು. ೧೯೩೦ ನೇ ಇಸ್ವಿಯ ಜೂನ್ ಅಖೈರಿನಲ್ಲಿ ಈ ಆಸ್ತಿಯ ಬೆಲೆಯು ೧೪.೧ ಕೋಟಿಯಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ಇದಲ್ಲದೆ ಮೂರುವರ್ಷಗಳ ಕೆಳಗೆ ಸರ್ಕಾರವು ಆರುಕೋಟಿ ನಗದು ಠೇವಣಾತಿಯನ್ನುಳ್ಳುದಾಗಿತ್ತು. ೩೦ ನೇ ಇಸ್ವಿಯ ಅಂತ್ಯದಲ್ಲಿ ಈ ಮೊಬಲಗು ಹಾಗೆಯೇ ಉಳಿಯುವುದು. ಇದಕ್ಕೆ ಪ್ರತಿಯಾಗಿ ನಮಗೆ ೩ ವರ್ಷಗಳ ಕೆಳಗೆ ೧೧.೧೬ ಕೋಟಿ ದೇಣೆಯಿದ್ದದ್ದು ೧೯೩೦ ಜೂನ್ ತಿಂಗಳಲ್ಲಿ ೧೩.೯೪ ಕೋಟಿಯಾಗಿರುವುದು. ಈ ಲೆಕ್ಕಾಚಾರದಿಂದ ನಗದು ಮತ್ತು ಠೇವಣಾತಿಗಳನ್ನು ಕಡಮೆಮಾಡದೆ ಸಂಸ್ಥಾನದ ನಿವ್ವಳ ಆಸ್ತಿಯನ್ನು ೩ ಕೋಟಿ ಹೆಚ್ಚಿಸಿದೆವೆಂಬುದು ವ್ಯಕ್ತವಾಗುವುದು.

ಮುಂದೆ ಮಾಡಲಿರುವ ಬಡಾವಣೆ ಶಾಶ್ವತಏರ್ಪಾಟುಗಳು

ಕಳೆದ ಮೂರುವರ್ಷಗಳಿಂದ ಆಯವ್ಯಯಗಳು ಸಮನಾಗಿದ್ದರೂ, ಬಡಾವಣೆ ಕಾರ್ಯಗಳಿಗೆ ಒಂದೇ ರೀತಿಯಾಗಿ ಹಣವನ್ನು ಒದಗಿಸುತ್ತಿರುವುದು ಗೊತ್ತಾಗುತ್ತದೆ. ಈ ಬಡಾವಣೆಕಾರ್ಯಗಳು ತಡೆಯಿಲ್ಲದೆ ನಡೆಯಲು ಆಯಾ ಇಲಾಖೆಗಳು ಪ್ರತಿವರ್ಷವೂ ತಪ್ಪದೆ ಎಷ್ಟು ಹಣವನ್ನು ಹೊಂದಬಹುದೆಂಬುದನ್ನು ಕೂಡಲೇ ನಿಖರವಾಗಿ ತಿಳಿಸಲು ಮಾಡಿರುವ ಏರ್ಪಾಟುಗಳನ್ನು ಇಲ್ಲಿ ತಿಳಿಸುತ್ತೇನೆ.

(೧) ಸರ್ಕಾರದವರು ಈಗಾಗಲೇ ಏರ್ಪಡಿಸಿರುವ ರಸ್ತೆ ನಿಧಿಗೆ ಟೋಲ್‌ಗೇಟುಗಳ ಆದಾಯವನ್ನು ಸೇರಿಸುವುದಲ್ಲದೆ ರಸ್ತೆ ಮತ್ತು ಸೇತುವೆಗಳ ಖರ್ಚಿಗೆ ಪ್ರತಿವರ್ಷವೂ ೧೧ ಲಕ್ಷ ಹಣವು ಸಿಗಲು ಬೇಕಾದ ಗ್ರಾಂಟನ್ನು ಸರ್ಕಾರವು ಕೊಡುತ್ತದೆ. ಈ ವಾರ್ಷಿಕ ಗ್ರಾಂಟುಗಳು ಆಯಾ ವರ್ಷದಲ್ಲಿ ಖರ್ಚಾಗದೆ ಉಳಿದರೆ ಅದನ್ನು ವಾಪಸು ತೆಗೆದುಕೊಳ್ಳದೆ ಮುಂದಿನ ಸಾಲಿನ ಖರ್ಚಿಗೆ ಕಾದಿಡಲಾಗುವುದು.

(೨) ನೀರಾವರಿ ಬಡಾವಣೆ ಕಾರ್ಯಗಳಿಗಾಗಿ ಹೆಚ್ಚು ಹಣವು ಕೊಡಲಾಗಿರುವುದು. ಆದರೂ ರೈತನ ಅಭಿವೃದ್ಧಿಗೆ ಅದು ಸಾಲದೆಂದು ಕಾಣುವುದರಿಂದ, ಮುಖ್ಯ ಕೆಲಸಗಳಿಗೆ ಕೊಡಲ್ಪಡುವ ಮೂಲಧನವಲ್ಲದೆ, ಪ್ರತಿವರ್ಷವೂ ಜನರಲ್ ರೆವಿನ್ಯೂ ಬಾಬಿನಿಂದ ೧೦ ಲಕ್ಷ ರೂ. ಗ್ರಾಂಟು ಕೊಡಲಾಗುವುದು. ನೀರಾವರಿ ಬಡಾವಣೆ ಕಾರ್ಯಗಳು ಸಮರ್ಪಕವಾಗಿ ನಡೆಯಲು ಆಲೆಕ್ಕಾಚಾರಕ್ಕೇ ಬೇರೊಂದು ಅಂದಾಜು ಪಟ್ಟಿಯನ್ನು ಈ ಸಾಲಿನಲ್ಲಿ ಕೊಟ್ಟಿರುವೆವು.

(೩) ಒಳ್ಳೆಲಾಭವನ್ನು ಕೊಡುತ್ತಿರುವ ಗಂಧದೆಣ್ಣೆ ಕಾರ್ಖಾನೆಗಳ ಹಿತದೃಷ್ಟಿಯಿಂದ, ಅವುಗಳಿಂದ ಉತ್ಪನ್ನವಾಗುವ ೫ ವರ್ಷಗಳ ಆದಾಯದ ಸರಾಸರಿಗಿಂತ ಹೆಚ್ಚಾಗಿ ಬರುವ ಲಾಭವನ್ನು ಆಡಳಿತದ ಸಾಮಾನ್ಯ ಖರ್ಚುಗಳಿಗ ವಿನಿಯೋಗಿಸದೆ, ಅದಕ್ಕೆ ಬೇರೊಂದು ವಿಶೇಷ ನಿಧಿಯನ್ನು ಮಾಡಿ ಶೇಖರಿಸುವುದು. ಇದಕ್ಕೆ ನೀವು ಒಪ್ಪುವಿರೆಂದು ನಂಬುತ್ತೇನೆ.

(೪) ವಿಶ್ವವಿದ್ಯಾನಿಲಯದ ಕೆಲಸಗಳು ತೃಪ್ತಿಕರವಾಗಿ ನಡೆಯುವಂತೆ ಪ್ರತಿವರ್ಷವೂ ಇಷ್ಟೇ ಗ್ರಾಂಟು ಕೊಡಬೇಕೆಂಬುದನ್ನು ಮೂರು ವರ್ಷಗಳಿಗೊಂದಾವರ್ತಿ ನಿರ್ಧರಿಸುವುದು. ಅದರಂತೆ ಮುಂದಿನ ಸಾಲಿಗೆ ೧೦|| ಲಕ್ಷ ನಿಖರವಾದ ಗ್ರಾಂಟು ಮೆಡಿಕಲ್ ಕಾಲೇಜ್ ಕಟ್ಟಡಕ್ಕೆ ೧|| ಲಕ್ಷ ರೂಪಾಯಿಯೂ ಕೊಡಲ್ಪಟ್ಟಿರುವುದು.

೧೯೩೮—೩೯ ಇಸ್ವಿಯ ಆದಾಯ.

ಈ ಸಾಲಿನ ಅಂದಾಜುಪಟ್ಟಿಯನ್ನು ತಯಾರ್ಮಾಡುವಾಗ ೩೫೫.೯೧ ಲಕ್ಷ ಆದಾಯವು ಬರುವುದೆಂದು ನಿರೀಕ್ಷಿಸಿ ೩೬೫.೪೮ ಲಕ್ಷವನ್ನು ಖರ್ಚುಮಾಡಬೇಕೆಂದೂ, ಅದರಲ್ಲಿ ೧೦ ಲಕ್ಷವನ್ನು ನೀರಾವರಿ ರಿಸರ್ವ್ ಹಣದಿಂದ ತೆಗೆದುಕೊಳ್ಳಬೇಕೆಂದೂ ಯೋಚಿಸಲ್ಪಟ್ಟಿತು. ಈಗ ಆದಾಯವು ವರ್ಷಾಂತ್ಯದೊಳಗಾಗಿ ನಿರೀಕ್ಷಿಸಿದ್ದಕ್ಕಿಂತ ೧೪ ಲಕ್ಷ ರೂ. ಹೆಚ್ಚುವುದರಿಂದ ೪|| ಲಕ್ಷ ರೂ. ಸಿಲ್ಕು ಉಳಿಯುವುದು. ಇದರಲ್ಲಿ ನಾಲ್ಕು ಲಕ್ಷವು ಸ್ಪೆಷಲ್ ರಿಜರ್ವ್ ಫಂಡಿಗೆ ಸೇರಿಸಲ್ಪಡುವುದು. ಅರಣ್ಯ, ಅಬ್ಕಾರಿ, ರಸ್ತೆ ಬದ್ದಿ, ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಇಲಾಖೆಗಳಿಂದ ಈ ಹೆಚ್ಚು ಆದಾಯವು ಬಂದಿರುತ್ತದೆ.

ಗಂಧದೆಣ್ಣೆ ಬಾಬಿನಲ್ಲಿ ನಿರೀಕ್ಷಿಸಿದ್ದಕ್ಕಿಂತ ೫೦ ಸಾವಿರ ಪೌಂಡ್ ಎಣ್ಣೆಯು ಹೆಚ್ಚಿಗೆ ಖರ್ಚಾಗಬಹುದಾಗಿದೆ. ಇದರ ಬೆಲೆ ೬ ಲಕ್ಷ ರೂ. ಗಳು. ಅಬ್ಕಾರಿ ಇಲಾಖೆಯಲ್ಲಿ ಕಳೆದ ವರ್ಷ ನಡೆದ ಹರಾಜಿನಿಂದ ೪ ಲಕ್ಷ ಹೆಚ್ಚಿಗೆ ಆದಾಯವು ಬರುವುದು. ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಇಲಾಖೆಯಿಂದ ೨|| ಲಕ್ಷ ರೂ. ಹೆಚ್ಚಿಗೆ ಬಂದಿದೆ. ಇದಕ್ಕೆ ಪ್ರತಿಯಾಗಿ ಮಿನರೇನಿಯಸ್ ಮತ್ತು ಎಲೆಕ್ಟ್ರಿಕ್ ಇಲಾಖೆಯ ಆದಾಯವು ಸ್ವಲ್ಪ ಕಮ್ಮಿಯಾಗುವ ಸಂಭವವಿದೆ. ಬೆಂಗಳೂರು ಸೆಂಟ್ರಲ್ ಜೈಲ್ ಹಿಂಭಾಗದಲ್ಲಿನ ಗೃಹನಿವೇಶನಗಳಿಂದ ೧|| ಲಕ್ಷ ರೂಪಾಯಿ ಬರಬಹುದೆಂದು ನಿರೀಕ್ಷಿಸಲ್ಪಟ್ಟಿತ್ತು. ಆಗ ಸರಿಯಾದ ಬೆಲೆಯು ಬಾರದಿದ್ದುದರಿಂದ ಹರಾಜು ವಜಾಮಾಡಿ ಈ ವರ್ಷ ಪುನಃ ಹರಾಜು ಹಾಕಲ್ಪಡುವುದು. ಮೆಟ್ಟೂರಿನಲ್ಲಿ ನಿರೀಕ್ಷಿಸಿದ್ದಷ್ಟು ವಿದ್ಯುಚ್ಛಕ್ತಿಯು ಖರ್ಚಾಗದಿದ್ದುದೇ ಎಲೆಕ್ಟ್ರಿಕ್ ಇಲಾಖೆಯ ಆದಾಯವು ಕಡಿಮೆಯಾಗಲು ಕಾರಣ.

೧೯೩೮—೩೯ ನೇ ಇಸ್ವಿಯ ವ್ಯಯ.

ಖರ್ಚುಬಾಬಿನಲ್ಲಿ ೩೬೫.೪೮ ಲಕ್ಷ ರೂ. ವ್ಯಯವಾಗಬೇಕಾಗಿತ್ತು. ಆದರೆ ಈಗ ಆ ಖರ್ಚು ೩೮೦.೯ ರೂ. ಇದರ ಪೈಕಿ ೧೦.೪೧ ಲಕ್ಷವು ರಿಜರ್ವ್ ಫಂಡಿಗೂ, ೩೬೯.೬೮ ಲಕ್ಷವು ರೆವಿನ್ಯೂ ಬಾಬಿಗೂ ಖರ್ಚು ಹಾಕಲ್ಪಡುತ್ತದೆ. ಅರಣ್ಯ, ಆಡಳಿತ, ನ್ಯಾಯ, ಸಿವಿಲ್ ಕಾಮಗಾರಿಗಳು, ವಿದ್ಯಾಭ್ಯಾಸ, ವ್ಯವಸಾಯ ಮತ್ತು ಪೋಲೀಸ್ ಇಲಾಖೆಗಳಲ್ಲಿ ಗೊತ್ತಾಗಿದ್ದಕ್ಕಿಂತ ಹೆಚ್ಚು ಖರ್ಚಾಗಿರುತ್ತದೆ. ರಸ್ತೆ ನಿಧಿಯನ್ನು ಏರ್ಪಡಿಸಿದ್ದರಿಂದ ಆ ಬಾಬಿನಲ್ಲಿ ೨|| ಲಕ್ಷ, ೧೯೪೦ ತಯಾರಿಕೆಗಾಗಿ ವ್ಯವಸಾಯದ ಇಲಾಖೆಗೆ ೨ ಲಕ್ಷ ಹೆಚ್ಚಾಗಿ ಖರ್ಚಾಗಿರುತ್ತದೆ. ರೆವಿನ್ಯೂ ಬಾಬಿಗೆ ಸೇರದಿರುವ ನೀರಾವರಿ ಕಾಮಗಾರಿಗಳಿಗೆ ಈ ವರ್ಷ ೪೯|| ಲಕ್ಷ ಹಣವನ್ನು ತೆಗೆದಿಟ್ಟಿತ್ತು. ಇರ್ವಿನ್ ಕಾಲುವೆಯ ಕೆಲಸವು ಚುರುಕಾಗಿ ನಡೆಯಲು ೬ ಲಕ್ಷ ರೂ. ಹೆಚ್ಚಿಗೆ ಸ್ಯಾಂಕ್ಷನ್ ಮಾಡಲಾಯಿತು. ವರ್ಷಾಂತ್ಯದಲ್ಲಿ ನೀರಾವರಿ ಕೆಲಸಗಳಿಗೆ ಒಟ್ಟಿಗೆ ೯೫ ಲಕ್ಷ ರೂಪಾಯಿ ಖರ್ಚು ಮಾಡಿದಂತಾಗುವುದು. ಈ ಸಾಲಿನಲ್ಲಿ ಸಿಲ್ಕು ೪೩ ಲಕ್ಷ ರೂ. ಸಾಲಿನಕೊನೆಯಲ್ಲಿ ವಿಶೇಷ ನಿಧಿಗಳಲ್ಲಿರುವ ಹಣ—

ವಿಶೇಷ ಖರ್ಚುಗಳಿಗೆ ರಿಜರ್ವ್	೧೦.೫೧
ಇರಿಗೇಷನ್ ಮೂಲಧನದ ರಿಜರ್ವ್	೪.೦೪
ಇರಿಗೇಷನ್ ಸೆಸ್ ಫಂಡು	೪.೦೦
ಒಟ್ಟು	೧೮.೫೫

೧೯೩೯—೪೦ ರ ಅಂದಾಜುಪಟ್ಟಿ

ಈಗ ನಿರೀಕ್ಷಿಸಿರುವಂತೆ ಬರುವ ಆದಾಯ ೩೭೦.೩೯ ಲಕ್ಷ ಖರ್ಚು ಸುಮಾರು ೩೮೫.೬೦ ಲಕ್ಷ. ಇದರಲ್ಲಿ ೧೫ ಲಕ್ಷ ರಿಜರ್ವ್ ಹಣದಿಂದ ತೆಗೆದುಕೊಳ್ಳಲ್ಪಡುವುದು. ವರ್ಷದ ಆಯವ್ಯಯಗಳು ಸಮತೂಕದಲ್ಲಿದ್ದು ೫೦ ಸಾವಿರ ರೂಪಾಯಿ ಸಿಲ್ಕು ಉಳಿಯಬಹುದೆಂದು ನೆನಸಲಾಗಿದೆ.

ನಂಜನಗೂಡು ತಾ|| ಹೊರತು ಉಳಿದ ತಾ|| ಗಳಲ್ಲಿ ರಿಸೆಟ್ಲ್‌ಮೆಂಟ್ ಕೆಲಸವು ಪೂರೈಸಿದೆ. ಅದ್ದರಿಂದ ಬರುವ ವರ್ಷದ ರೆವಿನ್ಯೂ ಆದಾಯವು ಹೊಸ ಲೆಕ್ಕದ ಆಧಾರದ ಮೇಲೆ ಮಾಡಲಾಗಿದೆ ರೈಲ್ವೆ ಮತ್ತು ಎಲೆಕ್ಟ್ರಿಕ್ ಇಲಾಖೆಗಳಿಂದ ಹೆಚ್ಚು ಆದಾಯ ಬರಬಹುದು.

ಖರ್ಚು ಬಾಬುಗಳು

ಈ ಸಾಲಿನ ಯಥಾರ್ಥ ಖರ್ಚುಗಳಿಗಿಂತ ಬರುವ ಸಾಲಿನಲ್ಲಿ ೫ ಲಕ್ಷ ಹೆಚ್ಚು ಖರ್ಚಾಗುವುದು. ನೀರಾವರಿ, ವಿದ್ಯಾಭ್ಯಾಸ, ಮತ್ತು ವ್ಯವಸಾಯದ ಬಡಾವಣೆಗಾಗಿ ಈ ಹಣವು ಉಪಯೋಗಿಸಲ್ಪಡುವುದು. ನೀರಾವರಿ ಕಾಮಗಾರಿಗಳಿಗೆ ೧೫ ಲಕ್ಷವನ್ನು ಒದಗಿಸಲಾಗಿರುವುದು. ಈ ಬಾಬಿಗೆ ಇನ್ನೂ ಹೆಚ್ಚಿಗೆ ಹಣ ಬೇಕಾಗಿದ್ದರೂ ಒದಗಿಸಲಾಗುವುದು.

ಜನರಿಗೆ ಉಪಯುಕ್ತವಾಗುವಂತೆ ಅಪಾರ ಹಣವನ್ನು ಖರ್ಚುಮಾಡಲು ವಿಶ್ವವಿದ್ಯಾನಿಲಯನಲ್ಲಿ ಅವಕಾಶವಿರುವುದು. ಆದರೆ ಸರ್ಕಾರದ ಆದಾಯವೆಷ್ಟಿರುವುದೆಂಬುದನ್ನು ನೋಡಿಕೊಂಡು ಆ ಖರ್ಚನ್ನು ಗೊತ್ತುಮಾಡಬೇಕಾಗಿದೆ. ಅದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಇಷ್ಟು ಹಣವನ್ನು ಇಷ್ಟು ವರ್ಷಗಳಕಾಲ ಕೊಡುವೆವೆಂದು ಮೊದಲೇ ನಿರ್ಧರಿಸಿ ಅದಕ್ಕನುಗುಣವಾದ ಅಭಿವೃದ್ಧಿ ಕಾರ್ಯಗಳನ್ನು ಆ ಇಲಾಖೆಯು ತಡೆಯಿಲ್ಲದೆ ನಡೆಸುವಂತೆ ಏರ್ಪಡಿಸಿದೆ. ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ಶತಗತಿಯ ಮತ್ತು ಪರೀಕ್ಷೆಯ ಸಂಬಳವನ್ನು ಇತರ ವಿಶ್ವವಿದ್ಯಾನಿಲಯಗಳ

ಯುಕ್ತವೈಶ್ಯಪುತ್ರರಾದ ಮ|| ರಾ|| ಪಿ. ಆರ್. ಸುಬ್ರ
ಹ್ಮಣ್ಯರವರು ಈ ವರ್ಷದ ಬಿ. ಎ. ಪರೀಕ್ಷೆಯಲ್ಲಿ
ದರ್ಜೆ ...ರು ಸ್ಟೇಟಿಗೆಲ್ಲಾ ಫಸ್ಟ್ ಪಾಸಾಗಿರುವರೆಂ
ಗೆ ಆಗ್ರ...ವನ್ನು ಕೇಳಿ ಸಂತೋಷಿಸುತ್ತೇವೆ.

ಒಂದು ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ನಿಮಿ
ತ್ತ ...ಈ ದಿನ ಬೆಳಿಗ್ಗೆ 10 ಗಂಟೆಗೆ ಅರಮನೆಯ
...ಮಂಟಪದ ಸಭಾಂಗಣದಲ್ಲಿ ದರ್ಬಾರು ನೆರವೇ
ವರ್ಷದ ...ದೆ ಸಾಯಂಕಾಲ ೫ ಗಂಟೆಗೆ ಶ್ರೀಮನ್ಮಹಾ
ಇದರಿಂದ ...ರ ಅಶ್ವಾರೋಹಣೋತ್ಸವವು ಸಕಲ ರಾಜ
ಇದರೊಡನೆ ...ಯೊಡನೆ ಬಹು ವೈಭವದಿಂದ ನೆರವೇರುವದು.
ಅದಕ್ಕಾಗಿ ೮
ಹೆಚ್ಚು ಗ್ರಾ...ಳೂರಿನ ಚೀಫ್‌ಕೋರ್ಟಿಗೆ "ಹೈಕೋರ್ಟ್"
...ಸರನ್ನಿಡಬೇಕೆಂದು ಸರ್ಕಾರದವರು ಒಂದು
ಇತರ ...ಮಸೂದೆಯನ್ನು ತಂದು ಪ್ರಜಾಪ್ರತಿನಿಧಿಸಭೆಯಲ್ಲಿ
ಗ್ರಾಂಟುಗಳ ಇಟ್ಟರು. ಇದಕ್ಕೆ ಸಭೆಯಲ್ಲಿ ಬಹುಮತವ
ನ್ನೂ ಇಲಾಖೆತು. ಇದು ನ್ಯಾಯವಿಧಾಯಕಸಭೆಯಲ್ಲಿಯೂ
ಚ್ಛಕ್ತಿ ಬಡಾ...ಾದರೆ ಆ ರೀತಿ ಹೆಸರನ್ನು ಬದಲಾವಣೆ ಮಾ
ಇಲಾಖೆಗೆ ೧
ಳನ್ನು ತೆಗೆದು
ವರ್ಜನಕ ...ಳೂರು ಸಿಟಿ ಚಾಮರಾಜಪೇಟೆಯಲ್ಲಿರುವ
ಲಕ್ಷ: ...ಟಾಗೋರ್ ಕಂಪೆನಿಯವರು ತಾವು ಪ್ರ
...ಸುವ "ದಾಂಪತ್ಯ ವಿಜ್ಞಾನ" ಅಥವಾ
ನೀರಾವರಿ...ಶ್ರಮ ರಹಸ್ಯ" ಎಂಬ ಗ್ರಂಥಕ್ಕೆ ಸಂಬಂ
ಕೊಡಲಾಗುವ ನೋಟೀಸನ್ನು ಈ ಸಂಚಿಕೆಯ ಸಂಗಡ ಹಂ
ಬಾಬಿನಿಂದಲೂ ಸಮಸ್ತರೂ ಇದನ್ನು ಓದಿ ಅದರಿಂದಾಗು
ಕೊಳ್ಳಲ್ಪಡುವ...ನವನ್ನು ಹೊಂದತಕ್ಕದ್ದು.
ವರಮಾನದ
ಲಕ್ಷ ರೂಪಾ...ರು ಬೆಂಗಳೂರು ಪಟ್ಟಣಗಳಲ್ಲಿ ಲೈಸೆನ್ಸು
ನಂದರೆ:— ...ಹಾರೂ ರಾಜಬೀದಿಗಳಲ್ಲಾಗಲಿ, ಆ ನವಿ...
ರೈಲ್ವೆ ...ರಿ ಸಭೆ, ಕೂಟ, ಮೆರವಣಿಗೆಗಳನ್ನು ನಡೆಯ
ಇರವಿ...ದು ಮ್ಯಾಜಿಸ್ಟ್ರೇಟರು ಆರ್ಡರ್ ಮಾಡಿ
ಕ್ಷನ್...ಈ ಆರ್ಡರು ಪ್ರಜಾಸ್ವಾತಂತ್ರ್ಯವನ್ನು
ವಿದ್ಯು...ನಾಶಮಾಡುವುದಾದ್ದರಿಂದ ಇದನ್ನು ರದ್ದುಪ
ಕ್ಕೆಗಾ...
ಭದಾ... ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗ
...ಗಿ ಚರ್ಚಿಸಿದರು.

...ರು ಯುವಕಸಂಘದ ಪರವಾಗಿ ಪ್ರಜಾ
ಶಿವಮೊಗ್ಗ...ನ್ನು ಕುರಿತು "ನೀವು ಮೆಂಬರುಗಳೋ
ದೊಳಗಾಗಿ ರಾ...? ದಾಕ್ಷಿಣ್ಯಕ್ಕೆ ಒಳಗಾಗುವಿರೋ
ಕಾಲುವೆ ಕೆಲಸ...ತಂತ್ರ್ಯವನ್ನು ಸ್ಥಾಪಿಸುವಿರೋ?" ಎಂ
ನೆ ಇಸ್ವಿ ಜೂನ್...ಬೋರ್ಡುಗಳನ್ನೂ, ನೋಟೀಸುಗಳನ್ನೂ
ನೀರುಹಾಯಿಸಲ್ಪ...
ಸಾಗರದಲ್ಲಿ ೧...ಸೋಮವಾರವೂ ಮಂಗಳವಾರವೂ ಪ್ರಜಾಪ್ರ
ನ್ನು ಬಡಾಯಿಸುಂಗಳಿಯ ಮುಂದೆಯೂ, ಪೇಟೆಗಳಲ್ಲಿಯೂ
ವುದು ಈ ಎಲ್ಲಾ ಅವುಗಳನ್ನು ಪೋಲೀಸರು ಕಿತ್ತುಕೊಂಡ
ಜೂರುಮಾಡಿರುವ...ಬರುತ್ತದೆ.

ಬೆಂಗಳೂರು ...ಮ ತಾಲೂಕು ಖಜಾನೆಯಲ್ಲಿ 13,00
ಏರ್ಪಾಟುಗಳು
ಭಾರಿಕಾಮಗಾ...ಳನ್ನು ಅಪಹರಿಸಿದರೆಂದು ಶಿರಸ್ತೇದಾರ
ದೃಷ್ಟಿಯಿಂದ ನ...ವೆಯ್ಯಂಗಾರ್, ಹೆಡ್‌ಗುಮಾಸ್ತೆ ಶ್ರೀಕ
ಕ್ಕಾಗಿ ಏರ್ಪಡಿಸಿ...ಫ ಹೊನ್ನಯ್ಯ ಈ ಮೂವರ ಮೇ
ಮೇಲೆ ಅದನ್ನು ...ಅವರಿಗೆ 2-3 ವರ್ಷದಂತೆ ಕಠಿಣ ಶಿಕ್ಷೆ
...ರೂಪಾಯಿಗಳ ಜುಲ್ಮಾನೆಯೂ ಆಗಿತ್ತು.
ಬಟ್ಲರ್ ...ವಿರು ಚೀಫ್‌ಕೋರ್ಟಿನಲ್ಲಿ ಅಪ್ಪೀಲು ಮಾ
ಗಳನ್ನು ಹೇ...ಅಪರಾಧವು ರುಜುವಾತಾಗುವುದಿ
ವಿಚಾರದಲ್ಲಿ ವರ...ಕೋರ್ಟಿನವರು ಅವರೆಲ್ಲರನ್ನೂ ಬಿಡು
ಸ್ಥಿತಿಗತಿಗಳಿಂದ ಬಿ...ಗಿ ಮಾಡಿದರು.
ಭವಿಷ್ಯದಲ್ಲಿ ಆರ್ಥಿ...
ಗೂಡುವ ಸಂಭವವಿರದ ... ಮೈಸೂರಾಯರಾದ ...
ಸರ್ಕಾರವೇ ಈಗಿನ ಪತಿಗಳು ಬರುವ ನವಂಬರ್ ತಾ
ಆದರೆ ಆ ಸಂಯು...ಗಾ ಜಿಲ್ಲೆಯಲ್ಲಿರುವ ಗೆರಸೊಪ್ಪ
ಸಹಾನುಭೂತಿ ಮ...ಸಿ ಅಲ್ಲಿ ಒಂದೆರಡು ದಿವಸಗಳಿದ್ದು ಸ್ಥ
ಹದಿಯಬೇಕು.
ಹಕ್ಕುಬಾಧ್ಯತೆಗಳ... ಪರಾಶೀಲಿಸಿ ರಾಜಧಾನಿಗೆ ಬಂ
ಘಟನೆಗಾದರೂ ...ನಕೋಟೆ ಕಾಡಿಗೆ ಬಿಜ್ಜೈಸಿ ಅಲ್ಲಿ
ಆದರೆ ಈ ವಿಚಾರ... ವಾಸಮಾಡಿ ಆನೆಗಳನ್ನು ಹಿಡಿಯ
ವುದು ಉತ್ತಮ. ...ನ್ಯಗಳನ್ನು ನರಪಣಿಗೆಗಳಿಂದ ಬಂಧಿಸ
ನಮ್ಮ ಸಂಸ್ಥಾನದ ...ಳನ್ನು ಪರಾಮರ್ಶಿಸಿಕೊಂಡು ಹಿಂದಿ
ಸರ್ವ ಸಮೃದ್ಧಿ...ನುಬರುತ್ತದೆ.
ದೆ. ನಾವು ಕಮಿಟಿ...
ದಮ್ಮ ಅದೇ ಉದ್ದೇ...ಒಂದು ಸಾರಾಯಿ ಅಂಗಡಿಗೆ ಬೆಂ
ಪ್ರಾಮ ಮತ್ತು ಸ...ಮೃತರಾದರು. ನಾಲ್ವರು ಮರಣೋ
ಸಲಹೆಗಳು ಕಾರ್ಯ...ರು, ಹಾಗೂ 17 ಜನರಿಗೆ ತುಂಬ
ಗೆ ಲಾಭವಾಗುತ್ತದೆ
...ರುವವು

ವರ್ತಮಾನಸಂಗ್ರಹ.

ಪೂನಾದಲ್ಲಿ ಗೋಖಲೆ ಎಂಬ ತರುಣನೊಬ್ಬನು ತಲೆಕೆಳಗಾಗಿ ಹಾರಿ ಈಜಬೇಕೆಂದು ಒಂದು ಭಾವಿಯೊಳಗೆ ಹಾರಲು ಕಲ್ಲುಬಂಡೆಗೆ ಬಡಿದು ಮೃತಪಟ್ಟನು.

ಗಂಗಾಯಮುನಾ ನದಿಗಳ ಜಲದಲ್ಲಿ ಕಾಲರಾ ಕ್ರಿಮಿಗಳನ್ನು ನಾಶಮಾಡುವ ಗುಣವಿರುತ್ತದೆಂದು ಡಾಕ್ಟರ್ ಇ. ಹೆಚ್. ಹೋಕಿನ್ಸರು ಅಭಿಪ್ರಾಯಪಟ್ಟಿರುವರು.

ಬೊಂಬಾಯಿ ಲೆಮಿಂಗ್‌ಟನ್ ಬೀದಿಯಲ್ಲಿರುವ ಒಂದು ಸಿನಿಮಾ ಕಂಪನಿಯ ಉಗ್ರಾಣಕ್ಕೆ ಬೆಂಕಿಬಿದ್ದು ಕಸ್ತೂರಿಬಾಯಿ ಮತ್ತು ಜೇರಾಬಾಯಿ ಎಂಬಿಬ್ಬರು ನರ್ತಕಿಯರು ಮೃತರಾದರು.

ಇಂಗ್ಲೆಂಡಿನ ಸೋಮರ್ ಸೆಟ್ಟಿನಲ್ಲಿದ್ದ ಮಿಸೆಸ್ ಸಾರಾ ಸಾಲ್ ಎಂಬ 105 ವರ್ಷದ ಮುದುಕಿಯು ಮೊನ್ನೆ ಮೃತಳಾದಳು. ಇವಳಿಗೆ 9 ಮಕ್ಕಳೂ, 36 ಮೊಮ್ಮಕ್ಕಳೂ, 40 ಮರಿಮಕ್ಕಳೂ ಇರುವರಂತೆ!

ನ್ಯೂಯಾರ್ಕಿನ ಒಂದು ಆಸ್ಪತ್ರೆಯಲ್ಲಿ ಒಬ್ಬನ ಕಣ್ಣನ್ನು ತೆಗೆದು ಇನ್ನೊಬ್ಬ ಕುರುಡನಿಗಿಡಲು ಆ ಕುರುಡನು ಸಕಲಪದಾರ್ಥಗಳನ್ನು ಚನ್ನಾಗಿ ನೋಡುತ್ತಿರುವನಂತೆ! ಪಾಶ್ಚಾತ್ಯರ ಬುದ್ಧಿಶಕ್ತಿಗೆ ಬೆಲೆಯೇ ?

ರಾಜ್ಯತ್ಯಾಗ ಮಾಡಿರುವ ಅಮಾನುಲ್ಲಾಖಾನರು ಎಲ್ಲಿದ್ದರೂ ಇನ್ನು ಒಂದು ವರ್ಷದೊಳಗಾಗಿ ಪುನಃ ಸಿಂಹಾಸನವನ್ನೇರುವರೆಂದು ಹೈದರಾಬಾದದ ಮುಸಲ್ಮಾನ ಜ್ಯೋತಿಷಿಯೋರ್ವನು ಭವಿಷ್ಯ ಹೇಳಿರುವನಂತೆ!

ಅಮೇರಿಕೆಯ ಮಿ. ಹೆರಾಲ್ಡ್‌ಸ್ಮಿತ್ ಎಂಬ ಕೋಟ್ಯಧೀಶ್ವರರು ತಮ್ಮ ಆಸ್ತಿಯ ವ್ಯವಸ್ಥೆಯ ವಿಷಯದಲ್ಲಿ ಸರಿಯಾದ ಸಲಹೆ ಕೊಟ್ಟವರಿಗೆ ಒಂದು ಸಾವಿರ ಡಾಲರ್ ಇನಾಮು ಕೊಡುವದನ್ನು ನಿಶ್ಚಯಿಸಿದ್ದಾರೆ.

ನಾಗಪುರದ ನನ್ನಭಾ ಮೊದಲಿಯಾರ್ ಎಂಬ 17 ವರ್ಷದ ತರುಣನು ತನ್ನ ... ಮು ತನ್ನನ್ನು ಕಾಶಿಯಲ್ಲಿರುವ ಥಿಯಾಸಾಫಿಕಲ್ ಸೊಸೈಟಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಲಿಲ್ಲವೆಂದು, ರೈಲ್‌ಗಾಡಿಗೆ ಸಿಲುಕಿ ಮೃತಪಟ್ಟನು.

ಪಾಶ್ಚಾತ್ಯ ಸಿನಿಮಾನರ್ತಕಿಯೊಬ್ಬಳು ತನ್ನ ದೇಹದ ಬೊಜ್ಜು ಕಡಿಮೆಯಾಗಲೆಂದು ಶಸ್ತ್ರಚಿಕಿತ್ಸೆಯನ್ನು ಮಾಡಿಕೊಂಡು ಅನೇಕ ಪೌಂಡುಕೊಬ್ಬನ್ನು ತೆಗಿಸಿಕೊಂಡಳಂತೆ! ಆದರೆ ಬೊಜ್ಜು ಮೊದಲಿಗಿಂತಲೂ ಹೆಚ್ಚಾಗಿ ಬೆಳೆಯಿತಂತೆ!

ಬಿರ್ಹಾಪುರದ ಹಿಂದೂಮುಸಲ್ಮಾನರಲ್ಲಿ ...ವು ನಡೆದು ಒಂದು ದೇವಸ್ಥಾನದಲ್ಲಿ ಮಲಗಿದ ... ಹಿಂದೂಸಾಧುಗಳನ್ನೂ ಸುತ್ತ ಒಬ್ಬ ಹಿಂ... ಗನನ್ನೂ ಮುಸಲಮಾನರು ಚಾಕುವಿನಿಂ... ಕೊಂದರು. ನೀಚಕೃತ್ಯ!

ವಿಮಾನ ಯಂತ್ರಗಳ ಪೋಸ್ಟು ಮೂಲಕ ಬಂದ ಎರಡು ರಿಜಿಸ್ಟರು ಕಾಗದಗಳನ್ನು ವಿಳಾಸದವರಿಗೆ ಬೊಂಬಾಯಿಯಲ್ಲಿ ಕಳೆದ ಶನಿವಾರ ಪಾವತಿಮಾಡಿದಾಗ್ಗೆ ಅವುಗಳಲ್ಲಿದ್ದ 13,540 ರೂಪಾಯಿಗಳ ಕರೆನ್ಸಿ ನೋಟುಗಳು ಮಾಯವಾಗಿದ್ದವು.

ಸಾರ್ವಭೌಮರ ಪುತ್ರರಲ್ಲೊಬ್ಬರಾದ ಡ್ಯೂಕ್ ಆಫ್ ಗ್ಲಾಸೆಸ್ಟರ್ ಎಂಬುವರು ಪೋಲೋ ಪಂದ್ಯದ ಆಟವನ್ನಾಡುತ್ತಿದ್ದಾಗ ಕುದುರೆಯಿಂದ ಕೆಳಕ್ಕೆ ಬಿದ್ದುಬಿಟ್ಟರು. ಇದರಿಂದ ಬೆನ್ನು ಪಕ್ಕದ ಮೂಳೆಗೆ ಬಲವಾದ ಪೆಟ್ಟುಬಿದ್ದು ಚಿಕಿತ್ಸೆ ಹೊಂದುತ್ತಿರುವರು.

ಆಫ್ರಿಕಾದೇಶಕ್ಕೆ ಸೇರಿದ ಪ್ರಿಟೋರಿಯಾ ಪಟ್ಟಣದ ಸಮೀಪದ ಒಂದು ಪರ್ವತದಲ್ಲಿರತಕ್ಕ ಪ್ರಾಣಿಗಳು 10 ಸಾವಿರ ಟನ್ ಮಣ್ಣನ್ನು ತಿಂದುಬಿಟ್ಟಿರುವವು. ಈ ಪ್ರಾಣಿಗಳು ಹುಲ್ಲು ತಿನ್ನುವದನ್ನು ಬಿಟ್ಟು ಮಣ್ಣನ್ನೇ ತಿಂದು ತಿಂದು ಕೊಬ್ಬಿರುವವಂತೆ!

ಮಧುರೆಯಲ್ಲಿ ಮುಕ್ತಾ ಇಬ್ರಾಹಿಂಸಾಹೇಬ ಎಂಬ ಕುಡುಕನೊಬ್ಬನು ಯಥೇಚ್ಛವಾಗಿ ಸುರಾಪಾನಮಾಡಿ, ತನ್ನನ್ನು ಬೆದರಿಸಲು ಬಂದ ಕಾನ್ಸ್‌ಟೇಬಲ್ಲನೊಬ್ಬನ ಮೇಲೆ ಹಾರಿ ಅವನ ಕಿವಿಯನ್ನು ಕಚ್ಚಿ, ತನ್ನ ಹಲ್ಲುಗಳಿಗೆ ಸಿಕ್ಕಿದಷ್ಟು ಕಿವಿಯನ್ನು ಕಡಿದು ನುಂಗಿದನಂತೆ!

ಜರ್ಮನಿಯ ವೈಸ್‌ಬರ್ಗ್ ಎಂಬ ಪತ್ರಿಕೆಯು ವಿಷಯಾಂಧವಾದ ಇಗ್ಲೆಂಡ್‌ದೇಶವು ಬೇಗನೆ ಸಮುದ್ರದಲ್ಲಿ ಮುಳುಗಿಹೋಗುವದೆಂದೂ ಅದರೊಂದಿಗೆ ಐರ್ಲೆಂಡ್, ಅಮೇರಿಕಾ, ಮತ್ತು ಯೂರೋಪಿನ ಕೆಲವು ಭಾಗಗಳೂ ಮುಳುಗುವವೆಂದೂ ಸಹ ಪ್ರಕಟಿಸಿರುವದು.

ದೇಹಲಿಯ ಅಸೆಂಬ್ಲಿಯಲ್ಲಿ ಬಾಂಬುಗಳನ್ನೆಸೆದ ಭಗತ್‌ಸಿಂಗ್ ಮತ್ತು ದತ್ತ ಈ ಉಭಯರಿಗೆ ಆಮರಣಾಂತ ದ್ವೀಪಾಂತರವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಜಡ್ಜ್‌ಮೆಂಟನ್ನು ಕೇಳಿದ ಕೂಡಲೆ ಅಪರಾಧಿಗಳಿಬ್ಬರೂ "ಕ್ರಾಂತಿಯು ಬಹುಕಾಲ ಬಾಳಲಿ ' ಎಂದು ಕೂಗಿದರಂತೆ!

ಮನಮಾಡದಲ್ಲಿ ನಡೆದ ಸಿಡಿಮದ್ದಿನ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟರು ಇಬ್ಬರು ಅಪರಾಧಿಗಳಿಗೆ ಏಳುವರ್ಷಗಳ ಕಠಿಣಶಿಕ್ಷೆಯನ್ನು ವಿಧಿಸಿದರು. ಮನಮೋಹನಗುಪ್ತನೆಂಬ ಅಪರಾಧಿಯು "ಸೆರೆಮನೆಯಿಂದ ಹಿಂತಿರುಗಿ ಬಂದಮೇಲೆ ಪುನಃ ಇಂತಹ ಕೃತ್ಯವನ್ನೇ ಮಾಡುವೆನು" ಎಂದು ನುಡಿದನಂತೆ!

ಮುಂದಿನ ತಿಂಗಳು 2 ನೆಯ ತಾರೀಖಿನ ದಿನ ನಡೆಯುವ ಪಾರ್ಲಿಮೆಂಟಿನ ಸಭೆಗೆ ಚಕ್ರವರ್ತಿಯವರು ದಯಮಾಡಿಸಿ ಸಾರ್ವಭೌಮರ ಪ್ರತಿನಿಧಿಯಾಗಿ ಸಭೆಯಲ್ಲಿ ಭಾಷಣವನ್ನು ಓದುವರೆಂದೂ, ಚಕ್ರವರ್ತಿನಿಯವರ ಸಂಗಡ ಪ್ರಿನ್ಸ್‌ಆಫ್‌ವೇಲ್ಸ್‌ರವರು ದಯಮಾಡಿಸುವರೆಂದೂ ತಿಳಿದುಬರುತ್ತದೆ.

ಅಮಾನುಲ್ಲಾಖಾನರ ಪತ್ನಿಯವರಾದ ಸೌರಿಯಾ ರಾಣಿಯವರು ಕಳೆದ 7ನೆಯ ತಾರೀಖಿನದಿನ ಬೊಂಬಾಯಿಯ ಸೆಂಟಜಾರ್ಜ್ ಆಸ್ಪತ್ರೆಯಲ್ಲಿ ಒಂದು ಹೆಣ್ಣು ಶಿಶುವನ್ನು ಪ್ರಸವಿಸಿದರು. ಇಂಡಿಯಾ ದೇಶದಲ್ಲಿ ಜನಿಸಿದುದರ ಸ್ಮಾರಕವಾಗಿ ಆ ಶಿಶುವಿಗೆ "ಹಿಂದಿಯಾ" ಎಂದು ನಾಮಕರಣಮಾಡಿರುವರು. ಸ್ತುತ್ಯ!

ರಂಗೂನಿನ ಸೆಂಟ್ರಲ್ ಜೈಲಿನಲ್ಲಿ ಖೂನಿಯನ್ನು ಮಾಡಿದನೆಂಬ ಅಪಾದನೆಯ ಮೇಲೆ ಕಾರಾಗೃಹವಾಸವನ್ನು ಅನುಭವಿಸುತ್ತಿರುವ ಒಬ್ಬ ಚೀನದೇಶದವನು ಜೈಲಿನ ಮರಗೆಲಸದ ಡಿಪಾರ್ಟ್‌ಮೆಂಟಿನಲ್ಲಿ ತನ್ನ ಜೊತೆಯಲ್ಲಿ ಕೆಲಸಮಾಡುತ್ತಿದ್ದ ಇನ್ನೊಬ್ಬ ಚೀನದೇಶದವನನ್ನು ಉಳಿಯಿಂದ ಹೊಡೆದು ಕೊಂದುಹಾಕಿರುವನು.

ಹಿಂದೂದೇಶದಲ್ಲಿ ವಿದೇಶಿಯರು ಸೀಮೆಯೆಣ್ಣೆ ಮತ್ತು ಪೆಟ್ರೋಲ್ ವ್ಯಾಪಾರದಿಂದ ವಿಶೇಷ ಲಾಭವನ್ನು ಹೊಂದುತ್ತಿರುವರು. ಬರ್ಮಾ ಆಯಿಲ್ ಕಂಪೆನಿಯ 100 ಪೌಂಡಿನ ಶೇರಿನ ಬೆಲೆಯು ಈಗ 2400 ಪೌಂಡು ಆಗಿರುವದು. 25 ವರ್ಷಗಳಲ್ಲಿ 1600 ಪೌಂಡುಗಳ ನಫೆಯನ್ನು ಹಂಚಿರುವರಂತೆ! ಭಾರತೀಯರಿಂದ ದುಡ್ಡನ್ನು ಸೆಳೆಯುವ ಕಸುಬು ವಿದೇಶೀಯರಿಗೆ ಗೊತ್ತು!

ಮಾಂಟ್ರೀಲಿನ ಡಾಲ್‌ಹೌಸಿ ಯೂನಿವರ್ಸಿಟಿಯ ಪ್ರೊಫೆಸರರಾದ ಡಾಕ್ಟರ್ ಗಿಬ್ ಎಂಬವರು ಕೆಲವು ಬೆಕ್ಕುಗಳ ಹೃದಯವನ್ನು ತೆಗೆದು ಅದಕ್ಕೆ ಬದಲಾಗಿ ವಿದ್ಯುಚ್ಛಕ್ತಿಯಿಂದ ಚಲಿಸುವ ರಬ್ಬರ್ ಹೃದಯವನ್ನಿಟ್ಟು ಪರೀಕ್ಷಿಸುವಲ್ಲಿ 4 ಬೆಕ್ಕುಗಳು ಕೆಲವು ಘಂಟೆಗಳವರೆಗೆ ಜೀವಿಸಿದ್ದುವಂತೆ! ಹೀಗೆ ಕೃತ್ರಿಮಹೃದಯದಿಂದ ರಕ್ತಚಲನೆಯು ನಡೆದದ್ದು ಇದೇ ಮೊದಲು. ಇವನು ನವೀನಬ್ರಹ್ಮನೇ ಸರಿ!

ಫ್ರೆಂಚ್ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಗಳು ಮಿತಿಮೀರಿ ಮಾತನಾಡಿದರೆ, ಪ್ರೆಸಿಡೆಂಟರು ಬಹಳ ಬೇಸತ್ತವರಂತೆ! ಆ ಕೂಡಲೆ "5 ನಿಮಿಷಗಳು ಮಾತ್ರ" ಎಂದು ಬರೆಯಲ್ಪಟ್ಟ ಕನ್ನಡಿಯು ಭಾಷಣಮಾಡುವವರ ಎದುರಿಗೆ ಕಾಣಿಸುವದಂತೆ! ಅದನ್ನು ಗಮನಿಸದಿದ್ದರೆ "ನಿಲ್ಲಿಸು" ಎಂಬುದಾಗಿಯೂ, ಅದನ್ನೂ ಮೀರಿ ಮಾತನಾಡಿದರೆ "ಹೊರಟುಹೋಗು" ಎಂಬುದಾಗಿಯೂ ಕನ್ನಡಿಯಲ್ಲಿ ಅಕ್ಷರಗಳು ಕಾಣಿಸುವವಂತೆ!

ಜಗದ್ಗುರು ಅವತಾರಿಯೆಂದು ಹೇಳಿಕೊಳ್ಳುತ್ತಿರುವ ಜೆ. ಕೃಷ್ಣಮೂರ್ತಿಗಳು ಕ್ಯಾಲಿಫೋರ್ನಿಯಾ (ಅಮೆರಿಕಾ)ದಲ್ಲಿ ಮೋಟಾರ್ ನಡೆಯಿಸಿಕೊಂಡು ಹೋಗುತ್ತಿರುವಾಗ್ಗೆ, ಬಿಸಲಿನ ಜಳದಿಂದ ಎದುರಿಗೆ ಬರುತ್ತಿದ್ದ ಮತ್ತೊಂದು ಮೋಟಾರು ಇವರ ಕಣ್ಣಿಗೆ ಕಾಣಿಸದೆ ಎರಡು ಮೋಟಾರುಗಳೂ ಒಂದಕ್ಕೊಂದು ತಗಲಿ ಕೃಷ್ಣಮೂರ್ತಿಗಳ ಮುಖದಮೇಲೆ ಕೆಲವು ಗಾಯಗಳಾಗಿರುವವಂತೆ! ಅಯ್ಯೋ ಪಾಪ! ದೇವರಿಗೂ ಕಷ್ಟತಪ್ಪಲಿಲ್ಲವಲ್ಲ?

ಪ್ಯಾರಿಸ್ಸಿನಲ್ಲಿ "ಪ್ಯಾರಿಸ್ಸಿನರಾಣಿ" ಎಂದು ಹೆಸರು ಪಡೆದ ಬಹು ಸುಂದರಿಯಾದ "ಸಿಮೂನೆಗಬಾರ್ಡ" ಎಂಬಾಕೆಯು ಅಲ್ಲಿಯ ಒಂದು ಥೀಯೇಟರಿನಲ್ಲಿ ನರ್ತನ ಮಾಡಲು ಒಪ್ಪಂದಮಾಡಿಕೊಂಡಳು. ನರ್ತನಮಾಡಿಸುವವರು ಅವಳಿಗೆ ತನ್ನ ದೇಹದ ಸೌಂದರ್ಯವು ಜನರಿಗೆ ಚೆನ್ನಾಗಿ ಕಾಣುವಂತೆ ಅಲ್ಪವಾದ ಉಡಪನ್ನು ಧರಿಸಿ ನರ್ತನಮಾಡಬೇಕೆಂದು ಹೇಳಿದರು. ಅದಕ್ಕೆ ಅವಳು ಒಪ್ಪದಿರಲು ನಾಟಕಶಾಲೆಯವರು ಅವಳಮೇಲೆ ದಾವಾಮಾಡಿರುವರಂತೆ!

ಲಾಹೋರಿನಲ್ಲಿ ಮಹಮದ್ ಅಬಾಬಾಕನೆಂಬುವನು ತನ್ನ ತಾಯಿಯ ಶವವನ್ನು ಟ್ರಂಕಿನೊಳಗೆ ಹಾಕಿಕೊಂಡು ಹೋಗುತ್ತಿದ್ದುದು ಪತ್ತೆಯಾಗಿ ಪೋಲೀಸಿನವರು ವಿಚಾರಣೆಮಾಡುವಲ್ಲಿ "ನನ್ನ ತಾಯಿಯು ಜೈಲಿನಲ್ಲಿ ಸತ್ತಳು; ಶವವನ್ನು ಕೊಡಿ ಎಂದು ಕೇಳಿದೆನು; ಅವರು ಕೊಡಲಿಲ್ಲ. ಅವಳನ್ನು ಹೂಳಿದಮೇಲೆ ನಾನು ನೆಲದಿಂದ ಕಿತ್ತುಕೊಂಡು ತಂದು ಈ ಟ್ರಂಕಿನಲ್ಲಿಟ್ಟು ಪೂಜೆಮಾಡುತ್ತಿದ್ದೇನೆ" ಎಂದು ಜವಾಬು ಕೊಟ್ಟನಂತೆ! ಪೋಲೀಸ್ ವಿಚಾರಣೆಯು ನಡೆಯುತ್ತಿದೆ.

ಅಮೇರಿಕೆಯ ಚಿಪ್ಪ ಎಂಬಲ್ಲಿ ಇಬ್ಬರು ರೈತರು ತಮ್ಮ ಹೆಂಡರುಮಕ್ಕಳನ್ನು ಬದಲಾಯಿಸಿಕೊಂಡರಂತೆ! ಒಬ್ಬನಿಗೆ 5 ಜನ ಮಕ್ಕಳು, ಇನ್ನೊಬ್ಬನಿಗೆ 6 ಜನ ಮಕ್ಕಳು. ಸಾಮಾನು ಮೊದಲುಗೊಂಡು ಹೆಂಡರು ಮಕ್ಕಳು ಎಲ್ಲರೂ ಬದಲಾಗಿರುವರು. ಈಗ ಹೆಂಡರು ವಿವಾಹ ವಿಚ್ಛೇದನಕ್ಕಾಗಿ ಕೋರ್ಟಿನಲ್ಲಿ ದಾವಾ ಮಾಡಿರುವರು. ಇದು ಮಂಜೂರಾದಮೇಲೆ ಅವರಿಗೆ ಬದಲಾಯಿಸಿದ ಪತಿಗಳಲ್ಲಿ ಪುನಃ ವಿವಾಹವಾಗುವದಂತೆ! ಸುಧಾರಿಸಿದ ರಾಷ್ಟ್ರ! ಇದು ಯೋಯೋ ತರುಣರಿಗೆ ಗೊತ್ತಿರಲಾರದು! ಗುಲಗಂಜಿಯ ಕಪ್ಪು ಗುಲಗಂಜಿಗೆ ಕಾಣಿಸುವದೇ ?

ಸಿಲೋನಿನ "ಎಪಿಸ್ವೆಮೊ" ಎಂಬ ಗ್ರಾಮದಲ್ಲಿ ನಾಲ್ಕು ಜನರು ಜೂಜಾಡುತ್ತಿದ್ದಾಗ್ಗೆ ಜಗಳವಾಗಿ ಒಬ್ಬನು ಇನ್ನೊಬ್ಬನ ಕಾಲಿಗೆ ಚೂರಿಯಿಂದ ತಿವಿದನು. ತಿವಿಸಿಕೊಂಡ ಯುವಕನು ಬೇರೆ ಇಬ್ಬರ ಸಹಾಯದಿಂದ ಅವನನ್ನು ಕೊಂದುಬಿಟ್ಟನು. ಕೂಡಲೆ ಆ ಮೂವರೂ ಸತ್ತುಬಿದ್ದವನ ರಕ್ತವನ್ನು ಕುಡಿದರಂತೆ! ಕೋರ್ಟಿನಲ್ಲಿ ವಿಚಾರಮಾಡುವಾಗ್ಗೆ ಮೊದಲು ತಿವಿಸಿಕೊಂಡವನು ತಾನು ಕಳೆದುಕೊಂಡ ರಕ್ತವನ್ನು ಭರ್ತಿಮಾಡಿಕೊಳ್ಳುವದಕ್ಕೋಸ್ಕರ ತನ್ನ ವಿರೋಧಿಯ ರಕ್ತವನ್ನು ಎರಡು ಬಟ್ಟಲಿನಷ್ಟು ಕುಡಿದೆನೆಂದು ಹೇಳಿದನಂತೆ! ಇವನಲ್ಲವೇ ನರರಾಕ್ಷಸನು ?

ಫಾಕ್‌ಲೆಂಡ್ ದ್ವೀಪದ ಬಳಿಯಲ್ಲಿ ಬೆಸ್ತರು ಎರಡು ದೋಣಿಗಳಲ್ಲಿ ಕುಳಿತು ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದಾಗ್ಗೆ ಒಂದು ದೋಣಿಯು ತಿಮಿಂಗಿಲದಿಂದ ಮುಳುಗಿಸಲ್ಪಡಲು ಅದರಲ್ಲಿದ್ದವರೆಲ್ಲರೂ ನೀರಿನಲ್ಲಿ ಮುಳುಗಿ ಪುನಃ ಸಾಹಸದಿಂದ ದೋಣಿಯನ್ನು ಹತ್ತಿದರು. ಆಗ್ಗೆ ಅವರಲ್ಲೊಬ್ಬನು ಕಾಣಬರಲು ತಿಮಿಂಗಿಲವು ಅವನನ್ನು ನುಂಗಿತೆಂದು ತಿಳಿದು ಅವನ ಆಶೆಯನ್ನು ಬಿಟ್ಟು ಉಳಿದವರು ಮುಂದಕ್ಕೆ ತೆರಳಿದರು. ಮರುದಿನ ಅದೇ ಬೆಸ್ತರು ಮೀನು ಹಿಡಿಯುವದಕ್ಕೆ ಹೋಗಿ ಒಂದು ತಿಮಿಂಗಿಲವನ್ನು ಕಂಡು ಬಹು ಸಾಹಸದಿಂದ ಅದನ್ನು ಕೊಂದು ಕತ್ತರಿಸಿ ನೋಡುವಲ್ಲಿ ಹಿಂದಿನ ದಿನ ನುಂಗಲ್ಪಟ್ಟಿದ್ದ ಮನುಷ್ಯನು ಅದರ ಹೊಟ್ಟೆಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದನಂತೆ! ದೇವರ ಲೀಲೆಯು ಅದ್ಭುತವಾದುದು!

ಸಂತೋಷವಾರ್ತೆ.

ಹುವ್ವಿನಹಡಗಲಿ ತಾಲೂಕು ಪೈಕಿ ಮೋರಿಗೇರಿ ಗ್ರಾಮದಿಂದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ತಾ|| 27-9-27 ರಲ್ಲಿ ಬನ್ನಿಕಲ್ಲು ಮುಕ್ಕಾಮಿಗೆ ದಯಮಾಡಿಸಿದ್ದರು. ಅದೇ ಸಮಯದಲ್ಲಿ ಗದ್ದಿಕೇರಿಗ್ರಾಮದ ಪಟೇಲರಾಗಿದ್ದ ಮ|| ರಾ|| ಮೋರಿಗೇರಿ ಎಚ್. ಸಕ್ರೆಗೌಡರು ಕಾರಣಾಂತರದಿಂದ ಕೆಲಸದಿಂದ ಬಿಡುಗಡೆಯಾಗಿರಲು ಮ|| ರಾ|| ಬನ್ನಿಕಲ್ಲು ಪಾಟೀಲ ಬಸವನಗೌಡರ ಸಹಾಯದೊಂದಿಗೆ ಮದ್ರಾಸು ರೆವಿನ್ಯೂಬೋರ್ಡು ಆಫೀಸಿನಲ್ಲಿ ಅಪ್ಪೀಲ್‌ಮಾಡಿಕೊಂಡಿದ್ದು ಸದರಿ ವಿಚಾರಣೆಯ ಸಮಯಕ್ಕೆ ಮ|| ರಾ|| ಎಚ್. ಸಕ್ರೆಗೌಡರು ಮ|| ರಾ|| ಪಿ. ಬಸವನಗೌಡರು ಮದ್ರಾಸಿಗೆ ಹೊರಡುವಾಗ ಮೇಲೆ ಕಾಣಿಸಿದ ಶ್ರೀಗಳವರು ಜಯಾಶೀರ್ವಾದವನ್ನಿತ್ತುದರಿಂದ ಅಪ್ಪೀಲಿನಲ್ಲಿ ಕಾರ್ಯವು ಸಫಲವಾಗಲು ಪಂಚಾಚಾರ್ಯಪ್ರಭಾ ಪೋಷಣೆಗಾಗಿ 5 ರೂಪಾಯಿಗಳನ್ನು ಸಮರ್ಪಿಸಿ ಹುವ್ವಿನಹಡಗಲಿ ಮಿಡಲ್‌ಸ್ಕೂಲು ಕನ್ನಡಪಂಡಿತರಾದ ಬನ್ನಿಕಲ್ಲು ಹಿರೇಮಠದ ಕೊಟ್ರೇಶಶಾಸ್ತ್ರಿಗಳವರ ಸ್ವಾಧೀನಕ್ಕೆ ಕೊಟ್ಟರು. ಗುರುಭಕ್ತಿ ಧುರೀಣರಾದ ಇವರಿಗೆ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನುಂಟುಮಾಡಲೆಂದು ಕೋರುವ,

ಹಿತಚಿಂತಕ.

ಶ್ರೀ ಜಗದ್ಗುರುಪಂಚಾಚಾರ್ಯರು ಸದಾರಕ್ಷಿಸಲಿ.

ಸಿರಗುಂಪಿ ಪಾಠಶಾಲಾಧ್ಯಕ್ಷರ ಸಮಾಚಾರವು.

ಸಿರಗುಂಪಿ ಪಂಚಾಚಾರ್ಯ ಸಂಸ್ಕೃತಪಾಠಶಾಲಾಧ್ಯಕ್ಷರಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಹಿರೇಮಠ ಚಿಕ್ಕಮುಚ್ಚಳ್ಳಿರು ಇವರು ಇನ್ನೂ ಚಿಕ್ಕವಯಸ್ಸಿನವರಿದ್ದು ೪-೬ ವರ್ಷ ಪರ್ಯಂತ ತಮ್ಮ ಜನ್ಮಭೂಮಿಯನ್ನು ತ್ಯಜಿಸಿ ಅನಂತ ದೇಶ ಪರ್ಯಟನಮಾಡಿ ಭಕ್ತಮಾಹೇಶ್ವರರಲ್ಲಿ ರತಕ್ತ ದುರಾಚಾರಾದಿಗಳನ್ನು ಬಿಡಿಸುವುದಕ್ಕೋಸ್ಕರ ಅಲ್ಲಲ್ಲಿಗೆ ಸಭಾ, ಭಜನಾಸಂಘ, ಲಾಯಬ್ರರಿ, ದಾಸೋಹ ಮೊದಲಾದ ಕಾರ್ಯಗಳನ್ನು ಆಚಾರ್ಯರ ಹೆಸರಿನಿಂದ ಸ್ಥಾಪಿಸುತ್ತಿರುವುದು ಸರ್ವರಿಗೂ ಪರಿಚಯವೇ ಆದೆ. ಆದರೆ ಇವರು ಬಳ್ಳಾರಿ ಡಿಸ್ಟ್ರಿಕ್ಟ್ ಸಿರಗುಂಪಿ ಶ್ರೀ ಜಗದ್ಗುರು ಕೇದಾರ ಶಾಖಾಮಠದಲ್ಲಿ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪನಮಾಡಿ ಶಾಸ್ತ್ರಿಗಳನ್ನು ನಿಯಮಿಸಿದ್ದರು. ೧೫-೧೬ ಜನ ವಿದ್ಯಾರ್ಥಿಗಳು ಅಧ್ಯಯನಮಾಡುತ್ತಿದ್ದು ೧ ವರುಷ ಪರ್ಯಂತ ಏನೂ ವಿಘ್ನವಿಲ್ಲದೆ ಚೆನ್ನಾಗಿ ನಡೆಯಿತು. ಆದರೆ ಸಿರಗುಂಪಿಯು ಕೇವಲ ಮಾಗಾಣಿ ಪ್ರದೇಶವಾದುದರಿಂದ ವಿದ್ಯಾರ್ಥಿಗಳಿಗೂ, ಶಾಸ್ತ್ರಿಗಳಿಗೂ, ಪಾಠಶಾಲಾಧ್ಯಕ್ಷರಿಗೂ ಕೂಡ ನೀರುಹತ್ತಿ ಬಹಳ ಅನಾರೋಗ್ಯವಾದಕಾರಣ ಪಾಠಶಾಲೆಗೆ ರಜಾ ಕೊಟ್ಟದೆ. ಅಧ್ಯಕ್ಷರಿಗೆ ಸದ್ಯಃ ಚತುರ್ಥ ಮಲೇರಿಯಾ ಜ್ವರವು ಬರುತ್ತಿದ್ದು ಇನ್ನೂ ಗುಣಮುಖವಾಗಿಲ್ಲ. ಗುಣಮುಖವಾದ ಕೂಡಲೆ ಮುಂದೆ ಶಾಲೆಯನ್ನು ನಡೆಯಿಸುವ ಪ್ರಯತ್ನವು ನಡಿಯುತ್ತದೆ. ಸದ್ಯಃ ಶ್ರೀಗಳಿಗೆ ಗುಣವಾಗಲೆಂದು ಪರಮೇಶ್ವರನನ್ನು ಪ್ರಾರ್ಥಿಸುವ.

ಸಿದ್ಧಲಿಂಗಯ್ಯ ಹೆಡ್‌ಮಾಸ್ತರ.

ಅರಹುಣಸಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವ. ಬಂಕಾಪುರ.

ವೈಶಾಖ ಶುದ್ಧ ೫ ಸೋಮವಾರ ಈ ಶುಭದಿವಸ ಇಲ್ಲಿಯ ಆದವಾನಿ ಮಠದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಗುರುಪೀಠಾಭಿಮಾನಿಗಳಾದ ಪ್ರಮುಖ ಭಕ್ತಮಂಡಲಿಯವರಿಂದ ಅತ್ಯಂತ ವೈಭವಪೂರ್ವಕ ನೆರವೇರಿಸಲ್ಪಟ್ಟಿತು. ಪ್ರಾತಃಕಾಲಕ್ಕೆ ರಂಭಾಸ್ತಂಭ ತಳಿರುತೋರಣಗಳಿಂದ ಅಲಂಕೃತವಾದ ದಿವ್ಯಮಂಟಪದಲ್ಲಿ ಮೂರ್ತಗೊಳಿಸಿದ ಶ್ರೀ ದಾರುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಯು ವೇದೋಕ್ತವಾಗಿ ಮಾಡಲ್ಪಟ್ಟಿತು. ಮಧ್ಯಾಹ್ನ ಅನ್ನಸಂತರ್ಪಣಸಮಾರಂಭವು ವಿಶೇಷ ವೈಭವದಿಂದ ನಡೆಯಿತು. ಅನಂತರ 4 ಘಂಟೆಗೆ ಜಗದಾಚಾರ್ಯರ ಭಾವಚಿತ್ರವು ಪಲ್ಲಕ್ಕಿಯಲ್ಲಿರಿಸಲ್ಪಟ್ಟು ಇಲ್ಲಿಯ ಪಂಚಾಚಾರ್ಯ ಭಜನಾಸಂಘದವರಿಂದಲೂ ಬ್ಯಾಂಡ ಮೊದಲಾದ ಮಂಗಲವಾದ್ಯವೈಭವಗಳಿಂದಲೂ ಜಗದಾಚಾರ್ಯರ ದಿವ್ಯಸ್ತುತಿಗಳಿಂದಲೂ ಯುಕ್ತವಾಗಿ ಉತ್ಸವವು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ರಾತ್ರಿ 10 ಘಂಟೆಗೆ ಆದವಾನಿ ಮಠವನ್ನು ಸೇರಿತು. ಗುರುಭಕ್ತಿಶೀಲರಾದ ಜನರು ಜಗದಾಚಾರ್ಯರ ಭಾವಚಿತ್ರಕ್ಕೆ ಕಾಯಿ ಕರ್ಪೂರ ಮಂಗಳಾರತಿಗಳನ್ನು ಅತ್ಯಂತ ಭಕ್ತಿಯಿಂದ ಸಮರ್ಪಿಸಿ ಧನ್ಯರಾದರು. ಆ ದಿವಸ ವೇ|| ಮುರಿಗಯ್ಯನವರು ಜಯಂತಿಯ ವಿಷಯವಾಗಿಯೂ ಮ|| ರಾ|| ಮಹಾದೇವಪ್ಪ ಕುಂಬಾರ ಇವರು ವೀರಶೈವಮತದ ಸನಾತನತ್ವ ಹಾಗೂ ಜಗದಾಚಾರ್ಯರ ಜಯಂತಿ ವಿಷಯವಾಗಿಯೂ ಅತ್ಯಂತ ಸ್ವಾರಸ್ಯವಾದ ಭಾಷಣಮಾಡಿ ಸಮಸ್ತ ವೀರಶೈವರನ್ನು ಆನಂದಾಬ್ಧಿಯಲಿ ಮುಳುಗಿಸಿದರು. ಅನಂತರ ಜಗದಾಚಾರ್ಯರ ಜುಮ್ಮೋಪದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಉತ್ಸವದ ವಿಶಿಷ್ಟ ಖರ್ಚನ್ನು ವೇ|| ಆದವಾನಿ ಮಠದ ಗುರುಪಾದಯ್ಯನವರೇ ವಹಿಸಿಕೊಂಡಿದ್ದರು. ಅಸಾಧಾರಣ ಗುರುಭಕ್ತಿಸಂಪನ್ನರಾದ ಇವರಿಗೂ ಇವರ ಪುತ್ರಪೌತ್ರಾದಿಗಳಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುವ,

ಮಹಾದೇವಪ್ಪ ಕುಂಬಾರ.

ಶ್ರೀಮಂತ್ರಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಆಂದೋಲಿಕೋತ್ಸವಾಹ್ವಾನಪತ್ರಿಕೆ

ಸಮಸ್ತ ವೀರಶೈವ ಮಂಡಲಿಯವರಲ್ಲಿ ವಿಜ್ಞಾಪನೆ.—

ಚಿತ್ರದುರ್ಗ ಡಿ|| ಹಂತರ ಪಟ್ಟಣದ ವೀರಶೈವ ದೈವದವರ ಪ್ರಾರ್ಥನೆಯ ಮೇರೆಗೆ ಮಹಾ|| || ಸ್ವಾರಿಯು ಶುಕ್ಲ ಸಂ|| ಜ್ಯೇಷ್ಠ|| ೧೫ (ತಾ|| ೨೨-೬-೨೯) ಶನಿವಾರ ಪ್ರಾತಃಕಾಲ ೮ ಘಂಟೆಗೆ ದಯಾಳುಗಳಾದ ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಮಹೋತ್ಸವಪೂರ್ವಕ ದಯಮಾಡಿಸುವದರಿಂದ ತಾವು ತಮ್ಮ ಆಪ್ತಮಿತ್ರರೊಡನೆ ಆಗಮಿಸಿ ಶ್ರೀಗುರುದರ್ಶನಾಶೀರ್ವಾದಗಳಿಗೆ ಪಾತ್ರರಾಗಿ ಧನ್ಯರಾಗಬೇಕೆಂದು ಕೋರುವ,

ಚನ್ನಪ್ಪಯ್ಯ ಹೊಸಮಠ

ಹಂತರ. ಸ್ವಾಗತಸಂಘಾಧ್ಯಕ್ಷ.

ವಿವಾಹ ಮಹೋತ್ಸವ, ದೊಡ್ಡಬಾಣಾವರ.

ತಾ|| 10-6-929 ರಲ್ಲಿ ಅರಸೀಕೆರೆ ತಾಲೂಕು ಬಾಣಾವರದ ಕೋಟಿ ಸೆಟ್ರು ಮ|| ರಾ|| ನಂಜುಂಡಪ್ಪಸೆಟ್ರವರು ತಮ್ಮ ಪುತ್ರಿ ಚಿ|| ಹ|| ಕುಂ|| ಸೌ|| ಪುಟ್ಟಗೌರಮ್ಮನನ್ನು ಬೆಂಗಳೂರು ಚಿಕ್ಕಪೇಟೆ ಎಲಕ್ಟ್ರಿಕಲ್ ಲೈಟ್ ಕಂಟ್ರಾಕ್ಟರ್ ಜಿ. ಯಸ್. ಶಿವರುದ್ರಪ್ಪನವರ ದ್ವಿತೀಯ ಕುಮಾರ ರುದ್ರಪ್ಪನೆಂಬ ವರನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸುವ ಕಾಲದಲ್ಲಿ ಅನೇಕ ವಿಘ್ನಗಳು ಪ್ರಾಪ್ತವಾದಾಗ್ಯೂ ಜಗದಾಚಾರ್ಯರ ಪ್ರಭಾವದಿಂದ ನಿರ್ವಿಘ್ನವಾಗಿ ನೆರವೇರಿದ ಸಂತೋಷಕಾಲದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ಮ|| ರಾ|| ಜಿ. ಎಸ್. ಶಿವರುದ್ರಪ್ಪನವರಿಂದ 2 ರೂಪಾಯಿಗಳು, ಮ|| ರಾ|| ನಂಜುಂಡಪ್ಪಸೆಟ್ರರವರಿಂದ 1 ರೂಪಾಯಿ, ಜುಮ್ಲಾ 3 ರೂಪಾಯಿಗಳು ವೇ|| ಹಿರೆಮಠದ ಜಿ. ವೀರಭದ್ರಸ್ವಾಮಿಯವರ ವಶಕ್ಕೆ ಕೊಡಲ್ಪಟ್ಟವು. ವಧೂವರರಿಗೆ ಶ್ರೀ ಜಗದ್ಗುರುಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನುಂಟುಮಾಡಲೆಂದು ಪ್ರಾರ್ಥಿಸುವ.

M. Madappa Setty,
Secretary,
Jagadguru Panchacharya
Bhajanasangha.

ಶ್ರೀ ಜಗದ್ಗುರು ರೇಣುಕಾಚಾರ್ಯಪ್ರಸೀದತು.

ದೀಕ್ಷಾವಿವಾಹಸಮಾರಂಭ

ಕೆಲಾದಿಗಿ.

ಕೆಲಾದಿಗಿ ಬೃಹನ್ಮಠಾಧ್ಯಕ್ಷರಾದ ಪಟ್ಟದಸ್ವಾಮಿಗಳಿಗೂ ಮತ್ತು ಮುಧೋಳ ಸಂಸ್ಥಾನಕ್ಕೆ ಸೇರಿದ ಜಾಲೀಕಟ್ಟಿ ಬೃಹನ್ಮಠದ ಚರಮೂರ್ತಿಸ್ವಾಮಿಗಳಿಗೂ ಅನುಗ್ರಹವನ್ನು ಮಾಡುವದಕ್ಕೋಸ್ಕರ ಕೊಪ್ಪಳದ ತಾ|| ಮಂಗಳೂರು ಅರಳೆ ಮಠದ ಶ್ರೀ ಪಟ್ಟದಸ್ವಾಮಿಗಳವರು ತಾ|| 3-6-29 ನೇ ದಿವಸ ಕೆಲಾದಿಗೆ ದಯಮಾಡಿಸಿದರು. ಸ್ವಾಮಿಗಳವರನ್ನು ರಂಭಾಸ್ತಂಭದಿಂದಲೂ ತಳಿರುತೋರಣಗಳಿಂದಲೂ ಅಲಂಕೃತವಾದ ರಾಜಬೀದಿಯಲ್ಲಿ ಉತ್ಸವಪೂರ್ವಕವಾಗಿ ಕರೆದುಕೊಂಡು ಬಂದರು. ಉತ್ಸವವು ನಾನಾತರಹ ವಾದ್ಯಧ್ವನಿಗಳಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷಗಳಿಂದಲೂ ಸ್ತುತಿಪರಾಕುಗಳಿಂದಲೂ ಒಳ್ಳೇ ವೈಭವದೊಡನೆ ನೆರವೇರಿತು. ಈ ಮಹಾಕಾರ್ಯಕ್ಕೆ ಲೋಕಾಪುರ, ಬಾಗಿ, ಸತ್ತಿಗೇರಿ ಮೊದಲಾದ ಗ್ರಾಮಗಳಿಂದ ಪಟ್ಟಚರಮೂರ್ತಿಸ್ವಾಮಿಗಳೂ ಮತ್ತು ವೇ|| ಮರೇಗುದ್ದಿ ಶಂಕರಶಾಸ್ತ್ರಿಗಳವರೂ ಇನ್ನೂ ಉಳಿದಾದ ಭಕ್ತಮಾಹೇಶ್ವರ ಮಂಡಳಿಯವರೂ ಆಗಮಿಸಿದ್ದರು. 2 ನೇ ತಾರೀಖಿನ ದಿವಸ 20 ಜನ ಮಾಹೇಶ್ವರ ವಟುಗಳಿಗೆ ದೀಕ್ಷಾಸಂಸ್ಕಾರವು ನೆರವೇರಿಸಲ್ಪಟ್ಟು ಮಹಾಗಣಾರಾಧನೆಯು ನೆರವೇರಿತು. ಜಾಲೀಕಟ್ಟಿ ಹಿರೇಮಠದ ವೇ|| ವಿರೂಪಾಕ್ಷಯ್ಯನವರಿಗೆ ಗುಳೇದಗುಡ್ಡದ ಪುರಾಣಿಕಮಠದ ವೇ|| ಗಂಗಯ್ಯನವರ ಪುತ್ರಿ ಸೌ|| ಗೌರವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸುವದರಲ್ಲಿ ಬಂದಿತು. ಮಹಾಗಣಾರಾಧನೆಗೆ 8-10 ಸಹಸ್ರ ಜನ ಮಿಳಿತರಾಗಿದ್ದರು. ಈ ಯಾವತ್ತು ಜನಗಳಿಗೆ ಸದರೀ ಮಠದ ಪಟ್ಟದಸ್ವಾಮಿಗಳವರು ಮಾಡಿದ ಆದರಾತಿಥ್ಯವನ್ನು ಕಂಡು ಸರ್ವರೂ ಸಂತುಷ್ಟರಾಗಿ ಸ್ವಾಮಿಗಳನ್ನು ಸ್ತುತಿಗೈದರು. ದೀಕ್ಷಾ ಸಮಯದಲ್ಲಿ ವೇ|| ಪಂಡಿತ ಶಂಕರಶಾಸ್ತ್ರಿಗಳವರಿಗೆ ವೇ|| ಅಣ್ಣೀಗೇರಿ ರಾಜೋಟಿಶಾಸ್ತ್ರಿಗಳೂ, ಅಲೂರು ವೇ|| ಭಕ್ತಾವತಿ ಮಠದ ರೇವಣಯ್ಯನವರೂ ಮತ್ತು ವೇ|| ಹಿಟ್ನಾಳ ಮಠದ ಸಂಗಯ್ಯನವರೂ ಸಹಾಯಕರಾಗಿದ್ದರು. ಈ ಸಮಯದಲ್ಲಿ ವೇ|| ಜಾಲೀಕಟ್ಟಿ ವಿರೂಪಾಕ್ಷಯ್ಯನವರು ವೀರಶೈವ ಮತೋದ್ಧಾರಕ್ಕಾಗಿ ಅವತಾರವೆತ್ತಿದ ಪಂಚಾಚಾರ್ಯಪ್ರಭಾ ಪೋಷಣಕ್ಕೋಸ್ಕರ 4 ರೂಪಾಯಿಗಳನ್ನೂ ವೇ|| ಗಂಗಯ್ಯನವರು 2 ರೂಪಾಯಿಗಳನ್ನೂ ಸಮರ್ಪಿಸಿದರು. ಅಸಾಧಾರಣಗುರುಭಕ್ತಿಧುರೀಣರಾದ ಈ ಮಹನೀಯರಿಗೆಲ್ಲರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ.

ಓರ್ವ ಪ್ರತ್ಯಕ್ಷದರ್ಶಿ.

ತಾಯಿಯರಿಗೆ ಮುಖ್ಯ ಸೂಚನೆಗಳು.

1. ಮಗು ಹುಟ್ಟುವುದಕ್ಕೆ ಆರು ತಿಂಗಳ ಮೊದಲೇ ಅದಕ್ಕೆ ಹಲ್ಲುಗಳು ಮೊಳೆಯಲಾರಂಭಿಸುವುವು.

2. ಗರ್ಭದೆಶೆಯಲ್ಲಿ ತಾಯಿಯ ಆಹಾರಕ್ರಮವೂ, ಅವಳ ದೇಹಾರೋಗ್ಯದ ಎಚ್ಚರಿಕೆಯೂ ಮಗುವಿನ ಹಲ್ಲುಗಳು ಸರಿಯಾದ ಸ್ಥಿತಿಯಲ್ಲಿರಲು ಸಹಕರಿಸುವುವು.

3. ಮಕ್ಕಳಿಗೆ ಸ್ತನ್ಯವೇ ಬಹಳ ಉತ್ತಮವಾದ ಆಹಾರವು; ಅದಕ್ಕೆ ಸಮಾನವಾದ ಬೇರೆ ವಸ್ತುವೇ ದೊರೆಯದು.

4. ಮಕ್ಕಳ ಬಾಯಿಗೆ ಬೇರೆ ವಸ್ತುಗಳೊಂದನ್ನೂ ಕೊಡಬಾರದು. ರಬ್ಬರುತೊಟ್ಟನ್ನು ಸೀಪುವುದಕ್ಕಾಗಿ ಅವುಗಳ ಬಾಯಿಗೆ ಕೊಡುವುದು ಬಹಳ ಅಪಾಯಕಾರಣವು.

5. ಮೊದಮೊದಲು ಮಾಡಿದ ಸ್ತನ್ಯಪಾನದ ಬಲದಿಂದಲೇ ಮಕ್ಕಳು ಮುಂದೆ ಸರಿಯಾಗಿ ಆಹಾರವನ್ನು ತೆಗೆದುಕೊಳ್ಳುವುವು.

6. ಮಿಠಾಯಿ ಮೊದಲಾದ ಭಕ್ಷ್ಯಗಳನ್ನು ಹೆಚ್ಚಾಗಿ ಮಕ್ಕಳಿಗೆ ತಿನ್ನಿಸಬಾರದು. ಅದರಲ್ಲಿಯೂ ಭೋಜನಕಾಲಗಳನ್ನು ಬಿಟ್ಟು ಮಧ್ಯಕಾಲಗಳಲ್ಲಿ ಅಂತಹ ಮಧುರಪದಾರ್ಥಗಳನ್ನು ಕೊಡುವುದು ಬಹಳ ಕೆಟ್ಟುದು. ತರಕಾರಿ, ಹಣ್ಣು ಕೀರ ಮುಂತಾದುವನ್ನು ಧಾರಾಳವಾಗಿ ಕೊಡಬಹುದು.

7. ಮಕ್ಕಳ ಹಲ್ಲುಗಳನ್ನು ಬ್ರಷ್ಷುಗಳಿಂದ ಚೆನ್ನಾಗಿ ತಿಕ್ಕಿ ತೊಳೆಯಬೇಕು. ಮೇಲಿನ ಸಾಲನ್ನು ಮೇಲಿಂದ ಕೆಳಕ್ಕೂ, ಕೆಳಸಾಲಿನ ಹಲ್ಲನ್ನು ಕೆಳಗಿನಿಂದ ಮೇಲಕ್ಕೂ, ದವಡೆಯ ಹಲ್ಲುಗಳನ್ನು ಅಡ್ಡಲಾಗಿಯೂ ತಿಕ್ಕಬೇಕು.

8. ಮಕ್ಕಳಿಗೆ ಪ್ರತಿದಿನವೂ ಯಾವುದಾದರೂ ಗಟ್ಟಿ ಪದಾರ್ಥವನ್ನು ಅಗಿಯುವುದಕ್ಕಾಗಿ ಕೊಡುತ್ತಿರಬೇಕು. ಹಲ್ಲುಗಳಿಗೆ ಈ ತರದ ವ್ಯಾಯಾಮವು ಅತ್ಯವಶ್ಯಕವು.

9. ಮಕ್ಕಳಿಗೆ 2½ ವರ್ಷ ಪ್ರಾಯವಾದಾಗ ದಂತವೈದ್ಯರಿಗೆ ಅವುಗಳ ಹಲ್ಲನ್ನು ತೋರಿಸಬೇಕು.

10. ಆಮೇಲೆ ನಾಲ್ಕು ತಿಂಗಳ ಕಾಲಕ್ಕೊಮ್ಮೆ ಆಗಾಗ್ಗೆ ವೈದ್ಯರಿಂದ ಪರೀಕ್ಷೆ ಮಾಡಿಸುತ್ತಿರಬೇಕು.

11. ಮಕ್ಕಳ ಹಲ್ಲುಗಳನ್ನು ಹೀಗೆ ಸರಿಯಾಗಿ ಕಾಪಾಡುವುದರಿಂದ, ಮುಂದೆ ಎಷ್ಟೋ ಅಪಾಯಗಳೂ, ತೊಂದರೆಗಳೂ, ರೋಗಗಳೂ ತಪ್ಪುವುವು.

12. ನಿಮಗೆ ನಿಮ್ಮ ಹಲ್ಲುಗಳು ಎಷ್ಟು ಮುಖ್ಯವೋ, ಮಕ್ಕಳಿಗೂ ಹಲ್ಲು ಬಹಳ ಪ್ರಧಾನವು.

13. ಆರೋಗ್ಯಕ್ಕೂ ಹಲ್ಲುಗಳಿಗೂ ಬಹಳ ಸಮೀಪ ಸಂಬಂಧವುಂಟು. ಬಾಯಿಯೇ ದೇಹಾರೋಗ್ಯದ ಹೆಬ್ಬಾಗಿಲು.

"ದಿ ಇಂಡಿಯನ್ ಡೆಂಟಲ್ ರಿವ್ಯೂ."

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.

ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡು ಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾಸ್ತಾ ಹಣ ವಾಪಸ ಕೊಡುವೆವು. ನಮ್ಮ ಅಡ್ರೆಸ್:— [11]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು "ಗೃಹಮಾತೆ"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ನಿಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಿನಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂಡವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಎಲ್ಲಾ ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಇದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಅದ್ದರಿಂದ ಈ ಔಷಧಾಲಯಕ್ಕೆ "ಅಷ್ಟವರ್ಗೌಷಧಾಲಯ"ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ

Himalayan Ashtawarg Medical Hall
[11] 848. Ganjipet Poona City.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಶಿಖೋಪನಿಷತ್.

ವೇದಗಳ ಶಾಖೆಗಳೇ ಉಪನಿಷತ್ತುಗಳ ರೂಪದಿಂದ ಪ್ರಕಾಶಿಸುತ್ತಿರುವವು. ಉಪನಿಷತ್ತುಗಳು ಒಂದಲ್ಲ, ಎರಡಲ್ಲ ಸಾವಿರಾರು ಇರುವವು. ಅದರಲ್ಲಿ ಕಾಲವೈಚಿತ್ರ್ಯದಿಂದ ಎಷ್ಟೋ ಉಪನಿಷತ್ತುಗಳು ಲುಪ್ತಗಳಾಗಿವೆ. ನಿರ್ಣಯಸಾಗರ ಮುದ್ರಣಾಲಯದಲ್ಲಿ ಮಾತ್ರ 120 ರ ವರೆಗೆ ಮಾತ್ರ ಉಪನಿಷತ್ತುಗಳು ಮುದ್ರಿಸಲ್ಪಟ್ಟಿವೆ. ಈ ಉಪನಿಷತ್ತುಗಳು ವೈದಿಕಸಿದ್ಧಾಂತವನ್ನು ಸ್ಥಿರಗೊಳಿಸುವವು. ಸದ್ಯಃ ದೊರೆಯುವ ಕೆಲವು ಉಪನಿಷತ್ತುಗಳಲ್ಲಿ ವೀರಶೈವ ಸಿದ್ಧಾಂತವು ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟಿರುವದು. ಆದರೆ ಈ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಉಪನಿಷತ್ತುಗಳು ಅನೇಕವಿದ್ದಾಗ್ಯೂ ಆ ಉಪನಿಷತ್ತುಗಳ ಹೆಸರುಗಳನ್ನು ನಮ್ಮ ಪ್ರಾಚೀನ ಗ್ರಂಥಕಾರರು ತೆಗೆದುಕೊಂಡಿದ್ದಾಗ್ಯೂ ಅವು ಇಲ್ಲಿಯವರೆಗೂ ಉಪಲಬ್ಧವಾಗಿರಲಿಲ್ಲ. ವೀರಶೈವಮತದ ಸುದೈವದಿಂದ ಸದ್ಯಃ ಸಿದ್ಧಾಂತಶಿಖೋಪನಿಷತ್ ಎಂಬ ಹೆಸರಿನ ಉಪನಿಷತ್ತು ಲಬ್ಧವಾಗಿರುವದು. ಈ ಉಪನಿಷತ್ತಿನಲ್ಲೆಲ್ಲಾ ವೀರಶೈವ ಸಿದ್ಧಾಂತವೇ ತುಂಬಿ ತುಳುಕುತ್ತಿರುವದು. ಇದರ ಯೋಗ್ಯತೆಗೆ ಎಷ್ಟು ಬೆಲೆ ಕೊಟ್ಟರೂ ತೀರದ್ದಾಗಿದೆ. ಗ್ರಂಥವು ಚಿಕ್ಕದಾದರೂ ಯೋಗ್ಯತೆಯು ಬಹು ದೊಡ್ಡದಾಗಿದೆ. ಈ ಗ್ರಂಥವನ್ನು ದೇವನಾಗರಿ, ಕನ್ನಡ ಈ ಎರಡು ಲಿಪಿಗಳಲ್ಲಿಯೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾಗಾರದವತಿಯಿಂದ ಪ್ರಿಂಟ್‌ಮಾಡಿಸಿದ್ದಾಗಿದೆ. ವೀರಶೈವರೆನಿಸುವ ಪ್ರತಿಯೊಬ್ಬರ ಮನೆಯಲ್ಲಿಯೂ ಈ ಗ್ರಂಥವು ಪ್ರಕಾಶಿಸುತ್ತಿರಬೇಕು. ಬೆಲೆ 4 ಆಣೆ. 4 ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು 5 ಆಣೆ ಸ್ಟಾಂಪನ್ನು ಕಳುಹಿಸಬೇಕು.

ಅಧ್ಯಾಪಕ,

ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ,
ಮಹಾಂತಿನಮಠ, ಚಿಕ್ಕಪೇಟೆ ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕಂಗಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಶಾಂತ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜವಾಕಂದ, ಶಾಲೀಮಲೀಕಂದ, ಅಶ್ವಕಂದ ಶ್ರೀಪತ್ರಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಾಲಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಕವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ತಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರಕ್ತಪುರುಷ, ಸಮುದ್ರಶಸ, ಕಥಿರ್ಯಾಗೋಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಖೋರಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀಮಗಜ, ಆಲದಹಾಲು, ನಾರೇರಿಭಾತಾ, ಗೋಕುರು, ಅಡವೀಬೆಂಡೆಬೀರು, ಅಮೃತಸತ್ವ, ಇಸಬಗೋಳ ಭುಸ್ಸ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾತಬಾರದಿರೋಣ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [22]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅದ್ಭುತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಟ್ಟಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣಪಟ್ಟವರಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವಹಿ ಪತ್ರಮೂಲಕ ತಿಳಿಸಿ, ಇಷ್ಟಾನುಸಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಪಟ್ಟಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚು, ಹೊಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮುಕೇಸುಗಳೂ, ಇತರ ಪ್ರಸಿದ್ಧ ಫರಂಗಿಯೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [46]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಸಂತೋಷವಾರ್ತೆ.

ಹುವ್ವಿನಹಡಗಲಿ ತಾಲೂಕು ಪೈಕಿ ಮೋರಿಗೇರಿ ಗ್ರಾಮದಿಂದ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ತಾ|| 27-9-27 ರಲ್ಲಿ ಬನ್ನಿಕಲ್ಲು ಮುಕ್ಕಾಮಿಗೆ ದಯಮಾಡಿಸಿದ್ದರು. ಅದೇ ಸಮಯದಲ್ಲಿ ಗದ್ದಿಕೇರಿಗ್ರಾಮದ ಪಟೇಲರಾಗಿದ್ದ ಮ|| ರಾ|| ಮೋರಿಗೇರಿ ಎಚ್. ಶಕ್ರಗೌಡರು ಕಾರಣಾಂತರದಿಂದ ಕೆಲಸದಿಂದ ಬಿಡುಗಡೆಯಾಗಿರಲು ಮ|| ರಾ|| ಬನ್ನಿಕಲ್ಲು ಪಾಟೀಲ ಬಸವನಗೌಡರ ಸಹಾಯದೊಂದಿಗೆ ಮದ್ರಾಸು ರೆವಿನ್ಯೂಬೋರ್ಡು ಆಫೀಸಿನಲ್ಲಿ ಅಪ್ಪೀಲ್‌ಮಾಡಿಕೊಂಡಿದ್ದು ಸದರಿ ವಿಚಾರಣೆಯ ಸಮಯಕ್ಕೆ ಮ|| ರಾ|| ಎಚ್. ಶಕ್ರಗೌಡರು ಮ|| ರಾ|| ಪಿ. ಬಸವನಗೌಡರು ಮದ್ರಾಸಿಗೆ ಹೊರಡುವಾಗ ಮೇಲೆ ಕಾಣಿಸಿದ ಶ್ರೀಗಳವರು ಜಯಾಶೀರ್ವಾದವನ್ನಿತ್ತುದರಿಂದ ಅಪ್ಪೀಲಿನಲ್ಲಿ ಕಾರ್ಯವು ಸಫಲವಾಗಲು ಪಂಚಾಚಾರ್ಯಪ್ರಭಾ ಪೋಷಣೆಗಾಗಿ 5 ರೂಪಾಯಿಗಳನ್ನು ಸಮರ್ಪಿಸಿ ಹುವ್ವಿನಹಡಗಲಿ ಮಿಡಲ್‌ಸ್ಕೂಲು ಕನ್ನಡಪಂಡಿತರಾದ ಬನ್ನಿಕಲ್ಲು ಹಿರೇಮಠದ ಕೊಟ್ರಪ್ಪಶಾಸ್ತ್ರಿಗಳವರ ಸ್ವಾಧೀನಕ್ಕೆ ಕೊಟ್ಟರು. ಗುರುಭಕ್ತಿ ಧುರೀಣರಾದ ಇವರಿಗೆ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನುಂಟುಮಾಡಲೆಂದು ಕೋರುವ,

ಹಿತಚಿಂತಕ.

ಶ್ರೀ ಜಗದ್ಗುರುಪಂಚಾಚಾರ್ಯರು ಸದಾರಕ್ಷಿಸಲಿ.

ಸಿರಗುಂಪಿ ಪಾಠಶಾಲಾಧ್ಯಕ್ಷರ ಸಮಾಚಾರವು.

ಸಿರಗುಂಪಿ ಪಂಚಾಚಾರ್ಯ ಸಂಸ್ಕೃತಪಾಠಶಾಲಾಧ್ಯಕ್ಷರಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರು ಇನ್ನೂ ಚಿಕ್ಕವಯಸ್ಸಿನವರಿದ್ದು ೪-೬ ವರ್ಷ ಪರ್ಯಂತ ತಮ್ಮ ಜನ್ಮಭೂಮಿಯನ್ನು ತ್ಯಜಿಸಿ ಅನಂತ ದೇಶಪರ್ಯಟನಮಾಡಿ ಭಕ್ತಮಾಹೇಶ್ವರರಲ್ಲಿ ತತ್ತ್ವ ಮತಾಚಾರಾದಿಗಳನ್ನು ಬಿಡಿಸುವದಕ್ಕೋಸ್ಕರ ಅಲ್ಲಲ್ಲಿಗೆ ಸಭಾ, ಭಜನಾಸಂಘ, ಲಾಯಬ್ರರಿ, ದಾಸೋಹ ಮೊದಲಾದ ಕಾರ್ಯಗಳನ್ನು ಆಚಾರ್ಯರ ಹೆಸರಿನಿಂದ ಸ್ಥಾಪಿಸುತ್ತಿರುವುದು ಸರ್ವರಿಗೂ ಪರಿಚಯವೇ ಅದೆ. ಆದರೆ ಇವರು ಬಳ್ಳಾರಿ ಡಿಸ್ಟ್ರಿಕ್ಟ್ ಸಿರಗುಂಪಿ ಶ್ರೀ ಜಗದ್ಗುರು ಕೇದಾರ ಶಾಖಾಮಠದಲ್ಲಿ ಪಂಚಾಚಾರ್ಯ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪನಮಾಡಿ ಶಾಸ್ತ್ರಿಗಳನ್ನು ನಿಯಮಿಸಿದ್ದರು. ೧೫-೧೬ ಜನ ವಿದ್ಯಾರ್ಥಿಗಳು ಅಧ್ಯಯನಮಾಡುತ್ತಿದ್ದು ೧ ವರುಷ ಪರ್ಯಂತ ಏನೂ ವಿಘ್ನವಿಲ್ಲದೆ ಚೆನ್ನಾಗಿ ನಡೆಯಿತು. ಆದರೆ ಸಿರಗುಂಪಿಯು ಕೇವಲ ಮಣಗಾಣೆ ಪ್ರದೇಶವಾದುದರಿಂದ ವಿದ್ಯಾರ್ಥಿಗಳಿಗೂ, ಶಾಸ್ತ್ರಿಗಳಿಗೂ, ಪಾಠಶಾಲಾಧ್ಯಕ್ಷರಿಗೂ ಕೆಟ್ಟ ನೀರುಹತ್ತಿ ಬಹಳ ಅನಾರೋಗ್ಯವಾದಕಾರಣ ಪಾಠಶಾಲೆಗೆ ರಜಾ ಕೊಟ್ಟಿದೆ. ಅಧ್ಯಕ್ಷರಿಗೆ ಸದ್ಯಃ ಚತುರ್ಥ ಮಲೇರಿಯಾ ಜ್ವರವು ಬರುತ್ತಿದ್ದು ಇನ್ನೂ ಗುಣಮುಖವಾಗಿಲ್ಲ. ಗುಣಮುಖವಾದ ಕೂಡಲೆ ಮುಂದೆ ಶಾಲೆಯನ್ನು ನಡೆಯಿಸುವ ಪ್ರಯತ್ನವು ನಡಿಯುತ್ತದೆ. ಸದ್ಯಃ ಶ್ರೀಗಳಿಗೆ ಗುಣವಾಗಲೆಂದು ಪರಮೇಶ್ವರನನ್ನು ಪ್ರಾರ್ಥಿಸುವ.

ಸಿದ್ಧಲಿಂಗಯ್ಯ, ಹೆಡ್‌ಮಾಸ್ತರ.
ಅರಹುಣಸಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವ. ಬಂಕಾಪುರ.

ವೈಶಾಖ ಶುದ್ಧ ೫ ಸೋಮವಾರ ಈ ಶುಭದಿವಸ ಇಲ್ಲಿಯ ಅದವಾನಿ ಮಠದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಗುರುಪೀಠಾಭಿಮಾನಿಗಳಾದ ಶ್ರಮುಖ ಭಕ್ತಮಂಡಲಿಯವರಿಂದ ಅತ್ಯಂತ ವೈಭವದೊಡನೆ ನೆರವೇರಿಸಲ್ಪಟ್ಟಿತು. ಪ್ರಾತಃಕಾಲಕ್ಕೆ ರಂಭಾಸ್ತಂಭ ತಳಿರುತೋರಣಗಳಿಂದ ಲಂಕೃತವಾದ ದಿವ್ಯಮಂಟಪದಲ್ಲಿ ಮೂರ್ತಗೊಳಿಸಿದ ಶ್ರೀ ದಾರುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಯು ವೇದೋಕ್ತವಾಗಿ ಮಾಡಲ್ಪಟ್ಟಿತು. ಮಧ್ಯಾಹ್ನ ಅನ್ನಸಂತರ್ಪಣಸಮಾರಂಭವು ವಿಶೇಷ ವೈಭವದಿಂದ ನಡೆಯಿತು. ಅನಂತರ 4 ಘಂಟೆಗೆ ಜಗದಾಚಾರ್ಯರ ಭಾವಚಿತ್ರವು ಪಲ್ಲಕ್ಕಿಯಲ್ಲಿರಿಸಲ್ಪಟ್ಟು ಇಲ್ಲಿಯ ಪಂಚಾಚಾರ್ಯ ಭಜನಾಸಂಘದವರಿಂದಲೂ ಬ್ಯಾಂಡ ಮೊದಲಾದ ಮಂಗಲವಾದ್ಯವೈಭವಗಳಿಂದಲೂ ಜಗದಾಚಾರ್ಯರ ದಿವ್ಯಸ್ತುತಿಗಳಿಂದಲೂ ಯುಕ್ತವಾಗಿ ಉತ್ಸವವು ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ರಾತ್ರಿ 10 ಘಂಟೆಗೆ ಅದವಾನಿ ಮಠವನ್ನು ಸೇರಿತು. ಗುರುಭಕ್ತಿಶೀಲರಾದ ಜನರು ಜಗದಾಚಾರ್ಯರ ಭಾವಚಿತ್ರಕ್ಕೆ ಕಾಯಿ ಕರ್ಪೂರ ಮಂಗಳಾರತಿಗಳನ್ನು ಅತ್ಯಂತ ಭಕ್ತಿಯಿಂದ ಸಮರ್ಪಿಸಿ ಧನ್ಯರಾದರು. ಆ ದಿವಸ ವೇ|| ಮುರಿಗಯ್ಯನವರು ಜಯಂತಿಯ ವಿಷಯವಾಗಿಯೂ ಮ|| ರಾ|| ಮಹಾದೇವಪ್ಪ ಕುಂಬಾರ ಇವರು ವೀರಶೈವಮತದ ಸನಾತನತ್ವ ಹಾಗೂ ಜಗದಾಚಾರ್ಯರ ಜಯಂತಿ ವಿಷಯವಾಗಿಯೂ ಅತ್ಯಂತ ಸ್ವಾರಸ್ಯವಾದ ಭಾಷಣಮಾಡಿ ಸಮಸ್ತ ವೀರಶೈವರನ್ನು ಆನಂದಾಬ್ಧಿಯಲ್ಲಿ ಮುಳುಗಿಸಿದರು. ಅನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಉತ್ಸವದ ಖಿಶಿಷ್ಟ ಖರ್ಚನ್ನು ವೇ|| ಅದವಾನಿ ಮಠದ ಗುರುಪಾದಯ್ಯನವರೇ ವಹಿಸಿಕೊಂಡಿದ್ದರು. ಅಸಾಧಾರಣ ಗುರುಭಕ್ತಿಸಂಪನ್ನರಾದ ಇವರಿಗೂ ಇವರ ಪುತ್ರಪೌತ್ರಾದಿಗಳಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುವ,

ಮಹಾದೇವಪ್ಪ ಕುಂಬಾರ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಆಂದೋಲಿಕೋತ್ಸವಾಹ್ವಾನಪತ್ರಿಕೆ

ಸಮಸ್ತ ವೀರಶೈವ ಮಂಡಲಿಯವರಲ್ಲಿ ವಿಜ್ಞಾಪನೆ.—

ಚಿತ್ರದುರ್ಗ ಡಿ|| ಹರಿಹರ ಪಟ್ಟಣದ ವೀರಶೈವ ದೈವದವರ ಪ್ರಾರ್ಥನೆಯ ಮೇರೆಗೆ ಮಹಾ|| || ಸ್ವಾರಿಯು ಶುಕ್ಲ ಸಂ|| ಜ್ಯೇಷ್ಠ|| ೧೫ (ತಾ|| ೨೨-೬-೨೯) ಶನಿವಾರ ಪ್ರಾತಃಕಾಲ ೮ ಘಂಟೆಗೆ ದಯಾಳುಗಳಾದ ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಮಹೋತ್ಸವಪೂರ್ವಕ ದಯಮಾಡಿಸುವದರಿಂದ ತಾವು ತಮ್ಮ ಆಪ್ತಮಿತ್ರರೊಡನೆ ಆಗಮಿಸಿ ಶ್ರೀಗುರುದರ್ಶನಾಶೀರ್ವಾದಗಳಿಗೆ ಪಾತ್ರರಾಗಿ ಧನ್ಯರಾಗಬೇಕೆಂದು ಕೋರುವ,

ಚನ್ನಪ್ಪಯ್ಯ, ಹೊಸಮಠ
ಹರಿಹರ. ಸ್ವಾಗತಸಂಘಾಧ್ಯಕ್ಷ.

ವಿವಾಹ ಮಹೋತ್ಸವ, ದೊಡ್ಡಬಾಣಾವರ.

ತಾ|| 10.6-929 ರಲ್ಲು ಅರಸೀಕೆರೆ ತಾಲೂಕು ಬಾಣಾವರದ ಕೋಟೆ ಸೆಟ್ಟಿ ಮ|| ರಾ|| ನಂಜುಂಡಪ್ಪಸೆಟ್ರವರು ತಮ್ಮ ಪುತ್ರಿ ಚಿ|| ಸ|| ಕುಂ|| ಸೌ|| ಪುಟ್ಟಗೌರಮ್ಮನನ್ನು ಬೆಂಗಳೂರು ಚಿಕ್ಕಪೇಟೆ ಎಲಕ್ಟ್ರಿಕಲ್ ಲೈಟ್ ಕಂಟ್ರಾಕ್ಟರ್ ಜಿ. ಯಸ್. ಶಿವರುದ್ರಪ್ಪನವರ ದ್ವಿತೀಯ ಕುಮಾರ ರುದ್ರಪ್ಪನೆಂಬ ವರನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸುವ ಕಾಲದಲ್ಲಿ ಅನೇಕ ವಿಘ್ನಗಳು ಪ್ರಾಪ್ತವಾದಾಗ್ಯೂ ಜಗದಾಚಾರ್ಯರ ಪ್ರಭಾವದಿಂದ ನಿರ್ವಿಘ್ನವಾಗಿ ನೆರವೇರಿದ ಸಂತೋಷಕಾಲದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ಮ|| ರಾ|| ಜಿ. ಎಸ್. ಶಿವರುದ್ರಪ್ಪನವರಿಂದ 2 ರೂಪಾಯಿಗಳು, ಮ|| ರಾ|| ನಂಜುಂಡಪ್ಪಸೆಟ್ರರವರಿಂದ 1 ರೂಪಾಯಿ, ಜುಮ್ಲಾ 3 ರೂಪಾಯಿಗಳು ವೇ|| ಹಿರೆಮಠದ ಜಿ. ವೀರಭದ್ರಸ್ವಾಮಿಯವರ ವಶಕ್ಕೆ ಕೊಡಲ್ಪಟ್ಟವು. ವಧೂವರರಿಗೆ ಶ್ರೀ ಜಗದ್ಗುರುಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನುಂಟುಮಾಡಲೆಂದು ಪ್ರಾರ್ಥಿಸುವ.

M. Madappa Setty,
Secretary,
Jagadguru Panchacharya
Bhajanasangha.

ಶ್ರೀ ಜಗದ್ಗುರು ರೇಣುಕಾಚಾರ್ಯಪ್ರಸೀದತು.

ದೀಕ್ಷಾವಿವಾಹಸಮಾರಂಭ

ಕೆಲಾದಿಗಿ.

ಕೆಲಾದಿಗಿ ಬೃಹನ್ಮಠಾಧ್ಯಕ್ಷರಾದ ಪಟ್ಟದಸ್ವಾಮಿಗಳಿಗೂ ಮತ್ತು ಮುಧೋಳ ಸಂಸ್ಥಾನಕ್ಕೆ ಸೇರಿದ ಜಾಲೀಕಟ್ಟಿ ಬೃಹನ್ಮಠದ ಚರಮೂರ್ತಿಸ್ವಾಮಿಗಳಿಗೂ ಅನುಗ್ರಹವನ್ನು ಮಾಡುವ ದಕ್ಷೋಶ್ವರ ಕೊಪ್ಪಳದ ತಾ|| ಮಂಗಳೂರು ಅರಳೆಲೆ ಮಠದ ಶ್ರೀ ಪಟ್ಟದಸ್ವಾಮಿಗಳವರು ತಾ|| 3-6-29 ನೇ ದಿವಸ ಕೆಲಾದಿಗಿಗೆ ದಯಮಾಡಿಸಿದರು. ಸ್ವಾಮಿಗಳವರನ್ನು ರಂಭಾಸ್ತಂಭದಿಂದಲೂ ತಳಿರುತೋರಣಗಳಿಂದಲೂ ಅಲಂಕೃತವಾದ ರಾಜಬೀದಿಯಲ್ಲಿ ಉತ್ಸವಪೂರ್ವಕವಾಗಿ ಕರೆದುಕೊಂಡು ಬಂದರು. ಉತ್ಸವವು ನಾನಾತರಹ ವಾದ್ಯಧ್ವನಿಗಳಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷಗಳಿಂದಲೂ ಸ್ತುತಿಪರಾಕುಗಳಿಂದಲೂ ಒಳ್ಳೇ ವೈಭವದೊಡನೆ ನೆರವೇರಿತು. ಈ ಮಹಾಕಾರ್ಯಕ್ಕೆ ಲೋಕಾಪೂರ, ಬಾಗಿ ಸತ್ತಿಗೇರಿ ಮೊದಲಾದ ಗ್ರಾಮಗಳಿಂದ ಪಟ್ಟಚರಮೂರ್ತಿಸ್ವಾಮಿಗಳೂ ಮತ್ತು ವೇ|| ಮರೇಗುದ್ದಿ ಶಂಕರಶಾಸ್ತ್ರಿಗಳವರೂ ಅನ್ಯ ಉಳಿದಾದ ಭಕ್ತ ಮಾಹೇಶ್ವರ ಮಂಡಲಿಯವರೂ ಆಗಮಿಸಿದ್ದರು. ೭ ನೇ ತಾರೀಖಿನ ದಿವಸ 20 ಜನ ಮಾಹೇಶ್ವರ ವಟುಗಳಿಗೆ ದೀಕ್ಷಾ ಸಂಸ್ಕಾರವು ನೆರವೇರಿಸಲ್ಪಟ್ಟು ಮಹಾಗಣಾರಾಧನೆಯು ನೆರವೇರಿತು. ಜಾಲೀಕಟ್ಟಿ ಹಿರೇಮಠದ ವೇ|| ವಿರೂಪಾಕ್ಷಯ್ಯನವರಿಗೆ ಗುಳೇದಗುಡ್ಡದ ಪುರಾಣಿಕಮಠದ ವೇ|| ಗಂಗಯ್ಯನವರ ಪುತ್ರಿ ಸೌ|| ಗೌರವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸುವದರಲ್ಲಿ ಬಂದಿತು. ಮಹಾಗಣಾರಾಧನೆಗೆ 8 10 ಸಹಸ್ರ ಜನ ಮಿಳಿತರಾಗಿದ್ದರು. ಈ ಯಾವತ್ತೂ ಜನಗಳಿಗೆ ಸದರೀ ಮಠದ ಪಟ್ಟದಸ್ವಾಮಿಗಳವರು ಮಾಡಿದ ಆದರಾತಿಥ್ಯವನ್ನು ಕಂಡು ಸರ್ವರೂ ಸಂತುಷ್ಟರಾಗಿ ಸ್ವಾಮಿಗಳನ್ನು ಸ್ತುತಿಗೈದರು. ದೀಕ್ಷಾ ಸಮಯದಲ್ಲಿ ವೇ|| ಪಂಡಿತ ಶಂಕರಶಾಸ್ತ್ರಿಗಳವರಿಗೆ ವೇ|| ಅಬ್ಬಿಗೇರಿ ರಾಚೋಟಿಶಾಸ್ತ್ರಿಗಳೂ, ಅಲ್ಲದೆ ವೇ|| ಭಿಕ್ಷಾವತಿ ಮಠದ ರೇವಣಯ್ಯನವರೂ ಮತ್ತು ವೇ|| ಹಿಪ್ಪರಗಿ ಮಠದ ಸಂಗಯ್ಯನವರೂ ಸಹಾಯಕರಾಗಿದ್ದರು. ಈ ಸಮಯದಲ್ಲಿ ವೇ|| ಜಾಲೀಕಟ್ಟಿ ವಿರೂಪಾಕ್ಷಯ್ಯನವರು ವೀರಶೈವ ಮತೋದ್ಧಾರಕ್ಕಾಗಿ ಅವತಾರವೆತ್ತಿದ ಪಂಚಾಚಾರ್ಯಪ್ರಭಾ ಪೋಷಣೆಗೋಸ್ಕರ 4 ರೂಪಾಯಿಗಳನ್ನೂ ವೇ|| ಗಂಗಯ್ಯನವರು 3 ರೂಪಾಯಿಗಳನ್ನೂ ಸಮರ್ಪಿಸಿದರು. ಅಸಾಧಾರಣಗುರುಭಕ್ತಿಧುರೀಣರಾದ ಈ ಮಹನೀಯರಿಗೆಲ್ಲರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ.

ಓರ್ವ ಪ್ರತ್ಯಕ್ಷದರ್ಶಿ.

ತಾಯಿಯರಿಗೆ ಮುಖ್ಯ ಸೂಚನೆಗಳು.

1. ಮಗು ಹುಟ್ಟುವುದಕ್ಕೆ ಆರು ತಿಂಗಳ ಮೊದಲೇ ಅದಕ್ಕೆ ಹಲ್ಲುಗಳು ಮೊಳೆಯಲಾರಂಭಿಸುವುವು.

2. ಗರ್ಭದೆಶೆಯಲ್ಲಿ ತಾಯಿಯ ಆಹಾರಕ್ರಮವೂ ಆವಳ ದೇಹಾರೋಗ್ಯದ ಎಚ್ಚರಿಕೆಯೂ ಮಗುವಿನ ಹಲ್ಲುಗಳು ಸರಿಯಾದ ಸ್ಥಿತಿಯಲ್ಲಿರಲು ಸಹಕರಿಸುವುವು.

3. ಮಕ್ಕಳಿಗೆ ಸ್ತನ್ಯವೇ ಬಹಳ ಉತ್ತಮವಾದ ಆಹಾರವು; ಅದಕ್ಕೆ ಸಮಾನವಾದ ಬೇರೆ ವಸ್ತುವೇ ದೊರೆಯದು.

4. ಮಕ್ಕಳ ಬಾಯಿಗೆ ಬೇರೆ ವಸ್ತುಗಳೊಂದನ್ನೂ ಕೊಡಬಾರದು. ರಬ್ಬರುತೊಟ್ಟನ್ನು ಸೀಪುವುದಕ್ಕಾಗಿ ಅವುಗಳ ಬಾಯಿಗೆ ಕೊಡುವುದು ಬಹಳ ಅಪಾಯಕಾರಣವು.

5. ಮೊದಮೊದಲು ಮಾಡಿದ ಸ್ತನ್ಯಪಾನದ ಬಲದಿಂದಲೇ ಮಕ್ಕಳು ಮುಂದೆ ಸರಿಯಾಗಿ ಆಹಾರವನ್ನು ತೆಗೆದುಕೊಳ್ಳುವುವು.

6. ಮಿಠಾಯಿ ಮೊದಲಾದ ಭಕ್ಷ್ಯಗಳನ್ನು ಹೆಚ್ಚಾಗಿ ಮಕ್ಕಳಿಗೆ ತಿನ್ನಿಸಬಾರದು. ಅದರಲ್ಲಿಯೂ ಭೋಜನಕಾಲಗಳನ್ನು ಬಿಟ್ಟು ಮಧ್ಯಕಾಲಗಳಲ್ಲಿ ಅಂತಹ ಮಧುರಪದಾರ್ಥಗಳನ್ನು ಕೊಡುವುದು ಬಹು ಕೆಟ್ಟುದು. ತರಕಾರಿ, ಹಣ್ಣು ಕ್ಷೀರ ಮುಂತಾದುವನ್ನು ಧಾರಾಳವಾಗಿ ಕೊಡಬಹುದು.

7. ಮಕ್ಕಳ ಹಲ್ಲುಗಳನ್ನು ಬ್ರಷ್ಷುಗಳಿಂದ ಚೆನ್ನಾಗಿ ತಿಕ್ಕಿ ತೊಳೆಯಬೇಕು. ಮೇಲಿನ ಸಾಲನ್ನು ಮೇಲಿಂದ ಕೆಳಕ್ಕೂ, ಕೆಳಸಾಲಿನ ಹಲ್ಲನ್ನು ಕೆಳಗಿನಿಂದ ಮೇಲಕ್ಕೂ, ದವಡೆಯ ಹಲ್ಲುಗಳನ್ನು ಅಡ್ಡಲಾಗಿಯೂ ತಿಕ್ಕಬೇಕು.

8. ಮಕ್ಕಳಿಗೆ ಪ್ರತಿದಿನವೂ ಯಾವುದಾದರೂ ಗಟ್ಟಿ ಪದಾರ್ಥವನ್ನು ಅಗಿಯುವುದಕ್ಕಾಗಿ ಕೊಡುತ್ತಿರಬೇಕು. ಹಲ್ಲುಗಳಿಗೆ ಈ ತರದ ವ್ಯಾಯಾಮವು ಅತ್ಯವಶ್ಯಕವು

9. ಮಕ್ಕಳಿಗೆ 2½ ವರ್ಷ ಪ್ರಾಯವಾದಾಗ ದಂತವೈದ್ಯರಿಗೆ ಅವುಗಳ ಹಲ್ಲನ್ನು ತೋರಿಸಬೇಕು.

10. ಆಮೇಲೆ ನಾಲ್ಕು ತಿಂಗಳ ಕಾಲಕ್ಕೊಮ್ಮೆ ಆಗಾಗ್ಗೆ ವೈದ್ಯರಿಂದ ಪರೀಕ್ಷೆ ಮಾಡಿಸುತ್ತಿರಬೇಕು.

11. ಮಕ್ಕಳ ಹಲ್ಲುಗಳನ್ನು ಹೀಗೆ ಸರಿಯಾಗಿ ಕಾಪಾಡುವುದರಿಂದ, ಮುಂದೆ ಎಷ್ಟೋ ಅಪಾಯಗಳೂ, ತೊಂದರೆಗಳೂ, ರೋಗಗಳೂ ತಪ್ಪುವುವು.

12. ನಿಮಗೆ ನಿಮ್ಮ ಹಲ್ಲುಗಳು ಎಷ್ಟು ಮುಖ್ಯವೋ, ಮಕ್ಕಳಿಗೂ ಹಲ್ಲು ಬಹಳ ಪ್ರಧಾನವು.

13. ಆರೋಗ್ಯಕ್ಕೂ ಹಲ್ಲುಗಳಿಗೂ ಬಹಳ ಸಮೀಪ ಸಂಬಂಧವುಂಟು. ಬಾಯಿಯೇ ದೇಹಾರೋಗ್ಯದ ಹೆಬ್ಬಾಗಿಲು.

"ದಿ ಇಂಡಿಯನ್ ಡೆಂಟಲ್ ರಿವ್ಯೂ"

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾಸ್ತಾ ಹಣ ವಾಪಸ್ ಕೊಡುವೆವು. ನಮ್ಮ ಅಡ್ರೆಸ್:— [11]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!
ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರು "ಗೃಹಮಾತೆ"ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂತ್ರವೃದ್ಧಿ, ಅರುಚಿ, ಆಮ್ಲವಾತ, ಆಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟಿನಮೇಲೆ ಇದು ಐವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಇದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಗಳು ಮತ್ತು ನಾನಾ ತರ ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಅದ್ದರಿಂದ ಈ ಔಷಧಾಲಯಕ್ಕೆ **"ಅಷ್ಟವರ್ಗೌಷಧಾಲಯ"**ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[11] **848. Ganjipet Poona City.**

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ಕ್ಕೆ ೩ ಆಣೆ. ೫೦ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಶಿಖೋಪನಿಷತ್.

ವೇದಗಳ ಶಾಖೆಗಳೇ ಉಪನಿಷತ್ತುಗಳ ರೂಪದಿಂದ ಪ್ರಕಾಶಿಸುತ್ತಿರುವವು. ಉಪನಿಷತ್ತುಗಳು ಒಂದಲ್ಲ, ಎರಡಲ್ಲ ಸಾವಿರಾರು ಇರುವವು. ಅದರಲ್ಲಿ ಕಾಲವೈಚಿತ್ರ್ಯದಿಂದ ಎಷ್ಟೋ ಉಪನಿಷತ್ತುಗಳು ಲುಪ್ತಗಳಾಗಿವೆ. ನಿರ್ಣಯಸಾಗರ ಮುದ್ರಣಾಲಯದಲ್ಲಿ ಮಾತ್ರ 120 ರ ವರೆಗೆ ಮಾತ್ರ ಉಪನಿಷತ್ತುಗಳು ಮುದ್ರಿಸಲ್ಪಟ್ಟಿವೆ. ಈ ಉಪನಿಷತ್ತುಗಳು ವೈದಿಕಸಿದ್ಧಾಂತವನ್ನು ಸ್ಥಿರಗೊಳಿಸುವವು. ಸದ್ಯಃ ದೊರೆಯುವ ಕೆಲವು ಉಪನಿಷತ್ತುಗಳಲ್ಲಿ ವೀರಶೈವ ಸಿದ್ಧಾಂತವು ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟಿರುವದು. ಆದರೆ ಈ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಉಪನಿಷತ್ತುಗಳು ಅನೇಕವಿದ್ದಾಗ್ಯೂ ಆ ಉಪನಿಷತ್ತುಗಳ ಹೆಸರುಗಳನ್ನು ನಮ್ಮ ಪ್ರಾಚೀನ ಗ್ರಂಥಕಾರರು ತೆಗೆದುಕೊಂಡಿದ್ದಾಗ್ಯೂ ಅವು ಇಲ್ಲಿಯವರೆಗೂ ಉಪಲಬ್ಧವಾಗಿರಲಿಲ್ಲ. ವೀರಶೈವಮತದ ಸುದೈವದಿಂದ ಸದ್ಯಃ ಸಿದ್ಧಾಂತಶಿಖೋಪನಿಷತ್ ಎಂಬ ಹೆಸರಿನ ಉಪನಿಷತ್ತು ಲಬ್ಧವಾಗಿರುವದು. ಈ ಉಪನಿಷತ್ತಿನಲ್ಲೆಲ್ಲಾ ವೀರಶೈವ ಸಿದ್ಧಾಂತವೇ ತುಂಬಿ ತುಳುಕುತ್ತಿರುವದು. ಇದರ ಯೋಗ್ಯತೆಗೆ ಎಷ್ಟು ಬೆಲೆ ಕೊಟ್ಟರೂ ತೀರದಾಗಿದೆ. ಗ್ರಂಥವು ಚಿಕ್ಕದಾದರೂ ಯೋಗ್ಯತೆಯು ಬಹು ದೊಡ್ಡದಾಗಿದೆ. ಈ ಗ್ರಂಥವನ್ನು ದೇವನಾಗರಿ, ಕನ್ನಡ ಈ ಎರಡು ಲಿಪಿಗಳಲ್ಲಿಯೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾಗಾರದವತಿಯಿಂದ ಪ್ರಿಂಟ್ ಮಾಡಿಸಿದಾಗಿದೆ. ವೀರಶೈವರೆನಿಸುವ ಪ್ರತಿಯೊಬ್ಬರ ಮನೆಯಲ್ಲಿಯೂ ಈ ಗ್ರಂಥವು ಪ್ರಕಾಶಿಸುತ್ತಿರಬೇಕು. ಬೆಲೆ 4 ಆಣೆ. 4 ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು 5 ಆಣೆ ಸ್ಟಾಂಪನ್ನು ಕಳುಹಿಸಬೇಕು.

ಅಧ್ಯಾಪಕ,
ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ,
ಮಹಾಂತಿನಮಠ, ಚಿಕ್ಕಪೇಟೆ ಬೆಂಗಳೂರು ಸಿಟಿ.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಲ್ಪುಷ್ಪ, ತಾಲಿಮಕಂದ, ಮಧುಕಂದ, ಜವಾಕಂಧ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೀವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀ ಬೀಜ, ಸಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಶಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇಕಮಿಶ್ರಿ, ತಾಲೀಮುಖಾನಾ, ಬೀಜಬಂದ, ಹರಣಬೋರಿ, ಮುಂಗಲೇಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸರ್ಗೀಮಗಜ, ಆಲದಹಾಲು, ನಾಕೇರಿಭಾತಾ, ಗೋಕುರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯು ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದಿರೋಣ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [22]

ಪತ್ತ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಆರೋಗ್ಯವೆಂಬ ಸಂಪತ್ತನ್ನು ಕಳಕೊಳ್ಳಬೇಡಿ! ರೋಗವೆಂಬ ವಿಧಿ ಆಪತ್ತನ್ನು ಪರಿಹರಿಸಿಕೊಳ್ಳ ನೋಡಿ!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಎಂಬ ಮದ್ದು ಮಲೆಜ್ವರವನ್ನೂ ಗಡ್ಡೆ ರೋಗ ಇತ್ಯಾದಿ ಇತರ ಜ್ವರಗಳನ್ನೂ ಖಂಡಿತ ಗುಣಪಡಿಸುವ ಈ ಅಮೃತವಾದ ಮದ್ದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ನಿಮಗಿಲ್ಲವೇ?

ಮಲೆಜ್ವರಕ್ಕೂ ಗಡ್ಡೆ ಇತರ ಜ್ವರಗಳಿಗೂ ನಾನಾ ಬಗೆಯ ಮದ್ದುಗಳು ನಿಮ್ಮನ್ನು ನಿರಾಶೆಪಡಿಸುವಂತೆ ಈ ಪ್ರಧಾನ ಮದ್ದು ಮಲೇರಿಯಾನವು ಮಾಡುವದೆಂಬ ಸಂಶಯಪಡುವಿರಾ? ಎಂದೂ ಮಾಡದೆಂದು ನಿಜವಾಗಿ ನಂಬಿರಿ. ನಿರಾಶೆ ಹಬ್ಬಿರುವ ಬಂಧುರೋಗಿಗಳು ಕಡೇಮದ್ದಾಗಿ ಇದೇ ಮಲೇರಿಯಾನವೆಂಬ ಮದ್ದನ್ನು ಸೇವಿಸಿಕೊಂಡು ರೋಗಗಳು ಸಂಪೂರ್ಣ ಗುಣವಾಗಿ ಇನ್ನೂ ಜೀವಿಸುತ್ತಾ ಒಳ್ಳೇ ಕಾಯಕಟ್ಟುಮಾಡಿ ಆರೋಗ್ಯದಲ್ಲಿರುತ್ತೇವೆಂದು ದಿನವೂ ಪತ್ರಮೂಲಕ ತಿಳಿಸಿ... ನಾರವಾದ ಹೆಸರುಗಳಿಂದ ಇದೇ ಮಲೇರಿಯಾನವನ್ನೇ ಹೊಗಳುತ್ತಾ ಇರುತ್ತಾರಲ್ಲಾ? ಹಾಗಾದರೆ ನಿರಾಶೆ ಹಬ್ಬಿರುವ ಬಂಧುರೋಗಿಗಳೇ ಇನ್ನು ಮಲೇರಿಯಾನವೆಂಬ ಪ್ರಧಾನ ಮದ್ದನ್ನು ತರಿಸಿ ಸೇವಿಸಿಕೊಳ್ಳಿ. ಕ್ರಯ—8 ಔನ್ಸಿಗೆ 1-8-0, ಅರ್ಧ ಡಜನ್ 8-8-0, ಡಜನ್ 16-8-0.

ಟಿಕ್ಚು, ಹೋಮಿಯೋಪತಿ ಮದ್ದುಗಳೂ, ಪರೀಕ್ಷಿಸಿಕೊಡುವ ದೃಷ್ಟಿಚಕ್ರಗಳೂ, ಪ್ರೇಮಳೇಸುಗಳೂ, ಇತರ ಪ್ರಸಿದ್ಧ ಫರಂಗಿಯೂ ನಮ್ಮಲ್ಲಿ ಇರುತ್ತದೆ. ಕ್ಯಾಟಲಾಗಿಗೆ ಬರೆಯಿರಿ. [46]

ಮಲೇರಿಯಾನ ಕಂಪೆನಿ, ನಂಬ್ರ ೨೧ ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ ಕ್ಕೆ	ರೂ. ಆ. ಪೈ.	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ		೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೧×೮|| ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ		೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ		೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ		೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ, ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪಿನಿಶ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[51] ಪೋ. ಬಾ. ೫೧೦, ಮದರಾಸ್.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ ನೇ ಜೂನ್ ೧೯೨೯ [ಸಂಚಿಕೆ ೭.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರಕ್ಷಣೆಯಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಆ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪ್ರಕಟನೆ.

ಶ್ರೀ ಜಗದ್ಗುರು ಪರ್ವತಸಂಸ್ಥಾನ ಸರ್ವಿಸಿನಲ್ಲಿ ನೌಕರಾಗಿದ್ದ ಎಂ. ಪಿ. ಮಲ್ಲಿಕಾರ್ಜುನಯ್ಯನೆಂಬಾತನು ಲೆಖ್ಖದಲ್ಲಿ ಕೆಲವು ಹಣ ದಸ್ತುಮಾಡಿ ಪರಾರಿಯಾಗಿಹೋಗಿರುವನು ಇವನು ಸಂಧ್ಯಾಲಪ್ರಾಂತ್ಯದಲ್ಲಿದ್ದು ಈ ಪೀಠದ ಹೆಸರಿನಿಂದ ಕೆಲವರ ಸಂಗಡ ಪತ್ರವ್ಯವಹಾರವನ್ನು ಮಾಡುತ್ತಿರುವನೆಂದು ತಿಳಿದುಬಂದಿರುವದರಿಂದ ಈತನನ್ನು ಯಾರಾದರು ಕಂಡಲ್ಲಿ ಹಿಡಿದು ಗುಂತಕಲ್ ನೊಕ್ಕಾಮಿಗೆ ರವಾನಿಸಬೇಕು. ಮತ್ತು ಈ ಸಂಸ್ಥಾನದ ಆನೆ ಮಾವುತನು ವಿಧಿವಶನಾದ್ದರಿಂದ ಆ ಕೆಲಸದಲ್ಲಿ ಅನುಭವವುಳ್ಳವರು ಎರಡು ಜನರು ಬೇಕಾಗಿದ್ದಾರೆ. ಕೆಲಸವನ್ನು ನೋಡಿ ಸಂಬಳವು ಗೊತ್ತುಮಾಡುವದು. ಬರಲಿಚ್ಛಿಸುವವರು ಅನಂತಪುರಂ ಜಿಲ್ಲಾ ಗುಂತಕಲ್ ಶ್ರೀ ಜಗದ್ಗುರು ಮಠಕ್ಕೆ ಬಂದು ಏಜಂಟರನ್ನು ಕಂಡು ನೌಕರಿಗೆ ಸೇರಬಹುದು. ಮಲ್ಲಿಕಾರ್ಜುನಯ್ಯನನ್ನೂ ಮತ್ತು ಆನೆಮಾವುತರನ್ನೂ ತಪಾಸ್ ಮಾಡಿ ತಂದವರಿಗೆ ಮಹಾಸಂಸ್ಥಾನದಿಂದ ಬಹುಮಾನ ಕೊಡಲ್ಪಡುವದು.

R. C. Aradhya Swamy,
Hiremath,
ಏಜಂಟ್.

ಶ್ರೀ ರೇಣುಕಜಯಂತಿಯು ರಜಾನಿಮಿತ್ತವಾಗಿ ಸಭೆ.

ಹಿಮಾಲಯ.

ತಾ|| 13-6-29 ನೆಯ ದಿವಸ ಶ್ರೀ ಕೇದಾರನಾಥ ಸನಾತನ ಮಹಾವಿದ್ಯಾಲಯದಲ್ಲಿ ಕೇದಾರಮಂಡಲಿಯ ಮಹಾಜನಗಳೆಲ್ಲರೂ ಸಮ್ಮಿಲಿತರಾದರು. ಬಳಿಕ ಸರ್ವಾನುಮತದಿಂದ ರಿಟೈರ್ಡ್ ಡಿ|| ಡಿ|| ಕಲೆಕ್ಟರ್ ರಾವ ಬಹದ್ದೂರ ವಿಶ್ವೇಶ್ವರಪ್ರಸಾದರವರು ಸಭಾಪತಿತ್ವವನ್ನು ಸ್ವೀಕರಿಸಿದರು. ತರುವಾಯ ಸನಾತನ ಧರ್ಮದ ಬಗ್ಗೆ ಪಂಡಿತರ ಭಾಷಣಗಳಾದವು. ಅನಂತರ "ಸನಾತನಧರ್ಮಾಚಾರ್ಯರು" ಎಂಬ ವಿಷಯದಲ್ಲಿ ಪಂ|| ಮುಕುಂದಾನಂದ ಶಾಸ್ತ್ರಿಗಳು ಬಹು ವಿಸ್ತಾರವಾಗಿ ರಾಮಾನುಜಾಚಾರ್ಯರ ಮತ್ತು ಶಂಕರಾಚಾರ್ಯರ ಮಹತ್ವಸಂಗತಿಗಳನ್ನು ಬೋಧಿಸಿದರು. ಅನಂತರ ಪಂಡಿತ ಚಿದ್ಘನಶಿವಾಚಾರ್ಯರು ಪುರಗಿರಿ ಬೃಹನ್ಮಠ ಇವರು ಶ್ರೀ ರೇಣುಕಾಚಾರ್ಯರ ಮಹಾತ್ಮ್ಯಗಳನ್ನು ವಿಶದವಾಗಿ ನಿಗಮಾಗಮಯುಕ್ತಿ ಪ್ರತ್ಯಕ್ಷ ಇತಿಹಾಸ ಪ್ರಮಾಣಪೂರ್ವಕವಾಗಿ ಪ್ರಕಾಂಡ ಪಾಂಡಿತ್ಯದ್ಯೋತಕಪ್ರವಚನ ದ್ವಾರಾ ಬೋಧಿಸಿ ಶ್ರೀ ರೇಣುಕಾಚಾರ್ಯರು ಸೋಮೇಶ್ವರ ನಾಮಕ ಲಿಂಗದಿಂದ ಕೊಲ್ಲಿಪಾಕೀ ಮಹಾಕ್ಷೇತ್ರದಲ್ಲಿ ಪ್ರಾದುರ್ಭವಿಸಿ ವೀರಶೈವ ಸಿದ್ಧಾಂತರತ್ನಪ್ರಭೆಯನ್ನು ವಿಶ್ವತೋಮುಖವಾಗಿ ವಿಸ್ತರಗೊಳಿಸಿ ಅನೇಕಾನೇಕ ಮುನಿಗಳಿಗೂ ಭೂಪಾಲರಿಗೂ ಉಪದೇಶವಂಗೈದು ಗುರುಸಾರ್ವಭೌಮರೆಂದು ಸೇತು ಹಿಮಾಚಲ ಪರ್ಯಂತವಾಗಿ ಸುಪ್ರಸಿದ್ಧರಾಗಿರುವರೆಂದೂ, ಈ ವಿಷಯದಲ್ಲಿ ಈಗಲೂ ಈ ಕೇದಾರಮಂಡಲದಲ್ಲಿರುವ ಉಖಾಮಠದ ಸಮೀಪದಲ್ಲಿ "ಅಗಸ್ತ್ಯಾಶ್ರಮ" ವೂ ಮೇಲುಭಾಗದ ಕೈಲಾಸಮಂಡಲದಲ್ಲಿ "**ರೇವಣಶಾಲಾ**" ವೂ ಪ್ರತ್ಯಕ್ಷ ಕಾಣುತ್ತಿರುವದೇ ಬಲವಾದ ಸಾಕ್ಷಿಯಾಗಿರುವದೆಂದೂ ಹೇಳಿ ಸರ್ವರನ್ನು ಆನಂದ ತುಂದಿಲ ಹೃದಯರನ್ನಾಗಿ ಮಾಡಿದರು. ಅದ್ಭುತ ಮಹಿಮಾಶಾಲಿಗಳಾದ ಈ ಗುರುಪುಂಗವರ ಜಯಂತಿ ದಿವಸವಾದ ಫಾಲ್ಗುಣ ಶು|| 13 ತಿಥಿಯನ್ನು ಅಖಿಲಭಾರತ ರಾಜ್ಯಮಂಡಲದಲ್ಲಿ ರಜಾದಿವಸವನ್ನಾಗಿ ಪರಿಗಣಿಸತಕ್ಕದ್ದು ಅತ್ಯವಶ್ಯಕವಾಗಿರುವದು. ಪ್ರಭಾಪತ್ರಿಕೆಯಲ್ಲಿ ಪ್ರಸಿದ್ಧವಾದಂತೆ ರಜಾಸಂಬಂಧವಾಗಿ ಸನಾತನ ಧರ್ಮೋದ್ಧಾರಾವತಾರಿಗಳಾದ ಶ್ರೀ ಕೃಷ್ಣರಾಜ ಒಡೆಯರ್ ಬಹಾದ್ದೂರರವರ ಸನ್ನಿಧಿಯಲ್ಲಿ ಈ ಸಭೆಯ ಪರಿಯಿಂದ ಪ್ರಾರ್ಥನಾಪತ್ರಿಕೆಯನ್ನು ಕಳುಹಿಸಬೇಕೆಂದು ಪ್ರಸ್ತಾಪಿಸಿ ಸ್ವಸ್ಥಾನದಲ್ಲಿ ಮಂಡಿಸಿದರು. ಅನಂತರ ಸರ್ವರೂ ಮುಕ್ತಕಂಠದಿಂದ ಈ ಅಭಿಪ್ರಾಯವನ್ನು ಅನುಮೋದಿಸಲು ಸಭಾಪತಿಗಳು ಮೈಸೂರುರಾಜ್ಯದಲ್ಲಿ ಯಾವತ್ತು ಧರ್ಮದಲಾಚಾರ್ಯರ ಜಯಂತಿದಿವಸಗಳು ರಜಾದಿವಸಗಳಾಗಿರುವಂತೆ ಶ್ರೀ ರೇಣುಕಾಚಾರ್ಯರ ಜಯಂತಿದಿನವು ರಜಾದಿನವಾಗಿ ಪರಿಗಣಿಸತಕ್ಕದ್ದೆಂದು ತಂತೀ ಮೂಲಕ ಚೀಫ್ ಸೆಕ್ರಟರಿ ಮಹೋದಯರಿಗೆ ಅರಿಕೆಮಾಡಿಕೊಂಡರು.

ಪ್ರತ್ಯಕ್ಷದರ್ಶಿ.

ಸ್ವೀಕಾರ.

ಬಳ್ಳಾರಿ ಡಿ|| ಹರಪನಹಳ್ಳಿ ತಾಲೂಕು ಮುಸುವನಕಲ್ಲಹಳ್ಳಿ ಗ್ರಾಮದ ಮ|| ರಾ|| ಇಟಿಗಿ ಬಸಪ್ಪನವರ ಪುತ್ರ ಚಿ|| ಪತ್ರಪ್ಪನಿಗೆ ಸದರಿ ಗ್ರಾಮದ ಸಕ್ರಗೌಡರ ಕೊಟ್ರಗೌಡರ ಪುತ್ರಿ ಸೌ|| ಹಂಪಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಿದ **4** ರೂಪಾಯಿಗಳು ಮತ್ತು ಸದರಿ ಗ್ರಾಮದ ಸಕ್ರಗೌಡರ ಹಲಗನಗೌಡ್ರು ತಮ್ಮ ಪುತ್ರ ಚಿ|| ಸಿದ್ಧಲಿಂಗನಗೌಡನ ವಿವಾಹಸಮಯದಲ್ಲಿ ಸಮರ್ಪಿಸಿದ **2** ರೂಪಾಯಿ ಹಾಗೂ ಸದರಿ ಗ್ರಾಮದ ಸಕ್ರಗೌಡರ ವೀರನಗೌಡರು ತಮ್ಮ ಪುತ್ರ ಚಿ|| ಚನ್ನವೀರನಗೌಡನ ವಿವಾಹ ಸಮಯದಲ್ಲಿ ಸಮರ್ಪಿಸಿದ **2** ರೂಪಾಯಿ ಒಟ್ಟು **8** ರೂಪಾಯಿಗಳು ಮ|| ರಾ|| ಉತ್ತಂಗಿ ಶಾನುಭೋಗರ ಶಿವನಾಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕಲ್ಲುಹೊಳೆ ಗ್ರಾಮದ ವೇ|| ಮಠದ ಕಲ್ಲುಹೊಳೆಯಪ್ಪಯ್ಯನವರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಶ್ರೀ ಜಗದ್ಗುರು ದಾರುಕನ ಕೃಪಾಶೀರ್ವಾದ ಬಲದಿಂದ ಪೂರ್ತಿ ಗುಣವಾದ ಸಂತೋಷಕ್ಕೋಸ್ಕರ ಸಾಣಾಪುರದ ಶ್ರೀ ವೀರಭದ್ರಸ್ವಾಮಿಯ ದೇವಾಲಯದಲ್ಲಿ ಮಹಾಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂಪಾಯಿಗಳು ವೇ|| ಮಠದ ಕೆಂಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಹಗರಿ ಗಜಾಪುರದ ವೇ|| ಮೆ|| ಮ|| ಮಠಗಿನ ರುದ್ರಪ್ಪಯ್ಯನವರ ಅನುಜ ಚಿ|| ಚಂದ್ರಯ್ಯನಿಗೆ ಅಯ್ಯನಹಳ್ಳಿ ಗ್ರಾಮದ ಬೋ|| ಮ|| ಹಾವಕ್ಕನ ಚನ್ನವೀರಯ್ಯನವರ ಪುತ್ರಿ ಸೌ|| ಚನ್ನಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರಿಂದ ಸಮರ್ಪಿಸಿದ **2** ರೂಪಾಯಿಗಳು ಕೊಟ್ಟೂರು ಅಗಡಿಮಠದ ಕೊಟ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾವೇರಿ ನಿವಾಸಿಗಳಾದ ಮ|| ರಾ|| ಕಲ್ಲುಮನಿ ಕೊಟ್ರಪ್ಪನವರ ಪುತ್ರಿ ಸೌ|| ಸಾವಿತ್ರವ್ವನನ್ನು ಚಿಕ್ಕೇರೂರು ಮ|| ರಾ|| ಶೆಟ್ರ ರುದ್ರಪ್ಪನವರ ಪುತ್ರ ಚಿ|| ಮುರಿಗಪ್ಪನಿಗೆ ಕೊಡುವುದಾಗಿ ನಿಶ್ಚೈಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂಪಾಯಿಯು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಸೆಕ್ರಟರಿಗಳಾದ ಸಾತೇನಹಳ್ಳಿ ಗುರುಸಿದ್ಧಪ್ಪನವರ ದ್ವಾರಾ ತಲ್ಪಿರುತ್ತದೆ.

ವಿಜಾಪುರ ಡಿ|| ಗುಳೇದಗುಡ್ಡ ನಿವಾಸಿಗಳಾದ ವೇ|| ಮರಬದಮಠದ ವೀರಸಂಗಯ್ಯನವರಿಗೆ ಬಾಗಲಕೋಟೆಯ ವೇ|| ರಾಚಯ್ಯನವರ ಪುತ್ರಿ ಸೌ|| ಪಾರ್ವತವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ವಧೂವರರಿಂದ ಸಮರ್ಪಿಸಿದ **2** ರೂಪಾಯಿಗಳು ವೇ|| ಹಂಜಗಿಮಠದ ಗುರುಪಾದಶರ್ಮರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. — ಸಂ.—

ಪತ್ರವ್ಯವಹಾರ.

ಬಾತ್ಮೀದಾರರ ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶಿವಶಕ್ತಿವಿಲಾಸವು.

ಲೇಖಕರು,—ಶ್ರೀ ಶಂಭುಲಿಂಗ ಶಿವಾಚಾರ್ಯಮಹಾಸ್ವಾಮಿಗಳು, ಹಿರೇಮಠ, ವಿಜಾಪುರ.

ಪ್ರತಿಯೊಬ್ಬ ದರ್ಶನಕಾರರ ಪಾರಿಭಾಷಿಕ ಸಂಜ್ಞೆಗಳು ಒಂದಕ್ಕೊಂದು ಭಿನ್ನಗಳಾಗಿರುವವು. ಕಪಿಲಮಹರ್ಷಿಯು ಮೊದಲಾದ ದರ್ಶನಕಾರರ ಒಂದು ಬಗೆಯ ವಿಶೇಷ ಸಂಪ್ರದಾಯವು ಕಂಡು ಬರುವುದು. ಅದೇನೆಂದರೆ, ಅವರು ತಮ್ಮ ವಿಚಾರಗಳನ್ನು ಜನರ ಮುಂದೆ ಇರಿಸುವುದಕ್ಕಾಗಿ ಯಾವ ಶಾಸ್ತ್ರಗಳನ್ನು ಬರೆಯುತ್ತಿರುವರೋ ಅವುಗಳಲ್ಲಿ ಭಾಷೆಯ ಮತ್ತು ವ್ಯಾಖ್ಯೆಗಳ ಉದ್ದುದ್ದವಾದ ವಾಕ್ಯಮಾಲೆಯ ಸೇರ್ಪಡೆಯು ಇರಬಾರದೆಂಬ ಉದ್ದೇಶದಿಂದ ಕೆಲವು ಪಾರಿಭಾಷಿಕ ಸಂಜ್ಞೆಗಳನ್ನು ಕಲ್ಪಿಸುವರು; ಮತ್ತು ವ್ಯುತ್ಪತ್ತಿಯು, ಭಾಷೆಯು, ರೂಢಿಯು ಎಂಬಿವುಗಳ ಅನುರೋಧದಿಂದಲೇ ಅವುಗಳ ಅರ್ಥವನ್ನು ನಿರ್ಣಯಿಗೊಳಿಸದೆ ತಮಗೆ ಅಭಿಪ್ರೇತವಾದುದನ್ನೇ ಆಯಾ ಪಾರಿಭಾಷಿಕ ಶಬ್ದಗಳ ಅರ್ಥಕಲ್ಪನೆ ಮಾಡುವರು. ಪ್ರಸಂಗಾನುಸಾರವಾಗಿ ಆಯಾ ಶಬ್ದಗಳ ರೂಢಾರ್ಥಗಳನ್ನು ಒತ್ತಟ್ಟಿಗಿರಿಸಿ ತಾವು ಯೋಜಿಸಿದ ಅರ್ಥಗಳಿಂದಲೇ ತಮ್ಮ ದರ್ಶನಗಳಲ್ಲಿ ಆ ಶಬ್ದಗಳನ್ನು ಉಪಯೋಗಿಸುವರು. ಒಬ್ಬ ದರ್ಶನಕಾರನು ತನ್ನ ದರ್ಶನಗ್ರಂಥದಲ್ಲಿ ಒಂದು ಶಬ್ದವನ್ನು ಯಾವ ಅರ್ಥದಿಂದ ಉಪಯೋಗಿಸುವನೋ ಆ ಶಬ್ದವನ್ನೇ ಅದೇ ಅರ್ಥದಿಂದ ಅನ್ಯದರ್ಶನಕಾರರು ಉಪಯೋಗ ಮಾಡೇ ಮಾಡುವರೆಂಬ ನಿಯಮವಿಲ್ಲ. ಒಂದೊಂದು ಪ್ರಸಂಗದಲ್ಲಿ ಇಬ್ಬರು ದರ್ಶನಕಾರರ ಕೆಲವು ಪರಿಭಾಷೆಗಳು ಏಕಾರ್ಥವಾಚಕಗಳಾಗಿ ಇರಬಹುದು; ಆದರೆ ಇದು ಕೆಲವೆಡೆ ಕಂಡು ಬರುವುದು. ಒಟ್ಟಿನಮೇಲೆ ಇಲ್ಲವೆಂದೂ ಹೇಳಲಿಕ್ಕೆ ಬರುವ ಹಾಗಿದೆ. ಆದರೆ ಒಬ್ಬ ದರ್ಶನಕಾರನು ಒಂದು ಪಾರಿಭಾಷಿಕ ಸಂಜ್ಞೆಯ ಶಬ್ದವನ್ನು ಒಂದು ಅರ್ಥದಲ್ಲಿ ಗುರಿಯಿಟ್ಟು ಉಪಯೋಗಿಸಿದುದಾದರೆ ಬೇರೆ ದರ್ಶನಕಾರನು ಅದೇ ಶಬ್ದವನ್ನು ತನ್ನ ಪರಿಭಾಷೆಯನ್ನಾಗಿಟ್ಟುಕೊಂಡು ತನ್ನ ದರ್ಶನದಲ್ಲಿ ಇತರರಿಗಿಂತ ಬೇರೆಯಾದ ಅರ್ಥದಲ್ಲಿಯೂ, ಕೆಲವು ಪ್ರಸಂಗಗಳಲ್ಲಿಯಾದರೂ ವಿಪರೀತಾರ್ಥಗಳಲ್ಲಿಯೂ ಉಪಯೋಗಿಸಿರುವ ಉದಾಹರಣೆಗಳು ಬಹಳವಾಗಿ ಸಿಕ್ಕುತ್ತವೆ. ಅವುಗಳಲ್ಲಿ ಕೆಲವನ್ನು ಉದಾಹರಣೆಗಾಗಿ ಈ ಕೆಳಗೆ ಬರೆಯುವೆವು.

'ಪ್ರತ್ಯಕ್ಷ' 'ಅನುಮಾನ' ಎಂಬಿವೆರಡು ಪಾರಿಭಾಷಿಕ ಶಬ್ದಗಳನ್ನೇ ಯಾವ ಯಾವ ಬಗೆಯಿಂದ ಉಪಯೋಗಿಸಿರುವರೆಂಬುದನ್ನು ನೋಡುವಾ: ನ್ಯಾಯದರ್ಶನಕಾರರು ಈ ಶಬ್ದಗಳನ್ನು ಅನುಕ್ರಮವಾಗಿ ಇಂದ್ರಿಯ ಮತ್ತು ವಿಷಯ ಇವುಗಳ ಸಂಬಂಧದಿಂದ ಉಂಟಾಗುವ ಜ್ಞಾನಕ್ಕೆ ಸಾಧನವೆಂದೂ, ಪರಾಮರ್ಶಜನ್ಯಜ್ಞಾನಸಾಧನವೆಂದೂ ಈ ತೆರದ ಅರ್ಥದಿಂದ ತಮ್ಮ ದರ್ಶನದಲ್ಲಿ ಉಪಯೋಗಿಸುತ್ತಾರೆ.

ಇಂದ್ರಿಯಗಳು ಪದಾರ್ಥಗಳೊಡನೆ ಸಂಬಂಧವಾಗುವ ಮೂಲಕ ಯಾವ ಜ್ಞಾನವುಂಟಾಗುವುದೋ ಅದಕ್ಕೆ **'ಪ್ರತ್ಯಕ್ಷ'** ವೆನ್ನತಕ್ಕದ್ದು. ಹೊಗೆಯುಳ್ಳ ಬೆಟ್ಟವನ್ನು ನೋಡಿ, ಬೆಂಕಿ ಹೊಗೆ ಇವುಗಳ ಸಾಹಚರ್ಯಜ್ಞಾನದಿಂದ ಹೊಗೆಯ ಮೇಲಿಂದ ಬೆಂಕಿಯನ್ನು ಊಹಿಸಿ ತಿಳಿವುದೇ ಅನುಮಿತಿಯು ಅದಕ್ಕೆ ಸಾಧನವಾದುದು **ಅನುಮಾನ**ವೆನಿಸುವುದು. ಶ್ರೀವ್ಯಾಸನು ಶ್ರೀಶಂಕರನು ಇವರು ಮೊದಲಾದ ಉತ್ತರಮೀಮಾಂಸಕರು ಈ 'ಪ್ರತ್ಯಕ್ಷ' 'ಅನುಮಾನ' ಶಬ್ದಗಳನ್ನು ಪರಿವಿಡಿದು ಶ್ರುತಿಯೂ ಸ್ಮೃತಿಯೂ ಎಂಬ ಅರ್ಥದಿಂದ ಪರಿಗ್ರಹಿಸಿ, ಹಾಗೇ ಅವುಗಳನ್ನು ತಮ್ಮ ದರ್ಶನ ಗ್ರಂಥಗಳಲ್ಲಿ ಉಪಯೋಗಿಸುತ್ತಾರೆ.

'ಅಪಿಸಂರಾಧನೆ ಪ್ರತ್ಯಕ್ಷಾನುಮಾನಾಭ್ಯಾಂ' ಚಿತ್ತವು ಲಯವಾಗುತ್ತಿರಲಾಗಿ, ಅಧ್ಯಾತ್ಮವೀರರೆನಿಸುವ (ವೀರಶೈವ) ಯೋಗಿಗಳೇ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವರೆಂಬುದು ಪ್ರತ್ಯಕ್ಷ ಮತ್ತು ಅನುಮಾನ ಇವುಗಳ ಮೇಲಿಂದ ಸಿದ್ಧವಾಗುತ್ತದೆ. (ಬ್ರ.ಸೂ. ೩-೨-೧೪) ಎಂಬ ಈ ಸೂತ್ರದಲ್ಲಿ 'ಪ್ರತ್ಯಕ್ಷಾನುಮಾನಾಭ್ಯಾಂ' ಶ್ರುತಿ ಸ್ಮೃತಿಭ್ಯಾಮಿತ್ಯರ್ಥಃ— ಪ್ರತ್ಯಕ್ಷ ಮತ್ತು ಅನುಮಾನ ಇವುಗಳ ಮೇಲಿಂದ ಎಂದರೆ ಶ್ರುತಿಸ್ಮೃತಿಗಳ ಮೂಲಕವು; ಎಂಬುವಾಗಿ ಈ ಪ್ರತ್ಯಕ್ಷ ಅನುಮಾನ ಎಂಬ ಶಬ್ದಗಳ ಅರ್ಥವಿರುವುದನ್ನು ಶಂಕರಾಚಾರ್ಯರು ಹೇಳುತ್ತಾರೆ.

'ಪ್ರಧಾನ' ಎಂಬ ಶಬ್ದಸಂಬಂಧವಾಗಿಯೂ ಇದೇ ಸ್ಥಿತಿಯು ಬೇರೆ ಬೇರೆ ದರ್ಶನಕಾರರಲ್ಲಿ ಕಂಡುಬರುವುದು. ಸಾಂಖ್ಯದರ್ಶನಕಾರರು, ಸ್ವತಂತ್ರವೂ ಅಚೇತನವೂ ಆದ ಜಗತ್ಕಾರಣರೂಪವಾದ ಪ್ರಕೃತಿಗೆ 'ಪ್ರಧಾನ' ಎಂಬ ಸಂಜ್ಞೆಯನ್ನು ಕೊಡುತ್ತಾರೆ. **"ಪುರುಷಸ್ಯ ದರ್ಶನಾರ್ಥಂ ಕೈವಲ್ಯಾರ್ಥಂ ಪ್ರಧಾನಸ್ಯ'**—ಪುರುಷನ ದರ್ಶನಕ್ಕೋಸ್ಕರವೂ ಕೇವಲೀಭಾವಕ್ಕಾಗಿಯೂ ಪ್ರಧಾನವು (ಸಾಂಖ್ಯಕಾರಿಕಾ ೨೧) ಎಂಬ ವಾಕ್ಯವು, ಪ್ರಧಾನದ ಲಕ್ಷಣವನ್ನು ನಿರೂಪಿಸುವದು.

'ಪ್ರಕಾಶನಶೀಲಂ ಸತ್ವಂ, ಕ್ರಿಯಾಶೀಲಂ ರಜಃ, ಸ್ಥಿತಿಶೀಲಂ ತಮಃ ಇತ್ಯೇತೆ ಗುಣಾಃ ಪ್ರಧಾನ ಶಬ್ದವಾಚ್ಯಾ ಭವನ್ತಿ'—ಪ್ರಕಾಶಗೊಳಿಸುವಿಕೆಯು ಸತ್ವಸ್ವಭಾವ (ಧರ್ಮ)ವು, ರಜೋಗುಣದ ಸ್ವಭಾವವು ಯತ್ನ ಮತ್ತು ಚಲನವಲನೆಗಳು, ತಮದ ಸ್ವಭಾವವು ಸ್ಥಿತಿಯು, ಎಂದರೆ ಪ್ರಕಾಶವೂ ಯತ್ನಚಲನೆಗಳೂ ಇಲ್ಲದಿರುವಿಕೆ; ಈ ಬಗೆಯಾಗಿ ಈ ಸತ್ವಾದಿ ಗುಣತ್ರಯವು 'ಪ್ರಧಾನ' ಎಂಬೀ ಶಬ್ದದಿಂದ ಪ್ರಸಿದ್ಧವಾಗಿರುವದು. (ಯೋಗಭಾಷ್ಯ ೨-೧೮).

ಆ 'ಪ್ರಧಾನ' ಶಬ್ದವೇ ಉತ್ತರಮೀಮಾಂಸಕರಿಂದ ಪರಮಾತ್ಮಚೇತನ (ಬ್ರಹ್ಮ) ವೆಂಬ ಅರ್ಥದಲ್ಲಿಯೇ ಯೋಜಿಸಲ್ಪಡುವುದು. ಅದು ಹೇಗೆಂದರೆ—**'ಆನಂದಾದಯಃ ಪ್ರಧಾನಸ್ಯ'**—ಪ್ರಧಾನವು ನಿರ್ದಿಷ್ಟವಾಗಿರುವೆಡೆಗಳಲ್ಲೆಲ್ಲಾ ಅದು (ಪರಮಾತ್ಮಚೇತನವು) ಆನಂದಾದಿ ಧರ್ಮಗಳಿಂದ ಕೂಡಿರತಕ್ಕದ್ದನ್ನಾಗಿ ತಿಳಿಯತಕ್ಕದು.

'ಬ್ರಹ್ಮಣೋ ಧರ್ಮಾಃ ಸರ್ವೇ ಸರ್ವತ್ರ ಪ್ರತಿಪತ್ತವ್ಯಾಃ | ಕಸ್ಮಾತ್ ಸರ್ವಾಭೇದಾದೇವ | ಸರ್ವತ್ರ ಹಿ ತದೇವೈಕಂ ಪ್ರಧಾನಂ ವಿಶೇಷ್ಯಂಬ್ರಹ್ಮ ನ ಭಿದ್ಯತೆ' ಪ್ರಧಾನವೆನಿಸುವ ಬ್ರಹ್ಮದ ಆನಂದಾದಿ ಧರ್ಮಗಳನ್ನು ಎಲ್ಲಕಡೆಯಲ್ಲಿಯೂ ಅರಿಯಬೇಕು; ಯಾವ ಕಾರಣದ ದೆಸೆಯಿಂದ? ಎಂದರೆ ಸರ್ವತ್ರ ಆ ಬ್ರಹ್ಮದ ನಿರ್ದೇಶವೇ ಇರುವುದರಿಂದ, ಕಾರಣ ಪ್ರಧಾನ (ಮುಖ್ಯ) ವಾದ ವಿಶೇಷ್ಯಬ್ರಹ್ಮವು ಎಲ್ಲಾದಿನಲ್ಲಿಯೂ ಒಂದೇ ಇದೆ ಭಿನ್ನವಿಲ್ಲ. (ಬ್ರಹ್ಮಸೂತ್ರ. ಶಾಂ. ಭಾ ೩-೩-೧೧). ಇಲ್ಲಿ ಉತ್ತರಮೀಮಾಂಸಕರ ಸಂಕೇತದಂತೆ 'ಪ್ರಧಾನ' ವೆಂಬ ಪಾರಿಭಾಷಿಕ ಸಂಜ್ಞೆಯು ಬ್ರಹ್ಮವೆಂಬ ಅರ್ಥವನ್ನು ಸೂಚಿಸುತ್ತದೆ. ಇದಲ್ಲದೆ 'ಪ್ರಧಾನ' ಎಂದರೆ 'ಮುಖ್ಯ' ವೆಂಬ ಅರ್ಥದಿಂದಲೂ ಶಾರೀರಕಭಾಷ್ಯದಲ್ಲಿ ಪ್ರಧಾನಶಬ್ದವು ಕೆಲವೆಡೆಯಲ್ಲಿ ಉಪಯೋಗಿಸಲ್ಪಟ್ಟದ್ದಾಗಿ ತೋರಿಬರುವುದು.

"ಕಾರ್ಯಕಾರಣಾನನ್ಯತ್ವಾತ್ ನಾಂಚ ಚೇತನತ್ವಾವಿಶೇಷೇಪಿ ಗುಣಪ್ರಧಾನಭಾವೋ ನವಿರೋಧ್ಯತೆ"—ಕಾರ್ಯಕಾರಣರೂಪ ಆತ್ಮರಲ್ಲಿ ಚೈತನ್ಯಭೇದವಿಲ್ಲದಿದ್ದರೂ ಒಂದು ಗೌಣ ಒಂದು ಮುಖ್ಯವೆಂಬ ತೆರನಿರುವುದು ವಿರುದ್ಧವಲ್ಲ. (ಬ್ರಹ್ಮಸೂ. ಶಾಂ-ಭಾ. ೨-೧.೪) ಇಲ್ಲಿ ಮುಖ್ಯವು ಅಥವಾ ಹೆಚ್ಚಿನದು ಎಂಬ ಅರ್ಥದಿಂದ 'ಪ್ರಧಾನ' ಶಬ್ದವು ಉಪಯೋಗಿಸಲ್ಪಟ್ಟಿದೆ.

ಈ ರೀತಿಯಾಗಿ ಆಗಮಿಕರು ಮೊದಲಾದ ಬೇರೆಬೇರೆ ದರ್ಶನಕಾರರು ಒಂದೇ ಶಬ್ದವನ್ನು ತೆಗೆದುಕೊಂಡು ತಮ್ಮ ತಮ್ಮ ಮತಾನುಸಾರವಾಗಿ ತಮ್ಮ ತಮ್ಮ ಪರಿಭಾಷೆಗಳನ್ನು ನಿಶ್ಚಯಿಸಿ ಆ ಶಬ್ದದ ಸ್ವೇಚ್ಛಾನುರೂಪಗಳಾದ ಸಾಂಕೇತಿಕ ಅರ್ಥಗಳನ್ನು ಕಲ್ಪಿಸುವುದಲ್ಲದೆ ತಮ್ಮ ದರ್ಶನಗ್ರಂಥಗಳಲ್ಲಿ ಆ ಶಬ್ದವನ್ನು ಬಳಕೆಯಲ್ಲಿ ತರುತ್ತಿರುವುದೂ ಕೂಡ ಕಂಡುಬರುತ್ತಿರುವುದು.

ಈ ಮೇರೆಗೆ ಭಿನ್ನಭಿನ್ನ ದರ್ಶನಕಾರರಿಂದ ಕಲ್ಪಿಸಲ್ಪಟ್ಟ ಒಂದೇ ಶಬ್ದದ ಅರ್ಥಗಳಾದರೋ ಪರಸ್ಪರ ಅತೀವ ಭಿನ್ನಗಳಾಗಿರುವವು. ಒಟ್ಟಿನಮೇಲೆ, ಒಬ್ಬ ದರ್ಶನಕಾರನು ತನ್ನ ಪರಿಭಾಷಿಕ ಸಂಜ್ಞೆಯನ್ನಾಗಿ ಕಲ್ಪಿಸಿದ ಒಂದಾನೊಂದು ಶಬ್ದವನ್ನು ತನ್ನ ಗ್ರಂಥದಲ್ಲಿ ಯಾವ ಅರ್ಥದಿಂದ ಉಪಯೋಗಿಸುವನೋ ಅದೇ ಅರ್ಥದಿಂದ ಆ ಶಬ್ದವನ್ನು ಮತ್ತೊಬ್ಬ ದರ್ಶನಕಾರನು ಯೋಜಿಸುವನೆಂಬ ಕಟ್ಟಳೆಯುಂಟೆಂದು ಹೇಳಲಾಗುವುದಿಲ್ಲ.

ಶಂಕರಾಚಾರ್ಯರು ಪ್ರಕೃತಿಯ ವ್ಯಾಖ್ಯೆಯನ್ನು ಮಾಡಿರುವುದು ಹೇಗೆಂದರೆ—

'ಇತೀಯಂ ಯಥೋಕ್ತಾ (ಭೂಮಿರಾಪೋನಲೋ ವಾಯುರಿತಿ) ಪ್ರಕೃತಿರ್ಮೆ ಮಮೈಶ್ವರೀ ಮಾಯಾಶಕ್ತಿಃ' ಈ ಪ್ರಕಾರವಾಗಿ, ಪೂರ್ವೋಕ್ತಪ್ರಕೃತಿಯು ನನ್ನ (ಈಶ್ವರನ) ಸಂಬಂಧಿಯಾದ ಮಾಯಾಶಕ್ತಿಯು ಎಂಟುವಿಧವಾಗಿ ಭಿನ್ನವಾಗಿದೆ. (ಗೀತಾಭಾಷ್ಯ ಅ. ೭.)

'ನಹಿತಯಾ ವಿನಾ ಪರಮೇಶ್ವರಸ್ಯ ಸ್ರಷ್ಟೃತ್ವಂ ಸಿಧ್ಯತಿ, ಶಕ್ತಿರಹಿತಸ್ಯ ತಸ್ಯ ಪ್ರವೃತ್ತ್ಯನುಪಪತ್ತೇಃ | ಅವಿದ್ಯಾತ್ಮಿಕಾಹಿ ಬೀಜ ಶಕ್ತಿರವ್ಯಕ್ತ ಶಬ್ದನಿರ್ದೇಶ್ಯಾ ಪರಮೇಶ್ವರಾಶ್ರಯಾ ಮಾಯಾಮಯಿ'—ಆ ಶಕ್ತಿಯು ಇಲ್ಲದೇ ಪರಮೇಶ್ವರನ ಜಗದುತ್ಪಾದಕತ್ವವೆಂಬ ಕಾರ್ಯವು ಸಿದ್ಧಿಸದು. ಅವನಲ್ಲಿ ಶಕ್ತಿಯೇ ಇಲ್ಲವಾದರೆ, ಅವನು ಸೃಷ್ಟಿಸಂಬಂಧವಾಗಿ ಉದ್ಯುಕ್ತನಾಗುವುದು ಶಕ್ಯವೇ ಇಲ್ಲ; ಅವ್ಯಕ್ತಶಬ್ದದಿಂದ ನಿರ್ದೇಶಿಸಲ್ಪಟ್ಟ ಅವಿದ್ಯಾತ್ಮಕ ಬೀಜಶಕ್ತಿಯು ಪರಮೇಶ್ವರನನ್ನು ಆಶ್ರಯಿಸಿರುವ ಮಾಯಾಮಯಿಯೆನಿಸುವ ಮಹಾನಿದ್ರೆಯೇ ಆಗಿದೆ. (ಬ್ರ. ಸೂ ಶಾಂ-ಭಾ. ೧-೪-೩).

'ಈಶ್ವರನ ಆತ್ಮಭೂತಗಳಾಗಿರುವ ಹಾಗೆಯೂ, ಆದರೆ ಈಶ್ವರರೂಪವೆಂದಾಗಲಿ ಈಶ್ವರ ರೂಪಕ್ಕೆ ಬೇರೆಯೆಂದಾಗಲಿ ಹೇಳಲಿಕ್ಕೆ ಬಾರದೆ ಇರುವುದರಿಂದಲೂ, ಅವಿದ್ಯೆಯಿಂದ ಕಲ್ಪಿತವಾದವುಗಳೆಂದೇ ಹೇಳಲ್ಪಡುವ ಸಂಸಾರ ವಿಸ್ತಾರಕ್ಕೆ ಬೀಜಭೂತಗಳಾದ ನಾಮರೂಪಗಳು ಶ್ರುತಿ ಸ್ಮೃತಿಗಳಲ್ಲಿ ಈಶ್ವರನ ಮಾಯಾಶಕ್ತಿಯ ಅಥವಾ ಪ್ರಕೃತಿಯ ಸ್ವರೂಪದ ಭೂತಗಳೇ ಎಂದು ನಿರ್ದಿಷ್ಟವಾಗಿವೆ.' (ಬ್ರ. ಸೂ. ಶಾಂ-ಭಾ. ೨-೧-೧೪).

ಮತ್ತು ಆ ಶಂಕರಾಚಾರ್ಯರೇ ಪುರುಷನ ವ್ಯಾಖ್ಯೆಯನ್ನು ಹೀಗೆ ಮಾಡುವರು—**'ಪುರುಷೋ ಜೀವಃ ಕ್ಷೇತ್ರಜ್ಞೋ ಭೋಕ್ತೇತಿ ಪರ್ಯಾಯಃ'** ಪುರುಷನು ಎಂದರೆ ಇಲ್ಲಿ ನಿರುಪಾಧಿಕ ಪರಮಾತ್ಮನಲ್ಲ; ಆದರೆ ಜೀವ-ಕ್ಷೇತ್ರಜ್ಞ-ಭೋಕ್ತಾ ಎಂಬ ಪರ್ಯಾಯನಾಮಗಳುಳ್ಳವನೇ ಪುರುಷ ಶಬ್ದವಾಚ್ಯನು. (ಗೀತಾ ಭಾಷ್ಯ ೧೩-೨೦).

ಬ್ರಹ್ಮವು ಒಂದೇ ಆದರೂ ಉಪಾಧಿಯ ಸಂಬಂಧದ ಅಪೇಕ್ಷಿತ ಮೂಲಕ ಉಪಾಸ್ಯವೆಂತಲೂ ಉಪಾಧಿಯ ಸಂಬಂಧವಿಲ್ಲದುದಾಗಿ ಜ್ಞೇಯವೆಂತಲೂ ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿದೆ (ಬ್ರ. ಸೂ. ಶಾಂ-ಭಾ. ೧-೧-೧೨)

ಅವಿದ್ಯೆಯಿಂದ ಮಾಡಲ್ಪಟ್ಟ ನಾಮರೂಪಗಳೆಂಬ ಉಪಾಧಿಗಳನ್ನು ಅನುಸರಿಸಿ ಈಶ್ವರನಿರುವನು; ಹೀಗೆ ಈಶ್ವರನ ಈಶ್ವರತ್ವ ಸರ್ವಜ್ಞತ್ವ ಸರ್ವಶಕ್ತಿತ್ವಗಳು ಅವಿದ್ಯಾತ್ಮಕ ಉಪಾಧಿಯಿಂದುಂಟಾದ ಪರಿಚ್ಛೇದವನ್ನು ಅವಲಂಬಿಸಿಯೇ ಇರುತ್ತವೆ; ವಸ್ತುತಃ ಇರುವುದಿಲ್ಲ. (ಬ್ರ) ಸೂ ಶಾಂ ಭಾ. ೨-೧-೧೪

ಶಾಂಕರೀಯಮತದಲ್ಲಿ ಪುರುಷನು ಪರಮಾರ್ಥತಃ ತಾತ್ವಿಕದೃಷ್ಟಿಯಿಂದ ನಿರುಪಾಧಿಕನಿರುವನಾದರೂ ಈಶ್ವರನೆಂಬ ಸಂಜ್ಞೆಗೆ ಪಾತ್ರನಾದರೆ ಅವನು ಮಾಯೆಯೆಂಬ ಉಪಾಧಿಯುಕ್ತನಾಗಿರುವನಲ್ಲದೆ **'ಪುರುಷ' 'ಹಿರಣ್ಯಗರ್ಭ' 'ಜೀವ'** ಎಂಬ ಮೊದಲಾದ ಸಂಜ್ಞೆಗಳನ್ನು ಪಡೆಯುತ್ತಾನೆ. ಜೀವಭಾವವನ್ನು ತಳೆದ ಉಪಾಧಿ ವಿಶಿಷ್ಟ ತತ್ವಕ್ಕೆ (ಪುರುಷನಿಗೆ) ಸೋಪಾಧಿಕವೆನ್ನುವುದು ಶಾಂಕರೀಯ ದೃಷ್ಟ್ಯಾಯುಕ್ತವೇ ಸರಿ; ಇದರಿಂದ ಜಗತ್ಕರ್ತನಾದ ಪರಮಾತ್ಮನು ಜಗತ್ತನ್ನು ನಿರ್ಮಿಸುವ ಅಧಿಕಾರಕಾಲದಲ್ಲಿ ಸೋಪಾಧಿಕನೇ ಆಗಿರುವುದು ಅವಶ್ಯಕವು; ಮತ್ತು ಅವನು ಹಾಗೆಯೇ ಇರುತ್ತಾನೆಂದು ಶಂಕರಾಚಾರ್ಯರ ಅಭಿಪ್ರಾಯವಿದೆ, ಎಂಬುದು ಈ ಮೇಲೆ ಉದಾಹೃತ ಭಾಷ್ಯಪಂಕ್ತಿಯಿಂದ ತಿಳಿದುಬರುವುದು. ಇದುವರೆಗೆ ಜಗತ್ಕರ್ತನಾದ ಪುರುಷನು ಶಾಂಕರೀಯ ದರ್ಶನದಲ್ಲಿ ಸೋಪಾಧಿಕನೆಂದು ಅಂಗೀಕರಿಸಲ್ಪಟ್ಟಿರುವನೆಂಬುದನ್ನು ತೋರಿಸಿದೆವು. ಆ ಪುರುಷನನ್ನು ಆಶ್ರಯಿಸಿರುವ ಪ್ರಕೃತಿಯಾದರೂ ಅಧ್ಯಸ್ತವೂ ಪರಾವಲಂಬಿಯೂ ಅನಿರ್ವಚನೀಯವೂ ಆಗಿರುವುದಲ್ಲದೆ ಉಪಾಧಿರೂಪವೂ ಆಗಿದೆ ಎಂದು ಶಾಂಕರದರ್ಶನದ ಹೇಳಿಕೆಯಿದೆ ಎಂಬುದೂ ಮೇಲಿನ ವಾಕ್ಯಗಳಿಂದ ಸ್ಪಷ್ಟವಾಗುವುದು.

ಶಾಂಕರೀಯ ಸಿದ್ಧಾಂತದಲ್ಲಿ ಪುರುಷನು ವಿಷಯಿ (ಪ್ರಕಾಶಕನು) ಎಂದೂ ಪ್ರಕೃತಿಯು ವಿಷಯ (ಪ್ರಕಾಶ್ಯ) ವೆಂದೂ ಒಡಂಬಡಿಕೆಯುಂಟು. ಅಧ್ಯಾಸ ಭಾಷ್ಯದಲ್ಲಿಯಾದರೂ 'ಈ ಆತ್ಮನು ಅಸ್ಮತ್ಪ್ರತ್ಯಯ ವಿಷಯನಾದಕಾರಣ, ನಿಯಮವಾಗಿ ಅವಿಷಯನೇ ಆಗಿದ್ದಾನೆಂದೂ ಹೇಳಲಾಗುವುದಿಲ್ಲ; ಎಂದು ಪ್ರತಿಪಾದಿಸಲ್ಪಟ್ಟಿದೆ.

ಶಂಕರಾಚಾರ್ಯರು ತಮ್ಮ ಶಾರೀರಕದಲ್ಲಿ ಉಪಾಧಿಯ ಸ್ವತಂತ್ರವ್ಯಾಖ್ಯೆಮಾಡಿದುದು ಎಲ್ಲಿಯೂ ಕಂಡುಬರುವದಿಲ್ಲ. ಆ ಗ್ರಂಥದಲ್ಲಿ ಅವರು ಉಪಾಧಿ ಶಬ್ದವನ್ನು ಮಾತ್ರ ಬಹುಸ್ಥಳಗಳಲ್ಲಿ ಉಪಯೋಗಿಸಿದ್ದಾರೆ. ಅದರ ಮೇಲಿಂದ ಶಂಕರಾಚಾರ್ಯರಿಗೆ ಆ ಉಪಾಧಿ ಶಬ್ದದಿಂದ ಏನು ಅಭಿಪ್ರೇತವಾಗಿತ್ತೆಂಬುದರ ಬಗ್ಗೆ ಸ್ಪಷ್ಟವಾದ ಕಲ್ಪನೆಯು ಮಾಡಲಿಕ್ಕೆ ಬರುವ ಹಾಗಿದೆ; ಆ ಕಲ್ಪನೆಗಾಗಿ ಈ ಕೆಳಗೆ ಕೆಲವು ವಾಕ್ಯಗಳನ್ನು ಉದ್ಧರಿಸುವೆವು.

ಶರೀರವು ಇಂದ್ರಿಯಗಳು, ಮನಸ್ಸು, ಬುದ್ಧಿಯು, ವಿಷಯಗಳು, ಹರ್ಷ, ಶೋಕಾದಿ ವೇದನೆಗಳು ಎಂಬ ಈ ಉಪಾಧಿಗಳಿಂದ ಜೀವನ ಸ್ವರೂಪವು ಅವಿವಿಕ್ತವಾಗಿರುವ ಹಾಗೆ ಪ್ರತೀತಿಯಾಗುವುದು; ಹಸನಾಗಿ ಬೆಳ್ಳಗಿರುವುದು ಸ್ಫಟಿಕದ ಸ್ವರೂಪವು. ಆದರೆ ಅದರ ಹತ್ತರದಲ್ಲಿ ಕೆಂಪು ಮತ್ತು ನೀಲಿಬಣ್ಣದ ಹೂಗಳನ್ನಿರಿಸಿದರೆ ಆ ಉಪಾಧಿಯಿಂದ ಸ್ಫಟಿಕವು ಆ ಬಣ್ಣಗಳ ಆಕಾರವಾಗಿ ತೋರುವುದು (ಬ್ರ ಸೂ. ಶಾಂ. ಭಾ ೧-೩-೧೯)

ಉಪಾಧಿಯ ದೆಸೆಯಿಂದ ಶಾರೀರ (ಜೀವ), ಅಂತರ್ಯಾಮಿ (ಈಶ್ವರ) ಇವರ ಭೇದವಿರುವುದೆಂದು ನಿರ್ದೇಶಿಸಲ್ಪಡುವುದು ಒಂದೇ ಆಕಾಶದಲ್ಲಿ ಘಟಾಕಾಶ (ಕೊಡದೊಳಗಿನ ಬಯಲು) ಮಹಾಕಾಶ (ಎಲ್ಲಕಡೆಯಲ್ಲಿರುವ ಬಯಲು) ಎಂಬ ಭೇದದ ಹೇಳಿಕೆಯಂತೆ ಒಬ್ಬ ಆತ್ಮನಲ್ಲಿಯೇ ಜೀವ ಮತ್ತು ಈಶ್ವರ ಎಂಬ ಭೇದವ್ಯವಹಾರವಿದೆ. (ಬ್ರ.ಸೂ. ಶಾಂ-ಭಾ. ೧-೨-೨೦.)

ಈ ವಿವೇಚನೆಯ ಮೇಲಿಂದ ನೋಡಿದರೆ, ತನ್ನ ಧರ್ಮವನ್ನು ಎರಡನೆಯದರ ಮೇಲೆ ಆರೋಪಿಸಿ ಅದನ್ನು ಬೇರೆ ಬಗೆಯಾಗಿ ಮಾಡಿ ತೋರಿಸುವ ಯಾವ ತತ್ವವಿದೆಯೋ ಅದೇ ಉಪಾಧಿಯು ಎಂದು ಶಂಕರಾಚಾರ್ಯರ ಹೇಳಿಕೆಯಿರುವುದು ತಿಳಿದುಬರುತ್ತದೆ. 'ಉಪಾಧಿ' ಎಂದರೆ ಘಟದಂತೆ ಇರುತ್ತಿರುವ ದೇಹಾದಿ ಪ್ರಪಂಚವು ಎಂಬುದಾಗಿ ಅವರು ಶಾರೀರಕದ ಕೆಲಕೆಲವು ಸಂದರ್ಭಗಳಲ್ಲಿ ಹೇಳಿದ್ದಾರೆ.

'ದೇಹಾದಿ ಸಮೂಹರೂಪ ಉಪಾಧಿಯ ಮೂಲಕವಾಗಿ ಯಾವ ಅವಿವೇಕವಿದೆಯೋ ಅದರಿಂದಲೇ ಈಶ್ವರನು ಮತ್ತು ಸಂಸಾರಿಯು (ಜೀವನು) ಎಂಬ ಈ ಭೇದವನ್ನು ಮಾಡಿ ತೋರಿಸುವ ಮಿಥ್ಯಾಬುದ್ಧಿಯುಂಟಾಗಿದೆಯಲ್ಲದೆ ವಸ್ತುತಃ ಇಲ್ಲ. ಆದರೂ ಪ್ರತೀಯಮಾನಗಳಾದ ಪಂಚಭೇದಗಳಾದರೂ ಉಪಾಧಿಯ ಕಾರ್ಯಗಳಾಗಿವೆ' (ಬ್ರ.ಸೂ. ಶಾ-ಭಾಂ. ೧-೧-೫).

'ಭೇದವೆಂಬುದು ಉಪಾಧಿನಿಮಿತ್ತವಾದ ಮಿಥ್ಯಾಜ್ಞಾನದಿಂದ ಕಲ್ಪಿತವಾಗಿದೆ, ವಾಸ್ತವವಾಗಿ ಭೇದವೆಂಬುದೇ ಇಲ್ಲ ... ಎಂಬೀ ಮೊದಲಾದ ಅವರ ಸ್ವತಃ ಉದ್ಗಾರಗಳ ಮೇಲಿಂದ— ... ಸ್ವರೂಪದಲ್ಲಿ ಪ್ರವೇಶಿಸದೆ ಯಾವದು ವ್ಯಾವರ್ತಕವಾಗಿರುವದೋ ಅದುವೇ ಅವರ ಉಪಾಧಿಯ ಕಲ್ಪನೆಯೆಂದು 'ನಿಖಿಲ ... ಶಾಸನನ್ನು' ಅನುಸರಿಸಿ ನಿಶ್ಚಯವಾಗಿ ಹೇಳಬಹುದು.

ಇನ್ನು ಶಬ್ದಶಾಸ್ತ್ರದ ಆಶ್ರಯದಿಂದ ನಿಜವಾದ ಯಾವ ಅರ್ಥವು ಹೊರಡುವದೆಂಬುದನ್ನು ನೋಡುವ. **'ಉಪ'** ಎಂಬ ಉಪಸರ್ಗದ ಅರ್ಥವು 'ಸಮೀಪ' ಎಂದಿದೆ. **'ಧಾ'** ಎಂಬೀ ಧಾತುವಿನ ಮೂಲಅರ್ಥವು 'ಇಡು —'ಹಾಕು' ಎಂದಿದೆ: ಉಪ+ಧಾ ಎಂಬಿವೆರಡರಿಂದಲೇ **'ಉಪಾಧಿ'** ಎಂಬ ಶಬ್ದವ್ಯುತ್ಪತ್ತಿಯು: 'ಉಪಾಧಿಸ್ತು ಧರ್ಮಧ್ಯಾನೆ ವಿಶೇಷಣೆ ಕುಟುಂಬವ್ಯಾಪೃತೆ ಛದ್ಮನಿ' ಎಂದು ವಿಶ್ವಕೋಶಕಾರರು ಉಪಾಧಿಯು ಶಬ್ದವನ್ನು ಧರ್ಮಚಿಂತನ, ವಿಶೇಷಣ, ಕುಟುಂಬಪೋಷಣಾಸಕ್ತ, ಕಪಟ ಎಂಬಿಷ್ಟು ಅರ್ಥಗಳಲ್ಲಿ ಯೋಜಿಸುತ್ತಾರೆ.

ಒಟ್ಟಿನಮೇಲೆ 'ಉಪಾಧಿ' ಎಂಬ ಈ ಶಬ್ದದ ಸಾಮಾನ್ಯವಾದ ಅರ್ಥವು ಆವುದೆಂದರೆ, ಹೊರಗಿನ ಕಾರಣವು ಇಲ್ಲವೆ ಸಾಹಾಯ್ಯವೆಂದು ಹೇಳಬಹುದು. ಶಂಕರಾಚಾರ್ಯರು ಶಾರೀರಕದಲ್ಲಿ ಉಪಾಧಿಶಬ್ದವನ್ನು ಮುಂದುವರಿಸುವದೇನೋ ಸರಿ; ಆದರೆ ಸ್ವತಂತ್ರವಾದ ವ್ಯಾಖ್ಯೆಯನ್ನು ನಿರೂಪಿಸಿದುದು ಎಲ್ಲಿಯೂ ಕಂಡುಬರುವದಿಲ್ಲ. ಇದರಿಂದ ಶಾಂಕರಮತದಲ್ಲಿ ಈಶ, ಜೀವ, ಜಗತ್ತು ಎಂಬ ಪದಾರ್ಥತ್ರಯದ ಸಮರ್ಪಕವಾದ ವಿವೇಚನೆಯು ಕೊರತೆಯಿರುವದೆಂದು ಊಹಿಸಬಹುದಾಗಿದೆ. ಆದ್ದರಿಂದ ಉತ್ತರಮೀಮಾಂಸೆಯು ತಿರುಳೇ ಶಾಂಕರ ಮತದಲ್ಲಿ ಅಡಗಿರುವದೆಂದು ಭಾವಿಸುವುದು ನಿರ್ವಿವಾದವಾದ ಸಂಗತಿಗೊಳ್ಳತಕ್ಕದ್ದಲ್ಲ. ವೇದವಲ್ಲಿಯ ಉತ್ತರವಿಚಾರದ ನಿರ್ಣೀತಾರ್ಥವನ್ನು 'ಸಿದ್ಧಾನ್ತ ಏವ ಸಿದ್ಧಾನ್ತಃ ಪೂರ್ವಪಕ್ಷಾಸ್ತಥಾಪರೆ' ಎಂಬ ಶ್ರೀಕಂಠಸೂರಿಯ ನುಡಿಯಂತೆ, ಸಿದ್ಧಾಂತವೆಂದು ಕರೆಯಲ್ಪಡುವ ಶೈವಾಗಮ ದರ್ಶನದಲ್ಲಿಯೇ ಅರಿತುಕೊಳ್ಳತಕ್ಕದ್ದೆಂದು ಸಿದ್ಧವಾಗುವುದು.

(ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುಮಾಹಾತ್ಮ್ಯ ಮತ್ತು ಪೂಜಾಸಮಾರಂಭ.

ಸಾಣಾಪುರ.

ಬಳ್ಳಾರಿ ಡಿ|| ಗೆ ಸೇರಿದ ಕಲ್ಲುಹೊಳೆಗ್ರಾಮದ ವೇ|| ಕಲ್ಲುಹೊಳೆಯಪ್ಪಯ್ಯನವರಿಗೂ ಇವರ ಸೊಸೆ ಬಸವಮ್ಮನವರಿಗೂ ಜ್ವರವು ಪ್ರಾಪ್ತಿಯಾಗಿ ಕಾಯಿಲೆಯು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬಂದಿತು. ಸದರಿ ಕಲ್ಲುಹೊಳೆಯಪ್ಪನವರು ತಮ್ಮ ಗ್ರಾಮದಲ್ಲಿ ತಮ್ಮ ವಂಶದ ಮೂಲಪುರುಷರಾದ ಶ್ರೀ ಚರಪಟ್ಟಾಧ್ಯಕ್ಷ ಸ್ವಾಮಿಗಳವರ ಗದ್ದುಗೆಯುಳ್ಳ ಮಠವನ್ನು ಶಿಲೆಯಿಂದ ನಿರ್ಮಿಸುವದಕ್ಕೋಸ್ಕರ ಪ್ರಾರಂಭಿಸಿ ಎರಡುವರ್ಷಗಳಾದುವು. ಇಲ್ಲಿಯವರೆಗೆ ಈ ಮಠನಿರ್ಮಾಣಕ್ಕಾಗಿ ಸದರಿಯವರು 15-16 ಸಾವಿರ ರೂಪಾಯಿಗಳನ್ನು ವ್ಯಯಮಾಡಿರುವರು. ಇನ್ನೂ 3-4 ಸಾವಿರ ರೂಪಾಯಿಗಳ ಕೆಲಸವಿದ್ದು 8.9 ತಿಂಗಳಲ್ಲಿ ಪೂರೈಸತಕ್ಕದ್ದಾಗಿದೆ. ನೂತನ ಮಠಪ್ರವೇಶೋತ್ಸವವನ್ನು ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರಿಂದ ನೆರವೇರಿಸಬೇಕೆಂತಲೂ ಆ ಸಮಯದಲ್ಲಿ, ರಂಭಾಪುರೀ ಪೀಠಾಧಿಕಾರದ ಕಾಲಕ್ಕೆ ವಾಗ್ದಾನ ಮಾಡಿದ ಒಂದು ಆನೆಯನ್ನು ಉಜ್ಜಯಿನೀ ಸಂಸ್ಥಾನಕ್ಕೂ ಮತ್ತೊಂದು ಆನೆಯನ್ನು ರಂಭಾಪುರೀ ಸಂಸ್ಥಾನಕ್ಕೂ ಸಲ್ಲಿಸಬೇಕೆಂತಲೂ, ಹಾಗೂ ಈ ಮೊದಲು ಪಂಚಾಚಾರ್ಯರ ಪ್ರಭಾಪೋಷಣಕ್ಕೋಸ್ಕರ ವಾಗ್ದಾನಮಾಡಿದ 500 ರೂಪಾಯಿಗಳನ್ನು ಅದೇ ಸಮಯದಲ್ಲಿಯೇ ಸಲ್ಲಿಸಬೇಕೆಂತಲೂ, ಬಡವರ ವಿವಾಹ ದೀಕ್ಷಾದಿಕಾರ್ಯಗಳನ್ನು ನೆರವೇರಿಸಬೇಕೆಂತಲೂ ಇತ್ಯಾದಿ ಮಹಾ ಮಹಾ ಸಂಕಲ್ಪಗಳನ್ನು ಮಾಡಿಕೊಂಡಿದ್ದರು. ಈ ರೀತಿ ಇರುವಲ್ಲಿ ಸದರಿಯವರಿಗೆ ಪ್ರಾಪ್ತವಾದ ಕಾಯಿಲೆಯನ್ನು ನೋಡಿ ಇವರು ಮಾಡಿಕೊಂಡ ಯಾವತ್ತೂ ಸಂಕಲ್ಪಗಳೂ ಒಂದೂ ನೆರವೇರದೆ ಹಾಗೆಯೇ ಉಳಿಯುವವಲ್ಲಾ ಎಂದು ವೇ|| ಕಲ್ಲುಹೊಳೆಮಠದ ಕೆಂಪಯ್ಯನವರು ಯೋಚಿಸಿ ಚಿಂತಾಕ್ರಾಂತರಾಗಿ ಈ ರೋಗವು ಯಾವ ವೈದ್ಯದಿಂದಲೂ ಗುಣವಾಗತಕ್ಕದ್ದಲ್ಲ; ಆ ಶ್ರೀಗುರು ದಾರುಕನೇ ಈ ರೋಗವನ್ನು ನಿವಾರಿಸಬೇಕಾಗಿದೆ, ಎಂದು ನಿರ್ಧರಿಸಿ, ಶ್ರೀ ದಾರುಕಾಚಾರ್ಯರ ಜಯಂತಿ ದಿನದವರೆಗೆ ಪ್ರತಿ ಸೋಮವಾರ ಶ್ರೀ ಜಗದ್ಗುರು ದಾರುಕಾಚಾರ್ಯಸ್ತೋತ್ರ ಶತನಾಮಾವಳಿ ಪಾರಾಯಣ, ಮಾಯಾ ಪಂಚಾಕ್ಷರೀ ಜಪ, ಪ್ರತಿ ಶುಕ್ರವಾರ ಗಾಯತ್ರ್ಯಷ್ಟೋತ್ತರಶತಜಪ, ಪ್ರತಿ ಅಮಾವಾಸ್ಯೆಗೆ ಗಣಾರಾಧನಾದಿಗಳನ್ನು ಮಾಡಬೇಕೆಂದು ನಿಶ್ಚಯಿಸಿ ಅದರಂತೆ ಯಾವತ್ತೂ ಕಾರ್ಯಗಳನ್ನು ನಿರ್ವಹಿಸಲು ಒಂದೂವರೆ ತಿಂಗಳಲ್ಲಿಯೇ ರೋಗದಿಂದ ಮುಕ್ತರಾಗಿ ಆ ಗುರುಸಾರ್ವಭೌಮನ ಕೃಪೆಯಿಂದ ಆರೋಗ್ಯಭಾಗ್ಯವನ್ನು ಪಡೆದರೆಂಬ ವಿಷಯವನ್ನು ತಿಳುಹಿಸಲು ಅತ್ಯಾನಂದವೆನಿಸುತ್ತದೆ. ಗುರುಮಹಿಮೆಯು ಸಾಮಾನ್ಯವಾದುದೇ?

ಆ ಮೇಲೆ ಸರ್ವರೂ ತಮ್ಮ ಮನದಲ್ಲಿ ನಿಶ್ಚಯಿಸಿಕೊಂಡಂತೆ ತುಂಗಭದ್ರಾತೀರದಲ್ಲಿ ರಾರಾಜಿಸುತ್ತಿರುವ ಸಾಣಾಪುರದ ಶ್ರೀ ವೀರಭದ್ರಸ್ವಾಮಿಯ ಸನ್ನಿಧಿಯನ್ನು ಸೇರಿ ಕಂಪ್ಲಿ ಕಗ್ಗಿನಮಠದ ಶ್ರೀ ಪಟ್ಟದಸ್ವಾಮಿಗಳನ್ನು ಬರಮಾಡಿಕೊಂಡು ಪ್ರತಿದಿನ ಬ್ರಾಹ್ಮೀಮುಹೂರ್ತದಲ್ಲಿ ಕಲ್ಲುಹೊಳೆಮಠದ ವೇ|| ಗುರುಪಾದಾರಾಧ್ಯರು, ಹಚ್ಚುಪಾರಾಧ್ಯರು ಇವರಿಂದ ವೇದೋಕ್ತವಾಗಿ ಶ್ರೀ ವೀರಭದ್ರಸ್ವಾಮಿಗೆ ರುದ್ರಾಭಿಷೇಕವನ್ನು ಪೂರೈಸಿ ಆ ಮೇಲೆ ಶ್ರೀ ದಾರುಕಾಚಾರ್ಯರ ಭಾವಚಿತ್ರಕ್ಕೆ ಪೂಜೆಯಂಗೈದು ದಾರುಕಾಷ್ಟೋತ್ತರ ಶತನಾಮಾವಳಿಗಳಿಂದ ಸ್ತುತಿಸಿ, ಮಂಗಳವಾದನಂತರ ಗಣಾರಾಧನೆಯನ್ನೂ ಮಾಡಿಸತ್ತು ಬಂದರು. ಈ ಗಣಾರಾಧನಾಸಮಾರಂಭವನ್ನು ವೇ|| ಕಲ್ಲುಹೊಳೆಯಪ್ಪಯ್ಯನವರು ಮತ್ತು ಶ್ರೀಮತಿ ಬಸಮ್ಮನವರು ಇವರೇ ಅತ್ಯಂತ ಶ್ರದ್ಧೆಯಿಂದ ನೆರವೇರಿಸುತ್ತಿದ್ದರು. ಆ ಸಮಯದಲ್ಲಿ ವೇ|| ಕೆಂಪಯ್ಯನವರು ಕೆಲಕೆಲವರ ಗ್ರಹಬಾಧೆಯನ್ನು ಉದ್ಧರಣೆಗಳ ದ್ವಾರಾ ತಪ್ಪಿಸಿದರು. ವೈಶಾಖ ಶುದ್ಧ ಸಪ್ತಮಿ ಬುಧವಾರ ದಿವಸ ಶ್ರೀ ದಾರುಕಾಚಾರ್ಯರ ಚರಿತ್ರವು ಬೋಧಿಸಲ್ಪಟ್ಟಿತು. ಈ ಚರಿತ್ರವನ್ನು ಕೇಳಿ ಸಂತುಷ್ಟರಾದ ಸಾಣಾಪುರದ ಪ್ರಮುಖರಾದ ವೇ|| ಮಠದ ಚನ್ನಬಸವಾರಾಧ್ಯರು, ಪಾಟೀಲ್ ರುದ್ರಗೌಡರು, ದೊಡ್ಡನಗೌಡರು, ವೀರಭದ್ರಗೌಡರು, ಮುಷೂರು ಸಕ್ರಗೌಡರು ಇವರೇ ಮೊದಲಾದವರು ಶುಕ್ರವಾರದ ದಿವಸ ತಮ್ಮ ಗ್ರಾಮದಲ್ಲಿ ಅತ್ಯಂತ ವೈಭವದಿಂದ ಶ್ರೀ ಜಗದಾಚಾರ್ಯರ ಭಾವಚಿತ್ರಕ್ಕೆ ಮಹಾರುದ್ರಾಭಿಷೇಕಾದಿ ಕಾರ್ಯಗಳನ್ನು ನೆರವೇರಿಸಿ ಶ್ರೀ ಗುರುಕೃಪೆಗೆ ಪಾತ್ರರಾದರು. ಈ ಸಮಯದಲ್ಲಿ ಕಂಪ್ಲಿಯಿಂದ ಆಗಮಿಸಿದ್ದ ಮಾನಮಂದಿ ಜಡಪ್ಪನವರು, ಕಂಬಿ ಬಸಯ್ಯನವರು, ಕಲ್ಲುಗಿ ಗುರುಸಿದ್ಧಪ್ಪನವರು, ತೆಂಗಿನಕಾಯಿ ಶರಭಣ್ಣನವರು, ಬಳ್ಳಾರಿ ಶಿವಧಾರದ ನೀಲಮ್ಮನವರು, ಇವರೆಲ್ಲರೂ ಸೇರಿ ಉತ್ಸವದ ಕೀರ್ತನ್ನು ನಾವು ವಹಿಸಿಕೊಳ್ಳುತ್ತೇವೆಂದು ನುಡಿದು ಅತ್ಯಂತ ವೈಭವಪೂರ್ವಕವಾಗಿ ಜಗದಾಚಾರ್ಯರ ಭಾವಚಿತ್ರವನ್ನು ಮೆರೆಯಿಸಿದರು, ಉತ್ಸವವು ಗ್ರಾಮದ ಶ್ರೀಲ್ಲಾ ಸಂಚರಿಸಿ ವೀರೇಶನ ದೇವಸ್ಥಾನವನ್ನು ಪ್ರವೇಶಿಸಿದ ಮೇಲೆ ವೇ|| ಕೆಂಪಯ್ಯನವರು ಪ್ರತಿವರ್ಷ ಇದೇ ರೀತಿ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ನಿಮ್ಮ ಗ್ರಾಮದಲ್ಲಿ ನೆರವೇರಿಸಬೇಕೆಂದು ಬೋಧಿಸಿದರು ಸರ್ವರೂ ಇದಕ್ಕೆ ಒಪ್ಪಿ ತಮ್ಮ ಸಮ್ಮತಿಯನ್ನು ಕರತಾಡನ ಮೂಲಕ ತೋರ್ಪಡಿಸಿದರು. ಈ ಸಮಯದಲ್ಲಿ ವೀರಶೈವ ಧರ್ಮೋದ್ಧಾರಕ್ಕಾಗಿ ಅವತಾರವನ್ನೆತ್ತಿರುವ ಪಂಚಾಚಾರ್ಯ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿದರು. ಅಸಾಧಾರಣಗುರುಭಕ್ತಿಪರರಾದ ಈ ಪ್ರಮುಖರಿಗೆಲ್ಲಾ ಶ್ರೀ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುವ.

ಗುರುಭಕ್ತ,
ಸಿದ್ಧನಗೌಡ, ಕುರುವಳ್ಳಿ.

ಬಸವಜಯಂತಿಯ ವೈಲಕ್ಷಣ್ಯವೂ ವಿರಕ್ತಪಂಥಿಗಳ ಜಾಲವೂ.

ದಾವಣಗೆರೆ ತಾಲೂಕು ಅವರಗೊಳ್ಳ ಗ್ರಾಮದಲ್ಲಿ ಶ್ರೀಮದ್ರಂಭಾಪುರೀ ಪೀಠಾಧಿಪತಿಗಳು ವೈಶಾಖ ಶು|| ೩ ಯಲ್ಲಿ ಬಸವಣ್ಣಗಳನ್ನು ಪೂಜಿಸಕೂಡದೆಂದು ಆಜ್ಞಾಪಿಸಿ ಅಡ್ಡಿಪಡಿಸಿದರೆಂಬುದಾಗಿ ಮೇ 4 ನೇ ತಾರೀಖು ಮೈಸೂರು ಸ್ವಾರುಪತ್ರಿಕೆಯಲ್ಲಿಯೂ, "ಮಂಕುಬೂದಿ" ಎಂಬ ಪ್ರಕಟನೆಯಲ್ಲಿಯೂ ಬರೆಯಲ್ಪಟ್ಟಿರುವುದು ಸರಿಯಷ್ಟೆ! ಇದರ ಬಗ್ಗೆ ಕೆಲವಂಶಗಳನ್ನು ವಾಚಕವೃಂದದ ಮುಂದೆ ಇಡಬೇಕೆಂಬ ಕುತೂಹಲವುಳ್ಳವನಾಗಿದ್ದೇನೆ. ವೈಶಾಖ ಶು|| ೩ ದಿವಸವು ಕಲ್ಯಾಣಪಟ್ಟಣದಲ್ಲಿ ಈಗ್ಗೆ 800 ವರ್ಷಗಳ ಪೂರ್ವದಲ್ಲಿ ಬಿಜ್ಜಳನ ಮಂತ್ರಿಯಾಗಿದ್ದ ಬಸವನಜಯಂತಿಯೆಂದು ಕೆಲವರ ಅಭಿಪ್ರಾಯವಿದೆ. ಇದು ಎಷ್ಟರ ಮಟ್ಟಿಗೆ ನಿಜವೋ ತಿಳಿಯದಾಗಿದೆ. ಇರಲಿ, ಆದಾಗ್ಯೂ ವಿರಕ್ತಪಂಥಿಗಳು ವೈಶಾಖ ಶು|| ೩ ಯನ್ನು ಬಸವಜಯಂತಿ ದಿವಸವನ್ನಾಗಿ ಆಚರಿಸಬೇಕೆಂದು ಬಡಬಡಿಸುವರು ನಾವು ಯಾರ ಜಯಂತಿಯನ್ನಾಚರಿಸುವೆವೋ ಅವರ ವಿಗ್ರಹವನ್ನಾಗಲಿ, ಭಾವಚಿತ್ರವನ್ನಾಗಲಿ ಪೂಜಿಸಿ, ಅಲಂಕರಿಸಿ ಅವರ ವಿಷಯವನ್ನು ಬೋಧಿಸುವುದು ಸ್ವಭಾವಸಿದ್ಧವಾಗಿದೆ. ಆದರೆ ಬಸವಜಯಂತಿಯು ಮಾತ್ರ ಹಾಗಲ್ಲ. ವೈಶಾಖ ಶು|| ೩ ದಿವಸ 3.4 ಗ್ರಾಮಗಳಿಗೆ ಹೋಗಿದ್ದೆನು. ಆ ಗ್ರಾಮದವರನ್ನು ಈ ದಿವಸ ವಿಶೇಷವೇನೆಂದು ಪ್ರಶ್ನಿಸಲಾಗಿ ಅವರು ಹೇಳಿದ್ದೇನೆಂದರೆ—"ಈ ದಿವಸ ನಮ್ಮೂರಲ್ಲಿ ಎತ್ತಿನಹಬ್ಬ ಸ್ವಾಮಿ! ಸಕಾಲಕ್ಕೆ ಬಂದಿರಿ" ಎಂದು ಹೇಳಿದರು. ಅನಂತರ "ಎತ್ತಿನಹಬ್ಬವೆಂದರೇನೆಂದು ಪ್ರಶ್ನೆ ಮಾಡಿದೆನು. ಅದಕ್ಕವರು "ಸ್ವಾಮಿ! ನಿಮಗೆ ಗೊತ್ತಿಲ್ಲವೇ? ಇವತ್ತು ಎತ್ತು ಹುಟ್ಟಿದದಿವಸವಂತೆ!" ಎಂದರು. "ಯಾರವರು ನಿನಗೆ ಹೇಳಿದವರು" ಎಂದು ಪ್ರಶ್ನೆ ಮಾಡಿದೆನು. "ಮೊನ್ನೆ ದಾವಣಗೆರೆಗೆ ಮಾಲು ಹೇರಿಕೊಂಡು ಹೋಗಿದ್ದೆ. ನಮ್ಮ ದಲಾಲರು ವೈಶಾಖ ಶು|| ೩ ಯಲ್ಲಿ ಎತ್ತು ಹುಟ್ಟಿದ ದಿವಸ; ಆ ದಿವಸ ಹಬ್ಬ ಮಾಡಿ ಎತ್ತುಗಳನ್ನಲಂಕರಿಸಿ ವಿಜೃಂಭಣೆಯಿಂದ ಊರಲ್ಲಿ ಮೆರವಣಿಗೆ ಮಾಡಿ ಬಸವಜಯಂತಿ ಮಾಡಿದೆವೆಂದು ಪತ್ರಿಕೆಗೆ ಕೊಡಿರಿ" ಎಂದು ಹೇಳಿದರು. "ನಾವು ಎತ್ತಿನಿಂದ ಉಣ್ಣೋದು. ಉಣ್ಣೋದು ಆ ಎತ್ತು ಹುಟ್ಟಿದ ದಿವಸ ಏಕೆ ಹಬ್ಬ ಮಾಡಬಾರದು. ಎಂದು ತಿಳಿದು ಈ ದಿವಸ ಹಬ್ಬ ಮಾಡಿ ಎತ್ತುಗಳನ್ನಲಂಕರಿಸಿ ಮೆರವಣಿಗೆ ಮಾಡುತ್ತೇವೆ" ಎಂದು ಹೇಳಿದರು. ಆಗ ನಾನು ಲೋಕೋಪಕಾರಿಯಾಗಿರುವ ನಾಲ್ಕು ಕಾಲಿನ ಬಸವಣ್ಣನಿಗೂ, ಕಲ್ಯಾಣಪಟ್ಟಣದ ಬಿಜ್ಜಳನ ಮಂತ್ರಿಯಾಗಿದ್ದ ಎರಡುಕಾಲಿನ ಬಸವಣ್ಣನಿಗೂ ಇರುವ ವ್ಯತ್ಯಾಸವನ್ನು ತಿಳುಹಿಸಿ ಅವರಿಗೆ ಸರಿಯಾದ ತಿಳುವಳಿಕೆ ಕೊಟ್ಟದ್ದಾಯಿತು. ವಿರಕ್ತಪಂಥಿಗಳು ಬಸವನಜಯಂತಿಯು ಸಾರ್ವತ್ರಿಕವಾಗಿ ಆಚರಿಸಲ್ಪಡುವುದೆಂದು ಜಗತ್ತಿಗೆ ತೋರ್ಪಡಿಸಬೇಕೆಂಬ ಉದ್ದೇಶದಿಂದ ವೈಶಾಖ ಶು|| ೩ ದಿವಸ ಎತ್ತಿನಹಬ್ಬ, ಎತ್ತು ಹುಟ್ಟಿದ ದಿವಸವೆಂದು ನಮ್ಮಂಥ ಹಳ್ಳಿಜನರಿಗೆ ಮಂಕುಬೂದಿಯನ್ನು ಚೆಲ್ಲುವರು. ಎರಡುಕಾಲಿನ ಬಸವನನ್ನು ಪರೋಪಕಾರಾರ್ಥವಾಗಿರುವ ನಾಲ್ಕು ಕಾಲಿನ ಬಸವನೊಡನೆ ಸಮಾವೇಶಮಾಡುವರು. ಈ ರೀತಿ ಜನಗಳಿಗೆ ತಪ್ಪು ತಿಳುವಳಿಕೆ ಕೊಟ್ಟು ಬಸವಜಯಂತಿಯನ್ನು ಮಾಡಿಸಿದೆವೆಂದು ಹಿಗ್ಗಿ ಹುಗ್ಗೀಪದಗವಾಗುವುದು ಆಶ್ಚರ್ಯಕರವೂ, ವಿಲಕ್ಷಣವೂ ಆಗಿದೆ. ಈ ರೀತಿ ಮಾಡುವುದರಿಂದ ಅವರು ಯಾವ ಕಲ್ಯಾಣದ ಬಸವನನ್ನು ಗೌರವಿಸುವೆವೆಂದು ಪ್ರತಿಪಾದಿಸುವರೋ ಆ ತತ್ವವನ್ನೇ ನಿರ್ಮೂಲವಮಾಡಿದ ಹಾಗಾಗುವುದು. ಜನಸಾಮಾನ್ಯಕ್ಕೆಲ್ಲಾ ವೈಶಾಖ ಶು|| ೩ ಯು ಕಲ್ಯಾಣದ ಬಸವನ ಜಯಂತಿಗೆ ಬದಲಾಗಿ ನಾಲ್ಕು ಕಾಲಿನ ಬಸವನ ಜಯಂತಿ ಎಂದು ತಿಳುವಳಿಕೆಯಾಗುವುದು. ಈ ರೀತಿ ಜನರನ್ನು ವಂಚಿಸುವ ವಿರಕ್ತಪಂಥಿಗಳ ಜಾಲವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಸಮಸ್ತ ಆಸ್ತಿಕರಿಗೂ ನಾಲ್ಕು ಕಾಲಿನ ಬಸವನಲ್ಲಿ ಗೌರವಬುದ್ಧಿ ಇದ್ದೇ ಇರುವುದು. ಕಾರಹುಣ್ಣಿಮೆಯ ದಿವಸ ಬಸವಣ್ಣಗಳನ್ನಲಂಕರಿಸಿ ಗೌರವಿಸುವುದು ಅನಾದಿನವಾಗಿ ರೂಢಿಯಲ್ಲಿ ಬಂದಿದೆ. ಆದರೆ ವಿರಕ್ತಪಂಥಿಗಳು ವೈಶಾಖ ಶು|| ೩ ಬಸವಜಯಂತಿಯೆಂದು ಸಾರುವುದಕ್ಕೆ ಪ್ರಾರಂಭಿಸಿದಂದಿನಿಂದ ಈ ಪದ್ಧತಿಯು ಸ್ವಲ್ಪ ಶಿಥಿಲವಾಗುತ್ತಾ ನಡೆದಿದೆ. ಆದ್ದರಿಂದ ಸಮಸ್ತ ಆಸ್ತಿಕ ಮಹಾಶಯರೂ ಕಾರಹುಣ್ಣಿಮೆ ದಿವಸ ಅನಾದೀನ ಪದ್ಧತಿಯಂತೆ ಬಸವಣ್ಣಗಳನ್ನು ಗೌರವಿಸಿ ಅಲಂಕರಿಸಿ ಅವುಗಳ ವಿಷಯದಲ್ಲಿ ತಮಗಿರುವ ಗೌರವಬುದ್ಧಿಯನ್ನು ವ್ಯಕ್ತಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಶ್ರೀ ರಂಭಾಪುರೀ ಪೀಠಾಧಿಪತಿಗಳು ವೈಶಾಖ ಶು|| ೩ ಯಲ್ಲಿ ಬಸವಣ್ಣಗಳನ್ನು ಗೌರವಿಸಕೂಡದೆಂದು ಆಜ್ಞಾಪಿಸಿದರೆಂದು ಹೇಳುವುದು ಶುದ್ಧ ತಪ್ಪು. ಪನ್ನತಿಪ್ರಕಾರ ಕಾರಹುಣ್ಣಿಮೆಯ ದಿವಸ ಮಾಡಬೇಕೆಂದು ನಾವು ಬುದ್ಧಿಪೂರ್ವಕವಾಗಿ ಬಿಟ್ಟಿರುವೆವೇ ಹೊರತು ಈ ವಿಷಯದಲ್ಲಿ ಅವರ ಆಜ್ಞೆ ಇಲ್ಲವಾದ್ದರಿಂದ ಅವರನ್ನಾಕ್ಷೇಪಿಸುವುದು ಶುದ್ಧ ಅನ್ಯಾಯವೆಂದು ಹೇಳದಿರಲಾರೆನು.

ಓರ್ವ ಅವರಗೊಳ್ಳ ನಿವಾಸಿ.

ಶ್ರೀರೇಣುಕಾದಿ ಪಂಚಾಚಾರ್ಯಾಃ ಪ್ರಸೀದಂತು.

ಅರಸೀಕೆರೆ ತಾಲ್ಲೋಕು ಕಣಕಟ್ಟೆಹೋಬಳಿ ತುಂಬಾಪುರ.

ಈ ಗ್ರಾಮದಲ್ಲಿರುವ ಸಾತುಂಗೆರೆಮಠದ ಶ್ರೀಚರಪಟ್ಟಾಧ್ಯಕ್ಷ ಮಹಾಸ್ವಾಮಿಯವರು ತಮ್ಮ ಅಧ್ಯಕ್ಷತೆಯಲ್ಲಿ ಶ್ರೀಪಂಚಾಚಾರ್ಯಭಗವತ್ಪಾದರವರ ಹೆಸರಿನಲ್ಲಿ ಭಜನಾಸಂಘವನ್ನೇರ್ಪಡಿಸಿರುವರು. ಈ ಸಂಘಕ್ಕೆ ಬೇಲೂರದ ಸಮರುಳೇಗೌಡರೂ, ಬಸಪ್ಪನ ಮರುಳೇಗೌಡರೂ, ವೇ|| ಕೆ. ಬಿ. ಬಸವಲಿಂಗಪ್ಪನವರು ಮೊದಲಾದ ಅನೇಕರು ಮೆಂಬರಾಗಿದ್ದಾರೆ.

ಸಂಘವೇರ್ಪಟ್ಟು ಇಲ್ಲಿಗೆ 1 ವರ್ಷ 6 ತಿಂಗಳು ಕಳೆಯಿತು. ಶ್ರೀಗಳು ಕ್ರಮವಾಗಿ ಪಂಚಪೀಠಾಧಿಪತಿಗಳ ಜಯಂತ್ಯುತ್ಸವವನ್ನು ಆಯಾ ಪವಿತ್ರ ತಿಥಿಗಳಲ್ಲಿ ಬಹು ವಿಜೃಂಭಣೆಯಿಂದ ನಡೆಯಿಸುತ್ತಿರುವುದು. ಅವರ ನೈಜವಾದ ಗುರುವಾಂಛಲ್ಯಶೀಲತೆಯನ್ನು ವ್ಯಕ್ತಪಡಿಸುತ್ತದೆ. ಪ್ರತಿಸೋಮವಾರವೂ ಭಜನಾಸಂಘಕ್ಕೆ ತಾವೂ ಸ್ವತಃ ಭಾಗಿಗಳಾಗಿ ಬಹು ಭಕ್ತಿಯಿಂದ ಶ್ರೀ ಪಂಚಾಚಾರ್ಯ ಗುರುಸಾರ್ವಭೌಮರ ನಾಮವನ್ನು ನಾನಾ ರಾಗಗಳಿಂದ ಸ್ತೋತ್ರಮಾಡುತ್ತ ನೆರೆಯುವ ಭಕ್ತಮಾಹೇಶ್ವರರಿಗೆ ಗುರುಭಕ್ತಿಯ ವಿಷಯದಲ್ಲಿ ಸರಸವಾಗಿ ಉಪನ್ಯಾಸಮಾಡುತ್ತಿರುವರು. ಈ ಶ್ರೀಗಳವರು ವಯಸ್ಸಿನಲ್ಲಿ ಚಿಕ್ಕವರಿದ್ದಾಗ್ಯೂ ಬುದ್ಧಿಯಲ್ಲಿ ವೃದ್ಧರಾಗಿದ್ದಾರೆ ತಾವು ಸಂಚರಿಸುವ ಪ್ರತಿಗ್ರಾಮಗಳಲ್ಲೂ ಶ್ರೀ ಪಂಚಾಚಾರ್ಯ ಗುರುಪುಂಗವರ ಮಹತ್ವದ ಮೇಲೆ ಭಕ್ತಮಾಹೇಶ್ವರರಿಗೆ ಶಾಸ್ತ್ರೀಯವಾದ ತಿಳುವಳಿಕೆ ಕೊಡುತ್ತಿರುವರಲ್ಲದೆ, ನಮ್ಮ ವೀರಶೈವಮತಕ್ಕೆ ದಿವ್ಯನೇತ್ರದಂತಿರುವ ಶ್ರೀ ಪಂಚಾಚಾರ್ಯ ಪ್ರಭಾಪತ್ರಿಕೆಯ ಶ್ರೇಷ್ಠತೆಯನ್ನು ಅವರಿಗೆ ತಿಳುಹಿಸಿ ಅನೇಕ ಜನ ಚಂದಾದಾರನ್ನು ಮಾಡುತ್ತಿರುವರು. ನಿನ್ನೆ ಈ ಶ್ರೀಗಳವರು ಭಜನಾನಂತರ ಶ್ರೀ ಪಂಚಾಚಾರ್ಯರ ಮಂಗಲವಂಪಾದಿ ಪ್ರಭಾಪತ್ರಿಕೆಯ ಪೋಷಣಕ್ಕಾಗಿಯೂ ಮತ್ತು ಬೆಂಗಳೂರು ಮಹಾಂತಿನ ಮಂಡಲಿ ಸ್ಥಾಪಿಸಿರುವ ಶ್ರೀ ಪಂಚಾಚಾರ್ಯ ವೀರಶೈವ ಪುಸ್ತಕಭಂಡಾರಕ್ಕಾಗಿಯೂ ಒಂದೊಂದು ರೂಪಾಯಿ ತೆಗೆಯಬೇಕೆಂದು ರಾಮಪುರಪುರದಲ್ಲಿರುವ ಕ್ಯಾಗಟೂರು ಮಠದ ವೇ|| ಜಿ. ಕೆ. ಸಿದ್ಧಲಿಂಗಾರ್ಯರು ಸೂಚಿಸಿದಂತೆ ಜುಮ್ಲ 2 ರೂ.ಗಳನ್ನು ಶ್ರೀಗಳು ಆಗಲೇ ಸಂಘದ ಪರವಾಗಿ ಕಳುಹಿಸಲು ವೇ|| ಜಿ. ಕೆ. ಸಿದ್ಧಲಿಂಗಾರ್ಯರವರ ವಶಕ್ಕೆ ಕೊಟ್ಟುಬಿಟ್ಟರು. ಈ ಭಜನಾಸಂಘವು ವೇ|| ಕೆ. ಬಿ. ಬಸವಲಿಂಗಯ್ಯನವರ ಸಂಗೀತ ಮತ್ತು ಪಿಟೀಲು ವಾದ್ಯದೊಡನೆ ಬಹು ರಸಭರಿತವಾಗಿಯೂ ಆನಂದಕರವಾಗಿಯೂ ನಡೆಯುತ್ತಿರುವುದು. ಇವಲ್ಲವೇ ಚರಪಟ್ಟಾಧಿಕಾರಿಗಳ ಸುತ್ಯವಾದ ಕರ್ತವ್ಯ? ಧರಣಿಮಂಡಲದಲ್ಲಿರತಕ್ಕ ಸಮಸ್ತ ಪಟ್ಟಚರಾಧಿಕಾರಿಗಳು ಈ ಮಹನೀಯರ ಮಾರ್ಗವನ್ನು ಕೈಕೊಂಡು ಸಮಾಜವನ್ನುದ್ಧರಿಸಬೇಕೆಂದು ಪ್ರಾರ್ಥಿಸುವ.

ಗುರುಭಕ್ತ,
ನಂಜೇಗೌಡರ ಸಿದ್ಧಲಿಂಗೇಗೌಡ
ತುಂಬಾಪುರ.

ಪಂಚಾಚಾರ್ಯ ಪ್ರಭಾ

೧೯೩೦ನೇ ಜೂನ್ ತಾ|| ೨೩ನೇ ಸೋಮವಾರ

ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವವು.

ಧರ್ಮಾವತಾರಿಗಳಾದ ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ 46 ನೆಯ ವರ್ಷದ ವರ್ಧಂತಿಮಹೋತ್ಸವವು ಇದೇ ತಿಂಗಳು ೧೭ನೆಯ ತಾರೀಖಿನ ದಿವಸ ಬಹು ಸಂಭ್ರಮದಿಂದ ನೆರವೇರಿತು. ಪ್ರಾತಃಕಾಲದಲ್ಲಿ ಮಹಾಪ್ರಭುಗಳಿಗೆ ಮಂಗಲಸ್ನಾನವು ನಡೆಯುವ ಅವಸರದಲ್ಲಿ ಪದ್ಧತಿಯ ಮೇರೆಗೆ ಆಯುರ್ವರ್ಷಗಳನ್ನು ಸೂಚಿಸುವ 46 ಗುಂಡುಗಳು ಹಾರಿಸಲ್ಪಟ್ಟುವು. ಸಂಧ್ಯಾವಂದನಾದಿ ನಿತ್ಯಕರ್ಮಗಳು ಪೂರೈಸಿದ ಬಳಿಕ ಪ್ರಭುಗಳು ರಾಜಸಭೋಚಿತಗಳಾದ ನೂತನ ವಸ್ತ್ರಾಭರಣಗಳಿಂದಲಂಕೃತರಾಗಿ ಜಯಭೇರಿಯು ಮೊಳಗುತ್ತಿರಲು ಪ್ರಜಾಪ್ರಮುಖರು ಜಯಜಯಕಾರವನ್ನು ಮಾಡುತ್ತಿರಲು ಕಲ್ಯಾಣಮಂಟಪದ ಭದ್ರಪೀಠವನ್ನಲಂಕರಿಸಿದರು. ಸಚಿವರೂ ಉಪಸಚಿವರೂ ರಾಜಪುತ್ರರೂ ರಾಜಬಂಧುಗಳೂ ಪೌರವೃದ್ಧರೂ ಶಾಖಾಧಿಕಾರಿಗಳೂ ವೈದಿಕರೂ ವಿದ್ವಾಂಸರೂ ಮಹಾವಿದ್ವಾಂಸರೂ ಧರ್ಮಾಧಿಕಾರಿಗಳೂ ರಾಜಭಕ್ತಿಚಿಹ್ನೆಗಳಿಂದೊಡಗೂಡಿ ಸಭೆಯಲ್ಲಿ ಸಾಲ್ಗಿಡಿದು ಕುಳಿತಿದ್ದರು. ರಾಜಬಂಧುಗಳು ಪ್ರಜಾಪ್ರಮುಖರು ಅಧಿಕಾರಿಗಳು ಭಯಭಕ್ತಿಗಳಿಂದೊಡಗೂಡಿ ನಜರುಮುಜರೆಗಳನ್ನರ್ಪಿಸಿದರು. ಬಳಿಕ ಸಂಗೀತಕಲಾಕೋವಿದರ ಗಾನಾಲಾಪವು ನಡೆದು ಸಭಿಕರಿಗೆ ಗಂಧಪುಷ್ಪಾದಿಗಳು ಹಂಚಲ್ಪಟ್ಟ ಬಳಿಕ ಸೈನಿಕಮರ್ಯಾದೆಯು ನಡೆದು ನಾನಾವಿಧ ವಾದ್ಯಗಳು ಭೋರ್ಗರೆಯುತ್ತಿರಲು ಮಹಾಸ್ವಾರಿಯು ಸ್ವಸ್ಥಾನಕ್ಕೆ ಚಿತ್ತೈಸಿತು. ಅಲ್ಲಿಗೆ ಪ್ರಾತಃಕಾಲದಲ್ಲಿ ನಡೆಯಬೇಕಾದ ಕ್ರಿಯೆಗಳೆಲ್ಲವೂ ಸಂಪೂರ್ತಿಗೊಂಡವು.

ಮಧ್ಯಾಹ್ನ 5 ಘಂಟೆಯ ಮೇಲೆ ಮಹಾಪ್ರಭುಗಳು ಶ್ರೀ ಜಯಚಾಮರಾಜೇಂದ್ರರೊಡನೆ ಪ್ರಜಾರಂಜಕವಾದ ಭವ್ಯವಸ್ತ್ರಾಭರಣಗಳಿಂದ ಭೂಷಿತರಾಗಿ ರತ್ನಾಭರಣಗಳಿಂದಲಂಕೃತಗಳಾದ ದಿವ್ಯಾಶ್ವಗಳನ್ನಾರೋಹಣಮಾಡಿ ದೊಡ್ಡಪೇಟೆಯ ಮಾರ್ಗದಿಂದ ಬಿಜಮಾಡಿದರು. ಹಸ್ತ್ಯಶ್ವರಥ ಪದಾತಿಗಳು ಕ್ರಮವಿಡಿದು ಮಹಾಸ್ವಾರಿಯ ಮುಂಭಾಗದಲ್ಲಿ ಮಂದಗಮನವನ್ನು ಮಾಡುತ್ತಿದ್ದುವು. ಶ್ವೇತಚ್ಛತ್ರಾದಿ ಸಕಲ ರಾಜಬಿರುದುಗಳು ಮಹಾಸ್ವಾರಿಯ ಉಭಯಪಾರ್ಶ್ವಗಳಲ್ಲಿ ಸಾಲುಸಾಲಾಗಿ ಒಪ್ಪುತ್ತಿದ್ದುವು. ಸಹಸ್ರಾರು ಜನ ಪ್ರಜಾಪ್ರಮುಖರೂ ಅಧಿಕಾರಿಗಳೂ ಕಟಿಬದ್ಧರಾಗಿ ನಯವಿನಯ ಭಯಭಕ್ತಿಗಳಿಂದೊಡಗೂಡಿ ಉತ್ಸವದ ಮುಂದುಗಡೆ ಸಾಲ್ಗಿಡಿದು ಹೋಗುತ್ತಲಿದ್ದರು. ಪ್ರೇಕ್ಷಕರಾಗಿ ಬಂದಿದ್ದ ಪ್ರಜೆಗಳು ಮಹಾಸ್ವಾರಿಯ ಉಭಯಪಾರ್ಶ್ವದಲ್ಲಿಯೂ ಕಿಕ್ಕಿರಿದು ನಿಂತಿದ್ದು ರಾಜದರ್ಶನದಿಂದುಂಟಾದ ಮಹದಾನಂದದಿಂದ ಮೇರೆದಪ್ಪಿ ಮಾಡುತ್ತಿದ್ದ ಕರತಾಡನಗಳಿಂದೊಡಗೂಡಿದ ಜಯಧ್ವನಿಗಳೂ ವಾದ್ಯಧ್ವನಿಗಳೂ ಭೂಮ್ಯಂತರಿಕ್ಷಗಳನ್ನೆಲ್ಲ ವ್ಯಾಪಿಸಿ "ಶಬ್ದಗುಣಕಮಾಕಾಶಂ" ಎಂಬ ಆಕಾಶದ ಲಕ್ಷಣವನ್ನು ಅನ್ವರ್ಥಕಗೊಳಿಸುತ್ತಿದ್ದುವು. ಪೇಟೆಯುದ್ದಕ್ಕೂ ಪುರಪ್ರಮುಖರು ಅಲ್ಲಲ್ಲಿಯೇ ಪದ್ಧತಿ ಪ್ರಕಾರ ಮಹಾಪ್ರಭುಗಳಿಗೂ ಪಕ್ಕದಲ್ಲಿದ್ದ ಭಾವಿಪ್ರಭುಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರಿಗೂ ಹಾರ ತುರಾಯಿಗಳನ್ನೊಪ್ಪಿಸಿ ಪುಷ್ಪಾವರಣವನ್ನು ಮಾಡಿ ಪ್ರಭುಕಟಾಕ್ಷಾಮೃತಸೇಚನದಿಂದ ತೃಪ್ತಿಗೊಳ್ಳುತ್ತಿದ್ದರು. ಶ್ರೀ ಜಯಚಾಮರಾಜೇಂದ್ರರೊಡನೆ ಬಿಜಮಾಡಿಸಿದ ನಮ್ಮ ಮಹಾಪ್ರಭುಗಳನ್ನು ನೋಡಿದವರೆಲ್ಲರಿಗೂ ಉಚ್ಚೈಶ್ರವವನ್ನು ಆರೋಹಣಮಾಡಿ ತನ್ನ ಪುತ್ರನಾದ ಜಯಂತನೊಡನೆ ಜಯಪ್ರಯಾಣವನ್ನು ಬೆಳೆಯಿಸಿದ ಸ್ವರ್ಗಾಧಿಪತಿಯಾದ ದೇವೇಂದ್ರನು ಸ್ಮರಣಪಥವನ್ನು ಹೊಂದುತ್ತಿದ್ದನು. ವಿಜಯೋತ್ಸವವು ಸಾಯಂಕಾಲ 7 ಘಂಟೆಯ ಸಮಯಕ್ಕೆ ದೊಡ್ಡಬಂಗಲೆಯನ್ನು ಸೇರಿತು. ಪ್ರಭುಗಳು ಅಶ್ವದಿಂದಿಳಿದು ಸ್ವಲ್ಪಕಾಲ ವಿಶ್ರಾಂತಿಸೌಖ್ಯವನ್ನನುಭವಿಸಿ ಸೈನಿಕರ ಕವಾಯಿತ ಮೊದಲಾದವುಗಳನ್ನು ಪರಾಮರ್ಶಿಸಿ ಸಮಸ್ತ ಪರಿವಾರ ಸಹಿತರಾಗಿ ರಾತ್ರಿ ಹತ್ತುಘಂಟೆಯ ಸಮಯಕ್ಕೆ ಅರಮನೆಯನ್ನು ಪ್ರವೇಶಿಸಿದರು.

ಸರ್ವದೇವಮಯಸ್ಯಾಪಿ ವಿಶೇಷೋ ಭೂಪತೇರಯಂ | ಶುಭಾಶುಭಫಲಂ ಸದ್ಯೋ ನೃಪಾದ್ದೇವಾದ್ಭವಾಂತರೇ || ಪ್ರಜಾಪಾಲಕರಾದ ಭೂಪತಿಗಳು ಸರ್ವದೇವತಾಸ್ವರೂಪರಾಗಿದ್ದರೂ ದೇವತೆಗಳಿಗಿಂತಲೂ ಇವರಲ್ಲಿ ಒಂದು ವಿಶೇಷಧರ್ಮವುಂಟು. ಪ್ರಜೆಗಳಲ್ಲಿ ಉತ್ತಮಾಚರಣೆಗಳಿದ್ದರೆ ಮಹಾರಾಜನು ಪ್ರಸನ್ನನಾಗಿ ಸದ್ಯಃ ಅಂತಹ ಪ್ರಜೆಗಳಿಗೆ ರಕ್ಷಣರೂಪವಾದ ಶುಭಫಲವನ್ನು ಕೊಡುತ್ತಾನೆ. ದುಷ್ಟಾಚರಣೆಗಳಿದ್ದರೆ ಅಂತಹ ದುಷ್ಟಪ್ರಜೆಗಳಿಗೆ ದಂಡನರೂಪವಾದ ದುಷ್ಫಲವನ್ನು ಕೊಡುತ್ತಾನೆ. ಆದರೆ ದೇವತೆಗಳು ಜನ್ಮಾಂತರದಲ್ಲಿ ಮಾತ್ರ ಅಂತಹ ಶುಭಾಶುಭ ಫಲಗಳನ್ನು ಕೊಡುವರಲ್ಲದೆ ಈ ಜನ್ಮದಲ್ಲಿಯೇ ಕೊಡಲಾರರು. ಆದುದರಿಂದ ದೇವತೆಗಳಿಗಿಂತಲೂ ಪ್ರಭುಗಳು ವಿಶೇಷಗುಣವುಳ್ಳವರು ಎಂಬ ರಾಜನೀತಿಗನುಸಾರವಾಗಿ ನಮ್ಮ ಮಹಾಪ್ರಭುಗಳು ದುಷ್ಟಶಿಕ್ಷಣ ಶಿಷ್ಟರಕ್ಷಣರೂಪವಾಗಿ ರಾಜ್ಯವನ್ನು ಪರಿಪಾಲಿಸುತ್ತ ಸಾಕ್ಷಾತ್ ದೇವರೆಂದು ಪ್ರಜೆಗಳಿಂದ ಹೊಗಳಿಸಿಕೊಳ್ಳಲ್ಪಡುತ್ತಾರೆ. ಆದುದರಿಂದಲೇ ಈ ಪ್ರಭುಗಳಕಾಲದಲ್ಲಿ ಮೈಸೂರು ರಾಜ್ಯವು ಭರತಖಂಡದಲ್ಲಿ ಮೊದಲನೆಯ ರಾಜ್ಯವೆನಿಸಿಕೊಂಡಿದೆ. ಸರ್ವಪ್ರಜೆಗಳನ್ನು ಪುತ್ರಭಾವದಿಂದ ಪರಿಪಾಲಿಸುತ್ತಿರುವ ನಮ್ಮ ಶ್ರೀಮನ್ಮಹಾರಾಜರವರಿಗೆ ಶ್ರೀ ಜಗದೀಶ್ವರನು ಚಿರಾಯುರಾರೋಗ್ಯಭಾಗ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮಳವಳ್ಳಿ ತಾಲ್ಲೂಕು ರಾವಣಿಗ್ರಾಮದ ಸಂಜಯ್ಯನೆಂಬ ಆದಿಕರ್ನಾಟಕ ಯುವಕನು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವನು.

ಕರ್ನಾಟಕದ ಏಕೀಕರಣದ ಸಲುವಾಗಿ ಅಖಿಲಕರ್ನಾಟಕದಲ್ಲಿ ಚಳುವಳಿಯು ನಡೆದಿರುವದಷ್ಟೆ! ಆದರೆ ಇದರ ವಿರುದ್ಧವಾಗಿ ಕೊಡಗಿನಲ್ಲೊಂದು ನೂತನ ಸಭೆಯು ಏರ್ಪಟ್ಟಿರುವದು. ಕೊಡಗು ಸಭೆಯ ಪ್ರೋತ್ಸಾಹಕರೇ ಇದಕ್ಕೆ ಮುಂದಾಳುಗಳಾಗಿರುವರು.

ಕಳೆದ ಗುರುವಾರ ಮಧ್ಯಾಹ್ನ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದ ಬ್ರಿಟಿಷ್ ರೆಸಿಡೆಂಟರವರು ಕುದುರೆಗಳ ಜೂಜನ್ನು ನೋಡಲು ಹೋಗಿದ್ದಾಗ್ಯೆ ಅವರ ಜೇಬಿನಲ್ಲಿದ್ದ ಹಣದ ಚೀಲವನ್ನು ಯಾರೋ ಅಪಹರಿಸಿದರಂತೆ! ಅದರಲ್ಲಿ ಸುಮಾರು 70 ರೂಪಾಯಿಗಳು ಇದ್ದುವೆಂದು ತಿಳಿದುಬಂದಿದೆ.

ರಾಜಧಾನಿಯಲ್ಲಿ ಆರಾಧ್ಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಾದಿಗಳ ಅನುಕೂಲ್ಯಕ್ಕಾಗಿ ಕಟ್ಟಿಸಲ್ಪಡುತ್ತಿರುವ ವಿದ್ಯಾರ್ಥಿನಿಲಯದ ವಿಷಯವು ನಮ್ಮ ಪತ್ರಿಕೆಯಲ್ಲಿ ಬೇರೊಂದು ಕಡೆಗೆ ಮುದ್ರಿಸಲ್ಪಟ್ಟಿರುವುದು ಸರಿಯಷ್ಟೆ! ವಿದ್ಯಾಭಿಮಾನಿಗಳಾದ ಪ್ರತಿಯೊಬ್ಬರೂ ಈ ಕಾರ್ಯಕ್ಕೆ ಸಹಾಯಮಾಡಿ ಪುಣ್ಯಭಾಗಿಗಳಾಗಬೇಕೆಂದು ಕೋರುತ್ತೇವೆ.

ಶಿವನಸಮುದ್ರದ ಜಹಗೀರಿಗೆ ಸಂಬಂಧಪಟ್ಟ ಪೂರಿಗಾಲಿ ಕಗ್ಗಲೀಪುರಗ್ರಾಮಗಳನ್ನು ದೇವಾದಾಯಕ್ಕೆಂದು ಮೈಸೂರು ಶ್ರೀಮನ್ಮಹಾರಾಜರು 1829 ರಲ್ಲಿ ಕೊಟ್ಟಿದ್ದು ಈಗಿನ ಜಹಗೀರದಾರರು ಅವುಗಳ ಆಡಳಿತವನ್ನು ಸರಿಯಾಗಿ ನಡೆಯಿಸುವದಿಲ್ಲವೆಂದು ತಿಳಿದು ಸರಕಾರದವರು ಆ ಗ್ರಾಮಗಳ ಆಡಳಿತವನ್ನು ತಾವೇ ವಹಿಸುವಯೋಚನೆ ಮಾಡುತ್ತಿರುವರೆಂದು ವರ್ತಮಾನವಿದೆ.

ಕಳೆದ 15 ನೆಯ ತಾರೀಖಿನದಿವಸ ರಾಜಧಾನಿಯಲ್ಲಿ ನಡೆದ ಕುದುರೆಗಳ ಪಂದ್ಯದಲ್ಲಿ ಒಂದು ಕುದುರೆಯು ಆಕಸ್ಮಿಕವಾಗಿ ಮುಗ್ಗರಿಸಿದುದರಿಂದ ಅದರ ಒಂದು ಕಾಲು ಮುರಿದುದಲ್ಲದೆ ಮೇಲೆ ಕುಳಿತಿದ್ದ ಮನುಷ್ಯನಿಗೂ ಸಹ ಸ್ವಲ್ಪ ಪೆಟ್ಟುತಗಲಿತು. ಪಂದ್ಯವು ಮುಗಿದನಂತರ ಮಾಲಿಕರು ಕುದುರೆಯನ್ನು ಪಿಸ್ತೂಲಿನಿಂದ ಹೊಡೆದು ಕೊಂದುಹಾಕಿದರು. ಆ ಕುದುರೆಯ ಬೆಲೆಯು 12,000 ರೂಪಾಯಿಗಳಂತೆ!

ಶಿಕಾರಿಪುರ ತಾಲೂಕಿನಲ್ಲಿ ದೊಡ್ಡ ಜಮೀನ್ದಾರನಾದ ವಡೇರ ಗುಲಾಂ ಮುಸ್ತಾಫಾಖಾನ್ ಜಾಟೊ ಎಂಬವರನ್ನು ಸುಮಾರು 100 ಜನ ದರವಡೆಖೋರರು ಹಗಲುಹೊತ್ತಿನಲ್ಲಿಯೇ ಅವರ ಹಳ್ಳಿಗೆ ನುಗ್ಗಿ ಕೊಂದುಹಾಕಿರುವರಲ್ಲದೆ ಇವರ ಸಹಾಯಕ್ಕಾಗಿ ಬಂದ ಇಬ್ಬರು ಸೇವಕರನ್ನೂ ಸಹ ಕೊಂದಿರುವರು. ಒಬ್ಬ ಪೋಲೀಸ್ ಕಾನ್‌ಸ್ಟೆಬಲ್ಲನಿಗೆ ತುಂಬಾ ಗಾಯಗಳಾಗಿವೆ? ಪೋಲೀಸರು ದಂಗೆಖೋರರನ್ನು ಹುಡುಕುತ್ತಿರುವರು.

ಈ ತಿಂಗಳ 18 ನೆಯ ತಾರೀಖಿನ ದಿವಸ ದಾವಣಗೆರೆಯಲ್ಲಿ ಹಿಂದೂ ಮಹಮ್ಮದೀಯರಿಗೆ ವಿಶೇಷವಾದ ಬಡೆದಾಟವಾಗಿ 3 ಜನರು ಮರಣಹೊಂದಿದರೆಂದೂ, 40-50 ಜನರು ಪೂರ್ಣ ಗಾಯಗೊಂಡಿರುವರೆಂದೂ, ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಿರುವರೆಂದೂ, ಉಭಯಪಂಗಡದವರಿಗೂ ಬಡೆದಾಟವಾಗುವ ಸಮಯದಲ್ಲಿ ಸಬ್‌ಡಿವಿಜನ್ ಆಫೀಸರೇ ಮೊದಲಾದ ಅಧಿಕಾರಿಗಳೂ, ಹಾಗೂ ಪೋಲೀಸು ಅಧಿಕಾರಿಗಳೂ ಇದ್ದರೆಂದೂ, ಗಲಾಟೆಯು ಶಾಂತವಾಗದಿದ್ದುದರಿಂದ ಪೋಲೀಸರು ಗುಂಡುಗಳನ್ನು ಹಾರಿಸಿದರೆಂದೂ, 19 ನೆಯ ತಾರೀಖಿನ ಬೆಳಿಗ್ಗೆ ಆಸ್ಪತ್ರೆಯ ಸಮೀಪದಲ್ಲಿ ಹಿಂದುಗಳು ಇಬ್ಬರು ಮಹಮ್ಮದೀಯರನ್ನು ಹೊಡೆದು ಅವರಿಗೆ ತುಂಬಾ ಗಾಯಮಾಡಿದರೆಂದೂ, ಕೆಲಜನ ಹಿಂದುಗಳು ಮಹಮ್ಮದೀಯರ ಅಂಗಡಿಗಳಲ್ಲಿಯ ಸಾಮಾನುಗಳನ್ನು ಸುಟ್ಟುಬಿಟ್ಟರೆಂದೂ, ಈ ಹೊಡೆದಾಟದಲ್ಲಿ ಹಿಂದುಗಳಿಗೇನೇ ವಿಶೇಷ ಅಪಾಯ ಸಂಭವಿಸಿರುವದೆಂದೂ, ಹಿಂದುಗಳು ಮುಸಲ್ಮಾನರ ಎರಡು ಮಶೀದಿಗಳಿಗೆ ನುಗ್ಗಿ ಅಲ್ಲಿದ್ದ ಸಾಮಾನುಗಳನ್ನೆಲ್ಲಾ ಸುಟ್ಟು ಅಸಭ್ಯಕೃತಿಗಳನ್ನು ಮಾಡಿರುವರೆಂದೂ, ಪಟ್ಟಣವೆಲ್ಲಾ ಬೂದಿಯ ರಾಶಿಯಿಂದ ತುಂಬಿಹೋಗಿರುವದೆಂದೂ, ಪುರಪ್ರಮುಖರು ಉಭಯ ಪಂಗಡದವರಲ್ಲಿ ಶಾಂತಿಯನ್ನು ನೆಲಗೊಳಿಸುವ ಕಾರ್ಯವನ್ನು ಕೈಗೊಂಡಿರುವರೆಂದೂ, ಈ ಹೊಡೆದಾಟದ ಆಮೂಲಾಗ್ರಕಾರಣಗಳನ್ನು ತಿಳಿದುಕೊಳ್ಳುವದಕ್ಕೋಸ್ಕರ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರೂ ಮತ್ತು ಚಿತ್ರದುರ್ಗ ಡಿ|| ಡೆಪ್ಯುಟಿಕಮೀಶನರ್ ಸಾಹೇಬರವರೂ 19 ನೆಯ ತಾರೀಖಿನ ಪ್ರಾತಃಕಾಲ ದಾವಣಗೆರೆಗೆ ಆಗಮಿಸಿದರೆಂದೂ, 20ನೆಯ ತಾರೀಖಿನ ದಿವಸ ಮೃತರಾದ ಇಬ್ಬರು ಹಿಂದುಗಳ ಶವಗಳನ್ನು ಹಿಂದುಗಳು ಹೊತ್ತುಕೊಂಡು ಹೋಗುತ್ತಿರುವಾಗ್ಯೆ ಒಬ್ಬ ಮಹಮ್ಮದೀಯನು ಎದುರಿಗೆ ಬರಲು, ಹಿಂದುಗಳು ಅವನ ತಲೆಯು ಚೂರುಚೂರಾಗುವಂತೆ ಹೊಡೆದರೆಂದೂ, ಪಟ್ಟಣದಲ್ಲಿ ಇನ್ನೂ ಶಾಂತಿಯು ನೆಲೆಗೊಂಡಿಲ್ಲವೆಂದೂ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಅಮಾನುಲ್ಲಾಖಾನರು 22 ನೆಯ ತಾರೀಖಿನ ದಿವಸ "ಎಸ್. ಎಸ್. ಮುಲ್ತಾನ" ಎಂಬ ಹಡಗವನ್ನೇರಿ ಇಟಲಿಗೆ ಪ್ರಯಾಣಮಾಡಿದರು.

ಅಮೇರಿಕೆಯ ಪಶ್ಚಿಮ ಇಂಡಿಯಾ ದ್ವೀಪಗಳಲ್ಲಿ 5000 ಜನ ದೊಂಬಿಗಾರರು ಕೇರೋಪಟ್ಟಣವನ್ನು ಮುತ್ತಿ ಸೈನ್ಯಾಧಿಪತಿಯನ್ನು ಬಹಳ ಗಾಯಪಡಿಸಿರುವರು!

ಸ್ಪಿರ್‌ಬನೋವಿಸೆಕಿಯಪೋಲ್ ಎಂಬವರು ಲಕೋಟೆಯನ್ನು ಒಡೆಯದೆ ಅದರೊಳಗಿನ ವಿಷಯವನ್ನು ಹೇಳುವರಂತೆ! ಇವರನ್ನು ಪ್ಯಾರಿಸ್ಸಿನಲ್ಲಿ ಪರೀಕ್ಷಿಸಬೇಕೆಂದಿರುವರು.

ಇಂಗ್ಲೆಂಡಿನಿಂದ ಬರುತ್ತಿರುವ ಪ್ರಥಮ ಭಾರತೀಯ ವೈಮಾನಿಕನಾದ ಮಿ|| ಕಬಾಲಿಯವರಿಗೆ ಬೊಂಬಾಯಿ ಮುನಸಿಪಾಲಿಟಿಯವರು ಸ್ವಾಗತವನ್ನೀಯಬೇಕೆಂದು ನಿರ್ಧರಿಸಿರುವರು.

ಇಂಗ್ಲೆಂಡಿನ ಕ್ಲೇರೂಕೌಂಟಿಯಲ್ಲಿ "ಒಸ್‌ಲಿವರ್" ಎಂಬ ಪ್ರಸಿದ್ಧ ಪತ್ತೇದಾರನು ಒಂದು ಪೆಟ್ಟಿಗೆಯನ್ನು ಶೋಧಿಸಲು ತೆರೆಯಲು ಒಳಗಿದ್ದ ಬಾಂಬುಗಳು ಸಿಡಿದು ಚೂರುಚೂರಾಗಿ ಹೋದನು.

ಅಫ್ಘಾನಿಸ್ಥಾನದ ಸ್ಥಿತಿಯು ಬಹು ವಿಷಮವಾಗಿದೆ. ಬಚ್ಚಾ-ಇ-ಸಾಕನು ನಾದಿರ್‌ಖಾನರೊಂದಿಗೆ ಸಂಧಾನ ನಡೆಸುತ್ತಿರುವನಂತೆ! ಅಲ್ಲದೆ ಇವರೀರ್ವರೂ ಬ್ರಿಟಿಷರ ಸಹಾಯವನ್ನು ಬೇಡಿರುವರಂತೆ!

ವಿಲಾಯತಿಯಲ್ಲಿಯ ಕೂಲಿಕಾರ ಪಕ್ಷದ "ನ್ಯೂ ಲೀಡರ್" ಎಂಬ ಪತ್ರಿಕೆಯು ಭಾರತಮಂತ್ರಿಗಳಾದ ವೆಜ್ಜವುಡ್‌ಬೆನ್ನರಿಗೆ ವಿಮಾರತ್ತಿನ ಖಟ್ಲೆಯನ್ನು ನಿಲ್ಲಿಸಿಬಿಡುವಂತೆ ಬುದ್ಧಿವಾದ ಹೇಳಿರುವದು.

ಮಸೊಲ್ ನಗರದಲ್ಲಿ 120 ವರ್ಷವಾಗಿದ್ದ ಒಬ್ಬ ವೃದ್ಧನು ಮರಣಹೊಂದಿದನು. ಅವನು ನಾಲ್ವರು ಹೆಂಡರನ್ನು ಮಾಡಿಕೊಂಡಿದ್ದು 100 ಜನ ಮಕ್ಕಳು ಮರಿಮಕ್ಕಳು ಇರುವರಂತೆ! ಕೊನೆಯ ಮಗನಿಗೆ 10 ವರುಷವಂತೆ!

ಕಲ್ಕತ್ತೆಯ ಪ್ರಿಯನಾಥಬಾನರ್ಜಿ ಎಂಬ ಧರ್ಮಾತ್ಮರು ಒಂದು ಲಕ್ಷ ರೂಪಾಯಿ ಬೆಲೆಬಾಳುವ ತಮ್ಮ ಆಸ್ತಿಯನ್ನು ಹಿಂದೂ ವಿಧವೆಯರ ಕಷ್ಟನಿವಾರಣೆಗಾಗಿ ಉಪಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುವರು. ಸ್ತುತ್ಯ!

ಮುಲ್ಲಾ ಮಹಮ್ಮದ್ ರಫೀಕ್ ಎಂಬವನು ಮಶೀದಿಯಲ್ಲಿ 9 ವರ್ಷದ ಹುಡುಗಿಯ ಮೇಲೆ ಅತ್ಯಾಚಾರ ನಡೆಯಿಸಿದನೆಂದು ಕರಾಚಿಯ ಮ್ಯಾಜಿಸ್ಟ್ರೇಟರು ಅವನಿಗೆ 3½ ವರ್ಷ ಕಠಿಣಶಿಕ್ಷೆಯನ್ನು ವಿಧಿಸಿದರು. ಯೋಗ್ಯಶಾಸನ!

ಬೊಂಬಾಯಿ ಪಟ್ಟಣದ ಗುಪ್ತಪೋಲೀಸ್ ಕಚೇರಿಗೆ ಕಳೆದ ಶುಕ್ರವಾರ ರಾತ್ರಿ ಕಳ್ಳರು ಬಿದ್ದು ಕೆಲವು ಬೆಲೆಯ ಮಾಲುಗಳನ್ನು ಅಪಹರಿಸಿಕೊಂಡು ಹೋಗಿರುವರಂತೆ! ಪೋಲೀಸಕಚೇರಿಯಲ್ಲಿ ಕಳವುಮಾಡಿದ ಇವರೇ ನಿಜವಾದ ಕಳ್ಳರಲ್ಲವೇ?

ಇಂಡಿಯಾ ಕೌನ್ಸಿಲಿನ ಮೆಂಬರಾಗಿರುವ ಡಾ|| ಪರಾಂಜಪೆಯವರ ಪುತ್ರಿಯು ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಗಣಿತಶಾಸ್ತ್ರದಲ್ಲಿ ತೇರ್ಗಡೆ ಹೊಂದಿರುವಳು. ಇವರಿಗೆ ಈ ಪರೀಕ್ಷೆಯಲ್ಲಿ ಹಿಂದೂ ಸ್ತ್ರೀಯರು ಯಾರೂ ತೇರ್ಗಡೆಯಾಗಿರುವದಿಲ್ಲವಂತೆ!

ಅಮೇರಿಕೆಯ ಪರಿಶೋಧಕನೊಬ್ಬನು 28 ಸಾವಿರ ಅಡಿ ಎತ್ತರವುಳ್ಳ ಹಿಮಾಲಯದ ಕಾಂಚನಗಂಗಾ ಶಿಖರವನ್ನು 25 ಸಾವಿರ ಅಡಿಗಳವರೆಗೆ ಹತ್ತಿ ಶಿಖರವು 3 ಸಾವಿರ ಅಡಿಯಿರುವಾಗ ಆಹಾರ ಮತ್ತು ವಾಯುವಿನ ಅಭಾವದಿಂದ ಮಡಿದನಂತೆ!

ರಷ್ಯಾದೇಶದ ಮಾಸ್ಕೋಪಟ್ಟಣದಲ್ಲಿ ನಾಸ್ತಿಕರ ಮಹಾಸಭೆಯೊಂದು ನಡೆಯುತ್ತಿರುವದು. ಇದಕ್ಕೆ 800 ಜನ ಪ್ರತಿನಿಧಿಗಳು ಬಂದಿರುವರು. ದೇವರೇ ಇಲ್ಲವೆಂದು ಸ್ಥಾಪಿಸುವದೇ ಈ ಸಭೆಯ ಮುಖ್ಯೋದ್ದೇಶವಂತೆ! ಬಹು ಘನವಾದ ಆಲೋಚನೆ ಮಾಡಿದ್ದಾರೆ.

ಅಮೇರಿಕಾ ದೇಶದ ಹೆನ್ರಿಫೋರ್ಡ್‌ರವರು ಇಂಗ್ಲೆಂಡಿನಲ್ಲಿಯೂ ಸಹ ಒಂದು ಮೋಟಾರ್‌ಕಾರ್ಖಾನೆಯನ್ನು ಸ್ಥಾಪಿಸಲು 300 ಎಕರೆ ಜಮೀನನ್ನು ಕೊಂಡುಕೊಂಡಿರುವರು. ಆ ಕಾರ್ಖಾನೆಯಲ್ಲಿ ಒಂದು ದಿನಕ್ಕೆ 300 ಮೋಟಾರುಗಳು ತಯಾರಾಗುವವಂತೆ!

12 ನೆಯ ತಾರೀಖಿನ ರಾತ್ರಿ ರೂಪನಾರಾಯಣಪುರದ ರೈಲ್ವೆ ಸ್ಟೇಷನ್ನಬಳಿ 12 ಜನ ಢಕಾಯಿತಿಗಳು ಆಯುಧಪಾಣಿಗಳಾಗಿ ಬಂದು ರೈಲನ್ನು ಮುತ್ತಿ ಮೂವರು ಪ್ರಯಾಣಿಕರನ್ನು ಹೊಡೆದು 700 ರೂ. ಗಳನ್ನು ಹೊತ್ತುಕೊಂಡು ಹೋದರಂತೆ! ಕಳ್ಳರೆಂದರೆ ಇವರಿಗೆ ಸಲ್ಲಬೇಕು.

ಜಾಕೋಬಾಬಾದಿನಲ್ಲಿ ಕೆಲವು ದಿನಗಳ ಹಿಂದೆ ಮುಸಲ್ಮಾನನೊಬ್ಬನು ಹತ್ತುಜನ ಹಿಂದುಗಳನ್ನು ಗುಂಡಿನಿಂದ ಹೊಡೆದು ಕೊಂದ ವಿಷಯದಲ್ಲಿ ಪೋಲೀಸರು ಇದುವರೆಗೂ ಯಾವ ವಿಚಾರಣೆಯನ್ನೂ ನಡೆಯಿಸದೆ ಇದ್ದುದರಿಂದ ಊರಲ್ಲೆಲ್ಲ ಪೂರ್ಣ ಹರತಾಳವನ್ನಾಚರಿಸಿರುವರು.

ಅಸ್ಸಾಂ ಪ್ರಾಂತದಲ್ಲಿ ಅಪಾರವಾದ ಮಳೆಯು ಸುರಿದು ನದಿಗಳಲ್ಲಿ ಪ್ರವಾಹವು ಹೆಚ್ಚಿರುವುದು. ಕಲ್ಕತ್ತೆಯಿಂದ ಚಿಟಿಗಾಂಗಿಗೆ ಹೋಗಿಬರುವ ರೈಲ್ ಮಾರ್ಗವು ಕಿತ್ತುಹೋಗಿದೆ. ಇದನ್ನು ತಿಳಿಯದೆ ಬರುತ್ತಿದ್ದ ಒಂದು ರೈಲುಗಾಡಿಯ ಇಂಜನ್ನು ಉರುಳಿಬಿದ್ದು ಆರುಜನರು ಮೃತಪಟ್ಟರು. ಬೇಗನೆ ಪ್ರವಾಹವು ಇಳಿಯದಿದ್ದರೆ ಆ ಡಿಸ್ಟ್ರಿಕ್ಟಿನ ಟೀ ತೋಟಗಳಿಗೆ ವಿಶೇಷನಷ್ಟವು ಸಂಭವಿಸುವದಂತೆ!

ಅಮೇರಿಕಾದೇಶದ ರೇಕೀಚ್ ಎಂಬ ಹೆಸರಿನ 28 ವರ್ಷದ ಮೋಟಾರ್‌ಡ್ರೈವರನು 300 ಮೈಲುಗಳ ಮೋಟಾರ ಜೂಜಿನಲ್ಲಿ ಮೋಟಾರು ಮುರಿದು ಮೃತನಾದನು. ಈ ಮೊದಲು ಇವನು 500 ಮೈಲುಗಳ ಜೂಜಿನಲ್ಲಿ ಪ್ರಥಮಸ್ಥಾನವನ್ನು ಪಡೆದು ಮೂರುಲಕ್ಷ ರೂಪಾಯಿಗಳ ಇನಾಮು ಪಡೆದಿದ್ದನು. ಈ ಜೂಜನ್ನು ನೋಡಲು 1,60,000 ಜನರು ನೆರೆದಿದ್ದರಂತೆ! ಇವನು ಘಂಟೆಗೆ 99½ ಮೈಲುಗಳ ವೇಗದಿಂದ ಮೋಟಾರು ನಡೆಯಿಸಿದನಂತೆ!

ಕುಂಭಕೋಣದ ನಾಚಿಯಾರ್ ಕೋಯಿಲ್ ಬೀದಿಯಲ್ಲಿ ಸೆಮುಪಡಯಾಚಿಯೆಂಬ 70 ವರ್ಷದ ಮುದುಕನಿಗೂ ಅವನ ಮಗನಿಗೂ ಜಗಳವಾಗಿ ಮಗನು ತಂದೆಯನ್ನು ಕೊಂದುಹಾಕಿದನು. ತಂದೆಯು ಮಗಳಿಗೆ ಗೊತ್ತುಮಾಡಿದ್ದ ವರನನ್ನು ಮಗನು ಸಮ್ಮತಿಸದಿದ್ದುದೇ ಈ ಕೊಲೆಗೆ ಕಾರಣವಂತೆ! ಈ ಕಾಲದಲ್ಲಿ ಮಕ್ಕಳ ಮಾತಿಗೆ ಬೆಲೆಕೊಡುವುದೇ ಒಳ್ಳೆಯದು; ಗುರುಭಕ್ತಿ, ದೇವಭಕ್ತಿ, ಮಾತೃಭಕ್ತಿ, ಪಿತೃಭಕ್ತಿ, ಶೂನ್ಯವಾದ ಕಾಲವಿದು!

ಧಾರವಾಡ ಡಿ|| ಗದಗತಾಲೂಕು ಲೋಕಲ್‌ಬೋರ್ಡಿನ ಅಧ್ಯಕ್ಷರೂ ದೊಡ್ಡಜಮೀನ್ದಾರರೂ, ರಾಜಕಾರಣಪಟುಗಳೂ, ಜನಾನುರಾಗಿಗಳೂ, ಪರೋಪಕಾರನಿರತರೂ, ದಯಾರ್ದ್ರಹೃದಯರೂ, ಸತ್ಯಸಂಧರೂ, ಸುಪ್ರಸಿದ್ಧರೂ ಆದ ಶ್ರೀಮಂತ ವೀರಪ್ಪನವರು ಚವಡಿ ಇವರಿಗೆ ಇಂಡಿಯಾಸರ್ಕಾರದವರು ಪಂಚಮ ಜಾರ್ಜ್ ಬಾದಶಹರ ಜನ್ಮಿಸಿದ ದಿವಸ "ರಾವಸಾಹೇಬ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರೆಂಬ ವಿಷಯವನ್ನು ತಿಳಿದು ಸಂತೋಷಿಸುತ್ತೇವೆ.

ಜೂನ್ 21 ನೆಯ ತಾರೀಖಿನ ದಿವಸ ಮಹಾತ್ಮಾ ಗಾಂಧಿಯವರು ಸಂಯುಕ್ತ ಸಂಸ್ಥಾನಕ್ಕೆ ಸೇರಿದ "ಅಲ್ಮೋರಾ" ದಲ್ಲಿ ಮ್ಯುನಿಸಿಪಾಲಿಟಿಯವರು ಒಪ್ಪಿಸಿದ ಅಡ್ರೆಸ್ಸನ್ನು ಸ್ವೀಕರಿಸಿ ಮೋಟಾರಿನಿಂದ ಹಿಂತಿರುಗಿ ಬರುವಾಗ್ಯೆ ದಾರಿಯಲ್ಲೊಬ್ಬನು ಮೋಟಾರಿಗೆ ಸಿಕ್ಕಲು ಮಹಾತ್ಮರು ಕೂಡಲೆ ಮೋಟಾರಿನಿಂದ ಕೆಳಕ್ಕೆ ಹಾರಿ ಅವನನ್ನು ಆಸ್ಪತ್ರೆಗೆ ಸಾಗಿಸಿದರೆಂದೂ ಆದರೂ ಅವನು ತುಂಬಾ ಅಪಾಯಸ್ಥಿತಿಯಲ್ಲಿರುವನೆಂದೂ ಇದಕ್ಕಾಗಿ ಮಹಾತ್ಮರು ವ್ಯಸನದಿಂದ ಉಪವಾಸವ್ರತವನ್ನಾಚರಿಸುತ್ತಿರುವರೆಂದೂ ತಿಳಿದುಬರುತ್ತದೆ.

ಪುಣೆಯ ಭವಾನೀ ಪೇಟೆಯಲ್ಲಿರುವ ಪದ್ಮಸಾಲಿ ನರಸಯ್ಯ ಎಂಬವರ ಮನೆಯಲ್ಲಿ 3 ವರ್ಷದ ಹುಡುಗಿಗೆ ಕೆಲವು ದಿವಸಗಳಿಂದ ಕಾಯಿಲೆಯಾಗಿದ್ದು ಕಳೆದ 20 ನೆಯ ತಾರೀಖಿನ ದಿವಸ ನಿಶ್ಚೇಷ್ಟಿತಳಾಗಿ ಬಿದ್ದಿತು. ಮನೆಯವರು ಇದನ್ನು ನೋಡಿ ಹುಡುಗಿಯು ಸತ್ತಿತೆಂದು ತಿಳಿದು ಸ್ಮಶಾನಕ್ಕೊಯ್ದು ಅಗ್ನಿಸಂಸ್ಕಾರವನ್ನು ಮಾಡಬೇಕೆನ್ನುವ ಸಮಯದಲ್ಲಿ ಕೈಕಾಲುಗಳಲ್ಲಿ ಸ್ವಲ್ಪ ಚಲನೆಯುಂಟಾಯಿತು. ಹತ್ತಿರಿದ್ದವರು ಇದನ್ನು ನೋಡಿ ಚಕಿತರಾಗಿ ಬಾಯಲ್ಲಿ ಸ್ವಲ್ಪ ನೀರನ್ನು ಬಿಡಲು ಕೆಲಹೊತ್ತಿನಮೇಲೆ ಎದ್ದು ಕುಳಿತು ಮಾತನಾಡಿತಂತೆ! ಮಗುವು ಚಿರಾಯುವಾಗಲಿ.

ಧಾರವಾಡಕ್ಕೆ ಸಮೀಪದಲ್ಲಿರುವ ಸೋಮೇಶ್ವರದಲ್ಲಿ ಸ್ಮಾರ್ತಬ್ರಾಹ್ಮಣರು ಯಜ್ಞಕ್ಕಾಗಿ 24 ಕುರಿಗಳನ್ನು ಕೂಡಿಹಾಕಿರುವರಂತೆ! ಸುಧಾರಿಸಿದ ಜನಾಂಗವೇ ಹೀಗೆ ಪ್ರಾಣಿಹಿಂಸೆಯನ್ನು ಮಾಡಲು ಪ್ರಯತ್ನಿಸಿದರೆ ಅಸುಧಾರಕರಾದ ಶೂದ್ರರು ಪ್ರಾಣಿಹಿಂಸೆಯನ್ನು ಬಿಡುವ ಬಗೆಯಂತು? ಒಟ್ಟಿಗೆ ಭರತಖಂಡದಲ್ಲಿ ಅಹಿಂಸಾತತ್ವವು ಎಂದು ನೆಲೆಗೊಳ್ಳುವದೋ ಆ ಕಾಲವೇ ಸುಕಾಲನೆಂದೂ ಆ ಕಾಲವನ್ನು ನೋಡುವ ಪುರುಷರೇ ಪುಣ್ಯಪುರುಷರೆಂದೂ ಹೇಳಬೇಕಾಗಿದೆ. ಮೇಲ್ಕಂಡ ಯಜ್ಞಚಾಲಕರು ತಾವು ಕೈಕೊಂಡಿರುವ ಈ ಹಿಂಸಾಕಾರ್ಯವನ್ನು ದೂರಮಾಡಬೇಕೆಂದು ಆಶಿಸುತ್ತೇವೆ.

ಹಿಂದೂಜನರಿಗೆ ದೊರೆಯಲಶಕ್ಯವಾದ ಗವ್ಹರ್ನರ ಪದವಿಯನ್ನನುಭವಿಸಿ ಇಂಡಿಯಾದೇಶದಲ್ಲಿ ಅತ್ಯಂತ ಪ್ರಸಿದ್ಧರಾಗಿ ಹೋದ ಲಾರ್ಡ್ ಸಿಂಹರ ಪುತ್ರಿ "ರಮಲಿ" ಎಂಬವಳನ್ನು ಕಲಕತ್ತಾ ಪಟ್ಟಣದಲ್ಲಿ ಸುಪ್ರಸಿದ್ಧರಾದ ಬ್ಯಾರಿಸ್ಟರ್ ಗುಪ್ತ ಎಂಬವರು ಮದುವೆಯಾಗಿದ್ದರು ಆದರೆ ಗುಪ್ತರವರು ತಮ್ಮ ಪತ್ನಿಯು ದಿಲ್ಲಿ ಅಸೆಂಬ್ಲಿಯ ಮೆಂಬರರಾದ ಗೋಸ್ವಾಮಿಯವರ ಸಹವಾಸವನ್ನು ಮಾಡಿರುವುದರಿಂದ ಅವಳ ಮತ್ತು ತಮ್ಮ ವಿವಾಹಸಂಬಂಧವನ್ನು ರದ್ದುಪಡಿಸಬೇಕೆಂದು ಕಲ್ಕತ್ತಾ ಹೈಕೋರ್ಟಿನಲ್ಲಿ ದಾವೆಯನ್ನು ತಂದಿರುವರು. ಗೋಸ್ವಾಮಿಯವರು ಈ ಆರೋಪವು ಸುಳ್ಳಿರುವದೆಂದೂ, ತಮ್ಮನ್ನು ಅವಮಾನಗೊಳಿಸುವದಕ್ಕಾಗಿ ಈ ರೀತಿ ಮಾಡಿರುವರೆಂದೂ ಕೈಫಿಯತ್ತನ್ನು ಕೊಟ್ಟಿರುವರು. ಆದರೆ ಗುಪ್ತರು ಇವರಿಬ್ಬರಿಗೂ ಸಂಬಂಧವಿರುವ ವಿಷಯದಲ್ಲಿ ಆಸ್ಟ್ರೇಲಿಯಾ, ಫ್ರಾನ್ಸ್, ಸ್ವಿಟ್ಜರ್‌ಲೆಂಡ್ ಮೊದಲಾದ ದೇಶಗಳಲ್ಲಿ ಸಾಕ್ಷಿಗಳಿರುವದರಿಂದ ಅವರನ್ನು ಕರೆಯಿಸಬೇಕೆಂದು ಕೋರ್ಟಿಗೆ ವಿನಂತಿಮಾಡಿಕೊಳ್ಳಲು ಅದಕ್ಕೆ ಕೋರ್ಟಿನವರು ಒಪ್ಪಿ ಹುಕುಂಮಾಡಿರುವರು. ದೊಡ್ಡ ದೊಡ್ಡ ಮನೆತನಗಳಲ್ಲಿ ಇಂಥ ಸ್ತ್ರೀಯರು ಜನ್ಮಿಸಿದರೆ ಆ ಮನೆತನಗಳ ಪುಣ್ಯಕ್ಕೆ ಬೆಲೆಯೇ ಇಲ್ಲವೆಂದು ಹೇಳಬಹುದಲ್ಲವೇ?

ವಿಮಾರತ್ತಿನ ವಿಚಾರಣೆಯು ಪ್ರಾರಂಭವಾಗಿರುವದು. ಅಪರಾಧಿಗಳನ್ನು ಬಿಗಿ ಗತ್ತಿಯ ಪಹರೆಯಿಂದ ಎರಡು ಮೋಟಾರಿನಲ್ಲಿ ತಂದರು. ಕೋರ್ಟಿಗೆ ಬಂದ ಕೂಡಲೆ ಅಪರಾಧಿಗಳು "ಸಾಮ್ರಾಜ್ಯಪ್ರಭುತ್ವದ ಅಧಃಪತನವಾಗಲಿ; ರಾಜ್ಯಕ್ರಾಂತಿಯು ಅಭ್ಯುದಯವಾಗಲಿ; ರೈತರಿಗೆ ಜಯವಾಗಲಿ" ಎಂದು ಕೂಗಿದರು. ತಾವು ರೈತರ ಪಕ್ಷದವರೆಂದು ತೋರಿಸಲು ಮೈಮೇಲೆ ಸುತ್ತಿಗೆ ಮತ್ತು ಕುಡುಗೋಲುಗಳ ಗುರ್ತಿನ ಪಟ್ಟಿಯನ್ನು ಧರಿಸಿದ್ದರು. ಸರಕಾರದ ಪಕ್ಷದ ವಕೀಲರಾದ ಬ್ಯಾರಿಸ್ಟರ್ ಜೇಮ್ಸ್‌ಸಾಹೇಬರು "ಅಪರಾಧಿಗಳು ಪಂಚಮಜಾರ್ಜ್‌ಚಕ್ರವರ್ತಿಗಳ ರಾಜ್ಯವನ್ನೇ ಬುಡಮೇಲುಮಾಡುವ ಉದ್ದೇಶವನ್ನಿಟ್ಟುಕೊಂಡಿರುವರೆಂದೂ, ಮಹಾತ್ಮಾಗಾಂಧಿ, ಲಾಲಾಲಜಪತರಾಯ ಮುಂತಾದವರು ಹುಚ್ಚರೂ, ವಿಶ್ವಾಸಘಾತಿಕರೆಂದು ಅಪರಾಧಿಗಳು ಹೇಳುವರೆಂದೂ, ಇವರು ರಷ್ಯಾದಲ್ಲಿರುವಂತೆ ಬೋಲ್ಷೆವಿಕ್ ರಾಜ್ಯಸ್ಥಾಪನ ಮಾಡಲು ಯತ್ನಿಸುವರೆಂದೂ, ಕೇವಲ ನಾಸ್ತಿಕರಾದ ಇವರ ತತ್ವವು ಬೇರೂರುವದಾದರೆ ಪ್ರಪಂಚದಲ್ಲಿ ಎಲ್ಲಾ ಮತಧರ್ಮಗಳು ನಾಶವಾಗುವವೆಂದೂ, ಇಂಗ್ಲೆಂಡಿನಲ್ಲಿ ಯಾವ ಮಂತ್ರಿಗಳಲ್ಲಿಯೂ ಇವರಿಗೆ ನಂಬಿಕೆಯಿಲ್ಲವೆಂದೂ ಬಹಳ ಹೊತ್ತು ಭಾಷಣಮಾಡಿದರು. ಅಪರಾಧಿಗಳ ಕಡೆಯ ವಕೀಲರು ನಡುನಡುವೆ ಇವರ ಭಾಷಣವನ್ನು ಆಕ್ಷೇಪಿಸುತ್ತಿದ್ದರು. ವಿಚಾರಣೆಯಕಾಲಕ್ಕೆ ಪಂಡಿತ ಜವಾಹಿರಲಾಲ, ಡಾಕ್ಟರ್ ಅನ್ಸಾರಿಯವರೇ ಮೊದಲಾದ 50 ಜನ ಪ್ರಮುಖರು ಹಾಜರಿದ್ದರು. ಅಪರಾಧಿಗಳಲ್ಲಿ ಹೆಚ್ಚು ಜನರು ಕಲಕತ್ತೆಯವರಾದ್ದರಿಂದ ವಿಚಾರಣೆಯನ್ನು ವಿಮಾರತ್ತಿನಲ್ಲಿ ನಡೆಯಿಸಕೂಡದೆಂದು ಮಿ|| ನರಿಮನ್ನರು ತಕರಾರು ಹಾಕಿದರು. ಮ್ಯಾಜಿಸ್ಟ್ರೇಟರು ಅದನ್ನು ಅಂಗೀಕರಿಸಲಿಲ್ಲ. ಅಪರಾಧಿಗಳು ತಮ್ಮ ಪಕ್ಷ ಹಿಡಿದು ವಾದಿಸಲು ಇಂಗ್ಲೆಂಡಿನ ಕೂಲಿಕಾರ ಪಕ್ಷದ ಮುಂದಾಳುಗಳಾದ ಬ್ಯಾರಿಸ್ಟರ್ ಹೋಲ್‌ಫೋರ್ಡ್‌ನೈಟ್ ಎಂಬವರನ್ನು ಕರೆಯಿಸಬೇಕೆಂದಿರುವರು.

ನೋಟೀಸ್.

ಈ ಮೂಲಕ ಸರ್ವರಿಗೂ ತಿಳುಹಿಸುವದೇನಂದರೆ.—ನನ್ನ ಮಗನಾದ ಬಸವರಾಜಯ್ಯ ಎಂಬಾತನು ೨ ತಿಂಗಳಹಿಂದೆ ವಿಕ್ಷಿಪ್ತತೆಯಿಂದ ದೇಶಾಂತರ ಹೋಗಿರುತ್ತಾನೆ. ಈತನಿಗೆ ೨೧ ವರ್ಷ, ಕೆಂಪುಬಣ್ಣ ಕಿವಿಯಲ್ಲಿ ರುದ್ರಾಕ್ಷಿಮುರವು. ನಿಲುವು ಎತ್ತರ, ಎರಡು ಮುಂಗೈಹರಡುಗಳಮೇಲೆ ಹುಚ್ಚೆ ನವೆಯಿಂದ ಸುಟ್ಟಕಲೆಗಳಿರುತ್ತವೆ. ಈತನಿಗೆ ಕಾವ್ಯಾದಿಸಾಹಿತ್ಯ ಮತ್ತು ಪೇಟಿ ಬಾರಿಸುವುದು ಹಾಡುವುದು ಮುಂತಾಗಿ ಸಂಗೀತ ಅಭ್ಯಾಸವಿರುತ್ತದೆ. ಈ ಚಹರೆಯುಳ್ಳ ನನ್ನ ಮಗನು ಯಾರಿಗಾದರೂ ಕಂಡು ಬಂದಲ್ಲಿ ಈ ಕೆಳಗಿನ ವಿಳಾಸಕ್ಕೆ ದಯಮಾಡಿ ತಿಳುಹಿಸಿ ಪುತ್ರದಾನದ ಪುಣ್ಯಕ್ಕೆ ಭಾಗಿಗಳಾಗಬೇಕೆಂದು ಹಾರೈಸುವ,

ತಮ್ಮ

ಅಯ್ಯಶಾಸ್ತ್ರಿ ಸಂಸ್ಥಾನ ಜವಳಗೇರಿಮಠ,

ಜಿಲ್ಲಾ ರಾಯಚೂರು, ಪೋಸ್ಟು ಜವಳಗೇರಿ.

ವಿದ್ಯಾರ್ಥಿನಿಲಯಕ್ಕೆ ಸಹಾಯ.

ಮೈಸೂರು ರಾಜಧಾನಿಯಲ್ಲಿ ವೀರಶೈವ ಗುರುವರ್ಗದವರ "ಆರಾಧ್ಯರ" ವೈದಿಕ ಸಂಸ್ಕೃತಾದಿ ವಿದ್ಯಾಭ್ಯಾಸಕ್ಕೋಸ್ಕರ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸುವ ಪ್ರಯತ್ನವು ನಡೆದಿದ್ದು ಅರ್ಧಕೆಲಸವಾಗಿದೆ, ದ್ರವ್ಯಾಭಾವದಿಂದ ಮುಂದಿನ ಕೆಲಸವು ನೆರವೇರದೆ ಹಾಗೆಯೇ ನಿಂತಿರುವದು. ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆ. ಟಿ. ಸಿ. ಐ. ಇ., ರವರು ಈ ವಿದ್ಯಾರ್ಥಿನಿಲಯದ ಸದುದ್ದೇಶವನ್ನು ಕಂಡು ಸಂತುಷ್ಟರಾಗಿ ಈ ನಿಲಯಕ್ಕೆ ಸಮಸ್ತ ವೀರಶೈವರು ಸಹಾಯಮಾಡಬೇಕೆಂದು ಕೋರಿರುವರು. ಅವರು ಕೊಟ್ಟಿರುವ ಪತ್ರವು ಈ ಕೆಳಗೆ ಮುದ್ರಿಸಲ್ಪಟ್ಟಿದೆ. ಅದನ್ನು ಸರ್ವರೂ ಓದಿ ನೋಡಿ ಈ ಪುಣ್ಯಕಾರ್ಯಕ್ಕೆ ಶಕ್ತ್ಯನುಸಾರ ದ್ರವ್ಯಸಹಾಯವನ್ನು ಮಾಡಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

From Mysore 18-6-29.

RAJASABHABHUSHANA DEWAN BAHADUR SIR. K. P. PUTTANNA CHETTY, KT., C.I.E.

The "Aradhya" Veerasaivas of Mysore are building a Students' Home for the Students of their Community in Mysore City. The Building has been started and has made some progress. Further progress is delayed by want of funds. They have appealed to the general public of the Veerasaiva Community for liberal support to the Scheme and I have much pleasure in Supporting the request which I hope, will meet a liberal response.

(Sd) K. P. Puttanna Chetty.

ಮೈಸೂರು, 18-6-29

ರಾಜಸಭಾಭೂಷಣ ದಿವಾನ್ ಬಹದ್ದೂರ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆ. ಟಿ. ಸಿ. ಐ. ಇ., ರವರ ಇಂಗ್ಲೀಷಪತ್ರದ ಕನ್ನಡ ಭಾಷಾಂತರ—

ರಾಜಧಾನಿಯಲ್ಲಿ "ಆರಾಧ್ಯ" ವೀರಶೈವರು ತಮ್ಮ ಪಂಗಡದ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿಭವನ (Students Home) ವನ್ನು ಕಟ್ಟಿಸುತ್ತಿರುವರು. ...

ಕೆ. ಪಿ. ಪುಟ್ಟಣ್ಣಶೆಟ್ಟಿ.

ಹಣ ಕಳುಹಿಸುವ ಅಡ್ರೆಸ್—
ಪಂಡಿತ ಕೆ. ಸಿ. ನಂಜುಂಡಾರಾಧ್ಯರು,
ಡೋರ್ ನಂಬರು 2900
... ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು.

ಬಳಗಾನೂರು ಶಂಕರದೇವರ ಮಠದ ಗುರು ಪಟ್ಟಾಧಿಕಾರ ಮಹೋತ್ಸವವು.

...

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು.

ಶ್ರೀ ಜಗದ್ಗುರು ಕೇದಾರಮಹಾಸ್ವಾಮಿಗಳ ಸರ್ಕೀಟು.

...

ವೇ|| ಸಿದ್ಧಲಿಂಗಯ್ಯನವರು, ಹಿರೇಮಠ ಕಟ್ಟಿಮನ್ನಿ.

ಕೆಲವು ಆರೋಗ್ಯಸೂತ್ರಗಳು.

"ಟಿಟ್‌ಬಿಟ್" ಎಂಬ ವಿಕಟಪತ್ರಿಕೆಯ 1929 ನೇ ವರ್ಷದ ವಾರ್ಷಿಕ ಸಂಚಿಕೆಯಲ್ಲಿ ಮನುಷ್ಯನ ದೇಹಾರೋಗ್ಯಸಂಬಂಧವಾಗಿ ಈ ಕೆಳಗೆ ಕಂಡ ಹನ್ನೆರಡು ಸೂತ್ರಗಳು ಪ್ರಕಟವಾಗಿವೆ.

1. ನೀವು ಒಂದುಕಡೆ ಏಕಾಂತವಾಗಿ ಕುಳಿತು ಕೆಲಸಮಾಡತಕ್ಕವರಾಗಿದ್ದರೆ ಎರಡುಸಲಕ್ಕಿಂತ ಹೆಚ್ಚಾಗಿ ಊಟಮಾಡಬೇಡಿರಿ.

2. ನೀವು ಮೇಜು ಅಥವಾ ಡೆಸ್ಕಿನ ಮೇಲೆ ಬಗ್ಗಿ ಕುಳಿತು ಕೆಲಸಮಾಡುವುದರಿಂದ, ಉಂಟಾಗಬಹುದಾದ ಕೆಡುಕನ್ನು ಪ್ರತಿದಿನವೂ ತಕ್ಕ ವ್ಯಾಯಾಮಗಳಿಂದ ತಪ್ಪಿಸಬೇಕು.

3. ಎಂತಹ ಹೊಗೆಯಾದರೂ ತುಂಬಿಕೊಂಡಿರುವ ವಾತಾವರಣದ ಗಾಳಿಯನ್ನು ಶ್ವಾಸಿಸಬೇಡಿರಿ.

4. ಕೊರಳುಪಟ್ಟಿಯನ್ನು ಬಿಗಿದು ಕಟ್ಟಬೇಡಿರಿ.

5. ಭೋಜನವಾದ ಮೇಲೆ ಮಧ್ಯಕಾಲಗಳಲ್ಲಿ ಎಂತಹ ಸಿಹಾಪದಾರ್ಥಗಳನ್ನೂ ಸೇವಿಸಬೇಡಿರಿ.

6. ಹೆಚ್ಚು ಹೊಗೆ ಹೊರಡುವಂತೆ ಹೊಗೆ ತೆಗೆಯುವ ಅಭ್ಯಾಸವನ್ನು ಮಾಡಬೇಡಿರಿ.

7. ವಿರಾಮಕಾಲಗಳಲ್ಲಿ ಉಲ್ಲಾಸಕರವಾದ ಆಟಪಾಟಗಳನ್ನೇ ಅವಲಂಬಿಸಿರಿ.

8. ನಿಮ್ಮ ರಜಾದಿನಗಳ ಊಟಗಳಲ್ಲಿ, ಆಟದಲ್ಲಿ, ಪಾನದಲ್ಲಿ, ನಡೆಯಲ್ಲಿ ಮತ್ತು ಹೊಗೆಸೇದುವುದರಲ್ಲಿ ಮಿತಿಮೀರಿ ಹೋಗಬೇಡಿರಿ.

9. ಬೀಡಿ ಚುಟ್ಟಾಗಳನ್ನು ಹಿಡಿಯುವಾಗ ಶ್ವಾಸವನ್ನೆಳೆದುಕೊಳ್ಳಬಾರದು. ಅದರ ಇಂಗಾಲಾಮ್ಲವು ಕೆಂಪು ರಕ್ತಕಣಗಳನ್ನು ಕೆಡಿಸುವುವು.

10. ಹೊಗೆಕುಡಿಯುವುದರಿಂದ ನಿಮ್ಮ ತುಟಿ ಅಥವಾ ನಾಲಗೆ ಹುಣ್ಣಾದರೆ, ಕುಡಿಯುವುದನ್ನು ನಿಲ್ಲಿಸಿ ಒಡನೆ ಡಾಕ್ಟರಿಗೆ ತೋರಿಸಿರಿ.

11. ಮುಂಜಾನೆಯ ತಿಂಡಿಯು ತೀರಿದ ಮೇಲೆ ಮನೆಯೊಳಗಿನ ಆಟಗಳನ್ನಾಡಬಾರದು. ಬೈಲಿನ ಗಾಳಿಯಲ್ಲಿ ಚುರುಕಾಗಿ ನಡೆಯಬೇಕು.

12. ಬೆಳಗಿನ ಊಟವನ್ನು ಆತುರದಿಂದ ತಿನ್ನಬೇಡಿರಿ. ಕಾಲಕ್ಕೆ ಮೊದಲೇ ಸಿದ್ಧರಾಗಿ ಬಂದು, ಸಿಧಾನವಾಗಿ ಭೋಜನಮಾಡಿರಿ.

ಆರೋಗ್ಯಚಂದ್ರಿಕೆ.

ಶ್ರೀ ಮರುಳಾರಾಧ್ಯಸ್ತೋತ್ರ.

...

ವಿರೂಪಾಕ್ಷಶಾಸ್ತ್ರೀ ಪುರಾಣಿಕಮಠ,
ಹೊಸ್ಪು, ಹಿರೇಹಡಗಲಿ, ಜಿಲ್ಲಾ ಬಳ್ಳಾರಿ.

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು
ರೇಶ್ಮೆವಸ್ತ್ರ ...
ರೇಶ್ಮೆಮಗುಟ ...
ರೇಶ್ಮೆಕೈವಸ್ತ್ರ ...
[12]
ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಬೆಲೆಯಲ್ಲಿ ಕಡಿಮೆಯಾದದ್ದು !
ಗುಣದಲ್ಲಿ ಮೇಲಾದದ್ದು !
ಶೀಘ್ರಗುಣಕಾರಿಯಾದದ್ದು !
ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ
ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ, ತಾಯಿಯು ತನ್ನ ಮಕ್ಕಳನ್ನು ... ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇವಳ್ಗೆ ಭಿಷಗ್ವರರುಗಳು "ಗೃಹಮಾತೆ"ಯೆಂದು ಕರೆದಿರುವರು. ... ಈ ಔಷಧಾಲಯಕ್ಕೆ "ಅಷ್ಟವರ್ಗೌಷಧಾಲಯ"ವೆಂದು ಕರೆದಿಲ್ಪಟ್ಟಿರುತ್ತದೆ. ... ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟ ಪೂನಾ ಸಿಟಿ
Himalayan Ashtawarg Medical Hall
848. Ganjipet Poona City.
[12]

ಲಿಂಗೋತ್ಪತ್ತಿ ಲಾಕೆಟ್ಸ್.

...

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಶಿಖೋಪನಿಷತ್.

ವೇದಗಳ ಶಾಖೆಗಳೇ ಉಪನಿಷತ್ತುಗ... ದಿಂದ ಪ್ರಕಾಶಿಸುತ್ತಿರುವವು. ಉಪನಿಷತ್ತುಗಳು ಒಂದಲ್ಲ, ಎರಡಲ್ಲ ಸಾವಿರಾರು ಇರುವವು. ಅದರಲ್ಲಿ ... ಚಿತ್ರ್ಯದಿಂದ ಎಷ್ಟೋ ಉಪನಿಷತ್ತುಗಳು ಲುಪ್ತಗಳಾಗಿವೆ. ನಿರ್ಣಯಸಾಗರ ಮುದ್ರಣಾಲಯದಲ್ಲಿ ... 120 ರ ವರೆಗೆ ಮಾತ್ರ ಉಪನಿಷತ್ತುಗಳು ಮುದ್ರಿಸಲ್ಪಟ್ಟಿವೆ. ಈ ಉಪನಿಷತ್ತುಗಳು ವೈದಿಕಸಿದ್ಧಾಂತ... ಗೊಳಿಸುವವು. ಸದ್ಯಃ ದೊರೆಯುವ ಕೆಲವು ಉಪನಿಷತ್ತುಗಳಲ್ಲಿ ವೀರಶೈವ ಸಿದ್ಧಾಂತವು ಸಂಕ್ಷಿಪ್ತ... ಪಾದಿಸಲ್ಪಟ್ಟಿರುವದು. ಆದರೆ ಈ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಉಪನಿಷತ್ತುಗಳು ಅನೇಕವಿದ್ದಾ... ಉಪನಿಷತ್ತುಗಳ ಹೆಸರುಗಳನ್ನು ನಮ್ಮ ಪ್ರಾಚೀನ ಗ್ರಂಥಕಾರರು ತೆಗೆದುಕೊಂಡಿದ್ದಾಗ... ಇಲ್ಲಿಯ... ಲಭ್ಯವಾಗಿರಲಿಲ್ಲ. ವೀರಶೈವಮತದ ಸುದೈವದಿಂದ ಸದ್ಯಃ ಸಿದ್ಧಾಂತಶಿಖೋಪನಿಷತ್ ಎಂಬ ಹೆಸರಿನ ... ವಾಗಿರುವದು. ಈ ಉಪನಿಷತ್ತಿನಲ್ಲೆಲ್ಲಾ ವೀರಶೈವ ಸಿದ್ಧಾಂತವೇ ತುಂಬಿ ತುಳುಕುತ್ತಿರುವದು. ...ಗೆ ಎಷ್ಟು ಬೆಲೆ ಕೊಟ್ಟರೂ ತೀರದ್ದಾಗಿದೆ. ಗ್ರಂಥವು ಚಿಕ್ಕದಾದರೂ ಯೋಗ್ಯತೆಯು ಬಹು... ದೆ. ಈ ಗ್ರಂಥವನ್ನು ದೇವನಾಗರಿ, ಕನ್ನಡ ಈ ಎರಡು ಲಿಪಿಗಳಲ್ಲಿಯೂ ಶ್ರೀ ಜಗದ್ಗುರು ರೇಣು... ಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾಗಾರದವತಿಯಿಂದ ಪ್ರಿಂಟ್‌ಮಾಡಿಸಿದ್ದಾಗಿ... ಅನುಸರಿಸುವ ಪ್ರತಿಯೊಬ್ಬರ ಮನೆಯಲ್ಲಿಯೂ ಈ ಗ್ರಂಥವು ಪ್ರಕಾಶಿಸುತ್ತಿರಬೇಕು. ಬೆಲೆ 4 ಆಣೆ. 4 ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು 5 ಆಣೆ ಸ್ಟಾಂಪನ್ನು ಕಳುಹಿಸಬೇಕು.

ಅಧ್ಯಾಪಕ,
ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ,
ಮಹಾಂತಿನಮಠ, ಚಿಕ್ಕಪೇಟೆ ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!
ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ
...
[23]
ಪತ್ತೆ—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಅಣ್ಣಗಳಿರಾ! ಅಕ್ಕಗಳಿರಾ!!
ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"
ಮಲೇರಿಯಾನ ಸರ್ವಜ್ವರಸಂಹಾರಿಣಿ
...
ಮಲೇರಿಯಾನ ಕಂಪನಿಯವರ ಮಲೇರಿಯಾನ
[47]
ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಿಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು, ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ. ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೬-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[52] ಪೋ. ಬಾ. ೫೧೦. ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ ನೇ ಜುಲೈ ೧೯೨೯ [ಸಂಚಿಕೆ ೮.

ಸ್ವೀಕಾರ.

ತೀರ್ಥಹಳ್ಳಿ ತಾಲೂಕು ಸಂಪಿಗೆಸರುವಿನ ಮ|| ರಾ|| ತಿಮ್ಮಯ್ಯಗೌಡರು ಮ|| ರಾ|| ಹಲೂಸಾಲೆ ನಾಗಪ್ಪಗೌಡರಿಗೆ ಒಬ್ಬ ಪುತ್ರಿಯನ್ನೂ ಹಾಗೂ ಕಲ್ಲುಗುಡ್ಡೆ ಮ|| ರಾ|| ಕೊಲಪ್ಪಗೌಡರಿಗೊಬ್ಬ ಪುತ್ರಿಯನ್ನೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಕನ್ಯೆಯರಿಂದ ಸಮರ್ಪಿಸಿದ 5 ರೂ. ವರರಿಂದ ಸಮರ್ಪಿಸಿದ 5 ರೂ. ಒಟ್ಟು 10 ರೂಪಾಯಿಗಳು ಮ|| ರಾ|| ದೇಸಿನ ಪಟೇಲ್ ಶಿವಪ್ಪಗೌಡರವರ ದ್ವಾರಾ ತಲ್ಪಿರುತ್ತವೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮೆಣಸಿಗಿ ಗ್ರಾಮದ ವೇ|| ಸಾಲೀಮಠದ ನಾಗಯ್ಯನವರು ತಮ್ಮ ಅಣ್ಣಂದಿರ ಪುತ್ರ ಚಿ|| ಮಡಿವಾಳಯ್ಯನಿಗೂ ಮತ್ತು ತಮ್ಮ ಪುತ್ರ ಚಿ|| ಮುರುಗಯ್ಯನಿಗೂ ಅಣ್ಣೇಗೇರಿ ಗ್ರಾಮದ ವೇ|| ಸಾಲೀಮಠದ ಕೊಟ್ರಯ್ಯನವರ ಪುತ್ರಿಯರಾದ ಸೌ|| ಮಹಾಲಿಂಗವ್ವನನ್ನು ಮತ್ತು ಶಿವಲಿಂಗವ್ವನನ್ನು ಅನುಕ್ರಮವಾಗಿ ತಂದು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರರಿಂದ ಸಮರ್ಪಿಸಿದ 4 ರೂಪಾಯಿಗಳು ಮತ್ತು ಕನ್ಯೆಯರಿಂದ ಸಮರ್ಪಿಸಿದ 2 ರೂಪಾಯಿಗಳು ಒಟ್ಟು 6 ರೂಪಾಯಿಗಳು ಶಿರೋಳ ಬೃಹನ್ಮಠದ ವೇ|| ಪಂಚಾಕ್ಷರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾನಗಲ್ಲ ತಾಲೂಕು ಆಲೂರು ಗ್ರಾಮದಲ್ಲಿರುವ ಭಿಕ್ಷಾವೃತ್ತಿಮಠದ ವೇ|| ಅಡವಪ್ಪಯ್ಯನವರು ತಮ್ಮ ಜ್ಯೇಷ್ಠಪುತ್ರರಿಗೆ ಪಟ್ಟಾಭಿಷೇಕ ಸಮಾರಂಭವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚಿತ್ರದುರ್ಗ ಡಿ|| ಜಗಲೂರು ತಾಲೂಕು ದೊಣೆಹಳ್ಳಿ ಗ್ರಾಮದ ವೇ|| ಮಠದ ತಿಪ್ಪೇಸ್ವಾಮಿಯವರು ತಮ್ಮ ಜ್ಯೇಷ್ಠಪುತ್ರ ಚಿ|| ಶಿವರುದ್ರಾರ್ಯನಿಗೆ ಹಿರಿಯೂರು ತಾಲೂಕು ಮೇಟಿಕುರಿಕೆ ಮಠದ ವೇ|| ಮಹಾದೇವಪ್ಪಯ್ಯನವರ ಪುತ್ರಿ ಸೌ|| ರುದ್ರಮ್ಮನನ್ನು ತಂದು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಗೋಕಾಕ ತಾಲೂಕು ಮುಗುಳಖೋಡ ಗ್ರಾಮದಲ್ಲಿರುವ ಮದರಖಂಡಿ ಹಿರೇಮಠದ ಶಿಷ್ಯರಾದ ಮಠದ ಗುರುನಾದಪ್ಪ ಎಂಬುವರು ತಮ್ಮ ಪುತ್ರರ ವಿವಾಹಸಮಾರಂಭ ಸಮಯದಲ್ಲಿ ವೇ|| ಮುಪ್ಪಯ್ಯನವರ ಹೇಳಿಕೆ ಪ್ರಕಾರ ಸಮರ್ಪಿಸಿದ 2 ರೂ. ಶೇಗುಣಸಿಯಲ್ಲಿರುವ ಮ|| ರಾ|| ವಾಲೀಶೆಟ್ಟರ ಚನ್ನಬಸವಪ್ಪನವರು ಮಹಲಿಂಗಪೂರ. ಇವರ ವಿವಾಹದಲ್ಲಿ ಮ|| ರಾ|| ಮಹಾಬಲಶೆಟ್ಟರ ಮಹಲಿಂಗಪ್ಪನವರ ಹೇಳಿಕೆ ಪ್ರಕಾರ ಸಮರ್ಪಿಸಿದ 1 ರೂ. ಹಾಗೂ ಸದರಿ ಗ್ರಾಮದ ಮ|| ರಾ|| ಶೀಲವಂತರ ಬಸವಪ್ರಭಪ್ಪನವರ ಮನೆಯಲ್ಲಿ ನೆರವೇರಿದ ಫಲಶೋಭನಕಾರ್ಯದಲ್ಲಿ ದೈವದವರ ಹೇಳಿಕೆಯ ಪ್ರಕಾರ ಸಮರ್ಪಿಸಿದ 1 ರೂ. ಒಟ್ಟು 4 ರೂಪಾಯಿಗಳು ಶ್ರೀ|| ಷ|| ಬ್ರ|| ಮದರಖಂಡಿ ಚರಮೂರ್ತಿಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಶಿಕಾರಿಪುರ ತಾ|| ಕಡೆನಂದಿಹಳ್ಳಿ ಗ್ರಾಮದ ಶ್ರೀ ಚರಮೂರ್ತಿಸ್ವಾಮಿಗಳವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಬಲದಿಂದ ತಮ್ಮ ಮನೋಭೀಷ್ಟಕಾರ್ಯವು ಸಫಲವಾದ ಸಂತೋಷಕ್ಕಾಗಿ 3 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಕಡೂರು ತಾ|| ಕಡೂರಳ್ಳಿ ಮಠದ ವೇ|| ಮಾದಯ್ಯನವರ ಪುತ್ರ ಚಿ|| ಮರುಳಯ್ಯನಿಗೆ ಚಿಕ್ಕಿಂಗಳ ಹಿರೇಮಠದ ವೇ|| ಗುರುಶಾಂತಾರಾಧ್ಯರ ಪುತ್ರಿ ಸೌ|| ಗೌರಮ್ಮನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ವೇ|| ಕೆಂಚಾಪುರದ ಅಡವಯ್ಯಶಾಸ್ತ್ರಿಗಳ ಹೇಳಿಕೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ಬುಕ್ಕಾಂಬುಧಿ ಮಠದ ಪುಟ್ಟಯ್ಯನವರ ದ್ವಾರಾ ತಲ್ಪಿರುತ್ತವೆ.

ಕುಣಿಗಲ್ ತಾ|| ಅಮೃತೂರು ಗ್ರಾಮದ ಮ|| ರಾ|| ವೀರಭದ್ರಯ್ಯನವರ ಪುತ್ರಿ ಸೌ|| ರುದ್ರಮ್ಮನನ್ನು ಮಂಡ್ಯ ತಾ|| ಬಿದುರುಕೋಟೆ ಮ|| ರಾ|| ಪುಟ್ಟನಂಜಪ್ಪನವರ ಪುತ್ರ ಚಿ|| ನಂಜಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶಿ|| ಚನ್ನವೀರಯ್ಯನವರ ದ್ವಾರಾ ತಲ್ಪಿರುತ್ತವೆ.

ಹೆಗ್ಗಡದೇವನಕೋಟೆ ತಾ|| ಚಾಮನಹಳ್ಳಿ ಹುಂಡಿಮಠದ ವೇ|| ರೇವಣಾರಾಧ್ಯರ ಪುತ್ರ ಚಿ|| ರೇವಣಾರಾಧ್ಯನಿಗೆ ಅಂಡುಗೇರಿ ಮಠದ ವೇ|| ಬಸವಾರಾಧ್ಯರ ಪುತ್ರಿ ಸೌ|| ಬಸವಾಂಬಿಕೆಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ತಳೂರು ಗುರುಮಠದ ಮಲ್ಲಾರಾಧ್ಯಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ತಡಗಣಿ ಗ್ರಾಮದ ಮ|| ರಾ|| ಹಳೇಗೌಡರ ಬಸವಣ್ಣೆಪ್ಪಗೌಡರ ಪುತ್ರಿ ಸೌ|| ವೀರಮ್ಮನನ್ನು ಕುಂದಿಗ್ರಾಮದ ಮ|| ರಾ|| ಸಿದ್ಧಲಿಂಗಪ್ಪಗೌಡರ ಪುತ್ರ ಚಿ|| ವೀರಪ್ಪಗೌಡನಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ತಡಗಣಿ ಹಂಚಿನಮನೆ ಸ್ವಾದಪ್ಪನವರ ದ್ವಾರಾ ತಲ್ಪಿರುತ್ತದೆ.

ಕುಂದಗೋಳ ತಾ|| ದೇವನೂರು ಗ್ರಾಮದಲ್ಲಿರುವ ಮ|| ರಾ|| ಹಾಲುಮಠದ ತೆಂಡೂರು ಹನುಮಪ್ಪನ ಪುತ್ರಿ ಸೌ|| ಮಲ್ಲವ್ವನನ್ನು ಶಿಗ್ಗಾವಿ ತಾ|| ಬಿದ್ದಿಯಲ್ಲಿರುವ ಅತ್ತೀಗೇರಿ ಹನುಮಪ್ಪನ ಪುತ್ರ ಚಿ|| ಲಿಂಗಪ್ಪನಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ವೇ|| ರಮಲಸಿದ್ಧಾಂತಿ ಸಿದ್ಧರಾಮಯ್ಯನವರು ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ದುಃಖವಾರ್ತೆ.

ತಾ|| 23-6-1929 ನೇ ಇಸವಿ ದಿವಸ ಅಥಣಿಯ ರಾವಬಹದ್ದೂರ ಕೊಲಬಸ ಸಂಗನಬಸಪ್ಪ ಮಂಗಸೂಳಿ ವಕೀಲ. ಈ ಮಹೋದಯರು ಕೈಲಾಸವಾಸಿಗಳಾದದ್ದು ವೀರಶೈವರಿಗೆ ಪರಮದುಃಖಕರವಾದ ಸಂಗತಿಯಾಗಿದೆ. ಇವರು ವೀರಶೈವ ಅನಾಥ ವಿದ್ಯಾರ್ಥಿಗಳ ದೆಶೆಯಿಂದ ಫಂಡನ್ನು ಮಾಡಿದರು. ಸದ್ಯಃ ಆ ಫಂಡಿನಲ್ಲಿಯೇ ೪-೬ ಜನ ಇಂಗ್ಲೀಷ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿರುವರು. ಹಾಗೂ ಇಲ್ಲಿಯ ಸಂಸ್ಕೃತಪಾಠಶಾಲೆಯ ವ್ಯವಸ್ಥಾಪಕರಾಗಿದ್ದರು. ಮುನಿಸಿಪಾಲ್ಟಿಯ ಪ್ರೆಸಿಡೆಂಟರಾಗಿ ಅನೇಕ ಸಾರ್ವಜನಿಕಕಾರ್ಯಗಳನ್ನು ಮಾಡಿದರು. ಡೆವಲಪ್‌ಮೆಂಟ್ ಆಫೀಸಿನ ಅಧ್ಯಕ್ಷರಾಗಿ ಬಡರೈತರ ಸಲುವಾಗಿ ಹೊಟ್ಟು, ಸೊಪ್ಪು, ಕಾಳು, ಕಡಿ ಮುಂತಾದವುಗಳನ್ನು ಸಂಗ್ರಹಿಸಿಕೊಟ್ಟರು. ಕೀಕಡಿ ಖಾತೆಯಲ್ಲಿ ಪೂರ್ಣ ಅನುಭವಿಕರಾಗಿದ್ದರಿಂದ ಸರಕಾರದವರು, ಇವರಿಗೆ ಮೇಲಿನ ಅಧಿಕಾರವನ್ನು ಕೊಟ್ಟಿದ್ದರು. ದನಗಳ ಪರೀಕ್ಷೆಯನ್ನು ಬಲ್ಲವರಾಗಿದ್ದರು. ಅರಬನ್ ಬ್ಯಾಂಕಿನ ಆರ್ಗನೈಜರರಾಗಿ ಸರ್ವಕಾರ್ಯಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದರು. ಇವರು ಎಲ್ಲ ಕಾರ್ಯಗಳಲ್ಲಿ ಧುರೀಣರಾಗಿದ್ದದ್ದನ್ನು ಕಂಡು ನಮ್ಮ ದಯಾಳು ಸರಕಾರದವರು "ರಾವಸಾಹೇಬ" ಪದವಿಯನ್ನು ಕೊಟ್ಟರು. ಇವರು ಸರಕಾರಿ ಪ್ಲೀಡರರಾಗಿದ್ದರು. 2 ವರುಷಗಳ ಹಿಂದೆ ನೀರಿನ ಕ್ಷಾಮ ಬಿದ್ದಾಗ ಅಲ್ಲಲ್ಲಿಗೆ ಅರವಟ್ಟಿಗೆಗಳನ್ನು ಇಡಿಸಿದರು. ಮತ್ತು ಸಿದ್ಧೇಶ್ವರ ಕೆರೆಯೊಂದನ್ನು ಬಹು ರಮಣೀಯವಾಗಿಯೂ ಒಂದಾವರ್ತಿ ನೀರಿನಿಂದ ತುಂಬಿದರೆ ಎಷ್ಟೋ ದಿವಸಗಳವರೆಗೆ ನೀರು ಇರುವಂತೆಯೂ ಕಟ್ಟಿಸಿ ಊರಿಗೆ ನೀರಿನ ಪುರವಣಿಗೆಯನ್ನು ಮಾಡಿಸಿಕೊಟ್ಟರು. ತನ್ನ ವೈರಿಯಾದರೂ ಬಂದು ತಮ್ಮ ತೊಂದರೆಗಳನ್ನು ಹೇಳಿಕೊಂಡರೆ ತಮ್ಮಲ್ಲಿ ರತಕ್ಕ ವೈಮನಸ್ಸನ್ನು ಬಿಟ್ಟು ಶಾಂತರೀತಿಯಿಂದ ಕೇಳಿ ಅವರ ಕಾರ್ಯವನ್ನು ಪೂರೈಸಿಕೊಡುತ್ತಿದ್ದರು. ಇದನ್ನೆಲ್ಲ ಕಂಡು ಸರಕಾರದವರು ಇದೇ ತಿಂಗಳಲ್ಲಿ "ರಾವಬಹಾದ್ದೂರ" ಪದವಿಯನ್ನಿತ್ತರು. ಇವರ ಕೈಲಾಸಯಾತ್ರೆಯ ದಿವಸ ಆದಿತ್ಯವಾರ ಸಂತೆಯಿದ್ದಾಗ್ಯೂ ಯಾವತ್ತು ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳನ್ನು ಬಂದುಮಾಡಿದರು. ಗಿರಣಿಗಳೂ ಬ್ಯಾಂಕಗಳೂ ಸಹ ಮುಚ್ಚಲ್ಪಟ್ಟವು. ಮರುದಿವಸ ರಾವಬಹಾದ್ದೂರವರ ನಿಧನದ ಬಗ್ಗೆ ಕೋರ್ಟುಕಚೇರಿಗಳೂ ಸಹ ಬಂದುಮಾಡಲ್ಪಟ್ಟವು. ಇಂಥ ವಸ್ತುವು ತಮ್ಮ ಸಮಾಜವನ್ನು ಬಿಟ್ಟುಹೋದದ್ದು ದುರ್ದೈವವೇ ಸರಿ! ಶ್ರೀ ಜಗದಾಚಾರ್ಯರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಓರ್ವ ಸ್ನೇಹಿತ.

ಪಾಶ್ಚಾತ್ಯರು ಆಂಗ್ಲೇಯ ಕವಿಶ್ರೇಷ್ಠನೆನಿಸಿದ ಷೇಕ್ಸ್‌ಪಿಯರನ ಸ್ಮಾರಕವಾಗಿ ಅವನ ಜನ್ಮಸ್ಥಳದಲ್ಲಿ ಒಂದು ನಾಟಕಶಾಲೆಯನ್ನು ಕಟ್ಟಿಸಬೇಕೆಂದು ನಿರ್ಧರಿಸಿರುವರು. ಈ ಕಟ್ಟಡವನ್ನು ಕಟ್ಟಿಸಲು 20,00,000 ರೂಪಾಯಿಗಳ ಅಂದಾಜು ಮಾಡಲ್ಪಟ್ಟಿದೆ. ಈಗಾಗಲೇ 17,60,000 ರೂಪಾಯಿಗಳನ್ನು ಸಂಗ್ರಹಿಸಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶಿವಶಕ್ತಿವಿಲಾಸವು.

(ಕಳೆದವಾರದ ಶೇಷ.)

ಲೇಖಕರು.—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ, ವಿಜಾಪುರ.

ಸ್ವತಂತ್ರವೂ ಅದ್ವಿತೀಯವೂ ಆದ ಬ್ರಹ್ಮವು ತ್ರಿಪುಟಿ ರೂಪವಾದ ವಿಶ್ವತೋರಿಕೆಗಾಗಿ 'ಉಪಾಧಿ'ಯೇ ಇಲ್ಲವೆ ಬೇರೆ ಯಾವದಾದರೊಂದು ಸಾಧನದ ಹಂಗು ಉಳ್ಳದ್ದಾಗಿರುವದೆಂಬ ಬಗೆಯಾದರೋ, ಉತ್ತರಮೀಮಾಂಸೆಯು ಉಗಮಸ್ಥಳವೆನಿಸುವ ಉಪನಿಷದ್ಭಾಗದಲ್ಲಿಯೇ ಕಂಡುಬರುವದಿಲ್ಲ. ಪರಬ್ರಹ್ಮಾಭಿಧ ಪರಶಿವನು ಸ್ವಾತ್ಮೀಯಶಕ್ತಿಕರಣಮಾತ್ರದಿಂದೇ ವಿಶ್ವನಿರ್ಮಾಣ ಸಮರ್ಥನಾಗಿದ್ದಾನೆ. ಅದುಕಾರಣವೇ ಪ್ರಮಾತೃಪ್ರಮಾಣ ಪ್ರಮೇಯರೂಪ ವಿಶ್ವವೆಲ್ಲವೂ ಶಿವಶಕ್ತಿವಿಲಾಸವೆಂದು ಉಪನಿಷತ್ತುಗಳೂ ಆಗಮಗಳೂ ಸಾರುತ್ತವೆ. ಶಿವಶಕ್ತಿವಿಲಾಸದ ಅಲಂಕಾರಿಕ ವರ್ಣನೆಯು ಬೃಹದಾರಣ್ಯಕದಲ್ಲಿ ಬಲು ಸೊಗಸಾಗಿದೆ. 'ಆತ್ಮೈವೇದಮಗ್ರ ಆಸೀತ್ ಪುರುಷ ವಿಧಃ'—ಇದೆಲ್ಲವೂ ಆರಂಭದಲ್ಲಿ ಕೇವಲ ಆತ್ಮನೇ ಆಗಿದ್ದಿತು; ಈ ಆತ್ಮನು ಪುರುಷನೆನಿಸಿಕೊಳ್ಳುವನು. (೧-೪-೧) 'ಸ ವೈ ನೈವರೇಮೆ, ತಸ್ಮಾದೇಕಾಕೀ ನ ರಮತೆ ಸ ದ್ವಿತೀಯ ಮೈಚ್ಛತ್. ಸ ಹೈತಾವಾನಾಸ ಯಥಾ ಸ್ತ್ರೀಪುಮಾಂಸೌ ಸಂಪರಿಷ್ವಕ್ತೌ ಸ ಇಮಮೇವಾತ್ಮಾನಂ ದ್ವೇಧಾಪಾತಯತ್, ತತಃ ಪತಿಶ್ಚ ಪತ್ನೀಚಾಭವತಾಂ, ತಸ್ಮಾದಿದಮರ್ಧ ಬೃಗಲಮಿವ ಸ್ವ ಇತಿ ಹ ಸ್ಮಾಹ....(೧-೪-೩)........ ಯದಿದಂ ಕಿಂಚ ಮಿಥುನಮಾಪಿಪೀಲಿಕಾಭ್ಯ ಸ್ತತ್ಸರ್ವಮಸೃಜತ್''

ಅವನು ರಮಿಸುವವನಾಗಲಿಲ್ಲ. ಅದುಕಾರಣವೇ ಈಗಲೂ ಒಂದೇ ಪ್ರಾಣಿಯು ರಮಿಸಲಾರದು. ಅವನು ಮತ್ತೊಂದು ವಸ್ತುವನ್ನು ಬಯಸಿದನು. ಆಗ ಪರಸ್ಪರ ಸಂಬದ್ಧವಾದ ಸ್ತ್ರೀಪುರುಷಪ್ರಮಾಣತೆಯನ್ನು ತಳೆದನು; ಅವನು ಈ ತನ್ನ ಇರುವನ್ನು ಇತ್ತರವಾಗಿ ವಿಂಗಡಿಸಿದನು. ಅದರಿಂದ ಗಂಡ ಹೆಂಡರೆಂಬ ದಾಂಪತ್ಯವುಂಟಾಯಿತು. ಆ ಕಾರಣದ ದೆಸೆಯಿಂದ, ತನ್ನ ಈ ಶರೀರವನ್ನು ಬಿದುರಿನ ಕಂಬಿಯಂತಿರುವುದೆಂದು ಹೇಳಿದನು. ಈ ಪುರುಷಾರ್ಧವಾದರೋ ಸ್ತ್ರೀಯಿಂದ ಪೂರ್ಣಗೊಳಿಸಲ್ಪಡುವುದು. (೧-೪-೩) ಈ ರೀತಿಯಾಗಿ, ಇರುವೆ ಮೊದಲಾಗಿ ತೀರ ದೊಡ್ಡ ಪ್ರಾಣಿಗಳವರೆಗಿನ ಸರ್ವ ಪ್ರಾಣಿಗಳ ಮಿಥುನವು [ಹೆಣ್ಣು ಗಂಡು ಜೋಡು], ಶಿವಶಕ್ತಿವಿಲಾಸವೇ [೧-೪-೪] 'ಸೋಽವೇದಾಹಂ ವಾವ ಸೃಷ್ಟಿರಸ್ಮಿ'—ನಾನೇ ಸೃಷ್ಟಿಯಾಗಿದ್ದೇನೆಂದು ತಿಳಿಯುವವನಾದನು [೧-೪-೫]

ಈ ಮೇಲಿನ ಬೃಹದಾರಣ್ಯದ ವಚನಗಳ ತಾತ್ಪರ್ಯವೇನೆಂದರೆ:—ಈ ಸಕಲ ಜಗತ್ತು ಮೊಟ್ಟಮೊದಲು ಕೇವಲ ಅದ್ವಿತೀಯ ಚೈತನ್ಯಾತ್ಮನೇ ಆಗಿದ್ದಿತು. ಈ ಆತ್ಮನು ಪುರುಷಪ್ರಕಾರಕನಾಗಿದ್ದನು; ಅವನು ಸರ್ವತ್ರ ನೋಡತೊಡಗಿದನು, ಆದರೆ ಅವನಿಗೆ ತನ್ನ ಹೊರತು ಮತ್ತೊಂದು ಏನೂ ತೋರಲೇ ಇಲ್ಲ; ಆಗ ಅವನು ಮೊದಲಿನ ಇದ್ದಕ್ಕಿದ್ದಂತೆ ಸರ್ವಾತ್ಮನು 'ನಾನಿದ್ದೇನೆ' ಎಂದನು; ಇದರಿಂದ ಅವನ ಹೆಸರು 'ಅಹಂ' ಎಂದುಂಟಾಯಿತು. ಈಗಲಾದರೂ ಯಾವನಾದರೊಬ್ಬನನ್ನು ಕುರಿತು 'ನೀನು ಯಾವನಿದ್ದೀಯೆ? ಎಂದು ಕೇಳಲು ಅವನು 'ಅಹಂ' ನಾನು, ಎಂದು ಮೊದಲು ಹೇಳಿ ಬಳಿಕ ತನಗಿಟ್ಟಿರುವ ಹೆಸರನ್ನು ಹೇಳುವನು. ಯಾವಕಾರಣದೆಸೆಯಿಂದ ಇವನು ಎಲ್ಲಕ್ಕೂ ಮೊದಲಿದ್ದನೋ, ಯಾವ ಇವನಿಂದ ಸರ್ವಪಾಪವೂ ದಹಿಸಲ್ಪಟ್ಟಿತೋ ಆ ಕಾರಣದ ದೆಸೆಯಿಂದ ಇವನಿಗೆ ಪುರುಷ 'ಪೂರ್ವಂ ಓಷತಿ' ಎನ್ನುವರು [ಬೃ. ೧-೪-೧] ಈ ಅವಸ್ಥೆಯಲ್ಲಿ ಆ ಪುರುಷ ಪ್ರಜಾಪತಿಗೆ [ಒಬ್ಬನೇ ಆಗಿದ್ದುದರಿಂದ] ರಮಿಸಲು ಬರದಂತಾಯಿತು [ದ್ವೈತಭಾವವಿಲ್ಲದೇ ವಿನಾ ವಿನೋದವು ಸಂಭವಿಸದು.] ಅದು ಕಾರಣವೇ ಈಗಲಾದರೂ ಒಬ್ಬನೇ ಒಬ್ಬನಿರುವ ಮನುಷ್ಯನಿಗೆ ರಮಿಸಲಾಗುವುದಿಲ್ಲ; ಮುಂದೆ ಅವನಿಗೆ ಜೋಡಿಯ ಬಯಕೆಯುಂಟಾಯಿತು, ಒಬ್ಬರನ್ನೊಬ್ಬರು ಆಲಿಂಗಿಸಿರುವ ಸ್ತ್ರೀ ಪುರುಷರ ತೋರಿಕೆಯ ಆಕಾರವನ್ನು ಆ ಪರಮಾತ್ಮನೇ ತಳೆದನು. ಅವನು ಒಬ್ಬನೇ ಆದರೂ ದಿವ್ಯರೂಪ [ಪತಿಪತ್ನಿಯರೂಪ] ನಾದನು. ಅದ್ದರಿಂದ ಹೆಂಗಸು ಗಂಡಸಿನ ಅರ್ಧ ದಲವಾಗಿದ್ದಾಳೆಂದು ಯಾಜ್ಞವಲ್ಕ್ಯನ ಮತವು. ಈ ಕಾರಣದ ದೆಸೆಯಿಂದಲೇ ಪುರುಷನೆಂಬ ಆಕಾಶವು ಸ್ತ್ರೀಯಳ ಅರ್ಧದಿಂದ ತುಂಬಿರುವುದು; ಪುರುಷನು ಸ್ತ್ರೀಯಳೊಂದಿಗೆ ರಮಿಸಿದ್ದರಿಂದ ಮನುಷ್ಯರು ಹುಟ್ಟಿದರು; ಎಂಬುದು ಈ ಉಪನಿಷತ್ತಿನ ಮತವು.

ಈ ಪತಿಪತ್ನೀ ಭಾವವೇ 'ಶಿವಶಕ್ತಿ-ದೇವದೇವೀ' ಎಂಬ ಹೆಸರುಗಳಿಂದ ಕರೆಯಲ್ಪಡುವುದು. ಚೈತನ್ಯವು ತಾನು ತನ್ನ ತತ್ವವನ್ನು ಹಾಗೆಯೇ ಅಬಾಧಿತವಾಗಿಟ್ಟು, ತಾನೇ ಶಕ್ತಿಯಾಗುವುದು. ಚೈತನ್ಯಕ್ಕೆ ವಿಶ್ವನಿರ್ಮಾಣದಲ್ಲಿ ತನ್ನ ಶಕ್ತಿಯೆಂಬ ಕರಣದ ವ್ಯತಿರಿಕ್ತವಾಗಿ ಬೇರೊಂದು ಬಾಹ್ಯಸಾಧನದ ಹಂಗಿರುವುದಿಲ್ಲ. ಈ ಅಭಿಪ್ರಾಯವು ಶೈವಾಗಮದರ್ಶನದಲ್ಲಿ ವಿಶದೀಕರಿಸಲ್ಪಟ್ಟಿರುವ ಹಾಗೆ ಮತ್ತಾವ ದರ್ಶನಗಳಲ್ಲಿಯೂ ಕಂಡುಬರುವುದಿಲ್ಲ. ಕಾಮಿಕೋಪಾಗಮವೆನಿಸುವ ಶ್ರೀ ಮೃಗೇಂದ್ರದ ವಿದ್ಯಾಪಾದಾಂತರ್ಗತವಾದ ಪತಿಲಕ್ಷಣ ಪರೀಕ್ಷಾ ಪ್ರಕರಣದಲ್ಲಿ 'ಕರಣಂಚಾಸ್ಯ ಶಕ್ತ್ಯೈಕಮ್' ವಿಶ್ವನಿರ್ಮಾಣಾದಿಕಾರ್ಯಗಳಲ್ಲಿ ಶಿವನಿಗೆ ಅವನ ಶಕ್ತಿಯೇ ಕರಣವಾಗಿ ಆಯಾಯ ಕ್ರಿಯೆಗಳನ್ನು ಸಿದ್ಧಗೊಳಿಸುವುದು ಎಂದೂ, ಶ್ರೀ ಶಿವಸೂತ್ರದಲ್ಲಿ 'ಸ್ವಶಕ್ತಿ ಪ್ರಚಯೋಽಸ್ಯ ವಿಶ್ವಮ್' ವಿಶ್ವವು ಶಿವನ ಸಂವಿದಾತ್ಮಕವಾದ ಶಕ್ತಿಯ ಸ್ಫುರಣರೂಪವಾದ ವಿಲಾಸವು [ಶಿವಸೂ. ೩-೩೦] ಎಂದೂ, ಶ್ರೀ ಸರ್ವಮಂಗಲಾಶಾಸ್ತ್ರದಲ್ಲಿ—

ಶಕ್ತಿಶ್ಚ ಶಕಿಮಾಂಶ್ಚೈವ ಪದಾರ್ಥದ್ವಯಮುಚ್ಯತೇ।
ಶಕ್ತಯೋಽಸ್ಯ ಜಗತ್ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ ||

ಶಕ್ತಿಯೂ ಶಕ್ತಿಯುಳ್ಳವನೂ ಎಂಬುದಾಗಿ ಎರಡು ಪದಾರ್ಥಗಳು ಹೇಳಲ್ಪಡುತ್ತವೆ; ಶಕ್ತಿಯುಳ್ಳವನು ಮಹೇಶ್ವರನೆಂದೂ, ಸರ್ವಜಗತ್ತು ಈ ಮಹೇಶ್ವರನ ಶಕ್ತಿವಿಲಾಸವೆಂದೂ ಹೇಳಲ್ಪಟ್ಟಿದೆ.

ಈ ಸಿದ್ಧಾಂತವನ್ನು ಶಾಂಕರ ಮತಾನುಯಾಯಿಗಳೂ ಶಿಂಸಾವಂದ್ಯವಾದುದನ್ನಾಗಿ ತಿಳಿಯಬೇಕಾಗಿದೆ. ಪರಬ್ರಹ್ಮಾಭಿಧ ಪರಶಿವಚೈತನ್ಯದಲ್ಲಿ ಜಗನ್ನಿರ್ಮಾಣ ಕರಣವಾದ ಅಲೌಕಿಕ ಶಕ್ತಿಯೊಂದು ಉಂಟೆಂದು ಶಂಕರಾಚಾರ್ಯರೂ 'ಚೇತನಮಪಿ ಬ್ರಹ್ಮ ಅನಪೇಕ್ಷ್ಯಂ ಬಾಹ್ಯಂ ಸಾಧನಂ ಸ್ವತಏವ ಜಗತ್ಪ್ರಕೃತಿ' ಚೇತನ ಬ್ರಹ್ಮವೇ ಬಾಹ್ಯಸಾಧನವನ್ನು ಅಪೇಕ್ಷಿಸದೆ ತಾನೇ ಜಗತ್ತನ್ನು ಹುಟ್ಟಿಸುವುದು. (ಬ್ರ. ಸೂ. ಶಾಂ-ಭಾ. ೨-೧-೨೫). ಎಂದು ಪ್ರಾಂಜಲತನದಿಂದ ಹೇಳುತ್ತಾರೆ.

ಒಂದೇ ನಾಣ್ಯವು ಒಪ್ಪಚ್ಚಿ ಹಾಯಿಸಿಯೂ ಒಪ್ಪಚ್ಚಿ ಹಚ್ಚಿಸಿಯೂ ತೋರುವ ಮೂಲಕ, ಆ ಒಂದು ನಾಣ್ಯವೇ ತನ್ನಂಗದ ಮೇಲೆ ಈ ಸೊಬಗಿನ ದಿಟವಾದ ಆಟವನ್ನು ತೋರಿಸಿತು. ಈ ಬಗೆಯೇ ಬೃಹದಾರಣ್ಯದಲ್ಲಿ (೧-೪-೩) ಅರ್ಧ ಬೃಗಲ ನ್ಯಾಯದಿಂದ ಬಣ್ಣಿಸಲ್ಪಟ್ಟಿದೆ. ಶಿವನು [ದೇವನು] ಪ್ರಕಾಶಕ [ವಿಷಯಿ] ನಾಗಿರುವಂತೆ, ಅವನ ಅವಿನಾಭಾವಶಕ್ತಿ [ದೇವಿ] ಯೂ ಪ್ರಕಾಶಕಳಾಗಿದ್ದಾಳೆ. ಇವರಿಬ್ಬರೂ ಲೀಲೆಗೋಸುಗ ತಮ್ಮ ವಿಶ್ವತೋರಿಕೆಯ ಸಾಮರ್ಥ್ಯದಿಂದ ಒಬ್ಬರನ್ನೊಬ್ಬರು ವಿಷಯೀಕರಿಸುವ ಬಗೆಯು ಉಂಟಾದುದೂ ಅಚ್ಚರಿಯಲ್ಲ. ಒಂದೇ ಅಂಗದ ಮೇಲೆ ಚಿಗಿತಿರುವ ಎರಡು ಕೈಗಳಲ್ಲಿ ಬಲಗೈ ಎಡಗೈಗೆ ಹಣಕೊಟ್ಟು ಸಾವುಕಾರನಾಗುವುದೂ ಎಡಗೈ ಆ ಹಣವನ್ನು ಇಸಿದುಕೊಳ್ಳುವ ಬಡವನೆನಿಸುವುದೂ ಎಂಬ ವಿಷಯ ವಿಷಯಿತ್ವಗಳು ಒಂದೇ ಅಂಗದಲ್ಲಿ ತೋರಿಬರುವುವು.

ಕಣ್ಣು ಮುಂದೆ ಕಾಣಬರುವ ಸರ್ವ ಪದಾರ್ಥಗಳೂ ಅವುಗಳನ್ನು ತನ್ನಲ್ಲಿಯೇ ಸಮಾವೇಶಮಾಡಿಕೊಳ್ಳುವ ಈ ಸರ್ವ ದೃಶ್ಯಾದೃಶ್ಯ ಪ್ರಪಂಚವೂ ಒಂದು ಚೈತನ್ಯವೇ ಆಗಿದೆ. ಶ್ರೀ ರೇಣುಕ ಭಗವತ್ಪಾದರು—

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೆ ||

'ವೃಕ್ಷವೇ ಪತ್ರಶಾಖಾದಿ ರೂಪದಿಂದಿರುವ ಹಾಗೆ, ಶಿವನು ಒಬ್ಬನೇ ತನ್ನ ಶಕ್ತಿವಿಲಾಸದಿಂದ ಭೂಮಿ ಮೊದಲಾದ ವಿಶ್ವರೂಪನಾಗಿ ತೋರುತ್ತಾನೆ' ಎಂದು ನಿರೂಪಿಸಿದ್ದಾರೆ.

ಆ ಒಂದು ಚೈತನ್ಯವೇ ತನಗಿಂತಲೂ ವಿಜಾತೀಯವಾದ ಯಾವ ಬಗೆಯ ಬೇರೊಂದು ತತ್ವದ ನೆರವಿಲ್ಲದೆ ತನ್ನ ಸ್ವೈಸರ್ಗಿಕವಾದ ಬಹು ಭವನ ನಿರ್ಮಾಣದಲ್ಲಿ ಕರಣವೆನಿಸುವ ಶಕ್ತಿಯಿಂದ ತಾನು ತನ್ನ ಏಕತ್ವವನ್ನು ಕಾಯ್ದುಇಟ್ಟುಕೊಂಡೇ ಒಂದಕ್ಕೆರಡು, ಎರಡಕ್ಕೆ ಮೂರು ಹೀಗೆಯೇ ಕೊನೆಗೆ ಬಹುರೂಪವಾಗಿರುವುದು. ಸೇಂಗಾದ (ನೆಲಗಡಲೆಯ) ಒಂದೇ ಕಾಳು ತನ್ನ ಸೇಂಗಾತನವನ್ನು ಅಗಲದೆ ಹೋಳೆ [ಬೇಳೆ] ಯಾದುದಾದರೂ ಸೇಂಗಾಕ್ಕಿಂತಲೂ ಬೇರೊಂದು ತತ್ವವೇ ನಿರ್ಮಾಣವಾಯಿತೆನ್ನಬಹುದೇ? ಮತ್ತು ಹೋಳೆಗಳು ಎರಡು, ಸೇಂಗಾ ಒಂದು, ಅಂತು ಮೂರು ಎಂದು ನುಡಿಯಲೂ ಬಾರದು. ಹೋಳೆಗಳಲ್ಲಿ ಸೇಂಗಾ ಇಲ್ಲವೆಂದೂ, ಸೇಂಗಾದಲ್ಲಿ ಹೋಳೆಗಳಿಲ್ಲವೆಂದೂ, ಹೇಳಲಾಗದು. ಪರಶಿವಚೈತನ್ಯವೊಂದೇ ಸೇಂಗಾಕಾಳಿನಂತಿರುವುದು. ಅದೂ ಅದರ ಸಂವಿಚ್ಛಕ್ತಿಯು ಎಂಬಿವೆರಡೂ ಆ ಸೇಂಗಾಕಾಳಿನ [ನೆಲಗಡಲೆಯ] ಎರಡು ಹೋಳೆಗಳು; ಅವೆರಡರಿಂದ ಉಂಟಾದ ವಿಸ್ತಾರವಾದರೂ ಸೇಂಗಾಕಾಳೇ. ಹಾಗೆಯೇ ಪರಶಿವಚೈತನ್ಯದಿಂದುಂಟಾದ ವಿಶ್ವವಾದರೂ ಆ ಪರಶಿವಚೈತನ್ಯವೇ. ಚರಾಚರಾತ್ಮಕವಾದ ಈ ವಿಶ್ವವು ಇಂದ್ರಜಾಲವಲ್ಲ; ಅದಕ್ಕಾಗಿ ಬ್ರಹ್ಮಕ್ಕೆ ವಿಜಾತೀಯವಾದ ಮಾಯೆಯ ಸಾಹಾಯ್ಯದ ಅಪೇಕ್ಷೆಯಿರುವುದಿಲ್ಲ. ಈ ಚೈತನ್ಯವು ಸರ್ವವನ್ನೂ ನಿರ್ಮಿಸುವ ಶಕ್ತಿಯುಳ್ಳದ್ದಾಗಿದೆ. ಬಹುರೂಪವಾಗಿ ತೋರುವುದೆಲ್ಲವೂ ಚೈತನ್ಯವು ತಾನೊಂದೇ. ಸೇಂಗಾಕಾಳಿನ ಎರಡು ಹೋಳೆಗಳು ಕೂಡಿ ಒಂದೇ ಸೇಂಗಾಕಾಳು. ಹಾಗೆಯೇ ಶಿವಶಕ್ತಿಗಳೆಂಬ ಎರಡು ಹೋಳೆಗಳು, ಒಂದು ಚೈತನ್ಯವೆಂಬ ಸೇಂಗಾಕಾಳೇ. ಶೈವಾಗಮದರ್ಶನದಲ್ಲಿ ಶಿವಶಕ್ತಿಗಳ ಸ್ವರೂಪವು, ಬೆಂಕಿಯು ಅದರ ಸುಡುವತನವೂ ಬೆಳ್ಳವು ಅದರ ಸವಿಯೂ ಎಂಬ ಮುಂತಾದವುಗಳಿಗೆ ಹೋಲಿಸಿ ನಿರ್ದೇಶಮಾಡಲ್ಪಟ್ಟಿದೆ. ಹಲಾಯುಧನು ಈ ಶಿವಶಕ್ತಿಯುಗ್ಮದ ಸ್ವರೂಪವನ್ನು—

ಏಕೋದೇವಃ ಸಜಯತಿ ಏವಃ ಕೇವಲಂ ಜ್ಞಾನಮೂರ್ತಿಃ | ದೇವೀ ಸಾಚ ತ್ರಿಭುವನಮಿದಂ ಯದ್ವಿಭೂತಿ ಪ್ರಪಂಚಮ್ || ಯತ್ಸ್ವಾಟಸ್ಥಂ ಮಿಥುನಮವಿನಾಭಾವ ಸಂಬಂಧಯೋಗಾ | ತ್ಸ್ತ್ರೀಭೂತಂ ತದಖಿಲ ಜಗಜ್ಜನ್ಮಬೀಜಂ ನಮಾಮಿ ||

'ದೇವನು [ಶಿವನು] ಸ್ವಪ್ರಕಾಶನೂ, ಅದ್ವಿತೀಯನೂ, ಆಗಿರುವಂತೆ ದೇವಿ [ಶಿವಶಕ್ತಿ] ಯಾದರೂ ಸ್ವಪ್ರಕಾಶಳೂ, ಅದ್ವಿತೀಯಳೂ, ಆಗಿದ್ದಾಳೆ. ಈ ತ್ರಿಭುವನವು ಯಾವ ಶಿವಶಕ್ತಿ ವಿಲಾಸವೇ ಆಗಿದೆಯೋ ಯಾವ ಶಿವಶಕ್ತಿಯುಗ್ಮವು ಅವಿನಾಭಾವ ಸಂಬಂಧವುಳ್ಳದ್ದಾಗಿರುವುದೋ ವಿಶ್ವದ ಉತ್ಪತ್ತಿಗೆ ಬೀಜವಾದ ಆ ಶಿವಶಕ್ತಿಯುಗ್ಮಕ್ಕೆ ಪೊಡಮಡುತ್ತೇನೆ.' ಎಂದು ಹೊಗಳಿದ್ದಾನೆ. ಕಾಳಿದಾಸನ 'ವಾಗರ್ಥಾವಿವಸಂಪೃಕ್ತೌ' ಎಂಬೀ ನುಡಿಯೆಂಬ ದುರ್ಬಿಣದಿಂದ ನೋಡಿದರೂ ಈ ಮತವೇ ಸ್ಪಷ್ಟವಾಗಿ ತೋರಿಬರುವುದು. (ಸಶೇಷ.)

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನ ಪೀಠದ ತಾಲೂಕು ಅಡಳಿತಕ್ರಮ.

ಚಿಕ್ಕಮಗಳೂರು.

ಈ ಅಡಳಿತಕ್ರಮದ ಪ್ರಾಂತಿಕ ಮೀಟಿಂಗು ತಾ|| 17-6-29 ನೇ ಸೋಮವಾರ ಚಿಕ್ಕಮಗಳೂರು ತಾಲ್ಲೂಕು ಅಲ್ದೂರು ಉರ್ದು ಬಾಯ್ಸ್ ಮಿಡಲ್ ಸ್ಕೂಲು ಹಾಲಿನಲ್ಲಿ ಅಲ್ದೂರು ನಾಡು ಪಟೇಲರು ಮ|| ರಾ|| ರಾಮಪ್ಪಗೌಡರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಸ್ಕೂಲುಕಟ್ಟಡವು ತಳಿರು ತೋರಣಗಳಿಂದ ಅಂದವಾಗಿ ಅಲಂಕರಿಸಲ್ಪಟ್ಟಿತ್ತು. ಅಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವು ಉಚಿತಾಸನದಲ್ಲಿ ಸ್ಥಾಪಿಸಲ್ಪಟ್ಟಿತ್ತು. ಸಭೆಯು ವೀರಶೈವರಿಂದಲೂ, ವೀರಶೈವ ಮತಾನುಯಾಯಿಗಳಿಂದಲೂ 200 ಜನಗಳವರೆಗೆ ತುಂಬಿತ್ತು. ಅಧ್ಯಕ್ಷರನ್ನು ಮಂಗಳವಾದ್ಯದೊಡನೆ ಸಭೆಗೆ ಕರೆದುಕೊಂಡು ಬಂದನಂತರ ಪ್ರಾರಂಭದಲ್ಲಿ ದೇವತಾಪ್ರಾರ್ಥನೆಯೂ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರವೂ ಬಹು ಭಕ್ತಿಪೂರ್ವಕವಾಗಿ ನೆರವೇರಿದವು. ಅನಂತರ ಅಧ್ಯಕ್ಷರು ತಮ್ಮ ಸ್ಥಾನವನ್ನು ಅಲಂಕರಿಸಿದರು. ಅಧ್ಯಕ್ಷರ ಉಭಯಪಾರ್ಶ್ವಗಳಲ್ಲಿ ಮ|| ರಾ|| ಕಾಫಿಪ್ಲಾಂಟರ್ ಬಿ. ಪುಟ್ಟಣ್ಣಶೆಟ್ಟರು ಮತ್ತು ಕೆಳಗೂರು ಪಟೇಲರು ಮ|| ರಾ|| ವೀರಪ್ಪಗೌಡರು ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ಅಧ್ಯಕ್ಷರು ಈ ಅಡಳಿತಕ್ರಮದ ವಿಚಾರವಾಗಿಯೂ ಇದರಿಂದ ಸಮಾಜದ ಏಳಿಗೆಗೂ ಪೀಠಗಳ ಅಭಿವೃದ್ಧಿಸ್ಥಿತಿಗೂ ಏಕಮತ್ಯಕ್ಕೂ ಎಷ್ಟರಮಟ್ಟಿಗೆ ಸಹಾಯಕವಾಗಿರುತ್ತದೆಂಬುದನ್ನೂ ಗುರುಭಕ್ತಿಯು ಸರ್ವತ್ರ ಎಷ್ಟರಮಟ್ಟಿಗೆ ಬೇರೂರಲು ಅವಕಾಶವಾಗುತ್ತದೆಂಬುದನ್ನೂ ಸರ್ವರಿಗೂ ಮನನವಾಗುವಂತೆ ಭಾಷಣಮಾಡಿದರು. ತರುವಾಯ ತಾಲೂಕು ಏಜಂಟ್ ಎಂ. ಪಿ. ಚಂದಯ್ಯನವರು ಇದುವರೆಗೆ ನಡೆಯಿಸಿದ ಅಡಳಿತದ ವಿಷಯದಲ್ಲಿ ಪ್ರಾಪ್ತವಾಗುತ್ತಲಿರುವ ಸಾಧಕಬಾಧಕಗಳನ್ನೂ, ಅದಕ್ಕೆ ಪರಿಹಾರವನ್ನೂ, ಈಗಿನ ವಸೂಲಿಕ್ರಮದಿಂದ ಉಂಟಾಗುತ್ತಲಿರುವ ತೊಂದರೆಗಳನ್ನೂ, ಸಮಾಜದ ಏಳಿಗೆಗೂ, ಏಕಮತ್ಯಕ್ಕೂ ಪೀಠಗಳ ಅಭಿವೃದ್ಧಿಸ್ಥಿತಿಗೂ ಮುಖ್ಯವಾಗಿ ಕೈಕೊಳ್ಳಬೇಕಾದ ಸಲಹೆಗಳನ್ನೂ, ಭಕ್ತಾದಿಗಳಿಗೆ ಕಾಣಿಕೆ ವಗೈರೆ ಸಲ್ಲಿಸಲು ಅನೇಕ ತೊಂದರೆಗಳಿವೆ ಎಂಬುವುದು ಸ್ಪಷ್ಟಪಡುತ್ತಲಿದ್ದಾಗ್ಯೂ ದುರ್ದೈವವಾಗಿ ನಮ್ಮಗಳ ಗಮನಕ್ಕೂ ಲಕ್ಷ್ಯಕ್ಕೂ ಬಾರದೆ ವ್ಯರ್ಥವಾಗಿ ಖರ್ಚಾಗುತ್ತಿರುವ ಭಾಗಗಳಲ್ಲಿ ಅಲ್ಪಸ್ವಲ್ಪವನ್ನಾದರೂ ಪರೋಪಕಾರಕ್ಕೆ ಸಹಾಯಮಾಡಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿ ಗುರುಭಕ್ತಿಯುತರಾಗಿ ನಡೆದುಕೊಳ್ಳಬೇಕೆಂಬುದನ್ನೂ ಅನೇಕದೃಷ್ಟಾಂತಗಳಿಂದ ಸರ್ವರ ಚಿತ್ತದಲ್ಲಿ ನೆಲೆಗೊಳ್ಳುವಂತೆ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಅಲ್ದೂರು A. V. ದೇವಪ್ಪಗೌಡರು ಸಮಾಜದ ಐಕಮತ್ಯ ಅಭಿವೃದ್ಧಿಸ್ಥಿತಿವಿಷಯವಾಗಿಯೂ, ಮತತತ್ವದ ವಿಷಯವಾಗಿಯೂ ಬೋಧಿಸಿದರು. ಇದೇ ವಿಷಯವನ್ನು ಕುರಿತು ಕಾಫಿಪ್ಲಾಂಟರ್ ಬಿ. ಪಿ. ಮಲ್ಲಪ್ಪಗೌಡರು, ಕೆಳಗೂರು ಪಟೇಲರು ಕಾಫಿಪ್ಲಾಂಟರ್ ವೀರಪ್ಪಗೌಡರು ಪುಷ್ಟೀಕರಿಸಿ ಮಾತನಾಡಿದರು. ಅನಂತರ ಈ ಸಂಸ್ಥಾನದ ತಾಲೂಕು ಅಡಳಿತಕ್ಕೆ ಅಲ್ದೂರು, ವಸ್ತಾರೆ, ಖಾಂಡ್ಯ, ಆವುತಿ ಈ ನಾಲ್ಕು ಹೋಬಳಿಗಳಿಂದ ಈ ಕೆಳಗೆ ಕಂಡ ಮಹನೀಯರು ಸಬ್ ಕಮಿಟಿಗೆ ಮೆಂಬರಾಗಿ ಚುನಾಯಿಸಲ್ಪಟ್ಟರು. 1. ಮ|| ರಾ|| ಅಲ್ದೂರು ನಾಡು ಪಟೇಲರು ರಾಮಪ್ಪಗೌಡರು, 2. ಮ|| ರಾ|| ಪಟೇಲರು ವೀರಪ್ಪಗೌಡರು ಕೆಳಗೂರು 3. ಮ|| ರಾ|| ಬಿ. ಪುಟ್ಟಣ್ಣಶೆಟ್ಟರು ಕಾಫಿಪ್ಲಾಂಟರ್ ಅಲ್ದೂರು, 4. ವೇ|| ಮಠದ ಚನ್ನಪ್ಪಯ್ಯನವರು ಅಲ್ದೂರು 5. ಎಗೆಡಿಗೆ ಮ|| ಪಟೇಲರು ನಂಜೇಗೌಡರು 6. ಮಾಚಗೋಡನಹಳ್ಳಿ, ಮ|| ಪಟೇಲರು ಸಿದ್ದೇಗೌಡರು 7. ಹಾಂದಿಪಟೇಲರು ಮ|| ರಾ|| ತಿಮ್ಮೇಗೌಡರ ಮಕ್ಕಳು ದ್ಯಾವೇಗೌಡರು, 8. ಚಿಕ್ಕಮಾಗ್ರವಳ್ಳಿ ಮ|| ನಂದೀಮನೆ ದ್ಯಾವೇಗೌಡರು, 9. ಬಿ. ಪಿ. ಮಲ್ಲಪ್ಪಶೆಟ್ಟರು ಕಾಫಿಪ್ಲಾಂಟರ್ ಅಲ್ದೂರು 10. ಆಣೂರುಮಠದ ವೇ|| ಸಿದ್ದಪ್ಪಯ್ಯನವರು, 11. ಆಣೂರು ಪಟೇಲರು ಮ|| ರಾ|| ಲಿಂಗೇಗೌಡರು, 12. ಕೋಟೆಪುರ ಪಟೇಲರು ಮ|| ತಂಬೇಗೌಡರು, 13. ಹೆಡ್ದಾಳು ಗುಡ್ಡದ ಮ|| ರಾ|| ಅಣ್ಣೇಗೌಡರು, 14. ಜೋಳದಾಳು ಕಾಫಿಪ್ಲಾಂಟರ್ ಮ|| ರಾ|| ಪುಟ್ಟಪ್ಪಶೆಟ್ಟರು, 15. ಚಿಕ್ಕನಹಳ್ಳಿ ಪಟೇಲರು ಮ|| ವೀರೇಗೌಡರು, 16. ತೋರಣಮಾವು ಪಟೇಲರು ಮ|| ... ಗೌಡರು, 17. ಹಲಸುಮನೆ ಪಟೇಲರು ಮ|| ರಾ|| ವೀರೇಗೌಡರು, 18. ನಂದೀಕೆರೆ ಪಟೇಲರು ಮ|| ಮಲ್ಲೇಗೌಡರು, 19. ಕಲ್ಲಳ್ಳಿ ಮಠದ ವೇ|| ರುದ್ರಯ್ಯನವರು, 20. ಶುಕ್ರವಾರಪೇಟೆ ವೇ|| ನಂಜಯ್ಯನವರು, 21. ಸೋಮವಾರಪೇಟೆ ಮ|| ವೀರಪ್ಪಶೆಟ್ಟರು, 22. ಕೋಟೆಪುರ ಮ|| ಚಂದಪ್ಪಶೆಟ್ಟರು, 23. ... ಪಟೇಲರು ಮ|| ಹೆಗ್ಗಡೇಗೌಡರು, 24. ಬೊಗಸೆ ಪಟೇಲರು ದ್ಯಾವೇಗೌಡರು, 25. ಬಾಸಾಪುರದ ಪಟೇಲರು ಮ|| ... ಸವಂತೆಗೌಡರು, 26. ಕಡವಂತಿ ಪಟೇಲರು ಮ|| ... ರು. 27. ಬೈಗೂರು ಪಟೇಲರು ಮ|| ದ್ಯಾವೇಗೌಡರು ... ದ ಮಳಲಿ ಮ|| ರಾ|| ಪಟೇಲರು ಅಣ್ಣೇಗೌಡರು

... ಶ್ರೀ ಜಗದ್ಗುರು ಮಹಾಸಂಸ್ಥಾನಕ್ಕೆ ಸಲ್ಲತಕ್ಕ ... ಕಾಣಿಕೆ ವಗೈರೆ ವಸೂಲಿ ವಿಷಯದಲ್ಲಿ ಆಯಾ ... ತ್ತು ಪ್ರಾಂತ್ಯದಲ್ಲಿರತಕ್ಕ ಮಠಸ್ಥರೂ ಕಮಿಟಿ ... ಯದಿಂದ ಪ್ರತಿಸಾಲಿನಲ್ಲಿಯೂ ಜನವರಿ, ... ರ್ಚ್, ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಪ್ರ... ಯೂ ವಸೂಲು ಮಾಡಿ ಕ್ರಮವಾಗಿ ಏಜಂಟರ ... ಮಾಡಿಸುತ್ತ ಬರಬೇಕೆಂದೂ, ಈ ವಿಷಯದಲ್ಲಿ ... ರು ಮಹಾಸಂಸ್ಥಾನದಿಂದ ಸಂದರ್ಭಾನುಸಾರ ... ಲಾಯಿಸುವ ನಿಬಂಧನೆಗಳಿಗೆ ಒಳಪಟ್ಟಿರಬೇಕೆಂ... ಮ ನಡೆಯಿಸತಕ್ಕವರಿಗೆ ಶ್ರೀಗಳವರ ಅಪ್ಪಣೆಮೇ... ವಾಗಿ ದ್ರವ್ಯಸಹಾಯಮಾಡಲಾಗುವುದೆಂದೂ ... ಜಗದ್ಗುರುಗಳ ಸನ್ನಿಧಿಯಿಂದ ಮುಂಜೂರಾದ ... ಜಾರಿಗೆ ತರಬಹುದೆಂದೂ ಬಹು ಚರ್ಚೆಯ ... ದ ತೀರ್ಮಾನಮಾಡಲ್ಪಟ್ಟಿತು. ಕನ್ಯಾಕುಲ್ಕ ... ಯವೆಂದು ತಿಳುವಳಿಕೆಯಲ್ಲಿದ್ದಾಗ್ಯೂ ಈ ... ಗಳಲ್ಲಿ ಆಚರಣೆಯಲ್ಲಿದೆ ಎಂಬುವುದು ತಿಳುದು ... ಮಹಾಸಂಸ್ಥಾನದ ಪದ್ಧತಿಯ ಮೇರೆಗೆ ... ನ್ನು ಸಲ್ಲಿಸಲು ತಕ್ಕ ಏರ್ಪಾಡನ್ನು ಕೈಕೊ... ಡಿಸ್ಟ್ರಿಕ್ಟು ಬೋರ್ಡ್ ಮೆಂಬರಾದ ಮ|| ರಾ|| ... ಗೌಡರು ತಂದ ಈ ವಿಷಯವನ್ನು ಮ|| ಬಿ. ಪಿ. ... ನುಮೋದಿಸಿದರು. ಅನಂತರ ಚರ್ಚೆಗೆ ಇಟ್ಟು ... ಶಾಸ್ತ್ರವಿರೋಧವಾಗಿರುವದರಿಂದ ಮಹಾಸಂ... ಮೇರೆಗೆ ತಕ್ಕ ಏರ್ಪಾಡನ್ನು ಕಲ್ಪಿಸಬೇಕೆಂ... ದಿಂದ ತೀರ್ಮಾನಮಾಡಲ್ಪಟ್ಟಿತು. ಮ|| ... ಪುಟ್ಟಣ್ಣಶೆಟ್ಟರು ಶ್ರೀ ಪಂಚಾಚಾರ್ಯಪ್ರ... ಯವಾಗಿ ಸರ್ವರಿಗೂ ತಿಳಿಯಪಡಿಸಿದ್ದರಿಂದ ... ಮೀಟಿಂಗಿನಲ್ಲಿ 15 ಜನರು ಚಂದಾದಾರರಾದರು. ... ದ ಮೀಟಿಂಗಿನ ಜ್ಞಾಪಕಾರ್ಥವಾಗಿ ಅಧ್ಯ... ಪಂಚಾಚಾರ್ಯಪ್ರಭೆಗೆ 2 ರೂಪಾಯಿಗಳನ್ನು ಕಳು... ಹಿಸಿದರು. ತರುವಾಯ ನಮ್ಮ ಪ್ರಭುವಯ ... ಮಹಾರಾಜರವರ ಶ್ರೇಯಃಪ್ರಾರ್ಥನೆಯು ... ಮುಕ್ತಾಯವಾದೊಡನೆ ಸಭೆಯು ಬರಖಾಸ್ತಾಯಿತು.

M. P. Chan...
Taluk ...

ಶ್ರೀಮಜ್ಜಗದ್ಗುರು ರಂಭಾಪುರೀ ವೀ...
ಚಿಕ್ಕಮಗಳೂರು.

ವಿವಾಹಮಹೋತ್ಸವ.

... ತೀರ್ಥಹಳ್ಳಿ ತಾಲ್ಲೂಕು ಕಸಬಾ ಹೋಬಳಿ ... ಮ|| ರಾ|| ತಿಮ್ಮಯ್ಯಗೌಡರು ಮ|| ರಾ|| ... ಗೌಡರಿಗೊಬ್ಬ ಪುತ್ರಿಯನ್ನೂ, ಕಲ್ಲುಗುಡ್ಡೆ ... ಗೊಬ್ಬ ಪುತ್ರಿಯನ್ನೂ ಕೊಟ್ಟು ಸ್ವಗೃಹದಲ್ಲಿ ... ವನ್ನು ನೆರವೇರಿಸಿದರು. ಆದರೆ ಮ|| ರಾ|| ... ತಮ್ಮ ಮಕ್ಕಳನ್ನು ದಾನಮಾಡುವುದಕ್ಕೆ ಬದಲು ... ಯಮಾಡಿದ ವಿಷಯವನ್ನು ವಾಚಕರ ಗೋಚರ... ದವೆನಿಸಿದೆ. ಇಂಥ ನಾಗರಿಕಕಾಲದಲ್ಲಿಯೂ ... ವು ಅತ್ಯುತ್ಕಟಾವಸ್ಥೆಯನ್ನು ಹೊಂದಿರು... ದ್ಧವನೆ ದೊಡ್ಡನೆಂದು ಗೊತ್ತಾಗುತ್ತದೆ ... ವಾದರೂ ಬಾಯಬಿಡುವುದೆಂದಮೇಲೆ ಅದಕ್ಕೆ ... ಬಂದಿರುವುದೇನೂ ಆಶ್ಚರ್ಯವಲ್ಲ. ರಾಜ ... ಬೇಕಾದರೂ, ರಾಜ್ಯಾಡಳಿತಗಳಲ್ಲಿ ... ಯಬೇಕಾದರೂ, ಸುಖಿಸ್ವಾವವೂ, ... ಬೇಕಾದರೂ ದುಡ್ಡಿನ ಆಶ್ರಯವೇ ... ಹಣದ ಮಹತ್ವದಿಂದ ನಮ್ಮ ಮಲ... ವು ದಿನೇ ದಿನೇ ಜಾಸ್ತಿಯಾಗುತ್ತಿರುವು... ಬೇಕಾಗಿದೆ. ಇದು ನಮ್ಮ ವಿನಾ... ನವಾಗಿರುವುದು. ಈ ವಿಷಯದಲ್ಲಿ ... ರ 14 ನೆಯ ತಾರೀಖಿನ ಪಂಚಾ... ಮ|| ರಾ|| ಬಿ. ಎಸ್. ರುದ್ರ... ದೀರ್ಘವಾದ ಲೇಖನವನ್ನು ಬರೆದು ಸತ್ತ...! ... ವನ್ನು ಒಂದು ದಿನ ಓದಿ ನೋಡಿದೆನು ... ಗೌಡರು ಕನ್ಯಾಶುಲ್ಕದ ವಿಷಯದಲ್ಲಿ ... ಧರ್ಮಕ್ಕೆ ಹೆದರದೆ ಇನ್ನೂ ಹೆಚ್ಚಾಗಿ ... ನ್ನು ನೋಡಿದರೆ ವ್ಯಸನವೆನಿಸುತ್ತದೆ ... ಹೋಗಲಾಡಿಸಿಕೊಳ್ಳದೆ ಇರುವುದು ... ಯೇ ಅವನ...

... ನಾದ ...
... ಮಾ...ರಾಜರು ತಮಗೆ ...ದ್ದರೆ ನಮ್ಮ ಲೋ... ...ಚಾರ್ಯ ಸಿಂಹಾ... ...ರಗಣ ಜಗತ್ತಿನ ... ...ಧಿಕರನ್ನೂ ಕಳ್ಳಿ ...ನೋಡಿದರೆ ಉಂಟಾ...

(ಕತ್ತರಿಸಿದ ತುಣುಕುಗಳು:) ...ರಿಸಿದು ಬಂದು ...ಗೆ ಕಡೆಗೆ ಹರಿ ...ಟ್ಟು ನೂರಾರು ...ಬಂದಿರುವರು. ...ಬಂಧವಾಗಿ ಕೂ ...ದ್ದಾಗ್ಯೆ ಒಬ್ಬರಿ ...ಮ ಗಾಯಹೊಂ ...ಬಿದು. ...ರು ನೂತನ ...ಟೈಪ್‌ರೈಟಿಂಗ್ ...ನ್ನ ದಕ್ಷರಗಳಿಂದ ...ಸಲು ಪ್ರಯತ್ನ ...ಶಕನು ಮದುವೆ ...ದೇಸದೇ ಪೀಡಿ ...ನಿಗೆ ಶೀರೆಯನ್ನು ...ಯಲ್ಲಿ ನಿಜಸ್ಥಿತಿ ...ಎಂಬ ಸ್ನೇಹಿನ್ನಿನ ...ನಡೆಯಿಸುವ ...ಯ ಮೇಲೆ ತಲೆ ...ಲು, ಆ ಮಾರ್ಗ ...ದನು. ...ಮುಸಲ ...ತನ್ನೊಂದು ...ಪುಸ್ತಕ ...ಸ್ತ್ರ್ಯ! ...ಒಂದು ನಿಮಿಷ ...ಜನರು ಮೃತ ...ರುವವು. ಅಲ್ಲಿ ...ರುವದು. ...ಗಳ ಹಿಂದೆ ...ಮಹಾರಾ ...ಡಿಸ್ಟ್ರಿಕ್ಟ್ ...ವಸ ಬಾಗೇ ...ಹಿಂದೂ ...25 ಜನರಿಗೆ ...ವರ್ಷದ ...ಪ್ರೇಟ್‌ಮಾಡಿ ...ಕ್ಷತ್ರಿಯ ...ಕಾದಿಯ ...ಪರದೇಶೀ ...ತ್ಯ! ...ಮಾಲು ...ಯನ್ನು ...ಗುವು

ರಿಸಬಾರದೆಂದೂ ರಾಜ್ಯಾಡಳಿತವನ್ನು ಸರ್ಕಾರದವರೇ ನಡೆಯಿಸಬೇಕೆಂದೂ ಸರಕಾರಕ್ಕೆ ತಿಳುಹಿಸಿರುವರಂತೆ!

ಅಲೀಬಾದಿನಲ್ಲಿದ್ದು ರಸಾಯನ ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದ ಲಲಿತಮುಕರ್ಜಿ ಎಂಬವನನ್ನು ಪೋಲೀಸರು ಅರೆಸ್ಟ್‌ಮಾಡಿ ಲಾಹೋರಿಗೆ ಕರೆದುಕೊಂಡು ಹೋಗಿರುವರು. ಇವನು ಸಾಂಡರ್ಸರ ಕೊಲೆಗೆ ಸಂಬಂಧಪಟ್ಟಿರುವನೆಂದು ತಿಳಿದು ಅರೆಸ್ಟ್ ಮಾಡಿರುವರು.

ಅಮೇರಿಕಾದೇಶದ ಸಂಯುಕ್ತಸಂಸ್ಥಾನಗಳಲ್ಲಿರುವ ವ್ಯಾಪಾರಿಗಳು 1927 ನೆಯ ಇಸವಿಯಲ್ಲಿ ಕೇವಲ ಜಾಹೀರಾತಿಗಾಗಿ ಸುಮಾರು 500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುವರು. ಇದರಲ್ಲಿ ಅರ್ಧಕ್ಕಿಂತ ಹೆಚ್ಚಾದ ಭಾಗವು ವೃತ್ತಪತ್ರಿಕೆಗಳ ಜಾಹೀರಾತಿಗಾಗಿ ಖರ್ಚಾಗಿರುವದಂತೆ!

ಅಸ್ಸಾಮಿನಲ್ಲಿ ಪ್ರವಾಹದಿಂದ 5,500 ಚದರಮೈಲುಗಳ ಪ್ರದೇಶವು ಹಾಳಾಗಿರುವದೆಂದೂ, 12 ಲಕ್ಷದ ವರೆಗೆ ಜನರು ಕಷ್ಟಕ್ಕೀಡಾಗಿರುವರೆಂದೂ ನೂರಕ್ಕೆ 90 ರಂತೆ ಪ್ರಾಣಿಗಳೂ, 45 ರಂತೆ ಮನೆಮಠಗಳೂ ನಾಶವಾಗಿರುವುವೆಂದೂ ನಷ್ಟಪಟ್ಟವರ ಸಹಾಯಕ್ಕಾಗಿ ಅಸ್ಸಾಂ ಸರಕಾರದವರು 25 ಸಾವಿರ ರೂಪಾಯಿಗಳನ್ನು ಕೊಟ್ಟಿರುವರೆಂದೂ ತಿಳಿಯಬರುತ್ತದೆ.

ಕಲ್ಲಿಕೋಟೆಯಲ್ಲಿ ಒಬ್ಬ ಹೆಂಗಸು ಬಹುದಿನಗಳಿಂದ ಹೊಟ್ಟೆನೋವಿನಿಂದ ನರಳುತ್ತಿದ್ದಳು. ವೈದ್ಯರು ಶಸ್ತ್ರಚಿಕಿತ್ಸೆಯನ್ನು ಮಾಡಿ ನೋಡುವಲ್ಲಿ ಮಗುವಿನ ಆಕಾರದಂತಿದ್ದ ಸುಣ್ಣದಕಲ್ಲಿನ ರೂಪವಾದ ಪದಾರ್ಥವು ಒಳಗೆ ಇದ್ದಿತಂತೆ! ಇದು ಬೆಳೆಯಲಾರಂಭಿಸಿ 8 ವರ್ಷಗಳಾಗಿರಬಹುದೆಂದು ಡಾಕ್ಟರರು ಅಭಿಪ್ರಾಯ ಪಟ್ಟಿರುವರು. ದೇವರ ಮಹಿಮೆಯು ಅವರ್ಣನೀಯವಾದುದು.

ಅಫ್ಘಾನಿಸ್ಥಾನದಲ್ಲಿ ಬಚ್ಚಾಯಿಸಾಕನು ನಾದಿರ್ ಖಾನನನ್ನು ಕೊಲ್ಲಬೇಕೆಂದು ಒಳಸಂಚುಮಾಡಿಕೊಂಡು ಅತನಿರುವ ಸ್ಥಳಕ್ಕೆ ಬರಲು ಈ ಸಂಚನ್ನು ಮೊದಲೇ ಅರಿತಿದ್ದ ನಾದಿರ್‌ಖಾನನು ಯುದ್ಧದಲ್ಲಿ ಬಚ್ಚಾಯಿಸಾಕನನ್ನು ಸೋಲಿಸಿ ಅವನ ಕಡೆಯ 500 ಜನರನ್ನೂ, 400 ಕುದುರೆಗಳನ್ನೂ, ಸೆರೆಹಿಡಿದಿರುವನಲ್ಲದೆ ಅವನಿಂದ 30,000 ರೂಪಾಯಿಗಳನ್ನು ತೆಗೆದುಕೊಂಡಿರುವನು.

ವಾಯುರೋಗದಿಂದ ಕೈಕಾಲುಗಳೂ ಮತ್ತು ಅಂಗಾಂಗಗಳೂ ಸ್ವಾಧೀನ ತಪ್ಪಿ ಅನೇಕರು ಮರಣವನ್ನೇ ಹೊಂದುವರು. ಈ ರೋಗವನ್ನು ಖಾತ್ರಿಯಾಗಿ ಗುಣಪಡಿಸುವವರು ಯಾರೂ ಇಲ್ಲವೆಂದರೆ ಅತಿಶಯೋಕ್ತಿಯೆನಿಸದು. ಆದರೆ ಸ್ವೀಡ್‌ದೇಶದ "ಫರ್ಡಿನೆಂಡ್ ಆಸಮೇರೊ" ಎಂಬ ಡಾಕ್ಟರೊಬ್ಬರು ಈ ವಾಯುರೋಗವು ಎಷ್ಟು ವರ್ಷಗಳಿಂದಿದ್ದರೂ 10 ನಿಮಿಷಗಳಲ್ಲಿ ಸಂಪೂರ್ಣವಾಗಿ ಗುಣಪಡಿಸುವ ಉಪಾಯವನ್ನು ಕಂಡುಹಿಡಿದಿರುವರು. ಯೂರೋಪ್, ಅಮೇರಿಕಾ ಖಂಡಗಳಲ್ಲೆಲ್ಲಾ ಪ್ರಸಿದ್ಧಿ ಹೊಂದಿದ ಯಾವ ಡಾಕ್ಟರರಿಂದಲೂ ಗುಣವಾಗದಿದ್ದ ವಾಯುರೋಗವನ್ನು ಇವರು ಐದೇ ನಿಮಿಷಗಳಲ್ಲಿ ಸಂಪೂರ್ಣ ಗುಣಪಡಿಸಿರುವರಂತೆ!

ಹಿಮಾಲಯಪರ್ವತದಲ್ಲಿ 13 ಸಾವಿರ ಅಡಿಗಳಿಂದ 20 ಸಾವಿರ ಅಡಿಗಳವರೆಗೆ ಇರುವ ಪ್ರದೇಶದಲ್ಲಿ ಮಿಗರೆಂಬ ಒಂದು ಜಾತಿಯ ನರರಾಕ್ಷಸರು ವಾಸವಾಗಿರುತ್ತಾರೆ. ಇವರು 12 ಅಡಿಗಳಷ್ಟು ಎತ್ತರ ಬೆಳೆಯುವರು. 8 ಅಡಿಗಳಿಗಿಂತಲೂ ಕಡಿಮೆಯಾಗಿ ಬೆಳೆಯುವುದೇ ಇಲ್ಲವು. ಇವರು ಅಕಸ್ಮಾತ್ ಇತರ ಮನುಷ್ಯರನ್ನು ಕಂಡರೆ ಆ ಕ್ಷಣದಲ್ಲಿಯೇ ಅವರನ್ನು ಕೊಲ್ಲುತ್ತಾರೆ. ಇವರ ಹೆಂಗಸರೂ ಸಹ ಇವರಂತೆ ಕಠಿಣಸ್ವಭಾವದವರಾಗಿರುತ್ತಾರೆ. ಯಾರಾದರೂ ಸುಂದರ ಪುರುಷರನ್ನು ಕಂಡರೆ ಅವರನ್ನು ಆ ಕ್ಷಣದಲ್ಲಿಯೇ ಮೋಹಿಸಿ ಅವರಮೇಲೆ ಬೀಳುತ್ತಾರೆ. ಆ ಪುರುಷರು ಅವರಿಚ್ಛೆಯಂತೆ ನಡೆಯದಿದ್ದರೆ ಅವರನ್ನು ಕೊಂದುಹಾಕುತ್ತಾರೆ. ಸಮ್ಮತಿಸಿದರೆ ಅವರನ್ನು ಪತ್ತೆಯಿಲ್ಲದಂತೆ ಮಾಯಮಾಡಿಬಿಡುತ್ತಾರೆ ಎಂದು ಸ್ವಾಸ್ಲಿ ಜಾಕ್ಸನ್ ಎಂಬವರು ಇಂಗ್ಲೆಂಡಿನ ಡೇಲಿ ಟೆಲಿಗ್ರಾಫ್ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವರಂತೆ!

ಅಮೇರಿಕಾದೇಶದಲ್ಲಿ ಮುಖ್ಯಪಟ್ಟಣವೆನಿಸಿದ ನ್ಯೂಯಾರ್ಕಿನಲ್ಲಿ 2 ಕೋಟಿ ಜನರು ಸೌಖ್ಯವಾಗಿ ವಾಸಮಾಡುವಂಥ ಮತ್ತು ನಿರಾತಂಕವಾಗಿಯೂ ಜಾಗ್ರತೆಯಾಗಿಯೂ ಸಂಚರಿಸಲನುಕೂಲವಾಗುವಂಥ ಒಂದು ನೂತನವಾದ ಏರ್ಪಾಡನ್ನು ಯೋಚಿಸಿರುವರು. ಅದಕ್ಕೆ 800 ಕೋಟಿ ರೂಪಾಯಿಗಳು ಖರ್ಚಾಗಬಹುದೆಂದು ಊಹಿಸಲ್ಪಟ್ಟಿದೆ. 1965 ನೆಯ ಇಸವಿಯೊಳಗಾಗಿ ನ್ಯೂಯಾರ್ಕಿನ ಜನಸಂಖ್ಯೆಯು 2 ಕೋಟಿಯಾಗುವುದೆಂದೂ, ಇಷ್ಟು ಜನಗಳ ವಾಸಕ್ಕೆ ಕಟ್ಟಲ್ಪಡುವ ಹೊಸ ಪಟ್ಟಣವು 5,528 ಚದರ ಮೈಲುಗಳುಳ್ಳದ್ದಾಗುವುದೆಂದೂ ಊಹಿಸಿರುವರು. ಹೊಸಪಟ್ಟಣವನ್ನು ಯಾವರೀತಿಯಲ್ಲಿ ಕಟ್ಟಬೇಕೆಂಬುದನ್ನು ತೋರಿಸುವ ನಕಾಶಗಳು 2 ದೊಡ್ಡ ಪುಸ್ತಕಗಳಲ್ಲಿ ಅಡಕವಾಗಿರುವುವು. ಈ ನಕಾಶಗಳನ್ನು ಉತ್ತಮರೀತಿಯಿಂದ ತಯಾರಿಸಲು 150 ಜನ ಮುಖ್ಯಮುಖ್ಯ ಇಂಜನಿಯರುಗಳೂ, ಶಿಲ್ಪಿಗಳೂ ಮತ್ತು ಅರ್ಥಶಾಸ್ತ್ರಜ್ಞರೂ 7 ವರ್ಷಗಳವರೆಗೆ ಕೆಲಸಮಾಡಿರುವರು. ಅದಕ್ಕಾಗಿ ಇಲ್ಲಿಯವರೆಗೆ 2½ ಕೋಟಿ ರೂಪಾಯಿಗಳು ಖರ್ಚಾಗಿರುವವಂತೆ!

ನೆಲ್ಲೂರು ಡಿಸ್ಟ್ರಿಕ್ಟಿನಲ್ಲಿರುವ "ಪೋಲಿರೆಡ್ಡಿಪಾಳ್ಯಂ" ಎಂಬ ರೈಲ್ವೆಸ್ಟೇಷನ್ನಿನಲ್ಲಿ ಸ್ಟೇಷನ್‌ಮಾಸ್ಟರಾಗಿರುವ ಮಿ|| ವೇಮೂರಿ ನರಸಿಂಹಯ್ಯಂಗಾರ ಎಂಬವರು ಚಿಕ್ಕಂದಿನಿಂದ ಹಾವು ಕಚ್ಚಿದವರಿಗೆ ಚಿಕಿತ್ಸೆಮಾಡುತ್ತಿರುವರಂತೆ! ಹಾವು, ಚೇಳು, ನಾಯಿ, ಚಿರತೆ ಅಥವಾ ಯಾವ ವಿಷಜಂತುವಿನಿಂದೇ ಆಗಲಿ ಕಡಿಸಿಕೊಂಡವರು ಅವರಿಗೆ ಟೆಲಿಗ್ರಾಂ ಮೂಲಕ "ನಾವು ಕಚಿಂದಿ ದಂಡವೇಯಲ" ಎಂದು ತಿಳುಹಿಸಿದರೆ, ಅವರು ಆ ಕೂಡಲೆ ಒಂದು ದಾರವನ್ನಾಗಲಿ ಅಥವಾ ಬಟ್ಟೆಯನ್ನಾಗಲಿ ಅವರ ಸಮೀಪದಲ್ಲಿದ್ದವರಿಗೆ ಕೊಟ್ಟು ಯಾವುದಾದರೂ ಒಂದು ಮರಕ್ಕೆ ಕಟ್ಟಿಬರುವಂತೆ ಹೇಳುವರಂತೆ! ಅದನ್ನು ಮರಕ್ಕೆ ಕಟ್ಟಿದೊಡನೆ ಕಡಿಸಿಕೊಂಡವರು ಎಲ್ಲಿದ್ದರೂ ಗುಣಹೊಂದುವರಂತೆ! ಇದು ನಿಜವಾದಪಕ್ಷದಲ್ಲಿ ಈತನಿಗೆ ಮಹಿಮನೆಂದೇ ಹೇಳಬೇಕಾಗುವದು. ನಮ್ಮ ಕರ್ಣಾಟಕದೇಶೀಯರು ಯಾರಾದರೂ ಈ ವಿಷಯವನ್ನು ಅನುಭವಕ್ಕೆ ತೆಗೆದುಕೊಂಡು ನಿಜಾಂಶವನ್ನು ತಿಳಿದು ವರ್ತಮಾನಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದರೆ ಜಗತ್ತಿನ ಜನರಿಗೆ ಮಹೋಪಕಾರ ಮಾಡಿದಂತಾಗುವದು.

ಸಿಕಂದರಾಬಾದಿನ ಮ್ಯಾಜಿಸ್ಟ್ರೇಟರ ಟೋಪಿಯು ಪ್ರತಿನಿತ್ಯವೂ ಅವರು ಆಫೀಸಿಗೆ ಹೊರಡುವ ವೇಳೆಗೆಸರಿಯಾಗಿ ಮಾಯವಾಗುತ್ತಿತ್ತಂತೆ! ಅವರು 2 ಹೊಸಟೋಪಿಗಳನ್ನು ಕೊಂಡುಕೊಂಡರು. ಆ ಟೋಪಿಗಳೂ ಸಹ ಮಾಯವಾಗಲು, ಯಾವನೋ ಚತುರನಾದ ಕಳ್ಳನು ಹೀಗೆ ಮಾಡುವನೆಂದು ತಿಳಿದು ಈ ವಿಷಯವನ್ನು ಪೋಲೀಸರಿಗೆ ತಿಳುಹಿಸಿದರು. ಪೋಲೀಸರು ಈ ಕಳ್ಳತನವನ್ನು ಕಂಡುಹಿಡಿಯಲು ಪ್ರಯತ್ನ ಮಾಡುತ್ತಿರುವಲ್ಲಿ ಮ್ಯಾಜಿಸ್ಟ್ರೇಟರ ಮತ್ತು ಅವರ ಮಗನ ಎರಡು ಟೋಪಿಗಳು ಪುನಃ ಮಾಯವಾದವು. ಎಲ್ಲರಿಗೂ ಆಶ್ಚರ್ಯವಾಯಿತು. ಪೋಲೀಸರು ಎಷ್ಟು ಎಚ್ಚರಿಕೆಯಿಂದ ಕಾವಲಿದ್ದರೂ ಕಳ್ಳತನವು ಪತ್ತೆಯಾಗಲಿಲ್ಲ. ರೆವಿನ್ಯೂ ಆಫೀಸಿನ ಕ್ಲಾರ್ಕನೊಬ್ಬನು ಅದುವರೆಗೆ ಮಾಯವಾಗಿದ್ದ ಟೋಪಿಗಳನ್ನೆಲ್ಲ ತಂದು ಮ್ಯಾಜಿಸ್ಟ್ರೇಟರ ಮುಂದಿರಿಸಿ, ತಾವು ಪ್ರೀತಿಯಿಂದ ಸಾಕುತ್ತಿದ್ದ ಬೆಕ್ಕು ತಮ್ಮ ಟೋಪಿಗಳನ್ನು ನನ್ನ ಮನೆಯಲ್ಲಿ ತಂದುಹಾಕುತ್ತದೆಂದು ಹೇಳಿದನು. ಮ್ಯಾಜಿಸ್ಟ್ರೇಟರು ಅವನ ಮಾತನ್ನು ನಂಬದೆ ಅವನನ್ನು ಪೋಲೀಸರ ವಶಮಾಡಿದರು. ಪೋಲೀಸರು ಗುಮಾಸ್ತನು ಹೇಳುವದನ್ನು ಪರೀಕ್ಷಿಸಬೇಕೆಂದು ಎರಡು ಟೋಪಿಗಳನ್ನು ಮ್ಯಾಜಿಸ್ಟ್ರೇಟರ ಮನೆಯಲ್ಲಿಟ್ಟು ಮರೆಯಲ್ಲಿ ನೋಡುತ್ತಿರಲು ಬೆಕ್ಕು ಅಲ್ಲಿಗೆ ಬಂದು ಟೋಪಿಗಳಲ್ಲಿ ಸ್ವಲ್ಪ ಹೊತ್ತು ಚೆಲ್ಲಾಟವಾಡಿ ಆ ಮೇಲೆ ಅವುಗಳನ್ನು ಕಚ್ಚಿಕೊಂಡು ಹೋಯಿತಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶಿವಶಕ್ತಿವಿಲಾಸವು.

(ಕಳೆದವಾರದ ಶೇಷ.)

ಲೇಖಕರು.—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ, ವಿಜಾಪುರ.

ಸ್ವತಂತ್ರವೂ ಅದ್ವಿತೀಯವೂ ಆದ ಬ್ರಹ್ಮವು ತ್ರಿಪುಟಿ ರೂಪವಾದ ವಿಶ್ವತೋರಿಕೆಗಾಗಿ 'ಉಪಾಧಿ' ಯೋ ಇಲ್ಲವೆ ಬೇರೆ ಯಾವದಾದರೊಂದು ಸಾಧನದ ಹಂಗು ಉಳ್ಳದ್ದಾಗಿರುವದೆಂಬ ಬಗೆಯಾದರೋ, ಉತ್ತರಮೀಮಾಂಸೆಯು ಉಗಮಸ್ಥಳವೆನಿಸುವ ಉಪನಿಷದ್ಭಾಗದಲ್ಲಿಯೇ ಕಂಡುಬರುವದಿಲ್ಲ. ಪರಬ್ರಹ್ಮಾಭಿಧ ಪರಶಿವನು ಸ್ವಾತ್ಮೀಯಶಕ್ತಿಕಾರಣಮಾತ್ರದಿಂದೇ ವಿಶ್ವನಿರ್ಮಾಣ ಸಮರ್ಥನಾಗಿದ್ದಾನೆ. ಅದುಕಾರಣವೇ ಪ್ರಮಾತೃಪ್ರಮಾಣ ಪ್ರಮೇಯರೂಪ ವಿಶ್ವವೆಲ್ಲವೂ ಶಿವಶಕ್ತಿವಿಲಾಸವೆಂದು ಉಪನಿಷತ್ತುಗಳೂ ಆಗಮಗಳೂ ಸಾರುತ್ತವೆ. ಶಿವಶಕ್ತಿವಿಲಾಸದ ಅಲಂಕಾರಿಕ ವರ್ಣನೆಯು ಬೃಹದಾರಣ್ಯಕದಲ್ಲಿ ಬಲು ಸೊಗಸಾಗಿದೆ. 'ಆತ್ಮೈವೇದಮಗ್ರ ಆಸೀತ್ ಪುರುಷ ವಿಧಃ'—ಇದೆಲ್ಲವೂ ಆರಂಭದಲ್ಲಿ ಕೇವಲ ಆತ್ಮನೇ ಆಗಿದ್ದಿತು: ಈ ಆತ್ಮನು ಪುರುಷನೆನಿಸಿಕೊಳ್ಳುವನು. (೧-೪-೧) 'ಸ ವೈ ನೈವರೇಮೆ, ತಸ್ಮಾದೇಕಾಕೀ ನ ರಮತೆ ಸ ದ್ವಿತೀಯ ಮೈಚ್ಛತ್, ಸ ಹೈತಾವಾನಾಸ ಯಥಾ ಸ್ತ್ರೀಪುಮಾಂಸೌ ಸಂಪರಿಷ್ವಕ್ತೌ ಸ ಇಮಮೇವಾತ್ಮಾನಂ ದ್ವೇಧಾಪಾತಯತ್, ತತಃ ಪತಿಶ್ಚ ಪತ್ನೀ ಚಾಭವತಾಂ, ತಸ್ಮಾದಿದಮರ್ಧ ಬೃಗಲಮಿವ ಸ್ವ ಇತಿ ಹ ಸ್ಮಾಹ....(೧-೪-೩)........ಯದಿದಂ ಕಿಂಚ ಮಿಥುನಮಾಪಿಪೀಲಿಕಾಭ್ಯ ಸ್ತತ್ಸರ್ವಮಸೃಜತ''

ಅವನು ರಮಿಸುವವನಾಗಲಿಲ್ಲ. ಅದುಕಾರಣವೇ ಈಗಲೂ ಒಂದೇ ಪ್ರಾಣಿಯು ರಮಿಸಲಾರದು. ಅವನು ಮತ್ತೊಂದು ವಸ್ತುವನ್ನು ಬಯಸಿದನು. ಆಗ ಪರಸ್ಪರ ಸಂಬದ್ಧವಾದ ಸ್ತ್ರೀಪುರುಷರಾವಸ್ಥೆಯನ್ನು ತಳೆದನು: ಅವನು ಈ ತನ್ನ ಇರುವನ್ನೇ ಎರಡಾಗಿ ವಿಂಗಡಿಸಿದನು. ಅದರಿಂದ ಗಂಡ ಹೆಂಡರೆಂಬ ಜೋಡುಂಟಾಯಿತು. ಆ ಕಾರಣದ ದೆಸೆಯಿಂದ, ತನ್ನ ಈ ದೇಹವನ್ನು ಬಿದುರಿನ ಸೀಳಿನಂತಿರುವುದೆಂದು ಹೇಳಿದನು. ಈ ಪುರುಷಾರ್ಧವಾದರೋ ಸ್ತ್ರೀಯಿಂದ ಪೂರ್ಣಗೊಳಿಸಲ್ಪಡುವುದು. (೧-೪-೩) ಈ ರೀತಿಯಾಗಿ, ಇರುವೆ ಮೊದಲಾಗಿ ಹಿರಿ ದೊಡ್ಡ ಪ್ರಾಣಿಗಳವರೆಗಿನ ಸರ್ವ ಪ್ರಾಣಿಗಳ ಮಿಥುನವು [ಹೆಣ್ಣು ಗಂಡು ಜೋಡು], ಶಿವಶಕ್ತಿವಿಲಾಸವೇ [೧-೪-೪] 'ಸೋಽವೇದಾಹಂ ವಾವ ಸೃಷ್ಟಿರಸ್ಮಿ'—ನಾನೇ ಸೃಷ್ಟಿಯಾಗಿದ್ದೇನೆಂದು ತಿಳಿಯುವವನಾದನು [೧-೪-೫]

ಈ ಮೇಲಿನ ಬೃಹದಾರಣ್ಯದ ವಚನಗಳ ತಾತ್ಪರ್ಯವೇನೆಂದರೆ:—ಈ ಸಕಲ ಜಗತ್ತು ಮೊಟ್ಟಮೊದಲು ಕೇವಲ ಅದ್ವಿತೀಯ ಚೈತನ್ಯಾತ್ಮವೇ ಆಗಿದ್ದಿತು. ಈ ಆತ್ಮನು ಪುರುಷಪ್ರಕಾರಕನಾಗಿದ್ದನು; ಅವನು ಸರ್ವತ್ರ ನೋಡತೊಡಗಿದನು, ಆದರೆ ಅವನಿಗೆ ತನ್ನ ಹೊರತು ಮತ್ತೊಂದು ಏನೂ ಕಾಣಲೇ ಇಲ್ಲ; ಆಗ ಅವನು ಮೊದಲಿನ ಇದ್ದಕ್ಕಿದ್ದಂತೆ ಸರ್ವಾತ್ಮನು 'ನಾನಿದ್ದೇನೆ' ಎಂದನು; ಇದರಿಂದ ಅವನ ಹೆಸರು 'ಅಹಂ' ಎಂದುಂಟಾಯಿತು. ಈಗಲಾದರೂ ಯಾವನಾದರೊಬ್ಬನನ್ನು ಕುರಿತು 'ನೀನು ಯಾವನಿದ್ದೀಯೆ? ಎಂದು ಕೇಳಲು ಅವನು 'ಅಹಂ' ನಾನು, ಎಂದು ಮೊದಲು ಹೇಳಿ ಬಳಿಕ ತನಗಿಟ್ಟಿರುವ ಹೆಸರನ್ನು ಹೇಳುವನು. ಯಾವಕಾರಣದೆಸೆಯಿಂದ ಇವನು ಎಲ್ಲಕ್ಕೂ ಮೊದಲಿದ್ದನೋ, ಯಾವ ಇವನಿಂದ ಸರ್ವಪಾಪವೂ ದಹಿಸಲ್ಪಟ್ಟಿತೋ ಆ ಕಾರಣದ ದೆಸೆಯಿಂದ ಇವನಿಗೆ ಪುರುಷ 'ಪೂರ್ವಂ ಓಷತಿ' ಎನ್ನುವರು [ಬೃ. ೧-೪-೧] ಈ ಅವಸ್ಥೆಯಲ್ಲಿ ಆ ಪುರುಷ ಪ್ರಜಾಪತಿಗೆ [ಒಬ್ಬನೇ ಆಗಿದ್ದುದರಿಂದ] ರಮಿಸಲು ಬರದಂತಾಯಿತು [ದ್ವೈತಭಾವವಿಲ್ಲದೇ ವಿನಾ ವಿನೋದವು ಸಂಭವಿಸದು.] ಅದು ಕಾರಣವೇ ಈಗಲಾದರೂ ಒಬ್ಬನೇ ಒಬ್ಬನಿರುವ ಮನುಷ್ಯನಿಗೆ ರಮಿಸಲಾಗುವುದಿಲ್ಲ; ಮುಂದೆ ಅವನಿಗೆ ಜೋಡಿಯ ಬಯಕೆಯುಂಟಾಯಿತು, ಒಬ್ಬರನ್ನೊಬ್ಬರು ಆಲಿಂಗಿಸಿರುವ ಸ್ತ್ರೀ ಪುರುಷರ ತೋರಿಕೆಯು ಆಕಾರವನ್ನು ಆ ಪರಮಾತ್ಮನೇ ತಳೆದನು. ಅವನು ಒಬ್ಬನೇ ಆದರೂ ದಿವ್ಯರೂಪ [ಪತಿಪತ್ನಿಯರೂಪ] ನಾದನು. ಆದ್ದರಿಂದ ಹೆಂಗಸು ಗಂಡಸಿನ ಅರ್ಧ ದಲವಾಗಿದ್ದಾಳೆಂದು ಯಾಜ್ಞವಲ್ಕ್ಯನ ಮತವು. ಈ ಕಾರಣದ ದೆಸೆಯಿಂದಲೇ ಪುರುಷನೆಂಬ ಆಕಾಶವು ಸ್ತ್ರೀಯಳ ಅರ್ಧದಿಂದ ತುಂಬಿರುವುದು; ಪುರುಷನು ಸ್ತ್ರೀಯಳೊಂದಿಗೆ ರಮಿಸಿದ್ದರಿಂದ ಮನುಷ್ಯರು ಹುಟ್ಟಿದರು: ಎಂಬುದು ಈ ಉಪನಿಷತ್ತಿನ ಮತವು.

ಈ ಪತಿಪತ್ನೀ ಭಾವವೇ 'ಶಿವಶಕ್ತಿ—ದೇವದೇವಿ' ಎಂಬ ಹೆಸರುಗಳಿಂದ ಕರೆಯಲ್ಪಡುವುದು. ಚೈತನ್ಯವು ತಾನು ತನ್ನ ಪತಿತ್ವವನ್ನು ಹಾಗೆಯೇ ಅಬಾಧಿತವಾಗಿಟ್ಟು, ತಾನೇ ಪತ್ನಿಯಾಗುವುದು. ಚೈತನ್ಯಕ್ಕೆ ವಿಶ್ವನಿರ್ಮಾಣದಲ್ಲಿ ತನ್ನ ಶಕ್ತಿಯೆಂಬ ಕಾರಣದ ವ್ಯತಿರಿಕ್ತವಾಗಿ ಬೇರೊಂದು ಬಾಹ್ಯಸಾಧನದ ಹಂಗಿರುವುದಿಲ್ಲ. ಈ ಅಭಿಪ್ರಾಯವು ಶೈವಾಗಮದರ್ಶನದಲ್ಲಿ ವಿಶದೀಕರಿಸಲ್ಪಟ್ಟಿರುವ ಹಾಗೆ ಮತ್ತಾವ ದರ್ಶನಗಳಲ್ಲಿಯೂ ಕಂಡುಬರುವುದಿಲ್ಲ. ಕಾಮಿಕೋಪಾಗಮವೆನಿಸುವ ಶ್ರೀ ಮೃಗೇಂದ್ರದ ವಿದ್ಯಾಪಾದಾಂತರ್ಗತವಾದ ಪತಿಲಕ್ಷಣ ಪರೀಕ್ಷಾ ಪ್ರಕರಣದಲ್ಲಿ 'ಕರಣಂಚನ ಶಕ್ತ್ಯನ್ಯತ್' ವಿಶ್ವನಿರ್ಮಾಣಾದಿಕಾರ್ಯಗಳಲ್ಲಿ ಶಿವನಿಗೆ ಅವನ ಶಕ್ತಿಯೇ ಕರಣವಾಗಿ ಆಯಾಯ ಕ್ರಿಯೆಗಳನ್ನು ಸಿದ್ಧಗೊಳಿಸುವುದು ಎಂದೂ, ಶ್ರೀ ಶಿವಸೂತ್ರದಲ್ಲಿ 'ಸ್ವಶಕ್ತಿ ಪ್ರಚಯೋಽಸ್ಯ ವಿಶ್ವಮ್' ವಿಶ್ವವು ಶಿವನ ಸಂವಿದಾತ್ಮಕವಾದ ಶಕ್ತಿಯ ಸ್ಫುರಣರೂಪವಾದ ವಿಕಾಸವು [ಶಿವಸೂ. ೩-೩೦] ಎಂದೂ, ಶ್ರೀ ಸರ್ವಮಂಗಲಾಶಾಸ್ತ್ರದಲ್ಲಿ—

ಶಕ್ತಿಶ್ಚ ಶಕಿಮಾಂಶ್ಚೈವ ಪದಾರ್ಥದ್ವಯಮುಚ್ಯತೇ।
ಶಕ್ತಯೋಽಸ್ಯ ಜಗತ್ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ ||

ಶಕ್ತಿಯೂ ಶಕ್ತಿಯುಳ್ಳವನೂ ಎಂಬುದಾಗಿ ಎರಡು ಪದಾರ್ಥಗಳು ಹೇಳಲ್ಪಡುತ್ತವೆ; ಶಕ್ತಿಯುಳ್ಳವನು ಮಹೇಶ್ವರನೆಂದೂ, ಸರ್ವಜಗತ್ತು ಈ ಮಹೇಶ್ವರನ ಶಕ್ತಿವಿಕಾಸವೆಂದೂ ಹೇಳಲ್ಪಟ್ಟಿದೆ.

ಈ ಸಿದ್ಧಾಂತವನ್ನು ಶಾಂಕರ ಮತಾನುಯಾಯಿಗಳೂ ಶಿರಸಾವಂದ್ಯವಾದುದನ್ನಾಗಿ ತಿಳಿಯಬೇಕಾಗಿದೆ. ಪರಬ್ರಹ್ಮಾಭಿಧ ಪರಶಿವಚೈತನ್ಯದಲ್ಲಿ ಜಗನ್ನಿರ್ಮಾಣ ಕಾರಣವಾದ ಅಲೌಕಿಕ ಶಕ್ತಿಯೊಂದು ಉಂಟೆಂದು ಶಂಕರಾಚಾರ್ಯರೂ 'ಚೇತನಮಪಿ ಬ್ರಹ್ಮ ಅನಪೇಕ್ಷ್ಯಂ ಬಾಹ್ಯಂ ಸಾಧನಂ ಸ್ವತವವ ಜಗತ್ ಸ್ರಕ್ಷ್ಯತಿ' ಚೇತನ ಬ್ರಹ್ಮವೇ ಬಾಹ್ಯಸಾಧನವನ್ನು ಅಪೇಕ್ಷಿಸದೆ ತಾನೇ ಜಗತ್ತನ್ನು ಹುಟ್ಟಿಸುವುದು. (ಬ್ರ. ಸೂ. ಶಾಂ—ಭಾ. ೨-೧-೨೫). ಎಂದು ಪ್ರಾಂಜಲತನದಿಂದ ಹೇಳುತ್ತಾರೆ.

ಒಂದೇ ನಾಣ್ಯವು ಒಪ್ಪತ್ತು ಪತಿಯೆನಿಸಿಯೂ ಒಪ್ಪತ್ತು ಪತ್ನಿಯೆನಿಸಿಯೂ ತೋರುವ ಮೂಲಕ, ಆ ಒಂದು ನಾಣ್ಯವೇ ತನ್ನ ಅಂಗದ ಮೇಲೆ ಈ ಸೊಬಗಿನ ದಿಟವಾದ ಆಟವನ್ನು ತೋರಿಸಿತು. ಈ ಬಗೆಯೇ ಬೃಹದಾರಣ್ಯದಲ್ಲಿ (೧-೪-೩) ಅರ್ಧ ಬೃಗಲ ನ್ಯಾಯದಿಂದ ಬಣ್ಣಿಸಲ್ಪಟ್ಟಿದೆ. ಶಿವನು [ದೇವನು] ಪ್ರಕಾಶಕ [ವಿಷಯಿ] ನಾಗಿರುವಂತೆ, ಅವನ ಅವಿನಾಭಾವಶಕ್ತಿ [ದೇವಿ] ಯಾದರೂ ಪ್ರಕಾಶಕಳಾಗಿದ್ದಾಳೆ. ಇವರಿಬ್ಬರೂ ಲೀಲೆಗೋಸುಗ ತಮ್ಮ ವಿಶ್ವತೋರಿಕೆಯ ಸಾಮರ್ಥ್ಯದಿಂದ ಒಬ್ಬರನ್ನೊಬ್ಬರು ವಿಷಯೀಕರಿಸುವ ಬಗೆಯು ಉಂಟಾದುದೂ ಆಶ್ಚರ್ಯವಲ್ಲ. ಒಂದೇ ಅಂಗದ ಮೇಲೆ ಚಿಗಿತಿರುವ ಎರಡು ಕೈಗಳಲ್ಲಿ ಬಲಗೈ ಎಡಗೈಗೆ ಹಣಕೊಟ್ಟು ಸಾಲುಕಾರನಾಗುವುದೂ ಎಡಗೈ ಆ ಹಣವನ್ನು ಇಸಿದುಕೊಳ್ಳುವ ಬಡವನೆನಿಸುವುದೂ ಎಂಬ ವಿಷಯ ವಿಷಯಿತ್ವಗಳು ಒಂದೇ ಅಂಗದಲ್ಲಿ ತೋರಿಬರುವುವು.

ಕಣ್ಣುಮುಂದೆ ಕಾಣಬರುವ ಸರ್ವ ಪದಾರ್ಥಗಳೂ ಅವುಗಳನ್ನು ತನ್ನಲ್ಲಿಯೇ ಸಮಾವೇಶಮಾಡಿಕೊಳ್ಳುವ ಈ ಸರ್ವ ದೃಶ್ಯಾದೃಶ್ಯ ಪ್ರಪಂಚವೂ ಒಂದು ಚೈತನ್ಯವೇ ಆಗಿದೆ. ಶ್ರೀ ರೇಣುಕ ಭಗವತ್ಪಾದರು—

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ|
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೆ ||

'ವೃಕ್ಷವೇ ಪತ್ರಶಾಖಾದಿ ರೂಪದಿಂದಿರುವ ಹಾಗೆ, ಶಿವನು ಒಬ್ಬನೇ ತನ್ನ ಶಕ್ತಿವಿಕಾಸದಿಂದ ಭೂಮಿ ಮೊದಲಾದ ವಿಶ್ವರೂಪನಾಗಿ ತೋರುತ್ತಾನೆ' ಎಂದು ನಿರೂಪಿಸಿದ್ದಾರೆ.

ಆ ಒಂದು ಚೈತನ್ಯವೇ ತನಗಿಂತಲೂ ವಿಜಾತೀಯವಾದ ಯಾವ ಬಗೆಯ ಬೇರೊಂದು ತತ್ವದ ನೆರವಿಲ್ಲದೆ ತನ್ನ ಸ್ವೈರಗಿರಿಕವಾದ ಬಹು ಭವನ ನಿರ್ಮಾಣದಲ್ಲಿ ಕರಣವೆನಿಸುವ ಶಕ್ತಿಯಿಂದ ತಾನು ತನ್ನ ಏಕತ್ವವನ್ನು ಕಾಯ್ದುಟ್ಟುಕೊಂಡೇ ಒಂದಕ್ಕೆರಡು, ಎರಡಕ್ಕೆ ಮೂರು ಹೀಗೆಯೇ ಕೊನೆಗೆ ಬಹುರೂಪವಾಗಿರುವುದು. ನೇಂಗಾದ (ನೆಲಗಡಲೆಯ) ಒಂದೇ ಕಾಳು ತನ್ನ ನೇಂಗಾತನವನ್ನು ಅಗಲದೆ ಹೊಳಕೆ [ಬೇಳೆ] ಯಾದುದಾದರೆ ನೇಂಗಾಕ್ಕಿಂತಲೂ ಬೇರೊಂದು ತತ್ವವೇ ನಿರ್ಮಾಣವಾಯಿತೆನ್ನಬಹುದೇ? ಮತ್ತು ಹೊಳಕೆಗಳು ಎರಡು, ನೇಂಗಾ ಒಂದು, ಅಂತು ಮೂರು ಎಂದು ನುಡಿಯಲೂ ಬಾರದು. ಹೊಳಕೆಗಳಲ್ಲಿ ನೇಂಗಾ ಇಲ್ಲವೆಂದೂ, ನೇಂಗಾದಲ್ಲಿ ಹೊಳಕೆಗಳಿಲ್ಲವೆಂದೂ, ಹೇಳಲಾಗದು. ಪರಶಿವಚೈತನ್ಯವೊಂದೇ ನೇಂಗಾಕಾಳಿನಂತಿರುವುದು. ಅದೂ ಅದರ ಸಂವಿಚ್ಛಕ್ತಿಯು ಎಂಬಿವೆರಡೂ ಆ ನೇಂಗಾಕಾಳಿನ [ನೆಲಗಡಲೆಯ] ಎರಡು ಹೊಳಕೆಗಳು; ಅವೆರಡರಿಂದ ಉಂಟಾದ ವಿಸ್ತಾರವಾದರೂ ನೇಂಗಾಕಾಳೇ. ಹಾಗೆಯೇ ಪರಶಿವಚೈತನ್ಯದಿಂದುಂಟಾದ ವಿಶ್ವವಾದರೂ ಆ ಪರಶಿವಚೈತನ್ಯವೇ. ಚರಾಚರಾತ್ಮಕವಾದ ಈ ವಿಶ್ವವು ಇಂದ್ರಜಾಲವಲ್ಲ; ಅದಕ್ಕಾಗಿ ಬ್ರಹ್ಮಕ್ಕೆ ವಿಜಾತೀಯವಾದ ಮಾಯೆಯ ಸಾಹಾಯ್ಯದ ಅಪೇಕ್ಷೆಯಿರುವುದಿಲ್ಲ. ಈ ಚೈತನ್ಯವು ಸರ್ವವನ್ನೂ ನಿರ್ಮಿಸುವ ಶಕ್ತಿಯುಳ್ಳದ್ದಾಗಿದೆ. ಬಹುರೂಪವಾಗಿ ತೋರುವುದೆಲ್ಲವೂ ಚೈತನ್ಯವು ತಾನೊಂದೇ. ನೇಂಗಾಕಾಳಿನ ಎರಡು ಹೊಳಕೆಗಳು ಕೂಡಿ ಒಂದೇ ನೇಂಗಾಕಾಳು. ಹಾಗೆಯೇ ಶಿವಶಕ್ತಿಗಳೆಂಬ ಎರಡು ಹೊಳಕೆಗಳು, ಒಂದು ಚೈತನ್ಯವೆಂಬ ನೇಂಗೀಕಾಳೇ. ಶೈವಾಗಮದರ್ಶನದಲ್ಲಿ ಶಿವಶಕ್ತಿಗಳ ಸ್ವರೂಪವು, ಬೆಂಕಿಯು ಅದರ ಸುಡುವತನವೂ ಬೆಲ್ಲವು ಅದರ ಸವಿಯೂ ಎಂಬ ಮುಂತಾದವುಗಳಿಗೆ ಹೋಲಿಸಿ ನಿರ್ದೇಶಮಾಡಲ್ಪಟ್ಟಿದೆ. ಹಲಾಯುಧನು ಈ ಶಿವಶಕ್ತಿಯುಗ್ಮದ ಸ್ವರೂಪವನ್ನು—

ಏಕೋದೇವಃ ಸಜಯತಿ ಶಿವಃ ಕೇವಲಂ ಜ್ಞಾನಮೂರ್ತಿಃ | ದೇವೀ ಸಾಚ ತ್ರಿಭುವನಮಿದಂ ಯದ್ವಿಭಾತಿ ಪ್ರಪಂಚಮ್ || ಯತ್ಕಾಟಸ್ಥಂ ಮಿಥುನಮವಿನಾಭಾವ ಸಂಬಂಧಯೋಗಾ | ನ್ಮಿಶ್ರೀಭೂತಂ ತದಖಿಲ ಜಗಜ್ಜನ್ಮಬೀಜಂ ನಮಾಮಿ ||

[ಸ್ಥ]ಳದೇಶದ ವೃತ್ತಾಂತಗಳು.

ಮಂಗಳವಾರ ರಾಜಧಾನಿಯಲ್ಲಿ ನೆರವೇರಿ[ದ]... ಬಜಾರಿನಲ್ಲಿ ಒಬ್ಬ ಚಾಕಿಯು ಕೆಳಗೆ ಬಿದ್ದು... ಯಪಟ್ಟಿರುವನು.

...ಊರಿನಲ್ಲಿ ಮಿಲ್ಲಿನ ಕೂಲಿಕಾರರ ಗಲಾಟೆಯು... ರುವುದರಿಂದ ರಾತ್ರಿ 9-30 ಘಂಟೆಯಮೇಲೆ... ಳನ್ನು 6 ತಿಂಗಳುಗಳವರೆಗೆ ನಡೆಯಿಸಕೂ[ಡದೆಂದು]... ಮ್ಯಾಜಿಸ್ಟ್ರೇಟರು ಹುಕುಂ ಮಾಡಿರುವ... ಬರುತ್ತದೆ.

ಸೋಮವಾರ ರಾಜಧಾನಿಯ ಅರಮನೆಯ... ಮಾಪದಲ್ಲಿ ಎದುರುಬದುರಾಗಿ ಬರುತ್ತಿದ್ದ... ಮೋಟಾರುಗಳು ಒಂದಕ್ಕೊಂದು ತಗ[ಲಿ]... ಇಂಜನಿಯರ್ ಮ|| ರಾ|| ಜಿ. ರಘುನಾ[ಥ]... ಎಂಬವರು ಮೋಟಾರಿಂದ ಬಿದ್ದು ಡಾಕ್ಟ[ರರು]... ಪಚಾರಮಾಡಿದರೂ ಪ್ರಯೋಜನವಾ[ಗದೆ]... ಅಂಟೆಗಳನಂತರ ಮೃತರಾದರು.

...ತಾಲೂಕಿನಲ್ಲಿ ಹತ್ತಿಯ ಬೆಳೆಯು ಕ[ಡಿಮೆ]... ತ್ತಿರುವದರಿಂದ ಮಿಡಿಗೇತಿಯಲ್ಲಿ ನೂ[ಲು]... ಬಾದಿಯನ್ನು ತಯಾರಿಸು[ವ]... ಪ್ರಾರಂಭಿಸಬೇಕೆಂದೂ ಇದು... ಬೋರ್ಡಿನವರು ತಿಂಗಳಿಗೆ 10... ನ್ನು ಕೊಡಬೇಕೆಂದೂ ತೀರ್ಮಾನವಾ[ಗಿದೆ]...

...ದ ಸವ್ಯಾ ಪತ್ರಿಕೆಯ ಒಳದೇಶವ[ರ್ತಮಾನ]... ಶಿಕಾರಿಪುರ ತಾಲೂಕಿನಲ್ಲಿ ಒಬ್ಬ ಜಮೀನ್ದಾರ... ಸಿಡಾಯಿತೆಂದು ಪ್ರಕಟವಾಗಿರುವದಷ್ಟೆ... ಉತ್ತರ ಹಿಂದುಸ್ಥಾನದಲ್ಲಿರುವ ಸಿಂ... ರಿದ ಶಿಕಾರಿಪುರ ತಾಲೂಕಿನಲ್ಲಿ ನ... ಇದು ವರ್ತಮಾನಸಂಗ್ರಹದಲ್ಲಿ ಬೀ... ತಪ್ಪಿನಿಂದ ಒಳದೇಶ ವೃತ್ತಾಂತದ[ಲ್ಲಿ]... ಪ್ರಾ.ಕ. ಆದುದರಿಂದ ವಾಚಕರು ಈ ವಿ... ಡಿ|| ಶಿಕಾರಿಪುರಕ್ಕೆ ಸಂಬಂ[ಧವಿಲ್ಲವೆಂದು]... ತಿಳಿಯತಕ್ಕದ್ದು.

...ಯಲ್ಲಿ ದೊಂಬಿಯು ನಿಂತು ಶಾಂ[ತವಾಗಿದೆ]... ಪುನಃ ಗಲಾಟೆಯಾಗದಂತೆ ಮಿಲಿಟ[ರಿ]... ಸರ್ವ್ ಪೋಲೀಸರೂ ನಗರವನ್ನು ಸು... ವರು. ಬೆಂಗಳೂರು ಸ್ಪೆಷಲ್ ಮ್ಯಾ[ಜಿಸ್ಟ್ರೇಟ್]... ಮ|| ಎಂ. ಆರ್. ಸುಂದರರಾಯ... ಆಫೀಸರಾಗಿ ನಿಯಮಿಸಲ್ಪಟ್ಟಿ[ರುವರು]... ರ್ಷ ಜಾರೀಮಾಡಿ, ಪಟ್ಟಣದಲ್ಲಿ... ಗಳನ್ನು ಹಿಡಿಯಕೂಡದೆಂದೂ, ಸ... ಅಸ್ತಿಮಾಡಿರುವರಲ್ಲದೆ ಲೈಸೆನ್ಸ... ಗಳನ್ನಿಟ್ಟುಕೊಂಡಿರುವವರೆಲ್ಲರೂ ಅ... ಗಳ ವಶಪಡಿಸಬೇಕೆಂದು ಪ್ರಕಟ... ಜೆಗೆ ಕೆಲ ಜನರನ್ನು ಅರೆಸ್ಟಮಾ[ಡಿ]... ಬಿಟ್ಟಿರುವರೆಂದು ತಿಳಿದುಬರುತ್ತದೆ.

'ದೇ... ರುವಂತೆ... ತೀಯಳೂ ವಿಕಾಸವೇ ಸಂಬಂಧವೇನ್ನ ಶಿವಶಕ್ತಿಯು... ಕಾಳಿದಾಸನು... ದುರ್ಗಣದಿಂ[ದ]... ಬರುವುದು.

ಶ್ರೀಮಜ್ಜ... ಸನೆ ಪಿ...

ಈ ಆದೇಶ... ನೇ ಸೋಮವಾರ... ಉರ್ದು ಬಾಯ್ಸ... ನಾಡು ಪಟೇಲರು... ಬಹಳ ವಿಜೃಂಭಣೆಯ... ತೋರಣಗಳಿಂದ... ಜಗದ್ಗುರು ಪಂಚಾ[ಚಾರ್ಯರ]... ಸ್ಥಾಪಿಸಲ್ಪಟ್ಟಿತು. ಮತಾನುಯಾಯಿಗ[ಳು]... ಅಧ್ಯಕ್ಷರನ್ನು ಮತ್ತು... ಬಂದನಂತರ ಪ್ರಾ... ದ್ಗುರು ಪಂಚಾಚಾ[ರ್ಯರ]... ವಾಗಿ ನೆರವೇರಿದವು... ಅಲಂಕರಿಸಿದರು. ಕಾಫಿಪ್ಲಾಂಟರ್ ಪಟೇಲರು ಮ|| ... ಕುಳಿತುಕೊಂಡರು. ... ಗಿಯೂ ಇದರಿಂದ ... ತಿಗೂ ಏಕಮತ್ಯಕ್ಕೂ ... ಬುದನ್ನೂ ಗುರುಭಕ್ತಿ ... ಅವಕಾಶವಾಶವಾಗ... ವಂತೆ ಭಾಷಣಮಾಡಿ ... ಎಂ. ಪಿ. ಚಂದಯ್ಯನ... ವಿಷಯದಲ್ಲಿ ... ಅದಕ್ಕೆ ಪರಿಹಾರವನ್ನು ... ತ್ತಲಿರುವ ತೊಂದರೆಗ[ಳನ್ನು]... ಕ್ಷೌ ಪೀಠಗಳ ಅಭಿವ[ೃದ್ಧಿ]... ದ ಸಲಕರಣೆಗಳನ್ನೂ ... ಅನೇಕ ತೊಂದರೆಗಳಿಃ ... ದುರ್ಭ್ರಗುವಾಗಿ ... ವ್ಯರ್ಥವಾಗಿ ಖರ್ಚಾಗ... ರೂ ಪರೋಪಕಾರಕ್ಕೆ ... ಯನ್ನು ಸಂಪಾದಿಸಿ ಗ... ಬುದನ್ನೂ ಅನೇಕದ... ಳ್ಳುವಂತೆ ಸ್ವಾರಸ್ಯ... ಬೋರ್ಡ್ ಮೆಂಬರಾಗಿ... ಸಮಾಜದ ಏಕಮತ್ಯ... ತತ್ವದ ವಿಷಯವಾಗಿ... ಕುರಿತು ಕಾಫಿಪ್ಲಾಂ[ಟರ್]... ಪಟೇಲರು ಕಾಫಿಪ್ಲಾಂ[ಟರ್]... ನಾಡಿದರು. ಅನಂತರ ಅಲ್ದೂರು, ವಸ್ತಾರೆ, ... ಗಳಿಂದ ಈ ಕೆಳಗೆ ಕಂ... ರಾಗಿ ಚುನಾಯಿಸಲ್ಪಟ್ಟ... ಪಟೇಲರು ರಾಮಪ್ಪಗೌ[ಡರು]... ಪ್ಪಗೌಡರು ಕೆಳಗೂರು ... ಕಾಫಿಪ್ಲಾಂಟರ್ ಅಲ್ದೂ[ರು]... ರು ಅಲ್ದೂರು, 5. ಎಲಿ... 6. ಮಾಚಗೋಡನಹಳ್ಳಿ... ಹಾಂದಿಪಟೇಲರು ಮ|| ... ಗೌಡರು, 8. ಚಿಕ್ಕಮಗ[ಳೂ]ರು, 9. ಬಿ. ಪಿ. ಮಲ್ಲ... 10. ಆಣೂರುಮಠದ ... ಪಟೇಲರು ಮ|| ರಾ|| ... ಪಟೇಲರು ಮ|| ಶಂಭೇ... ಮ|| ರಾ|| ಅಣ್ಣೇಗೌಡ... ಮ|| ರಾ|| ಪುಟ್ಟಪ್ಪಶೆಟ್ಟಿ... ವೀರೇಗೌಡರು, 16. ತ... ಗೌಡರು, 17. ಹಲಸುವ... ದರು, 18. ನಂದೀಕೆರೆ ... ಕಲ್ಲಳ್ಳಿ ಮಠದ ವೇ|| ... ವೇ|| ನಂಜಯ್ಯನವರು, ... ಶೆಟ್ಟರು, 22. ಕೋಟೆವ...

ಸಂತೋಷವಾರ್ತೆ.

...ವಾಸಿಗಳಾದ ಶ್ಯಾಂಡಲಾರ್ಡ ಶ್ರೀಮ... ನ್ನ ಚವಡಿ ಈ ಮಹಾಶಯರಿಗೆ ದಯಾ... ನಿಯೂ ಸಾರ್ವಭೌಮ ಸರಕಾರದಿಂದ " ರಾ... ಮು ಪ್ರಾಪ್ತವಾದದ್ದಕ್ಕೋಸ್ಕರ ಅತ್ಯ... ಈ ಮಹೋದಯರು ಅನೇಕ ವರ್ಷಗಳ... ರ್ ಪ್ರೆಸಿಡೆಂಟರಾಗಿ ಸರ್ವೋತ್ತಮ ರೀ... ಲೋಕೋಪಕಾರ ಕಾರ್ಯಗಳನ್ನು ಮಾ... ಸರಕಾರದ ಪ್ರೇಮವನ್ನೂ ಹೊಂದಿ ಕೀ... ಕಾಟನ್‌ಸೇಲ್ ಸೊಸಾಯಿಟಿ, ಕ. ಸಿ. ಬ್ಯಾ... ಗಳಲ್ಲಿ ಚೇರ್‌ಮನ್ನರಾಗಿಯೂ ಮೇ... ಇವರಿಷ್ಟು ಪ್ರಸಿದ್ಧಿಗೆ ಬರಲಿಕ್ಕೆ ಇವರಲ್ಲಿ... ದಯಾಲುತ್ವ, ಶಾಂತಿ, ನಿಷ್ಪಕ್ಷಪಾತ ಸಾರ... ಂಥತೆ ಮೊದಲಾದ ಶ್ರೇಷ್ಠಗುಣಗಳೇ ಕಾ... ತಿದೆ. ಸಾರ್ವಭೌಮ ಸರಕಾರದವರು ... ಪದವಿಯನ್ನು ದಯಪಾಲಿಸಿರುವರು. ... ಶಯರಿಗೆ ಉತ್ತರೋತ್ತರಾಭಿವೃದ್ಧಿಯನ್ನು... ರೋಗ್ಯಭಾಗ್ಯಾದಿಗಳನ್ನೂ ದಯಪಾಲಿಸಲೆಂ[ದು]... ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇ[ವೆ]...

...ಂಚಾಕ್ಷರಶಾಸ್ತ್ರಿಗಳು, ಹಿರೇಮಠ ಶಿರೋ[ಳ]...

ವರ್ತಮಾನಸಂಗ್ರಹ.

[ಹಿ]ಂದುಸ್ಥಾನದ ಸರಕಾರವು 18 ಕೋಟಿ ರೂಪಾ[ಯಿಗ]ಳ ಸಾಲವನ್ನು ತೆಗೆಯಬೇಕೆಂದಿರುವದಂತೆ!

[ಮು]ಂಬಾಯಿಯಲ್ಲಿ ಮೂರು ವರ್ಷದ ಮಗುವು [ಕುದಿ]ಯುತ್ತಿದ್ದ ನೀರಿನಲ್ಲಿ ಕೈಹಾಕಿ ಅದರ ಉರಿಯನ್ನು [ತಾಳ]ಲಾರದೆ ಮೃತಪಟ್ಟಿತು.

[ನಾಗ]ಪುರದ ಮುನಿಸಿಪಾಲಿಟಿಯವರು ಖಾದಿಯ ಮೇಲೆ ಹಾಕಿದ್ದ ಸುಂಕವನ್ನು ತೆಗೆದುಹಾಕಿ ಪರದೇಶೀ [ಬಟ್ಟೆ]ಗಳಿಗೆ ಸುಂಕವನ್ನು ಹಾಕಿರುವರು. ಸ್ತುತ್ಯ!

[ಕೊ]ಲ್ಹಾಪುರದ ಕುಮಾರಲೀಲೆ ಎಂಬ 9 ವರ್ಷದ [ಹು]ಡುಗಿಯು ಒಂದು ಚಿರತೆಯನ್ನು ಬೇಟೆಮಾಡಿ [ಕೊ]ಂದಿರುವಳು. ಇವಳೇ ನಿಜವಾದ ಕ್ಷತ್ರಿಯ [ಕನ್ಯೆ]ಯು!

ಕ್ರಿಸ್ತಶಕಕ್ಕಿಂತ ಪೂರ್ವ 250 ವರ್ಷಗಳ ಹಿಂದೆ ಹಿಂದುಸ್ಥಾನದಲ್ಲಿ ಆಳುತ್ತಿದ್ದ ಅಶೋಕ ಮಹಾರಾಜನ 14 ನೆಯ ಶಿಲಾಶಾಸನವು ಕರ್ನೂಲ್ ಡಿಸ್ಟ್ರಿಕ್ಟಿನಲ್ಲಿ ದೊರೆತಿರುತ್ತದೆ.

[ಇ]ದೇ ತಿಂಗಳು 21 ನೆಯ ತಾರೀಖಿನ ದಿವಸ ಬಾಗೇವಾಡಿ ತಾಲೂಕಿಗೆ ಸೇರಿದ ಕೊಲ್ಹಾರದಲ್ಲಿ ಹಿಂದೂ ಮುಸಲ್ಮಾನರೊಳಗೆ ಹೊಡೆದಾಟವಾಗಿ 20-25 ಜನರಿಗೆ [ಕಡ]ಬಾ ಗಾಯಗಳಾಗಿವೆ.

ಕಲ್ಕತ್ತೆಯಲ್ಲಿ ಮೊಹರಂಹುಬ್ಬದ ದಿವಸ ಮುಸಲ್ಮಾನರು ತಮ್ಮ ತಮ್ಮೊಳಗೆ ಹೊಡೆದಾಡಿದರು. ಹತ್ತು ಜನರಿಗೆ ಬಲವಾದ ಗಾಯಗಳಾಗಿವೆ. ಹನ್ನೊಂದು ಜನರನ್ನು ಅರೆಸ್ಟಮಾಡಿರುವರು.

ಕಲ್ಕತ್ತೆಯ ಬ್ಯಾರಿಸ್ಟರರಾದ ಪಿ. ಪಿ. ಚೌಧರಿಯವರು ಕಾಶಿಯ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಸುಮಾರು 20,000 ರೂ. ಬೆಲೆಬಾಳುವ ಫ್ರೆಂಚ್ ಪುಸ್ತಕಗಳನ್ನು ಉಚಿತವಾಗಿ ಕೊಟ್ಟಿರುವರು. ಸ್ತುತ್ಯ!

ನ್ಯೂಜಿಲಾಂಡ್ ಎಂಬ ದೇಶದಲ್ಲಿ ಒಂದು ನಿಮಿಷ ಮಾತ್ರದವರೆಗೆ ಭೂಕಂಪವಾಗಿ ನಾಲ್ಕು ಜನರು ಮೃತಪಟ್ಟು ಅನೇಕರಿಗೆ ತುಂಬಾ ಗಾಯಗಳಾಗಿರುವವು. ಅಲ್ಲಿ ಇನ್ನೂ ಆಗಾಗ್ಯೆ ಕಂಪವಾಗುತ್ತಲೇ ಇರುವದು.

ಕೊಲಂಬಿಯಾದಲ್ಲಿ ಭೂಭಾಗವೇ ಜರಿದು ಒಂದು ನದಿಯು ತನ್ನ ಪಾತ್ರವನ್ನು ಬಿಟ್ಟು ಬೇರೆ ಕಡೆಗೆ ಹರಿದುದರಿಂದ ನಾಲ್ವತ್ತು ಜನರು ಮೃತಪಟ್ಟು ನೂರಾರು ಜನಗಳು ಕೈಕಾಲುಗಳನ್ನು ಮುರಿದುಕೊಂಡಿರುವರು.

ಕರಾಚಿಯಲ್ಲಿ ವಿಧವಾ ವಿವಾಹಸಂಬಂಧವಾಗಿ ಕೂಡಿದ ಸಭೆಯಲ್ಲಿ ಚರ್ಚೆಯು ನಡೆಯುತ್ತಿದ್ದಾಗ್ಯೆ ಒಬ್ಬರಿಗೊಬ್ಬರಿಗೆ ಜಗಳವಾಗಿ ಎಷ್ಟೋ ಜನರು ಗಾಯಹೊಂದಿರುವರು. ಅಕ್ರಮವರ್ತನದ ಪರಿಣಾಮವಿದು.

ವಿಷ್ಣುಮಹಾದೇವ ಅತ್ರೆ ಎಂಬುವರು ನೂತನವಾಗಿ "ದೇವನಾಗರಿ' ಅಕ್ಷರದ ಟೈಪ್‌ರೈಟಿಂಗ್ ಮಿಷನ್ನನ್ನು ತಯಾರಿಸಿರುವರಂತೆ! ಕನ್ನಡಕ್ಷರಗಳಿಂದ ಯಾವ ಮಹನೀಯರಾದರೂ ತಯಾರಿಸಲು ಪ್ರಯತ್ನ ಪಡುತ್ತಿರುವರೋ?

ಬೆಳಗಾವಿನಲ್ಲಿ ಒಬ್ಬ ಮುದುಕನು ಮದುವೆಯಾಗಬೇಕೆಂದು ಗ್ರಾಮದವರನ್ನು ಪದೇಪದೇ ಪೀಡಿಸುತ್ತಿರಲು ಜನರು ಒಬ್ಬ ಹುಡುಗನಿಗೆ ಸೀರೆಯನ್ನುಡಿಸಿ ಲಗ್ನಮಾಡಿ ಮರುದಿವಸ ಪೇಟೆಯಲ್ಲಿ ನಿಜಸ್ಥಿತಿಯನ್ನು ಹೇಳಿ ಅವಮಾನಮಾಡಿದರಂತೆ!

ಜೆ.ಐ.ಪಿ. ರೈಲ್ವೆಯ "ಬೀರ" ಎಂಬ ಸ್ಟೇಷನ್ನಿನ ಸಮೀಪದಲ್ಲಿ ಡಿ. ಹಿರಾ ಎಂಬ ಇಂಜನ್ ನಡೆಯಿಸುವವನು ಬಹಳ ದಣಿದು ರೈಲ್ವೆಯ ಕಂಬಿಯ ಮೇಲೆ ತಲೆಯನ್ನಿಟ್ಟುಕೊಂಡು ನಿದ್ರೆಮಾಡುತ್ತಿರಲು, ಆ ಮಾರ್ಗದಿಂದ ಬಂದ ರೈಲಿಗೆ ಸಿಕ್ಕು ಮೃತನಾದನು.

ಅಲ್ವಾರ್ ಸಂಸ್ಥಾನದ ಮಹಾರಾಜರು ತಮಗೆ ಮಕ್ಕಳಿಲ್ಲದಿರುವದರಿಂದ ತಮ್ಮ ತರುವಾಯ ಸಿಂಹಾಸನದ ಮೇಲೆ ತಮ್ಮ ಯಾವ ಸಂಬಂಧಿಕರನ್ನೂ ಕುಳ್ಳಿರಿಸುವಾರದೆಂದೂ ರಾಜ್ಯಾಡಳಿತವನ್ನು ಸರ್ಕಾರದವರೇ ನಡೆಯಿಸಬೇಕೆಂದೂ ಸರಕಾರಕ್ಕೆ ತಿಳುಹಿಸಿರುವರಂತೆ!

ಅಲೀಬಾದಿನಲ್ಲಿದ್ದು ರಸಾಯನ ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದ ಲಲಿತಮುಕರ್ಜಿ ಎಂಬವನನ್ನು ಪೋಲೀಸರು ಅರೆಸ್ಟಮಾಡಿ ಲಾಹೋರಿಗೆ ಕರೆದುಕೊಂಡು ಹೋಗಿರುವರು. ಇವನು ಸಾಂಡರ್ಸರ ಕೊಲೆಗೆ ಸಂಬಂಧಪಟ್ಟಿರುವನೆಂದು ತಿಳಿದು ಅರೆಸ್ಟ ಮಾಡಿರುವರು.

ಅಮೇರಿಕಾದೇಶದ ಸಂಯುಕ್ತಸಂಸ್ಥಾನಗಳಲ್ಲಿರುವ ವ್ಯಾಪಾರಿಗಳು 1927 ನೆಯ ಇಸವಿಯಲ್ಲಿ ಕೇವಲ ಜಾಹೀರಾತಿಗಾಗಿ ಸುಮಾರು 500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುವರು. ಇದರಲ್ಲಿ ಅರ್ಧಕ್ಕಿಂತ ಹೆಚ್ಚಾದ ಭಾಗವು ವೃತ್ತಪತ್ರಿಕೆಗಳ ಜಾಹೀರಾತಿಗಾಗಿ ಖರ್ಚಾಗಿರುವದಂತೆ!

ಅಸ್ಸಾಮಿನಲ್ಲಿ ಪ್ರವಾಹದಿಂದ 5,500 ಚದರಮೈಲುಗಳ ಪ್ರದೇಶವು ಹಾಳಾಗಿರುವದೆಂದೂ, 12 ಲಕ್ಷದವರೆಗೆ ಜನರು ಕಷ್ಟಕ್ಕೀಡಾಗಿರುವರೆಂದೂ ನೂರಕ್ಕೆ 90 ರಂತೆ ಪ್ರಾಣಿಗಳೂ, 45 ರಂತೆ ಮನೆಮಠಗಳೂ ನಾಶವಾಗಿರುವುವೆಂದೂ ನಷ್ಟಪಟ್ಟವರ ಸಹಾಯಕ್ಕಾಗಿ ಅಸ್ಸಾಂ ಸರಕಾರದವರು 25 ಸಾವಿರ ರೂಪಾಯಿಗಳನ್ನು ಕೊಟ್ಟಿರುವರೆಂದೂ ತಿಳಿಯಬರುತ್ತದೆ.

ಕಲ್ಲಿಕೋಟೆಯಲ್ಲಿ ಒಬ್ಬ ಹೆಂಗಸು ಬಹುದಿನಗಳಿಂದ ಹೊಟ್ಟೆನೋವಿನಿಂದ ನರಳುತ್ತಿದ್ದಳು. ವೈದ್ಯರು ಶಸ್ತ್ರಚಿಕಿತ್ಸೆಯನ್ನು ಮಾಡಿ ನೋಡುವಲ್ಲಿ ಮಗುವಿನ ಆಕಾರದಂತಿದ್ದ ಸುಣ್ಣದಕಲ್ಲಿನ ರೂಪವಾದ ಪದಾರ್ಥವು ಒಳಗೆ ಇದ್ದಿತಂತೆ! ಇದು ಬೆಳೆಯಲಾರಂಭಿಸಿ 8 ವರ್ಷಗಳಾಗಿರಬಹುದೆಂದು ಡಾಕ್ಟರರು ಅಭಿಪ್ರಾಯ ಪಟ್ಟಿರುವರು. ದೇವರ ಮಹಿಮೆಯು ಅವರ್ಣನೀಯವಾದುದು.

ಅಫ್ಘಾನಿಸ್ಥಾನದಲ್ಲಿ ಬಚ್ಚಾಯಿಸಾಕನು ನಾದಿರ್ ಖಾನನನ್ನು ಕೊಲ್ಲಬೇಕೆಂದು ಒಳಸಂಚುಮಾಡಿಕೊಂಡು ಆತನಿರುವ ಸ್ಥಳಕ್ಕೆ ಬರಲು ಈ ಸಂಚನ್ನು ಮೊದಲೇ ಅರಿತಿದ್ದ ನಾದಿರ್‌ಖಾನನು ಯುದ್ಧದಲ್ಲಿ ಬಚ್ಚಾಯಿಸಾಕನನ್ನು ಸೋಲಿಸಿ ಅವನ ಕಡೆಯ 500 ಜನರನ್ನೂ, 400 ಕುದುರೆಗಳನ್ನೂ, ಸೆರೆಹಿಡಿದಿರುವನಲ್ಲದೆ ಅವನಿಂದ 30,000 ರೂಪಾಯಿಗಳನ್ನು ತೆಗೆದುಕೊಂಡಿರುವನು.

ವಾಯುರೋಗದಿಂದ ಕೈಕಾಲುಗಳೂ ಮತ್ತು ಅಂಗಾಂಗಗಳೂ ಸ್ವಾಧೀನ ತಪ್ಪಿ ಅನೇಕರು ಮರಣವನ್ನೇ ಹೊಂದುವರು. ಈ ರೋಗವನ್ನು ಖಾತ್ರಿಯಾಗಿ ಗುಣಪಡಿಸುವವರು ಯಾರೂ ಇಲ್ಲವೆಂದರೆ ಅತಿಶಯೋಕ್ತಿಯೆನಿಸದು. ಆದರೆ ಸ್ವೀಡದೇಶದ "ಫರ್ಡಿನೆಂಡ್ ಆಸಯೇರೊ" ಎಂಬ ಡಾಕ್ಟರೊಬ್ಬರು ಈ ವಾಯುರೋಗವು ಎಷ್ಟು ವರ್ಷಗಳಿಂದಿದ್ದರೂ 10 ನಿಮಿಷಗಳಲ್ಲಿ ಸಂಪೂರ್ಣವಾಗಿ ಗುಣಪಡಿಸುವ ಉಪಾಯವನ್ನು ಕಂಡುಹಿಡಿದಿರುವರು. ಯೂರೋಪ್, ಅಮೇರಿಕಾ ಖಂಡಗಳಲ್ಲೆಲ್ಲಾ ಪ್ರಸಿದ್ಧಿಹೊಂದಿದ ಯಾವ ಡಾಕ್ಟರರಿಂದಲೂ ಗುಣವಾಗದಿದ್ದ ವಾಯುರೋಗವನ್ನು ಇವರು ಐದೇ ನಿಮಿಷಗಳಲ್ಲಿ ಸಂಪೂರ್ಣ ಗುಣಪಡಿಸಿರುವರಂತೆ!

ಹಿಮಾಲಯಪರ್ವತದಲ್ಲಿ 13 ಸಾವಿರ ಅಡಿಗಳಿಂದ 20 ಸಾವಿರ ಅಡಿಗಳವರೆಗೆ ಇರುವ ಪ್ರದೇಶದಲ್ಲಿ ಮಿಗರೆಂಬ ಒಂದು ಜಾತಿಯ ನರರಾಕ್ಷಸರು ನಾಸವಾಗಿರುತ್ತಾರೆ. ಇವರು 12 ಅಡಿಗಳಷ್ಟು ಎತ್ತರ ಬೆಳೆಯುವ[ರು]... 8 ಅಡಿಗಳಿಗಿಂತಲೂ ಕಡಿಮೆಯಾಗಿ ಬೆಳೆಯು... ವು. ಇವರು ಅಕಸ್ಮಾತ್ ಇತರ ಮನುಷ್ಯರನ್ನು ... ತರೆ ಆ ಕ್ಷಣದಲ್ಲಿಯೇ ಅವರನ್ನು ಕೊಲ್ಲುತ್ತಾರೆ. ಇವರ ಹೆಂಗಸರೂ ಸಹ ಇವರಂತೆ ಕಠಿಣ ಸ್ವಭಾವದವರಾಗಿರುತ್ತಾರೆ. ಯಾರಾದರೂ ಸುಂದರ ಪುರುಷರನ್ನು ಕಂಡರೆ ಅವರನ್ನು ಆ ಕ್ಷಣದಲ್ಲಿಯೇ ಮೋಹಿಸಿ ಅವರಮೇಲೆ ಬೀಳುತ್ತಾರೆ. ಆ ಪುರುಷರು ಅವರಿಚ್ಛೆಯಂತೆ ನಡೆಯದಿದ್ದರೆ ಅವರನ್ನು ಕೊಂದು ಹಾಕುತ್ತಾರೆ. ಸಮ್ಮತಿಸಿದರೆ ಅವರನ್ನು ಪತ್ತೆಯಿಲ್ಲದಂತೆ ಮಾಯಮಾಡಿಬಿಡುತ್ತಾರೆ ಎಂದು ಶ್ವಾನ್ಸಿ ಜಾಕ್ಸನ್ ಎಂಬವರು ಇಂಗ್ಲೆಂಡಿನ ಡೇಲಿ ಟೆಲಿಗ್ರಾಫ್ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವರಂತೆ!

ಅಮೇರಿಕಾದೇಶದಲ್ಲಿ ಮುಖ್ಯಪಟ್ಟಣವೆನಿಸಿದ ನ್ಯೂಯಾರ್ಕಿನಲ್ಲಿ 2 ಕೋಟಿ ಜನರು ಸೌಖ್ಯವಾಗಿ ವಾಸಮಾಡುವಂಥ ಮತ್ತು ನಿರಾತಂಕವಾಗಿಯೂ ಜಾಗ್ರತೆಯಾಗಿಯೂ ಸಂಚರಿಸಲನುಕೂಲವಾಗುವಂಥ ಒಂದು ನೂತನವಾದ ಏರ್ಪಾಡನ್ನು ಯೋಚಿಸಿರುವರು. ಅದಕ್ಕೆ 800 ಕೋಟಿ ರೂಪಾಯಿಗಳು ಖರ್ಚಾಗಬಹುದೆಂದು ಊಹಿಸಲ್ಪಟ್ಟಿದೆ. 1965 ನೆಯ ಇಸವಿಯೊಳಗಾಗಿ ನ್ಯೂಯಾರ್ಕಿನ ಜನಸಂಖ್ಯೆಯು 2 ಕೋಟಿಯಾಗುವುದೆಂದೂ, ಇಷ್ಟು ಜನಗಳ ವಾಸಕ್ಕೆ ಕಟ್ಟಲ್ಪಡುವ ಹೊಸ ಪಟ್ಟಣವು 5,528 ಚದರ ಮೈಲುಗಳುಳ್ಳದ್ದಾಗುವುದೆಂದೂ ಊಹಿಸಿರುವರು. ಹೊಸಪಟ್ಟಣವನ್ನು ಯಾವರೀತಿಯಲ್ಲಿ ಕಟ್ಟಬೇಕೆಂಬುದನ್ನು ತೋರಿಸುವ ನಕಾಶಗಳು 2 ದೊಡ್ಡ ಪುಸ್ತಕಗಳಲ್ಲಿ ಅಡಕವಾಗಿರುವುವು. ಈ ನಕಾಶಗಳನ್ನು ಉತ್ತಮರೀತಿಯಿಂದ ತಯಾರಿಸಲು 150 ಜನ ಮುಖ್ಯಮುಖ್ಯ ಇಂಜನಿಯರುಗಳೂ, ಶಿಲ್ಪಿಗಳೂ ಮತ್ತು ಅರ್ಥಶಾಸ್ತ್ರಜ್ಞರೂ 7 ವರ್ಷಗಳವರೆಗೆ ಕೆಲಸಮಾಡಿರುವರು. ಅದಕ್ಕಾಗಿ ಇಲ್ಲಿಯವರೆಗೆ 2½ ಕೋಟಿ ರೂಪಾಯಿಗಳು ಖರ್ಚಾಗಿರುವವಂತೆ!

ನೆಲ್ಲೂರು ಡಿಸ್ಟ್ರಿಕ್ಟಿನಲ್ಲಿರುವ "ಪೋಲಿರೆಡ್ಡಿಪಾಳ್ಯಂ" ಎಂಬ ರೈಲ್ವೆಸ್ಟೇಷನ್ನಿನಲ್ಲಿ ಸ್ಟೇಷನ್‌ಮಾಸ್ಟರಾಗಿರುವ ಮಿ|| ವೇಮೂರಿ ನರಸಿಂಹಯ್ಯಂಗಾರ ಎಂಬವರು ಚಿಕ್ಕಂದಿನಿಂದ ಹಾವು ಕಚ್ಚಿದವರಿಗೆ ಚಿಕಿತ್ಸೆಮಾಡುತ್ತಿರುವರಂತೆ! ಹಾವು, ಚೇಳು, ನಾಯಿ, ಚಿರತೆ ಅಥವಾ ಯಾವ ವಿಷಜಂತುವಿನಿಂದೇ ಆಗಲಿ ಕಡಿಸಿಕೊಂಡವರು ಅವರಿಗೆ ಟೆಲಿಗ್ರಾಂ ಮೂಲಕ "ಪಾಮು ಕರಿಚಿಂದಿ ದಂಡವೇಯಲು" ಎಂದು ತಿಳುಹಿಸಿದರೆ, ಅವರು ಆ ಕೂಡಲೆ ಒಂದು ದಾರವನ್ನಾಗಲಿ ಅಥವಾ ಬಟ್ಟೆಯನ್ನಾಗಲಿ ಅವರ ಸಮೀಪದಲ್ಲಿದ್ದವರಿಗೆ ಕೊಟ್ಟು ಯಾವುದಾದರೂ ಒಂದು ಮರಕ್ಕೆ ಕಟ್ಟಬರುವಂತೆ ಹೇಳುವರಂತೆ! ಅದನ್ನು ಮರಕ್ಕೆ ಕಟ್ಟಿದೊಡನೆ ಕಡಿಸಿಕೊಂಡವರು ಎಲ್ಲಿದ್ದರೂ ಗುಣಹೊಂದುವರಂತೆ! ಇದು ನಿಜವಾದಪಕ್ಷದಲ್ಲಿ ಈತನಿಗೆ ಮಹಿಮನೆಂದೇ ಹೇಳಬೇಕಾಗುವದು. ನಮ್ಮ ಕರ್ಣಾಟಕದೇಶೀಯರು ಯಾರಾದರೂ ಈ ವಿಷಯವನ್ನು ಅನುಭವಕ್ಕೆ ತೆಗೆದುಕೊಂಡು ನಿಜಾಂಶವನ್ನು ತಿಳಿದು ವರ್ತಮಾನಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದರೆ ಜಗತ್ತಿನ ಜನರಿಗೆ ಮಹೋಪಕಾರ ಮಾಡಿದಂತಾಗುವದು.

ಸಿಕಂದರಾಬಾದಿನ ಮ್ಯಾಜಿಸ್ಟ್ರೇಟರ ಟೋಪಿಯು ಪ್ರತಿನಿತ್ಯವೂ ಅವರು ಆಫೀಸಿಗೆ ಹೊರಡುವ ವೇಳೆಗೆಸರಿಯಾಗಿ ಮಾಯವಾಗುತ್ತಿತ್ತಂತೆ! ಅವರು 2 ಹೊಸಟೋಪಿಗಳನ್ನು ಕೊಂಡುಕೊಂಡರು. ಆ ಟೋಪಿಗಳೂ ಸಹ ಮಾಯವಾಗಲು, ಯಾವನೋ ಚತುರನಾದ ಕಳ್ಳನು ಹೀಗೆ ಮಾಡುವನೆಂದು ತಿಳಿದು ಈ ವಿಷಯವನ್ನು ಪೋಲೀಸರಿಗೆ ತಿಳುಹಿಸಿದರು. ಪೋಲೀಸರು ಈ ಕಳ್ಳತನವನ್ನು ಕಂಡುಹಿಡಿಯಲು ಪ್ರಯತ್ನ ಮಾಡುತ್ತಿರುವಲ್ಲಿ ಮ್ಯಾಜಿಸ್ಟ್ರೇಟರ ಮತ್ತು ಅವರ ಮಗನ ಎರಡು ಟೋಪಿಗಳು ಪುನಃ ಮಾಯವಾದವು. ಎಲ್ಲರಿಗೂ ಆಶ್ಚರ್ಯವಾಯಿತು. ಪೋಲೀಸರು ಎಷ್ಟು ಎಚ್ಚರಿಕೆಯಿಂದ ಕಾವಲಿದ್ದರೂ ಕಳ್ಳತನವು ಪತ್ತೆಯಾಗಲಿಲ್ಲ. ರೆವಿನ್ಯೂ ಆಫೀಸಿನ ಕ್ಲಾರ್ಕನೊಬ್ಬನು ಅದುವರೆಗೆ ಮಾಯವಾಗಿದ್ದ ಟೋಪಿಗಳನ್ನೆಲ್ಲ ತಂದು ಮ್ಯಾಜಿಸ್ಟ್ರೇಟರ ಮುಂದಿರಿಸಿ, ತಾವು ಪ್ರೀತಿಯಿಂದ ಸಾಕುತ್ತಿದ್ದ ಬೆಕ್ಕು ತಮ್ಮ ಟೋಪಿಗಳನ್ನು ನನ್ನ ಮನೆಯಲ್ಲಿ ತಂದುಹಾಕುತ್ತದೆಂದು ಹೇಳಿದನು. ಮ್ಯಾಜಿಸ್ಟ್ರೇಟರು ಅವನ ಮಾತನ್ನು ನಂಬದೆ ಅವನನ್ನು ಪೋಲೀಸರ ವಶಮಾಡಿದರು. ಪೋಲೀಸರು ಗುಮಾಸ್ತನು ಹೇಳುವದನ್ನು ಪರೀಕ್ಷಿಸಬೇಕೆಂದು ಎರಡು ಟೋಪಿಗಳನ್ನು ಮ್ಯಾಜಿಸ್ಟ್ರೇಟರ ಮನೆಯಲ್ಲಿಟ್ಟು ಮರೆಯಲ್ಲಿ ನೋಡುತ್ತಿರಲು ಬೆಕ್ಕು ಅಲ್ಲಿಗೆ ಬಂದು ಟೋಪಿಗಳಲ್ಲಿ ಸ್ವಲ್ಪ ಹೊತ್ತು ಚೆಲ್ಲಾಟವಾಡಿ ಆ ಮೇಲೆ ಅವುಗಳನ್ನು ಕಚ್ಚಿಕೊಂಡು ಹೋಯಿತಂತೆ!

ವಿವಾಹಮಹೋತ್ಸವ.

ದೊಣೆಹಳ್ಳಿ

ಚಿತ್ರದುರ್ಗ ಡಿ|| ಜಗಲೂರು ತಾ|| ದೊಣೆಹಳ್ಳಿ ಗ್ರಾಮದ ಮಠದ ವೇ|| ಶಿವ್ಪೇಸ್ವಾಮಿಯವರ ಜೇಷ್ಠಪುತ್ರ ಚಿ|| ಶಿವರುದ್ರಾರ್ಧ್ಯರಿಗೆ ಹಿರಿಯೂರು ತಾ|| ಮೇಟಿಕುರಿಕೆ ಮಠದ ವೇ|| ಮಹಾದೇವಪ್ಪಯ್ಯನವರ ಪುತ್ರಿ ಚಿ|| ಸೌ|| ರುದ್ರಮ್ಮನನ್ನು ತಂದು ಇದೇ ಶುಕ್ಲನಾಮ ಸಂ|| ಜೇಷ್ಠ ಶು|| ೧೦ ಭಾನುವಾರ ದೊಣೆಹಳ್ಳಿಯಲ್ಲಿ ವಿವಾಹಕಾರ್ಯವನ್ನು ನೆರವೇರಿಸಿದ್ದಲ್ಲದೆ ತಮ್ಮ ಮಠದಲ್ಲಿ ಶ್ರೀ ವೀರಭದ್ರೇಶ್ವರವಟುಗಳಿಗೆ ಧರ್ಮಾರ್ಥ ಶಿವದೀಕ್ಷಾಸಂಸ್ಕಾರವನ್ನು ಮಾಡಿಸಿ ಶಿವಮೊಗ್ಗ ತಾ|| ಬೀಕಿ ಗ್ರಾಮದಲ್ಲಿರುವ ಶ್ರೀ|| ಷ|| ಬ್ರ|| ಚೀಳಂಗಿ ಮಠದ ಪಟ್ಟದ ಶ್ರೀಗಳವರ ಅಧ್ಯಕ್ಷತೆ ಮತ್ತು ಶ್ರೀ|| ಷ|| ಬ್ರ|| ದೊಡ್ಡೇರಿ ಬಾಲಸಿದ್ಧೇಶ್ವರಸ್ವಾಮಿ ಮಠದ ಚರಮೂರ್ತಿಸ್ವಾಮಿಗಳವರ ಉಪಾಧ್ಯಕ್ಷತೆಯಲ್ಲಿ ವೀರಶೈವಮಹೋತ್ಕರ್ಷಕ ಸಭೆಯನ್ನು ನಡೆಯಿಸಿದರು. ವೇ|| ಅರಸೀಕೆರೆ ಮಠದ ಚಿಕ್ಕಪ್ಪಯ್ಯಶಾಸ್ತ್ರಿಗಳು ಮುಷ್ಟಲಗುಮ್ಮಿ ಮಠದ ವೇ|| ಸಿದ್ಧಲಿಂಗಶಾಸ್ತ್ರಿಗಳು ಇನ್ನೂ ಕೆಲವರ ಭಾಷಣಗಳು ನಡೆದವು. ಅನಂತರ ವೇ|| ಅರಸೀಕೆರೆ ಮಠದ ಶಿವಕಥಾವಿದ್ವಾನ್ ಬಸವಲಿಂಗಶಾಸ್ತ್ರಿಗಳ ಮನೋಹರವಾದ ಶಿವಕಥೆಯು ನೆರವೇರಿತು. ವಿವಾಹಸಮಯದಲ್ಲಿ ಅನ್ನಸಂತರ್ಪಣೆಯು ವಿಶೇಷವಾಗಿ ನೆರವೇರಿದ್ದಲ್ಲದೆ ಸಕಲ ಕಾರ್ಯಕ್ರಮಗಳು ಸುಲಲಿತವಾಗಿ ನಡೆದು ಪೂರೈಸಿದವು. ಈ ಉಭಯ ಕಾರ್ಯಗಳನ್ನು ಕಾರ್ಯಾಧ್ಯಕ್ಷರಾದ ವೇ|| ಶಿವ್ಪೆಸ್ವಾಮಿಯವರು ತುಂಬಾ ಶ್ರದ್ಧೆಯಿಂದ ನೆರವೇರಿಸಿದರು. ಈ ಕಾರ್ಯಗಳಲ್ಲಿ ಮ|| ರಾ|| ಪಟೇಲ್ ವೀರಪ್ಪನವರು ಮ|| ರಾ|| ಜೋಗಿಹಳ್ಳಿ ವೀರಣ್ಣನವರು ತುಂಬಾ ಶ್ರಮವಹಿಸಿದರು. ಮೇಲ್ಕಂಡ ಪಟ್ಟಧರಾಧಿಕಾರಿಗಳ ಸೂಚನೆಯ ಮೇರೆಗೆ ಪಂಚಾಚಾರ್ಯಪ್ರಭಾ ಪೋಷಣೆಕ್ಕೋಸ್ಕರ 5 ರೂ ಗಳನ್ನು ಅರ್ಪಿಸಲಾಯಿತು. ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರು ಈ ನೂತನ ದಂಪತಿಗಳಿಗೂ ದೀಕ್ಷಾವಟುಗಳಿಗೂ ಆಯುರಾರೋಗ್ಯಾದಿ ಸಕಲ ಮಂಗಲಗಳನ್ನೀಯಲೆಂದು ಕೋರುವ,

ಜೋಗಿಹಳ್ಳಿ ವೀರಣ್ಣ, ದೊಣೆಹಳ್ಳಿ.

ಉತ್ತಂಗಿಯಲ್ಲಿ ನಡೆದ ಸಾದರ ವಿಚಿತ್ರೋತ್ಸವ.

ತಾರೀಖು 15-5-29 ನೆಯ ದಿವಸ ಹುವಿನಹಡಗಲಿ ತಾಲೂಕಿಗೆ ಸೇರಿದ ಉತ್ತಂಗಿಗ್ರಾಮದಲ್ಲಿ ಸಾದರ ಗುರುಗಳ ಉತ್ಸವವು ಬಹು ವಿಚಿತ್ರರೀತಿಯಿಂದ ನೆರವೇರಿತು. ಈ ಉತ್ತಂಗಿಯೆಂಬ ಚಿಕ್ಕಗ್ರಾಮದಲ್ಲಿ ಸಾದರು ತಮ್ಮ ಉತ್ಸವವನ್ನು ಮಾಡಬೇಕೆಂದು ಬಹುದಿವಸದಿಂದ ಪ್ರಯತ್ನಿಸುತ್ತಿದ್ದರು. ಆದಾಗ್ಯೂ ನೆರವೇರಿರಲಿಲ್ಲ. ಈ ವರ್ಷ ಸರಕಾರದವರು ಹ್ಯಾಗಾದರೂ ಮಾಡಿ ಈ ಗ್ರಾಮದಲ್ಲಿ ಉತ್ಸವವಾಯಿತೆನ್ನಿಸಬಿಡೋಣವೆಂದು ಯೋಚಿಸಿ ನಾಲ್ಕು ಐದು ನೂರು ಜನ ಪೋಲೀಸ್ ಸಿಬ್ಬಂದಿಯನ್ನು ಕಟ್ಟಿಕೊಂಡು ಬಂದು ಉತ್ಸವವನ್ನು ಮಾಡಿಸಿದರು. ಉತ್ಸವವಾದ ರೀತಿಯು ಈ ಮುಂದೆ ಕೊಟ್ಟಿರುವುದು. ಸಾದರ ಗುರುವು ಮಧ್ಯಾಹ್ನ 3 ಘಂಟೆಗೆ ನಂದೀ ಬೇವೂರುಗ್ರಾಮದಿಂದ ಉತ್ತಂಗಿ ಗ್ರಾಮದ ಊರುಹೊರಗಿನ ಭಾವಿಯ ಹತ್ತರಕ್ಕೆ ಬರಲು, ಪಲ್ಲಕ್ಕಿಯಲ್ಲಿ ಕೂಡ್ರಿಸಿದರು. ಅದಕ್ಕೆ ಜಾಲರಿಯ ಮುಸುಕು ಹಾಕುವದಾಗಿತ್ತು. ಅದರ ಹಿಂಭಾಗದಲ್ಲಿ ಬಾಗಿಲು ಮುಚ್ಚಿದ ಒಂದು ವ್ಯಾನಾ. ಅದರ ಹಿಂದೆಯೂ, ಮುಂದೆಯೂ ರಿಜರ್ವ್ ಪೋಲೀಸರ ಕಾವಲು ಅದರ ಮುಂದುಗಡೆ ವಾದ್ಯ ಅದರ ಮುಂದೆ ಮೆ|| ಜಿಲ್ಲಾ ಕಲೆಕ್ಟರರು, ಮೆ|| ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರೇ ಮೊದಲಾದವರು; ಗ್ರಾಮದಲ್ಲಿ ಉದ್ದಕ್ಕೂ ಪೋಲೀಸ್ ಕಾನ್‌ಸ್ಟೆಬಲರನ್ನು ನಿಲ್ಲಿಸಿದ್ದರು. ಮುಖ್ಯ ಮುಖ್ಯ ಯಾವ ಬಿರುದುಗಳೂ ಇಲ್ಲದೆ. "ಗುರು" ಎಂದು ಹೊಗಳಿಸಿಕೊಳ್ಳದೆ, ಊದಿಸಿಕೊಳ್ಳುತ್ತಾ ಹೋಗುವಾಗ್ಗೆ ಕೆಲವರು ನೆಲಮಡಿ ಹಾಸಲಿಕ್ಕೆ ಪ್ರಯತ್ನಪಡಲು ಆ ಕೂಡಲೇ ಜಿಲ್ಲಾಕಲೆಕ್ಟರು ಸಾಹೇಬರವರು ಅದನ್ನು ತೆಗೆಸಿಹಾಕಿಸಿದರು. ಚನ್ನಾಪುರದ ಭರಮಪ್ಪನ ಮನೆಯ ಹತ್ತರ ಗುರುವು ಪಲ್ಲಕ್ಕಿಯಿಂದಿಳಿದು ಆತನ ಮನೆಯೊಳಗೆ ಹೋಗಬೇಕೆಂದು ಪ್ರಯತ್ನಪಡಲು ಮೆ|| ಜಿಲ್ಲಾ ಕಲೆಕ್ಟರ್ ಸಾಹೇಬರೂ, ಹಾಗೂ ಜಿಲ್ಲಾ ಸೂಪರಿಂಟೆಂಡೆಂಟರವರೂ ಅಲ್ಲಿವೇ ಬಂದು ಪಲ್ಲಕ್ಕಿಯನ್ನು ಇಲ್ಲಿ ನಿಲ್ಲಿಸಲಿಕ್ಕೂ ಕೆಳಗೆ ಇಳಿಯಲಿಕ್ಕೂ ಯಾರು ಹುಕುಂ ಕೊಟ್ಟರೆಂದು ಬೆದರಿಸಿ ಆ ಗುರುವನ್ನು ಮನೆಯೊಳಗೆ ಹೋಗದಂತೆ ಮಾಡಿ, ಹಾಗೆಯೇ ಪಲ್ಲಕ್ಕಿಯನ್ನು ಹತ್ತಿಸಿದರು. ಮತ್ತು ಕೆಂಚನಗೌಡರ ನಾಗಪ್ಪ ಎಂಬಾತನು ಕಾಯಿಕರ್ಪೂರ ತೆಗೆದುಕೊಂಡು ಪಲ್ಲಕ್ಕಿಯ ಹತ್ತರ ಬರಲು ಪ್ರಯತ್ನಪಡಲು ಪೋಲೀಸರು ಬಾರದಂತೆ ಮಾಡಿದರು. ಎಲ್ಲಿಯೂ ಪಲ್ಲಕ್ಕಿಯು ನಿಲ್ಲಲಿಕ್ಕೂ ಯಾರೂ ಅದರ ಹತ್ತರ ಬರಲಿಕ್ಕೂ ಅವಕಾಶವಿಲ್ಲದಂತೆ ಸಾಗಿಸಿಕೊಂಡು ಹೋಗಿ ಸ್ವಸ್ಥಾನದ ಹತ್ತರ ವಾದ್ಯವನಾಡುವದನ್ನು ನಿಲ್ಲಿಸಿದರು. ಆ ಸಮಯದಲ್ಲಿ ದ್ಯಾಮನಗೌಡ ಎಂಬಾತನು ಮೆ|| ಕಲೆಕ್ಟರ ಸಾಹೇಬರವರನ್ನು ಕುರಿತು ನಮ್ಮ ಸ್ವಾಮಿಗಳು ನಮ್ಮ ಊರಲ್ಲಿ ಒಂದೆರಡು ದಿವಸಗಳಾದರೂ ಇರುವಂತೆ ಅಪ್ಪಣೆಕೊಡಬೇಕೆಂದು ಬೇಡಿಕೊಳ್ಳಲು, ಊರೊಳಗೆ ಹಿಂದಿರುಗಿ ಹೋಗಲಿಕ್ಕೆ ಅವಕಾಶ ದೊರೆಯುವದಿಲ್ಲವೆಂದು ಹೇಳಿದರು. ಆ ನಂತರ ಮೋರಗೇರಿ ದಾರಿಯನ್ನು ಹಿಡಿಸಿ ಇಟಿಗಿಯ ರೋಡಿಗೆ ಕೂಡಿಸಿ ಅಲ್ಲಿಂದ ಯಂದ ತಳಕಲ್ಲು ಎಂಬ ಗ್ರಾಮಕ್ಕೆ ಹೋಗಿ ಸೇರುವಂತೆ ಮಾಡಿದರು. ಈ ಉತ್ಸವವು ಗ್ರಾಮದಲ್ಲಿ ಇಪ್ಪತ್ತು ಇಪ್ಪತ್ತೈದು ನಿಮಿಷಗಳವರೆಗೆ ಮಾತ್ರ ನಡೆದಿರಬಹುದು. ಈ ರೀತಿಯಾಗಿ ವೈಭವದಿಂದ ನೆರವೇರಿದ ಉತ್ಸವವು ಇಂಡಿಯಾದಲ್ಲಿ ಎಲ್ಲಿಯೂ ನಡೆದಿರಲಿಕ್ಕಿಲ್ಲವೆಂದು ಹೇಳಬಹುದಾಗಿದೆ. ಈ ಉತ್ಸವವನ್ನು ನೋಡುವದಕ್ಕಾಗಿ ಸಾವಿರಾರು ಜನ ಸಾದರು ಉತ್ತಂಗಿಗೆ ಬಂದಿದ್ದರು. ಆದರೆ ಸರಕಾರದವರು ಅವರನ್ನು ಊರೊಳಗೆ ಬರದಂತೆ ಕಟ್ಟುಮಾಡಿ ಊರ ಹೊರಗೆಯೇ ನಿಲ್ಲಿಸಿದ್ದರು. ಪರಸ್ಥಳದಿಂದ ಬಂದ ಸಾದರಿಗೆ ಊರಲ್ಲಿ ನಿಂತು ನೀರುಕುಡಿಯಲಿಕ್ಕೂ ಸಹ ಅವಕಾಶದೊರೆಯದೆ ಒಳ್ಳೇ ಉತ್ಸವವನ್ನು ನೋಡುವದಕ್ಕೆ ಬಂದೆವಲ್ಲಾ ಎಂದು ತಮ್ಮತಮ್ಮೊಳಗೆ ಹೇಳಾಡುತ ತಮ್ಮ ಗ್ರಾಮಗಳಿಗೆ ಹೊರಟುಹೋದರು. ಮದ್ರಾಸ ಹೈಕೋರ್ಟಿನವರ ಆರ್ಡರಿನ ಪ್ರಕಾರ ಸಾದರಸ್ವಾಮಿಯು ಗುರುವೆನಿಸಿಕೊಳ್ಳದೆ ಸಾಧಾರಣ ಮನುಷ್ಯರಂತೆ, ಮುಖ್ಯ ಯಾವ ಬಿರುದುಗಳೂ ಇಲ್ಲದೆ ಹೋಗಲಿಕ್ಕೆ ಜಿಲ್ಲಾ ಕಲೆಕ್ಟರ ಸಾಹೇಬರವರೂ ಮತ್ತು ಪೋಲೀಸ್ ಸೂಪರಿಂಟೆಂಡೆಂಟ ಸಾಹೇಬರವರೂ ಆರ್ಡರುಮಾಡಿ, ಉತ್ಸವವನ್ನು ನೆರವೇರಿಸಿದರು.

ಈ ಉತ್ಸವವನ್ನು ನಡೆಯಿಸುವ ವಿಷಯದಲ್ಲಿ 1928ನೇ ಇಸವಿ ಸೆಪ್ಟಂಬರು 28 ನೆಯ ತಾರೀಖಿನ ದಿವಸ ಮೆ|| ಬಳ್ಳಾರಿ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ ಸಾಹೇಬರು ಕೊಟ್ಟಿರುವ ಸಿ. ನಂಬರು 1808 ಜನರಲ್ 1928 ನೇ ನಂಬರು ಹುಕುಂ ಈ ಕೆಳಗೆ ಕೊಟ್ಟಂತೆ ಇರುವದು.

Petitioner Gurusanthaswami is permitted to go in procession through the village of Uttangi on the 10th October 1928 upon the following conditions :—

That he does not use, carry, wear or exhibit or allow his followers to carry or exhibit during the procession any one or other of the following insiginia or emblems :—

(a) Nandi Dhwajam	(h) Chamara
(b) Vyasahastha	(i) Apthagiri
(c) Cross-Palanquin	(j) Nagari
(d) P[illegible] Kalasam	(k) Gaggari Kattiga
(e) S[illegible]atam	(l) Makara Thorana
(f) Sw[illegible]atram	(m) Kahli
(g) Chalavadi Ganta	(n) Red Umbr[illegible]

That he does not permit "Ka[illegible]" to be recited or sung during the procession.

ಆದರೆ ಪೋಲೀಸು ಸೂಪರಿಂಟೆಂಡೆಂಟ ಸಾಹೇಬರವರು ಕೊಟ್ಟಿರುವ ಮೇಲಿನ ಆರ್ಡರಿನಲ್ಲಿ ಸಾದರಗುರುವು ನಂದಿಧ್ವಜ, ವ್ಯಾಸಹಸ್ತ, ಅಡ್ಡಪಲ್ಲಕ್ಕಿ, ಪಂಚಕಲಶ, ಸಿಂಹಲಲಾಟ, ಶ್ವೇತಛತ್ರಿ, ಚಲವಾದಿಗಂಟೆ, ಚಾಮರ, ಅಪ್ತಾಗಿರಿ, ನಗಾರಿ, ಗಗ್ಗರಿಕಟ್ಟಿಗ, ಮಕರತೋರಣ, ಕಹಳೆ ಮತ್ತು ಕೆಂಪುಛತ್ರಿ ಇವುಗಳಲ್ಲಿ ಯಾವುದನ್ನು ಅವರಾಗಲಿ ಅವರ ಕಡೆಯವರಾಗಲಿ ಯಾರೂ ಉತ್ಸವಕಾಲದಲ್ಲಿ ಉಪಯೋಗಿಸಕೂಡದೆಂದೂ, ಮತ್ತು ಬಿರ(ಒಡಪು) ವನ್ನು ಹೇಳಕೂಡದೆಂದೂ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಈ ಆರ್ಡರಿನ ಪ್ರಕಾರವಾಗಿಯೇ ಯಾವ ಮುಖ್ಯ ಬಿರುದುಗಳೂ ಇಲ್ಲದೆ ಉತ್ಸವವು ನೆರವೇರಿದರೂ ಸಹ 1929 ನೇ ಜೂನ್ 1 ನೇ ತಾರೀಖಿನ "ಮೈಸೂರು ಸ್ಟಾರ್" ಪತ್ರಿಕೆಯಲ್ಲಿ ಮಹದೇವಪ್ಪ ಚೇರ್‌ಮನ್ ಅಳವಾಡಿ ತಾ|| ಚಿತ್ರದುರ್ಗ ಎಂಬಾತನು ಈ ಉತ್ಸವದ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಒಂದು ಲೇಖವನ್ನು ಬರೆದು ಆ ಲೇಖದಲ್ಲಿ ಸಕಲ ಬಿರುದಾವಳಿಗಳೊಡನೆ ಉತ್ಸವವು ನೆರವೇರಿತೆಂದೂ ಉತ್ಸವಕ್ಕೆ 10-12 ಸಾವಿರ ಜನರು ಬಂದು ಎರಡೂ ಪಕ್ಕಗಳಲ್ಲಿ ಗುಂಪುಗುಂಪಾಗಿ ನಿಂತಿದ್ದರೆಂದೂ ಇವೇ ಮೊದಲಾದ ಅಸತ್ಯಮಯ ವಿಷಯಗಳನ್ನು ಪ್ರಕಾಶಪಡಿಸಿ ಇದ್ದ ವಿಷಯವನ್ನು ಮರೆಮಾಚಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. "ಸ್ಟಾರ್" ಪತ್ರಿಕೆಯು ಸ್ನೇಹಿದವರಿಗೆ ಈ ಉತ್ಸವವು ಎಷ್ಟುವೈಭವದಿಂದ ನೆರವೇರಿತೋ ಏನೋ ಎಂದು ತೋರಬಹುದು. ಹಾಗೆ ಯಾರೂ ಭಾವಿಸಕೂಡದು. "ಸ್ಟಾರ್" ಪತ್ರಿಕಾ ಮೊದಲಾದ ಪತ್ರಿಕೆಗಳಲ್ಲಿ ಸಾದರು ಪ್ರಕಾಶಪಡಿಸಿದ ವಿಷಯವನ್ನು ಓದಿನೋಡಿ ಭ್ರಮಿತರಾದ ಜನರ ತಿಳುವಳಿಕೆಯ ಬಗ್ಗೆ ಯಥಾರ್ಥ ವಿಷಯವನ್ನು ಪ್ರಕಟಿಸಿದ್ದಾಗಿದೆ ಇದರ ನಿಜಾಂಶವನ್ನು ಸರ್ವರೂ ತಿಳಿದುಕೊಳ್ಳಲೆಂದು ಆಶಿಸುತ್ತೇನೆ.

ಓರ್ವ ಉತ್ತಂಗಿ ಗ್ರಾಮನಿವಾಸಿ.

ಸಂತೋಷವಿಷಯ.

ಬಿಜಾಪುರ ಡಿ|| ಬದಾಮಿ ತಾ|| ಗೋವನಕೊಪ್ಪ ಗ್ರಾಮದಲ್ಲಿ ಹೋದ ವರುಷದಂತೆ ಈ ವರುಷವಾದರೂ ಕಾರಹುಣ್ಣಿಮೆಯ ದಿವಸ ಅತಿ ಪವಿತ್ರಗಳಾದ ಬಸವನ್ನ (ಎತ್ತು)ಗಳ ಬಾಯಲ್ಲಿ ದುಷ್ಟ ಪದಾರ್ಥವನ್ನು ಹಾಕುವದನ್ನು ಯಾವತ್ತು ರೈತಬಾಂಧವರು ಬಿಟ್ಟುಬಿಟ್ಟರು. ಇಲ್ಲಿಯ ಮ|| ಎನ್. ಎಸ್. ಮಾಳವಾಡ ಇವರ ಜಾಹೀರ ಪತ್ರಿಕೆಯ ಪ್ರಕಾರ ಈ ಊರು ಸುತ್ತಮುತ್ತಲಿನ ಗ್ರಾಮಗಳ ರೈತಬಾಂಧವರೂ ಸಹ ಈ ಅಮಂಗಲಪದ್ಧತಿಯನ್ನು ಬಿಟ್ಟದನ್ನು ಕೇಳಿ ಅತ್ಯಂತ ಸಂತೋಷವೆನಿಸಿತು. ಇದರಂತೆ ಯಾವತ್ತು ಗ್ರಾಮಗಳ ರೈತರು ಈ ಕೃತಿಯನ್ನು ತಾವು ಬಿಡುವದಲ್ಲದೆ ತಮ್ಮ ಪರಿಚಯದವರಿಗೂ ಸಹ ತಿಳುಹಿಸಿ ಬಿಡಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ,

ಬಸಪ್ಪ ಹುರಕಡ್ಲಿ.

ಶ್ರೀ ಮರುಲಾರಾಧ್ಯಸ್ತೋತ್ರ.

ಈ ಗ್ರಂಥದಲ್ಲಿ ಮೂಲ ಜಗದಾಚಾರ್ಯರ ಸ್ತುತಿಯು ಭಾಮಿನಿ ಷಟ್ಪದಿಯಲ್ಲಿ ಮನೋಹರವಾದ ಶೈಲಿಯಿಂದ ರಚಿಸಲ್ಪಟ್ಟದ್ದು ಪ್ರತಿಯೊಬ್ಬ ವೀರಶೈವನೂ ಪಾರಾಯಣಮಾಡಲು ತುಂಬಾ ಯೋಗ್ಯವಾಗಿದೆ. ಇದರಲ್ಲಿ ಮೂಲಾಚಾರ್ಯರ ಮತ್ತು ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರಗಳಿವೆ. ಬೆಲೆ 1 ಕ್ಕೆ 2 ಆಣೆ.

1 ರೂಪಾಯಿ ಮನಿಯಾರ್ಡರಮಾಡಿ ಕಳುಹಿಸುವವರಿಗೆ 12 ಬುಕ್ಕುಗಳನ್ನು ಪೋಸ್ಟು ಚಾರ್ಜು ಇಲ್ಲದೆ ಕಳುಹಿಸುವದಾಗುವದು. 5 ಆಣೆ ಪೋಸ್ಟು ಸ್ಟಾಂಪು ಕಳುಹಿಸಿದವರಿಗೆ 3 ಬುಕ್ಕುಗಳನ್ನು ಕಳುಹಿಸುವದಾಗುವದು.

ವಿರೂಪಾಕ್ಷಶಾಸ್ತ್ರೀ ಪುರಾಣಿಕಮಠ,

ಪೋಸ್ಟು ಹಿರೇಹಡಗಲಿ, ಜಿಲ್ಲಾ ಬಳ್ಳಾರಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.

ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಪ್ರಿಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [13]

ಎಂ. ಎಸ್. ಗಂಗಂಣ ಮತ್ತು ಲೋಕಂಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು—ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ. **'ಕೊಡಗಿನ ಗುಡುಗುಡು!'** (ಛಳಿ)ಗಳು. **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [48]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. ೯—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕಿಟಬಾಗಿಗೆ) ಕ್ರಯಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಉಚಿತ! ಉಚಿತ!! ಉಚಿತ!!!

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ.

ಸುಮಾರು ನೂರು ಪುಟಗಳನ್ನೊಳಕೊಂಡ ಸಚಿತ್ರವಾದ ಪುಸ್ತಕ.

(ಆನರಬಲ್ ಡಾಕ್ಟರ್ ಯು. ರಾಮರಾಯರಿಂದ ರಚಿತವಾದುದು.)

ಇಂಗ್ಲಿಷಿನಲ್ಲಿ ಪ್ರಕಟವಾದ ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಮ್. ಎಲ್. ಸಿ. ಮದರಾಸು. "ಮುದ್ರಿತವಾದ ಈ ಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಮದರಾಸು ಮೆಯಿಲ್ ಪತ್ರಿಕೆ:—2-3-28. ಇದು ಪ್ರತಿ ಗೃಹಸ್ಥರ ಕೈಯಲ್ಲಿರಬೇಕಾದ ಉತ್ತಮ ಪುಸ್ತಕ."

"ಪ್ರಾಕ್ಟಿಕಲ್ ಮೆಡಿಸನ್" ಡೆಲ್ಲಿ—ಇದು ನಮ್ಮ ದೇಶದ ಪ್ರತಿ ಹೆಂಗಸರಿಗೆಲ್ಲ ಅವಶ್ಯವಾದ ಪುಸ್ತಕವೆಂದು ನಾವು ಅನುಮೋದಿಸುವೆವು. ಇಂಗ್ಲೀಷ್ ಭಾಷೆಯನ್ನು ತಿಳಿಯದವರಿಗೂ ಉಪಯೋಗಪಡುವಂತೆ ಇದನ್ನು ನಮ್ಮ ದೇಶಭಾಷೆಗಳಲ್ಲಿ ಪರಿವರ್ತನೆ ಮಾಡಿಸಿದರೆ ಉತ್ತಮವು."

ಹಿಂದೂಪತ್ರಿಕೆ:-4-4-28. "ಆನರಬಲ್. ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, ನಮ್ಮ ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ ಓದಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಜನಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಿಂದ, ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಲ್ಪಟ್ಟಿವೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳುವಳಿಕೆಯಿಲ್ಲದುದರಿಂದ ಎಷ್ಟೋ ಅಪಾಯಗಳು ಸಂಭವಿಸುತ್ತಿವೆ. ಈ ಪುಸ್ತಕವನ್ನೋದಿ ತಿಳಿದವರಿಂದ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

ಈ ಸಣ್ಣ ಪುಸ್ತಕದಲ್ಲಿ ಪ್ರಸವಕಾರ್ಯಕ್ಕೆ ಸಂಬಂಧಪಟ್ಟ ಶಾರೀರಕ ರಚನೆಗಳು, ಗರ್ಭದೆಸೆಯಲ್ಲಿಯೂ ಬಾಣಂತಿತನದಲ್ಲಿಯೂ ದೇಹಪೋಷಣೆ ಮತ್ತು ಆ ಕಾಲಗಳಲ್ಲಿ ಸಂಭವಿಸಬಹುದಾದ ರೋಗಗಳಿಗೆ ನಿವಾರಣೋಪಾಯಗಳು, ಮುಂತಾದುವೆಲ್ಲ ವಿವರಿಸಲ್ಪಟ್ಟಿವೆ."

ಡೇಯಿಲಿ ಎಕ್ಸ್‌ಪ್ರೆಸ್, ಮದರಾಸು:—4-3-28. ಜನರಿಗೆ ಆರೋಗ್ಯಜ್ಞಾನವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಡಾ. ಯು. ರಾಮರಾಯರ ಪ್ರಯತ್ನಗಳು ಸುಪ್ರಸಿದ್ಧವಾಗಿವೆ. ಈಗ ಹೊಸದಾಗಿ ಇವರು ಹೊರಕ್ಕೆ ತಂದಿರುವ ಈ ಸಣ್ಣ ಪುಸ್ತಕವು ನಮ್ಮ ದೇಶದ ಸ್ತ್ರೀ ಜಾತಿಗೆ ಅತ್ಯಂತೋಪಕಾರಕವೆಂದು ನಾವು ದೃಢವಾಗಿ ಹೇಳುವೆವು."

ಮೈಸೂರು ಪೇಟ್ರಿಯೇಟ್:—12-4-28. "ಇದು ತಮ್ಮ ದೇಹಾರೋಗ್ಯವನ್ನೂ, ತಮ್ಮ ಮಕ್ಕಳ ಪುರೋವೃದ್ಧಿಯನ್ನೂ ಬಯಸುವ ಪ್ರತಿ ಹೆಂಗಸರೂ ಅವಶ್ಯವಾಗಿ ಓದಬೇಕಾದ ಪುಸ್ತಕವಾಗಿದೆ. ಇದರಲ್ಲಿ, ಸ್ತ್ರೀಯರಿಗೆ ಗರ್ಭಕಾಲದಲ್ಲಿ ಆರೋಗ್ಯರಕ್ಷಣೆ. ರೋಗನಿವಾರಣೋಪಾಯಗಳು, ಬಾಣಂತಿಯರ ಆರೈಕೆ, ಪ್ರಸವಕಾಲದಲ್ಲಿ ಸಂಭವಿಸಬಹುದಾದ ಅಪಾಯಗಳಿಗೆ ತಾತ್ಕಾಲಿಕ ನಿವಾರಣೆಯ ಮಾರ್ಗಗಳು, ಈ ಮುಂತಾದ ವಿಷಯಗಳು ಬೇರೆಬೇರೆ 14 ಅಧ್ಯಾಯಗಳಾಗಿ ವಿಭಾಗಿಸಿ ಬರೆಯಲ್ಪಟ್ಟಿವೆ. ಯು. ರಾಮರಾಯರು ಹೀಗೆ ಸಾರ್ವಜನಿಕ ಕ್ಷೇಮಕ್ಕಾಗಿ ಬರೆದಿರುವ ಅನೇಕ ಪುಸ್ತಕಗಳು ಇಂಗ್ಲೀಷಿನಲ್ಲಿ ಮಾತ್ರವಲ್ಲದೆ ಅನೇಕ ದೇಶಭಾಷೆಗಳಲ್ಲಿಯೂ ಪರಿವರ್ತಿಸಲ್ಪಟ್ಟಿವೆ. ಪುಸ್ತಕದ ಮೂಲ್ಯವು ಸ್ವಲ್ಪವಾಗಿದ್ದರೂ, ಅದರಿಂದ ಜನಸಮುದಾಯಕ್ಕೆ ಉಂಟಾಗುವ ಪ್ರಯೋಜನವು ಅಮೂಲ್ಯವೆನಿಸಿದೆ."

ಪುಸ್ತಕದ ಬೆಲೆ, ಆರು ಆಣೆಗಳು ಮಾತ್ರ. ಅಂಚೆವೆಚ್ಚಕ್ಕಾಗಿ ಬೇರೇನೂ ಕೊಡಬೇಕಾಗಿಲ್ಲ.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನಪೇಕ್ಷಿಸತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

☞ ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮನಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [1]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

ಸೌಖ್ಯದ ಜಗತ್ತು] # ೧೦೦೦ ರೂಪಾಯಿ ಇನಾಮು [ಆದೀತು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಸ್ತ್ರೀಅರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ಶೀಘ್ರಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಶಿಕ್ಷಣಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಪುಷ್ಟವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಕಾಲಿಮುಸಂಡ, ಮಧುಕಂದ, ಜನಾಕಂಧ, ಕಾಲೀಮುಲೀಕಂದ, ಅಶ್ವಕಂದ ಶ್ರೀಷ್ಟಕಂದ, ಮುಸಳೇಕಂದ ಶತಾವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಶಾಪತ್ರಿ, ಮುದನಮಸ್ತ, ರತನಪುರುಷ, ಕಮರಕಸ, ಅಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಖಾನಾ, ಬೀಜಬಂದ, ಹರಣಖೋರಿ, ಮುಂಗಲೀಬೀದಾನೆ, ಮರ್ದಾನೀಕಟ್ಟಿಗೆ, ತತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಮೂಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧಿ ಕ್ರಿಮಿ, ನಾಸಬಾರದಿರೋಣ, ದಟ್ಟಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಔಷಧಿಯ 1 ಪುಡಿಕೆಗೆ 3 ರೂಪಾಯಿಗಳು. [24]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಬೆಲೆಯಲ್ಲಿ ಕಡಿಮೆಯಾದದ್ದು!
ಗುಣದಲ್ಲಿ ಮೇಲಾದದ್ದು!
ಶೀಘ್ರಗುಣಕಾರಿಯಾದದ್ದು!

ಹಿಮಾಲಯನ್ ಅಷ್ಟವರ್ಗೌಷಧಾಲಯದಲ್ಲಿ ಶುದ್ಧವನಸ್ಪತಿಗಳಿಂದ ಸಿದ್ಧಗೊಳಿಸಿದ

ಗೃಹಮಾತೆಯು

ಇದು ಹೆಸರಿಗೆ ತಕ್ಕಂತೆ. ತಾಯಿಯು ತನ್ನ ಮಕ್ಕಳನ್ನು ಯಾವರೀತಿಯಾಗಿ ಜೋಪಾನ ಮಾಡುವಳೋ, ಅದೇ ರೀತಿಯಾಗಿ ಈ ನಮ್ಮ ಮನೆ ತಾಯಿಯು ಅನುಪಾನಭೇದಗಳಿಂದ ಅನಂತರೋಗಗಳನ್ನು ನಾಶಮಾಡುವಳು. ಅಂತೇ ಇದಕ್ಕೆ ಭಿಷಗ್ವರರುಗಳು **"ಗೃಹಮಾತೆ"**ಯೆಂದು ಕರೆದಿರುವರು. ಇದೊಂದು ಗೃಹಮಾತೆಯು ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದಂತಾಗುವದೆಂದು ಖಂಡಿತವಾಗಿ ಹೇಳುವೆವು. ಈ ಗೃಹಮಾತೆಯಿಂದ ಗುಣಹೊಂದಿದ ರೋಗಮುಕ್ತರು, ಡಾಕ್ಟರರು, ವೈದ್ಯರಾಜರು ಗೃಹಮಾತೆಯನ್ನು ಕೊಂಡಾಡಿ ಸನ್ಮಾನಪತ್ರಗಳನ್ನು ಕೊಟ್ಟಿರುವರು. ಈ ಗೃಹಮಾತೆಯ ವರ್ಣನವು ಅಷ್ಟಿಷ್ಟೆಂದು ಹೇಳಲಾರೆವು. ನಮ್ಮ ಔಷಧವನ್ನು ನಾವು ವರ್ಣಿಸುವದು ಉಚಿತವಲ್ಲ; ಇರಲಿ; ಈ ಗೃಹಮಾತೆಯು ಅಜೀರ್ಣ, ಅತಿಸಾರ, ಅಪಸ್ಮಾರ, ಅಂತ್ರವೃದ್ಧಿ, ಅರುಚಿ, ಅಮ್ಲನಾಶ, ಅಮ್ಲಪಿತ್ತ ಮುಂತಾದ ರೋಗಗಳನ್ನು ನಾಶಮಾಡಲು ಪಾಶುಪತಾಸ್ತ್ರದಂತಿರುವದು. ಒಟ್ಟನಮೇಲೆ ಇದು ಏವತ್ತಾರು ರೋಗಗಳ ಮೇಲೆ ಬರುವದು. ಅನುಪಾನ ಪತ್ರಿಕೆಯು ಅದರ ಜೊತೆಯಲ್ಲಿಯೇ ಇರುವದು. ಲೋಕೋಪಕಾರಾರ್ಥವಾಗಿ ಯೋಗ್ಯವನಸ್ಪತಿಗಳಿಂದ ತಯಾರಿಸಿದ ಔಷಧಿಗಳು ಮತ್ತು ಪಾಷಾಣ, ಭಸ್ಮ, ಗುಟಿಕಾ, ಆಸವ, ಅರಿಷ್ಟ, ಉತ್ತಮ ತೈಲಗಳು, ಸರ್ವ ವನಸ್ಪತಿಗಳು ಕಡಿಮೆ ದರದಿಂದ ಸಿಗುವವು. ಚರಕಾದಿ ಮಹರ್ಷಿಗಳು ಎಂಟುವಿಧದ ವನಸ್ಪತಿಗಳನ್ನು ಬೇರೆ ಬೇರೆ ವರ್ಣಿಸುವರು. ಅವುಗಳನ್ನು ನಾವು ಹದಿನಾಲ್ಕು ವರ್ಷಗಳಿಂದಲೂ ಬಹಳ ಶ್ರಮಪಟ್ಟು ಶೋಧಿಸಿ ಸಿದ್ಧಗೊಳಿಸಿರುತ್ತೇವೆ. ಆದ್ದರಿಂದ ಈ ಔಷಧಾಲಯಕ್ಕೆ **"ಅಷ್ಟವರ್ಗೌಷಧಾಲಯ"**ವೆಂದು ಹೆಸರಿಡಲ್ಪಟ್ಟಿರುತ್ತದೆ. ಈ ಅಷ್ಟವರ್ಗದ ಪರಿಶೋಧನೆಯು ಮತ್ತೆಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಹಿಮಾಲಯದಲ್ಲಿ ನಮ್ಮ ಮೂರು ದೊಡ್ಡ ಆಫೀಸುಗಳಿದ್ದು ಅವುಗಳ ಕೆಳಗೆ ಪೂನಾದಲ್ಲಿ ಒಂದು ಬ್ರಾಂಚು ಆಫೀಸು ಸ್ಥಾಪಿಸಲ್ಪಟ್ಟಿರುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳತಕ್ಕದ್ದು. ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಬೆಲೆ—೧ ತೊಲೆಯ ಸೀಸೆ ೧ಕ್ಕೆ ೧೨ ಆಣೆ.

ಹಿಮಾಲಯನ್ ಅಷ್ಟವರ್ಗ ಔಷಧಾಲಯ
(೮೪೮) ಗಂಜಿಪೇಟೆ ಪೂನಾ ಸಿಟಿ
Himalayan Ashtawarg Medical Hall
[13] **848. Ganjipet Poona City.**

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರೂ ಆದ ವೇ|| ಪಂ|| ಧರ್ಮರತ್ನ ಉಮಚಿಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವ ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು[ಡಿ]ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗ[ಳು] ಇದನ್ನು ಉಪಯೋಗಿಸಿ, ಸಾವಿರಾರುಗಳ...

(Registered Trade Mark)

ಯೋಗ್ಯತಾಪತ್ರ... ಳನ್ನು ಕೊಟ್ಟಿರು... ರು. ಪ್ರಸಿದ್ಧವಾ... ಈ ನಶ್ಯದ ... ಯಿಂದ ಸ್ವಸ್ಥವಾ... ವ ವ್ಯಾಧಿಗಳು ... ವವೆಂದರೆ:—ಶಿ... ಒಂಟಿ ತಲೆನೋ... ತಲೆಯಲ್ಲಿನ ರೋ...ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗ[ಳು] ಜಲದೋಷ ಮುಂತಾದ ವ್ಯಾಧಿಗಳು ಪರಿಹಾರ... ವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳ... ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು... ಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂ... ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ... ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ... ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂ... ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ... ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-...

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ...ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆ[ಡ್]

[1] ಪೋ. ಬಾ. ೫೧೦, ಮದರಾ[ಸ್]

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ ನೇ ಜುಲೈ ೧೯೨೯ [ಸಂಚಿಕೆ ೯.

ಸ್ವೀಕಾರ.

ಮೈಸೂರು ಅರಮನೆ ಹುಜೂರು ಊಳಿಗ ಮ|| ರಾ|| ಗುರುಕಾರ್ ಬಸವಲಿಂಗಪ್ಪನವರು ತಮ್ಮ ಚತುರ್ಥ ಪುತ್ರಿ ಸೌ|| ಬಸವಲಿಂಗಮ್ಮನನ್ನು ಮ|| ರಾ|| ಮಲಗನ ... ಹುಲಗಪ್ಪನವರ ಜ್ಯೇಷ್ಠಪುತ್ರ ಚಿ|| ಶೆಟ್ಟಪ್ಪನಿಗೆ ಕೊಟ್ಟು ಸ್ವಗೃಹದಲ್ಲಿ ಅತ್ಯಂತ ವೈಭವದಿಂದ ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಕೊಟ್ಟೂರು ನಿವಾಸಿಗಳಾದ ವೇ|| ...ದ್ಯಾರಗಟ್ಟಿಮಠದ ಗಂಗಮ್ಮನಹಳ್ಳಿ ಕರಿಯಪ್ಪನವರು ತಮ್ಮ ಪುತ್ರಿಯ ಲಗ್ನದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಮ|| ರಾ|| ಕೋರಿ ...ರ ಚನ್ನಬಸವಪ್ಪನವರು ತಮ್ಮ ಪುತ್ರಿಯ ಲಗ್ನದಲ್ಲಿ ಸಮರ್ಪಿಸಿದ 2 ರೂ. ಹಾಗೂ ಮ|| ರಾ|| ಯಲಿಗಾರ ಕೊಟ್ರಬಸಪ್ಪನವರು ತಮ್ಮ ಪುತ್ರಿಯ ಲಗ್ನದಲ್ಲಿ ಸಮರ್ಪಿಸಿದ 1 ರೂ. ಒಟ್ಟು 5 ರೂಪಾಯಿಗಳು ವೇ|| ಬಿರಡೆಳಘಟ್ಟದ ಮಠದ ಜಾಗಟಗೇರಿ ...ವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ಡಿ|| ಕಿನ್ನಾಳಗ್ರಾಮದ ಮ|| ರಾ|| ಗಡಾದಶೆಟ್ರು ಬಸವಪ್ಪನವರಿಗೆ ಮ|| ರಾ|| ಲಕ್ಕುಂಡಿ ...ಡಿಗ ವೀರಪ್ಪನವರ ಪುತ್ರಿ ಸೌ|| ಗಂಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಮ|| ರಾ|| ...ರ ಪಂಪಣ್ಣನವರು ಪ್ರಭಾಪೋಷಣಕ್ಕೋಸ್ಕರ ...ಯಿಸಿದ 5 ರೂಪಾಯಿಗಳು ಮ|| ರಾ|| ಶ್ರೀಮಂತ ...ಗುರುಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ರೋಣ ತಾ|| ನಿಡುಗುಂದಿಗ್ರಾಮದ ಭೂಸನೂರು ಕಟ್ಟಿಮನಿ ವೇ|| ಶಿವಮೂರ್ತಯ್ಯನವರ ಪುತ್ರ ಚಿ|| ಸಂಗಪ್ಪಯ್ಯನಿಗೆ ವೇ|| ಯಳವತ್ತಿ ಹಿರಿಯಮಠದ ಫಕ್ಕೀರಯ್ಯನವರ ಪುತ್ರಿ ಸೌ|| ಪಾರ್ವತವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಅಬ್ಬಿಗೇರಿ ಅರಳೆಲೆಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಮೋಕಾ ಗ್ರಾಮದ ಹಿರೇಮಠದ ...ಯಸ್ವಾಮಿಯವರ ತಾಯಿಯವರು ಶ್ರೀ ಜಗದ್ಗುರು ಪಂಚಾಚಾರ್ಯರ ಹಾಗೂ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಪವಿತ್ರನಾಮಸ್ಮರಣವನ್ನು ಮಾಡುತ್ತ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೈಸೂರು ಪೀಪರ್ಲೈನಿನಲ್ಲಿರುವ ಮ|| ರಾ|| ...ಧರಯ್ಯನವರ ಮಕ್ಕಳು ಸಿದ್ಧಲಿಂಗಪ್ಪನವರ ... ಸೌ|| ಗಂಗಮ್ಮನನ್ನು ಬಿಡದಿ ಲೇಟ್ ದೇವಣ್ಣನವರ ಪುತ್ರ ಚಿ|| ನಂಜಪ್ಪನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವಧುವಿನ ತಂದೆಯವರು ಸಮರ್ಪಿಸಿದ 2 ರೂಪಾಯಿಗಳು ಸಿಂಗರ್ ಕಂಪನಿಯ ಮ್ಯಾನೇಜರ್ ದು|| ರಾ|| ಕೆ. ಮಲ್ಲಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಿರೇಕೆರೂರು ತಾಲೂಕು ಚಿಕ್ಕೇರೂರುಗ್ರಾಮದ ಮ|| ರಾ|| ಚಂಚಿ ಮಹಾಲಿಂಗಪ್ಪನವರ ತಮ್ಮ ಚಿ|| ಶಿವಬಸವಪ್ಪನಿಗೆ ಹಾವೇರಿ ಮ|| ರಾ|| ನಾಶೀನಹಳ್ಳಿ ಬಸವಣ್ಣೆಪ್ಪನವರ ಪುತ್ರಿ ಸೌ|| ನೀಲಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಚಿ|| ಶಂಕರಪ್ಪನ ಪ್ರೋತ್ಸಾಹದಮೇರೆಗೆ ವಧೂವರರಿಂದ ಸಮರ್ಪಿಸಿದ 2 ರೂಪಾಯಿಗಳು ಪಂ|| ಘ|| ಸಂಘದ ಸೆಕ್ರೆಟರಿಗಳಾದ ಮ|| ರಾ|| ನಾಶೀನಹಳ್ಳಿ ಗುರುಸಿದ್ಧಪ್ಪನವರ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರ ಡಿ|| ದರ್ಗನಹಳ್ಳಿಯಲ್ಲಿ ನಡೆದ ಒಂದಾನೊಂದು ವಿವಾಹದಲ್ಲಿ ಗೋತ್ರವಿಷಯಕವಾಗಿ ಮಾಡಿದ ತಪ್ಪಿಗಾಗಿ ಹೋಟಗಿ ಶ್ರೀ ಪಟ್ಟದಸ್ವಾಮಿಗಳು 2 ರೂಪಾಯಿಗಳನ್ನು ತೆಗೆಯಿಸಿ ಮ|| ರಾ|| ಬಿರಬದಾರ ಭೀಮರಾವ್ ಇವರ ದ್ವಾರಾ ಕಳುಹಿಸಿರುತ್ತಾರೆ.

ಕೊಪ್ಪಳ ತಾ|| ಕಾತರಕಿಗ್ರಾಮದ ಮ|| ರಾ|| ಹೊಂಬಳದ ಬಸಪ್ಪನವರಿಗೆ ಪುತ್ರರತ್ನವು ಜನಿಸಿ ಶಿವಲಿಂಗ ಸಂಸ್ಕಾರವನ್ನು ಮಾಡಿಸಿದ ಸಮಯದಲ್ಲಿ ವೇ|| ಸ್ಕೂಲ್‌ಮಾಸ್ಟರ್ ಶಿವಯ್ಯನವರ ಪ್ರೋತ್ಸಾಹದ ಮೇರೆಗೆ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಬಸಪ್ಪ ಲಕ್ಕುಂಡಿ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—

ವಿಮರ್ಶ.

ವಿಧವಾವಿವಾಹಮೀಮಾಂಸಾ. ಎಂಬೀ ಪುಸ್ತಕವನ್ನು ಮೈಸೂರು ಆಸ್ಥಾನ ವ್ಯಾಕರಣವಿದ್ವಾನ್ ಎಂ. ಕೆ. ಶ್ರೀನಿವಾಸ ರಾಘವಾಚಾರ್ಯರು ಕನ್ನಡದಲ್ಲಿ ಬರೆದಿರುವರು. ಸದರಿ ಪುಸ್ತಕವು ಹಿಂದೀಗ್ರಂಥದ ಅನುವಾದವಾಗಿರುವದು. ವಿಧವಾವಿವಾಹವು ವೇದಶಾಸ್ತ್ರಸಮ್ಮತವಾದುದೆಂದೂ, ಕಲಿಯುಗದಲ್ಲಿ ಪರಾಶರಸ್ಮೃತಿಯೇ ಪ್ರಬಲವಾದುದೆಂದೂ, ಇದರಲ್ಲಿ ವಿಧವಾವಿವಾಹವು ಹೇಳಲ್ಪಟ್ಟಿರುವುದೆಂದೂ ಸಾಧಿಸಲು ಪ್ರಯತ್ನಪಟ್ಟಿರುವ ಈಶ್ವರಚಂದ್ರ ಮೊದಲಾದವರ ದುರಭಿಪ್ರಾಯವು ಅನೇಕಾಧಾರಗಳಿಂದಲೂ, ಯುಕ್ತಿಗಳಿಂದಲೂ ಖಂಡಿಸಿ ಬರೆಯಲ್ಪಟ್ಟಿರುವದು. ಸಕಲ ಸನಾತನ ಧರ್ಮಾವಲಂಬಿಗಳು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ವಿಧವಾವಿವಾಹನಿಷೇಧಪರಗಳಾದ ಅತಿಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ.

ಬೆಲೆ ೮ ಆಣೆ.

ಮೇಲ್ಕಂಡ ವಿದ್ವಾಂಸರು "ಸನಾತನಧರ್ಮಸಂಜೀವಿನೀ" ಎಂಬ ಹೆಸರಿನಿಂದ ಒಂದು ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಆ ಪತ್ರಿಕೆಗೆ ಚಂದಾದಾರರಾಗುವವರಿಗೆ ಈ ಗ್ರಂಥವು ಉಚಿತವಾಗಿ ಕಳುಹಿಸಲ್ಪಡುವುದು.

ಸರ್ವಮತಭಾವದೀಪ. ಎಂಬೀ ಚಿಕ್ಕಗ್ರಂಥವು ಮೇಲ್ಕಂಡವರಿಂದಲೇ ರಚಿಸಲ್ಪಟ್ಟಿದೆ. ಇದರಲ್ಲಿ ಸಕಲ ದರ್ಶನಗಳ ಮತ್ತು ಮತಸಿದ್ಧಾಂತಗಳ ಸ್ವರೂಪವು ಸಂಕ್ಷಿಪ್ತವಾಗಿ ಹೇಳಲ್ಪಟ್ಟಿರುತ್ತದೆ. ಶಕ್ತಿವಿಶಿಷ್ಟಾದ್ವೈತಿಗಳಿಗೂ ಆದರಲ್ಲಿ ವಿಶಿಷ್ಟಾದ್ವೈತಿಗಳಿಗೂ ಈ ಗ್ರಂಥವು ಪ್ರಯೋಜನಕಾರಿಯಾಗಿದೆ. ಬೆಲೆ ೪ ಆಣೆ. ಗ್ರಂಥ ದೊರೆಯುವ ಅಡ್ರೆಸ್,

ಸನಾತನಧರ್ಮಸಂಜೀವಿನೀ ಆಫೀಸ್,
ಚಲುವಾಂಬಾ ಅಗ್ರಹಾರ, ಮೈಸೂರು.

ಹಿತಬೋಧಿನಿ. ಎಂಬೀ ಪುಸ್ತಕವನ್ನು ಸುಪ್ರಸಿದ್ಧರಾದ ಮ|| ರಾ|| ಎಂ. ವೆಂಕಟಕೃಷ್ಣಯ್ಯನವರು ರಚಿಸಿರುತ್ತಾರೆ. ಇದರಲ್ಲಿ ಸ್ವಾಮಿ ವಿವೇಕಾನಂದರವರ ಸಂಕ್ಷೇಪಚರಿತ್ರ, ವಿದುರನೀತಿ, ಚರಕಸಂದೇಶ ಮೊದಲಾದ ೧೬ ವಿಷಯಗಳು ಬರೆಯಲ್ಪಟ್ಟಿರುತ್ತವೆ. ಪುಸ್ತಕವು ವಾಚನಾರ್ಹವಾಗಿದೆ ಬೆಲೆ ೨ ಆಣೆ.

ಎಂ. ವೆಂಕಟಕೃಷ್ಣಯ್ಯನವರ ಜೀವಮಾನದ ಚರಿತ್ರ. ಎಂಬೀ ಪುಸ್ತಕವನ್ನು ಮ|| ರಾ|| ವೆಂಕಟಕೃಷ್ಣಯ್ಯನವರೇ ಬರೆದಿದ್ದಾರೆ. ಇವರು ಮಹಾತ್ಮಗಾಂಧಿಯವರಂತೆ ತಮ್ಮ ಚರಿತ್ರವನ್ನು ತಾವೇ ಬರೆಯುವ ಕಾರ್ಯವನ್ನು ಕೈಕೊಂಡಿದ್ದಾರೆಂದು ತೋರಿಬರುತ್ತದೆ. ಸ್ತುತ್ಯ! ಇದರಲ್ಲಿ ಇವರ ಜೀವನಚರಿತ್ರವು ಅತಿಸಂಕ್ಷೇಪವಾಗಿ ಹೇಳಲ್ಪಟ್ಟಿದ್ದು ಬೇರೆ ಬೇರೆ ಮಹತ್ವದ ವಿಷಯಗಳು ಮಧ್ಯಮಧ್ಯದಲ್ಲಿ ಸೇರಿಸಲ್ಪಟ್ಟಿರುತ್ತವೆ. ಪುಸ್ತಕವು ವಾಚನಾರ್ಹವಾಗಿದೆ. ಆದರೆ ಬೇರೆ ಬೇರೆ ವಿಷಯಗಳನ್ನು ಕಡಿಮೆಮಾಡಿ ಆಮೂಲಾಗ್ರವಾಗಿ ತಮ್ಮ ಜೀವನ ಚರಿತ್ರವನ್ನು ಬರೆದು ಪ್ರಸಿದ್ಧಪಡಿಸುವದು ಉತ್ತಮವೆಂದು ಭಾವಿಸುತ್ತೇವೆ.

ಬೆಲೆ ೮ ಆಣೆ.

ಪುಸ್ತಕ ದೊರೆಯುವ ಅಡ್ರೆಸ್,

ಕೆ.ವಿ.ಪಿ. ಪ್ರೆಸ್ ಲಕ್ಷ್ಮೀಪುರಂ,
ಮೈಸೂರು.

ಬೊಂಬಾಯಿಯಿಂದ ಪೂನಾಕ್ಕೆ ಬರುತ್ತಿದ್ದ ಒಂದು ಮೋಟಾರಿನಲ್ಲಿ ಯಾವನೋ ಒಬ್ಬನು ಸಿಗರೇಟನ್ನು ಸೇದಿ ಆರಿಸದೆ ಹಾಗೆಯೇ ಮೋಟಾರಿನಲ್ಲಿ ಎಸೆಯಲು ಹತ್ತಿರದಲ್ಲಿದ್ದ ಪೆಟ್ರೋಲ್ ಡಬ್ಬಿಗೆ ಕೂಡಲೆ ಬೆಂಕಿಯು ಹತ್ತಿ ಮೋಟಾರು ಸುಡಲಾರಂಭಿಸಿತು. ಒಳಗಿದ್ದವರೆಲ್ಲರೂ ಹಾರಿದ್ದುದರಿಂದ ಯಾರಿಗೂ ಅಪಾಯವಾಗಲಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶಿವಶಕ್ತಿವಿಲಾಸವು.

(ಕಳೆದವಾರದ ಶೇಷ.)

ಲೇಖಕರು.—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ, ಬಿಜಾಪುರ.

ತಾನೇ ನಿರ್ಮಿಸಿದ ಜಾಳಗಿಯನ್ನು ಜೇಡಹುಳವು ಮರಳಿ ತನ್ನ ಸ್ವರೂಪದಲ್ಲಿ ಅಡಗಿಸಿಕೊಳ್ಳುವಂತೆ, ದ್ವಿರೂಪವೂ ಬಹುರೂಪವೂ ಆಗಿ ತೋರುವ ತನ್ನ ಶಕ್ತಿ ವಿಲಾಸವನ್ನು ಪರಮಾತ್ಮನು ಮರಳಿ ತಾನೊಮ್ಮೆ ತನ್ನೊಳು ಅಡಗಿಸಿಕೊಂಡು ಒಬ್ಬನೇ ಉಳುಮೆಯಾಗುವನು. [ಮುಂಡ. ಉ. ೧. ೭]

ಪಟವೇ ಕುಟಿಯಾಗಿ ತೋರುವುದು. ಕುಟೀರೂಪವಾದ ವಿಶ್ವವು ಪಟರೂಪವಾದ ಚೈತನ್ಯವೇ. ಬ್ರಹ್ಮಕ್ಕೂ ತಚ್ಛಕ್ತಿ ವಿಲಾಸಭೂತವಾದ ವಿಶ್ವಕ್ಕೂ ಅಧಿಷ್ಠಾನ ಅಧ್ಯಸ್ತಭಾವವನ್ನು ಕಲ್ಪಿಸಿ ಹಗ್ಗ ಹಾವುಗಳ ಪರಿಯನ್ನು ಹೋಲಿಸಿ ಹೇಳುವುದು ಪಂಚಸ್ವತ್ಯದಯುಂಗೆ ರುಚಿಸದು.

ಈ ಹಿಂದೆ ಉಲ್ಲೇಖಿಸಿದ 'ಆತ್ಮಾನಂ ದ್ವೇಧಾ ಅಪಾತಯತ್ ತತಃಪತಿಶ್ಚ ಪತ್ನೀಚಾಭವತಾಮ್' ಎಂಬ ಬೃಹದಾರಣ್ಯಕ ವಾಕ್ಯದಂತೆ ಒಂದೇ ಚೈತನ್ಯವು ತನ್ನ ಲೀಲಾ ವಿಲಾಸಕ್ಕಾಗಿ ದ್ವಿರೂಪವಾಯಿತು …

ಮೈಸೂರು ವೀರಶೈವರೂ ಬಸವೇಶ್ವರ ದೇವಸ್ಥಾನವೂ.

ಮೈಸೂರು ದೊಡ್ಡಪೇಟೆಯಲ್ಲಿ ಒಂದು ಬಸವೇಶ್ವರ ದೇವಸ್ಥಾನವುಂಟು. ಈ ದೇವಸ್ಥಾನದ ವಿಷಯದಲ್ಲಿ ಬಣಜಿಗ ಸಜ್ಜನರಿಗೂ ವೈಮನಸ್ಯವುಂಟಾಗಿ ವಿಷಯವು ಮ್ಯಾಜಿಸ್ಟ್ರೇಟ್ ಕೋರ್ಟಿನವರೆಗೆ ಹೋಗಿರುವದಷ್ಟೆ? ಈ ಎರಡು ಪಂಗಡದವರೂ ವೀರಶೈವಮತಕ್ಕೆ ಸಂಬಂಧಪಟ್ಟವರಾಗಿದ್ದು, ಸ್ಥಾವರ ಮತ್ತು … ವಿಷಯದಲ್ಲಿ ಹೀಗೆ ಆಕ್ರೋಶದಿಂದ ಒಬ್ಬರಿಗೊಬ್ಬರು …

ಗೃಹಕ್ಕೆ ದೂರರಾಗಿ ವೀರಶೈವ ಎಂಬ ನಾಮಕ್ಕೆ ಕಲಂಕ ತಂದುಕೊಳ್ಳಬಾರದೆಂದೂ ಅನ್ಯಮತೀಯರ ಅಪಹಾಸ್ಯಕ್ಕೆ ಗುರಿಯಾಗಬಾರದೆಂದೂ ಕೋರುತ್ತೇನೆ.

ಓರ್ವ ವೀರಶೈವ. ಮೈಸೂರು.

ಮುದ್ರಾಸ್ ವೀರಶೈವ ವಿದ್ಯಾವರ್ಧಕಸಂಘದವರಲ್ಲಿ ಪ್ರಾರ್ಥನೆ.

ತಾ|| 28-6-29 ನೇ ದಿವಸ ಮುದ್ರಾಸ ವೀರಶೈವ ವಿದ್ಯಾರ್ಥಿಗಳ ಸಮಾವೇಶವು ಮುದ್ರಾಸು ಚೈನಾಬಜಾರದಲ್ಲಿರುವ … ದಲ್ಲಿ ಮ|| ರಾ|| ನಂಜುಂಡಯ್ಯ B.A. B.L. … ಅಧ್ಯಕ್ಷತೆಯಲ್ಲಿ ಕೂಡಿ ಕೆಳಗಿನ ನಿಬಂಧನೆಗಳನ್ನು ಪಾಸು … ಮೇಲ್ಕಂಡ ಅಧ್ಯಕ್ಷರನ್ನೇ ಈ ನಿಬಂಧನೆಗಳನ್ನು ಮುದ್ರಾಸ ವೀರಶೈವ ವಿದ್ಯಾವರ್ಧಕಸಂಘದ ಸಮಾವೇಶದಲ್ಲಿ ಚರ್ಚಿಸು… ಕೋರುತ್ತದೆ.

1. ಮುದ್ರಾಸಿನಲ್ಲಿರುವ ವೀರಶೈವ ವಿದ್ಯಾರ್ಥಿಗಳ … ಕ್ಕಾಗಿ ಬಳ್ಳಾರಿ ಮುದ್ರಾಸ ವೀರಶೈವವಿದ್ಯಾವರ್ಧಕ … ಪ್ರತಿ ತಿಂಗಳು 50 ರೂಪಾಯಿಗಳನ್ನು ಕೊಡಬೇಕೆಂದು ಸಭೆಯು ಅತ್ಯಂತ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತದೆ.

2. ಈ ರೀತಿ ಮಾಡುವ ಸಹಾಯಕ್ಕಾಗಿ ಮೇಲ್ಕಂಡ … ಫಲವನ್ನು ಹೊಂದಿದ ವಿದ್ಯಾರ್ಥಿಗಳು ಮುದ್ರಾಸ ವೀರಶೈವ ವಿದ್ಯಾವರ್ಧಕಸಂಘವು ಮಾಡುವ ನಿಬಂಧನೆಗಳಿಗೆ ಬದ್ಧರಾಗುತ್ತಾರೆ.

3. ಈ ಮೇಲ್ಕಂಡ ಠರಾವುಗಳನ್ನು ವರ್ತಮಾನ … ಳಿಗೂ ಸದರಿ ಸಂಘದ ಸಮಾವೇಶಕ್ಕೂ ಕಳುಹಿಸುವದಾಗಿ … ಮಾಡಲ್ಪಟ್ಟಿದೆ.

ಮುದ್ರಾಸು. ಎ. ಎಮ್. ಕೊ…

An Appeal for the Constituti[on] of the Sree Sailam Renovati[on] & Improvement Board.

Under clause 27 of the sche[me] (framed in O.S. 9 on the file of [the] Sub Judge, Kurnool for the mana[ge]ment of the Sreesailam Temple, [a] separate Board called 'The Sreesai[lam] Renovation and Improvement Bo[ard'] has to be constituted by the Tru[stees] of the Sreesailam Temple, for [the] purpose of collecting funds and [reno]vating the Temple. To start with, [the] Board would consist of 45 mem[bers]. Fifteen members would be sele[cted] from the Veerasaiva community, [15] members from the Brahmin com[mu]nity, and the rest from the o[ther] communities. The names of [the] distinguished gentlemen who [have] condescended to be on the Re[nova]tion and Improvement Board [are] published here under. The lett[er of] Dewan Bahadur Rajasabhabhu[shana] Sir K. P. Puttanna Chetty Esq., [Kt.,] C.I.E., is published for the inform[ation] of those who are willing to ser[ve on] the Board. All those gentleme[n who] are desirous of helping the sacred cause of renovating the temple by serving on the reno[vation] board are requested to commu[nicate] their willingness to the under[signed] before the 15th of July.

KARNATAK PROVINC[E]

MYSORE-Pandit Kasinatha Sas[tri] Naganuru Bruhar[…]

Brahma Sree Palace Vidwa[n] Sirsi Gurusantha Sastr[i], Editor, "Panchacharya Pr[abha]"

BANGALORE:—Dewan Bahadur [Raja]sabhabhushana Sir K. P. P[uttanna] Chetty Esq. Kt., C.I.E.,

T. Rachappa Esq., Contracto[r]

G. K. Rudrarya, Income [Tax] Officer.

SHOLAPUR:—M. S. Sirdar B.A. [(…] & Oxen) Barrister-at-law.

BIJAPUR:—P. G. Halkatti B.[A.,] LL.B., Pleader and Edito[r] Karnatak.

BELLARY:—M. Sadasivaiya G[aru, B.]A., B.L., Advocate.

ANDHRA PROVINC[E]

1. Desodharak. Nageswar[a Rao] Pantulu Garu, Editor [Andhra] Patrika, Madras.
2. G. Harisarvothama Ra[o] M.A., M.L.C., Kurnool.
3. K. Koti Reddi Garu M.L.C., Cuddapah.
4. O. Lakshmanaswamy Ra[o] M.A., Bar-at-law, Kurnoo[l].
5. S. Rama Krishna Redd[i] Land Lord, Kurnool.
6. W. Siva Ramiah Garu B.L., Advocate. Kurnool.

P. RAMAIYA

President, Sreesa[ilam Temple] Management.

13-6-29

… ನಾಣ್ಯದಲ್ಲಿ "ವಿದೀಶಾಸ್ಥಾನದ ಪೃಥುವಾದ ಮುದ್ಗಲ್" ಎಂದಿರುವದೆಂದೂ, ಈ ನಾಣ್ಯವು ಕ್ರಿಸ್ತಪೂರ್ವ 3050 ವರ್ಷದ್ದೆಂದೂ ಡಾಕ್ಟರರು ಹೇಳುತ್ತಾರೆ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರವಾಗಿ ಐದು ಜನ ಆಚಾರ್ಯರು ಈ ಐದು ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೧ ಬೆಲೆ ೧ ಕ್ಕೆ ೩ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶಿವಶಕ್ತಿವಿಲಾಸವು.

(ಕಳೆದವಾರದ ಶೇಷ.)

ಲೇಖಕರು.—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಮಠ, ಬಿಜಾಪುರ.

ತಾನೇ ನಿರ್ಮಿಸಿದ ಜಾಳಗಿಯನ್ನು ಜೇಡಹುಳವು ಮರಳಿ ತನ್ನ ಸ್ವರೂಪದಲ್ಲಿ ಅಡಗಿಸಿಕೊಳ್ಳುವಂತೆ, ದ್ವಿರೂಪವೂ ಬಹುರೂಪವೂ ಆಗಿ ತೋರುವ ತನ್ನ ಶಕ್ತಿವಿಲಾಸವನ್ನು ಪರಮಾತ್ಮನು ಮರಳಿ ತಾನೊಮ್ಮೆ ತನ್ನೊಳು ಅಡಗಿಸಿಕೊಂಡು ಒಬ್ಬನೇ ಉಳುಮೆಯಾಗುವನು. [ಮುಂಡ. ಉ. ೧. ೭]

ಪಟವೇ ಕುಟಿಯಾಗಿ ತೋರುವುದು. ಕುಟೀರೂಪವಾದ ಪಟರೂಪವಾದ ಚೈತನ್ಯವೇ. ಬ್ರಹ್ಮಶಕ್ತಿ ಕಲ್ಪಿತ ವಿಶ್ವವು ವಿಕಾಸರೂಪವಾದ ವಿಶ್ವಕ್ಕೆ ಅಧಿಷ್ಠಾನ ಅಧ್ಯಸ್ತಭಾವವನ್ನು ಕಲ್ಪಿಸಿ ಹಗ್ಗ ಹಾವುಗಳ ಪರಿಯನ್ನು ಹೋಲಿಸಿ ಹೇಳುವುದು ಪರಿಪಕ್ವಹೃದಯರಿಗೆ ರುಚಿಸದು.

ಈ ಹಿಂದೆ ಉಲ್ಲೇಖಿಸಿದ 'ಆತ್ಮಾನಂ ದ್ವೇಧಾ ಅಪಾತಯತ್ ತತಃಪತಿಶ್ಚ ಪತ್ನೀಚಾಭವತಾಮ್' ಎಂಬ ಬೃಹದಾರಣ್ಯಕ ವಾಕ್ಯದಂತೆ ಒಂದೇ ಚೈತನ್ಯವು ತನ್ನ ಲೀಲಾ ವಿಲಾಸಕ್ಕಾಗಿ ದ್ವಿರೂಪವಾಯಿತು; ಆದರೆ ಅದು ಎರಡಾಗಿ ತೋರುವ ಭರದಲ್ಲಿ ತನ್ನ ಏಕತ್ವಕ್ಕೆ ಕುಂದು ತಂದುಕೊಳ್ಳಲಿಲ್ಲ; ಎಂದರೆ ಅದು ಅರ್ಧ ಬೃಗುಲ ನ್ಯಾಯದಂತೆ (ದ್ವಿದಲ ಧಾನ್ಯದ ಹಾಗೆ) ತನ್ನ ಏಕಸ್ವರೂಪದಲ್ಲಿಯೇ [ಅರ್ಧನಾರೀ ನಟೇಶ್ವರನಂತೆ] ಎರಡು ಬಗೆಯ ರೂಪವನ್ನು ತೋರಿಸಿತು. ಆದರೆ, ಅದು ಅಧ್ಯಾಸವಲ್ಲ; ವಸ್ತುಸ್ಥಿತಿಯೇ. ದ್ವಿದಲದೊಳಗಣ ಅರ್ಧಭಾಗಕ್ಕೇನೇ ಶ್ರುತಿಯು ಪತ್ನಿಯೆಂದು ಹೆಸರಿಟ್ಟಿದೆ. ಈ ಚೈತನ್ಯಾರ್ಧದ್ವಯವು ತನ್ನ ಸ್ವಯಂಪ್ರಕಾಶತ್ವವನ್ನು ಕಳೆದುಕೊಳ್ಳದೆ ಜಗತ್ಕಾರಣವಾಗಿ ತನ್ನ ಸ್ವಭಾವದಂತಹ ಜಗತ್ತನ್ನು ನಿರ್ಮಿಸಿತು. ಕಾರಣದ ಗುಣವು ಕಾರ್ಯದಲ್ಲಿರಲೇಬೇಕು. ಎಂಬೀ ಸಾಮಾನ್ಯ ನಿಯಮದಂತೆ ಸ್ವಯಂಪ್ರಕಾಶ ಚೈತನ್ಯವು ಕೇವಲ ತನ್ನ ಸ್ವಭಾವದಿಂದಲೇ ಜಗತ್ತನ್ನು ಮಾಡಿದೆ; ಎಂದಮೇಲೆ ಈ ಜಗತ್ತಾದರೂ ಚಿತ್ಪ್ರಕಾಶವಾಗಿರಲೇ ಬೇಕು; ಕಾರಣಗುಣವು ಕಾರ್ಯದಲ್ಲಿರಲೇಬೇಕೆಂಬ ಹಾಗೇ ಇರುವುದು. ಕಾರಣಗುಣವು ಕಾರ್ಯದಲ್ಲಿರಲೇಬೇಕೆಂಬ ನಿಯಮವು ಶಂಕರಾಚಾರ್ಯರಿಗೆ ಗೊತ್ತಿರಲಿಲ್ಲವೆಂದಲ್ಲ. 'ಪ್ರಕೃತಿರೂಪಸ್ಯ ವಿಕಾರೇಽನ್ವಯ ದರ್ಶನಾತ್' [ಬ್ರ. ಸೂ. ಶಾಂ— ಭಾ. ೩-೧-೪] ಕಾರ್ಯದಲ್ಲಿ ಕಾರಣದ ಸ್ವರೂಪವು ಅನುಗತವಾಗಿರುವುದು ತೋರಿಬರುತ್ತದೆ. [ಮಣ್ಣಿನ ಕಾರ್ಯವಾದ ಕೊಡದಲ್ಲಿ ಮಣ್ಣಿನ ಸ್ವರೂಪವೂ, ಬಂಗಾರದಿಂದಾದ ಒಡವೆಯಲ್ಲಿ ಬಂಗಾರದ ಇರುವೂ ಕಂಡುಬರುವುದು-] ಎಂಬುದಾಗಿ ಹೇಳುವರು. ಆದರೆ ಈ ಮಾತು ಇತರರಿಗೆ ಸಂಬಂಧಿಸಿದ್ದಲ್ಲದೆ ತಾವು (ಶಂಕರಾಚಾರ್ಯರು) ಹೇಳುವ ಜಗತ್ತಿನ ಲಕ್ಷಣದಲ್ಲಿ ಒಪ್ಪಿಗೆಯಾದುದಲ್ಲವಂತೆ! ಯಾರಮತದಲ್ಲಿ ಸಚ್ಚಿದಾನಂದ ಚೈತನ್ಯವು, ಅಸತ್ತು, ಜಡ, ದುಃಖರೂಪವಾದ ಜಗತ್ತಿಗೆ ಕಾರಣವಾಗಿರುವದೋ ಅವರು ಈ ಕಾರ್ಯಕಾರಣವೈಲಕ್ಷಣ್ಯವನ್ನು ಒಪ್ಪುವ ಬಗೆಯು 'ನಾನು ಕಂಬಳಿಯನ್ನು ಬಿಡಬೇಕೆಂದು ಹವಣಿಸುವೆನು. ಆದರೆ ಕಂಬಳಿಯೇ ನನ್ನನ್ನು ಬಿಡಲೊಲ್ಲದು' ಎಂಬವನ ಪರಿಯಾಗಿದೆ. ಅಯ್ಯೊ! ತಾನೇ 'ನ ಚ ವಿಲಕ್ಷಣತ್ವೇ ಪ್ರಕೃತಿವಿಕಾರಭಾವೋ ದೃಷ್ಟಃ'—ಯಾವುದರಲ್ಲಿ ವೈಲಕ್ಷಣ್ಯವಿರುವದೋ ಅದರಲ್ಲಿ ಪ್ರಕೃತಿವಿಕಾರಭಾವ[ಕಾರ್ಯಕಾರಣಭಾವ]ವು ತೋರುವುದಿಲ್ಲ [ಬ್ರ. ಸೂ. ಶಾಂ. ಭಾ. ೨-೧-೪] ಎಂದು ಕಾರ್ಯಕಾರಣಗಳಲ್ಲಿ ವೈಲಕ್ಷಣ್ಯವಿಲ್ಲಮದನ್ನು ಸಾರುವವರಾಗಿ ಮತ್ತೆ ಈ ನುಡಿಗೆ ವಿರುದ್ಧವಾದ ಕಾರ್ಯಕಾರಣಭಾವದ ಘಟನೆಗೋಸುವುದಕ್ಕಾಗಿ ಹೆಣಗುವುದೊಂದು ಅಚ್ಚರಿಯೇ ಸರಿ.

ಎಲ್ಲೆಡೆಯಲ್ಲಿ ಹಬ್ಬಿ ತೋರುವ ಸೂರ್ಯನ ಪ್ರಭೆಯು ಸೂರ್ಯನ ಕಿರಣಮಯವಾಗಿರುವಂತೆ, ಪರಶಿವನ ಸಂವಿಚ್ಛಕ್ತಿಯೇ ವಿಶ್ವರೂಪವಾಗಿ ತೋರುವುದು. ಈ ರೀತಿಯಾಗಿ, ಪರಾಶಕ್ತಿಯೇ ಸಕಲ ಜಗನ್ನಿರ್ಮಾಣ ಸಮರ್ಥವಾಗಿರಲು ಪರಶಿವಚೈತನ್ಯದಲ್ಲಿ ಅನಿರ್ವಚನೀಯವೂ ಜಡವೂ ಆದ ಬೇರೊಂದು ಮಾಯೆಯೆಂಬ ಅಂತರ್ಗಡುವನ್ನು ಕಲ್ಪಿಸಿ ಜಲ್ಪಿಸುವುದೇಕೆ? ಶ್ರೀ ಮೃತ್ಯುಂಜಯ ಭಟ್ಟಾರಕದಲ್ಲಿ—

ಸಾ ಮಮೇಚ್ಛಾ ಪರಾಶಕ್ತಿರವಿಯುಕ್ತಾ ಸ್ವಭಾವಜಾ | ವಹ್ನೇರೂಷ್ಮೇವ ವಿಜ್ಞೇಯಾ ರಶ್ಮಿರೂಪಾ ರವೇರಿವ || ಸರ್ವಸ್ಯ ಜಗತೋಽಪ್ಯಾಪಿ ಸಾಶಕ್ತಿಃ ಕಾರಣಾತ್ಮಿಕಾ ||

ಎಂದು ಹೇಳಿರುವ ಮೇರೆಗೆ, ಅಗ್ನಿದಾಹಕ ಸೂರ್ಯಕಿರಣಗಳ ನ್ಯಾಯದಂತೆ ಪರಮಾತ್ಮನ ಇಚ್ಛಾರೂಪವಾದ ಪರಾಶಕ್ತಿಯೇ ಸರ್ವಜಗದ್ರೂಪವಾಗಿರುವುದು. ಕುಂಬಾರನು ತನಗೆ ಅನ್ಯವಾದ ಮಣ್ಣು ತಿಗುರಿ ಕೋಲುಗಳೆಂಬ ಉಪಾದಾನ ಸಹಕಾರಿ ಕಾರಣಗಳಿಲ್ಲದೆ ಕೊಡವನ್ನು ಮಾಡಲಾರನಷ್ಟೇ? ಹಾಗೆ ಪರಶಿವನಿಗೆ ಜಗನ್ನಿರ್ಮಾಣದಲ್ಲಿ ಗಗನಕುಸುಮಾಯಿತ ವಂಧ್ಯಾಪುತ್ರಾಯಿತ ಮಾಯೆ ಮೊದಲಾದುದರ ಹಂಗಿರುವುದಿಲ್ಲ. ತನ್ನ ಸತ್ಯವಾದ ಸಂವಿಚ್ಛಕ್ತಿಯು ಮತ್ತು ಅದರ [ಪುಷ್ಪಫಲನ್ಯಾಯದಂತೆ] ವಿಲಕ್ಷಣ ಪರಿಣಾಮರೂಪಗಳಾದ ಮಾಯಾ ಪ್ರಕೃತಿಗಳನ್ನೇ ಉಪಾದಾನ ಸಹಕಾರಿಗಳನ್ನಾಗಿ ಮಾಡಿಕೊಂಡು ವಿಶ್ವವನ್ನು ರಚಿಸುವನು. ಇದೇ ಅಭಿಪ್ರಾಯವನ್ನು ಒಪ್ಪಿಕೊಂಡ ಮಾಹೇಶ್ವರನು—

> ಶಕ್ತ್ಯಣ್ವಮೃತ್ಪಿಣ್ಡ ಮುಪಾದದಾನೋ
> ಮಾಯಾಣ್ವ ಚಕ್ರಭ್ರಮಣಕ್ರಮೇಣ |
> ಮೂಲಾಣ್ವದಂಡೇನ ಮುಹುರ್ವಿಧತ್ತೇ
> ಬ್ರಹ್ಮಾಣ್ಡಭಾಂಡಂ ಭಗವಾನ್ ಕುಲಾಲಃ ||

ಎಂದು ಹೇಳಿದ್ದಾನೆ. ಶಂಕರಾಚಾರ್ಯರಿಗಿಂತಲೂ ಹಿಂದಿನವರಾದ ಉತ್ಪಲಾಚಾರ್ಯರು—

> ಚಿದಾತ್ಮೈವಹಿದೇವೋಽನ್ತಃಸ್ಥಿತಮಿಚ್ಛಾವಶಾದ್ಬಹಿಃ |
> ಯೋಗೀವ ನಿರುಪಾದಾನಮರ್ಥಜಾತಂಪ್ರಕಾಶತೇ ||

ಎಂದು ನಿರೂಪಿಸಿರುವಂತೆ, ಯೋಗಿಗಳು ಪ್ರಸಿದ್ಧ ಮೃತ್ಕಾಷ್ಠ ಶುಕ್ರಶೋಣಿತಾದಿ ಬೇರೆಬೇರೆಯಾದ ಯಾವದೊಂದೂ ಉಪಾದಾನವನ್ನು ಅಪೇಕ್ಷಿಸದೆ, ಸ್ವೇಚ್ಛಾಶಕ್ತಿಮಾತ್ರದಿಂದೇ ಪುರ ಸೇನೆ ಮೊದಲಾದ ವೈಚಿತ್ರ್ಯವನ್ನು ನಿರ್ಮಿಸಿ ತೋರಿಸುತ್ತಿರುವಹಾಗೆಯೇ ಪರಶಿವನು ಸ್ವೇಚ್ಛಾಶಕ್ತಿಮಾತ್ರದಿಂದ ಸಮಸ್ತ ಪ್ರಪಂಚವನ್ನು ನಿರ್ಮಿಸುತ್ತಾನೆ. ಆದ್ದರಿಂದ, ಮಾಯೆಗೆ ಕಾಲತ್ರಯದಲ್ಲಿ ಅಭಾವವನ್ನು ಸಮರ್ಥಿಸಿ, ಪ್ರತೀಯಮಾನವಾದ ಈ ವಿಶ್ವಕ್ಕೆ ಅಂತಹ ಮಾಯೆಯೇ ಉಪಾದಾನಕಾರಣವೆಂದು ಹೇಳಬಾರದು. ತಾನೇ ಕಾಲತ್ರಯದಲ್ಲಿ ಇಲ್ಲಮದು ಬೇರೊಂದಕ್ಕೆ ಕಾರಣವಾಗುವದುಂಟೆ? ಅದು ಕಾರಣ, ಪರಶಿವ ವಿಮರ್ಶ ಶಕ್ತಿಯ ವಿಲಕ್ಷಣ ಪರಿಣಾಮವೇ ಮಾಯೆಯು; ಅದು ತನಗಧೋವರ್ತಿಯಾದ ಕಾರ್ಯವರ್ಗಕ್ಕೆ ಉಪಾದಾನವಾಗಿರುವುದರಿಂದ ಮಿಥ್ಯೆಯಲ್ಲ; ಅದುವೇ ಮಿಥ್ಯೆಯಾದರೆ ತತ್ಕಾರ್ಯರೂಪವಾದೀ ವಿಶ್ವವೇ ಸಂಭವಿಸದು. ಪರಶಿವಸ್ವಾತ್ಮೀಯ ಶಕ್ತಿಯೊಂದೇ ಬೇರೆಯಾವ ಕರಣವೇ ಇಲ್ಲದೆ ಸಮಸ್ತ ಪ್ರಪಂಚ ಪ್ರಥನೈಕ ಹೇತುವಾಗಿದೆ. ಎಂಬ ಶ್ರುತಿಸ್ಮೃತ್ಯಾಗಮ ಸಮ್ಮತವಾದ ಈ ಶಿವಾದ್ವೈತ ಮತವೇ ಸಿದ್ಧಾಂತಿತವಾದುದೆಂದು ಪ್ರಾಚೀನರೂ ಅರ್ವಾಚೀನರೂ ಏಕಕಂಠವಾಗಿ ಹೇಳುತ್ತಾರೆ- ಕೆಲ ಹಳಬರ ಸಾಕ್ಷಿಗಳಾದರೂ ಈ ಮೇಲೆ ಉಲ್ಲೇಖಿಸಲ್ಪಟ್ಟಿವೆ. ಅವರ ಈಚೆಗೆ ಮೈದೋರಿದ ಮಹಾಜ್ಞಾನಿಗಳಲ್ಲಿ, ಮಹಾರಾಷ್ಟ್ರದಲ್ಲಿ ಸುಪ್ರಸಿದ್ಧನಾದ ಜ್ಞಾನೇಶ್ವರನೆಂಬಾತನೂ ಶಕ್ತಿವಿಶಿಷ್ಟಾದ್ವೈತವಾದಿಯೇ ಆಗಿದ್ದನೆಂಬ ಸಂಗತಿಯು ಅವನು ಸ್ವತಂತ್ರವಾಗಿ ರಚಿಸಿದ **'ಅಮೃತಾನುಭವ'** ಎಂಬ ಮರಾಠೀ ಓವೀಬದ್ಧ ಗ್ರಂಥದಿಂದ ತಿಳಿಯಬರುವುದು. ಮುಂತಾದ ಸಮರ್ಥ ರಾಮದಾಸನೂ ಸಂತತುಕೋಬನೂ ಮುಂತಾದ ಮಹಾರಾಷ್ಟ್ರದೇಶದ ಸತ್ಪುರುಷರು ಆ ಜ್ಞಾನೇಶ್ವರನ ವಾಕ್ಯಗಳಲ್ಲಿ ಪ್ರಾಮಾಣ್ಯ ಬುದ್ಧಿಯುಳ್ಳವರಾಗಿದ್ದರೆಂಬ ಬಗ್ಗೆ ಅವರಿಂದ ಹಾಡಲ್ಪಟ್ಟ ಅಭಂಗಗಳೆಂಬ ಪದ್ಯಗಳೇ ಸಾಕ್ಷಿಗಳಾಗಿವೆ. ಅಂತಹ ಪ್ರಾಮಾಣಿಕ ಸಾಧುಪುರುಷನಾದ ಜ್ಞಾನೇಶ್ವರನು ಶೈವಾಗಮ ಮತ್ತು ಶಿವಸೂತ್ರಾದಿಗಳ ರಹಸ್ಯಾರ್ಥವನ್ನೇ ಆ 'ಅಮೃತಾನುಭವ' ಎಂಬ ಗ್ರಂಥದಲ್ಲಿ ಬಿಚ್ಚಿ ಹೇಳಿದ್ದಾನೆ. ಶಕ್ತಿವಿಶಿಷ್ಟಾದ್ವೈತ ವಿಚಾರದಬಗ್ಗೆ ಪ್ರಮಾಣ, ಯುಕ್ತಿ, ದೃಷ್ಟಾಂತಗಳ ಪೂರ್ವಕವಾಗಿ ಅನುಭವಗಮ್ಯವಾಗುವ ಹಾಗೆ ಪ್ರತಿಪಾದಿಸುವ ಜ್ಞಾನೇಶ್ವರನ ಶೈಲಿಯು ಶಿವಜ್ಞಾನಿಗಳು ಮೆಚ್ಚಿ ತಲೆದೂಗುವಂತಿದೆ. ಆ ಗ್ರಂಥವು ಸಂಪೂರ್ಣವಾಗಿ ಮರಾಠೀ ಕವಿತಾರೂಪವಾಗಿದ್ದರೂ ಅದರ ಮೊದಲನೆಯ ಪ್ರಕರಣದಲ್ಲಿಯ ಐದೇ ಶ್ಲೋಕಗಳು ಸಂಸ್ಕೃತಭಾಷೆಯಲ್ಲಿ ರಚಿಸಲ್ಪಟ್ಟಿರುವುದರಿಂದ, ಮರಾಠಿಭಾಷೆಯ ಪರಿಚಯವಿಲ್ಲದವರ ತಿಳುವಳಿಕೆಗಾಗಿ ಅವುಗಳಲ್ಲಿ ಮೂರನೆಯ ನಾಲ್ಕನೆಯ ಶ್ಲೋಕಗಳನ್ನು ನಾವು ಈ ಕೆಳಗೆ ಉಲ್ಲೇಖಿಸುವೆವು—

> ಸ್ವಾರ್ಥಂ ಕೇನಚ ಕಸ್ಯಾರ್ಥಂ ಶಿವಯೋಃ ಸಮರೂಪಿಣೋಃ | ಜ್ಞಾತುಂ ನಶಕ್ಯತೇಲಗ್ನ ಮಿತಿ ದ್ವೈತಚ್ಛಲಾನ್ಮುಹುಃ ||೩||
> ಅದ್ವೈತಮಾತ್ಮನಸ್ತತ್ತ್ವಂ ದರ್ಶಯನ್ತಾ ಮಿಥಸ್ತರಾಮ್ | ತೌ ವನ್ದೇ ಜಗತಾಮಾದ್ಯೌ ತಯೋಸ್ತತ್ತ್ವಾಭಿಪತ್ತಯೇ ||೪||

'ಸಮಾನವಾದ ರೂಪವುಳ್ಳ ಶಿವಶಕ್ತಿಗಳಲ್ಲಿ, ಯಾವುದರೊಂದಿಗೆ ಯಾವುದಿರುವುದೆಂಬುದೂ ಯಾವುದು ಯಾವುದರ ಅರ್ಥವೆಂಬುದೂ ತಿಳಿಯಲು ಶಕ್ಯವಿಲ್ಲ; ಶಿವಶಕ್ತಿಗಳು ತಮ್ಮ ನಿಜದಿರುವನ್ನು ಪರಸ್ಪರವಾಗಿ ವ್ಯಕ್ತಪಡಿಸುತ್ತವೆ, ಇವೆರಡರ ವಾಸ್ತವಿಕತೆಯ ಸ್ವರೂಪದ ಪ್ರಾಪ್ತಿಗಾಗಿ ಆ ಶಿವಶಕ್ತಿಗಳನ್ನು ನಮಿಸುತ್ತೇನೆ.

ಈ ಮೇಲಿನ ಶ್ಲೋಕಗಳ ಅರ್ಥವನ್ನು ನಾವು ಬರೆದಿರುವುದು ಜ್ಞಾನೇಶ್ವರನ ಹೃದಯದ ಆಶಯವನ್ನೆಲ್ಲ ಸ್ಪಷ್ಟಗೊಳಿಸುವದೆಂದು ನಮ್ಮ ಅಭಿಪ್ರಾಯವಲ್ಲ; ಶಿವಾನುಭವಿಗಳು ಇದಕ್ಕೂ ಹೆಚ್ಚಿನ ತಾತ್ಪರ್ಯವನ್ನು ಕಂಡು ಹಿಡಿದು ಜ್ಞಾನೇಶ್ವರನ ಅಸಾಮಾನ್ಯವಾದ ಭಾವವನ್ನು ವ್ಯಕ್ತಗೊಳಿಸಲು ಅನುಕೂಲ್ಯವಿರುವದೆಂದು ನಮ್ಮ ನಂಬಿಕೆ. ಮತ್ತು ಮಹಾರಾಷ್ಟ್ರಭಾಷೆಯ ಪರಿಜ್ಞಾನವುಳ್ಳ ಜಾಣರು ಜ್ಞಾನೇಶ್ವರನು ಬರೆದ ಅಮೃತಾನುಭವ ಗ್ರಂಥವನ್ನು ಅಗತ್ಯವಾಗಿ ಒಮ್ಮೆಯಾದರೂ ಓದಿ ಅದರ ಸ್ವಾರಸ್ಯವನ್ನು ಅರಿತು ಆನಂದ ಪಡಲೆಂದು ಅವರಿಗೆ ನಾವು ಬಿನ್ನೈಸುತ್ತೇವೆ.

ಒಟ್ಟಿನ ಮೇಲೆ, ಬೇರೆ ಬೇರೆ ಶಾಸ್ತ್ರಕಾರರು ತಮ್ಮ ತಮ್ಮ ಮತ ಸಾಧನೆಗಾಗಿ ನಾನಾವಿಧ ಪಾರಿಭಾಷಿಕ ಶಬ್ದಗಳನ್ನು ಕಲ್ಪಿಸಿ ಅವುಗಳನ್ನೇ ಬಳಕೆಯಲ್ಲಿ ತರುವ ಮೂಲಕವಾಗಿ [illegible] ಪರಿಯಿಂದ ಹೆಣಗುತ್ತಾರೆ; ಇಂಥ ಸಂದರ್ಭದಲ್ಲಿ ವಸ್ತು [illegible]

ಸ್ಥಳದೇಶದ ವೃತ್ತಾಂತಗಳು.

[illegible]ಂಗಳೂರಿನ ಬಿನ್ನಿಮಿಲ್ಲಿನ ಕೂಲಿಕಾರರು [illegible] ಯುವ ಯೋಚನೆಯಲ್ಲಿರುವರೆಂಬುದನ್ನು ತಿಳಿ[illegible] ಅಧಿಕಾರಿಗಳು ಸೋಮವಾರದಿಂದ ಮಿಲ್ಲನ್ನು [illegible] ರುವರು.

[illegible]ಸೂರು ವಿಶ್ವವಿದ್ಯಾನಿಲಯದ ಪದವೀದಾ[illegible] ರಂಭವು ರಾಜಧಾನಿಯ ಜಗನ್ಮೋಹನಪ್ಯಾ[illegible] ಆಗಸ್ಟು 29ನೆಯ ತಾರೀಖಿನ ಗುರುವಾರ ಬೆಳ[illegible] ಗ್ಗೆ ನಡೆಯುವದು.

[illegible]ಗಳೂರು ಚೀಫ್‌ಕೋರ್ಟಿಗೆ "ಹೈಕೋರ್ಟ್"[illegible] ಆಗಿ ನಾಮಕರಣಮಾಡಬೇಕೆಂದು ಪ್ರಜಾಪ್ರ[illegible] ಯಲ್ಲಿ ಚರ್ಚಿಸಲ್ಪಟ್ಟಿದ್ದ ವಿಷಯವು ಕಳೆದ [illegible] 24 ನೆಯ ತಾರೀಖಿನ ದಿವಸ ನ್ಯಾಯವಿಧಾ[illegible] ಯಲ್ಲಿ ತೀರ್ಮಾನವಾಗಿ ಅಂಗೀಕರಿಸಲ್ಪಟ್ಟಿತು.

[illegible]. ಬಿ. ಇಂದಿರಮ್ಮ ಬಿ.ಎ. ಎಂಬ ಮೈಸೂ[illegible] ಯು ಇಂಗ್ಲೆಂಡಿಗೆಹೋಗಿ ಲೀಡ್ಸ್‌ಯುನಿವ[illegible] **ಟೀಚರ್ ಡಿಪ್ಲೊಮಾ** ಪರೀಕ್ಷೆಯಲ್ಲಿ ತೇರ್ಗ[illegible] ಎಂಬ ಸಮಾಚಾರಬಂದಿದೆ ಒಕ್ಕಲಿಗರ ಪ[illegible] ಸೇರಿದ ಇವರು ಸೀಮೆಗೆಹೋಗಿ ಪರೀಕ್ಷೆ[illegible] ರ್ಗಡೆಯಾಗಿರುವದು ಸಂತೋಷಪ್ರದವಾಗಿ[illegible]

[illegible] ಭಾರತ ಚರಕಸಂಘದ ಕರ್ನಾಟಕಶಾಖೆ[illegible] ಗಳೂರಿನಲ್ಲಿ ಹೊಸದಾಗಿ ಒಂದು ಖಾದಿ[illegible] ವನ್ನು ಸ್ಥಾಪಿಸಿರುತ್ತಾರೆ. ಪೌರಸಭೆಯ[illegible] ಮೇಲಿನ ಸುಂಕವನ್ನು ತೆಗೆದುಹಾಕಿ ಪ್ರೋ[illegible] ಟ್ಟಿರುತ್ತಾರೆ. 1-6-29 ರಿಂದ 24-6-29 [illegible] ಸೂರಾರು 700 ರೂಪಾಯಿಗಳ ಖಾದಿಯು [illegible] ತ್ತದೆ.

[illegible]ರು ಸುಲ್ತಾನ್‌ಪೇಟೆಯ ಸ್ಕೂಲಿನ ಗಣಪ[illegible] ವನ್ನು ತೆಗೆದು ಆ ಕಟ್ಟಡದಲ್ಲಿ ಹಿಂದುಸ್ತಾ[illegible] ಲನ್ನು ಮಾಡುತ್ತಾರೆಂಬ ಸುಳ್ಳುಸಮಾ[illegible] ಲ್ಲೆಲ್ಲಾ ಹಬ್ಬಿ ಗಲಭೆಯಾಗಬಹುದೆಂಬ [illegible] ಇದ್ದರಿಂದ ಕಳೆದವಾರ ಪೋಲೀಸಿನವರ[illegible] ಲೂ, ಸವಾರರೂ ಮುಷ್ಟಿ ಮುಷ್ಟಿ ಬೀದಿ[illegible] ಶೇಷವಾಗಿ ಸುಲ್ತಾನ್‌ಪೇಟೆಯಲ್ಲೂ ಪ್ರ[illegible] ನ್ನು ಕಾಪಾಡಲು ಸಿದ್ಧವಾಗಿದ್ದರು. [illegible] ಟರು ಈ ಸಮಾಚಾರವೇ ಸುಳ್ಳೆಂದು [illegible] ರುವರು.

[illegible]ನಿಯಲ್ಲಿರುವ ನಾರಾಯಣಪ್ಪ, ಸೀತ[illegible] ರು ಒಬ್ಬ ಹುಡುಗಿಗೆ ಒಳ್ಳೇ ಐಶ್ವರ್ಯವ[illegible] ಡನನ್ನು ಮಾಡಿಕೊಡುತ್ತೇವೆಂದು ಆಶೆ[illegible] ನ್ನು ಮದ್ರಾಸಿಗೆ ಕರೆದುಕೊಂಡು ಹೋ[illegible] ಗೆ 50 ರೂಪಾಯಿಗೆ ಮಾರಿದ್ದರು. [illegible] ಸಮಯವನ್ನು ಸಾಧಿಸಿ ತನ್ನ ವೃತ್ತಾ[illegible] ಪೋಲೀಸಿನವರಿಗೆ ತಿಳುಹಿಸಲು, ಪೋಲೀಸ[illegible] ಹುಡುಗಿಯನ್ನು ಬಿಡಿಸಿ, ಸೂಳೆಯನ್ನು ದ[illegible] ಮೇಲ್ಕಂಡ 3 ಜನರಮೇಲೂ ಮೊಕದ್ದ[illegible] ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯ[illegible] ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾ[illegible]

[illegible]ಸಿಯ ಕೃಷ್ಣರಾಜಮೊಹಲ್ಲಾ ಸೀಸ[illegible]ಲ್ಲಿ ವಾಸವಾಗಿರುವ ಶ್ರೀ ರಂಗಮ್ಮ[illegible] ಮಹಾರಾಜರವರ ವರ್ಧಂತ್ಯುತ್ಸ[illegible] ಹುವುದಕ್ಕೆ ಹೋದಸಮಯವನ್ನು ನೋ[illegible] ಕ್ಕದ ಮನೆಯ ಸುಮಾರು 60 ವರ್ಷ[illegible] ನಿವಾಸಯ್ಯಂಗಾರಿ ಎಂಬಾತನು ಆಕೆ[illegible] ಸುಮಾರು 2,000 ರೂಪಾಯಿಗಳನ[illegible] ನಗಳನ್ನೂ ಅಪಹರಿಸಿಕೊಂಡು ಹೋ[illegible] ಪರ್ಸ್ಪೆಕ್ಟರ್ ಹಜ್. ನೂರುಲ್ಲಾರವರು [illegible] ಅಭರಣಗಳ ಸಮೇತ ಅಪರಾ[illegible] ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನ[illegible] ಮಾಡಿರುತ್ತಾರೆ.

[illegible]ಗೆರೆಯಲ್ಲಿ ನಡೆದ ಹಿಂದೂಮುಹಮ್ಮದೀಯ[illegible] ಬಂಧವಾಗಿ 9 ಜನ ಮುಹಮ್ಮದೀಯ[illegible] ನ ಹಿಂದುಗಳನ್ನೂ ದಸ್ತಗಿರಿಮಾಡಿ[illegible] ಮೇಲೆ ಬಿಟ್ಟಿರುವರು. ಬೆಂಗಳೂರು ದ[illegible] [illegible] ಹೋಗಿದ್ದ ಮುಹಮ್ಮದೀಯ ರಿಲೀಫ್‌ಪಾರ್ಟಿಯ[illegible] ಡವರಾದ ಮುಹಮ್ಮದೀಯರಿಗೆ ಧಾನ್ಯವನ್ನೂ [illegible] ಹಂಚಿದರು. ದಾವಣಗೆರೆಯ ಹತ್ತಿರದಲ್ಲಿ [illegible] ಆನೆಕೊಂಡದ ಬಸವೇಶ್ವರ ದೇವಾಲಯವು ಅಪ[illegible] ಮಾಡಲ್ಪಟ್ಟಿರುವದೆಂದು ತಿಳಿದುಬರುತ್ತದೆ. ದಾವ[illegible]ಗೆರೆಯ ಬಾರ್‌ಅಸೋಸಿಯೇಷನ್ನಿನವರು ಪೋಲೀಸಿ[illegible] ಗುಂಡುಹಾರಿಸಿದ್ದು ಅನ್ಯಾಯವೆಂದೂ, ಗಲಭೆ[illegible] ವಿಚಾರವನ್ನು ಆಮೂಲಾಗ್ರವಾಗಿ ವಿಚಾರಮಾ[illegible] ನ್ಯಾಯವಾದಿಗಳ ಸ್ವತಂತ್ರಕಮಿಟಿಯೊಂದನ್ನು [illegible] ಮಿಸಬೇಕೆಂದೂ ತೀರ್ಮಾನಿಸಿ ಗವರ್ನಮೆಂಟಿಗೆ ಅರಿ[illegible] ಮಾಡಿಕೊಂಡಿರುವರಂತೆ!

[illegible] ನಾಲ್ಕೈದು ವಾರಗಳ ಮೊದಲು ಸವಿಸ್ತಾ[illegible] ಯಲ್ಲಿ ಮಾತನಾಡುವ ಸಿನಿಮಾ (ಚಲನಚಿತ್ರ[illegible]) ಆಟವನ್ನು ಪಾಶ್ಚಾತ್ಯರು ಲಂಡನ್‌ಪಟ್ಟಣದಲ್ಲಿ [illegible] ಪ್ರಾರಂಭಿಸಿದ್ದಾರೆಂದು ಪ್ರಕಟಿಸಿದ ವಿಷಯ[illegible] ವಾಚಕರ ಸ್ಮೃತಿಪಥದಲ್ಲಿರಬಹುದು. ಆದರೆ ರಾಜ[illegible] ನಿಯ ಕ್ಯಾಪಿಟಲ್ ಸಿನಿಮಾ ಕಂಪನಿಯವರು ಆ[illegible] ಮಾತನಾಡುವ ಚಲನಚಿತ್ರಗಳನ್ನು ಸದ್ಯಃ ಇಲ್ಲಿ [illegible] ತರಿಸಿಕೊಂಡು 2-3 ದಿವಸಗಳಿಂದ ಆಟಗಳನ್ನು ಪ್ರದ[illegible] ರ್ಶಿಸುತ್ತಿರುವರು. ಇದು ನವೀನಶೋಧವಾಗಿದ್ದು [illegible] ಶ್ಚರ್ಯಕರವಾಗಿರುವದರಿಂದ ಪ್ರತಿದಿವಸವೂ ಸಾವಿ[illegible] ರು ಜನರು ಅತ್ಯುತ್ಸಾಹದಿಂದ ಸದರಿ ಆಟಗಳನ್ನು [illegible] ನೋಡಲಿಕ್ಕೆ ಹೋಗುತ್ತಿರುವರು. ಟಿಕೀಟುಗಳು ದೊರೆ[illegible] ಯುವದೇ ದುರ್ಲಭವಂತೆ! ಹೊಸ ಉಬ್ಬಿನಿಂದ ಜನರು [illegible] ಹಣವನ್ನು ವ್ಯಯಮಾಡಿಕೊಳ್ಳುತ್ತಿರುವರು. ಒಟ್ಟಿಗೆ [illegible] ಪಾಶ್ಚಾತ್ಯರು ಕಷ್ಟಪಟ್ಟು ತಮ್ಮ ಮಿದುಳನ್ನು ವೆಚ್ಚ[illegible] ಮಾಡಿ ನಾನಾರೀತಿಯಿಂದ ಭಾರತೀಯರ ಸರ್ವಸ್ವ[illegible] ವನ್ನು ಸೆಳೆಯುತ್ತಿರುವರು. ನಮ್ಮ ಭಾರತೀಯರು [illegible] ಇಂಥ ಮೋಹಕಕಲೆಗೆ ಮರುಳಾಗಿ ತಮ್ಮ ಹಣವನ್ನು [illegible] ಹಾಳುಮಾಡಿಕೊಳ್ಳುವದರಲ್ಲಿ ಕುಶಲರೇ ಹೊರತು [illegible] ಇಂಥ ಈ ತರದ ನೂತನಶೋಧವನ್ನು ತೆಗೆದು ಪಾಶ್ಚಾ[illegible] ತ್ಯರನ್ನು ದಂಗುಬಡಿಸಿ ಅವರಿಂದ ಹಣವನ್ನು ಸೆಳೆಯು[illegible] ವದರಲ್ಲಿ ಮಾತ್ರ ಕುಶಲರಲ್ಲ. ಆ ರೀತಿಯಾದ ಕಾಲವು [illegible] ಭರತಖಂಡಕ್ಕೆ ಯಾವಾಗ್ಗೆ ಪ್ರಾಪ್ತಿಯಾಗುವದೋ [illegible] ತಿಳಿಯದಾಗಿದೆ. "ಕಾಲಾಧೀನಂ ಜಗತ್ಸರ್ವಂ"

ವರ್ತಮಾನಸಂಗ್ರಹ.

[illegible] ಎಂಬ ಒಬ್ಬ ರೈತನು ಪಂದ್ಯವನ್ನು ಕಟ್ಟಿ [illegible] ದಿನಗಳವರೆಗೆ ಆಕಾಶವಿಮಾನದಲ್ಲಿ ಸಂಚರಿಸಿದನಂತೆ!

ಶ್ರೀಯುತ ಮಿಣಜಗಿ ಎಂಬ ಕರ್ನಾಟಕ ಶಿಲ್ಪಕಲಾ[illegible] ಕೋವಿದರು ಹೊಸ ದೆಹಲಿಯ ಶಿಲ್ಪಕಾರ್ಯಕ್ಕಾಗಿ [illegible] ನೇಮಿಸಲ್ಪಟ್ಟಿರುತ್ತಾರೆ.

ಡಾ|| ಕೃಷ್ಣಾಬಾಯಿ ಪಾಟೀಲ ಇವರು ಬಡೋ[illegible] ದೆಯ ಸರ್ಕಾರಿ ಆಸ್ಪತ್ರೆಯಲ್ಲಿ 1 ವರ್ಷದವರೆಗೆ ಲೇಡೀ [illegible] ಸರ್ಜನರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದ ತಾ|| 28 ನೆಯ ದಿವಸ ಪೂನಾ ಮುನಿಸಿ[illegible] ಪಾಲಿಟಿಯ ಆಫೀಸಿನ ಮೇಲೆ ರಾಷ್ಟ್ರಧ್ವಜವು ನ. ಚಿ. [illegible] ಕೇಳಕರ ಇವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು.

ನ್ಯೂಯಾರ್ಕಿನ ಮಿ|| ಕೆ. ಎಸ್. ಲಿಟೋರ್ ಎಂಬ [illegible] ಕೋಟ್ಯಾಧೀಶ್ವರನು ಬಡವರ ಸಹಾಯಾರ್ಥವಾಗಿ 40 [illegible] ಲಕ್ಷ ರೂಪಾಯಿಗಳನ್ನು ದಾನಮಾಡಿರುವನು. ಸ್ತುತ್ಯ!

ಹುಬ್ಬಳ್ಳಿಯ ಡೆಕ್ಕನ್ ಸಿನೀಮಾ ಕಂಪನಿಯವರು [illegible] ಒಂದು ದಿವಸದ ಉತ್ಪತ್ತಿ 800 ರೂಪಾಯಿಗಳನ್ನು ಆ [illegible] ಊರಿನ ಕೋ ಅಪರೇಟಿವ್ ಆಸ್ಪತ್ರೆಗೆ ಧರ್ಮಮಾಡಿರು[illegible] ತ್ತಾರೆ.

ದೆಹಲಿಯ ಅಸೆಂಬ್ಲಿಯಲ್ಲಿ ಬಾಂಬನ್ನು ಎಸೆದ ನ್ಯಾಯಾ[illegible] ಲಯದಲ್ಲಿ ಅಪರಾಧಿಗಳಾದ ದತ್ತ ಮತ್ತು ಸಿಂಹರಿ[illegible] ಬ್ಬರೂ ಸೆರೆಮನೆಯಲ್ಲಿ ನಿರಾಹಾರವ್ರತವನ್ನು ಆಚರಿಸು[illegible] ತ್ತಿರುವರು.

ಮಿರಾಶ್ ರೆಹಾರ್ ಎಂಬಲ್ಲಿ ನಡೆದ ಭಯಂಕರ [illegible] ವಾದ ಭೂಕಂಪದಿಂದ 3253 ಜನರೂ 6543 ಗನಕರು [illegible] ಮೃತಿಹೊಂದಿರುವವು. 1121 ಜನರಿಗೆ ಗಾಯ[illegible] ಗಳಾಗಿರುತ್ತವೆ. 80 ಗ್ರಾಮಗಳು ಹಾಳಾಗಿರುತ್ತವೆ.

[illegible]ಪಟ್ಟಣದಲ್ಲಿ ಯಲ್ಲಿ ಎಂಬ 20 ವರ್ಷದ [illegible] ಹಾಗೂ ಅವಳ ಉಪಪತಿಯೂ ಕೂಡಿ ಗಂಡ[illegible]ನಿಗೆ ವಿಷವನ್ನು ಹಾಕಿಕೊಂಡ ಅಪರಾಧಕ್ಕಾಗಿ ಸೆಷನ್ಸ್ ಜಡ್ಜರು ಅಪರಾಧಿಗಳಿಗೆ ಮರಣದಂಡವನ್ನು ವಿಧಿಸಿದರು.

ಹಿಂದುಸ್ಥಾನದಲ್ಲಿ ಶೇಕಡಾ 71 ಜನರು ಕೃಷಿಯಿಂದಲೂ, 6 ಜನರು ವ್ಯಾಪಾರದಿಂದಲೂ, ಇಬ್ಬರು ಕೂಲಿಯಿಂದಲೂ, ಇಬ್ಬರು ಸರ್ಕಾರಿ ಉದ್ಯೋಗದಿಂದಲೂ, ಒಬ್ಬನು ಕೈಗಾರಿಕೆಯಿಂದಲೂ, ಉಳಿದವರು ಬೇರೆ ಬೇರೆ ಉದ್ಯೋಗಗಳಿಂದಲೂ ಜೀವಿಸುತ್ತಾರೆ.

ಅಂಕಲೇಶ್ವರದ ಪದಮಜಿ ಪಿರೋಜಶಾದಾವರ ಎಂಬೊಬ್ಬ ಪಾರ್ಶಿತರುಣನು ಹಿಂದುಸ್ಥಾನವನ್ನೆಲ್ಲ ಕಾಲ್ನಡಿಗೆಯಿಂದಲೇ ಸುತ್ತಿಬರುವದಕ್ಕೆ ಹೊರಟಿರುತ್ತಾನೆ. ತನ್ನ ಪೋಷಣೆಗಾಗಿ ಒಂದು ಕಾಸನ್ನೂ ಸಹ ತೆಗೆದುಕೊಳ್ಳದೆ ಬರಿಗೈಯಿಂದಲೇ ಹೊರಟಿರುವನಂತೆ! ಈತನ ಸಾಹಸವೇ ಸಾಹಸ!

ಇಂಗ್ಲೆಂಡ್ ದೇಶದವರು ಸಮುದ್ರದಲ್ಲಿ ತಮಗೆ ಬೇಕಾದಷ್ಟು ಸ್ವಾತಂತ್ರ್ಯವಿರುವದರಿಂದ ಕೈಕಾರಿಕೆಯಿಂದಲೇ ನಾವು ಸದಾ ಜೀವಿಸಬಹುದೆಂದು ಭಾವಿಸಿ ವ್ಯವಸಾಯವನ್ನು ತ್ಯಜಿಸಿರುವದರಿಂದ ಮುಂದೆ ಅವರು ಅನೇಕ ಕಷ್ಟನಷ್ಟಗಳನ್ನನುಭವಿಸಬೇಕಾಗುವದೆಂದು ಮಾಜಿ ಫ್ರಾನ್ಸಿನ ಮುಖ್ಯ ಮಂತ್ರಿಗಳಾದ ಮಿ|| ಹೇರಿಯಟ್‌ರವರು ಹೇಳಿರುವರಂತೆ!

ರೋಚೆಸ್ಟರದ ಜಾರ್ಜ್ ಈಸ್ಟ್‌ಮನ್ ಎಂಬವರು ಪ್ರಪಂಚದ ವ್ಯವಹಾರವು ಸುಲಭವಾಗಿ ನಡೆಯಬೇಕಾದರೆ ತಿಂಗಳು ಒಂದಕ್ಕೆ 4 ವಾರಗಳು (ಅಂದರೆ 28 ದಿವಸಗಳು) ವರ್ಷ 1 ಕ್ಕೆ 13 ತಿಂಗಳುಗಳು ಆಗಬೇಕೆಂದು ಸೂಚಿಸಿರುತ್ತಾರೆ. ಹೀಗೆ ಮಾಡಿದರೆ ಕೆಲಸವು ಕಡಿಮೆಯಾಗಿ ಉತ್ಪತ್ತಿಯು ಹೆಚ್ಚಾಗುವುದಂತೆ! ಇವರ ಲೆಖ್ಖದಂತೆ ವರ್ಷ 1 ಕ್ಕೆ 364 ದಿವಸಗಳಾಗುವವು. ಕಡೆಯದಿವಸ ಅಂದರೆ 365 ನೆಯ ದಿವಸವನ್ನು ಪ್ರಪಂಚದಲ್ಲೆಲ್ಲ ಹಬ್ಬದ ದಿವಸವನ್ನಾಗಿ ಆಚರಿಸಬೇಕಂತೆ!

ಯೂರೋಪಿನ ವಾಲಿ ಕ್ಯಾಂಟಲ್ ಎಂಬ ಪರ್ವತ ಪ್ರದೇಶದಲ್ಲಿ ಮಾಂಟೆನ್ ಎಂಬ ಸಣ್ಣ ಹಳ್ಳಿಯೊಂದಿರುವದು. ಇದು 1870 ನೆಯ ಇಸವಿಯಲ್ಲಿ ಕುಸಿಯಲಾರಂಭಿಸಿ 1890 ನೆಯ ಇಸವಿಯ ಹೊತ್ತಿಗೆ 18 ಅಡಿಯಷ್ಟು ಕುಸಿದುಹೋಗಿದ್ದುದಲ್ಲದೆ ಈಚೆಗೆ ಪುನಃ ಕುಸಿಯಲಾರಂಭಿಸಿ ಈಗ ಮನೆಗಳ ಗೋಡೆಗಳು ಪ್ರತಿವರ್ಷವೂ ಬಿರಿಯುತ್ತಿರುವವಂತೆ! ಇದುವರೆಗೆ ಪುನಃ 22 ಅಡಿಗಳಷ್ಟು ಕುಸಿದುಹೋಗಿದೆಯೆಂದೂ ಆದರೂ ಸುತ್ತಮುತ್ತಲಿನ ಪ್ರದೇಶವು ಬಹು ಫಲವತ್ತಾಗಿರುವದರಿಂದ ಗ್ರಾಮಸ್ಥರು ಹಳ್ಳಿಯನ್ನು ಬಿಡದೆ ಅಲ್ಲಿಯೇ ವಾಸವಾಗಿರುತ್ತಾರೆಂದೂ ತಿಳಿದುಬರುತ್ತದೆ.

ಅಕ್ಬರನ ಮೊಮ್ಮಗನ ಮಗನಾದ ಮುಹಮ್ಮದ್ ದಾರಾಶಿಕುವ್ ಎಂಬವನಿಂದ ರಚಿಸಲ್ಪಟ್ಟ "ಹಿಂದೂ ಮುಹಮ್ಮದೀಯರ ಐಕಮತ." ವಿಷಯಕವಾದ ಗ್ರಂಥವು ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನ ಮುಹಮ್ಮದೀಯ ವಿದ್ಯಾರ್ಥಿಯೊಬ್ಬನಿಂದ ಹಿಂದೀಭಾಷೆಗೆ ತರ್ಜುಮೆಮಾಡಲ್ಪಟ್ಟಿದೆ. ಇದನ್ನು ಬಂಗಾಳದ ಏಷಿಯಾಟಿಕ್ ಸಂಘದವರು ಪ್ರಸಿದ್ಧಪಡಿಸಿರುವರೆಂದೂ, ಮೂಲಗ್ರಂಥಕಾರನು ಉಪನಿಷತ್ತುಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಮಹಾಜ್ಞಾನಿಯಾಗಿದ್ದನೆಂದೂ, ಹಿಂದೂಧರ್ಮದ ವಿಷಯವಾಗಿ ಪರ್ಶಿಯನ್ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ರಚಿಸಿರುವನೆಂದೂ ತಿಳಿದುಬಂದಿದೆ.

ಹುಬ್ಬಳ್ಳಿ ಸಿದ್ಧಾರೂಢಸ್ವಾಮಿಗಳು ತಮ್ಮ ಅನಂತರ ಮಠದ ಚರಸ್ಥಿರ ಆಸ್ತಿಗೆ ಒಬ್ಬ ಮರಿಯನ್ನು ಹಕ್ಕುದಾರನನ್ನಾಗಿ ನೇಮಿಸಿರಲು ಕೆಲವರು ಅದಕ್ಕೆ ಸಮ್ಮತಿಸದೆ ಸ್ವಾಮಿಗಳ ಮೇಲೆ ಕೋರ್ಟಿನಲ್ಲಿ ದಾವಾಮಾಡಿರುತ್ತಾರೆ. ಈ ಸಂದರ್ಭದಲ್ಲಿ ಸ್ವಾಮಿಗಳನ್ನು ಕೋರ್ಟಿಗೆ ಕರೆಯಿಸದೆ ಅವರ ಪರವಾಗಿ ಒಂದು ಕಮಿಷನ್ ಗೊತ್ತುಮಾಡಿ ಆ ಕಮಿಷನ್ ಮುಖಾಂತರ ಸ್ವಾಮಿಗಳ ಸಾಕ್ಷಿಯನ್ನು ತೆಗೆದುಕೊಳ್ಳಬೇಕೆಂದೂ ಸ್ವಾಮಿಗಳ ಕಡೆಯ ವಕೀಲರು ವಾದಿಸಿದರು. ಆದರೆ ಮುನಸೀಫರು ಅದನ್ನು ಅಂಗೀಕರಿಸದೆ ಸಿದ್ಧಾರೂಢರು 'ಖುದ್ದು ಕೋರ್ಟಿಗೆ ಬಂದು ಸಾಕ್ಷಿ ಹೇಳಬೇಕೆಂದೂ, ಇಲ್ಲವಾದರೆ ಮಠದಲ್ಲಿಯೇ ಕೋರ್ಟು ನಡೆಯಿಸಬಹುದೆಂದೂ ತೀರ್ಪುಮಾಡಿರುತ್ತಾರೆ.

ಜಮಖಂಡಿಯ ಶ್ರೀಮಂತಸರ್ಕಾರದವರು ಆಕಳು, ಎತ್ತು, ಆಕಳಕರು, ಕೋಣ, ಕುದುರೆ, ಮತ್ತು ಇತರ ಕೋಡುಳ್ಳ ಯಾವ ಪ್ರಾಣಿಗಳನ್ನು ಯಾರೂ ಕೊಲ್ಲಕೂಡದೆಂದೂ, ಮತ್ತು ಕಟುಕರಿಗೆ ಮಾರಕೂಡದೆಂದೂ, ಇದಕ್ಕೆ ವಿರುದ್ಧವಾಗಿ ನಡೆದರೆ 200 ರೂಪಾಯಿ ಜುಲ್ಮಾನೆ ಅಥವಾ ಒಂದು ತಿಂಗಳು ಸಜಾ ಇಲ್ಲವೆ ಇವೆರಡು ಶಿಕ್ಷೆಗಳೂ ವಿಧಿಸಲ್ಪಡುವುವೆಂದೂ ಮೂಕಪ್ರಾಣಿಗಳ ರಕ್ಷಣೆಗಾಗಿ ಒಂದು ಕಾಯಿದೆಯನ್ನು ಮಾಡಿರುವರು. ಇದು ಅತ್ಯಂತ ಪವಿತ್ರ ಮತ್ತು ಸ್ತುತ್ಯವಾದ ಕಾರ್ಯವಾಗಿದೆ. ಇತರ ಸ್ಟೇಟಿನವರು ಇದನ್ನು ಮೇಲ್ಪಂಕ್ತಿಯನ್ನಾಗಿಟ್ಟುಕೊಂಡು ತಮ್ಮ ತಮ್ಮ ರಾಜ್ಯದಲ್ಲಿ ಈ ತರದ ಶಾಸನವನ್ನು ಮಾಡಿಸಿ ಸಕಲ ಪ್ರಜೆಗಳ ಮನಸ್ಸಿಗೆ ಸಂತೋಷವನ್ನುಂಟು ಮಾಡುವದು ಯೋಗ್ಯವಲ್ಲವೇ?

ಡಾಕ್ಟರ್ ಎಲ್. ಎ. ವಾಡಲ್ ಎಂಬ ಪ್ರಸಿದ್ಧ ಶಾಸ್ತ್ರಜ್ಞರು ತಮ್ಮ ಗ್ರಂಥದಲ್ಲಿ ಸಿಂಧುನದಿಯ ಮೇಲ್ಭಾಗದಲ್ಲಿದ್ದ ಮೂಹೋಜ್‌ದೋರೋ ಎಂಬ ಪ್ರಾಚೀನ ನಗರನಿವಾಸಿಗಳಿಗೂ ಬ್ರಿಟನರಿಗೂ ಸಮೀಪ ಸಂಬಂಧವಿರುವದೆಂದೂ, ಬ್ರಿಟನರನ್ನು ಸಿಂಧಿಗಳೆಂದು ಹೇಳಿದರೆ ತಪ್ಪಾಗಲಾರದೆಂದೂ, ಮೆಸೊಪೊಟೇಮಿಯಾದಲ್ಲಿದ್ದ ಸುಮೇರಿಯನ್ ಜನಾಂಗದವರೇ ಮೊದಲು ಪ್ರಪಂಚದಲ್ಲಿ ನಾಗರೀಕತೆಯನ್ನು ಹುಡಿದರೆಂದೂ, ಸುಮೇರಿಯನ್ನರ ಪ್ರಾಚೀನಪಟ್ಟಣಗಳ ಜೀರ್ಣಾವಶೇಷಗಳು ಈಗೀಗ ಪ್ರಕಾಶಕ್ಕೆ ಬರುತ್ತಿರುವುವೆಂದೂ, ಇದುವರೆಗೆ ಇವರು ಸೆಮಿಟಿಕ್ ಸಂಗಡಕ್ಕೆ ಸೇರಿದವರೆಂಬ ಭಾವನೆಯಿದ್ದುದು ತಪ್ಪೆಂದೂ, ಸುಮೇರಿಯನ್ನರು ಆರ್ಯಜನಾಂಗಕ್ಕೆ ಸೇರಿದವರೆಂದೂ, ಪ್ರಾಚೀನಬ್ರಿಟನರಿಗೆ ಅವರೇ ಮೂಲಪುರುಷರೆಂದೂ ಬರೆದಿರುತ್ತಾರೆ. ಅಲ್ಲದೆ ಈಜಿಪ್ಟಿನ ಪ್ರಾಚೀನ ರಾಜವಂಶದ ಮೂಲಪುರುಷನಾದ ಮೇನಸ್ ಎಂಬವನು ಮೆಸೋಪೊಟೇಮಿಯಾದ ಪ್ರಸಿದ್ಧ ರಾಜನಾದ ಮೆನಿಸ್‌ಟನ್ ಎಂಬವನೆಂದೂ, ಹಿಂದೂಪುರಾಣ ಪ್ರಸಿದ್ಧನಾದ ಮನು ಚಕ್ರವರ್ತಿಯೇ ಇವನೆಂದೂ, ಮನುವು ಈಜಿಪ್ಟದೇಶದಲ್ಲಿ ಸ್ಥಾಪಿಸಿದ ರಾಜವಂಶವೇ ಅಲ್ಲಿಯ ಪ್ರಾಚೀನ ಸಂಸ್ಕೃತಿಗೆ ಕಾರಣವಾಯಿತೆಂದೂ, ಮನುವು ಈಜಿಪ್ಟಿನಲ್ಲಿ ಸ್ಥಾಪಿಸಿದ ರಾಜವಂಶದ ಪ್ರಭೇದವಾದ ಫಿನೀಷಿಯನ್ ಸಂಗಡಕ್ಕೆ ಸೇರಿದ ಕೆಲವರು ಬ್ರಿಟಿಷ್‌ದ್ವೀಪಗಳ ಖನಿಜಗಳಿಗಾಗಿ ಆಶೆಪಟ್ಟು ಅಲ್ಲಿ ಹೋಗಿ ನೆಲಸಿದರೆಂದೂ, ಸಿಂಧುನದಿಯ ತೀರದಲ್ಲಿ ದೊರೆತಿರುವ ಎರಡು ಪ್ರಾಚೀನಪಟ್ಟಣಗಳು ಈ ಸುಮೇರಿಯನ್ ಜನರಿಂದ ಸ್ಥಾಪಿಸಲ್ಪಟ್ಟವುಗಳೆಂದೂ, ಅಲ್ಲಿ ದೊರೆತ ಒಂದು ನಾಣ್ಯದಲ್ಲಿ "ವಿದೇಹಸ್ಥಾನದ ಪೃಥುವಾದ ಮುದ್ಗಲ" ಎಂದಿರುವದೆಂದೂ, ಈ ನಾಣ್ಯವು ಕ್ರಿಸ್ತಪೂರ್ವ 3050 ವರ್ಷದ್ದೆಂದೂ ಡಾಕ್ಟರರು ಹೇಳುತ್ತಾರೆ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದ್ದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೩ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ

ದಿಬ್ಬೂರು.

ತಾ|| 17-6-29 ನೇ ಸೋಮವಾರ ದಿವಸ ನಮ್ಮನ್ನಾಳುವ ಮಹಾಸ್ವಾಮಿಯವರ 46 ನೇ ವರುಷದ ವರ್ಧಂತಿಮಹೋತ್ಸವವನ್ನು ಈ ಗ್ರಾಮದಲ್ಲಿ ಸರ್ವರೂ ಕೂಡಿ ನಡೆಯಿಸಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಸ್ಕೂಲ್‌ಮಾಸ್ಟರ್ ಮ|| ರಾ|| ಎ. ಚನ್ನಪ್ಪನವರು ಗ್ರಾಮಸ್ಥರಿಗೆಲ್ಲ ಮೊದಲೇ ತಿಳುಹಿಸಿದಂತೆ ವಿಲೇಜ್ ಪಂಚಾಯಿತಿ ಛೇರ್ಮನ್ ಮ|| ರಾ|| ಮರುಳಯ್ಯನವರು, ಶ|| ದಾಸೇಗೌಡ್ರು ಮರ್ಚೆಂಟ್, ಎಂ. ರುದ್ರಪ್ಪಶೆಟ್ರು, ಚನ್ನಬಸವಶೆಟ್ರು, ಮಾಡಾಳ್‌ಚಿಕ್ಕೇಗೌಡ್ರು, ಎಸ್. ಎಂ. ವೀರಬಸವಯ್ಯನವರು, ಬಿ. ಯಸ್. ಚೌಡೇಗೌಡ್ರು, ಗವೇ ರಂಗೇಗೌಡ್ರು, ಎಸ್. ಮಂಜೇಗೌಡ್ರು, ಎಂ. ರಂಗೇಗೌಡ್ರು, ಡಿ. ಸಿದ್ದಪ್ಪ ವಗ್ಗೈರೆ ಮಹನೀಯರೆಲ್ಲ ಸೇರಿ ಗ್ರಾಮವನ್ನು ಮತ್ತು ಸ್ಕೂಲ್ ಕಟ್ಟಡವನ್ನು ತಳಿರುತೋರಣಾದಿಗಳಿಂದ ಶೃಂಗರಿಸಿ, ಶ್ರೀಮನ್ಮಹಾರಾಜರವರ ಭಾವಪಟವನ್ನು ಗಂಧ ಅಕ್ಷತಾದಿಗಳಿಂದ ಪೂಜಿಸಿ, ಎತ್ತರವಾದ ಪೀಠದಲ್ಲಿಟ್ಟು, ವಿದ್ಯಾರ್ಥಿಗಳಿಂದ ದೇವರಪ್ರಾರ್ಥನೆಗಳು, ನಾಟಕಸಂಘದವರಿಂದ ಸಂಗೀತವು ನಡೆದು ಮಂಗಳಾರತಿ ನೈವೇದ್ಯಾದಿಗಳು ಆದನಂತರ ಮ|| ರಾ|| ಎ. ಚನ್ನಪ್ಪನವರು ಪ್ರತ್ಯಕ್ಷದೇವರಂತಿರುವ ನಮ್ಮ ಮಹಾಪ್ರಭುಗಳವರ ಆಳ್ವಿಕೆಯಲ್ಲಿ ಅವರ ಪ್ರಜೆಗಳಾದ ನಮ್ಮಗಳಿಗಿರತಕ್ಕ ಸ್ವಾತಂತ್ರ್ಯಸೌಖ್ಯ ಸಂಪದಭಿವೃದ್ಧಿಗಳನ್ನು ಕುರಿತು ಎಲ್ಲರ ಮನಸ್ಸು ಆಕರ್ಷಿಸುವಂತೆ ಭಾಷಣಮಾಡಿದರು. ಅನಂತರ ಮರ್ಚೆಂಟ್ ಯಂ. ರುದ್ರಪ್ಪಶೆಟ್ಟರವರು ಮಾದರಿಸಂಸ್ಥಾನವೆನಿಸಿಕೊಂಡು ರಾಮರಾಜ್ಯದಂತೆ ಪ್ರಜ್ವಲಿಸುತ್ತಿರುವ ಮೈಸೂರುನಾಡನ್ನು ಹಿಂದಿನ ಪೋಷಕ ಮಹಾರಾಜರಂತೆ ಸಹನೆಯಿಂದಲೂ ಐಕ್ಯದಿಂದಲೂ ಪರಿಪಾಲಿಸುತ್ತಿರುವ ಶ್ರೀ ಕೃಷ್ಣರಾಜಒಡೆಯರವರು ದೇಶಾಭ್ಯುದಯ, ಪ್ರಜಾರಕ್ಷಣೆಗಳನ್ನು ಮಾಡುತ್ತ ನಮ್ಮನ್ನು ಸರ್ವರೀತಿಯಿಂದ ಅಭಿವೃದ್ಧಿಗೆ ತರುತ್ತಲಿರುವ ಶ್ರೀ ಮಹಾಪ್ರಭುಗಳವರಿಗೂ ಅವರ ಧರ್ಮಸರ್ಕಾರದವರಿಗೂ ನಾವು ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಅಲ್ಪವೇ ಆಗಿರುತ್ತದೆ. ಇಂಥ ಧರ್ಮಪ್ರಭುಗಳವರ ಆಳ್ವಿಕೆಯು ದೀರ್ಘಕಾಲ ನೆಲೆಗೊಳ್ಳಲೆಂದು ದೇವರನ್ನು ಪ್ರಾರ್ಥಿಸುತ್ತೇನೆಂಬುದಾಗಿ ತಮ್ಮ ಅಮೃತವಾಣಿಯಿಂದ ಭಾಷಣಮಾಡಿದ ಮೇಲೆ ಅಧ್ಯಕ್ಷರೇ ಮೊದಲಾದವರೆಲ್ಲ ಎದ್ದುನಿಂತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದನಂತರ ಸಭಿಕರಿಗೆಲ್ಲ ಫಲಾಹಾರಗಳು ಹಂಚಲ್ಪಟ್ಟು, ಪ್ರಭುಗಳವರ ಚಿತ್ರಪಟವನ್ನು ದಿವ್ಯವಾಗಿ ಅಲಂಕರಿಸಿದ್ದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ವಾದ್ಯವೈಭವದಿಂದಲೂ ಛತ್ರಿಚಾಮರ ಪತಾಕೆಗಳಿಂದಲೂ ಸ್ಕೂಲ್ ಬಾಲಕರ ಜಯಧ್ವನಿಯಿಂದಲೂ ಉತ್ಸವವು ನಡೆದು ಸ್ವಸ್ಥಾನಕ್ಕೆ ಬಿಜಮಾಡಿಸಿದನಂತರ ಶ್ರೀಮನ್ಮಹಾರಾಜರವರ ಜಯಘೋಷದೊಡನೆ ಮುಕ್ತಾಯವಾಯಿತು.

ಜಿ. ಯಂ. ಸಿ. ಸ್ಕೂಲ್ ವಿದ್ಯಾರ್ಥಿ.

ಹೊಳೆಸಿರಿಗೆರೆ.

ಹರಿಹರ ಸಬ್ ತಾಲೂಕು ಹೊಳೆಸಿರಿಗೆರೆ ಇನ್‌ಕಂಪ್ಲೀಟ್ ಮಿಡಲ್‌ಸ್ಕೂಲಿನಲ್ಲಿ ಶ್ರೀಮನ್‌ಮಹಾರಾಜರವರ ವರ್ಧಂತಿಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು. ಹೆಡ್‌ಮಾಸ್ಟರರಾದ ಮ|| ರಾ|| ಕೆ. ಸುಬ್ಬರಾಯರವರು ತಮ್ಮ ಸಹಾಯೋಪಾಧ್ಯಾಯರೊಂದಿಗೆ ತಾ|| 17-6-1929 ನೆಯ ಸೋಮವಾರದ ದಿವಸ ಗ್ರಾಮದ ಪಟೇಲರು ಮತ್ತು ಶಾನುಭೋಗರು ಚೇರ್ಮನ್ನರು ಮತ್ತು ಸ್ಕೂಲು ಬಾಲಕ ಬಾಲಕಿಯರ ಪೋಷಕರನ್ನು ಸ್ಕೂಲಿಗೆ ಬರಮಾಡಿಕೊಂಡು ಸದರಿ ಸ್ಕೂಲನ್ನು ತಳಿರುತೋರಣಗಳಿಂದ ಅಲಂಕರಿಸಿ ಮಹಾರಾಜರವರ ಯುವರಾಜರವರ ಮತ್ತು ಜಯಚಾಮರಾಜರವರ ಭಾವಚಿತ್ರಗಳನ್ನು ಹೂಮಾಲೆಗಳಿಂದಲೂ ಗಂಧಪುಷ್ಪಗಳಿಂದಲೂ ಅಲಂಕರಿಸಿ ಪೂಜೆಯನ್ನು ಮಾಡಿ, ವಾದ್ಯಗಳಿಂದಲೂ, ಸಂಗೀತದಿಂದಲೂ, ಪಂಚಾಚಾರ್ಯ ಭಜನಾಸಂಘದವರ ಭಜನೆಯಿಂದಲೂ, ಸಭಿಕರಿಂದೊಡಗೂಡಿ ಊರಲ್ಲೆಲ್ಲಾ ಮೆರವಣಿಗೆಯನ್ನು ಮಾಡಿಸಿ ದೇವಸ್ಥಾನಗಳಿಗೆ ಹೋಗಿ ಮಂಗಳಾರತಿಯನ್ನು ಮಾಡಿಸಿಕೊಂಡು ಪುನಃ ಸಭಿಕರಿಂದ ಮತ್ತು ವಾದ್ಯಗಳಿಂದೊಡಗೂಡಿ ಸ್ಕೂಲಿಗೆ ಬಂದು ಸಭಿಕರೆಲ್ಲರಿಗೂ ತಿಳಿಯುವಂತೆ ಸ್ಕೂಲ್ ಕಮಿಟಿ ರಿಪೋರ್ಟನ್ನು ಓದಿದುದಲ್ಲದೆ ಮಾಸ್ಟರುಗಳಿಗೆ ಇರುವ ವಾಸದಮನೆಯ ಅಭಾವವನ್ನೂ ಮತ್ತು ಮಿಡಲ್‌ಸ್ಕೂಲು ತರುವ ವಿಚಾರದಲ್ಲಿ ಜನಗಳು ಮಾಡತಕ್ಕ ಕಾರ್ಯಗಳನ್ನೂ ತಿಳಿಸಿದರು. ಅ|| ಮಾಸ್ಟರಾದ ಮ|| ರಾ|| ಎಸ್. ರಂಗಯ್ಯನವರು ರಾಜಭಕ್ತಿವಿಚಾರವಾಗಿಯೂ ಅ|| ಮಾ|| ಟಿ. ಸಣ್ಣಹನುಮಪ್ಪನವರು ಏಕಮತ್ಯ ವಿಷಯವಾಗಿಯೂ ಗರ್ಲ್ಸ್ ಸ್ಕೂಲ್ ಸಂಗೀತಮಾಸ್ಟರಾದ ಡಿ. ಎಮ್. ಮಲ್ಲಿಕಾರ್ಜುನಯ್ಯನವರು ಬಾಲಕಿಯರ ವಿದ್ಯಾಭ್ಯಾಸದ ವಿಷಯವಾಗಿಯೂ ಮತ್ತು ಧೂಳೆಹೊಳೆ ಸ್ಕೂಲು ಮಾಸ್ಟರಾದ ಹೆಚ್. ಜಿ. ಸಿದ್ದಪ್ಪನವರು ಮಕ್ಕಳ ಪೋಷಣೆ ವಿಷಯವಾಗಿಯೂ ಸ್ವಾರಸ್ಯವಾದ ಉಪನ್ಯಾಸಮಾಡಿದರು. ಮ|| ರಾ|| ರುದ್ರಪ್ಪಗೌಡರ ಸಂಗೀತವೂ ಮತ್ತು ಬಾಲಕರ ಆಟಪಾಟಗಳೂ ಸಭಿಕರನ್ನು ಆನಂದಗೊಳಿಸಿದವು. ಕೆ. ಎಲ್. ಎಸ್. ಪರೀಕ್ಷೆಯಲ್ಲಿ 8 ಜನ ವಿದ್ಯಾರ್ಥಿಗಳಲ್ಲಿ ಪಾಸಾದ ನಾಲ್ಕು ಹುಡುಗರ ಪೈಕಿ ಟಿ. ಭೀಮಪ್ಪನೆಂಬ ವಿದ್ಯಾರ್ಥಿಯು ಸದರಿ ಉತ್ಸವಕ್ಕೆ 5 ರೂ. ಗಳನ್ನು ಸಹಾಯಮಾಡಿದನು. ಅನಂತರ ಸಭಿಕರಿಗೆ ಹೂವಿನಮಾಲೆಗಳನ್ನು ಹಾಕಿ ಫಲಾಹಾರ ತಾಂಬೂಲಾದಿಗಳನ್ನು ಕೊಟ್ಟನಂತರ ಎಲ್ಲರೂ ನಮ್ಮನ್ನಾಳುವ ಶ್ರೀಮನ್‌ಮಹಾರಾಜರವರಿಗೂ ಮತ್ತು ರಾಜಮನೆತನದವರಿಗೂ ದೇವರು ಆಯುರಾರೋಗ್ಯೈಶ್ವರ್ಯಾದಿಗಳನ್ನುಂಟುಮಾಡಲೆಂದು ಪ್ರಾರ್ಥಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಮಠಾಧಿಕಾರಿ, ಶ್ರೀ ಮಹಾದೇವಪ್ಪಯ್ಯಶಾಸ್ತ್ರಿಗಳು,
ಧೂಳೆಹೊಳೆ.

ಕಟುಗರಲ್ಲಿ ಹೆಚ್ಚಿನ ಕಟುಗರಾರು ?

ತಮ್ಮ ಹೊಟ್ಟೆಯಲ್ಲಿ ಹುಟ್ಟಿ ತಮ್ಮಿಂದ ಸಂರಕ್ಷಣೆಯಾಗಿ ತಮ್ಮಿಂದ ಅಸ್ಥಿ ಮಾಂಸ ಚರ್ಮಗಳು ಬೆಳೆದು ತಾವೇ ಕರ್ತೃಗಳಾಗಿ ಬಾಲಕಿಯರು 12 ವರ್ಷದವರಾದ ಕೂಡಲೇ ಪೇಟೆಯಲ್ಲಿ ಹಣ್ಣುಹಂಪಲಗಳನ್ನು ವಿಕ್ರಯಿಸುವಂತೆ ತಮ್ಮ ಹೆಣ್ಣುಮಕ್ಕಳನ್ನು ಮಾರಿ ತಮ್ಮ ಒಡಲ ಪೋಷಣೆಯನ್ನು ಮಾಡಿಕೊಳ್ಳುವರು. ಇವರಲ್ಲವೇ ಹೆಚ್ಚಿನ ಕಟುಕರು ?

ಈ ವಿಧವಾದ ಶಾಸ್ತ್ರವಿರೋಧಕಾರ್ಯವೊಂದು ನಮ್ಮ ಹಾವೇರಿ ತಾಲೋಕಿನಲ್ಲಿ ಒಬ್ಬರಿಂದ ನಡೆಯಿಸಲ್ಪಟ್ಟಿತು. ಇವರೊಬ್ಬರನ್ನು ಆ ವರ್ಗದಲ್ಲಿ ಸೇರಿಸಬಹುದಲ್ಲವೇ ?

ವೀರಶೈವಮಹಾಭಿಮಾನಿಗಳೇ ? ಪ್ರಪಂಚದಲ್ಲಿ ಹೆಣ್ಣುಮಕ್ಕಳನ್ನು ಪಡೆಯುವದು ಕೇವಲ ತಂದೆತಾಯಿಗಳ ಸದ್ಗತಿಗಲ್ಲದೆ ಬೇರೆಯುಂಟೆ ? ಅದು ಹೇಗೆಂದರೆ, ಪೂರ್ವದಲ್ಲಿ ಮಹಾಮಹಾ ಯತಿಗಳೂ ಭೂಪಾಲರೂ ಘೋರವಾದ ತಪಸ್ಸನ್ನು ಮಾಡಿ ಹೆಣ್ಣುಮಕ್ಕಳನ್ನು ಪಡೆದು ಸ್ವರ್ಗಸ್ಥರಾಗಿರುವರು, ಮತ್ತು ಕೇವಲ ಸಾರ್ವಭೌಮನಾಗಿಯೂ ಸಂಪತ್ತಿನಲ್ಲಿ ದ್ವಿತೀಯ ಕುಬೇರನಾಗಿಯೂ ಶಾಂತಿಯಲ್ಲಿ ಪೃಥ್ವೀಸಮಾನನಾಗಿಯೂ ಮೆರೆಯುವ ಜನಕಮಹಾರಾಜನಿಗೆ ಅಧಿಕ ಸಂಪತ್ತಿದ್ದು ಮಕ್ಕಳಿಲ್ಲದ ವ್ಯಥೆಯಿಂದ ಸರ್ವಸುಖಸಾಮ್ರಾಜ್ಯವನ್ನೆಲ್ಲಾ ತೊರೆದು ದಂಪತಿಗಳಿಬ್ಬರೂ ಅನೇಕ ದೇಶ ಕೋಶ ಗಿರಿ ಕ್ಷೇತ್ರ ತೀರ್ಥಗಳನ್ನೆಲ್ಲ ಸಂಚಾರಮಾಡಿ ಮಕ್ಕಳ ಫಲವು ದೊರೆಯದೆ ಅಂತ್ಯದಲ್ಲಿ ಯಜ್ಞಮಾಡಬೇಕೆಂದು ಸಮುದ್ರತೀರದಲ್ಲಿ ಭೂಶೋಧನೆಯನ್ನು ಮಾಡುವ ಕಾಲದಲ್ಲಿ ಪರಮೇಶ್ವರನು ಆತನ ಭಕ್ತಿಗೆ ಮೆಚ್ಚಿ ಓರ್ವ ಹೆಣ್ಣುಶಿಶುವನ್ನು ಕೊಡಲು ಆ ಶಿಶುವನ್ನು ಕಂಡು ಆನಂದಭರಿತನಾಗಿ ಗೃಹಕ್ಕೆ ತೆಗೆದುಕೊಂಡು ಬಂದು ಅತ್ಯಾದರದಿಂದ ಪೋಷಿಸುತ್ತ ಆ ಶಿಶುವಿಗೆ ಜಾನಕಿ (ಜನಕನಂದಿನಿ) ಎಂಬ ಹೆಸರನ್ನಿಟ್ಟು ವಯಸ್ಸಿಗೆ ಬರುವತನಕ ಆ ಶಿಶುವಿಗೆ ಓದುಬರಹ ಕಲಾಕೌಶಲ ವಿದ್ಯೆಗಳನ್ನು ಓರ್ವ ಗುರುವಿನಿಂದ ಹೇಳಿಸಿ ಪಂಡಿತಳನ್ನಾಗಿ ಮಾಡಿ ದಶರಥಪುತ್ರನಾದ ರಾಮಚಂದ್ರನಿಗೆ ವಿವಾಹಮಾಡಿ ಕೊಟ್ಟದ್ದಲ್ಲದೆ ಅನೇಕ ಧನಕನಕ ವಜ್ರವೈಢೂರ್ಯರತ್ನಾಭರಣಗಳನ್ನು ಕೊಟ್ಟದ್ದರಿಂದಲ್ಲವೇ ಪರಮೇಶ್ವರನು ಮೆಚ್ಚಿ ಅವನಿಗೆ ಸದ್ಗತಿಯನ್ನು ಕೊಟ್ಟದ್ದು ? ಇದು ಅಲ್ಲದೆ ನಮ್ಮ ವೀರಶೈವ ಶಾಸ್ತ್ರಪುರಾಣಗಳು ಕೂಡಾ ಕನ್ಯಾದಾನಕ್ಕೆ ಮಿಗಿಲು ಇನ್ನು ದಾನಗಳಿಲ್ಲವೆಂದು ಘಂಟಾಘೋಷವಾಗಿ ಸಾರುವುದಿಲ್ಲವೇ ? ಹೀಗಿದ್ದು 400-800-1000 ರೂಪಾಯಿಗಳಿಗೆ ಹೆಣ್ಣನ್ನು ಮಾರಿಕೊಳ್ಳುವರಲ್ಲ ? ಮೇಲ್ಕಂಡ ದುಷ್ಟಾಚರಣೆಗೆ ಒಳಪಟ್ಟ ವೀರಶೈವರನ್ನು ಮಠಾಧಿಕಾರಿಗಳು ದಂಡಿಸದಿದ್ದರೆ ಇನ್ನು ಇಂತಹ ಅವಿವೇಕಗಳು ಸಮಾಜದಲ್ಲಿ ಹೆಚ್ಚಿ ಮಹಕ್ಕೆ ಕಳಂಕವುಂಟಾಗುತ್ತದೆ. ಇದನ್ನರಿತು ವೀರಶೈವಮಹಾಶಯರೇ ಜಾಗ್ರಂರಾಗಿ ಇಂಥ ಅನಾಚಾರಬೋಧೆಯನ್ನು ಮಾಡುವ ದುರುಪದೇಶಕರ ಮಾತಿಗೆ ಒಳಪಡದೆ ಸಾಂಪ್ರದಾಯಕರಾದ ಸದ್ಗುರುಗಳ ಉಪದೇಶದಂತೆ ಕನ್ಯಾವಿಕ್ರಯಕ್ಕೆ ಮನಗೊಡದೆ ಕನ್ಯಾದಾನದ ಫಲವನ್ನು ಹೊಂದುವಿರೆಂಗು ಕೋರುತ್ತೇನೆ.

ಓರ್ವ ವೀರಶೈವ, ಹಾವೇರಿ.

ಅಖಿಲಕರ್ನಾಟಕ

ತೃತೀಯ ಹಿಂದೀ-ಪ್ರಚಾರ ಸಮ್ಮೇಲನ ಮೈಸೂರು

ಕರಪತ್ರ ೧

ಹಿಂದೀ ಭಾಷೆಯನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಚಾರ ಮಾಡುವುದಕ್ಕೋಸ್ಕರ ಸನ್ 1918 ನೆಯ ವರ್ಷ ಮದ್ರಾಸಿನಲ್ಲಿ 'ದಕ್ಷಿಣಭಾರತ ಹಿಂದೀ ಪ್ರಚಾರಸಭಾ' ಎಂಬ ಸಂಸ್ಥೆಯು ಸ್ಥಾಪಿತವಾಗಿ ತದ್ದ್ವಾರಾ ತಮಿಳು, ತೆಲುಗು, ಕೇರಳ, ಕರ್ನಾಟಕ, ಪ್ರಾಂತ್ಯಗಳಲ್ಲಿ ಅವಿಚ್ಛಿನ್ನವಾದ ಕಾರ್ಯ ಸಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯವು. ಮೇಲ್ಕಂಡ ಸಭೆಯವರು ತಮ್ಮ ಅಧೀನದಲ್ಲಿ ತರಬೇತಾದ ಪ್ರಚಾರಕರನ್ನು ನಾಲ್ಕೂ ಪ್ರಾಂತ್ಯಗಳಿಗೆ ಕಳುಹಿಸಿ ಇಂದಿಗೂ ಸಹಸ್ರಾವಧಿ [illegible] ಪಾಯಿಗಳನ್ನು ವೆಚ್ಚಮಾಡುತ್ತಿರುವರು. ಇತ್ತೀಚೆಗೆ ಈ [illegible] ವಾದ ಪ್ರಚಾರಕಾರ್ಯದಲ್ಲಿ ಪ್ರಾದೇಶಿಕ ಪ್ರಗತಿಯನ್ನು ಗೋ[illegible] ಹಚ್ಚಿ ಹೊಸ ಏರ್ಪಾಡುಗಳನ್ನು ಮತ್ತು ಸ್ಥಳೀಯ ಅಭಿ[illegible] ಸ್ಥಿತಿಯನ್ನು ಸರಿಪಡಿಸುವುದಕ್ಕಾಗಿ ಪ್ರತಿಯೊಂದು ಪ್ರಾಂತ್ಯ[illegible]ಲ್ಲಿಯೂ ವಾರ್ಷಿಕಸಮ್ಮೇಳನವು ನೆರವೇರಿಸಲ್ಪಡುತ್ತಿದೆ. ಅ[illegible] ಕರ್ನಾಟಕಕ್ಕೂ ಅನ್ವಯಿಸತಕ್ಕ ಅಂತಹ ಸಮ್ಮೇಳನದ ಪ್ರಥಮಾಧಿವೇಶನವು ಬೆಂಗಳೂರಲ್ಲಿ 1928 ನೆಯ ವರ್ಷ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜರಗಿತು. ದ್ವಿತೀಯಾಧಿವೇಶನವು ಮರುವರ್ಷ ಧಾರವಾಡದಲ್ಲಿ ಪಂಡಿತ ತಾರಾನಾಥಜಿಯವರ ಸಮಕ್ಷಮ ಸಾಂಗಗೊಂಡಿತು. ತೃತೀಯಾಧಿವೇಶನವು ಈ ವರ್ಷ ಬರುವ ಆಗಸ್ಟು ತಿಂಗಳ ಅಂತ್ಯದೊಳಗೆ ರಾಜಧಾನಿಯಲ್ಲಿ [illegible] ಬೇಕೆಂಬುದಾಗಿ ನಿಶ್ಚಯವಾಗಿದೆ.

ಸ್ವಾಗತ ಸಮಿತಿಯು ಆಗಲೇ ಸ್ಥಾಪಿತವಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಎ. ಆರ್. ವಾಡಿಯಾ ಎಂ. ಎ. ಬಾರ್-ಅಟ್-ಲಾ ರವರು ಪ್ರಧಾನರಾಗಿಯೂ, ಧರ್ಮಪ್ರಕಾಶ [illegible] ಬಸಮಯ್ಯನವರು ಖಜಾನ್ಚಿಗಳಾಗಿಯೂ ಚುನಾಯಿಸಲ್ಪಟ್ಟಿ[illegible]ದ್ದಾರೆ. ಸಮ್ಮೇಳನದ ಅಧ್ಯಕ್ಷಪದವಿಗೆ ದೇ|| ಭ|| ಪಂಡಿತ ಮೋತೀಲಾಲ್‌ನೆಹರು, ಮಾಲವೀಯಾಜಿ, ಅಸೆಂಬ್ಲಿ ಪ್ರೆಸಿಡೆಂಟ್ [illegible]ಲರು, ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಸರ್. ತೇಜ್ ಬಹದ್ದೂರ್ ಸಪ್ರೂ ಮೊದಲಾದ ಮಹನೀಯರಲ್ಲಿ ಒಬ್ಬರನ್ನು ಪ್ರಾರ್ಥಿಸಿಕೊಳ್ಳಲಾಗುವುದು. ಕನ್ನಡಿಗರು ಈ ಸಮ್ಮೇಳನದ ಭಾಗಿಗಳಾಗಿ ರಾಷ್ಟ್ರೀಯ ಕಾರ್ಯದ ಪ್ರಧಾನ ಅಂಗವೆನಿಸಿದ ರಾಷ್ಟ್ರಭಾಷಾಪ್ರಚಾರದಲ್ಲಿ, ತಾವು ಅನ್ಯಪ್ರಾಂತ್ಯದವರಿಗೆ ಹಿಂದುಳಿದಿಲ್ಲವೆಂದು ತೋರಿಸಬೇಕಾಗಿದೆ. ಆದುದರಿಂದ ರಾಷ್ಟ್ರಾಭಿಮಾನಿಗಳಾದ ಯಾವತ್ತೂ ಜನರು ಉದಾರಮನಸ್ಸಿನಿಂದ ದ್ರವ್ಯಸಹಾಯವನ್ನಿತ್ತು ಸ್ವಾಗತ ಸದಸ್ಯರಾಗಿಯಾಗಲಿ ಪ್ರತಿನಿಧಿಗಳಾಗಿಯಾಗಲಿ ಸಹಕರಿಸಬೇಕೆಂದು ವಿನಂತಿ.

1929ನೇ ಜೂನ್ ಎಂ. ವಿ. ಜಂಬುನಾಥನ್, M.A.B.Sc.
ಸ್ವಾ. ಸ. ಕ. ಜಮುನಾಪ್ರಸಾದ ಶ್ರೀವಾಸ್ತವ, (ಮಂತ್ರಿಗಳು)
ಮೈಸೂರು. ಪಂಡಿತ ಸಿದ್ಧನಾಥಪಂತ, (ಸ್ಥಾಯಿಸಮಿತಿ)

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ
ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು
ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.
ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [14]
ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಅಣ್ಣಗಳಿರಾ! ಅಕ್ಕಗಳಿರಾ!
ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,
ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"— ಎಂಬುದನ್ನು ನೆನಪಿನಲ್ಲಿಡಿರಿ.
ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದಂಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**
ಮಲೇರಿಯಾನ ಸರ್ವಜ್ವರಸಂಹಾರಿಣಿ
ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು
ಇಂದೇ ದೃಢನಂಬುಗೆಯಿಂದ
ಮಲೇರಿಯಾನ ಕಂಪನಿಯವರ ಮಲೇರಿಯಾನ
ತರಿಸಿಕೊಂಡು ಕುಡಿಯಿರಿ. [49]
ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗ್) ಕ್ರಯದ ಪಟ್ಟಿಗೆ ಬರೆಯಿರಿ.
ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. [illegible]

ಔಷಧಸೇವನೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ **"ಆರೋಗ್ಯಚಂದ್ರಿಕೆ"** ಯೆಂಬ ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಅರೋಗದೃಢಕಾಯರಾಗಿ ಜೀವಿಸುವ ಮಾರ್ಗವನ್ನು, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ **ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಪೇಟ್ರಿಯಟ್"** ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"ಆನರಬಲ್ **ಡಾಕ್ಟರ್ ಯು. ರಾಮರಾವ್** ಮತ್ತು ಅವರ ಮಕ್ಕಳು **ಡಾಕ್ಟರ್ ಯು. ಕೃಷ್ಣರಾವ್** ಎಂ. ಬಿ. ಬಿ. ಎಸ್. ಇವರಿಬ್ಬರೂ ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾಯಿಗಳಿಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಚುರವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ರೈಲುಸ್ಟೇಷನುಗಳಲ್ಲಿರುವ ಮೆಸರ್ಸ್ **ಹಿಗ್ಗಿನ್ ಬಾಥಮ್ಸ್** ಕಂಪೆನಿಯವರ ಬುಕ್‌ಸ್ಟಾಲ್‌ಗಳಲ್ಲೆಲ್ಲಾ ನಮ್ಮ ಸಂಚಿಕೆಗಳು ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[2] **ಮ್ಯಾನೇಜರ್, ಆರೋಗ್ಯಚಂದ್ರಿಕೆ,** 323, ತಂಬುಶೆಟ್ಟಿ ಬೀದಿ, **ಮದರಾಸು.**

ವೈದ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!
ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.
ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜೆ] ವಜ್ರಾಂಗ ಸುಂದರಪಾಕ. [ಸ್ಪರ್ಧೆ
ಧಿಕ್ಕರಿಸದೆ, ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಬೀಳೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಚಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಪುಷ್ಟವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ ಮಧುಕಂದ, ಜಪಾಕಂಥ, ಕಾಲೀಮಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀ ಬೀಜ, ನವೇಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಶಮಿಪತ್ರಿ, ವಿಶಾಪತ್ರಿ, ಮದನಮಸ್ತ, ರಕತಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಸರಪಪೋರಿ, ಮುಂಗಲೇ ಜೀರಾಗೆ, ಮರ್ದನೀಕಟ್ಟಿಗೆ, ಶತಾವರಿ, ಸಕೇರಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅದವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ಗುಳಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ತ್ಯ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಕಬಾರದಿರೋಣ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 8 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [52]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಷ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಜಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯಾ ಅಷ್ಟವರ್ಗ ಔಷಧಾಲಯ
[14] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೫ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹು

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತಂಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತಂಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸು ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆ... ನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂ... ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾ... ಆದ ವೇ|| ಶಂ|| ಧರ್ಮರತ್ನ ಉಮಚಿಗಿ ಶಂಕರಶಾಸ್ತ್ರಿಗಳ... ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕ... ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರ... ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರ... ವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ... ಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ... ಗ್ರಂಥಗಳನ್ನು ಅವಶ್ಯವಾಗಿ ತಂಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-...
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-...
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-...

ವಿಳಾಸ:— ವೇ|| ಚನ್ನಯ್ಯ ಹೊಸಮಠ, ಪೋಸ್ಟು ಹಂತರ, ಡಿ|| ಚಿತ್ರದುರ್ಗ

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು... ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗ... ಇದನ್ನು ಉಪಯೋಗಿಸಿ. ಸಾವಿರಾರುಗಳ...

(Registered Trade Mark)

ಯೋಗ್ಯತಾಪತ್ರ... ಳನ್ನು ಕೊಟ್ಟಿರು... ರು. ಪ್ರಸಿದ್ಧವಾ... ಈ ನಶ್ಯದ ಉ... ಯಿಂದ ಸ್ವಸ್ಥವಾ... ವ ವ್ಯಾಧಿಗಳು ಯ... ವವೆಂದರೆ:—ಪಿ... ಒಂಟಿ ತಲೆನೋ... ತಲೆಯಲ್ಲಿನ ದೋ... ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗ... ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾ... ವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳ... ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು... ಡುತ್ತಹೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗ... ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ... ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ... ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂ... ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ... ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-...

ತಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ... ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆ...

[2] ಪೋ. ಬಾ. ೫೧೦, ಮದರಾ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ ನೇ ಜುಲೈ ೧೯೩೫ [ಸಂಚಿಕೆ ೧೦.

ದಾವಣಗೆರೆ ಮೊಹರಂ ಗಲಭೆ

ವಿಚಾರಣಾ ಕಮಿಟಿಯ ಅವಶ್ಯಕತೆ.

ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ.,ಸಿ.ಐ.ಇ. ಯವರ ಆಶಯ.

ದಾವಣಗೆರೆಯ ಗಲಭೆಯ ಸಂಬಂಧವಾಗಿ ಒಂದು ಸ್ವತಂತ್ರ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಕಳೆದ ಶನಿವಾರ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ ನಡೆದಾಗ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಈ ರೀತಿ ಅಭಿಪ್ರಾಯಪಟ್ಟರು.

ಕಳೆದ ವರ್ಷ ದಾವಣಗೆರೆಯಲ್ಲಿ ಒಂದು ಗಲಭೆ ನಡೆಯಿತು. ನಂತರ ಉಭಯಮತಸ್ಥರೂ ಕಲೆತು ಶಾಂತಿಸ್ಥಾಪನೆ ಮಾಡಿದರು. ಆ ಶಾಂತಿಸ್ಥಾಪನೆಯು ಶಾಶ್ವತವಾಗಿ ನೆಲಗೊಳ್ಳುತ್ತದೆಂತಲೂ ಮತ್ತು ಅಂದಿನಿಂದ ಉಭಯಪಂಗಡಗಳವರೂ ಪರಸ್ಪರ ಮೈತ್ರಿಭಾವದಿಂದ ವರ್ತಿಸುವರೆಂದೂ ಹಾರೈಸಿತ್ತು. ಈಗ ಪುನಃ ಕಲಹವುಂಟಾಗಿರುತ್ತದೆಂದು ಕೇಳಿ ಬಹಳ ನಿರಾಶೆಯಾಯಿತು. ಪತ್ರಿಕೆಗಳಿಂದಲೂ ಮತ್ತು ಎರಡನೇ ಕೌನ್ಸಿಲರವರ ಹೇಳಿಕೆಯಿಂದಲೂ ಅಶಾಂತಿ ಸ್ಥಿತಿಯಲ್ಲಿ ಏನೋ ಒಂದು ಕುಂಮುಂಟಾಗಿರುತ್ತದೆಂದು ತಿಳಿದು ಬಂದಿತು. ಈ ಕಲಹವು ಆಕಸ್ಮಾತ್ತಾಗಿ ಉಂಟಾದುದೆಂದಾಗಲಿ, ಅಥವ ಸರ್ಕಾರಿ ಆಡಳಿತಗಾರರು ಇದನ್ನು ತಿಳಿದಿರಲಿಲ್ಲವೆಂದಾಗಲಿ ಹೇಳಲಾಗುವುದಿಲ್ಲ. ಎರಡನೆಯ ಕೌನ್ಸಿಲ್ಲರವರು ಆ ಸ್ಥಳಕ್ಕೆ ಹೋಗಿಬಂದುದು ಬಹಳ ತೃಪ್ತಿಕರವಾದ ವಿಷಯ. ಈ ವಿಚಾರದಲ್ಲಿ ತಕ್ಕ ವಿಚಾರಣೆ ಮಾಡಲಾಗುವುದೆಂದೂ, ತಪ್ಪಿತಸ್ಥರನ್ನು ಶಿಕ್ಷಿಸಲು ತಕ್ಕ ಪ್ರಯತ್ನಗಳನ್ನು ಸಹ ಮಾಡಲಾಗುತ್ತದೆಂದೂ ಎರಡನೆಯ ಕೌನ್ಸಿಲ್ಲರವರು ಅಭಯ ಕೊಡಿಸಿರುತ್ತಾರೆ. ಯಾರು ತಮ್ಮ ನಡತೆಯನ್ನು ವಿಚಾರಣೆಗೆ ಗುರಿಮಾಡಬೇಕಾಗಿರುವುದೊ ಅವರಿಗೇನೆ ಈ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಮಾಡುವ ಕರ್ತವ್ಯವನ್ನು ವಹಿಸಕೂಡದೆಂದು ಹೇಳುತ್ತೇನೆ. ಗುಂಡು ಹಾರಿಸಿದ್ದರಿಂದ ನಿರಪರಾಧಿಗಳು ಪ್ರಾಣವನ್ನು ಕೊಟ್ಟು ಬಿಟ್ಟಿರುವರು. 10-20 ವರುಷ ವಯಸ್ಸುಳ್ಳ 10-20 ಬಾಲಕರು ಘಾಯಪಟ್ಟಿರುವರಲ್ಲದೆ ಬಹಳ ಸ್ವತ್ತು ನಷ್ಟವಾಗಿರುತ್ತೆ. ಮಸೀದಿಗಳು ಅಶುದ್ಧಿ ಹೊಂದಿರುತ್ತವೆ. ಅಕೃತ್ಯಗಳು ಮತ್ತು ಅತ್ಯಾಚಾರಗಳು ನಡೆದಿರುತ್ತವೆ. ಸರ್ಕಾರೀ ಅಧಿಕಾರಿಗಳ ದರ್ಜೆಕ್ಕೆ ಗೌರವ ಕೊಡಬೇಕೆಂದು ನಾನು ಯಾವಾಗಲೂ ಅಭಿಪ್ರಾಯಪಡುತ್ತೇನೆ. ಆದರೆ ಸಂಸ್ಥಾನದ ಗೌರವವು ಅಧಿಕಾರಿಗಳ ಗೌರವಕ್ಕಿಂತಲೂ ಹೆಚ್ಚು. ಈ ಅಧಿಕಾರಿಗಳ ದೃಷ್ಟಿಯಿಂದ ಈ ಪ್ರಶ್ನೆಯನ್ನು ನೋಡುವುದಾದರೆ ವಿಚಾರಣೆ ನಡಿಸುವುದರಿಂದ ನಿಜಾಂಶವು ಹೊರಪಟ್ಟು ಆ ಮೂಲಕ ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಹಿತಯಾಗುವುದು. ವಿಚಾರಣೆಯು ಮಾತ್ರ ಅಲ್ಲಿನ ಅಧಿಕಾರಿಗಳಿಂದ ನಡೆಸುವುದು ಯೋಕ್ತವಲ್ಲ. ಈ ...ದವಲ್ಲಿ ಅವರೂ ಸಹ ಭಾಗಿಗಳಾಗಿರಬಹುದು. ಆದುದರಿಂದ ನಿಷ್ಪಕ್ಷಪಾತ ಮತ್ತು ದೇಶಹಿತದೃಷ್ಟಿಭಾವನೆಯಿಂದ ಪರಿಶೀಲಿಸುವ ಬೇರೆ ಹುದ್ದೆದಾರರಿಂದ ಈ ವಿಚಾರಣೆಯನ್ನು ನಡಿಸಬೇಕು.

ಸ್ವೀಕಾರ.

ಕರ್ನೂಲ್ ಜಿಲ್ಲಾ ನಂದಿಕೋಟಕೂರು ತಾಲೂಕಿಗೆ ಸೇರಿದ ಸಪ್ತನದೀ ಸಂಗಮದ ಪುಣ್ಯಕ್ಷೇತ್ರದಲ್ಲಿರುವ ಕಪಿಲೇಶ್ವರ, ಸಂಗಮೇಶ್ವರ, ಮಲ್ಲೇಶ್ವರ, ಸೋಮೇಶ್ವರ, ಸಿದ್ಧೇಶ್ವರ ಈ ಪಂಚಲಿಂಗಗಳ ಮಧ್ಯದಲ್ಲಿ ಶ್ರೀಕೃಷ್ಣಾನದಿಯ ಉತ್ತರವಾಹಿನೀತೀರದಲ್ಲಿರುವ ಮಹಿಷಾಸುರಮರ್ದಿನೀ ಗುಹೆಯ ಹತ್ತಿರ ಜ್ಯೇಷ್ಠ ಶುದ್ಧ ೧೫ರಲ್ಲಿ ನೆರವೇರಿದ ನಾಗಿರೆಡ್ಡಿಸ್ವಾಮಿಗಳೆಂಬ ಯೋಗೀಶ್ವರರ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಕರ್ನೂಲ್ ಜಿಲ್ಲಾ ನಂದಿಕೋಟುಕೂರು ತಾ|| ಸಿದ್ಧೇಶ್ವರದ ಮ|| ರಾ|| ಸಂ|| ಲಕ್ಷ್ಮಾಕುಲರಾಮಪ್ಪನವರು ಸಮರ್ಪಿಸಿದ 5 ರೂ. ವೇ|| ತೆಲುಗ ಕೋಟೆಕೊಂಡಸ್ವಾಮಿಗಳು ಸಮರ್ಪಿಸಿದ 5 ರೂ. ಮ|| ರಾ|| ಸಂ|| ಕಾಲೂರಿ ನೆದ್ದಸಂಗಪ್ಪ ಕೂ|| ಸ್ವಾಮಿಗಳು ತಮ್ಮ ಪುತ್ರ ಚಿ|| ಬಸಪ್ಪನಿಗೆ ದೀಕ್ಷೆ ಮತ್ತು ಲಿಂಗಧಾರಣೆಯನ್ನು ನೆರವೇರಿಸಿ ಗಣಾರಾಧನೆಯನ್ನು ಮಾಡಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಹಾಗೂ ಮ|| ರಾ|| ಸಂ|| ಜಾನಕಿ ಮಲ್ಲಪ್ಪನವರ ಮಕ್ಕಳು ಬಸಪ್ಪನವರು ತಮ್ಮ ಪತ್ನಿ ತೀಗಮ್ಮನು ಶಿವಲೋಕಸಾಯುಜ್ಯವನ್ನು ಹೊಂದಿದ ಸಮಯದಲ್ಲಿ ಸಮರ್ಪಿಸಿದ 5 ರೂ. ಒಟ್ಟು 17 ರೂಪಾಯಿಗಳು ವೇ|| ವೀರಾಪುರಂ ಮಠಂ ರಾಮಲಿಂಗಯ್ಯನವರ ದ್ವಾರಾ ತಲ್ಪಿರುತ್ತವೆ.

ಚಿತ್ರದುರ್ಗ ತಾ|| ಕ್ಯಾದಿಗ್ಗೆರೆ ಮಠದ ಅಯ್ಯಪ್ಪಯ್ಯನವರು ತಮ್ಮ ಜ್ಯೇಷ್ಠ ಪುತ್ರಿ ಚಿ|| ಸೌ|| ನೀಲಮ್ಮನನ್ನು ಹಿರಿಯೂರು ತಾ|| ಜಡೆಗೊಂಡನಹಳ್ಳಿ ಜೆಮದಾಳುಮಠದ ಬಸಪ್ಪನವರ ಪುತ್ರ ಚಿ|| ಈಶ್ವರಯ್ಯನಿಗೆ ಕೊಟ್ಟು ವಿವಾಹವನ್ನೂ ಶ್ರೀ ವೀರಮಾಹೇಶ್ವರ ವಟುಗಳಿಗೆ ದೀಕ್ಷಾಕಾರ್ಯವನ್ನೂ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಚಿತ್ರದುರ್ಗ ತಾ|| ಕ್ಯಾದಿಗ್ಗೆರೆ ಮ|| ರಾ|| ಬನಜ್ಜಿ ಬಸಪ್ಪನವರ ಪುತ್ರಿ ಚಿ|| ಸೌ|| ಬಸಮ್ಮನನ್ನು ಹಿರಿಯೂರು ತಾ|| ಚಿಕ್ಕಸಿದ್ಧಪ್ಪನಹಳ್ಳಿ ಮ|| ರಾ|| ಪುಟ್ಟಣ್ಣನವರ ಮಲ್ಲಪ್ಪನ ಪುತ್ರ ಚಿ|| ಪ್ರಭಣ್ಣನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಲ್ಪಟ್ಟ 2 ರೂ. ಕ್ಯಾದಿಗ್ಗೆರೆ ಪುಟ್ಟಮ್ಮನವರ ಸಂಕಪ್ಪನ ಪುತ್ರಿ, ಚಿ|| ಸೌ|| ನೀಲಮ್ಮನನ್ನು ಮ|| ರಾ|| ಬನಜ್ಜಿ ಬಸಪ್ಪನವರ ಪುತ್ರ, ಚಿ|| ಕರಿಯಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಲ್ಪಟ್ಟ 2 ರೂ. ಕ್ಯಾದಿಗ್ಗೆರೆ ಮ|| ರಾ|| ಅಜ್ಜಪ್ಪನವರ ಪುತ್ರಿ, ಚಿ|| ಸೌ|| ಶಾಂತಮ್ಮನನ್ನು ಕ್ಯಾದಿಗ್ಗೆರೆ ಮ|| ರಾ|| ಅಸರಣ್ಣನವರ ಬಸಪ್ಪನ ಪುತ್ರ ಚಿ|| ತಿಪ್ಪಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಲ್ಪಟ್ಟ 2 ರೂ. ಹಾಗೂ ಕೆಂಚವೀರನಹಳ್ಳಿ ಮ|| ರಾ|| ತಿಪ್ಪಯ್ಯನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ಮ|| ರಾ|| ಬಾ|| ಮೂ|| ಗಿರಿಯಪ್ಪನವರ ಪುತ್ರ ಚಿ|| ತಿಮ್ಮಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಲ್ಪಟ್ಟ 1 ರೂ. ಒಟ್ಟು 9 ರೂಪಾಯಿಗಳು, ವೇ|| ಮಠದ ಅಯ್ಯಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಹಾವೇರಿ ಯರೇಶೀಮಿ ಮ|| ರಾ|| ಗುರುಶಾಂತಪ್ಪನವರ ಪುತ್ರ ಮ|| ರಾ|| ಸಿದ್ಧರಾಮಪ್ಪನವರಿಗೆ ರಾಣೇಬೆನ್ನೂರು ತಾ|| ಯತ್ತಿನಹಳ್ಳಿಗ್ರಾಮದ ಮ|| ರಾ|| ಕಡಗಣ್ಣನವರ ವಿರೂಪಾಕ್ಷಪ್ಪನವರ ಪುತ್ರಿ ಸೌ|| ಮಲಕವ್ವನನ್ನು ನಿಶ್ಚಯಿಸಿ ಜ್ಯೇಷ್ಠ ಶು|| ೧೨ ರಲ್ಲಿ ನಡೆದ ವಿವಾಹಸಮಯದಲ್ಲಿ ವರನಕಡೆಯಿಂದ ಸಮರ್ಪಿಸಲ್ಪಟ್ಟ 4 ರೂ. ವಧುವಿನಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ. ಒಟ್ಟು 5 ರೂಪಾಯಿಗಳು ಸದರಿಯವರ ಮನೆ ಗುರುಗಳಾದ ಕೇರಣಗಿ ಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಚನ್ನಪಟ್ಟಣದ ತಾ|| ಹೊಟ್ಟೆಗನ ಹೊಸಹಳ್ಳಿ ಗ್ರಾಮದ ಮ|| ರಾ|| ಶಾಂತಬಸವಣ್ಣನವರ ಪುತ್ರ ಚಿ|| ಶಿವಪ್ಪನಿಗೆ ಮಂಡ್ಯದ ತಾ|| ಕೊತ್ತತ್ತಿಗ್ರಾಮದ ಮ|| ರಾ|| ಮರಿಬಸಪ್ಪನವರ ಪುತ್ರಿ ಚಿ|| ಸೌ|| ಬಸಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವಧೂವರರು ಸಮರ್ಪಿಸಿದ 2 ರೂಪಾಯಿ, ಹಾಗೂ ಮಂಡ್ಯ ತಾ|| ಆಕತೂರು ಮ|| ರಾ|| ಹೊನ್ನಪ್ಪನವರ ಪುತ್ರ ಚಿ|| ಮಹದೇವಪ್ಪನಿಗೆ ಚನ್ನಪಟ್ಟಣ ತಾ|| ಸಂಕಲಗೆರೆ ಮ|| ರಾ|| ಮಾದಪ್ಪನವರ ಪುತ್ರಿ ಚಿ|| ಸೌ|| ಪುಟ್ಟವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವಧೂವರರು ಸಮರ್ಪಿಸಿದ 2 ರೂಪಾಯಿಗಳು ಒಟ್ಟು 4 ರೂಪಾಯಿಗಳು ಚನ್ನಪಟ್ಟಣದ ಸಿಂಗರುಕಂಪನಿಯ ಏಜಂಟ್ ಮ|| ರಾ|| ಮಲ್ಲಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕಂಪ್ಲಿ ತಾ|| ತರ್ಹಾಳು ಬೃಹನ್ಮಠದಲ್ಲಿ 3 ವಟುಗಳಿಗೆ ವೀರಮಾಹೇಶ್ವರ ದೀಕ್ಷೋಪನಯನವನ್ನೂ, ವೇ|| ಸಿದ್ಧಲಿಂಗಯ್ಯನವರ ಪುತ್ರಿ ಸೌ|| ಗಂಗಮ್ಮನನ್ನು ನಗರಿದಿನ್ನಿ ಬೃಹನ್ಮಠದ ವೇ|| ರುದ್ರಮುನಿಶಾಸ್ತ್ರಿಗಳ ಪುತ್ರ ಚಿ|| ರಾ|| ಕನ್ನರೇಶ್ವರಯ್ಯನಿಗೆ ಕೊಟ್ಟು ಹಾಗೂ ವೇ|| ಸಂಗಯ್ಯನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ಚಿ|| ಕೊಟ್ರಯ್ಯನಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆದಿಸಿದ 2 ರೂ. ಬೂದುಗುಪ್ಪಿ ಚರಪಟ್ಟಾಧ್ಯಕ್ಷ ವೇ|| ರುದ್ರಮುನಿಶಿವಾಚಾರ್ಯ ಮಹಾಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—

ಪತ್ರವ್ಯವಹಾರ,

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶಿವಪೂಜಾಪ್ರಭಾವವೂ ಅದರ ಅವಶ್ಯಕತೆಯೂ.

(ಲೇಖಕ—ವಿರೂಪಾಕ್ಷಶಾಸ್ತ್ರಿ, ಪುರಾಣೀಕಮಠ, ಹಿರೇಹಡಗಲಿ.)

ಶ್ರೀ ಪರಮಾತ್ಮನ ಪಂಚಾಸನೋದ್ಭವರಾದ ಜಗದಾಚಾರ್ಯರಿಂದ ಸ್ಥಾಪಿತವಾದ ಪರಮಪವಿತ್ರ ವೀರಶೈವಮತೋತ್ಪನ್ನರಾದ ಪ್ರತಿಯೊಬ್ಬರಿಗೂ ಶಿವ (ಲಿಂಗ) ಪೂಜೆಯೇ ಭೋಗಮೋಕ್ಷಗಳೆಂಬ ಸತ್ಫಲಗಳನ್ನು ಕೊಡತಕ್ಕದ್ದಾಗಿದೆ. ವೇದೋಕ್ತಗಳಾದ ಸಕಲ ಕರ್ಮಗಳಲ್ಲಿಯೂ ಶಿವಪೂಜೆಯೇ ಉತ್ತಮವಾದ ಕರ್ಮವೆಂದು ಹೇಳಿಸಿಕೊಳ್ಳಲ್ಪಡುವದು. ಯಜ್ಞಯಾಗಾದಿಗಳನ್ನು ಮಾಡುವದರಿಂದ ಸ್ವರ್ಗಾದಿಭೋಗಗಳುಂಟಾಗಿ ಅವನ್ನು ಅನುಭವಿಸಿದ ಬಳಿಕ ಪುನಃ ಭವಬಂಧನಕ್ಕೆ ಬರಬೇಕಾಗುವದು. ಶಿವಪೂಜಾರೂಪವಾದ ಕರ್ಮವು ಸೌಖ್ಯಾದಿಗಳನ್ನಿತ್ತು ಅಂತ್ಯದಲ್ಲಿ ಪುನರ್ಜನ್ಮರಹಿತವಾದ ನಿತ್ಯಮುಕ್ತಿಯನ್ನು ಕೊಡುವದು. ಇದರಿಂದ ಶಿವಪೂಜಾತತ್ಪರನಿಗೆ ಭೋಗಮೋಕ್ಷಗಳೆರಡೂ ಲಭಿಸುತ್ತವೆ. ಪೂರ್ವದಲ್ಲಿ ವಿಷ್ಣು, ಬ್ರಹ್ಮ, ಇಂದ್ರ, ಕುಬೇರ ಮೊದಲಾದ ದೇವತೆಗಳೂ, ರಾವಣ, ಬಾಣಾಸುರ, ವಿಭೀಷಣ ಮುಂತಾದ ದನುಜರೂ ಶಾರದಾ, ಲಕ್ಷ್ಮೀ, ಶಚೀ ಮೊದಲಾದ ದೇವಿಯರೂ ಮನುಮುನಿಗಳೂ ಗಂಧರ್ವ, ವಿದ್ಯಾಧರರೇ ಮೊದಲಾದವರೂ ಭಕ್ತಿಯಿಂದ ಶಿವಪೂಜೆಯನ್ನು ಮಾಡಿ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದು ಧನ್ಯರಾದರು.

ಆದುದರಿಂದ ಪ್ರತಿಯೊಬ್ಬ ವೀರಶೈವನು ಶಿವದೀಕ್ಷಾಸಂಪನ್ನನಾಗಿ ಶ್ರೀ ಗುರುವಿನಿಂದ ಅನುಗ್ರಹಿಸಲ್ಪಟ್ಟ "ಇಷ್ಟಲಿಂಗ"ವನ್ನು ಧರಿಸಿದ ಮೊದಲು "ಭಕ್ತ್ಯೈಕಮನಾಭೂತ್ವಾ ಯಾವಜ್ಜೀವಂ ಪ್ರತಿಜ್ಞಯಾ | ಅರ್ಚಯೇತ್ತಂ ಮಹಾದೇವ ಮಾಪನ್ನೋಪಿ ಸದಾಬುಧಃ ||" ಎಂಬುಕ್ತಿಯಂತೆ ತನ್ನ ಜೀವಿತಾವಧಿಪರ್ಯಂತವೂ ತಪ್ಪದೆ ಶಿವಪೂಜೆಯನ್ನು ಮಾಡಬೇಕು. ಆದರೆ "ಶ್ರೇಯಾಂಸಿಬಹುವಿಘ್ನಾನಿ" ಈ ಕಾಲದಲ್ಲಿ ಸತ್ಕಾರ್ಯ, ಸದ್ವ್ರತಗಳಿಗೆ ಅನೇಕ ಕಷ್ಟಪರಂಪರೆಗಳು ಒದಗುತ್ತಿರುವವು. ಆದರೂ ಆ ಶಿವಪೂಜಾಮಹಾವ್ರತವಂ ಬಿಡಲಾಗದು. ಆದರೆ ಕೆಲ ಜನ ಮಂದಮತಿಗಳು ದೃಢವಾದ ಮನಸ್ಸಿಲ್ಲದೆ ಕಾಲಾನುಗುಣವಾಗಿ ಯೇನಾದರೊಂದು ಸಂಕಟಪ್ರಾಪ್ತಿಯಾದ ಕೂಡಲೆ ವ್ರತಭ್ರಷ್ಟರಾಗುವದಲ್ಲದೆ ಸತ್ಕಾರ್ಯ ಶಿವಪೂಜಾದಿವ್ರತಗಳನ್ನು ಮಾಡಬೇಡಿರೆಂದೂ ಅದರಿಂದ ಏನೂ ಫಲವಿಲ್ಲೆಂದೂ ದುರ್ಬೋಧ ಮಾಡುತ್ತಿರುವರು. ನೋಡಿದಿರಾ ಇವರ ದುರ್ಮನಸ್ಸನ್ನು? ಇವರಿಗೆ ಶಿವಪೂಜಾದಿ ವ್ರತಗಳನ್ನು ಮಾಡಿದಕ್ಷಣವೇ ಫಲಪ್ರಾಪ್ತಿಯಾಗಬೇಕಂತೆ! ಇದು ಕೇವಲ ಶುದ್ಧ ತಪ್ಪು ತಿಳವಳಿಕೆಯಾಗಿದೆ. ಯಾಕೆಂದರೆ: ಭೂಮಿಯಲ್ಲಿ ಬೀಜಾರೋಪಣಮಾಡಿದಕೂಡಲೆ ಫಲಗಳು ಬರುವವೇ? ಹಾಲುಹಿಂಗಿದಕೂಡಲೇ ತುಪ್ಪವು ದೊರೆಯುವದೇ? ಹೇಗೆ ಇವುಗಳಿಗೆ ಕಾಲಾವಧಿಯು ಬೇಕಾಗುವದೋ ತದ್ವತ್ ಅನಂತಕಾಲಪರ್ಯಂತ ತ್ರಿಕರಣಶುದ್ಧವಾದ ಭಕ್ತಿಯಿಂದಲೂ ದೃಢಮನದಿಂದಲೂ ಶಿವಪೂಜಾವ್ರತವನ್ನು ನಡೆಯಿಸಿದ್ದಾದರೆ ಪರಮಾತ್ಮನು ತೃಪ್ತನಾಗುವನು. ಆದಕಾರಣ ಶಿವಾಚಾರಸಂಪನ್ನನು "ಸ್ನಾತ್ವಾದ್ವಿವಾರಂ ಶಿವಮರ್ಚಯುಷ್ಯನ್ | ...

[illegible]

ಕೊಡಗು ಕೊಡ್ಲಿಪೇಟೆ ವೃತ್ತಾಂತ.

[illegible]

... ಮಂದಿರಸ್ಥಾಪಿಸಬೇಕಾಗಿ ವಿನಂತಿ ಇದೆ. ಮುನಿಸಿಪಾಲಿಟಿ ಮೆಂಬರುಗಳಿಗೂ ಪ್ರೆಸಿಡೆಂಟರಿಗೂ ಭಗವಂತನು ಶ್ರೇಯಸ್ಸನ್ನುಂಟುಮಾಡಲೆಂದು ಹಾರೈಸುತ್ತೇನೆ.

ಓರ್ವ ಕೊಡ್ಲಿಪೇಟೆಯ ನಿವಾಸಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವಿವಾಹಮಹೋತ್ಸವ.

ಹಾವೇರಿ.

ಧಾರವಾಡ ಡಿ|| ಹಾವೇರಿ ತಾಲೂಕು ಹಾವೇರಿ ಗ್ರಾಮದ ಯರೇಶೀಮೆ ಮ|| ರಾ|| ಗುರುಶಾಂತಪ್ಪನವರ ಸುಪುತ್ರ ಸಿದ್ಧರಾಮಪ್ಪನವರಿಗೆ ಧಾರವಾಡ ಡಿ|| ರಾಣೆಬೆನ್ನೂರ ತಾಲೂಕ ಪ್ರೆತಿಯತ್ತಿನಹಳ್ಳಿಯಲ್ಲಿರುವ ಮ|| ರಾ|| ಕಡಗಣ್ಣ ವಿರುಪಾಕ್ಷಪ್ಪನವರ ಸುಪುತ್ರಿ ಕುಂ|| ಸೌ|| ಮಲಕವ್ವನನ್ನು ನಿಶ್ಚಯಿಸಿ ಇದೇ 1851 ನೆಯ ಶುಕ್ಲನಾಮ ಸಂ||ದ ಜೇಷ್ಠ ಶು|| 12 ದಿವಸ ಗೊತ್ತುಮಾಡಿದ ಮುಹೂರ್ತಕ್ಕೆ ಸರಿಯಾಗಿ ಸದರಿ ಸಿದ್ಧರಾಮಪ್ಪನವರ ಮನೆಯಲ್ಲಿ ವಿವಾಹಕಾರ್ಯವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಲಗ್ನಕಾರ್ಯಕ್ಕೆ ಯರೇಸೀಮೆ ಬಂಧುಗಳೂ ಇತರ ಆಪ್ತೇಷ್ಟರೂ ಹಾಗೂ ಮಿತ್ರಮಂಡಲಿಯವರೂ ಕೂಡಿ ಉತ್ಸುಕತೆಯಿಂದ ಈ ಕಾರ್ಯವನ್ನು ಸಾಂಗಗೊಳಿಸಿದರು. ಈ ಸಮಾರಂಭದಲ್ಲಿ ಮ|| ರಾ|| ಹೊಂಬಣ್ಣನವರ ಹಾವೇರಿ ಇವರು ಬಹು ಮುತವರ್ಜಿವಹಿಸಿ ಕಾರ್ಯವನ್ನು ಸಾಂಗಗೊಳಿಸಿದರು. ಇವರ ಕಾರ್ಯಕರ್ತೃತ್ವಶಕ್ತಿಯು ಸ್ತುತ್ಯವಾಗಿದೆ. ಯರೇಶೀಮೆಯವರ ಗುರುಗಳಾದ ಕೀರಣಗಿಮಠದ ಶ್ರೀ|| ಷ|| ಬ್ರ|| ಪಟ್ಟದ ರಾಚೋಟಿಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ 4 ರೂಪಾಯಿಗಳು ವಧುವಿನಕಡೆಯಿಂದ 1 ರೂಪಾಯಿಯು ಸಮರ್ಪಿಸಲ್ಪಟ್ಟವು. ಶ್ರೀ ಜಗದ್ಗುರು ಪಂಚಾಚಾರ್ಯರು ವಧೂವರರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಚಿನ್ನಪ್ಪಾ, ಹಂಚಿಗೇರಿ.

ಜಾಹೀರಾತ.

ಜಾತಕಗಳನ್ನೂ ಜನ್ಮಪತ್ರಿಕೆಗಳನ್ನೂ ಬರೆಯಿಸುವವರು ಇತ್ತಕಡೆಗೆ ಗಮನಕೊಡಬೇಕು.

ಧಾರವಾಡ ಜಿಲ್ಲಾ ಮುಂಡರಗಿ ಪೋಸ್ಟ ಶಿಂಗಟಾಲೂರ ಗ್ರಾಮದಲ್ಲಿರುವ ಮ|| ಗಳಾದ ಬ್ರಂ|| ಶ್ರೀ|| ಸಿದ್ಧಾಂತಿ ಗಂಗಾಧರಶಾಸ್ತ್ರಿಗಳು ಪ್ರಾಚೀನ ಪೌರ್ವಗ್ರಂಥಾಧಾರಗಳಿಂದ ಬಹು ಶ್ರಮವಹಿಸಿ ಜಾತಕಗಳನ್ನೂ ಜನ್ಮಪತ್ರಿಕೆಗಳನ್ನೂ ಅದರಲ್ಲಿ ಬಾಲಾರಿಷ್ಟದೋಷ ಬಾಲಾರಿಷ್ಟದೋಷನಿವಾರಣೋಪಾಯಗಳನ್ನೂ ಅತ್ಯುತ್ತಮರೀತಿಯಿಂದ ಬರೆಯುತ್ತಿರುವರು. ಜನ್ಮಪತ್ರಿಕೆಗೆ ೫ ರೂಪಾಯಿ. ಜಾತಕದ ವಿಷಯ ಪ್ರತ್ಯಕ್ಷ ಅಥವಾ ಪತ್ರದ್ವಾರಾ ತಿಳಿದುಕೊಳ್ಳತಕ್ಕದ್ದು.

ಅಪೇಕ್ಷಿತರು ಒಂದಾವರ್ತಿ ತಮ್ಮ ಹಾಗೂ ತಮ್ಮ ಶಿಶುಗಳ ಜನನಟಿಪ್ಪಣಿಯನ್ನು ಕಳುಹಿಸಿದಲ್ಲಿ ಪಂಡಿತರ ಪರಿಶ್ರಮವು ತಾನೇ ಗೊತ್ತಾಗುವುದು.

ವಿರೂಪಾಕ್ಷಗೌಡ ಪಾಟೀಲ,
ಹಮ್ಮಿಗಿ.

ಬಸವಜಯಂತಿಯ ಗೊಂದಲ.

[illegible]

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಮುರುಳವೇದಾಂತಿ ಗಜಕೇಸರಿ.

[illegible]

... ಪ್ರಾರ್ಥಿಸಿದನು. ಅದನ್ನು ಮುಂದೆ ಹೇಳಲಾರಂಭಿಸಿದನು.

(ಸಶೇಷ)

ಸಂತೆಕೊಡಿಪ್ಪರು ನಾಗಲೀಕರ ರಾಚಪ್ಪ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೩ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪಂಚಾಚಾರ್ಯ ಪ್ರಭಾ

೧೯೨೯ನೇ ಜುಲೈ ತಾ|| ೧೫ನೇ ಸೋಮವಾರ

ಇಂಗ್ಲೆಂಡಿನ ಹೊಸ ಪಾರ್ಲಿಮೆಂಟು.

ಇಂಗ್ಲೆಂಡಿನ ಹೊಸ ಪಾರ್ಲಿಮೆಂಟು ಸಭೆಯು ಕಳೆದ ಮಂಗಳವಾರ (ತಾ. 2) ಸೇರಿ ಕೆಲಸನೂಡ ಲಾರಂಭವಾಯಿತು. ಪದ್ಧತಿಯನ್ನನುಸರಿಸಿ ಪಾರ್ಲಿಮೆಂಟಿನ ಹೊಸ ಮೆಂಬರುಗಳನ್ನು ಕುರಿತು ಚಕ್ರವರ್ತಿ ಸಾರ್ವಭೌಮರವರು ಸರಕಾರದವರು ನಡೆಯಿಸಬೇಕೆಂದಿರುವ ಕಾರ್ಯಕಲಾಪಗಳ ವಿಷಯವಾಗಿ ಭಾಷಣ ಮಾಡಬೇಕಾಗಿದ್ದಿತು. ಈಸಾರಿ ಚಕ್ರವರ್ತಿಯವರ ದೇಹಾಲಸ್ಯದ ನಿಮಿತ್ತ ಅವರೇ ಸ್ವತಃ ಸಭೆಗೆ ಚಿತ್ತೈಸುವುದಕ್ಕಾಗದೆ ಹೋದುದರಿಂದ ಪ್ರಭುಗಳ ಭಾಷಣವನ್ನು ಲಾರ್ಡ್ ಛಾನ್ಸೆಲರ್ ಎಂಬ ಅಧಿಕಾರಿಯು ಮೆಂಬರುಗಳಿಗೆ ಓದಿ ಹೇಳಿದರು.

ಈಸಾರಿ ಚಕ್ರವರ್ತಿಯವರು ತಮ್ಮ ಭಾಷಣದಲ್ಲಿ ಏನು ಹೇಳುವರೋ ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದರು. ಯಾಕಂದರೆ ಕೂಲಿಕಾರರ ಪಕ್ಷದ ಗವರ್ನಮೆಂಟಿನವರು ಆ ಭಾಷಣವನ್ನು ತಯಾರುಮಾಡಿದ್ದು ಇದೇ ಪ್ರಥಮವಾಗಿರುತ್ತದೆ. ಈಸಲ ಚುನಾವಣೆಗಳು ನಡೆದದ್ದರಲ್ಲಿ ಹೌಸ್ ಆಫ್ ಕಾಮನ್ಸ್ ಸಭೆಗೆ ಇತರ ಪಕ್ಷಗಳಿಗಿಂತಲೂ ಕೂಲಿಕಾರರ ಪಕ್ಷದ ಮೆಂಬರುಗಳ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಆದಕಾರಣ ಆ ಪಕ್ಷದ ಮುಖಂಡರಾದ ಮಿ|| ರಾಮ್ಸೆ ಮೆಕ್ಡೊನಾಲ್ಡರವರು ಮಂತ್ರಿಶ್ರೇಷ್ಠರಾದರು. ಆದರೂ ಮಿ|| ಮೆಕ್ಡೊನಾಲ್ಡರವರಿಗೆ ಆಳ್ವಿಕೆಯಲ್ಲಿ ಅವರ ಹಿಂದಿದ್ದ ಮಂತ್ರಿಶ್ರೇಷ್ಠರುಗಳಿಗಿದ್ದಷ್ಟು ಅಧಿಕಾರವಿರುವದಿಲ್ಲ. ಪಾರ್ಲಿಮೆಂಟಿನಲ್ಲಿ ಇವರ ಪಕ್ಷಕ್ಕೆ ಸೇರಿದ ಮೆಂಬರುಗಳು ಅರ್ಧಕ್ಕಿಂತ ಕಡಮೆಯಾಗಿರುತ್ತಾರೆ. ಉಳಿದ ಮೆಂಬರುಗಳು ಲಿಬರಲ್ ಮತ್ತು ಕನ್ಸರ್ವೆಟಿವ್ ಪಕ್ಷಗಳಿಗೆ ಸೇರಿದವರು. ಆದುದರಿಂದ ಯಾವ ಸಂದರ್ಭದಲ್ಲೇ ಆಗಲಿ ಇವೆರಡು ಪಕ್ಷದವರೂ ವಿರೋಧಿಸಿ ಗವರ್ನಮೆಂಟಿಗೆ ಎದುರು ನಿಂತರೆ ಮಿ|| ಮೆಕ್ಡೊನಾಲ್ಡರವರು ಮಂತ್ರಿಪದವಿಗೆ ರಾಜೀನಾಮೆ ಕೊಡಬೇಕಾಗುತ್ತದೆ. ಆದಕಾರಣ ಮಿ|| ಮೆಕ್ಡೊನಾಲ್ಡರವರು ಅವೆರಡರ ಪೈಕಿ ಒಂದು ಪಕ್ಷದವರಿಗಾದರೂ ಒಪ್ಪಿಗೆಯಾಗುವಂಥಾ ಕಟ್ಟಳೆ ಕಾನೂನುಗಳನ್ನೇ ಸೂಚಿಸಬೇಕಾಗುವುದು.

ಮಿ|| ಮೆಕ್ಡೊನಾಲ್ಡರವರು ಪ್ರಧಾನವಾಗಿರುವ ಎರಡು ವಿಷಯಗಳಿಗೆ ಗವರ್ನಮೆಂಟಿನವರು ಗಮನ ಕೊಡುವರೆಂದು ಹೇಳಿದರು. ಇಂಗ್ಲೆಂಡಿಗೂ ಇತರ ರಾಜ್ಯಗಳಿಗೂ ಸ್ನೇಹವನ್ನು ಬೆಳಸುವುದು ಮೊದಲನೆಯದು; ಇಂಗ್ಲೆಂಡಿನಲ್ಲಿ ಕೆಲಸ ಸಿಕ್ಕದೆ ಜೀವನಕ್ಕೆ ಕಷ್ಟಪಡುತ್ತಿರುವ ಬಡಬಗ್ಗರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದೇ ಎರಡನೆಯದು. ಇದರಲ್ಲಿ ಮೊದಲನೆಯ ವಿಚಾರವನ್ನು ಸಾರ್ಥಕವಾಗಿ ನೆರವೇರಿಸುವುದಕ್ಕೆ ಕೆಲವು ಸಾಧನಗಳನ್ನು ಮಂತ್ರಿಶ್ರೇಷ್ಠರು ಸೂಚಿಸಿರುತ್ತಾರೆ. ಜರ್ಮನಿಯವರು ಯುದ್ಧದ ಋಣದ ಪರಿಹಾರವನ್ನು ಇಂಗ್ಲೆಂಡಿಗೂ ಮಿತ್ರಮಂಡಲಿಯವರಿಗೂ ಪಾವತಿಮಾಡುವುದಕ್ಕೆ ಈಗ ಜಾರಿಯಲ್ಲಿರುವ ಕ್ರಮಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು. ಹೀಗೆ ಮಾಡಿದಲ್ಲಿ ಮಿತ್ರಮಂಡಲಿಯವರು ರೈನ್ ನದಿಯ ಸುತ್ತಲೂ ಕಾವಲಿಟ್ಟಿರುವ ತಮ್ಮ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳುವುದಕ್ಕೆ ಅನುಕೂಲವಾದೀತೆಂಬ ನಿರೀಕ್ಷೆಯುಂಟು. ಇಂಗ್ಲೆಂಡಿನವರು ರಷ್ಯಾ ಗವರ್ನಮೆಂಟಿನವರ ಕೂಡ ಸ್ನೇಹ ಸಂಬಂಧವನ್ನು ಮೊದಲಿನಂತೆಯೇ ಕಲ್ಪಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತಾರೆ. ಆದರೆ ಘೋರಯುದ್ಧಕಾಲದಲ್ಲಿ ರಷ್ಯಾ ರಾಜ್ಯದೊಳಗೆ ಪ್ರಜೆಗಳು ತಮ್ಮ ಗವರ್ನಮೆಂಟನ್ನು ನಾಶಪಡಿಸಿದ್ದಲ್ಲದೆ ತಮ್ಮ ಚಕ್ರವರ್ತಿ ಜಾರ್‌ಯವರನ್ನು ಕೊಲೆಮಾಡಿಬಿಟ್ಟರು. ಆ ಬಳಿಕ ಅಲ್ಲಿ ಸ್ಥಾಪಿಸಲ್ಪಟ್ಟ ಗವರ್ನಮೆಂಟು ಇತರ ಜನಾಂಗಗಳಿಗೆ ವಿರೋಧವಾಗಿದ್ದಿತೆಂಬ ಅಭಿಪ್ರಾಯದ ಮೇಲೆ ಆ ಲಾಗಾಯಿತು ಬ್ರಿಟಿಷ್ ಗವರ್ನಮೆಂಟಿನವರು ಇದುವರೆಗೂ ರಷ್ಯಾ ಗವರ್ನಮೆಂಟನ್ನು ಗಣನೆಗೆ ತಂದಿರುವುದಿಲ್ಲ. ಈಗ ಇಂಗ್ಲೆಂಡಿನ ಹೊಸ ಗವರ್ನಮೆಂಟಿನವರು ರಷ್ಯಾ ಗವರ್ನಮೆಂಟನ್ನು ಒಪ್ಪಿಕೊಂಡು ಅವರೊಡನೆ ಸವ್ಯವಹಾರ ನಡಿಸಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಮಿ|| ಮೆಕ್ಡೊನಾಲ್ಡರವರು ಅಮೇರಿಕದವರೊಡನೆ ಸಮಸ್ತ ರಾಜ್ಯಗಳ ಯುದ್ಧಸಾಧನಗಳನ್ನೂ (ನಾವೆ, ಸೈನ್ಯ ಮುಂತಾದವು) ಕಡಮೆ ಮಾಡಬೇಕೆಂಬ ವಿಚಾರವನ್ನು ಕುರಿತು ಚರ್ಚೆಮಾಡುತ್ತಿದಾರೆ. ಇದಕ್ಕೆ ಅಮೇರಿಕದವರ ಒಪ್ಪಿಗೆಯು ದೊರಕಿದ ಪಕ್ಷದಲ್ಲಿ ಇತರ ರಾಜ್ಯಗಳನ್ನೂ ಆ ರೀತಿ ಒಪ್ಪಿಕೊಳ್ಳುವಂತೆ ಮಾಡುವುದು ಸುಲಭವಾಗುವುದೆಂದು ನೆನಸುತ್ತಾರೆ.

ಇಂಗ್ಲೆಂಡಿನಲ್ಲಿ ಕೆಲಸವಿಲ್ಲದೆ ಜೀವನಕ್ಕೆ ಕಷ್ಟಪಡುವಂಥ ಪ್ರಜೆಗಳಿಗೆ ಗವರ್ನಮೆಂಟಿನವರು ತಮ್ಮ ಕೈಲಾಗುವಷ್ಟು ಪ್ರಯತ್ನಮಾಡಿ ಭಾರಿ ಭಾರೀ ಕಾಮಗಾರಿ, ಕೆಲಸಕಾರ್ಯಗಳನ್ನು ಪ್ರಾರಂಭಿಸುವುದಾಗಿಯೂ, ವ್ಯಾಪಾರವು ಅಭಿವೃದ್ಧಿಗೆ ಬರಲು ಪ್ರೋತ್ಸಾಹಕೊಡುವುದಾಗಿಯೂ, ಈ ಕಾರ್ಯಗಳಿಂದ ಜನಗಳಿಗೆ ಜೀವನ ದೊರೆಯುವಂತೆ ಮಾಡುವುದಾಗಿಯೂ ಸಂಕಲ್ಪಮಾಡಿದ್ದಾರೆ. ಇಂಗ್ಲೆಂಡಿನಲ್ಲಿ ಹೆಚ್ಚಾಗಿ ಉಕ್ಕು ತಯಾರಾಗುತ್ತದೆ; ಅಲ್ಲಿಗೆ ಬೇಕಾದ ಮರಮುಟ್ಟುಗಳನ್ನು ದೇಶಾಂತರಗಳಿಂದ ತರಿಸಿಕೊಳ್ಳುವರು. ಆದ್ದರಿಂದ ಕಟ್ಟಡ ಮೊದಲಾದವುಗಳಿಗೆ ಮರಕ್ಕೆ ಬದಲಾಗಿ ಉಕ್ಕನ್ನು ಉಪಯೋಗಿಸಬೇಕೆಂಬ ಯೋಚನೆಯಿದೆ. ಅಂದರೆ ರೈಲ್ವೆಯವರು ಮರದ ಸ್ಲೀಪರುಗಳ[illegible] ಉಪಯೋಗಿಸುವುದಕ್ಕೆ ಪ್ರತಿಯಾಗಿ ಉಕ್ಕಿನ ಸ್ಲೀಪರುಗಳನ್ನು ಹಾಕಬಹುದು. ಹೇಗೂ ಅವರ ಸಲಹೆಗಳಿಂದ ಜನಗಳಿಗೆ ಹೆಚ್ಚಾಗಿ ಕೆಲಸಗಳು ದೊರಕಿ ಅವರ ಕಷ್ಟಗಳು ಬಹಳಮಟ್ಟಿಗೂ ಕಡಮೆಯಾಗುವವೆಂದು ನಿರೀಕ್ಷಿಸಲಾಗಿದೆಯಾದಕಾರಣ ಈ ಸಲಹೆಗಳನ್ನು ಉಳಿದ ಎರಡು ಪಕ್ಷಗಳ ಮೆಂಬರುಗಳೂ ಖಂಡಿಸಲಾರರೆಂದು ಕಾಣುತ್ತದೆ.

ಮೇಲ್ಕಂಡ ಭಾಷಣದಲ್ಲಿ ಹಿಂದುಸ್ಥಾನದ ಮುಂದಿನ ಆಳ್ವಿಕೆಯ ವಿಚಾರವಾದ ಪ್ರಸ್ತಾಪವೇ ಇಲ್ಲ. ಇದು ಭಾರತೀಯರಿಗೆ ಪೂರ್ಣ ಆಶಾಭಂಗವೇ ಸರಿ!

ಮೈಸೂರು ನ್ಯಾಯವಿಧಾಯಕಸಭೆ.

ಕಳೆದ ಜೂನ್ 29 ನೆಯ ತಾರೀಖಿನ ಶನಿವಾರ ಬೆಂಗಳೂರಿನಲ್ಲಿ ನಡೆದ ನ್ಯಾಯವಿಧಾಯಕಸಭೆಯಲ್ಲಿ ಅನೇಕ ಸದಸ್ಯರು ಗೌರ್ನಮೆಂಟಿನ ಕಾರ್ಯಕ್ರಮಗಳನ್ನು ಖಂಡಿಸಿ, ಪ್ರಜೆಗಳಿಗೆ ಹೆಚ್ಚಿನ ಸ್ವಾತಂತ್ರ್ಯಗಳನ್ನು ದಯಪಾಲಿಸಬೇಕೆಂದು ಕೇಳಿಕೊಂಡರು. ಮಿ|| ಡಿ. ವಿ. ಗುಂಡಪ್ಪನವರು ಸುಮಾರು ಒಂದುಗಂಟೆಯಕಾಲ ಮಾತನಾಡಿದರು. ಸಂಸ್ಥಾನದಲ್ಲಿ ಈಚೆಗೆ ನಡೆಯುತ್ತಿರುವ ಗಲಭೆಗಳಿಗೆ ಬಹುಮಟ್ಟಿಗೆ ಗೌರ್ನಮೆಂಟಿನವರೇ ಕಾರಣರೆಂದೂ, ಹೋದವರುಷ ಬೆಂಗಳೂರಿನಲ್ಲಿ ನಡೆದ ಗಣಪತಿಯ ಗಲಭೆಯ ಸಂಬಂಧವಾಗಿ ವಿಶ್ವೇಶ್ವರಯ್ಯ ಕಮಿಟಿಯವರು ವಿಚಾರಣೆ ನಡೆಯಿಸಿ ಸರ್ಕಾರಕ್ಕೆ ಒಪ್ಪಿಸಿದ ರಿಪೋರ್ಟಿನಲ್ಲಿ ಕಂಡ ಅನೇಕ ವಿಷಯಗಳನ್ನು ಸರಕಾರದವರು ಒಪ್ಪದೆ, ಅಂಥಾ ಗಲಭೆಗಳು ಪುನಃ ನಡೆಯದಂತೆ ತಕ್ಕ ವ್ಯವಸ್ಥೆಯನ್ನು ಮಾಡಲಿಲ್ಲವೆಂದೂ, ಬೆಂಗಳೂರಿನ ಮಿಲ್ಲಿನ ಕೂಲಿಗಾರರ ಗಲಾಟೆಗಳನ್ನು ನಿಲ್ಲಿಸಲು ತಕ್ಕ ಏರ್ಪಾಡುಗಳನ್ನು ಮಾಡದೆ ಇರುವದನ್ನು ನೋಡಿದರೆ, ಸರಕಾರದವರು ಮಿಲ್ಲಿನ ಯಜಮಾನರ ಪಕ್ಷವನ್ನು ವಹಿಸಿರುವಂತೆ ತೋರುವದಾಗಿಯೂ ಅಭಿಪ್ರಾಯಪಟ್ಟರು.

ಸರಕಾರದವರು ಕೆಲವು ಪತ್ರಿಕೆಗಳನ್ನು ನಿಲ್ಲಿಸಿದ ವಿಚಾರದಲ್ಲೂ, ಹಾಗೂ ಸರಕಾರದವರು 15 ತಿಂಗಳ ಹಿಂದೆ ವರ್ತಮಾನ ಪತ್ರಿಕೆಗಳ ಕಾನೂನನ್ನು ರದ್ದುಮಾಡುವದಾಗಿ ವಗ್ದಾನಮಾಡಿದ್ದು, ಈಗ ಅದೇ ಕಾನೂನನ್ನು ಅನುಸರಿಸಿ ಪತ್ರಿಕೆಗಳನ್ನು ನಿಲ್ಲಿಸಿದ್ದು ನ್ಯಾಯವಲ್ಲವೆಂದೂ ಖಂಡಿಸಿದರು.

ರಾಜಸಭಾಭೂಷಣ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಆಡಳಿತವಿಚಾರದಲ್ಲಿ ಪ್ರಜೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡಬೇಕಾದುದು ಅತ್ಯವಶ್ಯಕವೆಂದು ವಾದಿಸಿದರು.

ರಾಜಸಭಾಭೂಷಣ ಮಿ|| ಕೆ. ಚಾಂಡಿಯವರು ಸಹ ಸರ್ ಪುಟ್ಟಣ್ಣಶೆಟ್ಟರವರ ಅಭಿಪ್ರಾಯವನ್ನೇ ಪುಷ್ಟೀಕರಿಸಿ ಪಜಾಪ್ರತಿನಿಧಿಸಭೆಗಳು ಬಹುಮತದಿಂದ ಒಪ್ಪುವ ಕಾರ್ಯಕ್ರಮಗಳನ್ನು ಸರಕಾರದವರು ಅಂಗೀಕರಿಸಿ ಅದರಂತೆ ನಡೆದುಕೊಳ್ಳಬೇಕೆಂದು ಹೇಳಿದರು.

ತೃತೀಯಸಚಿವರಾದ ರಾಜಮಂತ್ರಪ್ರವೀಣ ಮಿ|| ಕೆ. ಮ್ಯಾಥ್ಯೂರವರು, ಮೇಲ್ಕಂಡ ಆಕ್ಷೇಪಣೆಗಳಿಗೆ ಸಮಾಧಾನವಾಗಿ ಸರಕಾರದಪರವಾಗಿ, ಪ್ರತಿನಿಧಿಸಭೆಯ ಕೆಲವು ಮೆಂಬರುಗಳು ಕಾಯಿದೆಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಹೀಗೆ ಆಕ್ಷೇಪಿಸುತ್ತಾರೆಂದೂ, ಆಳ್ವಿಕೆಯ ಕಷ್ಟನಿಷ್ಠುರಗಳೂ, ತೊಡಕುಗಳೂ, ಸಭೆಯ ಮೆಂಬರುಗಳಿಗಿಂತಲೂ ಸರಕಾರದವರಿಗೆ ಚೆನ್ನಾಗಿ ಗೊತ್ತಾಗುವವೆಂದೂ, ಆಕ್ಷೇಪಿಸತಕ್ಕವರು ಆಳ್ವಿಕೆಯ ಭಾರವನ್ನು ವಹಿಸಿರುವವರಿಗೆ ಇರುವ ಕಷ್ಟಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕೆಂದೂ ಹೇಳಿದರು.

ಶಾರೀರಕ ಬಲ.

ಯಾವ ದೇಶವೇ ಆಗಲಿ ಅದರ ಬಲಾಬಲಗಳು ಆ ದೇಶದ ತರುಣರನ್ನೇ ಅವಲಂಬಿಸಿರುತ್ತದೆ. ಯಾವ ದೇಶದ ತರುಣರು ಬಲಿಷ್ಠರಾಗಿಯೂ, ದೃಢಕಾಯರಾಗಿಯೂ ಇರುತ್ತಾರೆಯೋ ಆ ದೇಶವು ಎತ್ತಿದ ಮುಖವುಳ್ಳದ್ದಾಗಿರುತ್ತದೆ. ಹಾಗಿಲ್ಲದೆ ಯಾವದೇಶದ ತರುಣರು ಬಲಹೀನರೂ, ಹತವೀರ್ಯರೂ, ಹೇಡಿಗಳೂ ಆಗಿರುತ್ತಾರೆಯೋ ಆ ದೇಶವು ಪರಾಧೀನದಲ್ಲಿ ಸಿಕ್ಕಿ ನರಳುತ್ತದೆಂಬುದನ್ನು ಗ್ರಂಥಗಳಲ್ಲಿ ಮಾತ್ರ ನಾವು ಓದಬೇಕಾಗಿರುವದಿಲ್ಲ. ಇದು ಅನುಭವಸಿದ್ಧವಾದ ಸಂಗತಿಯಾಗಿರುವುದು.

ಪವಿತ್ರವಾದ ನಮ್ಮ ಈ ಭಾರತಭೂಮಿಯು ಪರಾಧೀನದ ಸಂಕಟದಲ್ಲಿ ನರಳುತ್ತಿರುವದಕ್ಕೂ ಮೇಲೆ ಹೇಳಿದಂತೆ ನಮ್ಮ ತರುಣರು ಹತವೀರ್ಯರಾಗಿರುವದೇ ಕಾರಣವೆಂಬುದನ್ನು ನಾವು ಪುನಃ ಹೇಳಬೇಕಾಗಿರುವದಿಲ್ಲ. ಆದರೆ ಈಗೀಗ ಭರತಖಂಡದಲ್ಲೆಲ್ಲಿಯೂ ಜನರು ಎಚ್ಚರಹೊಂದಿ ನಮ್ಮ ತರುಣರ ಶಾರೀರಕ ಬಲವನ್ನು ವೃದ್ಧಿಗೊಳಿಸಲು ಪ್ರಯತ್ನಪಡುತ್ತಿರುವದು ಶುಭಸೂಚಕವೂ, ಸ್ತೋತ್ರಾರ್ಹವೂ ಆಗಿರುತ್ತದೆ.

ಹೀಗೆ ಭರತಖಂಡದಲ್ಲಿನ ಎಲ್ಲಾ ಪ್ರಾಂತದವರೂ ತಮ್ಮ ತಮ್ಮ ತರುಣರು ಶಾರೀರಕ ಬಲವನ್ನು ವೃದ್ಧಿಗೊಳಿಸಲು ವಿಶೇಷ ಪ್ರಯತ್ನಗಳನ್ನು ನಡೆಸುತ್ತಿದ್ದರೂ ನಮ್ಮ ಕರ್ನಾಟಕದಲ್ಲಿ ಮಾತ್ರ ಈ ಕಾರ್ಯವು ಅಷ್ಟು ಸಮರ್ಪಕವಾಗಿ ನಡೆಯದಿರುವದು ಕೇವಲ ವಿಷಾದಜನಕವಾಗಿರುವದು. ಹಿಂದೂಸ್ಥಾನೀ ಸೇವಾದಲದವರು ಇದರ ಸಂಬಂಧವಾಗಿ ತಮ್ಮ ಕೈಲಾದಷ್ಟು ಪ್ರಯತ್ನಗಳನ್ನೇನೋ ಮಾಡುತ್ತಿರುವರು. ಅಲ್ಲಲ್ಲಿ ಕೆಲವು ವ್ಯಾಯಾಮಮಂದಿರದವರೂ ಈ ಕಾರ್ಯವನ್ನು ಆದಷ್ಟು ಮುಂದುವರಿಸುತ್ತಿರುವರು. ಆದರೇನು? ಇವುಗಳಲ್ಲಿ ಸರಿಯಾದ ವ್ಯವಸ್ಥೆಯಿಲ್ಲದಿರುವದೊಂದೇ ಅಲ್ಲ! ಇವುಗಳು ಕೇವಲ ದೇಶದ ಬಲದ ಬೆಳವಣಿಗೆಯನ್ನೇ ಮುಖ್ಯವಾದ ಧ್ಯೇಯವನ್ನಾಗಿ ಭಾವಿಸಿ ಕೆಲಸ ಮಾಡದೆ ಸಂಕುಚಿತ ದೃಷ್ಟಿಯಿಂದ ಕೆಲಸಮಾಡುವದರಿಂದ ಆ ವ್ಯಾಯಾಮ ಮಂದಿರಗಳಿಂದ ತೃಪ್ತಿಕರವಾದ ಕೆಲಸವು ನಡೆಯಲವಕಾಶವಿಲ್ಲದಿರುವದು. ಆದುದರಿಂದ ಅವುಗಳಿಗೆ ತಮ್ಮ ಕರ್ತವ್ಯವೇನೆಂಬುದನ್ನು ಚೆನ್ನಾಗಿ ತಿಳಿಯಪಡಿಸಬೇಕಾದುದು ಅತ್ಯವಶ್ಯಕವು.

ಬರುವ ಆಗಸ್ಟ್ ತಿಂಗಳಲ್ಲಿ ಬಾಗಲಕೋಟೆಯಲ್ಲಿ "ಅಖಿಲ ಕರ್ನಾಟಕ ಶಾರೀರಕ ಬಲವರ್ಧನ ಪರಿಷತ್ತಿ'ನ ಪ್ರಥಮ ಅಧಿವೇಶನವು ಕೂಡುವದಾಗಿ ವರ್ತಮಾನಕೇಳುತ್ತೇವೆ. ಇದು ಅತ್ಯಂತ ಸ್ತೋತ್ರಾರ್ಹವಾದ ಸಂಗತಿಯೇ ಸರಿ. ಆ ಕಾಲಕ್ಕೆ ಅಖಿಲ ಕರ್ನಾಟಕದ ವ್ಯಾಯಾಮ ಮಂದಿರದ ವ್ಯವಸ್ಥಾಪಕರೆಲ್ಲರೂ ಒಟ್ಟಾಗಿ ಸೇರಿ, ದೇಶದ ತರುಣರೆಲ್ಲರೂ ಬಲಶಾಲಿಗಳಾಗಲು ಮಾಡಬೇಕಾದ ಕಾರ್ಯಗಳನ್ನು ಚರ್ಚಿಸಿ ಎಲ್ಲರೂ ಏಕಮತದಿಂದ ಯಾವ ಮಾರ್ಗವು ಹೆಚ್ಚು ಫಲಕಾರಿಯೆಂದು ತೀರ್ಮಾನಿಸುವರೋ, ಅದರಂತೆ ನಡೆಯಿಸುವದಾದರೆ, ಆ ಮಂದಿರಗಳಿಗೆ ಅಪಾರವಾದ ಶ್ರೇಯಸ್ಸು ಬರುವದಿಷ್ಟೇ ಅಲ್ಲ! ಅಖಿಲ ಕರ್ನಾಟಕ್ಕೂ ದೊಡ್ಡ ಉಪಕಾರಮಾಡಿದ ಶ್ರೇಯಸ್ಸು ಲಭಿಸುವದು! ಅಖಿಲ ಭಾರತಕ್ಕೇ ದೊಡ್ಡ ಕಲ್ಯಾಣವಾದ ಶ್ರೇಯಸ್ಸು ತಪ್ಪದೆ ಬರುವದು.

ಒಳದೇಶದ ವೃತ್ತಾಂತಗಳು.

ಭದ್ರಾವತಿಯ ಶ್ರೀರಾಮದೇವಾಲಯಕ್ಕೆ ಯಾರೋ ದುಷ್ಟರು ನುಗ್ಗಿ ವಿಗ್ರಹಗಳನ್ನು ಕಿತ್ತು ಪಕ್ಕದ [illegible]ಲ್ಲಿ ಹಾಕಿರುವರಂತೆ. ಯಾರೆಂಬುದು ಇನ್ನೂ [illegible]ಯಾಗಿಲ್ಲ.

ಮೈಸೂರು ಸರಕಾರದವರ ಅಪ್ಪಣೆಯ ಮೇರೆಗೆ ನಿಲ್ಲಿಸಲ್ಪಟ್ಟಿದ್ದ "ನವಜೀವನ" ಮತ್ತು "ಸಾಧ್ವಿ" ಪತ್ರಿಕೆಗಳು ಸರಕಾರದ ಅಪ್ಪಣೆಯಿಲ್ಲದೆ ಪುನಃ ಪ್ರಕಟವಾಗಿರುವದಾಗಿ ವರ್ತಮಾನ ಕೇಳುತ್ತೇವೆ.

ಭದ್ರಾವತಿಯ ಕಬ್ಬಿಣಕಾರ್ಖಾನೆಯ ವ್ಯವಸ್ಥಾಪಕರಾದ ಶ್ರೀ|| ವಿ. ಗಣೇಶ ಅಯ್ಯರವರು ರೈಲ್ವೇ ಇಂಜಿನ್ನುಗಳಲ್ಲಿ ಒಂದು ಮಹತ್ವದ ಶೋಧನಮಾಡಿರುವರೆಂದು ವರ್ತಮಾನವನ್ನು ಕೇಳುತ್ತೇವೆ. ಇದರ ವಿವರವು ಇನ್ನೂ ಮುಂದೆ ತಿಳಿಯತಕ್ಕದ್ದಾಗಿದೆ.

ಲಂಡನ್ನಿನ ಸರ್ ವಿಲಿಯಂ ಮೇಯರ್ಸ್ ರೀಸರ್ಚ್‌ನ ವರ್ಷಕ್ಕೆ 1500 ರೂಪಾಯಿಗಳ ಸ್ಕಾಲರ್‌ಷಿಪ್ ಈ ಸಾರಿ ಮೈಸೂರಿನ ಮಿ|| ಕೆ. ಎಸ್. ವಿ. ಶಾಸ್ತ್ರಿಯವರಿಗೆ ದೊರತಿರುವದು. ಇದುವರೆಗೆ ಈ ವೇತನವು ಭಾರತೀಯನ್ಯಾರಿಗೂ ದೊರೆಯದೇ ಇದ್ದು ಈಗ ನಮ್ಮ ಮೈಸೂರಿನವರಿಗೆ ದೊರೆತದ್ದು ತುಂಬಾ ಸಂತೋಷಕರ!

ಕಳೆದವಾರ ಬೆಂಗಳೂರಿನಲ್ಲಿ ಇಬ್ಬರು ಸ್ತ್ರೀಯರು ಹರಿಕಥೆಯನ್ನು ಕೇಳುವದಕ್ಕೆ ಬಾಡಿಗೆ ಗಾಡಿಯಲ್ಲಿ ಹೋಗುತ್ತಿದ್ದಾಗ ಒಬ್ಬಳ ತಲೆಯಲ್ಲಿದ್ದ ಸುಮಾರು 500 ರೂಪಾಯಿ ಬೆಲೆಬಾಳುವ ಜಡೇಬಿಲ್ಲೆಯು ತಲೆಯಲ್ಲಿಲ್ಲದಿರುವದನ್ನು ಕಂಡು ಅವರು ಕೂಡಲೇ ಸಮೀಪದ ಪೋಲೀಸ್‌ಸ್ಟೇಷನ್ನಿಗೆ ಹೋಗಿ ತಿಳಿಸಲು ಪೋಲೀಸಿನವರು ಗಾಡಿಯವನನ್ನು ಅಲ್ಲಿಯೇ ಝಡ್ತಿಮಾಡಿದರು. ಒಡವೆಯು ಅವನಲ್ಲಿಯೇ ಸಿಕ್ಕಿತು. ಪೋಲೀಸಿನವರು ಅವನನ್ನು ದಸ್ತಗಿರಿಮಾಡಿರುತ್ತಾರೆ.

ಮೈಸೂರು ಸರಕಾರದವರು ಹೊಸತರಹ ಕೆಂಪು ಬಣ್ಣದ ರಶೀತಿ ಸ್ಟಾಂಪುಗಳನ್ನು ಅಚ್ಚುಹಾಕಿಸಿರುತ್ತಾರೆ. ಇವುಗಳನ್ನು ಬರುವ ಅಕ್ಟೋಬರು 1 ನೆಯ ತಾರೀಖಿನಿಂದ ಸಂಸ್ಥಾನದಲ್ಲಿ ಚಾರಿಗೆ ತರುವರು. ಆ ತಾರೀಖಿನಿಂದ ಮುಂದೆ ಒಂದು ತಿಂಗಳ ಒಳಗಾಗಿ ಈಗ ಉಪಯೋಗಿಸುತ್ತಿರುವ ಹಳೇ ಸ್ಟಾಂಪುಗಳೆಲ್ಲಾ ಉಪಯೋಗಿಸಿಬಿಡಬೇಕೆಂದೂ ಇಲ್ಲವೇ ಅದೇ ತಾರೀಖಿನಿಂದ ಮುಂದೆ ಎರಡು ತಿಂಗಳುಗಳೊಳಗಾಗಿ ಹಳೇಸ್ಟಾಂಪುಗಳನ್ನು ಹಿಂದಕ್ಕೆ ಕೊಟ್ಟು ಹೊಸಸ್ಟಾಂಪುಗಳನ್ನು ಪಡೆಯಬೇಕೆಂದೂ ಪ್ರಕಟಿಸಿರುತ್ತಾರೆ.

ಕಳೆದ 3 ನೇ ತಾರೀಖಿನ ದಿವಸ ಸಾಯಂಕಾಲ ಬೆಂಗಳೂರಿನ ಧರ್ಮಾಂಬುಧಿ ಕೆರೆಯಹತ್ತಿರ ಮಿಲ್ಲಿನ ಕೂಲಿಗಾರರು ಸಭೆಸೇರುವದಕ್ಕೆ ಪ್ರಯತ್ನಮಾಡಲು ಪೋಲೀಸಿನವರು ಅದಕ್ಕೆ ಅವಕಾಶಕೊಡದೆ ಕೂಲಿಯವರನ್ನು ಚದುರಿಸಿದರು. ಆದರೂ ಕೆಲಸಗಾರರ ಮುಖಂಡರ ಪ್ರೇರಣೆಯಿಂದ ಅವರು ಅಲ್ಲಿ ಪುನಃ ಸಭೆಸೇರಲು ಪ್ರಯತ್ನಿಸಿದಾಗ ಪೋಲೀಸಿನವರಿಗೂ ಕೆಲಸಗಾರರಿಗೂ ಸ್ವಲ್ಪ ಹೊಡೆದಾಟ ನಡೆದು, ಉಭಯರಲ್ಲಿಯೂ ಕೆಲವರಿಗೆ ಪೆಟ್ಟುಗಳು ಬಿದ್ದವು. ಸೇನ್ಗ್ರಿಯ ಮತ್ತು [illegible]ಲುವ ಸಂಘದ ಕಾರ್ಯದರ್ಶಿಗಳಾದ ಮ|| ರಾ|| [illegible]ಮಶರ್ಮರವರನ್ನು ಸಾಯಂಕಾಲವೂ, ಸಂಘದ ಅಧ್ಯಕ್ಷರಾದ ಅಡ್ವೋಕೇಟ್ ಮ|| ರಾ|| ಕೆ. ಟಿ. ಭಾಷ್ಯಂ ಅಯ್ಯಂಗಾರ್ರವರನ್ನು ರಾತ್ರಿ 9 ಘಂಟೆಯ ಮೇಲೂ ದಸ್ತಗಿರಿಮಾಡಿ ಜಾಮೀನ್ ಮೇಲೆ ಬಿಟ್ಟಿರುತ್ತಾರೆ. ಕೂಲಿಗಾರರು ವಿಶೇಷವಾಗಿ ವಾಸವಾಗಿರುವ [illegible]ಪೇಟೆಯಲ್ಲಿ ಪೋಲೀಸಿನವರ ಉಸ್ತುವಾರಿಯು [illegible]ಲ್ಪಟ್ಟಿದೆ. ಆದರೂ ಯಾವ ಗಳಿಗೆಯಲ್ಲಿ ಏನಾಗುವದೋ ಎಂದು ಎಲ್ಲರೂ ಭೀತರಾಗಿದ್ದಾರೆ. ಇದುವರೆಗೆ ಸುಮಾರು 12 ಜನ ಕೆಲಸಗಾರರನ್ನು ದಸ್ತಗಿರಿಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಕಾರ್ನಿಜ್ ಇನ್ಸ್ಟಿಟ್ಯೂಟಿನ ಡಾಕ್ಟರ್ ಆಸ್ಕರ್ ರಿಡಲ್‌ರವರ ಪ್ರಯೋಗವಿಜ್ಞಾನದಿಂದ ಒಬ್ಬ ಹೆಂಗಸಿನ ಲಿಂಗವೇ ಬದಲಾಯಿಸಿತಂತೆ!

ಒಂದು ನೂರು ಜನರು ಪ್ರಯಾಣಮಾಡಲನುಕೂಲವಾದ 525 ಕುದುರೆಗಳ ಶಕ್ತಿಯುಳ್ಳ ಒಂದು ಭಾರಿ ಆಕಾಶವಿಮಾನವನ್ನು ಜರ್ಮನಿಯವರು ತಯಾರುಮಾಡಿರುವರು.

ತಿರುವಾಂಕೂರಿನ ಹತ್ತಿರ ಒಂದು ಹಳ್ಳಿಯಲ್ಲಿ ದಂಪತಿಗಳಿಬ್ಬರು ದಾರಿದ್ರ್ಯವನ್ನನುಭವಿಸಲಾರದೆ ತಮ್ಮ ಮೂವರು ಮಕ್ಕಳನ್ನು ಭಾವಿಗೆ ತಳ್ಳಿ ತಾವೂ ಆತ್ಮಹತ್ಯಮಾಡಿಕೊಂಡರು.

ದಕ್ಷಿಣ ಅಮೇರಿಕದ ಕೋಟ್ಯಾಧೀಶ್ವರನೊಬ್ಬನು ಎಲ್ಲಿಪಾಟಿನೋ ಎಂಬ ಮಗಳ ಮದುವೆಯನ್ನು ಪ್ಯಾರಿಸ್ ನಗರದಲ್ಲಿ ಮಾಡಿದಕಾಲದಲ್ಲಿ ಮಗಳಿಗೆ 100,000,000 ರೂಪಾಯಿಗಳ ಬಳುವಳಿ ಕೊಟ್ಟನಂತೆ!

ತಿರುವಳ್ಳದ ಬಳಿ ಇರುವ ಕವಿಯೂರಿನಲ್ಲಿ ಒಬ್ಬ ಈಸಾಯಿಯ 12 ವರ್ಷದ ಹುಡುಗಿಯ ಮೈಮೇಲೆಲ್ಲಾ ಹುಲಿಯಂತೆ ಪಟ್ಟೆಗಳೂ ಕೂದಲೂ ಇರುವದಂತೆ! ಹುಲಿಯಂತೆಯೇ ಚೇಷ್ಟೆಗಳನ್ನೂ ಮಾಡುವಳಂತೆ!

ಹೈದರಾಬಾದಿಗೂ ವಾಡಿಸ್ಟೇಷನ್ನಿಗೂ ಮಧ್ಯೆ ಒಂದು ರೈಲಿಗೆ ಕೆಲವು ಕಳ್ಳರು ಹತ್ತಿ ಫಸ್ಟ್‌ಕ್ಲಾಸ್ ಗಾಡಿಯೊಳಗೆ ಪ್ರಯಾಣಮಾಡುತ್ತಿದ್ದ ಒಬ್ಬ ಪ್ರಯಾಣಿಕನ ಹತ್ತಿರ 5,000 ರೂಪಾಯಿಗಳನ್ನು ಅಪಹರಿಸಿಕೊಂಡು ಹೋದರು. ಕಳ್ಳರನ್ನು ಪೋಲೀಸಿನವರು ಹುಡುಕುತ್ತಿದ್ದಾರೆ.

ಪುದುಚೇರಿಯ ವೆಂಕಟಾಚಲಪಿಳ್ಳೆ ಬೀದಿಯಲ್ಲಿರುವ ಮಸೀದಿಯ ಹಿಂಭಾಗದ ತೋಟದಲ್ಲಿ 5-6 ಅಡಿ ಎತ್ತರವಿರುವ ಒಂದು ತೆಂಗಿನಮರದಲ್ಲಿ ಗೋಧುವೆಬಣ್ಣದ ಒಂದು ಆನೆಯ ತಲೆಯು ಹುಟ್ಟಿರುವದಂತೆ! ಇದಕ್ಕೆ ಕಣ್ಣುಗಳೂ, ಎರಡು ದಂತಗಳೂ ಇರುವವಂತೆ! ಪ್ರಾಣ ಮಾತ್ರವಿಲ್ಲವಂತೆ!

ಪ್ರತಿತಿಂಗಳ ಮೊದಲನೆಯ ಭಾನುವಾರವನ್ನು ಪರದೇಶೀವಸ್ತ್ರದ ಬಹಿಷ್ಕಾರದಿನವನ್ನಾಗಿ ಆಚರಿಸಬೇಕೆಂದು ಕಾಂಗ್ರೆಸ್ ಕಮಿಟಿಯವರು ನಿರ್ಣಯಮಾಡಿರುವರೆಂದೂ, ಅದರಂತೆ ಭಾರತೀಯರೆಲ್ಲರೂ ಆಚರಿಸಬೇಕೆಂದೂ, ಪರದೇಶೀವಸ್ತ್ರ ಬಹಿಷ್ಕಾರ ಮಂಡಲದವರು ವಿನಂತಿಮಾಡಿಕೊಂಡಿರುತ್ತಾರೆ.

ಮದ್ರಾಸ್ ಸರಕಾರದವರು ಮದ್ಯಪಾನವನ್ನು ನಿಲ್ಲಿಸುವದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಲು 4 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿರುತ್ತಾರೆ. ಅದಕ್ಕಾಗಿ ಅಲ್ಲಲ್ಲಿ ಕಮಿಟಿಗಳು ಏರ್ಪಾಡಾಗುವುವು. ಸ್ತುತ್ಯ! ಭರತಖಂಡದ ಇತರ ಸರಕಾರದವರೂ ಸಹ ಇತ್ತ ಕಡೆ ಲಕ್ಷ್ಯಕೊಡುವರೇ?

ಸುಮಾರು ಹತ್ತು ವರ್ಷಗಳ ಹಿಂದೆ ಕೆಳದವಡೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದ ಮೇಜರು ಜೇಮ್ಸ್ ಗಿಲ್ಲಿಸ್ ಎಂಬವರಿಗೆ ಮಾಸ್ಕೋವಿನ ಕುಶಲರಾದ ಡಾಕ್ಟರೊಬ್ಬರು ಶರೀರದ ಬೇರೆ ಬೇರೆ ಭಾಗಗಳ ಅಂಶಗಳನ್ನು ತೆಗೆದಿಟ್ಟು 44 ಸಾರಿ ಶಸ್ತ್ರಚಿಕಿತ್ಸೆಯನ್ನು ಮಾಡಿ ದವಡೆಯನ್ನು ಪೂರ್ತಿಗೊಳಿಸಿರುವರಂತೆ! ದವಡೆಯ ಎಲುಬನ್ನು ಸಹ ಹೊಸದಾಗಿ ಕೂಡಿಸಿರುವರಂತೆ!

ಕಲ್ಕತ್ತೆಯ ಗೋಣೀಚೀಲ ಮುಂತಾದದ್ದನ್ನು ತಯಾರ್ಮಾಡುವ ಒಂದು ಕಾರ್ಖಾನೆಯೊಳಗೆ (ಜೂಟ್‌ಮಿಲ್) ಯಂತ್ರಗಳನ್ನು ನಡಿಸುತ್ತಿದ್ದ ಇಂಜಿನ್ ಕಳೆದ ಗುರುವಾರ ಸಿಡಿದು ಭಾರಿ ಅನಾಹುತವಾಯಿತು. ಕಾರ್ಖಾನೆಯ ಒಂದು ಭಾಗದ ಮೇಲ್ಛಾವಣಿಯು ಕಿತ್ತು ಹಾರಿ ಕೆಲಸಗಾರರಲ್ಲಿ ಆರು ಮಂದಿ ಗಾಯಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಈ ಪೈಕಿ ಇಬ್ಬರು ಮೃತಪಟ್ಟರು. ಕಟ್ಟಡದ ಕೆಲವು ಭಾಗಗಳು ಒಡೆದು 40-50 ಅಡಿ ಮೇಲಕ್ಕೆ ಹಾರಿದವು.

ದರ್ಭಾಂಗದ ಮಹಾರಾಜಾಧಿರಾಜ ರಾಮೇಶ್ವರ ಸಿಂಗ್ ಬಹದ್ದೂರರವರು ಕಳೆದ 4 ನೆಯ ತಾರೀಖು ಗುರುವಾರ ತಮ್ಮ 68 ನೆಯ ವಯಸ್ಸಿನಲ್ಲಿ ಕಾಲವಾದರು. ಇವರು 1885 ನೆಯ ಇಸವಿಯಲ್ಲಿ ಬಂಗಾಳಾ ನ್ಯಾಯವಿಧಾಯಕಸಭೆಗೆ ಮೆಂಬರಾದರು. ರಾಜಕೀಯವಿಚಾರಗಳಲ್ಲಿ ತುಂಬಾ ಆಸಕ್ತರಾಗಿದ್ದರು. ತುಂಬಾ ಐಶ್ವರ್ಯವಂತರು. ಕೇವಲ ಧರ್ಮಕಾರ್ಯಗಳಿಗಾಗಿ 40 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ದಾನಮಾಡಿರುತ್ತಾರೆ. ಸ್ತ್ರೀವಿದ್ಯಾಭ್ಯಾಸವನ್ನು ಹರಡುವದರಲ್ಲಿ ತುಂಬಾ ಆಸಕ್ತರಾಗಿದ್ದರು. ಹಿಂದೂ ವೈದಿಕಧರ್ಮದ ಮೇಲೆ ಅವರಿಗೆ ತುಂಬಾ ಅಭಿಮಾನವಿದ್ದಿತು. ಹಿಂದೂ ಯೂನಿವರ್ಸಿಟಿ ಸೊಸೈಟಿಗೂ ಭಾರತಧರ್ಮ ಮಹಾಮಂಡಲಕ್ಕೂ ಅಧ್ಯಕ್ಷರಾಗಿದ್ದರು. ಇವರ ಮರಣದಿಂದ ಭಾರತೀಯರು ಒಂದು ಅಮೂಲ್ಯರತ್ನವನ್ನು ಕಳೆದುಕೊಂಡರೆನ್ನುವದರಲ್ಲಿ ಸಂದೇಹವಿಲ್ಲ.

ಅಫ್ಘಾನಿಸ್ಥಾನದ ಹಬೀಬುಲ್ಲನೂ ನಾದಿರ್ ಖಾನನೂ ದೊರೆತನಕ್ಕೆ ಪರಸ್ಪರ ಹೊಡೆದಾಡುವುದು ಇನ್ನೂ ಮುಕ್ತಾಯವಾಗಲಿಲ್ಲ. ಹತ್ತು ದಿನಗಳ ಹಿಂದೆ ನಾದಿರ್‌ಖಾನನ ಮುಖ್ಯ ಠಾಣ್ಯವಾಗಿದ್ದ ಗಾರ್ಡೆಜ್ ಪಟ್ಟಣವನ್ನು ಹಬೀಬುಲ್ಲನ ಕಡೆಯ ಸೈನಿಕರು ಗೆದ್ದು ಸ್ವಾಧೀನಪಡಿಸಿಕೊಂಡರು. ಆದರೆ ಕಾಬೂಲಿಗೂ ಗಾರ್ಡೆಜಿಗೂ ನಡುವೆ ಕದನಗಳಾದವೆಂದೂ, ಹಬೀಬುಲ್ಲನ ಸೈನಿಕರು ಸೋತು ತುಂಬಾ ನಷ್ಟಪಟ್ಟರೆಂದೂ ತಿಳಿದುಬರುತ್ತದೆ. ನಾದಿರ್‌ಖಾನನು ಹಬೀಬುಲ್ಲನ ಸಹೋದರನನ್ನು ಸೆರೆ ಹಿಡಿದಿರುವಂತೆ ಸಮಾಚಾರವಿದೆ. ಹಬೀಬುಲ್ಲನು ತುಂಬಾ ಕ್ರೂರಸ್ವಭಾವದವನಾಗಿರುವುದನ್ನು ಕಂಡು ಅಫ್ಘಾನವಂಶೀಯರನೇಕರು ಅವನ ಮೇಲೆ ತಿರುಗಿಬೀಳುತ್ತಿರುವುದಾಗಿಯೂ, ಇತ್ತಲಾಗಿ ನಾದಿರ್‌ಖಾನನಿಗೆ ಕೆಲವು ಐಶ್ವರ್ಯವಂತರಾದ ಸರ್ಹಿಯಾವರ್ತಕರ ಸಹಾಯವೂ ಬೆಂಬಲವೂ ದೊರಕಿರುವುದಾಗಿಯೂ ತಿಳಿದುಬರುತ್ತದೆ. ತೀರ್ಥಗೆ ಪ್ರಯಾಣಮಾಡಿದ ಅಮಾನುಲ್ಲರು ಪತ್ನಿಸಮೇತ ಮಾರ್ಸೇಲ್ಸಿನಲ್ಲಿ ಇಳಿದು ಕೆಲವು ದಿನ ಫ್ರಾನ್ಸಿನಲ್ಲಿದ್ದು ಆ ಬಳಿಕ ಇಟಲಿಗೆ ಪ್ರಯಾಣಮಾಡುವರು. ಇಟಲಿಯ ಮಂತ್ರಿಶ್ರೇಷ್ಠರಾದ ಮುಸೊಲೀನಿಯವರು ಅಮಾನುಲ್ಲರನ್ನು ಸತ್ಕಾರಪೂರ್ವಕವಾಗಿ ಸ್ವೀಕರಿಸುವುದಾಗಿ ಅವರಿಗೆ ತಿಳಿಸಿರುತ್ತಾರೆ. ಅಮಾನುಲ್ಲರ ಸಹೋದರರಾದ ಇನಾಯತುಲ್ಲರು ಮೆಸೋಪೊಟೇಮಿಯಾಮಿಗೆ (ಇರಾಕ್ ಸೀಮೆ) ಹೋಗುವುದಕ್ಕಾಗಿ ತಾ|| 5 ನೇ ಶುಕ್ರವಾರ ಬೊಂಬಾಯಿನಿಂದ ಜಹಜಿನಲ್ಲಿ ಪ್ರಯಾಣಮಾಡಿದರು. ಇವರು ಇರಾಕಿನಿಂದ ಸರ್ಹಿಯಾವಿಗೆ ಹೋಗುವರು.

ಕಳೆದ ಫೆಬ್ರುವರಿ ತಿಂಗಳಲ್ಲಿ ಬೊಂಬಾಯಿ ಪಟ್ಟಣದಲ್ಲಿ ಹಿಂದೂ ಮಹಮ್ಮದೀಯರಿಗೆ ಭಯಂಕರವಾದ ಕದನ ಕಡಿದಾಟಗಳಾದವು. ಅದರ ಪೂರ್ವೋತ್ತರವನ್ನು ತನಿಖೆಮಾಡುವುದಕ್ಕೆ ಸರ್ಕಾರದವರು ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ. ಈ ಕಮಿಟಿಯವರು ಪ್ರಜಾಮುಖಂಡರನ್ನು ಬರಮಾಡಿಕೊಂಡು ಅವರ ಹೇಳಿಕೆಗಳನ್ನು ಬರೆದುಕೊಳ್ಳುತ್ತಿದಾರೆ. ಹಿಂದೂ ಮಹಮ್ಮದೀಯರಲ್ಲಿ ಅವಿದ್ಯಾವಂತರಾದವರ ಪರಸ್ಪರ ದ್ವೇಷಾಸೂಯೆಗಳೇ ಈ ಕ್ರೂರಕೃತ್ಯಗಳಿಗೆ ಮುಖ್ಯ ಕಾರಣವೆಂದು ಸಾಕ್ಷಿಗಳು ನುಡಿದಿದ್ದಾರೆ. ಮಿಲ್ಲುಗಳಲ್ಲಿ ಕೆಲಸಮಾಡುವ ಹಿಂದುಗಳು ಮುಷ್ಕರಹಿಡಿದು ನಿಂತುಬಿಟ್ಟಾಗ ಯಜಮಾನರು ಅವರ ಕೆಲಸಗಳಿಗೆ ಪಠಾಣರನ್ನು ನೇಮಕಮಾಡಿದರು. ಈ ಪಠಾಣ ಜನರಿಗೆ ಹೆಚ್ಚು ಕೂಲೀಕೊಡುತ್ತಿದ್ದರು. ಇದರಿಂದ ಮೇಲ್ಕಂಡ ದ್ವೇಷಾಸೂಯೆಗಳು ಮತ್ತಷ್ಟು ಹೆಚ್ಚಿಹೋದವು. ದಂಗೆ ನಡೆದಾಗ ಸರ್ಕಾರದವರು ಅದನ್ನು ಅಣಗಿಸುವುದಕ್ಕೆ ದರ್ಪವುಳ್ಳಕಾರ್ಯಗಳನ್ನು ನಡೆಸದೆಹೋದದ್ದು ಸರ್ಕಾರದ ತಪ್ಪಾಗಿದೆ. ಕೆಲವುಕಾಲದಿಂದೀಚೆಗೆ ಅನೇಕ ಜನರು ಸರ್ಕಾರದವರನ್ನು ಕ್ರೂರಾತ್ಮಗಳೆಂದು ಭಾಷಣಗಳನ್ನು ಮಾಡಿ ಜರೆಯುತ್ತಾ ಬಂದದ್ದರಿಂದ ಗಂಡಾಂತರಪ್ರಾಪ್ತವಾದಾಗ ಗವರ್ನಮೆಂಟಿನವರು ಪ್ರಜಾಸಮ್ಮತಿಯನ್ನು ಕಾಪಾಡುವುದಕ್ಕೆ ಹೆದರಿ ಏನೂ ಮಾಡಲಾರದೇಹೋದರು. ಬೊಂಬಾಯಿನ ಪೋಲಿಸ್ ಸಿಬ್ಬಂದಿಯನ್ನು ಹೆಚ್ಚುಮಾಡಬೇಕೆಂದೂ, ಪೋಲಿಸಿನವರು ಅಪಾಯಸಂಭವಿಸುವ ಸಮಯಗಳಲ್ಲಿ ಬಂದೂಕಗಳನ್ನು ಉಪಯೋಗಿಸುವ ಸಾಮರ್ಥ್ಯವಿರುವಂತೆ ಅವರಿಗೆ ಶಿಕ್ಷಣವನ್ನು ಕೊಡಬೇಕೆಂದೂ ಕೆಲವು ಸಾಕ್ಷಿಗಳು ಹೇಳಿದರು. ವಿಚಾರಣೆಯು ಇನ್ನೂ ನಡೆಯುತ್ತಲೇ ಇದೆ.

ಜನರಲ್ಲಿ ಅಂಟುರೋಗಗಳನ್ನು ಹರಡುವ ಕ್ರಿಮಿಕೀಟಗಳು.

(ಆರೋಗ್ಯಚಂದ್ರಿಕೆ)

ಸಾಮಾನ್ಯವಾಗಿ ಮಲೇರಿಯ, ಪ್ಲೇಗು, ಆಮಶಂಕೆ, ಮುಂತಾಗಿ ಮನುಷ್ಯರಿಗೆ ಪ್ರಾಣಾಪಾಯವನ್ನುಂಟುಮಾಡುವ ರೋಗಗಳನ್ನು ಒಬ್ಬನಿಂದ ಮತ್ತೊಬ್ಬನಿಗೆ ಹರಡಿಸುವ ಕ್ರಿಮಿಗಳನ್ನು ಕುರಿತು ಎಲ್ಲರಿಗೂ ಸ್ವಲ್ಪಮಟ್ಟಿನ ತಿಳುವಳಿಕೆಯಿರುವುದು ಅತ್ಯವಶ್ಯಕವು.

ಸಾಧಾರಣವಾಗಿ ಎಲ್ಲಾ ಕೀಟಜಾತಿಗಳಿಗೂ ಮೂರು ಜೋಡುಕಾಲುಗಳಿವೆ. ಮತ್ತು ಎರಡು ಜೋಡಿ ರೆಕ್ಕೆಗಳಿವೆ. ಕಾಲುಗಳೂ ರೆಕ್ಕೆಗಳೂ ಎದೆಭಾಗದಲ್ಲಿರುವವು. ಈ ಎದೆಯ ಭಾಗವು ಒಂದುಕಡೆ ಕೊರಲಮೂಲಕವಾಗಿ ತಲೆಗೆ ಜೋಡಿಸಲ್ಪಟ್ಟಿದೆ. ಮತ್ತೊಂದುಕಡೆ ಇದು ಉದರದೊಡನೆ ಸೇರಿಕೊಂಡಿರುವುದು. ತಲೆಯಲ್ಲಿ ಕಣ್ಣುಗಳೂ, ಬಾಯಿಯೂ, ಸ್ಪರ್ಶೇಂದ್ರಿಯವೂ ಇವೆ. ಉದರಭಾಗವು ಒಂಭತ್ತು ಉಂಗುರಗಳ ಜೋಡಣೆಯಿಂದ ಉಂಟಾಗಿದೆ.

ಮನುಷ್ಯರಿಗೆ ಅಪಾಯವನ್ನುಂಟುಮಾಡುವುದರಲ್ಲಿ (1) ಹೇನು, (2) ತಿಗುಣೆ, (3) ಚಿಗಟ, (4) ನೊಣ, (5) ಸೊಳ್ಳೆ ಇವೈದೂ ಈ ದೇಶದಲ್ಲಿ ಮುಖ್ಯವಾದುವು.

೧. ಹೇನು.

ಮೂರು ಜಾತಿಯ ಹೇನುಗಳಿವೆ. ತಲೆಕೂದಲಲ್ಲಿರುವುದು ಒಂದುಜಾತಿಯದು. ಬಟ್ಟೆಗಳಲ್ಲಿ ಇರುವುದು ಇನ್ನೊಂದು ಜಾತಿಯದು. ದೇಹದ ಕೆಲವುಭಾಗಗಳ ರೋಮಗಳಲ್ಲಿ ಇರುವದು ಮೂರನೇ ಜಾತಿಯದು. ಮೊದಲನೇ ಜಾತಿಯ ಹೇನು 50-60 ತತ್ತಿಗಳನ್ನೂ, ಎರಡನೆಯ ಜಾತಿಯದು 70-80 ತತ್ತಿಗಳನ್ನೂ, ಮೂರನೇ ಜಾತಿಯದು 10-15 ನ್ನೂ ಇಡುವವು. ಮೊದಲನೇ ಮತ್ತು ಮೂರನೇ ಜಾತಿಯ ತತ್ತಿಗಳು ಆಯಾಭಾಗದ ಕೂದಲುಗಳಿಗೆ ಅಂಟಿಕೊಂಡೇ ಇರುವವು. ಎರಡನೇ ಜಾತಿಯ ಹೇನಿನ ಮೊಟ್ಟೆಗಳು ಬಟ್ಟೆಗಳ ಎಳೆಗಳಿಗೆ ಅಂಟಿಕೊಳ್ಳುವವು. ರೋಮಗಳಲ್ಲಿರುವ ತತ್ತಿಗಳು 6-7 ದಿನದಲ್ಲಿ ಒಡೆದು ಮರಿಗಳು ಹೊರಡುವವು. ಬಟ್ಟೆಯೊಳಗಳಲ್ಲಿನ ತತ್ತಿಗಳು 3-4 ದಿನಗಳಲ್ಲಿಯೇ ಒಡೆದು ಮರಿಗಳು ಹೊರಡುವವು. ಮರಿಗಳು ತಾಯಿಯನ್ನೇ ಬಹಳವು ಬೇಗ ಹೋಲುತ್ತಿರುವವು. ಅವು ಯಾವನ ಕೂದಲಲ್ಲಿ ಅಥವಾ ಬಟ್ಟೆಗಳಲ್ಲಿ ಇರುವವೋ, ಅವನ ನೆತ್ತರನ್ನು ಹೀರಿ, ಬೆಳೆದು, [illegible]

[illegible]

೨. ತಗುಣೆ.

[illegible]

[illegible]

ಕೀಟಗಳ ಕಾಟವನ್ನು ತಪ್ಪಿಸಬೇಕಾಗಿದ್ದರೆ, ಮನೆಗಳ ಕಸಕಡ್ಡಿಗಳನ್ನೂ, ಇಲಿಗಳೂ ಆಹಾರದ ಅದು ಸಾಧ್ಯವಾದ ಮಾತ್ರ ಪ್ಲೇಗುರೋಗ ಬಂದೀತೆಂಬ ಹೆದರಿಕೆ ಅವಕಾಶವಿಲ್ಲ. ಕೀಟಗಳು ಮನೆಯಲ್ಲಿರದಂತೆ ಕಾಪಾಡುವದಾದರೆ, ಅಂಥ ಮನೆಯ ಒಳಭಾಗಗಳನ್ನು ಆರು ಘಂಟೆಗಳ ಕಾಲಕ್ಕೆ ಪಟ್ಟಿಗೆ ಸೂರ್ಯಪ್ರಕಾಶದಲ್ಲಿ ಇರಗೊಳಿಸಬೇಕಾಗಿದೆ. ಹಂಚು ಹಾಸಿರುವ ಮನೆಗಳ ಹಂಚನ್ನೇ ಕೊಂಚ ಕಾಲಕ್ಕೆ ಎತ್ತುವದು ಮೇಲು. ಹುಲ್ಲು ಮುಚ್ಚಿದ ಕೋಣೆಗಳಮಟ್ಟಿಗೆ ಇದು ಸಾಧ್ಯವಲ್ಲವಾದಕಾರಣ ಫಿನ್ನಾಯಿಲ್ ಮಿಶ್ರಣದ ನೀರನ್ನು ಗೋಡೆಗಳ ಮೇಲೂ, ಮುಚ್ಚಿಗೆಯ ಮೇಲೂ ಚೆನ್ನಾಗಿ ಚಿಮುಕಿಸಿದರೆ ಗುಣ ಉಂಟು. ಒಂದೆರಡು ದಿನಗಳ ನಂತರ ಸುಣ್ಣ ಬಳಿಸಬೇಕು. ಕೋಳಿಯನ್ನು ಗುಡಿಸಿ ಸುಡುವದರಮೂಲಕ ಈ ಕ್ರಿಮಿಗಳನ್ನು ನಿರ್ಮೂಲಗೊಳಿಸಬಹುದು. ಇಲಿಗಳು ಮತ್ತೆ ಒಳಕ್ಕೆ ಬಾರದಂತೆ ಮಾಡುವದರಿಂದ ಪುನಃ ಈ ಕೀಟಗಳ ಬಾಧೆಯು ಉಂಟಾಗದಂತೆ ಮಾಡಬಹುದು. ಇಲಿಗಳು ಆಹಾರವನ್ನು ಹುಡುಕಿಕೊಂಡೇ ಒಳಕ್ಕೆ ಬರುವವು. ಕಸವೂ, ಕೊಳೆಯೂ, ಆಹಾರಪದಾರ್ಥಗಳು ಇಲ್ಲದಿರುವಲ್ಲಿ ಇಲಿಗಳು ಸುಳಿಯುವಂತಿಲ್ಲ.

ನೊಣಗಳು.

ರಕ್ತಹೀರುವಜಾತಿಗೆ ಸೇರಿದ ನೊಣಗಳೆಂದೂ, ಬೇರೆ ಕೆಲವು ರಕ್ತ ಹೀರದಿರುವಕಾರಣ ಕಚ್ಚದ ನೊಣಗಳೆಂದೂ, ನೊಣಗಳಲ್ಲಿ ಎರಡು ಮುಖ್ಯಜಾತಿಗಳಿವೆ. ರಕ್ತಹೀರುವ ನೊಣಗಳಲ್ಲಿ ಸುಮಾರು 2000 ಜಾತಿಗಳಿವೆ. ಮರಳುನೊಣ ಮತ್ತು ಮನೆಯ ನೊಣಗಳೆಂಬ ಎರಡುಬಗೆಯ ನೊಣಗಳು ಮದ್ರಾಸಿನಲ್ಲಿ ವಿಶೇಷವಾಗಿವೆ.

ಮರಳುನೊಣ.

ಇದು ಬಲು ಚಿಕ್ಕದು. ಸೊಳ್ಳೆ ಪರದೆಗಳ ಎಡೆಗಳಿಂದಲಾದರೂ ಇದು ನುಸುಳಬಲ್ಲುದು. ಹಗಲು ಹೊತ್ತಿನಲ್ಲಿ ಮನೆಗಳ ತಂಪಾದ ಮೂಲೆಗಳಲ್ಲೂ, ಇಟ್ಟಿಗೆಗಳ ಅಡಿಯಲ್ಲೂ, ಮರಗಳ ಪೊಟರೆಗಳಲ್ಲೂ, ಬಾಗಿಲು, ಪುಸ್ತಕ, ಚಿತ್ರಪಟಗಳ ಹಿಂದೆಯೂ ಪಾಯಖಾನೆಗಳಲ್ಲಿಯೂ ಅಡಗಿಕೊಂಡಿರುವದು. ಮನುಷ್ಯನು ದೊರೆತಾಗ ಅವನ ನೆತ್ತರನ್ನೂ, ಇಲ್ಲದಿದ್ದಲ್ಲಿ ಹಸುವಾರು, ನಾಯಿ, ಕಪ್ಪೆ, ಹಲ್ಲಿ ಇವುಗಳ ನೆತ್ತರನ್ನೂ ಹೀರಿ ತೃಪ್ತಿಹೊಂದುವದು. ಅದು ಹಾರಾಡುವಾಗ ಸದ್ದಿರುವದಿಲ್ಲ. ಸುಮಾರು 36-46 ಘಂಟೆಗಳಿಗೊಮ್ಮೆ ಅದಕ್ಕೆ ಆಹಾರವು ಬೇಕಾಗುವದು.

ತತ್ತಿಗಳು ಕೊಂಚ ಉದ್ದವಾಗಿ ಅಂಡಾಕಾರವಾಗಿವೆ. ಉದ್ದಕ್ಕೆ ಕರಿಯ ಗುರುತುಗಳಿವೆ; ಇವು ಗೋಡೆಯ ಅಥವಾ ಕಲ್ಲುಗಳ ಬಿರುಕು ಸಂದುಗಳಲ್ಲಿ ಒಂದೊಂದಾಗಿಡಲ್ಪಡುವವು. ಸೆಕೆಕಾಲದಲ್ಲಿ 4-6 ದಿನಗಳಲ್ಲೇ ತತ್ತಿಗಳೊಡೆಯುವವು; ಚಳಿಗಾಲದಲ್ಲಿ 14 ದಿನಗಳ ಕಾಲವು ಬೇಕಾಗುವದು. ಹುಟ್ಟಿದ ಕ್ರಿಮಿಗಳು ಬಹು ಚಿಕ್ಕದಾದಕಾರಣ ಕಣ್ಣಿಗೆ ಬೀಳುವದೇ ಕಡಿಮೆ.

ಈ ನೊಣವು ಒಂದುಬಗೆಯ ಜ್ವರವನ್ನು ಹರಡುವಂಥದಾಗಿದೆ. ಇವುಗಳನ್ನು ನಿರ್ಮೂಲಿಸುವದು ಸುಲಭವಲ್ಲ. ಅವುಗಳು ಅಡಗಿಕೊಂಡಿದ್ದ ಕಡೆಯಲ್ಲಿ, ಅಥವಾ ಅವು ತತ್ತಿಗಳನ್ನಿಟ್ಟಿರಬಹುದಾದ ಸ್ಥಳದಲ್ಲಿ ನೂರಕ್ಕೊಂದುಪಾಲು ಫಾರ್ಮಲಿನ್ ಬೆರಸಿದ ನೀರಿನಿಂದ ಚಿಮುಕಿಸುವದೇ ಉತ್ತಮೋಪಾಯವೆನ್ನಬಹುದಾಗಿದೆ.

(ಸಶೇಷ.)

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.

ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [14]

ಎಂ. ಎಸ್. ಗಂಗಂಣ ಮತ್ತು ಲೋಕಂಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು.

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [49]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟ (ಕೆಟಲಾಗ್) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಉಚಿತ! ಉಚಿತ!! ಉಚಿತ!!!

ಪ್ರಸವಕಾಲದಲ್ಲಿ ಪ್ರಥಮ ಚಿಕಿತ್ಸೆ.

ಸುಮಾರು ನೂರು ಪುಟಗಳನ್ನೊಳಕೊಂಡ ಸಚಿತ್ರವಾದ ಪುಸ್ತಕ.

(ಆನರಬಲ್ ಡಾಕ್ಟರ್ ಯು. ರಾಮರಾಯರಿಂದ ರಚಿತವಾದುದು.)

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಲ್. ಸಿ. ಮದರಾಸು. "ಮುದ್ದಾದ ಈ ಸಣ್ಣ [illegible] ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಮದರಾಸು ಮೆಯಿಲ್ ಪತ್ರಿಕೆ:—2-3-28. ಇದು [illegible] ಕೈಯಲ್ಲಿ ರಚಿತವಾದ ಉತ್ತಮ ಪುಸ್ತಕ."

"ಪ್ರಾಕ್ಟಿಕಲ್ ಮೆಡಿಸಿನ್" ಡೆಲ್ಲಿ—ಇದು ನಮ್ಮ [illegible] ಪ್ರತಿ ಹೆಂಗಸರಿಗೆಲ್ಲ ಅವಶ್ಯವಾದ ಪುಸ್ತಕವೆಂದು ನಾವು [illegible]ದಿಸುವೆವು.

[illegible]ಪತ್ರಿಕೆ:-4-4-28. "ಆನರಬಲ್. ಡಾ. ಯು. [illegible]ರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದ [illegible] ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, [illegible] ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ [illegible] ಕೊಳ್ಳಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. [illegible]

ದೇಹಪೋಷಣೆ ಮತ್ತು ಆ ಕಾಲಗಳಲ್ಲಿ ಸಂಭವಿಸಬಹುದಾದ ರೋಗಗಳಿಗೆ ನಿವಾರಣೋಪಾಯಗಳು, ಮುಂತಾದುವೆಲ್ಲ ವಿವರಿಸಲ್ಪಟ್ಟಿವೆ."

ಡೇಯಿಲಿ ಎಕ್ಸ್‌ಪ್ರೆಸ್, ಮದರಾಸು:—4-3-28. ಜನರಿಗೆ ಆರೋಗ್ಯಜ್ಞಾನವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಡಾ. ಯು. ರಾಮರಾಯರ ಪ್ರಯತ್ನಗಳು ಸುಪ್ರಸಿದ್ಧವಾಗಿವೆ. ಈಗ ಹೊಸದಾಗಿ ಇವರು ಹೊರಕ್ಕೆ ತಂದಿರುವ ಈ ಸಣ್ಣ ಪುಸ್ತಕವು ನಮ್ಮ ದೇಶದ ಸ್ತ್ರೀ ಜಾತಿಗೆ ಅತ್ಯಂತೋಪಕಾರಕವೆಂದು ನಾವು ದೃಢವಾಗಿ ಹೇಳುವೆವು."

ಮೈಸೂರು ಪೇಟ್ರಿಯೇಟ್:—12-4-28. "ಇದು ತಮ್ಮ ದೇಹಾರೋಗ್ಯವನ್ನೂ, ತಮ್ಮ ಮಕ್ಕಳ ಪುರೋಭಿವೃದ್ಧಿಯನ್ನೂ ಬಯಸುವ ಪ್ರತಿ ಹೆಂಗಸರೂ ಅವಶ್ಯವಾಗಿ ಓದಬೇಕಾದ ಪುಸ್ತಕವಾಗಿದೆ. ಇದರಲ್ಲಿ, ಸ್ತ್ರೀಯರಿಗೆ ಗರ್ಭಕಾಲದಲ್ಲಿ ಆರೋಗ್ಯ [illegible] ಪ್ರಸವಕಾಲದಲ್ಲಿ ಸಂಭವಿಸಬಹುದಾದ ಆಪಾಯಗಳಿಗೆ [illegible] 14 ಅಧ್ಯಾಯಗಳಾಗಿ ವಿಭಾಗಿಸಿ ಬರೆಯಲ್ಪಟ್ಟಿದೆ. ಯು. ರಾಮರಾಯರು ಹೀಗೆ ಸಾರ್ವಜನಿಕ ಕ್ಷೇಮಕ್ಕಾಗಿ ಬರೆದಿರುವ ಅನೇಕ ಪುಸ್ತಕಗಳು ಇಂಗ್ಲೀಷಿನಲ್ಲಿ ಮಾತ್ರವಲ್ಲದೆ ಅನೇಕ ದೇಶಭಾಷೆಗಳಲ್ಲಿಯೂ ಪರಿವರ್ತಿಸಲ್ಪಟ್ಟಿವೆ. ಪುಸ್ತಕದ ಮೂಲ್ಯವು ಸ್ವಲ್ಪವಾಗಿದ್ದರೂ, ಅದರಿಂದ ಜನಸಮುದಾಯಕ್ಕೆ ಉಂಟಾಗುವ ಪ್ರಯೋಜನವು ಅಮೂಲ್ಯವೇಸರಿ."

ಪುಸ್ತಕದ ಬೆಲೆ, ಆರು ಆಣೆಗಳು ಮಾತ್ರ. ಅಂಚೆವೆಚ್ಚಕ್ಕಾಗಿ ಬೇರೇನೂ ಕೊಡಬೇಕಾಗಿಲ್ಲ.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕಗಳನ್ನು [illegible] ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

[illegible] ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮನೀಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [3]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

[ಸೌಖ್ಯದ ಜಗತ್ತು] [ಅದೇನು ನೋಡೋಣ!

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ [illegible]ಯಶಕ್ಕಾಗಿ [illegible]ರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧೆ

ಧಿಕ್ಕರಿಸಿದರೆ, ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ [illegible]ಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಿ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, [illegible]ರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು [illegible]ವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ ಮತ್ತು [illegible] ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. [illegible] ವನಸ್ಪತಿ-ಶತಪುಷ್ಪ, ಕಾಲಿಮುಸಳಿಕಂದ, ಮಧುಕಂದ, ಜಪಾಕಂದ, ಕಾಲೀಮುಸಳೀಕಂದ, ಅಶ್ವಗಂಧ ಸ್ತ್ರೀಷ್ಮಕಂದ, ಮುಸಳೀಕಂದ [illegible]ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀ [illegible], ಚಿಕಣದಪಂಚಾಂಗ, ಅದರ ಎಳ್ಳಿನಪಂಚಾಂಗ, ತಮಪತ್ರಿ, ಪಿತಾಪತ್ರಿ, ಮದನಮಸ್ತ, ರತನಪುರುಷ, ಕಮರ [illegible] [illegible]

[1]

ಶ್ಯ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಕಾಪಿಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗ ಔಷಧಗಳು) ಎಂಬ "ಜೀವಪುಟ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲಿಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲಿಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೨ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲಿಗೆ ४೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಿಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹನಾಶೆಯು ೧ ತೊಲೆಯ ಚಿತ್ ೧ ಕ್ಕೆ ೧.೨ ಆಣೆ [illegible] ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ [illegible] ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬೇಕಾದವರು ೧ ಆಣೆಯ ಸ್ಟಾಂಪು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ್ ಓಖಿಮಠ, ಜಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[15] (ಕಳಲ) ಗಂಜೀಪೇಟ, ಪುಣಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗ[...] ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರ[...] ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡು[...] ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿ[...] ಕೊಡಲ್ಪಡುವವು. ಮುದ್ರಣದ ಸೊಬಗನ್ನ ಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹು[ದು].

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರ[ು].

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಅ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾ[ವತಾರದ] ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾ[ವತಾರ]ದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐದು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗು[ವುದು].

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸು[ವ]
ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆ[...] ನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂ[ರ್ಣ] ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾ[ತರೂ] ಆದ ವೇ|| ಶಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳ[ವರು] ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕ[ನ್ನಡ] ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರ[ವನ್ನು] ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರ[ಚಿಸಿದ] ವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. [ವೀರ]ಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವ[ರು ಈ] ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2[...]
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1[...]
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1[...]

ವಿಳಾಸ:—ವೇ|| ಚನ್ನಯ್ಯ ಹೊಸಮ[ಠ]
ಪೋಸ್ಟು ಹರಿಹರ, ಡಿ|| ಚಿತ್ರದು[ರ್ಗ]

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ[ಪುಡಿ]ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿ[...] ಇದನ್ನು ಉಪಯೋಗಿಸಿ, ಸಾವಿರಾರುಗಳ[...]

(Registered Trade Mark)

ಯೋಗ್ಯತಾಪತ್[ರಗಳ]ನ್ನು ಕೊಟ್ಟಿ[ರುವ]ರು. ಪ್ರಸಿದ್ಧ[...] ಈ ನಶ್ಯದ [...]ಯಿಂದ ಸ್ವಸ್ಥವಾ[ಗುವ]ವ ವ್ಯಾಧಿಗಳು [...]ವವೆಂದರೆ:—[...] ಒಂಟಿ ತಲೆಸೋ[...] ತಲೆಯಲ್ಲಿನ ರೋ[ಗ]ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿ[ಗಳು] ಜಲದೋಷ ಮುಂತಾದ ವ್ಯಾಧಿಗಳು ಪರಿಹಾರಿಂ[...]ವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗ[ಳನ್ನು] ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚ[ಿಸು]ತ್ತದೆ. ಮೂರುಬೆಪ್ಪಿನ ಸಾಧಾರಣ ನಶ್ಯದ [...] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯ[ನ್ನು] ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. [ಇದ]ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕು[...] ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ[...] ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦[...]
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮[...]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ [ಸ್ಪಷ್ಟ]ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿ[ಟೆಡ್]

[3] ಪೋ. ಬಾ. ೫೧೦, ಮದರ್[...]

[R]EGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

[ಸ್ಥ]ಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಜುಲೈ ೧೯೨೯ [ಸಂಚಿಕೆ ೧೧.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವೀಕಾರ.

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ ಗ್ರಾಮದ ದೈವದವರು ಶ್ರೀ ಗಂಗಾಧರೇಶ್ವರನ ತೇರ[ನ್ನು] ನೂತನವಾಗಿ ನಿರ್ಮಿಸಿ ಜೇಷ್ಠ ಬ|| ೯ ಸೋಮವಾರ ದಿವಸ ಅತ್ಯಂತ ವೈಭವದಿಂದ ಉತ್ಸವವನ್ನು [ನೆ]ನೇರಿಸಿದ ಸಮಯದಲ್ಲಿ ಸದರಿಗ್ರಾಮದ ಬೃಹನ್ಮಠಾ[ಧ್ಯ]ಕ್ಷರಾದ ಶ್ರೀಚರಮೂರ್ತಿ ಸ್ವಾಮಿಗಳವರ ಅಪ್ಪಣೆ[ಯ] ಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 10 [ರೂ]ಪಾಯಿಗಳು ಮ|| ರಾ|| ಮಹಾದೇವಪ್ಪ ಕೋಳಿ[ವಾ]ಡ ಇವರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವಜಿಲ್ಲಾ ಘೋಡಗೇರಿಯಲ್ಲಿರುವ ಮ|| [ರಾ]|| ಶಿದ್ಧಲಿಂಗಪ್ಪ ಲಿಂಗಪ್ಪಾ ಹೂಗಾರ ಇವರ [ಪತ್ನಿ]ಯವರು ಗರ್ಭಿಣಿಯಾಗಿದ್ದು ಅತಿಶಯ ರೋಗಪೀ[ಡಿತ]ರಾಗಿ ಎಂತೆಂತಹ ಔಷಧೋಪಚಾರಗಳಿಂದಲೂ ಗು[ಣ]ವಾಗದೆ ಇದ್ದು, ಮ|| ರಾ|| ಮಲ್ಲಪ್ಪಣ್ಣಾ ಗುಡಕೇತ್ರಿ[ಯ]ವರ ಅಭಿಪ್ರಾಯದಂತೆ, ಶ್ರೀ ಜಗದ್ಗುರು ಪಂಚಾ[ಚಾ]ರ್ಯರ ನಾಮಸ್ಮರಣಪ್ರಭಾವದಿಂದ, ಇವರ ಧರ್ಮ[ಪತ್ನಿ]ಗೆ ಸುಖಪ್ರಸವವಾಗಿ (8 ತಿಂಗಳಾಗಿದ್ದುದರಿಂದ [ಶಿಶು]ವು ಬಹು ದಿವಸ ಜೀವಿಸದಿದ್ದರೂ) ಬಾಣಂತಿಯು [ಮಾ]ತ್ರ ಸಂಪೂರ್ಣ ಗುಣಹೊಂದಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿರುತ್ತಾರೆ.

ಧಾರವಾಡ ಡಿ|| ಹಾನಗಲ್ಲ ತಾ|| ಆಲೂರು ವೇ|| ಮಳಿಯಯ್ಯನವರು ರಾಚಯ್ಯನವರು ಮಠದ ಇವರು ಆಲೂರು ಗ್ರೂಪ್ ಶೇತಕೀಸಂಘಕ್ಕೆ ತಮ್ಮನ್ನು ಸೆಕ್ರೆಟರಿಯನ್ನಾಗಿ ನೇಮಿಸಿಕೊಂಡ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 4 ರೂಪಾಯಿಗಳನ್ನು ಸಮರ್ಪಿಸಿರುತ್ತಾರೆ.

ನಗರದ ತಾ|| ಹುಂಚದ ಹೋಬಳಿ ಅವ್ವಕದ ಮ|| ರಾ|| ಸಿದ್ಧಪ್ಪಗೌಡರ ಪುತ್ರಿ ಚಿ|| ಸೌ|| ಹಾಲಮ್ಮನನ್ನು ಸದರಿ ತಾ|| ಅನಗೆರಸಿಯ ಮ|| ರಾ|| ಮಲ್ಲಪ್ಪಗೌಡರ ಪುತ್ರ ಚಿ|| ಪುಟ್ಟಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವೇ|| ಹುಂಚದ ರುದ್ರಾರಾಧ್ಯರ ಅಭಿಪ್ರಾಯದ ಮೇರೆಗೆ ವಧುವಿನಿಂದ ಸಮರ್ಪಿಸಲ್ಪಟ್ಟ 1 ರೂ. ವರನಿಂದ ಸಮರ್ಪಿಸಲ್ಪಟ್ಟ 1 ರೂ. ಜುಮ್ಲಾ 2 ರೂಪಾಯಿಗಳು ವೇ|| ರುದ್ರಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗಬೆಟಗೇರಿಯಲ್ಲಿರುವ ಮ|| ಬಸಪ್ಪ ಬಿನ್ ದೊಡ್ಡಬಾಳಪ್ಪಾ ಕುಂಬಾರ ಇವರು 'ಪಂಚಾಚಾರ್ಯಪ್ರಭಾ' ಪತ್ರಿಕೆಯಲ್ಲಿ ಪ್ರಕಟವಾಗುವ ಧರ್ಮಸಂಬಂಧವಾದ ಲೇಖನಗಳನ್ನು ಓದಿ ಮನಸ್ಸಿಗೆ ಅತ್ಯಾನಂದವಾದುದರಿಂದ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ನೀಲಪ್ಪಗೌಡ ಹಿರೇಮನಿಪಾಟೀಲ ಇವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ರಾಣೆಬೆನ್ನೂರು ತಾ|| ಮುದೇನೂರಲ್ಲಿರುವ ರಾಣೇಬೆನ್ನೂರು ಮಳೀಮಠದ ವೇ|| ಮಹಾದೇವಯ್ಯನವರು ತಮ್ಮ ಪುತ್ರಿ ಚಿ|| ಸೌ|| ಪಾರ್ವತಮ್ಮನಿಗೆ ಉಂಟಾಗಿದ್ದ ಕಾಯಿಲೆಯು ಶ್ರೀ ಉಜ್ಜಯಿನಿ ಜಗದ್ಗುರುಗಳ ಭಾವಚಿತ್ರದ ಪೂಜೆಯಿಂದಲೂ, ಶ್ರೀಜಗದ್ಗುರು ದಾರುಕಾಚಾರ್ಯರ ನಾಮಾವಳಿಯ ಪಠನದಿಂದಲೂ, ಸಂಪೂರ್ಣಗುಣವಾದ ಸಂತೋಷಾರ್ಥವಾಗಿ ಸಮರ್ಪಿಸಿದ 1 ರೂ. ವೇ|| ಮುದೇನೂರು ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇ[ವೆ].

ಸಂ—

WANTED.

[...]s for Telegraph and Station Master's Classes. Full particulars and Railway Fare Certificate on receipt of 2 annas stamp.

Apply to:—

INPERIAL TELEGRAPH
COLLEGE, DELHI.

ಶ್ರೀ ಗಂಗಾಧರೇಶ್ವರ ರಥೋತ್ಸವ.

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ ಗ್ರಾಮದಲ್ಲಿ ಸಮಸ್ತ ದೈವದವರಿಂದ ನಿಶ್ಚಯಿಸಲ್ಪಟ್ಟಿದ್ದ ಪ್ರಕಾರ ಶ್ರೀ ಗಂಗಾಧರೇಶ್ವರ ರಥೋತ್ಸವವು ಈ ವರ್ಷ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಕಳೆದ ತಿಂಗಳ 26 ನೆಯ ತಾರೀಖು ಬುಧವಾರದಿಂದ ಭಾನುವಾರದವರೆಗೂ ಪ್ರತಿದಿವಸವೂ ಸ್ವಾಮಿಗೆ ವಿಶೇಷ ಪೂಜಾದಿಗಳೊಂದಿಗೆ ಗರುಡವಾಹನ, ಮಯೂರವಾಹನ, ಅಶ್ವವಾಹನ, ಸಿಂಹವಾಹನ, ನಂದಿವಾಹನೋತ್ಸವಗಳು ನಡೆಯುತ್ತ ಇದೇ ತಿಂಗಳು ೧ನೆಯ ತಾರೀಖು ಸೋಮವಾರ ಪ್ರಾತಃಕಾಲ ಮಹಾರುದ್ರಾಭಿಷೇಕವು ವಿಧ್ಯುಕ್ತವಾಗಿ ನಡೆದು ಎರಡುಮೂರು ದಿವಸಗಳವರೆಗೆ ಯಾತ್ರಾರ್ಥಿಗಳಾಗಿ ಬಂದಿದ್ದವರಿಗೆಲ್ಲ ವಿಶೇಷವಾಗಿ ಅನ್ನಸಂತರ್ಪಣೆಯು ನಡೆಯಿಸಲ್ಪಟ್ಟಿತು. ಬಳಿಕ ಸಾಯಂಕಾಲಕ್ಕೆ 3-4 ಸಾವಿರ ರೂಪಾಯಿಗಳ ಖರ್ಚಿನಿಂದ ನೂತನವಾಗಿ ರಚಿಸಲ್ಪಟ್ಟಿದ್ದ ರಥದಲ್ಲಿ ಶ್ರೀ ಗಂಗಾಧರೇಶ್ವರನ ಮೂರ್ತಿಯನ್ನೂ, ಬಳಿಗೆ ಶ್ರೀ ಪಟ್ಟಾಧಿಕಾರಿಗಳನ್ನೂ ಮೂರ್ತಮಾಡಿಸಿ ಅನಂತ ವಾದ್ಯವೈಭವಗಳಿಂದ ರಥೋತ್ಸವ ಕಾರ್ಯವು ಸಾಂಗವಾಗಿ ಜರುಗಿಸಲ್ಪಟ್ಟಿತು. ಮರುದಿವಸ ಮಧ್ಯಾಹ್ನ ಶ್ರೀ ಸ್ವಾಮಿಯ ದೇವಾಲಯದಲ್ಲಿ ಸಭೆಸೇರಿತು. ದೇಸಾಯಿ, ದೇಶಪಾಂಡ್ಯ, ನಾಡಿಗರು ಮುಂತಾದ ದೈವದವರೆಲ್ಲರೂ ಸಭೆಗೆ ಆಗಮಿಸಿದ್ದರು. ಸಭಿಕರ ಅಪೇಕ್ಷೆಯಂತೆ ಸದರಿ ಗ್ರಾಮದ ಹಿರೇಮಠದ ಶ್ರೀ|| ಶ್ರೀ|| ಚರಮೂರ್ತಿಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. 25,30 ವರ್ಷಗಳಿಂದಲೂ ನಿಂತಿದ್ದ ಈ ರಥೋತ್ಸವ ಕಾರ್ಯವನ್ನು ಈ ವರ್ಷ ಇಲ್ಲಿಯ ದೈವದವರು ಒಮ್ಮನಸ್ಸಿನಿಂದ ಬಹಳ ವೈಭವದಿಂದ ನಡೆಯಿಸಿದ್ದುದರ ವಿಷಯವಾಗಿ ಬೀಳಗಿ ಶ್ರೀಗಳು, ಶ್ರೀಮಂತ ತಿರುಮಲರಾವ್ ರಾಮಚಂದ್ರ ದೇಸಾಯಿಯವರೂ ವ್ಯಾಖ್ಯಾತೃಗಳಾದ ಯುಕ್ತಿಯುಕ್ತಗಳಾದ ಉಪನ್ಯಾಸಗಳನ್ನು ಮಾಡಿದರು. ಬಳಿಕ ಸಭಾಧ್ಯಕ್ಷರ ಉಪಸಂಹಾರ ಭಾಷಣೆಯು ನಡೆದ ಬಳಿಕ ಗಂಗಾಧರೇಶ್ವರನ ಜಯಘೋಷದೊಂದಿಗೆ ಸಭಾಕಾರ್ಯವು ಸಮಾಪ್ತಿಗೊಂಡಿತು. ಮೂರುನಾಲ್ಕು ದಿವಸಗಳವರೆಗೆ ಸ್ಥಳಪರಸ್ಥಳದವರ ಪ್ರಸಿದ್ಧಪೈಲ್ವಾನರ ಕುಸ್ತಿಗಳಾಗಿ ಜಯಶೀಲರಾದವರಿಗೆ ಬಹುಮಾನಗಳು ಕೊಡಲ್ಪಟ್ಟವು. ಈ ಸಮಯದಲ್ಲಿ ದೈವದವರಿಂದ ಪ್ರಭಾಪೋಷಣಕ್ಕೋಸ್ಕರ 10 ರೂಪಾಯಿಗಳು ಸಮರ್ಪಿಸಲ್ಪಟ್ಟವು. ವಿಶೇಷ ದ್ರವ್ಯವನ್ನು ಖರ್ಚುಮಾಡಿದುದಲ್ಲದೆ ವಿಶೇಷ ಉತ್ಸುಕತೆಯಿಂದಲೂ ಭಕ್ತಿಯಿಂದಲೂ ಆರೇಳು ದಿವಸಗಳವರೆಗೆ ಶ್ರೀ ಗಂಗಾಧರೇಶ್ವರನ ಸೇವೆಯಲ್ಲಿ ಆಸಕ್ತರಾಗಿದ್ದ ಕುಂದಗೋಳಗ್ರಾಮದ ಸಮಸ್ತ ದೈವದವರಿಗೆ ಶ್ರೀ ಗಂಗಾಧರೇಶ್ವರನು ದೀರ್ಘಾಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ

ಓರ್ವಪ್ರತ್ಯಕ್ಷದರ್ಶಿ.

ಅಮೇರಿಕಾದಲ್ಲಿ 20 ಸಾವಿರ ಸಿನಿಮಾಮಂದಿರಗಳಿರುವುವು. ಅವುಗಳಲ್ಲಿ ಸುಮಾರು 1,800 ಮಂದಿರಗಳಲ್ಲಿ ಕೇವಲ ಮಾತನಾಡುವ ಚಿತ್ರಪಟಗಳೇ ತೋರಿಸಲ್ಪಡುವುವು. ಪ್ರತಿ ತಿಂಗಳಲ್ಲಿಯೂ 200-250 ರ ವರೆಗೆ ಮಾತಾಡುವ ಚಿತ್ರಪಟಗಳ ಮಂದಿರಗಳು ಹೆಚ್ಚುತ್ತಿರುವುವು. ಇಂಗ್ಲೆಂಡಿನಲ್ಲಿ 5,300 ಸಿನಿಮಾ ಮಂದಿರಗಳಿರುವುವು. ಅಲ್ಲಿಯೂ ಮಾತನಾಡುವ ಚಿತ್ರಪಟಗಳನ್ನೇ ಜಾರಿಗೆ ತರಲು ಪ್ರಯತ್ನಿಸುತ್ತಿರುವರು. ಇಂಗ್ಲೆಂಡಿನ ಎಲ್ಲಾ ಸಿನಿಮಾಗಳಲ್ಲೂ ಮಾತನಾಡುವ ಚಿತ್ರಪಟಗಳನ್ನೇ ತೋರಿಸಬೇಕಾದರೆ ಇಂಗ್ಲೆಂಡಿನ ಸಿನಿಮಾ ಮಂದಿರದವರು, ಜರ್ಮನಿ ಅಮೇರಿಕಾಕ್ಕೆ 25 ಕೋಟಿ ರೂಪಾಯಿಗಳನ್ನು ಕೊಡಬೇಕಾಗುವದಂತೆ!

ಪತ್ರವ್ಯವಹಾರ.

ಜಾತ್ರೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ರೇಣುಕಾಚಾರ್ಯರ ಪ್ರಸೀದಂತು.

ವಿದ್ಯಾವಿಷಯವಾಗಿ ಮಾಹೇಶ್ವರ ಜಂಗಮರಿಗೆ ಯಾವ ವಿಧವಾದ ಶಿಕ್ಷಣಕೊಡಬೇಕು ?

ವಾಚಕಮಹಾಶಯರೇ ನಮ್ಮ ಮತದಲ್ಲಿ ಅನ್ನದಾನಮಾಡಿದರೆ ಪುಣ್ಯದೊರಕುವದೆಂಬ ವಿಷಯವು ಪ್ರಸಿದ್ಧಿಗೆ ಬಂದು ಅಲ್ಲಲ್ಲಿ ಗಣ್ಯರಾದ ಜನರು ಗಣಾರಾಧನೆಯನ್ನು ಮೇಲಿಂದ ಮೇಲೆ ಮಾಡುತ್ತಿರುವದರಿಂದ, ಜಂಗಮರು ಅಲ್ಲಲ್ಲಿ ಮೃಷ್ಟಾನ್ನಭೋಜನವನ್ನೂ ಯಥೋಚಿತ ದಕ್ಷಿಣೆಯನ್ನೂ ಪ್ರಯಾಸವಿಲ್ಲದೆ ಪಡೆಯುತ್ತಾ ಯಾಚನಾಮಾತ್ರದಿಂದಲೇ ಧನಧಾನ್ಯದಕ್ಷಿಣೆಗಳನ್ನು ದೊರಕಿಸುತ್ತಿರುವುದರಿಂದ ಇವರಿಗೆ ವಿದ್ಯಾಭಿರುಚಿಯುಂಟಾಗದೆ ಇರುವುದಕ್ಕೆ ಕಾರಣವಾಗಿರುತ್ತದೆ. ಮತ್ತು ಉಪಾಚಾರ್ಯರಲ್ಲಿ ವೃತ್ತಿಗಳ ಲಾಭವು ವಿಶೇಷವಾಗಿರುವುದು. ಇದರಿಂದಲೇ ಉಪಜೀವನವು ನಿರಾಯಾಸವಾಗಿ ನಡೆಯುವಾಗ ಅಪರಿಮಿತಪ್ರಯಾಸದಿಂದ ವಿದ್ಯಾಭ್ಯಾಸವನ್ನೇಕೆ ಮಾಡಬೇಕೆಂದೂ, ವಿದ್ಯೆಯನ್ನು ಕಲಿತವರು ಎರಡು ಕೈಯಿಂದವುಂಡರೆ ನಾವು ಒಂದು ಕೈಯಿಂದ ಉಂಡರಾಯಿತು, ಎಂಬ ಹಾಸ್ಯೋಕ್ತಿಯನ್ನು ಇತರರಿಗೆ ಬೋಧಿಸುತ್ತಲೂ ಇರುವುದರಿಂದ ನಮ್ಮ ಜನರಲ್ಲಿ ದುರಾಚಾರ ಪ್ರಚಾರವಾಗಲು ಪ್ರಾರಂಭಿಸಿರುತ್ತದೆ. ಈಗಿನ ಅನೇಕ ಜಂಗಮರು ಪರಹಿತವೆಂದು ಹೇಳುತ್ತಾ ವೇಷವನ್ನು ಧರಿಸಿ ಧನವನ್ನು ಸಂಪಾದಿಸಿ ಅದರಿಂದ ಕುಟುಂಬಾಭರಣವನ್ನು ಮಾಡುತ್ತಾರೆ. ಈ ವೃತ್ತಿಯು ತಪ್ಪಿದ ಹೊರತು ಇವರ ದೃಷ್ಟಿಯು ವಿದ್ಯಾಭ್ಯಾಸದ ಕಡೆಗೆ ಬೀಳುವದಿಲ್ಲ. ವೀರಶೈವ ಮಹನೀಯರು ಮತ್ತು ಪ್ರಮುಖರು ಈ ವಿಷಯವನ್ನು ಅವರಿಗೆ ತಿಳಿಸಿ ಅವರ ಹತ್ತಿರಕ್ಕೆ ಬರುವ ಜಂಗಮರಿಗೆ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸುವಂತೆ ಸದುಪದೇಶಗಳನ್ನು ಬೋಧಿಸುತ್ತಿರಬೇಕು ಮತ್ತು ಇವರಿಗೆ ಕಾಯಕ ಮಾಡುವಂತೆ ಸಿಂಹಾಸನಾಧಿಪತಿಗಳು ನಿರೂಪವನ್ನು ಕೊಡುತ್ತಾರೆ ಹಾಗೆ ಮಾಡದಂತೆ ಸಿಂಹಾಸನಾಧಿಪತಿಗಳಿಗೆ ಬಿನ್ನೈಸಿಕೊಳ್ಳಬೇಕು. ಅಲ್ಲದೆ ವಿದ್ಯೆಯ ಮಹತ್ವವು ನಮ್ಮ ಮತದಲ್ಲಿ ಬಹು ಜನರಿಗೆ ಗೊತ್ತಿಲ್ಲವಾದ ಕಾರಣ ಅವರಿಗೆ ಮೇಲಿಂದ ಮೇಲೆ ಬೋಧಿಸುವದಕ್ಕೋಸ್ಕರ ಅಲ್ಲಲ್ಲಿ ಬೋಧಕಸಂಘಗಳನ್ನು ಕಲ್ಪಿಸಿ ತನ್ಮೂಲಕ ಸದುಪದೇಶಗಳು ನಡೆಯುವಂತೆ ಮಾಡುವದು ಅವಶ್ಯಕಾರ್ಯವಾಗಿದೆ. ಮತ್ತು ಎಲ್ಲಾ ಮತಗಳಿಗಿಂತಲೂ ವೀರಶೈವಮತವು ಹೀನಾವಸ್ಥೆಗೆ ಬಂದುದನ್ನು ಕಂಡು ನಾಗನೂರು ಬೃಹನ್ಮಠಾಧ್ಯರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳು ವೀರಶೈವಮತತತ್ವವನ್ನು ಪ್ರಚಾರಪಡಿಸುವದಕ್ಕಾಗಿಯೂ, ವೀರಶೈವಶ್ರೇಷ್ಠತ್ವವನ್ನು ಬೋಧಿಸುವದಕ್ಕಾಗಿಯೂ ಮೂಲಲಿಂಗೋದ್ಭವರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಚರಿತ್ರೆಗಳನ್ನೂ ವಿಶದಪಡಿಸುವದಕ್ಕಾಗಿಯೂ ಮೈಸೂರು ರಾಜಧಾನಿಯಲ್ಲಿ **ಪಂಚಾಚಾರ್ಯಪ್ರಭಾ** ನಾಮಾಂಕಿತವಾದ ವಾರಪತ್ರಿಕೆಯನ್ನು ಪ್ರಕಟಿಸಿ ಗುರು, ಲಿಂಗ, ಜಂಗಮ, ಶಿವ, ನಿರ್ಮಾಲ್ಯ, ವೀರಶೈವಮತವಿಮರ್ಶ ಮುಂತಾದ ವಿಷಯಗಳನ್ನು ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಪ್ರಕಟಿಸುತ್ತಾ ವೀರಶೈವಮತವನ್ನು ಉದ್ಧಾರಮಾಡಲು ಬದ್ಧಕಂಕಣರಾಗಿರುತ್ತಾರೆ. ಈ ಮಹಾಶಯರ ಹರಿಕೆಯನ್ನು ಕೈಗೂಡಿಸುವಂತೆ ನಾವುಗಳು ಚಂದಾದಾರರಾಗಿ ಪ್ರೋತ್ಸಾಹಿಸಿ ಈ ಕಾರ್ಯವು ನಿರ್ವಿಘ್ನವಾಗಿ ಸಾಗುವಂತೆ ಪಂಚಾಚಾರ್ಯರನ್ನು ಭಜಿಸತಕ್ಕದ್ದು. ಈ ವಿಷಯವನ್ನು ತಿಳಿಯದೆ ಕೆಲವು ಅಸೂಯಾಪರರು ಇಲ್ಲಸಲ್ಲದ ಲೇಖಗಳನ್ನು ಪ್ರಕಟಿಸಿ ಹೀಯಾಳಿಸುತ್ತಿರುತ್ತಾರೆ. ಮತ್ತು ವೇ|| ಪಂ|| ಕಾಶೀನಾಥಶಾಸ್ತ್ರಿಗಳ ಮೇಲೂ ಪ್ರಭಾಪತ್ರಿಕೆಯ ಮೇಲೂ ದುರ್ಲೇಖಗಳನ್ನು ಪ್ರಕಟಿಸುತ್ತಿರುತ್ತಾರೆ. ಇನ್ನುಮುಂದಾದರೂ ಇಂಥ ದುರ್ಲೇಖಗಳಿಗೆ ಅವಕಾಶಕೊಡದೆ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗುತ್ತಾರೆಂದು ನಂಬಿರುತ್ತೇನೆ ನಮ್ಮ ವೀರಶೈವರಲ್ಲಿ ಒಂದೊಂದು ದಿನದ ಆರಾಧನೆಯನ್ನೂ ಲಕ್ಷಾವಧಿ ದ್ರವ್ಯದಿಂದ ಮಾಡುವರು. ಪುರಾಣವನ್ನು ಪ್ರಾರಂಭಿಸಿ ಅಮಿತವಾಗಿ ಧನವನ್ನು ಖರ್ಚುಮಾಡುವರು, ಮಠಗಳನ್ನು ಕಟ್ಟಿಸುವುದಕ್ಕೆ ಬಹು ಧನವನ್ನು ವೆಚ್ಚಮಾಡುವರು, ಇಂತಹ ರೂಢಿಗಳು ಬಹಳವಾಗಿರುತ್ತವೆ. ಅವುಗಳನ್ನು ಮಿತವ್ಯಯದಿಂದ ಪೂರೈಸುತ್ತಾ ಅಮಿತದ್ರವ್ಯದಿಂದ ವಿದ್ಯಾಭಿವೃದ್ಧಿಫಂಡಿಗೆ ಕೊಡುತ್ತಾ ಬಂದರೆ ನಮ್ಮ ಮತೀಯರೆಲ್ಲರೂ ವಿದ್ಯಾವಂತರೂ, ಆಚಾರಶೀಲರೂ ಆಗಿ ಮತೋದ್ಧಾರವು ಶೀಘ್ರವಾಗಿಯೂ, ಸುಲಭವಾಗಿಯೂ ಆಗುವದರಲ್ಲಿ ಯಾವ ಸಂದೇಹವೂ ಇಲ್ಲ.

ಬಾಲಸಂಗೋಪನ.

ಸಣ್ಣಮಕ್ಕಳನ್ನು ರಕ್ಷಿಸುವ ಕೆಲಸದಲ್ಲಿ ಸಹ ಸುಶಿಕ್ಷಿತಸ್ತ್ರೀಯರ ಅವಶ್ಯಕತೆಯು ಬಹಳವಿರುವುದು. ಇದು ಈಗ ಸರ್ವರಿಗೂ ತಿಳಿಯಲಾರಂಭಿಸಿದೆ. ಆದರೆ ಅನೇಕ ಸ್ತ್ರೀಯರು ಅಜ್ಞಾನಿಗಳಾಗಿರುವುದರಿಂದ ಅವರಿಗೆ ನಮ್ಮ ಸಣ್ಣಮಕ್ಕಳ ಶಿಕ್ಷಣೆಯನ್ನು ಹೇಗೆ ಮಾಡಬೇಕೆಂಬುದು ತಿಳಿಯುವದಿಲ್ಲ. ಬಾಲಕರ ರಕ್ಷಣೆಯ ವಿಷಯಕವಾದ ಪುಸ್ತಕಗಳು ಇತ್ತೀಚೆಗೆ ಪ್ರಕಟವಾಗಿವೆ. ಆ ಪುಸ್ತಕಗಳನ್ನು ಪ್ರತಿಯೊಬ್ಬ ಸ್ತ್ರೀಯು ಓದಿದ್ದಾದರೆ ಸಣ್ಣ ಮಕ್ಕಳ ಸಂಬಂಧವಾಗಿ ಹೇಗೆ ಹೇಗೆ ನಡೆದುಕೊಳ್ಳಬೇಕು. ಮತ್ತು ತಮ್ಮ ಊಟಿಆಟಗಳನ್ನು ಹೇಗೆ ಇಟ್ಟದ್ದರೆ ಹುಡುಗರಿಗೆ ಆರೋಗ್ಯವಾಗುವುದು ಇದಲ್ಲದೆ ಆ ಬಾಲಕರಿಗೆ ಯಾವ ರೋಗವೂ ಬಾರದಂತೆ ಅವರ ಜೀವನನೆಯು ಚೆನ್ನಾಗಿರುವುದಕ್ಕೆ ಎಂಥಾ ಉಪಾಯಗಳನ್ನು ಯೋಚಿಸಬೇಕಾಗುತ್ತದೆ, ಎಂಬುದರ ತಿಳುವಳಿಕೆಯಾಗುವುದು. ಒಂದುವೇಳೆ ಹವವು ಕೆಟ್ಟರೆ ಮತ್ತು ಪ್ರಕೃತಿಧರ್ಮದಂತೆ ರೋಗವುತ್ಪತ್ತಿಯಾದರೆ ಸ್ಥಲಾಂತರವನ್ನು ಮಾಡುವುದು ಮತ್ತು ಸಾಧ್ಯವಾದ ಔಷಧಪ್ರಯೋಗಗಳನ್ನು ಮಾಡುವುದು, ಇದು ಆ ಪುಸ್ತಕಗಳಲ್ಲಿ ಹೇಳಿರುವುದರಿಂದ ಯಾವಾಗಲೂ ಎರಡನೇ ವೈದ್ಯರ ಮಾರ್ಗನಿರೀಕ್ಷಣೆಯನ್ನೇ ಮಾಡಬೇಕಾದ ನಿರ್ಬಂಧವಿಲ್ಲದೆ ವೇಳೆವೇಳೆಯಲ್ಲಿ ಸರಿಯಾಗಿ ಉಪಾಯವನ್ನು ಮಾಡಲು ಅನುಕೂಲಿಸುವುದು. ನಮ್ಮ ಸಮಾಜದಲ್ಲಿ ತಿಳಿಗೇಡಿಸ್ತ್ರೀಯರು ಮಕ್ಕಳಿಗೆ ಸ್ವಲ್ಪ ಅರೋಗ್ಯವ್ಯತ್ಯಾಸವಾದರೆ ಮೊದಲು ಮಂತ್ರಿಸಿದ ಬೂದಿ ಮಂತ್ರಿಸಿದ ಲೋಭಾನದ ಹೊಗೆಯು ಅಥವಾ ಮಂತ್ರಿಸಿದ ದಾರವನ್ನು ಕಟ್ಟುವುದು ಇವುಗಳಲ್ಲಿ ನಿರರ್ಥಕವಾಗಿ ಕಾಲವನ್ನು ಕಳೆದುಮಾಡಬೇಕಾದ ಯೋಗ್ಯ ಉಪಾಯಗಳನ್ನು ಬಿಡುತ್ತಾರೆ. ಇಲ್ಲವೇ ಯಾವನಾದರೊಬ್ಬ ತಿಳಿಗೇಡಿ ವೈದ್ಯನ ಔಷಧವನ್ನು ಕೊಟ್ಟು ಹುಡುಗರ ಪ್ರಕೃತಿಯನ್ನು ಕೆಡಿಸಿಬಿಡುತ್ತಾರೆ. ಇದರಿಂದ ಸಾವಿರಾರು ಮಕ್ಕಳು ಮೃತ್ಯುವಿಗೆ ತುತ್ತಾಗುತ್ತಾರೆ. ಯಥಾರ್ಥವಿಚಾರವನ್ನು ಮಾಡಿನೋಡಿದರೆ ಬಾಲಕರ ರಕ್ಷಣಾಧಿಕಾರಿಗಳು ಸ್ತ್ರೀಯರೇ ಹೊರತು ಇದರ ಜವಾಬ್ದಾರಿಯು ಪುರುಷರಕಡೆಗೆ ಸ್ವಲ್ಪವೂ ಇರುವುದಿಲ್ಲ. ಇಂಥ ಸೂಕ್ಷ್ಮ ಕೆಲಸದಲ್ಲಿ ಬಾಲಕರ ರಕ್ಷಣೆಯ ಉದ್ದಿಷ್ಟವಾದರೂ ಸ್ತ್ರೀಯರಿಗೆ ಶಿಕ್ಷಣವು ಅವಶ್ಯವಾಗಿ ಬೇಕಾಗುತ್ತದೆ. ಪಾರಶಿ ಯುರೋಪಿಯನ್ ಜನಗಳಲ್ಲಿ ಬಾಲಕರ ಸಂರಕ್ಷಣೆಯು ಸಶಾಸ್ತ್ರೀಯವಾಗಿರುವದರಿಂದ ಅವರ ಹುಡುಗರು ಸಶಕ್ತರೂ ಸುಂದರರೂ ತೇಜಸ್ವಿಗಳೂ ಬುದ್ಧಿವಂತರೂ ಆಗುತ್ತಾರೆ. ಇದಕ್ಕೆ ಆ ಹುಡುಗರ ತಾಯಿಯರು ಸುಶಿಕ್ಷಿತರಾಗಿರುವದೇ ಕಾರಣ. ಇದರಿಂದ ನಮ್ಮ ಸಮಾಜಸುಧಾರಣಧುರೀಣರು ಸ್ತ್ರೀಯರಿಗೆ ಶಿಕ್ಷಣಕೊಡುವ ವಿಷಯದಲ್ಲಿ ಆದಷ್ಟು ಹೆಚ್ಚು ಲಕ್ಷ್ಯವನ್ನು ಕೊಡಬೇಕು. ಸ್ತ್ರೀಯರನ್ನು ಸುಶಿಕ್ಷಿತರನ್ನಾಗಿ ಮಾಡದಿದ್ದರೆ ಸಮಾಜಸುಧಾರಣದ ಉಜ್ವಲಸ್ವರೂಪವು ಅವರ ದೃಷ್ಟಿಗೆ ಎಂದಿಗೂ ಬೀಳಲಾರದೆಂದು ನಾನು ಖಂಡಿತವಾಗಿ ಹೇಳುತ್ತೇನೆ.

ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಸೇವಕ,
ರಾಗಿಧರ್ಮಲಿಂಗಯ್ಯ, ಲ್ಯಾಂಡ್‌ಹೋಲ್ಡರ್,
ರಾಮಸಾಗರ, ಕಂಪ್ಲಿ ಬಳ್ಳಾರಿ.

ಮುದ್ದಾಬಳ್ಳಿ.

ನೈಜಾಮು ಇಲಾಖಾ ಕೊಪ್ಪಳ ತಾಲೂಕಿಗೆ ಸೇರಿದ ಮುದ್ದಾಬಳ್ಳಿ ಗ್ರಾಮದ ಮರೆಸ್ತರು-ಗೌಡರು-ಶೆಟ್ಟರು ಮತ್ತು ಸಮಸ್ತ ದೈವದವರ ಪ್ರಾರ್ಥನೆಯಂತೆ ೧೦ನೆಯ ತಾರೀಖಿನ ದಿವಸ ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಗುರುಚರಪಟ್ಟಾಧ್ಯಕ್ಷ ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಸವಾರಿಯು ಗೊಂಡಬಾಳಗ್ರಾಮದಿಂದ ಕೊಪ್ಪಳ ರೋಡಮಾರ್ಗವಾಗಿ ೨ ಫರ್ಲಾಂಗ ಅಂತರದಲ್ಲಿರುವ ಮಾವಿನತೋಪಿಗೆ ಚಿತ್ತೈಸಿತು. ಗ್ರಾಮದ ಮುಖ್ಯಸ್ಥರೆಲ್ಲರೂ ಪೂಜ್ಯಪಾದರದಾರಿಯನ್ನೇ ನಿರೀಕ್ಷಿಸುತ್ತಿದ್ದರು. ಮಹೋತ್ಸವವು ತಳಿರು-ತೋರಣ-ರಂಭಾಸ್ತಂಭಗಳಿಂದ ಶೃಂಗರಿಸಲ್ಪಟ್ಟ ರಾಜಬೀದಿಗಳಲ್ಲಿ ಸಮಸ್ತಬಿರುದಾವಳಿಗಳ ಸಮೇತವಾಗಿ ಅತ್ಯಂತವೈಭವದಿಂದ ಹೊರಟಿತು. ಗುರುಭಕ್ತರು ಮಧ್ಯ ಮಧ್ಯದಲ್ಲಿ ಜಗದ್ಗುರುಗಳಿಗೆ ಕಾಯಿಕರ್ಪೂರಗಳನ್ನೊಪ್ಪಿಸಿ ಮಂಗಲಧ್ವನಿಗಳಿಂದ ವಿಶೇಷವಾದ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ಹೀಗೆ ಉತ್ಸವವು ಒಳ್ಳೇ ವಿಜೃಂಭಣೆಯಿಂದ ಶ್ರೀವಿರೂಪಾಕ್ಷಸ್ವಾಮಿ ದೇವಸ್ಥಾನಕ್ಕೆ ತಲ್ಪಿತು. ಶ್ರೀಜಗದ್ಗುರುಗಳು ಸಿಂಹಾಸನದ ಮೇಲೆ ಮಂಡಿಸಿದಕೂಡಲೇ ಸಭಿಕರು ಜಯಘೋಷವನ್ನು ಮಾಡಿದರು. ತದನಂತರ ರಾ|| ವಿರೂಪಾಕ್ಷಪ್ಪ ಹಳ್ಳಿಗುಡಿ ಇವರು ತಯಾರು ಮಾಡಿದ್ದ ಮಕರತೋರಣ-ಮಹದ್ವಾರದ ಕವಚ ಛತ್ರಿ-ಗುನವಂತ-ಧ್ವಜಪತಾಕೆಯೇ ಮೊದಲಾದ ವಸ್ತುಗಳನ್ನು ಪಗಾಂಬರಿಸಿದರು. ಜಗದಾಚಾರ್ಯರು ಭಕ್ತರಭಕ್ತಿಯನ್ನು ನಿರೀಕ್ಷಿಸಿ ಆತ್ಮಾನಂದಭರಿತರಾಗಿ ತಮ್ಮ ಅಮೃತಮಯವಾದವಾಗೆಯಿಂದ "ಭಕ್ತಿ" ಎಂಬ ವಿಷಯವಾಗಿಯೇ ಬಹು ಅಮೂಲ್ಯವಾದ ಭಾಷಣಮಾಡಿ ಸಮಸ್ತರೂ ಆಯುರಾರೋಗ್ಯಭಾಗ್ಯಾದಿಗಳಿಂದಕೂಡಿ ಸುಖವಾಗಿರಲೆಂದು ಆಶೀರ್ವದಿಸಿದರು. ಇಷ್ಟು ಹೊತ್ತಿಗೆ ಶಿವಾರ್ಚನಾಸಮಯವಾದುದರಿಂದ ಜಗದ್ಗುರುಗಳು ಅಂದಿನ ಸಭೆಯನ್ನು ಮುಕ್ತಾಯಮಾಡಿ ಮೊದಲೇ ಏರ್ಪಡಿಸಿದ್ದಂತೆ ವತನದಾರ ಯಜಮಾನ ಬಸವನಗೌಡ್ರು ಮಾಲೀಪಾಟೀಲ ಇವರ ಚೌಕಿಯಲ್ಲಿರುವ ಶ್ರೀ ಚಂದ್ರಮೌಳೇಶ್ವರ ಆಲಯಕ್ಕೆ ದಯಮಾಡಿದರು. ವೇ|| ಹಿರೇಮಠದ ಕೊಟ್ರಬಸಯ್ಯ, ವೇ|| ಗುರುಸಂಗಶಾಸ್ತ್ರಿ ಸೊಪ್ಪಿಮಠ, ವೇ|| ಗುರುಪಾದಯ್ಯ ಸೊಪ್ಪಿಮಠ ಮ|| ರಾ|| ರಾ|| ವೆಂಕನಗೌಡ ಪೊ|| ಪಾಟೀಲ ಮ|| ರಾ|| ಶಿವನಗೌಡ ಪಾಟೀಲ ಮ|| ರಾ|| ಲಿಂಗನಗೌಡ ಪಾಟೀಲ ಮ|| ರಾ|| ವಿರೂಪಾಕ್ಷಪ್ಪ ಹಳ್ಳಿಗುಡಿ ಮ|| ರಾ|| ಸಂಗಪ್ಪ ನಾಗರಳ್ಳಿ ಮ|| ರಾ|| ಆದಿವೆಪ್ಪ ಬೇವಿನಹಳ್ಳಿ ಮ|| ರಾ|| ಮುದಿಯಪ್ಪ ತೋಟಿಗರ ಮ|| ರಾ|| ಗುರಪ್ಪ ನೂಜೆಮ್ಮದಳ್ಳಿ ಮ|| ರಾ|| ಗುರುಬಸಪ್ಪ ಮಾಳೇಕೊಪ್ಪ ಮಾಲೀಪಾಟೀಲ ಮ|| ರಾ|| ಯ|| ಬಸವನಗೌಡ ಇತ್ಯಾದಿ ಭಕ್ತಮಾಹೇಶ್ವರರು ಸನ್ನಿಧಿಯ ಅಪ್ಪಣೆ ಮೇರೆಗೆ ಪ್ರತಿದಿನವೂ "ಅಷ್ಟಾವರಣತಿಲಕ" ವೆಂಬ ಮಹಾಪುರಾಣಶ್ರವಣಕ್ಕೆ ಪ್ರಾರಂಭಿಸಿರುವರು. ವೇ|| ಸಿದ್ಧಪ್ಪಯ್ಯ ಸೊಪ್ಪಿಮಠ ಇವರು ಸರ್ವರಿಗೂ ಆನಂದವಾಗುವಂತೆ ಓದುವರು. ವೇ|| ಶಾಂತವೀರಶಾಸ್ತ್ರಿಗಳು ಸೊಪ್ಪಿಮಠ ಇವರು ಒಳ್ಳೇ ರಸವತ್ತಾಗಿ ಅರ್ಥ ಹೇಳುವರು. ಜಗದ್ಗುರುಗಳವರು ದಿವಸವೂ ಪುರಾಣಶ್ರವಣಾನಂತರ ಆಬಾಲವೃದ್ಧರಿಗೂ ವೇದ್ಯವಾಗುವಂತೆ ಸ್ವಲ್ಪಕಾಲ ಉಪನ್ಯಾಸಮಾಡುವರು. ಜಗದ್ಗುರುಗಳ ಆಜ್ಞೆಯಂತೆ ತಾ|| ೫-೭-೨೯ನೇ ಶುಕ್ರವಾರದ ದಿವಸ ಕೊಪ್ಪಳದ ಭಕ್ತರು ಅಂದರೆ ಶ್ರೀಮಂತ ಯಜಮಾನ ಮುದಗಲ್ಲ ಸಂಗಪ್ಪನ್ನ ದಿ|| ಚನ್ನಪ್ಪನ್ನ ಮ|| ರಾ|| ಅಗಡಿ ಅಂದಾನಪ್ಪ, ಮ|| ರಾ|| ಗಡಾದ ಶೆಟ್ರುಪಂಪಣ್ಣ, ಮ|| ರಾ|| ನಿಡಶೇಶಿ ಗುರುಸಿದ್ಧಪ್ಪ ಮ|| ರಾ|| ಹೆಸರೂರ ಸಿದ್ಧಲಿಂಗಪ್ಪ ಈ ಮಹಾಶಯರು ಸನ್ನಿಧಿಯ ದರ್ಶನವನ್ನು ಪಡೆದು ಪುರಾಣಶ್ರವಣಮಾಡಿಕೊಂಡು ಮಹದಾಚಾರ್ಯರ ಆಶೀರ್ವಾದವನ್ನು ಪಡೆದು ರಾತ್ರಿ ೯ ಘಂಟೆಗೆ ಮೋಟಾರಿನಲ್ಲಿ ಹಿಂತಿರುಗಿಹೋದರು. ಕೊಪ್ಪಳ ಸ್ಟೇಷನ್ನಿಗೆ ನಮ್ಮ ಗ್ರಾಮವು (ಮುದ್ದಾಬಳ್ಳಿ) ೯ ಮೈಲು ಅಂತರವಿದ್ದು ಮೋಟರ್ ಸರ್ವಿಸ್ ಇರುವದರಿಂದ ಪ್ರತಿನಿತ್ಯದಲ್ಲೂ ಭಗವತ್ಪಾದರ ದರ್ಶನಕ್ಕೆ ಪರಸ್ಥಳದ ಭಕ್ತಾದಿಗಳು ತಂಡತಂಡವಾಗಿ ಬರುತ್ತಿರುವರು. ಪುರಾಣವು ಶ್ರಾವಣಮಾಸಾಂತ್ಯದವರೆಗೆ ನಡೆಯಬಹುದು. ಶ್ರೀ ಗುರು-ಲಿಂಗ-ಜಂಗಮಾದಿ ಅಷ್ಟಾವರಣ ಮಹಿಮೆಯನ್ನು ಶ್ರವಣಮಾಡುವದಕ್ಕೂ ಜಗದಾಚಾರ್ಯರ ದರ್ಶನಾಶೀರ್ವಾದಗಳನ್ನು ಪಡೆಯುವದಕ್ಕೂ ಬಯಕೆಯುಳ್ಳ ಭಕ್ತಾಗ್ರೇಸರರಿಗೆ ಇದು ಸುಸಮಯವೆಂದು ನಾವು ಪೂರ್ಣನಂಬಿದ್ದೇವೆ.

ಗುರುಭಕ್ತ ಕಿಂಕರರು.

ತರೀಕೆರೆ ವೀರಶೈವತರುಣಸಂಘ.

ಈ ಸಂಘದ ಚಿರಸ್ಥಾಯಿಫಂಡಿಗೆ ಧನಸಹಾಯಮಾಡಿದಂಥಾ ಮಹನೀಯರುಗಳ ಹೆಸರುಗಳು.—

1. ಶ್ರೀಯುತರುಗಳಾದ ಶಿದ್ರಾಮಶೆಟ್ಟರವರು 10 ರೂ. 2. ಅಜ್ಜಂಪುರದ ಶಿದ್ದಯ್ಯನವರು 5 ರೂ. 3. ಮುಳ್ಳಯ್ಯನವರ ಬಸಪ್ಪನವರು 2 ರೂ. 4. ಕಡೂರು ತಾಲ್ಲೂಕು ಗಿರಿಯಾಪುರದ ಕರಿಸಿದ್ದಪ್ಪನವರು 2 ರೂ. 5. ಹೊಸದುರ್ಗದ ಹವನಪ್ಪನವರು 2 ರೂ. 6. ಅಜ್ಜಂಪುರದ ಮಲ್ಲೇಶಪ್ಪನವರು 1 ರೂ. 7. ಬಳೆಗಾರ ರುದ್ರಪ್ಪನವರು 1 ರೂ. 8. ಚಿಕ್ಕಮುನಿಸ್ವಾಮಯ್ಯನವರು ಜುಡಿಷಿಯಲ್ ಆಫೀಸರ್ 1 ರೂ. 9. ನಗದಿ ಗುಮಾಸ್ತೆ ಪಿ. ರುದ್ರಪ್ಪನವರು 1 ರೂ. 10. ತರೀಕೆರೆ ಮ|| ರಾ|| ನಾಗಪ್ಪನವರ ಪುತ್ರ ಚಿ|| ವೀರಭದ್ರಪ್ಪನೆಂಬ ವರನಿಗೂ ಮ|| ರಾ|| ಚನ್ನಬಸಪ್ಪನವರ ಪುತ್ರಿ ಚಿ|| ಸೌ|| ನಂಜುಂಡಮ್ಮನಿಗೂ ನಡೆದ ಲಗ್ನದಲ್ಲಿ ಬಂದದ್ದು ನಾಗಪ್ಪನವರಿಂದ 2 ರೂ. 11. ಈ ಹಿಂದೆ ಬಂದಿರುವುದು 170 ರೂ. ಒಟ್ಟು 197 ರೂ.

ಮೇಲ್ಕಂಡ ಮಹನೀಯರಂತೆ ಎಲ್ಲಾ ಮಹನೀಯರುಗಳು ಈ ಸಂಘಕ್ಕೆ ಧನಸಹಾಯಮಾಡುತ್ತಾರೆಂದು ನಂಬಿದೆ.

ತರೀಕೆರೆ,
ತಾ|| 10-7-1929.

(Sd.) ಟಿ. ಎಲ್. ಸಿದ್ದಪ್ಪ,
ಸಂಘದ ಅಧ್ಯಕ್ಷರಿಗೋಸ್ಕರ

ಶ್ರೀಜಗದ್ಗುರು ಪಂಚಾಚಾರ್ಯ ಪ್ರಸೀದ.

ವಿವಾಹಮಹೋತ್ಸವವು.

ಅಪುಕ.

ನಗರದ ತಾ|| ಹುಂಬುಚದ ಹೋ|| ಅಪುಕದ ಮ|| ರಾ|| ಸಿದ್ದಪ್ಪಗೌಡರ ಪುತ್ರಿ ಚಿ|| ಸೌ|| ಹಾಲಮ್ಮನನ್ನು ಸದರಿ ತಾ|| ಅನಗೆರಸಿಯ ಮ|| ರಾ|| ಮಲ್ಲಪ್ಪಗೌಡರ ಪುತ್ರ ಚಿ|| ಪುಟ್ಟಪ್ಪನಿಗೆ ಕೊಟ್ಟು ಇದೇ ಶುಕ್ಲ ಸ|| ರದ ಜೇಷ್ಠ ಬಹುಳ ಅಷ್ಟಮಿ ಭಾನುವಾರ ವಿವಾಹಮಹೋತ್ಸವವನ್ನು ವಿಧಿಪೂರ್ವಕವಾಗಿ ಹುಂಬಚದ ಆರಾಧ್ಯಮಠದ ಗುರುಸಿದ್ಧಾರಾಧ್ಯರು ರುದ್ರಾರಾಧ್ಯರು ಇವರುಗಳು ನೆರವೇರಿಸಿದರು. ವಿವಾಹಂಗಭೂತವಾದ ಗಣಪತಿ ಪೂಜ ಪುಣ್ಯಾಹವಾಂದಿ ಅಂಕುರಾರ್ಪಣ ಮಂಟಪ ಪ್ರತಿಷ್ಠೆ ಪಂಚಕಲಶಸ್ಥಾಪನ ಇತ್ಯಾದಿ ಕ್ರಿಯೆಗಳನ್ನು ವೀರಶೈವ ವೈದಿಕಪ್ರಕಾರವಾಗಿಯೂ ಮುಹೂರ್ತಕ್ಕೆ ಸರಿಯಾಗಿಯೂ ನೆರವೇರಿಸಿದರು. ಈ ಮಹೋತ್ಸವಕ್ಕೆ ಹೊದ್ದಲದ ಸಾಹುಕಾರ ಮ|| ರಾ|| ಹಾಲಪ್ಪಗೌಡರು, ಆರುಗಲ್ಲು ಸಾಹುಕಾರ ಮ|| ರಾ|| ನಂಜಪ್ಪಗೌಡರು, ಚಿಳಬೈಲು ಬಸವಲಿಂಗಪ್ಪಗೌಡರ ಪುತ್ರ ಮ|| ರಾ|| ಸಾಹುಕಾರ್ ಮಲ್ಲಪ್ಪಗೌಡರು ಹಾಗೂ ವೀರಶೈವಮಾಹೇಶ್ವರರು, ಭಕ್ತಾದಿಗಳಾದಿಯಾಗಿ 200-300 ಜನರು ದಯಮಾಡಿಸಿದ್ದರು. ಮ|| ರಾ|| ಸಿದ್ಧಪ್ಪಗೌಡರು ಸರ್ವರನ್ನೂ ಆತ್ಯಾದರಪೂರ್ವಕವಾದ ಸತ್ಕಾರದಿಂದ ಸಂತೋಷಗೊಳಿಸಿದರು. ಈ ಮಹೋತ್ಸವಸಮಯದಲ್ಲಿ ಮ|| ರಾ|| ರುದ್ರಪ್ಪಗೌಡರು ಹುಂಚದ ಆರಾಧ್ಯಮಠದ ವೇ|| ರುದ್ರಾರಾಧ್ಯರ ಸಲಹೆಯ ಮೇರೆ ವರನ ಕಡೆಯಿಂದ 1 ರೂಪಾಯಿಯೂ ವಧುವಿನ ಕಡೆಯಿಂದ 1 ರೂಪಾಯಿಯೂ ಜುಮ್ಲ 2 ರೂಪಾಯಿಗಳನ್ನು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದರು. ಈ ವಧೂವರರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ದೀರ್ಘಾಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಕೋರುವ,

ಪ್ರತ್ಯಕ್ಷದರ್ಶಿ.

[illegible] ಒಂದು ಒಂಟೆತ್ತಿನ ಬಂಡಿಗೆ ಢಿಕ್ಕಿಹೊಡೆದು [illegible]ಯು ಮುರಿದುದಲ್ಲದೆ ಮೋಟಾರುಬೈಸಿಕಲ್ಲಿನ [illegible] ಬರುತ್ತಿದ್ದವರಿಗೆ ತುಂಬಾ ಗಾಯಗಳಾಗಿ [illegible]ಗೆ ಸಾಗಿಸಲ್ಪಟ್ಟಿರುತ್ತಾರೆ. ಚೌಕದಲ್ಲಿ ಇದ್ದ [illegible]ಸು ಕಾನ್‌ಸ್ಟೇಬಲಿನ ಅಜಾಗರೂಕತೆಯೇ ಈ [illegible]ಕ್ಕೆ ಕಾರಣವೆಂದು ಕೇಳುತ್ತೇವೆ.

[illegible]ದಿನಂತೆ ಈ ವರ್ಷವೂ ನವರಾತ್ರಿಯಕಾಲದಲ್ಲಿ [illegible]ರಿನಲ್ಲಿ ಹಿಂದೂಸ್ಥಾನದ ಸರ್ವವಸ್ತುಪ್ರದರ್ಶನ[illegible] ನಡೆಯಿಸುವಂತೆ ನಮ್ಮ ಗೌರ್ನಮೆಂಟಿನವರು [illegible]ಮಾಡಿರುತ್ತಾರೆ. ಈ ಪ್ರದರ್ಶನವು ಅಕ್ಟೋಬರ್ 7 ನೇ ತಾರೀಖು ಸೋಮವಾರದ ದಿವಸ ಪ್ರಾ[illegible]ವಾಗಿ 14 ದಿನಗಳವರೆಗೆ ತೆರೆದಿರುತ್ತದೆ. ಪ್ರದರ್ಶನಕ್ಕೆ ಬರುವ ವಸ್ತುಗಳಲ್ಲಿ ಮೈಸೂರು ಸಂಸ್ಥಾನದ [illegible]ಗಳಿಗೆ ವಿಶೇಷ ಪ್ರೋತ್ಸಾಹಕೊಡಬೇಕೆಂದು ಸಂಕಲ್ಪಿಸಿರುತ್ತಾರಾಗಿ ಸಂಸ್ಥಾನದ ಎಲ್ಲಾ ಕೆಲಸಗಾರರು ತಮ್ಮ ಬುದ್ಧಿಕುಶಲತೆಯನ್ನು ಪ್ರದರ್ಶಿಸುವಂಥ ವಸ್ತುಗಳನ್ನು ಹೆಚ್ಚಾಗಿ ಕಳುಹಿಸುತ್ತಾರೆಂದು ನಿರೀಕ್ಷಿಸಲಾಗಿದೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ನಮ್ಮ ಶ್ರೀಮನ್ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಮೈಸೂರು ಬೆಂಗಳೂರು ಪಟ್ಟಣಗಳಿಗೆ ಬಂದು ವಾಪಸು ದಯಮಾಡುವಾಗ್ಗೆ ಇವೆರಡು ನಗರಗಳಲ್ಲೂ ಇರುವ ಧರ್ಮಸಂಸ್ಥೆಗಳಿಗೋಸ್ಕರ 10,500 ರೂಪಾಯಿಗಳನ್ನು ಉಚಿತವಾಗಿ ದಯಪಾಲಿಸಿದರು. ಈ ಧರ್ಮದ್ರವ್ಯವನ್ನು ಹಂಚಲು, ನಮ್ಮ ದಿವಾನರವರೂ, ಸರ್ ಚಾರಲ್ಸ್‌ಟಾಂಡ್‌ಹಂಟರ್‌ರವರೂ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರೂ ಕಲೆತು ಆಲೋಚಿಸಿ, ಕೆಳಗೆ ಕಾಣಿಸಿದಂತೆ ಹಂಚತಕ್ಕದ್ದೆಂದು ತೀರ್ಮಾನಮಾಡಿರುತ್ತಾರೆ. (1) ಬೆಂಗಳೂರಿನಲ್ಲಿ—ಮುಸ್ಲಿಂ ಅನಾಥಾಲಯ ರೂ. 1000; ಶ್ರೀನಿವಾಸಮಂದಿರದ ಅನಾಥಾಲಯ, ರೂ. 500; ಸೆಂಟ್‌ಮಾರ್ಥಾ ಆಸ್ಪತ್ರೆ ರೂ. 500; ವಿಕ್ಟೋರಿಯಾ ಆಸ್ಪತ್ರೆ, ರೂ. 200; ಮಿಂಟೋ ಆಸ್ಪತ್ರೆ, ರೂ. 200; ಹೆರಿಗೆ ಆಸ್ಪತ್ರೆ, ರೂ. 500; ಕುಷ್ಠರೋಗಿಗಳಿಗೆ ಸುಖಭೋಜನಕ್ಕೆ ರೂ. 100; ವಾಸಿಯಾಗದ ರೋಗಿಗಳ ಭೋಜನಕ್ಕೆ ರೂ. 100; ಸೆಂಟ್‌ತೆರೇಸಾ ಕಾನ್‌ವೆಂಟ್ ಮತ್ತು ಧರ್ಮದ ಆಸ್ಪತ್ರೆ, ರೂ. 200; ಅಶಕ್ತಪೋಷಕಸಂಘ; ರೂ. 500; ಮಹಿಳಾಸೇವಾಸಮಾಜ, ರೂ. 200; ಶಾರದಾ ಸ್ತ್ರೀಸಮಾಜ, ರೂ. 500; ಅಮೆಚೂರ್ ನಾಟಕ ಸಂಘ, ರೂ. 500 ಮತ್ತು ಮಕ್ಕಳಿಗೆ ಹಾಲೆರೆಯುವ ಸಂಘ, ರೂ. 500; ಜುಮ್ಲಾ ರೂ. 5,500. (2) ಮೈಸೂರಿನಲ್ಲಿ—ಮುಸ್ಲಿಂ ಅನಾಥಾಲಯ ರೂ. 500; ಬ್ರಾಹ್ಮಣ ಅನಾಥಾಲಯ, ರೂ. 500; ಲಿಂಗಾಯತರ ಅನಾಥಾಲಯ, ರೂ. 500; ಕೃಷ್ಣರಾಜೇಂದ್ರ ಆಸ್ಪತ್ರೆ, ರೂ. 500; ವಾಣೀವಿಲಾಸ ಆಸ್ಪತ್ರೆ, ರೂ. 200; ವೆಸ್ಲಿಯನ್ ಮಿಷನ್ ಆಸ್ಪತ್ರೆ, ರೂ. 200; ಕ್ಷಯರೋಗಿಗಳ ಆಸ್ಪತ್ರೆ, ರೂ. 100; ಅಂಟುರೋಗಿಗಳ ಆಸ್ಪತ್ರೆ, ರೂ. 100; ಮಕ್ಕಳಿಗೆ ಹಾಲೆರೆಯುವ ಗುಣಾಂಬಾಧರ್ಮಗಳು, ರೂ. 500; ಸಂಘಸಾಮಾಜಿಕ ಸಮಾಜದ ಹಾಲೆರೆಯುವ ಸೆಂಟರು, ರೂ. 200; ರೋಮನ್‌ಕ್ಯಾಥೊಲಿಕ್ ಕಾನ್‌ವೆಂಟ್ ರೂ. 200; ಪಿಂಜ್ರಾಪೋಲ್ ಸಂಘ, ರೂ. 500; ಕುರುಡಮೂಗರ ಸಂರಕ್ಷಣಾಲಯ ರೂ. 1000; ಜುಮ್ಲಾ [illegible]

[illegible]ಗೋಸ್ಕರ ಒಂದು ಅಭಿನವರೇಣುಕಮಂದಿರವನ್ನು ಕಟ್ಟಿಸಬೇಕೆಂದು ಪ್ರಯತ್ನಮಾಡಿರುವ ವಿಷಯವನ್ನೂ ಹಾಗೂ ಬೇರೆ [illegible] ಸದ್ಭಕ್ತರು ಯಾವದೊಂದು ಭೇದಭಾವನೆಗಳಿಗೆ ಅವಕಾಶ[illegible]ದಂತೆ ಏಕಮತ್ಯದಿಂದ ವರ್ತಿಸಿದ್ದನ್ನೂ ನೋಡಿದರೆ ಅವರ ಗುರುಭಕ್ತಿಯು ಅಭೂತಪೂರ್ವವಾದುದೆಂದು ಅಪ್ಪಣೆಕೊಡಿಸಿದರು. ಅದೇ ರೀತಿಯಲ್ಲಿ ಸರ್ವರೂ ಮಠ ಪೀಠ ಮತ್ತು ಧರ್ಮಗಳ ಅಭಿಮಾನದಿಂದ ವರ್ತಿಸಿದರೆ ಸಮಾಜವು ಬಹುಶೀಘ್ರತೆಯಾಗಿ ಅಭಿವೃದ್ಧಿಗೆ ಬರುವದೆಂದು ಅಪ್ಪಣೆಕೊಡಿಸಿ, ಪ್ರಜಾಪಾಲನಪಟುಗಳಾದ ನಮ್ಮ ಶ್ರೀಮನ್ಮಹಾರಾಜಾಧಿರಾಜ ಸರ್ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಜಿ.ಬಿ.ಇ. ಯವರಿಗೂ ಹಾಗೂ ಅವರ ಬಂಧುವರ್ಗದವರಿಗೂ, ಶ್ರೀ ಪಂಚಾಚಾರ್ಯರು ಚಿರಾಯುರಾರೋಗ್ಯೈಶ್ವರ್ಯಾದಿಗಳನ್ನಿತ್ತು ಸಲಹಲೆಂದು ಆಶೀರ್ವದಿಸಿ ಅಂದಿನ ಸಭೆಯನ್ನು ಪೂರೈಸಿದರು. ಸಭೆಯಲ್ಲಿ ನೆರೆದಿದ್ದ ತಾಲೂಕು ಅಮಲ್ದಾರರೇ ಮುಂತಾದ ಅಧಿಕಾರಿಗಳಿಗೂ, ಇತರ ಭಕ್ತಾದಿಗಳಿಗೂ ಮತ್ತು ಸ್ಥಳದ ದೊಡ್ಡಮನು[illegible]ಷ್ಯರಿಗೂ ಆಶೀರ್ವಾದದ ಫಲಪುಷ್ಪತಾಂಬೂಲಗಳನ್ನು ಕೊಟ್ಟಬಳಿಕ ಸವಾರಿಯು ಶ್ರೀಮಂತರ ಗೃಹಕ್ಕೆ ಬಿಜಯಮಾಡಿತು. ತಾ|| ೧-೭-೨೯ ನೆಯ ಭಾನುವಾರ ಚಿಕ್ಕಮಗಳೂರಿನಿಂದ ಪೋಲೀಸ್ ಸೂಪರಿಂಟೆಂಡೆಂಟ್‌ಸಾಹೇಬರಾದ ಶ್ರೀ|| ಆರ್. ಪಿ. ಮಲ್ಲಪ್ಪನವರು ಸಾಗರದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಜೆ. ರುದ್ರಪ್ಪನವರೇ ಮೊದಲಾದವರು ಬೀರೂರಿಗೆ ದಯಮಾಡಿಸಿ, ಶ್ರೀ ಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಪಡೆದು ಹಿಂತಿರುಗಿಹೋದರು. ಪ್ರತಿನಿತ್ಯವೂ ಸಾಯಂಕಾಲ ಶ್ರೀ ಮಹಾಸನ್ನಿಧಿಯಲ್ಲಿ ಸುಣ್ಣಕಲ್ ಬಿದರೆ ಆರಾಧ್ಯಮಠದ ವೇ|| ಪಂ|| ಬಸವಲಿಂಗಶಾಸ್ತ್ರಿಗಳವರಿಂದ ಪುರಾಣಶ್ರವಣವು ನಡೆಯುತ್ತಿರುವುದು ಇಲ್ಲಿನ ಜನಗಳು ಶ್ರವಣ, ಮನನ, ನಿಧಿಧ್ಯಾಸಗಳಿಂದಲೂ ಜಗದ್ಗುರುಗಳ ದರ್ಶನಾಶೀರ್ವಾದಗಳಿಂದಲೂ ಧನ್ಯರಾಗುತ್ತಲಿರುವರು. ಅಲ್ಲದೆ ನಮ್ಮ ಜಗದ್ಗುರುಗಳವರ ವಿಷಯದಲ್ಲಿ ಈ ಪ್ರಾಂತದ ವೀರಶೈವಮಹಾಜನಗಳ ಭಕ್ತಿವಿಶ್ವಾಸಗಳು ಎಷ್ಟು ದೃಢವಾಗಿರುವುವೆಂಬುವದಕ್ಕೆ ಬೀರೂರಿನಲ್ಲಿ ಅತ್ಯಂತ ವೈಭವದಿಂದ ನಡೆದ ಈ ಮಹೋತ್ಸವವೇ ನಿದರ್ಶನವಲ್ಲವೇ ?

ಓರ್ವ ಮಹೋತ್ಸವಭಾಗಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಪ್ರಸೀದತು.

ಶ್ರೀ ಸಂಗಮೇಶ್ವರ ಸಂಸ್ಕೃತಪಾಠಶಾಲಾ.

ನಿಜಾಂ ಇಲಾಖಾ ಅಣದುರ್ಗ.

ಇಲ್ಲಿಯ ಹಿರೇಮಠದ ಶ್ರೀ ಜಗದ್ಗುರು ರೇಣುಕಶಾಖಾಶ್ರಿತರಾದ ಶ್ರೀ ಶಿವಲಿಂಗಶಿವಾಚಾರ್ಯ ಪಟ್ಟದಸ್ವಾಮಿಗಳು ತಮ್ಮ ಮಠದಲ್ಲಿ ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿ ನಿಜಾಂ ಇಲಾಖೆಯಲ್ಲಿರುವ ವಿಶೇಷತಃ ಧಾರಾಶಿವಮಂಡಲಾಂತರ್ಗತ ತುಳಜಾಪೂರ ತಾಲೂಕಿನಲ್ಲಿರತಕ್ಕ ಮಾಹೇಶ್ವರ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯಗಳನ್ನುಂಟುಮಾಡಿರುತ್ತಾರೆ. ನಂದಗಾಂವ ಹಿರೇಮಠದ ವೇ|| ಬಸವಲಿಂಗಶಾಸ್ತ್ರಿಗಳನ್ನು ಅಧ್ಯಾಪಕರನ್ನಾಗಿ ನೇಮಿಸಿದ್ದು ಸದ್ಯಃ ಶಾಲೆಯಲ್ಲಿ 8 ಜನ ವಿದ್ಯಾರ್ಥಿಗಳು ಅಧ್ಯಯನಮಾಡುತ್ತಲಿದ್ದಾರೆ. ಈ ಗ್ರಾಮದ ಹೆಸರು ಅನ್ನದುರ್ಗ ಅಂದರೆ (ಅನ್ನದ ಕೋಟೆ) ಹೀಗಿದ್ದು ಅಣದುರ್ಗವೆಂಬ ಅಪಭ್ರಂಶ ಹೆಸರು ರೂಢಿಯಲ್ಲಿ ಬಂದಿರುತ್ತದೆ. ಇಲ್ಲಿಯ ಭಕ್ತರಾದವರೂ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಅನ್ನೋದಕಗಳನ್ನು ಕೊಡುತ್ತಲಿದ್ದಾರೆ. ಆದ್ದರಿಂದ ನಮ್ಮ ನಿಜಾಂ ಇಲಾಖೆಯಲ್ಲಿರತಕ್ಕ ಸಮಸ್ತ ಮಾಹೇಶ್ವರರಿಗೆ ಆಗ್ರಹಪೂರ್ವಕವಾಗಿ ತಿಳಿಸುವದೇನಂದರೆ—ಪ್ರತಿಯೊಬ್ಬರೂ ತಮ್ಮ ತಮ್ಮ ಹುಡುಗರನ್ನು ಶೀಘ್ರವಾಗಿ ಇಲ್ಲಿಗೆ ಕಳುಹಿಸಿ ಸಂಸ್ಕೃತ ಅಭ್ಯಾಸವನ್ನು ಮಾಡಿಸಬೇಕು. ಈ ಪಾಠಶಾಲೆಯ ಸಂಸ್ಥಾಪಕರಾದ ಶ್ರೀ ಶಿವಲಿಂಗಶಿವಾಚಾರ್ಯ ಪಟ್ಟದಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿದಂದಿನಿಂದ ಮಠದ ಕಟ್ಟಡವನ್ನು ಪುನಃ ಹೊಸದಾಗಿ ಕಟ್ಟಿಸಿ ತಮ್ಮ ಹೆಸರನ್ನು ಚಿರಸ್ಮರಣೀಯವನ್ನಾಗಿ ಮಾಡಿರುತ್ತಾರೆ. ಶ್ರೀ ಜಗದಾಚಾರ್ಯರು ಈ ಮಹನೀಯರಿಗೆ ಚಿರಾಯುರಾರೋಗ್ಯ ಐಶ್ವರ್ಯಾದಿಗಳನ್ನು ಕರುಣಿಸಲೆಂದೂ, ಇವರಿಂದ ಸ್ಥಾಪಿಸಲ್ಪಟ್ಟ ಸಂಸ್ಕೃತಪಾಠಶಾಲೆಯು ಅನಂತಕಾಲವಿರಲೆಂದೂ ಹಾರೈಸುತ್ತೇನೆ. ಇತಿ ಶಿವಂ.

ವ್ಯವಸ್ಥಾಪಕ.
ವೇ|| ಲಿಂಗಯ್ಯನವರು ಮಠಪತಿ, ಅಣದುರ್ಗ.

ತಾಂಬೂಲಸಮಾರಂಭವು.

ಕಜೆಗಿ ತಾ|| ಮರಡೂರ ಗ್ರಾಮದಲ್ಲಿ ತಾ|| 7-7-29 ನೆಯ ರವಿವಾರ ದಿವಸ ವೇ|| ರಾ. ರಾ. ಮಡಿವಾಳಯ್ಯ, ಮುಪ್ಪಯ್ಯ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ತಲಾಠಿ ಕುಲಕರ್ಣಿ ಮಿ|| ಬಸವಣ್ಣಯ್ಯ ಚನ್ನಬಸಯ್ಯ ಸಾಲೀಮಠ ಇವರಿಗೆ ಇಲ್ಲಿಂದಾ ಹಾನಗಲ್ಲ ತಾಲೂಕ ಬ್ಯಾತನಹಾಳ ಕರಾತಿಗೆ ವರ್ಗವಾದುದರಿಂದ ಸದರಿಯವರು ನಮ್ಮ ಗ್ರಾಮದಲ್ಲಿ ಬಹಳ ಉತ್ತಮರೀತಿಯಿಂದ ಕೆಲಸಮಾಡಿ ಬಡರೈತಜನರಿಗೆ ಅನೇಕ ವಿಧವಾದ ತಿಳುವಳಿಕೆಯನ್ನು ಕೊಟ್ಟು ಅವರನ್ನು ಸನ್ಮಾರ್ಗಕ್ಕೆ ಹಚ್ಚಿದುದಕ್ಕಾಗಿ ಅವರ ಸನ್ಮಾನಾರ್ಥವಾಗಿ ಒಂದು ಸಭೆಯು ಸೇರಿದ್ದಿತು. ಆ ಸಭೆಯಲ್ಲಿ (1) ಮಿ|| ಬಸವಣ್ಣಯ್ಯ ಸಾಲೀಮಠ ಇವರು ಜನಪ್ರಿಯರೂ ಶಾಂತಸ್ವಭಾವದವರೂ ಮತ್ತು ರೈತರಿಗೆ ಹಗಲಿರಲು ಹಿತಬಯಸತಕ್ಕವರೂ ಆದ್ದರಿಂದ ಎಲ್ಲರೂ ಅವರ ಕೂಡ ಪ್ರೇಮದಿಂದ ನಡೆದುಕೊಳ್ಳುವದು ಸಹಜಗುಣವಾಗಿರುತ್ತದೆಂದೂ. ಮನುಷ್ಯನಿಗೆ ಗುಣವೇ ಭೂಷಣವಲ್ಲದೆ ಧನಕನಕಾದಿಗಳು ಭೂಷಣವಲ್ಲನೆಂಬ ಕವಿಯ ಉಕ್ತಿಯಂತೆ ಮನುಷ್ಯನು ತನ್ನ ಸುಗುಣ ದುರ್ಗುಣಗಳ ಮೂಲಕವಾಗಿ ಸ್ತುತಿ ನಿಂದೆಗಳಿಗೆ ಒಳಪಡಬೇಕಾಗುವದೆಂದೂ, ಗ್ರಾಮದಲ್ಲಿ ಗ್ರಾಮಸ್ಥರ ಅಂದರೆ ಪಾಟೀಲ ಕುಲಕರ್ಣಿಯರ ಜವಾಬುದಾರಿಯು ಎಷ್ಟು ಇರುತ್ತದೆ, ಅವರು ರೈತರ ಕೂಡ ಹ್ಯಾಗೆ ವರ್ತಿಸಬೇಕು. ಇವೇ ಮೊದಲಾದ ಕೆಲವು ಮಹತ್ವದ ಸಂಗತಿಗಳನ್ನು ಕೂಡಿದ ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಗುವಂತೆ ಮಿ|| ಬಸಯ್ಯ ಗಂಗನರತಿ ಇವರು ಭಾಷಣಮಾಡಿದರು. ಮತ್ತು ಮಿ|| ಸಾಲೀಮಠ ಇವರು ತಮ್ಮನ್ನು ಅಗಲಿ ದೂರ ಹೋದ ಬಗ್ಗೆ ತಮ್ಮ ಖೇದವನ್ನು ಪ್ರಕಟಿಸಿದರು. (2) ಮಿ|| ಸಾಲೀಮಠ ಇವರು ಈ ಗ್ರಾಮಕ್ಕೆ ಕೆಲಸದ ಮೇಲೆ ಬಂದು 2½ ವರ್ಷ ಆಗುತ್ತಾ ಬಂದಿದ್ದು ಈ ಅವಧಿಯಲ್ಲಿ ರೈತರಲ್ಲಿ ಅನೇಕತರಹದ ಸುಧಾರಣೆಗಳನ್ನು ಮಾಡಿದ ಸಂಗತಿಯನ್ನೂ ಇಂಥ ಪರೋಪಕಾರಿಗಳೂ, ಸದ್ಗುಣಿಗಳೂ ಆದವರು ನಮ್ಮ ಗ್ರಾಮಕ್ಕೆ ಹಿಂದೆ ಯಾರೂ ಬಂದಿರಲಿಲ್ಲ, ಮುಂದೆ ಯಾರೂ ಬರುವಂತಿಲ್ಲ. ಇವರಿಗೆ ಇಷ್ಟು ಬೇಗ ವರ್ಗವಾದದ್ದು ನಮ್ಮೆಲ್ಲರ ದುರ್ದೈವವೆಂದು ಮಿ|| ಬಾಳುಸಾಬ ನವಾಬ ಇವರು ಭಾಷಣಮಾಡಿದರು. (3) ಮಿ|| ಹನುಮಪ್ಪ ಭರಡಿ ಇವರು ಕೂಡಿದ ಜನರ ಪರಿಯಿಂದಾ ಮಿ|| ಸಾಲೀಮಠ ಇವರು ವರ್ಗವಾಗಿ ದೂರಹೋದ ಬಗ್ಗೆ ತಮ್ಮ ವ್ಯಸನವನ್ನು ವ್ಯಕ್ತಪಡಿಸಿದರು. (4) ಮಿ|| ಸಾಲೀಮಠ ಇವರು ಊರ ಜನರು ತಮ್ಮ ಮೇಲೆ ಮಾಡುವ ಪ್ರೇಮದ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಲ್ಲದೆ ತಮ್ಮೆಲ್ಲರನ್ನು ಅಗಲಿ ದೂರಹೋಗಬೇಕಾದುದಕ್ಕೆ ವ್ಯಸನವನ್ನು ಸೂಚಿಸಿ ಭಾಷಣಮಾಡಿದರು. (5) ಅಧ್ಯಕ್ಷರ ಸಮಾರೋಪಣ ಭಾಷಣಾನಂತರ ಮಿ|| ವೀರಬಸನಗೌಡಾ ದೊಡ್ಡಗೌಡ್ರ ಇವರು ಅಧ್ಯಕ್ಷರ ಹಾಗೂ ಮಿ|| ಸಾಲೀಮಠ ಇವರ ಮತ್ತು ಕೂಡಿದ ಜನರ ಆಭಾರಮನ್ನಿಸಿದನಂತರ ಅಧ್ಯಕ್ಷರಿಗೂ ಮಿ|| ಸಾಲೀಮಠ ಇವರಿಗೂ ಹುವ್ವಿನಹಾರಗಳನ್ನು ಹಾಕಿ ಅತ್ತರ, ಗುಲಾಬು, ತಾಂಬೂಲಾದಿಗಳಿಂದ ಕೂಡಿದ ಜನರ ಸನ್ಮಾನಮಾಡಿ ಇವರಂತೆ ಹೋದಹೋದಲ್ಲಿ ಮಿ|| ಸಾಲೀಮಠ ಇವರು ಜನಪ್ರಿಯರಾಗಲೆಂದು ಈಶ್ವರಪ್ರಾರ್ಥನೆಯನ್ನು ಮಾಡಿದರು. ನಮ್ಮ ಸಾರ್ವಭೌಮ ಪಂಚಮಜಾರ್ಜ ಬಾದಶಹರವರ ಜಯಜಯಕಾರದೊಡನೆ ಸಭೆಯು ವಿಸರ್ಜನೆಯಾಯಿತು.

ವೀರಬಸನಗೌಡ ದೊಡ್ಡಭೀಮನಗೌಡಾ ದೊಡ್ಡಗೌಡ್ರ
ಸಾ|| ಮರಡೂರು.

[illegible]ವಿಧಿಗಳು.

ಡಾ. ಎ. ಲಕ್ಷ್ಮಿ[illegible] ಇವರು ತಾ. 18-10-28 ರಲ್ಲಿ ಮದ[illegible]ಯುವಕಜನ ಸಮಾಜ ಮಂದಿರದಲ್ಲಿ ಮೇಲ್ಕಂಡವಿಚಾರವನ್ನು ಕುರಿತು ಹೇಳಿದ ಉಪನ್ಯಾಸದ ಸಾರಾಂಶ:—

ವಸ್ತುತಃ ಭಾರತದೇಶವು ಪರಾಧೀನತೆಯಲ್ಲಿರುವುದರಿಂದ ಆ ಪಾಲಕರ ಶಾಸ್ತ್ರವಿಜ್ಞಾನಗಳು ಅಗ್ರಗಣ್ಯಗಳಾಗಿವೆಯೆಂದೂ ಪಾಲಕರ ಶಾಸ್ತ್ರವಿಜ್ಞಾನಗಳು ಉತ್ತಮವಾದವುಗಳಲ್ಲವೆಂದೂ ಭಾವಿಸಲ್ಪಡುತ್ತಲಿವೆ. ಭಾರತವರ್ಷವು ಸ್ವಜಾತೀಯವಾದ, ಹಾಗೂ ಸ್ವಕೀಯವಾದ ನಾಗರಿಕತೆಯನ್ನುಳ್ಳಂಥಾದ್ದು. ಒಂದಾನೊಂದುಕಾಲದಲ್ಲಿ ಈ ಭಾರತದ ಜ್ಯೋತಿಯು ಸರ್ವ ಪ್ರಪಂಚದಲ್ಲಿಯ ಸಂದುಗೊಂದಿಗಳಲ್ಲಿಯೂ ವ್ಯಾಪಿಸಿ ಅಲ್ಲಿಯ ಅಂಧಕಾರವನ್ನೆಲ್ಲವನ್ನೂ ತೊಲಗಿಸಿತ್ತು. ಇಂದಿಗೂ ಪಾಶ್ಚಾತ್ಯರು ಭಾರತೀಯರಿಂದ ಅರಿಯಬೇಕಾದ ವಿಷಯಗಳು ಅನೇಕಗಳಿವೆ. ಅವುಗಳಲ್ಲಿ ಭಾರತೀಯವೈದ್ಯವಿಧಾನವು ಒಂದು. ಆರೋಗ್ಯವಿಧಿಗಳು ಇತರ ದೇಶಗಳಿಗಿಂತ ಈ ದೇಶದಲ್ಲಿ ಅಧಿಕವಾಗಿ ಬೋಧಿಸಲ್ಪಟ್ಟು ಆಚರಿಸಲ್ಪಡುತ್ತಿದ್ದವು.

ವಿದ್ಯಾ ವಿಧಾನದಲ್ಲಿ ಪ್ರಾಚೀನರು ದೇಹಪವಿತ್ರಮಕ್ಕಾಗಿ ಪ್ರತ್ಯೇಕವಿಧಿಗಳನ್ನು ಏರ್ಪಾಡುಮಾಡಿದರು. ನಮ್ಮ ದೇಶದ ಪರಿಸ್ಥಿತಿಗಳನ್ನನುಸರಿಸಿ ಬ್ರಾಹ್ಮೀಮುಹೂರ್ತದಲ್ಲಿ ಏಳುವಿಕೆಯೂ, ಪ್ರಾತಃಕಾಲದಲ್ಲಿ ವಿದ್ಯೆಯನ್ನಭ್ಯಸಿಸುವಿಕೆಯೂ ಬಳಕೆಯಲ್ಲಿತ್ತು. 10 ಘಂಟೆಗಳ ಮೊದಲ್ಗೊಂಡು ವಿದ್ಯೆಯನ್ನಭ್ಯಾಸಮಾಡುವುದರಿಂದಲೇ ನಮ್ಮ ವಿದ್ಯಾರ್ಥಿಗಳು ಇಂದಿನ ಹೀನಸ್ಥಿತಿಗೆ ಬಂದಿರುವುದು. ಈಚೀಚೆಗೆ ಪಾಂಚಾಲದೇಶೀಯನಾದ ಗಾಮಾ ಎಂಬಾತನು ಪ್ರಪಂಚದ ಮಲ್ಲಯುದ್ಧ ವೀರನಾದ ಜಬಿಸ್ಕೋ ಎಂಬ ಪಾಶ್ಚಾತ್ಯನನ್ನು ಸೋಲಿಸಿ ಅಖಂಡಕೀರ್ತಿಯನ್ನು ಪಡೆದನು. ಇಂದಿಗೂ ಅಂಥಾ ಗಾಮಾಗಳು ಎಷ್ಟೋಮಂದಿ ಈ ದೇಶದಲ್ಲಿರುವರು. ಆದರೆ ಅಂಥವರನ್ನು ಪೋಷಿಸುವವರು ಇಲ್ಲದಿರುವರು. ನಮ್ಮ ಪೂರ್ವಿಕರ ದೇಹಪವಿತ್ರಮ ವಿಧಾನಗಳು ಇನ್ನೂ ನಾಶವಾಗಿರುವುದಿಲ್ಲ. ವಿದ್ಯಾಧಿಕಾರಿಗಳು ಈ ದೇಶೀಯ ವಿಧಾನಗಳನ್ನು ಉದ್ಧಾರಮಾಡಿ ವಿಶ್ವಕಲಾಪರಿಷತ್ತಿನಲ್ಲಿ ಪ್ರತಿ ವಿದ್ಯಾಲಯದಲ್ಲಿಯೂ ಪ್ರವೇಶಮಾಡಿಸತಕ್ಕದ್ದು.

ಭಾರತೀಯರ ದೇಹಪವಿತ್ರಮ ವಿಧಾನವೂ ಒಂದು ಅಂಗಕ್ಕೆ ಮಾತ್ರವಲ್ಲದೆ ದೇಹಕ್ಕೆಲ್ಲಾ ಬಲವನ್ನು ಕೊಡುವಂಥಾದ್ದಾಗಿದೆ. ದೇಹಪವಿತ್ರಮವಿಧಾನಗಳಲ್ಲಿ ಸೂರ್ಯನಮಸ್ಕಾರಮಾಡುವುದು ಒಂದಾಗಿದೆ. ಭಾರತೀಯರ ಪ್ರಾಣಾಯಾಮ ಪದ್ಧತಿಯು ಅಸಮಾನವಾದದ್ದು. ಇಂದ್ರಿಯನಿಗ್ರಹವೇ ಪ್ರಾಣಾಯಾಮದ ಪರಮಪ್ರಯೋಜನವು. ದೇಹಪವಿತ್ರಮಕ್ಕೆ ಮಾಘಮಾಸವು ಬಹಳ ಅನುಕೂಲವಾದದ್ದು. ದೇಹಪವಿತ್ರಮಾನಂತರದಲ್ಲಿ ಮರ್ದನ, ಸಂವಾಹನ, ಉತ್ಪಾಲನಗಳನ್ನು ಆಚರಿಸತಕ್ಕದ್ದು.

ಪೂರ್ಣಾರೋಗ್ಯವನ್ನು ಕೋರುವವರಿಗೆ ಇದರೊಂದಿಗೆ ಸ್ವಚ್ಛವಾದ ಗಾಳಿ, ನಿರ್ಮಲವಾದ ನೀರು, ಆರೋಗ್ಯಕರವಾದ ನಿವಾಸ ಇವು ಅತ್ಯವಶ್ಯಕವು. ಚರಕದಲ್ಲಿ ಹೇಳಲ್ಪಟ್ಟಿರುವ 'ಕಾಲೇ ಹಿತಂ, ಮಿತಂ' ಎಂಬ ಸೂತ್ರವನ್ನನುಸರಿಸಿ, ಯಾವ ಸಮಯದಲ್ಲಿ, ಎಷ್ಟು ಮಾತ್ರ, ಯಾವ ಕೆಲಸವನ್ನು ಮಾಡಬೇಕೋ, ಆ ಸಮಯದಲ್ಲಿ, ಅಷ್ಟುಮಾತ್ರ ಆಯಾ ಕೆಲಸಗಳನ್ನು ಮಾಡುತ್ತಿದ್ದಲ್ಲಿ ಮನುಷ್ಯನು ಪರಿಪೂರ್ಣಾಯುರಾರೋಗ್ಯಗಳನ್ನು ಪಡೆಯಬಲ್ಲನು.

ಶ್ರೀ ಧನ್ವಂತರಿ.

ಪಂಚಾಚಾರ್ಯ ಪ್ರಭಾ

೧೯೨೯ನೇ ಜುಲೈ ತಾ|| ೧೫ನೇ ಸೋಮವಾರ

ಅಹಿಂಸಾಪಾಲನ.

ಪ್ರಾಣಿಹಿಂಸೆಯೆಂಬುವುದು ಮನುಷ್ಯನನ್ನು ನರಕಕ್ಕೀಡುಮಾಡುವ ದುಷ್ಟಾಚರಣೆಯೆಂದು ಅನೇಕ ಶಾಸ್ತ್ರಾಧಾರಗಳಿಂದಲೂ ಯುಕ್ತಿಗಳಿಂದಲೂ ಲೋಕಾನುಭವದಿಂದಲೂ ಸಿದ್ಧವಾಗುತ್ತದೆ. ಸಾಮಾನ್ಯವಾಗಿ ಪ್ರಾಣಿಹಿಂಸೆಯನ್ನು ಮಾಡುವವರಾರುಂಟೋ ಅವರೆಲ್ಲರೂ ಅತಿ ಕ್ರೂರಸ್ವಭಾವವುಳ್ಳವರೆಂದು ಹೇಳಬಹುದಾಗಿದೆ. ಏಕೆಂದರೆ ಒಂದು ಪ್ರಾಣಿಯನ್ನು ಒಬ್ಬನು ಆಯುಧದಿಂದ ಕೊಲ್ಲುವಾಗ ಆತನು ಶಾಂತಿಗುಣವನ್ನು ಆಶ್ರಯಮಾಡಿದ್ದರೆ ಕೊಲ್ಲುವ ಕಾರ್ಯವೇ ನಡೆಯುವದಿಲ್ಲವು. ಆದಕ್ಕಾಗಿ ಕೊಲ್ಲುವುದರಲ್ಲಿ ಸಿದ್ಧನಾದ ಪುರುಷನು ಕ್ರೂರಸ್ವಭಾವವನ್ನು ಹೊಂದಲೇಬೇಕಾಗುವದು. ಹೀಗೆ ಪ್ರಾಣಗಳನ್ನು ಕೊಲ್ಲುವುದರಲ್ಲಿ ನಿರತನಾದ ಪುರುಷನ ಹೃದಯದಲ್ಲಿ ಯಾವಾಗಲೂ ರಾಜಸ ಸ್ವಭಾವವು ಹೆಚ್ಚುತ್ತಿರುವುದಲ್ಲದೆ ಸಾತ್ವಿಕಸ್ವಭಾವವೆಂಬುವುದು ಎಷ್ಟೂ ಹುಟ್ಟುವಂತಿಲ್ಲವು. ಇದಕ್ಕೆ ಪ್ರಾಣಿಗಳನ್ನು ಕೊಂದು ಮಾಂಸವನ್ನು ತಿಂದು ಜೀವಿಸುವ ಪ್ರಾಣಿಗಳೇ ಉದಾಹರಣೆಯಾಗಿರುತ್ತವೆ. ಹುಲಿ, ಕರಡಿ, ಸಿಂಹ ಮುಂತಾದ ಅರಣ್ಯದ ಘಾತುಕ ಪ್ರಾಣಿಗಳು ಬೇರೆ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸದಿಂದ ಜೀವಿಸಬೇಕಾಗಿರುವುದರಿಂದ ಇಂತಹ ಪ್ರಾಣಿಗಳನ್ನು ಬಹಳ ಕ್ರೂರಸ್ವಭಾವವುಳ್ಳವುಗಳನ್ನಾಗಿ ಎಲ್ಲರೂ ತಿಳಿದೇ ಇರುತ್ತಾರೆ. ಈ ಪ್ರಾಣಿಗಳಲ್ಲಿ ಯಾವ ಕಾಲದಲ್ಲೂ ಸೌಮ್ಯ ಸ್ವಭಾವವೆಂಬುವುದು ಹುಟ್ಟುವಂತೆಯೇ ಇಲ್ಲವು. ಇಂತಹ ಘೋರ ಸ್ವಭಾವವು ಮಾಂಸಾಹಾರಿಗಳಾದ ಪ್ರಾಣಿಗಳಲ್ಲಿ ಹುಟ್ಟುವಾಗಲೇ ಸ್ವಭಾವವಾಗಿ ಬಂದಿರುವುದನ್ನು ನೋಡಿದರೆ ಕೊಲ್ಲುವುದೂ ಕೊಂದ ಪ್ರಾಣಿಗಳ ಮಾಂಸವನ್ನು ತಿನ್ನುವುದೂ, ಗೋವು ಮೊದಲಾದ ಸೌಮ್ಯ ಪ್ರಾಣಿಗಳ ಮೇಲೆ ಹೂಂಕರಿಸುವುದೂ ಇವೆಲ್ಲಾ ಹುಲಿ ಕರಡಿ ಮುಂತಾದ ಮಾಂಸಾಹಾರಿಗಳಾದ ಪ್ರಾಣಿಗಳ ವರ್ಗಕ್ಕೆ ಬಂದ ಸ್ವಭಾವವಲ್ಲದೆ ವಿವೇಕದಿಂದೊಡಗೂಡಿದ ಮಾನವವರ್ಗಕ್ಕಾಗಲಿ ಹುಲ್ಲು ಸೊಪ್ಪು ಕಡ್ಡಿಯನ್ನು ತಿಂದು ಜೀವಿಸುವ ಗೋವು ಮುಂತಾದ ಪ್ರಾಣಿವರ್ಗಕ್ಕಾಗಲಿ ಬಂದ ಸ್ವಭಾವವಲ್ಲವು. ಈ ಕಲಿಕಾಲ ಮಹಿಮೆಯಿಂದ ಈಗ ಕೆಲ ಮಾನವವರ್ಗದಲ್ಲಿಯೂ ಕೂಡ ಅಂತಹ ಪ್ರಾಣಿಗಳನ್ನು ಕೊಂದು ಕೊಲ್ಲಿಸಿ ಅವುಗಳ ಮಾಂಸವನ್ನು ತಿನ್ನುವ ಅಭ್ಯಾಸವು ಬಂದಿರುತ್ತದೆ. ಮನುಷ್ಯನಾಗಲಿ ಅಥವಾ ಗೋವು ಮುಂತಾದ ಪ್ರಾಣಿಗಳಾಗಲಿ ಮಾಂಸಾಹಾರ ಮಾಡುವ ಪ್ರಾಣಿವರ್ಗದಲ್ಲಿ ಸೇರುವುದಿಲ್ಲವು. ಪ್ರಾಯಶಃ ಯಾವ ಪ್ರಾಣಿಗಳು ತುಟಿಗಳ ಸಹಾಯದಿಂದ ಜಲವನ್ನು ಪಾನಮಾಡಿ ಆಹಾರವನ್ನು ತಿನ್ನುತ್ತವೆಯೋ, ಅಂತಹ ಪ್ರಾಣಿಗಳೆಲ್ಲವೂ ಧಾನ್ಯತೃಣಾದಿಗಳನ್ನು ತಿನ್ನುವ ಸ್ವಭಾವವುಳ್ಳವುಗಳಾಗಿರುತ್ತವೆ. ಇವುಗಳಲ್ಲಿ ಧಾನ್ಯಾಹಾರಿಗಳಾದ ಮನುಷ್ಯರಾಗಲಿ ತೃಣಾಹಾರಿಗಳಾದ ಗೋವುಗಳೇ ಆಗಲಿ ಇವುಗಳೆಲ್ಲವೂ ತುಟಿಗಳ ಸಹಾಯದಿಂದ ತಿನ್ನುವ ಸ್ವಭಾವವುಳ್ಳವುಗಳಾದ್ದರಿಂದ ಇವುಗಳಲ್ಲಿ ಯಾವ ಪ್ರಾಣಿಯೂ ಮಾಂಸಾಹಾರಿಯಾದ ಪ್ರಾಣಿಯಲ್ಲವು. ಕಾಡಿನಲ್ಲಿ ವಾಸವಾಗಿರುವ ಹುಲಿ ಕರಡಿ ಸಿಂಹ ಮುಂತಾದ ಪ್ರಾಣಿಗಳು ತುಟಿಯ ಸಹಾಯವಿಲ್ಲದೆ ನಾಲಿಗೆಯ ಸಹಾಯದಿಂದಲೇ ಜಲವನ್ನು ಪಾನಮಾಡಿ ಆಹಾರವನ್ನು ತಿನ್ನುವ ಸ್ವಭಾವವುಳ್ಳವುಗಳಾದ್ದರಿಂದ ಇಂತಹ ಪ್ರಾಣಿಗಳೇ ಮಾಂಸಾಹಾರಿ ಪ್ರಾಣಿಗಳಾಗಿರುತ್ತವೆ. ಮತ್ತು ಈ ಪ್ರಾಣಿಗಳೇ ಬಹಳ ಕ್ರೂರ ಸ್ವಭಾವವುಳ್ಳವುಗಳೆಂದು ಪ್ರತ್ಯಕ್ಷ ಅನುಭವದಿಂದ ಸಿದ್ಧವಾಗುವುದಲ್ಲದೆ ಮಾನವವರ್ಗವು ಮಾಂಸಾಹಾರ ಮಾಡುವ ಕ್ರೂರಪ್ರಾಣಿಗಳ ಗುಂಪಿಗೆ ಸೇರಿದುದಲ್ಲವೆಂದು ಸಿದ್ಧವಾಗುತ್ತದೆ. ಮತ್ತು "ಆಹಾರಶುದ್ಧೌ ಸತ್ವಶುದ್ಧಿಃ" ಎಂಬ ಆರ್ಯೋಕ್ತಿಯಂತೆ ಯಾರು ಯಾವ ಆಹಾರವನ್ನು ತಿನ್ನುತ್ತಾರೆಯೋ ಅವರಿಗೆ ಆ ಆಹಾರನಿಷ್ಠಗುಣದೋಷಗಳೇ ಉಂಟಾಗುವವು. ಸಾತ್ವಿಕವಾದ ಧಾನ್ಯಾಹಾರವೇ ಸ್ವಭಾವವಾಗುಳ್ಳ ಮಾನವವರ್ಗದಲ್ಲಿ ಕೆಲವರು ತನ್ನ ಜನ್ಮಸಿದ್ಧವಾದ ಧಾನ್ಯಾಹಾರವನ್ನು ಬಿಟ್ಟು ಮದ್ಯಮಾಂಸಗಳನ್ನು ತಿನ್ನುತ್ತ ಬಂದದ್ದರಿಂದ ಮಾಂಸಾಹಾರಿಗಳಾದ ವ್ಯಾಘ್ರಾದಿ ಕ್ರೂರಜಂತುಗಳಿಗೆ ಸಮಾನರಾಗಿರುತ್ತಾರೆ. ಧಾನ್ಯಾಹಾರಿಗಳನ್ನು ಕಂಡರೆ ಮಾಂಸಾಹಾರಿಗಳು ದ್ವೇಷಿಸುವುದೂ, ಮಾಂಸಾಹಾರಿಗಳನ್ನು ಕಂಡರೆ ಧಾನ್ಯಾಹಾರಿಗಳು ದ್ವೇಷಿಸುವುದೂ ರೂಢಿಯಾಗಿ ಬಂದಿರುತ್ತದೆ. ಯಾರಿಗೆ ಒಂದೇ ವಿಧವಾದ ಆಹಾರ ನಿಯಮವಿರುತ್ತದೆಯೋ ಅವರಿಗೆಲ್ಲ ಒಂದೇ ವಿಧವಾದ ಬುದ್ಧಿವೃತ್ತಿಯು ಹುಟ್ಟುತ್ತದೆ. ಆದಿಲ್ಲದಿದ್ದರೆ ಸಿಂಹಗಳಿಗೂ ಆನೆಗಳಿಗೂ ದ್ವೇಷವಿರುವಂತೆ ಮಾಂಸಾಹಾರಿಗಳಿಗೂ ಧಾನ್ಯಾಹಾರಿಗಳಿಗೂ ಪರಸ್ಪರ ದ್ವೇಷಮಾತ್ಸರ್ಯಾದಿ ದುರ್ಗುಣಗಳು ಹೆಚ್ಚುತ್ತಲೇ ಹೋಗುವುವು. ಇವಕ್ಕೆಲ್ಲ ಆಹಾರಭೇದವೇ ಕಾರಣವೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಆದರಲ್ಲಿ ನಮ್ಮ ಭಾರತೀಯರಿಗೆ ಪ್ರಾಣಿಹಿಂಸೆಯಾಗಲಿ, ಮಾಂಸಭಕ್ಷಣವಾಗಲಿ, ಮದ್ಯಪಾನವಾಗಲಿ ಸ್ವಪ್ನದಲ್ಲೂ ಕೂಡದೆಂದೂ, ಈ ಘೋರವಾದ ಆಹಾರದಿಂದ ಈಶ್ವರನು ಕುಪಿತನಾಗುವನೆಂದೂ, ಇಂತಹ ಕ್ರೂರವೃತ್ತಿಯುಳ್ಳವರು ಯಮಗೃಹಕ್ಕೆ ಅತಿಥಿಗಳಾಗುವರೆಂದೂ ಶಾಸ್ತ್ರಗಳು ಸಾರುತ್ತಿರುವದನ್ನು ಲಕ್ಷಿಸದೆ ದುಸ್ಸಂಸರ್ಗದೋಷದಿಂದ ಭಾರತೀಯರಾದ ಕೆಲ ಆರ್ಯಜನಗಳೂ ಸಹ ಅನಾರ್ಯರು ಮಾಡುವ ಇಂತಹ ಕ್ರೂರವೃತ್ತಿಗಳಿಗೆ ಮನಸ್ಸನ್ನು ಕೊಡುವುದರಿಂದ ಒಬ್ಬರಿಗೊಬ್ಬರು ಮತ್ಸರಿಸುವ ಸ್ವಭಾವವುಳ್ಳವರಾಗಿದ್ದಾರೆಂದು ಹೇಳಬಹುದು. ಒಂದೇ ವಿಧವಾದ ಆಹಾರನಿಯಮವು ಎಲ್ಲಿ ನೆಲಸಿರುವುದೋ ಅಂತಹ ಜನಗಳಲ್ಲಿ ಪರಸ್ಪರ ಭೇದಬುದ್ಧಿಯು ಅಳಿದು ಎಲ್ಲರೂ ಸಹೋದರರೆಂಬ ಭಾವವುಂಟಾಗುತ್ತದೆ. ಸುಶೀಲರು ಮಾಂಸಾಹಾರವನ್ನೂ, ಮದ್ಯಪಾನವನ್ನೂ, ಪ್ರಾಣಿಹಿಂಸೆಯನ್ನೂ ನಿಷೇಧಿಸುವ ಸ್ವಭಾವವುಳ್ಳ ಮಾನವನನ್ನೂ, ಮದ್ಯಮಾಂಸಗಳನ್ನು ಭಕ್ಷಿಸುವ ಮನುಷ್ಯನನ್ನೂ ನೋಡಿ ಹುಲಿ ಕರಡಿಗಳಂತೆ ಜುಗುಪ್ಸೆಪಡುತ್ತಾರೆ. ಹೀಗೆ ಮನಸ್ಸಿನಲ್ಲಿ ಅಸಹ್ಯಭಾವವು ಯಾವಾಗ ಉಂಟಾಯಿತೋ ಆಗಲೇ ಅವರವರಲ್ಲಿದ್ದ ಮೈತ್ರೀಭಾವವು ಕೆಟ್ಟುಹೋಗುವುದು. ಅಥವಾ ಮದ್ಯಮಾಂಸಾಹಾರಿಗಳಿಗೂ ಧಾನ್ಯಾಹಾರಿಗಳಿಗೂ ಕೆಲವೆಡೆಯಲ್ಲಿ ಮೈತ್ರಿಯು ಕಾಣಿಸುತ್ತಿದ್ದರೂ ಸಹ ಆ ಮೈತ್ರಿಯು ಬಾಹ್ಯಾಡಂಬರದ ಪ್ರೇಮವಲ್ಲದೆ ವಾಸ್ತವವಾದ ಪ್ರೇಮವಲ್ಲವು. ಆದ್ದರಿಂದ ಮಾನವಜನ್ಮಕ್ಕೆ ಅತ್ಯಂತ ನಿಷಿದ್ಧಗಳಾದ ಮದ್ಯಮಾಂಸಾದಿಗಳ ಸೇವನೆಯಾಗಲಿ ಪ್ರಾಣಿಹಿಂಸೆಯೇ ಆಗಲಿ ಇವೆಲ್ಲವೂ ಎಂದು ನಮ್ಮ ಭಾರತೀಯರಲ್ಲಿ ನಿರ್ಮೂಲವಾಗುತ್ತವೆಯೋ ಅಂದೇ ಭಾರತೀಯರಲ್ಲಿ ಪರಸ್ಪರ ನಿಜವಾದ ಪ್ರೇಮವು ಉಂಟಾಗುವುದು. ಆದುದರಿಂದ ಭಾರತೀಯರು ಅಹಿಂಸಾವ್ರತವನ್ನು ಪಾಲಿಸಿ ಧನ್ಯರಾಗಲೆಂದು ಕೋರುತ್ತೇವೆ.

ವಿಶ್ವವಿದ್ಯಾನಿಲಯದ ಫೀ.

ಮೈಸೂರು ವಿಶ್ವವಿದ್ಯಾನಿಲಯದವರು ಈ ವರ್ಷದಿಂದ ಸಂಸ್ಥಾನದ ಕಾಲೇಜುಗಳಲ್ಲಿ 'ಫೀ' ಗಳ ದರವನ್ನು ಹೆಚ್ಚಿಸಿರುವರು. ಇನ್ನು ಮುಂದೆ ಕಾಲೇಜು ವಿದ್ಯಾರ್ಥಿಗಳು ಪ್ರತಿ ತಿಂಗಳು ಹಿಂದೆ ರೂಢಿಯಲ್ಲಿದ್ದ 'ಫೀ' ಗಿಂತ ಸುಮಾರು ಎರಡರಷ್ಟು ಸಲ್ಲಿಸಬೇಕಾಗಿರುವುದು. ಇಷ್ಟೇ ಅಲ್ಲ! ಪರೀಕ್ಷೆಯ 'ಫೀ' ಗಳೂ ಸಹ ಹೆಚ್ಚಿಸಲ್ಪಟ್ಟಿರುವುವು. ಇದರಿಂದ ಬಡವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಯಿತೆಂದು ಹೇಳಬಹುದಾಗಿದೆ. ಈ ಬದಲಾವಣೆಗೆ ಸರ್ಕಾರದವರೇ ಕಾರಣರೋ, ಅಥವಾ ವಿಶ್ವವಿದ್ಯಾನಿಲಯದವರೇ ಕಾರಣರೋ ಯಾವುದೂ ತಿಳಿಯುವಂತಿಲ್ಲ. ಹೋದ ವರ್ಷ ಜೂನಿಯರ್ ಬಿ. ಎ., ತರಗತಿಗೆ ಸೇರಲು ಸುಮಾರು 300 ವಿದ್ಯಾರ್ಥಿಗಳು ಅರ್ಜಿಹಾಕಿದ್ದರಂತೆ! ಈ ವರ್ಷ 50-60 ಜನರು ಮಾತ್ರ ಅರ್ಜಿ ಹಾಕಿದ್ದರಂತೆ! ಇದರಿಂದ ಯಾರಿಗೆ ಯಾವ ಪ್ರಯೋಜನವಾಯಿತೋ ತಿಳಿಯದು! ಇದ

ಗುರುಬಸಪ್ಪ ಮಾಳೀಕೊಪ್ಪ ಮಾಲೀಪಾಟೀಲ ಮ|| ರಾ|| [illegible] ಬಸವನಗೌಡ ಇತ್ಯಾದಿ ಭಕ್ತಮಹೇಶ್ವರರು ಸನ್ನಿಧಿಯ ಅಪ್ಪ[illegible] ಮೇರೆಗೆ ಪ್ರತಿದಿನವೂ "ಅಷ್ಟಾವರಣತಿಲಕ" ವೆಂಬ ಮ[illegible] ಪುರಾಣಶ್ರವಣಕ್ಕೆ ಪ್ರಾರಂಭಿಸಿರುವರು. ವೇ|| ಸಿದ್ಧಪ್ಪಯ್ಯ ಸ[illegible] ಮಠ ಇವರು ಸರ್ವರಿಗೂ ಆನಂದವಾಗುವಂತೆ ಓದುವರು. [illegible] ಶಾಂತವೀರಶಾಸ್ತ್ರಿಗಳು ಸೊಪ್ಪಿಮಠ ಇವರು ಒಳ್ಳೇ ರಸವತ್ತಾ[illegible] ಅರ್ಥ ಹೇಳುವರು. ಜಗದ್ಗುರುಗಳವರು ದಿವಸವೂ ಪುರಾಣ[illegible] ನಾನಂತರ ಅಬಾಲವೃದ್ಧರಿಗೂ ವೇದ್ಯವಾಗುವಂತೆ ಸ್ವಲ್ಪ[illegible] ಉಪನ್ಯಾಸಮಾಡುವರು. ಜಗದ್ಗುರುಗಳ ಆಜ್ಞೆಯಂತೆ [illegible] ೫-೭-೨೯ನೇ ಶುಕ್ರವಾರದ ದಿವಸ ಕೊಪ್ಪಳದ ಭಕ್ತರು ಅಂ[illegible] ಶ್ರೀಮಂತ ಯಜಮಾನ ಮುದಗಲ್ಲ ಸಂಗಪ್ಪ ಡಿ|| ಚನ್ನಪ್ಪ[illegible] ಮ|| ರಾ|| ಅಗಡಿ ಅಂದಾನಪ್ಪ, ಮ|| ರಾ|| ಗಡಾದ ಶೆಟ್ರ ಸಂಗಪ್ಪ[illegible] ಮ|| ರಾ|| ಸಿಡಶೀಶಿ ಗುರುಸಿದ್ಧಪ್ಪ ಮ|| ರಾ|| ಹೆಸರೂರ [illegible] ಲಿಂಗಪ್ಪ ಈ ಮಹಾಶಯರು ಸನ್ನಿಧಿಯ ದರ್ಶನವನ್ನು ಪಡೆ[illegible] ಪುರಾಣಶ್ರವಣಮಾಡಿಕೊಂಡು ಮಹದಾಚಾರ್ಯರ ಆಶೀರ್ವಾದವನ್ನು ಪಡೆದು ರಾತ್ರಿ ೯ ಘಂಟೆಗೆ ಮೋಟಾರಿನಲ್ಲಿ ಹಿಂತಿರುಗಿಹೋದರು. ಕೊಪ್ಪಳ ಸ್ಟೇಷನ್ನಿಗೆ ನಮ್ಮ ಗ್ರಾಮವು (ಮುದ್ದಾಬಳ್ಳಿ) [illegible] ಮೈಲು ಅಂತರವಿದ್ದು ಮೋಟರ್ ಸರ್ವಿಸ್ ಇರುವದರಿಂದ ಪ್ರ[illegible] ತ್ಯದಲ್ಲೂ ಭಗವತ್ಪಾದರ ದರ್ಶನಕ್ಕೆ ಪರಸ್ಥಳದ ಭಕ್ತಾದಿಗಳು ತಂಡತಂಡವಾಗಿ ಬರುತ್ತಿರುವರು. ಪುರಾಣವು ಶ್ರಾವಣಮಾಸ[illegible] ತ್ಯದವರೆಗೆ ನಡೆಯಬಹುದು. ಶ್ರೀ ಗುರು-ಲಿಂಗ-ಜಂಗಮ[illegible] ಅಷ್ಟಾವರಣ ಮಹಿಮೆಯನ್ನು ಶ್ರವಣಮಾಡುವದಕ್ಕೂ ಜಗ[illegible] ಚಾರ್ಯರ ದರ್ಶನಾಶೀರ್ವಾದಗಳನ್ನು ಪಡೆಯುವದಕ್ಕೂ ಬಂ[illegible] ಚ್ಛೆಯುಳ್ಳ ಭಕ್ತಾಗ್ರೇಸರರಿಗೆ ಇದು ಸುಸಮಯವೆಂದು ನಾ[illegible] ಪೂರ್ಣನಂಬಿದ್ದೇವೆ.

ಗುರುಭಕ್ತ ಕಿಂಕರರು.

ತರೀಕೆರೆ ವೀರಶೈವತರುಣಸಂಘ.

ಈ ಸಂಘದ ಚಿರಸ್ಥಾಯಿಫಂಡಿಗೆ ಧನಸಹಾಯಮಾಡಿದಂತ[illegible] ಮಹನೀಯರುಗಳ ಹೆಸರುಗಳು.—

1. ಶ್ರೀಯುತರುಗಳಾದ ಶಿದ್ರಾಮಶೆಟ್ಟರವರು 10 ರೂ. 2. ಅಜ್ಜಂಪುರದ ಶಿವಪ್ಪಯ್ಯನವರು 5 ರೂ. 3. ಮುಳ್ಳಯ್ಯ[illegible] ವರ ಬಸಪ್ಪನವರು 2 ರೂ. 4. ಕಡೂರು ತಾಲ್ಲೂಕು ಗಿ[illegible] ಪುರದ ಕರಿಸಿದ್ದಪ್ಪನವರು 2 ರೂ. 5. ಹೊಸದುರ್ಗದ ತವನ[illegible] ನವರು 2 ರೂ. 6. ಅಜ್ಜಂಪುರದ ಮಲ್ಲೇಶಪ್ಪನವರು 1 ರೂ. 7. ಬಳೆಗಾರ ರುದ್ರಪ್ಪನವರು 1 ರೂ. 8. ಚಿಕ್ಕಮಗಳೂರಿನ [illegible] ಯ್ಯನವರು ಜುಡಿಸಿಯಲ್ ಕ್ಲಾರ್ಕ್ 1 ರೂ. 9. ನಗದಿ ಗುಮ[illegible] ಸ್ತ ಪಿ. ರುದ್ರಪ್ಪನವರು 1 ರೂ. 10. ತರೀಕೆರೆ ಮ|| ರಾ|| ನಾಗಪ್ಪನವರ ಪುತ್ರ ಚಿ|| ವೀರಭದ್ರಪ್ಪನೆಂಬ ವರನಿಗೂ ಮ|| ರಾ|| ಚನ್ನಬಸಪ್ಪನವರ ಪುತ್ರಿ ಚಿ|| ಸೌ|| ನಂಜುಂಡಮ್ಮನಿಗೂ ನಡೆದ ಲಗ್ನದಲ್ಲಿ ಬಂದದ್ದು ನಾಗಪ್ಪನವರಿಂದ 2 ರೂ. 11. ಹಿಂದೆ ಬಂದಿರುವುದು 170 ರೂ. ಒಟ್ಟು 197 ರೂ.

ಮೇಲ್ಕಂಡ ಮಹನೀಯರಂತೆ ಎಲ್ಲಾ ಮಹನೀಯರುಗಳೂ ಈ ಸಂಘಕ್ಕೆ ಧನಸಹಾಯಮಾಡುತ್ತಾರೆಂದು ನಂಬಿದೆ.

ತರೀಕೆರೆ, (Sd.) ಟಿ. ಎಲ್. ಸಿದ್ದಪ್ಪ,
ತಾ|| 10-7-1929. ಸಂಘದ ಅಧ್ಯಕ್ಷರಿಗೋಸ್ಕರ.

ಶ್ರೀಜಗದ್ಗುರು ಪಂಚಾಚಾರ್ಯ ಪ್ರಸಾದ.

ವಿವಾಹಮಹೋತ್ಸವವು.

ಅವುಕ.

ನಗರದ ತಾ|| ಹುಂಬುಚದ ಹೋ|| ಅವುಕದ ಮ|| ರಾ|| ಶಿವಪ್ಪಗೌಡರ ಪುತ್ರಿ ಚಿ|| ಸೌ|| ಹಾಲಮ್ಮನನ್ನು ಸದರಿ ತಾ|| ಅನಗೆರೆಯ ಮ|| ರಾ|| ಮಲ್ಲಪ್ಪಗೌಡರ ಪುತ್ರ ಚಿ|| ಪುಟ್ಟ[illegible] ನಿಗೆ ಕೊಟ್ಟು ಇದೇ ಶುಕ್ಲ ಸ|| ರದ ಜೇಷ್ಠ ಬಹುಳ ಅಷ್ಟಮಿ[illegible] ಭಾನುವಾರ ವಿವಾಹಮಹೋತ್ಸವವನ್ನು ವಿಧಿಪೂರ್ವಕವಾ[illegible] ಹುಂಬುಚದ ಆರಾಧ್ಯಮಠದ ಗುರುಸಿದ್ಧಾರಾಧ್ಯರು ರುದ್ರಾರಾಧ್ಯರು ಇವರುಗಳು ನೆರವೇರಿಸಿದರು. ವಿವಾಹಾಂಗಭೂತವಾದ ಗಣಪತಿ ಪೂಜೆ ಪುಣ್ಯಾಹವಾಂದಿ ಅಂಕುರಾರ್ಪಣ ಮುಂತಾ[illegible]

ಈ ತಿಂಗಳು 18 ನೆಯ ತಾರೀಖಿನ ದಿವಸ [illegible] ದಿವಾನಸಾಹೇಬರವರು ಹಾಗೂ ರಾ. ಸೆಕ್ರೆಟರಿಗಳಾ[illegible] ಮೆ|| ಪಿ. ಮಹಾದೇವಯ್ಯನವರು, ಬಿ.ಎ.,ಬಿ.ಎಲ್. ರವರು ದಾವಣಗೆರೆಗೆ ಪ್ರಯಾಣಮಾಡಿ ಅಲ್ಲಿ[illegible] ಹಿಂದೂ ಮುಸಲ್ಮಾನ ಪ್ರಮುಖರನ್ನೆಲ್ಲ ಬರಮಾ[illegible] ಕೊಂಡು ಅವರಿಗೆಲ್ಲ ಸಮಾಧಾನವನ್ನು ಹೇಳಿ ಮುಂ[illegible] ಉಭಯಸಂಗಡದವರೂ ತಮ್ಮ ತಮ್ಮಲ್ಲಿಯ ಮನಸ್ತಾ[illegible] ಪಗಳನ್ನೆಲ್ಲ ದೂರಮಾಡಿ ವರ್ತಿಸಬೇಕೆಂದು ಹೇ[illegible] ಶಾಂತಿಯನ್ನು ನೆಲೆಗೊಳಿಸಿ ಬಂದಿರುವರೆಂದು ತಿಳಿದು ಬರುತ್ತದೆ.

ಕಳೆದ 16 ನೇ ತಾರೀಖು ಮಂಗಳವಾರದ ದಿವ[illegible] ರಾಜಧಾನಿಯ ಚಾಮರಾಜರೋಡಿನಲ್ಲಿ ಲಕ್ಷ್ಮೀಥಿಯೇಟರಿನ ಮುಂಭಾಗದಚೌಕದಲ್ಲಿ ಒಂದು ಮೋಟಾರ್ ಬ[illegible] ಬಂದು ಒಂಟೆತ್ತಿನ ಬಂಡಿಗೆ ಢಿಕ್ಕಿಹೊಡೆದು [illegible]ನು ಮುರಿದುದಲ್ಲದೆ ಮೋಟಾರು-ಬೈಸಿಕಲ್ಲಿನ [illegible] ಬರುತ್ತಿದ್ದವರಿಗೆ ತುಂಬಾ ಗಾಯಗಳಾಗಿ [illegible]ಗೆ ಸಾಗಿಸಲ್ಪಟ್ಟಿರುತ್ತಾರೆ. ಚೌಕದಲ್ಲಿ ಇದ್ದ [illegible]ನು ಕಾನ್ಸ್ಟೇಬಲಿನ ಅಜಾಗರೂಕತೆಯೇ ಈ [illegible]ತಕ್ಕೆ ಕಾರಣವೆಂದು ಕೇಳುತ್ತೇವೆ.

ಎಂದಿನಂತೆ ಈ ವರ್ಷವೂ ನವರಾತ್ರಿಯಕಾಲದಲ್ಲಿ ಮೈಸೂರಿನಲ್ಲಿ ಹಿಂದೂಸ್ಥಾನದ ಸರ್ವವಸ್ತುಪ್ರದರ್ಶನವನ್ನು ನಡೆಯಿಸುವಂತೆ ನಮ್ಮ ಗೌರ್ನಮೆಂಟಿನವರು [illegible]ಮಾಡಿರುತ್ತಾರೆ. ಈ ಪ್ರದರ್ಶನವು ಅಕ್ಟೋಬರು 7 ನೇ ತಾರೀಖು ಸೋಮವಾರದ ದಿವಸ ಪ್ರಾರಂಭವಾಗಿ 14 ದಿನಗಳವರೆಗೆ ತೆರೆದಿರುತ್ತದೆ. ಪ್ರದರ್ಶನಕ್ಕೆ ಬರುವ ವಸ್ತುಗಳಲ್ಲಿ ಮೈಸೂರು ಸಂಸ್ಥಾನದ ಪದಾರ್ಥಗಳಿಗೆ ವಿಶೇಷ ಪ್ರೋತ್ಸಾಹಕೊಡಬೇಕೆಂದು ಸಂಕಲ್ಪಿಸಿರುತ್ತಾರಾಗಿ ಸಂಸ್ಥಾನದ ಎಲ್ಲಾ [illegible]ಲಸಗಾರರು ತಮ್ಮ ಬುದ್ಧಿಕುಶಲತೆಯನ್ನು ಪ್ರದರ್ಶಿಸುವಂಥ ವಸ್ತುಗಳನ್ನು ಹೆಚ್ಚಾಗಿ ಕಳುಹಿಸುತ್ತಾರೆಂದು ನಿರೀಕ್ಷಿಸಲಾಗಿದೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಶ್ರೀಮನ್ಮಹಾರಾಜರವರ ಆತಿಥ್ಯವನ್ನು [illegible] ಸ್ವೀಕರಿಸಿ ಮೈಸೂರು ಬೆಂಗಳೂರು ಪಟ್ಟಣಗಳಿಗೆ [illegible]ಂದು ವಾಪಸು ದಯಮಾಡುವಾಗ್ಗೆ ಇವೆರಡು ನಗರ[illegible]ಗಳಲ್ಲೂ ಇರುವ ಧರ್ಮಸಂಸ್ಥೆಗಳಿಗೋಸ್ಕರ 10,500 ರೂಪಾಯಿಗಳನ್ನು ಉಚಿತವಾಗಿ ದಯಪಾಲಿಸಿದರು. [illegible] ಧರ್ಮದ್ರವ್ಯವನ್ನು ಹಂಚಲು, ನಮ್ಮ ದಿವಾನ[illegible]ವರೂ, ಸರ್ ಚಾರಲ್ಸ್ ಟಾಡ್ ಹಂಟರ್ ರವರೂ ಸರ್ [illegible]. ಪುಟ್ಟಣ್ಣಶೆಟ್ಟರವರೂ ಕಲೆತು ಆಲೋಚಿಸಿ, [illegible]ಳಗೆ ಕಾಣಿಸಿದಂತೆ ಹಂಚತಕ್ಕದ್ದೆಂದು ತೀರ್ಮಾನ ಮಾಡಿರುತ್ತಾರೆ. (1) ಬೆಂಗಳೂರಿನಲ್ಲಿ—ಮುಸ್ಲಿಂ ಅನಾಥಾಲಯ ರೂ. 1000; ಶ್ರೀನಿವಾಸಮಂದಿರದ ಅನಾಥಾಲಯ, ರೂ. 500; ಸೆಂಟ್ ಮಾರ್ತಾ ಆಸ್ಪತ್ರೆ ರೂ. 500; ವಿಕ್ಟೋರಿಯಾ ಆಸ್ಪತ್ರೆ, ರೂ. 200; [illegible]ಂಟೊ ಆಸ್ಪತ್ರೆ, ರೂ. 200; ಹೆಂಗಸ ಆಸ್ಪತ್ರೆ, ರೂ. [illegible]00; ಕುಷ್ಠರೋಗಿಗಳಿಗೆ ಸಹಾಯೋಜನಕ್ಕೆ ರೂ. [illegible]00; ವಾಸಿಯಾಗದ ರೋಗಿಗಳ ಭೋಜನಕ್ಕೆ ರೂ. [illegible]00; ಸೆಂಟ್ ಶೆಲೀಸಾ ಕಾನ್ವೆಂಟ್ ಮತ್ತು ಧರ್ಮದ ಆಸ್ಪತ್ರೆ, ರೂ. 200; ಅಶಕ್ತಪೋಷಕಸಂಘ; ರೂ. [illegible]00; ಮಹಿಳಾಸೇವಾಸದನ, ರೂ. 200; ಶಾರದಾ [illegible] ಸದನ, ರೂ. 500; ಅನೆಯೂರ್ ನಾಟಕ [illegible] ರೂ. 500 ಮತ್ತು ಮಕ್ಕಳಿಗೆ ಶಾಲೆಯ[illegible] ಸಂಘ, ರೂ. 500; ಜುಮ್ಲಾ ರೂ. 5,500. (2) ಮೈಸೂರಿನಲ್ಲಿ—ಮುಸ್ಲಿಂ ಅನಾಥಾಲಯ ರೂ. 500; [illegible] ಅನಾಥಾಲಯ, ರೂ. 500; ಲಿಂಗಾಯ[illegible]ರ ಅನಾಥಾಲಯ, ರೂ. 500; ಕೃಷ್ಣರಾಜೇಂದ್ರ ಆಸ್ಪತ್ರೆ, ರೂ. 500; ವಾಣೀವಿಲಾಸ ಆಸ್ಪತ್ರೆ, ರೂ. [illegible]00; [illegible] ಆಸ್ಪತ್ರೆ, ರೂ. 200; [illegible] ರೋಗಿಗಳ ಆಸ್ಪತ್ರೆ, ರೂ. 100; ಅಂಟುರೋಗಿಗಳ ಆಸ್ಪತ್ರೆ, ರೂ. 100; ಮಕ್ಕಳಿಗೆ ಶಾಲೆಯ[illegible] [illegible]ಧರ್ಮಗಳು, ರೂ. 500; ಸಂಘಸಾಮಾ[illegible] ಸಮಾಜದ ಶಾಲೆಯ[illegible] ಸೆಂಟರು, ರೂ. 200; [illegible] ಕಾನ್ವೆಂಟ್ ರೂ. 200; [illegible] ಪೋಲ್ ಸಂಘ, ರೂ. 500; [illegible] ಸಂರಕ್ಷಣಾಲಯ ರೂ. 1000; ಜುಮ್ಲಾ ರೂ. 5,000.

ವರ್ತಮಾನಸಂಗ್ರಹ.

ಕಳೆದ ವರ್ಷದ ಆದಾಯದಲ್ಲಿ ಅಮೇರಿಕಾ ಸರಕಾರಕ್ಕೆ 50 ಕೋಟಿ ರೂಪಾಯಿಗಳು ಉಳಿದಿರುವವಂತೆ! ಅದರಲ್ಲಿ 45 ಕೋಟಿ ರೂಪಾಯಿಗಳನ್ನು ರೈತರ ಹಿತಕ್ಕಾಗಿ ಈ ವರ್ಷ ವೆಚ್ಚಮಾಡುವರಂತೆ!

ಪ್ಯಾರಿಸ್ ನಗರದಲ್ಲಿ ತಿರುಕರೆಲ್ಲರೂ ಸಭೆಸೇರಿ, ತಮ್ಮ ತಿರುಪೆಯ ಉದ್ಯೋಗವು ಸರಿಯಾಗಿ ನಡೆಯುವದಕ್ಕಾಗಿ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ನಿರ್ಧರಿಸಿರುವರಂತೆ!

ಅಮಾನುಲ್ಲಾ ಖಾನರು ತಮ್ಮ ಪತ್ನಿ ಸೌರಿಯಾರಾಣಿಯೊಡನೆ ಮಾರ್ಸೆಲ್ಸಿಗೆ ತೆರಳಿ ಅಲ್ಲಿರುವ ಕೆಲವು ಆಫ್ಘಾನಮುಖಂಡರ ಸತ್ಕಾರವನ್ನು ಸ್ವೀಕರಿಸಿ ಮುಂದೆ ರೋಂ ಪಟ್ಟಣಕ್ಕೆ ತೆರಳಿದರು.

ನೂಲುವದಕ್ಕೆ ಅತಿ ಸುಲಭವಾಗಿಯೂ ಹೊಸನಮೂನೆಯಾಗಿಯೂ ಇರುವಂಥ ಹೊಸ ರಾಟೆಯನ್ನು ತಯಾರಿಸಿ ಕೊಡುವವರಿಗೆ 1 ಲಕ್ಷ ರೂಪಾಯಿಗಳ ಬಹುಮಾನ ಕೊಡುವದಾಗಿ ಮಹಾತ್ಮರು ಪ್ರಕಟಿಸಬೇಕೆಂದಿರುವರು.

ದಕ್ಷಿಣಧ್ರುವಸಾಗರದಲ್ಲಿ ಪರಿಶೋಧನೆಗಳನ್ನು ನಡೆಯಿಸಿದ ಕಮ್ಯಾಂಡರ್ ಬರ್ಡ್ ಎಂಬ ಅಮೇರಿಕಾದೇಶಸ್ಥರು ಇದುವರೆಗೆ ಯಾರಿಗೂ ತಿಳಿಯದಿದ್ದ 20 ಸಾವಿರ ಚದುರ ಮೈಲಿಗಳಷ್ಟು ವಿಸ್ತಾರವಾದ ಭೂಭಾಗವನ್ನು ಶೋಧಿಸಿರುವರಂತೆ!

ಜೆರುಸಲೇಮಿನ ಉತ್ತರಪ್ರಾಂತದಲ್ಲಿ ಸಾವಿರಾರು ವರ್ಷಗಳ ಹಿಂದಿನ 3 ಗೋರಿಗಳು ಪತ್ತೆಯಾಗಿವೆ. ಒಂದರಲ್ಲಿ ಕ್ರಿಸ್ತಪೂರ್ವ 6 ನೇ ಶತಮಾನದ ಕೆಲವು ಆಭರಣಗಳೂ ಎರಡನೆಯದರಲ್ಲಿ ಕ್ರಿಸ್ತಶಕೆ ಸಂಬಂಧದ ಒಂದು ನಾಣ್ಯವೂ ಮೂರನೆಯದರಲ್ಲಿ ಕೆಲವು ಅಮೂಲ್ಯಪಾತ್ರೆಗಳೂ ಸಿಕ್ಕಿರುತ್ತವೆ.

ಬೊಂಬಾಯಿನಲ್ಲಿ ಪುನಃ ಕೂಲಿಕಾರರಿಗೂ ಕೆಲವು ಪೋಲೀಸರಿಗೂ ಹೊಡೆದಾಟವಾಯಿತು. ಪೋಲೀಸರು ಕೂಲಿಕಾರರ ಸಭೆಯ ಅಧ್ಯಕ್ಷರೇ ಮೊದಲಾದ ಮೂವರನ್ನು ದಸ್ತಗಿರಿಮಾಡಿ ಕರೆದುಕೊಂಡು ಹೋಗುವಾಗ ಕೂಲಿಕಾರರು ಅವರಮೇಲೆ ಕಲ್ಲುಗಳನ್ನು ಎಸೆದರು. ಪೋಲೀಸಿನವರು ಹೆದರಿ ದಸ್ತಗಿರಿಮಾಡಿದ್ದವರನ್ನು ಬಿಟ್ಟು ಓಡಿಹೋದರು. ಅವರು ಹಾರಿಸಿದ ಗುಂಡುಗಳಿಂದ ಕೆಲವು ಕೂಲಿಕಾರರು ಗಾಯಪಟ್ಟರು. ಹಿಂದಿನಿಂದ ದೊಡ್ಡ ಪೋಲೀಸರ ಗುಂಪು ಬಂದು ದಂಗೆಯನ್ನು ಶಾಂತಮಾಡಿತು.

ಕತ್ತೆಕಿರುಬನೆಂಬ ಒಂದು ಕ್ರೂರಮೃಗವನ್ನು ಬೋನಿನಲ್ಲಿ ಕರಾಚಿಗೆ ಸಾಗಿಸಿಕೊಂಡುಹೋಗುತ್ತಿದ್ದಾಗ, ಅದು ಹೇಗೋ ಬೋನಿನಿಂದ ಹೊರಕ್ಕೆ ಬಂದು ಗ್ರಾಮದಲ್ಲಿ ನುಗ್ಗಿತು. ಆ ಗ್ರಾಮದ ನಾಯಿಗಳು ಕಿರುಬನ ಮೇಲೆ ಬಿದ್ದು ಅದನ್ನು ಕಾಡಿಗೆ ಓಡಿಸಿಬಿಟ್ಟವು. ಈ ವರ್ತಮಾನವನ್ನು ಕೇಳಿದ ಕೆಲವು ಗ್ರಾಮಸ್ಥರು ಕಿರುಬನನ್ನು ಹಿಡಿಯಲು ಕಾಡಿಗೆ ಹೋದಾಗ ಅದು ಅವರಮೇಲೆ ಬಿದ್ದು ಏಳು ಜನರನ್ನು ಪರಚಿ ಗಾಯಪಡಿಸಿತು. ಆಮೇಲೆ ಅದನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು.

ದೆಹಲಿಯಲ್ಲಿ ವಿಧವೆಯರಿಗೆ ಜೀವನೋಪಾಯವನ್ನು ಕಲ್ಪಿಸುವದಕ್ಕೆ ಕೆಲವು "ಆಶ್ರಮ" ಗಳು ಏರ್ಪಾಡಾಗಿರುತ್ತವೆ. ಹೆಂಗಸರನ್ನು ಅಲ್ಲಿಟ್ಟುಕೊಂಡು ಹರಾಜುಹಾಕುತ್ತಾರೆಂಬ ಪ್ರವಾದ ಹುಟ್ಟಿತು. 7 ನೇ ತಾ|| ಭಾನುವಾರ ಪೋಲೀಸಿನವರು ಒಂದು ಆಶ್ರಮದಲ್ಲಿ ನುಗ್ಗಿ ಅಲ್ಲಿದ್ದ ಹಿಂದೂಯುವತಿಯರನ್ನು ಬಿಡಿಸಿಕೊಂಡರು. ಒಬ್ಬರು ಅವರೆಲ್ಲರನ್ನು ಬಲಾತ್ಕಾರವಾಗಿ ಆಶ್ರಮದಲ್ಲಿಟ್ಟುಕೊಂಡಿದ್ದರೆಂದು ತಿಳಿದುಬಂದಿದೆ. ಈಗ ಅಧಿಕಾರಿಗಳು ಅಲ್ಲಿರುವ ಆಶ್ರಮಗಳನ್ನೆಲ್ಲಾ ಪರಿಶೋಧಿಸಬೇಕೆಂದಿರುತ್ತಾರೆ.

ಮಿಸ್ ಶ್ಯಾಮಕುಮಾರಿ ನೆಹರು ಎಂಬಾಕೆಯು ಅಲಹಾಬಾದಿನಲ್ಲಿ ಅಡ್ವೊಕೇಟ್ ಆಗಿರುತ್ತಾಳೆ. ಆಕೆಯು ಸರ್ ತೇಜ್ ಬಹದೂರ್ ಸಪ್ರು ಎಂಬ ಅಡ್ವೊಕೇಟರ ಸಹಕಾರ ವ್ಯಾಸಂಗಮಾಡಿ ಅಲ್ಲಿಯ ಹೈಕೋರ್ಟಿನಲ್ಲಿ ಒಂದು ಖೂನಿ ಮೊಕದ್ದಮೆಯ ಅಪೀಲಿನಲ್ಲಿ ಅಪರಾಧಿಗಳ ಪರವಾಗಿ ವಾದಿಸಿ ಅವರು ನಿರಪರಾಧಿಗಳೆಂಬುದನ್ನು ಸ್ಥಾಪಿಸಿದಳು. ಆಕೆಯ ವಾದವು ನ್ಯಾಯಸಮ್ಮತವಾಗಿದ್ದು ಅಪರಾಧಿಗಳು ತಪ್ಪಿತಸ್ಥರಲ್ಲವೆಂಬುದು ಸ್ಪಷ್ಟವಾಗಿ ತಿಳಿಯಬಂದಿತೆಂದು ಇಬ್ಬರು ಜಡ್ಜಿಗಳು ಹೇಳಿ ಆಕೆಯ ಸಾಮರ್ಥ್ಯವನ್ನು ಕೊಂಡಾಡಿದರು.

ಕಳೆದವಾರ ಅಫ್ಘಾನಿಸ್ಥಾನದಲ್ಲಿ ಕದನಕಡಿದಾಟಗಳೇನೂ ಆಗಿರುವದಿಲ್ಲ. ಹಬೀಬುಲ್ಲನು ಕಾಬೂಲಿನಲ್ಲಿ ಪ್ರಜಾಸೈನ್ಯದಿಯನ್ನು ಕಾಪಾಡುವದಕ್ಕೆ ಉದ್ಯುಕ್ತನಾಗಿರುತ್ತಾನೆ. ನಿಂತುಹೋಗಿದ್ದ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ಪುನಃ ತೆರೆದು ರಾತ್ರಿಯಹೊತ್ತು ಪಟ್ಟಣದಲ್ಲಿ ದೀಪಗಳು ಉರಿಯುವಂತೆ ಮಾಡಿರುತ್ತಾನೆ. ಗವರ್ನಮೆಂಟಿನವರು ಆ ನಗರದಲ್ಲಿರುವ ಮೋಟಾರು ಕಾರ್ಖಾನೆಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಇದರಿಂದ ದೇಶದಲ್ಲಿ ವ್ಯಾಪಾರವನ್ನು ಸರಿಯಾಗಿಮಾಡುವದಕ್ಕೂ, ನಾದಿರ್ ಖಾನನಮೇಲೆ ಯುದ್ಧಕ್ಕೆ ಕಳುಹಿಸಬೇಕಾದ ಸೈನಿಕರನ್ನು ಬಲಪಡಿಸುವದಕ್ಕೂ ಹಬೀಬುಲ್ಲನಿಗೆ ತುಂಬಾ ಸಹಾಯವಾಗಿದೆ.

ಬೆಳಗಾಂ ಡಿ|| ಹುಕ್ಕೇರಿ ತಾಲೂಕಿಗೆ ಸೇರಿದ ರಾಜಾರಾಮ ಪರಶುರಾಮ ಶಹಾ ಎಂಬ ಗೃಹಸ್ಥರು ಒಬ್ಬ ವೇಶ್ಯೆಯ ಮಾತನ್ನು ಕೇಳಿಕೊಂಡು, ಧರ್ಮಪತ್ನಿಯಾದ ಚಂಪಾವತಿಯನ್ನು ಪರಿಪರಿಯಾಗಿ ಪೀಡಿಸುತ್ತಿದ್ದುದಲ್ಲದೆ, ಕಡೆಗೆ ಅವಳ ಶೀರೆಯಮೇಲೆ ಸೀಮೆಯೆಣ್ಣೆಯನ್ನು ಚಲ್ಲಿ ಬೆಂಕಿಹತ್ತಿಸಿ ಸುಟ್ಟುಬಿಟ್ಟರು. ಈ ಕ್ರೂರಕೃತ್ಯಕ್ಕಾಗಿ ಅ|| ಜಡ್ಜಿಯವರಾದ ಮಿ|| ಹುಲಕೋಟಿಯವರು ಇವರಿಗೆ ಗಡೀಪಾರು ಶಿಕ್ಷೆಯನ್ನು ವಿಧಿಸಿದರು. ಇದರಮೇಲೆ ಅವರು ಹೈಕೋರ್ಟಿಗೆ ಅಪೀಲುಮಾಡಿದರು. ಅಲ್ಲಿಯೂ ಅದೇ ಶಿಕ್ಷೆಯೇ ಕಾಯಂ ಆಯಿತು. ತುರಂಗದಲ್ಲಿ ಈ ವಾರ್ತೆಯನ್ನು ಕೇಳಿದ ಕೂಡಲೇ ಶಹಾರವರು ಮೂರ್ಛೆಹೊಂದಿ ಪುನಃ ಎಚ್ಚರವಾಗಲೇ ಇಲ್ಲ.

ಪಾಟ್ಲದ ದಿನಪುರ ಎಂಬಲ್ಲಿ ಕೆಲವು ಜನರು ಒಂದಾಗಿ ವಿ. ಪಿ. ಪಾರ್ಸಲ್ ಗಳಲ್ಲಿರುವ ಸಾಮಾನುಗಳನ್ನು ಕಳವುಮಾಡುತ್ತಿದ್ದರು. ಕಳೆದವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಬೇರೆ ಬೇರೆ ಕಡೆಗಳಿಂದ ಸುಳ್ಳು ಹೆಸರಿನಿಂದ ಸಾಮಾನುಗಳನ್ನು ವಿ. ಪಿ. ಮೂಲಕ ರವಾನಿಸುವಂತೆ ವಿದೇಶಗಳಿಗೆ ಕೆಲವು ಆರ್ಡರುಗಳು ಕೊಡಲ್ಪಟ್ಟವು. ಸದರಿ ವಿ. ಪಿ. ಗಳು ವಿಳಾಸದ ಪೋಸ್ಟಾಫೀಸಿಗೆ ಹೋಗಿ ವಿಳಾಸದಾರರ ಪತ್ತೆಯಿಲ್ಲದೆ ಹಿಂತಿರುಗಿದುವು. ಹಿಂತಿರುಗಿ ಬಂದ ಪಾರ್ಸಲ್ಲನ್ನು ಕಂಪೆನಿಯವರು ಒಡೆದುನೋಡುವಾಗ ಅವುಗಳೊಳಗೆ ಇಟ್ಟಿಗೆ ಕಾಗದ ಮತ್ತು ಕಸಕಡ್ಡಿಗಳಿದ್ದವು. ಹೀಗೆ 42 ವಿ. ಪಿ. ಗಳು ಕಳವುಮಾಡಲ್ಪಟ್ಟವು. ಈ ವಿಚಾರವಾಗಿ ಪೋಲೀಸಿನವರು ಪತ್ತೆಹಚ್ಚಿ ನಡೆಸಿ ಒಬ್ಬ ಪೋಸ್ಟ್ ಮನ್ ಮತ್ತು ಇಬ್ಬರು ವೈದ್ಯರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಪಶ್ಚಿಮತೀರಕ್ಕೆ ಸೇರಿದ ಅನೇಕ ಪ್ರದೇಶಗಳಲ್ಲಿ ಎರಡುವಾರಗಳಿಂದ ಅಪಾರ ಮಳೆಗಳಾಗಿ ಕೊಚ್ಚಿಸಂಸ್ಥಾನದಲ್ಲೂ, ಮಲಬಾರಿನಲ್ಲೂ ತುಂಬಾ ನಷ್ಟಸಂಭವಿಸಿತು. ಕೊಚ್ಚಿ ರಾಜ್ಯದಲ್ಲಿ ಕರುನಗಪ್ಪಳ್ಳಿ ಎಂಬ ಸ್ಥಳದಲ್ಲಿ ನದೀತೀರದಲ್ಲಿದ್ದ ಒಂದು ಭಾರೀ ಅಡ್ಡಕಟ್ಟೆಯು ಒಡೆದು ಪ್ರವಾಹವು ಉರುಳಿ ಏಳು ಗ್ರಾಮಗಳನ್ನೂ 1,000 ಎಕರೆ ಕ್ಷೇತ್ರದ ಜಮೀನುಗಳನ್ನೂ ಮುಳುಗಿಸಿಬಿಟ್ಟಿತು. ದೈವವಶಾತ್ ಪ್ರಾಣನಷ್ಟವೇನೂ ಸಂಭವಿಸಲಿಲ್ಲ. ಕೊಚ್ಚಿ ಸಂಸ್ಥಾನದ ಮುಖ್ಯನಗರವಾದ ತ್ರಿಚೂರಿಗೆ ಹೋಗಿ ಬರುವ ರಸ್ತೆಗಳೂ ರೈಲ್ವೆಮಾರ್ಗವೂ ಪ್ರವಾಹದ ದೆಸೆಯಿಂದ ಕಟ್ಟಿಹೋದವು. ಕೆಲವು ದಿವಸಗಳವರೆಗೆ ಆ ನಗರಕ್ಕೆ ಜನಸಂಚಾರವೂ ಅಂಚೆಯೂ ಸಹ ನಿಂತುಹೋಗಿದ್ದವು. ಅತ್ತಲಾಗಿ ಮಲಬಾರ್ ಜಿಲ್ಲೆಯಲ್ಲೂ ಪ್ರವಾಹವು ಹೆಚ್ಚಿ "ಮಾಹಿ" ಎಂಬ ಸ್ಥಳದಲ್ಲಿ ಫ್ರೆಂಚರು ಕಟ್ಟುತ್ತಿದ್ದ ಭಾರೀ ಸೇತುವೆಯ ಕಂಬಗಳೂ ಕಮಾನುಗಳೂ ಸಹ ಕೊಚ್ಚಿಹೋದವು. ಉತ್ತರ ಮಲಬಾರಿನಲ್ಲಿ ಎರಡು ಲಕ್ಷ ರೂಪಾಯಿಗಳ ವೆಚ್ಚದಿಂದ ಕಾಮಗಾರಿಮಾಡಿಸುತ್ತಿದ್ದ ಒಂದು ದೊಡ್ಡ ಸೇತುವೆಯೇ ಪ್ರವಾಹದಲ್ಲಿ ಉರುಳಿಕೊಂಡು ಹೊರಟುಹೋಯಿತು. ಕಲ್ಲೀಕೋಟೆಗೂ ಮೈಸೂರಿಗೂ ಮಧ್ಯೆ ಕೆಲವು ದಿವಸಗಳವರೆಗೆ ಸಂಚಾರವೇ ನಿಂತುಹೋಗಿತ್ತು. ಇತ್ತಲಾಗಿ ಕೊಡಗಿನಲ್ಲಿ 5 ನೇ ತಾರೀಖಿನಿಂದ 12 ನೇ ತಾರೀಖಿನವರೆಗೆ 17 ಅಂಗುಲಗಳಷ್ಟು ಮಳೆಯಿಂದ ಕಾವೇರೀ ನದಿಯ ಪ್ರವಾಹವು ಹೆಚ್ಚಿ, ಅದು ಹರಿಯುವ ತಿರುಚನಾಪಳ್ಳಿ ಮೊದಲಾದ ದಕ್ಷಿಣ ಪ್ರದೇಶಗಳಲ್ಲಿ ಪ್ರಜೆಗಳಿಗೆ ಕಳವಳವನ್ನುಂಟುಮಾಡಿತ್ತು. ಸ್ಥಳಾಧಿಕಾರಿಗಳು ಜಾಗ್ರತರಾಗಿ ಏರ್ಪಾಡುಗಳನ್ನು ಮಾಡಿಕೊಂಡಿರುತ್ತಾರೆ. ಇದುವರೆಗೆ ಪ್ರವಾಹವು ಅಷ್ಟೇನೂ ಹೆಚ್ಚಿರುವುದಿಲ್ಲ.

ದುಃಖವಾರ್ತೆ.

ಹಡಗಲಿ ತಾಲೂಕು ಸೊನ್ನಗ್ರಾಮದ ಬಸವಹಳ್ಳಿ ಮಠದ ವಿರೂಪಾಕ್ಷಯ್ಯನವರು ಮೋರಿಗೇರಿ ಗ್ರಾಮದಲ್ಲಿ ಈಗ 6-7 ವರ್ಷಗಳ ಲಾಗಾಯಿತು ಬೋರ್ಡು ಗರ್ಲ್ಸ್ ಸ್ಕೂಲ್ ಹೆಡ್‌ಮಾಸ್ಟರಾಗಿದ್ದು ಬಹಳ ಶ್ರದ್ಧೆಯಿಂದ ಬಾಲಕಿಯರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಇವರ ಶ್ರದ್ಧೆಯೂ, ಉತ್ಸಾಹವೂ ಈ ಮೋರಿಗೇರಿಗ್ರಾಮದ ಸ್ತ್ರೀಪುರುಷರಿಗೆಲ್ಲರಿಗೂ ಆಶ್ಚರ್ಯ ಮತ್ತು ಆತ್ಯಾನಂದಗಳನ್ನುಂಟುಮಾಡುತ್ತಿತ್ತು. ಇವರಿಗೆ ಗುರುಹಿರಿಯರ ಮೇಲಿದ್ದ ಭಕ್ತಿವಿಶ್ವಾಸಗಳನ್ನು ವರ್ಣಿಸಲು ಅಸಾಧ್ಯ. 26 ನೇ ವರ್ಷ ವಯಸ್ಸಿನಲ್ಲಿಯೇ ಇವರು ಸದ್ಗುಣಗಳನ್ನುಳ್ಳ ಯಾವಾಗ್ಯೂ ಶಾಂತಯುಕ್ತರಾಗಿದ್ದುದನ್ನು ನೋಡಿದರೆ ತುಂಬಾ ಆಶ್ಚರ್ಯವೇ ಸರಿ. ಇಂಥ ಸದ್ಗುಣಭರಿತರಾದವರು ಇದೇ 1929 ನೇ ಇಸ್ವಿ ಮಾರ್ಚಿ 26 ನೇ ತಾರೀಖಿನ ದಿವಸ ಮಧ್ಯಾಹ್ನ 4 ಘಂಟೆ ಸಮಯದಲ್ಲಿ ಹುವ್ವಿನಹಡಗಲಿಯಲ್ಲಿ ಅಕಾಲಮರಣವನ್ನು ಹೊಂದಿದರೆಂದು ತಿಳಿಯಪಡಿಸಲು ತುಂಬಾ ವಿಷಾದವಾಗುತ್ತದೆ. ಮೋರಿಗೇರಿ ಕನ್ನಡ ಬಾಯ್ಸ್ ಸ್ಕೂಲ್ ವಿದ್ಯಾರ್ಥಿಗಳ ಮತ್ತು ಗರ್ಲ್ಸ್ ಸ್ಕೂಲ್ ವಿದ್ಯಾರ್ಥಿಗಳ ಶಿಕ್ಷಕರಲ್ಲಿ ಈ ವಿರೂಪಾಕ್ಷಯ್ಯನವರೇ ಅಗ್ರಗಣ್ಯರಾಗಿದ್ದರು. ಜಗದ್ಗುರುಗಳಾದ ಪಂಚಾಚಾರ್ಯರು ಇವರಿಗೆ ಇನ್ನು ಸ್ವಲ್ಪ ಆಯುಷ್ಯವನ್ನೂ, ಆರೋಗ್ಯಭಾಗ್ಯವನ್ನೂ ಅನುಗ್ರಹಿಸಿದ್ದ ಪಕ್ಷದಲ್ಲಿ ಇವರ ಮಹತ್ವಾಕಾಂಕ್ಷೆಗಳೆಲ್ಲವೂ ಫಲಿಸಿ ಈ ನಮ್ಮ ಮೋರಿಗೇರಿಗ್ರಾಮವು ವಿದ್ಯೆ ಮತ್ತು ಸಂಪದಭ್ಯುದ್ಧಿಯ ಶಿಖರವನ್ನು ಮುಟ್ಟುತ್ತಿತ್ತು ಎಂಬುವದಕ್ಕೆ ಅವ ಸಂಶಯವೂ ಇಲ್ಲ. ಇವರ ಮರಣವನ್ನು ನೆನಸಿ ವಿದ್ಯಾರ್ಥಿನಿಯರಾದ ಬಾಲಕಿಯರು ಈವತ್ತಿನವರೆಗೂ ಶೋಕಿಸುತ್ತಲೇ ಇರುವರು. ಅಂದಮೇಲೆ ಈ ಮಹನೀಯರನ್ನು ಪಡೆದ ಮಾತಾಪಿತೃಗಳು ಮತ್ತು ಹೆಂಡತಿಯರ ಶೋಕಕ್ಕೆ ಕೊನೆಯುಂಟೆ? ಇವರು ತಮ್ಮ ಸ್ವಹಸ್ತದಿಂದ ಬರೆದ ಶ್ರೀ ಜಗದಾಚಾರ್ಯರ ಲಿಂಗೋದ್ಭವ ಪದಗಳನ್ನು ನೋಡಿದರೆ ತುಂಬಾ ಆನಂದವಾಗದೆ ಇರಲಾರದು. ಇವರು ಎಲ್ಲರಿಗೂ ತುಂಬಾ ಹಿತಚಿಂತಕರಾಗಿದ್ದರೆಂಬುವದಕ್ಕೆ ಇವರ ಮರಣನಿಮಿತ್ತವಾಗಿ ಹಡಗಲಿ ತಾಲೂಕಿನ ಮೋರಿಗೇರಿಗ್ರಾಮದವರೆಲ್ಲರೂ ಶೋಕಸಾಗರದಲ್ಲಿ ಮುಳುಗಿ ಹೋಗಿರುವದೇ ನಿದರ್ಶನವು. ಇವರ ವೃದ್ಧ ಮಾತಾಪಿತೃಗಳಿಗೂ, ಇಬ್ಬರು ಸಣ್ಣಪುತ್ರರಿಗೂ, ಓರ್ವ ಪುತ್ರಿಗೂ ಶ್ರೀ ಜಗದಾಚಾರ್ಯರು ಸುಖವನ್ನೀಯುತ್ತ ಆ ಮಹನೀಯರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಸಮಾಜಹಿತಚಿಂತಕ, ಮೋರಿಗೇರಿಗ್ರಾಮ.

ಜನರಲ್ಲಿ ಅಂಟುರೋಗಗಳನ್ನು ಹರಡುವ ಕ್ರಿಮಿಕೀಟಗಳು.

(ಕಳೆದವಾರದ ಶೇಷ.)

ಮನೆಯ ನೊಣ.

ಈ ಪ್ರಾಣಿಗಳನ್ನು ಎಲ್ಲರೂ ಬಲ್ಲರು. ಯುಗಯುಗಾಂತರಗಳಿಂದಲೂ ಇವು ಮನುಷ್ಯನ ಸಹವಾಸದಲ್ಲಿವೆ.

ಹೆಣ್ಣು ನೊಣವು ದಿನಕ್ಕೆ 120-150 ರಂತೆ ತತ್ತಿಗಳನ್ನಿಡುವುದು. ತನ್ನ ಜೀವಕಾಲದಲ್ಲಿ ಒಂದು ನೊಣವು ನಾಲ್ಕು ಸಾರಿ ತತ್ತಿಗಳನ್ನಿಡಬಹುದು. ಒಂದೊಂದು ನೊಣವೂ ಈ ರೀತಿ ಒಂದೊಂದು ಸಲಕ್ಕೆ 120 ತತ್ತಿಗಳನ್ನಿಟ್ಟಲ್ಲಿ, ಒಂದು ವರ್ಷದೊಳಗೆ (ಅವುಗಳ ಹಗೆಗಳಾದ ಕೋಳಿ, ಗುಬ್ಬಚ್ಚಿ, ಜೇಡು, ಕಡವಿ ಮುಂತಾದುವು ಅವನ್ನು ರುಚಿಕರವಾದ ಆಹಾರವೆಂದು ಕೊಲ್ಲದಿರುವಲ್ಲಿ) ಸುಮಾರು ಐದುಸಹಸ್ರಕೋಟಿನೊಣಗಳು ಹುಟ್ಟಿದಂತಾಗುವುದೆಂದು ಸುಲಭವಾಗಿ ಲೆಕ್ಕಹಾಕಿ ಹೇಳಬಹುದು. ತತ್ತಿಗಳೊಡೆದು ಮರಿಗಳು ಹೊರಟಾಗ ಅವುಗಳಿಗೆ ಯೋಗ್ಯವಾದ ಆಹಾರವು ಎಲ್ಲಿ ಸಿಕ್ಕಬೇಕೋ ಅಂಥ ಸ್ಥಳಗಳಲ್ಲಿ ತತ್ತಿಗಳು ಇಡಲ್ಪಡುವವು. ಮರಿಗಳಾದರೋ ಸಸ್ಯಾಹಾರಿಗಳಾದಕಾರಣ ಕೊಳೆಯುವ ಸಸ್ಯಪದಾರ್ಥಗಳಲ್ಲಿ ತಾಯಿಯು ತತ್ತಿಗಳನ್ನಿಡುವದು. ಕುದುರೆ, ಜಾನುವಾರುಗಳು, ಆಡು, ಕುರಿ, ಕೋಳಿ, ಮನುಷ್ಯರು ಮುಂತಾದವರ ಮಲಮೂತ್ರಗಳು, ಗೊಬ್ಬರದ ರಾಶಿ, ಕೊಳೆತ ಪದಾರ್ಥಗಳು, ಹಣ್ಣುಹಂಪಲು, ಸಿಪ್ಪೆ, ಮಾವು, ಬಾಳೆ ಮುಂತಾದ ಹಣ್ಣುಗಳು ಇವೆಲ್ಲಾ ತತ್ತಿಗಳನ್ನಿಡುವ ಸ್ಥಾನಗಳು. ತತ್ತಿಯು ಬೇಸಗೆಯಲ್ಲಾದರೆ ಒಂದೇ ದಿನದಲ್ಲೂ, ಚಳಿಗಾಲದಲ್ಲಾದರೆ ಎರಡು ದಿನಗಳಲ್ಲೂ ಒಡೆದು ಮರಿಹೊರಡುವುದು. ಹೊರಟ ಕ್ರಿಮಿಗಳು ಎರಡು ದಿನಗಳೊಳಗೆ ಬೇಕಾದಂತೆ ಗವಗವನೆ ತಿಂದು ಬೆಳೆದು, ದೇಹದಲ್ಲಿ ನಾನಾಬಗೆಯ ಮಾರ್ಪಾಟುಗಳನ್ನು ಹೊಂದಿ, ಮೂರು ನಾಲ್ಕು ದಿನಗಳು ಬೆಳೆದು ಕೋಶಾವಸ್ಥೆಯಲ್ಲಿ ಜಡತ್ವವನ್ನು ಹೊಂದಿ, ಮೆಲ್ಲನೆ ಹಳದಿ ಅಥವಾ ಕಂದು ಬಣ್ಣವನ್ನು ತಳೆವುವು. ಹಗೆಯು ಅಥವಾ ಗೊಬ್ಬರದ ರಾಶಿಯನ್ನು ಮಗುಚಿದರೆ, ಹುಳುಗಳಾಗಿ ಕಾಣುವಂತವು ಈ ನೊಣಗಳ ಮರಿಗಳೇ ಅಲ್ಲದೆ ಬೇರೆಯಲ್ಲ. ಕೋಶದಿಂದ ಹೊರಟ ನೊಣವು ಮೊದಲು ತಾನು ಹುಟ್ಟಿದಲ್ಲಿರುವ ಮಣ್ಣಿನ ಅಥವಾ ಗೊಬ್ಬರದ ರಾಶಿಯಲ್ಲಿ ಮುಚ್ಚಲ್ಪಟ್ಟು, ಕ್ರಮೇಣ ಮೆಲ್ಲನೆ ಮೇಲಕ್ಕೆ ಬಂದು ಅಲ್ಲಿಂದ ಹಾರಿಹೋಗುವುದು. ಇವು ವಾಂತಿ ಭೇದಿಯಿಂದ ಪೀಡಿತನಾದ ರೋಗಿಯ ವಾಕರಿಕೆ, ಮಲ, ಮುಂತಾದುವನ್ನು ತಿನ್ನುವುವು. ಪೇಟೆಯಲ್ಲಿ ಸಿಕ್ಕುವ ಮಿಠಾಯಿ ಮೊದಲಾದ ಆಹಾರಪದಾರ್ಥಗಳನ್ನೂ ಉಣ್ಣುತ್ತಿರುವುವು. ಇದರಿಂದ ಒಂದು ಬಗೆಯ ಪದಾರ್ಥದೊಳಗಿನ ರೋಗಬೀಜಗಳನ್ನು ಮತ್ತೊಂದು ಬಗೆಯ ಪದಾರ್ಥಕ್ಕೆ ಅದು ಕೊಂಡೊಯ್ಯುವುದಾದಕಾರಣ, ಜನಗಳಿಗೆ ಬಹಳ ಹಾನಿಯಾಗುವುದು. ಆದುದರಿಂದ ನೊಣವು ಕುಳಿತುಕೊಂಡ ಯಾವ ಆಹಾರಪದಾರ್ಥವಾದರೂ ಮನುಷ್ಯರಿಗೆ ಹಾನಿಯನ್ನುಂಟುಮಾಡುವುದು. ನೊಣದ ಪಾದದಲ್ಲಿ ಇರುವ ಮೃದುವಾದ ಭಾಗವು, ಇಂಥ ಹಾನಿಕರವಾದ ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿ ಹರಡಿಸುವುದು. ಈ ರೀತಿಯಾಗಿ ಮನೆಯನೊಣವು ಹರಡಿಸುವ ರೋಗಗಳಲ್ಲಿ ಸನ್ನಿಪಾತ, ವಾಂತಿಭೇದಿ, ಆಮಶಂಕೆ, ಅತಿಸಾರ, ಕ್ಷಯ, ಬಗೆಬಗೆಯ ಹುಣ್ಣುಗಳು, ಮತ್ತು ಕಣ್ಣಿನ ರೋಗಗಳು ಇವು ಮುಖ್ಯವಾದುವು.

ದೇಹದ ಮತ್ತು ಊರಿನ ನಿರ್ಮಲತೆಯೇ, ನೊಣಗಳು ನಿರ್ಮೂಲಹೊಂದುವಂತೆ ಮಾಡುವ ಸುಲಭೋಪಾಯವು. ಶುಚಿತ್ವವಿಯವಲ್ಲಿ ನೊಣಕ್ಕೆ ತತ್ತಿಯಿಟ್ಟು ಮರಿಮಾಡುವುದಕ್ಕೆ ಅವಕಾಶವೇ ಇರಲಾರದು. ಎಲ್ಲರೂ ಈ ರೀತಿಯಲ್ಲಿ ಶುಚಿತ್ವದ ಆದರ್ಶವನ್ನು ಅಭ್ಯಾಸಮಾಡುವವರಲ್ಲವಾದಕಾರಣ, ನೊಣಗಳನ್ನು ಅಡಗಿಸಲು ಬೇರೆ ಉಪಾಯಗಳುಂಟು. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ:—

1. ಕಿಟಿಕಿಯ ದ್ವಾರಗಳನ್ನು ಅಷ್ಟಕಟ್ಟುವುದು. ಕಿಟಿಕಿಗಳಿಗೆ ನೀಲಬಣ್ಣದ ಗಾಜನ್ನು ಇಡುವುದು. ನೀಲಬಣ್ಣದ ಬೆಳಕನ್ನು ನೊಣವು ಮೆಚ್ಚುವುದಿಲ್ಲ.

2. ನೊಣಗಳಿಗಾಗಿ ವಿಷವನ್ನು ಸಿಹಿಯಾಗಿ ಬೆರಸಿ, ಕಾಗದಗಳಿಗೆ ಲೇಪಿಸುವುದರಿಂದ ನೊಣಗಳು ಸಿಹಿಪದಾರ್ಥವನ್ನು ತಿನ್ನುವದಕ್ಕೆ ಬಂದು ವಿಷವನ್ನೂ ತಿಂದು ಸಾಯುವುವು.

3. ಮನೆಯ ಸಮೀಪದಿಂದ ಗೊಬ್ಬರವನ್ನು 24 ತಾಸುಗಳೊಳಗೆ ದೂರಕ್ಕೆ ಒಯ್ಯುವುದು.

4. ಮಲಮೂತ್ರಗಳನ್ನು ಬೇಗನೆ ದೂರಕ್ಕೆ ಕೊಂಡೊಯ್ಯುವುದು. ಪಾಯಖಾನೆಗಳಲ್ಲಿ ಸೋಂಕುನಿವಾರಕ ದ್ರವಗಳನ್ನು ಉಪಯೋಗಿಸುವುದು.

5. ತತ್ತಿಗಳು ಇಡಲಾದ ಬಳಿಕ ಅಂಥ ಸ್ಥಳಗಳನ್ನು ಸುಡುವುದು. ಪ್ರತಿಮೂರುದಿನಗಳಿಗೊಂದುಸಾರಿ ಹೀಗೆ ಸುಡುವುದರಿಂದ ತತ್ತಿಯೊಡೆದು ಬರುವ ಮರಿಗಳು ಸಾಯುವುವು.

6. ಮಾರಾಟಕ್ಕೆ ಇಡುವ ಅಥವಾ ಆಹಾರಕ್ಕೆ ಉಪಯೋಗಿಸುವ ಪದಾರ್ಥಗಳನ್ನು ಮಸ್ಲಿನಿನಿಂದ ಅಥವಾ ಗ್ಲಾಸಿನಿಂದ ಮುಚ್ಚಿಡುವುದು.

ಸೊಳ್ಳೆ.

ಮನುಷ್ಯರಿಗೆ ಗಂಡಾಂತರವನ್ನುಂಟುಮಾಡುವ ಮತ್ತು ಇದುವರೆಗೆ ಗಂಡಾಂತರಕ್ಕೆ ಕಾರಣವೆಂದು ತಿಳಿದುಬಾರದ, ನಾನಾ ಜಾತಿಗಳ ಸೊಳ್ಳೆಗಳಿವೆ. ಅಪಾಯಕರವಾದವುಗಳಲ್ಲಿ ಎನೋಫಿಲೆ ಎಂಬ ಮಲೆಜ್ವರದ ಸೊಳ್ಳೆಗಳೂ, ಆನೇಕಾಲುರೋಗವನ್ನುಂಟುಮಾಡುವ ಸೊಳ್ಳೆಗಳೂ ಮುಖ್ಯವಾಗಿವೆ.

ಇದರ ಜೀವನಕ್ರಮವು ಸಾಧಾರಣವಾಗಿ ನೊಣದಂತೆಯೇ. ನೊಣವು ಗೊಬ್ಬರದ ರಾಶಿಯಲ್ಲಿ ಹುಟ್ಟುವುದು. ಸೊಳ್ಳೆಯು ನೀರಿನಲ್ಲಿ ಹುಟ್ಟುವುದು. ಇಷ್ಟೇ ಭೇದ. ಹೆಣ್ಣುಸೊಳ್ಳೆಯು ಹುಟ್ಟಿ ಹೊರಟ ಕೆಲಹೊತ್ತಿನಲ್ಲೇ ಗರ್ಭಧರಿಸಿ, ತತ್ತಿಯಿಡಲು ಸಿದ್ಧವಾಗುವುದು. ಆದರೆ ರಕ್ತಾಹಾರವನ್ನು ಪಡೆಯುವ ಮೊದಲು ತತ್ತಿಗಳನ್ನು ಇಡುವ ಶಕ್ತಿಯು ಇದಕ್ಕಿಲ್ಲ. ಮನುಷ್ಯನ ಅಥವಾ ಇತರ ಪ್ರಾಣಿಗಳ ನೆತ್ತರನ್ನು ಹೀರಿಕೊಂಡಾಗ, ಮುಂಜಾವದಲ್ಲಿ ತತ್ತಿಯನ್ನಿಡಲು ಉಪಕ್ರಮಿಸುವುದು. ತತ್ತಿಗಳನ್ನು ನೀರಿನ ಮೇಲ್ಭಾಗದಲ್ಲೇ ಇಡುವಾಗ ಕೆಲವು ಹರಡಿ ಬೀಳುವುವು. ಇನ್ನು ಕೆಲವು ಚುಕ್ಕೆಯಾಕಾರಕ್ಕೆ ತ್ರಿಕೋಣಾಕಾರಕ್ಕೆ ಸಾಲುಗಳಾಗಿ, ಹತ್ತಿರಹತ್ತಿರದಲ್ಲಿ ನಿಲ್ಲುವುವು. ಸೊಳ್ಳೆಗಳ ವಿಷಯ ಜ್ಞಾನವುಳ್ಳವರು ತತ್ತಿಗಳನ್ನು ಇಟ್ಟಿರುವ ಕ್ರಮ, ಆಕಾರ ಮೊದಲಾದವುಗಳಿಂದಲೇ ಸೊಳ್ಳೆಯ ಜಾತಿಯನ್ನು ನಿರ್ಧರಿಸುವರಾದರೂ, ಪ್ರತಿಸಾರಿ ಪ್ರತಿ ಸೊಳ್ಳೆಯು ನೂರುನೂರು ತತ್ತಿಗಳನ್ನು ನೀರಿನಮೇಲೆ ಇಡುವುದಾಗಿ ನಾವು ತಿಳಿದುಕೊಂಡರೆ ಸದ್ಯಕ್ಕೆ ಸಾಕು. ಈ ತತ್ತಿಗಳು 1/50 ರಿಂದ 1/20 ಅಂಗುಲ ಉದ್ದವಾಗಿ, ಮೇಲೆ ಚಪ್ಪಟೆಯಾಗಿಯೂ, ಕೆಳಭಾಗವು ಉಬ್ಬಿ ದುಂಡಗಾಗಿಯೂ, ಒಂದು ಕೊನೆಯು ಮತ್ತೊಂದಕ್ಕಿಂತ ಅಗಲವಾಗಿಯೂ ಇರುವಂಥವು. ಕಾಲಕ್ಕೆ ತಕ್ಕಂತೆ, ಸುಮಾರು 2 ದಿನಗಳಲ್ಲಿ ತತ್ತಿಯೊಡೆದು ಅದರ ... ಚಪ್ಪಟೆಯಾದ ಭಾಗದ ಒಂದು ತುಂಡೆತ್ತಿ, ಮರಿಗಳು ಹೊರಡುವುವು. ಇವು ಗವಗವನೆ ... ಯಿಂದ ಆಹಾರನುಂಗುತ್ತ, ಜೋರಾದ ಸಸ್ಯಾಹಾರವನ್ನು ... ಬದುಕುವುವು. ಕೆಲವು ನೀರಿನ ತಲದಮೇಲೆ ಚಪ್ಪಟೆಯಾಗಿ ... ಕೊಳ್ಳುವುವು. ಉಳಿದುವು ತಲಕ್ಕೆ ಬಾಗಿಕೊಂಡು ನೀರಿನಲ್ಲಿ ...ರುವುವು. ಮೊದಲನೆಯವು ಮಲೆಜ್ವರವನ್ನು ಹರಡುವ ಸ್ವಭಾವದ ಸೊಳ್ಳೆಮರಿಗಳು. ಎರಡನೆಯವು ಆನೆಕಾಲುರೋಗವನ್ನು ಉಂಟುಮಾಡುವಂಥವು. ನಂತರ, ಹತ್ತು ದಿನಗಳವರೆಗೆ ಅವು ... ಚುರುಕಾಗಿರುವುವು. ಅನಂತರ ಆಲಸ್ಯದಿಂದೊಡಗೂಡಿ, ಕೋಶಾವಸ್ಥೆಯಲ್ಲಿ 48 ತಾಸುಗಳವರೆಗೆ ಬಿದ್ದುಕೊಳ್ಳುವುವು. ಸಂಜೆ ಹೊತ್ತಿಗೆ ಇವು ನೀರಿನ ಮೇಲ್ಭಾಗಕ್ಕೆ ಏಳುವುವು. ಆಗ ...ಗಳ ಮೈದೊಗಲು ಒಡೆದು, ಇದರಿಂದ ಪ್ರಾಯಕ್ಕೆ ಬಂದ ಸೊಳ್ಳೆಯು ಹೊರಬಿದ್ದು ಹಾರುವುದು. ಪ್ರತಿಯೊಂದು ...ಯಿಂದ ಸೊಳ್ಳೆ ಹುಟ್ಟಿಬರಲಾರದು. ಏಕೆಂದರೆ, ಸೊಳ್ಳೆ... ನೀರಿನಲ್ಲಿಯೇ ಹಗೆಗಳಿವೆ. ಎಲ್ಲಾ ಬಗೆಯ ಚಿಕ್ಕ ಮೀನುಗಳು ಇವುಗಳ ವೈರಿಗಳು. ಇಂಥ ಮೀನುಗಳು ಇಲ್ಲದ ನೀರಿನಲ್ಲಿ, ಹುಲ್ಲು, ಕಡ್ಡಿ ಮೆಳೆಯಾಗಿ ಬೆಳೆದ ಸ್ಥಳವನ್ನೂ, ಅಂಥ ...ಯು ತತ್ತಿಗಳನ್ನಿಡುವುದು. ಮಲೆಜ್ವರದ ಸೊಳ್ಳೆಯು ... ವಾದ ನೀರೂ, ಕೊಂಚ ಕಡ್ಡಿ ಹುಲ್ಲು ಬೆಳೆದಿರುವಲ್ಲಿ ತತ್ತಿ ...ವುದು. ಆದುದರಿಂದ ಇವನ್ನು ಅಂಥ ಹುಲ್ಲು ಬೆಳೆದ ಹೊಳೆ ಪ್ರವಾಹ ಸ್ಥಳಗಳಲ್ಲೂ, ಹುಲ್ಲುಕಡ್ಡಿ ಬೆಳೆದ ಕೆರೆಗಳ ...ಗಳಲ್ಲೂ, ಹೆಚ್ಚಾಗಿ ಸಿಹಿ ಅಥವಾ ಕೊಂಚ ಸವುಳು ನೀರಿನ ... ದೊಡ್ಡ ಹೊಂಡಗಳಲ್ಲೂ, ಹಸುರು ಸಸ್ಯಪದಾರ್ಥವಿರುವಲ್ಲಿ ಕಾಣಬಹುದು. ಮತ್ತೊಂದು ಜಾತಿಯ (ಕ್ಯೂಲೆಕ್ಸ್) ಸೊಳ್ಳೆಯು, ಸಿಹಿ ಸವುಳು, ಶುದ್ಧ, ಅಥವಾ ಕೊಳೆತ ನೀರಿನ್ನ ದ...ಯಾದರಲ್ಲಿ ತತ್ತಿಗಳನ್ನಿಡುವುದು. ಚಿಕ್ಕ ದೊಡ್ಡ ಭಾವಿ... ನೀರ... ಗಳು, ಒಡೆದ ಸೀಸೆಗಳು, ಮಡಕೆ, ... ಬಿದಿರುಮೆಳೆ, ಬಾಳೆ ಮುಂತಾದುವಲ್ಲಿ ... ಇರಬಹುದಾದ ನೀರೇ ಇಂಥ ಸೊಳ್ಳೆಗಳ ಜನ್ಮಸ್ಥಾನಗಳೆಂದು ಧಾರಾಳವಾಗಿ ಹೇಳಬಹುದು.

ಸೊಳ್ಳೆಗಳ ಹುಟ್ಟನ್ನೇ ಅಡಗಿಸಬೇಕೆಂದು ನಾವು ಬಗೆದರೆ ಒಡೆದ ಬಾಟ್ಲಿ, ಮಡಕೆ, ಮುಂತಾದುವನ್ನು ಸಿಕ್ಕಿದ ಸ್ಥಳದಲ್ಲಿ ಬಿಸಾಡಬಾರದು. ಹಾಗೆ ಮಾಡಿದರೆ ಮಳೆಗಾಲದಲ್ಲಿ ಅವುಗಳಲ್ಲಿ ನೀರು ತಂಗಿ ನಿಂತಾಗ, ಸೊಳ್ಳೆಗಳು ಅವುಗಳಲ್ಲಿ ತತ್ತಿಗಳನ್ನು ಇಡುವುವು. ಕೆರೆಕೊಳಗಳ ಬದಿಯ ಹುಲ್ಲುಕಡ್ಡಿಗಳನ್ನು ... ಅವುಗಳ ತಳವು ಇಳಿಜಾರಾಗುವಹಾಗೆ ಮಾಡಿದರೆ, ನೀರು ಧಾರಾಳವಾಗಿ ಹರಿದುಹೋಗಿ, ಅಲ್ಲಲ್ಲಿ ಹಳ್ಳಗಳೇನೂ ಇಲ್ಲದಂತಾಗುವುದರಿಂದ ಸೊಳ್ಳೆಗಳು ತತ್ತಿ ಇಡಲು ಅಲ್ಲಿಗೆ ಬಾರವು.

ನೀರಿನಮೇಲೆ ಚಿಮಣಿಯೆಣ್ಣೆಯ ಮಿಶ್ರಣವನ್ನು ಚಿಮುಕಿಸುವುದರಿಂದ, ಎಳೇ ಹುಳುಗಳು ನಾಶವಾಗುವುವು. ಆದರೆ, ಇದರಿಂದ ಈ ಸೊಳ್ಳೆಗಳನ್ನು ತಿನ್ನುವ ಚಿಕ್ಕ ಮೀನುಗಳೂ ನಾಶವಾಗು...

ಸೊಳ್ಳೆಗಳು ಹರಡುವಂಥ ರೋಗಗಳಿಂದ ಪೀಡಿಸಲ್ಪಡ... ದೆಂದು ಮನಸ್ಸಿದ್ದರೆ, ಸೊಳ್ಳೆಪರದೆಗಳನ್ನು ಕಟ್ಟಿ ಅವುಗಳ ...ಗೆಯಲ್ಲಿ ನಿದ್ದೆಹೋಗುವುದು ಮೇಲು. (ಆ. ...)

ಬೆಲೆ ಸುಲಭ! ಶ್ರೀ: ಬಣ್ಣ ಗ್ಯಾರಂಟಿ

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.

ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿತಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡು ಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [15]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸಂಕಟಪಡುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಚಳಿಯೋಡನೆ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಷ್ಟೊ ಜ್ವರಗಳಾಗಲಿ **'ಕೊಡಗಿನ ಗುಡುಗುಡು!'** (ಅಥವಾ) **'ಸುಡುಸುಡು'** (ಉಂ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢಸಂಕಲ್ಪದಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ.

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂ. 1 ಮಂಗಳೂರು, ದ. [5]

ಔಷಧಸೀಸೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ **"ಆರೋಗ್ಯಚಂದ್ರಿಕೆ"** ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಆರೋಗದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗನಿವಾರಣವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗವನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಯಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ **ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಟೆಲಿಗ್ರಾಫ್ ..." ಟೈಮ್ಸ್** ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"ಆನರಬಲ್ **ಡಾಕ್ಟರ್ ಯು. ರಾಮರಾವ್** ಮತ್ತು ಅವರ ಮಕ್ಕಳು **ಡಾಕ್ಟರ್ ಯು. ಕೃಷ್ಣರಾವ್** ಎಂ. ಬಿ. ಬಿ. ಎಸ್. ಇವರಿಬ್ಬರೂ ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾಯಿಗಳಿಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ಕೈಲುಸ್ಟೇಷನುಗಳಲ್ಲಿರುವ ಮೆಸರ್ಸ್ **ಹಿಗ್ಗಿನ್ ಬಾಥಮ್ಸ್** ಕಂಪೆನಿಯವರ ಬುಕ್‌ಸ್ಟಾಲ್‌ಗಳಲ್ಲೆಲ್ಲಾ ಈ ಪತ್ರಿಕೆಗಳು ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[4] **ಮ್ಯಾನೇಜರ್, ಆರೋಗ್ಯಚಂದ್ರಿಕೆ,** 323, ತಂಬುಚೆಟ್ಟಿ ಬೀದಿ, **ಮದರಾಸು.**

...ದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧ

ಧಿಕ್ಕರಿಸಿದರೆ ಸ್ತ್ರೀರತಿಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ... ಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ತಲೆ ಜಡವು, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ... ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಕಾಂತಿ ಬರುತ್ತದೆ. ಧಾತು ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಇಚ್ಛಿಸುತ್ತದೆ. ಮತ್ತು ... ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. ವನಸ್ಪತಿ-ಶತಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂದ, ಕಾಲೀಮುಲೀಕಂದ, ಅಶ್ವಕಂದ, ಶ್ವೇತಕಂದ, ಮುಸಳೀಕಂದ, ವಿದಾರೀಕಂದ, ದ್ವಿವಾರ್ಷಿಕವಟಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ... ಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಂಪಳಪತ್ರಿ, ಮದನಮಸ್ತ, ರಸಪುರುಷ, ಕಮರ, ... ಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಳಾ, ಬೀಜಬಂದ, ಹರಣಬೋರಿ, ಮುಂಗಲೀ ... ಮರ್ದಾನೀಕಟ್ಟಿಗೆ, ಶತಾವರಿ, ಸರ್ಕೀಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಬಳ್ಳಿ, ... ಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ... ಕಲ್ಲುಸಕ್ಕರೆ. ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ... ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ... ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ. ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. ... ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಓನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಸಿಕ್ಕು, ರಕ್ತ, ಕೀವು, ಹುಣ್ಣು, ಮೂಗಿನ ನಾಶಪಾತವಿರೋಣ, ಪಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 1 ಪುಡಿಕೆಗೆ 3 ರೂಪಾಯಿಗಳು. [2]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬುಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ... ಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ... ಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿ... ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರ... ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರ... ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[16] (ಆಫೀಸ) ಗಂಜೀಗೇಟಿ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೩೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಪಟ್ಟಾಭಿ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೧ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೧ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ .... ೧೨ ಆಣೆ
ಗೋತ್ರಸೂತ್ರಪಟ ೧ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ಸಿದ್ಧತತ್ವದರ್ಪಣ ೧ನೆಯ ಆವೃತ್ತಿ .... ೨ ಆಣೆ
ಪಂಚಪಂಚಶತಿ ಪ್ರಶ್ನಪ್ರಕಾಶ ೧ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೧ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೧ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ
ವೀರಶೈವಮತವಿಮಾಂಸಾ .... ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:—ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ. ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಿಟ್ಟುಹೋಗದ ಮೊಂಡಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಿದ್ದ ಕೆಲವು ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮಾರ್ಕೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಅತ್ಯಂತ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪ್ಯಾಕೆಟ್ಟು ಕಳುಹಿಸಲಾಗುತ್ತದೆ.

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦.
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[4] ಪೋ. ಬಾ. ೫೧೦. ಮದರಾಸು.

(Registered Trade Mark)

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪವಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ ನೇ ಜುಲೈ ೧೯೨೯ [ಸಂಚಿಕೆ ೧೨.

ಸ್ವೀಕಾರ.

ಧಾರವಾಡ ಡಿ|| ರೋಣ ತಾ|| ಸಿಡಗುಂದ ಗ್ರಾಮದ ವೇ|| ಭೂಸನೂರು ಕಟ್ಟಿಮಠದ ವೇ|| ಶಿವಮೂರ್ತಯ್ಯನವರ ಪುತ್ರ ಚಿ|| ಸಂಗಯ್ಯನಿಗೆ ಕುಂದಗೋಳ ತಾ|| ದೇವನೂರು ಹಿರೇಮಠದ ವೇ|| ಫಕೀರಯ್ಯನವರ ಪುತ್ರಿ ಸೌ|| ಪಾರ್ವತಮ್ಮನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಹಾಗೂ ಸದರಿ ಕನ್ಯೆಯ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ. ಒಟ್ಟು 4 ರೂಪಾಯಿಗಳು ವೇ|| ಕುಸುಗಲ್ಲು ಹಿರೇಮಠದ ಧೂಳಯ್ಯನವರ ದ್ವಾರಾ ತಲ್ಪಿರುತ್ತವೆ.

ನಿಜಾಮ ಇಲಾಖಾ ತಾಲೂಕು ಚಿತಾಪೂರ ಜಿಲ್ಲಾ ಗುಲ್ಬುರ್ಗಾ ಪೈಕಿ ಹಲಕರಟಿ ಹಿರೇಮಠಾಧ್ಯಕ್ಷ ಚರಪಟ್ಟಾಧಿಕಾರಿಗಳಾದ ಮಹಾಶ್ರೀಗಳವರು, ತಮ್ಮ ಅಣ್ಣನವರ ಪುತ್ರರಾದ ವೇ|| ದೇಶಿಕೇಂದ್ರ ಪಾವಡಪ್ಪನವರಿಗೆ ಪಟ್ಟಾಧಿಕಾರವನ್ನೂ, ಸದರೀ ದೇಶಿಕೇಂದ್ರರ ಕರರಂಜಾತರಾದ ವೇ|| ಮುನಿಯಪ್ಪಯ್ಯನವರಿಗೆ ಚರಾಧಿಕಾರವನ್ನೂ ವಹಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ವೇ|| ಸಿದ್ಧಾಂತಿ ಸಿದ್ಧರಾಮಶಾಸ್ತ್ರಿಗಳು, ಇಲ್ಲಾಳಮಠ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ನವಲಗುಂದ ತಾಲೂಕು ಇನಾಮ್‌ರಾಪುರದ ವೇ|| ಸಂಗಯ್ಯನವರು ಹಿರೇಮಠ ಇವರ ಪುತ್ರ ಚಿ|| ರಾ|| ಚನ್ನಯ್ಯನಿಗೆ ವೇ|| ಶಿವಮೂರ್ತಯ್ಯಸ್ವಾಮಿ ಹೊಸಮಠ ಪೋಲೀಸ್ ಕ್ಲಾರ್ಕ್, ಅಣ್ಣೀಗೇರಿ. ಮು|| ತಡಸ, ಇವರ ಪುತ್ರಿ ಸೌ|| ಶಿವಬಸವ್ವನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವೇ|| ಪ್ರಭಯ್ಯನವರು ಹಿರೇಮಠ ಇವರ ಅಭಿಪ್ರಾಯದಂತೆ ತೆಗೆಯಿಸಿದ 2 ರೂಪಾಯಿಗಳು ವೇ|| ಮುರಿಗಯ್ಯ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ಡಿ|| ಬರೂರಿನ ಸಾಹುಕಾರ ಮ|| ರಾ|| ಸಾಯಬಣ್ಣಪ್ಪನವರು ತಮ್ಮ ಮಕ್ಕಳ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಚಂದ್ರಶೇಖರಯ್ಯ ರಾಚಪ್ಪ ಹಿರೇಮಠ, ಮೊರಬಗಿ ಇವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿಯಲ್ಲಿರುವ ಮ|| ರಾ|| ತಾಳ್ಕಂಟಿ ಬಾಣಸ್ವಾಡಿ ರುದ್ರಪ್ಪನವರ ಪುತ್ರ ಚಿ|| ನಂಜುಂಡಪ್ಪನಿಗೆ ಮಾಲೂರು ತಾಲೂಕು ತಾಳ್ಕುಂಟೆ ಗ್ರಾಮದಲ್ಲಿರುವ ಮ|| ರಾ|| ಜಿ. ವೀರಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಮ|| ರಾ|| ಯಂ. ಎಸ್. ಶಿವಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡಜಿಲ್ಲಾ ನರಗುಂದ ಪೋಸ್ಟ ಕೊಣ್ಣೂರುಗ್ರಾಮದ ಮ|| ರಾ|| ಪರಪ್ಪ ಬೀಳಗಿ ಇವರಿಗೆ ಸದರಿ ಗ್ರಾಮದ ಮ|| ರಾ|| ಲಕ್ಷೆಟ್ಟಪ್ಪ ದನ್ಯೊಮ್ಮಿ ಇವರ ಪುತ್ರಿ ಚಿ|| ಸೌ|| ವೀರಬಸವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಕೊಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ತುಮಕೂರು ಡಿ|| ಶಿರಾತಾಲೂಕು ಕಸಬಾ ಶಿರಾ ಕೋಟೆಯಲ್ಲಿರುವ ಮ|| ರಾ|| ಉಗ್ರಣ್ಣನವರ ಲಿಂಗಪ್ಪನವರ ಪುತ್ರಿ ಚಿ|| ಸೌ|| ಪುಟ್ಟಮ್ಮನನ್ನು ಹುಳಿಯಾರು ಸಮ್ಮತು ಕೆಂಕೆರೆಯಲ್ಲಿರುವ ಮ|| ರಾ|| ಮೇಲಪ್ಪನವರ ಪುತ್ರ ಚಿ|| ಗಿರಿಯಪ್ಪನಿಗೂ, ಸದರೀ ಕೋಟೆಯಲ್ಲಿರುವ ಮ|| ರಾ|| ಗಿರಿಯಣ್ಣನವರ ಪುತ್ರಿ ಚಿ|| ಸೌ|| ವೀರಮ್ಮನನ್ನು ಕೆಂಕೆರೆಯಲ್ಲಿರುವ ಮ|| ರಾ|| ಸಣ್ಣೀರಪ್ಪನವರ ಪುತ್ರ ಚಿ|| ಚನ್ನಪ್ಪನಿಗೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂಪಾಯಿಯು ಶಿರಾ ಕೋಟೀಗುಣಿಮಠದ ವೇ|| ರಾಚಯ್ಯನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ರೋಣತಾಲೂಕು ಆಲೂರಿನ ಮ|| ರಾ|| ಬಸಪ್ಪ ಉಪ್ಪಿನ ಇವರ ಪತ್ನಿ ಸೌ|| ಕಾಶೀಬಾಯಿಯವರು ದುಷ್ಟನಕ್ಷತ್ರದಲ್ಲಿ ಋತುಮತಿಯಾದ ದೋಷಪರಿಹಾರಾರ್ಥವಾಗಿ ಸದರಿಯವರ ಮನೆಯಲ್ಲಿ ನೆರವೇರಿಸಿದ ಲಿಂಗಾಭಿಷೇಕ, ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಆಲೂರು ಪಂಚಾಚಾರ್ಯಸೇವಾಸಂಘದ ಸೆಕ್ರೆಟರಿ ಮ|| ರಾ|| ಗದಿಗೆಪ್ಪ ಬೀರನೂರು ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ—

ಲಂಡನ್ನಿನಲ್ಲಿರುವಂತೆ ಕಲ್ಕತ್ತಾ ಪಟ್ಟಣದಲ್ಲಿಯೂ ಭೂಮಿಯ ಒಳಗೆ ಸುರಂಗಗಳ ಮೂಲಕ ರೈಲುಗಳನ್ನು ನಡೆಯಿಸಬೇಕೆಂದು ಆಲೋಚಿಸುತ್ತಿರುವರು. ಲಂಡನ್ನಿನಲ್ಲಿ ಅದರ ಅಂದಾಜು ಪಟ್ಟಿಯೂ, ರಚನಾಕ್ರಮವೂ ತಯಾರಾಗಿ ಸರಕಾರಕ್ಕೆ ಒಪ್ಪಿಸಲ್ಪಟ್ಟಿದೆ. ಇದಕ್ಕೆ ಸುಮಾರು 1,20,00,000 ರೂಪಾಯಿಗಳು ಬೇಕಾಗುವದಂತೆ! ಇನ್ನೇನು? ಇಂಗ್ಲೆಂಡಿನ ನಿರುದ್ಯೋಗಿಗಳಿಗೆ ದೊಡ್ಡ ಸುಗ್ಗಿಯು ಸಮೀಪಿಸಿದಂತೆಯೇ!

WANTED.

Candidates for Telegraph and Station Master's Classes. Full particulars and Railway Fare Certificate on receipt of 2 annas Stamp.

Apply to—

INPERIAL TELEGRAPH COLLEGE, DELHI.

(2)

ದಿವಸಕ್ಕೆ ೩ ಗಂಟೆ ನಿದ್ರೆ.

ಇಂಗ್ಲೆಂಡಿನ ನಾಟಕ ಏಜೆಂಟರಾದ 51 ವರ್ಷ ವಯಸ್ಸಿನ ಮಿ|| ಬಿ. ಜೇಮ್ಸ್ ಸ್ಮಿತ್ತರೆಂಬವರು ಕಳೆದ 20 ವರ್ಷಗಳಿಂದ ದಿವಸಕ್ಕೆ 21 ಗಂಟೆವರೆಗೆ ಕೆಲಸಮಾಡಿ 3 ಗಂಟೆ ಮಾತ್ರ ಮಲಗುತ್ತಿದ್ದರೆಂದು ತಿಳಿದುಬರುತ್ತದೆ. ಎಡಬಿಡದೆ 16-18 ಗಂಟೆ ಕೆಲಸ ಮಾಡುವುದೆಂದರೆ ಅವರಿಗೆ ಲಕ್ಷ್ಯವೇ ಇಲ್ಲ. ಇತರರು ನಿದ್ರಿಸಿ ಗೊರಕೆ ಹೊಡೆಯುತ್ತಿರುವಾಗ ಸ್ಮಿತ್ತರು ತಮ್ಮ ಮೇಜಿನ ಬಳಿ ಕುಳಿತು ಕೆಲಸಮಾಡುತ್ತಾ ಇರುತ್ತಾರೆ. ಅವರೇನು ನಿದ್ರಾಭಂಗದಿಂದ ಪೀಡಿತರಾಗುವುದಿಲ್ಲ. ಅವರಿಗೆ ಶ್ರಮವಾಗುವುದೇ ಇಲ್ಲ. ಬೇರೇನೂ ಕೆಲಸಮಾಡಲಿಕ್ಕಿಲ್ಲೆಂದು 3 ಗಂಟೆ ನಿದ್ರೆಮಾಡುತ್ತಾರೆ. ಅಂತಹದೇನಾದರೂ ಕೆಲಸವಿದ್ದರೆ ಈ 3 ಗಂಟೆಯೂ ಮಲಗುವುದಿಲ್ಲ. 60-70 ಗಂಟೆ ನಿದ್ರೆಯಿಲ್ಲದಿರುವುದೆಂದರೆ ಸ್ಮಿತ್ತರಿಗೆ ಲಕ್ಷ್ಯವೇ ಇಲ್ಲ. ಇವರು ಯುವಕರಾಗಿದ್ದಾಗ ಪ್ರಸಿದ್ಧ ಆಟಗಾರರಾಗಿದ್ದರು. ಕಾಲುಚೆಂಡು, ಕ್ರಿಕೇಟು, ಟೆನ್ನಿಸು, ಜಟ್ಟಿಕಾಳಗ, ಓಟ ಮೊದಲಾದವುಗಳಲ್ಲಿ ಅಗ್ರಗಣ್ಯರಾಗಿದ್ದರು. ಸ್ಮಿತ್ತರು ಚಿಕ್ಕಂದಿನಿಂದಲೂ ನಿದ್ರೆಯಿಂದ ವೃಥಾ ಸಮಯ ವ್ಯಯವಾಗುವುದೆಂದು ಭಾವಿಸುತಿದ್ದರು. ಬೆಳಗ್ಗೆ 4 ಗಂಟೆಗೆ ಎದ್ದು ಹೊರಹೋಗುತ್ತಿದ್ದರು. ನಾಟಕ ಕಂಪೆನಿಗೆ ಸೇರಿ ಅಪರ ರಾತ್ರಿಯಲ್ಲಿ ಮಲಗಿದರೂ ಬೆಳಗ್ಗೆ 4 ಗಂಟೆಗೇನೇ ಏಳುತ್ತಿದ್ದರು. 3 ಗಂಟೆ ನಿದ್ರೆಯೇ ಸ್ಮಿತ್ತರಿಗೆ ಸಾಕಾಗುತ್ತಿತ್ತು. ಅವರು ಏಳುವಾಗ 8 ಗಂಟೆ ಮಲಗುವವರಿಗಿಂತಲೂ ಉತ್ಸಾಹಿಯೂ ಸಂತೋಷಿಯೂ ಆಗಿದ್ದರು. ಒಮ್ಮೆ ಇವರು ದೂರ ದೂರವಿದ್ದ 2 ನಾಟಕ ಕಂಪೆನಿಗಳಲ್ಲಿ ಕೆಲಸಮಾಡುತ್ತಿದ್ದು 3 ವಾರಗಳ ತನಕ ಬೆಳಗ್ಗೆ 5 ಗಂಟೆಗೆ ಎದ್ದು ಟ್ರೈನ್ ಹತ್ತಿ ಬಾತ್ ಎಂಬಲ್ಲಿಗೆ ಹೋಗಿ ಬೆಳಗ್ಗೆ 9 ಗಂಟೆಗೆ ಸವೋಯಿ ಎಂಬಲ್ಲಿಗೆ ಬಂದು ಅಲ್ಲಿ ಅಪರಾಹ್ನ 3 ಗಂಟೆಯವರೆಗೆ ಕೆಲಸಮಾಡಿ ಸಂಜೆಯ ನಾಟಕಕ್ಕೆ ಪುನಹ ಬಾತಿಗೆ ಬಂದು, ಮಧ್ಯರಾತ್ರಿಯಾದ 1-2 ಗಂಟೆಗಳವರೆಗೆ ಸದರಿ ಪ್ರದರ್ಶನದಲ್ಲಿ ಕೆಲಸಮಾಡಿ ಪುನಹ ಬೆಳಗ್ಗೆ 5 ಗಂಟೆಗೆ ಎದ್ದು ಬಾತಿಗೆ ಹೋಗುತ್ತಿದ್ದರು. ಇಷ್ಟೊಂದು ಕೆಲಸಮಾಡಿಯೂ ನಿದ್ರೆಮಾಡುದುದು 3 ಗಂಟೆ ಮಾತ್ರ. ಇದರಿಂದ ಸ್ಮಿತ್ತರಿಗೆ ಬಹಳ ಸುಖವಾಗುತ್ತಿದ್ದಿತು. ಅವರು ಒಂದು ಸಿನೆಮ ಕಂಪೆನಿಯಲ್ಲಿ ನಟರಾಗಿದ್ದಾಗ ಮಧ್ಯರಾತ್ರಿಯಾದ ಮೇಲೆ 2 ಗಂಟೆವರೆಗೆ ಕೆಲಸಮಾಡಿ 4 ಗಂಟೆಗೆ ಮನೆಗೆ ಹೋಗಿ ಬೆಳಗ್ಗೆ 7 ಗಂಟೆಗೆ ಪುನಹ ಕೆಲಸಕ್ಕೆ ಹೋಗುತ್ತಿದ್ದರು. ಸರ್ವಸಾಧಾರಣ ಸಮಯದಲ್ಲಿಯೂ ಸ್ಮಿತ್ತರು ಬೆಳಗ್ಗೆ 9 ರಿಂದ ರಾತ್ರಿ 8 ಗಂಟೆಯವರೆಗೆ ಕೆಲಸಮಾಡಿ ನಂತರ 11 ಗಂಟೆಯವರೆಗೆ ನಾಟಕಾದಿಗಳನ್ನು ನೋಡಿ ಮನೆಗೆ ಬಂದು ಮನೆಯಲ್ಲಿ 2 ಗಂಟೆಯವರೆಗೆ ಏನಾದರೂ ಕೆಲಸಮಾಡಿ ನಂತರ ಮಲಗಿ 5 ಗಂಟೆಗೆ ಎದ್ದು ಚಾ ತಯಾರಿಸಿ ಕುಡಿದು 6 ಕ್ಕೆ ದಿನದ ಕೆಲಸಕ್ಕೆ ತಯಾರಾಗುವರು. ಹೆಚ್ಚಿನ ಜನರು ವಿಪರೀತ ಸಮಯ ಮಲಗುತ್ತಾರೆಂದು ಸ್ಮಿತ್ತರ ಅಭಿಮತ. ಅವರು ಒಮ್ಮೆ 8 ಗಂಟೆ ಮಲಗಿದುದರಿಂದ ಕೆಲವು ದಿವಸಗಳ ವರೆಗೆ ದೇಹಾಲಸ್ಯವಿತ್ತಂತೆ! ನಿದ್ರೆಯ ವಿಧಾನವು ಪ್ರಾಮುಖ್ಯವಲ್ಲದೆ ಪ್ರಮಾಣವಲ್ಲ. ಸ್ಮಿತ್ತರು ಮಲಗಿದ ಅತ್ಯಲ್ಪ ಸಮಯದಲ್ಲಿ ಅವರ ಪ್ರತಿಯೊಂದು ಎಲುಬು, ನರ, ಸ್ನಾಯುಗಳು ಸಂಪೂರ್ಣ ವಿಶ್ರಾಂತಿ ಪಡೆಯುತ್ತಿದ್ದುವು. ಮಾನಸಿಕ ಕೆಲಸವು ನಡಿಯುತ್ತಾ ಅಂಗಾಂಗಗಳು ಆಗಾಗ್ಗೆ ಚಡಪಡಿಸುವ 8-9 ಗಂಟೆ ನಿದ್ರೆಗಿಂತ ಇಂತಹ 3 ಗಂಟೆ ನಿದ್ರೆಯು ಶ್ರೇಷ್ಠವಾದುದು. ನಿದ್ರೆಯ ಕಲೆಯನ್ನು ಕಲಿತಿರುವ ಜನರು ಬಹಳ ಕಡಿಮೆ. ಪ್ರಾಯ ಹೋದಂತೆ ನಿದ್ರೆಯು ಕಡಿಮೆ ಬೇಕಾಗುವುದು. ಸ್ಮಿತ್ತರು 51 ವರ್ಷ ಪ್ರಾಯದವರಾದರೂ 31 ವರ್ಷದ ಯುವಕನಂತೆ ತೋರುವರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಬಾಲವಿವಾಹಕ್ಕೆ ಜವಾಬುದಾರರು ಯಾರು?

ಬಾಲವಿವಾಹವೆಂದರೆ ಸಣ್ಣಮಕ್ಕಳ ಲಗ್ನವೆಂಬುವದು ಸರ್ವಶ್ರುತವಷ್ಟೆ! ಈ ಪದ್ಧತಿಯು ಹೆಚ್ಚು ರೂಢಿಯಲ್ಲಿರುವದು ಕಂಡು ಬರುತ್ತದೆ. ಈ ವಿವಾಹಕ್ಕೆ ವಧೂವರರ ವಯಸ್ಸು ಇಷ್ಟೇ ಎಂದು ನಿರ್ಧರಿಸಿಲ್ಲ. ಏದಾರು ದಿವಸಗಳ ಶಿಶುಗಳು ಇದ್ದರೂ ಕೂಡಾ ಅವುಗಳ ಲಗ್ನ ಮಾಡುತ್ತಾರೆ. ಇಷ್ಟೇಕೆ ಅವಸರದಿಂದ ಲಗ್ನ ಮಾಡುವಿರೆಂದು ಕೇಳಿದರೆ ಅನೇಕರು ಅನೇಕ ಕಾರಣಗಳನ್ನು ಹೇಳುವರು. ಕೆಲವರಂತೂ ಹೀಗೆ ಹೇಳುವರು; ಕೆಟ್ಟದಿನಮಾನಗಳು ಇರುವವರಾರೋ ಸಾಯುವವರಾರೋ ನಾವಿರುವಾಗಲೇ ನಮ್ಮ ಕಣ್ಣಮುಂದೆ ಮಕ್ಕಳ ಕಲ್ಯಾಣಕಾರ್ಯಮಾಡುತ್ತೇವೆ. ಅಕಸ್ಮಾತ್ ನಾವು ಸತ್ತರೆ ಮಕ್ಕಳ ಲಗ್ನ ಮಾಡುವವರು ಯಾರೂ ಇಲ್ಲದೆ ಅವರು ಹಾಗೇ ಇರಬೇಕಾದೀತು. ಅದಕ್ಕು ಶೀಘ್ರ ಮಕ್ಕಳ ಕಲ್ಯಾಣಕಾರ್ಯ ಮಾಡಿದರೆ ನಾವು ಮಕ್ಕಳನ್ನು ಹಡೆದದ್ದಕ್ಕೆ ಸಾರ್ಥಕವಾಗುವದು ಇಲ್ಲವಾದರೆ ಮಾಡಿದ್ದೆಲ್ಲ ವ್ಯರ್ಥವಾಗುವದು. ಕಾರಣ ಮಕ್ಕಳನ್ನು ಹಡೆದವರು, ಆ ಮಕ್ಕಳ ಲಗ್ನಮಾಡಿಯೇ ಸಾಯಬೇಕಾಗುವದು ಎನ್ನುವರು ಅಹಾ! ನೋಡಿರಾ ಇವರ ವಿಚಾರವನ್ನು ಚಿಕ್ಕವಯಸ್ಸಿನಲ್ಲಿ ಲಗ್ನಮಾಡಿದರೆ ಮಕ್ಕಳ ಕಲ್ಯಾಣವಾಗುವುದಂತೆ. ಆ ಚಿಕ್ಕಮಕ್ಕಳಿಗೆ ವಿದ್ಯೆಯನ್ನು ಕಲಿಸುವದು ಬಿಟ್ಟು ಗೊಂಬಿಯ ಆಟದಂತೆ ಲಗ್ನಮಾಡಲಿಕ್ಕೆ ಹವಣಿಸುತ್ತಾರೆ. ಲಗ್ನವೆಂಬುವದೇ ಇವರಿಗೆ ಗೊತ್ತಿಲ್ಲದೆ ಹೋಯಿತು. ಸಣ್ಣ ಸಣ್ಣ ಮಕ್ಕಳನ್ನು ಕೂಡಿಸಿ ಅಕ್ಕೀಕಾಳು ಚೆಲ್ಲಿದರೆ ತಮ್ಮ ಕರ್ತವ್ಯವೇ ಮುಗಿದಂತಾಯಿತೆಂದೂ, ಮಕ್ಕಳ ಸಂಬಂಧಿ ಯಾವತ್ತೂ ಜವಾಬದಾರಿಯು ತೀರಿತೆಂದೂ, ತಾವು ನಿಶ್ಚಿಂತರಾದೆವೆಂದೂ ತಿಳಿಯುವರು. ಮುಂದೆ ಆ ಮಕ್ಕಳ ಬಾಳ್ವೆಯು ಸುರಕ್ಷಿತವಾಗಿ ನಡೆಯುವುದಕ್ಕೆ ಯಾರನ್ನು ಜವಾಬದಾರರನ್ನಾಗಿ ಇಟ್ಟಿರು? ಇಟ್ಟಿಲ್ಲವೆಂದ ಪಕ್ಷಕ್ಕೆ ಏನಾದರೂ ಹೆಚ್ಚುಕಡಿಮೆಯಾದರೆ ಅದಕ್ಕೆ ಯಾರು ಜವಾಬದಾರರು? ಈ ಬಾಲವಿವಾಹದಿಂದ ಸಮಾಜಕ್ಕೆ ಆಗುವ ಹಾನಿಯನ್ನು ಮತ್ತೊಮ್ಮೆ ಬರೆಯೋಣವಂತೆ ಇರಲಿ, ಸದ್ಯಕ್ಕೆ ಕೆಳಗೆ ಉದಾಹರಣೆಗಾಗಿ ಕೊಟ್ಟಿರುವ ಬಾಲವಿವಾಹಕ್ಕೆ ಯಾರು ಜವಾಬದಾರರೆಂಬುದನ್ನು ಹೇಳಿರಿ. ಒಬ್ಬಾನೊಬ್ಬ ನಾಲ್ಕುವರ್ಷದ ಬಾಲಕನಿಗೆ ಆರುತಿಂಗಳ ಶಿಶುವನ್ನು ತಂದು ಸಮಸ್ತರೂ ಕೂಡಿ ವಿಧಿಪ್ರಕಾರ ಮದುವೆ ಮಾಡಿದರು. ವಯಸ್ಸಿನಲ್ಲಿ ಲಗ್ನಮಾಡಿದ್ದು ಈ ಬಾಲಕನಿಗೆ ಸ್ವಲ್ಪವೂ ಕೂಡ ಗೊತ್ತಿರಲಿಕ್ಕೆ ಶಕ್ಯವಿಲ್ಲವಷ್ಟೇ? ಈ ಬಾಲಕನು ವಿದ್ಯಾವಂತನಾಗಿ ವಯಸ್ಸಿಗೆ ಬಂದನಂತರ ಅವನ ಬಂಧುಗಳು ನಿನಗೆ ಹೆಂಡತಿ ಇದ್ದಾಳೆಂದು ತಿಳಿಸಿದರು. ಅದಕ್ಕೆ ಅವನು "ನಾನು ಲಗ್ನಮಾಡಿಕೊಂಡಿಲ್ಲವೆಂದೂ, ಆ ಹುಡುಗಿಯು ನನಗೆ ಗೊತ್ತಿಲ್ಲವೆಂದೂ, ಒಂದುವೇಳೆ ಬಾಲ್ಯಾವಸ್ಥೆಯಲ್ಲಿ ಲಗ್ನಮಾಡಿದ್ದರೆ ಅದಕ್ಕೆ ತನ್ನ ಒಪ್ಪಿಗೆ ಇಲ್ಲವೆಂದೂ, ಸಮಸ್ತ ಜಗತ್ತು ತಾಯಿಸ್ವರೂಪದಲ್ಲಿರುವಾಗ ಹೆಂಡತಿಯಾಗಲಿಕ್ಕೆ ಬೇರೆವಸ್ತು ತನಗಿಲ್ಲವೆಂದೂ, ಉತ್ತರ ಕೊಟ್ಟನು. ಬಾಲವಿವಾಹ ಮಾಡುವ ಅಣ್ಣಗಳಿರಾ ಕೇಳಿದಿರಾ? ಮುಂದೆ ಅವಳ ಗತಿಯೇನು? ಅವಳು ಗಂಡನಿರುವನೆಂದು ತಿಳಿಯಬೇಕೋ? ಇಲ್ಲವೆಂದು ತಿಳಿಯಬೇಕೋ? ಇರುವನೆಂದ ಪಕ್ಷದಲ್ಲಿ ಅವನೇ ಇವಳ ಪತಿಯಷ್ಟೇ! ಅವನಂತೂ ಇವಳಿಗೆ ತನ್ನ ಸಂಬಂಧವಿಲ್ಲವೆಂದೂ, ಇವಳು ತಾಯಿಸ್ವರೂಪವೆಂದೂ ಅನ್ನುವದು ಅವನಮೇಲಿನ ವಾಕ್ಯದಿಂದ ಸ್ಪಷ್ಟವಾಗಿ ಕಂಡುಬರುವುದಿಲ್ಲವೇ? ಗಂಡನಿಲ್ಲವೆಂದು ತಿಳಿದಪಕ್ಷದಲ್ಲಿ ಗುರುಹಿರಿಯರಿಂದ ವಿಧಿಪ್ರಕಾರ ಅವನೊಡನೆ ಲಗ್ನಮಾಡಿಕೊಂಡಿರುವಳಲ್ಲವೇ? ಲಗ್ನಮಾಡಿಕೊಂಡ ಇವನು ಜೀವಂತನಿರುವನು. ಮುಂದೆ ಉಪಾಯವೇನು? ಅವಳು ವಿಧವೆಯೋ? ಸಧವೆಯೋ? ಅಥವಾ ಲಗ್ನವಾಗದೇ ಇದ್ದ ಹೊಸ ಕನ್ಯೆಯೋ? ಅವಳು ತಾನು ಹೇಗಿರುವೆನೆಂದು ತಿಳಿಯಬೇಕು? ಮುಂದೆ ಇವಳ ಸಂರಕ್ಷಣಕರ್ತರು ಯಾರು? ಪುನಃ ಲಗ್ನಮಾಡಿಕೊಳ್ಳಬೇಕೆಂದರೆ ವೀರಶೈವ ಧರ್ಮದಲ್ಲಿ ಪುನರ್ವಿವಾಹವಿಲ್ಲ. ಒಂದುವೇಳೆ ಯಾವದೋಷವಿಲ್ಲವೆಂದು ಪುನಃ ಲಗ್ನಮಾಡಿಕೊಳ್ಳಲಿಕ್ಕೆ ಬರುತ್ತದೋ ಹೇಗೆ? ಬಂದರೆ ಯಾವತ್ತೂ ಮಂಗಲಕಾರ್ಯಗಳಲ್ಲಿ ಇವಳಿಗೆ ಮುತ್ತೈದೆಯರಂತೆ ಅಧಿಕಾರವುಳಿಯುವದೋ ಹೇಗೆ? ಒಬ್ಬ ಗುರುಹಿರಿಯರು ವಿಧಿಪ್ರಕಾರ ಶ್ರೀ ಪಂಚಕಲಶ ಸ್ವರೂಪಿಗಳಾದ ಶ್ರೀ ಜಗದ್ಗುರು ಪಂಚಾಚಾರ್ಯರ ಸಾಕ್ಷಿಯಾಗಿ ಮಾಡಿದ ಲಗ್ನವು ಸುಳ್ಳು ಎಂದು ಅಳಿಯಬೇಕಾಗುವದಷ್ಟೆ? ಹಾಗೆ ಅಳಿಯಲಿಕ್ಕೆ ಬರುತ್ತದೋ ಹೇಗೆ? ಬರುತ್ತದೆಂದು ತಿಳಿದರೆ ಅದು ಶ್ರೀಮದ್ವೀರಶೈವ ಧರ್ಮಕ್ಕೆ ಪೂರಾವಿರೋಧವಲ್ಲವೇ? ಪುನಃ ಲಗ್ನವಾಗಲು ಬರುವುದಿಲ್ಲವೆಂದಪಕ್ಷಕ್ಕೆ ಅವಳಿಂದಾದ ತಪ್ಪೇನು? ಅವಳನ್ನು ಈ ನಿರಾಧಾರಸ್ಥಿತಿಗೆ ತಂದವರು ಗುರುಹಿರಿಯರೆಂಬ ಮಹನೀಯರಷ್ಟೇ? ನೋಡಿರಿ. ಮೇಲ್ಕಂಡ ಬಾಲವಿವಾಹದಿಂದ ಎಷ್ಟು ತೊಂದರೆ ಬಂದಿದೆಯೆಂಬುದು ಪ್ರತಿಯೊಬ್ಬರಿಗೂ ತಿಳಿಯುವ ಸಂಗತಿಯಷ್ಟೇ? ಈ ಬಾಲವಿವಾಹಕ್ಕೆ ಜವಾಬದಾರರು ಯಾರು? ಈ ಉಭಯರ ತಾಯಿತಂದೆಗಳೋ? ಅವರ ಬಂಧುಗಳೋ? ಗುರುಹಿರಿಯರೋ? ಏನು ಶ್ರೀ ಪಂಚಕಲಶ ಸ್ವರೂಪಿಗಳಾಗಿ ಕುಳಿತ ಶ್ರೀ ಜಗದ್ಗುರು ಪಂಚಾಚಾರ್ಯರೋ? ಇಲ್ಲವೆ ಬಾಲವಿವಾಹವನ್ನು ಹಿಗ್ಗಿ ಹಿಗ್ಗಿ ಮಾಡಿ ಹೋಳಿಗೆ ತುಪ್ಪದಮೇಲೆ ಕೈಎಳೆದು ಉಬ್ಬುಬ್ಬಿ ಹೋದ ಸಬ್ಬಣದವರೋ? ನಾವು ದೈವದವರು, ನಾವು ಗೌಡರು, ನಾವು ಶಾನಭೋಗರು, ಎಂದು ಹೇಳಿಕೊಂಡು ಬಾಬು ಕಟ್ಟಿಕೊಂಡು ಮನೆಗೆ ಹೋದ ಶೆಟ್ಟಿ ಸಾವುಕಾರರೋ? ಹೇಳಿರಿ. ಯಾವ ಜ್ಞಾನವೂ ಇಲ್ಲದ ಸಣ್ಣ ಸಣ್ಣ ಶಿಶುಗಳನ್ನು ಮದುವೆ ಮಾಡುವ ಮಹಾತ್ಮರು ಇತ್ತ ಲಕ್ಷಕೊಟ್ಟು ಇದಕ್ಕೆ ಉತ್ತರ ಕೊಡಿರಿ. ಉತ್ತರವನ್ನು ಸದರಿ ಪತ್ರಿಕೆಯಲ್ಲಾಗಲಿ ಕೆಳಗೆ ಸಹಿ ಮಾಡಿದವರ ಪತ್ತೆಗಾಗಲಿ ಕಳಿಸಿರಿ ಉತ್ತರ ಬರೆಯಲಾರೆವೆಂದ ಪಕ್ಷಕ್ಕೆ, ಹೀಗೆ ಮಾಡಿ ಎಷ್ಟು ಮಕ್ಕಳನ್ನು ಗೋಳಿಗೆ ಈಡು ಮಾಡಿರುವಿರಿ? ನಮ್ಮ ಹಿಂದುಸ್ಥಾನದಲ್ಲಿ ಎಲ್ಲಿ ನೋಡಿದಲ್ಲಿ ವಿಧವೆಯರೇ ಕಾಣುವದಿಲ್ಲವೇ? ಶಿವ ಶಿವಾ! ಅವರು ಎಷ್ಟು ಕಷ್ಟಪಡುವರೆಂಬುವದು ನಿಮ್ಮ ಜ್ಞಾನತಂತುವಿಗೆ ಹೊಳೆಯುವದಿಲ್ಲವೇ? ಆ ಮಕ್ಕಳು ಮರುಗಿದ ದೋಷವು ನಿಮ್ಮ ತಲೆಯ ಮೇಲೆಯೇ ಅಲ್ಲವೇ? ನಮ್ಮ ದೇಶದ ಅವನತಿಗೂ, ಧರ್ಮಗ್ಲಾನಿಗೂ ಈ ಬಾಲವಿವಾಹವೇ ಕಾರಣವೆಂಬುವದು ತಿಳಿದಿಲ್ಲವೇ! ಬುದ್ಧಿಶಾಲಿಗಳು ಬಾಲವಿವಾಹವನ್ನು ಮಾಡಬೇಡಿರೆಂದು ಕಂಠದ್ವಾರದಿಂದಲೂ, ಗ್ರಂಥದ್ವಾರದಿಂದಲೂ, ವರ್ತಮಾನಪತ್ರ ಮುಂತಾದವುಗಳಿಂದಲೂ ಹೇಳುವದನ್ನು ಸ್ವಲ್ಪವೂ ಕೂಡ ಲಕ್ಷಕ್ಕೆ ತರಬಾರದೇ? ಮಹನೀಯರೇ? ಮೇಲ್ಕಂಡ ಬಾಲವಿವಾಹದ ಕೃತಿಯನ್ನು ತಿಳಿದುಕೊಂಡು ಪ್ರತಿಯೊಬ್ಬರೂ ತಮ್ಮ ಕೈಲಾದಮಟ್ಟಿಗೆ ಬಾಲವಿವಾಹಕ್ಕೆ ಪ್ರತಿಬಂಧಮಾಡುವಿರೆಂದು ನಂಬಿದ್ದೇವೆ. ಅಲ್ಲದೆ, ಶ್ರೀಮಜ್ಜಗದ್ಗುರು ಪಂಚಾಚಾರ್ಯ ಧಾರ್ಮಿಕಗುರುಗಳೂ, ಮತ್ತು ಸರಕಾರದವರೂ ಈ ಬಾಲವಿವಾಹಪದ್ಧತಿಯನ್ನು ಅವಶ್ಯವಾಗಿ ಪ್ರತಿಬಂಧಮಾಡಬೇಕೆಂದು ನನ್ನ ಆಗ್ರಹದ ವಿನಂತಿಯಿದೆ.

ಉಳವಪ್ಪ ಬಸವಪ್ಪ ಎಲಿವಾಳ, ಶ್ರೀ ಜ|| ಪಂಚಾಚಾರ್ಯ
ಭ|| ಸಂಘದ ಆನರರಿ ಸೆಕ್ರೆಟರಿ ಹಿರೇಹೋಳಹಳ್ಳಿ
ಪೋ|| ಕಲಘಟಗಿ, ಡಿ|| ಧಾರವಾಡ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ರಾಯಚೂರು ಪ್ರಾಂತದ ರಾಜಕೀಯ ಅನಾಥ ವಿದ್ಯಾರ್ಥಿಗಳಿಗೆ ಒಂದು ಶುಭಸೂಚನೆ.

ಶ್ರೀ ಜಗದ್ಗುರು ಶ್ರೀ ಹಿಮವತ್ಕೇದಾರ ಸಿಂಹಾಸನಾಧಿಪತಿಗಳು ನಮ್ಮ ಪ್ರಾಂತಕ್ಕೆ ದಯಮಾಡಿಸಿ ಸುಮಾರು ಎರಡು ವರ್ಷಗಳಾಗುತ್ತಾ ಬಂದಿತು. ಅಂದರೆ ಕೆಲವು ದಿವಸ ಶ್ರೀಗಳವರ ಅಡ್ಡಪಲ್ಲಕ್ಕಿಯ ಉತ್ಸವದ ವಿಷಯವಾಗಿ ವ್ಯಾಜ್ಯ ನಡೆದು ಅದಕ್ಕಾಗಿ ಎಷ್ಟೋ ಹಣವು ವೆಚ್ಚವಾಯಿತು. ಕಡೆಗೆ ಉತ್ಸವಮಾಡಬಹುದೆಂದು ನಮ್ಮ ಸರಕಾರದವರ ಕಡೆಯಿಂದ ಅಪ್ಪಣೆ ದೊರೆಯಿತು. ನಂತರ ಯಾವತರಹದ ತೊಂದರೆಗಳಿಲ್ಲದೆ ಸರಿಯಾಗಿ ಸಕೀ(ರ್)ಟು ನಡಿಯುತ್ತಿತ್ತು. ನಾವು ಇದೇ ಸುಸಮಯವೆಂದು ತಿಳಿದು ಅನಾಥ ರಾಜಕೀಯ ವಿದ್ಯಾರ್ಥಿಗಳ ವಿಷಯವಾಗಿ ಹಣವನ್ನು ಕೊಡಿಸಬೇಕೆಂಬ ಕಾಂಕ್ಷೆಯಿಂದ ಶಿರವಾರ ಮುಕ್ಕಾಮಿಗೆ (ಇಲ್ಲಿಯ ಕೆಲವು ವೀರಶೈವಪ್ರಮುಖರ ಅಭಿಪ್ರಾಯದ ಪ್ರಕಾರ ನಾನು ಶ್ರೀಯುತ ವಕೀಲ ಬಸವಲಿಂಗಯ್ಯನವರು ಶ್ರೀಯುತ ವಕೀಲ ಅಮರಪ್ಪನವರು ಹಾಗೂ ಶ್ರೀಯುತ ವಕೀಲ ಸಿದ್ಧಲಿಂಗಪ್ಪನವರು ಸಹ) ಹೋಗಿ ಯಾವತ್ತು ಸಮಾಚಾರವನ್ನು ಶ್ರೀ ಸಿಂಹಾಸನದ ಸರ್ವಾಧಿಕಾರಿಗಳಿಗೆ ತಿಳಿಸಿದೆವು. ಅದಕ್ಕೆ ಅವರು ಬಂದ ಹಣದಲ್ಲಿ 5 ಆಣೆಯ ಪ್ರಕಾರ ಭಾಗ ಕೊಡಲು ಒಪ್ಪಿಕೊಂಡು ಅಪ್ಪಣೆಯ ವಿಷಯವಾಗಿ ಶ್ರೀ ಜಗದ್ಗುರುಗಳವರ ಸನ್ನಿಧಿಗೆ ಒಂದು ವಿಜ್ಞಾಪನೆಯನ್ನು ಬರೆದರು. ಅದೇ ಪ್ರಕಾರ ನಾವು ಸಹ ಶ್ರೀಗಳವರ ಸನ್ನಿಧಿಗೆ ಬಿನ್ನೈಸಿಕೊಂಡೆವು. ವಿದ್ಯಾಭಿಮಾನಿಗಳಾದ ದಯಾನಿಧಿಗಳು ನಮ್ಮ ಲೇಖಗಳನ್ನು ನೋಡಿ ಮಹಾಸಂತೋಷಪಟ್ಟು ಶ್ರೀ ಸರ್ವಾಧಿಕಾರಿಗಳು ವಾಗ್ದಾನ ಮಾಡಿದ ಪ್ರಕಾರ ಹಣವನ್ನು ಕೊಡಬಹುದೆಂದು ಅಪ್ಪಣೆಕೊಟ್ಟರು. ಅಂದರೆ ವಿದ್ಯಾರ್ಥಿಗಳ ದುರ್ದೈವವೊ ಅಥವಾ ನಾವು ಈ ವಿಷಯ ಕೇಳಲಿಕ್ಕೆ ಹೋದ ಮುಹೂರ್ತವೊ ತಿಳಿಯದು. ಸರ್ವಾಧಿಕಾರಿಗಳಲ್ಲಿ ಹಣವನ್ನು ಕೇಳಿದಾಗೆಲ್ಲ ಏನಾದರೊಂದು ಸಮಾಚಾರ ಹೇಳಿ ಉಪಶಾಂತಿಮಾಡುತ್ತಿದ್ದರು. ಅಷ್ಟರೊಳಗೆ ಶ್ರೀ ಜಗದ್ಗುರುಗಳವರೇ ನಮ್ಮ ಪ್ರಾಂತಕ್ಕೆ ಬಿಜಮಾಡಿಸಿದರು. (ಇದು ಬಡವಿದ್ಯಾರ್ಥಿಗಳ ಸುದೈವವೇ ಸರಿ) ಶ್ರೀ ಜಗದ್ಗುರುಗಳವರ ಮುಕ್ಕಾಂ ಕವಿತಾಳದಲ್ಲಿದ್ದಾಗ್ಗೆ ನಾನು ಮತ್ತು ಶ್ರೀಯುತ ವಕೀಲ ಬಸವಲಿಂಗಯ್ಯನವರು ಹೋಗಿ ಯಾವತ್ತು ಸಮಾಚಾರವನ್ನು ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡಿದ್ದಲ್ಲದೆ ಬಂದ ಹಣದಲ್ಲಿ ಎಂಟಾಣೆ ಭಾಗ ಪ್ರಕಾರ ಕೊಟ್ಟು ಫಂಡು ಕೂಡಿಸಬೇಕೆಂದು ಮತ್ತೊಂದು ಅರ್ಜಿಯನ್ನಿಟ್ಟೆವು. ಅದಕ್ಕೆ ಶ್ರೀಗಳವರು ಬಂದ ಹಣದಲ್ಲಿ ಎಳು ಆಣೆ ಪ್ರಕಾರ ಕೊಡುತ್ತೇವೆಂದು ಒಪ್ಪಿಕೊಂಡು ಅದೇ ಅರ್ಜಿಯ ಮೇಲೆ ಸ್ವಂತ ಬರಹವನ್ನು ಬರೆದು ಹಣವನ್ನು ಕೊಡುವುದರ ವಿಷಯವಾಗಿ ಸರ್ವಾಧಿಕಾರಿಗಳಿಗೆ ಅಪ್ಪಣೆಯನ್ನಿತ್ತು ಸ್ವಸ್ಥಾನಕ್ಕೆ ತೆರಳಿದರು. ಇಷ್ಟಾದಾಗ್ಯೂ, ಸರ್ವಾಧಿಕಾರಿಗಳು ಈ ವಿಷಯದ ಕಡೆ ಸಂಪೂರ್ಣ ಅಲಕ್ಷ್ಯಮಾಡಿದರು. ಅದಕ್ಕಾಗಿ ಬಡವಿದ್ಯಾರ್ಥಿಗಳು ಸರ್ವಾಧಿಕಾರಿಗಳ ಮೇಲೆ ನಿಟ್ಟುಸಿರನ್ನು ಹಾಕುತ್ತ ಕಾಲಕಳೆಯುತ್ತಿದರು. ಅಷ್ಟರೊಳಗಾಗಿ ಶ್ರೀ ಜಗದ್ಗುರುಗಳು ಸರ್ವಾಧಿಕಾರಿಗಳನ್ನು ಸಂಸ್ಥಾನದಿಂದ ತೆಗೆದುಬಿಟ್ಟರು. (ಇವರನ್ನು ಅಧಿಕಾರದಿಂದ ತೆಗೆಯಲಿಕ್ಕೆ ಬಡವಿದ್ಯಾರ್ಥಿಗಳ ನಿಟ್ಟುಸುರೇ ಕಾರಣವಾದಂತೆ ತೋರುತ್ತದೆ) ಈಗ ಶ್ರೀಯುತ ಸಿದ್ಧಲಿಂಗಯ್ಯನವರನ್ನು (ಉರುಫ್ ಗುರುಜಿ) ಮುಖ್ತಿಯಾರದಾರರನ್ನಾಗಿ ನೇಮಿಸಿದ್ದಾರೆ. ಇವರು ಫಂಡಿನ ವಿಷಯವಾಗಿ ಸಾಕ್ಷಾತ್ ಶ್ರೀಗಳವರು ವಚನಕೊಟ್ಟ ಪ್ರಕಾರ ನಡಿಸುತ್ತಾರೆಂದು ನನಗೂ ಮತ್ತು ಇತರ ಪ್ರಮುಖರಿಗೂ ಸಹ ಪೂರ್ಣಾ ನಂಬಿಗೆಯಿದೆ. ಏಕೆಂದರೆ ಈ ವಿಷಯದಲ್ಲಿ ಮೊದಲನೇ ಅಭಿಪ್ರಾಯವೇ ಇವರದಾಗಿತ್ತು, ವಿದ್ಯಾಭಿಮಾನಿಗಳಾದ ಇವರು ಏಕಮನಸ್ಸಿನಿಂದ ಕಾರ್ಯಕ್ರಮಗಳನ್ನು ಮಾಡುತ್ತಿರುವರು. ನಮ್ಮ ಪ್ರಾಂತದ ಅನಾಥ ರಾಜಕೀಯ ವಿದ್ಯಾರ್ಥಿಗಳಿಗೆ ಒಂದು ಯೋಗ್ಯವಾದ ಫಂಡನ್ನು ಕೂಡಿಸಬೇಕೆಂದು ಸಂಸ್ಥಾನದಲ್ಲಿ ಸೇರಿಕೊಂಡಿದ್ದಾರೆ. ಸದ್ಯಕ್ಕೆ ಇವರಿಗೆ ಯಾವತರಹದ ವೇತನವು ಸಹ ಇಲ್ಲ. ಅಂದಬಳಿಕ ಇವರ ಪರವಾಗಿ ಎಷ್ಟು ಬರೆದರೂ ತೀರುವಂತಿಲ್ಲ. ಶ್ರೀ ಪರಮಾತ್ಮನು ಇವರಿಗೆ ಕಲ್ಯಾಣಮಾಡುವದಲ್ಲದೆ ಇಂಥಾ ಸತ್ಕಾರ್ಯಗಳನ್ನೇ ಮಾಡುವದಕ್ಕೆ ಮನಸ್ಸೀಯಲೆಂದು ನಾನು ದಯಾನಿಧಿಯಾದ ಪರಮಾತ್ಮನನ್ನು ಮತ್ತು ಸಾಕ್ಷಾತ್ ಮಹಾಶ್ರೀಗಳವರನ್ನು ಪ್ರಾರ್ಥಿಸುವೆನು. ಈಗ ಸಂಸ್ಥಾನದವರು ಮಸಿಗಿ ಮುಕ್ಕಾಮಿನಲ್ಲಿದ್ದಾರೆ. ತಾ|| 12 ನೇ ಜುಲೈ ದಿವಸ ನಾನು ಮತ್ತು ಶ್ರೀಯುತ ವಕೀಲ ಅಮರಪ್ಪನವರು ಹಾಗೂ ಶ್ರೀಯುತ ಬಸವಲಿಂಗಯ್ಯ ವಕೀಲ ಇವರು ಇಲ್ಲಿಯ ವೀರಶೈವಪ್ರಮುಖರ ಅಭಿಪ್ರಾಯದ ಪ್ರಕಾರ ಫಂಡಿನ ವಿಷಯವಾಗಿ ಪ್ರಸ್ತಾಪಮಾಡಲು ಹೋಗಿದ್ದೆವು ಸಂಸ್ಥಾನದಲ್ಲಿ ಶ್ರೀ ಸಿದ್ಧಲಿಂಗಯ್ಯನವರು ನಿಸ್ಪೃಹವಾಗಿ ಕೆಲಸಗಳನ್ನು ಮಾಡುವದನ್ನು ನೋಡಿ ನಮ್ಮ ಮನಸ್ಸಿಗೆ ಬಹಳ ಆನಂದವಾಯಿತು. ಅವರನ್ನು ಫಂಡಿಗೆ ಕೊಡುವದಾಗಿ ಒಪ್ಪಿಕೊಂಡಿದ್ದ ಹಣವನ್ನು ಕೊಡಿಸಬೇಕೆಂದು ವಿಚಾರಿಸಿದೆವು. ಅದಕ್ಕೆ ಅವರು ಲೆಕ್ಕಪತ್ರಗಳನ್ನು ತೋರಿಸಿದರು. ಈ ಮುಕ್ಕಾಮಿನ ಹಣವು ವಸೂಲಾದ ಕ್ಷಣವೇ ಕಳುಹಿಸಿಕೊಡುತ್ತೇವೆಂದು ಹೇಳಿದರು. ಮಸಿಗಿ ಶ್ರೀ ವೇದಮೂರ್ತಿ ಬಸವರಾಜಶಾಸ್ತ್ರಿಗಳು ಯಾವಾಗಲೂ ಸಂಸ್ಥಾನದಲ್ಲಿದ್ದು ಕಾರ್ಯಕ್ರಮಗಳನ್ನು ಸರಿಯಾಗಿ ನಡೆಸುವದಕ್ಕಾಗಿ ಅಭಿಪ್ರಾಯಕೊಡುತ್ತಲೇ ಇರುವರಲ್ಲದೆ ತಮ್ಮ ಗ್ರಾಮದ ಮತ್ತು ಪಂಸ್ತಳದಿಂದ ಬಂದ ವೀರಶೈವಪ್ರಮುಖರಿಗೆ ಚನ್ನಾಗಿ ಸಹಾಯಮಾಡುವಂತೆ ಬೋಧಮಾಡುತ್ತಲಿರುವರು. ಈ ಪ್ರಕಾರ ಬೋಧಮಾಡುವದನ್ನು ಕಂಡು ನನಗೆ ಬಹಳ ಸಂತೋಷವಾಯಿತು. ಶ್ರೀ ಶಾಸ್ತ್ರಿಗಳವರಿಗೆ ದೀರ್ಘಾಯುವನ್ನು ಕೊಡಲೆಂದು ನಾನು ಪರಮಾತ್ಮನನ್ನು ಪ್ರಾರ್ಥಿಸುವೆನು. ಮೇಲೆ ಹೇಳಿದಂತೆ ದಯಾನಿಧಿಗಳಾದ ಶ್ರೀ ಜಗದ್ಗುರುಗಳು ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಯೋಗ್ಯವಾದ ಫಂಡನ್ನು ಏರ್ಪಾಡುಮಾಡುತ್ತೇವೆಂದು ವಾಗ್ದಾನಮಾಡಿರುವದೂ ಹಾಗೂ ಅವರು ಅನೇಕ ಸ್ಥಳಗಳಲ್ಲಿ ಅನಾಥವಿದ್ಯಾರ್ಥಿಗಳ ಸಲುವಾಗಿ ಫಂಡುಗಳನ್ನು ಏರ್ಪಾಡುಮಾಡಿರುವದೂ ಸಹ ಸರ್ವರಿಗೂ ವಿದಿತವಾಗಿಯೇ ಇದೆ. ಕಾರಣ ನಮ್ಮ ಪ್ರಾಂತದ ವೀರಶೈವಪ್ರಮುಖರಿಗೆ ಪ್ರಾರ್ಥನೆಮಾಡಿಕೊಳ್ಳುವದೇನೆಂದರೆ—ಶ್ರೀಗಳವರಿಗೆ ಚನ್ನಾಗಿ ಸಹಾಯಮಾಡಿ ಧರ್ಮಕಾರ್ಯದಲ್ಲಿ ಭಾಗಿಗಳಾಗಿ ಅನಾಥ ರಾಜಕೀಯ ವಿದ್ಯಾರ್ಥಿಗಳ ರೋದನವನ್ನು ದೂರಮಾಡಬೇಕು. ಅಂದರೆ ನಿಜವಾಗಿ ಮಹೋದ್ಧಾರವನ್ನು ಮಾಡಿದಂತಾಗುವದು. ಸದರಿ ವಿದ್ಯಾರ್ಥಿಗಳಿಗೆ ಇರುವದಕ್ಕಾಗಿ ಶ್ರೀಯುತ ರಸ್ತಾಪುರ ಮುನಿಯಪ್ಪನವರು ಇಲ್ಲಿ ಒಂದು ಬೋರ್ಡಿಂಗನ್ನು ಕಟ್ಟಿಸಿರುವರು. ಕಾರಣ ಇವರಿಗೆ ಯಾವಾಗಲೂ ಇಂಥಾ ಧರ್ಮಕಾರ್ಯಗಳನ್ನು ಮಾಡುವದಕ್ಕಾಗಿ ಮನಸ್ಸೀಯಲೆಂದು ಶ್ರೀ ಪರಮಾತ್ಮನನ್ನು ಪ್ರಾರ್ಥಿಸುವೆನು.

ಎಚ್. ವಿರೂಪಾಕ್ಷಗೌಡ ವಕೀಲ,
ಸೆಕ್ರೆಟರಿ ಅನಾಥರಾಜಕೀಯ ವಿದ್ಯಾರ್ಥಿಗಳ
ವೀರಶೈವ ಬೋರ್ಡಿಂಗ ರಾಯಚೂರು.

ವೀರಶೈವತರುಣಸಂಘ.

ಯರೆಹಂಚಿನಾಳ.

ಈ ಗ್ರಾಮದಲ್ಲಿ ಇದುವರೆಗೂ ವಿದ್ಯಾಪ್ರಸಾರದ ಯಾವ ವ್ಯವಸ್ಥೆಯೂ ಇಲ್ಲದಿದ್ದುದನ್ನು ನೋಡಿ ಸದರಿ ಗ್ರಾಮದ ಅನೇಕ ಮುಖಂಡರು ಈ ನ್ಯೂನತೆಯನ್ನು ಹೋಗಲಾಡಿಸಲಿಕ್ಕೆ ಬಹಳ ಮಟ್ಟಿಗೆ ಹೆಣಗಾಡಿ ಕಡೆಗೆ ಉಪಾಯಗಾಣದೆ ಸುಮ್ಮನೆ ಕುಳಿತಿದ್ದರು. ಪರಮಾತ್ಮನ ಪ್ರೇರಣೆಯಿಂದಲೋ ಅಥವಾ ಈ ಗ್ರಾಮದ ವಿದ್ಯಾಭಿಮಾನಿಗಳ ಸಹಾನುಭೂತಿಯಿಂದಲೋ ಈ ಕೊರತೆಯು ದೂರಾಗುವ ಸಮಯವು ಬಂತು. ಈ ಗ್ರಾಮದಲ್ಲಿ ಅನೇಕ ದಿವಸಗಳಿಂದಲೂ ವಾಸಗೊಂಡಿದ್ದ ಮ|| ರಾ|| ಗುರುನಾಥಗೌಡ ಫಕೀರಗೌಡ ಪಾಟೀಲ ಸಾ|| ಮೈನಳ್ಳಿ ಈ ಮಹನೀಯರು ತಮ್ಮ ಕೊಡಗೈಬುದ್ಧಿಯಿಂದ ಇಪ್ಪತ್ತೈದು ರೂಪಾಯಿಗಳನ್ನು ವಾಚನಾಲಯಕ್ಕೋಸ್ಕರ ಸಹಾಯ ಮಾಡಿದರು. ಇಂಥ ಸಹಾಯಮಾಡುವ ಬುದ್ಧಿಯನ್ನು ಅವರಿಗೆ ದಯಪಾಲಿಸಿದ ಪರಮಾತ್ಮನನ್ನು ನಾವೆಲ್ಲರೂ (ವೀರಶೈವ ತರುಣಸಂಘ) ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. ಇದೇ ವೇಳೆಯಲ್ಲಿ ಇನ್ನೂ ಅನೇಕ ಮಹಾನುಭಾವರೂ ವಿದ್ಯಾಭಿಮಾನಿಗಳೂ ತಮ್ಮ ಶಕ್ತ್ಯಾನುಸಾರವಾಗಿ ತನುಮನ ದನಗಳಿಂದ ಸಹಾಯಮಾಡಲು ಸ್ವಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಇದು ಈ ಗ್ರಾಮದ ಸುದೈವವೇ ಸರಿ.

ಸೆಕ್ರೆಟರಿ
ವೀರಶೈವ ತರುಣಸಂಘ,
ಯರೆಹಂಚಿನಾಳ ಜಿ|| ಕೊಪ್ಪಳ

ಕೇದಾರ ಸಿಂಹಾಸನಮ್.

ಲೇಖಕರು—ಶಾ|| ಶ್ರೀ ಚನ್ನಬಸವಾಚಾರ್ಯರು
ಪುರಗಿರಿ ಬ್ರಹನ್ಮಠ.

"ಕೈಲಾಸಯಾತ್ರಾ" ಶ್ರೀ ಕೇದಾರ ಸಿಂಹಾಸನ ಸಂಸ್ಥಾನವಾದ ಉಖಾಮಠ ಕ್ಷೇತ್ರದಿಂದ ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯರು ಮಹಾಸಂಸ್ಥಾನ ಮ್ಯಾನೇಜರ ರಿಟೈರಡ್ ಡಿ. ಕಲೆಕ್ಟರ್ ವಿಶ್ವೇಶ್ವರಪ್ರಸಾದರು ವೈದ್ಯರಾಜ ಗುರುದಾಸರು ಇತ್ಯಾದಿ ಪ್ರಮುಖಪರಿವಾರದೊಡನೆ ಹೊರಟೆವು. ಜಗದ್ಗುರುಗಳ ಸಲುವಾಗಿ ೮ ಜನ ದಂಡಿಗಳು ಪಲ್ಲಕ್ಕಿಯು ೪ ಚಪರಾಸಿಗಳು ೪ ಬೆಳ್ಳಿ ಬೆತ್ತದವರು ಹಾಸಿಗೆಯ ವಾಹಕರು ೪ ಜನರು ಅಗ್ರಿಯ ಚಪರಾಸಿಯೊಬ್ಬನು ಪಾಕಕರ್ತೃಗಳೀರ್ವರು ಇತ್ಯಾದಿ ಸಿಬ್ಬಂದಿಯು ಸಿದ್ಧವಾಗಿ ಸಾಗಿತು. ೧ ಮೈಲಿನಲ್ಲಿರುವ ಮಂದಾಕಿನೀ ಪೂಲಿಗೆ ಬಂದೆವು. ಅಲ್ಲಿಗೆ ಶ್ರೀ ನೀಲಕಂಠ ಯೋಗಾಶ್ರಮವಾಸಿಯಾದ ಯೋಗಿದೇವನೆಂಬ ಬ್ರಹ್ಮಚಾರಿಯು ಯೋಗಸಾಧಕರೊಡನೆ ಸಿದ್ಧನಾಗಿ ಆಶ್ರಮದಿಂದ ಬಂದು ಸಂತಿದ್ದು ಸರ್ವರು ಜಗದ್ಗುರುಗಳನ್ನು ಅಭಿವಂದಿಸಿದರು. ಈ ಯೋಗಿದೇವನು ದಾಕ್ಷಿಣಾತ್ಯ ಸ್ಮಾರ್ತದ್ವಿಜೋತ್ತಮನೂ ಸದಾಚಾರ ನಿರತನೂ ಸಂಸ್ಕೃತಸಾಹಿತ್ಯಜ್ಞನೂ ಆಗಿದ್ದು ಕೇವಲ ಕ್ಷೀರಾಹಾರಿಯಾಗಿರುವನು. ಯೋಗಿಕರ್ಮದಲ್ಲಿ ಶ್ರೀ ಜಗದ್ಗುರುಗಳ ಕೃಪಾವಶಾತ್ ಕುಶಲನಾಗಿದ್ದು ಸಾಧಕರಿಗೆ ಸನ್ಮಾರ್ಗದರ್ಶಕನಾಗಿರುವನು. ಬಳಿಕ ಅಲ್ಲಿಂದ ಹೊರಟು ಶ್ರೀ ವಿಶ್ವೇಶ್ವರಪುರ (ಗುಪ್ತಕಾಶಿ) ಗೆ ಬಂದೆವು. ಇಲ್ಲಿ ಶ್ರೀ ವಿಶ್ವನಾಥಲಿಂಗವಿದೆ. ಅನ್ನಪೂರ್ಣಾ ಮೂರ್ತಿಯಿದೆ. ಗಣಪತಿ, ನಂದಿ-ಗಣ ಮೂರ್ತಿಗಳಿವೆ. ಮಂದಿರವು ಉತ್ತಮ ಶಿಲಾನಿರ್ಮಿತವಾಗಿದೆ. ಈ ಮಂದಿರದ ಪುರೋಭಾಗದಲ್ಲಿ ೩ ಗಂಗಾ ಯಮುನಾ ಜಲಧಾರೆಗಳು ಬರುತ್ತವೆ. ಇಲ್ಲಿ ಅತಿಮನೋಹರವಾದ ಕುಂಡವಿರುವದು. ಈ ಕುಂಡದಲ್ಲಿ ಆಚಮನಮಾಡಿ ಶ್ರೀ ವಿಶ್ವನಾಥನನ್ನು ದರ್ಶನಮಾಡಿದೆವು. ಇಲ್ಲಿ ಪೂಜಿಸಲು ಬಿಲ್ವಪತ್ರಗಳು ರುದ್ರಪ್ರಯಾಗದಿಂದ ಬರುತ್ತವೆ. ಇಲ್ಲಿ ಸುಂದರಲಿಂಗನೆಂಬ ದ್ರಾವಿಡ (ವೀರಶೈವ ಬ್ರಾಹ್ಮಣ) ಪೂಜಾರಿಯು ಇರುವನು. ಈತನು ಲಿಂಗವನ್ನೂ ಮತ್ತು ಯಜ್ಞೋಪವೀತವನ್ನೂ ಧರಿಸಿರುತ್ತಾನೆ. ಜಟಾಧಾರಿಯಾಗಿದ್ದಾನೆ. ಇನ್ನು ಈ ವಿಶ್ವನಾಥಮಂದಿರದ ಎಡಭಾಗದಲ್ಲಿ ಅರ್ಧನಾರೀಶ್ವರ (ಗೌರೀಶಂಕರ) ಮಂದಿರವಿದೆ. ಈ ಮಂದಿರದ ಮಧ್ಯದಲ್ಲಿರುವ ಮೂರ್ತಿಯು ಶುಭ್ರವಾದ ಶಿಲೆಗಳಿಂದ ರಚಿಸಲ್ಪಟ್ಟು ಅತಿ ರಮಣೀಯವಾಗಿದೆ. ಎಡಬಲಭಾಗದಲ್ಲಿ ನಟೇಶ್ವರ, ಈಶ್ವರಮೂರ್ತಿಗಳಿವೆ. ಇವೆಲ್ಲ ಮೂರ್ತಿಗಳು ಶುಭ್ರ ಶಿಲೆಗಳಲ್ಲಿಯೇ ಇರುವವು. ಬಳಿಕ ಅದರ ಎಡಭಾಗದಲ್ಲಿ ಪಾಂಡವಾದಿಗಳ ಭೈರವಾದಿ ಗಣದ ಅನೇಕ ಮೂರ್ತಿಗಳು ಇರುವವು. ಅಲ್ಲಲ್ಲಿ ಅರ್ಚಕರು ಇರುವರು. ಈ ಗುಪ್ತಕಾಶಿಯೆಂಬ ಕ್ಷೇತ್ರವು ಪುರಾಣದಲ್ಲಿ ಗುಪ್ತವಾರಾಣಸೀ ಕ್ಷೇತ್ರವೆಂದು ವರ್ಣಿಸಲ್ಪಟ್ಟಿದೆ. ಮತ್ತು ಈ ಸ್ಥಳವು ಪೂರ್ವದಲ್ಲಿ ನಿರ್ಜನವಾಗಿದ್ದು ಈಗ ಸುಂದರವಾದ ಪಟ್ಟಣವಾಗಿದೆ. ಇದು ಶ್ರೀ ಕೇದಾರಸಂಸ್ಥಾನದ ಆಧಿಪತ್ಯದಲ್ಲಿರುವದು. ಇಲ್ಲಿ ಕೇದಾರಸಂಸ್ಥಾನತಿಯಿಂದ ಧರ್ಮಾರ್ಥ ಔಷಧಾಲಯವೂ ಧರ್ಮಾರ್ಥ ಶಾಲೆಗಳೂ ಇರುವುವು. ಅಲ್ಲದೆ ಅನೇಕ ಅಂಗಡಿಗಳೂ, ಪೋಸ್ಟ್ ಆಫೀಸ್, ತಾರ್ ಆಫೀಸ್ ಮೊದಲಾದ ಸುಂದರಭವನಗಳು ವಿರಾಜಿಸುತ್ತಲಿವೆ. ಈ ನಗರದ ಆದಾಯವು ಕೇದಾರಸಂಸ್ಥಾನದಲ್ಲಿಯೇ ಜಮಾ ಆಗಿ ಅರ್ಚನಾದಿ ವ್ಯವಸ್ಥೆಗೊಳಿಸುವದಕ್ಕೆ ಖರ್ಚು ಆಗುತ್ತಿರುವದು. ಇಲ್ಲಿ ಸಂಸ್ಥಾನದ ಮಠವೂ ಇರುವುದು. ಈ ಗುಪ್ತಕಾಶಿಗೆ ೪ ಮೈಲುಗಳೊಳಗೆ ಬಾಣಾಸುರನ ಪಟ್ಟಣವಿದೆ. ಜನರು ಅದಕ್ಕೆ ಸದ್ಯ "ಬಾಮಸೂ" ಎಂದು ಕರೆಯುತ್ತಿರುವರು. ಇಲ್ಲಿಂದ ೩ ಮೈಲಿನಲ್ಲಿ ರಾವಣಗಂಗೆಯು ಇರುವದು. ಇಲ್ಲಿ ರಾವಣನು ತಪಸ್ಸುಮಾಡಿ ಪರಮಾತ್ಮನನ್ನು ಪ್ರತ್ಯಕ್ಷಮಾಡಿಕೊಂಡಿರುವನು. ಈ ಕ್ಷೇತ್ರವು ಗಢವಾಲ ಜಿಲ್ಲೆಯಲ್ಲಿ ಸೌಂದರ್ಯದಲ್ಲಿ ಮೊದಲನೆಯದಾಗಿದೆ. ಗುಪ್ತಕಾಶಿಯಿಂದ ಮುಂದಕ್ಕೆ ಪ್ರಯಾಣಮಾಡಿದೆವು. ಅಲ್ಲಿಗೆ ಒಂದು ಮೈಲಿನಲ್ಲಿ "ನಾಲಾ" ಎಂಬ ಗ್ರಾಮವಿದೆ. ಈ ಸ್ಥಳದಲ್ಲಿ ನಳಮಹಾರಾಜನು ಭಸ್ಮರುದ್ರಾಕ್ಷಾದಿ ಶಿವಧರ್ಮಪರನಾಗಿ ಭಗವತ್ಸಾರಾಧನೆಯನ್ನು ಮಾಡಿರುವದರಿಂದ ಈ ಸ್ಥಳಕ್ಕೆ "ನಾಲಾ" ಎಂಬ ನಾಮವು ಈಗಲೂ ರೂಢವಾಗಿದೆ. ಅಲ್ಲಿಂದ ೧ ಮೈಲಿನಲ್ಲಿ ಭೆತ ಎಂಬ ಚಟ್ಟಿ ಅದೆ. ಬಳಿಕ ೩ ಮೈಲಿನಲ್ಲಿ ೩ ಭ್ಯುಂಗಚಟಿ ಅಲ್ಲಲ್ಲಿ ನೀರಿನ ಧಾರೆಗಳು, ಸ್ಥಳಕುಲಗಳೂ ವಿಪುಲಗಳಾಗಿವೆ. ಇಲ್ಲಿ ಖಾದ್ಯ ಪದಾರ್ಥಗಳು ರಚಿಸಲ್ಪಟ್ಟು ವಿಕ್ರಯಕ್ಕೆ ಸಿಗುತ್ತವೆ. ಬಳಿಕ ೧||| ಮೈಲಿನಲ್ಲಿ ಮೈಖಂಡಾನಾಮಕ ಗ್ರಾಮವಿದೆ. ಇಲ್ಲಿ ಮಹಿಷಮರ್ದಿನೀ ದೇವಿಯ ಮಂದಿರವಿದೆ. ಪೂರ್ವದಲ್ಲಿ ಭಗವತಿಯು ಈ ಸ್ಥಾನದಲ್ಲಿ ಮಹಿಷಾಸುರನನ್ನು ಮರ್ದನಮಾಡಿ ಆ ಮಹಿಷದ ಖಂಡಖಂಡಗಳನ್ನು ಕೂರಿಮಾಡಿರುವದರಿಂದ ಈ ಪರ್ವತಸ್ಥಳಕ್ಕೆ ಮೈಖಂಡಾ ಎಂಬ ನಾಮವು ಅನ್ವರ್ಥಕವಾಗಿರುವದು. ಭಗವತೀಶ್ವರನಾಮದಿಂದ ಶಿವಾಲಯವೂ ಇರುವದು. ಇಲ್ಲಿ ಮಹಿಷಮರ್ದಿನಿಯ ದರ್ಶನವನ್ನೂ ಈಶ್ವರದರ್ಶನವನ್ನು ಯಾತ್ರಿಕರು ಮಾಡುತ್ತಿರುವರು. ಈ ಮಂದಿರಗಳು ಕೇದಾರಸಂಸ್ಥಾನಾಧಿಪತ್ಯದಲ್ಲಿ ಅವೆ. ಮತ್ತು ಈ ಸ್ಥಳದಲ್ಲಿ ಎರಡು ಕಟ್ಟಿಗೆಯ ಎತ್ತರ ಸ್ತಂಭಗಳನ್ನು ನಿಲ್ಲಿಸಿ ಜೋಕಾಲಿಯಂ ಕಟ್ಟಿರುವರು. ಇದರಲ್ಲಿ ಯಾತ್ರಿಕರು ಜೋಲಾಡುವರು. ಬಳಿಕ ಫಾಟಾಚಟ್ಟಿಯು ೧| ಮೈಲಿನಲ್ಲಿ ಅದೆ. ಇಲ್ಲಿ ಯಾತ್ರಿಕರ ಉಪಯೋಗಾರ್ಥವಾಗಿ ಮನೆಗಳು ಧರ್ಮಶಾಲೆಗಳು ಪೋಸ್ಟ್ ಆಫೀಸ್ ನೀರಿನ ಝರಿಗಳು ದುಕಾನುಗಳು ಅವೆ. ಹಾಗೂ "ಶ್ರೀ ಕೇದಾರ ಕೀರ್ತಿ ಕಾರ್ಯಾಲಯ" ವೆಂಬ ಸಂಸ್ಥೆಯು ಬಜಾರದಲ್ಲಿದೆ. ಅಲ್ಲಿ ಕೇದಾರಮಂಡಲ ತೀರ್ಥಯಾತ್ರಾ ಮಹಿಮೆಗಳ ಫೋಟೋಗಳು ಪ್ರಚಾರವಾಗುತ್ತಲಿವೆ. ಬಳಿಕ ೩| ಮೈಲಿನಲ್ಲಿ "ಬದಲ" ಪುರವಿದೆ. ಅಲ್ಲಿಂದ ೧||| ಮೈಲಿನಲ್ಲಿ ರಾಮಪುರವಿದೆ. ಇಲ್ಲಿ ಧರ್ಮಶಾಲೆಯಿದ್ದು ಬಡವರಿಗೆ ಅನ್ನೋದಕಗಳೂ ಕಂಬಳಿಗಳೂ ಧರ್ಮಕ್ಕಾಗಿ ದೊರೆಯುವವು. ರಾಮಪುರದಿಂದ ೪ ಮೈಲು ದೂರದಲ್ಲಿ ತ್ರಿಯುಗೀನಾರಾಯಣವೆಂಬ ತೀರ್ಥವಿದೆ. ಈ ದಕ್ಷಿ(?)ಯು ಬಹಳ ಎತ್ತರದಾಗಿರುವದು. ಅಲ್ಲಿ ಅಶೋಕವೃಕ್ಷಗಳೂ ಅನಾರವೃಕ್ಷಗಳೂ ವಿಪುಲಗಳಾಗಿದ್ದವು. ಸದ್ಯ ಕಡಿಮೆಯಾಗಿವೆ. ಈ ತೀರ್ಥಸ್ಥಾನವು ಶ್ರೀ ಕೇದಾರಸಂಸ್ಥಾನಕ್ಕೆ ಸೇರಿರುವದು. ಇಲ್ಲಿ ಜಗದ್ಗುರುಗಳ ಮಠವಿದೆ, ಹಕ್ಕುಬಾಬುಗಳೆಲ್ಲವೂ ಸಂಸ್ಥಾನಕ್ಕೆ ಸಲ್ಲುತ್ತವೆ. ಜಿಲ್ಲಾ ಗಢವಾಲದಲ್ಲಿ ಜಗದ್ಗುರುಗಳವರ ಜಾಹಗೀರ ಗ್ರಾಮಾವಳಿಯಲ್ಲಿ ಈ ತೀರ್ಥವು ಈ ತೀರ್ಥಕ್ಕಿರುವ ಆದಾಯವೂ ಉಲ್ಲೇಖಿತವಾಗಿದೆ. ಇದು ನಾರಾಯಣನು ಶಿವಜ್ಞಾನಸಂಪಾದನೆಗಾಗಿ ತಪಸ್ಸುಮಾಡಿದ ಸ್ಥಾನವಾಗಿದೆ. ಇಲ್ಲಿ ನಾರಾಯಣನ ದೊಡ್ಡ ಮಂದಿರವಿದೆ. ಮೂರ್ತಿಯು ಬಹುಮನೋಹರವಾಗಿದೆ. ಇಲ್ಲಿ ನಾರಾಯಣನ ನಾಭಿಕಮಲದಿಂದ ಒಂದು ಜಲಧಾರೆಯು ಹೊರಟಿರುವದು. ಸರಸ್ವತೀಕುಂಡ ಬ್ರಹ್ಮರುದ್ರಕುಂಡಗಳಿವೆ. ಹಾಗೂ ಅಗ್ನಿಕುಂಡವಿದೆ. ಈ ಸ್ಥಾನದಲ್ಲಿ ಗಿರಿಜಾ ಗಿರೀಶರ ವಿವಾಹವು ನಡೆದಿರುವದಾಗಿ ದಂತಕಥೆಯಿದೆ. ಕೇದಾರಮಹಾಸಂಸ್ಥಾನಾಧಿಪತಿಗಳನ್ನು ಸರ್ವರೂ ಆ ದಿವಸ ಎದುರುಗೊಂಡು ಕಾಣಿಕಾ ಫಲಪುಷ್ಪಾದಿಗಳನ್ನು ಸಮರ್ಪಿಸಿ ನಮಸ್ಕರಿಸಿದರು. ಬಳಿಕ ಜಗದ್ಗುರುಗಳು ಮಹಾಸಂಸ್ಥಾನ ಮ್ಯಾನೇಜರರ ದ್ವಾರಾ ಲೆಖ್ಖಪತ್ರಗಳ ತಪಾಸುಮಾಡಿಸಿ ಮಂದಿರ ವ್ಯವಸ್ಥೆಯನ್ನೂ ಅಲ್ಲಿಯ ಜನರು ಸುಧಾರಿಸುವ ವಿದ್ಯಾ ಸ್ಕೂಲುಗಳನ್ನೂ ಬೀದಿಗಳನ್ನೂ ಸುಧಾರಿಸುವ ಅನೇಕಾನೇಕ ಮಹತ್ತರ ಆಲೋಚನೆಗಳ ದ್ವಾರಾ ಜನರಿಗೆ ಸುಧಾರಣೋಪದೇಶವನ್ನೂ ಮಾಡಿದರು. ರವಿಗ್ರಾಮದ ಜಮಲೋಗಜಾತಿಯ ಬ್ರಾಹ್ಮಣರನ್ನು ನಾರಾಯಣನ ಮಂದಿರದಲ್ಲಿ ಅರ್ಚನೆಗಾಗಿ ನಿಯಮಿಸಿರುವರು. ಸಂಸ್ಥಾನತಿಯಿಂದಲೇ ಪ್ರತಿಯೊಂದು ಕಾರಭಾರಗಳು ನಡೆಯುತ್ತವೆ. ಅಲ್ಲಿ ರಾತ್ರಿ ಶಿವಾರ್ಚನಾದಿಗಳಂ ಪೂರೈಸಿಕೊಂಡೆವು. ಅದರ ಚಳಿಯು ಮಾತ್ರ ಉಳಿದ ಸ್ಥಳಗಳಿಗಿಂತಲೂ ಅಧಿಕವಾಗಿತ್ತು. ಆದ್ದರಿಂದ ನಮ್ಮ ಸಾಂಪ್ರದಾಯಿಕ ರಾತ್ರಿ ಸ್ನಾನಾಚಾರ ವಿಷಯದಲ್ಲಿ ಪರಿವರ್ತನಮಾಡುವ ಪ್ರಸಂಗವು ಬಂದಿತು. ಆಗ್ಗೆ ಸ್ಕಾಂದಪುರಾಣಾಂತರ್ಗತ ಕೇದಾರಖಂಡ ೩೦೬ ನೆಯ ಅಧ್ಯಾಯದ ಈ ರೀತಿ ಕಥೆಯು ಸ್ಮಾರಣಪಥಕ್ಕೆ ಗೋಚರವಾಯಿತು. (ಸಶೇಷ.)

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಹಿರೇಮಠದ ಸ್ಥಿರಚರ ಪಟ್ಟಾಭಿಷೇಕ ಮಹೋತ್ಸವವು.

ಹುಲಕರಟ

ನಿಜಾಮ ಇಲಾಖೆ ತಾಲೂಕ ಚಿತಾಪೂರ ಜಿಲ್ಲಾ ಗುಲ್ಬುರ್ಗಾ ಪೈಕಿ ಹುಲಕರಟ ಹಿರೇಮಠಾಧ್ಯಕ್ಷ ಚರಪಟ್ಟಾಧಿಕಾರಿಗಳಾದ ಮಹಾಶ್ರೀಗಳವರು ತಮ್ಮ ಅಧಿಕಾರವನ್ನು ಗ್ರಾಮದ ಸಮಸ್ತ ಭಕ್ತಮಾಹೇಶ್ವರ ಹಾಗೂ ಶಿಷ್ಯಮಂಡಳಿಯ ಅನುಮತಿಯನ್ನು ತೆಗೆದುಕೊಂಡು ತಮ್ಮ ಅಣ್ಣನವರ ಪುತ್ರರಾದ ವೇ|| ದೇಶಿಕೇಂದ್ರ ಪಾವಡಪ್ಪನವರಿಗೆ ಪಟ್ಟಾಧಿಕಾರವನ್ನೂ ಸದರಿ ದೇಶಿಕೇಂದ್ರರ ಕರಕಂಜಾತರಾದ ವೇ|| ಮುಪ್ಪಯ್ಯಪ್ಪಯ್ಯನವರಿಗೆ ಚರಾಧಿಕಾರವನ್ನೂ ಒಳ್ಳೇ ವಿಜೃಂಭಣೆಯಿಂದ ಇದೇ ಸಂವತ್ಸರದ ಜೇಷ್ಠ ಕೃಷ್ಣ 12 ಗುರುವಾರ ದಿವಸ ವಿಧ್ಯುಕ್ತ ಪ್ರಕಾರವಾಗಿ ವಹಿಸಿದರು. ಈ ಕಾರ್ಯಕ್ಕೆ ಯಲೇರಿ, ಚಿತಾಪೂರ, ಹೊಸಗುಂಟಿ, ಮುದನಿ, ನಂದಿಹಳ್ಳಿ, ರಾವೂರು, ಲಾಡ್ಲಾಪೂರ, ಅಂಬಲಗಿ, ಅತಲಾಪೂರ, ಸೂಲಳ್ಳಿ, ಕಲಬುರ್ಗಿ ಇತ್ಯಾದಿ ಗ್ರಾಮಗಳ ಪಟ್ಟಾಧಿಕಾರಿಗಳೂ, ಚರಮೂರ್ತಿಗಳೂ, ಅನೇಕ ಜನ ದೇಶಿಕರೂ ಮಠಸ್ಥರೂ ಆಗಮಿಸಿದ್ದರು. ಅಲ್ಲದೆ ಅನೇಕ ಗ್ರಾಮಗಳಿಂದ ಭಕ್ತಮಾಹೇಶ್ವರರು ವಿಶೇಷವಾಗಿ ಆಗಮಿಸಿದ್ದರು. ಮಠವು ಪಂಚಪಲ್ಲವಗಳಿಂದಲೂ, ರಂಭಾಸ್ತಂಭಗಳಿಂದಲೂ, ಪಟ್ಸಮ್ಮಾರ್ಜನೆಯಿಂದಲೂ, ರಂಗವಲ್ಲ್ಯಾದಿಗಳಿಂದಲೂ ಅಲ್ಲಲ್ಲಿಗೆ ಕಟ್ಟಲ್ಪಟ್ಟ ಪಂಚಾಚಾರ್ಯರ ಭಾವಚಿತ್ರಪಟಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಆ ಸಮಯದಲ್ಲಿ ಗ್ರಾಮದ ಸಮಸ್ತ ಭಕ್ತಮಾಹೇಶ್ವರರು ಮಂಗಲಸ್ನಾನವನ್ನು ಗೈದು ಭಕ್ತಿಪರವಶರಾಗಿ ಜಗದಾಚಾರ್ಯರ ಮಂಗಲಕರವಾದ ನಾಮಸಂಕೀರ್ತನೆಯನ್ನು ಮಾಡುತ್ತಿದ್ದರಲ್ಲದೆ ನಗಾರಿ, ನೌಬತ್ತು, ಜಯಘಂಟಾ, ಕಹಳೆ, ಕರಡೆ, ಇವೇ ಮೊದಲಾದ ಮಂಗಲವಾದ್ಯಗಳು ಬಲವಾಗಿ ಮೊಳಗುತ್ತಿದ್ದವು. ಇದಲ್ಲದೆ ಜಗದಾಚಾರ್ಯರ ಜಯಘೋಷಧ್ವನಿಯು ಸರ್ವಜನರ ಮೈಮೇಲೆ ರೋಮಾಂಚಗಳನ್ನೆಬ್ಬಿಸುತ್ತಿತ್ತು. ಮರುದಿವಸ ಮುಂಜಾನೆ 8 ಘಂಟೆಗೆ ಮಠದಿಂದ ಅಧಿಕಾರಿಗಳ ಮೆರವಣಿಗೆಯು ಛತ್ರ, ಚಾಮರ, ವ್ಯಾಘ್ರಹಸ್ತ ಯುಕ್ತವಾದ ನಂದಿಧ್ವಜ, ಹಗಲುದೀವಟಿಗೆ, ಮಾಯಮರ್ಮುಕ ಇವೇ ಮೊದಲಾದ ಬಿರುದಾವಳಿಗಳಿಂದ ಹೊರಟಿತು. ಮುಂಭಾಗದಲ್ಲಿ ಅನೇಕ ತರದ ವಾದ್ಯಗಳಾಗುತ್ತಿದ್ದವಲ್ಲದೆ ಭಜನಾಸಂಘದವರ ಭಕ್ತಿರಸಭರಿತಗಳಾದ ಪದ್ಯಗಳು ಎಂಥ ನಾಸ್ತಿಕನಾದರೂ ಭಕ್ತಿಯನ್ನು ಹುಟ್ಟಿಸದೆ ಇರಲಿಲ್ಲ. ಪಂಚಾಚಾರ್ಯರ ಜಯಘೋಷಕ್ಕಂತೂ ಎಣೆಯೇ ಇದ್ದಿಲ್ಲ. ಭಕ್ತಿಪರಾಯಣರಾದ ಸುವಾಸಿನಿಯರು ಆರತಿಯನ್ನು ಹಿಡಿದುಕೊಂಡು ಹಿಂಭಾಗದಲ್ಲಿದ್ದು ಇಂಪಾದಸ್ವರದಿಂದ ಮಂಗಳವನ್ನು ಪಾಡಿ ಸರ್ವಜನರಿಗೆ ಭಕ್ತಿಯನ್ನು ಹುಟ್ಟಿಸುತ್ತಿದ್ದರು. ಇದರಂತೆ ಮೆರವಣಿಗೆಯು ಗ್ರಾಮದ ಮುಖ್ಯ ಮುಖ್ಯ ಬೀದಿಗಳಲ್ಲಿ ಸಂಚರಿಸಿ 11 ಘಂಟೆಗೆ ಮಠಕ್ಕೆ ತಲ್ಪಿತು. ಅನಂತರ ಅಧಿಕಾರಿಗಳಿಗೆ ಸಿಂಹಾಸನಾರೋಹಣವನ್ನು ಮಾಡಿಸಿ ಸಕಲ ಭಕ್ತಮಾಹೇಶ್ವರರು ಕಾಣಿಕೆಯನ್ನರ್ಪಿಸಿ ಆಶೀರ್ವಾದವನ್ನು ಪಡೆದನಂತರ ಪಟ್ಟಾಧಿಕಾರದ ಕಾಸು ಒಡೆದು ಅಧಿಕಾರಪತ್ರಿಕೆಯನ್ನು ನಮ್ಮ ಖಜಾನ್ಚಿಗಳು ಶಾನಭೋಗಿಮಠ ಕಲ್ಯಾಣ ಮು|| ಅಂಬಲಗಿ ಇವರ ಕಡೆಯಿಂದ ಬರೆಯಿಸಿ ಸರ್ವರೂ ಸಹಿಕೊಟ್ಟರು. ಅಧಿಕಾರಿಗಳು ಪ್ರಭಾಪೋಷಣಕ್ಕಾಗಿ 3 ರೂಪಾಯಿಗಳು ತೆಗೆದರು. ತರುವಾಯ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸದರಿ ಕಾರ್ಯದಲ್ಲಿ ಶರಣಪ್ಪ ಪೋಲೀಸಗೌಡ್ರು ವ್ಯವಸ್ಥಾಪಕರಾಗಿದ್ದರು.

ಪ್ರತ್ಯಕ್ಷದರ್ಶಿ.
ಸಿದ್ಧಾಂತಿ ಸಿದ್ಧರಾಮಶಾಸ್ತ್ರಿಗಳು,
ಇಲ್ಲಾಳಮಠ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಪಂಚಾಚಾರ್ಯರ ಉತ್ಸವ.

ಯರೇಹಂಚಿನಾಳ.

ಕೊಪ್ಪಳ ಜಿಲ್ಲಾ ಯರೇಹಂಚಿನಾಳ ಗ್ರಾಮದಲ್ಲಿ ವಾಲ್ಮೀಕರು ಹಾಲುಮತ ನಾಗೂ ಗಾಂಗೀಯಮತದವರು "ವೀರಶೈವ" ತರುಣಸಂಘದೊಡನೆ ಸೇರಿ ಭಕ್ತಿಪೂರ್ವಕವಾಗಿ ಬಿಲ್ವವೃಕ್ಷಕ್ಷೇತ್ರದಲ್ಲಿ ಆಷಾಢ ಶು|| ೩ ಸೋಮವಾರ ದಿವಸ ಮಹಾಗಣಾರಾಧನೆಯನ್ನು ಮಾಡಿದರು. ಮರುದಿವಸ ಸಾಯಂಕಾಲ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಪಟವನ್ನು ಮುಹೂರ್ತಗೊಳಿಸಿ ವಾದ್ಯವೈಭವದೊಡನೆ ಮಹೋತ್ಸವದಿಂದ ವೀರಭದ್ರದೇವಾಲಯದವರೆಗೆ ಬಂದು ಅಲ್ಲಿ ಕಾಯಿಕರ್ಪೂರಾದಿಗಳನ್ನು ಮಾಡಿಸಿಕೊಂಡು ಪಂಚವನಗಿ ಹಿರೇಮಠಕ್ಕೆ ತಲ್ಪಿದನಂತರ ಶಿ|| ಕೊಟ್ರಯ್ಯ ತುಮ್ಮಿಂದಗದ ಇವರು ಸದರಿಯವರ ಗುರುನಿಷ್ಠೆಯನ್ನು ನೋಡಿ ಸದಾಚಾರವೇ ಸದ್ಗತಿ ಎಂದು ಬೋಧಿಸಿದರು. ಅನಂತರ ಮ|| ರಾ|| ಬಸಪ್ಪನವರು ವೀರಾಪೂರ ಇವರು ಶಿವಭಕ್ತಿಯ ವಿಷಯವಾಗಿಯೂ ಗುರುಮಹತ್ವದ ವಿಷಯವಾಗಿಯೂ ಅಹಿಂಸಾಪರಮೋಧರ್ಮಃ ಈ ವಿಷಯವಾಗಿಯೂ ಪರಿಣಾಮವಾಗುವಂತೆ ಬೋಧಿಸಿದರು. ಅನಂತರ ಯಾವತ್ತರೂ ಸಂತೋಷಭರಿತರಾಗಿ ಕರತಾಳವನ್ನು ಮಾಡಿದರು. ಇಷ್ಟಕ್ಕೆ ಮಂಗಲವನ್ನು ಪಾಡಿ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಪ್ರತ್ಯಕ್ಷದರ್ಶಿ.

ಕಥಾಕಾಲಕ್ಷೇಪ

ಯಲಿಯೂರು.

ಚಿತ್ರದುರ್ಗ ಜಿಲ್ಲಾ ಹೊಳಲಕೆರೆ ಸುಪ್ರಸಿದ್ಧ ಕೀರ್ತನಕಾರರಾದ ಹೆಚ್. ಎಸ್. ಜಿ. ಬಿ. ಆರಾಧ್ಯ ಶರ್ಮ ಎಂಬುವರು ಕೀರ್ತನೆಗಳ ನಿಮಿತ್ತವಾಗಿ ಕುಣಿಗಲು ತಾಲೂಕು ಪ್ರಾಂತ ಆಗಮಿಸಲು, ನಮ್ಮ ಪುರನಿವಾಸಿಗಳು ಮೇಲ್ಕಂಡ ಕೀರ್ತನಕಾರರ ಘನವಾದ ಧರ್ಮಬೋಧೆಯನ್ನು ಕೇಳಲು ಕುತೂಹಲಪಟ್ಟು, ಹೆಚ್. ಎಸ್. ಜಿ. ಬಿ. ಆರಾಧ್ಯ ಶರ್ಮರವರನ್ನು ಈ ಯಲಿಯೂರು ಗ್ರಾಮಕ್ಕೆ ಆಹ್ವಾನಿಸಿ ಇವರಿಂದ ಮ|| ರಾ|| ಬಿ. ಸಂಜುಂಡಶೆಟ್ಟರವರ ಮನೆಯಲ್ಲಿ ಶರಭಲೀಲಾ ಮತ್ತು ಪಂಚಾಕ್ಷರಿಪ್ರಭಾವ, ಎಂಬ ಕೀರ್ತನೆಗಳನ್ನು ಅನುವಾದಮಾಡಿಸಿ ಅತ್ಯಂತ ಆನಂದಪಟ್ಟರು. ಈ ತರುಣ ಕೀರ್ತನಕಾರರ ಕಥಾಸಂವಿಧಾನ ವಿಷಯಪ್ರತಿಪಾದನ ಹೃದಯಂಗಮವಾದ ಭೂಷಣಯುಕ್ತವಾದ ಉಪಕಥೆಗಳ ಜೋಡನೆ ಮೊದಲಾದ ಸದ್ವಿಷಯಗಳಿಗೆ ಸಂತೋಷಪಟ್ಟು ಈ ಪುರನಿವಾಸಿಗಳು ತಾ|| 16-7-1929 ನೇ ಮಂಗಳವಾರ ಮೇಲ್ಕಂಡ ಕಥೆಗಳನ್ನು ನಡಿಸಿ ಕಥಾನಂತರ ವೇ|| ಹೆಚ್. ಎಸ್. ಜಿ. ಬಿ. ಆರಾಧ್ಯ ಶರ್ಮರವರಿಗೆ ಒಂದು ಸುವರ್ಣಪದಕವನ್ನು ಅಲಂಕರಿಸಿದರು. ಕೀರ್ತನಾದಿಗಳ ಮೂಲಕ ದೇಶಭಾಷೆಯ ಸೇವೆಮಾಡುತ್ತಿರುವ ಈ ಕೀರ್ತನಕಾರರಿಗೂ ಇವರ ಗುಣಗ್ರಹಣಮಾಡಿ ಇವರನ್ನು ಸನ್ಮಾನಿಸಿದ ಮ|| ರಾ|| ಶೇಕದಾರ್ ಟಿ. ಹೆಚ್. ಚೆನ್ನವೀರಶೆಟ್ಟರಿಗೂ, ಮ|| ರಾ|| ಜವಳಿಅಂಗಡಿ ವೈ. ಯಸ್. ಅದವಿಶೆಟ್ಟರಿಗೂ ಕೀರ್ತನಕ್ಕೆ ದಯಮಾಡಿಸಿ ಕಥಾನಂತರ ಕಥೆಯವಿಷಯವಾಗಿ ಅಮೋಘವಾದ ಉಪನ್ಯಾಸಗಳನ್ನು ಮಾಡಿದ ಮ|| ರಾ|| ವೈ. ಕಪಿನಯ್ಯಶೆಟ್ಟರಿಗೂ ಮತ್ತು ಸಭೆಗೆ ದಯಮಾಡಿಸಿದ್ದ, ವಿಲೇಜ್‌ಪಂಚಾಯಿತಿ ಮೆಂಬರುಗಳು ಸಾಹುಕಾರ ರೇವಣ್ಣಶೆಟ್ಟರು, ಪಂಡಿತ ಬಾಬಿ ನಾಡೇಬರು ಪಟೇಲ್ ವೀರಣ್ಣಗೌಡರು. ಶ್ಯಾನುಭೋಗ್ ವೆಂಕಟರಾಮೈಯ್ಯನವರು ಮತ್ತು ಹುಲಸೂರು ಸಂಜುಂಡಶೆಟ್ಟರಿಗೂ ಸಹ ಶ್ರೀಕಂಠೇಶ್ವರನು ಮಂಗಳವನ್ನು ಈಯಲೆಂದು ಪ್ರಾರ್ಥಿಸುವೆನು.

ವೈ. ಎಸ್. ರುದ್ರಪ್ಪಶೆಟ್ಟಿ,
ತಾ|| 18-7-1929 ಜವಳಿ ಮತ್ತು ಚಿಲ್ಲರೆಅಂಗಡಿ,
ಯಲಿಯೂರು.

ಪಂಚಾಚಾರ್ಯ ಪ್ರಭಾ

೧೯೨೯ನೇ ಜುಲೈ ತಾ|| ೨೯ನೇ ಸೋಮವಾರ

ಹಿಂದೂ ನ್ಯಾಯಶಾಸ್ತ್ರ ಸುಧಾರಣಾಕಮಿಟಿ.

ಮೇಲ್ಕಂಡ ಕಮಿಟಿಯ ಮೊದಲನೆಯ ಸಭೆಯು ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿರುವ ನ್ಯಾಯವಿಧಾಯಕಸಭೆಯ ಹಾಲಿನಲ್ಲಿ ಕಳೆದ 14 ನೆಯ ತಾರೀಖು ಭಾನುವಾರ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಕೆ. ಎಸ್. ಚಂದ್ರಶೇಖರ ಅಯ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ|| ರಾಮಚಂದ್ರರಾವ್ ಸಿಂಧೆಯವರ ವಿನಹ ಇತರ ಕಮಿಟಿಯ ಮೆಂಬರುಗಳೆಲ್ಲರೂ ಹಾಜರಿದ್ದರು.

ಅಧ್ಯಕ್ಷರ ಭಾಷಣವು ಮುಗಿದನಂತರ ಕಮಿಟಿಯವರು ಯಾವರೀತಿಯಲ್ಲಿ ಕಾರ್ಯಭಾಗಗಳನ್ನು ಪ್ರಾರಂಭಿಸಬೇಕೆಂಬುದನ್ನು ಚರ್ಚಿಸಿದರು. ಮತ್ತು ಕೆಲವು ವಿಷಯಗಳ ಸಂಬಂಧವಾಗಿ ಪ್ರಜಾಸಮೂಹದ ಅಭಿಪ್ರಾಯವನ್ನು ತಿಳಿಯುವದಕ್ಕೋಸ್ಕರ ಅವಶ್ಯಕವಾದ ಪ್ರಶ್ನೆಗಳನ್ನು ಪ್ರಕಟಿಸಬೇಕೆಂದು ತೀರ್ಮಾನಿಸಿದರು.

ಅಧ್ಯಕ್ಷರ ಭಾಷಣ.

ನಾವುಗಳೆಲ್ಲರೂ ಒಟ್ಟಿಗೆ ಸೇರಿರುವ ಈ ಪ್ರಥಮ ಸಭೆಯಲ್ಲಿ ಘನಹೊಂದಿದ ನಮ್ಮ ಶ್ರೀಮನ್ಮಹಾರಾಜರ ಸರಕಾರದವರು ನಮಗೆ ಒಪ್ಪಿಸಿರುವ ಮಹತ್ಕಾರ್ಯವನ್ನು ಕೈಕೊಳ್ಳುವದಕ್ಕೂ ಮತ್ತು ನಿಮ್ಮೆಲ್ಲರನ್ನು ಸಂದರ್ಶಿಸ[illegible] ನನಗೆ ತುಂಬಾ ಹರ್ಷವಾಗುತ್ತದೆ.

ಮೈಸೂರು ದೇಶದ ನ್ಯಾಯಾಸ್ಥಾನಗಳಲ್ಲಿ ಹಿಂದೂ ಧರ್ಮಶಾಸ್ತ್ರಕ್ಕನುಸಾರವಾಗಿ ಸ್ತ್ರೀಯರಿಗಿರುವ ಹಕ್ಕುಬಾಧ್ಯತೆಗಳನ್ನು ಉತ್ತಮಸ್ಥಿತಿಗೆ ತರಬೇಕೆಂಬುವದೇ ಈ ಕಮಿಟಿಗೆ ವಹಿಸಿರುವ ಮುಖ್ಯ ಕಾರ್ಯವಾಗಿದೆ. ಈ ವಿಷಯವಾಗಿ ನಾವು ಚೆನ್ನಾಗಿ ಶೋಧಮಾಡಿ, ಈ ಮಧ್ಯೆ ನಮ್ಮ ದೃಷ್ಟಿಗೆ ಗೋಚರವಾಗಬಹುದಾದ ಎಲ್ಲಾ ವಿಷಯಗಳನ್ನೂ ಚರ್ಚಿಸಿ, ಬ್ರಿಟಿಷ್ ಇಂಡಿಯಾದಲ್ಲಿ ಈ ವಿಷಯವಾಗಿ ಏನಾದರೂ ಹೊಸ ಕಟ್ಟಳೆಗಳು ಜಾರಿಗೆ ತರಲ್ಪಟ್ಟಿದ್ದರೆ ಅವುಗಳನ್ನು ಚೆನ್ನಾಗಿ ವಿಮರ್ಶೆಮಾಡಿ ನಮ್ಮ ರಾಜ್ಯದಲ್ಲಿ ಈಗ ಜಾರಿಯಲ್ಲಿರುವ ಕಾಯಿದೆಗಳನ್ನು ಯಾವರೀತಿಯಲ್ಲಿ ಬದಲಾಯಿಸುವದರಿಂದ ಸ್ತ್ರೀಯರಿಗಿರುವ ಹಕ್ಕುಬಾಧ್ಯತೆಗಳನ್ನು ಉತ್ತಮಸ್ಥಿತಿಗೆ ತರಬಹುದೆಂಬ ಬಗ್ಗೆ ಒಂದು ರಿಪೋರ್ಟನ್ನು ತಯಾರುಮಾಡಿ ಸರಕಾರಕ್ಕೆ ಒಪ್ಪಿಸಬೇಕಾಗಿದೆ.

ಈ ಕಾರ್ಯವು ಎಷ್ಟು ಮಹತ್ವದ್ದೋ ಅಷ್ಟೇ ಕಷ್ಟವೂ ಸೂಕ್ಷ್ಮವೂ ಆಗಿದೆ. ಇದು ಸರ್ವಸಮರ್ಪಕವಾಗಿ ನೆರವೇರಬೇಕಾದರೆ ನಾವು ಸಾವಧಾನದಿಂದಲೂ, ಎಚ್ಚರಿಕೆಯಿಂದಲೂ ಮುಂದುವರಿಯಬೇಕಲ್ಲದೆ. ಇದಕ್ಕೆ ಇತರರು ಅಂದರೆ ಹೊರಗಿನವರೂ ಸಹ ಶ್ರದ್ಧೆಯಿಂದ ಸಹಾಯಮಾಡಬೇಕು.

ಪ್ರಥಮದಲ್ಲಿ ನಾವು ಧರ್ಮಶಾಸ್ತ್ರಾನುಸಾರವಾಗಿ ನಮ್ಮ ಸ್ತ್ರೀಯರು ಆಸ್ತಿಪಾಸ್ತಿಗಳ ಸಂಬಂಧವಾಗಿ ಎಷ್ಟರಮಟ್ಟಿನ ಹಕ್ಕುಬಾಧ್ಯತೆಗಳುಳ್ಳವರೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಈ ವಿಷಯಗಳನ್ನು ಮೆಂಬರುಗಳೆಲ್ಲರೂ ಸಾಕಾದಷ್ಟು ತಿಳಿಯದೆ ಇರುವದರಿಂದ ಅವುಗಳನ್ನು ನಾವು ಸಂಪೂರ್ಣವಾಗಿ ತಿಳಿದುಕೊಳ್ಳುವದಕ್ಕಾಗಿ ಮೊದಲು ವಿಶೇಷ ಶೋಧವನ್ನು ಮಾಡಬೇಕಾಗುತ್ತದೆ.

ಎರಡನೆಯದಾಗಿ, ಈಗಿನ ಕಾಯಿದೆಯು, ಯಾವ ಯಾವ ವಿಷಯಗಳಲ್ಲಿ ಈಗಿನ ಜನಾಂಗದ ಸ್ಥಿತಿಗತಿಗಳಿಗೆ ಅನುಸಾರವಾಗಿ ಫಲಗಳನ್ನು ಕೊಡುವದಿಲ್ಲವೆಂಬುದನ್ನು ನಿರ್ಧರಿಸಬೇಕು. ಈ ಭಾಗವನ್ನು ನಾವು ಸಂಪೂರ್ಣವಾಗಿಯೂ ಸರ್ವರಿಗೂ ತೃಪ್ತಿಕರವಾಗುವಂತೆಯೂ ತೀರ್ಮಾನಿಸಬೇಕಾದರೆ ಈ ವಿಷಯಗಳಲ್ಲಿ ಆಸಕ್ತಿಯುಳ್ಳವರೆಲ್ಲರೂ ನಿರ್ವಂಚನೆಯಿಂದ ತಮ್ಮ ತಮ್ಮ ಅಭಿಪ್ರಾಯಗಳನ್ನು ನಮ್ಮ ಮುಂದೆ ತಿಳಿಸುವದಕ್ಕೆ ಸಂಪೂರ್ಣ ಅವಕಾಶವನ್ನು ಕಲ್ಪಿಸಬೇಕು.

ಕಡೆಯದಾಗಿ, ಹೀಗೆ ನಮಗೆ ದೊರೆಯಬಹುದಾದ ಎಲ್ಲಾ ಅಂಶಗಳನ್ನು ಗ್ರಹಿಸಿದ ನಂತರ, ಕಾಯಿದೆಯ ಯಾವ ಯಾವ ಭಾಗವನ್ನು ಅತ್ಯವಶ್ಯಕವಾಗಿ ಬದಲಾಯಿಸಬೇಕೆಂಬುದನ್ನೂ ಸರ್ವಸಮ್ಮತವಾಗಿರಲು ಯಾವ ಯಾವ ಕಾಯಿದೆಗಳನ್ನು ಯಾವಯಾವ ರೀತಿಯಲ್ಲಿ ಬದಲಾಯಿಸಬೇಕೆಂಬುದನ್ನೂ ನಿರ್ಧರಿಸಬೇಕು. ಇದೇ ನಮಗೆ ಅತ್ಯಂತ ಜವಾಬ್ದಾರಿಯಾದ ಕೆಲಸವು! ಇದನ್ನು ಸಮರ್ಪಕವಾಗಿ ಪೂರೈಸಬೇಕಾದರೆ ನಾನು ಮೇಲೆ ಹೇಳಿದ ಕ್ರಮದಂತೆ ಕಾರ್ಯಭಾಗವನ್ನು ನಡೆಯಿಸಬೇಕು.

ಪ್ರಜೆಗಳ ವಿಷಯಗಳನ್ನು ಸಂಗ್ರಹಿಸುವಕಾಲದಲ್ಲಿ ವಿಷಯಗಳಿಗೆ ತಕ್ಕಂತೆ, ಆ ವಿಷಯಗಳನ್ನು ತಿಳಿದಿರಬಹುದಾಗಿ ನಮಗೆ ತೋರುವ ಸ್ತ್ರೀ ಪುರುಷರನ್ನೇ ಖುದ್ದಾಗಿ ಕರೆಯಿಸಿ, ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು. ಪ್ರಜಾಭಿಪ್ರಾಯಗಳು ಚೆನ್ನಾಗಿ ತಿಳಿದುಬರುವಂತೆ ಒಂದೆರಡು ಪ್ರಶ್ನೆಮಾಲಿಕೆಗಳನ್ನು ಪ್ರಸಿದ್ಧಪಡಿಸಬೇಕು. ಆ ಪ್ರಶ್ನೆಗಳನ್ನು ನ್ಯಾಯಶಾಸ್ತ್ರದ ಗ್ರಂಥಗಳ ಆಧಾರದಿಂದಲೂ, ನ್ಯಾಯಸ್ಥಾನದ ತೀರ್ಪುಗಳಿಂದಲೂ, ನ್ಯಾಯಸಂಬಂಧವಾದ ಟೀಕಾಟಿಪ್ಪಣಿಗಳಿಂದಲೂ, ಚರ್ಚಿಸಲಗತ್ಯವೆಂದು ತೋರಿಬರುವ ವಿಷಯಗಳಿಂದಲೂ ನಿರ್ಧರಿಸಬೇಕು. ಈ ಪ್ರಶ್ನೆಗಳು ನಮ್ಮ ಅಭಿಪ್ರಾಯವು ಹೀಗೆಯೇ ಇರಬಹುದೆಂದು ಇತರರಿಗೆ ತಿಳಿಯದಂತೆ ಇರಬೇಕು. ಪ್ರಶ್ನೆಗಳು ವಿಶದವಾಗಿಯೂ ಅವುಗಳಿಗೆ ಸಂಬಂಧಪಟ್ಟ ವಿಷಯವು ಚರ್ಚೆಗೆ ಆಸ್ಪದವಿಲ್ಲದಂತೆ ಪರಿಪೂರ್ಣವಾಗಿಯೂ ಇರಬೇಕು. ಹೀಗೆ ಮಾಡುವದರಿಂದ ಆ ಪ್ರಶ್ನೆಗಳಿಗೆ ಸಮಂಜಸವಾದ ಮತ್ತು ವಿಷಯಕ್ಕೆ ತಕ್ಕಷ್ಟು ಪೂರ್ಣವಾದ ಉತ್ತರಗಳು ದೊರೆತು, ಮುಂದೆ ಪುನಃ ಆ ಸಂಬಂಧವಾಗಿ ಹೊಸ ಪ್ರಶ್ನೆಗಳಿಗೆ ಅವಕಾಶವಿಲ್ಲದೆ ಹೋಗುವದು. ಆದರೆ ಆ ವಿಚಾರವಾಗಿ ಈಗಲೇ ನಾವು ಹೆಚ್ಚು ಪ್ರಸ್ತಾಪ ಮಾಡಬೇಕಾಗಿಲ್ಲ.

ಪ್ರಜೆಗಳಲ್ಲಿ ಒಬ್ಬೊಬ್ಬರ ಅಭಿಪ್ರಾಯವು ಒಂದೊಂದು ವಿಧವಾಗಿರುವದರಿಂದ ಒಂದಕ್ಕೊಂದು ವಿರೋಧವಾದ ಅಭಿಪ್ರಾಯಗಳು ಮಿತಿಯಿಲ್ಲದೆ ಬರುವುವು. ನಾವಾದರೂ ಯಾವುದೊಂದು ಅಭಿಪ್ರಾಯದ ಪಕ್ಷವನ್ನು ವಹಿಸದೆ ಈಗಿನ ಕಾಯಿದೆಯ ಕುಂದುಕೊರತೆಗಳನ್ನು ತಿಳಿದು ಸರ್ವಸಮರ್ಪಕವಾಗಿರುವಂತೆಯೂ ಈ ಕಾಲದ ಜನಗಳ ಪರಿಸ್ಥಿತಿಗೂ ನಡವಳಿಕೆಗೂ ಹೊಂದುವಂತೆಯೂ ನಮ್ಮ ತೀರ್ಮಾನವನ್ನು ಮಾಡಬೇಕು. ನಾವು ಎಷ್ಟು ಎಚ್ಚರಿಕೆಯಿಂದಲೂ, ಬುದ್ಧಿವಂತಿಕೆಯಿಂದಲೂ ವರ್ತಿಸಬೇಕೆಂಬುದನ್ನೂ, ನಮ್ಮ ಅಭಿಪ್ರಾಯಗಳನ್ನು ಹೊರಗೆಡಹುವದಕ್ಕೆ ಪೂರ್ವದಲ್ಲಿ ಪ್ರತಿಯೊಬ್ಬರ ಅಭಿಪ್ರಾಯವನ್ನೂ ಚೆನ್ನಾಗಿ ಗಮನಿಸಬೇಕಾದ್ದು ಎಷ್ಟು ಅವಶ್ಯಕವೆಂಬುದನ್ನೂ ನಿಮಗೆ ತಿಳಿಸುವದಕ್ಕಾಗಿ ನಾನು ಇಷ್ಟೆಲ್ಲವನ್ನೂ ಹೇಳಿದೆನು. ಆದರೆ ನಾವು ಎಲ್ಲವನ್ನೂ ಚೆನ್ನಾಗಿ ಚರ್ಚಿಸಿ ಪೂರೈಸಿದ ಮೇಲೆ ನಮ್ಮ ತೀರ್ಮಾನವನ್ನು ಬಹಿರಂಗಪಡಿಸುವ ಕಾಲಕ್ಕೆ ಆ ನಮ್ಮ ತೀರ್ಮಾನಗಳಿಂದ ಬೇರೆ ಬೇರೆ ಜನರ ಮನಸ್ಸಿನ ಮೇಲೆ ಆಗಬಹುದಾದ ವಿಧವಿಧವಾದ ಪರಿಣಾಮಗಳನ್ನು ಲಕ್ಷ್ಯಕ್ಕೆ ತಾರದೆ ನಮ್ಮ ಆತ್ಮಸಾಕ್ಷಿಯಾಗಿ ಯಾವುದು ಸರಿಯೆಂದು ತೋರುವದೋ ಅದೇ ತೀರ್ಮಾನವನ್ನೇ ನಿರ್ವಂಚನೆಯಿಂದಲೂ ನಿರ್ಭೀತಿಯಿಂದಲೂ ಪ್ರಸಿದ್ಧಪಡಿಸಬೇಕು.

ಇಂತಹ ಮಹತ್ಕಾರ್ಯವನ್ನು ಕೈಕೊಳ್ಳುವ ಸಂದರ್ಭದಲ್ಲಿ ಪ್ರಾಪಂಚಿಕ ವಿಷಯಗಳಲ್ಲಿ ತುಂಬಾ ಅನುಭವಸ್ಥರೂ ನ್ಯಾಯವಿಚಾರದಲ್ಲಿ ತುಂಬಾ ನುರುಗಿದವರೂ ವ್ಯಾಪಾರ, ಉದ್ಯೋಗ ವಿಷಯಗಳಲ್ಲಿ ತುಂಬಾ ಅನುಭವ ಹೊಂದಿದ ಪುರುಷಶ್ರೇಷ್ಠರೇ ಅಲ್ಲದೆ ಸ್ತ್ರೀಯರ ಅಭ್ಯುದಯದ ಸಲುವಾಗಿ ಬದ್ಧಕಂಕಣರೆಂದು ಪ್ರಸಿದ್ಧಿಹೊಂದಿರುವ ಒಬ್ಬ ನಾರೀಮಣಿಯೂ ಸಹ ಈ ಕಮಿಟಿಯಲ್ಲಿ ನನಗೆ ಸಹಾಯಕರಾಗಿರುವದನ್ನು ನೋಡಿ ನನಗೆ ತುಂಬಾ ಆನಂದವಾಗಿರುತ್ತದೆ.

ಹೀಗೆ ಜನಾಂಗದ ಹಿತಕ್ಕಾಗಿ ಸೇರಿರುವ ನಾವೆಲ್ಲರೂ ಕಡೆಯವರೆಗೂ ಇದೇ ರೀತಿ ಪ್ರೀತಿವಿಶ್ವಾಸಗಳಿಂದ ಒಟ್ಟಾಗಿ ಕಾರ್ಯಭಾಗಗಳನ್ನು ನಡೆಯಿಸಿ, ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಕೈಲಾದ ಮಟ್ಟಿಗೂ ಈ ಸಭೆಯ ಉದ್ದೇಶವು ಸುಗಮವಾಗಿ ಕೊನೆಗಾಣುವದಕ್ಕೆ ಪ್ರಯತ್ನಿಸುವುದಲ್ಲದೆ, ನಮಗೆ ವಹಿಸಿರುವ ಕಾರ್ಯವು ಪೂರ್ತಿಯಾಗಿ ನಮ್ಮ ರಿಪೋರ್ಟನ್ನು ಸರಕಾರಕ್ಕೆ ಒಪ್ಪಿಸುವ ಕಾಲದಲ್ಲಿ ಆ ರಿಪೋರ್ಟಿನ ವಿಷಯಗಳು ಈ ಕಮಿಟಿಯವರೆಲ್ಲರಿಂದಲೂ ಒಂದೇ ತೆರನಾದ ಸಮ್ಮತಿಯಿಂದ ಕೂಡಿ ಅದರಲ್ಲಿ ಬರುವ ಅಭಿಪ್ರಾಯಗಳು ಮತ್ತು ಸೂಚನೆಗಳು ವಿಶೇಷ ಮಹತ್ವವುಳ್ಳದ್ದಾಗುವಂತೆ ಮಾಡುವಿರೆಂದು ನಂಬುತ್ತೇನೆ.

ಒಳದೇಶದ ವೃತ್ತಾಂತಗಳು.

ಹುಣಸೂರಿನ ಸ್ಪೆಷಲ್ ಮ್ಯಾಜಿಸ್ಟ್ರೇಟರು ವಕೀಲರನ್ನು ಅಗೌರವವಾಗಿ ಕಂಡಕಾರಣ ವಕೀಲರೆಲ್ಲರೂ ಒಟ್ಟಾಗಿ ಅವರಕೋರ್ಟಿಗೆ ಬಹಿಷ್ಕಾರಹಾಕಿರುವರಂತೆ!

ಕನ್ನಡ ಉಪನ್ಯಾಸಗಳನ್ನು ಸಂಕ್ಷಿಪ್ತವಾದ ಸಂಜ್ಞೆಗಳಿಂದ ಬರೆದುಕೊಳ್ಳುವ ಕ್ರಮವನ್ನು ರಾಜಧಾನಿಯ ಗೌರ್ನಮೆಂಟ್ ಕಮರ್ಷಿಯಲ್ ಸ್ಕೂಲಿನಲ್ಲಿ ಮುಖ್ಯತ್ವಾಗಿ ಕಲಿಸುತ್ತಾರೆಂದು ತಿಳಿದುಬಂದಿದೆ.

ಚಾಮರಾಜನಗರದಲ್ಲಿ ಉಪ್ಪಾರರಿಗೂ ಮುಸಲ್ಮಾನರಿಗೂ ಹೊಡೆದಾಟವಾಯಿತು. ಮುಸಲ್ಮಾನನೊಬ್ಬನು ಒಬ್ಬ ಉಪ್ಪಾರ ಹುಡುಗಿಯನ್ನು ಎತ್ತಿಕೊಂಡುಹೋದದ್ದೇ ಇದಕ್ಕೆ ಕಾರಣವೆಂದು "ಡೇಲಿಪೋಸ್ಟ್" ನಿಂದ ತಿಳಿದುಬರುತ್ತದೆ.

ಚಾಮರಾಜನಗರದ ತಾಲೂಕು ಬದನವಾಳಗ್ರಾಮದಲ್ಲಿ ತಯಾರಾಗುವ ಖಾದಿಬಟ್ಟೆಗಳನ್ನು ಸರ್ಕಾರಿ ಕೋರ್ಟುಕಛೇರಿಗಳಲ್ಲಿರುವ ಕಡಿಮೆಸಂಬಳದ ನೌಕರರ ಉಡುಪಿಗೂ ಆಸ್ಪತ್ರೆಗಳಲ್ಲಿ ಹಾಸಿಗೆ, ಹೊದ್ದಿಕೆ ಮುಂತಾದ್ದಕ್ಕೂ ಉಪಯೋಗಿಸತಕ್ಕದ್ದೆಂದು ಗೌರ್ನಮೆಂಟಿನವರು ಆರ್ಡರುಮಾಡಿರುತ್ತಾರೆ.

ರಾಜಧಾನಿಯಲ್ಲಿರುವ ಅರಮನೆ ಸಮುಖದ ವಿದ್ವಾಂಸರಾದ ಖಾಸಾ ಜ್ಯೋತಿಷ್ ವೇ|| ಗೋಮಠಂ ಶ್ರೀನಿವಾಸ ಜೋಯಿಸರು ಶ್ರೀಮನ್ ಮಹಾರಾಜರವರ ಸಂಸ್ಕೃತಕಾಲೇಜಿಗೆ ವಿದ್ಯಾರ್ಥಿ ಬಹುಮಾನದ ನಿಧಿಗಾಗಿ 1,000 ರೂಪಾಯಿಗಳನ್ನೂ, ರಾಜಧಾನಿಯ ಒಂದು ಆಂಗ್ಲೇಯ ವಿದ್ಯಾಶಾಲೆಯ ಕಟ್ಟಡಕ್ಕಾಗಿ 4,000 ರೂಪಾಯಿಗಳನ್ನು ದಾನಮಾಡಿದರು. ಸ್ತುತ್ಯ!

ಕಳೆದ ಭಾನುವಾರ ರಾಜಧಾನಿಯ ಗೌರ್ನಮೆಂಟು ಹೈಸ್ಕೂಲಿನಲ್ಲಿ ಸೆಷನ್ಸ್-ಜಡ್ಜರಾದ ಶ್ರೀ ಕೆ. ಶಂಕರನಾರಾಯಣರಾಯರ ಅಧ್ಯಕ್ಷತೆಯಲ್ಲಿ ಒಂದು ಕೂಟವು ನಡೆಯಿತು. ಮಿ|| ಬಿ. ನರಸಿಂಹಮೂರ್ತಿರಾಯರು ಆಬಾಲವೃದ್ಧರಾದಿಯಾಗಿ ಸ್ತ್ರೀಪುರುಷರೆಲ್ಲರೂ ಸೂರ್ಯನಮಸ್ಕಾರವನ್ನು ಯಥಾವಿಧಿಯಾಗಿ ಅಭ್ಯಾಸಮಾಡುವುದರಿಂದ ಕಾಯಪುಷ್ಟಿಯೂ ದೀರ್ಘಾಯುಷ್ಯವೂ ಲಭಿಸುವದೆಂದೂ ದೀರ್ಘವಾದ ಭಾಷಣಮಾಡಿದರು. 12 ಜನರು ಸೂರ್ಯನಮಸ್ಕಾರವನ್ನು ಪ್ರದರ್ಶನ ಮಾಡಿತೋರಿಸಿದರು. ಕಡೆಯಲ್ಲಿ ಅಧ್ಯಕ್ಷರು ಈ ನಮಸ್ಕಾರಗಳ ಮಹತ್ವವನ್ನು ಹೊಗಳಿ ಸರ್ವರೂ ಇದನ್ನು ಆಚರಿಸುವುದರಿಂದ ಐಹಿಕಾಮುಷ್ಮಿಕ ಫಲಗಳನ್ನು ಸುಲಭವಾಗಿ ಹೊಂದುವರೆಂದು ಹೇಳಿದರು.

ಮ|| ರಾ|| ತಗಡೂರು ರಾಮಚಂದ್ರರಾಯರೆಂಬುವರು ಸರ್ಕಾರಿ ಅಪ್ಪಣೆಗೆ ವಿರುದ್ಧವಾಗಿ "ಕಣಿಯರ ಪತ್ರಿಕೆ" ಯನ್ನು ಹೊರಡಿಸುತ್ತಿರುವನೂ, ಅವರು ಪತ್ರಿಕೆಯನ್ನು ಹೊರಡಿಸಿದಾಗಲೆಲ್ಲ ಪೋಲೀಸಿನವರು ಪತ್ರಿಕೆಗಳನ್ನೂ ಅವರ ಮುದ್ರಣಾಲಯವನ್ನೂ ಮುಟ್ಟಿಕೋಲು ಹಾಕಿಕೊಳ್ಳುತ್ತಿರುವದೂ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ! ಈ ತಿಂಗಳು 18 ನೆಯ ತಾರೀಖಿನ ದಿವಸ ಮ|| ತಗಡೂರು ರಾಮಚಂದ್ರರಾಯರು ಕೈಯಲ್ಲಿ ಬರೆದ "ಕಣಿಯರ ಪತ್ರಿಕೆ" ಯ ಪ್ರತಿಗಳನ್ನು ಬೆಂಗಳೂರು ಚಿಕ್ಕಪೇಟೆಯಲ್ಲಿ ಹಂಚಲಾರಂಭಿಸಿದರು. ಸುಮಾರು 20 ಜನ ಪೋಲೀಸಿನವರು ರಿವಾಲ್ವರು ಬಂದೂಕಗಳ ಸಮೇತ ಬಂದು ಪತ್ರಿಕೆಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ಪೋಲೀಸಿನವರು "ಪತ್ರಿಕೆಗಳನ್ನು ಮುದ್ರಿಸಿದ ಪ್ರೆಸ್ ಎಲ್ಲಿ?" ಎಂದು

ಕೇಳಿದಾಗ ಮ|| ರಾಮಚಂದ್ರರಾಯರು ತಮ್ಮ ಕೈಗಳನ್ನು ತೋರಿಸಿ, "ಇದನ್ನು ಮುಟ್ಟುಕೋಲು ಹಾಕಿಕೊಳ್ಳಿ" ಎಂದರಂತೆ!

ಈಗ್ಗೆ ಕೆಲವು ದಿವಸಗಳ ಹಿಂದೆ ಹೊಳೇನರಸೀಪುರದಲ್ಲಿ ಒಂದು ವಿಚಿತ್ರವಾದ ಕಳ್ಳತನವು ನಡೆಯಿತು. ವೈಶ್ಯರ ವಿಧವೆಯೊಬ್ಬಳು ಮನೆಯ ಹಿಂಭಾಗದ ಭಾವಿಯಲ್ಲಿ ಮಧ್ಯಾಹ್ನ ಸುಮಾರು 1 ಗಂಟೆಯಲ್ಲಿ ನೀರು ಸೇದುವದಕ್ಕೆ ಹೋಗಲು, ಯಾವನೋ ಒಬ್ಬನು "ನಿಮ್ಮ ದೇವರಿಗೆ ಹಣ್ಣು ಕಾಯಿ ಮಾಡಿಸಬೇಕು. ಪೂಜಾರಯ್ಯ ಇದ್ದಾರೋ?" ಎಂದು ಸ್ವಲ್ಪ ಮಾತನಾಡಿ, ಕೂಡಲೇ ಆಕೆಯನ್ನು ಕೆಳಕ್ಕೆ ಕೆಡವಿ ಮೈಮೇಲಿದ್ದ ಕೆಲವು ಒಡವೆಗಳನ್ನು ಕಿತ್ತುಕೊಂಡು ಪರಾರಿಯಾದನು. ಆ ಹೆಂಗಸು ಕೂಗಿಕೊಂಡು ಹೊರಕ್ಕೆ ಬರಲು, ಬೈಸಿಕಲ್‌ಮೇಲೆ ಬರುತ್ತಿದ್ದ ಕಂಟ್ರಾಕ್ಟರ್ ಮಿ|| ಆಗಾಖಾನ್ ಸಾಹೇಬರೆಂಬುವರು ಇದನ್ನು ಕೇಳಿ ಸಂದುಗೊಂದುಗಳಲ್ಲಿ ನುಗ್ಗಿ ಓಡಿಹೋಗುತ್ತಿದ್ದ ಕಳ್ಳನನ್ನು ಹಿಡಿದರು. ಆದರೆ ಅವನನ್ನು ಶೋಧಿಸುವಲ್ಲಿ ಯಾವ ಒಡವೆಯೂ ಅವನಲ್ಲಿರಲಿಲ್ಲ. ಕಳ್ಳನು ಯಕ್ಷಿಣಿ ಬಲ್ಲವನೆಂದು ಎಲ್ಲರೂ ಊಹಿಸಿದರು. ಪೋಲೀಸರು ಎಷ್ಟೇ ಪ್ರಯತ್ನಪಟ್ಟರೂ ಮಾಲು ಪತ್ತೆಯಾಗಲಿಲ್ಲ. ಕಡೆಗೆ ಮಿ|| ಆಗಾಖಾನ್ ಸಾಹೇಬರೇ ಕಳ್ಳನನ್ನು ಕರೆದುಕೊಂಡು ಹೋಗಿ ಉಪಾಯವಾದ ಮಾತುಗಳಿಂದಲೇ ತಿಪ್ಪೆಯಲ್ಲಿ ಮುಚ್ಚಿಟ್ಟಿದ್ದ ಒಡವೆಗಳನ್ನು ತೆಗೆಯಿಸಿದರು.

ವರ್ತಮಾನಸಂಗ್ರಹ.

ಕಳೆದ 19 ನೆಯ ತಾರೀಖಿನ ದಿವಸ ಮುರಗೋಡ, ಸವದತ್ತಿ ಮುಂತಾದ ಸ್ಥಳಗಳಲ್ಲಿ ಭೂಮಿಯು ನಡುಗಿತಂತೆ!

ಮಿ|| ಗೌಬಾರ ಎಂಬುವರು ಅಮೇರಿಕಾದಲ್ಲಿ 100 ಕ್ಕೆ 87 ಜನ ಸ್ತ್ರೀಯರು ವ್ಯಭಿಚಾರಿಗಳೆಂದು ಬರೆದಿರುವರಂತೆ!

ಪಂಜಾಬಿನಲ್ಲಿ ಪ್ರತಿ ಸಾವಿರ ಜನಗಳಿಗೆ ಒಬ್ಬರಂತೆ ಸೆರೆಮನೆಯಲ್ಲಿರುವರು. ಸೆರೆಮನೆಗೆ ವರ್ಷಕ್ಕೆ 32 ಲಕ್ಷ ರೂಪಾಯಿಗಳು ಖರ್ಚು!

ಚೀನಾದೇಶದ ಒಂದು ಪಟ್ಟಣದಲ್ಲಿ ಒಂದು ಭಾರೀ ಸಿಡಿಮದ್ದಿನ ಕಾರ್ಖಾನೆಗೆ ಬೆಂಕಿಬಿದ್ದು ಸಾವಿರಾರು ಜನರು ಮೃತ್ಯುವಶರಾದರು.

ದಿಲ್ಲಿಯಲ್ಲಿ ಒಬ್ಬನು ತನ್ನ ಮಗಳನ್ನು ಅವಳ ಗಂಡನ ಮನೆಯಿಂದ ಕರತಂದು ವಿಧವೆಯೆಂದು ಹೇಳಿ ಮತ್ತೊಬ್ಬನಿಗೆ 200 ರೂಪಾಯಿಗಳಿಗೆ ಮಾರಿದನಂತೆ!

ಲಂಡನ್ನಿನಿಂದ ಜರ್ಮನಿಯ ಮುಖ್ಯಪಟ್ಟಣವಾದ ಬರ್ಲಿನ್ನಿಗೆ ಚಿತ್ರಗಳನ್ನೂ ಫೋಟೋಗ್ರಾಫ್‌ಗಳನ್ನೂ ಟೆಲಿಗ್ರಾಫ್ ಮೂಲಕ ರವಾನಿಸುವ ಏರ್ಪಾಡು ನಡೆಯುತ್ತಿರುವುದು.

ಫ್ಲೋರಿಡಾ ಸಂಸ್ಥಾನದಲ್ಲಿ ಎರಡೇ ವಾರಗಳಲ್ಲಿ 22 ಬ್ಯಾಂಕುಗಳು ದಿವಾಳಿಯಾಗಿರುವವಂತೆ! ಈ ಬ್ಯಾಂಕುಗಳಲ್ಲಿ ಒಟ್ಟು 7,00,00,000 ರೂಪಾಯಿಗಳು ಮಾಯವಾಗಿರುವವಂತೆ!

ಪ್ರಪಂಚದಲ್ಲಿ ಸುಮಾರು 2,500 ಭಾಷೆಗಳಿರುವುವು. 61[illegible] ಭಾಷೆಗಳಿಗೆ ಬೈಬಲ್ಲನ್ನು ಭಾಷಾಂತರಮಾಡಿರುವರಂತೆ! ಕಳೆದ ವರ್ಷ 11,399,540 ಬೈಬಲ್ಲಿನ ಪ್ರತಿಗಳನ್ನು ಹಂಚಿದರಂತೆ!

ನಾಗಪುರದ ಸರ್. ಗಂಗಾಧರರಾಯ ಚಿಟಣೀಸರು ನಾಗಪುರ ವಿಶ್ವವಿದ್ಯಾನಿಲಯಕ್ಕೆ 40,000 ರೂಪಾಯಿಗಳನ್ನೂ 25,000 ರೂಪಾಯಿ ಬೆಲೆಬಾಳುವ ತಮ್ಮ ಗ್ರಂಥನಿಲಯವನ್ನೂ ಸಮರ್ಪಿಸಿದರು. ಸ್ತುತ್ಯ!

ಕಲ್ಕತ್ತೆಯಲ್ಲಿ ದಿಲೀಪ್‌ಬುಜ ಸರ್ಕಾರ್ ಎಂಬಾತನು ತನ್ನ ಮಕ್ಕಳು ವಿದ್ಯಾಭ್ಯಾಸಂಗ ಮಾಡದೆ ಇದ್ದುದರಿಂದ ಅವರಿಗೆ ಬುದ್ಧಿ ಕಲಿಸಬೇಕೆಂದು ತಾನೇ ವ್ಯಾಸಂಗಮಾಡಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂತು ತೇರ್ಗಡೆ ಹೊಂದಿದನಂತೆ! ಅವನ ವಯಸ್ಸು 54!

ಪ್ರತಿವರ್ಷವೂ ಭಾರತೀಯರಿಗೂ ಯೂರೋಪಿಯನರಿಗೂ ಫುಟ್‌ಬಾಲ್ ಪಂದ್ಯವು ನಡೆಯುವದು. 1921, 1924, 1925, 1926, 1927 ಈ ವರ್ಷಗಳಲ್ಲೆಲ್ಲಾ ಭಾರತೀಯರೇ ಗೆದ್ದರು. ಹೋದವರ್ಷ ಸೋತರು. ಆದರೆ ಪುನಃ ಈ ವರ್ಷ ಭಾರತೀಯರೇ ಗೆದ್ದರು.

ಹಿಮಾಲಯದ ಪರ್ವತ ಪ್ರದೇಶಗಳಲ್ಲಿ ಅಲ್ಲಲ್ಲಿ ಸಂಚರಿಸಿ ಶೋಧನೆಗಳನ್ನು ನಡೆಯಿಸುವದಕ್ಕಾಗಿ ಜರ್ಮನಿಯಿಂದ ಹೆರೂಪಾಲ್ ಬಾವುರು ಎಂಬುವರು ಕಲ್ಕತ್ತೆಗೆ ಬಂದಿಳಿದಿರುವರು. ಇವರ ಉದ್ದೇಶಕ್ಕೆ ಇಂಡಿಯಾ ಮತ್ತು ಸಿಕ್ಕಿಂ ಸರಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

1926 ನೆಯ ಇಸವಿಯಲ್ಲಿ ಪರದೇಶದಿಂದ ಇಂಡಿಯಾಕ್ಕೆ 159 ಕೋಟಿ ಗಜ ಬಟ್ಟೆಯು ಬಂದಿತು. ಅದರಲ್ಲಿ 156 ಕೋಟಿ ಗಜ ಬಟ್ಟೆಯು ಇಂಗ್ಲೆಂಡಿನಿಂದ ಬಂದಿತು. 1927-28 ರಲ್ಲಿ 70 ಕೋಟಿ ರೂಪಾಯಿಗಳ ಬಟ್ಟೆಯು ಬಂದಿತು. ಅದರಲ್ಲಿ ಇಂಗ್ಲೆಂಡಿನಿಂದ ಬಂದದ್ದು 65 ಕೋಟಿ!

ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಪ್ರತಿವರ್ಷವೂ 12,000 ಜನರು ಕೊಲ್ಲಲ್ಪಡುವರಂತೆ! ಅಂದರೆ ಇದು ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ ಮತ್ತು ಜಪಾನ್ ರಾಜ್ಯಗಳಿಗಿಂತ 50 ಪಾಲು ಹೆಚ್ಚಾಯಿತು. ಈ ಕೊಲೆಗಳನ್ನು ಪತ್ತೆಮಾಡಲು ಅಮೆರಿಕಾ ಸರಕಾರವು ಪ್ರತಿವರ್ಷವೂ 40,00,00,00,000 ರೂಪಾಯಿಗಳನ್ನು ವೆಚ್ಚಮಾಡುವದಂತೆ!

ಲಂಡನ್ನಿನಲ್ಲಿ ನೀರಿನ ಕ್ಷಾಮವು ತಲೆದೋರುವ ಚಿಹ್ನೆಗಳು ಕಂಡುಬರುತ್ತಿವೆ. ಅಲ್ಲಲ್ಲಿ ನೀರನ್ನು ಶೇಖರಿಸಿದ್ದ ಕೆರೆಗಳಲ್ಲಿ ನೀರು ತೀರಾ ಕಡಿಮೆಯಾಗಿ ಸರಕಾರದವರು ಮೋಟಾರುಗಳನ್ನು ತೊಳೆಯುವದಕ್ಕೂ ಹೂತೋಟಗಳಿಗೂ ನೀರನ್ನು ಉಪಯೋಗಿಸಕೂಡದೆಂದು ಪ್ರಸಿದ್ಧಮಾಡಿರುವರು. ಸ್ನಾನಕ್ಕಾದರೂ ವಿಶೇಷ ನೀರನ್ನು ಉಪಯೋಗಿಸದೆ ಸ್ಪಂಜಿನ ಪ್ರಯೋಗದಿಂದ ಪೂರೈಸಿದರೆ ಉತ್ತಮವೆಂದು ಪ್ರಕಟಿಸಿರುವರು.

ಕಳೆದ 18 ನೆಯ ತಾರೀಖಿನ ದಿವಸ ಒಬ್ಬ ಇಂಗ್ಲೀಷ್ ಶಿಪಾಯಿಯು ಒಬ್ಬ ಸ್ನೇಹಿತನೊಡನೆ ಒಂದು ಚಿಕ್ಕದೋಣಿಯಲ್ಲಿ ಕುಳಿತು ಹಿಮಾಲಯ ಪರ್ವತದಲ್ಲಿ ನೈನಿಟಾಲ್ ಎಂಬಲ್ಲಿರುವ ಸರೋವರದ ಮೇಲೆ ಹೋಗುತ್ತಿದ್ದಾಗ ಆ ದೋಣಿಯು ಹೇಗೋ ಮಗುಚಿಕೊಂಡು ಶಿಪಾಯಿಯು ನೀರಿನಪಾಲಾದನು. ಆ ಸರೋವರವು ಪ್ರತಿವರ್ಷವೂ ಹೀಗೆ ಯಾರಾದರೊಬ್ಬರನ್ನು ಆಹುತಿ ತೆಗೆದುಕೊಳ್ಳದೆ ಇರದೆಂದು ಅಲ್ಲಿಯ ಜನರ ನಂಬಿಕೆ!

ಪೂರ್ವ ಅಫ್ಘಾನಿಸ್ಥಾನದ ಪ್ರಮುಖರಲ್ಲಿ ಒಬ್ಬನಾದ ಅಲಿಮಹಮದ್ ಜಾನ್ ಎಂಬುವನು ಹಬಿಬುಲ್ಲರನ್ನು ದೊರೆಯೆಂದು ಅಂಗೀಕಾರಮಾಡದೆಹೋದುದಕ್ಕಾಗಿ ಹಬೀಬುಲ್ಲರು ಅವನನ್ನು ಕೊಲ್ಲಿಸಿದರು. ಅಲ್ಲದೆ ನಾದಿರ್ಖಾನರು ಕಾಬೂಲ್ ಕಡೆಗೆ ಸೈನ್ಯವನ್ನು ತೆಗೆದುಕೊಂಡುಹೋಗಿ ಹಬೀಬುಲ್ಲರ ಸೈನ್ಯವನ್ನು ಸೋಲಿಸಿ ಜಯಶಾಲಿಗಳಾದರೆಂದೂ ಹಬೀಬುಲ್ಲರ ಕಡೆಯವರಲ್ಲಿ 600 ಶಿಪಾಯಿಗಳು ಹತರಾಗಿ ಉಳಿದವರು ಓಡಿಹೋದರೆಂದೂ ವರ್ತಮಾನಬಂದಿದೆ.

ಕಳೆದ 15 ನೇ ತಾ|| ಬೆಳಿಗಿನಝಾವದಲ್ಲಿ ಪಂಜಾಬಿಗೆ ಹೋಗುತ್ತಿದ್ದ ರೈಲ್ವೆ ಮೇಲ್ ಗಾಡಿಯು ದ್ರುಮ ಎಂಬ ಒಂದು ಚಿಕ್ಕ ಸ್ಟೇಷನ್ನಿನ ಹತ್ತಿರಕ್ಕೆ ಬರುವಷ್ಟರಲ್ಲಿ ಆ ಸ್ಟೇಷನ್ನಿನ ಅ|| ಮಾಸ್ಟರಿಗೆ ಏನೋ ಅನುಮಾನಹುಟ್ಟಿ ರೈಲನ್ನು ನಿಲ್ಲಿಸುವಂತೆ ಸಂಜ್ಞೆಮಾಡಿದನು. ಅನಂತರ ಹತ್ತಿರಕ್ಕೆಹೋಗಿ ಪರೀಕ್ಷಿಸುವಲ್ಲಿ ಯಾರೋ ದುಷ್ಟರು ಒಂದು ಕಂಬಿಯನ್ನು ಸಂಪೂರ್ಣವಾಗಿ ಕಿತ್ತುಹಾಕಿದ್ದರು. ಆಮೇಲೆ ರೈಲ್‌ಗಾಡಿಯು ಬೇರೆ ಲೈನಿನಮೇಲೆ ಮುಂದಕ್ಕೆ ಹೊರಟಿತು. ಮೇಲ್ ಗಾಡಿಯು ಆ ಸಣ್ಣ ಸ್ಟೇಷನ್ನಿನಲ್ಲಿ ನಿಲ್ಲುತ್ತಿರಲಿಲ್ಲವಾದ್ದರಿಂದ, ಸ್ಟೇಷನ್ ಮಾಸ್ಟರು ಆ ರೀತಿ ಗಾಡಿಯನ್ನು ನಿಲ್ಲಿಸದೇ ಇದ್ದಿದ್ದರೆ ಮಹಾ ಅನಾಹುತಕ್ಕೆ ಆಸ್ಪದವಾಗುತ್ತಿದ್ದಿತು.

ಬೊಂಬಾಯಿಯಲ್ಲಿ ನಡೆದ ಗಲಭೆಗಳ ವಿಚಾರಣೆಯು ಇನ್ನೂ ಮುಂದುವರಿಯುತ್ತಲಿದೆ. ಹಿಂದೂಗಳ ಕಡೆಯ ಸಾಕ್ಷಿಗಳು ಗೌರ್ನಮೆಂಟಿನವರು ಮುಸಲ್ಮಾನರ ಪಕ್ಷವನ್ನು ವಹಿಸಿರುವರೆಂದು ಅವರನ್ನು ಆಕ್ಷೇಪಿಸುತ್ತಿದ್ದಾರೆ ಮುಸಲ್ಮಾನರ ಕಡೆಯ ಸಾಕ್ಷಿಗಳು ಈ ಗಲಭೆಗಳಿಗೆ ಹಿಂದುಗಳು ಅದರಲ್ಲಿಯೂ ಆರ್ಯಸಮಾಜದವರೇ ಮುಖ್ಯಕಾರಣರೆಂದೂ ಹೇಳುತ್ತಾರೆ ಕಳೆದ 15 ನೇ ತಾರೀಖು ಸೋಮವಾರ ಶೌಕತ್ ಅಲಿಯವರು, ಹಿಂದೂ ಮಹಾಸಭೆಯವರು ಮತ್ತು ಆರ್ಯಸಮಾಜದವರೂ ಈ ಭರತಖಂಡವನ್ನು ಹಿಂದೂಗಳ ಸೀಮೆಯನ್ನಾಗಿ ಮಾಡಬೇಕೆಂದು ಉದ್ದೇಶಿಸಿರುವರೆಂದೂ, ಬೊಂಬಾಯಿನಲ್ಲಿ ನಡೆದ ಗಲಭೆಗಳಿಗೆಲ್ಲಾ ಇವರೇ ಕಾರಣರೆಂದೂ, ಗೌರ್ನಮೆಂಟಿನವರು ಹಿಂದೂಮುಸಲ್ಮಾನರಲ್ಲಿ ಶಾಂತಿಯು ನೆಲಗೊಳ್ಳುವಂತೆ ತಕ್ಕವ್ಯವಸ್ಥೆಯನ್ನು ಮಾಡದಿದ್ದರೆ ತಮ್ಮ ಸಂರಕ್ಷಣೆಯ ಉಪಾಯವನ್ನು ಮಾಡಿಕೊಳ್ಳುವಂತೆ ಮಹಮ್ಮದೀಯರಿಗೆ ಎಚ್ಚರಕೊಡುವದಾಗಿಯೂ ಹೇಳಿದರು.

ಅಮೇರಿಕದ ಟೆಲಿಗ್ರಾಫ್ ಮತ್ತು ಟೆಲಿಫೋನ್ ಕಂಪೆನಿಯವರು ತಮ್ಮ ಲಂಡನ್ ಆಫೀಸಿನಲ್ಲಿ ಪ್ರಾಮುಖ್ಯ ಪ್ರಯೋಗವೊಂದನ್ನು ಮಾಡಿ ಸರ್ವಸಾಧಾರಣ ಫೋನಿನ ಮೂಲಕ 3000 ಮೈಲು ದೂರದಲ್ಲಿನ ಅಮೆರಿಕದ ನ್ಯೂಜೆರ್ಸಿ ಎಂಬ ರಾಜ್ಯದ ಮೇಲೆ ಹಾರಾಡುತ್ತಿರುವ ವಿಮಾನದ ಚಾಲಕರೊಡನೆ ಮಾತಾಡಿರುವರು. ಇಂತಹ ಪ್ರಯೋಗಗಳು ಇಷ್ಟರವರೆಗೆ ಭೂಭಾಗಗಳಲ್ಲಿ ಹೆಚ್ಚು ದೂರವಿಲ್ಲದ ಒಂದು ವಿಮಾನದಿಂದ ಇನ್ನೊಂದು ವಿಮಾನಕ್ಕೆ ವಾರ್ತೆಕೊಡಲು ಅಥವಾ ಪಡೆಯಲು ಮಾತ್ರ ನಡೆಸಲ್ಪಡುತ್ತಿದ್ದವು. ಆದರೆ ಈ ಹೊಸ ಪ್ರಯೋಗವು ವೈರ್‌ಲೆಸ್ ಟೆಲಿಫೋನಿನ ಮೂಲಕ ಸಾಗರಾಂತರದಲ್ಲಿ ಇನ್ನೊಂದು ಭೂಖಂಡದಲ್ಲಿರುವವರೊಡನೆಯೂ ಮಾತಾಡಲು ಸಾಧ್ಯವೆಂಬುದನ್ನು ವಿದಿತಗೊಳಿಸಿರುವುದು. 20 ನಿಮಿಷಗಳ ತನಕ ನಡೆದ ಈ ಮಾತುಕಥೆಯು ಸರಿಯಾಗಿ ಕೇಳಿಬರುವದಾಗಿದ್ದಿತು. 3000 ಮೈಲು ದೂರದ ನ್ಯೂಜೆರ್ಸಿಯಲ್ಲಿ ಗಂಟೆಗೆ 100 ಮೈಲುಗಳ ವೇಗದಲ್ಲಿ ಹಾರಾಡುತ್ತಿದ್ದ ವಿಮಾನದಲ್ಲಿದ್ದು ಮಾತಾಡಿದವನ ಮಾತು ಲಂಡನ್ನಿನಲ್ಲಿ ಮಾತಾಡಿದವನಂತೆಯೇ ಸ್ಪಷ್ಟವಾಗಿ ಕೇಳಿಬಂದು ಸ್ವರಭೇದವನ್ನು ಸಹ ತಿಳಿದುಕೊಳ್ಳುವಂತಿದ್ದಿತು. ಕೆಲವುವೇಳೆ ಮಾತ್ರ ವಾತಾವರಣದ ಮಾರ್ಗಾಟ, ವಿಮಾನಯಂತ್ರಗಳ ಶಬ್ದಗಳು ಮಾತಿನ ಸರಣಿಗೆ ತೊಡಕನ್ನುಂಟುಮಾಡುತ್ತಿದ್ದುವು. ಇನ್ನು ಸ್ವಲ್ಪ ಕಾಲದನಂತರ ಉತ್ತರ ಧ್ರುವದಲ್ಲಿ ನಿಂತು ದಕ್ಷಿಣ ಧ್ರುವದಲ್ಲಿರುವವನೊಡನೆ ಮಾತಾಡುವುದೂ ಸಾಧ್ಯವಾಗಬಹುದು.

ಚೀನಾಕ್ಕೂ ರಷ್ಯಾಕ್ಕೂ ಯುದ್ಧಸಂಭವಿಸಬಹುದೆಂದು ಎಲ್ಲರೂ ಶಂಕಿಸುತ್ತಿರುವರು. ಕೆಲವು ವರುಷಗಳಿಂದಲೂ ಚೀನಾದಲ್ಲಿ ನಡೆಯುತ್ತಿದ್ದ ಯುದ್ಧಗಳ ಸಮಯದಲ್ಲಿ ರಷ್ಯಾದವರು ಚೀನಾದಲ್ಲಿಯೇ ಇದ್ದುಕೊಂಡು, ರಷ್ಯಾದಲ್ಲಿರುವ ತರಹ ಗೌರ್ನಮೆಂಟನ್ನೇ ಚೀನಾದಲ್ಲಿಯೂ ಏರ್ಪಾಡುಮಾಡುವಂತೆ ಅಲ್ಲಿಯ ಜನಗಳನ್ನು ಪ್ರೇರಿಸುತ್ತಿದ್ದರಂತೆ! ಈಗ ಚೀನಾದಲ್ಲಿ ಯುದ್ಧವು ನಿಂತಿರುವದು. ಈಗ ಅವರು ರಷ್ಯಾದವರಿಂದ ತಮ್ಮ ದೇಶದಲ್ಲಿ ಹೊಸತೊಂದರೆಗಳು ಸಂಭವಿಸಬಹುದೆಂದು ತಿಳಿದು ಅವರನ್ನೆಲ್ಲಾ ದೇಶದಿಂದ ಹೊರಡಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಚೀನಾದ ಈಶಾನ್ಯದಿಕ್ಕಿನಲ್ಲಿರುವ ಮಾಂಚೂರಿಯಾದಲ್ಲಿ ಅರ್ಧ ಚೀನಾದವರಿಗೂ ಅರ್ಧ ರಷ್ಯಾದವರಿಗೂ ಸೇರಿರುವ ಒಂದು ರೈಲ್ವೆಯು ಇರುತ್ತದೆ ಈ ರೈಲ್ವೆಯಲ್ಲಿ ಕೆಲಸಮಾಡುವ ರಷ್ಯಾದವರಿಂದ ತಮಗೆ ತೊಂದರೆಯಾಗುತ್ತಿರುವದೆಂದು ಹೇಳಿ ಅವರನ್ನು ಸೆರೆಹಿಡಿದು ರಷ್ಯಾಕ್ಕೆ ಸಾಗಕಳುಹಿಸಲು ಪ್ರಾರಂಭಿಸಿದರು. ರಷ್ಯಾದವರು ಇದಕ್ಕೆ ಆಕ್ಷೇಪಿಸಿದರು. ಇದಕ್ಕೆ ಉತ್ತರವಾಗಿ ಚೀನಾದವರು ರಷ್ಯಾದಲ್ಲಿರುವ ಚೀನಾಪ್ರಜೆಗಳಿಗೆ ಆಗಿರುವ ಅನ್ಯಾಯಗಳನ್ನು ಎತ್ತಿತೋರಿಸಿದರು. ಕಡೆಗೆ ರಷ್ಯಾಗೌರ್ನಮೆಂಟಿನವರು ಚೀನಾದಲ್ಲಿದ್ದ ತಮ್ಮ ಪ್ರತಿನಿಧಿಗಳನ್ನೆಲ್ಲಾ ಹಿಂದಕ್ಕೆ ಕರೆಯಿಸಿಕೊಂಡರು. ರಷ್ಯಾದಕಡೆಯ ಕೆಲವು ಶಿಪಾಯಿಗಳು ಚೀನಾದೇಶವನ್ನು ಪ್ರವೇಶಮಾಡಬೇಕೆಂದು ಒಂದು ನದಿಯನ್ನು ದಾಟುತ್ತಿದ್ದಾಗ ಚೀನಾದವರಿಗೂ ಇವರಿಗೂ ಹೊಡೆದಾಟವಾಗಿ ಚೀನಾದವರು ರಷ್ಯಾದವರನ್ನು ಹಿಂದಕ್ಕೆ ಅಟ್ಟಿಬಿಟ್ಟರು.

ತರೀಕೆರೆ ವೀರಶೈವ ತರುಣಸಂಘದ ಆರಂಭಮಹೋತ್ಸವ.

ತರೀಕೆರೆ ಟವನ್ ಹುಚ್ಚುಳ್ಳೀಮಠದಲ್ಲಿ ತಾ|| 4-7-1929 ರಲ್ಲಿ ವೀರಶೈವ ತರುಣಸಂಘದ ಆರಂಭಮಹೋತ್ಸವವು ತರೀಕೆರೆ ಸಬ್-ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಶ್ರೀಯುತ ಟಿ. ರಾಮಯ್ಯ. ಬಿ.ಎ. ಯವರಿಂದ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಸ್ಪೆಷಲ್ ಮ್ಯಾಜಿಸ್ಟ್ರೇಟರವರು, ಅಮಲ್ದಾರರವರು, ಮ್ಯುನಿಸಿಪಲ್ ಮೆಂಬರುಗಳು, ಡಿಸ್ಟ್ರಿಕ್ಟ್-ಬೋರ್ಡು ಮೆಂಬರುಗಳು ಮತ್ತು ಇತರ ದೊಡ್ಡ ಮನುಷ್ಯರುಗಳೂ ಸಹ ದಯಮಾಡಿಸಿದ್ದರು. ಸಬ್-ಡಿವಿಜನ್ ಆಫೀಸರವರು ಆದಿನ ಸಾಯಂಕಾಲ ಹುಚ್ಚುಳ್ಳೀಮಠದಲ್ಲಿ ತಳಿರು ತೋರಣಗಳಿಂದಲೂ ಮತ್ತು ಚಿತ್ರಪಟಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಸಭಾಮಂಟಪಕ್ಕೆ ವಾದ್ಯಘೋಷಗಳೊಡನೆ ದಯಮಾಡಿಸಿದರು. ತರುಣರಿಂದ ದೇವತಾಪ್ರಾರ್ಥನೆಯಾದನಂತರ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರರು ಆಶೀರ್ವದಿಸಿ ಕಳುಹಿಸಿದ್ದ ನಿರೂಪವನ್ನು ಅಧ್ಯಕ್ಷರ ಸೂಚನೆಯಂತೆ ಸಂಘದ ಉಪಾಧ್ಯಕ್ಷರಾದ ಶ್ರೀಯುತ ಟಿ. ಬಸಪ್ಪನವರು ಓದಿದಕೂಡಲೆ ಸಭಿಕರೆಲ್ಲರೂ ಸಂತೋಷದಿಂದ ಕರತಾಡನಮಾಡಿದರು. ಚಿ|| ಸೌ|| ರಂಗನಾಯ್ಕಮ್ಮ ಎಂಬ ಬಾಲಕಿಯಿಂದ ಇಂಪಾದ ವೀಣೆಯ ಸಂಗೀತವು ನಡೆದಮೇಲೆ ಇಬ್ಬರು ತರುಣರು "ಅಂಗಸಾಧನ" ಮತ್ತು "ಪುಸ್ತಕಭಂಡಾರ" ಎಂಬ ವಿಷಯಗಳ ಮೇಲೆ ಸ್ವಾರಸ್ಯವಾದ ಪ್ರಬಂಧಗಳನ್ನು ಓದಿದರು. ಅನಂತರ ಸಂಘದರಿಪೋರ್ಟು ಸಂಘದ ಉಪಾಧ್ಯಕ್ಷರಿಂದ ಓದಲ್ಪಟ್ಟಿತು.

ರಿಪೋರ್ಟಿನ ಸಾರಾಂಶ—ಮಲೆನಾಡಿನಲ್ಲಿರುವ ವೀರಶೈವ ಸಮಾಜವು ವಿದ್ಯೆಯಲ್ಲಿಯೂ ದೇಹಧಾರ್ಢ್ಯದಲ್ಲಿಯೂ ಬಹಳ ಹೀನಸ್ಥಿತಿಗೆ ಬಂದಿರುವುದರ ಕಾರಣಗಳು; ಸಮಾಜವು ಅಭಿವೃದ್ಧಿಗೆ ಬರಬೇಕಾದರೆ ತರುಣಸಂಘಗಳ ಸ್ಥಾಪನೆ, ಮಾನಸಿಕ, ನೈತಿಕ, ಸಮಾಜಸುಧಾರಣೆ ಇವುಗಳಲ್ಲಿ ತರುಣರನ್ನು ಅಭಿವೃದ್ಧಿಗೊಳಿಸುವುದೇ ಈ ಸಂಘದ ಮುಖ್ಯೋದ್ದೇಶಗಳು. ಆರಂಭಮಹೋತ್ಸವವನ್ನು ಸಬ್‌ಡಿವಿಜನ್ ಆಫೀಸರವರು ತಮ್ಮ ಅಮೃತಹಸ್ತದಿಂದ ನೆರವೇರಿಸಿದ್ದಕ್ಕೋಸ್ಕರ ಸಂಘದವರು ವಂದನೆಗಳನ್ನು ಅರ್ಪಿಸಿದ ವಿಷಯ. ಎಷಯ ಪೂರ್ತಿಯಾದಕೂಡಲೆ ಅಧ್ಯಕ್ಷರು ಸಮಯೋಚಿತವಾದ ಭಾಷಣವನ್ನು ಮಾಡಿದರು.

ಭಾಷಣದ ಸಾರಾಂಶ.—ಪ್ರತಿಯೊಂದು ಕೋಮಿನವರೂ ಇಂತಹ ಸಂಘಗಳನ್ನು ಮಾಡಿಕೊಳ್ಳುವುದು ಅತ್ಯಾವಶ್ಯಕ. ವೀರಶೈವರು ಮೈದಾನಪ್ರದೇಶದಲ್ಲಿ ಬಹಳ ಮುಂದುವರಿದಿರುವರು. ಮಲೆನಾಡಿನಲ್ಲಿ ಅಷ್ಟು ಮುಂದುವರಿದಿಲ್ಲ. ವೀರಶೈವಕವಿಗಳು ಹಿಂದೆ ಅನೇಕ ಗ್ರಂಥಗಳನ್ನು ಕನ್ನಡ ಸಂಸ್ಕೃತದಲ್ಲಿ ಬರೆದಿರುವುದು, ಭಾಷಾಂತರಮಾಡಿರುವುದು. ಇದಕ್ಕೆ ನಿದರ್ಶನವಾಗಿ ಅನೇಕಜನ ಕವಿಗಳು ಬರೆದಿಟ್ಟಿರುವ ಗ್ರಂಥಗಳು. ಈ ಸಂಘದ ಮುಖ್ಯೋದ್ದೇಶಗಳನ್ನು ಶ್ಲಾಘನೆಮಾಡಿ ಅನಂತರ ಸಂಘದವರು ಎಲ್ಲಾ ಮತಗಳಲ್ಲಿಯೂ ಪರಸ್ಪರ ಸಹೋದರಭಾವವನ್ನುಂಟುಮಾಡಬೇಕು. ಕನ್ನಡ ಸಂಸ್ಕೃತ ಭಾಷೆಗಳಿಗೆ ಹೆಚ್ಚು ಗಮನ ಕೊಡಬೇಕು. ಈ ಸಂಘವು ಆಚಂದ್ರಾರ್ಕವಾಗಿ ರೂಢಿಗೆ ಬಂದು ಸಮಾಜ ಹಾಗೂ ದೇಶಸೇವೆಯನ್ನು ಮಾಡಲೆಂದು ಹಾರೈಸಿ ಆರಂಭಮಹೋತ್ಸವವನ್ನು ಸಾಂಗವಾಗಿ ನೆರವೇರಿಸಿದರು. ಅಧ್ಯಕ್ಷರಿಗೂ ಮತ್ತು ಮಹಾಜನಗಳಿಗೂ ಹಾರತುರಾಯಿ ತಾಂಬೂಲಗಳಾದನಂತರ ತರುಣಸಂಘದ ಅಧ್ಯಕ್ಷರಾದ ಶ್ರೀಯುತ ಸಿ. ಮಲ್ಲಪ್ಪನವರು ಅಧ್ಯಕ್ಷರಿಗೂ ನೆರೆದಿದ್ದ ಮಹನೀಯರುಗಳಿಗೂ ಆರಂಭಮಹೋತ್ಸವವನ್ನು ಸಾಂಗವಾಗಿ ನೆರವೇರಿಸಿಕೊಟ್ಟದ್ದಕ್ಕೆ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಿದರು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ, ಯುವರಾಜರವರಿಗೂ, ರಾಜಕುಟುಂಬದವರಿಗೂ ಶ್ರೀಯಃಪ್ರಾರ್ಥನೆಯನ್ನು ಮಾಡಿದನಂತರ ಸಭೆಯು ಮುಕ್ತಾಯಗೊಂಡಿತು.

ಟಿ. ಎಲ್. ಸಿದ್ದಪ್ಪ ಕಾರ್ಯದರ್ಶಿ.

ಗುರುಪ್ರಭಾವ

ಭರತಖಂಡದಲ್ಲಿರತಕ್ಕ ಸರ್ವಮತಸ್ಥಾಪಕರಾದ ಗುರುಗಳು ತಮ್ಮ ತಮ್ಮ ಮತದ ಧರ್ಮಕಾರ್ಯಗಳನ್ನು ಸರಿಯಾಗಿ ಪರಿಪಾಲಿಸುತ್ತಾ ಶಿಷ್ಯಕೋಟಿಯನ್ನುದ್ಧಾರಮಾಡುವದು ಆದ್ಯಕರ್ತವ್ಯವಾಗಿರುತ್ತದೆಂಬುದು ಸರ್ವರಿಗೂ ಗೊತ್ತಾಗಿರುತ್ತದೆ. ಆದರೆ ಅದರಂತೆ ವರ್ತಿಸುವದು ಬಹು ಕಷ್ಟಕರವಾದುದು. 'ನಗುರೋರಧಿಕಂ ನಾಸ್ತಿ ತತ್ವಂ ಗುರೋಃ ಪರಂ' ಇತ್ಯಾದಿ ವೇದವಾಕ್ಯಗಳು 'ಶಿವೇ ಕ್ರುದ್ಧೇ ಗುರುಸ್ತ್ರಾತಾ ಗುರೌ ಕ್ರುದ್ಧೇ ನಕಶ್ಚನ' ಇತ್ಯಾದಿ ಶಿವಾಗಮ ವಾಕ್ಯಗಳು "ಹರಮುನಿದರೆ ಗುರು ಕಾಯ್ವನು" ಇತ್ಯಾದಿ ಮಹನೀಯರ ವಾಕ್ಯಗಳು ಗುರುವಿನಮಹತ್ವವನ್ನು ವಿಶೇಷವಾಗಿ ಕೊಂಡಾಡುತ್ತಿರುವವು. ದೇವದಾನವ ಮಾನವಾದಿಗಳೆಲ್ಲ ಗುರುಸೇವೆ, ಗುರುಪೂಜೆ, ಗುರುಧ್ಯಾನಾದಿಗಳಿಂದಲೇ ಧನ್ಯರಾಗುತ್ತಾರೆ. ಗುರುಕೃಪೆಯಿಲ್ಲದೆ ಜಗತ್ತಿನಲ್ಲಿ ಯಾರಿಗೂ ಮೋಕ್ಷವು ಲಭಿಸಲಾರದು. ಹೀಗಿದ್ದರೂ ಈ ವಿಷಯವನ್ನು ಕೆಲವು ಜನರು ಲಕ್ಷ್ಯಕ್ಕೆ ತಾರದೆ ಧರ್ಮಶಾಸ್ತ್ರಕ್ಕೆ ವಿರೋಧವಾಗಿ ಹಂಗದಗಳನ್ನು ಎಬ್ಬಿಸುತ್ತಾ ತಿರುಗುತ್ತಿರುವರು. ಅವರ ಪಾಪಕ್ಕೆ ಸ್ಥಳವೇ ಇಲ್ಲದಂತಾಗುತ್ತದೆ.

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ । ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ ಕೃಪಾ ॥

ಮೇಲಿನವಾಕ್ಯಗಳು ಗುರುಶ್ರೇಷ್ಠತ್ವವನ್ನು ಕೊಂಡಾಡುತ್ತವೆ. ಅದ್ದರಿಂದ ಮುಕ್ತಿಮಾರ್ಗಕ್ಕೆ ಗುರುವೇ ಮೂಲಾಧಾರನು. ಗುರುವಿನ ಪರಿವೆಯಿಲ್ಲದೆ ತಿರುಗುವ ಮಹಾಶಯರೇ? ಇತ್ತ ಲಕ್ಷ್ಯಗೊಡಿರಿ! ವೀರಶೈವ ಮತಕ್ಕೆ ಅಷ್ಟಾವರಣಗಳೇ ಮುಖ್ಯ ಬೀಜಗಳಾಗಿರುತ್ತವೆ. ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಹೊಟಗಿ ಗುರುಗಳು ತಮ್ಮ ಶಿಷ್ಯರಾದ ಮ|| ರಾ|| ಸಾಯಬಣ್ಣಪ್ಪನವರು ಸಾವಕಾರ ಬರೂರ ಡಿ|| ಸೋಲಾಪೂರ ಇವರ ಮನೆಯಲ್ಲಿ ಮಂಗಲಕಾರ್ಯವಿದ್ದ ಮೂಲಕ ದಯಮಾಡಿಸಿದ್ದರು. ಕಾರ್ಯದ ವೈಭವವು ಮೂರು ದಿವಸಗಳವರೆಗೆ ಅತಿ ರಮಣೀಯವಾಗಿ ನಡೆಯಿತು. ಬೇರೆ ಬೇರೆ ಊರುಗಳ ಬಹಳ ಜನರು ಕೂಡಿದ್ದರು. ಲಗ್ನದ ಮಂಟಪವು ಅತಿ ವಿಸ್ತಾರವಾಗಿಯೂ ಸುಂದರವಾಗಿಯೂ ರಚಿಸಲ್ಪಟ್ಟಿತ್ತು. ನೋಡುವವರಿಗೆ ಅತಿ ಆನಂದವನ್ನುಂಟುಮಾಡುತ್ತಿತ್ತು. ಲಗ್ನದಕಾರ್ಯವು ಒಳ್ಳೆ ವೈಭವದಿಂದ ಜರಗಿತು. ದೇವಕಾರ್ಯದ ದಿವಸ ಶ್ರೀಗಳವರ ಅಧ್ಯಕ್ಷತೆಯಲ್ಲಿ ಧರ್ಮದ ಬಗ್ಗೆ ಒಂದು ಸಭೆಯು ಜರುಗಿತು. ಅಧ್ಯಕ್ಷರು ಈಗ ವೀರಶೈವರಲ್ಲಿ ವಿಚಾರಹೀನರು ಆಚರಿಸುವ ಕೆಟ್ಟ ಪದ್ಧತಿಗಳನ್ನು ಹೊಡೆದೋಡಿಸುವ ಸಲುವಾಗಿ ಅನೇಕ ಉದಾಹರಣೆಗಳನ್ನು ಕೊಟ್ಟು, ಅತಿ ವಿಸ್ತಾರವಾಗಿ ಜನರಮೇಲೆ ಒಳ್ಳೆ ಪರಿಣಾಮವಾಗುವ ಹಾಗೆ ತಿಳಿಸಿ ಹೇಳಿದರು. ಮತ್ತು ಅಷ್ಟಾವರಣಗಳ ಮಹತ್ವವನ್ನು ಜನರಿಗೆ ತಿಳಿಸಿ ಹೇಳಿ ಅದರಂತೆ ನಡೆಯುತಕ್ಕ ಕೆಲವು ಜನರು ಪೂರ್ಣ ಮನಸ್ಸಿನಿಂದ ಒಪ್ಪಿದರು. ಮ|| ರಾ|| ಬಸಪ್ಪ ಬಿರಾದಾರ ಹತ್ತರಸಂಗಿ ಇವರು ಕೆಲವು ಪ್ರಶ್ನೆಗಳನ್ನು ಕೇಳಿದರು. ಇವುಗಳ ಬಗ್ಗೆ ಶ್ರೀಗಳವರು ಸರಿಯಾಗಿ ಉತ್ತರವನ್ನು ಹೇಳಿದರು. ಮಿ|| ದೊಡ್ಡಯ್ಯ ಕರಜಗಿ ಇವರು ದುಷ್ಟಚಟಗಳನ್ನು ಜನರಿಂದ ಹೊಡೆದೋಡಿಸುವ ಸಲುವಾಗಿ ನಾನಾತರದ ಉದಾಹರಣೆಗಳನ್ನು ಕೊಟ್ಟು ಹೇಳಿದರು. ಶ್ರೀಗಳವರು ಇನ್ನು ಬಾಲ್ಯಾವಸ್ಥೆಯಲ್ಲಿದ್ದರೂ ಇವರು ಮಾಡುವ ಉತ್ತಮ ಕೃತ್ಯಗಳನ್ನು ನೋಡಿದರೆ ಪ್ರತಿಯೊಬ್ಬನಿಗೆ ಆನಂದವಾಗದೆ ಇರದು. ಹಗಲಿರುಳು ಸಮಾಜಸೇವೆಯಲ್ಲಿಯೇ ಮಗ್ನರಾಗಿರುತ್ತಾರೆ. ಸ್ವಗ್ರಾಮದಲ್ಲಿ ಅನೇಕ ತರಹದ ಸುಧಾರಣೆಗಳನ್ನು ನಡೆಯಿಸಿದ್ದಾರೆ. ಇವರಿಗೆ ಪರಮೇಶ್ವರನು ಸದಾ ಇದೇ ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಚಂದ್ರಶೇಖರಯ್ಯ ರಾಚಯ್ಯ ಹಿರೇಮಠ ದೇವರಬಗಿ.

ಕೊಪ್ಪಳ ವೀರಶೈವಬಂಧುಗಳೇ ಧರ್ಮದ ಕಡೆಗೆ ಲಕ್ಷ್ಯಗೊಡಿರಿ?

ನಿಜಾಮಕೊಪ್ಪಳದಲ್ಲಿ ವೀರಶೈವ ಸಂಖ್ಯೆಯು ೨|| ಸಾವಿರಕ್ಕಿಂತ ಹೆಚ್ಚಿರಬಹುದು. ಈ ಜಿಲ್ಲೆಯ ಹಳ್ಳಿಗಳಲ್ಲಿ ಜನಸಂಖ್ಯೆಯು ಅತ್ಯಲ್ಪವಿದ್ದರೂ ಸಹ ಜಯಂತಿಗಳನ್ನು ಬಹುವೈಭವದಿಂದ ಮಾಡಿದರು. ಬರೇ ವೀರಶೈವರೇ ಅಲ್ಲ! ಇಲ್ಲಿಯ ಕುರುಬ ಕುಂಬಾರ ಮುಂತಾದವರೂ ಸಹ ಉಚ್ಚಕುಲದವರನ್ನು ನಾಚಿಸಲಿವಂತೆ ಅತಿ ಹುರುಪಿನಿಂದಲೂ ಭಕ್ತಿಯಿಂದಲೂ ಮೆರವಣಿಗೆಯನ್ನು ತೆಗೆದು ತಮ್ಮಲ್ಲಿರುವ ಭಕ್ತಿಯನ್ನೂ ಪ್ರೇಮವನ್ನೂ ವ್ಯಕ್ತಗೊಳಿಸಿದರು. ಆದರೆ ಉಚ್ಚಕುಲದವರೆನಿಸುವ ವೀರಶೈವಬಂಧುಗಳಲ್ಲಿ ಇಂಥ ಧರ್ಮಪ್ರೇಮವು ಯಾಕಿಲ್ಲವೋ ತಿಳಿಯದಾಗಿದೆ. ಒಂದಾದರೂ ಧರ್ಮಕೆಲಸವನ್ನು ಮಾಡುವವರೇ ಇಲ್ಲ. ಇಂಥ ವಿಚಾರವು ಅವರ ಸ್ವಪ್ನದಲ್ಲಿ ಸಹ ಬರುವದಿಲ್ಲ. ಧರ್ಮದ ಹೆಸರಿನಿಂದ ಮಾತ್ರ ಫಂಡನ್ನು ಕೂಡಿಸುತ್ತಾರೆ. ಆ ಹಣವನ್ನು ಧರ್ಮಕಾರ್ಯಗಳಿಗೋಸ್ಕರ ಖರ್ಚುಮಾಡುವುದಿಲ್ಲ. ನಾನು ಸತತ ಒಂದು ವರ್ಷದಿಂದ ಧರ್ಮದಾಯಫಂಡು ಇವುಗಳ ಬಗ್ಗೆ ಲೇಖನಗಳನ್ನು 'ಲೋಕಮತ-ಪಂಚಾಚಾರ್ಯಪ್ರಭಾ' ಪತ್ರಗಳಲ್ಲಿ ಕೊಟ್ಟರೂ ಸಾರಿಸಾರಿಹೇಳಿದರೂ ಧರ್ಮಕಾರ್ಯಗಳನ್ನು ಮಾಡಲೊಲ್ಲರು. ದೇವರೇ ಇವರ ಮನಸ್ಸಿನಲ್ಲಿ ಬಂದು ಧರ್ಮಕಾರ್ಯವನ್ನು ಮಾಡಿಸಬೇಕಾಗಿದೆ. ಮುಂದಾಳುಗಳು ಇನ್ನಾದರೂ ಆಲೋಚಿಸಿ ಆಹಣವನ್ನು ಧರ್ಮಕಾರ್ಯಗಳಿಗುಪಯೋಗಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುವ.

ವೀರಯ್ಯ ಹುಂಡೇಕಾರ ಯಾಳವಾರಕರ್,
ಕೊಪ್ಪಳ.
ತಾ|| ೮-೭-೨೯.

ಶ್ರೀ ಲಿಂಗರಾಜ ಲೈಬ್ರರಿ.

ಬ್ಯಾಡಗಿ (ಜಿ. ಧಾರವಾಡ.)

ಬರುವ ಆಗಸ್ಟ 9 ನೆಯ ಶುಕ್ರವಾರದ ದಿವಸ ಮೇಲ್ಕಂಡ ನಮ್ಮ ಲೈಬ್ರರಿಯ 8 ನೆಯ ವಾರ್ಷಿಕಸಭೆಯು ಶಿವಮೊಗ್ಗದ ಸುಪ್ರಸಿದ್ಧ ವ್ಯಾಪಾರಿಗಳೂ ಮೈಸೂರು ರೆಪ್ರಜೆಂಟೆಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರರೂ ಆದ ಶ್ರೀಯುತ ಡಿ. ಎಸ್. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಜರುಗುವದು. ಹಾಗೂ ಮಾರನೆಯ ದಿವಸ ಶ್ರೀ ಜೋಡಿರಂಗಿನ 4 ನೆಯ ವಾರ್ಷಿಕಸಭೆಯು ಜರುಗುವುದು. ಸರ್ವರೂ ಈ ಸಭೆಗಳಿಗೆ ಆಗಮಿಸಬೇಕಾಗಿ ವಿನಂತಿಯದೆ.

ಸೆಕ್ರೆಟರಿ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಆಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೩ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ವಾಪಿಸಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [16]

ಎಂ. ಎಸ್. ಗಂಗಂಣ ಮತ್ತು ಲೋಕಂಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು—ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಬಾಧಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಆದೆಂತಹ ಜ್ವರಗಳಾಗಲೀ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [51]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0, 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಉಚಿತ! ಉಚಿತ!! ಉಚಿತ!!!

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ.

ಸುಮಾರು ನೂರು ಪುಟಗಳನ್ನೊಳಕೊಂಡ ಸಚಿತ್ರವಾದ ಪುಸ್ತಕ.
(ಆನರಬಲ್ ಡಾಕ್ಟರ್ ಯು. ರಾಮರಾಯರಿಂದ ರಚಿತವಾದುದು.)

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಮ್. ಎಲ್. ಸಿ. ಮದರಾಸು, "ಮುದ್ದಾದ ಈಸಣ್ಣ ಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಮದರಾಸು ಮೆಯಿಲ್ ಪತ್ರಿಕೆ:—2-3-28. ಇದು ಪ್ರತಿ ಗೃಹಸ್ಥರ ಕೈಯಲ್ಲಿರಬೇಕಾದ ಉತ್ತಮ ಪುಸ್ತಕ."

"ಪ್ರಾಕ್ಟಿಕಲ್ ಮೆಡಿಸಿನ್" ಡೆಲ್ಲಿ—ಇದು ನಮ್ಮ ದೇಶದ ಪ್ರತಿ ಹೆಂಗಸರಿಗೆಲ್ಲ ಅವಶ್ಯವಾದ ಪುಸ್ತಕವೆಂದು ನಾವು ಅನುಮೋದಿಸುವೆವು.

ಹಿಂದೂಪತ್ರಿಕೆ:-4-4-28. "ಆನರಬಲ್. ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ ನಮ್ಮ ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ ಓದಿಯೇತೀರಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಜನ ಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಿಂದ, ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಿ ಬರೆಯಲ್ಪಟ್ಟಿವೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳುವಳಿಕೆಯಿಲ್ಲದುದರಿಂದ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಈ ಪುಸ್ತಕವನ್ನೋದಿ ತಿಳಿದಿದ್ದರೆ ಅಂತಹ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

ಈ ಸಣ್ಣ ಪುಸ್ತಕದಲ್ಲಿ ಪ್ರಸವಕಾರ್ಯಕ್ಕೆ ಸಂಬಂಧಪಟ್ಟ ಶಾರೀರಕ ರಚನೆಗಳು, ಗರ್ಭದಶೆಯಲ್ಲಿಯೂ ಬಾಣಂತಿತನದಲ್ಲಿಯೂ ದೇಹಪೋಷಣೆ ಮತ್ತು ಆ ಕಾಲಗಳಲ್ಲಿ ಸಂಭವಿಸಬಹುದಾದ ರೋಗಗಳಿಗೆ ನಿವಾರಣೋಪಾಯಗಳು, ಮುಂತಾದುವೆಲ್ಲ ವಿವರಿಸಲ್ಪಟ್ಟಿವೆ."

ಡೇಯಿಲಿ ಎಕ್ಸ್‌ಪ್ರೆಸ್, ಮದರಾಸು:—4-3-28. ಜನರಿಗೆ ಆರೋಗ್ಯಜ್ಞಾನವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಡಾ. ಯು. ರಾಮರಾಯರ ಪ್ರಯತ್ನಗಳು ಸುಪ್ರಸಿದ್ಧವಾಗಿವೆ. ಈಗ ಹೊಸದಾಗಿ ಇವರು ಹೊರಕ್ಕೆ ತಂದಿರುವ ಈ ಸಣ್ಣ ಪುಸ್ತಕವು ನಮ್ಮ ದೇಶದ ಸ್ತ್ರೀ ಜಾತಿಗೆ ಅತ್ಯಂತೋಪಕಾರಕವೆಂದು ನಾವು ದೃಢವಾಗಿ ಹೇಳುವೆವು."

ಮೈಸೂರು ಪೇಟ್ರಿಯೋಟ್:-12-4-28. "ಇದು ತಮ್ಮ ದೇಹಾರೋಗ್ಯವನ್ನೂ, ತಮ್ಮ ಮಕ್ಕಳ ಪುರೋವೃದ್ಧಿಯನ್ನೂ ಬಯಸುವ ಪ್ರತಿ ಹೆಂಗಸರೂ ಅವಶ್ಯವಾಗಿ ಓದಬೇಕಾದ ಪುಸ್ತಕವಾಗಿದೆ. ಇದರಲ್ಲಿ, ಸ್ತ್ರೀಯರಿಗೆ ಗರ್ಭಕಾಲದಲ್ಲಿ ಆರೋಗ್ಯರಕ್ಷಣೆ, ರೋಗನಿವಾರಣೋಪಾಯಗಳು, ಬಾಣಂತಿಯರ ಆರೈಕೆ, ಪ್ರಸವಕಾಲದಲ್ಲಿ ಸಂಭವಿಸಬಹುದಾದ ಅಪಾಯಗಳಿಗೆ ತಾತ್ಕಾಲಿಕ ನಿವಾರಣೆಯ ಮಾರ್ಗಗಳು, ಈ ಮುಂತಾದ ವಿಷಯಗಳು ಬೇರೆಬೇರೆ 14 ಅಧ್ಯಾಯಗಳಾಗಿ ವಿಭಾಗಿಸಿ ಬರೆಯಲ್ಪಟ್ಟಿವೆ. ಯು. ರಾಮರಾಯರು ಹೀಗೆ ಸಾರ್ವಜನಿಕ ಕ್ಷೇಮಕ್ಕಾಗಿ ಬರೆದಿರುವ ಅನೇಕ ಪುಸ್ತಕಗಳು ಇಂಗ್ಲೀಷಿನಲ್ಲಿ ಮಾತ್ರವಲ್ಲದೆ ಅನೇಕ ದೇಶಭಾಷೆಗಳಲ್ಲಿಯೂ ಪರಿವರ್ತಿಸಲ್ಪಟ್ಟಿವೆ. ಪುಸ್ತಕದ ಮೌಲ್ಯವು ಸ್ವಲ್ಪವಾಗಿದ್ದರೂ, ಅದರಿಂದ ಜನಸಮುದಾಯಕ್ಕೆ ಉಂಟಾಗುವ ಪ್ರಯೋಜನವು ಅಮೂಲ್ಯವೆನಿಸಿದೆ."

ಪುಸ್ತಕದ ಬೆಲೆ, ಆರು ಆಣೆಗಳು ಮಾತ್ರ. ಅಂಚೆವೆಚ್ಚಕ್ಕಾಗಿ ಬೇರೇನೂ ಕೊಡಬೇಕಾಗಿಲ್ಲ.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನಪೇಕ್ಷಿಸತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮಣಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [5]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

[ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ... ವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ... ವಾಗಿ ಪುಷ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ... ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಸಕಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂಧ, ತಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ... ವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀ ... ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಸಾಪತ್ರಿ, ಮದನಮಸ್ತ, ರತನಪುರುಷ, ಕಮರ ... ಕಥಿರ್‍ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀ ... ವಾನೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀಲಮಗಜ, ಆಲವಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತ ... ಇಸಬಗೋಲ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ಗೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಶರಿ, ... ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ... ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ... ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ... ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಪಾಳಿ, ಪಿಶ್ಯ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ವಾತಬಾರದಿರೋಣ, ದಪ್ಪನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [3]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧ ಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧ ಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರನಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯರ್ ಅಷ್ಟವರ್ಗ ಔಷಧಾಲಯ
[17] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾಕಠರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯುಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೨—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯೋ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತನಿರಾಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ಸಿಂಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಪರಿಶುರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪೦·

ಡಜ಼ನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[5] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಆಗಸ್ಟ್ ೧೯೨೯ [ಸಂಚಿಕೆ ೧೩.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಸೀದ.

ಏಜಂಟರ ಆವಶ್ಯಕತೆ.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನದ ಏಜಂಟರನರ ಆಫೀಸಿನಿಂದ ಕೃತ ಪಡಿಸುವದೇನಂದರೆ, ಕರ್ಣಾಟಕ, ಇಂಗ್ಲಿಷ್, ಹಿಂದಿ ಮತ್ತು ತೈಲಂಗಭಾಷಾ ಪರಿಚಯವುಳ್ಳವರಾಗಿಯೂ, ಸರಕಾರೀ ಕೆಲಸದಿಂದ ನಿವೃತ್ತರಾಗಿ ಪೆನ್ಶನ್ ಪಡೆದವರಾಗಿಯೂ ಇರತಕ್ಕ ವೀರಶೈವರೂ, ಸದಾಚಾರಿಗಳೂ, ಕಾರ್ಯದಕ್ಷರೂ ಆದವರು ಮೇಲೆ ಕಾಣಿಸಿದ ಅಡ್ರೆಸ್ಸಿಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು ಅಥವಾ ರೂಬರೂಬು ಬಂದು ಭೆಟ್ಟಿಯಾಗತಕ್ಕದ್ದು. ಅವರವರ ಯೋಗ್ಯತಾನುಸಾರ ಪಗಾರವು ಗೊತ್ತುಮಾಡಲ್ಪಡುತ್ತದೆ. ಆಗಸ್ಟ್ ತಿಂಗಳ ಅಖೈರದೊಳಗಾಗಿ ಅಪ್ಲಿಕೇಷನ್ನುಗಳ ಮೂಲಕ ಅರಿಕೆ ಮಾಡಿಕೊಳ್ಳತಕ್ಕದ್ದು.

ಏಜಂಟ್,

ಮುಕ್ಕಾಂ ಬೀರೂರು. ರಂಭಾಪುರಿ ಸಂಸ್ಥಾನ.

Scholarships for Veerasaiva Students.

Students of Veerasaiva Community (Lingayets) may apply for Scholarships to Dr. T. S. Siddappa, Hon. Secretary, Marimallappa's Charities Mysore, before the 15th August 1929 in a prescribed form which can be had by sending him half anna stamp for postage.

ವೀರಶೈವ ವಿದ್ಯಾರ್ಥಿಗಳಿಗೆ ವೇತನ.

ದಿವಂಗತರಾದ ಮರಿಮಲ್ಲಪ್ಪನವರ ಧರ್ಮದ ಫಂಡಿನಿಂದ ವೇತನವನ್ನು ಹೊಂದಲಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳು, ಸದರಿ ಫಂಡಿನ ಸೆಕ್ರೆಟರಿಗಳಾದ ಡಾಕ್ಟರ್ ಟಿ. ಎಸ್. ಸಿದ್ದಪ್ಪನವರು, ಚಾಮೀವಿಲಾಸ್ ರೋಡ್, ಮೈಸೂರು ಇವರಿಗೆ ಆಗಸ್ಟ್ 15 ನೆಯ ತಾರೀಖಿನೊಳಗಾಗಿ ಅಪ್ಲಿಕೇಷನ್ ಕಳುಹಿಸಬೇಕು. ಪ್ರಿಂಟಾದ ಅಪ್ಲಿಕೇಷನ್ ಫಾರಂಗಳನ್ನು ಸೆಕ್ರೆಟರಿಯವರ ಹೆಸರಿಗೆ ½ ಆಣೆ ಸ್ಟಾಂಪನ್ನು ಕಳುಹಿಸಿ ತರಿಸಿಕೊಳ್ಳಬೇಕು.

WANTED.

Candidates for Telegraph and Station Master's Classes. Full particulars and Railway Fare Certificate on receipt of 2 annas Stamp.

Apply to:—

INPERIAL TELEGRAPH COLLEGE, DELHI.

(3)

ಸ್ವೀಕಾರ.

ಬಳ್ಳಾರಿಯಲ್ಲಿರುವ ವೇ|| ಮರಿಸ್ವಾಮಿಗಳ ಮಠದ ವೇ|| ಮರಿಯ್ಯನವರ ಧರ್ಮಪತ್ನಿ ಮರಿಬಸಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ|| ಮರಿಬಸವಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಚಾಮರಾಜನಗರ ತಾ|| ಚನ್ನಪ್ಪನಪುರದಲ್ಲಿರುವ ಹರದನಹಳ್ಳಿ ಶ್ರೀ ಗೋಸಲಸ್ವಾಮಿಯವರ ಮಠದ ವೇ|| ಕೆ. ಪುಟ್ಟಸೋಮಾರಾಧ್ಯರ ಸೋದರಮಾವಂದಿರ ಪುತ್ರ ಚಿ|| ರಾ|| ಚನ್ನವೀರಾರಾಧ್ಯನಿಗೆ ಉಮ್ಮತ್ತೂರು ಮಠದ ವೇ|| ಚನ್ನಬಸವಾರಾಧ್ಯರ ಪುತ್ರಿ ಸೌ|| ಮಹಾದೇವಾಂಬೆಯನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ತೆಗೆಯಿಸಿದ 1 ರೂ. ವಧುವಿನಕಡೆಯಿಂದ ತೆಗೆಯಿಸಿದ 1 ರೂ. ಒಟ್ಟು 2 ರೂಪಾಯಿಗಳು ವೇ|| ಪುಟ್ಟಸೋಮಾರಾಧ್ಯರ ದ್ವಾರಾ ತಲ್ಪಿರುತ್ತವೆ.

ವೇ|| ಕರಿಸಿದ್ಧಯ್ಯಾ ಕಂಬಿಮಠ ಸಾ|| ರೋಣ ಇವರ ಪುತ್ರ ಚಿ|| ಗುರುಸಿದ್ಧಯ್ಯನ ವಿವಾಹಮಹೋತ್ಸವಸಮಯದಲ್ಲಿ ವೇ|| ಬಸಪ್ಪಶಾಸ್ತ್ರಿ ವೀರಾಪೂರ ಇವರ ಪ್ರೋತ್ಸಾಹದ ಮೇರೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ವೇ|| ರುದ್ರಯ್ಯ ಪಟ್ಟದಯ್ಯನವರು ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಆಲೂರು ತಾಲೂಕು ಹಾರದಗೇರಿಯಲ್ಲಿರುವ ಗೂಳ್ಯದ ರಾಯಚೂರು ಮಠದ ವೇ|| ದೊಡ್ಡಬಸಯ್ಯನವರಿಗೆ ಪುತ್ರರತ್ನವು ಜನಿಸಿದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂಪಾಯಿಯು ಮ|| ರಾ|| ಎಚ್. ಟಿ. ಗೋವಿಂದರೆಡ್ಡಿಯವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ—

ಯುವನ ಸುಭಾಷಿತ.

ನಿನ್ನನ್ನು ನೀನು ತಿಳಿ; ಅದೇ ಜ್ಞಾನದ ಪ್ರಥಮ ಸೋಪಾನ

ಮಾತುಗಾರಿಕೆಯು ಮೂರ್ಖರ ಲಕ್ಷಣಗಳಲ್ಲೊಂದು.

ಸಂಸಾರವನ್ನು ನಿಂದಿಸಬೇಡ. ಅದಕ್ಕಿಂತ ಸುಂದರವಾದ ವಸ್ತುವು ಪ್ರಪಂಚದಲ್ಲಿ ಮತ್ತೊಂದಿಲ್ಲ.

ಆಕಾಶವೇ ಎಲ್ಲಕ್ಕಿಂತ ವಿಶಾಲವಾದ ವಸ್ತು. ಏಕಂದರೆ ಎಲ್ಲಾ ವಸ್ತುಗಳೂ ಅದರಲ್ಲಿ ಅಡಕವಾಗಿರುವವು.

ಅವಶ್ಯಕತೆಯು ಎಲ್ಲಕ್ಕಿಂತ ಬಲಶಾಲಿಯಾದ ವಸ್ತು. ಅವಶ್ಯಕತೆಯು ಬಲದಿಂದ ಅಸಾಧ್ಯವಾದ ವಸ್ತುವೂ ಸಾಧ್ಯವಾಗುವುದು.

ಸಮಯ ಅಥವಾ ಅವಕಾಶವು ಎಲ್ಲಕ್ಕಿಂತ ಬುದ್ಧಿಶಾಲಿಯಾದ ವಸ್ತು. ಸಮಸ್ತವಸ್ತುಗಳ ನಿರ್ಮಾಣವೂ ಅದರಿಂದಲೇ ಆಗುವುದು.

ಈಶ್ವರನು ಎಲ್ಲಾ ಪ್ರಾಣಿಗಳಿಗಿಂತ ಹಿಂದಿನವನು. ಏಕೆಂದರೆ ಈಶ್ವರನು ಅನಾದಿ.

ಮನಸ್ಸು ಎಲ್ಲಕ್ಕಿಂತ ತೀವ್ರಗಾಮಿಯಾದ ವಸ್ತು. ಒಂದು ನಿಮಿಷದಲ್ಲದು ಮೂರು ಲೋಕವನ್ನೂ ಸುತ್ತಿ ಹಾಕಬಲ್ಲುದು.

ಪಾಪಾಚರಣೆಯನ್ನು ದೇವರಿಂದ ಮುಚ್ಚಿಡಬಲ್ಲೆನೆಂದು ಭಾವಿಸಬೇಡ. ಆ ಸಂಬಂಧವಾದ ಯೋಚನೆಯನ್ನೂ ನೀನಾತನಿಂದ ಮುಚ್ಚಿಡಲಾರೆ.

ವಂಚನೆ, ಮೋಸ, ಕಳ್ಳತನ ಇವುಗಳಿಂದ ಹಣವನ್ನು ಗಳಿಸುವೆನೆಂದು ಭಾವಿಸಬೇಡ.

ಎದುರಿಗಿರುವ, ಹಾಗೂ ಮರೆಯಾಗಿರುವ ಸ್ನೇಹಿತರನ್ನು ಒಂದೇ ದೃಷ್ಟಿಯಿಂದ ನೋಡು.

ಇತರರಿಗೆ ಉಪದೇಶಮಾಡುವುದಕ್ಕಿಂತ ಅಸಹನೀಯವಾದ ಕೆಲಸವು ಪ್ರಪಂಚದಲ್ಲಿ ಮತ್ತೊಂದಿಲ್ಲ.

ಶರೀರದ ಅಲಂಕಾರಕ್ಕೆ ಹೆಚ್ಚು ಹೊತ್ತನ್ನು ಉಪಯೋಗಿಸಬೇಡ. ನಿನ್ನ ಬುದ್ಧಿಯನ್ನು ಅಲಂಕರಿಸಿ ಸುಂದರವಾಗಿ ಮಾಡುವ ಪ್ರಯತ್ನ ಮಾಡು.

ಯಾವನು ನಿರೋಗಿಯೂ, ಹಣವಂತನೂ, ಪಂಡಿತನೂ ಆಗಿರುವನೋ, ಪ್ರಾಪಂಚಿಕವಾದ ಸುಖವೆಲ್ಲವೂ ಅವನನ್ನೇ ಆಶ್ರಯಿಸುವುದು.

ತಂದೆತಾಯಿಗಳು ತಮ್ಮ ಮಕ್ಕಳನ್ನು ಯಾವರೀತಿ ನೋಡಿಕೊಳ್ಳುವರೋ, ಆ ಮಕ್ಕಳು ದೊಡ್ಡವರಾದ ಮೇಲೆ ಆ ತಂದೆತಾಯಿಗಳನ್ನು ಹಾಗೆಯೇ ನೋಡಿಕೊಳ್ಳುವರು.

"ಮಹಾತ್ಮಾ ಥೇಲ್ಸ"

ನಿನ್ನ ದರ್ಶನವನ್ನು ಯಾವಾಗಲೂ ಅಚ್ಚಳಿಯದೆ ಇಟ್ಟುಕೊಂಡಿರು—ಅವುಗಳನ್ನು ಸಫಲವಾಗಿ ಮಾಡಲು ನಿನ್ನ ತನುಮನವು ಮಗ್ನವಾಗಿರಲಿ.

ಇತರರ ಗುಣಗಳನ್ನು ವರ್ಣನೆ ಮಾಡುವುದರಲ್ಲಿ ವ್ಯರ್ಥವಾಗಿ ಕಾಲವನ್ನು ಕಳೆಯಬೇಡ. ಅದಕ್ಕೆ ಬದಲು ಆ ಗುಣಗಳನ್ನು ನೀನೂ ಕಲಿತುಕೊಳ್ಳಲು ಪ್ರಯತ್ನ ಮಾಡು.

ಮಾನವಜನ್ಮವು ಪರೋಪಕಾರಕ್ಕಾಗಿಯೇ. ಆದ್ದರಿಂದ ನಿನ್ನ ಸುತ್ತುಮುತ್ತಿನ ಜನರನ್ನು ಸುಧಾರಿಸಲು ಪ್ರಯತ್ನಮಾಡು ಇಲ್ಲವೆ ಅವರ ಸ್ಥಿತಿಗತಿಗನುಸಾರವಾಗಿ ನೀನೂ ಇರು.

ಶರೀರವು ಸಮುದ್ರ ಮಧ್ಯದ ಒಂದು ದ್ವೀಪದಂತೆ. ರಾತ್ರಿ ಹಗಲು ಅಲೆಗಳು ನಾಲ್ಕೂಕಡೆಯೂ ಬಂದು ಹೊಡೆಯುತ್ತಿರುವುದು. ಅವುಗಳೆಲ್ಲವನ್ನೂ ತಡೆದುಕೊಂಡರೆ ಅದು ಸಮುದ್ರ ಮಧ್ಯೆ ನಿಲ್ಲುವುದು ಸಾಧ್ಯ. ಇದರಂತೆ ನೀನೂಕೂಡಾ ಎಂತಹ ಆಪತ್ತುಗಳು ಬಂದರೂ ವಿಚಲಿತನಾಗದೆ, ಸ್ಥಿರಚಿತ್ತದಿಂದ ಅವುಗಳನ್ನು ಕಡೆಹಾಯಿಸಿ ಸ್ಥಿರನಾಗಿ ನಿಲ್ಲಬೇಕು.

"ಚಕ್ರವರ್ತಿ" ಮಾರ್ಕಸ್ ಅರಿಲಿಯಸ್.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಸನ್ಮಾನಸಮಾರಂಭಸಭಾ ಗದಗ.

ಧಾರವಾರ ಡಿ|| ಗದಗ ಪಟ್ಟಣದಲ್ಲಿ ತಾರೀಖು ೨೪-೭-೩೯ ನೆಯ ದಿವಸ ತಾಲೂಕುಬೋರ್ಡ್ ಪ್ರೆಸಿಡೆಂಟರಾದ ಶ್ರೀಮಂತ ವೀರಪ್ಪಣ್ಣಾ ಚವಡಿ ಇವರಿಗೆ ದಯಾಳುಗಳಾದ ಬ್ರಿಟಿಷ್ ಸಾರ್ವಭೌಮರವರು "ರಾವಸಾಹೇಬ್" ಎಂಬ ಪದವಿಯನ್ನು ದಯಪಾಲಿಸಿದ ಸಂತೋಷಕ್ಕಾಗಿ ಇಲ್ಲಿ ಸಕಲ ಜನಾಂಗದ ಪ್ರಮುಖ ಗೃಹಸ್ಥರು ಅತ್ಯಂತ ಉತ್ಸಾಹದಿಂದ ಪದವೀಸನ್ಮಾನ ಸಮಾರಂಭ ಕಾರ್ಯವನ್ನು ನೆರವೇರಿಸಿದರು. ಸದರಿ ಸಮಾರಂಭವು ಅತಿರಮಣೀಯವಾದ ತಾಲೂಕು ಲೋಕಲ್‌ಬೋರ್ಡ್ ಭವನದಲ್ಲಿ ನೆರವೇರಿತು. ಈ ಸಮಾರಂಭಕ್ಕೆ ಸರಕಾರಿ ಅಧಿಕಾರಿಗಳೂ, ಪದವೀಧರರೂ, ಲೋಕಲ್‌ಬೋರ್ಡಿನ ಮೆಂಬರರೂ, ಪುರಪ್ರಮುಖರೂ, ವ್ಯಾಪಾರಿಗಳೂ ಇವರೇ ಮೊದಲಾದವರು ಆಗಮಿಸಿದ್ದರು. ಸರ್ವರ ಪ್ರಾರ್ಥನೆಯ ಮೇರೆಗೆ ಮೆ|| ಗದಗ ತಾಲೂಕಿನ ಮಾಮಲೇದಾರ ಸಾಹೇಬರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅನಂತರ ಗದಗ ಮುನಸಿಪಾಲಟಿಯ ಪ್ರೆಸಿಡೆಂಟರಾದ ಮಿ|| ತೋಟಪ್ಪಣ್ಣ ಕೋಟಿ ಬಿ.ಎ., ಎಲ್.ಎಲ್.ಬಿ. ವಕೀಲರವರು ಸದರಿ ರಾವಸಾಹೇಬರವರು ಆಗರ್ಭ ಶ್ರೀಮಂತರಿದ್ದು ಆ ಶ್ರೀಮಂತಿಕೆಗೆ ಅನುರೂಪವಾದ ಶಾಂತಿ, ಸೌಜನ್ಯ, ಪರೋಪಕಾರ ಬುದ್ಧಿ, ಪ್ರಾಮಾಣಿಕತನ ಮೊದಲಾದ ಸದ್ಗುಣಗಳಿಂದ ಭೂಷಿತರಾಗಿ ಸಕಲ ಜನರ ಪ್ರೇಮಕ್ಕೆ ಪಾತ್ರರಾಗಿರುವರೆಂದೂ, ಇವರು ಈಗ್ಗೆ ೨೧ ವರ್ಷಗಳಿಂದ ಸ್ವಂತ ಕಾರ್ಯಗಳ ಕಡೆಗೆ ಗಮನಕೊಡದೆ ಎರಡನೆಯವರ ಹಿತದ ಕಡೆಗೆ ದೃಷ್ಟಿಯನ್ನಿಟ್ಟು ಲೋಕಲ್‌ಬೋರ್ಡ್, ಕೋಆಪರೇಟಿವ್, ರೆಡ್‌ಕ್ರಾಸ್ ಮೊದಲಾದ ಸಾರ್ವಜನಿಕ ಕೆಲಸಗಳನ್ನು ವಿಶೇಷ ದಕ್ಷತೆಯಿಂದ ನೆರವೇರಿಸಿ ಸಕಲ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವರಲ್ಲದೆ ಕಳೆದು ಹೋದ ಯುದ್ಧಸಮಯದಲ್ಲಿ ಸರಕಾರಕ್ಕೆ ನಾನಾರೀತಿಯಿಂದ ಸಹಾಯಮಾಡಿ ಸರಕಾರದವರ ಅಸಾಧಾರಣವಾದ ವಿಶ್ವಾಸಕ್ಕೆ ಪಾತ್ರರಾಗಿರುವರೆಂದೂ ಇಂಥ ಅನೇಕಾನೇಕ ಸುಕೃತ ಕಾರ್ಯಗಳನ್ನು ಮಾಡಿ ರಾಜ ಪ್ರಜೆಗಳ ನೈಜವಾದ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ಈಗ ಬಂದಿರುವ ಪದವಿಗಿಂತಲೂ ಹೆಚ್ಚಾದ ಪದವಿಯನ್ನು ಪಡೆಯಲು ಯೋಗ್ಯರಾಗಿದ್ದರೂ ಸಹ ನಮ್ಮ ಸರಕಾರದವರು ಅಂಥ ಹೆಚ್ಚಿನ ಪದವಿಯನ್ನು ಅನುಗ್ರಹಿಸದಿರುವದು ಒಂದು ರೀತಿಯಿಂದ ಮನಸ್ಸಿಗೆ ಕೊರಕೆಯಾಗಿರುವದೆಂದೂ, ಮುಂದಾದರೂ ಸರಕಾರದವರು ಇವರ ಯೋಗ್ಯತೆಗನುಸಾರವಾದ ಪದವಿಯನ್ನು ದಯಪಾಲಿಸಿ ಸರ್ವರಿಗೆ ಆನಂದವನ್ನುಂಟುಮಾಡಲೆಂದೂ, ಸದರಿ ರಾವಸಾಹೇಬರವರಿಂದ ಉತ್ತರೋತ್ತರವಾಗಿ ಜನಹಿತಕಾರ್ಯಗಳು ವಿಶೇಷವಾಗಿ ನೆರವೇರಲೆಂದೂ ಹೇಳಿ ಸ್ವಸ್ಥಾನವನ್ನು ಅಲಂಕರಿಸಿದರು. ಆಮೇಲೆ ಕೆಲವು ಜನ ಸದ್ಗೃಹಸ್ಥರು ಮಿ|| ಕೋಟಿ ವಕೀಲರು ಮಾತನಾಡಿದ ವಿಷಯವನ್ನೇ ಪುಷ್ಟೀಕರಿಸಿ ಹೇಳಿದರು. ಬಳಿಕ ಮೆ|| ಮಾಮಲೇದಾರಸಾಹೇಬರವರು ರಾವಸಾಹೇಬರವರ ಪರೋಪಕಾರಬುದ್ಧಿ, ಸಾರ್ವಜನಿಕ ಹಿತದೃಷ್ಟಿ, ಸ್ವಾರ್ಥತ್ಯಾಗಪೂರ್ವಕ ರಾಜ ಪ್ರಜೆಗಳ ವಿಶ್ವಾಸಪಾತ್ರತೆ ಮೊದಲಾದ ಸದ್ಗುಣಾವಳಿಯನ್ನು ಕೇಳಿ ಸಂತುಷ್ಟಚಿತ್ತರಾಗಿ ದಯಾಳುಗಳಾದ ಬ್ರಿಟಿಷ್ ಸಾರ್ವಭೌಮರವರು ಇವರಿಗೆ ರಾವ್‌ಸಾಹೇಬ್ ಪದವಿಯನ್ನು ದಯಪಾಲಿಸಿರುವದನ್ನು ನೋಡಿ ಅತ್ಯಂತ ಆನಂದವೆನಿಸುತ್ತದೆಂದು ಹೇಳಿ ತಮ್ಮ ನೈಜವಾದ ಆನಂದವನ್ನು ಪ್ರದರ್ಶಿಸಿ ಸರ್ವಸಭಿಕರನ್ನು ಸಂತೋಷಭರಿತರನ್ನಾಗಿ ಮಾಡಿದರು. ಆಮೇಲೆ ರಾವ್‌ಸಾಹೇಬರವರು ಎದ್ದುನಿಂತು ತಮಗೆ ಪ್ರಾಪ್ತವಾದ ಪದವಿಯ ಸನ್ಮಾನಸಮಾರಂಭವನ್ನು ನೆರವೇರಿಸಿದ ಮಹಾಶಯರನ್ನು ಅಭಿನಂದಿಸಿ ನನಗೆ ಪ್ರಾಪ್ತವಾದ ಈ ಪದವಿಯು ನನ್ನ ದಕ್ಷತೆಯಿಂದ ಬಂದುದಲ್ಲವೆಂದೂ, ತಮ್ಮೆಲ್ಲರ ಪ್ರೇಮಭಾವವೇ ಈ ಪದವಿಯ ಪ್ರಾಪ್ತಿಗೆ ಮೂಲಕಾರಣವೆಂದೂ ಸಮಯೋಚಿತ ಭಾಷಣವನ್ನು ಮಾಡಿ ಸ್ವಸ್ಥಾನದಲ್ಲಿ ಕುಳಿತರು. ಆಮೇಲೆ ಸಭಿಕರಿಗೆ ಹಾರತುರಾಯಿ ಪುಷ್ಪಾದಿಗಳು ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಸದರಿ ರಾವಸಾಹೇಬರವರು ೨೧ ವರ್ಷಗಳಿಂದ ತಾಲೂಕು ಬೋರ್ಡಿನ ಪ್ರೆಸಿಡೆಂಟರಾಗಿರುವರಲ್ಲದೆ ಸುಪ್ರಸಿದ್ಧವಾದ ಲ್ಯಾಂಡ ಮಾರ್ಟ್‌ಗೇಜ್ ಬ್ಯಾಂಕಿನ ಛೇರ್ಮನ್ನರೂ ಹಾಗೂ ಸೇಲ್ ಸೊಸೈಟಿಯ ಛೇರ್ಮನ್ನರೂ ಆಗಿರುವರು. ಈ ಮೊದಲು ಆನರರಿ ಮ್ಯಾಜಿಸ್ಟ್ರೇಟರೂ ವ್ಹಿಲೇಜ ಮನ್ಸೀಫರೂ, ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಛೇರ್ಮನ್ನರೂ ಆಗಿ ವಿಶೇಷ ದಕ್ಷತೆಯಿಂದ ಕೆಲಸವನ್ನು ಸಾಗಿಸಿದರು. ಈ ರೀತಿಯಾಗಿ ಸದಾ ಪರಹಿತಕಾರ್ಯದಲ್ಲಿಯೇ ಮನಸ್ಸನ್ನಿಟ್ಟು ಸರಕಾರದ ಮತ್ತು ಪ್ರಜೆಗಳ ಪರಮ ಪ್ರೀತಿಗೆ ಪಾತ್ರರಾಗಿರುವ ಈ ಪುಣ್ಯಾತ್ಮರಿಗೆ ಪರಮೇಶ್ವರನು ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ

ಪ್ರತ್ಯಕ್ಷದರ್ಶಿ,
ದಸ್ತಗಿರ್‌ಸಾಹೇಬ ಅಕ್ಕಿ ಲೋಕಲ್‌ಬೋರ್ಡ್
ಅಂಡ್ ಮುನಿಸಿಪಲ್ ಕೌನ್ಸಿಲರ್ ಗದಗ.

ಕೇದಾರ ಸಿಂಹಾಸನಮ್.

ಲೇಖಕರು—ಶಂ|| ಶ್ರೀ ಚೆನ್ನಬಸವಾಚಾರ್ಯರು
ಭರಗಿರಿ ಬೃಹನ್ಮಠ.

(ಕಳೆದವಾರದಿಂದ ಮುಂದಕ್ಕೆ ಸಾಗಿದ್ದು.)

ಸೂತ ಉವಾಚ || ತಸ್ಮಿನ್ನೇವ ಮಹಾಕ್ಷೇತ್ರೇ ಹಿಮದಾಶ್ರಮೇಮುನಿ || ಇತ್ಯಾದಿ ಗ್ರಂಥ ತಾತ್ಪರ್ಯವು.

ಸೂತನು ಅನ್ನುತ್ತಾನೆ—ಹೇ ಮುನೀಶ್ವರನೇ ? ಅದೇ ಕ್ಷೇತ್ರದಲ್ಲಿರುವ ಹಿಮದಾಶ್ರಮದಲ್ಲಿ ವಶಿಷ್ಠ ಮುನಿಯು ಅರುಂಧತಿಯೊಡನೆ ಹೊರಟು ಮಹಾದೇವನಲ್ಲಿ ಮನಸ್ಸುಳ್ಳವನಾಗಿ ಸಂಯತಾತ್ಮನಾಗಿ ದೃಢವ್ರತಿಯಾಗಿ ಭಿಲ್ಲಜನಸಮೂಹದೊಳಗೆ ಸೇರಿ ವಾಸಮಾಡಿದನು. ಈ ಋಷಿವರ್ಯನು ಆ ಪ್ರದೇಶವನ್ನು ಸ್ವರ್ಗಭೂಮಿಯೆಂದು ಭಾವಿಸಿ ಆಯಾ ದೇಶದ ಕಾಲ ಪರಿಸ್ಥಿತಿಗನುಸರಿಸಿದ ಆಚಾರವುಳ್ಳವನಾಗಿ ವಿಶೇಷಕ್ರಿಯೆಗಳನ್ನು ಬಿಟ್ಟು ತಾನೂ ಸಹ ಕಿರಾತರೊಡನೆ ಸಂಧ್ಯಾಸ್ನಾನಪರಾಙ್ಮುಖನಾಗಿ ನಿತ್ಯದಲ್ಲಿ ಕೃಷ್ಣಕಂಬಲಕಂಚುಕನಾಗಿ ಬಾಣವನ್ನು ಕರದಲ್ಲಿ ಹಿಡಿದು ಕಟಿಯಲ್ಲಿ ಖಡ್ಗವನ್ನಿರಿಸಿ ಜ್ಞಾನವಿಜ್ಞಾನಕ್ರಿಯಾಪರಾಙ್ಮುಖನಾದನು. ಶರೀರವಂತೂ ಅತಿ ಮಲಿನವಾಗಿತ್ತು. ಯಜ್ಞೋಪವೀತವು ಮಲದಿಂದ ಕಪ್ಪಾಗಿತ್ತು. ಈ ರೀತಿಯಾಗಿ ಬಹು ವರ್ಷದವರೆಗೂ ಸ್ವಧರ್ಮಪರಿವರ್ಜಿತನಾಗಿ ವಾಸಮಾಡಿದನು. ಹಾಗೆಯೇ ಅವನ ಸತಿಯೂ ಸಹ ವಿಗತಪ್ರಭೆಯಾಗಿ ಪತಿಯೊಡನೆ ಅದೇ ಧರ್ಮ ಸಂಯುತಳಾಗಿ ಸ್ನಾನ ಮಾಡದೆ ಮುಖವನ್ನು ಪ್ರಮಾರ್ಜನಮಾಡಿಕೊಂಡು ಭೋಜನಮಾಡುತ್ತಿದ್ದಳು. ಈ ಪ್ರಕಾರವಾದ ಆಚಾರವಿಹೀನನಾದ ವಶಿಷ್ಠನಿಗೆ ಹಿಮದಾಶ್ರಮದಲ್ಲಿ ಆಗ್ಗೆ ಬಹಳ ವರ್ಷಗಳು ಗತಿಸಿದವು. ಅಷ್ಟರೊಳಗೆ ರಾಮನು ದಶಕಂಧರನನ್ನು ಜಯಿಸಿ ಅಯೋಧ್ಯೆಗೆ ಬಂದು ಲಕ್ಷ್ಮಣನಿಗೆ ಹೇಳಿದನು. ಎಲೈ ಲಕ್ಷ್ಮಣನೇ ಕೈಲಾಸಕ್ಕೆ ಹೋಗು; ವಶಿಷ್ಠನು ಎಲ್ಲಿ ಇರುವನು ? ರಾಜ್ಯಾಭಿಷೇಕಕ್ಕಾಗಿ ಶೀಘ್ರ ಕರೆದುಕೊಂಡು ಬಾ ಎಂದು ನುಡಿದಬಳಿಕ ಲಕ್ಷ್ಮಣನು ಶೀಘ್ರವಾಗಿ ಕೈಲಾಸಪರ್ವತಕ್ಕೆ ಹೋದನು. ಅಲ್ಲಿ ವಾಗೀಶ್ವರವಶಿಷ್ಠನನ್ನು ಹುಡುಕಿದನು. ಬಳಿಕ ಹಿಮದಾಶ್ರಮಕ್ಕೆ ಹೋಗಿ ಆ ಮುನಿಯ ಮಂದಿರವನ್ನು ಹೊಂದಿದನು. ಬಳಿಕ ಅಲ್ಲಿ ಖಡ್ಗತೂಣೀರಚಾಪಗಳಂ ಧರಿಸಿ ಕಪ್ಪುಕಂಬಳಿಯ ಕಂಚುಕವಂ ಪೊದ್ದು ಕುಳಿತಿರುವ ಮುನಿಯಂ ನೋಡಿ ರಾಮೋಕ್ತಿಯನ್ನು ತಿಳುಹಿಸಿದನು. ಸ್ವಾಮಿ ! ರಾಮಭದ್ರನು ನಿಮ್ಮನ್ನು ನೋಡಲಪೇಕ್ಷಿಸುತ್ತಾನೆ. ರಾವಣನು ಯುದ್ಧದಲ್ಲಿ ಪುತ್ರಬಲವಾಹನ ಸಹಿತನಾಗಿ ಕೊಲ್ಲಲ್ಪಟ್ಟನು. ಈ ವಾಕ್ಯವನ್ನು ಕೇಳಿ ವಶಿಷ್ಠನು ಲಕ್ಷ್ಮಣನೊಡನೆ ಆ ಖಡ್ಗತೂಣೀರಚಾಪ ಅತಿಕೃಷ್ಣಮಲಕಂಬಲಕಂಚುಕಾಂದಿಗಳಂ ಬಿಟ್ಟು ಬಂದನು. ಗಂಗಾದ್ವಾರದಲ್ಲಿ ಬಂದು ಅಲ್ಲಿ ಸ್ನಾನಮಾಡಿದನು. ಸರ್ವಕ್ರಿಯೆಂಗಳನ್ನು ವಿಧಿವತ್ತಾಗಿ ಮಾಡಿ ಶಿವಸಮರ್ಚನವಂ ಮಾಡಿದನು. ಆ ಬಳಿಕ ಪೂರ್ವದಂತೆ ಉತ್ತಮ ಆಚಾರವನ್ನು ಭೋಜನವನ್ನು ವಿಧಾನಪೂರ್ವಕ ಮಾಡುತ್ತ ಅತಿಥ್ಯಾದಿ ಪೂಜನವನ್ನು ಮಾಡುತ್ತಿದ್ದನು. ಈ ಪ್ರಕಾರವಾದ ಆ ಮುನಿಯ ಆಚಾರವನ್ನು ರಘೂದ್ವಹನು ನೋಡಿ ಪರಮಾಶ್ಚರ್ಯವನ್ನಾಗಿ ತಿಳಿದು ಮಾರ್ಗದಲ್ಲಿ ಗುರುವನ್ನು ಪ್ರಶ್ನೆಮಾಡಿದನು. ಗುರುವೇ ನಿನ್ನ ಆಚರಣದಿಂದ ನನಗೆ ಸಂಶಯವಾಗಿದೆ. ವಿಭುವೇ ಇದೇನು ? ಅಲ್ಲಿ ಆಚಾರವನ್ನು ಯಾಕೆ ಬಿಟ್ಟಿದ್ದೀರಿ ? ಇನ್ನು ಇಲ್ಲಿ ಮಾತ್ರ ವಿಧ್ಯುಕ್ತವಾಗಿ ಸರ್ವ ಆಚಾರಗಳನ್ನು ನೀವು ಮಾಡುತ್ತಿರುವಿರಿ ? ಎಂದು ಕೇಳಿದಬಳಿಕ ವಶಿಷ್ಠನು ಆವಾಗ್ಗೆ ಸ್ಪಷ್ಟನಾಗಿ ಲಕ್ಷ್ಮಣನಿಗೆ ಹೇಳುತ್ತಾನೆ. ಲಕ್ಷ್ಮಣನೇ ? ನೀನು ಸತ್ಯವಾದದ್ದನ್ನೇ ನುಡಿದಿರುವಿ ; ಆದರೆ ಸಂಶಯ ಮಾಡತಕ್ಕೂಡದು. ಯಾಕೆಂದರೆ ಗಂಗಾದ್ವಾರವನ್ನಾರಂಭಿಸಿ ಶ್ವೇತಗಿರಿಯು ಎಲ್ಲಿಯವರೆಗೂ ಇರುವದೋ ಹಾಗೂ ಕಾಮಸಾಣಿಟಿದಿಂದ ಪೂರ್ವಕ್ಕೆ ಕಾಷ್ಠಗಿರಿ ಇರುವದೋ ಹಾಗೂ ಉತ್ತರಕ್ಕೆ ನಂದಾದ್ರಿಯಿಂದ ಇರುವ ಸ್ಥಾನವು ಶಿವಧಾಮವೆಂದು ಪಂಡಿತರಿಂದ ಹೇಳಲ್ಪಟ್ಟಿದೆ. ಎಲ್ಲಿಯವರೆಗೂ ಕೇದಾರಮಂಡಲವೋ ಅಲ್ಲಿಯವರೆಗೂ ಮಹತ್ಪುಣ್ಯತಮಧಾಮವೆನಿಸಿದೆ. ಇಲ್ಲಿ ಯಾವ ನಿರ್ಝರಗಳೂ ನದಿಗಳೂ ಸರಸ್ಸುಗಳೂ ಯಾವತ್ತೂ ಗಂಗಾಜಲವೆಂದು ತಿಳಿ ; ಯಾಕೆಂದರೆ ಗಂಗೆಯು ಇಲ್ಲಿ ಹೊರಟಿರುವಳು. ತಜ್ಜಲಸ್ಪರ್ಶಮಾತ್ರದಿಂದ ಸಕಲರೂ ಶುದ್ಧನಾಗುವನು. ಒಂದು ಸಾರೆ ಶಿವನೆಂದುಚ್ಚರಿಸಿದರೆ ಸರ್ವ ಜಪವು ಮಾಡಲ್ಪಟ್ಟಂತಾಗುತ್ತೆ. ಇಲ್ಲಿ ಬಹಳವಾಗಿ ಮಜ್ಜನಸ್ನಾನಾದಿಯಿಂದ ಏನು ಪ್ರಯೋಜನವಿದೆ. ಯಾವಾತನು ಒಂದು ಸಾರೆ ದಿವಸದಲ್ಲಿ ಆ ಜಲ ಸ್ಪರ್ಶಮಾಡುವನೋ ಅಂಥವನು ಸರ್ವ ತೀರ್ಥಗಳಲ್ಲಿ ಸ್ನಾನಮಾಡಿದವನಾಗುವನು ಮಹಾಮತಿಯೇ ಹೆಚ್ಚಿಗೆ ಏನು ಪ್ರಯೋಜನ ಆ ದೇಶದ ಸಮಾನವಾದ ದೇಶವು ಜಗತೀತಲದಲ್ಲಿ ಇರುವದಿಲ್ಲ. ಎಲೈ ಭದ್ರನೇ ಆದ್ದರಿಂದಲೇ ನಾನು ಕರ್ಮದರ್ಶನವನ್ನು ಮಾಡಲಿಲ್ಲ. ಈ ಪೃಥಿವಿಯಂತೂ ಸ್ವರ್ಗಭೂಮಿಯೇ ಆಗಿದೆ ಆದ್ದರಿಂದ ಇಲ್ಲಿ ವಾಸಿಸುವವರು ದೇವತೆಗಳೇ ಆಗಿರುವರು ಸಂಶಯವಿಲ್ಲ. ಈ ಪ್ರಕಾರವಾದ ಆ ವಾಕ್ಯವನ್ನು ಕೇಳಿ ಲಕ್ಷ್ಮಣನು ಕೇದಾರಮಂಡಲವು ಭುಕ್ತಿ ಮುಕ್ತಿ ಪ್ರದಾಯಕವಾದದ್ದೆಂದು ಬಹಳವಾಗಿ ಮನ್ನಿಸಿದನು. ವಶಿಷ್ಠ ಮಹಾಮುನಿಯು ರಾಮ ಮಹಾನವಮಿಯದಿಗೆ ಹೋದನು ಮತ್ತು ವಿಧಿವತ್ತಾಗಿ ಅಭಿಷೇಕವನ್ನು ಮಾಡಿಸಿದನು. ಈ ಕಥೆಯನ್ನು ಸ್ಮರಣಕ್ಕೆ ತಂದುಕೊಂಡು ಸಂಕ್ಷೇಪವಾಗಿ ಉಷ್ಣೋದಕದಿಂದ ಸ್ನಾನವನ್ನು ಪೂರೈಸಿದೆವು. ಬಳಿಕ ಅಲ್ಲಿಂದ ಪ್ರಾತಃಕಾಲದಲ್ಲಿ ಎದ್ದು ಶಾಕಂಬರೀದೇವಿಯನ್ನು ಮಾರ್ಗದಲ್ಲಿ ದರ್ಶನಮಾಡಿದೆವು ಈ ದೇವಿಯ ಮಹಿಮೆಯು ಪುರಾಣದಲ್ಲಿ ವರ್ಣಿತವಾಗಿದೆ ಶಾಕ್ತೇಯರು ವಿಶೇಷವಾಗಿ ಇಲ್ಲಿ ಅನುಷ್ಠಾನಗಳನ್ನು ಮಾಡುತ್ತಿರುವರು. ಪುನಃ ಅಲ್ಲಿಂದ ಪ್ರಸನ್ನ ಪಾಷಾಡಿಗೆ ಬಂದೆವು ಇಲ್ಲಿ ಭೀಮನಿಗೆ ಮಹಾದೇವನು ಮಹಿಷರೂಪದಲ್ಲಿ ಅವತರಿಸಿ ಕೈಲಾಸಮಾರ್ಗಕ್ಕೆ ಕರೆದೊಯ್ದು ಚಿನ್ಹೆಯಿದೆ ವಾಸುಕಿ ಗಂಗಾ, ಸುವರ್ಣಗಂಗಾ ಮಂದಾಕಿನೀ ಸಂಗಮವಾಗಿದೆ. ಸೋಮಪ್ರಯಾಗವೆಂದು ಇದಕ್ಕೆ ಹೇಳುತ್ತಾರೆ ಇಲ್ಲಿ ಈಗಲೂ ಭಿಕ್ಷೆ ದೊರವು ಸಿಕ್ಕುವುದು ಹಾಲು ಉತ್ತಮವಾಗಿದೆ. ಯಾತ್ರಿಕರಿಗೆ ಇಲ್ಲಿ ಚಾಲು ವಿಶಾಯಿಗಳು ಲಭಿಸುವುವು. ಅಲ್ಲಿಂದ ಪುನಃ ಉತ್ತರಮಾರ್ಗವನ್ನು ಹಿಡಿದು ಅರ್ಧ ಮೈಲು ಹೋಗುತ್ತಿರುವಾಗ ರೊಳಗೆ ಮುಂಡವು ಕತ್ತರಿಸಲ್ಪಟ್ಟ ಗಣೇಶಮೂರ್ತಿಯು ಪ್ರಾಪ್ತವಾಯಿತು. ಈ ಮೂರ್ತಿಯು ಪೂರ್ವಕಾಲದ ಗಣಪತಿಯ ಚರಿತ್ರೆಯನ್ನು ಸ್ಮೃತಿಪಥಕ್ಕೆ ತಂದಿತು. ಅದೇನಂದರೆ ಪೂರ್ವದಲ್ಲಿ ಕೈಲಾಸಪತಿಯು ಕೈಲಾಸದ ದರಬಾರದಿಂದ ಅಂತಃಪುರಕ್ಕೆ ದಯಮಾಡಿಸಿದನು ಆಗ್ಗೆ ನಂದಿಯು ದ್ವಾರಪಾಲಕನಾಗಿದ್ದನು. ಪಾರ್ವತಿಯು ಸ್ನಾನಮಾಡುತ್ತಿದ್ದಳು. ಆದರೆ ನಂದಿಯನ್ನುಲ್ಲಂಘಿಸಿ ಮಹಾದೇವನು ಸ್ನಾನಮಂದಿರದಲ್ಲಿ ಪ್ರವೇಶಮಾಡಿದನು. ಆಗ ಮಹಾದೇವಿಯು ಅಬಲಾಸ್ವಭಾವಕ್ಕನುಸರಿಸಿ ಮೌನದಿಂ ಲಜ್ಜಾವಶಾತ್ ವಸ್ತ್ರಗಳಂ ಧರಿಸಿಕೊಂಡಳು. ಬಳಿಕ ಅಂತಃಪುರದ ಜಯಾ-ವಿಜಯರೆಂಬ ಆಪ್ತಸಖಿಯರು ಮಹಾದೇವಿಗೆ ಸೂಚಿಸಿದ ಮೇರೆಗೆ ಮಹಾದೇವಿಯು ತನ್ನಂಗರಾಗದಿಂದ ಒಂದು ಸುಂದರ ಮೂರ್ತಿಯನ್ನು ರಚಿಸಿ ಪ್ರಾಣಕಲೆಯಂ ಯೋಜಿಸಿ ಹಸ್ತದಲ್ಲಿ ಗದೆಯಂ ಕೊಟ್ಟು ತನ್ನ ಅಂತಃಪುರದ ಮಹಾದ್ವಾರದ ಪಾಲಕನನ್ನಾಗಿ ನಿಯಮಿಸಿದಳು. ಬಳಿಕ ಮತ್ತೊಮ್ಮೆ ಮಹಾದೇವಿಯು ಸ್ನಾನಮಾಡುತ್ತಿರುವಾಗ ಮಹಾದೇವನು ಅಂತಃಪುರವನ್ನು ಪ್ರವೇಶಿಸಲು ಈ ಗಣೇಶ ಬಾಲಕನು ಮಹಾದೇವನನ್ನು ತಡೆದನು. ಅದೇ ಕಾರಣವಾಗಿ ಅವರೀರ್ವರಿಗೂ ಘೋರ ಯುದ್ಧವು ನಡೆದು ಅಂತ್ಯದಲ್ಲಿ ಗಣೇಶನ ಶಿರವು ಛೇದಿಸಲ್ಪಟ್ಟಿತು. ಬಳಿಕ ದೇವಿಯು ಅತ್ಯಂತ ದುಃಖಭರಿತಳಾಗಲು ಈಶ್ವರನು ಗಜಮುಖವನ್ನು ಮೂರ್ತಿಯಲ್ಲಿ ಇರಿಸಿ ಗಣೇಶಪದವನ್ನು ಅಂಬಾಪುತ್ರನಿಗೆ ಕೊಟ್ಟನೆಂಬ ವಿಘ್ನೇಶ್ವರನ ಕಥೆಯು ಇಲ್ಲಿ ಜ್ಞಾಪಕಕ್ಕೆ ಬಂದಿತು. ಬಳಿಕ ಈ ವಿಘ್ನೇಶ್ವರನನ್ನು ಸ್ತುತಿಸಿ ಪ್ರಸನ್ನತೆಯಂ ಪಡೆದು ಅಲ್ಲಿಂದ 5 ಮೈಲಿಯಲ್ಲಿರುವ ಗೌರೀಕುಂಡಕ್ಕೆ ಹೋದೆವು. ಈ ತೀರ್ಥಸ್ಥಾನವು ಗೌರೀ ಗೌರೀಶ್ವರ ಮಂದಿರಾಧಿಪತಿಗಳಾದ ಶ್ರೀ ಕೇದಾರ ಪೀಠಾಧೀಶರ ಅಧೀನತೆಗೆ ಒಳಪಟ್ಟಿದೆ. ವಸತಿಗೆ ಇಲ್ಲಿ ಕೇದಾರ ಸಂಸ್ಥಾನವತಿಯಿಂದ ಧರ್ಮಾರ್ಥ ಔಷಧಾಲಯವು ಇಡಲ್ಪಟ್ಟಿರುವದು ನಾವು ಸ್ವಂತವಾಗಿ ಔಷಧಾಲಯಕ್ಕೆ ಹೋಗಿ ಮಾರ್ಗಸ್ಥರಾದ ಯಾತ್ರಿಕರಿಗೆ ಈ ಔಷಧಾಲಯದಿಂದಾಗುವ ಉಪಕಾರವನ್ನು ನೋಡಿ ವೀರಶೈವ ಮಹಸ್ಥಾನಾಚಾರ್ಯ ಪೀಠಾಧಿಪತಿಗಳು ಮಾಡುವ ಮಹತ್ವದಕಾರ್ಯಗಳು ಭರತಖಂಡದಲ್ಲೆಲ್ಲ ವ್ಯಾಪಿಸಿರುವವೆಂದು ಆತ್ಮಾನಂದಪಟ್ಟೆವು. ಇದು ಪುರಾಣಪ್ರಸಿದ್ಧವಾದ ತೀರ್ಥವಾಗಿದೆ. ಯಾಕೆಂದರೆ ಪಾರ್ವತಿಯು ಪ್ರಥಮದಲ್ಲಿ ಸ್ನಾನವನ್ನು ಮಾಡಿರುವಳು. ಅಂದಿನಿಂದ ಜಲವು ಈ ದಿನದವರೆಗೂ ಹಲದಿವರ್ಣವಾಗಿದೆ. ಪಕ್ಕದಲ್ಲಿ ತಪ್ತಕುಂಡವಿದೆ. ಈ ತೀರ್ಥಗಳು ಮಂದಾಕಿನಿಯ ದಡದ ದೂರದಲ್ಲಿಯೇ ರಾಜಿಸುತ್ತಲಿವೆ. ಇಲ್ಲಿ ಮೊದಲು ಸ್ನಾನಮಾಡಲು ನೋಡಿದೆವು. ಒಬ್ಬ ಪುರೋಹಿತನು ಸಂಕಲ್ಪ ಹೇಳಿದನು. ಅವನಿಗೆ ದಕ್ಷಿಣೆಯನ್ನು ಕೊಟ್ಟೆವು ಬಳಿಕ ಗೌರೀ ಗೌರೀಶ್ವರರ ದರ್ಶನವಂ ಮಾಡಿಕೊಂಡು ತಪ್ತಕುಂಡದಲ್ಲಿ ನಂದಿಮುಖದಿಂದ ಬೀಳುವ ಜಲದಲ್ಲಿ ಸಂಕಲ್ಪಪೂರ್ವಕ ಸ್ನಾನಮಾಡಿದೆವು. ಆ ನೀರು ಅತ್ಯುಷ್ಣವಾಗಿ ಬಹು ಮಧುರವಾಗಿದೆ. ಅಲ್ಲಿಯ ಪುರೋಹಿತನು ನಮ್ಮ ತಾಯಿತಂದೆಗಳ ತಾತ ಮಹಾತರ ನಾಮಸ್ಮರಣವಂಮಾಡಿಸಿ ಸಂಕಲ್ಪವಂ ಹೇಳಿದನು. ಬಳಿಕ ಪಾರ್ವತೀಮಧ್ಯದಲ್ಲಿ ರಂಜಿಸುವ ಶಿಲೆಯಲ್ಲಿ ಪ್ರಾತಃಕಾಲದ ಅನುಷ್ಠಾನಾದಿಗಳನ್ನು ಪೂರೈಸಿಕೊಂಡು ಮುಂದಕ್ಕೆ ಪ್ರಯಾಣ ಬೆಳೆಸಿದೆವು. ಬಳಿಕ ೨ ಮೈಲಿನಲ್ಲಿ ಭೈರವಮೂರ್ತಿಯಿದೆ. ಇದು ಕೇದಾರಸಂಸ್ಥಾನಕ್ಕೆ ಸೇರಿದುದು. ಅಲ್ಲಿ ರೇಷ್ಮೆ ಚೀರವನ್ನೂ ದಕ್ಷಿಣೆಯನ್ನೂ ಅರ್ಪಿಸಿ ಸಗಾಲಸಟ್ಟಿಗೆ ಬಂದೆವು.

ಅಲ್ಲಿಂದ ೧|| ಮೈಲಿನಲ್ಲಿ ರಾಮವಾಡಿಯು ಪ್ರಾಪ್ತವಾಯಿತು. ಇಲ್ಲಿಗೆ ಚಳಿಯು ವಿಶೇಷವಾಯಿತು. ಆ ದಿವಸ ಏಕಾದಶಿ ಪ್ರದೋಷವಿದ್ದದರಿಂದ ಭೋಜನವನ್ನು ಮಾಡಬಾರದೆಂಬ ನಿಯಮವಿದ್ದರೂ ಅವರಾದಿ ಸಂಗಡ ನೆಂಬುವವರು ಆಗ್ರಹಿಸಿ ಹಾಲು ಹಣ್ಣುಗಳನ್ನು ಸ್ವೀಕಾರಮಾಡಿಸಿದರು. ಅಲ್ಲಿಂದ ಶ್ರೀ ಕೇದಾರನಾಥ ಮಂದಿರವು ಮೂರು ಮೈಲುಅದೆ. ಪರ್ವತವನ್ನು ಹತ್ತುವದು ಬಹು ದುಸ್ತರವಾಗಿತ್ತು. ಅಂತು ಮೆಲ್ಲಮೆಲ್ಲನೆ ಬಹು ಆಯಾಸಪೂರ್ವಕ ಹೋಗುವದರೊಳಗಾಗಿ ಒಬ್ಬ ಬಂಗಾಲಿಯು (ಕುರ್ಚಿಯಾಕಾರವಾದ ಬಿದಿರ ಆಸನದಲ್ಲಿ ಪುರುಷನಂ ಹೊರುವವನು) ಎದುರುಬಂದು 'ಇದರೊಳಗೆ ಕೊಡ್ರುವಿರೋ' ಎಂದು ಕೇಳಿದನು. ಅದಕ್ಕೆ ಬಾಡಿಗೆಯು ೨ ರೂಪಾಯಿಗಳು ಆಗುವುವೆಂದನು. ಆದರೆ ನಮಗೆ ಕೊಡ್ರುವ ರೂಢಿಯಿರುವದಿಲ್ಲ. ನಮ್ಮನ್ನು ನೋಡಿ ಭಯವಾಗದಿದ್ದರೆ ೧ ರೂಪಾಯಿ ಕೊಡುವೆವೆಂದೆವು. ಅದಕ್ಕೆ ಅವನು ಒಪ್ಪಿ ಆ ಆಸನದಲ್ಲಿ ನಮ್ಮನ್ನು ಕೂಡಿಸಿ ಹೊತ್ತುಕೊಂಡು ಹೊರಟನು. ಆದರಲ್ಲಿ ಕೊಡ್ರುವದರಿಂದ ಏನೂ ವೆನಿಸಲಿಲ್ಲ ... ಅನಿವಾರ್ಯಪಕ್ಷಕ್ಕೆ ಸ್ವಲ್ಪ ನಡಿಯುತ್ತ ಕೊಡ್ರುತ್ತ ಹೋದೆವು. ಮಧ್ಯದಲ್ಲಿ ಒಂದು ಕಡೆ ಮೇಲಿನಿಂದ ನೀರ ... ತ್ತು. ಮತ್ತೊಂದು ಕಡೆಯಲ್ಲಿ ನೀರು

... ಯಿತು. ಅಂತು ಇಂತು ಸಾಗುತ್ತ ಗರುಡಮೂರ್ತಿಯ ಮಂದಿರಕ್ಕೆ ಬಂದೆವು. ಈ ಗರುಡಮಂದಿರವು ಕೇದಾರಸಂಸ್ಥಾನದ ವಶದಲ್ಲಿರುವದು. ಅಲ್ಲಿಂದ ಮುಂದಕ್ಕೆ ಸಾಗುವದರೊಳಗೆ ಶ್ರೀ ಕೇದಾರೇಶ್ವರಮಂದಿರವು ದೃಷ್ಟಿಗೋಚರವಾಯಿತು. ಅಲ್ಲಿಂದ ... ದೂರ ಹೋಗುವದರೊಳಗಾಗಿ ಸಮತಲಭೂಮಿಯು ... ಆದ್ದರಿಂದ ಪಾದಚಾರಿಗಳಾಗಿ ನಡಿಯುತ್ತ ಮಂದಾಕಿನಿ ... ವನ್ನು ದಾಟಿ ಶ್ರೀ ಕೇದಾರಪುರಿಯಂ ಪ್ರವೇಶಿಸಿ ಕೇದಾರ ಮಂದಿರದ ಪುರೋಭಾಗದಲ್ಲಿ ಹಾಯ್ದು ಶ್ರೀ ಜಗದ್ಗುರುಗಳು ಮೊದಲೇ ದಯಮಾಡಿಸಿ ಮುಕ್ಕಾಂ ಮಾಡಿದ್ದ ಮಠಕ್ಕೆ ಹೋದೆವು. ಅಲ್ಲಿ ಚಳಿಯು ಪೂರ್ವಸ್ಥಳಗಳಿಗಿಂತ ಹೆಚ್ಚಾಗಿತ್ತು. ಜಗದ್ಗುರುಗಳು ಮಠದ ಮಧ್ಯದಲ್ಲಿ ಅಗ್ನಿಯ ಕಾವು ಹಿಡಿಸಿಕೊಂಡಿದ್ದರು. ಅವರಿಗೆ ನಮಸ್ಕರಿಸಿ ನಾವೂ ಅಗ್ನಿದೇವನ ಆಶ್ರಯದಲ್ಲಿ ಮಂಡಿಸಿದೆವು. ಅನಂತರ ... ಸರಿಯಾಗಿ ಉಷ್ಣಜಲದಿಂದ ಸ್ನಾನವಂ ಮಾಡಿ ... ಧರಿಸಿಕೊಂಡೆವು. ಜಗದ್ಗುರುಗಳು ನಮಗಿಂತಲೂ ಮೊದಲು ಸ್ನಾನಮಾಡಿ ಮಂದಿರದಲ್ಲಿ ಪ್ರವೇಶಮಾಡಿದರು. ಅವರ ಹಿಂದೆ ನಾವೂ ಪ್ರವೇಶಮಾಡಿದೆವು. ಶ್ರೀ ಜಗದ್ಗುರುಗಳು ಶ್ರೀ ಕೇದಾರಲಿಂಗಮೂರ್ತಿಯಂ ಮುಟ್ಟಿ ಮಂದಾಕಿನೀ ಜಲದಿಂದ ಮಜ್ಜನವಂ ಮಾಡಿ ಭಸ್ಮ ಗಂಧ ಪತ್ರಪುಷ್ಪಾದಿಗಳಿಂದ ಪೂಜಿಸಿದರು. ತರುವಾಯ ನಮಗ ಪೂಜಿಸಲು ಅಪ್ಪಣೆಯನ್ನು ಕೊಡಲು ಸಂಕಲ್ಪ ಮಾಡಿದರೇ ನಾವು ಪೂಜಿಸಲು ಸಿದ್ಧರಾದೆವು. ಮೊದಲು ... ಬ್ರಹ್ಮ, ಪುರುಷಸೂಕ್ತ, ಶ್ರೀ ರುದ್ರಮಂತ್ರಗಳನ್ನು ಪಠಿಸುತ್ತ ಜಲಧಾರೆಯನ್ನೆರೆಯುತ್ತಿದ್ದೆವು. ಆಗ್ಗೆ ದಾಕ್ಷಿಣಾತ್ಯ ... ಪವೀತಧರವಾತೇಶ್ವರನೋರ್ವನು ವೈದಿಕವಾಗಿ ... ಹೇಳುತ್ತಿದ್ದನು. ಅನಂತರ ಭಸ್ಮ ಗಂಧ ಅಕ್ಷತೆ ಪತ್ರ ... ಹಾಗೂ ನಾವು ಸಂಕಲ್ಪಪೂರ್ವಕವಾಗಿ ತೆಗೆದುಕೊಂಡು ಹೋದ ... ಹತ್ತು ರೂಪಾಯಿಗಳನ್ನೂ ೩-೪ ರೂಪಾಯಿಗಳ ಒಂದು ವಸ್ತ್ರವನ್ನೂ ಕೇದಾರೇಶ್ವರನಿಗೆ ಅರ್ಪಿಸಿ ನಮಸ್ಕರಿಸಿ ನಂತರ ... ವಂಮಾಡಿ ಉದಕಕುಂಡದಲ್ಲಿ ಆಚಮನವಂ ಮಾಡಿ ... ಕ ಪೂಜಾಮಂದಿರಕ್ಕೆ ಬಂದು ನಮ್ಮ ಹಸ್ತದಲ್ಲಿ ... ಶಿವಲಿಂಗವಂ ಯಥಾವಿಧಿಯಾಗಿ ಪೂಜಿಸಿ ಶ್ರೀ ರುದ್ರ ... ವನ್ನು ಮಾಡಿ ಉತ್ತಪ್ತಿಯಂ ನೈವೇದ್ಯಮಾಡಿ ... ದವಂ ಸ್ವೀಕರಿಸಿದೆವು. ತರುವಾಯ ಪುನಃ ಅಗ್ನಿದೇವನ ... ಯಲ್ಲಿಯೇ ಕೂತುಕೊಂಡು ಅನೇಕಾನೇಕ ಉಗ್ಗೆ ... ಹೊದ್ದುಕೊಂಡು ವಿಶ್ರಮಿಸಿದೆವು. ಆದರೆ ಶ್ರೀ ಜಗದ್ಗುರು ... ಪೀಠಾಧೀಶರು ೮-೧೦ ವರ್ಷಗಳಿಂದಲೂ ಈ ಮಠಕ್ಕೆ ... ಮಾಡಿಸದಿದ್ದುದರಿಂದ ಎಲ್ಲರೂ ಸಂತೋಷವಂತರಾಗಿ ... ಮಾಡಲು ಆತುರಪಡುತ್ತಿದ್ದರು. ಮತ್ತು ಸರ್ವರು ... ಸಮರ್ಪಿಸಿ ನಮಸ್ಕರಿಸುತ್ತಿದ್ದರು. ಜಗದಾಚಾರ್ಯರು ... ರೊಡನೆಯೂ ಪ್ರೀತಿಪೂರ್ವಕವಾಗಿ ಸಂಭಾಷಣವಂ ... ಮಾಡುತ್ತಿದ್ದರು. ಮತ್ತು ಪ್ರತಿವರ್ಷದಲ್ಲಿ ಇಲ್ಲಿಯೇ ... ಬೇಕೆಂದು ಜನರು ಪ್ರಾರ್ಥಿಸಿದರು. ಅದಕ್ಕೆ ... ೮ ವರ್ಷಗಳಿಂದಲೂ ಬರದೇ ಇದ್ದುದಕ್ಕೆ ಕಾರಣ ... ಕೊಡಿಸಿದರು.

ವಿವಾಹಮಹೋತ್ಸವವು.

ಚನ್ನಪ್ಪನಪುರ.

ಚಾಮರಾಜನಗರದ ತಾಲೂಕು ಹರದನಹಳ್ಳಿ ಚನ್ನಪ್ಪನಪುರದ ಮಠದಲ್ಲಿರುವ ಹರದನಹಳ್ಳಿ ಶ್ರೀ ... ಮಯವರ ಮಠದ ಕೆ. ಪುಟ್ಟಸೋಮಾರಾಧ್ಯರ ... ದರಾದ ಕುಮಾರಾರಾಧ್ಯರ ಮಕ್ಕಳು ಚಿ|| ಚನ್ನ ... ರಿಗೆ ಚಾಮರಾಜನಗರದ ತಾಲೂಕು ಉಮ್ಮ ... ಚನ್ನಬಸವಾರಾಧ್ಯರ ಪುತ್ರಿ ಸೌ|| ಮಹಾ ... ಕೊಟ್ಟು ಚನ್ನಪ್ಪನಪುರದ ನೂತನ ಮಠದಲ್ಲಿ ... ಸೋಮವಾರದ ದಿವಸ ವಿವಾಹಮಹೋತ್ಸವ ... ಹಳ್ಳಿ ... ಮಠದ ಪುಟ್ಟಸೋಮಾರಾಧ್ಯರು ಮುಂ ... ಹೊಸೂರು ಮಠದ ನಂಜುಂಡಾರಾಧ್ಯರು ವಿಧಿ ... ವೇರಿಸಿದರು. ವಿವಾಹಾಂಗಭೂತಗಳಾದ ಗಣ ... ಅಂಕುರಾರ್ಪಣ ಪಂಚಕಲಶಸ್ಥಾಪನ ಅಷ್ಟಾವ ... ಧಳಿ ವಟುಗಳಿಗೆ ಶಿವದೀಕ್ಷಾ ಸಂಸ್ಕಾರ ಇತ್ಯಾದಿ ... ಕಾಲಕಾಲಕ್ಕೆ ಸರಿಯಾಗಿ ನೆರವೇರಿಸಲ್ಪಟ್ಟವು. ... ಕಾರರು ಮ|| ಕೆ. ಪಿ. ವೀರಪ್ಪನವರು, ವೇ|| ... ಶಿವಲಿಂಗಾರಾಧ್ಯರು, ವೇ|| ಮಂಗಲದ ಮಠದ ... ರಾಧ್ಯರು ಹೊಸೂರು ಮಠದ ಚನ್ನವೀರಭದ್ರಾ ... ಲಿಂಗಾರಾಧ್ಯರು, ನಂಜನಗೂಡು ಮಠದ ವೇ|| ... ವಾರಾಧ್ಯರು, ಮಂಗಲದ ಮಠದ ವೇ|| ಮಲ್ಲಿ ... ರು, ವೀರಶೈವ ಮಹೇಶ್ವರರು ಭಕ್ತರು ಮು ... 2000 ಜನರು ಸೇರಿದ್ದರು. ಮ|| ರಾ|| ಪುಟ್ಟ ... ಎಲ್ಲರನ್ನೂ ಆತ್ಮಾದರಪೂರ್ವಕವಾದ ಸತ್ಕಾರದಿಂ ... ಳಿಸಿದರು. ಈ ಮಹೋತ್ಸವಸಮಯದಲ್ಲಿ ವೇ|| ... ಸೋಮಾರಾಧ್ಯರು ವೇ|| ನಂಜುಂಡಾರಾಧ್ಯರು ... ಮೇರೆಗೆ ವರನ ಕಡೆಯಿಂದ 1 ರೂ. ವಧುವಿನ ... ಒಟ್ಟು 2 ರೂಪಾಯಿಗಳನ್ನು ಪ್ರಭಾಪೋಷಣ ... ಸಿದರು. ಈ ವಧೂವರರಿಗೆ ಶ್ರೀ ಜಗದ್ಗುರು ... ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ... ದಯೆಂದು ಕೋರುವ.

ನೋಡಬಹುದು. ಅದರಲ್ಲಿ ಜಹಜಿನ ಕೆಲಸಗಾರರೇ 1,000 ಜನ !

ತಿರುಪತಿಯಲ್ಲಿ 18 ವರ್ಷದ ಒಬ್ಬ ಗೊಲ್ಲರ ಹುಡುಗಿಯನ್ನು ತಂದೆತಾಯಿಗಳು ಆಕೆಯ ಇಚ್ಛೆಗೆ ವಿರೋಧವಾಗಿ ಒಬ್ಬ ಸ್ವಜಾತಿಯವನಿಗೆ ಕೊಟ್ಟು ವಿವಾಹ ನಡೆಸಿ ಆಕೆಯನ್ನು ಒಬ್ಬ ಮುದುಕಿಯೊಡನೆ ಗಂಡನ ಮನೆಗೆ ಕಳುಹಿಸಲು ದಾರಿಯಲ್ಲಿ ಹುಡುಗಿಯು ನೀರು ಕುಡಿದು ಬರುತ್ತೇನೆಂದು ಹೇಳಿ ಹೋಗಿ ಹತ್ತಿರದಲ್ಲಿದ್ದ ಒಂದು ಭಾವಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿಕೊಂಡಳು.

ಕಳೆದವಾರ ಎರಡು ಬ್ರಿಟಿಷರ ಯುದ್ಧದಹಡಗುಗಳಲ್ಲಿ ಆಕಸ್ಮಿಕ ಅನಾಹುತಗಳು ಸಂಭವಿಸಿದುವು. 24 ನೆಯ ತಾರೀಖಿನ ದಿವಸ ಒಂದು ಜಹಜಿನಲ್ಲಿದ್ದ ಮದ್ದು ಸಿಡಿದು ಒಬ್ಬನು ಮೃತಪಟ್ಟನು; ಇಬ್ಬರಿಗೆ ತುಂಬಾ ಗಾಯಗಳಾದವು. 26 ನೆಯ ತಾರೀಖಿನ ದಿವಸ ಮೆಡಿಟರೇನಿಯನ್ ಕಡಲಿನಲ್ಲಿ ಒಂದು ಜಹಜಿನಲ್ಲಿ ಗುಂಡು ಹಾರಿಸುವದನ್ನು ಕಲಿಸುತ್ತಿದ್ದಾಗ ಒಂದು ದೊಡ್ಡ ಫಿರಂಗಿಯು ಒಡೆದು 17 ಜನರು ಮೃತಪಟ್ಟರು.

ಪ್ರಪಂಚದಲ್ಲಿ ಅತಿ ವಿನೋದವಾದ ದೇವಾಲಯವು ನಾರ್ವೇ ದೇಶದಲ್ಲಿ ಬೆರ್ಗ್ನ ಎನ್ನುವ ಊರಿನಲ್ಲಿರುವುದಂತೆ. ಬೇಯದ ಸುಣ್ಣದ ನೀರು, ಒಡೆದುಹೋದ ಹಾಲು, ಅನೇಕ ಸಾವಿರ ಮೊಟ್ಟೆಗಳನ್ನೊಡೆದು ತೆಗೆದ ವಸ್ತು. ಇವುಗಳನ್ನೆಲ್ಲಾ ಸೇರಿಸಿದ ಕಾಗದದಿಂದಲೇ ಈ ದೇವಾಲಯವನ್ನು ಕಟ್ಟಿರುವರಂತೆ. ಈ ದೇವಾಲಯದಲ್ಲಿ ಒಂದೇ ಸಮಯದಲ್ಲಿ ಸಾವಿರಜನರು ನಿಲ್ಲಲು ಸಾಕಾದಷ್ಟು ಸ್ಥಳವಿರುವುದಂತೆ !

ಸರ್ ಜೋಸೆಫ್ ವಿಸಿಸ್‌ಬರ್ಗ್ ಎಂಬ ಜರ್ಮನಿಯ ಪ್ರಸಿದ್ಧ ಜ್ಯೋತಿಷ್ಕನು ಜುಲೈ 13 ಕ್ಕೆ ಜರ್ಮನಿಯಲ್ಲಿ ಪ್ಲೇಗು ಪ್ರಾರಂಭವಾಗಿ ಅಸಂಖ್ಯಾತ ಜನರು ಸಾಯುವರೆಂದು ಹೇಳಿರುವನಂತೆ ! ಈ ಜ್ಯೋತಿಷ್ಕನು ತನ್ನ ಮಂತ್ರಬಲದಿಂದ ಹಿಂದಿನ ರಾಜರುಗಳನ್ನೂ ಸೈನಿಕರನ್ನೂ ಯಾವಾಗಲಾದರೂ ಆವಾಹನೆಮಾಡಿ ಮಾತನಾಡಿಸುವನಂತೆ ! ಇಂಥ ಜ್ಯೋತಿಷ್ಕನು ಪಶ್ಚಿಮ ದೇಶದಲ್ಲಿ ಇದುವರೆಗೆ ಯಾರೂ ಹುಟ್ಟಿರಲಿಲ್ಲವಂತೆ !

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದಲ್ಲಿ ಉತ್ಸವದ ಜೊತೆಯಲ್ಲಿ ಹೋಗುತ್ತಿದ್ದ ಒಂದು ಭಾರೀ ಆನೆಗೆ ಇದ್ದಕ್ಕಿದ್ದಹಾಗೆ ಸುದಸೇರಿ ಹತೋಟಿ ತಪ್ಪಿ ಮಾವುತನನ್ನು ಕೆಳಕ್ಕೆ ಬೀಳಿಸಿ ಕೊಂದುಹಾಕಿತು. ಆ ಆನೆಯ ಯಜಮಾನನು ಮೋಟಾರಿನಲ್ಲಿ ಬಂದು ಅದನ್ನು ಸಮಾಧಾನಪಡಿಸಲು ಯತ್ನಿಸಿದಾಗ ಅವನನ್ನೂ ಕೆಡವಿ ಅವನ ಮೋಟಾರನ್ನು ಹಾಳುಮಾಡಿತು. ಕಡೆಗೆ ಪೋಲೀಸಿನವರು ಗುಂಡಿನಿಂದ ಆನೆಯನ್ನು ಕೊಂದುಬಿಟ್ಟರು.

ಲಂಡನ್ ಪಟ್ಟಣದಲ್ಲಿ ನೂತನವಿಧವಾದ ... ಯಂತ್ರವನ್ನು ಕಂಡು ಹಿಡಿದಿರುವರು. ಆ ಯಂತ್ರವನ್ನು ಹಣ, ಒಡವೆ ಮೊದಲಾದುವುಗಳನ್ನು ಇಟ್ಟಿರುವ ಕಬ್ಬಿಣದ ಪೆಟ್ಟಿಗೆಯೊಡನೆ ಜೋಡಿಸಿಟ್ಟರೆ ಅದನ್ನು ಪಯೋಗಿಸಲು ಬಲ್ಲವರು ಹೊರ್ತು ಮತ್ತಾರಾದರೂ ಮುಟ್ಟಿದರೆ ಕೂಡಲೇ ಘಟ್ಟಿಯಾಗಿ ಘಂಟೆಬಾರಿಸುವ ಸದ್ದಾಗುವುದಂತೆ. ತಕ್ಷಣವೇ ಹೆಚ್ಚು ಬೆಳಕುಂಟಾಗಿ ಪೆಟ್ಟಿಗೆಯನ್ನು ಮುಟ್ಟುವವರ ಛಾಯಾಚಿತ್ರವನ್ನು ತೆಗೆಯುವುದಂತೆ. ಆ ಪೆಟ್ಟಿಗೆಗೆ ಬೆಂಕಿಯು ಸೋಕಿದರೂ ಕೂಡ ಗಂಟೆಬಾರಿಸುವುದಂತೆ.

ಅಫ್ಘಾನಿಸ್ಥಾನದಲ್ಲಿ ಈಗ ತಾನೇ ದೊರೆಯೆಂದು ಹೇಳಿಸಿಕೊಳ್ಳುತ್ತಿರುವ ಬಚ್ಚಾ-ಇ-ಸಾಕನು ಹಿಂದೆ ಪೆಶಾವರದಲ್ಲಿ ಒಂದು ಚಹಾ ಅಂಗಡಿಯಲ್ಲಿ ದುಡಿಯುತ್ತಿದ್ದನಂತೆ ! ಒಮ್ಮೆ ಇವನು ಒಂದು ಕಳ್ಳತನಮಾಡಿ ಪೋಲೀಸರ ಕೈಗೆ ಸಿಕ್ಕಿ ಅವರಿಂದ ಬಾರುಕೋಲಿನ ಪೆಟ್ಟುಗಳನ್ನು ತಿಂದು ಅವಮಾನದಿಂದ ಯಾರಿಗೂ ಮುಖವನ್ನು ತೋರಿಸದೆ ಕಾಬೂಲಿಗೆ ಓಡಿಹೋಗಿ ಅಲ್ಲಿ ಒಂದು ಪುಂಡರ ಗುಂಪನ್ನು ಸೇರಿಕೊಂಡನಂತೆ ! ಈಗ ಅವನೇ ಪ್ರಬಲನಾಗಿ ಅಫ್ಘಾನಿಸ್ಥಾನದ ಅಮೀರನೆನಿಸಿಕೊಳ್ಳುತ್ತಿರುವನು ! ದೈವಲೀಲೆಯು ಅಗಾಧವಾದುದು !

ಪ್ಯಾರಿಸ್ ನಗರದಲ್ಲಿ "ಬಿಬ್ಲಿಯಾಥಿಕ್ ನೇಷನಲ್" ಎನ್ನುವುದೊಂದು ದೊಡ್ಡ ಪುಸ್ತಕಭಂಡಾರದಲ್ಲಿ ಶೇಖರಮಾಡಲ್ಪಟ್ಟಿರುವ ಒಂದು ತಾಳೇಗರಿ ಪುಸ್ತಕವೇ ಪ್ರಪಂಚದಲ್ಲಿರುವ ಎಲ್ಲ ತಾಳೇಗರಿ ಪುಸ್ತಕಗಳಿಗಿಂತ ಬಹಳ ಪುರಾತನವಾದದ್ದಂತೆ. ಯೇಸುಕ್ರಿಸ್ತನು ಹುಟ್ಟುವುದಕ್ಕೆ ಮೂರುಸಾವಿರದ ಮುನ್ನೂರ ಅರವತ್ತಾರುವರ್ಷಗಳ ಹಿಂದೆ ಈಜಿಪ್ಟ ದೇಶದಲ್ಲಿದ್ದ "ಅಸ್ಸಾ" ಎನ್ನುವ ಅರಸನು ಆಳುವಾಗ "ಪ್ಟಾಹೊಟೆಪ್" ಎಂಬುವರಿಂದ ಬರೆಯಲ್ಪಟ್ಟಿತಂತೆ. ಅದರಲ್ಲನೇಕವಿಧ ತತ್ವಗಳೂ, ಲೋಕಾನುಭವಗಳೂ, ಮುಖ್ಯವಾಗಿ ಸ್ತ್ರೀಯರಲ್ಲಿ ಮರ್ಯಾದೆಯೂ ಪ್ರೀತಿಯೂ ಇರಬೇಕೆಂದೂ, ಎಲ್ಲರೂ ಒಬ್ಬನೇ ದೇವರನ್ನು ಪೂಜಿಸಬೇಕೆಂದೂ ಬರೆದಿರುವುದಂತೆ.

ಕಳೆದ ತಿಂಗಳು 22 ನೆಯ ತಾರೀಖಿನ ದಿವಸ ಇಂಗ್ಲೆಂಡಿನ ಯಾರ್ಕ್‌ಷೈರಿನಲ್ಲಿ ಕೆಲವು ಮಂದಿ ಸ್ತ್ರೀ ಪುರುಷರು ವಿನೋದಾರ್ಥವಾಗಿ ಒಂದು ಮೋಟಾರು ಕೋಚಿನಲ್ಲಿ ಬ್ಲೂ ಬ್ಯಾಂಕ್ ಹಿಲ್ ಎಂಬ ಬೆಟ್ಟದ ಮೇಲಕ್ಕೆ ಹೋಗಿದ್ದರು. ಮೋಟಾರು ಬೆಟ್ಟದ ತುದಿಯಲ್ಲಿ ಹತೋಟಿ ತಪ್ಪಿ ಕೆಳಮುಖನಾಗಿ ಬಂದು ಒಂದು ಕಲ್ಲಿನ ಗೋಡೆಗೆ ತಗುಲಿ, ಇಳಿಜಾರಾಗಿದ್ದ ಒಂದು ತೋಟದೊಳಕ್ಕೆ ತಲೆಕೆಳಗಾಗಿ ಮಗುಚಿತು. ಮೂವರು ಸ್ತ್ರೀಯರು ಕೂಡಲೇ ಮೃತಪಟ್ಟರು. 20 ಜನಕ್ಕೆ ಪೂರಾ ಗಾಯಗಳಾದುವು. 8 ಜನರಿಗೆ ಸ್ವಲ್ಪ ನೋವಾಯಿತು. ಈ ಮಧ್ಯೆ ಮೋಟಾರು ಕೆಳಕ್ಕೆ ಬರುವಾಗ ಒಂದು ಜೇನಿನ ಗೂಡಿಗೆ ತಗಲಿ, ಜೇನು ಹುಳುಗಳು ಗುಂಪಾಗಿ ಹಾರಿ ಬಂದು, ಮೊದಲೇ ತಲೆಕೆಳಕಾದ ಮೋಟಾರಿನಿಂದ ಉರುಳಿ ಗಾಯಪಟ್ಟಿದ್ದ ಜನರನ್ನು ಕಚ್ಚಿ ಮತ್ತಷ್ಟು ತೊಂದರೆಗೊಳಪಡಿಸಿದುವು.

ಮಧ್ಯ ಆಫ್ರಿಕಾಖಂಡದಲ್ಲಿ 'ಟ್ಸಾಟ್' (tsat) ಎನ್ನುವ ಒಂದು ದೊಡ್ಡ ಕೆರೆಯ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ವಾಸಮಾಡುವ ಸ್ತ್ರೀಯರಿಗೆಲ್ಲಾ ತುಟಿಗಳು ಜೋಲುಬಿದ್ದಿರುವುವಂತೆ. ಹೆಣ್ಣುಮಕ್ಕಳು ನಾಲ್ಕೈದು ವರ್ಷ ವಯಸ್ಸಾಗುವಾಗ ತುಟಿಗಳೆರಡನ್ನೂ ಸೇರಿಸಿ ಕತ್ತಿಯಿಂದ ತೂತುಮಾಡಿ ಅದರಲ್ಲೊಂದು ಕಡ್ಡಿಯನ್ನು ಸಿಗಿಸಿಬಿಡುವರಂತೆ. ಬರುತ್ತ ಬರುತ್ತ ದಪ್ಪ ದಪ್ಪ ಕಡ್ಡಿಗಳನ್ನು ಹಾಕುವುದರಿಂದ ತುಟಿಗಳು ಉದ್ದವಾಗುತ್ತ ಬರುವವಂತೆ. ಇಪ್ಪತ್ತೈದು ವಯಸ್ಸಾಗುವ ವೇಳೆಗೆ ಮೇಲುತುಟಿಯು ಐದು ಅಂಗುಲ ಉದ್ದವೂ, ಕೆಳಗಣ ತುಟಿಯು ಏಳು ಅಂಗುಲ ಉದ್ದವೂ ಆಗುವುದಂತೆ. ಯಾವ ಸ್ತ್ರೀಗೆ ತುಟಿಗಳು ಉದ್ದವಾಗಿರುವುವೋ, ಅವಳೇ ರೂಪವತಿಯೆಂದೂ ನಾಗರಿಕಳೆಂತಲೆಂದೂ ಆ ದೇಶದ ಶ್ರೀಮಂತರು ಭಾವಿಸಿ ಅವಳನ್ನು ವರಿಸಲು ನಾನು ತಾನೆಂದು ಮೇಲೆಬಿದ್ದು ಬರುವರಂತೆ. ಕಿವಿಗಳನ್ನೀರೀತಿ ಬೆಳೆಸುವುದು ಹಿಂದುಸ್ಥಾನದ ತಿರುನಲ್ವೇಲಿ ಮೊದಲಾದ ಕಡೆ ಪದ್ಧತಿಯಿದೆ.

ಅಫ್ಘಾನಿಸ್ಥಾನದಲ್ಲಿ ಈಗ ರಾಜನಾಗಿರುವ ಬಚ್ಚಾಯಿಸಾಕನು ರಾಜ್ಯದಲ್ಲಿ ಕೆಲವು ಸುಧಾರಣೆಗಳನ್ನು ನಡೆಸಬೇಕೆಂದು ಉರ್ದೂಭಾಷೆಯಲ್ಲಿ ಒಂದು ಪ್ರಕಟನೆಯನ್ನು ಹೊರಡಿಸಿರುತ್ತಾನೆ. ಅದರಲ್ಲಿ "ಧರ್ಮಶಾಸ್ತ್ರವನ್ನು ಪುನರ್ವಿಮರ್ಶೆಮಾಡಿ ಕ್ರಿಮಿನಲ್ ಸಿವಿಲ್ ಮತ್ತು ರಾಜಕಾರ್ಯಗಳನ್ನು ವಿಚಾರಿಸುವ ಕೋರ್ಟು ಎಂದು ಮೂರು ಕೋರ್ಟುಗಳನ್ನು ಸ್ಥಾಪಿಸಬೇಕು. ಪೋಲೀಸಿನವರನ್ನೂ ಸೈನ್ಯದ ಸಿಬ್ಬಂದಿಯನ್ನೂ ಹೆಚ್ಚಿಸಿ ಪ್ರಜೆಗಳ ಮಾನ, ಪ್ರಾಣ, ಆಸ್ತಿಪಾಸ್ತಿಗಳ ರಕ್ಷಣೆಗೆ ಹೆಚ್ಚುಗಮನ ಕೊಡಬೇಕು. ಅಲ್ಲದೆ ಸ್ವತಃ ಪ್ರಜೆಗಳಿಂದ ಫಿರ್ಯಾದನ್ನು ವಿಚಾರಿಸಬೇಕೆಂದು ಇರಾದೆಪಟ್ಟಿರುವೆನು. ನನ್ನ ಪ್ರಾಣತೆಗೆಯಲು ಪ್ರಯತ್ನಪಟ್ಟವರು ವಿನಾ ಉಳಿದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದು. ಅಫ್ಘನ್ ವಿದ್ಯಾರ್ಥಿಗಳಿಗೆ ತಕ್ಕ ಸಹಾಯದ್ರವ್ಯವು ಕೊಡಲ್ಪಡುವುದು." ಎಂದು ನಮೂದಿಸಿರುವನು. ಅಲ್ಲದೆ ಬಾಕಿ ನಿಂತಿರುವ ಕಂದಾಯವನ್ನು ಕಡ್ಡಾಯವಾಗಿ ವಸೂಲುಮಾಡುತ್ತಿರುವನು. ಕಾಂದಹಾರಿನಲ್ಲಿ ನಡೆದ ದರ್ಬಾರಿನಲ್ಲಿ ಸರ್ಕಾರ ಬಂದೂಕಗಳು ಯಾರಲ್ಲಿದ್ದರೂ ಅವರೆಲ್ಲ ವಾಪಸ್ ಕೊಟ್ಟುಬಿಡಬೇಕು, ಇಲ್ಲವಾದರೆ ಕಠಿಣಶಿಕ್ಷೆಗೆ ಗುರಿಯಾಗುವರೆಂದು ಅಫ್ಘನ್ ಹೊಸ ಗವರ್ನರಾದ ಅಬ್ದುಲ್ ಗಾದರ್ ಖಾನ್ ರವರು ಸೂಚಿಸಿರುವರು. ಇದರಿಂದ ಜನಗಳಿಗೆ ಬಹಳ ಅಸಮಾಧಾನವುಂಟಾಗಿ ಎದುರುಬಿದ್ದಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಸನ್ಮಾನಸಮಾರಂಭಸಭಾ ಗದಗ.

ಧಾರವಾಡ ಜಿ|| ಗದಗ ಪಟ್ಟಣದಲ್ಲಿ ತಾರೀಖು ೨೯-೭-೨೯ ನೆಯ ದಿವಸ ತಾಲೂಕುಬೋರ್ಡ್ ಪ್ರೆಸಿಡೆಂಟರಾದ ಶ್ರೀಮಂತ ವೀರಪ್ಪನವರ ಚವಡಿ ಇವರಿಗೆ ದಯಾಳುಗಳಾದ ಬ್ರಿಟಿಷ್ ಸಾರ್ವಭೌಮರವರು "ರಾವಸಾಹೇಬ್" ಎಂಬ ಪದವಿಯನ್ನು ದಯಪಾಲಿಸಿದ ಸಂತೋಷಕ್ಕಾಗಿ ಇಲ್ಲಿ ಸಕಲ ಜನಾಂಗದ ಪ್ರಮುಖ ಗೃಹಸ್ಥರು ಅತ್ಯಂತ ಉತ್ಸಾಹದಿಂದ ಪದವೀಸನ್ಮಾನ ಸಮಾರಂಭ ಕಾರ್ಯವನ್ನು ನೆರವೇರಿಸಿದರು. ಸದರಿ ಸಮಾರಂಭವು ಅತಿರಮಣೀಯವಾದ ತಾಲೂಕು ಲೋಕಲ್‌ಬೋರ್ಡ್ ಭವನದಲ್ಲಿ ನೆರವೇರಿತು. ಈ ಸಮಾರಂಭಕ್ಕೆ ಸರಕಾರಿ ಅಧಿಕಾರಿಗಳೂ, ಪದವೀಧರರೂ, ಲೋಕಲ್‌ಬೋರ್ಡಿನ ಮೆಂಬರರೂ, ಪುರಪ್ರಮುಖರೂ, ವ್ಯಾಪಾರಿಗಳೂ ಇವರೇ ಮೊದಲಾದವರು ಆಗಮಿಸಿದ್ದರು. ಸರ್ವರ ಪ್ರಾರ್ಥನೆಯ ಮೇರೆಗೆ ಮೆ|| ಗದಗ ತಾಲೂಕಿನ ಮಾಮಲೇದಾರ ಸಾಹೇಬರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅನಂತರ ಗದಗ ಮುನಸಿಪಾಲಟಿಯ ಪ್ರೆಸಿಡೆಂಟರಾದ ಮಿ|| ತೋಟಪ್ಪಣ್ಣ ಕೋಟಿ ಬಿ.ಎ., ಎಲ್.ಎಲ್.ಬಿ. ವಕೀಲರವರು ಸದರಿ ರಾವಸಾಹೇಬರವರು ಆಗರ್ಭ ಶ್ರೀಮಂತರಿದ್ದು ಆ ಶ್ರೀಮಂತಿಕೆಗೆ ಅನುರೂಪವಾದ ಶಾಂತಿ, ಸೌಜನ್ಯ, ಪರೋಪಕಾರ ಬುದ್ಧಿ, ಪ್ರಾಮಾಣಿಕತನ ಮೊದಲಾದ ಸದ್ಗುಣಗಳಿಂದ ಭೂಷಿತರಾಗಿ ಸಕಲ ಜನರ ಪ್ರೇಮಕ್ಕೆ ಪಾತ್ರರಾಗಿರುವರೆಂದೂ, ಇವರು ಈಗ್ಗೆ ೨೧ ವರ್ಷಗಳಿಂದ ಸ್ವಂತ ಕಾರ್ಯಗಳ ಕಡೆಗೆ ಗಮನಕೊಡದೆ ಎರವನೆಯವರ ಹಿತದ ಕಡೆಗೆ ದೃಷ್ಟಿಯನ್ನಿಟ್ಟು ಲೋಕಲ್‌ಬೋರ್ಡ್, ಕೋಆಪರೇಟಿವ್, ರೆಡ್‌ಕ್ರಾಸ್ ಮೊದಲಾದ ಸಾರ್ವಜನಿಕ ಕೆಲಸಗಳನ್ನು ವಿಶೇಷ ದಕ್ಷತೆಯಿಂದ ನೆರವೇರಿಸಿ ಸಕಲ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವರಲ್ಲದೆ ಕಳೆದು ಹೋದ ಯುದ್ಧಸಮಯದಲ್ಲಿ ಸರಕಾರಕ್ಕೆ ನಾನಾರೀತಿಯಿಂದ ಸಹಾಯವಮಾಡಿ ಸರಕಾರದವರ ಅಸಾಧಾರಣವಾದ ವಿಶ್ವಾಸಕ್ಕೆ ಪಾತ್ರರಾಗಿರುವರೆಂದೂ, ಇಂಥ ಅನೇಕಾನೇಕ ಸ್ತುತ್ಯ ಕಾರ್ಯಗಳನ್ನು ಮಾಡಿ ರಾಜ ಪ್ರಜೆಗಳ ನೈಜವಾದ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ಈಗ ಬಂದಿರುವ ಪದವಿಗಿಂತಲೂ ಹೆಚ್ಚಾದ ಪದವಿಯನ್ನು ಪಡೆಯಲು ಯೋಗ್ಯರಾಗಿದ್ದರೂ ಸಹ ನಮ್ಮ ಸರಕಾರದವರು ಅಂಥ ಹೆಚ್ಚಿನ ಪದವಿಯನ್ನು ಅನುಗ್ರಹಿಸದಿರುವದು ಒಂದು ರೀತಿಯಿಂದ ಮನಸ್ಸಿಗೆ ಕೊರತೆಯಾಗಿರುವದೆಂದೂ, ಮುಂದಾದರೂ ಸರಕಾರದವರು ಇವರ ಯೋಗ್ಯತೆಗನುಸಾರವಾದ ಪದವಿಯನ್ನು ದಯಪಾಲಿಸಿ ಸರ್ವರಿಗೆ ಆನಂದವನ್ನುಂಟುಮಾಡಲೆಂದೂ, ಸದರಿ ರಾವಸಾಹೇಬರವರಿಂದ ಉತ್ತರೋತ್ತರವಾಗಿ ಜನಹಿತಕಾರ್ಯಗಳು ವಿಶೇಷವಾಗಿ ನೆರವೇರಲೆಂದೂ ಹೇಳಿ ಸ್ವಸ್ಥಾನವನ್ನು ಅಲಂಕರಿಸಿದರು. ಆಮೇಲೆ ಕೆಲವು ಜನ ಸಭ್ಯಗೃಹಸ್ಥರು ಮಿ|| ಕೋಟಿ ವಕೀಲರು ಮಾತನಾಡಿದ ವಿಷಯವನ್ನೇ ಪುಷ್ಟೀಕರಿಸಿ ಹೇಳಿದರು. ಬಳಿಕ ಮೆ|| ಮಾಮಲೇದಾರಸಾಹೇಬರವರು ರಾವಸಾಹೇಬರವರ ಪರೋಪಕಾರಬುದ್ಧಿ, ಸಾರ್ವಜನಿಕ ಹಿತವೃಷ್ಟಿ, ಸ್ವಾರ್ಥತ್ಯಾಗಪೂರ್ವಕ ರಾಜ ಪ್ರಜೆಗಳ ವಿಶ್ವಾಸಪಾತ್ರತೆ ಮೊದಲಾದ ಸದ್ಗುಣಾವಳಿಯನ್ನು ಕೇಳಿ ಸಂತುಷ್ಟಚಿತ್ತರಾಗಿ ದಯಾಳುಗಳಾದ ಬ್ರಿಟಿಷ್ ಸಾರ್ವಭೌಮರವರು ಇವರಿಗೆ ರಾವಸಾಹೇಬ್ ಪದವಿಯನ್ನು ದಯಪಾಲಿಸಿರುವದನ್ನು ನೋಡಿ ಅತ್ಯಂತ ಆನಂದವೆನಿಸುತ್ತದೆಂದು ಹೇಳಿ ತಮ್ಮ ನೈಜವಾದ ಆನಂದವನ್ನು ಪ್ರದರ್ಶಿಸಿ ಸರ್ವಸಭಿಕರನ್ನು ಸಂತೋಷಭರಿತರನ್ನಾಗಿ ಮಾಡಿದರು. ಆಮೇಲೆ ರಾವ್‌ಸಾಹೇಬರವರು ಎದ್ದುನಿಂತು ತಮಗೆ ಪ್ರಾಪ್ತವಾದ ಪದವಿಯ ಸನ್ಮಾನಸಮಾರಂಭವನ್ನು ನೆರವೇರಿಸಿದ ಮಹಾಶಯರನ್ನು ಅಭಿನಂದಿಸಿ ನನಗೆ ಪ್ರಾಪ್ತವಾದ ಈ ಪದವಿಯು ನನ್ನ ದಕ್ಷತೆಯಿಂದ ಬಂದುದಲ್ಲವೆಂದೂ, ತಮ್ಮೆಲ್ಲರ ಪ್ರೇಮಭಾವವೇ ಈ ಪದವಿಯ ಪ್ರಾಪ್ತಿಗೆ ಮೂಲಕಾರಣವೆಂದೂ ಸಮಯೋಚಿತ ಭಾಷಣವನ್ನು ಮಾಡಿ ಸ್ವಸ್ಥಾನದಲ್ಲಿ ಕುಳಿತರು. ಆಮೇಲೆ ಸಭಿಕರಿಗೆ ಹಾರತುರಾಯಿ ಪುಷ್ಪಾದಿಗಳು ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಸದರಿ ರಾವಸಾಹೇಬರವರು ೨೧ ವರ್ಷಗಳಿಂದ ತಾಲೂಕು ಬೋರ್ಡಿನ ಪ್ರೆಸಿಡೆಂಟರಾಗಿರುವರಲ್ಲದೆ ಸುಪ್ರಸಿದ್ಧವಾದ ಲ್ಯಾಂಡ ಮಾರ್ಟ್‌ಗೇಜ್ ಬ್ಯಾಂಕಿನ ಛೇರ್ಮನ್ನರೂ ಹಾಗೂ ಸೇಲ್‌ಸೊಸೈಟಿಯ ಛೇರ್ಮನ್ನರೂ ಆಗಿರುವರು. ಈ ಮೊದಲು ಆನರರಿ ಮ್ಯಾಜಿಸ್ಟ್ರೇಟರೂ ಡಿಸ್ಟ್ರಿಕ್ಟ ಮನ್ಸಿಪರೂ, ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಛೇರ್ಮನ್ನರೂ ಆಗಿ ವಿಶೇಷ ದಕ್ಷತೆಯಿಂದ ಕೆಲಸವನ್ನು ಸಾಗಿಸಿದರು. ಈ ರೀತಿಯಾಗಿ ಸದಾ ಪರಹಿತಕಾರ್ಯದಲ್ಲಿಯೇ ಮನಸ್ಸನ್ನಿಟ್ಟು ಸರಕಾರದ ಮತ್ತು ಪ್ರಜೆಗಳ ಪರಮ ಪ್ರೀತಿಗೆ ಪಾತ್ರರಾಗಿರುವ ಈ ಪುಣ್ಯಾತ್ಮರಿಗೆ ಪರಮೇಶ್ವರನು ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ

ಪ್ರತ್ಯಕ್ಷದರ್ಶಿ,
ದಸ್ತಗಿರ್‌ಸಾಹೇಬ ಅಕ್ಕಿ ಲೋಕಲ್‌ಬೋರ್ಡ್
ಅಂಡ್ ಮುನಿಸಿಪಲ್ ಕೌನ್ಸಿಲರ್ ಗದಗ.

ಕೇದಾರ ಸಿಂಹಾಸನಮ್.

ಲೇಖಕರು—ಸಂ|| ಶ್ರೀ ಚೆನ್ನಬಸವಾಚಾರ್ಯರು
ಪುರಗಿರಿ ಬೃಹನ್ಮಠ.

(ಕಳೆದವಾರದಿಂದ ಮುಂದಕ್ಕೆ ಸಾಗಿದ್ದು.)

ಸೂತ ಉವಾಚ || ತಸ್ಮಿನ್ನೇವ ಮಹಾಕ್ಷೇತ್ರೇ ಹಿಮದಾವಾಶ್ರಮೆಮುನೆ || ಇತ್ಯಾದಿ ಗ್ರಂಥ ತಾತ್ಪರ್ಯವು.

ಸೂತನು ಅನ್ನುತ್ತಾನೆ—ಹೇ ಮುನೀಶ್ವರನೇ ! ಅದೇ ಕ್ಷೇತ್ರದಲ್ಲಿರುವ ಹಿಮದಾವಾಶ್ರಮದಲ್ಲಿ ವಶಿಷ್ಠಮುನಿಯು ಅರುಂಧತಿಯೊಡನೆ ಹೊರಟು ಮಹಾದೇವನಲ್ಲಿ ಮನಸ್ಸುಳ್ಳವನಾಗಿ ಸಂಯತಾತ್ಮನಾಗಿ ದೃಢವ್ರತಿಯಾಗಿ ಭಿಲ್ಲಜನಸಮೂಹದೊಳಗೆ ಸೇರಿ ವಾಸಮಾಡಿದನು. ಈ ಋಷಿವರ್ಯನು ಆ ಪ್ರದೇಶವನ್ನು ಸ್ವರ್ಗಭೂಮಿಯೆಂದು ಭಾವಿಸಿ ಆಯಾ ದೇಶದ ಕಾಲಪರಿಸ್ಥಿತಿಗನುಸರಿಸಿದ ಆಚಾರವುಳ್ಳವನಾಗಿ ವಿಶೇಷಕ್ರಿಯೆಗಳನ್ನು ಬಿಟ್ಟು ತಾನೂ ಸಹ ಕಿರಾತರೊಡನೆ ಸಂಧ್ಯಾಸ್ನಾನಪರಾಙ್ಮುಖನಾಗಿ ನಿತ್ಯದಲ್ಲಿ ಕೃಷ್ಣಕಂಬಲಕಂಚುಕನಾಗಿ ಬಾಣವನ್ನು ಕರದಲ್ಲಿ ಹಿಡಿದು ಕಟಿಯಲ್ಲಿ ಖಡ್ಗವನ್ನಿರಿಸಿ ಜ್ಞಾನವಿದ್ಯಾಗ್ನಿ ಕ್ರಿಯಾಪರಾಙ್ಮುಖನಾದನು. ಶರೀರವಂತೂ ಅತಿ ಮಲಿನವಾಗಿತ್ತು. ಯಜ್ಞೋಪವೀತವು ಮಲದಿಂದ ಕಪ್ಪಾಗಿತ್ತು. ಈ ರೀತಿಯಾಗಿ ಬಹು ವರ್ಷದವರೆಗೂ ಸ್ವಧರ್ಮಪರಿವರ್ಜಿತನಾಗಿ ವಾಸಮಾಡಿದನು. ಹಾಗೆಯೇ ಅವನ ಸತಿಯೂ ಸಹ ವಿಗತಪ್ರಭೆಯಾಗಿ ಪತಿಯೊಡನೆ ಅದೇ ಧರ್ಮ ಸಂಯುತಳಾಗಿ ಸ್ನಾನಮಾಡದೆ ಮುಖವನ್ನು ಪ್ರಮಾರ್ಜನಮಾಡಿಕೊಂಡು ಭೋಜನಮಾಡುತ್ತಿದ್ದಳು. ಈ ಪ್ರಕಾರವಾದ ಆಚಾರವಿಹೀನನಾದ ವಶಿಷ್ಠನಿಗೆ ಹಿಮದಾವಾಶ್ರಮದಲ್ಲಿ ಆಗ್ಗೆ ಬಹಳ ವರ್ಷಗಳು ಗತಿಸಿದವು. ಅಷ್ಟರೊಳಗೆ ರಾಮನು ದಶಕಂಧರನನ್ನು ಜಯಿಸಿ ಅಯೋಧ್ಯೆಗೆ ಬಂದು ಲಕ್ಷ್ಮಣನಿಗೆ ಹೇಳಿದನು. ಎಲೈ ಲಕ್ಷ್ಮಣನೇ ! ಕೈಲಾಸಕ್ಕೆ ಹೋಗು ; ವಶಿಷ್ಠನು ಎಲ್ಲಿ ಇರುವನು ? ರಾಜ್ಯಾಭಿಷೇಕಕ್ಕಾಗಿ ಶೀಘ್ರ ಕರೆದುಕೊಂಡು ಬಾ ಎಂದು ನುಡಿದಬಳಿಕ ಲಕ್ಷ್ಮಣನು ಶೀಘ್ರನಾಗಿ ಕೈಲಾಸಪರ್ವತಕ್ಕೆ ಹೋದನು. ಅಲ್ಲಿ ವಾಗೀಶ್ವರವಶಿಷ್ಠನನ್ನು ಹುಡುಕಿದನು. ಬಳಿಕ ಹಿಮದಾವಾಶ್ರಮಕ್ಕೆ ಹೋಗಿ ಆ ಮುನಿಯ ಮಂದಿರವನ್ನು ಹೊಂದಿದನು. ಬಳಿಕ ಅಲ್ಲಿ ಖಡ್ಗತೂಣೀರಚಾಪಗಳಂ ಧರಿಸಿ ಕಪ್ಪುಕಂಬಳಿಯ ಕಂಚುಕವಂ ಪೊದ್ದು ಕುಳಿತಿರುವ ಮುನಿಯಂ ನೋಡಿ ರಾಮೋಕ್ತಿಯನ್ನು ತಿಳುಹಿಸಿದನು. ಸ್ವಾಮಿ ! ರಾಮಭದ್ರನು ನಿಮ್ಮನ್ನು ನೋಡಲಪೇಕ್ಷಿಸುತ್ತಾನೆ. ರಾವಣನು ಯುದ್ಧದಲ್ಲಿ ಪುತ್ರಬಲವಾಹನ ಸಹಿತನಾಗಿ ಕೊಲ್ಲಲ್ಪಟ್ಟನು. ಈ ವಾಕ್ಯವನ್ನು ಕೇಳಿ ವಶಿಷ್ಠನು ಲಕ್ಷ್ಮಣನೊಡನೆ ಆ ಖಡ್ಗತೂಣೀರಚಾಪ ಅತಿಕೃಷ್ಣಮಲಕಂಬಲಕಂಚುಕಾಂದಿಗಳಂ ಬಿಟ್ಟು ಬಂದನು. ಗಂಗಾದ್ವಾರದಲ್ಲಿ ಬಂದು ಅಲ್ಲಿ ಸ್ನಾನಮಾಡಿದನು. ಸರ್ವಕ್ರಿಯೆಗಳನ್ನು ವಿಧಿವತ್ತಾಗಿ ಮಾಡಿ ಶಿವಸಮರ್ಜನವಂ ಮಾಡಿದನು. ಆ ಬಳಿಕ ಪೂರ್ವದಂತೆ ಉತ್ತಮ ಆಚಾರವನ್ನು ಭೋಜನವನ್ನು ವಿಧಾನಪೂರ್ವಕ ಮಾಡುತ್ತ ಅತಿಥ್ಯಾದಿ ಪೂಜನವನ್ನು ಮಾಡುತ್ತಿದ್ದನು. ಈ ಪ್ರಕಾರವಾದ ಆ ಮುನಿಯ ಆಚಾರವನ್ನು ರಘೂದ್ವಹನು ನೋಡಿ ಪರಮಾಶ್ಚರ್ಯವನ್ನಾಗಿ ತಿಳಿದು ಮಾರ್ಗದಲ್ಲಿ ಗುರುವನ್ನು ಪ್ರಶ್ನೆಮಾಡಿದನು. ಗುರುವೇ ನಿನ್ನ ಆಚರಣದಿಂದ ನನಗೆ ಸಂಶಯವಾಗಿದೆ. ವಿಭುವೇ ಇದೇನು ? ಅಲ್ಲಿ ಆಚಾರವನ್ನು ಯಾಕೆ ಬಿಟ್ಟಿದ್ದೀರಿ ? ಇನ್ನು ಇಲ್ಲಿ ಮಾತ್ರ ವಿಧ್ಯುಕ್ತವಾಗಿ ಸರ್ವ ಆಚಾರಗಳನ್ನು ನೀವು ಮಾಡುತ್ತಿರುವಿರಿ ? ಎಂದು ಕೇಳಿದಬಳಿಕ ವಶಿಷ್ಠನು ಆವಾಗ್ಗೆ ಸಸ್ಮಿತನಾಗಿ ಲಕ್ಷ್ಮಣನಿಗೆ ಹೇಳುತ್ತಾನೆ. ಲಕ್ಷ್ಮಣನೇ ? ನೀನು ಸತ್ಯವಾದವನ್ನೇ ನುಡಿದಿರುವಿ ; ಆದರೆ ಸಂಶಯ ಮಾಡತಕ್ಕದ್ದು. ಯಾಕೆಂದರೆ ಗಂಗಾದ್ವಾರವನ್ನಾರಂಭಿಸಿ ಶ್ವೇತಗಿರಿಯು ಎಲ್ಲಿಯವರೆಗೂ ಇರುವದೋ ಹಾಗೂ ತಾಮಸಾತಟದಿಂದ ಪೂರ್ವಕ್ಕೆ ಕಾಷಗಿರಿ ಇರುವದೋ ಹಾಗೂ ಉತ್ತರಕ್ಕೆ ನಂದಾದ್ರಿಯಿಂದ ಇರುವ ಸ್ಥಾನವು ಶಿವಧಾಮವೆಂದು ಪಂಡಿತರಿಂದ ಹೇಳಲ್ಪಟ್ಟಿದೆ. ಎಲ್ಲಿಯವರೆಗೂ ಕೇದಾರಮಂಡಲವೋ ಅಲ್ಲಿಯವರೆಗೂ ಮಹತ್ಪುಣ್ಯತಮಭೂಮಿಯೆನಿಸಿದೆ. ಇಲ್ಲಿ ಯಾವ ನಿರ್ಝರಗಳೂ ನದಿಗಳೂ ಸರಸ್ಸುಗಳೂ ಯಾವತ್ತೂ ಗಂಗಾಜಲವೆಂದು ತಿಳಿ : ಯಾಕೆಂದರೆ ಗಂಗೆಯು ಇಲ್ಲಿ ಹೊರಟಿರುವಳು. ತಜ್ಜಲಸ್ಪರ್ಶಮಾತ್ರದಿಂದ ತತ್‌ಕ್ಷಣದಲ್ಲಿ ಶುದ್ಧನಾಗುವನು. ಒಂದು ಸಾರೆ ಶಿವನೆಂದುಚ್ಚರಿಸಿದರೆ ಸರ್ವ ಜಪವು ಮಾಡಲ್ಪಟ್ಟಂತಾಗುತ್ತೆ. ಇಲ್ಲಿ ಬಹಳವಾಗಿ ಮಜ್ಜನಸ್ನಾನಾದಿಯಿಂದ ಏನು ಪ್ರಯೋಜನವಿದೆ. ಯಾವಾತನು ಒಂದು ಸಾರೆ ದಿವಸದಲ್ಲಿಲ್ಲ ಆ ಜಲ ಸ್ಪರ್ಶಮಾಡುವನೋ ಅಂಥವನು ಸರ್ವ ತೀರ್ಥಗಳಲ್ಲಿ ಸ್ನಾನಮಾಡಿದವನಾಗುವನು ಮಹಾಮತಿಯೇ ಹೆಚ್ಚಿಗೆ ಏನು ಪ್ರಯೋಜನ ಆ ದೇಶದ ಸಮಾನವಾದ ದೇಶವು ಜಗತೀತಲದಲ್ಲಿ ಇರುವದಿಲ್ಲ. ಎಲೈ ಭದ್ರನೇ ಅದ್ದರಿಂದಲೇ ನಾನು ಕರ್ಮದರ್ಶನವನ್ನು ಮಾಡಲಿಲ್ಲ. ಈ ಪೃಥಿವಿಯಂತೂ ಸ್ವರ್ಗಭೂಮಿಯೇ ಆಗಿದೆ ಆದ್ದರಿಂದ ಇಲ್ಲಿ ವಾಸಿಸುವವರು ದೇವತೆಗಳೇ ಆಗಿರುವರು ಸಂಶಯವಿಲ್ಲ. ಈ ಪ್ರಕಾರವಾದ ಆ ವಾಕ್ಯವನ್ನು ಕೇಳಿ ಲಕ್ಷ್ಮಣನು ಕೇದಾರಮಂಡಲವು ಭುಕ್ತಿ ಮುಕ್ತಿ ಪ್ರದಾಯಕವಾದದ್ದೆಂದು ಬಹಳವಾಗಿ ಮನ್ನಿಸಿದನು. ವಶಿಷ್ಠ ಮಹಾಮುನಿಯು ರಾಮ ಮಹಾಪ್ರಭುವಿದ್ದಡೆಗೆ ಹೋದನು ಮತ್ತು ವಿಧಿವತ್ತಾಗಿ ಅಭಿಷೇಕವನ್ನು ಮಾಡಿಸಿದನು. ಈ ಕಥೆಯನ್ನು ಸ್ಮರಣೆಕ್ಕೆ ತಂದುಕೊಂಡು ಸಂಕ್ಷೇಪವಾಗಿ ಉಪನ್ಯಾ

...ಳದೇಶದ ವೃತ್ತಾಂತಗಳು.

...ಗಳೂರಿನ ಬಿನ್ನಿಮಿಲ್ಲಿನ ಮುಷ್ಕರವು ...ಕಳೆದ ಸೋಮವಾರದಿಂದ ಬಿನ್ನಿಮಿಲ್... ರಾಜಾ ಮತ್ತು ಮಿನರ್ವಾ ಈ ಮೂರು ಮಿಲ್... ಕೆಲಸವು ನಡೆಯುತ್ತಿದೆ.

...ಸೂರು ಡಿಸ್ಟ್ರಿಕ್ಟ ಹುಣಸೂರು ತಾಲ್ಲೂಕಿ... ಗ್ರಾಮದಲ್ಲಿ ಒಂದು ಹೆಣವನ್ನು ಸ್ಮಶಾನ... ...ಂಡು ಹೋಗಿ ಹೂಳುತ್ತಿರುವಷ್ಟರಲ್ಲಿ ... ...ಬಂದು ತನ್ನ ಮಂತ್ರಬಲದಿಂದ ಸತ್ತ... ...ದುಕಿಸಿದನಂತೆ ! ಕಲಿಯುಗದ ವಿಚಿತ್ರ !

...ವತಿ ಕಬ್ಬಿಣದ ಕಾರ್ಖಾನೆಯಲ್ಲಿ ಉಕ್ಕನ್ನು ...ಡುವ ಸಲಹೆಯನ್ನು ಸರಕಾರದವರು ... ...ರೆ ಸರ್. ಎಂ. ವಿಶ್ವೇಶ್ವರಯ್ಯನವರು ತಮ್ಮ... ಪದವಿಗೆ ರಾಜೀನಾಮೆ ಕೊಡುವರಂತೆ... ...ರು ರಾಜೀನಾಮೆಯನ್ನು ಕೊಟ್ಟದ್ದೂ ಆಯ... ...ರ್ತಮಾನ !

...ೂರಿನಲ್ಲಿ ಚಂದ್ರರಾಜ್ ಎಂಬ ಹುಡುಗನ್ನು ... ಬೆಂಗಳೂರು ಸಿಟಿಕೋರ್ಟಿನಲ್ಲಿ ಮಾಡಿದ... ...ಯಲ್ಲಿ, ಮ್ಯಾಜಿಸ್ಟ್ರೇಟರು ಅಪರಾಧಿಗ... ...ರಾವೆ ಬರಲಿಲ್ಲವೆಂದು ಹೇಳಿ ಅವರನ್ನು... ...ಮಾಡಿದರು.

...ಶನಿವಾರ ರಾಜಧಾನಿಯ ಅರಮನೆಯಲ್ಲಿ ...ಚಾಮರಾಜೇಂದ್ರ ಒಡೆಯರವರ ವರ್ಷ... ...ವಗಳು ವಿಜೃಂಭಣೆಯಿಂದ ನೆರವೇರಿದುವು... ...ಕರವಾದ ದೀಪೋತ್ಸವವೂ, ದೇವಸ್ಥಾ... ...ಷವಾದ ಪೂಜೆಯೂ, ಶ್ರೇಯಃ ಪ್ರಾರ್ಥ... ...ಡಲ್ಪಟ್ಟವು.

...ರಾಮಚಂದ್ರರಾಯರು ಈಗ ಬೆಂಗ... "ಕಣಿಯರ ಪತ್ರಿಕೆಯನ್ನು" ಸೈಕ್ಲೋ... ...ಡಿ ಮಾರುತ್ತಿರುವರು. ಪೋಲೀಸಿನವರು... ...ಟ್ಟುಗೋಲು ಹಾಕುತ್ತಿಲ್ಲ! ಪತ್ರಿಕೆಗಳನ್ನು... ಅಥವಾ ಸೈಕ್ಲೋಸ್ಟೈಲ್ ಮಾಡಿ... ...ವುದು ಪತ್ರಿಕಾಕಾನೂನಿಗೆ ವಿರೋಧ...

...ಲೈ ತಿಂಗಳ 30 ನೇ ಮಂಗಳವಾರ ಬೆಂಗ... ...ಪೇಟೆಯ ಗಣೇಶನ ಪೂಜೆಯನ್ನು... ...ದ ಜುಲೈ 30 ನೇ ತಾರೀಖಿನ ಗಲಾ... ...ದಕಾರ್ಥವಾಗಿ ಮಾಡಬೇಕೆಂದು ಅಲ್ಲಿಯ... ಏರ್ಪಡಿಸಿದ್ದ ಸಂದರ್ಭದಲ್ಲಿ ಪೋಲೀ... ...ಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೂ ಇದಕ್ಕೆ... ...ಡದೆ ಗಲಭೆ ನಡೆದು ಜನರ ಗುಂಪನ್ನು... ಪೋಲೀಸಿನವರು ಡಿಸ್ಟ್ರಿಕ್ಟ ಮ್ಯಾಜಿ... ...ಣೆಯಂತೆ ಗುಂಡು ಹಾರಿಸಿದುದರಿಂದ ...ಸು ಮಡಿದನೆಂದೂ ಸುಮಾರು 50 ಜನರು ...ಸಲ್ಪಟ್ಟಿರುವರೆಂದೂ ಈ ಉತ್ಸವಕ್ಕಾಗಿ ...ಗಿದ್ದ ಶ್ರೀ ಭೀಮರಾವ್ ಮತ್ತು... ...ವರನ್ನು ಅರೆಸ್ಟ ಮಾಡಿರುವುದಾಗಿ ...ನಕೇಳುತ್ತೇವೆ.

...ಮಾನಸಂಗ್ರಹ.

...ಯಲ್ಲಿ ಒಬ್ಬ ನರ್ತಕಿಯು ಒಂದೇ... ...ಟೆಗಳವರೆಗೆ ನರ್ತನಮಾಡಿದಳಂತೆ !

...ಹ್ರೋ ಉತ್ತರ ಮಂಚೂರಿಯಲ್ಲಿ ಚೈನದ ...ದ್ಧಕ್ಕೆ ಸಿದ್ಧರಾಗುತ್ತಿರುವರು. ವಿಷಮ... ...ತ್ತಿವೆ.

...ಗಳು ಒಂದು ಪೌಂಡು ಜೇನುತುಪ್ಪ ...ಯು 60 ಸಾವಿರ ಪುಷ್ಪಗಳಲ್ಲಿನ ಮಧು ... ಬೇಕಾಗುವದಂತೆ !

...ದಿವಂಗತ ಜಗನ್ಮೋಹನ ಪಾಲರು ...ಲೇಜಿಗೆ ನಾಲ್ಕು ಲಕ್ಷರೂಪಾಯಿಗ... ...ತಿರುವರು. ಸ್ತುತ್ಯ !

...ಪ್ರಪಂಚದಲ್ಲಿರುವ ವಜ್ರಗಳನ್ನೆಲ್ಲಾ ಒಟ್ಟು... ...ನೋಡಿದಾಗ ನಲವತ್ತೆಂಟು ಟನ್ ತೂಕವುಳ್ಳ ...ವಿರುವುದಾಗಿ ಕಂಡುಬಂದಿದೆ.

...ದ್ರಾಸ್ ವಿಶ್ವವಿದ್ಯಾನಿಲಯದವರು ಕಾಲೇಜಿನ ...ರ್ಥಿಗಳಿಗೆ ಶಾರೀರಕಶಿಕ್ಷಣವನ್ನು ಅವಶ್ಯಕವಾಗಿ ...ಬೇಕೆಂದು ಗೊತ್ತುಮಾಡಿದ್ದಾರೆ.

...ಕ್ಕತ್ತೆಯ ಫುಟಬಾಲ್ ಸಂಘದವರು ಪ್ರವಾಹದ ...ಂದ ನಿರಾಶ್ರಿತರಾದವರ ಸಹಾಯಕ್ಕಾಗಿ ಹತ್ತು ...ರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸ್ತುತ್ಯ !

...ಮೇರಿಕದ ನ್ಯೂಯಾರ್ಕ್‌ಪಟ್ಟಣದಲ್ಲಿ ಪ್ರಪಂಚ...ಲ್ಲೆಲ್ಲಾ ಅತ್ಯಂತ ಎತ್ತರವಾದ ನಲವತ್ತುನಾಲ್ಕು ...ಗಳುಳ್ಳ ಒಂದು ಕಟ್ಟಡವನ್ನು ಕಟ್ಟುತ್ತಿರುವ...ರಂತೆ !

...ಇಂದಿನವರೆಗೆ ಈ ಪ್ರಪಂಚದಲ್ಲಿ ಕಂಡುಹಿಡಿಯಲ್ಪಟ್ಟಿರುವ 'ರೇಡಿಯಂ' ಎನ್ನುವ ಲೋಹದ ಪ್ರಮಾಣವು ಒಟ್ಟು ಏಳೂವರೆ ಔನ್ಸಂತೆ. ಆದರೆ ಅದರ ಬೆಲೆ ...ಸುಮಾರು 8 ಕೋಟಿ ರೂಪಾಯಿಗಳಂತೆ !

ಲಂಡನಿನಲ್ಲಿ ಒಬ್ಬ ಆಂಗ್ಲೇಯನು ಬೆನ್ನಿನ ಮೇಲೆ ತನ್ನ ಮೃತ್ಯುಶಾಸನ (will) ವನ್ನು ಅಚ್ಚುಹೊಯಿಸಿಕೊಂಡಿರುವನು. ಇದನ್ನು ಅಚ್ಚಿಸಿಕೊಳ್ಳುವುದಕ್ಕೆ 5 ಗಂಟೆಗಳಕಾಲವು ಹಿಡಿದು ಇದರ ಕೊನೆಯಲ್ಲಿ ಅವಶ್ಯವಾದ ಸಾಕ್ಷಿಗಳೂ ಹಾಕಲ್ಪಟ್ಟಿರುವುವು.

ಬಚ್ಚಾ-ಇ-ಸಾಕನು ಅಮಾನುಲ್ಲಾ ಖಾನರ ನಡವಳಿಕೆಗಳನ್ನು ತಿಳಿಯಲು ತನ್ನ ಕಡೆಯ ಗೂಢಚಾರರನ್ನು ಇಟಲಿಗೆ ಕಳುಹಿಸಿರುವನಂತೆ ! ನಾದಿರ್‌ಖಾನರ ಸಹೋದರರಾದ ಷಾ-ಅಹಮ್ಮದ್ ಖಾನರು ಅಪಾರಸೈನ್ಯದೊಂದಿಗೆ ಕಾಬೂಲನ್ನು ಮುತ್ತಲು ಹೊರಟಿರುವರಂತೆ !

ಮಿರಾಂತ್ರಿನ ಹೊಲ ಗದ್ದೆ ತೋಟಗಳಿಗೆ ಕೋಟ್ಯಂತರ ಮಿಡತೆಗಳ ಗುಂಪು ಬಂದು ಬೆಳೆಗಳನ್ನೆಲ್ಲಾ ನಾಶಮಾಡಿರುವುವು. ಇವು ಹೋದಕಡೆಗಳಲ್ಲೆಲ್ಲಾ ಇದೇ ರೀತಿ ಬೆಳೆಯು ನಾಶವಾಗಿರುವುದಾದರೂ ಅಲ್ಲಿಯ ರೈತರು ಈ ರೀತಿ ಮಿಡತೆಗಳ ಹೆಚ್ಚಳಿಕೆಯು ಮುಂದಿನ ಶುಭಸೂಚನೆಯೆಂದು ಹೇಳುತ್ತಿರುವರು.

ಕುಂಭಕೋಣದ ತಿರುಪ್ಪನಂದಾಳ್ ಹತ್ತಿರ ಇರುವ ಒಂದು ಹಳ್ಳಿಯಲ್ಲಿ ಮದುವೆಯ ಮೆರವಣಿಗೆಯೊಂದರಲ್ಲಿ ಬಾಣ ಬಿರುಸುಗಳನ್ನು ಹಚ್ಚುತ್ತಿದ್ದಾಗ ಅಕಸ್ಮಾತ್ತಾಗಿ ಪಕ್ಕದಲ್ಲಿದ್ದ ಗುಡಿಸಲುಗಳಿಗೆ ತಗುಲಿ ಅವೆಲ್ಲವೂ ಸುಟ್ಟು ಭಸ್ಮವಾದುವು. ಒಬ್ಬನು ತೀರಿಹೋದನು. ಸುಮಾರು 2000 ರೂಪಾಯಿಗಳ ನಷ್ಟವಾಗಿದೆ.

ಕಲ್ಕತ್ತೆಯಲ್ಲಿ ಒಬ್ಬ ಕವಿಶ್ರೇಷ್ಠನಿಗೆ ಒಂದು ಕ್ರಿಮಿನಲ್ ಶಿಕ್ಷೆಯಾಯಿತೆಂದು ಕೇಳಿ ಅವನ 15 ವರ್ಷದ ಮಗಳು ಅಫೀಮನ್ನು ತಿಂದು ಆತ್ಮಹತ್ಯಮಾಡಿಕೊಂಡಳು. ನಿಜವಾಗಿಯೂ ತಂದೆಗೆ ಮೊಬದ್ದಮೆಯಲ್ಲಿ ಬಿಡುಗಡೆಯಾಗಿತ್ತು. ಅವನು ಸಂತೋಷದಿಂದ ಮನೆಗೆ ಬಂದಾಗ ಮಗಳು ಮೃತಳಾಗಿದ್ದಳು. ಭಗವತ್ಸಂಕಲ್ಪ !

ಹುಬ್ಬಳ್ಳಿ ಸಿದ್ಧಾರೂಢಸ್ವಾಮಿಗಳಮೇಲೆ ಅವರು ಮಾಡಿದ್ದ ಮೃತ್ಯುಪತ್ರದ ಅಧಿಕಾರದ ವಿಷಯವಾಗಿ ಧಾರವಾಡದಲ್ಲಿ ವ್ಯವಹಾರ ನಡೆಯುತ್ತಿರುವುದು ಸರಿಯಷ್ಟೆ ! ಸಿದ್ಧಾರೂಢರು ತಮ್ಮ ಜವಾಬಿನಲ್ಲಿ "ನಾನೊಬ್ಬ ಸನ್ಯಾಸಿಯು, ನನಗೆ ಜಾತಿಯಿಲ್ಲ ಮತ್ತು ನನ್ನ ತಂದೆತಾಯಿಗಳ ಹೆಸರು ಗೊತ್ತಿಲ್ಲ" ವೆಂದು ಹೇಳಿದ್ದಾರೆ.

ವಾಷಿಂಗ್‌ಟನ್ ಸಂಸ್ಥಾನದ ಕೇಸ್ಕೋಡ ಪರ್ವತದ ಮೇಲಿನಿಂದ ಕೆಲವು ದಿವಸಗಳ ಹಿಂದೆ ಒಂದು ಅದ್ಭುತವಾದ ಪತಂಗಗಳ ಗುಂಪು ಹಾರಿಹೋಯಿತು. ಇದು 10-15 ಮೈಲ್ ಉದ್ದವೂ 3-4 ಮೈಲ್ ಅಗಲವೂ ಇದ್ದು ವಿಚಿತ್ರವರ್ಣಗಳ ಪತಂಗಗಳಿಂದ ಕೂಡಿದ್ದಿತು. ಇವು ಹಾರಿಹೋದ ಸಮಯದಲ್ಲಿ ಮೋಡಕವಿದಂತೆ ಊರಿನಲ್ಲೆಲ್ಲಾ ಕತ್ತಲೆಯಾಗಿದ್ದಿತು.

ಕಳೆದವರ್ಷ ಜರ್ಮನಿಯವರು "ಬ್ರೆಮೆನ್" ಎಂಬ ಒಂದು ದೊಡ್ಡ ಜಹಜನ್ನು ಕಟ್ಟಿದರು. ಈ ಜಹಜು ಕಳೆದವಾರ ಪ್ರಯಾಣಮಾಡಿ ಅಮೇರಿಕಾದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣವನ್ನು ತಲುಪಿತು. ಅದರಷ್ಟು ವೇಗವಾಗಿ ಹಿಂದೆ ಯಾವಜಹಜೂ ಹೋಗಿರಲಿಲ್ಲವಂತೆ ! ಆ ಜಹಜಿನಲ್ಲಿ 3,000 ಜನರು ಪ್ರಯಾಣಮಾಡಬಹುದು. ಅದರಲ್ಲಿ ಜಹಜಿನ ಕೆಲಸಗಾರರೇ 1,000 ಜನ !

ತಿರುಪತಿಯಲ್ಲಿ 18 ವರ್ಷದ ಒಬ್ಬ ಗೊಲ್ಲರ ಹುಡುಗಿಯನ್ನು ತಂದೆತಾಯಿಗಳು ಆಕೆಯ ಇಚ್ಛೆಗೆ ವಿರೋಧವಾಗಿ ಒಬ್ಬ ಸ್ವಜಾತಿಯವನಿಗೆ ಕೊಟ್ಟು ವಿವಾಹ ನಡೆಸಿ ಆಕೆಯನ್ನು ಒಬ್ಬ ಮುದುಕಿಯೊಡನೆ ಗಂಡನ ಮನೆಗೆ ಕಳುಹಿಸಲು ದಾರಿಯಲ್ಲಿ ಹುಡುಗಿಯು ನೀರು ಕುಡಿದು ಬರುತ್ತೇನೆಂದು ಹೇಳಿ ಹೋಗಿ ಹತ್ತಿರದಲ್ಲಿದ್ದ ಒಂದು ಭಾವಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿಕೊಂಡಳು.

ಕಳೆದವಾರ ಎರಡು ಬ್ರಿಟಿಷರ ಯುದ್ಧದಹಡಗುಗಳಲ್ಲಿ ಆಕಸ್ಮಿಕ ಅನಾಹುತಗಳು ಸಂಭವಿಸಿದುವು. 24 ನೆಯ ತಾರೀಖಿನ ದಿವಸ ಒಂದು ಜಹಜಿನಲ್ಲಿದ್ದ ಮದ್ದು ಸಿಡಿದು ಒಬ್ಬನು ಮೃತಪಟ್ಟನು; ಇಬ್ಬರಿಗೆ ತುಂಬಾ ಗಾಯಗಳಾದವು. 26 ನೆಯ ತಾರೀಖಿನ ದಿವಸ ಮೆಡಿಟರೇನಿಯನ್ ಕಡಲಿನಲ್ಲಿ ಒಂದು ಜಹಜಿನಲ್ಲಿ ಗುಂಡು ಹಾರಿಸುವದನ್ನು ಕಲಿಸುತ್ತಿದ್ದಾಗ ಒಂದು ದೊಡ್ಡ ಫಿರಂಗಿಯು ಒಡೆದು 17 ಜನರು ಮೃತಪಟ್ಟರು.

ಪ್ರಪಂಚದಲ್ಲಿ ಅತಿ ವಿನೋದವಾದ ದೇವಾಲಯವು ನಾರ್ವೇ ದೇಶದಲ್ಲಿ ಬೆರ್ಗನ್ ಎನ್ನುವ ಊರಿನಲ್ಲಿರುವುದಂತೆ. ಬೇಯದ ಸುಣ್ಣದ ನೀರು, ಒಡೆದುಹೋದ ಹಾಲು, ಅನೇಕ ಸಾವಿರ ಪೆಟ್ಟಿಗೆಗಳನ್ನೊಡೆದು ತೆಗೆದ ವಸ್ತು. ಇವುಗಳನ್ನೆಲ್ಲಾ ಸೇರಿಸಿದ ಕಾಗದದಿಂದಲೇ ಈ ದೇವಾಲಯವನ್ನು ಕಟ್ಟಿರುವರಂತೆ. ಈ ದೇವಾಲಯದಲ್ಲಿ ಒಂದೇ ಸಮಯದಲ್ಲಿ ಸಾವಿರಜನರು ನಿಲ್ಲಲು ಸಾಕಾದಷ್ಟು ಸ್ಥಳವಿರುವುದಂತೆ !

ಸರ್ ಜೋಸೆಫ್ ವಿಸಿಸ್‌ಬರ್ಗ್ ಎಂಬ ಜರ್ಮನಿಯ ಪ್ರಸಿದ್ಧ ಜ್ಯೋತಿಷ್ಯನು ಜುಲೈ 13 ಕ್ಕೆ ಜರ್ಮನಿಯಲ್ಲಿ ಪ್ಲೇಗು ಪ್ರಾರಂಭವಾಗಿ ಅಸಂಖ್ಯಾತ ಜನರು ಸಾಯುವರೆಂದು ಹೇಳಿರುವನಂತೆ ! ಈ ಜ್ಯೋತಿಷ್ಯನು ತನ್ನ ಮಂತ್ರಬಲದಿಂದ ಹಿಂದಿನ ರಾಜರುಗಳನ್ನೂ ಸೈನಿಕರನ್ನೂ ಯಾವಾಗಲಾದರೂ ಆವಾಹನೆಮಾಡಿ ಮಾತನಾಡಿಸುವನಂತೆ ! ಇಂಥ ಜ್ಯೋತಿಷ್ಯನು ಪಶ್ಚಿಮ ದೇಶದಲ್ಲಿ ಇದುವರೆಗೆ ಯಾರೂ ಹುಟ್ಟಿರಲಿಲ್ಲವಂತೆ !

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದಲ್ಲಿ ಉತ್ಸವದ ಜೊತೆಯಲ್ಲಿ ಹೋಗುತ್ತಿದ್ದ ಒಂದು ಭಾರೀ ಆನೆಗೆ ಇದ್ದಕ್ಕಿದ್ದಹಾಗೆ ಮದವೇರಿ ಹತೋಟಿ ತಪ್ಪಿ ಮಾವುತನನ್ನು ಕೆಳಕ್ಕೆ ಬೀಳಿಸಿ ಕೊಂದುಹಾಕಿತು. ಆ ಆನೆಯ ಯಜಮಾನನು ಮೋಟಾರಿನಲ್ಲಿ ಬಂದು ಅದನ್ನು ಸಮಾಧಾನಪಡಿಸಲು ಯತ್ನಿಸಿದಾಗ ಅವನನ್ನೂ ಕೆಡವಿ ಅವನ ಮೋಟಾರನ್ನು ಹಾಳುಮಾಡಿತು. ಕಡೆಗೆ ಪೋಲೀಸಿನವರು ಗುಂಡಿನಿಂದ ಆನೆಯನ್ನು ಕೊಂದುಬಿಟ್ಟರು.

ಲಂಡನ್‌ಪಟ್ಟಣದಲ್ಲಿ ನೂತನವಿಧವಾದ ಒಂದು ಯಂತ್ರವನ್ನು ಕಂಡು ಹಿಡಿದಿರುವರು. ಆ ಯಂತ್ರವನ್ನು ಹಣ, ಒಡವೆ ಮೊದಲಾದುವುಗಳನ್ನು ಇಟ್ಟಿರುವ ಕಬ್ಬಿಣದ ಪೆಟ್ಟಿಗೆಯೊಡನೆ ಜೋಡಿಸಿಟ್ಟರೆ ಅದನ್ನು ಉಪಯೋಗಿಸಲು ಬಲ್ಲವರು ಬೊರತು ಮತ್ತಾರಾದರೂ ಮುಟ್ಟಿದರೆ ಕೂಡಲೇ ಘಟ್ಟಿಯಾಗಿ ಘಂಟೆಬಾರಿಸುವ ಸದ್ದಾಗುವುದಂತೆ. ತಕ್ಷಣವೇ ಹೆಚ್ಚು ಬೆಳಕುಂಟಾಗಿ ಪೆಟ್ಟಿಗೆಯನ್ನು ಮುಟ್ಟುವವರ ಛಾಯಾಚಿತ್ರವನ್ನು ತೆಗೆಯುವುದಂತೆ. ಆ ಪೆಟ್ಟಿಗೆಗೆ ಬೆಂಕಿಯು ಸೋಕಿದರೂ ಕೂಡ ಗಂಟೆಬಾರಿಸುವುದಂತೆ.

ಅಫ್ಘಾನಿಸ್ಥಾನದಲ್ಲಿ ಈಗ ತಾನೇ ದೊರೆಯೆಂದು ಹೇಳಿಸಿಕೊಳ್ಳುತ್ತಿರುವ ಬಚ್ಚಾ-ಇ-ಸಾಕನು ಹಿಂದೆ ಪೆಶಾವರದಲ್ಲಿ ಒಂದು ಚಹಾ ಅಂಗಡಿಯಲ್ಲಿ ದುಡಿಯುತ್ತಿದ್ದನಂತೆ! ಒಮ್ಮೆ ಇವನು ಒಂದು ಕಳ್ಳತನಮಾಡಿ ಪೋಲೀಸರ ಕೈಗೆ ಸಿಕ್ಕಿ ಅವರಿಂದ ಬಾರುಕೋಲಿನ ಪೆಟ್ಟುಗಳನ್ನು ತಿಂದು ಅವಮಾನದಿಂದ ಯಾರಿಗೂ ಮುಖವನ್ನು ತೋರಿಸದೆ ಕಾಬೂಲಿಗೆ ಓಡಿಹೋಗಿ ಅಲ್ಲಿ ಒಂದು ಪುಂಡರ ಗುಂಪನ್ನು ಸೇರಿಕೊಂಡನಂತೆ! ಈಗ ಅವನೇ ಪ್ರಬಲನಾಗಿ ಅಫ್ಘಾನಿಸ್ಥಾನದ ಅಮೀರನೆನಿಸಿಕೊಳ್ಳುತ್ತಿರುವನು! ದೈವಲೀಲೆಯು ಅಗಾಧವಾದುದು !

ಪ್ಯಾರಿಸ್ ನಗರದಲ್ಲಿ "ಬಿಬ್ಲಿಯಾಥಿಕ್ ನೇಷನಲ್" ಎನ್ನುವುದೊಂದು ದೊಡ್ಡ ಪುಸ್ತಕಭಂಡಾರದಲ್ಲಿ ಶೇಖರಮಾಡಲ್ಪಟ್ಟಿರುವ ಒಂದು ತಾಳೆಗರಿ ಪುಸ್ತಕವೇ ಪ್ರಪಂಚದಲ್ಲಿರುವ ಎಲ್ಲ ತಾಳೆಗರಿ ಪುಸ್ತಕಗಳಿಗಿಂತ ಬಹಳ ಪುರಾತನವಾದದ್ದಂತೆ. ಯೇಸುಕ್ರಿಸ್ತನು ಹುಟ್ಟುವುದಕ್ಕೆ ಮೂರುಸಾವಿರದ ಮುನ್ನೂರ ಅರವತ್ತಾರುವರ್ಷಗಳ ಹಿಂದೆ ಈಜಿಪ್ಟ್ ದೇಶದಲ್ಲಿದ್ದ "ಅಸ್ಸಾ" ಎನ್ನುವ ಅರಸನು ಆಳುವಾಗ "ಪ್ಟಾಹೊಟೆಪ್" ಎಂಬುವರಿಂದ ಬರೆಯಲ್ಪಟ್ಟಿತಂತೆ. ಅದರಲ್ಲಿ ಅನೇಕವಿಧ ತತ್ವಗಳೂ, ಲೋಕಾನುಭವಗಳೂ, ಮುಖ್ಯವಾಗಿ ಸ್ತ್ರೀಯರಲ್ಲಿ ಮರ್ಯಾದೆಯೂ ಪ್ರೀತಿಯೂ ಇರಬೇಕೆಂದೂ, ಎಲ್ಲರೂ ಒಬ್ಬನೇ ದೇವರನ್ನು ಪೂಜಿಸಬೇಕೆಂದೂ ಬರೆದಿರುವುದಂತೆ.

ಕಳೆದ ತಿಂಗಳು 22 ನೆಯ ತಾರೀಖಿನ ದಿವಸ ಇಂಗ್ಲೆಂಡಿನ ಯಾರ್ಕ್‌ಷೈರಿನಲ್ಲಿ ಕೆಲವು ಮಂದಿ ಸ್ತ್ರೀಪುರುಷರು ವಿನೋದಾರ್ಥವಾಗಿ ಒಂದು ಮೋಟಾರು ಕೋಚಿನಲ್ಲಿ ಬ್ಲೂ ಬ್ಯಾಂಕ್ ಹಿಲ್ ಎಂಬ ಬೆಟ್ಟದ ಮೇಲಕ್ಕೆ ಹೋಗಿದ್ದರು. ಮೋಟಾರು ಬೆಟ್ಟದ ತುದಿಯಲ್ಲಿ ಹತೋಟಿ ತಪ್ಪಿ ಕೆಳಮುಖನಾಗಿ ಬಂದು ಒಂದು ಕಲ್ಲಿನ ಗೋಡೆಗೆ ತಗುಲಿ, ಇಳಿಜಾರಾಗಿದ್ದ ಒಂದು ತೋಟದೊಳಕ್ಕೆ ತಲೆಕೆಳಗಾಗಿ ಮಗುಚಿತು. ಮೂವರು ಸ್ತ್ರೀಯರು ಕೂಡಲೇ ಮೃತಪಟ್ಟರು. 20 ಜನಕ್ಕೆ ಘೋರಾ ಗಾಯಗಳಾದುವು. 8 ಜನರಿಗೆ ಸ್ವಲ್ಪ ನೋವಾಯಿತು. ಈ ಮಧ್ಯೆ ಮೋಟಾರು ಕೆಳಕ್ಕೆ ಬರುವಾಗ ಒಂದು ಜೇನಿನ ಗೂಡಿಗೆ ತಗಲಿ, ಜೇನು ಹುಳುಗಳು ಗುಂಪಾಗಿ ಹಾರಿ ಬಂದು, ಮೊದಲೇ ತಲೆಕೆಳಕಾದ ಮೋಟಾರಿನಿಂದ ಉರುಳಿ ಗಾಯಪಟ್ಟಿದ್ದ ಜನರನ್ನು ಕಚ್ಚಿ ಮತ್ತಷ್ಟು ತೊಂದರೆಗೊಳಪಡಿಸಿದುವು.

ಮಧ್ಯ ಆಫ್ರಿಕಾಖಂಡದಲ್ಲಿ 'ಟ್ಸಾಟ್' (tsat) ಎನ್ನುವ ಒಂದು ದೊಡ್ಡ ಕೆರೆಯ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ವಾಸಮಾಡುವ ಸ್ತ್ರೀಯರಿಗೆಲ್ಲಾ ತುಟಿಗಳು ಜೋಲುಬಿದ್ದಿರುವುವಂತೆ. ಹೆಣ್ಣುಮಕ್ಕಳು ನಾಲ್ಕೈದು ವರ್ಷ ವಯಸ್ಸಾಗುವಾಗ ತುಟಿಗಳೆರಡನ್ನೂ ಸೇರಿಸಿ ಕತ್ತಿಯಿಂದ ತೂತುಮಾಡಿ ಅದರಲ್ಲೊಂದು ಕಡ್ಡಿಯನ್ನು ಸಿಗಿಸಿಬಿಡುವರಂತೆ. ಬರುತ್ತಬರುತ್ತ ದಪ್ಪದಪ್ಪ ಕಡ್ಡಿಗಳನ್ನು ಹಾಕುವುದರಿಂದ ತುಟಿಗಳು ಉದ್ದವಾಗುತ್ತ ಬರುವವಂತೆ. ಇಪ್ಪತ್ತೈದು ವಯಸ್ಸಾಗುವ ವೇಳೆಗೆ ಮೇಲುತುಟಿಯು ಐದು ಅಂಗುಲ ಉದ್ದವೂ, ಕೆಳಗಣ ತುಟಿಯು ಏಳು ಅಂಗುಲ ಉದ್ದವೂ ಆಗುವುದಂತೆ. ಯಾವ ಸ್ತ್ರೀಗೆ ತುಟಿಗಳು ಉದ್ದವಾಗಿರುವುವೋ, ಅವಳೇ ರೂಪವತಿಯೆಂದೂ ನಾಗರಿಕವಂತಳೆಂದೂ ಆ ದೇಶದ ಶ್ರೀಮಂತರು ಭಾವಿಸಿ ಅವಳನ್ನು ವರಿಸಲು ನಾನು ತಾನೆಂದು ಮೇಲೆಬಿದ್ದು ಬರುವರಂತೆ. ಕಿವಿಗಳನ್ನೀರೀತಿ ಬೆಳೆಸುವುದು ಹಿಂದುಸ್ಥಾನದ ತಿರುನಲ್ವೇಲಿ ಮೊದಲಾದ ಕಡೆ ಪದ್ಧತಿಯಿದೆ.

ಅಫ್ಘಾನಿಸ್ಥಾನದಲ್ಲಿ ಈಗ ರಾಜನಾಗಿರುವ ಬಚ್ಚಾ-ಯಿ-ಸಾಕನು ರಾಜ್ಯದಲ್ಲಿ ಕೆಲವು ಸುಧಾರಣೆಗಳನ್ನು ನಡೆಸಬೇಕೆಂದು ಉರ್ದು ಭಾಷೆಯಲ್ಲಿ ಒಂದು ಪ್ರಕಟನೆಯನ್ನು ಹೊರಡಿಸಿರುತ್ತಾನೆ. ಅದರಲ್ಲಿ "ಧರ್ಮಶಾಸ್ತ್ರವನ್ನು ಪುನರ್ವಿಮರ್ಶೆಮಾಡಿ ಕ್ರಿಮಿನಲ್ ಸಿವಿಲ್ ಮತ್ತು ರಾಜಕಾರ್ಯಗಳನ್ನು ವಿಚಾರಿಸುವ ಕೋರ್ಟು ಎಂದು ಮೂರು ಕೋರ್ಟುಗಳನ್ನು ಸ್ಥಾಪಿಸಬೇಕು. ಪೋಲೀಸಿನವರನ್ನೂ ಸೈನ್ಯದ ಸಿಬ್ಬಂದಿಯನ್ನೂ ಹೆಚ್ಚಿಸಿ ಪ್ರಜೆಗಳ ಮಾನ, ಪ್ರಾಣ, ಆಸ್ತಿಪಾಸ್ತಿಗಳ ರಕ್ಷಣೆಗೆ ಹೆಚ್ಚುಗಮನ ಕೊಡಬೇಕು. ಅಲ್ಲದೆ ಸ್ವತಃ ಪ್ರಜೆಗಳಿಂದ ಫಿರ್ಯಾದನ್ನು ವಿಚಾರಿಸಬೇಕೆಂದು ಇರಾದೆಪಟ್ಟಿರುವೆನು. ನನ್ನ ಪ್ರಾಣತೆಗೆಯಲು ಪ್ರಯತ್ನಪಟ್ಟವರು ವಿನಾ ಉಳಿದ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವುದು. ಅಫ್ಘನ್ ವಿದ್ಯಾರ್ಥಿಗಳಿಗೆ ತಕ್ಕ ಸಹಾಯದ್ರವ್ಯವು ಕೊಡಲ್ಪಡುವುದು." ಎಂದು ನಮೂದಿಸಿರುವನು. ಅಲ್ಲದೆ ಬಾಕಿ ನಿಂತಿರುವ ಕಂದಾಯವನ್ನು ಕಡ್ಡಾಯವಾಗಿ ವಸೂಲ್ಮಾಡುತ್ತಿರುವನು. ಕಾಂದಹಾರಿನಲ್ಲಿ ನಡೆದ ದರ್ಬಾರಿನಲ್ಲಿ ಸರ್ಕಾರಿ ಬಂದೂಕಗಳು ಯಾರಲ್ಲಿದ್ದರೂ ಅವರೆಲ್ಲ ವಾಪಸ್ ಕೊಟ್ಟುಬಿಡಬೇಕು, ಇಲ್ಲವಾದರೆ ಕಠಿಣಶಿಕ್ಷೆಗೆ ಗುರಿಯಾಗುವರೆಂದು ಅಫ್ಘನ್ ಹೊಸ ಗವರ್ನರಾದ ಅಬ್ದುಲ್‌ಖಾದರ್‌ಖಾನ್‌ರವರು ಸೂಚಿಸಿರುವರು. ಇದರಿಂದ ಜನಗಳಿಗೆ ಬಹಳ ಅಸಮಾಧಾನವುಂಟಾಗಿ ಎದುರುಬಿದ್ದಿರುವರು.

ವಿಷಸರ್ಪಗಳ ಕಡಿತ.

(ಬೀಹಾರ್ ಮತ್ತು ಒರಿಸ್ಸಾ ದೇಶಗಳ ಜನಾರೋಗ್ಯಶಾಖೆಯ ಮುಖ್ಯಾಧಿಕಾರಿಗಳಾದ ಜೆ. ಎಲ್. ದಾಸ್, ಡಿ. ಪಿ. ಎಚ್. ಇವರಿಂದ)

ನಮ್ಮ ದೇಶದಲ್ಲಿ ವಿಷವುಳ್ಳ ಹಾವುಗಳು ವಿಶೇಷವಾಗಿವೆ. ಅವುಗಳಲ್ಲಿ ನಾಗರಹಾವು, ಚೋರ ಅಥವಾ ಚಂದ್ರಚೋರ ಗೋಧೀನಾಗರ ಎಂಬಿವು ಅಧಿಕ ವಿಷವುಳ್ಳವು. ಇಂಡಿಯಾದೇಶದಲ್ಲಿ ಪ್ರತಿವರ್ಷವೂ ಜರುಗುತ್ತಿರುವ ಸುಮಾರು 20,000 ಮರಣಗಳಿಗೆ ಈ ಹಾವುಗಳ ಕಡಿತವೇ ಕಾರಣವಾಗಿದೆ.

ಹಾವುಗಳು ಸಹಜವಾಗಿ ಹೊರಗೆ ಬರುವುದಕ್ಕೆ ಭಯಪಡುತ್ತವೆ. ಸಾಧಾರಣವಾಗಿ ಅವು ಕಣ್ಣಿಗೆ ಗೋಚರವಾಗುವಹಾಗೆ ಸಂಚರಿಸುವುದಿಲ್ಲ. ಅವು ಸ್ವಲ್ಪವೂ ಸದ್ದಿಲ್ಲದೆ ಸಂಚರಿಸುವುವು. ಬೆಳಕಿನಲ್ಲಿ ಹೊರಗೆ ಬರುವುದೂ ಇಲ್ಲ. ಮನುಷ್ಯರೂ, ಪ್ರಾಣಿಗಳೂ ಅಡಿಗಡಿಗೆ ಸಂಚರಿಸುತ್ತಿರುವ ಪ್ರದೇಶಗಳಲ್ಲಿ ತಲೆಯಿಕ್ಕುವುದಿಲ್ಲ. ಅವು ಸಾಮಾನ್ಯವಾಗಿ ಸೂರ್ಯಾಸ್ತಮಯಕ್ಕೆ ಮುಂಚೆ ಹೊರಗೆ ಬಾರದೆ, ಕತ್ತಲೆಹೊತ್ತಿನಲ್ಲಿ ಹೊರಗೆ ಬಂದು, ತಮ್ಮ ಆಹಾರಗಳನ್ನು ಸಂಪಾದಿಸಿಕೊಳ್ಳುವುವು. ಹಾವಿನ ಮೈಮೇಲಿರುವ ಗುರುತುಗಳನ್ನೂ, ಅದರ ಮೊಟಕಾದ ಮತ್ತು ಮೊನೆಯಿಲ್ಲದ ಬಾಲವನ್ನೂ ನೋಡಿ, ಅದು ವಿಷಜಾತಿಯದೇ ಅಲ್ಲವೇ ಎಂಬುದನ್ನು ತಿಳಿಯಬಹುದು. ಆದರೆ ಹಾವು ಇಂತಹ ಜಾತಿಗೆ ಸೇರಿದುದೆಂದು ಗೊತ್ತುಮಾಡಲು ಸ್ವಲ್ಪ ಅನುಭವವು ಬೇಕು. ಹಾವುಗಳಿಂದ ಕಡಿಸಿಕೊಂಡವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವಾಗ ತಮ್ಮನ್ನು ಕಡಿದ ಹಾವುಗಳನ್ನು ಕೊಂದು ತಂದರೆ ಉತ್ತಮವು. ಏಕೆಂದರೆ ಅನೇಕ ಸಂದರ್ಭಗಳಲ್ಲಿ ವಿಷವೇಗವಿಲ್ಲದ ಹಾವುಗಳೂ ಕಡಿಯುವದುಂಟು. ಆ ಹಾವುಗಳನ್ನು ನೋಡಿ ಡಾಕ್ಟರುಗಳು ಇವು ವಿಷಜಾತಿಗಳೇ ಅಲ್ಲವೇ ಎಂದು ತೀರ್ಮಾನಿಸಬಹುದಾದುದರಿಂದ ವಿಷಜಾತಿಗಳಲ್ಲವೆಂದು ತಿಳಿದಕೂಡಲೆ ಮನಸ್ಸಿಗೆ ನೆಮ್ಮದಿಯಾಗುವುದು. ಹಾವಿನ ಬೆನ್ನಿನಮೇಲೆ ಯಾವಭಾಗದಲ್ಲಾದರೂ ಒಂದುಸಾರಿ ಬೆತ್ತದಿಂದ ಹೊಡೆದರೆ, ಅದರ ಶಕ್ತಿಯೆಲ್ಲವೂ ಅಡಗಿಹೋಗುವುದು. ಆದರೂ ಅದಕ್ಕೆ ಇನ್ನೂ ಕಚ್ಚುವ ಶಕ್ತಿಯುಂಟು. ಹಾವಿನ ತಲೆಯಮೇಲೆ ಹೊಡೆದಹೊರತು ಅದು ಸಾಯುವುದಿಲ್ಲ. ತಲೆಯಮೇಲೆ ಹೊಡೆದು ಕೊಂದರೆ ಅದರ ಜಾತಿಯು ಚೆನ್ನಾಗಿ ತಿಳಿಯುವುದಿಲ್ಲವಾದುದರಿಂದ, ಸಾಧ್ಯವಾದಾಗ ಹಾವುಗಳ ಬೆನ್ನಮೇಲೆಯೇ ಪೆಟ್ಟುಕೊಟ್ಟು ಅದರ ತಲೆಯ ಪೂರ್ಣಾಕೃತಿಯನ್ನು ಕೆಡಿಸದೆ ಅದಕ್ಕೆ ಸಮೀಪದಲ್ಲಿ ಎಲ್ಲಿಯಾದರೂ ಹೊಡೆದು ಕೊಲ್ಲುವುದೊಳ್ಳೆಯದು.

ನಾಗರಹಾವು ಮುಂತಾದ ಕೆಲವು ಜಾತಿಯ ಹಾವುಗಳು ಕಡಿದರೆ ಆ ವಿಷವು ನರಗಳ ಕೇಂದ್ರಸ್ಥಾನವನ್ನು ಮುಟ್ಟಿ, ಆಮೂಲಕ ಬೆನ್ನುಹುರಿಗೂ, ಮಿದುಳಿಗೂ ವ್ಯಾಪಿಸಿ ಮಿದುಳಿನಲ್ಲಿರುವ ಶ್ವಾಸನಾಳಗಳ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿ, ಮರಣಕ್ಕೆ ಕಾರಣವಾಗುವುದು. ಬೇರೆ ಕೆಲವು ಜಾತಿಯ ಹಾವುಗಳು ಕಡಿದರೆ (ರಸಲ್ ವೈಪರ್ ಮುಂತಾದವು) ಅವು ರಕ್ತವನ್ನು ಕೆಡಿಸಿ, ಹೃದಯ ಚಲನಕ್ಕೆ ಅಡ್ಡಿಮಾಡಿ, ಶರೀರದ ಕೆಲಸಗಳೆಲ್ಲವನ್ನೂ ನಿಲ್ಲಿಸುವುವು. ಅಲ್ಲದೆ ಅಧಿಕವಾದ ರಕ್ತಸ್ರಾವದಿಂದ ದೇಹದ ಶಕ್ತಿಯೆಲ್ಲವೂ ಹೋಗಿ ಮರಣಕಾರಿಯಾಗುವುದು.

ಸಾಮಾನ್ಯವಾಗಿ ಹಾವುಗಳಿಗೆ ಭೀತಿಯು ಹೆಚ್ಚು. ಅವುಗಳನ್ನು ಕೆಣಕಿದಹೊರತು ಅವು ಕಚ್ಚುವುದಿಲ್ಲ. ಆದರೆ ನಾಗರಹಾವು ಕೇರೆಹಾವು ಮತ್ತು ಗೋಧಿನಾಗರಹಾವುಗಳು ಮಾತ್ರ ಮೇಲೆ ಬಿದ್ದುಬರುವುವು. ಕೆಣಕಿದವರನ್ನು ಅಟ್ಟಿಕೊಂಡೂ ಹೋಗುವುದುಂಟು. ತಮ್ಮ ನೆರಳನ್ನೇ ಕಡಿಯುಹೋಗುವುವೆಂದೂ ಹೇಳುವರು. ಪ್ರಾಯಶಃ ಯಾರಿಗೂ ಗೋಚರವಿಲ್ಲದೆ ರಾತ್ರಿಯ ಕಾಲಗಳಲ್ಲಿ ಹಾವುಗಳನ್ನು ತುಳಿಯುವುದರಿಂದ ಅವು ಕಚ್ಚುವ ಸಂದರ್ಭಗಳೇ ವಿಶೇಷವಾಗಿವೆ.

ವಿಷದ ಹಾವುಗಳಾದರೂ ಕಚ್ಚಿದಾಗ ವಿಷವನ್ನು ಕಕ್ಕದಿರುವುದುಂಟು. ಒಂದುವೇಳೆ ವಿಷವನ್ನು ದೇಹದೊಳಕ್ಕೆ ಬಿಟ್ಟಿದ್ದರೂ ಆ ವಿಷವು ಅವರನ್ನು ಕೊಲ್ಲುವ ಪ್ರಮಾಣಕ್ಕಿಲ್ಲದೆ ಕಡಮೆಯಾಗಿರಬಹುದು ಅಥವಾ ಅದೇಹಾವು ತನ್ನ ವಿಷವೆಲ್ಲವನ್ನೂ ಮೊದಲು ಬೇರೆಲ್ಲಾದರೂ ಉಪಯೋಗಿಸಿ ನಷ್ಟಪಡಿಸಿಕೊಂಡಿರಬಹುದು. ಅಥವಾ ಆ ಹಾವಿನ ವಿಷದ ಕೊಳವೆಗಳಲ್ಲಿ ಯಾವುದಾದರೂ ನ್ಯೂನತೆಯುಂಟಾಗಿ ಆ ವಿಷವು ಚೆನ್ನಾಗಿ ಇಳಿಯುವುದಕ್ಕೆ ಆಸ್ಪದವು ಕಡಮೆಯಾಗಿರಬಹುದು. ಅನೇಕ ಸಂದರ್ಭಗಳಲ್ಲಿ ವಿಷವಿಲ್ಲದ ಹಾವುಗಳು ಕಡಿದಿದ್ದರೂ ಭೀತಿಯಿಂದಲೇ ಹೆಚ್ಚುಮಂದಿ ಸತ್ತಿರುವರು. ನಮ್ಮ ಇಂಡಿಯಾದೇಶದಲ್ಲಿ ಹಾವಾಡಿಗರನೇಕರು ಬಹಳ ದಿವಸಗಳ ಕಾಲ ತಮ್ಮ ದೇಹಕ್ಕೆ ಸ್ವಲ್ಪಸ್ವಲ್ಪವಾಗಿ ವಿಷವನ್ನು ಏರಿಸಿಕೊಳ್ಳುತ್ತ ಬಂದು ಕ್ರಮೇಣ ಆ ವಿಷಬಾಧೆಯು ದೇಹಕ್ಕೆ ತಟ್ಟದಂತೆ ಮಾಡಿಕೊಳ್ಳುವರು. ಮುಂಗುಸಿಗೆ ಹಾವು ಕಚ್ಚಿದರೂ ವಿಷವೇರುವುದಿಲ್ಲವೆಂಬುದು ಸುಳ್ಳು. ವಿಷದ ಜಾತಿಯ ಹಾವು ಕೋಪದಿಂದ ಕಡಿದರೆ ಮುಂಗುಸಿಯಾದರೂ ಸಾಯುವುದು ನಿಶ್ಚಯವು.

ಹಾವಿನ ವಿಷವು ಸರಿಯಾದ ಪ್ರಮಾಣಕ್ಕೆ ದೇಹಕ್ಕೆ ಸೇರಿದ್ದರೆ ಕಡಿಸಿಕೊಂಡವರು ಒಂದು ಗಂಟೆಯಕಾಲದಿಂದ ಹಿಡಿದು ಆರು ಗಂಟೆಯಕಾಲದೊಳಗಾಗಿ ಸಾಯುವರು. ಕೆಲವು ಸಮಯಗಳಲ್ಲಿ 12 ಅಥವಾ 24 ಗಂಟೆಗಳ ಕಾಲದವರೆಗೂ ಬದುಕಿರುವುದುಂಟು. ನಾಗರಹಾವು ಕಡಿದರೆ ಬಹು ಶೀಘ್ರವಾಗಿ ಪ್ರಾಣವು ಹೋಗುವುದು. ರಸಲ್-ವೈಪರ್ ಜಾತಿಯ ಹಾವು ಕಡಿದರೆ ಕಚ್ಚಿಸಿಕೊಂಡವರು ಸಾಯಲು 24 ಗಂಟೆಗಳಿಂದ 27 ಗಂಟೆಗಳ ಕಾಲದವರೆಗೂ ಹಿಡಿಯುವುದು.

ಪ್ರಾಯಶಃವಾಗಿ ಹಾವುಗಳ ವಿಷದ ವೇಗವು ಉರಿಯನ್ನುಂಟುಮಾಡುವುವು. ಶರೀರದೊಳಕ್ಕೆ ವಿಷವು ಪ್ರವೇಶಿಸಿದೊಡನೆ ಅದು ಆಸ್ಥಳದಲ್ಲಿ ವಿಶೇಷವಾಗಿ ಉರಿ ಹುಟ್ಟಿಸುವುದು. ಹಾವು ಕಚ್ಚಿದ ಕೆಲವು ನಿಮಿಷಗಳೊಳಗಾಗಿ ಆಸ್ಥಳವು ಊದಿಕೊಳ್ಳುವುದಕ್ಕೆ ಪ್ರಾರಂಭಿಸಿ ಕೆಲವು ಘಂಟೆಗಳ ಕಾಲದೊಳಗಾಗಿಯೇ ಬಹಳ ದೊಡ್ಡದಾಗುವುದು. ಕಚ್ಚಿದ ಗಾಯದ ರಂಧ್ರದಿಂದ ಧಾರಾಳವಾಗಿ ರಕ್ತಸ್ರಾವವಾಗುವದಕ್ಕೆ ಪ್ರಾರಂಭಿಸುವುದು. ಈ ಸೂಚನೆಗಳಲ್ಲಿ ಯಾವುದಾದರೂ ಕಾಣಿಸಿದೊಡನೆ ಹಾವಿನ ವಿಷವು ಏರಿರುವುದೆಂದು ತಿಳಿಯಬಹುದು. ಹಾವು ಕಚ್ಚಿದಸ್ಥಳದಲ್ಲಿ ಗಾಯವು ದೊಡ್ಡದಾಗದೆ ಆ ಸ್ಥಳವೂ ಊದಿಕೊಳ್ಳದೆ, ಅದು ಕಚ್ಚಿದುದರಿಂದುಂಟಾದ ಸಣ್ಣಗಾಯದ ರಂಧ್ರವೂ ಮುಚ್ಚಿಕೊಳ್ಳುತ್ತ ಬಂದರೆ ವಿಷದಹಾವು ಕಡಿದಿಲ್ಲವೆಂದಾಗಲಿ ಹಾವಿನ ವಿಷವು ದೇಹದೊಳಕ್ಕೆ ಪ್ರವೇಶಿಸಿಲ್ಲವೆಂದಾಗಲಿ ತಿಳಿಯಬಹುದು. ಆದುದರಿಂದ ಹಾವು ವಿಷಜಾತಿಯದೇ ಅಲ್ಲವೇ ಎಂಬುದನ್ನು ತಿಳಿಯುವದಕ್ಕೆ, ಕಚ್ಚಿದ ಸ್ಥಳದಲ್ಲಿರುವ ಹಲ್ಲುಗಳ ಗುರುತನ್ನು ನೋಡಿದ ಮಾತ್ರದಿಂದ ಸಾಲದು. ಹಾವಿನ ವಿಷಕ್ಕೆ ಆಂಟಿವಿನೀನ್ ಎಂಬುದೊಂದೇ ಒಳ್ಳೇ ಗುಣಕಾರಿಯಾದ ಔಷಧಿ. ಮೊದಲನೆಯ ಸಲಕ್ಕೆ 100 ಕ್ಯೂಬಿಕ್ ಸೆಂಟಿಮೀಟರಿನ ಪ್ರಮಾಣವನ್ನು ದೇಹದೊಳಕ್ಕೆ ಬಿಡಬೇಕು. ಅದರಿಂದ ಮೇಲೆ ಹೇಳಿದ ಸೂಚನೆಗಳು ತಗ್ಗಿ ಗುಣವು ಕಂಡುಬಾರದಿದ್ದರೆ ಇನ್ನೂ ಒಂದೆರಡು ಸಾರಿ ಅದೇ ಪ್ರಮಾಣದಲ್ಲಿ ಔಷಧಿಯನ್ನು ದೇಹದೊಳಕ್ಕೆ ಬಿಡಬಹುದು. ಈ ಔಷಧಿಯನ್ನು ಕಸೌಲಿ ಎಂಬಸ್ಥಳದಲ್ಲಿ ತಯಾರಿಸುವರು. ಸಕಾಲದಲ್ಲಿ ಉಪಯೋಗಿಸಿದರೆ ನಾಗರಹಾವು ಮುಂತಾದವುಗಳ ವಿಷಗಳನ್ನೂ ಪರಿಹರಿಸಬಹುದು. ಇದು ದೇಹದಲ್ಲಿ ವೇಗವಾಗಿ ವ್ಯಾಪಿಸಿ ಕೆಲಸಮಾಡುವುದಕ್ಕೆ ಪ್ರಾರಂಭಿಸಿ ವಿಷದ ಶಕ್ತಿಯನ್ನು ಹೋಗಲಾಡಿಸುವುದು. ಮೇಲೆ ಹೇಳಿದ 'ಆಂಟಿವಿನೀನ್' ಎಂಬುದು ಹೊಸದಾಗಿದ್ದಷ್ಟೂ ಒಳ್ಳೆಯದು. ಆದರೆ ಕಸೌಲಿಯಲ್ಲಿ ತಯಾರಾಗುತ್ತಿರುವ ಆಂಟಿವಿನೀನ್ ಎಂಬುದು 1 ವರ್ಷಕಾಲಕ್ಕೆ ತನ್ನ ಶಕ್ತಿಯನ್ನುಳಿಸಿಕೊಂಡಿರುವುದು. ಆ ಪರ್ಯಾಯದೊಳಗಾಗಿ ಶೇಕಡಾ 5 ಅಥವಾ 10 ಭಾಗದಷ್ಟು ಕಡಮೆಯಾಗಬಹುದು. ಆ ಔಷಧಿಯ ಶಕ್ತಿಯು 1 ವರ್ಷ ಕಳೆದಮೇಲೆಯೂ ಬಹಳಮಟ್ಟಿಗೆ ಹಾಗೆಯೇ ಇರುವುದೂ ಉಂಟು. ಚಿಕ್ಕಮಕ್ಕಳಿಗೂ ಆಕಾರದಲ್ಲಿ ಚಿಕ್ಕವರಾಗಿರುವವರಿಗೂ ಯುವಕರಿಗೆ ಬೇಕಾದುದಕ್ಕಿಂತ ಹೆಚ್ಚು ಪ್ರಮಾಣದ ಔಷಧಿಯು ಬೇಕೆಂದು ಅನುಭವದಿಂದ ತಿಳಿದಿದೆ.

ಹಾವುಗಳ ವಿಷವನ್ನು ಪರಿಹರಿಸುವುದಕ್ಕೆ ಈಗ ಸಾಮಾನ್ಯವಾಗಿ ಉಪಯೋಗಿಸುವ ಔಷಧಿಗಳಲ್ಲಿ ಪೊಟಾಸಿಯಮ್ ಪರ್ಮಾಂಗನೇಟ್ (Permanganete of Potassium) ಎಂಬುದು ಮತ್ತೊಂದು. ಆದರೆ ವಿಷವು ರಕ್ತದೊಳಕ್ಕೆ ಪ್ರವೇಶಿಸಿದಮೇಲೆ ಈ ಔಷಧಿಯನ್ನು ಉಪಯೋಗಿಸುವುದರಿಂದ ಯಾವ ಗುಣವೂ ಇಲ್ಲ. ರಕ್ತದ ಮೂಲಕ ವಿಷವು ದೇಹದ ಒಳಭಾಗಕ್ಕೆಲ್ಲಾ ವ್ಯಾಪಿಸದಂತಿರಲು ಹಾವು ಕಚ್ಚಿದ ಸ್ಥಳಕ್ಕೆ ಸ್ವಲ್ಪ ಮೇಲುಭಾಗದಲ್ಲಿ ಕಟ್ಟುಕಟ್ಟಬೇಕು. ಹಾವು ಕಚ್ಚಿದ ಸ್ಥಳದಲ್ಲಿರುವ ಗಾಯವನ್ನು ಚಾಕುವಿನಿಂದ ಸೀಳಿ ದೊಡ್ಡದು ಮಾಡಿ ರಕ್ತವನ್ನು ಧಾರಾಳವಾಗಿ ಸುರಿಸಿ, ವಿಷಪರಿಹಾರಕ್ಕಾಗಿ ಆ ಗಾಯಕ್ಕೆ ಪೊಟಾಸಿಯಮ್ ಪರ್ಮಾಂಗನೇಟ್ ಪುಡಿಯನ್ನು ಹಾಕಿ ಒತ್ತಬೇಕು. ಆಗ ಮಾತ್ರ ಆ ಚಿಕಿತ್ಸೆಯು ಗುಣಕಾರಿಯು. ಮೇಲಿನ ಕಟ್ಟು ಅರ್ಧ ಗಂಟೆಗಳ ಕಾಲಕ್ಕಿಂತ ಹೆಚ್ಚು ಕಾಲ ಇರಬಾರದು. ಇಲ್ಲದಿದ್ದರೆ ಆ ಸ್ಥಳಗಳಲ್ಲೆಲ್ಲಾ ರಕ್ತಸಂಚಾರವೇ ಧಾರಾಳವಾಗಿ ನಡೆಯದೆ ಬಹಳ ಶ್ರಮವಾಗಬಹುದು. ರಕ್ತಸಂಚಾರವು ಧಾರಾಳವಾಗಿ ನಡೆಯುತ್ತಿರುವ ರಕ್ತನಾಳಗಳಲ್ಲಿ ವಿಷವು ಸೇರಿಕೊಂಡ ಮೇಲೆ ಪೊಟಾಸಿಯಮ್ ಪರ್ಮಾಂಗನೇಟನ್ನು ಉಪಯೋಗಿಸುವುದರಿಂದ ಏನೂ ಪ್ರಯೋಜನವಿಲ್ಲ.

ಹಾವಿನ ಕಡಿತಕ್ಕೆ ಯಂತ್ರಗಳೂ, ಔಷಧಿಗಳೂ ಅನೇಕ ಕಡೆಗಳಲ್ಲಿ ವಿಕ್ರಯಿಸಲ್ಪಡುತ್ತಿವೆ. ಆದರೆ, ಅವೊಂದೂ ಗುಣಕಾರಿಗಳಲ್ಲ. ಜನರು ಅಜ್ಞಾನದ ದೋಷದಿಂದ ಕಂಡಕಂಡ ಔಷಧಿಗಳನ್ನೆಲ್ಲಾ ಉಪಯೋಗಿಸುತ್ತಿರುವರು. ಮತ್ತು ಹಳ್ಳಿಗಳಲ್ಲಿ ಮಂತ್ರವಾದಿಗಳಿಗೆ ಹಾವಿನ ವಿಷವನ್ನು ಹೋಗಲಾಡಿಸುವ ಶಕ್ತಿಯಿರುವುದೆಂಬ ಮೂಢಭಕ್ತಿಯಿಂದ, ಅವರಲ್ಲಿಗೆ ಹೋಗಿ ವ್ಯರ್ಥ ಕಾಲವನ್ನು ಕಳೆದುಕೊಳ್ಳುತ್ತಿರುವರು. ಅನೇಕ ಸಂದರ್ಭಗಳಲ್ಲಿ ಹಾವುಗಳ ವಿಷವು ದೇಹದೊಳಕ್ಕೆ ತಕ್ಕ ಪ್ರಮಾಣದಲ್ಲಿ ಪ್ರವೇಶಿಸದೆ ಇರಬಹುದು. ವಿಷವಿಲ್ಲದ ಹಾವು ಕಡಿದಿರಬಹುದು. ವಿಷವನ್ನು ದೇಹದೊಳಕ್ಕೆ ಬಿಡದೆ ಸುಮ್ಮನೆ ಹಾವು ಕಚ್ಚಿರಬಹುದು. ತನ್ನ ವಿಷವೆಲ್ಲವನ್ನೂ ಉಪಯೋಗಿಸಿದ ಒಡನೆಯೇ [illegible] ಹಾವು ಮನುಷ್ಯನನ್ನು ಕಚ್ಚಿರಬಹುದು. ಇವೇ ಮುಂತಾದ ಕಾರಣಗಳಿರಬೇಕು. ಹಾವು ಕಚ್ಚಿದಾಗ ಪ್ರತಿನಿಮಿಷವೂ ಬಹಳ ಅಮೂಲ್ಯವಾದ ಕಾಲವೆಂದು ಭಾವಿಸಿ ಚಿಕಿತ್ಸೆ ಮಾಡಬೇಕು. ಹಾವು ಕಚ್ಚಿದೊಡನೆ ಮೇಲೆ ಕಟ್ಟುಕಟ್ಟಿ, ವೈದ್ಯರನ್ನು ಕರೆಸಬೇಕು. ಇಲ್ಲದಿದ್ದರೆ ರೋಗಿಯನ್ನು ಸಮೀಪದಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು.

ಆರೋಗ್ಯಚಂದ್ರಿಕೆ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇನೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೮ ಬೆಲೆ ೧ ಕ್ಕೆ ೬ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಪ್ರಿಕ್ ಕಂಡು ಬಂದಲ್ಲಿ ವಾಪಸು ಮಾಡಿರಿ ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [17]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಆದೆಂತಹ ಜ್ವರಗಳಾಗಲಿ, **'ಕೊಡಗಿನ ಗುಡುಗುಡು!'** (ಅಂ) **'ಸುಡುಸುಡು!'** (ಉಂ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [52]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ.

ಔಷಧಸೇವೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ **"ಆರೋಗ್ಯಚಂದ್ರಿಕೆ"** ಯೆಂಬ ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಆರೋಗದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ **ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಪೇಟ್ರಿಯಟ್"** ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"ಆನರಬಲ್ **ಡಾಕ್ಟರ್ ಯು. ರಾಮರಾವ್** ಮತ್ತು ಅವರ ಮಕ್ಕಳು **ಡಾಕ್ಟರ್ ಯು. ಕೃಷ್ಣರಾವ್** ಎಂ. ಬಿ. ಬಿ. ಎಸ್. ಇವರಿಬ್ಬರೂ ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾಯಿಗಳಿಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಚುರವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ರೈಲುಸ್ಟೇಷನುಗಳಲ್ಲಿರುವ ಮೆಸರ್ಸ್ **ಹಿಗ್ಗಿನ್ ಬಾಥಮ್ಸ್** ಕಂಪೆನಿಯವರ ಬುಕ್‌ಸ್ಟಾಲುಗಳಲ್ಲೆಲ್ಲಾ ನಮ್ಮ ಸಂಚಿಕೆಗಳು ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[6] **ಮ್ಯಾನೇಜರ್, ಆರೋಗ್ಯಚಂದ್ರಿಕೆ,** 323, ತಂಬುಚೆಟ್ಟಿ ಬೀದಿ, **ಮದರಾಸು.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅಪೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣದಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ್	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಕಳೆ ಪವರ್, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೌಡಕ್ಕೆ ಶಾಘ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜರಾಕಂಧ, ತಾಲೀಮಲೀಕಂದ, ಅಶ್ವಕಂದ, ಕ್ರೌಂಚಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಕಪಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನವಳೀಬೀಜ, ಚಿಕಣಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರಸಪುರುಷ, ಕಮಲಕಸ, ಅಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಖಾನಾ, ಬೀಜಬಂದ, ಹರಣಬೋರಿ, ಮುಂಗಲೀ ಬೇದಾಣೆ, ಮರ್ದಾಸೀಕಟ್ಟಿಗೆ, ಕಹಾಪರಿ, ಸಕೀಮುಗಜ, ಆಲದಹಾಲು, ವಾಕೇರಿಭಾಜಾ, ಗೋಖರು, ಅಡವಿ ಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಆವಳಕಾಟಿ, ಸಿಲಾಜಿತ, ಜಾಜೀಕಾಯಿ, ಜಾಪತ್ರೀ, ದೂಪದಮಸ್ತಕಿ, ನಂಕಲೋಚನ, ವರಧಾರಿ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ. ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಓನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ತ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಕಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [4]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಶೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[18] (೮೪೮) ಗಣೇಶಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಧನಸಂಪನ್ನರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೧×೧೪ ಬೆಲೆ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸಪ್ತಪಂಚಸೋಪಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟ್ ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಗಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುವಂತೆ ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[6] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ ನೇ ಆಗಸ್ಟ್ ೧೯೨೯ [ಸಂಚಿಕೆ ೧೪.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ !!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವೋಸಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲಾ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು.

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.**

ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಸೀದ.

ಏಜಂಟರ ಆವಶ್ಯಕತೆ.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನದ ಏಜಂಟರವರ ಆಫೀಸಿನಿಂದ ಕೃತ ನಡಿಸುವದೇನೆಂದರೆ, ಕರ್ನಾಟಕ, ಇಂಗ್ಲೀಷ್, ಹಿಂದಿ ಮತ್ತು ತೈಲಂಗಭಾಷಾ ಪರಿಚಯವುಳ್ಳವರಾಗಿಯೂ, ಸರಕಾರೀ ಕೆಲಸದಿಂದ ನಿವೃತ್ತರಾಗಿ ಪೆನ್ಶನ್ ಪಡೆದವರಾಗಿಯೂ ಇರತಕ್ಕ ವೀರಶೈವರೂ, ಸದಾಚಾರಿಗಳೂ, ಕಾರ್ಯದಕ್ಷರೂ ಆದವರು ಮೇಲೆ ಕಾಣಿಸಿದ ಅಡ್ರೆಸ್ಸಿಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು ಅಥವಾ ಖುದ್ದುರೂಬು ಬಂದು ಭೆಟ್ಟಿಯಾಗತಕ್ಕದ್ದು. ಅವರವರ ಯೋಗ್ಯತಾನುಸಾರ ಪಗಾರವು ಗೊತ್ತುಮಾಡಲ್ಪಡುತ್ತದೆ. ಆಗಸ್ಟ ತಿಂಗಳ ಅಖೈರದೊಳಗಾಗಿ ಅಪ್ಲಿಕೇಷನ್ನುಗಳ ಮೂಲಕ ಅರಿಕೆ ಮಾಡಿಕೊಳ್ಳತಕ್ಕದ್ದು.

ಏಜಂಟ್,
ಮುಕ್ಕಾಂ ಬೀರೂರು. ರಂಭಾಪುರಿ ಸಂಸ್ಥಾನ

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.

ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [18]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

WANTED.

Candidates for Telegraph and Station Master's Classes. Full particulars and Railway Fare Certificate on receipt of 2 annas Stamp.

Apply to—

INPERIAL TELEGRAPH COLLEGE, DELHI.

(4)

ಶ್ರೀ ಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು.

ಪಟುಗಳ ಚುನಾವಣೆ.

ಮುಳವಳ್ಳಿ ತಾಲೂಕು ಕಸಬಾ ಕೋಟೆಯಲ್ಲಿರುವ ಶಂಕರಮಠಕ್ಕೂ ಮತ್ತು ತಾಲೂಕು ಕಸಬಾ ಚೋಬೀ ಸಿದಗಟ್ಟದ ಮಠಕ್ಕೂ ಪಟ್ಟಸ್ವಾಮಿಗಳಾಗಬೇಕಾಗಿರುವದ್ದರಿಂದ ಸದ್ವಂಶಸ್ಥರಾಗಿರುವ ಪಟುಗಳು ಯಾರಿದ್ದಾಗ್ಯೂ ಮುಳವಳ್ಳಿ ಕಸಬಾ ಅಂಗಡಿ ಬೀದಿ ಬಿ. ವೀರಭದ್ರಪ್ಪನವರ ಹೆಸರಿಗೆ ತಾ|| 14-8-29 ರ ಒಳಗಾಗಿ ಪತ್ರದ ಮೂಲಕ ತಿಳಿಸಬೇಕಾಗಿ ಕೋರುತ್ತೇನೆ.

ಮಠಸೇವಕ
ಬಿ. ವೀರಭದ್ರಪ್ಪ.

ಕ್ಯಾಲಿಫೋರ್ನಿಯಾ ಮತ್ತು ಇಟಲಿಯಲ್ಲಿ ಸಿಂಬೆಹಣ್ಣಿನ ವ್ಯಾಪಾರವು ಬಹುಹೆಚ್ಚು! ವರ್ಷ ಒಂದಕ್ಕೆ ಈ ದೇಶಗಳಿಂದ 70 ಲಕ್ಷ ಸಿಂಬೇಹಣ್ಣಿನ ಪೆಟ್ಟಿಗೆಗಳು ಪರದೇಶಕ್ಕೆ ಕಳುಹಿಸಲ್ಪಡುವುವು. ಇಟಲೀದೇಶದ ಸಿಂಬೆಹಣ್ಣು ನಮ್ಮ ದೇಶದ ಹಣ್ಣಿಗಿಂತಲೂ ಮೂರರಷ್ಟು ಗಾತ್ರವಿರುತ್ತದೆ. ಕ್ಯಾಲಿಫೋರ್ನಿಯಾದಿಂದ ವರ್ಷಕ್ಕೆ 60 ಲಕ್ಷ ಪೆಟ್ಟಿಗೆಗಳು ಪರಸ್ಥಳಕ್ಕೆ ಹೋಗುವುವು. ಆದರೆ ನಮ್ಮ ಹಿಂದೂಸ್ಥಾನದಲ್ಲಿ ಮಾತ್ರ ನಮಗೆ ಸಾಕಾಗುವಷ್ಟು ಹಣ್ಣು ಸಹ ದೊರೆಯುವಂತಿಲ್ಲ!

ಸ್ವೀಕಾರ.

ಆದವಾನಿ ವೀರಾಸಾನಿಯು ಮಗಳು ಗೌರಾಸಾನಿಯು ಆದವಾನಿ ಮಠದ ದೈವದವರ ವಾಗ್ದೋಷನಿರೂಪಣೆಯಿಂದ ಸಮಾಜಕ್ಕೆ ದೂರಳಾಗಿದ್ದು ಈಗ ಶ್ರೀ ಜಗದ್ಗುರು ಪರ್ವತಸಿಂಹಾಸನಾಧೀಶ್ವರರು ಸದರಿ ಗೌರಾಸಾನಿಗೆ ವೀರಶೈವಧರ್ಮಪ್ರಕಾರ ಪ್ರಾಯಶ್ಚಿತ್ತ ಮಾಡಿಸಿ ಅವಳನ್ನೂ ಅವಳ ಮನೆತನದವರನ್ನೂ ಪುನಃ ಸಮಾಜಕ್ಕೆ ಸೇರಿಸಿಕೊಳ್ಳುವಂತೆ ಅನುಜ್ಞೆ ಮಾಡಿದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 5 ರೂಪಾಯಿಗಳು ವೇ|| ಸಾತನೂರು ಬಸೆಟ್ಟಪ್ಪನವರ ದ್ವಾರಾ ತಲ್ಪಿರುತ್ತವೆ.

ಅನಂತಪುರ ಜಿಲ್ಲಾ ಮಡಕಶಿರಾ ತಾಲೂಕು ಅಮರಾಪುರದ ಗೊಂಚಕಾರು. ಶಿದ್ಧಲಿಂಗಪ್ಪನವರು ತಮ್ಮ ಚಿಕ್ಕಮಗುವಿಗೆ ಒಂದು ದೊಡ್ಡ ಕುದುರೆ ಎದ್ದು [illegible] ದಾಗ ಡಕಾಯಿತನೂ ಅವನ ಸ್ನೇಹಿತನೂ ಸತ್ತುಬಿದ್ದಿದ್ದರು.

ರಷ್ಯಾದ ಜಾರ್ ಚಕ್ರವರ್ತಿಯು ಕೊಲ್ಲಲ್ಪಟ್ಟಾಗ 250 ಕೋಟಿ ರೂಪಾಯಿಗಳ ಆಸ್ತಿಯನ್ನು ಬಿಟ್ಟುಹೋದರು. ಈಗ ಈ ಅಪಾರವಾದ ಸಂಪತ್ತಿಗಾಗಿ ಮೂವರು ಅಮೆರಿಕೆಯ ಕೋರ್ಟುಗಳಲ್ಲಿ ಜಗಳವಾಡುತ್ತಿರುವದಾಗಿ ತಿಳಿಯಬಂದಿದೆ. ಈ ಮೂವರು ಹಕ್ಕುದಾರರ ಪೈಕಿ ಮೊದಲನೆಯವರು ಈಗ ರಷ್ಯಾದಲ್ಲಿರುವ ಸೋವಿಯಟ್ ಸರ್ಕಾರ, ಎರಡನೆಯವರು ರೋಮನಾಫ್ ವಂಶದಲ್ಲಿ ಉಳಿದವರು, ಮೂರನೆಯವರು ಜಾರರ ಕಿರಿಯಮಗಳು ಪ್ರಿನ್ಸೆಸ್ ಅನಾಸ್ಟಸಿಯ ಎಂದು ಹೇಳಿಕೊಳ್ಳುವ ಮ್ಯಾಡಂ ಚಾಕೋವಸ್ಕಿಯವರು. ಇವರು ರಷ್ಯಾ ಜಾರರ ಆಸ್ತಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಎಲ್ಲಾ ಬ್ಯಾಂಕು ಮತ್ತು ಟ್ರಸ್ಟ ಕಂಪನಿಗಳು ಲೆಕ್ಕವನೊಪ್ಪಿಸುವಂತೆ ಕೋರ್ಟಿನಿಂದ ಆಗಲೆ ಆರ್ಡರ್ ಪಡೆದಿರುವರು. ಸೋವಿಯಟ್ ಸರ್ಕಾರದ ಪ್ರತಿನಿಧಿಯು ಇವಕ್ಕೆ ವಿರುದ್ಧವಾಗಿ ಕೋರ್ಟಿಗೆ ಅರ್ಜಿಹಾಕಿ ಆ ಆಸ್ತಿಗಳಿಗೆ ಸೋವಿಯಟ್ ಸರ್ಕಾರವು ಹಕ್ಕುದಾರರೆಂಬುದಕ್ಕೆ ರುಜುವಾತು ಕೊಡುವುದಾಗಿ ಹೇಳಿದರು. ಮ್ಯಾಡಂ ಚಾಕೊವಸ್ಕಿಯು ತನ್ನ ತಂದೆತಾಯಿಗಳು ಕೊಲ್ಲಲ್ಪಟ್ಟನಂತರ ಬಹಳ ಕಷ್ಟದೆಸೆಯಲ್ಲಿ ವೇಷಮರೆಸಿಕೊಂಡಿದ್ದು, 1620 ರಲ್ಲಿ ಬರ್ಲಿನ ನಗರದಲ್ಲಿ ಸದಿ [illegible]

ಲಂಡನ್ನಿನಲ್ಲಿ ಹೊಗೆಸೊಪ್ಪಿನ ವ್ಯಾಪಾರದಲ್ಲೇ ಕೋಟ್ಯಂತರ ರೂಪಾಯಿಗಳನ್ನು ಸಂಪಾದಿಸಿ ಪ್ರಪಂಚದ ಕೋಟ್ಯಧೀಶ್ವರರುಗಳಲ್ಲಿ ಒಬ್ಬನಾದ ಎಂ. ಬೆನಾರ್ಡ್ ಬ್ಯಾರನ್ ಎಂಬ 78 ವರ್ಷದ ಶ್ರೀಮಂತನು ಕಳೆದ 2 ನೇ ತಾರೀಕಿನ ದಿವಸ ಅಕಸ್ಮಾತ್ತಾಗಿ ಮರಣವನ್ನು ಹೊಂದಿದನು. ಆತನ ಮರಣದಿಂದ ಬ್ರಿಟಿಷ್ ಸರಕಾರಕ್ಕೆ ಕೋಟ್ಯಂತರ ರೂಪಾಯಿಗಳು ಮರಣದ ತೆರಿಗೆಯರೂಪದಲ್ಲಿ ಸೇರಿತಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಬಾಳೆಹೊನ್ನೂರು ಶ್ರೀ ಜಗದ್ಗುರುಗಳವರ ಮಹಾಸನ್ನಿಧಿಯಲ್ಲಿ ನಡೆದ ಬೀರೂರಿನ ಸೇವಾಸಮಾಜದ ನಾಲ್ಕನೆಯ ಸಮಾರಂಭವು.

ಬಾಳೆಹೊನ್ನೂರು ಪೀಠಾಧೀಶ್ವರರಾದ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಸವಾರಿಯು ಈಗ ಬೀರೂರಿನಲ್ಲಿದೆ. ಪುರವಾಸಿಗಳಾದ ವೀರಶೈವರು ಜಗದ್ಗುರುಗಳನ್ನು ತಮ್ಮ ಸ್ಥಳಕ್ಕೆ ಬಿಜಮಾಡಿಸಿಕೊಂಡು ಭಕ್ತಿಪುರಸ್ಸರವಾಗಿ ಸತ್ಕಾರಮಾಡುತ್ತಿರುವುದು ಬಹು ಶ್ಲಾಘನೀಯವಾಗಿರುತ್ತದೆ. ಇದೇ ಸಮಯದಲ್ಲಿ ಈ ಊರಿನ ಸೇವಾಸಮಾಜದವರು ತಮ್ಮ 4 ನೆಯ ವಾರ್ಷಿಕಸಮಾರಂಭವನ್ನು ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ನೆರವೇರಿಸಿ ಅವರ ಅಮೋಘವಾದ ಸದುಪದೇಶವನ್ನು ಶ್ರವಣಮಾಡಿ ಧನ್ಯರಾಗಬೇಕೆಂಬ ಸಂಕಲ್ಪದಿಂದ ಶ್ರೀಗಳವರನ್ನು ಪ್ರಾರ್ಥಿಸಿಕೊಂಡು ಅವರ ಅನುಜ್ಞೆಯಂತೆ ತಾ|| 14-7-29 ನೆಯ ಭಾನುವಾರ ಸೇವಾಸಮಾಜದ ಮುಖ್ಯಕಾರ್ಯದರ್ಶಿಗಳು ಮುಂದೆ ನಿಂತು ಆ ದಿನ ಸಾಯಂಕಾಲ 6 ಘಂಟೆಗೆ ಸರಿಯಾಗಿ ಶ್ರೀ ಜಗದ್ಗುರುಗಳವರ ಸನ್ನಿಧಿಗೆ ಎಲ್ಲ ಜನರೊಡನೆ ಹಾಜರಾಗಲು ಸ್ವಯಂಸೇವಕರು ವರದಿಯನ್ನು ಕೊಡಲು ಸರ್ವರು ನಿಯಮಿತಕಾಲಕ್ಕೆ ಸರಿಯಾಗಿ ಆಸ್ಥಾನವನ್ನು ಸೇರಿದರು. ಪ್ರೆಸಿಡೆಂಟರಾದ ಮ|| ರಾ|| ಸಾ|| ದೊ|| ಹಾಲಪ್ಪನವರೂ ಮತ್ತು ಕಾರ್ಯದರ್ಶಿಗಳೂ ಇತರ ಸದಸ್ಯರುಗಳೊಂದಿಗೆ ಫಲಪುಷ್ಪಹಾರಗಳನ್ನು ತೆಗೆದುಕೊಂಡು ಹೋಗಿ ಮಹಾಪಾದಕ್ಕೆ ಒಪ್ಪಿಸಿ ಜಯಘೋಷವೊಡನೆ ನಮಸ್ಕಾರವನ್ನು ಮಾಡಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ಪದ್ಧತಿಯ ಪ್ರಕಾರ ಆಸ್ಥಾನ ವಿದ್ವಾನ್ ವೇ|| ಪಂ|| [illegible]ಸ್ಥಲಿಂಗಶಾಸ್ತ್ರಿಗಳವರಿಂದ ಸ್ವಲ್ಪಹೊತ್ತು ಪುರಾಣಶ್ರವಣವು ನಡೆ[illegible]ನಂತರ ಸೇವಾಸಮಾಜದ ಮುಖ್ಯಕಾರ್ಯದರ್ಶಿಗಳಾದ ಶ್ರೀಮಾನ್ ಕೆ. ಟಿ. ಸತ್ಯನಾರಾಯಣಶೆಟ್ಟರವರು ಸಮಾಜದ ಪರವಾಗಿ ಶ್ರೀ ಜಗದ್ಗುರುಗಳವರ ಗುಣಕಥನವನ್ನು ಮಾಡಿ, ಸೇವಾಸಮಾಜದ ಸದಸ್ಯರುಗಳೂ ಹಾಗೂ ಇತರ ಮಹಾಜನಗಳೂ ಸೇರಿದ ಉದ್ದೇಶವನ್ನೂ, ಸರ್ ರವೀಂದ್ರನಾಥ ಟಾಗೂರ್‌ರವರು ಬರೆದಿರುವ ಗೀತಾಂಜಲಿಯ ವಾಕ್ಯಗಳನ್ನೂ ಸಂಕ್ಷೇಪವಾಗಿ ತಿಳಿಸಿ ಮಹಾಸನ್ನಿಧಿಯಲ್ಲಿ ಅಭಿ[illegible]

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾ[illegible]

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡ[illegible] ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧[illegible]

ಮ್ಯಾನೇಜರ್.—

ಸರ್ವೋತ್ತಮಪ[illegible]

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪[illegible]
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪[illegible]
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆ[illegible]
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ
ಮಾಹೇಶ್ವರ ದೀಕ್ಷಾವಿಧಿ ....
ಗೋತ್ರಸೂತ್ರಪಟ ೩ನೆಯ ಆವೃತ್ತಿ ....
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃ[illegible]
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ [illegible]
ಬಸವಧ್ವಾಂತ ದಿವಾಕರ ....
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ
ವೀರಶೈವಾಚಾರವಿಧಿ ....
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ

[illegible] ಪ್ರ[illegible]ಮಾಡಿ ಸಂತೋಷಗೊಂಡ ಮ|| ರಾ|| ಶೇಷಾದ್ರಿಯ್ಯಂಗಾರ್ಯರು ಶ್ರೀ ಜಗದ್ಗುರುಗಳ ಪ್ರತಿಭೆಯನ್ನು ಕೊಂಡಾಡಿ ಮಹಾಜನಗಳ ಪರವಾಗಿ ವಂದನೆಗಳನ್ನರ್ಪಿಸಿದರು. ಮ|| ರಾ|| ಪಠೋಳಗರು ನರಸೋಜಿರಾಯರು ಶ್ರೀ ಮಹಾಸನ್ನಿಧಿಯಲ್ಲಿ ಭಕ್ತಿಪೂರ್ವಕವಾಗಿ "ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಈ ಶುಭಸಮಯದಲ್ಲಿ ಬೀರೂರಿಗೆ ದಯಮಾಡಿಸಿ ದರ್ಶನಾಶೀರ್ವಾದಗಳಿಂದಲೂ ತಮ್ಮ ಸದುಪದೇಶಗಳಿಂದಲೂ ನಮ್ಮ ಸೇವಾಸಮಾಜದವರನ್ನು ಕೃತಕೃತ್ಯರನ್ನಾಗಿ ಮಾಡಿದುದಕ್ಕೆ ಮಹಾಸ್ವಾಮಿಗಳವರ ಚರಣಸನ್ನಿಧಿಯಲ್ಲಿ ಸೇವಾಸಮಾಜದ ಪರವಾಗಿ ನಮ್ಮಗಳ ಕೃತಜ್ಞತಾಪೂರ್ವಕವಾದ ಮತ್ತು ಗುರುಭಕ್ತಿಪುರಸ್ಸರವಾದ ಸಹಸ್ರವಂದನೆಗಳನ್ನು ಸಮರ್ಪಿಸುವುದಲ್ಲದೆ ಇನ್ನೇತಿ ಸಂಪೂರ್ಣ ಕೃಪೆಯು ಸರ್ವದಾ ಇರಬೇಕಾಗಿ ಅಡಿಗಡಿಗೂ ಬೇಡಿಕೊಳ್ಳುತ್ತೇನೆ ಮಹಾಸ್ವಾಮಿ" ಎಂದು ಪ್ರಾರ್ಥಿಸಿದರು. ಆಮೇಲೆ ಜಗದ್ಗುರುಗಳವರು ಎಲ್ಲರಿಗೂ ಮಂಗಲಾಶೀರ್ವಾದ ಮಾಡಿದನಂತರ ಸಭೆಯು ಮುಕ್ತಾಯವಾಯಿತು.

ವೇ|| ಶಿವಕಥಾಪಂಡಿತ ಜಿ. ನಂಜುಂಡಾರಾಧ್ಯಶಾಸ್ತ್ರಿ,
ಹುಣಸೀಗಟ್ಟದ ಬೃಹನ್ಮಠ,
ಮೊಕ್ಕಾಂ ಬೀರೂರು.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಪ್ರಸೀದಂತು.

ಶಿವಲಿಂಗಾನುಷ್ಠಾನ ಸಮಾರಂಭ

ದರ್ಗನಹಳ್ಳಿ.

ಜಗತ್ತಿನಲ್ಲಿ ಸತ್ಪುರುಷರು ಅನೇಕ ಪ್ರಕಾರಗಳಾದ ಲೀಲೆಗಳನ್ನು ತೋರಿಸಿ ಅಜ್ಞಾನಿಜನರು ಸನ್ಮಾರ್ಗಿಗಳಾಗುವ ಮಾರ್ಗವನ್ನು ತೋರಿಸಿ ಮುಕ್ತಿಪದವಿಯನ್ನು ಹೊಂದಿರುವರು. ಅಂಥವರಲ್ಲಿ ಓರ್ವರಾದ ನಮ್ಮ ಗುರುವರ್ಯರು ಶ್ರೀ ಶೈಲಸೂರ್ಯಸಿಂಹಾಸನಾನುಯಾಯಿಗಳಾದ ಶ್ರೀ|| ಷ|| ಬ್ರ|| ಶ್ರೀ ಚನ್ನವೀರ ಶಿವಾಚಾರ್ಯ ಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಬೃಹನ್ಮಠ ಹೊಟಗೀ ಈ ಮಹಾಶಯರು ನಮ್ಮ ದರ್ಗನಹಳ್ಳಿಗೆ (ತಾ. 27-5-29) ಕ್ಕೆ ಆಗಮಿಸಿ ಶಿವರಾಮ ಭೀಮರಾವ್ ಬಿರಾಜದಾರ ಇವರ ತೋಟದಲ್ಲಿ ಪಂಡಿತಾಶ್ರಮವನ್ನು ತಾ|| 30-5-29 ಗುರುವಾರ ದಿವಸ ಸ್ಥಾಪನಮಾಡಿಸಿ ಕೈ|| ರಾವ್ ಬಹದ್ದೂರ್ ಮಲ್ಲಪ್ಪಾ ವಾರದ ಇವರು ಭಾಷಿಸಿದ್ದ "ವೀರಶೈವ ಆಚಾರ ಪ್ರದೀಪಿಕೆ" ಯನ್ನು ನಿತ್ಯದಲ್ಲಿಯೂ ಭಕ್ತರಿಗೆ ಉಪದೇಶಮಾಡುತ್ತಿದ್ದರು. ಆಶ್ರಮವು ಊರಿನಿಂದ ಒಂದು ಮೈಲಿ ದೂರದಲ್ಲಿದ್ದರೂ ನಿತ್ಯವೂ ಎಷ್ಟೋ ಜನರು ಬರುತ್ತಿದ್ದರು. ಮಧ್ಯಮಧ್ಯದಲ್ಲಿ ಊರಲ್ಲಿ ಸ್ತ್ರೀಪುರುಷರ ದೆಸೆಯಿಂದ ಸಭೆಗೂಡಿಸಿ ಸದಾಚಾರಗಳನ್ನು ತಿಳಿಸುತ್ತಿದ್ದರು ಈ ಊರ ಜನರಿಗೆ ತಾವುಯಾರು? ನಾವು ಯಾವ ಕುಲಜರು? ನಾವು ಹೇಗೆ ನಡೆಯಬೇಕು? ಲಿಂಗವೆಂದರೇನು? ಅಷ್ಟಾವರಣವೆಂದರೇನು? ಇವುಗಳ ಹೆಸರೂ ಕೂಡಾ ಗೊತ್ತಿದ್ದಿಲ್ಲ. ಅದೇ ಜನರು ಈಗ ಎರಡನೇ ಊರಿನವರಿಗೂ ಕೂಡಾ ಆಚಾರಹೇಳುವವರಾಗಿರುವರೆಂದು ಬರೆಯಲಿಕ್ಕೆ ಸಂತೋಷವಾಗುತ್ತದೆ ಸದರೀ ಮಹಾಸ್ವಾಮಿಗಳು ತಾ|| ೨-೬-೨೯ ಶನಿವಾರದಿಂದ ಆಶ್ರಮದಲ್ಲಿ ಕೆಲವುದಿವಸಗಳವರೆಗೆ ಬರೇ ಹಾಲನ್ನು ತೆಗೆದುಕೊಳ್ಳುತ್ತ ಶಿವಲಿಂಗಾನುಷ್ಠಾನವನ್ನು ಆರಂಭಿಸಿದರು. ಮುಂದೆ ತಾ|| ೭-೬-೨೯ ಮೊದಲುಮಾಡಿಕೊಂಡು ನಿತ್ಯದಲ್ಲಿಯೂ ೫ ಖಾರೀಕಗಳನ್ನು ಸ್ವೀಕರಿಸುತ್ತ ೩೬ ದಿವಸಗಳ ಪರ್ಯಂತರ ಘೋರವಾದ ಅನುಷ್ಠಾನವನ್ನು ಮಾಗಿ ತಾ. ೧೪-೭-೨೯ ಕ್ಕೆ ಸಮಾಪ್ತಗೊಳಿಸಿದರು. ಅದು ಮುಗಿಯುವ ಪರ್ಯಂತರ ಮ|| ರಾ|| ಚಂದಪ್ಪಾ ಬಿರಾಜದಾರ ಇವರು ಒಳ್ಳೇ ಭಕ್ತಿಯಿಂದ ಸೇವೆಯನ್ನು ಮಾಡುತ್ತಿದ್ದರು. ಸದರೀಕಾರ್ಯಕ್ಕೆ ಸೋಲಾಪುರದಿಂದ ಕುಂಬಾರಿ, ಬೋರಾಮಣಿ, ಸಂಗದರಿ, ಮುಸ್ತಿ, ದೊಡ್ಡಿ, ಫೋತ್ರಿ, ಸಿರಪನಹಳ್ಳಿ, ಹೋಟಗಿ, ಸಿಂಗದಗಾಂವ, ಕರ್ದಹಳ್ಳಿ, ರಾಮಪುರ, ಗುರ್ದಳ್ಳಿ, ಮುತ್ಸಳ್ಳಿ, ಚಿಂಚೋಳ್ಳಿ, ತೊಗರಳ್ಳಿ, ಮುಳೇಗಾಂವ ಈ ಗ್ರಾಮಗಳಿಂದ ಎಷ್ಟೋ ಭಜನಾಸಂಘದವರು ಬಂದಿದ್ದರು ಅನಂತರ ಸಮಸ್ತ ಜನರೂ ಕೂಡಿ ಮಹಾಸ್ವಾಮಿಗಳ ಪೂಜಾಮಂಗಲಾದಿಗಳನ್ನು ಮಾಡಿ ಕಾಯಿಕರ್ಪೂರಗಳನ್ನು ಅರ್ಪಿಸಿ ಅವರ ಆಶೀರ್ವಾದಕ್ಕೆ ಪಾತ್ರರಾದರು. ೧೧ ಗಂಟೆಗೆ ಮಹಾಗಣಾರಾಧನೆಯು ಪ್ರಾರಂಭವಾಗಿ ರಾತ್ರಿ ಹತ್ತು ಘಂಟೆಗೆ ಸಮಾಪ್ತವಾಯಿತು. ಅನಂತರ ಮಹಾಸ್ವಾಮಿಗಳ ಪಾಲಕೀ ಉತ್ಸವವು ಬಾಜಾ, ಬಜಂತ್ರಿ, ಡೊಳ್ಳು, ಹಲಿಗಿ, ಸಿಂಗಿ, ನಗಾರಿ, ಸುತೂರಿ, ನಫೇರಿಸೂರು, ಸನಾದಿ, ತಾಳ, [illegible] ಘಂಟೆ ಜಾಗಟ, ದಮಡಿ, ಏಕತಾರೀ ಇವೇ ಮೊದಲ[illegible] ವಾದ್ಯಗಳಿಂದಲೂ ಛತ್ರಚಾಮರ ಅಫ್ತಾಗಿರಿ ಇತ್ಯಾದಿ [illegible] ಭವಗಳಿಂದಲೂ "ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" "ಸದ್ಗುರು ಚನ್ನವೀರಮಹಾರಾಜಕೀ ಜೈ" ಎಂಬ ಜಯಜಯಕಾರಗಳಿಂದಲೂ ಅತ್ಯಂತ ವೈಭವದಿಂದ ಹೊರಟಿತು. ಊರಲ್ಲಿ ಸ್ವಾಮಿಗಳಿಗೆ ಭಕ್ತರು ತಮ್ಮ ತಮ್ಮ ಮನೆಗಳ ಮುಂದೆ ಕಾಯಿಕರ್ಪೂರ ಹಾರತುರಾಯಿಗಳನ್ನರ್ಪಿಸಿ ತಮ್ಮ ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಉತ್ಸವವು ಎಲ್ಲಾ ಕಡೆಯಲ್ಲಿಯೂ ತಿರುಗಾಡಿ ಊರ ಬಜಾರಕ್ಕೆ ಬಂದಮೇಲೆ ಸರ್ವರ ಪ್ರಾರ್ಥನೆಯಂತೆ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಸೋಲಾಪುರ ವಾರದ ಪಾಠಶಾಲೆಯಿಂದ ಬಂದಿದ್ದ ಸುತಗಟ್ಟಿ, ಚಿಂಚೋಳ್ಳಿ, ಮುಶಾಳ, ಪಟ್ಟಾಧಿಕಾರಿಗಳೂ, ಬೊಸಪೇಟೆ ವಿರಕ್ತಮಠಗಳು ಮತ್ತು ಸಿದ್ಧರಾಮಯ್ಯನವರು ದೇವಣಗಾಂವ ಇವರೂ ಬ್ರಹ್ಮಚರ್ಯ ಭಕ್ತಿ ಅಷ್ಟಾವರಣ ಇತ್ಯಾದಿ ವಿಷಯಗಳನ್ನು ಕುರಿತು ಸರಸವಾಗಿ ಉಪನ್ಯಾಸಮಾಡಿದರು. ಅಲ್ಲಮಪ್ರಭು ಅಲೂರವರು ಮಹಾಸ್ವಾಮಿಗಳ ವಿಷಯವಾಗಿ ಒಳ್ಳೇ ಉಪನ್ಯಾಸವನ್ನು ಮಾಡಿ ದರ್ಗನಹಳ್ಳಿಯು ನಿಜವಾಗಿ ಭರ್ಗನಹಳ್ಳಿಯೇ ಸರಿ! ಏಕೆಂದರೆ ಊರಲ್ಲಿ ಲಕ್ಷ್ಮಾದೇವಿ ಎಂಬ ಪಾರ್ವತಿಯ ಗುಡಿಯೂ, ಮಹಾದೇವರ ಗುಡಿಯೂ ಇರುವದಲ್ಲದೆ ಸದ್ಗುರುಗಳ ಆಶ್ರಮವೂ ಕೂಡಾ ಇರುತ್ತದೆ. ಹಾಗೂ ಈಗ ಸ್ವಾಮಿಗಳ ಅನುಷ್ಠಾನವೂ ಕೂಡಾ ಇಲ್ಲಿಯೇ ಆಗಿರುವುದೆಂದಮೇಲೆ ಈ ಊರಿಗೆ ಪರಮಾತ್ಮನ ಪಟ್ಟಣವೆನ್ನಲಿಕ್ಕೆ ಸಂದೇಹವಿಲ್ಲವೆಂದು ಸರ್ವರಿಗೂ ತಿಳಿಯುವಂತೆ ಹೇಳಿದರು ನಂತರ ಅಧ್ಯಕ್ಷ ಮಹಾಶಯರು ಅನುಷ್ಠಾನವೆಂದರೇನು ಗುರುಗಳ ಕರ್ತವ್ಯವೇನು ಈ ವಿಷಯವಾಗಿ ಅನೇಕ ಉದಾಹರಣೆಗಳಿಂದ ಸರ್ವರೂ ತಿಳಿದೂಗುವಂತೆ ಉಪನ್ಯಾಸಮಾಡಿ ಅಲ್ಲಿ ಸೇರಿದ್ದವರಿಗೆಲ್ಲ ಲಿಂಗೋದ್ಭವ ಲಾಕೆಟ್ಟುಗಳನ್ನು ಆಶೀರ್ವಾದವಾಗಿ ಕೊಟ್ಟರು. ಆಮೇಲೆ ಪುನಃ ಸ್ವಾಮಿಗಳು ಪಲ್ಲಕ್ಕಿಯಲ್ಲಿ ಕುಳಿತನಂತರ ಉತ್ಸವವು ವೈಭವದಿಂದ ಪಂಡಿತಾಶ್ರಮಕ್ಕೆ ಹೊರಟಿತು. ಆಶ್ರಮವನ್ನು ತಲ್ಪಿದನಂತರ ಹೊಟಗಿ ಕನ್ಯಾಸಮ್ಮೇಳನದ ಮಲಕಪ್ಪಾಬಾಯಿ ಗಂಗದೆ ರತ್ನಪ್ಪಾಬಾಯಿ ಸಂಗಪ್ಪಾಬಾಯಿ ಇವರು ಆಚಾರ್ಯರ ಪರವಾಗಿ ಮಂಗಲವನ್ನು ಮಾಡಿದರು. ಅನಂತರ ಮಹಾಸ್ವಾಮಿಗಳು ಸರ್ವರಿಗೂ ಆಶೀರ್ವಾದ ಮಾಡಿ ಕಳುಹಿಸಿದರು. ಅಲ್ಲಿಗೆ ಬೆಳಗಿನ ೫|| ಗಂಟೆಯಾಯಿತು. ಉತ್ಸವಕ್ಕೆ ಸಾಧಾರಣವಾಗಿ ಸಾವಿರಾರು ಜನರು ಸೇರಿದ್ದರು ಎಲ್ಲರೂ "ದರ್ಗನಹಳ್ಳಿಯೇ ನೀನೇ ಧನ್ಯ ನೀನೇ ಧನ್ಯ" ವೆಂದೆನ್ನುತ್ತ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಸದರೀ ಮಹಾಕಾರ್ಯವನ್ನು ಮ|| ರಾ|| ಗಳಾದ ಭೀಮರಾವ ಪಾಟೀಲ, ಮೇಲುಗಿರಿ ಬಿರಾಜದಾರ, ಸಂಗಪ್ಪಾ ಬಿರಾಜದಾರ, ಗಣಪತಿ ಬಿರಾಜದಾರ, ಶಿವರಾಮ ಬಿರಾಜದಾರ, ಲಕ್ಕಪ್ಪಾ ಬಿರಾಜದಾರ, ವಿಶ್ವಾರಾಧ್ಯ ಹೊಸಮುರಗಿಕರ, ಅಪ್ಪಾರಾವ ಕೇಗಾವಕರ, ರಾಮಪ್ಪಾ ಬಿರಾಜದಾರ, ದಾನಪ್ಪಾ ಗೋಗಾವಿ, ನೀಲಪ್ಪಾ ಬಿರಾಜದಾರ, ಗುರಪ್ಪಾ ಬಿರಾಜದಾರ ಇವರು ಒಳ್ಳೇ ಉತ್ಸಾಹದಿಂದ ನೆರವೇರಿಸಿದರೆಂದು ತಿಳುಹಿಸಲಿಕ್ಕೆ ಬಹಳ ಆನಂದವೆನಿಸುತ್ತದೆ.

ವಿಶ್ವಾರಾಧ್ಯ ಹೊಸೂರಕರ,
ಮುಕ್ಕಾಮು ದರ್ಗನಹಳ್ಳಿ.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು.

ಶ್ರೀ ವೀರಶೈವ ದೇವಸ್ಥಾನವೂ ಬ್ರಾಹ್ಮಣ ಪಾರುಪತ್ತೇಗಾರರೂ.

ಕುಣಿಗಲ್ ತಾಲೂಕು ಯಡಿಯೂರು ಕ್ಷೇತ್ರದಲ್ಲಿ ನೆಲಗೊಂಡಿರುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಪೂಜಾಸ್ಥಾನವು ವೀರಶೈವರ ಪವಿತ್ರ ಯಾತ್ರಾಕ್ಷೇತ್ರವಾಗಿದೆ. ಈಗ್ಗೆ ಕೆಲವು ವರುಷಗಳಿಂದೀಚೆಗೆ ಈ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿ ದೇವಸ್ಥಾನದ ಕೆಲಸಕ್ಕೆ ಪಾರಂಪರ್ಯ ಹಕ್ಕುದಾರಿಯಮೇಲೆ ಪಾಯಂ ನೌಕರರು ತಿಂಗಳು 1 ಕ್ಕೆ 1-0-0 ರೂ. ಸಲಬಿನಮೇಲೆ ಒಬ್ಬ ಗುಮಾಸ್ತೆಯೂ 3 ಮಂದಿ ಧರ್ಮದರ್ಶಿಗಳೂ ನಿಯಮಿತರಾದರು. ಈ ಧರ್ಮದರ್ಶಿಗಳ ಮತ್ತು ಗುಮಾಸ್ತೆಯ ಜೀವಿತಕಾಲದ ಸುಮಾರು ಹತ್ತುವರುಷಗಳಲ್ಲಿ ನೆಪಮಾತ್ರಕ್ಕೆ ಇವರುಗಳ ಹೆಸರುಗಳಿದ್ದುವು. ಇದು ಮಹಿಮಾಸ್ಥಳವಾದುದರಿಂದ ದೇವಸ್ಥಾನದ ನೌಕರಮಾನೇದುಗಳೂ ಭಕ್ತಾದಿಗಳೂ ಶ್ರೀ ಸ್ವಾಮಿಯ ಸೇವೆಯನ್ನು ನಿರಾತಂಕವಾಗಿ ನಡೆಸುತ್ತಾ ಬಂದರು.

1919 ನೇ ವರ್ಷದಲ್ಲಿ ಸರ್ಕಾರದವರು ಹೊಸದಾಗಿ 9 ಮಂದಿ ಧರ್ಮದರ್ಶಿಗಳನ್ನು ಚುನಾಯಿಸಲು ಏರ್ಪಾಡುಮಾಡಿದರು. ಇದು ವೀರಶೈವದೇವಸ್ಥಾನವಾದುದರಿಂದ ಹೆಚ್ಚು ಮಂದಿ ಆ ಪಂಗಡದ ಜನಗಳನ್ನು ಧರ್ಮದರ್ಶಿಗಳ ಸ್ಥಾನಕ್ಕೆ ಸೇರಿಸಬೇಕೆಂದು ಸರ್ಕಾರಿ ಅಪ್ಪಣೆಯಾಗಿತ್ತು. ಆದರೇನು ಈ ಪ್ರದೇಶದಲ್ಲಿ ವೀರಶೈವರ ಸಂಖ್ಯೆಯು ಅತ್ಯಂತ ಕಡಿಮೆಯಾಗಿರುವ ಕಾರಣ 5 ಮಂದಿ ವೀರಶೈವರಿಗಿಂತ ಹೆಚ್ಚಾಗಿ ದೊರೆಯಲಿಲ್ಲ. ಇವರ ಜೊತೆಗೆ ಈ ದೇವರ ಭಕ್ತರಾದ 3 ಮಂದಿ ಒಕ್ಕಲಿಗರು ಈ ಊರು ಶಾನುಭೋಗ (ಬ್ರಾಹ್ಮಣ) ರೊಬ್ಬರು ಸೇರಿ 9 ಮಂದಿ ಮೆಂಬರುಗಳಾದರು. ಅಧಿಕಾರಿಗಳ ಉದಾಸೀನತೆಯಿಂದಲೋ ಮತ್ತಾವ ಕಾರಣದಿಂದಲೋ ಸದರಿ ಆರ್ಡರು ಜಾರಿಗೆ ಬರಲಿಲ್ಲ.

ಇದೇ ಸುಮಾರಿನಲ್ಲಿ ಆಗಿನ ಮುಜರಾಯಿ ಕಮಿಷನರ್ ಸಾಹೇಬರವರಾದ ಮ|| ಆರಾವಮುದಯ್ಯಂಗಾರ್ರವರ ಸವಾರಿಯು ಮೇಲುಕೋಟೆಗೆ ಹೋಗುವ ಉದ್ದಿಶ್ಯವಾಗಿ ಈ ಮಾರ್ಗವಾಗಿ ದಯಮಾಡಿಸಿದಾಗ್ಗೆ ಈ ಊರಿನಲ್ಲಿರುವ ಶಾ|| ಕೃಷ್ಣಯ್ಯಂಗಾರವರು ಸದರಿ ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರರಾದರು.

ಈ ದೇವಸ್ಥಾನದ ಪಾರುಪತ್ತೇಗಾರಿಯ ಕೆಲಸಕ್ಕೆ ಹೊಸ ಸ್ಕೇಲ್ ಮಂಜೂರಾಯಿತು. ಈ ನೌಕರಿಯನ್ನು ಯಾರಿಗೆ ಕೊಡಬೇಕೆಂಬುದ ವಿಷಯದಲ್ಲಿ ಸರ್ಕಾರದವರು ಯಾವ ಕರೆಸ್ಪಾಂಡೆನ್ಸ್ ಸಹ ನಡೆಸಲಿಲ್ಲ. ಧರ್ಮದರ್ಶಿಗಳು ಮೊದಲೇ ಇಲ್ಲ. ಭಕ್ತಾದಿಗಳಿಗೆ ವಿಷಯವಿಮರ್ಶೆಗಳು ಗೊತ್ತಾಗಲಿಲ್ಲ. ಪಾರುಪತ್ತೆಗಾರಿ ಕೆಲಸವು ಅಭಿಮಾನಶಾಲಿಗಳಾದ ಸ್ಥಳೀಯಾಧಿಕಾರಿಗಳ ಸಹಾಯದಿಂದ ಮೇಲ್ಕಂಡ ಅಯ್ಯಂಗಾರ್ರವರಿಗೆ ಸೇರಿತು. ಅನಂತರ ದೇವಸ್ಥಾನದ ಕಾರ್ಯಕ್ರಮಗಳು ಕೆಡುತ್ತಾ ಬಂದುವು. ಭಕ್ತಿಯು ನಮ್ರಾಗುತ್ತಾ ಬಂದಿತು. ಭಕ್ತಾದಿಗಳ ಮನಸ್ಸಿಗೆ ಅಸಮಾಧಾನವು ಹೆಚ್ಚಿತು. ಭಕ್ತರನೇಕರು ನ್ಯಾಯವಿಧಾಯಕ ಸಭಾ ಮೆಂಬರುಗಳಲ್ಲಿ ಹೇಳಿಕೊಂಡರು. ಅವರು ಪ್ರಜಾಹಿತಕ್ಕಾಗಿ ಸರ್ಕಾರದಲ್ಲಿ ಅರಿಕೆಮಾಡಿದರು. ದಿವಾನ್ ಸಾಹೇಬರು ಇವನ್ನೆಲ್ಲಾ ಕ್ರಮಪಡಿಸಿಕೊಡುವುದಾಗಿ ಅಪ್ಪಣೆ ಕೊಡಿಸಿದರು.

1926 ನೇ ಇಸವಿಯ ಮಧ್ಯದಲ್ಲಿ ಕುಣಿಗಲ್ ತಾ|| ವೀರಶೈವ ಪ್ರಾಂತಿಕ ಸಭೆಯು ಈ ದೇವಸ್ಥಾನದಲ್ಲಿ ನಡೆಯಿತು. ಆಗ್ಗೆ ಈ ದೇವಸ್ಥಾನದ ಕುಂದು ಕೊರತೆಗಳೆಲ್ಲಾ [illegible] ಬೆಳಕಿಗೆ ಬಂದು ಆದ ನಿರ್ಧಾರಗಳನ್ನು ಸರ್ಕಾರಕ್ಕೆ [illegible]ದಮೇಲೆ ಹೊಸ ಧರ್ಮದರ್ಶಿಗಳ ಮಂಜೂರಾಯಿತಿ [illegible] ಮೂಲೆ ಗೊತ್ತರಿಸಲ್ಪಟ್ಟಿದ್ದು ಹೊರಗೆ ಬಂತು. ಅದೇ ಮೆಂಬರುಗಳೇ ಇನ್ನೂ 5 ವರುಷಗಳ ಕಾಲ ಧರ್ಮದರ್ಶಿಗಳಾಗಿರಲು ಮೊಕರರು ಮಾಡಿರುತ್ತೆಂದು ಆರ್ಡರಾಗಿ ಜಾರಿಗಲ್ಲಿ ಬಂದಿತು. ಆ

ಪದವಿಯ ಛಾರ್ಜನ್ನು ವಹಿಸಿರುತ್ತಾರೆಂದೂ ತಿಳಿಯಬರುತ್ತದೆ.

ಕಳೆದ ಮೇ ತಾ|| 7 ರಲ್ಲಿ ರಾಜಧಾನಿಯ ಸುಮಾರು 17.18 ವರ್ಷ ವಯಸ್ಸಿನ ನಾಗರತ್ನಮ್ಮನೆಂಬ ಹುಡುಗಿಯನ್ನು ಉಪಾಯದಿಂದ ಕರೆದುಕೊಂಡುಹೋಗಿ 2 ದಿವಸ ತಮ್ಮಲ್ಲಿಟ್ಟುಕೊಂಡು ಪುನಃ ಆಕೆಯ ತಂದೆತಾಯಿಗಳ ಬಳಿಗೆ ಕಳುಹಿಸಿಕೊಟ್ಟರೆಂದು ಪೋಲೀಸಿನವರು ಕೇಸುಮಾಡಿದ್ದ ಪುಟ್ಟಯ್ಯ, ಜವರಯ್ಯ, ಅಣ್ಣಯ್ಯ, ರಂಗಸ್ವ ಎಂಬ ನಾಲ್ಕುಜನರನ್ನು ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಕಳೆದ ಸೋಮವಾರ ಇಬ್ಬರನ್ನು ಸೆಷನ್ಸಿಗೆ ಗುರಿಮಾಡಿ ಉಳಿದ ಇಬ್ಬರನ್ನು ಬಿಟ್ಟುಬಿಟ್ಟರು.

ಆದಿಕರ್ನಾಟಕ ಮತ್ತು ಇತರ ಹಿಂದುಳಿದ ಪಂಗಡಗಳ ಜನರಿಗೆ ಮನೆಯನ್ನು ಕಟ್ಟಿಕೊಳ್ಳುವುದಕ್ಕೋಸ್ಕರ ಸಾಲಕೊಟ್ಟು ಸಹಾಯಮಾಡಲು ನಮ್ಮ ಘನಸರ್ಕಾರದವರು 10,000 ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ಈಸಾಲವನ್ನು ಅಭಿವೃದ್ಧಿ ಹೊಂದಿರುವ ಸ್ಥಳೀಯ ಲೇವಾದೇವಿ ಸಂಘಗಳ ಮುಖಾಂತರ ಕೊಡತಕ್ಕದ್ದು. ರೆಜಿಸ್ಟ್ರಾರರವರು ತಮಗೆ ಸೂಕ್ತತೋರಿದಂತೆ ಒಂದು ಸಂಘಕ್ಕೆ 2500 ರೂಪಾಯಿಗಳಿಗೆ ಮೀರದಂತೆ ಆ ಹಣವನ್ನು ಪಾವತಿಮಾಡಲು ಇಪ್ಪತ್ತೈದುವರ್ಷಗಳವರೆಗೂ ಅವಧಿಯನ್ನು ಕೊಡಬಹುದು. 1928-29 ರ ಲಾಗಾಯ್ತು 1930-31 ರವರೆಗೆ ಮೂರುವರ್ಷಗಳಲ್ಲಿ ಈ ಸಾಲಕ್ಕೆ ಬಡ್ಡಿ ಇಲ್ಲವೆಂದು ಮೈಸೂರು ಪರಸ್ಪರಸಹಾಯಕ ಸಂಘಗಳ ರೆಜಿಸ್ಟ್ರಾರ್‌ರವರು ಪ್ರಕಟಿಸಿರುತ್ತಾರೆ.

ಕಳೆದ ತಿಂಗಳು 31 ನೆಯ ತಾರೀಖಿನ ದಿವಸ [illegible]ಂದೆ ನಡೆದ ಚನ್ನಪಟ್ಟಣದ ಗಲಭೆಯ ಸಂಬಂಧವಾಗಿ ಸಾಕ್ಷಿ ಹೇಳಲು ಬೈರಾಪಟ್ಟಣದವರು ಕ್ಲೋಸ್‌ಪೇಟೆಗೆ ಹೋಗಿದ್ದು ಅವರಲ್ಲಿ ಒಬ್ಬನು ಹೊಳೆಯಬಳಿ ಊಟಮಾಡುತ್ತಿದ್ದಾಗ ಕೆಲವುಮಂದಿ ಮಹಮ್ಮದೀ[illegible] ಅವನನ್ನು ಹೊಡೆದು ಅಟ್ಟಿಸಿಕೊಂಡು ಬರಲು ತನ್ನ ಕಡೆಯವರ ಬಳಿಗೆ ಬಂದುಸೇರಿದನು. [illegible]ದೀಯರು ನೂರಾರು ಜನರು ಸೇರಿ ಅಲ್ಲಿಯೂ ಅವರನ್ನು ಬಿಡದೆ ಅಟ್ಟಿಕೊಂಡು ಬರಲು ಅವರು ಘಾಬರಿಯಾಗಿ ಓಡಿಹೋಗಿ ಅಲ್ಲಿಯ ಕೋರ್ಟಿನಲ್ಲಿಯೂ, ಸಬ್ ಡಿವಿಜನ್ ಆಫೀಸರ ಮನೆಯಲ್ಲಿಯೂ ಸೇರಿಕೊಂಡರು ಮಹಮ್ಮದೀಯರು ಅವರನ್ನು ಅಲ್ಲಿಗೂ ಹಿಂಬಾಲಿಸಲು, ಒಳಗೆ ಊಟಮಾಡುತ್ತಿದ್ದ ಸಬ್ ಡಿವಿಜನ್ ಸಾಹೇಬರು ಓಡಿಬಂದು ಮೂವರನ್ನು ದಸ್ತಗಿರಿಮಾಡಿ ಉಳಿದವರನ್ನು ಹಿಡಿಯಲು ಹೋದಾಗ ಅವರಮೇಲೆ ಮುಸಲ್ಮಾನರು ಕಲ್ಲುಗಳನ್ನೆಸೆದರು. ಅವರು ಚನ್ನಪಟ್ಟಣಕ್ಕೆ [illegible]ಫೋನ್‌ಮಾಡಿ [illegible] ಪೋಲೀಸಿನವರನ್ನು ಕ[illegible]ದೂ ಅಲ್ಲಿ ಗಾಯಪಟ್ಟಿದ್ದವರಿಗೆ ಡಾಕ್ಟರನ್ನು ಕರೆಸಿ ಉಪಚರಿಸಿದರೆಂದೂ ತಿಳಿಯಬಂದಿದೆ.

ವರ್ತಮಾನಸಂಗ್ರಹ.

ಅಮೇರಿಕಾದಲ್ಲಿ ಒಬ್ಬನು ಕೇವಲ ಭಿಕ್ಷೆಯಿಂದಲೇ [illegible] ತಿಂಗಳುಗಳಲ್ಲಿ 2400 ರೂಪಾಯಿಗಳನ್ನು ಸಂಪಾದಿಸಿದನಂತೆ!

ಇಂಗ್ಲೆಂಡಿನ ಲ್ಯಾಂಕಾಷೈರಿನಲ್ಲಿ ಕೂಲಿಕಾರರು ಬಹಿಷ್ಕಾರಮಾಡಿದ್ದರ ಕಾರಣವಾಗಿ 1,800 ಗಿರಣಿಗಳು ನಿಂತುಹೋಗಿರುವುವು!

ಕಿವುಡರು ಸಂಗೀತವನ್ನು ಹಲ್ಲುಗಳ ಮೂಲಕ ಕೇಳುವಂತೆ ಒಂದು ಯಂತ್ರವನ್ನು ಹೊಸದಾಗಿ ಒಬ್ಬ [illegible]ಜ್ಞನು ಕಂಡುಹಿಡಿದಿರುವನಂತೆ!

ಸಿಕಂದರಾಬಾದಿನಲ್ಲಿ ಒಬ್ಬ ಯೂರೋಪಿಯನ್ನನು ತಾನೊಬ್ಬ ಸಿ. ಐ. ಡಿ. ಆಫೀಸರೆಂದು ಹೇಳಿಕೊಂಡದ್ದರಿಂದ 3 ತಿಂಗಳ ಕಠಿಣಶಿಕ್ಷೆಗೊಳಗಾದನು.

ನಾದಿರ್‌ಖಾನರಿಗೆ ಈತನಕ ಯಾವ ಅಪಾಯವೂ ಸಂಭವಿಸಿಲ್ಲವೆಂದೂ, ರಣರಂಗವನ್ನು ಬಿಟ್ಟುಕೊಟ್ಟ ವಾರ್ತೆಯು ಮಿಥ್ಯವೆಂದೂ, ಅವರು ತಮ್ಮ ಸಾಧನೆಯಲ್ಲೇ ಇರುವರೆಂತಲೂ ವರ್ತಮಾನ ಬಂದಿದೆ.

ರಂಗಪುರದಲ್ಲಿ ಸುಂದರಿ ಎಂಬ ತರುಣಿಯು ತನ್ನ ಮೇಲೆ ಅತ್ಯಾಚಾರನಡೆಸಲು ಬಂದ ಮುಸಲ್ಮಾನನೊಬ್ಬನನ್ನು ಕೆಳಕ್ಕೆ ಕೆಡವಿ ಕತ್ತಿಯಿಂದ ಅವನ ತಲೆಯನ್ನು ಕತ್ತರಿಸಿದಳು!

ಬಂಗಾಳದ ಫರೀದ್‌ಪುರವೆಂಬ ಗ್ರಾಮದಲ್ಲಿ ಒಬ್ಬನು ತನ್ನ ತರುಣ ಪತ್ನಿಯನ್ನು 6 ಘಂಟೆಗಳಕಾಲ ಸಜೀವವಾಗಿ ನೆಲದಲ್ಲಿ ಹೂಳಿದ್ದು ಅವಳು ಮೃತಪಟ್ಟನಂತರ ಒಂದು ಕೆರೆಗೆ ಹಾಕಿದನಂತೆ! ಇವನಲ್ಲವೇ ನರರಾಕ್ಷಸ?

ಇಂಗ್ಲೆಂಡಿನಲ್ಲಿ ಈಗ 2,027,000 ಮೋಟಾರುಗಳು ಉಪಯೋಗದಲ್ಲಿವೆ. ಕಳೆದ ಮೇ ತಿಂಗಳಿಗೆ ಅಂತ್ಯವಾಗುವ ಅರ್ಧ ವರ್ಷಕ್ಕೆ ಲೈಸೆನ್ಸುಗಳಿಂದ 25 ಕೋಟಿ ರೂಪಾಯಿಗಳು ಉತ್ಪತ್ತಿಯಾಯಿತಂತೆ!

ಜರ್ಮನಿಯಲ್ಲಿ ನಲವತ್ತು ಕೊಠಡಿಗಳು, ಒಂದು ನಾಟಕಶಾಲೆ, ಭೋಜನಶಾಲೆ, ಉದ್ಯಾನವನ, ವಾಚನಾಲಯ, ಪ್ರಾರ್ಥನಾಲಯ ಮತ್ತು ಸ್ನಾನಮಾಡಲು ಬಿಸಿ ಮತ್ತು ತಣ್ಣೀರಿನ ಕೊಳಗಳುಳ್ಳ ಒಂದು ಭಾರಿ ವಿಮಾನವನ್ನು ತಯಾರಿಸಿರುವರಂತೆ!

ಲಾಹೋರಿನಲ್ಲಿ, ಅವಿ[illegible]ತಳಾದ ಮಿಸ್. ಗ್ರೇಸ್ ಎಂಬ ಶಾಲಾ ವಿದ್ಯಾರ್ಥಿನಿಯೊಬ್ಬಳು ತಾನು ಗುಟ್ಟಾಗಿ ಹೆತ್ತ ಶಿಶುವಿನ ಕೊಲೆಮಾಡಲು, ಅದು ಪತ್ತೆಯಾಗಿ ಮೊಕದ್ದಮೆ ನಡೆದು ದ್ವೀಪಾಂತರ ವಾಸದ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವಳು.

ಬರೋಡೆಯ ಅರಮನೆಯ ಬೀದಿಯಲ್ಲಿರುವ ಸುತಾರ್ ಮೋತಿಬಾಭಾ ಎಂಬಾತನು ತನ್ನ ಪತ್ನಿಯ ವಿಷಯದಲ್ಲಿ ಸಂಶಯಪಟ್ಟು ಅವಳನ್ನು ಉಳಿಯಿಂದ ಕಡಿದುಕೊಂದು ತಾನೇ ಪೋಲೀಸ್ ಸ್ಟೇಷನಿಗೆ ಹೋಗಿ ಅಪರಾಧವನ್ನೊಪ್ಪಿಕೊಂಡಿರುವನು.

ಡಾಕ್ಟರ್ ಲಿಯೋ ಫ್ರೊಬೇನಿಯಸ್ ಎಂಬ ಸುಪ್ರಸಿದ್ಧ ಜರ್ಮನ್ ವೈಜ್ಞಾನಿಕರು ಆಫ್ರಿಕದ ಮಧ್ಯ ಮತ್ತು ನೈರುತ್ಯ ಭಾಗದಲ್ಲಿ 7 ಸಾವಿರ ವರ್ಷಗಳ ಮೊದಲು ನಾಗರೀಕರಾಗಿದ್ದ ಹಿಂದುಗಳು ಹೋಗಿ ದೇವಸ್ಥಾನಾದಿಗಳನ್ನು ಕಟ್ಟಿಕೊಂಡಿದ್ದರೆಂಬುದನ್ನು ಶೋಧಮಾಡಿರುವರಂತೆ!

ಪರ್ಷಿಯಾದೇಶದ 1 ಕೋಟಿ ಜನಸಂಖ್ಯೆಯಲ್ಲಿ 40 ಲಕ್ಷ ಜನಕ್ಕಿಂತಲೂ ಹೆಚ್ಚಾಗಿ ನೇತ್ರರೋಗಪೀಡಿತರಾಗಿರುವರಂತೆ! 1,31,125 ಜನರು ಸಂಪೂರ್ಣ ಕುರುಡರಾಗಿರುತ್ತಾರೆ. ಇವರಲ್ಲಿ 18,675 ಜನರು ಜನನೇಂದ್ರಿಯರೋಗ ಮತ್ತು ಸಿಡುಬಿನಿಂದ ಕುರುಡರಾಗಿರುವರಂತೆ!

ಹೈದರಾಬಾದಿನಲ್ಲಿ ಮಹಮ್ಮದ್ ಪೈಗಂಬರರ ಜನ್ಮದಿನವನ್ನಾಚರಿಸುವ ಸಮಯದಲ್ಲಿ ಮಸೀದಿ, ಮನೆ ಪಟ್ಟಣಗಳನ್ನೆಲ್ಲಾ ಶೃಂಗರಿಸುವದರಿಂದ ಅಪಾರ ಹಣವು ವ್ಯರ್ಥವೆಚ್ಚವಾಗುವುದರಿಂದ, ಹಾಗೆ ಮಾಡದೆ ಆ ಹಣವನ್ನು ಬಡಬಗ್ಗರಿಗಾಗಿ ಉಪಯೋಗಿಸತಕ್ಕದ್ದೆಂದು ನೈಜಾಮರವರು ಹುಕುಂ ಕೊಟ್ಟಿರುವರು!

ಮೋಟಾರುಕಾರುಗಳಾಗಲಿ ಬಸ್ಸುಗಳಾಗಲಿ ಯಾವವಿಧದಿಂದಲಾದರೂ ವಿಶೇಷ ಶಬ್ದವನ್ನು ಮಾಡಿದರೆ ಅವುಗಳ ಮಾಲಿಕರಿಗೆ ಜುಲ್ಮಾನೆಯನ್ನು ಹಾಕಬೇಕೆಂದು ಬ್ರಿಟಿಷ್ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಮಾಡಿದ್ದ ಕಾನೂನು ಈ ತಿಂಗಳ ಮೊದಲನೆಯ ತಾರೀಕಿನಿಂದ ಜಾರಿಗೆ ಬಂದಿದೆ.

ಇಂಗ್ಲೆಂಡಿನಲ್ಲಿ ನೀರಿನ ಕ್ಷಾಮವು ಇತಿಹಾಸ ಪ್ರಸಿದ್ಧವಾಗುವಂತಿತ್ತು. ಗ್ಲಾಸ್ಗೋದಲ್ಲಿ ಕೆಲವರು ಬೇಗೆಗೆ ಸುಟ್ಟಂತಾದ ಕೈಕಾಲುಗಳಿಗೆ ಮುಖಕ್ಕೆ ಉಪಯೋಗಿಸುವ ಪೌಡರನ್ನು ಹಚ್ಚಿದರಂತೆ. ನೋರ್‌ಫೋಕ್ ಎಂಬಲ್ಲಿ ಒಂದು ಗಡಿಗೆ ನೀರನ್ನು ಅನ್ನೇ ಹಾಲು ಕೊಟ್ಟು ಪಡೆದುಕೊಂಡರಂತೆ. ಕೆಲವು ಕಡೆಗಳಲ್ಲಿ ಮೋಟಾರು ಡ್ರೈವರರು ದನಕರುಗಳಿಗಾಗಿಟ್ಟ ನೀರನ್ನು ಕದ್ದುಕೊಂಡು ಹೋದರಂತೆ. ಅಲ್ಲಲ್ಲಿ ಅಶುದ್ಧವಾದ ನೀರಿನ ಹೊಂಡಗಳಿಂದ ನೀರನ್ನು ಉಪಯೋಗಕ್ಕೆ ತೆಗೆಯುತ್ತಿರುವರಂತೆ! ಈಗ ಒಂದೆರಡು ಮಳೆಗಳಾಗಿರುವುವು!

ಅಫ್ಘಾನಿಸ್ಥಾನದಲ್ಲಿ ಅಮಾನುಲ್ಲರ ಹೊಸಸುಧಾರಣೆಗಳಿಗೆ ವಿರೋಧವಾಗಿ ದಂಗೆ ಎದ್ದಂತೆಯೇ ಈಗ ಪರ್ಷಿಯಾದಲ್ಲಿಯೂ ಒಂದು ದಂಗೆಯೆದ್ದಿರುವುದು. ಪರ್ಷಿಯಾದ ಈಗಿನ ಷಹಾರಾದ ರೀಜಾಖಾನರು ಮೊದಲಿನ ಮಾಮೂಲನ್ನು ಬಿಟ್ಟು ಪಾಶ್ಚಾತ್ಯರಂತೆ ಉಡುಪುಗಳನ್ನು ಧರಿಸಬೇಕೆಂದೂ ಮತ್ತು ಶಸ್ತ್ರತ್ಯಾಗಮಾಡಬೇಕೆಂದೂ ಮಾಡಿರುವ ಹೊಸ ಏರ್ಪಾಡನ್ನು ಶಿರಾಜ್ ಪ್ರಾಂತದ 50,000 ಅಶ್ವಾರೋಹಿಗಳ ಪಂಗಡವು ವಿರೋಧಿಸಿ ದಂಗೆಯೆದ್ದಿರುವುದು. ಈ ಸಂದರ್ಭದಲ್ಲಿ ನಡೆದ ಯುದ್ಧದಲ್ಲಿ ದಂಗೆಗಾರರೇ ಜಯಶೀಲರಾಗಿರುವರು. ದಂಗೆಯನ್ನಡಗಿಸಲು ಸರಕಾರದವರು 6 ಆಕಾಶವಿಮಾನ, 2 ಯುದ್ಧದ ಮೋಟಾರು ಮೊದಲಾದುವನ್ನು ಕಳುಹಿಸಿರುವರು.

ಪಂಜಾಬಿನ ಐದು ಡಿಸ್ಟ್ರಿಕ್ಟು ಮತ್ತು ನಾಲ್ಕು ದೇಶೀಯ ಸಂಸ್ಥಾನಗಳ ಪೋಲೀಸರು ಕಳೆದ 14 ವರ್ಷಗಳಿಂದ ಹುಡುಕುತ್ತಿದ್ದ 'ದೇವೀದಾಸ್' ಎಂಬ ಪ್ರಸಿದ್ಧ ಡಕಾಯಿತನನ್ನು ಕಳೆದವಾರ ಲಾಹೋರಿನ ಹತ್ತಿರ ಒಂದು ಹಳ್ಳಿಯಲ್ಲಿ ಪೋಲೀಸರು ಗುಂಡುಹಾರಿಸಿ ಕೊಂದರು. ನಡೆದ ಹೊಡೆದಾಟದಲ್ಲಿ ಡಕಾಯಿತನ ಸ್ನೇಹಿತನೊಬ್ಬನು ಮತ್ತು ಇಬ್ಬರು ಪೋಲೀಸರು ಮೃತಿಹೊಂದಿದರು. ಈ ಡಕಾಯಿತನು ಪಂಜಾಬಿನ ಫಿರೋಜಪೂರ್ ಲೂಧಿಯಾನ, ಅಂಬಾಲ, ಹೋಷಿಯರ್‌ಪೂರ್ ಮತ್ತು ಜಲಂಧರ್ ಡಿ|| ಗಳಲ್ಲಿಯೂ, ಪಾಟಿಯಾಲಾ, ನಾಭಾ, ಕಲ್ಸಿಯಾ ಮತ್ತು ಮಲೇರ್‌ಕೋಟ್ಲಾ ಸಂಸ್ಥಾನಗಳಲ್ಲಿಯೂ ಬಹಳ ಹಾವಳಿಮಾಡುತ್ತಿದ್ದನು. ಜಲಾಲಾಬಾದಿನ ಸಮೀಪದ ಒಂದು ಹಳ್ಳಿಯಲ್ಲಿ ಈ ಡಕಾಯಿತನು ತನ್ನ ಮುಖ್ಯಸಹಾಯಕರೊಡನೆ ಒಂದು ಮನೆಯಲ್ಲಿ ಇಳಿದುಕೊಂಡಿರುವನೆಂದು ತಿಳಿದ ಕೂಡಲೇ ಪೋಲೀಸು ಡಿ|| ಸೂಪರಿಂಟೆಂಟರು ಜಲಾಲಾಬಾದಿನಿಂದ ತಕ್ಕ ಸಿಬ್ಬಂದಿಯೊಡನೆ ಹೊರಟು ಮನೆಯನ್ನು ಮುತ್ತಿಗೆ ಹಾಕಿದರು. ಒಳಗಿದ್ದ ಡಕಾಯಿತರಿಗೂ ಪೋಲೀಸಿನವರಿಗೂ ಸುಮಾರು 5 ಗಂಟೆಯ ಕಾಲ ಹೊಡೆದಾಟವಾಯಿತು. ಇಬ್ಬರು ಪೋಲೀಸರು ಸತ್ತರು ಕೆಲವರಿಗೆ ಗಾಯವಾಯಿತು. ಮನೆಯೆಲ್ಲವೂ ಕತ್ತಲಾಗಿದ್ದುದರಿಂದ ಪೋಲೀಸರು ಗುರಿಯಿಟ್ಟು ಗುಂಡು ಹಾರಿಸಲು ಸಾಧ್ಯವಾಗಲಿಲ್ಲ. ಕೊನೆಗೆ ಅವರು ಮಾಳಿಗೆಯಲ್ಲಿ ತೂತು ಕೊರೆದು ಗುಂಡುಹಾರಿಸಿ, ಎಲ್ಲವೂ ನಿಶ್ಶಬ್ದವಾಗಿರಲು ಗೋಡೆಗಳನ್ನು ಕೆಡವಿ ಒಳಗೆ ಪ್ರವೇಶಿಸಿದಾಗ ಡಕಾಯಿತನೂ ಅವನ ಸ್ನೇಹಿತನೂ ಸತ್ತುಬಿದ್ದಿದ್ದರು.

ರಷ್ಯಾದ ಜಾರ್ ಚಕ್ರವರ್ತಿಯು ಕೊಲ್ಲಲ್ಪಟ್ಟಾಗ 250 ಕೋಟಿ ರೂಪಾಯಿಗಳ ಆಸ್ತಿಯನ್ನು ಬಿಟ್ಟುಹೋದರು. ಈಗ ಈ ಅಪಾರವಾದ ಸಂಪತ್ತಿಗಾಗಿ ಮೂವರು ಅಮೆರಿಕೆಯ ಕೋರ್ಟುಗಳಲ್ಲಿ ಜಗಳವಾಡುತ್ತಿರುವದಾಗಿ ತಿಳಿಯಬಂದಿದೆ. ಈ ಮೂವರು ಹಕ್ಕುದಾರರ ಪೈಕಿ ಮೊದಲನೆಯವರು ಈಗ ರಷ್ಯಾದಲ್ಲಿರುವ ಸೋವಿಯಟ್ ಸರ್ಕಾರ, ಎರಡನೆಯವರು ರೋಮನಾವ್ ವಂಶದಲ್ಲಿ ಉಳಿದವರು, ಮೂರನೆಯವರು ಜಾರರ ಕಿರಿಯ ಕುಮಾರಿ ಪ್ರಿನ್ಸೆಸ್ ಅನಾಸ್ಟೇಸಿಯ ಎಂದು ಹೇಳಿಕೊಳ್ಳುವ ಮ್ಯಾಡಂ ಚಾಕೋವಸ್ಕಿಯವರು. ಇವರು ರಷ್ಯಾಜಾರರ ಆಸ್ತಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಎಲ್ಲಾ ಬ್ಯಾಂಕು ಮತ್ತು ಟ್ರಸ್ಟ್ ಕಂಪನಿಗಳು ಲೆಕ್ಕವನ್ನೊಪ್ಪಿಸುವಂತೆ ಕೋರ್ಟಿನಿಂದ ಆಗಲೆ ಆರ್ಡರ್ ಪಡೆದಿರುವರು. ಸೋವಿಯಟ್ ಸರ್ಕಾರದ ಪ್ರತಿನಿಧಿಯು ಇದಕ್ಕೆ ವಿರುದ್ಧವಾಗಿ ಕೋರ್ಟಿಗೆ ಅರ್ಜಿಹಾಕಿ ಆ ಆಸ್ತಿಗಳಿಗೆ ಸೋವಿಯಟ್ ಸರ್ಕಾರವೆ ಹಕ್ಕುದಾರರೆಂಬುದಕ್ಕೆ ರುಜುವಾತು ಕೊಡುವುದಾಗಿ ಹೇಳಿದರು. ಮ್ಯಾಡಂ ಚಾಕೋವಸ್ಕಿಯು ತನ್ನ ತಂದೆತಾಯಿಗಳು ಕೊಲ್ಲಲ್ಪಟ್ಟನಂತರ ಬಹಳ ಕಷ್ಟದೆಸೆಯಲ್ಲಿ ವೇಷಮರೆಸಿಕೊಂಡಿದ್ದು, 1620 ರಲ್ಲಿ ಬರ್ಲಿನ್ ನಗರದಲ್ಲಿ ನದಿಯಲ್ಲಿ ಧುಮುಕಿ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿದಳೆಂದೂ ನೋಡಿದ ಜನರು ಅವಳನ್ನು ನೀರಿನಿಂದ ಎತ್ತಿದರೆಂದೂ, ಹಿಂದೆ ರಾಜಮನೆತನವನ್ನು ಚೆನ್ನಾಗಿ ಬಲ್ಲ ಪ್ರಿನ್ಸೆಸ್ ಎಸ್ಸ ಎಂಬಾಕೆಯು ರಾಜಕುಮಾರಿಯನ್ನು ಗುರುತುಹಿಡಿದು ಅಮೇರಿಕಕ್ಕೆ ಕರೆದುಕೊಂಡು ಹೋದಳೆಂದೂ, ಬಳಿಕ ಆಕೆಯ ಗಂಡನೇ ರಾಜಕುಮಾರಿಯನ್ನು ತಾನು ನೋಡುವುದಿಲ್ಲವೆಂದು ಹೇಳಿದ್ದರಿಂದ ಸ್ನೇಹಿತೆಯರಿಬ್ಬರೂ ಅಗಲಿದರೆಂದೂ ಹೇಳುತ್ತಾರೆ

[3 ನೇ ಪುಟದಿಂದ ಮುಂದೆಸಾಗಿದ್ದು]

ಸೀಮೆಅಕ್ಕಿ (Sags) ಯನ್ನು ಹಾಕಿ ಚೆನ್ನಾಗಿ ಕುದಿಸಿ ಸಕ್ಕರೆ ತುಪ್ಪ ಹಾಕಿ ತೆಗೆದುಕೊಳ್ಳಬಹುದು. ಇದು ಜೀರ್ಣಸುವುದು ನಿಧಾನವೆಂದು ತೋರಿದರೆ ದನೆಯಲ್ಲಿ ಮಾಡಬಹುದು. ಗೋಧಿಹಿಟ್ಟಿನ ಚಪಾತಿಗಳ ವಿನಹಾ ಬಾಕಿ ರೊಟ್ಟಿಗಳನ್ನು ವಿಶೇಷ ತಿನ್ನಬಾರದು. ಊಟದಲ್ಲಿ ಹುಳಿ, ಉಪ್ಪು, ಕಾರಗಳನ್ನು ಹೆಚ್ಚಾಗಿ ಸೇರಿಸಬಾರದು. ತಾಯಿಯ ಆಹಾರದಂತೆಯೇ ಮಗುವಿನ ಗುಣಗಳು ಏರ್ಪಡುವುವೆಂದು ಅನೇಕರು ಹೇಳುತ್ತಾರೆ. ಸಾತ್ವಿಕಾಹಾರದಿಂದ ಮಕ್ಕಳು ಸಾಧುಗಳೂ ಧೃಢಕಾಯರೂ ಬುದ್ಧಿಶಾಲಿಗಳೂ ಆಗುತ್ತಾರೆ. ಉಪ್ಪು ಹುಳಿ ಖಾರಗಳು ಹೆಚ್ಚಾದಷ್ಟೂ ಕೋಪವೂ ಹೆಚ್ಚಾಗುತ್ತದೆ. ತಮ್ಮ ಮಕ್ಕಳು ಯೋಗ್ಯರೂ ಧೃಢಕಾಯರೂ ಆಗಬೇಕೆಂಬ ಅಭಿಲಾಷೆಯುಳ್ಳವರು ಸಾತ್ವಿಕಾಹಾರವನ್ನೇ ತೆಗೆದುಕೊಳ್ಳಬೇಕು. ಮಧ್ಯಾಹ್ನ ನಾಲ್ಕೈದುಗಂಟೆಗೆ ಕಿತ್ತಳೆ ರಸಬಾಳೆ ಇತ್ಯಾದಿ ಉತ್ತಮ ಹಣ್ಣುಗಳನ್ನೂ ಏನಾದರೂ ಮಿತವಾದ ಅಲ್ಪಾಹಾರವನ್ನೂ ತೆಗೆದುಕೊಳ್ಳಬಹುದು. ಇವೆಲ್ಲಕ್ಕಿಂತಲೂ ಸ್ವಲ್ಪ ಅನ್ನವನ್ನು ಊಟಮಾಡುವುದು ಉತ್ತಮ. ರಾತ್ರಿ 10 ಗಂಟೆಯ ಮೇಲೆ ಊಟಮಾಡಲೇಬಾರದು. ಮಲಗುವಾಗ ಸುಖೋಷ್ಣವಾದ ಹಾಲಿಗೆ ಸ್ವಲ್ಪ ಕೇಸರಿ ಹಾಕಿ ಕುಡಿಯಬೇಕು. ಈ ಕಾಲದಲ್ಲಿ ಬಹುಬೇಗ, ಮಲಬದ್ಧತೆಯಾಗುತ್ತದೆ. ಅದರ ಪರಿಹಾರಾರ್ಥವಾಗಿ ಮಲಗುವಾಗ ದಿನಬಿಟ್ಟುದಿನ ಹಾಲಿಗೆ ನಾಲ್ಕೈದುತೊಟ್ಟು ಅಪ್ಪಟ ಹರಳೆಣ್ಣೆಯನ್ನು ಹಾಕಿ ಕುಡಿಯಬೇಕು. ತಿಂಗಳಿಗೊಮ್ಮೆ ಎರಡು ಮೂರುಸಲ ಜುಲಾಬಾಗುವಂತೆ ಅರ್ಧ ಅಥವ ಒಂದುಔನ್ಸು ಹರಳೆಣ್ಣೆಯನ್ನು ತೆಗೆದುಕೊಳ್ಳಬೇಕು.

ನಿದ್ದೆ.

ಸಾಮಾನ್ಯವಾಗಿ ಕೆಲವರಿಗೆ ನಾಲ್ಕೈದು ತಿಂಗಳವರೆಗೂ ಅತಿಯಾಗಿ ನಿದ್ದೆಬರುವುದುಂಟು. ನಿದ್ದೆ ಬರುತ್ತದೆಂದು ಯಾವಾಗಲೂ ನಿದ್ದೆ ಹೋಗುತ್ತಲೇ ಇರಬಾರದು. ನಾಟಕ ಬಯಾಸ್ಕೋಪುಗಳಿಗೆ ಹೋಗುವುದರಿಂದ ಅತಿಯಾಗಿ ನಿದ್ದೆ ಕೆಡಲೂಬಾರದು. ಬೇಗ ಮಲಗಿ ಬೇಗ ಏಳುವ ಅಭ್ಯಾಸವನ್ನಿಡಬೇಕು. ದಿನಕ್ಕೆ ಒಟ್ಟು 8-9 ಗಂಟೆಯ ಕಾಲ ನಿದ್ದೆಯಾದರೆ ಸಾಕು. ಮಧ್ಯಾಹ್ನ ಊಟವಾದನಂತರ ಒಂದು ಗಂಟೆಯಹೊತ್ತು ಮಲಗಬೇಕು. ಒಂದೇ ಸಮನೆ ಕೂತು ಅಥವ ಓಡಾಡುವ ಕೆಲಸಮಾಡುವಾಗ ಮಧ್ಯೆ ಆರಾಮಕುರ್ಚಿ (Easy chair) ಯಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳಬೇಕು.

ವ್ಯಾಯಾಮ.

ವ್ಯಾಯಾಮವೆಂದರೆ ಇತರಕಾಲದಂತೆ ಈ ಕಾಲದಲ್ಲಿ ಅಂಗಸಾಧನೆ ಮಾಡಲು ಆಗುವುದಿಲ್ಲ (ಮಾಡಲೂ ಬಾರದು). ಆದ್ದರಿಂದ ನಡಿಯುವುದು ಮೆಟ್ಟಿಲು ಹತ್ತುವುದೇ ಈಗಿನ ಮುಖ್ಯವ್ಯಾಯಾಮ. ದಿನಕ್ಕೆ 1 ಮೈಲಿಯಾದರೂ ನಡೆಯಬೇಕು. ಏಳು ತಿಂಗಳಮೇಲೆ ಭಾರ ಎತ್ತುವದು ಹೊರತು ಕುಟ್ಟುವದು ಬೀಸುವುದು ಮುಂತಾದ ಎಲ್ಲಾ ಕೆಲಸಗಳನ್ನೂ ಧಾರಾಳವಾಗಿ ಮಾಡಬಹುದು. ಹೊಗೆ ಮತ್ತು ಬೆಂಕಿಯಮುಂದೆ ಬಹಳ ಹೊತ್ತು ಇರಬಾರದು. ಸಾಮಾನ್ಯವಾಗಿ ಧಾರಾಳವಾದ ಗಾಳಿಯು ಓಡಾಡುವ ಕಡೆಯೇ ವಾಸಿಸಬೇಕು. ನಮ್ಮಲ್ಲಿಯ ಭಾಗ್ಯವಂತರು ಕೆಲಸಮಾಡುವುದೆಂದರೇನೇ ಬಹಳ ಹೀನಾಯವೆಂದು ಭಾವಿಸಿಕೊಂಡಿರುವರು. ಅದರಲ್ಲಿಯೂ ಗರ್ಭಿಣಿಯನ್ನೋ ಕೂತಕಡೆಯಿಂದ ಏಳಗೊಡದೆ ಅಪಥ್ಯವಾದ ತಿಂಡಿಗಳನ್ನು ಮಾತ್ರ ಮೇಲೆ ಮೇಲೆ ತಿನ್ನಿಸಿ ಅನಾರೋಗ್ಯಕ್ಕೆ ಗುರಿಮಾಡುವುದು ವಾಡಿಕೆಯಾಗಿದೆ. ಇದಲ್ಲದೆ ಬಸುರಿಯರು ಅಪೇಕ್ಷಿಸಿದುದೆಲ್ಲವನ್ನೂ ಮಾಡದಿದ್ದರೆ ಪಾಪಬರುತ್ತದೆಂಬ ಮೂಢಾಭಿಪ್ರಾಯಬೇರೆ. ಅದರ ಸಾರಾಂಶವೇನೆಂದರೆ ಗರ್ಭಿಣಿಯರು ಯಾವ ಆತಂಕವೂ ಇಲ್ಲದೆ ಎಷ್ಟು ಸಂತೋಷದಿಂದಿದ್ದರೆ ಮಕ್ಕಳು ಅಷ್ಟು ಚೆನ್ನಾಗಿ ಬೆಳೆಯುವರೆಂಬುದೇ ಹೊರತು ಸುಮ್ಮನೆ ಅಪರಿಮಿತವಾದ ತಿಂಡಿ ಕೊಡಬೇಕೆಂದಲ್ಲ. ಸುಮ್ಮನೆ ಅವರನ್ನು ಕೂರಿಸಿ ಏನುಬೇಕೇನುಬೇಕೆಂದು ಕೇಳುತ್ತಿದ್ದರೆ ಅವರು ಅಸಾಧ್ಯವಾದುದನ್ನು ಕೋರಬಹುದು. ಹಾಗೆ ಕೇಳಿದರೆಂದು ಮಾಡಬಾರದುದನ್ನು ಮಾಡಲು ಸಾಧ್ಯವೇ? ಆಹಾರದ ವಿಷಯವೂ ಹೀಗೆಯೇ. ಹೀಗೆ ಮೇಲೆ ಮೇಲೆ ಭರ್ತಿ ಹಾಕುತ್ತಿದ್ದು ಅದ್ಯಾಡದೆ ಕೂಳಿತಿರುವುದರಿಂದ ಕೆಲವರು ಮೈಲಿ ನೀರುತುಂಬುವುದರಿಂದ ಬಹಳ ದಪ್ಪವಾಗುವುದುಂಟು. ಇದು ಮುಂದಕ್ಕೆ ಬಹಳ ಅಪಾಯ. ಹಾಗೆ ಶೀತವು ಮೈಸೇರದಂತೆ ಎಚ್ಚರದಿಂದಿರಬೇಕು. ಆಗಾಗ್ಗೆ ಒಳ್ಳೆಯ ವೈದ್ಯರಿಂದ ದೇಹಸ್ಥಿತಿಯನ್ನು ಪರೀಕ್ಷಿಸುತ್ತಿರಬೇಕು. ಸರ್ಕಾರದವರೇ ವಿಷಯದಲ್ಲಿಷ್ಟೋ ಸಹಾಯಮಾಡಬೇಕೆಂದಲೇ ಎಲ್ಲೆಲ್ಲಿಯ ಆಸ್ಪತ್ರೆಗಳಲ್ಲಿಯೂ ಮತ್ತು ಗರ್ಭಿಣಿ ಶಿಶು ಸಂರಕ್ಷಣಾಸಮಿತಿಗಳಲ್ಲಿಯೂ ಲೇಡಿ ಡಾಕ್ಟರುಗಳನ್ನೂ ಸೂಲಗಿತ್ತಿಯರನ್ನೂ ಸಹ ನೇಮಿಸಿ ಧರ್ಮಾರ್ಥವಾಗಿ ಜನರಿಗೆ ಉಪಕಾರಮಾಡಲು ಗೊತ್ತುಮಾಡಿರುವರು. ಅಂಥವರ ಪರಿಚಯಮಾಡಿಕೊಂಡು ಆಗಾಗ್ಗೆ ಅವರಿಗೆ ದೇಹಸ್ಥಿತಿಯನ್ನು ತೋರಿಸುತ್ತಿರಬೇಕು. ಅವರ ಸಲಹೆಯಂತಿರಬೇಕು.

ಸ್ನಾನ.

ಮೊದಲು ನಾಲ್ಕುತಿಂಗಳವರೆಗೂ ಹಿಂದೆ ಹೇಳಿದಂತೆ ಚಳಿ ಚಳಿಯಾಗುತ್ತಿರುವ ಪಕ್ಷಕ್ಕೆ ಒಂದೊಂದುದಿನ ಮೈಗೆ ನೀರು ಹಾಕಬಾರದೇ ಹೊರತು ಆರೋಗ್ಯವಾಗಿರುವವರು ಪ್ರತಿನಿತ್ಯವೂ ಚೊಕ್ಕಟವಾಗಿ ಮೈ ಉಜ್ಜಿಕೊಂಡು ಬಿಸಿನೀರಿನಲ್ಲಿ ಸ್ನಾನಮಾಡಬೇಕು. ತಣ್ಣೀರಿನಲ್ಲಿ ಸ್ನಾನಮಾಡಬಾರದು. ಆ ಅಭ್ಯಾಸವಿರುವವರು ಕೂಡ ಬೆಚ್ಚಗಿರುವ ನೀರನ್ನೇ ಉಪಯೋಗಿಸಬೇಕು. 5-6 ದಿವಸಗಳಿಗೊಮ್ಮೆ ಚೆನ್ನಾಗಿ ಎಣ್ಣೆ ಒತ್ತಿಕೊಂಡು ಅಭ್ಯಂಗನ ಮಾಡಿಕೊಳ್ಳಬೇಕು.

ಹಗುರವಾದ ಉಡುಪನ್ನು ಸಡಿಲವಾಗಿ ಹಾಕಿಕೊಳ್ಳಬೇಕು. ಮೈಯನ್ನು ಗಾಳಿಗೆ ಬಿಡದೆ ಬೆಚ್ಚಗಿಟ್ಟಿರಬೇಕು. ಸೊಂಟಕ್ಕೆ ಸೀರೆಯನ್ನು ಬಿಗಿಸಬಾರದು. ಕೆಲವರು 6-7 ತಿಂಗಳವರೆಗೂ ಡಾಬನ್ನು ಹಾಕಿಕೊಳ್ಳುವರು. ಅದರಿಂದ ಅಪಾಯವಾಗುವುದಲ್ಲದೆ ಮಗುವನ್ನು ಅಮುಕಿ ಹಿಂಸಿಸಿದ ಪಾಪವೂ ಸಹ ಉಂಟಾಗುತ್ತದೆ. ಸಾಮಾನ್ಯವಾಗಿ ಆರೋಗ್ಯದಿಂದಿರುವವರು ಈ ಪ್ರಕಾರವನ್ನನುಸರಿಸಿದರೆ ಹೆಂಗೆಯು ಸುಲಭವಾಗುವುದಲ್ಲದೆ ಮಗುವೂ ಚೆನ್ನಾಗಿರುತ್ತದೆ. ಆದರೆ ಕಾಯಿಲೆಯವರು ಮಾತ್ರ ಶೀರ ವೈದರು ಹೇಳಿದಂತೆಯೇ ಇರಬೇಕು. ಎರಡು ತಿಂಗಳ ಮುಂಚಿನಿಂದಲೂ ಅನುಭವಸ್ಥರಾದ ಸೂಲಗಿತ್ತಿಯರನ್ನು (ಆಸ್ಪತ್ರೆಯವರೇ ಉತ್ತಮ) ಗೊತ್ತುಮಾಡಿಕೊಂಡಿದ್ದು ಆ ಸಮಯಕ್ಕೆ ಬೇಕಾದ ಬಟ್ಟೆಗಳು ಮುಂತಾದುವನ್ನು ಸಿದ್ಧಪಡಿಸಿಕೊಂಡಿದ್ದು ಸೂಚನೆಯಾದಕೂಡಲೆ ಅವರಿಗೆ ತಿಳಿಸಿದರೆ ಮುಂದಿನ ಕೆಲಸಕ್ಕೆ ಅನುಕೂಲವಾಗುತ್ತೆ. ಒಂದುವೇಳೆ ಮನೆಯಲ್ಲಿ ಅಸಾಧ್ಯವೆಂದು ತೋರಿದರೆ ಆಸ್ಪತ್ರೆಗೆ ಹೋಗುವುದು ಸರ್ವೋತ್ತಮ. ಆಸ್ಪತ್ರೆಗೆ ಹೋದರೆ ಬದುಕುವುದೇ ಇಲ್ಲವೆಂಬ ದುಷ್ಟ ಹೆದರಿಕೆಯಿಂದ ಅನೇಕರು ಎಷ್ಟು ಪ್ರಯಾಸವಾದರೂ ಮನೆಯಲ್ಲಿಯೇ ಇಟ್ಟುಕೊಂಡು ಕೊನೆಗೆ ತಾಯಿಯೋ ಮಗುವೋ ಅಥವಾ ಎರಡೂ ಹೋಗುವವರೆಗೂ ಸುಮ್ಮನಿದ್ದು ಕಡೆಗೆ "ಅಯ್ಯೋ ಅವಳ ವಿಧಿ ಹಾಗಿದ್ದಿತು" ಎಂದು ಗೋಳಾಡುವರು.

"ಸರಸ್ವತಿ" ಬೆಂಗಳೂರು.

ಪ್ರತಿದಿನವೂ ಕುಡಿಯಬೇಕಾದ ನೀರಿನ ಪ್ರಮಾಣವೇನು?

ನೀರನ್ನು ಅದರ ಸ್ವಾಭಾವಿಕವಾದ ರೂಪದಲ್ಲಾಗಲಿ, ಇತರ ಪದಾರ್ಥಗಳೊಡನೆಯಾಗಲಿ ಪ್ರತಿದಿನವೂ ಸೇವಿಸುವೆವು. ಉದಾಹರಣೆಗಾಗಿ ಅಲೂಗೆಡ್ಡೆಯಲ್ಲಿ ಮುಕ್ಕಾಲುಭಾಗವೆಲ್ಲಾ ನೀರೇ ಆಗಿರುವುದು. ಸೀಮೆ ಬದನೆಯಕಾಯಿಯಲ್ಲಿ ನೀರಿನ ಭಾಗವು ಇನ್ನೂ ಹೆಚ್ಚಾಗಿರುವುದು. ಆಹಾರಪದಾರ್ಥಗಳಲ್ಲಿ ಸಾಮಾನ್ಯವಾಗಿ ಸೇರಿರುವ ನೀರಿನ ಜೊತೆಗೆ ಬರೀ ನೀರನ್ನೂ ಧಾರಾಳವಾಗಿ ಉಪಯೋಗಿಸಬೇಕು.

ನಮ್ಮ ಆಹಾರಪದಾರ್ಥಗಳ ಮೂಲಕ ದೇಹಕ್ಕೆ ಸೇರುವ ನೀರಿನ ಜತೆಗೆ, ಊಟಕ್ಕೆ ಮುಂಚೆ ಅಥವಾ ಊಟವಾದಮೇಲೆ, ಸ್ವಲ್ಪಕಾಲ ಬಿಟ್ಟು ನೀರನ್ನು ವಿಶೇಷವಾಗಿ ಕುಡಿಯಬೇಕು. ಬೆಳಗ್ಗೆ ಎದ್ದೊಡನೆ, ಮತ್ತು ಊಟಮಾಡಿ ಎರಡು ಗಂಟೆಗಳ ಕಾಲ ಕಳೆದಮೇಲೆ ಎರಡೆರಡು ಲೋಟಾ ನೀರನ್ನು ಕುಡಿದರೆ ಅದು ಪ್ರತಿರಕ್ತಕಣಗಳಲ್ಲಿಯೂ ವ್ಯಾಪಿಸಿ, ಜೀರ್ಣವಾಗದೆ ನಿಂತಿರುವ ಪದಾರ್ಥಗಳನ್ನೆಲ್ಲಾ ಚೆನ್ನಾಗಿ ತೊಳೆಯುವುದು.

ದೇಹದ ಪ್ರತಿಭಾಗವನ್ನೂ ಬಹಳ ಶುಚಿಯಾಗಿಟ್ಟು, ರಕ್ತನಾಳಗಳಲ್ಲಿಯೂ, ಇತರ ಅವಯವಗಳಲ್ಲಿಯೂ ಕೊಬ್ಬು ಬೆಳೆಯಲು ಅಥವಾ ತಂಗಲು ಅವಕಾಶವನ್ನು ಕೊಡದಂತೆ ಮಾಡಲು ನೀರಿನಲ್ಲಿರುವ ಅಮೂಲ್ಯ ಗುಣವು ಇನ್ನೂ ಅನೇಕರಿಗೆ ತಿಳಿಯದು. ನೀರನ್ನು ವಿಶೇಷವಾಗಿ ಮೈಮೇಲೆ ಸುರಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ಕುಡಿಯುತ್ತ ಬಂದರೆ ದೇಹಾರೋಗ್ಯಕ್ಕೆ ಬಹಳವು ಟ್ಟಿಗೆ ಸಹಕಾರಿಯಾಗುವುದು.

ರಕ್ತದ ಒತ್ತಾಟವು ಹೆಚ್ಚಿದ್ದರೆ:—ಯೌವನಾವಸ್ಥೆಯು ಕಳೆದಿರುವವರಲ್ಲಿಯೂ, ಆಹಾರ, ಪಾನೀಯ ಮತ್ತು ಆಚರಣೆಯ ಕ್ರಮಗಳು ಸರಿಯಾಗಿಲ್ಲದಿರುವವರಲ್ಲಿಯೂ, ರಕ್ತದ ಅಮುಮಾಟವು ಹೆಚ್ಚಿ, ಅದರಿಂದ ಬಹಳ ಕಷ್ಟನಷ್ಟಗಳು ಆಗುತ್ತಿರುವುವು. ಅವರ ರಕ್ತದಲ್ಲಿ ವಿಷಮಿಶ್ರವಾದ ಪದಾರ್ಥಗಳು ಸೇರಿ, ರಕ್ತಸಂಚಾರದ ಶಕ್ತಿಯನ್ನೂ, ದೇಹದ ಕಶ್ಮಲವನ್ನು ಹೋಗಲಾಡಿಸಲು ಮೂತ್ರಕೋಶಕ್ಕಿರುವ ಶಕ್ತಿಯೂ ಕಡಿಮೆಯಾಗಿರುವುದು. ನೀರನ್ನು ವಿಶೇಷವಾಗಿ ಕುಡಿಯುವುದರಿಂದ ಅದು ಆ ರಕ್ತದೋಷಗಳನ್ನು ನಿವಾರಣೆಮಾಡುವುದು.

ರೋಗಮಿಶ್ರವಾದ ಊಟಿಯ ನೀರಿನ್ನ ಚಿಕಿತ್ಸೆಗಾಗಿ ಹೋಗುತ್ತಿರುವವರು ಅದರ ಗುಣವನ್ನು ಹೊಂದುತ್ತಿರುವ ಅಂತಹ ನೀರಿನಲ್ಲಿ ಸೇರಿರುವ ಲವಣಗಳು ಎಂಥವುಗಳಾಗಿದ್ದ ಆ ಚಿಕಿತ್ಸೆಯಲ್ಲಿ ನೀರನ್ನು ವಿಶೇಷವಾಗಿ ಸೇವಿಸುವುದರಿಂ ನೀರು ಮೇಲೆ ಹೇಳಿದಂತೆ ಗುಣವನ್ನುಂಟುಮಾಡುವುದು. ಸೇವಿಸುವ ಆಹಾರದಲ್ಲಿ ನೀರು, ಉಪ್ಪುಗಳು ಮತ್ತು ವಿಟಮಿ ಗಳಲ್ಲದೆ ಮತ್ತೆ ಕೆಲವು ಪದಾರ್ಥಗಳೂ ಇರಬೇಕು. ಅವುಗಳಾ ವೆಂಬುದನ್ನು ಮುಂದಿನ ಲೇಖನದಲ್ಲಿ ತಿಳಿಸುವೆವು.

ಧೂಮಾವರಣವು ಬೆಳವಳಿಗೆ ಅಡ್ಡಿಮಾಡುವುದು:—ಗಾರಿಕೆಯ ಕೆಲಸಗಳು ವಿಶೇಷವಾಗಿ ನಡೆಯುವ ಒಂದಾನೊಂದು ಪಾಶ್ಚಾತ್ಯನಗರದ ಮಧ್ಯಭಾಗದಲ್ಲಿ, ಒಂದು ಸಣ್ಣ ತರಕಾರಿ ಗಿಡವನ್ನು ಬೆಳೆಸಿ ನೋಡಿದರೆ, ಹೊಗೆಯಿಂದ ಸಸ್ಯಗಳ ಬೆಳ ಣಿಗೆ ಆಗುವ ಕೆಡಕನ್ನು ತಿಳಿಯಬಹುದು. ಆ ಗಿಡವು ಬೆಳೆಯು ದಕ್ಕೆ ಬಹಳ ದಿನಗಳಾಗುವುದು. ಅದರೂ ಹುಲುಸಾಗಿ ಬೆಳೆ ವುದಿಲ್ಲ. ಅದರ ಎಲೆಗಳು ಮಂಕಾಗಿರುವುವು. ಮತ್ತು ಸಸ್ಯ ಸೂರ್ಯರಶ್ಮಿಯಿಂದ ಆಕರ್ಷಿಸಬೇಕಾದ ಕ್ಲೋರೋಫಿಲ್ ಬುದು ಅದರಲ್ಲಿ ಬಹಳ ಕಡಿಮೆಯಾಗಿರುವುದು.

ಅದೇ ಗಿಡವನ್ನು ಊರಿನ ಹೊರಭಾಗದಲ್ಲೆಲ್ಲಾದರೂ ನೆಟ್ಟ ಗಿಡವು ಸೊಂಪಾಗಿ ಬೆಳೆಯುವುದು. ಮತ್ತು ಅದರ ಎಲೆ ಹಸುರಾಗಿಯೂ, ನೋಟಕ್ಕೆ ಅಂದವಾಗಿಯೂ ಇರುವು ಮೈದಾನದ ಪ್ರದೇಶಗಳಲ್ಲಿ ಬೆಳೆದ ಗಿಡವು ಹೊರನಾಗಿಯ ಉದ್ದವಾಗಿಯೂ ಬೆಳೆಯುವುದು, ಮತ್ತು ಅದರ ಎಲೆ ಹಸುರಾಗಿರುವುದು. ಇದರಿಂದ ಅದು ಬಹಳ ಶ್ರೇಷ್ಠವಾದ ಕಾರಿಯಾಗುವುದು.

ಆರೋಗ್ಯಚಂದ್ರಿಕೆ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷ ವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯ ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾ ಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧ ಬೆಲೆ ೧ ಕ್ಕೆ ೩ ಆಣೆ ೧ ರೂಪಾಯಿಗಿಂತಲೂ ಕಡಿ ಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು—ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [1]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಭಗಿನಿಯರೆ! ನೀವು ಅವಶ್ಯವಾಗಿ ಓದಬೇಕಾದ ಪುಸ್ತಕ

ಪ್ರಸವಕಾಲದಲ್ಲಿ ಪ್ರಥಮ ಚಿಕಿತ್ಸೆ.

ಕ್ರಯ ೩ ಆಣೆ. ಅಂಚೆವೆಚ್ಚ ೧ ಆಣೆ.

ಡಾಕ್ಟರ್ ರಾಮರಾಯರಿಂದ ರಚಿಸಲ್ಪಟ್ಟು, ನೂರಾರು ಸೂರು ಪುಟಗಳನ್ನೊಳಗೊಂಡ ಸಚಿತ್ರವಾದ ಈ ಪುಸ್ತಕದಲ್ಲಿ ನಿಮ್ಮ ಗರ್ಭದಶೆಯಲ್ಲಿಯೂ, ಪ್ರಸವಕಾಲದಲ್ಲಿಯೂ, ಅನಂತರದಲ್ಲಿಯೂ ನಿಮಗೆ ಸುಖಪ್ರಸವವಾಗಿ, ನಿಮ್ಮ ಮತ್ತು ನಿಮ್ಮ ಶಿಶುವಿನ ದೇಹಾರೋಗ್ಯವನ್ನೂ ಪಡೆಯಲು ಅವಶ್ಯಕವಾದ ಸೂಚನೆಗಳು ತಿಳಿಗನ್ನಡದಲ್ಲಿ ಸಚಿತ್ರವಾಗಿ ಕೊಡಲ್ಪಟ್ಟಿವೆ.

ನಿಮ್ಮಲ್ಲಿ ಅನೇಕರು ತಿಳಿವಳಿಕೆಯಿಲ್ಲದೆ ಮೇಲ್ಕಂಡ ಸಮಯಗಳಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಬಿಟ್ಟು ಅನೇಕ ಅಪಾಯಗಳಿಗೂ, ತೊಂದರೆಗಳಿಗೂ ಗುರಿಯಾಗುವಿರಿ. ತಾತ್ಕಾಲಿಕ ಸುಲಭ ಚಿಕಿತ್ಸಾಕ್ರಮಗಳಿಂದ ನಿಮ್ಮನ್ನು ಅಂಥ ತೊಂದರೆಗಳಿಂದ ತಪ್ಪಿಸುವುದೇ ಈ ಪುಸ್ತಕದ ಉದ್ದೇಶವು.

ಸಮರ್ಥ ವೈದ್ಯರ ಮತ್ತು ದಾದಿಯರ ಸಹಾಯವು ದೊರಕದ ಕುಗ್ರಾಮಗಳಲ್ಲಿರತಕ್ಕವರಿಗೆ ಈ ಪುಸ್ತಕವು ಅಮೂಲ್ಯವಾಗಿರುವುದು.

ಗರ್ಭದ ಸೂಚನೆಗಳು, ಗರ್ಭಿಣಿಯರ ದೇಹಾರೋಗ್ಯರಕ್ಷಣೆ, ಗರ್ಭಕಾಲದಲ್ಲಿ ಕಾಣಿಸಬಹುದಾದ ವ್ಯಾಧಿಗಳು, ಗರ್ಭಕ್ಕೆ ಸಂಭವಿಸಬಹುದಾದ ಅಪಾಯಗಳು, ಪ್ರಸವಕಾಲದಲ್ಲಿ ಶುಚಿತ್ವಪದ್ಧತಿಗಳು, ಸೂತಿಕಾದಿನಗಳಲ್ಲಿ ಬರಬಹುದಾದ ಅಪಾಯಗಳು, ಶಿಶುವಿನ ಉಪಚಾರ ಮತ್ತು ಶಿಶುವಿಗೆ ಆಹಾರವನ್ನು ಕೊಡುವ ಕ್ರಮಗಳು, ಇವೇ ಮುಂತಾದ ಅನೇಕ ವಿಷಯಗಳು ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿವೆ.

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಮ್. ಎಲ್. ಸಿ. ಮದರಾಸು. "ಮುದ್ರಿತವಾದ ಈ ಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಮದರಾಸು ಮೆಯಿಲ್ ಪತ್ರಿಕೆ:—2-3-28. "ಇದು ಪ್ರತಿ ಗೃಹಸ್ಥರ ಕೈಯಲ್ಲಿರಬೇಕಾದ ಉತ್ತಮ ಪುಸ್ತಕ."

ಹಿಂದೂಪತ್ರಿಕೆ:—4-4-28. "ಆನರಬಲ್, ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, ನಮ್ಮ ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ ಓದಿಯೇತೀರಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಜನಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಿಂದ, ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಿ ಬರೆಯಲ್ಪಟ್ಟಿವೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳಿವಳಿಕೆಯಿಲ್ಲದುದರಿಂದ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಈ ಪುಸ್ತಕವನ್ನೋದಿ ತಿಳಿದಿದ್ದರೆ ಅಂತಹ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನು ಪೇಕ್ಷಿಸತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

ನಮ್ಮ "ಆರೋಗ್ಯಚಂದ್ರಿಕೆ"ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೊದಲಿಂದ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮಣಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [7]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

[ಸೃಷ್ಟಿಯ ಜಗತ್ತು] # ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] # ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಕ್ಕಿಂತಲೇ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂಥ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಶೇಮಲೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಪಮಪತ್ರಿ, ಪಿಶಾಪತ್ರಿ, ಮುಡಮಸ್ತ, ರಕಪುರುಷ, ಕಮರಕಸ, ತಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಶಾಲೀಮಖಾನಾ, ಬೀಜಬಂದ, ಹರಣಜೋರಿ, ಮುಂಗಲೇಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸರ್ಕೀಮಗಜ, ಅಲದಹಾಲು, ನಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಲ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ. ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸಕ್ಕರ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಒಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಟ್ಟಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [5]

ಪತ್ತ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲಿಯ ಸೀಸೆ ೧ ಕ್ಕೆ ೧೩ ಆಣೆ ೩೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[19] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟ[...] ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಿ[...] ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ[...]ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೇಬಲುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿ[ಸಿ] ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹು[ದು].

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮॥ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆ[...]ನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂ[...] ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾ[...] ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವ[...] ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನ[ಡ] ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವ[...] ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿ[...]ವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀ[ರ]ಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು [...] ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0[...]
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8[...]
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0[...]

ವಿಳಾಸ:— ವೇ|| ಚನ್ನಯ್ಯ ಹೊಸಮಠ,

ಪೋಸ್ಟ್ ಹರಿಹರ, ಡಿ|| ಚಿತ್ರದುರ್ಗ[...]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[...]ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗ[ಳು] ಇದನ್ನು ಉಪಯೋಗಿಸಿ, ಸಾವಿರಾರುಗಳಾ[...]

ಯೋಗ್ಯತಾಪತ್ರ[...]ಳನ್ನು ಕೊಟ್ಟಿರು[...]ರು. ಪ್ರಸಿದ್ಧವಾ[...] ಈ ನಶ್ಯದ ಪು[...]ಯಿಂದ ಸ್ವಸ್ಥವಾಗ[...]ವ ವ್ಯಾಧಿಗಳು ಯಾ[...]ವವೆಂದರೆ:—ಶೀ[...] ಒಂಟಿ ತಲೆನೋವು[...] ತಲೆಯಲ್ಲಿನ ರೋಗ[...]ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳ[...] ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗು[...]ವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುವ[...]ಡುತ್ತದೆ. ಮೂರಿಬೆಟ್ಟಿನ ಸಾಧಾರಣ ನಶ್ಯದ ಸುಗ[...] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದ[...]ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ[...] ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ[...] ಪುಗಸಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-[...]

ಡಜ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆ[ಣೆ]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರಸ್ಸನ್ನೂ ಸ[...]ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[7] ಪೋ. ಬಾ. ೫೧೦, ಮದರಾಸು[...]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266

ಪಂಚಾ[...]

ಪ್ರತಿ ಸೋಮವಾರ

ಪಂಚಾಸ್ಯಾನನಪಂಕಜಾತಜನಿತರ್ ಪಂ[...]

ಪಂಚಾಚಾರನಿಯಾಮಕರ್ ಪರಿಲಸತ್ತಂ[...]

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಬ್ರಂ|| ಗುರುಶಾಂತ[...]

[...]ವರಿಗೆ ೧ ರೂ. ೧೧ ಆಣೆ.   ಬಿಡಿ ಪ್ರತಿ ೧ಕ್ಕೆ ೯ ಪೈ.   ಸರಸ್ವ[...]

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ ನೇ[...]

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮದ್ರಾಸು ವಿದ್ಯಾಶಾಖೆಯ ಪಟ್ಟಧಾರಿಗಳ ಸ್ವಾಗತವು.

ಈ ಸಂವತ್ಸರ ಮದ್ರಾಸು ವಿದ್ಯಾಶಾಖೆಯ ಪಟ್ಟಧಾರಿಗಳಾದ ವೀರಶೈವ ವಿದ್ಯಾರ್ಥಿಗಳಿಗೆ ಸ್ವಾಗತವು ತಾ|| 16-8-29 ರಲ್ಲಿ ಮ|| ರಾ|| ಡಿ. ನಂಜಪ್ಪನವರು ಮತ್ತು ಬಿ. ಬಸವಲಿಂಗಯ್ಯನವರು ಇವರಿಂದ ಕೊಡಲ್ಪಟ್ಟಿತು. ಆ ದಿವಸ ಪರಸ್ಥಳಗಳಿಂದ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿಗೆ ಬಂದಿರುವ ಸುಮಾರು 25 ಜನ ವೀರಶೈವವಿದ್ಯಾರ್ಥಿಗಳು ಸೇರಿದ್ದರು. ಮದ್ರಾಸು ನಿವಾಸಿಗಳು ವೀರಶೈವ ಪ್ರಮುಖರು, ಗುರುಬಸವ ಅಂಡ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆದ ಮ|| ರಾ|| ಮರಿಬಸಪ್ಪನವರು ಮತ್ತು ಶ್ರೀಮಂತ ಯಜಮಾನ್ ಮರಿಲಿಂಗಪ್ಪನವರು ಸಹ ಆಗಮಿಸಿದ್ದರು. ಪ್ರಾರಂಭದಲ್ಲಿ ಮ|| ರಾ|| ಬಿ. ಬಸವಲಿಂಗಯ್ಯನವರು ವೀರಶೈವರು ತಮ್ಮ ಮತಾಭಿವೃದ್ಧಿಗಾಗಿ ಮಾಡತಕ್ಕ ಹಿಯ ಮಗಳನ್ನು ಪ್ರಕಟಪಡಿಸಿ, ಮದ್ರಾಸಿನಲ್ಲಿರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ವಸತಿಯಿಲ್ಲದೆ ಇರುವ ವಿಷಯದಲ್ಲಿ ಭಾಷಣಮಾಡಿ ವಿದ್ಯಾರ್ಥಿಗಳಿಗಾಗಿ ಒಂದು ವಸತಿಯನ್ನೇರ್ಪಡಿಸಬೇಕೆಂದು ಪ್ರಾರ್ಥಿಸಿಕೊಂಡರು. ಆಮೇಲೆ ಪಟ್ಟಧಾರಿಗಳಲ್ಲೊಬ್ಬರಾದ ಮ|| ರಾ|| ಕೆ. ಯಂ. ಪಕ್ಷಿಣಾಮೂರ್ತಿ, ಎಂ.ಎ. ಇವರು ದೀರ್ಘವಾಗಿ ವೀರಶೈವಮತತತ್ವಗಳನ್ನು ಬೋಧಿಸಿ ವೀರಶೈವ ಸಮಾಜಸುಧಾರಣೆಗಾಗಿ ವೀರಶೈವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮಹೋದ್ದೇಶದನಂತರ ಮದ್ರಾಸಿನಲ್ಲಿ ತಾವು ಏಳುವರ್ಷ ಆಶ್ರಮವ ಸತಿಯಿಲ್ಲದೆ ಅನುಭವಿಸಿದ ಕಷ್ಟಗಳನ್ನು ಸಂಕ್ಷೇಪವಾಗಿ ವ್ಯಕ್ತಗೊಳಿಸಿ, ಮದ್ರಾಸಿನಲ್ಲಿ ವೀರಶೈವರಿಗೆ ಒಂದು ಹಾಸ್ಟಲ್ ಅವಶ್ಯಕವಾಗಿ ಬೇಕೆನ್ನುತ್ತ ತಮ್ಮ ಸ್ಥಾನವನ್ನು ಸ್ವೀಕರಿಸಿದರು. [...]. ಎಂ. ಕೊಟ್ರಯ್ಯನವರು ಮದ್ರಾಸಿನಲ್ಲಿ 25 ವೀರಶೈವ ವಿದ್ಯಾರ್ಥಿಗಳಿರುವರೆಂಬುವದನ್ನು ನೋಡಿದರೆ ಮನಸ್ಸಿಗೆ ಸಂತೋಷವಾಗುತ್ತದೆ. ಇವರೆಲ್ಲರು ಒಬ್ಬರ ಪರಿಚಯ ಮತ್ತೊಬ್ಬರಿಗಿಲ್ಲದಿರುವದಕ್ಕೆ ಮುಖ್ಯವಾಗಿ ಆಶ್ರಮವಸತಿಯೇ ಕಾರಣವಾಗಿರುತ್ತದೆಂಬುವದಾಗಿ ಭಾಷಣಮಾಡಿ ವೀರಶೈವ ವಿದ್ಯಾರ್ಥಿಗಳ ಆಶ್ರಮವಸತಿಗಾಗಿ ತಾವುಗಳು ಬಳ್ಳಾರಿ ಮ|| ವಿ. ವಿ. ಸಂಘದವರಲ್ಲಿ ಅಂಕಿತಮಾಡಿಕೊಂಡಿರುವದನ್ನು ಜ್ಞಪ್ತಿಗೆ ತಂದು ಅವರು ಮುಂದೆ ಮಾಡುವ ಸಹಾಯಕ್ಕೆ ಪುರನಿವಾಸಿಗಳಾದ ವೀರಶೈವ ಮಹಾಶಯರು ತನುಮನಧನಸಹಾಯವನ್ನು ಮಾಡಬೇಕೆಂಬುದಾಗಿ ಪ್ರಾರ್ಥಿಸಿ ತಮ್ಮ ಭಾಷಣವನ್ನು ಪೂರೈಸಿದರು.

ಈ ಮಧ್ಯದಲ್ಲಿ ಸಭಿಕರೆಲ್ಲರು ವೀರಶೈವ ಹಾಸ್ಟಲಿನ ಆವಶ್ಯಕತೆಯ ವಿಷಯವನ್ನು ಸ್ವಲ್ಪ ಚರ್ಚಿಸಿ ಮ|| ರಾ|| ಮರಿಲಿಂಗಪ್ಪನವರು ಮತ್ತು ಮ|| ರಾ|| ಮರಿಬಸಪ್ಪನವರ ಅಭಿಮತದ ಮೇರೆಗೆ ಈ ವಿಷಯವು ಮುಂದಿನ ತಿಂಗಳು ಪ್ರಥಮ ತಾರೀಖಿನಲ್ಲಿ ಮ|| ರಾ|| ರಾ|| ಡಾಕ್ಟರ್ ಜಿ. ತಿಮ್ಮಾರೆಡ್ಡಿ ಯಂ.ಬಿ. ಬಿ.ಯಸ್. ಇವರ ಅಧ್ಯಕ್ಷತೆಯಲ್ಲಿ ಪುರನಿವಾಸಿಗಳಾದ ವೀರಶೈವ ಮಹಾಶಯರನ್ನೆಲ್ಲಾ ಕೂಡಿಸಿ ಆಲೋಚಿಸುವುದಾಗಿ ನಿರ್ಧರಿಸಲ್ಪಟ್ಟಿತು.

ತದನಂತರ ಮ|| ರಾ|| ರಾ|| ರುದ್ರಪ್ಪನವರು, ಮದರಾಸು ನಿವಾಸಿಗಳಾದ ವೀರಶೈವ ಮಹಾಶಯರೆಲ್ಲರು ಈ ವಿಷಯದಲ್ಲಿ ಮನಃಪೂರ್ವಕವಾಗಿ ಸಹಾಯಮಾಡಿ ಶೀಘ್ರಕೇಸರಾಗುವರೆಂದು ಪೂರ್ಣ ನಂಬಿರುತ್ತೇನೆಂಬುದಾಗಿ ಭಾಷಣಮಾಡಿ ವಿದ್ಯಾಶಾಖೆಯ ಪಟ್ಟಧಾರಿಗಳು ಸಮಾಜ ಸುಧಾರಕತ್ವವನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸಿ ಸಭಿಕರೆಲ್ಲರಿಗೂ ವಂದನೆಗಳನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಸ್ವೀಕಾರ.

ವಿಜಾಪುರ ಡಿ|| ಜೈನಾಪುರಗ್ರಾಮದ ಹಿರೇಮಠದ ಶ್ರೀ|| ಷ|| ಪಟ್ಟದಸ್ವಾಮಿಗಳವರು ಪ್ರಭಾಪೋಷಣಕೋಸ್ಕರ ಕಳುಹಿಸಿದ 25 ರೂಪಾಯಿಗಳು ವೇ|| ಪಂ|| ಮಲ್ಲಿಕಾರ್ಜುನಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ನಿಜಾಮ ಇಲಾಖಾ ತಿಂಥಣೀಹಗ್ರಾಮದಲ್ಲಿ ಶ್ರೀ ಅಮರೇಶ್ವರಾಚಾರ್ಯ ಮಹಾಸ್ವಾಮಿಗಳು ನೆರವೇರಿಸಿದ ಅನುಷ್ಠಾನದ ಸಮಾಪ್ತಿ ಕಾಲದಲ್ಲಿ ಪ್ರಭಾಪೋಷಣಕೋಸ್ಕರ ತೆಗೆಯಿಸಿದ 5 ರೂಪಾಯಿಗಳು ವೇ|| ವೀರಭದ್ರಶಾಸ್ತ್ರಿಗಳು ಕಹಜಾಕ್ ಅವರಾದ ಇವರ ದ್ವಾರಾ ತಲ್ಪಿರುತ್ತವೆ.

ಅನಂತಪುರ ಡಿ|| ಗುತ್ತಿ ಪಶುಪತಿ ಮಠದ ನಾಗಯ್ಯನವರ ಪರ್ವಾರಾಧನ ಸಮಯದಲ್ಲಿ ಇವರ ಪುತ್ರಿ ಮೆಟ್ರಿಮಠದ ಶ್ರೀ|| ಚಾಯಮ್ಮನವರು ಸಮರ್ಪಿಸಿದ 1 ರೂ. ಬಳ್ಳಾರಿ ಡಿ|| ಮೆಟ್ರಿಗ್ರಾಮದ ಹಂಕಣಕಲ್ಲು ಬಸಲಿಂಗಪ್ಪನವರ ಮಕ್ಕಳು ಮ|| ರಾ|| ಶಿವಬಸಪ್ಪನವರು ಹೊಸ ಅಂಗಡಿಯ ಪೂಜಾಕಾಲದಲ್ಲಿ ಸಮರ್ಪಿಸಿದ 2 ರೂ. ಕಂಬಳಹೊಸೂರುಗ್ರಾಮದ ಮ|| ರಾ|| ಗೂಳಯ್ಯನವರ ಪುತ್ರ ಚಿ|| ಬಸಯ್ಯನಿಗೂ ಮತ್ತು ವೇ|| ತಗ್ಗಿನಮಠದ ಬಸವಯ್ಯನವರ ಪುತ್ರ ಚಿ|| ಚಂದ್ರಯ್ಯನಿಗೂ ಸಹ ವೀರಮಾಹೇಶ್ವರ ದೀಕ್ಷೆಯನ್ನು ನೆರವೇರಿಸಿದಕಾಲದಲ್ಲಿ ಸಮರ್ಪಿಸಿದ 2 ರೂ. ಒಟ್ಟು 5 ರೂಪಾಯಿಗಳು ವೇ|| ಹಂದಿಹಾಳು ಮಠದ ಮಹಾದೇವಯ್ಯನವರ ದ್ವಾರಾ ತಲ್ಪಿರುತ್ತವೆ.

ಸಂಪೂರ್ಣವಾಗಿ ಸ್ತನದೊಳಗಿನ ಹಾಲೆಲ್ಲವೂ ಹೊರಕ್ಕೆ ಬಂದುಬಿಡಬೇಕು ಮತ್ತು ಸ್ತನ್ಯವನ್ನು ಕೊಡುವುದರಲ್ಲಿಯೂ ಕಾಲಕ್ರಮವಿರಬೇಕು. ಮಗುವಿಗೆ ಹಾಲನ್ನು ಕುಡಿಸಿದಮೇಲೆ ಸ್ತನವನ್ನು ಹಿಂಡಿದರೆ ಸ್ತನ್ಯವು ಹೆಚ್ಚುವ ಸಂಭವವುಂಟು. ಮತ್ತು ಕೆಲವು ಸಂದರ್ಭಗಳಲ್ಲಿ ಕೆಲವು ವಾರಗಳವರೆಗೂ ಸ್ತನ್ಯಕೊಡುವುದನ್ನು ನಿಲ್ಲಿಸಿಬಿಟ್ಟರೂ, ತಿರುಗಿ ಮೊದಲಿನ ಹಾಗೆಯೇ ಹಾಲು ಬರಲಾರಂಭಿಸುವುದು.

ಈ ವಿಷಯಗಳನ್ನೆಲ್ಲಾ ನಾವು ಅನೇಕ ಸ್ತ್ರೀಯರ ಅನುಭವದಿಂದ ಶೋಧನೆಮಾಡಿ ನಿರ್ಧರಿಸಿರುವೆವು. ಇದೇ ವಿಚಾರದಲ್ಲಿ ವೈದ್ಯರ ಸೈಹಾಯ್ಯವೂ ಸ್ವಲ್ಪ ಬೇಕಾಗಿರುವುದಲ್ಲದೆ, ತಾಯಿಯರಲ್ಲಿಯೂ ತಾಳ್ಮೆಯೂ ದೃಢಪ್ರಯತ್ನವೂ ಇರಬೇಕಾಗಿದೆ. ಆಗಲೇ ಅದರಿಂದ ಒಳ್ಳೇ ಅನುಕೂಲವುಂಟು.

ತಾಯಿಯು ನಾಲ್ಕು ಘಂಟೆಗಳಿಗೊಮ್ಮೆ, ಹತ್ತು ನಿಮಿಷಗಳಿಗೆ ಮೀರದೆ, ಹಾಲನ್ನು ಕೊಟ್ಟು, ಉಳಿದ ಹಾಲನ್ನು ಕೈಯಿಂದ ಹಿಂಡಿ ಒಂದು ಬುಡ್ಡಿ ಅಥವಾ ಬಟ್ಟಲಿಂದ ಅದರ ಬಾಯಿಗೆ[...]ವಾದ ಹಾಲನ್ನು ಚೆಲ್ಲಿಬಿಡಬೇಕು. ಮಗುವಿಗೆ ಎದೆಹಾಲು ದೊರೆಯುವ ಹಾಗಿದ್ದರೆ, ಮೇಲೆ ಹೇಳಿದ ಪ್ರಮಾಣದಲ್ಲಿ $\frac{1}{3}$ ಅಥವಾ $\frac{1}{2}$ ಭಾಗವನ್ನು ಮಾತ್ರ ಉಪಯೋಗಿಸಬೇಕು. ಮಗುವಿಗೆ ಹೊಟ್ಟೆಕೂಲೆಯ ಸೂಚನೆಯು ಕಂಡುಬಂದರೆ ಹಾಲು ಸಕ್ಕರೆಯ ಪ್ರಮಾಣವನ್ನು ಇಳಿಸಿ ತಗ್ಗಿಸಬೇಕು. ಮಗುವಿನ ಮಲದಲ್ಲಿ ಮೊಸರಿನ ಥರದ ಹೆಪ್ಪುಗಳು ಕಂಡುಬಂದರೆ, ಬರೀನೀರಿಗೆ ಬದಲಾಗಿ ಬಾರ್ಲಿನೀರನ್ನು ಸೇರಿಸಿ, ಅದಕ್ಕೆ ತಕ್ಕಂತೆ ಸಕ್ಕರೆಯನ್ನು ತಗ್ಗಿಸಬೇಕು. ಬಾರ್ಲೀ ನೀರನ್ನು ಮೊದಲು ಕುದಿಸಿಟ್ಟುಕೊಂಡು, ಅದಕ್ಕೆ ಹಾಲನ್ನು ಬೆರಸಿ, ತಿರುಗಿ ಅದನ್ನು ಮೇಲೆಹೇಳಿದಂತೆ ಕುದಿಸಬೇಕು.

ದಿನದಿನವೂ ಒಂದು ಔನ್ಸನ್ನು ಕೆನೆತೆಗೆದ ಹಾಲಿಗೆ ಬದಲಾಗಿ ಅಷ್ಟೇಪ್ರಮಾಣದ ಅಪ್ಪಟ ಹಾಲನ್ನು ಕೊಡುತ್ತ ಬಂದು, ಕೊನೆಗೆ ಪೂರ್ತಿಯಾಗಿ ಅಪ್ಪಟ ಹಾಲನ್ನೇ ಉಪಯೋಗಿಸಬಹುದು. ಅದಕ್ಕೆ ತಕ್ಕಂತೆ ನೀರಿನ ಪ್ರಮಾಣವನ್ನು ತಗ್ಗಿಸುತ್ತ ಬಂದು, ಕೊನೆಗೆ ಒಂದು ಪೌಂಡಿನಷ್ಟು ಮಿಶ್ರಣದಲ್ಲಿ $1\frac{1}{3}$ ಔನ್ಸು ಹಾಲು ಸೇರುವಂತೆ ಮಾಡಬಹುದು. ಆದರೆ, ಹಾಲಿನ ಪ್ರಮಾಣವು ಯಾವಾಗಲೂ ದಿನಕ್ಕೆ ಪೌಂಡಿಗೆ 2 ಔನ್ಸುಗಳಿಗೆ ಮೀರಿಹೋಗಲೇಬಾರದು. ಈ ಪ್ರಮಾಣದ ಅಪ್ಪಟ ಹಾಲಿನಲ್ಲಿ ಮಗುವಿನ ಮೈಗೆ ಬೇಕಾದ ಪುಷ್ಟಿಜನಕವೂ, ಕೊಬ್ಬೂ, ಸಕ್ಕರೆಯೂ ದೊರೆಯುವುದು. ಹಾಲಿನ ಪ್ರಮಾಣವನ್ನು ಹೆಚ್ಚಿಸುತ್ತ ಬಂದ ಹಾಗೆಲ್ಲ ಹಾಲುಸಕ್ಕರೆಯನ್ನು ಕ್ರಮಕ್ರಮವಾಗಿ ಕಡಿಮೆಮಾಡಬೇಕು. ಏಕೆಂದರೆ, ಹಾಲಿನಲ್ಲಿರುವ ಸಕ್ಕರೆಯ ಭಾಗವೂ, ನಾವು ಮಿಶ್ರಮಾಡುವ ಸಕ್ಕರೆಯೂ ಸೇರಿ ನೂರಕ್ಕೆ ಆರು ಪಾಲಿಗಿಂತ ಮೀರಬಾರದು. ಅಥವಾ ದಿನಕ್ಕೆ ಪೌಂಡೊಂದಕ್ಕೆ $\frac{1}{8}$ ಅಥವಾ $\frac{1}{6}$ ಔನ್ಸಿನಷ್ಟಿರಬೇಕು.

ಶಿಕ್ಷಿತೆಯಾಗಿ ಒಳ್ಳೇ ಅನುಭವವುಳ್ಳ ತಾಯಿಯರು ತಮ್ಮ ಮಕ್ಕಳ ಮೈಗೆ ಬೇಕಾದ ಆಹಾರವಸ್ತುಗಳ ಪ್ರಮಾಣವನ್ನು ತಿಳಿದುಕೊಂಡು, ಅದಕ್ಕೆ ತಕ್ಕಂತೆ ಪ್ರೋಟೀನ್, ಕೊಬ್ಬು ಕಾರ್ಬೋಹೈಡ್ರೇಟ್ ಇವುಗಳನ್ನು ಸರಿಪಡಿಸಿಕೊಳ್ಳಬಲ್ಲರು.

ಹೀಗೆ ಕೃತ್ರಿಮವಾದ ಹಾಲನ್ನು ತಯಾರಿಸುವುದರಲ್ಲಿ, ಅಪ್ಪಟವಾದ ಹಾಲು ತಕ್ಕಷ್ಟು ಪ್ರಮಾಣಕ್ಕೆ ಬಂದೊಡನೆ, ಆ ಹಾಲನ್ನು ಮಗುವಿಗೆ ನಾಲ್ಕು ಘಂಟೆಗಳಿಗೊಮ್ಮೆ, ಒಂದೊಂದು ಸಲಕ್ಕೆ 2 ರಿಂದ 8 ಔನ್ಸುಗಳಿಗೆ ಮೇಲ್ಪಡದಂತೆ ಕೊಡಬಹುದು. ದಿನಕ್ಕೆ ಎಂದರೆ 24 ಘಂಟೆಗಳ ಕಾಲಕ್ಕೆ 32 ಔನ್ಸುಗಳಿಗೆ ಮೀರಿ ಹೋಗಬಾರದು.

ಹುಟ್ಟಿದುದು ಮೊದಲು ಒಂದು ವರ್ಷದವರೆಗೆ ಒಳ್ಳೇ ಆರೋಗ್ಯವುಳ್ಳ ಗಂಡುಮಗುವಿನ ಸರಾಸರಿ ತೂಕವೆಷ್ಟಿರಬೇಕೆಂಬುದನ್ನು ಇದರಡಿ ಕೊಟ್ಟಿದೆ.

ತಿಂಗಳು.	ಪೌಂಡು.
ಆಗಲೇ ಹುಟ್ಟಿದ ಮಗುವಿನ ತೂಕ	6.8
ಮೊದಲನೆಯ ತಿಂಗಳಲ್ಲಿ	7.4
ಎರಡನೆಯ ತಿಂಗಳಲ್ಲಿ	8.4
ಮೂರನೆಯ ತಿಂಗಳಲ್ಲಿ	9.6
ನಾಲ್ಕನೆಯ ತಿಂಗಳಲ್ಲಿ	10.8
ಐದನೆಯ ತಿಂಗಳಲ್ಲಿ	11.8
ಆರನೆಯ ತಿಂಗಳಲ್ಲಿ	12.4
ಏಳನೆಯ ತಿಂಗಳಲ್ಲಿ	13.4
ಎಂಟನೆಯ ತಿಂಗಳಲ್ಲಿ	14.4
ಒಂಭತ್ತನೆಯ ತಿಂಗಳಲ್ಲಿ	15.8
ಹತ್ತನೆಯ ತಿಂಗಳಲ್ಲಿ	16.8
ಹನ್ನೊಂದನೆಯ ತಿಂಗಳಲ್ಲಿ	17.8
ಹನ್ನೆರಡನೆಯ ತಿಂಗಳಲ್ಲಿ	18.5

ಸಾಧಾರಣವಾಗಿ ಮಗು ಹುಟ್ಟಿದ ಕೆಲವು ದಿನಗಳೊಳಗಾಗಿ ಅದರ ಮೈತೂಕವು ಸ್ವಲ್ಪಮಟ್ಟಿಗೆ ತಗ್ಗುವದುಂಟು.

ಆರೋಗ್ಯಚಂದ್ರಿಕೆ.

ಶಂಕರ ಕಾಲೇಜದ ವಿದ್ಯಾರ್ಥಿಗಳ ಪರೀಕ್ಷೆಯ ಪರಿಣಾಮವು.

ಈ ವರ್ಷ ನಮ್ಮ ಕಾಲೇಜದ ವತಿಯಿಂದ ಕಲ್ಕತ್ತಾ ಯೂನಿವರ್ಸಿಟಿಯ ಪರೀಕ್ಷೆಗೆ ಕುಳಿತ ೯ ಜನರಲ್ಲಿ ಕೆಳಗೆ ಬರೆದ ೬ ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ಸಾಹಿತ್ಯಮಧ್ಯಮದಲ್ಲಿ

೧. ಕಾಶೀನಾಥ ಶಾಸ್ತ್ರೀ ಹರೇಗಲ್ಲು.
೨. ಶಂಭುಲಿಂಗ ಶರ್ಮಾ ಭೀಮನಹಳ್ಳಿ.
೩. ವೀರಭದ್ರ ಶರ್ಮಾ ಅಮರಾಪುರ.

ಸಾಹಿತ್ಯಾದ್ಯದಲ್ಲಿ

೧. ಚನ್ನವೀರ ದೇವರು ತಾಳಿಕೋಟಿ.
೨. ಗುರುಶಾಂತ ದೇವರು ಶಹಪೂರು.
೩. ಚಂದ್ರಶೇಖರಯ್ಯ ಸುಣಕಲ್ಲ ಬಿದರಿ.

ವ್ಯಾಕರಣಾದ್ಯದಲ್ಲಿ

೧. ಸಿದ್ಧೇಶ್ವರ ನಾರಾಯಣಪೇಟೆ.

ತಾ|| ೧೨-೮-೨೯   ಸೆಕ್ರೆಟರಿ,
ಶಂಕರ ಕಾಲೇಜು ಯಾದಗಿರಿ.

ಶ್ರೀ ಪಂಚಾಚಾರ್ಯ ಎಲೆಕ್

ಸಯ್ಯಾಜಿರಾವ ರೋಡ್, ಮೈಸೂರ

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗ ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯುಗಳನ್ನು

ಮನೋಹರವಾದ

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂ

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರ
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸ
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋ
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋ
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆ
ಫೋ
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭ
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿ
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾ
ಗುರುದೀಕ್ಷಿಯನ್ನು ಧಾರಣಮಾಡಿ ಮೂರುಕೋಟಿ ಲಿಂಗ
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗು
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅ
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗ
ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂ

ಮ್ಯಾನೇಜರ್.—ಪ

ಸರ್ವೋತ್ತಮವಾ

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೧ನೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೧ನೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆ
ಮಾಹೇಶ್ವರ ದೀಕ್ಷಾವಿಧಿ ....
ಗೋತ್ರಸೂತ್ರಪಟ ೩ನೆಯ ಆವೃತ್ತಿ ....
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವ
ಬಸವಧ್ವಾಂತ ದಿವಾಕರ ....
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ
ವೀರಶೈವಾಚಾರವಿಧಿ ....
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ
ಸಂಕ್ಷಿಪ್ತ ಶಿವಪೂಜಾವಿಧಿ ೫ನೆಯ ಆವೃತ್ತಿ
ಶ್ರೀ ರೇಣುಕಾಚಾರ್ಯಶತಕಂ ....
ವಿವಾಹವಿಧಿ ....
ಪಂಚಾಚಾರ್ಯ ಪ್ರಭಾಕರ ....
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ
ವೀರಶೈವಮತಮೀಮಾಂಸಾ ....

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕ
ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರ

ಮ್ಯಾನೇಜರ್—ಪಂ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾಯ

ಯವರಿಗೂ, ಬೀರೂರಿನ ಡಾಕ್ಟರ್‌ರವರಿಗೂ, ದರೋಗರು ನರಸೋಜಿರಾಯರವರಿಗೂ ಸಂಗೀತವಿದ್ವಾನ್ ಸುಬ್ರಹ್ಮಣ್ಯರವರಿಗೂ ಮಹಾಸನ್ನಿಧಿಯಿಂದ ಫಲಪುಷ್ಪಹಾರಗಳು ಆಶೀರ್ವದಿಸಲ್ಪಟ್ಟು ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲಪೂರ್ವಕ ಸಭೆಯು ಬರಖಾಸ್ತುಮಾಡಲ್ಪಟ್ಟಿತು. ಅಷ್ಟರಲ್ಲಿಯೇ ಸ್ಥಳದ ದೊಡ್ಡ ಮನುಷ್ಯರಾದ ವೇ|| ಯಂ|| ವಿ|| ಸಾ||ಮರುಳುಸಿದ್ಧಯ್ಯನವರು ಬಿನ್ನಹಮಾಡಿದ್ದ ಮೇರೆಗೆ ತಮ್ಮ ಗೃಹಕ್ಕೆ ಜಗದ್ಗುರುಗಳವರನ್ನು ಬಿಜಯಮಾಡಿಸಿಕೊಂಡು ಹೋಗಲು ಇಸ್ತಕಬಾಲದೊಡನೆ ಬಂದು ಪ್ರಾರ್ಥಿಸಲು ಜಗದ್ಗುರುಗಳು ಅದನ್ನು ಅಂಗೀಕರಿಸಿ ಗುರುವಾರ ರಾತ್ರಿ 9 ಗಂಟೆಗೆ ಸದರಿಯವರ ಗೃಹಕ್ಕೆ ಮಂಗಲವಾದ್ಯ ಘೋಷದೊಡನೆ ದಯಮಾಡಿಸಿದರು ಇದೇಪ್ರಕಾರ ನಿತ್ಯವೂ ಒಬ್ಬರಂತೆ ತಮ್ಮ ತಮ್ಮ ಗೃಹಗಳಿಗೆ ಬಿಜಯಮಾಡಿಸಿಕೊಂಡು ಹೋಗಿ ಜಗದ್ಗುರುಗಳವರನ್ನು ಪಾದಪೂಜಾ ಕಾಣಿಕೆಗಳಿಂದ ಸೇವಿಸುತ್ತ ಆಸ್ಥಾನದಲ್ಲಿ ನಿತ್ಯವೂ ನಡೆಯುತ್ತಲಿರುವ ಪುರಾಣಶ್ರವಣವನ್ನು ಕೇಳಿ ಹಗಲಿರುಳು ಪಾದಸ್ತೋತ್ರವನ್ನು ಪಾರಾಯಣ ಮಾಡುತ್ತ ಧನ್ಯರಾಗುತ್ತಲಿರುವರು. ಇದರಂತೆ ಸುತ್ತಮುತ್ತಣ ಗ್ರಾಮದ ಭಕ್ತಮಹಾಜನಗಳು ತಮ್ಮ ಗ್ರಾಮಗಳಿಗೆ ಶ್ರೀ ಜಗದ್ಗುರುಗಳವರನ್ನು ದಯಮಾಡಿಸಿಕೊಂಡುಹೋಗಿ ತನುಮನಧನಗಳಿಂದ ಸೇವೆಯನ್ನು ಮಾಡಲು ಸಂಕಲ್ಪಿಸಿರುವರು. ಮಹಾಶಯರೇ! ಶ್ರೀ ಪಟ್ಟಾಧ್ಯಕ್ಷ ಚನ್ನಬಸವಶಿವಾಚಾರ್ಯಸ್ವಾಮಿಗಳವರು, ಮತ್ತು ಬೀರೂರಿನ ವೀರಶೈವಮಹಾಜನಗಳು, ಶ್ರೀ ರಂಭಾಪುರಿ ಜಗದ್ಗುರುಗಳವರನ್ನು ಅತ್ಯಂತ ವೈಭವದೊಡನೆ ಪಾದಸೇವಾ ಮಾಡುತ್ತಲಿರುವುದು ಪ್ರೇಕ್ಷಣೀಯವಾಗಿಯೂ, ಪ್ರತಿಯೊಬ್ಬ ಲಿಂಗಧಾರಿಯಾದ ವೀರಶೈವನಿಗೆ ಹೃದಯದಲ್ಲಿ ಗುರುಭಕ್ತಿಯನ್ನುಂಟುಮಾಡುವಂಥಾದ್ದಾಗಿಯೂ ಇರುತ್ತದೆ ಈ ಅನುಕರಣೀಯಮಾರ್ಗವನ್ನು ಪ್ರತಿಯೊಬ್ಬರೂ ಅನುಸರಿಸಿ ಧನ್ಯರಾಗಲೆಂದು ಬೇಡುವ

ಎಲ್. ಸಿ. ಶಿವಲಿಂಗಪ್ಪ ಮಾಸ್ಟರ್,
ಬೀರೂರು.

ಕೇದಾರ ಸಿಂಹಾಸನಮ್.

ಲೇಖಕರು—ಪಂ|| ಶ್ರೀ ಚಿನ್ನನಶಿವಾಚಾರ್ಯರು
ಪುರಗಿರಿ ಬೃಹನ್ಮಠ.
(ಕಳೆದವಾರದಿಂದ ಮುಂದಕ್ಕೆ ಸಾಗಿದ್ದು.)

ಜಗದ್ಗುರುಗಳು "ಶ್ರೀ ಕೇದಾರನಾಥಮಂದಿರದ ಸಲುವಾಗಿ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸಿ ಕಾರ್ಯವು ಸುರುವಾದಾಗಲೇ ಬರಬೇಕೆಂದು ನಮ್ಮ ಸಂಕಲ್ಪವಿತ್ತು. ಇಂದಿಗೆ ನಮ್ಮ ಸಂಕಲ್ಪವು ಸಫಲವಾಯಿತು. ಆದ್ದರಿಂದ ಈ ಕಾರ್ಯದ ನಕಾಶೆಯನ್ನು ತೆಗೆದು ಫೌಂಡೇಶನ್ (ಪಾಯ) ಹಾಕಿ ಕಟ್ಟಡವನ್ನಾರಂಭಿಸಲು ಶಿಲಾಸ್ಥಾಪನ ಮಾಡಿಸಲು ಇಂಜನೀಯರರಿಗೆ ತಿಳಿಸಿದ್ದಾಯಿತು. ಇನ್ನು ಮುಂದೆ ನಮಗೆ ಇಲ್ಲಿಗೆ ಬರಲು ಯಾವ ಅಭ್ಯಂತರವೂ ಇಲ್ಲ. ಶ್ರೀ ಕೇದಾರೇಶ್ವರನು ನಮ್ಮ ಸತ್ಸಂಕಲ್ಪವನ್ನು ನೆರವೇರಿಸಿದನು. ಈತನ ಮಹಿಮೆಯು ಅಗಾಧವಾದದ್ದು." ಎಂದು ಅಪ್ಪಣೆಕೊಡಿಸಿದರು. ಜಗದಾಚಾರ್ಯ ಯೋಗಿ ಸಾರ್ವಭೌಮರ ವಚನಾಮೃತವನ್ನು ಸರ್ವರೂ ಕೇಳಿ ಆಹಾ! ಯೋಗಿಜನ ಮಹಾನುಭಾವರ ಸಂಕಲ್ಪಗಳು ಸಫಲಗಳಾಗುವವು. ಎಂದು ಜಗದ್ಗುರುಗಳ ಪ್ರಶಂಸೆ ಮಾಡಿದರು. ತರುವಾಯ ಸರ್ವರೂ ತಮ್ಮ ತಮ್ಮ ಶಯನಸ್ಥಾನಗಳಿಗೆ ತೆರಳಿದರು. ಆಗ್ಗೆ ಶ್ರೀ ಜಗದ್ಗುರುಗಳು ಮಠದ ಬಹಿರ್ದ್ವಾರದಲ್ಲಿ ಬಂದು ಉತ್ತರದಿಕ್ಕಿನಲ್ಲಿರುವ ಕೈಲಾಸಪರ್ವತದ ದೃಶ್ಯವನ್ನು ತೋರಿಸಿದರು. ಚಂದ್ರನ ಚಂದ್ರಿಕೆಯು ಇದ್ದದರಿಂದ ರಾಮನು ರಾಮನಂತೆ, ರಾವಣನು ರಾವಣನಂತೆ, ಸಾಗರವು ಸಾಗರದಂತೆ ಹೇಗೋ ಹಾಗೆ ಕೈಲಾಸದ ಶೋಭೆಯು ಕೈಲಾಸದ ಶೋಭೆಯೇ ಆಗಿತ್ತು. ಸ್ಫಟಿಕಪರ್ವತವೆನ್ನಬಹುದು ಅಥವಾ ರಜತಪರ್ವತವೆನ್ನಬಹುದು. ಮತ್ತು ಇದಕ್ಕೇನೇ ಭರತಕೂಟವೆಂದೆನ್ನುತ್ತಾರೆ. ಹೀಗೆ ಕೈಲಾಸಪರ್ವತವನ್ನು ಎಷ್ಟು ವರ್ಣಿಸಿದರೂ ಮುಗಿಯದೆ ಕಡೆಗೆ ಕೇದಾರೇಶನ ಮಹಿಮೆಯನ್ನು ಕೊಂಡಾಡುತ್ತ ಶಯನಮಾಡಿದೆವು. ಉದಯ ಸಮಯದಲ್ಲಿ ಸ್ವಪ್ನದಲ್ಲಿ ಎಷ್ಟೋ ಮಹತ್ವಬೋಧಕ ವಿಷಯಗಳು ಸಮುಪಸ್ಥಿತವಾದವು. ಅಸ್ತು! ಅನಂತರ ಜಗದ್ಗುರುಗಳು ದೃಶ್ಯಗಳ ಸಂದರ್ಶನಕ್ಕೆ ಪಾಂಡಿ ಜನರ ಸಂಗಡ ಕೊಟ್ಟುಕಳುಹಿಸಿದರು. ಪೂರ್ವದಿಕ್ಕಿನ ಹಾದಿಯನ್ನು ಹಿಡಿದು ಹೊರಟೆವು. ಸ್ವಲ್ಪ ದೂರ ಹೋಗುವದರೊಳಗಾಗಿ ಪೂರ್ವಪರ್ವತ ಗುಹೆಯೋ ಹುಟ್ಟಿರುವ ಸರಸ್ವತೀ ನಾಮಕ ಗಂಗೆಯನ್ನು ದರ್ಶನಮಾಡಿ ಪುನಃ ಅಲ್ಲಿಂದ ಮೇಲುಭಾಗದಲ್ಲಿ 1-2 ಫರ್ಲಾಂಗದವರೆಗೂ ದೊಳಗೆ ಹೋದೆವು. ಅಲ್ಲಿ ಚಂದ್ರಶಿಲಾ ಎಂಬ ಬೃಹಚ್ಛಿ ಇದ್ದಿತು. ಈ ಶಿಲೆಯಲ್ಲಿ ಕೈಲಾಸಪರ್ವತಪ್ರವೇಷ್ಟುಗಳು ವಾರಂಗಿನ ತ್ರಿಶೂಲಜಸ್ಮದ ಲೇಖವನ್ನು ಬರೆದು ಹೋ ರೆಂದು ಹೇಳುತ್ತಾರೆ. ಈ ಲೇಖವು ಶಿಲೆಯ ಕೆಳಗಿನ ಲ್ಲಿದೆ. ಎಷ್ಟೋ ತ್ರಿಶೂಲ ಲೇಖಗಳುಂಟು. ಅಲ್ಲಿಂದ ಹೊರಡುವ ಸಂದರ್ಭದಲ್ಲಿಯೇ ಜಗದ್ಗುರುಗಳು 8-10 ಡನೆ ಅಲ್ಲಿಗೆ ದಯಮಾಡಿಸಿ ನಮ್ಮನ್ನು ಮುಂದಕ್ಕೆ ಯ್ದರು. 1-2 ಫರ್ಲಾಂಗುಗಳವರೆಗೂ ಪುನಃ ಭರ್ಪದಲ್ಲಿ ವದರೊಳಗಾಗಿ ಉತ್ತಮವಾದ ಬಯಲುಸಮತಲ ಪ್ರ ಪ್ರಾಪ್ತವಾಯಿತು. ಇಲ್ಲಿ ಕುಳಿತುಕೊಂಡೆವು ಅಲ್ಲಿ ಮನಸ್ಸಿಗೆ ಆದ ಆನಂದವನ್ನು ವರ್ಣಿಸಲು ಸಾಧ್ಯವಿಲ್ಲ. ನಾನಾವಿಧವಾದ ಸೌಗಂಧಿಕ ಪುಷ್ಪಗಳು ಪತ್ರಗಳು ರಾಜಿ ದ್ದವು. ಅವುಗಳ ಸುವಾಸನೆಯನ್ನು ಆಘ್ರಾಣಿಸಿ ಆನಂದ ಪುನಃ ಮುಂದಕ್ಕೆ 3 ಫರ್ಲಾಂಗ ಹೋಗುವದರೊಳಗಾಗಿ ದಿಕ್ಕಿನಿಂದ ಬಂದಿರುವ ಸ್ವರ್ಗದ್ವಾರಾ ಗಂಗಾತೀರದಲ್ಲಿ ಅಲ್ಲಿ ಒಂದು ಋಷ್ಯಾಶ್ರಮವು ರಾಜಿಸುತ್ತಿತ್ತು. ಅ ಮುಂದಕ್ಕೆ ಹೋದಬಳಿಕ ಸ್ವರ್ಗದ್ವಾರಾ ಗಂಗೆಯ ಯನ್ನೂ ನೋಡಿದೆವು. ಬಳಿಕ ಅಲ್ಲಿಂದ ಹೊರಟು ಸ್ವರ್ಗಾ ಹಿಣೀ (ಮಹಾಪಥ) ದಲ್ಲಿ ಬಂದೆವು. ಇಲ್ಲಿಗೆ ಬರುವ ಗಾಗಿ 2-3 ಮೈಲು ಮೇಲಾಗಿತ್ತು. ಆದರೆ ಈ ಬೀ ಉಚ್ಚತರವಾಗಿಯೂ ಭರ್ಪಮಯವಾಗಿಯು ಇತ್ತೆನ್ನು ಮರಿಯಲಾಗದು.

ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿ ಈಶಾನ್ಯಕೋ ಬೀಳುತ್ತಿರುವ ಭೃಗುಧಾರೆಯನ್ನು ನೋಡಿದೆವು. ಇಲ್ಲಿ ಕಾಲದಲ್ಲಿ ಜನರು ಪ್ರಾಣತ್ಯಾಗವಂ ಮಾಡುತ್ತಿದ್ದರು. ಈ ಯಲ್ಲಿ ಭೃಗುಮುನಿಯು ತಪಸ್ಸು ಮಾಡಿದ್ದನು. ಈ ರೆಯು ಬಹು ಎತ್ತರಪ್ರದೇಶದಿಂದ ಬೀಳುವದು. ಮೇಲುಭಾಗದಲ್ಲಿ ಹನುಮಾನ್ ಟೋಪಿಯು ಇರುವುದು ಜಗದ್ಗುರುಗಳು ದರ್ಶನಮಾಡಿಸಿದರು. ಇಲ್ಲಿ ದೊಡ್ಡ ಪ್ರದೇಶವಿದೆ. ಮತ್ತು ಇಲ್ಲಿ ಪ್ರೇಕ್ಷಕರಿಗೆ ಬಹು ಆನಂದ ವುದು. ಪೂರ್ವ, ಉತ್ತರದಿಕ್ಕಿನ ಪರ್ವತಮಧ್ಯದಲ್ಲಿಯೇ ರೋಹಿಣೀನಾಮಕಪಥವಿದೆ. ಇಲ್ಲಿಂದಲೇ ಸ್ವರ್ಗಕ್ಕೆ ವರು. ಈ ವೀಧಿಯಿಂದ ಹೋದರೇ ಸೀದಾ ಉ ಹೋಗಿ ಭರತಕೂಟವೆಂಬ ಕಾಂಚನಾದ್ರಿಯನ್ನು ವನು. ನಾವು ಕೂಡ ಭಗಪದಲ್ಲಿ 1.2 ಮೈಲಿನವರೆಗೆ ದ್ದೆವು. ಬಹಳ ಮನೋಹರವಾದ ಪ್ರದೇಶಗಳನ್ನು ಅಲ್ಲಿಂದ ತಿರುಗುವ ಮನಸ್ಸೇ ಆಗಲಿಲ್ಲ. ಮತ್ತು ದೊಡ್ಡ ಪರ್ವತದ ಮೇಲಿಂದ ಕಲ್ಲುಗಳು ಧಪ್ಪಧಪ್ಪನೇ ಬೀಳುವದನ್ನು ಇಲ್ಲಿಂದಲೇ ನೋಡುತ್ತಿದ್ದೆವು. ಅದ್ದ ಸೀದಾ ಪರ್ವತದ ಮೇಲೆ ಹೋಗಲು ಸಾಧ್ಯವಾಗಲಿಲ್ಲ. ಭರ್ಪದಿಂದ ತುಂಬಿರುವದರಿಂದ ಚಳಿಯಂತು ಸಹಿಸಲಸಾಧ್ಯ ರುವದು. ನಾವು ಉತ್ತರಶಿಖಿಂದ್ವೆಳಗಿರುವ ಪ್ರದೇಶವಂ ದೆವು. ಪೂರ್ವದಿಕ್ಕಿನಿಂದ ಬಂದಿರುವ ಸ್ವರ್ಗದ್ವಾರಾನದಿ ದಾಟಬೇಕು. ಆದರೆ ಇಲ್ಲಿ ಚರ್ಮದ ಬೂಟ್ಸುಗಳನ್ನು ಕೊಳ್ಳುವದಿಲ್ಲ. ಬರಿಗಾಲಿನಿಂದಲೇ ಹೋಗಬೇಕಾಗು ಸ್ವಲ್ಪ ದೂರದಲ್ಲಿ ಹೋದರೆ ಶುಭ್ರವಾದ ಭರ್ಪಗಳು ಅಪ್ಪ ದವಾಗಿ ದೊಡ್ಡ ಕಪ್ಪುಶಿಲೆಗಳಂತೆ ತೋರುವವು ಒಡೆದರೆ ನಂತೆ ಪೆಣಿಕಿ ಬರುವದು. ಈ ಪ್ರದೇಶವು ಮೊದಲು ಭೂಮಿಯುತ್ತಂತೆ ಕೆಳಗೂ ಮೇಲೂ ಆಗುತ್ತ ಆಗುತ್ತ ದೊಡ್ಡ ಪರ್ವತವಾಗಿದೆ. ಇದಕ್ಕೆ (ಉಬಳತಿಸಾಗರ) ಅಕ್ಕಿಯು ಕುದ್ದು ಕುದ್ದು ಮೇಲು ಕೆಳಗೆ ಆಗುವಂತೆ ಕಲ್ಲು ಮಣ್ಣು ಭರ್ಪಗಳು ಮೇಲುಕೆಳಗೆ ಆಗುವದರಿಂ ಹೆಸರು ಬಂದಿದೆ. ಇಲ್ಲಿಂದ ಮೇಲುಭಾಗದಲ್ಲಿ ಬ್ರಹ್ಮಗುಹೆ ಇರುತ್ತದೆ. ಇಲ್ಲಿ ಬ್ರಹ್ಮನು ಯಜ್ಞವನ್ನು ಮಾಡಿ ಹಾಗೂ ಪಾಂಡವಾದಿಗಳು ಯಜ್ಞಮಾಡಿರುವರು. ಮತ್ತು ಡು ವರ್ಷಕ್ಕೊಂದಾವರ್ತಿ ಕುಂಭ ಮೇಲವಾಗುವಾಗ ಇಲ್ಲಿ ರಮಂದಿರವತಿಯಿಂದಲೂ ವಿರಜಾಲನ ಹೋಮವಾಗುತ್ತ 1 ಫರ್ಲಾಂಗದಲ್ಲಿ ಉತ್ತರದಿಕ್ಕಿನಲ್ಲಿ (ಚುರಾವಾಡಿಲಾವ) ಮನೋಹರವಾದ ಮುಕ್ಕಾಲುಮೈಲು ಸುತ್ತಳತೆಯುಳ್ಳ ವರವಿರುವದು. ಸುತ್ತಲು ಕಮಲುಗಳು ವಿರಾಜಿಸು ಇಲ್ಲಿ ದೇವತೆಗಳು ವಿನೋದಿಸುವರಂತೆ ಮತ್ತು ಬ್ರ ಯಿಂದ ಒಂದು ಸಣ್ಣ ಧಾರೆಯು ಉದಯಿಸಿ ಈ ಸರೋ ಬರುವದು. ಈ ಸರೋವರದ ದಡದಲ್ಲಿರುವ ಒಂದು ಗುಹೆ ಒಂದು ಗಜ ಪ್ರಮಾಣವಾದ ಒಂದು ಧಾರೆಯು ಹೊರಟು ದಾಕಿನಿ ಗಂಗೆಯು ಆವಿರ್ಭವಿಸಿರುವಳು, ಮುಂದೆ ಪಶ್ಚಿಮ ಪರ್ವತದಿಂದ ಹೊರಟು ಪೂರ್ವಮುಖವಾಗಿ ಬರುವ ಮ ಯು ಮಂದಾಕಿನಿಯಲ್ಲಿ ಕೂಡುವದು. ಇತ್ತ ಪೂರ್ವದಿ ಸ್ವರ್ಗದ್ವಾರಾಗಂಗೆಯು ಸಮ್ಮಿಲಿತವಾಗಿರುವದು, ಈ ಕಿನೀ ಸ್ವರ್ಗದ್ವಾರಾಸಂಗಮದಲ್ಲಿ ಯಾತ್ರಿಕರು ಸ್ನಾ ತ್ತಿರುವರು. ಆದರೆ ಸ್ನಾನಮಾಡುವದು ಬಹುಕಷ್ಟವಾಗಿ ತ್ತದೆ. ಬಳಿಕ ಮಂದಾಕಿನಿಯು ಮಧುಗಂಗಾ ಸ್ವರ್ಗದ್ವಾ ಗಾಸಹಿತಳಾಗಿ ಮುಂದೆ ಹೋಗುವುದರೊಳಗೆ ಪಶ್ಚಿಮಪ ಪೂರ್ವಮುಖವಾಗಿ ಆವಿರ್ಭವಿಸಿದ ಕ್ಷೀರಗಂಗೆಯು ಸಂ ಗುವುದು. ಇನ್ನು ನಾವು ಸ್ವರ್ಗಾರೋಹಿಣೀಮಹಾ ಹಿಂದಿರುಗಿದೆವು. ಜಗದ್ಗುರುಗಳು ಮುಂದಕ್ಕೆ ಇನ್ನೂ

ದವರೆಗೂ ಹೋಗಿ ಆತ್ಮಾನಂದವಂಪಟ್ಟು ಬಂದರು. ಜಗದ್ಗುರುಗಳು ಬಹುದೂರಪ್ರದೇಶದವರೆಗೂ ಈ ಮುಂಚೆ ಹೋಗಿದ್ದರು. ಮತ್ತು ಇಲ್ಲಿಯ ಈಗಿನ ವಾಹಡಿಜನಗ ಯದಿದ್ದ ಎಷ್ಟೋ ಪ್ರದೇಶಗಳನ್ನು ನೋಡಿದ್ದುದನ್ನು ವಿವರಿಸಿದರು. ಮತ್ತು ಈ ಮುಂಚೆ ಹೇಳಿದ ಉಬಳತ ದಲ್ಲಿ ವಜ್ರಾಭ್ರಕ, ಸುವರ್ಣ, ರತ್ನ, ಸ್ಫಟಿಕ ಮುಂತಾದ ಪದಾರ್ಥಗಳು ಸಿಗುತ್ತವೆ. ಅಲ್ಲದೇ ಇಲ್ಲಿ ಸಿಗುವ ಸ್ಫಟಿಕವಜ್ರಾಭ್ರಕಗಳನ್ನೂ ಪ್ರತ್ಯಕ್ಷವಾಗಿ ತೋರಿಸಿದರು. ನಾವು ಹಿಂತಿರುಗಿ ಪೂರ್ವಪರ್ವತಸಾಮಪ್ರದೇಶಕ್ಕೆ ಬಂದೆವು. ಅಷ್ಟರೊಳಗೆ ಜಗದ್ಗುರುಗಳೂ ಹಿಂತಿರುಗಿ ಮಠಕ್ಕೆ ಬಂದರು, ನಾವು ವಸತ್ರ ಭೈರವದರ್ಶನವಂ ಮಾಡಿ ಕೆಳಗೆ ಇಳಿದು ತೀರದಲ್ಲಿರುವ ರೇತಃಕುಂಡೋದಕದಿಂದ ಆಚಮನ ಮಾಡಿದೆವು. ಇಲ್ಲಿ ಪಾರದವು ಹುಟ್ಟುತ್ತದೆ. ಮತ್ತು ಇಲ್ಲಿ ವೇನಂದರೆ "ಓಂ ನಮಃ ಶಿವಾಯ" ಎಂದುಚ್ಚರಿಸಿದರೆ ದಾಕಾರವಾಗಿ ಗುಳ್ಳೆಗಳು ಕೆಳಗಿಂದ ಮೇಲಕ್ಕೆ ಬರುವವು. ಅಲ್ಲಿಂದ 1.2 ಫರ್ಲಾಂಗದಲ್ಲಿ ಸರಸ್ವತೀ ತೀರದಲ್ಲಿ ಹಂಸಕುಂಡ ವನ್ನು ದರ್ಶನಮಾಡಿದೆವು. ಈ ಹಂಸಕುಂಡವು ಬ್ರಹ್ಮನು ಹಂಸ ರೂಪವಾಗಿ ರೇತಃಪಾನವನ್ನು ಮಾಡಿದುದರ ಸ್ಮಾರಕವಾಗಿದೆ. ಹತ್ತಿರ ಶ್ರೀ ಕೇದಾರಪೀಠಾಧಿಪತಿಗಳ ಪ್ರಾಚೀನಸಮಾಧಿಗಳು ಬಹಳವಾಗಿರುವವು. ಹಾಗೂ ಒಂದೇ ಶಿಲೆಯಲ್ಲಿ ಚಿತ್ರವಿಚಿತ್ರವಾಗಿ ನಿರ್ಮಿಸಲ್ಪಟ್ಟು ಬಹು ಮನೋಹರವಾಗಿರುವವು ಬಹು ದೊಡ್ಡ ಮಂದಿರಗಳಿದ್ದರೂ ಈ ಪೂರ್ವದಲ್ಲಿ ಭೂಕಂಪವಾದಾಗ್ಗೆ ಎಷ್ಟೋ ಸಮಾಧಿಗಳು ಭೂಮಿಯಲ್ಲಿ ಮುಳುಗಿರುವವು ಗಳೂ ಇಮಾರತಿಗಳೂ ಅಸ್ತವ್ಯಸ್ತವಾಗಿ ಬಗ್ಗಿರುವವು. ಇಲ್ಲಿ ೧೦೮ ಸಮಾಧಿಗಳು ಆಗಿರುವವು ಮಂದಾಕಿನೀ ಸ್ವರ್ಗದ್ವಾರಾ ತೀರಗಳಲ್ಲಿಷ್ಟು ಸಮಾಧಿಗಳು ಈಗಲೂ ರಂಜಿಸುತ್ತಲಿವೆ. ಇಲ್ಲಿ ಯಾತ್ರಿಕರು ತಮ್ಮ ಪೂರ್ವಜನರ ಅಸ್ತಿಗಳನ್ನು ಚೆಲ್ಲುವರು. ಪಿಂಡದಾನವನ್ನು ಮಾಡುವರು ಜಾತಕ ಪತ್ರಗಳನ್ನು ಚೆಲ್ಲುವರು ಅಲ್ಲಿಂದ ಮಠಕ್ಕೆ ಬಂದು ತಲ್ಪಿದೆವು.

(ಸಶೇಷ.)

ಬಸವೇಶ್ವರ ಮೂರ್ತಿಭಂಗ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕಿನಲ್ಲಿ ಉಚ್ಚಂಗಿದುರ್ಗ ಗ್ರಾಮವಿರುತ್ತದೆ, ಇದು ಕೋಟಿ ಪ್ಯಾಟಿ ಎಂಬದಾಗಿ ಎರಡು ಭಾಗವಾಗಿರುತ್ತದೆ. ಕೋಟೆಯಲ್ಲಿ ಶ್ರೀ ಮಳೇಬಾಗಿಲ ಬಸವೇಶ್ವರ ದೇವಸ್ಥಾನವಿರುತ್ತದೆ. ದೇವಸ್ಥಾನದ ಸಮೀಪದಲ್ಲಿ ಕೆಲವು ದಿವಸಗಳ ಮುಂಚೆ ಜನಗಳು ವಾಸಮಾಡಿಕೊಂಡಿರುತ್ತಿದ್ದರು. ಆದರೆ ಈಚೆಗೆ ಅಲ್ಲಿ ಜನಗಳು ವಾಸಮಾಡುವುದಕ್ಕೆ ಅನಾನುಕೂಲವಾದ್ದರಿಂದ ಬೇರೆಕಡೆಗೆ ಹೊರಟುಹೋದರು. ಸದರಿ ದೇವಸ್ಥಾನದ ಮೇಲ್ಗಡೆಯಲ್ಲಿ ಗಚ್ಚಿನಿಂದ ನಿರ್ಮಾಣಮಾಡಿದ ಬಹುಸುಂದರವಾಗಿದ್ದ ಬಸವಣ್ಣಗಳ ಮೂರ್ತಿಗಳನ್ನು ಯಾರೋ ದುರಾತ್ಮರು ಸ್ವಲ್ಪದಿವಸದ ಮುಂಚೆ ಭಂಗಪಡಿಸಿರುತ್ತಾರೆಂಬ ವಿಷಯವನ್ನು ತಿಳಿಸಲು ವಿಷಾದಪಡಬೇಕಾಗಿದೆ. ಈ ಗ್ರಾಮವು ದಾವಣಗೇರಿಗೆ 10 ಮೈಲು ಫಾಸಲೆಯಲ್ಲಿರುವುದರಿಂದ ಹಿಂದೂಮುಸಲ್ಮಾನರ ಸಂಸರ್ಗವೇ ಇಲ್ಲಿಯೂ ತಲೆದೋರಿದಹಾಗೆ ಕಾಣುತ್ತದೆ. ಕಾಲವೈಚಿತ್ರ್ಯಕ್ಕೆ ಯತ್ನವಿಲ್ಲ.

ಪ್ರತ್ಯಕ್ಷದರ್ಶಿ.

ಎಳೆಮಕ್ಕಳ ಆಹಾರಕ್ರಮ.

ಪ್ರಾರಂಭದವೆಳೆಯಲ್ಲ ಒಳ್ಳೆಯ ಅಭ್ಯಾಸವನ್ನು ಮಾಡಿದರೆ ಮುಂದೆ ಬಹಳ ಮೇಲುಂಟಾಗುವುದು. ಸಾಮಾಜಿಕ ದೃಷ್ಟಿಯಿಂದ ನೋಡಿದರೂ, ಮಗುವು ದೊಡ್ಡದಾದಮೇಲೆ ಯಶಸ್ಸನ್ನು ಸಂಪಾದಿಸುವಂತೆ ಮಾಡಲು ಅದಕ್ಕೆ ಬಾಲ್ಯದಲ್ಲಿಯೇ ತಕ್ಕ ಶಿಕ್ಷಣವನ್ನು ಕೊಡಬೇಕು.

ಮನಸ್ಸಿಗೆ ಪದಾರ್ಥಗಳಮೇಲೆ ಸಂಪೂರ್ಣವಾದ ಅಧಿಕಾರವಿರುವುದೆಂದು ಅನೇಕರ ಅಭಿಪ್ರಾಯವಿದ್ದರೂ, ಮನಸ್ಸು ಮತ್ತು ಶರೀರದಮೇಲೆ ಆರೋಗ್ಯಭಾಗ್ಯದಿಂದ ಕೂಡಿದ ದೇಹಕ್ಕಿರುವ ಅಧಿಕಾರವು ನಮ್ಮ ವೈದ್ಯರಿಗೆ ಚೆನ್ನಾಗಿ ತಿಳಿದಿರುವುದು. ದೇಹಾರೋಗ್ಯವು ಹೆಚ್ಚುವುದಕ್ಕೆ, ದೇಹಪೋಷಣೆಯೇ ಅತಿಮುಖ್ಯವಾದುದು.

ಶಿಶುವಿಗೆ ಎದೆಹಾಲೇ ಅತ್ಯುತ್ತಮವಾದ ಆಹಾರವೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತುಂಟು. ಆದರೂ ಶಿಶುವಿಗೆ ತಾಯಿಯ ಹಾಲನ್ನು ಸೇವಿಸಲು ಅವಕಾಶಕೊಡದೆ ಪ್ರಕೃತಿದೇವಿಯ ನಿಯಮಕ್ಕೆ ವಿರೋಧವಾಗಿ ನಡೆಯುತ್ತಿರುವೆವು.

ಕೆಲವು ತಾಯಿಯರಿಗೆ ತಮ್ಮ ಮಕ್ಕಳನ್ನು ಪೋಷಿಸುವ ಶಕ್ತಿಯೇ ಇಲ್ಲವೆಂಬ ಅಭಿಪ್ರಾಯವು ವಿಶೇಷವಾಗಿ ವೈದ್ಯರಲ್ಲಿರುವ, ಇತರರಲ್ಲಿಯೂ ಕಂಡು ಬರುತ್ತಿರುವುದು. ಆ ಅಭಿಪ್ರಾಯವು ಸರಿಯಲ್ಲವೆಂದು ತೋರಿಸುವುದೇ ಈ ಲೇಖನದ ಮುಖ್ಯೋದ್ದೇಶವು. ಮಿನಿಯಾಪೋಲಿಸ್ ಎಂಬ ಸ್ಥಳದಲ್ಲಿ, ಎದೆಹಾಲಿನ ವಿಷಯವನ್ನು ಕುರಿತು ಶೋಧನೆಮಾಡಿ, ಡಾಕ್ಟರ್ ಸೆಡ್ಗ್ವಿಕ್ ಎಂಬುವರು, ಶೇಕಡಾ ತೊಂಭತ್ತು ಮಂದಿ ತಾಯಿಯರು ತಮ್ಮ ಮಕ್ಕಳಿಗೆ ಎದೆಹಾಲನ್ನೇ ಮುಖ್ಯವಾದ ಆಹಾರವಾಗಿ ಕೊಡಲು ಸಮರ್ಥರಾಗಿರುವರೆಂದು ಸೂಚಿಸಿರುವರು.

ಮತ್ತು ಎದೆಹಾಲಿನ ಗುಣವು ಸಂಪೂರ್ಣವಾಗಿ ಕಾಣಬೇಕಾದರೆ, ಒಂದಾವರ್ತಿ ಹಾಲು ಕೊಡುವುದಕ್ಕೆ ಆರಂಭಿಸಿದಾಗ, ಸಂಪೂರ್ಣವಾಗಿ ಸ್ತನದೊಳಗಿನ ಹಾಲೆಲ್ಲವೂ ಹೊರಕ್ಕೆ ಬಂದು ಬಿಡಬೇಕು. ಮತ್ತು ಸ್ತನ್ಯವನ್ನು ಕೊಡುವುದರಲ್ಲಿಯೂ ಕಾಲಕ್ರಮವಿರಬೇಕು. ಮಗುವಿಗೆ ಹಾಲನ್ನು ಕುಡಿಸಿದಮೇಲೆ ಸ್ತನವನ್ನು ಹಿಂಡಿದರೆ ಸ್ತನ್ಯವು ಹೆಚ್ಚುವ ಸಂಭವವುಂಟು. ಮತ್ತು ಕೆಲವು ಸಂದರ್ಭಗಳಲ್ಲಿ ಕೆಲವು ವಾರಗಳವರೆಗೂ ಸ್ತನ್ಯಕೊಡುವುದನ್ನು ನಿಲ್ಲಿಸಿಬಿಟ್ಟರೂ, ತಿರುಗಿ ಮೊದಲಿನ ಹಾಗೆಯೇ ಹಾಲು ಬರಲಾರಂಭಿಸುವುದು.

ಈ ವಿಷಯಗಳನ್ನೆಲ್ಲಾ ನಾವು ಅನೇಕ ಸ್ತ್ರೀಯರ ಅನುಭವದಿಂದ ಶೋಧನೆಮಾಡಿ ನಿರ್ಧರಿಸಿರುವೆವು. ಇದೇ ವಿಚಾರದಲ್ಲಿ ವೈದ್ಯರ ನೈಪುಣ್ಯವೂ ಸ್ವಲ್ಪ ಬೇಕಾಗಿರುವುದಲ್ಲದೆ, ತಾಯಿಯರಲ್ಲಿಯೂ ತಾಳ್ಮೆಯೂ ದೃಢಪ್ರಯತ್ನವೂ ಇರಬೇಕಾಗಿದೆ. ಆಗಲೇ ಅದರಿಂದ ಒಳ್ಳೇ ಅನುಕೂಲವುಂಟು.

ತಾಯಿಯು ನಾಲ್ಕು ಘಂಟೆಗಳಿಗೊಮ್ಮೆ, ಹತ್ತು ನಿಮಿಷಗಳಿಗೆ ಮೀರದೆ, ಹಾಲನ್ನು ಕೊಟ್ಟು, ಉಳಿದ ಹಾಲನ್ನು ಕೈಯಿಂದ ಹಿಂಡಿ ಒಂದು ಬುಡ್ಡಿ ಅಥವಾ ಸೌಟಿನಿಂದ ಅದರ ಬಾಯಿಗೆ ಬಿಡಬೇಕು.

ಮೊಗಮೊದಲು ಆ ಹಾಲು ತೊಟ್ಟುಗಳಾಗಿ ಬಂದರೂ, ಆಮೇಲೆ ಒಂದೆರಡು ಟೀಸ್ಪೂನಿನಷ್ಟು ಹಾಲು ಬರುವುದು. ಈ ಸ್ವಲ್ಪ ಹಾಲಿನಿಂದಲೇ ಮಕ್ಕಳಿಗೆ ಅಧಿಕಪ್ರಯೋಜನವಾಗುವುದರೊಡನೆ, ಹಾಲನ್ನು ಕೈಯಿಂದ ಹಿಂಡಿಬಿಡುವುದರಲ್ಲಿ, ಮುಂದೆ ಮುಂದೆ ಸ್ತನ್ಯವು ಹೆಚ್ಚುವುದಕ್ಕೂ ಕಾರಣವಾಗುವುದು.

ತಾಯಿಗೆ ಸ್ತನ್ಯವು ಕಡಿಮೆಯಾಗಿದ್ದರೆಮಾತ್ರ ಈ ಕ್ರಮವನ್ನಾರಂಭಿಸಬೇಕು. ಈ ಪ್ರಯತ್ನದಲ್ಲಿಯೂ ಹಾಲು ದೊರೆಯದಿದ್ದರೆಮಾತ್ರ ಬೇರೆ ಬುಡ್ಡಿಯ ಹಾಲನ್ನು ಬಿಡಬೇಕಾಗುವುದು. ತಾಯಿಹಾಲು ಸಾಲದಂತೆ ತೋರಿದಾಗ ಹೊರತು, ಮಗುವಿಗೆ ಬೇರೆ ಆಹಾರವನ್ನು ಕೊಡಲೇಬಾರದು. ಹಾಗೆ ಕೊಡುತ್ತ ಬಂದರೆ, ಮಗುವಿಗೆ ಎದೆಹಾಲಿನ ಆತುರವು ತಗ್ಗಿ, ಅದೇ ಕಾರಣವಾಗಿ ತಾಯಿಯಲ್ಲಿ ಸ್ತನ್ಯವು ಜನಿಸುವುದಕ್ಕೂ ಉತ್ತೇಜನವಿಲ್ಲದೆ, ಮೊಲೆಹಾಲು ಬರುವುದು ನಿಂತೇಹೋಗಬಹುದು.

ಒಂದೊಂದುಸಾರಿ ಹಾಲೂಡಿಸಿದಮೇಲೆ, ಎದೆಹಾಲು ಸಾಲದುದಕ್ಕಾಗಿ ಬೇರೆ ಆಹಾರವನ್ನು ಕೊಡಬೇಕಾದ ಸಂಭವಗಳಲ್ಲಿ, ಅಪ್ಪಟವಾದ ಇಲ್ಲವೇ ಕೆನೆಯನ್ನು ತೆಗೆದ ಹಸುವಿನಹಾಲನ್ನಾಗಲಿ ಕೊಡಬೇಕು. ಇಂತಹ ಹಾಲನ್ನು ಆಗಲೇ ತಯಾರಿಸಿಕೊಡಬೇಕೇ ಹೊರತು, ಮೊದಲೇ ಮಾಡಿಟ್ಟದ್ದುದನ್ನು ಕೊಡಬಾರದು.

ತಾಯಿಯ ಸ್ತನ್ಯವು ಸಾಲದಿದ್ದ ಸಂದರ್ಭಗಳಲ್ಲಿ ಬೇರೆ ಆಹಾರವನ್ನು ಕೊಡದೆ ತೀರದು, ಅದಕ್ಕಾಗಿ ಹಸುವಿನ ಹಾಲನ್ನು ಮಗುವಿನ ವಯಸ್ಸಿಗೂ, ದೇಹಪ್ರಕೃತಿಗೂ ತಕ್ಕಂತೆ ಮಾರಿಸಿ ಕೊಡುವುದೇ ಅದಕ್ಕೆ ತಕ್ಕ ಪ್ರತಿನಿಧಿಯಾದ ಆಹಾರವೆನಿಸುವುದು. ಮಕ್ಕಳಿಗಾಗಿ ಸಿದ್ಧಪಡಿಸಿ ವಿಕ್ರಯಿಸಲ್ಪಡುವ ಆಹಾರಗಳನ್ನು ಸಂಪೂರ್ಣವಾಗಿ ನಿರಾಕರಿಸುವುದಾಗಲಿ, ಅವುಗಳನ್ನಾಗಿ ಶಿಫಾರಸು ಮಾಡುವುದಾಗಲಿ, ಇಲ್ಲಿ ನನ್ನ ಉದ್ದೇಶವಲ್ಲ. ಅವುಗಳಲ್ಲಿ ಕೆಲವು, ಕೆಲಸಮಯಗಳಲ್ಲಿ ಮಕ್ಕಳ ಮೈಗೆ ಅನುಕೂಲಿಸಲೂ ಬಹುದು. ಆದರೆ ಅಂತಹ ಬುಡ್ಡಿಯ ಹಾಲುಗಳನ್ನು ನಿರ್ಭಯವಾಗಿ ಯಾವ ಸಂದರ್ಭದಲ್ಲಿಯಾದರೂ ಉಪಯೋಗಿಸಬಹುದೆಂಬ ನಂಬಿಕೆಯು ಸರ್ವಸಾಮಾನ್ಯವಾಗಿ ಜನಗಳಲ್ಲಿ ಉಂಟಾದರೆ, ವೈದ್ಯರಿಗೂ, ಆಸ್ಪತ್ರೆಗಳಿಗೂ ಅದರಿಂದ ಕೆಟ್ಟ ಹೆಸರು ಬಂದಂತಾಗುವುದಲ್ಲವೇ? ಮತ್ತು ಅಂತಹ ಬುಡ್ಡಿಯ ಹಾಲನ್ನು ಕೊಟ್ಟು ಬೆಳೆಸಿದ ಮಗುವನ್ನು ಕೆಲವು ದಿವಸಗಳ ಮೇಲೆ ವೈದ್ಯರಬಳಿಗೆ ತೆಗೆದುಕೊಂಡು ಹೋದರೆ, ಆ ಮಕ್ಕಳಲ್ಲಿ ಗ್ರಹಿಣಿ ಮೊದಲಾದ ವ್ಯಾಧಿಗಳು ತಲೆದೋರಿ, ಅವುಗಳ ದೇಹದಲ್ಲಿ ರೋಗನಿವಾರಣ ಶಕ್ತಿಯು ತಗ್ಗಿರುವುದೂ ಚೆನ್ನಾಗಿ ತಿಳಿಯುವುದು. ಇದು ಯಾರ ತಪ್ಪು? ಬುಡ್ಡಿಹಾಲು ಮಕ್ಕಳಿಗೆ ಪುಷ್ಟಿಕಾರಿಯೆಂದು ನಂಬಿದ ತಾಯಿತಂದೆಗಳದೇ? ಅಥವಾ ಆ ಹಾಲನ್ನು ಮಕ್ಕಳಿಗೆ ಕೊಡಲು ಶಿಫಾರಸು ಮಾಡಿದ ವೈದ್ಯರದೋ?

ಮಗುವಿಗೆ ತಾಯಿಯ ಹಾಲು ದೊರೆಯದಿದ್ದರೆ, ಅಥವಾ ಅದು ಸಾಲದಿದ್ದರೆ ಮಾಡುವುದೇನು? ತಾಯಿಯಹಾಲು ಅಲ್ಪಸ್ವಲ್ಪವಾಗಿಯಾದರು ದೊರೆಯುವಹಾಗಿದ್ದರೆ, ಅಂತಹ ಕೂಸುಗಳಿಗೆ ಅದರೊಡನೆ ಅಪ್ಪಟವಾದ ಹಸುವಿನಹಾಲನ್ನು ಮಾರಿಸಿಕೊಡುತ್ತ ಬರಬಹುದು, ಆಗಲೂ ಒಂದುವಾರದ ಕಾಲದವರೆಗೆ ಅದು ತಡೆದುಕೊಳ್ಳಬಲ್ಲದು. ಆದರೆ, ಹಸುವಿನ ಹಾಲಲ್ಲಿರುವ ಕೊಬ್ಬು ಮಕ್ಕಳಮೈಗೆ ವಿರೋಧಿಸುವುದರಿಂದ, ಕೆನೆತೆಗೆದ ಹಾಲನ್ನು ಮಾರಿಸಿ ಕೊಡುವುದೇ ಮೇಲು. ಹೇಗಿದ್ದರೂ, ಹಾಲನ್ನು ಚೆನ್ನಾಗಿ ಕಾಯಿಸಿಯೇ ಮಕ್ಕಳಿಗೆ ಬಿಡಬೇಕು. ಹಸಿಹಾಲು ಅವುಗಳ ಮೈಗೆ ಅನುಕೂಲಿಸುವುದಿಲ್ಲ.

ಮೊಲೆಹಾಲನ್ನೇ ಕುಡಿಯುದ ಕೂಸಾಗಿದ್ದರೆ, ಪ್ರತಿದಿನವೂ ಪೌಂಡು ಒಂದಕ್ಕೆ, ಒಂದು ಔನ್ಸಿನಷ್ಟು ಕೆನೆತೆಗೆದ ಹಾಲು, ಎರಡುವರೆ ಔನ್ಸು ನೀರು, ಅರ್ಧ ಔನ್ಸಿನಷ್ಟು ಹಾಲುಸಕ್ಕರೆ, ಇವುಗಳನ್ನು ಸೇರಿಸಿ ಕೊಡಬೇಕು, ಎಂದರೆ, 5, 7, ಅಥವಾ 9 ಔನ್ಸಿನಷ್ಟು ತೂಕವುಳ್ಳ ಮಕ್ಕಳಿಗೆ ಕ್ರಮವಾಗಿ ಅದೇ 5, 7, 9 ಔನ್ಸಿನಷ್ಟು ಕೆನೆತೆಗೆದ ಹಾಲು, $12\frac{1}{2}$, $17\frac{1}{2}$, $22\frac{1}{2}$ ಔನ್ಸಿನಷ್ಟು ನೀರು, 6/3 $\frac{7}{8}$ ಅಥವಾ $\frac{1}{8}$ ಔನ್ಸು ಹಾಲುಸಕ್ಕರೆ, ಇವುಗಳ ಮಿಶ್ರಣವು ಬೇಕಾಗುವುದು. ಅಂತಹ ಹಾಲನ್ನು 5 ರಿಂದ 10 ನಿಮಿಷಗಳವರೆಗೆ ಕಾಯಿಸಿ ಕುದಿಸಬೇಕು. ಇಂತಹ ಹಾಲನ್ನು ಬೇರೆಬೇರೆ 7 ಬುಡ್ಡಿಗಳಲ್ಲಿ ತುಂಬಿಟ್ಟು, ಹಗಲು ಮೂರುಗಂಟೆಗಳ ಕಾಲಕ್ಕೊಮ್ಮೆಯೂ ಬಿಡಬೇಕು.

ಮಕ್ಕಳಿಗೆ ಅವಶ್ಯವಾದುದಕ್ಕಿಂತ ಅಧಿಕಾಹಾರವನ್ನು ಯಾವಾಗಲೂ ಕೊಡಬಾರದು. ಒಮ್ಮೆ ಉಪಯೋಗಿಸಿ, ಅವಶಿಷ್ಟವಾದ ಹಾಲನ್ನು ಚೆಲ್ಲಿಬಿಡಬೇಕು. ಮಗುವಿಗೆ ಎದೆಹಾಲು ದೊರೆಯುವ ಹಾಗಿದ್ದರೆ, ಮೇಲೆ ಹೇಳಿದ ಪ್ರಮಾಣದಲ್ಲಿ $\frac{1}{3}$ ಅಥವಾ $\frac{1}{2}$ ಭಾಗವನ್ನು ಮಾತ್ರ ಉಪಯೋಗಿಸಬೇಕು. ಮಗುವಿಗೆ ಹೊಟ್ಟೆಶೂಲೆಯು ಸೂಚನೆಯು ಕಂಡುಬಂದರೆ, ಹಾಲು ಸಕ್ಕರೆಯ ಪ್ರಮಾಣವನ್ನು ಇನ್ನೂ ತಗ್ಗಿಸಬೇಕು. ಮಗುವಿನ ಮಲದಲ್ಲಿ ಮೊಸರಿನ ಘಟ್ಟಿಯು ಹೋಲಿಕೆಯು ಕಂಡುಬಂದರೆ, ಬಾರ್ಲಿನೀರಿಗೆ ಬದಲಾಗಿ ಬಾರ್ಲೀ ನೀರನ್ನು ಸೇರಿಸಿ, ಅದಕ್ಕೆ ತಕ್ಕಂತೆ ಸಕ್ಕರೆಯನ್ನು ತಗ್ಗಿಸಬೇಕು. ಬಾರ್ಲೀ ನೀರನ್ನು ಮೊದಲು ಕುದಿಸಿಟ್ಟುಕೊಂಡು, ಅದಕ್ಕೆ ಹಾಲನ್ನು ಬೆರಸಿ, ತಿರುಗಿ ಅದನ್ನು ಮೇಲೆಹೇಳಿದಂತೆ ಕುದಿಸಬೇಕು.

ದಿನದಿನವೂ ಒಂದು ಔನ್ಸಿನಷ್ಟು ಕೆನೆತೆಗೆದ ಹಾಲಿಗೆ ಬದಲಾಗಿ ಅಷ್ಟೇಪ್ರಮಾಣದ ಅಪ್ಪಟ ಹಾಲನ್ನು ಕೊಡುತ್ತ ಬಂದು, ಕೊನೆಗೆ ಪೂರ್ತಿಯಾಗಿ ಅಪ್ಪಟ ಹಾಲನ್ನೇ ಉಪಯೋಗಿಸಬಹುದು, ಅದಕ್ಕೆ ತಕ್ಕಂತೆ ನೀರಿನ ಪ್ರಮಾಣವನ್ನು ತಗ್ಗಿಸುತ್ತ ಬಂದು, ಕೊನೆಗೆ ಒಂದು ಪೌಂಡಿನಷ್ಟು ಮಿಶ್ರಣದಲ್ಲಿ $1\frac{1}{2}$ ಔನ್ಸು ಹಾಲು ಸೇರುವಂತೆ ಮಾಡಬಹುದು. ಆದರೆ, ಹಾಲಿನ ಪ್ರಮಾಣವು ಯಾವಾಗಲೂ ದಿನಕ್ಕೆ ಪೌಂಡಿಗೆ 2 ಔನ್ಸುಗಳಿಗೆ ಮೀರಿಹೋಗಲೇಬಾರದು. ಈ ಪ್ರಮಾಣದ ಅಪ್ಪಟ ಹಾಲಿನಲ್ಲಿ ಮಗುವಿನ ಮೈಗೆ ಬೇಕಾದ ಪುಷ್ಟಿಜನಕವೂ, ಕೊಬ್ಬೂ, ತಕ್ಕಷ್ಟು ದೊರೆಯುವುದು. ಹಾಲಿನ ಪ್ರಮಾಣವನ್ನು ಹೆಚ್ಚಿಸುತ್ತ ಬಂದ ಹಾಗೆಲ್ಲ ಹಾಲುಸಕ್ಕರೆಯನ್ನು ಕ್ರಮಕ್ರಮವಾಗಿ ಕಡಿಮೆಮಾಡಬೇಕು. ಏಕೆಂದರೆ, ಹಾಲಿನಲ್ಲಿರುವ ಸಕ್ಕರೆಯ ಭಾಗವೂ, ನಾವು ಮಿಶ್ರಮಾಡುವ ಸಕ್ಕರೆಯೂ ಸೇರಿ ನೂರಕ್ಕೆ ಆರು ಪಾಲಿಗಿಂತ ಮೀರಬಾರದು. ಅಥವಾ ದಿನಕ್ಕೆ ಪೌಂಡೊಂದಕ್ಕೆ $\frac{1}{8}$ ಅಥವಾ $\frac{1}{8}$ ಔನ್ಸಿನಷ್ಟಿರಬೇಕು.

ಶಿಕ್ಷಿತೆಯಾಗಿ ಒಳ್ಳೇ ಅನುಭವವುಳ್ಳ ತಾಯಿಯರು ತಮ್ಮ ಮಕ್ಕಳ ಮೈಗೆ ಬೇಕಾದ ಆಹಾರವಸ್ತುಗಳ ಪ್ರಮಾಣವನ್ನು ತಿಳಿದುಕೊಂಡು, ಅದಕ್ಕೆ ತಕ್ಕಂತೆ ಪ್ರೋಟೀನ್, ಕೊಬ್ಬು ಕಾರ್ಬೋಹೈಡ್ರೇಟ್ ಇವುಗಳನ್ನು ಸರಿಪಡಿಸಿಕೊಳ್ಳಬಲ್ಲರು.

ಹೀಗೆ ಕೃತ್ರಿಮವಾದ ಹಾಲನ್ನು ತಯಾರಿಸುವುದರಲ್ಲಿ, ಅಪ್ಪಟವಾದ ಹಾಲು ತಕ್ಕಷ್ಟು ಪ್ರಮಾಣಕ್ಕೆ ಬಂದೊಡನೆ, ಆ ಹಾಲನ್ನು ಮಗುವಿಗೆ ನಾಲ್ಕು ಘಂಟೆಗಳಿಗೊಮ್ಮೆ, ಒಂದೊಂದು ಸಲಕ್ಕೆ 2 ರಿಂದ 8 ಔನ್ಸುಗಳಿಗೆ ಮೇಲ್ಪಡದಂತೆ ಕೊಡಬಹುದು. ದಿನಕ್ಕೆ ಎಂದರೆ 24 ಘಂಟೆಗಳ ಕಾಲಕ್ಕೆ 32 ಔನ್ಸುಗಳಿಗೆ ಮೀರಿ ಹೋಗಬಾರದು.

ಹುಟ್ಟಿದುದು ಮೊದಲು ಒಂದು ವರ್ಷದವರೆಗೆ ಒಳ್ಳೇ ಆರೋಗ್ಯವುಳ್ಳ ಗಂಡುಮಗುವಿನ ಸರಾಸರಿ ತೂಕವೆಷ್ಟಿರಬೇಕೆಂಬುದನ್ನು ಇದರಡಿ ಕೊಟ್ಟಿದೆ.

ತಿಂಗಳು.	ಪೌಂಡು.
ಆಗಲೇ ಹುಟ್ಟಿದ ಮಗುವಿನ ತೂಕ	6.8
ಮೊದಲನೆಯ ತಿಂಗಳಲ್ಲಿ	7.4
ಎರಡನೆಯ ತಿಂಗಳಲ್ಲಿ	8.4
ಮೂರನೆಯ ತಿಂಗಳಲ್ಲಿ	9.6
ನಾಲ್ಕನೆಯ ತಿಂಗಳಲ್ಲಿ	10,8
ಐದನೆಯ ತಿಂಗಳಲ್ಲಿ	11.8
ಆರನೆಯ ತಿಂಗಳಲ್ಲಿ	12.4
ಏಳನೆಯ ತಿಂಗಳಲ್ಲಿ	13.4
ಎಂಟನೆಯ ತಿಂಗಳಲ್ಲಿ	14.4
ಒಂಭತ್ತನೆಯ ತಿಂಗಳಲ್ಲಿ	15.8
ಹತ್ತನೆಯ ತಿಂಗಳಲ್ಲಿ	16.8
ಹನ್ನೊಂದನೆಯ ತಿಂಗಳಲ್ಲಿ	17.8
ಹನ್ನೆರಡನೆಯ ತಿಂಗಳಲ್ಲಿ	18.5

ಸಾಧಾರಣವಾಗಿ ಮಗು ಹುಟ್ಟಿದ ಕೆಲವು ದಿನಗಳೊಳಗಾಗಿ ಅದರ ಮೈತೂಕವು ಸ್ವಲ್ಪಮಟ್ಟಿಗೆ ತಗ್ಗುವುದುಂಟು.

ಆರೋಗ್ಯಚಂದ್ರಿಕೆ.

ಶಂಕರ ಕಾಲೇಜಿನ ವಿದ್ಯಾರ್ಥಿಗಳ ಪರೀಕ್ಷೆಯ ಪರಿಣಾಮವು.

ಈ ವರ್ಷ ನಮ್ಮ ಕಾಲೇಜಿನ ಪರಿಯಿಂದ ಕಲ್ಕತ್ತಾ ಯೂನಿವರ್ಸಿಟಿಯ ಪರೀಕ್ಷೆಗೆ ಕುಳಿತ ೯ ಜನರಲ್ಲಿ ಕೆಳಗೆ ಬರೆದ ೭ ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ಸಾಹಿತ್ಯಮಧ್ಯಮದಲ್ಲಿ

೧. ಕಾಶೀನಾಥ ಶಾಸ್ತ್ರೀ ಹರೇಗಲ್ಲು.
೨. ಶಂಭುಲಿಂಗ ಶರ್ಮಾ ಭೀಮನಹಳ್ಳಿ.
೩. ವೀರಭದ್ರ ಶರ್ಮಾ ಅಮರಾಪುರ.

ಸಾಹಿತ್ಯಾದ್ಯದಲ್ಲಿ

೧. ಚನ್ನವೀರ ದೇವರು ಕಾಳಕೋಟಿ.
೨. ಗುರುಶಾಂತ ದೇವರು ಹಡಪುರು.
೩. ಚಂದ್ರಶೇಖರಯ್ಯ ಸುಣಕಲ್ಲ ಬಿದರಿ.

ವ್ಯಾಕರಣಾದ್ಯದಲ್ಲಿ

೧. ಸಿದ್ಧೇಶ್ವರ ನಾರಾಯಣಪೇಟೆ.

ಸೆಕ್ರೆಟರಿ,
ತಾ|| ೧೨-೮-೩೪ ಶಂಕರ ಕಾಲೇಜು ಯಾದಗಿರಿ.

ಪಂಚಾಚಾರ್ಯ ಪ್ರಭಾ

೧೯೩೪ನೇ ಅಗಸ್ಟ ತಾ॥ ೧೯ ನೇ ಸೋಮವಾರ

ಮಾಹೇಶ್ವರಸುಧಾರಣೆ.

ವೀರಶೈವಮತದ ಗುರುಗಳೆನಿಸಿದ ವೀರಮಾಹೇಶ್ವರರೆಂಬುವರು ಕೆಲಕಾಲದಿಂದೀಚೆಗೆ ತಮ್ಮ ವೈದಿಕ ಧರ್ಮದ ಕರ್ತವ್ಯ ಕರ್ಮಗಳನ್ನು ಬಿಟ್ಟು ಲೌಕಿಕರಂತೆ ಕೃಷಿಕರ್ಮನಿರತರಾಗಿಯೂ, ಭಿಕ್ಷೋಪಜೀವಿಗಳಾಗಿಯೂ, ವ್ಯವಹಾರನಿರತರಾಗಿಯೂ ಬಂದದ್ದರಿಂದ ಭಕ್ತವರ್ಗದವರಲ್ಲಿ ಅನೇಕರಿಗೆ ಇವರಲ್ಲಿ ಶ್ರದ್ಧೆಯು ಕಡಿಮೆಯಾಗುತ್ತ ಬಂದಿತು. ಕೆಲವರಲ್ಲಿ ಪೂರ್ವದಂತೆ ಅಲ್ಪಸ್ವಲ್ಪ ಶ್ರದ್ಧೆಯು ಇದ್ದರೂ ಸಹ ಆರ್ಯಸಮಾಜದ ಮರಿಗಳಂತಾಗಬೇಕೆಂಬ ಅಭಿನಿವೇಶವುಳ್ಳ ಕೆಲ ವೀರಶೈವರು ಈ ಪವಿತ್ರವಾದ ವೀರಮಾಹೇಶ್ವರ ವರ್ಗವನ್ನೇ ತಲೆಕೆಳಕು ಮಾಡಲುದ್ಯುಕ್ತರಾಗಿರುತ್ತಾರೆ. ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಂತೆ ವಂಶಾವಳಿಯಿಂದ ಅನೂಚಾನವಾಗಿ ಬಂದ ಗುರುವರ್ಗ-ಶಿಷ್ಯವರ್ಗ ಸಂಪ್ರದಾಯವು ಈಗಣ ಕಠೋರತರವಾದ ವಾತಾವರಣದಲ್ಲಿ ಶಿಕ್ಕು ನರಳುತ್ತಲಿದೆ. ಅಲ್ಲಲ್ಲಿ ಕೆಲ ಜನ ಕಸ್ತರ್ಟರು ಅದೇನು? ಅಯ್ಯನವರೇ ಪೂಜ್ಯರೋ? ಭಕ್ತರು ಪೂಜ್ಯರಾಗಲರಿಯರೋ? ನಮ್ಮಂತೆ ಇವರಿಗೂ ಕಣ್ಣು-ಕೈ-ಕಾಲು ಮೂಗು ಹಸಿವು ತೃಷೆ ಮೊದಲಾದವುಗಳಿದ್ದ ಮೇಲೆ ಇವರೇಕೆ ಪೂಜ್ಯರಾಗಬೇಕು? ನಾವೇಕೆ ಪೂಜಕರಾಗಬೇಕು? ಇವೆಲ್ಲಾ ಈ ಅಯ್ಯನವರಿಂದ ಸ್ವಾಭ್ಯುದಯಕ್ಕಾಗಿ ಕಲ್ಪಿಸಲ್ಪಟ್ಟ ನಿಯಮಗಳಲ್ಲದೆ ಧರ್ಮಶಾಸ್ತ್ರೋಕ್ತಗಳಲ್ಲವು ಎಂದು ಕೋಲಾಹಲವನ್ನೆಬ್ಬಿಸುತ್ತ ಶಾಸ್ತ್ರೀಯವೂ, ಪರಮಪವಿತ್ರವೂ, ಅನಾದಿಯೂ ಸಂಪ್ರದಾಯಸಿದ್ಧವೂ ಆಗಿರುವ ಮಾಹೇಶ್ವರ ವರ್ಗದ ಏಳಿಗೆಯನ್ನೇ ಕೀಳುಮಾಡಲು ಯತ್ನಿಸುತ್ತಿರುವದನ್ನು ನೋಡಿ ಸದ್ವಂಶೀಯರಾದ ಭಕ್ತರಾಗಲಿ ಮಾಹೇಶ್ವರರಾಗಲಿ ವ್ಯಸನಪಡದೆ ಇರಲಾರರು. ಭಕ್ತವರ್ಗಪ್ರವಿಷ್ಟರಾದ ಕೆಲ ನಾಸ್ತಿಕಪಂಥಾನುಯಾಯಿಗಳಾದವರಲ್ಲಿ ಈಚೆರನಾದ ದುಷ್ಟಾಗ್ರಹವೆಂಬ ವಿಷಬೀಜವನ್ನು ಅವರವರ ಅಪವಿತ್ರವಾದ ಹೃದಯಕ್ಷೇತ್ರದಲ್ಲಿ ಊರಿ ಅದಕ್ಕೆ ದುರ್ವಿಚಾರವೆಂಬ ಜಲಸೇಚನವನ್ನು ಮಾಡುತ್ತ ವಿಷದ ಬಳ್ಳಿಯನ್ನು ವೀರಶೈವಸಮಾಜವೆಂಬ ಪರಿಶುದ್ಧವಾದ ವೃಕ್ಷಕ್ಕೆ ಹಬ್ಬಿಸುತ್ತಿರುವರು. ಎಂದು ಪವಿತ್ರವಾದ ಗುರುಶಿಷ್ಯ ನ್ಯಾಯವು ಲೋಕದಲ್ಲಿ ವ್ಯಸ್ತವ್ಯಸ್ತವಾಗುವದೋ ಅಂದೇ ರಾಜಪ್ರಜಾನ್ಯಾಯವೂ ಸತೀಪತಿನ್ಯಾಯವೂ ಸ್ವಾಮಿಭೃತ್ಯನ್ಯಾಯವೂ ಕ್ರಮವಾಗಿ ವ್ಯಸ್ತವ್ಯಸ್ತವಾಗಬೇಕಾಗುವುದು. ಹೀಗೆ ಆಗುವುದರಿಂದ ಲೋಕಸ್ಥಿತಿಯು ನಿಂತುಹೋಗಿ ಇನ್ನು ಮೇಲೆ ಸ್ತ್ರೀಜಾತಿಯೆಂದು ಪುರುಷಜಾತಿಯೆಂದು ಎರಡೇ ಜಾತಿಗಳು ನಿಲ್ಲಬೇಕಾಗುವುದು. ರಾಮಾಯಣ ಭಾರತಾದೀತಿಹಾಸಗಳಲ್ಲಿ ಇಂತಹ ವರ್ಣಸಾಂಕರ್ಯಕಾರಕಗಳಾದ ನಿಯಮಗಳು ಹೇಳಲ್ಪಟ್ಟಿಲ್ಲವು. ಮತ್ತು ಯಾವ ಆಗಮಗಳಲ್ಲಿಯೂ ಯಾವ ಸ್ಮೃತಿಗಳಲ್ಲಿಯೂ ಹೇಳಲ್ಪಟ್ಟಿಲ್ಲವು. ಈ ನವನಾಗರೀಕ ಕಾಲದಲ್ಲ ಪರಮಪವಿತ್ರವಾದ ಭಾರತೀಯ ಧರ್ಮಕ್ಕೆ ಇತರರಿಂದ ಕಳಂಕವುಂಟಾಗದೆ ವೇದಶಾಸ್ತ್ರಾವಲಂಬಿಗಳಾದ ಭಾರತೀಯರಿಂದಲೇ ಕಳಂಕವುಂಟಾಗುತ್ತಿರುವುದು. ದುಷ್ಪುತ್ರನು ಜನಿಸಿ ವಂಶವನ್ನೇ ಹಾಳು ಮಾಡುವಂತೆ ಇಂತಹ ನಾಸ್ತಿಕರು ಅಲ್ಲಲ್ಲಿಯೇ ಹುಟ್ಟಿ ಹಿಂದೂ ಮತವನ್ನೇ ಹಾಳುಮಾಡುತ್ತಲಿರುವರು. ಈ ಅನಾಹುತವನ್ನು ನೋಡುತ್ತಿದ್ದರೂ ಸಹ ಗುರುವರ್ಗದವರು ಇನ್ನೂ ತಮ್ಮ ಕರ್ತವ್ಯಕರ್ಮವನ್ನು ಸ್ಮರಿಸಿಕೊಳ್ಳದೆ ಗಾಢನಿದ್ರೆಯಲ್ಲಿರುತ್ತಾರೆ. ಕಳ್ಳನು ಮನೆಯನ್ನು ನುಗ್ಗಿ ಚಿನ್ನಬೆಳ್ಳಿಗಳನ್ನೆಲ್ಲ ದೋಚಿಕೊಂಡು ಹೋದಮೇಲೆ ಎಚ್ಚರಾದರೆ ಪ್ರಯೋಜನವೇನು? ಕೆಲ ಆಧುನಿಕ ನಾಗರೀಕರು ಕ್ರಮವಾಗಿ ಗ್ರಂಥಗಳನ್ನು ನೋಡದೆ ಭಾರತೀಯಧರ್ಮದಲ್ಲಿ ಶಿರಃಸ್ಥಾನಾಪನ್ನವಾದ ಗುರುಸ್ಥಾನದ ಶಿಬಿರವನ್ನು ಹಾಳಮಾಡಬೇಕೆಂದು ಮೇಘಗಳು ಶುಷ್ಕಗುಡುಗನ್ನು ಮಾಡುವಂತೆ ಶುಷ್ಕವಾಗಾಡಂಬರವನ್ನು ಮಾಡುತ್ತಿರುವರು. ವರ್ಣಗಳಿಗೆ ಗುಣಕ್ರಿಯೆಗಳೇ ಕಾರಣಗಳಲ್ಲದೆ ಜನ್ಮವು ಕಾರಣವಲ್ಲವೆಂದೂ ಯಾರು ಬುದ್ಧಿವಂತರೋ ಅವರೇ ಬ್ರಾಹ್ಮಣರೆಂದೂ ಯಾರು ದಡ್ಡರೋ ಅವರೇ ಬ್ರಾಹ್ಮಣೇತರರೆಂದೂ ಹೇಳಲೆತ್ನಿಸುತ್ತಲಿದ್ದಾರೆ. ಈ ಪಿಶಾಚಿಯು ಅಲ್ಲಲ್ಲಿಯೇ ತಾಂಡವವನ್ನು ಮಾಡುತ್ತ ಈಗ ವೀರಶೈವ ಸಮಾಜವೆಂಬ ರಂಗಸ್ಥಲಕ್ಕೂ ಕಾಲಿಡಲು ತವಕಪಡುತ್ತಲಿರುವದು. ಯಾರಿಗೆ ದೀಕ್ಷೆಯಾಗುವುದೋ ಅವರು ಯಾರಾದರೂ ಮಾಹೇಶ್ವರರಾಗಬಹುದು. ಯಾರು ಲಿಂಗಧಾರಿಗಳೋ ಅವರೆಲ್ಲಾ ಗುರುತ್ವದ ಅಧಿಕಾರವುಳ್ಳವರಾಗಬಹುದು. ಯಾವನಿಗೆ ಓದುಬರಹ ಬರುತ್ತದೆಯೋ, ಅವನೇ ಪೌರೋಹಿತ್ಯಕ್ಕೆ ಅಧಿಕಾರಿಯಾಗಬಹುದು. ಎಂದು ಅಲ್ಲಲ್ಲಿಯೇ ಮುಗ್ಧಜನಗಳ ತಲೆಯಲ್ಲಿ ಹೊಗಿಸುವುದಕ್ಕೆ ಪ್ರಾರಂಭಮಾಡಿದ್ದಾರೆ. ವೀರಶೈವ ಮತದ ಗುರುತ್ವಾಧಿಕಾರವುಳ್ಳ ಮಾಹೇಶ್ವರ ವರ್ಗವು ಇಂತಹ ಅನಾಹುತವನ್ನು ಕಣ್ಣಿನಿಂದ ನೋಡುತ್ತಿದ್ದರೂ, ಸುಮ್ಮನೆ ಕುಳಿತಿದೆ. ಮಾಹೇಶ್ವರರು ತಮ್ಮ ಜನ್ಮಸಿದ್ಧವಾದ ಧಾರ್ಮಿಕತತ್ವವೆಂಬ ಖಡ್ಗವನ್ನು ತೆಗೆದುಕೊಂಡು ಕೆಲ ಲೌಕಿಕರ ದುರಾಗ್ರಹವೆಂಬ ಅರಣ್ಯವನ್ನು ಪ್ರವೇಶಿಸಿ ನಾಸ್ತಿಕವಾದಗಳೆಂಬ ವಿಷವೃಕ್ಷಗಳನ್ನು ಕತ್ತರಿಸುತ್ತಲೂ ಸದ್ಧರ್ಮಗಳೆಂಬ ಉತ್ತಮಬೀಜಗಳನ್ನೂರುತ್ತಲೂ ಬಂದದ್ದಾದರೆ ಪೂರ್ವಾಚಾರ್ಯರ ಸತ್ಸಂಕಲ್ಪವು ಈಡೇರುವುದಲ್ಲದೆ ಜನ್ಮಸಿದ್ಧವೂ ಪಿತೃಪಿತಾಮಹಾದಿಗಳಿಂದಾರ್ಜಿತವೂ ಆದ ತಮ್ಮ ಹಕ್ಕನ್ನು ಉಳಿಸಿಕೊಂಡಂತಾಗುವುದು. ಈಗ ಅನೇಕರು ತಮ್ಮ ಅಭಿಪ್ರಾಯಗಳನ್ನು ಸ್ಥಿರಪಡಿಸಬೇಕೆಂದು ಧರ್ಮ ಗ್ರಂಥಗಳಿಗೆಲ್ಲಾ ಅಪಾರ್ಥವನ್ನು ಕಲ್ಪಿಸುತ್ತಿದ್ದಾರೆ. ಇದೇ ಅರ್ಥವೇ ನಿಜವಿರಬಹುದೆಂದು ಅನೇಕರು ಭ್ರಮಿಸುತ್ತಿರುವರು. ಇಂಥವರು ಧರ್ಮ ಗ್ರಂಥಗಳಿಗೆ ಮಾಡುವ ಅರ್ಥವನ್ನು ವಿಚಾರಮಾಡಿದರೆ ಮೆಣಸು, ಜೀರಿಗೆ ಎಂಬ ವಾಕ್ಯಕ್ಕೆ ಮೇಣ, ಸೂಜಿ, ರಿಗೆ ಎಂದು ಅರ್ಥಮಾಡುವ ಮಹಾಪಂಡಿತನಂತೆ ಇರುತ್ತದೆ. ಧರ್ಮಶಾಸ್ತ್ರದಲ್ಲಿ ವರ್ಣಗಳುಂಟೆಂದರೆ ಇಲ್ಲೆನ್ನುವರು ವರ್ಣಗಳು ಜನ್ಮಸಿದ್ಧಗಳೆಂದಿದ್ದರೆ ಗುಣಕ್ರಿಯೆಗಳಿಂದ ಬಂದವುಗಳೆಂದೆನ್ನುವರು. ವಿಧವಾವಿವಾಹವು ಧರ್ಮಶಾಸ್ತ್ರನಿಷೇಧವೆಂದಿದ್ದರೆ ಧರ್ಮಶಾಸ್ತ್ರವಿಹಿತವೆಂದು ವಾದಿಸುವರು. ಕನ್ಯಾವಿವಾಹವೇ ಶಾಸ್ತ್ರವಿಹಿತವೆಂದಿದ್ದರೆ ಪ್ರೌಢವಿವಾಹವೇ ವಿಹಿತವೆಂದು ಹೇಳುವರು. ಗುರುವರ್ಗಕ್ಕಿಂತಲೂ ಶಿಷ್ಯವರ್ಗವು ಭಿನ್ನವೆಂದಿದ್ದರೆ ಅಲ್ಲವೆನ್ನುವರು. ಮಠಸ್ಥಳಸಮುತ್ಪನ್ನತ್ವಾದಿ ಧರ್ಮವುಳ್ಳವನೇ ಗುರುವೆಂದಿದ್ದರೆ ಅದೇನು? ಅವರಿಗೆ ಕೊಂಬುಗಳು ಮೂಡಿಲ್ಲವೆನ್ನುವರು. ಗುರುಮನೆತನದವನೇ ಹವ್ಯಕವ್ಯಕರ್ಮಾಧಿಕಾರಿಯೆಂದಿದ್ದರೆ ಎಲ್ಲರೂ ಅಧಿಕಾರಿಗಳೆನ್ನುವರು. ಹೀಗೆ ಕಲಿಕಾಲಪ್ರಭಾವದಿಂದ ವಿಪರೀತ ಭಾವನೆಗಳು ಅಂಕುರಿಸಲಿಕ್ಕೆ ಹತ್ತಿರುತ್ತವೆ. ಮಾಹೇಶ್ವರ ವಂಶಾನುಯಾಯಿಗಳು ಧರ್ಮಶಾಸ್ತ್ರವನ್ನು ಓದಿ ಅಲ್ಲಿ ಹೇಳಿದಂತೆ ತಾವೂ ನಡೆಯುವುದಲ್ಲದೆ ಶಿಷ್ಯರಿಗೆ ಬೋಧಿಸುತ್ತ ಸದಾಚಾರಸಂಪನ್ನರಾಗಿ ಬಂದಿದ್ದರೆ ಇಂತಹ ಸ್ವೇಚ್ಛಾಪ್ರಲಾಪಗಳು ಜನಗಳಲ್ಲಿ ತಲೆದೋರುತ್ತಿದ್ದಿಲ್ಲವು. ಇವರುಗಳ ಬಿಗಿಯು ತಪ್ಪಿದುದರಿಂದ ಬೇಲಿಯು ಕಿತ್ತುಹೋದ ಹೊಲಕ್ಕೆ ದನಗಳು ನುಗ್ಗಿ ಹೊಲವನ್ನೆಲ್ಲಾ ಹಾಳುಮಾಡುವಂತೆ ವೀರಶೈವಮತವು ಹಾಳಾಗಹತ್ತಿದೆ.

ಎಲೌ ಮಾಹೇಶ್ವರರೇ? ನಿಮ್ಮ ಮತ ಧರ್ಮಗ್ರಂಥಗಳನ್ನು ನೀವು ಓದುತ್ತ ನಿಮ್ಮ ಮತಾಚಾರ್ಯರ ಕಟ್ಟಳೆಗಳನ್ನೆಲ್ಲ ಪಾಲಿಸುತ್ತ ನಿಮ್ಮ ಧರ್ಮಗಳನ್ನೆಲ್ಲ ತಪ್ಪದೆ ಅನುಷ್ಠಿಸುತ್ತ ಆಗಾಗ್ಗೆ ಶಿಷ್ಯರಿಗೆ ಬೋಧಿಸುತ್ತ ಆಚಾರ್ಯರ ಸಿದ್ಧಾಂತಧ್ವಜವನ್ನು ಪುನಃಸ್ಥಿರಗೊಳಿಸುತ್ತ ಬಂದಿದ್ದರೆ ಇಂತಹ ವಿಷಮಾವಸ್ಥೆಯು ನಿಮಗೆ ಪ್ರಾಪ್ತವಾಗುತ್ತಿರಲಿಲ್ಲವೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳಿರಿ. ನಿಮ್ಮ ನಿಮ್ಮ ಮಕ್ಕಳಿಗೆ ವೈದಿಕವಿದ್ಯೆಯನ್ನೂ ಧಾರ್ಮಿಕಸಿದ್ಧಾಂತವನ್ನೂ ಸದಾಚಾರವನ್ನೂ ಅಭ್ಯಾಸಮಾಡಿಸಿರಿ. ಗುರುಕುಲವನ್ನೇರ್ಪಡಿಸಿರಿ. ಶಿಷ್ಯಕುಲವನ್ನುದ್ಧಾರಮಾಡಿರಿ. ಶಿಷ್ಯರ ಮನೆಗಳಲ್ಲಿ ನಡೆಯಬೇಕಾದ ಶುಭಶೋಭನಾದಿಕಾರ್ಯಗಳಿಗೆ ಅನುವಾಗಿರಿ. ಈಗ ನಿಮಗೆ ಒಂದು ಶುಭಮುಹೂರ್ತವನ್ನು ನಿಶ್ಚಯಿಸಲಿಕ್ಕೂ ಶಕ್ತಿಸಾಲದೆ ಶಿಷ್ಯರಿಗೆ ಧಾರ್ಮಿಕಸಹಾಯಗಳೊಂದನ್ನು ಮಾಡದಿದ್ದಲ್ಲಿ ಶಿಷ್ಯರ ಭಕ್ತಿಯು ಹೇಗೆ ವೃದ್ಧಿಯಾದೀತು? ಗುರು... ವೃದ್ಧಿಗೆ ಬೀಜಭೂತರಾಗಿರುವ ನಿಮ್ಮ ಮಕ್ಕ... ಧಾರ್ಮಿಕವಿದ್ಯೆಯನ್ನು ಕಲಿಸಿರಿ. ಈರೀತಿಯಾಗಿ ನಿ... ಸಂತತಿಯನ್ನು ಸುಧಾರಿಸಿದರೆ ಶಿಷ್ಯಕೋಟಿಯು ಸ...ರಿಸುವದು. ಆದುದರಿಂದ ನಿಮ್ಮ ಸಂತತಿಯನ್ನು ...ದಿಕವಿದ್ಯಾಸಂಪನ್ನವನ್ನಾಗಿ ಮಾಡಬೇಕೆಂದು ಕೇ...ತ್ತೇವೆ.

ಒಳದೇಶದ ವೃತ್ತಾಂತಗಳು.

ಸಿಮ್ಲಾ ಪಟ್ಟಣಕ್ಕೆ ದಯಮಾಡಿರುವ ನಮ್ಮ ದಿವಾ... ಸಾಹೇಬರವರು ತಾ॥ 18 ನೆಯ ಭಾನುವಾರ ಅಲ್ಲಿ... ಹೊರಟು ಬೆಂಗಳೂರಿಗೆ ದಯಮಾಡುವರೆಂದು ...ತ್ತೇವೆ.

ಮೈಸೂರು ವಿಶ್ವವಿದ್ಯಾನಿಲಯದ ಪದವೀಪ್ರ... ಸಮಾರಂಭವು ಇದೇ ಅಗಸ್ಟು ತಿಂಗಳು 24 ... ಶನಿವಾರ ಬೆಳಿಗ್ಗೆ 9 ಘಂಟೆಗೆ ಸರಿಯಾಗಿ ಮೈಸೂ... ಜಗನ್ಮೋಹನ ಬಂಗಲೆಯಲ್ಲಿ ನೆರವೇರುವುದು.

ಕಳೆದ ತಿಂಗಳು ತಾ॥ 30 ರಲ್ಲಿ ಬೆಂಗಳೂರಿನಲ್ಲಿ ...ದ ಗಲಭೆಗಳ ಸಂಬಂಧವಾಗಿ ಪೋಲೀಸಿನವರು ... ಮಂದಿಯನ್ನು ದಸ್ತಗಿರಿಮಾಡಿ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರ ಮೇಲೆ ಮೊಕದ್ದ... ತಂದಿದ್ದಾರೆ.

ಶಿವಮೊಗ್ಗ ಡಿ॥ ಡೆಪ್ಯುಟಿ ಕಮಿಷನರಾದ ಶ್ರೀ ಬಿ. ಟಿ. ಕೇಶವಯ್ಯಂಗಾರ್, ಬಿ.ಎ., ಯವರು ಲಂಡ...ನಲ್ಲಿ ಮೈಸೂರಿನ ವ್ಯಾಪಾರದ ಕಮಿಷನರಾಗಿ ವ... ಒಂದಕ್ಕೆ 25,000 ರೂಪಾಯಿಗಳ ಸಂಬಳದ ನೇಮಿಸಲ್ಪಡುವರೆಂದು ತಿಳಿಯಬರುತ್ತದೆ.

ನಮ್ಮ ಸರ್ಕಾರದವರು ಇಂಗ್ಲೆಂಡಿನಲ್ಲಿ ತರ... ಹೊಂದಿಬರುವುದಕ್ಕಾಗಿ ಪೋಲೀಸ್ ಸಬ್-ಇನ್ಸ್...ರ್ ಬಿ. ಭೋಗಪ್ಪನವರನ್ನು ಲಂಡನ್ ಪಟ್ಟಣಕ್ಕೆ ...ಹಿಸಿದ್ದಾರೆ. ಇವರು ಕಳೆದ ಮಂಗಳವಾರ ಪ್ರಯಾ... ಮಾಡಿದರು.

ಮಂಗಳೂರಿನಿಂದ ರಾಜಧಾನಿಗೆ ಒಂದು ಲೈಸೆ... ಪಡೆಯದೆ ಟೌನ್‌ಹಾಲ್ ಮೈದಾನಿನಲ್ಲಿ ಉಪನ್ಯಾ... ಕೂಟವನ್ನು ನಡೆಯಿಸಿದ್ದಕ್ಕಾಗಿ ಮಿ॥ ಸಿದ್ಧಾಲಿಂಗ... ವಿದ್ಯಾವಾಚಸ್ಪತಿಯವರಿಗೆ ಸಿಟಿ ಮ್ಯಾಜಿಸ್ಟ್ರೇ... ಮಿ॥ ಎಂ. ಚನ್ನರಾಜೆ ಅರಸಿನವರು ಕಳೆದ ಶುಕ್ರವಾ... 20 ರೂಪಾಯಿ ಜುಲ್ಮಾನೆ, ಅಥವಾ 10 ದಿವ... ಸಾದಾ ಶಿಕ್ಷೆಯನ್ನು ವಿಧಿಸಿ ಎರಡನೆಯ ಆಪಾ... ಮಿ॥ ಕೆ. ಟಿ. ದೊರೆಸಾಮಯ್ಯಂಗಾರ್‍ರನ್ನು ಖುಲಾ... ಮಾಡಿದರು. ಮೊದಲನೆಯವರು ಜುಲ್ಮಾನೆ ಕೊ...ಲೊಪ್ಪದೆ ಬಂದೀಖಾನೆಗೆ ಹೋದರು.

ಬೆಂಗಳೂರು ರಾಜದ್ರೋಹದ ಮೊಕದ್ದಮೆಯ... ವೀರಕೇಸರಿ ಎಡಿಟರ್ ಮಿ॥ ಎಂ. ಸೀತಾರಾಮಶಾ...ಗಳ ಮೇಲೂ, ನವಜೀವನದ ಎಡಿಟರ್ ಮಿ॥ ಅಶ್ವ...ನಾರಾಯಣರಾಯರ ಮೇಲೂ ಡಿಸ್ಟ್ರಿಕ್ಟ್ ಮ್ಯಾ...ಸ್ಟ್ರೇಟರು ಕಳೆದವಾರ ಜಡ್ಜಮೆಂಟು ಹೇಳಿ ಆಪಾ...ಗಳಿಬ್ಬರಿಗೂ ಆರು ತಿಂಗಳ ಸಾದಾ ಸಜಾ ಮ... 500 ರೂಪಾಯಿ ಜುಲ್ಮಾನೆಯನ್ನು ವಿಧಿಸಿದರೆ... ಹಿಂದೆಯೇ ಪ್ರಕಟಿಸಿದ್ದೆವಷ್ಟೆ! ಈಚೆಗೆ ಅದರ ಮೇ... ಅವರಿಬ್ಬರೂ ಚೀಫ್ ಕೋರ್ಟಿನಲ್ಲಿ ಅಪ್ಪೀಲ್ ಮಾ...ದರು. ಜಾಮೀನ್ ಮೇಲೆ ಬಿಡಲಾಗದೆಂದೂ, ಅಪ್ಪೀ... ತೀರ್ಮಾನವಾಗುವ ತನಕ ಕೆಳಕೋರ್ಟಿನ ಶಿಕ್ಷೆ...ನ್ನು ಜಾರಿ ಮಾಡದೆ ತಡೆಯಬೇಕೆಂದೂ ಚೀ... ಕೋರ್ಟಿನವರು ಹುಕುಂ ಕೊಟ್ಟಿದ್ದಾರೆ.

ರಾಜಧಾನಿಯಲ್ಲಿ ನಾಟಕಗಳನ್ನು ಅಭಿನಯಿಸು...ರುವ ಗುಬ್ಬಿ ಕಂಪನಿಯವರು ಕಳೆದ 11 ನೆಯ ತಾ... ಭಾನುವಾರ ಸಾಯಂಕಾಲ ಪ್ರಭಾಮಣಿ ವಿಜಯ ನಾ... ನಾಟಕವನ್ನು ಅಭಿನಯಿಸಿ ಅದರ ಉತ್ಪತ್ತಿಯ ... 750 ರೂಪಾಯಿಗಳನ್ನು ಮ॥ ಎಂ. ವೆಂಕಟಕೃಷ್ಣ...ನವರ ಸಹಾಯ ನಿಧಿಗೆ ಉಚಿತವಾಗಿ ಕೊಟ್ಟು ತ... ಉದಾರ ವೃತ್ತಿಯನ್ನು ಪ್ರಕಾಶಪಡಿಸಿದರು. ನಾ...ಕಶಾಲೆಯ ಪ್ರೊಪ್ರೈಟರ್ ಮಿ॥ ಜಿ. ವೀ... ವೀರಣ್ಣನವರಿಗೆ ರಾಜಧಾನಿಯ ಬ್ರಾಹ್ಮಣ ಧ...

...ದಲಿಯ ಪರವಾಗಿ ರಾಜಶಿಲ್ಪಿ ವಿಶಾರದ ಮಿ॥ ...ಸುಬ್ಬರಾಯರು ಒಂದು ಬಂಗಾರದ ಪದಕವನ್ನು ...ಮಾನವಾಗಿ ಕೊಟ್ಟು ಮಿ॥ ವೀರಣ್ಣನವರ ನಿಷ್ಪಕ್ಷಪಾತವಾದ ಧರ್ಮವೃತ್ತಿಯನ್ನು ಕೊಂಡಾಡಿದರು.

...ಎನ್ನೂರೋಡಿನಲ್ಲಿರುವ ಮೆಸ್ಸರ್ಸ್ ಎಂ. ಎ. ಟಿ. ...ಚಾರ್ಯ ಕಂಪೆನಿಯವರು ಇರ್ವಿನ್ ಕಾಲುವೆ ಆಡಳಿತ...ಗಾರರಿಗೆ ಮೂರು ಡೈನಾಮೈಟ್ ಪೆಟ್ಟಿಗೆಗಳನ್ನು ರೈಲಿನಲ್ಲಿ ಕಳುಹಿಸಿದರೆಂದೂ, ಬೆಂಗಳೂರು ಗೂಡ್ಸ್ ಷೆಡ್ಡಿನಲ್ಲಿ ಅವುಗಳು ಕಳವಾದವೆಂದೂ, ಅಪಹರಿಸಿದವರಲೊಬ್ಬನು ತಾನೇ ಸಿ. ಐ. ಡಿ. ಇಲಾಖೆಯ ಮಿ॥ ನರಸಿಂಹಯ್ಯನವರಿಗೆ ಕಳುವಿನ ವಿಚಾರವನ್ನು ತಿಳಿಸಿದ್ದಲ್ಲದೆ, ತನ್ನ ಜತೆಗಾರರ ಹೆಸರುಗಳನ್ನು ಹೇಳಿದನೆಂದೂ ತಿಳಿದುಬಂದಿದೆ. ಅನಂತರ ಈ ತಿಳುವಳಿಕೆಯನ್ನು ಪಡೆದ ಪೋಲೀಸ್ ಅಧಿಕಾರಿಗಳು 2 ಪೆಟ್ಟಿಗೆಗಳನ್ನು ಬನ್ನಿಗಿರಣಿಯ ಪ್ರವೇಶದ್ವಾರದ ಹತ್ತಿರ ಹೂತಿದ್ದುದನ್ನು ತೆಗೆದರೆಂದೂ, ಇನ್ನೊಂದು ಪೆಟ್ಟಿಗೆಯನ್ನು ಕೆರೆಯಲ್ಲಿ ಬಿಸಾಡಿರುವಂತೆ ತಿಳಿದು ಸದರಿ ಕೆರೆಯನ್ನು ಶೋಧಿಸುತ್ತಿರುವರೆಂದೂ, ಮೂವರನ್ನು ದಸ್ತಗಿರಿ ಮಾಡಿರುವರೆಂದೂ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಇಂಗ್ಲೆಂಡಿನಿಂದ ಕರಾಚಿಗೆ ಟೆಲಿಫೋನ್ ಮೂಲಕ ಮಾತನಾಡುವ ಪ್ರಯತ್ನವು ನಡೆದಿರುವುದು.

ದಕ್ಷಿಣ ಅಮೇರಿಕಾಕ್ಕೆ ಸೇರಿದ ಈಕ್ವೆಡೋರ್ ಶೀಮೆಯಲ್ಲಿ ಬಹು ಕಠಿಣವಾದ ಭೂಕಂಪವಾಗಿ ಒಂದು ಪಟ್ಟಣವು ಸಂಪೂರ್ಣ ನಾಶಹೊಂದಿ 60 ಜನರು ಮೃತಪಟ್ಟಿರುತ್ತಾರೆ.

ಲಾಹೋರಿನ ರಾಜಕೀಯ ಖೈದಿಗಳಿಗೆ ದಿನ ಒಂದಕ್ಕೆ 0-12-7 ಪೈಸಂತೆ ಖರ್ಚುಮಾಡಿ ವಿಶೇಷರೀತಿಯಿಂದ ಭೋಜನವನ್ನು ಕೊಡಬಹುದೆಂದು ಪಂಜಾಬ್ ಸರ್ಕಾರದವರು ವ್ಯವಸ್ಥೆ ಮಾಡಿದ್ದಾರೆ.

ಲಾಹೋರಿನ ಪೋಸ್ಟುಮಾಸ್ಟರ್ ಜನರಲ್‍ರವರು ಬರುವ ಡಿಸೆಂಬರ್ ತಿಂಗಳಿನಲ್ಲಿ ನಡೆಯುವ ಕಾಂಗ್ರೆಸ್ಸಿನ ಕಾರ್ಯಕಲಾಪಗಳಿಗೆ ಪೋಸ್ಟ್ ಅಧಿಕಾರಿಗಳು ಯಾವಸಹಾಯವನ್ನೂ ಮಾಡಬಾರದಾಗಿ ಹುಕುಂ ಮಾಡಿರುವರಂತೆ!

ಆಫ್ರಿಕದ ಡರ್ಬಾನ್ ಎಂಬಲ್ಲಿ ಯುರೋಪ್ಯರಿಗೂ ಮೂಲನಿವಾಸಿಕರಿಗೂ ಮಾರಾಮಾರಿಯಾಗಿ ಕೆಲವು ಮೂಲನಿವಾಸಿಕರು ಮಡಿದು ಹಲವರಿಗೆ ಜಖಂ ಆಗಿತ್ತು! ಅದನ್ನು ವಿಮರ್ಶಿಸಲು ಒಂದು ಕಮಿಟಿಯು ನೇಮಕವಾಗಿದ್ದು ಇದಕ್ಕೆ ಯುರೋಪ್ಯರೇ ಕಾರಣೀಭೂತರೆಂದು ವರದಿಯು ಹೊರಬಿದ್ದಿದೆ.

ಲಂಕಾದ್ವೀಪವು ಅತಿ ವಿಸ್ತಾರವಾಗಿದ್ದು ದಕ್ಷಿಣ ಧ್ರುವದವರೆಗೆ ವ್ಯಾಪಿಸಿತ್ತೆಂದೂ ಸಿಲೋನು ಅದರ ಒಂದು ಭಾಗವೆಂದೂ ಆಫ್ರಿಕದ ಬಳಿಯಿರುವ ಮೆಡಗಾಸ್ಕರ ದ್ವೀಪಗಳೂ ಲಂಕೆಯ ಭಾಗವಾಗಿದ್ದಿರಬಹುದೆಂದೂ ರಾಯ್ ಬಹದ್ದೂರ್ ಕೇದಾರನಾಥರೆಂಬುವರು ಅಭಿಪ್ರಾಯಪಡುತ್ತಾರೆ.

ಅಫ್ಘಾನಿಸ್ಥಾನದ ಸದ್ಯಃ ಅಮೀರನಾದ ಬಚ್ಚಾಯಿಸಾಕನು ಒಂದು ದಿವಸ ತನ್ನ ಸೈನ್ಯವನ್ನು ನೋಡಲು ಹೋಗಿ ಹಿಂದಿರುಗಿ ಬರುತ್ತಿದ್ದಾಗ ಯಾರೋ ಅವನ ವೈರಿಯು ಬಂದೂಕದಿಂದ ಅವನಿಗೆ ಹೊಡೆದು ಓಡಿಹೋದನು. ದೈವವಶಾತ್ ಬಚ್ಚಾಯಿಸಾಕನಿಗೆ ಗುಂಡು ತಗುಲಲಿಲ್ಲವೆಂದು ತಿಳಿದುಬಂದಿದೆ.

ಅಮೇರಿಕದ ಮೆಕ್ಸಿಕೋದಲ್ಲಿ ಇಬ್ಬರು ಜಗಳವಾಡಿ ಪಿಸ್ತೂಲಿನಿಂದ ಹೊಡೆದಾಡಿ ಜಗಳವನ್ನು ಮುಕ್ತಾಯಮಾಡಬೇಕೆಂದು ನಿಶ್ಚಯಿಸಿ ಅದಕ್ಕಾಗಿ ಒಬ್ಬೊಬ್ಬರು ಒಬ್ಬೊಬ್ಬ ಪಂಚಾಯಿತರನ್ನು ಕರೆತಂದರು. ಪಂಚಾಯಿತರು ತಮ್ಮ ತಮ್ಮ ಕಡೆಯವರ ಹತ್ತಿರ ನಿಂತಿದ್ದು ಇವರು ಪಿಸ್ತೂಲುಗಳನ್ನು ಹಾರಿಸಿದಕೂಡಲೇ ಗುಂಡುಗಳು ಪಂಚಾಯಿತರಿಬ್ಬರಿಗೂ ತಗಲಿ ಅವರು ಕೂಡಲೇ ಮೃತರಾದರು.

ಕಳೆದ 1 ನೇ ತಾರೀಖಿನ ದಿನ ಬೆಜವಾಡದ ...ಲೂಕಿಗೆ ಸೇರಿದ ಮಂಟೇನಾ ಎಂಬ ಹಳ್ಳಿಯಲ್ಲಿ, ಒಂದು ಜಮೀನು ಸ್ವಾಧೀನದ ವಿಚಾರದಲ್ಲಿ ಮಾಲಾ ಪಂಗಡದ ರೈತರಿಗೂ ಕಮ್ಮಾ ಪಂಗಡದ ರೈತರಿಗೂ ಮಾರಾಮಾರಿ ನಡೆದು ಮಾಲಾ ಪಂಗಡದವರಿಬ್ಬರು ಸತ್ತುಹೋದರು. ಅನೇಕರಿಗೆ ಘೋರಾ ಗಾಯಗಳಾಗಿರುತ್ತವೆ. ಇದುವರೆಗೆ ಪೋಲೀಸಿನವರು 10 ಜನರನ್ನು ದಸ್ತಗಿರಿಮಾಡಿರುವರು.

ಐದು ವರ್ಷಗಳ ಹಿಂದೆ ಇಬ್ಬರು ಯುವಕರು ವಯಸ್ಸಾದ ತಮ್ಮ ತಾಯಿಯನ್ನು ವೆನಿಸ್ಸ್ಯಾಲ ಪಟ್ಟಣದಲ್ಲಿ ಬಿಟ್ಟು ದ್ರವ್ಯಸಂಪಾದನೆಗೆ ನ್ಯೂಯಾರ್ಕ್ ಪಟ್ಟಣಕ್ಕೆ ಹೋದರು. ಅಲ್ಲಿ ದ್ರವ್ಯಸಂಪಾದನೆ ಮಾಡಿ ತನ್ನ ತಾಯಿಗೆ ಬರುವಂತೆ ಹೇಳಿ ಕಳುಹಿಸಲು ಅವಳೂ ಬಂದಳು. ಮಕ್ಕಳು ಅವಳು ಬರುತ್ತಿದ್ದ ಹಡಗನ್ನು ನೋಡಲು ಹೋದರು. ಅವರನ್ನು ನೋಡಿದ ಕೂಡಲೆ ಅವಳ ಸಂತೋಷವು ಮೇರೆತಪ್ಪಿ ಅಲ್ಲಿಯೇ ಕೆಳಕ್ಕೆ ಬಿದ್ದು ಸತ್ತುಹೋದಳು.

ಬೊಂಬಾಯಿನಲ್ಲಿ ಕೆಲವು ಪಾರ್ಸಿ ಜನಗಳು ಸಮುದ್ರದಲ್ಲಿ ಸ್ನಾನಮಾಡುತ್ತಿರವಾಗ್ಗೆ ಆ ಪೈಕಿ ಒಬ್ಬ ಸ್ತ್ರೀಯು ನೀರಿನಲ್ಲಿ ಸಿಕ್ಕಿಕೊಂಡುಬಿಟ್ಟಳು. ಅವಳನ್ನು ಹಿಡಿದು ಬದುಕಿಸಬೇಕೆಂದು ಮೂವರು ಗಂಡಸರು ನುಗ್ಗಿಹೋದರು. ದುರ್ದೈವವಶಾತ್ ಆ ಮೂರು ಮಂದಿಯಿಂದಲೂ ಆಕೆಯನ್ನು ಬದುಕಿಸುವುದು ಅಸಾಧ್ಯವಾಯಿತು. ಆ ಸಮಯದಲ್ಲಿ ಸಮುದ್ರದಲ್ಲಿ ಅಲೆಗಳು ಬಹಳ ಬಿರುಸಾಗಿದ್ದಕಾರಣ ನೀರಿನಲ್ಲಿದ್ದ ಆ ನಾಲ್ಕು ಜನರು ಮೃತ್ಯುವಶರಾದರು.

ನ್ಯೂಯಾರ್ಕಿನ ಒಂದು ಕಾರಾಗೃಹದಲ್ಲಿ 1700 ಕೈದಿಗಳು ಹೇಗೋ ತಪ್ಪಿಸಿಕೊಂಡು ದಂಗೆಯೆದ್ದು, ಜೈಲಿಗೆ ಬೆಂಕಿಯಿಟ್ಟರು. ಬಂದೀಖಾನೆಯ ಆಯುಧಶಾಲೆಯನ್ನು ಹೊಕ್ಕು ಐವತ್ತು ಬಂದೂಕಗಳನ್ನೂ— 4 ಫಿರಂಗಿಗಳನ್ನೂ ವಶಪಡಿಸಿಕೊಂಡು, ಸರಕಾರದ ಸೈನ್ಯವನ್ನೆದುರಿಸಿದರು. ಸರಕಾರದವರು ತಮ್ಮ ಬಂದೀಖಾನೆಗೆ ತಾವೇ ಮುತ್ತಿಗೆ ಹಾಕಬೇಕಾಯಿತು. 24 ಗಂಟೆಗಳವರೆಗೆ ಯುದ್ಧನಡೆದು ಇಬ್ಬರು ಆಹುತಿಯಾಗಿ, ಎಲ್ಲರೂ ಹಿಡಿಯಲ್ಪಟ್ಟರು. 1 ಲಕ್ಷ ಪವನು ನಷ್ಟವಾಗಿರಬಹುದೆಂದು ಅಂದಾಜು ಹಾಕಿದ್ದಾರೆ.

ಬಾಗಲಕೋಟೆಯಲ್ಲಿ ಸ್ವಯಂಸೇವಕರು ತಮ್ಮ ದಳಕ್ಕೆ ಬೇಕಾದ ಸಹಾಯವನ್ನು ಬೇಡಲು ಮೆರವಣಿಗೆಯೊಡನೆ ಹೋಗುತ್ತಿದ್ದಾಗ ಅಲ್ಲಿನ ಮಸೀದಿಯ ಮುಂದೆ ಬ್ಯಾಂಡನ್ನು ಬಾರಿಸಿದರೆಂಬ ನೆವದಿಂದ ಅಲ್ಲಿಯ ಕೆಲವರು ಮುಸಲ್ಮಾನರು ಇವರ ಮೇಲೆ ಬಿದ್ದು ಚೆನ್ನಾಗಿ ಬಡಿದರು. ಸ್ವಯಂಸೇವಕರು ಮುಸಲ್ಮಾನರಮೇಲೆ ಕೈಮಾಡದೆ ತಮ್ಮ ತಪ್ಪನ್ನು ಒಪ್ಪಿಕೊಂಡು ಎಷ್ಟು ಕ್ಷಮೆಯನ್ನು ಬೇಡಿದರೂ ಸಾರ್ಥಕವಾಗಲಿಲ್ಲ. ಕಡೆಗೆ ಮುಸಲ್ಮಾನರ ಮುದಿಕೆಯರಾದ ಸ್ತ್ರೀಯರು ಬಂದು ಅವರಕಡೆಯವರಿಗೆ ಬೈದು ಓಡಿಸಿದರಂತೆ!

ಬೊಂಬಾಯಿಯ ರಾಮಚಂದ್ರಮಹಾದೇವ ಎಂಬವರೊಬ್ಬರು ಪಂಢರಾಪುರದ ಯಾತ್ರೆಗೆ ಪತ್ನೀಪರಿವಾರ ಸಮೇತರಾಗಿ ಹೋಗಿದ್ದು ಅಲ್ಲಿದ್ದ ಸಾಧುಗಳನ್ನು ನೋಡಿ ತಾವೂ ಸನ್ಯಾಸವನ್ನು ತೆಗೆದುಕೊಳ್ಳಬೇಕೆಂದಾಲೋಚಿಸಿ ಹೆಂಡತಿಗೆ ಹೇಳಲು ಆಕೆಯು ಮತ್ತು ಆಪ್ತೇಷ್ಟರು ಒಪ್ಪದಿರಲು ತಾವು ಇಳಿದುಕೊಂಡಿದ್ದ ಮಹಡಿಯ ಮೇಲಿನಿಂದ ಕೆಳಕ್ಕೆ ಧುಮುಕಿ ಪ್ರಾಣತ್ಯಾಗಮಾಡಿಕೊಂಡರು. ಅದನ್ನು ತಿಳಿದ ಪತ್ನಿಯೂ ಮಹಡಿಯ ಮೇಲಿನಿಂದ ಕೆಳಕ್ಕೆ ಬಿದ್ದಳು. ಆದರೆ ಈಕೆಯ ಪ್ರಾಣವು ಹೋಗದಿದ್ದುದರಿಂದ ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳು.

ಜರ್ಮನಿಯಲ್ಲಿ ಹೊಸ ಮಾದರಿಯ ಒಂದು ಟಪಾಲು ಪೆಟ್ಟಿಗೆಯು ತಯಾರಿಸಲ್ಪಟ್ಟಿರುವುದು. ಕಾಗದ ಪಾರ್ಸಲುಗಳನ್ನು ರಿಜಿಸ್ಟರ್ ಮಾಡತಕ್ಕವರು ತಾವು ತಂದ ಪ್ಯಾಕೆಟನ್ನು ಆ ಯಂತ್ರದ ಒಂದು ಭಾಗದಲ್ಲಿರಿಸಿದ ಕೂಡಲೇ ಒಂದು ಮುಳ್ಳು ಅದಕ್ಕೆ ಕೊಡಬೇಕಾದ ಹಣವನ್ನು ಸೂಚಿಸುವುದು. ಅಷ್ಟು ಹಣವನ್ನು ಹಾಕಿದಕೂಡಲೇ ಒಂದು ಚೀಟಿಯು ಹೊರಗೆ ಬರುವುದು. ಅದನ್ನು ಪಾರ್ಸೆಲಿಗೆ ಹಚ್ಚಿ ಪೆಟ್ಟಿಗೆಯೊಳಗೆ ಹಾಕಲು, ಹಣ ಪಾವತಿಯ ರಶೀದಿಯು ಹೊರಡುತ್ತದೆ. ಅಂತೂ ಇನ್ನು ಮುಂದೆ ಆ ಕೆಲಸಕ್ಕೆ ಕಾರಕೂನನು ಅಗತ್ಯವಿಲ್ಲದಂತಾಗುವುದು.

ಇದೇ ತಿಂಗಳು 6 ನೆ ತಾ॥ ದಿನ ಬೆಳಿಗ್ಗೆ 6½ ಘಂಟೆ ಸಮಯದಲ್ಲಿ ಮದರಾಸಿನ ಟ್ರಿಪ್ಲಿಕೇನ್‌ಮಾರ್ಗವಾಗಿ ಹೋಗುತ್ತಿದ್ದ 29 ವರ್ಷ ವಯಸ್ಸುಳ್ಳ ಕಾಸಿಯಾಚಾರ ಎಂಬ ಅಕ್ಕಸಾಲಿಗನು ಹೋಗುತ್ತಿದ್ದಹಾಗೆ ಕೆಳಗೆ ಬಿದ್ದು ಆರ್ತಧ್ವನಿಮಾಡಿದನು. ಬೀದಿಯ ಸುತ್ತಮುತ್ತಲಿನ ಜನಗಳು ಓಡಿಬಂದು ನೋಡುವಲ್ಲಿ ಅವನ ಎದೆಗೆ ಚಾಕುವಿನಿಂದ ಬಲವಾಗಿ ತಿವಿದ ಗಾಯಗಳಿಂದ ವಿಪರೀತ ರಕ್ತ ಸುರಿಯುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಅವನು ಪ್ರಾಣಬಿಟ್ಟನು. 18 ವರ್ಷದ ಒಬ್ಬ ತ್ಯಾಗರಾಜಾಚಾರ ಎಂಬುವನು ಮೃತನನ್ನು ಖೂನಿಮಾಡಿದನೆಂದು ತಿಳಿದು ಪೋಲೀಸಿನವರು ಅವನನ್ನು ದಸ್ತಗಿರಿಮಾಡಿ ತನಿಖೆ ನಡೆಸುತ್ತಿರುವರು.

ಪೇಶಾವರಿನಲ್ಲಿ ಆರ್. ಬಿ. ಹರಿಜೀಮಲ್ ಅಂಡ್ ಸನ್ಸ್‌ರವರ ಸೋಡಾ ಕಾರ್ಖಾನೆಯ ಮ್ಯಾನೇಜರವರ ಏಳುವರ್ಷ ವಯಸ್ಸಿನ ಮುಸಮುತ್ ಭಿಂಬೋ ಎಂಬ ಮಗಳು 2 ನೆಯ ತಾರೀಕಿನಿಂದ ಎಲ್ಲಿಯೋ ತಪ್ಪಿಸಿಕೊಂಡಿದ್ದಳು. ಪೋಲೀಸಿನವರು ಮೂರು ದಿವಸ ಹುಡುಕಿದಮೇಲೆ ಅವಳ ಮೃತಶರೀರವು ಸ್ಮಶಾನದ ಒಂದು ಹಳ್ಳದಲ್ಲಿ ಬಿದ್ದಿದ್ದಿತು. ಕುತ್ತಿಗೆಯಲ್ಲಿ ಕತ್ತಿಯ ಪೆಟ್ಟೊಂದಿತ್ತು. ಕೆಲವು ದಿನಗಳ ಹಿಂದೆ ಅದೇ ಕಾರ್ಖಾನೆಯ ಹಿಂದೂ ಇಂಜನಿಯರ್ ಒಬ್ಬನು ಖೂನಿಮಾಡಲ್ಪಟ್ಟಿದ್ದನು. ಇಲ್ಲಿಯವರೆಗೆ ಇಬ್ಬರನ್ನು ದಸ್ತಗಿರಿ ಮಾಡಿರುವುದಾಗಿಯೂ ಅವರಲ್ಲೊಬ್ಬನು ತನ್ನ ತಪ್ಪಿತವನ್ನು ಒಪ್ಪಿಕೊಂಡಿರುವುದಾಗಿಯೂ ತಿಳಿದುಬರುತ್ತದೆ.

ಕಲ್ಕತ್ತಾಪಟ್ಟಣದ ಟಿಟಿಗರ್, ಚಂಪದಾನಿ, ಬೆಲಿಯಗಟ್ಟ, ರಿಷ್ರಾ, ಕಂಕಿನಾರಾ ಮತ್ತು ಭಟ್‌ಪಾರಾ ಈ ಸ್ಥಳಗಳಲ್ಲಿರುವ 35 ಗಿರಣಿಗಳ ಒಂದು ಲಕ್ಷ ಮೇಲ್ಪಟ್ಟ ಕೆಲಸಗಾರರು ಮುಷ್ಕರ ಹಿಡಿದು ಕೆಲಸವಿಲ್ಲದೆ ಸುಮ್ಮನೆ ಇರುವರು. ಮುಷ್ಕರಗಾರರು ಹೊಡೆದಾಟವನ್ನು ನಡೆಯಿಸಿ, ತಮ್ಮ ಕಷ್ಟಗಳು ಪರಿಹಾರವಾಗುವವರೆಗೂ ಕೆಲಸಕ್ಕೆ ಹೋಗಕೂಡದೆಂದು ನಿರ್ಧರಿಸಿಕೊಂಡಿರುವರು. ಆಯುಧಪಾಣಿಗಳಾದ ಪೋಲೀಸಿನವರು ಗಿರಣಿ ಪ್ರದೇಶಗಳಲ್ಲೆಲ್ಲ ಬಲವಾದ ಉಸ್ತುವಾರಿ ಮಾಡುತ್ತಿರುವರು. ಸೆಣಬು ಕಾರ್ಖಾನೆಯ ಕೆಲಸಗಾರರ ಯೂನಿಯನ್ನಿನ ಎಂಟು ಜನ ಸ್ವಯಂಸೇವಕರನ್ನು ಪೋಲೀಸಿನವರು ದಸ್ತಗಿರಿಮಾಡಿರುವರು. ಆಗ ಮುಷ್ಕರಗಾರರು ಶಾಂತಭಾವದಿಂದಿದ್ದುದರಿಂದ ಯಾವ ಗಲಾಟೆಯು ನಡೆಯಲಿಲ್ಲ. ಈಗಾಗಲೆ ಒಂದು ಸಭೆ ನಡೆಯಿತೆಂದೂ, ಅದರಲ್ಲಿ ಯಾವ ಇತ್ಯರ್ಥವೂ ಆಗಲಿಲ್ಲವೆಂದೂ ತಿಳಿದುಬಂದಿದೆ. ಅನೇಕ ಕೆಲಸಗಾರರ ಮುಖಂಡರನ್ನು ದಸ್ತಗಿರಿ ಮಾಡಿ ಅವರ ಒಳ್ಳೆಯ ನಡತೆಗೆ ಜಾಮೀನು ಕೊಡಬೇಕೆಂದು ಅಧಿಕಾರಿಗಳು ಕೇಳುತ್ತಿರುವರು.

ಸಾಮಾನ್ಯವಾಗಿ ಇಂಗ್ಲೆಂಡಿನಲ್ಲಿ ಅಗಸ್ಟ ... ಯವೇ ಬೇಸಿಗೆ ತಿಂಗಳು. ಅನೇಕಾನೇಕ ಪ್ರಜೆಗಳು ...ಗಳಿಂದ ಹೊರಟು ವಿಹಾರಾರ್ಥವಾಗಿ ಸಮುದ್ರತೀರಗಳಿಗೆ ಹೋಗುವುದುಂಟು. ಅಗಸ್ಟ ತಿಂಗಳಲ್ಲಿ ಮೊದಲನೆಯ ಸೋಮವಾರ ಬ್ಯಾಂಕುಗಳಿಗೆ ರಜಾ ಕೊಡುತ್ತಾರೆ. ಸಾಮಾನ್ಯವಾಗಿ ಆ ದಿವಸ ಇಂಗ್ಲೆಂಡಿನಲ್ಲೆಲ್ಲಾ ಸಮಸ್ತ ಕಚೇರಿಗಳೂ, ಕಾರ್ಯಾಲಯಗಳೂ, ಅಂಗಡಿಗಳೂ ಮುಚ್ಚಿರುವವು. ಈ ವರುಷ ಬೇಸಿಗೆ ತಾಪವು ಹೆಚ್ಚಾಗಿದ್ದಿತು. ಆದ್ದರಿಂದ ಪ್ರಜೆಗಳು ತಮ್ಮ ಮನೆಗಳನ್ನು ತ್ಯಜಿಸಿಹೋಗಲು ವಿಶೇಷ ಆತುರಪಟ್ಟರು. ಲಂಡನ್ ಮೊದಲಾದ ಅನೇಕ ದೊಡ್ಡ ಪಟ್ಟಣಗಳಿಂದ ಸಮುದ್ರತೀರವನ್ನು ಕುರಿತು ಹೊರಟ ಪ್ರಜೆಗಳು ಬಹಳ ಹೆಚ್ಚಾಗಿದ್ದರು. ಈ ತಿಂಗಳು ತಾ॥ 2-3 ನೇ ಶುಕ್ರವಾರವೂ ಶನಿವಾರವೂ ಸಮುದ್ರತೀರದಲ್ಲಿರುವ ಪಟ್ಟಣಗಳಿಗೆ ಹೋದ ರೈಲ್ ಗಾಡಿಗಳು ಪ್ರಯಾಣಿಕರಿಂದ ಕಿಕ್ಕಿರಿಯುತ್ತಿದ್ದವು. ಇದಲ್ಲದೆ ಸಾವಿರಾರು ಪ್ರಜೆಗಳು ಮೋಟರುಗಳಲ್ಲೂ ಬಸ್ಸುಗಳಲ್ಲೂ ಹೊರಟುಹೋದರು. ಇದರಿಂದ ರಸ್ತೆಗಳಲ್ಲಿ ಅನಾಹುತಗಳು ಸಂಭವಿಸಿ 20 ಜನಗಳು ಅಕಾಲ ಮರಣಕ್ಕೆ ಗುರಿಯಾದರೆಂದೂ, 70 ಜನಗಳಿಗಿಂತಲೂ ಹೆಚ್ಚು ಮಂದಿ ಗಾಯಪಟ್ಟರೆಂದೂ ತಿಳಿದುಬಂದಿದೆ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ಗದಗ ತಾಲೂಕ ಬಳಗಾನೂರ.

ಇಲ್ಲಿ ಪ್ರತಿವರ್ಷದಂತೆ ವೇ|| ನನ್ನಪ್ಪಯ್ಯಸ್ವಾಮಿಗಳವರ ಮಠದಲ್ಲಿ ಇದೇ ಶುಕ್ಲನಾಮ ಸಂವತ್ಸರದ ಶ್ರಾವಣ ಶು|| 1 ಮಂಗಳವಾರದಿಂದ ಪ್ರತಿನಿತ್ಯ ಪ್ರಾತಃಕಾಲ 6 ಗಂಟೆಯಿಂದ 11 ಗಂಟೆಯವರೆಗೆ ಗದ್ದುಗೆಯ ಪೂಜಾಸಮಾರಂಭವೂ, ಶಿವಭಜನೆಯೂ, ನಂತರ ಅನ್ನಸಂತರ್ಪಣೆಯೂ, ಸಾಯಂಕಾಲ 6 ಘಂಟೆಯಿಂದ 8 ಗಂಟೆಯವರೆಗೆ ಶ್ರೀ ಚರಣಬಸವೇಶ್ವರ ಪುರಾಣಶ್ರವಣವೂ ಅನಂತರ 12 ಗಂಟೆಯವರೆಗೆ ಶಿವಭಜನೆಯೂ ನಡೆಯುವದು. ಸದರಿ ಮಠದಪತಿಯಿಂದ ವೇ|| ರಾಚೋಟಿಶಾಸ್ತ್ರಿಗಳು ಕಬ್ಬಿನ ಕಿರೂರ ಹಿರೇಮಠ ಇವರು ಶ್ರಾವಣಮಾಸ ಪೂರೈಸುವ ಪರ್ಯಂತರ ಪ್ರತಿಯೊಂದು ಗ್ರಾಮಕ್ಕೆ ಹೋಗಿ ಒಂದೊಂದು ದಿವಸ ಪುರಾಣ ಶ್ರವಣವನ್ನು ಮಾಡಲಿಕ್ಕೆ ಒಪ್ಪಿಕೊಂಡು ಹೊರಟಿರುತ್ತಾರೆ. ಇದಲ್ಲದೆ ಮಠದಲ್ಲಿ ಶ್ರೀಮದನ್ನದಾನಿ ಶಿವಯೋಗೀಂದ್ರವೆಂಬ ನಾಮದಿಂದ ಸಂಸ್ಕೃತ ಪಾಠಶಾಲೆಯೂ ನಿತ್ಯದಾಸೋಹವೂ ಇರುವದು. ಕಾರಣ ಯಾವತ್ತೂ ಸ್ಥಳ ಪರಸ್ಥಳದ ಜನರು ಶ್ರವಣದ ಕಾಲಕ್ಕೆ ಪ್ರತಿನಿತ್ಯ ಬರಬೇಕಾಗಿ ವಿನಯ ವಿನಂತಿಯು. ಮತ್ತು ಪಾಠಶಾಲೆಗೆ ಬರತಕ್ಕ ವಿದ್ಯಾರ್ಥಿಗಳೂ ಮುಲ್ಕಿ ಪರೀಕ್ಷೆ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳೂ ಸಹ ತಮ್ಮ ತಮ್ಮ ಊರಗ್ರಾಮಸ್ಥರ ಸರ್ಟಿಫಿಕೇಟನೊಡನೆ ಕೆಳಗಿನ ಪತ್ತೆಗೆ ಅರ್ಜಿ ಕಳುಹಿಸಬೇಕು. ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವೆಂಕಪ್ಪ ಭೀಮಪ್ಪ ಹಿತ್ತಲಮನಿ. ವ್ಯವಸ್ಥಾಪಕ. } ಬಸೆಟ್ಟೆಪ್ಪ ವೀರಪ್ಪ ವಾಲಿ. ಸಂಸ್ಕೃತಪಾಠಶಾಲೆಯ ಮ್ಯಾನೇಜರ ಬಳಗಾನೂರ.

ತಾ|| ಗದಗ, ಜಿ|| ಧಾರವಾಡ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ವಾಗ್ಘೋಷ ನಿರೂಪಣೆ

ಅದವಾನಿ

1929 ನೆಯ ಇಸವಿ ಜುಲೈ ತಿಂಗಳು 27 ನೆಯ ತಾರೀಖಿನ ದಿವಸ ಆದವಾನಿ ಮಠದ ಮಹಾತ್ ಮುಖ್ಯಸ್ಥರು ದೈವಾಚಾರದ ಯಜಮಾನರೇ ಮುಖ್ಯಸ್ಥರ ಕಡೆಯಿಂದ ಆದ ನಿರೂಪಣ— ಆದವಾನಿ ಮೌಜೆ ... ಗೌರಾಸಾನಿಗೆ ಮೌಜೇವೀರಾಸಾನಿಯು ... ಮಠಮಹಾತ್ ದೈವದವರಿಂದ ವಾಕ್‌ದೋಷ ... ಸಮಾಜಕ್ಕೆ ದೂರರಾಗಿದ್ದಳು ಈಕೆಗಾಗಿ ಶ್ರೀ ಜಗದ್ಗುರು ಪರ್ವತಸಿಂಹಾಸನ ಮಹಾಸ್ವಾಮಿಗಳವರು ಮಾಡಿದ ಪ್ರಸಿದ್ಧ ಪತ್ರಿಕಾಪ್ರಕಾರವಾಗಿ ಸದರಿ ಗೌರಾಸಾನಿಯು ಮೇಲ್ಕಂಡ ದೈವಾಚಾರದವರಿಗೆ 25-7-29 ನೆಯ ತಾರೀಖಿನಲ್ಲಿಟ್ಟ ಅರ್ಜಿಯನ್ನು ಪರಾಂಬರಿಸಿ 27-7-29 ನೆಯ ತಾರೀಖಿನ ದಿವಸ ವಾಗ್ಘೋಷ ನಿರೂಪಣೆ ಬಗ್ಗೆ ವಿಧಿಪ್ರಕಾರ ಪ್ರಾಯಶ್ಚಿತ್ತ ಮಾಡಬೇಕೆಂದು ಆಜ್ಞೆಮಾಡಿ ಸದರಿ ಗೌರಾಸಾನಿ ಮನೆತನದಲ್ಲಿ ವೀರಶೈವಾಚಾರಧರ್ಮದ ಪದ್ಧತಿಯ ಪ್ರಕಾರವಾಗಿ ಮೇಲ್ಕಂಡ ಮಠ ಮಹಾತ್ ಮುಖ್ಯಸ್ಥರು ಆಚರಿಸುವ ಬಗ್ಗೆ ತೀರ್ಮಾನಮಾಡಿರುತ್ತಾರೆ. ಇದೇ ಸಂದರ್ಭದಲ್ಲಿ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಸಾತನೂರು ಬಸೆಟ್ಟೆಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ಅನುಷ್ಠಾನ ಸಮಾಪ್ತಿಯ ಮಹಾಸಮಾರಂಭ

ಸಿಂಧಖೇಡ.

ನಿಜಾಮ ಇಲಾಖಾ ಸಿಂಧಖೇಡವೆಂಬ ಗ್ರಾಮದಲ್ಲಿ ಶ್ರೀಯೋಗಿ ಅಮರೇಶ್ವರಾಚಾರ್ಯ ಮಹಾಸ್ವಾಮಿ ಸಂಸ್ಥಾನ ಕಹಾಜರ್ ಅವರಾದ ಇವರು ಇದೇ ಚೈತ್ರ ಶುದ್ಧ ೧ ಮೊದಲ್ಗೊಂಡು ಆಷಾಢ ಶುದ್ಧ 2 ರವರೆಗೂ ಸದರಿ ಗ್ರಾಮದ ಬಹಿಪ್ರದೇಶದಲ್ಲಿ ಬಿಲ್ವವನದಿಂದಲೂ ಭವ್ಯವಾದ ದೇವಾಲಯದಿಂದಲೂ ರಮ್ಯವಾದ ನಿರ್ಜನಸ್ಥಾನವನ್ನು ನೋಡಿ, ಫಲಾಹಾರದಿಂದಲೂ ಮೌನವ್ರತದಿಂದಲೂ ಈಶಪ್ರೀತ್ಯರ್ಥವಾಗಿ ಅನುಷ್ಠಾನವನ್ನು ಆಚರಿಸಿದರು. ಆಷಾಢ ಶುದ್ಧ ೩ ಸೋಮವಾರ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಅನುಷ್ಠಾನ ಸಮಾಪ್ತಿಯಾಯಿತು. ಅನಂತರ ಮಧ್ಯಾಹ್ನ 4 ವರೆಗೆ ಮಹಾಗಣಾರಾಧನೆಯು ನಡೆದು, 4 ರಿಂದ ರಾತ್ರಿ 11 ವರೆಗೆ ಭಜನೆ ಮತ್ತು ಪುರಾಣ ಶ್ರವಣವು ನಡೆಯಿತು. 3 ಮಂಗಳವಾರ ಬ್ರಾಹ್ಮೀಮುಹೂರ್ತದಮೇಲೆ ಸ್ಥಳಪರಸ್ಥಳಗಳಿಂದ ಬಂದ ಅನೇಕ ಭಕ್ತಮಾಹೇಶ್ವರರ ದೀಕ್ಷಾ, ಅಯ್ಯಾಚಾರಗಳನ್ನು ಮಾಡಿ, ಭೋಜನಾನಂತರ ಸಾಯಂಕಾಲ 4 ರಿಂದ 10 ರವರೆಗೆ ಭಜನೆ ಹಾಗೂ ಶಿವಕೀರ್ತನೆಯು ನಡೆದು. ಆ ಮೇಲೆ ಪುರಾಣಸಮಾಪ್ತಿಯಾದ ಕಡತವಿ ತಳಿರುತೋರಣಾದಿಗಳಿಂದ ಶೋಭಿಸುತ್ತಿರುವ ಬೀದಿಗಳಲ್ಲಿ ಮೋಟಾರ್, ಕುದುರೆ, ಸವಾರಬ್ಯಾಂಡ್, ಬಾಜಿ ಮೊದಲಾದ ಕಿಟ್ಟುಂಬಿಗಳೊಡನೆ ಮಹಾಸ್ವಾಮಿಗಳು ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಹೊರಟಿತು. ಶುದ್ಧ 4 ಬುಧವಾರ ಬೆಳಿಗ್ಗೆ 6 ಘಂಟೆಗೆ ಸರಿಯಾಗಿ ಸದರಿ ಶ್ರೀಯೋಗಿ ಅಮರೇಶ್ವರಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಪ್ರಥಮದಲ್ಲಿ ಸಿಂಧಖೇಡ ಬಾಲ ಸಮಾಜದವರಿಂದ ಮಧುರವಾಗಿ ಈಶಸ್ತವನ ಹಾಗೂ ಸ್ವಾಗತಪರವಾದ ಪದಗಳು ಹಾಡಲ್ಪಟ್ಟವು. ಅನಂತರ ಸ್ವಾಗತಾಧ್ಯಕ್ಷರಾದ ಲಾತೂರ ವೇ|| ಶ್ರೀ ವಿರೂಪಾಕ್ಷದೇಶೀಕೇಂದ್ರರವರು ಪಂಡಿತಪಾಮರರಿಗೂ ಕೂಡ ತಿಳಿಯುವಂತೆ ಒಳ್ಳೆ ಸರಸವಾಗಿ ಭಾಷಣಮಾಡಿದರು. ಬಳಿಕ ವೇ|| ವೀರಭದ್ರಶಾಸ್ತ್ರಿ ಅವಸೆ, ವೇ|| ಸಿದ್ಧವೀರಶಾಸ್ತ್ರಿ ಬನ್ನಟ್ಟಿ, ವೇ|| ಬಾಳಲಿಂಗಸ್ವಾಮಿಗಳು ವೈರಾಗಳರ, ವೇ|| ಸಂಗಯ್ಯಾಸ್ವಾಮಿ ವಕೀಲ ಚಾಕುರಕರ, ಮ|| ರಾ|| ಚನ್ನಪ್ಪ ವಾರದ ಅಂಬುಲಗೇಕರ, ಮ|| ರಾ|| ಚನ್ನಪ್ಪ ನೀಲಂಗೆ ಲಾತೂರ, ಮ|| ರಾ|| ಶಿದ್ರಾಮಪ್ಪಾ ಶೆಟ್ಟಿಗಾರ ಚಹ್ವಾಣ ಮ|| ರಾ|| ಪಂಡರೀನಾಥ ವಾರವಾಡಿ ನೀಲಂಗಾ, ಮ|| ರಾ|| ಮಾಸ್ತರ್ ವಾಮನಗೋವಿಂದ ಭಾತಮ್ರೇಕರ ಮೊದಲಾದವರು ಧಾರ್ಮಿಕ, ನೈತಿಕ ಸಾಮಾಜಿಕ, ಶೇತಕಿ, ಉದ್ಯೋಗ ಇತ್ಯಾದಿ ವಿಷಯಗಳಮೇಲೆ ಉಪನ್ಯಾಸಮಾಡಿದಬಳಿಕ ನೀಲಂಗಿಯಲ್ಲಿ ಇಂಗ್ಲಿಷ್ ಹಾಗೂ ಉರ್ದು ಕಲಿಯತಕ್ಕ ವಿದ್ಯಾರ್ಥಿಗಳಿಗಾಗಿ ಶ್ರೀಮಂತ ಅಣ್ಣಾಸಾಹೇಬ ಪತ್ತಿ ಸಿಂಧಖೇಡ ಇವರ ಉದಾರಾಶ್ರಯದಿಂದೊಂದು ಬೋರ್ಡಿಂಗನ್ನು ಸ್ಥಾಪಿಸಬೇಕೆಂದು ಸರ್ವಾನುಮತದಿಂದ ಠರಾವು ಪಾಸಾಯಿತು. ಅನಂತರ ಸಭೆಗಾಗಿ ದೂರದೂರದಿಂದ ಬಂದ ಸಹಾನುಭೂತಿಪರವಾದ ತಾರ ಮತ್ತು ಪತ್ರಗಳು ಓದಲ್ಪಟ್ಟಮೇಲೆ ಅಧ್ಯಕ್ಷರಾದ ಮಹಾಸ್ವಾಮಿಗಳು ತಮ್ಮ ದಿವ್ಯವಾಣಿಯಿಂದ ಸಕಲ ಉಪನ್ಯಾಸಕರ ವಿಷಯದ ಸಾರವನ್ನು ಕ್ರೋಢೀಕರಿಸಿ, ಯೋಗ್ಯವಿಚಾರದಿಂದ ಉಪಸಂಹಾರರೂಪ ಭಾಷಣವನ್ನು ಮಾಡಿ ಸಭಿಕರನ್ನು ಅತ್ಯಾನಂದಗೊಳಿಸಿದರು. ಪಶ್ಚಾತ್ ಸರ್ವರ ಆಭಾರಮನ್ನಿಸಿ, ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಈ ಸಮಾರಂಭಕ್ಕಾಗಿ ಬದರ್‌ಪೂರ, ಲಾತೂರ, ಬಾರ್ಶಿ, ಅವಸೆ, ನೀಲಂಗಿ, ಹುಮನಾಬಾದ, ಕಲ್ಯಾಣ, ಉದಗೀರ, ಮೊದಲಾದ ಸ್ಥಳಗಳಿಂದ ಪಟ್ಟಚರಾಧಿಕಾರಿಗಳೂ ಭಕ್ತಮಾಹೇಶ್ವರರೂ ಆಗಮಿಸಿದ್ದರು. ಮೂರು ದಿವಸಗಳವರೆಗೆ ಎಲ್ಲಿ ನೋಡಿದರೂ ಶಿವಭಜನೆ, ಶಿವಕೀರ್ತನ, ಶಿವನಾಮಘೋಷ, ಶಿವಕಥಾಶ್ರವಣಗಳೇ ನಡೆದದ್ದರಿಂದ ಸದರಿ ಸ್ಥಾನವು ಭೂಕೈಲಾಸದಂತೆ ಒಪ್ಪುತಿತ್ತು. ಇದರ ಅತ್ಯಂತ ಸುಮಾರು ಐದಾರು ಸಾವಿರ ರೂಪಾಯಿಗಳ ಖರ್ಚನ್ನು ದಾನಶೂರರಾದ ಮ|| ರಾ|| ಅಣ್ಣಾಸಾಹೇಬ ಪತ್ತಿ ಸಿಂಧಖೇಡ ಇವರೇ ವಹಿಸಿಕೊಂಡಿದ್ದರು. ಪೀಠಾಧಿಕಾರಿಗಳೇ ಮೊದಲಾದ ಮಾಹೇಶ್ವರ ವರ್ಗದವರನ್ನೆಲ್ಲ ಉತ್ತಮವಸ್ತ್ರಭೂಷಣಾದಿಗಳಿಂದಲಂಕರಿಸಿದರಲ್ಲದೆ ಭೂರಿದಕ್ಷಿಣೆಗಳನ್ನು ಸಮರ್ಪಿಸಿ, ಸಂತೋಷಪಡಿಸಿದರು. ಈ ಅಭೂತಸಮಾರಂಭವನ್ನು ನೋಡಿದವರೆಲ್ಲರೂ ಇದೆಲ್ಲವೂ ಆ ಯೋಗಿಗಳ ತಪೋಬಲವೆಂತಲೇ ಹೇಳುತ್ತಿದ್ದರು. ಸದ್ಯ ಈ ಮಹನೀಯರು ಕಾಶಿಯಲ್ಲಿ ಶಾಸ್ತ್ರಾಭ್ಯಾಸ ಮಾಡುತ್ತಿದ್ದು, ಈಗಾಗಲೇ ಇವರಿಂದಾಗುತ್ತಿರುವ ದೇಶೋನ್ನತಿಯ ಮಹತ್ಕಾರ್ಯವನ್ನು ನೋಡಿದರೆ ಹಿಂದುಳಿದ ನಿಜಾಮ ಪ್ರಾಂತವನ್ನು ಇವರು ಸ್ವಲ್ಪ ದಿವಸದಲ್ಲಿಯೇ ಸುಧಾರಿಸಬಹುದೆಂದು ನಿಶ್ಚಯದಿಂದ ಹೇಳಬಹುದು. ಇಂತಹ ಸ್ವಾಮಿಗಳೂ, ನಿಜವಾದ ಸಮಾಜದ ಕಳಕಳಿಯುಳ್ಳ ಮ|| ರಾ|| ಅಣ್ಣಾಸಾಹೇಬ ಪತ್ತಿ ಸಿಂಧಖೇಡ ಇವರಂತಹ ಸ್ವಾರ್ಥತ್ಯಾಗಿಗಳೂ ಯಾರಿಗೆ ತಾನೆ ಸ್ತುತ್ಯರಾಗುವದಿಲ್ಲ?

ಓರ್ವ ಪ್ರತ್ಯಕ್ಷದರ್ಶಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ನೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.

ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.

ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾಸ್ತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [19]

ಎಂ. ಎಸ್. ಗಂಗಂಣ ಮತ್ತು ಲೋಕಂಣ

ರೇಶ್ಮೆ ಜವಳಿ ವ್ಯಾಪಾರಿಗಳು, ನೊಳಕಾಲ್ಮುರು.

ಖಾತೆಕಿರ್ದಿ ಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವೋನಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ, ಗದಗ.**

[2] ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ತಡಸಂಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋದವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, '**ಕೊಡಗಿನ ಗುಡುಗುಡು!**' (ಛಳಿ) '**ಸುಡುಸುಡು!**' (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಹಿಡಿತವಾಗಿಯೂ ಪೂರ್ಣ ಬಿಟ್ಟೋಡುವುವು.

ಇಂದೇ ದೃಢಸಂಕಲ್ಪದಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [2]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0. 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಮದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಔಷಧಸೀಸೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "**ಆರೋಗ್ಯಚಂದ್ರಿಕೆ**" ಯೆಂಬ ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಆರೋಗದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ **ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಪೇಟ್ರಿಯಟ್"** ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"ಆನರಬಲ್ **ಡಾಕ್ಟರ್ ಯು. ರಾಮರಾವ್** ಮತ್ತು ಅವರ ಮಕ್ಕಳು **ಡಾಕ್ಟರ್ ಯು. ಕೃಷ್ಣರಾವ್** ಎಂ. ಬಿ. ಬಿ. ಎಸ್. ಇವರಿಬ್ಬರೂ ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾಯಿಗಳಿಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಚುರವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ರೈಲುಸ್ಟೇಷನುಗಳಲ್ಲಿರುವ ಮೆಸರ್ಸ್ **ಹಿಗ್ಗಿನ್ ಬಾಥಮ್ಸ್** ಕಂಪೆನಿಯವರ ಬುಕ್‌ಸ್ಟಾಲ್‌ಗಳಲ್ಲೆಲ್ಲಾ ನಮ್ಮ ಸಂಚಿಕೆಗಳು ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[8] **ಮ್ಯಾನೇಜರ್, ಆರೋಗ್ಯಚಂದ್ರಿಕೆ,** 323, ತಂಬುಶೆಟ್ಟಿ ಬೀದಿ, **ಮದರಾಸು.**

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಟರ್ಡ

ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಶಪುಷ್ಪ, ಕಾಲಿಮಕಂದ, ಮಧುಕಂದ, ಜನಾಕಂಧ, ಕಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಶತಾವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಗಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ತಮಿಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮಖಾನಾ, ಬೀಜಬಂದ, ಹರಣಜೋರಿ, ಮುಂಗಲೀಬೀವಾಳೆ, ಮರ್ಜಾನಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇಂಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ... ಕಲ್ಲುಸಕ್ಕರೆ. ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ... ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [6]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಶೈಲಾಸೀಯ ಮಹೌಷಧರಸವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರು ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಸತ್ಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲಿಯ ಶೀಶೆ ೧ ಕ್ಕೆ ೧೨ ಆಣೆ ಸ್ತ್ರೀ. ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[20] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಒಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಿಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೨ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೯೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆಸ್ಥಾನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂರ್ಣ ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾತರು ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರಚಿಸುವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ವೀರಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ಈ ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	2-0-0
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	1-8-0
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	1-0-0

ವಿಳಾಸ:— ವೇ|| ಚನ್ನಯ್ಯ ಹೊಸಮಠ,
ಪೋಸ್ಟು ಹರಿಹರ, ಡಿ|| ಚಿತ್ರದುರ್ಗ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಬದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ನೂರೆಂಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಒಳ್ಳೆಯ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪೦-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮೆಟೆಡ್

[8] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ ನೇ ಆಗಸ್ಟ್ ೧೯೨೯ [ಸಂಚಿಕೆ ೧೬.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದ್ದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪರಳಿಪ್ರಕರಣದ ತೀರ್ಮಾನವು ವೀರಶೈವರಿಗೆ ಜಯವು.

ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಪ್ರಸಿದ್ಧವಾಗಿರುವ ಪರಳಿಯ ವೈದ್ಯನಾಥಲಿಂಗಕ್ಕೆ ವೇದೋಕ್ತ ಮಂತ್ರಗಳಿಂದ ಯಾವಾಗಲೂ ವೀರಶೈವರು ಅಭಿಷೇಕ ಮಾಡುತ್ತ ಬಂದಿರುವದು ಜಗತ್ಪ್ರಸಿದ್ಧವೇ ಆದೆ. ಹೀಗಿದ್ದರೂ ಕೆಲವರು ಅಸೂಯಾಳುಗಳಾದ ಸ್ಮಾರ್ತರು ವೀರಶೈವರಿಗೆ ಅಧಿಕಾರವಿಲ್ಲವೆಂದು ಕೋರ್ಟಿನಲ್ಲಿ ಮೂರು ವರ್ಷಗಳ ಹಿಂದೆ ವ್ಯಾಜ್ಯವನ್ನು ನಡೆಯಿಸಿದ್ದರಷ್ಟೆ! ಈ ವ್ಯಾಜ್ಯವು ಹೈದರಾಬಾದಿನಲ್ಲಿ ಮೂರು ಜನ ಜಡ್ಜಿಗಳಲ್ಲಿ ನಡೆದು ವೀರಶೈವರ ಪರವಾಗಿ ಆಗಿತ್ತು. ಆದರೆ ಕೌನ್ಸಿಲ್ಲರ ಸಹಿಯಾಗಿ ಘನವನ್ನು ಹೊಂದಿದ ನೈಜಾಮರವರ ಸಹಿಯಾಗುವದಕ್ಕಾಗಿ ನಿಂತಿತ್ತು. ಈಗ ಸಹಿಯಾಗಿ ಹೊರಬಿದ್ದಿರುವದು ಸಮಗ್ರ ವೀರಶೈವ ಸಮಾಜಕ್ಕೆ ಅಪಾರವಾದ ಆನಂದವೆನಿಸಿದೆ. ನ್ಯಾಯವನ್ನು ತೋರಿಸಿದ ನೈಜಾಂ ಸರಕಾರಕ್ಕೆ ವೀರಶೈವ ಸಮಾಜವು ಅತ್ಯಂತ ಋಣಿಯಾಗಿರುತ್ತದಲ್ಲದೆ ಈ ಪ್ರಕರಣದಲ್ಲಿ ಅತ್ಯಂತ ಶ್ರಮವನ್ನು ವಹಿಸಿ ಕಾರ್ಯವನ್ನು ಮಾಡಿದ ಸ್ವರ್ಗವಾಸಿರಾಯ ಬಾಲಮುಕುಂದ ಸಾಹೇಬರನ್ನು ಎಷ್ಟು ಬಣ್ಣಿಸಿದರೂ ತೀರದಾಗಿದೆ. ಈ ತೀರ್ಮಾನದಲ್ಲಿರತಕ್ಕ ಎಲ್ಲ ವಿಷಯಗಳನ್ನು ಮುಂದೆ ಬರೆಯುತ್ತೇವೆ. ಈ ಪ್ರಕರಣದ ಪರಿಣಾಮವನ್ನು ವೀರಶೈವರು ಬಹಳ ಆತುರತೆಯಿಂದ ನಿರೀಕ್ಷಿಸುತ್ತಿದ್ದರು. ಕೊನೆಗೆ ಜಯವಾದದ್ದಕ್ಕೆ ಸಂತೋಷವೆನಿಸುತ್ತದೆ—

ಚಂದ್ರಶೇಖರಶಾಸ್ತ್ರೀ ವ್ಯಾಕರಣತೀರ್ಥ,
ಯಾದಗಿರಿ.

ಶ್ರೀ ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶವು.

(ಕಾಶೀ ಹಿಂದೂವಿಶ್ವವಿದ್ಯಾಲಯ)

೧. ಶ್ರೀ ನಂದಿಕೇಶ್ವರ ಶಿವಾಚಾರ್ಯರು ಸವದತ್ತಿ ಚಿಟ್ನಿಸಮಠ ಬೃಹನ್ಮಠ.
ವೇದಾಂತಾಚಾರ್ಯ ಪರೀಕ್ಷೆಯಲ್ಲಿ.

೨. ಶ್ರೀ ಗುರುದೇವ ಶಿವಾಚಾರ್ಯರು ಚಿಕ್ಕಮಗಳೂರ ಬೃಹನ್ಮಠ.
ಪ್ರಥಮ ಪರೀಕ್ಷೆಯಲ್ಲಿ.

ಕಾಶೀ ಗೌರ್ನಮೆಂಟ್ (ಕ್ವೀನ್ಸ ಕಾಲೇಜ) ಸಂಸ್ಕೃತಕಾಲೇಜ.

೩. ಶ್ರೀ ನೀಲಕಂಠಶಾಸ್ತ್ರಿಗಳು ಭಾವಾಪೂರ ಬೃಹನ್ಮಠ.
ಕಾವ್ಯತೀರ್ಥ ಇವರು.
ವೇದಾಂತ ಶಾಸ್ತ್ರ ಪ್ರಥಮ ಖಂಡದಲ್ಲಿ.

೪. ಶ್ರೀ ಚನ್ನಬಸಲಿಂಗ ಶಿವಾಚಾರ್ಯರು ಹೊಳಲ್ಕೆರೆ ಬೃಹನ್ಮಠ.
ನ್ಯಾಯಸಂಪೂರ್ಣ ಮಧ್ಯಮದಲ್ಲಿ.
ಕಲಕತ್ತಾ ಸಂಸ್ಕೃತಕಾಲೇಜ.

೫. ಶ್ರೀ ನೀಲಕಂಠ ಶಾಸ್ತ್ರಿಗಳು ಭಾವಾಪೂರ ಬೃಹನ್ಮಠ
ಕಾವ್ಯತೀರ್ಥ ಇವರು.
ವೇದಾಂತ ಪ್ರಥಮ-ಮಧ್ಯಮದಲ್ಲಿ.

೬. ಶ್ರೀ ವಾಮದೇವ ಶಾಸ್ತ್ರಿಗಳು ಉಪ್ಪಿನಬೆಟಗೇರಿ ಬೃಹನ್ಮಠ.
(ಕ) ನ್ಯಾಯ ಪ್ರಥಮದಲ್ಲಿ.

೭. ಶ್ರೀ ಶಾಂತಬಸವ ಶಾಸ್ತ್ರಿಗಳು ಜಾಲಿಹಾಳ ಬೃಹನ್ಮಠ.
ವ್ಯಾಕರಣ ಪ್ರಥಮದಲ್ಲಿ.

೮. ಶ್ರೀಅನ್ನದಾನಶಿವಾಚಾರ್ಯರು ಜಮಖಂಡಿ ಮುಕ್ತಾಗುಚ್ಛ ಮಠ.
ಕಾವ್ಯ ಪ್ರಥಮದಲ್ಲಿ.

ಉತ್ತೀರ್ಣರಾದರು.

ಓರ್ವ ವಿದ್ಯಾರ್ಥಿ.
ಜಂಗಮವಾಡೀ ಮಠ.

ಸಾಹಿತ್ಯಕ್ಕೆ ಶ್ರೀಮಂತರ ಸಹಾಯ.

ಶ್ರೀಗುರು-ಲಿಂಗ-ಜಂಗಮ ಗ್ರಂಥಮಾಲೆಯ ದ್ವಿತೀಯ ರತ್ನವಾದ ಬ. ವಿ. ಮಠ. ಮಾಸ್ತರ ಕೃತ 'ವಚ್ಚಶರೀರ ಶಿಕ್ಷಣ' ವೆಂಬ ಗ್ರಂಥಮುದ್ರಣಕ್ಕಾಗಿ ಸಹಾಯ ಮಾಡಿದ ಮಹನೀಯರ ಹೆಸರು ರಕಮು ಕೆಳಗೆ ಕಾಣಿಸಿದಂತೆ.—

	ರೂ.
ಡಾಕ್ಟರ ಸಿ. ಎಸ್. ಪಾಟೀಲ ಎಲ್. ಎಂ. ಅಂಡ್ ಎಸ್.	100
ರಾ. ಸಾ. ಶಿವಪ್ಪ ದಂಡಪ್ಪ ಮಾನವಿ	51
ರಾ. ಸಾ. ವೀರಪ್ಪ ಪರಪ್ಪ ಚವಡಿ	26
ರಾ. ಸಾ. ಗುರುಸಿದ್ದಪ್ಪ ಆಡವೆಪ್ಪ ಸೆಟ್ಟರ	50
ಶ್ರೀಮಂತ ಸಿದ್ರಾಮಪ್ಪ ಅಂದಾನಪ್ಪ ಮಾನವಿ.	50
,, ಮಡಿವಾಳಪ್ಪ ಬಸಪ್ಪ ಸೆಟ್ಟರ	50
,, ಶಾಂತಪ್ಪ ಸಂಗಪ್ಪ ಎಳಮಲಿ	50
,, ರಾಚಪ್ಪ ವೀರಪ್ಪ ಮಾನವಿ	50
,, ಗುರಪ್ಪ ಚನವೀರಪ್ಪ ಟೆಂಗಿನಕಾಯಿ	25
,, ಅಮೀನಸಾ ದಾವಲಸಾ ಹಣಗಿ	25
,, ಗೊಳಸಗೌಡಾ ಶಿ. ಪಾಟೀಲ	35

ಇನ್ನುಳಿದ ಸ್ವಾಮಿ ಶ್ರೀಮಂತರು ಸಹಾಯಮಾಡಿ ಸದರ ಮಾಲೆಯ ವತಿಯಿಂದ ಉತ್ತಮೋತ್ತಮ ಗ್ರಂಥಗಳು ಪ್ರಕಟವಾಗುವಂತೆ ಪ್ರಯತ್ನಿಸಬೇಕಾಗಿ ವಿನಂತಿ.

ನಾಗಪ್ಪ ಇನಾಮತಿ ಮಾಳಕೇರಿ.
ಜಿಲ್ಲಾ ಧಾರವಾಡ.

ವೈದ್ಯಶಾಸ್ತ್ರವನ್ನು ಓದತಕ್ಕ ವಿದ್ಯಾರ್ಥಿಗಳಿಗೆ ಸೂಚನೆ.

ಶ್ರೀ ೧೦೮ ಜಗದ್ಗುರು ಕೇದಾರಸಂಸ್ಥಾನದ ಆಯುರ್ವೇದ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಪಂಡಿತ ಭೈರವದತ್ತರೆಂಬ ವನಸ್ಪತಿಶಾಸ್ತ್ರಿಗಳು 15-9-29 ರಲ್ಲಿ ವನಸ್ಪತಿಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಮಾಡಿಸುವದಕ್ಕಾಗಿ ಹಿಮಾಲಯಪರ್ವತಗಳಲ್ಲಿ 1 ತಿಂಗಳು ಸಂಚರಿಸುವದಕ್ಕೆ ಹೊರಡುವರು. ಆ ಕಾಲದಲ್ಲಿ ಯಾರಾದರೂ ವೈದ್ಯರೂ, ವಿದ್ಯಾರ್ಥಿಗಳೂ ಬರತಕ್ಕವರಿದ್ದರೆ ಬರಬಹುದು. ಅವರಿಗೆ ಸರ್ವಪ್ರಕಾರದ ಅನುಕೂಲ್ಯ ವನಸ್ಪತಿಗಳ ಪರಿಚಯವನ್ನು ಮಾಡಿಸುವರು. ಬರಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಪತ್ರ ಬರೆದು ತಿಳಿಸಬೇಕು. ಹಿಮಾಲಯಪ್ರದೇಶದ ಉನ್ನತಪರ್ವತಶೃಂಗಗಳ ಮೇಲೆ ಸದ್ಯ ಹಿಮ ಬೀಳುತ್ತಿರುವದು. ಅದ್ದರಿಂದ ಬರಲಿಚ್ಛಿಸುವವರು ಶೀತ ನಿವಾರಣೆಗಾಗಿ ಸಾಮಗ್ರಿಗಳನ್ನು ತೆಗೆದುಕೊಂಡು ಬರಬೇಕು.

ಪತ್ರವ್ಯವಹಾರದ ವಿಳಾಸ—ಮ್ಯಾನೇಜರ,
ಶ್ರೀ ಕೇದಾರನಾಥ ಆಯುರ್ವೇದ ಮಹಾವಿದ್ಯಾಲಯ,
ಪೋ|| ಓಖಿಮಠ, ಜಿ|| ಗಡವಾಲ, ಹಿಮಾಲಯ.

ಸ್ವೀಕಾರ.

ವಿಜಾಪುರ ಶಹರನಿವಾಸಿಗಳಾದ ವೇ|| ಕರ್ಪೂರಮಠದ ಬಸಯ್ಯನವರ ಪುತ್ರಿ ಸೌ|| ಮುರಿಗವ್ವನನ್ನು ಬಂಕಾಪುರದ ಕಟ್ಟೀಹಳ್ಳಿಮಠದ ವೇ|| ಸಿದ್ಧರಾಮಯ್ಯನವರ ಪುತ್ರ ಚಿ|| ಶಿವಯ್ಯನಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ತೆಗೆಯಿಸಿದ 5 ರೂ. ಮತ್ತು ಸದರಿಯವರ ಫಲಶೋಭನ ಕಾರ್ಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 6 ರೂಪಾಯಿಗಳು ವೇ|| ಬಸವಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೋಶಿಗಿಗ್ರಾಮದಲ್ಲಿರುವ ಶ್ರೀ|| ಮಹಾದೇವಮ್ಮನವರಿಗೆ ಪ್ರಾಪ್ತವಾಗಿದ್ದ ಕರ್ಣಬಾಧೆಯು ಜಗದಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಮ|| ರಾ|| ಗೂಡೂರು ಸೂಗಣ್ಣನವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಕೊಟ್ಟೂರುಗ್ರಾಮದ ಕೆಂಭಾವಿಮಠದಲ್ಲಿ ಭಜನಾಸಂಘದ ಗಣಸಂತರ್ಪಣ ಸಮಾರಂಭ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 1 ರೂ. ವೇ|| ಪಿ. ಯಂ. ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಕೊಪ್ಪಳ ಡಿ|| ಯರೇಹಂಚಿನಾಳದ ಶಿ|| ವೀರಯ್ಯನವರು ಮುಂಡರಗಿಯ ಇವರ ವಿವಾಹಸಮಯದಲ್ಲಿ ಗಂಜಿವಣ್ಣಿಗಿ ಹಿರೇಮಠದ ವೇ|| ರುದ್ರಯ್ಯನವರ ಅಭಿಪ್ರಾಯದ ಮೇರೆಗೆ ಪ್ರಭಾಪೋಷಣೆಕ್ಕೋಸ್ಕರ ತೆಗೆಯಿಸಿದ 1 ರೂ. ಮ|| ರಾ|| ನಾಗಪ್ಪ ಯಾಳಗಿ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಕೇದಾರಪೀಠದಲ್ಲಿ ನೆರವೇರಿದ ಮಹತ್ಕಾರ್ಯಗಳು.

ಶ್ರೀ ಕೇದಾರಮಂಡಲ ಮಧ್ಯವಿದ್ಯೋತಮಾನ ಶ್ರೀ ಶಕ್ತಿವಿಶಿಷ್ಟಾದ್ವೈತ ವೀರಮಾಹೇಶ್ವರ ದರ್ಶನಪ್ರತಿಷ್ಠಾಪನಾಚಾರ್ಯ ಶ್ರೀಮದೇಕೋರಾಮ ಶಿವಾಚಾರ್ಯ ಪ್ರತಿಷ್ಠಾಪಿತ ಶ್ರೀಕೇದಾರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಶ್ರೀ ಕೇದಾರ ಮಹಾಸಂಸ್ಥಾನ (ಉಖಾಮಠ) ಖಾಸ್‌ದರಬಾರಾದೊಳಗೆ ಈ ಕೆಳಗೆ ಕಂಡ ಮೇರೆಗೆ ಕಾರ್ಯಕ್ರಮಗಳು ಬಹು ವಿಜೃಂಭಣೆಯಿಂದ ಜರಗಿದವು.

೧೩-೭-೨೯ ರಲ್ಲಿ ಮಹಾಸ್ವಾಮಿಗಳವರು ೩೫ ಸಹಸ್ರ ರೂಪಾಯಿಗಳನ್ನು ವೆಚ್ಚಮಾಡಿ ತಯಾರಿಸಿದ ಭವ್ಯಭವನದಲ್ಲಿ ಮಾಹೇಶ್ವರರಿಂದ ಮಹಾಹೋಮ ಮಾಹೇಶ್ವರ ಸಂತರ್ಪಣಾದಿ ಸಮಾರಂಭವು ಸಾಂಗವಾಗಿ ಆಚರಿಸಲ್ಪಟ್ಟಿತು. ಬಳಿಕ ಮಧ್ಯಾಹ್ನದಲ್ಲಿ ಜಗದ್ಗುರುಗಳ ನೇತೃತ್ವದಲ್ಲಿ ಸಭೆಯು ನಡೆಯಿತು. ಸಭೆಯಲ್ಲಿ ಗಢವಾಲ ಡಿ|| ಚಮೋಲಿ ತಾ|| ನಕೀಲ ಶ್ರೀ ಘನಶ್ಯಾಮ ಬಿ.ಎ., ಎಲ್. ಎಲ್. ಬಿ. ಮುಂತಾದವರು ಇನಸ್ಪೆಕ್ಟರ, ಸಬ್ ಇನ್‌ಸ್ಪೆಕ್ಟರ ಮುಂತಾದ ರಾಜಾಧಿಕಾರಿಗಳು, ಗಢವಾಲ ಡಿ|| ಸುಪ್ರಸಿದ್ಧ ಪಂ|| ಶ್ರೀ [illegible]ಶಾಸ್ತ್ರಿಗಳು, ಪಂ|| ಶ್ರೀ ವಂಶೀಧರಶಾಸ್ತ್ರಿಗಳು, ಪಂ|| ಬಾಲಕೃಷ್ಣಶಾಸ್ತ್ರಿಗಳು, ಪಂ|| ಚಿದ್ಘನ ಶಿವಾಚಾರ್ಯಶಾಸ್ತ್ರಿಗಳೂ ಮುಂತಾದ ಪಂಡಿತರೂ ಮಹಾವಿದ್ಯಾಲಯ ಉಪಾಧ್ಯಾಯರೂ ಛಾತ್ರಮಂಡಲವೂ ಶ್ರೀ ನೀಲಕಂಠ ಮಿಡಲಸ್ಕೂಲ್ ಮಾಸ್ಟರರೂ ಸ್ಟೂಡೆಂಟರೂ ಸ್ಥಳ ಪರಸ್ಥಳದ ಶ್ರೀಮಂತರೂ ವಿದ್ಯಾಭಿಮಾನಿಗಳೂ ಆಗಮನಮಾಡಿದ್ದರು. ಪ್ರಥಮದಲ್ಲಿ ಪಂ|| ಮಹಿಮಾನಂದಶಾಸ್ತ್ರಿಗಳು ಪ್ರಾಸ್ತಾವಿಕ ಭಾಷಣ ಮಾಡಿದ ಬಳಿಕ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾ ವಿದ್ಯಾಲಯ (ಸಂಸ್ಕೃತ ಕಾಲೇಜು) ಚಾತುರ್ವಾರ್ಷಿಕಾಧಿವೇಶನ ಕಾರ್ಯಕ್ರಮವು ನಡೆಯಿತು. ಮೊಟ್ಟಮೊದಲು ಶ್ರೀ ಕೇದಾರ ಸಂಸ್ಥಾನದ ವಿದ್ಯಾಲಯ ವಿದ್ಯಾರ್ಥಿ ಭಾಸ್ಕರಾನಂದನು ಸನಾತನಧರ್ಮದ ಬಗ್ಗೆ ಭಾಷಣಮಾಡಿದನು. ಈ ವಿದ್ಯಾರ್ಥಿಯ ಭಾಷಣವು ಪಂಡಿತರ ಭಾಷಣಕ್ಕೆ ಸದೃಶವಾಗಿತ್ತು. ತರುವಾಯ ರುದ್ರದತ್ತವಿದ್ಯಾರ್ಥಿಯು ಬ್ರಹ್ಮಚರ್ಯದ ಬಗ್ಗೆ ಭಾಷಣಮಾಡಿದನು ಬಳಿಕ ಶ್ಯಾಮಸುಂದರವರ್ಮವಿದ್ಯಾರ್ಥಿಯು ಬ್ರಹ್ಮಚರ್ಯದ ಬಗ್ಗೆ ಭಾಷಣಮಾಡಿದನು. ಈ ಭಾಷಣವು ಸುಶ್ರಾವ್ಯವಾಗಿದ್ದು ಸಭಿಕರನ್ನು ಚಕಿತಗೊಳಿಸಿತು.

ಸಭೆಯಲ್ಲಿ ಭಾಸ್ಕರಾನಂದವಿದ್ಯಾರ್ಥಿಗೂ ಶ್ಯಾಮಸುಂದರವರ್ಮವಿದ್ಯಾರ್ಥಿಗೂ ಶ್ರೀಮಾನ್ ಘನಶ್ಯಾಮವಕೀಲಸಾಹೇಬರು ಸಂತುಷ್ಟರಾಗಿ (೧೦) ರೂಪಾಯಿಗಳ ಪಾರಿತೋಷಕವನ್ನು ಕೊಟ್ಟರು. ಶ್ಯಾಮಸುಂದರನಿಗೆ ಇನ್ನೂ ಅನೇಕ ಮಹಾಜನರು ಪಾರಿತೋಷಕಕೊಟ್ಟರು. ತರುವಾಯ ಪರೀಕ್ಷೋತ್ತೀರ್ಣರಾದ ವಿದ್ಯಾರ್ಥಿಗಳಿಗೂ ಸಂಧ್ಯಾಪೂಜಾಪಾಠಾದಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೂ ಪುಸ್ತಕಗಳೂ ವಸ್ತ್ರಾದಿಗಳೂ ರೂಪಾಯಿಗಳೂ ಶ್ರೀ ಜಗದ್ಗುರುಗಳ ಹಸ್ತದಿಂದ ಪ್ರದಾನಮಾಡಲ್ಪಟ್ಟವು. ತರುವಾಯ ನೂತನ ಭವನಕ್ಕೆ ಶ್ರೀ ಕೇದಾರ ಜಗದ್ಗುರು ನೀಲಕಂಠಲಿಂಗ ಮಿಡಲ್ ಸ್ಕೂಲ್ ಎಂಬ ಅಭಿಧಾನವು ಮಾಡಲ್ಪಟ್ಟಿತು. ಬಳಿಕ ಸ್ಕೂಲ ವಿದ್ಯಾರ್ಥಿಗಳಿಗೆ ಪುಸ್ತಕಾದಿಗಳು ಶ್ರೀ ಜಗದ್ಗುರುಗಳಿಂದ ಕೊಡಲ್ಪಟ್ಟವು. ಬಡವಿದ್ಯಾರ್ಥಿಗಳಿಗೆ ಸ್ಕಾಲರ್‌ಸಿಪ್ ಮಂಜೂರುಮಾಡಲ್ಪಟ್ಟಿತು. ತರುವಾಯ ಮಹಾವಿದ್ಯಾಲಯ ಅಧ್ಯಾಪಕ ಪಂ|| ಮಹಿಮಾನಂದಶಾಸ್ತ್ರಿಗಳಿಗೂ ಮಿಡಲ್‌ಸ್ಕೂಲ್ ಹೆಡ್‌ಮಾಸ್ಟರಿಗೂ ಬಹುಮೂಲ್ಯವಸ್ತ್ರಾದಿಗಳು ಶ್ರೀ ಜಗದ್ಗುರುಗಳಿಂದ ಪಾರಿತೋಷಕರೂಪವಾಗಿ ಕೊಡಲ್ಪಟ್ಟವು. ತರುವಾಯ ಮಹಾವಿದ್ಯಾಲಯದ ಚಾತುರ್ವಾರ್ಷಿಕ ರಿಪೋರ್ಟ ಆಯವ್ಯಯಾದಿವಿಷಯವು ಸಭೆಯಲ್ಲಿ ಓದಿ ಹೇಳಲ್ಪಟ್ಟಿತು. ಈ ಮಹಾವಿದ್ಯಾಲಯವು ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ (ರಾವಲ್) ಮಹೋದಯರಿಂದ ಸ್ಥಾಪಿತವಾಗಿ ೪ ವರ್ಷವಾಯಿತು. ಮೊದಲನೆಯ ವರ್ಷದಲ್ಲಿ ೧೯ ವಿದ್ಯಾರ್ಥಿಗಳ ಸಂಖ್ಯೆಯಿದ್ದು ನೀಗೊಳ್ಳವಿದ್ಯಾಗ್ರಹಣಮಾಡಿದರು. ಮತ್ತು ವಾಸವಸನ, ಪುಸ್ತಕ, ಎಣ್ಣೆ, ಕಾಗದ ಇತ್ಯಾದಿ ವ್ಯಯವು ಶ್ರೀ ಜಗದ್ಗುರು ಸಂಸ್ಥಾನದ ವತಿಯಿಂದ ಸಹಾಯಮಾಡಲ್ಪಟ್ಟಿತು. ೩ ನೇ ವರ್ಷದಲ್ಲಿ ೩೦ ವಿದ್ಯಾರ್ಥಿಗಳು ಉತ್ತೀರ್ಣ ಸಹಾಯಗ್ರಹಣ ವಲ್ಲದೆ ಭೋಜನಾದಿ ವ್ಯವಸ್ಥೆಯು ಸರಿಯಾಗಿ ಹೊಂದಿ೧ ವಿದ್ಯಾರ್ಥಿಯು ಕಾಶೀಮಧ್ಯಮ ಪ್ರಥಮಖಂಡದಲಿ ೪ ವಿದ್ಯಾರ್ಥಿಗಳು ಕಾಶೀ ಪ್ರಥಮಾಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮತ್ತು ಈ ಎರಡು ವರ್ಷಗಳೊಳಗೆ ಪಂ|| ದೇವಕೀನಂದ ಧವಲಯಾಲ ಮೆನೇಟರಿ ಡಾಕ್ಟರ್ ಮ|| ವಲೀವಲಾ ಡಿ. ಕಮಿಶನರ್ ಕಲೆಕ್ಟರ ಸಾಹೇಬರು ಚಮೋಲೀ ಡಿ. ಪರೋತ್ತಮಜೀ ತೊಬಾಲ ಇನ್‌ಸ್ಪೆಕ್ಟರ್ ಸಾಹೇಬ ಪಂ. ಗೋಕುಲದೇವಜೀ ಸೈಧಾನೀ ಸ. ಡಿ. ಇನಸ್ಪೆಕ್ಟರ ಸಾಹೇಬ ಡಾ|| ಪಾಠೀ ರಾಮಜೀ ರಾವಬಹಾದ್ದೂರ ಚೇರಮೇನ್ ಡಿ|| ಬೋ|| ಪಂ|| ವ್ರಜಮೋಹನಜೀ ಚಂದೋಲಾ, ಎಂ.ಎ., ಎಲ್‌ಎಲ್.ಬಿ. ರಾಯಬಹಾದ್ದೂರ ಎ. ಅನುಸೂಯಾಪ್ರಸಾದಜೀ ವಕೀಲ ಮೆಂಬರ ಡಿ|| ಬೋರ್ಡ್, ಡಾ|| ಪ್ರದ್ಯುಮ್ನಸಿಂಹಜೀ ಕಲೆಕ್ಟರ್ ಎಕ್ಸ್ಟ್ರಾ ಅಸಿಸ್ಟೆಂಟ್ ಆಫೀಸರ್ ಮಿ|| ಸಿ. ಯಬ್. ಬ್ರೌಫೀನ ಸಾಹೇಬ ಡಿ|| ಇನ್‌ಸ್ಪೆಕ್ಟರ್ ರಾವಸಾಹೇಬ ಪಂ|| ರಾಮಶರಣಮಿಶ್ರ, ಎಂ. ಎ. ಎಲ್.ಟಿ. ಅಸಿಸ್ಟೆಂಟ ಇನ್‌ಸ್ಪೆಕ್ಟರ್ ಇತ್ಯಾದಿ ಮಹಾನುಭಾವರು ಈ ವಿದ್ಯಾಲಯಕ್ಕೆ ಆಗಮನಮಾಡಿ ಪರೀಕ್ಷಿಸಿ ಸಂತೋಷಜನಕ ಪ್ರಶಂಸನಮಾಡಿರುತ್ತಾರೆ. ಮತ್ತು ಶ್ರೀ ಜಗದ್ಗುರು ರಾವಲ್ ಸಾಹೇಬ ಮಹಾಸ್ವಾಮಿಗಳವರ ದೇಶಪ್ರೇಮ, ವಿದ್ಯಾಪ್ರೇಮ, ಧರ್ಮಪ್ರೇಮಗಳನ್ನು ನೋಡಿ ಮುಕ್ತಕಂಠದಿಂದ ಕೊಂಡಾಡಿರುತ್ತಾರೆ. ತೃತೀಯ ವರ್ಷದಲ್ಲಿ ವಿದ್ಯಾರ್ಥಿಗಳು ಸರ್ಕಾರಸಹಾಯಪೂರ್ವಕ ವ್ಯಾಕರಣ, ಜೋತಿಷ ಇತ್ಯಾದಿ ಶಾಸ್ತ್ರಗಳಲ್ಲಿ ಬನಾರಸ ರಾಜಕೀಯ ಪರೀಕ್ಷೆಯಲ್ಲಿ ಸಮ್ಮಿಲಿತರಾಗಿದ್ದರು. ವ್ಯಾಕರಣ ಮಧ್ಯಮಾದ್ವಿತೀಯ ಖಂಡದಲ್ಲಿ ಭಾಸ್ಕರಾನಂದ ವಿದ್ಯಾರ್ಥಿಯು ಪ್ಯಾಸಾಗಿದ್ದಾನೆ. ಪ್ರಥಮಖಂಡದಲ್ಲಿ ವಿಶ್ವೇಶ್ವರದತ್ತಾದಿ ೯ ಜನ ವಿದ್ಯಾರ್ಥಿಗಳು ಪ್ಯಾಸಾಗಿದ್ದಾರೆ. ೪ ಜನ ವಿದ್ಯಾರ್ಥಿಗಳು ಪ್ರಥಮಪರೀಕ್ಷೆಯಲ್ಲಿ ಪ್ಯಾಸಾಗಿದ್ದಾರೆ. ಉತ್ತೀರ್ಣರಾದ ವಿದ್ಯಾರ್ಥಿಗಳು ಪುಸ್ತಕಗಳು ವೃತ್ತಿ ವಗೈರೆ ಹಿಂದೆ ಉಲ್ಲೇಖಿಸಲ್ಪಟ್ಟಂತೆ ಕೊಡಲ್ಪಟ್ಟಿತು. ಈ ಚತುರ್ಥ ವರ್ಷ ಪ್ರಾರಂಭದಲ್ಲಿ ತೃತೀಯ ವರ್ಷದಲ್ಲಿ ಪ್ಯಾಸಾದ ವಿದ್ಯಾರ್ಥಿಗಳು ಅಲ್ಲದೆ ನೂತನ ವಿದ್ಯಾರ್ಥಿಗಳನ್ನು ಸೇರಿಸುವರು. ಅಧ್ಯಾಪಕ ಸಾಹಿತ್ಯದಲ್ಲಿ ಬಾಲಕೃಷ್ಣಶಾಸ್ತ್ರಿಗಳು ಜ್ಯೋತಿಷದಲ್ಲಿ ಮುಕುಂದಾನಂದಶಾಸ್ತ್ರಿಗಳು ವ್ಯಾಕರಣದಲ್ಲಿ ಪಂ|| ಮಹಿಮಾನಂದಶಾಸ್ತ್ರಿಗಳು ಇರುವರು. ಈ ರೀತಿ ನೀಲಕಂಠ ಮಿಡಿಲ ಸ್ಕೂಲಿನಲ್ಲಿಯೇ ವಿದ್ಯಾಪ್ರೋತ್ಸಾಹ ಕಾರ್ಯಗಳು ನಡೆದವು. ಶ್ರೀ ಜಗದ್ಗುರುಗಳವರು ದೇಶ, ಧರ್ಮ ಈ ಬಗ್ಗೆ ಭಾಷಣಮಾಡಿದರು. ಬಳಿಕ ಸಭಾ ವಿಸರ್ಜನವಾಯಿತು. ತಾ|| ೧೪-೭-೨೯ ತರುವಾಯ ಮರುದಿನ ಆಯುರ್ವೇದ ವಿದ್ಯಾಲಯವು ಶ್ರೀ ಜಗದ್ಗುರುಗಳಿಂದ ನೂತನವಾಗಿ ಸ್ಥಾಪಿಸಲ್ಪಟ್ಟಿತು. ಸದ್ಯಃ ಇಬ್ಬರು ವಿದ್ಯಾರ್ಥಿಗಳು ಒಬ್ಬರು ಆಯುರ್ವೇದಾಚಾರ್ಯ ಪರೀಕ್ಷೋತ್ತೀರ್ಣರಾದ ಪಂಡಿತರು ಅಧ್ಯಾಪಕರು ಇರುವರು. ಹಿಮಾಲಯ ಪ್ರಸಿದ್ಧ ವನಸ್ಪತಿಗಳ ಪ್ರಸಾರಕ್ಕಾಗಿ ಆಯುರ್ವೇದ ಮಹೌಷಧಾಲಯವೂ ಸಹ ಸ್ಥಾಪಿಸಲ್ಪಟ್ಟಿತು. ಆ ಕಾಲದಲ್ಲಿ ಶ್ರೀ ಜಗದ್ಗುರುಗಳವರ ಆಯುರ್ವೇದಕ ವಿಷಯ ಭಾಷಣವು ನಡೆಯಿತು. ಶ್ರೀ ಜಗದ್ಗುರುಗಳು ಆಯುರ್ವೇದವಿದ್ಯೆಯಲ್ಲಿ ಕುಶಲರು ಅಭಿಮಾನಿಗಳು ಪ್ರೋತ್ಸಾಹಿಗಳು ಆಗಿದ್ದು ಪ್ರಪಂಚಕ್ಕೆ ಇದರ ದ್ವಾರಾ ಕಲ್ಯಾಣಮಾಡಲು ಸದಾ ಇಚ್ಛಿಸುತ್ತಾರೆ.

ಪ್ರತ್ಯಕ್ಷದರ್ಶಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸತ್ಪಾತ್ರದಾನ.

ಮಹಾಶಯರೇ? ಸತ್ಕರ್ಮವನ್ನು ಮಾಡುವದರಿಂದ ಪುಣ್ಯವುಂಟಾಗುವದು. ದುಷ್ಕರ್ಮವನ್ನು ಮಾಡುವದರಿಂದ ಪಾಪವುಂಟಾಗುವದು. ಪಾಪಪುಣ್ಯಗಳು ಒಂದು ತರದ ಅದೃಷ್ಟಶಕ್ತಿಗಳು. ಇವು ಮುಂದಿನ ಜನ್ಮದಲ್ಲಿ ಸುಖದುಃಖರೂಪವಾದ ಫಲವನ್ನು ಕೊಡುವವು. ಈ ಜನ್ಮದಲ್ಲಿ ಮಾಡಿದ ಪುಣ್ಯವು ಮುಂದಿನ ಜನ್ಮದಲ್ಲಿ ಸುಖರೂಪವಾದ ಫಲವನ್ನು ಕೊಡುವದು. ಈ ಜನ್ಮದಲ್ಲಿ ಮಾಡಿದ ಪಾಪವು ಮುಂದಿನ ಜನ್ಮದಲ್ಲಿ ದುಃಖರೂಪವಾದ ಫಲವನ್ನು ಕೊಡುವದು. ಈ ಪುಣ್ಯಪಾಪಗಳು ಉತ್ಕಟವಾಗಿದ್ದರೆ ಇದೇ ಜನ್ಮದಲ್ಲಿ ಫಲವನ್ನು ಕೊಡುವವೆಂದು ಮಹಾತ್ಮರು ಹೇಳುವರು.

ಪುಣ್ಯವು ಕ್ರಮವಾಗಿ ಮನುಷ್ಯನನ್ನು ಉಚ್ಚಸ್ಥಿತಿಗೆ ಒಯ್ಯುವದು. ಪುಣ್ಯದಿಂದ ನರನು ದೇವನಾಗಬಹುದು. ಪಾಪವು ಯಾವಾಗಲೂ ಮನುಷ್ಯನನ್ನು ಅಧೋಗತಿಗೆ ಒಯ್ಯುವದು.

ಲೋಕವ್ಯವಹಾರದಲ್ಲಿ ನಾವು ನಿರಂತರ ಮಾಡುವ ಕೆಲಸಗಳಲ್ಲಿ ಕೆಲವು ಪುಣ್ಯದವೂ ಕೆಲವು ಪಾಪದವೂ ಇರಬಹುದಾದರೂ ದೇವರ ವಿಷಯವಾಗಿ ನಾವು ಮಾಡುವ ಕೆಲಸಗಳೆಲ್ಲಾ ಪುಣ್ಯಕರವಾಗಿಯೇ ಇರುವವು. ಅವುಗಳಲ್ಲಿ ಪಾಪದ ಲೇಶವೂ ಇರುವದಿಲ್ಲ. ಅವಕ್ಕೆ ಪಾಪದ ಸಂಪರ್ಕವೇ ಇರುವದಿಲ್ಲ. ದೇವರಿಗೆ ನಾವು ಒಮ್ಮೆ ಕೈಮುಗಿದರೂ ಸಾಕು. ಇಷ್ಟು ಕೆಲಸವು ಪುಣ್ಯವನ್ನೇ ಉಂಟುಮಾಡುವದು. ಯಾವಾಗಲೂ ಮನುಷ್ಯನು ಈ ಕರ್ಮಗಳಿಂದ ಉಚ್ಚಸ್ಥಿತಿಯನ್ನೇ ಹೊಂದುತ್ತಾನೆ. ಆದುದರಿಂದ ಪರಮೇಶ್ವರನನ್ನು ನಾವು ಎಷ್ಟು ಬಗೆಯಿಂದ ಪೂಜಿಸಿದರೂ ಸಾಲದು. ಶಿವಮೊಗ್ಗ ಡಿ|| ಹೊನ್ನಾಳಿ ತಾ|| ನ್ಯಾಮತಿವಾಸಿ ಹರಿಹರದ ಜ್ಯೋತಿಷಿಗಳ ಮ|| ರಾ|| ಬಸಪ್ಪ ಎಂಬವರು ತಮ್ಮ ಸಾಂಸಾರಿಕ ಕರ್ಮಗಳು ಎಷ್ಟೇ ಇದ್ದಾಗ್ಯೂ ಅವುಗಳನ್ನು ನಿಲ್ಲಿಸಿ ನಿತ್ಯದಲ್ಲಿಯೂ ಗುರುಲಿಂಗಜಂಗಮಾರ್ಚನೆ, ಶಿವಪೂಜಾ, ಅತಿಥಿಸತ್ಕಾರ ವಗೈರೆ ಸತ್ಕರ್ಮಗಳನ್ನು ಮೊದಲು ಪೂರೈಸಿಕೊಂಡು ಅನಂತರ ತಮ್ಮ ಇತರ ಸಂಸಾರಿಕ ಕರ್ಮಗಳನ್ನು ಪೂರೈಸಿಕೊಳ್ಳುತ್ತ ಗುರುಸೇವಾಧುರೀಣರಾಗಿದ್ದರು. ಅವರು ಅನಂತ ಪುಣ್ಯಕಾರ್ಯಮಾಡುತ್ತಿದ್ದುದರಿಂದಲೇ ತಾವು ಶಿವಸಾಯುಜ್ಯಪದವಿಯನ್ನು ಹೊಂದುವ ಒಂದು ತಿಂಗಳು ಮುಂಚಿತವಾಗಿ ನಾನು ಇಂಥ ದಿವಸವೇ ಇಷ್ಟೇ ಹೊತ್ತಿಗೆ ವಸ್ತು ಬಿಡುತ್ತೇನೆಂದು ಹೇಳಿ ಆ ಮೊದಲ್ಗೊಂಡು ಪ್ರತಿದಿವಸವೂ ಮನೆಯಲ್ಲಿ ಅತಿಥಿಸತ್ಕಾರ ಪಾರಾಯಣ ಗಣಾರಾಧನೆ ಮುಂತಾದ ಸತ್ಕರ್ಮಗಳನ್ನು ವಿಧಾನದಿಂದ ನಡೆಯಿಸುತ್ತಿದ್ದು ವಸ್ತು ಬಿಡುವದಿವಸ ಅನಂತ ಜನರಿಗೆ ಅನ್ನಸಂತರ್ಪಣೆ ಮಾಡಿಸಿದರು. ಇದು ಸತ್ಕರ್ಮದಿಂದ ಉಂಟಾದ ಪುಣ್ಯದ ಫಲವಲ್ಲವೇ ?

ಆದರೆ ಇವರು ವಸ್ತು ಬಿಡುವ ಕಾಲದಲ್ಲಿ ತಮ್ಮ ಧರ್ಮಪತ್ನಿಯವರಾದ ಸ|| ಬಸವಮ್ಮನವರನ್ನು ಕುರಿತು ನಾನು ಒಂದು ಶಾಶ್ವತವಾದ ಸತ್ಕರ್ಮವನ್ನು ಮಾಡಬೇಕೆಂದಿದ್ದೆನು. ಆದರೆ ನನಗೆ ಇಹಲೋಕಯಾತ್ರೆ ಪೂರೈಸಿ ಪರಲೋಕಯಾತ್ರೆಯು ಸಮೀಪಿಸಿತು. ಆದಕಾರಣ ಬಾಕಿಯಾದ ಆ ಸತ್ಕರ್ಮವನ್ನು ನೀನು ಪೂರ್ತಿಮಾಡಬೇಕೆಂದು ಆಜ್ಞಾಪಿಸಿ ಅವರಿಂದ ವಚನವನ್ನು ತೆಗೆದುಕೊಂಡು ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಧ್ಯಾನದೊಡನೆ ಶಿವಸಾಯುಜ್ಯವನ್ನು ಹೊಂದಿದರು. ಶ್ರೀಮತಿ ಬಸವಮ್ಮನವರು ನಡೆಯಬೇಕಾದ ಉತ್ತರಾದಿಕಾರ್ಯಗಳನ್ನೆಲ್ಲಾ ನಡೆಯಿಸಿ ತಾನೂ ತನ್ನ ಪತಿಯಂತೆ ಸತ್ಕರ್ಮಗಳನ್ನು ನಡೆಯಿಸುತ್ತಿದ್ದು ಪತಿಯ ಆಜ್ಞಾಪರಿಪಾಲನೆಗೋಸ್ಕರ ಯಾವ ಸತ್ಕಾರ್ಯವನ್ನು ಮಾಡಬೇಕೆಂದು ಚಿಂತಿಸುತ್ತಿದ್ದರು. ಆದರೆ ಪುಣ್ಯಕಾರ್ಯದ ಫಲವಿಶೇಷದಿಂದ ಶ್ರೀಮದ್ರಂಭಾಪುರೀ ಪೀಠಾಧಿಪತಿಗಳು ಈ ನಮ್ಮ ಗ್ರಾಮಕ್ಕೆ ಆಗಮಿಸಿದ ಸಮಯದಲ್ಲಿ ಉತ್ಸವದ ಖರ್ಚಿಗೋಸ್ಕರ ತಮ್ಮ ಶಕ್ತಿಮೀರಿ ಸಹಾಯಮಾಡಿದ್ದಲ್ಲದೆ ತಮ್ಮ ಶಕ್ತಿಮೀರಿ ಕಾಣಿಕೆಯನ್ನು ಒಪ್ಪಿಸಿದರು. ಅಲ್ಲದೆ ಪತಿಯಾಜ್ಞಾಪರಿಪಾಲನೆಗೋಸ್ಕರ ಇಲ್ಲಿ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘಕ್ಕೆ ಮಂದಿರವು ಕೊರತೆಯಾಗಿರುವದನ್ನು ತಿಳಿದು ತಮ್ಮದೊಂದು ಗೃಹವನ್ನು ಇದೇ ಶುಕ್ಲನಾಮಸಂವತ್ಸರದ ಶ್ರಾವಣ ಶು|| ಪಂಚಮಿಯಲ್ಲಿ ವಿಧ್ಯುಕ್ತವಾಗಿ ಗೃಹಾರಂಭ ಗೃಹಪ್ರವೇಶ ವಗೈರೆ ನಡೆಯಿಸಿ 400-500 ಜನರಿಗೆ ಅನ್ನಸಂತರ್ಪಣವಮಾಡಿಸಿ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘಕ್ಕೋಸ್ಕರ ಭಕ್ತಿಪುರಸ್ಸರವಾಗಿ ತ್ರಿಕರಣಶುದ್ಧಿಯಿಂದ ದಾನಮಾಡಿಸದರ ಸಂಘಕ್ಕೆ ಒಪ್ಪಿಸಿದರು. ಅಲ್ಲದೆ ವೈದಿಕಮಾಹೇಶ್ವರರಿಗೆ ಯೋಗ್ಯಸಂಭಾವನೆಯನ್ನು ಒಪ್ಪಿಸಿ ಪತಿಯಾಜ್ಞಾಪರಿಪಾಲನೆ ಮಾಡಿದ ಕೀರ್ತಿಗೆ ಭಾಗಿಯಾಗಿ ಧನ್ಯರಾದರೆಂದು ತಿಳಿಸಲು ಸಂತೋಷಪಡುತ್ತೇವೆ. ಶ್ರೀಮತಿ ಬಸವಮ್ಮನವರಿಗೂ ಇವರ ವಂಶಜರಿಗೂ ಆಯುರಾರೋಗ್ಯೈಶ್ವರ್ಯಾದಿಗಳನ್ನಿತ್ತು ರಕ್ಷಿಸಲೆಂದು ಶ್ರೀಮಜ್ಜಗದ್ಗುರು ಪಂಚಾಚಾರ್ಯರನ್ನು ಕುರಿತು ಪ್ರಾರ್ಥಿಸುವ,

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಸೇವಾಮಂಡಳಿ, ನ್ಯಾಮತಿ.

ಶ್ರೀ ಗುರು ಪಂಚಾಚಾರ್ಯಾಃ ಪ್ರಸೀದಂತು.

ಕನ್ಯಾವಿಕ್ರಯಿಸುವವರಿಗೆ ಇನ್ನಾದರೂ ನಾಚಿಕೆಬರಲಿ.

ನೈಜಾಂ ಇಲಾಖಾ ರಾಯಚೂರು ಜಿ|| ಮಾನ್ವಿ ತಾ|| ಕಲ್ಲೂರುಗ್ರಾಮದಲ್ಲಿರುವ ಗೊಬ್ಬೂರು ಮಠದ ವೀರಮ್ಮನೆಂಬ ಸಾಧ್ವೀಮಣಿಯು ತನ್ನ ಸುಪುತ್ರಿಯಾದ ಹಂಪಮ್ಮನನ್ನು ಸದರಿ ಗ್ರಾಮದಲ್ಲಿರುವ ಶ್ರೀ ಪರ್ವತೇಶ್ವರ ಸಂಗೀತ ನಾಟಕಕಂಪನಿಯಲ್ಲಿ ಪಾರ್ಟುಮಾಡುವದಕ್ಕೆ ಬಂದಿದ್ದ ಗದಗ ತಾ|| ತಿಮ್ಮಾಪೂರ ಹಿರೇಮಠದ ಚಿನ್ನಯ್ಯನವರ ಜೇಷ್ಠಪುತ್ರರಾದ ಅನ್ನದಾನಯ್ಯನವರಿಗೆ ಸಾಲಂಕೃತ ಕನ್ಯಾದಾನವನ್ನು ಮಾಡಿಕೊಟ್ಟಳು. ಇದೇ ಗ್ರಾಮಕ್ಕೆ ಕಳೆದ ಸಂವತ್ಸರ ಮಾಘಮಾಸದಲ್ಲಿ ಶ್ರೀ ಜಗದ್ಗುರು ಹಿಮವತ್ಕೇದಾರ ಶ್ರೀ ನೀಲಕಂಠಶಿವಾಚಾರ್ಯ ಮಹಾಸ್ವಾಮಿಗಳವರು ದಯಮಾಡಿಸಿದ್ದರು. ಆ ವೇಳೆಯಲ್ಲಿ ಅಂದೋಳಿಕಾದಿ 72 ಬಿರದಾವಳಿಗಳಿಂದ ಶ್ರೀಗಳವರ ಉತ್ಸವವು ಒಳ್ಳೇ ವಿಜೃಂಭಣೆಯಿಂದ [illegible]ತು. ಆ ಸಮಯದಲ್ಲಿ ವೀರಶೈವಸಮಾಜದಲ್ಲಿ ಪ್ಲೇಗ [illegible] ಮಾರಿಕಾ ಹಾವಳಿಯಂತೆ ನಡೆದಿರುವ ಕನ್ಯಾಶುಲ್ಕದ [illegible] ವಿಷಯವಾಗಿ ಪಂಡಿತವರ್ಗದಿಂದ ಖಂಡನೆ ಮಾಡಿದ ಮೇಲೆ ಶ್ರೀಗಳವರು ಅದೇ ವಿಷಯವಾಗಿ ತಮ್ಮ ಅಮೋಘವಾದ ಬೋಧದ ಮೂಲಕ ಜನರ ಮೇಲೆ ಒಳ್ಳೇ ಪರಿಣಾಮವಾಗುವಂತೆ ಬೋಧಿಸಿದರು. ಆ ಕ್ಷಣವೇ ಸಭಿಕರಲ್ಲರೂ ಇಂತಹ ನೀಚಕೃತ್ಯವನ್ನು ಇನ್ನು ಮೇಲೆ ಮಾಡುವದಿಲ್ಲವೆಂದು ಶ್ರೀಗಳವರಿಗೆ ಶಿ|| ಸಾ|| ನಮಸ್ಕಾರವನ್ನು ಮಾಡಿದರು. ಲಗ್ನಮಾಸಗಳು ಸೋಂಕಿಗೊಡಸಿಯೇ ಪ್ರಮಾಣಮಾಡಿದವರು ವಿಮುಖರಾದರು. ಪರಂತು ಆ ಸಾಧ್ವೀಮಣಿಯು ಕನ್ಯಾವಿಕ್ರಯದಿಂದ ಬರುವ ಹಣಕ್ಕೆ ಮೋಸಹೋಗದೆ ಶ್ರೀಗಳವರ ಬೋಧದ ಪ್ರಭಾವವು ಇವರಲ್ಲಿ ಅಂಕುರಿಸಿದ್ದು ಸಹಜವಾದ ಮಾತೇ ಸರಿ! ಯಾಕೆಂದರೆ ದೈವಭಕ್ತಿಯುಳ್ಳ ಮನೆತನದಲ್ಲಿ ಇಂತಹ ಕನ್ಯಾದಾನ ಕೂಸುಗಳು ಉದ್ಭವಿಸಿದ್ದುದು ಭೂಷಣವಾಗಿದೆ. ಕನ್ಯಾದಾನದ ವಿಷಯವನ್ನು ನಾವು ಅನೇಕಸಾರೆ ಧರ್ಮಶಾಸ್ತ್ರಗಳಲ್ಲಿಯೂ ಮತ್ತು ವಾರಮಾಸಪತ್ರಿಕೆಗಳಲ್ಲಿಯೂ ನೋಡುತ್ತಿದ್ದೆವಲ್ಲದೆ ಜ್ಞಾನವೃದ್ಧರ ಮುಖದಿಂದಲೂ ಸಹ ಕೇಳುತ್ತಿದ್ದೆವು. ಇದುವರೆಗೆ ನಾವು ಇಂತಹ ಕಾರ್ಯವನ್ನು ಪ್ರತ್ಯಕ್ಷ ನೋಡಿದ್ದಿಲ್ಲ. ಲಗ್ನದ ಸಮಯಕ್ಕೆ ಅನೇಕ ವಿಘ್ನಗಳು ಬಂದರೂ ಮತ್ತು ರೂಪಾಯಿಗಳ ಕೊರತೆಯಿದ್ದರೂ ಸಹ ಈ ಸಾಧ್ವಿಯು ಗನ್ನ ಧೃಢಸಂಕಲ್ಪವನ್ನು ಪೂರೈಸಿದಳು. ಇಂತಹ ಅಪೂರ್ವವಾದ ಮಹೋತ್ಸವವನ್ನು ನೋಡಿದ ನಮ್ಮ ನೇತ್ರಗಳೇ ಪವಿತ್ರಗಳು; ನಮ್ಮ ಗ್ರಾಮದವರೇ ಧನ್ಯರು. ಅಂಧಕಾರದಲ್ಲಿ ನಡೆದಿರುವ ನಮ್ಮ ವೀರಶೈವ ಸಮಾಜಕ್ಕೆ ಸನ್ಮಾರ್ಗದರ್ಶನವನ್ನು ಮಾಡಿಕೊಟ್ಟ ವೀರಮ್ಮನೇ ಧನ್ಯಳು. ಈ ಸಾಧ್ವಿಗೆ ಪರಮೇಶ್ವರನು ಮಂಗಳವನ್ನೀಯಲಿ.

ಸೀಗಲ್ಲು ಶಿವರಾಜಪ್ಪ ವಕೀಲ್,
ರಾಯಚೂರು.

ಮದ್ರಾಸು ವಿಶ್ವವಿದ್ಯಾಲಯದ ಪಟ್ಟಪ್ರಧಾನ ಮಹೋತ್ಸವದಲ್ಲಿ ಪ್ರಶಸ್ತಿ ಪತ್ರಿಕೆಗಳನ್ನು ಪಡೆದ ವೀರಶೈವ ವಿದ್ಯಾರ್ಥಿಗಳಿಗೆ ಮದ್ರಾಸಿನಲ್ಲಿರುವ ವೀರಶೈವ ವಿದ್ಯಾರ್ಥಿಗಳು ಮಾಡಿದ ಅಭಿನಂದನವು.

ಕಳೆದ 15 ನೇ ತಾ|| ಗುರುವಾರ 3 ಗಂಟೆಗೆ ಮದ್ರಾಸು ವಿಶ್ವವಿದ್ಯಾಲಯದ "ಪಟ್ಟಪ್ರಧಾನ ಮಹೋತ್ಸವವು" ಮದ್ರಾಸು ವಿಶ್ವವಿದ್ಯಾಲಯದ ಸೆನೆಟ್ ಮಂದಿರದಲ್ಲಿ ನಡೆಯಿತು. ಆ ಸಮಯದಲ್ಲಿ ಕೆಲವು ವೀರಶೈವ ವಿದ್ಯಾರ್ಥಿಗಳು ಬೇರೆ ಬೇರೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಪ್ರಶಸ್ತಿ ಪತ್ರಿಕೆಗಳನ್ನು ಪಡೆದಿರುತ್ತಾರೆ.

ಮ|| ರಾ|| ಜಿ. ಟಿ. ರೆಡ್ಡಿಯವರು ಎಂ. ಬಿ. ಬಿ. ಎಸ್.
ಮ|| ರಾ|| ಕೆ. ಎಂ. ದಕ್ಷಿಣಾಮೂರ್ತಿಯವರು ಎಂ. ಎ.
ಮ|| ರಾ|| ವಿ. ಚನ್ನಯ್ಯನವರು ಬಿ. ಎಲ್.
ಮ|| ರಾ|| ವಿ. ಮುರುಡಪ್ಪನವರು ಬಿ. ಎಲ್.
ಮ|| ರಾ|| ಎಂ. ಮಹದೇವಪ್ಪನವರು ಬಿ. ಎಂ.

ಈ ಪೈಕಿ ಮ|| ರಾ|| ಜಿ. ಟಿ. ರೆಡ್ಡಿಯವರು ಕೆ. ಎಂ. ದಕ್ಷಿಣಾಮೂರ್ತಿಯವರು ಮತ್ತು ಎಂ. ಮಹದೇವಪ್ಪನವರು ಪಟ್ಟಪ್ರಧಾನಮಹೋತ್ಸವಕ್ಕೆ ಬಂದಿದ್ದರು.

ಈ ಪಟ್ಟಣದಲ್ಲಿರುವ ವೀರಶೈವ ವಿದ್ಯಾರ್ಥಿಗಳು ತೇರ್ಗಡೆಯಾಗಿ ಪ್ರಶಸ್ತಿ ಪತ್ರಿಕೆಗಳನ್ನು ಪಡೆದಿರುವ ತಮ್ಮ ಸ್ನೇಹಿತರಿಗೆ ತಮ್ಮ ಸಂತೋಷವನ್ನು ಸೂಚಿಸುವುದಕ್ಕಾಗಿ 16 ನೇ ತಾ|| ಶುಕ್ರವಾರ 2 ಗಂಟೆಗೆ ಎಡಪಾಳಯಂ ಲೇನ್ ಪಾರ್ಕ ಟರ್ನ ಮದ್ರಾಸು ವೀರಶೈವ ವಿದ್ಯಾರ್ಥಿಗಳ ಲಾಡ್ಜಿನಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿ ಆ ದಿವಸದ ಮುಖ್ಯ ಅಭ್ಯರ್ಥಿಗಳನ್ನು ತಮ್ಮ ಸ್ನೇಹಿತರುಗಳನ್ನು ಈ ಪಟ್ಟಣದ ಪ್ರಸಿದ್ಧ ನಗದ ವ್ಯಾಪಾರಿಗಳಾದ ಗುರುಬಸವ ಅಂಡ್ ಕಂಪನಿಯ ವ್ಯವಸ್ಥಾಪಕರಾದ ಮ|| ರಾ|| ಮರಿಯಪ್ಪನವರನ್ನು ಮತ್ತು ಮ|| ರಾ|| ನಾಗಲಿಂಗಪ್ಪನವರನ್ನು ಬರಮಾಡಿಕೊಂಡಿದ್ದರು. ಈ ಸಂತೋಷಕೂಟಕ್ಕೆ ಸುಮಾರು 25 ಮಂದಿಯವರೆಗೂ ಸೇರಿದ್ದರು.

ಫಲಾಹಾರವಾದನಂತರ ಮ|| ರಾ|| ಜಿ. ಟಿ. ರೆಡ್ಡಿ ಎಂ. ಬಿ. ಬಿ. ಎಸ್. ರವರು ಆ ದಿವಸದ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಮ|| ರಾ|| ಬಿ. ಬಸವಲಿಂಗಯ್ಯ ಬಿ. ಎ. ಯವರು ಸೂಚಿಸಲು ಎಲ್ಲರೂ ಸಲಹೆಯನ್ನು ಅನುಮೋದಿಸಿದರು. ಆ ದಿವಸದ ಕಾರ್ಯಗಳು ಮ|| ರಾ|| ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದವು.

ಪ್ರಾರಂಭದಲ್ಲಿ ಮ|| ರಾ|| ಬಿ. ರಾಮಲಿಂಗಯ್ಯನವರು ಕನ್ನಡದಲ್ಲಿಯೂ ತೆಲುಗಿನಲ್ಲಿಯೂ ಈಶ್ವರ ಸ್ತೋತ್ರವನ್ನು ಮಾಡಿದರು.

ಅನಂತರ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮ, ಪಂಚಮಜಾರ್ಜ ಪ್ರಭುಗಳು ಬಹಳದಿವಸದಿಂದ ದೇಹಾಲಸ್ಯದಿಂದಿದ್ದು ಈಗ ತಾನೆ ಆರೋಗ್ಯಸುಖವನ್ನು ಅನುಭವಿಸುತ್ತಿರುವುದು ನಮಗೆಲ್ಲ ಸಂತೋಷವನ್ನುಂಟುಮಾಡುತ್ತದೆಂದು ಇನ್ನು ಮುಂದೆ ಸಾರ್ವಭೌಮರಿಗೆ ಈಶ್ವರನು ಆಯುರಾರೋಗ್ಯವನ್ನು ದಯಪಾಲಿಸಲೆಂದು ಪ್ರಾರ್ಥನವಾಯಿ ಆ ದಿವಸದ ಕಾರ್ಯಗಳು ನಡೆಸಲ್ಪಟ್ಟವು.

ಮ|| ರಾ|| ಬಿ. ಬಸವಲಿಂಗಯ್ಯನವರು ಪ್ರಶಸ್ತಿ ಪತ್ರಿಕೆಗಳನ್ನು ಪಡೆದಿರುವ ಸ್ನೇಹಿತರಿಗೂ ಈ ಸಂತೋಷಕೂಟವನ್ನು ನಡೆಸುವವರ ಪ್ರಾರ್ಥನಮೇರೆಗೆ ಸಕಾಲಕ್ಕೆ ಬಂದ ವೀರಶೈವ ವಿದ್ಯಾರ್ಥಿಗಳಿಗೂ ಮತ್ತು ಮ|| ರಾ|| ಮರಿಯಪ್ಪನವರಿಗೂ ಮ|| ರಾ|| ನಾಗಲಿಂಗಪ್ಪನವರಿಗೂ ತಮ್ಮ ಸಂತೋಷವನ್ನು ಸೂಚಿಸಿ ಈ ಸಂತೋಷಕೂಟವನ್ನು ನಡೆಸಲು ಕಾರಣಗಳನ್ನು ಈ ಕೆಳಗೆ ವಿವರಿಸುವಂತೆ ತಿಳಿಸಿದರು.

ಮೊದಲನೆಯದು ಈ ವರ್ಷ ತೇರ್ಗಡೆಯಾಗಿ ಪ್ರಶಸ್ತಿಪತ್ರಿಕೆಗಳನ್ನು ಪಡೆದಿರುವ ತಮ್ಮ ಸ್ನೇಹಿತರಿಗೆ ನಮ್ಮೆಲ್ಲರ ಅಭಿನಂದನರೂಪವಾದ ಸಂತೋಷವನ್ನು ತಿಳಿಸುವುದು.

ಎರಡನೆಯದು ದಕ್ಷಿಣ ಇಂಡಿಯಾದೇಶದ ನಾನಾಭಾಗಗಳಿಂದ ವೀರಶೈವ ವಿದ್ಯಾರ್ಥಿಗಳು ಈ ಪಟ್ಟಣಕ್ಕೆ ಬಂದು ದೊಡ್ಡ ಶಾಲೆಗಳಲ್ಲಿ ಅಭ್ಯಾಸಮಾಡುತ್ತಿರುವರು. ಆದರೆ ಒಂದು ಪ್ರಾಂತದಿಂದ ಬಂದಿರುವವರಿಗೆ ಇನ್ನೊಂದು ಕಡೆಯಿಂದ ಬಂದಿರುವವರ ಪರಿಚಯವು ಮಾತ್ರ ಇಲ್ಲ. ಈ ನಾಗರೀಕಕಾಲದಲ್ಲಿಯೂ ಈ ರೀತಿ ಅಪರಿಚಿತರಂತೆ ಇರುವುದು ಯುಕ್ತವಲ್ಲವೆಂದು ತಿಳಿದು ಅವರಿಗೆ ಪರಸ್ಪರ ಸ್ನೇಹವನ್ನುಂಟುಮಾಡಿಕೊಡಬೇಕೆಂಬ ಉದ್ದೇಶವು. ಈ ಅಜ್ಞಾತವಾಸಕ್ಕೆ ಕಾರಣವೇನೆಂದು ಅನೇಕರು ಊಹಿಸಬಹುದು. ಇದರ ಮುಖ್ಯಕಾರಣವು ಈ ಪಟ್ಟಣದಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಸರಿಯಾದ ಹಾಸ್ಟಲ್ ಇಲ್ಲದೆ ಇರುವುದು.

ಮದ್ರಾಸಿನಲ್ಲಿ ಎಲ್ಲಿ ನೋಡಿದರೂ ಪ್ರತಿಯೊಂದು ಸಮಾಜದವರ ವಿದ್ಯಾರ್ಥಿಗಳಿಗೆ ಹಾಸ್ಟಲ್‌ಗಳು ಮತ್ತು ಉಚಿತ ವಿದ್ಯಾರ್ಥಿಮಂದಿರಗಳು ಇರುತ್ತವೆ. ವೀರಶೈವ ವಿದ್ಯಾರ್ಥಿಗಳ ದೌರ್ಭಾಗ್ಯಕ್ಕೆ ಒಂದು ಹಾಸ್ಟಲು ಇಲ್ಲ. ಹಾಸ್ಟಲು ಇದ್ದರೆ ಸ್ವಾಭಾವಿಕವಾಗಿ ನಮ್ಮ ವಿದ್ಯಾರ್ಥಿಗಳು ಬಂದು ಸೇರುವುದಕ್ಕೂ ಪರಸ್ಪರ ಸ್ನೇಹಕ್ಕೂ ಅವಕಾಶವಾಗಿ ಮುಂದೆ ಸಮಾಜದ ಸೇವೆಗೂ ಇತರ ಕಾರ್ಯಗಳಿಗೂ ಅವಕಾಶವಾಗುತ್ತಿತ್ತು. ಆದರೆ ಅಂಥ ಸುಯೋಗವು ಇನ್ನೂ ದೊರೆತಿಲ್ಲ. ಕಾರಣ ಕೊಡಗು, ಸೇಲಂ ಡಿ|| ಬಳ್ಳಾರಿ ಹರಪನಹಳ್ಳಿ ಪ್ರಾಂತಗಳಿಂದಲೂ ಮತ್ತು ಮೈಸೂರು ದೇಶದಿಂದಲೂ ಬಂದಿರುವ ವಿದ್ಯಾರ್ಥಿಗಳಿಗೆ ಪರಿಚಯವನ್ನುಂಟುಮಾಡಿಕೊಟ್ಟು ಮುಂದಿನ ಸಮಾಜಸೇವೆಗೆ ನೆರವಾಗಲೆಂಬ ಅಭಿಪ್ರಾಯದಿಂದ ಈ ಕೂಟವನ್ನು ನಡೆಸಿದುದಾಯಿತು.

ಮೂರನೆಯದು ಈ ಪಟ್ಟಣದಲ್ಲಿರುವ ವೀರಶೈವ ಬಂಧುಗಳಿಗೂ ಪರಸ್ಥಳದಿಂದ ಬಂದಿರುವ ವಿದ್ಯಾರ್ಥಿಗಳಿಗೂ ಪರಸ್ಪರ ಭೇಟಿಯಾಗಲು ಅವಕಾಶದೊರೆಯದೆ ಇರುವುದರಿಂದ ಈ ರೀತಿಯಾದರೂ ಪರಿಚಯದೊರೆಯಲೆಂದು. ಅನಂತರ ಈ ಮಹಾಶಯರ ಸಹಾಯದಿಂದಲೂ ಇತರ ಪ್ರಾಂತಗಳ ವೀರಶೈವ ದಾನಶೀಲರ ಉದಾರ ಸಹಾಯದಿಂದಲಾದರೂ ಈ ಪಟ್ಟಣದಲ್ಲಿ ಒಂದು ವೀರಶೈವ ಹಾಸ್ಟಲ್‌ನ್ನು ಸ್ಥಾಪಿಸುವುದಕ್ಕೆ ಅವಕಾಶವಾಗಬಹುದೆಂಬ ಅಭಿಪ್ರಾಯದಿಂದಲೂ ಇದನ್ನು ಇಡಲಾಯಿತು.

ಈ ಪಟ್ಟಣದಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಒಂದು ಹಾಸ್ಟಲ್ ಇಲ್ಲದಿರುವುದು ವೀರಶೈವರ ಗೌರವಪ್ರತಿಷ್ಠೆಗಳಿಗೆ ನಾಚಿಕೆಗೇಡಾಗಿರುತ್ತದೆ. ಮತ್ತು ಪ್ರಾಂತಿಕ ವೀರಶೈವರ ಉದಾಸೀನತೆಯನ್ನು ವ್ಯಕ್ತಗೊಳಿಸುತ್ತದೆ. ಅಲ್ಲದೆ ಈ ಪಟ್ಟಣದಲ್ಲಿ ಇದುವರೆಗೂ ಅಭ್ಯಾಸಮಾಡಿ ಕಷ್ಟಗಳನ್ನು ಅನುಭವಿಸಿದ ವಿದ್ಯಾವಂತರ ಸ್ವಾರ್ಥತೆಯನ್ನು ನೋಡಿದರೆ ನಗುಬರುತ್ತದೆ. ಅವರಾದರೂ ತಾವು ಕಷ್ಟಪಟ್ಟರೂ ಮುಂದೆ ಬರುವವರಿಗಾದರೂ ಸೌಕರ್ಯಗಳನ್ನು ಒದಗಿಸಿಕೊಡಲು ಅದಷ್ಟು ಪ್ರಯತ್ನವನ್ನು ಮಾಡಿಕೊಡುವದಕ್ಕೆ ಪ್ರಯತ್ನಮಾಡದಿರುವದು ಬಹಳ ಶೋಚನೀಯವಾಗಿರುತ್ತದೆ.

ಇನ್ನು ಮುಂದಾದರೂ ವೀರಶೈವ ಸಹೋದರರು ಇತ್ತಕಡೆ ಗಮನಕೊಟ್ಟರೆ ಪಟ್ಟಣದ ವೀರಶೈವಸಮಾಜದವರ ಸಹಾಯದಿಂದ ಹಾಸ್ಟಲಿನ ಏರ್ಪಾಡುಮಾಡಬಹುದೆಂದು ಅರಿಕೆಮಾಡಿದರು. ಈ ದಿವಸ ಮ|| ಮರಿಯಪ್ಪನವರು ಮತ್ತು ಮ|| ನಾಗಲಿಂಗಪ್ಪನವರು ಬಂದುದು ನಮ್ಮ ಪುಣ್ಯವೆಂದೇ ಭಾವಿಸಬೇಕು. ಇವರು ಇಲ್ಲಿಯ ಕಾರ್ಯಗಳ ಜವಾಬ್ದಾರಿಯನ್ನು ವಹಿಸಿದರೆ ಈ ಭಾವೀ ಹಾಸ್ಟಲು ಆಗುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದರು.

ಅನಂತರ ಮ|| ಕೆ. ಎಂ. ದಕ್ಷಿಣಾಮೂರ್ತಿಯವರು ವಿದ್ಯಾಪ್ರಶಸ್ತಿ ಪತ್ರಿಕೆಗಳನ್ನು ಪಡೆದಿರುವ ಸ್ನೇಹಿತರ ಪರವಾಗಿ ಈ ಸಂತೋಷಕೂಟವನ್ನೇರ್ಪಡಿಸಿದವರಿಗೆ ತಮ್ಮ ಸಂತೋಷವನ್ನು ಸೂಚಿಸಿದರು. ಮತ್ತು ಅವರೂ ಕೂಡ ಹಾಸ್ಟಲಿನ ಅವಶ್ಯಕತೆಯ ವಿಚಾರವಾಗಿ ಭಾಷಣಮಾಡಿದರು. ಅವರು 8 ವರ್ಷಗಳವರೆಗೆ ಈ ಮದ್ರಾಸಿನಲ್ಲಿ ಪಟ್ಟ ಕಷ್ಟಗಳನ್ನು ತಿಳಿಸಿ, ಪ್ರಾಚೀನ ಕಾಲದ ತಂಗಾಳಿಯ ಪರಿಚಯದಿಂದಲೂ ಮತ್ತು ಪ್ರಕೃತಿದೇವಿಯ ವಿಚಿತ್ರತರವಾದ ಚಾತುರ್ಯದಿಂದಲೂ ಅರಳಿದ ಕುಸುಮಗಳು ಅಲ್ಪಕಾಲವೇ ಇದ್ದು ಪ್ರಪಂಚಕ್ಕೆ ಸಂತೋಷವನ್ನುಂಟುಮಾಡಿ ಸೂರ್ಯನ ಮುಳುಗಲು ತಮಗೆ ಇನ್ನು ಯಾರುಗತಿಯೆಂಬ ಶಂಕೆಯಿಂದಲೋ ಅಥವ ನೈಜಸ್ವಭಾವದಿಂದಲೋ ನಶಿಸಿಹೋಗುವಂತೆ ಕಳೆದ ಹತ್ತುವರ್ಷಗಳಿಂದ ವೀರಶೈವ ವಿದ್ಯಾರ್ಥಿಗಳ ಸ್ವಪ್ರಯತ್ನದಿಂದಲೇ ಆಗಾಗ್ಗೆ ನಡೆಸಿಕೊಂಡು ಬರುತ್ತಿದ್ದ ಹಾಸ್ಟಲುಗಳ ಚರಿತ್ರೆಯನ್ನು ಮತ್ತು ಅವುಗಳು ಹೇಗೆ ನಶಿಸಿಹೋಗುತ್ತಿದ್ದುವು ಎಂಬುದನ್ನು ಹೇಳಿದರು. ಅಲ್ಲದೆ ಎಂಟುವರ್ಷಗಳು ಈ ಪಟ್ಟಣದಲ್ಲಿದ್ದರೂ ನಮ್ಮ ಸಮಾಜದ ಸಹೋದರರ ಪರಿಚಯವು ಮತ್ತು ಸಮಾಜಬಂಧುಗಳ ಪರಿಚಯವು ಆಗದಿದ್ದುದಕ್ಕೆ ತುಂಬಾ ವಿಷಾದಪಟ್ಟರು. ಇಲ್ಲಿ ಹಾಸ್ಟಲು ಇಲ್ಲದೆ ಇರುವುದು ಪ್ರಾಂತಿಕ ವೀರಶೈವರ ಸ್ವಾರ್ಥತೆಯನ್ನು ಮತ್ತು ಉದಾಸೀನತೆಯನ್ನು ತೋರಿಸುತ್ತದೆ. ಇಲ್ಲಿಂದಿತ್ತಲಾದರೂ ದಕ್ಷಿಣ ಇಂಡಿಯಾದ ವೀರಶೈವರು ಮದ್ರಾಸಿನಲ್ಲಿರುವ ವೀರಶೈವಪ್ರಮುಖರ ಸಹಾಯದಿಂದ ತಮ್ಮ ಕಡೆಯಿಂದ ಬಂದು ಈ ಪಟ್ಟಣದಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳ ವಸತಿಗಾಗಿ ಹಾಸ್ಟಲನ್ನು ಕಟ್ಟಿಸುವ ಪ್ರಯತ್ನ ಮಾಡಬೇಕೆಂದು ಈ ಮಹತ್ಕಾರ್ಯಕ್ಕೆ ಗುರುವರ್ಗದವರೆಲ್ಲರನ್ನು ಸಹಾಯಮಾಡಬೇಕೆಂದು ಪ್ರಾರ್ಥಿಸಿಕೊಳ್ಳಬೇಕೆಂದು ಭಾಷಣ ಮಾಡಿದರು.

ಮ|| ಎ. ಎಂ. ಕೊಟ್ಟೂರಯ್ಯನವರು ಬಳ್ಳಾರಿ ವೀರಶೈವ ಸಂಘದ ಸೆಕ್ರೆಟರಿಯವರುಗಳು ಈ ಕಾರ್ಯಕ್ಕೆ ಅದಷ್ಟು ಸಹಾಯವನ್ನು ಮಾಡುವುದಾಗಿ ಹೇಳಿದರೆಂದು ತಿಳಿಸಿದರು. ಯಾರಾದರೂ ಮೊದಲು ಕಂಕಣಬದ್ಧರಾಗಿ ನಿಂತರೆ ಪ್ರತಿಯೊಬ್ಬ ವೀರಶೈವ ಸಮಾಜಾಭಿಮಾನಿಯು ತನ್ನ ಕೈಲಾದ ಸಹಾಯವನ್ನು ಮಾಡದ ಇರಲಾರನೆಂದು ನೋಡಿದರೆ ಈ ಕಾರ್ಯವು ಸಾಂಗವಾಗಿ (ಪ್ರಾರಂಭದಲ್ಲಿ ಅನೇಕರಿಗೆ ಅನುಮಾನವನ್ನುಂಟುಮಾಡಿದರು) ನೆರವೇರುವುದೆಂದು ತಿಳಿಸಿದರು.

ಹೀಗೆ ಭಾಷಣಗಳು ನಡೆಯಲು ಮ|| ಮರಿಯಪ್ಪನವರು ಮತ್ತು ಮ|| ನಾಗಲಿಂಗಪ್ಪನವರು ಕೆಲವು ಕಾರಣಗಳಿಂದ ಮುಖ್ಯವಾಗಿ ಈ ಪಟ್ಟಣದಲ್ಲಿ ವೀರಶೈವಪ್ರಜಾಸಂಖ್ಯೆಯು ಬಹಳ ಕಡಿಮೆ ಇರುವುದರಿಂದ ಹಾಸ್ಟಲನ್ನು ಸ್ಥಾಪಿಸಲು ಇದುವರೆಗೂ ಸಾಧ್ಯವಾಗಲಿಲ್ಲವೆಂದು ಈಗಲೆ ಯಾವ ವಿಚಾರವನ್ನು ಕೈಕೊಳ್ಳುವುದಕ್ಕೂ ಮತ್ತು ಹೇಳುವುದಕ್ಕೂ ಆಗುವುದಿಲ್ಲವೆಂದು ಈ ಮಹತ್ಕಾರ್ಯಕ್ಕೆ ಈ ಊರಲ್ಲಿರುವ ನಮ್ಮ ಸಮಾಜದವರನ್ನು ಬರಮಾಡಿಕೊಂಡು ಆಲೋಚನೆಮಾಡಬೇಕು. ಅನಂತರ ನಮ್ಮಿಂದಾಗಬಹುದಾದ ಸಹಾಯವನ್ನು ಮಾಡುತ್ತೇವೆ. ಇದಕ್ಕಾಗಿ ಇತರ ಪ್ರಾಂತಗಳಲ್ಲಿರುವ ವೀರಶೈವರು ಸಹಾಯವನ್ನು ಮಾಡಬೇಕು. ಇವನ್ನೆಲ್ಲಾ ಚರ್ಚಿಸುವುದಕ್ಕೆ ಸೆಪ್ಟಂಬರ್ ತಿಂಗಳು ಒಂದನೆ ತಾರೀಖು ಭಾನುವಾರ ಈ ಪಟ್ಟಣದಲ್ಲಿರುವ ಎಲ್ಲಾ ವೀರಶೈವ ವಿದ್ಯಾರ್ಥಿಗಳನ್ನು ಮತ್ತು ಸಮಾಜದವರನ್ನು ಬರಮಾಡಿಕೊಂಡು ಸಭೆಯನ್ನು ನಡೆಸಬಹುದೆಂದು ತಿಳಿಸಿದರು.

ಸಂತೋಷವನ್ನುಂಟುಮಾಡುವ ಭರವಸೆಯನ್ನು ಕೇಳಿ ಮ|| ಹೆಚ್. ಜಿ. ರುದ್ರಪ್ಪನವರು ಮ|| ಮರಿಯಪ್ಪನವರ ಮತ್ತು ಮ|| ನಾಗಲಿಂಗಪ್ಪನವರ ಸಹೃದಯವನ್ನು ಮತ್ತು ಸಮಾಜಾಭಿಮಾನವನ್ನು ಕುರಿತು ಸ್ವಲ್ಪಹೊತ್ತು ಭಾಷಣಮಾಡಿದರು.

ಈ ರೀತಿಯಾಗಿ ವಿಷಯಗಳು ಚರ್ಚಿಸಲ್ಪಟ್ಟು ಮುಂದಿನ ಮೀಟಿಂಗನ್ನು ಸೆಪ್ಟಂಬರ್ ತಿಂಗಳು 1ನೇ ತಾ|| ಭಾನುವಾರ ಇಟ್ಟುಕೊಳ್ಳಬಹುದೆಂದು ನಮ್ಮ ವಿದ್ಯಾರ್ಥಿಗಳನ್ನು ಮತ್ತು ಸಮಾಜದವರನ್ನು ಬರಮಾಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಅಧ್ಯಕ್ಷರು ಮ|| ಜಿ. ಟಿ. ರೆಡ್ಡಿಯವರು ತಮ್ಮ ಸ್ನೇಹಿತರು ಈ ದಿವಸ ಮಾಡಿದ ಆದರಾತಿಥ್ಯಕ್ಕೆ ಈ ಸಂತೋಷಕೂಟದಿಂದುಂಟಾದ ಫಲಿತಾಂಶಗಳಿಗೂ ಬಹಳ ಸಂತೋಷಪಟ್ಟರು. ವರ್ಷವರ್ಷ ವೀರಶೈವವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿರುವುದರಿಂದಲೂ ಅವರಿಗೆ ಸರಿಯಾದ ವಾಸಸ್ಥಾನವು ಇಲ್ಲದೆ ಇರುವುದರಿಂದಲೂ ಹಾಸ್ಟಲ ಅವಶ್ಯಕವೆಂದು ತಿಳಿಸಿದರು. ವೀರಶೈವ ಪ್ರತಿಯೊಬ್ಬ ಯುವಕನು ಇತರ ಜನಾಂಗದ ಯುವಕರು ಹೇಗೆ ಮುಂದುವರಿಯುತ್ತಿರುತ್ತಾರೆಂಬುವನ್ನು ಕೇಳಿ, ರಾಜಕೀಯ ಕಾರ್ಯಗಳಲ್ಲಿಯೂ, ಸಮಾಜಸೇವೆ, ದೇಶಸೇವೆಗಳಲ್ಲಿ ಮುಂದಾಳುಗಳಾಗಬೇಕೆಂದೂ, ಈ ಕಾರ್ಯಗಳನ್ನು ಅವಲಂಬಿಸುವುದಕ್ಕಿಂತ ಮುಂಚೆ ಕಾರ್ಯನಿರ್ವಹಣಶಕ್ತಿಯನ್ನು ಸಂಪಾದಿಸಿಕೊಳ್ಳಬೇಕೆಂದು ತಿಳಿಸಿ ಆ ದಿವಸದ ಕಾರ್ಯವನ್ನು ಪರಿಸಮಾಪ್ತಿಗೊಳಿಸಿದರು.

ಅಧ್ಯಕ್ಷರ ಭಾಷಣಾನಂತರ ನಮ್ಮ ಪ್ರಭುಗಳಾದ ಬ್ರಿಟಿಷ್ ಸಾರ್ವಭೌಮ ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ವೀರಶೈವ ಸಹೋದರರ ಪರಸ್ಪರ ಪರಿಚಯದಿಂದುಂಟಾದ ಸಂತೋಷವನ್ನು ಪ್ರದರ್ಶಿಸುತ್ತ ತಮ್ಮ ಸ್ಥಳಗಳಿಗೆ ಹೊರಟುಹೋದರು.

2. ಎಡಪಾಳಯಂ ಲೇನ್
ಪಾರ್ಕ್‌ಟರ್ನ, ಮದ್ರಾಸು. ಬಿ. ಬಸವಲಿಂಗಯ್ಯ, ಬಿ.ಎ.
20-8-29.

ಭಜನಾಸಂಘ ಕೊಟ್ಟೂರು.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾ|| ಕೊಟ್ಟೂರು ಕಂಭಾವಿ ಮಠದಲ್ಲಿ ಈಗ ಸುಮಾರು 8 ವರ್ಷಗಳಿಂದ ಪ್ರತಿ ಸೋಮವಾರ ಸಾಯಂಕಾಲ ಒಂದು ಘಂಟೆಕಾಲ ಭಜನೆಯು ನಡೆಯುತ, ವರ್ಷಾಂತ್ಯದಲ್ಲಿ ಭಜನಾಸತ್ಸದ್ಭಕ್ತರ ಸಹಾಯದಿಂದ ಗಣತೃಪ್ತಿಯು ನಡೆದು ಆಂದೋಳನೋತ್ಸವದೊಡನೆ ಮಠಕ್ಕೆ ಹೋಗಿ ಬರುವ ಪದ್ಧತಿಯುಂಟು. ಈ ವರ್ಷ ಅದರಂತೆ ಆಷಾಢ ಬ|| 8 ಸೋಮವಾರ ದಿವಸ ಯಥೇಷ್ಟ ಗಣಸಂತರ್ಪಣೆಯು ನಡೆದು ಅನಂತರ ಈ ಸಂಘದ ಪುರೋಭಿವೃದ್ಧಿಯ ಸೂಚನೆಗಳೋ ಎಂಬಂತೆ ಇತ್ತೀಚೆಗೆ ಈ ಗ್ರಾಮದಲ್ಲಿ ಉತ್ಪನ್ನಗಳಾದ ಇತರ ಭಜನಾಸಂಘಗಳು ಸೇರಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಶಿವನಾಮಸ್ತೋತ್ರಭಕ್ತಿಯಿಂದ ಶ್ರೀ ಪಂಚಾಚಾರ್ಯರ ಚಿತ್ರವನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಛತ್ರಚಾಮರಾದಿಗಳಿಂದಲೂ ಅನೇಕ ವಾದ್ಯವಿಶೇಷಗಳಿಂದಲೂ, ಭಜನೆಯಿಂದಲೂ ಈ ಮಠದಿಂದ ಹೊರಟು ಅತಿ ವಿಜೃಂಭಣೆಯಿಂದ ಶ್ರೀ ನಂದೀಶನ ಅಪರಾವತಾರವೆನಿಸಿದ ಕೊಟ್ಟೂರೇಶನ ದೇವಾಲಯಕ್ಕೆ ಹೋಗಿ ಅಲ್ಲಿ ಫಲಪುಷ್ಪಾಕ್ಷತ ಸಮರ್ಪಣೆ ಮಂಗಳಾಚರಣೆಯನ್ನು ಮಾಡಿ ಪುನಃ ಸದರಿ ಮಠಕ್ಕೆ ಬಂದು ತಲ್ಪಿತು. ಸರ್ವರು ಅತ್ಯಂತ ಗುರುಭಕ್ತಿಯಿಂದ ಜಯಘೋಷವನ್ನು ಮಾಡಿದರು. ಈ ರೀತಿ ಶಿವಭಕ್ತಿ ಗುರುಭಕ್ತಿಯನ್ನು ತೋರಿಸಿದರಲ್ಲವೇ ಶಿವಸ್ವರೂಪ ಮೋಕ್ಷಪದವಿಯು ದೊರೆಯಬಹುದೆಂಬುದು ? ಸರ್ವರ ಮನಸ್ಸಿನಲ್ಲಿ ಪರಿಣಮಿಸಿ ಭಜನಮಾಡುವ ಉತ್ಸುಕತೆಯುಂಟಾಯಿತು. ಹೀಗೆ ಪ್ರತಿಯೊಬ್ಬರಲ್ಲಿ ದೇವಭಜನಾಸಕ್ತಿಯುಂಟಾದರೆ ಲೋಕವ್ಯವಹಾರವೆಲ್ಲ ದೇವತಾಪ್ರೀತಿಯಾಗಿ ಈಗ ಬಂದಿರುವ ದುರ್ಧರಣಗಳೆಲ್ಲ ದೂರವಾಗಬಹುದು. ಅನಿತ್ಯಾನಿ ಶರೀರಾಣಿ ವಿಭವೋ ನೈವಶಾಶ್ವತಃ | ನಿತ್ಯಂಸನ್ನಿಹಿತೋಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ || ಹೀಗೆಂಬ ಜ್ಞಾನಿಗಳ ಉಕ್ತಿಯಂತೆ ಅನಿತ್ಯವಾದ ಈ ಶರೀರದಿಂದ ಜೀವನು ಬಿಡುಗಡೆಯಾಗುವದರೊಳಗಾಗಿ ಪರಮಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಂಪಾದಿಸಿಕೊಳ್ಳಬೇಕು. ಆದಕಾರಣ ಈ ಪುರುಷಾರ್ಥಗಳಿಗೆ ಮುಖ್ಯ ಮೂಲಾಧಾರವಾದದ್ದು ದೇವರನಾಮಭಜನೆ ಹೇಗೆಂದರೆ ಲೋವಾದೇವಿಯಲ್ಲಿ ಒಬ್ಬ ಮನುಷ್ಯನ (ದಸ್ತತ್) ಅಂದರೆ ನಾಮಮಾತ್ರ ಶಿಕ್ಕರೆ ಹೇಗೆ ಆತನನ್ನು ಸ್ವಾಧೀನ ಪಡಿಸಿಕೊಳ್ಳುವ ಚೈತನ್ಯವುಂಟೋ ಅದರಂತೆ ದೇವರ ನಾಮವನ್ನು ನಾವು ಭದ್ರವಾಗಿಟ್ಟುಕೊಂಡು ಭಕ್ತಿಯಿಂದ ಭಜಿಸುತ್ತಿದ್ದರೆ ಆ ದೇವರ ಸ್ವರೂಪವು ನಮ್ಮ ವಶವಾಗುವದು. ಅಲ್ಲದೆ ತತ್ಸಂಬಂಧಿ ಪುರುಷಾರ್ಥಗಳು ಸಿದ್ಧಿಸುವದು ಸುಲಭಸಾಧ್ಯವೆಂದು ಹೇಳಬೇಕಾದ ಅವಶ್ಯಕತೆಯೇ ಇಲ್ಲ. ಅದ್ದರಿಂದ ಇದರಂತೆ ಸರ್ವರು ದೇವಭಜನಾಫಲಾಪೇಕ್ಷಿಗಳಾಗಿ ತಮ್ಮ ತಮ್ಮ ಗ್ರಾಮಗಳಲ್ಲಿ ಭಜನಾಸಂಘವನ್ನೇರ್ಪಡಿಸಿ ವಿಪತ್ತುಗಳನ್ನು ದೂರಮಾಡಿಕೊಳ್ಳುವರೆಂದು ಪೂರ್ಣನಂಬಿರುವ,

ಸಿ. ಹೆಚ್. ಯಂ. ಶಿವಾಚಾರ್ಯರು,
ಚಿಮುರಗೊಳ್ಳ.

ಪಂಚಾಚಾರ್ಯ ಪ್ರಭಾ

೧೯೨೯ನೇ ಆಗಸ್ಟ್ ತಾ|| ೨೬ನೇ ಸೋಮವಾರ

ಆಚಾರ.

ಮಾನವಕೋಟಿಯ ಉದ್ಧಾರಕ್ಕೋಸ್ಕರ ಆಚಾರವೇ ಶ್ರೇಷ್ಠವಾದ ಸಾಧನವಾಗಿರುತ್ತದೆ. ಆಚಾರದಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಪ್ರಾಪ್ತವಾಗುತ್ತವೆ. ಪೂರ್ವಕಾಲದ ಮಹರ್ಷಿಗಳೂ, ಮಹಾತ್ಮರೂ, ಸತ್ಪುರುಷರೂ ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಜಗತ್ತಿನಲ್ಲಿ ಈ ಹೊತ್ತಿನವರೆಗೆ ತಮ್ಮ ಪವಿತ್ರನಾಮವನ್ನುಳಿಸಿಕೊಂಡು ಸರ್ವರಿಂದಲೂ ಸ್ತುತ್ಯರಾಗಿ ಪ್ರಕಾಶಿಸುತ್ತಿರುವರು. ಅದುದರಿಂದಲೇ ಭಗವತೀ ಶ್ರುತಿದೇವಿಯು "ಆಚಾರಃ ಪರಮೋ ಧರ್ಮಃ" ಎಂದು ಈ ಆಚಾರದ ಶ್ರೇಷ್ಠತೆಯನ್ನು ನಾನಾವಿಧವಾಗಿ ಕೊಂಡಾಡಿರುವಳು. ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸುವ ಸಮಯದಲ್ಲಿ "ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ! ಸದಾಚಾರಂ ವಿನಾ ತಸ್ಯ ಪ್ರಸಾದೋನೈವಜಾಯತೇ" ಎಂದು ಬೋಧಿಸಿರುವರು. ಅಂದರೆ ಭಗವದ್ಭವಾನೀಪತಿಯು ಸದಾಚಾರದಿಂದಲೇ ಪ್ರೀತಿಯುಳ್ಳವನಾಗುವನೆಂದೂ, ಮಾನವನು ಸದಾಚಾರದಿಂದ ಮಾನ್ಯನಾಗುವನೆಂದೂ, ಸದಾಚಾರಶೂನ್ಯನಾದ ಮಾನವನಿಗೆ ಶಿವಪ್ರಸಾದವು ಲಭಿಸುವದಿಲ್ಲವೆಂದೂ, ಆದುದರಿಂದ ಮನುಷ್ಯನು ಮುಖ್ಯವಾಗಿ ಸದಾಚಾರಸಂಪನ್ನನಾಗಿ ಪರಮಪುರುಷಾರ್ಥವನ್ನು ಸಂಪಾದಿಸಿಕೊಳ್ಳಬೇಕೆಂದೂ ಬೋಧಿಸಿದ್ದಾರೆ. ಅಲ್ಲದೆ ಲೋಕವಿಖ್ಯಾತರಾದ ಗೌತಮಮಹರ್ಷಿಗಳೂ ಕೂಡ ಈ ಆಚಾರದ ಮಹತ್ವವನ್ನು ಬಹುರೀತಿಯಿಂದ ವರ್ಣಿಸಿದ್ದಾರೆ.

ಆಚಾರಃ ಪರಮೋಧರ್ಮ ಆಚಾರಃ ಪರಮಂ ಧನಂ | ಆಚಾರಃ ಪರಮಾ ವಿದ್ಯಾ ಆಚಾರಃ ಪರಮಾ ಗತಿಃ || ಸದಾಚಾರೇಣ ದೇವತ್ವಮೃಷಿತ್ವಂಚ ವರಾನನೇ | ಉಪಾಗತಾಃ ಕುಯೋನಿತ್ವಂ ಮನುಷ್ಯಾಸ್ತದ್ವಿಪರ್ಯಯೇ || ಜ್ಞಾನಮಾಚಾರಹೀನೇಷು ಸರ್ವದೈವಸಮನ್ವಿತಂ | ದುಷ್ಟಚಂಡಾಲ ಭಾಂಡೇಷು ಯಥಾ ಭಾಗೀರಥೀಜಲಂ ||

ಆಚಾರವೇ ಶ್ರೇಷ್ಠವಾದ ಧರ್ಮವೆಂದೂ, ಆಚಾರವೇ ಶ್ರೇಷ್ಠವಾದ ಧನವೆಂದೂ, ಆಚಾರವೇ ಶ್ರೇಷ್ಠವಾದ ಬ್ರಹ್ಮವಿದ್ಯೆಯೆಂದೂ, ಆಚಾರವೇ ಶ್ರೇಷ್ಠವಾದ ಮೋಕ್ಷವೆಂದೂ, ಇಂಥ ಸರ್ವೋತ್ತಮವಾದ ಆಚಾರದಿಂದಲೇ ಮನುಷ್ಯರು ದೇವತ್ವವನ್ನೂ ಹಾಗೂ ಮಹರ್ಷಿತ್ವವನ್ನೂ ಪಡೆಯುವರೆಂದೂ, ಆಚಾರಹೀನರಾದ ಮನುಷ್ಯರು ಶ್ವಾನಸೂಕರಾದಿ ಜನ್ಮಗಳನ್ನು ತಾಳುವರೆಂದೂ, ಚಂಡಾಲರ ಪಾತ್ರೆಯಲ್ಲಿ ಪವಿತ್ರವಾದ ಗಂಗಾಜಲವಿದ್ದರೂ ಸಹ ಆ ಜಲವು ಪ್ರಯೋಜನಕಾರಿಯಾಗದಂತೆ ಅನಾಚಾರಿಗಳಲ್ಲಿ ಜ್ಞಾನವಿದ್ದರೂ ಕೂಡ ಆ ಜ್ಞಾನವು ಪ್ರಯೋಜನಕಾರಿಯಲ್ಲವೆಂದೂ, ಬೋಧಿಸಿರುವರು. ಇದರ ಮೇಲಿಂದ ಆಚಾರದ ಅವಶ್ಯಕತೆಯು ಸನಾತನಧರ್ಮಾವಲಂಬಿಗಳಿಗೆ ಎಷ್ಟರಮಟ್ಟಿಗೆ ಇರಬಹುದೆನ್ನುವದು ಚಿಕ್ಕ ಬಾಲಕರಿಗೂ ಕೂಡ ತಿಳಿಯುವಂತಿದೆ. ಹೀಗಿದ್ದರೂ ಸಹ ಈ ಕಾಲದಲ್ಲಿ ಈ ಆಚಾರದ ಸ್ವರೂಪವನ್ನು ತಿಳಿದು ಅದರಂತೆ ವರ್ತಿಸುವವರು ಕೇವಲ ವಿರಳರಾಗಿದ್ದಾರೆ. ಪೂರ್ವಕಾಲದ ಜನರು ಆಚಾರಸಂಪನ್ನರಾಗಿ ಧರ್ಮ ಕರ್ಮಗಳಿಗೆ ಭೀತರಾಗಿ ವರ್ತಿಸುತ್ತಿದ್ದರು. ಈಗಿನವರು ಅವೆಲ್ಲಕ್ಕೂ ಬಹಿಷ್ಕಾರವನ್ನು ಹಾಕಿಬಿಟ್ಟಿದ್ದಾರೆ. ಈಗಿನವರಿಗೆ ಧರ್ಮ ಬೇಡ; ಕರ್ಮ ಬೇಡ; ಗುರುಗಳು ಬೇಡ; ಆಚಾರವು ಬೇಡ; ತಂದೆಯು ಬೇಡ; ತಾಯಿಯು ಬೇಡ; ಆಚಾರವನ್ನು ಬೋಧಿಸುವವರು ಮೊದಲೇ ಬೇಡವಾಗಿದೆ. ಯಾರು ಅನಾಚಾರವನ್ನು ಬೋಧಿಸುವವರೋ ಅವರೇ ಈಗಿನವರಿಗೆ ತಂದೆತಾಯಿಗಳು, ಗುರುಹಿರಿಯರು, ಬಂಧುಬಳಗದವರಾಗಿದ್ದಾರೆ. ವೀರಶೈವ ಧರ್ಮಶಾಸ್ತ್ರದಲ್ಲಿ ಭವಿಗಳ ನೆರಳೂ ಸಹ ಇವರ ಮೇಲೆ ಬೀಳಕೂಡದೆಂದು ಕಟ್ಟು ಕಠಿಣಶಾಸನವಿರುವಲ್ಲಿ ಆ ಮಾರ್ಗವನ್ನು ತೊರೆದು ಅಲ್ಪರೀತಿಯಿಂದಾದರೂ ಕ್ರಿಯೆಗಳನ್ನು ಸಾಗಿಸದೆ ನಿರ್ಭೀತಿಯಿಂದ ಅನ್ಯಮತೀಯರ ಕಾಫೀಕ್ಲಬ್ಬುಗಳಿಗೆ ಹೋಗಿ ಚಹಾ, ಕಾಫಿ, ಉಪ್ಪಿಟ್ಟು, ದೋಸೆ, ಕೇಸರಿಭಾತ, ವಾಂಗೀಭಾತ ಮೊದಲಾದವುಗಳನ್ನು ತಿಂದು ತೇಗುತ್ತ ಬರುತ್ತಿರುವುದನ್ನು ನೋಡಿದರೆ ಯಾರಿಗೆ ವ್ಯಸನವೆನಿಸಲಿಕ್ಕಿಲ್ಲ? ಈ ಧರ್ಮಭ್ರಷ್ಟರು ತಾವು ಕೆಡುವದಲ್ಲದೆ ತಮ್ಮ ಮನೆಯವರನ್ನೆಲ್ಲ ಕೆಡಿಸುವರು. ಅಲ್ಲದೆ ಸದಾಚಾರಿಗಳ ಮನೆಯಲ್ಲಿ ಹೋಗಿ ಅವರೊಡನೆ ಪಂಕ್ತಿಯಲ್ಲಿ ಕುಳಿತು ತಿಂದು ಅವರು ಅಲ್ಪಸ್ವಲ್ಪ ಆಚಾರವನ್ನು ಕಾಯ್ದುಕೊಂಡಿದ್ದರೂ ಅವರನ್ನು ಸಹ ಕೆಡಿಸುತ್ತಿರುವರು. ಈ ಕಾಲದಲ್ಲಿ ಇಂಥ ಧರ್ಮಲಂಡರ ಸಹವಾಸಕ್ಕೆ ಬಿದ್ದು ಅನೇಕರು ಕೆಡಲಿಕ್ಕೆ ಪ್ರಾರಂಭಿಸಿರುವರು. ಇದು ಕಲಿಕಾಲದ ಪ್ರಭಾವವೆಂದೇ ಹೇಳಬೇಕಾಗಿದೆ. ಈ ಜನರಲ್ಲಿ ಮೂರು ತರಗತಿಗಳಿವೆ. ಒಂದನೆಯ ತರಗತಿಯವರು ಉಡುಪಿಹೋಟೆಲ್ಲುಗಳಿಗೆ ಹೋಗುವವರು; ಎರಡನೆಯ ತರಗತಿಯವರು ಯುರೋಪಿಯನ್ನರ ಹೋಟೆಲ್ಲುಗಳಿಗೆ ಹೋಗುವವರು; ಮೂರನೆಯ ತರಗತಿಯವರು ಮುಸಲ್ಮಾನರ ಹೋಟೆಲ್ಲುಗಳಿಗೆ ಹೋಗುವವರು; ಇವರೇ ಹೆಚ್ಚಿನ ಗ್ರೇಡಿನವರು. ಇಂಥ ಅಧಮರು ಸಮಾಜದಲ್ಲಿ ಕಾಲಿಡುತ್ತ ಹೋದರೆ ಸಮಾಜವು ಸುಧಾರಿಸುವ ಬಗೆಯೆಂತು? ಶಿವಪ್ರೀತಿಯಾಗುವದೆಂತು? ಪ್ರತಿಯೊಬ್ಬ ಜಾತಿಯವನು ಬಾಯಲ್ಲಿಟ್ಟುಕೊಂಡು ಕುಡಿದು ಎಂಜಲದಿಂದ ಕೂಡಿದ ಪಾತ್ರೆಯನ್ನೇ ಮತ್ತೊಬ್ಬನು ಕುಡಿಯುತ್ತಾನೆ. ಅದನ್ನೇ ಬೇರೊಬ್ಬನು ಪಾನಮಾಡುತ್ತಾನೆ. ಇದೊಂದು ನೂತನ ಯಮಲೋಕವೆಂದೇ ಹೇಳಬೇಕಾಗಿದೆ. ಇಂಥ ಧರ್ಮವಿರುದ್ಧ ಅಸಹ್ಯದುಷ್ಟಕೃತಿಯನ್ನು ಮಾಡಲಿಕ್ಕೆ ಇವರ ಮನಸ್ಸು ಹೇಗೆ ಒಪ್ಪುವದೋ ಯಾರಿಗೂ ತಿಳಿಯದಾಗಿದೆ. ಇಂಥ ಪುಣ್ಯಾತ್ಮರಿಗೆ ಸದಾಚಾರಿಗಳು ಆದಷ್ಟುಮಟ್ಟಿಗೆ ಬುದ್ಧಿವಾದವನ್ನು ಹೇಳಿ ಅವರನ್ನು ಆ ದುರ್ಮಾರ್ಗದಿಂದ ತಪ್ಪಿಸುವ ಪ್ರಯತ್ನವನ್ನು ಮಾಡಬೇಕೆಂದು ಕೋರುತ್ತೇವೆ. ಈ ರೀತಿ ಅನಾಚಾರಶೀಲರಾಗಿ ನಡೆಯುವವರು ಇಹಲೋಕದ ಅಲ್ಪಸುಖದ ಕಡೆಗೆ ದೃಷ್ಟಿಯನ್ನಿಡದೆ ಪರಲೋಕದ ಭೀತಿಯ ಕಡೆಗೆ ದೃಷ್ಟಿಯನ್ನಿಟ್ಟು ಪಾಪಪುಣ್ಯಗಳ ಮತ್ತು ಧರ್ಮಾಧರ್ಮಗಳ ಸ್ವರೂಪವನ್ನು ತಿಳಿದು ತಾವು ಯಾವಮತದಲ್ಲಿ ಜನ್ಮವೆತ್ತಿರುವರೋ ಆ ಮತದ ಕಟ್ಟಳೆಗಳನ್ನೂ ಮೇಲೆ ಹೇಳಿದಂತೆ ಆಚಾರದ ಶ್ರೇಷ್ಠತೆಯನ್ನೂ ತಿಳಿದುಕೊಂಡು ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಇಹಪರಸುಖಗಳೆರಡನ್ನೂ ಅನುಭವಿಸಿ ಧನ್ಯರಾಗಬೇಕೆಂದು ಆಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕೋಲಾರದ ಚಿನ್ನದಗಣಿಗಳ ಪೈಕಿ ಬುಲ್ಲಕ್‌ಷಾಫ್ಟ ಎಂಬ ಗಣಿಯಲ್ಲಿ ಕಳೆದ ಮಂಗಳವಾರ ಸ್ಫೋಟವುಂಟಾಗಿ ಒಬ್ಬ ಕೆಲಸಗಾರನು ಮೃತಪಟ್ಟನು.

ಸಿಮ್ಲಾಕ್ಕೆ ದಯಮಾಡಿಸಿರುವ ಶ್ರೀಮನ್ಮಹಾರಾಜರವರು ಪರಿವಾರ ಸಮೇತ ಈ ದಿವಸ ರಾಜಧಾನಿಗೆ ದಯಮಾಡಿಸುವರೆಂದು ತಿಳಿಯಬಂದಿದೆ.

ಸುಮಾರು ಮೂರುವಾರಗಳವರೆಗೆ ಬೆಂಗಳೂರಿನಲ್ಲಿ ನಮ್ಮ ಮಹಾರಾಜರವರ ಅತಿಥಿಗಳಾಗಿದ್ದ ತಿರುವಾಂಕೂರು ಮಹಾರಾಣಿ ರೀಜಂಟರವರೂ, ಮಹಾರಾಜರವರೂ ಕಳೆದವಾರ ಪರಿವಾರ ಸಮೇತ ತಮ್ಮ ಸಂಸ್ಥಾನಕ್ಕೆ ಪ್ರಯಾಣ ಬೆಳೆಸಿದರು.

ಮೊನ್ನೆ ಸೋಮವಾರ ಸಾಯಂಕಾಲ ಆರ್ಕಾಟು ಶ್ರೀನಿವಾಸಾಚಾರ್ ಬೀದಿಯ ಹಳೆತರಗುಪೇಟೆ ಚೌಕದಲ್ಲಿ ಡ್ಯೂಟಿ ಮೇಲಿದ್ದ ಪೋಲೀಸ್ ಕಾನ್ಸ್ಟೇಬಲಿನ ಮೇಲೆ ಎತ್ತಿನಗಾಡಿಯು ಹರಿದು ಗಾಯಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಮರುದಿನ ಸಾಯಂಕಾಲ ಆಸ್ಪತ್ರೆಯಲ್ಲಿ ಸತ್ತನು.

ಇದೇ ಶ್ರಾವಣ ಬಹುಳ ಏಕಾದಶಿ ಶುಕ್ರವಾರ (ತಾ|| 30-8-29) ಗುಬ್ಬಿ ವೀರಶೈವ ನಿವಾಸಿಗಳು ಪೇಟೆಮಧ್ಯದಲ್ಲಿರುವ ಅಮರಗೊಂಡ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಲ್ಲಿ "ಲಕ್ಷಬಿಲ್ವಾರ್ಚನೆ" ಮತ್ತು ತತ್ಸಂಬಂಧವಾದ ಆರಾಧನೆಯನ್ನು ನಡೆಯಿಸುವರೆಂದು ತಿಳಿದುಬರುತ್ತದೆ.

ಕಳೆದವಾರ ಬೌರಿಂಗ್‌ಪೇಟೆ ಹತ್ತರ ಒಂದು ಗೂಡ್ಸ್ ಗಾಡಿಯು ರೈಲ್ವೆಲೈನನ್ನು ಬಿಟ್ಟು ಹರಿದದ್ದರಿಂದ ಒಂದು ದಿನವೆಲ್ಲಾ ರೈಲ್‌ಗಾಡಿಗಳ ಸಂಚಾರಕ್ಕೆ ತೊಂದರೆಯಾಗಿತ್ತು. ಮಾರನೆಯ ದಿನವೇ ಬಿದ್ದ ಗಾಡಿಗಳನ್ನು ಎತ್ತಿ ಕಂಬಿಗಳನ್ನು ಸರಿಪಡಿಸಿದರು. ಈ ಅಚಾತುರ್ಯವು ಹೇಗೆ ನಡೆಯಿತೆಂಬುದನ್ನು ವಿಚಾರಿಸುತ್ತಿರುವುದಾಗಿ ತಿಳಿಯಬರುತ್ತದೆ.

ಮೈಸೂರಿನ ಹತ್ತಿರವಿರುವ ಇಲವಾಲ ಗ್ರಾಮದ ಶಿಂಗ್ರಿ ಎಂಬ ಪೋಲೀಸ್ ಕಾನ್ಸ್ಟೇಬಲ್ಲನು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದವನು ಕಳೆದ ಸೋಮವಾರ ಬೆಳಿಗ್ಗೆ ಪಬ್ಲಿಕ್ ಲೈಬ್ರರಿ ಕಟ್ಟಡದ ಹತ್ತಿರ ಪೋಲೀಸ್ ಡ್ರೆಸ್ಸಿನಲ್ಲಿಯೇ ಸತ್ತುಬಿದ್ದಿದ್ದನು. ಪೋಲೀಸಿನವರು ಮಹಜರ್ ಮುಂತಾದ್ದನ್ನು ನಡೆಯಿಸಿ ಶವವನ್ನು ದಫನ ಮಾಡಿಸಿದರು.

ಬೆಂಗಳೂರಿನಲ್ಲಿರುವ ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಗೆ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಬೆಂಗಳೂರು ಗಲಭೆಗಳ ವಿಚಾರವಾಗಿ ಹೇಳಿ ಪ್ರಕಟಪಡಿಸಿದ ಸಮಾಚಾರದಲ್ಲಿ ತಮಗೆ ಅಪಮಾನವಾಯಿತೆಂದೂ, ಇದರ ಪರಿಹಾರಾರ್ಥವಾಗಿ 500 ರೂಪಾಯಿಗಳ ಪರಿಹಾರವನ್ನು ಕೊಡಿಸಬೇಕೆಂದೂ ಬೆಂಗಳೂರು ಅಡ್ವೋಕೇಟ್ ಮಿ|| ಡಿ. ಶಾಮರಾಯರು ಅಲ್ಲಿನ ಫಸ್ಟ್ ಮುನ್ಸಿಫ್ ಕೋರ್ಟಿನಲ್ಲಿ ದಾವಾ ಮಾಡಿರುತ್ತಾರೆ.

ಮೈಸೂರು-ಹೆಗ್ಗಡದೇವನಕೋಟೆ ಮಾರ್ಗದಲ್ಲಿರುವ ಚಟ್ಟನಹಳ್ಳಿಯ ಸಮೀಪದಲ್ಲಿ ಕಳೆದ ಸೋಮವಾರ ಒಂದು ಮೋಟಾರ್ ಬಸ್ಸಿನ ಅನಾಹುತವು ಸಂಭವಿಸಿತು. ಮೋಟಾರಿನ ಯಂತ್ರವು ಮುರಿದು, ಬಸ್ಸು ಸಾಲುಮರಕ್ಕೆ ಢಿಕ್ಕಿ ಹೊಡೆಯಿತು. ಆಗ ಬಸ್ಸಿನಲ್ಲಿ ಕುಳಿತಿದ್ದ ಫಾರೆಸ್ಟ್ ರೇಂಜರ್ ಶ್ರೀ ಎಚ್. ಅನಂತರಾಮಯ್ಯನವರ ಕಾಲು ಮಧ್ಯದಲ್ಲಿ ಸಿಕ್ಕಿಕೊಂಡು, ಪೂರಾ ಘಾಯವಾಗಿ ಮುರಿದುಹೋಯಿತು. ಅಸಿಸ್ಟೆಂಟ್ ಇಂಜನಿಯರ್ ಶ್ರೀ ಲಕ್ಷ್ಮೀನಾರಾಯಣರಿಗೂ ಸ್ವಲ್ಪ ಜಖಂ ಆಗಿದೆ. ಇಬ್ಬರೂ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆ.

ದಾವಣಗೆರೆಯ ದಂಗೆಯ ಸಂಬಂಧವಾಗಿ ಸರಕಾರದವರು 55 ಜನ ಹಿಂದುಗಳ ಮೇಲೂ, 35 ಜನ ಮುಸಲ್ಮಾನರ ಮೇಲೂ ಮೊಖದ್ದಮೆಯನ್ನು ಮಾಡಿರುವರು. ಕಳೆದ 10-8-29 ನೆಯ ಶನಿವಾರ ಮಧ್ಯಾಹ್ನ 11 ಘಂಟೆಗೆ ಅಪರಾಧಿಗಳೆಲ್ಲರೂ ಕೋರ್ಟಿನ ಬಳಿ ಹಾಜರಿದ್ದರು. ಅವರಲ್ಲಿ 9 ಜನ ಹಿಂದುಗಳೂ, 5 ಜನ ಮಹಮ್ಮದೀಯರೂ ಹಾಜರಾಗಿರಲಿಲ್ಲ. ಮಹಮ್ಮದೀಯ ಅಪರಾಧಿಗಳಲ್ಲದೆ ಇನ್ನು ಎಷ್ಟೋ ಜನ ಮಹಮ್ಮದೀಯರು ತಮ್ಮ ಮುಖಂಡರೊಡನೆ ಬಂದಿದ್ದರು. ಹಿಂದೂಗಳಲ್ಲಿ ಅಪರಾಧಿಗಳ ವಿನಾ ಬೇರೆ ಯಾರೂ ಬಂದಿರಲಿಲ್ಲ. ಕೋರ್ಟಿನವರು ಅಪರಾಧಿಗಳೆಲ್ಲರಿಂದಲೂ ರುಜುವನ್ನು ಮಾಡಿಸಿಕೊಂಡು ಅಡ್ಜರ್ನ್ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಪದವೀಪ್ರದಾನ ಸಮಾರಂಭವು ಮೊನ್ನೆ ಶನಿವಾರ ಬೆಳಿಗ್ಗೆ 9 ಗಂಟೆಗೆ ಅತ್ಯಂತ ವೈಭವದಿಂದ ನೆರವೇರಿತು. ವಿಶ್ವವಿದ್ಯಾನಿಲಯದ ಛಾನ್ಸೆಲರಾದ ಶ್ರೀಮನ್ಮಹಾರಾಜರವರು ರಾಜಧಾನಿಯಲ್ಲಿಲ್ಲದುದರಿಂದ ವೈಸ್-ಛಾನ್ಸೆಲರಾದ ಡಾಕ್ಟರ್ ಸರ್ ಬ್ರಜೇಂದ್ರನಾಥಸೀಲ್‌ರವರೇ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಈ ಸಮಯದಲ್ಲಿ ಕಲಕತ್ತಾ ಯೂನಿವರ್ಸಿಟಿಯ ಪ್ರೊಫೆಸರಾದ ಸರ್ ಸಿ. ವಿ. ರಾಮನ್‌ರವರು ವಿದ್ಯಾರ್ಥಿಗಳ ಸಲುವಾಗಿ ಅಮೋಘವಾದ ಭಾಷಣವನ್ನು ಮಾಡಿದರು. ಈ ಸಮಾರಂಭಕ್ಕೆ ಅನೇಕ ಜನ ದೊಡ್ಡಮನುಷ್ಯರೂ ಲಾಯರುಗಳೂ ಮತ್ತು ಅಧಿಕಾರಿಗಳೂ ದಯಮಾಡಿಸಿದ್ದರು.

ಕಳೆದ ಏಪ್ರಿಲ್ ತಿಂಗಳಿನಲ್ಲಿ ಬೀರೂರು ಶಿವಮೊಗ್ಗಾ ರೈಲ್ ಗಾಡಿಯಲ್ಲಿದ್ದ ಮೇಲ್ ಸರ್ವೀಸ್ಸಿಗೆ ಯಾವನೋ ಒಬ್ಬ ಕಳ್ಳನು ನುಗ್ಗಿ ಅಲ್ಲಿದ್ದ ಸಾರ್ಟರನನ್ನು ಕಟ್ಟಿಹಾಕಿ ರಜಿಸ್ಟರು ಮತ್ತು ಇನ್ಶೂರು ಕವರುಗಳನ್ನು ಒಡೆದು ಸುಮಾರು 12,000 ರೂಪಾಯಿಗಳನ್ನು ಅಪಹರಿಸಿ ತಲೆತಪ್ಪಿಸಿಕೊಂಡಿದ್ದನಷ್ಟೆ! ಈಚೆಗೆ ಗುಪ್ತಪೋಲೀಸಿಗೆ ಸೇರಿದ ಮಿ|| ಡಿ. ರಘುನಾಥರಾವ್ ಮತ್ತು ಮಿ|| ಡಿ. ಹಯಾತ್ ಎಂಬ ಆಫೀಸರುಗಳು ಪತ್ತೆತರದೂದು ನಡೆಯಿಸಿ ಉತ್ತರದೇಶದಲ್ಲಿ ಆ ಕಳ್ಳನನ್ನು ಹಿಡಿದಿರುತ್ತಾರೆಂದೂ, ಅವನ ಹತ್ತಿರ 6,300 ರೂಪಾಯಿಯ ನೋಟುಗಳು ಸಿಕ್ಕಿವೆಯೆಂದೂ ಪ್ರಕಟವಾಗಿದೆ. ಈ ಕಳ್ಳನು ಕಾಬೂಲಿನವನೆಂದೂ ಹಿಂದೆ ಅವನು ಬೀರೂರು ಶಿವಮೊಗ್ಗಾ ರೈಲ್ವೆಲೈನಿನಲ್ಲಿ ನೌಕರನಾಗಿದ್ದನೆಂದೂ ತಿಳಿಯಬಂದಿದೆ.

ವರ್ತಮಾನಸಂಗ್ರಹ.

ಬಚ್ಚಾ-ಇ-ಸಾಕನು ತನಗೆ ವಿರೋಧಿಗಳಾದ 300 ಜನ ಪಠಾಣರ ಮೂಗು ಕೊಯಿಸಿದನಂತೆ!

ಕಲ್ಕತ್ತಾದಲ್ಲೊಬ್ಬ ತಿರುಕನು ಒಬ್ಬ ಅಂಗಡಿಯವನೊಡನೆ ಜಗಳವಾಡಿ ಅವನನ್ನು ಕೊಂದು ಇನ್ನಿಬ್ಬರಿಗೆ ಗಾಯಪಡಿಸಿ ಪೋಲೀಸಿನವರ ಕೈಗೆ ಸಿಕ್ಕಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುವನು.

ವರ್ಧಮಾನ ಮಹಾರಾಜರ ಮಗಳಾದ ಕುಮಾರಿ ಲಲಿತಾ ರಾಣಿಯು ಲಂಡನ್ ನಗರದ ವಸ್ತುಸಂಗ್ರಹಾಲಯದಲ್ಲಿ ಒಂದು ಅಂಗಡಿಯನ್ನು ತೆರೆದು ಸ್ವತಃ ತಾನೇ ಸಿಂಕು ವ್ಯಾಪಾರಮಾಡುತ್ತಿರುವಳಂತೆ!

ಕಾರಾಗೃಹದಲ್ಲಿ ಉಪವಾಸವ್ರತವನ್ನು ಕೈಕೊಂಡಿರುವ ಭಗತ್‌ಸಿಂಗ್ ಮೊದಲಾದವರನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ. ಅವರ ದೇಹಸ್ಥಿತಿಯು ಅಧಿಕಾರಿಗಳಿಗೆ ವಿಶೇಷ ಕಳವಳವನ್ನುಂಟುಮಾಡಿರುತ್ತದೆ.

ಚೀನಾ ಮತ್ತು ರಷ್ಯಕ್ಕೆ ಯುದ್ಧವು ಪ್ರಾರಂಭವಾಗಿರುವುದು. 10 ಸಾವಿರ ರಷ್ಯದ ಸೈನ್ಯವು ಚೀನಾ ಸರಹದ್ದನ್ನು ದಾಟಿದೆ. ಗಡಿಗಳಲ್ಲಿ ಹೊಡೆದಾಟಗಳು ನಡೆದು ಎರಡು ಕಡೆಯೂ ಕೆಲವರು ಸತ್ತಿರುವರೆಂದು ತಿಳಿಯಬಂದಿದೆ.

ಕಲ್ಕತ್ತಾ ಯೂನಿವರ್ಸಿಟಿಯ ಪ್ರೊಫೆಸರಾದ ಸರ್ ಸಿ. ವಿ. ರಾಮನ್‌ರವರು ಕಂಡುಹಿಡಿದಿರುವ "ರಾಮನ್ ಥಿಯರಿ" ಎಂಬ ಶಾಸ್ತ್ರಶೋಧನಕ್ಕೆ ಇಟಲಿದೇಶದವರು "ಮ್ಯಾಟ್ಟಿಯೋಸಿ ಮೆಡಲ್" ಎಂಬ ಬಂಗಾರದ ಪದಕವನ್ನು ಬಹುಮಾನಿಸಿರುವರು.

ಕರ್ನಾಟಕದೇಶದಲ್ಲಿಯೂ ಇತರ ದೇಶಗಳಲ್ಲಿಯೂ ವೇದಾಂತಶಾಸ್ತ್ರಬೋಧೆಯಿಂದ ಅತ್ಯಂತ ಖ್ಯಾತಿಯನ್ನು ಹೊಂದಿದ್ದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಸ್ವಾಮಿಗಳವರು ಕಳೆದ ಬುಧವಾರದ ದಿವಸ ಶಿವಲೋಕವನ್ನೈದಿದರೆಂದು ತಿಳಿದುಬರುತ್ತದೆ.

ಬರುವ ಡಿಸೆಂಬರಿನಲ್ಲಿ ನಡೆಯುವ ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಮಹಾತ್ಮಾ ಗಾಂಧಿಯವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದರು. ಆದರೆ ಮಹಾತ್ಮರು ಅದಕ್ಕೆ ಒಪ್ಪದೆ ಈ ಸಲ ಅಧ್ಯಕ್ಷಸ್ಥಾನವನ್ನು ಪಂ|| ಜವಾಹಿರಲಾಲನೆಹರು [illegible] ಕೊಡತಕ್ಕದ್ದೆಂದು ಪ್ರಸಿದ್ಧಿಸಿರುವರು.

ಖ್ವಾಜಾಹಸನ್ ನಿಜಾಮಿ ಎಂಬ ಮಹಮ್ಮದೀಯ ಮುಖಂಡರು ಲಾಹೋರಿನ ಪ್ರತಾಪ ಪತ್ರಿಕೆಯಲ್ಲಿ ಮಹಮ್ಮದ್ ಮತ್ತು ಶ್ರೀ ಕೃಷ್ಣನ ಜನ್ಮದಿನವು ಒಂದೇ ದಿವಸವಾಗುವುದರಿಂದ ಆ ದಿನ ಮಹಮ್ಮದೀಯರು ಗೋವಧೆಯನ್ನು ನಿಲ್ಲಿಸಬೇಕೆಂದು ಬರೆದಿರುತ್ತಾರೆ. ಯೋಗ್ಯ ಸಲಹೆ!

ಅಮೆರಿಕೆಯಲ್ಲಿ ಟಪ್ಪಾಲುಚೀಟಿಯನ್ನು ಹಚ್ಚುವ ಒಂದು ಹೊಸ ಯಂತ್ರವು ತಯಾರಿಸಲ್ಪಟ್ಟಿದೆ. ಕಾಗದವನ್ನು ದುಡ್ಡನ್ನೂ ಟಪ್ಪಾಲುಪೆಟ್ಟಿಗೆಗೆ ಹಾಕಿದರೆ ನಾಣ್ಯ ಖಜಾನೆಗೆ ಬಿದ್ದು ಕಾಗದದ ಮೇಲೆ ದುಡ್ಡಿಗೆ ತಕ್ಕಂತೆ ಮುದ್ರೆಯು ಒತ್ತಲ್ಪಡುವುದಂತೆ! ದುಡ್ಡನ್ನು ಹಾಕದಿದ್ದರೆ ಮುದ್ರೆಯೂ ಇಲ್ಲ.

ಕಲ್ಕತ್ತೆಯಲ್ಲಿ ಒಂದು ಗಾಡಿಯೂ ಮೋಟಾರೂ ಢಿಕ್ಕಿ ಹೊಡೆದವು. ಸ್ವಲ್ಪಹೊತ್ತಿನೊಳಗಾಗಿ ಅದೇ ಮಾರ್ಗವಾಗಿ ಬರುತ್ತಿದ್ದ ಒಂದು ಲಾರಿಯೂ ಸಹ ಢಿಕ್ಕಿ ಹೊಡೆದು ಗಾಡಿಯು ಚೂರುಚೂರಾಗಿ ಕೆಲವು ಬಂಗಾಳಿ ಸ್ತ್ರೀಯರು ತುಂಬಾ ಗಾಯಪಟ್ಟರು. ಒಂದು ಮಗುವು ಅಲ್ಲಿಯೇ ಮೃತಿಯನ್ನು ಹೊಂದಿತು.

ಬರ್ಹಾಮಪುರದಲ್ಲಿ ಪೋಸ್ಟಾಫೀಸಿನಿಂದ ಪೋಸ್ಟ್ ಚೀಲಗಳನ್ನು ಗಾಡಿಯ ಮೇಲೆ ರೈಲ್ವೆ ಸ್ಟೇಷನ್‌ಗೆ ಸಾಗಿಸಿಕೊಂಡು ಹೋಗುತ್ತಿದ್ದಾಗ ಕೆಲವು ದರೋಡೆಕೋರರು ಆ ಗಾಡಿ ನಡೆಯಿಸುತ್ತಿದ್ದವರನ್ನು ತಡೆದು ಗಾಬರಿಪಡಿಸಿ ಆ ಚೀಲಗಳನ್ನೆಲ್ಲಾ ಮೋಟಾರಿನಲ್ಲಿ ಎತ್ತಿಹಾಕಿಕೊಂಡು ಪರಾರಿಯಾದರು. ಪೋಲೀಸಿನವರು ಶೋಧ ನಡೆಯಿಸುತ್ತಿದ್ದಾರೆ.

ಅಮೇರಿಕೆಯಿಂದ ಇಂಗ್ಲೆಂಡಿಗೆ ಬಂದಿದ್ದ ಒಬ್ಬ ಲಕ್ಷಾಧೀಶ್ವರನು ನ್ಯೂಯಾರ್ಕಿನಲ್ಲಿರುವ ತನ್ನ ಸ್ನೇಹಿತನೊಡನೆ ಟೆಲಿಫೋನಿನಲ್ಲಿ 95 ನಿಮಿಷಗಳ ವರೆಗೆ ಮಾತನಾಡಿನಂತೆ! ಅದಕ್ಕಾಗಿ ಅವನು ಸುಮಾರು 4,000 ರೂಪಾಯಿಗಳನ್ನು ಕೊಡಬೇಕಾಯಿತಂತೆ! ಒಂದು ಸಾರೆ ಟೆಲಿಫೋನ್ ಉಪಯೋಗಿಸಲು ಇದುವರೆಗೆ ಕೊಟ್ಟಿರುವ ಚಾರ್ಜಿನಲ್ಲಿ ಇದೇ ಹೆಚ್ಚಿನದು.

ನೈಜಾಮ ರಾಜ್ಯದಲ್ಲಿರತಕ್ಕ ಪರಳಿ ವೈದ್ಯನಾಥನ ರುದ್ರಾಭಿಷೇಕದ ವಿಷಯದಲ್ಲಿ ವೀರಶೈವರಿಗೂ ಸ್ಮಾರ್ತರಿಗೂ ವಾದವುಂಟಾಗಿ ಈಗ್ಗೆ 4 ವರ್ಷಗಳ ಕೆಳಗೆ ಹೈದರಾಬಾದ ಪಟ್ಟಣದಲ್ಲಿ ಆಮೂಲಾಗ್ರವಾಗಿ ವಿಚಾರವು ನಡೆದ ವಿಷಯವು ಸರ್ವರಿಗೂ ವೇದ್ಯವಿದೆಯಷ್ಟೆ! ಆ ಪ್ರಕರಣದ ತೀರ್ಮಾನವು ಮೊನ್ನೆಮೊನ್ನೆ ವೀರಶೈವರ ಪರವಾಗಿ ಆಯಿತೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ.

ಜಬ್ಬಲ್‌ಪುರದಲ್ಲಿರುವ ನಾಲ್ವರು ಸೋಲ್ಜರುಗಳು ಷಿಕಾರಿಗೋಸ್ಕರ ಸಮೀಪದಲ್ಲಿರುವ ಕಾಡಿಗೆಹೋದರು. ಅವರು ವಾಪಸುಬರುವ ಸಮಯದಲ್ಲಿ ಒಬ್ಬ ಸೋಲ್ಜರನು ಬಂದೂಕವನ್ನು ಇನ್ನೊಬ್ಬ ಸೋಲ್ಜರನ ಬೈಸಿಕಲ್ಲಿಗೆ ಕಟ್ಟುತ್ತಿರುವಾಗ ಆ ಬಂದೂಕದಲ್ಲಿದ್ದ ಗುಂಡು ಹಾರಿ ಗೋಲಿಯು ಆ ಸೋಲ್ಜರನಿಗೆ ಬಡಿದು ತುಂಬಾ ಅಪಾಯವಾಯಿತು. ಗಾಯಪಟ್ಟವನನ್ನು ಮೋಟರಿನಲ್ಲಿ ಆಸ್ಪತ್ರೆಗೆ ತಂದು ಚಿಕಿತ್ಸೆಮಾಡಿದರೂ ಪ್ರಯೋಜನವಾಗದೆ ಮೃತಪಟ್ಟನು.

ಅಮೇರಿಕಾದೇಶದಲ್ಲಿ ಒಬ್ಬ ಸ್ತ್ರೀಯಳಿಗೆ 11 ಜನ ಗಂಡರಿರುವರಂತೆ! ಇವಳು ಇಷ್ಟು ಜನರನ್ನು ವಿವಾಹ ಮಾಡಿಕೊಂಡದ್ದಕ್ಕಾಗಿ ಅಲ್ಲಿಯ ಸರಕಾರದವರು ಇವಳನ್ನು ದಸ್ತಗಿರಿಮಾಡಿರುವರಂತೆ! ಇವಳು ತನ್ನ ವಕೀಲರ ಮೂಲಕವಾಗಿ ನಾನು ಇಷ್ಟು ಜನರನ್ನು ಮದುವೆಯಾದುದು ನನ್ನ ತಪ್ಪಲ್ಲವೆಂದೂ ಪ್ರತಿದಿವಸದಲ್ಲಿಯೂ ಕೆಲ ಕೆಲ ಸ್ತ್ರೀಯರು ಅನೇಕ ಜನರನ್ನು ಮದುವೆಯಾಗುತ್ತಿರುವರೆಂದು ವೃತ್ತಪತ್ರಿಕೆಗಳಲ್ಲಿ ಪ್ರಸಿದ್ಧಿಸುವದನ್ನು ನಾನು ಓದುವದರಿಂದ ಅದು ವೃತ್ತಪತ್ರಿಕಾಕರ್ತರ ತಪ್ಪೆಂದೂ ಸರಕಾರದವರಿಗೆ ತಿಳುಹಿಸಿರುವಳಂತೆ! ಮಹಾಪತಿವ್ರತೆ!

ರಾಜಪುತಾಣದಲ್ಲಿ ಜೌಬೆ ಎಂಬ ಚಿಕ್ಕರಾಜ್ಯವಿರುವುದು. ಇಲ್ಲಿಯ ರಾಜರಾದ ಉದಯಸಿಂಗರಿಗೆ ಈಗ 54 ವರ್ಷ. ಈಗಾಗಲೇ ಇವರು 8 ಸಾರೆ ಮದುವೆಯಾಗಿ ಅಷ್ಟಮಹಿಷಿಯರೊಂದಿಗೆ ಬೆಳಗುವರು. ಈಗಿವರ 9 ನೆಯ ಮದುವೆಗೆ ಪಹಲಿಯ 18 ವರ್ಷದ ಒಬ್ಬ ರಾಜಪುತ್ರಿಯು ಗೊತ್ತಾಗಿರುವಳಂತೆ! ಇವರ ಎಂಟನೆಯ ಮದುವೆಯಾಗಿ ಇನ್ನೂ 6 ತಿಂಗಳು ತುಂಬಿಲ್ಲ. ರಾಜನ ಎಂಟೂಜನ ಹೆಂಡತಿಯರೂ ಪರಿವಾರವೂ ಇದನ್ನು ವಿರೋಧಿಸುವರು. ಈ ತೊಂದರೆಯನ್ನು ತಪ್ಪಿಸಿಕೊಳ್ಳಲು ರಾಜರು ಮಹೋ ಎಂಬ ಹಳ್ಳಿಯಲ್ಲಿ ಗುಪ್ತವಾಗಿ ಮದುವೆಯಾಗುವರಂತೆ! ವಿಚಿತ್ರವರ್ತನ!

ನ್ಯೂಯಾರ್ಕಿನಲ್ಲಿ ಆಗಾಗ್ಗೆ ಬೆಂಕಿಯಿಂದ ಅನಾಹುತಗಳು ವಿಶೇಷವಾಗಿ ನಡೆಯುವುವಾದ್ದರಿಂದ ಫೈರ್ ಅಲಾರಂ ಎಂಬ ಟೆಲಿಫೋನ್ ಯಂತ್ರವು ಅನೇಕ ಸ್ಥಳಗಳಲ್ಲಿ ಇಡಲ್ಪಟ್ಟು ಎಲ್ಲಿಯಾದರೂ ಬೆಂಕಿಬಿದ್ದರೆ ಕೂಡಲೆ ಈ ಯಂತ್ರದಲ್ಲಿ ಕೂಗಿಹೇಳಿದರೆ ಫೈರ್ ಬ್ರಿಗೇಡ್ ಸೈನಿಕರು ಬಂದು ಅದನ್ನು ಆರಿಸುವರು. ಇದನ್ನು ತಿಳಿದಿರುವ ಅನೇಕರು ಕುಚೇಷ್ಟೆಗಾದರೂ ಈ ಯಂತ್ರದಲ್ಲಿ ಕೂಗಿ ಸುಳ್ಳುನಾಮಧೇಯವನ್ನು ಹೇಳಿ ಓಡಿಹೋಗುವರು. ಇದಕ್ಕಾಗಿ ಒಬ್ಬ ಶಾಸ್ತ್ರಜ್ಞರು ಈ ಯಂತ್ರದ ಎದುರಿನಲ್ಲಿ ಬಂದು ನಿಂತವರ ಭಾವಚಿತ್ರವು ಅದಕ್ಕೆ ಜಂಟಿಮಾಡಿರುವ ಕನ್ನಡಿಯಲ್ಲಿ ಬೀಳುವಂತೆ ಒಂದು ಹೊಸ ಶೋಧವನ್ನು ಮಾಡಿರುವರು. ಆದರೂ ಕೆಲವರು ಛತ್ರಿ ವರ್ತಮಾನಪತ್ರಿಕೆ ಮೊದಲಾದವುಗಳಿಂದ ತಮ್ಮ ಮುಖವನ್ನು ಮುಚ್ಚಿಕೊಂಡು ಈ ಯಂತ್ರದಲ್ಲಿ ಮಾತನಾಡುವರಂತೆ! ಇದಕ್ಕೆ ಯಾವ ಹೊಸಯಂತ್ರ ಸ್ಥಾಪನೆಯಾಗುವುದೋ ನೋಡಬೇಕು!

ಇಂಗ್ಲೆಂಡಿನಿಂದ ಅಟ್ಲಾಂಟಿಕ್ ಸಾಗರವನ್ನು ದಾಟಿ ಅಮೇರಿಕಕ್ಕೆ ಹೋಗುವ ವಿರೋಪ್ಲೇನುಗಳು ಇನ್ನು ಮೇಲೆ ಹೆಚ್ಚಿನ ಸಂಭವವಿದೆ. ಇಂತಹ ವಿಮಾನಗಳಿಗೆ ಮಧ್ಯದಲ್ಲಿ ಏನಾದರೂ ಅಪಾಯವಾದರೆ ಅವುಗಳನ್ನು ಸಮುದ್ರಮಧ್ಯದಲ್ಲಿ ಇಳಿಸಿ ರಿಪೇರಿ ಮಾಡಲು ತೇಲಾಡುವ ವಿಮಾನ ರೇವುಗಳನ್ನು ಕಟ್ಟುವ ಪ್ರಯತ್ನವು ನಡೆಯುತ್ತಿದೆ. ಈ ವಿಧವಾದ ಕಾಮಗಾರಿಯಲ್ಲಿ ಚತುರರಾದ ಮಿ|| ಜಾಸಫ್ ಮ್ಯಾಕ್‌ಡೊನಾಲ್ಡ್ ಎಂಬ ಇಂಜನಿಯರು ಕೆಲಸವನ್ನು ನಡೆಯಿಸುತ್ತಿರುವರು. ಮುಂದಿನ ವರ್ಷದ ಆಗಸ್ಟ್ ತಿಂಗಳೊಳಗೆ ಇಂತಹ ಮೊದಲನೆಯ ವಿಮಾನದ ರೇವು ಮುಗಿಯುವುದಂತೆ! ಈ ರೇವು 15 ಸಹಸ್ರ ಟನ್ ಭಾರವುಳ್ಳದ್ದಾಗಿ, 400 ಅಡಿ ಅಗಲವೂ 1,200 ಅಡಿ ಉದ್ದವೂ ಇರುವದಂತೆ! ಸಮುದ್ರಮಟ್ಟದಿಂದ 70 ಅಡಿ ಮೇಲೆ ವಿಮಾನವು ಇಳಿಯಲು ಸ್ಥಳವೇರ್ಪಡಿಸಲ್ಪಟ್ಟಿದೆ. ಒಂದೊಂದು ರೇವಿನಲ್ಲಿಯೂ ವರ್ಕ್‌ಷಾಪ್, ಹೋಟೆಲ್, ರೆಸ್ಟೋರೆಂಟ್ ಇವೆಲ್ಲಾ ಇರುವುವು.

ಆಶ್ಚರ್ಯಕರವಾದ ಯಂತ್ರಸಾಧನಗಳು ಪಾಶ್ಚಿಮಾತ್ಯರಲ್ಲಿ ಪ್ರಕಾಶಕ್ಕೆ ಬರುತ್ತಿರುವುವು. ಅವುಗಳಿಗೆ "ಸ್ಲೋಟ್" ಯಂತ್ರಗಳೆಂದು ಹೆಸರು. ನಮ್ಮ ಭರತಖಂಡದಲ್ಲಿ ಕೇವು ದೊಡ್ಡ ದೊಡ್ಡ ಸ್ಟೇಷನ್ನುಗಳಲ್ಲಿ ಮಾತ್ರ ಹಳೇ ಸಮೂನೆಯ ಯಂತ್ರಗಳಿರುವುವು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಯಂತ್ರಗಳು ವಿಶೇಷವಾದ ಬದಲಾವಣೆಯನ್ನು ಹೊಂದಿ ಮನುಷ್ಯರಿಗಿಂತಲೂ ವೇಗವಾಗಿ ಕಾರ್ಯವನ್ನು ಪೂರೈಸುವುವು. ಇದರಲ್ಲಿ ನಾಟಕ ಮೊದಲಾದ ಸ್ಥಳಗಳಲ್ಲಿ ರಾತ್ರಿಯ ವೇಳೆಯಲ್ಲಿ ಫಲಹಾರಪದಾರ್ಥಗಳನ್ನು ಮಾರುವದೊಂದು ಯಂತ್ರವಿರುವದು. ಈ ಯಂತ್ರದಲ್ಲಿ 77 ವಿಧವಾದ ಪದಾರ್ಥಗಳಿರುವುವು. ಯಂತ್ರದಲ್ಲಿ ಬೇರೆ ಬೇರೆ ಭಾಗಗಳಿರುವುವು. ಒಂದೊಂದು ಭಾಗದಲ್ಲಿ ದುಡ್ಡುಹಾಕಿದರೆ ಒಂದೊಂದು ವಿಧವಾದ ಪದಾರ್ಥವು ಹೊರಗೆ ಬರುವುದು. ಇನ್ನೊಂದು ಯಂತ್ರದಲ್ಲಿ 44 ಭಾಗಗಳಿದ್ದು ಪ್ರತಿಯೊಂದು ಭಾಗದಲ್ಲಿಯೂ ಬೇರೆ ಬೇರೆ ವಿಧವಾದ ಪದಾರ್ಥಗಳಿರುವುವು. ಇದಕ್ಕೆಲ್ಲಾ ಕನ್ನಡಿಗಳನ್ನು ಹಾಕಿರುವದರಿಂದ ತಮಗೆ ಬೇಕಾದ ಪದಾರ್ಥವನ್ನು ಕಣ್ಣಿನಿಂದ ನೋಡಿ ಅನಂತರ ಆ ಭಾಗದಲ್ಲಿ ದುಡ್ಡನ್ನು ಹಾಕಿ ತಮಗೆ ಬೇಕಾದ ಪದಾರ್ಥಗಳನ್ನು ಪಡೆಯಬಹುದು. ರೈಲ್ವೆ ಟಿಕೆಟ್ಟುಗಳನ್ನು ಮಾರುವ ಯಂತ್ರಗಳಂತೂ ಇನ್ನೂ ವಿಚಿತ್ರವಾಗಿರುವುವು. ಈ ಯಂತ್ರಗಳು ಮೋಸಹೋಗುವದೇ ಇಲ್ಲ. ಚಲಾವಣೆಯಾಗದ ಅಥವಾ ಖೋಟಾ ನಾಣ್ಯಗಳನ್ನು ಅವು ತಿರಸ್ಕರಿಸಿಬಿಡುತ್ತವೆ. ನಾಣ್ಯವು ಒಳ್ಳೆಯದಾಗಿದ್ದರೆ 3 ಸೆಕೆಂಡುಗಳಲ್ಲಿ ಇವರಿಗೆ ಬೇಕಾದ ಟಿಕೆಟ್ಟು ಹೊರಗೆ ಬರುವದು. ಇಷ್ಟೇ ಅಲ್ಲ! 8 ಆಣೆಯ ಟಿಕೆಟ್ಟಿಗೆ ನಾವು ಒಂದು ರೂಪಾಯಿಯನ್ನು ಪಾವತಿ ಮಾಡಿದ್ದರೆ ಯಂತ್ರವು 8 ಆಣೆಯ ಟಿಕೆಟ್ಟನ್ನೂ ಬಾಕಿ 8 ಆಣೆಯ ಚಿಲ್ಲರೆಯನ್ನೂ ಸರಿಯಾಗಿ ಪಾವತಿಮಾಡುವದಂತೆ! ಜಮಾಖರ್ಚಿನ ಲೆಖ್ಖವನ್ನು ಸಹ ಸರಿಯಾಗಿ ತೋರಿಸಿ ಟಿಕೆಟ್ಟಿನ ಮಾರಾಟವು ಪೂರೈಸಿದಕೂಡಲೆ ಗಂಟೆಯನ್ನು ಬಾರಿಸುವದಂತೆ!

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಪಾಲಿಸಲ್ಲಿ ಮಿಸ್ಸಲ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [20]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮುರು

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ದುರುಳವೇದಾಂತಿ ಗಜಕೇಸರಿ.

ಶ್ರೀ|| ಶಿವಸ್ವಯಮುಖದಿಂದುದ್ಭವಿಸಿ ಮರ್ತ್ಯದ ಪಾಪ ತವೆ ಕಳೆಯ ವೀರಶೈವವ ಪಾಲಿಸುವ | ಸುವಿಚಾರಿ ಶ್ರೀಗುರುಗಳಿರು ಶಿಹರು ||

ಮಗ—ಜನಕನೇ ? ಶಿವಲಾಂಛನವನ್ನು ಧರಿಸಿ ಚರಿಸುವ ಈ ಅವಧೂತರಂತೆ ನೀನು ಹೇಳುವ ಗುರುಗಳಲ್ಲವೇನು ?

ತಂ—ಶ್ರೀ|| ಪರಳಕೇಳರೊ ಅವರ ಪರಿಯಲ್ಲ ಇವರೆಂದು ಸ್ಥಿರಗೊಳಿಸಲೋಸುಗುವೆ ನೆರೆ ನಂಬಿ ಚರಿಸುವವರ ತಂತ್ರವಾಕ್ಯವನುಪೇಳ್ವೆ ||

ಮಗನೇ ! ಚಿತ್ತವಿಟ್ಟಾಲಿಸು ಶ್ರೀ ಪರಮೇಶ್ವರನ ಸದ್ಯೋಜಾತಾದಿ ಪಂಚಮುಖಗಳಿಂದುದ್ಭವಿಸಿದ ಶ್ರೀ ರೇಣುಕಾದಿ ಪ್ರಮಥರಿಗೆ ಆ ಪರಶಿವನು ನೀವು ಭೂಲೋಕದಲ್ಲಿ ಶಿವಲಿಂಗಗಳಿಂದ ಅವತರಿಸಿ ಬ್ರಾಹ್ಮಣಾದಿ ಸಕಲವರ್ಣದವರಿಗೆ ಸತಿಧರ್ಮಂಗಳಂ ಬೋಧಿಸಿ ಅವರನ್ನು ಉದ್ಧರಿಸಿ ಬನ್ನಿರೆಂದು ಅಜ್ಞಾಪಿಸಲು ಆ ಶಿವನಪ್ಪಣೆಯಿಂದ ಶ್ರೀ ರೇಣುಕಾದಿ ಪ್ರಮಥರು ಕೊಲ್ಲಿಪಾಕಿ, ವಟಕ್ಷೇತ್ರ, ದ್ರಾಕ್ಷಾರಾಮ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ಸೋಮೇಶ್ವರ, ಸಿದ್ಧೇಶ್ವರ, ರಾಮನಾಥ, ಮಲ್ಲಿಕಾರ್ಜುನ, ವಿಶ್ವನಾಥಲಿಂಗಗಳಿಂದ ಉದ್ಭವಿಸಿ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ವಿಶ್ವಾರಾಧ್ಯರೆಂಬೀ ನಾಮಗಳಿಂದ ಅಗಸ್ತ್ಯಾದಿ ಮಹರ್ಷಿಗಳಿಗೆ ಶಕ್ತಿವಿಶಿಷ್ಟಾದ್ವೈತಮಂ ಬೋಧಿಸಿ ವೀರಶೈವ ಮತವಂ ವೃದ್ಧಿಗೊಳಿಸಿ, ರುದ್ರಮುನಿ ಮೊದಲಾದ ಶಿಷ್ಯರಿಗೆ ಆಚಾರ್ಯ ಪಟ್ಟಮಂ ಕಟ್ಟಿ ತಮ್ಮ ಪೀಠದಲ್ಲಿ ಸ್ಥಾಪಿಸಿದರೆಂದು ಶಿವಾಗಮಂ ಬಲ್ಲ ಪಂಡಿತರಿಂದ ಕೇಳಿದ್ದು ನಿನಗೆ ತಿಳಿಸುವದಾಯಿತು. ಹೀಗೆ ಗುರುವಂಶಸಂಭೂತರಾಗಿ ಮಠಪೀಠ ಆಸನ ಲಕ್ಷಣ ಲಕ್ಷಿತರಾದವರಾಗಿ—

ಶ್ಲೋ|| ಚಿತ್ಕಲಾಪ್ರಜಪಃ ಶಾಂತಸ್ಸತ್ಯವಾಗನಸಂಕೃತಃ | ನಿರ್ಮತ್ಸರೋನಿರುತ್ಸೇಕಃ ಕಾಮಾದಿಗುಣವರ್ಜಿತಃ || ಸ್ವದಾರನಿರತಶ್ಯಾಂತಃ ಸಮಸ್ತಾಗಮಪಾರಗಃ | ಆಗ್ನೀಗಭೀರಸ್ಸಂತುಷ್ಟಃ ಪ್ರಗಲ್ಭೋಕರುಣಾಸ್ಪದಃ || ಅಧೀತವೇದಾಗಮಾದಿಸರ್ವತಂತ್ರೇಸುಕೋವಿದಃ | ಪುರಾಣಸಂಹಿತಾವೃತ್ತಸ್ತದರ್ಥಪ್ರತಿಪಾದಕಃ || ಮಂತ್ರಶಾಸ್ತ್ರಕ್ರತಾಭ್ಯಾಸೋ ಯಂತ್ರೋದ್ಧಾರವಿಧಾನವಿತ್ | ಸದಾಚಾರೈಕನಿರತೋ ಸದ್ವಂಶೇಚಸಮುದ್ಭವಃ | ಏವಮಾದಿಗುಣೋಪೇತೋ ಗುರುಪೀಠಾಧಿರೋಹಕಃ ||

ತಂ|| ಲಿಂಗದಲ್ಲಿ ಸಮುಚ್ಚಿತನಾದ ಪರತತ್ವಬೋಧಕನಾದ ಚಿತ್ಕಲಾಜಪಾಸಕ್ತನಾದ ಶಾಂತನಾದ ಸತ್ಯಸಂಧನಾದ ನಿರ್ಮತ್ಸರ್ಯನಾದ ಕಾಮಾದಿಗುಣರಹಿತನಾದ ಏಕಪತ್ನೀವ್ರತವುಳ್ಳವನಾದ ಕರುಣಾಶಾಲಿಯಾದ ವೇದಾಗಮಾದಿ ಸರ್ವತಂತ್ರದಲ್ಲಿಯೂ ನಿಪುಣನಾದ ಪುರಾಣಸಂಹಿತೆಗಳಿಗೆ ಅರ್ಥಬಲ್ಲವನಾದ ಮಂತ್ರಶಾಸ್ತ್ರಾಭ್ಯಾಸಮಾಡಿದವನಾದ ಯಂತ್ರೋದ್ಧಾರಣ ಕ್ರಮವನ್ನು ಬಲ್ಲವನಾದ ಸದಾ ಲಿಂಗಾರ್ಚನಾಸಕ್ತನಾದ ಸದಾಚಾರನಿರತನಾದ ಸದ್ವಂಶದಲ್ಲಿ ಹುಟ್ಟಿದವನಾದ ಈ ಎಲ್ಲಾ ಗುಣಗಳುಳ್ಳವನೇ ಗುರುಪೀಠಾದಿರೋಹಣವನ್ನು ಮಾಡುವದಕ್ಕೆ ಯೋಗ್ಯನೆಂದು ಸೂಕ್ಷ್ಮಾಗಮ ವಚನವಿರುವದು. ಮಗನೇ ? ಇಂಥ ಮಹತ್ತರ ಗುಣವಿಶಿಷ್ಟರಾದ ಸದ್ವಂಶಜಾತರಿಗೆ ಈ ವೇಷಧಾರಿಗಳಾದ ದುರಿತಭಾಜನರಾದ ದುರುಳವೇದಾಂತಿಗಳನ್ನು ಹೋಲಿಸುವದು [illegible]ತಲ್ಲವೇ ?

ಮಗ—ಜನಕನೇ ? ಜಗದಾದಿಯಿಂದ ಬಂದ ಗುರುವಂಶಜರ ವೃತ್ತಾಂತವನ್ನು ಕೇಳಿ ಧನ್ಯನಾದೆನು. ಮುಂದೆ ದುರುಳ ವೇದಾಂತಿಗಳ ಮಾರ್ಗವನ್ನು ದೂರೀಕರಿಸುವ ಮಾರ್ಗವನ್ನು ಬೋಧಿಸು.

ತಂದೆ—ಒಳ್ಳೇದು ; ಮಗನೇ ? ಶಿವಲಕ್ಷಣ ಲಕ್ಷಿತರಾದ ಗುರುಗಳ ಸನ್ನಿಧಿಯಲ್ಲಿ ಶಾಸ್ತ್ರಾಧ್ಯಾಯನವನ್ನು ಮಾಡಿ ಅದರ ಅರ್ಥವನ್ನು ತಿಳಿದು ಜೀವಬ್ರಹ್ಮೈಕ್ಯನಿಶ್ಚಯದಿಂದ ಆತ್ಮಜ್ಞಾನಿಗಳಾಗಿ ಇರುವವರೇ ಗುರುಗಳು ; ವೇದಾಧ್ಯಯನವನ್ನು ಮಾತ್ರ ಮಾಡಿ ಆತ್ಮಜ್ಞಾನವನ್ನು ಪಡೆಯದವರು ಎಂದೂ ಗುರುಗಳಾಗಲಾರರು. ಏಕೆಂದರೆ ಜಿಜ್ಞಾಸುಗಳ ಸಂಶಯವನ್ನು ನಿವೃತ್ತಿ ಮಾಡುವ ಶಕ್ತಿಯು ಇವರಲ್ಲಿರುವದಿಲ್ಲ. ಒಂದುವೇಳೆ ಸಂಶಯರಹಿತ ಉತ್ತಮ ಜಿಜ್ಞಾಸುಗಳಿಗೆ ಉಪದೇಶಿಸುವದಕ್ಕೆ ಇವರು ಸಮರ್ಥರಾಗಬಹುದೆಂದು ಕೆಲವರು ಹೇಳಬಹುದು ; ಹಾಗಲ್ಲ ; ಮರಳಿ ಸಂಶಯವಂಕುರಿಸದಂತೆ ಬೋಧಿಸುವಾತನೇ ಗುರುವಕ್ಕುಂ ; ಎಂದು ನಿಜಗುಣರ ಉಕ್ತಿ ಇರುವದರಿಂದ ವಿಧಿವಿಧೀತಶಾಸ್ತ್ರಜ್ಞರೇ ಬ್ರಹ್ಮೋಪದೇಶಕ್ಕೆ ಅರ್ಹರು ಅಲ್ಲದೆ,

ಕರುಣಾಸಕ್ತಲೆಕ್ಷಣ್ತಪರಿತೆ ನಿರಾಕೇಳಂ | ದಕ್ಷಸುಮುಖಕ್ಷಸುಗುಣಸುಜ್ಞಾನಂಗ | ಳಿರಲವನೆ ಸೇವ್ಯಗುರುವಕ್ಕುಂ || ಅನುಭವಸಾರ.

ತಾ|| ಭೂತದಯೆ ಸಕಲಾ ಶಾಸ್ತ್ರಪರಿಚಯ ವೈರಾಗ್ಯ ಸತ್ವಗುಣ ಸುಜ್ಞಾನ ಮೊದಲಾದ ಚಿಹ್ನೆಗಳುಳ್ಳವರೇ ಸೇವ್ಯಗುರುಗಳು ; ಮೊದಲು ಉದಾಹರಿಸಿದ ಲಕ್ಷಣಗಳಲ್ಲಿ ಒಂದಾದರೂ ನಮ್ಮ ದುರುಳ ವೇದಾಂತಿಗಳಲ್ಲಿರುವದೇ ? ಇಲ್ಲ, ಇಲ್ಲ ; ಅಂದಬಳಿಕ ಇವರು ಗುರುಗಳಾಗುವ ಬಗೆ ಹ್ಯಾಗೆ ? ವೇಷಧಾರಿಗಳೆಲ್ಲರೂ ಗುರುಗಳೇ ! ವಿಷಯಲಂಪಟರೆಲ್ಲರೂ ಗುರುಗಳೇ !

ಮಗ—ಜನಕನೇ ಇಂಥ ಗುರುಗಳು ಈ ವೇಷಧಾರಿಗಳಲ್ಲಿ ಸಿಗುವದೇ ದುರ್ಲಭ. ಒಂದು ವೇಳೆ ಅಂಥ ಲಕ್ಷಣವ್ಯಕ್ತಿಯುಳ್ಳ ಗುರುವು ದೊರಕಿದರೆ ಶಿಷ್ಯನು ಹ್ಯಾಗಿರಬೇಕು. ಅದನ್ನು ಕೃಪಿಸಬೇಕು.

ತಂದೆ—ಅಂಥ ಶಿಷ್ಯರ ಅಧಿಕಾರವನ್ನು ತಿಳಿಸುತ್ತೇನೆ ಕೇಳು ?

ಅನುಭವಶೀಲರಿಗೂ ವೇದಾಂತಶಾಸ್ತ್ರದಲ್ಲಿ ಶ್ರದ್ಧೆಯುಳ್ಳವರಿಗೂ ತತ್ವೋಪದೇಶವನ್ನು ಮಾಡಬೇಕು. ಅಜ್ಞರಿಗೆ ಅಂದರೆ ಅನಧಿಕಾರಿಗಳಿಗೆ ಎಂದೂ ಮಾಡಲಾಗದು ಹೀಗೆ ನಿಜಗುಣರ ಉಕ್ತಿ ಇದ್ದರೂ ಆ ದುರುಳವೇದಾಂತಿಗಳು ಶಿಕ್ಷೋದರಪಾರಾಯಣರಿಗೂ ಜಾರಚೋರರಿಗೂ ಉಪದೇಶಿಸುವದಿಲ್ಲ ? ಇದು ಗುರುಗಳ ಸಾಂಪ್ರದಾಯವೇ ? ಜೀವಿದ್ದಲ್ಲಿಗೆ ಬಂದು ನಾನೇ ಉಪದೇಶಿಸುವೆನೆಂದು ಹೇಳುವ ಕಪಟಿಗುರುಗಳಿಗೆ ಏನೆನ್ನಬೇಕು ? ಎಂಬುವದನ್ನು ನಿನ್ನಂತೆ ವಿಚಾರಪರಿಶೀಲರಾದ ವಾಚಕರೇ ಊಹಿಸಲಿ ; "ಪರಿತ್ರಾಣಾಯಸಾಧೂನಾಂ ವಿನಾಶಾಯಚದುಷ್ಕೃತಾಂ | ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿಯುಗೆಯುಗೆ ||"

ತಾ|| ಸಜ್ಜನರನ್ನು ರಕ್ಷಿಸುವದಕ್ಕೂ ದುರ್ಜನರನ್ನು ಶಿಕ್ಷಿಸುವದಕ್ಕೂ ಮತ್ತು ಧರ್ಮವನ್ನು ಸ್ಥಾಪಿಸುವದಕ್ಕೂ ಪ್ರತಿಯುಗದಲ್ಲಿ ನಾನು ಹುಟ್ಟುವೆನೆಂದು ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿರುವನು. ವ್ಯಾಸಾದಿ ಮಹರ್ಷಿಗಳೂಕೂಡ ಲೋಕದಲ್ಲಿ ಅವತರಿಸಿ ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ಶಿಕ್ಷಿಸಿ ಧರ್ಮಾಚರಣೆಯನ್ನೂ ವೇದವಿಧಿಯನ್ನೂ ಸಹ ಸ್ಥಾಪಿಸಿರುವರು.

ಶ್ಲೋ|| ಯದಾಯದಾಹಿಧರ್ಮಸ್ಯ ಹಾನಿರ್ಭವತಿಭೂತಲೇ | ತದಾತದಾವತಾರೋಯಂ ಗಣೇಶಾನಾಂಮಹೀಪತೇ | ಯದಾಯದಾಪ್ರಾಣಿವೈಕ್ಯಭಾಜಾಂ ಹಾನಿಸ್ಸ್ಯಾದ್ವೇದ್ಯಮಿಪಲೇಗಣೇಶಾಃ | ತದಾತದಾಮರ್ತ್ಯಕುಲೇವತೀರ್ಯಸಂಭೂಯಕುರ್ವಂತಿಚ ಧರ್ಮಸಂಸ್ಥಾಂ ||

ತಾ|| ಅಂದರೆ ಪ್ರಾಣಲಿಂಗಾಂಗ ಸಾಮರಸ್ಯ ವಿಚಾರಕ್ಕೆ ಯಾವಾಗ ಭೂಲೋಕದಲ್ಲಿ ಹಾನಿ ಉಂಟಾಗುತ್ತದೆಯೋ ಆಯಾಯ ಕಾಲಗಳಲ್ಲಿ ಶಿವಧರ್ಮವನ್ನು ಪುನಃ ಪುನಃ ಸ್ಥಾಪಿಸುವದಕ್ಕೋಸ್ಕರ ರುದ್ರಲೋಕದಿಂದ ರುದ್ರಗಣಂಗಳು ಮರ್ತ್ಯಲೋಕದಲ್ಲಿ ಅವತರಿಸಿ ಧರ್ಮವಂ ಸ್ಥಾಪಿಸುವರೆಂದು ಸ್ಕಾಂದಪುರಾಣವಿರುವಂತೆ, ಶ್ರೀ ಮದ್ರೇಣುಕಾದಿ ಪಂಚಾಚಾರ್ಯರನ್ನು ಶಿವಧರ್ಮಸಂಸ್ಥಾಪನಾರ್ಥವಾಗಿ ಮರ್ತ್ಯಲೋಕದಲ್ಲಿ ಅವತರಿಸಬೇಕೆಂದು ಪರಶಿವನು ಅನುಜ್ಞೆಯುಂಮಾಡುವನು. ಅದರಂತೆ ಅವತರಿಸಿ ಜೀರ್ಣವಾದ ವೀರಶೈವಮತವನ್ನು ಅಭಿವೃದ್ಧಿಗೆ ತರುತ್ತಿರುವರು. ನಮ್ಮ ಈ ದುರುಳವೇದಾಂತಿಗಳಂತೆ ವ್ಯಾಸಾದಿ ಮಹರ್ಷಿಗಳು ಮತವನ್ನು ಭ್ರಷ್ಟಗೊಳಿಸಿದರೇ ? ಈ ಕುಟಿಲವೇದಾಂತಿಗಳು ಮಹರ್ಷಿಯರ ಉಪಮಾನವನ್ನು ಹೇಳತೊಡಗುವರು. ಮಾಡಲಿ ಏನು ? ಈ ಕಪಟಿಗಳು ಆರೂಢಮಾರ್ಗವನ್ನು ತಿಳಿಸುವೆವೆಂದು ಹೇಳುವರಲ್ಲ ? ಇವರಿಗೆ ಆರೂಢ ಶಬ್ದಾರ್ಥವಾದರೂ ಗೊತ್ತಿದೆಯೋ? ಇಲ್ಲ ಇಲ್ಲ.

ಮಗ—ಹೇ ಜನಕಾ? ವಿದ್ಯಾಹೀನರಾದ ಮೂಗೇಡಿ ವೇದಾಂತಿಗಳು ಆಚರಿಸುವ ಮಾರ್ಗವಾವುದು ? ಅದನ್ನು ಹೇಳು ?

ತಂದೆ—ಗುರುಕಂಥೆಲಿಂಗವೆ ತಾನಾಗಿ ಮುಕ್ತ ಪರಿಕಲ್ಪನೆಗಳು ಸುಳಿದು ನಿಸ್ಸುಖದ ಕರನಿಧಿಯೆನಿಸಿದ ನಿಜದೊಳು ಮುಕ್ತನಾಗಿರುತಿರ್ಪನಾರೂಢನೆನಿಸುವನೂ || ಕೈವಲ್ಯ.

ತಾ|| ದ್ವೈತಭ್ರಾಂತಿ ಇಲ್ಲದವನಾಗಿ ಪರಬ್ರಹ್ಮಸ್ವರೂಪವು ತಾನಾಗಿರುವೆನೆಂಬ ಕಲ್ಪನೆಯೂಕೂಡ ಇಲ್ಲದವನಾಗಿ ನಿಸ್ಸುಖದ ಸಮುದ್ರವೇ ತಾನಾಗಿ ಇಹದಲ್ಲಿ ಮುಕ್ತನಾದವನೇ ಆರೂಢನೆಂದು ನಿಜಗುಣರ ಉಕ್ತಿಯಿರುವದು. ಮತ್ತು ಸುಪೇಚ್ಛೆ, ಸುವಿಚಾರಣೆ, ತನುಮಾನಸ, ಸತ್ವಾಪತ್ತಿ, ಅಸಂಸಕ್ತಿ, ಪದಾರ್ಥಭಾವನೆ, ತುರ್ಯಗಾಮಿ ಈ ಸಪ್ತಭೂಮಿಕೆಗಳನ್ನು ಹತ್ತಿದವನೇ ಆರೂಢನೆಂದು ಬಲ್ಲವರು ಹೇಳುತ್ತಿರುವರು. ಕೂಪ ಮಂಡೂಕ ನ್ಯಾಯದಂತೆ ಕಂಡಕಂಡವರ ಮನೆಗಳಲ್ಲಿ ಅಪೇಯ ಅಭಕ್ಷ್ಯಗಳನ್ನು ಸೇವಿಸಿ ಆರೂಢರೆಂದು ಹೇಳಿಕೊಳ್ಳುವದು ನಾಚಿಕೆಗೇಡಿಗಳ ಮತವಾಗಿರುವುದಲ್ಲವೇ ? ಮತ್ತು ಈ ಮರುಳುವೇದಾಂತಿಗಳು ಜೀವಬ್ರಹ್ಮವೆಂಬೆನೆವದಿಂದ ಯಾವದೋ ಒಂದು ವಿಧ ಮುದ್ರೆಯ ಪ್ರಕಾಶವನ್ನು ತೋರಿಸಿ ಇದುವೇ ಬ್ರಹ್ಮವೆಂದು ತಿಳಿಸಿ ನೀನು ಇಷ್ಟಲಿಂಗವನ್ನು ತ್ಯಜಿಸು. ಇದನ್ನು ಪೂಜಿಸಬೇಡ, ಇದರಿಂದ ನಿನಗೆ ಏನೂ ಪ್ರಯೋಜನವಿಲ್ಲವು. ಈ ಶಿಲಾಮಯವಾದ ಸ್ಥೂಲಲಿಂಗದಿಂದ ಗತಿಯಾದರೂ ಯಾರಿಗಾಗಿದೆ ? [illegible] ನಮ್ಮ ಮತವನ್ನುಸರಿಸೆಂದು ಹೇಳುವರು. ಮಗನೇ ! ಇದೇ ಅವರಿಗೆ ಮಾರ್ಗವಾಗಿರುವದು.

(ಸಶೇಷ.)

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ !!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖಿತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವಯೋಗಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥೆ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು.

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.**

[3] ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ. ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಗಳಲ್ಲೆಲ್ಲಾ ಶಿರೋಮಣಿ !

ಮಲೇರಿಯಾನ ಸರ್ವಜ್ವರಸಂಹಾರಿಣೀ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಎಂಥಹ ಜ್ವರಗಳಾಗಲೀ: **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಸೇವಿಸಿರಿ.

ಕ್ರಯ 8 ಬಿನ್ನಿಗೆ ರೂ. 1—8—0 ; ½ ಡಜನಿಗೆ ರೂ. 8—8—0. 1 ಡಜನಿಗೆ ರೂ. 16—8—0. [3]

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಭಗಿನಿಯರೇ! ನೀವು ಅವಶ್ಯವಾಗಿ ಓದಬೇಕಾದ ಪುಸ್ತಕ

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ.

ಕ್ರಯ ೬ ಆಣೆ. ಅಂಚೆವೆಚ್ಚ ೧ ಆಣೆ.

ಡಾಕ್ಟರ್ ರಾಮರಾಯರಿಂದ ರಚಿಸಲ್ಪಟ್ಟು, ಸುಮಾರು ನೂರು ಪುಟಗಳನ್ನೊಳಗೊಂಡ ಸಚಿತ್ರವಾದ ಈ ಪುಸ್ತಕದಲ್ಲಿ ನಿಮ್ಮ ಗರ್ಭದಶೆಯಲ್ಲಿಯೂ, ಪ್ರಸವಕಾಲದಲ್ಲಿಯೂ, ಅನಂತರದಲ್ಲಿಯೂ ನಿಮಗೆ ಸುಖಪ್ರಸವವನ್ನೂ, ನಿಮ್ಮ ಮತ್ತು ನಿಮ್ಮ ಶಿಶುವಿನ ದೇಹಾರೋಗ್ಯವನ್ನೂ ಪಡೆಯಲು ಅವಶ್ಯಕವಾದ ಸೂಚನೆಗಳು ತಿಳಿಗನ್ನಡದಲ್ಲಿ ಸಚಿತ್ರವಾಗಿ ಕೊಡಲ್ಪಟ್ಟಿವೆ.

ನಿಮ್ಮಲ್ಲಿ ಅನೇಕರು ತಿಳಿವಳಿಕೆಯಿಲ್ಲದೆ ಮೇಲ್ಕಂಡ ಸಮಯಗಳಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಬಿಟ್ಟು ಅನೇಕ ಅಪಾಯಗಳಿಗೂ, ತೊಂದರೆಗಳಿಗೂ ಗುರಿಯಾಗುವಿರಿ. ತಾತ್ಕಾಲಿಕ ಸುಲಭ ಚಿಕಿತ್ಸಾಕ್ರಮಗಳಿಂದ ನಿಮ್ಮನ್ನು ಅಂಥ ತೊಂದರೆಗಳಿಂದ ತಪ್ಪಿಸುವುದೇ ಈ ಪುಸ್ತಕದ ಉದ್ದೇಶವು.

ಸಮರ್ಥ ವೈದ್ಯರ ಮತ್ತು ದಾದಿಯರ ಸಹಾಯವು ದೊರಕದ ಕುಗ್ರಾಮಗಳಲ್ಲಿರತಕ್ಕವರಿಗೆ ಈ ಪುಸ್ತಕವು ಅನುಕೂಲ್ಯವಾಗಿರುವುದು.

ಗರ್ಭದ ಸೂಚನೆಗಳು, ಗರ್ಭಿಣಿಯರ ದೇಹಾರೋಗ್ಯರಕ್ಷಣೆ, ಗರ್ಭಕಾಲದಲ್ಲಿ ಕಾಣಿಸಬಹುದಾದ ವ್ಯಾಧಿಗಳು, ಗರ್ಭಕ್ಕೆ ಸಂಭವಿಸಬಹುದಾದ ಅಪಾಯಗಳು, ಪ್ರಸವಕಾಲದಲ್ಲಿ ಶುಚಿತ್ವಪದ್ಧತಿಗಳು, ಸೂ[illegible]ಗಳಲ್ಲಿ ಒದಗಬಹುದಾದ ಅಪಾಯಗಳು, ಶಿಶುವಿನ ಉಪಚಾರ ಮತ್ತು ಶಿಶುವಿಗೆ ಆಹಾರವನ್ನು ಕೊಡುವ ಕ್ರಮಗಳು ಇವೇ ಮುಂತಾದ ಅನೇಕ ವಿಷಯಗಳು ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿವೆ.

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಮ್. ಎಲ್. ಸಿ. ಮದರಾಸು. "ಮುದ್ದಾದ ಈ ಸಣ್ಣ ಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಹಿಂದೂಪತ್ರಿಕೆ:—4-4-28. "ಆನರಬಲ್. ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, ನಮ್ಮ ದೇಶದ ಸ್ತ್ರೀಯರೆಲ್ಲರೂ ಇದನ್ನು ಅವಶ್ಯವಾಗಿ ಓದಿಯೇತೀರಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಜನಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಿಂದ, ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಿ ಬರೆಯಲ್ಪಟ್ಟಿವೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳಿವಳಿಕೆಯಿಲ್ಲದುದರಿಂದ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಈ ಪುಸ್ತಕವನ್ನೋದಿ ತಿಳಿದಿದ್ದರೆ ಅಂತಹ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನು ಬೇಕೆನ್ನತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮನಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [9]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಆದೇವಸು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಸ್ತ್ರೀಯರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧೈರ್ಯವಿದ್ದರೆ ಕೀರ್ತಿಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು [illegible]ವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ ಮತ್ತು [illegible] ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. ([illegible]) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಬರಾಕಂದ, ಕಾಲೀಮುಲೀಕಂದ, ಅಶ್ವಕಂದ ಗ್ರೀಷ್ಮಕಂದ, ಮುಸಳೀಕಂದ [illegible]ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀ [illegible] ವಿವೇಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರಕ್ತಪುರುಷ, ಕಮರ[illegible] ಶಪಿಲ್ಲಾಗೊಂಡ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಪಾ, ಬೀಜಬಂದ, ಹರಣಚೋರಿ, ಮುಂಗಲೀ [illegible], ಮರ್ದನೀಕಟ್ಟಿಗೆ, ಶತಾವರಿ, ಸತೀಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತ[illegible] ಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, [illegible], ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟ[illegible] 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ, ಭೋಜನಾನಂತರ 2 ತೊಲಿಯ ಒಂದು [illegible] ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸಾಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು [illegible] ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. [illegible]ಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿ.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ಥ, ರಕ್ತ, ಕೀವು, ಹುಣ್ಣು, ಬಿರ್ಗಂ[illegible], ನಾಶಬಾರದಿರೋಣ, ದಟ್ಟಿರೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು [illegible] ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [7]

ಪತ್ತ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಶೈಲಾಸೀಯ ಮಹೌಷಧವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ [illegible]ಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗ[illegible] ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲಿಯ ಶೀಶೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ನಾನರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[21] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕ ಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನವೀನ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟ... ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗು... ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಿ... ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡು... ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹು...

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ ಕ್ಕೆ	ರೂ. ಆ. ಪೈ. ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧.೨ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೪ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೨ ಆಣೆ
ವೀರಶೈವಾಚಾರವಿಧಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೪ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೧ ಆಣೆ
ವಿವಾಹವಿಧಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸು...

ಸರ್ವೋತ್ಕೃಷ್ಟ ಗ್ರಂಥಗಳು.

ಶ್ರೀ ಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಆ... ನ ಪಂಡಿತರೂ, ವೀರಶೈವ ಸಿದ್ಧಾಂತದ ಸ್ವರೂಪವನ್ನು ಸಂಪೂ... ಬಲ್ಲವರೂ, ವೀರಶೈವ ಪಂಡಿತಾಗ್ರಗಣ್ಯರೂ, ಲೋಕವಿಖ್ಯಾ... ಆದ ವೇ|| ಪಂ|| ಧರ್ಮರತ್ನ ಉಮಚಗಿ ಶಂಕರಶಾಸ್ತ್ರಿಗಳ... ಅತ್ಯಂತ ಶ್ರಮವಹಿಸಿ ಈ ಕೆಳಗೆ ಕಾಣಿಸಿದ ಗ್ರಂಥಗಳನ್ನು ಕ... ಭಾಷೆಯಲ್ಲಿ ಬರೆದು ವೀರಶೈವಮತಕ್ಕೆ ಮಹೋಪಕಾರ... ಮಾಡಿದ್ದಾರೆ. ಈ ಕಾಲದಲ್ಲಿ ಇಂಥ ಗ್ರಂಥರತ್ನಗಳನ್ನು ರ... ವವರೇ ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ... ಶೈವಸಿದ್ಧಾಂತವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರು ... ಗ್ರಂಥಗಳನ್ನು ಅವಶ್ಯವಾಗಿ ತರಿಸಿ ಓದಿಕೊಳ್ಳಬೇಕು.

ವೀರಶೈವ ಸಿದ್ಧಾಂತಸುಧಾಕರ	24...
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	14...
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	14...

ವಿಳಾಸ:— ವೇ|| ಚನ್ನಯ್ಯ ಹೊಸಮಠ, ಪೋಸ್ಟು ಹರಿಹರ, ಡಿ|| ಚಿತ್ರದುರ್ಗ...

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು... ಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗ... ಇದನ್ನು ಉಪಯೋಗಿಸಿ, ಸಾವಿರಾರುಗಳ...

(Registered Trade Mark)

ಯೋಗ್ಯತಾಪತ್ರ... ಗಳನ್ನು ಕೊಟ್ಟಿದ್ದಾ... ರು. ಪ್ರಸಿದ್ಧವಾ... ಈ ನಶ್ಯದ ಘ... ಯಿಂದ ಸ್ವಸ್ಥವಾ... ವ ವ್ಯಾಧಿಗಳು ಯ... ವವೆಂದರೆ:—ಪಿ... ಒಂಟಿ ತಲೆನೋ... ತಲೆಯಲ್ಲಿ... ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳ... ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾ... ವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳ... ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾ... ಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗ... ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಒಳ್ಳೆಯ ಪರಿಮಳವಾಗುವುದು. ... ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ... ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ... ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-... ಡಜನ್ ಒಂದಕ್ಕೆ ಕ್ರಯ. ರೂ. ೨-೮-೦. ವಿ.ಪಿ. ೮ ಆ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ... ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[9] ಪೋ. ಬಾ. ೫೧೦. ಮದರಾಸ್...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತು ದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಸೆಪ್ಟಂಬರ್ ೧೯೨೯ [ಸಂಚಿಕೆ ೧೭.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಮಹಾಗಣಾರಾಧನೆ ಮತ್ತು ರೇವಣಸಿದ್ಧೇಶ್ವರ ಪುರಾಣಪ್ರಾರಂಭ.

ಬಂಕಾಪುರ.

ಇದೇ ಶುಕ್ಲನಾಮ ಸಂವತ್ಸರದ ಶ್ರಾವಣ ಶು|| ೧೪ ತಾ|| 19-8-29 ನೆಯ ಇಸ್ವಿ ಸೋಮವಾರ ದಿವಸ ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿ ಸಂಸ್ಥಾನ ಹಂದಿಗನೂರ ವ ನಾದರ್ಗಿ ಮಾಮಲೇ ಬಂಕಾಪುರ ಇವರ ಧರ್ಮಪತ್ನಿಯರಾದ ಪ|| ಕುಂ|| ಸೌ|| ಶ್ರೀಮತಿ ರಾಮಾಬಾಯಿ ದೇಸಾಯಿಣೆಯವರ 27 ತಿಂಗಳ ಬಿಲ್ವವೃಕ್ಷದ ವ್ರತದ ಸಮಾಪ್ತಿಕಾಲಕ್ಕೆ ಸದರಿ ದೇಸಾಯಿಯವರು ಸ್ಥಳಪರಸ್ಥಳದ ಸಾವಿರಾರು ಗಣಸಮೂಹಕ್ಕೆ ಬಿನ್ನಹ ಮಾಡಿ ಬರಮಾಡಿಕೊಂಡು ಸದರಿ ಬಿಲ್ವವೃಕ್ಷದ ಆವಾರದಲ್ಲಿಯೇ ಶಿಗ್ಗಾವಿ ಹಿರೇಮಠದ ಶ್ರೀ ಚರಮೂರ್ತಿಗಳವರ ಪಾದಪೂಜೆಯನ್ನು ನೆರವೇರಿಸಿ ಸಮಸ್ತ ವೀರಶೈವ ಮಾಹೇಶ್ವರರಿಗೂ ಪಂಚಪಕ್ವಾನ್ನಗಳಿಂದ ತೃಪ್ತಿಗೊಳಿಸಿದ್ದಲ್ಲದೆ ಭಸ್ಮ, ರುದ್ರಾಕ್ಷಿ, ಶಿವಧಾರ, ವಸ್ತ್ರ, ದಕ್ಷಿಣೆ, ತಾಂಬೂಲಗಳಿಂದ ಸರ್ವಮಾಹೇಶ್ವರರಿಗೂ ಪಂಚಾಂಗಸಮೇತ ನಮಸ್ಕರಿಸಿ ಪುಣ್ಯಭಾಗಿಗಳಾದರು. ಸದರಿ ಶ್ರೀಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸುಗ ನಾಲ್ಕು ರೂಪಾಯಿಗಳನ್ನು ರಾ|| ರಾ|| ಬಸವನಗೌಡರು ಮೆಣಸಿನ ಇವರ ಕಡೆಗೆ ಕೊಟ್ಟಿರುತ್ತಾರೆ ಮತ್ತು ಅದೇ ದಿವಸ ಸಾಯಂಕಾಲ 6 ಘಂಟೆಗೆ ಆಮಂತ್ರಣಮೇರೆಗೆ ಬಂದಿದ್ದ ವೇ|| ಪ್ರಭುಶಾಸ್ತ್ರಿಗಳು ಪುರಾಣಿಕಮಠ ಬೆಂಚಲಿ ವೇ|| ಜಯದೇವಗವಾಯಿಗಳು ಹಾವೇರಿ ಹಿರೇಮಠ ಇವರಿಂದ ವೀರಶೈವಮತಸಾಮ್ರಾಜ್ಯರೂ ಮತೋದ್ಧಾರಕರೂ ಸದರಿ ದೇಸಾಯಿಯವರ ಕುಲದೇವರೂ ಆದ ರೇವಣಸಿದ್ಧೇಶ್ವರಪುರಾಣವನ್ನು ತಮ್ಮ ಅರಮನೆಯಲ್ಲಿಯೇ ಪ್ರಾರಂಭ ಮಾಡಿಸಿದರು. ಪುರಾಣವು ಉತ್ತಮರೀತಿಯಿಂದ ನಡೆದಿರುವದಲ್ಲದೆ ಮಧ್ಯದಲ್ಲಿ ಸದರಿ ಗವಾಯಿಗಳವರ ಶಿಷ್ಯಗಾನಕುಶಲನೆಂಬ ಪ್ರಶಸ್ತಿಯನ್ನು ಪಡೆದಂಥ ವೇ|| ಗುರುಶಾಂತಯ್ಯನವರ ಗಾಯನವಾದನವೂ ನಡೆಯುತ್ತದೆ. ಇಂಥಾ ಗುರುಭಕ್ತಿಧುರೀಣರೂ ಮಹಾಭವಾಬ್ಧಿಗಳೂ, ಸದ್ಭಕ್ತಿಶೀಲರೂ ಆದ ಶ್ರೀಮಂತರಿಗೆ ಸಕಲೈಶ್ವರ್ಯವನ್ನೂ ಪುತ್ರಪೌತ್ರಾಭಿವೃದ್ಧಿಯನ್ನೂ ಚಿರಾಯುಷ್ಯವನ್ನೂ ಶ್ರೀ ಜಗದ್ಗುರು ಪಂಚಾಚಾರ್ಯರು ದಯಪಾಲಿಸಲೆಂದು ಬೇಡಿಕೊಳ್ಳುತ್ತೇವೆ.

ಓರ್ವ ಪ್ರತ್ಯಕ್ಷದರ್ಶಿ.

ನೂತನ ಪಾಠಶಾಲಾ ಪ್ರವೇಶೋತ್ಸವ.

ತಾ 19-8-29 ನೆಯ ಸೋಮವಾರ ನೈಜಾಮ ಇಲಾಖಾ ಗುಲ್ಬರ್ಗ ಜಿಲ್ಲಾ ದಿಗ್ಗಾಂವಿಯಲ್ಲಿ ನೂತನ ಪಾಠಶಾಲಾ ಪ್ರವೇಶೋತ್ಸವವು ಅತ್ಯಂತ ವೈಭವದಿಂದ ಜರುಗಿತು. ಪಾಠಶಾಲೆಯು ಬಾಳೆಕಂಬಗಳಿಂದಲೂ ತಳಿರುತೋರಣಗಳಿಂದಲೂ ಭವ್ಯವಾಗಿ ಅಲಂಕರಿಸಲ್ಪಟ್ಟಿತ್ತು. ಸಾಯಂಕಾಲ 4 ಗಂಟೆಗೆ ಗ್ರಾಮದ ಬಹು ಮಂದಿ ಸದ್ಗೃಹಸ್ಥರೂ ಪ್ರಮುಖರೂ ಶಾಲೆಯ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಪಾಠಶಾಲೆಯಲ್ಲಿ ಸಭೆಸೇರಿದ್ದರು. ಹಿರೇಮಠದ ಶ್ರೀ ರುದ್ರಮುನಿಶಿವಾಚಾರ್ಯ ಮಹಾಸ್ವಾಮಿಯವರು ಆ ದಿನ ಬಹು ಮಹಾನುಸಾರವಾಗಿ ಅಧ್ಯಕ್ಷತೆಯನ್ನು ವಹಿಸಿ ಸಭಾಕಾರ್ಯಗಳನ್ನು ನೆರವೇರಿಸಿದರು. ಮ|| ರಾ|| ಎಸ್. ಆರ್. ಡಾಕ್ಟರ್ ಎಚ್. ಬಿ. ಕುಲಕರ್ಣಿಯವರು ಸ್ಕೂಲ್ ಹೆಡ್‌ಮಾಸ್ಟರ್ ಮಡಿವಾಳಪ್ಪನವರು ವಿದ್ಯಾ, ದಾನ, ಔದಾರ್ಯಗಳನ್ನು ಕುರಿತು ಬಹು ಸ್ವಾರಸ್ಯವಾಗಿ ವ್ಯಾಖ್ಯಾನಮಾಡಿದರು. ಅನಂತರ ಅಧ್ಯಕ್ಷರು ವಿವೇಚನಾ ಪೂರಿತವಾದ ಭಾಷಣವನ್ನು ಗಂಭೀರವಾಣಿಯಿಂದ ಸುಮಾರು ಒಂದು ತಾಸಿನವರೆಗೆ ಅ... ಡಿಸಿದರು. ಸಭಿಕರಿಗೆಲ್ಲಾ ಗಂಧ, ಪುಷ್ಪ, ತಾಂಬೂಲ ವಿನಿಯೋಗವಾದನಂತರ ಎಲ್ಲರೂ ವಾದ್ಯವಿಶೇಷಗಳೊಡನೆ ಬಸವಂತರಾವ್ ಮುಲ್ಗೆ ಪಾಟೀಲರವರ ಶ್ರೀ ಶಂಭುಲಿಂಗೇಶ್ವರ ದೇವಾಲಯಕ್ಕೆ ಹೋಗಿ ದೇವತೋತ್ಸವವನ್ನು ನೆರವೇರಿಸಿ ಈ ಪಾಠಶಾಲಾ ನಿರ್ಮಾಣಕ್ಕೆ ಸಹಾಯ ಮಾಡಿದ ಮಹಾಶಯರಿಗೆ ಶ್ರೀ ಭಗವತ್ಪಾದರು ಮಂಗಳವನ್ನುಂಟುಮಾಡಲಿ ಎಂದು ಜಯಘೋಷವನ್ನು ಮಾಡಿದರು.

ಉತ್ಸವಭಾಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶಿವದೀಕ್ಷಾ ಸಂಸ್ಕಾರ ಸಮಾರಂಭ.

ಹುಬ್ಬಳ್ಳಿ.

ಹುಬ್ಬಳ್ಳಿಯಲ್ಲಿ ರಾರಾಜಿಸುತ್ತಿರುವ ಹನ್ನೆರಡು ಮಠದಲ್ಲಿ ಇದೇ ಶ್ರಾವಣ ಬಹುಳ ಶುಕ್ರವಾರದ ದಿವಸ ಶಿವದೀಕ್ಷಾ ಸಂಸ್ಕಾರಕಾರ್ಯವು ಬಹು ವೈಭವದಿಂದ ನೆರವೇರಿತು. ದೀಕ್ಷಾ ಮಂಟಪವು ರಂಭಾಸ್ತಂಭಗಳಿಂದಲೂ, ತಳಿರುತೋರಣಗಳಿಂದಲೂ, ಜಗದಾಚಾರ್ಯರ ಮಹತ್ವಪ್ರದರ್ಶಕಗಳಾದ ಭವ್ಯಭಾವಚಿತ್ರಗಳಿಂದಲೂ ಅಲಂಕೃತವಾಗಿದ್ದು ನೋಡುವವರ ಕಣ್ಮನಗಳನ್ನು ಸೆಳೆಯುತ್ತಿತ್ತು. ಸದರಿ ಕಾರ್ಯವು ಬಂಕಾಪುರದ ಶ್ರೀ|| ಷ|| ಬ್ರ|| ಅರಳೆಲೆಮಠದ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರಿಂದಲೂ, ಶ್ರೀ|| ಷ|| ಬ್ರ|| ಹನ್ನೆರಡುಮಠದ ಶ್ರೀ ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳವರಿಂದಲೂ, ಹಾಗೂ ಶ್ರೀ|| ಷ|| ಬ್ರ|| ಲೋಕಾಪುರ ಹಿರೇಮಠದ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರಿಂದಲೂ, ನೆರವೇರಿತು. ವೇ|| ಗಂಜಿಗಟ್ಟಿ ಹಿರೇಮಠದ ಚನ್ನಬಸವಯ್ಯನವರ ಪಾತ್ನಿಶ್ರೀಯವರೂ, ಮಾತಾಮಹರೂ ಹಾಗೂ ಇವರ ಪತ್ನಿಯವರೂ ಮತ್ತು ನವಲಿ ಕುಪ್ಪನವೀರಪ್ಪನವರೂ ಶಿವದೀಕ್ಷಾಸಂಸ್ಕಾರವನ್ನು ಪಡೆದರು. ಈ ಸಮಯದಲ್ಲಿ ವೇ|| ನಲವಡಿ ಹಿರೇಮಠದ ಶ್ರೀಕಂಠಶಾಸ್ತ್ರಿಗಳು ಮತ್ತು ವೇ|| ನಂದಿಕೇಶ್ವರಮಠದ ವಿರೂಪಾಕ್ಷಾಚಾರ್ಯರು ವಿಧಿವತ್ತಾಗಿ ಈ ಕಾರ್ಯವನ್ನು ನೆರವೇರಿಸಿದರು. ಅನಂತರ ಮಾಹೇಶ್ವರ ಸಂತರ್ಪಣವು ನೆರವೇರಿತು. ಈ ಸಮಯದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭೆಯ ಪೋಷಣಕ್ಕಾಗಿ ಅಸಾಧಾರಣ ಗುರುಭಕ್ತಿಶೀಲರಾದ ವೇ|| ಗಂಜಿಗಟ್ಟಿ ಹಿರೇಮಠದ ಚನ್ನಬಸವಯ್ಯನವರು 5 ರೂಪಾಯಿಗಳನ್ನು ಸಮರ್ಪಿಸಿದರು. ಪ್ರತಿದಿವಸವೂ ಪಂ|| ಶ್ರೀಕಂಠಶಾಸ್ತ್ರಿಗಳವರು ರೇಣುಕವಿಜಯ ಪುರಾಣವನ್ನು ಪಠಿಸಿ ಆ ಗುರುಸಾರ್ವಭೌಮರ ಅನಂತಾನಂತಾದ್ಭುತ ಲೀಲೆಗಳನ್ನು ಬೋಧಿಸಿ ಜನರನ್ನು ಗುರುಭಕ್ತಿಯುಳ್ಳರನ್ನಾಗಿಮಾಡುತ್ತಿರುತ್ತಾರೆ. ಈ ಕಾರ್ಯದಲ್ಲಿ ತೊಡಗಿದ ಸಕಲ ಗುರುಭಕ್ತರಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯ, ಭಾಗ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ,

ಚರಂತಯ್ಯನವರು ಸಾವಿರಮಠ,
ಹಿರೇಹೊನ್ನೀಹಳ್ಳಿ.

ಪ್ಯಾರಿಸ್‌ನಗರದಲ್ಲಿ ಗೂಡಿಸಿದಕಸವು ಪ್ರತಿಸಿತ್ಯವೂ 800,000 ಟನ್‌ಗಳಾಗುತ್ತದೆ. ಇದನ್ನೆಲ್ಲ ಸುಡುವದರಿಂದುಂಟಾದ ಹೊಗೆಯಿಂದ ವಿದ್ಯುಚ್ಛಕ್ತಿಯನ್ನು ಸೃಷ್ಟಿಸಿ ಅಪಾರ ಹಣವನ್ನು ಗಳಿಸುತ್ತಿರುವರು.

400 ಮೈಲುಗಳ ವಿಸ್ತಾರವನ್ನು ಚೆನ್ನಾಗಿ ನೋಡುವ ಒಂದು ಯಂತ್ರವನ್ನು ಒಬ್ಬ ಚಿಕ್ಕ ಹುಡುಗನು ಕಂಡುಹಿಡಿದಿರುವನು. ಯುದ್ಧದಲ್ಲಿ ಶತ್ರುಸೈನ್ಯದ ಚಲನೆಯನ್ನೂ, ಅವರ ಕಾರ್ಯಕಲಾಪಗಳನ್ನೂ ಸುಲಭವಾಗಿ ಇದರ ಮೂಲಕ ನೋಡಬಹುದಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾ ಪ್ರಸೀದಂತು.

ಶ್ರೀಗುರು ಪಟ್ಟಾಧಿಕಾರ ಸಮಾರಂಭ.

ಜಿಲ್ಲಾ ಚಿತ್ರದುರ್ಗ, ರಾಯಚೂರು ವಿಭಾಗಕ್ಕೆ ಮುಖ್ಯವಾದ ಸೋಮವಾರಪೇಟೆ ಹಿರೇಮಠದಲ್ಲಿ ಶಕ ೧೮೫೧ ಶುಕ್ಲ ಸಂ|| ಶ್ರಾವಣ ಶು|| ೫ ಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಪುರಾಣ ಶ್ರವಣಕಾರ್ಯವು ನಿರಂತರ ನಡೆಯುತ್ತಿರುವುದು. ಇದರಲ್ಲಿ ಸದರಿ ಮಠಾಧ್ಯಕ್ಷ ಶ್ರೀ ರೇಣುಕ ಶಾಖಾನ್ವಿತರಾದ ಶ್ರೀ ರಾಯಚೋಟಿಸ್ವಾಮಿಗಳಿಗೆ ಗುರುವಂಶಪರಂಪರೆಯಿಂದ ಬಂದ ಶ್ರೀ ಪಟ್ಟಾಧಿಕಾರವನ್ನು ನಡೆಯಿಸಲೋಸುಗ ಚಿ|| ಬಿಕ್ಕಾಲಿಮಠದ ಸಾವಿರದೇವರು ಶ್ರೀ ಮಹಾಂತಸ್ವಾಮಿಗಳವರ್ಯರು ಆಗಮಿಸಿದ್ದಲ್ಲದೆ ನೀರಡಗುಂಭದಶಾಲಾಧ್ಯಾಪಕರಾದ ವೇ|| ಬಸವರಾಜಶಾಸ್ತ್ರಿಗಳೂ ವೇ|| ಮೊಕ್ತಲಿ ಸಾಲಿ ಬಸವಲಿಂಗಪ್ಪನವರೂ ವೇ|| ಕಲ್ಲೂರು ಸೂಗೂರಪ್ಪಶಾಸ್ತ್ರಿಗಳೂ ಆಲಂಪಲ್ಲಿಮಠದ ವೇ|| ಶಾಂತಮೂರ್ತೆಪ್ಪನವರೂ ಇನ್ನೂ ಅನಂತ ಗ್ರಾಮಗಳ ಭಕ್ತಮಾಹೇಶ್ವರರೂ ಬಂದು ನೆರೆದಿದ್ದರು. ಇದೇ ಶ್ರಾವಣ ಶು|| ೧೧ ಸೋಮವಾರ ಶುಭಮುಹೂರ್ತದಲ್ಲಿ ಸದರಿ ರಾಯಚೋಟಿಸ್ವಾಮಿಗಳವರಿಗೆ ಶ್ರೀ ಪಟ್ಟಾಭಿಷೇಕವು ವೈದಿಕವಿಧಿಯಿಂದ ಸಮರ್ಪಕವಾಗಿ ಜರುಗಿಸಲ್ಪಟ್ಟಿತು. ಆ ದಿನ ಸಾಯಂಕಾಲ ೮ ಗಂಟೆಗೆ ಮಠದಲ್ಲಿ ಮೊದಲೇ ಅತಿ ರಮ್ಯವಾಗಿ ಶೃಂಗರಿಸಲ್ಪಟ್ಟಿದ್ದ ಮತ್ತು ಅನೇಕ ದೀಪೋತ್ಸವಗಳಿಂದ ಪ್ರಕಾಶಿಸುತ್ತಿದ್ದ ಸಿಂಹಾಸನವನ್ನು ನೂತನ ಶ್ರೀ ಪಟ್ಟಾಧಿಕಾರಿಗಳು ಎಲ್ಲರ ಜಯಘೋಷದೊಡನೆ ಆರೋಹಣಮಾಡಿದರು. ಆಗ ಶಿಷ್ಯವರ್ಗದವರೂ ಸಮಸ್ತ ಭಕ್ತಮಾಹೇಶ್ವರರೂ ಸುವರ್ಣ ವಸ್ತ್ರಾಲಂಕಾರರೂಪವಾದ ಪಾದಗಾಣಿಕೆಯನ್ನರ್ಪಿಸಿದರು. ನೂತನ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಮೊದಲು ವೇ|| ಮಸಿಗಿ ಬಸವಪ್ಪಶಾಸ್ತ್ರಿಗಳು ಶ್ರೀ ರೇಣುಕ ಪುರಾಣಾಂತರ್ಗತವಾದ ಶ್ರೀ ರುದ್ರಮುನಿ ಪಟ್ಟಾಭಿಷೇಕದ ಕಥೆಯನ್ನು ಪ್ರಸಂಗಕ್ಕನುಸರಿಸಿ ಸಕಲರಿಗೂ ತಿಳಿಯುವಂತೆ ಶ್ರವಣಮಾಡಿಸಿದರು. ಆ ಬಳಿಕ ನೀರಡಗುಂಭದ ಶಾಲಾಧ್ಯಾಪಕರು ಗುರುಮಹಿಮೆಯ ಬಗ್ಗೆ ಭಾಷಣಮಾಡಲು ಅದೇ ವಿಷಯವನ್ನು ಪುನಃ ಪುಷ್ಟೀಕರಿಸಿ ಶಿವಯೋಗಿ ಸಾಧಕರುಗಳು ಜನರಿಗೆ ಆನಂದವಾಗುವಂತೆ ಬೋಧಿಸಿದರು. ಆಮೇಲೆ ಶ್ರೀಗಳವರಿಂದ ಸಕಲರಿಗೂ ಫಲಾಶೀರ್ವಾದವು ಕೊಡಲ್ಪಟ್ಟು ಆ ದಿನ ಸಭೆಯು ವಿಸರ್ಜಿಸಲ್ಪಟ್ಟಿತು. ಮಾರನೆಯ ದಿನ ಶ್ರೀ ಶಿವಗಣಾರಾಧನೆಯನ್ನು ಅತ್ಯುತ್ಸಾಹದಿಂದ ಜರುಗಿಸಿರಲು ಆಲಂಪಲ್ಲಿ ಮಾ|| ಗೌ|| ಸಿದ್ಧರಾಮಪ್ಪನವರು ಸಕಲ ಮಾಹೇಶ್ವರರಿಗೆ ಒಂದೊಂದು ರೂಪಾಯಿಯಂತೆ ಭೂರಿದಕ್ಷಿಣೆಯನ್ನು ಕೊಟ್ಟು ತಮ್ಮ ಉದಾರಗುಣವನ್ನು ಪ್ರಕಟಿಸಿದರು. ಸಾಯಂಕಾಲ ೬ ಗಂಟೆಗೆ ಶಿವಭಜನಾ ನಾನಾವಾದ್ಯಗಳೊಡನೆ ನೂತನ ಪಟ್ಟಾಧಿಕಾರಿಗಳ ಆಂದೋಲಿಕೋತ್ಸವವು ಮಠದಿಂದ ಹೊರಟು ಬಜಾರ ಬೀದಿಗಳೊಳು ಅಲ್ಲಲ್ಲಿ ನೆರದಿರುವ ಜನರ ಕರತಾಡನ ಜಯಘೋಷ ಮುಂತಾದವುಗಳಿಂದ ಸಂತೋಷಪ್ರದರ್ಶನವಾಗುತ್ತಿರಲು ೯ ಗಂಟೆಯ ಸಮಯಕ್ಕೆ ತಿರುಗಿ ಮಠಕ್ಕೆ ತಲ್ಪಿತು ಕೂಡಲೇ ಶ್ರೀಗಳವರು ಸೇವಕಹಸ್ತಾವಲಂಬನದಿಂದ ಸಾಗಿ ಬಂದು ಸಭಾಸ್ಥಪೀಠದಲ್ಲಿ ಮಂಡಿಸಲು ಪದ್ಧತಿಯಂತೆ ಪುರಾಣಶ್ರವಣವೂ ಮಂಗಲವೂ ಮಾಡಲ್ಪಟ್ಟವು. ಈ ಕಾರ್ಯದಲ್ಲಿ ಸಹಜಭಕ್ತಿಯಿಂದ ಸೇವಾತತ್ಪರರಾಗಿದ್ದ ಭಕ್ತವೃಂದಕ್ಕೆ ದೇವರು ಆಯುರಾರೋಗ್ಯಾದಿಗಳನ್ನಿತ್ತು ಕಾಪಾಡಲಿ.

ಪ್ರತ್ಯಕ್ಷದರ್ಶಿ.

ಹೊಸಪೇಟೆ ತಾಲ್ಲೂಕುಬೋರ್ಡು ಖಾದೀಪ್ರಚಾರ.

ತಾ|| 27-8-29 ರಲ್ಲಿ ಜರುಗಿದ ಬಳ್ಳಾರಿ ಜಿಲ್ಲಾ ಹೊಸಪೇಟೆ ತಾ|| ಬೋರ್ಡಿನ ಮೀಟಿಂಗಿನಲ್ಲಿ ಮ|| ರಾ|| ಗುಗ್ರಿ ದೊಡ್ಡಪ್ಪನವರು "ಬೋರ್ಡ ಶಾಲೆಗಳಲ್ಲಿ ರಾಟೆಯಿಂದ ನೂಲು ತೆಗೆಯುವುದನ್ನು ವಿದ್ಯಾರ್ಥಿಗಳಿಗೆ ತಿಳುಹಿಸಬೇಕೆಂದೂ, ವಿದ್ಯಾರ್ಥಿಗಳು ಖಾದಿ ಬಟ್ಟೆಗಳನ್ನು ಧರಿಸಲು ಪ್ರೋತ್ಸಾಹಿಸಬೇಕೆಂದೂ" ಸೂಚಿಸಿದ ಠರಾವು ಸರ್ವಾನುಮತದಿಂದ ತೀರ್ಮಾನವಾದುದಲ್ಲದೆ—

(1) ರಾಟೆಯಿಂದ ನೂಲುವುದಕ್ಕೆ ಸಂಯಾದ ಕೇಂದ್ರಸ್ಥಾನಗಳನ್ನು ನಿರ್ದೇಶಿಸಿ ರಿಪೋರ್ಟ ಮಾಡಬೇಕೆಂದು ಸದರಿ ಸೂಚಕರನ್ನು ಪ್ರಾರ್ಥಿಸಲಾಯಿತು.

(2) ಖಾದಿಬಟ್ಟೆಗಳನ್ನು ಉಪಯೋಗಮಾಡುವುದರಿಂದ ಬರುವ ಲಾಭಗಳನ್ನು ತಮ್ಮ ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದು ಬೋರ್ಡಸ್ಕೂಲ್ ಮಾಸ್ಟರರಿಗೆ ಸರ್ಕ್ಯುಲರ್ ಕಳುಹಿಸಬೇಕೆಂದು ನಿರ್ಧರವಾಯಿತು.

ಪ್ರತ್ಯಕ್ಷದರ್ಶಿ.

ರೇವಣಸಿದ್ಧಕ್ಷೇತ್ರ.

ಭುವನಪ್ರಸಿದ್ಧರೂ, ವೀರಶೈವಮತಪ್ರಥಮಾಚಾರ್ಯರೂ ಆದ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಷಯವಾಗಿ ಹಲವುಗ್ರಂಥಗಳೂ, ಹಲವು ಕ್ಷೇತ್ರಗಳೂ ಅವರ ಮಾಹಾತ್ಮ್ಯಕ್ಕೆ ಸಾಕ್ಷಿಯಾಗಿವೆ. ನಾನು ಬೆಳಗಾಂವ ಜಿಲ್ಲೆಯ ಬೆಲ್ಲದ ಬಾಗೇವಾಡಿಯಲ್ಲಿ ಕೀರ್ತನ ಹೇಳುತ್ತಿದ್ದಾಗ ಅಲ್ಲಿಗೆ ಸುಮಾರು ಹತ್ತುಮೈಲು ದೂರದಲ್ಲಿ ಶ್ರೀ ರೇವಣಸಿದ್ಧಕ್ಷೇತ್ರವಿದೆ ಎಂಬುದನ್ನು ಕೇಳಿ ಆ ಪುಣ್ಯಕ್ಷೇತ್ರಕ್ಕೆ ಒಂದು ದಿನ ಪ್ರಯಾಣಮಾಡಿದೆನು. ಈ ಕ್ಷೇತ್ರ ಪರಿಚಯವು ಸಮಸ್ತ ವೀರಶೈವರಿಗೂ ಪ್ರತಿಯೊಬ್ಬ ಕನ್ನಡಿಗನಿಗೂ ಅವಶ್ಯಕವೆಂದು ಭಾವಿಸಿ ಈ ಬರಹವನ್ನು ಬರೆದಿರುವೆನು.

ಬೆಂಗಳೂರಿನಿಂದ ಪೂನಾ ಕಡೆಗೆ ಹೋಗುವ ರೈಲುಮಾರ್ಗದಲ್ಲಿ ಬೆಳಗಾಂವ ಸ್ಟೇಶನ್ ದಾಟಿದ ಮೇಲೆ ಬೆಲ್ಲದ ಬಾಗೇವಾಡಿ ಎಂಬ ಸ್ಟೇಶನ್ ಬರುತ್ತದೆ. ಅಲ್ಲಿಂದ ಬೆಲ್ಲದ ಬಾಗೇವಾಡಿಯು ಎರಡು ಮೈಲು ದೂರದಲ್ಲಿದೆ. ಅಲ್ಲಿಗೆ ಬಂದು ಕಾಲುಮಾರ್ಗದಿಂದಾಗಲಿ, ಗಾಡಿಯ ಮಾರ್ಗದಿಂದಾಗಲಿ ಹತ್ತು ಮೈಲು ದೂರದಲ್ಲಿರುವ ಶ್ರೀ ರೇವಣಸಿದ್ಧಕ್ಷೇತ್ರಕ್ಕೆ ಹೋಗಬಹುದು. ಈ ಕ್ಷೇತ್ರವಿರುವ ಪ್ರದೇಶವು ಕೊಲ್ಲಾಪುರ ರಾಜ್ಯಕ್ಕೆ ಸೇರಿರುವದು. ಈ ಪುಣ್ಯಭೂಮಿಯು ಗುಡ್ಡಗಾಡಿನಲ್ಲಿ ಒಂದು ಗುಡ್ಡದ ಬುಡದಲ್ಲಿದೆ. ಆ ಗುಡ್ಡವನ್ನು ಜನರು ರೇವಣಸಿದ್ಧನ ಗುಡ್ಡವೆಂದು ಕರೆಯುವರು. ಆ ಗುಡ್ಡದ ತಪ್ಪಲಿನಲ್ಲಿ ದೇವಾಲಯವಿದೆ. ಈ ರೇವಣಸಿದ್ಧದೇವಾಲಯದ ಪಕ್ಕದಲ್ಲಿ ಒಂದು ಮಠವೂ, ಒಂದು ಛತ್ರವೂ ಇವೆ. ಸದಾಕಾಲದಲ್ಲಿಯೂ ಭಕ್ತರು ಬರುತ್ತಲೇ ಇರುವರು. ಈ ದೇವಾಲಯದ ಸುತ್ತಲೆಲ್ಲಾ ಪಕ್ಷಿಯ ಗಿಡಗಳೂ ಹೂವಿನಗಿಡಗಳೂ ಬಹಳವಾಗಿವೆ. ದೇವಾಲಯದ ಪಕ್ಕದಲ್ಲಿ ಒಂದು ಸರೋವರವೂ, ಬಾವಿಯೂ ಇವೆ. ಇಲ್ಲಿಗೆ ಬಂದವರನ್ನು ಸಂತೈಸಲು ಇಲ್ಲಿಯ ಮಠದಲ್ಲಿರುವ ಶ್ರೀ ಗುರುಸಿದ್ಧಯ್ಯನವರು ಸದಾ ಶ್ರಮಪಡುತ್ತಿರುವರು. ರೇವಣಸಿದ್ಧನ ಗುಡ್ಡದಮೇಲೆ ಶ್ರೀ ರೇಣುಕಾಚಾರ್ಯರ ಪಾದದ ಗುರುತುಗಳಿವೆ. ಅಲ್ಲದೆ ಅಲ್ಲಿ ಒಂದು ಸಣ್ಣ ಗುಹೆಯೂ ಸಹ ಇದೆ. ಈ ದೇವಸ್ಥಾನದ ಮಹಾದ್ವಾರವನ್ನು ಶ್ರೀ ಗುರುಸಿದ್ಧಯ್ಯನವರು ಕಟ್ಟಿಸಲು ಪ್ರಾರಂಭಿಸಿರುವರು. ಆ ಕಟ್ಟಡವು ಪೂರ್ಣವಾದರೆ ಈ ಕ್ಷೇತ್ರದ ಶೋಭೆಯು ಇಮ್ಮಡಿಯಾಗುವುದರಲ್ಲಿ ಸಂದೇಹವಿಲ್ಲ.

ಈ ದೇವಾಲಯಕ್ಕಾಗಿ ಕೊಲ್ಲಾಪುರದ ಸರ್ಕಾರದಿಂದ ಸ್ವಲ್ಪ ಭೂಮಿಯು ಸಿಕ್ಕಿದೆ. ಅದರ ಸಹಾಯದಿಂದ ಪೂಜಾದಿ ಕಾರ್ಯಗಳು ನಡೆಯಬೇಕಾಗಿವೆ. ದೇವಾಲಯದ ಸಮೀಪದಲ್ಲಿರುವ ಛತ್ರವೂ ಮಹಾದ್ವಾರವೂ ಅರೆಗೆಲಸವಾಗಿ ನಿಂತಿವೆ. ಈ ಕಟ್ಟಡಗಳು ಪೂರ್ಣವಾಗುವುದು ಅವಶ್ಯಕ. ಈ ಕ್ಷೇತ್ರದ ಪುರೋಭಿವೃದ್ಧಿಗಾಗಿ ಶ್ರೀ ಗುರುಸಿದ್ಧಯ್ಯನವರು ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿರುವರು. ಈ ಮಠಕ್ಕೆ ಹಕ್ಕುದಾರರಂತಿರುವ ಈ ಮಠದಲ್ಲಿಯೇ ವಾಸಿಸುವ ಇನ್ನೊಂದು ವ್ಯಕ್ತಿಯು ಶ್ರೀ ಗುರುಸಿದ್ಧಯ್ಯನವರ ಕಾರ್ಯಕ್ಕೆ ಸ್ವಾರ್ಥಬುದ್ಧಿಯಿಂದ ಅಡಚಣೆಯನ್ನುಂಟುಮಾಡುತ್ತಿರುವದು.

ಶ್ರೀ ಜಗದ್ಗುರು ರೇಣುಕಭಗವತ್ಪಾದರು ದೇಶಾಟನಮಾಡುವಾಗ್ಗೆ ಆ ಮಹಾತ್ಮರ ಪಾದಸ್ಪರ್ಶವಾದ ಸ್ಥಳಗಳೆಲ್ಲ ಪುಣ್ಯಕ್ಷೇತ್ರಗಳಾಗಿವೆ. ನಮಗೆ ತಿಳಿದಮಟ್ಟಿಗೆ ಕೆಳಗೆ ಸೂಚಿಸಿರುವ ಸ್ಥಳಗಳು ಶ್ರೀ ರೇಣುಕರ ವಿಷಯವಾಗಿ ಪ್ರಸಿದ್ಧವಾಗಿವೆ.

1. ಮೈಸೂರು ಸೀಮೆಯಲ್ಲಿ ಕೋಲಾರಪೇಟೆ ಹತ್ತರವಿರುವ ಶ್ರೀ ರೇಣುಕಗಿರಿ ಅಥವಾ ರೇವಣಸಿದ್ಧೇಶ್ವರ ಬೆಟ್ಟ ಇದು ಶ್ರೀ ರೇಣುಕಾಚಾರ್ಯರು ತಪಸ್ಸು ಮಾಡಿದ ಸ್ಥಳ.

2. ಶ್ರೀರಂಭಾಪುರೀ ಕ್ಷೇತ್ರ. ಜಗದ್ಗುರು ರೇಣುಕಾಚಾರ್ಯರ ಸಂಸ್ಥಾನ ಮಠವೂ, ಶ್ರೀ ವೀರಸಿಂಹಾಸನವೂ, ಶ್ರೀ ರುದ್ರಮುನೀಶ್ವರ ಶಿವಾಚಾರ್ಯರ ದೇವಾಲಯವೂ ಇರುವ ಪವಿತ್ರಸ್ಥಾನ.

3. ಬೆಂಗಳೂರು ಜಿಲ್ಲೆಯ ಶ್ರೀ ಶಿವಗಂಗಾಕ್ಷೇತ್ರ. ಆ ಬೆಟ್ಟದ ಪೂರ್ವಭಾಗದಲ್ಲಿರುವ ಶ್ರೀ ರೇವಣಸಿದ್ಧೇಶ್ವರ ದೇವಾಲಯ.

4. ಶ್ರೀ ರೇಣುಕಾಚಾರ್ಯರ ಜನ್ಮಸ್ಥಾನವಾದ ಕೊಲ್ಲಿಪಾಕಿ ಕ್ಷೇತ್ರ.

5. ರೇಣಾವಿ ಹತ್ತರ ಮಹಾರಾಷ್ಟ್ರದೇಶದಲ್ಲಿರುವ ರೇವಣಸಿದ್ಧಕ್ಷೇತ್ರ.

6. ಈಗ ನಮ್ಮ ಲೇಖನ ವಿಷಯಕ್ಕೆ ಕಾರಣವಾದ ಕೊಲ್ಲಾಪುರ ರಾಜ್ಯಕ್ಕೆ ಸೇರಿದ ಶ್ರೀ ರೇವಣಸಿದ್ಧಕ್ಷೇತ್ರ.

ಮೇಲ್ಕಂಡವುಗಳೇ ಅಲ್ಲದೆ ಇನ್ನೂ ಹಲವು ಕ್ಷೇತ್ರಗಳಿರಬೇಕು. ಅವನ್ನೆಲ್ಲಾ ಪ್ರಸಿದ್ಧಿಸುವುದು ರೇಣುಕನ ಭಕ್ತರ ಕಾರ್ಯವಾಗಿದೆ.

ಶ್ರೀ ರೇಣುಕಭಗವತ್ಪಾದರು ಕೊಲ್ಲಾಪುರದ ಗೋಲಕ್ಷನ ಗರ್ವಭಂಗಕ್ಕೆ ಹೋಗುವಾಗ ಈ ಕ್ಷೇತ್ರದಲ್ಲಿದ್ದು ಸ್ವಲ್ಪಕಾಲ ತಪಸ್ಸುಮಾಡಿದರೆಂದು ಐತಿಹ್ಯವಿದೆ. ಅವರು ತಪಸ್ಸುಮಾಡಿದ ಸ್ಥಳದಲ್ಲಿಯೇ ದೇವಾಲಯವಿದೆ. ಅಲ್ಲಿಯೇ ಶಿವಲಿಂಗಸ್ಥಾಪನೆಯಾಗಿದೆ. ದೇವಾಲಯವು ಬಹಳ ಪ್ರಾಚೀನವೆಂದು ಎಂತಹ ಶಿಲ್ಪಿಯಾದರೂ ಹೇಳಬಹುದು. ಒಟ್ಟಿನಲ್ಲಿ ಇದು ಶ್ರೀ ಜಗದ್ಗುರು ರೇಣುಕಭಗವತ್ಪಾದರ ವಿಷಯವಾದ ಪ್ರಸಿದ್ಧಕ್ಷೇತ್ರವೆಂಬುದರಲ್ಲಿ ಅನುಮಾನವಿಲ್ಲ. ವೀರಶೈವರೆನಿಸಿದವರೂ, ಕನ್ನಡಿಗರೆನಿಸಿದವರೂ ತಮ್ಮ ಜನ್ಮದಲ್ಲಿ ಒಂದು ಸಾರೆಯಾದರೂ ಈ ಕ್ಷೇತ್ರ ದರ್ಶನ ಮಾಡುವುದು ಅತ್ಯಂತ ಅವಶ್ಯಕವಾಗಿದೆ.

ಬಿ. ಶಿವಮೂರ್ತಿಶಾಸ್ತ್ರೀ ಕೀರ್ತನಕೇಸರಿ,
ಕವಿರತ್ನ ಹುಮುಕೂರು.

ರಾವಸಾಹೇಬ ಪದವೀಸನ್ಮಾನಸಮಾರಂಭಸಭೆ.

ನಾರಾಯಣಪುರ.

ಧಾರವಾಡ ಜಿ|| ಗದಗಪಟ್ಟಣದಲ್ಲಿ ವಾಸವಾಗಿರುವ ಮ|| ರಾ|| ಶ್ರೀಮಂತ ವೀರಪ್ಪನವರು ಚವಡಿ ಇವರಿಗೆ ನಮ್ಮನ್ನಾಳುವ ದಯಾಳುಗಳಾದ ಬ್ರಿಟಿಷ್ ಸಾರ್ವಭೌಮರವರು, "ರಾವಸಾಹೇಬ್" ಎಂಬ ಪ್ರಶಸ್ತಿಯನ್ನು ದಯಪಾಲಿಸಿದುದರ ಸಂತೋಷಕ್ಕಾಗಿ ಗದಗ ತಾಲೂಕಿಗೆ ಸೇರಿದ ನಾರಾಯಣಪುರ, ಕೋಟುಮಚಗಿ, ಎರೆಬೇಲೇರಿ ಹಾಗೂ ನೀರಲಗಿ ಈ ಯಾವತ್ತೂ ಗ್ರಾಮದವರು ತಾ|| 18-8-29 ನೆಯ ರವಿವಾರದಿವಸ ನಾರಾಯಣಪುರ ಗ್ರಾಮದಲ್ಲಿ ದೊಡ್ಡ ಸಭೆಯನ್ನು ಕರೆದಿದ್ದರು. ಸದರಿ ಸಭೆಗೆ ಸರಕಾರೀ ಅಧಿಕಾರಿಗಳೂ, ಪದವೀಧರರೂ, ಲೋಕಲ್ ಬೋರ್ಡ ಮೆಂಬರುಗಳೂ, ಹಾಗೂ ದೊಡ್ಡ ದೊಡ್ಡ ವ್ಯಾಪಾರಿಗಳೂ ವಿಶೇಷವಾಗಿ ಆಗಮಿಸಿದ್ದರಲ್ಲದೆ, ಸುತ್ತುಮುತ್ತಲಿನ ಗ್ರಾಮದ ಜನರು ಒಂದು ಸಾವಿರದವರೆಗೆ ಸಮ್ಮಿಲಿತರಾಗಿದ್ದರು. ಸರ್ವ ಜನರ ಪ್ರಾರ್ಥನೆಯ ಮೇರೆಗೆ ಸದರಿ ಸಭೆಯ ಅಧ್ಯಕ್ಷಸ್ಥಾನವನ್ನು ಮೆಹರ್ಬಾನ್ ಗದಗ ತಾಲೂಕಿನ ಮಾಮಲೇದಾರ ಸಾಹೇಬರವರು ಅಲಂಕರಿಸಿದ್ದರು. ಆಮೇಲೆ ಯಾವತ್ತೂ ಗ್ರಾಮಗಳ ಜನರು ರಾವಸಾಹೇಬರವರಲ್ಲಿ ರತಕ್ಕ ತಮ್ಮ ನೈಜವಾದ ಪ್ರೇಮಭಾವವನ್ನು ವ್ಯಕ್ತಗೊಳಿಸಿ ಅಮೋಘವಾದ ಅಭಿನಂದನ ಪತ್ರಿಕೆಯನ್ನು ಸಮರ್ಪಿಸಿದರು. ಸದರಿ ಅಭಿನಂದನ ಪತ್ರಿಕೆಯು ಮುಂದೆ ಕೊಡಲ್ಪಟ್ಟಿರುವದು. ಅಭಿನಂದನ ಪತ್ರಿಕೆಯು ಸಮರ್ಪಿಸಲ್ಪಟ್ಟನಂತರ ರಾವಸಾಹೇಬರವರು ತಮ್ಮ ಯಥಾರ್ಥಾಭಿಪ್ರಾಯವನ್ನು ಈ ಪ್ರಕಾರವಾಗಿ ಸಭೆಯಲ್ಲಿ ವ್ಯಕ್ತಗೊಳಿಸಿದರು. "ಈ ದಿವಸ ಈ ಸಭೆಯಲ್ಲಿ ನೆರೆದ ತಾವುಗಳೆಲ್ಲರೂ ಅತ್ಯಂತ ಪ್ರೇಮಬುದ್ಧಿಯಿಂದ ನನಗೊಪ್ಪಿಸಿದ ಅಭಿನಂದನ ಪತ್ರಿಕೆಯಲ್ಲಿ ಪ್ರಕಟಿಸಿದ ಯಾವತ್ತು ವಿಷಯಗಳು ತಮ್ಮೆಲ್ಲರ ನೈಜವಾದ ಪ್ರೇಮಭಾವದಿಂದ ನಡೆದವುಗಳೆಂದೂ, ಇಷ್ಟಕ್ಕೆಲ್ಲ ತಮ್ಮೆಲ್ಲರ ಸಹಾನುಭೂತಿ, ಅಂತಃಕರಣ, ಪರಸ್ಪರ ಸೌಹಾರ್ದ, ಇವುಗಳೇ ಮೂಲಕಾರಣವೆಂದೂ, ಮನುಷ್ಯನು ಸಾರ್ವಜನಿಕಕಾರ್ಯಗಳಲ್ಲಿ ತೊಡಗಿದಮೇಲೆ ಆತನಲ್ಲಿ ವಿವೇಕ, ಶಾಂತಿ, ಪ್ರಮಾಣಿಕತನ, ಚಿತ್ತೈಕ್ಯ ಮೊದಲಾದಗುಣಗಳು, ಮುಖ್ಯವಾಗಿರಬೇಕೆಂದೂ, ಈ ಗುಣಗಳಿಲ್ಲದಿದ್ದರೆ ಸಾರ್ವಜನಿಕ ಕಾರ್ಯಗಳು ಅಷ್ಟು ಸಮರ್ಪಕವಾಗಿ ನೆರವೇರುವದಿಲ್ಲವೆಂದೂ, ನಾನು ಈ ಹೊತ್ತಿನವರೆಗೆ ನಿಷ್ಕಾಮ ಬುದ್ಧಿಯಿಂದ ಸಾರ್ವಜನಿಕ ಕಾರ್ಯಗಳನ್ನು ಮಾಡಿ, ತಮ್ಮೆಲ್ಲರ ಪ್ರೀತಿಗೆ ಪಾತ್ರನಾಗಿರುವುದು ಪರಮೇಶ್ವರನ ಕೃಪೆಯಿಂದಲ್ಲದೆ ಬೇರೆ ಮತ್ತಾವ ಕಾರಣವಿಲ್ಲವೆಂದೂ, ರಾವಸಾಹೇಬ್ ಪದವಿಯು ದೊರೆಯಲಿ ಅಥವಾ ದೊರೆಯದಿರಲಿ ಸಾರ್ವಜನಿಕಕಾರ್ಯಗಳಲ್ಲಿ ತೊಡಗಿದವರು, ಪರಮೇಶ್ವರನಮೇಲೆ ಭಾರವನ್ನಿಟ್ಟು ತಮ್ಮ ಕಾರ್ಯದಲ್ಲಿ ನಿರತರಾಗಬೇಕೆಂದೂ, ಇಷ್ಟು ಚಿಕ್ಕಗ್ರಾಮದಲ್ಲಿ ನನ್ನಲ್ಲಿರತಕ್ಕ ಪ್ರೇಮಭಾವದಿಂದ ನೀವುಗಳೆಲ್ಲರೂ ಸೇರಿ ಇಂಥ ಪ್ರಚಂಡ ಸಭೆಯನ್ನು ನೆರವೇರಿಸಿ ನಿಮ್ಮ ಅಮೋಘವಾದ ಸಂತೋಷವನ್ನು ಪ್ರದರ್ಶಿಸಿದ್ದಕ್ಕಾಗಿ ನಾನು ಪೂರ್ಣ ಆಭಾರಿಯಾಗಿರುವೆನೆಂದೂ, ಇದರಂತೆಯೇ ನಿಮ್ಮೆಲ್ಲರ ಪ್ರೇಮಭಾವವು ನನ್ನ ವಯೋಮಾನದಲ್ಲಿ ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದುತ್ತ ನಡೆಯಲೆಂದೂ ಈಶ್ವರಾನುಗ್ರಹವಿರುವವರೆಗೆ ನನ್ನ ಕೈಲಾದಮಟ್ಟಿಗೆ ಇನ್ನೂ ಹೆಚ್ಚು ಹೆಚ್ಚಾಗಿ ಸರ್ವಜನೋಪಯೋಗಿಕಾರ್ಯಗಳನ್ನು ಮಾಡುವೆನೆಂದೂ ನುಡಿದರು. ಸಭಿಕರು ರಾವ್‌ಸಾಹೇಬರವರ ಅಮೃತತುಲ್ಯವಾದ ಈ ಭಾಷಣವನ್ನು ಕೇಳಿ ಆನಂದತುಂದಿಲಹೃದಯರಾಗಿ ತಮ್ಮ ಅನುಮೋದನವನ್ನು ಪ್ರಚಂಡಕರತಾಡನ ದ್ವಾರಾ ವ್ಯಕ್ತಗೊಳಿಸಿದರು. ಆಮೇಲೆ ಅಧ್ಯಕ್ಷಪದವಿಯನ್ನಲಂಕರಿಸಿದ್ದ ಮೆ|| ಮಾಮಲೇದಾರ್ ಸಾಹೇಬರವರು ರಾವಸಾಹೇಬರವರ ವಿಷಯದಲ್ಲಿರತಕ್ಕ ಸಕಲ ಜನರ ಸಹಜಪ್ರೇಮವನ್ನು ಕಂಡು ಸಂತುಷ್ಟಚಿತ್ತರಾಗಿ ಸದರಿ ಶ್ರೀಮಂತರಿಗೆ ಪ್ರಾಪ್ತವಾದ "ರಾವಸಾಹೇಬ್" ಪದವಿಯ ಸಂತೋಷವನ್ನು ಪ್ರದರ್ಶಿಸುವದಕ್ಕಾಗಿ ಈ ತಾಲೂಕಿನಲ್ಲಿ ನಡೆದ ಸಭೆಗಳು ವಿಶೇಷತಃ ನನ್ನ ಅಧ್ಯಕ್ಷತೆಯಲ್ಲಿಯೇ ನೆರವೇರಿದವೆಂದು ಹೇಳಲಿಕ್ಕೆ ನನಗೆ ಅತ್ಯಾನಂದವಾಗುವದೆಂದೂ ರಾವಸಾಹೇಬರವರಲ್ಲಿ ನಿಸರ್ಗವಾಗಿ ವಾಸಮಾಡಿಕೊಂಡಿರುವ ಸದ್ಗುಣಸಮೂಹವೇ ಸಕಲರ ಸಂತೋಷಕ್ಕೆ ಮೂಲಕಾರಣೀಭೂತವಾಗಿರುವದೆಂದೂ, ಲೋಕದಲ್ಲಿ ನದಿಗಳು ತಮ್ಮ ತಮ್ಮ ಉಗಮಸ್ಥಾನದಲ್ಲಿ ವಿಶೇಷವಾಗಿ ವಿಸ್ತಾರವನ್ನು ಹೊಂದಿರದೆ ಬರಬರುತ್ತ ದೂರಗಾಮಿಗಳಾದ ಹಾಗೆಲ್ಲ ವಿಸ್ತಾರವನ್ನು ಹೊಂದುವಂತೆ ಅನೇಕ ಜನರ ಸ್ಥಿತಿಯಾಗಿದ್ದರೂ ಸದರಿ ರಾವ್‌ಸಾಹೇಬರ ಸ್ಥಿತಿಯು ಇದಕ್ಕೆ ವಿಲಕ್ಷಣವಾಗಿರುವದೆಂದೂ, ಇವರ ಉಗಮಸ್ಥಾನದಲ್ಲಿ ಇವರ ಯಶಸ್ಸು ವಿಶೇಷವಾಗಿರುವದನ್ನು ಕಂಡು ಪರಮ ಸಂತೋಷವಾಗುತ್ತದೆಂದೂ, "ಗದಗ" ಎಂಬ ಶಬ್ದವು ಯಾವಕಡೆಯಿಂದ ಓದಿದರೂ ತನ್ನ ನಿಜಾರ್ಥವನ್ನೇ ವ್ಯಕ್ತಗೊಳಿಸುವಂತೆ, ಇವರ ವಿಷಯದಲ್ಲಿರತಕ್ಕ ಜನರ ಪ್ರೇಮಭಾವವು ಸರ್ವತ್ರ ಒಂದೇ ವಿಧವಾಗಿರುವದೆಂದೂ ಯುಕ್ತಿಯುಕ್ತವೂ ಯಥಾರ್ಥವೂ ಸಕಲ ಜನ ಮನೋಹ್ಲಾದಕಾರಕವೂ ಸುಶ್ರಾವ್ಯವೂ ಆದ ಸಮಯೋಚಿತಭಾಷಣವನ್ನು ಮಾಡಿ ಸಕಲ ಜನರನ್ನು ಸಂತೋಷಸಾಗರದಲ್ಲಿ ಮುಳುಗಿಸಿದರು. ಆಮೇಲೆ ಹಾರತುರಾಯಿಗಳು ಸಮರ್ಪಿಸಲ್ಪಟ್ಟು ಅಧ್ಯಕ್ಷರ, ರಾವ್‌ಸಾಹೇಬರ, ಹಾಗೂ ಯಾವತ್ತು ಸಭಿಕರ ಆಭಾರವು ಮನ್ನಿಸಲ್ಪಟ್ಟು ಸಭೆಯು ಜಯಜಯಕಾರದೊಡನೆ ಸಮಾಪ್ತಿಗೊಳಿಸಲ್ಪಟ್ಟಿತು.

ಬಸವಲಿಂಗಯ್ಯ ಹಿರೇಮಠ,
ನಾರಾಯಣಪುರ.

ಭಾರತಮಾತೆಯ ಗರ್ಭಾಂಬುಧಿಯಲ್ಲಿ ರತ್ನದಂತೊಪ್ಪುತ್ತಿರುವ
ರಾವಸಾಹೇಬ ಪದವೀವಿಭೂಷಿತರಾದ ಗದಗ ತಾಲೂಕ ಲೋಕಲ್‌ಬೋರ್ಡ ಪ್ರೆಸಿಡೆಂಟ

ಶ್ರೀಮಂತ ವೀರಪ್ಪನವರು ಚವಡಿ ಇವರ ಸಮಕ್ಷಮದಲ್ಲಿ

ಗದಗ ತಾಲೂಕಿಗೆ ಸೇರಿದ ನಾರಾಯಣಪುರ, ಕೋಟೆಉಮಚಿಗಿ, ಎರಿಬೇಲೇರಿ, ನೀರಲಗಿ ಗ್ರಾಮನಿವಾಸಿಗಳಾದ ನಾವು ಅತ್ಯಂತ ಪ್ರೇಮಪೂರ್ವಕವಾಗಿ ಸಮರ್ಪಿಸುವ ಅಭಿನಂದನಪತ್ರಿಕೆಯು.

ಮಹನೀಯರೇ ?

ಶ್ರೀ ಪರಮೇಶ್ವರನ ಕೃಪಾಬಲದಿಂದ ತಾವು ನಮ್ಮ ಪ್ರಾಂತದಲ್ಲಿ ಆಗರ್ಭ ಶ್ರೀಮಂತ ಮನೆತನವೆಂದು ಪ್ರಸಿದ್ಧಿವೆತ್ತ **ಕೋಟೆಉಮಚಿಗಿ** ಗ್ರಾಮದಲ್ಲಿ ರಾರಾಜಿಸುವ **ಚವಡಿ**ಯವರ ವಂಶದಲ್ಲಿ ಸದ್ಗುಣಗಣಭೂಷಿತರಾಗಿದ್ದ ಕೈ. **ಪರಪ್ಪನವರ** ಉದರದಿಂದ ಜನ್ಮವನ್ನು ತಾಳಿ, ಬಾಲ್ಯದಲ್ಲಿ ಮಾತೃಭಾಷಾಶಿಕ್ಷಣವನ್ನು ಹೊಂದಿ, ಚಿಕ್ಕವಯಸ್ಸಿನಲ್ಲಿಯೇ ಸಕಲರ ಪ್ರೀತಿಗೆ ಪಾತ್ರರಾಗಿ ೩೫ ವರ್ಷ ವಯಸ್ಸಿನವರೆಗೆ ಸ್ವಗ್ರಾಮದಲ್ಲಿದ್ದು ಗ್ರಾಮಾಭಿವೃದ್ಧಿಯನ್ನು ಮಾಡಿ, ಆ ಮೇಲೆ ತಾಲೂಕಿನ ಮುಖ್ಯ ಸ್ಥಳವಾದ **ಗದಗ ಪಟ್ಟಣ**ಕ್ಕೆ ಆಗಮಿಸಿ ಅಲ್ಲಿಯೇ ನಿತ್ಯವಾಸವನ್ನಂಗೀಕರಿಸಿದಿರಿ.

ಈ ಪಟ್ಟಣಕ್ಕಾಗಮಿಸಿದ ಸ್ವಲ್ಪ ದಿವಸಗಳಲ್ಲಿಯೇ ಪುರಪ್ರಮುಖರ ಇತರ ಸದ್ಗೃಹಸ್ಥರ ಹಾಗೂ ಸರಕಾರ ಅಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾಗಿ, **ಲೋಕಲ್‌ಬೋರ್ಡ, ಮುನಸಿಪಾಲಿಟಿ** ಮೊದಲಾದ ಸಂಸ್ಥೆಗಳಲ್ಲಿ ಪ್ರವೇಶಿಸಿ ಆಯಾ ಸಂಸ್ಥೆಗಳ **ಅಧ್ಯಕ್ಷ**ಸ್ಥಾನವನ್ನಲಂಕರಿಸಿ ದಕ್ಷತೆಯಿಂದಲೂ, ಉತ್ಸಾಹದಿಂದಲೂ, ನಿಸ್ವಾರ್ಥತೆಯಿಂದಲೂ, ಲೋಕಹಿತದೃಷ್ಟಿಯಿಂದಲೂ ಸರ್ವರ ಮನಸ್ಸಿಗಾನಂದವುಂಟಾಗುವಂತೆ ಕಾರ್ಯವನ್ನು ನಡೆಯಿಸಿ ಸಕಲ ಮತಾನುಯಾಯಿಗಳ ಅಸಾಧಾರಣವಾದ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಸ್ತುತ್ಯರಾದಿರಿ. ಭಯಂಕರ ಚಳವಳಿರೂಪ ವಾತಾವರಣದಿಂದ ಯುಕ್ತವಾಗಿರುವ ಇಂಥ ವಿಷಮಕಾಲದಲ್ಲಿಯೂ ಸಹ ಪರರ ಪ್ರತಿಭಟನೆಗೆ ಅವಕಾಶವಿಲ್ಲದಂತೆ ಅವಿಚ್ಛಿನ್ನವಾಗಿ **೨೦ ವರ್ಷಗಳವರೆಗೆ** ಲೋಕಲ್‌ಬೋರ್ಡಿನ ಅಧಿಕಾರವನ್ನು ನಡೆಯಿಸಿರುವ ವಿಷಯವು ನಮ್ಮ **ಮುಂಬಯಿ ಇಲಾಖೆಯಲ್ಲಿಯೇ ಉದಾಹರಣರೂಪವಾಗಿದೆ** ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲವೆಂದು ಅತ್ಯಾನಂದದಿಂದ ಹೇಳಬಲ್ಲೆವು.

ಅಲ್ಲದೆ ತಾವು ಈ ಮೊದಲು ಎಷ್ಟೋ ದಿವಸಗಳವರೆಗೆ ಸರಕಾರದವರಿಂದ **ಆನರರಿ ಮ್ಯಾಜಿಸ್ಟ್ರೇಟರಾ**ಗಿಯೂ, **ವಿಲೇಜ ಮುನಸೀಫ**ರಾಗಿಯೂ ನಿಯಮಿಸಲ್ಪಟ್ಟು, ಆಯಾ ಜವಾಬ್ದಾರಿ ಕಾರ್ಯಗಳನ್ನು ಅತಿ ವಿಚಕ್ಷಣತೆಯಿಂದ ನೆರವೇರಿಸಿ ಸರಕಾರದವರ ವಿಶ್ವಾಸಕ್ಕೆ ಪಾತ್ರರಾದಿರಿ. ಹಾಗೂ ೮-೧೦ ವರ್ಷಗಳಿಂದ ಗದಗಿನಲ್ಲಿರುವ **ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ಹ ಬ್ಯಾಂಕಿನ ಮುಖ್ಯಾಧಿಕಾರಿಗಳಾಗಿ** ಅತ್ಯಂತ ಸಮರ್ಪಕರೀತಿಯಿಂದ ಕಾರ್ಯವನ್ನು ನಡೆಯಿಸಿ, ಕಳೆದ ತಿಂಗಳಲ್ಲಿ ಆ ಕೆಲಸದಿಂದ ನಿವೃತ್ತರಾಗಿ ಧಾರವಾಡ ಡಿಸ್ಟ್ರಿಕ್ಟಿನ **ಲ್ಯಾಂಡಮಾರ್ಗೇಜ್ ಬ್ಯಾಂಕಿನ ಚೇಅರಮನ್** ಸ್ಥಾನವನ್ನು ಅಲಂಕರಿಸಿರುವಿರಿ; ಅಲ್ಲದೆ ಸುಪ್ರಸಿದ್ಧವಾದ **ಗದಗ ಕೋ-ಆಪರೇಟಿವ್ಹ ಕಾಟನ್ ಸೇಲ ಸೊಸಾಯಿಟಿಯ ಚೇಅರಮನ್**ರಾಗಿರುವಿರಿ.

ತಮ್ಮ ಕಾಲದಲ್ಲಿ ಗದಗಿನಲ್ಲಿರುವ ಸುಪ್ರಸಿದ್ಧ **ಗ್ರೇನ ಮಾರ್ಕೆಟಿನ** ಸ್ಥಾಪನೆಗಾಗಿ ವಿಶೇಷ ಸಹಾಯವು ದೊರೆತುದರಿಂದ ತಮ್ಮ ಸ್ಮಾರಕವಾಗಿ [illegible]ವಾದ ಡಿಸ್ಟ್ರಿಕ್ಟಿನ ಕಲೆಕ್ಟರರಾಗಿದ್ದ **ಮೆ|| ಮೆಕಾನಕಿ ಸಾಹೇಬರವರು** ತಮ್ಮ ನಾಮವನ್ನು ಶಿಲೆಯಲ್ಲಿ ಕೆತ್ತಿಸಿ ಸದರಿ ಮಾರ್ಕೇಟಿನ [illegible]ಗದಲ್ಲಿ ಸ್ಥಾಪಿಸಿರುವರು. ಅಲ್ಲದೆ ಗದಗ ಪಟ್ಟಣದಲ್ಲಿ ತಮ್ಮಿಂದ ೧೫-೨೦ ಸಾವಿರ ರೂಪಾಯಿಗಳ ವೆಚ್ಚದಿಂದ ಭವ್ಯವಾದ **ಲೋಕಲ್‌ಬೋರ್ಡ ಮಂದಿರವೂ,** ಕೋಟೆಉಮಚಿಗಿ ಗ್ರಾಮದಲ್ಲಿ ೧೫ ಸಾವಿರ ರೂಪಾಯಿಗಳ ವೆಚ್ಚದಿಂದ **ಕನ್ನಡಶಾಲೆಯೂ,** ಹರ್ಲಾಪುರ ಗ್ರಾಮದಲ್ಲಿ ಸರ್ವಜನೋಪಯೋಗಕ್ಕಾಗಿ ಮನೋಹರವಾದ ಬಾವಿಯೂ ನಿರ್ಮಿಸಲ್ಪಟ್ಟು ಆ ಸ್ಮಾರಕವು ಚಿರಕಾಲ ಉಳಿಯುವಂತೆ **ಶಿಲಾಕ್ಷರಗಳಿಂದ** ಪ್ರಜ್ವಲಿಸುತ್ತಿರುವದು.

ತಾವು ಇಂಥ ಅನೇಕಾನೇಕ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿ ಸ್ವದ್ರವ್ಯವ್ಯಯಮೂಲಕ ನಿಸ್ವಾರ್ಥತೆಯಿಂದಲೂ ದಕ್ಷತೆಯಿಂದಲೂ ಪ್ರತಿಯೊಂದು ಕಾರ್ಯವನ್ನು ನಿರ್ವಹಿಸುತ್ತಿರುವದನ್ನು ಕಂಡು ದಯಾಳುಗಳಾದ **ಬ್ರಿಟಿಷ್ ಸಾರ್ವಭೌಮರವರು** ಈ ವರ್ಷ ತಮಗೆ ಅಮೋಘವಾದ "**ರಾವಸಾಹೇಬ**" ಪದವಿಯನ್ನು ದಯೆಪಾಲಿಸಿರುವದನ್ನು ನೋಡಿ ಅತ್ಯಾನಂದಭರಿತರಾಗಿರುತ್ತೇವೆ. ಪರಮೇಶ್ವರನ ಕೃಪಾಬಲದಿಂದ ಉತ್ತರೋತ್ತರವಾಗಿ ತಮಗೆ ಇದಕ್ಕಿಂತಲೂ ಹೆಚ್ಚಿನ ಪದವಿಗಳು ದೊರೆಯಲೆಂದು ಆ ಜಗನ್ನಿಯಾಮಕನನ್ನು ತ್ರಿಕರಣಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ತಮಗೆ ಪ್ರಾಪ್ತವಾಗಿರುವ ಈ ಯಶೋವೈಭವಕ್ಕೆಲ್ಲ ತಮ್ಮಲ್ಲಿ ಮನೆಮಾಡಿಕೊಂಡಿರುವ **ಪರೋಪಕಾರ, ಪ್ರಾಮಾಣಿಕತನ, ಸ್ವಾರ್ಥತ್ಯಾಗ, ವಿವೇಕ, ಶಾಂತಿ, ಸೌಜನ್ಯ** ಮೊದಲಾದ ಸದ್ಗುಣಗಳೇ ಮೂಲಕಾರಣೀಭೂತಗಳಾಗಿರುತ್ತವೆಂದು ಅತ್ಯಂತ ಸಂತೋಷದಿಂದ ಹೇಳಬೇಕಾಗಿದೆ.

ಇಂಥ ಸದ್ಗುಣಮಂಡಿತರಾದ ತಮಗೆ ಶ್ರೀ ಜಗದೀಶ್ವರನು ಸ್ಥಿರತರಾಯುರಾರೋಗ್ಯೈಶ್ವರ್ಯ ಪುತ್ರಪೌತ್ರಾದಿ ಸಕಲ ಸಂಪತ್ಸಮೃದ್ಧಿಯನ್ನು ಕೊಟ್ಟು, ತಮ್ಮಿಂದ ಇನ್ನೂ ಹೆಚ್ಚಾದ ಲೋಕಹಿತಕಾರ್ಯಗಳನ್ನು ನೆರವೇರಿಸಲೆಂದು ಆ ಜಗನ್ನಿಯಾಮಕನನ್ನು ಅನನ್ಯಸಾಧಾರಣವಾದ ಭಕ್ತಿಯಿಂದ ಭಜಿಸುತ್ತೇವೆ.

ಇಂತು ತಮ್ಮ ನಿರಂತರ ಹಿತಚಿಂತಕರಾದ,

ನಾರಾಯಣಪುರ,
ತಾ|| ೧೮—೮—೧೯೨೯ ನೇ ಇಸ್ವಿ.

ನಾರಾಯಣಪುರ, ಕೋಟೆಉಮಚಿಗಿ, ಎರಿಬೇಲೇರಿ, ನೀರಲಗಿ ಗ್ರಾಮವಾಸಿಗಳು.

ಪಂಚಾಚಾರ್ಯ ಪ್ರಭಾ

೧೯೩೪ನೇ ಸೆಪ್ಟಂಬರ್ ತಾ|| ೩ನೇ ಸೋಮವಾರ

ಪರಳಿಪ್ರಕರಣದ ತೀರ್ಪು.

ನೈಜಾಂಸ್ಟೇಟ್ ಬೀಡ ಡಿಸ್ಟ್ರಿಕ್ಟಿಗೆ ಸೇರಿದ ಪರಳಿ ಎಂಬ ಗ್ರಾಮದಲ್ಲಿ ವೈದ್ಯನಾಥ ಎಂಬ ಹೆಸರಿನ ಜ್ಯೋತಿರ್ಲಿಂಗಮೂರ್ತಿಯುಂಟು. ಈ ಜ್ಯೋತಿರ್ಲಿಂಗವು ಭರತಖಂಡದಲ್ಲಿ ಪ್ರಜ್ವಲಿಸುತ್ತಿರುವ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವದು. ಈ ಶಿವಲಿಂಗಕ್ಕೆ ರುದ್ರಾಭಿಷೇಕಮಾಡುವ ವಿಷಯದಲ್ಲಿ ಈಗ್ಗೆ 4-5 ವರ್ಷಗಳ ಕೆಳಗೆ ಅನ್ಯಮತೀಯರಿಗೂ ವೀರಶೈವರಿಗೂ ವಾದವು ಉತ್ಪನ್ನವಾಯಿತು. ವೀರಶೈವರಿಗೆ ವೇದೋಕ್ತಪೂಜೆಯನ್ನು ಮಾಡುವ ಅಧಿಕಾರವಿಲ್ಲವೆನ್ನುವದೇ ಈ ವಾದಕ್ಕೆ ಮೂಲಕಾರಣವಾಯಿತು. ಪರಳಿಗ್ರಾಮದಲ್ಲಿರತಕ್ಕ ವೀರಶೈವರು ನಾವು. ಅನಾದಿಕಾಲದಿಂದ ಈ ಶಿವಲಿಂಗಕ್ಕೆ ವೇದೋಕ್ತರೀತ್ಯಾ ಪೂಜೆಯನ್ನು ನೆರವೇರಿಸುತ್ತ ಬಂದಿರುತ್ತೇವೆಂದೂ, ಪರಮ ವೈದಿಕರಾದ ನಮ್ಮ ವಿಷಯದಲ್ಲಿ ಈ ರೀತಿಯಾದ ಹೇಯ ಮಾತುಗಳನ್ನು ಉಪಯೋಗಿಸುವದು ಕೇವಲ ಅನ್ಯಾಯವಾದುದೆಂದೂ, ಆದುದರಿಂದ ಉಭಯರೂ ಸಹೋದರಭಾವದಿಂದ ವರ್ತಿಸುವದು ಶ್ರೇಯಸ್ಕರವೆಂದೂ ಇತ್ಯಾದಿ ವಿಷಯಗಳನ್ನು ಅವರಿಗೆ ನಾನಾ ರೀತಿಯಾಗಿ ಹೇಳಿದರೂ ಸಹ ಅವರು ಲಕ್ಷ್ಯಗೊಡದೆ ತಮ್ಮ ಅಸೂಯಾಬುದ್ಧಿಯನ್ನೇ ಮುಂದುವರಿಸಿದರು. ಇದರಿಂದ ಭಯಂಕರ ವ್ಯಾಜ್ಯಕ್ಕೆ ಕಾರಣವಾಗಿ ಕಡೆಗೆ ಹೈದರಾಬಾದ ಪಟ್ಟಣದಲ್ಲಿ ದೊಡ್ಡ ಸಭೆಯು ಸೇರಿ ಈ ವಿಷಯವು ನಿರ್ಣಯಿಸಲ್ಪಡಬೇಕೆಂದು ನೈಜಾಂ ಸರಕಾರದಿಂದ ತೀರ್ಮಾನಿಸಲ್ಪಟ್ಟಿತು. ಸರಕಾರದವರ ಅಭಿಪ್ರಾಯದ ಮೇರೆಗೆ ಈ ಸಭೆಯ ಅಧ್ಯಕ್ಷಸ್ಥಾನವನ್ನು ನೈಜಾಂ ರಾಜ್ಯದಲ್ಲಿ ಅತ್ಯಂತ ಘನತೆಯನ್ನು ಹೊಂದಿದ್ದ ಕೈ|| ಬಾಲಮುಕುಂದರಾಯರೆಂಬ ಅಸಾಧಾರಣ ಮೇಧಾವಿಗಳು ವಹಿಸಿದರು. ಉಭಯ ಪಕ್ಷಗಳ ಪಂಡಿತರು ನಾನಾದೇಶಗಳಿಂದ ಸನ್ನಿಹಿತರಾದರು. ಎರಡೂ ಪಕ್ಷಗಳವತಿಯಿಂದ ಪಂಡಿತರ ಸಾಕ್ಷಿಗಳಾದವು. ಲಿಂಗಾಯತ ಮತದಲ್ಲಿ ವರ್ಣಾಶ್ರಮ ವಿಭಾಗವಿಲ್ಲವೆಂದೂ, ಈ ಮತವು ನಾನಾಜಾತಿಗಳಿಂದ ಸಂಕರವಾಗಿರುವದರಿಂದ ಮುಸಲ್ಮಾನ ಕ್ರಿಶ್ಚಿಯನ್ ಮತಗಳಂತೆ ಇದೊಂದು ಸಂಕರಮತವಾಗಿರುವದೆಂದೂ, ಆದುದರಿಂದ ಇವರಿಗೆ ವೇದಾಧಿಕಾರವಿಲ್ಲವೆಂದೂ ಪ್ರತಿಪಾದಿಸಿದರು. ಅದಕ್ಕೆ ವೀರಶೈವಮತದ ಪಂಡಿತರು ಇವರು ಪ್ರತಿವಾದಿಸುವ ಮತಕ್ಕೂ ವೀರಶೈವಮತಕ್ಕೂ ಯಾವ ಸಂಬಂಧವಿಲ್ಲವೆಂದೂ, ವೀರಶೈವಮತದಲ್ಲಿ ಚತುರ್ವರ್ಣಾಶ್ರಮಗಳು ಉಂಟೆಂದೂ, ವೀರಶೈವರು ಷೋಡಶಕರ್ಮಗಳನ್ನು ವೇದವಿಧ್ಯುಕ್ತಪೂರ್ವಕವಾಗಿ ಆಚರಿಸುವರೆಂದೂ, ಇವರು ಮುಖ್ಯವಾಗಿ ವೇದಗಳನ್ನೂ ಆ ವೇದಾರ್ಥವನ್ನೇ ಪ್ರತಿಪಾದಿಸತಕ್ಕ ಶಿವಾಗಮಗಳನ್ನೂ ಪ್ರಮಾಣೀಭೂತಗಳನ್ನಾಗಿ ನಂಬುವದರಿಂದ ವೈದಿಕತಾಂತ್ರಿಕರೆಂದು ಶಾಸ್ತ್ರಪ್ರಸಿದ್ಧರಾಗಿರುವರೆಂದೂ, ಶ್ರೀವೈಷ್ಣವಮತದ ಹಾಗೂ ವೀರಶೈವಮತದ ವರ್ಣಾಶ್ರಮಾದಿ ಸಕಲ ಧರ್ಮತತ್ವಗಳು ಒಂದೇ ವಿಧವಾಗಿರುವವೆಂದೂ, ಇಂಥ ಶುದ್ಧ ವೈದಿಕರು ಜಗತ್ತಿನಲ್ಲಿ ದೊರೆಯುವದೇ ದುರ್ಲಭವೆಂದೂ ಅನೇಕ ಪ್ರಮಾಣಗಳಿಂದ ದೃಢೀಕರಿಸಿದರು. ಅಧ್ಯಕ್ಷರು ಈ ಉಭಯ ಪಕ್ಷದವರ ವಾದ ವಿವಾದಗಳನ್ನು ಪರ್ಯಾಲೋಚಿಸಿ ವೀರಶೈವರು ಪರಮವೈದಿಕರಾದುದರಿಂದ ಪರಳಿ ವೈದ್ಯನಾಥಲಿಂಗಮೂರ್ತಿಗೆ ವೇದೋಕ್ತರೀತ್ಯಾ ಅಭಿಷೇಕಾದಿಗಳನ್ನು ಮಾಡಬಹುದೆಂದು ಜಡ್ಜ್‌ಮೆಂಟನ್ನು ಬರೆದು ಅದನ್ನು ನೈಜಾಂ ಗವರ್ನಮೆಂಟಿನ ಮುಂಜೂರಾತಿಗಾಗಿ ಕಳುಹಿಸಿದರು. ಕಳುಹಿಸಿದ ಸ್ವಲ್ಪದಿವಸಗಳಲ್ಲಿಯೇ ಅವರು ಪರಲೋಕವಾಸಿಗಳಾದರು. ಇತ್ತ ಕಡೆಗೆ ಭರತಖಂಡದಲ್ಲಿರತಕ್ಕ ಸಕಲ ವೀರಶೈವರು ಈ ಪ್ರಕರಣದ ತೀರ್ಪು ಇಂದು ಹೊರಬೀಳಬಹುದು, ನಾಳೆ ಹೊರಬೀಳಬಹುದೆಂದು ಅದೇ ಧ್ಯಾನದಲ್ಲಿಯೇ ಕಾಲವನ್ನು ಕಳೆಯಹತ್ತಿದರು. ವಿಚಾರವಾದ ೩-೪ ತಿಂಗಳುಗಳಲ್ಲಿ ತೀರ್ಪು ಪ್ರಸಿದ್ಧವಾಗುವದು ಎಲ್ಲಾ ಗವರ್ನಮೆಂಟಿನ ಪದ್ಧತಿಯಾಗಿರುತ್ತದೆ. ಆದರೆ ನೈಜಾಂ ಗವರ್ನಮೆಂಟ್ (ನೊಗಲಾಯಿ) ತಾನು ಭರತಖಂಡದಲ್ಲಿ ಪಡೆದಿರುವ ತನ್ನ ಅಭಿಧಾನಕ್ಕೆ ತಕ್ಕಂತೆ ೪ ವರ್ಷಗಳ ಮೇಲೆ ತೀರ್ಪು ಹೇಳಿತು. ಎಲ್ಲರೂ ಇದರ ಆಲೋಚನೆಯನ್ನು ಮರೆತುಬಿಟ್ಟಿದ್ದರು. ಯಾರ ಸ್ವಪ್ನದಲ್ಲಿಯೂ ಸಹ ಈ ವಿಷಯವು ಬರುವಂತಿದ್ದಿಲ್ಲ. ಇಂಥ ಸಮಯದಲ್ಲಿ ಹ್ಯಾಗೇ ಆಗಲಿ ನೈಜಾಂ ಸರಕಾರದವರು ಸಭಾಧ್ಯಕ್ಷರ ಜಡ್ಜಮೆಂಟಿನ ಮೇರೆಗೆ ಆರ್ಡರ್ ಮಾಡಿದ್ದು ಸಕಲ ವೀರಶೈವರ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡಿರುತ್ತದೆ. ಅನ್ಯಮತೀಯರು ಲಿಂಗಧಾರಿಗಳ ವಿಷಯದಲ್ಲಿ ಬಹಳ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಇದಕ್ಕೆ ಅವರಲ್ಲಿ ದೀರ್ಘಾಲೋಚನೆಯಿಲ್ಲದಿರುವದೇ ಮುಖ್ಯಕಾರಣವೆಂದು ಹೇಳಬೇಕಾಗಿದೆ. ಶಿವಲಿಂಗಮೂರ್ತಿಯನ್ನು ಪೂಜಿಸುವದಕ್ಕೋಸ್ಕರ ಬ್ರಾಹ್ಮಣಾದಿ ಚಂಡಾಲಪರ್ಯಂತವಾಗಿ ಸಕಲ ಜಾತಿಯವರೂ ಲಿಂಗವನ್ನು ಧರಿಸಿಕೊಂಡಿರುತ್ತಾರೆ. ಇದು ಶಾಸ್ತ್ರಸಿದ್ಧವಾದ ಮಾತಾಗಿದೆ. ಸಕಲ ಜಾತಿಯವರು ಲಿಂಗವನ್ನು ಧರಿಸಿಕೊಂಡಾಗ್ಯೂ ತಮ್ಮ ತಮ್ಮ ಜಾತಿಕುಲಪದ್ಧತಿಗಳಿಗನುಸಾರವಾಗಿ ಈ ಹೊತ್ತಿನವರೆಗೂ ವರ್ತಿಸುತ್ತಾರೆ. ವೀರಶೈವಮತದಲ್ಲಿ ನಾಲ್ಕೂ ವರ್ಣದವರುಂಟು. ಇತ್ತೀಚೆಗೆ ಲಿಂಗವನ್ನು ಧರಿಸಿಕೊಂಡ ಕನ್ವರ್ಟ (ಮಿಶ್ರ) ರನ್ನು ಕಂಡು ಎಲ್ಲರೂ ಹೀಗೆಯೇ ಇರಬಹುದೆಂಬ ಮಹಾ ಭೂತವು ಇವರನ್ನು ಬಡೆದುಕೊಂಡಿರುವದು. ಕನ್ವರ್ಟ (ಮಿಶ್ರ) ಲಿಂಗಾಯತರಿಗೂ ಶುದ್ಧ ಸಾಂಪ್ರದಾಯದ ವೀರಶೈವರಿಗೂ ಯಾವರೀತಿಯಿಂದಲೂ ಸಂಬಂಧವಿರುವದಿಲ್ಲ. ಶುದ್ಧಸಾಂಪ್ರದಾಯದ ವೀರಶೈವರಿಗೆ ಶ್ರೌತರೀತ್ಯಾ ಲಿಂಗಧಾರಣವಾಗುತ್ತದೆ. ಶೂದ್ರರಿಗೆ ಅಶ್ರೌತರೀತ್ಯಾ ಲಿಂಗಧಾರಣವಾಗುತ್ತದೆ. ಈ ವಿಷಯವು ಅನೇಕಾನೇಕ ವೀರಶೈವಧರ್ಮಗ್ರಂಥಗಳಲ್ಲಿ ಘಂಟಾಘೋಷವಾಗಿ ಸಾರಲ್ಪಟ್ಟಿರುತ್ತದೆ. ಈ ರೀತಿಯಾಗಿರುವ ಧರ್ಮಕಟ್ಟಳೆಯನ್ನು ತಿಳಿಯದೆ ಲಿಂಗ ಧರಿಸಿದವರು ಎಲ್ಲರೂ ಒಂದೇ ಎಂದು ಭಾವಿಸುವದು ಅವರ ಅಜ್ಞತೆಯಲ್ಲದೆ ಬೇರೊಂದಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಶ್ರೀವೈಷ್ಣವರಲ್ಲಿ ಸಕಲ ವರ್ಣದವರಿದ್ದಾರೆ. ಅವರೆಲ್ಲರೂ ಊರ್ಧ್ವಪುಂಡ್ರ ಶಂಖ ಚಕ್ರಾದಿಗಳನ್ನು ಧರಿಸುತ್ತಾರೆ. ಇಷ್ಟು ಮಾತ್ರಕ್ಕೆ ಎಲ್ಲರೂ ಬ್ರಾಹ್ಮಣರಾಗಬಲ್ಲರೇನು? ಅದರಂತೆಯೇ ಈ ಮತದ ಸ್ಥಿತಿಯಾಗಿರುತ್ತದೆನ್ನುವದನ್ನು ಪರಿಗ್ರಹಿಸಿ ತಮ್ಮಲ್ಲಿ ವಾಸಮಾಡಿಕೊಂಡಿರತಕ್ಕ ವಿರುದ್ಧಾಭಿಪ್ರಾಯವನ್ನು ದೂರೀಕರಿಸಿ ಸಹೋದರ ಭಾವದಿಂದ ವರ್ತಿಸುವದು ಭೂಷಣಾಸ್ಪದವಾಗಿದೆ. ಇರಲಿ; ಈ ರುದ್ರಾಭಿಷೇಕದ ಪ್ರಕರಣದಲ್ಲಿ ಹೈದರಾಬಾದ ರಾಜ್ಯದಲ್ಲಿ ಸಕಲ ರೀತಿಯಿಂದಲೂ ಕೀರ್ತಿಯನ್ನು ಹೊಂದಿ ಪರಿಶೋಭಿಸುತ್ತಿರುವ ಹೈಕೋರ್ಟ ವಕೀಲ ಬಾಪೂರಾವ ಮಹೋದಯರು ಅಸಾಧಾರಣವಾದ ಶ್ರಮವನ್ನು ವಹಿಸಿ ದೂರ ದೂರ ಪ್ರಾಂತಗಳಿಂದ ಆಗಮಿಸಿದ್ದ ಸಕಲರಿಗೂ ಯಾವ ಕೊರತೆಯೂ ಇಲ್ಲದಂತೆ ಕಾರ್ಯವನ್ನು ನಡೆಯಿಸಿದರು. ಅವರ ಶ್ರಮವು ಇಂದಿಗೆ ಸಾರ್ಥಕವಾಯಿತೆಂದು ಅತ್ಯಾನಂದದಿಂದ ಹೇಳಬೇಕಾಗಿದೆ. ಈ ಪ್ರಕರಣದಲ್ಲಿ ತನುಮನೋಧನಗಳನ್ನು ವೆಚ್ಚಮಾಡಿ ಮತಸೇವೆಯನ್ನು ಮಾಡಿದ ಯಾವತ್ತು ಧರ್ಮಾಭಿಮಾನಿಗಳಿಗೆ ಈ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲವಿಧಾಯುರಾರೋಗ್ಯಭಾಗ್ಯಾದಿಸಂಪತ್ಸಮೃದ್ಧಿಯನ್ನು ಕೊಟ್ಟು ರಕ್ಷಿಸಲೆಂದು ಆ ಭಗವತ್ಪಾದರನ್ನು ಅನನ್ಯ ಸಾಧಾರಣವಾದ ಭಕ್ತಿಯಿಂದ ಭಜಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಪರಿವಾರಸಮೇತ ಸಿಮ್ಲಾ ಪಟ್ಟಣದಿಂದ ಕಳೆದ ಸೋಮವಾರ ಸಾಯಂಕಾಲ ರಾಜಧಾನಿಗೆ ಚಿತ್ತೈಸಿದರು.

ಬೆಂಗಳೂರು ಸಿಟಿ ಮಹಾರಾಜಾ ಮಿಲ್ಲಿನ ಎಂಟು ಜನ ಕೆಲಸಗಾರರು ಪೋಲೀಸಿನವರ ಮೇಲೆ ಬಿದ್ದು ಅವರನ್ನು ಹೊಡೆದರೆಂದು ಮೊಕದ್ದಮೆ ಆಗಿ ಸಿಟಿ ಮ್ಯಾಜಿಸ್ಟ್ರೇಟರು ದರ್ಯಾಪ್ತಿಮಾಡಿ ಆ ಪೈಕಿ ಮೂವರನ್ನು ಖುಲಾಸಾ ಮಾಡಿಸಿ ಉಳಿದ ಐದು ಜನರಿಗೂ 2-3-4 ತಿಂಗಳಂತೆ ಸಜಾ ವಿಧಿಸಿದರು.

ಅಖಿಲಕರ್ಣಾಟಕ ತೃತೀಯ ಹಿಂದೀಸಮ್ಮೇಳನವು ರಾಜಧಾನಿಯಲ್ಲಿ ಇದೇ ಸೆಪ್ಟಂಬರ್ 29-30 ನೇ ತಾರೀಖಿನ ದಿವಸಗಳಲ್ಲಿ ಪ್ರಖ್ಯಾತರಾದ ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ನೆರವೇರುವುದು. ಹಿಂದೀ ಭಾಷಾಭಿಮಾನಿಗಳು ಆ ಕಾಲಕ್ಕೆ ಸರಿಯಾಗಿ ಆಗಮಿಸಿ ಸಮ್ಮೇಲನದಿಂದ ಆಗುವ ಪ್ರಯೋಜನವನ್ನು ಹೊಂದುವರೆಂದು ನಂಬುತ್ತೇವೆ.

ಕಳೆದ 19 ನೆಯ ತಾರೀಖು ಸೋಮವಾರ ಸಾಯಂಕಾಲ ಬೆಂಗಳೂರುಸಿಟಿ ಹಳೇ ತರಗುಪೇಟೆ ಚೌಕದಲ್ಲಿ ಒಂದು ತುಂಟೆತ್ತಿನ ಗಾಡಿಯು ರಭಸವಾಗಿ ಹಕೋಟಿ ವಿಸಾರಿ ನುಗ್ಗಿ ನಿಂತಿದ್ದ ಪೋಲೀಸನನ್ನು ಕೆಡವಿ ಅವನ ಮೇಲೆ ಹಾಯ್ದು ಹೋದದ್ದರಿಂದ ಅವನು ಗಾಯಪಟ್ಟು ಮರುದಿನ ಆಸ್ಪತ್ರೆಯಲ್ಲಿ ತೀರಿಹೋದನು. ಗಾಯಪಟ್ಟ ಇನ್ನಿಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ಬೆಂಗಳೂರು ದಂಡಿಗೂ ಸಿಟಿಗೂ ಕುಡಿಯುವ ನೀರನ್ನು ಇನ್ನಷ್ಟು ಹೆಚ್ಚಾಗಿ ಒದಗಿಸುವ ನಿಮಿತ್ತ ನಮ್ಮ ಸರ್ಕಾರದವರು ಬೆಂಗಳೂರು-ಮಾಗಡಿ ರಸ್ತೆಯಲ್ಲಿ 20ನೇ ಮೈಲಿನ ಹತ್ತಿರವಿರುವ ತಿಪ್ಪಗೊಂಡನಹಳ್ಳಿಯಲ್ಲಿ ಅರ್ಕಾವತೀನದಿಗೆ ಅಡ್ಡಕಟ್ಟೆ ಹಾಕಿ ಭಾರೀ ಕೆರೆಯನ್ನು ಕಟ್ಟುವ ಏರ್ಪಾಟು ಮಾಡಿರುವುದನ್ನು ಇಂಡಿಯಾ ಗೌರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆಂದು ಕೇಳಿಸಂತೋಷಿಸುತ್ತೇವೆ.

ರಾಜಧಾನಿಯ ಪಂಡಿತ ಚಂದ್ರಭಾನ್ ಸಿಂಗರವರು ಕಾರ್ಯಾರ್ಥವಾಗಿ ಮೊನ್ನೆ ಯಡತೊರೆ ತಾಲ್ಲೂಕು ಚಂದಗಾಲ್ ಗ್ರಾಮಕ್ಕೆ ಹೋಗಿದ್ದಾಗ ಸುಮಾರು 30 ವರುಷದ ಕುಳ್ಳೇಗೌಡನೆಂಬ ರೈತನು ನಾಗರಹಾವು ಕಡಿದು ಜಮೀನಿನಲ್ಲಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾನೆಂದು ಕೇಳಿ ಪಂಡಿತರು ಅಲ್ಲಿಗೆ ಹೋಗಿ ನೋಡುವಾಗ್ಗೆ ಆ ರೈತನು ಕೈಯಲ್ಲಿ ಹಾವಿನ ತಲೆಯನ್ನು ಭದ್ರವಾಗಿ ಹಿಡಿದು ಮಲಗಿದ್ದನು. ಸರ್ಪವು ಅವನ ರಟ್ಟೆಗೆ ಸುತ್ತಿಕೊಂಡಿತ್ತು. ಆಗ ಪಂಡಿತರು ಅವನಿಗೆ ಔಷಧಿ ಕೊಟ್ಟು ಅವನನ್ನು ಪ್ರಜ್ಞೆಗೆ ತಂದು ಅವನು ಹಾವನ್ನು ಹಿಡಿದಿದ್ದ ಹಾಗೆಯೇ ಅವನನ್ನು ಗಾಡಿಯಲ್ಲಿ ರಾಜಧಾನಿಗೆ ತಂದು ತಮ್ಮ ಮನೆಯಲ್ಲಿ ಚಿಕಿತ್ಸೆಮಾಡಿದ್ದಲ್ಲದೆ ಗೌಡನಿಗೆ ನಿದ್ದೆಗೆ ಅವಕಾಶಕೊಡದೆ ರಾತ್ರಿಯೆಲ್ಲಾ ಮೈದಾನದಲ್ಲಿ ಅವನ ಸಂಗಡ ಎಚ್ಚರಿಕೆಯಾಗಿ ಕಾಯ್ದು ಆ ಹಾವಿನ ಸಮೇತ ಫೋಟೋ ತೆಗೆಯಿಸಿದರು. ಆಮೇಲೆ ಹಾವನ್ನು ಕಿತ್ತುಹಾಕಲು ಅದು ಸತ್ತುಹೋಗಿತ್ತು. ಅದು ಅವನನ್ನು ಮೂರುಕಡೆ ಕಡಿದಿದ್ದಿತು. ಅನೇಕ ಜನರು ಅದನ್ನು ನೋಡಿ ಪಂಡಿತರ ಸಾಮರ್ಥ್ಯವನ್ನೂ ಸದರಿ ಗೌಡನ ಧೈರ್ಯವನ್ನೂ ಕೊಂಡಾಡುತ್ತಿದ್ದಾರೆ.

ಇಂಗ್ಲೆಂಡಿನಲ್ಲಿ ಸ್ಮಿತ್ ಎಂಬ ಮನೆತನದ ಒಂದು ಕುಂಟುಂಬವಿದೆ. ಇಷ್ಟು ಎತ್ತರವುಳ್ಳ ಕುಟುಂಬವು ಲೋಕದಲ್ಲಿ ಇಲ್ಲವೆಂದೇ ಹೇಳಬಹುದು. ಏಕೆಂದರೆ ಇಬ್ಬರು ತಾಯಿತಂದೆಗಳ, ನಾಲ್ಕು ಮಂದಿ ಮಕ್ಕಳ ಎತ್ತರವನ್ನು ಅಳೆದರೆ ಒಟ್ಟು 37 ಅಡಿಯಾಗುತ್ತದೆ. ಇವರಲ್ಲಿ ಬಹಳ ಗಿಡ್ಡನೆಂದರೆ 6 ಅಡಿ 3 ಅಂಗುಲದ ಕಿರಿ ಮಗನು! ತಾಯಿಯು 9 ಮಣ ಭಾರವಿದ್ದಾಳೆ. ಮಗಳೊಬ್ಬಳು 9 ಗ್ಯಾಲನ್ ಹೆಂಡ ತುಂಬಿದ ಭಾಂಡವನ್ನು ಲೀಲಾಜಾಲವಾಗಿ ಒಂದು ಕೈಯ್ಯಲ್ಲಿ ತೂಗಿಸಿಕೊಂಡು ನಡೆಯಬಲ್ಲಳು.

ವರ್ತಮಾನಸಂಗ್ರಹ.

ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂನಲ್ಲಿ ನಾಲ್ಕು ಕೋಟಿ ಪುಸ್ತಕಗಳಿವೆಯಂತೆ!

ಭರತಪೂರ್ ಮಹಾರಾಣಿಯವರು ಕಳೆದ 19 ನೆಯ ತಾರೀಖಿನ ದಿನ ಸಿಮ್ಲಾದಲ್ಲಿ ಹೃದ್ರೋಗದಿಂದ ಮೃತರಾದರು.

ದಕ್ಷಿಣ ಆಫ್ರಿಕಾದಲ್ಲಿ ಒಂದು ದೊಡ್ಡ ಎಲುಬು ಸಿಕ್ಕಿದೆ. ಅದನ್ನು ಎತ್ತುವದಕ್ಕೆ 16 ಜನಗಳು ಬೇಕಾಯಿತಂತೆ!

ಮದ್ರಾಸಿನ ವಸಂತ ಬಿಲ್ಡಿಂಗ್ ಎಂಬ ಕಟ್ಟಡವು ಕುಸಿದು ಬಿದ್ದು 15 ಜನ ಕೂಲಿಗಳಿಗೆ ಗಾಯವಾಗಿದೆ. ಪ್ರಾಣಾಪಾಯವಿಲ್ಲ.

ನ್ಯೂಯಾರ್ಕಿನಲ್ಲಿ ಕಳ್ಳತನದಲ್ಲಿ ಶಿಕ್ಷಣಕೊಡುವ ಶಾಲೆಯೊಂದಿದೆಯಂತೆ! ಅನೇಕರು ಇದರಲ್ಲಿ ಓದಿ ಪದವಿ ಪಡೆಯುತ್ತಾರಂತೆ!

ಕರಾಚಿಬಂದರದಲ್ಲಿ ಮೃತಪಟ್ಟ ಒಂದು ದೊಡ್ಡ ಮೀನವು ದಡಕ್ಕೆ ಬಂದು ಬಿದ್ದಿರುವುದು. ಇದು 25 ಅಡಿ ಉದ್ದವಾಗಿದ್ದು ಕಣ್ಣು ಮಾತ್ರ 5 ಅಡಿ ಉದ್ದವಾಗಿರುವುದಂತೆ!

ಇಟಲಿಯಲ್ಲಿ ಒಂದು ಭಾರಿ ಸ್ಫಟಿಕಶಿಲೆಯು ಚಪ್ಪಡಿಯಿರುವದು. ಅದು 60 ಅಡಿ ಎತ್ತರ, 6 ಅಡಿಉದ್ದ ಮತ್ತು 6 ಅಡಿ ಅಗಲವಿದ್ದು ಸುಮಾರು 380 ಟನ್ ತೂಕವಿರುವದು.

ಪೆನ್ಸಿಲ್ವೇನಿಯಾದಲ್ಲಿ ಜಿ. ಎ. ಬೋಡಮರ್ ಎಂಬಾತನು ತನ್ನ ಗಂಡು ಹುಡುಗನೊಬ್ಬನನ್ನು 19 ವರ್ಷಗಳಾಗುವವರೆಗೂ ಹೆಣ್ಣುಮಗುವೆಂದು ಭಾವಿಸಿ ಸಾಕಿ ಸಲಹಿದನಂತೆ! ವಿಚಿತ್ರವಿಚಾರ!

ಒಂದೇ ವರ್ಷದಲ್ಲಿ ಅಲ್ಲಲ್ಲಿ 200 ಕ್ಕಿಂತ ಹೆಚ್ಚು ಸೈಕಲ್ಲುಗಳನ್ನು ಕಳವು ಮಾಡಿದ್ದ ಮಹಮ್ಮದ್ ಇಸ್ಮಾಯಿಲ್ ಎಂಬವನನ್ನು ಪೋಲೀಸರು ಲಕ್ನೋದಲ್ಲಿ ಸೆರೆಹಿಡಿದು 13½ ವರ್ಷಗಳ ಕಾರಾಗೃಹವಾಸಕ್ಕೆ ಗುರಿಪಡಿಸಿರುವರು.

ಫ್ರಾನ್ಸಿನ ಲಾರೋಕೆಟ್ ಎಂಬಲ್ಲಿ ಚಟ್ಟಲೇಲ್ಲ್ ಎಂಬ ಒಂದು ಮೋಟಾರು ಗ್ಯಾರೇಜಿನಲ್ಲಿ ಪೆಟ್ರೋಲ್ ಗೆ ಬೆಂಕಿತಗಲಿ 120 ಮೋಟಾರುಗಳು ನಾಶವಾದವು. ಇದರಿಂದ 10 ಲಕ್ಷ ರೂಪಾಯಿಗಳ ನಷ್ಟ ಸಂಭವಿಸಿರುವುದು.

ಗ್ರಾಫ್‌ಜೆಪ್‌ಲಿನ್ ಎಂಬ ಜರ್ಮನಿಯ ಪ್ರಚಂಡ ಆಕಾಶವಿಮಾನವು ಭೂಪ್ರದಕ್ಷಿಣೆಗಾಗಿ ಹೊರಟಿರುವುದು. ಅದರಲ್ಲಿ 20 ಜನ ಪ್ರಯಾಣಿಕರೂ 2500 ಗ್ಯಾಲನ್ ಪೆಟ್ರೋಲೂ 400 ಗ್ಯಾಲನ್ ಎಣ್ಣೆಯೂ 50,000 ಕಾಗದಪತ್ರಗಳೂ ಇರುವುವಂತೆ!

ಸಿಂಧುದೇಶಕ್ಕೆ ಸೇರಿದ ಖೈರಪುರದ ಸಂಸ್ಥಾನದಲ್ಲಿ ಅಬುಲ್ ಕಾಲುವೆಯು ಒಡೆದು ಅದರ ನೀರು 25-30 ಮೈಲುಗಳವರೆಗೆ ನುಗ್ಗಿ ಅನೇಕ ಹಳ್ಳಿಗಳು ಮುಳುಗಿಹೋದವೆಂದೂ ಇದರಿಂದ 50 ಲಕ್ಷ ರೂಪಾಯಿಗಳ ನಷ್ಟವಾಗಿರುವದೆಂದೂ ತಿಳಿದುಬರುತ್ತದೆ.

ಕ್ಯಾಪ್ಟನ್ ಬರ್ನಟ್ ಹಾರಿಸ್ ಎಂಬಾತನು ಒಂದು ತರಹದ ಗುಂಡನ್ನು ತಯಾರಿಸಿರುವನು. ಇದರ ತುದಿಯು ಮೊನೆಯಾಗಿದ್ದು ಒಂದು ಪ್ರಕಾರದ ಔಷಧವನ್ನು ಹಚ್ಚಿರುವನು. ಈ ಗುಂಡು ತಾಗಿದೊಡನೆಯೇ ಪ್ರಾಣಿಗಳಿಗೆ ನಿದ್ದೆ ಬರುವದಂತೆ! ಒಳ್ಳೇ ಅಸ್ತ್ರ!

ಕಳೆದ 10-12 ದಿವಸಗಳಿಂದ ಬೊಂಬಾಯಿಯಲ್ಲಿ ಒಂದು ಹೊಸರೋಗವು ಉತ್ಪನ್ನವಾಗಿರುವುದು. ಇದುವರೆಗೆ ಈ ರೋಗವು 13 ಜನ ಇಟಾಲಿಯನ್ ಜನರಿಗೆ ಮಾತ್ರ ಪ್ರಾಪ್ತವಾಗಿರುತ್ತದೆ. ಈ ರೋಗವು ಹತ್ತಿದವರಿಗೆ ಜ್ವರವು ವಿಪರೀತವಾಗಿ ಬಂದು ಜ್ವರವು ಕಡಿಮೆಯಾಗುವವರೆಗೆ ಹುಚ್ಚು ಹಿಡಿಯುವದಂತೆ!

ಅಮೇರಿಕೆಯ ಹೆಂಗಸರಲ್ಲಿ ಆಕಾಶವಿಮಾನವನ್ನು ಹಾರಿಸುವ ಪಂದ್ಯವು ನಡೆಯುವುದು. ಗೆದ್ದವರಿಗೆ ಸುಮಾರು 65000 ರೂ. ಗಳ ಬಹುಮಾನ! ಈ ಸಾರೆ ಈ ಪಂದ್ಯಕ್ಕೆ 18 ಜನ ಹೆಂಗಸರು ಉಮೇದುವಾರರಾಗಿ ಸೇರಿದ್ದರು. ಅವರಲ್ಲೊಬ್ಬಳು ಪಂದ್ಯವು ನಡೆಯುವ ಹಿಂದಿನದಿನ ಒಂದು ವಿಮಾನದಿಂದ ಕೆಳಗುರುಳಿ ಸತ್ತುಹೋದಳು.

ಹೈದ್ರಾಬಾದಿನ ಮಹಬೂಬ್ ನಗರದಲ್ಲಿ ಒಬ್ಬ ತರುಣನು ತನ್ನ ಪ್ರೇಮಪಾತ್ರಳ ಗಂಡನನ್ನು ಖೂನಿ ಮಾಡಿದನು. ಹೆಂಡತಿಗೆ ಅದು ತಿಳಿದರೂ ಸಹ ಉಪಪತಿಯು ಕಷ್ಟಕ್ಕೊಳಗಾಗುವನೆಂದು ಸುಮ್ಮನಿದ್ದಳು. ಗ್ರಾಮದ ಪಟೇಲನು ಸಂದೇಹಪಟ್ಟು ಹುಡುಕಿಸಿದಾಗ ಉಪಪತಿಯು ಸಿಕ್ಕಿಬಿದ್ದು ತನ್ನ ತಪ್ಪನ್ನೊಪ್ಪಿಕೊಂಡು ಹೆಣವನ್ನು ಚಲ್ಲಿದ ಭಾವಿಯನ್ನು ತೋರಿಸಿದನು.

ಶ್ರೀಯುತ ಸುಧಾಂಶು ಚೌಧರಿ, ರಾಧಾಚರಣ ಉಕೀಲ್, ಧೀರೇಂದ್ರದೇವ್ ಮತ್ತು ಲಲಿತಮೋಹನ ಸೇನ್ ಎಂಬ ನಾಲ್ಕು ಜನ ಬಂಗಾಳಿ ಚಿತ್ರಕಲಾಚತುರರನ್ನು ಲಂಡನ್ನಿನಲ್ಲಿ ಹೊಸದಾಗಿ ಕಟ್ಟಲ್ಪಡುವ ಇಂಡಿಯಾ ಹೌಸ್ ಮಂದಿರವನ್ನು ಚಿತ್ರಗಳಿಂದ ಶೃಂಗರಿಸಲು ಹಿಂದುಸ್ಥಾನ ಸರ್ಕಾರದವರು ಇಂಗ್ಲೆಂಡಿಗೆ ಕಳುಹಿಸುವರು. ಅವರು ಅಲ್ಲಿ ಒಂದು ವರ್ಷಕಾಲ ಸೌತ್‌ಕೆನಿಂಗ್‌ಸ್ಟನ್ನಿನ ರಾಯಲ್ ಕಾಲೇಜಿನಲ್ಲಿ ಚಿತ್ರಾಲಂಕಾರದಲ್ಲಿ ಶಿಕ್ಷಣವನ್ನು ಹೊಂದಿ ಬಳಿಕ ಇಟಲಿ ಫ್ರಾನ್ಸ್ ಮುಂತಾದ ಪಾಶ್ಚಾತ್ಯದೇಶಗಳಲ್ಲಿ ಸಂಚಾರ ಮಾಡಿ ಅಲ್ಲಿಯ ಚಿತ್ರಕಲೆಯನ್ನು ಪರಿಶೀಲಿಸಿ, ತರುವಾಯ ಇಂಡಿಯಾ ಹೌಸಿನ ಶೃಂಗಾರಕ್ಕೆ ಕೈಹಾಕುವರು.

ಬಳ್ಳಾರಿಯ ವೀರಶೈವರಲ್ಲಿ ಮುಂದಾಳುಗಳಾದ ಸಮಾಜಸೇವೆಯನ್ನು ಅತ್ಯುತ್ಸಾಹದಿಂದಲೂ ಧೈರ್ಯದಿಂದಲೂ ತ್ರಿಕರಣಶುದ್ಧಿಯಿಂದಲೂ ಮಾಡುತ್ತ ಸುಪ್ರಸಿದ್ಧರಾಗಿದ್ದ ಶ್ರೀಮಂತ ಹೀರದ ಕರಿಬಸವಪ್ಪನವರು ಪರಲೋಕವಾಸಿಗಳಾದರೆಂಬ ವಿಷಯವನ್ನು ಕೇಳಿ ಅತ್ಯಂತ ವಿಷಾದಿಸುತ್ತೇವೆ. ಇವರು ಅತ್ಯಲ್ಪವಯಸ್ಕರಾದಾಗ್ಯೂ, ಇವರಲ್ಲಿ ಪರೋಪಕಾರ, ಸೌಜನ್ಯ, ಶಾಂತಿ, ವಿವೇಕ ಮೊದಲಾದ ಸದ್ಗುಣಗಳು ನೆಲೆಗೊಂಡಿದ್ದುದರಿಂದ ಇವರು ಸಕಲ ಮತಾನುಯಾಯಿಗಳ ಪ್ರೀತಿವಿಶ್ವಾಸಗಳಿಗೆ ಪೂರ್ಣಪಾತ್ರರಾಗಿದ್ದರು. ಈ ತರದ ಗುಣಗಳು ಆಗರ್ಭಶ್ರೀಮಂತರಲ್ಲಿ ನೆಲೆಗೊಂಡಿರುವ ವಿಷಯವು ಅಪೂರ್ವವೆಂದೇ ಹೇಳಬೇಕಾಗಿದೆ. ಸದಾ ಸಮಾಜಸೇವಾಕಾರ್ಯದಲ್ಲಿ ನಿರತರಾಗಿದ್ದ ಇಂಥ ಪುಣ್ಯಾತ್ಮರನ್ನು ಕಳೆದುಕೊಂಡದ್ದು ಬಳ್ಳಾರಿಯ ವೀರಶೈವರ ಸಮಾಜಕ್ಕೆ ವಿಶೇಷವಾದ ಹಾನಿಯುಂಟಾಯಿತೆಂದು ಹೇಳಬೇಕಾಗಿದೆ. ಶ್ರೀ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೂ ಸದರಿಯವರ ಪತ್ನೀಪುತ್ರಾದಿಗಳಿಗೆ ಸೌಖ್ಯವನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ಯೆರುಸಲೇಂ ಪಟ್ಟಣದಲ್ಲಿ ಅರಬ್ಬಿಯವರಿಗೂ ಯೆಹೂದಿಯರಿಗೂ ಕದನಗಳಾಗಿರುತ್ತವೆ. ಆ ಪಟ್ಟಣದಲ್ಲಿ ಪ್ರಾಚೀನ ನಗರದ ಒಂದು ದೊಡ್ಡಗೋಡೆಯು ನಿಂತಿದೆ. ಯೆಹೂದಿಯರು ಬಹು ಕಾಲದಿಂದಲೂ ಅಲ್ಲಿ ಹೋಗಿ ಪ್ರಾರ್ಥನಾಕೂಟಗಳನ್ನು ನಡೆಯಿಸುವುದುಂಟು. ಕೆಲವುದಿನಗಳ ಕೆಳಗೆ ಕೆಲವು ಯೆಹೂದಿಯರು ಅಲ್ಲಿ ಸೇರಿದ್ದಾಗ ನೂರುಮಂದಿ ಅರಬ್ಬಿಯವರು ಹೋಗಿ ಅವರ ಮೇಲೆ ಬಿದ್ದು ಜಗಳ ಮಾಡಿದ್ದರಲ್ಲಿ ಯೆಹೂದಿಯರಿಬ್ಬರಿಗೆ ಗಾಯಗಳಾದವು. ಅಲ್ಲಿಂದೀಚೆಗೆ ಆವೆರಡು ಕಕ್ಷಿಯವರಿಗೂ ಆಗಾಗ್ಗೆ ಕದನಗಳಾಗುತ್ತಲೇ ಇರುವವು. ಆ ಪಟ್ಟಣದ ಇತರ ಭಾಗಗಳಲ್ಲಿಯೂ ಜಗಳಗಳಾಗಿರುವವು. ತಾರೀಖು 23 ರಲ್ಲಿ ಯೆರುಸಲೇಂ ನಗರದ ರಾಜಬೀದಿಗಳಲ್ಲಿ ಕದನಗಳಾಗಿ ಎರಡು ಗಂಟೆಗಳ ತನಕ ಉಭಯ ಕಕ್ಷಿಯವರೂ ಕಡಿದಾಡಿದರು. 15 ಜನಗಳು ಕೊಲೆಯಾದರೆಂದೂ ಗಾಯಪಟ್ಟವರ ಸಂಖ್ಯೆ 100 ಕ್ಕಿಂತ ಹೆಚ್ಚಾಯಿತೆಂದೂ ಸಮಾಚಾರ ಬಂದಿದೆ. ತಾ|| 25 ರ ವರೆಗೆ ಬಂದಿರುವ ಸುದ್ದಿಯಿಂದ ಯೆಹೂದಿಯರು 40 ಮಂದಿ ಕೊಲೆಯಾದರೆಂದೂ 50 ಗುಂದಿ ಗಾಯಪಟ್ಟರೆಂದೂ ಗೊತ್ತಾಗುತ್ತದೆ.

ಕಳೆದ ತಿಂಗಳು 15 ನೆಯ ತಾರೀಖಿನ ದಿನ ಲಕ್ನೋ ಪಟ್ಟಣದ ಡಾಕ್ಟರ್ ಚುನಿಲಾಲ್‌ರವರು, ಗುಲ್ಜಾರಿಲಾಲ್ ಎಂಬುವರ ಮನೆಯಹತ್ತಿರ ಹೋಗುತ್ತಿರುವಾಗ ಮನೆಯೊಳಗಿನಿಂದ ಕೆಟ್ಟವಾಸನೆ ಬಂದುದರಿಂದ ಅವರು ಅನುಮಾನಿತರಾಗಿ, ಪೋಲೀಸಿನವರಿಗೆ ವರ್ತಮಾನ ತಿಳುಹಿಸಲು, ಅವರು ಬಂದು ಕದವನ್ನು ಒಡೆದು ಒಳಕ್ಕೆ ಹೋಗಿ ನೋಡಿದರು. ಗುಲ್ಜಾರಿಲಾಲನ ಹೆಂಡತಿ ಮುಸಾಮತ್ ನಾರಾಯಣದೇವಿಯ ಹೆಣವು ಅಲ್ಲಿ ಬಿದ್ದಿತ್ತು. ಪಕ್ಕದಲ್ಲಿ ಗಂಡನು ಎಲೆ ಅಡಿಕೆ ಹಾಕಿಕೊಳ್ಳುತ್ತ ಕುಳಿತಿದ್ದನು. ಆತನು ಕಳೆದ ಮೂರುದಿನಗಳಿಂದಲೂ ಹೆಣದ ಪಕ್ಕದಲ್ಲೇ ಅಡಿಗೆ ಮಾಡಿಕೊಂಡು ಊಟಮಾಡುತ್ತಿದ್ದನೆಂದು ಗೊತ್ತಾಯಿತು. ಆತನನ್ನು ಕೇಳುವಲ್ಲಿ ತನ್ನ ಹೆಂಡತಿಯು 11ನೆಯ ತಾರೀಖಿನ ದಿನ ಸತ್ತುಹೋದಳೆಂದೂ ಆಕೆಯ ಸಂಬಂಧಿಕರಿಗೂ ತನಗೂ ವ್ಯಾಜ್ಯನಡೆದು ಹೆಣಕ್ಕೆ ಸಂಸ್ಕಾರ ಮಾಡಲಿಲ್ಲವೆಂದೂ ಹೇಳಿದನು. ನಗದು ಹಣ, ನೋಟುಗಳು, ನಗಗಳು ಇವುಗಳೆಲ್ಲಾ ಆ ಮನೆಯಲ್ಲಿ ಬೇಕಾದಷ್ಟು ಸಿಕ್ಕವು. ಅವುಗಳನ್ನು ಪೋಲೀಸಿನವರು ಮೃತಳ ಸಂಬಂಧೀಕರಿಗೆ ಕೊಟ್ಟು, ಗುಲ್ಜಾರಿಲಾಲನನ್ನು ದಸ್ತಗಿರಿ ಮಾಡಿ, ಬಂಧನದಲ್ಲಿರಿಸಿರುವರು.

ಸ್ವೀಕಾರ.

ಬಳ್ಳಾರಿ ಡಿ|| ವಿಂಚೇರಿ ಗ್ರಾಮದ ಮ|| ರಾ|| ಉಡೇದ ಅಪ್ಪನಗೌಡರು ತಮಗೆ ಪ್ರಾಪ್ತವಾದ ರೋಗವು ಶ್ರೀ ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಹಾಗೂ ಸದರಿಯವರ ಸಹೋದರಿ ಚಿ|| ಸೌ|| ಗೌರಮ್ಮನನ್ನು ನೈಜಾಮು ಇಲಾಖಾ ಹೊಸಹಳ್ಳಿ ಬಸಪ್ಪನವರ ಪುತ್ರ ಚಿ|| ಸ|| ಲಕ್ಷ್ಮಿರೆಡ್ಡಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 3 ರೂ. ಮತ್ತು ಸದರಿ ಗೌಡರ ಮಿತ್ರರು ತಮ್ಮ ಮನೋರಥವು ಜಗದಾಚಾರ್ಯರ ಕೃಪಾಬಲದಿಂದ ಸಿದ್ಧಿಸಿದ ಸಂತೋಷಕ್ಕಾಗಿ ಸಮರ್ಪಿಸಿದ 3 ರೂ. ಒಟ್ಟು 8 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ನೈಜಾಮು ಇಲಾಖಾ ರಾಯಚೂರು ಪಟ್ಟಣದಲ್ಲಿರುವ ಸೋಮವಾರಪೇಟೆ ಮಠದಲ್ಲಿ ನೂತನ ಪಟ್ಟಾಧಿಕಾರ ಸಮಾರಂಭವು ನೆರವೇರಿದ ಸಮಯದಲ್ಲಿ ಸದರಿ ಮಠದ ಶ್ರೀ ಪಟ್ಟದಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಚಿತ್ರದುರ್ಗ ಡಿ|| ಬೊಮ್ಮಗೊಂಡನಕೆರೆಯಲ್ಲಿ ಮ|| ರಾ|| ಭಾರಿ ಸಣ್ಣಸಿದ್ದಪ್ಪನವರು ಶ್ರೀ ಹಿಮವತ್ಕೇದಾರೇಶ್ವರನೆಂಬ ನಾಮದಿಂದ ಶಿವಲಿಂಗಪ್ರತಿಷ್ಠೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಸಾಹುಕಾರ್ ಭಾರಿ ಬಸಪ್ಪನವರ ದ್ವಾರಾ ತಲ್ಪಿರುತ್ತವೆ.

ಬಿಜಾಪೂರ ಡಿ|| ಬಾಗೇವಾಡಿ ತಾ|| ಮುತ್ತಗಿ ಗ್ರಾಮದ ಪಾಟೀಲರಾದ ಮ|| ರಾ|| ಸಂಗನಗೌಡರು ಧಾರವಾಡ ಡಿ|| ರೋಣ ತಾ|| ಭೋಪಳಾಪುರ ಗ್ರಾಮದ ಮ|| ರಾ|| ನಾಗನಗೌಡರ ಪುತ್ರ ನೀಲಪ್ಪಗೌಡನನ್ನು ವಿಧಿವತ್ತಾಗಿ ಬಿಜಾಪುರ ಪಟ್ಟಣದಲ್ಲಿ ದತ್ತಕ ಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಭೋಪಳಾಪುರದ ಪಾಟೀಲ್ ರಾಯನಗೌಡರ ದ್ವಾರಾ ತಲ್ಪಿರುತ್ತವೆ.

ತಿಪಟೂರು ನಿವಾಸಿಗಳಾದ ಮ|| ರಾ|| ಬೇಗೂರು ಚಿಕ್ಕ ಚನ್ನಬಸಪ್ಪನವರು ತಮ್ಮ ಪುತ್ರಿಗೆ ರೇವಣಾಂಬೆಯೆಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ವೇ|| ರಾಣೆಬೆನ್ನೂರು ಮಳೇಮಠದ ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತದೆ.

ಬಿಜಾಪುರ ಶಹರ ನಿವಾಸಿಗಳಾದ ಮ|| ರಾ|| ರಾಚಪ್ಪಾ ಮುರಿಗೆಪ್ಪಾ ಶಾಬಾದಿ ಇವರು ತಮ್ಮ ಗೋವಿಗೆ ಪ್ರಾಪ್ತವಾದ ಅಸಾಧ್ಯರೋಗವು ಜಗದಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ 1 ರೂ. ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ—

ವೀರಶೈವಧಾರ್ಮಿಕಸಭೆ.

ಲಾತೂರು.

ತಾ|| 25-8-29 ರಲ್ಲಿ ಲಾತೂರಲ್ಲಿ ಶ್ರೀ ಬರದಾಪೂರಕರ ಶ್ರೀ ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವೀರಶೈವಮಹಾಜನರ ಸಭೆಯು ನೆರೆದಿತ್ತು. ಆಗ್ಗೆ ವಿರೂಪಾಕ್ಷದೇಶಿಕೇಂದ್ರರು ಎರಡು ತಾಸಿನವರೆಗೆ ಸುಶ್ರಾವ್ಯವಾದ ಭಾಷಣವನ್ನು ಮಾಡಿ ನಿಜಾಮ ಸರಕಾರದವರು ಪರಳಿ ವೈಜನಾಥನ ರುದ್ರಾಭಿಷೇಕ ಪ್ರಕರಣದಲ್ಲಿ ವೀರಶೈವ ಸಮಾಜದ ಬಗ್ಗೆ ತೋರಿಸಿದ ಧರ್ಮಾಭಿಮಾನಕ್ಕಾಗಿ ಅವರ ಆಭಾರವನ್ನು ಮನ್ನಿಸಿದರು. ವೀರಶೈವರು ತಮ್ಮ ಧಾರ್ಮಿಕಕಾರ್ಯಗಳನ್ನು ಸ್ವಮತಾಚಾರ್ಯರಿಂದ ಮಾಡಿಸಬೇಕೆಂದು ಸಭೆಯು ಏಕಕಂಠದಿಂದ ತೀರ್ಮಾನಿಸಿತು. ಆ ಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸಭಿಕ.

ಪರಳೀರುದ್ರಾಭಿಷೇಕದ ತೀರ್ಮಾನ.

ಮಹಾಶಯರೇ ?

ಸುಮಾರು ನಾಲ್ಕೈದು ವರ್ಷಗಳಿಂದಲೂ ವಿವಾದ ನಡೆಯುತ್ತಿದ್ದ ನಿಜಾಮ ಇಲಾಖಾ ಪರಳಿಯ ರುದ್ರಾಭಿಷೇಕದ ವಿಚಾರವನ್ನು ನಮ್ಮ ದಯಾಳು ನಿಜಾಮ ಸರ್ಕಾರದವರು ಕೂಲಂಕಷವಾಗಿ ವಿಮರ್ಶಿಸಿ ವೀರಶೈವರಿಗೆ ಅಭಿಷೇಕದ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯವೆಂಬೆಂದೂ, ವೀರಶೈವ ಧಾರ್ಮಿಕಕಾರ್ಯಗಳಲ್ಲಿ ಸ್ವಾರ್ಥರು ಕೈಹಾಕಬಾರದೆಂದೂ ಇನ್ನುಮುಂದೆ ವೀರಶೈವರೇ ಧಾರ್ಮಿಕಕಾರ್ಯಗಳನ್ನು ನೆರವೇರಿಸಬೇಕೆಂದು ತೀರ್ಮಾನಿಸಿರುವರು. ಇದಕ್ಕಾಗಿ ಇಡೀ ವೀರಶೈವ ಸಮಾಜವೇ ನಿಜಾಮ ಸರಕಾರಕ್ಕೆ ಆಭಾರಿಯಾಗಿದೆ. ಸಮಾಜಸ್ವಾಮಿಗಳು ತಮ್ಮ ತಮ್ಮ ಸ್ಥಳಗಳಲ್ಲಿ ಸಭೆಗೂಡಿಸಿ ನಿಜಾಮ ಸರಕಾರಕ್ಕೆ ಅಭಿನಂದನಗಳನ್ನು ತಂತಿಮೂಲಕ ಒಪ್ಪಿಸಬೇಕೆಂದು ನನ್ನ ಪ್ರಾರ್ಥನೆ.

ವಿರೂಪಾಕ್ಷಸ್ವಾಮಿ. ದೇಶಿಕೇಂದ್ರ
ಲಾತೂರು.

ಕೇದಾರ ಸಿಂಹಾಸನಂ.

ಲೇಖಕರು— [illegible] ಚನ್ನಸಿದ್ಧಶಿವಾಚಾರ್ಯರು

[illegible] ಬಸ್ತಿಹಳ್ಳಿ.

(ಕಳೆದವಾರದಿಂದ ಮುಂದಕ್ಕೆ ಸಾಗಿದ್ದು.)

ಈ ಕೇದಾರಸಿಂಹಾಸನ ಮಠವು ಮತ್ತು ಕೇದಾರೇಶ್ವರ ಮಂದಿರವು ಸಹ ಪೂರ್ವದಿಂದ ಆವಿರ್ಭವಿಸಿದ ಸರಸ್ವತೀ, ಮಂದಾಕಿನೀ ನದಿಗಳ ಮಧ್ಯಭಾಗದಲ್ಲಿರುವದು. ಈ ಸರಸ್ವತಿಯ ಹಾಗೂ ಪೂರ್ವೋಕ್ತ ಮಂದಾಕಿನಿಯ ಸಂಗಮವು ದಕ್ಷಿಣಕ್ಕೆ ಮಠಮಂದಿರಗಳ ಕೆಳಗಿನ ಭಾಗದಲ್ಲಿ ವಿರಾಜಿಸುತ್ತಿರುವದು. ಈ ಸಂಗಮದಲ್ಲಿಯೂ ಯಾತ್ರಿಕರು ಸ್ನಾನಮಾಡುವರು. ಇಲ್ಲಿ ಯಾತ್ರಿಕರ ಸಲುವಾಗಿ ಮಂದಾಕಿನೀ ನದಿಗೆ ಪೂಲನ್ನು ನಿರ್ಮಿಸಿರುವರು. ಇಲ್ಲಿ ಗಂಗಾಮಂದಿರವೊಂದು ಶೋಭಿಸುತ್ತಿರುವದು. ಈ ಗಂಗಾ ಮಧ್ಯಪ್ರದೇಶದಲ್ಲಿಯೇ ಶ್ರೀ ಕೇದಾರಮಂದಿರ ಮಠಗಳು ಇರುತ್ತವೆ. ಮಂದಿರಕ್ಕೆ ದಕ್ಷಿಣದಿಕ್ಕಿನಲ್ಲಿಯೂ ಪೂರ್ವದಿಕ್ಕಿನಲ್ಲಿಯೂ ಬಾಗಿಲುಗಳಿವೆ. ದಕ್ಷಿಣ ದಿಮ್ಮುಖವಾಗಿ ಇರುವ ಮಹಾದ್ವಾರದ ಮುಂದುಗಡೆಯಲ್ಲಿ ನಂದಿಗಣಮೂರ್ತಿಯು ಸದ್ಮ ಬೈಲಿನಲ್ಲಿಯೇ ಅದೆ. ಈಗ ಜಗದ್ಗುರುಗಳು ಈ ಮೂರ್ತಿಯ ಮೇಲುಗಡೆಯಲ್ಲಿ ಶಿಲಾಛತ್ರವನ್ನೂ ಎಡಬಲ ಪಾರ್ಶ್ವಗಳಲ್ಲಿ ಯಾತ್ರಿಕರ ಹಿತಾರ್ಥವಾಗಿ ಪಟ್ಟಸಾಲೆಗಳನ್ನು ಕಟ್ಟಿಸುವರು. ಅದರ ಮಧ್ಯದಲ್ಲಿ ಪೂಜಾಪಾಠಗಳಿಗೆ ಅನುಕೂಲವಾಗುವಂತೆ ಮಾಡುವರಲ್ಲದೆ ಸಂಗಮಪ್ರವಾಹದಲ್ಲಿ ಹೋಗಿ ಸ್ನಾನಮಾಡಿ ಗಂಗಾಜಲವನ್ನು ಹಸ್ತದಲ್ಲಿ ತರುವವರೊಳಗಾಗಿ ಜನಗಳಿಗೆ ಬಹಳ ಕಷ್ಟವಾಗುವದೆಂದು ಭಾವಿಸಿ ಸರಸ್ವತೀ ಮಂದಾಕಿನೀ ಜಲಧಾರೆಗಳನ್ನು ಇಲ್ಲಿಗೇ ತರುವರು. ಅಂದರೆ ಅಲ್ಲಿ ಸ್ನಾನಮಾಡಿ ಕೂಡಲೇ ಯಾತ್ರಿಕರು ಆ ಶಾಲೆಗಳಲ್ಲಿ ಬಂದು ಅಗ್ನಿಯಂ ಆಶ್ರಯಿಸಿ ಕೇದಾರನಾಥನ ಪೂಜೆಯನ್ನು ಮಾಡಬಹುದು. ಇವರಂತೆ ನಕಶೆಯನ್ನು ತೆಗೆಯಿಸಿ ಕಾರ್ಯವನ್ನು ಪ್ರಾರಂಭಿಸಿರುವರು. ಮಂದಿರದ ಮಹಾದ್ವಾರವನ್ನು ಪ್ರವೇಶಿಸಿದ ಕೂಡಲೇ ಮತ್ತೊಂದು ಮಧ್ಯರಂಗವಿದೆ. ಅದರಲ್ಲಿ ನಂದಿ ಗಣದ ಹಿತ್ತಾಳೆಯ ಸಣ್ಣ ಮೂರ್ತಿಯು ಇರುತ್ತದೆ. ಸುತ್ತಲೂ ಕಂಭಗಳು ಇರುತ್ತವೆ. ಅವುಗಳ ಸುತ್ತಲೂ ಭಿತ್ತಿಗಳಲ್ಲಿ ಪಂಚಪಾಂಡವರ ಹಾಗೂ ಕುಂತೀ ದ್ರೌಪದಿಯರ ಮೂರ್ತಿಗಳು ಮತ್ತು ರಾಮಲಕ್ಷ್ಮಣರ ಮೂರ್ತಿಗಳೂ ಸಹ ಇರುವವು. ಈ ಸರ್ವರೂ ಕೇದಾರೇಶ್ವರನ ಪೂಜೆಗಾಗಿ ಬಂದವರು. ಅಲ್ಲಿಂದ ಒಂದು ದ್ವಾರವನ್ನು ದಾಟಿದ ಮೇಲೆ ಎಡಬಲಕ್ಕೆ ಗೌರೀ, ಲಕ್ಷ್ಮೀಯರ ಮೂರ್ತಿಗಳಿವೆ. ಬಳಿಕ ಇನ್ನೊಂದು ಬಾಗಿಲವನ್ನು ದಾಟಿ ಒಳಗೆ ಪ್ರವೇಶಿಸಿ ಸ್ವಲ್ಪ ಕೆಳಕ್ಕೆ ಇಳಿದರೆ ಅಲ್ಲಿ ಶ್ರೀ ಕೇದಾರೇಶ್ವರ ಜ್ಯೋತಿರ್ಲಿಂಗವಿದೆ. ಈ ಲಿಂಗವನ್ನು ಉಪಮನ್ಯು ಶಿವಯೋಗಿಯು ಪೂರ್ವಯುಗದಲ್ಲಿ ಪೂಜಿಸಿರುವನು. ಇದು ವ್ಯಾಸೋಕ್ತ ಸ್ಕಾಂದಾಂತರ್ಗತ ಕೇದಾರಖಂಡದಲ್ಲಿ ಉಲ್ಲೇಖಿತವಾಗಿದೆ. ಇದನ್ನು ತ್ರೇತಾಯುಗದಲ್ಲಿ ಶ್ರೀರಾಮಲಕ್ಷ್ಮಣರು ಪೂಜಿಸಿರುವರು. ಬಳಿಕ ದ್ವಾಪರದಲ್ಲಿ ಪಾಂಡವರು ಪೂಜಿಸಿರುವರು. ಅನಂತರ ಇತರ ರಾಜರೂ ಪೂಜಿಸಿರುವರು. ಈಗಲೂ ಗೌರ್ನಮೆಂಟಿನವರೂ ಸಹ ಈ ಮಹಲ್ಲಿಂಗವನ್ನು ಪೂಜ್ಯಭಾವದಿಂದ ಕಾಣುತ್ತಿರುವರಲ್ಲದೆ ಈ ಪೂರ್ವದಲ್ಲಿ ಗಢವಾಲದ ಮಹಾರಾಜರಿಂದ ಮಾಡಲ್ಪಟ್ಟಿರುವ ಮಾರ್ಗವನ್ನು ಹೈರೋಡನ್ನಾಗಿ ವಿರಚಿಸಿ ಅಲ್ಲಲ್ಲಿ ಜೀರಿನ ಕಾಲುವೆಗಳನ್ನು ರಚಿಸಿರುವರು. ಅದ್ದರಿಂದ ಈ ಆಂಗ್ಲದೇಶೀಯರ ರಾಜ್ಯವು ಸ್ಥಿರವಾಗಿರುವದೆಂದು ಹೇಳಲು ಯಾವ ಸಂಶಯವೂ ಇಲ್ಲ. ನಮ್ಮ ದೇಶವು ಇನ್ನೂ ಮುಸಲ್ಮಾನರ ಅಧೀನತೆಯಲ್ಲಿಯೇ ಇದ್ದಾಗ ಅವರು ಹಿಮಾಲಯಕ್ಕೆ ಬಂದು ಎಷ್ಟೋ ಮೂರ್ತಿಗಳನ್ನು ಭಗ್ನಗೊಳಿಸಿದರು. ಬೌದ್ಧರ ಕಾಲದಲ್ಲಿಯೂ ಸಹ ಮೂರ್ತಿಗಳ ಗ್ಲಾನಿಯಾಯಿತು. ಆದಾಗ್ಯೂ ಶ್ರೀ ಕೇದಾರ ಸಿಂಹಾಸನ ಪ್ರಭೆಯಲ್ಲಿರುವ ಈ ಕೇದಾರೇಶ್ವರನ ಸಮೀಪಕ್ಕೆ ಬರುವದೇ ಅವರಿಗೆ ಆಗಿಲ್ಲವೆಂದು ಹೇಳಬಹುದಾಗಿದೆ. ಯಾಕಂದರೆ ಇಲ್ಲಿ ಅಂತಹ ಅನರ್ಥಗಳೇನೂ ಅವರಿಂದ ಜರಗಿದಂತೆ ಕಂಡುಬರುವದಿಲ್ಲ. ಜನಶ್ರುತಿಯೂ ಇರುವದಿಲ್ಲ. ಆದರೆ ಅನ್ಯತ್ರ ಜರಗಿದ್ದಕ್ಕೆ ನಮ್ಮ ಉತ್ತರವಿಲ್ಲ. ವೀರಶೈವ ಪೂರ್ವಾಚಾರ್ಯರ ಯೋಗಿಕಪ್ರಭಾವವು ವಿಲಕ್ಷಣವಾದದ್ದಾಗಿದೆ. ಅಸ್ತು! ಈ ಮಹಲ್ಲಿಂಗಮೂರ್ತಿಯಲ್ಲಿ ಶಕ್ತಿ, ಗಣಪತಿ, ಸರ್ಪ, ತ್ರಿಶೂಲ, ಡಮರು ಇತ್ಯಾದಿ ಮಹಾದೇವನ ಸಗುಣಮೂರ್ತಿಯ ಚಿಹ್ನೆಗಳಿವೆ. ಲಿಂಗದ ಒಂದು ಭಾಗದಲ್ಲಿ ದೊಡ್ಡ ರಂಧ್ರವಿದೆ. ಇದನ್ನು ಪೂರ್ವಕಾಲದಲ್ಲಿ ಭೀಮನು ಭಕ್ತಿಭರದಿಂದ ಗದೆಯಿಂದ ಹೊಡೆದ ಛಿದ್ರವೆಂದು ಹೇಳುತ್ತಾರೆ. ಈ ಛಿದ್ರದಲ್ಲಿ ಯಾತ್ರಿಕರು ಗುಪ್ತದಾನವಂ ಮಾಡುತ್ತಾರೆ. ಅದರೊಳಗೆ ಪಾರವಿಲ್ಲದಷ್ಟು ಜಲವಿರುವದು. ಇನ್ನು ಈ ಮಹಾಮೂರ್ತಿಯ ಸುತ್ತಲೂ ಒಂದೇ ಒಂದಾದ ಬೃಹಚ್ಛಿಲೆಯಿದೆ. ಅದರ ಮೇಲೆ ನಾಲ್ಕು ದಿಕ್ಕಿಗೂ ನಾಲ್ಕು ಉನ್ನತವಾದ ವಿಶಾಲವಾದ ಶಿಲಾಸ್ತಂಭಗಳಿವೆ. ಈ ಲಿಂಗಮೂರ್ತಿಯ ಸುತ್ತಲಿರುವ ಶಿಲಾಸ್ತಂಭಗಳನ್ನು ಪಂಚಪಾಂಡವರೇ ಸ್ಥಾಪಿಸಿರುವರಂತೆ!

ಈ ಕಂಬಗಳಲ್ಲಿ ಲೇಖಗಳು ಅವೆ. ಇವುಗಳನ್ನು ಓದುವದು ಶಕ್ಯವಲ್ಲ. ಅಂಧಕಾರಮಯವಾದ ಗರ್ಭಗುಡಿಯು ದೀಪಾವಳಿಗಳಿಂದ ಪ್ರಕಾಶಮಾನವಾದರೂ ಲೇಖಾಕ್ಷರಗಳು ದೇವನಾಗರಿಯ ನಮೂನಿಯಾಗಿ ಒಂದೊಂದು ಮಾತ್ರ ಕಂಡುಬರುವವು. ಇದರಿಂದ ಭಾಷಾಜ್ಞಾನವಾಗಲು ಸಾಧ್ಯವಿಲ್ಲ. ಒಳಭಾಗದ ಸುತ್ತಲು ಶಿಲೆಗಳಲ್ಲಿಯೂ ಲೇಖಗಳಿವೆ. ಅವೂ ಸಹ ಇದೇ ರೀತಿಯಾಗಿರುವವು. ಇನ್ನೂ ಎಷ್ಟೋ ಜನ ಶೋಧಕರಿಗೂ ಇದು ಸಾಧ್ಯವಾಗಿಲ್ಲವೆಂದೇ ಹೇಳಬಹುದಾಗಿದೆ. ಯಾಕಂದರೆ ಇಲ್ಲಿಗೆ ಸಾವಿರಾರು ಜನರು ಯಾತ್ರಿಕರೂ ಶೋಧಕರೂ ಬಂದರೂ ಈ ಲೇಖಜ್ಞಾನವು ಯಾರಿಗೂ ಆಗಿಲ್ಲವೆಂತಲೇ ಹೇಳಬೇಕಾಗಿದೆ. ಮತ್ತು ಲಿಂಗಮೂರ್ತಿಯ ಸನ್ನಿಧಿಯಲ್ಲಿ ಯಾವಾಗಲೂ ವೀರಶೈವಮತೀಯ ಶಿವಲಿಂಗಯುಕ್ತೋಪವೀತಧಾರಿಗಳಾದ ಓರ್ಚಾಬ್ರಾಹ್ಮಣಮೂರ್ತಿಗಳು ನಿಂತಿರುತ್ತಾರೆ. ಇವರ ಕೈಯಲ್ಲಿ ಅನೇಕಾನೇಕ ಸೇವಕರು ಇರುವರು. ಲಿಂಗಮೂರ್ತಿಯ ಮೇಲೆ ರಾಜರೂ ಮಹಾರಾಜರೂ ಶೆಟ್ಟರೂ ಸಾಹುಕಾರರೂ ಸಾಧುಗಳೂ ಸತ್ಪುರುಷರೂ ಪಂಡಿತರೇ ಮೊದಲಾದ ಭಕ್ತರು ಮೊದಲೇ ಸಂಕಲ್ಪಮಾಡಿ ತಂದಿರುವ ರತ್ನಗಳನ್ನೂ ಸ್ವರ್ಣಾಭರಣಗಳನ್ನೂ ಬೆಳ್ಳಿಯ ರೂಪ್ಯಕಗಳನ್ನೂ ಆಭರಣಗಳನ್ನೂ ಕಲಾಬತ್ತಿನ ರೇಶ್ಮೆ ಪೀತಾಂಬರಗಳನ್ನೂ ದುಶಾಲುಗಳನ್ನೂ ಸಾದಾ ಜರೀಧೋತರಗಳನ್ನೂ ಸಮರ್ಪಿಸಿ ಪೂಜೋಕ್ತ ಅರ್ಚಕ ಬ್ರಾಹ್ಮಣರಿಂದ ಪೂಜಾಮಂತ್ರಗಳನ್ನು ಹೇಳಿಸುವರು. ಬಳಿಕ ಅರ್ಚಕರು ವೈದಿಕಮಂತ್ರೋಚ್ಚಾರಣಪೂರ್ವಕವಾಗಿ ಸರ್ವರಿಗೂ ಪ್ರಸಾದವನ್ನು ಕೊಡುವರು. ಈ ಅರ್ಚಕರು ಶ್ರೀ ಕೇದಾರಸಿಂಹಾಸನಾಧಿಪತಿಗಳಿಂದಲೇ ನಿಯಮಿಸಲ್ಪಟ್ಟವರಾಗಿರುವರು. ಈ ಕೇದಾರೇಶ್ವರ ಮಧ್ಯಮೇಶ್ವರ ಗುಪ್ತಕಾಶೀ ವಿಶ್ವನಾಥಮಂದಿರಗಳಲ್ಲಿ ಮಾಹೇಶ್ವರಗಣಂಗಳ ಹೊರತಾಗಿ ಬೇರೆ ಯಾರೂ ಪೂಜಿಸಲು ಅಧಿಕಾರವಿಲ್ಲ. ಸಂಪ್ರದಾಯವೂ ಕಾಣುವದಿಲ್ಲ. ಯಾವಾಗಲೂ ದಕ್ಷಿಣದಿಂದ ಬಂದ ಮಾಹೇಶ್ವರ (ಜಂಗಮ) ಸಾಂಪ್ರದಾಯಿಕ ಬ್ರಾಹ್ಮಣರೇ ಪೂಜಿಸುತ್ತಿರುವರು. ಹೀಗೆಯೇ ಉಖಾಮಠದಲ್ಲಿರುವ ಜಗದ್ಗುರುಗಳ ಸಮಾಧಿ (ಓಂಕಾರೇಶ್ವರ) ನಾಮಕಲಿಂಗಮೂರ್ತಿಯ ಮಂದಿರದಲ್ಲಿಯೂ ದಾಕ್ಷಿಣಾತ್ಯಲಿಂಗಧಾರಿಬ್ರಾಹ್ಮಣರೇ ಪೂಜಿಸುವರು. ಕೇದಾರಪೀಠಾಧಿಪತಿಗಳು ಈ ಮಠದಲ್ಲಿದ್ದಾಗ್ಗೆ ಪ್ರದೋಷಕಾಲದಲ್ಲಿ ನಿತ್ಯವೂ ಈ ಓಂಕಾರೇಶ್ವರನ ದರ್ಶನಕ್ಕೆ ತಪ್ಪದೆ ಬರುವರು. ಇನ್ನು ಓಂಕಾರವು ಅ+ಉ+ಮ್ ಎಂಬ ಅಕ್ಷರತ್ರಯವುಳ್ಳದ್ದಾಗಿರುವದರಿಂದ ಸುಪ್ರಭೇದಾದ್ಯಾಗಮೋಕ್ತ ಕೃತ (ಸತ್ಯ) ಯುಗೀಯ ಏಕತ್ರ್ಯಕ್ಷರಾಚಾರ್ಯರ ನಾಮವು ತ್ರ್ಯಕ್ಷರವೆಂತಲೇ ಇರುವದರಿಂದ ಓಂಕಾರ (ತ್ರ್ಯಕ್ಷರ) ಗಳ ಅರ್ಥವು ಅನ್ವರ್ಥವಾಗಿ ವದು. ಮತ್ತು ಸತ್ಯಯುಗದಲ್ಲಿ ಆಗಿರುವ ಸೂರ್ಯವಂಶೀಯ ಮಾಂಧಾತೃ ಚಕ್ರವರ್ತಿಯು ಈ ತ್ರ್ಯಕ್ಷರ (ಓಂಕಾರ) ಶಿವಾಚಾರ್ಯರನ್ನು ಶರಣುಹೊಂದಿ ಶಿವಜ್ಞಾನವಂ ಪಡೆದಿರುವನು ಈ ಬಗ್ಗೆ ಕೇದಾರಖಂಡದಲ್ಲಿಯೂ ಉಲ್ಲೇಖವಿದೆ. ಅದರಂತೆ ಹಸ್ತಗಳಂ ಜೋಡಿಸಿಕೊಂಡು ಮಾಂಧಾತನೆಂಬ ಮಹಾರಾಜನು ಆಚಾರ್ಯವರ್ಯನನ್ನು ಪೂಜಿಸಿ ಸಿದ್ಧಿಯನ್ನು ಪಡೆದನೆಂಬುದನ್ನು ಸೂಚಿಸುವ ಮಾಂಧಾತಮೂರ್ತಿಯೂ ಇದಕ್ಕೆ ದೃಷ್ಟಾಂತವಾಗಿದೆ. ಇನ್ನು ಕೃತಯುಗೀಯಮೂಲತ್ರ್ಯಕ್ಷರಾಚಾರ್ಯರು ದ್ರಾಕ್ಷಾರಾಮಕ್ಷೇತ್ರೀಯ ಶ್ರೀ ರಾಮನಾಥ ಲಿಂಗದಿಂದಾವಿರ್ಭವಿಸಿ ಶಕ್ತಿವಿಶಿಷ್ಟಾದ್ವೈತ ಮತಸ್ಥಾಪಕರಾಗಿ ಈ ಕೇದಾರಸಿಂಹಾಸನವನ್ನಲಂಕರಿಸಿ ತಮ್ಮ ಪಾರಂಪರ್ಯವನ್ನು ಸ್ಥಿರಗೊಳಿಸಿ ಅದೇ ಲಿಂಗದಲ್ಲಿ ಡಗಿದರೆಂದು ವೀರಪ್ರಭೇದ ಸ್ವಯಂಭುವಾದಿ ಶಿವಶ್ರುತಿಗಳಲ್ಲಿ ಉಲ್ಲೇಖವಿರುವದರಿಂದ ಇದು ಮತ್ತೊಬ್ಬತ್ರ್ಯಕ್ಷರ (ಓಂಕಾರ) ಶಿವಾಚಾರ್ಯರ ಸಮಾಧಿಯಾಗಿರಬೇಕು. ಅಸ್ತು! ಈ ಕೇದಾರೇಶ್ವರನ ಮಂದಿರದ ಹಿಂದೆ ಪೂರ್ವದಿಕ್ಪಾರ್ಶ್ವದಲ್ಲಿ ಶ್ರೀ ಕೇದಾರಸಿಂಹಾಸನಮಠವು ವಿರಾಜಿಸುತ್ತಲಿರುವುದು.

ಈ ಮಠಾಂಗಣದ ಒಂದು ಭಾಗದಲ್ಲಿ ಬಹು ಪ್ರಾಚೀನವಾದ ಏಕೋರಾಮಾಚಾರ್ಯರ ಶಿಷ್ಯರ ಸಮಾಧಿಯು ಇರುವುದು. ಇದು ಬಹು ಜಾಗರೂಕಸ್ಥಾನವಾಗಿದೆ. ನಿತ್ಯದಲ್ಲಿ ಅರ್ಚನವಾಗುತ್ತದೆ. ಮತ್ತು ಈ ಮಠವು ಕೆಳಗಿನ ಭಾಗದಲ್ಲಿ ಬಹು ಪ್ರಾಚೀನವಾಗಿ ತೋರಿದರೂ ಭೂಕಂಪಾದಿಗಳಿಂದ ಕೆಲವು ಭಾಗಗಳು ಬಿದ್ದುಹೋಗಿ ಹೊಸದಾಗಿರುವದು. ಗುಹೆಯೊಳಗಿಂದ ನಂದಿಮುಖದ್ವಾರಾ ಸರಸ್ವತಿಯ ಒಂದು ಶಾಖೆಯು ಮಠದಲ್ಲಿ ಬಂದಿರುವದು. ಈ ಮಠದ ಒಂದು ಭಾಗದಲ್ಲಿಯೇ ಮೋಟಿ[illegible]ಖಾನೆ ವಗೈರೆ ಯಾವತ್ತು ಸಿಬ್ಬಂದಿಯ ಕೋಣೆಗಳು ಇರುವವು. ಪಶ್ಚಿಮಭಾಗದಲ್ಲಿ ನೂತನವಾಗಿ ರಚಿಸಲ್ಪಟ್ಟ ಮತ್ತೊಂದು ಮಠವು ಇರುವದು. ಈ ಕೇದಾರಪೀಠಾಧಿಪತಿಗಳು ಪೂರ್ವದಲ್ಲಿ ೧೨ ತಿಂಗಳು ಇಲ್ಲಿಯೇ ವಾಸಿಸುತ್ತಿದ್ದರೆಂತಲೂ ಬೇಕಾದಾಗ ದಕ್ಷಿಣದೇಶೋದ್ಧಾರಕ್ಕಾಗಿ ವಿಜಯಂಗೈಯ್ಯುವದಾದರೆ ಉಷಾದೇವಿ ನಿರ್ಮಿತ ಉಖಾಮಠದಲ್ಲಿ ವಾಸಿಸುತ್ತಿದ್ದರೆಂತಲೂ ಹೇಳಬಹುದಾಗಿದೆ. ಆದರೆ ಈ ಕೇದಾರದ ೨ ಮಠಗಳು ಚಳಿಗಾಲ, ಉಷ್ಣಗಾಲ ನಿಮಿತ್ತವಾಗಿ ರಚಿಸಲ್ಪಟ್ಟಿರುವವೆಂದು ಹೇಳುವದು ಯುಕ್ತವಾಗಿತೋರುತ್ತದೆ. ಈ ಎರಡೂ ಮಠಗಳ ಪ್ರಾಚೀನತೆಗೆ ಇನ್ನೂ ಕೆಲವು ಪ್ರಮಾಣಗಳಿರುವುವು. ವ್ಯಾಸನಿರ್ಮಿತ ಸ್ಕಾಂದಪುರಾಣಾಂತರ್ಗತ ಕೇದಾರಖಂಡದಲ್ಲಿ ಉಭಯ ಮಠಗಳ ವರ್ಣನವೂ ಇರುವದು. ಮತ್ತು ಈ ಮಠಗಳಲ್ಲಿ ಘಂಟಾಕರ್ಣ ಮಹಾಮುನಿ ಗಣೇಶನು ವಾಸಿಸುತ್ತಿದ್ದನೆಂದು ಉಲ್ಲೇಖವಿದೆ. ಮತ್ತು ವ್ಯಾಸಮುನಿಯು ಕಾಲದಲ್ಲಿ ಈ ಕೇದಾರಪೀಠದಲ್ಲಿ ಘಂಟಾಕರ್ಣಶಿವಾಚಾರ್ಯರೇ ಶೋಭಿಸುತ್ತಿದ್ದು ಮುನಿಗೆ ಶಿವಜ್ಞಾನೋಪದೇಶವನ್ನು ಮಾಡಿದರೆಂದು ಕೇದಾರಖಂಡದಲ್ಲಿ ಉಕ್ತವಾದ "**ಘಂಟಾಕರ್ಣೋ ಮುನಿಸ್ತತ್ರ ಸದ್ಯಃ ಪ್ರತ್ಯಯಕಾರಕಃ**" ಎಂಬ ಶ್ಲೋಕದಿಂದಲೂ ಪೀಠದಲ್ಲಿರುವ **ವ್ಯಾಸಪ್ರತಿಮೆ**ಯಿಂದಲೂ ಸಿದ್ಧವಾಗುತ್ತದೆ. ಏವಂ ವ್ಯಾಸಕಾಶೀಕ್ಷೇತ್ರದಲ್ಲಿ ಹಾಗೂ ಅವಿಮುಕ್ತ ವಾರಾಣಸೀ ಗಂಗಾತೀರದಲ್ಲಿಯೂ ವ್ಯಾಸೇಶ್ವರ (ವಿಶ್ವೇಶ್ವರ) ಸನ್ನಿಧಿಯಲ್ಲಿ ಬೃಹತ್ಪೀಠದಲ್ಲಿ [illegible]ಮುದ್ರಾಧರ ಜಟಾಮಕುಟಾದಿ ಶಿವಯೋಗಿಚಿಹ್ನ ಧಾರಿತ ಘಂಟಾಕರ್ಣ ಗಣೇಶ್ವರಮೂರ್ತಿಯು ದೃಷ್ಟಾಂತವೂ ಈ ಸಂದರ್ಭಕ್ಕೆ ಸಹಾಯಕವಾಗುತ್ತದೆ. ಅರ್ಥಾತ್ ಅನೇಕಾನೇಕ ಶಿವಮುನಿಗಳಿಗೂ ಚಕ್ರವರ್ತಿವೃಂದಕ್ಕೂ ಘಂಟಾಕರ್ಣಶಿವಾಚಾರ್ಯರು ಶಿವಲಿಂಗೋಪದೇಶವಂ ಮಾಡಿರುವರೆಂಬುದು ಸಿದ್ಧವಾಗುತ್ತದೆ. ಹೀಗೆ ಶಿವಗಣಚಕ್ರವರ್ತಿಗಳಿಂದ ಅಲಂಕೃತವಾದ ಈ ಕೇದಾರಪೀಠವು ಈಗಲೂ ವೀರಶೈವಾಚಾರ್ಯ ಸಾಂಪ್ರದಾಯಿಕ ಮಠವಾಗಿರುವದೆನ್ನುವದು ಅತ್ಯಾನಂದದಾಯಕವಾದ ಸಂಗತಿಯಾಗಿದೆ. ಸದ್ಯ ಕರ್ಣಾಟದೇಶೀಯ ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯರು ಈ ಪೀಠವನ್ನಲಂಕರಿಸಿರುವದರಿಂದ ವಿಶೇಷವಾಗಿ ಈ ಪೀಠವು ಕರ್ಣಾಟಕದಲ್ಲಿ ಬಹು ಶ್ರೇಷ್ಠತ್ವವಂ ಪಡೆದಿರುವುದು. ಇನ್ನು ಈ ಕೇದಾರೇಶ್ವರ ಮಂದಿರ ಹಾಗೂ ಮಠ ಇವುಗಳು ಸಮುದ್ರತಲದಿಂದ ೧೧೦೦೦ ಹನ್ನೊಂದು ಸಾವಿರ ಅಡಿಗಳ ಎತ್ತರದಲ್ಲಿವೆ. ಇಲ್ಲಿ ಪಂಡಾಜನರಮನೆಗಳೂ ಧನವಂತರು ತಯಾರಿಸಿದ ಧರ್ಮಶಾಲೆಗಳೂ ರಾಜರು ತಯಾರಿಸಿದ ಧರ್ಮಶಾಲೆಗಳೂ ಕಾಲೀಕಮಲಿ ಧರ್ಮಶಾಲೆಯೂ ಸದಾವರ್ತಿಗಳೂ ಹಂಗಾಮಿ ಪೋಷ್ಟ ಆಫೀಸು, ಪೋಲೀಸ್ ಚೌಕಿ ಮುಂತಾದ ನಾಗರಿಕ ಪಟ್ಟಣ ಪ್ರಬಂಧವು ಯಾತ್ರಿಕರ ಹಿತಾರ್ಥವಾಗಿರುತ್ತದೆ. ಶ್ರೀ ಕೇದಾರಮಂದಿರದ ಗರ್ಭಗುಡಿಯ ಮೇಲುಭಾಗದಲ್ಲಿ ಉನ್ನತವಾದ ಶಿಲಾಶಿಖರವಿರುವದು. ಅದರ ಮೇಲುಭಾಗದಲ್ಲಿ ಬಂಗಾರದ ಕಲಶಗಳಿರುವವು. ೧ ತ್ರಿಶೂಲವಿರುವದು. ಶಿಖರದ ಕೆಳಭಾಗದಲ್ಲಿ ಪೂರ್ವಭಾಗದ ಗೌರ್ಯಾದಿ ನಂದಿಗಣವಿರುವ ಮಧ್ಯರಂಗದ ಪ್ರಥಮ ಬಹಿರ್ಭಾಗದಲ್ಲಿಯೇ ಸಿಂಹಾಕಾರವು ದಕ್ಷಿಣ ದಿಙ್ಮುಖವಾಗಿರುವದು ಅದರ ಮುಂಭಾಗದ ಕಟ್ಟಡವು ಲೋಹದ ತಗಡುಗಳಿಂದ ರಚಿಸಲ್ಪಟ್ಟು ಸುತ್ತಲು ಭಿತ್ತಿಗಳೆಲ್ಲವೂ ಎಲ್ಲಕಡೆಗೂ ಶಿಲಾನಿರ್ಮಿತಗಳಾಗಿರುವವು. ಇಲ್ಲಿ ಇನ್ನೂ ಅನೇಕಾನೇಕ ಮಹತ್ವಬೋಧಕ ವಿಷಯಗಳಿರುವವು. ಕೇದಾರಮಂದಿರ ಈಶಾನ್ಯದಿಗ್ಭಾಗದಲ್ಲಿ ಈಶಾನ್ಯಲಿಂಗವೆಂಬ ಈಶ್ವರಲಿಂಗವಿದೆ. ಈ ಮೂರ್ತಿಯು ಕೇದಾರೇಶ್ವರ ಪ್ರದಕ್ಷಿಣದೊಳಗೆ ಬರುವದು. ಕ್ರಮಶಃ ಪುನಃ ಪ್ರಕಾಶಮಾಡುವೆವು.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ !!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವೋನಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲಾ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.**

[4] ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ). **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ.

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0. [4]

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ಕಾಗಿ ಈ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಔಷಧಸೇವೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ **"ಆರೋಗ್ಯಚಂದ್ರಿಕೆ"** ಯೆಂಬ ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಆರೋಗದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ, ಆರೋಗ್ಯಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ **ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಪೇಟ್ರಿಯಟ್"** ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"ಆನರಬಲ್ **ಡಾಕ್ಟರ್ ಯು. ರಾಮರಾವ್** ಮತ್ತು ಅವರ ಮಕ್ಕಳು **ಡಾಕ್ಟರ್ ಯು. ಕೃಷ್ಣರಾವ್** ಎಂ. ಬಿ. ಬಿ. ಎಸ್. ಇವರಿಬ್ಬರು ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾ[illegible]ಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಚುರವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ರೈಲುಸ್ಟೇಷನುಗಳಲ್ಲಿರುವ ಮೆಸರ್ಸ್ **ಹಿಗ್ಗಿನ್ ಬಾಥಮ್ಸ್** ಕಂಪೆನಿಯವರ ಬುಕ್‌ಸ್ಟಾಲ್‌ಗಳಲ್ಲೆಲ್ಲಾ ನಮ್ಮ ಸಂಚಿಕೆಗಳು ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[10] **ಮ್ಯಾನೇಜರ್, ಆರೋಗ್ಯಚಂದ್ರಿಕೆ,** 323, ತಂಬುಶೆಟ್ಟಿ ಬೀದಿ, **ಮದರಾಸು.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ, ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂಧ, ತಾಲೀಮಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೇರಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಶರಿ, ಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ವಾಸಬಾರದಿರೋಣ, ದಟ್ಟಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [8]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಿಗಾ ಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ...×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೪ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಅಲ್ಪಬೆಲೆ ! ಅಧಿಕ ಲಾಭ !!

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕದ್ದಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[1] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೬೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಪೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೮ ಆಣೆ. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[10] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಸೆಪ್ಟಂಬರ್ ೧೯೨೯ [ಸಂಚಿಕೆ ೧೮.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದ್ದಾಗಿದೆ.

ಶ್ರೀ ಜಗದ್ಗುರು ರೇಣುಕ ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [21]

ಎಂ. ಎಸ್. ಗಂಗಂಣ ಮತ್ತು ಲೋಕಂಣ

ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಧರ್ಮಾರ್ಥ ಶಿವದೀಕ್ಷಾ ಸಂಸ್ಕಾರ.

ಬಳ್ಳಾರಿ ಡಿ|| ಹೂವಿನಹಡಗಲಿ ತಾಲೂಕು ಪೈಕಿ ದೇವಗೊಂಡನಹಳ್ಳಿ ಗ್ರಾಮದ ನಿವಾಸಿಗಳಾದ ವೇ|| ಮಠದ ಗವಿಯಯ್ಯನವರು ಇದೇ ಶುಕ್ಲನಾಮ ಸಂ|| ರದ ಶ್ರಾವಣ ಶುದ್ಧ ೧೪ ಚಂದ್ರವಾರ ಶುಭಮುಹೂರ್ತದಲ್ಲಿ ಸ್ಥಳಪರಸ್ಥಳದ ೮ ಜನ ಮಾಹೇಶ್ವರ ವಟುಗಳಿಗೆ ಶಿವದೀಕ್ಷಾಕಾರ್ಯವನ್ನು ಮಾನಿಹಳ್ಳಿ ಪರವರ್ಗಮಠದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಮಳೇಸ್ವಾಮಿಗಳವರ ಸನ್ನಿಧಿಯಲ್ಲಿ ಬನ್ನಿಕಲ್ಲು ವೇ|| ಕೊಟ್ರಪ್ಪಶಾಸ್ತ್ರಿಗಳವರಿಂದ ವಿಧ್ಯುಕ್ತಪ್ರಕಾರ ನೆರವೇರಿಸಿದರು. ತರುವಾಯ ಭೂರುದ್ರಗಣಮಹಾಸಮಾರಾಧನೆಯೂ ಸಾಯಂಕಾಲ 7 ಗಂಟೆಯಿಂದ 12 ಗಂಟೆಯವರೆಗೆ ಶ್ರೀಗಳವರ ಮಹೋತ್ಸವವೂ ಅತ್ಯಂತ ಸಂಭ್ರಮದಿಂದ ಜರುಗಿದವು. ಇವರಿಗೆ ಶ್ರೀ ಪರಶಿವನು ನಿತ್ಯಸುಖವನ್ನೀಯಲೆಂದು ಹಾರೈಸುತ್ತೇವೆ. ಮಾಹೇಶ್ವರವಟುಗಳು.

ದುಃಖವಾರ್ತೆ.

ಮೈಸೂರಿನ ರಿಟೈರ್ಡ್ ಸಿಟಿಮ್ಯಾಜಿಸ್ಟ್ರೇಟರಾದ ವೇ|| ಬಿ. ಬಸವಾರಾಧ್ಯ ಬಿ.ಎ.,ಬಿ.ಎಲ್. ರವರು 1-2 ವರ್ಷಗಳಿಂದ ಲಘು ಪಾರ್ಶ್ವವಾಯುವಿನಿಂದ ಪೀಡಿತರಾಗಿದ್ದು ಕಳೆದ ತಿಂಗಳು 30 ನೆಯ ತಾರೀಖು ಶುಕ್ರವಾರ ರಾತ್ರಿ ಬೆಂಗಳೂರು ಬಸವನಗುಡಿಯಲ್ಲಿರುವ ತಮ್ಮ "ಅಂಬಿಕಾವಿಲಾಸ" ಬಂಗಲೆಯಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಈ ದುಃಖವಾರ್ತೆಯು ಮೈಸೂರು ಮೊದಲಾದ ಸ್ಥಳಗಳಿಗೆ ಮುಟ್ಟಿದ ಕೂಡಲೆ ಆರಾಧ್ಯಮಾಹೇಶ್ವರರೆಲ್ಲರಿಗೂ ಇಷ್ಟಮಿತ್ರರಿಗೂ ಹಾಗೂ ಇವರ ಬಂಧುವರ್ಗದವರೆಲ್ಲರಿಗೂ ಅತ್ಯಂತ ದುಃಖವನ್ನುಂಟುಮಾಡಿತು. ಇವರ ತಂದೆಯವರು ಅಲ್ಪಸಂಬಳದಿಂದ ಮೈಸೂರಿನಲ್ಲಿ ವಾಸಮಾಡಿಕೊಂಡು ತಮ್ಮ ಮೂರುಜನ ಗಂಡುಮಕ್ಕಳುಗಳಿಗೂ ವಿದ್ಯಾಭ್ಯಾಸಮಾಡಿಸುವದು ಕಷ್ಟವಾದ್ದರಿಂದ ಹಾಲಿ ಮೈಸೂರು ಡೆಪ್ಯುಟಿಕಮಿಷನರಾಗಿರುವ ಸರ್ದಾರ್ ಎಂ. ಎನ್. ಬಾಳರಾಜೇ ಅರಸಿನವರ ಪಿತಾಮಹರ ಸಹಾಯದಿಂದ ಶ್ರೀ|| ಬಸವಾರಾಧ್ಯರು ಬಿ.ಎ. ಪ್ಯಾಸ್ ಮಾಡಿದರು. ಇವರ ಶಕ್ತಿ ಮತ್ತು ಮೇಧಾವಿಗೆ ಸಂತೋಷಪಟ್ಟು ಕೈ|| ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಲೇಟ್ ದಿವಾನ್ ಸರ್ದಾರ್ ಎಂ. ಕಾಂತರಾಜೆ ಅರಸಿನವರಿಗೆ ಇಂಗ್ಲಿಷ್ ಪಾಠಹೇಳಲು ಗೊತ್ತು ಮಾಡಿದರು. ಮೇಲ್ಕಂಡ ಮಹನೀಯರ ಸಹಾಯದಿಂದ ಮದರಾಸಿಗೆ ಹೋಗಿ ಬಿ. ಎಲ್. ಪರೀಕ್ಷೆಯನ್ನು ಓದಿ ಬಂದರು. ಆಗ ಆರಾಧ್ಯಮಾಹೇಶ್ವರರಲ್ಲಿ ಮಾತ್ರವೇ ಅಲ್ಲ! ಇಡೀ ಲಿಂಗಧಾರಿಗಳಲ್ಲಿ ಇವರೇ ಲಾ ಪರೀಕ್ಷೆಯನ್ನು ಓದಿದವರಲ್ಲಿ ಮೊದಲನೆಯವರಾಗಿದ್ದರು. ಕೆಲವುಕಾಲ ಮೈಸೂರಿನಲ್ಲಿ ಅಡ್ವೋಕೇಟರಾಗಿ ಕೆಲಸಮಾಡುತ್ತಿದ್ದರು. ಲೇಟ್ ದಿವಾನ್ ರಂಗಾಚಾರ್ಯರವರು ಇವರಲ್ಲಿ ತುಂಬಾ ವಿಶ್ವಾಸವಿಟ್ಟುಕೊಂಡಿದ್ದುದರಿಂದ ಇವರನ್ನು ಕೂಡಲೆ ಮುನಸೀಫರಾಗಿ ತೆಗೆದುಕೊಂಡರು. ಕೆಲವುಕಾಲ ಛೀಫ್‌ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರಾಗಿಯೂ, ಆಮೇಲೆ ಸಬ್‌ಡಿವಿಜನ್ ಆಫೀಸರಾಗಿಯೂ ಇದ್ದು ಕೊನೆಗೆ ಮೈಸೂರಿನಲ್ಲಿ ಸಿಟಿಮ್ಯಾಜಿಸ್ಟ್ರೇಟರಾಗಿದ್ದು ಅನಂತರ ರಿಟೈರಾದರು. ಇವರು ಇಂಗ್ಲಿಷ್ ಒಂದರಲ್ಲೇ ಅಲ್ಲ, ಕನ್ನಡ, ಸಂಸ್ಕೃತಗಳಲ್ಲಿಯೂ ಒಳ್ಳೆ ಪಂಡಿತರಾಗಿದ್ದರು. ತಮ್ಮ ಅಂಬಿಕಾವಿಲಾಸ ಗ್ರಂಥಮಾಲೆಯಲ್ಲಿ ಪೂರ್ವಗ್ರಂಥಗಳನ್ನು ಪರಿಶೋಧಿಸಿ ಪದ್ಮರಾಜಪುರಾಣ, ಕರ್ಣಾಟಕ ಶಿವಗೀತೆ, ಷಡಕ್ಷರಕಂದ ಮೊದಲಾದ 10-15 ಗ್ರಂಥಗಳನ್ನು ಪ್ರಸಿದ್ಧಪಡಿಸಿರುವರು. ಪ್ರಸಿದ್ಧವಾದ ಶ್ರೀಕರಭಾಷ್ಯಾದಿ ಗ್ರಂಥಗಳನ್ನು ಒಳಗೊಂಡ ಆರಾಧ್ಯಧರ್ಮೋಜ್ಜೀವಿನ ಮಾಸಪತ್ರಿಕೆಗೆ ಮುಖ್ಯಸಂಪಾದಕರಾಗಿಯೂ ಇದ್ದರು. ಟೆಕ್ಸ್ಟ್‌ಬುಕ್ ಕಮಿಟಿ ಮೆಂಬರಾಗಿಯೂ, ಪರೀಕ್ಷಕರಾಗಿಯೂ, ಮೊದಲು ನಡೆದ ಬೆಂಗಳೂರು ವೀರಶೈವಮಹಾಸಭೆಯ ಮುಖ್ಯ ಚಾಲಕರಲ್ಲೊಬ್ಬರಾಗಿಯೂ ಇದ್ದುದಲ್ಲದೆ, ಲಿಂಗಾಯಿತ ಎಜ್ಯುಕೇಷನಲ್ ಫಂಡಿನ ಸೆಕ್ರಿಟರಿಗಳಾಗಿದ್ದು ಎಲ್ಲಾ ವೀರಶೈವರ ಸಂಗಡಗಳವರಿಂದಲೂ ಫಂಡನ್ನು ಕೂಡಿಸಿ ಅದನ್ನು ಅಭಿವೃದ್ಧಿಗೆ ತಂದವರಲ್ಲಿ ಇವರೇ ಮೊದಲನೆಯವರು. ರಿಟೈರಾದಮೇಲೆ ಕೇವಲ ಶಿವಯೋಗಾನಂದವೈಭವದಲ್ಲೇ ಕಾಲ ಕಳೆಯುತ್ತಿದ್ದರು. ದೇಹಸಾರ್ಥಕತೆಗೋಸ್ಕರ ದೇಶಸೇವೆ ಮತ್ತು ಮತಸೇವೆಯನ್ನು ಮಾಡಲು ಉದ್ದೇಶಿಸಿ ಮೈಸೂರು ಸಿಟಿಯ ವೈಸ್‌ಪ್ರೆಸಿಡೆಂಟರಾಗಿಯೂ ಕೆಲವುಕಾಲ ಕೆಲಸಮಾಡಿದರು. ಅಖಿಲಭಾರತೀಯ ಆರಾಧ್ಯಬ್ರಾಹ್ಮಣ ಮಹಾಸಭಾ ಮತ್ತು ಕೆರಗೋಡು ಸಂಸ್ಥಾನದ ಶ್ರೀಮಠದ ಶ್ರೀ ಜಗದಾರಾಧ್ಯ ಚೈತನ್ಯವಿಲಾಸ ಲೈಬ್ರರಿಗೂ ಆಜೀವಸಭಾಧ್ಯಕ್ಷರಾಗಿ ಇದ್ದರು. ನಮ್ಮ ಬಾಲಕರುಗಳನ್ನು ನಮ್ಮ ಪೂರ್ವಜರಂತೆ ವಿದ್ಯಾವಂತರನ್ನಾಗಿ ಮಾಡಿಸಿ ಅಭಿವೃದ್ಧಿಗೆ ತರಬೇಕೆಂದು ಕೈ|| ಫಸ್ಟ್‌ಗ್ರೇಡ್ ಪ್ಲೀಡರ್ ಎಂ ಮಲ್ಲಾರಾಧ್ಯರವರ ಸಲಹೆಯನ್ನೇ ಅನುಸರಿಸಿ ಮೈಸೂರು ಮಹಾ ರಾಜಧಾನಿಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಲು ಏರ್ಪಾಡುಮಾಡಿ 500 ರೂಪಾಯಿಗಳನ್ನು ದಾನ ಮಾಡಿದರು. ಇನ್ನೂ ಮುಂದುವರಿದು ಕೆಲಸ ಮಾಡುವಷ್ಟರಲ್ಲೇ ನಮ್ಮ ದೌರ್ಭಾಗ್ಯದಿಂದ ಪಾರ್ಶ್ವವಾಯು ಪೀಡಿತರಾಗಿ ಈಗ್ಗೆ 2-3 ವರ್ಷದಿಂದಲೂ ತುಂಬಾ ಕಷ್ಟವನ್ನನುಭವಿಸುತ್ತಿದ್ದರು. ನಾನು ನಾಲ್ಕೈದುವರ್ಷ ಬೆಂಗಳೂರಿಗೆ ಹೋಗಿ ದರ್ಶನ ಮಾಡಿದಾಗ ಪುಸ್ತಕಗಳ ಕಡೆಗೂ, ತಮ್ಮ ಸಂಸಾರ ವ್ಯವಹಾರದ ಕಡೆಗೂ ಕೈತೋರಿಸಿ ಹಣೆಯನ್ನು ಬಡಿದುಕೊಂಡು ಕಣ್ಣಿನಲ್ಲಿ ನೀರನ್ನು ಸುರಿಸಿದರು. ನನ್ನಲ್ಲಿ ಅವರು ಸಂಪೂರ್ಣವಾದ ವಿಶ್ವಾಸವನ್ನೂ ನಂಬಿಗೆಯನ್ನೂ ಇಟ್ಟುಕೊಂಡಿದ್ದರೆಂಬುವದಕ್ಕೆ ಅವರು ಏರ್ಪಾಡುಮಾಡಿ ಹೋಗಿರುವ ಕೆಲಸಕಾರ್ಯಗಳನ್ನು ಬಿಡದೆ ಮುಂದುವರಿಸಲು ಪಾಡುಪಡುತ್ತಿರುವದೇ ಸಾಕ್ಷಿಯಾಗಿದೆ. ಅಂತಪ್ಪ ಆಶ್ರಯದಾತರನ್ನು ಕಳೆದುಕೊಂಡೆನೆಂಬ ದುಃಖವು ನನ್ನನ್ನು ಬಾಧಿಸುತ್ತದೆ. ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೂ ಇವರ ಪತ್ನೀಪುತ್ರಾದಿ ಬಂಧುವರ್ಗದವರಿಗೆ ಸೌಖ್ಯವನ್ನೂ ಕೊಟ್ಟು ಕಾಪಾಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ಪಂಡಿತ ಕೆ. ಸಿ. ನಂಜುಂಡಾರಾಧ್ಯ,
ವೈಸ್‌ಪ್ರೆಸಿಡೆಂಟ್,
ಅಖಿಲಭಾರತೀಯ ಆರಾಧ್ಯಬ್ರಾಹ್ಮಣ ಮಹಾಸಭಾ,
ಮೈಸೂರು

ಎಲ್ಲಾ ರಾಜ್ಯಗಳೊಳಗೂ ಕಾರೀಗಾರರು ವಿಮಾನಯಂತ್ರಗಳನ್ನು ಹಕ್ಕಿಪಕ್ಷಿಗಳು ರೆಕ್ಕೆಗಳು ಬಿಟ್ಟುಕೊಂಡು ಹಾರಾಡುವ ಆಕೃತಿಯಲ್ಲಿ ತಯಾರುಮಾಡುತ್ತಾರೆ. ಜರ್ಮನಿಯವರಾದರೋ ವಿಮಾನಗಳನ್ನು ಭಾರೀ ಆಕಾಶಬುಟ್ಟಿಗಳಂತೆ ಕಟ್ಟುವರು. ಇಂಜಿನ್ ಸಹಾಯದಿಂದ ಅವು ಅಂತರಿಕ್ಷದಲ್ಲಿ ಸಂಚಾರಮಾಡುತ್ತವೆ. ಜರ್ಮನಿಯವರು ಮೊನ್ನಿನ ಘೋರ ಯುದ್ಧಕಾಲದಲ್ಲಿ ಕೂಡ ಅಂಥಾ ವಿಮಾನ ಬುಟ್ಟಿಗಳನ್ನು ಕಟ್ಟಿ ಉಪಯೋಗಿಸಿದರು. ಆದರೆ ಅವು ಆಕಾರದಲ್ಲಿ ಗಾತ್ರವಾಗಿದ್ದುದರಿಂದ ಶತ್ರುಗಳು ಅವನ್ನು ಸುಲಭವಾಗಿ ಗುರಿಕಟ್ಟಿ ನಾಶಮಾಡಿದ್ದರಿಂದ ಆ ವಿಮಾನಗಳ ಸಹಾಯವು ಜರ್ಮನಿಯವರಿಗೆ ದೊರೆಯಲಿಲ್ಲ. ಈಚೆಗೆ ಅವರು ಅದೇ ತರದ ವಿಮಾನಗಳನ್ನು ಕಟ್ಟುತ್ತಿದಾರೆ. ಇವು ಪ್ರಯಾಣಕ್ಕೂ ವ್ಯಾಪಾರ ಸರಕನ್ನು ಹೆಚ್ಚಾಗಿ ಸಾಗಿಸುವುದಕ್ಕೂ ತುಂಬಾ ಅನುಕೂಲ. ಆದರೂ ಅವು ಅಂತರಿಕ್ಷದಲ್ಲಿ ಸಂಚರಿಸುವಾಗ್ಗೆ ವಿಶೇಷವಾದ ಗಾಳಿ ಮಳೆಗಳು ಹುಟ್ಟಿದರೆ ತಡೆದುಕೊಳ್ಳಲಾರವು. ಆಗ್ಗೆ ಅವನ್ನು ನಡಿಸುವವನು ಹತೋಟಿಯಲ್ಲಿಟ್ಟುಕೊಳ್ಳುವುದು ಪ್ರಯಾಸ. ಇಂಥಾ ಒಂದಾನೊಂದು ವಿಮಾನದ ಬುಟ್ಟಿಯು ಮೊನ್ನೆ ತಾನೇ 21 ದಿನಗಳಲ್ಲಿ ಪ್ರಪಂಚ ಆದ್ಯಂತವನ್ನೂ ಸುತ್ತಿಕೊಂಡು ಬಂದಿದೆ. 21 ದಿನಗಳು ಆದರೂ ಅದರಲ್ಲಿ ಅಲ್ಲಲ್ಲಿ ತಂಗಿದ್ದರಿಂದಲೇ ಒಂಭತ್ತು ದಿನಗಳು ಕಳೆದುಹೋದುವು. ಅಂದರೆ ಆ ವಿಮಾನದ ಬುಟ್ಟಿಯು ನಿಜವಾಗಿಯೂ 12 ದಿನಗಳಲ್ಲಿ ಪ್ರಪಂಚವನ್ನು ಸುತ್ತಿಬಂದಿದೆ ಎಂದು ಹೇಳಿಂದಾಯಿತು. ಇದುವರೆಗೆ ಇಷ್ಟು ಸ್ವಲ್ಪ ಕಾಲದಲ್ಲಿ ಯಾರೂ ಪ್ರಪಂಚವನ್ನು ಸುತ್ತಿಬಂದಿರಲಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶಿವದೀಕ್ಷಾಪ್ರಶಂಸೆ.

ಶ್ರೀ ಗುರುವರೇಣ್ಯನು ಶಿಶುವಿನ ಭವಿತವ್ಯವನ್ನರಿಯುವದಕ್ಕಾಗಿ ಗರ್ಭದ 8 ನೇ ತಿಂಗಳಲ್ಲಿಯಾಗಲಿ ಈಷತ್ ಪಕ್ಷ ಭೂಮಿಗೆ ಬಿದ್ದ ತರುವಾಯದಲ್ಲಿಯಾಗಲಿ ತನ್ನ ಕೃಪಾವಿಶೇಷದಿಂದ ಶಿಶುವಿಗೋಸ್ಕರ ಶಿವಲಿಂಗವನ್ನನುಗ್ರಹಿಸುವನು. ಗುರುಕೃಪೆಯಿಂದ ಶಿವಲಿಂಗವನ್ನು ಪಡೆದ ಆ ಶಿಶುವು ಆಗಲಿ "ವೀರಶೈವ" ವೆಂಬ ಅಭಿದಾನದಿಂದ ಪ್ರಸಿದ್ಧವಾಗುವದು. ವೀರಶೈವರಲ್ಲಿ ಭಕ್ತ ಮಾಹೇಶ್ವರರೆಂದು ಎರಡು ವರ್ಗಗಳಿರುವವು ಈ ದ್ವಂದ್ವಭಾಗಗಳು ಧರ್ಮಸ್ಥಾಪನಾಚಾರ್ಯರಾದ ಶ್ರೀಮದ್ರೇಣುಕಾದಿ ಪಂಚಾಚಾರ್ಯರಿಂದ ಸೃಷ್ಟ್ಯಾದಿಯಲ್ಲಿಯೇ ಮಾಡಲ್ಪಟ್ಟಿರುವವು. ಮಾಹೇಶನು ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಈ ಷಟ್ಕರ್ಮಗಳಲ್ಲಿ ಅಧಿಕಾರಿಯಾಗಿದ್ದು ಭಕ್ತನು ಅಧ್ಯಾಪನ, ಯಾಜನ, ಪ್ರತಿಗ್ರಹ ಈ ತ್ರಯಕರ್ಮಗಳಲ್ಲಿ ಅನಧಿಕಾರಿಯಾಗಿರುವನು. ಉಭಯವರ್ಗದವರಿಗೆ ಆಯಾ ಅಧಿಕಾರಗಳು ಪ್ರಾಪ್ತವಾಗಬೇಕಾದರೂ 8 ರಿಂದ 12 ವರ್ಷಗಳಲ್ಲಿ ಕನಿಷ್ಠಪಕ್ಷ 16 ವರ್ಷಗಳಲ್ಲಿ ಗುರುಕೃಪಾಪರಮಾವಧಿಯ ಒಂದು ವಿಶೇಷಸಂಸ್ಕಾರನಾಗಬೇಕಾಗುತ್ತದೆ. ಈ ಸಂಸ್ಕಾರಕ್ಕೇನೆ ಅಪ್ರಾಕೃತಧರ್ಮವಾದ ಶಿವದೀಕ್ಷೆ ಎಂದೆನ್ನುವರು. ಶಿವದೀಕ್ಷಾಸುಸಂಸ್ಕಾರದಲ್ಲಿ ಲಿಂಗಾಂಗಸಾಮರಸ್ಯಾಂತರಂಗಿತ ಮಹತ್ವವಿಷಯಗಳನ್ನು ತಮ್ಮ ತಮ್ಮ ಶಾಖಾನುವರ್ತಿಗಳಾದ ಸದ್ಗುರುಗಳಿಂದ ಪಡೆಯುವರು. ಲಿಂಗಧಾರಣ, ಶಿವದೀಕ್ಷಾ, ಚರಪಟ್ಟಾಧಿಕಾರ, ಅತ್ರಮಸ್ತೀಕಾರ ಮೊದಲಾದ ಶುಭಕರ್ಮಗಳು ಶ್ರೀಮತ್ಪಂಚಾಚಾರ್ಯರ ಪಂಚಕಲಶಯುಕ್ತವಾಗಿ ಸದ್ಗುರುಗಳ ಅಧ್ಯಕ್ಷತೆಯಲ್ಲಿ ಸಂಪೂರ್ತಿಯಾಗುವವು. ಶ್ರೀ ಗುರುವಿನ ಕೃಪಾರಸದಿಂದ ವೀರಶೈವನು ಶಿವದೀಕ್ಷೆಯನ್ನು ಹೊಂದಿದ್ದಾದರೆ ಅವನು ಮಾಂಸಪಿಂಡವನ್ನಳಿದು ಮಂತ್ರದೇಹಿಯಾಗುವನೆಂದು ಶ್ರುತಿಗಳ ಸಮ್ಮತವಿರುವದರಿಂದ ಶಿವದೀಕ್ಷಾಸಂಪನ್ನರಾಗಬೇಕೆಂದು ಇಚ್ಛೆಪಡುವದಕ್ಕಾಗಿ "ಶಿವದೀಕ್ಷಾಪ್ರಶಂಸ" ವೆಂಬ ಲೇಖವನ್ನು ಪ್ರಚಾರಪಡಿಸಲಾಗಿದೆ. ಕಲಿಕಾಲಮಹಾತ್ಮೆಯಿಂದ ಈಗ ಎತ್ತನೋಡಿದತ್ತ ದೀಕ್ಷಾವಿಹೀನತೆಯು ತೋರುವದರಿಂದ ವೀರಶೈವಸಮಾಜವು ವಿಷಮಾವಸ್ಥೆಯನ್ನು ಹೊಂದಿದೆ ಎಂದು ಹೇಳಬಹುದು. ಆದರೆ ವರ್ಣಾಶ್ರಮಗಳ ನಿಬಂಧನೆಯನ್ನು ಮೀರಿ ಆಚರಿಸುವ ದುರುಳವೇದಾಂತಿಗಳು ಪ್ರಜ್ವಲವಾಗುತ್ತ ನಡೆದರೆ ಸಂಸ್ಕೃತವಿದ್ಯೆಯ ಗಾಳಿಯು ಸೋಂಕದೆ ಇದ್ದರೆ, ಶಿವದೀಕ್ಷಾದಿ ಅಪ್ರಾಕೃತವಿಚಾರಗಳೇ ಲೋಪವಾಗಿ ವೀರಶೈವಧರ್ಮದಲ್ಲಿ ಅಂಗಾಂಗಳಗಳು ಮತ್ತಿಷ್ಟು ಪ್ರಬಲವಾಗುವವು. ಪರಂತು ಎಂದಿನವರೆಗೆ ವರ್ಣಾಶ್ರಮಗಳ ತಾರತಮ್ಯಗಳ ಸುಸಾರವಾಗಿ ನಡೆಯಲಾರರೋ ಎಲ್ಲಿಯವರೆಗೆ ಶಿವದೀಕ್ಷಾಸಂಸ್ಕಾರವನ್ನು ಪಡೆಯಲಾರರೋ ಅಲ್ಲಿಯವರೆಗೆ ವೀರಶೈವರು ಅಸ್ಪೃಶ್ಯದಿಂದಿರಬೇಕಾಗಿದೆ ಎಂದು ಬರೆಯಲು ವಿಷಾದಪಡಬೇಕಾಗಿದೆ. ಶಿವದೀಕ್ಷೆಯೆನ್ನುವದು ಸಾಧಾರಣವೇ? ಶಿವದೀಕ್ಷೆಯೇ ಭೋಗ ಮೋಕ್ಷಂಗಳ ತವರ್ಮನೆಯಾಗಿರುವದು. ಜ್ಞಾನಿಗಳೇ ಇದರ ಮರ್ಮವನ್ನು ಬಲ್ಲರು. ಮಹಾವಿರಕ್ತರಾದ ಅನಾದಿಕೋಟಿಯ ಸಿದ್ಧೇಶ್ವರರು ಗುರುವಿನ ಮಹತ್ವವನ್ನು ಗುರುವಿನಿಂದನುಗ್ರಹಿಸಲ್ಪಟ್ಟ ಶಿವಲಿಂಗಶ್ರೇಷ್ಠತ್ವವನ್ನು ಶ್ರೀಪಂಚಕಲಶಸ್ಥಾಪನಾವಿಷಯವನ್ನು ಹಾಗೂ ಶಿವದೀಕ್ಷಾಪ್ರಶಂಸೆಯನ್ನು ಚಿಕ್ಕ ಬಾಲಕನಿಗೂ ಕೂಡ ವೇದ್ಯವಾಗುವಂತೆ ಅಚ್ಚಗನ್ನಡದಲ್ಲಿ "ಶ್ರೀಗುರುವು ಶಿವಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿಸುವಲ್ಲಿ ಪರಮೇಶ್ವರನ ಪಂಚಮುಖವನ್ನೇ ಪಂಚಕಲಶವಾಗಿ ಮೂರ್ತಗೊಳಿಸಿ ಗಣಂಗಳು ಸಾಕ್ಷಿಯಾಗಿ ಕರಸ್ಥಲಕ್ಕೆ ಶಿವಲಿಂಗವನ್ನು ಕೊಟ್ಟು ಈ ಲಿಂಗವೇ ಗಂಡ ನೀನೇ ಹೆಂಡತಿ ಎಂದು ಹೇಳಿ ಲಲಾಟದಲ್ಲಿ ವಿಭೂತಿ ಪಟ್ಟವನ್ನು ಕಟ್ಟಿ ಹಸ್ತದಲ್ಲಿ ಕಂಕಣವ ಕಟ್ಟಿ ಪಾದೋದಕ ಪ್ರಸಾದವನಿತ್ತು ಎಂದೆಂದಿಗೂ ಸತಿಪತಿಭಾವ ತಪ್ಪದಿರಲಿ ಎಂದು ನಿರೂಪಿಸಿದನಯ್ಯ | ಶ್ರೀಗುರುವಿನ ಆ ನಿರೂಪವ ಮಹಾಪ್ರಸಾದವೆಂದು ಕೈ ಕೊಂಡೆನಯ್ಯ | ಇದು ಕಾರಣವಾಗಿಯಲ್ಲದೆ ಅನ್ಯವನರಿಯೆನಯ್ಯ ಮಹಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ" ಎಂದು ಜಗಜ್ಜಾಹೀರಮಾಡಿ ತಮ್ಮ ವಿರಕ್ತಪದ್ಧತಿಗನುಸಾರನಾಗಿ ಆಚರಿಸಿ ಕೀರ್ತಿಯನ್ನು ಪಡೆದು ಗುರುಭಕ್ತರು ಎಂಬ ಅಸಾಧಾರಣ ಅಭಿಧಾನವನ್ನು ಹೊಂದಿ ಮುಕ್ತರಾದರು. ಇಂಥ ವಿಭೂತಿಗಳು ಇನ್ನಿಷ್ಟು ಹೆಚ್ಚಲಿ! ಅನಂತಶ್ರುತಿಗಳು "ದೀಯತೇಚ ಯಯಾಜ್ಞಾನಂ ಕ್ಷೀಯತೇಚಮಲತ್ರಯಂ | ಸಾದೀಕ್ಷಾ ಸಂಜ್ಞಿತಾ ಶಸ್ತ್ರಾಂ ಗುರುದೀಕ್ಷಾ ಗುರುರ್ಮತಃ ||" ಎಂದು ಶಿವದೀಕ್ಷಾಪ್ರಭಾವವನ್ನು ಪ್ರಶಂಸಿಸುತ್ತಿರುವದರಿಂದಲೇ ಈಗಿನ ಧರ್ಮಸುಧಾರಕರು ದೀಕ್ಷಾಪದ್ಧತಿಗೆ ವೇದಕಾಲದ ಪದ್ಧತಿಯಂತೆ ಅತ್ಯಂತ ಮಹತ್ವವನ್ನು ಕೊಡುತ್ತಿದ್ದಾರೆ. ಇದು ಸ್ವಸ್ಥವೇ ಸರಿ! ನಿವೃತ್ತಿಮಾರ್ಗವಾದ ಶಿವದೀಕ್ಷೆಯ ಅವಧಿಯು ಕೆಲವರಿಗೆ ವಿನಾರಿದಂತಾಗಬಹುದು. ಆದರೂ ಅದಿಲ್ಲ. ಯಾಕೆಂದರೆ ಮಾನವ ಸನಯಪ್ರಮಾಣವು ಒಂದು ಶತಮಾನವಾಗಿದ್ದು ನಿದ್ರೆ, ದುಷ್ಟಟಿ ಲೋಗ, ಲೌಕಿಕವ್ಯವಹಾರ ಇವುಗಳಲ್ಲಿಯೇ ಕಳೆದು ಹೋಗುವದರಿಂದ ಇವನಿಗೆ ನಿಜಸುಖವು ದೊರೆಯುವ ಬಗೆಹೇಗೆ? ಭವಸರಾದ ಮುಕ್ತಿಯೆಂಬ ಸೌಖ್ಯವನ್ನು ಹೊಂದಬೇಕೆಂಬ ಆಸೆಯುಳ್ಳವನು ಸದ್ಗುರುವಿನಿಂದ ಶಿವದೀಕ್ಷೆಯನ್ನು ಹೊಂದುವದೇ ಇವನ ಆದ್ಯಕರ್ತವ್ಯವಾಗಿರುವದು. ಶಿವದೀಕ್ಷೆಯಿಲ್ಲದೆ ಶಿವಭಕ್ತರಾಗುವರೆಂದು ಅನ್ನಬಹುದು. ಇದು ಶಾಸ್ತ್ರಪ್ರಮಾಣವಾದ ಮಾತಲ್ಲವು ಯಾಕೆಂದರೆ ಶಿವದೀಕ್ಷೆಯಿಲ್ಲದೆ ಎಷ್ಟು ಶಿವಾರ್ಚನೆಮಾಡಿದರೇನು? ಶಿವದೀಕ್ಷೆಯಿಲ್ಲದೆ ಎಷ್ಟು ರುದ್ರಾಕ್ಷಿ ಧರಿಸಿದರೇನು? ಶಿವದೀಕ್ಷೆಯಿಲ್ಲದೆ ಎಷ್ಟೇ ಜಪ, ತಪ, ಹೋಮಾದಿಗಳನ್ನು ಮಾಡಿದರೇನು? ಎಲ್ಲವೂ ನಿಷ್ಫಲವಾಗುವವು. ಪಾಠಕಮಹಾಶಯರೇ. ಭಕ್ತ (ಶಿಷ್ಯ) ನಿಗೆ ಶಿವದೀಕ್ಷೆಯನ್ನನುಗ್ರಹಿಸಿ ಅವನನ್ನುದ್ಧರಿಸುವದು ಸದ್ಗುರುವಿನ ಕರ್ತವ್ಯವಾಗಿರುವದು. ತಮ್ಮ ತಮ್ಮ ಶಾಖಾನುವರ್ತಿಗಳಾದ ಗುರುಪುಂಗವರಿಂದ ಶಿವದೀಕ್ಷೆಯನ್ನು ಪಡೆದು ಧನ್ಯರಾಗುವ ಭಾರವು ಭಕ್ತರದಾಗಿರುವದು ಆದಕಾರಣ ಗುರುವರ್ಗ ಭಕ್ತವರ್ಗ ಈ ಉಭಯರೂ ಶಿವದೀಕ್ಷೆಯನ್ನು ಪ್ರಸಾರಮಾಡುವದಕ್ಕಾಗಿ ಜಾಗ್ರತರಾಗಬೇಕೆಂದು ನನ್ನ ಕೋರಿಕೆಯು. ನೈಜಾಮುಇಲಾಖಾಕೊಪ್ಪಳತಾಲೂಕಿಗೆ ಸೇರಿದ ಮುದ್ದಾಬಳ್ಳಿ ಗ್ರಾಮಕ್ಕೆ ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ ಶ್ರೀ 108 ಜಗದ್ಗುರು ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಸ್ವಾರಿಯು ದಯಮಾಡಿಸಿದ್ದ ವಿಷಯವು ವೇದ್ಯವಿರಬಹುದು. ಇದೇ ಗ್ರಾಮದ ವತನದಾರರಾದ ಶ್ರೀಮಂತ ವಿ|| ಪಾಟೀಲ ಯಜಮಾನ ಬಸವನಗೌಡರು ಶ್ರೀ ಜಗದ್ಗುರುಗಳ ಸ್ವಾರಿಯನ್ನು ಸ್ವಗೃಹಕ್ಕೆ ಬರಮಾಡಿಕೊಂಡು ಪೂಜ್ಯಪಾದರ ಸಾನ್ನಿಧ್ಯದಲ್ಲಿ ವೈದಿಕಮಂಡಳಿಯೊಡನೆ ಪರಮಗುರುವಾದ ರೇಣುಕರ ಶಾಖಾನ್ವಯಶಿಷ್ಯರಾದ ಇವರು ಮತ್ತು ಇವರ ಮಕ್ಕಳೂ, ವಯೋವೃದ್ಧರೂ ತಪೋವೃದ್ಧರೂ ಆದ ಮಂಗಳೂರು ಅರಳಿಲಿ ಬೃಹನ್ಮಠಾಧ್ಯಕ್ಷ ಷ|| ಬ್ರ|| ಶ್ರೀ|| ಪಟ್ಟದಸ್ವಾಮಿಗಳವರಿಂದ ವೇದೋಕ್ತವಾಗಿ ಶಿವದೀಕ್ಷಾಸಂಸ್ಕಾರವನ್ನು ಪಡೆದರೆಂದು ತಿಳುಹಿಸಲು ಪರಮ ಸಂತೋಷವಾಗುತ್ತದೆ. ಮತ್ತು ಇದೇ ಶ್ರಾವಣ ಶು|| 13 ರವಿವಾರ ಗಣಪತಿಪೂಜಾ ಸ್ವಸ್ತಿವಾಚನ ಮಂಟಪದೇವತಾಪ್ರತಿಷ್ಠಾ ಇತ್ಯಾದಿ ಶಿವದೀಕ್ಷಾಕಾರ್ಯಗಳು ಜರುಗಿ ಮರುದಿವಸ ಶು|| 14 ಚಂದ್ರವಾರ ಭಗವತ್ಪಾದ ಜಗದ್ಗುರುಗಳ ಪೂಜಾನಂತರ ಗಣಾರಾಧನೆ ನಡೆಯಿತು. ಪಾಟೀಲರವರು ಮಹಾದಾಚಾರ್ಯರ ಪಾದಕ್ಕೆ 5-5|| ತೊಲಿ ಭಂಗಾರದ ತೀರ್ಥದ [illegible] ಅರ್ಪಿಸಿ ಫಲಾಶೀರ್ವಾದವನ್ನು ಪಡೆದು ವೈದಿಕ [illegible] ಶಿವದೀಕ್ಷಾಸ್ಮಾರಕವಾಗಿ ಶ್ರೀ [illegible] ಪ್ರಭಾ" ಪತ್ರಿಕೆಯ ಪೋಷಣಾರ್ಥವಾಗಿ [illegible] ಗಳನ್ನು ವೇ|| ಗುರುವೃಷಭಶರ್ಮಾ ಹಿರೇಮಠ ಇವರ ಸ್ವಾಧೀನಕ್ಕೆ ಒಪ್ಪಿಸಿದರು. ಇದೇ ಪ್ರಕಾರ ಶಿವದೀಕ್ಷಾಸಂಸ್ಕಾರಹೊಂದಬೇಕೆಂಬ ಆಸೆಯು ಪ್ರತಿಯೊಬ್ಬರಲ್ಲಿ ಅಂಕುರಿಸಲೆಂದೂ ಶಿವದೀಕ್ಷೆಯನ್ನು ಪಡೆದ ಮಹಾಶಯರಿಗೆ ಆಯುರಾರೋಗ್ಯಾದಿಗಳು ಬೆಳೆಯಲೆಂದೂ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ.

ಶಿವಯ್ಯ ಹಿರೇಮಠ ಆಶ್ಯಂಗ್ ಸ್ಕೂಲಮಾಸ್ತರ
ಕಾಸರಕಿ ಗೊಂಡಬಾಳ.

ವಿಭೂತಿ.

ವಿಭೂತಿರ್ಭಸಿತಂ ಭಸ್ಮಕ್ಷಾರಂರಕ್ಷೇತಿಭಸ್ಮನಃ |
ಏತಾನಿಪಂಚನಾಮಾನಿಹೇತುಭಿಃ ಪಂಚಭಿರ್ಧ್ರುವಂ ||

ಭಸ್ಮವು ಅಣಿಮಾದ್ಯಷ್ಟೈಶ್ವರ್ಯ ಸಿದ್ಧಿಗೆ ಕಾರಣವಾಗಿರುವದರಿಂದ ವಿಭೂತಿ ಎಂತಲೂ, ಶಿವತತ್ವವನ್ನು ಪ್ರಕಾಶಪಡಿಸುವದರಿಂದ ಭಸಿತವೆಂತಲೂ, ಮನೋವಾಕ್ಕಾಯಗಳಿಂದ ಹುಟ್ಟುವ ಪಾಪಗಳನ್ನು ಸುಡುವದರಿಂದ ಭಸ್ಮವೆಂತಲೂ, ತಾಪತ್ರಯಗಳಿಂದ ಜನಿಸುವ ವಿಪತ್ತುಗಳನ್ನು ನಾಶಗೊಳಿಸುವದರಿಂದ ಕ್ಷಾರವೆಂತಲೂ, ಗ್ರಹಯಕ್ಷಾದಿಗಳ ಭಯವಿಲ್ಲದಂತೆ ಕಾಪಾಡುವದರಿಂದ ರಕ್ಷೆಯೆಂತಲೂ ಐದು ಪ್ರಕಾರವಾಗಿರುವದು. ಈ ಭಸ್ಮವು ಕಲ್ಪವೆಂತಲೂ, ಅನುಕಲ್ಪವೆಂತಲೂ, ಉಪಕಲ್ಪವೆಂತಲೂ, ಅಕಲ್ಪವೆಂತಲೂ ನಾಲ್ಕು ವಿಧವಾಗಿ ತಂತ್ರಜ್ಞರಿಂದ ನಿಶ್ಚಯಿಸಲ್ಪಟ್ಟಿರುವದು. ಇವುಗಳಲ್ಲಿ ಮೊದಲನೆಯದಾದ ಕಲ್ಪಭಸ್ಮವೇ ಉತ್ತಮವಾದದ್ದು. ಈ ಭಸ್ಮವು ದೊರೆಯದ ಪಕ್ಷದಲ್ಲಿ ಉಳಿದ ಮೂರು ವಿಧವಾದ ಭಸ್ಮಗಳು ಅಂಗೀಕರಿಸತಕ್ಕವುಗಳಾಗಿರುತ್ತವೆ. ನಂದಾದಿಧೇನುಗಳಿಂದುತ್ಪನ್ನವಾದ ಪವಿತ್ರವಾದ ಗೋಮಯವನ್ನು ಸದ್ಯೋಜಾತಮಂತ್ರದಿಂದ ತೆಗೆದುಕೊಂಡು ವಾಮದೇವಮಂತ್ರದಿಂದ ಉಂಡೆಯನ್ನು ಮಾಡಿ ತತ್ಪುರುಷಮಂತ್ರದಿಂದ ಒಣಗಿಸಿ ಶಿವಮಂತ್ರದಿಂದ ಸಂಸ್ಕರಿಸಿ ವಿರಜಾಗ್ನಿಯಲ್ಲಿ ಅಘೋರಮಂತ್ರದಿಂದ ಬೇಯಿಸಿದ ಭಸ್ಮವೇ ಕಲ್ಪಭಸ್ಮವು ಅರಣ್ಯದಲ್ಲಿ ಒಣಗಿದ ಗೋಮಯವನ್ನು ತಂದು ಪುಡಿಮಾಡಿ ಮೊದಲಿನಂತೆ ಶಿವಾಗ್ನಿಯಿಂದ ಬೇಯಿಸಲ್ಪಟ್ಟ ಭಸ್ಮವೇ ಅನುಕಲ್ಪಭಸ್ಮವು. ಅಂಗಡಿ ಮೊದಲಾದ ಸ್ಥಳಗಳಲ್ಲಿರುವ ಭಸ್ಮದ ಉಂಡೆಗಳನ್ನು ತಂದು ಪುಡಿಮಾಡಿ ವಸ್ತ್ರದಿಂದ ಶೋಧಿಸಿ ಮುಂದೆ ಗೋಮೂತ್ರದಿಂದ ತೋಯಿಸಿ ಉಂಡೆಯನ್ನು ಮಾಡಿ ಅನಂತರ ಮೊದಲಿನಂತೆ ಶಿವಾಗ್ನಿಯಿಂದ ಬೇಯಿಸಲ್ಪಟ್ಟ ಭಸ್ಮವೇ ಉಪಕಲ್ಪಭಸ್ಮವು ಮಂತ್ರಹೀನರಿಂದ ಸಂಪಾದಿಸಲ್ಪಟ್ಟ ಭಸ್ಮವೇ ಅಕಲ್ಪಭಸ್ಮವೆನಿಸುವದು. ಸ್ನಾನಕಾಲದಲ್ಲಿ ನಿರ್ಮಲೋದಕದಿಂದ ಹಸ್ತಪಾದಾದಿಗಳನ್ನು ತೊಳೆದುಕೊಂಡು ಭಸ್ಮಸ್ನಾನವನ್ನು ಮಾಡುತ್ತೇನೆಂದು ಸಂಕಲ್ಪಿಸಿ ಪ್ರಾಣಾಯಾಮತ್ರಯಮಂ ಮಾಡಿ ಅನಂತರ ಭಸ್ಮವನ್ನು ತೆಗೆದುಕೊಂಡು ಪೂಜಿಸಿ ಧರಿಸಿಕೊಳ್ಳತಕ್ಕದ್ದು. ಜಲಸ್ನಾನವನ್ನು ಮಾಡಿದಮೇಲೆ ಯಾವನು ನಿತ್ಯದಲ್ಲಿಯೂ ಭಸ್ಮಸ್ನಾನವನ್ನು ಮಾಡುವನೋ ಅವನು ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ, ಸನ್ಯಾಸಿಯಾಗಲಿ, ಸರ್ವಪಾಪಗಳಿಂದ ಬಿಡಲ್ಪಟ್ಟವನಾಗಿ ಸದ್ಗತಿಯನ್ನು ಹೊಂದುತ್ತಾನೆ. ಎಂಬ ಶ್ರುತಿಯಾಕಾರದ ಪ್ರಮಾಣದಿಂದ ಜಲಸ್ನಾನವನ್ನು ಮೊದಲು ಮಾಡಬೇಕೆಂದು ಸಿದ್ಧವಾಗುವದು. ಈ ಶ್ರೇಷ್ಠವಾದ ಭಸ್ಮವನ್ನು ಧರಿಸುವ ಕ್ರಮವು ಹೇಗೆಂದರೆ

ಮಧ್ಯಾಂಗುಲಿತ್ರಯೇಣೈವ ಸ್ವದಕ್ಷಿಣಕರಸ್ಯತು |
ಷಡಂಗುಲಾಯತಂಮಾನಮಾಪಿನಾಲಕಮಾನತಃ ||

ಎಂಬ ಪ್ರಮಾಣಾನುಸಾರವಾಗಿ ತರ್ಜನಿ, ಮಧ್ಯಮ, ಅನಾಮಿಕೆ ಈ ಮೂರು ಬೆರಳುಗಳಿಂದ ಆರು ಅಂಗುಲ ದೀರ್ಘವಾಗಿ ಧರಿಸಬೇಕು.

ಭಸ್ಮವಿಲ್ಲದ ಹಣೆಯನ್ನೂ, ಶಿವಾಲಯವಿಲ್ಲದ ಗ್ರಾಮವನ್ನೂ, ಶಿವಾರ್ಚನೆಯಿಲ್ಲದ ಜನ್ಮವನ್ನೂ, ಶಿವವಿಷಯಕವಿಲ್ಲದ ವಿದ್ಯೆಯನ್ನೂ, ಸುಡು ಎಂದು ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿರುವದು. ಆದಕಾರಣ ಈಶ್ವರನ ಸ್ಮರಣಮಂತ್ರದಿಂದಲೇ ಹೇಗೆ ಪಾಪವು ನಾಶವಾಗುವದೋ ಹಾಗೆಯೇ ಈ ಭಸ್ಮಧಾರಣಮಾತ್ರದಿಂದಲೇ ಪಾಪವು ನಾಶವಾಗುತ್ತದೆ. ಭಸ್ಮವನ್ನು ಧರಿಸಿರುವ ಶಿವಭಕ್ತನನ್ನು ನೋಡಿ ಯಾರು ಸಂತೋಷಪಡುವರೋ ಅವರು ದೇವತೆಗಳಿಂದಲೂ, ದಾನವರಿಂದಲೂ, ಮುನಿಶ್ರೇಷ್ಠರಿಂದಲೂ, ಪೂಜಿಸಿಕೊಳ್ಳುವದಕ್ಕೆ ಅರ್ಹರಾಗುತ್ತಾರೆಂದು ಶಾಸ್ತ್ರಗಳು ಸಾರುತ್ತವೆ. ಭಸ್ಮರುದ್ರಾಕ್ಷಿಗಳನ್ನು ಧರಿಸದೆ ಶಿವನನ್ನು ಪೂಜಿಸಿದ್ದಾದರೆ ಶಿವನು ಅವನಿಗೆ ಯಾವ ವಿಧವಾದ ಫಲವನ್ನೂ ಕೊಡುವದಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರು ಪರಮಪವಿತ್ರವಾದ ಭಸ್ಮದಲ್ಲಿ ಭಕ್ತಿಯನ್ನಿಟ್ಟು ಧರಿಸಿ ಧನ್ಯರಾಗಬೇಕೆಂದು ಆಶಿಸುತ್ತೇನೆ.

ದೇವರಗಿರಿಮಠದ ಸಿದ್ಧಲಿಂಗಶರ್ಮಾ

ಸನ್ಮಾನಸಮಾರಂಭ ಸಭಾ.

ಬಳಗಾನೂರು.

ಶ್ರೀಮಂತ ವೀರಪ್ಪನ್ನ [illegible] ಗದಗ ಇವರಿಗೆ ರಾವ್ ಸಾಹೇಬ್ ಪದವಿಯು ಪ್ರಾಪ್ತವಾದ ಸಂತೋಷವನ್ನು ಸೂಚಿಸುವದಕ್ಕೋಸ್ಕರ ಗದಗ ತಾ|| ಬಳಗಾನೂರು ಗ್ರಾಮನಿವಾಸಿಗಳು ತಮ್ಮ ಗ್ರಾಮದಲ್ಲಿ ತಾ|| 15-8-29 ನೆಯ ದಿವಸ ಸಭೆಯನ್ನು ನೆರವೇರಿಸಿದರು. ಸದರಿ ಸಭೆಗೆ ಸರಕಾರಿ ಅಧಿಕಾರಿಗಳೂ ಸಭ್ಯಗೃಹಸ್ಥರೂ, ಲೋಕಲ್‌ಬೋರ್ಡ ಮೆಂಬರರೂ ಆಗಮಿಸಿದ್ದರು. ಸದರಿ ಸಭೆಯ ಅಧ್ಯಕ್ಷಸ್ಥಾನವನ್ನು ಗದಗ ತಾಲೂಕಿನ ಮ|| ಮಾಮಲೇದಾರ ಸಾಹೇಬರವರು ಅಲಂಕರಿಸಿದ್ದರು. ಆದಿಯಲ್ಲಿ ಧಾರವಾಡದ ವಕೀಲರು ರಾವಸಾಹೇಬರವರು ತಮ್ಮ ಜೀವಮಾನದಲ್ಲಿ ಬಹು ದಕ್ಷತೆಯಿಂದಲೂ, ಉತ್ಸಾಹದಿಂದಲೂ, ಲೋಕಹಿತದೃಷ್ಟಿಯಿಂದಲೂ ನಿಸ್ವಾರ್ಥಬುದ್ಧಿಯಿಂದಲೂ ಈವರೆಗೆ ಮಾಡಿದ ಅನೇಕಾನೇಕ ಸಾರ್ವಜನಿಕಕಾರ್ಯಗಳ ವಿಷಯವನ್ನು ಕುರಿತು ಮನೋಹರವಾದ ಭಾಷಣವನ್ನು ಮಾಡಿದರು. ಆ ಮೇಲೆ ಮಿ|| ಗೋವಿ ಅಡಿಟರ್ ಇವರು ರಾವ್ ಸಾಹೇಬರವರಲ್ಲಿ ಯಾವತ್ತು ಜನರು ಅನುಕರಣಮಾಡತಕ್ಕಂಥ ಶಾಂತಿ, ವಿವೇಕ, ನಿಸ್ವಾರ್ಥತೆ ಪ್ರಾಮಾಣಿಕತನ ಮೊದಲಾದ ಸರ್ವೋತ್ತಮಗುಣಗಳು ವಾಸಮಾಡಿಕೊಂಡಿರುವವೆಂದೂ ವ್ಯಕ್ತಪಡಿಸಿದರು. ಆಮೇಲೆ ಇನ್ನು ಕೆಲವರ ಭಾಷಣಗಳಾದವು. ಅನಂತರ ರಾವ್‌ಸಾಹೇಬರವರು ಈ ಸನ್ಮಾನಸಮಾರಂಭ ಸಭೆಯನ್ನು ನೆರವೇರಿಸಿದ ಮಹಾಶಯರನ್ನು ಅಭಿನಂದಿಸಿ ತಮಗೆ ಪ್ರಾಪ್ತವಾದ ಈ ಪದವಿಯು ತಮ್ಮ ದಕ್ಷತೆಯಿಂದ ಬಂದುದಲ್ಲವೆಂದೂ, ಇದಕ್ಕೆ ತಮ್ಮಗಳೆಲ್ಲರ ಪ್ರೀತಿಯೇ ಮುಖ್ಯ ಕಾರಣವೆಂದೂ ಭಾಷಣಮಾಡಿ ಸರ್ವರನ್ನೂ ಸಂತೋಷಗೊಳಿಸಿದರು. ಆ ಮೇಲೆ ಮ|| ಅಧ್ಯಕ್ಷಸಾಹೇಬರವರ ಸಮಯೋಚಿತವಾದ ಸುಶ್ರಾವ್ಯಭಾಷಣವಾಯಿತು. ಅನಂತರ ಸಭಿಕರಿಗೆ ಹಾರತುರಾಯಿಗಳು ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಅಂದಾನಪ್ಪ ಮಲ್ಲೇಶಪ್ಪ, ಅಂಗಡಿ.

ದಾನಪತ್ರವಿಷಯಕವಾದ ಕರಾರು, ಮೈಸೂರು.

ಸನ್ 1929 ನೆಯ ಆಗಸ್ಟು ಮಾಹೆ 31 ರಲ್ಲೂ ಮೈಸೂರು ಸಂತೇಪೇಟೆಯಲ್ಲಿರುವ ಕಾಡಬೆಟ್ಟರ ಮಗ ನಂದೀಬಸಪ್ಪನವರಿಗೆ ಮೈಸೂರು ವೀರಶೈವ ಸಜ್ಜನ ಮಹಸ್ಥರಾದ ಈ ಕೆಳಗೆ ರುಜುಮಾಡಿರುವ ಜನಗಳು ಬರೆಸಿಕೊಟ್ಟ ಚೀಟಿ ಅದಾಗಿ ನಾವುಗಳು ಈ ದಿನ ನಮ್ಮ ವೀರಶೈವ ಸಜ್ಜನ ಸಂಘದ ಫಂಡಿಗೆ ದಾನಶಾಸನದ ಮೂಲಕ ವಹಿಸಿಕೊಟ್ಟಿರುವ ಎರಡು ಸಾವಿರ ರೂಪಾಯಿಗಳನ್ನು ಅತ್ಯಂತ ವಿಶ್ವಾಸದಿಂದ ಸ್ವೀಕರಿಸಿ ಈ ದಿನ ಆ ದೊಬಲಗನ್ನು ನಿಮ್ಮ ಇಚ್ಛೆಯಂತೆ ಸಂಘದ ಜಮಾಖರ್ಚು ಪುಸ್ತಕದಲ್ಲಿ ಜಮಾಮಾಡಿದ್ದೇವೆ. ನಿಮ್ಮ ಧರ್ಮಶಾಸನದಲ್ಲಿ ನಮೂದಿಸಿರುವ ಮೇರೆ ಆ ದ್ರವ್ಯದಿಂದ ಬರುವ ವರಮಾನದಲ್ಲಿ ಅರ್ಧ ದೊಬಲಗನ್ನು ನಿಮ್ಮ ಅಣ್ಣನವರಾದ ರಾಮಣ್ಣನವರ ಮಗ ದಾನೀಬಸಪ್ಪನವರ ಹೆಸರಿನಲ್ಲಿ ಪ್ರತಿವರ್ಷವೂ ಅರ್ಹರಾದ ಜನರಿಗೆ ಬಟ್ಟೆಗಳನ್ನು ಕೊಡುವದಕ್ಕೂ ಉಳಿಕೆಯಾದರೆ ಅರ್ಹರಾದ ನಮ್ಮ ವಿದ್ಯಾರ್ಥಿಗಳಿಗೆ ಕೊಡುವುದಕ್ಕೂ ಉಳಿಕೆಯಾದ ಅರ್ಧ ವರಮಾನವನ್ನು ನಿಮ್ಮ ಅಣ್ಣನವರ ಹೆಣ್ಣುಮಕ್ಕಳು ಮುದ್ದಮ್ಮ ಮತ್ತು ಬಸಮ್ಮ ಇವರ ಅತ್ಯಾಂತಿಕೆಗೆಸ್ತ ಸ್ತ್ರೀವರ್ಗ ಭಾಗ್ಯವಿದಮಾನವರಲ್ಲಿ ನಮ್ಮಗಳಿಗೆ ಸೇರಿದ ಜಮೀನ್ ಮಠದ ಬೀದಿಯಲ್ಲಿರುವ ಶ್ರೀ ಕಪಿಲ ಮಲ್ಲಿಕಾರ್ಜುನಸ್ವಾಮಿ ಮಠದಲ್ಲಿ ನಡೆಯುವ ಗೌರಿಗಣಪತಿ ಪೂಜೆಗಳಿಗೂ ಗಣಪತಿ ಆರಾಧನೆಗೂ ಆರಾಧನೆಗೆ ಬರುವ ಸುವಾಸಿನಿಯರಿಗೆ ಬಾಗಿಣ, ಅರಿಸಿನ ಕುಂಕುಮಗಳನ್ನು ಕೊಡುವದಕ್ಕೂ ವಿನಿಯೋಗಿಸಲಾಗುತ್ತೆ. ಸದರಿ ಫಂಡಿನ ಆದಾಯವೆಲ್ಲಗಳನ್ನೆಲ್ಲಾ ನಮ್ಮ ಸಂಘಕ್ಕೆ ಸೇರಿದ ಜಮಾಖರ್ಚು ಪುಸ್ತಕದಲ್ಲಿಯೇ ಇಟ್ಟು ಪ್ರತಿ ಭಾದ್ರಪದ ಮಾಸದಲ್ಲಿ ಈ ಕಾರ್ಯಗಳು ತೀರಿದನಂತರ ಜಮಾಖರ್ಚು ಪಟ್ಟಿಯನ್ನು ತಯಾರುಮಾಡಿ ಅದರ ಕಾಪಿಯೊಂದನ್ನು ನಿಮ್ಮಲ್ಲಿಗೆ ಕಳುಹಿಸಿಕೊಡುತ್ತೇವೆ. ಮೂಲಧನವನ್ನು ಯಾವ ವಿಧದಲ್ಲಿಯೂ ಯಾವ ಕಾರ್ಯಕ್ಕೂ ಉಪಯೋಗಿಸದೆ ವರಮಾನವನ್ನು ಮೇಲ್ಕಂಡ ಉದ್ದೇಶಗಳಿಗೆ ಮಾತ್ರವೇ ಖರ್ಚುಮಾಡಲಾಗುತ್ತೆ. ಜಮಾಖರ್ಚುಪಟ್ಟಿಯನ್ನು ನೀವೇ ಆಗಲಿ ನಿಮ್ಮ ವಾರಸುದಾರರೇ ಆಗಲಿ ಯಾವಾಗಬೇಕಾದರೂ ಪಡೆಯಬಹುದು ಎಂಬದಾಗಿ ಬರೆಸಿಕೊಟ್ಟ ಚೀಟಿ.

ಚಿಕ್ಕಚಂದ್ರಯ್ಯ	ಎಂ. ಎಸ್. ವೀರಣ್ಣ
ನಾಗಣ್ಣ	Sangappa
ಯಜಮಾನ್ ಲಿಂಗಣ್ಣ.	ಎಂ. ಜಿ. ಭಟ್ಟಸ್ವಾಮಯ್ಯ
M. Basappa	ಬಿ. ನಾಗಪ್ಪ
ಬಿ. ವಿ. ರುದ್ರಪ್ಪ	M. P. Bhogiah

ಮೂಡಿಗೆರೆ ತಾಲ್ಲೂಕು ಚಿನ್ನಗದವಿಚಾರ.

ಇಲ್ಲಿ ಮಳೆಯು ಸಕಾಲಕ್ಕೆ ಸರಿಯಾಗಿ ಬಂದು ಭತ್ತದ ಪೈರುಗಳಿಗೆ ಅನುಕೂಲವಾಗಿರುತ್ತೆ. ಬಿತ್ತನೆಪೈರುಗಳು ಕೆಲವೆಡೆಗಳಲ್ಲಿ ಚನ್ನಾಗಿದೆ. ನಾಟಿಕೆಲಸಗಳು ಕ್ರಮವಾಗಿ ನಡೆದು ಪೂರೈಸುತ್ತಾ ಬಂದಿವೆ. ಮತ್ತು ದನಕರುಗಳಿಗೆ ಹುಲ್ಲು ಸಮೃದ್ಧಿಯಾಗಿದೆ. ಇದೇ ಊರಿಗೆ ಇಲ್ಲಿಯ ಪ್ರಜಾಪ್ರತಿನಿಧಿಸಭೆಯ ಮೆಂಬರೂ, ಡಿಸ್ಟ್ರಿಕ್ಟ್ ಬೋರ್ಡ ಮೆಂಬರೂ ಮೊಕ್ತೇಸರ್ ಪಟೇಲರೂ ಆದ ಮಿಸ್ಟರ್ ದ್ಯಾವಪ್ಪಗೌಡರೆಂಬುವರು ಒಂದು ವೈದ್ಯಶಾಲೆಯನ್ನು ತಮ್ಮ ಸ್ವಂತ ಖರ್ಚಿನಿಂದಲೇ ಕಟ್ಟಿಸಿದ್ದರ ಮೇಲೆ ಘನಸರ್ಕಾರದವರು ಇಲ್ಲಿಗೆ ಒಂದು ನೇಟಿವ್ ವೈದ್ಯಶಾಲೆಯನ್ನು ದಯಪಾಲಿಸಿದ್ದಾರೆ. ಈಗ ಬಂದಿರುವ ಡಾ|| ಚಕ್ರವರ್ತಿ ಎಸ್. ಗೋಪಾಲಾಚಾರ್‌ರವರು ತುಂಬಾ ಮುತುವರ್ಜಿ ವಹಿಸಿ ಕೆಲಸ ಮಾಡುತ್ತಾರೆ. ಮತ್ತು ಇವರಿಗೆ ಪ್ರಜೆಗಳ ಕಷ್ಟವನ್ನು ಪರಿಹಾರಮಾಡಲು ಬೇಕಾದ ಬುದ್ಧಿಶಕ್ತಿಗಳನ್ನು ಇನ್ನೂ ಹೆಚ್ಚಿಸಲೆಂದು ನಾವು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇವೆ. ಮತ್ತು ಇದಲ್ಲದೆ ಸದರಿ ಮಿ|| ದ್ಯಾವಪ್ಪಗೌಡರು ಒಂದು ಸ್ಕೂಲ್ ಕಟ್ಟಡವನ್ನೂ ಉಪಾಧ್ಯಾಯರ ವಾಸಕ್ಕೆ ಒಂದು ಮನೆಯನ್ನೂ ಡಾಕ್ಟರ್‌ರವರ ವಾಸಕ್ಕೆ ಒಂದು ಮನೆಯನ್ನೂ ಒಂದು ಸಿಮೆಂಟಿನ ಬಾವಿಯನ್ನೂ ಸಹ ತಮ್ಮ ಸ್ವಂತ ಖರ್ಚಿನಿಂದಲೇ ಕಟ್ಟಿಸಿಕೊಟ್ಟಿದ್ದಾರೆ. ಘನಹೊಂದಿದ ಸರ್ಕಾರದವರು ಪಾಠಶಾಲೆಯನ್ನೂ ಸಹ ದಯಪಾಲಿಸಿದ್ದಾರೆ. ಮಿ|| ದ್ಯಾವಪ್ಪಗೌಡರು ಈ ನಮ್ಮ ಮಲ್ನಾಡು ಪ್ರಜೆಗಳ ಏಳಿಗೆಗೆ ಪ್ರಜಾಪ್ರತಿನಿಧಿಸಭೆಯಲ್ಲೂ, ಡಿಸ್ಟ್ರಿಕ್ಟ್‌ಬೋರ್ಡ ಸಭೆಯಲ್ಲೂ ಸಹ ಕಷ್ಟಪಟ್ಟು ಏರ್ಪಾಡುಗಳನ್ನು ಮಾಡಿರುತ್ತಾರೆ. ಇವರು ಪ್ರಜಾಹಿತೈಷಿಗಳು ಮತ್ತು ದೇಶಬಂಧುಗಳು ಎಂಬಭಿದಾನಕ್ಕೆ ಅರ್ಹರಾಗಿರುತ್ತಾರೆ. ಇವರಿಗೆ ಪ್ರಜಾನುರಾಗವೂ ಪ್ರಜಾವಾತ್ಸಲ್ಯವೂ ನಿಜವಾಗಿಯೂ ಇದೆ ಎಂಬುದು ಮೇಲೆ ಹೇಳಿರುವ ಧರ್ಮಕಾರ್ಯಗಳಿಂದ ವ್ಯಕ್ತಪಡುವುದು. ಇವರು ಈ ಅನಾಗರೀಕರಾದ ಮಲ್ನಾಡುಪ್ರಜೆಗಳನ್ನು ಸದ್ಯದಲ್ಲೇ ನಾಗರೀಕರನ್ನಾಗಿ ಮಾಡಿ ವಿದ್ಯಾಭಿವೃದ್ಧಿ, ಕೈಗಾರಿಕೆ, ಕೃಷಿ ಮೊದಲಾದುವುಗಳನ್ನು ಹೆಚ್ಚಿಸಿ ಮಲ್ನಾಡನ್ನು ಮುಂದಕ್ಕೆ ಏಳಿಗೆಗೆ ತರುತ್ತಾರೆಂದು ನಾವು ಹಾರೈಸುತ್ತೇವೆ. ಶ್ರೀ ಜಗದ್ಗುರು ಪಂಚಾಚಾರ್ಯರು ಇವರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕೊಡಲೆಂದು ಹಾರೈಸುತ್ತೇವೆ.

ಸಿ. ಬಿ. ದೇವಪ್ಪ ಅಂಡ್ ಬ್ರದರ್ಸ್,
ಚಿನ್ನಗ.

ಶ್ರೀ ಜಗದ್ಗುರು ರೇಣುಕಾಚಾರ್ಯಾಃ ಪ್ರಸೀದಂತು.

ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ತಾಲ್ಲೋಕು ಆಡಳಿತಕ್ರಮ ಚಿಕ್ಕಮಗಳೂರು.

ಈ ಆಡಳಿತಕ್ರಮವು ಚಿಕ್ಕಮಗಳೂರು ಟವನ್ನಿನಲ್ಲಿ ತಾ|| 1-5-28 ರಲ್ಲಿ ಸ್ಥಾಪಿಸಲ್ಪಟ್ಟಿತು. ಈ ಆಡಳಿತಕ್ರಮದ ನಿಬಂಧನೆ ಪ್ರಕಾರ ಚಿಕ್ಕಮಗಳೂರು ಟವನ್ ಮತ್ತು ತಾಲ್ಲೋಕಿನ ಎಲ್ಲಾ ಗ್ರಾಮಗಳಲ್ಲಿಯೂ ಶ್ರೀ ಜಗದ್ಗುರು ಮಹಾಸಂಸ್ಥಾನಕ್ಕೆ ಸೇರಿದ ಶಿಷ್ಯಮಂಡಲಿಯ ಖಾನೇಷುಮಾರಿ ಲೆಕ್ಕವನ್ನು ಬರೆದು ದೀಪಾರಾಧನೆ ಕಾಣಿಕೆ ವಗೈರೆ ವಸೂಲಿಕ್ರಮವು ಅತಿ ಜಾಗ್ರತೆಯಾಗಿ ನಡೆಯಲು ಅನೇಕ ತೊಡಕುಗಳಿದ್ದಾಗ್ಯೂ ಈಗೀಗ ಮಹಾಜನಗಳಿಗೆ ಇದರ ವಿಚಾರವು ಅನುಕೂಲವಾದ ಮಾರ್ಗವೆಂದು ತಿಳಿದುಬರುತ್ತಾ ಇರುವುದರಿಂದ ಮುಂದೆ ಅನುಕೂಲಸ್ಥಿತಿಗೆ ಬರಬಹುದೆಂದು ಖಂಡಿತವಾಗಿಯೂ ನಿರೀಕ್ಷಿಸಲ್ಪಟ್ಟಿರುತ್ತೆ. ಒಟ್ಟು ಈ ಚಿಕ್ಕಮಗಳೂರು ತಾಲ್ಲೋಕಿನಲ್ಲಿ ಟವನ್ ಬಿಟ್ಟು ದಾಖಲೆ ಗ್ರಾಮಗಳಲ್ಲದೆ ಅಸಲಿಗ್ರಾಮಗಳು 232 ಇವೆ. ಟವನ್ ಮತ್ತು ಪ್ರತಿಯೊಂದು ಗ್ರಾಮದಲ್ಲಿಯೂ ಶ್ರೀ ಜಗದ್ಗುರು ಮಹಾಸಂಸ್ಥಾನಗಳಿಗೆ ಸಂಬಂಧಪಟ್ಟ ಶಿಷ್ಯಮಂಡಲಿಯು ಇರುತ್ತದೆ. ಆದಪ್ರಯುಕ್ತ ಪ್ರತಿಯೊಂದು ಗ್ರಾಮದಲ್ಲಿರುವ ಮಠಸ್ಥರು ಸರ್ವರೂ ಸೇರಿ ಈ ಆಡಳಿತದ ಕ್ರಮದ ನಿಬಂಧನೆಯ ಪ್ರಕಾರ ಅತಿ ಸುಲಭವಾಗಿರುವ ದೀಪಾರಾಧನೆ ಕಾಣಿಕೆ ವಗೈರೆ ವಸೂಲಿ ಕ್ರಮವನ್ನು ನಡೆಸುತ್ತಾ ಬರುವ ಭಾಗದಲ್ಲಿ ಸಾಲಿಯಾನ ಹತ್ತುಸಾವಿರ ರೂಪಾಯಿಗೆ ಕಡಿಮೆಯಿಲ್ಲದಂತೆ ಉತ್ಪತ್ತಿಯಾಗಬಹುದೆಂದು ಅಂದಾಜುಮಾಡಲ್ಪಟ್ಟಿರುತ್ತೆ. ವೃತ್ತಪತ್ರಿಕೆಯಲ್ಲಿ ಈ ರೀತಿಯಾಗಿ ಪ್ರಕಟಿಸಿ ಸಂತೋಷಪಡುವುದಕ್ಕಿಂತಲೂ, 1929-30 ನೇ ಸಾಲಿಗೆ ಅಂದರೆ 1930 ನೇ ಜೂನ್ ಅಖೈರೊಳಗೆ ಈ ಕಾರ್ಯವನ್ನು ಕಾರ್ಯತಃ ನಡೆಸಿ ಸರ್ವರೂ ಆನಂದಪಡಬೇಕಾಗಿ ನನ್ನ ಮುಖ್ಯವಾದ ಪ್ರಾರ್ಥನೆ ವಸೂಲಿ ಕ್ರಮವನ್ನು ಪ್ರತಿ ಸಾಲಿನಲ್ಲಿಯೂ ಜನವರಿ ಆರಾಯಿತು ಜೂನ್ ಅಖೈರೊಳಗೆ ನಡೆಸತಕ್ಕದ್ದಾಗಿರುತ್ತೆ. ಪೀಠಾಭಿಮಾನಿಗಳಾಗಿಯೂ, ಸಮಾಜಹಿತೈಷಿಗಳಾಗಿಯೂ ಇರುವ ಸರ್ವರೂ ಉದಾರವಾಗಿ ಈ ಕಾರ್ಯಕ್ಕೆ ನೆರವಾಗಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿಕೊಳ್ಳಬೇಕೆಂದು ಪ್ರಾರ್ಥನೆ. ವೃಥಾ ನಮ್ಮ ಪೀಠಗಳು ಅಭಿವೃದ್ಧಿಗೆ ಬರಬೇಕು. ನಿಮ್ಮ ಸಮಾಜ ಏಕಮತ್ಯಕ್ಕೆ ಬರಬೇಕು ಉದ್ಧಾರವಾಗಬೇಕು ಎಂದು ಹೇಳುವುದಕ್ಕಿಂತಲೂ ಕಾರ್ಯತಃ ಪ್ರತಿಯೊಬ್ಬರೂ ಭಿನ್ನಭೇದಗಳಿಗೆ ಅವಕಾಶಕೊಡದಂತೆ ಕೆಲಸಮಾಡುತ್ತಾ ಬಂದರೆ ಸರ್ವವೂ ಜಯಪ್ರದವಾಗುವುದೆಂದು ತಿಳಿದೇ ಇರುತ್ತೀರಿ. ಈ ಆಡಳಿತದ ಕ್ರಮದ ಮಸೂದೆ ಕಾನೂನುಗಳು ಪೀಠಗಳಿಗೆ ಸಂಬಂಧಪಟ್ಟ ಶಾಖಾ ಮಠಗಳ ಅಭಿವೃದ್ಧಿಗೂ ಸಮಾಜೋದ್ಧಾರಕ್ಕೂ ಅನುಕೂಲವಾಗುವಂತೆ ಏರ್ಪಡಿಸಲ್ಪಟ್ಟಿರುವುದರಿಂದ ಯಾವ ಅನಾನುಕೂಲವೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಆಡಳಿತಕ್ರಮದ ವಾರ್ಷಿಕ ಜನರಲ್ ಮೀಟಿಂಗು ಇದೇ ನವಂಬರ್ ತಿಂಗಳ ಕೊನೆಯ ವಾರದಲ್ಲಿ ಚಿಕ್ಕಮಗಳೂರು ಟವನ್ನಿನಲ್ಲಿ ನಡೆಯಲು ಏರ್ಪಾಡುಮಾಡಲ್ಪಡುತ್ತಲಿದೆ.

ಮಹಾಶಯರೆ, ಇದೇ ಸಂದರ್ಭದಲ್ಲಿ ತಮ್ಮಗಳಲ್ಲಿ ಅರಿಕೆಮಾಡಿಕೊಳ್ಳುವ ಅತ್ಯಂತ ಸಂತೋಷಕರವಾದ ವಾರ್ತೆಯನ್ನು ಕೇಳಿ ತಾವುಗಳು ಆನಂದಪಡದೆ ಇರಲಾರಿರಿ ಎಂದು ಪೂರ್ಣ ನಂಬಿರುತ್ತೇನೆ. ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸಂಸ್ಥಾನವು ಕಡೂರು ಡಿಸ್ಟ್ರಿಕ್ಟಿನಲ್ಲಿರುವುದು. ಅಲ್ಲಿನ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಸವಾರಿಯು ಬೀರೂರು ಮೊಕ್ಕಾಮಿನಲ್ಲಿರುವುದು ಸರ್ವವಿದಿತವಾಗಿರುವುದು. ಇಂಥಾದ್ದರಲ್ಲಿ ಈ ಡಿಸ್ಟ್ರಿಕ್ಟಿನ ಮುಖ್ಯಪಟ್ಟಣವಾದ ಚಿಕ್ಕಮಗಳೂರಿಗೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರನ್ನು ಬಿಜಯಮಾಡಿಸಿಕೊಂಡು ಸಮಸ್ತ ಶಿಷ್ಯಮಂಡಲಿಯು ಶ್ರೀ ಜಗದ್ಗುರು ಮಹಾಸ್ವಾಮಿಗಳವರ ದರ್ಶನಾಶೀರ್ವಾದವನ್ನು ಪಡೆದು ಗುರುಕೃಪೆಗೆ ಪಾತ್ರರಾಗತಕ್ಕ ಸಮಯವು ನಮ್ಮಗಳಿಗೆ ಈಗ ಒದಗಿರುವ ಸಮಯವೇ ಸುಸಮಯವೆಂದೂ ಪೀಠಗಳ ಅಭಿವೃದ್ಧಿಗೂ ಸಮಾಜದ ಏಕಮತ್ಯಕ್ಕೂ ಮೂಲಾಧಾರವೆಂದೂ ಹೇಳಿದರೆ ಅದೇನೂ ಅತಿಶಯೋಕ್ತಿಯಲ್ಲವು. ಈ ಚಿಕ್ಕಮಗಳೂರು ಮತ್ತು ಈ ತಾಲ್ಲೋಕಿನ ಎಲ್ಲಾ ಗ್ರಾಮಗಳಲ್ಲಿರುವ ವೀರಶೈವರು ಮತ್ತು ವೀರಶೈವ ಮತಾನುಯಾಯಿಗಳಾದ ಸಮಸ್ತ ಶಿಷ್ಯಮಂಡಲಿಯು ತಮ್ಮ ತಮ್ಮ ಶಕ್ತಿಮೀರಿ ಗುರುಕಾಣಿಕೆಯನ್ನು ಸಲ್ಲಿಸಿ ಪೀಠಗಳ ಏಳಿಗೆಗೂ ಸಮಾಜೋನ್ನತಿಗೂ ಅತ್ಯವಶ್ಯಕವಾದ ಒಂದು ದ್ರವ್ಯನಿಧಿಯನ್ನು ನಿರ್ಮಿಸಲು ಮಾರ್ಗಮಾಡಿಕೊಟ್ಟು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿ ಬ್ರಿಟಿಷ್ ಇಂಡಿಯಾಕ್ಕೇನೆ ಮಾದರಿಯನ್ನು ವ್ಯಕ್ತಪಡಿಸುವಿರೆಂದು ನಂಬಬಹುದಾಗಿದೆ. ಇದೇ ನಂಬಿಕೆಯನ್ನೇ ಸಾರ್ಥಕಪಡಿಸಲು ಈ ತಾಲ್ಲೋಕಿನ ಎಲ್ಲಾ ಶಿಷ್ಯಮಂಡಲಿಯು ಪೂರ್ಣಮನಸ್ಸು ಮಾಡುವುದಾದ ಪಕ್ಷದಲ್ಲಿ ಲಕ್ಷಾಂತರ ರೂಪಾಯಿ ಫಂಡನ್ನು ಶೇಖರಿಸಲು ಅಸಾಧ್ಯವೇನಿಸದು. ಆದಪ್ರಯುಕ್ತ ಸರ್ವರೂ ಏಕಮನಸ್ಕರಾಗಿ ಶಕ್ತಿಗನುಸಾರವಾಗಿ ಮುಂದಿನ ಕಾರ್ಯಕ್ಕಾರಂಭಿಸಿ ಪೂರ್ಣಗೊಳಿಸಿ ಆನಂದಪಡಿರಿ. ಸರ್ವರ ಉದ್ದೇಶವು ಹೀಗಿರುವುದೆಂದೇ ತಿಳಿದು ಈ ಮೂಲಕ ಮತ್ತೊಂದಾವರ್ತಿ ತಮ್ಮಗಳಿಗೆ ಕೇಳಿಕೊಳ್ಳುತ್ತೇನೆ.

30-8-29, Chikamagalur.

M. P. Chavadaiya,
Taluk Agent.
ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಠ.

ದುಃಖಪ್ರದರ್ಶನಕೂಟ, ಬಳ್ಳಾರಿ.

ತಾ|| 19-8-29 ರಲ್ಲಿ ಬಳ್ಳಾರಿಯ ವೀರಶೈವರಲ್ಲಿ ಪ್ರಮುಖರೂ ಸಮಾಜಹಿತೈಷಿಗಳೂ ಆದ ಹೀರದ ಕರಿಬಸಪ್ಪನವರು ತಮ್ಮ ಅಲ್ಪವಯಸ್ಸಿನಲ್ಲಿ ಅಂದರೆ 37 ನೆಯ ವರ್ಷದಲ್ಲಿ ಕೈಲಾಸವಾಸಿಗಳಾದುದಕ್ಕಾಗಿ ತಾ|| 25-8-29 ನೆಯ ಆದಿತ್ಯವಾರ ಸಾಯಂಕಾಲದಲ್ಲಿ ಹೀರದ ಸೂಗಮ್ಮನವರ ಚೌಕಿಯಲ್ಲಿ ಶ್ರೀಯುತ ವಿದ್ಯಾಪ್ರವರ್ಧಕ ತೊಗರಿ ವೀರಪ್ಪನವರ ಅಧ್ಯಕ್ಷತೆಯಲ್ಲಿ ಬಳ್ಳಾರಿಯ ಪುರನಿವಾಸಿಗಳ ದುಃಖಪ್ರದರ್ಶನಕೂಟವು ಜರುಗಿತು. ವೇ|| ಯಂ. ಮೂರ್ತಿನಾಥಶಾಸ್ತ್ರಿಗಳು, ವೇ|| ಪಿ. ಯಂ. ಸೋಮಶೇಖರಶಾಸ್ತ್ರಿಗಳು, ವೇ|| ವೈ. ನಾಗೇಶಶಾಸ್ತ್ರಿಗಳು, ಹಾಗೂ ಶ್ರೀಯುತ ಜೂಗಪ್ಪ, ಎಂ. ಎ. ಬಳ್ಳಾರಿಯ ಸಬ್‌ಮಾಜಿಸ್ಟ್ರೇಟ್ ಇವರು ಕೈ|| ಕರಿಬಸಪ್ಪನವರ ಜೀವನಚರಿತ್ರೆಯು ಮತ್ತು ಅವರ ಶಾಂತಸ್ವಭಾವ, ಸೌಜನ್ಯ, ಉದಾರತೆ, ಸೌಹಾರ್ದಭಾವ ಮೊದಲಾದ ಗುಣಗಳ ಬಗ್ಗೆ ಸಂಕ್ಷೇಪವಾಗಿ ಮಾತನಾಡಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಕೈ|| ಕರಿಬಸಪ್ಪನವರು ಸಮಾಜಸೇವೆಯಲ್ಲಿ ತನುಮನಧನಗಳನ್ನೇ ಅರ್ಪಿಸಿದ್ದರೆಂಬುದಕ್ಕೆ ಅವರು ಮದ್ರಾಸು ವೀರಶೈವ ವಿದ್ಯಾವರ್ಧಕಸಂಘದ ಕಾರ್ಯದರ್ಶಿಗಳಾಗಿಯೂ ಸಂಘದ ಫಂಡನ್ನು ಸಂಗ್ರಹಿಸುವದರಲ್ಲಿ ಅಡಿಯಾಳಾಗಿ ಕೆಲಸಮಾಡುವ ಉತ್ಸುಕತೆಯುಳ್ಳವರಾಗಿಯೂ ಇದ್ದುದಲ್ಲದೆ 25-30 ಸಹಸ್ರ ರೂಪಾಯಿಗಳ ಆಸ್ತಿಯನ್ನೇ ಮೂಲಧನವಾಗಿಟ್ಟು ತಮ್ಮ ಚೌಕಿಯಲ್ಲಿ ಸಂಸ್ಕೃತ ವೈದಿಕಪಾಠಶಾಲೆಯನ್ನು ಸ್ಥಾಪಿಸಿದ್ದುದೇ ನಿದರ್ಶನವೆಂದು ಹೇಳಿ ಇಂತಹ ಉತ್ಸಾಹ ತರುಣರನ್ನು ಕಳೆದುಕೊಂಡುದು ನಮ್ಮೆಲ್ಲರ ದೌರ್ಭಾಗ್ಯವೆಂದು ದುಃಖೋದ್ಗಾರವನ್ನು ತೆಗೆದರು. ಅನಂತರ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

ಬಳ್ಳಾರಿಯ ಪುರನಿವಾಸಿಗಳಾದ ವೀರಶೈವ ಸಮಾಜದವರಲ್ಲಿ ಮುಖಂಡರೂ, ಸಮಾಜಸೇವಾದುರಂಧರರೂ, ಮದ್ರಾಸು ವೀರಶೈವ ವಿದ್ಯಾವರ್ಧಕಸಂಘದ ಸೇವೆಯಲ್ಲಿ ಮುಂದಾಳುಗಳೂ ಆದ ಶ್ರೀಮಂತ ಹೀರದ ಕರಿಬಸಪ್ಪನವರು ತಾ|| 19-8-29 ರಲ್ಲಿ ಕೈಲಾಸವಾಸಿಗಳಾದುದಕ್ಕೆ ಈ ಸಭೆಯು ದುಃಖಪ್ರದರ್ಶನ ಮಾಡುವದಲ್ಲದೆ ಅವರ ಆತ್ಮಕ್ಕೂ ಅವರ ಕುಟುಂಬಕ್ಕೂ ಶಾಂತಿಯನ್ನುಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತದೆ ಎಂದು ವೇ|| ವಿದ್ವಾನ್ [illegible] ನಾಗೇಶಶಾಸ್ತ್ರಿಗಳು ಸೂಚಿಸಿ, ಮ|| ರಾ|| ಎಚ್. ರುದ್ರ [illegible] ಶ್ವರಪ್ಪನವರು ಅದನ್ನು ಅನುಮೋದಿಸಿದ ಮೇರೆಗೆ ಸರ್ವಾನುಮತದಿಂದ ಮುಂಬೂರಾಗಿ ಅದರ ಕಾಪಿಯನ್ನು ಅವರ ಕುಟುಂಬಕ್ಕೂ ಪತ್ರಿಕೆಗಳಿಗೂ ಕಳುಹಿಸಬೇಕೆಂದು ತೀರ್ಮಾನಿಸಲ್ಪಟ್ಟಿತು. ಈ ಸೂಚನೆಯು ಸಭೆಯ ಮುಂದೆ ಇಡಲ್ಪಟ್ಟನಂತರ ಸಭಿಕರು ಮೌನದಿಂದ ಎದ್ದುನಿಂತು ತಮ್ಮ ಅನುತಾಪವನ್ನು ಸೂಚಿಸುತ್ತಾ ಮೃತರ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಗೊಳಿಸಿದರು.

ಕೈ|| ಮ|| ರಾ|| ಹೀರದ ಕರಿಬಸಪ್ಪನವರ ಭಾವಚಿತ್ರವನ್ನು ಬರೆಯಿಸಿ ವಿದ್ಯಾವರ್ಧಕಸಂಘದ ಆಫೀಸಿನಲ್ಲಿ ಸ್ಥಾಪಿಸುವದಾಗಿ ವಿದ್ಯಾವರ್ಧಕಸಂಘದವರಿಗೆ ಈ ಸಭೆಯು ಸೂಚಿಸಿರುತ್ತದೆ.

ಕೈ|| ಹೀರದ ಕರಿಬಸಪ್ಪನವರ ಗುಣಗಾನಂ

ಕಂ|| ಭೂರಿಗುಣಮಂಡಿತಂ ಬ |
ಳ್ಳಾರಿಯ ವರವೀರಶೈವರೊಳ್ ಶಾಂತ್ರಮುಖಂ ||
ಚಾರುತರಚರಿತನಮಲಂ |
ಹೀರದ ಕರಿಬಸವನಾಮಕಂ ಶಿವಭಕ್ತಂ ||
ಘೋರಂ ಕೈಲಾಸಕೆ ಮರೆ |
ಯಾದಂ ಸತಿಪುತ್ರಮಿತ್ರನೇತ್ರಕೆ ಧರೆಯೊಳ್ |
ಆದುದುವಿಯೋಗಮೆಂದರ |
ಲಾದುಮುಮಿತಿಯಲ್ಲಿ ದಖಿಳಜನಕಂ ಪುರದೊಳ್ ||

ವೃ|| ಬಡವರ ಬಂಧು ಶಾಂತಿರಸಸಿಂಧು ಕೃಪಾಮಯನೆಂದು ಪಟ್ಟಣಂ | ಬಿಡದುರೆ ಬಣ್ಣಿಸುತ್ತಿರೆ ಸಮಾಜದಸೇವೆಗೆ ಮುಕ್ತ ಸಜ್ಜನಂ || ಮೃಡನಡಿಯಲ್ಲಿ ಶಾಂತವಡೆಯಂಮು ಶುಭೋಕ್ತಿಯ ಪೇಳೆಭಕ್ತನೇ || ನಡೆನಿನಸೋ ಸುರಾಧ್ವಕೆ ಪರಾತ್ಪರನಾಜ್ಞೆಯ ಮೀರಲಪ್ಪುದೇಂ ||

ಕಂ|| ಅಳಲಿಕ್ಕಗ್ಗತಲೆಯಿತ |
ನ್ನಳವೊಳಗೆಸೀಘ್ರದಿಂ ಸುಶಾಂತಿಯದೀಶಂ ||
ಬೆಳಗಿ ಕುಟುಂಬದ ಜನರೊಳ್ |
ಪಲಿದೋರುಗೆಪ್ಪಿಯಮೊಳಗೆ ಶಂಕರಕೃಪೆಯಿಂ ||
ತೊರೆದುಜಗತವನ ಜನರೊಳ್ |
ಬೆರದಂತಿಹದಲ್ಲಿ ಪರದೊಳುಂ ಪರಶಿವನೊಳ್ ||
ಬೆರದೇಕವಾಗಿ ಸುಖಿಸುಗೆ |
ಕರಿಬಸವಂ ಭಕ್ತಪುಂಗವಗ್ಗ ದುಹಿರಿದೇಂ ||

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣ ಮತ್ತು ಆರಾಧನೆ.

ನಿಲುವಂಜಿ

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಪೋಸ್ಟ್ ಚಿಗಟೇರಿ ಹಳ್ಳಿ ನಿಲುವಂಜಿಗ್ರಾಮದಲ್ಲಿ ಇದೇ ಶುಕ್ಲನಾಮಸಂವತ್ಸರದ ಶ್ರಾವಣ ಶುದ್ಧ 14 (19-8-29) ನೆಯ ಸೋಮವಾರದ ದಿವಸ ವೇ|| ಮಠದ ಸಂಗಯ್ಯನವರು ಮತ್ತು ಸಣ್ಣವೀರಬಸಯ್ಯನವರು ಸಹ ಶ್ರೀ ಕಲ್ಲೇಶ್ವರ ದೇವಾಲಯದಲ್ಲಿ ಪ್ರಾತಃಕಾಲ 7 ಗಂಟೆಯಿಂದ ಸಾಯಂಕಾಲ 8 ಗಂಟೆಗಳವರೆಗೆ ಶ್ರೀ ರೇಣುಕಾಚಾರ್ಯರ ಪುರಾಣವನ್ನು ಓದಿದರು. ತೊಗರಿ ಕಟ್ಟಿಮಠದ ಸ್ಕೂಲ್ ಮಾಸ್ಟರ್ ವೇ|| ವೀರಯ್ಯನವರು ಸರ್ವರಿಗೂ ತಿಳಿಯುವಂತೆ ಅರ್ಥವನ್ನು ಹೇಳಿದರು. ಅನಂತರ ಶ್ರೀ ಕಲ್ಲೇಶ್ವರ ದೇವಾಲಯದಲ್ಲೂ ಹಾಗೂ ಶ್ರೀ ಆಂಜನೇಯಸ್ವಾಮಿಯ ದೇವಾಲಯದಲ್ಲಿಯೂ ಆರಾಧನೆಗಳು ಜರುಗಿದುವು. ಅನಂತರ ಭಜನಾಸಂಘದವರು ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಗಳನ್ನು ಮನೋಹರವಾಗಿ ಅಲಂಕರಿಸಿ ಸಕಲ ಬಿರುದಾವಳಿಗಳ ಮತ್ತು ವಾದ್ಯವೈಭವಗಳ ಸಮೇತರಾಗಿ ತಳಿರುತೋರಣಗಳಿಂದ ಅಲಂಕೃತವಾದ ರಾಜಬೀದಿಗಳಲ್ಲಿ ಉತ್ಸವಹೊರಡಿಸಿದರು. ಉತ್ಸವವು ರಾತ್ರಿ 12 ಗಂಟೆಗೆ ಹೊರಟು ಪ್ರಾತಃಕಾಲ 6 ಗಂಟೆಗೆ ದೇವಸ್ಥಾನಕ್ಕೆ ಬಂದು ಸೇರಿತು. ಆ ಮೇಲೆ ಸರ್ವರೂ ಮಂಗಳಸ್ತೋತ್ರವನ್ನು ಮಾಡಿ ಫಲಾಶೀರ್ವಾದಗಳನ್ನು ಸ್ವೀಕರಿಸಿದನಂತರ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಹುಣಸೀಕಟ್ಟಿ ವೀರಬಸಪ್ಪ.

ಪಂಚಾಚಾರ್ಯ ಪ್ರಭಾ

೧೯೨೯ನೇ ಸೆಪ್ಟಂಬರ್ ತಾ|| ೯ನೇ ಸೋಮವಾರ

ಮಾಹೇಶ್ವರರು.

ವೀರಶೈವಮತೀಯರಲ್ಲಿ ಗುರುತ್ವವೆಂಬ ಅಧಿಕಾರವನ್ನು ನಿರ್ವಹಿಸುವ ಗುರುಗಳಲ್ಲಿ ಮಾಹೇಶ್ವರರು ಗೃಹಸ್ಥರಾದ ಗುರುಗಳೆನಿಸಿರುತ್ತಾರೆ. ಮಾಹೇಶ್ವರರ ಪುತ್ರರನ್ನೇ ಪಟ್ಟಾಧಿಕಾರ ಮೊದಲಾದ ಬ್ರಹ್ಮಚಾರಿ ಗುರುತ್ವಕ್ಕೆ ವಿನಿಯೋಗಿಸುವುದು ರೂಢವಾಗಿದೆ. ಮಾಹೇಶ್ವರರಲ್ಲಿ ಹಲವರು ಮಠಾಧಿಪತ್ಯವನ್ನು ಹೊಂದುತ್ತ ಶಿಷ್ಯಸಂಪತ್ತನ್ನು ಪಡೆದವರಾಗಿರುವರು. ಮಾಹೇಶ್ವರರಲ್ಲಿ ಭಕ್ತಪೂಜ್ಯತ್ವವು, ಭಕ್ತರಲ್ಲಿ ಮಾಹೇಶ್ವರ ಪೂಜ್ಯತ್ವವು ಯಾವಾಗಲೂ ಪ್ರಸಿದ್ಧವಾಗಿರುವುದರಿಂದ ಪೂಜ್ಯತ್ವವು ಮಾಹೇಶ್ವರರನ್ನು, ಪೂಜಕತ್ವವು ಭಕ್ತರನ್ನು ಹೊಂದಿತು. ಮತ್ತೂ ಭಕ್ತರ ಗೃಹಗಳಲ್ಲಿ ಎಲ್ಲ ವೈದಿಕ ಕರ್ಮಗಳನ್ನು ಮಾಡಿಸುವುದು ಮಾಹೇಶ್ವರರನ್ನು ಹೊಂದಿದುದಾಗಿದೆ. ಇತ್ಯಾದಿ ಕಾರಣಗಳಿಂದ ಮಾಹೇಶ್ವರರು ಪೂಜ್ಯರೆನಿಸಿ ಗುರುವರ್ಗದವರೆನಿಸಿರುತ್ತಾರೆ. ಯಾವ ಮಾಹೇಶ್ವರರು "ಗುರುತ್ವಸ್ಯವಿದ್ಯಾ" ಎಂದಿರುವುದರಿಂದ ವೇದವೇದಾಂಗಾದಿ ವಿದ್ಯೆಗಳಲ್ಲೂ ಧಾರ್ಮಿಕ ಗ್ರಂಥಗಳಲ್ಲೂ ವಿಶೇಷವಾದ ಪಾಂಡಿತ್ಯವನ್ನಾರ್ಜಿಸಿ, ಧರ್ಮರಹಸ್ಯವನ್ನರಿತು, ಧರ್ಮಾನುಷ್ಠಾನತತ್ಪರರಾಗಿ, ಶಿವಜ್ಞಾನಿಗಳಾಗಿ ಭಕ್ತವರ್ಗಕ್ಕೆ ಧರ್ಮಸ್ವರೂಪವನ್ನೂ ಜ್ಞಾನಸ್ವರೂಪವನ್ನೂ ಬೋಧಿಸುವರೋ ಅವರೇ ಭಕ್ತೋದ್ಧಾರಕರೆನಿಸಿ ತಮ್ಮ ಗುರುತ್ವವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳುವರು. ಅವರಿಂದ ಶಿಕ್ಷಿತರಾಗುವ ಭಕ್ತರು ಧರ್ಮಸ್ವರೂಪವೇತ್ತರಾಗಿ ಶಿವಭಕ್ತಿತತ್ಪರರೂ ಗುರುಭಕ್ತಿತತ್ಪರರೂ ಆಗುವರು. ಆ ಭಕ್ತರನ್ನು ಕಪಟವೇದಾಂತಿಗಳು ತಮ್ಮ ದುರುಪದೇಶಪಾಶದಿಂದ ಬಂಧಿಸಲಾರರು. ಹಿಂದಣ ಕಾಲದಲ್ಲಿದ್ದ ಮಾಹೇಶ್ವರರು ವೇದವೇದಾಂಗಾದಿ ವಿದ್ಯೆಗಳಲ್ಲೂ ವೀರಶೈವಧಾರ್ಮಿಕಗ್ರಂಥಗಳಲ್ಲೂ ವಿಶೇಷವಾದ ವೈದುಷ್ಯವನ್ನು ಪಡೆದು ಧರ್ಮಬಲವನ್ನೂ ಜ್ಞಾನಬಲವನ್ನೂ ಹೊಂದಿ ಧರ್ಮಗಳನ್ನೂ ಜ್ಞಾನವನ್ನೂ ಭಕ್ತರಿಗೆ ಉಪದೇಶಿಸುತ್ತ ಇದ್ದರು, ಅವರಲ್ಲಿ ಹಲವರು ಗ್ರಂಥಕರ್ತರಾಗಿದ್ದರು. ಹಲವರು ಮಹಿಮರೂ ಆಗಿದ್ದರು. ಈಗಿರುವ ಮಾಹೇಶ್ವರರು ಆ ಮಾಹೇಶ್ವರರ ವಂಶದಲ್ಲಿ ಜನಿಸಿದವರಾದರೂ ಇವರಲ್ಲಿ ಹಲವರು ತಮ್ಮ ಗುರುತ್ವಕ್ಕೆ ಉಚಿತವಾದ ವಿದ್ಯೆಯನ್ನಭ್ಯಾಸಮಾಡದೆ ಅಸಾಧಾರಣಧರ್ಮಗ್ರಂಥಗಂಧವುಳ್ಳವರಾಗಿರುತ್ತಾರೆ. ಕೆಲವರು ಕೃಷಿವಾಣಿಜ್ಯಗಳಲ್ಲಿ ಅಥವಾ ಯಾಚನೆಯಲ್ಲಿ ತೊಡಗಿ ಧರ್ಮಸ್ವರೂಪವನ್ನರಿಯದವರಾಗಿರುತ್ತಾರೆ. ಸ್ವಕರ್ತವ್ಯವಿಮುಖರಾದ ಮಾಹೇಶ್ವರರು ಹೆಚ್ಚಾಗಿರುತ್ತಾರೆ. ಕೆಲವರುಮಾತ್ರ ವೇದಾದಿವಿದ್ಯೆಗಳಲ್ಲೂ, ಧರ್ಮಗ್ರಂಥಗಳಲ್ಲೂ ಪಾಂಡಿತ್ಯವನ್ನಾರ್ಜಿಸಿ ಸ್ವಕರ್ತವ್ಯವನ್ನರಿತು ತಮ್ಮ ಗುರುತ್ವವನ್ನು ಸಾರ್ಥಕಪಡಿಸಿಕೊಳ್ಳುತ್ತಿರುವರು. ಅವರ ಸಂಖ್ಯೆಯು ಬಹಳ ಕಡಿಮೆಯಾಗಿರುವುದರಿಂದ ಕಪಟವೇದಾಂತಿಗಳು ಭಕ್ತರಲ್ಲಿ ಹಲವರನ್ನು ಸ್ವಾಧೀನರನ್ನಾಗಿ ಮಾಡಿಕೊಳ್ಳುತ್ತಲೇ ಇರುವರು. ಆದ್ದರಿಂದ ಭಕ್ತರಲ್ಲಿ ಕೆಲವರು ವಿಚಾರಶಾಲಿಗಳಾಗದೆ ವೀರಶೈವಧರ್ಮಗಳ ಸ್ವರೂಪವನ್ನರಿಯದೆ, ತಮ್ಮ ಗೋತ್ರಸೂತ್ರಗಳನ್ನರಿಯದೆ ತಮ್ಮ ಕುಲಗುರುಗಳಾರೆಂಬುದನ್ನೂ ಅರಿಯದೆ ಮತಸ್ಥಾಪಕಾಚಾರ್ಯರಲ್ಲಿ ಭಕ್ತಿಯಿಲ್ಲದವರಾಗಿರುವರು. ಅವರನ್ನು ಕಪಟವೇದಾಂತಿಗಳು ಸುಲಭವಾಗಿ ಸ್ವಾಧೀನಮಾಡಿಕೊಳ್ಳುವುದರಲ್ಲಿ ಆಶ್ಚರ್ಯವೇನಿದೆ? ಯಾವ ಮಾಹೇಶ್ವರರು ವಿದ್ಯಾಭ್ಯಾಸಮಾಡುವುದರಲ್ಲಿ ಅಸಕ್ತರೋ, ಅವರು ತಮ್ಮ ಪುತ್ರಾದಿಗಳನ್ನು ವೇದಾದಿವಿದ್ಯೆಗಳಲ್ಲೂ ಧರ್ಮಗ್ರಂಥಗಳಲ್ಲೂ ಪಂಡಿತರನ್ನು ಮಾಡುವುದಕ್ಕೆ ವಿಶೇಷ ಯತ್ನಗಳನ್ನು ಮಾಡಿದರೆ ಕೆಲವು ವರ್ಷಗಳೊಳಗೆ ಧರ್ಮಬಲಯುಕ್ತರೂ ಜ್ಞಾನಬಲಯುತರೂ ಆದ ಮಾಹೇಶ್ವರರ ಬಾಹುಳ್ಯವು ದೊರಕುವುದು. ಆಗ ಭಕ್ತಬೃಂದದಲ್ಲಿ ಹಲವರು ಧರ್ಮಸ್ವರೂಪವೇತ್ತರಾಗಿ ಕಪಟವೇದಾಂತಿಗಳ ದುರುಪದೇಶಕ್ಕೆ ಕಿವಿಗೊಡದೆ, ಆಚಾರ್ಯಭಕ್ತಿತತ್ಪರರೂ ಆಗುವರು. ಆದರಿಂದ ಮಾಹೇಶ್ವರರ ಗೌರವವು ಹೆಚ್ಚುವುದು. ಮುಖ್ಯವಾಗಿ ಮಾಹೇಶ್ವರರು ಲೌಕಿಕವೃತ್ತಿಯನ್ನು ಪ್ರಧಾನವನ್ನಾಗಿ ಭಾವಿಸದೆ, ಸ್ವಕರ್ತವ್ಯವನ್ನು ನೆರವೇರಿಸುವುದರಲ್ಲಿ ವಿಶೇಷವಾಗಿ ಯತ್ನವನ್ನು ಮಾಡಬೇಕು. ಈ ವಿಷಯದಲ್ಲಿ ಉಪೇಕ್ಷೆಯನ್ನು ಮಾಡಬಾರದು. ಉಪೇಕ್ಷೆಯನ್ನು ಮಾಡಿದರೆ ತಮಗೂ ಭಕ್ತರಿಗೂ ಇರುವ ಧಾರ್ಮಿಕ ಸಂಬಂಧವೂ ಪೂಜ್ಯಪೂಜಕಭಾವವೂ ವಿಶೇಷವಾಗಿ ಕೊರತೆಯನ್ನು ಹೊಂದಬಹುದು. ವೇದಾಂತಿಗಳ ದುರುಪದೇಶವು ಪ್ರಾಬಲ್ಯವನ್ನು ಹೊಂದಬಹುದು.

ಮಾಹೇಶ್ವರರೇ! ಪೂರ್ವಕಾಲದಲ್ಲಿದ್ದ ಮಾಹೇಶ್ವರರಂತೆ ನೀವು ವೇದವೇದಾಂಗಾದಿ ವಿದ್ಯೆಗಳನ್ನೂ ಧಾರ್ಮಿಕ ಗ್ರಂಥಗಳನ್ನೂ ಓದುವುದರಲ್ಲಾಸಕ್ತರಾಗಬೇಕಲ್ಲದೆ, ನಿಮ್ಮ ಮಕ್ಕಳಿಗೂ ಅಭ್ಯಾಸಮಾಡಿಸಿ ಭಕ್ತವರ್ಗವನ್ನು ಉದ್ಧರಿಸಿ, ನಿಮ್ಮ ಗೌರವವನ್ನು ಕಾಪಾಡಿಕೊಳ್ಳುತ್ತ, ನಮ್ಮ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಸಿದ್ಧಾಂತವನ್ನು ಪ್ರಸರಿಸುತ್ತ ಕೃತಕೃತ್ಯತೆಯನ್ನು ಹೊಂದುವಿರಿ ಎಂದು ನಂಬಿರುತ್ತೇನೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸರ್ಕಾರದ ಗಂಧದೆಣ್ಣೆಯ ಕೇಸಿನ ವಿಚಾರಣೆಯೆಲ್ಲವೂ ಮುಗಿದುದರಿಂದ ಬರುವ 16 ನೆಯ ಸೋಮವಾರ ಮ್ಯಾಜಿಸ್ಟ್ರೇಟರು ಜಡ್ಜ್‌ಮೆಂಟನ್ನು ಹೇಳುವವರಾಗಿರುವರು.

ಬೆಂಗಳೂರು ಡಿ|| ಕನಕಾಸಹಳ್ಳಿ ತಾಲೂಕಿನ ಒಂದು ಹಳ್ಳಿಯಲ್ಲಿ ಕೆಂಪೇಗೌಡ ಎಂಬ ಜಮೀನ್ದಾರರನ್ನು ಯಾರೋ ದುರಾತ್ಮರು ರಾತ್ರಿ 8 ಘಂಟೆಯ ಸಮಯದಲ್ಲಿ ತುಂಬಿದ ರಸ್ತೆಯಲ್ಲಿ ಕೊಲೆಮಾಡಿದರೆಂದೂ, 4 ಜನರನ್ನು ಅರೆಸ್ಟ್‌ಮಾಡಿರುವದಾಗಿಯೂ ವರ್ತಮಾನ ಕೇಳುತ್ತೇವೆ.

ಹಿಂದೆ ಮೈಸೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಾಗಿಯೂ, ಕೆಲವು ಕಾಲ ಮೈಸೂರು ಡೆಪ್ಯುಟಿಕಮಿಷನರಾಗಿಯೂ ಇದ್ದು ಸದ್ಯಃ ಮೈಸೂರು ಸರಕಾರದ ಗಂಧದ ಎಣ್ಣೆಯ ಮೊಕದ್ದಮೆಯ ವಿಚಾರಣೆಯನ್ನು ನಡೆಯಿಸುತ್ತಿರುವ ಶ್ರೀ|| ಟಿ. ಜಿ. ರಾಮಯ್ಯರ್‌ರವರು ಮೈಸೂರು ಡಿ|| ಡೆಪ್ಯುಟಿಕಮಿಷನರಾಗಿ ನೇಮಿಸಲ್ಪಟ್ಟಿರುವರೆಂದು ವರ್ತಮಾನ ಕೇಳುತ್ತೇವೆ.

ಶಿವಮೊಗ್ಗೆಯ ಡೆಪ್ಯುಟಿಕಮಿಷನರಾದ ಮಿ|| ಬಿ. ಟಿ. ಕೇಶವಯ್ಯಂಗಾರ್ಯರನ್ನು ಸರ್ಕಾರದವರು ಟ್ರೇಡ್ ಕಮಿಷನರಾಗಿ ನೇಮಿಸಿ ಲಂಡನ್ ಪಟ್ಟಣಕ್ಕೆ ಕಳುಹಿಸಿಕೊಡುವವರಾಗಿದ್ದಾರೆ. ಆ ಡಿಸ್ಟ್ರಿಕ್ಟಿನ ಪ್ರಜೆಗಳು ಅವರನ್ನು ಸತ್ಕರಿಸಿ ಅವರ ಭಾವಚಿತ್ರವನ್ನು ಟೌನ್‌ಹಾಲಿನಲ್ಲಿ ಉತ್ಸವಪೂರ್ವಕವಾಗಿ ಪ್ರತಿಷ್ಠೆಮಾಡಬೇಕೆಂದು ಪ್ರಯತ್ನಪಡುತ್ತಿರುವರು. ಮೊನ್ನೆ ಡಿಸ್ಟ್ರಿಕ್ಟ್ ಬೋರ್ಡಿನವರು ಅವರನ್ನು ಉಪಾಹಾರಂಗಳಿಂದ ಟೌನ್‌ಹಾಲಿನಲ್ಲಿ ಸತ್ಕರಿಸಿದರು. ಇಂಜನಿಯರ್ ಮಿ|| ಬಳಿಗಿರಿರಾಯರು ಅವರಿಗೆ ದಿವ್ಯವಾದ ಔತಣವನ್ನು ಮಾಡಿದರು.

ಪೂರ್ವದಲ್ಲಿ ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿದ್ದ ಆರಾಧ್ಯವಂಶಸಂಭೂತರಾದ ವೇ|| ಬಿ. ಬಸವಾರಾಧ್ಯರು, ಬಿ.ಎ., ಬಿ.ಎಲ್. ರವರು ಕೆಲವು ದಿವಸಗಳಿಂದ ಪಾರ್ಶ್ವರೋಗಗ್ರಸ್ತರಾಗಿದ್ದು, ಈಗ್ಗೆ 7-8 ದಿವಸಗಳ ಕೆಳಗೆ ಬೆಂಗಳೂರಿನಲ್ಲಿ ಶಿವೈಕ್ಯರಾದರೆಂಬ ವಿಷಯವನ್ನು ಕೇಳಿ ಅತ್ಯಂತ ವಿಷಾದಿಸುತ್ತೇವೆ. ಇವರ ಮರಣದಿಂದ ಆರಾಧ್ಯ ಸಮೂಹದ ಒಂದು ದಿವ್ಯ ಕಳೆಯೇ ನಷ್ಟವಾಯಿತೆಂದು ಹೇಳಬಹುದಾಗಿದೆ. ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೂ ಪತ್ನೀಪುತ್ರಾದಿಗಳಿಗೆ ಸೌಖ್ಯವನ್ನೂ ಉಂಟುಮಾಡಲೆಂದು ಹಾರೈಸುತ್ತೇವೆ.

ಕಳೆದವರ್ಷದ ಅಕ್ಟೋಬರಿನಲ್ಲಿ ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗೆ ಟೆಲಿಫೋನ್ ಕನೆಕ್ಷನುಗಳನ್ನು ಕೊಡಬೇಕೆಂದು ಏರ್ಪಡಿಸಿ ಕಾರಣಾಂತರದಿಂದ ನಿಲ್ಲಿಸಲ್ಪಟ್ಟಿದ್ದು ಈಗ ಇದೇ ಅಕ್ಟೋಬರ್ ತಿಂಗಳ್ಲಿ ವರ್ಷಕ್ಕೆ 180 ರೂಪಾಯಿಗಳನ್ನು ಕೊಡಲಿಚ್ಛಿಸುವವರಿಗೆಲ್ಲಾ ಟೆಲಿಫೋನುಗಳನ್ನು ಇಟ್ಟುಕೊಡಲಾಗುವುದೆಂದೂ ಇದರ ಸಂಬಂಧವಾಗಿ ಹೆಚ್ಚು ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಬೆಂಗಳೂರು ಪವರ್ ಅಂಡ್ ಲೈಟಿಂಗ್ ಸೂಪರಿಂಟೆಂಡೆಂಟರಿಗಾಗಲಿ ಮೈಸೂರು ಪವರ್ ಅಂಡ್ ಲೈಟಿಂಗ್ ಸೂಪರಿಂಟೆಂಡೆಂಟರಿಗಾಗಲಿ, ಬರೆದು ತಿಳಿದುಕೊಳ್ಳಬಹುದೆಂದು ಪ್ರಕಟಿಸಿರುತ್ತಾರೆ.

ವರ್ತಮಾನಸಂಗ್ರಹ.

ಮಹಾತ್ಮಾ ಗಾಂಧಿಯವರು ತಮ್ಮ ಆರೋಗ್ಯದ ನಿಮಿತ್ತ ಆಗ್ರದಲ್ಲಿ ಒಂದು ವಾರ ಸಂಪೂರ್ಣ ವಿಶ್ರಾಂತಿಯನ್ನು ಪಡೆಯುವರು.

ರಷ್ಯ ಚೀನರ ಯುದ್ಧವು ಎರಡು ಕಡೆಯವರಿಗೂ ಒಪ್ಪಂದವಾಗಿ ಶಾಂತವಾಗಿದೆ. ರಾಜಿಪ್ರಸ್ತಾಪಗಳನ್ನೆಲ್ಲಾ ಇತ್ಯರ್ಥಮಾಡಲು ಒಂದು ಪರಿಷತ್ತು ನಡೆಯುವುದು.

ಅಮೇರಿಕದ ಹೋಲಿವುಡ್ ಚಲನಚಿತ್ರದ ಕಂಪೆನಿಯವರು ನ್ಯೂಯಾರ್ಕಿನಲ್ಲಿ 60 ಅಡಿ ಉದ್ದ 2/3 ಅಂಗುಲಮಾತ್ರ ಅಗಲವಿರುವ ಜಮೀನಿಗೆ 100 ಪೌಂಡುಗಳನ್ನು ಕೊಟ್ಟುಕೊಂಡುಕೊಂಡರಂತೆ!

ಕ್ಯಾಪ್ಟನ್ ರಾಬರ್ಟ್ಸ್ ಎಂಬುವರು ಹೊಸ ಸಮೂನೆಯ ಒಂದು ಮೋಟಾರುಕಾರನ್ನು ತಯಾರುಮಾಡಿರುವರು. ಅದರ ಹತ್ತಿರ ನಿಂತು ಸೀಟಿ ಊದಿದರೆ ಪ್ರಯಾಣಿಕನ ಇಚ್ಛಾನುಸಾರ ಅದು ಹೋಗುವುದಂತೆ!

ಶಾಸ್ತ್ರಶೋಧಕರೆಂದು ಪ್ರಖ್ಯಾತಿಗೊಂಡ ಸರ್ ಪಿ. ಸಿ. ರೇ ಎಂಬ ಬಂಗಾಳಾ ಮಹನೀಯರು ಕಲ್ಕತ್ತಾ ಯೂನಿವರ್ಸಿಟಿಯಲ್ಲಿ ರಸಾಯನ ಶಾಸ್ತ್ರಾಭ್ಯಾಸಕ್ಕೆಂದು 90,000 ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿದ್ದಾರೆ. ಈ ಹಣದಲ್ಲಿ ಯೂನಿವರ್ಸಿಟಿಯವರು 25,000 ರೂಪಾಯಿಗಳನ್ನು ಕಟ್ಟಡ, ಉಪಕರಣಗಳಿಗೆ ವಿನಿಯೋಗಿಸಿ ಉಳಿದ ಹಣವನ್ನು ಫಂಡುಮಾಡಿ ಅದರ ಹುಟ್ಟುವಳಿಯಿಂದ ರಸಾಯನ ಶಾಸ್ತ್ರಶೋಧನೆ ಮಾಡುವವರಿಗೆ 200 ರೂಪಾಯಿನ ಮಾಸಾಶನವನ್ನು ಕಲ್ಪಿಸುವಂತೆ ತೀರ್ಮಾನಮಾಡಿದ್ದಾರೆ.

ಕಳೆದ ಮಾಹೆ 24 ನೆಯ ತಾರೀಖಿನ ಮಧ್ಯಾಹ್ನ 1½ ಘಂಟೆಯ ಸಮಯದಲ್ಲಿ ಗುಬ್ಬಿ ತಾಲೂಕು ನಿಟ್ಟೂರು ವಾಸಿಗಳಾದ ಭರಮಸೂರಯ್ಯನೆಂಬುವರು ತಮ್ಮ ಬಾಬತು ಒಂದು ಟ್ರಂಕುಪೆಟ್ಟಿಗೆಯನ್ನು ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿ ಒಂದಾನೊಂದು ಷಾಪಿನ ಮುಂಭಾಗದಲ್ಲಿರಿಸಿ ವ್ಯಾಪಾರಮಾಡಲು ಷಾಪಿನ ಒಳಕ್ಕೆ ಹೋದರೆಂದೂ ಒಳಕ್ಕೆ ಹೋಗಿ ಬಂದು ನೋಡುವಲ್ಲಿ ಸದರಿ ಟ್ರಂಕುಪೆಟ್ಟಿಗೆಯೇ ಮಾಯವಾಗಿತ್ತೆಂದೂ ಅದರಲ್ಲಿ ಛಂಗಾರದ ಒಂದು ಡಾಬೂ ಒಂದು ಜೊತೆ ಬಳೆಗಳೂ ಒಂದು ಹಸಿರು ಶಾಲೂ ಮತ್ತು 78 ರೂಪಾಯಿಗಳ ನಗದು ಹಣವೂ ಇತ್ತೆಂದೂ ಪೋಲೀಸಿಗೆ ಫಿರ್ಯಾದಾಗಿರುತ್ತದೆ.

ಲಾರ್ಡ್ ಹಾರ್ನ್ ಎಂಬ ಬ್ರಿಟಿಷ್ ದಳಪತಿಯು ಐರ್ಲೆಂಡಿನಲ್ಲಿ ಕಾಲವಾದರೆಂದು ಸಮಾಚಾರ ಬಂದಿದೆ ಇವರಿಗೆ 68 ವಯಸ್ಸಾಗಿದ್ದಿತು. ಇವರು ಘೋರ ಯುದ್ಧದಲ್ಲಿ ದಳಪತಿಯಾಗಿ ಅನೇಕ ಶೌರ್ಯಕಾರ್ಯಗಳನ್ನು ನಡೆಯಿಸಿ ಮಿತ್ರಮಂಡಲಿಯ ಸರ್ವಸೇನಾಪತಿಯಾದ ಲಾರ್ಡ್ ಹೇಗ್‌ರವರಿಗೆ ಆಪ್ತಮಿತ್ರರಾಗಿದ್ದರು. ಫ್ರಾನ್ಸ್ ಯುದ್ಧಭೂಮಿಯಲ್ಲಿ ಇವರೇ ಮೊದಲನೆಯ ಬ್ರಿಟಿಷ್ ದಳಪತಿಯಾಗಿದ್ದರು. ಯುದ್ಧ ಪೂರೈಸಿದ ಮೇಲೆ ಅವರಿಗೆ ಜನರಲ್ ಎಂಬ ಹುದ್ದೆಯನ್ನೂ, ಅಲ್ಲಿಂದೀಚೆಗೆ ಲಾರ್ಡ್ ಎಂಬ ಬಿರುದನ್ನೂ ದಯಪಾಲಿಸಿದ್ದಲ್ಲದೆ 4,00,000 ರೂಪಾಯಿಗಳನ್ನು ಅವರಿಗೆ ಸ್ಯಾಂಕ್ಷನ್ ಮಾಡಿದ್ದರು.

ಅಮೇರಿಕದ ಮಿಸೆಸ್ ಚಾರ್ಲೆಟ ಸಾಮುಯಲ್ಸ್ ಎಂಬ ಸ್ತ್ರೀಯು ತನ್ನ ಪತಿಯಮೇಲೆ ವಿವಾಹವಿಮೋಚನೆಯ ನೂತನವ್ಯವಹಾರವೊಂದನ್ನು ಹೂಡಿರುವಳಂತೆ! ಬಹಳ ದಪ್ಪನಾಗಿ ಕೊಬ್ಬಿರುವ ಇವಳ ಪತಿಯು ಕೃಶನಾಗಲೆಂಬ ಉದ್ದೇಶದಿಂದ ತಾನು ಎಷ್ಟು ಪ್ರಯತ್ನಪಟ್ಟರೂ, ಅವನು ಇವಳೆದುರಿಗೆ ಮಾತ್ರ ಕಠಿಣವಾದ ಆಹಾರಗಳನ್ನು ತಿನ್ನುತ್ತಾ, ಹೊರಗೆ ಹೋದಾಗ, ತನ್ನ ಮನಸ್ಸಿಗೆ ತೋರಿದಂತೆ ಸಿಕ್ಕಿದ ಪದಾರ್ಥಗಳನ್ನೆಲ್ಲಾ ತಿಂದು ವಂಚಿಸಿದನೆಂಬುದೇ ಇವಳ ವ್ಯವಹಾರಕ್ಕೆ ಕಾರಣ! ಕೇಳುವದೇನು? ಸುಧಾರಣೆಯ ಕಾಲವಲ್ಲವೇ?

ಹೂಗ್ಲಿ ವಾಸಸ್ಥಳಾದ ಶ್ರೀಮತಿ ಸುಶೀಲಾಬಾಯಿ ಎಂಬ ವಿಧವೆಯು ರೈಲ್ವೆಗೈಡ್ ಪುಸ್ತಕದಲ್ಲಿ ತನ್ನ ಭಾವಚಿತ್ರವನ್ನು ಮುದ್ರಿಸಿ ಪ್ರಕಟಿಸಿದರೆಂಬ ಅಪಾದನೆಗಾಗಿ ಈಸ್ಟಿಂಡಿಯಾ ರೈಲ್ವೆ ಕಂಪನಿಯವರ ಮೇಲೆ 10,000 ರೂಪಾಯಿಗಳ ಪರಿಹಾರದ್ರವ್ಯಕ್ಕಾಗಿ ಕಲ್ಕತ್ತಾಹೈಕೋರ್ಟಿನಲ್ಲಿ ವಿವಾದವನ್ನು ಹೂಡಿರುವಳು. ತನ್ನ ಅನುಮತಿಯಿಲ್ಲದೆ ತನ್ನ ಭಾವಚಿತ್ರವನ್ನು ರೈಲ್ವೆ ಗೈಡ್ ಪುಸ್ತಕದಲ್ಲಿ ಮುದ್ರಿಸಿ ಪ್ರಕಟಿಸಿರುವುದು ತಾನು ಅನುಸರಿಸಿರುವ ಹಿಂದೂ ಘೋಷಾಪದ್ಧತಿಗೆ ವಿರೋಧವಾಗಿರುವುದರಿಂದ ತನ್ನ ಪ್ರಶಂಸೆಗೆ ಕುಂದುಂಟಾಗಿರುವುದೇ ವಿವಾದಕ್ಕೆ ಕಾರಣವೆಂದು ಶ್ರೀಮತಿ ಸುಶೀಲಾಬಾಯಿಯು ತನ್ನ ದಾವಾ ಅರ್ಜಿಯಲ್ಲಿ ನಮೂದಿಸಿರುವಳು.

ಹರಿಚಂದ್ ಮತ್ತು ಹರ್ಕ ಎಂಬಿಬ್ಬರು ಸಹೋದರರು ಬಾಯಿಲೆಬಿದ್ದಿದ್ದುದರಿಂದ ಕಾಳಿದೇವತೆಗೆ ಒಂದು ಕೋಳಿಯನ್ನು ಬಲಿಕೊಟ್ಟರು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲವಾಗಿ, ನರಬಲಿ ಕೊಡಬೇಕೆಂದು ನೀಲದ ಪುರೋಹಿತನನ್ನೂ ಒಬ್ಬ ಚಾಡಮಾಲಿಯನ್ನು ಊರಿನ ಯಾವುದೋ ಒಂದು ಮೂಲೆಗೆ ಕರೆದುಕೊಂಡು ಹೋಗಿ ಕಾಳಿದೇವತೆಯ ಹೆಸರಿನ ಮೇಲೆ ಅವರಿಬ್ಬರನ್ನೂ ಬಲಿಕೊಟ್ಟು ಅವರ ಶರೀರಗಳನ್ನು ಒಂದು ಬಾವಿಗೆ ಬಿಸಾಡಿದರು. ಇದು ಹೇಗೋ ಪತ್ತೆಯಾಗಿ ಮೊಕದ್ದಮೆಯು ನಡೆದು ವಿಚಾರಣೆಯ ಸೆಷನ್ ಜಡ್ಜರು ಅವರಿಗೆ ಮರಣದಂಡನೆಯನ್ನು ವಿಧಿಸಿದರು. ಹೈಕೋರ್ಟಿಗೆ ಅಪ್ಪೀಲುಹೋಗಿ ಅವರ ಪರ ವಕೀಲರು ಅವರಿಗೆ ಜ್ಞಾನ ಸರಿಯಾಗಿರಲಿಲ್ಲವೆಂದು ವಾದಿಸಿದರು. ನ್ಯಾಯಾಧೀಶರು ಅದನ್ನು ಮೊದಲು ಅಂಗೀಕರಿಸಿರಲಿಲ್ಲವೆಂದೂ ಬಾಯಿಲೆಯಿಂದ ಅವರ ಮನಸ್ಸು ಸ್ಥಿಮಿತವಾಗಿರಲಿಲ್ಲವಾದುದರಿಂದ ಮೂಢಭಕ್ತಿಯಿಂದ ಆ ಕಾರ್ಯಮಾಡಿದರೆಂದೂ ಹೇಳಿ ಮರಣದಂಡನೆಯನ್ನು ತೆಗೆದುಹಾಕಿ ಜನ್ಮಾವಧಿ ದ್ವೀಪಾಂತರ ಸಜವನ್ನು ವಿಧಿಸಿದರು.

ಭರತಖಂಡದಿಂದ ಪ್ರತಿವರ್ಷವೂ ಸುಮಾರು 350 ಕೋಟಿ ರೂಪಾಯಿಗಳು ಈ ಕೆಳಗೆ ಕಂಡ ಪಟ್ಟಿಯ ಮೇರೆ ಪರಸ್ಥಳಗಳಿಗೆ ಹೋಗುವುವು.

ಬಟ್ಟೆ ಮತ್ತು ನೂಲಿಗೆ 1,15,52,21,018 ರೂ. ಸಕ್ಕರೆಗಾಗಿ 19,16,50,530 ರೂ. ಔಷಧಗಳಿಗಾಗಿ 4,50,95,000 ರೂ. ಬಿಸ್ಕತ್‌ಗೆ 5,50,48,611 ರೂ. ಆಹಾರಸಾಮಗ್ರಿಗೆ 1,90,61,170 ರೂ. ಹಣ್ಣು, ಮತ್ತು ತರಕಾರಿ 1,53,52,331 ರೂ. ಮದ್ಯಕ್ಕೆ 3,52,85,838 ರೂ. ಹೊಗೇಸೊಪ್ಪು ಸಿಗರೇಟ್ 2,56,10,669 ರೂ. ಕಾಗದ ಪೆನ್ಸಿಲ್ ಮುಂತಾದ ಸ್ಟೇಷನರಿಗೆ 4,58,12,670 ರೂ. ಎಣ್ಣೆ ಸೆಂಟ್ ಮೊದಲಾದವುಗಳಿಗೆ 7,75,10,970 ರೂ. ಆಟದಸಾಮಾನುಗಳಿಗೆ 92,11,178 ರೂ. ಗುಂಡಿಗಳಿಗೆ 37,60,260 ರೂ. ಮರದ ಸಾಮಾನುಗಳಿಗೆ 29,68,275 ರೂ. ಚರ್ಮಕ್ಕೆ 90,74,350 ಬಣ್ಣಹಾಕುವ ಸಾಮಾನುಗಳಿಗೆ 2,13,22,772 ರೂ. ಸಾಬೂನಿಗೆ 1,52,41,278 ರೂ. ಮೊಂಬತ್ತಿಗೆ 2,20,906 ರೂ. ಗಾಜಿನ ಸಾಮಾನುಗಳಿಗೆ 2,52,88,239 ರೂ. ರೈಲ್ವೆ ಸಾಮಾನುಗಳಿಗೆ 44,72,82,220 ರೂ. ಸೈಕಲ್ ಮತ್ತು ಮೋಟಾರುಗಳಿಗೆ 6,16,46,345 ರೂ. ಮಿಷನರಿ ಸಾಮಾನುಗಳಿಗೆ 24,09,55,725 ರೂ. ಲೋಹದ ಸಾಮಾನುಗಳಿಗೆ 91,24,07,168 ರೂ. ಬಣ್ಣಗಳಿಗೆ 5,70,41,900 ರೂ. ಹೀಗೆ ಇನ್ನೂ ಯಾವಯಾವುದೋ ಸಾಮಾನುಗಳಿಗಾಗಿ ದ್ರವ್ಯವು ವಿದೇಶಕ್ಕೆ ಹೋಗುತ್ತಿದೆ.

ಲಾಹೋರ್ ಸೆಂಟ್ರಲ್ ಜೈಲಿನ ಅಧಿಕಾರಿಗಳಾದ ಮಿ|| ಸರ್ದಾರ್ ಖಾನ್‌ರವರು ಪದ್ಧತಿಪ್ರಕಾರ ಪ್ರತಿಯೊಂದು ಕೊಠಡಿಯನ್ನೂ ನೋಡಿಕೊಂಡು ಬರುವಾಗ 11ನೆಯ ಕೊಠಡಿಯಲ್ಲಿ ಈಶ್ವರ್‌ಸಿಂಗ್ ಎಂಬುವನ ಮೃತಶರೀರವು ಬಿದ್ದಿರುವುದನ್ನು ಕಂಡರು. ಕೈಕಾಲುಗಳನ್ನು ಒಟ್ಟಿಗೆ ಸೇರಿಸಿ ಹಗ್ಗದಿಂದ ಬಿಗಿದಿದ್ದುದಲ್ಲದೆ ಶರೀರವೆಲ್ಲಾ ರಕ್ತಮಯವಾಗಿತ್ತು. ರಕ್ತದಿಂದ ಕೂಡಿದ ಹೆಜ್ಜೆಗಳೂ ಇದ್ದುವು. ಒಂದು ಹೆಜ್ಜೆಯು ಮಾತ್ರ ಪೂರ್ತ ರಕ್ತದಿಂದ ತೊಯ್ದುಹೋಗಿತ್ತು. ಸರದಾರರು ಓಡಿಹೋಗಿ ಈ ವಿಷಯವನ್ನು ಇತರಅಧಿಕಾರಿಗಳಿಗೆ ತಿಳಿಸಿದರು. ಮುಜಫರ್‌ಪುರ್ ಮತ್ತು ಅಲ್ಲಾ ಎಂಬಿಬ್ಬರು ಕೊಲೆಮಾಡುತ್ತಿದ್ದುದನ್ನು ಕಣ್ಣಾರೆ ಕಂಡೆನೆಂದು ಗುಲಾಂ ಮುಹಮ್ಮದ್ ಎಂಬ ಖೈದಿಯು ಹೇಳಿದನು. ಆದರೆ ಅನುಮಾನಾಸ್ಪದವಾದ ಅವನ ನಡತೆಗಳಿಂದಲೂ ಅವನ ಹೆಜ್ಜೆಗಳ ಗುರ್ತಿನಿಂದಲೂ ಅವನೇ ಕೊಲೆಗಾರನೆಂದು ನಿರ್ಧರಿಸಿ, ಅಧಿಕಾರಿಗಳು ಅವನನ್ನು ದಸ್ತಗಿರಿಮಾಡಿದರು. ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಲಿದೆ. ಅಪರಾಧಿಯು ಒಬ್ಬ ಹುಡುಗನನ್ನು ಕೊಲೆಮಾಡಿದ್ದಕ್ಕಾಗಿ ಗಡೀಪಾರು ಶಿಕ್ಷೆಯನ್ನನುಭವಿಸುತ್ತಿದ್ದನೆಂದು ತಿಳಿದುಬಂದಿದೆ.

ಅಫ್ಘಾನಿಸ್ತಾನದ ಸ್ಥಿತಿಯು ಬಹಳ ವಿಷಮಾವಸ್ಥೆಯನ್ನು ಹೊಂದಿದೆ. ಬಚ್ಚಾಯಿಸಾಕನು ಸರದಾರ ಅಲಿ ಅಹಮದ್ ಜಾನರನ್ನು ಕೊಲ್ಲಿಸಿದ ಮೇಲೆ ದೇಶದಲ್ಲೆಲ್ಲಾ ಬಹಳ ಗಲಾಟೆಗೆ ಆರಂಭವಾಗಿದೆ. ಅಹಮದ್ ಜಾನರ ಹೆಂಡತಿ (ಅಮಾನುಲ್ಲರ ಸಹೋದರಿ) ಮಕ್ಕಳನ್ನು ಮನೆಯಿಂದ ಅಟ್ಟಿಬಿಟ್ಟು ಅವರ ಆಸ್ತಿಯನ್ನೆಲ್ಲಾ ವಶಪಡಿಸಿಕೊಂಡಿದ್ದಾನೆ. ಈಗ ಆ ಹೆಂಡತಿ ಮಕ್ಕಳು ಬೀದಿಬೀದಿಗಳಲ್ಲಿ ತಿರುಪೆಯನ್ನು ಬೇಡುತ್ತಿರುವರು. ಅವರಿಗೆ ಸಹಾಯಮಾಡಲು ಅನೇಕರಿರುವರಾದರೂ ಬಚ್ಚಾಯಿಸಾಕನ ಅಪ್ಪಣೆಗೆ ಎಲ್ಲರೂ ಹೆದರುತ್ತಿರುವರು. ಅಬ್ದುಲ್ ಹಾಮಿದ್ ಎಂಬ ಮುಸ್ಲಿ ಮುಲ್ಲನು ಬಚ್ಚಾಯಿಸಾಕನು ಕಾಫರನೆಂದು ಹೇಳಿರುವನು. ನಾದಿರ್‌ಖಾನನು ಪ್ರಸಿದ್ಧಪತ್ರಿಕೆಗಳನ್ನು ಮುದ್ರಿಸಿ ಹಂಚಿರುವನು. ಈಗಿನ ಸ್ಥಿತಿಯನ್ನು ನೋಡಿದರೆ ಬಚ್ಚಾ...ಸಾಕನು ರಾಜ್ಯದಲ್ಲಿ ನಿಲ್ಲಲಾರನೆಂದು ತೋರುತ್ತದೆ. ಅಲ್ಲದೆ ಈಚೆಗೆ ಬಂದಿರುವ ವರ್ತಮಾನದಿಂದ ಬಚ್ಚಾಯಿಸಾಕನು ಅಮಾನುಲ್ಲರ ಸಹೋದರರಾದ ಅಮೀರ್‌ಜಾನರನ್ನೂ ಕೊಂದುಹಾಕಿರುವನೆಂದೂ ನಾದಿರ್‌ಖಾನನು ಗಾರ್ಡೆಜ್ ಕೋಟೆಯನ್ನೂ ನಗರವನ್ನೂ ವಶಪಡಿಸಿಕೊಂಡು ಅಪಾರವಾದ ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳನ್ನು ಪಡೆದಿರುವನೆಂದೂ ತಿಳಿದುಬಂದಿದೆ.

ಮೂಗು, ಕಾಲು, ಕೈ, ಹರಕು ಕೋಟು ಮೊದಲಾದುವುಗಳನ್ನೆಲ್ಲಾ ಅಮೆರಿಕದ ಸುಪ್ರಸಿದ್ಧ ನಟಿ, ಸಿನೆಮು ನಟನಟಿ ಮತ್ತು ಗಾಯಕರು ಇನ್‌ಶ್ಯೂರ್ ಮಾಡಿಸುವರು. ಓಕ್ಲ ಹೋಮ ಪಟ್ಟಣದ ವಿಚಕ್ಷಣ ಸುಗಂಧದ್ರವ್ಯ ತಯಾರಿಸುವ ಮಿಸೆಸ್ ಬ್ಲೇಂಚ್ ಕೆವಿಟ್ ಎಂಬವಳು ತನ್ನ ಮೂಗನ್ನು 1,30,000 ರೂಪಾಯಿಗಳಿಗೆ ಇನ್‌ಶ್ಯೂರು ಮಾಡಿರುವಳಂತೆ! ಜೋರ್ಟನ್ ಸ್ಮಿತ್ ಮತ್ತು ವಾಲ್ಟರ್ ಹೇಗನ್ ಎಂಬಿಬ್ಬರು ಗಾಲ್ಫ್ ಆಟಗಾರರು ತಮ್ಮ ಕೈಕಾಲುಗಳನ್ನು ಒಬ್ಬನು 65,000 ಮತ್ತೊಬ್ಬನು 1,30,000 ರೂಪಾಯಿಗಳಿಗೆ ಇನ್‌ಶ್ಯೂರು ಮಾಡಿರುವರು. ಡಗ್ಲಸ್ ಫೇರ್ ಬ್ಯಾಂಕ್ಸ್, ಮೇರಿ ಪಿಕ್ ಫೋರ್ಡ್, ಗ್ಲೋರಿಯ ಸ್ವಾನ್ಸನ್, ನೋರ್ಮ ಮತ್ತು ಕಾನ್ಸ್‌ಸ್ಟೆನ್ಸ್ ಟಾಲ್ಮಡ್ಜ್, ಬೀಬ್ ಡ್ಯಾನಿಯೆಲ್ಸ್, ವಿಲ್ಮ ಬ್ಲೇಂಕಿ, ಜೋನ್ ಬೆನೋರ್, ರೋನಾಲ್ಡ್ ಕೊಲ್ಮಾನ್ ಮೊದಲಾದ ಪ್ರಸಿದ್ಧ ಸಿನೆಮು ನಟನಟಿಯರೆಲ್ಲಾ ತಮ್ಮ ಅಭಿನಯ ಕಾಲದಲ್ಲಿ ಮುಖಕ್ಷೇನಾದರೂ ತಗಲಿ ವಿರೂಪವಾಗಿ ತಮ್ಮ ಜನಾದರವು ಕಡಿಮೆಯಾಗುವ ಸಮಯ ಬಂದೀತೆಂದು ತಮ್ಮ ಮುಖಗಳನ್ನು ಇನ್‌ಶ್ಯೂರು ಮಾಡಿಸಿರುವರು. ಬೆನ್‌ಟರ್ಪಿನ್ ಎಂಬ ಸುಪ್ರಸಿದ್ಧ ವಿದೂಷಕ ನಟನು ತನ್ನ ಕಣ್ಣುಗಳನ್ನು ಇನ್‌ಶ್ಯೂರ್ ಮಾಡಿಸಿರುವನು.

ಸ್ವೀಕಾರ.

ಹುಬ್ಬಳ್ಳಿಯ ಹನ್ನೆರಡುಮಠದಲ್ಲಿ ವೇ|| ಗಂಜೆಗಟ್ಟಿ ಹಿರೇಮಠದ ಚನ್ನಬಸಯ್ಯನವರ ಮಾತೃಶ್ರೀಯವರೂ ಮಾತಾಮಹರೂ ಹಾಗೂ ಇವರ ಪತ್ನಿಯವರೇ ಮೊದಲಾದವರು ಶಿವದೀಕ್ಷಾ ಸಂಸ್ಕಾರವನ್ನು ಪಡೆದಸಮಯದಲ್ಲಿ ವೇ|| ಗಂಜೆಗಟ್ಟಿ ಹಿರೇಮಠದ ಚನ್ನಬಸವಯ್ಯನವರು ಪ್ರಭಾಪೋಷಣಾರ್ಥೇಸ್ವರ 5 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಮೈಸೂರು ರಾಜಧಾನಿಯ ನಿವಾಸಿಗಳಾದ ಮ|| ರಾ|| ಕೆ. ರಾಮಣ್ಣನವರ ಪುತ್ರಿ ಚಿ|| ಸೌ|| ಬಸವಮ್ಮನವರು ಶಿವಾಧೀನರಾಗಲು ಅವರ ಸ್ಮಾರಕವಾಗಿ, ಸದಾ ಧರ್ಮ ಕಾರ್ಯಗಳು ನೆರವೇರುವಂತೆ ಮ|| ರಾ|| ಕೆ. ಬಸಪ್ಪನವರು 2000 ರೂಪಾಯಿಗಳನ್ನು ದಾನಮಾಡಿ, ನ್ಯಾಯದವರ ಸ್ವಾಧೀನದಲ್ಲಿರಿಸಿ ಧರ್ಮಶಾಸನವನ್ನು ಬರೆಸಿದ ಮತ್ತು ಕಳೆದ ಆಗಸ್ಟ್ 31 ನೆಯ ತಾರೀಖಿನ ದಿವಸ ನಡೆಯಿಸಿದ 11ನೆಯ ದಿವಸದ ಆರಾಧನೆಯ ಸಮಯದಲ್ಲಿ ಪ್ರಭಾಪೋಷಣಾರ್ಥೇಸ್ವರ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಎಂ. ಪಿ. ಭೋಗಯ್ಯನವರು ಬಿ. ಎ. ಬಿ. ಎಲ್. ಅಡ್ವೊಕೇಟ್ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬಂಕಾಪುರ ತಾಲೂಕು ಹಂದಿಸೂರು ಸಂಸ್ಥಾನದ ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿ ಮಾನ್ವಿ ಬಂಕಾಪೂರ ಇವರ ಧರ್ಮಪತ್ನಿಯವರಾದ ಹ|| ಕುಂ|| ಸೌ|| ಶ್ರೀ ರಾಮಾಬಾಯಿಯವರು 27 ತಿಂಗಳ ಬಿಲ್ವವ್ರತವನ್ನು ನೆರವೇರಿಸಿ 19-8-29ನೆಯ ಸೋಮವಾರ ಸದರಿ ವ್ರತವನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಶಿಗ್ಗಾಂವಿ ಶ್ರೀಗಳವರ ಅಪ್ಪಣೆಯಮೇರೆಗೆ ಪ್ರಭಾಪೋಷಣಾರ್ಥೇಸ್ವರ ಸಮರ್ಪಿಸಿದ 4 ರೂಪಾಯಿಗಳು ಬಸನಗೌಡ ಹಾಲನಗೌಡ ಬಸನಗೌಡ ಮೇಡ್ಲೇರಿ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೂವಿನಹಡಗಲಿ ತಾಲೂಕು ಹೊಳಗುಂದಿಗ್ರಾಮದ ಮ|| ರಾ|| ಪಾಟೀಲ್ ಸಿದ್ಧಲಿಂಗನಗೌಡರು ತಮ್ಮ ಧರ್ಮಪತ್ನಿಯು ಈಗ 4-6 ವರ್ಷಗಳಿಂದಲೂ ಹಡೆದ ಮಕ್ಕಳೆಲ್ಲರೂ ನಷ್ಟವಾಗುತ್ತಾ ಬಂದಿದ್ದು, ಜಗದಾಚಾರ್ಯರಿಗೆ ಹರಿಕೆಮಾಡಿಕೊಂಡಮೇಲೆ ಹೆಣ್ಣುಶಿಶುವು ಜನಿಸಿ ಸೌಖ್ಯವಾಗಿರುವ ಸಂತೋಷಕ್ಕಾಗಿ ಪ್ರಭಾಪೋಷಣಾರ್ಥೇಸ್ವರ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಕೊಪ್ಪಳ ಡಿ|| ಕುಪ್ಪಿನಪೇಟೆಗೇರಿಯಲ್ಲಿರುವ ಗೌರಮ್ಮ ಬಿನ್ನಾಳ ಇವರ ಮೊಮ್ಮಕ್ಕಳಾದ ಚಂದ್ರಶೇಖರಪ್ಪ ಮತ್ತು ಚನ್ನಬಸಪ್ಪನವರಿಬ್ಬರೂ ಅತಿಶಯರೋಗಪೀಡಿತರಾಗಿದ್ದು ಶ್ರೀ ಜಗದಾಚಾರ್ಯರ ಕೃಪಾಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಾರ್ಥೇಸ್ವರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಚನ್ನಪ್ಪ ವ ವೀರಭದ್ರಪ್ಪ ಅಂಗಡಿ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ನಿವಾಸಿಗಳಾದ ಮ|| ರಾ|| ಗದಿಗಯ್ಯ ಹುಚ್ಚಯ್ಯ ಹೊಸ್ಮಾಪುರಮಠ ವಕೀಲ ಇವರು ತಾವು ಮಾಡಿಸಿದ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಾರ್ಥೇಸ್ವರ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಹರಪನಹಳ್ಳಿ ತಾಲೂಕು ಅಣಜಿಗೇರಿ ಮುಬರಾ ಜಂಗಮಕುಂಬಿಗೇರಿ ವಾಸಿಗಳಾದ ಮ|| ರಾ|| ಗೌಡ್ರ ಕೆಂಚನಗೌಡರ ಪುತ್ರ ಕೆಂಚನಗೌಡರು ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥೇಸ್ವರ ಸಮರ್ಪಿಸಿದ 1 ರೂಪಾಯಿಯು ವೇ|| ಎಂ. ವೀರಭದ್ರಪ್ಪಯ್ಯನವರು ಸ್ಕೂಲ್‌ಮಾಸ್ಟರ್ ಇವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಕಲಘಟಗಿ ತಾಲೂಕು ಇನಾಂ ನಾಗನೂರು ಗ್ರಾಮದ ವೇ|| ಸಂಗಯ್ಯನವರು ಚಿಕ್ಕಮಠ ಇವರು ತಮ್ಮ ಚಿರಂಜೀವಿಗಳ ದೀಕ್ಷಾಮಹೋತ್ಸವಸಮಯದಲ್ಲಿ ಪ್ರಭಾಪೋಷಣಾರ್ಥೇಸ್ವರ 1 ರೂ. ಯನ್ನು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—

ಶ್ರೀ ದುಂಡಿಬಸವೇಶ್ವರ ವಾಚನಾಲಯ.

ಆಲೂರ (ಹಾನಗಲ್ಲ)

ತಾ॥ ೯-೮-೧೯೨೯ ನೆಯ ದಿವಸ ಈ ಊರ ವೀರಶೈವ ಪ್ರಮುಖಜನರು ದುಂಡಿಬಸವೇಶ್ವರ ದೇವಾಲಯದಲ್ಲಿ ಕೂಡಿ ಸದರೀ ದೇವರಿಗೆ ವಿಧ್ಯುಕ್ತವಾಗಿ ಅಭಿಷೇಕಮಾಡಿಸಿ ಹೊಸದ ಶೋಡಶೋಪಚಾರಗಳಿಂದ ಪೂಜೆಮಾಡಿಸಿದರು. ಅನಂತರ ಸದರಿ ದೇವಾಲಯದಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿದರು. ಈ ವಾಚನಾಲಯವನ್ನು ಸ್ಥಾಪಿಸಿದ ಉದ್ದೇಶವು ಮುಖ್ಯವಾಗಿ ವೀರಶೈವರಲ್ಲಿ ಧರ್ಮ ಜಾಗ್ರತೆಯನ್ನುಂಟುಮಾಡುವದು. ಮತ್ತು ಸದರಿ ದೇವಸ್ಥಾನದ ಪೂಜಾವಿನಿಯೋಗವು ನಿರಂತರ ಸಾಗುವಂತೆ ವ್ಯವಸ್ಥೆಮಾಡುವದೇ ಆಗಿರುತ್ತದೆ. ಈವಾಚನಾಲಯಕ್ಕೆ ಧನಸಹಾಯ ಮಾಡುವುದಕ್ಕೆ ಒಪ್ಪಿಕೊಂಡ ಜನರು ಮತ್ತು ರಕಮುಗಳ ವಿವರ

(1) ದುಂಡಪ್ಪ ಬಸಪ್ಪ ಕುಪ್ಪದ 200 ರೂ. (2) ಬಸಪ್ಪ ಸಂಗಪ್ಪ ಮಿರ್ಜಿ 200 ರೂ. (3) ಫಕೀರಪ್ಪ ಶಿದ್ಲಿಂಗಪ್ಪ ಚೌಸಷ್ಟಿ 100 ರೂ. (4) ವೀರಪ್ಪ ಸಂಗನಬಸಪ್ಪ ಕೊಲ್ಲಾವರ 100 ರೂ. (5) ಚನ್ನಬಸಪ್ಪ ಶಿದ್ರಾಮಪ್ಪ ಎಲಿವಾಳದ 100 ರೂ. (6) ಚನ್ನಬಸಪ್ಪ ರುದ್ರಪ್ಪ ವೀರಣ್ಣನವರ 100 ರೂ. (7) ಮಹಾರುದ್ರಪ್ಪ ವೀರಪ್ಪ ಬೈಲಪ್ಪನವರ 100 ರೂ. (8) ದುಂಡಪ್ಪ ಸೋಮಪ್ಪ ನೀರಲಗಿ 50 ರೂ. (9) ನಾಗಪ್ಪ ಸೋಮಪ್ಪ ನೀರಲಗಿ 50 ರೂ. (10) ಬಸೆಟ್ಟೆಪ್ಪ ತೋಟಪ್ಪ ಕೊಲ್ಲಾವರ 50 ರೂ. (11) ಅಡಿವಪ್ಪಾಯ್ಯ ವೀರಭದ್ರಪ್ಪ ಪತ್ರೀಮಠ 25 ರೂ. (12) ಚನ್ನಪ್ಪ ಸಾತಪ್ಪ ಬೆಲ್ಲದ 25 ರೂ. (13) ಗುರುಪಾದಪ್ಪ ಚನ್ನಮಲ್ಲಪ್ಪ ಗೋಧಿ 25 ರೂ. (14) ಶಿವಯೋಗೆಪ್ಪ ಗುರುಪಾದಪ್ಪ ಬೆಲ್ಲದ 25 ರೂ. (15) ರುದ್ರಪ್ಪ ಶಿವಲಿಂಗಪ್ಪ ಕೊಲ್ಲಾವರ 25 ರೂ. (16) ಶಿದ್ರಾಮಪ್ಪ ಮಾಲಿಂಗಪ್ಪ ಮಹಾಲಿಂಗಶೆಟ್ಟಿ 10 ರೂ. (17) ಸಂಗಪ್ಪ ವೀರೂಪಾಕ್ಷಪ್ಪ ಮೋಟಗಿ 10 ರೂ. (18) ಮುತ್ತಿನ ಕಂತಯ್ಯನವರು ಗುರುಸಿದ್ಧಯ್ಯನವರು ಮುತ್ತಿನಕಂತಿಮಠ 10 ರೂ. (19) ಕಳಕಪ್ಪ ಸಂಗಪ್ಪ ರಾಜೂರ 10 ರೂ. (20) ಸಂಗಪ್ಪ ಶಿದ್ಧಪ್ಪ ಮುಚ್ಚಂಡಿ 10 ರೂ. (21) ಶಿದ್ಧೇಶ್ವರಶಾಸ್ತ್ರಿಗಳು ಪಟ್ಟದಕಲ್ಲಕ 5 ರೂ. (22) ನಾಗಯ್ಯನವರು ಸಣ್ಣೂರ ಮಠ 5 ರೂ. (23) ಚನ್ನವೀರಪ್ಪ ಫಕ್ಕೀರಪ್ಪ ಉಪ್ಪಿನ 5 ರೂ. ಈ ಪ್ರಕಾರ ವಾಗ್ದಾನ ಮಾಡಿದನಂತರ ಮುಂದೆ ಜನರಲ್‌ಕಮಿಟಿಯನ್ನು ಕರೆಯಬೇಕೆಂದೂ ಆ ದಿವಸ ಸಂಸ್ಥೆಯ ನೇಮಗಳ ಸ್ವೀಕಾರ, ಚೇರಮನ್ ಸೆಕ್ರೆಟರಿಯವರನ್ನು ಆರಿಸುವುದನ್ನೂ ಮಾಡಬೇಕೆಂದು ನಿಶ್ಚಯಿಸಿ ಶ್ರೀ ಹರ ಶಿವನ ಮಂಗಲದೊಡನೆ ಆ ದಿವಸದ ಕೆಲಸವು ಮುಗಿಸಲ್ಪಟ್ಟಿತು.

J. M. Kollawar,
ಪ್ರತ್ಯಕ್ಷದರ್ಶಿ.

ADRESS

Presented by the Inmates of the Anathalaya, Mysore,

To Mr. M. Venkatakrishnayya,

On his 85th Birthday.

Beloved Sir,

It is with great joy, love and esteem that we offer this Address to you on reaching the 85th Birthday of your noble and illustrious career. Perhaps there is no one to day, who by his many-sided endeavours, achievements and contributions, could be said to be symbolical of Mysore as you. Yours has been a great life epitomising within its compass varied lines of work well-done, which even if pursued individually would be sufficient to bring honour and esteen for a man.

For full two generations and more you have been part of the history of Mysore, and to no small extent its moulder. In the fields of Education, Journalism, literary culture, civics, politics and free thought, you have been both a pioneer and a preceptor. To day the one outstanding figure for all that stands for complete citizenship, is yours.

As an educationist you are as distinguished in Mysore as Dr. Arnold. As a Journalist you have been as fearless and steadfast as Stead, and as worthy of reverence as Scott. As a Parliamentarian you stand for Mysore in the place of T. P. O'Connor. As spokesman and tribune of the people, you have been as brilliant and fearless as Wilkes. As a public benefactor and philanthropist, flowing with the milk of human kindness, you can only be compared with Dr. Bernardo, Howard, and Dr. Fawcett.

YOU are one of the self-made men of history, who have made yourself not only into a great and good man, but have succoured, raised, and helped innumerable others to make themselves noble and useful. You are the founder, prop and nurse of numerous benevolent institutions in Mysore. To us and the Anathalaya, though our benefactors and those to whom we owe life-long gratitude are many, you are the very life. You are our father, teacher, friend, master, and exemplar. Words fail us to discribe all that we owe to your kindness, care, and solicitude. As the present becomes the past, and as we grow older and become fathers of families, the memory of the days spent under your loving protection will abide with us, and your image will remain graven in our hearts.

SOME one speaks of Rockefeller, who observed his 90th birthday last month, as the dean of world figures: Edison and President Hindenburg are 82: Clemenceau is 87. You may similarly be said to be the dean of Indian public men to-day. You are only younger than Dadabhoy. You are older than Surendranath. You have passed the age of Voltaire and Talleyrand, and reached the age of Cato, Newton, and Benjamin Franklin.

BUT as age advances, the cares that weaken, and sorrows that unman, crowd around one. Our heartfelt sympathies go to you in your hours of trial. Nevertheless, if we may do so without being deemed selfish, and if God, who tempers the wind for the shorn lamb, will soften the buffets of fate for your decrepit old age, we pray that this day may have many returns as the seasons evolve, and that your inspiring life and elevating presence may be spared to us for long years to come.

Mysore,
1-9-29.

Beloved, Esteemed, and Honoured Sir,
we remain,
Your faithful and devoted wards,
THE INMATES OF THE ANATHALAYA.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವೋನಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಸುತ್ತೇವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.**

[5]

ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋದವೇ ಮೊದಲಾದ ರೋಗಪೀಡಿತರಾದಂಗೆ ಔಷಧಗಳಲ್ಲಿ ಇದು **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಎಂತಹ ಜ್ವರಗಳಾಗಲೀ. **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಪಂಡಿತವಾಗಿರುವ ಸಂಪೂರ್ಣ ಬಿಟ್ಟೋಡುವುದು. **'ಕೊಡಗಿನ ಗುಡುಗುಡು!'** (ಛಳಿ).

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ.

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0. [5]

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಭಗಿನಿಯರೆ! ನೀವು ಅವಶ್ಯವಾಗಿ ಓದಬೇಕಾದ ಪುಸ್ತಕ

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ.

ಕ್ರಯ ೬ ಆಣೆ. ಅಂಚೆವೆಚ್ಚ ೧ ಆಣೆ.

ಡಾಕ್ಟರ್ ರಾಮರಾಯರಿಂದ ರಚಿಸಲ್ಪಟ್ಟು, ಸುಮಾರು ನೂರು ಪುಟಗಳನ್ನೊಳಗೊಂಡ ಸಚಿತ್ರವಾದ ಈ ಪುಸ್ತಕದಲ್ಲಿ ನಿಮ್ಮ ಗರ್ಭದಶೆಯಲ್ಲಿಯೂ, ಪ್ರಸವಕಾಲದಲ್ಲಿಯೂ, ಅನಂತರದಲ್ಲಿಯೂ ನಿಮಗೆ ಸುಖಪ್ರಸವವನ್ನೂ, ನಿಮ್ಮ ಮತ್ತು ನಿಮ್ಮ ಶಿಶುವಿನ ದೇಹಾರೋಗ್ಯವನ್ನೂ ಪಡೆಯಲು ಅವಶ್ಯಕವಾದ ಸೂಚನೆಗಳು ತಿಳಿಗನ್ನಡದಲ್ಲಿ ಸಚಿತ್ರವಾಗಿ ಕೊಡಲ್ಪಟ್ಟಿವೆ.

ನಿಮ್ಮಲ್ಲಿ ಅನೇಕರು ತಿಳುವಳಿಕೆಯಿಲ್ಲದೆ ಮೇಲ್ಕಂಡ ಸಮಯಗಳಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಬಿಟ್ಟು ಅನೇಕ ಅಪಾಯಗಳಿಗೂ, ತೊಂದರೆಗಳಿಗೂ ಗುರಿಯಾಗುವಿರಿ. ತಾತ್ಕಾಲಿಕ ಸುಲಭ ಚಿಕಿತ್ಸಾಕ್ರಮಗಳಿಂದ ನಿಮ್ಮನ್ನು ಅಂಥ ತೊಂದರೆಗಳಿಂದ ತಪ್ಪಿಸುವುದೇ ಈ ಪುಸ್ತಕದ ಉದ್ದೇಶವು.

ಸಮರ್ಥ ವೈದ್ಯರ ಮತ್ತು ದಾದಿಯರ ಸಹಾಯವು ದೊರಕದ ಕುಗ್ರಾಮಗಳಲ್ಲಿರತಕ್ಕವರಿಗೆ ಈ ಪುಸ್ತಕವು ಅನುಕೂಲ್ಯವಾಗಿರುವುದು.

ಗರ್ಭದ ಸೂಚನೆಗಳು, ಗರ್ಭಿಣಿಯರ ದೇಹಾರೋಗ್ಯರಕ್ಷಣೆ, ಗರ್ಭಕಾಲದಲ್ಲಿ ಕಾಣಿಸಬಹುದಾದ ವ್ಯಾಧಿಗಳು, ಗರ್ಭಕ್ಕೆ ಸಂಭವಿಸಬಹುದಾದ ಅಪಾಯಗಳು, ಪ್ರಸವಕಾಲದಲ್ಲಿ ಶುಚಿತ್ವಪದ್ಧತಿಗಳು, ಸೂತಿಕಾದಿನಗಳಲ್ಲಿ ಒದಗಬಹುದಾದ ಅಪಾಯಗಳು, ಶಿಶುವಿನ ಉಪಚಾರ ಮತ್ತು ಶಿಶುವಿಗೆ ಆಹಾರವನ್ನು ಕೊಡುವ ಕ್ರಮಗಳು ಇವೇ ಮುಂತಾದ ಅನೇಕ ವಿಷಯಗಳು ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿವೆ.

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಮ್. ಎಲ್. ಸಿ. ಮದರಾಸು. "ಮುದ್ದಾದ ಈ ಸಣ್ಣಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಹಿಂದೂಪತ್ರಿಕೆ:—1-4-28. "ಆನರಬಲ್. ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, ನಮ್ಮ ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ ಓದಿಯೇ ತೀರಬೇಕೆಂದು ಅವರು ಧಾರಾಳವಾಗಿ ಹೇಳಬಲ್ಲರು. ಜನಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಲ್ಲಿ ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಿ ಬರೆಯಲಾಗಿದೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳುವಳಿಕೆಯಿಲ್ಲದುದರಿಂದ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಈ ಪುಸ್ತಕವನ್ನೋದಿ ತಿಳಿದಿದ್ದರೆ ಅಂತಹ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನು ಕೇಳತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮನಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [11]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

ಸತ್ತ ದ ಜಗತ್ತು] **೧೦೦೦ ರೂಪಾಯಿ ಇನಾಮು** [ಆದೇವನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜೆ] **ವಜ್ರಾಂಗ ಸುಂದರಪಾಕ.** [ಸ್ಪರ್ಧೆ

ಧಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋದು, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋದು, ಚಿತ್ತವಿಕಾರ ನಿದ್ರೆಯು ಬಾರದೆ ಇರೋದು ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಸಾಥ ಆಗುತ್ತದೆ. ಧಾತು ದಪ್ಪವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಕಾಲಿಮಕಂದ, ಮಧುಕಂದ, ಜಪಾಕಂಧ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸಿವಲೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಾಯಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕವಚ ಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಶಾಲೀನುಖಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ಬಶೀಕಟ್ಟಿಗೆ, ಶತಾವರಿ, ಸರೀಮಗಜ, ಆಲದಹಾಲು, ವಾಕೇಂಭಾತಾ, ಗೋಖರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಸಿಲಾಜಿತ, ಜಾಪೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, **ಕಲ್ಲುಸಕ್ಕರೆ,** ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸೊಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಸಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಪಾರದರೋಗ, ದಟ್ಟಿಸೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು, 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [9]

ಪತ್ತೆ:—ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ॥ ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[22] (೮೪೮) ಗಂಜೀಪೇಟೆ, ಪೂನಾಸಿಟಿ

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಧಬನಾಸೆಂಘದವರು ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನು ವೀಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧೨ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೧ ಆಣೆ
ಬಸವಧ್ವಾಂತ ದಿವಾಕರ	೪ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೨ ಆಣೆ
ವೀರಶೈವಾಚಾರವಿಧಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೪ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೧ ಆಣೆ
ವಿವಾಹವಿಧಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಲ್ಪಬೆಲೆ! ಅಧಿಕ ಲಾಭ!!

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,

[2] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಷ್ಟು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿಪಿ. ೦-೬೦-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[11] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಸೆಪ್ಟಂಬರ್ ೧೯೨೯ [ಸಂಚಿಕೆ ೧೯.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನವಂತೆ ರಕ್ಷಿಸತಕ್ಕದ್ದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಪಂಚಾಚಾರ್ಯೇಭ್ಯೋ ನಮಃ

ಪುರಾಣಶ್ರವಣ ಮತ್ತು ದೀಕ್ಷಾಸಮಾರಂಭ.

ಸಾತಾರ.

ಮಹಾರಾಷ್ಟ್ರ ಜಿಲ್ಲೆಗಳ ಪೈಕಿ ಒಂದಾದ ಸಾತಾರಾ (ಶಹರದಲ್ಲಿ) ಇದೇ ಶ್ರಾವಣ ಶು|| ೧ ರಿಂದ ವೀರಶೈವಧರ್ಮಸಂಬಂಧಿ ಪುರಾಣವು ಪ್ರಾರಂಭವಾಗಿ ವಿಶೇಷವೈಭವದಿಂದ ನಡೆಯುತ್ತಿದೆ. ಇತರ ಜಿಲ್ಲೆಗಳಿಗಿಂತ ಈ ಸಾತಾರಾ ಜಿಲ್ಲೆಯು ಧಾರ್ಮಿಕ ವಿಷಯದಲ್ಲಿ ಬಹಳ ಹಿಂದೆ ಉಳಿದಿದ್ದು, ಇತ್ತೀಚೆಗೆ ಇಲ್ಲಿಯ ವ್ಯಾಪಾರಿಗಳಾದ ವೇ|| ಕೃಷ್ಣಶಂಕರಸ್ವಾಮಿ, ಶ್ರೀಯುತ ಶಂಕರರಾವಶೇಟ, ವ. ಮಾರುತಿರಾವ ಚೌಕವಾಲೆ ಇವರೆಲ್ಲರ ಚಳವಳಿಯಿಂದ ಈಗ ಇಲ್ಲಿಯ ವೀರಶೈವ ಜನಾಂಗದಲ್ಲಿ ಜಾಗ್ರತೆಯಾಗುತ್ತಿರುತ್ತದೆ. ಸದರಿ ಪುರಾಣವನ್ನು ವೇ|| ಶಾ|| ಗಂಗಾಧರ ಕೃಷ್ಣಶಂಗಶಾಸ್ತ್ರಿ ಸಾತಾರಕರವರು ಸಂಗೀತ ರೂಪದಿಂದ ಸುಶ್ರಾವ್ಯವಾಗಿ ಹೇಳುತ್ತಾರೆ. ಪ್ರತಿನಿತ್ಯವೂ ಸ್ತ್ರೀಪುರುಷಶ್ರೋತೃಸಮೂಹವು 300-400 ರ ವರೆಗೆ ಇರುತ್ತದೆ. ಅಲ್ಲಿ ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯರೇ ನಿಜವಾದ ಜಗದ್ಗುರುಗಳು ಇವರ ಹೊರತು ವೀರಶೈವರಿಗೆ ಅನ್ಯದೈವವೇ ಇಲ್ಲವೆಂತಲೂ ಹಾಗೂ ಅಷ್ಟಾವರಣವೇ ಮುಖ್ಯವಾದವುಗಳೆಂತಲೂ ಬೋಧಿಸುತ್ತಾರೆ. ಮತ್ತು ಪ್ರತಿಯೊಬ್ಬ ವೀರಶೈವನು ತಮ್ಮ ತಮ್ಮ ಗೋತ್ರಸೂತ್ರಕ್ಕನುಸಾರವಾಗಿ ತಮ್ಮ ಕುಲಗುರುಗಳ ಕಡೆಯಿಂದಲೇ ದೀಕ್ಷಾಸಂಸ್ಕಾರವನ್ನು ಹೊಂದಬೇಕೆಂದು ಬೋಧಿಸಿದಪ್ರಕಾರ ಇಲ್ಲಿಯ ಶೆಟ್ಟರಾದ ಶ್ರೀಮಂತ ಶಂಕರರಾವ ಮತ್ತು ರೇವಣಸಿದ್ಧಪ್ಪ ಉರ್ಫ್ ಬಾಬುರಾವ ಶೆಟ್ಟರ ಇವರು ತಮ್ಮ ತಮ್ಮ ಕುಟುಂಬ ಸಹಿತ ಮತ್ತು ಇಲ್ಲಿಯ ಸೌ|| ಮಾಸ್ತರ ರಾ|| ರ ಸಹ ತಮ್ಮ ಕುಟುಂಬ ಸಹಿತ ತಮ್ಮ ಗುರುಗಳಾದ ನಾಲತವಾಡ ಬೃಹನ್ಮಠಾಧ್ಯಕ್ಷ ಶ್ರೀ ಗಂಗಾಧರಸ್ವಾಮಿ ಪಟ್ಟದ ಮಹಾಸ್ವಾಮಿಗಳನ್ನು ಬರಮಾಡಿಕೊಂಡು ಅವರಿಂದ ಇದೇ ಶ್ರಾ|| ಬ|| ೧೪ ಸೋಮವಾರ ದಿವಸ ವಿಧ್ಯುಕ್ತಪ್ರಕಾರ ದೀಕ್ಷಾಸಂಸ್ಕಾರವನ್ನು ಕೈಕೊಂಡರು. ಮರುದಿವಸ ಮಹಾ ಗಣಾರಾಧನೆಯು ಜರಗಿತು. ಅದೇ ದಿವಸ ರಾತ್ರಿ ೮ ಗಂಟೆಗೆ ಸರಿಯಾಗಿ ಶೆಟ್ಟರ ಮಹಡಿಯಲ್ಲಿ ಶ್ರೀ ನಾಲತವಾಡಕರ ಗುರುಮಹಾರಾಜರ ಅಧ್ಯಕ್ಷತೆಯಲ್ಲಿ ಸಭೆಸೇರಿ ಧಾರ್ಮಿಕ ಮತ್ತು ಶಿಕ್ಷಣ ವಿಷಯವಾಗಿ ಸಾ|| ವೇ|| ಶಾಸ್ತ್ರಿಗಳ ಮತ್ತು ಹೆ|| ಮಾಸ್ತರ ವ್ಯಾಖ್ಯಾನಗಳಾದವು. ಅನಂತರ ಅಧ್ಯಕ್ಷ ಸಾ|| ರ ಸಮಾರೋಪಭಾಷಣವಾದ ನಂತರ ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಧಾರ್ಮಿಕಕಾರ್ಯಗಳಲ್ಲಿ ಧನರೂಪದಿಂದ ಪ್ರಭಾಪೋಷಣಕ್ಕೋಸ್ಕರ ಸಹಾಯ ಮಾಡಬೇಕೆಂದು ಅಜ್ಞೆಮಾಡಿ ಅಧ್ಯಕ್ಷ ಸಾಹೇಬರವರಿಗೆ ಹಾರಗಜರೆ ತಾಂಬೂಲಾದಿಗಳನ್ನು ಸಮರ್ಪಿಸಿದ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಗುರುಮಹಾರಾಜರ ಆಜ್ಞಾಪ್ರಕಾರ ಶ್ರೀಮಂತ ಶೆಟ್ಟರು ಪ್ರಭಾಪೋಷಣಕ್ಕೋಸ್ಕರ ೨ ರೂಪಾಯಿಗಳನ್ನು ಕಳುಹಿಸಿರುವರು.

ಪ್ರತ್ಯಕ್ಷದರ್ಶಿ,

ವಿಶ್ವನಾಥರಾವ ಉದಾಳೆ ಸಾತಾರ ಸಿಟಿ.

ಪ್ರಥಮ ಲಂಬಾಣಿ ಹಾಸ್ಟಲ್ ಮಹೋತ್ಸವ ಅರಸೀಕೆರೆ.

ಮೇಲ್ಕಂಡ ಹಾಸ್ಟಲು ಹಾಸನದ ಡಿಸ್ಟ್ರಿಕ್ಟು ಅರಸೀಕೆರೆ ಆಸಬಾದಲ್ಲಿ ತಾ|| 3-9-1929 ನೆಯ ಸಾಯಂಕಾಲ 5ಗಂಟೆಗೆ ಹಾಸನದ ಡಿಸ್ಟ್ರಿಕ್ಟು ಪಿ| ಕ| ಸಾಹೇಬರವರಾದ ಮ|| ರಾ|| ಎಸ್. ಅಬ್ದುಲ್‌ವಾಜಿದ್ ಬಿ.ಎ. ಯವರಿಂದ ತೆರೆಯಲ್ಪಟ್ಟಿತು. ಈ ಜನಗಳ ಪರವಾಗಿ ಸಂಘದ ಸೆಕ್ರೆಟರಿ ಮ|| ರಾ|| ಬಿ ಸಂಜರಾಮನಾಯ್ಕರು ಸಂಘದ ಅಭಿವೃದ್ಧಿಯ ರಿಪೋರ್ಟನ್ನು ಓದಿಹೇಳಿದರು. ಅನಂತರ ಪ್ರೆಸಿಡೆಂಟ್ ಸಾಹೇಬರವರು, ಈ ಜನಗಳ ಪ್ರೋತ್ಸಾಹಗಳನ್ನು ಬಹಳ ಉತ್ಸಾಹದಿಂದ ಇಂಗ್ಲೀಷಿನಲ್ಲಿ ಅಪ್ಪಣೆಕೊಡಿಸಿದರು ಅದನ್ನು ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಯುಕನಾಮಿಕ್ ಸೂಪರಿಂಟೆಂಟ್ ಸಾಹೇಬರವರಾದ ಮ|| ರಾ|| ಹೆಚ್. ಮಲ್ಲಪ್ಪನವರು ಅಪ್ಪಣೆಕೊಡಿಸಿದರು. ಅನಂತರ ಈ ಸಭೆಗೆ ದಯಮಾಡಿಸಿದ್ದ ಸಬ್‌ಡಿವಿಜನ್ ಸಾಹೇಬರಾದ ಮ|| ರಾ|| ಸಿ. ಗೋಪಾಲಾಚಾರ್ ಬಿ.ಎ, ಬಿ.ಎಲ್. ರವರು, ಮ|| ರಾ|| ಅರಸೀಕೆರೆ ಕೋಲಾ ನರಸಿಂಹಶೆಟ್ಟರವರು, ಮತ್ತು ಯಡಕೊರೆ ಮ|| ರಾ|| ಕೋಲಾ ಕೆಂಚರಾಮಶೆಟ್ಟರು. ಮ|| ರಾ|| ಛಂಟೇಕಾರಿ ಬಸಪ್ಪನವರು, ಮ|| ರಾ|| ಎ. ಕೆಂಚಪ್ಪನವರು, ಮ|| ರಾ|| ವೆಂಕಟರಾಮಪ್ಪನವರು ಮೊದಲಾದ ದೊಡ್ಡ ಮನುಷ್ಯರುಗಳೊಂದಿಗೆ ಆರಂಭಮಹೋತ್ಸವವು ನೆರವೇರಿಸಲ್ಪಟ್ಟಿತು. ನೂರು ಜನದ ಮೇಲ್ಪಟ್ಟು ಲಂಬಾಣಿಯವರು ಸೇರಿದ್ದರು. ಮ|| ರಾ|| ಹಾರನಹಳ್ಳಿ ಲಿಂಗಪ್ಪಶೆಟ್ಟರವರು ಈ ಜನಗಳ ಅಭಿವೃದ್ಧಿ ವಿಚಾರವಾಗಿ ಮತ್ತು ಪ್ರೆಸಿಡೆಂಟರವರ ಗುಣಕಥನವನ್ನು ಎಲ್ಲರ ಮನಸ್ಸು ಕರಗುವಂತೆ ಭಾಷಣಮಾಡಿದರು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ನಡೆದು ಗಂಧಪುಷ್ಪ ತಾಂಬೂಲಾದಿಗಳನ್ನು ವಿನಿಯೋಗಿಸಿದನಂತರ ಅಂದಿನ ಕಾರ್ಯವು ಮುಕ್ತಾಯವಾಯಿತು. ಈ ಲಂಬಾಣಿಜನಗಳ ವಿದ್ಯಾಭ್ಯಾಸಕ್ಕೆ ಮತ್ತೆಲ್ಲಿಯೂ ಅನುಕೂಲವಿಲ್ಲ. ಈ ಹಾಸ್ಟಲಿಗೆ ಸೇರುವ ಲಂಬಾಣಿ ವಿದ್ಯಾರ್ಥಿಗಳು ಈ ಕೆಳಗೆ ಕಂಡ ಅಡ್ರಸ್ಸಿಗೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು ಅದು ಮೊಹನತ್ತಿನಿಂದ ಏರ್ಪಟ್ಟು ಸೂಪರ್ವೈಸರವರಿಗೆ ಒಳಪಟ್ಟಿದ್ದಾಗಿರುತ್ತೆ.

ಬಿ. ಸಂಜರಾಮನಾಯ್ಕ.

ತಾ|| 5-9-29. ಸೆಕ್ರೆಟರಿ,

ಲಂಬಾಣಿಸಂಘ ಅರಸೀಕೆರೆ.

ಸ್ವೀಕಾರ.

ಬಳ್ಳಾರಿ ಡಿ|| ಹೂವಿನ ಹಡಗಲಿ ತಾ|| ಹೊಳಗುಂದಿ ಮಜರಾಭಾವಿಹಳ್ಳಿ ಗ್ರಾಮದ ಸೋಗಿ ಮರುಳಸಿದ್ದಪ್ಪನವರ ಪುತ್ರಿ ಹು|| ಕುಂ|| ಕೋ|| ಗೌರಮ್ಮನನ್ನು ಹಡಗಲಿ ತಾಲೂಕು ಬೂದನೂರು ಗ್ರಾಮದ ರಾ|| ಪಾಟೀಲ್ ರುದ್ರಗೌಡರಿಗೆ ಕೊಟ್ಟು ನೆರವೇರಿಸಿದ ಹಿರೇವಿಳ್ಯದ ಕಾರ್ಯದಲ್ಲಿ ಡಿ|| ಮತ್ತು ತಾ|| ಬೋರ್ಡ್ ಮೆಂಬರು ಮ|| ರಾ|| ಹೊಳಗುಂದಿ ಹಲಗಪ್ಪನವರ ದೊಡ್ಡಹಾಲಪ್ಪನವರ ದ್ವಾರಾ ಬಂದ 2 ರೂ. ಗಳು, ಹಾಗೂ ಸದ್ರಿ ಭಾವಿಹಳ್ಳಿಗ್ರಾಮದ ವೇ|| ಬುರ್ಲಕಟ್ಟಿ ಮಠದ ಗುರುಬಸವಯ್ಯನವರ ಪುತ್ರರಾದ ಚಂದ್ರಶೇಖರಯ್ಯನವರು ಪಂಚಾಕ್ಷರ ಸ್ವಾಮಿಗಳಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಶ್ರೀ ಜಗದಾಚಾರ್ಯರ ಕೃಪಾಬಲದಿಂದ ಪೂರ್ಣ ಗುಣವಾದ ಸಂತೋಷಾರ್ಥವಾಗಿ ಒಪ್ಪಿಸಿದ 5 ರೂ. ಗಳು ಒಟ್ಟು 7 ರೂಪಾಯಿಗಳು ಮ|| ರಾ|| ಎಸ್. ಬಿ. ಸಣ್ಣತೋಟಪ್ಪನವರ ದ್ವಾರಾ ತಲ್ಪಿರುತ್ತವೆ.

ಹರಪನಹಳ್ಳಿ ತಾ|| ಕಣ್ವಿಹಳ್ಳಿ ಗ್ರಾಮದ ವಿರುಪಣ್ಣನವರ ಬಸಪ್ಪನವರು ಹೊಸಪೇಟೆ ತಾ|| ಧಣಾಯಕನಕೇರಿ ಲಿಂಗಪ್ಪನವರ ಮಗ ಚಿ|| ಬಸಪ್ಪನನ್ನು ವಿಧಿವತ್ತಾಗಿ ದತ್ತಕಪುತ್ರನನ್ನಾಗಿ ಸ್ವೀಕರಿಸಿದ ವೇಳೆಯಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ರವಾನಿಸಿರುತ್ತಾರೆ.

ಮೈಸೂರು ಡಿ|| ಗುಂಡ್ಲುಪೇಟೆ ತಾ|| ಚಿಕ್ಕತುಪ್ಪೂರುಗ್ರಾಮದ ಶಿವಪೂಜಾ ಮಠಾಧ್ಯಕ್ಷರಾದ ವೇ|| ಪಟ್ಟದ ಶಿವಲಿಂಗಮೂರ್ತಿಗಳಿಗೆ 2-3 ತಿಂಗಳಿಂದಲೂ ಪ್ರಾಪ್ತವಾಗಿದ್ದ ಪ್ರಬಲರೋಗವು ಪಂಚಾಚಾರ್ಯರ ಆಶೀರ್ವಾದ ಬಲದಿಂದ ಸಂಪೂರ್ಣ ಗುಣವಾದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ 2½ ರೂಪಾಯಿಗಳನ್ನು ಸಮರ್ಪಿಸಿರುತ್ತಾರೆ.

ಮಹಾರಾಷ್ಟ್ರ ಜಿಲ್ಲೆಗೆ ಸೇರಿದ ಸತಾರಾಶಹರದಲ್ಲಿ ಶ್ರೀಮಂತ ಶಂಕರರಾವ್ ಮತ್ತು ರೇವಣಸಿದ್ಧಪ್ಪ ಉರ್ಫ್ ಬಾಬುರಾವಶೆಟ್ಟರೇ ಮೊದಲಾದವರು ತಮ್ಮ ಕುಟುಂಬಸಮೇತರಾಗಿ ದೀಕ್ಷಾಸಂಸ್ಕಾರವನ್ನು ಹೊಂದಿದ ಸಮಯದಲ್ಲಿ ನಾಲತವಾಡ ಬೃಹನ್ಮಠಾಧ್ಯಕ್ಷರಾದ ವೇ|| ಗಂಗಾಧರಸ್ವಾಮಿಗಳ ಅಭಿಪ್ರಾಯದಂತೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ವೇ|| ಗಂಗಾಧರ ಕೃಷ್ಣಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ—

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವರ ಸಂಘ ಮದ್ರಾಸು.

ಇದೇ ಸೆಪ್ಟಂಬರು ತಿಂಗಳು 1 ನೆಯ ತಾರೀಖು ಭಾನುವಾರ ಮೂರುಗಂಟೆಯಲ್ಲಿ ಮದ್ರಾಸಿನಲ್ಲಿರುವ ವೀರಶೈವರ ಮತ್ತು ಎಲ್ಲಾ ಪ್ರಾಂತಗಳಿಂದಲೂ ವಿದ್ಯಾಭ್ಯಾಸಕ್ಕಾಗಿ ಬಂದಿರುವ ವೀರಶೈವವಿದ್ಯಾರ್ಥಿಗಳ ಸಭೆಯು ಗುರುಬಸವ ಅಂಡ್ ಕಂಪನಿ (ಲಿಮಿಟೆಡ್)ಯ ಮ್ಯಾನೇಜಿಂಗ್ ಡೈರೆಕ್ಟರಾದ ಮ|| ಎಸ್. ಸಿ. ಶೆಟ್ಟರವರ ಅಧ್ಯಕ್ಷತೆಯಲ್ಲಿ ವೀರಶೈವ ವಿದ್ಯಾರ್ಥಿಗಳ ಲಾಡ್ಜಿನಾಗನಲ್ಲಿ (2. ಎಡಪಾಲಯ ಬೀದಿ, ಪಾರ್ಕ್ ಟವನ್ ಮದ್ರಾಸು) ನಡೆಸಲ್ಪಟ್ಟಿತು. ಆ ಕಾಲಕ್ಕೆ ಕಾರ್ಯಾರ್ಥವಾಗಿ ಮದ್ರಾಸು ಪಟ್ಟಣಕ್ಕೆ ದಯಮಾಡಿಸಿದ್ದ ಪರಸ್ಥಳದ ವೀರಶೈವರೂ ವಿದ್ಯಾರ್ಥಿಗಳು ಮತ್ತು ಮದ್ರಾಸಿನಲ್ಲಿರುವ ವೀರಶೈವರೆಲ್ಲರೂ ದಯಮಾಡಿಸಿದ್ದರು. ಅಧ್ಯಕ್ಷರು ಮೂರುಗಂಟೆಗೆ ಸರಿಯಾಗಿ ದಯಮಾಡಿ [illegible]

[illegible]

ದಿವಸದ ಕಾರ್ಯವನ್ನು ಮುಕ್ತಾಯಗೊಳಿಸಿದರು. ಅನಂತರ ಶ್ರೀಮದಿಂಡಿಯಾಚಕ್ರವರ್ತಿಗಳವರ ಮತ್ತು ಮೈಸೂರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ, ಸಭಾಧ್ಯಕ್ಷರಿಗೆ ತಮ್ಮ ವಂದನೆಯನ್ನು ಹೇಳಿ ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ಪ್ರಾರ್ಥನೆ.

ವೀರಶೈವಜನಾಂಗದ ಮಹಾಸ್ವಾಮಿಯವರ ಸನ್ನಿಧಿಯಲ್ಲಿಯೂ ಮತ್ತು ಮಹಾಜನರಲ್ಲಿಯೂ ಮದ್ರಾಸಿನಲ್ಲಿರುವ ವಿದ್ಯಾರ್ಥಿಗಳು ಅರಿಕೆಮಾಡಿಕೊಳ್ಳುವುದೇನಂದರೆ :—

ಪ್ರಿಯ ಸಮಾಜಬಾಂಧವರೇ ! ದಕ್ಷಿಣ ಇಂಡಿಯಾದೇಶದಲ್ಲಿ [illegible]

[illegible]

ಹಿಸಬೇಕೆಂದು ಪ್ರಾರ್ಥನೆ.

ಮದ್ರಾಸು. ಪ್ರೆಸಿಡೆಂಟ್,

6-9-29. ವೀರಶೈವಸಂಘ ಮದ್ರಾಸು.

ಶ್ರೀಮದ್ರಂಭಾಪುರಿ ಜಗದ್ಗುರುಗಳವರ ಸನ್ನಿಧಾನಕ್ಕೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿರವರ ಆಗಮನ.

ಶೀರೂರು.

ಕಳೆದ ಆಷಾಢಮಾಸದಲ್ಲಿ ಘನವಸ್ತೈದಿದ ದಿವಾನ್ ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರು ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಪರಾಂಬರಿಸುವುದಕ್ಕೆ ಬಂದ ಸಮಯ [illegible]

[illegible]

[illegible]

ಶಾಲಾರಾಮದುರ್ಗದ ವಾರ್ಷಿಕಸಮಾರಂಭ.

ಇದೇ ಶುಕ್ಲಸಂವತ್ಸರ ಶ್ರಾವಣ ಬಹುಳ ೧೦ ಶುಕ್ರವಾರ ನಾಲ್ಕು ಗಂಟೆಗೆ ರಾಯಚೂರ ಜಿಲ್ಲಾ ಶಾಲಾರಾಮದುರ್ಗ [illegible] ಸಭೆಯು ಶಾಲಾರಾಮದುರ್ಗದಲ್ಲಿಯೇ [illegible] ಸುಮಾರು ಒಂದು ನೂರು ಜನರು [illegible] ಸಭಾಧ್ಯಕ್ಷಸ್ಥಾನವನ್ನು ಇಲ್ಲಿಯ ಫೌಜದಾರರಾದ [illegible] ವಹಿಸಿದ್ದರು. ಈಶಪ್ರಾರ್ಥನೆಯೊಂದಿಗೆ ಸಭಾಕಾರ್ಯವು ಪ್ರಾರಂಭವಾಯಿತು. [illegible]

[illegible]

ಪ್ರತ್ಯಕ್ಷದರ್ಶಿ

ಚನ್ನಬಸಪ್ಪ ಲಿಂಗಪ್ಪ ಮತ್ತೀಗಟ್ಟಿ.

ಶ್ರೀ ಪಂಚಾಚಾರ್ಯೇಭ್ಯೋನಮಃ

ಚನ್ನಗಿರಿ ತಾಲೂಕ್ ಬಸವಾಪಟ್ಟದ ಹೋಬಳಿ ಚಿರಡೋಣಿಗ್ರಾಮದಲ್ಲಿ ಪಂಚಾಚಾರ್ಯ ಭಜನಾಸಂಘಸ್ಥಾಪನ ಸಮಾರಂಭ.

ಮಹನೀಯರೇ ?

ತಾ|| ೩-೯-೨೯ ನೆಯ ಗುರುವಾರ ದಿವಸ ಈ ಗ್ರಾಮದ [illegible]

[illegible]

ಪುರಾಣಪ್ರಸ್ತ

[illegible]

ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಸೇವಕ,

ಸಿ. ಎಮ್. ಹಾಲಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಶಿವಸಹಸ್ರನಾಮ ಪಾರಾಯಣ ಮತ್ತು ಗಣಾರಾಧನೆ.

ಜಗಳೂರು.

ಜಗಳೂರಲ್ಲಿ ಮ|| ರಾ|| ಸಾಹುಕಾರ್ ಮಹಲಿಂಗಪ್ಪನವರು ಪ್ರತಿವರ್ಷವೂ ನಡೆಸುತ್ತಿರುವ ಪದ್ಧತಿಪ್ರಕಾರ ಈ ವರ್ಷದ ಶ್ರಾವಣಮಾಸದ ಮೂವತ್ತು ದಿನಗಳಲ್ಲಿಯೂ ಪ್ರತಿದಿನವೂ [illegible]

[illegible] ಅಂಥ ಧರ್ಮಪ್ರಚಾರಕಾರ್ಯಗಳನ್ನೆಸಗಿಸುವವರಿಗೆ ಶ್ರೀ ಜಗದ್ಗುರುಗಳು ಸದಾ ಮಂಗಳವನ್ನೀಯಲಿ.

ಶ್ರಾವಣ ಗಣಸಮಾರಾಧನ

[illegible]

ಪಂಚಾಚಾರ್ಯ ಪ್ರಭಾ

೧೯೨೯ನೇ ಸೆಪ್ಟಂಬರ್ ತಾ|| ೧೬ನೇ ಸೋಮವಾರ

ಧರ್ಮ.

ಮಾನವರು ವಿಶೇಷಪ್ರಜ್ಞಾಶಾಲಿಗಳೆನಿಸಿರುವುದರಿಂದ ಪುರುಷಾರ್ಥಗಳನ್ನು ಸ್ವಾಧೀನಗಳನ್ನಾಗಿ ಮಾಡಿಕೊಳ್ಳುವುದರಲ್ಲಿ ಸಮರ್ಥರೆನಿಸಿರುವರು. ಧರ್ಮ, ಅರ್ಥ, ಕಾಮ, ಮೋಕ್ಷಗಳು ಪುರುಷಾರ್ಥಗಳೆನಿಸಿರುತ್ತವೆ. ಇವುಗಳಲ್ಲಿ ಮೋಕ್ಷವು ಪರಮಪುರುಷಾರ್ಥವೆಂದು ಪ್ರಸಿದ್ಧವಾಗಿದೆ. "ಜ್ಞಾನಾದೇವ ತು ಕೈವಲ್ಯಂ" ಎಂಬ ಶ್ರುತಿವಾಕ್ಯಪ್ರಮಾಣವಿದೆಯಾದ್ದರಿಂದ ಮೋಕ್ಷವು ಬ್ರಹ್ಮಜ್ಞಾನದಿಂದ ಸಾಧ್ಯವು. ಬ್ರಹ್ಮಜ್ಞಾನವು ಧರ್ಮದಿಂದ ಸಾಧ್ಯವು. ಧರ್ಮರಹಿತರಾದ ಮನುಷ್ಯರು ಅಶುದ್ಧಾಂತಃಕರಣರೇ ಆಗುವರಾದ್ದರಿಂದ ಬ್ರಹ್ಮಜ್ಞಾನಿಗಳಲ್ಲದವರಾಗಿ ಮೋಕ್ಷವನ್ನು ಹೊಂದರು. ಈ ಕಾರಣದಿಂದ ಧರ್ಮವು ಮೋಕ್ಷವನ್ನು ಕುರಿತು ಮುಖ್ಯಸಾಧನವಾಗಿ ಮೊದಲನೆಯ ಪುರುಷಾರ್ಥವಾಗಿ ಒಪ್ಪುತ್ತಿದೆ. ಯಾರು ಯಾವ ಮತವನ್ನು ಅನುಸರಿಸಿದವರೋ, ಅವರು ಆ ಮತದ ಧರ್ಮಸಿದ್ಧಾಂತಗ್ರಂಥಗಳಲ್ಲಿ ನಿರೂಪಿತಗಳಾದ ಧರ್ಮಗಳನ್ನು ಅನುಷ್ಠಿಸುವುದರಲ್ಲಿ ಅಧಿಕಾರಿಗಳಾಗಿರುವರು. ಅವರಿಗೆ ಆ ಧರ್ಮಗಳೇ ಸ್ವಧರ್ಮಗಳು. ಅನ್ಯಧರ್ಮಗಳು ಅವರಿಗೆ ವಿರುದ್ಧಧರ್ಮಗಳೆನಿಸುವುವು. ಪ್ರಾಜ್ಞರಾದ ಜನರು ಸ್ವಧರ್ಮಗಳನ್ನು ಮನಸ್ಸಿನಿಂದಲೂ, ವಾಕ್ಕಿನಿಂದಲೂ, ಮನಸ್ಸಿನಿಂದಲೂ ಅತಿಕ್ರಮಿಸಬಾರದು. "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮೋ ಭಯಾವಹಃ" ಎಂಬ ಗೀತಾವಾಕ್ಯವಾದರೋ ಸ್ವಧರ್ಮನಿರತನಾದ ಮನುಷ್ಯನಿಗೆ ಶ್ರೇಯಸ್ಸು ಹೊಂದಲ್ಪಡುವುದೆಂದೂ, ಅನ್ಯಧರ್ಮನಿರತನಾದ ಮನುಷ್ಯನಿಂದ ದುಃಖವು ಹೊಂದಲ್ಪಡುವುದೆಂದೂ ಹೇಳುತ್ತದೆ. ಮನುಷ್ಯನು ತನ್ನ ಶರೀರವನ್ನೂ ಸಂಪತ್ತನ್ನೂ ನಿತ್ಯಗಳನ್ನಾಗಿ ತಿಳಿದು ಕೆಡಬಾರದು. "ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ | ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ" ಎಂಬ ಧರ್ಮಶಾಸ್ತ್ರವಾಕ್ಯವು ದೇಹವನ್ನೂ ಸಂಪತ್ತನ್ನೂ ಅಶಾಶ್ವತವನ್ನಾಗಿ, ಮೃತ್ಯುವನ್ನು ಯಾವಾಗಲೂ ಸನ್ನಿಹಿತವಾಗಿರುವುದನ್ನಾಗಿ ಹೇಳಿ ಧರ್ಮಸಂಗ್ರಹಾವಶ್ಯಕತೆಯನ್ನು ತಿಳಿಸುತ್ತದೆ. ದೇಹಾದಿಗಳ ಅಶಾಶ್ವತೆಯು ಪ್ರತ್ಯಕ್ಷಪ್ರಮಾಣದಿಂದಲೂ ಗೊತ್ತಾಗುತ್ತದೆ. ಹೀಗಿರುವುದರಿಂದ ಯಾರೂ ಸ್ವಧರ್ಮಗಳಲ್ಲಿ ವಿಮುಖರಾಗಬಾರದು. ಸ್ವಧರ್ಮವಿಮುಖರು ಬಾಪಾತ್ಮರೆನಿಸಿ, ಈ ಲೋಕದಲ್ಲಿ ನಿಂದಾಪವಾದಗಳಿಗೆ ಪಾತ್ರರಾಗಿ, ದುಃಖಾನುಭವಿಗಳಾಗಿ, ಪರಲೋಕದಲ್ಲೂ ಅಪರಿಮಿತಗಳಾದ ಕಷ್ಟಗಳನ್ನನುಭವಿಸುವರು.

ವೀರಶೈವಮತವು ವೈದಿಕಮತಗಳಲ್ಲೊಂದಾಗಿ ತನ್ನನ್ನಾಶ್ರಯಿಸಿದ ಜೀವರಿಗೆ ಮುಕ್ತಿದಾಯಕವಾಗಿರುತ್ತದೆ. ವೈಷ್ಣವಾದಿ ಮತವನ್ನವಲಂಬಿಸಿದ ಜನರಿಗೆ ಆಯಾ ಮತದ ಧರ್ಮಸಿದ್ಧಾಂತಗ್ರಂಥಗಳಲ್ಲಿ ನಿರೂಪಿತಗಳಾದ ಧರ್ಮಗಳೇ ಸ್ವಧರ್ಮಗಳೆನಿಸಿರುವಂತೆ, ವೀರಶೈವಮತವನ್ನವಲಂಬಿಸಿದ ಜನರಿಗೆ ಶ್ರೀ ರೇಣುಕಾದ್ಯಾಚಾರ್ಯರಿಂದ ವಿರಚಿತಗಳಾದ ಧರ್ಮಸಿದ್ಧಾಂತಗ್ರಂಥಗಳಲ್ಲಿ ನಿರೂಪಿತಗಳಾದ ಅಷ್ಟಾವರಣಕ್ರಿಯೆಗಳೂ, ಪಂಚಾಚಾರಗಳೂ ಅಪ್ರಾಕೃತವರ್ಣಾಶ್ರಮಧರ್ಮಗಳೂ ಸ್ವಧರ್ಮಗಳಾಗಿರುತ್ತವೆ. ವೀರಶೈವಮತೀಯರು ಶ್ರುತ್ಯುಕ್ತವಾದ ಲಿಂಗಧಾರಣರೂಪವಾದ, ಯಾವಜ್ಜೀವನಿರ್ವಾಹ್ಯವಾದ ವ್ರತವನ್ನು ಹೊಂದಿದವರಾದ್ದರಿಂದ "ಅನಾರಾಧ್ಯ ಮಹಾದೇವಂ ನ ಭುಂಜೀಯಾತ್ ಕದಾಚನ" ಇತ್ಯಾದಿ ಪ್ರಮಾಣಾನುಸಾರವಾಗಿ ತಮ್ಮಿಂದ ಧರಿಸಲ್ಪಟ್ಟಿರುವ ಶಿವಲಿಂಗವನ್ನು ಆರಾಧಿಸದೆ ಊಟವನ್ನು ಮಾಡಕೂಡದಾದ್ದರಿಂದಲೂ "ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ" ಇತ್ಯಾದಿ ಶ್ರುತಿಪ್ರಮಾಣಗಳೂ, "ಸರ್ವಂ ಶಿವಾರ್ಪಿತಂ ಚಾನ್ನಂ ಭಕ್ಷ್ಯಮೂಲಫಲಾನ್ವಿತಂ ಭುಂಜೀಯಾದಪ್ರಮಾದೇನ" ಇತ್ಯಾದಿ ಶಾಂಕರಸಂಹಿತಾದಿವಾಕ್ಯಪ್ರಮಾಣಗಳೂ ಇರುವುದರಿಂದ ಅನ್ನಾದಿವಸ್ತುಗಳನ್ನು ಲಿಂಗಕ್ಕೆ ನಿವೇದಿಸಿ ಪ್ರಸಾದಭಾವನೆಯಿಂದಲೇ ಸ್ವೀಕರಿಸಬೇಕಾದ್ದರಿಂದಲೂ, "ತ್ರಿಗುಣಾತ್ಮಕಮಶ್ನೀಯಾದ್ಯದಿ ಪಾಪಾಚ್ಛಿವಾನರ್ಪಿತಂ ಭುಂಕ್ತ್ವೈಕದೇಶೋ ಭುಂಕ್ತ್ವಾ ಕ್ರಿಮಿಂ ಭುಂಕ್ತ್ವಾ ಮಲಂ ಭುಂಕ್ತ್ವಾ ಅಘಂ ಭುಂಕ್ತ್ವಾ" ಇತ್ಯಾದಿ ಶ್ರುತಿಪ್ರಮಾಣಗಳೂ "ಅಸಮರ್ಪ್ಯ ಪರಂ ಶಂಭೋಃ ಭುಂಕ್ತೇ ಬಾಧತಿ ಪಾತಿಯಃ || ಶ್ವಮಾಂಸಮಸ್ಥಿ ಮೂತ್ರಂ ಚ ಭುಂಕ್ತೇ ಬಾಧತಿ ಪಾತಿಸಃ" ಇತ್ಯಾದಿ ಪುರಾಣವಾಕ್ಯಗಳೂ ಇರುವುದರಿಂದ ಲಿಂಗಕ್ಕೆ ನಿವೇದಿಸಲ್ಪಡದ ವಸ್ತುಗಳು ಅಪವಿತ್ರಗಳಾಗುವುದರಿಂದ ಆ ವಸ್ತುಗಳನ್ನು ಸೇವಿಸಿದರೆ ದೋಷಿಗಳಾಗುವರಾದ್ದರಿಂದಲೂ "ಅಸಂಸ್ಕೃತಾತ್ಮೇಂದ್ರಿಯಭೂತಕಾಯೈರಲಿಂಗಿಭಿಃ ಸ್ವಾರ್ಥಪರೈಸ್ಸಕಾಮೈಃ || ದೃಷ್ಟಂ ಕೃತಂ ಸ್ಪೃಷ್ಟಮಥೋಪಭುಕ್ತಂ ಘ್ರಾತಾದ್ಯಮುಚ್ಛಿಷ್ಟಮಿತಿ ಪ್ರಸಿದ್ಧಂ" ಎಂಬ ವಿಶೇಷಾರ್ಥಪ್ರಕಾಶಿಕಾ ವಾಕ್ಯಪ್ರಮಾಣವಿರುವುದರಿಂದ ಭವಿಗಳಿಂದ ಮಾಡಲ್ಪಟ್ಟ ವಸ್ತುವು, ತಿನ್ನಲ್ಪಟ್ಟ ಅಥವಾ ಆಘ್ರಾಣಿಸಲ್ಪಟ್ಟ ವಸ್ತುವು ಉಚ್ಛಿಷ್ಟವೆನಿಸುವುದರಿಂದ ಅದನ್ನು ಲಿಂಗಕ್ಕೆ ನಿವೇದಿಸಿದರೂ ಅನುಭವಿಸಿದರೂ ದೋಷಿಗಳೆನಿಸುವರಾದ್ದರಿಂದಲೂ "ಭಕ್ತಾನಾಂ ಸದನೇ ಗತ್ವಾ ಭುಂಜೀಯಾದ್ಭಕ್ತಿಸಂಯುತಃ" ಎಂಬ ಶಿವಧರ್ಮವಾಕ್ಯಪ್ರಮಾಣವಿರುವುದರಿಂದ ಲಿಂಗಾಂಗಿಗಳ ಗೃಹದಲ್ಲಿಯೇ ಊಟವನ್ನು ಮಾಡಬೇಕಾದುದು ವಿಹಿತವೆನಿಸಿರುವುದರಿಂದಲೂ, ಲಿಂಗಪೂಜೆಯನ್ನು ಮಾಡಿ, ಶಿವಲಿಂಗಧಾರಿಗಳಿಂದಲೇ ಮಾಡಲ್ಪಟ್ಟ ಪಾಕವನ್ನೇ ಶಿವಲಿಂಗಧಾರಿಗಳಿಂದ ಕೊಡಲ್ಪಟ್ಟ ವಸ್ತುಗಳನ್ನೇ ಲಿಂಗಕ್ಕೆ ನಿವೇದಿಸಿ ಪ್ರಸಾದಭಾವನೆಯಿಂದ ಉಪಯೋಗಿಸಿಕೊಳ್ಳುವರಾಗಬೇಕು. ಇತ್ಯಾದ್ಯನೇಕ ಧರ್ಮಗಳು ವೀರಶೈವ ಧರ್ಮಸಿದ್ಧಾಂತ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವೀರಶೈವ ಮತಸ್ಥರ ಸ್ವಧರ್ಮಗಳಾಗಿರುತ್ತವೆ. ವೀರಶೈವ ಮತಸ್ಥರಲ್ಲಿ ಹಲವರು ಸ್ವಧರ್ಮನಿರತರಾಗಿದ್ದರೂ, ಕೆಲವರು ಸ್ವಧರ್ಮಗಳ ಸ್ವರೂಪಗಳನ್ನರಿಯದೆಯೋ ಜಿಹ್ವಾಚಾಪಲ್ಯಯುಕ್ತರಾಗಿಯೋ ಯಾವ ಕಾರಣದಿಂದಲೋ ಅಲಿಂಗಿಗಳಿಂದ ಮಾಡಲ್ಪಡುವ ಪಕ್ವಪದಾರ್ಥಗಳನ್ನೂ ಪಾನೀಯ ದ್ರವ್ಯಗಳನ್ನೂ ಸೇವಿಸುವುದರಿಂದ ತೃಪ್ತರಾದೆವೆಂದು ಸಂತೋಷಪಡುತ್ತಿರುವರು. ಇನ್ನಾದರೂ ಅವರು ಸ್ವಮತವಿರುದ್ಧವಾದ ಆ ಕೃತ್ಯವನ್ನು ಬಿಡುವುದರಲ್ಲಿ ಯತ್ನಿಸುವರೆಂದು ನಂಬಿರುತ್ತೇವೆ.

ಒಳದೇಶದ ವೃತ್ತಾಂತಗಳು.

15 ನೇ ತಾರೀಖು ಭಾನುವಾರದಿಂದ ಕಣೆಯರಪತ್ರಿಕೆಯು ಪ್ರತಿ ಭಾನುವಾರವೂ ಬೆಂಗಳೂರು ಬಳೇಪೇಟೆಯಲ್ಲಿರುವ ಸತ್ಯಾಗ್ರಹಾಶ್ರಮದಲ್ಲಿ 15 ನೆಯ ಸತ್ಯಾಗ್ರಹ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಡುವುದು.

ಶ್ರೀ|| ಡಿ. ಶಾಮರಾಯರು ಸರ್ ಕೆ.ಪಿ. ಪುಟ್ಟಣ್ಣಶೆಟ್ಟರಮೇಲೆ 500 ರೂಪಾಯಿಗಳಿಗೆ ಮಾನನಷ್ಟ ವ್ಯವಹಾರವನ್ನು ತಂದಿರುವರಷ್ಟೆ. 6 ನೆಯ ತಾರೀಖಿನದಿನ ವ್ಯವಹಾರವಿತ್ತು. ಸರ್ ಶೆಟ್ಟರ ವಕೀಲರು ಒಂದು ತಿಂಗಳ ಅವಧಿಯನ್ನು ಕೇಳಿಕೊಂಡಿರುವರು.

ಸರ್. ಎಂ. ವಿಶ್ವೇಶ್ವರಯ್ಯನವರು ಭದ್ರಾವತಿಯ ಕಾರ್ಖಾನೆಯ ಛೇರ್ಮನ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರಿಂದ ಪ್ರಥಮ ಸಚಿವರಾದ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಎಂ. ಎನ್ ಕೃಷ್ಣರಾಯರು ಆ ಸ್ಥಳಕ್ಕೆ ನೇಮಿಸಲ್ಪಟ್ಟಿರುವರು.

ಬರ್ಡೋಲಿಯಲ್ಲಿ ರೈತರಿಂದ ಸತ್ಯಾಗ್ರಹವನ್ನು ಮಾಡಿಸಿ ಜಯಶಾಲಿಗಳಾದ ಶ್ರೀ ವಲ್ಲಭಾಯಿ ಪಟೇಲ್‌ರವರು ಮೊನ್ನೆ 12 ನೆಯ ತಾರೀಖಿನ ದಿವಸ ಬೆಂಗಳೂರಿಗೆ ದಯಮಾಡಿಸಿದ್ದರು. ಪುರಪ್ರಮುಖರೇ ಮೊದಲಾದವರು ಅವರನ್ನು ವಿಶೇಷವಾಗಿ ಸನ್ಮಾನಿಸಿದರು.

ದಾವಣಗೆರೆಗೆ 12 ಮೈಲಿಗಳ ದೂರದಲ್ಲಿರುವ ಅಣಬೆ ಎಂಬ ಗ್ರಾಮದಲ್ಲಿನ ಹಿಂದೂ ದೇವಾಲಯಗಳಲ್ಲಿ ಎರಡು ವಿಗ್ರಹಗಳು ಮಾಯವಾಗಿರುತ್ತವೆ. ಸ್ಥಳೀಕ ಅಧಿಕಾರಿಗಳು ಗ್ರಾಮಕ್ಕೆ ದಯಮಾಡಿಸಿ ಮಾಯವಾಗಿರುವ ವಿಗ್ರಹಗಳ ವಿಚಾರದಲ್ಲಿ ತನಿಖೆನಡೆಸುತ್ತಿರುವರು.

ಬೆಂಗಳೂರಿನಲ್ಲಿ ಕೆಲವು ತಿಂಗಳ ಹಿಂದೆ ಟಪ್ಪಾಲು ಇಲಾಖೆಯಲ್ಲಿ ಪಾಲ್ಮನ್ ಎಂಬವರು 4 ಸಾವಿರ ರೂಪಾಯಿಗಳನ್ನು ದುರುಪಯೋಗಮಾಡಿದ ಅಪಾದನೆಯ ಮೇಲೆ ದಸ್ತಗಿರಿಮಾಡಲ್ಪಟ್ಟರು. ವಿಚಾರಣೆ ನಡೆದು 1 ವರ್ಷದ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿರುತ್ತಾರೆ.

ಕಳೆದ 12 ನೆಯ ತಾರೀಖು ಗುರುವಾರ ಬೆಳಿಗ್ಗೆ ಚನ್ನಪಟ್ಟಣ ಕ್ಲೋಸ್‌ಪೇಟೆಗೆ ಮಧ್ಯೆ, ಹೊರೆಯನ್ನು ಹೊತ್ತಿದ್ದ ಒಬ್ಬ ಮುಸಲ್ಮಾನನು ತಿರುವಿನಲ್ಲಿ ಬರುತ್ತಿದ್ದ ಮೋಟಾರುಬಸ್ಸಿಗೆ ಸಿಕ್ಕಿದನು. ಕಾಲುಮುರಿದು ಬಹಳ ಘಾಯಗಳಾಗಿವೆ. ಆತನನ್ನು ಕೂಡಲೆ ಕ್ಲೋಸ್‌ಪೇಟೆ ಆಸ್ಪತ್ರೆಗೆ ಸಾಗಿಸಿದರು. ಈಚೆಗೆ ಈ ವಿಧ ಅಪಾಯಗಳು ಹೆಚ್ಚುತ್ತಿರುವುದು ವಿಷಾದಕರವಾಗಿದೆ.

ಮಾಗಡಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಕೊಲೆಮಾಡಿದರೆಂಬ ಅಪಾದನೆಗೆ ಗುರಿಯಾಗಿ ಕ್ಲೋಸ್‌ಪೇಟೆ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ವಿಚಾರಣೆ ನಡೆದು ಅನಂತರ ಬೆಂಗಳೂರು ಸೆಷನ್ಸ್ ಜಡ್ಜಿಗಳ ಮುಂದೆ ವಿಚಾರಣೆಗೆ ಗುರಿಯಾಗಿದ್ದ, ಒಣಬೆಗರ ಒಬ್ಬ ಹೆಂಗಸು ಮತ್ತು ಆಕೆಗೆ ಸಹಾಯಕನಾಗಿದ್ದ ಇನ್ನೊಬ್ಬ ಗಂಡಸು, ಇವರೀರ್ವರೂ ತಪ್ಪಿತಸ್ಥರಲ್ಲವೆಂದು ಅಸೆಸರ್ಸ್‌ರು ಅಭಿಪ್ರಾಯಪಟ್ಟಿದ್ದಂತೆ, ಜಡ್ಜಿಯವರೂ ಸಹ ಅದನ್ನು ಅನುಮೋದಿಸಿ, ಅಪಾದಿತರನ್ನು ಖುಲಾಸೆಮಾಡಿದರು ಬೆಂಗಳೂರಿನ ಪ್ರಸಿದ್ಧ ವಕೀಲರಾದ ಮಿ|| ಪಿ. ರಾಜರತ್ನಂರವರು ಅಪಾದಿತರ ಪರವಾಗಿ ವಾದಿಸಿದರು.

ದಾವಣಗೆರೆಯ ಗಲಭೆಯ ವಿಚಾರಣೆ ಮಾಡಲು ನಿಯಮಿತರಾಗಿರುವ ಸ್ಪೆಷಲ್ ಆಫೀಸರು ಇದುವರೆವಿಗೆ, ನೂರುಜನ ಸಾಕ್ಷಿಗಳ ವಿಚಾರಣೆ ನಡೆಸಿರುವರು. ಅವರ ವಿಚಾರಣೆಯಲ್ಲಿ ವಿಧವಿಧವಾದ ಮತ್ತು ಹೊಸ ಸಂಗತಿಗಳು ಹುಟ್ಟಿರುವುವು. ಇದುವರೆವಿಗೆ ನಡೆದಿರುವ ಸಾಕ್ಷಿಗಳನ್ನು ನಾಟಿಸವಾಲ್ ವಿಚಾರಣೆ ಮಾಡಿದ ಹೊರತು ಹೀಗೆಯೇ ಸರಿ ಎಂದು ನಿರ್ಧರಿಸಲು ಸಾಧ್ಯವಿಲ್ಲದಂತೆ ತೋರುತ್ತದೆ. ಕಳೆದ ಜೂನ್ ಮಾಹೆ 20 ಮತ್ತು 21 ನೇ ತಾರೀಖುಗಳಲ್ಲಿ ಪೋಲೀಸ್ ಐ. ಜಿ. ಯವರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮತ್ತು ದ್ವಿತೀಯ ಸಚಿವರ ಮುಂದೆ ಹೇಳಿಕೆ ಕೊಟ್ಟಿರುವ ಮುಸಲ್ಮಾನ್ ಜನರ ಹೇಳಿಕೆಗಳು ಮುಖ್ಯವಾದವುಗಳಾಗಿರುತ್ತವೆ. ಸ್ಪೆಷಲ್ ವಿಚಾರಣಾ ಅಧಿಕಾರಿಗಳೂ ಸಹ ಆ ಸಾಕ್ಷಿಗಳನ್ನು ವಿಚಾರಣೆಮಾಡಿ ನಿಶ್ಚಯಾಂಶಗಳನ್ನು ತಿಳಿದುಕೊಳ್ಳದೆ ಇರಲಾರರೆಂದು ನಿರೀಕ್ಷಿಸಿದೆ.

ವರ್ತಮಾನಸಂಗ್ರಹ.

ಅಮೆರಿಕೆಯ ಡಾ. ಫಿಶರವರು ಪುರುಷರು ಮುಪ್ಪಾಗದಂತಹ ಒಂದು ಔಷಧಿಯನ್ನು ಶೋಧಿಸಿದ್ದಾರಂತೆ!

230 ಎಕ್ರೆ ಸ್ಥಳವನ್ನು ಉಪಯೋಗಿಸಿ, ವಿಮಾನಗಳು ಬಂದಿಳಿಯುವುದಕ್ಕೆ ಲಂಡನ್ನಿನಲ್ಲೊಂದು ಏರ್‌ಪಾರ್ಕ್ ರಚಿಸಲಾಗಿದೆ.

ಕಲ್ಕತ್ತಾ ಪಟ್ಟಣದಲ್ಲಿ ಅತಿ ವೃಷ್ಟಿಯಿಂದ ಒಂದೆರಡು ದಿವಸಗಳವರೆಗೆ ಮೋಟಾರುಗಳನ್ನೂ ನಡೆಯಿಸದಂತೆ ಅಡ್ಡಿಯಾಗಿತ್ತು.

ಗಾಂಧೀಜಿಯವರ "ಹಿಂದೀಸ್ವರಾಜ್ಯ" ವೆಂಬ ಪುಸ್ತಕವನ್ನು ಬಿಕನೀರ್ ಸಂಸ್ಥಾನದೊಳಕ್ಕೆ ತರಕೂಡದೆಂದು ಕಟ್ಟಪ್ಪಣೆಯಾಗಿದೆ.

ಫಿನ್‌ಲೇಂಡ್ ದೇಶದ ಕುರು ಎಂಬ ಒಂದು ಹಡಗು ಬಿರುಗಾಳಿಗೆ ಸಿಕ್ಕಿ 100 ಮಂದಿ ಪ್ರಯಾಣಿಕರು ಮುಳುಗಿಹೋಗಿರುವರೆಂದು ತಿಳಿದುಬರುತ್ತದೆ.

ಇನ್ನೂ ಕೆಲವು ದಿವಸಗಳಲ್ಲಿ ಪರ್ಷಿಯದ ತೆಹರಾನಿನಿಂದ ಬಾಗ್ದಾದಿಗೆ ವಾರಕ್ಕೆರಡು ಸಾರೆ ವಿಮಾನದ ಮೂಲಕ ಟಪ್ಪಾಲು ಸಾಗಿಸುವ ವ್ಯವಸ್ಥೆಯಾಗುವದು.

ಬೆಳಗಾಂವಿಯೊಳಗಿನ ಶ್ರೀ|| ಮೋರೆಯೆಂಬ ಶಿಕ್ಷಕರು ಒಂದು ಹೊಸ ಬಗೆಯ ನೂಲುವ ಯಂತ್ರವನ್ನು ತಯಾರಿಸಿದ್ದು, ಅದು ತಾನೇ ಗಂಟೆಗೆ 50 ಗಜ ನೂಲುತ್ತದೆಯಂತೆ.

ಕಲ್ಕತ್ತದ ಹೂಗ್ಲಿ ನದಿಯಲ್ಲಿ, ಕೆಲವು ಕೂಲಿಕಾರರು ಕುಳಿತಿದ್ದ ಒಂದು ದೋಣಿಯು ಮುಳುಗಿ 20 ಮಂದಿಗಳು ಜಲಸಮಾಧಿ ಹೊಂದಿದರು. ನಾಲ್ಕು ಶವಗಳು ದೊರೆತಿವೆ.

ರಂಗೂನಿನಲ್ಲಿ 5,000 ರೂಪಾಯಿಗಳವರೆಗೆ ಕಳ್ಳ ನೋಟುಗಳನ್ನು ತಯಾರಿಸಿದ್ದ ಇಬ್ಬರು ಬರ್ಮಾಯರನ್ನು ನೋಟುಗಳನ್ನು ತಯಾರಿಸುವಾಗಲೇ ಹಿಡಿದು ಕೈದುಮಾಡಿರುವರು.

ಬಾಗಲಕೋಟೆಯಲ್ಲಿ ಸದ್ಯದಲ್ಲೆ ತೆರೆಯುವ ಔದ್ಯೋಗಿಕ ಶಾಲೆಗೆ ಶ್ರೀ ಗುರುಸಂಗಪ್ಪ ವೀರಶೆಟ್ಟಿ ಎಂಬುವರು 10,000 ರೂ. ಗಳ ದಾನಮಾಡಿರುವರೆಂದು ತಿಳಿದುಬರುತ್ತದೆ ಸ್ತುತ್ಯ!

ಪಾಟ್ನಾದ ಶ್ರೀ ಗಜಧರ ಪ್ರಸಾದನ ಹೆಂಡತಿಯಾದ ಅಹಲ್ಯೆಯು ನನೆಯ ಅಳಿಯನೊಂದಿಗೆ ಓಡಿಹೋಗಿದ್ದು, ಕೋರ್ಟಿನಲ್ಲಿ ಗಂಡನನ್ನೊಲ್ಲೆ! ಅಳಿಯನೊಂದಿಗೇ ಇರುವೆನೆಂದು ನುಡಿದಳಂತೆ!

ಅಮೇರಿಕದ 'ಸಾನ್ ಫ್ರಾನ್ಸಿಸ್ಕೊ' ನಾಮಾಂಕಿತ ವಿಮಾನವೊಂದು ಸಿಡಿಲು ಮಿಂಚುಗಳಿಗೆ ಸಿಕ್ಕಿಬಿದ್ದು ಚೂರಾಯಿತು. ಮಿಂಚು ಹೊಡೆದು, ಐವರು ಪ್ರಯಾಣಿಕರೂ ಮೂವರು ಯಂತ್ರಚಾಲಕರೂ ಮೃತಪಟ್ಟಿರುವರು.

ಜರ್ಮನಿದೇಶದಲ್ಲಿ ಒಂದು ಸಾವಿರ ಕ್ಯಾರೆಟ್ ಭಾರದ ಒಂದು ಇಂದ್ರನೀಲಮಣಿಯೂ, 99 ಕ್ಯಾರೆಟ್ ತೂಕದ ಒಂದು ಮಾಣಿಕ್ಯವೂ ದೊರೆತಿರುವುವೆಂದೂ, ಮಾಣಿಕ್ಯದ ಬೆಲೆಯು ಸುಮಾರು 8 ಲಕ್ಷ ರೂಪಾಯಿಗಳಿಗೆ ಮಾರುತ್ತದೆಂತಲೂ ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿಯವರು ಆರೋಗ್ಯದಲ್ಲಿರುವರು. ಡಾಕ್ಟರರು ಮತ್ತೂ ಕೆಲವು ದಿನಗಳ ವಿಶ್ರಾಂತಿಯ ಅವಶ್ಯಕತೆ ಸೂಚಿಸಿರುದರಿಂದ, ಇದೇ ತಾ|| 11ಕ್ಕೆ ಆಗ್ರಾಕ್ಕೆ ಹೋಗಿ ಅಲ್ಲಿ ವಿಶ್ರಮಿಸಿ ತಾ|| 20ಕ್ಕೆ ಅಲ್ಲಿಂದ ಮೀರತ್‌ಪುರಿಗೆ ಸಂಚಾರ ಹೊರಡುವರು.

ಲಾಹೋರಿನ ಸೆರೆಮನೆಯಲ್ಲಿ ಅಪಾದಿತರಾಗಿದ್ದು ಉಪವಾಸವ್ರತವನ್ನು ಕೈಗೊಂಡಿದ್ದವರಲ್ಲಿ ಒಬ್ಬರಾದ ಯತೀಂದ್ರದಾಸ್‌ರವರು ಇದೇ 13 ನೆಯ ತಾರೀಖಿನ ದಿನ ಮೃತರಾದರು. ಭಗತ್‌ಸಿಂಗ್ ಮತ್ತು ದತ್ತರವರು ತಮ್ಮ ವ್ರತವನ್ನು ಇನ್ನೂ ಮುಂದುವರಿಸುತ್ತಲೇ ಇರುವರು.

ವೈಸರಾಯ್ ಲಾರ್ಡ್ ಅರವಿನ್ನರು ಹಿಂದೂಸ್ಥಾನಕ್ಕೆ ಹಿಂತಿರುಗಿದಾಗ ತಿರುವಾಂಕೂರಿಗೆ ಬರುವರು. ಆಗ ಅವರಿಗೆ ರಾಜಭೋಜನ ಕೊಡುವ ಏರ್ಪಾಡಾಗಿದೆ. ಅದಕ್ಕಾಗಿ ತಟ್ಟೆ, ಬಟ್ಟಲು, ಚಂಬು, ಚಮಚ ಇತ್ಯಾದಿ ಪರಿಕರಗಳಿಗಾಗಿ ದರ್ಬಾರಿನವರು 50,000 ರೂಪಾಯಿಗಳನ್ನು ವಿನಿಯೋಗಿಸಲಾಗಿಟ್ಟಿರುವರಂತೆ!

ದೇಶೀಯ ಸಂಸ್ಥಾನಗಳಿಂದ ಇಂಡಿಯಾ ಸರಕಾರಕ್ಕೆ ಈ ಕೆಳಗೆ ಕಂಡಂತೆ ಪ್ರತಿವರ್ಷವೂ ಹತ್ತುಕೋಟಿ ರೂಪಾಯಿಗಳ ಮೇಲೆ ಆದಾಯವು ಬರುತ್ತಿದೆ. ಹಡಗಿನ ವ್ಯಾಪಾರ ಸುಂಕ 706 ಲಕ್ಷ, ಉಪ್ಪು 93 ಲಕ್ಷ, ರೈಲ್ವೆ 120 ಲಕ್ಷ, ಚಲಾವಣೆ, ಟಂಕಶಾಲೆ 86 ಲಕ್ಷ, ಸುಂಕ 39 ಲಕ್ಷ, ಒಟ್ಟು 1,044 ಲಕ್ಷ.

ಲಂಡನ್ನಿನಲ್ಲಿ ಟೆಲಿಫೋನ್ ಸರ್ವಿಸ್ಸಿನ 50 ನೆಯ ವಾರ್ಷಿಕೋತ್ಸವವನ್ನು ಜರುಗಿಸಲಾಯಿತು. ಈ ಅರ್ಧಶತಮಾನದ ಹಿಂದೆ ಅಲ್ಲಿ ಟೆಲಿಫೋನ್ ಪ್ರಾರಂಭವಾದಾಗ ಅದಕ್ಕೆ ಕೇವಲ 12 ಮಂದಿ ಚಂದಾದಾರರಿದ್ದರು; ಇಂದು 6|| ಲಕ್ಷ ಮಂದಿಗಳಿರುವರು; ಟೆಲಿಫೋನ್ ಎಕ್ಸ್‌ಚೇಂಜಿನ ಕಟ್ಟಡವು 7 ಮಹಡಿಯುಳ್ಳದ್ದಾಗಿದೆ.

ಲಾಹೋರ್ ಕಾಂಗ್ರೆಸ್ ಪ್ರೆಸಿಡೆಂಟರನ್ನಾರಿಸುವುದಕ್ಕಾಗಿ ಇದೇ ತಿಂಗಳು ತಾ|| 28 ಕ್ಕೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು ಲಕ್ನೋದಲ್ಲಿ ನಡೆಯುವುದು. ಲಾಹೋರು ಕಾಂಗ್ರೆಸ್ ಸ್ವಾಗತ ಕಮಿಟಿ ಅಧ್ಯಕ್ಷರಾದ ಡಾಕ್ಟರ್ ಕಿಚಲೂರವರು ಗಾಂಧಿಯವರೇ ಅಧ್ಯಕ್ಷರಾಗಬೇಕೆಂದು ಅವರನ್ನು ತಂತಿ ಮೂಲಕ ಕೇಳಿಕೊಂಡಿರುವರು.

ಲಾಹೋರ್ ಪ್ರಾಂತಕ್ಕೆ ಸೇರಿದ ಕ್ಯಾಂಪ್‌ಬೆಲ್‌ಪುರದ ಪಾಟ್ನಾಲಿ ಎಂಬ ಗ್ರಾಮದಲ್ಲಿ ಮಹಮುದ್‌ಖಾನ್ ಎಂಬ ರೈತನ (ಎರಡನೆಯ) ಹೆಂಡತಿಯು ತನ್ನ ಬಲಮಗನನ್ನು ತುಂಡುತುಂಡಾಗಿ ಕತ್ತರಿಸಿ ಚೂರುಗಳನ್ನು ಮನೆಯಲ್ಲೆಲ್ಲಾ ಮುಚ್ಚಿಮುಚ್ಚಿ ಇಟ್ಟಿದ್ದಳಂತೆ! ಅವಳನ್ನು ದಸ್ತಗಿರಿಮಾಡಿ ವಿಚಾರಣೆನಡೆಯಿಸುತ್ತಿರುವರು. ಪೈಶಾಚಕೃತ್ಯ!

ಪಂಜಾಬಿನ ಆರ್. ಎಲ್. ಬಾಟ್ರ ಎಂಬ ಎಗ್ಸಿಕ್ಯುಟಿವ್ ಇಂಜನಿಯರರು ಕಳೆದ 10ನೆಯ ತಾರೀಖಿನ ರಾತ್ರಿ ಯಾರೋ ದುರಾತ್ಮರಿಂದ ಗುಂಡಿನಿಂದ ಹೊಡೆಯಲ್ಪಟ್ಟರು, ಗುಂಡಿನೇಟು ಬಲವಾಗಿದ್ದರೂ ಅವರು ಬದುಕುವರೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ. ಅಪರಾಧಿಗಳನ್ನು ಪತ್ತೆಮಾಡುವ ಪ್ರಯತ್ನ ನಡೆಯುತ್ತಿದೆ. ಇದುವರೆಗೆ ಯಾರೂ ಸಿಕ್ಕಿಲ್ಲ.

ಕಲ್ಕತ್ತಾ ಪಟ್ಟಣದ ಸ್ಪೆಷಲ್ ಬ್ರಾಂಚ್ ಪೋಲೀಸಿನವರು ಸರಸ್ವತಿ ಲೈಬ್ರರಿಯನ್ನು ಮತ್ತು ಬರ್ಮನ್ ಪಬ್ಲಿಷಿಂಗ್ ಹೌಸ್ ಅದರ ಮುದ್ರಣಾಲಯವನ್ನು ಶೋಧನೆಮಾಡಿ, "ಬಿದ್ರೋಹಿಬೀರ್ ಪ್ರಮೋದ್ ರಂಜನ್" ಎಂಬ ಪುಸ್ತಕದ ಕೆಲವು ಪ್ರತಿಗಳನ್ನು ವಶಪಡಿಸಿಕೊಂಡರು. ಈ ಪುಸ್ತಕವನ್ನು ಮುದ್ರಿಸಿ ಪ್ರಕಟಿಸಲಾಗದೆಂದು ಸರ್ಕಾರದವರು ಹಿಂದೆ ತಿಳಿಸಿದ್ದರು.

ಇಂಗ್ಲೆಂಡಿನಿಂದ ಕರಾಚಿಗೆ ಟಪ್ಪಾಲುತರುವ ವಿಮಾನವು ಕಳೆದ ತಾ|| 6 ನೇ ರಾತ್ರಿ ಜಾಸ್ಟ ಎಂಬಲ್ಲಿ ಇಳಿಯುವಾಗ ಅಕಸ್ಮಾತ್ತಾಗಿ ಬೆಂಕಿಹತ್ತಿ ವಿಮಾನವು ಸುಟ್ಟುಹೋಗಿರುವುದು. ಕೆಪ್ಟನ್‌ವುಡ್‌ಬ್ರೈಟ್ ಎಂಬ ವೈಮಾನಿಕರೂ, ವಿ. ಜಿ. ಹೆಲ್ ಎಂಬ ಪ್ರಯಾಣೀಕರೂ ಜೆ. ಕೋರ್ಟ್ ಎಂಬವರೂ ಮೃತರಾಗಿರುವರು. ಇನ್ನಿಬ್ಬರಿಗೂ ಬಹಳ ಅಪಾಯವುಂಟಾಗಿರುವುದು ಟಪ್ಪಾಲೆಲ್ಲಾ ಸುಟ್ಟುಹೋಗಿರುವುದು.

ಕೆನಡಾ ದೇಶದ ಉತ್ತರದಲ್ಲಿ 'ಸ್ವಾತಂತ್ರ್ಯಪುತ್ರರು' ಎಂಬೊಂದು ಪಂಥಕ್ಕೆ ಸೇರಿದ 31 ಜನರು ಬತ್ತಲೆತಿರುಗಿದುದಕ್ಕಾಗಿ ಸರಕಾರದವರು ಅವರನ್ನು ಕೈದುಮಾಡಿರುವರು. ಅದನ್ನು ನಿಷೇಧಿಸಿ ಸುಮಾರು 300 ಜನರು ಪುನಹ ಬತ್ತಲೆಯಾಗಿ ತಿರುಗಲೆತ್ನಿಸಲು ಅವರನ್ನು ಪೋಲೀಸರು ತಡೆಗಟ್ಟಿದರು. ನೆಲ್ಸನ್ ಎಂಬಲ್ಲಿಂದ ಪುನಹ 250 ಜನರು ಈ ಪ್ರದರ್ಶನಕ್ಕೆ ಹೊರಟಾಗ ಪೋಲೀಸರು ಅವರ ಮೇಲೆ ದಬ್ಬಾಳಿಕೆ ನಡೆಯಿಸಿಬಿಡಿಸಿದರು.

ಪ್ಯಾಲೆಸ್ಟೈನಿನ ವಾತಾವರಣವು ಬಹುಮಟ್ಟಿಗೆ ಶಾಂತವಾಗಿದೆ. ಶಾಂತಿಭಂಗವಾಗದಂತೆ ಪೋಲೀಸರು ತುಂಬಾ ಜಾಗರೂಕರಾಗಿರುವರು. ಕೂಲಂಕಷವಾಗಿ ವಿದ್ಯಮಾನಗಳನ್ನು ವಿಮರ್ಶಿಸಲು ಒಂದು ಕಮಿಷನ್ ನೇಮಕವಾಗಿದ್ದು ಕಮಿಟಿಯವರು ಅತ್ತ ತೆರಳಿರುವರು. ಕಾಮನ್ಸ್ ಸಭೆಯ ಮೂರು ರಾಜಕೀಯ ಪಂಗಡಗಳಿಂದಲೂ ಮೂವರು ಸದಸ್ಯರು ಕಮಿಷನಿನ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು. ಲಘಾಟಾನರು, ಗಲಭೆಯಿಂದ ನಿರಾಶ್ರಿತರಾದವರ ಸಹಾಯಕ್ಕೆ ಹಣಕೂಡಿಸುತ್ತಿರುವರು.

ಕಲ್ಕತ್ತದ ಅಲ್ಬಿಯನ್, ಲೋದಿಯನ್ ಮತ್ತು ಓರಿಯಂಟ್ ಸೆಣಬು ಕಾರ್ಖಾನೆಗಳಲ್ಲಿ ಮುಷ್ಕರ ಹಿಡಿದಿದ್ದ ಕೆಲಸಗಾರರು ಕಳೆದ ಬುಧವಾರ ಬೆಳಿಗ್ಗೆ ತಮ್ಮ ತಮ್ಮ ಕೆಲಸಗಳಿಗೆ ಹೋದರು. ಸೆಣಬು ಗಿರಿಣಿಗಳಲ್ಲೆಲ್ಲಾ ಭಾರಿಗಿರಣಿಯಾದ ಬಡ್ಜ್ ಗಿರಣಿಯಲ್ಲಿನ ಮುಷ್ಕರಗಾರರಲ್ಲಿ ಮುಕ್ಕಾಲು ಭಾಗದಷ್ಟು ಜನರು ತಮ್ಮ ತಮ್ಮ ಕೆಲಸಗಳಿಗೆ ಹೋದರು, ಒಟ್ಟಿನಲ್ಲಿ ಮುಷ್ಕರದ ಗಿರಣಿಗಳ ಕೆಲಸಗಾರರೆಲ್ಲರೂ ಮುಷ್ಕರವನ್ನು ಬಿಟ್ಟು ಒಂದೆರಡು ದಿನಗಳಲ್ಲೆ ಯಥಾಪ್ರಕಾರ ಕೆಲಸಗಳಿಗೆ ಹೋಗುವವರಾಗಿರುವರು.

ಮಿ|| ರಾಬರ್ಟ್ ಅಬೆಟ್ಟ್ ಎಂಬ ಅಮೇರಿಕದ ಕೋಟ್ಯಾಧೀಶ್ವರನಾದ ನಿಗ್ರೋ ಒಬ್ಬನು ಲಂಡನ್ನಿಗೆ ತೆರಳಿದಾಗ ಯಾವ ಹೋಟೇಲಿನವರೂ ಆತನಿಗೆ ಪ್ರವೇಶಮಾಡಿಸಕೊಡಲಿಲ್ಲವಂತೆ. ಹೀಗೆ, ಸುಮಾರು 30 ಹೋಟೇಲುಗಳನ್ನು ಸುತ್ತಿ ದಣಿದು ಕೊನೆಗೆ ತನ್ನ ಸ್ವವರ್ಣದವನೊಬ್ಬನನ್ನು ಕಂಡು ಆತನಿಂದ ಸ್ವೀಕರಿಸಲ್ಪಟ್ಟನು. ಇದೇ ಕೋಟ್ಯಾಧಿಪತಿಗೆ ಪೆರಿಸ್, ಬ್ರುಸ್ಸೆಲ್ಸ್, ಹೇಂಬರ್ಗ್, ಬರ್ಲಿನ್ ಇತ್ಯಾದಿ ಮಹಾನಗರಗಳಲ್ಲಿ ತುಂಬಾ ಸನ್ಮಾನಸಸ್ವಾಗತಗಳಾಗಿದ್ದುವು. ವರ್ಣದ್ವೇಷದ ತಿರಸ್ಕಾರದ ಅನುಭವವು ಇಂಗ್ಲಾಂಡಿನಲ್ಲಿ ವಿಶೇಷ!

ಅಫ್ಘಾನಿಸ್ಥಾನದಿಂದ ಇತ್ತಲಾಗಿನ ಸರಿಯಾದ ಸಮಾಚಾರವೇ ಇಲ್ಲ. ಬಚ್ಚಾ ಇಸಾಕೋನ ಅಧಿಕಾರವು ಕಾಬೂಲಿನೊಳಗೆ ಮಾತ್ರ ಸ್ಥಿರವಾಗಿದೆಯಂತೆ. ಕಂದಹಾರಿನ ಕೆಲವುಪಂಗಡಿಗರು ದಂಗೆಯೆದ್ದಿರುವರಂತೆ. ಗಾರ್ಡೆಜಿನ ಬಳಿ ಪ್ರಬಲ ಹೋರಾಟ ನಡೆಯುತ್ತಿದೆಯೆಂದೂ, ನಾದಿರ್‌ಖಾನರು ಕಾಬೂಲನ್ನು ಮುತ್ತುವ ಪ್ರಯತ್ನ ನಡಿಸುತ್ತಿರುವರೆಂದೂ ಸುದ್ದಿಬಂದಿದೆ. ಅಲಿ ಅಹಮ್ಮದ್‌ಖಾನರು ಬಚ್ಚಾ ಇಸಾಕೋನಿಗೆ ಶರಣಾಗಿದ್ದಾಗ ಅವರ ಮೂಗಿಗೆ ಕಬ್ಬಿಣದ ಸರಳು ಚುಚ್ಚಿ ಚಿತ್ರಹಿಂಸೆ ಮಾಡಿಸಿ ತಲೆ ಕಡಿಸಲಾಯಿತೆಂದು ಅವರ ಮಗಳು ಲಾಹೋರಿಗೆ ಬಂದು ತಿಳಿಸಿರುತ್ತಾಳೆ.

ಹೈದರಾಬಾದಿನ ನಿಜಾಮರ 17 ವಯಸ್ಸಿನ ಕುವರಿಯಾದ ಕರೀಮುನ್ನೀಸಾ ಬೇಗಮಳನ್ನು 25 ವರ್ಷ ಪ್ರಾಯದ ಸರದಾರ ಅಲಿಖಾನರಿಗೆ ವಿವಾಹಮಾಡಿಕೊಡುವದಾಗಿ ಪ್ರಕಟವಾಗಿದೆ. ವರನು ನವಾಬ ಮುಜಾಫರ್ ಜಂಗ್ ಎಂಬವರ ಪುತ್ರ; ವಿಲಾಯತಿಯಲ್ಲಿ ನ್ಯಾಯಶಾಸ್ತ್ರವನ್ನು ವ್ಯಾಸಂಗ ಮಾಡುತ್ತಿರುವರು. ನಿಜಾಮರು ತಮ್ಮ ಭಾವೀ ಅಳಿಯನಿಗೆ ಸರದಾರ ಜಂಗ್ ಬಿರುದನ್ನಿತ್ತಿರುವರು. ಮತ್ತೊಬ್ಬ ಮಗಳನ್ನು ಬಾದರ್ ಅಲಿಖಾನ್ ಎಂಬವರಿಗೆ ಕೊಡುವರೆಂದು ತಿಳಿದುಬರುತ್ತದೆ. ವರನಿಗೆ ಬಾದರ್ ಜಂಗ್ ಎಂಬ ಹೆಸರನ್ನು ದಯಪಾಲಿಸಿರುತ್ತಾರೆ. ಸದ್ಯದಲ್ಲಿಯೇ ಇವರು ಇಂಗ್ಲೆಂಡಿಗೆ ಕೈಗಾರಿಕೆಯಲ್ಲಿ ಶಿಕ್ಷಣವನ್ನು ಹೊಂದುವುದಕ್ಕಾಗಿ ತೆರಳುವರು.

ಬೂಸಾವಲ್ ರೈಲ್ವೆಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಒಬ್ಬ ಬಂಗಾಳಿಯೂ ಮತ್ತು ಒಬ್ಬ ದಕ್ಷಿಣ ಪ್ರಯಾಣೀಕನು ಎರಡು ಸಾಮಾನಿನ ಮೂಟೆಗಳನ್ನು ಹತ್ತಿರ ಇಟ್ಟುಕೊಂಡು ರೈಲು ಬರುವಿಕೆಗಾಗಿ ನಿರೀಕ್ಷಿಸುತ್ತಿದ್ದರು. ಈ ಮಧ್ಯೆ ರೈಲ್ವೆಪೋಲಿಸ್ ಕಾನ್‌ಸ್ಟೇಬಲಿಗೆ ಅನುಮಾನಬಂದದ್ದರಿಂದ ಅವರ ಸಾಮಾನು ಮೂಟೆಗಳನ್ನು ಶೋಧನೆಮಾಡಬೇಕೆಂದು ಪ್ರಯಾಣೀಕರನ್ನು ಕೇಳಲು ಅವರು ಮಾಡಕೂಡದೆಂದು ನಿರಾಕರಿಸಿದರು. ಕಾನ್‌ಸ್ಟೇಬಲನಿಗೆ ಮತ್ತಷ್ಟು ಅನುಮಾನವು ಹೆಚ್ಚಿ ಇತರಜನರ ಸಹಾಯದಿಂದ ನಿರ್ಬಂಧವಾಗಿ ಶೋಧನೆ ಮಾಡಲು ಪ್ರಯತ್ನಪಟ್ಟಕೂಡಲೆ ಆ ಪ್ರಯಾಣೀಕರು ರಿವಾಲ್ವರಿನಿಂದ ಎರಡು ಗುಂಡುಗಳನ್ನು ಹಾರಿಸಿದ್ದರಿಂದ ಕಾನ್‌ಸ್ಟೇಬಲಿನ ಮೊಣಕಾಲಿಗೆ ಪೆಟ್ಟು ಬಿತ್ತು. ಎಲ್ಲರೂ ಸೇರಿಕೊಂಡು ಪ್ರಯಾಣೀಕರನ್ನು ದಸ್ತಗಿರಿಮಾಡಿ ಅವರ ಸಾಮಾನಿನ ಮೂಟೆಗಳನ್ನು ಹುಡುಕಲು ಎರಡು ಬಾಂಬುಗುಂಡುಗಳು ಸಿಕ್ಕಿದವು.

ಮದ್ರಾಸ್ ಸಾಹುಕಾರಪೇಟೆಯಲ್ಲಿರುವ ಜೈನಶ್ವೇತಾಂಬರ ದೇವಸ್ಥಾನದಲ್ಲಿ ತಾ|| 8-9-29 ನೆಯ ಭಾನುವಾರ ಬೆಳಗ್ಗೆ 10 ಘಂಟೆ ಸುಮಾರಿನಲ್ಲಿ ಪೂಜೆಮಾಡುತ್ತಲಿದ್ದ ಅದೇ ದೇವಸ್ಥಾನದಲ್ಲಿ ಮೊದಲು ಗುಮಾಸ್ತನಾಗಿದ್ದ ಶಾಮಲಾಲ್ ಎಂಬುವನು 40,000 ರೂಪಾಯಿಗಳ ಬೆಲೆಬಾಳುವ ಕಿರೀಟ ಕುಂಡಲಗಳನ್ನು ದೇವಸ್ಥಾನದಲ್ಲಿ ಯಾರೂ ಇಲ್ಲದವೇಳೆ ತನ್ನ ಚೀಲದಲ್ಲಿ ಹಾಕಿ ತೆಗೆದುಕೊಂಡು ಹೋದನು ಸಾಯಂಕಾಲ 5 ಘಂಟೆಗೆ ಪೂಜಾರಿಯು ಅಲ್ಲಿಹೋಗಿ ನೋಡುವಲ್ಲಿ ಕಿರೀಟವು ಇಲ್ಲದೆ ಎದೆಗುಂದಿ ಆಗಲೇ ದೇವಸ್ಥಾನದ ಟ್ರಸ್ಟಿಗಳಿಗೆ ತಿಳಿಸಲಾಗಿ ಅವರು ಅಲ್ಲಿಗೆ ಬಂದು ವಿಚಾರಿಸಿ ಪೋಲೀಸ್ ಸ್ಟೇಷನಿಗೆ ಹೋಗಿ ಈ ಸಂಗತಿಯನ್ನು ತಿಳಿಸಿದರು. ಅವರು ಅಲ್ಲಿಗೆ ಬಂದು ಮಹಜರು ಮಾಡಿ 9 ಜನರನ್ನು ದಸ್ತಗಿರಿಮಾಡಿ ಅವರೆಲ್ಲರ ಮನೆಗಳನ್ನು ಜಪ್ತಿಮಾಡಿದರೂ ಕಿರೀಟವು ಸಿಕ್ಕದೆ ಈ ಶಾಮಲಾಲ್ ಮನೆಯಲ್ಲಿ ಮಾತ್ರ ಸುಮಾರು 60 ರೂಪಾಯಿನ ಬೇರೆ ಸಾಮಾನು ಸಿಕ್ಕಿದ್ದರಿಂದ ಇವನ ಮೇಲೆಯೇ ಪೂರಾ ಗುಮಾನಿಯಾಗಿ ಶಾಮಲಾಲನನ್ನು ಪಹರೆಯಲ್ಲಿ ಇಟ್ಟಿದ್ದಾರೆ. ಕಿರೀಟ ಕುಂಡಲಗಳು ಈಚೆಗೆ ಒಬ್ಬ ನಾಯಕನಾನಿಯ ಮನೆಯಲ್ಲಿ ದೊರಕಿರುತ್ತವೆ.

ಶ್ರೀ ವಿದ್ಯಾಗಣಪತಿಯ ಮಹಾಮಂಗಳಾರತಿ ಮೈಸೂರು.

ಮೈಸೂರು ಹಳೇಅಗ್ರಹಾರದಲ್ಲಿರುವ ವರ್ತಕರಾದ ದಲ್ಲಾಳಿ ಬಸಪ್ಪನವರು ತಾ|| 11-9-29 ನೇ ಸಾಯಂಕಾಲ ತಮ್ಮ ನಿಲಯದಲ್ಲಿ ಶ್ರೀ ವಿದ್ಯಾಗಣಪತಿಯ ಮಹಾಮಂಗಳಾರತಿಯನ್ನು ನೆರವೇರಿಸಿದರು. ನಗರದ ಪ್ರಮುಖರೂ, ವರ್ತಕರೂ, ಇನ್ನೂ ಅನೇಕ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು. ಆಸ್ಥಾನ ಸಂಗೀತವಿದ್ವಾನ್ ಮ|| ರಾ|| ಚಿಕ್ಕರಾಮರಾಯರ ಮಧುರವಾದ ಸಂಗೀತವೂ ಮತ್ತು ಮುತ್ತುಸ್ವಾಮಿಯವರ ಮೃದಂಗವಾದನವೂ, ಎಚ್. ವಿ. ಕೃಷ್ಣರಾಯರ ಫಿಟ್ಲುವಾದನವೂ ಸಭಿಕರನ್ನು ಆನಂದಗೊಳಿಸಿದುವು. ಮಹಾಮಂಗಳಾರತಿಯಾದ ನಂತರ ಸಭಿಕರಿಗೆಲ್ಲಾ ಗಂಧ ಪುಷ್ಪ, ತಾಂಬೂಲ ಮತ್ತು ಪ್ರಸಾದವಿನಿಯೋಗಗಳು ನಡೆದುವು. ಮ|| ರಾ|| ಬಸಪ್ಪನವರು ದೈವಭಕ್ತಿನಿರತರಾದ ಸದ್ಗೃಹಸ್ಥರು. ಇವರಿಗೆ ಶ್ರೀ ಗಣಪತಿಯು ಸುಖ ಸಂತೋಷಗಳನ್ನುಂಟುಮಾಡಲೆಂದು ಹಾರೈಸುತ್ತೇನೆ.

ಓ. ಎಸ್. ಲಿಂಗಯ್ಯ.

ಶ್ರೀ ಹಿಮವತ್ಕೇದಾರೇಶ್ವರ ಪ್ರಸೀದ.

ಶ್ರೀ ಹಿಮವತ್ಕೇದಾರೇಶ್ವರ ಪ್ರತಿಷ್ಠೆ

ಬೊಮ್ಮಗೊಂಡನಕೆರೆ

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ |
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯಶಂಭವೇ ||

ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕ ವರುಷಂಗಳು ೧೮೫೧ನೇ ಶುಕ್ಲನಾಮಸಂವತ್ಸರೇ ದಕ್ಷಿಣಾಯನೇ ವರ್ಷರ್ತೌ ಶ್ರಾವಣಮಾಸೇ ಶುಕ್ಲಪಕ್ಷೇ ಏಕಾದಶೀ ತಿಥೌ ಭೃಗುವಾಸರೇ ಮೊಳಕಾಲ್ಮೂರು ತಾ|| ಬೊಮ್ಮಗೊಂಡನಕೆರೆ ಗ್ರಾಮದ ಶ್ರೀಮದ್ವೀರಶೈವ ಸಜ್ಜನ ಭಾರಿ ಗುರಪ್ಪನವರ ಮಕ್ಕಳು ಭಾರಿ ಸಣ್ಣಶಿದ್ದಪ್ಪನವರು ಕಟ್ಟಿಸಿದ್ದ ದೇವಸ್ಥಾನವನ್ನು ಶಿವಲಿಂಗಪ್ರತಿಷ್ಠಾ ಕಾರ್ಯಕ್ಕೆ ಇದೇ ಬೊಮ್ಮಗೊಂಡ್ನಕೆರೆ ಗ್ರಾಮದ ದೈವಕ್ಕೆ ಒಪ್ಪಿಸಿದ ಮೇರೆ ಮೇಲ್ಕಂಡ ದೈವದವರು ಆಮೋದಿಸಿ ವೇ|| ಶಿರಾ|| ಹೋಳೆ ಹಂಪಯ್ಯನವರ ಮಠದ ಪಟ್ಟಾಧ್ಯಕ್ಷ ಶಿದ್ದಪ್ಪದೇವರನ್ನೂ ಮತ್ತು ವೇ|| ಸಾಣೇಕೆರೆ ಮಠದ ಶಾಂತಪ್ಪಯ್ಯನವರ ಮಕ್ಕಳು ತಿಪ್ಪೇಸ್ವಾಮಿ, ಇವರನ್ನು ಬರಮಾಡಿಕೊಂಡು ಶ್ರೀ ಶಿವಲಿಂಗಕ್ಕೆ ಶ್ರೀ ಹಿಮವತ್ಕೇದಾರೇಶ್ವರ ಎಂಬಭಿಧಾನದಿಂದ ಪ್ರತಿಷ್ಠಾಕಾರ್ಯಕ್ಕೆ ವಿಜ್ಞಾಪನೆ ಮಾಡಿಕೊಂಡ ಪ್ರಕಾರ ಮೇಲ್ಕಂಡ ಪಟ್ಟದದೇವರೇ ಮುಂತಾದ ಅಯ್ನರುಗಳೂ ಸಮ್ಮತಿಯಿತ್ತು ಮೇಲ್ಕಂಡಂತೆ ಶ್ರೀ ಹಿಮವತ್ಕೇದಾರೇಶ್ವರನೆಂಬ ನಾಮದಿಂದ ಪ್ರತಿಷ್ಠಾ ಮಹತ್ಕಾರ್ಯಕ್ಕೆ ಆಗಮಿಸಿದ ಪಟ್ಟಚರಾಧಿಕಾರಿಗಳು, ಮಠ, ಮಹತ್ತು, ಶೆಟ್ರು, ಯಜಮಾನರು, ಗೌಡ್ರು, ಗೊಂಚಿಕಾರರು ಇನ್ನೂ ಮುಂತಾದ ಮಹನೀಯರು ಬರೆಸಿದ ಸಂಪುಟ.

ಶ್ರೀಮತ್‌ಪಂಚಾಚಾರ್ಯೇಭ್ಯೋ ನಮಃ.

ಸಂಪುಟದ ವಿವರಣೆ.

ರೀತ್ಯಾ ಒಂದು ಶಿವಲಿಂಗಪ್ರತಿಷ್ಠಾ ಕಾರ್ಯ ನಡೆಸಬೇಕೆಂಬ ಆಶಯದಿಂದ ಮೇಲ್ಕಂಡ ಭಾರಿ ಸಣ್ಣಶಿದ್ದಪ್ಪನವರ ಖಾಸಾ ಅಣ್ಣ ದೊಡ್ಡಶಿದ್ದಪ್ಪನವರು ಪ್ರಯತ್ನಪಟ್ಟು ಈ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಲಗತು ಒಂದು ಗುಡಿಯನ್ನು ನಿರ್ಮಾಣಮಾಡಿ, ಗ್ರಹಚಾರವಶಾತ್ ಶಿವಾಧೀನನಾದರು. ಈ ಸಣ್ಣಶಿದ್ದಪ್ಪನವರು ಅವರ ಅಣ್ಣ ಕಟ್ಟಿಸಿದ ಗುಡಿಯಲ್ಲು ಶಿವಪ್ರತಿಷ್ಠಾ ಕಾರ್ಯ ಮಾಡಿಸಬೇಕೆಂದು, ಶಿವಲಿಂಗವನ್ನೂ, ಬಸವ ಮೂರ್ತಿಯನ್ನೂ ಸಂಗ್ರಹಿಸಿ, ಜಲಾಧಿವಾಸ ಮಾಡಿಸಿ ಈ ಮಹತ್ಕಾರ್ಯ ಒಬ್ಬರಿಂದ ಸಾಧ್ಯವಲ್ಲೆಂದು ಯೋಚಿಸಿ ಗ್ರಾಮದ ದೈವಕ್ಕೆ ಒಪ್ಪಿಸಿ ಕಾರ್ಯಕ್ರಮಗಳ ಖರ್ಚುಗಳಿಗೋಸ್ಕರ ಒಂದುನೂರ ಐವತ್ತು ರೂಪಾಯಿಗಳನ್ನು ಒಪ್ಪಿಸಿದರು. ಆದಾಗ್ಯೂ ದೈವದ ಮುಖಂಡರ ಸ್ವಾರ್ಥಬುದ್ಧಿಯಿಂದಲೂ, ಇನ್ನೂ ಇತರ ಕಾರಣಗಳಿಂದಲೂ ಸಾಮಾನ್ಯವಾಗಿ ಹತ್ತು ವರುಷಗಳಿಂದಲೂ. ಕೆಲಸ ನಡೆಯದೆ ಸಣ್ಣಶಿದ್ದಪ್ಪನಿಂದ ಬಂದ ಹಣ ಆದೇ ಕೆಲಸಕ್ಕೆ ಉಪಯೋಗವಾಗದೆ ವ್ಯರ್ಥವಾಗಿ ಹೋಯಿತು. ಅಂತೂ, ಇಂತೂ ಕೈಲಾಸವಾಸಿ ದೊಡ್ಡಶಿದ್ದಪ್ಪನವರ ಸಂಕಲ್ಪ ಈಡೇರದೆ ಹೋಗಿ ಹಿಂದಿನಗುಡಿ ನಿರ್ಮಾಣವಾಗಿ, ಸುಮಾರು ಇಪ್ಪತ್ತು ವರುಷಗಳಾಗುತ್ತಾ ಬಂತು. ಇತ್ತೀಚೆಗೆ ಕಾಲಗತಿಯಿಂದ ಸದರಿ ಸಣ್ಣಶಿದ್ದಪ್ಪನು ತುಂಬಾ ಕಷ್ಟನಷ್ಟಗಳಿಗೊಳಗಾದನಾದರೂ ತನ್ನ ಅಣ್ಣನ ಸಂಕಲ್ಪ ನೆರವೇರದೆ ಹೋಯಿತೆಂಬ ವ್ಯಸನದಿಂದ ಹೊಸ ಗುಡಿ ಕಟ್ಟಿಸಿ, ಬಹುದಿವಸ ಕಳೆದು ಹೋದ್ದರಿಂದ ಸ್ವಾಮಿವಾಸಕ್ಕೆ ಯೋಗ್ಯವಲ್ಲೆಂಬ ಆಕ್ಷೇಪಣೆಯನ್ನು ಕೇಳಿ ತನಗೊದಗಿದ ಕಷ್ಟಾದಿಗಳನ್ನು ಲಕ್ಷಿಸದೆ ಬಹು ಶ್ರಮಪಟ್ಟು ಗುಡಿಯನ್ನು ನಿರ್ಮಾಣಮಾಡಿ ಮೇಲ್ಕಂಡಂತೆ ದೈವಕ್ಕೆ ಒಪ್ಪಿಸಿದ್ದು ತುಂಬಾ ಸ್ತುತ್ಯವಾದದ್ದು. ಮಹದ್ದೈವದವರು ಪ್ರತಿಷ್ಠಾಕಾರ್ಯಕ್ಕೆ ಮುಂದುವರಿದು ಒಪ್ಪಿಕೊಂಡದ್ದು ಸ್ತುತ್ಯವಾದ್ದೇ ಸರಿ. ಆದರೆ ಮುಂದೆ ದೇವರಪೂಜಾ ನಂದಾದೀಪ ದೇವತಾಯೋಗ್ಯ ಸಾಮಾನುಗಳ ಶೇಖರಣೆ, ಗುಡಿ ಬರಾವಣೆ, ಪೌಳಿಯ ಕಟ್ಟಡ ಇತ್ಯಾದಿ ವಿಶೇಷತಃ ನಡೆಯತಕ್ಕದ್ದಿರುತ್ತೆ. ಈಗಿನ ಸ್ಥಿತಿಯಲ್ಲು ಸಣ್ಣಶಿದ್ದಪ್ಪನವರಿಗೆ ಮೇಲ್ಕಂಡ ಕಾರ್ಯಗಳು ನಡೆಸಲು ಶಕ್ತಿಸಾಲದ ಕಾರಣ ಈತನನ್ನು ಕಾರ್ಯದರ್ಶಿಯಾಗಿ ನೇಮಿಸಿ ಈ ಕಾರ್ಯಗಳನ್ನು ನಡೆಯಿಸಿಕೊಂಡು ಹೋಗಬೇಕೆಂದು ...

[ಈ ಸಾಲುಗಳು ಮೂಲದಲ್ಲಿ ಹೀಗಿವೆ:] ಕಾರಣ ಈತನನ್ನು ಕಾರ್ಯದರ್ಶಿಯಾಗಿ ನೇಮಿಸಿ ಪ್ರಯಾವಣೆಮಾಡಿ ಕೊಂಡರು.

ವೇ|| ರಾ|| ಹಿ|| ಮ|| ಹಂಪಣ್ಣಯ್ಯನವರು, ಮ|| ರಾ|| ಕೋಣಸಾಗರದ ಬಿಸಿನೀರು ಸಣ್ಣವೀರಣ್ಣನವರ ಮಕ್ಕಳು ಮುದ್ದಪ್ಪನವರು, ಮ|| ರಾ|| ಬೊಮ್ಮಗೊಂಡ್ನಕೆರೆ ಭಾರಿ ಸಿ. ಬಸಪ್ಪನವರು, ಮ|| ರಾ|| ಭಾರಿ ಟಿ. ಮುದ್ದಾನಪ್ಪನವರು, ಮ|| ರಾ|| ಭಾರಿ ಯಂ. ಬಸಪ್ಪನವರು, ಮ|| ರಾ|| ನಂದಿಕೋಲು ಬಸೆಟ್ಟಪ್ಪನವರು, ಮ|| ರಾ|| ಸಾಣೇಕೆರೆ ಚನ್ನವೀರಪ್ಪನವರು, ಮ|| ರಾ|| ಸಾಣೇಕೆರೆ ಚನ್ನಪ್ಪನವರು ಈ ಎಂಟು ಜನರನ್ನು ಪಂಚಾಯ್ತರಾಗಿ ನೇಮಿಸಿರುತ್ತೆ. ಹಾಲಿ ಗುಡಿಯ ಪೌಳಿಯ ಕಟ್ಟಡವನ್ನು ಮ|| ರಾ|| ಬಿ. ಮುದ್ದಪ್ಪನವರು ಕಟ್ಟಿಸಿಕೊಡುವುದಾಗಿ ವಾಗ್ದಾನಮಾಡಿರುತ್ತಾರೆ. ಉಳಿದ ಮೇಲ್ಕಂಡ ಕೆಲಸಗಳ ಪೈಕಿ ಪೂಜಾಕಾರ್ಯವನ್ನು ಇದೇ ಗ್ರಾಮದ ಬಸವೇಶ್ವರ ಮೂರ್ತಿಯನ್ನು ಆರ್ಷೆಯಿಂದಲೂ ಪೂಜೆಮಾಡಿಕೊಂಡು ಬಂದಿರುವ ಪೂಜಾರಿ ಶಿದ್ದಬಸಪ್ಪನವರ ಮಗ ವೀರಭದ್ರಯ್ಯನವರು ಪೂಜಾ ಮಾಡಿಕೊಂಡು ಬರುತ್ತೇವೆಂತಲೂ ಇದನ್ನು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತೇವೆಂತಲೂ ಅದಕ್ಕೆ ಪ್ರತಿಫಲವಾಗಿ ಸುಮಾರು ಎರಡುನೂರು ರೂಪಾಯಿಗಳು ಬೆಲೆಬಾಳಬಹುದಾದ ಜಮೀನನ್ನು ಸಣ್ಣಶಿದ್ದಪ್ಪನವರ ಮಗ ಗುರುಬಸಪ್ಪನು ಕೊಡಿಸಿಕೊಡಬೇಕೆಂದೂ ಉಭಯರು ನಡಿಸಿಕೊಂಡುಬರುವುದಾಗಿ ವಾಗ್ದಾನಮಾಡಿರುತ್ತಾರೆ. ಸದರಿ ಜಮೀನ್ ದೇವರ ಹೆಸರಿಗೆ ಪಟ್ಟಾ ಇರತಕ್ಕದ್ದು. ಅದರ ವೆಚ್ಚಕ್ಕೂ, ಇತರೇ ಕೆಲಸಗಳಿಗೂ, ಪಂಚಾಯ್ತರು ನಾನಾಮುಖದಲೂ ಯೋಗ್ಯ ಉಪಾಯಗಳಿಂದ ಹಣ ಸಂಗ್ರಹಿಸಿ, ಸ್ವಹಸ್ತ, ಪರಹಸ್ತ ಸಹಾಯದಿಂದ ನಡೆಸಿಕೊಂಡುಬರಬೇಕು. ಎಲ್ಲಾ ಆಲೋಚನೆಗಳೂ ಪಂಚಾಯ್ತರ ಮೆಜಾರಿಟಿ ಒಪ್ಪಿಗೆಯಂತೆ ನಡಿಸತಕ್ಕದ್ದು. ಯಾವ ಕಾಲದಲ್ಲಿ ಯಾರೊಬ್ಬ ಪಂಚಾಯ್ತರ ಚುನಾವಣೆ ಕ್ಯಾನ್ಸಲ್, ಸಹ ಕಾರ್ಯದರ್ಶಿ ನೇರಿ ಅದೂ ಮೆಜಾರ್ಟಿಗೆ ಒಪ್ಪಿಗೆಗೆ ಸೇರಿರತಕ್ಕದ್ದು. ಈ ದೇವರ ಸಾಯಂಕಾಲ ದೀಪಾರಾಧನೆಗೆ ತಕ್ಕಷ್ಟು ಅಂದರೆ ವರುಷ ಒಂದಕ್ಕೆ ಸುಮಾರು ಐದು ಧಡಿಯದ ಎಣ್ಣೆ ಉಚಿತವಾಗಿ ಅವರ ಜೀವಮಾನದವರೆವಿಗೂ ನಡಿಸಿಕೊಂಡು ಬರುವುದಾಗಿ ಮ|| ರಾ|| ನಂದಿಕೋಲ್ ಶಿವಣ್ಣನವರ ಮಕ್ಕಳು ಬಸೆಟ್ಟಪ್ಪ, ಚನಬಸಪ್ಪ ಒಪ್ಪಿಕೊಂಡು ವಾಗ್ದಾನಮಾಡಿರುತ್ತಾರೆ. ಈ ರೀತಿ ನಡೆಸಿಕೊಂಡುಬರಲು ಸಂಪುಟವೇರ್ಪಾಟಾಗಿ ಕಲಿತ ಮಹಾಜನಗಳು ಒಪ್ಪಿ ಇದಕ್ಕೆ ದಸ್ಕತ್ತುಗಳು ಮಾಡಿ ಇರುತ್ತಾರೆ.

ತುಮಕೂರು ಡಿ|| ಶಿರಾ ತಾ|| ಕಸಬಾಹೋಬಳಿ ಹಂಪಯ್ಯನವರ ಮಠದ ಪಟ್ಟಾಧ್ಯಕ್ಷ ಶ್ರೀ ಶಿದ್ದಪ್ಪದೇವರು ಉಜ್ಜಯಿನೀ ಸಂಸ್ಥಾನ ಇರಾಖಾ, ಸಾಣೇಕೆರೆ ಮಠದ ತಿಪ್ಪೇಸ್ವಾಮಿ, ಮ|| ಗಾಳಿಪುರದ ಮಠದ ರುದ್ರಯ್ಯನವರು, ಹಿರೇ ಮಧುರೇಮಠದ ನೀಲಕಂಠಪ್ಪನವರು, ಕ್ಯಾತಗೊಂಡ್ನಹಳ್ಳಿ ಮಠದ ಸಣ್ಣವೀರಪ್ಪಯ್ಯನವರು, ಮಠದ ಚನಬಸಯ್ಯನವರು, ನಾಯ್ಕನಹಟ್ಟಿ ಹಿರೇಮಠದ ಹಂಪಣ್ಣಯ್ಯ, ಯಂ. ಯಂ. ಚನಬಸವಾರಾಧ್ಯರು, ಗೌರಿಸಮುದ್ರದ ಹಿರೇಮಠದ ಬುಕ್ಕಾಂಬುದಿವಾಸಿ ಮಠದ ಚಲುಮಯ್ಯ, ಭಾರಿ ಸಣ್ಣಶಿದ್ದಪ್ಪ, ಭಾರಿ ಸಣ್ಣಬಸಪ್ಪ, ಭಾರಿ ಸಿ. ಬಸಪ್ಪ, ಭಾರಿ ಮುದ್ದಾನಪ್ಪ, ಸಿ. ಬಸಪ್ಪ ಬೊಮ್ಮಗೊಂಡ್ನಕೆರೆ ಜಾಜೂರ್ ರುದ್ರಪ್ಪನವರು, ಸಾಣೇಕೆರೆ ಚನ್ನಪ್ಪ, ಸಾಣೇಕೆರೆ ಚನ್ನವೀರಪ್ಪನವರು, ಭಾರಿ ರುದ್ರಪ್ಪ ಬೊಮ್ಮಗೊಂಡನಕೆರೆ ಭಾರಿ ಗುಂಡಪ್ಪ, ಶಿದ್ದಯ್ಯನಕೋಟೆ ಪೈರುದಾರ್ ಸಣ್ಣಲಿಂಗಪ್ಪ, ಮೊಳಕಾಲ್ಮೂರು ಭಾರಿ ಶಿ|| ಚನ್ನಬಸಪ್ಪ, ಯಮುಕರ ತಮ್ಮಪ್ಪ, ಪೇಟೆನ್‌ಡಾಕ್ಟರ್ ಚಾಲಪ್ಪ, ಗೊಂಚಿಗಾರ ದೊಡ್ಡತಿಪ್ಪಯ್ಯ, ಕೋಣ್ಣ ಶಿದ್ದಪ್ಪನವರ ಮಗ ತಾಳ್ಕೆರಪ್ಪ ಸಹಿ|| ಹುಂಡೇವು.

ಇದರ ಅಸಲುಕಾಪಿಗಳು ಈ ಬೊಮ್ಮಗೊಂಡನಕೆರೆ ವೇಳು ಮಠದ ಚನ್ನಬಸಪ್ಪಯ್ಯನವರಲ್ಲಿ ಒಂದು, ಭಾರಿ ಸಣ್ಣಶಿದ್ದಪ್ಪನವರಲ್ಲಿ ಒಂದು, ಶ್ರೀ ಜಗದ್ಗುರು ಶಿದ್ದಲಿಂಗಶಿವಾಚಾರ್ಯ ವೀರಶೈವಬ್ರಾಹ್ಮಣ ವಿದ್ಯಾವರ್ಧಕ ಸಂಘದಲ್ಲಿ ಒಂದು ಇರುತ್ತೆ. ಇವುಗಳ ಮಾದರಿ ಈ ನಕಲನ್ನು ಮೈಸೂರು ಪಂಚಾಚಾರ್ಯಪ್ರಭಾ ಪತ್ರಿಕಾ ಆಫೀಸಿಗೆ ಕೊಟ್ಟು ಇರುತ್ತೆ. 24-8-29.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿ೨ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಚಾರ್ಜು ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [22]

ಎಂ. ಎಸ್. ಗಂಗಂಣ ಮತ್ತು ಲೋಕಂಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣೆ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವೋನಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು.

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.**

[6] ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಲಿಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದಂಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸುಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [6]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಔಷಧಸೇವನೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ **"ಆರೋಗ್ಯಚಂದ್ರಿಕೆ"** ಯೆಂಬ ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಆರೋಗ್ಯದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗನಿವಾರಣವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ **ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಪೇಟ್ರಿಯಟ್"** ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"**ಆನರಬಲ್ ಡಾಕ್ಟರ್ ಯು. ರಾಮರಾವ್** ಮತ್ತು ಅವರ ಮಕ್ಕಳು **ಡಾಕ್ಟರ್ ಯು. ಕೃಷ್ಣರಾವ್** ಎಂ. ಬಿ. ಬಿ. ಎಸ್. ಇವರಿಬ್ಬರೂ ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾಯಿಗಳಿಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಚುರವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ರೈಲುಸ್ಟೇಷನುಗಳಲ್ಲಿರುವ ಮೆಸರ್ಸ್ **ಹಿಗ್ಗಿನ್ ಬಾಥಮ್ಸ್** ಕಂಪೆನಿಯವರ ಬುಕ್‌ಸ್ಟಾಲ್‌ಗಳಲ್ಲೆಲ್ಲಾ ನಮ್ಮ **ಸಂಚಿಕೆಗಳು** ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[12] **ಮ್ಯಾನೇಜರ್, ಆರೋಗ್ಯಚಂದ್ರಿಕೆ,** 323, ತಂಬುಶೆಟ್ಟಿ ಬೀದಿ, **ಮದರಾಸು.**

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಆದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವ ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂಧ, ಕಾಲೀಮಲೀಕಂದ, ಅಶ್ವಕಂದ ಕ್ರೌಷ್ಟಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಪವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಪತ್ರಿ, ಪಿಪ್ಪಲಪತ್ರಿ, ಮದನಮಸ್ತ, ರಕನಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಖಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀರಮಗಜ, ಅಲದಹಾಲು, ವಾಕೇರಿಭಾಕಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಮಾಲಕ್ಕಿ, **ಕಲ್ಲುಸಕ್ಕರೆ,** ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊ. ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ ೪ ರೂಪಾಯಿಗಳು.

ಸಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕ, ರಕ್ತ, ಶೀತ, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಬ್ಬಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [10]

ಪತ್ತ:—ಮಾಲಿಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ತಾಬೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗ ಔಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವುವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಸೆ ೧ ಕ್ಕೆ ೧೨ ಆಣೆ ೩೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ್ ಅಷ್ಟವರ್ಗ ಔಷಧಾಲಯ
[23] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿದ್ದುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೨—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೨—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಲ್ಪಬೆಲೆ! ಅಧಿಕ ಲಾಭ!!

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕಡೆವರೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[3] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಸೀನಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦ ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[12] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪವಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವಿದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಸೆಪ್ಟಂಬರ್ ೧೯೨೯ [ಸಂಚಿಕೆ ೨೦.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

“ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು”—ಎಂಬುದನ್ನು ನೆನೆಸಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರದೆಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, ‘ಕೊಡಗಿನ ಗುಡುಗುಡು!’ (ಛೀ). ‘ಸುಡುಸುಡು!’ (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಶೀಘ್ರವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [7]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಿಕೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇನೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರಾವಣ ಗಣಾರಾಧನೆ.

ಬಿಜಾಪುರ.

ಈ ಊರ ಜೋರಾಪುರ ಪೇಟೆಯಲ್ಲಿರುವ ಮ|| ರಾ|| ರಾ|| ಶಂಕರಪ್ಪಾ ನಿಜಗುಣಪ್ಪಾ ಹೇರಲಗಿ ಇವರು ಪ್ರತಿವರ್ಷ ಶ್ರಾವಣಮಾಸದ ಅಖೈರಿನಲ್ಲಿ ತಮ್ಮ ಮನೆಯಲ್ಲಿ ಗಣಾರಾಧನೆಯನ್ನು ಮಾಡುವಂತೆ ಈ ವರ್ಷವಾದರೂ ಭಾದ್ರಪದ ಶುದ್ಧ ೧೦ ಶುಕ್ರವಾರದ ದಿವಸ ಗಣಾರಾಧನೆಯ ಸಮಯದಲ್ಲಿ ಇಲ್ಲಿಯ ಹಿರೇಮಠದಲ್ಲಿ ಸ್ಥಾಪಿಸಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘವನ್ನು ಬರಮಾಡಿಕೊಂಡು ಭಕ್ತಿಯಿಂದ ಜಗದಾಚಾರ್ಯರ ಭಜನಾಪದಗಳನ್ನು ಹಾಡಿಸಿ ಆ ಸಮಯದಲ್ಲಿ ಆತ್ಮಾನಂದದಿಂದ ಭಜನಾಸಂಘಕ್ಕೆ 2 ರೂಪಾಯಿಗಳನ್ನು ಸಮರ್ಪಿಸಿದರಲ್ಲದೆ ಮೈಸೂರು ರಾಜಧಾನಿಯಲ್ಲಿ ಪ್ರಕಾಶಿಸುವ ಶ್ರೀ “ಪಂಚಾಚಾರ್ಯ ಪ್ರಭಾ” ಪತ್ರಿಕೆಗೆ ಒಂದು ರೂಪಾಯಿಯನ್ನು ಸಮರ್ಪಿಸಿದರು ಈ ಮಹೋದಯರಿಗೆ ಶ್ರೀಮದಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಶ್ರೀ ಪಂಚಾಚಾರ್ಯ ಭಜನಾಸಂಘ. ಸೆಕ್ರೆಟರಿ.
ವೇ|| ದುಂಡಯ್ಯಾ ಬಸಯ್ಯಾ ಕರ್ಪೂರಮಠ
ವಿಜಾಪುರ.

ಈ ತಿಂಗಳ 2 ನೆಯ ತಾರೀಕು ಸೋಮವಾರ ಬೊಂಬಾಯಿನಲ್ಲಿ ಶ್ವೇತಾಂಬರಜೈನರ ಒಂದು ಮೆರವಣಿಗೆಯು ಹೊರಟು ಎರಡು ಪಾರ್ಟಿಗಳಾಗಿ ಬಡಿದಾಟವಾಗಿ ನಾಲ್ಕುಮಂದಿ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟಿರುವರೆಂದೂ ಒಬ್ಬನು ಬಹಳ ಗಾಯ ಹೊಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ಈ ವ್ಯವಹಾರವು ಕೋರ್ಟು ಕಚೇರಿಯನ್ನು ಕಾಡಿರುವುದೆಂದೂ ವರ್ತಮಾನ ಕೇಳುತ್ತೇವೆ.

ಸ್ವೀಕಾರ.

ಬಳ್ಳಾರಿ ಡಿ|| ಕುಡತಿನಗ್ರಾಮದ ನಯನಸ್ವಾಮಿ ಮಠದ ಶ್ರೀ ಪಟ್ಟದಸ್ವಾಮಿಗಳವರು ಪ್ರಭಾಪೋಷಣೋತ್ಕರ್ಷಕ್ಕಾಗಿ ಈ ಮೊದಲು ಕಳುಹಿಸಿದ 25 ರೂಪಾಯಿಗಳಲ್ಲದೆ ಪುನಃ 25 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಹಿರಿಯೂರು ತಾಲೂಕು ಮರ್ತವಿಮಠದ ವೇ|| ಸಾರವಡದಪ್ಪನವರ ಪುತ್ರಿ ಚಿ|| ಸೌ|| ಪುಟ್ಟಶಿದ್ದಮ್ಮನನ್ನು ದೊಡ್ಡೇರಿಮಠದ ವೇ|| ತಿಪ್ಪೇಸ್ವಾಮಿಗಳ ಮಕ್ಕಳು ಚಿ|| ತ್ಯಾರಪ್ಪನವರಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣೋತ್ಕರ್ಷಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಮ|| ರಾ|| ಗುಡಾಣದಯ್ಯನವರ ದ್ವಾರಾ ತಲ್ಪಿರುತ್ತವೆ.

ಕೊಟ್ಟೂರು ಮೂಲಿಮನಿ ಚಾನುಕೋಟಿಮಠದ ವೇ|| ರುದ್ರಯ್ಯನವರ ಮಕ್ಕಳಿಗೆ ಉಪ್ಪಾರಗಟ್ಟಿಮಠದ ವೇ|| ಕರಿತಮ್ಮಯ್ಯನವರ ಮಗಳನ್ನು ಕೊಟ್ಟು ಹಿರೇವೀಳ್ಯಪ್ರಸ್ತವನ್ನು ಜರುಗಿಸಿದ ಸಮಯದಲ್ಲಿ ಪ್ರಭಾಪೋಷಣೋತ್ಕರ್ಷಕ್ಕೆ ತೆಗೆಯಿಸಿದ 2 ರೂಪಾಯಿಗಳು ಜಾಗಟಗೇರಿಮಠದ ಮ|| ರಾ|| ಚನ್ನವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೊಸಪೇಟೆಯ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘದವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಉತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಸದರೀ ಸಂಘದ ಅಧ್ಯಕ್ಷರಾದ ಕುರುಗೋಡು ಮೇಲುಮಠದ ವೇ|| ಬಸವರಾಜಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಬಿಜಾಪೂರ ಶಹರನಿವಾಸಿಗಳಾದ ಮ|| ರಾ|| ಶಂಕರಪ್ಪಾ ನಿಜಗುಣಪ್ಪಾ ಹೇರಲಗಿ ಇವರು ತಮ್ಮ ಮನೆಯಲ್ಲಿ ನೆರವೇರಿಸಿದ ಶ್ರಾವಣಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಹಾಗೂ ಮ|| ರಾ|| ಸಂಗಪ್ಪಾ ಕಾಶಪ್ಪಾ ಲೋಣಿ ಇವರು ಸಂಕಲ್ಪಿಸಿದ್ದ ಕಾರ್ಯವು ಅನುಕೂಲವಾಗಿ ನೆರವೇರಿದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಒಟ್ಟು 2 ರೂಪಾಯಿಗಳು ವೇ|| ದುಂಡಯ್ಯಾ ಬಸಯ್ಯಾ ಕರ್ಪೂರಮಠ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹುಬ್ಬಳ್ಳಿ ತಾ|| ಬು|| ಅಂಚಟಗೇರಿ ಗ್ರಾಮದ ಹಳೇಸೂರ ಹಿರೇಮಠದ ಶ್ರೀ ಸಂಗನಬಸವ್ವನವರು ಶ್ರಾವಣಮಾಸದ ಪುರಾಣಪ್ರಸ್ತವನ್ನೂ ಗಣಾರಾಧನೆಯನ್ನೂ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣೋತ್ಕರ್ಷಕ್ಕೆ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಚನ್ನಬಸಪ್ಪ ಲಿಂಗಪ್ಪ ಮತ್ತೀಗಟ್ಟಿ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವರು ಮುಂದುವರಿದಿರುವರೇ ?

ಈಗಿನ ನಾಗರೀಕತೆಯ ಕಾಲದಲ್ಲಿ ಎಲ್ಲಾ ಮತೀಯರೂ ಮುಂದುವರಿಯಲು ನಾನಾಮಾರ್ಗಗಳಲ್ಲಿ ಪ್ರಯತ್ನಿಸುತ್ತಿರುವರು. ವೀರಶೈವರು ಈ ಮೇಲಾಟದಲ್ಲಿ ಬಹುಮಟ್ಟಿಗೆ ತಮ್ಮ ಗುರಿಯನ್ನು ಸಮೀಪಿಸಿರುವರೆಂದು ಆನಂದದಿಂದ ಹೇಳಬಹುದು. ಈಗ ನಾಡಿನ ನಾನಾ ಭಾಗಗಳಲ್ಲಿ ಕಾಣಬರುತ್ತಿರುವ, ದಿನದಿನಕ್ಕೂ ಹೆಚ್ಚುತ್ತಿರುವ ವಿದ್ಯಾರ್ಥಿನಿಲಯಗಳೂ, ವಿದ್ಯಾರ್ಥಿವೃಂದವೂ ಅಪರಿಮಿತವಾದ ಅಭಿವೃದ್ಧಿಯ ಚಿಹ್ನೆಯೆಂಬುದನ್ನು ಎಲ್ಲರೂ ಬಲ್ಲರು. ಯಾವುದೊಂದು ಮತವಾಗಲಿ ಸಂಪೂರ್ಣವಾಗಿ ಮುಂದುವರಿಯಬೇಕಾದರೆ ಆಯಾ ಮತದ ಪ್ರತ್ಯೇಕ ವ್ಯಕ್ತಿಯೂ ಸಮಾಜದ ಅಭಿವೃದ್ಧಿಗಾಗಿ ಅಂತರಂಗ ಬಹಿರಂಗಗಳಲ್ಲಿಯೂ ನಿಷ್ಠೆಯಿಂದ ಕಾರ್ಯಮಾಡಬೇಕು. ಒಂದು ಸಮಾಜದ ಉನ್ನತಿಯನ್ನು ತಿಳಿಯಬೇಕಾದರೆ ಅದರ ಉದ್ಯೋಗಿಕ, ಸಾಂಘಿಕ ಮತ್ತು ವಿದ್ಯಾಬಲಗಳೇ ಪ್ರಧಾನವಾದ ಪಡಿಯಚ್ಚುಗಳೆಂತಿರುವುವು. ಸಾಂಪತ್ತಿಕ ಮತ್ತು ವೈದಿಕಬಲಗಳು ಆಧುನಿಕವ್ಯವಹಾರದಲ್ಲಿ ದ್ವಿತೀಯಸ್ಥಾನವನ್ನು ಸ್ವೀಕರಿಸುವುವೆಂದು ಹೇಳಬಹುದಾದರೂ, ಇವುಗಳ ಪೂರ್ಣಪ್ರತಿಭೆಯು ಮಾತ್ರ ಆಯಾ ಮತದ ಒಳತಿರುಳೆಂತಿರುವುವೆಂಬುದನ್ನು ಮಾತ್ರ ನಾವು ಮರೆಯಬಾರದು. ಸದ್ಯದ ಪರಿಸ್ಥಿತಿಯಲ್ಲಿ ವೀರಶೈವಸಮಾಜವು ಮುಂದುವರಿದಿರುವುದೇ ? ಎಂಬುದಾಗಿ ವಿಚಾರಿಸಬೇಕಾಗಿದೆ. ನಮಗೆ ಧನಬಲವುಂಟು. ವೈದಿಕಬಲವುಂಟು. ಆದರೆ ಉದ್ಯೋಗಿಕ, ಸಾಂಘಿಕ ಮತ್ತು ವಿದ್ಯಾಬಲಗಳು ನಿರೀಕ್ಷಿತಪ್ರಮಾಣದಲ್ಲಿಲ್ಲ. ಇರುವ ಬಲವೂ ಏಕಮತ್ಯವಿಲ್ಲದೆ ಕಳೆಗುಂದುತ್ತಿರುವುದು. ರಾಜಕೀಯ ಉದ್ಯೋಗಗಳಲ್ಲಿ ನಮ್ಮವರು ಸ್ವೀಕರಿಸಿರುವ ಸ್ಥಾನಗಳು ಸಮಾಜ ದೃಷ್ಟಿಯಿಂದ ನೋಡಿದರೆ, ತೀರ ವಿರಳವಾಗಿರುವುವು. ನಮ್ಮ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಉದ್ಯೋಗಿಗಳು ಇನ್ನೂ ಬಹಳವಾಗಿವೆ. ನ್ಯಾಯಖಾತೆಯಲ್ಲಿ ಒಬ್ಬಿಬ್ಬರು ಇರುವರಾದರೂ ವಿದ್ಯಾಖಾತೆಯಲ್ಲಿ ಉತ್ತರವಾದಿತ್ವವುಳ್ಳ ಅಧಿಕಾರಿಗಳು ಯಾರೂ ಇಲ್ಲ. ಮೈಸೂರು ದೇಶದಲ್ಲಿರುವ ಹೈಸ್ಕೂಲುಗಳಲ್ಲಿ ಒಬ್ಬರಾದರೂ ವೀರಶೈವ ಹೆಡ್ಮಾಸ್ಟರ್ ಇಲ್ಲವೆಂದ ಮೇಲೆ ಇನ್ನು ಕನ್ನಡ ಪಂಡಿತರೂ ಸಹ ಇಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಎಂಟು ಜನ ಜಿಲ್ಲಾಧಿಕಾರಿಗಳೂ ಎಂಟು ಜನ ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರುಗಳೂ ಇವರಲ್ಲಿ ಯಾರೂ ವೀರಶೈವರಿಲ್ಲ. ಕಾಲೇಜಿನಲ್ಲಂತೂ ಪ್ರವೇಶವೇ ಇಲ್ಲ. ಬೆಂಗಳೂರು ಮಾಹು ಹೊಸದು ಇನ್ನೂ ನಾನಾ ಖಾತೆಗಳು ನಮ್ಮವರಿಗೆ ಬಾಗಿಲು ತೆರೆದಿರುವುದಿಲ್ಲ. ನಮ್ಮ ಸ್ತ್ರೀಯರ ಸ್ಥಿತಿಯಂತೂ ಇನ್ನೂ ಶೋಚನೀಯವಾಗಿರುವುದು. ಖಂಡಿತವಾಗಿ ಹೇಳುವುದಾದರೆ ಒಬ್ಬ ವಿದ್ವತ್ ಸ್ಕೂಲ್‌ಮುಖ್ಯೋಪಾಧ್ಯಾಯಿನಿಯೂ ಇಲ್ಲ. ಇದಕ್ಕೆ ಸಮಾಜವೇ ಉತ್ತರಹೇಳಬೇಕು, ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸಮಾಡಿಸಿ ಅವರೂ ದೇಶಸೇವೆ, ಸಮಾಜಸೇವೆಮಾಡಲು ಅನುವಾಗುವಂತೆ ಮಾಡಬೇಕು. ಈವರೆಗೆ ಒಬ್ಬ ಲೇಡಿ ಗ್ರ್ಯಾಜುಯೇಟ್ ಆಗಲಿ, ಪಂಡಿತಪರೀಕ್ಷೆ ಕೊಟ್ಟ ಸ್ತ್ರೀಯಾಗಲಿ ಇಲ್ಲವೆಂದರೆ ನಮ್ಮ ಸಮಾಜ ಮುಂದುವರಿದಿರುವುದೇ ? ಎಂಬ ಸಂಶಯಬರುತ್ತದೆ. ಸಾಂಘಿಕಬಲದಲ್ಲಂತು ನಾವು ಬಹಳಮಟ್ಟಿಗೆ ಹಿಂದಿರುವೆವು. ಈಗಲೂ ಕೆಲವರು ವೀರಶೈವರು ಶ್ರಾವಣಶನಿವಾರದಲ್ಲಿ ವೆಂಕಟೇಶನನ್ನು ಪೂಜಿಸುವದಷ್ಟೇ ಅಲ್ಲ ಊರ್ಧ್ವತ್ರಿಪುಂಡ್ರವನ್ನೂ ಹಾಕುತ್ತಾರೆ. ಅನ್ಯೋನ್ಯಪಂಗಡಗಳ ಮೈತ್ರಿಭಾವವು ಅಂಕುರಿಸಿಲ್ಲ. ಆಚಾರವ್ಯವಹಾರಗಳ ಕಟ್ಟು ಸಡಿಲವಾಗಿದೆ. ವಿದ್ಯಾಬಲವು ಈಗ ಬಹುತರವಾಗಿ ಬೆಳೆಯುತ್ತಿದೆ. ಆದರೆ ಅನೇಕ ವಿದ್ಯಾರ್ಥಿನಿಲಯಗಳು ವಿದ್ಯಾಗಂಧವೇ ಇಲ್ಲದ ದೊಡ್ಡ ಮನುಷ್ಯರ ಆಡಳಿತದಲ್ಲಿವೆ, ಇದರಿಂದ ಈಪ್ಸಿತಫಲವಾಗಲಾರದು. ವಿದ್ಯಾರ್ಥಿಗಳ ಬೆಳವಣಿಗೆಗೆ ಸಾಧಕವಾದ ನಾನಾ ಸಹಾಯಗಳು ಸರಿಯಾದ ರೀತಿಯಲ್ಲಿ ಹೊಂದಲಾರವು ವಿದ್ಯಾರ್ಥಿಗಳ ಪುರೋಭಿವೃದ್ಧಿಯನ್ನು ನೋಡಿಕೊಂಡು ಅವರನ್ನು ನಾಗರೀಕ ಬೆಳಕಿನಲ್ಲಿ ಒಯ್ಯಬೇಕಾದರೆ ಸಮರ್ಥರಾದ ಲೋಕವ್ಯವಹಾರಗಳೂ ವಿದ್ಯಾಸಂಪನ್ನರೂ ಬೇಕು. ನಮ್ಮ ವಿದ್ಯಾರ್ಥಿಗಳು ಕೇವಲ ಕಾಲೇಜ್‌ವ್ಯಾಸಂಗಕ್ಕಾಗಿಯೇ ನುಗ್ಗುತ್ತಿರುವುದರ ಬದಲು ಆಯುರ್ವೇದಿಕ ವಿದ್ಯುಚ್ಛಕ್ತಿ ಸರ್ವೆ, ಕಾಡು, ಖಾತೆ, ಟೆಲಿಗ್ರಫಿ, ಎಲೆಕ್ಟ್ರಿಕ್, ಟೆಕ್ನಿಕಲ್ ಮೊದಲಾದ ನಾನಾ ಶಾಖೆಗಳ ಕಡೆಗೆ ಗಮನಕೊಡಬೇಕು. ವಿದ್ಯಾರ್ಥಿನಿಲಯಗಳಲ್ಲಿ ಮೇಲ್ವಿಚಾರಕರು ಇವುಗಳನ್ನು ಅಭ್ಯಾಸಿಸುವ ಯುವಕರಿಗೆ ಆಶ್ರಯಕೊಡಬೇಕು. ಅಲ್ಲದೆ ಪ್ರೌಢವಿದ್ಯಾಭ್ಯಾಸವು ದೊಡ್ಡ ದೊಡ್ಡ ನಗರಗಳಲ್ಲಿಯೇ ನಡೆಯಬೇಕಾಗಿರುವದರಿಂದ ಮೊದಲು ಆ ವಿದ್ಯಾರ್ಥಿಗಳ ಕಡೆಗೆ ಲಕ್ಷ್ಯಗೊಡಬೇಕು. ಪ್ರೈಮರಿ ವಿದ್ಯಾಭ್ಯಾಸವು ಹಳ್ಳಿಗಳಲ್ಲಿಯೇ ದೊರಕುವುದರಿಂದ ಸಣ್ಣ ಹುಡುಗರ ಸಲುವಾಗಿ ಹಿರಿಯ ವಿದ್ಯಾರ್ಥಿಗಳ ಅನುಕೂಲವನ್ನು ಬಲಿಗೊಡಬಾರದು. ಪಟ್ಟಣವಾಸದಲ್ಲಿ ಹುಡುಗರು ಕೆಟ್ಟುಹೋಗಬಹುದಾದ ಸಂಭವವಾದರೂ ಇರಬಹುದು. ಆದರೆ ತಮ್ಮ ಜವಾಬ್ದಾರಿಯನ್ನು ತಿಳಿದ ಪ್ರೌಢವಿದ್ಯಾರ್ಥಿಗಳು ಇದಕ್ಕೆ ಒಳಗಾಗರು. ನಮ್ಮದೆಂದು ಹೇಳಿಕೊಳ್ಳುವ ಸಂಸ್ಕೃತಪಾಠಶಾಲೆಗಳಲ್ಲಿ ಸಹ ಸಮರ್ಥರಾದ ವೀರಶೈವಪಂಡಿತರಿಲ್ಲವೆಂದು ಹೇಳಿದರೆ ನಮ್ಮ ಸಮಾಜವು ಮುಂದುವರಿದಿರುವುದೇ ? ವೀರಶೈವರು ಕನ್ನಡಭಾಷೋಜ್ಜೀವಿಗಳೆಂದು ಅಭಿಮಾನಪಡಬಹುದಾದರೂ ಈಗ ಎಷ್ಟುಮಂದಿ ಕನ್ನಡದಲ್ಲಿ ನಿಷ್ಣಾತರಿರುವರು? ನಮ್ಮವರಿಂದ ಈಚೆಗೆ ರಚಿತವಾಗಿರುವ ಎಷ್ಟು ನಾಟಕಗಳು ರಂಗಭೂಮಿಯಲ್ಲಿ ಅಭಿನಯಿಸಲ್ಪಡುತ್ತಿರುವುವು ? ನಮ್ಮವರು ಬರೆದ ಯಾವ ಪುಸ್ತಕಗಳು ಶಾಲೆಗಳಲ್ಲಿ ಪಠ್ಯಪುಸ್ತಕಗಳಾಗಿ ನೇಮಿಸಲ್ಪಟ್ಟಿವೆ ? ಇದರಿಂದ ಈ ಕಾರ್ಯಗಳೆಲ್ಲಾ ನೆರವೇರಬೇಕಾದರೆ ಈಗಿನ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳು ಸುಶಿಕ್ಷಿತರಾಗಿ ಕನ್ನಡನುಡಿಯ ಸೇವೆಯನ್ನು ಮಾಡುವಂತೆ ಪ್ರೋತ್ಸಾಹಿಸಬೇಕಾದುದು ಆಡಳಿತಗಾರರ ಕೈಯಲ್ಲಿದೆ. ಸೂಕ್ಷ್ಮದೃಷ್ಟಿಯಿಂದ ನೋಡಿದರೆ ನಾವಿನ್ನೂ ಮುಂದುವರಿದಿಲ್ಲ. ಇಷ್ಟೂ ನಮ್ಮ ಮೈಸೂರುನಾಡಿಗೆ ಅನ್ವಯಿಸುತ್ತದೆ. ಯಾವ ಸಮಾಜಾಭಿಮಾನಿಯಾಗಲಿ ವೀರಶೈವರು ಮುಂದುವರಿದಿರುವರೆಂದು ಹೇಳಬಲ್ಲರು ?

ಸಮಾಜಸೇವಕ
ಮುದುಗೆರೆ, ಓ. ಎಸ್. ಲಿಂಗಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಏಕೋರಾಮ ಸಂಸ್ಕೃತ ಪಾಠಶಾಲಾ ಸ್ಥಾಪನಾ ಸೂಚನಾ

ಮಸಿಗಿ.

ವೀರಶೈವ ಸಮಾಜಬಾಂಧವರೇ ಈಗಿನಕಾಲವೆಂದರೆ ಅಸ್ಪೃಶ್ಯರ ಮೊದಲ್ಗೊಂಡು ಸರ್ವಮತೀಯರೂ ಸುಧಾರಣೆಯ ಶಿಖರವನ್ನು ಹೊಂದಿದ (ಹೊಂದುತ್ತಲಿರುವ) ಕಾಲವೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ಸ್ಥಿತಿಯಲ್ಲಿ ಯಾರು ಶಿವಜೀವೈಕ್ಯವಂ ಬೋಧಿಸುವ ವೇದಾಂತವಿದ್ಯೆಯಲ್ಲಿ ರಮಿಸುವರಾದ್ದರಿಂದ ವೀರಶೈವರೆಂಬ ಅನ್ವರ್ಥನಾಮವಂ ಪಡೆದಿರುವರೋ ಇವರಿಗೆ ವೇದವನ್ನೋದಕೂಡದೆಂತಲೂ, ಯಾವ ಶಿವಲಿಂಗಪ್ರಾಧಾನ್ಯವುಳ್ಳ ವೀರಶೈವಮತವಂ ಸ್ಥಾಪಿಸಿದ ಪಂಚಾಚಾರ್ಯರು ಶ್ರೀಶೈಲ ಕೇದಾರ ಕಾಶೀ ಮುಂತಾದ ಪಂಚಲಿಂಗಗಳಿಂದವತರಿಸಿ ಆ ಲಿಂಗಗಳಲ್ಲಿಯೇ ಐಕ್ಯರಾಗಿಯೂ ಆಯಾ ಜ್ಯೋತಿರ್ಲಿಂಗಾದಿ ಕ್ಷೇತ್ರಗಳಿಗೆ ಶತಮಾನಾರಂಭದಿಂದ ಈಗ್ಯೂ ಅಧಿಕಾರಿಗಳಾಗಿಯೂ ಇರುವರೋ ಅಂತಹ ವೀರಶೈವರಿಗೆ (ಕ್ರೈಸ್ತ) ಸ್ಥಾವರ ಲಿಂಗಗಳ ಗರ್ಭಗುಡಿಯಲ್ಲಿ ಪ್ರವೇಶಿಸಲು ಕೂಡಾ ಅಧಿಕಾರವಿಲ್ಲವೆಂತಲೂ ಯಾವ ವೀರಶೈವರು ದೀಕ್ಷಾಬಲದಿಂದ ವೈದಿಕಾಷ್ಟಾವರಣಾದಿ ಸತ್ಕರ್ಮನಿಷ್ಠರಾಗಿರುವರೋ ಮತ್ತು ಸಕಲ ಶೈವಮತಗಳಲ್ಲಿ ಅಗ್ರಗಣ್ಯರೆನಿಸಿರುವರೋ ಇಂತಹ ವೀರಶೈವರೇ ಅವೈದಿಕರೆಂತಲೂ, ಶೂದ್ರರೆಂತಲೂ, ಮುಂತಾಗಿ ಪರಮತೀಯರ ಅವಹೇಳನಕ್ಕೆ ಗುರಿಯಾಗಿರುವರು. ಯಾವ ವೀರಶೈವಮತವು ಒಂದಾನೊಂದು ಕಾಲದಲ್ಲಿ ರಾಜಾಧಿರಾಜರು ಋಷಿಗಳು ಮುಂತಾದವರಿಂದ ಅಂಗೀಕರಿಸಲ್ಪಟ್ಟು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಆಸೇತುಹಿಮಾಚಲ ಪರ್ಯಂತ ಪ್ರಸರಿಸಲ್ಪಟ್ಟು ವೀರಶೈವಮಯವಾಗಿತ್ತೋ ಅಂಥ ವೀರಶೈವಮತವೇ ಪ್ರಬಲರಾದ ಪರಮತೀಯರ ಕ್ರಾಂತಿಯಿಂದ ಸದ್ಯಃ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತ್ರ ಮಿಣುಕುಮಿಣುಕಾಗಿ ತೋರುತ್ತಿರುವದು. ಇಂಥ ದೈನ್ಯಾವಸ್ಥೆಯಲ್ಲಿರುವ ವೀರಶೈವಸಮಾಜವನ್ನುದ್ಧರಿಸಲು ವಿದ್ಯಾವಂತಗುರುಗಳು ಅವಶ್ಯವು. ಈಗಿನ ಭಕ್ತ ಮಾಹೇಶ್ವರವೆಂಬ ಗುರುಶಿಷ್ಯವರ್ಗವೆರಡೂ ವೇದಾಂತಾದಿ ವಿದ್ಯೆಯ ಗಂಧವಂ ಸೋಂಕದೆ ಪಟ್ಟಿಲ ಧರ್ಮದ ನೆಲೆಯಂ ಬಿಟ್ಟು ಅಜ್ಞಾನಾಂಧತೆಯಿಂದ ಅಲೆದಾಡುತ್ತಾ ಗುರುವಿಗೆ ಗುಟುಗ ನೀರು ಶಿಷ್ಯನಿಗೆ ಮುಳುಗನೀರು ಎಂಬ ಗಾದೆಯಂತೆ ಈ ವೀರಶೈವಜನಾಂಗವು ಅತ್ಯಂತ ಶೋಚನೀಯಸ್ಥಿತಿಗೆ ಬಂದಿರುವದನ್ನು ಕಂಡು ಘನದಯಾಳುಗಳಾದ ಈಗಿನ ಶ್ರೀ ೧೦೦೮ ಜಗದ್ಗುರು ಪಂಚಾಚಾರ್ಯರು 'ಪಂಚಾಚಾರ್ಯಪ್ರಭಾ' ಪತ್ರಿಕಾಮೂಲಕವಾಗಿಯೂ ಅಲ್ಲಲ್ಲಿ ಸಂಸ್ಕೃತಪಾಠಶಾಲಾ ಅನಾಥವಿದ್ಯಾರ್ಥಿಗಳ ಬೋರ್ಡಿಂಗು ಮುಂತಾಗಿ ವಿದ್ಯಾಮಂದಿರಗಳನ್ನು ಸ್ಥಾಪಿಸುತ್ತಲೂ ವೀರಶೈವಮತವು ಪೂರ್ವದ ತನ್ನ ವೈದಿಕಧರ್ಮದ ಉಜ್ವಲತೆಯನ್ನಾದರೂ ಸ್ಮರಣಪಥಕ್ಕೆ ತರುವಂತೆ ಮಠದಲ್ಲಿ ಮುಂಜಾಗ್ರತೆಯನ್ನುಂಟುಮಾಡುತ್ತಿರುವದು ಸರ್ವರಿಗೂ ವೇದ್ಯವೇ ಇರುತ್ತದೆ. ಅಂತೆಯೇ ಶ್ರೀ ಕೇದಾರಪೀಠಾಧಿಪತಿಗಳಾದ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸವಾರಿಯು ನೈಜಾಂ ಇಲಾಖಾ ಕವಿತಾಳ ಮುಕ್ಕಾಮಿಗೆ ದಯಮಾಡಿಸಿದಾಗ್ಗೆ ಮಹಾಸನ್ನಿಧಿಯ ದರ್ಶನಾಶೀರ್ವಾದಾರ್ಥವಾಗಿ ವೇ|| ಗುರುಶಾಂತಾರ್ಯ ಹಿರೇಮಠ ನೀರಲಕೇರಿ ಮಸಿಗಿ ಇವರು ಮಸಿಗಿಗ್ರಾಮದ ಕೆಲವು ಭಕ್ತರೊಡಗೂಡಿ ಹೋದಾಗ್ಗೆ ವಿದ್ಯಾಧರ್ಮಾಚರಣೆಗಳಿಂದ ತೀರ ಹಿಂದುಳಿದ ನಮ್ಮ ನೈಜಾಂಪ್ರಾಂತದ ವೀರಶೈವಜನಾಂಗವನ್ನುದ್ಧರಿಸಲು ಮಹಾಸ್ವಾಮಿಯವರು ಪ್ರತಿಯೊಂದು ತಾಲೂಕಿನಲ್ಲಿ ಕಾಣಿಕೆಯನ್ನು ವಸೂಲ್ಮಾಡಿ ಆಯಾ ತಾಲೂಕಿನಲ್ಲಿ ಫಂಡನ್ನು ಕೂಡಿಸಿ ರಾಜಕೀಯ ಧಾರ್ಮಿಕ ವಿದ್ಯೆಯ ಪಾಠಶಾಲೆಗಳನ್ನು ಏರ್ಪಡಿಸಬೇಕೆಂದು ವಿಜ್ಞಾಪನೆಯಂ ಮಾಡಿಕೊಂಡಪ್ರಕಾರಕ್ಕೆ ಶ್ರೀ ಜಗದ್ಗುರುಗಳವರು ತಮ್ಮ ಪ್ರಸಾದವಾಣಿಯಿಂದ ಈ ನೈಜಾಂ ಪ್ರಾಂತದಲ್ಲಿ ಜಲದುರ್ಗವೆಂಬುದು ಕರ್ನಾಟಕದಲ್ಲಿ ಬಹು ರಮ್ಯಸ್ಥಾನವಿದ್ದು ಅಲ್ಲಿ ಒಂದು ಗುರುಕುಲವಾಸವನ್ನು ಸ್ಥಾಪಿಸಿ ಸಂಸ್ಕೃತ ಇಂಗ್ಲೀಷ್, ಉರದು ಕನ್ನಡವೆಂಬ ನಾಲ್ಕು ಪಾಠಶಾಲೆಗಳು ನಡೆಯುವಂತೆಯೂ ಅಲ್ಲಿ ಛಾತ್ರಮಿಗಳಿಗೆ ಅನುಕೂಲವಾಗುವಂತೆಯೂ ಸಹಸ್ರ ಗೋರಕ್ಷಣವಾಗುವಂತೆಯೂ ಮುಂದೆ ಮಹತ್ತರವಾದ ಕಾರ್ಯವನ್ನು ನೆರವೇರಿಸಬೇಕಾಗಿರುತ್ತೆ. ಆ ಜಲದುರ್ಗವನ್ನು ಖರೀದಿಗೆ ತೆಗೆದುಕೊಂಡು ಅದು ನಮ್ಮ ಸ್ವಾಧೀನವಾಗುವವರೆಗೂ ನಿಮ್ಮ ಲಿಂಗಸುಗೂರು ತಾಲೂಕಿನಲ್ಲಿ ನಿಮ್ಮ ಮಸಿಗಿಗ್ರಾಮದಲ್ಲಿ ಅಥವ ನಿಮಗೆ ಅನುಕೂಲವಾದ ಯಾವ ಗ್ರಾಮದಲ್ಲಿಯಾಗಲಿ ವಿದ್ಯಾರ್ಥಿಗಳ ಭೋಜನಮಾತ್ರಕ್ಕೆ ವ್ಯವಸ್ಥೆಯಾದಲ್ಲಿ ಪಾಠಶಾಲಾ ಶಾಸ್ತ್ರಿಗಳ ಪಗಾರದ ಖರ್ಚನ್ನು ಮಹಾಸಂಸ್ಥಾನವತಿಯಿಂದಲೇ ಚಿರಕಾಲ ಚ್ಯುತಿಯಿಲ್ಲದಂತೆ ಪೂರೈಸುವದಾಗುತ್ತೆ ಎಂಬದಾಗಿ ಅಪ್ಪಣೆಯಂ ದಯಪಾಲಿಸಿದರು. ಆ ಮೇರೆಗೆ ಇದೇ ಶುಕ್ಲ ಸಂ|| ಚೈತ್ರ ಶು|| ಯುಗಾದಿಯ ಶುಭಮುಹೂರ್ತದಲ್ಲಿ ಪಂ|| ಅಮರನಾಥಶಾಸ್ತ್ರಿಗಳು ಹಿರೇಮಠ ಬನ್ನಿಗೋಳ ಇವರ ಅಧ್ಯಾಪಕತ್ವದಿಂದ ಬಹು ಸಂಭ್ರಮದೊಡನೆ ಪಾಠಶಾಲೆಯು ಸ್ಥಾಪಿಸಲ್ಪಟ್ಟಿತು. ಹೀಗೆ ಮಹಾಸಂಸ್ಥಾನದ ವತಿಯಿಂದಲೇ ಈ ಪಾಠಶಾಲೆಯು ನಡೆದಿರುತ್ತದೆ ಸದ್ಯಃ 6 ಜನ ವಿದ್ಯಾರ್ಥಿಗಳಿರುವರು. ಈ ಗ್ರಾಮದಲ್ಲಿ ಸುಮಾರು 300 ವೀರಶೈವರಮನೆಗಳುಂಟು. ಪ್ರತಿವರ್ಷ ಶ್ರೀ ಮಲ್ಲಿಕಾರ್ಜುನಸ್ವಾಮಿಯ ರಥೋತ್ಸವಾದಿಕಾರ್ಯಗಳು ನಡೆಯುತ್ತವೆ. ಈ ಗ್ರಾಮಕ್ಕೆ ಉನ್ನತ ಗುಡ್ಡಗಳೂ ಹಳ್ಳ, ಕಾಲುವೆ, ಮೈದಾನಪ್ರದೇಶವೂ ಇರುವದರಿಂದ ಆರೋಗ್ಯಕ್ಕೂ ಆಚಾರಕ್ಕೂ ಬಹಳ ಅನುಕೂಲವಾದ ಸ್ಥಲವಾಗಿರುತ್ತದೆ ಆದುದರಿಂದ ಸಾಹಿತ್ಯಾದಿ ಸಂಸ್ಕೃತಾಭ್ಯಾಸವಂ ಬಯಸುವ ಯೋಗ್ಯವಿದ್ಯಾರ್ಥಿಗಳು ಬಂದಲ್ಲಿ ಧರ್ಮಾರ್ಥವಾಗಿ ಭೋಜನಾದಿವ್ಯವಸ್ಥೆಯು ಸರಿಯಾಗಿ ಮಾಡಲ್ಪಡುವದೆಂದು ತಿಳಿಸುವ,

ತಮ್ಮ ಹಿತೈಷಿ
ಶ್ರೀ ಜಗದ್ಗುರು ಏಕೋರಾಮ ಸಂಸ್ಕೃತ ಪಾಠಶಾಲಾ ಸೆಕ್ರೆಟರಿ,
ಶಿದ್ಧರಾಮಪ್ಪಾ ಶ್ಯಾನಭಾಗ,
ವಿರೂಪಾಕ್ಷಪ್ಪ ಮಾಲೀಗಿ, ಕಂಥೆಪ್ಪಾ ಬಣಗಾರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಮಾಹೇಶ್ವರ ದೀಕ್ಷಾಮಹೋತ್ಸವ.

ನಾಗನೂರು.

ಧಾರವಾಡ ಜಿಲ್ಲಾ ಕಲಘಟಗಿ ತಾಲೂಕ ಪೈಕಿ ಇನಾಮು ನಾಗನೂರುಗ್ರಾಮದಲ್ಲಿರುವ ಸಂಗಯ್ಯನವರು ಚಿಕ್ಕಮಠ ಇವರು ತಮ್ಮ ಪುತ್ರರ ಶಿವದೀಕ್ಷಾಕರ್ಮವನ್ನು ತಾ|| 23-8-29 ನೆಯ ಶುಕ್ರವಾರದ ದಿವಸ ಪಾಲೀಕೊಪ್ಪದ ಬೃಹನ್ಮಠಾಧ್ಯಕ್ಷರಾದ ಪಟ್ಟಾಧೀಶ ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳವರಿಂದ ಶಾಸ್ತ್ರೋಕ್ತವಾಗಿ ನೆರವೇರಿಸಿದರೆಂದು ತಿಳುಹಿಸಲು ಬಹಳ ಆನಂದವೆನಿಸುತ್ತದೆ. ಸದರೀ ಸ್ವಾಮಿಗಳು ಆ ದಿವಸ ಪ್ರಾತಃಕಾಲದ ಆರು ಘಂಟೆಗೆ ಸರಿಯಾಗಿ ದಯಮಾಡಿಸಿದರು. ಇದಕ್ಕೆ ಮೊದಲೇ ಊರಜನರೆಲ್ಲರೂ ಮಂಗಲಸ್ನಾನವನ್ನು ಮಾಡಿ ಫಲಪುಷ್ಪಾದಿಗಳ ಸಮೇತ ಭಯಭಕ್ತಿಗಳಿಂದ ಮೆರವಣಿಗೆಯ ಸನ್ನಾಹವನ್ನು ಮಾಡಿ ಸ್ವಾಮಿಗಳ ಆಗಮನವನ್ನೇ ನಿರೀಕ್ಷಿಸುತ್ತಿದ್ದರು. ಸ್ವಾಮಿಗಳು ಸದರೀ ಗ್ರಾಮದ ಬಹಿಃಪ್ರದೇಶದಲ್ಲಿರುವ ಮಾವಿನ ತೋಟಕ್ಕೆ ದಯಮಾಡಿಸಿ ಅಲ್ಲಿ ನಿರ್ಮಿಸಿದ್ದ ಮಂಟಪದಲ್ಲಿ ಮುಹೂರ್ತ ಮಾಡಿದರು. ಅನಂತರ ಅರ್ಘ್ಯಪಾದ್ಯಾದಿಗಳಿಂದ ಶ್ರೀಗಳವರ ಪಾದಪ್ರಕ್ಷಾಲನವನ್ನು ಮಾಡಿ ಫಲತಾಂಬೂಲಗಳನ್ನರ್ಪಿಸಿ ಮಂಗಳಾರತಿಯನ್ನು ಮಾಡಿ ಧರ್ಮದ್ರೋಹಿಗಳೆಂಬ ಜಂಕೆಗಳನ್ನೋಡಿಸುವ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಸಿಂಹಗರ್ಜನೆಯನ್ನು ಮಾಡಿದ ಮೇಲೆ ಶ್ರೀಗಳವರು ಹೂಗಳಿಂದ ಲಂಕರಿಸಿದ್ದ ಪಲ್ಲಕ್ಕಿಯನ್ನು ಏರಿದರು. ಅನೇಕವಾದ್ಯಗಳಿಂದಲೂ ನಾಗನೂರು ಪಾಲಿಕೊಪ್ಪ ಮೊದಲಾದ ಗ್ರಾಮಗಳ ಭಜನಾ ಸಂಘದವರ ಭಜನೆಯಿಂದಲೂ ಉತ್ಸವವು ಹೊರಟು ಒಂಭತ್ತು ಘಂಟೆಗೆ ಮಠಕ್ಕೆ ತಲ್ಪಿತು. ಪುನಃ ಮಂಗಳವಾದನಂತರ ಜಗದಾಚಾರ್ಯರ ಜಯಘೋಷವನ್ನು ಮಾಡಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಇತ್ತ ಶ್ರೀಗಳು ಸ್ನಾನಪೂಜಾದಿಗಳನ್ನು ಪೂರೈಸಿ ವೇ|| ವೀರಬಸವಶರ್ಮ ಬೃಹನ್ಮಠ ಪಾಲೀಕೊಪ್ಪ ವೇ|| ಶಿದ್ಧರಾಮಯ್ಯನವರು ಹಿರೇಮಠ ಅಗಡಿ ವೇ|| ಸೋಮನಾಥಶರ್ಮ ವೇ|| ಉಮಾಪತಿಶರ್ಮ ಈ ಋತ್ವಿಜರಿಂದ ಚೆನ್ನಾಗಿ ನಿರ್ಮಿಸಲ್ಪಟ್ಟ ದೀಕ್ಷಾಗುರುಪೀಠವನ್ನು ಅಲಂಕರಿಸಿದರು. ಆ ಮೇಲೆ ಯಥಾವಿಧಿಯಾಗಿ ದೀಕ್ಷಾಕರ್ಮವು ನಡೆಯಿತು. ಸದರಿ ಕರ್ಮವು ಪರಿಸಮಾಪ್ತಿಯಾದ ಮೇಲೆ ಸಂಜೆಯ 5 ಘಂಟೆಯವರೆಗೆ ಭೂರುದ್ರಸಂತರ್ಪಣವು ನಡೆದ ಮೇಲೆ ಸಭೆಯು ಸೇರಿ ರಾತ್ರಿ 8 ಘಂಟೆಯ ವರೆಗೆ ವೀರಶೈವರು ತಿಳಿದಿರಬೇಕಾದ ಅಷ್ಟಾವರಣವಿವೇಕದೀಕ್ಷಾ ವಿಚಾರವಾಗಿ ಉಪನ್ಯಾಸವು ಜರುಗಿತು. ಸ್ವಾಮಿಗಳಿಗೆ ಹಾರತುರಾಯಿಗಳು ಒಪ್ಪಿಸಿದನಂತರ ಸಭಿಕರಿಗೆ ಪ್ರಸಾದವು ಹಂಚಲ್ಪಟ್ಟು ಜಗದಾಚಾರ್ಯರ ತ್ರಿವಾರಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಆ ಮೇಲೆ ದೀಕ್ಷಿತರಾದ ವಟುಗಳ ಮೆರವಣಿಗೆಯಾಯಿತು. ಅಂತೂ ಆ ದಿನವು ಮೇಘಾಡಂಬರದಿಂದ ದುರ್ದಿನವಾಗಿದ್ದರೂ ಆಚಾರ್ಯರ ಭಜನೆಯ ಮಂಗಲಧ್ವನಿಯಿಂದಲೂ ಸ್ವಾಮಿಗಳ ಆಗಮನದಿಂದಲೂ ಸುದಿವಸವಾಗಿಯೇ ಪರಿಣಮಿಸಿತು.

ಜಗದಾಚಾರ್ಯರ ಪಾದಕಿಂಕರ,
ನಂದೀಶ ಕೆಂಚರಡ್ಡಿ ಕೂಸುಗಲ್ಲವರ,
ಪಾಲೀಕೊಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾ ಮಹೋತ್ಸವ

ಹೊಸಪೇಟೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಆಚಾರ್ಯರು ಶ್ರೀ ಪರಮೇಶ್ವರನ ಪಂಚಮುಖಗಳಿಂದ ಉತ್ಪನ್ನರಾಗಿ ಈ ಸಂಸಾರಸಾಗರದಲ್ಲಿ ಮುಳುಗಿ ತೇಲಾಡುತ್ತಿರುವ ನಮ್ಮನ್ನು ತಮ್ಮ ತಪೋಬಲವೆಂಬ ನೌಕಾಸಹಾಯದಿಂದ ದಡಕ್ಕೆ ಸೇರಿಸುವದಕ್ಕಾಗಿ ಈ ಪ್ರಪಂಚದಲ್ಲಿ ಅವತರಿಸಿದ ವಿಷಯವು ಸರ್ವರಿಗೂ ತಿಳಿದ ಸಂಗತಿಯೇ ಇರುವದು. ಅಂಥ ಜಗದ್ಗುರು ಪಂಚಾಚಾರ್ಯರಿಗೆ ನಮ್ಮ ಸಂಘದವತಿಯಿಂದ ನನ್ನ ಧನ್ಯವಾದವು. ಹೊಸಪೇಟೆಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘವು ಏರ್ಪಡಾಗಿ ಇಂದಿಗೆ ಸುಮಾರು ಒಂದೂವರೆ ವರ್ಷವಾಯಿತು. ಈ ಚಿಕ್ಕ ಅವಧಿಯಲ್ಲಿ ಈ ಭಜನಾಸಂಘವೆಂಬ ವೃಕ್ಷವು ದೊಡ್ಡದಾಗಿ ಭಕ್ತಮಹೇಶ್ವರರಿಗೆ ಅಮೃತತುಲ್ಯವಾದ ಫಲಗಳನ್ನು ಕೊಡುವದನ್ನು ನೋಡಿದರೆ ಯಾರಿಗೆ ತಾನೇ ಆನಂದವಾಗಲಿಕ್ಕಿಲ್ಲ ? ಈ ವೃಕ್ಷವು ಇಷ್ಟು ಬಲಿಯಲಿಕ್ಕೂ ಇಷ್ಟು ಫಲಕೊಡಲಿಕ್ಕೂ ಅದರ ಪೋಷಕರೇ ಕಾರಣಭೂತರಲ್ಲವೇ ? ಕುರುಗೋಡು ಮೇಲುಮಠದ ವೇ|| ಬಸವರಾಜಸ್ವಾಮಿಗಳೇ ಈ ಸಂಘದ ಅಧ್ಯಕ್ಷರಾಗಿರುವರು. ಮ|| ರಾ|| ಕೆ. ಎಂ. ಗಂಗಾಧರಯ್ಯನವರು, ಮ|| ರಾ|| ಜಿ. ಪಂಪಣ್ಣನವರು, ಮ|| ರಾ|| ಕೆ. ವಜ್ರಗೌಡರು ಮತ್ತು ಮ|| ರಾ|| ಎ. ದೊಡ್ಡನಗೌಡರು ವ್ಯವಸ್ಥಾಪಕರುಗಳಾಗಿಯೂ ಹೊಳಗುಂದಿ ಕಬ್ಬಿಣ ಕಂತಿಮಠದ ವೇ|| ವೀರಬಸಯ್ಯನವರು ಕಾರ್ಯದರ್ಶಿಗಳಾಗಿಯೂ ಮ|| ರಾ|| ಎಸ್. ಎಂ. ಡಿ. ದೊಡ್ಡಬಸಯ್ಯನವರು ಟ್ರೆಜರರಾಗಿಯೂ ಈ ಕಾರ್ಯವನ್ನು ಅತಿ ಗೌರವದಿಂದಲೂ ಭಕ್ತಿಯಿಂದಲೂ ಮಾಡುವದನ್ನು ನೋಡಿದರೆ ಅತ್ಯಂತ ಆನಂದವಾಗುತ್ತದೆ. ಕಳೆದ 2-9-29 ನೆಯ ಸೋಮವಾರ ಸಾಯಂಕಾಲ ಈ ಭಜನಾಸಂಘದವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಉತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಉತ್ಸವವು ಆ ದಿವಸ ಸಾಯಂಕಾಲ 6 ಘಂಟೆಗೆ ಶ್ರೀಗಳವರ ಭಜನಾಮಂದಿರದಿಂದ ಹೊರಟಿತು. ಆ ಉತ್ಸವಕಾಲದಲ್ಲಿ ರಾಜಬೀದಿಗಳೆಲ್ಲವೂ ತಳಿರುತೋರಣಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟು, ಪ್ರೇಕ್ಷಕರ ಮನಸ್ಸನ್ನು ಆನಂದಗೊಳಿಸುತ್ತಲಿತ್ತು. ಶ್ರೀ ಜಗದ್ಗುರು ರೇಣುಕರ ಪಲ್ಲಕ್ಕಿಯ ಹಿಂಭಾಗದಲ್ಲಿ ಶ್ರೀಮದ್ವೀರಶೈವ ಸಂಸ್ಕೃತಪಾಠಶಾಲೆಯ ವಿದ್ಯಾರ್ಥಿಗಳ ವೇದಘೋಷವು. ಮುಂಭಾಗದಲ್ಲಿ ಭಜಕರ ಮಂಜುಳವಾದ ಗುರುಧ್ಯಾನವೂ ಅದರ ಮುಂಭಾಗದಲ್ಲಿ ಅನೇಕ ಭಕ್ತಮಹೇಶ್ವರರ ಪರಾಕು ಮತ್ತು ಧನ್ಯವಾದಗಳು ಪ್ರೇಕ್ಷಕರ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತಿತ್ತು. ಪುರಜನರು ಶ್ರೀ ಜಗದ್ಗುರು ರೇಣುಕರ ಭಾವಚಿತ್ರಕ್ಕೆ ಪುಷ್ಪವಳೆಯನ್ನು ಕರೆಯುತ್ತಿದ್ದರು. ಅಲ್ಲಿ ನೆರೆದ ಜನರು ಅಮಿತ, ಈ ಮಿತವೆನ್ನದೆ ಎಲ್ಲರೂ ಜಯಘೋಷಮಾಡುತ್ತಿರಲು, ಎಲ್ಲರ ನೇತ್ರದೊಳಗಿನಿಂದ ಆನಂದಾಶ್ರುಗಳು ಉದುರುತ್ತಿರಲು ಉತ್ಸವವು ಅತಿ ವಿಜೃಂಭಣೆಯಿಂದ ಶ್ರೀ ವೃಷಭೇಶ್ವರ ದೇವಸ್ಥಾನಕ್ಕೆ ನಾಗಿತು. ಅಲ್ಲಿ ನೆರೆದಿದ್ದ ಭಕ್ತಮಹೇಶ್ವರರನ್ನು ಕುರಿತು ವೇ|| ಎಚ್. ಎಂ. ಚಂದ್ರಶೇಖರಶರ್ಮರವರು ಪಂಚಾಚಾರ್ಯರ ವಿಷಯವಾಗಿ ಧನ್ಯವಾದ ಭಾಷಣವನ್ನು ಮಾಡಿದರು. ಅನಂತರ ಪಾಠಶಾಲೆಯ ವಿದ್ಯಾರ್ಥಿಗಳಿಂದ ವಿಧ್ಯುಕ್ತವಾಗಿ ಪೂಜೆಯೂ, ಮತ್ತು ಮಂಗಲವೂ ನೆರವೇರಿದನಂತರ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯು ಈ ಸಂಘದಮೇಲೆ ನಿರಂತರವೂ ಇರಲೆಂದು ಬಯಸುವೆನು. ಮತ್ತು ಈ ಉತ್ಸವಕಾಲದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಈ ಸಂಘದ ಅಧ್ಯಕ್ಷರಿಂದ ಕಳುಹಿಸಲ್ಪಟ್ಟಿದೆ.

ಸಿಂಟಗಲ್ ಲಿಂಬಯ್ಯನವರು, ಹೊಸಪೇಟೆ.

ಶ್ರೀಗುರುಪಂಚಾಚಾರ್ಯೇಭ್ಯೋ ನಮಃ

ಶ್ರೀಗುರುಪಂಚಾಚಾರ್ಯ ಭಜನಾಮಹೋತ್ಸವ ಮತ್ತು ಗಣಾರಾಧನೆ

ಹಾವೇರಿ.

ಈ ಗ್ರಾಮದಲ್ಲಿ ಹಿಂದಿನಿಂದ ಸಾಗುತ್ತಾ ಬಂದ ಭಜನಾಸಂಘವು ಈ ವರ್ಷ ಶ್ರಾವಣ ಶು|| ೧ ರಿಂದ ಶ್ರಾವಣ ಬ|| ೩೦ ವರೆಗೆ ಪ್ರಾತಃಕಾಲ ೪ ಗಂಟೆಯಿಂದ ೬ ಗಂಟೆಯವರೆಗೆ ಜಗದೋದ್ಧಾರಕರ ನಾಮಸ್ಮರಣೆಯನ್ನು ಮಾಡುತ್ತಿದ್ದರು. ತಂಪಾದ ಬೆಳಗಿನ ಝಾವದಲ್ಲಿ ಬಾಲಕರು ಮಾಡುವ ಭಜನಾಘೋಷವು ಪುರವನ್ನೆಲ್ಲ ವ್ಯಾಪಿಸಿ ಆನಂದಮಯವನ್ನಾಗಿ ಮಾಡುತ್ತಿತ್ತು. ಪ್ರತಿವರ್ಷ ಸಾಧಾರಣವಾಗಿ ನಡೆಯುತ್ತಿದ್ದು ಈ ವರ್ಷ, ವಿಶೇಷವಾಗಿ ನಡೆದುದು ಜಗದಾಚಾರ್ಯರ ಕರುಣಾಕಟಾಕ್ಷವೆಂದೇ ಹೇಳಬೇಕಾಗಿದೆ. ಮತ್ತು ಈ ವರ್ಷ ವಿಶೇಷವಾಗಿ ತನುಮನಧನಗಳಿಂದ ಸಹಾಯಮಾಡಿದ ಈ ಗ್ರಾಮದ ಮಠಾಧಿಕಾರಿಗಳು ಶೆಟ್ಟರೂ ಶ್ರೀಮಂತರೂ ಶೈವರು ಮೊದಲಾದವರ ದೈವಭಕ್ತಿಯು ಸ್ತುತ್ಯನೀಯ ಸರಿ! ಮೇಲ್ಕಂಡ ಗ್ರಾಮಸ್ಥರು ಮಾಡಿದ ಧನಸಹಾಯದಿಂದ ನೂತನವಾದ ತಬಲಾಪೆಟಿಯನು ತಾಳತಪ್ಪಡಿ ಮುಂತಾದ ಸಾಮಗ್ರಿಗಳಲ್ಲದೇ ಭಜನೆಯ ವೇಳೆಯಲ್ಲಿ ಬಾಲಕರು ಕೊಡುವುದಕ್ಕೆ ಉಡುಪುಗಳನ್ನೂ ಮಾಡಿಸಿದ್ದಾಯಿತು. ಈ ಭಜನಾಸಂಘವನ್ನು ಹೀಗೆ ಅಭಿವೃದ್ಧಿಗೆ ತರಲು ಶ್ರಮಪಟ್ಟ ವೇ|| ನಡುವಿನ ಮಠದ ಚನ್ನಬಸಯ್ಯನವರು ವೇ|| ಅಲದಕಟ್ಟಿ ಹಿರೇಮಠದ ರುದ್ರಯ್ಯನವರು (ಹಾವೇರಿ) ರಾ|| ರಟಗಲ್ ಪುಟ್ಟಪ್ಪನವರು ಸಹ ಪ್ರತಿದಿವಸ ಪ್ರಾತಃಕಾಲ ಮತ್ತು ಸಾಯಂಕಾಲ ಭಜನಾಮಂದಿರಕ್ಕೆ ಬಂದು ಒಳ್ಳೇ ವ್ಯವಸ್ಥೆಯಿಂದ ಭಜನೆಯನ್ನು ಸಾಂಗೋಪಾಂಗವಾಗಿ ನೆರವೇರಿಸಿ ಒಂದು ತಿಂಗಳು ಮುಗಿದ ಕೂಡಲೇ ತಾ|| ೯-೯-೨೯ ನೆಯ ಸೋಮವಾರ ಇದೇ ಊರ ಹೆಗ್ಗೇರಿಯಲ್ಲಿ ಅನ್ನಸಂತರ್ಪಣೆ ಗಣಾರಾಧನೆಯನ್ನು ಮಾಡಿ ಅದೇ ದಿವಸ ಸಾಯಂಕಾಲ ೬ ಗಂಟೆಯಿಂದ ಜಗದಾಚಾರ್ಯರ ಭಾವಚಿತ್ರವನ್ನು ಅಡ್ಡಪಾಲಕಿಯಲ್ಲಿ ಕೂರಿಸಿ ಹಾರಹಾರಾವಳಿ ತುರಾಯಿಗಳಿಂದ ಅಲಂಕರಿಸಿ ಉತ್ಸವಮಾಡಿದರು. ಮುಂಭಾಗದಲ್ಲಿ ಜಗದೋದ್ಧಾರಕರ ಪರಾಕು ಹೊಗಳುವ ಪ್ರತಿಭಟರೂ ಅವರ ಮುಂಭಾಗದಲ್ಲಿ ಭಜನಾಮೇಳದವರು ಅದರ ಮುಂಭಾಗದಲ್ಲಿ ಬಾಜಾಬಜಂತ್ರಿಗಳ ಸಂಮ್ಮೇಳನವೂ ಈ ಸರ್ವ ಪರಾಕು ಭಜನಾವಾದ್ಯಗಳ ರಭಸವು ಪುರವನ್ನೆಲ್ಲ ವ್ಯಾಪಿಸಿತು. ಹೀಗೆ ಅತ್ಯಂತ ವೈಭವದಿಂದ ಜರುಗಿದ ಜಗದ್ಗುರು ರೇಣುಕಾಚಾರ್ಯರ ಉತ್ಸವವು ನೋಡಿದವರ ಭವತಾಪಗಳನ್ನು ಹರಿಸಿ ದಿವ್ಯಜ್ಞಾನವನ್ನು ಉಂಟುಮಾಡದೆ ಇರುತ್ತಿರಲಿಲ್ಲ. ಜಗದಾಚಾರ್ಯರ ಉತ್ಸವವು ಪ್ರತಿಯೊಂದು ರಾಜಬೀದಿಯಲ್ಲಿಯೂ ಪ್ರತಿಯೊಂದು ಮನೆಯ ಮುಂಭಾಗದಲ್ಲಿ ಭಕ್ತರು ಅರ್ಪಿಸುವ ಕಾಯಿಕರ್ಪೂರ ಮಂಗಳಾರತಿಗಳನ್ನು ಸ್ವೀಕರಿಸುತ್ತ ಪುರಪ್ರದಕ್ಷಿಣೆಯನ್ನು ಮಾಡಿ ಸ್ವಸ್ಥಾನವನ್ನು ಸೇರಲು ರಾತ್ರಿ ೧೨|| ಗಂಟೆಯಾಯಿತು. ಇಂಥ ಉತ್ಸವವು ಈ ಗ್ರಾಮದಲ್ಲಿ ಎಂದೂ ಆಗಿಲ್ಲವೆಂದು ಹೇಳಬಹುದು ಈ ಸಂಘದ ಸಹಾಯಕರಿಗೂ ಬಾಲಕ ಬಾಲಕರಿಗೂ ಜಗದಾಚಾರ್ಯರು ಆಯುರಾರೋಗ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ

ಓರ್ವ ಹಾವೇರಿ ವೀರಶೈವ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣ ಸಮಾರಂಭ ಮತ್ತು ಸಮಾರಾಧನೆ

ಗುರುಸುಣಗಿ.

ಶಹಪೂರ ತಾಲೂಕ ಗುರಸುಣಗಿ ಗ್ರಾಮದಲ್ಲಿ ಇದೇ ಶುಕ್ಲನಾಮ ಸಂವತ್ಸರ ಶ್ರಾವಣ ಶುದ್ಧ ಪ್ರತಿಪದೆಯ ದಿವಸ ಸದರಿ ಗ್ರಾಮದ ಸುಪ್ರಸಿದ್ಧ ಶ್ರೀಮಂತರಾದ ಮಹಾದೇವ ರಡ್ಡಿ ಶಾಂತವೀರ ಇವರ ಮನೆಯಲ್ಲಿ ಅವರ ವಂಶಪರಂಪರಾಗತ ಗುರುಗಳಾದ ಮಲಕೂಡ ಹಿರೇಮಠದ (ಕಟ್ಟೀಮನಿ) ಚರಪಟ್ಟಾಧ್ಯಕ್ಷ ಸೋಮನಾಥಸ್ವಾಮಿಗಳವರ ಪಾದಪೂಜೆ ಸಮಾರಂಭವು ಪ್ರತಿದಿವಸ ೧೧ ಗಂಟೆಗೆ ಪ್ರಾರಂಭವಾಗಿ ೨ ಗಂಟೆಯ ವರೆಗೆ ಪಂಚಾಚಾರ್ಯರ ಮಂಗಲಸ್ತೋತ್ರಗಳಿಂದಲೂ ಜಯಘೋಷಗಳಿಂದಲೂ ನಡೆದುದಲ್ಲದೆ, ಸದರಿ ಸ್ವಾಮಿಗಳ ಮುಂದೇವರಾದ ವೇ|| ಸೋಮಶೇಖರ ಶಿವಾಚಾರ್ಯರು ಸಪ್ರಮಾಣವಾಗಿಯೂ ಸುವ್ಯಾಖ್ಯಾನವಾಗಿಯೂ ಪುರಾಣಹೇಳುತ್ತಿದ್ದರು. ವೇ|| ರೇವಣಸಿದ್ಧ ಶರ್ಮರಿಗ್ಗಾವಿ ಇವರು ಮನೋಹರವಾಗಿ ಓದುತ್ತಿದ್ದರು. ಹೀಗೆ ಪುರಾಣವು ಒಂದು ತಿಂಗಳವರೆಗೆ ನಡೆದು ಕಡೆಯ ದಿವಸ ಅಂದರೆ ಭಾದ್ರಪದ ಶುದ್ಧ ಪ್ರತಿಪದೆಯ ದಿವಸ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರ ಪುರಾಣ ಸಮಾಪ್ತಿಯೂ ಮಹಾಗಣಸಮಾರಾಧನೆಯೂ ಆಯಿತು. ಅದೇ ದಿವಸ ರಾತ್ರಿ ೭ ಗಂಟೆಗೆ ತಳಿರುತೋರಣಗಳಿಂದ ಅಲಂಕೃತವಾದ ಪುರಬೀದಿಗಳಲ್ಲಿ ಶ್ರೀ ಜಗದ್ಗುರುಗಳಾದ ರೇವಣಸಿದ್ಧೇಶ್ವರರ ಮೆರವಣಿಗೆಯು ಅತ್ಯಂತ ವೈಭವದಿಂದ ಹೊರಟಿತು. ದಾರಿಯುದ್ದಕ್ಕೂ ಗುರುಭಕ್ತರು ಕುತೂಹಲಿಗರಾಗಿ ಭಯಭಕ್ತಿಯಿಂದ ಕಾಯಿಕರ್ಪೂರಗಳನ್ನು ಫಲಪುಷ್ಪಗಳನ್ನು ಅರ್ಪಿಸುವದನ್ನು ನೋಡಿದರೆ ಎಂಥ ನಾಸ್ತಿಕನಿಗೂ ಕೂಡ ಗುರುಭಕ್ತಿಯು ಹುಟ್ಟುವಂತೆ ಇತ್ತು. ಮೆರವಣಿಗೆಯು ರಾತ್ರಿ ೯ ಗಂಟೆಗೆ ಸದರಿ ಗುರುಭಕ್ತರ ಮನೆಗೆ ತಲ್ಪಿತು. ಆ ಸಮಯದಲ್ಲಿ ವೇ|| ರೇವಣಸಿದ್ಧಶರ್ಮ ಇವರು ೪೦-೫೦ ಆಚಾರ್ಯರ ಭಾವಚಿತ್ರಗಳನ್ನು ಹಂಚಿದರು. ಅನಂತರ ಸಕಲ ಗುರುಭಕ್ತರುಗಳೂ ಆಶೀರ್ವಾದವನ್ನು ಪಡೆದು ಆನಂದಭರಿತರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಇದೇ ರೀತಿಯಲ್ಲಿ ಸರ್ವ ಭಕ್ತರು ಗುರುಕೃಪೆಗೆ ಪಾತ್ರರಾಗಲೆಂದು ಹಾರೈಸುವ

ಓರ್ವ ಉತ್ಸವಭಾಗಿ.

ಬಿಸರಹಳ್ಳಿ.

ನೈಜಾಂ ಇಲಾಖಾ ಕೊಪ್ಪಳ ತಾಲೂಕಿಗೆ ಸೇರಿದ ಬಿಸರಹಳ್ಳಿ ಗ್ರಾಮದ ಮಠಸ್ಥರು, ಗೌಡರು, ಶೆಟ್ಟರು, ಸಾಹುಕಾರರೂ ಹಾಗೂ ಸಮಸ್ತ ದೈವದವರ ಪ್ರಾರ್ಥನೆಯಂತೆ ತಾ|| ೯-೯-೨೯ ನೆಯ ಸೋಮವಾರ ದಿವಸ ಶ್ರೀಮತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಗುರುವರ ಪಟ್ಟಾಧ್ಯಕ್ಷ ಚಂದ್ರಮೌಳಿ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಮುದ್ದಾಬಳ್ಳಿ ಗ್ರಾಮದಿಂದ ಸಾಯಂಕಾಲಕ್ಕೆ ಬಿಸರಹಳ್ಳಿಗೆ ದಯಮಾಡಿಸಿತು. ಗ್ರಾಮದ ಮುಖ್ಯಸ್ಥರೆಲ್ಲರು ಘಟ್ಟಪಾದರ ದಾರಿಯನ್ನೇ ನಿರೀಕ್ಷಿಸುತ್ತಿದ್ದರು. ಮಹೋತ್ಸವವು ತಳಿರುತೋರಣಗಳಿಂದಲಂಕೃತವಾದ ರಾಜಬೀದಿಯಲ್ಲಿ ಚತುರಂಗಬಲದೊಡನೆ ಅತ್ಯಂತ ವೈಭವದಿಂದ ಹೊರಟಿತು. ಗುರುಭಕ್ತರು ಮಧ್ಯಮಧ್ಯದಲ್ಲಿ ಜಗದ್ಗುರುಗಳಿಗೆ ಕಾಯಿಕರ್ಪೂರಗಳನ್ನರ್ಪಿಸಿ ಮಂಗಳದ್ರವ್ಯಗಳಿಂದ ವಿಶೇಷ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ಸದರಿ ಉತ್ಸವದಲ್ಲಿ ಆ ಸ್ಥಾನ ಮುನಿಸು ಕೊಟ್ರಾರಾಧ್ಯ ಆಸ್ಥಾನ ಪ್ರಧಾನ ಕಾಮಿನಹಾಳ ಪಟ್ಟದಸ್ವಾಮಿಗಳು ಒಳ್ಳೇ ದಕ್ಷತೆಯಿಂದ ಕಾರ್ಯಭಾಗವನ್ನು ನಿರ್ವಹಿಸಿದರು. ಹೀಗೆ ಉತ್ಸವವು ಒಳ್ಳೆ ವಿಜೃಂಭಣೆಯಿಂದ ನಂದೀಶ್ವರ ದೇವಸ್ಥಾನಕ್ಕೆ ತಲ್ಪಿತು. ಶ್ರೀ ಜಗದ್ಗುರುಗಳು ಸಿಂಹಾಸನವನ್ನು ಅಲಂಕರಿಸಿದ ಕೂಡಲೇ ಸಭಿಕರು ಜಯಘೋಷವನ್ನು ಮಾಡಿದರು. ಅನಂತರ ಆಸ್ಥಾನ ವಿದ್ವಾನ್ ವೇ|| ಪಂ|| ಅನ್ನದಾನಶಾಸ್ತ್ರಿಗಳು ಎಲಿಹಂಚಿನಹಾಳ ಇವರು ಪಂಚಾಚಾರ್ಯರ ವಿಷಯವಾಗಿ ಸಮಯೋಚಿತ ಭಾಷಣವನ್ನು ಮಾಡಿದರು. ಆಮೇಲೆ ಶ್ರೀಗಳವರು ಅಮೃತಮಯವಾದ ತಮ್ಮ ವಾಣಿಯಿಂದ ಭಕ್ತಿಯ ವಿಷಯವಾಗಿ ಅಪ್ಪಣೆಕೊಡಿಸಿದರು. ಅಷ್ಟರೊಳಗೆ ಶಿವಾರ್ಚನೆಗೆ ಸಮಯವಾದುದರಿಂದ ಜಗದ್ಗುರುಗಳು ಅಂದಿನ ಸಭೆಯನ್ನು ಮುಕ್ತಾಯಮಾಡಿ ಶಿವಪೂಜಾಗೃಹಕ್ಕೆ ದಯಮಾಡಿಸಿದರು. ಪ್ರತಿನಿತ್ಯವೂ ಸದರಿ ಶಾಸ್ತ್ರಿಗಳವರು ವ್ಯಾಸಕೃತ ಶಿವಮಹಾಪುರಾಣವನ್ನು ಪ್ರವಚನಮಾಡಿಸುತ್ತಲಿರುವರು. ಸದ್ಭಕ್ತರು ಕೇಳಿ ಆನಂದಪಡುತ್ತಲಿರುವರು. ಮತ್ತು ಸದರಿ ಗ್ರಾಮದ ಬೃಹನ್ಮಠಾಧ್ಯಕ್ಷರಾದ ವೇ|| ಸಿದ್ಧಾಂತಿ ಶಿವರುದ್ರಪ್ಪಯ್ಯ ಶಾಸ್ತ್ರಿಗಳವರು ತಮ್ಮಿಂದ ಸ್ಥಾಪಿಸಲ್ಪಟ್ಟ ಶ್ರೀ ಗವಿಸಿದ್ಧೇಶ್ವರ ಪ್ರಾಸಾದಿಕ ನಾಟಕಮಂಡಲಿಯಿಂದ ಸನ್ನಿಧಿಯಲ್ಲಿ ಗಾನವನ್ನು ಮಾಡಿಸಿದರು ಮತ್ತು "ಶಾಪವಿಮೋಚನೆ" ಯೆಂಬ ನಾಟಕದಲ್ಲಿನ ಒಂದು ಭಕ್ತಿಪೂರಿತವಾದ ಪ್ರವೇಶವನ್ನು ಪಾರ್ಟುಗಳಿಂದ ಅತ್ಯುತ್ತಮವಾಗಿ ಮಾಡಿಸಿ ತೋರಿಸಿದರು. ಸನ್ನಿಧಿಯವರು ಬಹಳ ಆನಂದವುಳ್ಳವರಾಗಿ ಸದರೀ ಸಂಘವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿದರು. ಸದರಿ ಗ್ರಾಮದ ಶ್ರೀಯುತ ಮ|| ರಾ|| ಶ್ರೀ ಗುರಪ್ಪಯ್ಯ ದೇಸಾಯಿ ಸಾಹೇಬ ಇಲಾಖಾ ಬಸಾಪಳ್ಳಿ ಇವರು ಜಗದ್ಗುರುಗಳ ದರ್ಶನಕ್ಕೆ ಬಂದು ತಮ್ಮ ಅಸಾಧಾರಣವಾದ ಭಕ್ತಿಯನ್ನು ವ್ಯಕ್ತಮಾಡಿದರು. ಜಗದ್ಗುರುಗಳೂ ಸದರಿ ದೇಸಾಯಿಯವರ ಪರಧರ್ಮ ಸಹಾನುಭೂತಿಯನ್ನೂ ಶ್ರೇಷ್ಠವಾದ ಭಕ್ತಿಯನ್ನೂ ನೋಡಿ ಅತ್ಯಂತ ಆನಂದಪೂರ್ವಕವಾಗಿ ಫಲಾಶೀರ್ವಾದವನ್ನು ಮಾಡಿದರು. ಈ ಗ್ರಾಮದ ಮಠಸ್ಥರು, ಸದ್ಭಕ್ತರು ಜಗದ್ಗುರುಗಳ ಕಾಣಿಕೆ ವಿಷಯವಾಗಿ ವಿಶೇಷ ಪ್ರಯತ್ನಮಾಡಿ ಗುರುಭಕ್ತಿಯನ್ನು ವ್ಯಕ್ತಮಾಡಿದ ಬಿಸರಹಳ್ಳಿ ಗ್ರಾಮದ ಸದ್ಭಕ್ತರೇ ಧನ್ಯರು. ಅವರಂತೆಯೇ ಸರ್ವ ಗ್ರಾಮದ ವೀರಶೈವರೂ ವರ್ತಿಸಿ ಶಿವಪ್ರೀತಿಗೆ ಪಾತ್ರರಾಗಲೆಂದು ಹಾರೈಸುವ

ಸದ್ಭಕ್ತ ವೈ. ಬಿ. ಹಿಟ್ನಹಾಳಕರ್,
ಸ್ಕೂಲ್ ಮಾಸ್ಟರ್ ಬಿಸರಹಳ್ಳಿ.

ಗೃಹಕೃತ್ಯದ ನೋಟೀಸ್.

ಹೆಗ್ಗಡದೇವನಕೋಟೆ ತಾಲೂಕು ಸರಗೂರು ಹೋಬಳಿ ಮುಳ್ಳೂರು ಗ್ರಾಮದಲ್ಲಿ ಇರುವ ವೀರಶೈವಜಾತಿ ದೇವರಾಜಯ್ಯನವರ ಹೆಂಡತಿ ದೇವಮ್ಮ ಉರುಫ್ ಮರಮ್ಮನು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—

ನಂಜನಗೂಡು ತಾಲೂಕು ಹುಲ್ಲಹಳ್ಳಿ ಹೋಬಳಿ ಮಾದನಹಳ್ಳಿ ಗ್ರಾಮದ ಕೂಸಪ್ಪನ ಬಸಪ್ಪನವರಾದ ನನ್ನ ತಂದೆಯವರು ಈಗ್ಗೆ ಸುಮಾರು 4 ವರ್ಷದಲ್ಲಿ ಫೌತಿಯಾದರು ನನ್ನ ತಂದೆಯ ಹಿರಿ ಹೆಂಡತಿ ನಂಜಮ್ಮನವರಿಗೆ ನಾನೊಬ್ಬಳೇ ಹೆಣ್ಣುಮಗಳು. ನನ್ನ ತಾಯಿಯು ಫೌತಿಯಾದನಂತರ ಹಾಲಿ ಇರುವ ನನ್ನ ಚಿಕ್ಕಮ್ಮ ವೀರಮ್ಮ ಎಂಬುವರನ್ನು ನನ್ನ ತಂದೆಯವರು ಲಗ್ನವಾಗಿ ಆಕೆಯಲ್ಲಿ ಮೂರು ಜನ ಹೆಣ್ಣುಮಕ್ಕಳು ಆದರು. ಈ ಮಕ್ಕಳು ಹಾಲಿ ಮೈನರಾಗಿರುತ್ತಾರೆ. ನಾವು ನಾಲ್ಕುಜನ ಹೆಣ್ಣುಮಕ್ಕಳು ಶಿವಾಯಿ ನನ್ನ ತಂದೆಗೆ ಇನ್ನು ಗಂಡು ಮತ್ತು ಹೆಣ್ಣುಮಕ್ಕಳು ಯಾರೂ ಇಲ್ಲ. ಈಚೆಗೆ ಕೆಲವು ಜನಗಳ ದುರ್ಬೋಧನೆಯಿಂದ ನನ್ನ ಚಿಕ್ಕಮ್ಮ ವೀರಮ್ಮನು ನನಗೆ ಮೋಸಪಡಿಸತಕ್ಕ ಇರಾದೆಯಿಂದ ನನ್ನ ತಂದೆಯ ಬಾಬ್ತು ಆಸ್ತಿಗಳನ್ನು ಯಾವಕಾರಣವೂ ಇಲ್ಲದೆ ಇತರರಿಗೆ ಆಧಾರ ಭೋಗ್ಯ ವಗೈರೆ ಪರಾಧೀನ ಮಾಡುವ ಪ್ರಯತ್ನದಲ್ಲಿ ಇದ್ದಾಳೆಂದು ವರ್ತಮಾನ ಕೇಳುತ್ತೇನೆ. ನನ್ನ ತಂದೆಯವರು ಅನುಕೂಲಸ್ಥರಾಗಿದ್ದು ಆಸ್ತಿಯಿಂದ ವಿಶೇಷ ಉತ್ಪತ್ತಿ ಬರುತ್ತಾ ಲೇವಾದೇವಿ ವಗೈರೆ ಮಾಡಿದ್ದರು. ಹಾಲಿ ಅದೇರೀತಿ ಉತ್ಪತ್ತಿ ಇದೆ. ಹೀಗಿರುವಲ್ಲಿ ಸಾಲ ವಗೈರೆ ಮಾಡಲು ಕಾರಣವಿಲ್ಲ. ನನ್ನ ತಂದೆ ಬಾಬ್ತು ಯಾವ ದ್ವಿಶಿಷ್ಟ ಚರ ಸ್ಥಿರ ಆಸ್ತಿಗಳ ¼ ಹಿಸ್ಸೆಗೆ ನಾನು ಬಾಧ್ಯಳಾಗಿರುವುದರಿಂದ ನನ್ನ ಇರಾದೆಯಿಲ್ಲದೆ ಸದರಿ ವೀರಮ್ಮ ವಗೈರೆರಿಂದ ಯಾರೂ ಯಾವವಿಧವಾದ ಆಧಾರ ಭೋಗ್ಯ ವಗೈರೆ ಮಾಡಿಕೊಳ್ಳಕೂಡದು ಒಂದುವೇಳೆ ಹಾಗೇನಾದರೂ ಮಾಡಿಕೊಂಡಲ್ಲಿ ಅದು ಊರ್ಜಿತವಾಗಲಾರದೆಂದು ಈ ಮೂಲಕ ಸರ್ವರಿಗೂ ತಿಳಿಸುತ್ತೇನೆ.

ಈ ಎಡಗೈ ಹೆಬ್ಬೆರಳಿನ ಗುರುತು
ದೇವಮ್ಮ ಉರುಫ್ ಮರಮ್ಮ ಹಾಕಿದ್ದು.

ಪಂಚಾಚಾರ್ಯಪ್ರಭಾ

೧೯೨೯ನೇ ಸೆಪ್ಟಂಬರ್ ತಾ॥ ೨೩ ನೇ ಸೋಮವಾರ

ಸಂಸ್ಕಾರ.

ಯಾವ ಮಾನವರು ಯಾವ ದೇವತಾಸಂಬಂಧಿನಿಯಾದ ಭಕ್ತಿಯನ್ನು ಹೊಂದಿರುವರೋ, ಅವರು ಆ ಭಕ್ತಿಯಿಂದ ಆ ದೇವತೆಯನ್ನು ಉಪಾಸಿಸುವದಕ್ಕಾಗಿ, ಆ ಉಪಾಸನಾಕ್ರಮಾದಿಗಳನ್ನು ನಿರೂಪಿಸುವ ಮತವನ್ನು ಆಶ್ರಯಿಸಿ ಆ ಮತದ ಸಿದ್ಧಾಂತದಲ್ಲಿ ಹೇಳಲ್ಪಟ್ಟ ಸಂಸ್ಕಾರಗಳನ್ನು ಹೊಂದಿ, ಆ ಭಕ್ತಿಯನ್ನು ಹೆಚ್ಚಿಸಿಕೊಂಡು, ಅದರಿಂದ ಆ ಮತದ ಧರ್ಮಜ್ಞಾನಗಳನ್ನು ಸಾಧಿಸಿ ಮುಕ್ತರಾಗಬೇಕಾದುದು ಅವಶ್ಯಕವು. ಶಿವನೇ—ಪರಮಾತ್ಮನೂ, ಸಕಲ ಜಗತ್ಕಾರಣನೂ ಮೋಕ್ಷದಾಯಕನೂ ಎಂದು ತಿಳಿದು, ಆತನಲ್ಲಿಯೇ ಭಕ್ತಿಯುಳ್ಳವರಾರೋ ಅವರು ಶಿವಭಕ್ತರೆನಿಸಿಕೊಳ್ಳುವರು. ಶಿವಭಕ್ತಿಯು ಎಲ್ಲರಿಂದಲೂ ಹೊಂದಲ್ಪಡಲು ಶಕ್ಯವಲ್ಲ. "ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ। ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ" ಎಂದು ಶಿವಗೀತಾವಾಕ್ಯವಿರುವದರಿಂದ ಅನೇಕ ಜನ್ಮಗಳಲ್ಲಿ ಶ್ರುತಿ ಸ್ಮೃತ್ಯುಕ್ತಗಳಾದ ಕಾಮ್ಯಕರ್ಮಗಳನ್ನಾಚರಿಸಿ ಪುಣ್ಯಾಧಿಕರೂ ಕ್ಷೀಣಪಾಪರೂ ಆದ ನರರ ಮನಸ್ಸಿನಲ್ಲಿಯೇ ಶಿವಭಕ್ತಿಯು ಹುಟ್ಟುತ್ತದೆ. ಅವರೇ ತಮ್ಮ ಉದ್ದೇಶವನ್ನು ನೆರವೇರಿಸುವದಕ್ಕೋಸ್ಕರ ಶಿವಭಕ್ತಕುಲದಲ್ಲಿಯೇ ಜನಿಸಿ ಆ ಭಕ್ತಿಯಿಂದಲೇ ವೀರಶೈವಸಿದ್ಧಾಂತೋಕ್ತಗಳಾದ ಅಷ್ಟಾವರಣಕ್ರಿಯೆಗಳು, ಪಂಚಾಚಾರಗಳು, ವರ್ಣಾಶ್ರಮಕ್ರಿಯೆಗಳು ಎಂಬ ಧರ್ಮಗಳನ್ನೂ, ಲಿಂಗಾಂಗಸಾಮರಸ್ಯಜ್ಞಾನವನ್ನೂ ಅಭ್ಯಾಸಮಾಡುತ್ತ ಜೀವನ್ಮುಕ್ತರಾಗಿ ಕಡೆಯಲ್ಲಿ ಶಾಶ್ವತಶಿವಸಾಯುಜ್ಯವನ್ನು ಪಡೆಯುವರು. ಈ ಕಾರಣದಿಂದ ಶಿವಭಕ್ತಿಯೇ ಶಿವಭಕ್ತರ ಸ್ವಭಾವಗುಣವೆನ್ನುವದರಲ್ಲಿ ಸಂದೇಹವಿಲ್ಲ. ಆ ಭಕ್ತಿಯು ನಾಲಿನ್ಯಾದಿದೋಷಗಳಿಂದ ವಿಕಾರವನ್ನು ಹೊಂದದಿರಲೆಂಬ ಉದ್ದೇಶದಿಂದ ವೀರಶೈವಸಿದ್ಧಾಂತದಲ್ಲಿ ಅನೇಕ ಸಂಸ್ಕಾರಗಳು ಶಿವಭಕ್ತರಿಗೋಸ್ಕರ ಹೇಳಲ್ಪಟ್ಟಿವೆ.

ಆ ಸಂಸ್ಕಾರಗಳಲ್ಲಿ ಗರ್ಭದೀಕ್ಷೆಯು ಒಂದಾಗಿದೆ "ವೀರಶೈವಸ್ಥಿತಾನಾಂತು ಸ್ತ್ರೀಣಾಂ ಗರ್ಭಸ್ಯ ಸಪ್ತಮೇ। ಅಷ್ಟಮೇವಾಗುರುರ್ಲಿಂಗಂ ಧಾರಯೇದ್ವಿಧಿವಚ್ಛುಭಂ" ಎಂಬ ಶಿವಾಗಮೋಕ್ತಿಯು ಇರುವುದರಿಂದ ಶಿವಭಕ್ತಸ್ತ್ರೀಯರು ಗರ್ಭವತಿಯರಾಗಲು, ಆ ಗರ್ಭದಲ್ಲಿರುವ ಜೀವನಿಗೋಸ್ಕರ ಆ ಗರ್ಭದ ಏಳನೆಯ ಅಥವಾ ಎಂಟನೆಯ ತಿಂಗಳಲ್ಲಿ ಗುರುವು ಪಂಚಸೂತ್ರಘಟಿತವಾದ ಲಿಂಗವನ್ನು ಯಥಾವಿಧಿಯಾಗಿ ಸಂಸ್ಕರಿಸಿ, ಶಿವಕಲೆಯಿಂದ ಕೂಡಿದುದನ್ನಾಗಿ ಮಾಡಿ, ಆಕೆಯ ದೇಹದಲ್ಲಿ ಧಾರಣೆಮಾಡಬೇಕು. ಇದೇ ಗರ್ಭದೀಕ್ಷೆಯು; ಯಾವಾಗ ಗರ್ಭವು ಆಗುವದೋ, ಆ ಕಾಲದಿಂದ ಮೊದಲಾಗಿ ಕ್ರಮದಿಂದ ಪಿಂಡವಾಗಿ ಶಿರಃಪಾದಾದಿಗಳನ್ನು ಹೊಂದಿ ಏಳನೆಯ ತಿಂಗಳಿನಲ್ಲಿ ಜೀವನಿಂದ ಕೂಡಿ ಎಂಟನೆಯ ತಿಂಗಳಿನಲ್ಲಿ ಸರ್ವಾಂಗಪೂರ್ಣವಾಗಿ ಜೀವಶಿಶುವೆನಿಸಿಕೊಳ್ಳುವದು. ಹಿಂದಿನ ಜನ್ಮದಲ್ಲಿದ್ದಾಗ ಶಿವಭಕ್ತಿಯನ್ನು ಹೊಂದಿ ಆ ಶಿವನನ್ನು ಉಪಾಸನೆಮಾಡುವದಕ್ಕೋಸ್ಕರವೇ ಶಿವಭಕ್ತಸ್ತ್ರೀಯಳ ಗರ್ಭವನ್ನು ಹೊಂದಿದ ಆ ಜೀವನು ತನ್ನ ಉದ್ದೇಶಕ್ಕನುಸಾರವಾಗಿ ಆ ಗರ್ಭದಲ್ಲಿರುವಾಗಲೇ ಶಿವಲಿಂಗಸಂಬಂಧವನ್ನು ಹೊಂದಿ ಆ ಗುಣವನ್ನು ಹೆಚ್ಚಿಸಿಕೊಳ್ಳಬೇಕಾದುದು ಅವಶ್ಯವಾದುದರಿಂದಲೂ ತಾನು ಲಿಂಗಸಂಬಂಧವನ್ನು ಪಡೆಯದಿದ್ದರೆ "ಮದ್ಯಪಾನೀ ಮಾಂಸಭಕ್ಷೀ ಚಾನ್ಯದೇವಸ್ಯ ಪೂಜಕಃ। ಅಲಿಂಗೀಚ ದುರಾಚಾರಃ ಪಂಚೈತೇ ಭವಿನಃ ಸ್ಮೃತಾಃ" ಎಂದಿರುವದರಿಂದ ಭವಿಯೆನಿಸಿಕೊಳ್ಳುವನಾದ್ದರಿಂದಲೂ, ಭವಿಸಂಬಂಧವನ್ನು ಹೊಂದಿದ ತಾಯಿಗೆ "ಭವಿಸಂಗಾಲ್ಲಭೇಜ್ಜಂತುಃ ಕೋಟಿಜನ್ಮ ತಪಃಕ್ಷಯಂ। ವಿಹಿತೇನಿಂದಿತಕ್ಷೈವ ನರಕ್ರನರಕಂ ವ್ರಜೇತ್" ಎಂದಿರುವದರಿಂದ ತಪೋನಾಶವೂ, ಇಹಲೋಕದಲ್ಲಿ ನಿಂದೆಯೂ, ಪರಲೋಕದಲ್ಲಿ ನರಕವೂ ಸಂಭವಿಸುವದರಿಂದಲೂ, "ಸಾತುಕಾರ್ಯಾವೀರಶೈವೈಃ ಗರ್ಭದೀಕ್ಷಾದಿಸಂಸ್ಕೃತಿಃ" ಇತ್ಯಾದಿ ಪ್ರಮಾಣವಾಕ್ಯಗಳಿರುವದರಿಂದ ಗರ್ಭದೀಕ್ಷಾದಿಸಂಸ್ಕಾರಗಳನ್ನು ಪಡೆದ ಜೀವನೇ ದಹರೋಪಾಸನೆಯನ್ನು ಮಾಡುವದರಲ್ಲಿ ಯೋಗ್ಯತೆಯನ್ನು ಪಡೆಯುವವನಾಗುವದರಿಂದಲೂ, ಗರ್ಭಸ್ಥವಾದ ಶಿಶುವಿಗೆ ಗರ್ಭದೀಕ್ಷೆಯು ಅತ್ಯಾವಶ್ಯಕವೆನಿಸಿತು. ಶಿವಭಕ್ತಕುಲದಲ್ಲಿ ಹುಟ್ಟಿದ್ದರೂ ಈ ಸಂಸ್ಕಾರವನ್ನು ಪಡೆಯದ ಜೀವರು ವ್ರಾತ್ಯರೆನಿಸಿಕೊಂಡು ಭ್ರಷ್ಟರಾಗುವರು. ಗರ್ಭದೀಕ್ಷೆಯನ್ನು ಹೊಂದಿದ ಶಿಶುವು ಮಾತೃಗರ್ಭವನ್ನು ಬಿಟ್ಟು ಹೊರಗೆ ಬಂದಾಗ ಗರ್ಭದೀಕ್ಷಾಕಾಲದಲ್ಲಿ ಆ ಜನನಿಯ ದೇಹದಲ್ಲಿ ಆ ಶಿಶುವಿಗೋಸ್ಕರ ಧಾರಣೆಮಾಡಿದ್ದ ಆ ಲಿಂಗವನ್ನೇ ಗುರುವು ಪುನಃ ಸಂಸ್ಕರಿಸಿ ಧಾರಣೆಮಾಡುವದು ಜಾತಕರ್ಮವೆನಿಸಿರುತ್ತದೆ. ಶಿಶುವು ಹೊರಗೆ ಬಂದ ಕೂಡಲೆ ಜಾತಕರ್ಮವು ಮಾಡಲ್ಪಡಬೇಕೆಂದು ಸಿದ್ಧಾಂತದಲ್ಲಿ ಹೇಳಲ್ಪಟ್ಟಿದೆ. ಗರ್ಭದೀಕ್ಷೆಯನ್ನು ಹೊಂದದ ಶಿಶುವು ಆಗಲೇ ದುರ್ನಿವಾರ್ಯವಾದ ಭವಿತ್ವವನ್ನು ಪಡೆದು ಅಶುದ್ಧಸಂಪ್ರದಾಯವನ್ನು ಪ್ರವೇಶಿಸಿತಾದ್ದರಿಂದ ಅದಕ್ಕೆ ಜಾತಕರ್ಮವು ಅನವಶ್ಯಕವಾಯಿತು. ಆ ಶಿಶು ಜೀವನು ಅಲಿಂಗಿಯೆನಿಸಿಕೊಂಡನಾದ್ದರಿಂದ ವೇಧಾ ಮನು ಕ್ರಿಯಾರೂಪವಾದ ಶಿವದೀಕ್ಷೆಯೆಂಬ ವಿಶೇಷ ಸಂಸ್ಕಾರವನ್ನು ಹೊಂದುವದಕ್ಕೆ ಅನರ್ಹನಾಗಿ, ಲಿಂಗಪೂಜೆಯನ್ನು ಮಾಡುವದಕ್ಕೆ ಯೋಗ್ಯತೆಯಿಲ್ಲದವನಾಗಿ, ಪತಿತನಾಗುವನು. ಆದುದರಿಂದ ಗರ್ಭದೀಕ್ಷೆ, ಜಾತಕರ್ಮ ಎಂಬ ಸಂಸ್ಕಾರಗಳನ್ನು ಯಾರು ತಮ್ಮ ಶಿಶುಗಳಿಗೆ ಕ್ರಮದಿಂದ ಮಾಡಿಸುವರೋ ಅವರು ಆ ಶಿಶುಗಳನ್ನು ವೀರಶೈವಮಾರ್ಗದಲ್ಲಿ ಪ್ರವೇಶಮಾಡಿಸುವುದರಿಂದುಂಟಾಗುವ ವಿಶೇಷ ಪುಣ್ಯಗಳನ್ನು ಹೊಂದುವರಲ್ಲದೆ ಸ್ವಧರ್ಮಪಾಲಕರೆನಿಸಿಕೊಂಡು ಇಹಲೋಕದಲ್ಲಿ ಗೌರವ ಪ್ರತಿಷ್ಠೆಗಳನ್ನು ಪರಲೋಕದಲ್ಲಿ ಸದ್ಗತಿಯನ್ನು ಹೊಂದುವರು. ಲಿಂಗಾಂಗಿಗಳಲ್ಲಿ ಕೆಲವರು ತಮ್ಮ ಶಿಶುಗಳಿಗೆ ಯೋಗ್ಯಕಾಲಗಳಲ್ಲಿ ಗರ್ಭದೀಕ್ಷಾದಿ ಸಂಸ್ಕಾರಗಳನ್ನು ನೆರವೇರಿಸುವುದರಲ್ಲಿ ಉದಾಸೀನಮತಿಗಳಾಗಿರುವದರಿಂದ ಗುರುವರ್ಗದವರು ಅವರಿಗೆ ಶಿವಸಂಸ್ಕಾರಸ್ವರೂಪವನ್ನು ತಿಳುಹಿಸಿ ಅವರ ಶಿಶುಗಳನ್ನು ಸಂಸ್ಕಾರಿಗಳನ್ನಾಗಿ ಮಾಡಿ ಭಕ್ತೋದ್ಧಾರಕರೆಂಬ ಕೀರ್ತಿಗೆ ಪಾತ್ರರಾಗಬೇಕಾಗಿ ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರ ಬೆಂಗಳೂರಿನ ರತ್ನಾವಳಿ ಥಿಯೇಟರಿನಲ್ಲಿ ಬೆಂಗಳೂರಿನ ಪ್ರೊಫೆಸರ್ ಕೆ. ವಿ. ಅಯ್ಯರವರ ವ್ಯಾಯಾಮ ಪ್ರದರ್ಶನ ನಡೆದು ಉತ್ಪತ್ತಿಯಾದ 2 ಸಹಸ್ರ ರೂಪಾಯಿಗಳು ಸಿಂಧದೇಶದಲ್ಲಿ ಪ್ರವಾಹದ ಹಾವಳಿಯಿಂದ ವ್ಯಥೆಪಟ್ಟವರಿಗೆ ಸಹಾಯವಾಗಿ ಕಳುಹಿಸಲ್ಪಟ್ಟಿತು. ಸ್ತುತ್ಯ!

ಇದೇ ತಿಂಗಳು 29 ನೆಯ ಭಾನುವಾರ ರಾಜಧಾನಿಯಲ್ಲಿ ನಡೆಯುವ "ಅಖಿಲಕರ್ಣಾಟಕ ಹಿಂದೀಪ್ರಚಾರ ಸಮ್ಮೇಳನ" ದ ಅಧ್ಯಕ್ಷರಾಗಿ ಆಗಮಿಸುವ ಡಾಕ್ಟರ್ ಅನ್ಸಾರಿಯವರಿಗೆ ಇಲ್ಲಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಒಂದು ಸನ್ಮಾನಪತ್ರವನ್ನೊಪ್ಪಿಸಬೇಕೆಂದು ತೀರ್ಮಾನಿಸಿರುವರು.

ಮೈಸೂರು ಯೂನಿವರ್ಸಿಟಿ ವಿದ್ಯಾರ್ಥಿಗಳ ದೇಹಸ್ಥಿತಿಯನ್ನು ಪರೀಕ್ಷಿಸಲು ಅವರಿಂದ ತಲಾ ಒಂದು ರೂಪಾಯಿಸಂತೆ 1929 ನೇ ಜುಲೈ ಪ್ರಾರಂಭದಿಂದ ವರ್ಷಕ್ಕೊಂದುಸಾರಿ ಫೀಜು ವಸೂಲು ಮಾಡಬೇಕೆಂದೂ ವಿದ್ಯಾರ್ಥಿನಿಯರಿಂದ ವಸೂಲ್ಮಾಡಬೇಕಾಗಿಲ್ಲವೆಂದೂ ಸರ್ಕಾರದವರು ಗೊತ್ತುಮಾಡಿರುವರು.

ಬೆಂಗಳೂರು ಸಿಟಿಯಲ್ಲಿ ಚಂದ್ರರಾಜನೆಂಬುವನು ಮಿ॥ ಅಬ್ಬಾಸ್ ಖಾನರ ಮೇಲೆ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ವಜಾಮಾಡಿಬಿಟ್ಟರು. ಆದರ ಮೇಲೆ ಚಂದ್ರರಾಜನು ಕಳೆದ ಶುಕ್ರವಾರ ಸೆಷನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದಾನೆ.

ಮಿ॥ ಟಿ. ಜಿ. ರಾಮಯ್ಯರ್ರವರು ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ಮುನಿಸಿಪಲ್ ಪ್ರೆಸಿಡೆಂಟ್ ಮತ್ತು ಟ್ರಸ್ಟ್ ಬೋರ್ಡ್ ಛೇರ್ಮನ್ ಕೆಲಸಗಳ ಛಾರ್ಜನ್ನು ವಹಿಸಿಕೊಂಡಿದ್ದಾರೆ. ಮಿ॥ ಕೆ. ವಿ. ಅನಂತರಾಮರಾಯರವರು ಬೆಂಗಳೂರಿನಿಂದ ಈ ವಾರ ಬಂದು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ್ ಕೆಲಸದ ಛಾರ್ಜನ್ನು ವಹಿಸಿಕೊಳ್ಳುವ ತನಕ ಮಿ॥ ಟಿ. ಜಿ. ರಾಮಯ್ಯರ್ರವರೇ ಡಿಸ್ಟ್ರಿಕ್ಟ್ ಕೆಲಸಗಳನ್ನೂ ನೋಡುತ್ತಾ ಬರುವರು.

ಮೈಸೂರು ಗಂಧದೆಣ್ಣೆ ಛಪಾವಣೆ ಮೊಕದ್ದಮೆಯಲ್ಲಿ ಅಡಿಷನಲ್ ಡಿ॥ ಮ್ಯಾಜಿಸ್ಟ್ರೇಟ್ ಮಿ॥ ಟಿ. ಜಿ. ರಾಮಯ್ಯರವರು ಮೊನ್ನೆ ಸೋಮವಾರ ತೀರ್ಮಾನ ಹೇಳಿದರು. ಅಪರಾಧಿಗಳಾದ ಬಿ. ಸೀತಾರಾಮಾಚಾರ್ಯರು ನಂಬಿಕೆ ದ್ರೋಹ ಮಾಡಿದುದುಂಟೆಂದು 2 ವರ್ಷ ಕಠಿಣಸಜ 1000 ರೂ. ಜುಲ್ಮಾನೆ ತಪ್ಪಿದರೆ ಪುನಃ 6 ತಿಂಗಳು ಕಠಿಣ ಸಜಾ ಶಿಕ್ಷೆ ವಿಧಿಸಿದರು. ತೀರ್ಮಾನವು 150 ಪುಟಗಳನ್ನೊಳಗೊಂಡಿರುವುದಾಗಿಯೂ, ಅಪರಾಧಿಯು ಮನಃಪೂರ್ವಕವಾಗಿ ನಂಬಿಕೆ ದ್ರೋಹ ಮಾಡಿದನೆಂದು ಒಪ್ಪಿರುವುದಾಗಿಯೂ ತಿಳಿಯಬರುತ್ತದೆ.

ಚಿತ್ರದುರ್ಗಕ್ಕೆ ಸುಮಾರು 10-12 ಮೈಲಿ ದೂರದಲ್ಲಿರುವ ಮುದ್ದನೂರು ಎಂಬಲ್ಲಿ ಉಪ್ಪಾರಜಾತಿಯವನೊಬ್ಬನು ಯಾವುದೋ ಕಾರಣದಿಂದ ಒನಕೆಯಿಂದ 20 ವಯಸ್ಸಿನ ಪೂರ್ಣಗರ್ಭಿಣಿಯಾಗಿದ್ದ ತನ್ನ ಹೆಂಡತಿಯ ತಲೆಯಮೇಲೆ ಹೊಡೆದು ಆಕೆಯು ಕೂಗಿಕೊಳ್ಳುತ್ತಾ ಕೆಳಕ್ಕೆ ಬಿದ್ದ ಕೂಡಲೆ ಕುಡುಗೋಲಿನಿಂದ ಹೊಟ್ಟೆಯನ್ನು ಬಗೆದು ಕೊಂದನು. ಆಸ್ಪತ್ರೆಯಲ್ಲಿ ಎರಡು ದಿನಗಳನಂತರ ಶವವನ್ನು ಪರೀಕ್ಷಿಸಿ ಹೊಟ್ಟೆಯಲ್ಲಿದ್ದ ಕೂಸನ್ನು ತೆಗೆದು ಶವವನ್ನು ದಫನ ಮಾಡಿಸಿದರಂತೆ! ಕೊಲೆಪಾತಕನನ್ನು ಖೈದುಮಾಡಿರುವರು.

ರಾಜಧಾನಿಯ ಸಂತೇಪೇಟೆಯಲ್ಲಿ ದೊಡ್ಡ ದಿನಸಿಮಂಡಿ ವರ್ತಕರಾಗಿದ್ದ ಮಿ॥ ಪಿ. ಕೆಂಪಣ್ಣನವರು ಮೊನ್ನೆ ಸೋಮವಾರ ಬೆಳಗ್ಗೆ ಪದ್ಧತಿಯಂತೆ ಕುಕ್ಕರಹಳ್ಳಿಕೆರೆಕಡೆ ಹೋಗಿದ್ದು ವಾಪಸು ಬಾರದಿರಲು ಮನೆಯವರು ಗಾಬರಿಯಾಗಿ ಊರೆಲ್ಲಾ ಹುಡುಕಾಡಿದರು. ಕಡೆಗೆ ಅವರು ಸ್ನಾನಕ್ಕೆ ಇಳಿದಾಗ ಕುಕ್ಕರಹಳ್ಳಿ ಕೆರೆಯಲ್ಲಿ ಬಿದ್ದುಹೋಗಿದ್ದುದು ಗೊತ್ತಾಯಿತು. ಶವವನ್ನು ಪದ್ಧತಿಯಂತೆ ಮೆರವಣಿಗೆಯಾಗಿ ಸಾಗಿಸಿ ದಫನ ಮಾಡಿದರು. ಗುಣಾಢ್ಯರಾಗಿಯೂ ಧರ್ಮನಿರತರಾಗಿಯೂ ಬಹು ಜನ ಪ್ರಿಯರಾಗಿಯೂ ಇದ್ದ ಕೆಂಪಣ್ಣನವರಿಗೆ ಪೂರ್ವ ವಯಸ್ಸಿನಲ್ಲೇ ಅವಸಾನವು ಪ್ರಾಪ್ತವಾದದ್ದು ವಿಷಾದಕರವಾಗಿದೆ.

ಬೆಂಗಳೂರು ಟೈಂಸ್ ಪತ್ರಿಕೆಯ ಸಂಪಾದಕರಾದ ಮಿ॥ ಸೈಯದ್ ಗೌಸ್ ಮೊಹಿಯುದ್ದೀನ್‌ರವರು ತಮ್ಮ ಲಾಯರಾದ ಮಿ॥ ಎಲ್. ಎಸ್. ರಾಜುಯವರ ಮೂಲಕ ಸದರಿ ಪತ್ರಿಕೆಯ ಮುದ್ರಕರಾದ ಶ್ರೀನಿವಾಸ ಪ್ರೆಸ್ಸಿನವರಿಗೆ ತಾವು ಪತ್ರಿಕೆಯ ಸಂಪಾದಕತ್ವಕ್ಕೆ ರಾಜೀನಾಮೆಕೊಟ್ಟಿರುವುದರಿಂದ ಮುಂದೆ ತಮ್ಮ ಹೆಸರಿನಿಂದ ಟೈಂಸ್ ಪತ್ರಿಕೆಯನ್ನು ಪ್ರಿಂಟುಮಾಡಬಾರದೆಂದು ನೋಟೀಸು ಕೊಟ್ಟಿರುವರು. ಮಿ॥ ಮೊಹಿಯುದ್ದೀನ್‌ರವರು ವರ್ತಮಾನಪತ್ರಿಕೆಗಳಿಗೆ ಕಳುಹಿಸಿರುವ ವಾಂಗ್ಮೂಲದಲ್ಲಿ ಕೆಲವು ಮಂದಿ ಸ್ನೇಹಿತರ ಇಚ್ಛೆಯಂತೆ ತಾವು ಹೆಸರಿಗೆ ಮಾತ್ರ ಆ ಪತ್ರಿಕೆಗೆ ಸಂಪಾದಕರಾಗಿದ್ದರೆಂದೂ, ಅದರ ವಿಶಿಷ್ಟ ಆಡಳಿತವೂ ಅದರಲ್ಲಿ ಪ್ರಕಟವಾಗುವ ಅಭಿಪ್ರಾಯಗಳೂ ಖಾನ್ ಬಹದ್ದೂರ್ ಮಿ॥ ಅಬ್ಬಾಸ್‌ಖಾನರದಾಗಿದೆ ಎಂದೂ ಹೇಳಿರುತ್ತಾರೆ.

ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿಯವರು ಈ ಸಾರಿ ಮೈಸೂರಿಗೆ ಬಂದಿದ್ದಾಗ್ಗೆ ಕಂಪನಿ ಪ್ರೊಪ್ರೈಟರಾದ ವಿನೋದರತ್ನಾಕರ ಮ॥ ಜಿ. ಎಚ್. ವೀರಣ್ಣನವರ ಸೋದರಳಿಯಂದಿರಿಗೆ ನ್ಯುಮೋನಿಯಾ ಎಂಬ ಬಾಯಿಲೆ ಪ್ರಾಪ್ತವಾಗಿ ಬಹಳ ಕಷ್ಟವಾಗಿದ್ದ ಸಮಯದಲ್ಲಿ ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಸುಪ್ರಸಿದ್ಧ ಮೈಸೂರು ಮೆಡಿಕಲ್ ಹಾಲ್ ಎಂಬ ಔಷಧಾಲಯದಲ್ಲಿರುವ ಡಾಕ್ಟರ್ ಅಣ್ಣಾಜಪ್ಪನವರು ಕೇವಲ ಮುತುವರ್ಜಿ ವಹಿಸಿ ತಮ್ಮ ಅಸಾಧಾರಣ ಶಕ್ತಿಸಾಮರ್ಥ್ಯಗಳಿಂದ ಅಂಥಾ ಕಠಿಣವಾದ ಬಾಯಿಲೆಯನ್ನು ಕೆಲವು ದಿನಗಳಲ್ಲಿಯೇ ಗುಣಪಡಿಸಿದರು. ಡಾಕ್ಟರವರ ಚಿಕಿತ್ಸಾಕ್ರಮಗಳಿಗೆ ಮೆಚ್ಚಿ ವಿನೋದರತ್ನಾಕರ ಮ॥ ಜಿ. ಎಚ್. ವೀರಣ್ಣನವರು ಇದೇ ಮಾಹೆ ತಾ॥ 5 ನೆಯ ಗುರುವಾರ ಒಂದು ಭಂಗಾರದ ರಿಸ್ಟ್‌ಲೆಟ್ ಎಂಬ ಹಸ್ತಾಭರಣವನ್ನು ಬಹುಮಾನಿಸಿ ಸತ್ಕರಿಸಿದರು. ಮೇಲ್ಕಂಡ ಡಾಕ್ಟರವರು ಇನ್ನೂ ತರುಣವಯಸ್ಕರಾಗಿದ್ದಾಗ್ಯೂ ಅಸಾಧ್ಯವಾಗಿ ತೋರಿ ಕೈಬಿಟ್ಟ ಅನೇಕ ಬಾಯಿಲೆಗಳನ್ನೂ ಸಹ ತಮ್ಮ ಅಸಾಧಾರಣ ಮೇಧಾಶಕ್ತಿಯಿಂದ ಗುಣಪಡಿಸಿ ಅನೇಕ ಮಹಾಜನಗಳ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ರೋಗಿಗಳ ವಿಷಯದಲ್ಲಿ ಇವರು ತೋರಿಸುವ ದಯಾರಸವೂ, ಮಿತ್ರಭಾವವೂ, ಮಮತೆಯೂ, ಮತ್ತು ಇವರ ಚಿಕಿತ್ಸಾಕ್ರಮವೂ ಬಹಳ ಸ್ತೋತ್ರಾರ್ಹವಾಗಿವೆ.

ವರ್ತಮಾನಸಂಗ್ರಹ.

ಜರ್ಮನಿಯ ರಿಷಸ್ಟೇಗ್ ಎಂಬ ಹೆಸರುಳ್ಳ ಪಾರ್ಲಿಮೆಂಟ್ ಸಭೆಗೆ ಯಾರೋ ಬಾಂಬು ಗುಂಡುಗಳನ್ನು ಎಸೆದರು. ಬಾಂಬಿನಲ್ಲಿ "ಜರ್ಮನಿಯೇ! ಎದ್ದೇಳು" ಎಂದು ಬರೆದಿದ್ದ ಕಾಗದವಿದ್ದಿತು.

ಪಾಶ್ಚಾತ್ಯ ದೇಶಗಳಲ್ಲಿ ಈಗ ಎಲ್ಲಾ ಕೆಲಸಕ್ಕೂ ಯಂತ್ರಗಳೇ ಉಪಯೋಗಿಸಲ್ಪಡುವುದು ಹೆಚ್ಚಾಗುತ್ತಿದೆ. ಕೋಳಿಮರಿಗಳ ಗರಿಗಳನ್ನು ಕೆಲವು ಸೆಕೆಂಡುಗಳಲ್ಲಿ ಕಿತ್ತುಹಾಕುವ ಯಂತ್ರವೊಂದು ಈಗ ತಯಾರಾಗಿದೆಯಂತೆ!

ಚೀನಾದೇಶದ ಹಾಂಕಾಂಗಿನಲ್ಲಿ ಮಳೆಬರುವಂತೆ ಮಾಡುವ ಪ್ರಯೋಗನಡೆದು 600 ಪೌಂಡು ಪುಡಿಮಣ್ಣನ್ನು ವಿಮಾನಗಳ ಮೂಲಕ ಮಳೆಯ ಮೋಡಗಳಿಗೆ ಸುರಿಸಲಾಯಿತು. ಆದರೆ ಫಲಿತಾಂಶ ಧೂಳು ಮಾತ್ರ; ಮಳೆಯ ಹನಿಯೂ ಇಲ್ಲ.

ಸ್ವಾಜಿಲೇಂಡಿನ ಆರುಮಂದಿ ವೈಜ್ಞಾನಿಕರು ಬಂಗಾರವನ್ನು ಮಾಡುತ್ತಿರುವರು. ಅವರು ಕ್ರೋಮೊಝೈನ್ ಎಂಬ ಹೊಸದಾದ ಒಂದು ಶಕ್ತಿಯನ್ನು ಕಂಡು ಹಿಡಿದಿರುವರು. ಇದು ವಿದ್ಯುಚ್ಛಕ್ತಿಗಿಂತ ಹತ್ತು ಪಾಲು ಶಕ್ತಿಯುಳ್ಳದ್ದಾಗಿರುವುದಂತೆ!

ಯತೀಂದ್ರದಾಸರ ಶವವು 13 ನೆ ಯತಾ॥ ಮಧ್ಯಾಹ್ನ ಲಾಹೋರಿನಲ್ಲಿ ಮೆರವಣಿಗೆ ಮಾಡಲ್ಪಟ್ಟಿತು. ಮೆರವಣಿಗೆಯಲ್ಲಿ 50000 ಜನರು ಸೇರಿದ್ದರು. ಮೆರವಣಿಗೆಯಾದನಂತರ ಶವವು ಹೌರಾಮೇಲ್ ಗಾಡಿಯಲ್ಲಿ ಕಲ್ಕತ್ತೆಗೆ ಸಾಗಿಸಲ್ಪಟ್ಟಿತು. ಕಲ್ಕತ್ತಾ, ಡೆಲ್ಲಿ, ಮಿರಾತ್, ಅಮೃತಸರ್, ಅಲಹಾಬಾದ್ ಮುಂತಾದ ಕಡೆಗಳಲ್ಲಿ ದುಃಖಸೂಚನಾರ್ಥವಾಗಿ ವ್ಯಾಪಾರಾದಿ ದಿನಚರಿಯ ಕೆಲಸಗಳು ನಿಲ್ಲಿಸಲ್ಪಟ್ಟಿದ್ದವು.

ತಿನ್ನವೆಲ್ಲಿಯ ಒಬ್ಬ ಕ್ರಿಶ್ಚಿಯನನು ತನ್ನ ಹೆಂಡತಿಯು ಮದುವೆಯಾದ ಮೂರುದಿನಕ್ಕೆ ಮನೆಬಿಟ್ಟು ಹೋಗಿ ಒಬ್ಬ ಹಿಂದೂವಿನ ಸಂಗಡ ವಾಸಮಾಡುತ್ತಿರುವುದರಿಂದ ವಿವಾಹವನ್ನು ವಜಾಮಾಡಬೇಕೆಂದು ತಿನ್ನವೆಲ್ಲಿ ಡಿ॥ ಕೋರ್ಟಿನಲ್ಲಿ ಮೊಕದ್ದಮೆ ತಂದನು. ಹೆಂಡತಿಯು ಕೋರ್ಟಿಗೆ ಹಾಜರಾಗಿ ಮದುವೆಯು ತನ್ನ ಇಷ್ಟಕ್ಕೆ ವಿರೋಧವಾಗಿ ನಡೆದದ್ದರಿಂದ ಮನೆಯಿಂದ ಓಡಿಹೋಗಿ ಮತಾಂತರಹೊಂದಿ ಹಿಂದುವೊಬ್ಬನನ್ನು ಮದುವೆಯಾದೆನು ಎಂದು ಹೇಳಿದಳು. ಅವಳ ದ್ವಿತೀಯ ಪತಿಯೂ ಇದೇ ರೀತಿ ಹೇಳಿಕೆ ಕೊಟ್ಟನು. ಜಡ್ಜರು ವಿವಾಹ ಬಂಧನವನ್ನು ವಜಾಮಾಡಿದರು.

20 ವರ್ಷ ಜೈಲಿನಲ್ಲಿದ್ದ ಬಂದಿಯೊಬ್ಬನು ಸಂಪೂರ್ಣವಾಗಿ ಮರದಿಂದಲೇ ವಿಚಿತ್ರ ಗಡಿಯಾರವೊಂದನ್ನು ತಯಾರಿಸಿರುವನು. ಇದು ಒಂದು ಕವಾಟಿನಲ್ಲಿರಿಸಲ್ಪಟ್ಟು ಲೋಕದ 30 ದೊಡ್ಡ ಪಟ್ಟಣಗಳಲ್ಲಿನ ಬೇರೆ ಬೇರೆ ಕಾಲವನ್ನು ತೋರಿಸುವ 30 ಗಡಿಯಾರಗಳನ್ನೊಳಗೊಂಡಿದೆ. ಇವಲ್ಲದೆ ಇನ್ನೊಂದು ಪ್ರತ್ಯೇಕ ಗಡಿಯಾರವು ಸೂರ್ಯ, ಚಂದ್ರ, ನಕ್ಷತ್ರಗಳ ಚಲನೆಯನ್ನು ತೋರಿಸುವುದು. ಉಷ್ಣಮಾಪಕ ಯಂತ್ರವೊಂದು ಹವಾಗುಣವನ್ನು ಸೂಚಿಸುವುದು. ತಾರೀಖು ಪಟ್ಟಿಯೊಂದು ದಿನ, ವಾರ, ತಿಂಗಳುಗಳನ್ನೆಲ್ಲಾ ಅಧಿಕ ವರ್ಷ ಬಂದರೂ ತಪ್ಪಿಲ್ಲದೆ ತೋರಿಸುವುದು. ತೂಕ ಮಾಡುವ ಯಂತ್ರವೊಂದು ಈ ಗಡಿಯಾರದೊಂದಿಗೆ ಜೋಡಿಸಲ್ಪಟ್ಟಿರುವುದು.

ಅಮೇರಿಕದ ಕೋಟ್ಯಾಧಿಪತಿ ಮಿ॥ ವಿಲ್ಲಿಯಮ್ ಕೆನ್ನಿ ಎಂಬವರು ಯುರೋಪಿನಲ್ಲಿ ಸಂಚರಿಸುತ್ತಾ ಲಂಡನ್ನಿಗೆ ಬಂದಿರುವರು. ಇವರಿಗೆ 2 ತಿಂಗಳಿಂದ ಯುರೋಪಿನಲ್ಲಾಗಲಿ ಇಂಗ್ಲೆಂಡಿನಲ್ಲಾಗಲಿ ತೃಪ್ತಿಕರವಾದ ಕ್ಷೌರಿಕನು ದೊರೆಯಲಿಲ್ಲವಂತೆ! ಅವರೀಗ ನ್ಯೂಯಾರ್ಕಿನ ಫ್ರಾಂಕೋ ಎಂಬ ಕ್ಷೌರಿಕನಿಗೆ ಟೆಲಿಗ್ರಾಂ ಮಾಡಿ ಕೂಡಲೇ ಲಂಡನ್ನಿಗೆ ಬರಹೇಳಿರುವರು. 3500 ರೂ. ಗಳ ಸಂಬಳ ಮತ್ತು ಹೋಗಿ ಬರುವ ವೆಚ್ಚವನ್ನೆಲ್ಲಾ ಕೊಡಲೊಪ್ಪಿರುವರು. ಲಂಡನ್ನಿನ ಕ್ಷೌರಿಕರೆಲ್ಲಾ ಬೇಗ ಫ್ರಾಂಕೋನು ಇಂಗ್ಲೆಂಡಿಗೆ ಬಾರದಂತೆ ಮಾಡಬೇಕೆಂದು ಯತ್ನಿಸುತ್ತಿರುವರು. ತಾ॥ 17 ರವರೆಗೆ ಮಾತ್ರ ಫ್ರಾಂಕೋನು ಲಂಡನಿನಲ್ಲಿದ್ದು ಅನಂತರ ಹಿಂತಿರುಗಬೇಕೆಂದು ಸರಕಾರದ ಹುಕುಮಾಗಿದೆ. ಕೋಟ್ಯಾಧಿಪತಿಯು ಇದೊಂದು ಹುಚ್ಚಿಗಾಗಿ ಸುಮಾರು 5 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದಂತಾಯಿತು!

20 ವರ್ಷಗಳ ಪೂರ್ವದಲ್ಲಿ ಹಂಗೇರಿ ದೇಶದ ಇಂಕೋಟೆ ಎಂಬ ಗ್ರಾಮದಲ್ಲಿ ಕುಳ್ಳ, ಗಡ್ಡ ತುಂಬಿದ, ಗೋರಿಲ್ಲಾ ಕೋತಿಯಂತಹ ಬೇಲಾಕಿಸ್ ಎಂಬವನು ಅನೇಕ ಸ್ತ್ರೀಯರನ್ನು ಮರುಳುಗೊಳಿಸುವವನಾಗಿ ಇತರ ಜನರ ಹೊಟ್ಟೆಕಿಚ್ಚಿಗೆ ಗುರಿಯಾದನು. ಕಿಸ್ಸನು ವಾಸಮಾಡುತ್ತಿದ್ದ ಮನೆಯ ಕಿಟಿಕಿಗಳಲ್ಲಿ ಪ್ರತಿ ತಿಂಗಳಿಗೊಂದು ಹೊಸ ಸ್ತ್ರೀಮುಖವು ಕಾಣಬರುತ್ತಿತ್ತು. ಕೊನೆಗೆ ಕಿಸ್ಸನು ಆ ಮನೆಯನ್ನು ಬಿಟ್ಟು ಹೋದಾಗ ಅವನ ಭಯಂಕರ ಕೃತ್ಯವು ಬಯಲಾಯಿತು. ಒಂದು ವರ್ಷದನಂತರ ಸದರಿ ಮನೆಯ ಹೊಸ ಯಜಮಾನನು ಅದನ್ನು ಹೊಸದಾಗಿ ಕಟ್ಟಲು ತಳಹದಿಯನ್ನು ಅಗೆಸಿದಾಗ ಮಣ್ಣಿನೊಳಗೆ 13 ಕಬ್ಬಿಣದ ಪೆಟ್ಟಿಗೆಗಳು ದೊರೆತವು. ಈ ವಿಷಯದಲ್ಲಿ ಪತ್ತೆ ನಡಿಸಿದ ಪೋಲೀಸರು ಈ ಪೆಟ್ಟಿಗೆಗಳ ಬಾಗಿಲುಗಳನ್ನು ತೆಗೆಯುವಾಗ 13 ಪೆಟ್ಟಿಗೆಗಳೊಳಗೆ 13 ತರುಣಿಯರ ಶವಗಳನ್ನು ಕಂಡು ಭಯಚಕಿತರಾಗಿ ಸ್ಮೃತಿ ತಪ್ಪಿಬಿದ್ದರು. ಕೂಡಲೆ ಇಂತಹ ಕೊಲೆಪಾತಕಿಗೆ ತಕ್ಕ ಶಿಕ್ಷೆ ಕೊಡಲೇಬೇಕೆಂಬ ಮೊರೆಯೆದ್ದಿತು. ಪೋಲೀಸರು ಎಲ್ಲಿ ಹುಡುಕಿದರೂ ಕಿಸ್ಸನ ಪತ್ತೆಯಾಗಲಿಲ್ಲ. ಆದರೆ ಯುದ್ಧದ ಸಮಯದಲ್ಲಿ ಆಫ್ರಿಕದಲ್ಲಿ ಫ್ರೆಂಚ್ ಸೈನ್ಯದಲ್ಲಿ ಕಾದಾಡುತ್ತಿದ್ದಾಗ ಕಿಸ್ಸನು ಕೊಲ್ಲಲ್ಪಟ್ಟನೆಂಬ ಸುಳ್ಳು ಸುದ್ದಿ ಹಬ್ಬಿ ಅವನ ಪತ್ತೆ ಕೆಲಸವು ನಿಲ್ಲಿಸಲ್ಪಟ್ಟಿತು. ಆದರೆ 20 ವರ್ಷಗಳನಂತರ ಈಗ ಕಿಸ್ಸನ ಪತ್ತೆಯಾಗಿದೆ. ಅವನು ತಾನೊಬ್ಬ ಪ್ರಸಿದ್ಧ ದರೋಡೆಗಾರನೆಂದು ತೋರ್ಪಡಿಸಿ ಅದಕ್ಕಾಗಿ ರುಮೇನಿಯಾ ದೇಶದ ಕಾರಾಗೃಹದಲ್ಲಿ ಮರಣಾಂತ ಶಿಕ್ಷೆ ಅನುಭವಿಸುತ್ತಿದ್ದನು. ಅವನ ಚಹರೆ, ಕೈಬರಹ ಮೊದಲಾದುವುಗಳಿಂದ ಕಿಸ್ಸನೇ ಅವನೆಂದು ಪತ್ತೆಯಾಗಿ ವಿಚಾರಣೆಗೊಳಮಾಡಲಾಯಿತು. ಕಿಸ್ಸನು ತನ್ನ ಪತ್ತೆಯ ಸಂಗತಿ ತಿಳಿದೊಡನೆಯೇ ಜೈಲಿನಿಂದ ತಪ್ಪಿಸಿಕೊಂಡು ಹೋಗಲೆತ್ನಿಸಿ ಭಗ್ನಮನೋರಥನಾದನು. ಅನಂತರ ಆತ್ಮಹತ್ಯೆ ಮಾಡಿಕೊಳ್ಳಲು ಅವನು ಮಾಡಿದ ಪ್ರಯತ್ನವೂ ನಿಷ್ಫಲವಾಯಿತು.

ಚೀನಾ ದೇಶಕ್ಕೆ 1000 ಕೋಟಿ ರೂಪಾಯಿಗಳ ಸಾಲವಿದೆ. ಆದರೆ ಅದಕ್ಕಿಂತಲೂ ಹೆಚ್ಚಿನ ಐಶ್ವರ್ಯವನ್ನು ಚೀನದ ಅರಸರ ಸಮಾಧಿಗಳಿಂದ ದುರುಳರು ಕದ್ದೊಯ್ದಿರುವರಂತೆ! ಚೀನದ ರಾಣಿ ರಾಜರನ್ನು ಹೂಳಿಡುವಾಗ ಸಮಾಧಿಯೊಳಗೆ ಅಪಾರ ಧನ, ಕನಕ ರತ್ನಗಳನ್ನು ಹಾಕಿಡುವುದು ಪದ್ಧತಿಯಿರುವುದು. ಚಕ್ರವರ್ತಿನಿ ಟ್ಸುಹ್ಸಿಯವರ ಸಮಾಧಿಯಿಂದ ಕಳೆದ ವರ್ಷವೊಂದರಲ್ಲಿಯೇ 7 ಕೋಟಿ ರೂಗಳ ಬೆಲೆಯ ನಗನಾಣ್ಯಗಳು ಕದ್ದೊಯ್ಯಲ್ಪಟ್ಟಿವೆ. ಈ ಚಕ್ರವರ್ತಿನಿಯ ಸಮಾಧಿಯೊಳಗೆ ಎಷ್ಟೊಂದು ಐಶ್ವರ್ಯವು ಹುಗಿಯಲ್ಪಟ್ಟಿರುವದೆಂಬುದು ಶೋಧಕರನ್ನು ವಿಸ್ಮಯಗೊಳಿಸಿರುವುದು. ಅವರ ಶವವು ಪೆಟ್ಟಿಗೆಯೊಳಗೆ ಹಾಕಲ್ಪಟ್ಟಾಗ ಪೆಟ್ಟಿಗೆಯ ಅಡಿಗೆ 7 ಇಂಚು ದಪ್ಪದ ಮುತ್ತು ಕುರಿದ ಬಂಗಾರದ ತಗಡು ಹಾಸಲ್ಪಟ್ಟಿದ್ದಿತು. ಮೇಲ್ಭಾಗವನ್ನು ಮುತ್ತು ಪೋಣಿಸಿದ ರೇಶ್ಮೆ ವಸ್ತ್ರದಿಂದ ಮುಚ್ಚಲಾಗಿತ್ತು. ತಲೆ ಮತ್ತು ಕಾಲುಬುಡಗಳಲ್ಲಿ ತಾವರೆ ಎಸಳಿನಂತಹ ಸುವರ್ಣ ನಗಗಳನ್ನು ಇಡಲಾಗಿತ್ತು. ಶವಪೆಟ್ಟಿಗೆಯೊಳಗೆ ಹಾಕಿದ ಸುವರ್ಣ ತಗಡಿಗೆ 10,500 ಮುತ್ತು ಕೆಂಪು, ನೀಲಿಗಳಿದ್ದುವು. 200 ಚಿಕ್ಕ ಪಚ್ಚೆಗಳಿದ್ದುವು. ಕರೆಕಾಲಿನ ಭಾಗಗಳನ್ನು ಗಟ್ಟಿ ಮಾಡಲು 4, 500, 000 ರೂಗಳೂ ತಲೆಯ ಮತ್ತು ಕಾಲುಬುಡದ ತಾವರೆ ಎಸಳುಗಳನ್ನು ಮಾಡಲು 25, 00, 000 ಮತ್ತು 24, 00, 000 ರೂಪಾಯಿಗಳು ವೆಚ್ಚವಾಗಿದ್ದುವು. ಚಕ್ರವರ್ತಿನಿಯ ಇಡೀ ದೇಹಕ್ಕೆ ಮುತ್ತು ಕುರಿದ ಸುವರ್ಣದ ಶೀರೆ ಮತ್ತು ರವಿಕೆ ತೊಡಿಸಲ್ಪಟ್ಟು ಮುತ್ತಿನ ಸರವು 9 ಸಲ ದೇಹಕ್ಕೆ ಸುತ್ತು ಹಾಕಲ್ಪಟ್ಟಿತ್ತು. ಬುದ್ಧದೇವನ 18 ಮುತ್ತಿನ ಪ್ರತಿಮೆಗಳು ಅವರ ತೋಳುಗಳಲ್ಲಿಡಲ್ಪಟ್ಟಿದ್ದುವು. ಇನ್ನು ಇಡೀ ಶವಪೆಟ್ಟಿಗೆಯನ್ನು ಭಂಗಾರ ರತ್ನಗಳಿಂದೆಲ್ಲಾ ಮುಚ್ಚಲಾಗಿತ್ತು. ಇವನ್ನೆಲ್ಲಾ ಕಳ್ಳರು ಕದ್ದು ಶವವನ್ನು ಪೆಟ್ಟಿಗೆಯಿಂದ ಹೊರಹಾಕಿದ್ದರು.

ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ನಿರಾಕರಿಸಿದ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ಯಂಗ್ ಇಂಡಿಯಾ ಪತ್ರಿಕೆಯಲ್ಲಿ "ಮುಂದಿನ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನು ಚುನಾಯಿಸಲು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಪುನಃ ಸೇರಲು ನಾನು ಕಾರಣನಾದುದಕ್ಕಾಗಿ ವ್ಯಸನಪಡುತ್ತೇನೆ. ನನ್ನ ನಿರ್ಧಾರವನ್ನು ಪುನರಾಲೋಚಿಸಬೇಕೆಂದು ಸ್ನೇಹಿತರನೇಕರು ನನಗೆ ಬರೆದಿರುತ್ತಾರೆ; ತಂತಿ ವರ್ತಮಾನಗಳನ್ನು ಕಳುಹಿಸಿರುತ್ತಾರೆ. ಅಧ್ಯಕ್ಷಗಿರಿಯನ್ನು ನಿರಾಕರಿಸಲು ಅವರಂತೆ ನಾನೂ ವ್ಯಸನಪಡುವೆನೆಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಿಚ್ಛಿಸುತ್ತೇನೆ. ಕೌನ್ಸಿಲ್ ಕಾರ್ಯಕ್ರಮದಲ್ಲಾಗಲೀ, ಸ್ಕೂಲ್ ಕಾಲೇಜು, ಕೋರ್ಟು ಮತ್ತು ಇತರ ಚಳವಳಿಗಳಲ್ಲಾಗಲೀ ನನಗೆ ನಂಬಿಕೆಯಿರುವುದಿಲ್ಲ. ಕೂಲಿಕಾರರ ಹಕ್ಕು ಭಾಧ್ಯತೆಗಳಿಗಾಗಿ ಹೋರಾಡುವುದು ಆವಶ್ಯಕವಾದರೂ, ರಾಜಕೀಯಾನುಕೂಲದ ದೃಷ್ಟಿಯಿಂದ ಪ್ರಾರಂಭಿಸಲ್ಪಡುವ ಕೂಲಿಕಾರ ಚಳವಳಿಗಳನ್ನು ನಾನು ಒಪ್ಪಲಾರೆನು. ಸಂಪೂರ್ಣ ಅಹಿಂಸೆ, ಹಿಂದೂ—ಮುಸಲ್ಮಾನ್—ಸಿಕ್ ಜೈನ—ಪಾರಸಿ—ಯಹೂದಿ—ಈಸಾಯಿಗಳಲ್ಲಿ ಒಗ್ಗಟ್ಟು, ಅಸ್ಪೃಶ್ಯನಿವಾರಣೆ ಇವುಗಳನ್ನು ನಾನು ನಂಬುತ್ತೇನೆ. ಯಾವದೊಂದು ಅಲ್ಪಸಂಖ್ಯೆಯ ಕೋಮಿನ ಪ್ರಯೋಜನಗಳನ್ನು ನಷ್ಟಮಾಡಿ ಸ್ವರಾಜ್ಯವನ್ನು ಸಂಪಾದಿಸಲು ನಾನು ಒಪ್ಪಲಾರೆನು. ನಾನು ದ್ರವ್ಯದ ಮತ್ತು ದೇಶೀಯ ಸಂಸ್ಥಾನಗಳ ದ್ವೇಷಿಯಲ್ಲ. ಖಾದಿ ಮತ್ತು ಚರಕದಲ್ಲಿ ಇನ್ನೂ ನನಗೆ ಪೂರ್ಣವಿಶ್ವಾಸವಿರುವುದು—ಇವೆಲ್ಲವನ್ನೂ ಯೋಚಿಸಿದರೆ ನನ್ನ ಅಭಿಪ್ರಾಯಗಳನ್ನು ಒಪ್ಪುವವರು ಕಾಂಗ್ರೆಸ್ ಸಭೆಯಲ್ಲಿ ಕೆಲವರು ಮಾತ್ರ ಇರುವರೆಂದು ವ್ಯಕ್ತವಾಗುವುದು. ಈ ಸಂದರ್ಭದಲ್ಲಿ ನಾನು ಅಧ್ಯಕ್ಷತೆಯನ್ನು ವಹಿಸುವುದು ಅನುಚಿತ. ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ಈ ಸಂಬಂಧವಾಗಿ ಪುನಃ ನನ್ನನ್ನು ಒತ್ತಾಯ ಮಾಡಲಾಗದೆಂದು ಪ್ರಾರ್ಥಿಸುತ್ತೇನೆ." ಎಂದು ಬರೆದಿರುತ್ತಾರೆ.

ಪ್ರಸಿದ್ಧಪತ್ರಿಕೆ.

ಮೈಸೂರು ಅರಮನೆ ಮುಜರಾಯಿ ಬಕ್ಷಿಗಳವರು
ಮ॥ ಶ್ರೀ ರಾಜಕವಿಭೂಷಣ
ಹೆಚ್. ಲಿಂಗರಾಜ ಅರಸಿನವರಿಂದ ವಿರಚಿತವಾದ

ಯದುನೃಪವಿಜಯ ಮತ್ತು ನೋಟ್ಸ್

ಎಂಬ V ತರಗತಿ (Fifth Form) ಗೆ 1928-29 ನೆ ಸಾಲಿಗೆ ಟೆಕ್ಸ್ಟ್ ಬುಕ್ಕಾಗಿ ನಿಯಮಿತವಾದ 2 ನೆ ಮುದ್ರಣ ಗ್ರಂಥದ ಬಿಕರಿ ಹಕ್ಕನ್ನು (Whole Sale Agency) ಮೂಲಕ ಮೈಸೂರು ಹಳೆಅಗ್ರಹಾರದಲ್ಲಿರುವ ಜನರಲ್ ಮರ್ಚೆಂಟ್ ಕೆಟ್ಟಪ್ಪ ಬಿನ್ ಶಿದ್ದಪ್ಪನವರು ಪಡೆದಿರುವರು. ಪುಸ್ತಕ :ಕ್ಕೆ 0-8-0 ಮೇರೆಗೆ ಈ ಕೆಳಗೆ ಕಂಡವರಿಂದ ಪಡೆದುಕೊಳ್ಳಬಹುದು.

(1) ಕೆಟ್ಟಪ್ಪ ಬಿನ್ ಶಿದ್ದಪ್ಪ,
[1] ಬೇಸಾರಿ ಮತ್ತು ಜನರಲ್ ಮರ್ಚೆಂಟ್,
ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ, ಮೈಸೂರು.

(2) SREEKANTAPPA & Sons,
Druggists, Doddapet, Bangalore City.

ಸ್ತ್ರೀಯರೂ, ಆರೋಗ್ಯವೂ.

"ಆರೋಗ್ಯ" ವೆನ್ನುವ ಮೂರಕ್ಷರದ ಮಾತಿನ ಅರ್ಥವು "ರೋಗವಿಲ್ಲದಿರುವಿಕೆ" "ದೃಢದೇಹ" ಎಂಬುದನ್ನು ಸಾಧಾರಣವಾಗಿ ಎಲ್ಲರೂ ಬಲ್ಲರು. ಹಿರಿಯರಿಗೆ ನಾವು ನಮಸ್ಕಾರ ಮಾಡಿದರೆ ಅವರು "ರೋಗವಿಲ್ಲದೆ ಬಾಳು" ಎಂದು ಮೊದಲು ಹರಿಸಿದ ನಂತರ ಪುತ್ರಸಂತಾನ-ಸಂಪದಭಿವೃದ್ಧಿ ಮೊದಲಾದ ವಿಷಯಗಳನ್ನು ಹೇಳಿ ಹರಸುವುದು ನಮಗ ಗೊತ್ತಷ್ಟೆ. ಪೂಜೆಪರ್ವಕಾಲಗಳಲ್ಲಿ ದೇವಸಾನ್ನಿಧ್ಯಗಳಲ್ಲಿಯೂ ಕೂಡ "ಸಕಲ ಜನರಿಗೂ ಸುಖವನ್ನೂ ಆರೋಗ್ಯವನ್ನೂ ಕೊಡು" ಎನ್ನುವರು. ಹಿರಿಯರು ಆಶೀರ್ವಾದಮಾಡುವುದು ವಂಶಪಾರಂಪರ್ಯವಾಗಿ ನಮ್ಮಲ್ಲಿ ರೂಢಿಗೆ ಬಂದಿದ್ದರೂ ನಾವುಗಳು ಅರ್ಥದ ವಿಮರ್ಶೆಯ ಕಡೆ ಲಕ್ಷ್ಯಕೊಡುತ್ತಲೇ ಇಲ್ಲ. ಮೇಲೆ ಹೇಳಿದ ಆಶೀರ್ವಾದದ ಅರ್ಥವು, ರೋಗರುಜಿನಗಳಿಲ್ಲದೆ ಆರೋಗ್ಯವಂತರಾಗಿಯೂ, ದೃಢದೇಹಿಗಳಾಗಿಯೂ ಇರತಕ್ಕವರಿಗೆ ಮಾತ್ರವೇ ಐಶ್ವರ್ಯದಿಂದಲೂ ಪುತ್ರಪೌತ್ರಾದಿ ಅಷ್ಟಲಕ್ಷ್ಮಿಗಳಿಂದಲೂ ಪ್ರಯೋಜನವುಂಟೆಂದು; ಹೊರತು ರೋಗದಿಂದಲೂ ಇತರ ಚಿಂತೆಗಳಿಂದಲೂ ನರಳತಕ್ಕವರಿಗೆಂದಲ್ಲ. ಆರೋಗ್ಯವೆಂಬುದಕ್ಕೆ ಪರಿಷ್ಕಾರವಾದರ್ಥವೇನೆಂಬುದನ್ನು ಹಿರಿಯರೂ ಸುಪ್ರಸಿದ್ಧ ವೈದ್ಯರೂ ಎಷ್ಟೋ ಬಗೆಯಲ್ಲಿ ಹೇಳಿರುವರು. ಆದುದರಿಂದ ಅದೇ ವಿಷಯವನ್ನು ಮತ್ತೆ ಬರೆಯುವುದಕ್ಕಿಂತ ಆರೋಗ್ಯಕ್ಕೂ ಸ್ತ್ರೀಯರಾದ ನಮಗೂ ಎಂತಹ ಸಮೀಪ ಸಂಬಂಧವುಂಟೆಂಬ ವಿಷಯವಾಗಿ ಸ್ವಲ್ಪ ತಿಳಿಸುವೆನು. ತಾಯಿಯರು ರೋಗವಿಲ್ಲದೆ ಸುಖವಾಗಿರುವುದರಿಂದ ತಂದೆಯೂ, ಮಕ್ಕಳೂ ಸುಖದೇಹಿಗಳಾಗಿರುವರೆಂಬುದು ಹಿರಿಯರ ಅಭಿಪ್ರಾಯ. ತಾಯಿಯು ಸೌಖ್ಯವಾಗಿ ಶಕ್ತಿವಂತಳಾಗಿದ್ದರೆ ರುಚಿರುಚಿಯಾದ ಆಹಾರಪದಾರ್ಥಗಳನ್ನು ಸಿದ್ಧಗೊಳಿಸಿ, ಅಂಗಡಿಯಿಂದ ತಂದ ಸಾಮಾನುಗಳಲ್ಲಿ ಹುಳುಹುಪ್ಪಟೆಗಳು ಬೀಳದಂತೆ ಮುಚ್ಚಿಟ್ಟು, ಮಕ್ಕಳಿಗೆ ಸ್ನಾನಮಾಡಿಸಿ ಶುಭ್ರವಾದ ಬಟ್ಟೆಬರೆಗಳನ್ನುಡಿಸಿ, ಪತಿಯ ದೇಹಾರೋಗ್ಯವನ್ನು ಪರಾಂಬರಿಸುವುದು ಸಾಧ್ಯವೆಂಬುದು ನಮ್ಮ ಹಿರಿಯರ ಅಭಿಪ್ರಾಯವು. ಆದರೆ ನಾಗರೀಕತೆಯ ವಾತಾವರಣದಲ್ಲಿ ಬೆಳೆದ ಈಗಿನಕಾಲದವರಾದ ನಮಗೆ ಅಡಿಗೆಮಾಡಿ ಮನೆಯವರಿಗೆ ಬಡಿಸುವುದೆಂದರೆ ಅಗೌರವವೆಂಬ, ಮಕ್ಕಳ ಪರಾಂಬರಿಕೆಯು ಹೀನಾಯವೆಂಬ ಭಾವನೆಯು ವಿಶೇಷವಾಗುಂಟಾಗಿರುವುದು. ಇದು ಪಾಶ್ಚಾತ್ಯರನ್ನನುಕರಣ ಮಾಡಿದುದರ ಫಲ. ಮಕ್ಕಳಿಗೆ ಆಹಾರ ಕೊಡಲೂ ನಿದ್ರೆಮಾಡಿಸಲೂ ಆಳುಕಾಳುಗಳ ಅವಲಂಬನವಿಲ್ಲದಿದ್ದರೆ ಸಾಗುವುದೇ ಇಲ್ಲ. ಹೀಗೆ ಮಾಡುವುದು ಮಾತ್ರವಲ್ಲದೆ "ಪುಸ್ಸಿ" "ಪಪ್ಪಿ" ಮೊದಲಾದ ಮೃಗಶಿಶುಗಳ ಮುದ್ದಾಟವೂ ಕೂಡ ಆಚರಣೆಗೆ ಬರುತ್ತಿದೆ. ಅಡಿಗೆಯವನಿಗೇ ಸಂಸಾರದ ಸಕಲ ಸ್ವಾತಂತ್ರ್ಯವನ್ನೂ ವಹಿಸಿ, ಅವನು ಹೇಗೆ ಮಾಡಿಟ್ಟಿದ್ದರೆ ಅದನ್ನೇ ಉಣ್ಣುವುದೂ ಕೂಡ ಅಭ್ಯಾಸವಾಗಿ ಹೋಗಿದೆ. ಇವೆಲ್ಲಕ್ಕೂ ಕಾರಣವು ನಾಗರೀಕತೆಯ ಅರ್ಥವನ್ನು ತಪ್ಪಾಗಿ ಮಾಡಿಕೊಂಡು, ತಮ್ಮ ಮಕ್ಕಳ ಪರಾಂಬರಿಕೆ ಮಾಡುವುದು ಅನಾಗರೀಕತೆಯ ಕುರುಹೆಂಬ ಭಾವನೆಯು ನಮ್ಮಲ್ಲಿ ಬೇರೂರಿರುವುದೇ. ಈರೀತಿ ಮನೆಕೆಲಸಗಳನ್ನು ಅಲ್ಲಗಳೆದು ಊಟಮಾಡಿ ಅದನ್ನರಗಿಸಿಕೊಳ್ಳದಿದ್ದರೆ ನಾನಾವಿಧವಾದ ರೋಗಗಳುಂಟಾಗುವುದು ಸಹಜವೇ. ಈ ಕಾರಣದಿಂದಲೇ ಅನಾದಿಕಾಲದಿಂದಲೂ ಅನೇಕ ದೈನಿಕಕಾರ್ಯಗಳು ಕಾಲಾನುಗುಣವಾಗಿ ನಿಯಮಿಸಲ್ಪಟ್ಟಿರುವವು. ಅವುಗಳನ್ನು ಮೀರುವುದು ಪ್ರಕೃತಿವಿರೋಧವೂ ಅಶ್ರೇಯಸ್ಕರವೂ ಆದುದು. ಸಾಧಾರಣವಾಗಿ ಈ ಕಾಲದಲ್ಲಿ ಮೊದಲಿಗಿಂತ ನೂತನವಾದ ಅನೇಕ ವ್ಯಾಧಿಗಳೂ, ಶಿಶುಮರಣವೂ ಹೆಚ್ಚುತ್ತಿರುವುದು ಎಲ್ಲರೂ ಅರಿತ ವಿಷಯವೇ. ಹಿಂದಿನಕಾಲದ ಹಿರಿಯರ ಲೊಬ್ಬರಾದರೂ ನಮ್ಮಂತೆ ಬಲಹೀನರೂ ರೋಗಿಗಳೂ ಆಗಿರಲಿಲ್ಲ. ಶಿಶುಮರಣವೂ ಅಕಾಲಮರಣವೂ ಹೆಚ್ಚಿರಲಿಲ್ಲ. ಅದಕ್ಕೆ ಕಾರಣವು ಪ್ರಾಚೀನ ರೀತಿ ನಡೆನುಡಿಗಳನ್ನು ಇಂದಿನವರಾದ ನಾವು ಬಿಟ್ಟುಬಿಟ್ಟಿರುವುದೇ!

ಹಿಂದಿನಕಾಲದ ರಮಣಿಯರು ಕುಟುಂಬ ನಿರ್ವಾಹಕ್ಕೆ ಸಂಬಂಧವಾದ ಎಲ್ಲ ಕಾರ್ಯಗಳನ್ನೂ ಅಂದರೆ, ಮಕ್ಕಳ ಪೋಷಣೆ, ಅತಿಥಿ ಸತ್ಕಾರ, ಪೂಜೆಪುರಸ್ಕಾರ, ಗುರುಹಿರಿಯರ ಸೇವೆ, ಮೊದಲಾದುವುಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಪ್ರಕೃತ ನಿತ್ಯನೈಮಿತ್ತಿಕವಾದ ಎಲ್ಲ ಕೆಲಸಗಳನ್ನೂ ಕೂಲಿಕೊಟ್ಟು ಮಾಡಿಸಬೇಕಾದ ಸ್ಥಿತಿಯಲ್ಲಿ ಇಂದಿನ ವಾತಾವರಣವಿರುವುದು. ಇದಕ್ಕೆ ಆಗಿದ್ದುದು "ಅನಾಗರೀಕತೆಯ ಕುರುಹಾದ ಗ್ರಾಮವಾಸ" ಎಂದು ನಾವು ಸಮಾಧಾನ ಹೇಳಬಹುದು. ಅದರಲ್ಲಿ ಅತ್ಯಲ್ಪಾಂಶವು ಸತ್ಯವಾದರೂ ನಾನಾಗಿ ಸ್ವತಃ ಮಾಡಿಕೊಳ್ಳಬಹುದಾದ ಸಲಕರಣೆಗಳನ್ನು ಅಥವಾ ಸಾಧನಗಳನ್ನು ನಗರವಾಸವು ಬೇಡವೆಂದು ಎಂದೂ ಹೇಳುವುದಿಲ್ಲ. ರಸ್ತೆಯಲ್ಲಿ ಸದಾ ಸಂಚಾರಮಾಡುತ್ತಿರುವ ಮೋಟಾರು ಬಂಡಿಗಳ ದೆಸೆಯಿಂದುಂಟಾಗುವ ಧೂಳೂ, ಜನಬಾಹುಳ್ಯದಿಂದುಂಟಾಗುವ ಕಶ್ಮಲವಾಯು ಸಂಚಾರವೂ ಇನ್ನೂ ಅನೇಕ ವಿಧವಾದ ಸೌಕರ್ಯಗಳು ಪಟ್ಟಣವಾಸದಿಂದುಂಟಾದುವೆಂದು ಒಪ್ಪಿಕೊಳ್ಳಬಹುದಾದರೂ ನಮ್ಮ ಮಕ್ಕಳ ಆರೋಗ್ಯರಕ್ಷಣೆ, ಮನೆಯಲ್ಲಿರುವ ಪಾತ್ರೆಪದಾರ್ಥಗಳನ್ನು ಶುಚಿಯಾಗಿಡುವಿಕೆ, ಬಟ್ಟೆಬರೆಗಳನ್ನು ಶುಭ್ರವಾಗಿ ಒಗೆದಿಡುವುದು—ಇವೇ ಮೊದಲಾದವುಗಳಲ್ಲಿ ನಾವು ತೋರುವ ಅನಾದರಣೆಯು ಪಟ್ಟಣವಾಸದ ಕೆಡುಕಿನಿಂದಲ್ಲ. ನಮ್ಮ ಅಜಾಗರೂಕತೆಯಿಂದಲೋ, ಸೋಮಾರಿತನದಿಂದಲೋ ಪದಾರ್ಥಗಳನ್ನು ಎಲ್ಲೆಂದರಲ್ಲಿ ಕಡೆ ಎಸೆದಿರುವುದು, ಅಡಿಗೆಯವರು ಕೆಲಸ ಮಾಡುವ ಆತುರದಲ್ಲಿ ಸಿಕ್ಕಿದ ನೀರನ್ನು ಮಾಡುತ್ತಿರುವ ಅಡಿಗೆಯಲ್ಲಿ ಸುರಿಯುವುದು, ಸೊಪ್ಪು ಮೊದಲಾದ ಕಾಯಿಪಲ್ಯಗಳಲ್ಲಿರತಕ್ಕ ಹುಳು ಹುಪ್ಪಟೆಗಳನ್ನು ನೋಡದೆ ಹೆಚ್ಚಿ ಪಲ್ಯ ಹುಳಿಮಾಡುವುದು, ಇನ್ನೂ ಅನೇಕ ಅಕ್ರಮಗಳನ್ನು ಅಡಿಗೆಯವರು ಮಾಡಲವಕಾಶಕೊಟ್ಟು ಅದನ್ನು ನಾವು ಸ್ವಲ್ಪವೂ ಗಮನಿಸದಿರುವುದು, ಇವುಗಳೆಲ್ಲವೂ ಪಟ್ಟಣವಾಸದ ಪ್ರಭಾವವೆಂದು ಹೇಳಲಾಗುವುದೇ? ಮನೆಗೆಲಸಗಳನ್ನು ಆಳುಕಾಳುಗಳಮೇಲೆ ಹೊರಿಸಿ ವ್ಯಾಯಾಮಕ್ಕೆಂದು ಪ್ರಾತಃಕಾಲ ಸಂಧ್ಯಾಸಮಯಗಳಲ್ಲಿ ವಾಯುಸೇವನೆಗೆಂದು ಗಾಡಿಯಲ್ಲಿ ಹೊರಟು, ಕೆಳಗಿಳಿದು ನಡೆಯದೆಯೇ ಗಾಡಿಯಲ್ಲಿ ಹೋಗಿ ಗಾಡಿಯಲ್ಲಿ ಮನೆಗೆ ಬರುವುದು ಶರೀರಕ್ಕೆ ಯಾವ ಪ್ರಯೋಜನವನ್ನು ತಾನೇ ಕೊಟ್ಟೀತು? ಇದನ್ನೂ ಪಟ್ಟಣವಾಸದ ಪ್ರಾದುರ್ಭಾವವೆನ್ನುತ್ತೇವೆ!

ನಾವು ಯಾವ ಪದ್ಧತಿಗಳನ್ನು 'ಕಂದಾಚಾರ' ನೆಂದು ಅಲ್ಲಗಳೆಯುತ್ತೇವೆಯೋ, ಆ ಪದ್ಧತಿಗಳಲ್ಲಿ ಕೆಲವು ಹೊರತು ಉಳಿದವುಗಳೆಲ್ಲವೂ ತತ್ವಶಾಸ್ತ್ರಕ್ಕನುಸರಿಸಿಯೇ ಏರ್ಪಡಿಸಲ್ಪಟ್ಟಿರುವವು. ಕಣ್ಣಿಗಾನಂದವುಂಟುಮಾಡುವ ಕೆಂಪುಬಣ್ಣವುಳ್ಳ "ಕುಂಕುಮ" ವು ಸುಣ್ಣ ಬಿಳಿಗಾರ ಮೊದಲಾದವುಗಳನ್ನು ಸೇರಿಸಿ ಮಾಡಲ್ಪಟ್ಟಿರುವುದು. ಇದನ್ನು ಹುಬ್ಬಿನ ಮಧ್ಯೆ ಧರಿಸುವುದರಿಂದ ಮೂಳೆಗಳಿಗೆ ಬಲವನ್ನು ಕೊಡುವುದೆಂದು ಕೆಲವರು ಹೇಳುವರು. ಅರಶಿನ ಹಚ್ಚುವುದೂ ಕೂಡ ಶೀತವಾಗದಿರಬೇಕೆಂಬ ಅಭಿಪ್ರಾಯದಿಂದಲೇ ಇರಬಹುದೇನೋ? ಮಕ್ಕಳಿಗೆ ನೆಗಡಿಯಾದರೆ ಅರಶಿನದ ಪಟ್ಟು ಹಾಕುತ್ತಾರೆಯಲ್ಲವೇ! ನಮ್ಮ ದೇಹಾರೋಗ್ಯಕ್ಕೆ ಸಂಬಂಧಿಸಿದ ವಸ್ತುಗಳನ್ನು ದೇವರಿಗೆ ಅರ್ಪಿಸಿ, ಶುಕ್ರವಾರ ಮಂಗಳವಾರಗಳಲ್ಲಿ ಕುಂಕುಮ ಅರ್ಚನೆ, ಅಭಿಷೇಕ, ಪೂಜೆ ಮೊದಲಾದವುಗಳನ್ನು ಮಾಡಿಸುವುದರಿಂದ ದೇವರಿಗೆ ತೃಪ್ತಿಯಾಗುವದೆಂದು ನಾವು ನಂಬುತ್ತೇವೆಯೋ ಹೊರತು ಅವು ಆರೋಗ್ಯ ಸಂಬಂಧವಾದವುಗಳೆಂಬುದನ್ನು ನಾವು ನಂಬುವದಿಲ್ಲ. ಇದರಂತೆಯೇ ನಮ್ಮ ದಿನಚರ್ಯೆಗಳೆಷ್ಟೋ ವೈದ್ಯಶಾಸ್ತ್ರವನ್ನನುಸರಿಸಿಯೇ ವಿಧಿಸಲ್ಪಟ್ಟಿರುವವು. ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸುತ್ತ ಹೋಗುವದಸಾಧ್ಯ. ವಿದ್ಯಾವಂತರಾದವರಿಗೆ ಮಾತ್ರ ವಿಚಕ್ಷಣೆಯಿಂದ ಗೃಹಕಾರ್ಯನಿರ್ವಾಹಮಾಡುವುದಕ್ಕೆ ಬರುವುದೆಂಬ ಅಭಿಪ್ರಾಯದಿಂದ ಶಾಲೆಗಳಲ್ಲಿ "ಗೃಹಕಾರ್ಯನಿರ್ವಾಹ" (Domestic Economy) ಎಂಬ ಹೆಸರಿನಿಂದ ಗ್ರಂಥಗಳ ಮೂಲಕ ಶಿಕ್ಷಣಕೊಡುವರು. ಅವುಗಳನ್ನು ಓದಿದವರಿಗೆ ಮಾತ್ರ ಕುಟುಂಬ ನಿರ್ವಾಹಮಾಡಲು ಬರುವುದೆಂಬುದು ನಮ್ಮಗಳ ಅಭಿಪ್ರಾಯ. ನಮ್ಮ ಹಿರಿಯರು ಈ ವಿಷಯಕ್ಕೆ ಸಂಬಂಧಿಸಿದ ಆವಗ್ರಂಥಗಳನ್ನು ಓದಿದರು? ಅವರ ಶಕ್ತಿಯೂ, ದೃಢತ್ವವೂ ನಮಗುಂಟೇ? ಕುಟುಂಬ ನಿರ್ವಾಹವು ಸ್ತ್ರೀಯರ ಹುಟ್ಟುಗುಣ, ಪಾಕಗೃಹವೇ ಅವರ ವಿಶ್ವವಿದ್ಯಾನಿಲಯ ಹಸುವಿನ ಕೊಟ್ಟಿಗೆಯೇ ಅವರಿಗೆ ಜೀವಕಾರುಣ್ಯವನ್ನು ಬೋಧಿಸುವ ಶ್ರೇಷ್ಠ ಗ್ರಂಥಭಂಡಾರ. ಅತಿಥಿಸತ್ಕಾರ, ವಿವಿಧರಂಗವಲ್ಲಿಗಳಿಂದ ಗೃಹವನ್ನಲಂಕರಿಸುವುದು, ರುಚಿರುಚಿಯಾದ ಪಾಕಗಳನ್ನು ಸಿದ್ಧಗೊಳಿಸುವುದು, ದೇವ, ದೇಶ ಇವುಗಳ ಪೂಜೆ ಇವುಗಳು ಅವರೊಪ್ಪಿಸುವ ಪಾಠಗಳು! ಇವುಗಳೆಲ್ಲವೂ ಬಾಲ್ಯದಿಂದಲೇ ಅವರಿಗಭ್ಯಾಸವಾಗುತಿದ್ದುದರಿಂದಲೂ. "ಆರೋಗ್ಯ ಮತ್ತು ಧರ್ಮ" ವೆನ್ನುವ ಎರಡು ಅಮೂಲ್ಯಾಭರಣಗಳು ಕೈಶವದಿಂದಲೂ ಅವರ ದೇಹಕಾಂತಿಯನ್ನು ಹೆಚ್ಚಿಸಿ, ಕೀರ್ತಿವಂತರಾಗಿಯೂ, ತೇಜಸ್ವಿಗಳಾಗಿಯೂ ಬೆಳಗುತ್ತಿದ್ದರು. ಅವರಿಗೆ ಒಂದೊಂದೂ ಕೆಲಸವೂ ದಲು ಆಳುಗಳಿರಲಿಲ್ಲ. ರಾಮಾಯಣ ಭಾರತಾದಿ ಗ್ರಂಥಗಳಲ್ಲಿ ಕೂಡ ಆಗಿನಕಾಲದ ಸ್ತ್ರೀಯರು ಕುಟುಂಬಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನೂ ಸ್ವತಃ ಮಾಡುತಿದ್ದರೆನ್ನುವುದಕ್ಕೆ ಸಾಕಾದಷ್ಟು ನಿದರ್ಶನಗಳಿವೆ. ಹೀಗೆ ಬರೆಯುವುದರಿಂದ ದಾಸದಾಸಿಯರನ್ನೂ ಅವರಿಗಾಶ್ರಯಕೊಡುವ ಪುಣ್ಯವಂತರನ್ನೂ ಅವಹೇಳನ ಮಾಡಿದ್ದಾಗಿ ನನ್ನ ಸಹೋದರಿಯರು ತಿಳಿಯಬಾರದು. ಅಂತಹ ಎಷ್ಟೇ ಅನುಕೂಲಗಳನ್ನು ಭಗವಂತನು ಕೊಟ್ಟಿದ್ದಾಗ್ಯೂ ದೇಹಾರೋಗ್ಯವನ್ನು ಕೊಡುವಷ್ಟು ಕೆಲಸಗಳನ್ನು ಸ್ವತಃ ಮಾಡಿಕೊಳ್ಳುವದರಿಂದ ವೈದ್ಯರಿಗೆ ತೆರುವ ಹಣದಲ್ಲಿ ಬಹುಭಾಗ ಉಳಿಯುವುದು. ಆರೋಗ್ಯಭಾಗ್ಯವನ್ನು ಪಡೆದು ದೃಢಕಾಯರಾದ ಸಂತಾನದಿಂದಕೂಡಿದ ನವಚೈತನ್ಯಭರಿತವಾದ ನೂತನ ಜನಾಂಗದ ಸಿದ್ಧತೆಯನ್ನು ಮಾಡುವುದು ಪ್ರತಿಯೊಬ್ಬ ತಾಯಿಯರ ಪವಿತ್ರವಾದ ಆದ್ಯ ಧರ್ಮವಾಗಿರಬೇಕೆಂಬ ಉದ್ದೇಶದಿಂದಲೇ ಇಷ್ಟನ್ನೆಲ್ಲಾ ಬರೆದಿರುವೆನು. ಆದುದರಿಂದ ಅನುಕೂಲತೆಯುಳ್ಳ ನನ್ನ ಪೂಜ್ಯ ತಾಯಿತಂಗಿಯರ ಕ್ಷಮೆಯನ್ನು ನಾನು ಕೇಳಿಕೊಳ್ಳುವೆನು. ಇಂತಹ ತಾಯಿತಂಗಿಯರ ಅನುಕರಣವು ಎಲ್ಲ ಕುಟುಂಬಗಳಲ್ಲಿಯೂ ಧಾರಾಳವಾಗಿ ಪ್ರವೇಶಿಸಿ ಜನಾಂಗದ ಆರೋಗ್ಯವನ್ನು ಹಾಳುಮಾಡುತ್ತಿದೆ. ನಿವೃತ್ತಿಯಿಲ್ಲದವರು ಮೇಲ್ಕಂಡ ಅನುಕೂಲಗಳನ್ನು ಪೇಕ್ಷಿಸದರೂ ಭಗವದ್ದತ್ತವಾದ ದೇಹಾರೋಗ್ಯವಿರುವವರೂ ಅವರನ್ನೇ ಅನುಸರಿಸುವದು ಹುಚ್ಚುತನ. ನಾಗರಿಕತೆಯ ಅನುಕರಣವು ಅನುಕೂಲಸ್ಥರಿಗೆ, ಅವರನುಕರಣವು ಮಧ್ಯಮತರಗತಿಯವರಿಗೆ ಈ ಅನುಕರಣದಿಂದಲೇ ನಾವು ಹಾಳಾಗುತ್ತಿದ್ದೇವೆ. ಕುಟುಂಬದ ಆರೋಗ್ಯವು ಬಹುಮಟ್ಟಿಗೆ ತಾಯಿತಂಗಿಯರಾದ ನಮ್ಮನ್ನೇ ಅವಲಂಬಿಸಿರುವುದರಿಂದ ನಾವು ಎಷ್ಟೇ ಕಷ್ಟಪಟ್ಟಾದರೂ ಅದನ್ನು ರಕ್ಷಿಸುವ ಪ್ರಯತ್ನವಾಡಬೇಕಾದುದು ನಮ್ಮ ಕರ್ತವ್ಯವು. ಮದರಾಸಿನಲ್ಲಿರುವ ಸುಪ್ರಸಿದ್ಧ ಕ್ಷಯರೋಗ ವೈದ್ಯರಾದ ಡಾಕ್ಟರ್ "ಮುತ್ತು" ಎಂಬವರು ದೇಶದ ಕುಟುಂಬದ ಆರೋಗ್ಯರಕ್ಷಣದ ಕಡೆಗೆ ನನ್ನ ತಾಯಿತಂಗಿಯರ ಪೂರ್ಣ ಗಮನಕೊಡಲ್ಪಟ್ಟಿತೆಂದರೆ ಅಂದಿನಿಂದ ವೈದ್ಯರಾದ ನಮ್ಮ ಅವಶ್ಯಕತೆಯೇ ಇಲ್ಲದಂತಾಗಿ ನಮಗೆ ಕೆಲಸವೇ ಇಲ್ಲದೇ ಹೋಗುವುದು. ಅಂತಹ ದಿನವನ್ನು ಬಹುಬೇಗ ಬರಿಸುವಂತೆ ಮಾಡಬೇಕೆಂದು ತಾಯಿತಂಗಿಯರನ್ನು ಕೈಮೋಡಿಸಿ ಬೇಡುವೆನು ಎಂದು ಹೇಳುವರು. ಅವರ ಉದ್ದೇಶವನ್ನು ಜನಾಂಗದ ತಾಯಿತಂಗಿಯರಾದ ನಾವು ಸಫಲಗೊಳಿಸುವ ಸುದಿನವನ್ನು ಜಗತಿಯು ಬೇಗ ಕೊಡಲೆಂದು ಪ್ರಾರ್ಥಿಸುವೆನು.

(ಸರಸ್ವತಿ).

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಷ್ಮೆವಸ್ತ್ರಗಳು

ರೇಷ್ಮೆವಸ್ತ್ರ—೧ ನೇ ನಂ. ಕೊಲ ೧ಕ್ಕೆ ೮ ಆ.
ರೇಷ್ಮೆಮುಗುಟ—೧ ನೇ ನಂ. ಕೊಲ ೧ಕ್ಕೆ ೯ ಆ.
ರೇಷ್ಮೆ ಕೈವಸ್ತ್ರ—ಬಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಖರ್ಚು ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [22]

ಎಂ. ಎಸ್. ಗಂಗಂಣ ಮತ್ತು ಲೋಕಂಣ
ರೇಷ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿಮೋನಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥೆ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.

[6] ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಭಗಿನಿಯರೆ! ನೀವು ಅವಶ್ಯವಾಗಿ ಓದಬೇಕಾದ ಪುಸ್ತಕ

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ.

ಕ್ರಯ ೬ ಆಣೆ. ಅಂಚೆವೆಚ್ಚ ೧ ಆಣೆ.

ಡಾಕ್ಟರ್ ರಾಮರಾಯರಿಂದ ರಚಿಸಲ್ಪಟ್ಟು, ಸುಮಾರು ನೂರು ಪುಟಗಳನ್ನೊಳಗೊಂಡ ಸಚಿತ್ರವಾದ ಈ ಪುಸ್ತಕದಲ್ಲಿ ನಿಮ್ಮ ಗರ್ಭದಶೆಯಲ್ಲಿಯೂ, ಪ್ರಸವಕಾಲದಲ್ಲಿಯೂ, ಅನಂತರದಲ್ಲಿಯೂ ನಿಮಗೆ ಸುಖಪ್ರಸವವನ್ನೂ, ನಿಮ್ಮ ಮತ್ತು ನಿಮ್ಮ ಶಿಶುವಿನ ದೇಹಾರೋಗ್ಯವನ್ನೂ ಪಡೆಯಲು ಅವಶ್ಯಕವಾದ ಸೂಚನೆಗಳು ತಿಳಿಗನ್ನಡದಲ್ಲಿ ಸಚಿತ್ರವಾಗಿ ಕೊಡಲ್ಪಟ್ಟಿವೆ.

ನಿಮ್ಮಲ್ಲಿ ಅನೇಕರು ತಿಳಿವಳಿಕೆಯಿಲ್ಲದೆ ಮೇಲ್ಕಂಡ ಸಮಯಗಳಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಬಿಟ್ಟು ಅನೇಕ ಅಪಾಯಗಳಿಗೂ, ತೊಂದರೆಗಳಿಗೂ ಗುರಿಯಾಗುವಿರಿ. ತಾತ್ಕಾಲಿಕ ಸುಲಭ ಚಿಕಿತ್ಸಾಕ್ರಮಗಳಿಂದ ನಿಮ್ಮನ್ನು ಅಂಥ ತೊಂದರೆಗಳಿಂದ ತಪ್ಪಿಸುವುದೇ ಈ ಪುಸ್ತಕದ ಉದ್ದೇಶವು.

ಸಮರ್ಥ ವೈದ್ಯರ ಮತ್ತು ದಾದಿಯರ ಸಹಾಯವು ದೊರಕದ ಕುಗ್ರಾಮಗಳಲ್ಲಿರತಕ್ಕವರಿಗೆ ಈ ಪುಸ್ತಕವು ಅನುಕೂಲ್ಯವಾಗಿರುವುದು.

ಗರ್ಭದ ಸೂಚನೆಗಳು, ಗರ್ಭಿಣಿಯರ ದೇಹಾರೋಗ್ಯರಕ್ಷಣೆ, ಗರ್ಭಕಾಲದಲ್ಲಿ ಕಾಣಿಸಬಹುದಾದ ವ್ಯಾಧಿಗಳು, ಗರ್ಭಕ್ಕೆ ಸಂಭವಿಸಬಹುದಾದ ಅಪಾಯಗಳು, ಪ್ರಸವಕಾಲದಲ್ಲಿ ಶುಚಿತ್ವಪದ್ಧತಿಗಳು, ಸೂತಿಕಾದಿನಗಳಲ್ಲಿ ಒದಗಬಹುದಾದ ಅಪಾಯಗಳು, ಶಿಶುವಿನ ಉಪಚಾರ ಮತ್ತು ಶಿಶುವಿಗೆ ಆಹಾರವನ್ನು ಕೊಡುವ ಕ್ರಮಗಳು, ಇವೇ ಮುಂತಾದ ಅನೇಕ ವಿಷಯಗಳು ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿವೆ.

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್. ಎಮ್. ಎಲ್. ಸಿ. ಮದರಾಸು, "ಮುದ್ದಾದ ಈ ಸಣ್ಣಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಹಿಂದೂಪತ್ರಿಕೆ:—4-4-28. "ಆನರಬಲ್, ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, ನಮ್ಮ ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ ಓದಿಯೇ ತೀರಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಜನಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಿಂದ ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಿ ಬರೆಯಲ್ಪಟ್ಟಿವೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳುವಳಿಕೆಯಿಲ್ಲದುದರಿಂದ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಈ ಪುಸ್ತಕವನ್ನೋದಿ ತಿಳಿದಿದ್ದರೆ ಅಂತಹ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನಪೇಕ್ಷಿಸತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

☞ ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮನಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [13]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323, ತಂಬುಚೆಟ್ಟಿ ಬೀದಿ, **ಮದರಾಸು.**

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜೆ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕಾರ ದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋದು, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋದು, ಪಿತ್ತವಿಕಾರ ನಿದ್ರೆಯು ಬಾರದೆ ಇರೋದು ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಪೌಷ್ಟಿಕ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಕಾಲಿಮುಕಂದ, ಮಧುಕಂದ, ಜಸಾಕಂಧ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸಿವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸವೇಲೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಪಮಪತ್ರಿ, ಪಿಕಾಪತ್ರಿ, ಮದನಮಸ್ತ, ಲಾಸಪುರುಸ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಬಮಿಶ್ರಿ, ಸಫೇತಮಿಶ್ರಿ, ಕಾಲೀಮುಖಾನಾ, ಬೀಜಬಂದ, ಹರಣಬೋರಿ, ಮುಂಗಲೀಪೀವಾಣಿ, ಮರ್ದಪೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ನಾಕೇರಿಭಾತಾ, ಗೋಖರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಮಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಾಯಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧಿ, ಕ್ರಿಮಿ, ಶ್ವಾಸಬಾರದಿರೋದು, ದಮ್ಮುರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [11]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬುಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರಸವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹನಾಶಕಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ ಸಾ. ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[24] (೮೪೮) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವ ವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನು ಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧಕತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ಶಿವತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮರ್ಶಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಅಲ್ಪಬೆಲೆ! ಅಧಿಕ ಲಾಭ!!

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆಯ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,

[4] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಬಹು ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪೦-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೫ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[13] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಸೆಪ್ಟಂಬರ್ ೧೯೨೯ [ಸಂಚಿಕೆ ೨೧.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದ್ದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವಿವಾಹಮಹೋತ್ಸವ.

ತುಮಕೂರು ತಾ|| ಬೆಳ್ಳಾವೆಯಲ್ಲಿರುವ ಗುರಗಂಜಿಹಳ್ಳಿಮಠದ ವೇ|| ಗಂಗಾಧರ ಶಾಸ್ತ್ರಿಗಳವರ ಪುತ್ರಿ ಚಿ|| ಸೌ|| ಹ|| ಕುಂ|| ಶೋಭಿತೆಯಾದ ಸ್ವರ್ಣಗಂಗಾಂಬಿಕೆಯೆಂಬ ಕನ್ಯಾರತ್ನವನ್ನು ಗುಬ್ಬಿಯಲ್ಲಿರುವ ತುಮಕೂರು ಗಂಟೇದೇವರ ಮಠದ ವೀರಪ್ಪಶಾಸ್ತ್ರಿಗಳವರ ಪುತ್ರರಾದ ವೇ|| ಕೀರ್ತನಕೇಸರಿ ಶಿವರುದ್ರಶಾಸ್ತ್ರಿಗಳವರಿಗೆ ಕೊಟ್ಟು, ಕಳೆದ ಭಾದ್ರಪದ ಶು|| ೯ ರಲ್ಲಿ ಪಾಣಿಗ್ರಹಣಮಹೋತ್ಸವವು ಪಂಚಕಲಶಸ್ಥಾಪನಾಪೂರ್ವಕವಾಗಿ, ಬೆಳ್ಳಾವೆಯಲ್ಲಿ ಅತ್ಯಂತವಿಜೃಂಭಣೆಯಿಂದ ವೇ|| ಮಾಜಿ|| ಪಟ್ಟದ ರುದ್ರದೇವರು ಹಾಲನೂರು ಪುಟ್ಟಾರಾಧ್ಯರು ಬೆಳ್ಳಾವೆ, ಈ ಉಭಯರ ಮುಂದಿಯರ ಕಾರ್ಯದಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಆಹ್ವಾನಿಸಲ್ಪಟ್ಟ ಪ್ರಕಾರ ಈ ವಿವಾಹಮಹೋತ್ಸವ ಸಮಾರಂಭದ ಶುಭಸಮಯದಲ್ಲಿ ವೈದಿಕನುಹೋದಯರೂ, ಲೌಕಿಕಪದವೀಧರರೂ ಕೀರ್ತನಕಾರರೂ, ಬಂಧುಮಿತ್ರರೂ ಸಹ ಆಗಮಿಸಿದ್ದು ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರು ನೂತನ ವಧೂವರರಿಗೆ ಚಿರಾಯುರಾರೋಗ್ಯೈಶ್ವರ್ಯಾದಿಗಳನ್ನೀಯಲೆಂದು ಪ್ರಾರ್ಥಿಸಿದ ಬಳಿಕ ಪಂಚಾಚಾರ್ಯ ಪ್ರಭಾ ಪತ್ರಿಕಾಪೋಷಣಾರ್ಥವಾಗಿ ವಧೂವರರಿಂದ ಎರಡು ರೂಪಾಯಿಗಳು ಸಮರ್ಪಿಸಲ್ಪಟ್ಟಿತು. ಲೋಕಪ್ರಸಿದ್ಧ ಗುಬ್ಬೀ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕಸಂಘದ ಯಜಮಾನರಾದ ವಿನೋದರತ್ನಾಕರ ಶ್ರೀಯುತ ಜಿ. ಎಚ್. ವೀರಣ್ಣನವರು ತಮ್ಮ ನಾಟಕಸ್ಥಾಪಕರಾದ ವೇ|| ಗುಬ್ಬೀ ವೀರಪ್ಪಶಾಸ್ತ್ರಿಗಳ ಪುತ್ರರಾದ, ಕೀರ್ತನಕೇಸರಿ ಶಿವರುದ್ರಶಾಸ್ತ್ರಿಗಳ ಈ ವಿವಾಹಮಹೋತ್ಸವಕ್ಕಾಗಿ ಪರಮ ಸಂತೋಷದಿಂದ ಎರಡು ನೂರು ರೂಪಾಯಿಗಳನ್ನು ಸಹಾಯಮಾಡಿ ತಮ್ಮ ಸ್ವಭಾವಾದ ಗುರುಭಕ್ತಿಯನ್ನು ಪ್ರಕಾಶಗೊಳಿಸಿರುವುದು ಸ್ತುತ್ಯವೇ ಸರಿ.

ಯು. ಗ. ವಿ ಬಸೆಟ್ಟೆಪ್ಪ, ಬೆಳ್ಳಾವೆ.

ದುಃಖವಾರ್ತೆ.

ಮ|| ರಾ|| ಕಿನ್ನಾಳು ಅಕ್ಕಿ ಕೊಟ್ರಪ್ಪನವರ ಧರ್ಮಪತ್ನಿಯಾದ ಕುಂಕುಮ ಸೌಭಾಗ್ಯವತಿ ಗಂಗಮ್ಮನವರು ಬಳ್ಳಾರಿಯಲ್ಲಿ ಕಳೆದ ತಿಂಗಳು ಶ್ರಾವಣ ಬ|| ೪ ಶನಿವಾರ ದಿನಸ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ವ್ಯಸನವಾಗುತ್ತದೆ. ಇವರು ೧೯ನೇ ವಯಸ್ಸಿನವರಾದಾಗ್ಯೂ ಪತಿವ್ರತಾಶೀಲರಾಗಿಯೂ ಪತಿಯಾಜ್ಞಾಧುರಂಧರರಾಗಿಯೂ ಗುರುಲಿಂಗಜಂಗಮಪೂಜಾನಿರತರಾಗಿಯೂ ಲಿಂಗಪೂಜಾಪರಾಯಣರಾಗಿಯೂ ಇದ್ದರು. ಅವರು ಮರಣಸಮಯದಲ್ಲಿ ಎಡಬಿಡದೆ ಪಂಚಾಕ್ಷರೀಸ್ಮರಣೆ ಮತ್ತು ಪರಮಾತ್ಮನ ಧ್ಯಾನಮಾಡುತ್ತಿದ್ದರಲ್ಲದೇ ಯಾರ ಆಶೆಯೂ ಸಹಾ ಇಲ್ಲದೆ ದಾನಧರ್ಮಾದಿಗಳನ್ನು ಮಾಡಿ ಆತ್ಮಸುಖವನ್ನು ಪೇಕ್ಷಿಸುತ್ತಿದ್ದುದನ್ನು ನೋಡಿದರೆ ಇವರ ಹೃದಯವು ಎಷ್ಟು ಪವಿತ್ರವಾಗಿತ್ತೆನ್ನುವದು ತಿಳಿಯಬರುವದು. ಇಂಥವರ ವಿಯೋಗದಿಂದ ಉಂಟಾದ ಅವರ ಪತಿ ಪುತ್ರ ಮಾತೃಗಳ ಮನೋದುಃಖವನ್ನು ಪರಮಾತ್ಮನು ಹೋಗಿಸಿ ಅವರ ಆತ್ಮಕ್ಕೆ ಸುಖವನ್ನೀಯಲೆಂದು ಆ ಭಗವಂತನನ್ನು ಪ್ರಾರ್ಥಿಸುವ.

ಕೆ. ಎಂ. ಮರೆಯ್ಯ, ಬಳ್ಳಾರಿ.

ನೋಟೀಸ್.

ವೈದಿಕ ಪಂಡಿತರು ಬೇಕಾಗಿದೆ.

ನಮ್ಮ ಕಾಲೇಜಿನಲ್ಲಿ ವೈದಿಕಾಭ್ಯಾಸವನ್ನು ಮಾಡಿಸಲಿಕ್ಕೆ ಒಬ್ಬ ವೈದಿಕ ಪಂಡಿತರು ಬೇಕಾಗಿದ್ದಾರೆ. ಮೈಸೂರು ಪದ್ಧತಿಯಂತೆ ವೇದಾಭ್ಯಾಸವು ಆಗತಕ್ಕದ್ದು. ಪಗಾರವು ಯೋಗ್ಯತೆಯ ಮೇಲಿನಿಂದ ಅರ್ಜಿಯನ್ನು ಮಾಡಿಕೊಳ್ಳತಕ್ಕವರು ತಾ|| 20-10-29 ಅಕ್ಟೋಬರ್ ಇಪ್ಪತ್ತನೆಯ ತಾರೀಕಿನೊಳಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು ಪತ್ರವ್ಯವಹಾರ ಮಾಡತಕ್ಕವರು ಕೆಳಗಿನ ಸಹಿಗೆ ಮಾಡಿರಿ.

ಪ್ರಸಿಡೆಂಟರು,

ಶಂಕರ ಕಾಲೇಜು ಯಾದಗಿರಿ.

ಸ್ವೀಕಾರ.

ಶ್ರೀ ಮಹಾಕೂಟ ಕ್ಷೇತ್ರದಲ್ಲಿ ನೆರವೇರಿಸಿದ ಸಹಸ್ರ ಗಣಾರಾಧನೆಯ ಸಮಯದಲ್ಲಿ ತೆಗೆಯಿಸಿದ 2 ರೂಪಾಯಿಗಳು ಅಜೂರು ಪಂಚಾಚಾರ್ಯರ ಭಜನಾ ಮ ಸೇವಾಸಂಘದ ಸೆಕ್ರೆಟರಿಗಳಾದ ಮ|| ರಾ|| ಗದಿಗೆಪ್ಪಾ ಬೀರಸೂರು ಇವರ ದ್ವಾರಾ ತಲ್ಪಿರುತ್ತವೆ.

ತುಂಕೂರು ತಾ|| ಬೆಳ್ಳಾವೆಯಲ್ಲಿರುವ ಗುರಗಂಜಿಹಳ್ಳೀ ಮಠದ ವೇ|| ಗಂಗಾಧರಶಾಸ್ತ್ರಿಗಳ ಪುತ್ರಿ ಚಿ|| ಸೌ|| ಸ್ವರ್ಣಗಂಗಾಂಬಿಕೆಯನ್ನು ಗುಬ್ಬಿಯಲ್ಲಿರುವ ತುಮಕೂರು ವೇ|| ಗಂಟೇದೇವರ ಮಠದ ವೀರಪ್ಪಶಾಸ್ತ್ರಿಗಳ ಪುತ್ರರಾದ ವೇ|| ಕೀರ್ತನಕೇಸರಿ ಶಿವರುದ್ರಶಾಸ್ತ್ರಿಗಳಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ವಧುವಿನಕಡೆಯಿಂದ ತೆಗೆಯಿಸಿದ 1 ರೂ. ಮತ್ತು ವರನಕಡೆಯಿಂದ ತೆಗೆಯಿಸಿದ 1 ರೂ. ಒಟ್ಟು 2 ರೂಪಾಯಿಗಳು ಮ|| ರಾ|| ಯು|| ಗ|| ವಿ|| ಬಸೆಟ್ಟೆಪ್ಪ ಬೆಳ್ಳಾವೆ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡಜಿಲ್ಲಾ ಶಿಗ್ಗಾಂವಿ ಪೋಸ್ಟು ಬನ್ನೂರು ವಾಸಿಗಳಾದ ಮ|| ರಾ|| ಮಹಾದೇವಪ್ಪಾ ಧರ್ಮಪ್ಪಾ ಅಗಡಿ ಇವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ರವಾನಿಸಿರುತ್ತಾರೆ.

ಸೊಲ್ಲಾಪುರ ಜಿ|| ಬೋರಾಮಣಿಯಲ್ಲಿ ನೆರವೇರಿಸಿದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಭಜನೆ ಮತ್ತು ಉತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ದೊಡ್ಡಯ್ಯಸ್ವಾಮಿಗಳು ಹಿರೇಮಠದ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿ|| ರೋಣ ತಾ|| ಜಿಲೇರಿ ಗ್ರಾಮದ ವೇ|| ಗುರಯ್ಯನವರು ತಮ್ಮ ಪುತ್ರಿ ಚಿ|| ಸೌ|| ವೀರವ್ವನ ಲಗ್ನದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಶಿವಲಿಂಗಾರ್ಯ ಗುರುಸ್ವಾಮಿಮಠ ಗದಗ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ವಿಚಾರಣೆಯಲ್ಲಿ ನಡೆಯುತ್ತಿರುವ ಲಾಹೋರಿ ಮೊಕದ್ದಮೆಗಳಲ್ಲಿ ಅಪರಾಧಿಕರಾಗಿದ್ದು ಅರವತ್ತುಮೂರು ದಿವಸಗಳ ಉಪವಾಸವನ್ನು ಮಾಡಿ ಸ್ವರ್ಗಸ್ಥರಾದ ಶ್ರೀಯುತ ಜತೀಂದ್ರನಾಥ ದಾಸರವರ ಸ್ಮಾರಕ ದಿನವನ್ನು ಮೈಸೂರು ಪ್ರಜೆಗಳ ಕಾಂಗ್ರೆಸ್ ಮತ್ತು ಮೈಸೂರು ಸಂಸ್ಥಾನದ ಯುವಕರ ಸಂಘ ಇವುಗಳ ಪರವಾಗಿ ಬೆಂಗಳೂರು ಸಿಟಿಯಲ್ಲಿರುವ ಗಾಂಧೀ ಮೈದಾನದಲ್ಲಿ 18 ನೇ ತಾರೀಖು ಬುಧವಾರ ಸಾಯಂಕಾಲ 6 ಘಂಟೆಗೆ ಸೇರಿತ್ತು.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಮಹಾಕೂಟ ಕ್ಷೇತ್ರದಲ್ಲಿ ಸಹಸ್ರ ಗಣಾರಾಧನೆಯ ಅನ್ನಸಂತರ್ಪಣೆಯು.

"ನಭವತಿ ಸಮತುಲ್ಯಂ ಅನ್ನದಾನಸಮಾನಂ" ಎಂಬುಕ್ತಿಯಂತೆ ಏಕಕಾಲಕ್ಕೆ ಏಕಪಂಕ್ತಿ ಸಹಸ್ರ ಗಣಾರಾಧನೆಯನ್ನು ಆರಂಭಿಸಿ ಅಂತರಾತ್ಮನ ಪ್ರಸನ್ನತೆಯನ್ನು ಹೊಂದುವ ಉತ್ಕಟೇಚ್ಛೆಯು ಅಂಕುರಿಸಿ ಹೊಳೆಆಲೂರ ಭಕ್ತಗಣವು ಬೆಳವಣ್ಕಿ ಕುರ್ಲಗೇರಿ ಹಿರೇಮಠದ ಮೃತ್ಯುಂಜಯಶಾಸ್ತ್ರಿಗಳನ್ನು ಬರಮಾಡಿಕೊಂಡು ಮಾಡಿದ ಸಂಕಲ್ಪವನ್ನು ಅವರಿಗೆ ಅರುಹಲು ಅವರು ಪರಮಮಂಗಲಕರವೂ, ಇಷ್ಟಾರ್ಥದಾಯಕವೂ ಆದ ದಕ್ಷಿಣಕಾಶಿಯೆನಿಸುವ ಶ್ರೀ ಮಹಾಕೂಟಕ್ಷೇತ್ರದಲ್ಲಿ ತಾ|| 16-9-29 ನೆಯ ಚಂದ್ರವಾರ ಗಣಾರಾಧನೆಯ ಕಾರ್ಯವನ್ನು ಜರಿಗಿಸಬೇಕೆಂಬುದಾಗಿ ಪ್ರೋತ್ಸಾಹಿಸಿದರು. ಅವರು ಹೇಳಿದಂತೆ ಇಲ್ಲಿಯ ಭಕ್ತಗಣವು ಮಂಗಳೂರ ಪ|| ಬ್ರ|| ಅರಳೆಲೆ ಪಟ್ಟಾಧ್ಯಕ್ಷರ ಕಡೆಗೆ ಹೋಗಿ ಸಂಕಲ್ಪವನ್ನುರುಹಿ ಶ್ರೀ ಮಹಾಕೂಟಕ್ಷೇತ್ರಕ್ಕೆ ಸರ್ವಸನ್ನಾಹದೊಂದಿಗೆ ದಯಮಾಡಲಿಕ್ಕೆ ಬಿನ್ನಹವನ್ನು ಮಾಡಿಕೊಂಡರು. ತಾ|| 15-9-29 ನೆಯ ರವಿವಾರದ ದಿವಸ ಪುರವನ್ನು ತಳಿರುತೋರಣಗಳಿಂದಲಂಕರಿಸಿ ಗಣಾರಾಧನೆಯ ಯಾವತ್ತು ಸಾಹಿತ್ಯಗಳನ್ನು ಸಜ್ಜುಗೊಳಿಸಿ ಭಜನಾಸಂಘದೊಡನೆ ಭಜಂತ್ರಿ, ಕಹಳೆ, ಕರ್ಣಿ, ಬೇಂದು ಇವುಗಳ ರಭಸಧ್ವನಿಯಿಂದಲೂ, ನಿರುಪಾಧಿಕನೂ ಮಾಯಾತೀತನೂ ಸಚ್ಚಿದಾನಂದಸ್ವರೂಪನೂ ಆದ ಅಂಬಿಕಾಧವನಸ್ತೋತ್ರಘೋಷದಿಂದಲೂ ಪುರವಾಸಿಗಳು ಶ್ರೀ ಮಹಾಕೂಟಕ್ಷೇತ್ರವನ್ನು ಪ್ರವೇಶಿಸಿದರು. ಕಾರ್ಯಕ್ರಮದಂತೆ ವೇ|| ಮೃತ್ಯುಂಜಯಶಾಸ್ತ್ರಿಗಳು ಶ್ರೀ ಮಹಾಕೂಟ ಮಲ್ಲಿಕಾರ್ಜುನಲಿಂಗಕ್ಕೆ ಏಕಾದಶರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಗಳನ್ನು ವೇದೋಕ್ತವಾಗಿ ನೆರವೇರಿಸಿ ಮಂಗಲವನ್ನು ಮಾಡುವುದು ಶ್ರೀಗಳವರ ಪಾದಪೂಜೆ ತೀರ್ಥಪ್ರಸಾದವನ್ನು ಕೊಡುವದು ಮೊದಲಾದ ಕಾರ್ಯಗಳು ಮುಂಜಾನೆ 7 ಘಂಟೆಗೆ ಪ್ರಾರಂಭವಾಗಿ 10 ಘಂಟೆಗೆ ಸಮಾಪ್ತಿಗೊಂಡವು. ಭಕ್ತರ ಸಂಕಲ್ಪದಂತೆ ಶ್ರೀಪುರಾಂತಕನಲೀಲೆಯಿಂದ ಸಹಸ್ರ ಗಣಂಗಳು ಏಕಕಾಲಕ್ಕೆ ಪ್ರಾಪ್ತರಾದ್ದರಿಂದ ಭಕ್ತರ ಆನಂದವು ಉಕ್ಕೇರಿ ನವಗಂಧ, ಪುಷ್ಪ, ವೀಳೆಗಳಿಂದರ್ಚಿಸಿ ಭೋಜನಾದಿಗಳಿಂದ ತೃಪ್ತಿಪಡಿಸಿ ತಾಂಬೂಲ ದಕ್ಷಿಣೆಯಿಂದ ಆನಂದಗೊಳಿಸಿದರು. ಇನ್ನುಳಿದ ಸಾವಿರಾರು ಅನ್ಯಧರ್ಮಿಗಳಿಗೆ ಅತಿಥಿ ಅಭ್ಯಾಗತರಿಗೆ ಅನ್ನಸಂತರ್ಪಣೆಯಿಂದ ಆನಂದಪಡಿಸಿದರು. ಮರುದಿವಸ ಮಂಗಳವಾರ ಭಗವಾನ್ ಸದಾಶಿವನಲೀಲೆಗನುಸಾರವಾಗಿ 4-5 ನೂರು ಜನ ಗಣಂಗಳು ಪ್ರಾಪ್ತರಾಗಲು ಭಕ್ತಜನರು ಹಿಂದೆ ಮುಂದೆ ನೋಡದೆ ಅವರ ಭೋಜನದ ಏರ್ಪಾಡುಮಾಡಿಸಿ ಅನ್ನಸಂತರ್ಪಣೆಯ ಕಾರ್ಯವನ್ನು ಸಮಾಪ್ತಿಗೊಳಿಸಿದರು. ಮೊದಲೇ ಗೊತ್ತಾಗಿದ್ದಂತೆ ಶ್ರೀ ಮಹಾಕೂಟಕ್ಷೇತ್ರದಿಂದ 6 ಘಂಟೆಗೆ ಪುರಪ್ರವೇಶಮಾಡಿದರು. ಪುರದಲ್ಲಿ ಉಳಿದ ಸದ್ಭಕ್ತರು ಬೀದಿಬೀದಿಗೆ ಪನ್ನೀರಿನ ಚಳೆಯಕೊಟ್ಟು ದೀಪಗಳ ವ್ಯವಸ್ಥೆಗೊಳಿಸಿ ಪುರಬಹಿರ್ಭಾಗದಲ್ಲಿರುವ ದೇವಾಲಯದಲ್ಲಿ ಪಂಚಾಚಾರ್ಯರ ಭಾವಚಿತ್ರವನ್ನು ಮುಹೂರ್ತಗೊಳಿಸಲಿಕ್ಕೂ ಶ್ರೀಗಳವರು ಮಂಡಿಸಲಿಕ್ಕೂ ಅಲಂಕಾರಯುಕ್ತವಾದ ಭವ್ಯಸಿಂಹಾಸನವನ್ನು ರಚಿಸಿ ದೀಪ, ಪುಷ್ಪ, ಸುಗಂಧದ್ರವ್ಯಗಳಿಂದ ಸಜ್ಜುಗೊಳಿಸಿದ್ದರು. 2 ಘಂಟೆಗೆ ಪಂಚಾಚಾರ್ಯರ ಭಾವಚಿತ್ರವನ್ನು ಮನೋಹರವಾದ ಭವ್ಯಪೀಠದಲ್ಲಿ ಮುಹೂರ್ತಗೊಳಿಸಿ ಸಾಲಾಗಿ ಒಪ್ಪುವ ದೀಪಗಳ ಪ್ರಭೆಯಲ್ಲಿ ಉತ್ಸವವು ಸಾಗಿತು. ಕಹಳೆ, ಕರ್ಣಿ, ಭಜಂತ್ರಿ, ಬೇಂದು ಮೊದಲಾದವುಗಳ ರಭಸಧ್ವನಿಯಿಂದ ಪುರವು ತುಂಬಲ್ಪಟ್ಟಿತು. ಸಚ್ಚಿದಾನಂದ ಪರಮಾತ್ಮನ ಸ್ತೋತ್ರಘೋಷದಿಂದಲೂ ಪಂಚಾಚಾರ್ಯರ ಜಯಘೋಷದಿಂದಲೂ ಪುರವಾಸಿಗಳ ಕರ್ಣಾನಂದವಾಯಿತು. ಬೀದಿಬೀದಿಗಳಲ್ಲಿ ಸುಮಂಗಲೆಯರೂ ಐಶ್ವರ್ಯಸಂಪನ್ನೆಯರೂ ವಸ್ತ್ರಾಲಂಕಾರಭೂಷಿತರಾಗಿ ತಂಡತಂಡವಾಗಿ ಬಂದು ಭಕ್ತಿಪುರಸ್ಸರವಾಗಿ ಮಂಗಲನೀರಾಜನಗಳನ್ನು ಬೆಳಗಿ ಕಾಯಿಕರ್ಪೂರಗಳನ್ನು ಸಮರ್ಪಿಸಿ ಆಶೀರ್ವಾದಪಡೆಯುತ್ತಲಿದ್ದರು. ಉತ್ಸವವು ಎಲ್ಲ ಬೀದಿಗಳಲ್ಲಿ ಸಂಚರಿಸಿ ರಾತ್ರಿ 10.11 ಘಂಟೆಗೆ ಪೂರ್ವಸ್ಥಳಕ್ಕೆ ಬಂದುತಲ್ಪಿತು. ಶ್ರೀಗಳವರು ಪಂಚಾಚಾರ್ಯರ ಭಾವಚಿತ್ರವನ್ನು ದಿವ್ಯಸಿಂಹಾಸನದಲ್ಲಿ ಮುಹೂರ್ತಗೊಳಿಸಿ ಭಕ್ತರನ್ನುದ್ದೇಶಿಸಿ ನೀವು ಸಂಕಲ್ಪಿಸಿ ಕೈಕೊಂಡ ಕಾರ್ಯವು ಭಗವಾನ್ ಶಿವನ ಲೀಲೆಗನುಸರಿಸಿ ವಿಧಾನೋಕ್ತವಾಗಿ ಸಮಾಪ್ತಿಗೊಂಡಿತು. ಭಕ್ತಿಪುರಸ್ಸರವಾಗಿ ಬೆಳೆಸಿದ ಶಶಿಶೇಖರನ ಹಾಗೂ ಪಂಚಾಚಾರ್ಯರ ಮಹೋತ್ಸವವು ವಿಜೃಂಭಣೆಯಿಂದ ಪೂರ್ತಿಗೊಂಡು ಆನಂದದಾಯಕವಾಯಿತು. ಧಾರ್ಮಿಕ ಪ್ರವೃತ್ತಿಯನ್ನು ಜಾಗ್ರತೆಪಡಿಸಲಿಕ್ಕೆ ನೀವು ಕೈಕೊಂಡಕಾರ್ಯವು ಶ್ಲಾಘನೀಯವಾದದ್ದಿರುವದು. ಧರ್ಮದ ರಹಸ್ಯವು ಒಡೆದು ಕಾಣುವಂತಲ್ಲದೆ ಸತ್ಕಾರ್ಯಸಂಧಾನಕ್ಕೆ ಪ್ರಯತ್ನಿಸಿ ಸ್ವಾರ್ಥವನ್ನವಲಂಬಿಸದೆ ಸಮಾಜದ ಉನ್ನತಿಗೆ ಮನನೆಳಿಸಿದ್ದುದನ್ನು ನೋಡಿದರೆ ನೀವೆಲ್ಲರೂ ಮಹಾಮಹಿಮನಾದ ಪರಮಾತ್ಮನ ಕೃಪೆಗೆ ಪಾತ್ರರಾದಿರೆಂದು ಬೇರೆ ಹೇಳುವಕಾರಣವಿಲ್ಲ. ಈಶ್ವರನು ಇದರಂತೆ ಸದ್ಬುದ್ಧಿಯನ್ನು ಸದಾ ನಿಮಗೀಯಲೆಂದು ನಾನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ಈಗ ಪಂಚಾಚಾರ್ಯಪ್ರಭಾ ಪೋಷಣಕ್ಕೆ 2 ರೂಪಾಯಿಗಳನ್ನು ಭಜನಾಸಂಘದ ಸೆಕ್ರೆಟರಿಗಳಾದ ಬೀರನೂರ ಗದಿಗೆಪ್ಪನವರಿಗೆ ಸಮರ್ಪಿಸತಕ್ಕದ್ದು ಎಂಬದಾಗಿ ಅಮೃತವಾಣಿಯಿಂದ ಅಪ್ಪಣೆಗೊಳಿಸಿ ಆಶೀರ್ವಾದವಿತ್ತರು. ಆಶೀರ್ವಾದವನ್ನು ಕೈಕೊಂಡು ಭಕ್ತಸಮುದಾಯವು ಪಂಚಾಚಾರ್ಯ ಜಯಘೋಷದಿಂದ ತಮ್ಮ ತಮ್ಮ ಗೃಹಗಳಿಗೆ ತೆರಳಿದರು. ಸಮಾಜಸುಧಾರಕರೂ ಪರಮಾತ್ಮನ ಭಕ್ತಿಚಿಂತನಪರಾಯಣರೂ ಆದಹೊಳೆ ಆಲೂರು ಪುರವಾಸಿಗಳಿಗೆ ಸದಾ ಸುಖವಿತ್ತು ಕಾಪಾಡಲೆಂದೂ ಇದಕ್ಕೂ ಮಿಗಿಲಾದ ಜ್ಞಾನಭಕ್ತಿಗಳನ್ನುಂಟುಮಾಡಲೆಂದೂ ಶ್ರೀ ಗಿರಿಜಾಧವನನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಮಂಡಲಿ, ತುಮಕೂರು.

ಶುಕ್ಲಸಂವತ್ಸರದ ಶ್ರಾವಣ ಶುದ್ಧ ಪ್ರತಿಪದೆಯ ಲಾಗಾಯ್ತು ಶ್ರೀ ಸಾಂಬ ಮಂದಿರದಲ್ಲಿ ಪ್ರಾತಃಕಾಲದಲ್ಲಿ ಶಿವಸಹಸ್ರನಾಮ ಸಂಕೀರ್ತನದಿಂದ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರಗಳಿಗೆ ವಿಶೇಷಾರ್ಚನೆಯು ರಾತ್ರಿ 8 ಘಂಟೆಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರ ಮಹತ್ಕಾತಿಶಯಂಗಳಂ ದಶದಿಕ್ಕುಗಳಲ್ಲೂ ಪ್ರಸರಗೊಳಿಸಿರುವ "ಶ್ರೀ ರೇಣುಕವಿಜಯ" ಪುರಾಣ ಶ್ರವಣವು ನಡಿಸಲ್ಪಟ್ಟು ಮಹಾಲಯದಲ್ಲಿ ಅಂದರೆ 2-9-29 ನೆಯ ಸೋಮವಾರ ಶ್ರೀ ಮಾನಂಗಿ ಮಠದ ವೇ|| ಷ|| ಬ್ರ|| ಗಳಾದ ಪಟ್ಟದ ಶ್ರೀಯವರ ಪಾದಪೂಜೆಯು ಜಂಗಮ ಸಂತರ್ಪಣೆಯು ಯಥೋಚಿತವಾಗಿ ನಡಿಸಲ್ಪಟ್ಟು ಶ್ರಾವಣಮಾಸದ ಜಗದಾಚಾರ್ಯರ ಪೂಜಾಸೇವೆಯು ಈ ಸೇವಾಮಂಡಲಿಯವರಿಂದ ಸಾಂಗಗೊಳಿಸಲ್ಪಟ್ಟಿತು.

ತದ್ವತ್ ಭಾದ್ರಪದಶುದ್ಧ ಚತುರ್ಥಿದಿನ ಪ್ರತಿಷ್ಠಿತವಾದ ಶ್ರೀ ಗಜಾನನ ಪೂಜಾ ಸೇವೆಗಾಗಿ ಸೇವಾಮಂಡಲಿಯವರಿಂದ ಪ್ರಸಿದ್ಧಪತ್ರಿಕೆಗಳ ಮೂಲಕ ಆಹೂತರಾಗಿದ್ದ ವೀರಶೈವ ಸಮಾಜ ಬಾಂಧವರು 14-9-29 ನೆಯ ಸ್ಥಿರವಾರ ಸಾಯಂಕಾಲ ೬|| ಘಂಟೆಗೆ ಶ್ರೀ ಸಾಂಬಮಂದಿರದಲ್ಲಿ ನೆರೆದಿದ್ದರು. ಆ ಕಾಲದಲ್ಲಿ ನಗರದ ೩-೪ ಮಠಗಳ ಶ್ರೀಯವರುಗಳು ಅನೇಕ ಜನ ಭಕ್ತಮಾಹೇಶ್ವರರು ಸಭೆಗೆ ದಯಮಾಡಿದ್ದ ವಿಚಾರವು ಸಂತೋಷಕರವಾಗಿತ್ತು. ಸಭಾಂಗಣದಲ್ಲಿ ಪ್ರತಿಷ್ಠಿತವಾಗಿದ್ದ ಶ್ರೀ ಗಜಾನನ ಮಂಟಪದ ಮೇಲ್ಭಾಗದಲ್ಲಿ ಗುರುಸಾರ್ವಭೌಮರಾದ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರ, ವೀರಸಿಂಹಾಸನಾಧೀಶ್ವರರಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಪರಂಪರಾಗತ ಶ್ರೀ ಮದಭಿನವ ರೇಣುಕ ಭಗವತ್ಪಾದರಾದ ಶ್ರೀ ಜಗದ್ಗುರು ಶಿವಾನಂದ ರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ, ಸನಾತನ ಧರ್ಮೋದ್ಧಾರಕರಾದ ಲೋಕಮಾನ್ಯ ಜಗದ್ವಂದ್ಯ ವೇ|| ಶ್ರೀ|| ಪಂಡಿತ ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಕಾಶೀನಾಥಶಾಸ್ತ್ರಿಗಳವರ ಮತ್ತು ಸಮಾಜ ಪ್ರಿಯರಾಗಿ ಕೈಲಾಸವಾಸಿಗಳಾದ ವೇ|| ಶ್ರೀ|| ಬಿ. ಬಸವಾರಾಧ್ಯರು ಬಿ.ಎ., ಬಿಲ್. ರವರ ಭಾವಚಿತ್ರಗಳು ಸುಗಂಧಪುಷ್ಪಮಾಲಿಕೆಗಳಿಂದಲಂಕೃತವಾಗಿ ಶೋಭಾಯಮಾನವಾಗಿರಲು ಸಭಾಮಂದಿರಕ್ಕೆ ದಯಮಾಡಿಸಿದ ಸಕಲ ಭಕ್ತಮಾಹೇಶ್ವರರು ಶ್ರೀ ಗುರುವರ್ಯರ ಭಾವಚಿತ್ರಗಳಿಗೂ ಶ್ರೀ ವಿಘ್ನೇಶ್ವರ ಮೂರ್ತಿಗೂ ಭಕ್ತಿಪೂರ್ವಕವಾಗಿ ವಂದಿಸಿ ಸಭೆಯನ್ನಲಂಕರಿಸಿದರು. ನಿಯಮಿತಕಾಲಕ್ಕೆ ಸರಿಯಾಗಿ ವೇ|| ಶ್ರೀ ಗುಬ್ಬಿ ಹುಚ್ಚಪ್ಪಾರಾಧ್ಯರವರಿಂದ ವೇದಮಂತ್ರೋಚ್ಚಾರಣೆಯಿಂದಲೂ, ಶ್ರೀ ಗುರುಸ್ತೋತ್ರಮಾಲಿಕೆಯಿಂದಲೂ, ಗಣಸ್ತುತಿಯಿಂದಲೂ ಸಹ ಶ್ರೀ ಗಜಾನನ ಮೂರ್ತಿಗೂ ಶ್ರೀ ಗುರುಸಾರ್ವಭೌಮರ ಮಂಗಲಮೂರ್ತಿಗಳಿಗೂ ಅಷ್ಟವಿಧಾರ್ಚನೆಯು ವೇದೋಕ್ತವಾಗಿ ನಡಿಸಲ್ಪಟ್ಟಿತು. ನಂತರ ಈ ಭವ್ಯವಾದ ಮಂಗಲಸಭಾಧ್ಯಕ್ಷತೆಯನ್ನು ಶ್ರೇಷ್ಠಮಾಹೇಶ್ವರ ವರ್ಗದವರಾಗಿ ಸನಾತನ ಧರ್ಮಪ್ರಿಯರಾಗಿ ಸದಾಚಾರಸಂಪನ್ನರೂ ಧರ್ಮತತ್ಪರರೂ ಶ್ರೀಮಂತರೂ ಬೆಂಚ್ ಮ್ಯಾಜಿಸ್ಟ್ರೇಟ್ ಮತ್ತು ಮ್ಯುನಿಸಿಪಲ್ ಕೌನ್ಸಿಲರ್‌ರವರೂ ಆದ ವೇ|| ತಂಬೂರು ಮಠದ ಶ್ರೀ ಟಿ. ಹೆಚ್. ಗುಬ್ಬಯ್ಯನವರಿಗೆ ವಹಿಸಬೇಕೆಂದು ಮಂಡಲಿಯ ಸೆಕ್ರೆಟರಿಗಳಾದ ಪ್ರೀಡರ್ ಮ|| ರಾ|| ಜಿ. ಕೆ. ಗುರುಸಂಗಾರ್ಯರು ಸೂಚಿಸಲು ವೇ|| ಹುಲ್ಯಾಂಟಿ ಮಠದ ಶ್ರೀ ಚನ್ನಸಂಜಯ್ಯನವರು ಪುಷ್ಟೀಕರಿಸಲು ಸಕಲ ಸಭಾಸದರು ಕರತಾಡನ ಮಾಡುತ್ತಿರಲು ವೇ|| ಟಿ. ಹೆಚ್. ಗುಬ್ಬಯ್ಯನವರು ಅಗ್ರಾಸನವನ್ನಲಂಕರಿಸಿದರು. ಅಧ್ಯಕ್ಷರಿಗೂ ಮ|| ದೇಶದ ಶೆಟ್ಟರು ರುದ್ರಪ್ಪನವರಿಗೂ ಮ|| ದೇಶದ ಯಜಮಾನ್ ಭೋಜಪನಾದಪ್ಪನವರಿಗೂ ಹೂಮಾಲೆಗಳು ಹಾಕಲ್ಪಟ್ಟವು. ತರುವಾಯ ಸೆಕ್ರೆಟರಿಗಳಾದ ಪ್ಲೀಡರ್ ಮ|| ಗುರುಸಂಗಾರ್ಯರು ಸಕಲ ವೀರಶೈವ ಮಹನೀಯರು ಶ್ರೀ ಜಗದ್ಗುರು ಪಂಚಾಚಾರ್ಯ ಸಾರ್ವಭೌಮರ ಜಯಂತಿಗಳನ್ನು ಭಕ್ತಿಯಿಂದ ಆಚರಿಸಬೇಕಾದ ಅವಶ್ಯತೆಯನ್ನು ಕುರಿತು ಭಾಷಣಮಾಡುತ್ತಾ ಇದರಡಿ ವಿವರಿಸಿರುವ ಮೂರು ನಿರ್ಧಾರಗಳನ್ನು ಸಭಾಸದರ ಅವಗಾಹನೆಗೆ ತಂದು ಸರ್ವಾನುಮತಿಯನ್ನು ಕೋರಿ ಸದ್ಭುದ್ಧಿ ಸದ್ಭಕ್ತಿ, ಸದಾಚರಣೆಗಳ ಬಗ್ಗೆ ಸುಶ್ರಾವ್ಯವಾಗಿ ½ ಗಂಟೆಗಳವರೆಗೆ ಭಾಷಣ ಮಾಡಿ ಸಭಾಸದರನ್ನು ಸ್ತಂಭೀಭೂತರನ್ನಾಗಿ ಮಾಡಿದರು. ಈ ನಿರ್ಧಾರಗಳನ್ನು ಪುಷ್ಟೀಕರಿಸಿ ವೇ|| ಗುಬ್ಬಿ ಹುಚ್ಚಪ್ಪಾರಾಧ್ಯರು ವೇ|| ರುದ್ರಯ್ಯನವರು ಮ|| ಯಜಮಾನರು ಮತ್ತು ಆಮೀನ್ ಕೆಂಪಯ್ಯನವರು ಸಹಾ ಭಾಷಣ ಮಾಡಿದನಂತರ ಸಭಾಸದರು ಕರತಾಡನಗಳಿಂದ ಸರ್ವಾನುಮತಿಯನ್ನು ವೇ|| ಆರಾಧ್ಯರವರು ಕೈಲಾಸವಾಸಿಗಳಾದ ಬಗ್ಗೆ ತಮ್ಮ ದುಃಖವನ್ನು ಅವರ ವಿಷಯದಲ್ಲಿ ಸಮಾಜದಕೃತಜ್ಞತೆಯನ್ನು ಪ್ರಕಟಪಡಿಸಿದರು. ಅನಂತರ ಶ್ರೀಯವರ ಆತ್ಮಕ್ಕೆ ಶಾಂತಿಯನ್ನು ಬೇಡಿ 5 ನಿಮಿಷಗಳವರೆಗೆ ಸರ್ವರೂ ಮೌನವಾಗಿ ನಿಂತಿದ್ದು ಅವರ ಕುಟುಂಬವರ್ಗದವರಿಗೂ ಆಪ್ತಬಾಂಧವರಾದ ವೇ|| ಶ್ರೀ ಪಂಡಿತ ಕೆ. ಸಿ. ನಂಜುಂಡಾರಾಧ್ಯರವರಿಗೂ ಸಹ ಅದನ್ನು ಸೂಚಿಸತಕ್ಕದ್ದೆಂದು ನಿರ್ಧರಿಸಿದರು. ಅನಂತರ ಅಧ್ಯಕ್ಷರು ತಮ್ಮ ಸ್ವಗುರುಭಕ್ತಿಯನ್ನು ಧರ್ಮಾನುರಾಗವನ್ನು ಪ್ರದರ್ಶಿಸಿ ಹಿತಕರವಾದ ಭಾಷಣವನ್ನು ಮಾಡಿ ಶ್ರೀಮದ್ರಂಭಾಪುರೀ ಜಗದ್ಗುರು ಮಹಾಸ್ವಾಮಿಗಳವರ ದಿವ್ಯಸವಾರಿಯನ್ನು ಆದಷ್ಟು ಜಾಗ್ರತೆ ತುಂಕೂರಿಗೆ ದಿಗ್ವಿಜಯಂಗೈಸಬೇಕೆಂದು ಸೂಚಿಸಿದ್ದಕ್ಕೆ ಮಹಾಜನರೆಲ್ಲರೂ ನಿರತಿಶಯ ಭಕ್ತಿಯಿಂದ ಆನಂದೋದ್ಗಾರವನ್ನು ಮಾಡಿ ಕರತಾಡನಮಾಡಿ ಅಧ್ಯಕ್ಷರ ನಿಜಗುರುಭಕ್ತಿಯನ್ನು ನಿರತಿಶಯವಾಗಿಕೊಂಡಾಡಿದನಂತರ ಶ್ರೀ ಜಗದ್ಗುರು ಸಾರ್ವಭೌಮರಿಗೂ ಶ್ರೀ ಗಜಾನನ ಮಂಗಲಮೂರ್ತಿಗೂ ಮಂಗಲವನ್ನು ಕೋರಿ, ಮಠದ ವೇ|| ಶ್ರೀ ಸಿದ್ಧಯ್ಯನವರಿಂದ ಮಂಗಲ ನೀರಾಜನವಾದನಂತರ ಸರ್ವರಿಗೂ ಸುಗಂಧಪುಷ್ಪಹಾರ ತಾಂಬೂಲಪ್ರಸಾದ ವಿನಿಯೋಗಮಾಡಿದರು. ಧರ್ಮಪ್ರಭುಗಳಾದ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಮಾಜಬಾಂಧವರಿಗೆಲ್ಲಾ ಉಪಕಾರ್ಯದರ್ಶಿಗಳಾದ ಮ|| ರಾ|| ಟಿ. ಪಿ. ಶಿವಯ್ಯನವರು ವಂದನೆಯನ್ನು ಸಮರ್ಪಿಸಿ ಆಭಾರಮಾಡುವಾಗ್ಯೆ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯನಿನಾದದಿಂದ ಸಭೆಯು ವಿರಮಿಸಲ್ಪಟ್ಟಿತು.

ದೇಶದ ಯಜಮಾನ್ ಭೋಜಪನಾದಪ್ಪ ತುಂಕೂರು.

15-9-29 ಉಪಾಧ್ಯಕ್ಷ.

ನಿರ್ಧಾರಗಳು.

1. ವೀರಶೈವ ಮತಸ್ಥಾಪನಾಚಾರ್ಯರಾಗಿ ಜಗದಾಚಾರ್ಯರಾದ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯ ಭಗವತ್ಪಾದರವರ ಜಯಂತಿಮಹೋತ್ಸವದ ದಿವವನ್ನು ಪ್ರತಿವರ್ಷವೂ ಸರ್ಕಾರಿ ರಜಾದಿನವಾಗಿ ಮಂಜೂರುಮಾಡಿ ಕೊಡಬೇಕೆಂಬು ಧರ್ಮಪ್ರಭುಗಳಾದ ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರ್‌ರವರನ್ನು ಅವರ ಘನಸರ್ಕಾರದವರನ್ನು ಈ ಸಭಾ ಮೂಲಕ ಪ್ರಾರ್ಥಿಸತಕ್ಕದ್ದು.

2. ಪರಳಿ ರುದ್ರಾಭಿಷೇಕದ ಪ್ರಕರಣವನ್ನು ವೀರಶೈವರ ಪರವಾಗಿ ತೀರ್ಮಾನಿಸಿ ನ್ಯಾಯಪರಿಪಾಲನೆಮಾಡಿದುದಕ್ಕಾಗಿ ವೀರಶೈವಜನಾಂಗವು ಘನತೆಯಿಂದಿದ ನೈಜಾಂಸರ್ಕಾರದವರಿಗೆ ಚಿರಕಾಲ ಕೃತಜ್ಞರಾಗಿರುವದಲ್ಲದೆ ಇದಕ್ಕಾಗಿ ಅವಿಶ್ರಾಂತಶ್ರಮಪಟ್ಟ ಹೈದರಾಬಾದಿನ ಸುಪ್ರಸಿದ್ಧ ವಕೀಲರಾದ ಮ|| ರಾ|| ಬಾಪೂರಾವ್ ಮಹೋದಯರಿಗೆ ಸಮಾಜವು ಅಭಿನಂದನವನ್ನು ಪ್ರದರ್ಶಿಸುತ್ತದೆ.

3. ಕೈಲಾಸವಾಸಿಗಳಾದ ವೇ|| ಶ್ರೀ ಬಿ. ಬಸವಾರಾಧ್ಯರ್ ಬಿ.ಎ., ಬಿ.ಎಲ್., ರವರ ಸುಗುಣಶೀಲ್ಯಾದಿಗಳನ್ನು ಸದಾ ಸ್ಮರಿಸುವದಲ್ಲದೆ ಅವರ ಆತ್ಮಕ್ಕೆ ಶ್ರೀ ಜಗದೀಶ್ವರನಲ್ಲಿ ಶಾಂತಿಯನ್ನು ಕೋರಿ ಅವರ ಕುಟುಂಬವರ್ಗದವರಿಗೆ ಸಮಾಜದ ಸಂತಾಪವನ್ನು ಸೂಚಿಸತಕ್ಕದೆಂದು ಈ ಸಭೆಯು ನಿರ್ಧರಿಸುತ್ತದೆ.

14-9-29 G. K. Gurusangarya, ಸೆಕ್ರೆಟರಿ.

ಶ್ರೀ ಗಣೇಶಾಯ ನಮಃ.

ಹೆಬ್ಬಾಳಿನಲ್ಲಿ ನಡೆದ ಗಣೇಶನ ಮಂಗಳಾರತಿ ಮಹೋತ್ಸವ.

1. ತಾರೀಖು 6-9-29 ನೆಯ ಶುಕ್ರವಾರ ಬೆಳಗ್ಗೆ ಗೌರಮ್ಮನನ್ನು ಶನಿವಾರ ವರಸಿದ್ಧಿವಿನಾಯಕನನ್ನು ತಳಿರುತೋರಣ ಕದಳಿಸ್ತಂಭಗಳಿಂದಲೂ, ಫಲಪುಷ್ಪಾದಿಗಳಿಂದಲೂ, ಅಲಂಕರಿಸಲ್ಪಟ್ಟ ಮಂಟಪದಲ್ಲಿ ಬಿಜಮಾಡಿಸಿ ಪ್ರತಿದಿವಸವೂ ಎರಡುವೇಳೆಯೂ ಕ್ರಮವಾಗಿ ಪೂಜೆ, ಭಜನೆ ಮತ್ತು ಸೇವಾರ್ಥವು ನಡೆಸಲ್ಪಟ್ಟವು.

2. ಈ ಉತ್ಸವದ ಖರ್ಚಿಗೋಸ್ಕರ ಪದ್ಧತಿಯಪ್ರಕಾರ ಗ್ರಾಮಸ್ಥರಿಂದಲೂ, ಕಮಿಟಿ ಮೆಂಬರುಗಳಿಂದಲೂ, ಇತರ ಗ್ರಾಮದ ಮುಖಂಡರಿಂದಲೂ ಚಂದಾ ವಸೂಲ್‌ಮಾಡಿ ಬಂದ ಮೊಬಲಗಿನಲ್ಲಿ ದೇವರಸೇವೆಗೆ ಅಗತ್ಯ ಸಾಮಾನುಗಳನ್ನು ತೆಗೆದುಕೊಂಡು ತಾ|| 11-9-29 ನೆಯ ಬುಧವಾರ ಸಾಯಂಕಾಲ 8 ಘಂಟೆಯ ವೇಳೆಗೆ ಸಮಾಪದ ಗ್ರಾಮಸ್ಥರುಗಳು ಸ್ಥಳದ ಹೆಂಗಸರು, ಗಂಡಸರು, ಮಕ್ಕಳು ಆದಿಯಾಗಿ ಸರ್ವರೂ ಸೇರಿದರು.

3. ತಾ|| 11-9-29 ನೆಯ ಬುಧವಾರ ರಾತ್ರಿ 9 ಘಂಟೆಗೆ ಮಂಗಳವಾದ್ಯ ಮತ್ತು ಪೂಜೆಯೂ ಆದನಂತರ ಸ್ಕೂಲಿನ ಬಾಲಕ ಬಾಲಕಿಯರು ದೇವರಸ್ತೋತ್ರವನ್ನು ಹಾಡಿದರು. ಅನಂತರ ಮ|| ರಾ|| ಹಲಗೇಗೌಡರನ್ನು ಮೊದಲನೆಯ ಮೆಂಬರನ್ನಾಗಿಯೂ ಗ್ರಾಮಸ್ಥರ ಪರವಾಗಿ ಮಠದ ವೇ|| ಮತ್ತು ಸ್ಕೂಲ್ ಕರೆಸ್‌ಪಾಂಡೆಂಟ್ ಮೆಂಬರು ಎಸ್. ಪುಟ್ಟಪ್ಪಾರಾಧ್ಯರನ್ನು ಚುನಾವಣೆಮಾಡಿದರು. ಅಧ್ಯಕ್ಷರು ಗ್ರಾಮಸ್ಥರು ಚುನಾವಣೆ ಮಾಡಿದ ವಿಷಯದಲ್ಲಿ ಕೊಂಚಹೊತ್ತು ಭಾಷಣವನ್ನು ಮಾಡಿದರು. ಅನಂತರ ಈ ಕೆಳಗೆ ಕಂಡ ರೀತಿ ಉಪನ್ಯಾಸಗಳು ನಡೆದುವು.

1. ಚಿ|| ಹೆಚ್. ವೀರೇಗೌಡನೆಂಬ ವಿದ್ಯಾರ್ಥಿಯು ಮಕ್ಕಳ ಪೋಷಣೆ ಮತ್ತು ಶಿಕ್ಷಣೆಯ ವಿಚಾರವಾಗಿ ಉಪನ್ಯಾಸಮಾಡಿದನು.

2. ಚಿ|| ಸೌ|| ವಿದ್ಯಾರ್ಥಿನಿ ಗಂಗಮ್ಮನು ಸ್ತ್ರೀವಿದ್ಯಾಭ್ಯಾಸವು ಅತ್ಯಾವಶ್ಯಕವಾದುದು ಎಂಬ ವಿಷಯದಲ್ಲಿ ಉಪನ್ಯಾಸಮಾಡಿದಳು. 3. ಚಿ|| ವಿದ್ಯಾರ್ಥಿ ಬಸವಣ್ಣಯ್ಯನು ಬಾಲ್ಯವಿದ್ಯಾಭ್ಯಾಸದ ವಿಚಾರವಾಗಿಯೂ, 4. ಚಿ|| ಕೆ. ಬಸವೇಗೌಡನು ಪ್ರೈಮರಿ ಮತ್ತು ಮಿಡ್ಲ್ ತರಗತಿ ವಿಷಯವಾಗಿಯೂ ಉಪನ್ಯಾಸಮಾಡಿದರು. 5. ವೇ|| ಸ್ಕೂಲ್ ಅ|| ಮಾ|| ರುದ್ರಾರಾಧ್ಯರು ಬಾಲಕರು ಗೈರ್‌ಹಾಜರಾಗುವ ವಿಷಯದಲ್ಲಿಯೂ ಅವರುಗಳ ಶುಚಿತ್ವದ ವಿಷಯದಲ್ಲಿಯೂ ಉಪನ್ಯಾಸಮಾಡಿದರು. 6. ಮಿ|| ಸ್ಕೂಲ್ ಹೆಡ್ಮಾಸ್ಟರ್ ಕೆ. ವಿ. ದೇವಪ್ಪಶಾಸ್ತ್ರಿಗಳು ವಿದ್ಯಾಭ್ಯಾಸ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಸುಧಾರಣೆಯ ವಿಷಯದಲ್ಲಿ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. 7. ಚಿ|| ಸ್ಕೂಲ್ ವಿದ್ಯಾರ್ಥಿ ಬಸವಯ್ಯನು ಗಣೇಶನ ಪೂರ್ವಕಥೆ ಮತ್ತು ಗಣೇಶನನ್ನು ಪ್ರತಿಯೊಬ್ಬರೂ ಪೂಜೆಮಾಡಬೇಕೆಂಬ ವಿಷಯದಲ್ಲಿ ಉಪನ್ಯಾಸಮಾಡಿದನು.

5. ಅನಂತರ ಅಧ್ಯಕ್ಷರು ಪ್ರತಿಯೊಬ್ಬರೂ ಮಾಡಿದ ಉಪನ್ಯಾಸವನ್ನು ಗೋಷ್ಠಾರೆಯಾಗಿ ಗ್ರಾಮಸ್ಥರಿಗೆ ವಿಶದವಾಗಿ ತಿಳಿಯುವಂತೆ ಅರ್ಥಸ್ವಾರಸ್ಯವಾಗಿ ಹೇಳಿದ್ದಲ್ಲದೆ ಗ್ರಾಮಸ್ಥರು ತಮ್ಮ ಮಕ್ಕಳ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಸ್ಕೂಲಿಗೆ ಕಳುಹಿಸುವಂತೆಯೂ ಸ್ಕೂಲಿನ ವಿಷಯದಲ್ಲಿ ಕಮಿಟಿ ಮೆಂಬರುಗಳು ಮತ್ತು ಗ್ರಾಮಸ್ಥರು ಮುತುವರ್ಜಿಯಿಂದ ಆಗಾಗ್ಗೆ ಮೇಲ್ವಿಚಾರಣೆಯನ್ನು ಮತ್ತು ಉತ್ಸವಾದಿಗಳಿಗೆ ಹೆಚ್ಚು ಗಮನವನ್ನು ಕೊಟ್ಟು, ಎಲ್ಲರೂ ಏಕೀಭವಿಸಿ ನಡೆದುಕೊಳ್ಳುವಂತೆಯೂ, ಮುಂದೆ ಮಿಡ್ಲ್‌ಸ್ಕೂಲಿನ ವಿಷಯವಾಗಿ ದ್ರವ್ಯಸಹಾಯಮಾಡಿ ಸ್ಕೂಲ್ ಕಟ್ಟಡವು ಶೀಘ್ರದಲ್ಲಿ ಆಗುವಂತೆ ಮಾಡಿ ಕೀರ್ತಿಭಾಗಿಗಳಾಗಬೇಕೆಂಬುದಾಗಿಯೂ ಬಹಳ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು.

6. ಅನಂತರ ಶ್ರೀ ಗಣೇಶನ ದೊಡ್ಡಮಂಗಳಾರತಿಯು ವೇದೋಕ್ತವಾಗಿಯೂ ಮಂಗಳವಾದ್ಯದೊಡನೆಯೂ ನಡೆದ ಮೇಲೆ ಶ್ರೀಮನ್‌ಮಹಾರಾಜರ ಮತ್ತು ಚಕ್ರವರ್ತಿಸಾರ್ವಭೌಮರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟವು. ಸರ್ವರಿಗೂ ತಾಂಬೂಲ, ಪುಷ್ಪ, ಫಲಹಾರಗಳು ಹಂಚಲ್ಪಟ್ಟನಂತರ ಅಂದಿನ ಸಭೆಯು ಮುಕ್ತಾಯವಾಯಿತು.

7. ತಾ|| 12-9-29ನೆಯ ಗುರುವಾರ ಪ್ರಾತಃಕಾಲ 7 ಘಂಟೆಗೆ ಗ್ರಾಮಸ್ಥರೆಲ್ಲರೂ ಸೇರಿ ಗೌರಿ ಗಣೇಶರಿಗೆ ಪೂಜೆ ಮಂಗಳಾರತಿಯನ್ನು ಮಾಡಿದ ಮೇಲೆ ಅಲಂಕರಿಸಲ್ಪಟ್ಟ ಪಾಲಿಕೆಯಲ್ಲಿ ಅವರನ್ನು ಬಿಜಮಾಡಿಸಿ ಗ್ರಾಮದೇವತೆಯೊಡನೆ ಮಂಗಳವಾದ್ಯಸಮೇತ ಊರಿನಲ್ಲೆಲ್ಲಾ ಉತ್ಸವವನ್ನು ನಡೆಯಿಸಿ 10 ಘಂಟೆಯ ವೇಳೆಗೆ ಕೆರೆಯಲ್ಲಿ ಬಿಟ್ಟು ವಾಪಸು ಬಂದರು. ಈ ಮೇಲ್ಕಂಡ ವಿಷಯವೆಲ್ಲವೂ ಆ ಗಣೇಶನ ಕೃಪೆಯಿಂದ ಸಾಂಗವಾಗಿ ನೆರವೇರಿದುವು.

ಪುಟ್ಟಪ್ಪಾರಾಧ್ಯ.

ಹೆಬ್ಬಾಳುಮಠ, ಬೇಲೂರು ತಾಲೂಕು.

ಗುರುನಿಂದೆ.

ಶ್ರೀಮತ್ಪರಶಿವನ ಪಂಚಮುಖೋದ್ಭೂತರಾದ ಜಗದಾಚಾರ್ಯರ ತತ್ವವನ್ನರಿಯದೆ ಕೆಲವು ಜನ ಮಹನೀಯರು ದ್ವೇಷಾಸೂಯೆಗಳಿಂದ ಪ್ರೇರಿತರಾಗಿ ಅರ್ಥವಿಲ್ಲದೆ ಕಲಹವಾಡುತ್ತಿರುವುದು ಪರಮಾಶ್ಚರ್ಯಕರವಾಗಿದೆ. ಈ ಕಲಹಗಳಿಂದ ದೇಶದ ಶಾಂತಿಸುಖಗಳಿಗೆ ಭಂಗವುಂಟಾಗುವುದಲ್ಲದೆ ಪ್ರಾಚೀನ ಗ್ರಂಥಗಳು ಇಂಥವರ ಕೈಯ್ಯಲ್ಲಿ ಸಿಲುಕಿ ತಮ್ಮ ನೈಜಸ್ವರೂಪವನ್ನು ಕಳೆದುಕೊಳ್ಳುವುವು. ಮತ್ತು ಸತ್ಯಬೋಧಕ ಸನಾತನಗ್ರಂಥಗಳು ಮಾಯವಾಗಿ ಕುಕಲ್ಪಿತಗ್ರಂಥಗಳು ತಲೆ ಎತ್ತುವುವು. ಇದರಿಂದ ಪ್ರಾಚೀನಗ್ರಂಥಗಳಲ್ಲಿ ನಮಗಿರತಕ್ಕ ಆಸ್ತಿಕತ್ವವು ಹೋಗಿ ನಾಸ್ತಿಕತ್ವ ಉಂಟಾಗುವುದರಲ್ಲಿ ಯಾವ ಸಂಶಯವಿಲ್ಲ. ಯಾವಕಾರಣದಿಂದಲೋ ಈ ಕಾಲದಲ್ಲಿ ಜಗದಾಚಾರ್ಯರ ತತ್ವಕ್ಕೆ ಹೆಚ್ಚುಮಂದಿ ವಿರೋಧಿಗಳಾಗಿರುವುದು ಪರಮಶೋಚನೀಯವಾಗಿದೆ. ಕೆಲವರು ಶಿವಸ್ವರೂಪಿಗಳಾದ ಆಚಾರ್ಯರು ತಾಮಸರೆಂಬುದಾಗಿಯೂ ಇವರ ವಿಷಯವಾಗಿ ಹೇಳತಕ್ಕ ವಿಷಯಗಳೆಲ್ಲ ಕುಕಲ್ಪಿತಗಳೆಂದೂ ಮನಸ್ಸಿಗೆ ಬಂದ ಹಾಗೆ ಜರಿಯುತ್ತಿರುವರು. ಶ್ರುತಿ ಸ್ಮೃತಿ ಆಗಮಪುರಾಣಾದಿಗಳಲ್ಲಿ ಹೇಳುವ ಇವರ ವಿಷಯವನ್ನು ಎತ್ತಿದ ಕೂಡಲೆ ಭೂಮಿಯೂ ಆಕಾಶವೂ ಒಂದಾಗುವಂತೆ ಘನಗರ್ಜನೆಯನ್ನು ಮಾಡುವರು. ವೀರಶೈವರಿಗೆ ಸಂಬಂಧವಿಲ್ಲದ ಜಯಂತಿಗಳನ್ನು ಮಾತ್ರ ಬಹು ಅಟ್ಟಹಾಸದಿಂದ ಮಾಡಬೇಕೆಂತಲೂ ವೇದಾಗಮಪ್ರತಿಪಾದಿತವಾದ ಈ ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವವರ ಮುಖವನ್ನು ಸಹ ನೋಡಬಾರದೆಂಬುದಾಗಿಯೂ ಇವರ ಅವಗಾಹನೆಯಿಂದ ದೇಶಮಧ್ಯದಲ್ಲಿ ಘನವಾದ ಉಪದೇಶ ಕುಕಲ್ಪಿತಗ್ರಂಥಗಳು ಮಾತ್ರ ಎಲ್ಲೆಲ್ಲಿಯೂ ಸರ್ವಮಾನ್ಯಗಳಾಗಿರುವುವಲ್ಲದೆ ಜಗದಾಚಾರ್ಯರ ಮಹತ್ವವನ್ನು ಪ್ರಕಾಶಪಡಿಸುವ ರೇಣುಕವಿಜಯಾದಿ ಗ್ರಂಥಗಳು ಹೆಸರಿಲ್ಲದಂತೆ ಹೋಗಬೇಕೆಂಬುದೇ ಇವರ ಉದ್ದೇಶ. ಯಾವ ಕಾರ್ಯದಲ್ಲಿಯೇ ಆಗಲಿ ಇವರ ಮನೋಭಿಪ್ರಾಯದಂತೆ ನಡೆದುಕೊಂಡರೆ ಆ ಕಾರ್ಯವು ದಿಗ್ವಿಜಯವಾಗುವುದೆಂದೂ ತಾವು ಹೇಳತಕ್ಕ ಶ್ಲೋಕಗಳೇ ಪ್ರಮಾಣಗಳೆಂಬುದಾಗಿ ಕೆಲವು ಕವಿತಾಸಂಸ್ಕೃತಶ್ಲೋಕಗಳನ್ನು ಹೇಳುತ್ತಾ ಇವು ಪಾರ್ವತಿಗೆ ಪರಮೇಶ್ವರನು ಹೇಳಿದ ವೀರಾಗಮ ಸೂಕ್ಷ್ಮಾಗಮ ಶ್ಲೋಕಗಳು ಎಂಬುದಾಗಿ ಗಂಭೀರವಾಗಿ ಹೇಳುವರು. ಓಹೋ, ಪಾರ್ವತೀದೇವಿಯು ಇವರಿಂದ ಮಾಡಲ್ಪಟ್ಟ ಕವಿತಾಶ್ಲೋಕಗಳನ್ನೇ ಪರಮೇಶ್ವರನಿಂದ ಕೇಳಿ ಧನ್ಯಳಾಗಿರಬಹುದಲ್ಲವೇ. ಇವರು ಯಾವ ಶಾಸ್ತ್ರಾಗಮಪುರಾಣಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಹೇಳುತ್ತಾರೋ ಅವೇ ಶಾಸ್ತ್ರಾಗಮಗಳನ್ನು ಪರಿಶೋಧನೆಮಾಡಿಯಾಗಲಿ ಅಥವಾ ಮಾಡಿದವರ ವಾಕ್ಯವನ್ನಾಗಲೀ ಕೇಳಿ ಅದರಂತೆ ವರ್ತಿಸುವುದು ಮೇಲಲ್ಲವೇ. ಇವರ ಕೊನೆಯ ಹೇಳಿಕೆ ಏನೆಂದರೆ, ಯಾರನ್ನೂ ನಿಂದಿಸಬಾರದೆಂತಲೂ ಎಲ್ಲರೂ ಐಕ್ಯದಿಂದಿರಬೇಕೆಂತಲೂ ಬಹುಸ್ವಾರಸ್ಯವಾಗಿ ಹೇಳುತ್ತಾರೆ. ಇದು ಸ್ತುತ್ಯವಾದ ಸಂಗತಿಯೇ ಸರಿ. ಆದರೆ ಇವರು ಮಾತ್ರ ಹಾಗೆ ವರ್ತಿಸುವುದಿಲ್ಲ. ಯಾರಿಂದ ಪಂಚಸೂತ್ರಘಟಿತವಾದ ಶಿವಲಿಂಗವು ದೊರೆಯಿತೋ ಅಂಥ ಸಾಕ್ಷಾತ್ ಶಿವಸ್ವರೂಪಿಗಳಾದ ಜಗದಾಚಾರ್ಯರ ನಿಂದೆಯು ಮಾತ್ರ ಇವರಲ್ಲಿ ಮನೆಮಾಡಿಕೊಂಡಿರುವುದು. ಗುರುನಿಂದೆಗಿಂತ ಅಧಿಕವಾದ ನಿಂದೆಯು ಯಾವುದಿರುವುದೋ ಅದನ್ನು ಪರಮೇಶ್ವರನೇ ಬಲ್ಲ.

ವಾಚಕಮಹಾಶಯರೇ, ಈ ತೆರದ ಇವರ ನಿಂದಾವಾಕ್ಯಗಳನ್ನು ಪರಿಶೀಲಿಸಿದರೆ ಮತಾವಲಂಬಿಗಳು ಗುರುನಿಂದೆಯನ್ನು ಮಾಡುವ ಭರದಲ್ಲಿ ತಮ್ಮ ಕಾಲುಗಳ ಮೇಲೆ ತಾವೇ ಕಲ್ಲನ್ನ ಹಾಕಿಕೊಂಡಂತಾಗುವುದಲ್ಲವೇ ? ಇವರ ಈ ರೀತಿಯಾದ ಉಪನ್ಯಾಸದಿಂದಲೇ ಈ ಮತದ ತತ್ವವನ್ನರಿಯದ ಈ ಮತಾವಲಂಬಿಗಳೇ ಈ ಮತವನ್ನು ತ್ಯಜಿಸಿ ಅನ್ಯಮತಕ್ಕೆ ಕಾಲಿಡಲು ಅವಕಾಶವಾಯಿತು. ಮೂವತ್ತೈದುಲಕ್ಷ ವೀರಶೈವರ ಸಂಖ್ಯೆಯು ಮೂವತ್ತುಲಕ್ಷಕ್ಕಿಳಿದದ್ದೇ ಇದಕ್ಕೆ ಬಲವಾದ ದೃಷ್ಟಾಂತವಾಗಿದೆ. ಅಸ್ತು, ಮಹಾಶಯರೇ, ಜಗದಾಚಾರ್ಯರೂ ಮತ್ತು ಇವರ ತತ್ವವೂ ತಾಮಸಗಳಾಗಿದ್ದ ಪಕ್ಷದಲ್ಲಿ ಸನಾತನಧರ್ಮಪ್ರತಿಪಾದಕರಾದ ಶ್ರೀಮತ್ ಶಂಕರಾಚಾರ್ಯರೂ ಅಗಸ್ತ್ಯಾದಿ ಮಹರ್ಷಿಗಳೂ ಚೋಳಭೂಪಾಲಾದಿ ಮಹಾರಾಜರುಗಳೂ ವಿಭೀಷಣಾದಿ ರಾಕ್ಷಸರೂ ಗೋರಕ್ಷಾದಿ ಸಿದ್ಧರುಗಳೂ ಎಂದಿಗೂ ಇವರ ಶಿಷ್ಯರಾಗುತ್ತಿರಲಿಲ್ಲ. ಇವರ ತತ್ವವು ಶ್ರೇಷ್ಠವಾದ್ದರಿಂದಲೂ ಇವರು ಮಹತ್ಪುರುಷರಾದ್ದರಿಂದಲೂ ಅನೇಕ ಮೇಲ್ಕಂಡ ಮಹನೀಯರುಗಳು ಇವರ ಶಿಷ್ಯರಾಗಿ ಹೋದರು. ಈ ವಿಷಯವು ಇವರುಗಳಿಗೆ ತಿಳಿದಂತವಾಗಿದ್ದರೂ ಮತ್ತು ಗುರುಸಾರ್ವಭೌಮರನ್ನು ನಿಂದಿಸಬಾರದೆಂಬುದಾಗಿ ವೇದಾಗಮಗಳು ಘಂಟಾಘೋಷವಾಗಿ ಸಾರುತ್ತಿದ್ದರೂ ಕೂಡ ತಾವು ಯಾವುದೋ ಒಂದು ಅಭಿಮಾನದಿಂದ ಈ ರೀತಿ ತಮ್ಮಭಿಪ್ರಾಯವನ್ನು ಪ್ರಚಾರಪಡಿಸುವುದು ಸರಿಯಲ್ಲವೆಂಬುವುದು ಸಣ್ಣಮಕ್ಕಳಿಗೂ ಕೂಡ ತಿಳಿದಂತವೇ ಇದೆ. ಒಂದುಪಕ್ಷ ತಾವು ಹೇಳತಕ್ಕ ವಿಷಯವೇ ನಿಜವಿದ್ದಲ್ಲಿ ಒಂದು ಶಾಸ್ತ್ರೀಯ ಸಭೆಯಲ್ಲಾಗಲಿ ವೀರಶೈವ ಮಹಾಸಭೆಗಳಲ್ಲಾಗಲಿ ಚರ್ಚೆಗೆ ತಂದು ಒಂದೊಂದು ಠರಾವುಗಳನ್ನು ಪಾಸ್‌ಮಾಡಿಸಿ ಅದರಂತೆ ಎಲ್ಲಾ ಗುರುಭಕ್ತಮಂಡಳಿಯವರು ವರ್ತಿಸುವಂತೆ ಮಾಡುವುದು ಭೂಷಣಾಂಶವಾಗಿದೆ. ಇದನ್ನು ಬಿಟ್ಟು ವೃತ್ತಾಂತಪತ್ರಿಕೆಗಳಲ್ಲಿಯೂ ಪ್ರಕಟನಪತ್ರಿಕೆಗಳಲ್ಲಿಯೂ ದೇಶಮಧ್ಯೆ ಅವರವರಿಗೆ ತಿಳಿದಂತವನ್ನು ಪ್ರಕಟಿಸುವುದರಿಂದ ದೇಶದ ಶಾಂತಿಸುಖಗಳಿಗೆ ಭಂಗ ಉಂಟಾಗುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಕಾರಣ ಈ ರೀತಿ ಪ್ರಕಟಿಸದೆ ಮೇಲೆ ಹೇಳಿದಂತೆ ಮಹಾಸಭೆಗಳಲ್ಲಾಗಲೀ ಅಥವಾ ಶಾಸ್ತ್ರೀಯಸಭೆಗಳನ್ನು ಸೇರಿಸಿಯಾಗಲಿ ನಿಜವಾದಂಶವನ್ನು ಪಡೆಯಿಸಿ ಅದರಂತೆ ವರ್ತಿಸಲು ಈ ಮಹಾಶಯರಿಗೆ ಸದ್ಬುದ್ಧಿಯನ್ನೀಯಲೆಂದು ಜಗದಾಚಾರ್ಯರನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ.

ಕೆ. ಕೊಟ್ರಪ್ಪ, ಸಾರಥಿ.

ಕರ್ನಾಟಕದ ರಾಷ್ಟ್ರೀಯ ಉತ್ಸವವಾದ

ನವರಾತ್ರಿಯ ಹಬ್ಬ.

ಕಳೆದವರುಷ ಈ ಹಬ್ಬವು ಕರ್ನಾಟಕದಲ್ಲೆಲ್ಲ ರಾಷ್ಟ್ರೀಯ ಉತ್ಸವವೆಂದು ಉತ್ಸಾಹದಿಂದ ಜರುಗಿಸಲ್ಪಟ್ಟಿತು. ಈಸಲ ಬೆಳಗಾಂವಿಯಲ್ಲಿ ಹೋದವರುಷಕ್ಕಿಂತಲೂ ಹೆಚ್ಚು ಸಡಗರದಿಂದ ಈ ನಾಡಹಬ್ಬವು ಜರುಗಬೇಕೆಂದು ಗೊತ್ತುಪಡಿಸಲಾಗಿದೆ. ಕರ್ನಾಟಕದ ಶಾರೀರಿಕ, ಮಾನಸಿಕ ಶಕ್ತಿಗಳು ಸುಸಂಘಟಿತವಾಗಿ ವಿಕಾಸಹೊಂದಲಿಕ್ಕೆ ಇಂಬು ದೊರೆಯುವಂತೆ ಈ ಹಬ್ಬಕ್ಕೆ ರೂಪ ಕೊಡಬೇಕಾಗಿದೆ. ಸಾಮಾನ್ಯಜನರಲ್ಲಿ ಧಾರ್ಮಿಕಭಾವನೆಯನ್ನೂ, ರಾಷ್ಟ್ರೀಯ ಸವಿಶೈಕ್ಯವನ್ನೂ ಉಂಟುಮಾಡುವದಕ್ಕೆ ಪ್ರಯತ್ನಿಸಬೇಕಾಗಿದೆ. ನಮ್ಮಲ್ಲಿ ಪರಸ್ಪರ ಪ್ರೀತಿವಿಶ್ವಾಸಗಳುಂಟಾಗುವಂತೆ ಮಾಡಿ ಒಕ್ಕಟ್ಟನ್ನು ಬೆಳೆಯಿಸಬೇಕಾಗಿದೆ. ನಡೆದಿರುವ ಸ್ತ್ರೀಯರ ರಂಗವಲ್ಲಿ ಕಸೂತಿ ಮೊದಲಾದ ಕೈಕೆಲಸದ ಕಲೆಗಳನ್ನು ಮತ್ತೆ ರೂಪಕ್ಕೆ ತರುವುದು ಅವಶ್ಯವಾಗಿದೆ. ತರುಣರಲ್ಲಿ ಹಸ್ತೋದ್ಯೋಗಗಳು ಹೆಚ್ಚಿ ತಮ್ಮ ನಾಡು ತಮ್ಮ ನುಡಿ ಮೊದಲಾದವುಗಳ ವಿಷಯವಾಗಿ ಅವರಲ್ಲಿ ಅಭಿಮಾನವುಂಟಾಗುವಂತೆ ಮಾಡುವದು ಅಗತ್ಯದ ಕೆಲಸವಾಗಿದೆ. ಹೀಗೆ ಕರ್ನಾಟಕದ ಸಾಮಾನ್ಯಜನರ ಮತ್ತು ಸುಶಿಕ್ಷಿತ ಸಮಾಜದ ಶಾರೀರಿಕ ಮಾನಸಿಕಶಕ್ತಿಗಳ ವಿಕಾಸಕ್ಕೆ ಅನುವು ದೊರೆಯುವಂತೆ ಬರುವ ಅಶ್ವೀಜ ಶುದ್ಧ ಪ್ರತಿಪದೆ (3-10-29) ಯಿಂದ ನವಮಿಯ (12-10-29) ವರೆಗೆ ಉಪನ್ಯಾಸಗಳು, ಕೀರ್ತನೆಗಳು, ಲಾವಣಿಗಳು, ಕವಿಗಳ ಸಮ್ಮೇಳನ ಮೊದಲಾದವುಗಳನ್ನು ಏರ್ಪಡಿಸಿ ಬೆಳಗಾಂವಿಯಲ್ಲಿ ಈ ಉತ್ಸವವನ್ನು ಸಾಂಗಗೊಳಿಸಿ ರಾಷ್ಟ್ರೀಯ ಭಾವನೆಯನ್ನು ಹೆಚ್ಚಿಸುವ ಯತ್ನಮಾಡಬೇಕಾಗಿದೆ. ಇವೆಲ್ಲ ಕೆಲಸಗಳನ್ನು ಕೈಕೊಳ್ಳಬೇಕಾದರೆ ಹಣದ ಸಹಾಯ ವಿಶೇಷವಾಗಿ ಬೇಕು. ಧನಸಹಾಯವು ದೊರೆತಂತೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಕರ್ನಾಟಕದ ಈ ನಾಡಹಬ್ಬವು ಎಲ್ಲ ಬಗೆಯಿಂದಲೂ ಹುರುಪಿನಿಂದ ಚೆನ್ನಾಗಿ ನೆರವೇರಿಸಿ ಬೆಳಗಾಂವಿಗೆ ಶೋಭೆಬರುವಂತೆ ಮಾಡುವದು ಅಗತ್ಯವಾಗಿದೆ. ಆದುದರಿಂದ ಎಲ್ಲರೂ ತನುಮನಧನಗಳಿಂದ ಸಹಾಯಮಾಡಿ ಈ ಕೆಲಸಕ್ಕೆ ನೆರವಾಗಬೇಕೆಂದು ಬೇಡಿಕೆ.

ಹಿರಿಯರು.	ಅಡಕಗಾರರು.
ಜೋಶಿ ನಾರಾಯಣರಾಯರು.	ಕಟ್ಟಿ ಶೇಷಗಿರಿರಾಯರು.
ಕಿರಿಹಿರಿಯರು.	ವೇಟಕರ ರಾಮರಾಯರು.
ಸವಣೂರ ಹಣಮಂತರಾಯರು.	ನಂದದ ವೆಂಕಣ್ಣನವರು.
ಗೆಜ್ಜಿ ಕೃಷ್ಣರಾಯರು.	

ಕೆಲಸಗಾರರ ಕೂಟ.

ಹಲಗಲಿ ಹಂಪಯ್ಯನವರು.	ಪಾಟೀಲ ಕಲ್ಲನಗೌಡರು.
ದಾತಾರ ಬಳವಂತರಾಯರು.	ಬೆಳವಿ ಬಳವಂತರಾಯರು.
ಪಾಟೀಲ ವೀರನಗೌಡರು.	ಮುಂದಗಿ ಅನಂತರಾಯರು.
ಅಡ್ಡಣಗಿ ಶಿವರುದ್ರಪ್ಪನವರು.	ಅಂಕಲೆ ಯಶವಂತರಾಯರು.
ಗೋಖಲೆ ಕೃಷ್ಣರಾಯರು.	ವಿಜಾಪುರ ಕಲ್ಯಾಣರಾಯರು.
ಪಂಡಿತ ವೆಂಕಟರಾಯರು.	ಕುಲಕರ್ಣಿ ಕೃಷ್ಣರಾಯರು.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಸಿದ್ಧರಾಮೇಶ್ವರ ಪುರಾಣ ಮಹೋತ್ಸವ ಕಲುಬುರಗಿ.

ಕಲುಬುರಗಿ ಚೌದಾಪುರೀ ಹಿರೇಮಠ ಮೂಲಮಠ ಬ್ರಹ್ಮಪುರದ ಚರಸ್ಥಿರ ಪಟ್ಟಾಧ್ಯಕ್ಷರಾದ ವೇ||ಶ್ರೀಶಾಂತವೀರಸ್ವಾಮಿಗಳು, ಉರ್ಫ್ ರಾಚೋಟಿಪನವರು, ಬ್ರಹ್ಮಪುರ ಬೃಹನ್ಮಠದಲ್ಲಿ ಇದೇ ಶುಕ್ಲನಾಮ ಸಂ|| ಶ್ರಾವಣಮಾಸದಲ್ಲಿ ಶ್ರೀಸಿದ್ಧರಾಮೇಶ್ವರ ಪುರಾಣವನ್ನು ತಾವೇ ಹೇಳುತ್ತ ಸಮಸ್ತ ಭಕ್ತಮಾಹೇಶ್ವರರ ಹೃದಯದಲ್ಲಿ ವೀರಶೈವಧರ್ಮಾಚರಣೆಗಳನ್ನು ಸಂಪೂರ್ಣ ಬಿಂಬಿಸುವಂತೆ ಮಾಡಿದರು. ಇದೇ ಭಾದ್ರಪದ ಶು|| ೧೦ನೆಯ ದಿವಸ ಪುರಾಣದ ಮಂಗಲಾರಾಧನೆಯನ್ನು ಮಾಡಿ ಎಂಟು ಸಹಸ್ರಜನರನ್ನು ತೃಪ್ತಿಗೊಳಿಸಿದರು. ಮರುದಿವಸ ಅಂದರೆ ಭಾದ್ರ|| ೧೧ ಸೋಮವಾರ ಹಗಲು 10 ಘಂಟೆಗೆ ಮಠದ ಶ್ರೀಗಳು ಪುರಾಣ ಸಹಿತ ಪಲ್ಲಕ್ಕಿಯನ್ನು ಅಲಂಕರಿಸಲು ಉತ್ಸವವು ವಾದ್ಯವಿಜೃಂಭಣೆಯಿಂದಲೂ ಛತ್ರಚಾಮರಅಬ್ದಾಗಿರಿಗಳಿಂದಲೂ ಅನೇಕ ಭಜನಾಮಂಡಲಿಗಳಿಂದಲೂ ಸಂಪೂರ್ಣ ಕಲುಬುರಗಿ ಬಾಜಾರದಲ್ಲಿ ಮೆರವಣಿಗೆ ಮಾಡಿಕೊಂಡು ಹಿರೇಬಾಜಾರದಲ್ಲಿರುವ ಶ್ರೀಗಳ ಮಠಕ್ಕೂ ದೇವಸ್ಥಾನಕ್ಕೂ ಹೋಗಿದ್ದು ಅನಂತರ ಬ್ರಹ್ಮಪುರ ಮಠವನ್ನು ಮುಟ್ಟಿತು. ಆಮೇಲೆ ಶ್ರೀಗಳು ಸರ್ವರಿಗೂ ಇಂಥಾ ಧರ್ಮಕಾರ್ಯದಲ್ಲಿ ಯಾವಾಗಲೂ ಶ್ರದ್ಧೆಯಿರಬೇಕೆಂದು ಹೇಳಿ ಆಶೀರ್ವದಿಸಿದರು. ಈ ಕಲುಬುರಗಿಯಲ್ಲಿ ಸಂಗಡಗೆಳದ್ದರೂ ಶ್ರೀಗಳ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ಸರ್ವರೂ ಉತ್ಸಾಹದಿಂದ ನಡೆಸಿದ ಸಮಾರಂಭದ ವೈಭವವನ್ನೂ ಬ್ರಹ್ಮಪುರದಭಕ್ತರು ತನುಮನಧನಂಗಳಲ್ಲಿ ವಂಚಕತೆಯಿಲ್ಲದೆ ಅವಿಶ್ರಾಂತವಾಗಿ ಕೆಲಸ ಮಾಡಿ ಸರ್ವರಿಗೂ ಆನಂದವಾಗುವಂತೆ ಮಾಡಿದುದನ್ನೂ ಎಷ್ಟು ವರ್ಣಿಸಿದರೂ ಸಾಲದು. ಇಂಥಾ ಸಾಹಸಸಂಪನ್ನರಾದ ಸಮಸ್ತ ಭಕ್ತರಿಗೂ ಗೌರೀಶಂಕರರು ಸರ್ವದಾ ಇಷ್ಟಾರ್ಥ ಫಲದಾಯಕರಾಗಲೆಂದು ಪ್ರಾರ್ಥಿಸುವ.

ಓರ್ವ ಪ್ರತ್ಯಕ್ಷದರ್ಶೀ.

ಓಂ ಶ್ರೀಗುರು

ಯಾದಗಿರಿಯ ಎರಡನೆಯ ಸುವಾರ್ತೆ.

ವೀರಶೈವಬ್ರಾಹ್ಮಣರೇ ಸುದ್ದಿಯಿಗೇ ? ನಮ್ಮ ಸಮಾಜವು ಯುಗಯುಗಾಂತರಗಳಿಂದ ಉನ್ನತಿಯಲ್ಲಿದ್ದು ಏನೋ ಕಾಲಚಕ್ರದಿಂದ ಕಲಿಯುಗದಲ್ಲಿ ಮಾತ್ರ ನಶಿಸುತ್ತಿರುವುದನ್ನು ಕೆಲಸತ್ಯದಯ ಧನಾಢ್ಯರೂ ಸುಶಿಕ್ಷಿತರೂ ನೋಡಲಾರದೆ ಸಮಾಜದ ಪುನರುಜ್ಜೀವನಕ್ಕಾಗಿ ಅಹೋರಾತ್ರಿ ಹೆಣಗಾಡುತ್ತಿರುವುದು ಇದು ಕಾಲಶಕ್ತಿಯೇ: ಇಂಥವರಲ್ಲಿ ಕೀರ್ತಿಶೇಷರಾದ ಧರ್ಮವೀರ (ಶೈ ಶಂಕರಣ್ಣ) ನವರು ಒಬ್ಬರಾಗಿರುವರು. ಇವರು ಧಾರ್ಮಿಕ ವಿದ್ಯೆಯ ಅಭಿವೃದ್ಧಿಗಾಗಿ (1½) ಲಕ್ಷ ರೂಪಾಯಿಗಳನ್ನು ದಾನಮಾಡಿ ಸಂಸ್ಕೃತಕಾಲೇಜನ್ನು ಸ್ಥಾಪಿಸಿದ್ದು ಯಾದಗಿರಿಯ ಒಂದನೆಯ ಸುವಾರ್ತೆಯಲ್ಲವೇ? ಇದನ್ನು ಕೇಳಿದರೆ ಯಾವ ಜೀವಧಾರಿಯಾದ ಮನುಷ್ಯನಿಗೆ ಆನಂದಾಭಿಮಾನಗಳುತ್ಪನ್ನವಾಗಿಗಿಲ್ಲ. ಇಂಥಾ ಸಮಾಜಸುಧಾರಣೆಗೆ 1 ಲಕ್ಷ ರೂಪಾಯಿ ದಾನಮಾಡಿದ ಮಹಾಶ್ರೀ ಅಕ್ಕನಾಗಮ್ಮನವರ ವಿಚಾರಪರವು ಮ|| ರಾ|| ಲಿಂಗೇಗೌಡ ಸಿದ್ಧಪ್ಪನವರ ದೂರದೃಷ್ಟಿಯೂ ಸಮಾಜಸೇವಕಧುರೀಣರಾದ ರುದ್ರಪ್ಪ ವಕೀಲ ಹೈಕೋರ್ಟರವರ ಅನುಮತಿಯೂ, ಸ್ತುತ್ಯನಾದದ್ದಲ್ಲವೇ ? ಮತ್ತು ಸಮಾಜ ಸುಧಾರಕರಾದ ಗುರುಮಠಕಲ್ಲು ಶ್ರೀಗಳವರ ದೀರ್ಘಪ್ರಯತ್ನವು ಶ್ಲಾಘ್ಯವಾದದ್ದು ಆನಾಥಜಂಗಮಮೂರ್ತಿಗಳ ಪುಣ್ಯೋದಯವು ಸಮಾಜದ ಸುದೈವವು ಈ ಅತ್ಯಂತ ಸಂತೋಷಕರವಾದ ವಾರ್ತೆಯನ್ನು ಕೇಳಿ ಯಾರು ತಾನೇ ಆನಂದಪಡದೆ ಇರಲಾರರು?

ಮಾಸ್ತರ್ ರೇವಣಸಿದ್ದಪ್ಪ ಕಲ್ಲೂರಕರ್.

ಪಂಚಾಚಾರ್ಯ ಪ್ರಭಾ

೧೯೨೯ ನೇ ಸೆಪ್ಟಂಬರ್ ತಾ|| ೩೦ ನೇ ಸೋಮವಾರ

ಗುರುವರ್ಗದ ಕರ್ತವ್ಯ.

ಉತ್ತಮರಾದ ಉಪಾಧ್ಯಾಯರು ಬಾಲಕರನ್ನು ವಿದ್ಯಾಧಿಕರನ್ನಾಗಿಯೂ, ಗುಣಾಧಿಕರನ್ನಾಗಿಯೂ ಮಾಡುವುದರಲ್ಲಿ ಹೇಗೆ ಮುಖ್ಯಕಾರಣರೋ ಹಾಗೆ ಮಠಧರ್ಮಾಧಿಕಾರವನ್ನು ವಹಿಸಿದ ಗುರುಗಳು ತಮ್ಮ ಮಠದ ಜನರನ್ನು ಸಂಸ್ಕಾರಸಂಪನ್ನರನ್ನಾಗಿಯೂ, ಅತಿಶಯಭಕ್ತಿಯುತರನ್ನಾಗಿಯೂ, ಸ್ವಧರ್ಮಾಸಕ್ತರನ್ನಾಗಿಯೂ, ಜ್ಞಾನಿಗಳನ್ನಾಗಿಯೂ ಮಾಡುವದರಲ್ಲಿ ಮುಖ್ಯಕಾರಣರಾಗಿರುತ್ತಾರೆ. ಉತ್ತಮವಾದ ದೋಣಿಯನ್ನಾಶ್ರಯಿಸಿದ ಜನರು ಹೇಗೆ ಸುಖವಾಗಿ ನದಿಯನ್ನು ದಾಟುವರೋ ಹಾಗೆ ಸದ್ಗುರುಗಳನ್ನಾಶ್ರಯಿಸಿದ ಶಿಷ್ಯರು ಸಂಸಾರಸಾಗರವನ್ನು ದಾಟುವರು. ಗುರುಗಳಲ್ಲಿ ಆ ಶಕ್ತಿಯು ಧನಕನಕಾದಿವಸ್ತುಗಳಿಂದಲೂ, ಸೌಂದರ್ಯ ವೇಷಾದಿಗಳಿಂದಲೂ ಕಾಪಟ್ಯದಿಂದಲೂ, ವಾಗಾಡಂಬರದಿಂದಲೂ ಉಂಟಾಗುವದಿಲ್ಲ. ಗುಣಗಳಿಂದಲೂ, ವಿದ್ಯೆಗಳಿಂದಲೂ, ಧರ್ಮಸಿದ್ಧಾಂತಗ್ರಂಥಾಭ್ಯಾಸದಿಂದಲೂ, ಧರ್ಮಾನುಷ್ಠಾನದಿಂದಲೂ, ತತ್ವಜ್ಞಾನಾನುಭವದಿಂದಲೂ ಉಂಟಾಗುತ್ತದೆ. ಯಾರಲ್ಲಿ ಆ ಶಕ್ತಿಯು ಇರುವದಿಲ್ಲವೋ ಅವರು ನಾಮತಃ ಗುರುಗಳೆನಿಸಿಕೊಂಡು ಮುಗ್ಧಜನರನ್ನು ಕಪಟೋಕ್ತಿಗಳಿಂದ ಸ್ವಾಧೀನರನ್ನು ಮಾಡಿಕೊಂಡು ಅವರಿಂದ ದ್ರವ್ಯವನ್ನಾರ್ಜಿಸಿ ಅದನ್ನು ತಮ್ಮ ಭೋಗಕ್ಕೂ, ತಮ್ಮ ಬಂಧುಗಳನ್ನು ಪೋಷಿಸುವದಕ್ಕೂ ವಿನಿಯೋಗಿಸುವರು. ಉತ್ತಮರಾದ ಪ್ರಭುಗಳು ಪ್ರಜೆಗಳಿಂದ ನ್ಯಾಯಾನುಸಾರವಾಗಿ ದ್ರವ್ಯವನ್ನಾರ್ಜಿಸಿ ಅದನ್ನು ಆ ಪ್ರಜೆಗಳ ಸುಖಕ್ಕಾಗಿಯೇ ಹೇಗೆ ಉಪಯೋಗಿಸುವರೋ ಹಾಗೆ ಆ ಶಕ್ತಿಯನ್ನು ಪಡೆದ ಗುರುಗಳು ಶಿಷ್ಯರಿಂದ ನ್ಯಾಯಾನುಸಾರವಾಗಿ ದ್ರವ್ಯವನ್ನು ಸಂಪಾದಿಸಿ ಅದನ್ನು ಅವರ ಧರ್ಮ, ವಿದ್ಯೆ ಮೊದಲಾದುವುಗಳ ವೃದ್ಧಿಗೋಸ್ಕರ ಉಪಯೋಗಿಸುವರು. ಆದರೆ ಕುಲಶೀಲಾದಿಗಳಿಂದ ಉತ್ತಮರಾದ ಜನರಲ್ಲಿ ಯಾರಾದರೂ ಕಪಟಗುರುಗಳ ಸಂಬಂಧವನ್ನು ಹೊಂದಿದರೆ ಅವರು "ಸಂಸರ್ಗಜಾ ದೋಷಗುಣಾ ಭವಂತಿ" ಎಂದು ನ್ಯಾಯವಿರುವದರಿಂದ ಧರ್ಮರಹಿತರೂ ಅಜ್ಞಾನಿಗಳೂ ಆಗುವರು. ಅವರು ಇಹಲೋಕದಲ್ಲಿ ನಿಂದಿತರಾಗಿ, ಪರಲೋಕದಲ್ಲಿ ಸದ್ಗತಿಯನ್ನು ಹೊಂದುವದಿಲ್ಲ.

ವೀರಶೈವವು ಶಿವೋಕ್ತವಾದುದರಿಂದ ಶಿವಮತವೆಂದೂ, ಶಿವಭಕ್ತರಿಂದಲೇ ಆಶ್ರಯಿಸಲ್ಪಡುವದಕ್ಕೆ ಯೋಗ್ಯವಾಗಿರುವದರಿಂದ ಶಿವಭಕ್ತಮತವೆಂದೂ ಪ್ರಸಿದ್ಧವಾಗಿ ಶಿವಪಂಚಮುಖೋದ್ಭೂತರಾದ ಶ್ರೀ ಜಗದ್ಗುರು ಪಂಚಾಚಾರ್ಯರಿಂದಲೇ ಸ್ಥಾಪಿತವಾಗಿ ಮೋಕ್ಷದಾಯಕವಾಗಿರುತ್ತದೆ. ಇದನ್ನಾಶ್ರಯಿಸಿದ ಜನರಿಗೆ ಸಂಸ್ಕಾರಗಳನ್ನು ಕೊಡುವದರಲ್ಲಿಯೂ ಶಿವಧರ್ಮಗಳಾದ ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷ, ಮಂತ್ರ, ಪಾದೋದಕ, ಪ್ರಸಾದಗಳೆಂಬ ಅಷ್ಟಾವರಣ ಕ್ರಿಯೆಗಳನ್ನೂ, ಲಿಂಗಾಚಾರ ಸದಾಚಾರ, ಶಿವಾಚಾರ, ಭೃತ್ಯಾಚಾರ ಗಣಾಚಾರಗಳೆಂಬ ಪಂಚಾಚಾರಗಳನ್ನೂ ಅಪ್ರಾಕೃತ ವರ್ಣಾಶ್ರಮಾಚಾರಗಳನ್ನೂ, ಷಟ್ಸ್ಥಲಲಿಂಗಾಂಗಸಮರಸಾತ್ಮಕವಾದ ಶಿವಜ್ಞಾನವನ್ನೂ ಉಪದೇಶಿಸುವುದರಲ್ಲಿ ಸದ್ಗುರುಗಳೇ ಶಕ್ತರಾಗಿರುತ್ತಾರೆ. ಆ ಸದ್ಗುರುಗಳಲ್ಲಿ ವೇದವೇದಾಂಗಾದಿವಿದ್ಯಾವೈದುಷ್ಯ, ಶಿವಾದ್ವೈತಸಿದ್ಧಾಂತಪಾಂಡಿತ್ಯ, ಚತುಷ್ಷಷ್ಟಿ ತಂತ್ರಪ್ರಯೋಗನೈಪುಣ್ಯ, ಸತ್ಯವಾದಿತ್ವ ಲೋಭಮೋಹರಾಹಿತ್ಯ, ಭ್ರಾಂತಿರಾಹಿತ್ಯ, ನಿಶ್ಚಯಬುದ್ಧಿ, ಶಿವಧರ್ಮನಿಷ್ಠೆ, ಗುರುಪರಂಪರಾಗತ ಶಾಸ್ತ್ರೀಯಾಚಾರಸಂಪತ್ತಿ, ಶಿವಧ್ಯಾನಾಸಕ್ತಿ, ಭಸ್ಮತ್ರಿಪುಂಡ್ರರುದ್ರಾಕ್ಷಧಾರಣಾಸಕ್ತಿ, ಬಾಹ್ಯಾಂತರ್ಲಿಂಗಧಾರಣಸಂಪತ್ತಿ, ಬಾಹ್ಯಾಂತರ್ಲಿಂಗೋಪಾಸನೆ, ಏಕೋತ್ತರಶತಸ್ಥಲಜ್ಞಾನ, ಲಿಂಗಾಂಗಸಂಬಂಧವಿಚಾರ ಮೊದಲಾದ ಲಕ್ಷಣಗಳಿರಬೇಕು. ಪ್ರಾಚೀನಕಾಲದಲ್ಲಿ ಇಂಥಹ ಸದ್ಗುರುಗಳೇ ಈ ಮಠೀಯರ ಮಠಾಧಿಕಾರಗಳನ್ನು ವಹಿಸುತ್ತಿದ್ದರಾದ್ದರಿಂದ ಆ ಕಾಲದಲ್ಲಿದ್ದ ಈ ಮಠೀಯರಲ್ಲಿ ಶಿವಭಕ್ತಿ ಶಿವಧರ್ಮ ಶಿವಜ್ಞಾನಗಳು ಔನ್ನತ್ಯವನ್ನು ಹೊಂದಿದ್ದವೆಂದು ಹೇಳಬಹುದು. ಆದ್ದರಿಂದ ಆ ಕಾಲದಲ್ಲಿ ಈ ಮಠೀಯರಲ್ಲಿ ಹಲವರು ಮಹಾತ್ಮರೂ, ಹಲವರು ಗ್ರಂಥಕರ್ತರೂ ಆಗಿದ್ದರು. ಆ ಗುರುಗಳಿಗಾದರೋ ಸ್ವಮತ ಪರಮತದ ಬಹುಮಂದಿರಾಜರು ಭಕ್ತರಾಗಿ ಅವರ ಮಠಗಳಿಗೆ ವೃತ್ತಿ ಮಾನ್ಯ ಮೊದಲಾದ ಅನುಕೂಲಗಳನ್ನು ಮಾಡಿಕೊಟ್ಟರು. ಸ್ವಲ್ಪಕಾಲದಿಂದ ಈ ಮಠದಲ್ಲಿ ಅಂಥ ಸದ್ಗುರುಗಳ ಸಂಖ್ಯೆಯು ಕಡಿಮೆಯಾದುದರಿಂದ ಈ ಮಠೀಯರಿಗೆ ಪರಮತೀಯರಿಂದ ಹಲವು ತೊಂದರೆಗಳು ಉಂಟಾಗುತ್ತಬಂದವು. ಮತ್ತು ಈ ಮಠದ ಜನರಲ್ಲಾದರೋ ಹಲವರುಮೂಢರೂ ಅಸಂಸ್ಕಾರಿಗಳೂ ಆಗಿ ಸ್ವಧರ್ಮಗಳ ಸ್ವರೂಪಗಳನ್ನು ತಿಳಿಯದವರಾಗಿ ತಮ್ಮ ಗೋತ್ರಸೂತ್ರಪ್ರವರಶಾಖೆಗಳನ್ನೂ, ಶ್ರೀ ಜಗದ್ಗುರು ಪಂಚಾಚಾರ್ಯರ ಮಹತ್ವವನ್ನೂ ಅರಿಯದವರಾದರು. ಅವರಲ್ಲಿ ಕೆಲವರನ್ನು ಕಪಟಗುರುಗಳು ತಮ್ಮ ಕಪಟವೇದಾಂತೋಪದೇಶದಿಂದ ಸ್ವಾಧೀನರನ್ನು ಮಾಡಿಕೊಂಡು ಅವರಿಗೆ ವೇದವೇದಾಂಗಾದಿವಿದ್ಯೆಗಳಲ್ಲಿಯೂ ಸ್ವಧರ್ಮಗಳಲ್ಲಿಯೂ ಹೇಯಬುದ್ಧಿಯನ್ನು ಹುಟ್ಟಿಸಿ ದುರಾಚಾರಗಳನ್ನೇ ಬೋಧಿಸುತ್ತ ಸ್ವಾರ್ಥಪರರಾಗಿ ಧರ್ಮಘಾತುಕರಾಗಿರುವರು. ಸದ್ಯಃ ಈ ಮಠದಲ್ಲಿ ಕೆಲವರು ಸದ್ಗುರುಗಳು ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿರುವದರಿಂದಲೇ ಈ ಮಠದ ಜನರೆಲ್ಲರೂ ಕಪಟಗುರುಗಳ ವಶರಾಗಿಲ್ಲ. ಆದರೆ ಸದ್ಗುರುಗಳ ಸಂಖ್ಯೆಗಿಂತ ಕಪಟಗುರುಗಳ ಸಂಖ್ಯೆಯು ವಿಶೇಷವಾಗಿರುವದರಿಂದ ಧರ್ಮಸುಧಾರಣೆಯು ನಿರ್ವಿಘ್ನವಾಗಿ ನೆರವೇರುತ್ತಿಲ್ಲ. ಆದ್ದರಿಂದ ಮಾಹೇಶ್ವರರು ತಮ್ಮ ವಟುಗಳನ್ನು ವೇದವೇದಾಂಗಾದಿ ವಿದ್ಯಾಸಂಪನ್ನರನ್ನಾಗಿಯೂ, ವೀರಶೈವಧರ್ಮಸಿದ್ಧಾಂತಗ್ರಂಥಗಳಲ್ಲಿ ಪಂಡಿತರನ್ನಾಗಿಯೂ ಮಾಡುವದಕ್ಕೋಸ್ಕರ ಪ್ರಯತ್ನಗಳನ್ನು ವಿಶೇಷವಾಗಿ ಅವಲಂಬಿಸಿದರೆ ಇನ್ನು ಸ್ವಲ್ಪಕಾಲದಲ್ಲಿಯೇ ಈ ಮಠದಲ್ಲಿ ಸದ್ಗುರುಗಳ ಸಂಖ್ಯೆಯು ಹೆಚ್ಚಿ ಈ ಮಠೀಯರಲ್ಲಿ ಧರ್ಮಾಭಿವೃದ್ಧಿಯುಂಟಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಒಳದೇಶದ ವೃತ್ತಾಂತಗಳು.

ಈಸಲ ನವರಾತ್ರಿಯಕಾಲಕ್ಕೆ ಪುದುಚೇರಿಯ ಫ್ರೆಂಚ್‌ಗವರ್ನರನವರು ಪತ್ನಿ ಪರಿವಾರ ಸಮೇತರಾಗಿ ರಾಜಧಾನಿಗೆ ನಮ್ಮ ಮಹಾರಾಜರವರ ಅತಿಥಿಗಳಾಗಿ ದಯಮಾಡಿಸುವರೆಂದು ತಿಳಿಯಬಂದಿದೆ.

ಮೈಸೂರು ಸಂಸ್ಥಾನದ ಕೋ-ಆಪರೇಟಿವ್ ಸೊಸೈಟಿಗಳ ಹದಿನಾರನೇ ವಾರ್ಷಿಕ ಮಹಾಸಭೆಯು ಬರುವ ಅಕ್ಟೋಬರ್ 8 ನೆಯ ಮಂಗಳವಾರದ ಬೆಳಿಗ್ಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ದಿವಾನ್‌ಸಾಹೇಬರಿಂದ ಪ್ರಾರಂಭಿಸಲ್ಪಟ್ಟು 3 ದಿವಸಗಳವರೆಗೆ ನಡೆಯುವುದು.

ಬೆಂಗಳೂರು ಸಿಟಿ ಚಿಕ್ಕಪೇಟೆಯ ಮಾರುತಿ ಹಾಲ್ ಎಂಬ ನಗಗಳ ಅಂಗಡಿಗೆ ಕಳೆದ ಗುರುವಾರ ರಾತ್ರಿ ಕಳ್ಳರು ಬಿದ್ದು ಕಬ್ಬಿಣದ ಪೆಟ್ಟಿಗೆಯನ್ನು ಸಾಗಿಸಿ ಒಡೆದು ಒಳಗಿದ್ದ ರೂಪಾಯಿ ಮತ್ತು ಇತರ ನಗಗಳನ್ನು ಅಪಹರಿಸಿರುತ್ತಾರೆಂದೂ, ಪತ್ತೆಮಾಡಿದವರಿಗೆ ಒಂದು ಭಂಗಾರದ ಮೆಡಲು ಕೊಡುವಂತೆ ಅಂಗಡಿ ಮಾಲೀಕರಾದ ಮಿ|| ಚನ್ನಪ್ಪನವರು ತಿಳಿಸಿರುವುದಾಗಿಯೂ ಕೇಳುತ್ತೇವೆ.

ತುಮಕೂರಿಗೆ 15 ಮೈಲಿ ದೂರದಲ್ಲಿರುವ ಸೀಬಿ ಎಂಬ ಗ್ರಾಮದ ಹೊರಪ್ರದೇಶದಲ್ಲಿ ಒಂದು ಬಿಡ ಮೃಗ (ಕಿರುಬವು) ಮಲಗಿದ್ದದ್ದನ್ನು ಹೊಲದಕಡೆಗೆ ಹೋಗುತ್ತಿದ್ದ ಒಬ್ಬ ಸಣ್ಣವಯಸ್ಸಿನ ಹುಡುಗನು ಕಂಡು, ಒಂದು ದೊಡ್ಡ ಕಲ್ಲನ್ನು ಎತ್ತಿ ಅದರ ತಲೆಯಮೇಲೆ ಹಾಕಲು ಕೂಡಲೇ ಸತ್ತಿತು. ಸತ್ತಮೃಗವನ್ನು ತುಮಕೂರಿಗೆ ಸಾಗಿಸಿಕೊಂಡುಬಂದರು. ಮೃಗದ ತಲೆಯಮೇಲೆ ಕಲ್ಲನ್ನು ಹಾಕಿ ಸಾಯಿಸಿದ ಹುಡುಗನ ಧೈರ್ಯವನ್ನು ಎಲ್ಲರೂ ಮೆಚ್ಚಿದರೆಂದು ತಿಳಿದು ಬರುತ್ತದೆ.

ಬೆಂಗಳೂರು ಸಿಟಿಯಲ್ಲಿ ಹಿಂದೂ ಮಹಾಸಭೆಯ ಆಶ್ರಯದಲ್ಲಿ ಗಣಪತಿಯನ್ನು ಪ್ರತಿಷ್ಠೆಮಾಡಿ ಎಂಟು ದಿನ ಪ್ರತಿನಿತ್ಯವೂ ಒಬ್ಬೊಬ್ಬರಂತೆ ದೊಡ್ಡ ಮನುಷ್ಯರು ಉಪನ್ಯಾಸಗಳನ್ನು ಮಾಡುತ್ತಿದ್ದರು. ಕಡೇ ದಿನ ಅಂದರೆ ತಾ. 15 ನೆಯ ಭಾನುವಾರ ಸಾಯಂಕಾಲ ಉತ್ಸವವನ್ನು ಮಾಡಿ ಗಣೇಶನನ್ನು ಧರ್ಮಾಂಬುಧಿ ಕೆರೆಯಲ್ಲಿ ಬಿಟ್ಟುಬಂದರು. ಈ ಉತ್ಸವವು ಬಹಳ ಶಾಂತವಾಗಿಯೂ, ನೇತ್ರಾನಂದಕರವಾಗಿಯೂ ಜರುಗಿತು. ಸಾವಿರಾರು ಪ್ರಜೆಗಳು ಈ ಉತ್ಸವದಲ್ಲಿ ಏಕೀಭವಿಸಿ ಬೆರೆದು ಸಂಭ್ರಮಪಟ್ಟರು. ಡೆಪ್ಯುಟಿಕಮೀಷನರು, ಇನ್‌ಸ್ಪೆಕ್ಟರ್ ಜನರಲ್‌ರವರೂ, ಇತರ ಅಧಿಕಾರಸ್ಥರೂ ಪೋಲೀಸಿನವರನ್ನು ಇಟ್ಟುಕೊಂಡು ಯಾವುದೊಂದು ಗಲಾಟೆಗೂ ಆಸ್ಪದವಿಲ್ಲದಂತೆ ಬಂದೋಬಸ್ತು ಮಾಡಿದರು.

ರಜದಮೇಲೆ ಇಂಗ್ಲೆಂಡಿಗೆ ಹೋಗಿರುವ ವೈಸ್ರಾಯ್ ಲಾರ್ಡ್ ಅರ್ವಿನ್‌ರವರು ಮುಂದಿನ ತಿಂಗಳು 10 ಕ್ಕೆ ಭರತಖಂಡಕ್ಕೆ ಹಿಂದಿರುಗುವರು. ಇವರು ನವಂಬರ್ 21 ನೆಯ ಗುರುವಾರ ಬೆಳಿಗ್ಗೆ ಬೀರೂರು ಮಾರ್ಗವಾಗಿ ಶಿವಮೊಗ್ಗವನ್ನು ತಲುಪಿ ಗೆರುಸೊಪ್ಪಕ್ಕೆ ದಯಮಾಡಿಸುವರು. ಅಲ್ಲಿ ಒಂದುದಿವಸವಿದ್ದು 22 ನೆಯ ರಾತ್ರಿ ಶಿವಮೊಗ್ಗಕ್ಕೆ ಹಿಂತಿರುಗಿ ಅಲ್ಲಿ ರೈಲು ಹತ್ತಿ ತಾ|| 23 ನೆಯ ಶನಿವಾರ ಬೆಳಿಗ್ಗೆ 8 ಗಂಟೆಗೆ ರಾಜಧಾನಿಯನ್ನು ತಲುಪುವರು. ಅದಿನ ಭೋಜನವಾದ ನಂತರ ಖಾರಾಪುರಕ್ಕೆ ದಯಮಾಡಿಸಿ ಮೂರುದಿವಸ ಅಲ್ಲಿದ್ದು 27 ನೆಯ ಬುಧವಾರ ಸಾಯಂಕಾಲ ರಾಜಧಾನಿಗೆ ಹಿಂತಿರುಗುವರು. ಆ ರಾತ್ರಿ ಗೌರ್ನಮೆಂಟ್ ಹೌಸಿನಲ್ಲಿ ಔತಣ ನಡೆದು, 28 ನೆಯ ಪ್ರಾತಃಕಾಲ ಮಡಕೇರಿಗೆ ಪ್ರಯಾಣಮಾಡಿ ಮರುದಿವಸ ಕನ್ನಾನೂರಿಗೆ ಪ್ರಯಾಣಬೆಳಸುವರೆಂದು ತಿಳಿದುಬಂದಿದೆ.

ಇದೇ ಬರುವ ಅಕ್ಟೋಬರ್ 3ನೆಯ ಗುರುವಾರ ನವರಾತ್ರ್ಯಾರಂಭವಾಗಿ ಶ್ರೀಮನ್ಮಹಾರಾಜರವರು ಆ ದಿನ ಬೆಳಿಗ್ಗೆ 9-50 ಘಂಟೆಗೆ ಸಿಂಹಾಸನಾರೋಹಣವನ್ನು ಬೆಳಸುತ್ತಾರೆ. ಪಟ್ಟದ ಆನೆ ಪಟ್ಟದ ಕುದುರೆಗಳು ಸಾಯಂಕಾಲ 6 ಘಂಟೆಗೆ ಕೆರೆಗೆ ಬಿಜಮಾಡಿ ಹಿಂದಿರುಗುವುವು. 7 ಘಂಟೆಗೆ ಶ್ರೀಮನ್ಮಹಾರಾಜರ ದರ್ಬಾರ್, 4 ನೆಯ ಶುಕ್ರವಾರದಿಂದ 11 ನೆಯ ಶುಕ್ರವಾರದವರೆಗೂ ಬೆಳಿಗ್ಗೆ 8 ಘಂಟೆಗೆ ಗಜಾಶ್ವಾದಿಗಳು ಕೆರೆಗೆ ಹೋಗಿ ಹಿಂದಿರುಗುವುವು. ಸಾಯಂಕಾಲ 7 ಘಂಟೆಗೆ ದರ್ಬಾರ್. 12 ನೆಯ ಶನಿವಾರ ಬೆಳಿಗ್ಗೆ ಅರಮನೆಯ ಮುಂಭಾಗದಲ್ಲಿ ಶ್ರೀಮನ್ಮಹಾರಾಜರವರು ಗಜಾಶ್ವಾದಿಗಳಿಗೂ ಆಯುಧಗಳಿಗೂ ಪೂಜೆಯನ್ನು ಬೆಳಸುವರು. ಸಾಯಂಕಾಲ 7 ಘಂಟೆಗೆ ಇಂಗ್ಲೀಷ್ ದರ್ಬಾರ್, 13 ನೆಯ ಭಾನುವಾರ ಪಟ್ಟದ ಆನೆ ಪಟ್ಟದ ಕುದುರೆ ಆಯುಧಗಳ ಸಮೇತ ಬನ್ನಿಮಂಟಪಕ್ಕೆ ಬಿಜಮಾಡುವುದು. ಅರಮನೆಯ ಮುಂಭಾಗದಲ್ಲಿ ಜಟ್ಟಿಕಾಳಗ, ಸಾಯಂಕಾಲ ನಾಲ್ಕು ಘಂಟೆಗೆ ಶ್ರೀಮನ್ಮಹಾರಾಜರವರು ದಿವ್ಯಾಲಂಕಾರ ಭೂಷಿತರಾಗಿ ಸಕಲ ಸೈನಿಕ ಮರ್ಯಾದೆಗಳೊಡನೆ ಅಂಬಾರಿಯಲ್ಲಿ ಕುಳಿತು ಬನ್ನಿಮಂಟಪಕ್ಕೆ ಬಿಜಮಾಡುವರು. 14 ನೆಯ ಸೋಮವಾರ ಮತ್ತು 15 ನೆಯ ಮಂಗಳವಾರ ಸಾಯಂಕಾಲ 7½ ಘಂಟೆಗೆ ದರ್ಬಾರು ನಡೆಯುವದು.

ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ಅಕ್ಟೋಬರ್ ತಾ. 3 ನೆಯ ಗುರುವಾರದಿಂದ ತಾ. 12 ನೆಯ ಶನಿವಾರದ ವರೆಗೆ ನಡೆಯುವವು. ಈ ಸಂಬಂಧದಲ್ಲಿ ಮೆರವಣಿಗೆಗಳೂ, ದರ್ಬಾರುಗಳೂ ಕೋಟೆಯೊಳಗೆ ಪದ್ಧತಿಯ ಪ್ರಕಾರ ಜರುಗುವವು. ತಾ. 13 ನೆಯ ಭಾನುವಾರ ವಿಜಯದಶಮಿ ಉತ್ಸವ ನಡೆಯುತ್ತದೆ.

ತಾ. 8 ನೆಯ ಮಂಗಳವಾರದಿಂದ ತಾ. 10 ನೆಯ ಗುರುವಾರದ ವರೆಗೆ ಮೂರು ದಿನ ಮೈಸೂರು ಸಂಸ್ಥಾನಾಮಳೆಯ ಪರಸ್ಪರ ಸಹಾಯ ಸಂಘಗಳ ಕಾನ್‌ಫರೆನ್ಸು ನಡೆಯುವುದು. ಆ ದಿನದಲ್ಲೇ ಪೋಲೋ ಪಂದ್ಯಗಳೂ ನಡೆಯುವಂತೆ ಏರ್ಪಾಡಾಗಿದೆ.

ತಾ. 14 ನೆಯ ಸೋಮವಾರದಿಂದ ತಾ. 19 ನೆಯ ಶನಿವಾರದ ತನಕ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕೂಟಗಳು ಜರಗುತ್ತವೆ. ತಾ|| 19 ನೆಯ ಶನಿವಾರ

ಮಹಾರಾಜಾ ಕಾಲೇಜ್ ಡೇ ಎಂಬ ವಾರ್ಷಿಕ ಸಂತೋಷ ಕೂಟವು ನಡೆಯಲು ಏರ್ಪಾಡಾಗಿದೆ.

ಮೈಸೂರು ರೈಲ್ವೆಸ್ಟೇಷನ್ ಬಳಿ ಇರುವ ಕಟ್ಟಡದಲ್ಲೂ ಎದುರು ಪಾರ್ಶ್ವದ ಕಟ್ಟೆ ಮೈದಾನದಲ್ಲೂ ವ್ಯವಸಾಯದ ಮತ್ತು ಕೈಗಾರಿಕೆಗಳ ಪ್ರದರ್ಶನೋತ್ಸವವು ತಾ|| 7ನೆಯ ಸೋಮವಾರದಿಂದ ಪ್ರಾರಂಭವಾಗಿ ತಾ. 20 ನೆಯ ಭಾನುವಾರದ ವರೆಗೆ ನಡೆಯುತ್ತದೆ. ಈ ಸಲದ ಪ್ರದರ್ಶನದಲ್ಲಿ ಗ್ರಾಮಪಂಚಾಯತಿ ಮತ್ತು ಸ್ಯಾನಿಟೇಷನ್, ಮಾದರಿ ಮನೆಗಳು, ಗ್ರಾಮಗಳ ಮಾದರಿ, ಇವನ್ನು ಬಹಳ ಚೆನ್ನಾಗಿ ಅಣಿಮಾಡಿಟ್ಟು ಪ್ರಾಮುಖ್ಯವಾಗಿ ತೋರಿಸುತ್ತಾರೆ. ಪ್ರದರ್ಶನ ಶಾಲೆಯಲ್ಲಿ ದಿನವಹಿ ಸಿನೆಮಾ ಮತ್ತು ನಾಟಕಗಳಾಗುವವು. ಕೃಷ್ಣರಾಜಸಾಗರದ ರಚನೆಯನ್ನು ಚೆನ್ನಾಗಿಯೂ ದೊಡ್ಡದಾಗಿಯೂ ಮಾಡಿಟ್ಟು ತೋರಿಸುತ್ತಾರೆ. ತಾ. 10, 11, 12 ರಲ್ಲಿ ನಾನಾಬಗೆಯ ಕಸರತ್ತಿನ ಪಂದ್ಯಗಳೂ, ಪ್ರದರ್ಶನಗಳೂ ನಡೆಯುವವು. ಯಕ್ಷಿಣೀ ಆಟಗಳೂ, ಕಾನ್ಸರ್ಟುಗಳೂ, ಬೆಂಗಳೂರಲ್ಲಿ ತಯಾರಾದ 3-4 ಸಿನೆಮಾ ಪ್ರದರ್ಶನಗಳೂ ತೋರಿಸಲಾಗುತ್ತವೆ.

ಆ ಕಾಲದಲ್ಲೇ ವಿಮಾನಯಂತ್ರವನ್ನು ತರಿಸಿದುವರು. ಬೇಕಾದವರು ಅದರಲ್ಲಿ ಕುಳಿತುಕೊಂಡು ಅಂತರಿಕ್ಷದಲ್ಲಿ ಸ್ವಲ್ಪ ಸ್ವಲ್ಪ ಹೊತ್ತು ಸಂಚಾರಮಾಡಬಹುದು ಏರ್ಪಾಡು ಮಾಡುತ್ತಾರೆ.

ಈ ಪ್ರಕಾರ ಈ ವರ್ಷ ಅಕ್ಟೋಬರ್ ತಿಂಗಳಲ್ಲಿ ರಾಜಧಾನಿಯೊಳಗೆ ನಾನಾವಿಧವಾದ ಸಂತೋಷಗಳು ನಡೆಯುವವು.

ವರ್ತಮಾನಸಂಗ್ರಹ.

ಕಲಕತ್ತೆಯಿಂದ ಹುಗ್ಲಿಯವರೆಗೆ 30 ಮೈಲನ್ನು 18 ವರ್ಷದ ತರುಣನೊಬ್ಬನು 4 ತಾಸು 34 ಮಿನಿಟುಗಳಲ್ಲಿ ಈಜಿಹೋದನಂತೆ!

ಜರ್ಮನಿಯ ಪೈಲ್ವಾನನೊಬ್ಬನು ಹಲ್ಲುಗಳ ಮಧ್ಯೆ ಹಿಡಿದ ಹಗ್ಗದಿಂದ ಮೋಟರೊಂದನ್ನು ಎಳೆಯುತ್ತಾ ಯುರೋಪ್ ಖಂಡವನ್ನು ಸುತ್ತಾಡುತ್ತಿರುವನಂತೆ!

ಇಂಗ್ಲೆಂಡಿನ ಹಲ್ ಎಂಬಲ್ಲಿ ಸುಮಾರು 50 ಲಕ್ಷ ಗ್ಯಾಲನ್ ಪ್ಯಾರಫಿನ್ ಎಣ್ಣೆಯನ್ನು ತುಂಬಿದ್ದ ಟ್ಯಾಂಕಿಗೆ ಬೆಂಕಿಬಿದ್ದು ಬಹಳ ನಷ್ಟವಾಗಿದೆ. ಇದು ಆರಲು 48 ದಿವಸಗಳು ಬೇಕಾಗುವುದೆಂದು ತಿಳಿಯ ಬಂದಿದೆ.

ಜೆರುಸಲೇಮಿನಲ್ಲಿ ಒಂದು ಹಳೆಗೋಡೆ ಇದೆ. ಅದನ್ನು ಜ್ಯೂಜನರು ಸಾಲೋಮನ ರಾಜ್ಯದ ಅರಮನೆ ಗೋಡೆಯೆಂದು ತಿಳಿದು ಅದರ ಹತ್ತಿರ ಹೋಗಿ ತಮ್ಮ ಗತವೈಭವವನ್ನು ಸ್ಮರಣೆಮಾಡಿ ಅಳುತ್ತಾರಂತೆ! ಈ ಪದ್ಧತಿಯು 700 ವರ್ಷಗಳಿಂದ ನಡೆದಿರುವದು.

ರಾಜದ್ರೋಹದ ಆರೋಪದಮೇಲೆ ರಂಗೂನು ಕಾರಾಗೃಹದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಫುಂಗಿ ವಿಜಯರೆಂಬ ಬೌದ್ಧ ಸನ್ಯಾಸಿಗಳು ಕಳೆದ 19 ನೆಯ ತಾರೀಖಿನದಿವಸ ಮೃತರಾದರು. ಇವರು 167 ದಿವಸಗಳಿಂದಲೂ ಉಪವಾಸ ವ್ರತವನ್ನಾಚರಿಸುತ್ತಿದ್ದರು.

ಜರ್ಮನಿಯ ಕೆಲವರು 500 ಮಂದಿ ಕೂತುಕೊಳ್ಳಲು ಸ್ಥಳವಿರುವ ತೇಲುವ ನಾಟಕ ಗೃಹವೊಂದನ್ನು ರಚಿಸಿರುವರು. ಇವರು ಲಂಡನ್, ಹ್ಯಾಂಬರ್ಗ್, ನ್ಯೂಯಾರ್ಕ್, ಬಾಲ್ಟಿಮೋರ್ ಮೊದಲಾದ ಬಂದರಗಳಿಗೆಲ್ಲಾ ಹೋಗಿ ಜರ್ಮನ್ ನಾಟಕಗಳನ್ನು ಪ್ರದರ್ಶನ ಮಾಡಬೇಕೆಂದಿರುವರು.

ಹಿಂದೂ ದೇಶದಲ್ಲಿ 18 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಹುಡುಗರಿಗೂ, 14 ವರ್ಷಕ್ಕಿಂತಲೂ ಕಡಿಮೆವಯಸ್ಸಿನ ಹುಡುಗಿಯರಿಗೂ ವಿವಾಹ ಮಾಡಕೂಡದೆಂದೂ ಹಾಗೆ ಮಾಡಿದರೆ ಜುಲ್ಮಾನೆ ಅಥವಾ ಸಜಾಶಿಕ್ಷೆಗೆ ಗುರಿಮಾಡಲ್ಪಡುವರೆಂಬ ಕಾನೂನು ಇಂಡಿಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಬಹುಮತದಿಂದ ಪಾಸಾಯಿತು.

ಪೆರಿಯೆಂಬವರು ಓರ್ವ ಪ್ರಯಾಣಿಕರೊಂದಿಗೆ ತೇಲುವ ಮೋಟಾರ್ ಸೈಕಲ್ಲಿನಲ್ಲಿ 7 ಗಂಟೆ 25 ನಿಮಿಷದಲ್ಲಿ ಇಂಗ್ಲೆಂಡಿನ ಡೋವರಿನಿಂದ ಫ್ರಾನ್ಸಿನ ಕಲೆವರೆಗಿನ

...ಜೀವನಕ್ರಮದಿಂದಲೇ
...ನ್ನೂ ಸಂಪಾದಿಸಬಹುದು.

...ಮಾಡುವ ಸಹಾಯವೇ ಇದು!

...ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ" ...ದುಗೆ ಆರೋಗದೃಢಕಾಯರಾಗಿ ಜೀವಿಸುವ ಮಾರ್ಗ ...ಡಿಯಲ್ಪಟ್ಟ ರೋಗನಿವಾರವನ್ನೂ ಬೋಧಿಸುವುದು. ...ರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ...ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗ ...ವಾಗಲು ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

...ಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ...ಣಾಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆ ...ವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪ... ...ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿ...

ತಮ್ಮ ಹೆಸ್ರ...

ಹೊಗಳಬೇಕೆಂದು ತೀರ್ಮಾನಿಸಿದರಂತೆ! ವಿಚಿತ್ರ ನ್ಯಾಯ!

ಕಡಪಾ ಡಿಸ್ಟ್ರಿಕ್ಟಿಗೆ ಸೇರಿದ ಮಂಗಾಪಟ್ಣಂ ಎಂಬ ಊರಿನಲ್ಲಿ, ಸೌಂದರ್ಯವತಿಯಾದ 26 ವರ್ಷ ಪ್ರಾಯದ ಕಮ್ಮ ಜಾತಿಯ ರಾಯರ್ತಕುಳ ಸುಬ್ಬಮ್ಮನೆಂಬ ಹೆಂಗಸನ್ನು, ಆಕೆಯು ತನ್ನ ಹೊಲದಲ್ಲಿ ಹುಲ್ಲು ಕುಯ್ಯುತ್ತಿರುವಾಗ ಯಾರೋ ದುರಾತ್ಮರು, ಕೊಲೆಮಾಡಿ ಒಂದು ಭಾವಿಗೆಸೆದಿದ್ದರು. ಪೋಲೀಸಿನವರು ತನಿಖೆ ನಡೆಸಿ ಇದುವರೆಗೆ ಒಬ್ಬನನ್ನು ದಸ್ತಗಿರಿಮಾಡಿರುವರು. ಮುಂದಿನ ತನಿಖೆ ನಡೆಯುತ್ತಿದೆ.

ಸಾಪೋಲ ಎಂಬಲ್ಲಿನ ಎರಡು ಗ್ರಾಮದವರು ಒಂದೊಂದು ಟೀಮಿನಲ್ಲಿ 400 ಮಂದಿ ನಿಂತು 100 ಶೀಶೆ ಸಾರಾಯಿಗೆ ಪಂಥ ಹಾಕಿ 3 ತಿಂಗಳ ತನಕ ದೊಡ್ಡ ಕ್ರಿಕೆಟ್ ಆಟವನ್ನು ಆಡಿದರಂತೆ! ಈ 3 ತಿಂಗಳ ಕೊನೆಯಲ್ಲಿ ಇವರೆಲ್ಲರೂ ಉಪವಾಸ ಬೀಳಬೇಕಾಯಿತು. ಯಾಕಂದರೆ ಆಟದ ಭರದಲ್ಲಿ ಮನೆಯ ಕೆಲಸದ ಗೊಡವೆಯೇ ಇವರಿಗಿದ್ದಿಲ್ಲ. ಕೊನೆಗೆ ಎರಡು ಕಡೆಯವರಿಗೂ ಜಗಳವಾಗಿ ಅನೇಕರು ಸತ್ತುಹೋದರಂತೆ. ಒಳ್ಳೇ ಕ್ರಿಕೆಟ್ ಆಟ.

ಮದ್ರಾಸ್ ಪಟ್ಟಣದಲ್ಲಿ ತಾ. 15 ರಲ್ಲಿ ವಿಶೇಷವಾಗಿ ಮಳೆ ಸುರಿದದ್ದರಿಂದ ಒಂದು ಮನೆಯ ಒಂದು ಪಾರ್ಶ್ವದ ಗೋಡೆ ಬಿದ್ದು ಅದರ ಹಿಂದಿದ್ದ ಒಂದು ಗುಡಿಸಲನ್ನು ಮುಚ್ಚಿಬಿಟ್ಟಿತು. ಅದರೊಳಗೆ 7 ಜನ ಗಂಡಸರೂ ಒಬ್ಬ ಹೆಂಗಸೂ ಹಾಡು ಹೇಳುತ್ತಾ ಸಂತೋಷದಲ್ಲಿದ್ದರು. ಆ ಗುಡಿಸಲಿನ ಮೇಲೆ ಮೇಲ್ಗಡೆ ಗೋಡೆ ಮಗುಚಿಕೊಂಡದ್ದರಿಂದ ಒಬ್ಬನು ಸತ್ತುಹೋದನು. ಗಾಯಪಟ್ಟಿದ್ದ ಉಳಿದ ಏಳು ಮಂದಿಯನ್ನೂ ಆಸ್ಪತ್ರೆಗೆ ಸಾಗಿಸಬೇಕಾಯಿತು. ಅವರಲ್ಲೂ ಒಬ್ಬನು ದಾರಿಯಲ್ಲೇ ಮೃತಪಟ್ಟನು.

ಬಾಂಕಾಲ್ ಜೈಲಿನಲ್ಲಿ ಉಪವಾಸವ್ರತವನ್ನು ಹಿಡಿದಿರುವ ಶ್ರೀ|| ಸರ್ತಸೇನ್‌ರವರನ್ನು 10,000 ರೂಪಾಯಿಗಳ ಜಾಮೀನಿನಮೇಲೆಯೂ ಬಾಕಿ 13 ಜನರನ್ನು ತಲಾ 500 ರೂಪಾಯಿಗಳ ಜಾಮೀನಿನಮೇಲೂ ಬಿಡುಗಡೆಮಾಡಬಹುದೆಂದು ಕಲ್ಕತ್ತ ಹೈಕೋರ್ಟು ಜಡ್ಜರಾದ ಜಸ್ಟಿಸ್ ಮಿತ್ತರ್, ಮತ್ತು ಜಸ್ಟಿಸ್ ಘೋಷ್‌ರವರು ತೀರ್ಮಾನ ಹೇಳಿದರು. ಅವರ ಸ್ಥಿತಿಯು ಇನ್ನೂ ಮೊದಲಿದ್ದಂತೆಯೇ ಇದೆ. ಆಹಾರವನ್ನು ತೆಗೆದುಕೊಳ್ಳುತ್ತಾ ಇಲ್ಲ. ಅವರನ್ನು ಸಂಧಿಸುವುದಕ್ಕೆ ಯಾರಿಗೂ ಅವಕಾಶಕೊಟ್ಟಿರಲಿಲ್ಲ.

ಸಂಪಗಾಂವ ತಾಲ್ಲೂಕು ಬುಧರಗಟ್ಟಿ ಗ್ರಾಮದಲ್ಲಿ ಮಳೆಯಿಲ್ಲದೆ ದನಕರುಗಳಿಗೆ ತುಂಬಾ ಕಷ್ಟವಾಗಿರುವದನ್ನು ನೋಡಿ ಫಕೀರಪ್ಪ ಆತೀರ ಎಂಬ ದನಕಾಯುವ ಹುಡುಗನು ಕಳೆದ 10-9-29 ನೆಯ ತಾರೀಖಿನ ದಿವಸ ಸ್ನಾನಮಾಡಿ ಶುಚಿರ್ಭೂತನಾಗಿ ಆಊರಿನ ಹೊರಭಾಗದ ದೇವಾಲಯದಲ್ಲಿ ಭಜನೆಮಾಡುತ್ತಾ, 3-4 ದಿವಸಗಳವರೆಗೂ ಕುಳಿತಿದ್ದ ಬಾಗೂ, ಆ ಬಾಲಕನ ಮೊರೆಯನ್ನು ಕೇಳಿ ಜಗದೀಶ್ವರನು ಪ್ರಸನ್ನನಾದನೋ ಎಂಬಂತೆ 4 ನೆಯ ದಿವಸ ಸ್ವಲ್ಪ ಮಳೆಯೂ ಐದನೆಯ ದಿವಸ ಅತಿವೃಷ್ಟಿಯೂ ಆಯಿತೆಂದು ತಿಳಿಯ ಬರುತ್ತದೆ.

ನಿನ್ನೆ ದಿನ ಕಲ್ಕತ್ತಾಪಟ್ಟಣದ ಕೀರ್ತಿಚಂದ್ರರಾಯ್ ಚೌಧರಿ ಎಂಬ ಪೋಲೀಸ್ ಜವಾನನು ರಾತ್ರಿ ಗಸ್ತು ಮಾಡುತ್ತಿದ್ದಾಗ ಬೆಳಗಿನ ಝಾವದಲ್ಲಿ ದರೋಡೆಗಾರರನ್ನು ಹಿಡಿಯುವ ಪ್ರಯತ್ನದಲ್ಲಿ ಕೊಲೆಮಾಡಲ್ಪಟ್ಟಿರುವನು. ಆ ಜವಾನನ ಹೊಟ್ಟೆಗೆ ಚೂಪಾದ ಕಸ್ತ್ರಿಯಿಂದ ತಿವಿದು ಕೊಂದುಹಾಕಿರುವರು. ಹೆಣವನ್ನು ಪೋಲೀಸಿನವರೂ ಮತ್ತು ಅಧಿಕಾರಿಗಳೂ ಮರ್ಯಾದೆಪೂರ್ವಕ ಮೆರವಣಿಗೆಯಿಂದ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ದಹನ ಸಂಸ್ಕಾರ ನಡೆಸಿದರು. ಆ ಜವಾನನ ಸ್ವಾಮಿಭಕ್ತಿಕಾರ್ಯಕ್ಕೆ ಮೆಚ್ಚಿ ನೂರಾರುಜನಗಳು ಸಭೆಸೇರಿ ಗುಣಕಥನ ಮಾಡಿದರು.

ಈಚೆಗೆ ಒಬ್ಬ ಇಂಗ್ಲಿಷ್ ಸ್ತ್ರೀಯು ಮದರಾಸಿನಲ್ಲಿ ಮೋಟಾರಿನಲ್ಲಿ ಹೋಗುತ್ತಿದ್ದಾಗ ಆ ಮೋಟಾರು ಒಬ್ಬ ಬಡ ಹೆಂಗಸಿಗೆ ತಗುಲಿ ಸ್ವಲ್ಪ ಹೊತ್ತಿನಲ್ಲೇ ಮೃತಪಟ್ಟಳು. ಮುಕದ್ದಮೆ ನಡೆದಾಗ್ಗೆ ಮೋಟಾರು ನಡಿಸುವುದನ್ನೇ ತಿಳಿಯದವರು ಪಂಚಾಯತದಾರರಾಗಿದ್ದರು. ಅವರ ಅಭಿಪ್ರಾಯವನ್ನು ತಿಳಿಯುವುದು ಪ್ರಯಾಸವಾಯಿತು. ಅದರಮೇಲೆ ಪೋಲೀಸ್ ಕಮಿಷನರವರು ಒಂದು ಹುಕುಂ ಕೊಟ್ಟು ಇನ್ನು ಮೇಲೆ ಮೋಟಾರ್ ಅಪಾಯಗಳನ್ನು ಇನ್‌ಸ್ಪೆಕ್ಟರುಗಳು ತನಿಖೆ ಮಾಡುವಾಗ್ಗೆ ಮೋಟಾರು ನಡಿಸುವುದರಲ್ಲಿ ಪರಿಶ್ರಮವಿರುವವರನ್ನೇ ಪಂಚಾಯಿತಿಗೆ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ.

ಚಿಕಾಗೋವಿನಲ್ಲಿ ತರುಣಿಯೊಬ್ಬಳು ಒಬ್ಬ ಸಂಗೀತಗಾರನನ್ನು ವರಿಸಿದಳು. ಅನೇಕ ದಿವಸಗಳಾದರೂ ಗಂಡನು ಒಂದು ದಿವಸವಾದರೂ ಮನೆಯಲ್ಲಿ ಸಂಗೀತವನ್ನು ಹಾಡಲಿಲ್ಲ. ತರುಣಿಯು ಕೋಪಗೊಂಡು ಕೋರ್ಟಿನಲ್ಲಿ ಕೇಸುಮಾಡಿ ತನ್ನ ಹೇಳಿಕೆಯಲ್ಲಿ "ನಾನು ಈತನನ್ನು ವರಿಸಿದುದು ಪ್ರತಿನಿತ್ಯವೂ ಸಂಗೀತ ಕೇಳಬೇಕೆಂಬ ಇಚ್ಛೆಯಿಂದ; ಈತನು ನನ್ನನ್ನು ವಿವಾಹವಾಗಿ ಅನೇಕ ದಿವಸಗಳಾದರೂ ನಾನು ಎಷ್ಟು ಕೇಳಿಕೊಂಡರೂ ಒಂದು ದಿವಸವಾದರೂ ಹಾಡಲಿಲ್ಲ. ಆದ್ದರಿಂದ ಇನ್ನೂ ಮುಂದೆ ಮನೆಯಲ್ಲಿ ಆತನು ಹಾಡುವದಿಲ್ಲವಾದರೆ ನನ್ನ ವಿವಾಹ ಸಂಬಂಧವನ್ನು ಕೊನೆಗಾಣಿಸಿರಿ" ಎಂದು ಹೇಳಿದಳು. ಇದನ್ನು ಕೇಳಿ ಜಡ್ಜರು ಆಕೆಯ ಪತಿಯ ಹೇಳಿಕೆಯನ್ನು ತೆಗೆದುಕೊಂಡು "ಗಂಡನು ಪ್ರತಿನಿತ್ಯವೂ ಎರಡಾವರ್ತಿ ಮನೆಯಲ್ಲಿ ಸಂಗೀತವನ್ನು ಹಾಡಬೇಕೆಂದು" ತೀರ್ಮಾನಿಸಿರುವರು.

ಜರ್ಮಾದೇಶದ ತಾರ್ಟ ಡಿಸ್ಟ್ರಿಕ್ಟಿನ ಮಾಳ್ ಪ್ಲೇಟ್ ಎಂಬ ಕಲ್ಲುಗುಡ್ಡದ ಮ್ಯಾನೇಜರಾದ ಮಿ|| ವೀಲರ್ ಎಂಬುವರ ಮನೆಯಲ್ಲಿ 3 ವರ್ಷದಿಂದ್ಲ... ಒಬ್ಬ ಹಿಂದೂ ... ಜಗದಾ... ...ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸಂಪಣೆಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನ್ನಮಃ.

ಶ್ರೀಮದನೇಕಕೋಟಿಬ್ರಹ್ಮಾಂಡ ಸೃಷ್ಟಿ ಸ್ಥಿತಿ ಸಂಹಾರ ಬಂಧಮೋಕ್ಷ ಲಕ್ಷಣ ಪಂಚಕೃತ್ಯ ಮಹಾನಾಟ್ಯರಸಿಕ ಶ್ರೀಮತ್ಪರಶಿವ ವಕ್ತ್ರಗಲಜನೋದ್ಭವ ಶ್ರೀಮದ್ವೀರವೇದಾಂತ ಸಿದ್ಧಾಂತಾದ್ಯಾಗಮಪ್ರತಿಪಾದಿತ ಅನಾದಿಶೈವ ಆದಿಶೈವ ಮಹಾಶೈವ ಅನುಶೈವ ಅವಾಂತರಶೈವ ಪ್ರವರಶೈವ ಅಂತ್ಯಶೈವ ಸಮಾನಶೈವ ಮಿಶ್ರಶೈವ ಶುದ್ಧಶೈವಗರ್ಭಿತ ಸಾಮಾನ್ಯವೀರಶೈವ ವೀರಶೈವ ವಿಶೇಷವೀರಶೈವ ನಿರಾಭಾರಿ ವೀರಶೈವ ಮಹಾಮತಸ್ಥಾಪನಾಚಾರ್ಯ ದೀಕ್ಷಾ ಶಿಕ್ಷಾ ಮೋಕ್ಷೈಕಕಾರಣಾವತಾರ ದುರಾಚಾರ ದುರ್ಮಾರ್ಗ ದುಷ್ಟನಿಗ್ರಹ ಸನ್ಮಾರ್ಗಶಿಷ್ಟಾನುಗ್ರಹ ಪರಿಪಾಲನಾಶೀಲ ಶ್ರೀ ಜಗದ್ಗುರು ದಾರುಕಾಚಾರ್ಯ ಪರಂಪರಾಗತ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಮಾರ್ತಂಡ ಸನ ವಸ್ತ್ರಲಾಂಛನ ಪರಿಶೋಭಿತಶಿಖರಾದಿ ಪಂಚಮುದ್ರಾಧಿಕಾಭರಾಮ ಶ್ರೀ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗಶಿವಾಚಾರ್ಯರಾಜದೇಶಿಕೇಂದ್ರ ಮಹಾಸ್ವಾಮಿನಾಂ ಸನ್ನಿಧಾನೇನ.

ಶ್ರೀಮಜ್ಜಗದ್ಗುರು ಚರಣಾರವಿಂದ ಮಕರಂದಮಧುಕರಾಯಮಾನರಾದ ನೈಜಾಂ ಸಂಸ್ಥಾನಕ್ಕೆ ಸೇರಿದ ಪ್ರತಿ ಜಿಲ್ಲೆಗಳಲ್ಲಿರುವ ಪ್ಯಾಟೆ ಮನೆ ಮುಂತಾದ ಪ್ರತಿ ಗ್ರಾಮಾನುಗ್ರಾಮಗಳ ಶ್ರೀ ಪಟ್ಟಚರಾಧಿಕಾರಿಗಳು ಮಠಮಹತ್ತು ದೇಸಾಯಿ ದೇಶಪಾಂಡ್ಯ ನಾಡಗೌಡ ಶೆಟ್ಟಿ ಮಾಜಾನ್ ಗೌಡ ಕುಲಕರಣಿ ಮುಂತಾದ ಸಮಸ್ತ ವೀರಶೈವಮಂಡಲಿಗೂ ತನ್ನ ತಾನುಯಾಯಿಗಳಿಗೂ ಸಹ ಪುಣ್ಯವಾಚನ ಪೂರ್ವಕ ಮಾಡುವ ಶುಭಾಶೀರ್ವಾದಗಳು. ಶಹ.

ಈ ಮುಖಂ ದ್ವಾರಾ ನಿಮ್ಮಗಳಿಗೆ ಅಪ್ಪಣೆಕೊಡಿಸುವದೇನಂದರೆ—ನಮ್ಮ ಉಜ್ಜಯಿನೀ ಜಗದ್ಗುರು ಪೀಠದ ಸಿಂಹಾಸನ ಮಠವು ಪುರಾತನವಿದ್ದು ಶಿಥಿಲವಾಗಿರುವ ಪ್ರಯುಕ್ತ ಸದರೀ ಮಠವನ್ನು ನೂತನವಾಗಿ ಶಿಲೆಯಿಂದ ಕಟ್ಟಿಸ ಮಾಡಿಸಲಿಕ್ಕೆ ಏರ್ಪಾಡುಮಾಡಿರುತ್ತೇವೆ. ಇದರ ದ್ರವ್ಯಾರ್ಜನೆಗಾಗಿ ಖಾಸಾ ಮಹಾಸವಾರಿಯು ದಯಮಾಡಿಸತಕ್ಕದ್ದಿತ್ತು. ಸಂಸ್ಥಾನದ ಕಾರ್ಯಬಾಹುಳ್ಯದಿಂದ ಮಹಾಸವಾರಿಯು ದಯಮಾಡಿಸಲವಕಾಶ ದೊರೆಯದೆ ಇದ್ದಕಾರಣ ನಮ್ಮ ಸಂಸ್ಥಾನದ ಸರ್ವಾಧಿಕಾರಿಗಳಾದ ಅನಂತಪುರದ ಜಿಲ್ಲಾ ಕಲ್ಯಾಣದುರ್ಗದ ತಾಲೂಕು ಶಿರ್ಪಿ ಉಜ್ಜಯಿನೀ ಮಠದ ಚರಪಟ್ಟದ ಸಿದ್ಧರಾಮಯ್ಯನವರನ್ನು ಸಿಬ್ಬಂದಿಯೊಡನೆ ಸರ್ಕೀಟು ನಡಿಸುವ ಬಗ್ಗೆ ಆನೆಗಳು, ಬಲ್ಲೆಗಳು, ಛತ್ರಗಳು, ಮೊಹರು ಇತ್ಯಾದಿಗಳ ಸಮೇತ ಕೊಟ್ಟು ಕಳುಹಿಸಿರುತ್ತೇವೆ. ಇವರು ನಿಮ್ಮ ಪ್ರಾಂತ್ಯಗಳಿಗೆ ಸರ್ಕೀಟು ಬಂದಲ್ಲಿ ಸಂಸ್ಥಾನದ ಪದ್ಧತಿಪ್ರಕಾರ ಮಾನಮರ್ಯಾದೆಗಳಿಂದ ಮೊಕ್ಕಾಂ ಮಾಡಿಸಿಕೊಂಡು ಖಾನೇಸುಮಾರಿ ವಗೈರೆ ಬರೆಯಿಸಿ ನಿಮ್ಮ ನಿಮ್ಮ ಶಕ್ತಿಮೀರಿ ಕಾಣಿಕಾ ವಗೈರೆ ವಸೂಲು ಕೊಟ್ಟು, ಮತಸಂಬಂಧವಾದ ಆಚಾರಬಾಬು ಶಿವಾಯಿ ಇತರ ಮೊಕದ್ದಮೆಗಳಲ್ಲಿ ವಾದಿ ಪ್ರತಿವಾದಿಗಳು ಹಾಜರು ಇದ್ದು ವ್ಯವಹರಿಸಿಕೊಳ್ಳುವದಲ್ಲದೆ ಸದರಿಯವರನ್ನು ಮುಂದಿನ ಮೊಕ್ಕಾಮುಗಳಿಗೆ ಸಂಸ್ಥಾನದ ಮರ್ಯಾದೆಯೊಡನೆ ಕಳುಹಿಸಿಕೊಟ್ಟು ಶ್ರೀ ಗುರುಕೃಪೆಗೆ ಪಾತ್ರರಾಗಿ ಯಶೋಭಾಗಿಗಳಾಗತಕ್ಕದ್ದು. ಈ ಬಗ್ಗೆ ಗುರುಸಂಸ್ಥಾನದ ಅಭಿಮಾನಶೀಲರಾದ ನಿಮಗೆ ಹೆಚ್ಚಿಗೆ ತಿಳಿಸುವದೇನಿದೆ—ಮೊಕ್ಕಾಂ ಮಸಹಳ್ಳಿ. ತಾಲೂಕು ಕೂಡ್ಲಿಗಿ. ಜಿಲ್ಲಾ ಬಳ್ಳಾರಿ.

ಶ್ರೀ ಜಗದ್ಗುರು ಮಹಾಸಂಸ್ಥಾನದ ಏಜಂಟ್,
ತಾ|| 2-9-1929. ಟಿ. ಯಂ. ಸಿದ್ಧಪಾದಶರ್ಮ, ಉಜ್ಜಯಿನಿ.
ಇಲ್ಲಿ ಮಹಾಸ್ವಾಮಿಗಳ ಸಹಿ ಇರುತ್ತೆ.

ಪ್ರಾಚೀನಕಾಲದಲ್ಲಿ ಇಂತಹ ಸದ್ಗುರುಗಳೇ ಈ ಮತೀಯರ ಮಠಾಧಿಕಾರಿಗಳನ್ನು ವಹಿಸುತ್ತಿದ್ದರಾದ್ದರಿಂದ ಆ ಕಾಲದಲ್ಲಿದ್ದ ಈ ಮತೀಯರಲ್ಲಿ ಶಿವಭಕ್ತಿ ಶಿವಧರ್ಮ ಶಿವಜ್ಞಾನಗಳು ಔನ್ನತ್ಯವನ್ನು ಹೊಂದಿದ್ದವೆಂದು ಹೇಳಬಹುದು. ಆದ್ದರಿಂದ ಆ ಕಾಲದಲ್ಲಿ ಈ ಮತೀಯರಲ್ಲಿ ಹಲವರು ಮಹಾತ್ಮರೂ, ಹಲವರು ಗ್ರಂಥಕರ್ತರೂ ಆಗಿದ್ದರು. ಆ ಗುರುಗಳಿಗಾದರೋ ಸ್ವಮತ ಪರಮತದ ಬಹುಮಂದಿರಾಜರು ಭಕ್ತರಾಗಿ ಅವರ ಮಠಗಳಿಗೆ ವೃತ್ತಿ ಮಾನ್ಯ ಮೊದಲಾದ ಅನುಕೂಲಗಳನ್ನು ಮಾಡಿಕೊಟ್ಟರು. ಸ್ವಲ್ಪಕಾಲದಿಂದ ಈ ಮತದಲ್ಲಿ ಅಂಥ ಸದ್ಗುರುಗಳ ಸಂಖ್ಯೆಯು ಕಡಿಮೆಯಾದುದರಿಂದ ಈ ಮತೀಯರಿಗೆ ಪರಮತೀಯರಿಂದ ಹಲವು ತೊಂದರೆಗಳು ಉಂಟಾಗುತ್ತಬಂದವು. ಮತ್ತು ಈ ಮತದ ಜನರಲ್ಲಾದರೋ ಹಲವರುಮೂಢರೂ ಅಸಂಸ್ಕಾರಿಗಳೂ ಆಗಿ ಸ್ವಧರ್ಮಗಳ ಸ್ವರೂಪಗಳನ್ನು ತಿಳಿಯದವರಾಗಿ ತಮ್ಮ ಗೋತ್ರಸೂತ್ರಪ್ರವರಶಾಖೆಗಳನ್ನೂ, ಶ್ರೀ ಜಗದ್ಗುರು ಪಂಚಾಚಾರ್ಯರ ಮಹತ್ವವನ್ನೂ ತಿಳಿಯದೆ ಹೋಗಿರುವುದು ಅತ್ಯಂತ ದುಃಖಕರವಾದ ಸಂಗತಿ. ಈ ಮತಕ್ಕೆ ಶಿವಧರ್ಮಗಳೇ ಮೂಲಭೂತವಾದವುಗಳು

ವೆಂದೂ, ಶಿವಭಕ್ತರಿಂದಲೇ ಆಶ್ರಯಿಸಲ್ಪಡುವದು. ಯೋಗ್ಯವಾಗಿರುವದರಿಂದ ಶಿವಭಕ್ತಮತವೆಂದೂ ಪ್ರಸಿದ್ಧವಾಗಿ ಶಿವಪಂಚಮುಖೋದ್ಭೂತರಾದ ಶ್ರೀ ಜಗದ್ಗುರು ಪಂಚಾಚಾರ್ಯರಿಂದಲೇ ಸ್ಥಾಪಿತವಾಗಿ ಮೋಕ್ಷದಾಯಕವಾಗಿರುತ್ತದೆ. ಇದನ್ನಾಶ್ರಯಿಸಿದ ಜನರಿಗೆ ಸಂಸ್ಕಾರಗಳನ್ನು ಕೊಡುವದರಲ್ಲಿಯೂ ಶಿವಧರ್ಮಗಳಾದ ಗುರು, ಲಿಂಗ, ಜಂಗಮ, ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳೆಂಬ ಅಷ್ಟಾವರಣ ಕ್ರಿಯೆಗಳನ್ನೂ, ಲಿಂಗಾಚಾರ ಸದಾಚಾರ, ಶಿವಾಚಾರ, ಭೃತ್ಯಾಚಾರ ಗಣಾಚಾರಗಳೆಂಬ ಪಂಚಾಚಾರಗಳನ್ನೂ ಅಪ್ರಾಕೃತ ಪರ್ಯಾಪ್ತಮಾಚಾರಗಳನ್ನೂ, ಷಟ್ಸ್ಥಲಲಿಂಗಾಂಗಸಮರಸಾತ್ಮಕವಾದ ಶಿವಜ್ಞಾನವನ್ನೂ ಉಪದೇಶಿಸುವುದರಲ್ಲಿ ಸದ್ಗುರುಗಳೇ ಶಕ್ತರಾಗಿರುತ್ತಾರೆ. ಆ ಸದ್ಗುರುಗಳಲ್ಲಿ ವೇದವೇದಾಂಗಾದಿವಿದ್ಯಾವೈದುಷ್ಯ, ಶಿವಾದ್ವೈತಸಿದ್ಧಾಂತಪಾಂಡಿತ್ಯ, ಚತುಷ್ಷಷ್ಟಿ ತಂತ್ರಪ್ರಯೋಗನೈಪುಣ್ಯ, ಸತ್ಯವಾದಿತ್ವ, ಲೋಭಮೋಹರಾಹಿತ್ಯ, ಭ್ರಾಂತಿರಾಹಿತ್ಯ, ನಿಶ್ಚಯಬುದ್ಧಿ, ಶಿವಧರ್ಮನಿಷ್ಠೆ, ಗುರುಪರಂಪರಾಗತ ಶಾಸ್ತ್ರೀಯಾಚಾರಸಂಪತ್ತಿ, ಶಿವಧ್ಯಾನಾಸಕ್ತಿ, ಭಸ್ಮತ್ರಿಪುಂಡ್ರರುದ್ರಾಕ್ಷಧಾರಣಾಸಕ್ತಿ, ಬಾಹ್ಯಾಂತರ್ಲಿಂಗಧಾರಣಾಸಂಪತ್ತಿ, ಬಾಹ್ಯಾಂತರ್ಲಿಂಗೋಪಾಸನೆ, ಏಕೋತ್ತರಶತಸ್ಥಲಜ್ಞಾನ, ಲಿಂಗಾಂಗಸಂಬಂಧವಿಚಾರ ಮೊದಲಾದ ಲಕ್ಷಣಗಳಿರಬೇಕು.

ಶಾಸ್ತ್ರಿಗಳು ಬೇಕು.

ಸಾಹಿತ್ಯವನ್ನು ಚೆನ್ನಾಗಿ ಬಲ್ಲಂಥ 8 ಜನ ಶಾಸ್ತ್ರಿಗಳವರು ಬೇರೆಬೇರೆ ಪಾಠಶಾಲೆಗಳಿಗೆ ಬೇಕಾಗಿರುತ್ತಾರೆ. ಪಗಾರವು ಯೋಗ್ಯತೆಯಮೇಲೆ ಕೊಡಲ್ಪಡುವದು. ಪತ್ರವ್ಯವಹಾರದಿಂದ ತಿಳಿದುಕೊಳ್ಳಬಹುದು. ತಾ|| 20-10-29 ಅಕ್ಟೋಬರ ತಿಂಗಳು 20 ನೆಯ ತಾರೀಖಿನೊಳಗಾಗಿ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು. ಕೆಳಗಿನ ಹೆಸರಿಗೆ ಪತ್ರವ್ಯವಹಾರವನ್ನು ಮಾಡಬೇಕು.

ಪ್ರಿನ್ಸಿಪಾಲ ಶಂಕರ ಕಾಲೇಜು,
ಯಾದಗಿರಿ.

ಪ್ರಸಿದ್ಧಪತ್ರಿಕೆ.

ಮೈಸೂರು ಅರಮನೆ ಮುಜರಾಯಿ ಬಕ್ಷಿಗಳವರು
ಮ|| ಶ್ರೀ ರಾಜಕವಿಭೂಷಣ
ಹೆಚ್. ಲಿಂಗರಾಜ ಅರಸಿನವರಿಂದ ವಿರಚಿತವಾದ

ಯದುನೃಪವಿಜಯ ಮತ್ತು ನೋಟ್ಸು

ಎಂಬ V ತರಗತಿ (Fifth Form) ಗೆ 1928-29 ಸಾಲಿಗೆ ಟೆಕ್ಸ್ಟ್ ಬುಕ್ಕಾಗಿ ನಿಯಮಿತವಾದ 2 ನೆ ಮುದ್ರಣ ಗ್ರಂಥದ ಬಿಕರಿ ಹಕ್ಕನ್ನು (Whole Sale Agency) ಮೂಲಕ ಮೈಸೂರು ಹಳೇಅಗ್ರಹಾರದಲ್ಲಿರುವ ಜನರಲ್ ಮರ್ಚೆಂಟ್ ಶೆಟ್ಟಿಪ್ಪ ಬಿನ್ ಶಿವಪ್ಪನವರು ಪಡೆದಿರುವರು. ಪುಸ್ತಕ 1ಕ್ಕೆ 0-8-0 ಮೇರೆಗೆ ಈ ಕೆಳಗೆ ಕಂಡವರಿಂದ ಪಡೆದುಕೊಳ್ಳಬಹುದು.

(1) ಶೆಟ್ಟಿಪ್ಪ ಬಿನ್ ಶಿವಪ್ಪ,
ಪಸಾರಿ ಮಳಿಗೆ,
ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ, ಮೈಸೂರು.
[2]
ಶ್ರೀಕಂಠಪ್ಪ ಅಂಡ್‌ಸನ್ಸ್,
ಔಷಧವ್ಯಾಪಾರಿಗಳು, ದೊಡ್ಡಪೇಟೆ, ಬೆಂಗಳೂರು ಸಿಟಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮುರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ಸೇ. ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ಸೇ. ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಜಾಸ್ತಿ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [23]

ಎಂ. ಎಸ್. ಗಂಗಂಣ ಮತ್ತು ಲೋಕಂಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರದಿಂದ ಬೆಳೆಯೋಣವೇ ಮೊದಲಾದ ರೋಗಪೀಡಿತರಾದಂಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ) 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [8]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ ಶಿವಯೋಗಪ್ಪ ಬುಕ್‌ಬೈಂಡರ್ ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕು ಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—ಸೈಮನ್ ಪ್ರಿಂಟಿಂಗ್ ವರ್ಕ್ಸ, ಗದಗ.
[7] ನಮ್ಮ ಏಜಂಟರ ವಿಳಾಸ:—
ಭದ್ರಶೆಟ್ಟಿ ರುದ್ರಪ್ಪ ಅಷ್ಟಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಔಷಧಸೀಸೆಗಳಿಗಿಂತಲೂ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರಬಲ್. ಡಾಕ್ಟರ್ ಯು. ರಾಮರಾವ್ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ" ಯೆಂಬ ಆರೋಗ್ಯಬೋಧಕವಾದ ಮಾಸಪತ್ರಿಕೆಯು, ನಿಮಗೆ ಆರೋಗ್ಯದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವುದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವುದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರುಗಳು ನಿಮಗೂ, ನಿಮ್ಮ ಕುಟುಂಬಕ್ಕೂ ಆರೋಗ್ಯಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕುರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವುವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯಪ್ರಚಾರಕರು, ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯವಿಷಯಗಳು ಇದರಲ್ಲಿರುವುವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ಮೈಸೂರು ದೇಶದ ಪೂಜ್ಯಪಿತಾಮಹರೆನಿಸಿದ ಶ್ರೀ. ಎಮ್. ವೆಂಕಟಕೃಷ್ಣಯ್ಯನವರು "ಮೈಸೂರ್ ಪೇಟ್ರಿಯೆಟ್" ಎಂಬ ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿರುವರು.

"ಆನರಬಲ್ ಡಾಕ್ಟರ್ ಯು. ರಾಮರಾವ್ ಮತ್ತು ಅವರ ಮಕ್ಕಳು ಡಾಕ್ಟರ್ ಯು. ಕೃಷ್ಣರಾವ್ ಎಂ. ಬಿ. ಬಿ. ಎಸ್. ಇವರಿಬ್ಬರೂ ವರ್ಷಕ್ಕೆ 1½ ರೂಪಾಯಿ ಮಾತ್ರ ಬೆಲೆಯುಳ್ಳ ಮಾಸಪತ್ರಿಕೆಗಳ ಮೂಲಕವಾಗಿ ಕೋಟ್ಯಂತರ ರೂಪಾಯಿಗಳಿಂದಲೂ ಸಾಧ್ಯವಲ್ಲದ ಮಹೋಪಕಾರಗಳನ್ನು ಮಾಡುತ್ತಿರುವರು. ಈ ಪತ್ರಿಕಾಸಂಪಾದಕರಿಗೆ ದೇವರು ಸದಾ ಶ್ರೇಯೋಭಿವೃದ್ಧಿಯನ್ನುಂಟುಮಾಡಲಿ. ಈ ಪತ್ರಿಕೆಯಲ್ಲಿ ಪ್ರಚುರವಾಗುವ ಅಮೂಲ್ಯ ಲೇಖನಗಳನ್ನು ನಾವು ನಮ್ಮ ವಾಚಕರ ಉಪಯೋಗಕ್ಕಾಗಿ ಆಗಾಗ ಪ್ರಚುರಪಡಿಸಲು ಉದ್ದೇಶಿಸಿರುವೆವು."

ರೈಲುಸ್ಟೇಷನುಗಳಲ್ಲಿರುವ ಮೆಸರ್ಸ್ ಹಿಗ್ಗಿನ್ ಬಾಥಮ್ಸ್ ಕಂಪೆನಿಯವರ ಬುಕ್‌ಸ್ಟಾಲ್‌ಗಳಲ್ಲೆಲ್ಲಾ ನಮ್ಮ ಸಂಚಿಕೆಗಳು ಮಾರಲ್ಪಡುವುವು.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದುಬೀಳುವುದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

[14] ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ರಜಿ] ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಗಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಶಪುಷ್ಪ, ಕಾಲಿಮಕಂದ, ಮಧುಕಂದ, ಜಬಾಕಂಧ, ಕಾಲೀಮಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ಸೀವರೀಕಂದ, ಗ್ರೀಷಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಬೋಳರೀಬೀಜ, ಸಮೇಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಂಪಳಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಸೀಕಟ್ಟಿಗೆ, ಶತಾವರಿ, ಸಕೀನಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಬಿಬಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ನಾಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕೆ, ರಕ್ತ, ಕೀವು, ಹುಣ್ಣು, ಮುಗ್ಗ ದ ಕ್ರಿಮಿ, ನಾತಬಾರದಿರೋಣ, ಪಟ್ಟಿಸೋರು ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 3 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [12]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರಸವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲಿಯ ಶೀಸೆ ೧ ಕ್ಕೆ ೧೨ ಆಣೆ ೫೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[25] (೮೪೮) ಗಂಜೀಪೇಟೆ, ಪೂನಾ ಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮|| ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಲ್ಪಬೆಲೆ ! ಅಧಿಕ ಲಾಭ !!

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವನನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ,

[5] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೧೦-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[14] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಖ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||

ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಸ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ನೇ ಅಕ್ಟೋಬರ್ ೧೯೨೯ [ಸಂಚಿಕೆ ೨೨.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೩ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವಿದ್ಯಾದಾನದ ಪ್ರತಿಫಲ.

ಬಳ್ಳಾರಿಯ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದಿಂದ ವೇತನವನ್ನು ಪಡೆದು ವಿದ್ಯಾಭ್ಯಾಸದಿಂದ ನಿವೃತ್ತರಾಗಿ ಉದ್ಯೋಗದಲ್ಲಿ ತೊಡಗಿರುವವರ ಸಂಖ್ಯೆಯು ನೂರಕ್ಕೆ ಮುಟ್ಟಿರುವುದು. ಸಂಘದ ನಿಯಮದಂತೆ ಕೆಲವರು ತಮ್ಮ ವೇತನದ ಹಣವನ್ನು ಮುಟ್ಟಿಸಿರುವರು. ಕೆಲವರು ಮುಟ್ಟಿಸುತ್ತಿರುವರು. ಉಳಿದವರುಮಾತ್ರ ಸಂಘದಿಂದ ಎಷ್ಟು ಪತ್ರಗಳು ಹೋದರೂ ವಕೀಲರ ದ್ವಾರಾ ನೋಟೀಸುಗಳನ್ನು ಕಳಿಸಿದರೂ ಅವಕ್ಕೆ ಉತ್ತರವನ್ನು ಕೊಡದೆ ಮೌನಮುದ್ರೆಯನ್ನು ಧರಿಸಿರುವರು. ಸಂಘವು ಉಪಾಯಾಂತರವನ್ನು ಕಾಣದೆ ಕೆಲವರಮೇಲೆ ಬಳ್ಳಾರಿಯ ಮುನಸೀಫ ಕೋರ್ಟ ನ|| ನಂಬರು 500-501 502-509 ರಲ್ಲಿ ದಾವಾ ನಡೆಸಿರುವುದು. ನೋಡಿದಿರಾ? ಓದು ಕಲಿತವರು ತಮಗೆ ಸಿಕ್ಕ ವಿದ್ಯಾದಾನದ ಪ್ರತಿಫಲವನ್ನು ಹೇಗೆ ತೀರಿಸುವರು?

ಸಂಘಾಭಿಮಾನಿ.

ಶ್ರೀ ಗುರುಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಮಹೋತ್ಸವ.

ಹಾವೇರಿ.

ನಮ್ಮ ಗ್ರಾಮದ ವಿರಕ್ತಮಠದಲ್ಲಿ (ಚನ್ನವೀರಸ್ವಾಮಿಮಠದ ಬಾಕಿಯಲ್ಲಿ) ಕಳೆದ ಶ್ರಾವಣ ಶು|| ೧ ಯಿಂದಲೂ ಪ್ರಾರಂಭವಾದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯು ಇದೇ ಆಶ್ವೀಜ ಶು|| ೨ ಪರ್ಯಂತ ಒಳ್ಳೆ ವೈಭವದಿಂದ ಜರುಗಿ ಇದೇ ದಿವಸಗೆ ಶುಕ್ರವಾರ ಬೆಳಗ್ಗೆ ಜಗದಾಚಾರ್ಯರ ಭಾವಚಿತ್ರ ಸಮೇತ ಅತ್ಯಪಾಲಕಿ ಉತ್ಸವವು ಒಳ್ಳೆ ವಿಜೃಂಭಣೆಯಿಂದ ಜರಗಿತು. ಮತ್ತು ಮಧ್ಯಾಹ್ನಕ್ಕೆ ಗಣಾರಾಧನೆಯು ಅನಂತರ ವೀರಶೈವ ಧರ್ಮಸಂಬಂಧಿಭಾಷಣಗಳು ಜರುಗಿದವು. ಅನಂತರ ಕೂಡಿದ ಮಹಾಜನಗಳೆಲ್ಲರೂ ಜಯಘೋಷಪೂರ್ವಕ ಪ್ರಸಾದ ಸ್ವೀಕಾರವನ್ನು ಹೊಂದಿದರು. ಸದರಿ ಮೇಲ್ಕಂಡ ಧರ್ಮೋದ್ಧಾರಕಾರ್ಯದಲ್ಲಿ ವಿರಕ್ತಮಠದ ವೇ|| ಬಸವಲಿಂಗಮಂದೇವರೂ ವೇ|| ಅಗಡಿ ಶಿದ್ರಾಮಯ್ಯನವರೂ ಮತ್ತು ಮ|| ರಾ|| ಹಿಂಚಿಗೇರಿ ಶೇಖಪ್ಪನವರೂ ಒಳ್ಳೆ ದಕ್ಷತೆಯಿಂದ ಕೆಲಸಮಾಡಿ ಕೀರ್ತಿಭಾಜನರಾದರು. ಅವರಿಗೂ ಅವರ ವಂಶಕೋಟಿಗೂ ಜಗದಾಚಾರ್ಯರು ಮಂಗಲವನ್ನಿತ್ತು ಕಾಪಾಡಲೆಂದು ಹಾರೈಸುವ

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದಾಚಾರ್ಯಾಃ ಪ್ರಸೀದಂತು.

ಪುರಾಣ ಸಮಾರಂಭ ಬಂಕಾಪುರ.

ವೀರಶೈವ ದುರಸ್ಥಾಪಕರೂ ಅನೇಕ ಮಹಿಮಶಾಲಿಗಳೂ ಕೊಲ್ಲಿಪಾಕಿ ಸೋಮೇಶಲಿಂಗೋದ್ಭವರೂ ಆದ ಶ್ರೀ ಜಗದಾಚಾರ್ಯ ರೇವಣಸಿದ್ಧೇಶ್ವರ ಪುರಾಣವನ್ನು ತಾ|| 19-8-29 ನೇ ಯಸ್ತಿ ಸೋಮವಾರದಿವಸ ಮಧ್ಯಾಹ್ನ 12 ಘಂಟೆಯ ಸಮಯದಲ್ಲಿ ಮಹಾಗಣಾರಾಧನೆಯಿಂದ ಗಾಂತಿ ಮಾಡಿಸಿ ವೇ|| ಪ್ರಭುಶಾಸ್ತ್ರಿಗಳು ಪುರಾಣಿಕ ಮಠ ಚಿಂಚಲಿ ವೇ|| ಜಯದೇವಗವಾಯಿಗಳು ಹಾವೇರಿ ವ. ಲಕಮಾಪುರ ಹಿರೇಮಠ ಇವರನ್ನು ಬರಮಾಡಿಕೊಂಡು ಅದೇ ದಿವಸ ಸಾಯಂಕಾಲಕ್ಕೆ ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿ ವ. ನಾಡಕರ್ಣಿ ಸಂ|| ಹಂದಿಗನೂರ ಮಾಮಲೇ ಬಂಕಾಪುರ ಇವರು ತಮ್ಮ ಅರಮನೆಯಲ್ಲಿ ಪ್ರಾರಂಭಿಸಿದ್ದನ್ನು ಈ ಮೊದಲೇ ಪ್ರಸಿದ್ಧಪಡಿಸಿರುತ್ತದಷ್ಟೆ.

ಈ ಮಹಾ ಮಹಿಮರ ದಿವ್ಯಪ್ರಭಾವದಿಂದ ದಿನೇದಿನೇ ಪುರಾಣವು ಅಭಿವೃದ್ಧಿಯಾಗುತ್ತ ಸಾವಿರಾರು ಸ್ತ್ರೀ ಪುರುಷರು ಮಹಾಮಹಿಮರ ಅಗಾಧಾರವ ಚರಿತ್ರೆಯನ್ನು ಕೇಳಿ ಮಂಗಲವಾದ ನಂತರ ಪ್ರಸಾದವನ್ನು ಪಡೆದುಕೊಂಡು ಪುನೀತರಾಗುತ್ತಿರುವರಲ್ಲದೆ ನಮ್ಮ ಸದ್ಭಕ್ತಿಶೀಲರಾದ ಶ್ರೀಮಂತರ ಆಶ್ರಯಕೂಡ ಆನಂದಸಾಗರದಲ್ಲಿ ಮುಳುಗಿಹೋಗಿದೆ. ಶ್ರೀಮಂತರಾದವರೂ ಇದೇ ಶುಕ್ಲನಾಮ ಸಂ|| ಭಾದ್ರಪದ ಬ|| 17 ಬುಧವಾರ ದಿವಸ ಶಾಸ್ತ್ರೋಕ್ತವಾಗಿ ವೇ|| ಜಯದೇವಗವಾಯಿಗಳವರಿಂದ ಲಗ್ನವನ್ನು ಕಟ್ಟಿಸಿ ಅನಂತರ ಸಮಸ್ತ ಮಾಹೇಶ್ವರರಿಗೂ ಭೂರಿದಕ್ಷಿಣೆ ತಾಂಬೂಲವನ್ನಿತ್ತರು. ಪ್ರಾತಃಕಾಲ 11 ಘಂಟೆಗೆ ಸಭೆಯು ವಿಸರ್ಜನೆಯಾಯಿತು. ಆ ಮೇಲೆ ದೇಶಮುಖಿಗಳಾದ ಮುರಿಗೆಯ್ಯನವರು ದೇಸಾಯಿ ವಿರಕ್ತಮಠ ಇವರು ಮತ್ತು ಶ್ರೀಮಂತ ಸಿದ್ಧಲಿಂಗಪ್ಪ ಉರ್ಫ ಅಪ್ಪಾಸಾಹೇಬ ದೇಸಾಯಿ ವ ನಾಡಕರ್ಣಿ ಸಂ|| ಹಂದಿಗನೂರ ಮಾಮಲೇ ಬಂಕಾಪುರ ರಾ|| ರಾ|| ಸಿದ್ಧರಾಮಪ್ಪ ಪಟೇಗಲ್ಲ ರಾ|| ರಾ|| ಸಂಗಪ್ಪಗೌಡ ಸಂಗಪ್ಪಗೌಡ ಕುಂಬಾರ ಕಟ್ಟಿಮನಿ ಗೌಡರ ಮಾಮಲೇ ಬಂಕಾಪುರ ಇವರು ಅದೇ ದಿವಸ ಮಧ್ಯಾಹ್ನ ೨ ಘಂಟೆಗೆ ಪದ್ಧತಿ ಪ್ರಕಾರ ಶ್ರೀ ಜಗದಾಚಾರ್ಯರ ಅಭಿನವಮೂರ್ತಿಗೆ ಬಿನ್ನಹಮಾಡಿ ಶ್ರೀಮಂತರ ರಥವನ್ನು ತೆಗೆದುಕೊಂಡು ಸಕಲ ವೈಭವಗಳಿಂದ ಉತ್ಸವಪೂರ್ವಕ ತಮ್ಮ ತಮ್ಮ ಗೃಹಗಳಿಗೆ ಕರೆದುಕೊಂಡು ಹೋಗಿದ್ದರು. ಸಾಯಂಕಾಲ 6 ಘಂಟೆಗೆ ಅರಮನೆಯನ್ನು ತಲ್ಪಿದರು. ಇದೇ ಭಾದ್ರಪದ ಬ|| 8 ಗುರುವಾರ ಪ್ರಾತಃಕಾಲ 6 ಘಂಟೆಯಿಂದ ಮಧ್ಯಾಹ್ನ (2) ಘಂಟೆಯವರೆಗೆ ಮಂಟಪವನ್ನು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕರಿಸಿ ಆಮಂತ್ರಣಮೇರೆಗೆ ಆಗಮಿಸಿದ ಭಕ್ತಮಾಹೇಶ್ವರ ಸಮೂಹಕ್ಕೆ ಲೆಕ್ಕವೇ ಇದ್ದಿಲ್ಲ. ಅನಂತರ ಪುರಾಣವು ಪ್ರಾರಂಭವಾಗಿ 9 ಘಂಟೆಗೆ ಸಮಾಪ್ತಿಯಾದನಂತರ ರಾ|| ರಾ|| ಹಡಪ ಸಣ್ಣಪ್ಪಗೌಡರು ಮಾಸ್ತರರು ವರದ ಪರವಾಗಿ 5 ರೂಪಾಯಿಗಳನ್ನೂ ಇವರ ಧರ್ಮಪತ್ನಿಯರಾದ ಹಂ|| ಕುಂ|| ಸೌ|| ಸಾವಿತ್ರೆವ್ವಾ ಉರ್ಫ ಫಟ್ಟೆವ್ವಾ ಇವರು ವಧುವಿನ ಪರವಾಗಿ ಒಂದು ಕಣವನ್ನೂ ಸಮರ್ಪಿಸಿದರು. ಆಮೇಲೆ ಶ್ರೀಮಂತರು ಮಾಹೇಶ್ವರರಿಗೆ ಭೂರಿದಕ್ಷಿಣೆಯನ್ನೂ ಸಕಲ ಭಕ್ತಸಮೂಹಕ್ಕೆ ತಾಂಬೂಲವನ್ನೂ ಕೊಟ್ಟು ಶ್ರೀ ಜಗದಾಚಾರ್ಯರ ಪ್ರಸಾದವನ್ನಿರಿಸಿದನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆ ವಿಸರ್ಜನೆಯಾಯಿತು. ಮರುದಿವಸ ಅಂದರೆ (ಇದೇ ಭಾ|| ಬಹುಳ ಶುಕ್ರವಾರ) ಮಧ್ಯಾಹ್ನ 3 ಘಂಟೆಯಿಂದ ಮೆರವಣಿಗೆಯು ಅರಮನೆಯಿಂದ ಪುರವೀದಿಗಳಲ್ಲಿ ಸಂಸ್ಥಾನ ಸಿಬ್ಬಂದಿ ಪ್ರಕಾರ ಸಕಲ ವಾದ್ಯವೈಭವಗಳಿಂದ ಹೊರಟು ಶ್ರೀ ಸಿದ್ಧೇಶ್ವರ ದೇವಸ್ಥಾನಕ್ಕೆ ಹೋಗಿ ಪುನಃ ಸಾಯಂಕಾಲ 6 ಘಂಟೆಗೆ ಅರಮನೆಯನ್ನು ತಲ್ಪಿತು. ಈ ಸಮಯದಲ್ಲಿ ಶ್ರೀಮಂತರು ಸದ್ಭಕ್ತಿಯಿಂದ ನೂರಾರು ರೂಪಾಯಿಗಳನ್ನು ಖರ್ಚುಮಾಡಿದರು. ಶ್ರೀ ರುದ್ರಮುನೀಶ್ವರರು ಉದ್ಭವಿಸಿದನಂತರ ಇದೇ ಆಶ್ವೀಜ ಶು|| ೧ ಗುರುವಾರ ಪ್ರಾತಃಕಾಲಕ್ಕೆ ಪಂಚಕಲಶಸ್ಥಾಪನೆಗಳಿಂದ ಪಟ್ಟಾಭಿಷೇಕವಂ ಮಾಡಿಸಿ ಸಾಯಂಕಾಲ 9 ಘಂಟೆಗೆ ಪುರಾಣವು ಸಮಾಪ್ತಿಯಾದನಂತರ ಶ್ರೀ ರುದ್ರಮುನಿದೇವರನ್ನು ಸಿಂಹಾಸನಾರೋಹಣಮಾಡಿಸಿದರು. ಆಮೇಲೆ ಸರ್ವಭಕ್ತಮಾಹೇಶ್ವರರು ಕಾಣಿಕೆಯನ್ನಿತ್ತಬಳಿಕ ಶ್ರೀಮಂತರು ಭೂರಿದಕ್ಷಿಣೆಗಳಿಂದಲೂ ತಾಂಬೂಲ ಪ್ರಸಾದಗಳಿಂದಲೂ ಸರ್ವರನ್ನೂ ಉಪಚರಿಸಿದರು. ಆ ವೇಳೆಯಲ್ಲಿ ಪ್ರಭಾಪೋಷಣಕ್ಕೋಸುಗ ಎರಡು ರೂಪಾಯಿಗಳನ್ನು ಶ್ರೀಮಂತರು ರಾ|| ರಾ|| ಬಸನಗೌಡರು ಮೇಟ್ಟೇರಿ ಇವರ ಕಡೆಗೆ ಕೊಟ್ಟರು. ಇವರಲ್ಲವೇ ಸದ್ಭಕ್ತರು? ಮತ್ತು ಇದೇ ಶುಕ್ಲನಾಮ ಸಂ|| ಆಶ್ವೀಜ ಶು|| ಪಾಡ್ಯಮಿ ಮೊದಲಾಗಿಯೇ ಪುರಾಣವು ಸಮಾಪ್ತಿಯಾಗುತ್ತದೆ. ಇಂಥ ಸದ್ಭಕ್ತಸಂಪನ್ನರಾದ ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿ ವ. ನಾಡಕರ್ಣಿ ಸಂ|| ಹಂದಿಗನೂರ ಮಾಮಲೆ ಬಂಕಾಪುರ ಇವರಿಗೂ ಮತ್ತು ಇವರ ಧರ್ಮಪತ್ನಿಯರಾದ ಹಾಗೂ ಸದ್ಗುಣಸಂಪನ್ನರಾದ ಶ್ರೀಮತಿ ಹಂ|| ಕುಂ|| ಸೌ|| ರಾಮಬಾಯಿ ದೇಸಾಯಿಯವರಿಗೂ ಶ್ರೀ ಜಗದಾಚಾರ್ಯರು ನಿತ್ಯಮಂಗಲವನ್ನೂ ಪುತ್ರಪೌತ್ರಾದಿ ಅಭಿವೃದ್ಧಿಯನ್ನೂ ಸಕಲೈಶ್ವರ್ಯವನ್ನೂ ದಯಪಾಲಿಸಲೆಂದು ಹಾರೈಸಿ ಶ್ರೀಮಂತರ ಆಭಾರವನ್ನಿಸುವ

ಓರ್ವ ಪ್ರತ್ಯಕ್ಷದರ್ಶಿ.

ಹಿಂದೂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಬಾಲ್ಯವಿವಾಹವನ್ನು ನಿಲ್ಲಿಸುವ ಮಸೂದೆಯು ಹಿಂದಿನ ಸೋಮವಾರ (ತಾ|| 22) ಬಹು ಮತದಿಂದ ಪಾಸಾಯಿತು. ಅದು ಕಾನೂನಾಗಬೇಕೆಂದು 67 ಮೆಂಬರುಗಳು ಸಮ್ಮತಿಸಿದ್ದರು. 14 ಮಂದಿ ಮಾತ್ರ ಕೂಡದೆಂದು ಹೇಳಿದರು. ಪ್ರತಿಭಟಿಸುವುದಕ್ಕಾಗಿ ಓಟು ಮಾಡುವುದಕ್ಕಾಗಿ ಮೊದಲು ಆರು ಜನ ಮಹಮದೀಯ ಪ್ರತಿನಿಧಿಗಳು ಸಭೆಯಿಂದ ಎದ್ದು ಹೊರಟುಹೋದರು. ಈವರೆಗೆ ಕಳೆದ ಶುಕ್ರವಾರ ಈ ಮಸೂದೆಯು ಸ್ಟೇಟ್ ಕೌನ್ಸಿಲ್‌ನಲ್ಲಿ ಚರ್ಚೆಯಾಗಿ ಸೋಮವಾರ ಆ ಸಭೆಯಲ್ಲೂ ಪಾಸಾಗಿರುತ್ತದೆ. ಈ ಸ್ಟೇಟ್ ಕೌನ್ಸಿಲ್‌ನಲ್ಲೂ ಮಹಮ್ಮದೀಯ ಪ್ರತಿನಿಧಿಗಳು ಅದನ್ನು ಕಾನೂನಾಗಕೂಡದೆಂದು ಬಹಳ ಕಠಿಣವಾಗಿ ಖಂಡಿಸಿದರು. ವೈದಿಕಧರ್ಮವನ್ನನುಸರಿಸುವ ಹಿಂದುಗಳು ಈಗ ಅನೇಕ ಕಡೆಗಳಲ್ಲಿ ಸಭೆಗಳನ್ನು ನಡಿಸಿ ಅದು ಕಾನೂನಾಗಕೂಡದೆಂದೂ, ವೈಸ್ರಾಯರವರು ಅದಕ್ಕೆ ಸಮ್ಮತಿಯನ್ನು ಹಾಕದೆ ಇರಬೇಕೆಂದೂ ತೀರ್ಮಾನಗಳನ್ನು ಮಾಡುತ್ತಿರುವರು. ಸರ್ಕಾರೂ ಈ ಬಿಲ್ಲನ್ನು ನಿಷೇಧಿಸಿಯೇ ತೀರಬೇಕಾಗಿದೆ.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪುರಾಣಸಮಾಪ್ತಿ.

ಪಾಲೀಕೊಪ್ಪ.

ಸಮಾಜಬಂಧುಗಳೇ ? ನಮ್ಮ ಹಿಂದಿನ ಹಿರಿಯರು ಮುಂದಿನ ಜನರು ದುರ್ಮಾರ್ಗಿಗಳಾಗಬಾರದೆಂಬ ಸದುದ್ದೇಶದಿಂದ ವೇದಗಳ ಆಧಾರಗಳಿಂದ ಅನೇಕಾನೇಕ ಉತ್ತಮೋತ್ತಮ ನೀತಿಬೋಧಕ ಗ್ರಂಥಗಳನ್ನು ಬರೆದು ನಮ್ಮ ಮೇಲೆ ಮಹೋಪಕಾರವನ್ನು ಮಾಡಿರುವರು. ನಮ್ಮ ಪೂರ್ವಜರು ದಯಾಳುಗಳಾಗಿ ಇಂಥ ಗ್ರಂಥಗಳನ್ನು ಬರೆಯದಿದ್ದ ಪಕ್ಷದಲ್ಲಿ ನಮ್ಮ ಸ್ಥಿತಿಯು ಬಹು ಶೋಚನೀಯವಾಗುತ್ತಿತ್ತು. ಸಂಸಾರದಲ್ಲಿ ಬಿದ್ದು ಸುಖದುಃಖಗಳನ್ನನುಭವಿಸುತ್ತ ಬಳಲುವ ಸರ್ವ ಪ್ರಾಣಿಗಳೂ ಮನಸ್ಸಿನಲ್ಲಿ ಮುಕ್ತಿಯನ್ನೇ ಅಪೇಕ್ಷಿಸುತ್ತವೆ. ಆ ಮುಕ್ತಿಯನ್ನು ಪಡೆಯಬೇಕಾದರೆ ನಮ್ಮ ಶರೀರದಲ್ಲಿಯ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಶುದ್ಧತೆಯು ಮೊದಲು ಬೇಕು. ಧರ್ಮಶ್ರದ್ಧೆಯೇ ...

... ತರುಣರೊಬ್ಬರು, ಶಿರೀಯಾಳಚರಿತ್ರೆ, ಧ್ರುವಚರಿತ್ರೆ, ಮೂರುವರೆವಜ್ರ, ಗರುಡಗರ್ವಭಂಗ ಎಂಬ ನಾಲ್ಕು ಕಥೆಗಳನ್ನು ಹೇಳಿ ಜನಗಳ ಮನಸ್ಸನ್ನು ಆಕರ್ಷಿಸುತ್ತಿದ್ದರು. ಈ ನಾಲ್ಕು ದಿವಸವೂ ಅನೇಕ ಮಹಜನರೂ, ಮಹಿಳೆಯರೂ ನೆರೆದಿದ್ದರು. ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಈ ತೆರದ ದಿವ್ಯಜ್ಞಾನವೂ, ವಾಕ್ಚಾತುರ್ಯವೂ ಅನೇಕ ಸತ್ಕಥೆಗಳನ್ನು ಸಂಗ್ರಹಿಸಿ, ಸತ್ಕೀರ್ತಿಯನ್ನು ಪಡೆದಿರುವದು ಆಶ್ಚರ್ಯವೆಂದರೆ ಅದೇನೂ ಅತಿಶಯೋಕ್ತಿಯೂ ಗಲಾರದು. ವಾಚಕಮಹಾಶಯರೇ ? ಇತಿಹಾಸ ಸುಪ್ರಸಿದ್ಧವಾದ ರಾಮರಾಜ್ಯವೆಂದೆನಿಸುವ ಮಾದರಿ ಮೈಸೂರು ಸೀಮೆಯಲ್ಲಿಯ ಭಾರತೀಯ ತರುಣರೆಲ್ಲರೂ ಇದೇ ರೀತಿಯಾದ ದಿವ್ಯಜ್ಞಾನವನ್ನು ಪಡೆದು ಲೋಕವಿಖ್ಯಾತರಾಗಲೆಂದು ಶ್ರೀ ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ. ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿಕ್ಕ ಮಂಗಲವನ್ನೀಯಲೆಂದು ಹಾರೈಸುತ್ತೇನೆ.

C. B. Devappa and Bros.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ದೇವೀಪುರಾಣ ಸಮಾರಂಭ.

ಕಟ್ರಿಕಲ್ಲು.

ಅನಂತಪುರದ ಡಿ|| ಗುತ್ತಿತಾಲೂಕಿಗೆ ಸೇರಿದ ಕಟ್ರಿಕಲ್ಲು ಗ್ರಾಮದಲ್ಲಿ ಇದೇ ಶುಕ್ಲನಾಮ ಸಂ|| ಅಶ್ವೀಜ ಶು|| ೧ ತಾ|| 3-10-29 ಮೊದಲು ಇದೇ ಅಶ್ವೀಜ ಶು|| ೧೩ ಮಂಗಳವಾರ ತಾ|| 15-10-29 ವರೆಗೆ ಪದ್ಧತಿಯ ಮೇರೆ ಇದೇ ಗ್ರಾಮದ ಶಿವಾಲಯದಲ್ಲಿ ಹಗಲು 10ಘಂಟೆಯ ಮೊದಲು 12 ಘಂಟೆಯ ...

ವಿವಾಹಮಹೋತ್ಸವ.

ಮೂಡಿಗೆರೆ ತಾಲೂಕು ಚಿನ್ನಗಪ್ರಾಂತದ ವಿಚಾರ.

ಶ್ರೀ ಪಂಡಿತಾರಾಧ್ಯ ಪುರಾಣಸಮಾರಂಭ

(ಹೋಟಗಿ)

... ಕೊಡುವರೋ ಅವರಿಗೂ ಒಂದು ತಿಂಗಳ ಸಾದಾ ಶಿಕ್ಷೆ, ಒಂದು ಸಾವಿರ ರೂ. ದಂಡ ಮಾಡಲ್ಪಡುವದು. ಈ ಕಾಯಿದೆಯು ಮುಂದಿನ ವರ್ಷ ಅಮಲಿನಲ್ಲಿ ಬರುವದಿದೆ.

ಕಳೆದ ತಾ|| 25 ನೇ ಬುಧವಾರ ದಿವಸ ಧಾರವಾಡದ ಹುಜೂರು ಡೆಪ್ಯುಟಿ ಕಲೆಕ್ಟರರಾದ ಮಿ|| ಕೌಂಡಿನ್ಯಾರವರ ಕೋರ್ಟಿನಲ್ಲಿ ಶಿವಲಿಂಗಪ್ಪ ಫೌಜದಾರ ಇವರ ಪ್ರಕರಣದ ವಿಚಾರಣೆಯು ಉಪಕ್ರಮವಾಯಿತು. ಮಿ|| ಶಿವಲಿಂಗಪ್ಪನವರ ಪರವಾಗಿ ಹುಬ್ಬಳ್ಳಿಯ ಮಿ|| ವಿಶ್ವನಾಥರಾವ್ ಜೋಶಿ ಮತ್ತು ಧಾರವಾಡದ ಮಿ|| ಬಿ. ಎ. ಜೋಶಿ ವಕೀಲರು ಕೆಲಸ ನಡೆಸುತ್ತಿದ್ದಾರೆ. ಈ ಪ್ರಕರಣದ ವಿಚಾರಣೆಯು ಧಾರವಾಡ ಜಿಲ್ಲೆಯಲ್ಲಿ ನಡೆಯಬಾರದೆಂತಲೂ, ಬೇರೊಂದು ಜಿಲ್ಲೆಯಲ್ಲಿ ನಡೆಯಬೇಕೆಂತಲೂ ಕೇಳಿಕೊಳ್ಳಲು ಹಾಯ್‌ಕೋರ್ಟಿಗೆ ಅರ್ಜಿಮಾಡಬೇಕಾಗಿರುವದರಿಂದ ತಮಗೆ ಮುದ್ದತು ಸಿಗಬೇಕೆಂದು ವಾದಿಸಿದರು. ಆ ಪ್ರಕಾರ ಮುದ್ದತು ಬಿದ್ದು ವಿಚಾರಣೆಯು ನಿಲ್ಲಿಸಲ್ಪಟ್ಟಿದೆ.

ಸ್ವೀಕಾರ.

ಶಿರಗುಪ್ಪಾ ತಾಲೂಕು ಅರಳಿಗನೂರು ವಾಸಿಗ ...

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.——

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪುರಾಣಸಮಾಪ್ತಿ.

ಪಾಲೀಕೊಪ್ಪ.

ಸಮಾಜಬಂಧುಗಳೇ ? ನಮ್ಮ ಹಿಂದಿನ ಹಿರಿಯರು ಮುಂದಿನ ಜನರು ದುರ್ಮಾರ್ಗಿಗಳಾಗಬಾರದೆಂಬ ಸದುದ್ದೇಶದಿಂದ ವೇದಗಳ ಆಧಾರಗಳಿಂದ ಅನೇಕಾನೇಕ ಉತ್ತಮೋತ್ತಮ ನೀತಿಬೋಧಕ ಗ್ರಂಥಗಳನ್ನು ಬರೆದು ನಮ್ಮ ಮೇಲೆ ಮಹೋಪಕಾರವನ್ನು ಮಾಡಿರುವರು. ನಮ್ಮ ಪೂರ್ವಜರು ದಯಾಳುಗಳಾಗಿ ಇಂಥ ಗ್ರಂಥಗಳನ್ನು ಬರೆಯದಿದ್ದಪಕ್ಷದಲ್ಲಿ ನಮ್ಮ ಸ್ಥಿತಿಯು ಬಹು ಶೋಚನೀಯವಾಗುತ್ತಿತ್ತು. ಸಂಸಾರದಲ್ಲಿ ಬಿದ್ದು ಸುಖದುಃಖಗಳನ್ನನುಭವಿಸುತ್ತ ಬಳಲುವ ಸರ್ವ ಪ್ರಾಣಿಗಳೂ ಮನಸ್ಸಿನಲ್ಲಿ ಮುಕ್ತಿಯನ್ನೇ ಅಪೇಕ್ಷಿಸುತ್ತವೆ. ಆ ಮುಕ್ತಿಯನ್ನು ಪಡೆಯಬೇಕಾದರೆ ನಮ್ಮ ಶರೀರದಲ್ಲಿಯ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಶುದ್ಧತೆಯು ಮೊದಲು ಬೇಕು. ಧರ್ಮಶ್ರದ್ಧೆಯೇ ಮುಕ್ತಿಗೆ ಮೂಲವಾಗಿರುವದು. ಧರ್ಮಶ್ರದ್ಧೆಯು ನಮ್ಮಲ್ಲಿ ನೆಲೆಗೊಳ್ಳಬೇಕಾದರೆ ನಮ್ಮ ಸಕಲೇಂದ್ರಿಯಗಳ ಶುದ್ಧತೆಯೇ ಮೂಲಕಾರಣವಲ್ಲದೆ ಇನ್ನೊಂದಿಲ್ಲ. ಯಾವ ಮನುಷ್ಯನ ಇಂದ್ರಿಯಗಳು ದೋಷಮುಕ್ತಗಳಾಗಿರುವವೋ ಅಂಥವನೇ ಮುಕ್ತಿಸಾಮ್ರಾಜ್ಯಕ್ಕೆ ಅಧಿಕಾರಿಯು. ಸರ್ವೇಂದ್ರಿಯಗಳು ತಮ್ಮ ದುರ್ಗುಣಗಳನ್ನು ಬಿಡುವದಕ್ಕೆ ಹಿತೋಪದೇಶಶ್ರವಣವೇ ಕಾರಣವು. ಇದೇ ತತ್ವವನ್ನವಲಂಬಿಸಿಯೇ ಸರ್ವಮಹರ್ಷಿಯರೂ, ಹಿಂದಣ ಮಹರ್ಷಿಯರು ರಚಿಸಿದ ಪುಣ್ಯಕಥೆಗಳನ್ನು ಕೇಳಿ ತಮ್ಮ ಸಾಂಸಾರಿಕ ದುಃಖಗಳನ್ನು ನೀಗಿ ಮುಕ್ತರಾಗುವರು. ಈ ಸದುದ್ದೇಶದಿಂದಲೇ ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂ|| ಪಾಲೀಕೊಪ್ಪದ ಸರ್ವಜನರು ಸದರಿ ಗ್ರಾಮದ ಬೃಹನ್ಮಠಾಧ್ಯಕ್ಷರಾದ ಷ|| ಬ್ರ|| ಪಟ್ಟಾಧಿಕಾರಿ ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳವರ ಸನ್ನಿಧಿಯಲ್ಲಿ ಪುರಾಣಶ್ರವಣದ ಬಗ್ಗೆ ಬೇಡಿಕೊಳ್ಳಲು ಸದರಿ ಶ್ರೀಗಳು, ಸಂತೋಷಭರಿತರಾಗಿ ಅಭಯವನ್ನಿತ್ತು ಶ್ರೀ|| ರಾ|| ಬಾ|| ವಾರದ ಮಲ್ಲಪ್ಪನವರು ಮುದ್ರಿಸಿದ "ವೀರಮಾಹೇಶ್ವರಾಚಾರಸಂಗ್ರಹ" ವೆಂಬ ಪುರಾಣವನ್ನು ಪ್ರಾರಂಭಿಸಿದರು. ಪುರಾಣಶ್ರವಣಕ್ಕಾಗಿ ಸುತ್ತುಮುತ್ತಲಿನ ಗ್ರಾಮದ ದೇಸಾಯಿ ದೇಶಪಾಂಡೆ ಮೊದಲಾದ ಜನರು ಬರುತ್ತಿದ್ದರು. ಅಲ್ಲದೆ ಮಠದಲ್ಲಿಯೇ ಪ್ರತಿಪಕ್ಷದಲ್ಲಿಯೂ ಬರುವ ಜನರ ಬಗ್ಗೆ ಮೃಷ್ಟಾನ್ನಭೋಜನವು ಊರಜನರಿಂದ ನಡೆಯಿಸಲ್ಪಡುತ್ತಿತ್ತು. ಪರಸ್ಥಳದ ಅನೇಕಾನೇಕ ಜನರು ಗಣಾರಾಧನೆಯನ್ನು ಮಾಡಿ ಪುರಾಣವನ್ನು ಕೇಳಿ ತಮ್ಮ ಜನ್ಮವು ಸಾರ್ಥಕವಾಯಿತೆಂದೂ, ಅಜ್ಞಾನವೆಂಬ ಕಾರ್ಗತ್ತಲೆಯಿಂದ ಕೂಡಿದ ತಮ್ಮ ಮನಸ್ಸೆಂಬ ಆಕಾಶದಲ್ಲಿ ಜ್ಞಾನೋದಯವಾಯಿತೆಂದೂ ತಮ್ಮ ತಮ್ಮಲ್ಲಿಯೇ ಮಾತಾಡುತ್ತಿದ್ದರು. ಶ್ರಾವಣಮಾಸವು ಹಿಂದೂ ಜನರ ಧಾರ್ಮಿಕ ಸಮೃದ್ಧಿಗೆ ಹೇತುವಾದ್ದರಿಂದ ಅಷ್ಟಾವರಣನಿಷ್ಠರಾದ ಸಕಲ ವೀರಶೈವರು ಮಹರ್ಷಿಯರಾದ ಸದರಿ ಶ್ರೀಗಳ ಪಾದಪೂಜೆಯನ್ನು ಮಾಡಿ ತಮ್ಮ ಗುರುಭಕ್ತಿಯನ್ನು ಪ್ರಕಟಿಸುತ್ತಿದ್ದರು. ಸ್ವಾಮಿಗಳು ತ್ರಿಕಾಲಲಿಂಗ ಪೂಜಾಧುರೀಣರಾದ್ದರಿಂದ ನಗಾರಿ, ಜಯಘಂಟಾ, ಕುಹೂರಿ, ಕಹಳೆ, ಮೊದಲಾದ ವಾದ್ಯಗಳು ತ್ರಿಕಾಲದಲ್ಲಿಯೂ ಮೊಳಗಿ ಜನರಲ್ಲಿ ಧರ್ಮಜಾಗ್ರತಿಯನ್ನುಂಟುಮಾಡುತ್ತಿದ್ದವು. ಪೂಜಾವೈಭವವಂತೂ ಬಹು ಮನೋಹರವಾಗಿರುತ್ತಿತ್ತು. ತ್ರಿಕಾಲದಲ್ಲಿಯೂ ರುದ್ರಾಭಿಷೇಕವಾಗುತ್ತಿತ್ತು. ವೇ|| ವೀರಬಸವಯ್ಯನವರು ತ್ರಿಕಾಲದಲ್ಲಿಯೂ ಆಚಾರ್ಯರ ನಾಮಾವಳಿಯನ್ನು ಶಿವಮಹಿಮ್ನಸ್ತೋತ್ರವನ್ನೂ ಪಠಿಸುತ್ತಿದ್ದರು. ಲಿಂಗಾರ್ಚನೆಗೋಸ್ಕರ ಪ್ರಾತಃಕಾಲದಲ್ಲಿ ಶುದ್ಧದೀಪಾರತಿಕವೂ, ಮಧ್ಯಾಹ್ನದಲ್ಲಿ ಎಣ್ಣೆಯಾರತಿಕವೂ ಸಾಯಂಕಾಲಕ್ಕೆ ಕರ್ಪೂರದಾರತಿಕವೂ ನಡೆಯುತ್ತಿತ್ತು. ಅಲ್ಲದೆ ಶ್ರೀಗಳ ಅಪ್ಪಣೆಯಮೇರೆಗೆ ಇಲ್ಲಿಯ ಭಜನಾಸಂಘದವರು ಮಂಗಲಸ್ನಾನಾಲಂಕೃತರಾಗಿ ಪ್ರತಿನಿತ್ಯ ಸಾಯಂಕಾಲದ 6 ಘಂಟೆಯ ಸಮಯಕ್ಕೆ ಪುಷ್ಪಮಾಲಾದಿಗಳಿಂದಲಂಕೃತವಾದ ಪಲ್ಲಕ್ಕಿಯಲ್ಲಿ ಜಗದಾಚಾರ್ಯರ ಭಾವಚಿತ್ರವನ್ನಿರಿಸಿ ಜಗದಾಚಾರ್ಯರ ಮಹತ್ವಪ್ರತಿಪಾದಕಗಳಾದ ಪದ್ಯಗಳನ್ನು ಪಠಿಸುತ್ತ ಗ್ರಾಮದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸುತ್ತಿದ್ದರು. ಸರ್ವಜನರೂ ಪಾಲಕಿಯು ತಮ್ಮ ತಮ್ಮ ಮನೆಗಳಮುಂದೆ ಬಂದಾಗ ಆಚಾರ್ಯರ ಭಾವಚಿತ್ರಕ್ಕೆ ಕಾಯಿ ಕರ್ಪೂರಗಳಿಂದ ಪೂಜೆಯನ್ನು ಮಾಡುತ್ತಿದ್ದರು. ಇಷ್ಟಲ್ಲದೆ ಪಲ್ಲಕ್ಕಿಯು ಹೊರಡುವದಕ್ಕಿಂತಲೂ ಪೂರ್ವದಲ್ಲಿ ಸರ್ವಜನರು ತಮ್ಮ ತಮ್ಮ ಅಂಗಳಗಳನ್ನು ಮಡಿಸೀರಿಸಿದ ಶೋಭೆಯು ವದನ್ನು ನೋಡಿದರೆ ಎಷ್ಟೋ ದಿವಸಗಳಿಂದ ಚಿಗಿಯಾಗಿಕೂಡ ತಮ್ಮ ಪಾಪಗಳನ್ನೇನಾದರೂ ತೊಳೆಯುವರೋ ಎಂಬಂತೆ ಭಾಸವಾಗುತ್ತಿತ್ತು. ಮತ್ತು ಭಕ್ತಿಯುಳ್ಳ ಅನೇಕ ಮುತ್ತೈದೆಯರು ಮಂಗಲಸ್ನಾನಾಲಂಕಾರಯುತರಾಗಿ ಅಮೂಲ್ಯವಸ್ತ್ರಗಳನ್ನು ಧರಿಸಿಕೊಂಡು ಹಸ್ತಗಳಲ್ಲಿ ಆರತಿಯ (ಅ-ದೀಪದಲ್ಲಿಯ, ರತಿಯು-ಪ್ರೀತಿಯುಕ್ತವಾದ) ತಳಿಗೆಗಳನ್ನು ಹಿಡಿದು ಗುರುಮಹಿಮೆಯ ಪದಗಳನ್ನು ಮಂಜುಳಸ್ವರದಿಂದ ಹಾಡುವ ಸಮಯದಲ್ಲಿ ಇತರ ಜನರು ಅವರ ಕೈಯಲ್ಲಿಯ ಆರತಿಯಲ್ಲಿ ಎಣ್ಣೆ ಹುಗ್ಗಗಳನ್ನು ಹಾಕುವದನ್ನು ನೋಡಿದರೆ ಮುತ್ತೈಗೆಯ ಕೈಯಲ್ಲಿಯ ಜ್ಞಾನಾಗ್ನಿಯಲ್ಲಿ ತಮ್ಮ ದುರಾಚಾರಗಳೆಂಬ ಹವಿರ್ದ್ರವ್ಯಗಳನ್ನು ಹಾಕಿ ಪವಿತ್ರರಾಗುವರೋ ಏನೋ ಎಂಬಂತೆ ತೋರುತ್ತಿತ್ತು. ಅನೇಕ ವಾದ್ಯಗಳಿಂದಲೂ, ಅನೇಕ ಸ್ತುತಿಗಳಿಂದಲೂ ಛತ್ರಚಾಮರಾದಿ ರಾಜವೈಭವದಿಂದಲೂ ಎತ್ತರವಾಗಿದ್ದು ತನ್ನ ಎರಡೂ ಪಕ್ಷಗಳೆಂಬ ಕೈಗಳಿಂದ ದೂರದಲ್ಲಿಯ ಜನರನ್ನು ಗುರುಸೇವೆಗಾಗಿ ಕರೆಯುತ್ತದೆಯೋ ಏನುವಂತೆ ವಾಯುವಿನಿಂದ ಅಲ್ಲಾಡುತ್ತಿರುವ, ಆಚಾರ್ಯರ ವರ್ಣಸೂಚಕಗಳಾದ ಪಂಚವರ್ಣದ ನಿಶಾನೆಗಳಿಂದಲೂ ಸಾಲು ಸಾಲಾಗಿರುವ ದೀಪಗಳ ಶೋಭೆಯಿಂದಲೂ ಊರತುಂಬ ಅಲ್ಲಲ್ಲಿ ಕಟ್ಟಿದ ನಾನಾತರದ ತಳಿರುತೋರಣಗಳಿಂದಲೂ ರಮಣೀಯವಾದ ಉತ್ಸವವು ಎಂಥ ನಾಸ್ತಿಕನಿಗಾದರೂ ಭಕ್ತಿಯನ್ನು ಹುಟ್ಟಿಸದೇ ಬಿಡುತ್ತಿರಲಿಲ್ಲ. ಮಧ್ಯದಲ್ಲಿ ಎಷ್ಟೋ ಜನ ಕೀರ್ತನಕಾರರ ಕೀರ್ತನಗಳಾಗುತ್ತಿದ್ದವು. ಇತರ ಗ್ರಾಮಗಳ ಭಜನಾ ಸಂಘದವರು ಸ್ವಾಮಿಗಳ ದರ್ಶನಕ್ಕೆ ಬರುವದು, ಅವರನ್ನು ವಾದ್ಯವೈಭವದೊಡನೆ ಎದುರ್ಗೊಂಡು ಕರೆತರುವದು, ಇವೇ ಮೊದಲಾದ ಕಾರಣಗಳಿಂದ ನಮ್ಮ ಗ್ರಾಮವು ಕೈಲಾಸದಂತೊಪ್ಪುತ್ತಿರುವುದಾದರಿಂದಲೂ ಸದರೀ ಸ್ವಾಮಿಗಳು ಪಂಚಶಿಖಾಮಣಿಧರರಾಗಿ ಶಿವಸ್ವರೂಪಿಗಳಾಗಿರುವುದರಿಂದಲೂ ನಾವೆಲ್ಲರೂ ಇಷ್ಟುದಿವಸ ಶಿವಸಭೆಯ ಸುಖವನ್ನೇ ಅನುಭವಿಸದಂತಾಯಿತು. ಹೀಗೆ ಆನಂದದಾಯಕವಾದ ಈ ಪುರಾಣಶ್ರವಣವು ವೀರಶೈವರಿಗೆ ಮೊದಲು ಬೇಕಾದ ಅಷ್ಟಾವರಣನಿಷ್ಠೆ, ಧರ್ಮಶ್ರದ್ಧಾ, ಪಾಪಭೀರುತ್ವ, ಸ್ವಾಭಿಮಾನ, ದೇಶಭಕ್ತಿ ಮೊದಲಾದವುಗಳನ್ನು ಬೋಧಿಸಿದ್ದರಿಂದ ನಮ್ಮ ಪ್ರಾಂತವು ಧನ್ಯವಾಯಿತು. ಯಾವಸ್ಥಾನದಲ್ಲಿ ಗುರುನಾಮವೋ ಯಾವಸ್ಥಾನದಲ್ಲಿ ಶಿವಕಥಾಶ್ರವಣವೋ ಎಲ್ಲಿ ಧರ್ಮಬೋಧವೋ ಅದೇಸ್ಥಾನವೇ ಪವಿತ್ರವಲ್ಲವೇ? ಅಂಥವರೇ ಪುನೀತರಲ್ಲವೇ? ಹೀಗೆ ವಿಜೃಂಭಣೆಯಿಂದ ನಡೆದ ಪುರಾಣವು ಇದೇ ಭಾ. ಬ|| ಪ್ರತಿಪದೆಯ ಗುರುವಾರದಿವಸ ಸಮಾಪ್ತಿಗೊಂಡಿತು. ಈ ಸಮಯದಲ್ಲಿ ಅನೇಕಜನರಿಗೆ ಮೃಷ್ಟಾನ್ನಭೋಜನವೂ ಬಡಬಗ್ಗರಿಗೆ ವಸ್ತ್ರದಾನವೂ ಗುರುವರ್ಗಕ್ಕೆ ಭೂರಿದಕ್ಷಿಣೆಯೂ ಸಮರ್ಪಿಸಲ್ಪಟ್ಟವು. ಸರ್ವಜನರಿಗೂ, ಭಜನಾಸಂಘದವರಿಗೂ ಪ್ರೋತ್ಸಾಹಪೂರ್ವಕವಾಗಿ ಶ್ರೀಗಳಿಂದ ಆಶೀರ್ವಾದವು ಮಾಡಲ್ಪಟ್ಟನಂತರ ಸರ್ವರೂ ಊರಜನರನ್ನು ಸ್ವಾಮಿಗಳನ್ನು ಕೊಂಡಾಡುತ್ತ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ವಾಚಕಮಹಾಶಯರೇ ಇದೇ ಪ್ರಕಾರವಾಗಿ ಸರ್ವರು ತಮ್ಮ ತಮ್ಮ ಗ್ರಾಮಗಳಲ್ಲಿ ಇಂಥ ಪುಣ್ಯಕರ್ಮಗಳನ್ನು ಮಾಡುತ್ತಾ ಹೋದರೆ ಭೂಲೋಕವು ಕೈಲಾಸವಾಗುವದಕ್ಕೆ ತಡವೇ ? ಕಲಿಯುಗವು ಸತ್ಯಯುಗವಾಗುವುದಕ್ಕೆ ಅವಕಾಶವೇ ! ಸಮಾಜಸುಧಾರಣೆಗೆ ಅವಧಿಯೇ ? ಗುರುವರ್ಗದವರೆಲ್ಲ ಹೀಗೆಯೇ ಸರಾರ್ಥಬುದ್ಧಿಯಿಂದ ಧರ್ಮಬೋಧೆಯಂ ಮಾಡುತ್ತ ಹೊಟ್ಟೆಯ ಉಪಜೀವನಕ್ಕಾಗಿ ಗುರುತ್ವವನ್ನು ವಹಿಸುವದನ್ನು ಬಿಟ್ಟರೆ ಶಿವಮತದ ಏಳ್ಗೆಗೆ ಆಲಸ್ಯವೇಕೆ? ಗುರುಭಕ್ತಿಯು ನೆಲೆಗೊಳ್ಳಲಿಕ್ಕೆ ಕಾಲಾತಿಕ್ರಮಣವೇಕೆ? ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ನಾಮವು ಸಕಲಜನರ ನಾಲಿಗೆಯಮೇಲೆ ನರ್ತನಮಾಡಲಿಕ್ಕೆ ಸಂಶಯವೇಕೆ? ಇರಲಿ. ಸರ್ವರೂ ಇದೇ ಮಾರ್ಗವನ್ನು ಅನುಸರಿಸಲೆಂದೂ, ಸ್ವಾಮಿಗಳು ನಮ್ಮ ರೇಣುಕಭಾಗವೆಂಬ ಪುಣ್ಯಕ್ಷೇತ್ರದಲ್ಲಿದ್ದು ಏಕಾಂತವಾಸ, ಸ್ವಯಂಪಾಕಾದಿಗಳಿಂದ ಕಠೋರವ್ರತವನ್ನಾಚರಿಸಿ ಶಿವಾರಾಧನೆಯನ್ನು ಮಾಡುವದನ್ನು ಬಿಟ್ಟು ಊರಿಗೆ ದಯಮಾಡಿ ನಮ್ಮೆಲ್ಲರಿಗೆ ಉಪದೇಶಾಮೃತವನ್ನು ಪಾನಮಾಡಿಸಿದ್ದಕ್ಕಾಗಿ ಸದರೀ ಶ್ರೀಗಳಿಗೆ ಇಹಲೋಕೃತಿಕಯಗಳಾದ ಆಯುರಾರೋಗ್ಯಭಾಗ್ಯಾದಿಗಳನ್ನು ಕೊಡಲೆಂದೂ, ಗುರುವರ್ಗವು ವಿದ್ಯಾವಿಶಾರದರಾಗಿ ಶಿಷ್ಯಕೋಟಿಯನ್ನು ಉದ್ಧರಿಸಲೆಂದೂ ಶಿವಧರ್ಮವು ಎಲ್ಲೆಲ್ಲಿಯೂ ನೆಲೆಗೊಳ್ಳುವಂತೆ ಜಗದಾಚಾರ್ಯರ ಕೃಪಾದೃಷ್ಟಿಯು ಸರ್ವತ್ರ ಸಮಾನವಾಗಿ ಬೀಳಲೆಂದೂ ದಯಾಘನನಾದ ಪಾರ್ವತೀಪತಿಯನ್ನು ಪ್ರಾರ್ಥಿಸುವ,

ವೀರಶೈವ ಧರ್ಮಸುಧಾರಣಾಭಿಲಾಷಿ
ಸೋಮನಾಥ ಶರ್ಮಾ, ಬೃಹನ್ಮಠ, ಪಾಲೀಕೊಪ್ಪ.

ಮೂಡಿಗೆರೆ ತಾಲೂಕು ಚಿನ್ನಿಗಪ್ರಾಂತದ ವಿಚಾರ.

ಇಲ್ಲಿ ಮಳೆಯು ಸಮೃದ್ಧಿಯಾಗಿ ಬಂದು ಪೈರುಪಚ್ಚೆಗಳಿಗೆ ಅನುಕೂಲವಾಗಿರುತ್ತೆ. ಜನರಿಗೂ, ದನಕರುಗಳಿಗೂ, ಹವಾ ಆರೋಗ್ಯವಾಗಿರುತ್ತೆ. ಈ ನಮ್ಮ ಮಲ್ನಾಡು ಪ್ರದೇಶದ ಕೆಲ ನಡೆಗಳಲ್ಲಿ, ಗ್ರಾಮಪಂಚಾಯಿತಿಯು, ಸುಲಲಿತವಾಗಿ ನಡೆಯುತ್ತಾ ಇಲ್ಲ. ಇದಕ್ಕೆ ಘನಸರ್ಕಾರದವರು ಗ್ರಾಮಾಂತರ ಸಂಚರಿಸಿ, ಸದರಿ ರೆಗ್ಯುಲೇಷನ್ನನ್ನು ಪ್ರಬಲಿಸಿ, ಗ್ರಾಮಾಭಿವೃದ್ಧಿಯನ್ನೂ, ವಿದ್ಯಾಭಿವೃದ್ಧಿಯನ್ನೂ, ಮಾಡಿ ಮಲ್ನಾಡುಪ್ರಜೆಗಳ ಕುಂದುಕೊರತೆಗಳನ್ನೂ, ಹೋಗಲಾಡಿಸಬೇಕಾಗಿ ಈ ಮೂಲಕ ಅರಿಕೆಮಾಡಿಕೊಳ್ಳುತ್ತೇವೆ. ಇಲ್ಲಿಗೆ ಸಮೀಪವಾದ ಗೋಣೀಬೀಡು ಅಗ್ರಹಾರದ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ಈಗ ನಾಲ್ಕು ದಿನಗಳಿಂದಲೂ ಹರಿಕಥೆಗಳು ನಡೆದವು. ಸದರಿ ದೇವಾಲಯದಲ್ಲಿ ಮ|| ರಾ|| ರಾ|| ಎಸ್. ಚಕ್ರವರ್ತಿ ಗೋಪಾಲಾಚಾರ್ಯರೆಂಬುವರ ತೃತೀಯ ಕುಮಾರರಾದ, ಹರಿದಾಸ್ ಸಿ. ಎಸ್. ರಾಮಚಂದ್ರಾಚಾರ್ಯರೆಂಬುವ ಹದಿನಾಲ್ಕು ವರ್ಷವಯಸ್ಸಿನ

ವರ್ತಮಾನಸಂಗ್ರಹ.

ತರುಣರ... ವಿದ್ಯಾ... ಜನಗಳ ಶಾರದಾ ಬಿಲ್ಲಿನ ವಿರುದ್ಧವಾಗಿ ಮುಸಲ್ಮಾನರು ಅನೇಕ ದೊಂದು ಶಿಷ್ಟಮಂಡಲವನ್ನು ವೈಸರಾಯರ ಕ... ಚಿಕ್ಕವಯ... ಒಯ್ದಿದ್ದಾರೆ.

ಯಾವು... ಪಡೆದಿರುವ... ಂಡನ್ನಿನಲ್ಲಿ 84 ವರ್ಷದ ವೃದ್ಧಳೊಬ್ಬಳು ಮಿ|| ಸಿರಿ... ಗಳಾದರು... ಲ್ಸ್ ಎಂಬ 23 ವರ್ಷದ ತರುಣನನ್ನು ವಿವಾಹ ರಾಮರಾ... ವಾದಳು.

ಭಾರತೀಯ... ಲಾಹೋರಿನಲ್ಲಿ ನೆರವೇರುವ ಕಾಂಗ್ರೆಸ್ಸಿಗೆ ಜವಾಹರ ಪಡೆದು ಲ... ಲು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪ... ಪ್ರಾರ್ಥಿಸು... ನಿತ್ಯ ಮಂಗ...

...ಂಗ್ಲಂಡದ ಸ್ಯಾಂಡಸ್ಟ್ ಕಾಲೇಜಿನಲ್ಲಿ ಲಷ್ಕರಿ ...ಹೊಂದಲು 8 ಜನ ಭಾರತೀಯ ತರುಣರನ್ನು ...ಕೊಂಡಿದ್ದಾರೆ.

ಶ್ರೀ ...ರದಾಬಿಲ್ಲನ್ನು ನಿಷೇಧಿಸುವದಕ್ಕಾಗಿ ನಾಗಪೂರ ಅನಂತವಾಸುದೇವರು ತಮ್ಮ ಮಹಾಮಹೋ...ಯ ಪದವಿಯನ್ನು ಬಿಟ್ಟುಕೊಟ್ಟಿದ್ದಾರೆ. !

ಅನಂತ... ಗ್ರಾಮದಲ್ಲಿ ...ತ್ಯಾಗದ ವಿಷಯದಲ್ಲಿ ಅಲ್ ಇಂಡಿಯಾ ಕಾಂ ತಾ|| 3-10. ...ಕಮಿಟಿಯವರು ಗೊತ್ತುಪಡಿಸಿದ ಠರಾವಿನ ವಾರ ತಾ|| ...ಮಿರತದ 26 ಜನ ಆರೋಪಿಗಳು ಅನ್ನತ್ಯಾಗ ದ ಶಿವಾಲಯ ...ವ್ರತವನ್ನು ನಿಲ್ಲಿಸಿದರು.

ವರೆಗೂ ಅಷ್ಟ... ...ಟ್ನೀದ ವಕೀಲರೊಬ್ಬರಾದ ಮುನ್ಷಿ ಈಶ್ವರ ಯಿಂದ 8 ... ಪಂಚಾಚಾರ್ಯ... ...ಂಬವರು ರೂ. 2,15,000 ಬೆಲೆಬಾಳುವ ಆಸ್ತಿ ...ಯಿಂದ 12 ...ದರಿದ್ರ ಬಾಲಕರಿಗೆ ಕೈಗಾರಿಕೆ ಶಿಕ್ಷಣವನ್ನು ಗ್ರಾಮದ ...ಪದಕ್ಕಾಗಿ ದಾನಮಾಡಿರುವರು.

ಮಾಹಾತ್ಮ... ಮಹಾಕಾರ್ಯ... ...ನಾರ ರಾಜಧಾನಿಯ ಮಿರ್ಜ ಆಸ್ಪತ್ರೆಯಲ್ಲೂ ಇದೇ ಗ್ರಾಮ... ...ಬಾ ಮತ್ತು ದೇವೀರಾಂಬಾ ಅಗ್ರಹಾರಗ ಗೌಡರು, 178ಗ್ ಉಪದ್ರದಿಂದ ನಾಲ್ಕು ಮರಣಗಳಾಗಿ ಪ್ಪನವರು, ಕಾ ...ಸಿಟಿ ಹೆಲ್ತ್ ಆಫೀಸರರು ತಿಳುಹಿಸುತ್ತಾರೆ.

ಯುವಂತೆ ಮಾ... ರೂ ಬಂದು ಈ ...ಪಿ. ರೈಲ್ವೆ ಟಿಕೆಟು ಕಲೆಕ್ಟರ ಓಧಾರಾಮ ಎಂಬವನು ಪ್ರವಾಸಿಕರಿಗೆ ಅಪಶಬ್ದ ಪಾತ್ರರಾಗಬೇಕ... ಮಹಾಕಾರ್ಯ... ...ಕ್ಕಾಗಿ ಠಾಣೆಯ ಮ್ಯಾಜಿಸ್ಟ್ರೇಟರು 50 ಲಿಂಗಪ್ಪನವರು ಅಥವಾ 10 ದಿನದ ಕಠಿಣಶಿಕ್ಷೆ ವಿಧಿಸಿದರು.

ಭೂಷಣವೂ ಮ... ...ವಾಲಿಸನಲ್ಲಿ ಜೋಸೆಫ್ ಏಡೋವೆಲ್ ಎಂಬ ಕಾರ್ಯವನ್ನು ... 128 ವಯಸ್ಸು ! ಕಳೆದ ಜುಲೈ ತಿಂಗಳಲ್ಲಿ ದ್ಗುರು ಪಂಚಾ... ...ಸವಳೊಬ್ಬಳನ್ನು ಮದುವೆಯಾದನಂತೆ ! ಲೆಂದು ಹಾರೈಸು... ...ಜೋಸೆಫನ 80 ವರ್ಷದ ಮಗನೂ !!

...ಮವಲ್ಲಿ ಕೃಷ್ಣ ಪರಶುರಾಮ ಎಂಬವನು ...ಮದ್ಯಪಾನಮಾಡಿ, ಅನುಲಿನಲ್ಲಿ ಜನರಿಗೆ ...ಗಳನ್ನಾಡುತ್ತ ವಸ್ತ್ರರಹಿತನಾಗಿ ಮಂಗ...ದ್ದಕ್ಕಾಗಿ ಮ್ಯಾಜಿಸ್ಟ್ರೇಟರು 50 ರೂ. ...ದರು.

ಹೊಸೂರು ತಾ... ಕರ್ಪೂ ಹೈಸಪುರದ ...ಲಾರಾಧ್ಯರವರ ಜೇಧುರಂಜನ ಚಕ್ರವರ್ತಿ, ಹರೇಂದ್ರಚಂದ್ರ ಕಾನಹಳ್ಳಿ ಕಾಲೂ... ಮನೋರಂಜನ ವಿಶ್ವಾಸ, ... ಹಳ್ಳಿ ಮಠದ ...ಂಗಾಲಿಗಳು ಲಾಹೋರ ಕಾಂಗ್ರೆಸ್ಸಿಗೆ ಸ|| ರಾಮಾನುಜಾ... ...ಯಿಂದ ಹೋಗಲು 30 ನೆಯ ತಾರೀ ನೂತನ ಮಠದಲ್ಲಿ ದಿವಸ ವಿವಾಹಮಹೋ... ...ಗತ್ತೆಯಿಂದ ಪ್ರಯಾಣಮಾಡಿದರು.

ಸುವರ್ತಿಗಳಾದ ...ಭೋಗುತ್ತಿದ್ದ ಒಬ್ಬ ಹೆಂಗಸು ಬಿಕ್ನಾರ ವೀರಭದ್ರಾರಾಧ್ಯರ ...ಹಿಲೆ ತನ್ನ ಕೂಸು ಆಡುತ್ತಾಡುತ್ತ ಕಿಡಿ ವಿದ್ಯಾರ್ಥಿಗಳಾದ ...ಕೆಳಗೆ ಬೀಳಲು, ಅದನ್ನು ಉಳಿಸಲು ಮಾರಾಧ್ಯರ ಕುಮಾ... ...ನುಮುಕಿದಳು. ಕೂಡಲೆ ತಾಯಿಯು ಹೈಸಪುರದ ದೊಡ್ಡ ... ಶಿವಾರಾಧ್ಯರು ...ಳು. ಕೂಸು ಮಾತ್ರ ಸ್ವಲ್ಪ ಗಾಯ ಶ್ರೀಮದ್ ...ಭೀಮುಗೆತು.

ಪರ್ವತಾರಾಧ್ಯಸ್ವಾಮಿ... ...ಜಿಲ್ಲಾ ಬಾಗೇಪಲ್ಲಿ ತಾಲೂಕು ಜೇ... ವಿಧಿಪೂರ್ವಕವಾಗಿ ...ಯಲ್ಲಿ ಒಂದು ಹಳ್ಳಿಯಿರುವುದು. ಅಲ್ಲಿ ಲಾದ ಗಣಪತಿಪೂಜಾ ...ಮುದ್ದಮ್ಮನೆಂಬ ಒಕ್ಕಲಿಗರ ಹುಡು ಕಲಶಸ್ಥಾಪನ ಆಚಾ... ದೀಕ್ಷಾಸಂಸ್ಕಾರ ... ...ಯಿತು. ಈಗ ಮುದ್ದಮ್ಮನು ಮುದ್ದ ಶ್ರೀಮದ್ಹಿರಿಯರ ... ಪಂಚೆ ಉಡುತ್ತಿದ್ದಾಳೆ. ಹೆಂಗಸಿನ ತಿರುಮಲದಾರ ಮಠವಾತೆ!

ವನಹಳ್ಳಿ ಮಠದ ವೇ|| ... ವೇ|| ಮುದ್ದುಮಾದಾ... ...ನಲ್ಲಿ ಭೆಸ್ಟ್ ಎಂಬ ಕ್ರೌಟಿಕನು ಮುದ್ದಪ್ಪಾರಾಧ್ಯರೂ ...ಗಳನ್ನು ಉಪಯೋಗಿಸಿ ಒಂದು ಮನೆ ನವರೂ ಮತ್ತಿಗೆರೆ ಮ|| ...ವನಂತೆ! ತಳಹದಿಯಿಂದ ಮಹಡಿಯ ಗೌಡರೂ ಬೀಮುದ್ರೆ

...ತುದಿಯವರೆಗೂ ಎಲ್ಲೆಲ್ಲಿಯೂ ಕನ್ನಡಿಯೇ ತುಂಬಿ...ರುವುದಂತೆ! ಅದರೊಳಗೆ ಯಾರಾದರೂ ಪ್ರವೇಶಿಸಿ...ದರೆ ದಿಗ್ಭ್ರಮೆಹಿಡಿಯುವದು.

ರಾಜಕೋಟೆಯ ವೆಸ್ಟ್ ಹಾಸ್ಪಿಟಲ್ ಆಸ್ಪತ್ರೆಯಲ್ಲಿ...ರುವ ಡಾಕ್ಟರ್ ಷಹದ್ದಾಯ್ ದೌಲತ್ರಾಯ್ ...ಜ್ವಾಲ ಎಂಬುವರು ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂ...ದುತ್ತಿದ್ದ ಒಬ್ಬ ರೋಗಿಗಾಗಿ ತಮ್ಮ ಶರೀರದಿಂದ ...-10 ಔನ್ಸುಗಳಷ್ಟು ರಕ್ತವನ್ನು ಕೊಟ್ಟು ಪ್ರಾಣದಾನ ಮಾಡಿರುವರು. ಸ್ತುತ್ಯ !

ಹಂಗೇರಿಯಾದಲ್ಲಿ ಒಬ್ಬ ರಾಕ್ಷಸನನ್ನು ಸೆರೆಹಿಡಿದಿರುವರು. ಅವನ ಮುಖದಲ್ಲಿ ನೀಲವರ್ಣದ ಕೇಸರಗಳಂತೆ ಭಯಂಕರವಾದ ಕೂದಲುಗಳಿರುವುವಂತೆ! ಅವನು ಬಹಳ ದೃಢಕಾಯನಾಗಿಯೂ ಕ್ರೂರಸಾಹಸಿಯಾಗಿಯೂ ಇರುವನು. 20 ವರ್ಷಗಳ ಹಿಂದೆ ಆತನು ಸುಮಾರು 30 ಮಂದಿ ಸ್ತ್ರೀಯರನ್ನು ಕೊಂದಿರುವನಂತೆ!

ನ್ಯೂಜೀಲೇಂಡಿನ ಕೈವರವೆಂಬ ಸಮುದ್ರದ ದಡದಲ್ಲಿ ಇಬ್ಬರು ಸಹೋದರರಿಗೆ ಒಂದು ಅಮೂಲ್ಯದ್ರವ್ಯವು ದೊರೆತಿರುವದು. ಎಂಟುಮಣ ಭಾರವಿರುವ ಒಂದು ಅಂಬರಿನ ಗಟ್ಟಿಯ ಹೆಕ್ಕಲು ಸಿಕ್ಕಿರುವುದು. ಅದರ ಮೇಲೆಲ್ಲಾ ನರಗಳು ಅಂಟಿಕೊಂಡಿರುವುವು. ಅದರ ಕ್ರಯವು ಸುಮಾರು 35,840 ಪೌಂಡುಗಳಾಗುವುದಂತೆ.

ವಾಷಿಂಗ್‌ಟನ್ನಿನ ಸ್ಪೋಕೇನ್ ಎಂಬಲ್ಲಿರುವ ಹಿಲ್ ಯಾರ್ಡ್ ಎಂಬ ಕಂಪನಿಯಲ್ಲಿ ಗ್ರೇಟ್‌ನಾರ್ದನ್ ರೈಲ್ವೆ ಕಂಪನಿಯವರಿಗಾಗಿ ಒಂದು ಹೊಸ ರೈಲ್ವೆ ಎಂಜಿನ್ನನ್ನು ತಯಾರಿಸಿರುವರು. ಇದು 109 ಅಡಿ ಉದ್ದವೂ 19,78,240 ಪೌಂಡುಗಳ ತೂಕವೂ ಇದೆ ಇದಕ್ಕೆ ಸುಮಾರು ಏಳು ಲಕ್ಷ ರೂಪಾಯಿಗಳ ಕ್ರಯವಾಗುವದಂತೆ!

ದಾವಣಗೆರೆಯಲ್ಲಿ ಪ್ರಜಾಸೌಮ್ಯದಿಯು ಇನ್ನೂ ನೆಲೆಸಿಲ್ಲವಾದುದರಿಂದ ಸರ್ಕಾರದವರು ರಿಜರ್ವ್ ಪೋಲೀಸಿನವರನ್ನು ಒಂದು ವರ್ಷದವರೆಗೆ ಅಲ್ಲಿ ಇಟ್ಟು ಆ ಸಿಬ್ಬಂದಿಯ ಸಂಬಳ ಮತ್ತು ಇತರ ಖರ್ಚುಗಳಿಗೆ ಬೇಕಾಗುವ 14,000 ರೂಪಾಯಿಗಳನ್ನು ಸರ್ಕಾರಿ ನೌಕರರ ಹೊರತು ಇತರ ಪ್ರಜೆಗಳು ಕಂದಾಯ ರೂಪವಾಗಿ ಕೊಡಬೇಕೆಂದು ಗೊತ್ತುಮಾಡಿರುವರು.

ಹಿಂದಕ್ಕೆ ಕೆಲ ದಿನ ಕಾಳ ಎಂಬ ವಾರಪತ್ರಿಕೆಯನ್ನೂ, ಆಮೇಲೆ ಸ್ವರಾಜ್ಯವಾರಪತ್ರಿಕೆಯನ್ನೂ ಹೊರಡಿಸುತ್ತಿದ್ದ ಶ್ರೀ ಶಿವರಾಮ ಮಹದೇವ ಪರಾಂಜಪೆಯವರು ಪುಣೆಯಲ್ಲಿ ಕಳೆದವಾರ 27 ನೇ ತಾರೀಖಿನ ದಿನ ನಿಧಿದರು. ಇವರು ಮೇಲಾದಬರಹಗಾರರೂ, ವಾಗ್ಮಿಗಾರರೂ, ಇದ್ದರು. ಇವರ ಮರಣದಿಂದ ಪುಣೆಯ ...ಟಿ ಹಾಗೂ ಸಾರ್ವಜನಿಕ ಸಂಸ್ಥೆಗಳು ಮುಚ್ಚಲ್ಪಟ್ಟಿದ್ದವು.

ಚಾಮುಂಡಿಬೆಟ್ಟದ ಮೇಲೆ ಶ್ರೀ ಚಾಮುಂಡೇಶ್ವರೀ ಅಮ್ಮನವರ ರಥೋತ್ಸವವು ಶುಕ್ಲನಾಮ ಸಂವತ್ಸರದ ಆಶ್ವಯುಜ ಬಹುಳ ದ್ವಿತೀಯಾ ರವಿವಾರ ದಿವಸ (20-10-29) ನಡೆಯುವುದೆಂಬುದಾಗಿ ಅನೇಕ ಪಂಚಾಂಗದಲ್ಲಿ ಬರೆದಿರುವುದು ಸರಿಯಷ್ಟೆ ! ಆದರೆ ಈ ವರುಷ ಶ್ರೀ ಚಾಮುಂಡೇಶ್ವರೀ ಅಮ್ಮನವರ ರಥೋತ್ಸವವು ಆಶ್ವಯುಜ ಶುದ್ಧ ಚತುರ್ದಶಿ ಗುರುವಾರ (17-10-28) ದಿವಸ ನೆರವೇರುವದೆಂದು ತಿಳಿದುಬರುತ್ತದೆ.

ಅಫ್ಘಾನಿಸ್ಥಾನದಲ್ಲಿ ಜ|| ನಾದಿರಖಾನ ಇವರಿಗೆ ಎಲ್ಲ ಕಡೆಗೂ ಸಹಾಯವು ದೊರೆಯುತ್ತಿದೆ. ಬಚ್ಚಾ ಯಿಸಕ್ಕನನ್ನು ಕಾಬೂಲಿನಲ್ಲಿಯೇ ಸುತ್ತುಗಟ್ಟಿ ಮುತ್ತಿಗೆ ಮಾಡುವದು ನಾದಿರಖಾನರ ಉದ್ದೇಶವಾಗಿದೆ. ನಾದಿರಖಾನರು ಕಂದಹಾರವನ್ನು ವಶಮಾಡಿಕೊಂಡ ಮೇಲೆ ಅಫ್ಘಾನಿ ಜನರು ಇವರ ಸಹಾಯಕ್ಕೆ ಧಾವಿಸಿ ಬರುತ್ತಿರುವರು. ಪೇಶಾವರದಲ್ಲಿ ಅಫ್ಘಾನಿ ಸಹಾಯಕ ಕಮಿಟಿಯು ನಿಯಮಿಸಲ್ಪಟ್ಟಿದೆ. ನಾದಿರಖಾನ ಇವರು ಗಾರ್ದೇಜನ್ನು ತೆಗೆದುಕೊಂಡರೆಂಬ ಸುದ್ದಿಯಿದೆ.

ರಂಗೂನಿನ ಒಂದು ಜೆಲ್ಲೆಯಲ್ಲಿ ಒಬ್ಬ ಸೇವಕನು ತನ್ನ ಯಜಮಾನನ 18 ವರ್ಷ ಪ್ರಾಯದ ಹುಡುಗಿಯನ್ನು ಒಂದು ಕೋಣೆಯಲ್ಲಿ ಕರೆದೊಯ್ದು ಮಾನಭಂಗಮಾಡಲು ಪ್ರಯತ್ನಿಸಿದನು. ಆದರೂ ಹುಡುಗಿಯು ಹೆದರಲಿಲ್ಲ. ಅವನ ಕೈಯಲ್ಲಿಯ ಪಿಸ್ತೂಲನ್ನು ಕಸಿದೊಗೆದು ಅವನನ್ನು ನೆಲಕ್ಕುರುಳಿಸಿದಳು. ಕೂಡಲೆ ಹೊರಗೆ ಬಂದು ಬಾಗಿಲನ್ನು ಮುಚ್ಚಿದಳು. ಸೇವಕನು ಹೆದರಿ ಕೋಣೆಯಲ್ಲಿಯೇ ಪಿಸ್ತೂಲಿನಿಂದ ಹೊಡೆದುಕೊಂಡು ಪ್ರಾಣಬಿಟ್ಟನು.

ಬೊಂಬಾಯಿಯ ಪೀಟರ್ ಸಲ್ದಾನನೆಂಬ ಕ್ಯಾಥೋಲಿಕನೊಬ್ಬನು ಸಿವಿಲ್ ಲಾ ಪ್ರಕಾರ ಓರ್ವಳನ್ನು ವಿವಾಹಮಾಡಿಕೊಂಡಿದ್ದನು. ಅನಂತರ ಕ್ಯಾಥೋಲಿಕ್ ವಿವಾಹ ವಿಧಿಪ್ರಕಾರ ಚರ್ಚಿನಲ್ಲಿ ಇನ್ನೊಬ್ಬಳನ್ನು ವಿವಾಹವಾದನು. ಆಮೇಲೆ ಮೊದಲನೆ ಪತ್ನಿಯು ದಾವೆಹೂಡಿಸಿದಳು. ಬೊಂಬಾಯಿ ಹೈಕೋರ್ಟಿನವರು ಸಿವಿಲ್ ಲಾ ಪ್ರಕಾರ ಒಮ್ಮೆ ವಿವಾಹವಾದಮೇಲೆ ಚರ್ಚ್ ವಿಧಿಪ್ರಕಾರ ಇನ್ನೊಬ್ಬಳನ್ನು ವರಿಸಿದುದು ತಪ್ಪೆಂದು ಆರೋಪಿಗೆ ಶಿಕ್ಷೆ ವಿಧಿಸಿದರು.

ಕಾಬೂಲದೊಳಗಿನ ಕ್ರಾಂತಿಕಾರಕರು ಬಚ್ಚಾನನ್ನು ಕೊಂದರೆಂದು ಪೇಶಾವರದಲ್ಲಿ ಸುದ್ದಿ ಹರಡಿದೆ. ನಾದೀರಖಾನರು ಕಂದಹಾರ ವಶಮಾಡಿಕೊಂಡಂದಿನಿಂದ ಅಫಗಾಣರು ಅವರಿಗೆ ಅನುಕೂಲರಾಗಿರುವರು. ನಾದೀರಖಾನರಿಗೆ ಸಹಾಯಮಾಡಲಿಕ್ಕೆಂದು ಪೇಶಾವರದೊಳಗೊಂದು ಸಹಾಯಕ ಮಂಡಲವು ನಿಯಮಿಸಲ್ಪಟ್ಟಿದೆ. ಅದರಂತೆ ಚಂದಾ ಕೂಡಿಸುವ ಕ್ರಮವೂ ಸಹ ನಡೆದಿದೆ. ನಾದೀರಖಾನರು ಗಾರ್ದೇಜ ಕೈವಶಮಾಡಿಕೊಂಡ ಸಂಗತಿಯು ಪ್ರಸಿದ್ಧವಾಗಿದೆ.

ಕೋಲಾರ ಜಿಲ್ಲಾ ಬಾಗೇಪಲ್ಲಿ ತಾಲೂಕಿನಲ್ಲಿ ಗೊಳ್ಳಪಲ್ಲಿ ಎಂಬ ಹಳ್ಳಿಯಿರುವುದು. ಅಲ್ಲಿ ಒಡ್ಡರ ಕುಲದ ವೆಂಕಟಮ್ಮ ಎಂಬವಳ ಹೊಟ್ಟೆಯಲ್ಲಿ ಈಗ ಎರಡು ತಿಂಗಳ ಹಿಂದೆ ಒಂದು ಹೆಣ್ಣು ಕೂಸು ಹುಟ್ಟಿತು. ಹುಟ್ಟಿದ ಒಂದು ತಿಂಗಳ ಮೇಲೆ ಆ ಕೂಸಿಗೆ ಹೆಣ್ಣು ಚಿಹ್ನಗಳೆಲ್ಲ ಹೋಗಿ ಗಂಡು ಚಿಹ್ನಗಳು ತೋರುತ್ತಿವೆ. ಮಿಟ್ಟೇಮರಿ ಪೋಲೀಸು ದಫೇದಾರರು, ಬಾಗೇಪಲ್ಲಿ ತಾ|| ಅಮಲ್ದಾರರು, ಡಾಕ್ಟರರು, ಚಿಕ್ಕಬಳ್ಳಾಪುರದ ಸ್ಪೆಷಲ್ ಮ್ಯಾಜಿಸ್ಟ್ರೇಟರು ಹೋಗಿ ನೋಡಿಕೊಂಡು ಬಂದಿರುವರು. ಪ್ರತಿದಿನ ನೂರಾರು ಜನರು ಹೋಗಿ ನೋಡಿ ಬರುತ್ತಿದ್ದಾರೆ.

ಪಶ್ಚಿಮಖಾನದೇಶದಲ್ಲಿ ನವಾಪುರವೆಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನ ಬಳೆಗಾರನು ಬಳೆ ಇಡಿಸಲಿಕ್ಕೆ ಹೋದಾಗ್ಗೆ ಲಕ್ಷ್ಮೀಬಾಯಿ ಎಂಬವಳ ಮೈಮೇಲೆ ಹೋಗಲು ಅವಳು ಅವನನ್ನು ಕಾಲಿನಿಂದ ಒದ್ದು ನೆಲಕ್ಕುರುಳಿಸಿದಳು. ಆದರೂ ಲಕ್ಷ್ಮೀಬಾಯಿಗೆ ಈ ಅಪಮಾನವನ್ನು ಸಹಿಸುವದಾಗಲಿಲ್ಲ. ಕಡೆಗೆ ಗಂಡನ ಟೇಬಲ್ಲಿನ ಮೇಲೊಂದು ಚೀಟಿ ಬರೆದಿಟ್ಟು ಪತಿಯನ್ನು ಧ್ಯಾನಿಸುತ್ತ ಬಾವಿಯಲ್ಲಿ ಧುಮುಕಿ ಪ್ರಾಣವನ್ನು ಬಿಟ್ಟಳು. ಪತಿಯು 5 ಘಂಟೆಗೆ ಶಾಲೆಯಿಂದ ಬಂದು ಪತ್ರನ್ನೋದಿ ಪರವಶನಾಗಿ ಅದೇ ಬಾವಿಯಲ್ಲಿ ತಾನೂ ಬಿದ್ದು ಪ್ರಾಣವನ್ನು ಬಿಟ್ಟನು.

ಸಾತಾರಾ ಡಿ|| ವಾಯಿ ತಾಲೂಕಿನ ಬೋರ್ಡಿನಲ್ಲಿ ದುಡ್ಡು ಅಪವ್ಯಯವಾದ ಸಂಗತಿಯು ಜನರ ಬಾಯಲ್ಲಿತ್ತು: ಈ ಬಗ್ಗೆ ಸಾತಾರೆಯ ಕಲೆಕ್ಟರರು ಹುಡುಕಬೇಕೆಂದು ಮನಸ್ಸು ಮಾಡಿ ಅದರಂತೆ ನೋಡಲು ವಸ್ತುಸ್ಥಿತಿಯು ಹೊರಬಿದ್ದು ಈಗ ತಾಲೂಕ ಲೋಕಲ್‌ಬೋರ್ಡಿನ ಅಧ್ಯಕ್ಷರಾದ ಮಿ. ಆನಂದರಾವ ದಾಢೆ ಎಂಬುವರನ್ನು ಸೆರೆಹಿಡಿದು ಈಗಿನ ಮಟ್ಟಿಗೆ 2 ಸಾವಿರ ರೂಪಾಯಿಗಳ ಮುಚ್ಚಳಿಕೆಯಿಂದ ಬಿಡುಗಡೆಮಾಡಿದ್ದಾರೆ. ಜಮಾಖರ್ಚಿನಲ್ಲಿ 60 ರೂಪಾಯಿ ಶಿಲ್ಕು ವಿನಾಯಿತೆಂಬುವ ಲಕ್ಷ್ಯವು ತಿಳಿಯದಾಗಿದೆ. ಕಾರಕೂನ ದೇಶಪಾಂಡೆ ಎಂಬುವನ ಮೇಲೆಯೂ ವ್ಯಾಜ್ಯನಡೆಯುವದಿದೆ.

14 ವರ್ಷದೊಳಗಿನ ಹುಡುಗಿಗೆ ಇಲ್ಲವೆ 18 ವರ್ಷದೊಳಗಿನ ಹುಡುಗನಿಗೆ ಲಗ್ನವಾದರೆ ಅದು ಕಾಯದೆ ವಿರುದ್ಧವೆಂದು ತಿಳಿಯಲ್ಪಡುವದು. ಲಗ್ನವಾದವನು 18 ವರ್ಷದ ಮೇಲಿನವನು 21 ವರ್ಷದೊಳಗಿನವನು ಇದ್ದರೆ ಅವನಿಗೆ ಒಂದು ಸಾವಿರ ರೂಪಾಯಿಗಳವರೆಗೆ ದಂಡ. 21 ವರ್ಷಕ್ಕಿಂತಲೂ ಹೆಚ್ಚಿನ ವಯಸ್ಸಿನವನಿದ್ದರೆ 1 ತಿಂಗಳ ಸಾದಾ ಶಿಕ್ಷೆ ಒಂದು ಸಾವಿರ ರೂ. ದಂಡ ಮಾಡಲ್ಪಡುವನು. ಈ ಲಗ್ನಕ್ಕೆ ಯಾರು ಪ್ರೋತ್ಸಾಹ ಕೊಡುವರೋ ಅವರಿಗೂ ಒಂದು ತಿಂಗಳ ಸಾದಾ ಶಿಕ್ಷೆ. ಒಂದು ಸಾವಿರ ರೂ. ದಂಡ ಮಾಡಲ್ಪಡುವದು. ಈ ಕಾಯದೆಯು ಮುಂದಿನ ವರ್ಷ ಅಮಲಿನಲ್ಲಿ ಬರುವದಿದೆ.

ಕಳೆದ ತಾ|| 25 ನೇ ಬುಧವಾರ ದಿವಸ ಧಾರವಾಡದ ಹುಜೂರು ಡೆಪ್ಯುಟಿ ಕಲೆಕ್ಟರರಾದ ಮಿ|| ಕೌಂಡಿಣ್ಯರವರ ಕೋರ್ಟಿನಲ್ಲಿ ಶಿವಲಿಂಗಪ್ಪ ಪೌಜದಾರ ಇವರ ಪ್ರಕರಣದ ವಿಚಾರಣೆಯು ಉಪಕ್ರಮವಾಯಿತು. ಮಿ|| ಶಿವಲಿಂಗಪ್ಪನವರ ಪರವಾಗಿ ಹುಬ್ಬಳ್ಳಿಯ ಮಿ|| ವಿಶ್ವನಾಥರಾವ ಜೋಶಿ ಮತ್ತು ಧಾರವಾಡದ ಮಿ|| ಬಿ. ಎ. ಜೋಶಿ ವಕೀಲರು ಕೆಲಸ ನಡೆಸುತ್ತಿದ್ದಾರೆ. ಈ ಪ್ರಕರಣದ ವಿಚಾರಣೆಯು ಧಾರವಾಡ ಜಿಲ್ಲೆಯಲ್ಲಿ ನಡೆಯಬಾರದೆಂತಲೂ, ಬೇರೊಂದು ಜಿಲ್ಲೆಯಲ್ಲಿ ನಡೆಯಬೇಕೆಂತಲೂ ಕೇಳಿಕೊಳ್ಳಲು ಹಾಯ್‌ಕೋರ್ಟಿಗೆ ಅರ್ಜಿಮಾಡಬೇಕಾಗಿರುವದರಿಂದ ತರುಗಿ ಮುದ್ದತು ಸಿಗಬೇಕೆಂದು ವಾದಿಸಿದರು. ಆ ಪ್ರಕಾರ ಮುದ್ದತು ಸಿಕ್ಕು ವಿಚಾರಣೆಯು ನಿಲ್ಲಿಸಲ್ಪಟ್ಟಿದೆ.

ಸ್ವೀಕಾರ.

ಶಿರಗುಪ್ಪಾ ತಾಲೂಕು ಆರಳಿಗನೂರು ವಾಸಿಗಳಾದ ಮ|| ರಾ|| ವೀರಬಸವಯ್ಯನವರು ತಮಗೆ ಪ್ರಾಪ್ತವಾಗಿದ್ದ ಪ್ರಬಲ ಕಾಯಿಲೆಯು ಗುರುಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣೆಕ್ಕೋಸ್ಕರ 5 ರೂ. ಗಳನ್ನು ಕಳುಹಿಸಿರುತ್ತಾರೆ.

ಕೊಪ್ಪಳ ತಾ|| ಮುದ್ದಾಬಳ್ಳಿ ವಾಸಿಗಳಾದ ಶ್ರೀಮಂತ ಮ|| ರಾ|| ಮಾಲೀಪಾಟೀಲ ಬಸವನಗೌಡರು ಶ್ರೀ ಹಿಮವತ್ಕೇದಾರ ಜಗದ್ಗುರುಗಳ ಸನ್ನಿಧಿಯಲ್ಲಿ ತಮ್ಮ ಪುತ್ರರೇ ಮೊದಲಾದವರಿಗೆ ಶಿವದೀಕ್ಷಾಸಂಸ್ಕಾರವನ್ನೂ ಗಣಾರಾಧನೆಯನ್ನೂ ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ವೇ|| ಶಿವಯ್ಯ ಹಿರೇಮಠ ಸ್ಕೂಲ್‌ಮಾಸ್ಟರ್ ಕಾತರಕಿ ಇವರ ದ್ವಾರಾ ತಲ್ಪಿರುತ್ತವೆ.

ತುಮಕೂರು ಟವ್ನ್ ವಾಸಿಗಳಾದ ಪ್ಲೀಡರ್ ಮ|| ರಾ|| ಜಿ. ಕೆ. ಗುರುಸಂಗಾರ್ಯರು ತಮ್ಮ ಪುತ್ರಿ ಚಿ|| ಕುಂ|| ಸೌ|| ಪುಟ್ಟರೇಣುಕಾಂಬೆಯ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ದೇಶದ ಯುಬಮಾ ಭೋಜಪವಾಡಪ್ಪನವರ ದ್ವಾರಾ ತಲ್ಪಿರುತ್ತವೆ.

ಹೊಸೂರು ತಾಲೂಕು ಹೈಸಪುರದ ದೊಡ್ಡಮಠದಲ್ಲಿರುವ ವೇ|| ಸಂ|| ಮಂಡಲಾರಾಧ್ಯರವರ ಜ್ಯೇಷ್ಠಕುಮಾರ ಚಿ|| ಮಂಡಲಾರಾಧ್ಯರಿಗೆ ಕಾನಕಾನಹಳ್ಳಿ ತಾಲೂಕು ಭೀಮಗೊಂಡನಹಳ್ಳಿ ಮಠದ ಮ್ಯಾನೇಜರ್ ವೇ|| ರಾಮಾರಾಧ್ಯರ ಪುತ್ರಿ ಸೌ|| ರಾಮರಾಜಾಂಬೆಯನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ರಾಮಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ಜಿಲ್ಲಾ ಹೋಟಗಿ ಗ್ರಾಮದಲ್ಲಿ ನೆರವೇರಿದ ಶ್ರೀ ಪಂಡಿತಾರಾಧ್ಯ ಪುರಾಣಸಮಾರಂಭದಲ್ಲಿ ರಾ|| ರಾ|| ಕಲ್ಲಪ್ಪಾ ರೇಶ್ಮೆ ಇವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಮ|| ರಾ|| ಬಾಪೂರಾವ ಪಾಟೀಲ ಇವರ ದ್ವಾರಾ ತಲ್ಪಿರುತ್ತದೆ.

ಹುಬ್ಬನಹಡಗಲಿ ನಿವಾಸಿಗಳಾದ ಶ್ರೀಮಂತ ಗುಗ್ರಿ ಹುಚ್ಚಪ್ಪನವರು ತಮ್ಮ ಗೃಹದಲ್ಲಿ ನೆರವೇರಿಸಿದ ಗರ್ಭಲಿಂಗಧಾರಣ ಹಾಗೂ ಶ್ರಾವಣ ಗಣಸಮಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಬನ್ನಿಕಲ್ಲು ಹಿರೇಮಠದ ವೇ|| ಕೊಟ್ರಪ್ಪಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.——

ಮೈಸೂರು ಸೀಮೆಯ ದಿವಾನರಾದ
ಅಮೀನ್-ಉಲ್-ಮುಲ್ಕ್
ಮಿ|| ಮಿರ್ಜಾ ಎಂ. ಇಸ್ಮೈಲ್ ಬಿ.ಎ., ಸಿ.ಐ.ಇ., ಓ.ಬಿ.ಇ.,
ಯವರಿಗೆ

ಮದರಾಸು ಪೌರಸಭೆಯವರು ಒಪ್ಪಿಸಿದ ಮಾನಪತ್ರ.

ಮಹಾಸ್ವಾಮಿ,

ಮದರಾಸ್ ಪೌರಸಭೆಯ ಅಧ್ಯಕ್ಷರೂ ಮತ್ತು ಸದಸ್ಯರೂ ಆದ ನಾವು ನಮ್ಮ ಪಟ್ಟಣಕ್ಕೆ ನೀವು ದಯಮಾಡಿಸಿರುವ ಈ ಸಂದರ್ಭದಲ್ಲಿ ನಿಮಗೆ ಮನಃಪೂರ್ವಕವಾದ ಸ್ವಾಗತವನ್ನು ಬಯಸುವೆವು.

ನಮ್ಮ ಪಕ್ಕದ ದೇಶವಾದ ಮೈಸೂರು ಸಂಸ್ಥಾನದಲ್ಲಿ ನೀವು ಮಾಡುತ್ತಿರುವ ಕಾರ್ಯಗಳನ್ನೆಲ್ಲಾ ನಾವು ಉತ್ಸಾಹ ಮತ್ತು ಸಂತೋಷಗಳಿಂದ ನೋಡುತ್ತಿದ್ದೇವೆ. ಮತ್ತು ದೇಶೀಯ ಸಂಸ್ಥಾನವೊಂದರಲ್ಲಿ ಅತ್ಯಂತ ಉನ್ನತಪದವಿಯಾದ ದಿವಾನಗಿರಿಗೆ ತಾವು ಯೋಗ್ಯರಾಗುವಂತೆ ಮಾಡಿದ ತಮ್ಮ ಗುಣಗಳನ್ನು ನೋಡಿ ನಾವು ಆಶ್ಚರ್ಯವುಳ್ಳವರಾಗಿದ್ದೇವೆ. ನಿಮ್ಮ ಸಾಮರ್ಥ್ಯದಿಂದಲೂ, ಸಂಸ್ಥಾನದ ಸ್ಥಿತಿಗತಿಗಳಲ್ಲಿ ಬಹಳ ದಿವಸಗಳಿಂದಲೂ ನಿಮಗಿರುವ ಅನುಭವದಿಂದಲೂ ಮತ್ತು ಶ್ರೀಮನ್ಮಹಾರಾಜರಲ್ಲಿ ನಿಮಗಿರುವ ನಿಜವಾದ ಭಕ್ತಿಯಿಂದಲೂ ನೀವು ಆ ರಾಜರ್ಷಿಗಳ ವಿಶೇಷವಾದ ಆಪ್ತಸ್ನೇಹವನ್ನು ಅನುಭವಿಸುತ್ತ ಇದ್ದೀರಿ.

ಮೈಸೂರು ಸಂಸ್ಥಾನದಲ್ಲಿ ನಿಮ್ಮ ಪದವಿಯು ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ ಎಲ್ಲಾ ಕೋಮುಗಳ ಜನರೂ ಏಕರೀತಿಯಿಂದ ಮಂತ್ರಿಮಂಡಲದಲ್ಲಿ ಪದವಿಗಳನ್ನು ಅನುಭವಿಸುತ್ತಿದ್ದ ಇತಿಹಾಸಕಾಲವನ್ನು ಜ್ಞಾಪಕಕ್ಕೆ [illegible]

ಶ್ರೀಮನ್ಮಹಾರಾಜರವರ ಆಳ್ವಿಕೆ [illegible] ಮುಂದಾಳುತ್ವಗಳಲ್ಲಿ ಮೈಸೂರು ಸಂಸ್ಥಾನದ ಪ್ರ[illegible] ಅವರ ಧ್ಯೇಯಗಳನ್ನು ಹೊಂದಲು ತಕ್ಕರೀತಿಯಲ್ಲಿ ಮುಂದುವರಿಯುತ್ತಾರೆಂದು ಭರವಸೆಯುಳ್ಳವರಾಗಿದ್ದೇವೆ.

ನಿಮ್ಮ ಕಾರ್ಯಕಲಾಪಗಳೆಲ್ಲ ಸಮರ್ಪಕವಾಗಿ ನೆರವೇರಲೆಂದು ನಾವು ಹಾರೈಸುತ್ತೇವೆ. ಅಲ್ಲದೆ ನೀವು ಈ ಪದವಿಯಿಂದ ನಿವೃತ್ತರಾಗುವುದರೊಳಗಾಗಿ ಜ್ಞಾನಪೂರ್ಣರಾದ ಮಹಾರಾಜರವರ ಪ್ರೇರಣೆಯಿಂದ ನಮ್ಮ ನೆರೆಯವರಾದ ಮೈಸೂರು ದೇಶದ ಪ್ರಜೆಗಳು ಸೌಖ್ಯ, ತೃಪ್ತಿ ಮತ್ತು ಸಂಪತ್ತುಗಳನ್ನು ಹೊಂದುವಂತೆ ಮಾಡುವಿರೆಂದು ನಾವು ಪೂರ್ಣವಾಗಿ ನಂಬುತ್ತೇವೆ.

ನಮ್ಮ ಮಧ್ಯೆ ನೀವಿರುವಾಗ ಸೌಖ್ಯದಿಂದಿರುವಂತಾಗಲೆಂದು ನಮ್ಮ ಪಟ್ಟಣಕ್ಕೆ ಬಂದಿದ್ದರಿಂದ ನಿಮಗೆ ಆನಂದ ಉಂಟಾಗಲೆಂದು ನಾವು ಆಶಿಸುತ್ತೇವೆ.

ಇತಿ, ನಿಮ್ಮ ಹಿತಕಾಂಕ್ಷಿಗಳು
ಮದರಾಸ್ ಪೌರಸಭೆಯ ಅಧ್ಯಕ್ಷರು
ಮತ್ತು ಸದಸ್ಯರು.

ದಿವಾನರ ಉತ್ತರ.

ಶ್ರೀ|| ರಾಮಸ್ವಾಮಿ ಮೊದಲಿಯಾರ್‌ರವರೇ, ಮಹಿಳೆಯರೇ, ಮತ್ತು ಮಹನೀಯರೇ,

"ನನ್ನ ಜೀವಿತಕಾಲದಲ್ಲಿ ಅನಿರೀಕ್ಷಿತವಾದ ಅನೇಕ ವಿಷಯಗಳು ಸಂಭವಿಸಿವೆ. ಆದರೆ ಈ ಸಂದರ್ಭವು ಅವುಗಳೆಲ್ಲಕ್ಕಿಂತಲೂ ಶ್ರೇಷ್ಠವಾಗಿರುತ್ತದೆ. ನನ್ನನ್ನು ಆದರಪೂರ್ವಕವಾಗಿ ಬರಮಾಡಿಕೊಂಡು, ಇಲ್ಲಿ ನೆರದಿರುವ ಮಹನೀಯರ ಮಧ್ಯದಲ್ಲಿ ಈ ಪಟ್ಟಣದ ಪೌರಸಭೆಯ ಪರವಾಗಿ ಒಂದು ಬಿನ್ನವತ್ತಳೆಯನ್ನು ನನಗೆ ಅರ್ಪಿಸಿದುದು ನೀವು ನನಗೆ ತೋರಿಸಿದ ಸನ್ಮಾನದ ಹೆಗ್ಗುರುತಾಗಿದೆ. ನಾನು ಮಾಡಿರುವ ಅಲ್ಪಕಾರ್ಯಗಳನ್ನು ನಿಮ್ಮ ಬಿನ್ನವತ್ತಳೆಯಲ್ಲಿ ಪ್ರಸ್ತಾಪಿಸಿರುವಿರಿ. ತಾವು ಪ್ರಸ್ತಾಪಿಸಿರುವ ವಿಚಾರಗಳನ್ನು ಪ್ರತಿಯೊಬ್ಬ ದೇಶಸೇವಕನೂ ಅನುಸರಿಸಲು ಯೋಗ್ಯವಾಗಿರುತ್ತವೆ. ತಮ್ಮ ಸ್ನೇಹಭಾವವನ್ನು ಅಂಗೀಕರಿಸುವುದರಲ್ಲಿ ತಾವು ಈ ಪಟ್ಟಣಕ್ಕೂ ಮತ್ತು ಅಧಿಪತ್ಯಕ್ಕೂ ಮಾಡಿರುವ ಕಾರ್ಯಭಾಗಗಳ ವಿಷಯವಾಗಿ ನನ್ನ ಹೃದಯಪೂರ್ವಕವಾದ ಸ್ನೇಹಭಾವವನ್ನು ಸೂಚಿಸುತ್ತೇನೆ.

ನಿಮ್ಮ ಮನಃಪೂರ್ವಕವಾದ ಮತ್ತು ಸಂತೋಷಭರಿತವಾದ ಪ್ರೀತಿಯಲ್ಲಿ ನೀವು ವ್ಯಕ್ತಿಸಂಬಂಧವಾದ ಆಹ್ವಾನಕ್ಕಿಂತಲೂ ಹೆಚ್ಚಾಗಿ ಸೂಚಿಸಿದ್ದೀರೆಂದು ನಾನು ತಿಳಿಯುತ್ತೇನೆ. ಈ ಸಭೆಯೂ ಮತ್ತು ಈ ನಿಮ್ಮ ಮಾತುಗಳೂ ದೀರ್ಘವಾದ ಮತ್ತು ಗಂಭೀರವಾದ ಗುರುತುಗಳುಳ್ಳವಾಗಿವೆ. ಪುರಾತನಕಾಲದ ವಿರೋಧ ಚಳವಳಿಗಳು ಈ ಕಾಲದಲ್ಲಿ ಹೆಚ್ಚು ವಿಶದವಾಗಿ ಹೊರಬೀಳುವವು. ಸಂಸ್ಥಾನಸಂಸ್ಥಾನಗಳಿಗೂ, ಅವುಗಳ [illegible]ಭಾಗದಲ್ಲೂ

ಸ್ಥಿತಿಗತಿಗಳನ್ನು ಸರಿಪಡಿಸಬೇಕೆಂದು ನಾವು ಪ್ರಯತ್ನಪಡುತ್ತಿರುವುದರಿಂದ ಅವೆಲ್ಲವೂ ಬಹಳ ದೊಡ್ಡ ಸಮಸ್ಯೆಗಳಾಗಿ ನಮಗೆ ತೋರುತ್ತವೆ. ಈ ಗಡಿಬಿಡಿ ಮತ್ತು ಗಲಭೆಗಳಲ್ಲಿ ಒಂದು ಯೋಚನೆಯು ಯಾವಾಗಲೂ ನನ್ನ ಮನಸ್ಸಿಗೆ ತೃಪ್ತಿಯನ್ನುಂಟುಮಾಡುತ್ತದೆ. ಪಂಗಡಗಳಲ್ಲಿಯೂ ವ್ಯಕ್ತಿಗಳಲ್ಲಿಯೂ ದ್ವೇಷವನ್ನು ಹೆಚ್ಚಿಸತಕ್ಕ ಶಕ್ತಿಯೇ ಇಂಡಿಯಾದೇಶವನ್ನೆಲ್ಲಾ ಒಟ್ಟುಗೂಡಿಸತಕ್ಕದ್ದಾಗಿದೆ. ಈ ಧ್ಯೇಯದಲ್ಲಿ ನಂಬಿಕೆಯಿಡುವುದನ್ನು ನೀವೆಲ್ಲರೂ ಅಷ್ಟುಮಟ್ಟಿಗೆ ಪ್ರಶಂಸಿಸತಕ್ಕ ನನ್ನ ಸ್ವಾಮಿಯವರಿಂದ ನಾನು ತಿಳಿದುಕೊಂಡೆನು.

ಬ್ರಿಟಿಷ್ ಇಂಡಿಯಾದ ಅಧೀನ ರಾಜ್ಯಗಳ ಧ್ಯೇಯಗಳು ಬೇರೆ ಬೇರೆ ಎಂಬುವದನ್ನು ಶುದ್ಧ ತಪ್ಪು ಭಾವನೆಯೆಂದು ಮೈಸೂರಿನವರಾದ ನಾವು ಯಾವಾಗಲೂ ತಿಳಿದಿರುತ್ತೇವೆ. ನಮ್ಮೆಲ್ಲರ ಧ್ಯೇಯವೂ ಒಂದೇ. ಇಂಡಿಯಾದೇಶದ ಈ ಎರಡು ಭಾಗಗಳೂ ಅಲ್ಲದೆ ಈ ವಿಶಾಲ ದೇಶದಲ್ಲಿ ವಾಸವಾಗಿರುವ ಎರಡು ದೊಡ್ಡ ಪಂಗಡಗಳೂ ಏಕಧ್ಯೇಯವೆಂಬ ದೇವತೆಯನ್ನು ಪೂಜಿಸುತ್ತಾ ಒಂದೇ ತರಹ ದೇಶವಾತ್ಸಲ್ಯವುಳ್ಳವರಾಗಿರಬೇಕಾಗಿದೆ. ನಾವು ನಮ್ಮ ಸಂಸ್ಥಾನವನ್ನು ಪ್ರೀತಿಸುತ್ತೇವೆ. ಹಾಗೆ ಮಾಡದಿದ್ದರೆ ನಾವು ಇಂಡಿಯಾದೇಶೀಯರಾಗಲು ಯೋಗ್ಯರಲ್ಲ. ಭಾಗವು ಒಟ್ಟಿಗಿಂತ ಹೆಚ್ಚೆಂದು ಹೇಳುವ ಗ್ರೀಕ್ ತತ್ವಜ್ಞಾನಿಯಂತೆ ನಾವು ವರ್ತಿಸುವವರಲ್ಲ. ಆದರೆ ಕೊಂಬೆಗಳನ್ನು ಕಳೆದುಕೊಳ್ಳುವ ಮರವು ತಾನೇ ಒಣಗಿ ನಾಶವಾಗುವುದು ಎಂದು ಅಭಿಪ್ರಾಯಪಡುವ ಇಂಗ್ಲಿಷ್ ಕವಿಯಂತೆಯೇ ನಾವು ತಿಳಿದುಕೊಳ್ಳುವವರಾಗಿದ್ದೇವೆ. ಪ್ರತಿಯೊಂದು ಮತದ ಮತ್ತು ಕೋಮಿನವರೂ ಈ ಪಾಠವನ್ನು ಕಲಿತುಕೊಳ್ಳಲೆಂಬುದೇ ನನ್ನ ಆಶಯವಾಗಿದೆ.

ಈ ದಿವಸದ ಸಭೆಯು ಇಂಡಿಯಾದೇಶದ ಒಗ್ಗಟ್ಟು ಮತ್ತು ಶ್ರೇಯಸ್ಸನ್ನು ಸೂಚಿಸುತ್ತದೆ. ಆರ್ಥಿಕ, ರಾಜಕೀಯ ಮುಂತಾದ ವಿಷಯಗಳೆಲ್ಲಲ್ಲಾ ಇಂಡಿಯಾದೇಶವು ಏಕೀಭವಿಸಿ ತನ್ನ ಧ್ಯೇಯವನ್ನು ಸಾಧಿಸುವ ಕಾಲವು ಶೀಘ್ರವಾಗಿ ಬರಲಿ.

ಈ ಘಳಿಗೆಯಲ್ಲಿ ಆ ಭವಿಷ್ಯದ ಸಂತೋಷವನ್ನು ನಾವು ನೋಡುತ್ತಿದ್ದೇವೆ. ಇದಕ್ಕೂ ಮತ್ತು ನಿಮ್ಮ ವಿಶ್ವಾಸಗಳಿಗೂ ನಾನು ನಿಮಗೆ ಚಿರಕೃತಜ್ಞನಾಗಿರುವೆನು.

ಪ್ರಸಿದ್ಧಪತ್ರಿಕೆ.

ಮೈಸೂರು ಅರಮನೆ ಮುಜರಾಯಿ ಬಕ್ಷಿಗಳವರು
ಮ|| ಶ್ರೀ ರಾಜಕವಿಭೂಷಣ
ಹೆಚ್. ಲಿಂಗರಾಜ ಅರಸಿನವರಿಂದ ವಿರಚಿತವಾದ

ಯದುನೃಪವಿಜಯ ಮತ್ತು ನೋಟ್ಸು

ಎಂಬ V ತರಗತಿ (Fifth Form) ಗೆ 1928-29 ಕ್ಕೆ ಶಾಲೆಗೆ ಟೆಕ್ಸ್ಟ್ ಬುಕ್ಕಾಗಿ ನಿಯಮಿತವಾದ 2 ನೆ ಮುದ್ರಣ ಗ್ರಂಥದ ಬಿಕರಿ ಹಕ್ಕನ್ನು (Whole Sale Agency) ಮೂಲಕ ಮೈಸೂರು ಹಳೇಅಗ್ರಹಾರದಲ್ಲಿರುವ ಜನರಲ್ ಮರ್ಚೆಂಟ್ ಶೆಟ್ಟಪ್ಪ ಬಿನ್ ಶಿದ್ದಪ್ಪನವರು ಪಡೆದಿರುವರು. ಪುಸ್ತಕ 1ಕ್ಕೆ 0-8-0 ಮೇರೆಗೆ ಈ ಕೆಳಗೆ ಕಂಡವರಿಂದ ಪಡೆದುಕೊಳ್ಳಬಹುದು.

(1) ಶೆಟ್ಟಪ್ಪ ಬಿನ್ ಶಿದ್ದಪ್ಪ,
ಪರ್ಸಾರಿ ಮಳಿಗೆ,
ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ, ಮೈಸೂರು.
[3]
ಶ್ರೀಕಂಠಪ್ಪ ಅಂಡ್ ಸನ್ಸ್,
ಔಷಧವ್ಯಾಪಾರಿಗಳು, ದೊಡ್ಡಪೇಟೆ, ಬೆಂಗಳೂರು ಸಿಟಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ತೊಲ ೧ಕ್ಕೆ ೮ ಆ.
ರೇಶ್ಮೆಮಗುಟ—೧ ನೇ ನಂ. ತೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿ. ಪೋಸ್ಟೇಜ್ ಜಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [24]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನೆಸಿಲ್ಲಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಸೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ !

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, '**ಕೊಡಗಿನ ಗುಡುಗುಡು!**' (ಛಳಿ), '**ಸುಡುಸುಡು!**' (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [9]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ !!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ **ಶಿವಯೋಗಪ್ಪ ಬುಕ್‌ಬೈಂಡರ್** ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—**ಸೈಮನ್ ಪ್ರಿಂಟಿಂಗ್ ವರ್ಕ್ಸ, ಗದಗ.**

[8] ನಮ್ಮ ಏಜಂಟರ ವಿಳಾಸ:—

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಭಗಿನಿಯರೆ! ನೀವು ಅವಶ್ಯವಾಗಿ ಓದಬೇಕಾದ ಪುಸ್ತಕ

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ

ಕ್ರಯ ೬ ಆಣೆ. ಅಂಚೆವೆಚ್ಚ ೧ ಆಣೆ.

ಡಾಕ್ಟರ್ ರಾಮರಾಯರಿಂದ ರಚಿಸಲ್ಪಟ್ಟು, ಸುಮಾರು ನೂರು ಪುಟಗಳನ್ನೊಳಗೊಂಡ ಸಚಿತ್ರವಾದ ಈ ಪುಸ್ತಕದಲ್ಲಿ ನಿಮ್ಮ ಗರ್ಭದಶೆಯಲ್ಲಿಯೂ, ಪ್ರಸವಕಾಲದಲ್ಲಿಯೂ, ಅನಂತರದಲ್ಲಿಯೂ ನಿಮಗೆ ಸುಖಪ್ರಸವವನ್ನೂ, ನಿಮ್ಮ ಮತ್ತು ನಿಮ್ಮ ಶಿಶುವಿನ ದೇಹಾರೋಗ್ಯವನ್ನೂ ಪಡೆಯಲು ಅವಶ್ಯಕವಾದ ಸೂಚನೆಗಳು ತಿಳಿಗನ್ನಡದಲ್ಲಿ ಸಚಿತ್ರವಾಗಿ ಕೊಡಲ್ಪಟ್ಟಿವೆ.

ನಿಮ್ಮಲ್ಲಿ ಅನೇಕರು ತಿಳಿವಳಿಕೆಯಿಲ್ಲದೆ ಮೇಲ್ಕಂಡ ಸಮಯಗಳಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಬಿಟ್ಟು ಅನೇಕ ಅಪಾಯಗಳಿಗೂ, ತೊಂದರೆಗಳಿಗೂ ಗುರಿಯಾಗುವಿರಿ. ತಾತ್ಕಾಲಿಕ ಸುಲಭ ಚಿಕಿತ್ಸಾ ಕ್ರಮಗಳಿಂದ ನಿಮ್ಮನ್ನು ಅಂಥ ತೊಂದರೆಗಳಿಂದ ತಪ್ಪಿಸುವುದೇ ಈ ಪುಸ್ತಕದ ಉದ್ದೇಶವು.

ಸಮರ್ಥ ವೈದ್ಯರ ಮತ್ತು ದಾದಿಯರ ಸಹಾಯವು ದೊರಕದ ಕುಗ್ರಾಮಗಳಲ್ಲಿರತಕ್ಕವರಿಗೆ ಈ ಪುಸ್ತಕವು ಅನುಕೂಲ್ಯವಾಗಿರುವುದು.

ಗರ್ಭದ ಸೂಚನೆಗಳು, ಗರ್ಭಿಣಿಯರ ದೇಹಾರೋಗ್ಯ ರಕ್ಷಣೆ, ಗರ್ಭಕಾಲದಲ್ಲಿ ಕಾಣಿಸಬಹುದಾದ ವ್ಯಾಧಿಗಳು, ಗರ್ಭಕ್ಕೆ ಸಂಭವಿಸಬಹುದಾದ ಅಪಾಯಗಳು, ಪ್ರಸವಕಾಲದಲ್ಲಿ ಚಿಕಿತ್ಸಾಪದ್ಧತಿಗಳು, ಸೂತಿಕಾದಿನಗಳಲ್ಲಿ ಒದಗಬಹುದಾದ ಅಪಾಯಗಳು, ಶಿಶುವಿನ ಉಪಚಾರ ಮತ್ತು ಶಿಶುವಿಗೆ ಆಹಾರವನ್ನು ಕೊಡುವ ಕ್ರಮಗಳು. ಇವೇ ಮುಂತಾದ ಅನೇಕ ವಿಷಯಗಳು ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿವೆ.

ಈ ಪುಸ್ತಕದ ಪ್ರಯೋಜನವನ್ನು ಕುರಿತು ಕೆಲವು ಸದಭಿಪ್ರಾಯಗಳು.

ಡಾ. ಮುದ್ದುಲಕ್ಷ್ಮಿರೆಡ್ಡಿಯವರು ಎಮ್. ಬಿ. ಸಿ. ಎಮ್., ಎಮ್. ಎಲ್. ಸಿ. ಮದರಾಸು, "ಮುದ್ದಾದ ಈ ಸಣ್ಣಪುಸ್ತಕವು ನಮ್ಮ ಸ್ತ್ರೀಯರಿಗೆ ಅತ್ಯಂತೋಪಯುಕ್ತವಾಗಿದೆ."

ಹಿಂದೂಪತ್ರಿಕೆ:—4-4-28. "ಆನರಬಲ್, ಡಾ. ಯು. ರಾಮರಾಯರು ಪ್ರಸವಕಾಲದಲ್ಲಿ ಡಾಕ್ಟರುಗಳ ಮತ್ತು ಸುಶಿಕ್ಷಿತರಾದ ಸೂಲಗಿತ್ತಿಯರ ಅವಶ್ಯಕತೆಯೇ ಇಲ್ಲದಂತಿರುವುದಕ್ಕಾಗಿ ಈ ಪುಸ್ತಕವನ್ನು ತಾವು ಬರೆದುದಲ್ಲವೆಂದು ಹೇಳಿದರೂ, ನಮ್ಮ ದೇಶದ ಸ್ತ್ರೀಯರೊಬ್ಬೊಬ್ಬರೂ ಇದನ್ನು ಅವಶ್ಯವಾಗಿ ಓದಿಯೇತೀರಬೇಕೆಂದು ನಾವು ಧಾರಾಳವಾಗಿ ಹೇಳಬಲ್ಲೆವು. ಜನಸಾಮಾನ್ಯಕ್ಕೆ ತಿಳಿಯುವ ಸುಲಭ ಭಾಷೆಯಿಂದ, ಶಿಶುಜನನ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳೆಲ್ಲ ಇದರಲ್ಲಿ ಸಂಗ್ರಹಿಸಿ ಬರೆಯಲ್ಪಟ್ಟಿವೆ. ಒಳ್ಳೇ ಡಾಕ್ಟರ ಸಹಾಯವಿಲ್ಲದ ಹಳ್ಳಿಗಾಡುಗಳಲ್ಲಿ ಪ್ರಸವವಿಚಾರವಾದ ತಿಳಿವಳಿಕೆಯಿಲ್ಲದುದರಿಂದ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಈ ಪುಸ್ತಕವನ್ನೋದಿ ತಿಳಿದಿದ್ದರೆ ಅಂತಹ ಎಷ್ಟೋ ಅಪಾಯಗಳನ್ನು ತಪ್ಪಿಸಿಕೊಳ್ಳಬಹುದು.

6 ಪ್ರತಿಗಳಿಗಿಂತ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡಲಾರದು. ಒಂದೆರಡು ಪುಸ್ತಕವನ್ನಪೇಕ್ಷಿಸತಕ್ಕವರು ಮುಂಗಡವಾಗಿ ಟಪಾಲ್ ಚೀಟಿಗಳ ಮೂಲಕ ಹಣವನ್ನು ಕಳುಹಿಸಬೇಕು.

☞ ನಮ್ಮ "ಆರೋಗ್ಯಚಂದ್ರಿಕೆ" ಗಾಗಿ ವಾರ್ಷಿಕ ಚಂದಾ ಹಣವನ್ನು ಮುಂಗಡವಾಗಿ ಕಳುಹಿಸಿದವರಿಗೆಲ್ಲ ಈ ಮೇಲ್ಕಂಡ ಪುಸ್ತಕದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವುದು. ಆದರೆ ಚಂದಾ ಹಣವನ್ನು ಕಳುಹಿಸುವಾಗ ಆ ಪುಸ್ತಕವನ್ನು ಕಳುಹಿಸಿಕೊಡುವಂತೆ ನಮಗೆ ಮನಿಯಾರ್ಡರ್ ಕೂಪನ್ನಿನಲ್ಲಿ ಬರೆಯಬೇಕು. [15]

ಮ್ಯಾನೇಜರ್, "ಆರೋಗ್ಯಚಂದ್ರಿಕೆ". 323. ತಂಬುಚೆಟ್ಟಿ ಬೀದಿ, **ಮದರಾಸು.**

ಸಕ್ಕದ ಜಗತ್ತು] ೧೦೦೦ ರೂಪಾಯಿ ಇನಾಮು [ಆದಿವಸ ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಸಿನಲ್ಲಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ಸಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಲಪುಷ್ಪ, ಶಾಲಿಮಕಂದ, ಮಧುಕಂದ, ಜನಾಕಂದ, ಶಾಲೀಮಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ಸಿವರೀಕಂದ, ದ್ವೀಪಾಂತರವಚಾಕಂದ, ತವಜೆಬೀಜ, ಸಮುದ್ರಶೋಕದಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಜಮಿಪತ್ರಿ, ವಿಶಾಪತ್ರಿ, ಮದನಮಸ್ತ, ರಸಗುಪ್ತ, ಕಮರಕಸ, ಕಫಿಲ್ಲಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಲಾ, ಬೀಜಬಂದ, ಹರಣಜೋರಿ, ಮುಂಗಲೇಬೀದಾಣೆ, ಮರ್ದಾಣೀಕಟ್ಟಿಗೆ, ಶತಾವರಿ, ಸಕೀರಮಗಜ, ಅಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಮಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಹಿಕ್ಕಿ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾಧರಿರೋಣ, ದಮ್ಮಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [13]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಕಾಶೀಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥ[illegible] ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿ[illegible] ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧ ವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೩ ಆಣೆ ೩೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಮೂವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[26] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ರಾಂಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೇಬಲುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦೮|| ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬ ೪ ಬೆಲೆ ೧ ಕ್ಕೆ ೦—೦—೬
ಪದ್ಮಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪ ೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಲ್ಪಬೆಲೆ! ಅಧಿಕ ಲಾಭ!!
ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದ ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಹೊಸ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
[6] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೧೦-
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[5] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ನೇ ಅಕ್ಟೋಬರ್ ೧೯೨೯ [ಸಂಚಿಕೆ ೨೪.

ಅತಿಮಹತ್ವದ ನೂತನ ಫೋಟೋ

ಪ್ರತಿಯೊಬ್ಬ ವೀರಶೈವರು ತಮ್ಮ ತಮ್ಮ ಮನೆಯಲ್ಲಿಟ್ಟು ರತ್ನದಂತೆ ರಕ್ಷಿಸತಕ್ಕದಾಗಿದೆ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸನ್ನ.

ಲಿಂಗಾಂಗಿಗಳಾದ ಲಾಳಗೊಂಡ ಮಹಾಜನಗಳಲ್ಲಿ ವಿಜ್ಞಾಪನೆ.

ಧಾರವಾಡ ಡಿಸ್ಟ್ರಿಕ್ಟು ಗದಗಿನ ಫರ್ಸ್ಟ್ ಕ್ಲಾಸ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ನಡೆದಿರುವ ಕೇಸಿನಲ್ಲಿ ಬಳ್ಳಾರಿ ಬಸಪ್ಪ ಎಂಬುವಾತನು ಹಾಗು ಹೂಗಾರ ಮಡಿವಾಳಪ್ಪ ಎಂಬಾತನು ಇವರಿಬ್ಬರು ಸಾಕ್ಷಿ ನುಡಿಯುವಕಾಲಕ್ಕೆ ವೀರಶೈವಮತೀಯರಾದ ಲಾಳಗೊಂಡರು ಅನಾದಿಕಾಲದಿಂದ ಬಂದ ಶುದ್ಧಸಾಂಪ್ರದಾಯದವರಾದಗ್ಯೂ ಕೂಡ ಇಂಥವರನ್ನು ಕುರಿತು ಇವರು ಮೊದಲು ಕುರುಬರಿದ್ದರೆಂದೂ, ಇತ್ತೀಚಿಗೆ ಲಿಂಗಧಾರಣಮಾಡಿಕೊಂಡಿರುವರೆಂದೂ, ಇವರಲ್ಲಿ ಯಾವ ವೀರಶೈವರು ಬಳಕೆ ಮೊದಲಾದವುಗಳನ್ನು ಮಾಡುವದಿಲ್ಲವೆಂದೂ ಮ್ಯಾಜಿಸ್ಟ್ರೇಟರ ಮುಂದೆ ತಮ್ಮ ಜಬಾನಿಯನ್ನು ಪಬ್ಲಿಕ್ ಕೋರ್ಟಿನಲ್ಲಿ ಕೊಟ್ಟಿರುವರು. ಇದರಿಂದ ನಮ್ಮ ಲಾಳಗೊಂಡ ಸಮಾಜಕ್ಕೆ ಅಪರಿಮಿತವಾದ ಮಾನಹಾನಿಯಾಗಿರುವದು. ಈ ವಿಷಯವನ್ನು ಪ್ರಸಿದ್ಧಪಡಿಸಲು ತುಂಬಾ ವ್ಯಸನವಾಗುತ್ತದೆ. ಈ ರೀತಿಯಾಗಿ ಅನ್ಯಾಯದಿಂದ ಜಬಾನಿ ಕೊಟ್ಟಿರುವವರ ವಿಷಯದಲ್ಲಿ ನಮ್ಮ ಸಮಾಜಬಾಂಧವರು ತಕ್ಕ ಚರ್ಚೆಯನ್ನು ಸಭಾಮೂಲಕ ನಿರ್ಣಯಿಸಿ ಆ ಕಾರ್ಯವನ್ನು ಆದಷ್ಟು ಬೇಗನೆ ಕೈಕೊಂಡು ನಮ್ಮ ಸಮಾಜದ ಗೌರವವನ್ನು ಕಾಯ್ದುಕೊಳ್ಳಬೇಕೆಂದು ಸಮಾಜಬಾಂಧವರಲ್ಲಿ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.

ಲಾಳಗೊಂಡ ಸಮಾಜಬಂಧು,
ತಾ|| 8-10-29. ಕಂಪ್ಲಿ ಸೋಮಣ್ಣ ಕುಡತನಿ, ಡಿ|| ಬಳ್ಳಾರಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀ ಗಜಾನನಮಹೋತ್ಸವ ಮತ್ತು ಶ್ರೀ ಶಂಕರ ಭಜನಾಸಂಘಸ್ಥಾಪನಾ ಸಮಾರಂಭ.

ಶ್ರೀಮನ್ನೃಪ ಶಾಲಿವಾಹನಶಕ ೧೮೫೧ ನೇ ಶುಕ್ಲನಾಮಸಂವತ್ಸರ ಭಾದ್ರಪದ ಶು|| ೪ ಶನಿವಾರ ತಾ|| 7-9-29 ನೇ ಇಸ್ವಿ ದಿವಸ ಧಾರವಾಡ ಜಿಲ್ಲಾ ಹಳೇ ಹುಬ್ಬಳ್ಳಿ ಸೈಕಿ ಚನ್ನಪ್ಪಾಟಿಯಲ್ಲಿ ಸರ್ವಸಜ್ಜಗೃಹಸ್ಥರಿಂದ ಶ್ರೀ ಶಂಕರದೇವಾಲಯದಲ್ಲಿ ಶ್ರೀ ಗಜಾನನ ಮೂರ್ತಿಯನ್ನು ಒಳ್ಳೇ ಅಲಂಕಾರದಿಂದ ಪ್ರತಿಷ್ಠೆಗೊಳಿಸಿದ ಮೇಲೆ ಅದೇ ದೇವಾಲಯದಲ್ಲಿ ಅಲ್ಲಿಯ ವೀರಶೈವ ಸಮಾಜದವರಿಂದ ಶ್ರೀ ಶಂಕರಭಜನಾಸಂಘವು ಸ್ಥಾಪಿಸಲ್ಪಟ್ಟಿತು. ಶ್ರೀ ಗಜಾನನಮೂರ್ತಿಗೆ ಪ್ರತಿದಿವಸವು ಎರಡುವೇಳೆ ಕ್ರಮವಾಗಿ ಪೂಜೆ ಭಜನೆ ಮತ್ತು ಸೇವಾರ್ಥವನ್ನು ನಡಿಸುತ್ತಾ ಇದೇ ಭಾದ್ರಪದ ಶು|| ೧೪ ಅಂದರೆ ಶ್ರೀ ಅನಂತನಚತುರ್ದಶಿ ದಿವಸ ಶ್ರೀ ಗಜಾನನಮೂರ್ತಿಯನ್ನು ಪಲ್ಲಕ್ಕಿಮಹೋತ್ಸವದೊಡನೆ ಸದರಿ ಭಜನಾಸಂಘದವರು ಸಕಲ ವಾದ್ಯದೊಂದಿಗೆ ಶ್ರೀ ಪಂಚಾಚಾರ್ಯರ ಭಜನೆಯನ್ನು ಮಾಡುತ್ತ ಶ್ರೀ ಬಣಗಾರಮಠದ ಭಾವಿಯಲ್ಲಿ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಮತ್ತು ಹಾರ ತುರಾಯಿದೊಂದಿಗೆ ವಿಸರ್ಜಿಸಿದರು. ಆಮೇಲೆ ಸರ್ವರೂ ಶ್ರೀ ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಜಯಘೋಷದಿಂದ ಬಿಜಯಂಗೈಸಿದರು.

ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಸೇವಕ,
ರುದ್ರಯ್ಯ ರಾಚಯ್ಯ ಅಣ್ಣೀಗೇರಿ,
ಹೊಸಮಠ.

ಸ್ವೀಕಾರ.

ವಿಜಾಪುರ ಡಿ|| ಮನಗೂಳಿಯ ಬೃಹನ್ಮಠದ ಷ|| ಬ್ರ|| ಶ್ರೀ ಪಟ್ಟದ ಮಹಾಸ್ವಾಮಿಗಳು ನೆರವೇರಿಸಿದ ಪುರಾಣಮಹೋತ್ಸವದ ಸಮಾಪ್ತಿಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂಪಾಯಿಗಳು ವೇ|| ರೇವಣಯ್ಯ ಶಿದ್ಧಲಿಂಗಯ್ಯ ಮನಗೂಳಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಬಂಕಾಪುರ ಗ್ರಾಮವಾಸಿಗಳಾದ ಶ್ರೀ|| ಮಲ್ಲಿಕಾರ್ಜುನಪ್ಪ ಮಾಮಲೇ ದೇಸಾಯಿಯವರು ತಮ್ಮ ಅರಮನೆಯಲ್ಲಿ ಶ್ರೀ ರೇವಣಸಿದ್ಧೇಶ್ವರ ಪುರಾಣೋಕ್ತ ಶ್ರೀ ರುದ್ರಮುನಿಶಿವಾಚಾರ್ಯರ ಪಟ್ಟಾಭಿಷೇಕವನ್ನು ನೆರವೇರಿಸಿದ ಸಮಯದಲ್ಲಿ ವೇ|| ಮುರಿಗೆಯ್ಯನವರು ದೇಸಾಯಿ ವಿರಕ್ತಮಠ ಇವರ ಅಪ್ಪಣೆ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಬಸನಗೌಡರು ಮುದ್ಲೇರಿ ಇವರ ದ್ವಾರಾ ತಲ್ಪಿರುತ್ತವೆ.

ಸೋಲಾಪೂರ ನಿವಾಸಿಗಳಾದ ಮ|| ರಾ|| ಬಸಲಿಂಗಪ್ಪಾ ಚಕೋತ ಇವರು ಪುರಾಣಸಮಾಪ್ತಿಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಅಲ್ಲಮಪ್ರಭುಗಳು ಅಲೂರ ಬೃಹನ್ಮಠ ವಾರದವಾಠಶಾಲಾ, ಸೋಲಾಪೂರ ಇವರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಲಂಡನ್ನಿನಲ್ಲಿ ಸೆಪ್ಟಂಬರ್ 28ನೇ ತಾರೀಖಿನ ದಿವಸ ವಿಭಾರತ್ ಕೈದಿಗಳ ರಕ್ಷಣಾ ಸಮಿತಿಯವರ ಸಭೆಯೊಂದು ಸೇರಿತ್ತು. ಎಲ್ಲಾ ಸಂಸ್ಥೆಗಳಿಂದಲೂ ಒಟ್ಟು 208 ಜನ ಸದಸ್ಯರು ಸೇರಿದ್ದರು. ರಾಷ್ಟ್ರೀಯ ಅಲ್ಪಸಂಖ್ಯಾತರ ಮುಂದಾಳುಗಳಾದ ಮ|| ರಾ|| ಅಲೆಗ್ಸಾಂಡರ್ ಗಾಸಿಫ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಪ್ರಾರಂಭ ಭಾಷಣದಲ್ಲಿ ನಮ್ಮ ಹೆಸರಿನ ಮೇಲೆ ಇಂಡಿಯಾ ದೇಶದಲ್ಲಿ ಅನೇಕ ಅಸಹ್ಯಕರವಾದ ಕಾರ್ಯಗಳು ನಡೆಯುತ್ತಾ ಇವೆ. ಅವೆಲ್ಲವೂ ಸಾಮ್ರಾಜ್ಯ ಸರ್ಕಾರದವರು ಮಾಡುವ ದಬ್ಬಾಳಿಕೆಗಳಲ್ಲದೆ ಮತ್ತೆ ಬೇರೆ ಅಲ್ಲ. ಈ ವಿಷಯದಲ್ಲಿ ಬ್ರಿಟಿಷ್ ಜನರು ಇಂಡಿಯಾ ದೇಶೀಯರ ಸಹಾಯಕ್ಕೆ ಕೈಹಾಕಿ ಅವರಿಗಾಗುತ್ತಿರುವ ಅನ್ಯಾಯಗಳಿಗೆ ಕೊನೆಗಾಣಿಸಬೇಕು, ಎಂದು ಹೇಳಿದರು. ಲೇಬರ್ ಎಂ. ಪಿ. ಯವರಲ್ಲೊಬ್ಬರಾದ ಮಿಸೆಸ್. ಜೆ. ಕನ್ನಿ ಎಂಬಾಕೆಯು ಒಂದು ನಿರ್ಣಯವನ್ನು ಸೂಚಿಸಿ, ಅದರಲ್ಲಿ ಲೇಬರ್ ಸರ್ಕಾರದವರು ಇಂಡಿಯಾ ದೇಶೀಯರಿಗೆ ತೋರುತ್ತಿರುವ ನಿರ್ದಯ, ನಿರ್ಲಕ್ಷ್ಯ ಮತ್ತು ದಬ್ಬಾಳಿಕೆಗಳನ್ನು ಖಂಡಿಸಿದರು. ಅಲ್ಲದೆ ಈಗ ಕಷ್ಟಪಡುತ್ತಿರುವ ರಾಜಕೀಯ ಕೈದಿಗಳ ಮೇಲಾಗಿ ಸಹಾನುಭೂತಿಯನ್ನು ತೋರಿಸಿದ್ದಲ್ಲದೆ ಶ್ರೀ ಜತೀಂದ್ರದಾಸ್‌ರವರ ಮರಣದಿಂದ ತಮಗುಂಟಾದ ಅನುತಾಪವನ್ನು ಸಹ ಸೂಚಿಸಿದರು. ಅದೇ ನಿರ್ಣಯದಲ್ಲಿ ವಿಭಾರತ್ 'ಪಿತೂರಿ' ಮೊಕದ್ದಮೆಯ ಅಪಾದಿತರೆಲ್ಲರನ್ನೂ ಬಿಟ್ಟುಬಿಡಬೇಕೆಂದೂ, ಕೆಲಸಗಾರರ ಮೇಲೆ ಇರುವ ಕಾನೂನುಗಳನ್ನು ತೆಗೆದುಹಾಕಬೇಕೆಂದೂ ರಾಜಕೀಯ ಕೈದಿಗಳೆಲ್ಲರಿಗೂ ಬಿಡುಗಡೆಮಾಡಿಸಬೇಕೆಂದೂ ಇದಕ್ಕಾಗಿ ಅಲ್ಲಿ ಹಾಜರಿದ್ದ ಪ್ರತಿಯೊಂದು ಸಂಸ್ಥೆಯವರು ತಮ್ಮ ಸಂಸ್ಥೆಗಳ (ಪಾರ್ಲಿಮೆಂಟ್) ಸದಸ್ಯರಿಗೆ ಈ ವಿಚಾರವನ್ನು ತಿಳಿಸಿ ಅವರ ಬೆಂಬಲವನ್ನು ಪಡೆದು ಮೇಲ್ಕಂಡ ಕಾರ್ಯಗಳನ್ನು ಕೂಡಲೇ ಸಾಧಿಸಬೇಕೆಂದು ಸಹ ಸೂಚಿಸಲಾಯಿತು. ಈ ಸೂಚನೆಯನ್ನು ಮಿ|| ಸಕಲತ್‌ವಾಲಾಯವರೂ, ಕಾಂಗ್ರೆಸ್ ಸದಸ್ಯರಾದ ಎಸ್. ಡಿ. ಮುಜುಂದಾರ್‌ರವರೂ ಇನ್ನೂ ಅನೇಕ ಲಾಂಕಾಶೈರಿನ ಪ್ರತಿನಿಧಿಗಳೂ ಸಹ ಪುಷ್ಟೀಕರಿಸಿದರು. ನಿರ್ಣಯವು ಏಕಮತದಿಂದ ಅಂಗೀಕಾರವಾಯಿತು. ವಿಭಾರತ್ ಕೈದಿಗಳಾದ ಮಿ|| ಬ್ರಾಡ್ಲೀ ಮತ್ತು ಮಿ|| ಹುಚಿಸನ್ ಇವರ ತಾಯಿಯವರೂ ಸಹ ಹಾಜರಿದ್ದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

1929 ನೇ ಇಸವಿ ಅಕ್ಟೋಬರು 14 ನೇ ತಾರೀಖು.

ಒಂದನೆಯ ಭಾಗ.

ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಮಹಾಶಯರಿರಾ ? ಈಗ ನಡೆಯುವುದಾಗಿರುವ ಮತ್ತೊಂದು ಅಧಿವೇಶನಕ್ಕೆ ತಮ್ಮೆಲ್ಲರನ್ನೂ ಆದರದಿಂದ ಬರಮಾಡಿಕೊಂಡು, ಸರ್ಕಾರದವರು ಕೈಕೊಂಡಿರುವ ನಾನಾ ಕಾರ್ಯಕಲಾಪಗಳ ಸಂಬಂಧದಲ್ಲಿಯೂ ಅವರಿಗಿರುವ ಆಶಯವನ್ನೂ ಅವರು ನಡಿಸಿರುವ ಪ್ರಯತ್ನಗಳನ್ನೂ, ತಮ್ಮ ಅವಗಾಹನೆಗೆ ತರುವ ಸುಯೋಗವೂ ಸಂತೋಷವೂ ನನಗೆ ದೊರೆತಿದೆ.

ವೈಸ್ರಾಯರವರ ಆಗಮನದ ವಿಚಾರ.

ಮೊಟ್ಟಮೊದಲು ನನ್ನ ಮನಸ್ಸಿಗೆ ತೋರುವುದು ವೈಸ್ರಾಯರವರ ಆಗಮನದ ಸಂತೋಷವಾರ್ತೆ. ಮೈಸೂರು ಸಂಸ್ಥಾನಕ್ಕೆ ಮತ್ತೊಮ್ಮೆ ದಯಮಾಡಿಸಬೇಕೆಂಬದಾಗಿ ಶ್ರೀಮನ್ಮಹಾರಾಜರವರು ಕಳುಹಿಸಿದ್ದ ಆಹ್ವಾನವನ್ನು ಅವರು ವಿಶ್ವಾಸದಿಂದ ಅಂಗೀಕರಿಸಿರುತ್ತಾರೆ. ಇದನ್ನು ಕೇಳಿ ತಮ್ಮೆಲ್ಲರಿಗೂ ಸಂತೋಷವಾಗುವುದೆಂದು ನಾನು ನಿಸ್ಸಂದೇಹವಾಗಿ ನಂಬಿದ್ದೇನೆ. ವೈಸ್ರಾಯರವರು ಮುಂದಿನ ತಿಂಗಳು ನಮ್ಮ ಸಂಸ್ಥಾನಕ್ಕೆ ದಯಮಾಡಿ ಇಲ್ಲಿ ಒಂದು ವಾರದ ವರೆಗೂ ನಿಲ್ಲುವರು. ಮೈಸೂರು ಸೀಮೆಯವರು ಆ ಮಹನೀಯರ ವಿಷಯದಲ್ಲಿ ಅಸಾಧಾರಣವಾದ ಕೃತಜ್ಞತೆಯಿಂದ ನಡೆದುಕೊಳ್ಳುವುದಕ್ಕೆ ವಿಶೇಷ ಕಾರಣವುಂಟು. ಆದಕಾರಣ ಅವರಿಗೆ ಕೇವಲ ಉತ್ಸಾಹಪೂರ್ವಕವಾದ ಸ್ವಾಗತವು ನಮ್ಮ ದೇಶದಲ್ಲಿ ದೊರೆಯುವುದೆಂದು ನಾನು ದೃಢವಾಗಿ ನಂಬಿದ್ದೇನೆ.

ಕಾಲಸ್ಥಿತಿಯ ವಿಚಾರ.

ಈಗ್ಗೆ ಇಪ್ಪತ್ತು ಇಪ್ಪತ್ತೈದು ದಿನಗಳವರೆಗೂ ಮಳೆಯು ಬೀಳುವ ಲಕ್ಷಣವೇ ಇರಲಿಲ್ಲ. ಅದರಲ್ಲಿಯೂ ಮೈದಾನ ಡಿಸ್ಟ್ರಿಕ್ಟುಗಳಲ್ಲಂತು ಮಳೆಯು ಬೀಳುವುದೋ, ಇಲ್ಲವೋ ಎಂಬುದೇ ಸಂದೇಹವಾಗಿ ಹೋಗಿದ್ದಿತು. ಇದೆಲ್ಲವೂ ತಮಗೆ ವೇದ್ಯವಾಗಿಯೇ ಇದೆ. ಮಳೆ ಇಲ್ಲದೆ ಅನೇಕ ತಾಲ್ಲೂಕುಗಳಲ್ಲಿ ದನಕರುಗಳಿಗೆ ಮೇವು ದೊರೆಯುವುದು ಕೂಡ ಬಹಳ ಕಷ್ಟವಾಗಿದ್ದಿತು. ಈ ತೊಂದರೆಯನ್ನು ನಿವಾರಣೆಮಾಡುವುದಕ್ಕಾಗಿ ಮನ್ನಾ ಜಂಗಲುಗಳಲ್ಲಿ ದನಕರುಗಳನ್ನು ಮೇಯಿಸಬಹುದೆಂಬುದಾಗಿ ಜನರಿಗೆ ತಿಳಿಸಿ ಆ ಭಾಗದಲ್ಲಿ ತಕ್ಕ ಸೌಕರ್ಯವನ್ನು ಒದಗಿಸುವುದಕ್ಕಾಗಿ ಕ್ರಮ ಜರುಗಿಸಿದೆವು. ಇತರ ಕೆಲವು ಮಾರ್ಗಗಳಲ್ಲಿ ಜನರಿಗೆ ಸಹಾಯಮಾಡಬೇಕೆಂಬ ವಿಷಯವೂ ಪರ್ಯಾಲೋಚನೆಯಲ್ಲಿದ್ದಿತು. ಅಷ್ಟರಲ್ಲಿ ದೈವಾನುಗ್ರಹದಿಂದ ಯಥೇಷ್ಟವಾಗಿ ಮಳೆಯಾಯಿತು. ಕಳೆದ ತಿಂಗಳಿನಲ್ಲಿ ಸಂಸ್ಥಾನದ ಎಲ್ಲಾ ಪ್ರಾಂತಗಳಲ್ಲಿಯೂ ಈ ರೀತಿ ಮಳೆಯಾದುದರಿಂದ ಸ್ಥಿತಿಗತಿಗಳು ವಿಶೇಷವಾಗಿ ಕಳವಳವೂ, ಆತಂಕವೂ ಪರಿಹಾರವಾದುವು.

ಆಯವ್ಯಯಗಳ ವಿಚಾರ.

1928-29 ನೆಯ ಸಾಲಿನಲ್ಲಿ ಎಷ್ಟು ಹುಟ್ಟುವಳಿಯು ಬರಬಹುದೆಂಬ ವಿಚಾರದಲ್ಲಿಯೂ, ಎಷ್ಟು ಮೊಬಲಗು ವೆಚ್ಚವಾಗಬಹುದೆಂಬ ವಿಚಾರದಲ್ಲಿಯೂ ನಾನು ಕಳೆದ ಜೂನ್ ತಿಂಗಳಿನಲ್ಲಿ ತಿದ್ದುಪಾಟು ಅಂದಾಜುಗಳನ್ನು ತಮ್ಮ ಅವಗಾಹನೆಗೆ ತಂದಿದ್ದುದು ಸರಿಯಷ್ಟೆ ! 1928-29 ನೆಯ ಸಾಲಿನಲ್ಲಿ ವಾಸ್ತವವಾಗಿ ನಡೆದ ಆಯವ್ಯಯಗಳ ವಿಚಾರದಲ್ಲಿ ಈಗ ಕಚ್ಚಾಲೆಕ್ಕಗಳು ಸಿದ್ಧವಾಗಿವೆ. ಅವುಗಳ ಪ್ರಕಾರ ನೋಡಿದರೆ, ನಾವು ನಿರೀಕ್ಷಿಸಿದ್ದುದಕ್ಕಿಂತಲೂ ಉತ್ತಮವಾದ ಪರಿಸ್ಥಿತಿಯೇ ಕಂಡುಬರುತ್ತದೆ. ಎಂದರೆ, ವೆಚ್ಚವು ಕಳೆದು ಎಷ್ಟು ಮೊಬಲಗು ಉಳಿತಾಯವಾಗಬಹುದೆಂಬುದಾಗಿ ನಾವು ತಿದ್ದುಪಾಟು ಅಂದಾಜಿನ ಮೇರೆಗೆ ನಿರೀಕ್ಷಿಸಿದ್ದೆವೋ ಅಷ್ಟಕ್ಕಿಂತಲೂ ಹೆಚ್ಚು ಮೊಬಲಗೇ ಉಳಿಯುವುದಾಗಿ ಕಂಡುಬಂದಿದೆ. ಇನ್ನು ಮೊಬಲಗುಗಳ ವಿವರಗಳನ್ನೇ ತಿಳಿಸುತ್ತೇನೆ. ಒಟ್ಟು 3,69,96,000 ರೂಪಾಯಿಗಳ ಹುಟ್ಟುವಳಿಯು ಬರಬಹುದೆಂದೂ ಹುಟ್ಟುವಳಿಯ ಬಾಬಿಗೆ ಖರ್ಚು ಬೀಳತಕ್ಕ ವೆಚ್ಚಗಳಿಗಾಗಿ ಅದರಲ್ಲಿ 3,65,55,000 ರೂಪಾಯಿಗಳು, ವಿನಿಯೋಗವಾಗಬಹುದೆಂದೂ, ಒಟ್ಟಿನಲ್ಲಿ 4,43,000 ರೂಪಾಯಿಗಳು ಮಿಗಬಹುದೆಂದೂ ನಾವು ನಿರೀಕ್ಷಿಸಿದ್ದೆವು. ತಿದ್ದುಪಾಟು ಅಂದಾಜಿನ ಪ್ರಕಾರ ಇಷ್ಟುಮಟ್ಟಿನ ನಿರೀಕ್ಷೆಯಿದ್ದಿತು. ಅಲ್ಲದೆ, ವೆಚ್ಚವು ಕಳೆದು ಈ ರೀತಿ ಮಿಗುತಾಯವಾಗುವ 4,43,000 ರೂಪಾಯಿಗಳಲ್ಲಿ 4,13,000 ರೂಪಾಯಿಗಳನ್ನು "ಸ್ಪೆಷಲ್ ರಿಜರ್ವ್" ಎಂಬ ಆಪದ್ಧನದ ನಿಧಿಗೆ ಸೇರಿಸಬೇಕೆಂದೂ ಉದ್ದೇಶಿಸಿದ್ದೆವು. ಈ ಭಾಷಣದ ಎರಡನೆಯ ಭಾಗಕ್ಕೆ ಸೇರಿಸಿರುವ ಪಟ್ಟಿಗಳಲ್ಲಿ ಸೂಚಿಸಿರುವ ಪ್ರಕಾರ ಪ್ರಸಕ್ತ ವರ್ಷದ ವಾಸ್ತವಿಕ ಹುಟ್ಟುವಳಿಯು 3,74,58,000 ರೂಪಾಯಿಗಳು. ನಿಧಿಗಳಿಂದ ಹಣವನ್ನೊದಗಿಸಬೇಕಾದ ವೆಚ್ಚಗಳೂ ಸೇರಿ, ಒಟ್ಟು ವೆಚ್ಚವು 3,75,04,000 ರೂಪಾಯಿಗಳು. ಆದರೆ ವಾರ್ಷಿಕ ಹುಟ್ಟುವಳಿಯಿಂದಲೇ ಹಣವನ್ನೊದಗಿಸಬೇಕಾದ ವೆಚ್ಚಗಳ ಒಟ್ಟು ಮೊಬಲಗು ಮಾತ್ರ 3,68,25,000 ರೂಪಾಯಿಗಳು. ಎಂದರೆ ಈ ವೆಚ್ಚದ ಮೊಬಲಗನ್ನು ತೆಗೆದುಹಾಕಿದರೆ ವಾರ್ಷಿಕ ಹುಟ್ಟುವಳಿಯಲ್ಲಿ ಒಟ್ಟಿನ ಮೇಲೆ 6,33,000 ರೂಪಾಯಿಗಳು ಉಳಿದಂತಾಯಿತು. ಅಂತು, ಪ್ರಸಕ್ತ ವರ್ಷದ ಆಯವ್ಯಯಗಳ ವಾಸ್ತವಿಕ ಫಲಿತಾಂಶದ ಮೇರೆಗೆ, ನಾವು ತಿದ್ದುಪಾಟು ಅಂದಾಜಿನಲ್ಲಿ ಲೆಕ್ಕಹಾಕಿದ್ದುದಕ್ಕಿಂತಲೂ ಹೆಚ್ಚಾಗಿ, ಸುಮಾರು ಎರಡು ಲಕ್ಷ ರೂಪಾಯಿಗಳ ಉಳಿತಾಯವು ಕಂಡುಬಂದಿದೆ.

ಉಳಿತಾಯ ಮೊಬಲಗು ಹೀಗೆ ಹೆಚ್ಚಾದುದಕ್ಕೆ ಹಲವು ಕಾರಣಗಳಿರುತ್ತವೆ. ಆದರೂ ಇವುಗಳಲ್ಲಿ ಮುಖ್ಯವಾದವು ಎರಡು ಕಾರಣಗಳು. ಮೊದಲನೆಯದು; ಗಂಧದೆಣ್ಣೆಯು ಹೆಚ್ಚಾಗಿ ಮಾರಾಟವಾದುದು. ಇನ್ನು ಎರಡನೆಯ ಕಾರಣ; ತಿದ್ದುಪಾಟಾದ ಅಂದಾಜನ್ನು ರಚಿಸಿದ ಕಾಲದಲ್ಲಿ ಚೌಬೀನೆ ಮರಕ್ಕೆ ಕ್ರಿಯೊಸೋಟ್ ತೈಲವನ್ನು ಲೇಪಿಸುವ ಯಂತ್ರದ ಕಾರ್ಖಾನೆಯಿಂದ ಬರುವುದಾಗಿದ್ದ ಹುಟ್ಟುವಳಿಯನ್ನು ಇಷ್ಟೇ ಸರಿಯೆಂದು ನಿಷ್ಕರ್ಷೆಯಿಂದ ನಿಗದಿಮಾಡುವುದು ಸಾಧ್ಯವಿರಲಿಲ್ಲ. ನಾವು ಫಾರೆಸ್ಟು ಬಾಬಿನ ಕೆಳಗೆ ಅದನ್ನು ಏನೋ ಒಂದು ಅಂದಾಜಿನ ಮೇಲೆ ನಮೂದಿಸಿದ್ದೆವು. ಆದರೆ, ವಾಸ್ತವಿಕವಾಗಿ ನೋಡಿದರೆ, ಈ ಕಾರ್ಖಾನೆಯಿಂದ ನಾವು ಅಂದಾಜು ಕಟ್ಟಿದುದಕ್ಕಿಂತಲೂ ಹೆಚ್ಚು ಹುಟ್ಟುವಳಿಯೇ ಬಂದಿತು. ಒಟ್ಟಿನಲ್ಲಿ ಹುಟ್ಟುವಳಿಯು ನಾವು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಾದುದಕ್ಕೆ ಇವೇ ಮುಖ್ಯಕಾರಣಗಳು.

1928 ನೆಯ ಇಸವಿ ಜೂನ್ ತಿಂಗಳಿನಲ್ಲಿ ತಮಗೆ ಒಪ್ಪಿಸಿದ್ದ ಆಯವ್ಯಯಗಳ ಅಂದಾಜು ಪಟ್ಟಿಯ ಪ್ರಕಾರ (ಎಂದರೆ, ಬಡ್ಜೆಟ್ಟಿನ ಪ್ರಕಾರ) ನಾವು ನಿರೀಕ್ಷಿಸಿದ್ದುದಕ್ಕಿಂತಲೂ 18½ ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಪ್ರಸಕ್ತ ವರ್ಷದಲ್ಲಿ ನಮ್ಮ ಕೈಸೇರಿತು. ಈ ಹೆಚ್ಚು ಹುಟ್ಟುವಳಿಗೆ ಕಾರಣವಾದ ಮುಖ್ಯ ಬಾಬುಗಳನ್ನೂ, ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಬಂದ ಹೆಚ್ಚು ಹುಟ್ಟುವಳಿಯನ್ನೂ, ತಮ್ಮ ಅವಗಾಹನೆಗೆ ತರಲು ಇಚ್ಛೈಸುತ್ತೇನೆ. ಗಂಧದೆಣ್ಣೆಯ ಮಾರಾಟವೂ ಸೇರಿ, ಫಾರೆಸ್ಟು ಬಾಬಿನಲ್ಲಿ 12 ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಬಂದಿತು. ಎಕ್ಸೈಜು ಬಾಬಿನಲ್ಲಿ 4½ ಲಕ್ಷ ರೂಪಾಯಿಗಳೂ, ಸ್ಟ್ಯಾಂಪುಗಳ ಮಾರಾಟದಿಂದ 1 ಲಕ್ಷ ರೂಪಾಯಿಗಳೂ, ನಾವು ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿ ನಮಗೆ ಲಭಿಸಿದುವು. ಬಡ್ಡಿಯ ಬಾಬಿನಲ್ಲಿ 2 ಲಕ್ಷ ರೂಪಾಯಿಗಳ ಆಧಿಕ್ಯವು ಕಂಡುಬಂದಿತು; ರಸ್ತೆಗಳ ಸಂಬಂಧದ ವರಮಾನದ ಬಾಬುಗಳಿಂದಲೂ ಮತ್ತು ಇತರ ಕೆಲವು ಕಾಮಗಾರಿಗಳ ಬಾಬಿನಿಂದಲೂ ನಾವು ಅಂದಾಜುಮಾಡಿದ್ದುದಕ್ಕಿಂತಲೂ ಹೆಚ್ಚಾಗಿ 2½ ಲಕ್ಷ ರೂಪಾಯಿಗಳು ನಮ್ಮ ಕೈಸೇರಿದುವು. ರೈಲ್ವೆಯ ಬಾಬಿನಲ್ಲಿ ನಿವ್ವಳ ಹುಟ್ಟುವಳಿಯು ನಾವು ಅಂದಾಜುಮಾಡಿದ್ದುದಕ್ಕಿಂತಲೂ 2½ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಯಿತು. ಕೋಲಾರ ಡಿಸ್ಟ್ರಿಕ್ಟಿನ ರೈಲ್ವೆಯ ಸಂಬಂಧದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರಿಗೆ ಸಲ್ಲಬೇಕಾದ ನಿವ್ವಳ ಹುಟ್ಟುವಳಿಯು ಭಾರಿ ಭಾರಿ ಮೊಬಲಗುಗಳು ಪಾವತಿಯಾಗದೆ ಬಾಕಿಯಾಗಿ ಉಳಿದಿದ್ದುವು. ಆ ಸಲುವಾಗಿ ಮೊಬಲಗುಗಳನ್ನು ಸಂದಾಯಮಾಡಿದುದೇ, ರೈಲ್ವೆಯ ಹುಟ್ಟುವಳಿಯಲ್ಲಿ ಮೇಲೆ ಹೇಳಿದಂತೆ ಮೊಬಲಗು ಕಡಿಮೆಬಿದ್ದುದಕ್ಕೆ ಮುಖ್ಯಕಾರಣವು.

ಹುಟ್ಟುವಳಿಯಲ್ಲಿ 6,33,000 ರೂಪಾಯಿಗಳ ಉಳಿತಾಯವು ಕಂಡುಬಂದಿತಷ್ಟೆ ! ರಸ್ತೆಗಳೇ ಮುಂತಾದ ಸಂಚಾರಸಾಧನಗಳನ್ನು ಉತ್ತಮಗೊಳಿಸಬೇಕಾದುದು ಅತ್ಯಾವಶ್ಯಕವಾಗಿ ಪರಿಣಮಿಸಿದೆ. ಆದಕಾರಣ ಈ ಸಂಬಂಧದಲ್ಲಿ ನಡೆಯಬೇಕಾದ ಕಾಮಗಾರಿಗಳಿಗೋಸ್ಕರ, ಮೇಲೆ ಹೇಳಿದ ಉಳಿತಾಯದ ಹಣದಿಂದ ರಸ್ತೆಯ ನಿಧಿಗೆ (ರೋಡ್ ಫಂಡಿಗೆ) 2,07,000 ರೂಪಾಯಿಗಳನ್ನು ಒಂದು ಹೆಚ್ಚಿಗೆ ಮೊತ್ತವಾಗಿ ಕೊಡುತ್ತೇವೆ. ಅಲ್ಲದೆ "ಸ್ಪೆಷಲ್ ರಿಜರ್ವ್" ಎಂಬ ಆಪದ್ಧನದ ನಿಧಿಗೆ 3,70,000 ರೂಪಾಯಿಗಳನ್ನೂ ಸೇರಿಸುತ್ತೇವೆ. ಇವೆರಡಕ್ಕೂ ಮೊತ್ತವನ್ನು ಒದಗಿಸಿದ ಬಳಿಕ, ಉಳಿತಾಯದ ಮೊಬಲಗಿನಿಂದ ಒಟ್ಟಿನಲ್ಲಿ ಪ್ರಸಕ್ತ ವರ್ಷಕ್ಕೆ 56,000 ರೂಪಾಯಿಗಳ ಕಿಲ್ಲು ತೇಲಿದಂತಾಗುತ್ತದೆ.

ನಿಧಿಗಳಿಂದ ವೆಚ್ಚಕ್ಕೆ ತೆಗೆದುಕೊಂಡ ಮೊಬಲಗಿಗಿಂತ, ನಿಧಿಗಳಿಗೆ ಸೇರಿಸಿರುವ ಮೊಬಲಗೇ ಸುಮಾರು 1¼ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದೆಯೆಂಬುದು ಮೇಲೆ ಕೊಟ್ಟಿರುವ ಪಟ್ಟಿಯಿಂದ ಗೊತ್ತಾಗುತ್ತದೆ. ಅಂತು ಪ್ರಸಕ್ತವರ್ಷದಲ್ಲಿ ಅಂದಾಜು ಮಾಡಿದ್ದುದಕ್ಕಿಂತಲೂ ಹೆಚ್ಚು ಹುಟ್ಟುವಳಿಯು ಬಂದುದರಿಂದ ಆಯವ್ಯಯಗಳನ್ನು ಸಮತೂಕದಲ್ಲಿ ನಿಲ್ಲಿಸಿಕೊಂಡು, ಮೇಲೆ ಹೇಳಿದಂತೆ ನಿಧಿಗಳಿಗೂ ಹೆಚ್ಚು ಹಣವನ್ನು ಸೇರಿಸುವುದು ಸರ್ಕಾರದವರಿಗೆ ಸಾಧ್ಯವಾಯಿತು.

ಚಾಲ್ತಿಸಾಲಿನಲ್ಲಿ 371 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂಬುದಾಗಿ ಅಂದಾಜು ಮಾಡಲಾಗಿದೆ. ಅಲ್ಲದೆ ವಾರ್ಷಿಕ ಹುಟ್ಟುವಳಿಯಿಂದಲೇ ಹಣವನ್ನೊದಗಿಸಬೇಕಾದ ವೆಚ್ಚಗಳಿಗೋಸ್ಕರ ಸುಮಾರು ಅಷ್ಟೇ ಮೊತ್ತವು ವಿನಿಯೋಗವಾಗಬಹುದೆಂದೂ ಅಂದಾಜು ಮಾಡಿದ್ದೇವೆ. ತದನುಗುಣವಾಗಿ ಆಯವ್ಯಯಗಳ ಅಂದಾಜಿನ ಪಟ್ಟಿಯಲ್ಲಿ ಬಾಬುವಾರಾಗಿ ವೆಚ್ಚಗಳಿಗೆ ಮೊಬಲಗುಗಳನ್ನು ಹಂಚಿಹಾಕಿದ್ದೇವೆ. ಈ ಅಂಶಗಳು ತಮಗೂ ವೇದ್ಯವಾಗಿಯೇ ಇವೆ. ಮುಂದಣ ತಿಂಗಳಿನಲ್ಲಿ ವೈಸ್ರಾಯರವರು ನಮ್ಮ ಸಂಸ್ಥಾನಕ್ಕೆ ಮತ್ತೆ ದಯಮಾಡಿಸುವರೆಂಬ ಸಂಗತಿಯನ್ನು ಆಗಲೇ ತಿಳಿಸಿರುವೆನಷ್ಟೆ. ಅವರನ್ನು ಸತ್ಕರಿಸುವ ಏರ್ಪಾಡುಗಳಿಗೋಸ್ಕರ ಮೂರು ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲು ಉದ್ದೇಶಿಸಿದ್ದೇವೆ. ಈ ವೆಚ್ಚವು ವಾರ್ಷಿಕ ಹುಟ್ಟುವಳಿಗೆ ಖರ್ಚು ಬೀಳತಕ್ಕ ಹೆಚ್ಚಿಗೆ ಬಾಬೆಂಬುದನ್ನೂ ತಮಗೆ ಶೃತಪಡಿಸಬಹುದಾಗಿದೆ.

ತ್ರೈವಾರ್ಷಿಕ ಫಲಿತಾಂಶಗಳು.

ಕಳೆದ ಮೂರು ವರುಷಗಳಲ್ಲಿ ಹುಟ್ಟುವಳಿಗಳು ಒಟ್ಟಿನಲ್ಲಿ 34 ಲಕ್ಷ ರೂಪಾಯಿಗಳಷ್ಟು ಹೆಚ್ಚಿರುವುವೆಂಬುದು ಗೊತ್ತಾಗುತ್ತದೆ. ಅಲ್ಲದೆ, ವೆಚ್ಚವೂ ಕೂಡ, 20 ಲಕ್ಷ ರೂಪಾಯಿಗಳಷ್ಟು ಹೆಚ್ಚಿರುತ್ತದೆಂಬುದೂ ಗೊತ್ತಾಗುತ್ತದೆ. ಇಲ್ಲಿ ಮತ್ತೊಂದು ಅಂಶವನ್ನೂ ನಾವು ಗಮನಿಸಬೇಕು. 1928-29 ನೆಯ ಸಾಲಿನಲ್ಲಿ ಪೂಗದಿಯು ಕಡಮೆಯಾದುದರ ಸಂಬಂಧದಲ್ಲಿ 10½ ಲಕ್ಷ ರೂಪಾಯಿಗಳ ವೆಚ್ಚವು ತಗ್ಗಿರುವುದು ಸರಿಯಷ್ಟೆ. ಅದಕ್ಕೆ ಪ್ರತಿಯಾಗಿ ಅದೇ ಮೊಬಲಗಿನಷ್ಟು ವೆಚ್ಚವು ಹೆಚ್ಚಿದುದೂ ಅಲ್ಲದೆ, ಅದರ ಮೇಲೂ, ವೆಚ್ಚವು ಮತ್ತೆ 20 ಲಕ್ಷ ರೂಪಾಯಿಗಳಷ್ಟು ಹೆಚ್ಚಿದೆ. ಅವಶ್ಯಕಂಡ ರೀತಿಯಲ್ಲಿ ಹೀಗೆ ವೆಚ್ಚವು ಹೆಚ್ಚಿದ್ದೂ ಕೂಡ, ಮೇಲೆ ಹೇಳಿದಂತೆ ಉಳಿತಾಯವು ಕಂಡುಬಂದಿದೆ. ಪರಿಸ್ಥಿತಿಯು ಉತ್ತಮಪಟ್ಟಿರುವುದು ಇದರಿಂದ ಚೆನ್ನಾಗಿ ವ್ಯಕ್ತವಾಗುವುದಿಲ್ಲವೆ? 1928-29 ನೆಯ ಸಾಲಿನಲ್ಲಿ ಎರಡನೆಯ ಭಾಗದ ಹುಟ್ಟುವಳಿಯ ಮೊಬಲಗಿನಿಂದ, ಆ ಭಾಗಕ್ಕೆ ಖರ್ಚುಬಿದ್ದ ವೆಚ್ಚಕ್ಕೆ ಪೂರ್ತಿಯಾಗಿ ಹಣವನ್ನು ತೆಗೆದಿಟ್ಟಮೇಲೂ ಕೂಡ, ಸುಮಾರು 5 ಲಕ್ಷ ರೂಪಾಯಿಗಳು ಉಳಿದುವು. ಒಂದನೆಯ ಭಾಗದಲ್ಲಿ ಸರ್ವಿಸ್ ಇಲಾಖೆಗಳ ವೆಚ್ಚವು ಆ ಭಾಗದ ಹುಟ್ಟುವಳಿಗಿಂತಲೂ 5 ಲಕ್ಷ ರೂಪಾಯಿಗಳಷ್ಟು ಅಧಿಕವಾಗಿದೆ. ಮುಂದೆ ಇದನ್ನು ತಪ್ಪಿಸಿ ಈ ಭಾಗದಲ್ಲಿಯ ಆಯವ್ಯಯಗಳನ್ನು ಸಮತೂಕಕ್ಕೆ ತರಲು ಸರ್ವಪ್ರಯತ್ನಗಳನ್ನೂ ಮಾಡಲಾಗುವುದು. ಹಾಗೆ ಮಾಡಿದಲ್ಲಿ ಎರಡನೆಯ ಭಾಗದಲ್ಲಿ ಮಿಗುತಾಯವಾಗುವ ಹಣವು ಮೊದಲನೆಯ ಭಾಗದ ಹೆಚ್ಚು ವೆಚ್ಚದ ಹಣಕ್ಕೆ ಉತ್ತಾರವಾಗುವುದು ತಪ್ಪಿ, ಅಭಿವೃದ್ಧಿಯ ಕಾಮಗಾರಿಗಳನ್ನು ಮತ್ತಷ್ಟು ಹೆಚ್ಚಾಗಿ ಕೈಗೊಳ್ಳಲು ನಮಗೆ ಸಾಧ್ಯವಾಗುವುದು.

ಕೆಳದರ್ಜೆಯ ನೌಕರರ ಸಂಬಳಗಳನ್ನೂ ಬಡ್ತಿಯ ಸಂಭವಗಳನ್ನೂ ಹೆಚ್ಚಿಸುವುದು.

ಗುಮಾಸ್ತರಿಗೂ, ಉಪಾಧ್ಯಾಯರಿಗೂ, ಕನಿಷ್ಠ ಪಕ್ಷ ತಿಂಗಳಿಗೆ 25 ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಸಂಬಳಗಳು ಬರುವಂತೆ ಮಾಡಿಕೊಡಬೇಕೆಂಬುದು ಸರ್ಕಾರದವರಿಗಿರುವ ಪ್ರಬಲವಾದ ಆಕಾಂಕ್ಷೆಯಾಗಿದೆ. ಡಿಸ್ಟ್ರಿಕ್ಟು ಪೋಲೀಸ್ ಕಾನ್ಸ್ಟೇಬಲುಗಳ ಸಂಬಳಗಳನ್ನು ಕನಿಷ್ಠ ಪಕ್ಷ 15 ರೂಪಾಯಿಗಳಿಗಾದರೂ ಹೆಚ್ಚಿಸಬೇಕು. ಮತ್ತು ಸಿಟಿ ಪೋಲೀಸ್ ಕಾನ್ಸ್ಟೇಬಲುಗಳಿಗೆ ತಿಂಗಳಿಗೆ 18 ಅಥವಾ 19 ರೂಪಾಯಿಗಳನ್ನಾದರೂ ಕೊಡಬೇಕು. ಇವುಗಳನ್ನೆಲ್ಲಾ ಮಾಡಬೇಕಾದರೆ, ವರುಷವೊಂದಕ್ಕೆ ಪ್ರಾಯಶಃ ಹತ್ತು ಲಕ್ಷ ರೂಪಾಯಿಗಳವರೆಗೂ ಹೆಚ್ಚು ವೆಚ್ಚವನ್ನು ಕೈಕೊಳ್ಳಬೇಕಾಗುತ್ತದೆ. ಇಷ್ಟು ಹಣವನ್ನು ಒದಗಿಸುವುದು ಸದ್ಯದಲ್ಲಿಯೇ ಸಾಧ್ಯವಿಲ್ಲ. ಆದರೂ ನಾವು ನಿರೀಕ್ಷಿಸಿರುವುದಕ್ಕಿಂತಲೂ ಶೀಘ್ರವಾಗಿಯೇ ಅದು ಸಾಧ್ಯವಾಗಬಹುದೆಂಬ ನಂಬಿಕೆಯು ನನಗುಂಟು. ಸಾಧ್ಯಕಂಡೊಡನೆಯೇ ಲೇಶವೂ ತಾಮಸಮಾಡದೆ ಈ ನೌಕರರ ಸಂಬಳಗಳನ್ನು ಹೆಚ್ಚಿಸಲೇಬೇಕೆಂಬ ದೃಢಸಂಕಲ್ಪವು ಸರ್ಕಾರದವರ ಮನಸ್ಸಿನಲ್ಲಿ ಖಚಿತವಾಗಿದೆ. ಈ ಅಂಶವನ್ನು ಅವರೆಲ್ಲರೂ ಖಂಡಿತವಾಗಿ ನಂಬಿ, ಭರವಸೆಯನ್ನಿಟ್ಟುಕೊಳ್ಳಬಹುದಾಗಿದೆ.

ಆದರೆ ಸಂಬಳಗಳ ದರಗಳನ್ನು ಗಣ್ಯವಾಗಿ ಹೆಚ್ಚಿಸಬೇಕಾದರೆ ಸಾಧ್ಯವಿರುವ ಮಟ್ಟಿಗೂ ನೌಕರರ ಸಂಖ್ಯೆಯನ್ನೂ ತಗ್ಗಿಸಬೇಕಾಗುವುದು. ಸಂಬಳವನ್ನು ಹೆಚ್ಚಿಸುವುದನ್ನು ಪರ್ಯಾಲೋಚಿಸುವಾಗ್ಗೆ, ಈ ಅಂಶವನ್ನೂ ಸಂಗಡಲೇ ಯೋಚಿಸಬೇಕಾಗುತ್ತದೆಂಬುದನ್ನು ನಾವು ನೆನಪಿನಲ್ಲಿಡಬೇಕು. ಸಿಬ್ಬಂದಿಯು ಸಂಖ್ಯೆಯಲ್ಲಿ ಹೆಚ್ಚುತ್ತಲೇ ಹೋಗುವ ಸಂಭವವಿರುತ್ತದೆ. ಆದಕಾರಣ ಸಮಯವು ದೊರೆತಂತೆಲ್ಲಾ ಇದಕ್ಕೆ ಅವಕಾಶವನ್ನೇ ತಪ್ಪಿಸುತ್ತ ಬರಬೇಕಾದುದು ಆವಶ್ಯಕ. ಸಾಧ್ಯಕಂಡಹಾಗೆಲ್ಲಾ ನೌಕರರ ಸಂಖ್ಯೆಯನ್ನು ಕಡಿಮೆಮಾಡುವುದಕ್ಕೆ ನಾವು ಪ್ರಯತ್ನಪಡದೆ ಹಟಸ್ಥರಾದಲ್ಲಿ, ನಮ್ಮ ಉದ್ದೇಶವು ನೆರವೇರುವುದೇ ಬಹಳ ಕಷ್ಟವಾಗುವುದು. ಎಂದರೆ, ನಾನಾ ನೌಕರರಿಗೂ ಕನಿಷ್ಠ ಪಕ್ಷ ಫಲಾನಾ ಮೊಬಲಗುಗಳೆಂದು ಗೊತ್ತಾಗಿರುವ ಸಂಬಳಗಳ ದರಗಳನ್ನು ಕಾಲಾನುಗುಣ್ಯವಾಗಿ ನಾವು ಹೆಚ್ಚು ಮಾಡುವುದೂ ಬಹಳ ಕಷ್ಟವಾಗುವುದು; ನಿಯತಕಾಲಗಳಲ್ಲಿ ಬಡ್ತಿಯು ದೊರೆಯುತ್ತ ಹೋಗುವಂತೆ ಸಂಬಳಗಳನ್ನು ಗೊತ್ತುಮಾಡುವುದೂ ಸಹ, ಆಗ್ಗೆ ಇದರಂತೆಯೇ ಬಹಳ ಕಷ್ಟವಾಗುವುದು, ಹೀಗಾಗಲು ಅವಕಾಶ ಕೊಡದಿರುವುದು ಮೇಲಲ್ಲವೇ ?

ಗಂಧದೆಣ್ಣೆಯ ಕಾರ್ಖಾನೆಗಳು.

ಗಂಧದೆಣ್ಣೆಯ ಮಾರಾಟದ ಕೆಲಸವನ್ನು ಈಗ ಸ್ವಲ್ಪಕಾಲದವರೆಗೂ ಸರ್ಕಾರಿ ಉದ್ಯೋಗಸ್ಥರಲ್ಲದವರಿಗೆ ವಹಿಸಿದ್ದುದು ಸರಿಯಷ್ಟೆ. ಈ ಏರ್ಪಾಡಿನಲ್ಲಿ ಕೆಲವು ನ್ಯೂನತೆಗಳಿರುವುವೆಂಬುದು ಈಚಿನ ವಿದ್ಯಮಾನಗಳ ದೆಸೆಯಿಂದ ಸರ್ಕಾರದವರಿಗೆ ಚೆನ್ನಾಗಿ ಅನುಭವಕ್ಕೆ ಬಂದಿತು. ಗಂಧದೆಣ್ಣೆಯ ಮಾರಾಟಕ್ಕೆ ಸಂಬಂಧಪಟ್ಟ ಸಮಗ್ರವಿಚಾರಗಳನ್ನೂ ಇಂಗ್ಲೆಂಡಿನಲ್ಲಿಯೂ ಮತ್ತು ಅಮೇರಿಕಾದಲ್ಲಿಯೂ ಕೂಲಂಕಷವಾಗಿ ಪರಿಶೀಲಿಸಿ ನೋಡುವುದಕ್ಕಾಗಿ ಸರ್ಕಾರದವರು ಮಿ|| ಎಸ್. ಮಾಧವರಾಯರವರನ್ನು ಕಳುಹಿಸಿಕೊಟ್ಟರು. ಅಲ್ಲದೆ, ಸರ್ಕಾರದವರಿಗೆ ಬರಬೇಕಾದ ಹಣಗಳನ್ನು ವಸೂಲ್ಮಾಡುವುದಕ್ಕೂ ಮತ್ತು ಗಂಧದೆಣ್ಣೆಯ ವ್ಯಾಪಾರದ ಸಂಬಂಧದಲ್ಲಿ ಸರ್ಕಾರದವರ ಪ್ರಯೋಜನಾಂಶಗಳು ಅಬಾಧಿತವಾಗಿ ಸುರಕ್ಷಿತವಾಗಿರುವಂತೆ ಏರ್ಪಾಡು ಮಾಡುವುದಕ್ಕೂ, ಸಲಹೆಗಳನ್ನು ಒಪ್ಪಿಸುವ ಕೆಲಸವನ್ನೂ ಮಿ|| ಮಾಧವರಾಯರಿಗೆ ವಹಿಸಿದ್ದೆವು. ಅವರಿಂದ ಆಗಾಗ್ಗೆ ವರದಿಗಳು ಸಲ್ಲಿವೆ. ಅವಶ್ಯಾನುಸಾರವಾಗಿ ತಕ್ಕಂತೆ ನಡವಳಿಕೆಯನ್ನೂ ನಡೆಸಲಾಗಿದೆ. ಅವರು ಈಗ ಅಮೇರಿಕಾದಲ್ಲಿ ತಾವು ಮಾಡಬೇಕಾಗಿದ್ದ ಕೆಲಸವನ್ನು ಪೂರೈಸಿ, ಲಂಡನ್ ನಗರಕ್ಕೆ ಬಂದಿದ್ದಾರೆ. ಗಂಧದೆಣ್ಣೆಯ ವ್ಯಾಪಾರದ ಸಂಬಂಧವಾಗಿ ಆ ನಗರದಲ್ಲಿ ಇತ್ಯರ್ಥವಾಗ-

ಬೇಕಾಗಿರುವ ಕೆಲವು ವಿಷಯಗಳನ್ನು ಕುರಿತು, ಅವರು ಪರಿಶೀಲನೆಗಳನ್ನು ನಡೆಸುತ್ತಿದ್ದಾರೆ.

ಈ ಸಂಬಂಧದಲ್ಲಿ ಆದೇಶಕ್ಕೆ ಸೇರಿದಂತೆ ಈಚೆಗೆ ನಡೆದಿರುವ ಒಂದು ಏರ್ಪಾಡನ್ನು ತಮ್ಮ ಅವಗಾಹನೆಗೆ ತರಬಹುದಾಗಿದೆ. ಮೈಸೂರು ಸರ್ಕಾರದ ಪರವಾಗಿ ಲಂಡನ್ ನಗರದಲ್ಲಿ "ಟ್ರೇಡ್ ಕಮಿಷನರ್" ಎಂಬ ಹೆಸರಿನ ವಾಣಿಜ್ಯನಿಯೋಗಿಯೊಬ್ಬರನ್ನು ಈಚೆಗೆ ನೇಮಕಮಾಡಿದ್ದೇವೆ. ಹೀಗೆ ಮಾಡಬೇಕಾದುದು ತೀರ ಆವಶ್ಯಕವೆಂಬುದಾಗಿ ಕಂಡುಬಂದಿತು. ಹೀಗೆ ಇಲ್ಲಿಯ ಅಧಿಕಾರಿಯೊಬ್ಬರನ್ನು ನೇಮಕಮಾಡಬೇಕಾದುದು ಗಂಧದೆಣ್ಣೆಯ ವ್ಯಾಪಾರದ ಯೋಗಕ್ಷೇಮದ ದೃಷ್ಟಿಯಿಂದ ಕೇವಲ ಪ್ರಯೋಜನಕರವೆಂದು ಮೊದಲಿನಲ್ಲಿ ಕಂಡುಬಂದಿತು. ಅದಕ್ಕನುಸಾರವಾಗಿ ಹಾಗೆ ಮಾಡಿಯೂ ಮಾಡಿದೆವು. ಆದರೆ, ಈ ಪ್ರಯತ್ನವು ಈಗ ತಳೆದಿರುವ ರೂಪವೇ ಬೇರೆ. ಮೊದಲಿನಲ್ಲಿ ನಮ್ಮ ಉದ್ದೇಶಕ್ಕೆ ಸೇರದೆಹೋಗಿದ್ದ ಕೆಲವು ಹೆಚ್ಚಿನ ಪ್ರಯೋಜನಗಳನ್ನೂ ಪಡೆಯಬೇಕೆಂದೂ ಈಗ ನಿರ್ಣಯಿಸಿದ್ದೇವೆ. ಗಂಧದೆಣ್ಣೆಯ ವ್ಯಾಪಾರದ ಸಂಬಂಧದಲ್ಲಿ ನಡೆಯಬೇಕಾದ ಆದೇಶಗಳನ್ನು ನೋಡಿಕೊಳ್ಳುವುದು ಮಾತ್ರವೇ ಅಲ್ಲದೆ ಇನ್ನೂ ಹೆಚ್ಚಿನ ಕರ್ತವ್ಯಗಳನ್ನೂ ಈ ಹೊಸ ಅಧಿಕಾರಿಯವರಿಗೆ ವಹಿಸಬೇಕೆಂದು ನಿಷ್ಕರ್ಷೆಮಾಡಿದ್ದೇವೆ. ಸಂಸ್ಥಾನದ ವ್ಯಾಪಾರ ವಾಣಿಜ್ಯಗಳ ಅಭಿವೃದ್ಧಿಗೆ ಸಾಧಕವಾದ ಕೆಲವು ಕಾರ್ಯಗಳನ್ನೂ ಇವರು ನೆರವೇರಿಸಬೇಕಾಗುತ್ತದೆ. ಅವುಗಳು ಯಾವುವೆಂದರೆ: ನಮ್ಮ ಸಂಸ್ಥಾನದ ಆಮದು ರಫ್ತುಗಳ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸುವುದು; ನಮ್ಮ ದೇಶೀಯರಿಗೆ ಅತ್ಯಂತ ಲಾಭದಾಯಕವಾದ ರೀತಿಯಲ್ಲಿ ಆಮದು ರಫ್ತುಗಳು ನಡೆಯುವಂತೆ ತಕ್ಕ ಸಲಹೆಗಳನ್ನು ಕೊಡುವುದು; ಮೈಸೂರು ಸಂಸ್ಥಾನದ ಸಾಮಾನುಗಳಿಗೆ ವಿದೇಶಗಳಲ್ಲಿ ಈಗಿರುವುದಕ್ಕಿಂತಲೂ ಹೆಚ್ಚು ಗಿರಾಕಿಗಳನ್ನು ದೊರೆಯಿಸುವುದು ಎಷ್ಟು ಮಟ್ಟಿಗೆ ಸಾಧ್ಯವೆಂಬುದನ್ನು ವಿಚಾರಮಾಡಿ ಕಂಡುಹಿಡಿಯುವುದು; ನಮ್ಮ ದೇಶದಲ್ಲಿ ನಡಿಸಲು ಪ್ರಕೃತಿಸಹಜವಾದ ಅನುಕೂಲಗಳಿರುವಂತಹ ಯಾವುದಾದರೂ ಕೈಗಾರಿಕೆಯನ್ನು ನಡೆಸಿ, ವಿದೇಶಗಳ ಬಳಕೆಗೆ ಅವಶ್ಯವಾಗಿ ಬೇಕಾಗಿರುವ ಸಾಮಾನುಗಳನ್ನು ಒದಗಿಸುವುದಕ್ಕಾದೀತೇ ಎಂಬುದನ್ನು ಆಲೋಚಿಸಿ ನೋಡಿ ಸಲಹೆಗಳನ್ನು ಕೊಡುವುದು. ಇವುಗಳೆಲ್ಲಾ ಅವರ ಕರ್ತವ್ಯಗಳಾಗಿವೆ. ವಿಜ್ಞಾನ ವಿಚಾರಗಳಲ್ಲಿಯೂ, ಕಸಬುದಾರೀ ತಯಾರಿಯ ವಿಚಾರಗಳಲ್ಲಿಯೂ, ವಿದೇಶಿಯರು ಏಕಪ್ರಕಾರವಾಗಿ ಪರಿಶೋಧನೆಗಳನ್ನು ನಡೆಸಿ, ಹೊಸ ಹೊಸ ವಿಷಯಗಳನ್ನು ಕಂಡುಹಿಡಿಯುತ್ತಲೇ ಇರುತ್ತಾರೆ. ಅವುಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆಯ ವಿಧಾನಗಳಲ್ಲಿ ಅವಶ್ಯಾನುಗುಣವಾಗಿ ಬಗೆಬಗೆಯ ಮೇಲ್ಪಾಟುಗಳನ್ನು ಮಾಡಿ, ಅವರು ವಿಶೇಷವಾಗಿ ಲಾಭವನ್ನು ಗಳಿಸುತ್ತಾರೆ. ಇದು ಎಲ್ಲರಿಗೂ ತಿಳಿದೇ ಇದೆ. ಸಾಧ್ಯವಾದ ಮಟ್ಟಿಗೂ ಈ ಮೇಲ್ಪಾಟುಗಳ ವಿಚಾರವನ್ನು ಪರಿಶೀಲಿಸುತ್ತಿದ್ದು, ನಮ್ಮ ಸಂಸ್ಥಾನದಲ್ಲಿ ನಡೆಯುವ ಕೈಗಾರಿಕೆಗಳ ಸಂಬಂಧದಲ್ಲಿ ಉಪಯೋಗವಾಗತಕ್ಕವುಗಳನ್ನು ತಿಳಿಸುವ ಭಾರವೂ ಸಹ "ಟ್ರೇಡ್ ಕಮಿಷನರ್" ಎಂಬ ಈ ಅಧಿಕಾರಿಯವರನ್ನೇ ಸೇರಿದೆ. ಅವರ ಕರ್ತವ್ಯಗಳು ಇಲ್ಲಿಗೇ ಪೂರೈಸಲಿಲ್ಲ. ನಮ್ಮ ದೇಶದಲ್ಲಿ ಈಗ ನಡೆಯುತ್ತಿರುವ ಕೈಗಾರಿಕೆಗಳ ಸಂಬಂಧದಲ್ಲಿ ಇಲ್ಲಿಯವರಿಗೆ ಉಪಯೋಗವಾಗುವ ಕೆಲವು ಸಂಗತಿಗಳನ್ನು ಸಂಗ್ರಹಿಸಿ ಕಳುಹಿಸುವ ಕೆಲಸವನ್ನೂ ಅವರಿಗೆ ವಹಿಸಿದ್ದೇವೆ. ಎಂದರೆ, ಇದೇ ವಿಧದ ಕೈಗಾರಿಕೆಗಳನ್ನು ನಡಿಸುವುದರಲ್ಲಿ ಯಾವ ಯಾವ ಉತ್ತಮವಿಧಾನಗಳನ್ನು ಅನುಸರಿಸಿ ಹೇಗೆಹೇಗೆ ಅಲ್ಲಿ ಕೆಲಸಮಾಡುತ್ತಿದ್ದಾರೆಂಬುದೊಂದು; ಅಲ್ಲಿ ಆಚರಣೆಯಲ್ಲಿರುವ ವಾಣಿಜ್ಯಕ್ರಮದ ಮೇರೆಗೆ ಪರ್ಯಾಲೋಚಿಸಿ ನೋಡಿದರೆ, ಆ ಕೈಗಾರಿಕೆಗಳಿಂದ ತಯಾರಾದ ವಸ್ತುಗಳಿಗೆ ಗಿರಾಕಿಗಳನ್ನೊದಗಿಸಿಕೊಳ್ಳುವ ಭಾಗದಲ್ಲಿ ಹೇಗೆ ಹೇಗೆ ಕೆಲಸಮಾಡುವುದು ಸಾಧ್ಯವಿದೆಯೆಂಬುದೊಂದು; ಈ ಸಂಗತಿಯನ್ನು ಶೋಧಿಸಿಮಾಡಿ ತಿಳಿಸುವ ಭಾರವೂ ಅವರ ಮೇಲಿದೆ. ನಮ್ಮ ದೇಶದಲ್ಲಿ ದೊರಕುವ ಅನುಕೂಲ್ಯಗಳ ದೆಸೆಯಿಂದ ಮುಂದೆ ಯಾವ ಯಾವ ಕೈಗಾರಿಕೆಯ ಉದ್ಯಮಗಳನ್ನು ಪ್ರಾರಂಭಿಸುವ ಸಾಧ್ಯತೆಯು ಕಂಡುಬರುತ್ತದೋ, ಆ ಕೈಗಾರಿಕೆಗಳ ಸಂಬಂಧದಲ್ಲಿಯೂ ಅವರು ಈ ಸಂಗತಿಗಳನ್ನು ಶೋಧಿಸಿ ಕಳುಹಿಸಬೇಕೆಂದೂ ಅಪ್ಪಣೆ ಮಾಡಿದ್ದೇವೆ. ಈ ಎಲ್ಲ ಕರ್ತವ್ಯಗಳನ್ನೂ ಅವರಿಗೆ ವಹಿಸಿರುವುದರ ದೆಸೆಯಿಂದ ವಾಣಿಜ್ಯಕ್ಷೇತ್ರದಲ್ಲಿ ನಮ್ಮ ದೇಶಕ್ಕೆ ವಿಶೇಷ ಹೆಚ್ಚಿನ ಪ್ರಯೋಜನಗಳು ಲಭಿಸುವುದಕ್ಕೆ ಒಳ್ಳೆಯ ಸಮಯವು ದೊರೆಯುವಂತಾಗುತ್ತದೆ. ವಾಣಿಜ್ಯದ ದೃಷ್ಟಿಯಿಂದ ನೋಡಿದರೆ, ಈ ಹೊಸ ಅಧಿಕಾರವನ್ನು ಕಲ್ಪಿಸಿದುದು ಕೇವಲ ಪ್ರಯೋಜನಕರವಾಗಿ ಪರಿಣಮಿಸುವುದೆಂದು ಸ್ಪಷ್ಟ ಸಿದ್ಧವಾಗಿಯೇ ಇದೆ. ವಾಣಿಜ್ಯದಲ್ಲಿಯೂ, ಕೈಗಾರಿಕೆಯಲ್ಲಿಯೂ ಉದ್ಯುಕ್ತರಾಗಿರುವ ನಮ್ಮ ದೇಶಬಾಂಧವರು ಲಂಡನ್ ನಗರದಲ್ಲಿ ನಮ್ಮ ಸಂಸ್ಥಾನದ ವಾಣಿಜ್ಯನಿಯೋಗಿಯವರು ಇರುವುದರ ದೆಸೆಯಿಂ[illegible] ಪೂರ್ಣಪ್ರಯೋಜನವನ್ನು ಪಡೆಯಲು ಶೀಘ್ರವಾ[illegible] ಮಾಡುವರೆಂಬುದಾಗಿ ನಾನು ದೃಢವಾಗಿ ನಂಬಿದ್ದೇನೆ.

ನೀರಾವರಿ ಸಂಬಂಧದ ಕಾಮಗಾರಿಗಳು.

ನಮ್ಮ ದೇಶದಲ್ಲಿ ಭಾರಿಭಾರಿ ನೀರಾವರಿ ಸಾಧನಗಳೂ ಸಣ್ಣಪುಟ್ಟ ನೀರಾವರಿ ಸಾಧನಗಳೂ ಅನೇಕವಾಗಿರುವುದು ಸರಿಯಷ್ಟೆ. ಅವುಗಳ ಜೊತೆಗೆ ಮತ್ತೆ ಕೆಲವನ್ನು ಹೊಸದಾಗಿ ಕಲ್ಪಿಸುವ ಕೆಲಸವು ಗಣನೀಯವಾದ ರೀತಿಯಲ್ಲಿ ನಡೆಯಿತು. ಅವಶ್ಯಕಂಡ ಹಾಗೆಲ್ಲಾ ಹಳೆಯವುಗಳಲ್ಲಿ ಕೆಲವನ್ನು ಸರಿಮಾಡಿಸುವ ಕೆಲಸವೂ, ಮತ್ತೆ ಕೆಲವನ್ನು ಜೀರ್ಣೋದ್ಧಾರ ಮಾಡಿಸುವ ಕೆಲಸವೂ ಇದರಂತೆಯೇ ಸಮರ್ಪಕವಾಗಿ ನಡೆಯಿತು. ಭದ್ರಾನದಿಯ ಅಣೆಕಟ್ಟೆಯ ಕಾಮಗಾರಿಯು ಪೂರೈಸಿತು. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಭೃಗುನದಿಗೆ ಅಡ್ಡವಾಗಿ ಕಟ್ಟುತ್ತಿರುವ ಅಣೆಕಟ್ಟೆಯ ಕಾಮಗಾರಿಯು ಪೂರೈಸುವುದರಲ್ಲಿದೆ. ಈಗ ನಡೆಯುತ್ತಿರುವ ಮುಖ್ಯವಾದ ಇತರ ಕಾಮಗಾರಿಗಳು ಯಾವುವೆಂದರೆ:—ಅಂಜನಾಪುರದ ಬಳಿಯಲ್ಲಿ ಅಣೆಯನ್ನು ಹಾಕುತ್ತಿರುವ ಜಲಾಶಯದ ಕೆಲಸ; ಮತ್ತು ತಂಬದಿ, ನಿಡಸಾಲೆ ಮತ್ತು ಬಿಡದಿ—ಈ ಸ್ಥಳಗಳಲ್ಲಿ ಕೆರೆಗಳನ್ನು ಕಟ್ಟಿಸುವ ಕೆಲಸ. ಇವುಗಳಿಗಾಗಿ ಒಟ್ಟು 26 ಲಕ್ಷ ರೂಪಾಯಿಗಳ ಮೊಬಲಗು ವೆಚ್ಚವಾಗಬೇಕಾಗುತ್ತದೆ. ನಾಗಮಂಗಲ ತಾಲ್ಲೂಕಿನಲ್ಲಿರುವ [illegible] ಕೆರೆಯನ್ನು ಜೀರ್ಣೋದ್ಧಾರ ಮಾಡುವ ಕಾಮಗಾರಿಯೂ ನಡೆಯುತ್ತಿದೆ. ಕಾಮಸಮುದ್ರದ ಬಳಿಯಲ್ಲಿರುವ ವೃಷಭಾವತೀ ನದಿಗೆ ಅಡ್ಡಕಟ್ಟೆಯನ್ನು ಹಾಕಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸುವ ಕಾಮಗಾರಿಯನ್ನು ಈಚೆಗೆ ಪ್ರಾರಂಭಿಸಲಾಗಿದೆ. ಇದಕ್ಕೆ 2 ಲಕ್ಷ ರೂಪಾಯಿಗಳ ಮೊಬಲಗು ವೆಚ್ಚವಾಗುತ್ತದೆ. ಭಾರಿ ಭಾರಿ ನೀರಾವರಿಯ ಸಾಧನಗಳು, ಮತ್ತು ಸಣ್ಣಪುಟ್ಟ ನೀರಾವರಿಯ ಸಾಧನಗಳು ಇವೆರಡರ ಸಂಬಂಧದಲ್ಲಿಯೂ ಕೂಡ, ಒಂದು ತ್ರೈವಾರ್ಷಿಕ ಕಾರ್ಯಕ್ರಮದ ಪಟ್ಟಿಯನ್ನು ರಚಿಸಿಕೊಂಡು, ಅದಕ್ಕನುಗುಣವಾಗಿ ಕೆಲಸ ನಡೆಸುವ ಏರ್ಪಾಡನ್ನು ಅವಲಂಬಿಸಿದ್ದೇವಷ್ಟೆ. ಮುಂದಣ ಮೂರು ವರುಷಗಳ ಅವಧಿಗೆ ಇಂತಹ ಕಾರ್ಯಕ್ರಮದ ಪಟ್ಟಿಯು ರಚಿಸಲ್ಪಡುತ್ತಾ ಇದೆ. ಹಳೆಯವುಗಳಿಗೆ ಕಾಮಗಾರಿಯನ್ನು ನಡೆಸುವ ಕೆಲಸಗಳೂ, ಹೊಸವುಗಳನ್ನು ಏರ್ಪಡಿಸುವ ಕೆಲಸಗಳೂ, ಯಾವ ಅನುಕ್ರಮದಲ್ಲಿ ನಡೆಯಬೇಕೆಂಬುದು ಅದಕ್ಕನುಗುಣವಾಗಿ ವ್ಯವಸ್ಥೆಯಾಗಬೇಕಾಗುತ್ತದೆ. ಬೆಂಗಳೂರಿಗೆ ನೀರು ಸರಬರಾಯಿ ಮಾಡುವುದಕ್ಕಾಗಿ ಅರ್ಕಾವತೀ ನದಿಗೆ ಅಣೆಕಟ್ಟೆಯನ್ನು ಕಟ್ಟಿ ಹೊಸದಾಗಿ ಒಂದು ಜಲಾಶಯವನ್ನು ಏರ್ಪಡಿಸುವ ಉದ್ದೇಶವಿರುವುದು ಸರಿಯಷ್ಟೆ. ಬೆಂಗಳೂರು ದಂಡಿನ ಪ್ರದೇಶಕ್ಕೂ ಇದರ ಅನುಕೂಲವು ದೊರೆಯುವಂತೆ ಮಾಡಬೇಕೆಂಬುದು ಇಂಡಿಯಾ ಸರ್ಕಾರದವರ ಇಷ್ಟ. ಆದಕಾರಣ, ಈ ಏರ್ಪಾಡಿಗೆ ತಾವೂ ಸೇರುವುದಾಗಿ ಅವರು ತಿಳಿಸಿದ್ದಾರೆ. ಈ ಜಲಾಶಯವನ್ನು ಏರ್ಪಡಿಸುವ ಕಾಮಗಾರಿಯನ್ನು ಶೀಘ್ರವಾಗಿ ಕೈಕೊಳ್ಳಲು ತಕ್ಕ ಏರ್ಪಾಡುಗಳನ್ನು ಮಾಡಲಾಗುವುದು. ಈ ಜಲಾಶಯದಿಂದ ಬೆಂಗಳೂರು ನಗರಕ್ಕೆ ಸಮೃದ್ಧಿಯಾಗಿ ನೀರು ದೊರೆಯುವಂತಾಗುತ್ತದೆ. ಇದರ ಪ್ರತ್ಯಕ್ಷಫಲರೂಪವಾಗಿ, ಬೆಂಗಳೂರು ನಗರವು ವಿಶೇಷ ಬಡಾವಣೆ ಹೊಂದಿ ಏಳಿಗೆಗೆ ಬರುವುದೆಂದು ನಾನು ನಂಬಿದ್ದೇನೆ.

ಕೃಷ್ಣರಾಜಸಾಗರ ಸಂಬಂಧವಾದ ಕಾಮಗಾರಿಗಳ ಎಲ್ಲ ಬಾಬುಗಳಿಗೂ ತಗಲಿದ ವೆಚ್ಚವು 45,51,699 ರೂಪಾಯಿಗಳಾಯಿತು.

ಪ್ರಸಕ್ತವರ್ಷದಲ್ಲಿ ಇರ್ವಿನ್ ನಾಲೆಯನ್ನು ತೋಡಿಸುವ ಕಾಮಗಾರಿಯು ಸಮರ್ಪಕವಾಗಿ ಮುಂದುವರಿಯಿತು. ಸುಮಾರು 4,000 ಅಡಿಗಳಷ್ಟು ದೂರ ಸುರಂಗ ಮಾರ್ಗವನ್ನು ಕೊರೆದು ಸಿದ್ಧಪಡಿಸಿದ್ದಾರೆ. ಇದರ ಒಟ್ಟು ಉದ್ದವು ಸುಮಾರು 9,300 ಅಡಿಗಳಷ್ಟಾಗುತ್ತದೆ. ಆದಕಾರಣ, ಈ ಸುರಂಗಮಾರ್ಗದ ಕೆಲಸದಲ್ಲಿ ಅರ್ಧಪಾಲಿಗಿಂತ ಸ್ವಲ್ಪ ಕಡಮೆಯಾಗಿ ಕೆಲಸವು ನಡೆದಂತಾಯಿತು. ಈ ನಾಲೆಯನ್ನು ಏರ್ಪಡಿಸುವುದರ ಸಂಬಂಧದಲ್ಲಿ ಇದುವರೆಗೆ ನಡೆದಿರುವ ಕಾಮಗಾರಿಗಳಿಗಾಗಿ ಒಟ್ಟು 40 ಲಕ್ಷ ರೂಪಾಯಿಗಳಷ್ಟು ಮೊಬಲಗು ವೆಚ್ಚವಾಯಿತು. 1931 ನೆಯ ಇಸವಿ ಜೂನ್ ತಿಂಗಳೊಳಗಾಗಿ 30,000 ಎಕರೆಗಳಷ್ಟು ಜಮೀನಿಗೆ ನೀರು ಹಾಯಿಸುವದಕ್ಕೆ ಸಾಕಾದಷ್ಟು ನಾಲೆಗಳು ಸಿದ್ಧವಾಗುವುವೆಂದು ನಿರೀಕ್ಷಿಸಲಾಗಿದೆ. ಇದಲ್ಲದೆ, ಇನ್ನೂ 50,000 ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿಯ ಸೌಕರ್ಯವನ್ನು ಒದಗಿಸುವದು ಸಾಧ್ಯವಾಗಬಹುದು. ಅಂತು ಸುಮಾರು 1936ನೆಯ ಇಸವಿಯೊಳಗಾಗಿ ಒಟ್ಟು 80,000 ಎಕರೆಗಳಿಗೆ ನೀರು ಹಾಯಿಸಲು ಸಾಧ್ಯವಾಗಬಹುದು.

ಇರ್ವಿನ್ ನಾಲೆಯ ಕೆಳಗೆ ಉತ್ತಮವಿಧದಲ್ಲಿ ನೀರಾವರಿಯನ್ನು ನಡೆಸುವ ಒಂದು ಹೊಸಕ್ರಮವನ್ನೂ ಆಚರಣೆಗೆ ತರಬೇಕೆಂಬ ಉದ್ದೇಶವಿದೆ. ಈಗ ತರಿ ಜಮೀನುಗಳಲ್ಲಿ ಸಾಮಾನ್ಯವಾಗಿ ಪ್ರತಿವರ್ಷವೂ ಬತ್ತದ ಪೈರೊಂದನ್ನೇ ಇಡುವದು ವಾಡಿಕೆಯಾಗಿದೆ. ಇದರಿಂದ ಹೆಚ್ಚು ನೀರೂ ವಿನಿಯೋಗವಾಗುತ್ತದೆ. ಅದರ ಜೊತೆಗೆ ಭೂಮಿಯ ಸಾರವು ಕಡಿಮೆಯಾಗುವದೇ ಮುಂತಾದ ಇತರ ಬಾಧಕಗಳೂ ಇರುತ್ತವೆ. ಈ ನ್ಯೂನತೆಯನ್ನು ತಪ್ಪಿಸುವದಕ್ಕೋಸ್ಕರ ಇರ್ವಿನ್ ನಾಲೆಯ ಬಯಲಿನಲ್ಲಿ ಜಮೀನುಗಳನ್ನು ತಾಕುಗಳಾಗಿ ವಿಂಗಡಿಸಿ, ಪ್ರತಿತಾಕನ್ನೂ ಮೂರು ಹಂತಗಳಾಗಿ ವಿಭಾಗಿಸಬೇಕೆಂಬ ಉದ್ದೇಶವಿದೆ. ಈ ಮೂರು ಹಂತಗಳಲ್ಲಿ ಪ್ರತಿಯೊಂದರಲ್ಲಿಯೂ ಸರದಿಯ ಮೇಲೆ ಬತ್ತ, ಕಬ್ಬು, ಇತರ ಬೆಳೆ, ಇವುಗಳನ್ನಿಡುವ ತ್ರೈವಾರ್ಷಿಕ ಕ್ರಮವನ್ನು ಆಚರಣೆಗೆ ತರಬೇಕೆಂದಿದ್ದೇವೆ. ಇರ್ವಿನ್ ನಾಲೆಯ ಬಯಲಿನಲ್ಲಿ ಸಾಧ್ಯಕಂಡಷ್ಟು ಹೆಚ್ಚು ವಿಸ್ತೀರ್ಣದಲ್ಲಿ ಕಬ್ಬಿನ ಬೆಳೆಯನ್ನಿಡುವಂತೆ ಮಾಡಬೇಕೆಂಬುದೂ ನಮ್ಮ ಸಂಕಲ್ಪವಾಗಿದೆ. ಈ ನಾಲೆಯ ಕೆಳಗೆ ಉತ್ತಮವಿಧದಲ್ಲಿ ನೀರಾವರಿಯನ್ನು ನಡೆಸಬೇಕಾದರೆ, ಆ ಸಂದರ್ಭದಲ್ಲಿ ಅನೇಕ ಕ್ಲಿಷ್ಟವಿಚಾರಗಳನ್ನು ಇತ್ಯರ್ಥಪಡಿಸಬೇಕಾಗಿ ಬರುತ್ತದೆ. ಹೀಗೆ ಮಾಡಲು ವಿಶೇಷ ವಿಧದ ಏರ್ಪಾಡುಗಳೂ ಅವಶ್ಯಕ; ಅಲ್ಲದೆ, ಅವಿಚ್ಛಿನ್ನವಾಗಿ ಪ್ರಬಲ ಪ್ರಯತ್ನಗಳೂ ನಡೆಯಬೇಕಾಗಿ ಬರುತ್ತದೆ. ಈ ನಾಲಾ ಬಯಲಿನಲ್ಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ ನೀರಾವರಿ ಸಾಗುವಳಿಯನ್ನು ಅಭಿವೃದ್ಧಿಗೊಳಿಸಬೇಕೆಂದು ಸರ್ಕಾರದವರ ಮುಖ್ಯೋದ್ದೇಶ. ಅದು ನೆರವೇರಲು ಅನುಕೂಲಿಸುವಂತೆ, ಸರ್ಕಾರದವರು ಈ ಸಮಗ್ರವಿಚಾರಗಳನ್ನೂ ತೀವ್ರಾಸಕ್ತಿಯಿಂದ ಪರ್ಯಾಲೋಚಿಸುತ್ತಿದ್ದಾರೆ.

ಈಗ ಇರತಕ್ಕ ನಾಲೆಗಳ ಕೆಳಗೆ ನಾವು ಎಷ್ಟುಮಟ್ಟಿಗೆ ನೀರಾವರಿ ಸಾಗುವಳಿಯನ್ನು ಹೆಚ್ಚಿಸಿಕೊಳ್ಳಬಹುದೆಂಬ ವಿಚಾರದಲ್ಲಿ ಮದರಾಸು ಸರ್ಕಾರದವರೊಡನೆ ಒಂದು ಒಪ್ಪಂದವು ನಡೆದಿದೆಯಷ್ಟೆ. ಈಗಿರುವದಕ್ಕಿಂತಲೂ ಹೆಚ್ಚು ವಿಸ್ತೀರ್ಣದ ಜಮೀನನ್ನು ನೀರಾವರಿ ಸಾಗುವಳಿಗೆ ತರಲು, ಅದರ ಪ್ರಕಾರ ಇನ್ನೂ ಅವಕಾಶವಿದೆ. ಹೀಗೆ ಅವಕಾಶವಿರುವಷ್ಟು ಮಟ್ಟಿನ ಜಮೀನುಗಳನ್ನೂ ನೀರಾವರಿ ಸಾಗುವಳಿಗೆ ತರುವ ಭಾಗದಲ್ಲಿಯೂ ಸರ್ಕಾರದವರು ಕ್ರಮಜರುಗಿಸಿದ್ದಾರೆ.

1924 ನೆಯ ಇಸವಿಯ ಒಪ್ಪಂದದ ಮೇರೆಗೆ ಗೊತ್ತಾಗಿದ್ದ ಕೆಲವು ನಿಯಮಗಳಿಗೆ ಅರ್ಥಸಮನ್ವಯಮಾಡುವದರಲ್ಲಿ ಮದರಾಸು ಸರ್ಕಾರದವರಿಗೂ ನಮ್ಮ ಸರ್ಕಾರದವರಿಗೂ ಭಿನ್ನಾಭಿಪ್ರಾಯವುಂಟಾಗಿದ್ದಿತು. ಆ ಸಂಬಂಧದ ವಿವಾದವು ವ್ಯವಸ್ಥೆಯಾಗದೆ ಉಳಿದಿದ್ದಿತು. ಈ ವಿವಾದವು ವ್ಯವಸ್ಥೆಯಾಗುವದರಲ್ಲಿ ಬ್ರಿಟಿಷ್ ರೆಸಿಡೆಂಟರಾದ ಘನತೊಂದಿದ ಮಿ|| ಎಸ್. ಇ. ಪಿಯರ್ಸ್‌ರವರಿಂದ ವಿಶೇಷ ಸಹಾಯವಾಯಿತು. ಕಲ್ಕತ್ತಾ ಹೈ ಕೋರ್ಟಿನ ನ್ಯಾಯಾಧೀಶರಾದ ಘನತೊಂದಿದ ಮಿ|| ಗೇಜ್‌ರವರ ಮಧ್ಯಸ್ಥಿಕೆಯಲ್ಲಿ ಉಭಯ ಸರ್ಕಾರದವರಿಗೂ ಸಮ್ಮತವಾಗಿರುವಂತೆ ಅದು ಇತ್ಯರ್ಥವಾಗಿ, ರಾಜಿಯ ಒಪ್ಪಂದವು ನಡೆಯಿತು. ಆದಕಾರಣ, ಈ ಈರ್ವರು ಮಹನೀಯರಿಂದಲೂ ನಮಗೆ ಮಹೋಪಕಾರವಾದಂತಾಯಿತು

[ಸಶೇಷ]

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯಾ ಪ್ರಸೀದಂತು.

ಪುರಾಣಮಹೋತ್ಸವ.

ವಿಜಾಪುರ ಡಿ|| ಮನಗೂಳಿಯ ಬೃಹನ್ಮಠದ ಷ|| ಬ್ರ|| ಶ್ರೀ ಪಟ್ಟದ ಮಹಾಸ್ವಾಮಿಗಳವರು ಶ್ರಾವಣ ಶುದ್ಧ ಪಂಚಮಿಯ ಶುಭಮುಹೂರ್ತದಲ್ಲಿ ಸ್ಕಾಂದಪುರಾಣಾಂತರ್ಗತ ಕಾಶೀಖಂಡ ಮಹಾಪುರಾಣವನ್ನು ಆರಂಭಮಾಡಿಸಿ ತಾವು ಸಂಕಲ್ಪಮಾಡಿಕೊಂಡ "ಮಹಾರುದ್ರ ಮತ್ತು ಅತಿರುದ್ರ" ಪ್ರವಚನವನ್ನು 11 ಜನ ವೈದಿಕರಿಂದ ಕೂಡಿ ಗಲಗಲಿ ಶ್ರೀ ಚರಪಟ್ಟಾಧ್ಯಕ್ಷ ಸ್ವಾಮಿಗಳ ಕಡೆಯಿಂದ 55 ದಿನಗಳಲ್ಲಿ ಪೂರ್ತಿಮಾಡಿಸಿ ಕಡೆಗೆ ಶಾಂತಿ ಮಹಾ ಹೋಮವನ್ನು ವಿಧ್ಯುಕ್ತಪ್ರಕಾರವಾಗಿ ಮಾಡಿಸಿದರು. ಆ ದಿನ ಉಭಯಕಾರ್ಯಗಳ ಶಾಂತಿಗೋಸ್ಕರ ಮಹಾಗಣಾರಾಧನೆಯನ್ನು ಮಾಡಿಸಿ ಬಂದ ಸ್ಥಳಪರಸ್ಥಳದ ಹದಿನೈದುಸಾವಿರ ಜನಗಳಿಗೆ ಮೃಷ್ಟಾನ್ನದಿಂದ ತೃಪ್ತಿಗೊಳಿಸಿದರು. ಮರುದಿನ ಮುಂಜಾನೆ ಎಂಟು ಗಂಟೆಯ ಸುಮಾರಕ್ಕೆ ಶೃಂಗರಿಸಿದ ದಿವ್ಯಪಲ್ಲಕ್ಕಿಯಲ್ಲಿ ಗಲಗಲಿ ಶ್ರೀ ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳನ್ನು ಮೂರ್ತಮಾಡಿಸಿ ಮುಂದೆ ಮಹಾಪುರಾಣವನ್ನು ಇಟ್ಟು ಮಠಕ್ಕೆ ಮಾಮೂಲಪ್ರಕಾರವಾಗಿ ನಡೆದುಬಂದ ಸಕಲ ಬಿರುದಾವಳಿಗಳಿಂದಲೂ ಕೂಡಿ ಮುಂದೆ ಅನೇಕ ವಾದ್ಯಗಳು ಭೋರ್ಗರೆಯುತ್ತಿರಲು ಉತ್ಸವವು ಹೊರಟು ಪಟ್ಟಣದ ಶೃಂಗರಿಸಿದ ಸಕಲ ಬೀದಿಗಳಲ್ಲಿ ಸಂಚರಿಸಿ ಅಲ್ಲಿಗಲ್ಲಿಗೆ ಮುತ್ತೈದೆಯರು ಬೆಳಗುವ ಆರತಿಗಳನ್ನು ಭಕ್ತರು ಅರ್ಪಿಸುವ ಫಲಪುಷ್ಪಾದಿಗಳನ್ನು ಸ್ವೀಕರಿಸುತ್ತ "ಪಂಚಾಚಾರ್ಯರ ಜಯಘೋಷದೊಡನೆ [illegible] ನಿರ್ವಿಘ್ನವಾಗಿ ತಿರುಗಿ ಉತ್ಸವವು ಮೂರು ಗಂಟೆಗೆ [illegible] ಸೇರಿತು. ಮಹಾಮಂಗಳವನ್ನು ಮಾಡಿದನಂತರ ಸಭೆ [illegible] ಯೋಚಿತ ಭಾಷಣಗಳಾದವು. ಆ ಸಮಯದಲ್ಲಿ ಪ್ರಭಾ[illegible]ಕ್ಕೋಸ್ಕರ 5 ರೂಪಾಯಿಗಳು ತೆಗೆದಿಡಲ್ಪಟ್ಟವು. ಸಭೆಗೆ ವಿಂ|| ಜೈನಾಪುರ ವೇ|| ಮಲ್ಲಿಕಾರ್ಜುನಶಾಸ್ತ್ರಿಗಳೂ ಹುನಗುಂದ, ಪಂ|| ವೀರಭದ್ರಶಾಸ್ತ್ರಿಗಳೂ, ಅನೇಕ ವೈದಿಕ ಜನವೂ ಮತ್ತೂ ಸ್ಥಿರ ಚರ ಪಟ್ಟಾಧ್ಯಕ್ಷರೂ ಕೂಡಿದ್ದರಿಂದ ವಿಶೇಷ ಗೌರವವುಂಟಾಗಿತ್ತು. ಮಹಾಪುರಾಣವನ್ನು ಗಾನವಿಶಾರದ ಕಮತಿಗಿ ಹುಚ್ಚಪ್ಪಯ್ಯನವರು ಓದುವದರಿಂದಲೂ ಪಂ|| ವೀರಭದ್ರಶಾಸ್ತ್ರಿಗಳು ಹೇಳುವದರಿಂದಲೂ ಕೇಳತಕ್ಕ ಜನಸಮುದಾಯವು ಪ್ರತಿ ದಿವಸವೂ ಸಾವಿರಕ್ಕಿಂತಲೂ ಹೆಚ್ಚಾಗಿಯೇ ಕೂಡುತ್ತಲಿತ್ತು. ಇಂಥ ಮಹತ್ವದ ಕಾರ್ಯವು ಈ ಊರಲ್ಲಿ ನಡೆದದ್ದು ಇದೇ ಮೊದಲೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೇಲ್ಕಂಡ ಈ ಮಹತ್ವದ ಕಾರ್ಯವನ್ನು ಅವಿಶ್ರಾಂತಪರಿಶ್ರಮವಹಿಸಿ ಯಾವತರದ ತೊಂದರೆಗಳು ಬಾರದಂತೆ ನಿಂತು ಕಡೆಗಾಣಿಸಿದ ಇಲ್ಲಿಯ ಪ್ರಮುಖರಾದ 1. ಶ್ರೀಮಂತ ಸೋಮನಗೌಡ ಪಾಟೀಲ. 2. ಶ್ರೀಮಂತ ದ್ಯಾವನಗೌಡ ಪಾಟೀಲ, 3. ಶ್ರೀ|| ರಂಗನಗೌಡ ಪಾಟೀಲ, 3. ಬಿ. [illegible] ಗೌಡರು, 5. ಬಿ. ಮಹಾಂತಪ್ಪಗೌಡರು ಗುಬಗೊಂಡ. 6. ಶ್ರೀಮಂತ ಬೊಮ್ಮನಹಳ್ಳಿ ಶಾಂತಪ್ಪಗೌಡರು. 7. ಶ್ರೀ|| ಹತ್ತರಕಾಳಶಂಕರಗೌಡರು, 8. ಶ್ರೀ|| ಮುತ್ತಗಿ ಸಂಗನಗೌಡರು. 9. ಶ್ರೀ|| ಹನುಮಂತಗೌಡರು ಆಲೂರು. ಮೊದಲಾದ ಸದ್ಭಕ್ತ ಮಹಂತರಿಗೆ ಜಗದೀಶನು ಸನ್ಮಂಗಲವನ್ನೀಯಲೆಂದು ಆಶಿಸುತ್ತೇನೆ.

ರೇವಣಯ್ಯ, ಕಾರಭಾರಿ ಹಿರೇಮಠ
ಮನಗೋಳಿ.

ಪಂಚಾಚಾರ್ಯ ಪ್ರಭಾ

೧೯೨೯ನೇ ಅಕ್ಟೋಬರ್ ತಾ|| ೨೧ ನೇ ಸೋಮವಾರ

ನವರಾತ್ರಿಮಹೋತ್ಸವ.

ಈ ಮಹೋತ್ಸವವು ನಮ್ಮ ಭರತಖಂಡದಲ್ಲಿ ಸುಪ್ರಸಿದ್ಧವಾದ ಹಬ್ಬವೆಂದು ಪರಿಗಣಿಸಲ್ಪಡುವುದು. ಈ ಹಬ್ಬವನ್ನು ಒಂದೊಂದುದೇಶದಲ್ಲಿ ಒಂದೊಂದು ವಿಧವಾಗಿ ಆಚರಿಸುವರು. ಪ್ರತಿಯೊಂದು ಜನಾಂಗವೂ ಯಾವಯಾವ ವ್ಯಾಪಾರವನ್ನು ಮಾಡುತ್ತಿರುವುದೋ ಆಯಾಯ ವ್ಯಾಪಾರಸಾಧಕಗಳಾದ ಆಯುಧಸಾಮಗ್ರಿಗಳನ್ನು ಈ ನವರಾತ್ರ್ಯುತ್ಸವಸಮಯದಲ್ಲಿ ಅತಿಭಕ್ತಿಯಿಂದ ಪೂಜಿಸುವ ಪದ್ಧತಿಯು ಬಂದಿರುವುದು. ಕ್ಷತ್ರಿಯರು ಜಯಸಾಧಕಗಳಾದ ಶಸ್ತ್ರಾಸ್ತ್ರಗಳನ್ನೂ ವಿದ್ಯಾರ್ಥಿಗಳೂ ವಿದ್ವಾಂಸರೂ ಶಾರದಾರೂಪವಾದ ಪುಸ್ತಕಗಳನ್ನೂ ವ್ಯವಸಾಯಗಾರರು ಮರಮುಟ್ಟುಗಳನ್ನೂ ತಮ್ಮ ಜೀವಿಕೆಗೆ ಸಾಧಕಗಳಾದುದರಿಂದ ಬಹುಭಕ್ತಿಯಿಂದ ಆರಾಧಿಸಿ ವಿಜಯದಶಮಿಯದಿವಸ ತಮ್ಮ ಕಾರ್ಯಾರಂಭವನ್ನು ಮಾಡುತ್ತಾರೆ. ಇದಲ್ಲದೆ ಕ್ಷತ್ರಿಯರಲ್ಲಿ ವಿಜಯದಶಮಿಯದಿವಸ ನೂತನಗಳಾದ ಉಡುಪುಗಳನ್ನು ಧರಿಸಿಕೊಂಡು ದೇವರನ್ನಾಗಲಿ, ಗುರುಗಳನ್ನಾಗಲಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ವಾದ್ಯವೈಭವಗಳೊಂದಿಗೆ ಬನ್ನಿಮರಪೊದೆಗೆ ಹೋಗಿ ಪೂಜಿಸಿ ಬನ್ನಿಯಚಿಗುರನ್ನು ತೆಗೆದುಕೊಂಡು ಮರಳಿ ಉತ್ಸವದೊಂದಿಗೆ ದೇವರನ್ನಾಗಲಿ, ಗುರುಮಠವನ್ನಾಗಲಿ ಪ್ರವೇಶಿಸಿ "ಶಮೀಶಮಯತೇಪಾಪಂ ಶಮೀಶತ್ರುವಿನಾಶಿನೀ" ಎಂದು ಹೇಳ[illegible] ತಮ್ಮ ಬಂಧುಮಿತ್ರಾದಿಗಳಿಗೆ ನಮಸ್ಕಾರ [illegible]ಸ್ಕಾರಪೂರ್ವಕವಾಗಿ ಒಬ್ಬರಿಗೊಬ್ಬರು ಬನ್ನಿಯಚಿಗುರನ್ನು ಕೊಡುವುದುಂಟು. ಹೀಗೆ ಮಾಡುವುದರಿಂದ ಆ ವರ್ಷವೆಲ್ಲ ಆತನು ಮಾಡುವ ಕಾರ್ಯವೆಲ್ಲ ಕೈಗೂಡುವುವೆಂದು ದೃಢವಾದ ಒಂದು ನಂಬಿಕೆಯು ಪ್ರತಿಯೊಬ್ಬರಲ್ಲಿಯೂ ರೂಢಮೂಲವಾಗಿ ಬಂದಿದೆ. ಮೈಸೂರು ರಾಜಧಾನಿಯಲ್ಲಿ ನವರಾತ್ರ್ಯುತ್ಸವದ ಸಂಭ್ರಮವಂತೂ ಹೇಳಲಶಕ್ಯವಾಗಿತ್ತು. ಈ ತಿಂಗಳ 3 ನೆಯ ತಾರೀಖು ಮೊದಲು ಮಾಡಿಕೊಂಡು 12 ನೆಯ ತಾರೀಖಿನವರವಿಗೂ ರಾಜಧಾನಿಯು ಎರಡನೇ ಸ್ವರ್ಗಲೋಕವೇ ಆಗಿತ್ತೆಂದರೂ ಅತಿಶಯೋಕ್ತಿಯೆನಿಸಲಾರದು. ಈ ದಿವಸಗಳಲ್ಲಿ ಪ್ರತಿಸಾಯಂಕಾಲಗಳಲ್ಲಿಯೂ ಪ್ರಭುಗಳವರು ದಿವ್ಯ ವಸ್ತ್ರಾಭರಣಾಲಂಕೃತರಾಗಿ ಕರ್ಣಾಟಕರಾಜ್ಯಲಕ್ಷ್ಮಿಯ ತಾಂಡವಸ್ಥಾನವೆಂದೆನಿಸುವ ರತ್ನಖಚಿತವಾದ ಸಿಂಹಾಸನವನ್ನು ಆರೋಹಣಮಾಡುತ್ತಿದ್ದರು. ರಾಜಬಂಧುಗಳೂ ಸಚಿವೋಪಸಚಿವರುಗಳೂ ಪುರಪ್ರಮುಖರೂ ದೇಶಪ್ರಮುಖರೂ ಸೈನಿಕರೂ ಕ್ರಮವರಿತು ನಜರುಮುಜುರೆಗಳನ್ನು ಮಾಡುತ್ತಿದ್ದರು. ಮತ್ತು ಸಜ್ಜೆಯ ಮುಂದಣ ಅಂಗಣದಲ್ಲಿ ಕುಸ್ತಿ ಪಂಜಿನಾಟ ಬಿರುಸುಬಾಣಮುಂತಾದ ವಿಧವಿಧಗಳಾದ ವಿನೋದಗಳು ನಡೆಯುತ್ತಿದ್ದವು. ಅನೇಕದೇಶಗಳಿಂದ ಆಗಮಿಸಿದ್ದ ಪ್ರಸಿದ್ಧ ಸಂಗೀತ ವಿದ್ವಾಂಸರ ವಾದ್ಯಗಾರರ ಸಂಗೀತವೂ ವಾದ್ಯಗಳೂ ಆಗಾಗ್ಗೆ ನಡೆಯುತ್ತಲೇ ಇದ್ದವು. ಪ್ರತಿವರ್ಷವೂ ಇರುವುದಕ್ಕಿಂತಲೂ ವಿಶೇಷ ಚಮತ್ಕಾರವಾಗಿ ರಚಿಸಲ್ಪಟ್ಟಿರುವ ವಿದ್ಯುದ್ದೀಪಾವಳಿಗಳ ಸೊಬಗು ಪ್ರೇಕ್ಷಕರಿಗೆ ಅಪೂರ್ವವಾದ ಸಂತೋಷವನ್ನುಂಟುಮಾಡುತ್ತಿದ್ದಿತು. ಭಾನುವಾರ ಪ್ರಾತಃಕಾಲ ಪದ್ಧತಿಪ್ರಕಾರವಾಗಿ ವಜ್ರಮುಷ್ಟಿಕಾಳಗ ಮುಂತಾದ ಕಾರ್ಯಗಳೆಲ್ಲ ನಡೆದನಂತರ ಮಹಾಪ್ರಭುಗಳು ಕುದುರೆಯನ್ನೇರಿ ಪಟ್ಟಾಯುಧವನ್ನಿಟ್ಟ ಚಿನ್ನದ ಪಲ್ಲಕ್ಕಿಮುಂತಾದವುಗಳನ್ನು ಬನ್ನಿಮಂಟಪಕ್ಕೆ ಸಾಗಗೊಳಿಸಿದರು. ಅದೇ ದಿವಸ ಮಧ್ಯಾಹ್ನ 4 ಘಂಟೆಗೆ ನಾನಾವಿಧವಾದ ವಾದ್ಯಗಳು ಪ್ರಯಾಣಭೇರಿಯು ಮೊಳಗುತ್ತಿರಲು ಅನರ್ಘಗಳಾದ ಉಡುಪನ್ನು ಧರಿಸಿಕೊಂಡು ಆನೆಯಮೇಲಿಟ್ಟಿರುವ ಅಂಬಾರಿಯಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರವರೊಂದಿಗೆ ಮೂರ್ತಮಾಡಿದರು. ಪ್ರಯಾಣಸೂಚಕವಾದ 21 ತೋಪುಗಳು ಹಾರಿಸಲ್ಪಟ್ಟವು. ಹಸ್ತಿ ಅಶ್ವರಥ ಪದಾತಿರೂಪವಾದ ಸೈನ್ಯದೊಡನೆ ಸ್ವಾರಿಯು ಸಕಲ ರಾಜಮರ್ಯಾದೆಗಳೊಂದಿಗೆ ದೊಡ್ಡಪೇಟೆಮಾರ್ಗವಾಗಿ ಪ್ರಯಾಣ ಬೆಳೆಸಿತು. ಅಲ್ಲಿಂದಲ್ಲಿಗೆ ಪ್ರಜೆಗಳಿಂದ ಒಪ್ಪಿಸಲ್ಪಡುತ್ತಿದ್ದ ಪುಷ್ಪಗುಚ್ಛಾದಿಗಳನ್ನು ಮಹಾರಾಜರು ಒಪ್ಪಿಸಿಕೊಳ್ಳುತ್ತಿದ್ದರು. ಉತ್ಸವವು ಬನ್ನಿಮಂಟಪಕ್ಕೆ ವಿಜಯಮಾಡಿಸಿದನಂತರ ಶಮೀಪೂಜಾದಿ ಶುಭಾವಹವಾದ ಕರ್ತವ್ಯಗಳು ನಡೆದಬಳಿಕ ಬೇರೆ ಉಡುಪುಗಳನ್ನು ಒಪ್ಪಿಸಿಕೊಂಡು ರಾತ್ರಿ 11 ಘಂಟೆಗೆ ಸ್ವಾರಿಯು ಅರಮನೆಗೆ ದಯಮಾಡಿಸಿತು. ಆಗಮನಸೂಚಕಗಳಾದ 21 ತೋಪುಗಳು ಹಾರಿಸಲ್ಪಟ್ಟವು.

ಈ ವರ್ಷ ಶ್ರೀಮನ್ಮಹಾರಾಜರವರು ರಾಜಕುಮಾರರೊಡನೆ ಬನ್ನಿಮಂಟಪಕ್ಕೆ ಹೋಗುವಾಗ ಪ್ರಿನ್ಸ್ ಗೋಪಾಲರಾಜ ಅರಸಿನವರೂ ಹಿಂತಿರುಗಿ ಬರುವಾಗ ಪ್ರಭುವರ್ಯರ ಪೂರ್ಣಾನುಗ್ರಹಕ್ಕೆ ಪಾತ್ರರಾದ ದಿವಾನ್ ಮಿರ್ಜಾಸಾಹೇಬರವರೂ ಅಂಬಾರಿಯ ಹಿಂಭಾಗದಲ್ಲಿ ಕುಳಿತಿದ್ದರು. ಈ ವರ್ಷ ಭಾರತವಸ್ತುಪ್ರದರ್ಶನವು ವಿಶೇಷವಾಗಿದ್ದುದರಿಂದ ಪ್ರತಿವರ್ಷಕ್ಕಿಂತಲೂ ಹೆಚ್ಚಾಗಿ ದೇಶವಿದೇಶಗಳಿಂದ ಲಕ್ಷಾವಧಿ ಪ್ರೇಕ್ಷಕರು ಆಗಮಿಸಿದ್ದರು. ಮೈಸೂರು ರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡಿರುವ ಸಾಕ್ಷಾದ್ಧರ್ಮಾವತಾರಿಗಳಾದ ಪ್ರಭುವರ್ಯರಿಗೂ, ಶ್ರೀಮದ್ಯುವರಾಜರವರಿಗೂ, ಭಾವೀಪ್ರಭುಗಳಾದ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರವರಿಗೂ, ಅವರ ಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ಪಂಚಾಚಾರ್ಯರು ಇತೋಪ್ಸಿತಯವಾದ ಸಕಲ ಸೌಭಾಗ್ಯವನ್ನುಂಟುಮಾಡಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಇರ್ವಿನ್‌ನಾಲೆಯಲ್ಲಿ ಹುಲಿಕೆರೆ ಟನಲ್ ಬಳಿ ಡೈನಾಮೈಟ್ ಇಟ್ಟು ಕಲ್ಲನ್ನು ಹಾರಿಸುವಾಗ ಬಹಳ ದೂರದಲ್ಲಿದ್ದ ಡೈನಾಮೈಟ್‌ಗಳ ಮೇಲೆ ಬಿದ್ದು ಸಾವಿರಾರು ರೂಪಾಯಿಗಳ ಡೈನಾಮೈಟ್ ನಷ್ಟವಾದುದಲ್ಲದೆ ಆ ಬಳಿ ಇದ್ದ ಕೆಲವು ಹುಲ್ಲಿನ ಗುಡಿಸಲುಗಳು ಸುಟ್ಟುಹೋದುವು.

ಕಳೆದ ತಾ|| 10ನೇ ಗುರುವಾರ ರಾತ್ರಿ ಅರಮನೆಯ ಮುಂಭಾಗದಲ್ಲಿ ಕಸರತ್ತುಗಳನ್ನು ಮಾಡುತ್ತಿದ್ದ ಒಬ್ಬ ಜಟ್ಟಿಯು ಬೆಂಕಿಯ ಪಂಜಿನಿಂದ ಕೆಲವು ಸಾಹಸಗಳನ್ನು ಮಾಡುತ್ತಿರುವಾಗ್ಗ ಬೆಂಕಿಯು ಅವನ ಬಟ್ಟೆಗೆ ತಗಲಿ ಹತ್ತಿಕೊಂಡು ವಿಶೇಷ ಗಾಯವಾಯಿತೆಂದು ತಿಳಿದುಬರುತ್ತದೆ.

ಮದರಾಸ್ ಮುನಿಸಿಪಲ್ ಕಾರ್ಪೋರೇಷನ್ನಿನ ಪ್ರೆಸಿಡೆಂಟರಾದ ಮಿ|| ಎ. ರಾಮಸ್ವಾಮಿಮೊದಲಿಯಾರ್ರವರು ರಾಜಧಾನಿಯಲ್ಲಿ ಕಳೆದ 10 ನೇ ಗುರುವಾರ ನಡೆದ ಬ್ರಾಹ್ಮಣೇತರ ಕಾನ್ಫರೆನ್ಸಿಗೆ ಅಧ್ಯಕ್ಷರಾಗಿ ಬಂದ ದಿವಸ ಇಲ್ಲಿಯ ಮುನಿಸಿಪಲ್ ಕೌನ್ಸಿಲರುಗಳು ತಮ್ಮ ಆಫೀಸ್ ಕಟ್ಟಡದಲ್ಲಿ ಒಂದು ಅಡ್ರೆಸನ್ನು ಒಪ್ಪಿಸಿದರು.

ಮೈಸೂರು, ಬೆಂಗಳೂರು, ದಾವಣಗೆರೆ, ಈ ಮೂರು ಸ್ಥಳಗಳಲ್ಲೂ ಪೇಟೆಗಳಲ್ಲಿ ದಿನಸಿ ಮುಂತಾದ್ದನ್ನು ಕೊಳ್ಳುವವರೂ ವಿಕರಿಮಾಡುವವರೂ ಸರ್ಕಾರದ ಮುದ್ರೆ ಇರುವಂಥಾ ಸೇರು ಮುಂತಾದ ಸಾಧನಗಳನ್ನೇ ಉಪಯೋಗಿಸಬೇಕೆಂಬ ಕಾನೂನನ್ನು ಸರ್ಕಾರದವರು 1929 ನೇ ನವಂಬರ್ ತಾ|| 1 ರಿಂದ ಜಾರಿಗೆ ತರಲಾಗುವುದೆಂದು ಪ್ರಕಟಮಾಡಿರುತ್ತಾರೆ.

ಕಳೆದ ಭಾನುವಾರ ನಂಜನಗೂಡಿನಿಂದ ರಾಜಧಾನಿಗೆ ಪ್ರಯಾಣಿಕರನ್ನು ಕರೆದುಕೊಂಡುಬರುತ್ತಿದ್ದ ಮೋಟಾರ್ ಬಸ್ಸೂ ರಾಜಧಾನಿಯಿಂದ ನಂಜನಗೂಡಿಗೆ ಹೋಗುತ್ತಿದ್ದ ಬಸ್ಸೂ ಕಡಕೊಳದ ಹತ್ತಿರ ಡಿಕ್ಕಿ ಹೊಡೆದು ಡ್ರೈವರಿಗೂ ಕೆಲವು ಪ್ರಯಾಣಿಕರಿಗೂ ಬಹಳ ಘಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರೆಂದೂ ಒಬ್ಬನು ಸತ್ತುಹೋದನೆಂದೂ ಕೇಳುತ್ತೇವೆ.

ತುಮಕೂರು ಡಿಸ್ಟ್ರಿಕ್ಟ್ ತುಮಕೂರು ತಾಲೂಕು ಮೈದಾಳದಕೆರೆಯನ್ನು ಅನೇಕ ಸಹಸ್ರ ರೂಪಾಯಿಗಳ ಖರ್ಚಿನಿಂದ ಬಿಡಾಯಿಸಿ ದೇವರಾಯದುರ್ಗದ ಬೆಟ್ಟದಿಂದ ನೀರು ಬರುವಂತೆ ಕಾಲುವೆಗಳನ್ನು ತೆಗೆದು ಕೆರೆಯಿಂದ ತುಮಕೂರು ಟವನಿಗೆ ನೀರನ್ನು ಬಿಟ್ಟು ಊರಿನಲ್ಲಿ ನಲ್ಲಿಗಳನ್ನಿಟ್ಟಿರುವರು. ಎಲೆಕ್ಟ್ರಿಕ್ ಪವರನ್ನು ಬಿಡುವುದಕ್ಕಾಗಿ ಬೆಂಗಳೂರಿನಿಂದ ಕಂಭಗಳನ್ನು ನೆಡುತ್ತಿರುವರು. ತಂತಿ ಹಾಕಿ ಪೂರೈಸಿದ ನಂತರ ಟವನಿನಲ್ಲಿ ಎಲೆಕ್ಟ್ರಿಕ್ ದೀಪಗಳನ್ನು ಇಡಲು ಏರ್ಪಾಡು ಮಾಡುವರು.

ಬೆಂಗಳೂರಿನಲ್ಲಿ ಇದುವರೆಗೂ ಬಯಾಸ್ಕೋಪಿನವರು ದೂರದೇಶಗಳಿಂದ ಫಿಲ್ಮ್ ಚಿತ್ರಗಳನ್ನು ತರಿಸಬೇಕಾಗಿತ್ತು. ಈಗ ಬೆಂಗಳೂರು ದಂಡಿನಲ್ಲಿ ಸೂರ್ಯ ಫಿಲ್ಮ್ ಕಂಪೆನಿಯೊಂದು, ಚಿಕ್ಕಪೇಟೆಯಲ್ಲಿ ಕರ್ಣಾಟಕ ಪಿಕ್ಚರು ಕಾರ್ಪೋರೇಷನ್ ಕಂಪೆನಿಯೊಂದು, ಅರಳೆಪೇಟೆಯಲ್ಲಿ ಮೈಸೂರು ಪಿಕ್ಚರ್ ಕಂಪೆನಿಯೊಂದು, ಹೀಗೆ 3 ಫಿಲ್ಮ್ ಕಂಪೆನಿಗಳು ಕೆಲವು ಲಕ್ಷ ರೂಪಾಯಿಗಳ ಬಂಡವಾಳದಿಂದ ಪ್ರಾರಂಭವಾಗಿವೆ. ಆಯಾಯ ಪಾತ್ರಗಳನ್ನು ಕಲಿತು ಅಭ್ಯಾಸಮಾಡಲು ಅನೇಕ ಜನ ಯುವಕರನ್ನು ಕಂಪೆನಿಗಳಲ್ಲಿ ಸಂಬಳಕ್ಕೆ ನೇಮಿಸಿರುವರು.

ಶ್ರೀಮನ್ಮಹಾರಾಜರವರು ಈ ಸಲ ನವರಾತ್ರಿಯ ದರ್ಬಾರಿನಲ್ಲಿ ಈ ಕೆಳಗೆ ಕಂಡ ಮಹಾಶಯರುಗಳಿಗೆ ಪ್ರಶಸ್ತಿಗಳನ್ನು ದಯಪಾಲಿಸಿದರು.—ಮಿ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರವರಿಗೆ 'ರಾಜಸಭಾಭೂಷಣ' ರೆವಿನ್ಯೂಕಮಿಷನರ್ ಮಿ|| ಪಿ. ಜಿ. ಡಿಸೌಜಾರವರಿಗೆ 'ರಾಜಕಾರ್ಯಪ್ರವೀಣ' ಚೀಫ್ ಇಂಜನಿಯರ್ ಮಿ|| ಜಾರ್ಜ್‌ಭೋರ್‌ರವರಿಗೂ ಕೃಷ್ಣರಾಜಸಾಗರದ ಚೀಫ್ ಇಂಜನಿಯರ್ ಮಿ|| ಕೆ. ಆರ್. ಶೇಷಾಚಾರ್ಯರಿಗೂ 'ರಾಜಸೇವಾಸಕ್ತ' ರಿಟೈರ್ಡ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಡಾಕ್ಟರ್ ಬಿ. ಮಹಮ್ಮದ್ ಉಸ್ಮಾನರವರಿಗೆ 'ಫಕರುಲ್-ಹಕೀಂ' ಫೈನಾನ್ಷಿಯಲ್ ಸೆಕ್ರೆಟರಿ ಮಿ|| ಬಿ. ಶ್ರೀನಿವಾಸಯ್ಯಂಗಾರ್ಯರಿಗೆ 'ರಾಜಸೇವಾಪರಾಯಣ' ಚಿಕ್ಕಮಗಳೂರು ಸಾಹುಕಾರ್ ಮಿ|| ನಾಗಪ್ಪಶೆಟ್ಟರಿಗೆ 'ಧರ್ಮಪ್ರವರ್ತಕ' ಶ್ರೀ|| ಆಲಮ್ಮನವರಿಗೆ 'ಧರ್ಮಪರಾಯಣೆ,' ಆಸ್ಥಾನ ಮಹಾವಿದ್ವಾನ್ ರಾಮಚಂದ್ರಾಚಾರ್ಯರಿಗೆ 'ವೇದಾಂತ ವಿಶಾರದ' ದ್ವಿವೇದಿ ಸುಬ್ರಹ್ಮಣ್ಯಶಾಸ್ತ್ರಿಯವರಿಗೂ ಪಂಡಿತ ಆಯ್ಯಾಘನಪಾಠಿಯವರಿಗೂ 'ವೇದರತ್ನ' ಆಸ್ಥಾನಮಹಾವಿದ್ವಾನ್ ಹೊಳವನಹಳ್ಳಿ ಶೇಷಾಚಾರ್ಯರಿಗೆ 'ಪೌರಾಣಿಕರತ್ನ' ಮಹಾವಿದ್ವಾನ್ ಪೆರಿಕೊಳಂ ಶ್ರೀನಿವಾಸಾಚಾರ್ಯರಿಗೆ 'ವೇದಾಂತರತ್ನ' ಸಂಗೀತವಿದ್ವಾನ್ ಮುತ್ತಯ್ಯಭಾಗವತರವರಿಗೆ 'ಗಾಯಕಶಿಖಾಮಣಿ'

ವರ್ತಮಾನಸಂಗ್ರಹ.

ಕಾಶ್ಮೀರದಲ್ಲಿ ಪ್ರವಾಹದಿಂದ 12 ಹಳ್ಳಿಗಳು ಮುಳುಗಿ ಒಂದು ಕೋಟಿ ರೂಪಾಯಿಗಳ ಹಾನಿಯಾಗಿದೆ.

1921 ನೇ ಇಸವಿಯಲ್ಲಾದ ಜಾನೆಷುಮಾರಿ ಲೆಖ್ಖದಂತೆ ಹಿಂದೂಸ್ಥಾನದಲ್ಲಿ 5 ಲಕ್ಷದವರೆಗೆ ಕುರುಡರಿರುವರೆಂದು ತಿಳಿದುಬರುತ್ತದೆ.

ಲಖನೌದ ಮುನಿಸಿ ಈಶ್ವರದಯಾಳರೆಂಬ ವಕೀಲರು ಬಡಬಾಲಕರ ಕೈಗಾರಿಕೆಯ ಶಿಕ್ಷಣಕ್ಕಾಗಿ 2,15,000 ರೂ. ಆಸ್ತಿಯನ್ನು ಅರ್ಪಿಸಿದರು. ಸ್ತುತ್ಯ!

ಇಟಲಿ ಮತ್ತು ಜುಗೊಸ್ಲಾವಿಯಾದಿಂದ ಎದುರುಬದುರಾಗಿ ಬರುತಿದ್ದ ಎರಡು ದಂಡಿನ ವಿಮಾನಗಳು ಮಧ್ಯದಲ್ಲಿ ಒಂದಕ್ಕೊಂದು ಬಡಿದು ಒಳಗಿದ್ದ ನಾಲ್ವರು ಮಡಿದರು.

ಶಾರದಾಬಿಲ್ಲಿಗೆ ಮುಸಲ್ಮಾನ ಸಮಾಜದ ಒಪ್ಪಿಗೆ ಇಲ್ಲವೆಂದು ಮೌಲಾನಾ ಮಹಮ್ಮದಲಿಲ್ಲಿ ಗಳು ವೈಸರಾಯರಿಗೆ ತಿಳಿಸಿದ್ದಾರೆ. ಪ್ರಸಂಗ ಬಂದರೆ ಸತ್ಯಾಗ್ರಹ ಹೂಡುವರಂತೆ!

ಮ್ಯಾಂಚೆಸ್ಟರದಲ್ಲಿ ಮಿಸ್ ವಾಟಸನ ಎಂಬವಳು ಹಿಂದೀ ಧರ್ಮವನ್ನು ಸ್ವೀಕರಿಸಿ, ಮರುದಿವಸ ಡಾ|| ಸೋನಿ ಎಂಬವರೊಂದಿಗೆ ಹಿಂದೀ ಪದ್ಧತಿ ಮೇರೆಗೆ ವಿವಾಹಮಾಡಿಕೊಂಡಳಂತೆ!

ಲೋಕದ ಅತಿವೃದ್ಧನೆನಿಸಿಕೊಂಡಿದ್ದು ಇನ್ನೂ ದಫೇದಾರ ಕೆಲಸ ಮಾಡಿಕೊಂಡಿದ್ದ ಝಾರೋಅಘಾನೆಂಬ ಟರ್ಕಿಯ 145 ವರ್ಷದ ಮುದುಕನೊಬ್ಬನು ಮೋಟರಿನ ಅಡಿಗೆ ಬಿದ್ದು ಮೃತನಾದನು.

ಯತೀಂದ್ರನಾಥನ ಶವದ ಮೆರವಣಿಗೆಯ ಫಿಲ್ಮನ್ನು ಕಲ್ಕತ್ತೆಯಲ್ಲಿ ಪ್ರದರ್ಶಿಸಲು ಪೋಲೀಸರು ಬಿಡಲಿಲ್ಲ. ಹೈದರಾಬಾದು ಸಿಕಂದರಾಬಾದುಗಳಲ್ಲಿಯೂ ಅದನ್ನು ಪ್ರದರ್ಶಿಸಬಾರದಾಗಿ ಅಲ್ಲಿಯ ಸರಕಾರದಿಂದ ಹುಕುಂ ಹೊರಟಿದೆ.

ಲಾಹೋರದ ಕಾಂಗ್ರೆಸ್ಸಿಗಾಗಿ ಕಲಕತ್ತೆಯಿಂದ 30 ನೇ ತಾರೀಖಿನ ದಿವಸ ಮಧುರಂಜನ ಚಕ್ರವರ್ತಿ, ಹರೇಂದ್ರಚಂದ್ರ ಭಾರದ್ವಾಜ, ಮನೋರಂಜನಮಿಶ್ರಾಸ ಎಂಬ ಮೂವರು ತರುಣರು ನಡೆಯುತ್ತ ಹೊರಟಿದ್ದಾರಂತೆ!

ಎಂಥ ಕಠಿಣ ವಿಷಪ್ರಯೋಗ ಮಾಡಲ್ಪಟ್ಟವರನ್ನೂ ಬದುಕಿಸಲು ಸಾಧ್ಯವಾದಂಥ ಗುಣಗಳಿರುವ ಒಂದು ವಿಧದ ಮೂಲಿಕೆಯನ್ನು ಹಿಂದೂ ವೈಜ್ಞಾನಿಕರಾದ ಸರ್ ಜಗದೀಶಚಂದ್ರ ಬೋಸರು ಹಿಮಾಲಯದ ಸಮೀಪ ಕಂಡುಹಿಡಿದಿರುವರಂತೆ.

ಡೋವರಿನಲ್ಲಿ ಜೋ-ಬೆರ್ಟೀ ಎಂಬ ೧೨ ವರ್ಷ ವಯಸ್ಸಿನ ಹುಡುಗಿಯು ಡೋವರಿನಿಂದ 20 ಮೈಲಿ ದೂರದಲ್ಲಿರುವ ರಾಮ್ಸ್‌ಗೇಟ್ ಎಂಬಲ್ಲಿಗೆ 6 ಘಂಟೆ ? ನಿಮಿಷದಲ್ಲಿ ಈಜಿರುವಳು. ಇಷ್ಟು ಜಾಗ್ರತೆ ಇದುವರೆಗೂ ಯಾರೂ ಈ ನದಿಯಲ್ಲಿ ಈಜಿರಲಿಲ್ಲ.

ಬಲಾತ್ಕಾರದಿಂದ ಆಹಾರ ಸ್ವೀಕರಿಸುವಂತೆ ಜೈಲಾಧಿಕಾರಿಗಳು ಮಾಡಿರುವುದರಿಂದ ದೇಹಭಾರವು ಪುನಃ ಹೆಚ್ಚುತ್ತಿದೆಯಾಗಿ ಭಗತಸಿಂಗನೂ ದತ್ತನೂ ಉಪವಾಸವ್ರತವನ್ನು ನಿಲ್ಲಿಸಿರುವರು. ಜೈಲುಸುಧಾರಣೆಯಾಗಲಿರುವುದರಿಂದ ಇನ್ನು ಮುಷ್ಕರವೇಕೆಂದು ಅವರ ಮತ್ತೊಂದು ಅಭಿಪ್ರಾಯ!

ಹಿಮಾಲಯದ ಅತ್ಯುನ್ನತ ಶಿಖರವಾದ ಕಾಂಚನಗಂಗವನ್ನೇರಲು ಪ್ರಯತ್ನಿಸುತ್ತಿದ್ದ ಜರ್ಮನಿಯ ಕೆಲವು ಜನರು 21,509 ಅಡಿವರೆಗೆ ಏರಿಹೋಗಿರುವರು. ಇನ್ನು ತುದಿಗೇರಬೇಕಾದರೆ 6,505 ಅಡಿಯಿರುವದು. ಇವರು ಇಳಿಜಾರಾಗಿರುವ ಮಂಜುಗಡ್ಡೆಯ ಶಿಖರದಲ್ಲಿ ಮೆಟ್ಟುಕಡಿಯುತ್ತಾ ಮುಂದುವರಿಯುತ್ತಿರುವರು.

ಕಾನ್‌ಸಾಸ್ ಎಂಬಲ್ಲಿ ಬೆನೆಟ್ ಎಂಬವನೂ ಅವನ ಪತ್ನಿಯೂ ತಮ್ಮ ನೆರೆಯವರಿಬ್ಬರೊಡನೆ ಬ್ರಿಜ್ ಆಟ ಆಡಿ ಸೋತು 3 ಆಣೆ ಕಳೆದುಕೊಂಡರು. ಗಂಡಹೆಂಡರಿಬ್ಬರಿಗೂ ಜಗಳವಾಯಿತು. ಬೆನೆಟನು ಸಿಟ್ಟಿನಿಂದ ಪತ್ನಿಯನ್ನು ಹೊಡೆದನು. ಪತ್ನಿಯು ಅಳುತ್ತಾ ಮಲಗುವ ಕೋಣೆಗೆ ಹೋಗಿ ರಿವಾಲ್ವರನ್ನು ತಂದು ಪತಿಯನ್ನು ಕೊಂದಳು.

ಪ್ರಕೃತ ಅತಿ ಹೆಚ್ಚಿನ ಸಂಬಳ ಪಡೆಯುವ ಸಿನಿಮ ನಟಿಯೆಂದರೆ ಮಿಸ್ ಗಟ್ರೋಡ್ ಲೋರೆನ್ಸ್ ಎಂಬವಳಂತೆ! ಇವಳಿಗೆ ಮಾತಾಡುವ ಚಿತ್ರದಲ್ಲಿ ನಟಿಸುವುದಕ್ಕೆ ವಾರಕ್ಕೆ 1000 ಪವನು ಸಂಬಳವಿದೆ. ರೇಡಿಯೋ ಮೂಲಕ ಪ್ರಸರಿಸುವುದಕ್ಕಾಗಿ ಹಾಡುವುದಕ್ಕೆ 15 ನಿಮಿಷಕ್ಕೆ 500 ಪವನು ದೊರೆಯುವುದು. ಇನ್ನು ಗ್ರಾಮಾಫೋನ್ ರಿಕಾರ್ಡುಗಳಿಗೆ ಹಾಡುವದಕ್ಕೆ ಆದಾಯವು ಪ್ರತ್ಯೇಕವಿದೆಯಂತೆ!

ಜರ್ಮನ ದೇಶದಲ್ಲಿ 14 ರಿಂದ 21 ವರುಷ ವಯಸ್ಸಿನ ತರುಣರ ಸಂಖ್ಯೆಯು 91 ಲಕ್ಷ ಇರುವದು. ಅವರಲ್ಲಿ 80 ಲಕ್ಷ ತರುಣರು ಸ್ವಾವಲಂಬಿಗಳಿದ್ದು, ತಮ್ಮ ಚರಿತಾರ್ಥವನ್ನು ತಾವೇ ಸಾಗಿಸುತ್ತಿರುವರು. 55 ಲಕ್ಷ ತರುಣರು ಸಂಘದ ಸಭಾ ಸದರಾಗಿರುವರು. ಪ್ರತಿವರುಷ ಪ್ರವಾಸ ಮಾಡುವ ತರುಣರ ಸಂಖ್ಯೆಯು 21 ಲಕ್ಷ ಇರುವದು. ಅವರ ಸಲುವಾಗಿ 23,000 ವಸತಿಗ್ರಹಗಳು ಇರುತ್ತವೆ. ಬರ್ಲಿನದ ಗ್ರಂಥ ಸಂಗ್ರಹಾಲಯದ ವಾಚಕರಲ್ಲಿ 100 ಕ್ಕೆ 38 ರಂತೆ ವಾಚಕರು 11 ವರುಷಗಳೊಳಗಿನವರಿರುವರು. ಆದರೆ ನಮ್ಮ ದೇಶದಲ್ಲಿ?

ರಶಿಯಾದಲ್ಲಿ 114786 ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ಒಂದು ಕೋಟಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವರು. ದಂಧೆ ಶಿಕ್ಷಣದ 5247 ಶಾಲೆಗಳಿದ್ದು ಎಂಟು ಲಕ್ಷ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಪ್ರೌಢವಯಸ್ಸಿನವರಿಗೆ ರಾಜಕೀಯ ಶಿಕ್ಷಣ ಕೊಡುವ 58 ಸಾವಿರ ಶಿಕ್ಷಣ ಸಂಸ್ಥೆಗಳಿರುವವಲ್ಲದೆ, 52 ಸಾವಿರ ವಾಚನಾಲಯಗಳು ಕೂಲಿಕಾರರ, ಒಕ್ಕಲಿಗರ ಸಲುವಾಗಿ ಇರುವವು. ಈ ಪ್ರಕಾರವಾಗಿ ಅಲ್ಲಿಯ ಜನತೆಗೆ ಶಿಕ್ಷಣ ಕೊಡುವ ಕ್ರಮವನ್ನು ಸರಕಾರದವರು ಒಳ್ಳೇ ತೀವ್ರ ಗತಿಯಿಂದ ಕೈಕೊಂಡಿದ್ದಾರೆ. ಆದರೆ ಬಡ ಭಾರತೀಯರಿಗೂ ಅಂಥ ಶಿಕ್ಷಣದ ಲಾಭ ದೊರೆಯುವದು ಎಂದಿಗೆ?

ಮೈನ್‌ಹೆಡ್ ಎಂಬಲ್ಲಿ ಅತಿ ವಿನೋದ ಸಂಗತಿಯೊಂದು ನಡೆದಿದೆ. ಅಲ್ಲಿ ಅತ್ಯಂತ ಸುಂದರಿ ಹುಡುಗಿಯಾರೆಂದು ಕಂಡುಹಿಡಿಯಲು ಲಾವಣ್ಯ ಸ್ಪರ್ಧೆಯೊಂದು ನಡೆಯಿತು. ಇದರಲ್ಲಿ ಆರಿಸಲ್ಪಟ್ಟವಳು ಮುಂದಿನ ನಗರೋತ್ಸವದಲ್ಲಿ ಸೌಂದರ್ಯರಾಣಿಯಾಗಿ ಮಾನಪತ್ರ ಪಡೆಯಬೇಕೆಂದು ನಿರ್ಣಯವಾಯಿತು. ಮೈನ್‌ಹೆಡ್ಡಿನ ಸುಂದರಿಯರೆಲ್ಲರೂ ತಮ್ಮ ತಮ್ಮ ಫೋಟೋ ಕಳುಹಿಸಿದರು. ಓಟಿನಿಂದ ಅತಿ ಸುಂದರಿಯನ್ನು ಆರಿಸುವ ಏರ್ಪಾಡಾಗಿತ್ತು. ಹೆಚ್ಚಿನವರು ಅದೊಂದು ಭಾವಚಿತ್ರಕ್ಕೆ ಓಟುಕೊಟ್ಟು ಆ ಚಿತ್ರದವಳೇ ಅತ್ಯಂತ ಸುಂದರಿಯೆಂದು ಆರಿಸಿದರು. ಆದರೆ ಕೊನೆಗೆ ನೋಡುವಾಗ ಅದು ಸ್ತ್ರೀವೇಷಧಾರಿ ಯುವಕನ ಫೋಟೋ ಆಗಿತ್ತು.

ಪ್ಯಾರಿಸ್ಸಿನಲ್ಲಿ ಮಾಸ್ಕಬಾಕ್ ಎಂಬ ಬಹಳ ಜಿಪುಣನಾದ ಒಬ್ಬ ದೊಡ್ಡಜಮೀನ್ದಾರನು ತನ್ನ ಆಸ್ತಿಯಲ್ಲಿ ಒಂದುಕಾಸನ್ನೂ ಖರ್ಚುಮಾಡದೆ ಪ್ರತಿನಿತ್ಯವೂ ಭಿಕ್ಷುಕನಂತೆ ವೇಷವನ್ನು ಧರಿಸಿ ಒಂದು ದೊಡ್ಡ ಹೋಟೆಲಿನ ಮುಂದೆ ನಿಂತು ಕಾಸನ್ನು ಬೇಡಿ ಅದರಲ್ಲಿ ಬಂದ ಹಣದಿಂದಲೇ ಜೀವಿಸುತ್ತಿದ್ದನು. ಇವನಿಗೆ ಪ್ರತಿನಿತ್ಯವೂ ಭಿಕ್ಷದಿಂದ 150 ರೂಪಾಯಿಗಳು ದೊರಕುತ್ತಿದ್ದುವಂತೆ. ಇವನ ಜಮೀನಿನಿಂದಲೇ ವರ್ಷಕ್ಕೆ ಸುಮಾರು 12,000 ರೂಪಾಯಿಗಳು ಉತ್ಪತ್ತಿಯಾಗುತ್ತಿದ್ದುವು. ಬೀದಿಯಲ್ಲಿ ಹೋಗುವವರು ಯಾರಾದರೂ ಇವನಿಗೆ ತಿಂಡಿಕೊಟ್ಟರೆ ಇವನು ಅದರಲ್ಲಿ ಸ್ವಲ್ಪ ತಿಂದು ಮಿಕ್ಕಿದುದನ್ನು ಮಾರಿ ಹಣ ಗಳಿಸುತ್ತಿದ್ದನಂತೆ! ಈಗ ಇವನನ್ನು ಪೋಲೀಸಿನವರು ಹಿಡಿದಿರುತ್ತಾರೆ.

ಒಲಿಂಪಿಯಾದಲ್ಲಿ ಶಿಪ್ಪಿಂಗ್ ಮತ್ತು ಇಂಜನಿಯರಿಂಗ್ ಪ್ರದರ್ಶನವು ನಡೆಯಿತು. ಪ್ರದರ್ಶನಕ್ಕೆ ಅದ್ಭುತಮಹಿಮೆಯ ಒಂದು ಸ್ಟೀಮರು ತರಲ್ಪಟ್ಟಿತ್ತು. ಸ್ಟೀಮರಿಗೆ ಎಲ್ಲಿ ಬೆಂಕಿ ಹಿಡಿದರೂ ತಕ್ಷಣ ತಿಳಿಯುವಂತೆಯೂ ಅದನ್ನು ಆ ಕೂಡಲೇ ನಂದಿಸುವಂತೆಯೂ ಯಾವುದಾದರೂ ಅಪಾಯಬರುವಂತಿದ್ದರೆ ಬಹುಸುಲಭದಲ್ಲಿ ತಿಳಿಯುವಂತೆಯೂ ಸ್ಟೀಮರು ಮುಳುಗುವಂತಿದ್ದರೆ 'ಲೈಫ್ ಬೋಟ್' (ಆಪತ್ಕಾಲದಲ್ಲಿ ಪ್ರಯೋಗಿಸುವ ದೋಣಿ) ಗಳಲ್ಲಿ ಜನಗಳನ್ನು ತುಂಬಿ ಸುರಕ್ಷಿತವಾಗಿಯೂ ಜಾಗ್ರತೆಯಾಗಿಯೂ ಕಳಿಸುವಂತೆ ಯೋಜನೆಗಳಿವೆ. ಇನ್ನೂ ಹೆಚ್ಚಿನ ಏರ್ಪಾಡೆಂದರೆ, ಓಕರಿಕೆ, ಆಲಸ್ಯ ಇತ್ಯಾದಿಗಳುಂಟಾದರೆ ತಕ್ಷಣ ಪರಿಹರಿಸಲು 'ಗ್ಯಾಸ್ ರೂಮ್' ಎಂಬ 'ಶಮನಾಲಯ' ವೂ ಇದೆ.

ವೈರ್‌ಲೆಸ್ ಮೂಲಕ ಚಿತ್ರಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳುಹಿಸುವ ಏರ್ಪಾಟು ನಡೆದಿದೆಯಷ್ಟೆ. ಕೆಲವು ದಿವಸಗಳ ಹಿಂದೆ ಬರ್ಲಿನ್ನಿನಲ್ಲಿ ಒಬ್ಬನಿಗೆ ಕಣ್ಣು ಕಾಣದಂತಾಗಿ ಒಂದುವಿಧವಾದ ರೋಗವು ತಲೆದೋರಲು ಅಲ್ಲಿಂದ ಬಾನಸ್ ಏರ್ಸ್ ಎಂಬಲ್ಲಿಗೆ ಆ ಕಣ್ಣಿನ ಚಿತ್ರವನ್ನು ವೈರ್‌ಲೆಸ್ ಮೂಲಕ ಕಳುಹಿಸಿ ರೇಡಿಯೋ ಟೆಲಿಫೋನ್ ಮುಖಾಂತರ ಆ ರೋಗದ ವಿಷಯದಲ್ಲಿ ಚರ್ಚೆಮಾಡಿದರು. ಆದರೆ ಬಾನಸ್ ಏರ್ಸಿನ ಡಾಕ್ಟರು ಈ ಖಾಯಿಲೆಯು ವಾಸಿಯಾಗುವುದಿಲ್ಲವಾದ್ದರಿಂದ ರೋಗಿಯು ಸಾಯುವನು ಎಂದು ನಿರ್ಧರಿಸಿದರಂತೆ! ಈ ರೀತಿ ಸೂಕ್ಷ್ಮ ಪದಾರ್ಥಗಳನ್ನು ತಂತಿಯಿಲ್ಲದ ಸಾಧಕಗಳಿಂದ ಸಾವಿರಾರು ಮೈಲಿಗಳ ದೂರಕ್ಕೂ ಕಳುಹಿಸುವ ಏರ್ಪಾಟು ಮಾಡಿರುವುದು ಒಂದು ವಿಚಿತ್ರವೇ ಸರಿ.

ಜರ್ಮನಿಯ ಪರರಾಜ್ಯಗಳ ಇಲಾಖಾ ಮಂತ್ರಿಯವರಾಗಿದ್ದ ಡಾಕ್ಟರ್ ಸ್ಟ್ರೇಸ್ಮಾನರವರು ಕಳೆದವಾರ ಕಾಲವಾದ ಸುದ್ದಿಯು ಹರಡಿ ಜರ್ಮನಿಯಲ್ಲೂ ಯೂರೋಪ್ ಖಂಡದ ಆದ್ಯಂತದಲ್ಲೂ ವಿಶೇಷವಾದ ವ್ಯಸನವನ್ನುಂಟುಮಾಡಿದೆ. ಡಾ|| ಸ್ಟ್ರೇಸ್ಮಾನರವರು 1878 ರಲ್ಲಿ ಒಂದು ಬಡ ಸಂಸಾರದಲ್ಲಿ ಜನಿಸಿ ಕಷ್ಟಪಟ್ಟು ವಿದ್ಯಾದಿ ಸಾಮರ್ಥ್ಯವನ್ನು ಸಂಪಾದಿಸಿಕೊಂಡು 1907 ರಲ್ಲಿ ಜರ್ಮನಿಯ ಪಾರ್ಲಿಮೆಂಟಿನ ಮೆಂಬರಾಗಿ ಬಂದರು. ಘೋರ ಯುದ್ಧವಾದ ಬಳಿಕ ಅವರು ಇದುವರೆಗೂ ಜರ್ಮನಿಯ ಮುಖ್ಯ ರಾಜತಂತ್ರಜ್ಞರಾಗಿದ್ದರು. ಜರ್ಮನಿಯ ಶತ್ರುರಾಜ್ಯಗಳಿಗೂ ಜರ್ಮನಿಗೂ ಪರಸ್ಪರ ಅನ್ಯೋನ್ಯಭಾವವನ್ನುಂಟುಮಾಡುವ ವಿಷಯದಲ್ಲಿ ಡಾ|| ಸ್ಟ್ರೇಸ್ಮಾನರಷ್ಟು ವಿಶೇಷವಾಗಿ ಸಾಹಸಪಟ್ಟವರು ಬೇರೆ ಯಾರೂ ಇಲ್ಲ. ಅವರು ಕಾಲವಾದ ಸುದ್ದಿಯನ್ನು ಕೇಳಿ ನಮ್ಮ ಚಕ್ರವರ್ತಿ ಸಾರ್ವಭೌಮರವರು ಜರ್ಮನಿ ಗವರ್ನಮೆಂಟಿಗೆ ತಮ್ಮ ಅನುತಾಪವನ್ನು ತಂತೀ ವರ್ತಮಾನಕೊಟ್ಟು ತಿಳಿಸಿರುತ್ತಾರೆ.

ದಕ್ಷಿಣ ಆರ್ಕಾಟಿನ ತ್ರಿಕೋಯಿಲೂರೆಂಬಲ್ಲಿ ದೊರೆಸ್ವಾಮಿಯೆಂಬವನೊಬ್ಬನು ತನ್ನ ಜಾತಕವನ್ನು ಜೋಯಿಸನೊಬ್ಬನಿಗೆ ತೋರಿಸಿದನು. ಮಗನ ಜಾತಕವೇ ಆತನಿಗೆ ಕಂಟಕಕರವೆಂದು ಜೋಯಿಸನು ಗುಣಿಸಿ ಹೇಳಿದನು. ದೊರೆಸ್ವಾಮಿಯು ತಬ್ಬಿಬ್ಬಾದನು. ಮಗನನ್ನಾದರೂ ಕೊಂದು ತನ್ನ ಪ್ರಾಣವನ್ನು ಉಳಿಸಬೇಕೆಂಬ ದುರಿಚ್ಛೆಯು ಅವನಲ್ಲುಂಟಾಯಿತು. ಒಂದು ದಿನ ತಿರುಪತಿ ಯಾತ್ರೆಯ ನೆವದಿಂದ ಮಗನನ್ನು ಪೆನ್ನಾರ್ ಎಂಬ ಗುಪ್ತ ಸ್ಥಳಕ್ಕೆ ಕರದೊಯ್ದು ಕೊಂದುಹಾಕಿ ಬಿಟ್ಟನು. ಕುಡಿದು ಉನ್ಮತ್ತನಾಗಿದ್ದ ದೊರೆಸ್ವಾಮಿಯನ್ನು ಸ್ಟೇಶನ್ನಿನಲ್ಲಿ ಪೋಲೀಸರು ಬಂದೋಬಸ್ತು ಮಾಡಿದರು. ಅಷ್ಟರಲ್ಲಿ ಮಗನ ಶವವು ದೊರೆತು ದೊರೆಸ್ವಾಮಿಯು ಪುತ್ರಹತ್ಯೆಯ ಆರೋಪಕ್ಕೊಳಗಾಗಿ ಜನ್ಮಾವಧಿ ಶಿಕ್ಷೆಗೊಳಗಾದನು. ಈ ಅನಾಹುತಕ್ಕೆ ಮೂಲಕಾರಣನಾದ ಜೋಯಿಸನು ತನ್ನ ಭವಿಷ್ಯವು ಶೀಘ್ರ ಫಲಿಸಿತೆಂದು ಜಂಬ ಹೊಡೆಯಬಹುದು. ಇಂಥವರಿಗೆ ಮೊದಲು ಶಿಕ್ಷೆ ಕೊಡದೆ ಬಿಡುವುದು ತೀರಾ ಅನ್ಯಾಯವಲ್ಲವೇ?

ಅಮೇರಿಕದಲ್ಲಿ ಕಳವು, ಸುಲಿಗೆ, ದರೋಡೆಗಳೆಂದರೆ ಸರ್ವಸಾಧಾರಣ ವಿದ್ಯಮಾನಗಳಾಗಿವೆ. ಕೆಲವು ವೇಳೆ ಈ ದರೋಡೆಗಾರರು ಬಹು ವಿನೋದಕರ ರೀತಿಯಲ್ಲಿ ತಮ್ಮ ಕೆಲಸ ನಡಿಸುತ್ತಾರೆ. ನ್ಯೂಯಾರ್ಕ್ ಪಟ್ಟಣದ ರಿಚಾರ್ಡ್‌ವೆಬರ್ ಎಂಬುವರು ಕಟ್ಟಡ ಕಟ್ಟಿಸುವ ಕೋಟ್ಯಾಧಿಪತಿಯು, ಇವರ ಮನೆಯಲ್ಲಿ ಒಂದು ದಿವಸ ಅವರ ಪತ್ನಿ ಮತ್ತು ಪುತ್ರಿಯು ಮಲಗಿದ್ದು ಸೇವಕನು ಕಸಗುಡಿಸುತ್ತಿದ್ದಾಗ ನಾಜೂಕು ಪೋಷಾಕಿನ ಓರ್ವನು ಬಾಗಿಲು ದೂಡಿ ತನಗೆ ವೆಬರರೊಡನೊಂದು ಪ್ರಾಮುಖ್ಯ ಕೆಲಸವಿದೆಯೆಂದನು. ಅವನೊಂದಿಗೆ ಇನ್ನೂ ಮೂವರು ಒಳಕ್ಕೆ ನುಗ್ಗಿದರು. ಇವರಲ್ಲೊಬ್ಬನು ರಿವಾಲ್ವರ್ ಹಿಡಿದು ಸೇವಕನನ್ನು ಕೊಲ್ಲುವ ಬೆದರಿಕೆಹಾಕಿ ವೆಬರನ ಪತ್ನಿಯಿರುವ ಸ್ಥಳಕ್ಕೆ ತಮ್ಮನ್ನು ಕರದೊಯ್ಯುವಂತೆ ನಿರ್ಬಂಧಿಸಿದನು. ಸೇವಕನು ನಿರ್ವಾಹವಿಲ್ಲದ ಹಾಗೆಯೇ ಮಾಡಬೇಕಾಯಿತು. ವೆಬರನ ಪತ್ನಿಯು ಎಚ್ಚರವಾದಾಗ ರಿವಾಲ್ವರು ಹಿಡಿದ ನಾಲ್ಕು ಮಂದಿಯನ್ನು ಕಂಡಳು. ದರೋಡೆಗಾರರಲ್ಲೊಬ್ಬನು ಅವಳನ್ನು ಸಂಬೋಧಿಸಿ, "ನಿನ್ನೊಡನೆ 10 ಸಾವಿರ ಪವನುಗಳಿಗೆ ಇನ್‌ಶ್ಯೂರ್ ಮಾಡಿದ ಆಭರಣಗಳಿವೆಯೆಂದು ನಮಗೆ ಗೊತ್ತಿದೆ. ಅವು ನಮಗೆ ಬೇಕಾಗಿವೆ" ಎಂದರು. ಇದನ್ನು ಕೇಳಿದೊಡನೆಯೇ ವೆಬರಳು ಪ್ರಜ್ಞೆ ತಪ್ಪಿ ಬೀಳುವದರಲ್ಲಿದ್ದಳು. ಆಗ ದರೋಡೆಗಾರನು ತನ್ನ ಸಂಗಾತಿಗಳೊಡನೆ ನೀರುತರಹೇಳಿ ಶೈತ್ಯೋಪಚಾರ ಮಾಡಿದನೋಲೆ ಆಭರಣವಿರುವ 'ಸೇಫಿನ' ಬಾಗಿಲನ್ನು ತೆರೆಯ ಹೇಳಿದನು. ವೆಬರಳು ಶಂಕಿಸಿದಳು. ಆಗ ದರೋಡೆಗಾರನು ಸ್ವಲ್ಪಬಿರುಸಿನಿಂದ, "ಸುಮ್ಮನೆ ಸಮಯಕಳೆಯಬೇಡ. 'ಸೇಫನ್ನು' ಬೇಗನೆ ತೆರೆ" ಎಂದು ಆಜ್ಞಾಪಿಸಿ 7080 ಪವನು ಬೆಲೆಯ ಆಭರಣಗಳನ್ನು ಸುಲಿದು ಟೆಲಿಫೋನ್ ವೈರ್ ಕಡಿದು ಕೆಳಗಿಳಿದು ಮುಸುಕು ತೆರೆದು ಸದ್ಗೃಹಸ್ಥರಂತೆ ಮೋಟಾರಿನಲ್ಲಿ ಕುಳಿತು ಹೋಗಿಬಿಟ್ಟರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ನವರಾತ್ರಿ ಮಹೋತ್ಸವ.

ಬೀರೂರು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಜಗದ್ಗುರು ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ನವರಾತ್ರ ಮಹೋತ್ಸವವು ಈ ವರ್ಷ ಬೀರೂರು ಗ್ರಾಮದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು. ಆಶ್ವಯುಜ ಶುದ್ಧ ಪ್ರತಿಪದ್ಗುರುವಾರದಿಂದ ನವಮಿ ತಿಥಿಯವರೆಗೂ ಪ್ರತಿದಿವಸ ಪ್ರಾತಃಕಾಲದಲ್ಲಿ ಗಜಾಶ್ವಗಳ ಪೂಜೆಯೂ ಶ್ರೀ ವೀರೇಶ್ವರನ ರುದ್ರಾಭಿಷೇಕವೂ ನಡೆಯುತ್ತ ಪ್ರತಿ ಸಾಯಂಕಾಲ 6 ಘಂಟೆಗೆ ಜಗದ್ಗುರುಗಳ ಸಿಂಹಾಸನಾರೋಹಣವಾದನಂತರ ವೈದಿಕರ ವೇದಘೋಷವೂ ಸಂಗೀತಜ್ಞರ ಗಾನಾಲಾಪವೂ ಚತುರಂಗಸೈನ್ಯದ ನಜರಮುಜರೆಗಳೂ ನಡೆಯುತ್ತಲಿದ್ದವು. ಅನೇಕ ಪಟ್ಟೆದಾರಾಧಿಕಾರಿಗಳಿಂದಲೂ ಧರ್ಮರತ್ನ ಪಂ|| ಶಂಕರಶಾಸ್ತ್ರಿಗಳು, ವ್ಯಾಕರಣ ಸಿದ್ಧಾಂತಭೂಷಣ ಪಂ|| ವಿಶ್ವನಾಥಶಾಸ್ತ್ರಿಗಳು ಮೊದಲಾದ ಪಂಡಿತ ಮಂಡಲಿಯಿಂದಲೂ ಭಕ್ತಮಾಹೇಶ್ವರ ಸಮುದಾಯದಿಂದಲೂ ಪ್ರಸಿದ್ಧ ಕೀರ್ತನಕಾರರಿಂದಲೂ ಸಂಗೀತ ವಿದ್ವಾಂಸರುಗಳಿಂದಲೂ ಇತರ ಪ್ರೇಕ್ಷಕ ಮಹಾಶಯರಿಂದಲೂ ಸಭಾಮಂಟಪವು ಅಲಂಕೃತವಾಗಿದ್ದಿತು. ಪ್ರತಿದಿವಸವೂ ಈ ವಿದ್ವನ್ಮಣಿಗಳು ತಮ್ಮ ವಿದ್ಯಾಚಾತುರ್ಯದಿಂದ ಸಭಿಕರ ಮನಸ್ಸನ್ನು ರಂಜನಗೊಳಿಸಿ ಮಹಾಸನ್ನಿಧಿಯ ಕೃಪೆಗೆ ಪಾತ್ರರಾಗುತ್ತಿದ್ದರು. ಈ ಮಧ್ಯೆ ಶ್ರೀ ಸಂಸ್ಥಾನಪದ್ಧತಿಪ್ರಕಾರ ಸಪ್ತಮಿ ಬುಧವಾರ ಶಾರದಾಪೂಜೆಯೂ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟಿತು. ನವಮಿ ಶನಿವಾರ ಪ್ರಾತಃಕಾಲ ಆಯುಧ ಗಜಾಶ್ವಗಳ ಪೂಜೋತ್ಸವವು ಅತಿ ವೈಭವದಿಂದ ನೆರವೇರಿತು. ದಶಮಿ ಭಾನುವಾರ ಮಧ್ಯಾಹ್ನ ಮೂರು ಘಂಟೆ ಸಮಯದಲ್ಲಿ ಶ್ರೀ ಮಹಾಸನ್ನಿಧಿಯ ಚತುರಂಗ ಬಲಸಮೇತನಾಗಿ ಸುವರ್ಣಾಂದೋಲಿಕಾಮಹೋತ್ಸವವು ಸಕಲ ರಾಜಮರ್ಯಾದೆಯೊಡನೆ ಸಭಾಮಂಟಪದಿಂದ ಹೊರಟು ತ್ಯಾವನಗಿಮಠದ ಶ್ರೀಮಂತ ವೇ|| ಶಿವಪ್ಪಯ್ಯನವರ ಬಂಗ್ಲೆ ಬಳಿಯಲ್ಲಿರುವ ಮೈದಾನಕ್ಕೆ ಸಾಗಿತು ಅಲ್ಲಿ ನಡೆಯಬೇಕಾದ ದಶಮಿ ಪೂಜಾ ಮುಂತಾದ ಶಾಸ್ತ್ರೀಯ ಕಾರ್ಯಗಳೆಲ್ಲವೂ ಸಮಾಪ್ತಿಯಾದ ಬಳಿಕ ನಾನಾವಿಧವಾಗಿ ರಚಿಸಲ್ಪಟ್ಟ ಮದ್ದಿನ ಸಮಾಷೆಯೂ ಸ್ವಲ್ಪ ಹೊತ್ತು ನಡೆದು ಉತ್ಸವವು ಪುನಃ ಹಿಂತಿರುಗಿ ಸಾಯಂಕಾಲ ಒಂಭತ್ತು ಘಂಟೆಗೆ ಸ್ವಸ್ಥಾನವನ್ನು ಸೇರಿತು. ಈ ಮಹೋತ್ಸವಕ್ಕೆ ನ್ಯಾಮತಿ ಹಾರನಹಳ್ಳಿ ದಾವಣಗೆರೆ ಹಾವೇರಿ ಹರಿಹರ ಬುಕ್ಕಾಂಬುಧಿ ಮುಂತಾದ ಅನೇಕ ಪ್ರಾಂತಗಳಿಂದ ಭಜನಾಸಂಘಗಳು ಬಂದಿದ್ದವು. ಮತ್ತು ಅನೇಕ ಜನ ವಾದ್ಯಗಾರರೂ ಬಂದಿದ್ದರಲ್ಲದೆ ಬೆಂಗಳೂರು ದಾವಣಗೆರೆ ಹಾವೇರಿ ಹರಿಹರ ಮುಂತಾದ ಸ್ಥಳಗಳಿಂದಲೂ ಸುತ್ತಮುತ್ತಣ ಸ್ಥಳಗಳಿಂದಲೂ ಸುಮಾರು 15-16 ಸಾವಿರದವರೆಗೆ ಜನಗಳು ಸೇರಿದ್ದರು ಈ ಹತ್ತು ದಿವಸಗಳವರೆಗೂ ಬೀರೂರು ಗ್ರಾಮವು ಆಚಾರ್ಯ ಜಯಘೋಷಮಯವಾಗಿದ್ದಿತು ಏಕಾದಶಿ ಸೋಮವಾರ ಮಧ್ಯಾಹ್ನ ಶ್ರೀಮುಖಾಸನಾರಿಯು ಸಭಾಮಂಟಪದಲ್ಲಿ ಅಲಂಕರಿಸಿದ್ದ ಭದ್ರಪೀಠವನ್ನಲಂಕರಿಸಿತು. ಅವರವರಿಗೆ ಉಪಯುಕ್ತವಾದ ಕಾಲಗಳಲ್ಲಿ ಪದ್ಧತಿಯಂತೆ ಕಲಾವೈದುಷ್ಯವು ಪ್ರದರ್ಶಿಸಲ್ಪಟ್ಟಿತು ಭಜನಾಸಂಘಗಳ ಭಜನಾಕೌಶಲ್ಯವೂ ಸಂಗೀತ ವಿದ್ವಾಂಸರ ಗಾನನೈಪುಣ್ಯವೂ ಕೀರ್ತನಕಾರರ ಚಾತುರ್ಯವೂ ಶಾಸ್ತ್ರಜ್ಞರ ಸಿದ್ಧಾಂತವೈದುಷ್ಯವೂ ಸಭಿಕರ ಮನಸ್ಸನ್ನು ಆನಂದಗೊಳಿಸುತ್ತಿದ್ದವು ಮಹಾಸನ್ನಿಧಿಯಿಂದ ಅವರವರ ಯೋಗ್ಯತಾನುಸಾರವಾಗಿ ಸಂಭಾವನೆಗಳು ಆಶೀರ್ವದಿಸಲ್ಪಟ್ಟವು. ಬೀರೂರು ಗ್ರಾಮವಾಸಿಗಳಾದ ತ್ಯಾವಣಿಗಿಮಠದ ಶ್ರೀಯುತ ಪಟ್ರೆ ಚನ್ನವೀರಪ್ಪಯ್ಯನವರು ಮ|| ರಾ|| ದೊಡ್ಡಮನಿ ಹಾಲಪ್ಪನವರು ಮುಂತಾದ ಮಹಾಜನಗಳು ಅಹೋರಾತ್ರಿಯಲ್ಲಿಯೂ ಬಹಳ ಶ್ರದ್ಧೆಯಿಂದ ಮಹಾಸನ್ನಿಧಿಯ ಸೇವಾಸಕ್ತರರಾಗಿ ದರ್ಶನಾರ್ಥಿಗಳಾಗಿ ಬಂದ ಪರಸ್ಥಳದ ಮಹಾಶಯರಿಗೆಲ್ಲ ಸ್ವಲ್ಪವೂ ನ್ಯೂನತೆಯಿಲ್ಲದಂತೆ ಸತ್ಕಾರವನ್ನು ಮಾಡಿ ಜಗದಾಚಾರ್ಯರಕೃಪೆಗೆ ಪಾತ್ರರಾಗಿರುತ್ತಾರೆ. ಈ ಮಹೋತ್ಸವದಲ್ಲಿ ಪೀಠೋದ್ಧರಣ ಕಾರ್ಯದಲ್ಲಿ ತನುಮನಧನಗಳಿಂದ ಗುರುಸೇವೆಯನ್ನು ಮಾಡಿ ಯಶಸ್ವಿಗಳಾಗಿರುವ ಮ|| ರಾ|| ನರಸಿಂಹರಾಜಪುರದ ಯಂ|| ಸಿ|| ಶಾಂತಪ್ಪಶೆಟ್ಟರವರಿಗೆ "ಧರ್ಮಪ್ರವರ್ತಕ" "ಶ್ರೀಮದಾಚಾರ್ಯ ಸೇವಾದರ್ಶ" ಎಂಬ ಉಭಯಪ್ರಶಸ್ತಿಗಳಿಂದೊಡಗೂಡಿದ ಸುವರ್ಣ ಪದಕವನ್ನೂ ಅತ್ಯಂತ ದಕ್ಷತೆಯಿಂದ ಗುರುಸೇವೆಯನ್ನು ಮಾಡಿದ ಮ|| ರಾ|| ದೊಡ್ಡಮನಿ ಮುನಸೀಪಾಲಿಟಿ ವೈಸ್ ಪ್ರೆಸಿಡೆಂಟ್ ಯಜಮಾನ್ ಹಾಲಪ್ಪನವರಿಗೆ "ಗುರುಭಕ್ತವತಂಸ" ಎಂಬ ಪ್ರಶಸ್ತಿಪತ್ರವನ್ನು ಜರತಾರಿ ವಸ್ತ್ರಸಮುಂಬರಗಳೊಡನೆ ದಯಪಾಲಿಸಿದರು. ಪ್ರಸಿದ್ಧ ಸಂಗೀತ ಕಲಾಭಿಜ್ಞರಾದ ಹರಪನಹಳ್ಳಿ ಗುರುಸ್ವಾಮಿಮಠದ ... ಕೊಟ್ರಯ್ಯನವರಿಗೆ "ಸಂಗೀತ ವಿದ್ವಾನ್" ಎಂಬ ... ಸುವರ್ಣಪದಕವನ್ನು ಕೊಟ್ಟರು. ಕೆಂಭಾವಿಮಠದ ಚನ್ನ...ಶಾಸ್ತ್ರಿಗಳಿಗೆ "ಗಾನವಾದನವಿದ್ವಾನ್" ಎಂಬ ಪ್ರಶಸ್ತಿಯುತ ಸುವರ್ಣಪದಕವನ್ನು ಹಾವೇರಿ ಗೌರೀಮಠದ ಜಯದೇವಯ್ಯನವರಿಗೆ "ಸಂಗೀತ ವಿದ್ವಾನ್" ಎಂಬ ಪ್ರಶಸ್ತಿಯುತ ಸುವರ್ಣಪದಕವನ್ನೂ ಅವರ ಶಿಷ್ಯ ಶಾಂತಯ್ಯನೆಂಬ ಬಾಲಕನಿಗೆ "ಗಾನಕುಶಲ" ಎಂಬ ಪ್ರಶಸ್ತಿಯುತ ಸುವರ್ಣಪದಕವನ್ನೂ ಬೀರೂರು ವೇ|| ಬೂ|| ಬ|| ನಂಜುಂಡಾರಾಧ್ಯರಿಗೆ "ಕೀರ್ತನಾಲಂಕಾರ" ಎಂಬ ಪ್ರಶಸ್ತಿಯುತ ಸುವರ್ಣಪದಕವನ್ನು ಭಜನಸಂಘದವರಿಗೆಲ್ಲ ಉಚಿತವಾದ ಮೆಡ್ಲುಗಳನ್ನು ಆಶೀರ್ವದಿಸಿದರು ಬಳಿಕ ಶ್ರೀ ಜಗದ್ಗುರುಗಳವರು ಸಭಿಕರ ಪ್ರಾರ್ಥನೆಯಂತೆ ವೀರಶೈವಸಿದ್ಧಾಂತವನ್ನು ಸುಲಭಶೈಲಿಯಿಂದಲೂ ಗಂಭೀರವಾಣಿಯಿಂದಲೂ ಆಬಾಲವೃದ್ಧರಿಗೂ ತಿಳಿಯುವಂತೆ ಅಪ್ಪಣೆಯನ್ನು ಕೊಡಿಸಿ ಸರ್ವರನ್ನೂ ಆನಂದಗೊಳಿಸಿ ಬೀರೂರು ಭಕ್ತಮಾಹೇಶ್ವರರು ಮಾಡಿದ ಅತಿಶಯವಾದ ಗುರುಸೇವೆಯನ್ನು ಸಭಿಕರಿಗೆ ತಿಳುಹಿಸಿ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬದವರಿಗೂ ಶ್ರೇಯೋಭಿವೃದ್ಧಿಯನ್ನು ಬಯಸಿ ಸಭಾವಿಸರ್ಜನೆಗೆ ಅಪ್ಪಣೆಯಿತ್ತರು.

ಓರ್ವ ಉತ್ಸವಭಾಗಿ,

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರಸಿದ್ಧಪತ್ರಿಕೆ.

ಶ್ರೀಮದ್ವೇದಾಗಮೋಪನಿಷತ್ಪತಿಪಾದಿತ ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯವರ್ಯ ಶ್ರೀ ಜಗದ್ಗುರು ಪಂಡಿತಾರಾಧ್ಯ ಸೂತ್ರಾನುವರ್ತಿಗಳಾದ ಬಳ್ಳಾರಿ ಜಿಲ್ಲಾ ಹಿರೇಹಡಗಲಿ ಗುರುಪಾದದೇವರ ಮಠಾಧ್ಯಕ್ಷರಾದ ಶ್ರೀ ಹಾಲಸ್ವಾಮಿಗಳು—

ಶ್ರೀಗುರು ಕೃಪಾಪಾತ್ರರಾದ ಸಮಸ್ತ ಜನಗಳಿಗೂ ವೀರಶೈವ ಮಂಡಳಿಗೂ ಆಯುರಾರೋಗ್ಯಾದಿ ಸಂಪದಭಿವೃದ್ಧಿಯಾಗಲೆಂದು ಕೃತಾನೇಕಾಶಿಷಃ ಸಂತು

ನಮ್ಮ ಮಠದಲ್ಲಿ ಬಹುದಿವಸಗಳಿಂದಲೂ ನಡೆಯುತ್ತಾ ಬಂದಿರುವ ಪದ್ಧತಿ ಪ್ರಕಾರ ಈ ಶುಕ್ಲನಾಮಸಂವತ್ಸರದ ಆಶ್ವೀಜ ಬ|| ೩ ಮಿತಿ ಮುಳ್ಳುಗದ್ದುಗೆ ಈ ಬ|| ೩ ಮಿತಿ ರಥೋತ್ಸವವು ಈ ಬ|| ೪ ಕಡುಬಿನ ಕಾಳಗಮಹೋತ್ಸವವು ಈ ಬ|| ೫ ಶಿವಕೀರ್ತನ ಸಂಗೀತ ಸಭಾ ಸದ್ಬೋಧನಾದಿ ಕಾರ್ಯಗಳು ಈ ಬ|| ೬ ರಿಂದ ಪ್ರಸಿದ್ಧ ಜಟ್ಟಿಗಳ ಕುಸ್ತಿಗಳು ಹಾಗು ಸನ್ಮಾನ ಆಶೀರ್ವಾದಗಳು ವಗೈರೆ. ಈ ಪ್ರಕಾರ ಯಾತ್ರಾಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರಗುತ್ತದೆ. ಅದ್ದರಿಂದ ನೀವು ನಿಮ್ಮ ಕುಟುಂಬ ಪರಿವಾರದೊಡನೆ ಆಗಮಿಸಿ ಯಾತ್ರಾನಂದವನ್ನು ಹೊಂದಿ ಫಲಾಶೀರ್ವಾದಗಳಂ ಪಡೆದು ಧನ್ಯರಾಗಬೇಕು.

ಇತ್ಯಾಶಿಷಃ.

ಪ್ರಸಿದ್ಧಪತ್ರಿಕೆ.

ಮೈಸೂರು ಅರಮನೆ ಮುಜರಾಯಿ ಬಕ್ಷಿಗಳವರು ಮ|| ಶ್ರೀ ರಾಜಕವಿಭೂಷಣ ಹೆಚ್. ಲಿಂಗರಾಜ ಅರಸಿನವರಿಂದ ವಿರಚಿತವಾದ

ಯದುನೃಪವಿಜಯ ಮತ್ತು ನೋಟ್ಸ್

ಎಂಬ V ತರಗತಿ (Fifth Form) ಗೆ 1928-29 ನೆ ಸಾಲಿಗೆ ಟೆಕ್ಸ್ಟ್ ಬುಕ್ಕಾಗಿ ನಿಯಮಿತವಾದ 2 ನೆ ಮುದ್ರಣ ಗ್ರಂಥದ ಬಿಕರಿ ಹಕ್ಕನ್ನು (Whole Sale Agency) ಮೂಲಕ ಮೈಸೂರು ಹಳೇಅಗ್ರಹಾರದಲ್ಲಿರುವ ಜನರಲ್ ಮರ್ಚೆಂಟ್ ಶೆಟ್ಟಪ್ಪ ಬಿನ್ ಶಿದ್ದಪ್ಪನವರು ಪಡೆದಿರುವರು. ಪುಸ್ತಕ 1ಕ್ಕೆ 0-8-0 ದರೆಗೆ ಈ ಕೆಳಗೆ ಕಂಡವರಿಂದ ಪಡೆದುಕೊಳ್ಳಬಹುದು.

(1) ಶೆಟ್ಟಪ್ಪ ಬಿನ್ ಶಿದ್ದಪ್ಪ,
ಪಸಾರಿ ಮಳಿಗೆ,
ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ, ಮೈಸೂರು.

[5]

ಶ್ರೀಕಂಠಪ್ಪ ಅಂಡ್ ಸನ್ಸ್,
ಔಷಧವ್ಯಾಪಾರಿಗಳು, ದೊಡ್ಡಪೇಟೆ, ಬೆಂಗಳೂರು ಸಿಟಿ.

ಬೆಲೆ ಸುಲಭ! ಶ್ರೀ ಬಣ್ಣ ಗ್ಯಾರಂಟಿ!!

ಪ್ರಸಿದ್ಧವಾದ ಮೊಳಕಾಲ್ಮೂರು ರೇಶ್ಮೆವಸ್ತ್ರಗಳು

ರೇಶ್ಮೆವಸ್ತ್ರ—೧ ನೇ ನಂ. ಕೊಲ ೧ಕ್ಕೆ ೮ ಆ.
ರೇಶ್ಮೆಮುಗುಟ—೧ ನೇ ನಂ. ಕೊಲ ೧ಕ್ಕೆ ೯ ಆ.
ರೇಶ್ಮೆ ಕೈವಸ್ತ್ರ—ಬಿಡಿ ೧ಕ್ಕೆ ೧೧ ಆ.

ಒಂದುಸಲ ತರಿಸಿನೋಡಿರಿ. ಮಾಲಿನಲ್ಲಿ ಮಿಸ್ಟೇಕ್ ಕಂಡುಬಂದಲ್ಲಿ ವಾಪಸು ಮಾಡಿರಿ. ಪೋಸ್ಟೇಜ್ ಖಾತಾ ಹಣ ವಾಪಸು ಕೊಡುವೆವು. ನಮ್ಮ ಅಡ್ರೆಸ್:— [26]

ಎಂ. ಎಸ್. ಗಂಗಣ್ಣ ಮತ್ತು ಲೋಕಣ್ಣ
ರೇಶ್ಮೆ ಜವಳಿ ವ್ಯಾಪಾರಿಗಳು, ಮೊಳಕಾಲ್ಮೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ. **'ಕೊಡಗಿನ ಗುಡುಗುಡು!'** (ಛಳಿ). **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢಸಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [11]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! **ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!**

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖಿತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ ಶಿವೋನಪ್ಪ ಬುಕ್‌ಬೈಂಡರ್ ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕುಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—**ಸ್ಕೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.**

ನಮ್ಮ ಏಜಂಟರ ವಿಳಾಸ:—

[10]

ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಪೂರ್ವಗ್ರಂಥ! ಅಪೂರ್ವಗ್ರಂಥ!!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು. **ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಉಬ್ಬಸ ಸಂಹಾರಿ.

ROWJEE'S

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಇದು ಹೆಚ್ಚಾಗಿ ತಂದೆತಾಯಿಗಳಿಂದ ಮಕ್ಕಳಿಗೆ ಬರುವದು ಸಹಜ. ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟ್ಲು ಹಿಡಿದಂತೆ ಆಗಿ, ಈಗಲೋ, ಇನ್ನೊಂದು ಕ್ಷಣಕ್ಕೋ ಪ್ರಾಣ ಹೋಗುವಂತೆ ಕಾಣಿಸುವುದು. ಎದೆಯಲ್ಲಿ ಬೆಕ್ಕು ಕೂಗಿದಂತೆ ಗೊಯಿಗೊಯಿ ಎಂಬ ಶಬ್ದವು ಕೇಳಿಸುವುದು. ಹಾಸಿಗೆಯ ಮೇಲೆ ಮೈಚಾಚಿ ಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು ನಮ್ಮ **'ಉಬ್ಬಸಸಂಹಾರಿ'** ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವಹಾಗೆ ಶೀಘ್ರದಲ್ಲಿಯೇ ಗುಣವಾಗುವುದು. [1]

ಬಾಟ್ಲಿ 1ಕ್ಕೆ ರೂ. 2—8—0. ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣ ಬ್ರದರ್ಸ್, 323 ತಂಬುಚೆಟ್ಟಿಬೀದಿ, ಮದ್ರಾಸ್.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಸಿಗೆ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಸರ್ದಿ, ಗರ್ಮಿ, ಕೈಕಾಲು, ಮೂತ್ರ ಉರಿರೋಗ, ರಕ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಬದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಕಾಲಿಮುಸಂದ, ಮಧುಕಂದ, ಜನಾಕಂದ, ಕಾಲೀಮುಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ಶತಾವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ಸವೇಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಳಾ, ಬೀಜಬಂದ, ಹರಣಜೋರಿ, ಮುಂಗಲೀ ಪೀವಾಣೆ, ಮರ್ದಸೀಕಟ್ಟಿಗೆ, ಶತಾವರಿ, ಸಕೀರಮುಗಳು, ಆಲದಹಾಲು, ವಾಕೇರಿಭಾತಾ, ಗೋಖರು, ಅಡವಿಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ದಾಲಚಿನ್ನಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಳಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಘಾತಬಾರದಿರೋಣ, ದಪ್ಪಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [15]

ಪತ್ತೆ:—**ಮೂಲಿಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜು)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹವಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೩ ಆಣೆ ಸ್ತ್ರೀ. ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[28] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇನೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆ...

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಸಯ್ಯಾಜಿರಾವ ರೋಡ್, ಮೈಸೂರು.

ನಮ್ಮ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳಿಂದ ನವೀನಪದ್ಧತಿಯ ಮೇರೆಗೆ ತಯಾರಿಸಲ್ಪಟ್ಟಿರುವ ಬಹು ಬೆಲೆಯುಳ್ಳ ನಾನಾತರಹದ ಮಿಷನ್ನುಗಳು ತರಿಸಲ್ಪಟ್ಟಿವೆ. ಯಾವತ್ತು ಮಿಷನ್ನುಗಳು ವಿದ್ಯುಚ್ಛಕ್ತಿಯಿಂದಲೇ ನಡೆಯುವದರಿಂದ ಈ ಮಿಷನ್ನುಗಳಲ್ಲಾಗತಕ್ಕ ಮುದ್ರಣದ ಮನೋಹರತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಹಾಫ್‌ಟೋನ್ ಬ್ಲಾಕುಗಳೂ ಮತ್ತು ಮೂರುಬಣ್ಣಗಳ (Three Colours) ಬ್ಲಾಕುಗಳೂ ಮುದ್ದಾಗಿ ಮುದ್ರಿಸಲ್ಪಡುವವು. ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಎಲ್ಲಾ ತರಹದ ಚಿಕ್ಕ ದೊಡ್ಡ ಗ್ರಂಥಗಳು ಬಹು ಮನೋಹರವಾಗಿ ಮುದ್ರಿಸಿ ಕೊಡಲ್ಪಡುವವಲ್ಲದೆ, ಲಗ್ನಪತ್ರಿಕೆಗಳೂ, ಆಹ್ವಾನಪತ್ರಿಕೆಗಳೂ, ನೋಟೀಸುಗಳೂ, ಲೆಟರುಗಳೂ ಹಾಗೂ ಎಲ್ಲಾ ತರಹದ ಜಾಬ್ ವರ್ಕುಗಳೂ ಅಂದವಾಗಿ ಸಕಾಲಕ್ಕೆ ಮುದ್ರಿಸಿ ಕೊಡಲ್ಪಡುವವು. ಮುದ್ರಣದ ಸೊಬಗನ್ನಪೇಕ್ಷಿಸುವವರು ಇತ್ತ ದೃಷ್ಟಿಯನ್ನಿಡಬೇಕು. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೧೦ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಅಲ್ಪಬೆಲೆ! ಅಧಿಕ ಲಾಭ!!
ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
[8] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವೆಂದರೆ:—ಪಿ... ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[17] ಪೋ. ಬಾ. ೫೧೧. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ನೇ ಅಕ್ಟೋಬರ್ ೧೯೨೯ [ಸಂಚಿಕೆ ೨೫.

AUM

NOTICE.

A final General Meeting of the Shareholders of the All India Mutual Aid and Poor Houses Association, Ltd., Mysore, which was wound up for the purpose of being amalgamated with the Universal Mutual Aid and Poor Houses Association, Ltd., Madras, will be held on Monday the 25th November 1929, at 3 p.m. in Building No. 289, Thambu Chettey Street, Madras for the purpose of considering and adopting the account of the winding up of the said Association submitted by the Liquidator.

H. Venkatesaiya.

16th October 1929. *Liquidator.*

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪಂಚಾಚಾರ್ಯ ತರುಣ ಭಜನಾಸಂಘ

ಹಾವೇರಿ.

ಧಾರವಾಡ ಜಿಲ್ಲಾ ಹಾವೇರಿ ಗ್ರಾಮದ ಚೆನ್ನವೀರಸ್ವಾಮಿ ವಿರಕ್ತಮಠಕ್ಕೆ ಸೇರಿದ ಶಿವಲಿಂಗಪ್ಪನವರ ಚೌಕಿ ಮಠದಲ್ಲಿ ಸ್ಥಾಪಿಸಿದ ಶ್ರೀ ಪಂಚಾಚಾರ್ಯ ತರುಣ ಭಜನಾಸಂಘದವರು ಇದೇ ಅಶ್ವಯುಜ ಶು|| ೧೦ ರವಿವಾರ ದಿವಸ ಶ್ರೀ ಪಂಚಾಚಾರ್ಯರ ಭಾವಚಿತ್ರವನ್ನೂ ಹಾಗೂ ಶ್ರೀ ಜಗದ್ಗುರು ಕಾಶೀಸ್ವಾಮಿಗಳ ಪಾದುಕೆಗಳನ್ನೂ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಸಮಸ್ತ ಬಿರುದಾವಳಿಗಳಿಂದಲೂ ಹಗಲ ದೀವಟಿಗೆ ಛತ್ರಚಾಮರಾದಿಗಳಿಂದಲೂ ಅನೇಕ ವಾದ್ಯಘೋಷಗಳಿಂದಲೂ ಮಹಾವೈಭವದಿಂದ ಉತ್ಸವಮಾಡಿಕೊಂಡು ಶ್ರೀ ಬನ್ನಿ ಮಹಾಕಾಳಿಯ ಮಂಟಪಕ್ಕೆ ಹೋಗಿ ಅಲ್ಲಿ ಉತ್ಸವವನ್ನು ಮಂಟಪದಲ್ಲಿ ಮೂರ್ತಗೊಳಿಸಿ ಕಾಯಿಕರ್ಪೂರ ಮಂಗಲಾಚರಣೆಯನ್ನು ಮಾಡಿದರು. ಅನಂತರ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಬನ್ನಿಯನ್ನು ಸಮಸ್ತರಿಗೂ ಸಮರ್ಪಿಸಿ ಪುನಃ ಉತ್ಸವ ಸಮೇತ ಸಿದ್ಧೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿಯೂ ಶ್ರೀ ಜಗದಾಚಾರ್ಯರಿಗೆ ಫಲಪುಷ್ಪಾಕ್ಷತೆಗಳನ್ನು ಸಮರ್ಪಣೆಮಾಡಿ ಮಂಗಲಾಚರಣೆಯನ್ನು ಮಾಡಿದನಂತರ ಮಠಕ್ಕೆ ಹಿಂತಿರುಗಿ ಬಂದು ಶ್ರೀ ಪಂಚಾಚಾರ್ಯರ ಮಂಗಲಾಚರಣೆಯನ್ನು ಮಾಡಿ ಎಲ್ಲರೂ ಆಶೀರ್ವಾದವನ್ನು ಪಡೆದರು. ಈ ತರುಣಸಂಘದ ಅಧ್ಯಕ್ಷರಾದ ಬಸವಲಿಂಗ ಮರಿದೇವರು ಹಾಗೂ ಈ ಸಂಘದ ಅಭಿಮಾನಿಶಾಲಿಗಳಾದ ಚೆನ್ನವೀರಸ್ವಾಮಯ್ಯನವರು, ಶಿವಾನ್ವಯ್ಯ ಅಂಗಡಿ, ಮಠದ ಶೇಕರಪ್ಪ, ಹಿಂಚಗೇರಿ ಕಂಟೆಪ್ಪ ಉಮರಿ, ಮೊದಲಾದ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ದೇವೀಪುರಾಣಸಮಾರಂಭ.

ಬಳ್ಳಾರಿ ಡಿ|| ಹೂವಿನಹಡಗಲಿ ತಾ|| ಹಿರೇಹಡಗಲಿ ನಿವಾಸಿಗಳಾದ ಮ|| ರಾ|| ಶೀಲವಂತರ ಅಣ್ಣವೀರಪ್ಪನವರು ತಮ್ಮ ಗೃಹದಲ್ಲಿ ಇದೇ ಶುಕ್ಲನಾಮ ಸಂ|| ರದ ಅಶ್ವಯುಜ ಶು|| ೧ರ ಲಾಗಾಯತು ಶು|| ೧೦ ರ ವರೆಗೆ ಶ್ರೀ ಪುರಾಣವನ್ನು ಪ್ರಾರಂಭಮಾಡಿಸಲು ಇದೇ ಗ್ರಾಮದ ಪುರಾಣಿಕ ಮಠದ ವೇ|| ವಿರೂಪಾಕ್ಷಶಾಸ್ತ್ರಿಗಳವರು ಸಂಗೀತ ಸಾಹಿತ್ಯಗಳಿಂದಲೂ, ರಾಗರಚನೆಗಳಿಂದಲೂ, ಪದ್ಯಾರ್ಥ ತಾತ್ಪರ್ಯಾದಿಗಳನ್ನು ಬೋಧಿಸುತ್ತಾ ಶ್ರೋತೃಜನರ ಮನಾನಂದಗೊಳಿಸಿದರು. ಪುರಾಣವು ಗಾಯನಕುಶಲರಾದ ಸಾಮಂತ್ರಿ ತಿರಕಪ್ಪನವರ ಪಿಟೀಲುವಾದನ ಹಾರ್ಮೋನಿಯಂ ಮೃದಂಗಗಳಿಂದ ಬಹು ಸರಸವಾಗಿ ಜರುಗಿತು. ಸಮಾಪ್ತಿಕಾಲಕ್ಕೆ ಮಾನಿಹಳ್ಳಿ ಪುರವರ್ಗಮಠದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಮಳೀ ಸ್ವಾಮಿಗಳೂ, ಯಜಮಾನ್ ಗುರುಶಾಂತಾಯ್ಯರೂ, ಪಾಟೀಲು ಶಿವರುದ್ರಗೌಡರೂ, ಬಾಗಳಿ (ಬಣಕಾರ) ಬಸಪ್ಪ, ಮಳಿ|| ಮಲ್ಲಪ್ಪ ಮುಂತಾದ ಮಂಡಲಿಯು ಸಮ್ಮಿಳಿತರಾಗಿ ಮಹಾ ಪಾದಪೂಜಾ ಗಣಾರಾಧನೆಗಳೂ ನಡೆದವು. ತರುವಾಯ ಸಾಯಂಕಾಲಕ್ಕೆ ಶ್ರೀಕಲ್ಲುಬಸವೇಶಮೂರ್ತಿಯ ಉತ್ಸವವನ್ನು ಹೊರಡಿಸಿ ಶಮೀವೃಕ್ಷದ ಬಳಿಗೆ ಹೋಗಿ ಅರ್ಘ್ಯಪಾದ್ಯಾದಿಗಳಿಂದಲೂ, ಷೋಡಶೋಪಚಾರಗಳಿಂದಲೂ ಪೂಜೆಯು ನಡೆದ ಬಳಿಕ ಪರಸ್ಪರ ಪ್ರೇಮಾಭಿಲಾಷೆಗಳನ್ನು ಭಕ್ತಿಭಾವಗಳನ್ನು ವೃದ್ಧಿಗೊಳಿಸುವ ಶಮೀಪ್ರದಾನಸಮಾರಂಭವು ನಡೆಯಿತು. ಶ್ರೀ ಮಹಾದೇವಿಯು ಸರ್ವರಿಗೂ ಸಕಲವಿಧ ಸಂತೋಷಗಳನ್ನೀಯಲೆಂದು ಪ್ರಾರ್ಥನೆ ಮಾಡಿದನಂತರ ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಪ್ರತ್ಯಕ್ಷದರ್ಶಿ,
ಸಿದ್ಧಾಂತಿ ಗುಡದೀರಪ್ಪನವರ್.

ಸ್ವೀಕಾರ.

ಕರ್ನೂಲು ಡಿ|| ಆಲಂಪೂರುಗ್ರಾಮ ನಿವಾಸಿಗಳಾದ ವೇ|| ಮಠಂ ರುದ್ರಮುನಿಸ್ವಾಮಿಗಳು ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಬಳ್ಳಾರಿ ಡಿ|| ಚಿತ್ರವಾಡಿಗಿ ಗ್ರಾಮವಾಸಿಗಳಾದ ಮುದ್ದಾಪುರದ ಮಾಪನಮಡುಗು ದೊಡ್ಡಯ್ಯನವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮನವರು ವಿಜಯದಶಮಿ ಶಮೀಸಮರ್ಪಣ ದ್ವಾರಾ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ಗುರುಭಕ್ತಕೇಸರಿ ಹುಮ್ಮಿಗಿ ಇವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಡಿ|| ಶಿಕಾರಿಪುರ ತಾಲೂಕು ಕಡೆಯ ನಂದೀಹಳ್ಳಿಗ್ರಾಮದ ಶ್ರೀ|| ಷ|| ಬ್ರ|| ಚರಮೂರ್ತಿಸ್ವಾಮಿಗಳವರು ಜಗದಾದಿ ಗುರು ಶ್ರೀ ರೇಣುಕನ ಕೃಪಾಶೀರ್ವಾದ ಬಲದಿಂದ ತಮ್ಮ ಮನಸ್ಸಂಕಲ್ಪವು ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 3 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಕೊಪ್ಪಳ ಜಿಲ್ಲಾ ಬಿಸರಹಳ್ಳಿಗ್ರಾಮದ ವೇ|| ಬೃಹನ್ಮಠದ ಶಿವರುದ್ರಸ್ವಾಮ್ಯಶಾಸ್ತ್ರಿಗಳವರ ಪುತ್ರನಿಗೆ ವಿಷಮಜ್ವರವು ಪ್ರಾಪ್ತವಾಗಿದ್ದು ಜಗದಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ 2 ರೂಪಾಯಿಗಳನ್ನು ಸಮರ್ಪಿಸಿರುತ್ತಾರೆ.

ಬಳ್ಳಾರಿ ಡಿ|| ಆದವಾನಿಗ್ರಾಮದ ಪಾತ್ರದ ಗೌರಾಸಾನಿ ವೀರಾಸಾನಿ ಇವರ ವಿಷಯದಲ್ಲಿ ಸಾತನೂರು ಬಸೆಟ್ಟೆಪ್ಪನವರು ಪ್ರಕಟಿಸಿದ ಪ್ರಕಟನೆಯು ಧರ್ಮವಿರುದ್ಧವಾದುದೆಂದು ನಿಷೇಧಪ್ರದರ್ಶನ ಸಭೆಯನ್ನು ಕರೆದ ಸಮಯದಲ್ಲಿ ಆದವಾನಿಯವರಿಂದ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ಮ|| ರಾ|| ಬೆಳ್ಳುಳ್ಳಿ ನಾಗಪ್ಪ ಅಳ್ಳಪ್ಪಾ ಜನರಲ್ ಮರ್ಚಂಟ್ ಇವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಟೌನ್ ನಿವಾಸಿಗಳಾದ ಮ|| ರಾ|| ಅಂಬಲಿ ಗುರುಲಿಂಗಪ್ಪನವರು ವಿಜಯದಶಮಿ ಶಮೀಸಮರ್ಪಣ ದ್ವಾರಾ ಕಳುಹಿಸಿದ 1 ರೂ. ಹಾಗೂ ಮ|| ರಾ|| ಕೀರಣಗಿ ಗೋಲಪ್ಪನವರ ಚಿರಂಜೀವಿಗೆ ಪ್ರಾಪ್ತವಾಗಿದ್ದ ಜ್ವರವು ಶ್ರೀ ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಒಟ್ಟು 2 ರೂ. ಗಳು ವೇ|| ಕಪ್ಪರ ಮಠದ ದುಂಡಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಡಗಲಿ ತಾಲೂಕು ಹೊಳಗುಂದಿ ಗ್ರಾಮದ ಮ|| ರಾ|| ಕಳಸಪ್ಪನವರ ಊರಪ್ಪನ ಹೆಂಡತಿ ಶಿವಮ್ಮನಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಆಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಶ್ಯಾ|| ಭ|| ಸಂಣಕೋಟಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಿರೇಹಡಗಲಿ ನಿವಾಸಿಗಳಾದ ಮ|| ರಾ|| ಶೀಲವಂತರ ಅಣ್ಣವೀರಪ್ಪನವರ ಮನೆಯಲ್ಲಿ ನೆರವೇರಿಸಿದ ಪುರಾಣ ಸಮಾಪ್ತಿ ಸಮಯದಲ್ಲಿ ಸಮರ್ಪಿಸಿದ 1 ರೂ. ಹಾಗೂ ಈ ಮೊದಲು ಶಿವದೀಕ್ಷಾಸಂಸ್ಕಾರದಲ್ಲಿ ತೆಗೆಯಿಸಿದ 1 ರೂ. ಒಟ್ಟು 2 ರೂಪಾಯಿಗಳು ವೇ|| ಪುರಾಣಿಕ ಮಠದ ವಿರೂಪಾಕ್ಷಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ರೋಣ ತಾ|| ಬೆಳವಣಿಕೆ ಗ್ರಾಮದಲ್ಲಿ ನೆರವೇರಿದ ಹೇಮರೆಡ್ಡಿ ಮಲ್ಲಮ್ಮಾಂಬೆಯ ಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಮ|| ರಾ|| ಶಿವಪ್ಪಾ ಸಜ್ಜನರ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇನೆ. ಸಂ—

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

[ಕಳೆದ ವಾರದ ಶೇಷ.]

ಭದ್ರಾವತಿಯ ಕಬ್ಬಿಣದ ಕಾರ್ಖಾನೆ.

ಸರ್ ಎಂ. ವಿಶ್ವೇಶ್ವರಯ್ಯನವರು ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರ ಕೆಲಸದಿಂದ ವಿಶ್ರಾಂತರಾದರು. ಫಾರೆಸ್ಟು ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆ, ಭೂಗರ್ಭ ಶೋಧನೆಯ ಇಲಾಖೆ, ಗಣಿಗಳ ಇಲಾಖೆ—ಈ ಇಲಾಖೆಗಳ ಛಾರ್ಜಿನಲ್ಲಿರುವ ಕೌನ್ಸಿಲ್ಲಿನ ಮೆಂಬರವರಾದ ರಾಜಕಾರ್ಯಪ್ರಸಕ್ತ ದಿವಾನ್‌ಬಹದ್ದೂರ್ ಮಿ|| ಎಂ. ಎನ್. ಕೃಷ್ಣರಾಯರವರು ಈಗ ಆ ಅಧ್ಯಕ್ಷಸ್ಥಾನವನ್ನು ವಹಿಸಿದ್ದಾರೆ.

ಈಗ್ಗೆ ಆರುವರೆ ವರುಷಗಳಿಗೆ ಹಿಂದೆ, ಭದ್ರಾವತಿ ಕಾರ್ಖಾನೆಯ ಉದ್ಯಮವು ಸಫಲವಾಗಿ ನೆರವೇರುವುದೋ ಇಲ್ಲವೋ ಎಂಬುದೇ ಅನುಮಾನವಾಗಿ ವಿಶೇಷ ಆತಂಕವುಂಟಾಗಿದ್ದಿತು. ಅಂತಹ ವಿಷಮಸ್ಥಿತಿಯು ಒದಗಿದ್ದ ಸಮಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಸರ್ಕಾರದವರ ಬಿನ್ನಹದ ಮೇಲೆ ಅದರ ಆಡಳಿತವನ್ನು ವಹಿಸಿದರು. ಅವರು ಈ ಕೆಲಸದಿಂದ ವಿಶ್ರಾಂತರಾದುದರ ದೆಸೆಯಿಂದ, ಕಾರ್ಖಾನೆಗೆ ಒಂದು ದೊಡ್ಡ ನಷ್ಟವು ಸಂಭವಿಸಿದೆ. ಕಾರ್ಖಾನೆಯ ಆಡಳಿತ ನಿರ್ವಾಹಕ ಮಂಡಲಿಗೆ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರು ಸಂತತವೂ ಅದರ ಯೋಗಕ್ಷೇಮವನ್ನು ಕುರಿತು ಚಿಂತಿಸುತ್ತಿದ್ದರು. ಕಾರ್ಖಾನೆಯನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬ ದೃಢನಿಶ್ಚಯದಿಂದ ಕೂಡಿ ಅವರು ಶ್ರಮವನ್ನೂ ಪರಿಗಣಿಸದೆ ಸರ್ವದಾ ವಿಶೇಷ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ಇದಕ್ಕಾಗಿ ಸರ್ಕಾರದವರು ಅವರಿಗೆ ಎಷ್ಟು ಕೃತಜ್ಞರಾಗಿದ್ದರೂ ತೀರದು. ಸ್ವಾರ್ಥತ್ಯಾಗವೂ, ಉತ್ಸಾಹಶ್ರದ್ಧೆಗಳೂ, ಸರ್ ಎಂ. ವಿಶ್ವೇಶ್ವರಯ್ಯನವರ ವ್ಯಕ್ತಿಲಕ್ಷಣಗಳೋ—ಎನ್ನುವಂತೆ ಅವರಲ್ಲಿ ನೆಲೆಸಿವೆ. ತದನುಗುಣವಾದ ತೀವ್ರಾಸಕ್ತಿಯಿಂದ, ಅವರು ಈ ಕಾರ್ಖಾನೆಯ ಆಡಳಿತವನ್ನು ನೆರವೇರಿಸಿದ್ದಾರೆ. ಅವರು ಈ ರೀತಿ ಕೆಲಸ ನಡೆಸಿರುವುದಕ್ಕಾಗಿ ನಮ್ಮ ಅಂತರವಾದ ಅಭಿನಂದನವನ್ನೂ, ಕಾರ್ಖಾನೆಯನ್ನು ಈಗಿರುವಷ್ಟು ಉತ್ತಮಸ್ಥಿತಿಗೆ ತಂದುದಕ್ಕಾಗಿ ಅವರಲ್ಲಿ ನಮಗಿರುವ ಅಗಾಧವಾದ ಕೃತಜ್ಞತೆಯನ್ನೂ, ವ್ಯಕ್ತಗೊಳಿಸುವರಲ್ಲಿ, ತಾವೆಲ್ಲರೂ ಏಕವಾಕ್ಯತೆಯಿಂದ ನನ್ನೊಡನೆ ಸೇರುವಿರೆಂದು ನಾನು ದೃಢವಾಗಿ ನಂಬಿದ್ದೇನೆ.

ಅವರು ಯಾವ ಪ್ರತಿಫಲವನ್ನೂ ಸ್ವೀಕರಿಸದೆ ಕೆಲಸಮಾಡುತ್ತಾ, ಈ ಕಾರ್ಖಾನೆಯನ್ನು ಅಭಿವೃದ್ಧಿಸ್ಥಿತಿಗೆ ತರುವುದಕ್ಕೋಸ್ಕರ 6½ ವರುಷಗಳಕಾಲ ವಿಶ್ರಾಂತಿಯನ್ನೂ ಪಡೆಯದೆ ಏಕಪ್ರಕಾರವಾಗಿ ಶ್ರಮಪಟ್ಟಿರುತ್ತಾರೆ. ಯೂರೋಪು ಮತ್ತು ಅಮೇರಿಕಾ ಖಂಡಗಳಲ್ಲಿ ಇಂತಹ ಕಾರ್ಖಾನೆಗಳಲ್ಲಿ ಯಾವ ರೀತಿ ಕೆಲಸವು ನಡೆಯುತ್ತಿದೆಯೆಂಬುದನ್ನು ವಿಶೇಷ ರೀತಿಯಲ್ಲಿ ಪರಿಶೀಲಿಸುವುದಕ್ಕಾಗಿ ಅವರು ತಮ್ಮ ಸ್ವಂತ ವೆಚ್ಚದಿಂದ ಅವೆರಡು ಖಂಡಗಳಲ್ಲಿಯೂ ಸಂಚಾರ ಮಾಡಿಕೊಂಡು ಬಂದರು. ಅವರು ಈ ವಿಧದ ಉದ್ಯೋಗಪರತೆಯನ್ನೂ, ಕಾರ್ಯಶ್ರದ್ಧೆಯನ್ನೂ ತೋರಿಸಿ ಕೆಲಸಮಾಡಿರುವುದಕ್ಕಾಗಿ, ಅವರಿಗೆ ನಾವು ಎಷ್ಟು ಕೃತಜ್ಞರಾಗಿದ್ದೇವೆಂಬ ಅಂಶವನ್ನು ಯಥಾಯೋಗ್ಯವೆನಿಸುವ ಹಾಗೆ ತಕ್ಕಂತೆ ವ್ಯಕ್ತಗೊಳಿಸಿ ಮುಗಿಸುವುದು ಸಾಧ್ಯವೇ ಇಲ್ಲ.

ಮಾನ್ಯರಾದ ನನ್ನ ಸಹೋದ್ಯೋಗಿಗಳವರು ಈಚೆಗೆ ಈ ಕಾರ್ಖಾನೆಯ ಆಡಳಿತವನ್ನು ವಹಿಸಿಕೊಂಡಿರುವುದು ಸರಿಯಷ್ಟೆ. ಸರ್ ಎಂ. ವಿಶ್ವೇಶ್ವರಯ್ಯನವರು ಇದುವರೆಗೂ ಮಾಡಿರುವ ಒಳ್ಳೆಯ ಕೆಲಸವನ್ನು ಲೇಶಮಾತ್ರವೂ ಲೋಪಬಾರದಂತೆ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಏಕರೀತಿಯಾಗಿ ಮುಂದುವರಿಸಿಕೊಂಡು ಬರುವ ಭಾಗದಲ್ಲಿ ಅವರು ಸರ್ವಪ್ರಯತ್ನಗಳನ್ನೂ ನಡೆಸಿಯೇ ನಡೆಸುತ್ತಾರೆ. ಈ ಭಾಗದಲ್ಲಿ ಅವರ ಪರವಾಗಿ ಈ ಸಭೆಯವರಿಗೆ ನಾನು ಭರವಸೆ ಹೇಳಬೇಕಾದ ಆವಶ್ಯಕತೆಯೇ ಇಲ್ಲ. ಅವರು ಗುರುತರವಾದ ತಮ್ಮ ಕರ್ತವ್ಯಗಳ ಜೊತೆಗೆ ಈ ಜವಾಬ್ದಾರಿಯನ್ನೂ ವಹಿಸಿಕೊಂಡಿರುವುದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿರಬೇಕಾಗಿದೆ. ಕ್ಲೇಶದಾಯಕವಾದ ಈ ಕೆಲಸವನ್ನು ಸಫಲರೀತಿಯಲ್ಲಿ ನೆರವೇರಿಸುವ ಶಕ್ತಿ ಸಾಮರ್ಥ್ಯಗಳು ಅವರಿಗುಂಟೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಅವರ ಪ್ರಯತ್ನಗಳೆಲ್ಲವೂ ಸಾಂಗವಾಗಿಯೂ, ಸಮುಚಿತವಾಗಿಯೂ ನೆರವೇರಿ ತನ್ಮೂಲಕ ನಮ್ಮ ಇಷ್ಟಾರ್ಥವು ಸಂಪೂರ್ಣವಾಗಿ ಕೈಗೂಡುವಂತಾಗಲೆಂಬುದೇ ನನ್ನ ಹಾರೈಕೆ. ತಮ್ಮ ಹಾರೈಕೆಯೂ ಸಹ ಅದೇ ರೀತಿಯಲ್ಲಿದೆಯೆಂದು ನಾನು ದೃಢವಾಗಿ ನಂಬಿದ್ದೇನೆ.

ವಿದ್ಯುಚ್ಛಕ್ತಿಯ ಇಲಾಖೆ.

1928-29 ನೆಯ ಸಾಲಿನಲ್ಲಿ ವಿದ್ಯುಚ್ಛಕ್ತಿಯ ಯಂತ್ರಸ್ಥಾಪನೆಗಳ ಸಂಖ್ಯೆಯು 256 ರಷ್ಟು, ವಿದ್ಯುಚ್ಛಕ್ತಿ ದೀಪಗಳ ಯಂತ್ರಸ್ಥಾಪನೆಗಳ ಸಂಖ್ಯೆಯು 2,136 ರಷ್ಟು ಹೆಚ್ಚಿದುವು. ವಿದ್ಯುಚ್ಛಕ್ತಿಯ ಸಹಾಯದಿಂದ ಕೆಲಸಮಾಡಿ ನೀರಾವರಿ ಸಾಗುವಳಿಗಾಗಿ ಬಾವಿಗಳಿಂದ ನೀರನ್ನೆತ್ತುವ ಯಂತ್ರಗಳನ್ನು (ಎಂದರೆ, ಪಂಪುಗಳನ್ನು) ಸ್ಥಾಪಿಸಿಕೊಳ್ಳುವುದಕ್ಕಾಗಿ ರೈತರಿಗೆ ಸಮಸ್ತ ಸೌಕರ್ಯಗಳನ್ನೂ ಕಲ್ಪಿಸಿಕೊಡುತ್ತಿದ್ದೇವೆ; ಮತ್ತು ಈ ಭಾಗದಲ್ಲಿ ತೋರಿಸಲ್ಪಟ್ಟಿರುವ ರಿಯಾಯಿತಿಗಳನ್ನು ವ್ಯವಸಾಯಗಾರರು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. 1927-28 ನೆಯ ಸಾಲಿನಲ್ಲಿ ಇಂತಹ 55 ಯಂತ್ರಗಳಲ್ಲಿ ಮಾತ್ರವೇ ಕೆಲಸವು ನಡೆಯುತ್ತಿದ್ದಿತು. ಪ್ರಸಕ್ತ ವರ್ಷದ ಕೊನೆಯಲ್ಲಿ ನೀರನ್ನೆತ್ತುವ ಇಂತಹ 107 ಯಂತ್ರಗಳು ಸ್ಥಾಪಿಸಲ್ಪಟ್ಟು, ಅವುಗಳಿಂದ ಕೆಲಸವು ನಡೆಯುತ್ತಿದ್ದಿತು. ಈ ಏರ್ಪಾಡು ಜನರಂಜಕವಾಗಿ ಪರಿಣಮಿಸಿರುವುದು ಇದರಿಂದ ಸ್ಪಷ್ಟಪಡುತ್ತದೆ. ಚನ್ನಪಟ್ಟಣ, ನಂಜನಗೂಡು, ಕ್ಲೋಸ್‌ಪೇಟೆ ಮತ್ತು ಶ್ರೀರಂಗಪಟ್ಟಣ, ಈ ನಾಲ್ಕು ಊರುಗಳಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಯಿತು. ಕೋಲಾರ, ತುಮಕೂರು, ಮಳವಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ ಮತ್ತು ಶಿಡ್ಲಘಟ್ಟ ಈ ಏಳು ಊರುಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸಲು ತಂತಿಯನ್ನು ಹಾಕುವುದೇ ಮುಂತಾದ ಕೆಲಸಗಳು ನಡೆಯುತ್ತಿವೆ. ಮಂಡ್ಯಕ್ಕೂ ಮತ್ತು ಆನೆಕಲ್ಲಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದೇವೆ; ಮತ್ತು ಮುಂದೆ ಸದ್ಯದಲ್ಲಿಯೇ ಈ ಕೆಲಸವನ್ನು ಹಿಡಿಯಲಾಗುವುದು. 1928 ನೆಯ ಇಸವಿ ನವಂಬರ್ 23 ನೆಯ ತಾರೀಖಿನಿಂದಲೂ ಮೆಟ್ಟೂರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತಿದ್ದೇವೆ. ಅಲ್ಲಿಗೆ ತಂತಿಗಳನ್ನು ಹಾಕಿಸುವುದೇ ಮುಂತಾದ ಕಾರ್ಯಗಳನ್ನು ವಿದ್ಯುಚ್ಛಕ್ತಿಯ ಇಲಾಖೆಯವರು ಅತಿ ಶೀಘ್ರವಾಗಿ ಪೂರೈಸಿದರು. ಇದಕ್ಕಾಗಿ ಚೀಫ್ ಎಲೆಕ್ಟ್ರಿಕಲ್ ಇಂಜನಿಯರವರೂ, ಅವರ ಸಿಬ್ಬಂದಿಯವರೂ, ನಮ್ಮ ವಂದನೆಗಳಿಗೆ ಪಾತ್ರರಾಗಿದ್ದಾರೆ.

ಆಟೋಮ್ಯಾಟಿಕ್ ಟೆಲಿಫೋನುಗಳನ್ನು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿಯೂ ಮತ್ತು ಬೆಂಗಳೂರಿಂದ ಮೈಸೂರಿಗೂ ಇಡಿಸುವ ಕೆಲಸವು ನಡೆಯುತ್ತಾ ಇದೆ. ಇದು ಈ ತಿಂಗಳು ಮುಗಿಯುವುದಕ್ಕೆ ಮುಂಚಿತವಾಗಿಯೇ ಜನರ ಉಪಯೋಗಕ್ಕೆ ಸಿದ್ಧವಾಗುವುದು.

ವಿಶ್ವವಿದ್ಯಾನಿಲಯ.

ಪ್ರಸಕ್ತ ವರ್ಷದಲ್ಲಿ ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ 15,000 ರೂಪಾಯಿಗಳ ಹೆಚ್ಚಿಗೆ ಮೊತ್ತವನ್ನು ಮಂಜೂರು ಮಾಡಲಾಯಿತು. ಒಟ್ಟು 200 ವಿದ್ಯಾರ್ಥಿವೇತನಗಳನ್ನು ಕೊಡಲು ವಿಶ್ವವಿದ್ಯಾನಿಲಯದವರಿಗೆ ಇದರ ದೆಸೆಯಿಂದ ಸಾಧ್ಯವಾಯಿತು. ಹಿಂದುಳಿದ ಪಂಗಡಗಳ ವಿದ್ಯಾರ್ಥಿವೇತನಗಳಿಗಾಗಿ ಇದ್ದ ಆವಶ್ಯಕತೆಗೆ ತಕ್ಕಂತೆ ಹಣವು ಒದಗುವ ಭಾಗದಲ್ಲಿ ಇದರಿಂದ ಬಹುಮಟ್ಟಿಗೆ ಸಹಾಯವಾಯಿತೆಂಬುದಾಗಿ ಸೂಚಿಸಲ್ಪಟ್ಟಿದೆ.

ವಿಶ್ವವಿದ್ಯಾನಿಲಯದಲ್ಲಿ ನಾನಾ ತರಗತಿಗಳಿಗೂ ವಿಧಾಯಕವಾಗಿರುವ ಫೀಜುಗಳನ್ನೂ, ಪರೀಕ್ಷೆಗಳಿಗೆ ಕಟ್ಟಲು ಗೊತ್ತಾಗಿರುವ ಫೀಜುಗಳನ್ನೂ, ಈಚೆಗೆ ಹೆಚ್ಚು ಮಾಡಿರುವುದು ಸರಿಯಷ್ಟೆ. ಈ ಮುಖ್ಯವಿಚಾರವನ್ನೂ ಕುರಿತು ಇಲ್ಲಿ ಒಂದೆರಡು ಅಂಶಗಳನ್ನು ಪ್ರಸ್ತಾಪಿಸುವುದು ಯುಕ್ತವಾಗಿದೆ. ಈಚೆಗೆ ಇಂಟರ್ಮೀಡಿಯೆಟ್ ಕಾಲೇಜುಗಳ ಏರ್ಪಾಡನ್ನು ಜಾರಿಗೆ ತಂದಿದ್ದೇವೆ. ಇದರ ದೆಸೆಯಿಂದ ವಿಶ್ವವಿದ್ಯಾನಿಲಯದ ವೆಚ್ಚವು ವಿಶೇಷವಾಗಿ ಹೆಚ್ಚಿದೆ. ಆದರೆ ವಿಶ್ವವಿದ್ಯಾನಿಲಯಕ್ಕೆ ಸಲ್ಲುವ ವಾರ್ಷಿಕ ಮೊತ್ತವು ಮಾತ್ರ ಇದ್ದಷ್ಟೇ ಇದೆ. ಅದು ಹೆಚ್ಚಲು ಅವಕಾಶವಿಲ್ಲವಾಗಿದೆ. ಆದಕಾರಣ, ಮೇಲೆ ಹೇಳಿದ ಹೆಚ್ಚು ವೆಚ್ಚಕ್ಕೆ ತಕ್ಕಷ್ಟು ಮೊಬಲಗು ಒದಗುವ ಸಾಧನೋಪಾಯಗಳನ್ನು ಕಂಡು ಹಿಡಿಯುವ ಭಾರವು ವಿಶ್ವವಿದ್ಯಾನಿಲಯದವರ ಮೇಲೆ ಬಿದ್ದಿತು. ಫೀಜುಗಳ ದರವನ್ನು ಹೆಚ್ಚಿಸುವುದು ಉಚಿತವೇ—ಎಂಬ ಅಂಶವನ್ನು ವಿಚಾರಮಾಡುವುದಕ್ಕಾಗಿ "ಸೆನೆಟ್" ಸಭೆಯವರು ಒಂದು ಸಮಿತಿಯನ್ನು ನೇಮಕಮಾಡಿದರು. ಅದರಲ್ಲಿ ಸೆನೆಟ್ ಸಭೆಯ ಪ್ರತಿನಿಧಿಗಳೂ, "ಯೂನಿವರ್ಸಿಟಿ ಕೌನ್ಸಿಲಿನ" ಪ್ರತಿನಿಧಿಗಳೂ ಮತ್ತು ಕಾಲೇಜುಗಳ ಪ್ರತಿನಿಧಿಗಳೂ ಸಹ ಸದಸ್ಯರಾಗಿದ್ದರು. ಈ ಸಮಿತಿಯಲ್ಲಿ ಇವರೂ ಸೇರಿ, ಒಟ್ಟು ಏಳುಮಂದಿ ಸದಸ್ಯರಿದ್ದರು. ಫೀಜುಗಳ ದರಗಳನ್ನು ಹೆಚ್ಚಿಸಬೇಕೆಂಬುದಾಗಿ ಆ ಏಳು ಮಂದಿಗಳೂ ಏಕವಾಕ್ಯತೆಯಿಂದ ಸಲಹೆಮಾಡಿದರು. ಈ ಸಲಹೆಯು "ಸೆನೆಟ್" ಸಭೆಯವರಿಂದ ಅಂಗೀಕರಿಸಲ್ಪಟ್ಟು ಆ ಬಳಿಕ ಸರ್ಕಾರದವರಿಂದ ಕ್ರಮವಾಗಿ ಮಂಜೂರಾಗಲ್ಪಟ್ಟಿತು.

ಬೊಂಬಾಯಿ, ಮದರಾಸು, ಮೊದಲಾದ ಅಧಿಪತ್ಯಗಳಲ್ಲಿ ಬಹುಕಾಲದ ಹಿಂದೆಯೇ ಸ್ಥಾಪಿತವಾಗಿ ನಡೆದುಬರುತ್ತಿರುವ ವಿಶ್ವವಿದ್ಯಾನಿಲಯಗಳಲ್ಲಿ ಫೀಜಿನ ದರಗಳು ಇಲ್ಲಿಗಿಂತಲೂ ಬಹಳ ಹೆಚ್ಚಾಗಿವೆ. ಇದೂ ಹೋಗಲಿ, ಇಂಡಿಯಾ ದೇಶದ ಇತರ ಪ್ರಾಂತ್ಯಗಳಲ್ಲಿ ಈಚೆಗೆ ಸ್ಥಾಪಿಸಲ್ಪಟ್ಟು ಹೆಚ್ಚು ಸ್ವಾವಲಂಬನೆಯಿಂದ ನಡೆಯುತ್ತಿರುವ ವಿಶ್ವವಿದ್ಯಾನಿಲಯಗಳ ವಿಚಾರವನ್ನು ಬೇಕಾದರೂ ತೆಗೆದುಕೊಳ್ಳೋಣ. ನಮ್ಮ ದೇಶದ ವಿಶ್ವವಿದ್ಯಾನಿಲಯಕ್ಕೂ, ಅವುಗಳಿಗೂ ಹೆಚ್ಚಿನ ಹೋಲಿಕೆಯಿದೆ. ನಾವು ಈಗ ಮಂಜೂರ್ಮಾಡಿರುವ ಫೀಜುಗಳ ದರಗಳಿಗಿಂತಲೂ ಬಹಳ ಹೆಚ್ಚಿನ ದರಗಳಲ್ಲಿ ಆ ವಿಶ್ವವಿದ್ಯಾನಿಲಯಗಳಲ್ಲಿಯೂ ಫೀಜುಗಳು ವಿಧಾಯಕವಾಗಿವೆ.

ಕುಡಿಯುವ ನೀರಿನ ಬಾವಿಗಳು.

ನಮ್ಮ ದೇಶದಲ್ಲಿ ಶುದ್ಧವಾದ ಕುಡಿಯುವ ನೀರು ತಕ್ಕ ಪ್ರಮಾಣದಲ್ಲಿ ದೊರೆಯದೆ ಇರುವುದರಿಂದ ಉಂಟಾಗಿರುವಷ್ಟು ಕಷ್ಟವು ಮತ್ತಾವುದರಿಂದಲೂ ಉಂಟಾಗಿಲ್ಲ. ಆದಕಾರಣ, ಈಗ ಎಲ್ಲಕ್ಕಿಂತಲೂ ಹೆಚ್ಚಾಗಿ ಅತ್ಯವಶ್ಯವಾಗಿ ನಮ್ಮ ದೇಶಕ್ಕೆ ಬೇಕಾಗಿರುವುದು ಸಮೃದ್ಧವಾದ ಜಲವಸತಿಯೊಂದೇ. ಕೆಲವು ಗ್ರಾಮಗಳಲ್ಲಿ ನೀರಿಗೋಸ್ಕರ ಜನರು ಕಷ್ಟಪಡುವುದನ್ನು ನೋಡಿದರೆ, ಬಹಳ ವ್ಯಥೆಯಾಗುತ್ತದೆ. ಎಲ್ಲಿ ನೋಡಿದರೂ ಬೆಳಕುಹರಿಯುವ ವೇಳೆಗೆ ಕೊಡಗಳನ್ನು ಕೈಯಲ್ಲಿ ಹಿಡಿದು, ತಂಡತಂಡವಾಗಿ ಹೊರಡುವ ಜನಗಳೇ! ಊರಲ್ಲಿ ಯಾರನ್ನು ನೋಡಿದರೂ ನೀರನ್ನು ಅರಸುತ್ತ, ದೂರದೂರ ಅಲೆದಾಡುತ್ತಿರುವವರೇ! ಅಷ್ಟು ದೂರ ಹೋದರೂ ನೀರು ದೊರೆಯುವುದೆಂಬ ಭರವಸೆಯಾದರೂ ಉಂಟೆ? ಅದು ಮೊದಲೇ ಇಲ್ಲ. ಅನೇಕ ಮೈಲಿಗಳ ದೂರದಲ್ಲಿರುವ ಯಾವುದೋ ಒಂದು ಬಾವಿಗೋ, ಯಾವುದೋ ಒಂದು ನೀರಿನ ಗುಂಡಿಗೋ ಹೋಗಬೇಕು. ಅಲ್ಲಿ ನೀರು ದೊರೆತರೆ ದೊರೆಯಬಹುದು. ಇಲ್ಲವೇ, ಅಲ್ಲಿಯೂ ನೀರು ಬತ್ತಿಹೋಗಿದ್ದರೂ ಹೋಗಿರಬಹುದು. ಒಂದುವೇಳೆ ನೀರು ದೊರೆತರೂ, ಅದು ಕೊಳಕು ನೀರೋ, ಕಶ್ಮಲದ ನೀರೋ, ಕ್ರಿಮಿಗಳಿಂದ ತುಂಬಿದ ನೀರೋ, ಯಾವ ನೀರೋ ಹೇಳತೀರದು. ಅದನ್ನು ಹುಡುಕಿಕೊಂಡು ಹೋಗಿ ಬೆಳಗಿನಿಂದ ಮಧ್ಯಾಹ್ನದವರೆಗೂ ಅಲೆದಾಡಿ ಪಾಡುಪಡುವವರನ್ನು ನೋಡಿ ಹೊಟ್ಟೆಹಿಡಿಯುವ ಬಗೆ ಹೇಗೆ? ಜನರು ಈ ರೀತಿ ನೀರಿಗಾಗಿ ಕಷ್ಟಪಟ್ಟು ತೊಳಲಿ ಬಳಲುವುದನ್ನು ಕಂಡು ಎಷ್ಟು ಪರಿತಾಪಪಟ್ಟರೂ ತೀರದು. ಮಳೆಯು ಸರಿಯಾಗಿ ನಡೆಸದೆ ಇರುವ ಕಾಲದಲ್ಲಂತು, ನೀರಿನ ಕಷ್ಟವು ಮತ್ತೂ ಉತ್ಕಟವಾಗುತ್ತದೆ. ಆಗ್ಗೆ, ಪ್ರಾಯಶಃ ಊರಿನ ಬಳಿಯಲ್ಲಿರುವ ಬಾವಿಗಳೂ ಕೆರೆಕಟ್ಟೆಗಳೂ ಎಲ್ಲವೂ ಒಣಗಿಹೋಗಿರುತ್ತವೆ. ಉರಿಬಿಸಿಲಿನಲ್ಲಿ ಊರಿನಿಂದ ಎಷ್ಟು ದೂರ ಹೋಗಿ, ಯಾವ ಯಾವ ಸ್ಥಳದಲ್ಲಿ ಹುಡುಕಿದರೂ ತಕ್ಕಷ್ಟು ನೀರು ದೊರೆಯದು. ನೀರನ್ನು ಹುಡುಕಿ ಹುಡುಕಿ ಬಳಲಿ ಬೆಂಡಾಗಿರುವ ಜನಗಳ ಕಷ್ಟವು ದುಸ್ಸಹವಾದುದು.

ಶರೀರ ಸಾಮರ್ಥ್ಯವು ಸರಿಯಾಗಿರುವುದಕ್ಕೂ, ದೇಹನೈರ್ಮಲ್ಯಕ್ಕೂ, ಆರೋಗ್ಯಸಾಧನೆಗೂ, ಪರಿಶುದ್ಧವಾದ ನೀರೇ ಮುಖ್ಯಾವಲಂಬನ. ಆದಕಾರಣ, ಸಮೃದ್ಧಿಯಾಗಿ ನೀರನ್ನೊದಗಿಸುವ ಕಾರ್ಯಕ್ರಮವೂ ಏರ್ಪಟ್ಟಿಲ್ಲದ ಪಕ್ಷಕ್ಕೆ, ಇತರ ಯಾವ ಯಾವ ವಿಧದ ದೇಶೋನ್ನತಿಯ ಪ್ರಯತ್ನಗಳನ್ನು ಎಷ್ಟು ಚೆನ್ನಾಗಿ ನಡೆಸಲು ಪ್ರಯತ್ನಿಸಿದರೂ ಸಾರ್ಥಕವಿಲ್ಲ. ಏಕೆಂದರೆ, ಅಲ್ಲಿಗೆ ಅದು ಅರೆಗೆಲಸವೆನಿಸುವುದೇ ಹೊರತು, ಸರ್ವಸಿದ್ಧತೆಯುಳ್ಳ ಪೂರ್ಣ ಪ್ರಯತ್ನವೆಂಬ ಹೆಸರೆಂದಿಗೂ ಅದಕ್ಕೆ ಸಲ್ಲದು.

ಸರ್ಕಾರದವರೇನೋ ಜಲವಸತಿಯನ್ನು ಒದಗಿಸುವ ಭಾಗದಲ್ಲಿ ವಿಶೇಷವಾಗಿ ಪ್ರಯತ್ನಮಾಡಿಯೂ, ಮಾಡುತ್ತಲೂ ಇದ್ದಾರೆ. ಆದರೂ ಅವರಿಗಿರುವ ದ್ರವ್ಯಾನುಕೂಲತೆಯು ಕೇವಲ ಪರಿಮಿತವಾಗಿದೆ. ಆದುದರಿಂದ ಅವರಿಗೆ ಇನ್ನೂ ಎಷ್ಟೋ ಆಸೆಯಿದ್ದೂ ಕೂಡ, ಈಗ ನಡೆಯುತ್ತಿರುವಷ್ಟರಿಂದಲೇ ತೃಪ್ತರಾಗಿ, ಅವರು ನಿರ್ವಾಹವಿಲ್ಲದೆ ಸುಮ್ಮನಿರಬೇಕಾಗಿದೆ. ಜಲವಸತಿಯನ್ನು ಪಡೆಯುವುದಕ್ಕಾಗಿ ವಿಜ್ಞಾನಶಾಸ್ತ್ರ ಪರಿಶೋಧನೆಗಳ ಮೂಲಕ ಒದಗಿಸಲ್ಪಟ್ಟಿರುವ ಎಲ್ಲ ಸಾಧನಗಳನ್ನೂ ಉಪಯೋಗಿಸಿಕೊಳ್ಳುವುದೇ ಈ ಉದ್ದೇಶ ಸಾಧನೆಗೆ ನಮಗಿರುವ ಮಾರ್ಗ. ಇನ್ನು ಯಂತ್ರದ ಸಹಾಯದಿಂದ ಬಾವಿಗಳನ್ನು ತೋಡಿಸುವ ವಿಚಾರವನ್ನು ಪರ್ಯಾಲೋಚಿಸೋಣ. ಹೀಗೆ ಮಾಡುವುದೇ ನಮ್ಮ ಈ ಉದ್ದೇಶವು ನೆರವೇರುವುದಕ್ಕೆ ಅತ್ಯುತ್ತಮವಾದ ಉಪಾಯವೆಂಬುದು ಈಚಿನ ಅನುಭವದಿಂದ ಕಂಡುಬಂದಿದೆ. ಸಾಮಾನ್ಯವಾದ ರೀತಿಯಲ್ಲಿ ಹಾರೆ ಗುದ್ದಲಿಗಳಿಂದ ಬಾವಿಗಳನ್ನು ತೋಡಿಸುವುದಕ್ಕಿಂತಲೂ, ಈ ಯಂತ್ರದ ಸಹಾಯದಿಂದ ಬಾವಿಗಳನ್ನು ತೋಡಿಸುವುದು ಅತಿ ಸುಲಭ ವೆಚ್ಚದಲ್ಲಿ ಸಾಗುತ್ತದೆ. ಅಷ್ಟೇ ಅಲ್ಲ. ಭೂಮಿಯಲ್ಲಿ ಬಂಡೆಯು ಸಿಕ್ಕಿದಾಗ ಆ ಬಂಡೆಯನ್ನು ಕೂಡ ಬಹಳ ಆಳದವರೆಗೂ ಈ ಯಂತ್ರದ ಸಹಾಯದಿಂದ ಕೊರೆದು, ಧ್ರುವಜಲವನ್ನು ಪಡೆಯಬಹುದು. ಯಂತ್ರದ ಸಹಾಯವಿಲ್ಲದೆ, ಸಾಮಾನ್ಯರೀತಿಯಲ್ಲಿ ಬಾವಿಗಳನ್ನು ತೋಡುವಾಗ, ಇಷ್ಟು ಆಳದವರೆಗೆ ಬಂಡೆಯನ್ನು ಬಗೆದು ನೀರನ್ನು ಕಾಣುವುದೆಂದಿಗೂ ಸಾಧ್ಯವೇ ಇಲ್ಲ. ಯಂತ್ರದ ಸಹಾಯದಿಂದ ಈ ರೀತಿ ಬಂಡೆಯನ್ನು ಕೊರೆದು ಜಲವಸತಿಯನ್ನು ಪಡೆದರೆ, ಅಗ್ಗೆ ದೊರೆಯುವ ನೀರು ಕೇವಲ ಪರಿಶುದ್ಧವಾಗಿಯೂ ಇರುತ್ತದೆ. ಕುಡಿಯುವುದಕ್ಕೆ ಯೋಗ್ಯವಾಗಿಯೂ ಇರುತ್ತದೆ. ತಿಪಟೂರು ಮುಂತಾದ ಕೆಲವು ಸ್ಥಳಗಳಲ್ಲಿ ತೋಡಿಸಿರುವ ಬಾವಿಗಳನ್ನು ಇದಕ್ಕೆ ನಿದರ್ಶನವಾಗಿ ಹೇಳಬಹುದಾಗಿದೆ. ಈ ಬಾವಿಗಳಲ್ಲಿ ಪ್ರತಿಯೊಂದರಿಂದಲೂ ಘಂಟೆಯೊಂದಕ್ಕೆ ಸುಮಾರು 1,000 ಗ್ಯಾಲನ್ನುಗಳಷ್ಟು ನೀರು ಒದಗುತ್ತದೆ. ಸಮೃದ್ಧಿಯಾಗಿ ನೀರನ್ನು ಒದಗಿಸುವುದು ಹೇಗೆಂಬುದೇ ಇದುವರೆಗೂ ಒಂದು ದೊಡ್ಡ ಸಮಸ್ಯೆಯಾಗಿದ್ದಿತು. ಅದನ್ನು ಬಗೆಹರಿಸುವ ಭಾಗದಲ್ಲಿ ದಿಕ್ಕೇ ತೋರುತ್ತಿರಲಿಲ್ಲವೆಂದರೂ ಸಲ್ಲುವುದು. ಯಂತ್ರದಿಂದ ಬಾವಿಗಳನ್ನು ತೋಡಿಸುವ ಅನುಕೂಲವು ದೊರೆತುದರಿಂದ, ನಮ್ಮ ತೊಂದರೆಗಳನ್ನೆಲ್ಲಾ ಪರಿಹರಿಸಿಕೊಳ್ಳಲು ಅತಿ ಸುಲಭವಾದ ಮತ್ತು ಕಾರ್ಯಕಾರಿಯಾದ ಉಪಾಯವು ದೊರೆತಹಾಗಾಯಿತು. ಭೂಮಿಯ ಕೆಳಗೆ ಆಳವಾಗಿ ತೋಡಿದರೆ, ಜಲವಸತಿಯು ದೊರೆಯದೆಹೋಗುವ ಪ್ರದೇಶವು ನಮ್ಮ ಸಂಸ್ಥಾನದಲ್ಲಿ ಪ್ರಾಯಶಃ ಎಲ್ಲಿಯೂ ಇಲ್ಲವೆಂಬುದಾಗಿ ನಮ್ಮ ಸಂಸ್ಥಾನದಲ್ಲಿರುವ ಭೂಗರ್ಭಶಾಸ್ತ್ರಜ್ಞರು ತಿಳಿಸುತ್ತಾರೆ. ಮಲೆನಾಡಿನ ಒಳಾಯ ಪ್ರದೇಶಕ್ಕೆ ಸೇರಿರುವ ಕೆಲವು ಗ್ರಾಮಗಳಲ್ಲಿ ಸಾಕಾದಷ್ಟು ಕುಡಿಯುವ ನೀರು ದೊರೆಯದೆ ಸರ್ವಕಾಲಗಳಲ್ಲಿಯೂ ತೊಂದರೆಯಾಗಿದೆ. ಬಹುಕಾಲದಿಂದಲೂ ಹೀಗೆ ನೀರಿಗೆ ಕಷ್ಟವಾಗಿ, ಅಲ್ಲಿನ ಸ್ಥಿತಿಯು ವಿಚಿತ್ರವಾಗಿರುವಂತೆ ತೋರುತ್ತದೆ. ತಥಾಪಿ ಅಂಥ ಸ್ಥಳಗಳಲ್ಲಂತು, ಹೀಗೆ ಯಂತ್ರದ ಸಹಾಯದಿಂದ ಬಾವಿಗಳನ್ನು ತೋಡಿಸಿದರೆ, ವಿಶೇಷ ಅನುಕೂಲವಾಗುವ ಸಂಭವವುಂಟು. ಬಾವಿಗಳನ್ನು ತೋಡುವ ಇಂತಹ ಯಂತ್ರಸಾಧನಗಳು ಈಗ ನಮ್ಮ ವರ್ಕ್‌ಷಾಪಿನಲ್ಲಿಯೇ ತಯಾರಾಗುತ್ತಾ ಇವೆ. ಅವುಗಳು ವಿಶೇಷ ಸುಲಭವೆಚ್ಚದಲ್ಲಿ ತಯಾರಾಗುತ್ತಿರುವುದಲ್ಲದೆ, ಹೊರದೇಶಗಳಿಂದ ಬರುವ ಅಂತಹ ಯಂತ್ರಗಳಷ್ಟೇ ಉತ್ತಮವಾಗಿಯೂ ಇವೆ. ಇದನ್ನು ಕೇಳಿ ತಮ್ಮೆಲ್ಲರಿಗೂ ಸಂತೋಷವಾಗಬಹುದೆಂಬುದಾಗಿ ನಾನು ನಂಬಿದ್ದೇನೆ.

ಜಲವಸತಿಯನ್ನೊದಗಿಸುವ ಈ ವಿಷಯವು ಕೇವಲ ಪ್ರಾಮುಖ್ಯವಾದುದಾಗಿರುತ್ತದೆ ಮತ್ತು ಅದರ ಫಲಿತಾಂಶಗಳೂ ಸಹ, ಬಹುದೂರ ವ್ಯಾಪಿಸತಕ್ಕವುಗಳಾಗಿವೆ. ಆದಕಾರಣ, ಇಷ್ಟು ಮುಖ್ಯವಾಗಿರುವ ಕೆಲಸಕ್ಕೆ ಆಯಾ ವರುಷದ ಸ್ಥಿತಿಗತಿಗಳನ್ನನುಸರಿಸಿ, ಆಗ್ಗೆ ದೊರೆತಷ್ಟು ಹಣವನ್ನು ಮಾತ್ರವೇ ಕೊಡುತ್ತಾ ಬರುವುದು ಸರಿಯಲ್ಲ. ಇದು ಆಯಾ ವರುಷದ ಆಯವ್ಯಯದ ಸ್ಥಿತಿಗೆ ಅಧೀನವಾಗಿರುವಂತೆ ಕೈಬಿಡುವಂತಹ ಸಾಮಾನ್ಯ ವಿಚಾರವಲ್ಲ. ಆದುದರಿಂದ, ಒಂದು ಗೊತ್ತಾದ ಕಾರ್ಯಕ್ರಮದ ನಿಯಮವನ್ನು ನಿರ್ಧರಮಾಡಿಟ್ಟುಕೊಂಡು, ಸುವ್ಯವಸ್ಥಿತವಾದ ಒಂದು ಏರ್ಪಾಡಿನ ಮೇರೆಗೆ ಈ ಭಾಗದಲ್ಲಿ ನಾವು ಕೆಲಸವನ್ನು ನಡೆಸಬೇಕು. ಹೀಗೆ ಮಾಡಬೇಕಾದುದು ಅತ್ಯಾವಶ್ಯಕವೆಂದು ನನ್ನ ಮನಸ್ಸಿಗೆ ತೋರುತ್ತದೆ.

ಇಂಥ ಕಾರ್ಯಕ್ರಮದ ನಿಯಮವನ್ನು ಯಾವ ರೀತಿ ಇರುವಂತೆ ಗೊತ್ತುಮಾಡಬೇಕೆಂಬುದನ್ನು ವಿಚಾರಮಾಡುವುದಕ್ಕೆ ಇದೀಗ ಸಕಾಲವಾಗಿರುವಂತೆ ತೋರುತ್ತದೆ. ಯುಕ್ತವಾದೊಂದು ಅವಧಿಯೊಳಗಾಗಿ ಪ್ರತಿಯೊಂದು ಗ್ರಾಮಕ್ಕೂ ಸಾಕಾದಷ್ಟು ಕುಡಿಯುವ ನೀರು ಒದಗುವಂತೆ ಮಾಡುವುದಕ್ಕಾಗಿ ಒಂದು ಕಾರ್ಯಕ್ರಮವನ್ನು ರಚಿಸಿಟ್ಟುಕೊಂಡು, ಅದರಂತೆ ಕೆಲಸ ನಡೆಸುವುದು ಸರ್ಕಾರದವರ ಮತ್ತು ಸ್ಥಳೀಯ ಸಂಸ್ಥೆಗಳವರ ಅವಶ್ಯಕರ್ತವ್ಯವಾಗಿದೆ. ಈ ಅವಧಿಯನ್ನು ಮುಸಲಾ ಹತ್ತು ವರುಷಗಳೆಂದು ಗೊತ್ತುಮಾಡಬಹುದು. ಅಂತು, ಹೀಗೆ ಗೊತ್ತಾದ ಕಾಲಾವಧಿಯೊಳಗಾಗಿ ಈ ಕಾರ್ಯವನ್ನು ನೆರವೇರಿಸಬೇಕು. ಇದಕ್ಕೆ ಹಣವನ್ನೊದಗಿಸುವ ಬಗೆ ಹೇಗೆಂಬ ಪ್ರಶ್ನೆಯು ಹುಟ್ಟಬಹುದು. ಈಗಿನ ಆವಶ್ಯಕತೆಗಳಲ್ಲಿ ಅತಿ ಮುಖ್ಯವಾದುವುಗಳಲ್ಲೊಂದಾದ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಹಣವನ್ನೊದಗಿಸುವುದಕ್ಕಾಗಿ ಅನುಸರಿಸುವಂಥ ಕ್ರಮವೇ, ಪ್ರಾಯಶಃ ಈ ವಿಷಯದಲ್ಲಿಯೂ ಶ್ರೇಷ್ಠವಾದುದಾಗಿರಬಹುದು. ಸದ್ಯದಲ್ಲಿ ಈ ವಿಷಯವನ್ನು ಕುರಿತು ನಾನು ಮತ್ತೇನನ್ನೂ ಹೆಚ್ಚಾಗಿ ಹೇಳುವುದಿಲ್ಲ. ನನ್ನ ಅಭಿಪ್ರಾಯಗಳನ್ನು ಸಾಮಾನ್ಯವಾಗಿ ಸೂಚಿಸಿರುತ್ತೇನೆ. ತಾವುಗಳೂ ಸಹ ಈ ವಿಷಯಕ್ಕೆ ಗಮನವನ್ನು ಕೊಟ್ಟು, ತಕ್ಕ ಸಾಧನೋಪಾಯಗಳನ್ನು ಕಲ್ಪಿಸುವುದಕ್ಕೆ ಸಹಾಯಮಾಡುವಿರೆಂದು ನಂಬಿದ್ದೇನೆ.

ಆರೋಗ್ಯ ಪರಿಶೀಲನೆ (ಹೆಲ್ತ್ ಸರ್ವೆ.)

ಮಲೇರಿಯಾ ಜ್ವರದ ಸಂಬಂಧದಲ್ಲಿ ಯಾವ ಯಾವ ಪ್ರಾಂತ್ಯದ ಜನರಲ್ಲಿ ಜ್ವರದ ಗಡ್ಡೆಗಳು ಇವೆಯೆಂಬುದನ್ನು ಪರಿಶೀಲನೆಮಾಡುವ ಕೆಲಸವನ್ನು ಸರ್ಕಾರದವರು ಡಾಕ್ಟರ್ ಸ್ಟೀಟ್‌ರವರಿಗೆ ವಹಿಸಿದ್ದರು. ಅವರು ಸಂಸ್ಥಾನದ ನಾನಾ ಪ್ರದೇಶಗಳಿಗೂ ಹೋಗಿ, ಪರಿಶೀಲನೆಗಳನ್ನು ನೆರವೇರಿಸಿದರು. ಅದರ ಫಲಿತಾಂಶವಾಗಿ, ಮಲೇರಿಯಾ ಜ್ವರದ ಹಾವಳಿಯನ್ನು ತಗ್ಗಿಸುವ ಉದ್ದೇಶದಿಂದ (ಮೈಸೂರು ತಾಲ್ಲೂಕಿನ) ನಾಗೇನಹಳ್ಳಿ, ಮೂಡಿಗೆರೆ, ಮತ್ತು ಹಿರಿಯೂರು—ಈ ಮೂರು ಸ್ಥಳಗಳಲ್ಲಿಯೂ ಒಂದೊಂದು ಪ್ರಯೋಗಕ್ಷೇತ್ರವು ಸ್ಥಾಪಿಸಲ್ಪಟ್ಟಿತು. ಅಲ್ಲಿ ಮಲೇರಿಯಾ ಜ್ವರದ ಸಂಬಂಧವಾಗಿ ಅನೇಕ ಪ್ರಯೋಗಗಳು ನಡೆದುವು. ಇದುವರೆಗೆ ಅಲ್ಲಿ ನಡೆದಿರುವ ಕಾರ್ಯಕಲಾಪಗಳ ಫಲಿತಾಂಶವಾಗಿ, ಮಲೇರಿಯಾ ಜ್ವರದ ಹಾವಳಿಯನ್ನಡಗಿಸಿ ಹತೋಟಿಗೆ ತರುವುದಕ್ಕೆ ಸಾಧಕವಾದ ಏರ್ಪಾಡುಗಳನ್ನು ಡಾಕ್ಟರ್ ಸ್ಟೀಟ್‌ರವರು ಅತಿ ಶೀಘ್ರದಲ್ಲಿಯೇ ಆಚರಣೆಗೆ ತರುವವರಾಗಿದ್ದಾರೆ.

ಅಮೇರಿಕಾ ಖಂಡದ ಕೋಟ್ಯಾಧೀಶ್ವರರಲ್ಲೊಬ್ಬರಾದ ರಾಕ್‌ಫೆಲರ್ ಎಂಬ ಪುಣ್ಯಾತ್ಮರು ಕೊಟ್ಟ ನಿಧಿಯ ಸಹಾಯದಿಂದ "ರಾಕ್‌ಫೆಲರ್ ಫೌಂಡೇಷನ್" ಎಂಬ ಹೆಸರಿನ ವ್ಯವಸ್ಥೆಯೊಂದು ಏರ್ಪಟ್ಟಿದೆಯಷ್ಟೆ. ನಮ್ಮ ಸಂಸ್ಥಾನದಲ್ಲಿ ರೋಗಗಳ ವಿಚಾರವನ್ನು ಪರಿಶೀಲನೆಮಾಡಲು ಕೆಲವು ವರುಷಗಳ ಕಾಲ ಕೆಲಸಮಾಡುವುದಕ್ಕಾಗಿ ಡಾಕ್ಟರ್ ಸ್ಟೀಟ್‌ರವರನ್ನು ಕಳುಹಿಸಿ ಕೊಟ್ಟಿರುವವರೂ ಆ ವ್ಯವಸ್ಥೆಯ ಆಡಳಿತಗಾರರೇ. ಅವರು ಡಾಕ್ಟರ್ ಸ್ಟೀಟ್‌ರವರನ್ನು ಇನ್ನೂ ಸ್ವಲ್ಪಕಾಲ ಇಲ್ಲಿ ಇಟ್ಟಿರುವುದಲ್ಲದೆ 1930 ನೆಯ ಇಸವಿ ಜನವರಿ 1 ನೆಯ ತಾರೀಖಿನಿಂದ ಮೂರು ವರುಷಗಳವರೆಗೆ ಇಲ್ಲಿ ಕೆಲಸಮಾಡಲು ಒಬ್ಬರು ಸ್ಯಾನಿಟರಿ ಇಂಜನಿಯರವರನ್ನೂ ಕಳುಹಿಸಿಕೊಡುವುದಾಗಿ ದಯೆಯಿಟ್ಟು ಒಪ್ಪಿರುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯ "ಸ್ಯಾನಿಟರಿ ಇಂಜನಿಯರಿಂಗ್" ಶಾಖೆಯನ್ನು, ಈ ಸ್ಯಾನಿಟರಿ ಇಂಜನಿಯರವರ ಹತೋಟಿಗೆ ವಹಿಸಬೇಕೆಂಬುದಾಗಿ ಸರ್ಕಾರದವರು ಆಲೋಚಿಸಿದ್ದಾರೆ.

ನಗರಾಭಿವೃದ್ಧಿ ಮತ್ತು ಗ್ರಾಮಾಭಿವೃದ್ಧಿ.

ನಗರಾಭಿವೃದ್ಧಿಯ ವಿಚಾರದಲ್ಲಿ ಮ್ಯುನಿಸಿಪಾಲಿಟಿಗಳೇ ಮೊದಲಾದ ಆಯಾ ಸ್ಥಳೀಯ ಸಂಸ್ಥೆಗಳವರಿಗೆ ಸಹಾಯಮಾಡುವುದು; ಸ್ಥಳ ನೈರ್ಮಲ್ಯ, ಜಲಮಾರ್ಗಗಳ ಮತ್ತು ಚರಂಡಿಗಳ ಏರ್ಪಾಡು, ನೀರು ಸರಬರಾಯಿ, ಈ ಮೂರು ಬಾಬುಗಳ ಕೆಲಸವೂ ಈಗಿರುವುದಕ್ಕಿಂತ ಇನ್ನೂ ಉತ್ತಮವಾಗುವ ಹಾಗೆ ತನ್ನ ಕಾರ್ಯಕ್ರಮಗಳನ್ನು ರಚಿಸಿ ಆಯಾ ಸಂಸ್ಥೆಗಳವರಿಗೆ ಒದಗಿಸಿಕೊಡುವುದು; ಈ ಎರಡು ಕಾರ್ಯಗಳನ್ನೂ ನೆರವೇರಿಸುವುದಕ್ಕಾಗಿ ಸ್ಯಾನಿಟರಿ ಇಲಾಖೆಗೆ ಒಂದು ಹೊಸ ಸಿಬ್ಬಂದಿಯನ್ನು ಈಗ ಸುಮಾರು ಮೂರು ವರುಷಗಳ ಹಿಂದೆ ನೇಮಿಸಿದೆವು. ಈ ಸಂಗತಿಯು ತಮಗೆ ವೇದ್ಯವಿರಬಹುದು. ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ಈ ಸಂಬಂಧದ ಕಾಮಗಾರಿಗಳಿಗಾಗಿ ಸರ್ಕಾರದವರು ಪ್ರತಿ ವರ್ಷವೂ ಸುಮಾರು 1¼ ಲಕ್ಷ ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದಾರೆ.

ಈ ಸಿಬ್ಬಂದಿಯವರು ಮ್ಯುನಿಸಿಪಾಲಿಟಿಗಳಿಗೋಸ್ಕರ ಸುಮಾರು ಒಂದು ಸಾವಿರ ನಕ್ಷೆಗಳನ್ನೂ, ಕಾರ್ಯಕ್ರಮದ ವಿವರಗಳನ್ನೂ (ಎಂದರೆ, "ಪ್ಲಾನು" ಗಳನ್ನೂ, "ಪ್ರಾಜೆಕ್ಟು" ಗಳನ್ನೂ) ತಯಾರುಮಾಡಿ ಕೊಟ್ಟಿದ್ದಾರೆ. ಇದನ್ನು ನೋಡಿದರೆ, ಸರ್ಕಾರದವರು ಒದಗಿಸಿಕೊಟ್ಟ ಈ ಸೌಕರ್ಯಗಳನ್ನೂ ಮ್ಯುನಿಸಿಪಾಲಿಟಿಗಳವರು ವಿಶೇಷವಾಗಿ ಉಪಯೋಗಿಸಿಕೊಂಡಿರುವರೆಂಬ ಸಂಗತಿಯು ವ್ಯಕ್ತವಾಗುತ್ತದೆ. ಅತಿ ವಿಶೇಷವಾಗಿ ಗಮನಕೊಡುತ್ತಿರುವ ಅಂಶಗಳಲ್ಲಿ ಟೌನುಗಳ ಬಡಾವಣೆಯ ಏರ್ಪಾಡು ಒಂದಾಗಿದೆ. ಮ್ಯುನಿಸಿಪಾಲಿಟಿಗಳೇ ಮುಂತಾದ ಸ್ಥಳೀಯ ಸಂಸ್ಥೆಗಳವರು ತಮ್ಮ ಊರುಗಳನ್ನು ಬಡಾವಣೆಗೊಳಿಸಿ ವಿಸ್ತೀರ್ಣವನ್ನು ಹೆಚ್ಚು ಮಾಡಿಕೊಳ್ಳುವುದೊಂದರಿಂದಲೇ ತೃಪ್ತರಾಗಿಲ್ಲ. ಊರಿನ ರಮಣೀಯತೆಯು ಹೆಚ್ಚುವಂತೆ ಅವರು ಅನೇಕ ಉದ್ಯಾನಗಳನ್ನೂ, ಉಪವನಗಳನ್ನೂ ನಿರ್ಮಿಸಿಕೊಂಡಿದ್ದಾರೆ. ಅಲ್ಲದೆ, ಊರಿಗೆ ಅಲಂಕಾರಪ್ರಾಯವಾಗಿರುವಂತೆ ಕಟ್ಟಡಗಳು ಏಳಲು ಕೂಲಿಸುವಂತೆ ಸಾರ್ವಜನಿಕ ಭವನಗಳೇ ಮೊದಲಾದುವುಗಳಿಗಾಗಿ ಪ್ರತ್ಯೇಕರೀತಿಯಲ್ಲಿ ನಿವೇಶನಗಳನ್ನು ಕೊಟ್ಟಿದ್ದಾರೆ. ಇದೆಲ್ಲವನ್ನೂ ನೋಡಿದ ನಮ್ಮ ದೇಶಬಾಂಧವರಿಗೆ ತಮ್ಮ ಊರಿನ ಸೌಂದರ್ಯವನ್ನು ಹೆಚ್ಚುಮಾಡಿಕೊಳ್ಳುವುದರಲ್ಲಿಯೂ ಅಭಿರುಚಿಯುಂಟೆಂಬುದೂ, ಅವರು ಅದರ ವಿಷಯದಲ್ಲಿಯೂ ತೀವ್ರಾಸಕ್ತಿಯುಳ್ಳವರಾಗಿದ್ದಾರೆಂಬುದೂ ವ್ಯಕ್ತವಾಗಿ, ತನ್ಮೂಲಕ ಮನಸ್ಸಿನಲ್ಲಿ ಎಷ್ಟೋ ಹರ್ಷವುಂಟಾಗುತ್ತದೆ.

ಕಳೆದ ಐದು ವರುಷಗಳಿಂದೀಚೆಗೆ, ಮುಖ್ಯಮುಖ್ಯವಾದ ಒಂಭತ್ತು ಊರುಗಳಿಗೆ ಕುಡಿಯುವ ನೀರಿನ ವಸತಿಯನ್ನು ಕಲ್ಪಿಸಿಕೊಡಲಾಗಿದೆ. ಇವುಗಳಲ್ಲಿ ಎರಡು ಊರುಗಳು ಡಿಸ್ಟ್ರಿಕ್ಟು ಕಸಬೆಗಳಾಗಿವೆ. ಇತರ 17 ಊರುಗಳಿಗೆ ನೀರು ಸರಬರಾಯಿ ಕಾಮಗಾರಿಯ ಕಾರ್ಯಕ್ರಮದ ವಿವರಗಳನ್ನು (ಎಂದರೆ, "ಪ್ರಾಜೆಕ್ಟು" ಗಳನ್ನು) ರಚಿಸಿ ಒದಗಿಸಲಾಗಿದೆ. ಊರುಗಳನ್ನು ವಿಸ್ತರಿಸುವುದಕ್ಕಾಗಿ ಬೇರೆಬೇರೆ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿ ಬಡಾವಣೆಗೊಳಿಸುವುದು; ಸಂತೆಯ ಮಾಳಗಳನ್ನು ಅಚ್ಚುಕಟ್ಟಾಗಿ ಏರ್ಪಡಿಸುವುದು; ಮಾದರಿ ಗ್ರಾಮಗಳನ್ನೇರ್ಪಡಿಸುವುದು; ಮಾದರಿಯ ಮನೆಗಳು, ಮಾದರಿಯ ಪಣ್ಯಶಾಲೆಗಳು (ಎಂದರೆ, ಮಾದರಿಯ "ಮಾರ್ಕೆಟ್ಟು" ಗಳು) ಮುಂತಾದವುಗಳನ್ನು ಕಟ್ಟಿಸುವುದು; ಈ ನಾಲ್ಕು ವಿಚಾರಗಳಲ್ಲಿಯೂ ಮ್ಯುನಿಸಿಪಾಲಿಟಿಗಳೇ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ನಕ್ಷೆಗಳೂ, ಸಲಹೆಗಳೂ ವಿಶೇಷವಾಗಿ ಒದಗಿಸಲ್ಪಟ್ಟಿವೆ. ಊರುಗಳನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿಯೂ, ನೈರ್ಮಲ್ಯರಕ್ಷಣೆಯ ವಿಚಾರದಲ್ಲಿಯೂ ಪ್ರಜೆಗಳು ತೀವ್ರಾಸಕ್ತಿಯನ್ನು ತೋರ್ಪಡಿಸಿದ್ದಾರೆ. ಅಲ್ಲದೆ ಈ ಭಾಗದಲ್ಲಿ ಅವರು ಸರ್ಕಾರದವರಿಗೆ ನೆರವಾಗಿ ನಿಂತು ವಿಶೇಷ ಶ್ರದ್ಧೆಯಿಂದ ಕೆಲಸ ನಡೆಸಿಯೂ, ನಡೆಸುತ್ತಲೂ ಬಂದಿದ್ದಾರೆ. ಇದೇ ರೀತಿಯಲ್ಲಿ ಏಕಪ್ರಕಾರವಾಗಿ ಇನ್ನು ಮುಂದೆಯೂ ಅಭಿವೃದ್ಧಿಕಾರ್ಯಗಳು ನಡೆಯುತ್ತಾ ಹೋದರೆ ನಮ್ಮ ದೇಶದ ಗ್ರಾಮಗಳು ಇನ್ನು ಸ್ವಲ್ಪ ಕಾಲದೊಳಗಾಗಿಯೇ ವಿಶೇಷ ಅಭಿವೃದ್ಧಿಗೆ ಬರುತ್ತವೆ; ಅಲ್ಲದೆ ಅವು ಸೌಂದರ್ಯದ ಸೊಬಗಿನಿಂದ ಕೊಂಪುಗೂಡಿ ಮೆರೆಯುವಂತಾಗುತ್ತವೆ. ನಾವೆಲ್ಲರೂ ಅವುಗಳನ್ನು ನೋಡಿ ಅಭಿಮಾನದಿಂದ ತಲೆದೂಗಿ ಆನಂದಪಡುವುದಕ್ಕೆ ಸರ್ವತೋಮುಖವಾದ ಕಾರಣಗಳಿರುವ ಸುದಿನವು ಬೇಗನೆ ಬರುತ್ತದೆ. ನನ್ನ ಅಭಿಪ್ರಾಯದಲ್ಲೇನೋ ಗ್ರಾಮಗಳು ಹೀನಸ್ಥಿತಿಯಲ್ಲಿರುವುದೆಂದಿಗೂ ಉತ್ತಮವಾದ ರಾಜ್ಯಾಡಳಿತಕ್ರಮದ ಲಕ್ಷಣವಲ್ಲ. ಗ್ರಾಮಗಳು ಮಾತ್ರ ಹೀನಸ್ಥಿತಿಯಲ್ಲಿ ಹಿಂದೆ ಬಿದ್ದಿದ್ದು, ಇತರ ವಿಚಾರಗಳಲ್ಲಿ ಎಷ್ಟು ವಿಚಕ್ಷಣೆಯಿದ್ದರೂ ಸಾರ್ಥಕವಿಲ್ಲ. ಗ್ರಾಮಗಳು ಎಷ್ಟೆಷ್ಟು ಅಭಿವೃದ್ಧಿಸ್ಥಿತಿಯಲ್ಲಿದ್ದರೆ ಆಡಳಿತಕ್ರಮವೂ ಅಷ್ಟಷ್ಟು ಉತ್ತಮವಾದುದೆಂದು ಧಾರಾಳವಾಗಿ ಹೇಳಬಹುದು. ಇದೇ ನಿರ್ಧರವಾದ ನನ್ನ ಅಭಿಪ್ರಾಯ.

ಸ್ಥಳೀಯ ಪ್ರಜಾಧಿಕಾರದ ಏರ್ಪಾಡು.

ಇನ್ನು ಸ್ಥಳೀಯ ಪ್ರಜಾಧಿಕಾರದ ಏರ್ಪಾಡನ್ನು ಕುರಿತು ಒಂದೆರಡು ಸಂಗತಿಗಳನ್ನು ತಮಗೆ ಶ್ರುತಪಡಿಸಲಿಚ್ಛಿಸುತ್ತೇನೆ. ಅದರ ವಿಷಯವಾಗಿ ಬೇರೆ ಸಂದರ್ಭದಲ್ಲಿ ಮೊನ್ನೆ ಮೊನ್ನೆ ಪ್ರಸ್ತಾಪಿಸಿದ್ದೇನೆ. ಆಗ್ಗೆ ಸೂಚಿಸಿದ ಅಂಶವನ್ನೇ ಮತ್ತೊಮ್ಮೆ ಇಲ್ಲಿ ಪ್ರಸ್ತಾಪಿಸುತ್ತೇನೆ. ಗ್ರಾಮಪಂಚಾಯಿತಿಗಳು, ಮ್ಯುನಿಸಿಪಾಲಿಟಿಗಳು ಡಿಸ್ಟ್ರಿಕ್ಟು ಬೋರ್ಡುಗಳು—ಇವೇ ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ಸಾಧ್ಯವಾದ ಮಟ್ಟಿಗೂ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಅವು ಅಭಿವೃದ್ಧಿಗೆ ಬರುವಂತೆ ಉತ್ತೇಜನಕೊಡುವ ವಿಷಯದಲ್ಲಿ ಸರ್ಕಾರದವರು ಬದ್ಧಸಂಕಲ್ಪದಿಂದ ಕೂಡಿದ್ದಾರೆ. ಪ್ರಜಾವರ್ಗದವರು ಈ ಸಂಸ್ಥೆಗಳ ಕಾರ್ಯಕಲಾಪಗಳನ್ನು ಎಷ್ಟೆಷ್ಟು ವಿಚಕ್ಷಣೆಯಿಂದ ನಡೆಸಿ ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳಲು ಎಷ್ಟೆಷ್ಟು ಸಮರ್ಥರಾದರೆ ಸರ್ಕಾರದವರಿಗೂ ಅಷ್ಟಷ್ಟು ಹೆಚ್ಚಿನ ತೃಪ್ತಿಯುಂಟಾಗುವುದು. ಹೀಗೆ ಮಾಡುವುದರಿಂದ ಅವರು ಸರ್ಕಾರದವರ ಭಾರವನ್ನೂ ಹೆಚ್ಚುಹೆಚ್ಚಾಗಿ ಇಳುಕಿ ಹಗುರಮಾಡಿ ಕೊಟ್ಟಂತಾಗುವುದು. ಅಷ್ಟೇ ಅಲ್ಲ. ಪ್ರಜಾವರ್ಗದವರು ಹೀಗೆ ನಿಷ್ಪಕ್ಷದಿಂದಲೂ, ವಿಚಕ್ಷಣೆಯಿಂದಲೂ ಸ್ಥಳದ ಆಡಳಿತವನ್ನು ನಿರ್ವಹಿಸುತ್ತ ಬಂದಹಾಗೆಲ್ಲಾ, ಸರ್ಕಾರದವರೂ ಅಭಿಮಾನಪರವಶರಾಗಿ ಆನಂದಗೊಳ್ಳುವರು. ಈ ಸಂಸ್ಥೆಗಳವರು ನಡೆಯಿಸುವ ಕಾರ್ಯಕಲಾಪಗಳಿಗೆ ಅಡ್ಡಬಂದು, ಅವುಗಳಲ್ಲಿ ಕೈಹಾಕುವುದರಲ್ಲಿ, ಸರ್ಕಾರದವರಿಗೆ ಸಂತೋಷವೇನೂ ಇಲ್ಲ. ಒಂದು ವೇಳೆ ನಿರ್ವಾಹವಿಲ್ಲದೆ ಸರ್ಕಾರದವರು ಹಾಗೆ ಕೈಹಾಕಬೇಕಾಗಿ ಬಂದರೆ, ಆ ಸಂಸ್ಥೆಗಳ ಯೋಗಕ್ಷೇಮದ ದೃಷ್ಟಿಯಿಂದ ಅವರು ಆ ರೀತಿ ಮಾಡುತ್ತಾರೆಯೇ ಹೊರತು, ಅನ್ಯಥಾ ಇಲ್ಲ. ಈ ವಿಷಯವನ್ನು ತಾವು ಖಚಿತವಾಗಿಯೂ ನಂಬಬಹುದೆಂಬುದಾಗಿ ನಾನು ಪೂರ್ಣಭರವಸೆ ಕೊಡುತ್ತೇನೆ.

ಸರ್ಕಾರದವರು ಈ ವಿಷಯದಲ್ಲಿ ಉದಾರಭಾವನೆಗಳಿಂದ ಕೂಡಿ ಕಾರ್ಯನಿಯಮವೊಂದನ್ನು ನಿಗದಿ ಮಾಡಿಕೊಂಡೇ ಇದ್ದಾರೆ. ಇದಕ್ಕೆ ನಿದರ್ಶನವಾಗಿ ಒಂದು ಸಂಗತಿಯನ್ನು ನಾನು ತಮಗೆ ಶ್ರುತಪಡಿಸಲಿಚ್ಛಿಸುತ್ತೇನೆ. ಬೆಂಗಳೂರು ನಗರದ ಪೌರ ಕಾರ್ಯನಿರ್ವಾಹಕ ಸಭೆಯವರು ತಮ್ಮ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಮತ್ತೆ ಅವರಿಗೆ ಕೊಡಬೇಕೆಂಬುದಾಗಿ ಸರ್ಕಾರದವರು ನಿರ್ಧರಿಸಿದ್ದಾರೆ. ಕಾರ್ಯತಃ ಸಾಧ್ಯವೆಂದಷ್ಟು ಶೀಘ್ರವಾಗಿ ಅವರಿಗೆ ಈ ಅಧಿಕಾರವನ್ನು ಮತ್ತೆ ಕೊಡಲಾಗುತ್ತದೆ. ಸರ್ಕಾರದವರು ಅನುಸರಿಸಬೇಕೆಂದಿರುವ ಕಾರ್ಯನಿಯಮದ ಉದಾರಭಾವವನ್ನು ಸೂಚಿಸುವ ಮತ್ತೊಂದು ಅಂಶವನ್ನೂ ತಮ್ಮ ಅವಗಾಹನೆಗೆ ತರಲು ಇಚ್ಛಿಸುತ್ತೇನೆ. ಮೈಸೂರು, ಶಿವಮೊಗ್ಗ, ಕಡೂರು, ತುಮಕೂರು ಮತ್ತು ಚಿತ್ರದುರ್ಗ ಈ ಡಿಸ್ಟ್ರಿಕ್ಟುಗಳಲ್ಲಿ ಡಿಸ್ಟ್ರಿಕ್ಟು ಬೋರ್ಡುಗಳ ಸದಸ್ಯರು ತಮ್ಮ ತಮ್ಮ ಡಿಸ್ಟ್ರಿಕ್ಟು ಬೋರ್ಡಿಗೆ ಅಧ್ಯಕ್ಷರಾಗಿರಲು ಸರ್ಕಾರಿ ಉದ್ಯೋಗಸ್ಥರಲ್ಲದವರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂಬುದಾಗಿ ಸರ್ಕಾರದವರು ತೀರ್ಮಾನಿಸಿದ್ದಾರೆ. ಈಗ್ಗೆ ಕೆಲವು ವರುಷಗಳ ಹಿಂದೆ ಸರ್ಕಾರದವರು ಕೆಲವು ಡಿಸ್ಟ್ರಿಕ್ಟು ಬೋರ್ಡುಗಳಿಗೆ ಈ ಅಧಿಕಾರವನ್ನು ಕೊಟ್ಟಿದ್ದರಷ್ಟೆ. ಹಾಗೆ ಅಧಿಕಾರವನ್ನು ಪಡೆದಿರುವ ಡಿಸ್ಟ್ರಿಕ್ಟು ಬೋರ್ಡುಗಳಲ್ಲಿ ಸರ್ಕಾರಿ ಅಧಿಕಾರಿಗಳಲ್ಲದವರೇ ಅಧ್ಯಕ್ಷರಾಗಿದ್ದಾರೆ. ಅವರುಗಳು ಕೇವಲ ದಕ್ಷತೆಯಿಂದಲೂ ವಿಚಕ್ಷಣೆಯಿಂದಲೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿಕೊಂಡು ಬಂದಿರುವುದನ್ನು ನೋಡಿ, ಸರ್ಕಾರದವರಿಗೆ ವಿಶೇಷ ಸಂತೋಷವುಂಟಾಯಿತು. ಅಲ್ಲದೆ, ಈಗ ಮತ್ತೆ ನಾಲ್ಕು ಡಿಸ್ಟ್ರಿಕ್ಟು ಬೋರ್ಡುಗಳಿಗೆ ಈ ಅಧಿಕಾರವನ್ನು ಕೊಡಲು ಸರ್ಕಾರದವರಿಗೆ ಪ್ರೇರಣೆಯುಂಟಾದುದೂ ಇದರ ದೆಸೆಯಿಂದಲೇ. ಈಗ ಹೊಸದಾಗಿ ಈ ಅಧಿಕಾರವನ್ನು ಕೊಡುವ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿಯೂ ಸಹ ಅವುಗಳಂತೆಯೇ ಅಷ್ಟೇ ವಿಚಕ್ಷಣೆಯಿಂದ ಕೆಲಸ ನಡೆಯುವುದೆಂಬುದಾಗಿ ನಾವು ನಿಸ್ಸಂದೇಹವಾಗಿ ಭರವಸೆಯನ್ನಿಟ್ಟುಕೊಳ್ಳಬಹುದಾಗಿದೆ.

ಪರಿಸಮಾಪ್ತಿ.

ಕಳೆದ ವರುಷದಲ್ಲಿ ನಡೆದ ಆಡಳಿತಗಳನ್ನೂ, ಕಾರ್ಯಕಲಾಪಗಳನ್ನೂ ಕುರಿತು ನಾನು ವಿಮರ್ಶೆಮಾಡಿ ವಿವರಿಸಿದುದು ಇಲ್ಲಿಗೆ ಪೂರೈಸಿತು. ಆ ಸಂಬಂಧದಲ್ಲಿ ನಾನು ಮತ್ತಾವ ಸಂಗತಿಗಳನ್ನೂ ತಮಗೆ ಶ್ರುತಪಡಿಸಬೇಕಾದುದಿಲ್ಲ.

ಮಹನೀಯರೆ, ಪ್ರಜೆಗಳಲ್ಲಿ ಪ್ರತಿಯೊಂದು ಪಂಗಡದವರೂ ಸುಖಸಂತೋಷಗಳಿಂದ ಕೂಡಿ ಪರಿತೃಪ್ತರಾಗಿ ಜೀವನಮಾಡುವುದಕ್ಕೆ ಸಾಧಕವಾದ ಸೌಕರ್ಯಗಳೆಲ್ಲವನ್ನೂ ಉಂಟುಮಾಡಿಕೊಡಬೇಕಾದುದೇ ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದೆ. ಮಹತ್ತರವಾದ ಈ ಕರ್ತವ್ಯ ಸಾಧನೆಯ ಪ್ರಯತ್ನದಲ್ಲಿ ನಾವೆಲ್ಲರೂ ಒಟ್ಟುಗೂಡಿ ವರ್ತಿಸೋಣ. ಯಾವುದೊಂದರಿಂದಲೂ ಲೇಶಮಾತ್ರವೂ ವ್ಯಗ್ರಚಿತ್ತರಾಗದೆ ಏಕಾಗ್ರಬುದ್ಧಿಯಿಂದ ಕೂಡಿ ವ್ಯವಹರಿಸೋಣ. ಪ್ರಜೆಗಳಲ್ಲಿ ಸಮಸ್ತ ಪಂಗಡದವರಿಗೂ ಸುಖದ ಸುಗ್ಗಿಯು ಸಂಪೂರ್ಣವಾಗಿ ದೊರೆಯುವವರೆಗೂ ಸಂತತವೂ ಅವಿಶ್ರಾಂತರಾಗಿ ದುಡಿದು ಧನ್ಯರಾಗೋಣ. ಕೃಪಾಳುವಾದ ಭಗವಂತನು ನಮ್ಮ ಅಭೀಷ್ಟಸಿದ್ಧಿಯನ್ನು ದಯಪಾಲಿಸಿ ಅನುಗ್ರಹಿಸಲೆಂಬುದೇ ನನ್ನ ಭಕ್ತಿಪೂರ್ವಕವಾದ ಪ್ರಾರ್ಥನೆ!

ಮಿರ್ಜಾ ಎಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನ್‌ರವರು.

ಪಂಚಾಚಾರ್ಯ ಪ್ರಭಾ

೧೯೨೯ನೇ ಅಕ್ಟೋಬರ್ ತಾ|| ೨೧ನೇ ಸೋಮವಾರ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮತ್ತು ಮೈಸೂರು ಪ್ರಜಾಪ್ರತಿನಿಧಿಸಭೆ.

ಪ್ರತಿವರ್ಷವೂ ದಸರಾಮಹೋತ್ಸವ ಸಮಯದಲ್ಲಿ ನೆರವೇರತಕ್ಕ ಪ್ರಜಾಪ್ರತಿನಿಧಿಸಭೆಯು ಈ ವರ್ಷವಾದರೂ ಜಗನ್ಮೋಹನ ಪ್ರಾಸಾದದಲ್ಲಿ ಸಂಸ್ಥಾನದ ಅಮಾತ್ಯವರ್ಯರಾದ ಮೆ|| ಮಿರ್ಜಾ ಎಂ. ಇಸ್ಮಾಯಿಲ್ ಬಿ.ಎ., ಒ.ಬಿ.ಇ., ಯವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಈ ಅಧಿವೇಶನಕ್ಕೆ ಸಂಸ್ಥಾನದ ಯಾವತ್ತೂ ಡಿಸ್ಟ್ರಿಕ್ಟುಗಳಿಂದ ಯಾವತ್ತೂ ಮೆಂಬರರು ಆಗಮಿಸಿದ್ದರು. ಸಂಸ್ಥಾನಾಭಿವೃದ್ಧಿಕರಗಳಾದ ಅನೇಕ ನಿರ್ಣಯಗಳು ಸರ್ವಾನುಮತದಿಂದ ಪಾಸಾದವು. ಅವುಗಳಲ್ಲಿ ವೀರಶೈವರ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕಂಥ ನಿರ್ಣಯವು ಒಂದಾಗಿದೆ. ಆ ನಿರ್ಣಯವೇ "ಶ್ರೀ ರೇಣುಕಾಚಾರ್ಯರ ಜಯಂತಿರಜಾ" ಎಂಬ ಹೆಸರಿನಿಂದ ಪ್ರಜ್ವಲಿತವಾಗಿದೆ. ದಯಾಳುಗಳಾದ ಮೈಸೂರು ಸರಕಾರದವರು ತಮ್ಮ ರಾಜ್ಯದಲ್ಲಿರತಕ್ಕ ಯಾವತ್ತೂ ಮತೀಯ ಪ್ರಜೆಗಳ ಪ್ರಾರ್ಥನಾನುಸಾರವಾಗಿ ಆಯಾಯ ಮತಸ್ಥಾಪನಾಚಾರ್ಯರ ಜಯಂತಿದಿನಗಳಿಗಾಗಿ ರಜಾಕೊಟ್ಟಿದ್ದು, ವೀರಶೈವಮತಸ್ಥಾಪನಾಚಾರ್ಯರ ಜಯಂತಿದಿನಗಳಿಗೋಸ್ಕರ ಇಲ್ಲಿಯವರೆಗೂ ರಜಾ ಮಂಜೂರ್ಮಾಡದೆ ಇದ್ದ ವಿಷಯವನ್ನು ಸದಸದ್ವಿವೇಕಶಾಲಿಗಳಾದ ಅನೇಕಜನ ಮಹನೀಯರು ಕಂಡು ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ರಜಾ ಮಂಜೂರ್ಮಾಡಿಸಬೇಕೆಂಬ ಸತ್ಪ್ರಯತ್ನವಿಶೇಷದಿಂದ ಈಗ್ಗೆ 1-2 ವರ್ಷಗಳಿಂದ ಈ ವಿಷಯವನ್ನು ಸರಕಾರದವರ ದೃಷ್ಟಿಗೆ ತಂದು ಚರ್ಚಿಸುತ್ತ ಬಂದರೂ ಸಹ, ಯಾವ ಪ್ರಯೋಜನವೂ ದೊರೆತಿದ್ದಿಲ್ಲ. ಆದರೆ ಮೊನ್ನೆ ನೆರವೇರಿದ ಪ್ರಜಾಪ್ರತಿನಿಧಿ ಸಮ್ಮೇಳನದಲ್ಲಿ ಈ ವಿಷಯವು ಸರ್ವಪ್ರಜಾಪ್ರತಿನಿಧಿಗಳ ಏಕಾಭಿಪ್ರಾಯದಿಂದ ಪಾಸಾಗಿರುವದೆಂಬ ವಿಷಯವನ್ನು ಕೇಳಿ ಭರತಖಂಡದಲ್ಲಿರತಕ್ಕ ಸಮಸ್ತ ವೀರಶೈವರೂ ಹಾಗೂ ಶ್ರೀ ರೇಣುಕನ ಭಕ್ತರಾಗಿದ್ದ ಇತರ ಮತೀಯರೂ ಮೈಸೂರು ಸರಕಾರದವರಿಗೂ ಹಾಗೂ ಸಕಲ ಮತೀಯ ಪ್ರಜಾಪ್ರತಿನಿಧಿ ಮೆಂಬರರಿಗೂ ಚಿರಕೃತಜ್ಞರಾಗಿದ್ದಾರೆಂಬು ಹೇಳಬೇಕಾಗಿದೆ. ತಾ|| 18-10-29 ನೆಯ ದಿವಸ ನೆರವೇರಿದ ಸಭೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿದಿನವಾದ ಫಾಲ್ಗುಣ ಶು|| ತ್ರಯೋದಶೀ ದಿನವನ್ನು ದಯಾಳುಗಳಾದ ಮೈಸೂರು ಸರಕಾರದವರು ರಜಾದಿನವನ್ನಾಗಿ ಮಂಜೂರ್ಮಾಡಬೇಕೆಂಬ ಆಶಯಗರ್ಭಿತವಾದ ನಿರ್ಣಯವನ್ನು ಹಾಸನ ಡಿ|| ಶ್ರವಣಬೆಳಗೊಳ ನಿವಾಸಿಗಳಾದ ಮ|| ರಾ|| ಎಸ್. ವಿ. ಗುರುಮೂರ್ತ್ಯಾಚಾರ್ಯರೆಂಬ ವಿಶ್ವಕರ್ಮಸಂಗಡಕ್ಕೆ ಸೇರಿದ ಮಹಾಶಯರು ಸಭೆಯಮುಂದೆ ತಂದರು. ಈ ವಿಷಯವನ್ನು ಕಡೂರು ಡಿ|| ಆಲ್ದೂರು ನಿವಾಸಿಗಳಾದ ಮ|| ರಾ|| ಬಿ. ಪಿ ಬಸವಪ್ಪಶೆಟ್ಟರವರು ಅನುಮೋದಿಸಿದ್ದಲ್ಲದೆ ಮೈಸೂರು ಸರಕಾರದವರು ಸಕಲ ಮತಸ್ಥಾಪನಾಚಾರ್ಯರ ಜಯಂತಿದಿನಗಳಿಗೋಸ್ಕರ ರಜಾ ಮಂಜೂರ್ಮಾಡಿ ವೀರಶೈವಮತಸ್ಥಾಪನಾಚಾರ್ಯರ ಜಯಂತಿ ದಿನಗಳಿಗೆ ರಜಾ ಮಂಜೂರ್ಮಾಡದಿರುವದು ಸಕಲ ವೀರಶೈವರ ಮನಸ್ಸಿಗೆ ವ್ಯಾಕುಲವನ್ನುಂಟುಮಾಡಿರುವದೆಂದೂ, ಶ್ರೀ ರೇಣುಕಾಚಾರ್ಯರ ಧರ್ಮಪೀಠವು ಮೈಸೂರು ಸಂಸ್ಥಾನಕ್ಕೆ ಸೇರಿರುವದರಿಂದ ಆ ಪೀಠಾಚಾರ್ಯರ ಜಯಂತಿ ದಿನವನ್ನು ಅವಶ್ಯವಾಗಿ ರಜಾದಿನವನ್ನಾಗಿ ಮಂಜೂರ್ಮಾಡುವಂತೆ ಆರ್ಡರು ಮಾಡಬೇಕೆಂದೂ, ಕಳೆದ ಫಾಲ್ಗುಣ ಶು|| ತ್ರಯೋದಶೀದಿವಸ ಬೆಂಗಳೂರು ಪಟ್ಟಣದಲ್ಲಿ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಭೆಯಲ್ಲಿ ನಿರ್ಣಯಿಸಲ್ಪಟ್ಟ ಪ್ರಕಾರವೂ ಭರತಖಂಡದಲ್ಲಿರುವ ಸಮಸ್ತವೀರಶೈವರೂ ತಮ್ಮ ದಯಾಳು ಸರಕಾರವನ್ನು ಪ್ರಾರ್ಥಿಸಿಕೊಂಡ ಪ್ರಕಾರವೂ, ಫಾಲ್ಗುಣ ಶುದ್ಧ ತ್ರಯೋದಶೀ ದಿವಸವನ್ನು ರಜಾದಿವಸವನ್ನಾಗಿ ಅವಶ್ಯವಾಗಿ ಮಂಜೂರ್ಮಾಡಬೇಕೆಂಬದಾಗಿ ಸಮರ್ಥಿಸಿ ಹೇಳಿದರು. ಆ ಮೇಲೆ ಮೈಸೂರು ರಾಜಧಾನಿಯ ನಿವಾಸಿಗಳಾದ ಮ|| ರಾ|| ಬಿ. ನರಸಿಂಗರಾಯರೆಂಬ ಮಹೋದಯರವರು ಎಲ್ಲಾ ಮತದ ಮೂಲಾಚಾರ್ಯರ ಜಯಂತಿ ದಿನಗಳಿಗೋಸ್ಕರ ನಮ್ಮ ಸರಕಾರದವರು ರಜಾ ಕೊಟ್ಟಂತೆ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಾಚಾರ್ಯರ ಜಯಂತಿ ದಿನಕ್ಕೂಕೂಡ ರಜೆಯನ್ನು ಅವಶ್ಯವಾಗಿ ಕೊಟ್ಟೇ ತೀರಬೇಕೆಂದು ಪ್ರತಿಪಾದಿಸಿದರು. ಇದೇ ವಿಷಯವನ್ನು ಮ|| ರಾ|| ಚಿಕ್ಕಮಗಳೂರು ಟೌನ್ ನಿವಾಸಿಗಳಾದ ಮ|| ರಾ|| ಎಂ. ಸಿದ್ಧಲಿಂಗಪ್ಪಶೆಟ್ಟರವರು ಅನುಮೋದಿಸಿದರು. ಆಮೇಲೆ ರಾಜಧಾನಿಯ ನಿವಾಸಿಗಳಾದ ಮ|| ರಾ|| ವೆಂಕಟಕೃಷ್ಣಯ್ಯನವರೆಂಬ ವಿವೇಕಶಾಲಿಗಳು ಸರ್ವಮತಸ್ಥಾಪನಾಚಾರ್ಯರ ಜಯಂತಿ ದಿನಗಳಿಗೆ ರಜಾಕೊಟ್ಟರುವಂತೆ ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಾಚಾರ್ಯರ ಜಯಂತಿ ದಿನಕ್ಕೂ ಕೂಡ ಸರಕಾರದವರು ರಜಾ ಕೊಡಬೇಕೆಂದೂ, ಕೊಡುವದಾಗುವದಿಲ್ಲವೆಂಬ ಪಕ್ಷದಲ್ಲಿ ಎಲ್ಲಾ ಮತಾಚಾರ್ಯರ ಜಯಂತಿ ದಿನಗಳಿಗೆ ಈಗ ಕೊಟ್ಟಿರುವ ರಜವನ್ನು ತೆಗೆದುಹಾಕಬೇಕೆಂದೂ ಅತ್ಯಂತ ದೂರವಿಚಾರಪೂರಿತ ದೃಷ್ಟಿಯಿಂದ ಪ್ರತಿಪಾದಿಸಿದರು. ಈ ರೀತಿಯಾಗಿ ಸರ್ವರೂ ಏಕಾಭಿಪ್ರಾಯದಿಂದ ರಜಾ ಮಂಜೂರಿಯನ್ನು ಕೇಳಿಕೊಳ್ಳುತ್ತಿದ್ದರೂ ಕೂಡ ಮೊದಲು ಸರಕಾರದವರು "ನಾಸ್ತಿ" ಎಂಬ ದೊಡ್ಡ ಉತ್ತರವನ್ನೇ ಕೊಟ್ಟರಂತೆ! ಆಮೇಲೆ ಪುನಃ ಚರ್ಚೆಯಾಗಲು ಸರಕಾರದವರು ಈ ವಿಷಯದಲ್ಲಿ ಯಾರ ಯಾರ ಅಭಿಪ್ರಾಯವು ಯಾವ ಯಾವ ರೀತಿಯಾಗಿರುವದೆಂಬುದಕ್ಕೆ ಓಟು ಕೊಡಬೇಕೆಂದು ಹೇಳಲು, ಆ ಪ್ರಚಂಡಸಭೆಯಲ್ಲಿ ಕೂಡಿದ ಯಾವತ್ತೂ ಮತೀಯ ಮೆಂಬರರು ಯಾವ ಮತಭೇದಬುದ್ಧಿಯನ್ನಿಡದೆ, ಸರ್ವರೂ ಅನನ್ಯಕವಾಗಿ ಜಯಂತಿಗೆ ರಜಾ ಮಂಜೂರುಮಾಡಬೇಕೆಂದು ಕೈಎತ್ತಿ ಹೇಳಿದರು. ಇದಕ್ಕೆ ವಿರುದ್ಧವಾಗಿ ಒಬ್ಬರೂ ತಮ್ಮ ಅಭಿಪ್ರಾಯವನ್ನು ಸೂಚಿಸಿದೆ ಇರುವದನ್ನು ನೋಡಿದರೆ ಸರ್ವ ಮೆಂಬರರ ಶುದ್ಧಹೃದಯ ಸುವಿಚಾರತ್ವವನ್ನು ತೋರ್ಪಡಿಸುತ್ತದೆ. ವೀರಶೈವಮತಸ್ಥಾಪನಾಚಾರ್ಯ ಜಯಂತಿ ರಜಾ ನಿರ್ಣಯದ ವಿಷಯದಲ್ಲಿ ಸಕಲ ಮತೀಯರೂ ಅನ್ಯೋನ್ಯ ಪ್ರೇಮಭಾವದಿಂದ ವರ್ತಿಸಿ ಈ ನಿರ್ಣಯವನ್ನು ಸರ್ವಾನುಮತದಿಂದ ಪಾಸುಮಾಡಿಸಿದ್ದಕ್ಕಾಗಿ ಸಭೆಯ ಸಮಸ್ತ ಮೆಂಬರರಿಗೂ ಯಾವತ್ತು ವೀರಶೈವರು ಚಿರಋಣಿಗಳಾಗಿದ್ದಾರೆಂದು ಕೈಯೆತ್ತಿ ಹೇಳಬಹುದಾಗಿದೆ. ಭರತಖಂಡದಲ್ಲಿರತಕ್ಕ ಪ್ರತಿಯೊಬ್ಬ ಗುರುಭಕ್ತರೂ ತಮ್ಮ ತಮ್ಮ ಗ್ರಾಮಗಳಲ್ಲಿ ಸಭೆಯನ್ನು ಕೂಡಿಸಿಯಾಗಲಿ, ಅಥವಾ ಅರ್ಜಿಗಳ ಮುಖಾಂತರವಾಗಲಿ, ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿದಿನವಾದ ಫಾಲ್ಗುಣ ಶುದ್ಧ ತ್ರಯೋದಶಿ ದಿನವನ್ನು ದಯಾಳುಗಳಾದ ಮೈಸೂರು ಸರಕಾರದವರು ಕೂಡಲೇ ರಜಾದಿನವನ್ನಾಗಿ ಮಂಜೂರ್ಮಾಡಿರುವದಾಗಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿ ಸಮಸ್ತ ವೀರಶೈವರ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕೆಂಬ ಅಭಿಪ್ರಾಯವನ್ನು ಬರೆಯಿಸಿ ಅದರ ಕೆಳಗೆ ಅನೇಕ ಜನರ ರುಜು ಮಾಡಿಸಿ, "ಚೀಫ್ ಸೆಕ್ರೆಟರಿ, ಮೈಸೂರು ಗೌರ್ನಮೆಂಟ್, ಬೆಂಗಳೂರು ಸಿಟಿ," ಎಂಬ ಅಡ್ರೆಸ್ಸಿಗೆ ಬರೆದುಕೊಳ್ಳಬೇಕೆಂದು ಕೋರುತ್ತೇವೆ. ದಯಾಳುಗಳಾದ ಮೈಸೂರು ಸರಕಾರದವರು ಈ ವಿಷಯವನ್ನು ಪೂರ್ಣಚಿತ್ತಕ್ಕೆ ತಂದುಕೊಂಡು ಕೂಡಲೇ ಮಂಜೂರುಮಾಡಿ ಸಕಲ ವೀರಶೈವರ ಚಿರಕೃತಜ್ಞತೆಗೆ ಪಾತ್ರರಾಗಬೇಕೆಂದೂ, ಈ ಕಾರ್ಯದಲ್ಲಿ ಒಮ್ಮನಸ್ಸಿನಿಂದ ಕಾರ್ಯವನ್ನು ಕೈಕೊಂಡ ಸಮಸ್ತ ಮತೀಯ ಮೆಂಬರರಿಗೆ ಜಗದೀಶ್ವರನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದೂ, ನಮ್ಮನ್ನಾಳುವ ಸಾಕ್ಷಾತ್ ಧರ್ಮಾವತಾರಿಗಳಾದ ಶ್ರೀಮತ್ಕೃಷ್ಣಭೂಪಾಲರವರ ಕೀರ್ತಿಯು ಆಚಂದ್ರಾರ್ಕವಾಗಿ ಈ ಪೃಥ್ವೀಮಂಡಲದಲ್ಲಿ ಪ್ರಕಾಶಿಸಲೆಂದೂ, ಮಹಿಮಾಕರರಾದ ಆ ಶ್ರೀ ಜಗದ್ಗುರು ರೇಣುಕಾಚಾರ್ಯರನ್ನು ಭಕ್ತಿಭಾವದಿಂದ ಭಜಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಈ ತಿಂಗಳ ಅಂತ್ಯಭಾಗದಲ್ಲಿ ಕೋಲಾರಕ್ಕೆ ದಯಮಾಡುವರೆಂದು ಕೇಳುತ್ತೇವೆ.

ಈಗಿನ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಅವಧಿಯು 1929 ನೇ ಜೂನ್ ತಿಂಗಳಿಗೆ ಮುಗಿದು ಹೋಗಿರುವುದೆಂದೂ. ಹೊಸದಾಗಿ ಸಂಸ್ಥಾನಾವಳಿ ಪ್ರತಿನಿಧಿಗಳ ಚುನಾವಣೆಯು 1930 ನೇ ಮಾರ್ಚಿ ತಾ|| 8 ನೇ ಶನಿವಾರ ನಡೆಯತಕ್ಕದ್ದೆಂದೂ ಸರ್ಕಾರದವರು ಇಸ್ತಿಹಾರನ್ನು ಪ್ರಕಟಿಸಿರುತ್ತಾರೆ.

ನಾರುಹುಣ್ಣನ್ನು ಸಮೂಲವಾಗಿ ನಾಶಮಾಡುವಂಥ ಔಷಧವನ್ನು ದಾವಣಗೇರಿಯಲ್ಲಿರುವ ಮ||ರಾ|| ರಾಜೇನಹಳ್ಳಿ ಗೋವಿಂದಪ್ಪನವರ ಅಂಗಡಿಯಲ್ಲಿ ಧರ್ಮಾರ್ಥವಾಗಿ ಕೊಡುವರೆಂದೂ, ಈ ಔಷಧವನ್ನು ಸೇವಿಸಿದರೆ ಈ ರೋಗವು ಖಂಡಿತವಾಗಿ ಗುಣ[illegible]ವದೆಂದೂ, ಮ|| ರಾ|| ಶಿವಲಿಂಗಾರಾಧ್ಯ ಸ[illegible]ಸ್ಟರ್ ಎಂಬವರು ಸ್ವಂತ ಅನುಭವದ ಮೇಲೆ ತಿ[illegible]ಸಿದ್ದಾರೆ.

ಕಳೆದ ಮಂಗಳವಾರ (ತಾ|| 22) ರಾಜಧಾನಿಯ ಲಲಿತಾದ್ರಿ ಬಡಾವಣೆಯಲ್ಲಿ ಕೆಲವು ದಿನಗಳಿಂದ ಕಾಯಿಲೆಯಾಗಿದ್ದ ಲೇಟ್ ದಳವಾಯಿ ದೇವರಾಜೇ ಅರಸಿನವರ ಪತ್ನಿಯವರು ಕಾಲವಾದರೆಂದು ಕೇಳಿ ವಿಷಾದಿಸುತ್ತೇವೆ. ಬಹು ಜನರಿಗೆ ಆಶ್ರಯದಾತರಾಗಿಯೂ, ಸ್ವಧರ್ಮನಿಷ್ಠೆಯುಳ್ಳವರಾಗಿಯೂ, ಉದಾರಚಿತ್ತರಾಗಿಯೂ ಇದ್ದ ಇವರು ಕಾಲವಾದದ್ದು ಸಂತಾಪಕರವಾಗಿದೆ. ಅರಮನೆಯ ಮರ್ಯಾದೆಗಳ ಸಮೇತ ಶವವನ್ನು ಸಾಗಿಸಿ ಸಾಯಂಕಾಲ ಸಂಸ್ಕಾರಗಳು ನೆರವೇರಿದವು.

ಬೆಂಗಳೂರಿನ ಡೈರಿಫಾರಮ್ಮಿನಲ್ಲಿದ್ದ ಜಿಲ್ ಎಂಬ ಆಕಳು ಕೆಲವು ದಿನಗಳ ಹಿಂದೆ ಮೃತಪಟ್ಟಿತು. ಅದು 1909 ನೆಯ ಇಸವಿಯಲ್ಲಿ ಹುಟ್ಟಿ 16 ವರ್ಷಗಳಲ್ಲಿ 16 ಸಾರೆ ಕರುಗಳನ್ನು ಹಾಕಿತು. ಪ್ರತಿಸಾರೆ ಕರುವನ್ನು ಹಾಕಿದಾಗಲೂ 295 ದಿನಗಳ ವರೆಗೆ ಹಾಲು ಕೊಡುತ್ತಿದ್ದು, ಮುಂದೆ 52 ದಿನಗಳು ಮಾತ್ರ ಹಾಲು ಕೊಡುತ್ತಿರಲಿಲ್ಲ. ಅದು ವರ್ಷ ಒಂದಕ್ಕೆ 9,544 ಪೌಂಡು ಅಂದರೆ ಸರಾಸರಿ ದಿನ ಒಂದಕ್ಕೆ 7½ ತಂಬಿಗೆಯಷ್ಟು ಹಾಲನ್ನು ಕೊಡುತ್ತಿದ್ದಿತು. ಹುಟ್ಟಿದಾರಭ್ಯ ಸಾಯುವವರೆಗೆ ಅದಕ್ಕೆ ಯಾವ ಕಾಯಿಲೆಯೂ ಬಂದಿರಲಿಲ್ಲವಂತೆ!

ಈಚೆಗೆ ಕೆಲವು ಕಾರಣಗಳಿಂದ ಪತ್ರಿಕಾಕರ್ತರುಗಳಿಗೆ ಪ್ರಜಾಪ್ರತಿನಿಧಿ ಮುಂತಾದ ಸಭೆಗಳಿಗೆ ಬರುವದಕ್ಕೆ ಸರಕಾರದವರಿಂದ ಒದಗಿಸಲ್ಪಡುತ್ತಿದ್ದ ಅನುಕೂಲಗಳು ನಿಲ್ಲಿಸಲ್ಪಟ್ಟಿದ್ದುದು ಸರಿಯಷ್ಟೆ! ಈ ವಿಷಯದಲ್ಲಿ ಆ ಅನುಕೂಲಗಳನ್ನು ಪುನಃ ಕಲ್ಪಿಸಿಕೊಡಬೇಕೆಂದು ಅನೇಕ ಪತ್ರಿಕಾಕರ್ತರು ಸರಕಾರದವರಲ್ಲಿ ಬಿನ್ನೈಸಿಕೊಳ್ಳುತ್ತಲೇ ಇದ್ದರು. ಈ ಸಾರೆ ನಡೆದ ದಸರಾ ಅಧಿವೇಶನದಲ್ಲಿ ಘನಹೊಂದಿದ ನಮ್ಮ ಸರಕಾರದವರು ಪತ್ರಿಕಾಕರ್ತರುಗಳ ಸೌಲಭ್ಯವನ್ನು ಎಂದಿನಂತೆ ಕಲ್ಪಿಸಿಕೊಡುವ ವಾಗ್ದಾನಮಾಡಿರುವರೆಂಬುದನ್ನು ಕೇಳಿ ಸಂತೋಷಿಸುತ್ತೇವೆ.

ಸರಕಾರದವರು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರ ಸಲಹೆಯ ಮೇರೆ ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ 1929-30 ನೆಯ ಸಾಲಿಗೆ 50,000 ರೂಪಾಯಿಗಳನ್ನು ಹೆಚ್ಚಾಗಿ ಸ್ಯಾಂಕ್ಷನ್ ಮಾಡಿರುವರು. ಈ ಹಣದಲ್ಲಿ 36,435 ರೂ. ಗಳ ವೆಚ್ಚದಿಂದ 145 ಸ್ಕೂಲುಗಳು ಹೊಸದಾಗಿ ಸ್ಥಾಪಿಸಲ್ಪಡುವುವು. 9,180 ರೂ. ಗಳ ವೆಚ್ಚದಿಂದ 60 ಏಡೆಡ್ ಸ್ಕೂಲುಗಳು ಸರ್ಕಾರೀ ಸ್ಕೂಲುಗಳಾಗಿ ಮಾಡಲ್ಪಡುವುವು. ಮತ್ತು 3,600 ರೂ. ಗಳ ವೆಚ್ಚದಿಂದ ಈಗಿರುವ ಪ್ರಾಥಮಿಕ ವಿದ್ಯಾಶಾಲೆಗಳಿಗೆ 15 ಜನ ಉಪಾಧ್ಯಾಯರು ಹೆಚ್ಚಾಗಿ ನೇಮಿಸಲ್ಪಡುವರು.

ವರ್ತಮಾನಸಂಗ್ರಹ.

ಪ್ಯಾಲೆಸ್ಟೈನಿನಲ್ಲಾದ ಗಲಾಟೆಗಳ ಫಲವಾಗಿ ನೂರಾರು ಮಂದಿ ಅಮೇರಿಕಾಕ್ಕೆ ಓಡಿ ಹೋಗುತ್ತಿದ್ದಾರೆ.

ಇಂಗ್ಲೆಂಡಿನಲ್ಲಿ ಒಟ್ಟು 10.000 ಬ್ಯಾಂಕುಗಳಿರುವವು. ಅದರಲ್ಲಿ ಲಂಡನ್ ಪಟ್ಟಣವೊಂದರಲ್ಲಿಯೇ 1,700 ಬ್ಯಾಂಕುಗಳಿರುವವಂತೆ!

ಕಲ್ಕತ್ತೆಯ ಕಿತ್ತಾನಾರು ಗಿರಣಿಯೊಂದರಲ್ಲಿ 3400 ಮಂದಿ ಕೆಲಸಗಾರರು ಮುಷ್ಕರಹಿಡಿದು ಇಡೀ ಗಿರಣಿಯೇ ಮುಚ್ಚಲ್ಪಟ್ಟಿರುವುದು.

ಜೆರೂಸಲೇಮಿನಲ್ಲಿ ಬ್ರಿಟಿಷರು ಯೆಹೋದ್ಯರ ಕಡೆ ಪಕ್ಷಪಾತ ತೋರಿಸಿದರೆಂದು ಹೇಳಿ ಅರಬರು ಒಂದು ದಿನ ಪ್ರಚಂಡಮುಷ್ಕರ ಹಿಡಿದರು.

ಅಮೇರಿಕೆಯ ಚಿಕಾಗೋ ಪಟ್ಟಣದಲ್ಲಿ ಒಂದುಗಂಟೆಗೆ 40,000 ಇಟ್ಟಿಗೆಗಳನ್ನು ತಯಾರ್ಮಾಡುವ ಒಂದು ಹೊಸಯಂತ್ರವನ್ನು ನಿರ್ಮಿಸಿರುವರು.

ಮಹಾತ್ಮ ಗಾಂಧಿಯವರು ಸಂಯುಕ್ತ ಸಂಸ್ಥಾನದ 20 ಜಿಲ್ಲೆಗಳಲ್ಲಿ ಸಂಚರಿಸಿ ರೂ. 1,31,500 ನ್ನು ಸಂಗ್ರಹಿಸಿರುವರು. ಇವರೀಗ ಮುಸೂರಿಗೆ ಹೋಗಿ ಅಲ್ಲಿ ತಾ|| 24 ರ ವರೆಗೆ ವಿಶ್ರಾಂತಿ ತೆಗೆದುಕೊಳ್ಳಲಿರುವರು.

ಸಾಧಾರಣವಾಗಿ ಗಟ್ಟಿಮುಟ್ಟಾದ ಒಬ್ಬ ಮನುಷ್ಯನು 8 ಘಂಟೆಗಳ ಕಾಲ ನೆಲವನ್ನು ಅಗೆದರೆ, ಆಗ ಅವನ ಶರೀರದಲ್ಲಿ 5 ಸೇರು ಮಂಜಿನಗಡ್ಡೆಯನ್ನು ನೀರಾಗಿ ಮರಳಿಸುವಷ್ಟು ಉಷ್ಣವು ಉತ್ಪತ್ತಿಯಾಗುವದಂತೆ!

14 ನೆಯ ತಾರೀಖು ಮೊರಾಕೋದಲ್ಲಿ ದೇಶೀಯ ಸೈನಿಕರು ಫ್ರೆಂಚ್ ಸೈನ್ಯದ ತುಕ್ಕಡಿಯೊಂದರ ಮೇಲೆ ಕೈಮಾಡಿದರು. 50 ಫ್ರೆಂಚ್ ಸೈನಿಕರು ಸತ್ತರು. ದಂಗೆಕೋರರನ್ನು ಅಡಗಿಸಲು ಬಹುಕಷ್ಟವಾಯಿತು.

ಹಿಂದೀ ಸ್ತ್ರೀಯರ ಶಿಕ್ಷಣ ಪ್ರೋತ್ಸಾಹಕ್ಕಾಗಿ ಕಾಲೇಜುಗಳನ್ನು ಸ್ಥಾಪಿಸಲು ಇಂಗ್ಲೆಂಡಿನ ಕೆಲವು ಮಹನೀಯರು 6,50,000 ರೂ. ಗಳನ್ನು ಸಂಗ್ರಹಿಸಲು ನಿರ್ಧರಿಸಿರುವರಂತೆ!

ಇಂಗ್ಲೆಂಡಿನ ಈಗಣ ಮಂತ್ರಿಮಂಡಲವನ್ನು ಇನ್ನು ಕೆಲವು ತಿಂಗಳಲ್ಲಿ ಹೊರದಬ್ಬಿ ಪುನಹ ಚುನಾವಣೆ ನಡೆಸುವಂತೆ ಕನ್‌ಸರ್ವೇಟಿವ್ ಪಕ್ಷೀಯರು ಪ್ರಯತ್ನ ಮಾಡುತ್ತಿರುವರಂತೆ!

ನ್ಯಾನ್‌ಕಿಂಗಿಗೆ ಉತ್ತರಕ್ಕೆ 60 ಮೈಲು ದೂರದ ಪೂಹು ಎಂಬಲ್ಲಿ ಚೀಣಾಸೈನಿಕರು ದಂಗೆ ಎದ್ದು ಊರೆಲ್ಲ ಲೂಟಿಮಾಡಿದರು. ದಂಗೇಕೋರರನ್ನು ಸರಕಾರದವರು ಅಡಗಿಸಿರುವರು.

ಜಾವಾದ್ವೀಪದಲ್ಲಿ ಮಳೆಯಕಾಲದಲ್ಲಿ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದಷ್ಟು ಗುಡುಗು ಕೇಳಿಸುವದಂತೆ! ಈ ಗುಡುಗುಗಳು ಘಂಟೆಗೆ 13 ಮೈಲಿಗಳಿಂದ 60 ಮೈಲಿಗಳವರೆಗೆ ಸಂಚರಿಸುವವಂತೆ!

ಎಡಿನ್‌ಬರ್ಗ್, ಅಥೆನ್ಸ್, ಕಾನ್‌ಸ್ಟಾಂಟಿನೋಪಲ್, ಫ್ಲಾರೆನ್ಸ್, ಮತ್ತು ನೇಪಲ್ಸ್ ಎಂಬೀ ಐದು ಪಟ್ಟಣಗಳು ಪ್ರಪಂಚದಲ್ಲಿ ಅತ್ಯಂತ ಸುಂದರವಾದ ಪಟ್ಟಣಗಳೆಂದು ಭಾವಿಸಲ್ಪಟ್ಟಿರುವವು.

ಕಳೆದ ಒಂದುವರ್ಷದಲ್ಲಿ ಇಂಗ್ಲೆಂಡಿನಲ್ಲಿ ಮೋಟಾರ್ ಮೊದಲಾದವುಗಳಿಗೆ ಸಿಕ್ಕಿ 6,128 ಜನರು ಮೃತಪಟ್ಟಿವರು. 1,64 838 ಜನರಿಗೆ ಗಾಯಗಳಾಗಿರುವುವು. ಈ ವಿಷಯವಾಗಿ ಚರ್ಚೆಮಾಡಲು ಕಾಲ್ನಡಿಗೆಯವರ ಪರಿಷತ್ತೊಂದು ನವಂಬರ್ ತಿಂಗಳಲ್ಲಿ ನಡೆಯುವದು.

ಲಂಡನ್ ಪಟ್ಟಣದ ಕಚಡಾಡಬ್ಬಿಗಳಲ್ಲಿ ಪ್ರತಿವರ್ಷವೂ 3,20,000 ಟನ್ ಸಾದೆಯು ಬಿಸಾಡಲ್ಪಡುವದಂತೆ! ಅದರ ಕ್ರಯವು 9,80,000 ರೂಪಾಯಿಗಳೆಂದು ಗೊತ್ತುಮಾಡಲ್ಪಟ್ಟಿರುವದು. ಆದರೆ ಅದನ್ನು ನಾಶಮಾಡಲು 27,70,000 ರೂಪಾಯಿಗಳು ವೆಚ್ಚವಾಗುವವಂತೆ!

ಶ್ರೀ ಕಾಶೀಪೀಠಾಧೀಶ್ವರರಾದ ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈಗ್ಗೆ 1 ವರ್ಷದಿಂದ ಮಹಾರಾಷ್ಟ್ರದೇಶದಲ್ಲಿ ಶಿಷ್ಯೋದ್ಧಾರಕ್ಕೋಸ್ಕರ ಸಂಚರಿಸುತ್ತಿದ್ದು ನವರಾತ್ರಿಯ ಆದಿಯಲ್ಲಿ ಸಂಚಾರವನ್ನು ನಿಲ್ಲಿಸಿ ಶ್ರೀ ಕಾಶೀಕ್ಷೇತ್ರಕ್ಕೆ ಆಗಮಿಸಿರುವರೆಂದು ತಿಳಿದುಬರುತ್ತದೆ.

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ 108 ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಹಿಮಾಲಯದಿಂದ ವಿಜಯದಶಮಿಯ ಸಮಯಕ್ಕೆ ರಾಯಚೂರು ಡಿ|| ಮಸ್ಕಿ ಗ್ರಾಮಕ್ಕೆ ದಯಮಾಡಿಸಿದರೆಂದೂ ಅಲ್ಲಿಂದ ಮೆದಿಕಿನಹಾಳು ಗ್ರಾಮದಲ್ಲಿ ಮೊಕ್ಕಾಂ ಮಾಡಿರುವರೆಂದೂ ತಿಳಿದುಬರುತ್ತದೆ.

ಸೋಲಾಪೂರ ಡಿಸ್ಟ್ರಿಕ್ಟ್ ದುಧನಿ ಪೋಸ್ಟ್ ಭೂಸನೂರು ಗ್ರಾಮದಲ್ಲಿರುವ ಶ್ರೀ ಸದ್ಗುರುದತ್ತ ವ್ಯಾಸಾದಿಕ ದವಾಖಾನೆಯವರು ನಾರು, ದಮ್ಮು, ಕೆಮ್ಮು, ಮಾರಿಕ, ಕಾವಿಸಿ, ಹಾವು ಚೇಳು ಕಡಿತ ಮೊದಲಾದ ರೋಗಗಳ ಮೇಲೆ ಧರ್ಮಾರ್ಥವಾಗಿ ಔಷಧ ಕೊಡುತ್ತಾರೆಂದೂ, ಅಪೇಕ್ಷೆಯುಳ್ಳವರು ಅಲ್ಲಿಂದ ತರಿಸಿಕೊಳ್ಳಬಹುದೆಂದೂ ಒಬ್ಬ ಚಂದಾದಾರರು ತಿಳಿಸುತ್ತಾರೆ.

ಇಲ್ಲಿಯವರೆಗೆ ಕಟ್ಟಲ್ಪಟ್ಟಿರುವ ವಿಮಾನಗಳಲ್ಲಿ ಜರ್ಮನಿಯ ಗ್ರೇಫ್ ಜೆಪಲಿನ್ ವಿಮಾನವು ಅತಿ ದೊಡ್ಡದು. ಅದು 30 ಜನ ಪ್ರಯಾಣಿಕರ ಸಮೇತ ಸುಖವಾಗಿ ಲೋಕವನ್ನು ಸುತ್ತಿರುವುದು. ಬ್ರಿಟಿಷರು ಇದಕ್ಕೆ ಬದಲಾಗಿ 2,60,00,000 ರೂ. ಗಳನ್ನು ವೆಚ್ಚಮಾಡಿ 100 ಜನರ ಪ್ರಯಾಣಕ್ಕೆ ಎಲ್ಲಾ ಅನುಕೂಲತೆಗಳುಳ್ಳ ಆರ್ 101 ಎಂಬ ವಿಮಾನವನ್ನು ತಯಾರಿಸಿ ಕಳೆದ ತಾ|| 20 ರಲ್ಲಿ ಪ್ರಯೋಗಾರ್ಥವಾಗಿ ಪ್ರಯಾಣ ನಡೆಸಿದರು.

ಯುರೋಪ್ಯ ಜನಾಂಗಗಳು ಪರಸ್ಪರ ದ್ವೇಷಾಸೂಯೆ, ಅನುಮಾನ, ಭಯಗಳಿಂದ ತಮ್ಮ ತಮ್ಮ ಸೇನಾಬಲವನ್ನು ನಾನಾರೂಪವಾಗಿ ವೃದ್ಧಿಪಡಿಸಿಕೊಳ್ಳುತ್ತಿವೆ. ಇದರ ಫಲವಾಗಿ ಲೋಕದ ಶಾಂತಿಗೆ ಭಂಗ ಬಂದಿದೆ. ಆದಕ್ಕಾಗಿ ನಾನಾ ತರಹದ ಸಂಧಾನಗಳು ಒಂದುಕಡೆ ನಡೆಯುತ್ತಿವೆ, ಶಸ್ತ್ರಸನ್ಯಾಸವಾದಿಗಳು ಹಲವರಿದ್ದಾರೆ. ಈ ಮಧ್ಯೆ ನೌಕಾಬಲಗಳನ್ನು ಕಡಿಮೆ ಮಾಡುವ ಪ್ರಶ್ನೆಯನ್ನು ಚರ್ಚಿಸಲು ಬ್ರಿಟಿಷ್ ಸರ್ಕಾರದವರು ಒಂದು ಸಭೆಕೂಡಲು ಜನಾಂಗಗಳಿಗೆ ಆಹ್ವಾನ ಕೊಟ್ಟಿದ್ದಾರೆ. ಅಮೇರಿಕ, ಫ್ರಾನ್ಸ್, ಇಟಲಿ ಮತ್ತು ಜಪಾನುಗಳು ಈ ಸಭೆಗೆ ಒಪ್ಪಿವೆ.

ಟಿ ಎಂಬ ನದಿಗೆ ಕಟ್ಟಿರುವ ಸೇತುವೆಯು ಪ್ರಪಂಚದಲ್ಲಿ ಅತ್ಯಂತ ಉದ್ದವಾದುದು. ಪ್ರಥಮದಲ್ಲಿ ಇದಕ್ಕೆ ಕಟ್ಟಿದ್ದ ಸೇತುವೆಯು ಕುಸಿದುಬಿದ್ದು 67 ಜನರು ಮೃತಪಟ್ಟರು. ಈಗ ಕಟ್ಟಿರುವ ಸೇತುವೆಯು ಅಂತಹ ಅಪಘಾತಗಳಾಗದಂತಿರುವದು. ಈ ಸೇತುವೆಗೆ 50 ಅಡಿಯಿಂದ 245 ಅಡಿಯವರೆಗೆ ಅಗಲವಾದ 86 ಕಮಾನುಗಳಿರುವವು. ಈ ಕಮಾನುಗಳ ಕಂಭಗಳ ತಳಹದಿಯು ನದೀ ಪಾತ್ರದೊಳಗೆ ಭೂಮಿಯಲ್ಲಿ 30-40 ಅಡಿಗಳ ವರೆಗೂ ಹೋಗಿರುವವು. ಸೇತುವೆಯು ಎರಡು ಮೈಲಿಗಳಿಗಿಂತಲೂ ಹೆಚ್ಚು ಉದ್ದವಾಗಿರುವದು. ಈ ಸೇತುವೆಗೆ ಒಟ್ಟು 2,37,328 ಮಣ ಕಬ್ಬಿಣವು ಉಪಯೋಗಿಸಲ್ಪಟ್ಟಿರುವದು. ಮತ್ತು ಒಟ್ಟುವೆಚ್ಚ ಸುಮಾರು 84,50,000 ರೂಪಾಯಿಗಳಾಗಿರುವದು.

ರೋಂಪಟ್ಟಣದಲ್ಲಿರುವ ರೋಮನ್‌ಕ್ಯಾಥೋಲಿಕ್ ಕ್ರಿಶ್ಚಿಯನ್ನರ ಗುರುಗಳಾದ ಪೋಪರವರ ಅರಮನೆಯು ಪ್ರಪಂಚದಲ್ಲೆಲ್ಲಾ ಅತ್ಯಂತ ಮನೋಹರವಾದ ಕಟ್ಟಡವೆಂದು ಪ್ರಸಿದ್ಧಿಗೊಂಡಿರುವದು. ಪ್ರಾರಂಭದಲ್ಲಿ ಕಟ್ಟುವಾಗ ಅದು ಅಷ್ಟು ದೊಡ್ಡದಾಗಿರದಿದ್ದರೂ, ಕ್ರಮೇಣ ಹೊಸ ಹೊಸ ಭಾಗಗಳು ಕಟ್ಟಲ್ಪಟ್ಟು ಈಗ ಒಟ್ಟು 9,00,000 ಚದರಡಿಗಳಷ್ಟು ಸ್ಥಳವನ್ನು ಆಕ್ರಮಿಸಿಕೊಂಡಿರುವದಲ್ಲದೆ, ಬಹು ವಿಶಾಲವೂ ಅತ್ಯಂತ ಮನೋಹರವೂ ಆದ ಉದ್ಯಾನವನವನ್ನು ಒಳಗೊಂಡಿರುವದು. ಈ ಅರಮನೆಯಲ್ಲಿ ಒಟ್ಟು 200 ಮಹಡಿಯ ಮೆಟ್ಟಲುಗಳೂ, 20 ದೊಡ್ಡ ದರ್ಬಾರ್‌ಹಾಲ್‌ಗಳೂ, 4,422 ಕೊಠಡಿಗಳೂ ಇರುವವು. ಅದರ ಚಿತ್ರಸಂಗ್ರಹವು ಪ್ರಪಂಚದಲ್ಲಿ ಅದ್ವಿತೀಯವಾಗಿರುವದು.

ಪೂನಾ ನಗರದಲ್ಲಿ ಅಂತ್ಯಜರು ಪ್ರಸಿದ್ಧವಾದ ಪಾರ್ವತಮ್ಮನ ದೇವಸ್ಥಾನದೊಳಕ್ಕೆ ಪ್ರವೇಶಮಾಡಬೇಕೆಂದು ಸಾಹಸಪಡುತ್ತಿದ್ದಾರೆ. ಈ ವಿಷಯದಲ್ಲಿ ಪಟ್ಟಣದೊಳಗೆ ಕಳವಳವುಂಟಾಗಿರುವುದು. ಹಿಂದಿನ ಭಾನುವಾರ (ತಾ|| 13) ಕೆಲವು ಅಂತ್ಯಜರು ದೇವಸ್ಥಾನಕ್ಕೆ ಬಲಾತ್ಕಾರವಾಗಿ ಪ್ರವೇಶಿಸಬೇಕೆಂದು ಹೊರಟಾಗ ಅವರನ್ನು ಉತ್ತಮರು ತಡೆದರು. ದೇವಸ್ಥಾನದ ಮೆಟ್ಟಲುಗಳಮೇಲೆ ಪರಸ್ಪರಹೊಡೆದಾಟಗಳಾದವು. ಅಂತ್ಯಜರಲ್ಲಿ ಇಬ್ಬರಿಗೆ ಗಾಯಗಳಾಗುವಷ್ಟರೊಳಗೆ ಪೋಲೀಸಿನವರು ಹೋಗಿ ದೊಂಬಿಕಲಹವನ್ನು ನಿಲ್ಲಿಸಿದರು. ಅಂತ್ಯಜರು ಸತ್ಯಾಗ್ರಹಮಾಡುತ್ತೇವೆಂದು ಹಟಹಿಡಿದರು. ಕೆಲವು ದೊಡ್ಡಮನುಷ್ಯರು ವಿಚಾರ ಮಾಡಿ ತೀರ್ಮಾನಹೇಳುತ್ತೇವೆಂದು ಅಂತ್ಯಜರನ್ನು ಒಪ್ಪಿಸಿ ಎರಡುವಾರಗಳ ಅವಧಿ ತೆಗೆದುಕೊಂಡಿದ್ದಾರೆ.

ನೀರು ಭೂಮಟ್ಟಕ್ಕೆ ಅನುಸಾರವಾಗಿ ಹೆಚ್ಚು ಕಡಿಮೆ ಶಾಖಕ್ಕೆ ಕುದಿಯುವದು. ಲಂಡನ್ ಪಟ್ಟಣದಲ್ಲಿ ನೀರು ಫಾರನ್‌ಹೀಟ್ 212 ಡಿಗ್ರಿಗಳಿಗೆ ಮರಳುವದು. ಜರ್ಮನಿಯ ಮ್ಯೂನಿಚ್ಚಿನಲ್ಲಿ 209½ ಡಿಗ್ರಿಗಳಿಗೂ ಅಮೇರಿಕೆಯ ಮೆಕ್ಸಿಕೋದಲ್ಲಿ 200 ಡಿಗ್ರಿಗಳಿಗೂ ಹಿಮಾಲಯಾದಲ್ಲಿ 18,000 ಅಡಿಗಳ ಎತ್ತರದಲ್ಲಿ 180 ಡಿಗ್ರಿಗಳಿಗೂ ಮರಳುವದು. ಗಾಳಿಯ ತೂಕದ ವ್ಯತ್ಯಾಸವೇ ಹೀಗೆ ನೀರು ಹೆಚ್ಚು ಕಡಿಮೆ ಶಾಖಕ್ಕೆ ಮರಳುವದಕ್ಕೆ ಕಾರಣವಾಗಿರುವದು. ಅಂದರೆ ಲಂಡನ್ ಪಟ್ಟಣದಲ್ಲಿ ಒಂದು ಚದುರಂಗಲ ಜಾಗದಲ್ಲಿ ಗಾಳಿಯ ತೂಕವು ಎಷ್ಟಿರುವದೋ, ಅಷ್ಟು ತೂಕವು ಮೆಕ್ಸಿಕೊ ಪಟ್ಟಣದಲ್ಲಿ ಒಂದು ಚದುರಂಗಲದಲ್ಲಿಲ್ಲ. ಸಮುದ್ರಮಟ್ಟಕ್ಕಿಂತ ಭೂಮಟ್ಟವು ಹೆಚ್ಚುತ್ತಾ ಹೋದ ಹಾಗೆಲ್ಲಾ ಗಾಳಿಯ ತೂಕವು ಕಡಿಮೆಯಾಗುತ್ತಾ ಹೋಗುವುದು. ಆದರೆ ನೀರು ಕಡಿಮೆ ಶಾಖಕ್ಕೆ ಕುದಿಯುತ್ತಾ ಬರುವುದು.

ಕಳೆದ ಗುರುವಾರ (ತಾ|| 17) ಕಲ್ಕತ್ತಾ ಪಟ್ಟಣದಲ್ಲಿ ಒಂದು ಸಿನೆಮಾ ನಾಟಕಮಂದಿರದಲ್ಲಿ ಭಯಂಕರವಾದ ಬೆಂಕಿಯು ಅನಾಹುತ ಸಂಭವಿಸಿ ಸುಮಾರು 50, 000 ರೂಪಾಯಿನ ಆಸ್ತಿ ನಷ್ಟವಾಯಿತು. ಸಿನೆಮಾ ಫಿಲಂಗಳನ್ನು ಶೇಖರಮಾಡಿ ಇಟ್ಟುಕೊಂಡಿದ್ದ ಕೊಠಡಿಯಲ್ಲಿ ಬೆಂಕಿಯು ಮೊದಲು ಕಾಣಿಸಿಕೊಂಡಿತು. ನಾಟಕ ಮಂದಿರದಲ್ಲೇನೋ ನೋಟಕರು ತುಂಬಿ ತುಳುಕುತ್ತಿದ್ದರು. ಆದರೆ ಆ ನಗರದ ಮ್ಯುನಿಸಿಪಲ್ ಕಟ್ಟಳೆಯ ಪ್ರಕಾರ ಬೆಂಕಿ ಕಾಣಿಸಿಕೊಂಡ ಕೊಠಡಿಯ ಸುತ್ತಲೂ ಕಬ್ಬಿಣದ ತಗಡುಗಳನ್ನು ಹಾಕಿದ್ದ ಕಾರಣ ನೋಟಕರ್ಯಾರಿಗೂ ಯಾವ ಅಪಾಯವೂ ಆಗದೆ ಎಲ್ಲರೂ ಸುರಕ್ಷಿತರಾಗಿ ನಾಟಕಶಾಲೆಯಿಂದ ಹೊರಟು ಹೋದರು. ಸಿನೆಮಾ ಮಂದಿರಗಳಲ್ಲಿ ಫಿಲಂಗಳನ್ನು ನಡೆಸುವ ಕೊಠಡಿಯಲ್ಲಿ ಬಹು ವಿಶೇಷವಾದ ರಕ್ಷಣಾ ಏರ್ಪಾಡುಗಳಿರಬೇಕಾದದ್ದು ಸಂಪೂರ್ಣವಶ್ಯವಾಗಿದೆ. ಯಾಕೆಂದರೆ ಬೆಂಕಿಯು ಬಹಳ ಸುಲಭವಾಗಿ ಫಿಲಂಗಳಿಗೆ ತಗಲುವದು.

ಬೊಂಬಾಯಿ ಪಟ್ಟಣದ ಬಾಂದ್ರಾ ಎಂಬ ಸಮೀಪ ಪ್ರದೇಶದಲ್ಲಿ ಒಬ್ಬ ಪಾರ್ಸಿಯವನೂ ಈರ್ವರು ಹೆಂಗಸರೂ ಒಂದು ಮನೆಯಲ್ಲಿ ವಾಸಮಾಡಿಕೊಂಡಿದ್ದರು. ಕಳೆದ ಗುರುವಾರ (ತಾ. 17) ಆ ಮನೆಯೊಳಗಿಂದ ಹೊಗೆಬರಲಾರಂಭವಾಯಿತು. ಬಾಗಿಲು ಬೀಗಹಾಕಿದ್ದ ಕಾರಣ ಕದವನ್ನು ಒಡೆದು ಒಳಗೆ ಹೋಗಬೇಕಾಯಿತು. ಒಳಗೆ ನೋಡಿದಾಗ ಬಟ್ಟೆಗಳಿಗೆ ಎಣ್ಣೆ ಬಿದ್ದು ಕೆಲವು ಹತ್ತಿ ಉರಿಯುತ್ತಿದ್ದವು. ಮನೆಯ ಯಜಮಾನನು ಇರಲಿಲ್ಲ. ಹೆಂಗಸರಿಬ್ಬರು ಪ್ರಜ್ಞೆಯಿಲ್ಲದೆ ಹಾಸಿಗೆಯ ಮೇಲೆ ಬಿದ್ದಿದ್ದರು. ಘಾತುಕರ್ಯಾರೋ ಯಜಮಾನನು ಇಲ್ಲದ ಸಂದರ್ಭವನ್ನು ತಿಳಿದು ಒಳಗೆ ನುಗ್ಗಿ ಆ ಹೆಂಗಸರಿಗೆ ವಿಷಹಾಕಿ ಪ್ರಜ್ಞೆತಪ್ಪಿಸಿ ಅವರ ಒಡವೆಗಳನ್ನೆಲ್ಲಾ ಅಪಹರಿಸಿಕೊಂಡು ಹೋದರೆಂದು ಊಹಿಸಲಾಗಿದೆ. ಈಚೆಗೆ ಅವರಿಗೆ ಔಷಧಿಕೊಟ್ಟು ಚಿಕಿತ್ಸೆ ಮಾಡಿದ್ದರಿಂದ ಆ ಹೆಂಗಸರು ಆರೋಗ್ಯವಾಗುತ್ತಿದ್ದಾರೆ. ಅವರ ಇಬ್ಬರು ಆಳುಗಳನ್ನು ದಸ್ತಗಿರಿ ಮಾಡಿದ್ದಾರೆ.

ದೀಕ್ಷಾಮಹೋತ್ಸವಸಮಾರಂಭ

ಬಂಕಾಪುರ.

ತಾ|| ೧೯-೧೦-೩೯ ನೆಯ ಶನಿವಾರ ದಿವಸ ಶ್ರೀಮಂತ ಶಿದ್ಧಲಿಂಗಪ್ಪ ಉರುಫ್ ಅಪ್ಪಾಸಾಹೇಬ ದೇಸಾಯಿ ವ. ನಾಡಕರ್ಣಿ ಸಂಸ್ಥಾನ ಹಂದಿಗನೂರ ಮೊಮಲೇ ಬಂಕಾಪೂರ ಇವರು ತಮ್ಮ ಜನ್ಮಗುರುಗಳಿಂದ ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಸ್ಥ ಸೂತ್ರಾನುವರ್ತಿ ಶ್ರೀಮಠ ಮಹಾಮಳಲೀ ಮಠಾಧೀಶ್ವರ ಸ್ಥಿಂಪಟ್ಟಾಧ್ಯಕ್ಷ ಶ್ರೀ ಗುರುನಾಗಾರ್ಜುನರಾಜೇಂದ್ರ ಮಹಾಸ್ವಾಮಿಗಳವರಿಗೆ ಅಂದೋಲಿಕಾಮಹೋತ್ಸವದ ಬಿನ್ನಹಮಾಡಿ ಸಂಸ್ಥಾನ ಸಿಬ್ಬಂದಿಪ್ರಕಾರ ಸಕಲ ವಾದ್ಯವೈಭವದೊಡನೆ ೧೦ ಗಂಟೆಗೆ ತಮ್ಮ ಅರಮನೆಗೆ ಬಹು ವೈಭವದಿಂದ ಭಕ್ತಿಪುರಸ್ಸರವಾಗಿ ಕರೆದುಕೊಂಡು ಹೋಗಿ ಸದರಿ ಮಹಾಸ್ವಾಮಿಗಳವರಿಂದ ದಂಪತಿ ಸಮೇತ ಶಿವದೀಕ್ಷೆಯನ್ನು ಹೊಂದಿದರು. ಅಷ್ಟರೊಳಗಾಗಿಯೇ ಶ್ರೀ ಶಿಗ್ಗಾವಿ ಬೃಹನ್ಮಠಾಧ್ಯಕ್ಷ ಷ|| ಬ್ರ|| ಚರವರ್ಯ ಮಹಾಸ್ವಾಮಿಗಳವರು ಪ್ರಾತಃಕಾಲ ೮ ಗಂಟೆಗೆ ದಯಮಾಡಿಸಿ ಮಹಾರುದ್ರಾಭಿಷೇಕವನ್ನು ನೆರವೇರಿಸಿದ್ದರು. ಮತ್ತು ಇದಲ್ಲದೆ ಶ್ರೀಮಂತರು ಬಿನ್ನಹಮಾಡಿಕೊಂಡ ಪ್ರಕಾರವೇ ಶಾಸ್ತ್ರಿಗಳವರೂ ಗವಾಯಿಗಳೂ ಇತರ ಜನರ ಸಮೂಹವೂ ಹಾಗೂ ಸ್ವಗ್ರಾಮದ ಭಕ್ತರೂ ಕೂಡ ಆಗಮಿಸಿದ್ದರು. ಮಧ್ಯಾಹ್ನ ೧೨ ಘಂಟೆಗೆ ಭೋಜನಸಮಾರಂಭವು ಸುರುವು ಆಗಿದ್ದು ರಾತ್ರಿ ೧೨ ಗಂಟೆಯವರೆಗೂ ನಡೆಯಿತು. ಅನಂತರ ಗುರುಗಳಿಗೆ ಗುರುಕಾಣಿಕೆಯನ್ನರ್ಪಿಸಿ ಸಕಲ ಮಾಹೇಶ್ವರರನ್ನು ಭೂರಿದಕ್ಷಿಣೆ ತಾಂಬೂಲಗಳಿಂದ ತೃಪ್ತಿಗೊಳಿಸಿದರು. ಇಂಥಾ ಸದ್ವೃತ್ತಶೀಲರಾದ ಶ್ರೀಮಂತರಿಗೂ ಅವರ ಧರ್ಮಪತ್ನಿಯರಾದ ಶ್ರೀಮತಿ ಹ|| ಕಂ|| ಸೌ|| ಬಸವಂತಬಾಯಿ ದೇಸಾಯಿಯವರಿಗೂ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ. ಮತ್ತು ಮಂಗಲಕಾರ್ಯದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಐದು ರೂಪಾಯಿಗಳನ್ನು ಸಂಗೀತವಿದ್ವಾನ್ ಜಯದೇವ ಗವಾಯಿಗಳು ಹಾವೇರಿ ಇವರ ಕಡಿಗೆ ಕೊಟ್ಟಿರುತ್ತಾರೆ.

ಓರ್ವ ಬೃಹನ್ಮಠಾಧ್ಯಕ್ಷ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಕೇದಾರ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಅಂದೋಲಿಕೋತ್ಸವವು ಮಸಿಗಿ.

ಇದೇ ಅಶ್ವಯುಜ ಶುದ್ಧ ವಿಜಯದಶಮಿಯ ದಿವಸ ಈ ಗ್ರಾಮದ ಭಕ್ತಾದಿಗಳ ಪ್ರಾರ್ಥನೆಯ ಮೇರೆಗೆ ಶ್ರೀ ಕೇದಾರ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ರಾಯಚೂರು ಜಿಲ್ಲಾ ಲಿಂಗಸುಗೂರು ತಾಲೂಕು ಪೈಕಿ 56 ದೇಶದ ಕಟ್ಟಿಮನಿ ಕಸಬಾ ಮಸಿಗಿ ಗ್ರಾಮಕ್ಕೆ ಪ್ರಾತಃಕಾಲಕ್ಕೆ ದಯಮಾಡಿಸಲು ಮಹಾಸನ್ನಿಧಿಯ ದರ್ಶನೇಚ್ಛೆಯ ಭಕ್ತಿಯಿಂದಾಗಮಿಸಿದ ರಾಜಾ ನೀಲಕಂಠರಾವ ಬಹದ್ದೂರ ನಾಡಗೌಡರು ಇಲಾಖಾ ಉದ್ದಬಾಳ ಸಂಸ್ಥಾನ ರಾಜಾ ಅಮರೇಶ್ವರ ರಾವಬಹದ್ದೂರ ನಾಡಗೌಡರು ಇಲಾಖಾ ಮುದಿಕಿನಾಳ ಸಂಸ್ಥಾನ ಮುಂತಾದ ಅಜೂಬಾಜು ಗ್ರಾಮಗಳ ನಾಡಗೌಡರು ಗೌಡರು ಶ್ರೀಮಂತರು ಗ್ರಾಮದ ಭಕ್ತಮಾಹೇಶ್ವರರಾದಿಯಾಗಿ ಸ್ವಮತ ಪರಮತೀಯ ಸಮಸ್ತ ದೈವವೃಂದದೊಡನೆ ನಾನಾವಿಧ ವಾದ್ಯಸಂಭ್ರಮಪುರಸ್ಸರವಾಗಿ ಶ್ರೀ ಮಹಾಸನ್ನಿಧಿಯವರನ್ನು ಎದುರ್ಗೊಂಡು ಶ್ರೀ ಪಾದಕ್ಕೆ ಫಲ ತಾಂಬೂಲಾದಿ ಕಾಣಿಕೆಯನ್ನರ್ಪಿಸಿ ದಟ್ಟಣೆಯಾಗಿ ನೆರೆದ ಭಕ್ತಾದಿ ಮಂಡಲಿಯು ಗುರುಶ್ರದ್ಧೆಯಿಂ ಬದ್ಧಾಂಜಲಿಪುಟರಾಗಿ ಶುದ್ಧಾಂತಃಕರಣದಿಂ ಸ್ವಧನ್ಯತೆಯಂ ಪ್ರಕಟಿಸುತ್ತಿರಲು ಶ್ರೀ ಪೂಜ್ಯಪಾದರು ಮಂದಹಾಸದೊಡನೆ ಸರ್ವರಿಗೂ ತಮ್ಮ ಅಮೃತವಚನದಿಂದಾಶೀರ್ವದಿಸಿ ಸರ್ವರ ಪ್ರಾರ್ಥನೆಯ ಮೇರೆಗೆ ಶೃಂಗರಿಸಲ್ಪಟ್ಟ ಮಂಗಲಪುಷ್ಪಾಂದೋಲಿಕೆಯಲ್ಲಿ ಸರ್ವರ ಜಯಘೋಷದೊಡನೆ ಮೂರ್ತಮಾಡಿದರು. ನಂದಿಧ್ವಜ ಶ್ವೇತಚ್ಛತ್ರ ಮಕರತೋರಣ ಮಾವಿನಮರಡಾಪು ಹಗಲು ದೀವಟಿಗೆ ಮುಂತಾದ ಸಮಸ್ತ ಬಿರುದಾವಳಿಗಳಿಂದಲೂ ಪಂಡಿತರ ವೇದಘೋಷ ಮತ್ತು ಜಯಪಠಾಕುಗಳೂ ವೀರಮಾಹೇಶ್ವರರ ಘುಘುಘುಘುಸುವ ನಡವಿನ ಉಗ್ಘಡಗಳು ವಿದ್ಯಾರ್ಥಿಗಳು ಮುಂತಾದವರ ಮಂಜುಲ ಭಜನಾವಾದ್ಯಗಳು ಕಹಳೆ ತಮ್ಮಟೆ ಝಾಗಟೆ ಮುಂತಾದ ಸುನಾದಗಳೂ ಭಕ್ತಿಪರವಶರಾದ ಹಾಲುಮತಸ್ಥರ ವೀರವಾದ್ಯಗಳೂ ಎಲ್ಲೆಲ್ಲಿಯೂ ಪ್ರತಿಧ್ವನಿಯು ವ್ಯಾಪಿಸುವಂತೆ ಮೊಳಗುತ್ತಿರಲು ಉಭಯಪಾರ್ಶ್ವದಲ್ಲಿ ಸೇವೆಯಂ ಕೈಕೊಂಡು ಪಾದಚಾರಿಗಳಾಗಿ ಬರುತ್ತಿರುವ ರಾಜಮಂಡಲಿಯಿಂ ಮಿಲಿತವಾದ ಮಹೋತ್ಸವವು ವಿಚಿತ್ರತರ ಪಲ್ಲವತೋರಣಗಳಿಂದಲೂ ಸುಗಂಧಮಯ ಸಾರಣೆಕಾರಣೆಗಳಿಂದಲೂ ಗಗನಚುಂಬಿತ ಜಯಪತಾಕೆಗಳಿಂದಲೂ ರಂಭಾಸ್ತಂಭಾದಿಗಳಿಂದಲೂ ಪ್ರತಿಗೃಹದ್ವಾರಗಳಲ್ಲಿ ಸೀಮಂತಿನಿಯರು ಬೆಳಗುವ ಮಂಗಳಾರತಿಗಳಿಂದಲೂ ಭಕ್ತಿಸಂಭ್ರಮದಿಂ ರಮಣೀಯವಾದ ರಾಜವೀಥಿಯಲ್ಲಿ ಉತ್ಸವವು ಆಗಮಿಸುತ್ತಿರಲು ಅತಿ ದೀರ್ಘವೂ ವಿಶಾಲವೂ ಆದ ರಾಜವೀಥಿಯಲ್ಲಿ ದರ್ಶನೋತ್ಕಂಠತೆಯಿಂ ತಂಡೋಪತಂಡವಾಗಿ ಕಿಕ್ಕಿರಿದು ನಿಂತಿರುವ ಗ್ರಾಮಾನುಗ್ರಾಮಗಳ ನರನಾರೀವೃಂದವು ಮಧ್ಯಮಧ್ಯದಲ್ಲಿ ಉಚ್ಚರಿಸುವ ಶ್ರೀ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾರಾಜಕೀ ಜೈ ಎಂಬ ಜಯಜಯಕಾರವು ನೆರೆದ ಜನರಲ್ಲಿ ದೃಢವಾದ ಭಕ್ತಿಯನ್ನು ವ್ಯಕ್ತಗೊಳಿಸುತ್ತಿತ್ತು. ಹೀಗೆ ಗ್ರಾಮದ ಪೋಲೀಸರ ಸುವ್ಯವಸ್ಥೆಯಿಂದ ಉತ್ಸವವು ನಿರಾತಂಕವಾಗಿ ಗ್ರಾಮದ ದಕ್ಷಿಣದಿಕ್ಕಿನಲ್ಲಿರುವ ಶ್ರೀ ಮಲ್ಲಿಕಾರ್ಜುನಸ್ವಾಮಿಯ ದೇವಾಲಯದವರೆಗೂ ನಡೆದು ಮೊದಲೇ ಶೃಂಗರಿಸಲ್ಪಟ್ಟ ಭವ್ಯತರ ಸಿಂಹಾಸನದಲ್ಲಿ ಪೂಜ್ಯಪಾದ ಜಗದ್ಗುರುಗಳವರು ಸರ್ವರ ಜಯಘೋಷಪೂರ್ವಕ ಕರತಾಡನದೊಡನೆ ಮೂರ್ತಗೊಳಿಸಿದರು. ದೇವಾಲಯದ ವಿಶಾಲಪ್ರದೇಶದಲ್ಲಿ ಕಿಬಿದವಾದ ಜನಸ್ತೋಮಕ್ಕೆ ಶ್ರೀ ಜಗದ್ಗುರು ಏಕೋರಾಮ ಸಂಸ್ಕೃತಪಾಠಶಾಲಾಧ್ಯಾಪಕ ವೇ|| ಪಂ|| ಅಮರನಾಥಶಾಸ್ತ್ರಿಗಳು ಹಿರೇಮಠ ಬನ್ನಿಗೋಳ ಮುಕ್ಕಾಂ ಮಸಿಗಿ ಇವರು ಶ್ರೀ ಕೇದಾರಪೀಠದ ಮಹಿಮೆಯನ್ನು ಸರ್ವರಿಗೂ ಆಶ್ಚರ್ಯಕರವಾಗುವಂತೆ ತಿಳಿಯ ಹೇಳಿದರು. ಆ ಮೇಲೆ ಸಮಾಜೋದ್ಧಾರಕ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಮಹಾಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರು ಪೀಠಾಚಾರ್ಯರ ಆಗಮನದಿಂದಾಗುವ ಲಾಭ ಎಂಬ ವಿಷಯವಾಗಿ ಸ್ವಾರಸ್ಯವಾದ ಭಾಷಣವಂ ಮಾಡಿದರು. ಮತ್ತು ವೇ|| ಸಂಗೀತ ವಿದ್ವಾನ್ ಅಮರಪ್ಪ ಶಾಸ್ತ್ರಿಗಳು ಹಿರೇಮಠ ಲಿಂಗಸುಗೂರು ಇವರು ಗುರುಮಹಿಮಾ ವಿಷಯದ ಬಗ್ಗೆಯೂ, ವೇ|| ಬಸವಪ್ಪಶಾಸ್ತ್ರಿಗಳು ಶಾಲಾಮಠ ಮಸಿಗಿ ಇವರು ಈ ಬನ್ನಿಹಬ್ಬವು ನಾವು ಪರಸ್ಪರ ಹಮುಚಿತ್ತರಾಗಿ ಬನ್ನಿ ಅಂದರೆ ಬರ್ರಿ ಎಂದು ಪ್ರೇಮಭಾವನೆಯನ್ನಿಂಟು ಮಾಡತಕ್ಕದ್ದಿದ್ದು ಅಂತಹ ಬನ್ನಿಹಬ್ಬವು ಶ್ರೀ ಜಗದ್ಗುರುಗಳ ವಿಷಯದಲ್ಲಿ ಬನ್ನಿ ಅಂದರೆ ಬರ್ರಿ ಎಂದು ಭಕ್ತಿಯಿಂ ಬರಮಾಡಿಕೊಂಡದ್ದೀಗ ಸತ್ಯವಾದ ಬನ್ನಿಹಬ್ಬವಾಯಿತೆಂತಲೂ ಈ ದಿನವೇ ನಿಜವಾದ ವಿಜಯದಿವಸವೆಂತಲೂ ಮುಂತಾಗಿ ಗುರುಭಕ್ತಿ ವಿಷಯವಾಗಿ ಭಾಷಣಮಾಡಿದನಂತರ ಶ್ರೀ ಜಗದ್ಗುರುಗಳವರು ತಮ್ಮ ಪ್ರಸಾದವಾಣಿಯಿಂದ ಇಲ್ಲಿ ನೆರೆದಿರುವ ಗುರುಭಕ್ತಿಸಂಪೂರ್ಣರಾದ ನಿಮ್ಮುಗಳಿಗೆ ಜಗದಾಚಾರ್ಯರು ಆಯುರಾರೋಗ್ಯವನ್ನಿಂಟುಮಾಡಲೆಂತಲೂ ಸರ್ವದಾ ಇದರಂತೆ ವರ್ತಿಸಿ ಕೃತಕೃತ್ಯರಾಗಬೇಕೆಂತಲೂ ಬೋಧಿಸಿ ಅಷ್ಟಕ್ಕೆ 9 ಘಂಟೆಯಾಗಿ ಶಿವಯೋಗಾನುಷ್ಠಾನ ಸಮಯವಾದ್ದರಿಂದ ಸರ್ವರಿಗೂ ಫಲತಾಂಬೂಲಾಶೀರ್ವಾದಗಳನ್ನಿತ್ತು ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಪಂಚಾಚಾರ್ಯರ ಪರವಾದ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬುಳ್ಳಾ ಮಲ್ಲಪ್ಪನವರು ಮಸಿಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸೂಚನೆ.

ಅಯ್ಯಾ, ವೀರಶೈವಮಹನಿಯರೇ ಪ್ರಕೃತದಲ್ಲಿ ಬಾಲವಿವಾಹ ಪ್ರತಿಬಂಧಕ ಕಾಯಿದೆಯು ಅಮಲಿನಲ್ಲಿ ಬರುವದಕ್ಕಾಗಿ ಯತ್ನ ನಡೆದಿದೆಯಷ್ಟೇ! ಇದು ವೀರಶೈವರಿಗೆ ಅಶಾಸ್ತ್ರೀಯವಾದುದೆನಿಸುವದು ಹೇಗೆಂದರೆ ಋತುದರ್ಶನವಾಗುವದಕ್ಕೆ ಮುಂಚಿತವಾಗಿ ಕನ್ಯಾದಾನಮಾಡಬೇಕು ಕನ್ಯೆಯ ಹನ್ನೆರಡನೆಯ ವರುಷವು ಪ್ರಥಮ ರಜೋದರ್ಶನದ ಉಪಲಕ್ಷಿತವಾಗಿದೆ. ಅದ್ದರಿಂದ ಋತುಕಾಣಿಸುವದಕ್ಕೆ ಮುಂಚೆ ಕನ್ಯೆಗೆ ಮದುವೆ ಮಾಡಬೇಕು. "ಮಾತಾಚೈವ ಪಿತಾಚೈವ ಜ್ಯೇಷ್ಠಭ್ರಾತಾತಥೈವಚ ತ್ರಯಸ್ತೇ ನರಕಂಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ" ಎಂಬ ಈ ವಚನವು ಋತುಮತಿಯಾದ ಕನ್ಯೆಯನ್ನು ನೋಡಿದ ಆಕೆಯ ತಾಯಿ ತಂದೆ ಅಣ್ಣ ಈ ಮೂವರು ನರಕವನ್ನು ಹೊಂದುತ್ತಾರೆ ಎಂಬದಾಗಿ ಕನ್ಯಾದಾನಮಾಡುವುದರಲ್ಲಿ ಅಧಿಕಾರಿಗಳಿಗೆ ಋತುಕಾಣುವದಕ್ಕೆ ಮುಂಚೆ ಕನ್ಯಾದಾನ ಮಾಡದಿದ್ದರೆ ಮಹತ್ತರವಾದ ಶಾಸನವನ್ನು ವಿಧಿಸುವದು. ಹಾಗೂ ಋತುವಾಗುವದಕ್ಕೆ ಮುಂಚೆ ವಿವಾಹವೂ ಋತುವಾದ ಬಳಿಕ ಗರ್ಭಾಧಾನವೂ ಮಾಡಲ್ಪಡುವ ವಿಧಾನವಿದೆ. ಆದರೆ ಹದಿನಾಲ್ಕು ವರ್ಷದ ಕನ್ಯೆಯು ಪ್ರೌಢವಯಸ್ಕಳಾದ್ದರಿಂದ ಋತುಮತಿಯಾದ ಅವಳಿಗೆ ವಿವಾಹ ಮಾಡಬೇಕೆನ್ನುವದು ಶಾಸ್ತ್ರದಿಂದಲೂ ವ್ಯವಹಾರದೃಷ್ಟಿಯಿಂದಲೂ ಅಯೋಗ್ಯವೆನಿಸುವದು ಹಾಗೂ "ಅಸಂಸ್ಕೃತಾಂ ರೋಗದಿಶಾಂ ಪತಿತಾಂಚ ರಜಸ್ವಲಾಂ| ನೈವೋದ್ವಹೇದ್ವೀರಶೈವ ಇಹಧರ್ಮಾನುಶಾಸನಂ" ಎಂದು ಶಿವಾಗಮದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಮೇರೆಗೆ ಪ್ರೌಢವಯಸ್ಕಳಾದ ಕನ್ಯೆಯ ವಿವಾಹವು ನಿಷಿದ್ಧವಾದದು. ಅದ್ದರಿಂದ "ಶಾರದಾಮಸೂದೆ" ಯು ವೀರಶೈವ ಧರ್ಮಶಾಸ್ತ್ರ ವಿರುದ್ಧವಾಗಿರುವದಾದಕಾರಣ ಈ ವಿಷಯವಾಗಿ ವೀರಶೈವ ಜಗದ್ಗುರುಗಳೂ ಹಾಗೂ ಸಮಾಜ ಪ್ರಮುಖರೂ ವೈಸರಾಯರಿಗೆ ಸೂಚಿಸಿ ಆರ್ಯಧರ್ಮದ ಪದ್ಧತಿಯು ಶಿಥಿಲವಾಗದಂತೆ ಯತ್ನ ಮಾಡುವವರಾಗಬೇಕೆಂದು ಬಯಸುತ್ತೇವೆ.

ಪಂ|| ಶ್ರೀ ಶಂಭುಲಿಂಗಶಿವಾಚಾರ್ಯ,
ಬೃಹನ್ಮಠ ಬಿಜಾಪುರ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ. ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ. 'ಕೊಡಗಿನ ಗುಡುಗುಡು!' (ಛಳಿ). 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [12]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಖಾತೆಕಿರ್ದಿಬುಕ್ಕುಗಳು.

ದೀಪಾವಳಿ ಹಬ್ಬಕ್ಕೋಸ್ಕರ ನೂತನ ಬುಕ್ಕುಗಳು ಸಿದ್ಧವಾಗಿವೆ.

ವ್ಯಾಪಾರಿಗಳೇ ತ್ವರೆಮಾಡಿರಿ! ನಕಲಿಬುಕ್ಕುಗಳಿಗೆ ಮೋಸಹೋಗಬೇಡಿರಿ!!

ಪ್ರತಿಯೊಬ್ಬ ವ್ಯಾಪಾರಸ್ಥರಿಗೆ ಉಪಯೋಗವಾಗುವ ರೋಜು, ಖತಾವಣಿ, ನಗದು ಮೊದಲಾದ ಬುಕ್ಕುಗಳು ೧೮೮೦ ರಲ್ಲಿ ಸ್ಥಾಪಿಸಲ್ಪಟ್ಟಿರುವ ಸುಪ್ರಸಿದ್ಧ ಶಿವೋನಪ್ಪ ಬುಕ್‌ಬೈಂಡರ್ ಇವರ ಕಂಪನಿಯಲ್ಲಿ ಸಿದ್ಧವಾಗಿವೆ. ಈ ಬುಕ್ಕುಗಳು ಬಾಳಿಕೆಯಲ್ಲಿಯೂ, ಸೌಂದರ್ಯದಲ್ಲಿಯೂ ಕರ್ನಾಟಕ ದೇಶದಲ್ಲೆಲ್ಲ ಒಳ್ಳೆ ಹೆಸರನ್ನು ಪಡೆದಿವೆ. ಜನರ ಸೌಕರ್ಯಕ್ಕಾಗಿ ಎಲ್ಲಾ ತರಹದ ವ್ಯಾಪಾರಸ್ಥರ ಬುಕ್ಕುಗಳು ಕೆಳಗೆ ಕಾಣಿಸಿದ ಎರಡು ಸ್ಥಳಗಳಲ್ಲಿ ಒಂದೇ ಬೆಲೆಗೆ ಕೊಡುವ ವ್ಯವಸ್ಥಾ ಮಾಡಿದೆ. ಗ್ರಾಹಕರ ಇಚ್ಛಾನುಸಾರವಾಗಿ ರೂಲು ಮತ್ತು ನಂಬರು ಸಹ ಹಾಕಿಸಿ ಕೊಡಲ್ಪಡುವವು. ವ್ಯಾಪಾರಿಗಳು ತಮಗೆ ಸಮೀಪವಾಗುವ ಆಯಾ ಸ್ಥಳಗಳಲ್ಲಿ ತೆಗೆದುಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲೀಷ್ ಗುಜರಾಥಿ ಈ ನಾಲ್ಕು ಭಾಷೆಗಳಲ್ಲಿ ವ್ಯಾಪಾರಿಗಳಿಗೆ ಉಪಯೋಗವಾಗುವ ಎಲ್ಲಾ ತರಹದ ಪ್ರಿಂಟಿಂಗ್ ಕೆಲಸಗಳು ನಡೆಯುತ್ತವೆ. ಹೆಚ್ಚಿನ ವಿಷಯವನ್ನು ಪತ್ರದ್ವಾರಾ ತಿಳಿಯಬೇಕು

ನಮ್ಮ ವಿಳಾಸ:—ಸೈಮನ್ ಪ್ರಿಂಟಿಂಗ್ ವರ್ಕ್ಸ್, ಗದಗ.

ನಮ್ಮ ಏಜಂಟರ ವಿಳಾಸ:—

[11] ಭದ್ರಶೆಟ್ಟಿ ರುದ್ರಪ್ಪ ಅಡ್ಡಂಗಡಿ ಕೊಟ್ರಬಸಪ್ಪ, ಕೊಟ್ಟೂರು.

ಅಪೂರ್ವಗ್ರಂಥ! ಅಪೂರ್ವಗ್ರಂಥ!!

ಮಹಾನಾರಾಯಣೋಪನಿಷತ್

(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು. ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಪಾಯಗಳು.

ಈಗ ಎಲ್ಲಿ ನೋಡಿದರೂ ಅಪಾಯಗಳು ಹೆಚ್ಚುತ್ತಿವೆ. ಅಂತಹ ಎಲ್ಲಾ ಕಡೆಯೂ ವೈದ್ಯರ ಸಹಾಯವು ದೊರೆಯುವುದು ದುರ್ಲಭವು. ಆದುದರಿಂದ ಗಾಯಪಟ್ಟವರಿಗೆ ಇನ್ನೂ ಹೆಚ್ಚು ಅಪಾಯಕ್ಕೆ ದಾರಿಕೊಡದಂತೆ ಶಾಸ್ತ್ರೀಯವಾದ ರೀತಿಯಲ್ಲಿ ತಾತ್ಕಾಲಿಕವಾದ ಚಿಕಿತ್ಸೆಮಾಡುವ ಕ್ರಮವನ್ನು ಅಬಾಲವೃದ್ಧರು ಮೊದಲುಗೊಂಡು ಸ್ತ್ರೀಪುರುಷರಲ್ಲಿ ಪ್ರತಿಯೊಬ್ಬರೂ ತಿಳಿದಿರಬೇಕಾದುದು ಅತ್ಯವಶ್ಯವಾಗಿದೆ. ಇಂತಹ ತಾತ್ಕಾಲಿಕ ಚಿಕಿತ್ಸೆಯಲ್ಲಿ ತಿಳುವಳಿಕೆ ಹೊಂದಿ, ಒಳ್ಳೇ ಸುಶಿಕ್ಷಿತರಾದವರು ಸಮೀಪದಲ್ಲಿದ್ದರೆ ಅವರು ರಕ್ತಸ್ರಾವ, ಅಸ್ಥಿಭಂಗ, ಜಲಗಂಡ, ಅಗ್ನಿಗಂಡ, ಚೇಳು ಹಾವುಗಳ ಕಡಿತ, ವಿಷಭಕ್ಷಣ, ಮೂರ್ಛೆ, ಆತಪಘಾತ, ಪ್ರಜ್ಞೆ ತಪ್ಪುವುದು, ಉಸಿರುಕಟ್ಟುವುದು, ಸೆಳವು, ಕಣ್ಣು, ಮೂಗು, ಕಿವಿ, ಗಂಟಲು ಮೊದಲಾದ ಕಡೆಗಳಲ್ಲಿ ಹೊರಗಿನ ಪದಾರ್ಥಗಳೇನಾದರೂ ಸೇರಿಕೊಳ್ಳುವುದು. ಇತ್ಯಾದಿ ಮಹಾಪಾಯಗಳಲ್ಲಿ ಡಾಕ್ಟರುಗಳು ಬಂದು ಸೇರುವಷ್ಟರಲ್ಲಿ ತತ್ಕಾಲಕ್ಕೊದಗಿದ ಉಪಕರಣಗಳನ್ನೇ ಸಾಧನವಾಗಿಟ್ಟುಕೊಂಡು, ಪ್ರಾಣಾಪಾಯಕ್ಕೆ ಅವಕಾಶ ಕೊಡದಂತೆ ಸಹಾಯಮಾಡಬಲ್ಲರು. ಅಂತಹ ತಿಳುವಳಿಕೆಯನ್ನು ಜನಸಾಮಾನ್ಯದಲ್ಲಿ ಪ್ರಚಾರಗೊಳಿಸುವುದಕ್ಕಾಗಿಯೇ ಆನರಬಲ್ ಡಾಕ್ಟರ್ ಯು. ರಾಮರಾಯರಿಂದ "ಅಪಾಯಸಂಭವಗಳಲ್ಲಿ ಪ್ರಥಮಚಿಕಿತ್ಸೆ" ಯೆಂಬ ಪುಸ್ತಕವು ರಚಿತವಾಗಿದೆ. ಅಪಾಯಕ್ಕೆ ಸಿಕ್ಕಿಬಿದ್ದವನನ್ನು ಕಂಡಾಗ, ಅವನನ್ನು ಹೇಗಾದರೂ ಅದರಿಂದ ತಪ್ಪಿಸಬೇಕೆಂಬ ಕಾತರವೇನೋ ಎಲ್ಲರಿಗೂ ಹುಟ್ಟುವುದು ಸಹಜವೇ! ಆದರೆ ಹೇಗೆ ಮಾಡಬೇಕೆಂಬುದನ್ನು ತಿಳಿಯದೆ ಅನೇಕರು ಹಿಂಜರಿಯುವರು. ಕೆಲವರು ತಿಳಿಯದೆ ಕೈಹಾಕಿ ಅದರಿಂದ ಇನ್ನೂ ಅಧಿಕವಾದ ಅಪಾಯಕ್ಕೆ ಗುರಿಮಾಡುವರು. ಹೀಗೆ ಪ್ರತಿವರ್ಷಕ್ಕೆ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಪ್ರಥಮಚಿಕಿತ್ಸಾಕ್ರಮದಲ್ಲಿ ಸ್ವಲ್ಪಮಟ್ಟಿಗಾದರೂ ತಿಳುವಳಿಕೆಯುಳ್ಳು ಕೆಲಸಮಾಡಿದ್ದರೆ, ಅಂತಹ ಪ್ರಾಣಾಪಾಯಗಳಿಗೆ ಅವಕಾಶವಿರುತ್ತಿರಲಿಲ್ಲ. ಆದುದರಿಂದ ಮೇಲ್ಕಂಡ ಪುಸ್ತಕವನ್ನೋದಿ ತಿಳಿದುಕೊಂಡಿದ್ದರೆ, ಮಹಾವಿಪತ್ತುಗಳನ್ನು ತಪ್ಪಿಸಿ, ಪ್ರಾಣಗಳನ್ನೇ ಉಳಿಸಬಹುದು. ಅನೇಕ ಚಿತ್ರಪಟಗಳೊಡನೆ ಬಹು ಸುಲಭವಾದ ಕನ್ನಡದಲ್ಲಿ ಬರೆದಿರುವ ಈ ಪುಸ್ತಕದ ಸಾವಿರಾರು ಪ್ರತಿಗಳು ಈಗಾಗಲೇ ಖರ್ಚಾಗಿ, ನಾಲ್ಕೈದುಸಾರಿ ಪುನರ್ಮುದ್ರಣಗಳೂ ಆಗಿವೆ. ಸರಕಾರೀ ಆಫೀಸುಗಳು, ರೇಲ್ವೆಗಳು, ಗಣಿಗಳು. ಕಾರಖಾನೆಗಳು, ಯಂತ್ರಶಾಲೆಗಳು, ಪಾಠಶಾಲೆಗಳು ಮುಂತಾಗಿ ಎಲ್ಲಾ ಕಡೆಗಳಲ್ಲಿಯೂ ಈ ಪುಸ್ತಕದ ಪ್ರಚಾರವಿದೆ. ಅನೇಕ ಡಾಕ್ಟರುಗಳು ಇದನ್ನು ಕುರಿತು ಬಹಳ ಪ್ರಶಂಸೆಮಾಡುವರು. ಬೆಲೆ 12 ಆಣೆಗಳು ಮಾತ್ರ. [2]

ಶ್ರೀ ಕೃಷ್ಣನ್ ಬ್ರದರ್ಸ್, 323, ತಂಬುಚೆಟ್ಟಿಬೀದಿ, ಮದ್ರಾಸ್.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜಾಕಂದ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸಾವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಾಯಿಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಜೋರಿ, ಮುಂಗಲೀ ಪೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀಲಮಗಜ, ಆಲದಹಾಲು, ನಾಕೇರಿಭಾತಾ, ಗೋಖರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಲ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಮಾಲಕ್ಷ್ಮಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿದ್ದೆಂದು ಮತು 50 ಜಿನಸು ಹಾಕಿದ್ದೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯು ಒಂದು ವಡಿಯನ್ನು ತಕ್ಕೊಂಡು, ಆದರಮೇಲೆ ಸ್ವಲ್ಪ ಕಾಸಿದ 20 ತೊಲೆ ಆಕಳ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 64 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಡಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಿಕಾರಂಧ್ರರೋಗ, ದಬ್ಬನೋವು ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [16]

ಪತ್ತ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯನ್ ಅಷ್ಟವರ್ಗ ಔಷಧಾಲಯ

[29] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ
ವೀರಶೈವಮತವಿಮಾಂಸಾ .... ೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅತಿಮಹತ್ವದ ನೂತನ ಫೋಟೋ.

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,

[9] ಪೋ|| ಗುಳೇದಗುಡ್ಡ, ಜಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು.

(Registered Trade Mark)

ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ... ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿ... ...ಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ... ...ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[18] ಪೋ. ಬಾ. ೫೧೦. ಮದರಾಸ.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ನವಂಬರ್ ೧೯೨೯ [ಸಂಚಿಕೆ ೨೬.

ಸನ್ಮಾನಕೂಟ.

ಮೈಸೂರು ಸಿಟಿ ಶ್ರೀರಾಮಪೇಟೆಗೆ ಸೇರಿದ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಪಿಟೀಲ್ ವಿದ್ವಾಂಸರಾದ ಮ|| ಚೌಡಯ್ಯನವರ ಮನೆಯಲ್ಲಿ ಮೂರುನಾಲ್ಕು ಜನ ಮಕ್ಕಳಿಗೆ ಬಹಳ ಕಾಯಿಲೆಯಾಗಿ ಆ ಮಕ್ಕಳ ವಿಷಯವಾಗಿ ಎಲ್ಲರೂ ನಿರಾಶರಾಗಿದ್ದ ಕಾಲದಲ್ಲಿ ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಮೈಸೂರು ಮೆಡಿಕಲ್ ಹಾಲಿನಲ್ಲಿ ಕೆಲಸಮಾಡುತ್ತಿರುವ, ಅನೇಕನಾದ ಅಸಾಧ್ಯಕಾಯಿಲೆಗಳನ್ನು ಗುಣಪಡಿಸುವುದರ ಮೂಲಕ ಬಹುಜನಗಳ ಕೃತಜ್ಞತೆಗೆ ಪಾತ್ರರಾಗಿ ಅನೇಕ ಬಹುಮಾನಗಳನ್ನು ಪಡೆದಿರುವ ಪ್ರಸಿದ್ಧರಾದ ಡಾ|| ಅಣ್ಣಾಜಪ್ಪನವರು ಬಹಳ ಮುತುವರ್ಜಿ ವಹಿಸಿ ಆ ಮಕ್ಕಳಿಗೆ ಚಿಕಿತ್ಸೆ ಮಾಡಿ ಗುಣಪಡಿಸಿ ತಮ್ಮ ವಿದ್ಯಾ ಮತ್ತು ಬುದ್ಧಿಶಕ್ತಿಗಳನ್ನು ಪ್ರಕಟ ಮಾಡಿದರು. ಇದರಿಂದ ಮ|| ಚೌಡಯ್ಯನವರ ಮನೆಯವರಿಗೆ ಉಂಟಾದ ಸಂತೋಷಕ್ಕೆ ಪಾರವೇ ಇಲ್ಲ. ಮ|| ಚೌಡಯ್ಯನವರು ಈ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ 28-10-29 ನೇ ಸೋಮವಾರ ಒಂದು ಸಂತೋಷಕೂಟವನ್ನೇರ್ಪಡಿಸಿದರು. ಆ ಕೂಟಕ್ಕೆ ಪ್ರಸಿದ್ಧರಾದ ಮ|| ಗಾನವಿಶಾರದ ಬಿಡಾರ ಕೃಷ್ಣಪ್ಪನವರೂ, ವೃತ್ತಾಂತಪತ್ರಿಕೆಯ ಸಬ್ ಎಡಿಟರಾದ ಮ|| ಟಿ. ಕೃಷ್ಣರಾಯರೂ, ಅನೇಕ ಜನ ವಿದ್ವಾಂಸರೂ, ಅಧಿಕಾರಿಗಳೂ ಸೇರಿದ್ದರು. ಮ|| ಚೌಡಯ್ಯನವರು ಆ ಕಾಲದಲ್ಲಿ ಸೇರಿದ್ದ ಜನಗಳನ್ನೆಲ್ಲಾ ಫಲಾಹಾರಾದಿಗಳಿಂದ ಸಂತೋಷಪಡಿಸಿದನಂತರ ಮ|| ಗಾನವಿಶಾರದ ಬಿಡಾರದ ಕೃಷ್ಣಪ್ಪನವರ ಶಿಷ್ಯರಾದ ಮ|| ನಾಗರತ್ನ ಶರ್ಮರವರು ಕೊಳಲು ಮತ್ತು ಪಿಟೀಲು ವಾದನದಿಂದ ಎಲ್ಲರನ್ನೂ ಆನಂದಗೊಳಿಸಿದರು. ಅನಂತರ ಮ|| ಚೌಡಯ್ಯನವರ ಕೋರಿಕೆಪ್ರಕಾರ ವೃತ್ತಾಂತ ಪತ್ರಿಕೆ ಸಬ್ ಎಡಿಟರಾದ ಮ|| ಟಿ. ಕೃಷ್ಣರಾಯರು ವೈದ್ಯವಿದ್ಯೆಯನ್ನು ಪ್ರಶಂಸಿಸಿ ಭಾಷಣಮಾಡಿ ನಮ್ಮ ಡಾಕ್ಟರವರು ತರುಣವಯಸ್ಕರಾದಾಗ್ಯೂ ಅವರಿಗಿರುವ ಅನುಭವವೂ ಮತ್ತು ಸೌಜನ್ಯವೂ ಸ್ತೋತ್ರಾರ್ಹವಾದುವುಗಳೆಂದು ಹೇಳಿದರು. ಇದಕ್ಕೆ ಪ್ರತ್ಯುತ್ತರವಾಗಿ ಡಾಕ್ಟರವರು "ಈ ಪ್ರಪಂಚದಲ್ಲಿ ಎಲ್ಲಾ ರೋಗಗಳಿಗಿಂತಲೂ ಪ್ರಬಲವೂ ಅನಿವಾರಣೀಯವೂ ಆದ ಭವರೋಗದಿಂದ ಸರ್ವರೂ ನರಳುತ್ತಿರುತ್ತೇವೆ. ಇದನ್ನು ಪರಿಹರಿಸತಕ್ಕವನು ಸರ್ವ ಚೈತನ್ಯಮೂರ್ತಿಯೂ ಭವರೋಗ ವೈದ್ಯನೂ ಆದ ಆ ಪರಮೇಶ್ವರನಲ್ಲದೆ ಮತ್ತೆ ಬೇರೆ ಇಲ್ಲ. ಆತನನ್ನು ಒಲಿಸಿಕೊಳ್ಳಬೇಕಾದರೆ ಆತನ ಸೇವೆಯನ್ನು ನಾವು ಸದಾ ಮಾಡಬೇಕು. ಆದರೆ ಆತನು ನಮ್ಮ ಕಣ್ಣಿಗೆ ಕಾಣದೆ ಇರುವುದರಿಂದಲೂ, ಸರ್ವಾಂತರ್ಯಾಮಿಯಾಗಿರುವುದರಿಂದಲೂ "ಸಂತೋಷಂ ಜನಯೇತ್ಪ್ರಾಜ್ಞಃ ತದೇವೇಶ್ವರಪೂಜನಂ" ಎಂಬಂತೆ ಈ ಪ್ರಪಂಚ ಸೇವೆಯನ್ನು ಕೈಲಾದಮಟ್ಟಿಗೂ ಮಾಡಿ ಸಂತೋಷವನ್ನುಂಟುಮಾಡುವುದರಿಂದ ಈಶ್ವರನನ್ನು ಸಂತೋಷಪಡಿಸಿದಂತೆಯೇ ಆಗುತ್ತದೆ. ಆದ್ದರಿಂದ ನಾನು ಮಾಡತಕ್ಕ ಸಮಸ್ತವಾದ ಕೆಲಸಗಳು ನನ್ನ ಕರ್ತವ್ಯದೃಷ್ಟಿಯಿಂದಾದುವೇ ವಿನಾ ಅನ್ಯಭಾವನೆಯಿಂದಲ್ಲ ಮತ್ತು ನಾನು ಮಾಡಿದ ಕೆಲಸಗಳಲ್ಲಿ ಅನುಕೂಲವಾಗಿರತಕ್ಕದು ಆ ಪರಮೇಶ್ವರನ ಅನುಗ್ರಹದಿಂದಲೇ ಹೊರತು ನನ್ನ ಸ್ವಂತಶಕ್ತಿಯಿಂದಲ್ಲ ಇರುವುದಿಲ್ಲ." ಎಂಬುದಾಗಿ ಭಾಷಣ ಮಾಡಿ ತಮಗಿರತಕ್ಕ ನಿರಹಂಕಾರವನ್ನೂ ಪರಮೇಶ್ವರನಲ್ಲಿರತಕ್ಕ ಭಕ್ತಿಯನ್ನೂ ವ್ಯಕ್ತಪಡಿಸಿದರು. ಅನಂತರ ಮಿ|| ಚೌಡಯ್ಯನವರು ಮ|| ಟಿ. ಕೃಷ್ಣರಾಯರ ಹಸ್ತದಿಂದ ಕೆಂಪುಕಲ್ಲಿನ ಒಂದು ಬಂಗಾರದ ಕೈಸರಪಣಿಯನ್ನು ಡಾಕ್ಟರವರಿಗೆ ಬಹುಮಾನವಾಗಿ ಕೊಡಿಸಿ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಕಡೆಯಲ್ಲಿ ಮ|| ನಾಗರತ್ನ ಶರ್ಮರವರು ಡಾಕ್ಟರವರಮೇಲೆ ಕೆಲವು ಪದ್ಯಗಳನ್ನು ಹಾಡಿ ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿದರು. ಪರಮೇಶ್ವರನು ಡಾಕ್ಟರವರಿಗೆ ಸಕಲ ಸನ್ಮಂಗಲಗಳನ್ನುಂಟುಮಾಡಲೆಂದು ಕೋರುವ.

ಪ್ರತ್ಯಕ್ಷದರ್ಶಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಧರ್ಮೋಪದೇಶ.

ದಿಗ್ಗಾವಿ.

ತಾ|| 2-10-29 ನೇ ದಿನ ಸಾಯಂಕಾಲ ೫ ಘಂಟೆಗೆ ದಿಗ್ಗಾವಿ ಬೃಹನ್ಮಠದಲ್ಲಿ "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಗೀತಾವಾಕ್ಯಾಧಾರದಮೇಲೆ ಅವರವರ ಮತಧರ್ಮಗಳನ್ನು ಯಾರೂ ಬಿಡಲಾಗದೆಂದು 2 ಘಂಟೆವರೆಯವರೆಗೆ ವೇ|| ವಿರೂಪಾಕ್ಷಶಾಸ್ತ್ರಿಗಳು ವಂದ್ಲಿದಾಸೋಹಮಠ ಇವರು ತಮ್ಮ ಸರಳವಾಣಿಯಿಂದ ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಉಪದೇಶಿಸಿದರು. ತರುವಾಯ ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷರವರು ಅದೇ ವಿಷಯವನ್ನು ಅನಂತಯುಕ್ತಿಗಳೊಂದಿಗೆ ಸುಗಮವಾಗಿ ಪ್ರತಿಪಾದಿಸಿದರು. ಅನಂತರ ಮ|| ರಾ|| ಮಡಿವಾಳಪ್ಪ ಜೇಡ್ಮನಸ್ಕರ ಇವರು ಉಭಯೋಪನ್ಯಾಸಕರ ಅಭಿಪ್ರಾಯವನ್ನು ಸೂಚಿಸಿದರು ಮತ್ತು ಮಾರನೆದಿವಸ ಶಾಲೆಯಲ್ಲಿ ಸದರೀ ಶ್ರೀಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದನಂತರ; ಮ|| ರಾ|| ರಾ|| ಶಿವರಾಜಪ್ಪ ಪೋಲೀಸ ಪಾಟೀಲ, ಸಿದ್ಧಪ್ಪ ಮಾಲೀ ಪಾಟೀಲ, ಮ|| ರಾ|| ಹನುಮಂತರಾವ ಕುಲಕರ್ಣಿ, ಮ|| ರಾ|| ಶಂಕರರಾವ ಶೇಷಕರ, ಮಿಸ್ಟರ್ ನರಹರರಾವ ಡಾಕ್ಟರ, ಇವರ ಸಹಾಯದಿಂದ ಮ|| ರಾ|| ವೀರಬಸಪ್ಪ, ಗಾಣಿಗೇರ, ಇವರು ಮ|| ರಾ|| ಸೂಗಪ್ಪ ಅಣ್ಣನವರ ಸ್ಮಾರಕದಸೆಯಿಂದ ಲೈಬ್ರರಿಸ್ಥಾಪನೆಗೆ 50 ರೂ. ಮ|| ರಾ|| ಗಣಪತರಾವ್ ಶೇಷಕರ ಇವರ ಕಲಿಸೂರಿ ಜವಾ ಇಡಲ್ಪಟ್ಟಿತು. ಆ ರೂಪಾಯಿಗಳನ್ನೇ ಮೂಲವಾಗಿಟ್ಟುಕೊಂಡು ಲೈಬ್ರರಿಸ್ಥಾಪನ ಬಗ್ಗೆ ವೇ|| ರೇವಣಸಿದ್ಧಶರ್ಮ ಸೊಪ್ಪಿಮಠ ಇವರು ತಮ್ಮ ಅಮೃತವಾಣಿಯಿಂದ ಜನರ ಮನಸ್ಸಿನಲ್ಲಿ ಪರಿಣಮಿಸುವಂತೆ ಭಾಷಣಮಾಡಿದರು. ಅನಂತರ ವೇ|| ಸದರೀ ವಿರೂಪಾಕ್ಷಶಾಸ್ತ್ರಿಗಳು ವಂದ್ಲಿದಾಸೋಹಮಠ, ವೇ|| ಪಡಶೆಟ್ಟಿ ಕವಿ ಗುಂಜಹಳ್ಳಿ, ಮಿ|| ಹನುಮಂತರಾವ್, ಮಿ|| ಜೇಡ್ಮನಸ್ಕರ, ಮಿ|| ಶರಬಣ್ಣ ಮಾಸ್ತರ ಇಂತಿಷ್ಟು ಜನರು ಸದರಿ ವಿಷಯಕ್ಕಾಗಿ ಸರ್ವಜನರಿಗೆ ಪ್ರತಿಪಾದಿಸಿದನಂತರ, ಮಿ|| ನರಹರರಾವ ಡಾಕ್ಟರ್ ಇವರು ಹಿಂದಿಭಾಷೆಯಲ್ಲಿ ಮೇಲಿನ ವಿಷಯವನ್ನೇ ಪ್ರತಿಪಾದನಮಾಡಿದರು. ತದನಂತರ ಅಧ್ಯಕ್ಷರು ಲೈಬ್ರರಿಯ ಅಭಿವೃದ್ಧಿಗೋಸ್ಕರ ತಮ್ಮ ಅಮೃತವಾಣಿ... ...ಪ್ರಶಂಸಿಸಿದರು. ಮ|| ರಾ|| ಗುರುಲಿಂಗಪ್ಪ ಶೀಲವಂತ ... ...ಧ್ಯಕ್ಷರ ಅಭಾರವನ್ನು ಮನ್ನಿಸಿದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶರಣಪ್ಪ ಪಾಟೀಲ, ಮದಗಣಕಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

(ಇರು ಇಲ್ಲ ಪದ್ಧತಿ.)

ಲೇಖಕರು—ವಾಗೀಶಶಿವಾಚಾರ್ಯರು, ಬೃಹನ್ಮಠ, ಮುದೇನೂರು. ಶ್ರೀ ವಿಶ್ವಾರಾಧ್ಯ ಗುರುಕುಲ, ಕಾಶೀ.

ಕಂದಪದ್ಯದ ನಿಯಮ—

ಕಂದದಪೂರ್ವಾರ್ಧದೊಳಂ |
ಅಂದದಿನಾಲ್ಕಲ್ಕುಮಾತ್ರೆಗಳ ಗಣಮೊಂಟು ||
ಮುಂದಿನಾಲ್ಕರಗಣಗಳೆರಡುಂ |
ಹಿಂದಿನಕಡೆಯಿಂದಲೆಣೆಸಲುಮಾಗಿರ್ಕುಂ ||೧||

೨ನೆಯ ಅಭಿಪ್ರಾಯ—

ಗೀತಾವ್ಯಕ್ತದಿಚರಣಗ |
ಳಾತತರ್ ನಾಲ್ಕುಮಾರ್ಧಪೂರ್ವಾರ್ಧಸಮಂ ||
ಖ್ಯಾತಕಮೀಶ್ವರವಿಧಕಂ |
ರೀತಿಯೊಳಂ (ಕಂದಮೆಂತು) ಪೇಳಲ್ಪಟ್ಟಪದ್ಯ ||೨||

(ವಿಷಯಪ್ರಾರಂಭ)

ಕಂ|| ಈ (ಮ)ಹಿಯೊಳ್ ತಿನುಕುವಂ |
ಕಾಮಿವನರರುಂಟು ಕಾಮವಾಸನೆಯಿಂದಂ ||
(ಕಾಮ) ಕಾಮಸವನು ಬಿಟ್ಟುರುತ |
ಶಿಮೆಯನನುಸರಿಪ ಸುಜನರಿಲ್ಲವು ಪಟಿಯೊಳ್ ||೧||
ಸ(ದ)ಮಲಯೋಧೆಯುಪಡೆಯುದೆ |
ಕುದಿಯುತ ಪರಗುಣವ ಪಳಿವ ಕ್ರೋಧಿಗಳುಂಟೈ ||
(ಕ್ರೋಧ) ಮುದದಿಂ ತಮ್ಮ ಯತಿರದಿಂ |
ಸದುಗುಣಿಗೆಲ್ಲರೆಂಬ ಮನುಜರುಮಿಲ್ಲಂ ||೨||
ತೋ(ರ)ಲುವನ್ನು ವದೊಂದುವು |
ದಾರದು ಕಾವಾದೊಡೇನು ಲೋಭಿಪರುಂಟೈ ||
(ಲೋಭ) ಧೀರತೆಯಿಂದದನೊಲ್ಲದ |
ಶೂರರುಕಾವ್ ಪೇರದಕ್ಕಟ ಭುವಿಯೊಳ್ ||೩||
ಮ(ಹಿ)ಯೊಳು ಮನುವಿನವಚವು |
ಮಹಿಳೆಯರಿಂಗಲ್ಲ-ಮದುವೆಮಹಿಗಿಹುದೆನುತಂ ||
(ಮೋಹ) ಬಹುವಿಧದೊಳು ಭ್ರಮೆಗೊಳಿಸುವ |
ಅಹಿಗಳು ಬಹಳುಂಟು ಮೋಹಜಿತಜನರಿಲ್ಲಂ ||೪||
ಮ(ತೆ)ಮತನೆಂಬುವ ಮತಿತಾ |
ಕ್ಷಿತಿಯೊಳಗತಿಸತವಾಂಕುದಾಸ್ಯವನೊಳಂ ||
(ಮದ) ಚ್ಯುತಪದಮದಲ್ಲವು ತಾ |
ನತಿಬಲದಿಂಬಂದುಸೇರಲಂಬುವದಿಲ್ಲಂ ||೫||
ಜ್ಞಾ(ನಾ)ವಸ್ಥೆಯೊಳಿರ್ದು |
ಹೀನಾವಸ್ಥೆಯೊಳಿರ್ದವನವಳಿವವರುಂಟೈ ||
(ಮತ್ಸರ) ಜ್ಞಾನಿಗಳವರತಿಪೂಜ್ಯರ್ |
ಮಾನಿಗಳೆಂದೆಂಬ ವಿಗತಮತ್ಸರರಿಲ್ಲಂ ||೬||

(ಸಶೇಷ.)

ಸ್ವೀಕಾರ.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ತಾಳ್ಕಂಟೆ ಮ|| ರಾ|| ಟಿ. ಎಂ. ಗುರುಚನ್ನಬಸಪ್ಪನವರ ಗೃಹದಲ್ಲಿ ನೆರವೇರಿದ ಮ|| ರಾ|| ಟಿ. ಗುರುಲಿಂಗಪ್ಪನವರ ಕುಮಾರ ಚಿ|| ಸೌ|| ಸಿದ್ಧಗಂಗಮ್ಮನೆಂಬ ವಧುವಿನ ಗರ್ಭಾಧಾನ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 2 ರೂ. ಗಳು ಮ|| ರಾ|| ಯಂ. ಎಂ. ಶಿವನಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಆದವಾನಿ ತಾ|| ಯಮ್ಮಿಗನೂರು ವಾಸಿಗಳಾದ ಮ|| ರಾ|| ಯಂ. ರಾಮಲಿಂಗಪ್ಪನವರು ಪ್ರಭಾಪೋಷಣೆಕ್ಕೋಸ್ಕರ 2 ರೂ. ಗಳನ್ನು ರವಾನಿಸಿರುತ್ತಾರೆ.

ಹುಬ್ಬಳ್ಳಿಯ ಹನ್ನೆರಡು ಮಠದಲ್ಲಿ ನೆರವೇರಿದ ಪುರಾಣಸಮಾಪ್ತಿ ಮತ್ತು ದಸರಾ ಪಾದಪೂಜಾ ಮಹೋತ್ಸವ ಸಮಯದಲ್ಲಿ ಗುಂಜೆಗಟ್ಟಿ ಹಿರೇಮಠದ ವೇ|| ಚನ್ನಯ್ಯನವರು ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 1 ರೂ. ಹನ್ನೆರಡುಮಠದ ಶ್ರೀಗಳವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ—

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಸದ್ಯದ ಶಿಕ್ಷಣವೂ ಮತ್ತು ನಿರುದ್ಯೋಗವೂ

ಅಯ್ಯಾ ನನ್ನ ಭಾರತ ಬಂಧುಗಳೇ? ನಮ್ಮ ತಾಯಿತಂದೆಗಳು ನಮ್ಮನ್ನು ಬುದ್ಧಿವಂತರನ್ನಾಗಿ ಮಾಡಬೇಕೆಂಬ ಲವಲವಿಕೆಯಿಂದ ತಮಗಾದ ಕಷ್ಟನಷ್ಟಗಳನ್ನೆಲ್ಲ ಸಹಿಸಿಕೊಂಡು ಶಾಲೆಗೆ ಕಳುಹಿಸುತ್ತಾರೆ. ಭಾರತಮಾತೆಯ ಪುತ್ರರಾದ ನಾವು ನಮ್ಮ ಪ್ರಾಥಮಿಕ ಶಿಕ್ಷಣವನ್ನು ನಮ್ಮ ಜನ್ಮಸ್ಥಳದಲ್ಲಿಯಾಗಲಿ ಅಥವಾ ಅಜುಬಾಜು ಹಳ್ಳಿಗಳಲ್ಲಾಗಲಿ ಹೊಂದಲಿಕ್ಕೆ ಪ್ರಾರಂಭಿಸುತ್ತೇವೆ. ನಾವು ಸದರಿ ಶಾಲೆಗಳಲ್ಲಿ 4-5 ಕ್ಲಾಸುಗಳವರೆಗೆ, ಬಹಳವಾದರೆ 2 ನೇ ಕ್ಲಾಸಿನವರೆಗೆ ನಮ್ಮ ಮಾತೃಭಾಷೆಯನ್ನು ಕಲಿತು, ಈಗಿನ ಪರಿಸ್ಥಿತಿಗನುಸಾರವಾಗಿ ರಾಜಭಾಷೆಯಾದ ಇಂಗ್ಲೀಷನ್ನು ಕಲಿಯಲಿಕ್ಕೆ ದೊಡ್ಡ ದೊಡ್ಡ ಪಟ್ಟಣಗಳನ್ನು ಸೇರುತ್ತೇವೆ. ನಮ್ಮ ಮಕ್ಕಳು ಇಂಗ್ಲೀಷ್ ಕಲಿಯುವರೆಂಬ ಅಭಿಮಾನದಿಂದ ತಾಯಿತಂದೆಗಳು ಮಹತ್ತರವಾದ ಎಡರುಗಳಿಗಾದರೂ ಹೊಣೆಗಾರರಾಗಿ ದುಡ್ಡನ್ನು ಕಳಿಸುತ್ತಾರೆ. ಧನದ ಮಹಿಮೆಯನ್ನರಿಯದ ತರುಣರಾದ ನಾವು, ಅದನ್ನು ನಮ್ಮ ಆಕಾಂಕ್ಷೆಯ ಮೇರೆಗೆ ವಿನಿಯೋಗಿಸುತ್ತೇವೆ. ಬಹುಶಃ ಈಗಿನ ಎಲ್ಲ ವಿದ್ಯಾರ್ಥಿಗಳು ತಂದೆತಾಯಿಗಳಿಂದ ಕಳಿಸಲ್ಪಟ್ಟ ಹಣವನ್ನು ನಾಟಕ, ಸಿನಿಮಾ ನೋಡುವದಕ್ಕಾಗಲಿ, ಚಹಾ ಕಾಫಿ ಕುಡಿಯುವದಕ್ಕಾಗಲಿ, ಸಿಗರೇಟು ಚರೂಟ ಸೇದುವದಕ್ಕಾಗಲಿ, ಪಾನಪಟ್ಟಿ ಸೇವಿಸುವದಕ್ಕಾಗಲಿ, ಮತ್ತು ನಾನಾ ಪ್ರಕಾರದ ನೂತನ ಪೋಷಾಕುಗಳನ್ನು ಧರಿಸುವದಕ್ಕಾಗಲಿ ವೆಚ್ಚಮಾಡುವವಲ್ಲದೆ ಹಣವನ್ನು ಸದುಪಯೋಗಮಾಡಿಕೊಳ್ಳಲಾರರು. ಪಾಪ! ಹುಡುಗರೇನು ಮಾಡ್ಯಾರು! ಈಗಿನ ವಾತಾವರಣವೇ ಹಾಗೆ ಇರುತ್ತದೆ. ಪ್ರತಿ ಒಂದು ಇಂಗ್ಲೀಷ ಶಾಲೆಯ ಸುತ್ತಲೂ ಸಹಜವಾಗಿ ಚುಟ್ಟಾ, ಸಿಗರೇಟು ಮತ್ತು ಚಹಾ ಕಾಫಿ ಅಂಗಡಿಗಳು ನಾನಾ ಪ್ರಕಾರದ ತಸ್ವೀರುಗಳಿಂದಲೂ, ದೊಡ್ಡ ದೊಡ್ಡ ಕನ್ನಡಿಗಳಿಂದಲೂ, ಮತ್ತು ಫೋಟೋಗ್ರಾಫಿನ ಇಂಪಾದಗಾಯನದಿಂದಲೂ ಕೂಡಿಕೊಂಡು ಅಲಂಕರಿಸಲ್ಪಟ್ಟು ಹುಡುಗರ ಮನಸ್ಸನ್ನು ಎಳೆದು ಅವರನ್ನು ಸ್ವಾಗತಮಾಡಲಿಕ್ಕೆ ಸ್ಥಾಪಿಸಲ್ಪಟ್ಟೇ ಇರುತ್ತವೆ. ಇಂಗ್ಲೀಷ ವಿದ್ಯೆಯೆಂಬ ಮೇಲಟ್ಟಕ್ಕೆ ಮೇಲೆ ಹೇಳಿದವುಗಳೆಲ್ಲ ಸೋಪಾನಗಳೋಪಾದಿಯಲ್ಲಿ ಇರುತ್ತವೆ. ಆದ್ದರಿಂದ ಯಾವ ತರಗತಿಯ ಹುಡುಗರು ಬಂದರೂ ಬಹುಶಃ ಅವರು ಕೆಟ್ಟು ತಮ್ಮನ್ನು ತಾವೇ ಮರೆಯುವರು. ಅವರಲ್ಲಿಯೂ ಸುಶಿಕ್ಷಿತರಾದವರು ವಿಚಾರಪೂರ್ವಕವಾಗಿ ವರ್ತಿಸಿ ಈ ವಿದ್ಯೆಯನ್ನು ಸಂಪಾದಿಸುವರು. ಆಗಲಿ! ಇಷ್ಟು ವೆಚ್ಚಮಾಡಿ ಕಲಿತ ವಿದ್ಯೆಯಿಂದಾದರೂ ನಾವು ಮಾಡುವದೇನು? ಇಂಥ ವಿದ್ಯೆಯಿಂದ ನಮಗೇನೂ ದೊರಕುವದಿಲ್ಲ. ನಾವು ಈ ವಿದ್ಯೆಯನ್ನು (ಇಂಗ್ಲೀಷ್) ಹಂಬಲಿಸಿ, ನಮ್ಮ ಮಾತೃಭಾಷೆಯನ್ನು ಕಲಿತು ಅದರಲ್ಲಿ ನಿಧಿ ಇರಾಗದೆ, ನಡುವೆ ಕೊರಳು ಕತ್ತರಿಸಿ ಕನಿಕರವಿಲ್ಲದೆ ಬಿಟ್ಟು ಬರುತ್ತೇವೆ. ನಿರ್ಲಜ್ಜರಾಗಿ ಬಂದಂಥ ನಾವು ಇಂಗ್ಲೀಷಿನಲ್ಲಿಯಾದರೂ ಪೂರ್ಣ ತೇರ್ಗಡೆ ಹೊಂದಬೇಕೆಂದರೆ ಅದರಲ್ಲಿಯೂ ಹತ್ತೆಂಟು ವಿಷಯಗಳನ್ನು ಹಚ್ಚಿರುವಕಾರಣ, ನಮಗೆ ಒಂದು ವಿಷಯದಲ್ಲಾದರೂ ಪೂರ್ಣಜ್ಞಾನವಾಗುವದು ದುರ್ಲಭವು. ಬರೀ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂಬ ಇಚ್ಛೆಯಿಂದ, ಅಹರ್ನಿಶಿ ರಾತ್ರಿ ನಿದ್ರೆ ಇಲ್ಲದೆ ದುಡಿದು ದುಡಿದು ಪರೀಕ್ಷೆಗೆ ಕೂಡ್ರುತ್ತೇವೆ. ಒಂದು ವೇಳೆ ಯಾವುದಾದರೊಂದು ವಿಷಯದಲ್ಲಿ ತೇರ್ಗಡೆಹೊಂದಲಿಕ್ಕೆ 4-5 ಗುಣಗಳು ಕಡಿಮೆಯಾದರೆ ನಮ್ಮ ವಾರ್ಷಿಕ ಸತತ ಪ್ರಯತ್ನವು ವ್ಯರ್ಥವು. ಈ ರೀತಿಯಾಗಿ ಅಹೋರಾತ್ರಿ ಆಯಾಸಪಟ್ಟು ಅಭ್ಯಾಸಮಾಡುವದರಿಂದ ನಾವು ಶಕ್ತಿಹೀನರು, ಅಲಸ್ಯವಂತರೂ ಆಗುವದಲ್ಲದೆ ನಮ್ಮ ಮೇಧಾಶಕ್ತಿಯು ಕಡಿಮೆಯಾಗಿ ಕಡೆಗೆ ವಿಚಾರಹೀನರಾಗುತ್ತೇವೆ. ಬಹುಶಃ ಈಗಿನ ವಿದ್ಯಾರ್ಥಿಗಳಾದ ನಾವು ಹಚ್ಚಿದಂಥ ಹತ್ತೆಂಟು ಪುಸ್ತಕಗಳನ್ನಾದರೂ, ಸ್ವತಃ ನಮ್ಮ ವಿಚಾರದಿಂದಲೇ ಅಭ್ಯಾಸಮಾಡದೆ, ಎರಡನೆಯವರು ಬರೆದಂಥ ಅರ್ಥದ ಪುಸ್ತಕಗಳನ್ನು ಕೊಂಡು, ಅವರ ವಿಚಾರಗಳನ್ನೆಲ್ಲ ನಮ್ಮ ತಲೆಯಲ್ಲಿ ತುಂಬಿಕೊಂಡು ಹೇಗಾದರೂ ಮಾಡಿ ಪರೀಕ್ಷೆಯವರೆಗೆ ಕಾದಿಟ್ಟು ಪರೀಕ್ಷೆಯಲ್ಲಿ ಉತ್ತೀರ್ಣಹೊಂದುತ್ತೇವೆ. ಇಷ್ಟಾದರೆ ನಾವು ನಮ್ಮ ಹಣೆಬರಹ ವ[illegible] ಗೆದ್ದಂತಾಯಿತು. ಪರೀಕ್ಷೆಯು ಮುಗಿದನಂತರವೇ ಆ [illegible]ಲ್ಲ ಸಿಕ್ಕ ಕಡೆಗೆ ಹಾರಿಹೋಗುವವು.

[illegible] ನನ್ನ ಬಂಧುಗಳೇ? ಈ ಪ್ರಕಾರ ಶಿಕ್ಷಣಹೊಂದಿದರೆ, ನಾವುಗಳಾಗಲಿ ಅಥವಾ ನಮ್ಮ ಮುಂದಿನ ಪೀಳಿಗೆಗಳಾಗಲಿ ಹೇಗೆ ಸುಧಾರಿಸಬೇಕೆಂಬುದನ್ನು ನೀವೇ ವಿಚಾರಮಾಡಿನೋಡಿರಿ? ವಿದ್ಯೆಕಲಿಯುವವರ ಫಲಿತಾರ್ಥವು ಸುಧಾರಿಸುವದಕ್ಕೂ, ನಮ್ಮ ಹಿರಿಯರಾಗಲಿಕ್ಕೂ ಪರಮಾತ್ಮನನ್ನು ಸೂಕ್ಷ್ಮದೃಷ್ಟಿಯಿಂದ ಭಜಿಸಲಿಕ್ಕೂ ದೀನರಿಗೆ ಸಹಾಯ ಮಾಡಲಿಕ್ಕೂ, ದುಷ್ಟರನು ಶಿಷ್ಟರನ್ನಾಗಿ ಮಾಡಲಿಕ್ಕೂ ಮತ್ತು ದೇಶದ ದಾಸತ್ವವನ್ನು ಬಿಡಿಸಲಿಕ್ಕೂ ಇರುತ್ತದೆ. ಆದರೆ ಇವುಗಳಿಗೆಲ್ಲ ನಾವು ವಿರುದ್ಧವಾಗಿರುತ್ತೇವೆ. ಈಗಿನ ಶಿಕ್ಷಣದಿಂದ, ನಾವು ನಮೂನಿಕಾಲರಿನ ಅಂಗಿಗಳನ್ನು ಹೊಲಿಸುವದರಲ್ಲಿಯೂ, ಅಂದವಾದ ಟೊಪ್ಪಿಗೆಗಳನ್ನು ಕೊಂಡುಕೊಳ್ಳುವದರಲ್ಲಿಯೂ, ನಕ್ಟಾಯಿ, ಪ್ಯಾಂಟುಗಳನ್ನು ತಯಾರುಮಾಡಿಸುವದರಲ್ಲಿಯೂ, ಕ್ರಾಪು ಕತ್ತರಿಸುವದರಲ್ಲಿಯೂ, ನಾನಾಪ್ರಕಾರದ ಸುಗಂಧಮಯವಾದ ಅತ್ತರಗಳನ್ನು ಉಪಯೋಗಿಸುವದರಲ್ಲಿಯೂ, ಚಹಾದ ಡಿಕಾಕ್ಷನ್ ಇಳಿಸುವದರಲ್ಲಿಯೂ, ಕೈಯಲ್ಲಿ ಕೋಲನ್ನು ಹಿಡಿದುಕೊಂಡು ತೋಟಗಳಲ್ಲಿ ಅಡ್ಡಾಡಲಿಕ್ಕೆ ಹೋಗುವದರಲ್ಲಿಯೂ ಮತ್ತು ಬೇರೊಬ್ಬರಿಗೆ ಗುಲಾಮರಾಗಿ ಜೀವಿಸುವದರಲ್ಲಿಯೂ ಸುಧಾರಿಸಿದ್ದೇವೆ. ಇಂಗ್ಲೀಷ ಕಲಿತ ನಾವು ಸೂಟಿಯಲ್ಲಿ ನಮ್ಮ ಊರಿಗೆ ಹೋದಾಗ್ಗೆ ನಮ್ಮ ತಾಯಿತಂದೆಗಳು ಬಾವಿಯಿಂದ ಒಂದು ಕೊಡ ನೀರನ್ನು ತರಲಿಕ್ಕೆ ಹೇಳಿದರೆ, ಅಭಿಮಾನದಿಂದ ಮರ್ಯಾದೆಗೆ ಭಂಗ ಬರುವದೆಂದು, ತಂದೆತಾಯಿಗಳ ಆಜ್ಞೆಯನ್ನು ಮೀರಿ ತರುವದಿಲ್ಲೆಂದು ಖಂಡಿತವಾಗಿ ಹೇಳಿಬಿಡುತ್ತೇವೆ. ಆಮೇಲೆ ಮುಪ್ಪಿನ ತಾಯಿತಂದೆಗಳೇ ಆ ಕೆಲಸವನ್ನು ಕೈಕೊಳ್ಳುವರು. ಅಗ್ಗೆ ಮಾತ್ರ ನಮ್ಮ ಮರ್ಯಾದೆಗೆ ಭಂಗಬರುವದಿಲ್ಲವಂತೆ! ಒಳ್ಳೇ ಅಭಿಮಾನ. ನೀರು ತರುವವನ ಮಗ ಎಂಥಾ ಸುಬೇದಾರನಾದ್ರೂ ಮಗನು ನೀರು ತಂದರೆ ಮರ್ಯಾದೆಗೆ ಭಂಗವಂತೆ! ತಂದೆಯು ತಂದರೆ ಅಲ್ಲವಂತೆ! ಇದೆಂಥ ಹೇಡಿ ಅಭಿಮಾನವು! ನಾವು ಕಲಿತು ಬರೀ ಅಭಿಮಾನವುಳ್ಳವರಾದರೆ, ನಮ್ಮ ದೇಶದ ಸ್ವಾತಂತ್ರ್ಯ ವಿಷಯದಲ್ಲಿ ಆ ಅಭಿಮಾನವನ್ನು ತೋರಿಸಬೇಕು. ಅಂದರೆ ಅದೇ ಖರೇ ಅಭಿಮಾನವು! ಇಂಥ ಮಹತ್ಕಾರ್ಯವನ್ನು ಬಿಟ್ಟು, ಡೌಲಿಗೆ ಭಂಗಬರುವದೆಂದು ನಾವು ಕೆಲಸಮಾಡಲಿಚ್ಛಿಸುವದಿಲ್ಲ. ನಾವು ಮುಂದೆ ಶಾಲೆಯನ್ನು ಬಿಟ್ಟುಹೋದ ಮೇಲೆ, ಇದೇ ಡೌಲಿನ ಅಭಿಮಾನದ ಸಲುವಾಗಿ ಕೆಲಸಮಾಡದೆ ನಿರುದ್ಯೋಗಿಗಳಾಗಿ ಕೂಡ್ರುತ್ತೇವೆ. ಇದೇ ರೀತಿಯಾಗಿ ನಾವೆಲ್ಲರೂ ನಿರುದ್ಯೋಗಿಗಳಾದ್ದರಿಂದಲೇ ನಮ್ಮ ಭಾರತಮಾತೆಯು ದಾರಿದ್ರ್ಯವೆಂಬ ರಕ್ಕಸನ ದವಡೆಯಲ್ಲಿ ಸಿಕ್ಕು ಹಿಚಕಲ್ಪಡುತ್ತಾಳೆ. ಬಹುಶಃ ಈಗಿನ ಎಲ್ಲ ವಿದ್ಯಾರ್ಥಿಗಳು ರಾಜಕೀಯ ಭಾಷೆಯನ್ನು ಕಲಿಯುವದು, ಒಂದು ನೌಕರಿಗಾಗಿಯೇ! ಅವರೆಲ್ಲರಲ್ಲಿಯೂ ನೌಕರಿಯಿಂದಲೇ ದುಡ್ಡನ್ನು ಗಳಿಸಬೇಕೆಂಬ ಮಹತ್ವಾಕಾಂಕ್ಷೆಯು ಉಕ್ಕುಕ್ಕಿ ಕುದಿಯುತ್ತಿರುತ್ತದೆ. ಎಲೈ ನನ್ನ ಭಾರತಬಂಧುಗಳೇ? ಈಗಿನ ಪರಿಸ್ಥಿತಿಯಲ್ಲಿ ಕಲಿತವರೆಲ್ಲರಿಗೂ ನೌಕರಿ ಸಿಗುವದು ದುರ್ಲಭವು. ಆದ[illegible] ನಾವು ಇಂಥ ವಿದ್ಯೆಯನ್ನು ಕಲಿತು ನಿರುದ್ಯೋಗಿಗಳಾಗಿ ಕೂಡ[illegible] ಬೇರೇ ನಮ್ಮ ಸ್ವತಂತ್ರ ಉದ್ಯೋಗವನ್ನು ಕೈಕೊಳ್ಳುವದು ಲೇಸು. ನಮ್ಮ ತಾಯಿತಂದೆಗಳು ತಮ್ಮ ಮನೆಯಲ್ಲಿ ನಮ್ಮ ಮಕ್ಕಳು ಮಾಮಲೇದಾರರಾಗುವರು, ಇನಸ್ಪೆಕ್ಟರರಾಗುವರು ಮತ್ತು ಕಲೆಕ್ಟರರಾಗುವರೆಂದು ಹೇಳಿಕೊಳ್ಳುತ್ತಿರುವಲ್ಲಿ, ನಾವು ಇಲ್ಲಿ ನೌಕರಿ ಇಲ್ಲದೆ ನಿರುದ್ಯೋಗಿಯಾಗಿ ಕೂಡ್ರದೆ ಯಾವದಾದರೊಂದು ಸ್ವತಂತ್ರವಿದ್ಯೆಯಾದ ನೇಕಾರಿಕೆ, ವ್ಯಾಪಾರ, ಒಕ್ಕಲತನದ ಖಾತೆ; ಚಿತ್ರಬರೆಯುವ, ಚಿತ್ರ ಕಡೆಯುವ ಇಲ್ಲವೇ ಬಣ್ಣಕೊಡುವ ಕೆಲಸಗಳಲ್ಲಿ ಉತ್ತೀರ್ಣರಾಗಿ ಸೊಂದಂಥ ನಮ್ಮ ತಾಯಿತಂದೆಗಳನ್ನು ಸಂತೋಷಸಾಗರದಲ್ಲಿ ಮುಳುಗಿಸಿದರೆ ಖರೇ ಮಕ್ಕಳು; ಇಲ್ಲವಾದರೆ ವೈರಿಗಳು. ಈ ಕೆಳಗಿನ ಅರ್ಥಗರ್ಭಿತವಾದ ಪದ್ಯವೂ ಸಹ ಮಾತ್ರವಿದ್ಯೆಯ ಕಡೆಗೆ ನಮ್ಮ ಲಕ್ಷ್ಯವನ್ನು ಏನೂ ವ್ಯಾಖ್ಯಾನಿಸಲಿದೆ ಕೆಡವುತ್ತದೆ.

ಹೊಟ್ಟೆ ಕಕ್ಕುಲತೆಯ ಮಿದಿದರೆ ಅನ್ಯದೇಶದ ವಿದ್ಯೆ |
ಉತ್ತಮಗತಿಯನ್ನು ದೇಶದ ಕಲೆಮರೆತು |
ಹೊತ್ತುಗಳೆವುದು ಹಿತವೋ ಅಹಿತವೋ ತಿಳಿಯದನು |
ಒತ್ತರದಿ ರಾಷ್ಟ್ರೀಯಮತಕೆ ಪೋಗಯ್ಯಾ ||

ಭಾರತಮಾತೆಯ ಪುತ್ರರಾದ ನಾವು ನಮ್ಮ ದೇಶದ ಒಕ್ಕಲಿಗರು ತಮ್ಮ ದೇಹದಂಡನೆಮಾಡಿ ಗಳಿಸಿಟ್ಟ ಸೊತ್ತಿನಿಂದಲೇ ಕಲಿಯುವದು, ಚಹಾ ಕಾಫಿ ಕುಡಿಯುವದು ಮತ್ತು ನಮೂನೆ ಪೋಷಾಕು ಹೊಲಿಸುವದು! ಹೀಗಿದ್ದೂ, ಮುಂದೆ ನಾವು ಕಲಿತು ಯಾವದಾದರೊಂದು ನೌಕರಿಯ ಮೇಲೆ ಬಂದರೆ, ತಿರುಗಿ ಅದೇ ಒಕ್ಕಲಿಗರನ್ನು ಅನೇಕ ಕಷ್ಟನಷ್ಟಗಳಿಗೆ ಗುರಿಮಾಡಿ ಅವರ ಕಡೆಯಿಂದ ಲಂಚ ತೆಗೆದುಕೊಳ್ಳುವೆವು. ಅವರಿಂದಲೇ ಪೋಷಣೆ ಮಾಡಲ್ಪಟ್ಟ ಗಿಡಗಳಾದ ನಾವು ತಿರುಗಿ ಅವರಿಗೆ ವಿಷಭರಿತವಾದ ಫಲಗಳನ್ನೀಯುವದೆಂದರೆ, ಎಂಥ ಕೃತಘ್ನತೆಯು? ಇದೆಲ್ಲವೂ ಈ ವಿದ್ಯೆಯ ಮಹಿಮೆಯಿಂದಲ್ಲವೇ? ಈ ರಾಜಕೀಯ ಭಾಷೆಯನ್ನು ಕಲಿತು ವಕೀಲರಾದಂಥ ಜನರ ಬೋರ್ಡುಗಳನ್ನು (ಹಲಗೆಗಳನ್ನು) ಬಹುಶಃ ಪ್ರತಿ ಒಂದು ಗೋಡೆಯ ಮೇಲೆ ನಾವು ನೋಡಬಹುದು. ಹೇಗೆ ಹೇಗೆ ವಕೀಲರು ಹೆಚ್ಚು ಹೆಚ್ಚು ಆಗುವರೋ ಹಾಗೆಹಾಗೆಯೇ ಹೊಸಹೊಸ ನ್ಯಾಯಗಳು ಸುರುವು ಆಗುವವು. ಇದೇ ಏನು? ನಮ್ಮ ಕಲಿತದ್ದರ ಪರಿಣಾಮವು? ಒಂದು ವೇಳೆ ಮ್ಯಾಟ್ರಿಕ್ ಅಥವಾ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ನೌಕರಿ ಬೇಡಿದರೆ ಕೊಡುವವರು ಯಾರು? ನಮ್ಮಂಥ ಮ್ಯಾಟ್ರಿಕ್ ಬಿ.ಎ. ಜನರು ಲಕ್ಷಾವಧಿ ಇರುತ್ತಾರೆ. ಒಂದು ವೇಳೆ ದೈವವಶಾತ್ ಸಿಕ್ಕರೂ ಸಹ ತಿಂಗಳಿಗೆ 30-40 ರೂಪಾಯಿಗಳನ್ನು ಕೊಡುತ್ತಾರೆ. ನನ್ನ ಪ್ರಿಯಬಂಧುಗಳೇ? ನಾವು ಕಲಿಯುವಾಗ ಎಷ್ಟು ದುಡ್ಡು ಹಾಳುಮಾಡುತ್ತೇವೆಂಬದನ್ನು ವಿಚಾರಮಾಡಿನೋಡಿರಿ? ನಾವು ಕಲಿಯುವಾಗ ಹಾಳುಮಾಡಿದಷ್ಟು ಪಡುವಕ್ಕೆ ಕಲಿತಮೇಲೆ ಗಳಿಸುವದಾಗುವದಿಲ್ಲ. ಇದೇ ಪ್ರಕಾರ ನಮ್ಮ ದೇಶೀಯ ಜನರು ನೌಕರಿಯ ಆಶೆಗಾಗಿ ಕಲಿತು, ಇದ್ದಷ್ಟು ವೆಚ್ಚಮಾಡಿಕೊಂಡು ನೌಕರಿಯಿಲ್ಲದೆ ನಿರುದ್ಯೋಗಿಯಾಗಿ ಕೂಡ್ರುವದರಿಂದ ನಮ್ಮ ದೇಶವು ಹೀನಾವಸ್ಥೆಗೆ ಬಂದಿದೆ. ಒಂದಾನೊಂದು ಕಾಲದಲ್ಲಿ ಬಂಗಾರದ ಹೊಗೆ ಹಾಯುತ್ತಿದ್ದ ದೇಶದಲ್ಲಿ ಈಗ ಅಲ್ಲಿ ಧೂಳು ಹೊಗೆ ಹಾಯಬೇಕೆಂದರೆ, ದೇಶದ ದುರದೃಷ್ಟವೇ ಸರಿ! ಈಗ ನಮ್ಮ ಭಾರತಾಂಬೆಯು ದಾರಿದ್ರ್ಯವೆಂಬ ರಾಕ್ಷಸನ್ನಾಯಿಯ ದವಡೆಯಲ್ಲಿ ಸಿಕ್ಕು ಹಿಚುಕಲ್ಪಡುವದರಿಂದಲೇ ನಮಗಿಷ್ಟು ಬಡತನವು. ಈ ನಮ್ಮ ತಾಯಿಯನ್ನು ಆ ಕೆಟ್ಟ ರಕ್ಕಸಿಯ ದವಡೆಯಿಂದ ನೋಯಿಸದೆ ಹೊರಗೆ ತೆಗೆಯಬೇಕಾದರೆ, ಭಾರತವಾಸಿಗಳಾದ ನಾವು ಕೆಳಗೆ ಹೇಳಿದ ಪದ್ಯದಂತೆ ನಡೆಕೊಂಡರೇನೇ ಸಾಧ್ಯವು ಇಲ್ಲವಾದರೆ ಅಸಾಧ್ಯವು.

ಪೋಗಿಕಾಲೆಗೆ ಬಗೆಬಗೆಯ ಕಲಿಕಲಿತು |
ಜಾಗರೂಕರೆದೆ ಎದ್ದು ನಾಡಬಡತನವ ||
ಬೇಗನೀಗಿಸು ನೀನು ಧರಿಸಿಖಾದಿಯಬಟ್ಟೆ |
ನಾಗಶಯನನವಾದ ಕಮಲಭಜಿಸಯ್ಯಾ ||

ನಾವು ನಿರುದ್ಯೋಗದಿಂದ ವಿನೋಚನೆ ಹೊಂದಿ, ಉದ್ಯೋಗವಂತರಾಗಬೇಕಾದರೆ, ಕಲಿತ ವಿದ್ಯೆಯಿಂದ ನಮ್ಮ ತವರೂರುಗಳಾದ ಹಳ್ಳಿಗಳಿಗೆ ಹೋಗಿ, ಒಕ್ಕಲಿಗರಿಗೆ ರಾಟಿಯನೂಲು ತೆಗೆಯುವದನ್ನು ಕಲಿಸಿ, ಅವರಿಗೆ ನಾಲ್ಕು ಸವಿಮಾತುಗಳನ್ನು ಹೇಳಿ ಆ ಉದ್ಯೋಗದಲ್ಲಿ ತೊಡಗಿಸಬೇಕು; ಯಾಕಂದರೆ ವರ್ಷದಲ್ಲಿ ಮೂರುತಿಂಗಳುಗಳ ವರೆಗೆ ನಿರುದ್ಯೋಗಿಗಳಾಗಿ ಜೀವಿಸುವ ಹಳ್ಳಿಗಾಡ ಜನರ ಸಂಖ್ಯೆಯು ಒಟ್ಟು ಈ ಭಾರತಭೂಮಿಯಲ್ಲಿ ೩,೬೭,೫೦,೦೦೦ ಇರುತ್ತದೆ. ಇಂಥ ಜನರು ಆ ವೇಳೆಯಲ್ಲಿ ದಿನಾಲು ೪-೫ ಕಾಸು ಗಳಿಸಿದರೆ, ಬಹಳವಿಲ್ಲ ಸ್ವಲ್ಪವಾದರೂ ನಮ್ಮ ಬಡತನವು ಹಿಂಗಿ ನಮಗೆ ಸುಖವಾಗುವದು. ಇದೇ ರೀತಿಯಾಗಿ ಪ್ರತಿಯೊಂದು ಪ್ರಾಥಮಿಕ ಮತ್ತು ಉಚ್ಚಶಿಕ್ಷಣ ಶಾಲೆಗಳಲ್ಲಿಯೂ ೪-೬ ಮಗ್ಗಗಳಿದ್ದರೆ ಬಹಳ ಲಾಭಕರವಾಗುವದೆಂದು ಎಷ್ಟು ಹೇಳಲಿಕ್ಕೆ ಏನೂ ವ್ಯಾಖ್ಯಾನಿಸಲಿಲ್ಲ. ಈ ರೀತಿಯಾಗಿ ಒಂದಿಲ್ಲೊಂದು ಉದ್ಯೋಗಮಾಡಿದರೆ ದೇವರು ನಮ್ಮ ಮೇಲೆ ಪ್ರೀತಿಯುಳ್ಳವನಾಗಿ ನಮಗೆ ಸುಖವನ್ನೀಯುವನು. ಯಾಕಂದರೆ "ಉದ್ಯೋಗಂ ಪುರುಷಲಕ್ಷಣಂ" ಎಂಬ ಶಾಸ್ತ್ರೋಕ್ತಿಯಂತೆ ಮತ್ತು "ರಟ್ಟೆಮುರಿದು ರೊಟ್ಟಿತಿನ್ನು" ಎಂಬ ಗಾದೆಯಂತೆ ವರ್ತಿಸುತ್ತೇವೆಂದು ದೇವರು ನಮ್ಮನ್ನು ಸದಾ ರಕ್ಷಿಸುತ್ತಾನೆ. ನಾವು ನೌಕರಿಯವರಹಾಗೆ ಒಬ್ಬರಮೇಲೆ ಅವಲಂಬನವಾಗದೆ, ನಮ್ಮ ಸ್ವಂತಉದ್ಯೋಗಗಳಲ್ಲಿಯೇ ಒಂದನ್ನು ಆರಿಸಿಕೊಂಡು ಯಾವಾಗಲೂ ಸ್ವತಂತ್ರವಿರಲಿಕ್ಕೆ ಕಂಕಣವನ್ನು ಧರಿಸಬೇಕು, ಯಾಕಂದರೆ—

ತಂತ್ರಿವಾದ್ಯವುಲೇಸು |
ಮಂತ್ರಿಯಾಕೆಲೇಸು ||
ಯಂತ್ರವಾಹಕನ ದುಡಿಲೇಸು |
ಜಗದಿಸ್ವಾತಂತ್ರ್ಯವೇಲೇಸು ಸರ್ವಜ್ಞ ||

ಈ ರೀತಿಯಾಗಿ ಭಾರತಪುತ್ರರೆಲ್ಲರೂ ತಮ್ಮ ತನುಮನಧನಗಳನ್ನೆಲ್ಲ ಮಾಜಿಹೋದ ನಮ್ಮ ದೇಶದ ಕಲೆಗಳಿಗರ್ಪಿಸಿ, ಎಲ್ಲರನ್ನು ಉದ್ಯೋಗದಲ್ಲಿ ತೊಡಗಿಸಿ, ಭಾರತಾಂಬೆಯನ್ನು ದಾರಿದ್ರ್ಯವೆಂಬ ರಾಕ್ಷಸನ ಬಳನಿಯಿಂದ ಪಾರುಮಾಡಿಸಿ, ಸ್ವತಂತ್ರ ಸುಖೋಪಭೋಗವನ್ನು ಅನುಭೋಗಿಸಲಿಕ್ಕೆ ದಯಪಾಲಿಸೆಂದು ಕಾಯಜಾಂತಕನನ್ನು ಸ್ಮರಿಸುತ್ತ ಕಾಲಹರಣಮಾಡಬೇಕೆಂದು ನನ್ನ ದೀನಕೋರಿಕೆಯು.

ಚನ್ನಪ್ಪ ಗುರಪ್ಪ ಬಂಡಿ,
(ಮೆಟ್ರಿಕ್ ವಿದ್ಯಾರ್ಥಿ) ಅಬ್ಬಿಗೇರಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪುರಾಣಮಹೋತ್ಸವ ಚಿಕ್ಕಮುಂಣೂರ.

ರೋಣ ತಾಲೂಕ ಪೈಕಿ ಚಿಕ್ಕಮುಂಣೂರು ಗ್ರಾಮದಲ್ಲಿ ಶ್ರೀ ಶರಣಬಸವೇಶ್ವರ ಪುರಾಣವನ್ನು ಗುರುಗಳ ಮುಖದಿಂದ ಶ್ರವಣಮಾಡಬೇಕೆಂಬ ಅಪೇಕ್ಷೆಯಿಂದ ಅಲ್ಲಿಯ ಪುರಪ್ರಮುಖರು ಸಮಜೋದ್ಧಾರಕ ಶ್ರೀ॥ ಷ॥ ಬ್ರ॥ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಮಹಾಸ್ವಾಮಿಗಳು ಹಿರೇಮಠ ಚಿಕ್ಕಮುಂಣೂರ ಇವರನ್ನು ಅರಹುಣಸಿ ಮುಕ್ಕಾಮಿನಿಂದ ಕರೆಯಿಸಿ ಪುರಾಣವನ್ನು ಪ್ರಾರಂಭಮಾಡಿಸಿದರು. ಶ್ರೀಗಳು ಪುರಾಣವನ್ನು ಶ್ರೋತೃಗಳಿಗೆ ಆನಂದವಾಗುವಂತೆ ಬಹು ಸ್ವಾರಸ್ಯವಾಗಿ ಹೇಳಿದರು. ಅಲ್ಲದೆ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಮಹತ್ವವನ್ನು ಆಗಾಗ್ಗೆ ಪುರಾಣದಲ್ಲಿ ಬೋಧಿಸುತ್ತಲಿದ್ದರು. ಇವರ ಬೋಧಾಮೃತವನ್ನು ಸಮಸ್ತ ಭಕ್ತವೃಂದವು ಕೇಳಿ ಸಂತೋಷಭರಿತರಾಗುತ್ತಿದ್ದರು. ಈ ಪುರಾಣಸಮಾಪ್ತಿಯಾಗುವಾಗ್ಗೆ ಸಾವಿರಾರು ಭಕ್ತಜನ ಮಾಹೇಶ್ವರರು ಕೂಡಿದ್ದರು. ಗಣಾರಾಧನೆಯು ಬಹು ವಿಜೃಂಭಣೆಯಿಂದ ನಡೆಯಿತು. ಶ್ರೀಗಳ ಪಲ್ಲಕ್ಕಿಮಹೋತ್ಸವವು ತಾ॥ ೧೭-೯-೨೯ ರಲ್ಲಿ ಸಮಸ್ತ ಬಿರುದಾವಳಿಗಳೊಂದಿಗೆ ನಡೆಯಿತು. ಈ ಮಹೋತ್ಸವಕ್ಕೆ ಅರಹುಣಸಿ ಪಂಚಾಚಾರ್ಯ ಸಂಘದವರು ಸ್ಥಳದ ಭಜನಾಸಂಘದವರು ಬಂದಿದ್ದರು. ಭಜನೆಯನ್ನು ಬಹು ಸ್ವಾರಸ್ಯವಾಗಿ ಮಾಡಿದುದರಿಂದ ಶ್ರೀಗಳು ಭಜನಾಸಂಘದವರಿಗೆ ಕಡೇವನ್ನು ನಿಶಾನಿಯನ್ನು ಸಂತೋಷೋಪಜನವ ಫಂಡನ್ನು ಕೊಟ್ಟು ಸಮಸ್ತ ಭಕ್ತಮಾಹೇಶ್ವರರಿಗೆ ಆಶೀರ್ವಾದವನ್ನು ಮಾಡಿದರು. ಈ ಕಾರ್ಯಕ್ಕೆ ವೇ॥ ಚಂದ್ರಶೇಖರಯ್ಯನವರು ಪಾಟೀಲ ಶಿವನಗೌಡರು ಜವಳಿದಾರ ಅರಳಿ ವೀರಪ್ಪನವರು ಸೆಕ್ರೆಟರಿ ಚನ್ನಬಸಪ್ಪನವರು ಅರಳಿ ಶಿವಪ್ಪನವರು ಕಿಡಿಯಪ್ಪನವರು ಕುಂಬಾರ ಸಂಗಪ್ಪನವರು, ಈ ಮಹಾಜನರು ಕೇವಲ ಕಾರ್ಯದಕ್ಷರಾಗಿ ನಿಂತು ಕೆಲಸಮಾಡಿದರು. ಇವರುಗಳಿಗೆ ಆಚಾರ್ಯರು ಆಯುರಾರೋಗ್ಯವರಗಳನ್ನು ದಯಪಾಲಿಸಲೆಂದು ಬೇಡುವ,

ಅರಳಿ ಶಿವಪ್ಪನವರು, ಚಿಕ್ಕಮುಂಣೂರ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಗುರುಪ್ರಭಾವ.

ಜಗತ್ತಿನೊಳಗಿನ ಸರ್ವಕಾರ್ಯಗಳು ಜಗದೀಶ್ವರನ ಸಹಾಯದಿಂದಲೇ ನಡೆಯುತ್ತಿರುವವೆಂದು ಬೇರೆ ಹೇಳಬೇಕಾಗಿಲ್ಲ. ಆ ಕಾರ್ಯಗಳಲ್ಲಿ ಯೋಗ್ಯಾಯೋಗ್ಯಗಳೆಂದು ಎರಡುಭೇದಮಾಡಬಹುದು. ಇವೆರಡರಲ್ಲಿ ಯೋಗ್ಯವಾದ ಕಾರ್ಯವಾವುದೆಂಬುವದನ್ನು ಗುರ್ತುಹಿಡಿದು ಅದನ್ನು ಕೊನೆಗಾಣಿಸಿ ವ್ಯಕ್ತಿ ಮಾತ್ರದ ಮುಖ್ಯ ಉದ್ದೇಶವೆನಿಸಿದ ಮೋಕ್ಷದ ಮಾರ್ಗವನ್ನು ತೋರಿಸುವವನಿಗೆ ಗುರುವೆಂಬ ಹೆಸರು ಬಂದಿರುವದು. ಈತನು ಮೋಕ್ಷಮಾರ್ಗವನ್ನು ತೋರಿಸಿ ಕೊಡುತ್ತಿದ್ದು ಪೂರ್ವಸಮಯದಲ್ಲಿಯೇ ಮೋಕ್ಷಾನಂದದ ಸವಿ ಕ್ಷಣವನ್ನುದ್ದೇಶಿಸಿ ಪ್ರತ್ಯಕ್ಷ ಮುಮುಕ್ಷು ಮಾತ್ರಕ್ಕೆ ವಿದಿತವಾಗುವಂತೆ ಅನುಭವಕ್ಕೆ ತಂದುಕೊಡುವ ಶಕ್ತಿಗೆ "ಗುರುಪ್ರಭಾವ" ವೆಂಬ ಹೆಸರು. ಪ್ರಭಾವದರ್ಶನಾರ್ಥಿಗಳೇ ನೋಡಿರಿ! ನಮ್ಮ ಚಿ॥ ಶಿವಬಸವಾರ್ಯನಿಗೆ ಈಗೀಗ ನಾಲ್ಕು ವರ್ಷಗಳು ನಡೆಯುತ್ತಿರುವವು. ಈ ಬಾಲಕನಿಗೆ ಒಮ್ಮಿಂದೊಮ್ಮೆ ವಿಷಮಜ್ವರದಿಂದಲೂ ಅತಿ ಸಾರದಿಂದಲೂ ಪ್ರಾಣಾಪಾಯವು ಸಮೀಪಿಸಿತು. ಆಷ್ಟರಲ್ಲಿ ಶ್ರೀ ಜಗದ್ಗುರು ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಮುಕ್ಕಾಂ ಎರಡನೇ ಕಡೆಗೆ ಹೊರಡುತ್ತಿದ್ದು ಇಲ್ಲಿಯ ಭಕ್ತರ ಕೋರಿಕೆಯಂತೆ ದಸರಾಮಹೋತ್ಸವ ತೀರಿಸಿಕೊಂಡು ಹೊರಡಬೇಕೆಂದು ಅಂಕಿತಮಾಡಿಕೊಂಡದ್ದರ ಮೇಲೆ ಸನ್ನಿಧಿಯವರ ಮುಕ್ಕಾಮು ಇದ್ದ ಮೂಲಕ ಸಿದ್ಧದರ್ಶನಕ್ಕೆ ಹೋಗುವ ಪದ್ಧತಿ ಪ್ರಕಾರ ನಾನು ಹೋದವೇಳೆಯಲ್ಲಿ ಜಗದ್ಗುರುಗಳು ನನ್ನ ಮುಖವನ್ನು ನೋಡಿ ಕಾರಣವನ್ನು ಕೇಳಲು ಸರ್ವವೂ ಅರಿಕೆಮಾಡಿಕೊಂಡೆನು. ಅದಕ್ಕೆ ಪ್ರಸಾದವಾಣಿಯಿಂದ "ಸಿದ್ಧಪಾದೋದಕಪ್ರಸಾದ ಸಮರ್ಪಿಸು ಅನುಗ್ರಹವಾಗುವದು" ಎಂದು ಅಪ್ಪಣೆಕೊಡಿಸಿದರು. ತದನುಸಾರ ಸಿದ್ಧದಲ್ಲಿ ಶಿವಾರ್ಚನಾಕಾಲದಲ್ಲಿ ಕಾಯ್ದುಕೊಂಡಿದ್ದು ಜಗದ್ಗುರುಗಳವರು ಅಪಾರ ಪ್ರೇಮಾನುಗ್ರಹದಿಂದ ದಯಪಾಲಿಸಿದ ಪಾದೋದಕವನ್ನು ತಂದು ಸಿದ್ಧಪ್ರಸಾದಮಾಡಿ ಸುತ್ತಿರಲಾಗಿ ಸದರಿ ಮಗುವಿಗೆ ಸರ್ವರೀತಿಯಿಂದಲೂ ಆರೋಗ್ಯವಾಯಿತು. ಇದೇ ಅಲ್ಲವೇ ಗುರುಪ್ರಭಾವವು? ಶ್ರೀ ಜಗದ್ಗುರು ಪಂಚಾಚಾರ್ಯರ ಭಕ್ತಿಯಿಂದ 2 ರೂಪಾಯಿಗಳನ್ನು ಪಂಚಾಚಾರ್ಯಪ್ರಭಾ ಪೋಷಣಕ್ಕೋಸ್ಕರ ಅರ್ಪಣ ಮಾಡುತ್ತೇನೆ. ಗುರುಪಾದೋದಕದಲ್ಲಿ ಸಾಮರ್ಥ್ಯವಿದೆಯೆನ್ನುವ ಬಗ್ಗೆ ಇದುವರೆಗೂ ಶಾಸ್ತ್ರದಿಂದಲೂ ಆರ್ಯರಿಂದಲೂ ಕೇಳುತ್ತಿದ್ದೆವು. ಈಗ ಪ್ರತ್ಯಕ್ಷ ಅನುಭವಕ್ಕೆ ಬಂದಿತು. ಗುರುನಾಥನು ಭವರೋಗವೈದ್ಯನಾದಕಾರಣ ಇಂಥ ಅಲ್ಪರೋಗಗಳನ್ನು ನಿವಾರಣಮಾಡುವದಕ್ಕೆ ಸಮರ್ಥನೆಂಬುವ ಮಾತು ಬೇರೆ ಹೇಳುವಕಾರಣವಿಲ್ಲ. ಮುಖ್ಯವಾಗಿ ಭಕ್ತಿಯೇ ಕಾರಣವು ಗುರುಪ್ರಭಾವವನ್ನು ವರ್ಣಿಸುವದಕ್ಕೆ ಒಂದು ನಾಲಿಗೆಯಿಂದ ತೀರದು. ಆದಿಶೇಷನಿಗೂ ಅಸಾಧ್ಯವು! ಆದಕಾರಣ ಸರ್ವರೂ ಗುರುಭಕ್ತಿಯಿಂದ ತಮ್ಮ ತಮ್ಮ ಇಷ್ಟಾರ್ಥವನ್ನು ಪೂರೈಸಿಕೊಳ್ಳಲೆಂಬ ಉದ್ದೇಶದಿಂದ ಸ್ವಾನುಭವದ ಈ ಲೇಖವನ್ನು ಪ್ರಕಟಿಸಿದ್ದೇನೆ. ಈ ವಿಷಯವನ್ನು ಸರ್ವರೂ ಗ್ರಹಿಸತಕ್ಕದೆಂದು ಕೋರುವ,

ವೇ॥ ಶಿದ್ರಾಂತಿ ಶಿವರುದ್ರಪ್ರಯ್ಯಶಾಸ್ತ್ರಿಗಳು,
ಬೃಹನ್ಮಠಾಧ್ಯಕ್ಷ ಬಿಸರಹಳ್ಳಿ.

ಶ್ರೀಮಜ್ಜಗದ್ಗುರು ಹಿಮವತ್ಕೇದಾರ ಪರಿಶೋಭಿತ ವೈರಾಗ್ಯ ಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ

ಚಿದ್ಘನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ದಸರಾಮಹೋತ್ಸವ.

ಬಿಸರಳ್ಳಿ.

ಶ್ರೀ ಕೇದಾರ ಜಗದ್ಗುರುಗಳಿಗೆ ಬಿಸರಳ್ಳಿಗ್ರಾಮದ ಯಾವತ್ತು ಸದ್ಭಕ್ತರು ಈ ವರುಷದ ದಸರಾಮಹೋತ್ಸವವನ್ನು ನಮ್ಮ ಗ್ರಾಮದಲ್ಲಿಯೇ ಜರುಗಿಸಿ ದಸರೆಯಲ್ಲಿ ನಡೆಯಬಹುದಾದ ಪುರಾಣಪಾರಾಯಣಾದಿಗಳಿಂದ ಭಕ್ತೋದ್ಧಾರಗೊಳಿಸಬೇಕೆಂದು ವಿಶೇಷ ಭಕ್ತಿಯಿಂದ ಬಿನ್ನಮಾಡಿಕೊಂಡಿದ್ದರಿಂದ ಭಕ್ತರ ಕೋರಿಕೆಯಂತೆ ಅಶ್ವೀಜ ಶು॥ ೧ ಯಿಂದ ನವಮಿಯವರೆಗೆ "ಶ್ರೀ ದೇವೀಮಹಾತ್ಮ್ಯ" ಎಂಬ ಪುರಾಣವನ್ನು ನವರಾತ್ರಿಯಲ್ಲಿ ಜರಿಗಿಸೋಣವಾಯಿತು. ಪ್ರತಿದಿನದಲ್ಲಿಯೂ ಸದರಿ ಪುರಾಣವನ್ನು ಬೃಹನ್ಮಠದ ವೇ॥ ಶಿದ್ರಾಂತಿ ಶಿವರುದ್ರಪ್ರಯ್ಯಶಾಸ್ತ್ರಿಗಳು ಮಂಜುಳಗಾನದೊಂದಿಗೆ ಶ್ರೋತೃಜನರ ಮನಸ್ಸಿಗೆ ಆನಂದವಾಗುವಂತೆ ಪುರಾಣವನ್ನು ಓದಿದರು. ಮತ್ತು ಆಸ್ಥಾನ ವಿದ್ವಾನ್ ಸಂಡಿತ ಯರೇಹಂಚಿನಾಳ ಅನ್ನದಾನಶಾಸ್ತ್ರಿಗಳವರು ತಮ್ಮ ಪಾಂಡಿತ್ಯಕ್ಕೆ ಶೋಭಿಸುವಂತೆ ಅರ್ಥಮಾಡಿ ಹೇಳುತ್ತಿದ್ದರಲ್ಲದೆ ಶಿವಭಕ್ತಿ ಗುರುಭಕ್ತಿ ಪರವಾದ ಲೌಕಿಕ ಪಾರಮಾರ್ಥಿಕ ವಿಷಯಗಳನ್ನು ಸಮಯೋಚಿತವಾಗಿ ಹೇಳಿ ಭಕ್ತರನ್ನೆಲ್ಲ ಆನಂದಗೊಳಿಸಿದರು. ಮಹಾನವಮಿದಿವಸ ಬೆಳಗಿನ 6 ಘಂಟೆಗೆ ಗಜಾಶ್ವಗಳು ಪೂಜಿಸಲ್ಪಟ್ಟು ವಿಜೃಂಭಣೆಯಿಂದ ಮೆರೆಸಲ್ಪಟ್ಟವು. ದಶಮಿಯ ದಿವಸ ಪುರಾಣೋತ್ಸವದೊಂದಿಗೆ ದಸರಾಮಹೋತ್ಸವವು ಅತಿ ವೈಭವದಿಂದ ಜರಗಿತು. ಈ ಉತ್ಸವಕ್ಕೆ ಮುದ್ದಾಬಳ್ಳಿಗ್ರಾಮದ ಮ॥ ರಾ॥ ಬಸವನಗೌಡರು ತಮ್ಮ ಭಜನಾಸಂಘದೊಡನೆ ಬಂದು ಉತ್ಸವಕ್ಕೆ ಶೋಭೆಯನ್ನುಂಟುಮಾಡಿದರು. ಮತ್ತು ಸದರಿ ಗ್ರಾಮದ ಶ್ರೀಮಂತ ಮ॥ ರಾ॥ ಗುಗ್ಗಪ್ಪಯ್ಯಾ ದೇಸಾಯಿ ಸಾ॥ ಇಲಾಖಾ ಬಿಸರಹಳ್ಳಿ ಇವರು ಶ್ರೀ ಜಗದ್ಗುರುಗಳವರಿಗೆ ಮಹಾನವಮಿ ದಿವಸ ಬಿನ್ನಹಮಾಡಿ ವಿಜಯದಶಮಿದಿವಸ ಭಕ್ತಮಾಹೇಶ್ವರರಿಗೆ ಸದರಿ ಸಿದ್ಧಾಂತಿಗಳವರ ಮಠದಲ್ಲಿ ಅನ್ನಸಾಮಗ್ರಿಗಳನ್ನು ತಯಾರುಮಾಡಿಸಿ ಭಿಕ್ಷೆಯವೇಳೆಗೆ ಸರಿಯಾಗಿ ಜಗದ್ಗುರುಗಳವರನ್ನು ಉತ್ಸವದೊಡನೆ ಸಂದೀಕ್ಷರದೇವಸ್ಥಾನದಿಂದ ಬಿಜಯಮಾಡಿಸಿಕೊಂಡು ಅನ್ನಸಂತರ್ಪಣೆಯ ಕಾರ್ಯವನ್ನು ನೆರವೇರಿಸಿದರು. ಈ ಕಾರ್ಯದಲ್ಲಿ ಸದರಿ ಶಿವರುದ್ರಪ್ರಯ್ಯಶಾಸ್ತ್ರಿಗಳವರು ಗುರುಭಕ್ತಿ ರಾಜಭಕ್ತಿಯುಳ್ಳ ವಿಶೇಷವಾಗಿ ವ್ಯಕ್ತಪಡಿಸಿ ಒಳ್ಳೆ ದಕ್ಷತೆಯಿಂದ ಕೆಲಸಮಾಡಿದರು. ಅಹೊತ್ತಿನ ದಿವಸ 150 ಜನ ಭಕ್ತಮಾಹೇಶ್ವರರು ಸಂತೃಪ್ತಿಯಾಯಿತು. ಅನಂತರ ಸದರಿ ಶಿವರುದ್ರಪ್ರಯ್ಯಶಾಸ್ತ್ರಿಗಳು ತಮ್ಮ "ಶ್ರೀ ಗವಿಸಿದ್ಧೇಶ್ವರಪ್ರಸಾದಿಕ ನಾಟಕಮಂಡಳಿಯ" ರಾ॥ ರಾ॥ ವೀರಭದ್ರಪ್ಪ ಹಂಪಸಾಗರ ಚನ್ನಪ್ಪ ದಾವಣಗೇರಿ ಬಸವಣ್ಣೆಪ್ಪ ಆಕಾಳ್ಯಾಂ ಪಟದಯ್ಯ ಹಿರೇಮಠ ಗುರಪ್ಪ ಜವಳಿ ಪಟೇಲ ಸಾಬು ಈ ಮೊದಲಾದ ನಾಟಕಕಲಿಯವರಿಂದ ರಸವತ್ತಾದ ಗಾನವೈಶಕನ್ನು ತಮ್ಮ ಬೃಹನ್ಮಠದಲ್ಲಿಯೇ ಮಾಡಿಸಿ ಶ್ರೀ ಜಗದ್ಗುರುಗಳಿಗೆ ಆನಂದವನ್ನುಂಟುಮಾಡಿದರು. ಹೀಗೆ ಅನ್ನದಾನವನ್ನು ಸದರಿ ದೇಸಾಯಿಸಾಹೇಬರವರು ಸ್ವಧರ್ಮವೆಂಬ ಭೇದಭಾವವಿಲ್ಲದೆ ಮಾಡಿದ್ದು ಸರ್ವತ್ರ ಭೂಷಣಿಯವಾದ ಸಂಗತಿಯಾಗಿದೆ. ಪ್ರತಿಯೊಂದು ಗುರ್ಮೂಡಮೇಲೆ ಪ್ರೇಮವನ್ನು ಬೀರತಕ್ಕ ಇಂಥ ಧರ್ಮಪ್ರಭುಗಳಿಂದಲೇ ಜಗದುದ್ಧಾರವು; ಪರಧರ್ಮಸಹಿಷ್ಣುತೆಯು ಬರುವದು ಸಾಮಾನ್ಯವಾದ ಮಾತಲ್ಲ. ಇಂಥ ಸದ್ಗುಣವು ಸದರಿ ದೇಸಾಯಿ ಸಾ॥ ರವರ ಮನಸ್ಸಿನಲ್ಲಿ ಮನೆಮಾಡಿಕೊಂಡಿರುತ್ತವೆ. ಇದಲ್ಲದೆ ವಿಜಯದಶಮಿ ಕನಿಕಾದಲವನ್ನು ಅರ್ಪಿಸುವದಕ್ಕಾಗಿ ಸದರಿ ದೇಸಾಯಿ ಸಾಹೇಬರವರು ಭಕ್ತಿಪುರಸ್ಸರವಾಗಿ ಕನಿಕಾದಲವನ್ನು ಅರ್ಪಿಸಿ ಆಶೀರ್ವಾದವನ್ನು ಪಡೆದ ಬಳಿಕ ಜಗದ್ಗುರುಗಳಿಗೆ ಬಿನ್ನಹಮಾಡಿಕೊಂಡರು. ಮಹಾಸವಾರಿಯು ಮರುದಿನಸ ತಮ್ಮ ಪರಿವಾರದೊಡನೆ ಅರಮನೆಗೆ ದಯಮಾಡಿ ಭವ್ಯವಾದ ಸಿಂಹಪೀಠದಮೇಲೆ ಮುಹೂರ್ತ ಮಾಡಿದನಂತರ ಅರಮನೆಯ ಹಿಂಡಿತರೊಡನೆ ಆನಂದಪ್ರಸ್ಥಗೊಳಗಾದವು. ಮಹಾಸನ್ನಿಧಿಯವರು ವೇದಾಂತಜನ್ಯವಾದ ಜ್ಞಾನಪ್ರಸಿದ್ಧಾದಿಕರಾದ ಕೆಲವು ವಾಕ್ಯಗಳನ್ನು ಅಪ್ಪಣೆಕೊಡಿಸಿ ಆನಂದಗೊಳಿಸಿದರು. ಸದರಿ ದೇಸಾಯಿ ಸಾಹೇಬರವರ ಇಷ್ಟಾನುಸಾರವಾಗಿ ಯಾವತ್ತೂ ಅರಮನೆಯಲ್ಲಿ ಪಾದಪೂಜೆಯನ್ನು ಮಾಡಿ ಸದರಿ ದೇಸಾಯಿಯವರ ಮನಾನಂದಗೊಳಿಸಿ ಫಲಾಶೀರ್ವಾದವನ್ನು ಮಾಡಿ ಪುನಃ 6-30 ಘಂಟೆಗೆ ಸಂದೀಕ್ಷರದೇವಸ್ಥಾನಕ್ಕೆ ದಯಮಾಡಿಸಿದರು. ಈ ಪ್ರಕಾರ ಸಮಸ್ತ ಸ್ವಪರಧರ್ಮದ ಮಹನೀಯರು ಪರಸ್ಪರ ಪ್ರೇಮಭಾವದಿಂದ ನಡೆದುಕೊಳ್ಳುವದು ಶ್ರೇಯಸ್ಕರವಾದುದರಿಂದ ಅಂಥ ಸದ್ಬುದ್ಧಿಯನ್ನು ಜಗದ್ಗುರು ಪಂಚಾಚಾರ್ಯರು ಸರ್ವರಿಗೂ ದಯಪಾಲಿಸಲೆಂದು ಹಾರೈಸುವ.

ಓರ್ವಸದ್ಭಕ್ತ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಮಾಡಿದ ಅಡ್ಡಪಲ್ಲಕ್ಕಿ ಮಹೋತ್ಸವ, ಹುಮನಾಬಾದ್.

ಇದೇ ಶುಕ್ಲನಾಮ ಸಂವತ್ಸರದ ಶ್ರಾವಣ ಶು॥ ೧ ರಿಂದ ಭಾದ್ರಪದ ಶು॥ ೧ ವರೆಗೆ ಪ್ರತಿನಿತ್ಯದಲ್ಲೂ ಮಧುರಗಾನದೊಂದಿಗೆ ಭಜನೆಯನ್ನು ಮಾಡುತ್ತ ಉಪಸಂಹಾರವು ಮಾಡಲ್ಪಟ್ಟಿತು. ಪುನಃ ಭಾದ್ರಪದ ಬಹುಳ ೪ ದಿವಸ ಗಣಾರಾಧನೆಯೂ ಜಗದ್ಗುರುಗಳ ಭಾವಪಟಕ್ಕೆ ರುದ್ರಾಭಿಷೇಕವೂ ನಡೆಯಿತು. ವೇ॥ ಮಡಿವಾಳಯ್ಯ ವೇ॥ ಶಿದ್ದರಾಮಯ್ಯನವರು ಭಂಗಿ ಇವರುಗಳು ಸಕ್ರಮವಾಗಿ ರುದ್ರಾಧ್ಯಯನವನ್ನು ಮಾಡಿ ಜಗದಾಚಾರ್ಯರ ಪೂಜಾಸಮಾರಂಭವು ಸಮಾಪ್ತಿಗೊಂಡ ತರುವಾಯ ಹಿರೇಮಠದ ದೇಶಿಕೇಂದ್ರಸ್ವಾಮಿಗಳ ಮಹಾಪಾದಪೂಜಾ ಸಮಾರಂಭವು ಒಂದು ಗಂಟೆವರೆಗೂ ನಡೆದು ರಾತ್ರಿ ಹನ್ನೆರಡು ಗಂಟೆಯವರೆಗೆ ಅನ್ನಸಂತರ್ಪಣಕಾರ್ಯವು ನಡೆಯಿತು. ಈ ವಿಧ್ಯುಕ್ತವಾದ ಮಹಾಪೂಜೆಯ ಮತ್ತು ಮೃಷ್ಟಾನ್ನಭೋಜನದ ಆನಂದವನ್ನು ಅಲ್ಲಿಯವರು ನೋಡಿ ಜಗದಾಚಾರ್ಯರಲ್ಲಿರುವ ಭಕ್ತರ ಭಕ್ತಿಭಾವನೆಯನ್ನು ಹೊಗಳುತ್ತಿದ್ದರು. ಮರುದಿವಸ ಅಡ್ಡಪಲ್ಲಕ್ಕಿ ಮಹೋತ್ಸವವು ಪ್ರಾರಂಭವಾಯಿತು. ಛತ್ರಚಾಮರ ತೋರಣ ಸಂದಿಗ್ಧಲ ವಿವಿಧ ದೋತ್ಸಾಹದ ನಿಶಾನಿ ಮೊದಲಾದ ಬಿರುದುಗಳಿಂದಲೂ ಕಾಳಿಭೇರಿ ಒಂಟೆಯಮೇಲೆ ಹೇರಿದ ಡಂಕಾನೌಬತ್ತು, ಬ್ಯಾಂಡ್ ಕರಡಿ ಮುಂತಾದ ನಾನಾವಿಧ ವಾದ್ಯಗಳಿಂದಲೂ ಉತ್ಸವವು ಕಣ್ಣಿಗೆ ಆನಂದೋಹರವಾಗಿದ್ದಿತು. ಅಲಂಕೃತಗಳಾದ ಕೃತಿ ಮನೆಜ್ಜ್ಯೋಗಳನ್ನು ದೇವಲಗ್ರಾಮದವರು ತಂದಿದ್ದರು. ಜೀವನಿಗ ಗೋಕರ್ಣದ ಎರಡು ಭಜನಾಸಂಘಗಳು ಬಂದಿದ್ದವು. ಬಾದಿಗಳಲ್ಲಿ ಲಾಜಪುಷ್ಪವೃಷ್ಟಿಯನ್ನು ಗುಲಾಲ್‌ಬುಕ್ಕಿಟ್ಟನ್ನು ಎರಚುತ್ತಿದ್ದರಲ್ಲದೆ ಅಂಗಡಿಅಂಗಡಿಗಳಲ್ಲಿ ಮಂಗಳಾರತಿ ಪಂಚಪೂರಗಳನ್ನು ಅರ್ಪಿಸುತ್ತಿದ್ದರು. ವೇದಘೋಷವು ನಡೆಯುತ್ತಿತು. ಸಮಸ್ತ ಮಹೀಯರು ಭಜನೆಗೆ ಸಿದ್ಧರಾಗಿದ್ದರು. ಪೇಟೆ ತಬಲಾ ತಂಬೂರಿ ವಗೈರೆ ಸಂಗೀತದಿಂದ ಗ್ರಾಮದಲ್ಲೆಲ್ಲಾ ಸಾಕ್ಷಾತ್ ಪಂಚಾಚಾರ್ಯರ ಪ್ರಭಾವವೇ ಮೂರ್ತಿಭವಿಸಿದಂತೆ ಉತ್ಸವವು ಬಹಳ ಆನಂದಕರವಾಗಿತ್ತು. ಮರುದಿನಗೆಯು ಒಳ್ಳೆ ವಿಜೃಂಭಣೆಯಿಂದ ಹಗಲು ಐದುಗಂಟೆಗೆ ಹೊರಟು ರಾತ್ರಿ ಹನ್ನೆರಡು ಗಂಟೆಗೆ ಸ್ವಸ್ಥಾನಕ್ಕೆ ತಲ್ಪಿತು. ಈ ಕಾರ್ಯವನ್ನು ಎರಡುದಿವಸಗಳಲ್ಲಿಯೇ ನೆರವೇರಿಸಿದ ಮೇನೇಜರ್ ಶಂಕರಲಾಲ್‌ರವರು ಮತ್ತು ನಮ್ಮ ಸಂಘಕ್ಕೆ ಯಜಮಾನರಾದ ರಾಮಣ್ಣಪ್ಪಾ ಉದ್ಗಿರಿ ಇವರು ಪರಮಶೀಲರಿದ್ದು ಈ ಗುರುಸಂಘಕ್ಕೆ ತಮ್ಮ ಸ್ವಧರ್ಮದಂತೆ ಭಾವಿಸಿ ಕಾರ್ಯನೆರವೇರಿಸಿದಲ್ಲದೆ ಧರ್ಮಾಭಿಮಾನಿಯಾದ ಸಂಗಪ್ಪ ಹುಗಾರ್ ಭಾಂಡಾವ್ಯಾಪಾರಿ ಇವರು ಶ್ರಮವಹಿಸಿ ಈ ಕಾರ್ಯದಲ್ಲಿ ಭಾಗಿಗಳಾದರು. ಜಗದ್ಗುರುಗಳು ಇವರ ಹೃದಯದಲ್ಲಿ ನೆಲಸಿದರೋ ಏನೋ ಅನ್ನುವಂತೆ ಪ್ರತಿವರ್ಷವು ಹೀಗೆಯೇ ಮಾಡಲಿಕ್ಕೆ ನಮಸ್ಕರಿಸಿದರು. ಮತ್ತು ಬಸವಣ್ಣಪ್ಪಾ ನಾಸಿ ಬಸವಣ್ಣಪ್ಪಾ ಅಗಡಿ ಮಹಾದೇವಪ್ಪಾ ವಿಜಾಪುರ ಇವರು ಗುರುಧರ್ಮಾಭಿಮಾನದಿಂದ ಸ್ವತಃ ಸೇವೆಯನ್ನು ಮಾಡಿ ಈ ಕಾರ್ಯವನ್ನು ನೆರವೇರಿಸಿದರು. ಇವರಿಗೆಲ್ಲಾ ಜಗದಾಚಾರ್ಯರು ಮಂಗಲವನ್ನುಂಟುಮಾಡಲೆಂದು ಹಾರೈಸುವ.

ಪಂಚಾಚಾರ್ಯ ಭಜನಾಸಂಘದ ಸ್ವಯಂಸೇವಕ.

ಮದ್ರಾಸ್ ವೀರಶೈವಹಾಸ್ಟಲ್ ಪ್ರಾರಂಭ ಮಹೋತ್ಸವ.

ಮದ್ರಾಸಿನಲ್ಲಿರುವ ವೀರಶೈವ ಮಹನೀಯರು ಮತ್ತು ವೀರಶೈವ ವಿದ್ಯಾರ್ಥಿಗಳು 1929 ನೇ ಅಕ್ಟೋಬರ್ 7 ನೇ ಸೋಮವಾರ, ಮದ್ರಾಸ್ ವೀರಶೈವ ಸಂಘದ ಅಧ್ಯಕ್ಷರೂ ಮತ್ತು ಗುರುಬಸವ ಅಂಡ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರರೂ ಆದ ಮ॥ ರಾ॥ ಎಸ್. ಸಿ. ನಾಗಲೆಟ್ಟಿರವರ ಅಧ್ಯಕ್ಷತೆಯಲ್ಲಿ ವೀರಶೈವ ಹಾಸ್ಟಲನ್ನು ಪ್ರಾರಂಭಿಸುವದಕ್ಕಾಗಿ ಜಾರ್ಜ್‌ಟೌನಿನ ಹನುಮಂತರಾಯನ ಬೀದಿ 41 ನೇ ನಂಬರಿನ ಕಟ್ಟಡದಲ್ಲಿ ನೆರೆದಿದ್ದರು. ಈ ಮಹೋತ್ಸವಕ್ಕೆ ಮದ್ರಾಸಿಗೆ ಕಾರ್ಯಾರ್ಥವಾಗಿ ಬಂದಿದ್ದ ಪ್ರಾಂತಿಕ ವೀರಶೈವಬಾಂಧವರೂ ಕೂಡ ದಯಮಾಡಿಸಿದ್ದರು. ದೇವತಾಪ್ರಾರ್ಥನಾನಂತರ ಈ ಕೆಳಗೆ ಕಂಡ ಪ್ರಕಾರ ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಭಾಷಣವನ್ನು ಮಾಡಿ ಹಾಸ್ಟಲ್ ಪ್ರಾರಂಭಮಹೋತ್ಸವ ಕಾರ್ಯವನ್ನು ನೆರವೇರಿಸಿದರು.

ಅಧ್ಯಕ್ಷರ ಭಾಷಣ.

"ಸಹೋದರರೇ? ಇಲ್ಲಿ ನಾವುಗಳು ಏತಕ್ಕಾಗಿ ನೆರೆದಿರುತ್ತೇವೆಂಬುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ವೀರಶೈವ ಸಂಘದ ಕಾರ್ಯನಿರ್ವಾಹಕ ಕಮಿಟಿಯಲ್ಲಿ 6-10-29 ರಲ್ಲಿ ತೀರ್ಮಾನಿಸಿದ ಪ್ರಕಾರ "ವೀರಶೈವಹಾಸ್ಟಲನ್ನು" ಪ್ರಾರಂಭಮಾಡಬೇಕೆಂದು ಇಲ್ಲಿ ನೆರೆದಿರುತ್ತೇವೆ. ಹಾಸ್ಟಲು ಪ್ರಾರಂಭಮಾಡಲ್ಪಟ್ಟಿತೆಂದು ಹೇಳುವುದಕ್ಕೆ ಮೊದಲು ನಾನು ಕೆಲವು ವಿಷಯಗಳನ್ನು ತಿಳಿಸಬೇಕೆಂದು ಅಪೇಕ್ಷಿಸುತ್ತೇನೆ. ಪ್ರೌಢವಿದ್ಯಾಭ್ಯಾಸಕ್ಕಾಗಿ ಬಂದು ಮದ್ರಾಸಿನಲ್ಲಿರುವ ನಮ್ಮ ಜನಾಂಗದ ವಿದ್ಯಾರ್ಥಿಗಳು ಇಲ್ಲಿರುವವರೆಗೂ ಬಹಳ ಅನನುಕೂಲಗಳನ್ನು ಅನುಭವಿಸುತ್ತಿದ್ದರು. ಹಾಸ್ಟಲನ್ನು ಸ್ಥಾಪಿಸಬೇಕೆಂಬುದಾಗಿ ಬಹಳ ಕಾಲದಿಂದಲೂ ಅಪೇಕ್ಷೆಯಿತ್ತು. ಆದರೆ ಅನೇಕ ಕಾರಣಗಳಿಂದ ನನ್ನ ಪ್ರಯತ್ನಗಳು ಸಫಲವಾಗಲಿಲ್ಲ. ಈಗಲಾದರೋ ಹಾಸ್ಟಲನ್ನು ಸ್ಥಾಪಿಸುವುದಕ್ಕೆ ಪ್ರಶಸ್ತವಾದ ಕಾಲವು ಒದಗಿಬಂದಿರುತ್ತದೆ. 1929 ನೇ ಇಸವಿಯ ಅಕ್ಟೋಬರ್ 1 ನೇ ತಾರೀಖಿನಲ್ಲಿ ವೀರಶೈವಹಾಸ್ಟಲನ್ನು ಸ್ಥಾಪಿಸಬೇಕೆಂದು ಮದ್ರಾಸ್ ವೀರಶೈವಸಂಘದವರು ನಿಶ್ಚಯಿಸಿದ್ದರು. ಹಾಸ್ಟಲಿಗಾಗಿ ಅನುಕೂಲವಾದ ಕಟ್ಟಡವು ಇದುವರೆಗೂ ದೊರೆಯಲಿಲ್ಲ. ಅದನ್ನು ಜಾಗ್ರತೆಯಾಗಿ ಹಾಸ್ಟಲನ್ನು ಪ್ರಾರಂಭಿಸುವುದು ಅವಶ್ಯಕವೆಂದು ತೋರಿಬಂದುದರಿಂದ ತಕ್ಕ ಕಾರ್ಯಗಳನ್ನು ಮಾಡಬೇಕಾಯಿತು. ಮ॥ ರಾ॥ ಗುರುಬಸವ ಅಂಡ್ ಕಂಪೆನಿಯ ವ್ಯವಸ್ಥಾಪಕರು ಸದ್ಯದಲ್ಲಿ ಹಾಸ್ಟಲನ್ನು ಪ್ರಾರಂಭಿಸುವದಕ್ಕಾಗಿ ತಮ್ಮದೇ ಒಂದು ಕಟ್ಟಡವನ್ನು ಕೇವಲ ಪ್ರೀತಿಯಿಂದ ನಮಗೆ ಕೊಟ್ಟಿರುತ್ತಾರೆ. ವಿದ್ಯಾರ್ಥಿಗಳ ಪರಸ್ಪರ ಪ್ರೀತಿಯಿಂದಲೂ ಐಕ್ಯಮತ್ಯದಿಂದಲೂ ಮತ್ತು ವೀರಶೈವ ಸಮಾಜದವರ ಪ್ರೋತ್ಸಾಹದಿಂದಲೂ ಈ ಹಾಸ್ಟಲ್ ಅಭಿವೃದ್ಧಿಯನ್ನೈದಿ ಶಾಶ್ವತವಾದ ಸಂಸ್ಥೆಯಾಗುವುದೆಂದು ನಾನು ಬಯಸುತ್ತೇನೆ. ನಮ್ಮ ಹಾಸ್ಟಲ್ ಪ್ರಾರಂಭದಲ್ಲಿ ಕೇವಲ ಚಿಕ್ಕದಾದರೂ ಪರಿಣಾಮದಲ್ಲಿ ಉತ್ಕೃಷ್ಟಸ್ಥಿತಿಯನ್ನು ಹೊಂದುವುದೆಂದೂ, ಇದರಿಂದ ವೀರಶೈವ ವಿದ್ಯಾರ್ಥಿಗಳು ನಿರಾತಂಕರಾಗಿ ವಿದ್ಯಾರ್ಜನೆ ಮಾಡುವುದಕ್ಕೆ ಅವಕಾಶವಾಗುವುದೆಂದೂ ನಾನು ನಂಬುತ್ತೇನೆ. ಬೇರೆಬೇರೆ ಸ್ಥಳಗಳಿಂದ ಬರತಕ್ಕ ವೀರಶೈವ ವಿದ್ಯಾರ್ಥಿಗಳು ಈ ಹಾಸ್ಟಲಿಗೆ ಸೇರಿ ಪರಸ್ಪರ ಪರಿಚಯವನ್ನುಂಟುಮಾಡಿಕೊಂಡು ಸಮಾಜಾಭಿವೃದ್ಧಿಯಲ್ಲಿ ಕರ್ತರಾಗುವುದಕ್ಕೆ ಅವಕಾಶವಾಗಿರುತ್ತದೆ. ದಯಾಮಯನಾದ ಭಗವಂತನು ಈ ಹಾಸ್ಟಲಿಗೂ ಮತ್ತು ಹಾಸ್ಟಲ್ ವಿದ್ಯಾರ್ಥಿಗಳಿಗೂ ಶ್ರೇಯೋಭಿವೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸಿ ಹಾಸ್ಟಲ್ ಪ್ರಾರಂಭವಾಯಿತೆಂದು ಸಂತೋಷಪೂರ್ವಕವಾಗಿ ಹೇಳುತ್ತೇನೆ." ಅನಂತರ ಜಾಯಿಂಟ್ ಸೆಕ್ರೆಟರಿಯಾದ ಮ॥ ರಾ॥ ಬಿ. ಬಸವಲಿಂಗಯ್ಯ, ಬಿ.ಎ. ಯವರೂ ಮ॥ ರಾ॥ ಹೆಚ್. ಜಿ. ರುದ್ರಪ್ಪನವರು ಮತ್ತು ಡಾಕ್ಟರ್ ಜಿ. ತಿಮ್ಮಾರೆಡ್ಡಿ ಎಂ.ಬಿ.ಬಿ.ಎಸ್. ರವರೂ ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಪ್ರಸ್ತೋಚಿತವಾದ ಸದುಪದೇಶವನ್ನು ಮಾಡಿದರು.

41 ಹನುಮಂತರಾಯನ ಬೀದಿ, ಜಾರ್ಜ್‌ಟೌನ್ ಮದರಾಸು. 9-10-1929

ಬಿ. ಬಸವಲಿಂಗಯ್ಯ, ಜಾಯಿಂಟ್ ಸೆಕ್ರೆಟರಿ ವೀರಶೈವಸಂಘ.

ಪಂಚಾಚಾರ್ಯ ಪ್ರಭಾ

೧೯೨೯ ನೇ ನವಂಬರ್ ತಾ|| ೪ ನೇ ಸೋಮವಾರ

ಬಾಲ್ಯವಿವಾಹನಿರೋಧಶಾಸನ ಬಿಲ್ಲು.

ಪರಮಪುಣ್ಯಭೂಮಿಯೆನಿಸಿದ ಭರತಖಂಡದಲ್ಲಿ ಜನ್ಮವೆತ್ತಿ ಜಗದ್ವಿಖ್ಯಾತರಾಗಿಹೋದ ಮನು, ಯಾಜ್ಞವಲ್ಕ್ಯ, ಗೌತಮಾದ್ಯನೇಕಾನೇಕ ಮಹರ್ಷಿಗಳು ತ್ರಿಕಾಲಜ್ಞಾನಸಂಪನ್ನರಾಗಿ ಸಕಲ ಪ್ರಾಣಿಗಳ ಉದ್ಧಾರಕ್ಕೋಸ್ಕರ ಸ್ಮೃತ್ಯಾದಿ ಗ್ರಂಥಗಳನ್ನು ರಚಿಸಿ, ಲೋಕಮಾನ್ಯರಾಗಿರುವ ವಿಷಯವು ಸುಪ್ರಸಿದ್ಧವದೆಯಷ್ಟೆ! ಭೂತಭವಿಷ್ಯದ್ವರ್ತಮಾನ ಕಾಲಗಳ ಸ್ವರೂಪವನ್ನು ಆಮೂಲಾಗ್ರವಾಗಿ ಜ್ಞಾನದೃಷ್ಟಿಯಿಂದ ತಿಳಿದುನೋಡಿ ಬರೆದ ಆ ಮಹರ್ಷಿಪುಂಗವರ ಗ್ರಂಥಗಳು ಈ ಕಲಿಕಾಲದಲ್ಲಿ ಯಾತಕ್ಕೂ ಬಾರದವುಗಳಾಗಿಹೋದವು. ಇಂದಿನವರೆಗೂ ಭರತಖಂಡವನ್ನಾಳಿದ ಅನೇಕಾನೇಕ ಜನ ಹಿಂದೂಮಹಾರಾಜರು ಮುಸಲ್ಮಾನ ಮಹಾರಾಜರು ಇವರೇ ಮೊದಲಾದವರು ಪ್ರಾಚೀನ ಮಹರ್ಷಿಗಳಿಂದ ರಚಿಸಲ್ಪಟ್ಟ ಸ್ಮೃತಿಗ್ರಂಥಗಳ ಆಧಾರದ ಮೇಲೆ ರಾಜ್ಯವನ್ನು ಪರಿಪಾಲಿಸುತ್ತ, ತಮ್ಮ ರಾಜ್ಯದಲ್ಲಿ ವಾಸಮಾಡತಕ್ಕ ಸಕಲ ಮತಾನುಯಾಯಿಗಳಿಗೂ ಆಯಾಯ ಮತೀಯ ಗ್ರಂಥೋಕ್ತಿಗಳಂತೆ ಅವರನ್ನು ಆಚರಿಸುವಂತೆ ಮಾಡುತ್ತ ಸಕಲಪ್ರಜಾಪ್ರೇಮಿಗಳಾಗಿಹೋದರು. ಘನವನ್ನೈದಿದ ಚಕ್ರವರ್ತಿನಿಯವರಾಗಿದ್ದ ವಿಕ್ಟೋರಿಯಾ ಮಹಾರಾಣಿಯವರು ರಾಜ್ಯವನ್ನು ಪರಿಪಾಲಿಸುತ್ತಿರುವ ಸಮಯದಲ್ಲಿ ಹಿಂದೂ ಧರ್ಮಕರ್ಮಗಳ ವಿಷಯದಲ್ಲಿ ಬ್ರಿಟಿಷ್ ಸರಕಾರದವರು ಯಾವಾಗಲೂ ಕೈಹಾಕಬಾರದೆಂದು ೧೮… ಇಸ್ವಿಯಲ್ಲಿ ಅಪ್ಪಣೆಯನ್ನು ದಯಪಾಲಿಸಿರುವ ವಿಷಯವು ಲೋಕಪ್ರಸಿದ್ಧವೇ ಅದೆ. ಹೀಗಿದ್ದಾಗ್ಯೂ ಸಹ ಆ ಮಹಾರಾಜ್ಞಿಯವರ ಆಜ್ಞೆಯನ್ನು ಮೀರಿ ಇಂಡಿಯಾ ಸರಕಾರದವರು ಬಾಲ್ಯವಿವಾಹನಿರೋಧಶಾಸನ ವಿಷಯದಲ್ಲಿ ಕೈಹಾಕಿ ಸದ್ಯಃ ಆ ವಿಷಯವನ್ನು ಮಂಜೂರುಮಾಡಿ ಜಾರಿಯಲ್ಲಿ ತರಲು ಪ್ರಯತ್ನಪಡುತ್ತಿರುವದನ್ನು ನೋಡಿದರೆ ಅತ್ಯಂತ ಖೇದವೂ ಆಶ್ಚರ್ಯವೂ ಏಕಕಾಲದಲ್ಲಿಯೇ ಉತ್ಪನ್ನವಾಗುತ್ತವೆ. ಭರತಖಂಡ ನಿವಾಸಿಗಳಿಗೆ ಸ್ಮೃತಿಗಳೇ ಮೂಲಾಧಾರಗಳಾಗಿವೆ. ಆ ಸ್ಮೃತಿಗಳಲ್ಲಿ ಉಕ್ತಗಳಾದ ಆಚರಣೆಗಳನ್ನೇ ಭಾರತೀಯರು ಇಟ್ಟುಕೊಂಡು ಅದರಂತೆ ಈ ಹೊತ್ತಿನವರೆಗೂ ವರ್ತಿಸುತ್ತ ಬಂದಿರುತ್ತಾರೆ. ಸ್ಮೃತ್ಯುಕ್ತಮಾರ್ಗವನ್ನು ಅನುಸರಿಸಿ ವರ್ತಿಸುವವನೇ ಹಿಂದುಗಳೆಂದು ಅನೇಕಾನೇಕ ಗ್ರಂಥಕಾರರು ಸಾರಿರುವರು. ಆದರೆ ತ್ರಿಕಾಲಜ್ಞಾನಿಗಳಾದ ಮಹರ್ಷಿಗಳು ತಾವು ಬರೆದ ಸ್ಮೃತಿಗ್ರಂಥಗಳಲ್ಲಿ ವಿವಾಹ ವಿಷಯವನ್ನು ಪ್ರತಿಪಾದಿಸುವಾಗ್ಗೆ ಕನ್ಯೆಯನ್ನು ಮಾತಾಪಿತೃಗಳು ರಜಸ್ವಲೆಯಾಗುವುದಕ್ಕಿಂತಲೂ ಮೊದಲು ವಿವಾಹ ಮಾಡಿಕೊಡಬೇಕೆಂದೂ, ರಜಸ್ವಲೆಯಾದನಂತರ ವಿವಾಹವನ್ನು ಮಾಡಿಕೊಟ್ಟದ್ದಾದರೆ ನರಕಗಾಮಿಗಳಾಗುವರೆಂದೂ ಸ್ಪಷ್ಟವಾಗಿ ಎಡಿತೋರಿಸಿದ್ದಾರೆ. ಈ ವಿಷಯದಲ್ಲಿ "ಮಾತಾಚೈವ ಪಿತಾಚೈವ ಜ್ಯೇಷ್ಠಭ್ರಾತಾ ತಥೈವಚ | ತ್ರಯಸ್ತೇ ನರಕಂಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ" ಇತ್ಯಾದ್ಯನೇಕ ಪ್ರಮಾಣಗಳು ಸ್ಮೃತ್ಯಾದಿ ಗ್ರಂಥಗಳಲ್ಲಿ ರಾರಾಜಿಸುತ್ತಲಿವೆ. ಅಂದಮೇಲೆ ಈಗಿರತಕ್ಕ ಭಾರತೀಯರು ಪರಲೋಕಭೀತಿಯನ್ನನುಸರಿಸಿ ಸ್ಮೃತಿಗ್ರಂಥಗಳಲ್ಲುಕ್ತವಾದಂತೆ ವರ್ತಿಸಬೇಕೋ? ಅಥವಾ ಈಗಿನ ಶಾಸನ ನಿರ್ಬಂಧಕ್ಕೆ ಭೀತರಾಗಿ ಪ್ರಾಚೀನ ಧರ್ಮತತ್ವವನ್ನು ಮೀರಿ ವರ್ತಿಸಬೇಕೋ? ಎಂಬ ವಿಷಯವು ಯಾರಿಗೂ ತಿಳಿಯದಾಗಿಹೋಗಿದೆ. ಅತ್ಯಂತ ಧರ್ಮಶಾಸ್ತ್ರವಿರೋಧವಾದ ಈ ಬಾಲ್ಯವಿವಾಹ ನಿರೋಧ ಶಾಸನವನ್ನು ಕಂಡು ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಸನಾತನ ಧರ್ಮಾಭಿಮಾನಿಗಳು ಅಲ್ಲಲ್ಲಿಯೇ ಸಭೆಗಳ ಮೂಲಕವಾಗಿಯೂ, ಭಾಷಣಗಳ ಮೂಲಕವಾಗಿಯೂ, ಲೇಖಗಳ ಮೂಲಕವಾಗಿಯೂ, ಗ್ರಂಥಗಳ ಮೂಲಕವಾಗಿಯೂ, ಖಂಡಿಸುತ್ತ ಅತ್ಯಂತ ಅನ್ಯಾಯಕರವಾದ ಈ ವಿಷಯವನ್ನು ವೈಸ್‌ರಾಯರವರಲ್ಲಿ ವಿಜ್ಞಾಪಿಸಿಕೊಳ್ಳುತ್ತಿರುವರು. ಮೈಸೂರು ರಾಜಧಾನಿಯಲ್ಲಿಯೂ ಸಹ ಸದರಿ ಬಿಲ್ಲನ್ನು ನಿಷೇಧಿಸುವದಕ್ಕೋಸ್ಕರ 3-4 ಸ್ಥಾನಗಳಲ್ಲಿ ಸಭೆಗೂಡಿ ಬಾಲ್ಯವಿವಾಹನಿರೋಧದಿಂದ ಸನಾತನ ಧರ್ಮಕ್ಕೆ ಅಪಾರವಾದ ಕಲಂಕವುಂಟಾಗುವದೆಂದೂ ಹಿಂದೂಮತಾಚಾರಗಳ ವಿಷಯದಲ್ಲಿ ಇಂಡಿಯಾ ಸರಕಾರದವರು ಕೈಹಾಕಿ ಸರ್ವಜನವಿರೋಧವಾದ ಈ ತರಹದ ಧಾರ್ಮಿಕ ಕಾನೂನನ್ನು ವಿಧಿಸುವದು ಸರ್ವಥಾ ಅನ್ಯಾಯವೆಂದೂ, ಈ ತರಹದ ಕಾನೂನುಗಳು ವಿಕ್ಟೋರಿಯಾ ಮಹಾರಾಜ್ಞಿಯವರ ಸತ್ಸಂಕಲ್ಪಕ್ಕೆ ಭಂಗವನ್ನುಂಟುಮಾಡತಕ್ಕವುಗಳಾಗಿರುವದೆಂದೂ, ಈ ರೀತಿ ಶಾಸನವನ್ನು ಮಾಡಲಿಕ್ಕೆ ಇಂಡಿಯಾದೇಶದ ಶಾಸನಸಭೆಗೆ ಯಾವ ತರಹದ ಅಧಿಕಾರವೂ ಇಲ್ಲವೆಂದೂ, ಈ ಧರ್ಮಾಧಿಕಾರವು ಯಾವತ್ತು ಪಂಗಡಗಳ ಮತಾಚಾರ್ಯರಿಗೂ, ಹಾಗೂ ಅವರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಗೂ ಇರುವದರಿಂದ ಇಂಥ ಅಧಿಕಾರದಲ್ಲಿ ಅವರ ಅಭಿಪ್ರಾಯವನ್ನು ಕೇಳದೆ, ಸರಕಾರದವರು ಸ್ವತಃ ತಾವೇ ಕೈಹಾಕಿ ಧರ್ಮವಿರೋಧವಾದ ಈ ಶಾಸನವನ್ನು ಮಾಡಿರುವದು ಕೇವಲ ಅಸಾಧುವೆಂದೂ ಇವೇ ಮೊದಲಾದ ವಿಷಯಗಳನ್ನು ಜಾರ್ಜ್ ಸಾರ್ವಭೌಮರಲ್ಲಿಯೂ, ಪಾರ್ಲಿಮೆಂಟ್ ಸಭೆಯಲ್ಲಿಯೂ ಹಾಗೂ ವೈಸ್‌ರಾಯರವರಲ್ಲಿಯೂ ಅರಿಕೆಮಾಡಿಕೊಂಡಿರುತ್ತಾರೆ. ಇದರಂತೆಯೇ ಪ್ರತಿಯೊಂದು ನಗರ ಗ್ರಾಮಗಳಲ್ಲಿರುವ ಸನಾತನಧರ್ಮಾವಲಂಬಿಗಳು ತಮ್ಮ ತಮ್ಮಲ್ಲಿ ಸಭೆಗೂಡಿಸಿ ಭರತಖಂಡಕ್ಕೆ ಪ್ರಾಪ್ತವಾಗಿರುವ ಬಾಲ್ಯವಿವಾಹ ನಿರೋಧರೂಪವಾದ ದುರ್ದಶೆಯನ್ನು ನಿಷೇಧ ಠರಾವುಗಳ ಮೂಲಕ ಹೋಗಲಾಡಿಸಿ ಸದರಿ ಠರಾವುಗಳನ್ನು ವೈಸ್‌ರಾಯರವರಲ್ಲಿಗೆ ಕಳುಹಿಸಿಕೊಡಬೇಕೆಂದೂ ಇದರಂತೆಯೇ ಪ್ರತಿಯೊಂದು ಗ್ರಾಮದವರೂ ನಿಷೇಧಗೊಳಿಸಿ ವೈಸ್‌ರಾಯರವರಲ್ಲಿ ಅರಿಕೆಮಾಡಿಕೊಂಡಿದ್ದಾದರೆ ಈ ಶಾಸನವು ಪುನಃ ರದ್ದಾಗಬಹುದೆಂದೂ ತೋರಿಬರುತ್ತದೆ. ಈ ಶಾಸನದಿಂದ ಮುಂದೆ ಪ್ರಜೆಗಳಿಗೆ ಅನೇಕ ವಿಧಗಳಾದ ತೊಂದರೆಗಳು ಪ್ರಾಪ್ತವಾಗತಕ್ಕ ಸಂಭವವಿರುವದರಿಂದ ಈಗಲೇ ಈ ಶಾಸನವನ್ನು ಸರ್ವರೂ ಸರ್ವರೀತಿಯಿಂದಲೂ ನಿಷೇಧಿಸಬೇಕಾಗಿದೆ. ಈ ಶಾಸನದಲ್ಲಿ ಪಾಸಾಗಿರುವ ಮುಖ್ಯ ವಿಷಯಗಳೇನಂದರೆ; ಕನ್ಯೆಗೆ 14 ವರ್ಷಗಳು ತುಂಬಿದ ಮೇಲೆ ಲಗ್ನವನ್ನು ಮಾಡಬೇಕೆಂದೂ, ವರನು 24 ವರ್ಷಕ್ಕೆ ಮೇಲ್ಪಟ್ಟವನಿರಬೇಕೆಂದೂ, ಮೇಲ್ಕಂಡ ವರ್ಷದೊಳಗಿನ ವಧೂವರರಿಗೆ ವಿವಾಹವನ್ನು ಮಾಡಿದ್ದಾದರೆ ಇದು ಕಾಯಿದೆ ವಿರುದ್ಧವಾಗುವದೆಂದೂ, ಕಾಯಿದೆ ವಿರೋಧವಾಗಿ ಲಗ್ನವಾದ ವರನಿಗೂ ಪ್ರೋತ್ಸಾಹಕರಿಗೂ ಒಂದೊಂದು ಸಾವಿರ ರೂಪಾಯಿಗಳ ದಂಡವೂ, ಹಾಗೂ ಸಾದಾ ಶಿಕ್ಷೆಯೂ, ವಿಧಿಸಲ್ಪಡುವದೆಂದೂ, ನಿರ್ಣಯಿಸಲ್ಪಟ್ಟಿದೆ. ಈರೀತಿ ಕಠೋರವಾದ ಶಾಸನವನ್ನು ಏಕಕಾಲದಲ್ಲಿಯೇ ಮಾಡಿದ್ದರಿಂದ ಇದು ಸನಾತನ ಧರ್ಮಾವಲಂಬಿಗಳಿಗೆ ವಿಶೇಷವಾದ ಕಳವಳವನ್ನುಂಟುಮಾಡಿದೆ. ಆದುದರಿಂದ ಈ ಧರ್ಮವಿರೋಧ… ಶಾಸನದ ವಿಷಯದಲ್ಲಿ ಸರ್ವರೂ ಒಮ್ಮನಸ್ಸಿನಿಂದ ಕೈಹಾಕಿ ನಿಷೇಧಿಸಿ ವೈಸ್‌ರಾಯರವರಲ್ಲಿ ಅರಿಕೆಮಾಡಿಕೊಳ್ಳುವದೇ ಮೊದಲನೆಯ ಸಾಧನವಾಗಿದೆ. ಎಲ್ಲರೂ ಏಕಪ್ರಕಾರವಾಗಿ ಬೇಡಿಕೊಂಡರೆ ಮೊದಲಿನ ವೈಸ್‌ರಾಯರವರು ಈ ವಿಷಯಕ್ಕೆ ತಮ್ಮ ಸಮ್ಮತಿಯನ್ನಿತ್ತು ಪಾಸುಮಾಡಿದ್ದರೂ ಸಹ ಈಗಿನ ವೈಸ್‌ರಾಯರವರು ತಮಗಿರುವ "ವಿಟೋ" ಎಂಬ ವಿಶೇಷಾಧಿಕಾರದಿಂದ ಅದನ್ನು ರದ್ದುಪಡಿಸಬಹುದು; ಆದುದರಿಂದ ಸನಾತನ ಧರ್ಮಾವಲಂಬಿಗಳು ಈ ಕಾಲದಲ್ಲಿ ಪೂರ್ಣಜಾಗ್ರತರಾಗಿ ತಮಗೆ ಬಂದೊದಗಿದ್ದ ಕಷ್ಟವನ್ನು ಕೂಡಲೆ ದೂರಮಾಡಿಕೊಳ್ಳುವರೆಂದು ಆಶಿಸುತ್ತೇವೆ. ಅಲ್ಲದೆ ದಯಾಳುಗಳಾದ ಬ್ರಿಟಿಷ್ ಸರಕಾರದವರು ಭಾರತೀಯರ ಮತಾಚಾರ ವಿಷಯಗಳಲ್ಲಿ ಕೈಹಾಕಿ ಅವರ ಮನಸ್ಸಿಗೆ ನೋವನ್ನುಂಟುಮಾಡದೆ ವಿಕ್ಟೋರಿಯಾ ಮಹಾರಾಜ್ಞಿಯವರ ಅನುಜ್ಞೆಯಂತೆ ತಮ್ಮ ರಾಜ್ಯವನ್ನು ಪರಿಪಾಲಿಸುತ್ತ ಯಾವತ್ತು ಭಾರತೀಯರ ಪ್ರೇಮಕ್ಕೂ ಕೃತಜ್ಞತೆಗೂ ಪಾತ್ರರಾಗಿ ಮಾನ್ಯರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕೃಷ್ಣರಾಜಸಾಗರದ ಸಮಿತಿಯ ಅಧ್ಯಕ್ಷರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಆ ಸ್ಥಾನಕ್ಕೆ ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಮಿ|| ಬಾಲಸುಂದರಂ ಅಯ್ಯರವರನ್ನು ನಿಯಮಿಸಿದರೆಂದು ತಿಳಿಯಬಂದಿದೆ.

ಕಳೆದ ತಿಂಗಳು 28 ನೇ ಸೋಮವಾರ ದಿವಸ ತರೀಕೆರೆಯಲ್ಲಿ ಶ್ರೀರಂಭಾಪುರೀ ಜಗದ್ಗುರು ಶಿವಾನಂದರಾಜೇಂದ್ರ ಮಹಾಸ್ವಾಮಿಗಳ ಆಂದೋಳಿಕೋತ್ಸವವು ಬಹು ವೈಭವದಿಂದ ನಡೆಯಿತು. ತರೀಕೆರೆ ಭಕ್ತರೆಲ್ಲರೂ ಬೀದಿಬೀದಿಗಳನ್ನು ಮಂಟಪಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಿ ಒಮ್ಮನಸ್ಸಿನಿಂದ ಉತ್ಸವವನ್ನು ಸಾಂಗವಾಗಿ ನೆರವೇರಿಸಿ ಬಂದ ಜನಗಳನ್ನೆಲ್ಲ ವಿಶೇಷವಾಗಿ ಆದರಿಸಿ ತಮ್ಮ ಸ್ವಭಾವವಾದ ಗುರುಭಕ್ತಿಯನ್ನು ಪ್ರಕಾಶಪಡಿಸಿದರು.

ಹಿಂದುಸ್ಥಾನದ ಸರ್ವಸೇನಾಪತಿಯಾದ ಸರ್ ಬರ್ಡ್‌ವುಡ್‌ರವರು ಮುಂದಿನ ತಿಂಗಳು ತಾ|| 20 ರಲ್ಲಿ ಶಿವಮೊಗ್ಗೆಗೆ ದಯಮಾಡಿ ಗೇರುಸೊಪ್ಪಾ ಜಲಪಾತವನ್ನೂ ಭದ್ರಾವತೀ ಕಬ್ಬಿಣದ ಕಾರ್ಖಾನೆಯನ್ನೂ ಪರಾಮರ್ಶಿಸಿ ರಾಜಧಾನಿಗೆ ಚಿತ್ತೈಸಿ ಕಾಕನಕೋಟೆ ಕೆಡ್ಡಾ ಕ್ಯಾಂಪಿಗೆ ಪ್ರಯಾಣಮಾಡುವರು. ಅಲ್ಲಿ ವೈಸ್‌ರಾಯರೊಂದಿಗೆ ಆನೆಗಳನ್ನು ಹಿಡಿಯುವುದನ್ನು ನೋಡಿ, ತೆರಳುವವರಾಗಿದ್ದಾರೆ. ಕಾಕನಕೋಟೆ ಕೆಡ್ಡಾದಲ್ಲಿ ಕಳೆದವಾರ 25 ಆನೆಗಳ ಒಂದು ಗುಂಪನ್ನು ಫಾರೆಸ್ಟ್ ಇಲಾಖೆಯವರು ಹಿಡಿದಿರುವರೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ಹುಜೂರು ಸೆಕ್ರೆಟರಿ ಮತ್ತು ದಿವಾನ್ ಸಾಹೇಬರವರೊಡನೆ ಕಳೆದ ಬುಧವಾರ ತಾ|| 23 ರಾತ್ರಿ ರಾಜಧಾನಿಯಿಂದ ಅರಸೀಕೆರೆ ಮಾರ್ಗವಾಗಿ ಶೃಂಗೇರಿಗೆ ದಯಮಾಡಿ ಶ್ರೀ ಸ್ವಾಮಿಗಳ ಆಶೀರ್ವಾದ ಆತಿಥ್ಯಾದಿಗಳನ್ನು ಸ್ವೀಕರಿಸಿ ಶ್ರೀಮಠದ ವ್ಯವಸ್ಥೆಗಳನ್ನೆಲ್ಲ ಪರಾಮರ್ಶಿಸಿ ಭಾನುವಾರ ರಾತ್ರಿ ವಾಪಸು ರಾಜಧಾನಿಗೆ ದಯಮಾಡಿದರು. ಶ್ರೀಸ್ವಾಮಿಗಳ ಆರೋಗ್ಯವು ಬಹಳ ಚೆನ್ನಾಗಿರುವುದೆಂದೂ ಈ ಸಂಬಂಧದಲ್ಲಿ ವಿಪರೀತಭಾವನೆಯುಂಟಾಗುವಂತೆ ಪ್ರಕಟವಾಗಿದ್ದ ಸಮಾಚಾರಗಳೆಲ್ಲವೂ ನಿರಾಧಾರವಾದವುಗಳೆಂದೂ ತಿಳಿದುಬಂದಿದೆ.

ಕಳೆದತಿಂಗಳು ತಾ|| 18ನೇ ಸಾಯಂಕಾಲ ಮೈಸೂರಿನ ವಸ್ತುಪ್ರದರ್ಶನಾಲಯಕ್ಕೆ ಹೋಗಿದ್ದ ಒಬ್ಬ ಪ್ರಾಯದ ಹೆಂಗಸು ಒಂದು ಜವಳಿ ಅಂಗಡಿಯಲ್ಲಿ ಬಟ್ಟೆಗಳನ್ನು ನೋಡುವ ನೆಪದಲ್ಲಿ ಸುಮಾರು 30 ರೂ. ಬೆಲೆಯ ಸೀರೆಯನ್ನು ಅಪಹರಿಸಿಕೊಂಡು ಹೋಗುವದನ್ನು ಅಂಗಡಿಯವನು ನೋಡಿಕೊಂಡಿದ್ದು ಆಕೆಯು ಪ್ರದರ್ಶನಾಲಯವನ್ನು ಬಿಟ್ಟು ಹೊರಗೆ ಹೊರಡುವ ಸಮಯದಲ್ಲಿ ಬಾಗಿಲಬಳಿ ಆಕೆಯನ್ನು ತಡೆದು ಸೀರೆಯನ್ನು ಕೊಂಡ ಚೀಟಿಯನ್ನು ತೋರಿಸೆಂದು ಕೇಳಿದನು. ಆಕೆಯು ಭಯಗ್ರಸ್ತಳಾಗಿ ತಬ್ಬಿಬ್ಬು ಮಾತನಾಡಲು ಆಕೆಯನ್ನು ಪೋಲೀಸಿನವರ ವಶದಲ್ಲಿಡಲು ಅಷ್ಟರಲ್ಲಿ ಆಕೆಯ ಕಡೆಯವರು ಅಂಗಡಿಯವನಿಗೆ ಆದರ ಬೆಲೆಯನ್ನು ಕೊಟ್ಟು ಬಿಡಿಸಿದರೆಂದು ತಿಳಿದುಬರುತ್ತದೆ.

ರಾಜಧಾನಿಯ ಬ್ರಾಹ್ಮಣ ಧರ್ಮಸಹಾಯ ಸಭೆಯ ಪರವಾಗಿ ಕಳೆದ ಗುರುವಾರ ತಾ|| 24 ಸಾಯಂಕಾಲ, ನೂರಾರು ಜನ ವೈದಿಕರೂ ಲೌಕಿಕರೂ ಸೇರಿ ಶ್ರೀ ಮದಭಿನವ ಶಂಕರಾಲಯದಲ್ಲಿ ಆಸ್ಥಾನ ಮಹಾವಿದ್ವಾನ್ ರಾಮಶೇಷಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಕೂಟವನ್ನು ನಡೆಯಿಸಿದರು. ಭರತಖಂಡದ ಎಲ್ಲಾ ಪ್ರಾಂತಗಳಲ್ಲಿಯೂ ಮುಂದಿನ ಏಪ್ರಿಲ್ ಲಾಗಾಯಿತು ಆಚರಣೆಗೆ ತರಲ್ಪಡುವುದಕ್ಕೆ ಸಿದ್ಧವಾಗಿರುವ ಶಾರದಾ ಬಾಲ್ಯ ವಿವಾಹ ನಿರೋಧಕ ಕಾನೂನಿನಿಂದ ಸನಾತನಧರ್ಮಕ್ಕೆ ಉಂಟಾಗುವ ಬಾಧಕಗಳನ್ನು ಯೋಚಿಸುವುದೇ ಆ ಸಭೆಯ ಮುಖ್ಯೋದ್ದೇಶವಾಗಿದ್ದಿತು. ಶೃಂಗೇರಿಯ ವೇ|| ವೈದ್ಯರತ್ನಂ ಶೇಷಶಾಸ್ತ್ರಿಗಳೂ, ಹಿಂದುಸ್ಥಾನದ ಹಿಂದೂಧರ್ಮ ಮಹಾಮಂಡಲದ ಉಪನ್ಯಾಸಕರಾದ ಮಳೂರು ವೇ|| ಶ್ರೀನಿವಾಸ ಚಕ್ರವರ್ತಿಯವರೂ ಬ್ರಿಟಿಷ್ ಸಾರ್ವಭೌಮರು ಹಿಂದುಸ್ಥಾನದ ಮತಧರ್ಮಾಚರಣೆಗಳಲ್ಲಿ ಪ್ರವೇಶಿಸುವುದಿಲ್ಲವೆಂದು ದಯಪಾಲಿಸಿರುವ ವಾಗ್ದಾನಕ್ಕೆ ಈ ಕಾನೂನು ವಿರೋಧವಾಗಿರುವುದೆಂದೂ, ಪ್ರೌಢಾ ವಿವಾಹ ಪದ್ಧತಿಯಿಂದ ಪಾಶ್ಚಾತ್ಯ ರಾಜ್ಯಗಳಲ್ಲಿ ಉಂಟಾಗಿರುವ ಸಾಂಘಿಕ ದೋಷಗಳನ್ನೂ ನಾನಾ ದೃಷ್ಟಾಂತ ಮೂಲಕವಾಗಿ ವಿಸ್ತರಿಸಿಹೇಳಿದರು. ಕಡೆಯಲ್ಲಿ ಸಭಿಕರು ಏಕವಾಕ್ಯತೆಯಿಂದ ತೀರ್ಮಾನಮಾಡಿದ್ದೇನೆಂದರೆ:— (1) ಮತಸಂಬಂಧ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಪ್ರವೇಶಿಸಿ, ಅನೂಚಾನವಾಗಿ ಬಂದಿರುವ ಮತಾಚಾರಗಳಿಗೆ ವಿರುದ್ಧವಾಗಿ ಶಾರದಾ ಬಿಲ್ ಎಂಬ ಕಾನೂನನ್ನು ಮಾಡಿ ಜನಗಳ ಮನಸ್ಸಿಗೆ ಕೊರತೆಯನ್ನುಂಟುಮಾಡುವುದು ಧರ್ಮವಲ್ಲ. (2) ಇಷ್ಟಬಂದವರು ಮಾತ್ರ ನವೀನಪದ್ಧತಿಯನ್ನನುಸರಿಸಬಹುದೆಂದು ಕಾನೂನು ಮಾಡಬಹುದು; ಆದರೆ ಬಹುಕಾಲದಿಂದ ಬಂದಿರುವ ಆಚಾರವನ್ನನುಸರಿಸುವವರು ಶಿಕ್ಷಾರ್ಹರೆಂದು ಕಾನೂನನ್ನು ಮಾಡುವುದು ಮಾತ್ರ ಧರ್ಮಕ್ಕೂ ನ್ಯಾಯಕ್ಕೂ ವಿರುದ್ಧವಾಗಿರುತ್ತದೆ. ಇವೆರಡು ತೀರ್ಮಾನಗಳನ್ನೂ ಇಂಡಿಯಾ ಗವರ್ನಮೆಂಟಿಗೂ, ಮೈಸೂರು ಗವರ್ನಮೆಂಟಿಗೂ ಕಳುಹಿಸತಕ್ಕದ್ದೆಂಬ ಬಗ್ಗೆ ಅಧ್ಯಕ್ಷರಿಗೆ ಸಭೆಯವರು ಅಧಿಕಾರವನ್ನು ವಹಿಸಿ ಆ ದಿನದ ಸಭೆಯನ್ನು ಮುಗಿಸಿದರು.

ವರ್ತಮಾನಸಂಗ್ರಹ.

ಬರುವ ಡಿಸೆಂಬರಿನಲ್ಲಿ ನಡೆಯಬೇಕಾಗಿರುವ ಲಾಹೋರ್ ಕಾಂಗ್ರೆಸ್ ಸಮಯದಲ್ಲಿ ಆರ್ಯಮಹಿಳೆಯರ ಪರಿಷತ್ತನ್ನು ನಡೆಯಿಸಬೇಕೆಂದು ಲಾಹೋರಿನ ಸ್ತ್ರೀಯರು ಪ್ರಯತ್ನ ಪಡುತ್ತಿರುವರು.

ಮುಂದಿನ ತಿಂಗಳಲ್ಲಿ ರೋಸ್ ಇನ್ಸ್ಟಿಟ್ಯೂಟಿನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸರ್ ಜಗದೀಶ ಚಂದ್ರಬೋಸರು ಭಾಷಣಮಾಡುವಾಗ ಈ ವನಸ್ಪತಿಯ ವಿಚಾರವಾಗಿ ಹೆಚ್ಚಿನ ಸಂಗತಿಗಳನ್ನು ತಿಳುಹಿಸುತ್ತಾರೆ.

ತ್ರಿವೇಂದ್ರಂ ಮಹಾರಾಜರು ಬಡಗಿ ಕೆಲಸವನ್ನು ಕಲಿಯಲು ಅಭಿರುಚಿಯುಳ್ಳವರಾಗಿರುವ ಪ್ರಯುಕ್ತ, ಅವರಿಗೆ ಆ ಕೆಲಸವನ್ನು ಕಲಿಸಲು ತ್ರಿವೇಂದ್ರಂ ಸರ್ಕಾರಿನ ಬಡಗಿ ಕೆಲಸದ ಅಸಿಸ್ಟೆಂಟರಾದ ಮಿ|| ಶಂಕರನ್‌ರವರು ಒಪ್ಪಿಕೊಂಡಿರುವರು.

ಕಲ್ಕತ್ತಾ ಪಟ್ಟಣಕ್ಕೆ ಹದಿನೆಂಟು ಮೈಲು ದೂರದಲ್ಲಿರುವ ಭದ್ರೇಶ್ವರ ಎಂಬ ಸ್ಥಳದಲ್ಲಿ ಗೋಪ್ಯವಾಗಿ ಸಾಗಿಸುತ್ತಿದ್ದ ಒಂದು ಲಕ್ಷ ರೂಪಾಯಿ ಬೆಲೆಬಾಳುವ ಅಫೀಮು ಮತ್ತು ಕೊಕೇನ್ ಎಂಬ ಮಾದಕ ಪದಾರ್ಥಗಳನ್ನು ಪೋಲೀಸರು ಪತ್ತೆ ಮಾಡಿ ಇದಕ್ಕೆ ಸಂಬಂಧಪಟ್ಟ ಏಳುಜನರನ್ನು ದಸ್ತಗಿರಿ ಮಾಡಿರುವರು.

ಅಂಬಾ ಸಮುದ್ರಕ್ಕೂ ಮತ್ತು ಕಲ್ಲದ ಕುರುಚಿಗೂ ಮಧ್ಯದಲ್ಲಿರುವ ತಾಂಬ್ರಪರ್ಣಿನದಿಯ ಸೇತುವೆಯಮೇಲೆ 21ನೇ ತಾ|| ದಿನ ರಾತ್ರಿ 23 ವರ್ಷದ ತರುಣನೊಬ್ಬನು ಹೋಗುತ್ತಿದ್ದನು. ಸೇತುವೆಯ ಮಧ್ಯಕ್ಕೆ ಹೋಗುವಷ್ಟರಲ್ಲಿಯೇ ಹಿಂಭಾಗದಿಂದ ರೈಲುಗಾಡಿಯು ಬಂದುದರಿಂದ, ಅವನು ತಪ್ಪಿಸಿಕೊಳ್ಳಲು ಯತ್ನವಿಲ್ಲದೆ ರೈಲಿಗೆ ಸಿಕ್ಕು ತುಂಡು ತುಂಡಾದನು.

ಹಿಂದುಸ್ಥಾನದ ಟಪಾಲುಗಳನ್ನೂ ಹಾಗೂ ಕೆಲವು ಜನ ಪ್ರಯಾಣಿಕರನ್ನೂ ಕರಾಚಿಯಿಂದ ಇಂಗ್ಲೆಂಡಿಗೆ ಸಾಗಿಸಿಕೊಂಡು ಹೋಗುತ್ತಿದ್ದ ವಿಮಾನಯಂತ್ರವು ಇಟಲಿಯ ಸಮುದ್ರತೀರದಲ್ಲಿ ಪ್ರಚಂಡಗಾಳಿಗೆ ಸಿಕ್ಕು ಒಡೆದುಹೋಯಿತು. ಅದರೊಳಗಿದ್ದ ನಾಲ್ವರು ಪ್ರಯಾಣಿಕರು ಮೂರುಜನ ಕೆಲಸಗಾರರು ಸಮುದ್ರದಲ್ಲಿ ಬಿದ್ದು ತತ್ಕಾಲಮರಣ ಹೊಂದಿದರು.

ಶ್ರೀ ಕೃಷ್ಣಭಾರ್ಗ ಮತ್ತು ಪ್ಯಾರಿಲಾಲ್ ಅಸ್ವತಿ ಎಂಬಿಬ್ಬರು ಭಾರತೀಯರು ಪ್ರಪಂಚವನ್ನೆಲ್ಲಾ ನೋಡಬೇಕೆಂಬ ಕಾಂಕ್ಷೆಯಿಂದ ಸೈಕಲ್ ಹತ್ತಿ ಸಂಚಾರ ಮಾಡುತ್ತಿರುವರು. ಇವರು ಈಗಾಗಲೆ 3000 ಮೈಲಿಗಳಿಗಿಂತ ಹೆಚ್ಚಾಗಿ ಸಂಚರಿಸಿರುವರು. ಇವರ ಸಂಚಾರವು ಸುಮಾರು 16 ವರ್ಷಗಳ ಮೇಲಾಗುತ್ತದೆಂದೂ, ಇವರು ಸಾಧಾರಣವಾಗಿ 52000 ಮೈಲುಗಳ ಪ್ರಯಾಣ ಮಾಡುವರೆಂದೂ ತಿಳಿದುಬರುತ್ತದೆ.

20ನೇ ತಾ|| ದಿನ ಕಲ್ಕತ್ತಾ ಪಟ್ಟಣದ ಎಂಪೈರ್ ಸೆಣಬಿನ ಕಾರ್ಖಾನೆ ಸಮೀಪದಲ್ಲಿಯ ಒಂದು ಮನೆಯಲ್ಲಿ ಜೂಜಾಟವು ನಡೆಯುತ್ತದೆಂಬ ಬಾತ್ಮಿಯಮೇಲೆ ಪೋಲೀಸರು ಆ ಮನೆಗೆ ನುಗ್ಗಿ ಶೋಧನೆಮಾಡುತ್ತಿದ್ದಾಗ ಅಲ್ಲಿದ್ದ ಜೂಜುಗಾರರು ಪೋಲೀಸರ ಮೇಲೆ ಬಿದ್ದು ಒಬ್ಬ ಪೋಲೀಸ್ ಅಧಿಕಾರಿಯನ್ನು ಪೂರಾ ಹೊಡೆಯಲು ಕೂಡಲೆ ಅಧಿಕಾರಿಯು ಸೀಟಿ ಹೊಡೆಯಲು ಹೆಚ್ಚಿಗೆ ಪೋಲೀಸರು ಬಂದು 50 ಜನ ಜೂಜುಕೋರರನ್ನು ದಸ್ತಗಿರಿ ಮಾಡಿದರು.

ಇಟಲಿ ರಾಜ್ಯದ ದೊರೆಯ ಹಿರಿಯ ಕುಮಾರನು ಕಳೆದ ಬುಧವಾರ (ತಾ|| 23) ಬೆಲ್ಜಿಯಂ ರಾಜಧಾನಿಯಾದ ಬ್ರಸೆಲ್ಸ್ ಪಟ್ಟಣಕ್ಕೆ ಹೋಗಿರುವನು. ರಾಜಪುತ್ರಿಯನ್ನು ವರಿಸಿ ವಿವಾಹಮಾಡಿಕೊಳ್ಳಬೇಕೆಂಬುವುದೇ ಆತನ ಉದ್ದೇಶವಾಗಿದೆ. ಅದೇರೀತಿ ನಿಶ್ಚಯವೂ ಆಯಿತು. ಬ್ರಸೆಲ್ಸ್ ನಗರದಲ್ಲಿ ತತ್ಸಂಬಂಧವಾಗಿ ನಡೆದ ಸಂತೋಷೋತ್ಸವದಲ್ಲಿ ಜನಗಳು ವಿಶೇಷ ಗುಂಪುಗುಂಪಾಗಿ ಸೇರಿದ್ದರು. ಆ ಗುಂಪಿನಲ್ಲಿದ್ದ ಒಬ್ಬ ಇಟಲಿಪ್ರಜೆಯು ಆ ರಾಜಪುತ್ರನಿಗೆ ಗುರಿಕಟ್ಟಿ ಪಿಸ್ತೂಲು ಹಾರಿಸುವ ಪ್ರಯತ್ನ ಮಾಡಿದನು. ದೈವವಶಾತ್ ಅವನ ಕೃತ್ಯವನ್ನು ಒಬ್ಬ ಪೋಲೀಸಿನವನು ನೋಡಿ ಅವನು ಗುಂಡುಹಾರಿಸುವ ಸಮಯಕ್ಕೆ ಸರಿಯಾಗಿ ಅವನ ತೋಳಿಗೆ ಹೊಡೆದನು. ಹಾರಿದ ಗುಂಡು ನೆಲಕ್ಕೆ ಬಿದ್ದಿತು. ಯಾರಿಗೂ ಯಾವ ಅಪಾಯವೂ ಆಗಲಿಲ್ಲ. ಆ ಘಾತುಕನನ್ನು ದಸ್ತಗಿರಿಮಾಡಿದ್ದಾರೆ.

ರಂಗೂನ್ ಪಟ್ಟಣದ ಟವಾಯ್ ಸಿನಿಮಾಮಂದಿರಕ್ಕೆ ಚಲನಚಿತ್ರ ಪ್ರದರ್ಶನವನ್ನು ನೋಡಲು ಮಾಂಗ ಸಾಯ್ ಎಂಬಾತನು ಹೋಗಿ ಟಿಕೆಟ್ ಕೊಂಡುಕೊಳ್ಳುವಾಗ, ಟಿಕೆಟ್ ಮಾರುವ ದುರ್ಬಾನ್ ಎಂಬಾತನಿಗೂ ಅವನಿಗೂ ಸ್ವಲ್ಪಮಾತುನಡೆದು, ದುರ್ಬಾನನು ಮಾಂಗ್‌ಸಾಯ್ ಎಂಬುವನನ್ನು ಹೊಡೆದನು. ಇದರಿಂದ ಕೋಪಗೊಂಡ ಮಾಂಗ್ ಸಾಯ್ ಎಂಬಾತನು ತನ್ನ ಜೇಬಿನಲ್ಲಿದ್ದ ರಿವಾಲ್ವರಿನಿಂದ ಹೊಡೆಯಲು ದುರ್ಬಾನನು ಕೂಡಲೆ ಮೃತನಾದನು. ಅನಂತರ ಮಾಂಗ್ ಸಾಯನನ್ನು ಪೋಲೀಸಿನವರು ದಸ್ತಗಿರಿಮಾಡಿ ಮೊಕದ್ದಮೆ ನಡೆಯಿಸಿದರು. ಅಪಾದಿತನಾದ ಮಾಂಗ್‌ಸಾಯನ ಕಡೆಯ ವಕೀಲರು ಈ ಕೃತ್ಯವು ಆಕಸ್ಮಾತ್ ಆದದ್ದಾಗಿಯೂ ಮತ್ತು ಆತ್ಮಸಂರಕ್ಷಣೆಗಾಗಿ ನಡೆಯಿಸಿದ್ದಾಗಿಯೂ ಇರುತ್ತದೆಂದು ವಾದಿಸಿದರು. ಇದನ್ನು ಸೆಷನ್ ಜಡ್ಜಿಯವರು ಅನುಮೋದಿಸಿ ಅಪರಾಧಿಯನ್ನು ಖುಲಾಸ್ ಮಾಡಿದರು.

ಬಚ್ಚಾಯಿಸಾಕನನ್ನು ಸಂಪೂರ್ಣವಾಗಿ ಸೋಲಿಸಿ ಹೊಸದಾಗಿ ಅಮೀರ್ ಪದವಿಗೆ ಬಂದಿರುವ ನಾದಿರ್ ಖಾನರ ಸೈನಿಕರಿಗೂ ಹಬೀಬುಲ್ಲನ ಸೈನ್ಯಕ್ಕೂ ಯುದ್ಧವು ಸ್ವಲ್ಪಮಟ್ಟಿಗೆ ನಡೆಯಿತಾದರೂ ನಾದಿರ್ ಖಾನರನ್ನು ವಿರೋಧಿಸತಕ್ಕವರು ವಿಶೇಷವಾಗಿಲ್ಲವೆಂದು ಕಾಣುತ್ತದೆ. ಒಂದುವರುಷದಿಂದ ಗಲಭೆಯಾಗುತ್ತ ಬಂದಿರುವ ಕಾಬೂಲ ದೇಶದಲ್ಲಿ ಮುಂದೆ ಶಾಂತಿಯುಂಟಾಗಬಹುದೆಂದು ನಿರೀಕ್ಷಿಸಲಾಗಿದೆ. ಬ್ರಿಟಿಷ್ ಸರರಾಜ್ಯಗಳ ಮಂತ್ರಿಯಾದ ಮಿ|| ಹೆಂಡರ್‌ಸನ್‌ರವರು ನಾದಿರ್‌ಖಾನರಿಗೆ ದೊರೆತನವಾದ ವಿಷಯದಲ್ಲಿ ತಮ್ಮ ಸಂತೋಷವನ್ನು ತಿಳುಹಿಸಿ ಇನ್ನುಮುಂದೆ ಬ್ರಿಟನ್ನಿಗೂ ಅಫ್ಘಾನಿಸ್ಥಾನಕ್ಕೂ ಎಂದಿನಂತೆ ಸ್ನೇಹಭಾವವು ನಡೆದುಬರುವದೆಂಬ ಆಶಯವನ್ನು ತಂತೀವರ್ತಮಾನದ್ವಾರಾ ತಿಳುಹಿಸಿದ್ದಾರೆ. ಅಲ್ಲದೆ ಇಟಲಿಯಲ್ಲಿರುವ ಮಾಜಿ ದೊರೆಯಾದ ಅಮಾನುಲ್ಲರಿಂದಲೂ ನಾದಿರ್‌ಖಾನರಿಗೆ ಸಂತೋಷಸೂಚಕವಾದ ತಂತೀವರ್ತಮಾನವು ತಲಪಿದೆ. ನಾದಿರ್ ಖಾನರು ಅಮಾನುಲ್ಲನಿಗೆ ಜವಾಬುಕೊಡುವಲ್ಲಿ "ನಿಮ್ಮ ಆಳ್ವಿಕೆಯು ಚೆನ್ನಾಗಿದ್ದಿತು. ನಿಮ್ಮ ಜಾಡನ್ನೇ ಹಿಡಿದು ನಾನು ಆಳ್ವಿಕೆಯನ್ನು ನಡಿಸುವೆನು" ಎಂಬದಾಗಿ ತಿಳುಹಿಸಿದ್ದಾರೆ. ನಾದಿರ್‌ಖಾನರು ಪ್ರಜಾಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡು ಆಳ್ವಿಕೆಯ ಕೆಲಸ ಕಾರ್ಯಗಳಿಗೆ ದ್ರವ್ಯವನ್ನು ಕೂಡಿಸಿಕೊಳ್ಳುತ್ತಿದ್ದಾರೆಂದು ತಿಳಿಯುವುದು. ನಾದಿರ್‌ಖಾನರು ಬಚ್ಚಾಯಿಸಾಕನನ್ನು ಸೆರೆಯಲ್ಲಿಟ್ಟಿದ್ದಾರೆಂದು ವರ್ತಮಾನವಿದೆ.

ತಮ್ಮ ಅಸಾಧಾರಣವಾದ ವಿದ್ಯಾಪ್ರಖ್ಯಾತಿಯಿಂದ ಪಾಶ್ಚಾತ್ಯರ ಮೆಚ್ಚುಗೆಯನ್ನೂ ಗೌರವವನ್ನೂ ಪಡೆದಿರುವ ಹಿಂದೂ ದೇಶೀಯರಲ್ಲಿ ಸರ್ ಜಗದೀಶ ಚಂದ್ರಬೋಸರವರೊಬ್ಬರಿರುವರು. ಇವರು ವಿಜ್ಞಾನ ಶಾಸ್ತ್ರದಲ್ಲಿ ಅಸದೃಶವಾದ ಪ್ರಖ್ಯಾತಿಯನ್ನು ಸಂಪಾದಿಸಿ, ಅನೇಕ ಸೂಕ್ಷ್ಮ ವಿಚಾರಗಳನ್ನು ಸ್ವಶಕ್ತಿಯಿಂದ ಕಂಡುಹಿಡಿದು ಪ್ರಪಂಚವನ್ನು ಬೆರಗುಗೊಳಿಸಿರುತ್ತಾರೆ. ಮನುಷ್ಯಮೃಗಾದಿಗಳಂತೆಯೇ ಸಸ್ಯವರ್ಗವೂ ಸಹ ಕಷ್ಟನಷ್ಟಗಳನ್ನೂ ಸುಖಸಂತೋಷಗಳನ್ನೂ ಅನುಭವಿಸಬಲ್ಲದೆಂದೂ, ಸೈರಿಸಲಾರದಷ್ಟು ಸಂಕಟವೊದಗಿದರೆ ಮನುಷ್ಯರಂತೆಯೇ ಅವುಗಳೂ ಮೃತವಾಗುವವೆಂದೂ, ತಮ್ಮಿಂದ ನಿರ್ಮಿಸಲ್ಪಟ್ಟಿರುವ ಅತಿ ಸೂಕ್ಷ್ಮವಾದ ಯಂತ್ರಗಳಿಂದ ಸಿದ್ಧಮಾಡಿತೋರಿಸಿರುವರು. ಇವರು ಇಂಡಿಯಾ ದೇಶದಲ್ಲಲ್ಲದೆ ಯೂರೋಪ್ ಅಮೇರಿಕ ಖಂಡಗಳಲ್ಲಿಯೂ ಸಹ ತಮ್ಮ ಯಂತ್ರಗಳ ಮೂಲಕ ಇದನ್ನು ವ್ಯಕ್ತಪಡಿಸಿ, ಅಲ್ಲಿಯ ಶಾಸ್ತ್ರಜ್ಞರಿಂದ ಗೌರವವನ್ನು ಸಂಪಾದಿಸಿಕೊಂಡಿರುವರು. ಇವರು ಹಿಮಾಲಯ ಪರ್ವತಪ್ರಾಂತ್ಯದಲ್ಲಿಯ ಕೆಲವು ವನಸ್ಪತಿಗಳ ಗುಣದೋಷಗಳನ್ನು ವಿಮರ್ಶೆಮಾಡುತ್ತ ಇರುವಾಗ, ಅವುಗಳಲ್ಲೊಂದು ವನಸ್ಪತಿಯು ಕಳೆದುಹೋದ ಪ್ರಾಣವನ್ನು ಕೂಡ ಬರಮಾಡಿಕೊಡಬಲ್ಲದೆಂದು ಕಂಡುಬಂದಿರುವದಂತೆ! ಮೃತವಾಗುತ್ತಿದ್ದ ಇತರ ಸಸ್ಯಗಳು ಆ ವನಸ್ಪತಿಯ ಉಪಯೋಗದಿಂದ ಪುನಃ ಚೇತರಿಸಿಕೊಂಡವಂತೆ! ಅಲ್ಲಿಂದ ಬೋಸರವರು ಒಂದು ಕಪ್ಪೆಗೆ ವಿಷವನ್ನು ಹಾಕಿಕೊಂದು ಅನಂತರ ಪಿಚಕಾರಿಯ ಮೂಲಕ ಆ ವನಸ್ಪತಿಯ ರಸವನ್ನು ಮೃತಕಪ್ಪೆಯ ಶರೀರಕ್ಕೆ ಸೇರಿಸಿದ ಕೂಡಲೆ ಅದು ಬದುಕಿಕೊಂಡು ಮೊದಲಿಗಿಂತಲೂ ಚಟಪಟಿಕೆಯುಳ್ಳದಾಯಿತಂತೆ!

ಬೊಂಬಾಯಿಯಲ್ಲಿ ಸುಲಿಗೆ ದರೋಡೆಗಳು ಹಗಲು ಹೊತ್ತಿನಲ್ಲೇ ನಡೆಯುತ್ತಿವೆ. ಈಗ್ಗೆ ಕೆಲವು ದಿನಗಳ ಹಿಂದೆ, ಪೆಡ್ಡರ್ ರೋಡಿನಲ್ಲಿ ವಾಸವಾಗಿದ್ದ ಧನಿಕಳಾದ ಸ್ತ್ರೀಯ ಸೇವಕನೊಬ್ಬನು ತನ್ನ ಯಜಮಾನಗಿತ್ತಿಯನ್ನೇ ಕೊಂದುಹಾಕಿದನು. ಪ್ರಾಯಶಃ ಧನದಾಶೆಯಿಂದ ಈ ಕಾರ್ಯವು ನಡೆದಿರಬೇಕೆಂದು ವ್ಯಕ್ತವಾಗುತ್ತದೆ. ಬಾಂದ್ರದಲ್ಲಿ ಇಬ್ಬರು ಪಾರ್ಸಿಸ್ತ್ರೀಯರಿಗೆ ಔಷಧಿಹಾಕಿ ಆ ಮೂಲಕ ಅವರ ಆಳುಗಳೇ ಅವರ ಪ್ರಾಣವನ್ನು ತೆಗೆದುಹಾಕಿ ಕಡೆಗೆ ಅವರ ಮನೆಯನ್ನು ಲೂಟಿಮಾಡಿ ಬೆಂಕಿಹಚ್ಚಿದರು. ಅದೃಷ್ಟವಶಾತ್ ಅಕ್ಕಪಕ್ಕದಲ್ಲಿ ವಾಸವಾಗಿದ್ದ ಕೆಲವು ಪಾರ್ಸಿದೊಡ್ಡಮನುಷ್ಯರುಗಳು ಸಹಾಯಕ್ಕೆ ಬಂದು ಬೆಂಕಿಯನ್ನು ಆರಿಸಿದರು. ಮನೆಯನ್ನು ತಪ್ಪಿಸಿಕೊಂಡು ಹೋಗಿರುವ ಆಳುಗಳನ್ನೆಲ್ಲ ಇಬ್ಬರನ್ನು ದಸ್ತಗಿರಿಮಾಡಿದ್ದಾರೆ. ಧರ್ಭಾಯ್ಜಿ ಎಂಬುವರ ಮನೆಯಿಂದ ಸಾಯಂಕಾಲ ಸುಮಾರು 6 ಘಂಟೆಯ ಹೊತ್ತಿನಲ್ಲಿ ಹೊಗೆ ಕಾಣಿಸಿತು. ಪಕ್ಕದಮನೆಯವರು ಕೂಗಿಕೊಂಡು ಗಲಭೆಯೆಬ್ಬಿಸಿದರು. ಮನೆಯ ಒಳಗಡೆಯಿಂದ ಚಿಲಕಹಾಕಲ್ಪಟ್ಟಿದ್ದರಿಂದ ಬಾಗಿಲನ್ನು ಒಡೆದು ಒಳಗೆ ನೋಡುವಲ್ಲಿ ಮಿಸೆಸ್ ಧರ್ಭಾಯ್ಜಿಯವರೂ ಅವರ ಸಹೋದರಿಯವರೂ ಸಹ ಪ್ರಜ್ಞೆತಪ್ಪಿ ಮಲಗಿದ್ದುದನ್ನು ಕಂಡರು. ಕೊಠಡಿಯಿಂದ ಸೀಮೆಯೆಣ್ಣೆ ವಾಸನೆಯು ಹೊರಕ್ಕೆ ಬರುತ್ತಿದ್ದು ಕಷ್ಟಪಟ್ಟು ಬೆಂಕಿಯನ್ನು ಆರಿಸಿ ಮಲಗಿದ್ದ ಸ್ತ್ರೀಯರನ್ನು ರಕ್ಷಿಸಲಾಯಿತು. ವೈದ್ಯರು ಬಂದು ಪರೀಕ್ಷೆ ಮಾಡುವಲ್ಲಿ ಮನೆಯ ಆಳುಗಳು ಅವರಿಗೆ ಬೇಯೊಡನೆ ಧತ್ತೂರ ವಿಷವನ್ನು ಬೆರೆಯಿಸಿಕೊಟ್ಟಿರಬೇಕೆಂದು ತಿಳಿಯಬಂದಿತು. ಮನೆಯಲ್ಲಿದ್ದ ಕಬ್ಬಿಣದಪೆಟ್ಟಿಗೆಯನ್ನು ಒಡೆದು ತೆಗೆಯಲು ಸಾಧ್ಯವಿಲ್ಲದೆ, 10 ಬೀರುಗಳನ್ನು ಒಡೆದು ಅಲ್ಲಿ ಸಿಕ್ಕ ದ್ರವ್ಯ ಮತ್ತು ಒಡವೆಗಳನ್ನು ಸಾಗಿಸಿದ್ದಾರೆ. ಧತ್ತೂರ ವಿಷದ ದುಷ್ಪರಿಣಾಮವು ಸ್ತ್ರೀಯರಿಗೆ ಇನ್ನೂ ಪೂರ್ತಾ ಹೋಗಿಲ್ಲ; ಕಳವಾದ ಪದಾರ್ಥಗಳು ಇನ್ನೂ ಸಿಕ್ಕಿಲ್ಲ. ಅಡಿಗೆಯವನೊಬ್ಬನನ್ನು ದಸ್ತಗಿರಿಮಾಡಿದ್ದಾರೆ.

ಸದ್ಬೋಧ.

ಸೋಲಾಪುರ ಪ್ರಾಂತದಲ್ಲಿ ಪ್ರಸಿದ್ಧಿಯನ್ನು ಪಡೆದ ಚನ್ನವೀರ ಶಿವಾಚಾರ್ಯರು ಬೃಹನ್ಮಠ ಹೋಟಗಿ ಈ ಮಹಾಶಯರು ವೀರಶೈವರಲ್ಲಿ ಶಾಸ್ತ್ರೀಯಗಳಾದ ಕ್ರಿಯಾಜ್ಞಾನಾಚರಣೆಗಳ ಸುಧಾರಣೆಗಾಗಿ ಗ್ರಾಮಗ್ರಾಮಗಳಿಗೆ ದಯಮಾಡಿಸಿ ಸಭೆಯನ್ನೇರ್ಪಡಿಸಿ ಮಧುರವಾಣಿಯಿಂದ ಅಜ್ಞಜನರಿಗೂ ಸುಲಭಬೋಧೆಯಾಗುವಂತೆ ಉಪದೇಶಮಾಡುತ್ತಿರುವುದು ಈ ಮಠದ ಸುದೈವವೇ ಸರಿ. ಅದರಂತೆ ನಮ್ಮ ಗ್ರಾಮಕ್ಕೆ ತಾ|| 14 ರಲ್ಲಿ ದಯಮಾಡಿಸಿ ೮ ದಿವಸಗಳಪರ್ಯಂತ ನಿತ್ಯದಲ್ಲಿ ಮಹಾದೇವನ ಗುಡಿಯಲ್ಲಿ ಉಪನ್ಯಾಸವನ್ನು ಮಾಡಿದರು. ಈ ಮಹೋದಯರ ಉಪದೇಶವನ್ನು ಕೇಳುವುದಕ್ಕಾಗಿ ಸಂಗದರಿ, ದರ್ಗನಹಳ್ಳಿ, ಇತ್ಯಾದಿ ಸುತ್ತುಮುತ್ತಲಿನ ಅನೇಕ ಜನರು ಬರುತ್ತಿದ್ದರು. ತಾ|| 21-10-29 ಕ್ಕೆ ಮಹಾಸ್ವಾಮಿಗಳು ಉಪದೇಶವನ್ನು ಪೂರೈಸಿದ ಬಳಿಕ ನಮ್ಮ ಗ್ರಾಮದ ಸಮಸ್ತ ಭಕ್ತಮಾಹೇಶ್ವರರೂ ಸೇರಿ ಮಹಾಸ್ವಾಮಿಗಳು ಮಾಡಿಸಿದ ಸದ್ಬೋಧಾಮೃತಪಾನಕ್ಕೆ ಚಿರಕೃತಜ್ಞತೆಯನ್ನು ತೋರಿಸಿದರು. ಜಗತ್ತಿನಲ್ಲಿರುವ ಗುರುವರ್ಗದವರೆಲ್ಲರೂ ವಿದ್ಯಾಸದಾಚಾರಸಂಪನ್ನರಾಗಿ ಭಕ್ತರುದ್ಧಾರವೇ ತಮ್ಮ ಜೀವನಾನದ ಫಲವೆಂದು ದೃಢಸಂಕಲ್ಪದಿಂದ ತಮ್ಮ ಕರ್ತವ್ಯದಲ್ಲಿ ದಕ್ಷರಾದರೆ ವೀರಶೈವಮತದ ಏಳಿಗೆಯು ಶೀಘ್ರದಲ್ಲಿ ಏಕೆ ಆಗಲಾರದು? ಗುರುವರ್ಗಮಹಾಶಯರೇ ಇನ್ನಾದರೂ ನೀವೆಲ್ಲರೂ ಈ ಸ್ವಾಮಿಗಳ ಮೇಲ್ಪಂಕ್ತಿಯನ್ನು ಅನುಸರಿಸುವಿರೋ?

ಸಮಸ್ತ ಭಕ್ತಮಂಡಳಿ ಬೋರಾಮಣಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ಕೇದಾರ ೧೦೮ ಜಗದ್ಗುರುಗಳವರ ಆಗಮನ

ಮೆದಕಿನಹಾಳು.

ನೈಜಾಮ್ ಇಲಾಖಾ ತಾಲೂಕವೈಕಿ ಮೆದಕಿನಹಾಳ ಸಂಸ್ಥಾನದ ಗ್ರಾಮಕ್ಕೆ ಶ್ರೀ ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ತಾ||21-10-29 ನೇ ಸೋಮವಾರ ಸಾಯಂಕಾಲಕ್ಕೆ ದಯಮಾಡಿಸಿದರು. ಗ್ರಾಮದ ಪ್ರಮುಖರಾದ ರಾಜಾ ಅಮರೇಶ್ವರರಾವ್ ಬಹದ್ದೂರ ಸಂಸ್ಥಾನ ನಾಡಗೌಡರು ಇನ್ನುಳಿದ ಭಕ್ತಾದಿ ಇಷ್ಟಕವಾಲ ಸಹಿತರಾಗಿ ಸಿದ್ಧರಾಗಿದ್ದರು. ಮಹಾಸನ್ನಿಧಿಯವರು ದಯಮಾಡಿಸಿದಕೂಡಲೆ ಸರಕಾರಿ ಪೋಲೀಸರು ಗೌರವಾರ್ಥವಾಗಿ ಗುಂಡುಗಳನ್ನು ಹಾರಿಸಿದರು. ಪ್ರತಿ ಬೀದಿಗಳೂ ತಳಿರುತೋರಣ ರಂಭಾಸ್ತಂಭರಂಗವಲ್ಲಿಗಳಿಂದ ನೋಡುವವರ ಕಣ್ಣಿಗೆ ರಮಣೀಯವಾಗಿ ತೋರುತ್ತಿದ್ದುವು. ಮಹಾಸ್ವಾಮಿಗಳವರ ಆಂದೋಲಿಕೋತ್ಸವವು ಬಹು ವೈಭವದಿಂದ ಗದ್ದಿಗೆಮಠವನ್ನು ತಲ್ಪಿತು. ಜಗದ್ಗುರುಗಳು ಆಂದೋಲಿಕೆಯಿಂದ ಇಳಿದು ಮಠದಲ್ಲಿ ಅಲಂಕರಿಸಿದ್ದ ಸಿಂಹಾಸನದಲ್ಲಿ ಮೂರ್ತವಾಡಿದರು. ಸರ್ವಭಕ್ತಮಾಹೇಶ್ವರರು ಜಯ ಜಯ ಕಾರವನ್ನು ಮಾಡಿ ಗುರುಗಳ ಸಮ್ಮುಖದಲ್ಲಿ ಕುಳಿತಮೇಲೆ ಶ್ರೀ ಮ|| ಷ|| ರೇವಣಸಿದ್ಧಶಿವಾಚಾರ್ಯ ಪಟ್ಟದಸ್ವಾಮಿಗಳು ಚಿಕ್ಕಮಣ್ಣೂರು ಇವರು ಶ್ರೀ ಜಗದ್ಗುರುಗಳವರ ಆಗಮನದ ಸಂತೋಷವನ್ನು ಸೂಚಿಸಿ ವೀರಶೈವಸಮಾಜದ ಬಗ್ಗೆ ಪಂಡಿತರಿಗೂ ಪಾಮರರಿಗೂ ತಿಳಿಯುವಂತೆ ಸ್ಫೂರ್ತಿದಾಯಕವಾದ ವ್ಯಾಖ್ಯಾನ ಮಾಡಿದರು. ಇವರ ವ್ಯಾಖ್ಯಾನವನ್ನು ಕೇಳಿ ಸರ್ವರೂ ಸಂತೋಷಸಾಗರದಲ್ಲಿ ಮುಳುಗಿ ಕರತಾಡನವನ್ನು ಮಾಡುತ್ತಿದ್ದರು. ಬಳಿಕ ಭಕ್ತಮಾಹೇಶ್ವರರು ಜಯಘೋಷವನ್ನು ಮಾಡಿ ಮಹಾಸ್ವಾಮಿಗಳವರ ಆಶೀರ್ವಾದವನ್ನು ಪಡೆದು ಶ್ರೀ ಪಂಚಾಚಾರ್ಯರ ಜಯಜಯಕಾರ ಮಾಡುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಪೋಸ್ಟ ಮಾಸ್ತರ ಪಂಚಾಕ್ಷರಯ್ಯನವರು.
ಗುಂಡಳ್ಳಿ ಮಲಕಾಜಪ್ಪನವರು.

ಸಿರಿಗನ್ನಡಂಗೆಲ್ಗೆ

ಆದಿಪಂಪ ಮಹಾಕವಿಯ ಸ್ಮಾರಕೋತ್ಸವವು.

ಕರ್ನಾಟಕ ಕವಿಕುಲಗುರುವೂ ಕರ್ನಾಟಕ ರಾಷ್ಟ್ರೀಯ ಕವಿಪುಂಗವನೂ ಆದ ಆದಿಪಂಪಮಹಾಕವಿಯು ತನ್ನ ಆದಿಪುರಾಣ ಗ್ರಂಥವನ್ನು ಕಾರ್ತಿಕ ಶುದ್ಧ ೫ ರಲ್ಲಿ ಮುಗಿಸಿದ್ದರಿಂದ ಆ ಮಹಾಕವಿಯ ಸ್ಮಾರಕೋತ್ಸವವನ್ನು ಅವನ ಜನ್ಮಸ್ಥಾನವಾದ ಈ ಪುಲಿಗೆರೆ (ಲಕ್ಷ್ಮೇಶ್ವರ) ಯಲ್ಲಿ ಇದೇ ಕಾರ್ತಿಕ ಶುದ್ಧ ೫ (6-11-29) ಬುಧವಾರ ಸಾಯಂಕಾಲ 4 1/2 ಘಂಟೆಗೆ ಜರುಗಿಸಬೇಕೆಂದು ನಿರ್ಧರಿಸಿದೆ, ಕರ್ನಾಟಕ ಸಾಹಿತ್ಯಪ್ರೇಮಿಗಳಿಗೆ ಆಮಂತ್ರಣವನ್ನು ಕೊಟ್ಟಿರುವೆವು. ಕನ್ನಡನುಡಿಯ ಕೆಲವು ಪ್ರಸಿದ್ಧಭಕ್ತರು ಈ ಉತ್ಸವಕ್ಕೆ ಬರಲು ಸಮ್ಮತಿಸಿರುವರು. ಆದಿಕವಿಸಾರ್ವಭೌಮನ ಸ್ಮಾರಕೋತ್ಸವಕ್ಕೆ ವಾಙ್ಮಯಪ್ರೇಮಿಗಳಾದ ಕನ್ನಡಬಾಂಧವರು ಇಲ್ಲಿಗೆ ಬಂದು ಉತ್ಸವವನ್ನು ಯಶಸ್ವಿಯನ್ನಾಗಿ ಮಾಡಬೇಕಾಗಿ ಬೇಡುತ್ತೇವೆ.

ತಮ್ಮ ವಿಧೇಯರು,
ಬಾತಪ್ಪ ಇಜಾರಿ ಬಿ. ಎ.
ವೀರಭದ್ರಪ್ಪಾ ಕೊಪ್ಪಳ ಬಿ. ಎ.
ರಾಮಚಂದ್ರ ಅಭ್ಯಂಕರ ಬಿ. ಎ.
ನಾಗರಾಜಪ್ಪಾ ಘೋಂಗಡಿ.
(ಕಾರ್ಯದರ್ಶಿಗಳು)

ಶ್ರೀಸನಾತನಧರ್ಮೋ ವಿಜಯತಾಂ

ಬಾಲ್ಯವಿವಾಹ ನಿರೋಧಕಶಾಸನ.

ಶ್ರೀ ಶುಕ್ಲನಾಮ ಸಂವತ್ಸರದ ಆಶ್ವಯುಜ ಬಹುಳ ದಶಮಿ ಭಾನುವಾರ ಸಾಯಂಕಾಲ ಮೈಸೂರು ರಮಾವಿಲಾಸಾಗ್ರಹಾರದಲ್ಲಿರುವ ಶ್ರೀನೃಸಿಂಹೋಬಲಮಠದಲ್ಲಿ ಮೇಲ್ಕಂಡ ವಿವಾಹ ಶಾಸನದಿಂದ ಸನಾತನಧರ್ಮಕ್ಕೆ ಉಂಟಾಗಿರುವ ಕೊರತೆಗಳನ್ನು ಕುರಿತು ಆಲೋಚಿಸಲು ಪೂರ್ವೋತ್ತರ ಮೀಮಾಂಸಾಭೂಷಣ ವಿದ್ಯಾನಿಧಿ ವೇ|| ಬ್ರ|| ಶ್ರೀ|| ಶ್ರೀವರ್ಣ ದೇವಶಿಖಾಮಣಿ ರಾಮಾನುಜಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತ್ತು. ಪ್ರಮುಖರಾದ ಬಹುಜನ ವಿದ್ವಾಂಸರು, ಆಚಾರ್ಯರುಗಳೂ, ಅಧಿಕಾರಿಗಳೂ, ಮುಂತಾದ [illegible] ಜನಗಳವರೆಗೂ, ನೆರೆದಿದ್ದರು. ಶೃಂಗೇರಿಯಿಂದ ಬಂದಿರುವ ಆಯುರ್ವೇದ ವಿದ್ವಾನ್ ಬ್ರ|| ಶ್ರೀ ವೇ|| ವೈದ್ಯರತ್ನಂ ಕೆ. ಶೇಷಶಾಸ್ತ್ರಿಗಳವರು ಮೇಲ್ಕಂಡ ವಿವಾಹ ಶಾಸನದಿಂದ ಸನಾತನ ಧರ್ಮಕ್ಕೆ ಉಂಟಾಗಿರುವ ಲೋಪಗಳನ್ನೂ ಸನಾತನ ಧರ್ಮಾಭಿಮಾನಿಗಳಿಗೆ ಉಂಟಾಗಿರುವ ವ್ಯಥೆಯನ್ನೂ ಕುರಿತು ಶ್ರುತಿ, ಸ್ಮೃತಿ, ಆಯುರ್ವೇದ ಮುಂತಾದ್ದರ ಆಧಾರಗಳನ್ನು ಕೊಟ್ಟು ಉಪನ್ಯಾಸಮಾಡಿದರು.

ತರುವಾಯ ಸಭಿಕರಿಂದ ಈ ಕೆಳಗೆ ಕಂಡ ಠರಾವುಗಳು ಸರ್ವಸಮ್ಮತದಿಂದ ಮಾಡಲ್ಪಟ್ಟವು.

ಠರಾವುಗಳು.

1. ಭಗವಂತನು, ಭಾರತಭೂಮಿಯಲ್ಲಿ ಪ್ರಕೃತ ಸನಾತನ ಧರ್ಮಕ್ಕೆ ಪ್ರಾಪ್ತವಾಗಿರುವ ಘೋರ ಕಂಟಕವನ್ನು ಪರಿಹಾರಮಾಡುವದರ ಮೂಲಕ ಲೋಕಕಲ್ಯಾಣವನ್ನುಂಟುಮಾಡಲೆಂದು ಈ ಮಹಾಸಭೆಯವರು ಪ್ರಾರ್ಥಿಸುತ್ತಾರೆ.

2. ವಿಕ್ಟೋರಿಯಾ ಮಹಾರಾಜ್ಞಿಯವರೂ ಮತ್ತು ತದನಂತರ ಪ್ರಭುವರ್ಯರೂ ಸಹ ಮತವಿಚಾರಗಳಲ್ಲಿ ಹಾಟಸ್ಥ್ಯವನ್ನು ವಹಿಸುವೆವೆಂದು ಮಾಡಿದ ಘನತರವಾದ ಭರವಸೆಯ ಆಜ್ಞೆಯನ್ನು ಪ್ರಕೃತ ಇಂಡಿಯಾ ಸರ್ಕಾರದವರು ನಿರಾಕರಿಸಿ ಮಿ|| ಶಾರದರ ವಿವಾಹದ ಬಿಲ್ಲನ್ನು ಮಂಜೂರ್ಮಾಡಿದುದಕ್ಕಾಗಿ ಈ ಮಹಾಸಭೆಯವರು ಖಿನ್ನಮನಸ್ಕರಾಗಿ ಕಳವಳದಿಂದ ಸಂಕಟಪಡುತ್ತಾರೆ ಮತ್ತು ಪುನರ್ವಿಮರ್ಶೆಮಾಡಿ ಈ ವಿವಾಹ ಶಾಸನವನ್ನು "ವಿಟೋ" ಅಧಿಕಾರದಿಂದ ರದ್ದು ಮಾಡಬೇಕೆಂದು ಪ್ರಾರ್ಥಿಸುತ್ತಾರೆ.

3. ಶಾಸನ ಸಭೆಯು ರಚನೆಯಲ್ಲಿ ಮತಧರ್ಮಕ್ಕೆ ಸಂಬಂಧಪಟ್ಟ ಶಾಖೆಯಾಗಲೀ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಲೀ ನಾನಾ ಪಂಗಡಗಳ ಮತಾಚಾರ್ಯಪ್ರತಿನಿಧಿಗಳಾಗಲೀ, ಮತಾಚಾರ ವಿಷಯವಾಗಿ ಜನಗಳಿಂದ ಚುನಾಯಿಸಲ್ಪಟ್ಟ ಮೆಂಬರುಗಳಾಗಲೀ ಇಲ್ಲದೆ ಇರುವದ್ದರಿಂದ ಇಂಥಾ ವಿವಾಹ ಶಾಸನಾದಿಗಳನ್ನು ಮಾಡಲು ಇಂಡಿಯಾ ಶಾಸನ ಸಭೆಗಳಿಗೆ ಅಧಿಕಾರವಿಲ್ಲವೆಂದೂ ಈಗ ಹಾಗೆಮಾಡಿರುವುದು ಅಕ್ರಮವೆಂದೂ ಈ ಮಹಾಸಭೆಯವರು ತೀರ್ಮಾನಿಸಿರುತ್ತಾರೆ.

4. 1858 ನೇ ಇಸ್ವಿಯಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯವರಿಂದ ದಯಪಾಲಿಸಲ್ಪಟ್ಟಿರುವ ಪ್ರೊಕ್ಲಮೇಷನ್ ಪ್ರಕಾರ ಮತವಿಚಾರದಲ್ಲಿ ಹಾಟಸ್ಥ್ಯವನ್ನು ವಹಿಸುವಂತೆ ಇಂಡಿಯಾಸರ್ಕಾರದವರಿಗೆ ತಿಳಿಯಪಡಿಸಬೇಕೆಂದು ವಿನಯಪುರಸ್ಸರವಾದ ರಾಜಭಕ್ತಿಯಿಂದ ಶ್ರೀ ಸಾರ್ವಭೌಮರಲ್ಲಿಯೂ ಪಾರ್ಲಿಮೆಂಟ್ ಮಹಾಸಭೆಯವರಲ್ಲಿಯೂ ಈ ಸಭೆಯವರು ಪ್ರಾರ್ಥಿಸುತ್ತಾರೆ.

5. ಶಾಸನ ಸಭೆಗಳಲ್ಲಿ ಸನಾತನ ಧರ್ಮೋದ್ಧರಣಕ್ಕಾಗಿ ಶ್ರಮವಹಿಸಿ ಕೆಲಸಮಾಡಿದ ಮಿ|| ಎಂ. ಕೆ. ಆಚಾರ್ಯ ಮುಂತಾದ ಆಸ್ತಿಕ ಮಹಾಶಯರನ್ನು ಈ ಸಭೆಯವರು ಅಭಿನಂದಿಸುತ್ತಾರೆ.

6. ರಾಜಕೀಯ ವಿಷಯಗಳಲ್ಲಿ ಮಾತ್ರ ಪ್ರಾಧಾನ್ಯ ಗಿರಬಹುದಾದ ಕೆಲವು ಕಾಂಗ್ರೆಸ್ ವಗ್ಯೆರೆ ಮೆಂಬರುಗಳು ಹಿಂದೂ ಮತ್ತು ಮುಸಲ್ಮಾನ್ ಮಹಾಜನಾಭಿಪ್ರಾಯವನ್ನು ಪಡೆಯದೆ ಮತಾಚಾರ ವಿರುದ್ಧವಾಗಿ ಸರ್ವಧರ್ಮ ನಾಶಕರವಾಗಿರುವ ಈ ಶಾಸನವನ್ನು ಪುಷ್ಟೀಕರಿಸಿದ ವಿಷಯದಲ್ಲಿ ಈ ಮಹಾಸಭೆಯವರ ತಿರಸ್ಕಾರವಿದೆ.

7. ಸನಾತನ ಧರ್ಮಾಭಿಮಾನಿಗಳಾದ ಭಾರತೀಯರೆಲ್ಲರೂ ಮುಂದೆ ಶಾಸನ ಸಭಾ ಮೆಂಬರುತನಕ್ಕೆ ಓಟು ಕೊಡುವಾಗ್ಗೆ ಸನಾತನ ಧರ್ಮ ವಿರೋಧವಾದ ಸಲಹೆಗಳನ್ನು ಕೊಡುವದಿಲ್ಲವೆಂದು ಪ್ರಮಾಣ ಮಾಡಿಕೊಟ್ಟವರಿಗೆ ಮಾತ್ರ ಓಟುಗಳನ್ನು ಕೊಡಬೇಕೆಂದು ಈ ಮಹಾಸಭೆಯವರು ವಿನಯದಿಂದ ಪ್ರಾರ್ಥಿಸುತ್ತಾರೆ.

8. ಈ ಠರಾವುಗಳಲ್ಲಿ ಕಂಡ ಕಾರ್ಯಕ್ರಮಗಳನ್ನು ನೆರವೇರಿಸಲು "ಸನಾತನ ಧರ್ಮಸಂಜೀವಿನೀ ಸಭಾ" ಎಂಬ ಸ್ಥಾಯಿಸಮಿತಿಯನ್ನು ಕಲ್ಪಿಸಿ ಈ ಸಮಿತಿಗೆ ಈ ಮಹಾಸಭೆಯವರು ಅಧಿಕಾರ ಕೊಟ್ಟಿರುತ್ತಾರೆ.

ಪೌರಾಣಿಕ ಎಸ್. ಜಿ. ಶ್ರೀಕಂಠಶಾಸ್ತ್ರಿ,
ಮೈಸೂರು ಗೌ|| ಕಾರ್ಯದರ್ಶಿ
31-10-1929 ಸನಾತನ ಧರ್ಮಸಂಜೀವಿನೀ ಸಭಾ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನವೆಯುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಆದೆಂತಹ ಜ್ವರಗಳಾಗಲೀ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢಸಂಕಲ್ಪದಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [13]

ಕ್ರಯ 8 ಔನ್ಸಿಗೆ ರೂ. 1—8—0; 1/2 ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಮದ ಪತ್ರಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಅಪೂರ್ವಗ್ರಂಥ! ಅಪೂರ್ವಗ್ರಂಥ!!

ಮಹಾನಾರಾಯಣೋಪನಿಷತ್

(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುಣ್ಯಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು. **ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಉಬ್ಬಸ ಸಂಹಾರಿ.

ROWJEE'S

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಇದು ಹೆಚ್ಚಾಗಿ ತಂದೆತಾಯಿಗಳಿಂದ ಮಕ್ಕಳಿಗೆ ಬರುವದು ಸಹಜ. ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟಲು ಹಿಡಿದಂತೆ ಆಗಿ, ಈಗಲೋ, ಇನ್ನೊಂದು ಕ್ಷಣಕ್ಕೋ ಪ್ರಾಣಹೋಗುವಂತೆ ಕಾಣಿಸುವುದು. ಎದೆಯಲ್ಲಿ ಬೆಕ್ಕು ಕೂಗಿದಂತೆ ಗೊಯಿಗೊಯಿ ಎಂಬ ಶಬ್ದವು ಕೇಳಿಸುವುದು. ಹಾಸಿಗೆಯ ಮೇಲೆ ಮೈಚಾಚಿ ಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು ನಮ್ಮ **'ಉಬ್ಬಸಸಂಹಾರಿ'** ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವಹಾಗೆ ಶೀಘ್ರದಲ್ಲಿಯೇ ಗುಣವಾಗುವುದು. [3]

ಬಾಟ್ಲಿ 1ಕ್ಕೆ ರೂ. 2—8—0. ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣ ಬ್ರದರ್ಸ್, 323 ತಂಬುಚೆಟ್ಟಿಬೀದಿ, ಮದ್ರಾಸ್.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆಪನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಕಾಲಿಮುಕಂದ, ಮಧುಕಂದ, ಜಪಾಕಂದ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೀವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಬೋಕರೀಬೀಜ, ಪವೇಬೀಜ. ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಶಾಪತ್ರಿ, ಮದನಮಸ್ತ, ರಸನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಲಾ, ಬೀಜಬಂದ, ಹರಣಖೋರಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀಮಗಜ, ಆಲದಹಾಲು, ವಾಕೇರಿಭಾತಾ, ಗೋಕುರು, ಅಡವೀಬೆಂಡಿಬೀರು, ಅಮ್ಮತಸತ್ವ, ಇಸಬಗೋಳ ಭೂಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾ ಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, ಯಾಲಕ್ಕಿ, ಕಲ್ಲು ಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಜೀಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಸಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಪಿತ್ಥ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಪ್ಪನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [17]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲಿಯ ಶೀಶೆ ೧ ಕ್ಕೆ ೧೨ ಆಣೆ ಶಿಶು ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[30] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಐಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಪದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅತಿಮಹತ್ವದ ನೂತನ ಫೋಟೋ

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[10] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:— ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜ಼ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[19] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ ನೇ ನವಂಬರ್ ೧೯೨೯ [ಸಂಚಿಕೆ ೨೭.

ನೋಟೀಸ್.

ಶ್ರೀ ಶಿವಾನಂದಾಶ್ರಮ ಬೀರೂರು.

ನನ್ನಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಸ್ಕೃತ ಪಾಠಶಾಲೆಗೆ ವಿದ್ಯಾರ್ಥಿಗಳು ಬೇಕಾಗಿದೆ. ಸಾಹಿತ್ಯವನ್ನೋದಲು ಅಪೇಕ್ಷೆಯುಳ್ಳವರು ಈ ತಿಂಗಳ ಅಖೈರಿನ ಒಳಗಾಗಿ ಅರ್ಜಿಯಿಂದ ತಿಳುಹಿಸಿ ಹಾಜರಾಗತಕ್ಕದ್ದು. ವಿದ್ಯಾರ್ಥಿಗಳು ಕನ್ನಡ ಐದನೇ ಕ್ಲಾಸಿನವರೆಗಾದರೂ ಅಭ್ಯಾಸಮಾಡಿರಬೇಕು. ಬರುವಾಗ್ಗೆ ತಮ್ಮ ತಮ್ಮ ಗ್ರಾಮದ ಪ್ರಮುಖರಿಂದ ಯೋಗ್ಯತಾಪತ್ರಿಕೆಯನ್ನು ತೆಗೆದುಕೊಂಡು ಬರತಕ್ಕದ್ದು. ಕಾಲವು ಮೀರಿದರೆ ಸ್ಥಳವು ದೊರೆಯಲಾರದು.

ದೊಡ್ಡಮನೆ ಹಾಲಪ್ಪ

ಆನರರಿ ವೈಸ್‌ಪ್ರೆಸಿಡೆಂಟ್, ಬೀರೂರು.

ಪುರಾಣಮಹೋತ್ಸವ.

ಬೆಳವಣಿಕಿ.

ಸದರಿ ಗ್ರಾಮದ ಹಿರೇಮಠದಲ್ಲಿ ಗ್ರಾಮದ ಪ್ರಮುಖಜನರೆಲ್ಲರೂ ಕೂಡಿ ಹೇಮರಡ್ಡಿ ಮಲ್ಲಮಾಂಬೆಯ ಪುರಾಣಪ್ರವಚನವನ್ನು ಪ್ರಾರಂಭಮಾಡಿಸಿದರು. ಈ ಪುರಾಣವನ್ನು ಹಿರೇಮಠದ ವೇ|| ಗುರುದೇವಶಾಸ್ತ್ರಿಗಳು ಅರ್ಥಮಾಡಿ ಹೇಳುತ್ತಿದ್ದರು. ಕಲವಡಿ ಬಸವಯ್ಯನವರು ಗಾನರೂಪದಿಂದ ಓದುತ್ತಿದ್ದರು. ಗ್ರಾಮದ ಯಾವತ್ತೂ ಜನರು ಸದರಿ ಪುರಾಣವನ್ನು ಕೇಳುವದಕ್ಕೋಸ್ಕರ ಪ್ರತಿದಿವಸವೂ ಅತಿಭಕ್ತಿಯಿಂದ ಆಗಮಿಸುತ್ತಿದ್ದರು. ಪುರಾಣವು ಒಂದು ತಿಂಗಳವರೆಗೆ ಬಹು ವೈಭವದಿಂದ ನೆರವೇರಿತು. ಸಮಾಪ್ತಿಸಮಯದಲ್ಲಿ ಗ್ರಾಮವು ಶೃಂಗರಿಸಲ್ಪಟ್ಟು ಪುರಾಣಮಹೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಉತ್ಸವಕ್ಕೆ ಬೆಳವಣಿಕಿ, ಕಾಜಗೇರಿ, ಚಿಕ್ಕಮಣ್ಣೂರು, ಭಾಸಲಾಪುರ ಮೊದಲಾದ ಗ್ರಾಮಗಳ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಆಗಮಿಸಿದ್ದರು. ಜಗದಾಚಾರ್ಯರ ಸ್ತುತಿಗಳಿಂದಲೂ, ಜಯಜಯಕಾರಗಳಿಂದಲೂ, ಸದರಿ ಗ್ರಾಮವು ಸಾಕ್ಷಾತ್ ಶಿವಲೋಕದಂತೆ ಕಂಗೊಳಿಸುತ್ತಿತ್ತು, ಈ ಕಾರ್ಯದಲ್ಲಿ ಮ|| ರಾ|| ಗಂಗಪ್ಪಾ ಹುದ್ಲಿ, ಲಿಂಗಪ್ಪಾ ಹುದ್ಲಿ, ಶಿವಪ್ಪಾ ಸಜ್ಜನರ, ಮೊದಲಾದವರು ವಿಶೇಷ ಶ್ರಮವನ್ನು ವಹಿಸಿದರು. ಈ ಯಾವತ್ತೂ ಸದ್ಭಕ್ತರಿಗೆ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ

ವೀರನಗೌಡ ಪಾಟೀಲ, ಬೆಳವಣಿಕಿ.

ಈಶ್ವರಲೀಲೆಯು ಅಗಾಧವಾದದ್ದು.

ಬಬಲೇಶ್ವರ ಗ್ರಾಮದ ಸ್ಥಿತಿಯು ಮೇಲಿಂದಲೂ ಇಲ್ಲಿಯ ಜನರ ಸ್ಥಿತಿಯು ಮೇಲಿಂದಲೂ ಇಲ್ಲಿಯ ಸುಧಾರಣಾ ಹಾಗೂ ವಿದ್ಯೆ ಇವುಗಳ ಮೇಲಿಂದಲೂ ನೋಡಲಾಗಿ ಈ ಊರಲ್ಲಿ ಮಾಸಿಕಪತ್ರ ಹೊರಡುವದೂ ಪ್ರಜಾಮಿತ್ರವೆಂಬ ವಾರಪತ್ರ ಹೊರಡುವದೂ ಇದೂ ಅಲ್ಲದೆ ಅಚ್ಚುಕೂಟದ ವ್ಯವಸ್ಥೆಯಾಗುವದೂ ಕನಸಿನಲ್ಲಿ ಸಹ ಕಂಡ ಮಾತಲ್ಲ. ಇಂಥ ಪರಿಸ್ಥಿತಿಯಲ್ಲಿ ಮೇಲ್ಕಂಡ ವಿದ್ಯಾಸಾಧನದ ಸೌಲಭ್ಯಗಳು ದೊರೆತಮೇಲೆ ಈ ಊರ ಪುಣ್ಯಕ್ಕೆ ಎಣೆಯೇ ಇಲ್ಲ. ಹೊಸದಾಗಿ ಸ್ಥಾಪಿತವಾದ ಅಚ್ಚುಕೂಟದ ಅನಾವರಣಸಮಾರಂಭವು ವಿಜಯ ದಶಮಿ ಸುಮುಹೂರ್ತದಲ್ಲಿ ಇಲ್ಲಿಯ ಸುಪ್ರಸಿದ್ಧ ಶ್ರೀ ಶಾಂತವೀರಮಹಾಸ್ವಾಮಿಗಳವರ ಹಸ್ತದಿಂದ ಜರುಗಿತು. ಅಚ್ಚುಕೂಟಗೃಹವನ್ನು ಪ್ರವೇಶಿಸಿದೊಡನೆಯೇ ಎದುರಿಗೆ ಗೋಡೆಗೆ ತೂಗಹಾಕಿದ್ದ ವೃತ್ತಪತ್ರಗಳನ್ನು ನೋಡಿದರೆ ನಮ್ಮ ಕರ್ನಾಟಕದಲ್ಲಿ ಕನ್ನಡವಾಙ್ಮಯದಲ್ಲಿ ಪ್ರತಿವಾರ ಎಷ್ಟು ಪತ್ರಗಳು ಹೊರಡುತ್ತವೆಂಬುದು ಸ್ಪಷ್ಟವಾಗಿ ವ್ಯಕ್ತವಾಗುವಂತಿತ್ತು. ಎಡಗಡೆ ಬೆಂಚಿನ ಮೇಲೆ ಕರ್ನಾಟಕದಲ್ಲಿ ಹೊರಡುವ ಕನ್ನಡ ವಾಙ್ಮಯ ಸೇವೆಗೆ ಬದ್ಧಕಂಕಣವಾದ ಮಾಸಪತ್ರಿಕೆಗಳು ಸಾಲಾಗಿ ಇರಿಸಲ್ಪಟ್ಟಿದ್ದವು. ಸುಮಾರು ಎಂಟುವರೆ ಗಂಟೆಗೆ ಶ್ರೀ ಸ್ವಾಮಿಗಳು ಸಭಾಮಂಟಪವನ್ನು ಪ್ರವೇಶಿಸಿದರು. ಮೊದಲು ಶ್ರೀ ಬಸಪ್ಪಾ ಮಂಗಳವೇಡೆ ಇವರು ಸಭೆಯು ನೆರೆದ ಕಾರಣವನ್ನು ತಿಳಿಸಿದಮೇಲೆ ಪ್ರಜಾಮಿತ್ರನ ಮುಂದಾಳುಗಳಾದ ಶ್ರೀಯುತ ಗುಡಗುಂಟಿ ಇವರು ಸ್ವಾಗತಿದಾಯಕ ಭಾಷಣವನ್ನು ಮಾಡಿದರು. ಅವರು ವಾರಪತ್ರದ ಧ್ಯೇಯವನ್ನು ತಿಳಿಸಿ ಕರ್ನಾಟಕದ ಏಕೀಕರಣ, ಕನ್ನಡವಾಙ್ಮಯ ಇವುಗಳ ಸಲುವಾಗಿ ಪ್ರಯತ್ನ ಮಾಡಲಿಕ್ಕೆ ಸೂಚಿಸಿದರು. ಸರಕಾರದವರು ಹಿಂಥ ಕರ್ನಾಟಕಪ್ರಾಂತಗಳ ನಡುವೆ ಮಾಡುವ ಭೇದಾಭೇದವನ್ನು ತಿಳಿಸಿದರು. ಆ ಮೇಲೆ ಸುಪರವಾಯಿಜರ ಶ್ರೀ|| ಶೆಟ್ಟಿ ಇವರು ರಾಷ್ಟ್ರದ ಮೂಲವು ಹಳ್ಳಿಗಳೇ ಇರುವದರಿಂದ ಸದ್ಯಃ ಹಳ್ಳಿಗಳ ಸುಧಾರಣೆಯೇ ಯೋಗ್ಯವೆಂದು ತಿಳಿಸಿದರು. ಆ ಮೇಲೆ ಇಲ್ಲಿಯ ಇಂಗ್ಲಿಷ ಶಾಲೆಯ ಅಧ್ಯಾಪಕರಾದ ಮಿ|| ಹಿರೇಮಠ ಇವರು ಪ್ರತಿಯೊಂದು ಪ್ರಾಂತಕ್ಕೆ ಮುಂದಾಳುಗಳಂತೆ ಕರ್ನಾಟಕಕ್ಕಾದರೂ ಮುಂದಾಳುಗಳ ಅವಶ್ಯಕತೆಯನ್ನು ಸೂಚಿಸಿದರು. ಮತ್ತು ಏಕೀಕರಣದ ವಿಷಯವಾಗಿ ಪ್ರತಿಯೊಂದು ಹಳ್ಳಿಯೂ ಕೂಗಬೇಕಾಗಿ ಪ್ರತಿಪಾದಿಸಿದರು. ಆ ಮೇಲೆ ಅಧ್ಯಕ್ಷರು ವೃತ್ತಪತ್ರಗಳು ರಾಷ್ಟ್ರಪುರುಷನ ಮುಖಗಳೆಂದು ಸವಿಸ್ತಾರ ವರ್ಣಿಸಿ ವಿಜಯದಶಮಿ ಮುಹೂರ್ತದ ಮಹತ್ವವನ್ನು ತಿಳಿಸಿದರು.

ಪ್ರಜಾಮಿತ್ರನ ಸಂಪಾದಕರಾದ ಶ್ರೀಯುತ ಬಿ. ಸಿ. ಪುರಾಣಿಕ ಇವರು ಅಧ್ಯಕ್ಷರ ಆಭಾರವನ್ನು ಮನ್ನಿಸಿದ ಮೇಲೆ ಸಭಾ ವಿಸರ್ಜನೆಯಾಯಿತು.

ಓರ್ವ ಪ್ರೇಕ್ಷಕ.

ಸ್ವೀಕಾರ.

ಮ|| ರಾ|| ಹೊನ್ನಾಳಿ ನಂದಿ ಮುರಗಿ ರುದ್ರಪ್ಪನವರ ಪುತ್ರ ಚನ್ನಬಸವಪ್ಪನವರ ಪತ್ನಿ ಸೌ|| ಚನ್ನಮ್ಮನಿಗೆ ಪ್ರಾಪ್ತವಾಗಿದ್ದ ಪ್ಲೇಗುರೋಗವು ಜಗದಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ನರಸಿಂಹರಾಜಪುರದ ಮ|| ರಾ|| ಬಿ.೦. ಸಿ. ಶಾಂತಪ್ಪಶೆಟ್ಟರವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೊಟ್ಟೂರು ನಿವಾಸಿಗಳಾದ ವೇ|| ಮಿರಾಳಘಟ್ಟದ ಮಠದ ಜಾಗಟಗೇರಿ ಚನ್ನವೀರಪ್ಪಯ್ಯನವರ ಧರ್ಮಪತ್ನಿಯವರಾದ ಶ್ರೀಮತಿ ಚನ್ನವೀರಮ್ಮನವರು ಆಶ್ವಯುಜ ಬಹುಳ ೧೪ ಗುರುವಾರ ದಿವಸ ಶಿವಾಧೀನರಾದ ಸಮಯದಲ್ಲಿ ಜಗದಾಚಾರ್ಯರ ನಾಮಸ್ಮರಣಪೂರ್ವಕ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ವೇ|| ದೊಡ್ಡವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗಿನಲ್ಲಿರುವ ವೇ|| ಕಲ್ಲುಮಠದ ಕರಿಬಸವಯ್ಯನವರ ಧರ್ಮಪತ್ನಿ ಸೌ|| ಗುರುಬಸವ್ವನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಜುಕ್ತಿಮಠದ ಅಯ್ಯಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಆದವಾನಿ ತಾಲೂಕು ಹಣವಾಳು ಗ್ರಾಮದ ಮ|| ರಾ|| ಪಾಟೀಲ ಸಿದ್ಧಲಿಂಗನಗೌಡರು ತಮ್ಮ ಪುತ್ರಿ ಸೌ|| ಶಂಕರಮ್ಮನ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ|| ಹುಬ್ಬಳ್ಳಿ ತಾಲೂಕು ಪಾಲೀಕೊಪ್ಪದ ಹಿರೇಮಠದಲ್ಲಿ ಜಗದಾಚಾರ್ಯರ ಭಾವಚಿತ್ರೋತ್ಸವ ಪೂರ್ವಕ ದೀಪಾವಳೀ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಮ|| ರಾ|| ಕೂಡಲಸಂಗಪ್ಪನವರು 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ—

ಚೀನಾದ ಪೆಕಿಂಗಿನಲ್ಲಿ ಲೀಚಿಂಗ್ ಯ್ಯುಂ ಎಂಬ 250 ವರ್ಷ ವಯಸ್ಸಿನ ಒಬ್ಬ ಮುದುಕನಿರುವನಂತೆ! ಪ್ರೊಫೆಸರು ವ್ಹೂ ಎಂಬುವರು ಇವನನ್ನು ಕಂಡು ಹಿಡಿದಿರುವರು, ಚಿಂಗನ ಕುಟುಂಬದ ದಾಖಲೆಯ ಮೇರೆ ಅವನು 1677 ನೆಯ ವರ್ಷದಲ್ಲಿ ಹುಟ್ಟಿದನು. 23 ಜನ ಪತ್ನಿಯರನ್ನು ವರಿಸಿ 24 ನೆಯ ಪತ್ನಿಯೊಂದಿಗೆ ಈಗ ಸಂಸಾರಮಾಡುತ್ತಿರುವನು. ಈಗಲೂ ಆತನು ಗಟ್ಟಿಮುಟ್ಟಾಗಿ ಓಡಾಡುತ್ತಿರುವನು. ಮಾತೂ ದೃಷ್ಟಿಯೂ ನೆಟ್ಟಗಿರುವವು. ಚಿಂಗನು ತನ್ನ ಚಿಕ್ಕ ವಯಸ್ಸಿನಲ್ಲಿ ವೈದ್ಯನಾಗಿದ್ದು, ಕೆಲವು ಮೂಲಿಕೆಗಳನ್ನು ಹುಡುಕಲು ಯೂನಾನ್ ಪರ್ವತಕ್ಕೆ ಹೋಗಿದ್ದಾಗ ಮನುಷ್ಯರ ಶರೀರದಲ್ಲಿ ಅದ್ಭುತ ಶಕ್ತಿಯನ್ನುಂಟುಮಾಡುವ ಒಂದು ವಿಚಿತ್ರಮೂಲಿಕೆಯನ್ನು ಪಡೆದನಂತೆ! ಇಗ್ಗೆ ನೂರು ವರ್ಷಗಳ ಮೊದಲು ನಡೆದ ವಿಷಯಗಳು ಈಗ ಅವನಿಗೆ ಚೆನ್ನಾಗಿ ಸ್ಮರಣೆಯಲ್ಲಿರುವವಂತೆ! ಈಗ ಅವನು ಮರಣವನ್ನು ನಿರೀಕ್ಷಿಸುತ್ತ ಕಾಲಕಳೆಯುತ್ತಿರುವನು.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ದಸರಾಮಹೋತ್ಸವ.

ಹೊಸಕಟ್ಟಿ.

"ಮಹಾಜನೋಯೇನ ಗತಃಸಪಂಥಾಃ" ಎಂಬಂತೆ ಪ್ರಾಚೀನಕಾಲದ ಆರ್ಯರು ತೋರಿಸಿದ ದಾರಿಯಿಂದಲೇ ಮುಂದುಮುಂದಿನ ಜನರು ನಡೆಯಬೇಕಾಗಿದೆ. ಯಾವ ದಾರಿಯಿಂದ ಅಸಾಧಾರಣ ಜ್ಞಾನವುಳ್ಳ ಮಹನೀಯರು ನಡೆದರೋ, ಯಾವ ಮಾರ್ಗದಿಂದ ನಡೆದರೆ ಯಾರಿಗೂ ಎಷ್ಟು ತೊಂದರೆಯಾಗುವದಿಲ್ಲವೋ, ಯಾವ ಪದ್ಧತಿಯಿಂದ ವರ್ತಿಸಿದರೆ ಸರ್ವಮಾನವರು ಇಹದಲ್ಲಿ ಭೋಗೈಶ್ವರ್ಯಗಳನ್ನು ಹೊಂದುವದಲ್ಲದೆ ಪರದಲ್ಲಿ ಮುಕ್ತಿಯನ್ನೈದುವರೋ ಅದೇ ಉತ್ತಮಹಾದಿಯಲ್ಲದೇ ಇತರಥಾ ಇಲ್ಲ. ಮಾನವರು ಪುರಾತನರು ಹಾಕಿಕೊಟ್ಟ ಮಾರ್ಗದಿಂದ ನಡೆಯುದಿದ್ದ ಪಕ್ಷದಲ್ಲಿ ಸುಖಶಾಂತಿಗಳನ್ನು ಹೊಂದುವದೆಲ್ಲಿ? ಹಿರಿಯರು ಹಾಕಿಕೊಟ್ಟ ಕಟ್ಟು ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಿಗೆ ಸಮಾನವಾಗಿರುವದು. ಸನ್ಮಾರ್ಗದಿಂದ ನಡೆಯುವ ಮನುಷ್ಯನಿಗೆ ಲೌಕಿಕ, ಪಾರಮಾರ್ಥಿಕ ವಿಷಯದಲ್ಲಿ ಯಾವ ಪ್ರಕಾರದ ಕೊರತೆಯೂ ಇಲ್ಲವೆಂದು ಅನೇಕಾನೇಕ ಗ್ರಂಥಗಳು ಘಂಟಾಘೋಷಮಾಡುತ್ತಲಿರುವವು. ಮನುಷ್ಯನಾದವನು ಜ್ಞಾನಿಯಾಗಿ ನಡೆದರೆ ಕಾಮಧೇನು ಕಲ್ಪವೃಕ್ಷಗಳಿಂದ ಹೊಂದಬೇಕಾದ ನಶ್ವರಫಲಗಳಿಗಿಂತಲೂ ಮಿಗಿಲಾದ ಅಕ್ಷಯಫಲವನ್ನು ಪಡೆಯಬಹುದು. ಇದಕ್ಕೆ ಉದಾಹರಣೆಯನ್ನು ಬೇರೆ ಹುಡುಕುವ ಅವಶ್ಯಕತೆಇಲ್ಲ. ಶ್ರುತಿ ಸ್ಮೃತಿಗಳಲ್ಲಿ ಹೇಳಲ್ಪಟ್ಟ ವಾಕ್ಯಗಳೂ ಪುರಾಣಕಾವ್ಯೇತಿಹಾಸಗಳಲ್ಲಿ ಕಂಡುಬರುವ ಮಹಾಪುರುಷರ ಚರಿತ್ರಗಳೂ ಕಂಗೊಳಿಸುತ್ತಿರುವವು. ಕಣ್ಣುಗಳಿಲ್ಲದವನು ಸನ್ಮಾರ್ಗವಂ ಬಿಟ್ಟು ಅಡ್ಡದಾರಿಯಂ ತುಳಿದು ಕಲ್ಲುಮುಳ್ಳುಗಳಿಂದೊದಗಿದ ಸಂಕಟಗಳಿಗೆ ಹೇಗೆ ಗುರಿಯಾಗುವನೋ? ಹಾಗೆಯೇ ಜ್ಞಾನಹೀನನಾದವನು ವೇದಾದಿಗಳುಕ್ತವಾದ ಸರಣಿಯನ್ನನುಸರಿಸದಿದ್ದರೆ ಇಹಪರಗಳಲ್ಲಿ ಅನುಕ್ರಮವಾಗಿ ಮಹಾಘೋರ ಸಂಕಟ ನರಕಗಳಲ್ಲಿ ಬೀಳಬೇಕಾಗುತ್ತದೆಂದು ಬೇರೆ ಬರೆಯಲು ಕಾರಣವಿಲ್ಲ. ಸನ್ಮಾರ್ಗದಿಂದ ನಡೆಯುವದು ಮೊದಲು ಮೊದಲು ಬಹು ಕಠಿಣವಾಗಿ ಪರಿಣಮಿಸಿದರೂ ಉತ್ತರಕಾಲದಲ್ಲಿ ಮಾತ್ರ ಉತ್ತಮ ಫಲವು ದೊರೆಯುತ್ತದೆ. ಕಹಿಯಾದ ಔಷಧವನ್ನು ಸ್ವೀಕರಿಸಿದಲ್ಲದೇ ರೋಗನಿವಾರಣೆಯಾಗುವದು? ಔಷಧವು ಸಿಹಿಯಾಗಿರಬೇಕು ರೋಗವೂ ನಾಶವಾಗಬೇಕೆಂದರೆ ಹೇಗೆ? ವಸ್ತುತಃ ವಿಚಾರಮಾಡಿದರೆ ಸನ್ಮಾರ್ಗಗಾಮಿಯು ದುರಾಚಾರಿಯಾಗುವದೂ ದುರಾಚಾರಿಯು ಸನ್ಮಾರ್ಗಿಯಾಗುವದೂ ಪರಸ್ಪರ ಕಷ್ಟಸಾಧ್ಯಗಳಾಗಿವೆ. ಸನ್ಮಾರ್ಗವರ್ತನವು ಅನೇಕ ಧನಕನಕರತ್ನಾದಿಗಳಿಂದ ಕೂಡಿದ ಭೂಮಿಯಂತಿರುವದು. ಆದರೆ ಅದರಲ್ಲಿಯ ತತ್ವಗಳು ಕೇವಲ ತೊಗಲಿನ ಕಣ್ಣಿಗೆ ಗೋಚರಗಳಾಗುವದಿಲ್ಲ. "ಭಾಗ್ಯಹೀನಾ ನ ಪಶ್ಯಂತಿ ಬಹುರತ್ನಾಂ ವಸುಂಧರಾಂ" ಭೂಮಿಯಲ್ಲಿರತಕ್ಕ ರತ್ನಾದಿಗಳು ಕೇವಲ ಚರ್ಮ ಚಕ್ಷುಸ್ಸುಗಳಿಗೆ ಗೋಚರಿಸದೆ ಹೇಗೆ ಅಂಜನಸಿದ್ಧಿಯಿಂದ ಕಂಡುಬರುವವೋ ಹಾಗೆಯೇ ಸನ್ಮಾರ್ಗಭೂಮಿಯಲ್ಲಿರುವ ಫಲರತ್ನಗಳು ಜ್ಞಾನಾಂಜನದಿಂದ ಕಂಗೊಳಿಸುವವು. "ಆರ್ಯಾವರ್ತಃಪುಣ್ಯಭೂಮಿ ರ್ಮಧ್ಯಂವಿಂಧ್ಯ ಹಿಮಾಗಯೋಃ" ಎಂಬ ವಾಕ್ಯದಂತೆ ವಿಂಧ್ಯ ಮತ್ತು ಹಿಮಾಲಯಪರ್ವತಗಳ ಮಧ್ಯಪ್ರಾಂತವು ಪುಣ್ಯಭೂಮಿಯೆಂತಲೂ ಶಿವನ ಆವಾಸಸ್ಥಾನವಾದ್ದರಿಂದ ಭಾರತಭೂಮಿ (ಭರತಖಂಡ) ವೆಂತಲೂ ಇದರಲ್ಲಿರುವವರೆಲ್ಲರೂ ಭಾರತೀಯರೆಂತಲೂ (ಶಿವನ ಸಂಬಂಧಿಗಳಾದ ಸೇವಕರೆಂತಲೂ) ಪ್ರಸಿದ್ಧವಿದೆ ಅಲ್ಲದೆ ಭಾರತೀಯರಿಗೆ ಶಿವನು ಮಾಡಿದ, ಅವನ ಭಕ್ತರುಮಾಡಿದ ಅಸಂತಾನಂತ ಮಹತ್ವಗಳನ್ನು ಸ್ಫುಟವಾಗಿ ತೋರಿಸುವ ಎಷ್ಟೋ ಉತ್ಸವದಿವಸ (ಹಬ್ಬ) ಗಳು ಸಂಬಂಧಿಸಿರುವವಲ್ಲದೆ ಆಸ್ತಿಕರಾದ ಭಾರತೀಯರು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿ ಶಿವನ ಕೃಪೆಗೆ ಪಾತ್ರರಾಗಿ ಆಗುತ್ತಲಿರುವರು. ಅತಏವ ಇದೇ ವೃದ್ಧಾಚಾರವನ್ನನುಸರಿಯೇ ಭಾರತಭೂನಿವಾಸಿಗಳಿಂದನುಷ್ಠಿಸಲ್ಪಡಬೇಕಾದ ಉತ್ಸವಗಳಲ್ಲಿ ಒಂದಾದ, ಶಿವಶಕ್ತಿಯ ಮಹಿಮಾತಿಶಯ ಪ್ರತಿಪಾದಕವಾದ ವಿಜಯದಶಮಿ ಮಹೋತ್ಸವವು ಜಿ|| ಧಾರವಾಡ ತಾ|| ಶಿಗ್ಗಾವಿಪೈಕಿ ಹೊಸಕಟ್ಟಿಯಲ್ಲಿ ಬಹು ವೈಭವದಿಂದ ಸಕಲ ಭಕ್ತಮಾಹೇಶ್ವರರಿಂದ ನೆರವೇರಿಸಲ್ಪಟ್ಟಿತೆಂದು ತಿಳುಹಿಸಲು ಪರಮ ಸಂತೋಷವೆನಿಸುತ್ತದೆ. ಇಲ್ಲಿಯ ಪಾಟೀಲರಾದ ಬಸವನಗೌಡರು ಆ|| ಶು|| ಪ್ರತಿಪದಿಯ ದಿವಸ ಪಾಲಿಕೊಪ್ಪದ ಬೃಹನ್ಮಠಾಧೀಶ ಷ|| ಬ್ರ|| ಷಟ್ಸ್ಥಲಬ್ರಹ್ಮ ಶ್ರೀ ಗಂಗಾಧರ ಶಿವಾಚಾರ್ಯರನ್ನು ಬರಮಾಡಿಕೊಂಡು ತಮ್ಮ ಮನೆಯಲ್ಲಿಯೇ ಸ್ವತಃ ಖರ್ಚಿನಿಂದ ಶಿವಶಕ್ತಿಯಾದ ಭವಾನಿಯ ಭವ್ಯಪರಾಕ್ರಮ ಪ್ರತಿಪಾದಕವಾದ "ದೇವೀ ಮಾಹಾತ್ಮ್ಯಂ" ಎಂಬ ಪುರಾಣವನ್ನು ಪ್ರಾರಂಭಿಸಿದರು. ಸದರಿ ಪುರಾಣಶ್ರವಣದಲ್ಲಿ, ಸಾಮಾಜಿಕ, ಧಾರ್ಮಿಕ, ನೈತಿಕವಿಷಯಗಳನ್ನು ಪ್ರತಿಪಾದಿಸುತ್ತಿದ್ದರು. ಪ್ರತಿನಿತ್ಯದಲ್ಲಿಯೂ ಸಕಲ ಭಕ್ತಮಾಹೇಶ್ವರರಿಂದಲೂ ಶ್ರೀಗಳ ಪಾದಪೂಜೆಯು ಬಹು ಭಕ್ತಿಯಿಂದಲೂ ದೀಪಾವಲ್ಯಾದಿ ಪೂಜೋಪಕರಣಗಳಿಂದಲೂ ವೈಭವವಿಶೇಷದಿಂದ ನೆರವೇರಿಸಲ್ಪಡುತ್ತಿತ್ತು. ಬರಹೋಗುವ ಜನರ ಭೋಜನದ ವ್ಯವಸ್ಥೆಯನ್ನು ಪಾಟೀಲರೊಬ್ಬರೇ ನೋಡಿಕೊಳ್ಳುತ್ತಿದ್ದರು. ಈ ಪ್ರಕಾರವಾಗಿ ನಡೆದ ಪುರಾಣೋತ್ಸವವು ಆ|| ಶು|| ೯ ಶನಿವಾರ ದಿವಸ ಸಮಾಪ್ತಿಗೊಂಡಿತು. ಸಾವಿರಾರು ಜನರಿಗೆ ಅನ್ನಸಂತರ್ಪಣೆಯು ಮಾಡಲ್ಪಟ್ಟಿದಲ್ಲದೆ ಮಾಹೇಶ್ವರರಿಗೆ ಶಕ್ತ್ಯನುಸಾರ ದಕ್ಷಿಣೆಯನ್ನಿತ್ತರು. ಮರುದಿವಸ ಅಂದರೆ ಆ|| ಶು|| ವಿಜಯದಶಮಿ ಆದಿತ್ಯವಾರದ ಪ್ರಾತಃಕಾಲಕ್ಕೆ ಊರಲ್ಲಿಯ ಆಬಾಲವೃದ್ಧರು ಮಂಗಲಸ್ನಾನವನ್ನಾಚರಿಸಿ ಸ್ವಾಮಿಗಳ ಸನ್ನಿಧಿಯಂ ಸೇರಿ ರುದ್ರಾಭಿಷೇಕ ಪಾದಪೂಜಾಪಾದೋದಕ ಪ್ರಸಾದಸ್ವೀಕಾರಾದಿಗಳನ್ನು ಮುಗಿಸಿದನಂತರ ಮಂಗಲವೇಷಾಲಂಕೃತರಾಗಿ ಸದರಿ ಸ್ವಾಮಿಗಳನ್ನು ಶೋಭಾವಿಶೇಷವಿಶಿಷ್ಟವಾದ ಪಾಲಕಿಯಲ್ಲಿ ಆಚಾರ್ಯರ ಜಯಘೋಷಕರತಾಡನಗಳೊಡನೆ ಮೂರ್ತಮಾಡಿಸಿದರು. ಅನೇಕ ವಾದ್ಯಗಳಿಂದಲೂ, ಛತ್ರಚಾಮರಾದಿಗಳಿಂದಲೂ ವಿಶ್ವಲಾಪುರ, ಗುರನಳ್ಳಿ, ರಾಮನಕೊಪ್ಪ, ತಿರುಮಲಕೊಪ್ಪ, ಪಾಲೀಕೊಪ್ಪ, ಈ ಊರುಗಳ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘಗಳಿಂದಲೂ, ಸುವಾಸಿನಿಯರ ಆರತಿ, ಶೋಭನಪದಗಳಿಂದಲೂ, ಪಾಲಕಿ ಮೆರವಣಿಗೆಯು ಊರಲ್ಲಿ ಹಾಯ್ದು ನಿಯಮಿತಸಮಯಕ್ಕೆ ಶಮೀಮಂಟಪಕ್ಕೆ ಮುಟ್ಟಿತು. ವೇ|| ವೀರಬಸವಶರ್ಮ ಬೃಹನ್ಮಠ ಪಾಲೀಕೊಪ್ಪ ಇವರ ಕಡೆಯಿಂದ ವಿಧಿಪ್ರಕಾರ ಶಮೀಪೂಜೆಯಾದನಂತರ ಸರ್ವರೂ ಸ್ವಾಮಿಗಳ ಸನ್ನಿಧಿಯಲ್ಲಿ ಸದಕ್ಷಿಣಶಮಿಯನ್ನರ್ಪಿಸಿ ಆಶೀರ್ವಾದ ಪಡೆದು ಅಲ್ಲಿಯೇ ಸಭೆಯ ವ್ಯವಸ್ಥೆಯನ್ನು ಮಾಡಿದ್ದರಿಂದ ಬಹುಮತದ ಪ್ರಕಾರ ಶ್ರೀಗಳೇ ಅಧ್ಯಕ್ಷತೆಯನ್ನು ವಹಿಸಿ "ವಿಜಯದಶಮಿಮಹತ್ವ" "ಸ್ವಾಭಿಮಾನ ಪಕ್ಷ" ಈ ವಿಷಯಗಳನ್ನೊಡಗೊಂಡು ೧|| ಘಂಟೆಯಪರ್ಯಂತ ಸರ್ವರೂ ತಲೆದೂಗುವಂತೆ ಬೋಧಿಸಿದ ಮೇಲೆ ಆಚಾರ್ಯರ ಜಯಘೋಷನಾದದೊಡನೆ ಸಭೆಯು ವಿಸರ್ಜಿಸಲ್ಪಟ್ಟು ಪುನಃ ಉತ್ಸವಪೂರ್ವಕ ಹಿಂದಿರುಗಿ ಊರಿನವರರ್ಪಿಸಿದ ಉಪಚಾರಗಳನ್ನು ಸ್ವೀಕರಿಸುತ್ತ ಪಾಟೀಲರ ಮನೆಗೆ ತಲ್ಪಿ ಉತ್ಸವದನಿಮಿತ್ತವಾಗಿ ಬಂದ ಸಾವಿರಾರು ಜನರೊಡನೆ ಸದರಿ ಪಾಟೀಲರ ಮನೆಯಲ್ಲಿಯೇ ಶಿವಪೂಜಾದಿಗಳನ್ನು ತೀರಿಸಿಕೊಂಡು ಸಕಲ ಪರಿವಾರದೊಡನೆ ದಾರಿಯಲ್ಲಿ ಹತ್ತುವ ತಿರುಮಲಕೊಪ್ಪ ಮೊದಲಾದ ಊರಜನರ ಸತ್ಕಾರಗಳನ್ನು ಸ್ವೀಕರಿಸುತ್ತ ಪ್ರಾಥಮಿಕ ಶಾಲಾಸ್ಥಾಪನೆಗೋಸ್ಕರ ತವಕಪಡುತ್ತಿರುವ ಪಾಲಿಕೊಪ್ಪದ ಜನರ ಆಗ್ರಹದ ಮೇರೆಗೆ ಸದರಿ ಕಾರ್ಯವನ್ನು ನೆರವೇರಿಸುವದಕ್ಕೋಸ್ಕರ ಸ್ವಗ್ರಾಮಕ್ಕೆ ತೆರಳಿದರು. ವೀರಶೈವ ಮಹಬಾಂಧವರೇ ಏಳಿರಿ? ವೀರಗರ್ಜನೆಯನ್ನು ಮಾಡಿರಿ? ದುರುಪದೇಶಕರ ದುರಾಲಾಪಗಳನ್ನು ಪಾದಾಕ್ರಮಣದಿಂದ ಪಾತಾಳಕ್ಕೊತ್ತಿರಿ? ಗುರುವರ್ಗಕ್ಕೆ ಶರಣುಹೊಗಿರಿ? ಅಜ್ಞಾನಪಟಲವನ್ನು ದೂರವಾಗಿ ಹಾರಿಸಿರಿ? ಭರತಭೂಮಿಯನ್ನುದ್ಧರಿಸಿರಿ? ಮುಕ್ತಿಪಟ್ಟಣವನ್ನು ನಿರಾಯಾಸವಾಗಿ ಸೇರಿರೆಂದು ಒತ್ತಾಯದಿಂದ ತಿಳಿಸುವ,

ಸ್ಕೂಲಮಾಸ್ತರ ಹೊಸಕಟ್ಟಿ.

ನೂತನ ಸ್ಕೂಲಿನ ಪ್ರವೇಶೋತ್ಸವ.

ಇಂಕಂಪ್ಲೀಟ್ ಮಿಡಲ್‌ಸ್ಕೂಲ್, ಕೊಣಬೇವು

ಈ ಸ್ಕೂಲ್ ಕಟ್ಟಡವು ಪೂರೈಸಿದನಂತರ ಗ್ರಾಮಸ್ಥರು ಸ್ಕೂಲನ್ನು ಅದರ ಆವರಣವನ್ನೂ ಮಂಟಪಾದಿಗಳಿಂದ ಅಂದಗೊಳಿಸಿ ತಳಿರುತೋರಣಪತಾಕೆಗಳಿಂದ ಶೃಂಗರಿಸಿ ಅತ್ಯುತ್ಸಾಹದಿಂದ ನಿರೀಕ್ಷಿಸುತ್ತಿದ್ದರು. ಕಮಿಟಿಯವರ ಆಹ್ವಾನಪತ್ರಿಕೆಯಮೇರೆಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರು, ಇಂಜಿನಿಯರ್‌ರವರು, ಅಮಲ್ದಾರ್‌ರವರು, ರೇಂಜ್ ಅ|| ಇನ್ಸ್‌ಪೆಕ್ಟರವರು, ತುರುವನೂರು ಮತ್ತು ಚಿತ್ರದುರ್ಗದ ರೆವಿನ್ಯು ಇನ್||ರವರು, ಪೋಲೀಸ್‌ಅಫೀಸ್‌ರವರೇ ಮೊದಲಾದ ಅಧಿಕಾರಿವರ್ಗದವರೂ, ಡಿ|| ಬೋರ್ಡ್, ವೈ|| ಪ್ರೆಸಿಡೆಂಟ್ ಶ್ರೀಯುತ ವೀರಭದ್ರಪ್ಪನವರು ಬಳಗೋಡಿನ ಶ್ರೀಮಂತ ದುಮ್ಮಿ ತಿಪ್ಪೆ ರುದ್ರಪ್ಪನವರು ಡಿ|| ಅ|| ಮೆಂಬರ್ ಸಾಸಲಂ ಕೃಷ್ಣಪ್ಪನವರು ವಗೈರೆ ಪ್ರಸಿದ್ಧ ಪುರುಷರೂ ಚಿಕ್ಕಗ್ಗಿನಹಳ್ಳಿ ಪ|| ಕರಿಯಣ್ಣಗೌಡರು, ತುರುವನೂರು ಪ|| ಮುಷ್ಟೂರಪ್ಪನವರು, ಕಂಟ್ರಾಕ್ಟರ್ ಅಯ್ಯಣ್ಣಗೌಡರು ಬಾಗೇನಹಳ್ಳಿ, ವಿ. ಎಂ. ಚಂದ್ರಶೇಖರಯ್ಯನವರೇ ಮೊದಲಾದ ಪ್ರಾಂತೀಯ ಪ್ರಮುಖರು ಆಗಮಿಸಿದ್ದರು. ಡ|| ಡೆ|| ಕಮಿಷನರ್ ಸಾಹೇಬರವರ ಸವಾರಿಯು ದಯಮಾಡಿಸಲೊಡನೆ ಮಂಗಳವಾದ್ಯಗಳು ಭೋರ್ಗರೆದುವು. ಮೆಂಬರುಗಳು ಸುಖಾಗಮನವನ್ನು ಬಯಸಿ ಸ್ವಾಗತವನ್ನು ಆಚರಿಸಿದರು. ಮಳೆಯ ಆಧಿಕ್ಯದಿಂದ ಅಲಂಕರಿಸಿದ್ದ ಮಂಟಪದಲ್ಲಿ ಸಭೆಯು ನೆರೆಯದೆ ಹೋದದ್ದು ಪ್ರೇಕ್ಷಕರಿಗೆ ವಿಷಾದಕರವಾಗಿದ್ದರೂ ಸ್ಕೂಲ್ ಕಟ್ಟಡದಲ್ಲಿಯೇ ಸಭೆಯು ಪ್ರಾರಂಭವಾಯಿತು. ಸಭಿಕರ ಕೋರಿಕೆಯ ಮೇರೆಗೆ ಡ|| ಡೆ|| ಕಮಿಷನರ್ ಮ|| ರಾ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರ್ಯರವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ವಿಲೇಜ್ ಕಮಿಟಿ ಛೇರ್ಮನ್ ಕೊಂತೆ ತಿಪ್ಪಯ್ಯನವರು ಹಾರತುರಾಯಿಗಳನ್ನೂ, ಕಾರ್ಯದರ್ಶಿಗಳಾದ ತುರುವನೂರು ಮಿ|| ಸ್ಕೂಲ್ ಅ|| ಮಾ|| ಸೀತಾರಾಮಯ್ಯನವರು ಪ್ರೋಗ್ರಾಂ ಟಿಕ್ಕೆಟ್ಟುಗಳನ್ನು ಒಪ್ಪಿಸಿದರು. ವಿದ್ಯಾರ್ಥಿಗಳಿಂದ ದೇವತಾಸ್ತುತಿಯು ಶ್ರೀಮನ್ಮಹಾರಾಜರವರ ಪ್ರಾರ್ಥನೆಯು ಆಚರಿಸಲ್ಪಟ್ಟಿತು. ಅನಂತರ ವಿದ್ಯಾರ್ಥಿಗಳು ವಿವಿಧವಿನೋದಗಳನ್ನೂ, ಹಾಡುಗಾರಿಕೆಗಳನ್ನೂ ನಡೆಯಿಸಿದರು. ಸ್ಕೂಲಿನ ವರದಿಯನ್ನು ವಿ. ಎಂ. ಚಂದ್ರಶೇಖರಯ್ಯನವರು ಗಂಭೀರವಾಗಿ ಓದಿದರು. ಈ ವಿಜ್ಞಾಪನಾಪತ್ರಿಕೆಯು ಸಂಕ್ಷೇಪವಾಗಿದ್ದರೂ ಸ್ಕೂಲಿನ 50 ವರ್ಷಗಳ ಆದೀತವನ್ನೂ ಇದರ ಅಭಿವೃದ್ಧಿಗೆ ಕಾರಣರಾದ ಹೆ|| ಮ|| ಎಂ. ಗುರುಬಸಯ್ಯನವರು ಈಗಿನ ಹೆ|| ಮ|| ಐ|| ವಿರುಪಾಕ್ಷಯ್ಯನವರು ಆಯಾಯ ಕಾಲದ ಅ|| ಮಾ|| ಗಳು ಮತ್ತು ಇಲಾಖಾ ಅಧಿಕಾರಿಗಳು ಸ್ಕೂಲ್ ಕಟ್ಟಡಕ್ಕೆ ಸೈಟನ್ನು ಧರ್ಮಾರ್ಥವಾಗಿ ಕೊಟ್ಟ ಗಾಡರ ದೊಡ್ಡ ಪುಟ್ಟಪ್ಪನವರು ಕಂಟ್ರಾಕ್ಟರ್ ಜಿ. ಕಲ್ಲಪ್ಪನವರು, ಇಂ|| ಇಲಾಖಾ ಅಧಿಕಾರಿಗಳು ಈಗಿನ ಕಾರ್ಯಮಂಡಲಿಯ ಅಧ್ಯಕ್ಷರು ಮೊದಲಾದವರ ಆಭಾರಮನ್ನಣೆಯು ಸರ್ಕಾರದವರಲ್ಲಿ ಕೆಲವು ಕೋರಿಕೆಗಳನ್ನೊಳಗೊಂಡು ಒಳ್ಳೆಯ ಸ್ಫೂರ್ತಿದಾಯಕವಾಗಿತ್ತು. ಅನಂತರ ಅಧ್ಯಕ್ಷರು ಇವರ ವಿಜ್ಞಾಪನಾಪತ್ರಿಕೆಯ ವಿಚಾರಗಳೆಗೆಲ್ಲ ಸಾವಧಾನದಿಂದ ಹಸನ್ಮುಖಿಗಳಾಗಿ ಉತ್ತರಗಳನ್ನು ಅಪ್ಪಣೆಕೊಡಿಸಿ ಗ್ರಾಮಸ್ಥರ ಸಾಹಸಗಳಿಗೆ ಸಂತೋಷಪಟ್ಟರು. (ಸಭಿಕರ ಛಾಯಾಚಿತ್ರವು ತೆಗೆಯಲ್ಪಟ್ಟಿತು.) ಚಿತ್ರದುರ್ಗದ ರೇಂಜ್ ಅ|| ಇನ್|| ಮ|| ರಾ|| ಹೆಚ್. ವಿ. ರಾಮಣ್ಣ, ಬಿ.ಎ., ಬಿ.ಟಿ. ರವರು ಗ್ರಾಮದ ಹಾಗೂ ಇಲಾಖೆಯವರ ಪರವಾಗಿಯೂ ಅಧ್ಯಕ್ಷರೇ ಮೊದಲಾದ ಸಭಿಕರ ಆಭಾರಮನ್ನಣೆಗೈದರು. ಗಂಧತಾಂಬೂಲವು ವಿನಿಯೋಗಿಸಲ್ಪಟ್ಟಿತು. ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸರ್ವರಿಗೂ ಉಪಹಾರವಾದ ಅನಂತರ ಸರ್ವರೂ ಸ್ವಸ್ಥಳಗಳಿಗೆ ಪ್ರಯಾಣಬೆಳಸಿದರು. ಫ್ರೀ ಸ್ಪೆಷಲ್ ಮೋಟಾರುಗಳಲ್ಲಿ ಅತ್ಯಂತ ಶ್ರಮದಿಂದ ಅನೇಕ ಮಹಾಶಯರನ್ನು ಸಭೆಗೆ ಬರಮಾಡಿದ ಮತ್ತು ಈ ಉತ್ಸವವನ್ನು ಸುಲಲಿತವಾಗಿ ನೆರವೇರಿಸಿದ ಸರ್ವ ಮಹನೀಯರಿಗೂ ಪರಮಾತ್ಮನು ಜಯವನ್ನುಂಟುಮಾಡಲೆಂದು ಕೋರುವ,

ಉತ್ಸವಭಾಗಿ,
ಅಕ್ಕಾಚಾರಿ ಹನುಮಂತಪ್ಪ,
ವಿ. ಪಂ|| ಮೆಂಬರ್.

ಶ್ರೀ ಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀಸರಸ್ವತೀ ಮಹೋತ್ಸವ.

ಸೊಲ್ಲಾಪುರ.

ಪ್ರತಿವರ್ಷದ ಪದ್ಧತಿಯಂತೆ ಆಶ್ವೀಜ ಶು|| ೬ ಬುಧವಾರ ಮೊದಲುಮಾಡಿಕೊಂಡು ಶು|| ೧೦ ಶನಿವಾರದವರಿಗೂ ಶ್ರೀಮದ್ವೀರಶೈವ ಸಂಸ್ಕೃತಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಶ್ರೀಸರಸ್ವತೀಮಹೋತ್ಸವವು ಅತಿವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸರಸ್ವತೀದೇವಿಯ ಆವಾಹನ ಮೊದಲುಮಾಡಿಕೊಂಡು ವಿಸರ್ಜನೆಪರ್ಯಂತವಾಗಿ ಸಾಯಂಪ್ರಾತಃಕಾಲಗಳಲ್ಲಿ ವಿದ್ಯಾರ್ಥಿಗಳ ವೇದಪಾಠಗಳಿಂದಲೂ ಸಂಗೀತರೂಪಗಳಾದ ಮಂಗಲಸ್ತೋತ್ರಗಳಿಂದಲೂ ವಿಧ್ಯುಕ್ತಪ್ರಕಾರವಾಗಿ ಷೋಡಶೋಪಚಾರಗಳಿಂದಲೂ ಶ್ರೀಸರಸ್ವತೀದೇವಿಯ ಪೂಜೆಯು ಮಾಡಲ್ಪಟ್ಟಿತು. ಆಶ್ವೀಜ ಶು|| ೮ ಶುಕ್ರವಾರ ೫ ಘಂಟೆಗೆ ಶ್ರೀಸರಸ್ವತೀ ದೇವಿಯಸನ್ನಿಧಿಯಲ್ಲಿ ಸಭೆಯು ಮಾಡಲ್ಪಟ್ಟಿತು. ಸಭೆಗೆ ಅನೇಕಜನರು ಬಂದಿದ್ದರು. ಸಭಾಧ್ಯಕ್ಷಸ್ಥಾನವು ವೇ|| ಗುರುಸಿದ್ಧಶರ್ಮ ಹಂಚಿನಾಳ ಬೃಹನ್ಮಠ ಇವರಿಂದ ಸ್ವೀಕರಿಸಲ್ಪಟ್ಟಿತು. ಅನಂತರ ವೇ|| ಪಟ್ಟಾಧ್ಯಕ್ಷ ಗುರುಪಾದಸ್ವಾಮಿ ಮುಳ್ಳೂರ ಬೃಹನ್ಮಠ ಮತ್ತು ವೇ|| ಪಟ್ಟಾಧ್ಯಕ್ಷ ನೀಲಕಂಠಶಿವಾಚಾರ್ಯರು ಜಂಬೋಳಿ ಬೃಹನ್ಮಠ ವೇ|| ಸಿದ್ಧರಾಮಮರಿದೇವರು ಕುಂಬೋಜ ಮಠ ಸೊಲ್ಲಾಪುರ ಈ ಮೂವರು ವಿದ್ಯೆಯೇ ಚತುರ್ವಿಧ ಪುರುಷಾರ್ಥಗಳಿಗೆ ಕಾರಣವಾದದ್ದು ತಸ್ಮಾತ್ ಎಲ್ಲರೂ ವಿದ್ಯಾಧ್ಯಯನವನ್ನು ಮಾಡಬೇಕೆಂದು ಭಾಷಣವನ್ನುಮಾಡಿದರು ತರುವಾಯ ಇದೇ ವಿಷಯವನ್ನೇ ವೇ|| ಅಲ್ಲಮಪ್ರಭುದೇವರು ಭಿಕ್ಷಾವರ್ತಿಮಠ ಆಲೂರ ಇವರು ಮತ್ತು ವೇ|| ನಿಜಗುಣಶರ್ಮ ಹೊಸಪೇಟಿ ಈ ಉಭಯರು ಪುಷ್ಟೀಕರಿಸಿದರು. ಅನಂತರ ವೇ|| ಬಸವರಾಜಶರ್ಮ ಯಸಳೂರ ವೇ|| ಶಂಕರಮರಿದೇವರು ಆಲಂಪಲ್ಲಿ ವಿರಕ್ತಮಠ ವೇ|| ಸದಾಶಿವ ಶರ್ಮ ರಾಫುಲುಡಿ ಬೃಹನ್ಮಠ ಈ ಮೂವರು ಗೀರ್ವಾಣವಿದ್ಯೆಯು ಸಮಸ್ತ ವಿದ್ಯೆಗಳಿಗೆ ಮಾತೃಸ್ವರೂಪವಾದದ್ದು; ಈ ಗೀರ್ವಾಣವಿದ್ಯೆಯು ಪೂರ್ವದಲ್ಲಿ ಬಹು ಪ್ರಚಾರದಲ್ಲಿತ್ತು, ಆದರೆ ಇತ್ತೀಚಿಗೆ ಕಾಲವೈಚಿತ್ರ್ಯದಿಂದ ಬಹಳ ಹೀನಸ್ಥಿತಿಯಲ್ಲಿರುವುದು. ಇದಕ್ಕೆ ನಮ್ಮ ಭಾರತದೇಶದ ಜನರ ಉದಾಸೀನವೇ ಕಾರಣವಾಗಿರುವುದು. ಮತ್ತು ಪರಮ ವೈದಿಕ ಮತಸ್ಥರಾದ ವೀರಶೈವರಿಗೆ ಧಾರ್ಮಿಕಶಿಕ್ಷಣಕ್ಕಾಗಿ ಗೀರ್ವಾಣವಿದ್ಯೆಯು ಮುಖ್ಯವಾಗಿ ಬೇಕಾಗಿರುವದೆಂದು ಸಮಸ್ತ ಜನರು ತಲೆದೂಗುವಂತೆ ಸುಶ್ರಾವ್ಯವಾಗಿ ಭಾಷಣವನ್ನು ಮಾಡಿದನಂತರದಲ್ಲಿ ಮಹತ್ತರವಾದ ಗೀರ್ವಾಣವಿದ್ಯೆಯನ್ನು ವೀರಶೈವಮತದಲ್ಲಿ ಅಭಿವೃದ್ಧಿಗೊಳಿಸಿದ ಶ್ರೀ ಸಕ್ರಿ ಕರಡೆಪ್ಪನವರು ಮತ್ತು ರಾವ್ ಬಹದ್ದೂರ್ ಶ್ರೀಮಂತ ಮಲ್ಲಪ್ಪಾ ಬಸಪ್ಪಾ ವಾರದ ಮೊದಲಾದ ಮಹಾತ್ಮರ ಮಾರ್ಗಾವಲಂಬಿಗಳಾಗಿ ತನುಮನೋಧನಗಳನ್ನು ಸಮರ್ಪಿಸಿ ಗೀರ್ವಾಣ ವಿದ್ಯಾಭಿವೃದ್ಧಿಯನ್ನು ಗೊಳಿಸುತ್ತಿರುವರು. ಶ್ರೀಮಂತ ಚನ್ನಬಸಪ್ಪಾ ಮಲ್ಲಪ್ಪಾ ಉರ್ಫ ಬಾಬಾಸಾಹೇಬ ವಾರದ ಶ್ರೀಮಂತ ನಾಗಪ್ಪಾ ಬಂಡೆಪ್ಪಾ ಕಾಡಾದಿ ಇವರ ಕೀರ್ತಿಯನ್ನು ಕೊಂಡಾಡಿದರು. ಅನಂತರದಲ್ಲಿ ಅವಿಶ್ರಾಂತಿಯಿಂದ ಗೀರ್ವಾಣವಿದ್ಯೆಯನ್ನು ಬೋಧಿಸುತ್ತಿರುವ ವೇ|| ಪಂ|| ಜಗದೀಶಶಾಸ್ತ್ರಿಗಳವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಶ್ರೀ ಶಾರದಾದೇವಿಯ ಮಂಗಲಸ್ತೋತ್ರಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ವೇ|| ಅಲ್ಲಮ ಪ್ರಭುದೇವರು ಭಿಕ್ಷಾವರ್ತಿ ಮಠ ಆಲೂರ,

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ರೇವಣಸಿದ್ಧೇಶ್ವರ ಪುರಾಣಸಮಾಪ್ತಿ ಮಹೋತ್ಸವ ಬಂಕಾಪುರ.

ವೀರಶೈವ ಸಮಾಜ ಬಾಂಧವರೇ? ಮಾನವ ಪ್ರಾಣಿಯು ತನ್ನ ಪ್ರಪಂಚವನ್ನು ಸಾಗಿಸಿಕೊಂಡು ಮುಕ್ತಿಯನ್ನು ಹೊಂದಬೇಕಾದರೆ ಶಾಸ್ತ್ರಗಳಲ್ಲಿ ಅನೇಕ ಮಾರ್ಗಗಳುಂಟು. ಅದರಲ್ಲಿ ಸುಲಭವಾದವುಗಳು ಭಕ್ತಿ, ಗುರುಧ್ಯಾನ, ಹಾಗೂ ಪುರಾಣಶ್ರವಣವೆಂದೇ ಹೇಳಬೇಕಾಗಿದೆ. ಯಾಕೆಂದರೆ—"ಭಕ್ತಿಯೋಗೋ ನಿರುಪದ್ರವಃ ಭಕ್ತಿಯೋಗಾನ್ಮುಕ್ತಿಃ" ಎಂಬ ಉಕ್ತಿಯಂತೆ ಬಡವನಾಗಲಿ, ಶ್ರೀಮಂತನಾಗಲಿ ಭಕ್ತಿಯೋಗವನ್ನು ನಿರಾತಂಕವಾಗಿ ಆಚರಿಸಬಹುದಾಗಿದೆ. ಭಕ್ತಿಯಿಲ್ಲದೆ ಯಾವ ಕಾರ್ಯಗಳು ಸಿದ್ಧಿಸಲಾರವು. ತಳಹದಿಯಿಲ್ಲದ ಮನೆಯು ಹೇಗೆ ಅಶಾಶ್ವತವೋ ಅದರಂತೆ ಭಕ್ತಿಯಿಲ್ಲದೆ ಆಚರಿಸಿದ ಪೂಜಾ, ಧ್ಯಾನ, ಶ್ರವಣ ಇತ್ಯಾದಿಗಳನ್ನು ಎಷ್ಟೋ ಜನ್ಮಗಳಲ್ಲಿ ಆಚರಿಸಿದರೂ ಕೂಡ ಮೋಕ್ಷವು ಸಿಗಲಾರದು. ಮೋಕ್ಷವೆಂದರೆ ಸಕಲ ದುಃಖನಿವೃತ್ತಿ ನಿತ್ಯಾನಂದಪದಪ್ರಾಪ್ತಿ; ಅಂದರೆ ಪ್ರಪಂಚದಲ್ಲಿ ಮೇಲಿಂದಮೇಲೆ ಒದಗತಕ್ಕ ದುಃಖಗಳು ಅಡಗಿ ಯಾವಾಗಲೂ ಆನಂದಸಾಗರದಲ್ಲಿ ಮಗ್ನವಾಗಿರುವದೇ ಮೋಕ್ಷವು. ಮೋಕ್ಷಾಪೇಕ್ಷೆಯುಳ್ಳವರೂ, ಸದ್ಭಕ್ತಿಸಂಪನ್ನರೂ ಗುರುಧ್ಯಾನಾಸಕ್ತರೂ ಪುರಾಣಶ್ರವಣಲಾಭವನ್ನು ಹೊಂದುವವರೂ ಆದ ಧಾರವಾಡ ಜಿಲ್ಲಾ ಬಂಕಾಪುರ ಗ್ರಾಮದ ಶ್ರೀಮಂತ ಮಲ್ಲಿಕಾರ್ಜುನಪ್ಪ ಬಸವಲಿಂಗಪ್ಪ, ದೇಸಾಯಿ ವ, ನಾಡಗೌಡ ಸಂಸ್ಥಾನ ಹಂದಿಗನೂರ ಮಾಮಲೇ ಬಂಕಾಪುರ ಈ ಮಹಾನುಭಾವರು ಶ್ರೀ ವೀರಶೈವ ಮತಸ್ಥಾಪನಾಚಾರ್ಯ ಶ್ರೀಮಜ್ಜಗದ್ಗುರು ಶ್ರೀರೇಣುಕಾಚಾರ್ಯರ ಮಹಾಪುರಾಣವನ್ನು ವೇ|| ಜಯದೇವಗವಾಯಿ ಹಾವೇರಿ ವ, ಲಕ್ಷ್ಮಾಪುರ ಹಿರೇಮಠ ಇವರು ಓದುವವರಿಂದಲೂ ವೇ|| ಪಂ|| ಪ್ರಭುಶಾಸ್ತ್ರಿಗಳು ಚಿಂಚಲಿ ಪುರಾಣಿಕ ಮಠ ಸಾ|| ಹಾವೇರಿ ಇವರು ಅರ್ಥಮಾಡುವವರಿಂದಲೂ ವೇ|| ಜಯದೇವ ಗವಾಯಿಗಳವರ ಶಿಷ್ಯ ಗುರುಶಾಂತಯ್ಯನು ನಡುನಡುವೆ ಮಾಡುವ ಮಂಜುಳಗಾನದಿಂದಲೂ ಕೇಳತಕ್ಕ ಜನಸಮುದಾಯವು ವಿಶೇಷವಾಗಿ ಆನಂದಪಡುತ್ತಲಿತ್ತೆಂಬುವದು ಸರ್ವರಿಗೂ ವೇದ್ಯವಾಗಿಯೇ ಇದೆ. ಮಹಾಶಯರೇ? ಪುರಾಣ ಸಮಾಪ್ತಿಯ ಕಾಲದಲ್ಲಿ ನಡೆದ ಉತ್ಸವ ಕಾರ್ಯಕ್ರಮಗಳನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಶ್ರೀಮಂತರ ವಂಶಗುರುಗಳಾದ ಶ್ರೀಮತ್ ಮಹಾಮಳಲೀ ಮಠದ ಷ|| ಬ್ರ|| ಶ್ರೀ ಗುರುನಾಗಾರ್ಜುನ ಮಹಾಸ್ವಾಮಿಗಳವರು ಶ್ರೀಮಂತರ ಬಿನ್ನಹದ ಮೇರೆಗೆ ತಾರೀಖು 16—10—29 ನೇ ಬುಧವಾರ ದಿವಸ ಸಾಯಂಕಾಲಕ್ಕೆ ಸೂಕ್ಷ್ಮ ಪರಿವಾರದೊಡನೆ ದಯಮಾಡಿಸಿದರು. ಅದೇ ದಿವಸವೆ ಸಿಗ್ಗಾವಿ ಷ|| ಬ್ರ|| ಮ|| ಷ|| ಬ್ರ|| ಶ್ರೀ ಚರವರ್ಯ ಮಹಾಸ್ವಾಮಿಗಳವರು ದಯಮಾಡಿಸಿದರು. ಅವರನ್ನು ಶ್ರೀಮಂತರು ತಮ್ಮ ಸಂಸ್ಥಾನದ ಪದ್ಧತಿ ಪ್ರಕಾರ ಅರಮನೆಗೆ ದಯಮಾಡಿಸಿಕೊಂಡು ಬಂದರು. ಈ ಪ್ರಕಾರ ತತ್ಸಮಯಕ್ಕೆ ಶ್ರೀಗಳವರು ದಯಮಾಡಿಸಿದ್ದು ಶ್ರೀಮಂತರ ಭಕ್ತಿಪ್ರಭಾವವೇ ಸರಿ. ಮರುದಿವಸ ತಾ|| 17-10-29 ನೇ ಗುರುವಾರ ಪ್ರಾತಃಕಾಲ ೬ ಘಂಟೆಗೆ ಏಕಾದಶ ರುದ್ರಾಭಿಷೇಕವು ಪ್ರಾರಂಭವಾಗಿ ೧೦ ಘಂಟೆಗೆ ಪೂರೈಸಿತು. ಅನಂತರ ಗುರುಗಳವರ ಪಾದಪೂಜೆಯು ಪ್ರಾರಂಭವಾಯಿತು. ಆ ಕಾಲಕ್ಕೆ ಆಮಂತ್ರಿತರಾಗಿ ಬಂದಿದ್ದ ಸ್ಥಳ ಪರಸ್ಥಳದಿಂದ ಸಾವಿರಾರು ಭಕ್ತಗಣಾಧೀಶ್ವರರು ಜಗದಾಚಾರ್ಯರ ಜಯಘೋಷಮಾಡುತ್ತಿದ್ದರು. ಪೂಜಾಸಮಾರಂಭವು ೧೨ ಘಂಟೆಗೆ ಸಮಾಪ್ತಿಯಾದನಂತರ ಸಕಲರನ್ನು ಮೃಷ್ಟಾನ್ನ ಭೋಜನದಿಂದಲೂ ಭೂರಿದಕ್ಷಿಣೆ ತಾಂಬೂಲಾದಿಗಳಿಂದಲೂ ತೃಪ್ತಿಗೊಳಿಸುವದರೊಳಗಾಗಿ ೩ ಘಂಟೆಯಾಯಿತು. ಆಮೇಲೆ ಪುರಾಣವು ಪ್ರಾರಂಭವಾಗಿ ಸಾಯಂಕಾಲ ೬ ಘಂಟೆಗೆ ಸಮಾಪ್ತಿಮಾಡಲ್ಪಟ್ಟಿತು. ಅನಂತರ ಶೃಂಗರಿಸಿದ ದಿವ್ಯಪಲ್ಲಕ್ಕಿಯಲ್ಲಿ ಗುರುಗಳನ್ನು ಮೂರ್ತಮಾಡಿಸಿ ಮುಂದೆ ಮಹಾಪುರಾಣವನ್ನು ಇಟ್ಟು ಅರಮನೆಯಿಂದ ಯಾವತ್ತು ಮರ್ಯಾದೆ ಪ್ರಕಾರ ಸಿಬ್ಬಂದಿಯೊಡನೆ ಚತುರಂಗಬಲ ಸಮೇತವಾಗಿ ಮುಂದೆ ಮುಂದೆ ವೇದಪಾಠಕರ ವೇದಧ್ವನಿಯು ಪಂಚಾಚಾರ್ಯಜಯಘೋಷವು, ಮುತ್ತೈದೆಯರು ಹಸ್ತಗಳಲ್ಲಿ ಆರತಿಗಳನ್ನು ಹಿಡಿದುಕೊಂಡು ಗುರುಮಹಿಮೆಯ ಪದಗಳನ್ನು ಪಾಡುವ ಮಂಜುಳಸ್ವರವೂ ಭೋರ್ಗರೆಯುವ ನಾನಾ ತರದ ವಾದ್ಯಗಳೂ ನೋಡುವ ಜನರಿಗೆ ಮಹಾನಂದವನ್ನುಂಟುಮಾಡುತ್ತಿದ್ದವು. ಮಹೋತ್ಸವವು ಪಟ್ಟಣದ ಶೃಂಗರಿಸಿದ ಬೀದಿಗಳಲ್ಲಿ ಅಲ್ಲಿಗಲ್ಲಿಗೆ ಮುತ್ತೈದಿಯರು ಬೆಳಗುವ ಆರತಿಗಳನ್ನೂ ಭಕ್ತರು ಅರ್ಪಿಸುವ ಕಾಯಿ ಕರ್ಪೂರ ಫಲಪುಷ್ಪಾದಿಗಳನ್ನೂ ಸ್ವೀಕರಿಸುತ್ತ ಸಾಗಿರಲಾಗಿ ಪ್ರತಿನಿತ್ಯವೂ ಸುರಿಯುತ್ತಿದ್ದ ಮೇಘರಾಜನು ಈ ದಿವಸ ಸಂಪೂರ್ಣ ತಟಸ್ಥನಾಗಿ ಶಾಂತಚಿತ್ತದಿಂದ ಆಂದೋಲಿಕೆಯ ಮೇಲ್ಭಾಗದಲ್ಲಿ ಛತ್ರದೋಪಾದಿಯಲ್ಲಿ ಒಪ್ಪಿ ಉತ್ಸವವು ರಾತ್ರಿ ೧೦ ಘಂಟೆಗೆ ನಿರ್ವಿಘ್ನವಾಗಿ ಅರಮನೆಗೆ ತಲ್ಪಿತು. ಶ್ರೀಗಳವರು ಸಿಂಹಾಸನಾರೋಹಣವಾದ ಕೂಡಲೆ ಆನಂದಸೂಚಕಗಳಾದ ೨೧ ಗುಂಡುಗಳು ಸಂಸ್ಥಾನಪದ್ಧತಿಯಂತೆ ಹಾರಿಸಲ್ಪಟ್ಟವು. ಮಂಗಲವನ್ನು ಮಾಡಿದನಂತರ ಸಮಯೋಚಿತ ಭಾಷಣಗಳಾದವು. ಆ ಸಮಯದಲ್ಲಿ ಪ್ರಭಾಪೋಷಣೆಗೋಸ್ಕರ ಶ್ರೀಗಳವರ ಅಪ್ಪಣೆ ಮೇರೆಗೆ ಶ್ರೀಮಂತರು ೫ ರೂಪಾಯಿಗಳನ್ನು ರಾ|| ರಾ|| ಸಿದ್ಧಲಿಂಗಪ್ಪ ರಾಮಣ್ಣವರ ಮಾಸ್ತರ ಬಂಕಾಪುರ ಇವರ ಕಡೆಗೆ ಒಪ್ಪಿಸಿದರು. ಅನಂತರ ಉತ್ಸವಭಾಗಿಗಳಾಗಿ ಬಂದಿದ್ದ ಸ್ವಮತಪರಮತೀಯರಿಗೆ ಶ್ರೀಗಳವರಿಂದ ಆಶೀರ್ವದಿಸಲ್ಪಟ್ಟ ಕೂಡಲೆ ಪಂಚಾಚಾರ್ಯರ ಜಯಘೋಷದೊಡನೆ ಸಭಾವಿಸರ್ಜನೆಯಾಯಿತು. ಶ್ರೀಮಂತರು ಶ್ರೀಗಳವರಿಗೆ ತಮ್ಮ ಸಂಸ್ಥಾನಮರ್ಯಾದೆ ಪ್ರಕಾರ ಕಾಣಿಕೆಯನ್ನಿತ್ತರು. ಮತ್ತು ಪುರಾಣಿಕರಿಗೆ ಅವರವರ ವೇತನವನ್ನಿತ್ತರಲ್ಲದೆ ಚೆನ್ನಾಗಿ ಸಂಭಾವನೆಯನ್ನು ಕೊಟ್ಟರು. ಈ ಕಾರ್ಯವನ್ನು ಅವಿಶ್ರಾಂತಶ್ರಮ ವಹಿಸಿ ತಮ್ಮ ಸ್ವಂತ ಖರ್ಚಿನಿಂದ ಕೊನೆಗಾಣಿಸಿ ನಮ್ಮೆಲ್ಲರಿಗೂ ಪುರಾಣಶ್ರವಣ ಸುಯೋಗವನ್ನು ಒದಗಿಸಿಕೊಟ್ಟ ಮಹಾಶಯರಿಗೆ ಜಗದಾಚಾರ್ಯರು ಪುತ್ರಪೌತ್ರ ಆಯುರಾರೋಗ್ಯ ಭಾಗ್ಯಾದಿಗಳ ಅಭಿವೃದ್ಧಿಯನ್ನು ಕೊಡಲೆಂದು ಬೇಡಿಕೊಳ್ಳುವ,

ಓರ್ವ ಉತ್ಸವಭಾಗಿ.

ಆಲನಹಳ್ಳಿ ಸ್ಕೂಲಿನ ತೃತೀಯ ವಾರ್ಷಿಕೋತ್ಸವ.

ಹೆಗ್ಗಡದೇವನಕೋಟೆ ತಾ|| ಆಲನಹಳ್ಳಿ ಗ್ರಾಮ—ಅಯ್ಯಾ ಈ ಗ್ರಾಮಕ್ಕೆ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರು ಬಂದು ಗೌರ್ನಮೆಂಟ್ ಪ್ರೈಮರಿ ಬಾಯ್ಸ್ ಸ್ಕೂಲನ್ನು ದಯಪಾಲಿಸಿ ಇಂದಿಗೆ ಮೂರುವರ್ಷಗಳಾದುವು. ಸ್ಕೂಲಿನ ತೃತೀಯ ವಾರ್ಷಿಕೋತ್ಸವವು ತಾ|| 20-10.29 ನೇ ಭಾನುವಾರ ತುಂಬಾ ವಿಜೃಂಭಣೆಯಿಂದ ನಡೆಯಿತು. ಸ್ಕೂಲ್ ಕಮಿಟಿ ಮೆಂಬರುಗಳು ಮತ್ತು ಪಂಚಾಯ್ತಿ ಮೆಂಬರುಗಳು ಗ್ರಾಮಸ್ಥರು ಸಹ ಸೇರಿ ಸ್ಕೂಲಿನ ಮುಂಭಾಗದಲ್ಲಿ ಹಸುರುವಾಣಿ ಚಪ್ಪರವನ್ನು ಹಾಕಿಸಿದ್ದರು. ಸ್ಕೂಲನ್ನು ತಳಿರುತೋರಣಗಳಿಂದಲೂ, ಪಟಗಳಿಂದಲೂ ಬಹು ರಮ್ಯವಾಗಿ ಅಲಂಕರಿಸಿದ್ದರು. ಅಜುಬಾಜುಗ್ರಾಮಗಳಿಂದ ಮಹೋತ್ಸವಕ್ಕೆ ನೂರಾರು ಜನಗಳಮೇಲೆ ಬಂದು ಸೇರಿದ್ದರು. ಶ್ರೀಮನ್ ಮಹಾರಾಜರವರ ಪಟವನ್ನು ರಾಜಮರ್ಯಾದೆಯೊಡನೆ ಗ್ರಾಮದ ಬೀದಿಯಲ್ಲಿ ಮೆರವಣಿಗೆ ಮಾಡಿದರು. ಅನಂತರ ಸ್ಕೂಲ್ ಕಮಿಟಿ ಮೆಂಬರು ಚಂದಪ್ಪನವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ನಾಲ್ಕು ಘಂಟೆಗೆ ಸಭೆಸೇರಿದರು. ಆ ಕಾಲದಲ್ಲಿ ಸ್ಕೂಲಿನ ಹೆಡ್‌ಮಾಸ್ಟರ್ ಎಂ. ಎಸ್. ಸುಬ್ಬಣ್ಣನವರು ವಿದ್ಯಾಭಿವೃದ್ಧಿ ವಿಚಾರದಲ್ಲೂ ಸ್ಕೂಲ್ ಅಭಿವೃದ್ಧಿಯ ವಿಚಾರದಲ್ಲೂ ಉಪನ್ಯಾಸವನ್ನು ಮಾಡಿದರು. ಅಸಿಸ್ಟೆಂಟ್‌ಮಾಸ್ಟರ್ ಎಂ. ನರಸಿಂಹಯ್ಯನವರು ವಿದ್ಯಾಭಿವೃದ್ಧಿ ವಿಚಾರದಲ್ಲಿ ಗ್ರಾಮಸ್ಥರಿಗಿರುವ ಸಂತೋಷವನ್ನು ಅವರು ಅನುಸರಿಸಬೇಕಾದ ವಿಚಾರವನ್ನು ಕುರಿತು ಉಪನ್ಯಾಸಮಾಡಿದರು. ಅನಂತರ ಗ್ರಾಮದ ಶಾಬೆ ರಾಮಚಂದ್ರಯ್ಯ ಉರುಫ್ ಪಟ್ಟಣಿಗರಾಮೈಯ್ಯನವರು ಮಾಸ್ಟರುಗಳು ಸ್ಕೂಲ್ ಕೆಲಸದಲ್ಲಿ ಮುತವರ್ಜಿ ವಹಿಸಿ ಕೆಲಸಮಾಡುತ್ತಿರುವುದೇ ನಮ್ಮ ಸ್ಕೂಲ್ ಅಭಿವೃದ್ಧಿಗೆ ಕಾರಣವೆಂದು ಉಪನ್ಯಾಸ ಮಾಡಿದರು. ಎ. ಸಿ. ಲಿಂಗಪ್ಪನವರು ಮಾಸ್ಟರುಗಳಿಗೆ ಗ್ರಾಮಸ್ಥರಲ್ಲಿರುವ ಪ್ರೀತಿಯೂ ಗ್ರಾಮಸ್ಥರುಗಳಿಗೆ ಮಾಸ್ಟರುಗಳಲ್ಲಿರುವ ಪ್ರೀತಿಯೂ ಸ್ಕೂಲ್ ಅಭಿವೃದ್ಧಿಗೆ ಕಾರಣವೆಂದು ಉಪನ್ಯಾಸ ಮಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ನೆರದಿದ್ದ ಸಭೆಯವರಿಗೂ ಸ್ಕೂಲ್ ಬಾಲಕರುಗಳಿಗೂ ಕೊಬ್ಬರಿಸಕ್ಕರೆ, ಹೂ, ತಾಂಬೂಲಗಳನ್ನು ಹಂಚಿ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೆ ಶ್ರೇಯಸ್ಸನ್ನು ಕೋರಿ ಮಂಗಳಾಚರಣೆಮಾಡಿ ಸಭೆಯನ್ನು ಬರಖಾಸ್ತುಮಾಡಿದರು.

ಬಸವಯ್ಯ.

ಪ್ರಾಥಮಿಕ ಪಾಠಶಾಲಾ ಸಮಾರಂಭ.

ಸೊಂಡೂರು ಸಂಸ್ಥಾನ ಕಣ್ವಿಹಳ್ಳಿಗ್ರಾಮದ ವೀರಶೈವ ಶ್ರೀಮಂತ ಚಿತ್ರಿಕಿ ಕೋಟಪ್ಪನವರು ತಮ್ಮ ತಂದೆ ಚಿತ್ರಿಕಿ ಕರಿಬಸಪ್ಪನವರ ಹೆಸರಿನಲ್ಲಿ ಧರ್ಮಾರ್ಥ ಪ್ರಾಥಮಿಕ ಪಾಠಶಾಲೆಯನ್ನು ಅವರ ತಂದೆಯವರು ಕಟ್ಟಿಸಿರುವ ಭವ್ಯದ ಆವರಣದಲ್ಲಿ ಸ್ಥಾಪಿಸಿ, ಶಾಲೆಯ ಪ್ರಾರಂಭೋತ್ಸವವನ್ನು ಇದೇ ತಿಂಗಳು ತಾ|| 10 ಗುರುವಾರ ಸಾಯಂಕಾಲ ಸೊಂಡೂರು ಸಂಸ್ಥಾನ ಶ್ರೀಮಂತ ರಾಜಾಸಾಹೇಬರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಶಾಲೆಯ ಕಟ್ಟಡದ ಮುಂಭಾಗದಲ್ಲಿ ಚಪ್ಪರವು ಹಾಕಲ್ಪಟ್ಟು ಸುಂದರವಾಗಿ ಅಲಂಕರಿಸಲ್ಪಟ್ಟಿತು. ಒಂದು ತಿಂಗಳಿಂದ ಮಳೆ ಆಗುತ್ತಿದ್ದರೂ ಅದೃಷ್ಟ ಒಂದೆರಡು ದಿವಸ ಮೇಘರಾಜನು ತಟಸ್ಥನಾದುದರಿಂದ ಸಮಾರಂಭವು ಬಹಳ ವೈಭವದಿಂದ ಜರುಗಿತು. ಹಳ್ಳಗಳಲ್ಲಿ ನೀರು ತುಂಬಾ ಹರಿಯುತ್ತಿದ್ದು ಮೋಟಾರ್ ಬಸ್ಸುಗಳ ಪ್ರಯಾಣಕ್ಕೆ ವಿಘ್ನವಾಗಿದ್ದರೂ ಬಳ್ಳಾರಿ ಗದಗ ವಗೈರೆ ಪ್ರಾಂತಗಳಿಂದ ವಿದ್ವನ್ಮಣಿಗಳು ಮತ್ತು ಸಂಸ್ಥಾನದ ದಿವಾನ್ ಸಾಹೇಬರೇ ಮೊದಲಾದ ಅಧಿಕಾರಿಗಳು ಆಗಮಿಸಿದ್ದರು. ಶ್ರೀಮಂತ ರಾಜಾಸಾಹೇಬರವರು ಆಗಮಿಸಿದ ಕೂಡಲೇ ಶ್ರೀಮಂತ ಚಿತ್ರಿಕಿ ಕೋಟಪ್ಪನವರು ಸ್ವಾಗತವನ್ನು ಬಯಸಿ ಅವರನ್ನು ಅಗ್ರಾಸನದಲ್ಲಿ ಕುಳ್ಳಿರಿಸಿದಮೇಲೆ ಶಾಲೆಯ ವಿದ್ಯಾರ್ಥಿಗಳು ಮನೋಹರವಾದ ಸಂಗೀತದಿಂದ ದೇವರ ಪ್ರಾರ್ಥನೆಯನ್ನು ಮಾಡಿದರು. ತರುವಾಯ ಶ್ರೀಮಂತ ಕೋಟಪ್ಪನವರು ರಾಜಾಸಾಹೇಬರವರಿಗೆ ಇಂಗ್ಲೀಷಿನಲ್ಲಿ ಮಾನಪತ್ರವನ್ನು ಒಪ್ಪಿಸಿದರು. ಅನಂತರ ಶ್ರೀಮಂತ ರಾಜಾಸಾಹೇಬರವರು ಕೋಟಪ್ಪನವರು ಕೈಕೊಂಡಿರುವ ವಿದ್ಯಾಪ್ರಸಾರಕಾರ್ಯವು ಅತ್ಯಂತ ಮಹತ್ವದ್ದೆಂದೂ ಸದರಿಯವರ ಉತ್ಸಾಹವನ್ನು ಇತರರೂ ಅನುಸರಿಸಬೇಕೆಂದೂ ಆ ಶಾಲೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳೆಲ್ಲರೂ ಕೋಟಪ್ಪನವರ ಹೆಸರನ್ನು ಚಿರಕಾಲವೂ ಸ್ಮರಿಸತಕ್ಕದ್ದೆಂತಲೂ ಸಮಯೋಚಿತ ಭಾಷಣವನ್ನು ಮಾಡಿ ಶಾಲೆಯ ಬಾಗಿಲನ್ನು ಮತ್ತು ಲೇಟ್ ಚಿತ್ರಿಕಿ ಕರಿಬಸಪ್ಪನವರ ಛಾಯಾಚಿತ್ರದ ಮುಸುಕನ್ನು ತೆಗೆದರು. ಎಲ್ಲರಿಗೂ ಪುಷ್ಪ ಗಂಧ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟನಂತರ ಶಾಲೆಯ ಪಕ್ಕದ ವಿಶಾಲವಾದ ದೊಡ್ಡಮಾವಿನ ತೋಟದಲ್ಲಿರುವ ಟೆನ್ನಿಸುಕೋರ್ಟಿನಲ್ಲಿ ಸರ್ವರ ಫೋಟೋ ತೆಗೆಯಲಾಯಿತು. ಕೋಟಪ್ಪನವರು ರಾಜಾಸಾಹೇಬರವರಿಗೂ ಸಭಿಕರಿಗೂ ವಂದನೆಗಳನ್ನರ್ಪಿಸಿದ ಮೇಲೆ ಶಾಲೆಯ ಹಿಂಭಾಗದಲ್ಲಿರುವ ಮನೋಹರವಾದ ಹೂವಿನ ತೋಟದಲ್ಲಿ ಸರ್ವರನ್ನು ಅಲ್ಪಾಹಾರದಿಂದ ಸತ್ಕರಿಸಿದರು. ಈ ಶಾಲೆಯಲ್ಲಿ ಈಗಲೆ 108 ವಿದ್ಯಾರ್ಥಿಗಳು 3 ಮಂದಿ ಉಪಾಧ್ಯಾಯರು ಇರುವರು. ಶಾಲೆಯಲ್ಲಿ ಲೈಬ್ರರಿಗೆ ಮತ್ತು ಶಾಲೆಗೆ ಇರಬೇಕಾದ ಉಪಕರಣಗಳು ಯಾವತ್ತು ವ್ಯವಸ್ಥೆಮಾಡಲ್ಪಟ್ಟಿವೆ. ವಿದ್ಯಾದಾನಶೀಲರಾದ ಚಿತ್ರಿಕಿ ಕೋಟಪ್ಪನವರಿಗೆ ಜಗದೀಶ್ವರನು ಸಮಸ್ತ ಸನ್ಮಂಗಳವನ್ನೀಯಲೆಂದು ಪ್ರಾರ್ಥಿಸುವ.

ಸ್ಕೂ|| ಮಾ|| ಅಜ್ಜಯ್ಯ.

|| ಶ್ರೀ ಗಣೇಶಾಯನಮಃ ||

ಕರ್ನಾಟಕಾಯುರ್ವೇದ ಮಂಡಲ.

ಐದನೆಯ ಅಧಿವೇಶನ.

ತಾ|| 16-11-29. ಮೈಸೂರು.

ಕರ್ನಾಟಕಾಯುರ್ವೇದ ಮಂಡಲದ ಐದನೆಯ ಅಧಿವೇಶನವು ಮೈಸೂರಿನಲ್ಲಿ ಹಳೇ ಅಗ್ರಹಾರದ ಕರ್ನಾಟಕಾಯುರ್ವೇದ ವಿದ್ಯಾಪೀಠದ ಕಾರ್ಯಾಲಯದಲ್ಲಿ ತಾ|| 16-11-29 ನೇ ಶನಿವಾರ ಮಧ್ಯಾಹ್ನ 5 ಗಂಟೆಗೆ ಸೇರಬೇಕಾದುದರಿಂದ ಮಂಡಲಿಯ ಸಭಾಸದರೆಲ್ಲರೂ ದಯಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಒಂದು ವೇಳೆ ಬರಲು ಸಾಧ್ಯವಿಲ್ಲದವರು ತಮ್ಮ ಅಭಿಪ್ರಾಯವನ್ನು ಸೆಕ್ರೆಟರಿ C/o ಕರ್ನಾಟಕಾಯುರ್ವೇದ ವಿದ್ಯಾಪೀಠ, 1485 ಹಳೇ ಅಗ್ರಹಾರ, ಮೈಸೂರು. ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

ತಮ್ಮ ವಿಶ್ವಾಸಪಾತ್ರರಾದ,
ಶೃಂಗೇರಿ. ಡಾ|| ಹೆಚ್. ವಿ. ಸವಣೂರ್,
ತಾ|| 1-11-29. ಎಲ್. ಎಂ. ಎಸ್.
ವಿದ್ವಾನ್ ಕೆ. ಶೇಷಶಾಸ್ತ್ರಿ, ಬಿ. ಟಿ. ಯು. ಮಂತ್ರಿಗಳು.

ವಿಮರ್ಶಿಸಲ್ಪಡುವ ವಿಷಯಗಳು.

1. 21 ನೇ ಅಖಿಲ ಭಾರತ ಆಯುರ್ವೇದ ವೈದ್ಯ ಸಮ್ಮೇಳನವನ್ನು ಮೈಸೂರಿಗೆ ಆಹ್ವಾನ ಮಾಡುವಿಕೆ.
2. ಮೇಲ್ಕಂಡ ವಿಚಾರದಲ್ಲಿ ಡೆಪ್ಯುಟೇಷನ್‌ಗೆ ಅವಕಾಶ ಕೊಟ್ಟ ಬಗ್ಗೆ ಮ|| ದಿವಾನರವರ ಅಭಿನಂದನ ಪುರಸ್ಸರವಾಗಿ ಮುಂದಿನ ಅಂಕೆಗಳು.
3. ಧಾರವಾಡದಲ್ಲಿ 5 ನೇ ಕರ್ನಾಟಕಾಯುರ್ವೇದ ಸಮ್ಮೇಳನವು ನಡೆಯುವ ಬಗ್ಗೆ ವಿಮರ್ಶೆ.
4. ಕರಾಚಿಯಲ್ಲಿ 1930 ಜನವರಿ ತಾ|| 1-2-3-4 ದಿನಗಳಲ್ಲಿ ನಡೆಯುವ ಆಯುರ್ವೇದ ಮಹಾಸಭೆಗೆ ಪ್ರತಿನಿಧಿ ನಿರ್ಧಾರಣೆ ಮತ್ತೂ ಪ್ರಸ್ತಾವವಿಷಯ ತೀರ್ಮಾನ.
5. ಅವಶ್ಯವಾಗಿ ಸೂಚನೀಯ ವಿಷಯಗಳು.

ಶ್ರೀ ವೀರೇಶಾಯನಮಃ

ಶ್ರೀ ವೀರಭದ್ರಸ್ವಾಮಿ ದೇವಾಲಯ.
(ಶಿಂಗಟಾಲೂರು ಹಮ್ಮಿಗಿ ನವಲಿ)
ಪಂಚಕಮಿಟಿಯಿಂದ,
ಜಾಹೀರಾತು.

ಆಮಾವತ್ತು ಜನರಿಗೆ ತಿಳುಹಿಸುವುದೇನಂದರೆ: ಸದರಿ ದೇವಸ್ಥಾನದ ಗೋವು ವ ಹೋರಿಕರಗಳು ಹಾಗೂ ಬೀಜದ ಹೋರಿಗಳೂ ಕೇರಿ ಅಂತೂ ಸರಾಸರಿ 35-40 ಜಾನಾವರಗಳನ್ನು ತಾರೀಖು 26-11-29 ಮಂಗಳವಾರ ಉದಯ 8 ಘಂಟೆಗೆ ಶ್ರೀ ದೇವಾಲಯದಲ್ಲಿ ಪ್ರಸಿದ್ಧ ಲಿಲಾವಿನಿಂದ ಮಾರುವದರಲ್ಲಿ ಬರುವದು. ಅಪೇಕ್ಷಿತ ಜನರು ಲೀಲಾವಿನ ವೇಳೆಗೆ ಹಾಜರಾಗಿ ಆಖೈರ ನಿಂತ ಸವಾಲಿನ ರಕಮನ್ನು ರೋಖ ಕೊಟ್ಟು ಒಯ್ಯಬಹುದು. ಮತ್ತು ಅದೇ ದಿವಸ ಸದರಿ ದೇವಸ್ಥಾನದ ಪುರೋಭಿವೃದ್ಧಿಯ ಆಲೋಚನೆಯ ಬಗ್ಗೆ ಕಮಿಟಿಯು ಸೇರಬೇಕೆಂದು ನಿರ್ಧರಿಸಿರುತ್ತದೆ. ಅಲ್ಲದೆ ತಾರೀಖು 25-11-29 ನೇ ಸೋಮವಾರ ಶ್ರೀ ಸ್ವಾಮಿಯ ಆಖೈರ ಕಾರ್ತಿಕೋತ್ಸವವು ಇರುತ್ತದೆ. ಆದಕಾರಣ ಶ್ರೀ ದೇವರ ಭಕ್ತರು ಹಾಗೂ ದೇವಾಲಯದ ಅಭಿವೃದ್ಧಿಯ ಹಿತಚಿಂತಕರು ತಪ್ಪದೆ ಬರಬೇಕಾಗಿ ವಿನಂತಿ.

ಕಮಿಟಿ ಪ್ರೆಸಿಡೆಂಟ
ಗುರುಭಕ್ತ ಕೇಸರಿ, ಹಮ್ಮಿಗಿ.

ಪಂಚಾಚಾರ್ಯ ಪ್ರಭಾ

೧೯೨೯ನೇ ನವಂಬರ್ ತಾ॥ ೧೧ನೇ ಸೋಮವಾರ

ಅಫಗಾನಸ್ಥಾನದ ನೂತನ ಅಮೀರರು.

ಈ ಪ್ರಪಂಚದಲ್ಲಿ ಯಾವ ಕಾರ್ಯವಾದರೂ ಜನರ ಮೆಚ್ಚುಗೆಗೆ ಪಾತ್ರವಾಗಿ ಯಶಸ್ಸು ಪಡೆಯಬೇಕಾದರೆ ಅದಕ್ಕೆ ಧರ್ಮವೇ ಮೂಲಕಾರಣವಾಗಿರುವದು. ಧರ್ಮಶಾಸ್ತ್ರದ ತತ್ವಗಳಿಗನುಸಾರವಾಗಿ ನೆರವೇರಿಸುವ ಕಾರ್ಯಕ್ಕೆ ಎಂದಿಗೂ ಚ್ಯುತಿಯು ಬರಲಾರದು. ರಾಜಕಾರ್ಯಕ್ಕಂತೂ ಧರ್ಮವು ಮೂಲ ತಳಹದಿಯಾಗಿರುವದು. ಧರ್ಮದಿಂದ ರಾಜ್ಯಪರಿಪಾಲನಮಾಡುವ ರಾಜನು ಜಗದ್ವಿಖ್ಯಾತನಾಗುವನಲ್ಲದೆ ಅವನ ಕೀರ್ತಿಯು ಪ್ರಪಂಚದಲ್ಲಿ ಆಚಂದ್ರಾರ್ಕವಾಗಿ ಪ್ರಕಾಶಿಸುವದು. ಧರ್ಮವಿರುದ್ಧವಾಗಿ ರಾಜ್ಯಪರಿಪಾಲನಮಾಡುವ ರಾಜನು ಪ್ರಜೆಗಳ ವೈರಿಯಾಗಿ, ಅಪಕೀರ್ತಿಗೆ ಗುರಿಯಾಗುವನಲ್ಲದೆ, ಅತ್ಯಲ್ಪಕಾಲದಲ್ಲಿಯೇ ಅಧಃಪತನವನ್ನು ಹೊಂದುವನೆಂಬುವದರಲ್ಲಿ ಯಾವ ಸಂಶಯವೂ ಇಲ್ಲ. ಧರ್ಮರಹಸ್ಯವನ್ನರಿತು ರಾಜ್ಯಪಾಲನಮಾಡುವದು ಸಾಮಾನ್ಯವಾದ ಕಾರ್ಯವಲ್ಲ. ಎಲ್ಲರೂ ತಮ್ಮ ತಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಿರಪಡಿಸಿಕೊಳ್ಳಲು ಹೋರಾಡುತ್ತಿರುವ ಈ ಕಾಲದಲ್ಲಿ, ಧರ್ಮಕ್ಕೆ ಚ್ಯುತಿಬಾರದಂತೆಯೂ, ಸಕಲ ಪ್ರಜೆಗಳ ಮನಸ್ಸಿಗೆ ಸಮ್ಮತವಾಗಿರುವಂತೆಯೂ ರಾಜ್ಯಭಾರವನ್ನು ಮಾಡುವದು ಬಹು ಕಷ್ಟತರವಾದ ವಿಷಯವಾಗಿದೆ. ಈಗಿನ ಪ್ರಜೆಗಳು ಧರ್ಮದಿಂದ ಪರಿಪಾಲನ ಮಾಡುವ ರಾಜರನ್ನು ಪ್ರೀತಿಸುವರೇ ಹೊರತು ಇದಕ್ಕೆ ವಿರೋಧವಾಗಿ ವರ್ತಿಸುವವರನ್ನು ಪ್ರೀತಿಸುವದಿಲ್ಲ. ಪೂರ್ವಕಾಲದ ರಾಜರು ಪಾಪಭೀತರಾಗಿ ಧರ್ಮಶಾಸ್ತ್ರಮಾರ್ಗವನ್ನು ಸ್ವಲ್ಪವೂ ಮೀರದಂತೆ ರಾಜ್ಯಪರಿಪಾಲನ ಮಾಡುತ್ತಿದ್ದರು. ಸಕಲ ಪ್ರಜೆಗಳನ್ನು ತಮ್ಮ ಮಕ್ಕಳಂತೆ ಭಾವಿಸಿ ಪರಿಪಾಲಿಸುತ್ತಿದ್ದರು. ಪ್ರಜೆಗಳ ಮತಧರ್ಮಗಳಿಗೂ, ಆಚಾರವ್ಯವಹಾರಗಳಿಗೂ ಕುಂದುಂಟಾಗದಂತೆ ರಕ್ಷಿಸುತ್ತಿದ್ದರು. ವ್ಯವಹಾರಜ್ಞಾನಸಂಪನ್ನರೂ, ಪ್ರಜೆಗಳ ಕುಂದುಕೊರತೆಗಳನ್ನು ಚೆನ್ನಾಗಿ ಅರಿತವರೂ, ಧರ್ಮಶಾಸ್ತ್ರ ಪ್ರವೀಣರೂ ಆದ ಮಂತ್ರಿಗಳ ಸಲಹೆಯಂತೆ, ರಾಜ್ಯಸೂತ್ರಗಳನ್ನು ಸಾಗಿಸುತ್ತಿದ್ದರು. ತಮ್ಮ ಮನಸ್ಸಿಗೆ ತೋರಿದಂತೆ ವರ್ತಿಸದೆ ಪ್ರಜೆಗಳ ಕಷ್ಟಸುಖಗಳನ್ನು ಚೆನ್ನಾಗಿ ಅರಿತು, ಸರ್ವರಿಗೂ ಹಿತವಾಗುವ ಮಾರ್ಗದಲ್ಲಿ ವರ್ತಿಸುತ್ತಿದ್ದರು. ರಾಜರು ಪ್ರಜಾನುರಾಗಿಗಳಾಗಿ, ಕೀರ್ತಿವಂತರಾಗುವದಕ್ಕೆ ಧರ್ಮವೇ ಮೂಲಕಾರಣವಾಗಿದೆ. ಧರ್ಮವಿರುದ್ಧವಾಗಿ ರಾಜ್ಯವನ್ನು ಪರಿಪಾಲಿಸುತ್ತಿರುವ ರಾಜರು ರಾಜ್ಯಭ್ರಷ್ಟರಾಗಿ ಹೋದ ಎಷ್ಟೋ ಕಥೆಗಳನ್ನು ಚರಿತ್ರಗಳಲ್ಲಿ ನಾವು ನೋಡಬಹುದು. ಕಳೆದ ಘೋರಯುದ್ಧದ ಕಾಲದಲ್ಲಿ ಜರ್ಮನ ಚಕ್ರವರ್ತಿಯಾದ ಕೈಸರನೂ, ರಷ್ಯಾಚಕ್ರವರ್ತಿಯಾದ ಝಾರನೂ ರಾಜ್ಯಭ್ರಷ್ಟರಾಗಲು, ಅವರು ಪ್ರಜೆಗಳ ಪ್ರೇಮಕ್ಕೆ ಪಾತ್ರರಾಗಿ ಧರ್ಮದಿಂದ ರಾಜ್ಯಪರಿಪಾಲನ ಮಾಡದಿದ್ದುದೇ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಅಫ್ಘಾನಿಸ್ಥಾನದ ಅಮೀರ್ ಅಮಾನುಲ್ಲಾಖಾನರು ಈ ಕಾರಣದಿಂದಲೇ ರಾಜ್ಯಭ್ರಷ್ಟರಾದರು. ಅವರ ರಾಜ್ಯಪರಿಪಾಲನೆಯಲ್ಲಿ ತೋರಿಬಂದ ಧರ್ಮಲೋಪವನ್ನು ಅಫ್ಘಾನಿಸ್ಥಾನದ ನೌಜೆಶಾರಡ್ಜ ಎಂಬ ಸ್ತ್ರೀಯಳು ಬಹು ಚೆನ್ನಾಗಿ ವರ್ಣಿಸಿರುವಳು.

ಅಮಾನುಲ್ಲಾಖಾನರು ಯೂರೋಪ್ ಖಂಡದಲ್ಲಿ ಸಂಚರಿಸುವದಕ್ಕೆ ಮೊದಲು ಧರ್ಮದಿಂದ ರಾಜ್ಯಪರಿಪಾಲನ ಮಾಡುತ್ತಿದ್ದರೆಂದು ಅವರನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಆ ಕಾಲದಲ್ಲಿ ಅಫ್ಘಾನಿಸ್ಥಾನವು ಸುಖಶಾಂತಿಗಳ ತವರುಮನೆಯಾಗಿತ್ತು. ಹೀಗಿರುವ ಅಮೀರರು ತಮ್ಮ ಪತ್ನಿಯಾದ ಸೌರಿಯಾ ರಾಣಿಯೊಡನೆ ಯೂರೋಪ್ ಖಂಡವನ್ನೆಲ್ಲಾ ಸುತ್ತಿ ಕಾಬೂಲಿಗೆ ಹಿಂತಿರುಗಿ ಬರಲು ಅವರ ನಡವಳಿಕೆಗಳೂ, ಆಚಾರವಿಚಾರಗಳೂ ಬಹಳ ಬದಲಾವಣೆಯನ್ನು ಹೊಂದಿದ್ದವು. ಮುಸಲ್ಮಾನಸ್ತ್ರೀಯರ ಘೋಷಾಪದ್ಧತಿಯನ್ನು ಸರ್ವರೂ ಬಲ್ಲರು. ಇಸ್ಲಾಂ ಧರ್ಮಶಾಸ್ತ್ರಾನುಸಾರವಾಗಿ ಸ್ತ್ರೀಯರು ಮುಖದಮೇಲೆ ಮುಸುಕಿಲ್ಲದೆ ಹೊರಗೆ ಬರುವುದೆಂದರೆ ದೊಡ್ಡ ಅಪರಾಧವೆಂದು ಭಾವಿಸುತ್ತಾರೆ. ಸೌರಿಯಾ ರಾಣಿಯು ಯೂರೋಪ್ ಖಂಡದಿಂದ ಹಿಂತಿರುಗಿ ಬಂದಮೇಲೆ ಘೋಷಾಪದ್ಧತಿಯನ್ನು ದೂರೀಕರಿಸಿದಳು. ಘೋಷಾ ಉಡುಪುಗಳನ್ನು ಧರಿಸುವುದನ್ನು ಬಿಟ್ಟು ಪಾಶ್ಚಾತ್ಯಸ್ತ್ರೀಯರಂತೆ ಉಡುಪುಗಳನ್ನು ಧರಿಸಿಕೊಂಡು ನಗರದಲ್ಲೆಲ್ಲಾ ಸಂಚರಿಸಲಾರಂಭಿಸಿದಳು. ಅಮಾನುಲ್ಲರು ಸರ್ವಮುಸಲ್ಮಾನಸ್ತ್ರೀಯರು ಘೋಷಾಪದ್ಧತಿಯನ್ನು ದೂರಮಾಡಬೇಕೆಂದು ಆಜ್ಞಾಪಿಸಿದರು. ಈ ಧರ್ಮವಿರುದ್ಧಬೋಧದಿಂದ ಪ್ರಜೆಗಳು ಕುಪಿತರಾದರು. ಆ ಸಮಯಕ್ಕೆ ಸರಿಯಾಗಿ ಬಚ್ಚಾ-ಇ-ಸಾಕೋ ಎಂಬ ದಂಗೆಖೋರನು ಕುಪಿತರಾಗಿದ್ದ ಜನರನ್ನು ಮತ್ತಷ್ಟು ರೇಗಿಸಿ ದಂಗೆಯನ್ನೆಬ್ಬಿಸಿದನು. ಜನರೆಲ್ಲರೂ ಅವನ ಮಾತಿನಲ್ಲಿ ವಿಶ್ವಾಸವುಳ್ಳವರಾಗಿದ್ದುದರಿಂದ ಅವನ ಪಂಗಡವು ಬಲವಾಗಿ ಕಡೆಗೆ ಅಮಾನುಲ್ಲಾಖಾನರು ತಾವಾಗಿಯೇ ರಾಜ್ಯವನ್ನು ಬಿಟ್ಟು ಓಡಿಹೋಗಬೇಕಾಯಿತು. ರಾಜಭಕ್ತಿಯುತರಾದ ಕೆಲವರು ಮಾತ್ರ ದಂಗೆಯನ್ನಡಗಿಸಲು ಪ್ರಯತ್ನಿಸಿದರೂ ಕೂಡ ಆ ಪ್ರಯತ್ನದಲ್ಲಿ ಅವರು ಜಯಶೀಲರಾಗಲಿಲ್ಲ. ಬಚ್ಚಾ-ಇ-ಸಾಕೋನು ಎಲ್ಲರನ್ನೂ ಗೆದ್ದು ತಾನೇ ಅಮೀರನಾದನು. ಅವನಾದರೂ ಧರ್ಮದಿಂದ ರಾಜ್ಯಪರಿಪಾಲನಮಾಡದೆ, ಜನರನ್ನು ನಾನಾಬಗೆಯಾಗಿ ಹಿಂಸಿಸಿ, ತನ್ನ ಸುಖೋಪಭೋಗಕ್ಕೋಸ್ಕರ ಬಲಾತ್ಕಾರವಾಗಿ ಹಣವನ್ನು ಸುಲಿಗೆಮಾಡಲಾರಂಭಿಸಿದನು. ತನಗೆ ವಿರುದ್ಧವಾಗಿ ವರ್ತಿಸಿದವರನ್ನು ಕೊಲ್ಲಿಸಿದನು. ಇದರಿಂದ ಜನರಲ್ಲಿ ಹಾಹಾಕಾರವು ಹೆಚ್ಚಿತು. ಇಂಥ ವಿಷಮಸಮಯದಲ್ಲಿ ಅಮಾನುಲ್ಲಾಖಾನರ ಮುಖ್ಯ ಸೇನಾಧಿಪತಿಯಾಗಿ ಅನಂತರ ಆಫ್ಘನರಾಯಭಾರಿಯಾಗಿ ಫ್ರಾನ್ಸಿನಲ್ಲಿದ್ದ ಜನರಲ್ ನಾದಿರ್‌ಖಾನರು ಶರೀರದಲ್ಲಿ ಸ್ವಾಸ್ಥ್ಯವಿಲ್ಲದೆ ಚಿಕಿತ್ಸೆಹೊಂದುತ್ತಿದ್ದರೂ ಸಹ ತಮ್ಮ ರಾಜ್ಯವು ಬಚ್ಚಾ-ಇ-ಸಾಕೋನಂಥ ದಂಗೆಖೋರನ ವಶವಾಯಿತೆಂಬ ವಿಷಾದವಾರ್ತೆಯನ್ನು ಕೇಳಿ ಅಫ್ಘಾನಿಸ್ಥಾನಕ್ಕೆ ಒಬ್ಬಂಟಿಗರಾಗಿ ಬಂದರು. ಅವರು ಒಬ್ಬಂಟಿಗರಾದ ಮಾತ್ರಕ್ಕೇನಾಯಿತು? ಪ್ರಜಾಹಿತದೃಷ್ಟಿಯಿಂದ ರಾಷ್ಟ್ರೋದ್ಧಾರ ಕಾರ್ಯದಲ್ಲಿ ಕೈಹಾಕಿದ ಅವರಿಗೆ ದೇವರೇ ಬೆಂಬಲನಾದನೆಂದು ಹೇಳಬಹುದಾಗಿದೆ. ನಾದಿರ್‌ಖಾನರು ಅಲ್ಪಸ್ವಲ್ಪಾಗಿ ಜನರನ್ನು ಶೇಖರಿಸುತ್ತ ವಿಘ್ನಪರಂಪರೆಗಳಿಗೆ ಹೆದರದೆ ಬಚ್ಚಾ-ಇ-ಸಾಕೋನ ಮೇಲೆ ಯುದ್ಧಮಾಡಿ ಕಡೆಗೆ ಆ ರಾಜ್ಯವನ್ನೆಲ್ಲ ತಮ್ಮ ವಶಪಡಿಸಿಕೊಂಡು ಸದ್ಯಃ ಅಮೀರರಾಗಿ ಮೆರೆಯುತ್ತಿರುವರು. ಅವರು ಅಮೀರರಾದುದಕ್ಕೆ ಅವರಲ್ಲಿ ನೆಲೆಗೊಂಡಿರುವ ಗುಣಾತಿಶಯಗಳೇ ಕಾರಣವಲ್ಲದೆ ಬೇರೆಯಿಲ್ಲ. ನಾದಿರಖಾನರು ಪುನಃ ಅಮಾನುಲ್ಲಾಖಾನರನ್ನೇ ರಾಜರನ್ನಾಗಿ ಮಾಡಬೇಕೆಂಬ ಅಭಿಪ್ರಾಯವನ್ನು ತೋರ್ಪಡಿಸಿದರೂ ಸಹ ಜನರು ನಾದಿರ್‌ಖಾನರ ಗುಣವನ್ನೂ ಅವರು ದೇಶೋದ್ಧಾರಕ್ಕಾಗಿ ಮಾಡಿದ ಸಾಹಸಕಾರ್ಯಗಳನ್ನೂ ನೆನೆದು ಅವರನ್ನೇ ಅಮೀರರಾಗಬೇಕೆಂದು ಪ್ರಾರ್ಥಿಸಿದರು. ಅಮೀರ್ ನಾದಿರ್‌ಖಾನರು ಬಹಳ ಸರಳಸ್ವಭಾವದವರಾಗಿರುವರು. ಅವರಿಗೆ ಯಾರಲ್ಲಿಯೂ ದ್ವೇಷವಿಲ್ಲ. ಅಮೀರ್ ನಾದಿರ್‌ಖಾನರ ಕಡೆಯವರು ಬಚ್ಚಾ-ಇ-ಸಾಕೋನನ್ನು ಸೆರೆಹಿಡಿದು ತಂದರು. ಬಚ್ಚಾ-ಇ-ಸಾಕೋನು ರಾಕ್ಷಸೀ ಸ್ವಭಾವದವನಾಗಿದ್ದು ಅಸಂಖ್ಯಾತಜನರ ರಕ್ತಪಾತಕ್ಕೆ ಕಾರಣೀಭೂತನಾಗಿದ್ದಾಗ್ಯೂ ಅವನು ಕ್ಷಮಾಪಣೆಯನ್ನು ಬೇಡಿದ್ದುದರಿಂದ ನಾದಿರ್‌ಖಾನರು ಅವನನ್ನು ಕ್ಷಮಿಸಿ ಬಿಟ್ಟರು. ಆದರೆ ಅವನ ಆಳ್ವಿಕೆಯಲ್ಲಿ ನಾನಾ ವಿಧವಾದ ಕ್ಲೇಶಗಳನ್ನನುಭವಿಸಿದ್ದ ಪ್ರಜೆಗಳು ಮಾತ್ರ ಅದರಿಂದ ತೃಪ್ತರಾಗದೆ ಅವನನ್ನೂ ಅವನ ಕಡೆಯವರನ್ನೂ ಕೊಂದು ಹಾಕಿದರು. ಈ ವರ್ತಮಾನವನ್ನು ಕೇಳಿ ನಾದಿರ್ ಖಾನರು ವ್ಯಸನಾಕ್ರಾಂತರಾದರಂತೆ! ಅಂದ ಮೇಲೆ ಅವರ ಧಾರ್ಮಿಕಹೃದಯವನ್ನು ಎಷ್ಟೆಂದು ವರ್ಣಿಸಬೇಕು? ಮುಖ್ಯವಾಗಿ ಧರ್ಮದಿಂದ ಪ್ರಭುತ್ವಮಾಡುವವರೇ ಧರ್ಮಪ್ರಭುಗಳೆನಿಸುವರು. ಅಸ್ತು! ಕೆಲವು ದಿವಸಗಳಿಂದ ಅನಾಯಕವಾಗಿ ಅಸಾಧಾರಣಕಷ್ಟಕ್ಕೀಡಾಗಿದ್ದ ಅಫ್ಘಾನಿಸ್ಥಾನವು ಅಮೀರ್ ನಾದಿರ್‌ಖಾನರ ಆಳ್ವಿಕೆಯಿಂದ ಸುಖಶಾಂತಿಯನ್ನು ಹೊಂದಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಪಾಶ್ಚಾತ್ಯದೇಶಗಳಲ್ಲಿ ಸಂಚಾರಕ್ಕೆ ದಯಮಾಡಿಸಿದ್ದ ಶ್ರೀಮದ್ಯುವರಾಜರವರು ಕಳೆದ ಮಂಗಳವಾರ ರಾಜಧಾನಿಗೆ ಚಿತ್ತೈಸಿದರು.

ನಿನ್ನೆ ರಾತ್ರೆ ರಾಜಧಾನಿಯ ಅರಮನೆ ಮೋತೀಖಾನೆಯಲ್ಲಿ ಒಬ್ಬ ಕೆಲಸಗಾರನು ಎಲೆಕ್ಟ್ರಿಕ್ ಕರೆಂಟ್ ಬಡಿದು ಸ್ವಲ್ಪ ಹೊತ್ತಿನೊಳಗಾಗಿ ಮೃತಪಟ್ಟನು.

ಚಿಕ್ಕಮಗಳೂರಿನಲ್ಲಿ ಮುಂದಿನ ಜನವರಿಯಿಂದ ಡಿಸ್ಟ್ರಿಕ್ಟ್‌ಬೋರ್ಡಿನವರ ಆಶ್ರಯದಲ್ಲಿ ಒಂದು ವ್ಯವಸಾಯದ ಪಾಠಶಾಲೆಯು ಪ್ರಾರಂಭಿಸಲ್ಪಡುವುದು.

ಕೋಲಾರಕ್ಕೆ ಎಲೆಕ್ಟ್ರಿಕ್ ದೀಪಗಳನ್ನು ಹಾಕಿ ಬಹುದಿನಗಳಾಗಿತ್ತು. ಶ್ರೀಮನ್ಮಹಾರಾಜರವರು ಕಳೆದ ಮಂಗಳವಾರ ಅಲ್ಲಿಗೆ ದಯಮಾಡಿಸಿ, ಅದರ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಮೈಸೂರು ಪಟ್ಟಣದ ಸಮೀಪದ ಕಾಡುಗಳಲ್ಲಿ ಸಂಚರಿಸುತ್ತ ಗ್ರಾಮವಾಸಿಗಳಿಗೂ ದನಕರುಗಳಿಗೂ ಮೃತ್ಯುರೂಪವಾಗಿದ್ದ ಒಂದು ಚಿರತೆಯನ್ನು ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾದ ಮಿಸೆಸ್ ಡಬ್ಲ್ಯು. ಎಚ್. ಥಿಯೊಬಾಲ್ಡ್‌ರವರು ಗುಂಡುಹೊಡೆದು ಕೊಂದರೆಂದು ಕೇಳುತ್ತೇವೆ.

ಕಳೆದ ಘೋರಯುದ್ಧದ ವಾರ್ಷಿಕೋತ್ಸವವು ಈ ದಿನ ಪ್ರಪಂಚದಲ್ಲೆಲ್ಲಾ ಆಚರಿಸಲ್ಪಡುವದು. ಪ್ರತಿವರ್ಷದಂತೆ ಈ ಸಾರೆಯೂ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಸಮಸ್ತರೂ ತಮ್ಮ ಕೆಲಸಕಾರ್ಯಗಳನ್ನು ನಿಲ್ಲಿಸಿ ಎರಡು ನಿಮಿಷಗಳವರೆಗೆ ಮೌನವನ್ನವಲಂಬಿಸಬೇಕೆಂದು ನಮ್ಮ ಸರಕಾರದವರು ಪ್ರಕಟಿಸಿರುತ್ತಾರೆ.

ಭದ್ರಾವತಿ ರೇಂಜ್ ಜೋಡದಾಳುಗ್ರಾಮದ ಕಾಡಿನಲ್ಲಿ ಹುಲಿಗಳು ಬಹಳ ಹೆಚ್ಚಿರುವವು. ಫಾರೆಸ್ಟ್ ಇಲಾಖೆಯವರು ಅವುಗಳನ್ನು ಹಿಡಿಯಲು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಗುತ್ತಿರುವವು. ಕೆಲವು ದಿವಸಗಳ ಹಿಂದೆ ಬಹು ಸಾಹಸಪಟ್ಟು ಒಂದು ಭಾರೀ ಹುಲಿಯನ್ನು ಜೀವಸಹಿತ ಹಿಡಿದು ಕಳೆದ ತಿಂಗಳು ತಾ॥ 28 ರಲ್ಲಿ ಮೈಸೂರಿಗೆ ಕಳುಹಿಸಿರುತ್ತಾರೆ.

ಕೆಲವು ದಿವಸಗಳ ಹಿಂದೆ ಬೆಂಗಳೂರು ದಂಡಿನಿಂದ ಸಿಟಿಗೆ ಬಂದಿದ್ದ ಆರೋಗ್ಯಸ್ವಾಮಿ ಎಂಬಾತನು ಚಿಕ್ಕಪೇಟೆಯ ಉಡುಪಿ ಹೋಟಲಿಗೆ ಹೋಗಿ ಹೊರಕ್ಕೆ ಬರುವಾಗ ಒಬ್ಬ ಬ್ರಾಹ್ಮಣ ಹುಡುಗನ ಜೇಬಿನಿಂದ ಹಣದ ಚೀಲವನ್ನು ಕದ್ದುಕೊಳ್ಳಲಿಕ್ಕೆ ಯತ್ನಿಸಲು, ಕೂಡಲೆ ಪತ್ತೆಯಾಗಿ, ಪೋಲೀಸರಿಂದ ಬಂಧಿಸಲ್ಪಟ್ಟು ವಿಚಾರಣೆ ನಡೆಯುತ್ತಿರುವದಾಗಿ ವರ್ತಮಾನವಿದೆ.

ಈಗ್ಗೆ ಕೆಲವು ದಿವಸಗಳ ಪೂರ್ವದಲ್ಲಿ ಬೆಂಗಳೂರಿನಿಂದ ನೆಲಮಂಗಲಕ್ಕೆ ಹೋಗುತ್ತಿದ್ದ ಮೋಟಾರ್ ಬಸ್ಸು ಎದುರಾಗಿ ಬರುತ್ತಿದ್ದ ಮತ್ತೊಂದು ಬಸ್ಸಿಗೆ ಢಿಕ್ಕಿ ಹೊಡೆದು ಅನೇಕರಿಗೆ ಏಟುಗಳು ಬಿದ್ದಿದ್ದುವಷ್ಟೆ! ಅವರಲ್ಲಿ ಬಂಕಾರಾಂ ಎಂಬುವನೊಬ್ಬನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದು, ಕಳೆದ ಗುರುವಾರ ರಾತ್ರಿ ಮರಣಹೊಂದಿದನು. ಇದುವರೆಗೂ ಮೂರು ಜನರು ಈ ಕಾರಣದಿಂದ ಮೃತಪಟ್ಟಿರುವರು. ಎರಡು ಬಸ್ಸುಗಳೂ ಬಹು ರಭಸದಿಂದ ಹೋಗುತ್ತಿದ್ದುದೇ ಈ ಅನಾಹುತಕ್ಕೆ ಕಾರಣವಾಗಿದೆ. ಆ ಎರಡೂ ಮೋಟಾರ್ ಡ್ರೈವರರ ಮೇಲೂ ಖಟ್ಲೆ ನಡೆದು ವಿಚಾರಣೆಯಾಗುತ್ತಿದೆ.

ಇಂದೂರಿನ ಪ್ರಸಿದ್ಧ ಕೋಟ್ಯಧೀಶ್ವರರಾದ ರಾಜಭೂಷಣ ಸರ್ ಸೇಟ್‌ಹುಕುಂಚಂದ್ ಹುಕುಂಚಂದಜೆಯವರು ಒಂದು ನೇತ್ರ ವೈದ್ಯಶಾಲೆಯನ್ನು ಮಹಾರಾಜಾ ತುಕ್ಕೋಜಿಯವರ ಆಸ್ಪತ್ರೆಯಲ್ಲಿ ಒಂದು ಹೆರಿಗೆಯ ವಾರ್ಡನ್ನೂ ಕಟ್ಟಿಸುವದಕ್ಕೆ ಏರ್ಪಾಡು ಮಾಡಿರುತ್ತಾರೆ. ಸ್ತುತ್ಯ!

ವರ್ತಮಾನಸಂಗ್ರಹ.

ಬ್ರಿಟಿಷ್ ಮುನಿಸಿಪಲ್ ಚುನಾವಣೆಯಲ್ಲಿ ಕೂಲಿಕಾರರ ಪಕ್ಷದವರು ಮೊದಲಿಗಿಂತಲೂ 50 ಸೀಟುಗಳನ್ನು ಹೆಚ್ಚು ಪಡೆದಿರುವರು.

ಮುಂಬಯಿಯ ಮಿ. ಆರ್ಡೆಕರ್ ಇನಾಮಿ ಎಂಬ ಯುವಕನು ಕೇವಲ ಪುಸ್ತಕಗಳ ಸಹಾಯದಿಂದ 3 ವರ್ಷಗಳವರೆಗೆ ಕಷ್ಟಪಟ್ಟು "ಮಾನೋ ಪ್ಲೇನ" ಎಂಬ ವಿಮಾನವನ್ನು ಸ್ವಂತವಾಗಿ ತಯಾರಿಸಿರುವನಂತೆ!

ಬರ್ಮಾದ ರತ್ನದಗಣಿಗಳಲ್ಲಿ ದೊರೆತ ಅತ್ಯಮೂಲ್ಯವಾದ ರತ್ನವೊಂದನ್ನು ಅಮೇರಿಕೆಯ ಆಲ್ಬರ್ಟರಾಮ್ಸೆ ಯೆಂಬುವರು 6 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿರುವರಂತೆ! ಅದನ್ನು ಅರುಹುಂಡುಮಾಡಿ ವಿಕ್ರಯಿಸುವರಂತೆ!

ಭರತಖಂಡದಲ್ಲಿ ಪ್ರಕಟಿಸಲ್ಪಡಬಾರದೆಂದು ಬ್ರಿಟಿಷ್ ಸರಕಾರದಿಂದ ನಿಷೇಧಿಸಲ್ಪಟ್ಟಿರುವ ಡಾಕ್ಟರ್ ಸಂಡರ್‌ಲೆಂಡರವರು ಬರೆದ "ಹಿಂದೂದೇಶದ ದಾಸ್ಯ" ಎಂಬ ಪುಸ್ತಕವು ಅಮೇರಿಕೆಯಲ್ಲಿ ವಿಶೇಷ ಪ್ರಚಾರವನ್ನು ಹೊಂದಿ ಈಗ ಎರಡನೆಯಾವೃತ್ತಿ ಅಚ್ಚಾಗಿದೆಯಂತೆ!

ತನ್ನೆದುರಿಗೆ ಯಾವನು ಮಾತನಾಡಿದರೂ ಕೆಲವು ಸೆಕೆಂಡುಗಳೊಳಗಾಗಿ ಅದನ್ನು ಆಡಿ ತೋರಿಸುವ ಒಂದು ಹೊಸಯಂತ್ರವನ್ನು ಲಂಡನ್ನಿನಲ್ಲಿ ಶೋಧಮಾಡಿರುವರು. ಒಂದಾವರ್ತಿ ಕೇಳಿದಮಾತುಗಳನ್ನು ಅದು ಎಂದೆಂದಿಗೂ ಮರೆಯುವದಿಲ್ಲವಂತೆ!

ಆಸ್ಟ್ರಖಾನ ನಗರದಲ್ಲಿರುವ ಸೋವಿಯಟ್ ಸರ್ಕಾರದ ನ್ಯಾಯಾಧೀಶ್ವರರು ಹದಿನಾಲ್ಕು ಜನ ನೌಕರರೂ ಮತ್ತು ವ್ಯಾಪಾರಿಗಳೂ ಲಂಚವನ್ನು ತೆಗೆಕೊಂಡರೆಂಬ ಅಪವಾದನೆಯಮೇಲೆ ಎರಡು ತಿಂಗಳುಗಳಿಂದಲೂ ವಿಚಾರಣೆ ನಡೆಯಿಸಿ, ಅವರಿಗೆಲ್ಲಾ ಮರಣದಂಡನೆಯನ್ನು ವಿಧಿಸಿರುವರು!

ಪರ್ಷಿಯಾದ ಬೆಲೂಚಿಸ್ಥಾನಕ್ಕೆ ಸೇರಿದ ಖಾಷ್ ಎಂಬಲ್ಲಿ ಕಳೆದತಿಂಗಳು 22 ನೆಯ ತಾರೀಖಿನ ದಿವಸ ಆಕಾಶದಲ್ಲಿ ಅತ್ಯಂತ ಪ್ರಕಾಶಮಾನವಾದ ಜ್ವಾಲೆಯೊಂದು ಒಂದುನಿಮಿಷದವರೆಗೂ ಮೂಡಿ ಪಟ್ಟಣವನ್ನೆಲ್ಲಾ ಬೆಳಕುಮಾಡಿ ಅನಂತರ ಒಂದು ಧೂಮಕೇತುವಿನ ಆಕಾರವಾಗಿ ಗುಡುಗುಡಿಸಿ ಕೆಳಗೆ ಬಿದ್ದಿತೆಂದು ವರ್ತಮಾನವಿದೆ.

ಜರ್ಮನಿಯ ಪ್ರೊಫೆಸರ್ ಗ್ರಂಥಲ್ ಮತ್ತು ಪ್ರೊಫೆಸರ್‌ಗ್ರೇಫ್ ಎಂಬ ಶಾರೀರಕಮರ್ಮಶಾಸ್ತ್ರಜ್ಞರೀರ್ವರು ಪ್ರಾಣಿಗಳ ಮೆದುಳುಗಳನ್ನು ಶೋಧಮಾಡಿ, ಅದರಲ್ಲಿ ಒಂದು ಮುಖ್ಯವಾದ ನರವ ಚುಚ್ಚಿದಾಗ ಪ್ರಾಣಿಗಳನ್ನು ದಪ್ಪನಾಗಿ ಅಥವಾ ತೆಳ್ಳನಾಗಿ ಮಾಡಬಹುದೆಂದು ಕಂಡುಹಿಡಿದಿರುವರು. ಮನುಷ್ಯರಿಗೂ ಹೀಗೆಯೇ ಮಾಡಬಹುದೆಂದು ಈ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಿರುವರು.

ಬೊಂಬಾಯಿ ಪಟ್ಟಣದ ಕೊಲಾಬಾ ವಿಲಿಟಿರಿ ಬ್ಯಾಂಕಿನಲ್ಲಿ ಕೆಲಸಮಾಡುತ್ತಿದ್ದ ಮೂವರು ಆಂಗ್ಲೊ ಇಂಡಿಯನ್ ಸ್ತ್ರೀಯರು ಸಿಪಾಯಿಗಳನ್ನು ಬಹಿರಂಗವಾಗಿ ವ್ಯಭಿಚಾರಕ್ಕೆ ಕರೆಯುತ್ತಿದ್ದರೆಂಬ ಅಪವಾದನೆಯಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು. ಇವರನ್ನು ಬಂಧಿಸುವದಕ್ಕೆ ಹೋದಾಗ ಪೋಲೀಸರನ್ನು ಮನಸ್ವೀ ಬೈದುದಲ್ಲದೆ ಸಬ್‌ಇನ್ಸ್‌ಪೆಕ್ಟರರ ತಲೆಯಮೇಲೆ ಮದ್ಯದ ಸೀಸೆಯಿಂದ ಹೊಡೆದರಂತೆ!

ಅಫ್ಘಾನಿಸ್ಥಾನದಲ್ಲಿ ನೆಮ್ಮದಿಯುಂಟಾಗಿದೆ. ಹೊಸ ಅಮೀರ್‌ನಾದಿರ್‌ಖಾನರು ಬೇರೆ ಬೇರೆ ಇಲಾಖೆಗಳ ಮಂತ್ರಿಗಳನ್ನು ನೇಮಕಮಾಡಿರುತ್ತಾರೆ. ಅದರಲ್ಲಿ ಹಿಂದಿನ ಅಮೀರ್ ಅಮಾನುಲ್ಲರ ಕಾಲದ ಕೆಲವು ಮಂತ್ರಿಗಳನ್ನು ನೇಮಕಮಾಡಿಕೊಂಡಿರುತ್ತಾರೆ. ಇದುವರೆಗೆ ನಡೆದ ಗಲಾಟೆಗಳಿಂದ ಅಲ್ಲಿಗೂ ಇತರ ದೇಶಗಳಿಗೂ ನಡೆಯುತ್ತಿದ್ದ ವ್ಯಾಪಾರಗಳೆಲ್ಲಾ ನಿಂತುಹೋಗಿದ್ದುವು. ಈಗ ಅವು ಪುನಃ ಎಂದಿನಂತೆ ಪ್ರಾರಂಭವಾಗಿವೆ.

ಮುಂಬಯಿ ಪ್ರಾಂತದ ಪೂರ್ವಖಾನದೇಶದ ಪರೋಲ ತಾಲೂಕಿನಲ್ಲಿ ಕಳೆದ ತಿಂಗಳು 22 ನೆಯ ತಾರೀಖಿನ ದಿವಸ ಹಿಂದೂಮುಸಲ್ಮಾನರಿಗೆ ಹೊಡೆದಾಟವಾಗಿ 6 ಮಸೀದಿಗಳು ಹಾಳುಮಾಡಲ್ಪಟ್ಟಿರುವವಂತೆ! ಹಿಂದುಗಳು ಕೆಲವು ಮುಸಲ್ಮಾನರ ಮನೆಗಳಿಗೆ ನುಗ್ಗಿ ಹಾಳುಮಾಡಿರುವರೆಂದೂ, 40 ಜನರು ಮರಣಾವಸ್ಥೆಯಲ್ಲಿರುವರೆಂದೂ, ಪೋಲೀಸರು ದಕ್ಷತೆಯಿಂದ ಗಲಾಟೆಯನ್ನು ನಿಲ್ಲಿಸಿ 20 ಜನರನ್ನು ಖೈದುಮಾಡಿರುವರಂತೆ!

ರಷ್ಯಾದಲ್ಲಿ ಚುಂಬನದ ಬಗ್ಗೆ ಒಂದು ಹೊಸ ಚಳವಳಿಯು ಎದ್ದಿರುವದು. ಚುಂಬಿಸುವದರಿಂದ ನಾನಾ ರೋಗಗಳು ಹುಟ್ಟುವವಾದಕಾರಣ ಇನ್ನು ಮುಂದೆ ಸ್ತ್ರೀಪುರುಷರು ಚುಂಬಿಸುವದನ್ನು ತಪ್ಪಿಸಬೇಕೆಂಬುದೇ ಈ ಚಳವಳಿಯ ಉದ್ದೇಶವಾಗಿರುವುದು. ಚುಂಬಿಸುವದರಿಂದ ಆಗುವ ಅಪಾಯಗಳನ್ನು ಅನೇಕ ಚಿತ್ರಪಟಗಳ ಮೂಲಕ ಪ್ರದರ್ಶಿಸುತ್ತಿರುತ್ತಾರೆ. ಪ್ರತಿಯೊಂದು ಪಟ್ಟಣದಲ್ಲಿಯೂ ಚುಂಬನವಿರೋಧಸಂಘದ ಶಾಖೆಗಳು ಸ್ಥಾಪಿಸಲ್ಪಟ್ಟಿರುತ್ತವೆ.

ಖೂನಿಮಾಡಿದವರನ್ನು ಗಲ್ಲಿಗೆ ಹಾಕುವದು ಎಲ್ಲಾ ದೇಶಗಳಲ್ಲೂ ಪದ್ಧತಿಯಾಗಿದೆ. ಆದರೆ ಇಂಗ್ಲಂಡಿನಲ್ಲಿ ಕೆಲವು ಮುಖಂಡರು ಈ ಮರಣದಂಡನೆಯ ಶಿಕ್ಷೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಅನೇಕವರ್ಷಗಳಿಂದ ಪ್ರಯತ್ನಪಡುತ್ತಿದ್ದಾರೆ. ಅಮೇರಿಕೆಯ ಕೆಲವು ರಾಜ್ಯಗಳಲ್ಲಿ ಮರಣದಂಡನೆಯ ಶಿಕ್ಷೆಯನ್ನು ನಿಲ್ಲಿಸಿರುವದರಿಂದ ಆ ದೇಶಗಳಲ್ಲಿ ಖೂನಿಗಳಾಗುವದು ಹೆಚ್ಚಿರುವದಿಲ್ಲವೆಂದು ಅಭಿಪ್ರಾಯಪಡುವವರು ಹೆಚ್ಚುತ್ತಾ ಬಂದಿರುವದರಿಂದ ಬ್ರಿಟಿಷ್ ಪಾರ್ಲಿಮೆಂಟಿನವರು ಈ ವಿಷಯವಾಗಿ ಪರ್ಯಾಲೋಚಿಸಿ ವರದಿಯನ್ನೊಪ್ಪಿಸುವಂತೆ ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ.

ಲಂಡನ್ ನಗರದಲ್ಲಿ ಈಚೀಚೆಗೆ ವಯಸ್ಸಾದ ಸ್ತ್ರೀಯರು ಪ್ರಾಯದ ಹುಡುಗರನ್ನು ಮದುವೆಮಾಡಿಕೊಳ್ಳುವುದು ಹೆಚ್ಚುತ್ತಿದೆ. ಈ ಸಾರೆ ವಿವಾಹಗಳ ರಿಜಿಸ್ಟ್ರಾರ್‌ರವರು ಹೊರಡಿಸಿರುವ ವರದಿಯ ಪ್ರಕಾರ 30 ವರ್ಷ ವಯಸ್ಸಿನ 21 ಜನ ಸ್ತ್ರೀಯರು 22 ವರ್ಷದ ಯುವಕರನ್ನೂ, 30 ವರ್ಷದ ಇನ್ನೊಬ್ಬ ಸ್ತ್ರೀಯಳು 17 ವರ್ಷದ ತರುಣನನ್ನೂ, 40 ಮತ್ತು 41 ವರ್ಷದ ಇಬ್ಬರು ಸ್ತ್ರೀಯರು 20 ವರ್ಷದ ತರುಣರನ್ನೂ, 40 ರಿಂದ 52 ವರ್ಷದ ವರೆಗಿನ 17 ಜನ ಸ್ತ್ರೀಯರು 22 ವರ್ಷದ ತರುಣರನ್ನೂ ಮದುವೆಯಾಗಿರುವರಂತೆ! ಸುಧಾರಿಸಿದ ರಾಷ್ಟ್ರಪದ್ಧತಿ!

ಧಾರವಾಡ ಡಿಸ್ಟ್ರಿಕ್ಟಿಗೆ ಸೇರಿದ ಗದಗಪಟ್ಟಣದಲ್ಲಿ ಮಿ॥ ಬಳವಂತರಾವ ನೀಲಗುಂದಕರ ಎಂಬೋರ್ವ ವಕೀಲರಿರುವರು. ಇವರು ಪ್ಲೀಡರರಾದಾಗ್ಯೂ ಇವರಲ್ಲಿರುವ ಮೇಧಾಶಕ್ತಿ, ಲಾ (ಕಾಯಿದೆ) ಪಾಂಡಿತ್ಯ, ವಿಷಯವಿವೇಚನೆ, ದೀರ್ಘಾಲೋಚನೆ, ಸಾರಾಸಾರ ವಿಚಾರಶೀಲತೆ, ಭಾವಿಪರಿಣಾಮಪರಿಜ್ಞಾನ, ಕೇಸು ನಡೆಯಿಸತಕ್ಕ ಸುವ್ಯವಸ್ಥಿತಪದ್ಧತಿ ಯುಕ್ತಿಪ್ರಯುಕ್ತಿ, ಬುದ್ಧಿಚಾತುರೀ ಮೊದಲಾದವುಗಳನ್ನು ನೋಡಿದರೆ ಇದು ಭಗವತ್ಕೃಪೆಯೇ ಎಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಇಂಥ ಅಪೂರ್ವ ಬುದ್ಧಿಶಾಲಿಗಳಿಗೆ ಜಗದೀಶ್ವರನು ಚಿರಾಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇವೆ.

ಪಾಶ್ಚಿಮಾತ್ಯದೇಶಗಳಲ್ಲಿ ವಿವಾಹವಿಮೋಚನೆಗಳು ಹೆಚ್ಚುತ್ತಿರುವುವು. ಈಗ್ಗೆ ಕೆಲವು ವರ್ಷಗಳ ಪೂರ್ವದಲ್ಲಿ ಇಂಗ್ಲಂಡಿನಲ್ಲಿ ವರ್ಷಕ್ಕೆ ಸುಮಾರು 40 ವಿವಾಹವಿಮೋಚನೆಗಳು ನಡೆಯುತ್ತಿದ್ದುವು. ಬರಬರುತ್ತ ಇದು ಹೆಚ್ಚಿ, 1927 ನೆಯ ಇಸವಿಯಲ್ಲಿ ಸುಮಾರು 3,200 ವಿವಾಹವಿಮೋಚನೆಗಳಾದವು. 1928 ರಲ್ಲಿ 3,940 ವಿವಾಹವಿಮೋಚನೆಗಳಾಗಿ, 1929ರಲ್ಲಿ 4,100 ಕ್ಕೆ ಏರಿಹೋಯಿತು! ಅಂದರೆ 144 ವಿವಾಹಗಳಿಗೆ ಒಂದರಂತೆ ವಿಮೋಚನೆಯಾದಂತಾಯಿತು. ಅಮೇರಿಕೆಯಲ್ಲಿ 7 ವಿವಾಹಗಳಿಗೆ ಒಂದರಂತೆ ವಿಮೋಚನೆಯಾಗುವದಂತೆ! ಈಗ ಪಾಸಾಗಿರುವ ಶಾರದಾ ಬಿಲ್ಲಾದರೂ ಮುಂದೆ ಭರತಖಂಡದಲ್ಲಿ ಇದೇ ಸಂಪ್ರದಾಯವನ್ನು ನೆಲೆಗೊಳಿಸುವದು.

ಹಿಮಾಲಯ ಪರ್ವತದ ಎತ್ತರಪ್ರದೇಶಗಳಲ್ಲಿ ಮನುಷ್ಯಪ್ರಾಣಿಗಳಾವುವೂ ಬದುಕುವುದೇ ಇಲ್ಲವೆಂದು ಇದುವರೆಗಿನ ಶೋಧಕರು ಅಭಿಪ್ರಾಯಪಡುತ್ತಿದ್ದರು. ಆದರೆ ಈಚೆಗೆ ಕೆಲವುಜನ ಜರ್ಮನಿಯ ಶೋಧಕರು ಹಿಮಾಲಯದ ಅತ್ಯುನ್ನತವಾದ ಶಿಖರಗಳಲ್ಲಿ ಒಂದು ಜಾತಿಯ ಮನುಷ್ಯರು ವಾಸಿಸುವರೆಂಬುದನ್ನು ಕಂಡು ಹಿಡಿದಿರುವರು. ಆ ಶೋಧಕರು ಪರ್ವತವನ್ನು ಏರುತ್ತಿದ್ದಾಗ ಒಂದುಕಡೆ ಕೋಳಿಗಳ ಕೂಗು ಕೇಳಿಸಿತಂತೆ! ಅದರ ಕಾರಣವನ್ನು ತಿಳಿಯುವ ಕುತೂಹಲದಿಂದ ಶೋಧಕರು ಮತ್ತೂ ಮೇಲಕ್ಕೆ ಹತ್ತಿ ನೋಡಲು ಮಂಜುಗಡ್ಡೆಯಂತೆ ಮೈ ಬಣ್ಣವುಳ್ಳ ಕೆಲವು ಜನ ಮನುಷ್ಯರನ್ನು ಕಂಡರಂತೆ! ಅವರ ಮಾತುಗಳು ಕೋಳಿಗಳಂತೆ ವಿಕಾರವಾಗಿರುವವಂತೆ!

ಕಲ್ಕತ್ತೆಯಲ್ಲಿ ಶಿವನಾರಾಯಣನೆಂಬುವನು ಕೇದಾರನಾಥಪೋದ್ದಾರ್ ಎಂಬ ಮಾರ್ವಾಡಿಯನ್ನು ಒಂದು ಮನೆಯೂ ತೋಟವೂ ಮಾರಾಟಕ್ಕಿರುವದೆಂದು ಹೇಳಿ ಕರೆದೊಯ್ದನು. ಕೇದಾರನಾಥನು ಮನೆಯ ಕಾಂಪೌಂಡಿನೊಳಗೆ ಹೋದಾಗ ಅಲ್ಲಿ ಒಬ್ಬ ಸ್ತ್ರೀಯಳಿದ್ದಳು. ಅಷ್ಟರಲ್ಲಿ ಮನೆಯ ಯಜಮಾನನು ಸಿಟ್ಟಿನಿಂದ ಹೊರಕ್ಕೆ ಬಂದು ತನ್ನ ಮನೆಯಲ್ಲಿ ಅನೇಕದಿವಸಗಳಿಂದ ಕಳ್ಳತನ ನಡೆಯುತ್ತಿರುವುದೆಂದೂ, ಕೇದಾರನಾಥನೇ ಕಳ್ಳನೆಂದು ಗದರಿಸಿ, ಆ ಹೆಂಗಸು ಯಾರೆಂದು ಕೇಳಿದನು. ತಾನು ಮಾನವಂತಸ್ತ್ರೀಯಳೆಂದೂ, ಕೇದಾರನಾಥನೇ ತನ್ನನ್ನು ಬರಹೇಳಿದನೆಂದೂ ಅವಳು ಹೇಳಲು ಯಜಮಾನನು ಮತ್ತಷ್ಟು ರೇಗಿ ಪೋಲೀಸರನ್ನು ಕರೆಕಳುಹಿಸಲು ಪೋಲೀಸರು ಬಂದು ಕೇದಾರನಾಥನನ್ನು ಬಂಧಿಸಿ ಸ್ಟೇಷನ್ನಿಗೆ ಕರೆದುಕೊಂಡುಹೋಗುವಷ್ಟರಲ್ಲಿ ಶಿವನಾರಾಯಣನು ಮಧ್ಯಸ್ತಿಕೆಮಾಡಿದನು. ಯಜಮಾನನು ಸ್ವಲ್ಪವೂ ಶಾಂತನಾಗದೆ ತನಗೆ 2000 ರೂ. ಗಳ ಪರಿಹಾರದ್ರವ್ಯವನ್ನು ಕೊಡಬೇಕೆಂದು ಹೇಳಲು, ಕೇದಾರನಾಥನು ಆಗ ತನ್ನ ಬಳಿಯಲ್ಲಿದ್ದ 200 ರೂ. ಗಳನ್ನು ಕೊಟ್ಟು ಉಳಿದ ಹಣಕ್ಕೆ ಕಾಗದವನ್ನು ಬರೆದುಕೊಟ್ಟು ಬಂದನು. ಈಗ ಇದರ ಸಂಬಂಧವಾಗಿ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ. ಹೀಗೆ ಸ್ತ್ರೀಯರ ಮೂಲಕ ಜನರನ್ನು ವಂಚಿಸುವ ಒಂದು ದೊಡ್ಡ ಸಂಗಡವೇ ಕಲ್ಕತ್ತೆಯಲ್ಲಿರುವದಂತೆ!

ಹಿಂದುಸ್ಥಾನದಿಂದ ಕಾಗದಪತ್ರಗಳನ್ನು ಪ್ರಯಾಣಿಕರ ಸಮೇತ ಇಂಗ್ಲಂಡಿಗೆ ತೆಗೆದುಕೊಂಡು ಹೋಗುತ್ತಿದ್ದ ಒಂದು ವಿಮಾನಯಂತ್ರವು ಇಟಲಿಯ ಸಮೀಪದಲ್ಲಿ ಸಮುದ್ರದ ಮೇಲೆ ಅಕಸ್ಮಾತ್ತಾಗಿ ಬಿದ್ದು ನಾಶವಾಯಿತೆಂಬ ವಿಷಯವನ್ನು ಕಳೆದವಾರ ತಿಳುಹಿಸಿದ್ದೆವಷ್ಟೆ! ಆ ವಿಮಾನಯಂತ್ರವು ಅಂತರಿಕ್ಷದಲ್ಲಿ ಹೋಗುತ್ತಿದ್ದಾಗ ಸುಂಟರಗಾಳಿಗೆ ಸಿಕ್ಕು ಸಮುದ್ರಕ್ಕೆ ಇಳಿದು ಬಿಟ್ಟಿತು. ಆ ಕೂಡಲೆ ಅದರೊಳಗಿದ್ದವರು ತಮಗೆ ಅಪಾಯ ಸಂಭವಿಸಿದೆ ಎಂದು ತಂತಿಗಳಿಲ್ಲದ ಸಾಧನದಿಂದ ಎಲ್ಲಾ ಕಡೆಗೂ ವರ್ತಮಾನವನ್ನು ಕೊಟ್ಟರು. ಆ ಸುದ್ದಿಯನ್ನು ಒಂದು ಇಟಲಿ ಹಡಗಿನೊಳಗಿದ್ದವರು ತಿಳಿದು ಆ ವಿಮಾನಯಂತ್ರವನ್ನು ಹುಡುಕಿಕೊಂಡು ಹೋಗಿ ಅದನ್ನು ಕಂಡುಹಿಡಿದು ಅದರೊಳಗಿದ್ದವರನ್ನು ಹಡಗಿನೊಳಕ್ಕೆ ಕರೆದುಕೊಳ್ಳಬೇಕೆಂದು ಸಾಹಸಪಡಲು ಸಮುದ್ರದಲ್ಲಿ ಅಲ್ಲೋಲಕಲ್ಲೋಲವಾಗುವಂತೆ ಅಲೆಗಳೆದ್ದ ಕಾರಣ ಅದು ಸಾಧ್ಯವಾಗದೆ ಹೋಯಿತು. ಆಗ ಹಡಗಿನವರು ವಿಮಾನಯಂತ್ರಕ್ಕೆ ಹಗ್ಗವನ್ನು ಬಿಗಿದು ಅದನ್ನು ಸಮುದ್ರದ ಮೇಲೆ ಎಳೆದು ತೀರಕ್ಕೆ ತರುತ್ತಿದ್ದರು. ಆ ಸಮಯದಲ್ಲಿ ಅಕಸ್ಮಾತ್ತಾಗಿ ಹಗ್ಗವು ಕಿತ್ತುಹೋಗಿ ವಿಮಾನಯಂತ್ರವು ಸಮುದ್ರದಲ್ಲಿ ಮುಳುಗಿಕೊಂಡಿತು. ಆ ಸ್ಥಳದಲ್ಲಿ ನೀರು ಸುಮಾರು 300 ಅಡಿಯಷ್ಟು ಆಳವಾಗಿದ್ದುದರಿಂದ ಆ ಯಂತ್ರವನ್ನು ಸಮುದ್ರದೊಳಗಿಂದ ಮೇಲಕ್ಕೆತ್ತುವುದು ಸಾಧ್ಯವಾಗಲಿಲ್ಲ. ಆ ವಿಮಾನಯಂತ್ರದೊಳಗಿದ್ದ ಏಳು ಜನರೂ ಸಮುದ್ರದಲ್ಲಿ ಮುಳುಗಿಹೋದರು. ಅದರಲ್ಲಿ ನಾಲ್ವರ ಶವಗಳು ಈಚೆಗೆ ಸಿಕ್ಕಿರುವವು. ಈಗ ವಿಮಾನಯಂತ್ರಗಳು ಹೋಗಿಬರುವ ಮಾರ್ಗವನ್ನು ಸ್ವಲ್ಪ ಬದಲಾವಣೆ ಮಾಡಿರುತ್ತಾರೆ. ಅದರಿಂದ ಅವು ಸುಂಟರಗಾಳಿಗೆ ಸಿಕ್ಕುವ ಸಂಭವ ತಪ್ಪಿಹೋದಂತೆ ತಿಳಿಸಲಾಗಿದೆ. ಇನ್ನು ಕೆಲವು ಕಾಲದವರೆಗೆ ಪ್ರಯಾಣಿಕರಾರನ್ನೂ ಈ ವಿಮಾನಯಂತ್ರಗಳಲ್ಲಿ ಕೂಡ್ರಿಸಿ ಕರೆದುಕೊಂಡುಹೋಗದಂತೆ ನಿಲ್ಲಿಸಿರುತ್ತಾರೆ. ಯಾಕಂದರೆ ವಿಮಾನಯಂತ್ರಗಳ ಮಾರ್ಗವು ಬದಲಾವಣೆಯಾಗಿರುವುದರಿಂದ ಅವು ನಿಲ್ಲುವ ಸ್ಥಳಗಳಲ್ಲಿ ಅನುಕೂಲವಾದ ವಸತಿಗಳನ್ನು ಏರ್ಪಾಡುಮಾಡಬೇಕಾಗಿರುವುದೆಂದು ಪ್ರಕಟವಾಗಿದೆ.

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು:—ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಬೃಹನ್ಮಠ ವಿಜಾಪುರ.

ಧರ್ಮ ಎಂಬ ಈ ಶಬ್ದವು '**ಧೃ**' ಧಾತುವಿನಿಂದಾಗಿದೆ; ಈ ಧಾತುವಿನ ಅರ್ಥವು—(೧) ಜೀವನ ಧಾರಣಮಾಡುವಿಕೆ, ಬದುಕುವಿಕೆ; (೨) ಇರುವಿಕೆ, (೩) ಧರಿಸುವುದು, ಆಧಾರವಾಗುವಿಕೆ, (೪) ಅಧಿಕಾರವನ್ನು ನಡೆಯಿಸುವಿಕೆ, ತನ್ನದನ್ನಾಗಿ ಮಾಡಿಟ್ಟುಕೊಳ್ಳುವಿಕೆ; (೫) ಉಪಯೋಗಮಾಡುವಿಕೆ, (೬) ಅಭ್ಯಾಸಮಾಡುವಿಕೆ, (೭) ಇಡುವಣ, ಇರಿಸುವಿಕೆ; ಎಂಬುದಾಗಿ ಉಂಟು.

ಪಾಣಿನಿಯು ತಾನು ಬರೆದ ಧಾತು ಪಾಠದಲ್ಲಿ '**ಧೃ**' ಧಾತುವಿಗೆ 'ಧಾರಣೆ-ಪೋಷಣೆ-ಅವಸ್ಥಾನೆ' ಎಂಬ ಅರ್ಥಗಳನ್ನು ತೋರಿಸಿದ್ದಾನೆ; ಈ ಮೂಲ ಅರ್ಥಗಳನ್ನು ಅನುಸರಿಸಿಯೇ ಸಂಸ್ಕೃತಭಾಷೆಯಲ್ಲಿ ಈ ಧಾತುವು ಮೇಲೆ ತೋರಿಸಿದ ಆರು ಏಳು ಅರ್ಥಗಳಲ್ಲಿಯೂ ಉಪಯೋಗಿಸಲ್ಪಡುತ್ತದೆ. ಈ ಮೂಲ ಅರ್ಥದಕಡೆ ಲಕ್ಷ್ಯಗೊಟ್ಟರೆ, **ಧರ್ಮ** ಶಬ್ದದ ಧಾತ್ವರ್ಥವು ಹೀಗೆ ಸಿದ್ಧಿಸುವುದು:—

ಮನುಷ್ಯನು ಈ ಜಗತ್ತಿನಲ್ಲಿ (೧) ಸರಿಯಾಗಿ ಬದುಕಲು ಅಂದರೆ ತನ್ನ ಜೀವನ ಕ್ರಮವನ್ನು ಸುವ್ಯವಸ್ಥೆಯಿಂದ ನಡೆಯಿಸುವುದಕ್ಕಾಗಿಯೂ, (೨) ಈ ಭೂಮಿಯ ಮೇಲೆ ಇಷ್ಟಾನುಸಾರವಾಗಿರುವುದಕ್ಕಾಗಿಯೂ, (೩) ತನ್ನ ಅಸ್ತಿತ್ವದ ಧಾರಣಪೋಷಣಗಳನ್ನು ಮಾಡಿಕೊಳ್ಳುವದಕ್ಕಾಗಿಯೂ, ಮತ್ತು ಬಡಬಗ್ಗರಿಗೆ ಆಸರಕೊಡುವದಕ್ಕಾಗಿಯೂ; (೪) ಈ ಜಗತ್ತಿನಲ್ಲಿ ತನ್ನ ಅಧಿಕಾರವನ್ನು ನಡೆಯಿಸಲಿಕ್ಕಾಗಿಯೂ, ಈ ಜಗತ್ತನ್ನು ತನ್ನದನ್ನಾಗಿ ಮಾಡಿಕೊಳ್ಳುವುದಕ್ಕಾಗಿಯೂ, (೫) ಈ ಜಗತ್ತನ್ನು ಸರಿಯಾಗಿ ಉಪಯೋಗಮಾಡಿಕೊಳ್ಳುವದಕ್ಕಾಗಿಯೂ, (೬) ಜಗತ್ತಿನ ಸತ್ಯನಿಯಮವೇನಿರುವುದೆಂಬುದನ್ನು ಅರಿತುಕೊಂಡು ಅದನ್ನು ಅಭ್ಯಾಸಿಸುವುದಕ್ಕಾಗಿಯೂ, (೭) ಒಟ್ಟಿನಮೇಲೆ ಎಲ್ಲ ವಿಧದಿಂದಲೂ ತನ್ನ ರಕ್ಷಣೆಯಾಗಬೇಕೆಂಬುದಕ್ಕಾಗಿ ಯಾವ ಯಾವ ಉತ್ತಮನಿಯಮಗಳನ್ನು ಪಾಲಿಸಬೇಕಾದ ಆವಶ್ಯಕತೆಯುಂಟೋ ಆಯಾ ನಿಯಮಗಳಿಗೆ **ಧರ್ಮ**ವೆನ್ನತಕ್ಕದ್ದು.

ಹೀಗೆ, ಧರ್ಮಶಬ್ದದ ಮೂಲ ಅರ್ಥವನ್ನು ಕಂಡುಕೊಂಡುವಾಯಿತಷ್ಟೇ! ಇನ್ನು ಸಂಸ್ಕೃತಭಾಷೆಯಲ್ಲಿ **ಧರ್ಮ** ಶಬ್ದದ ರೂಢಗಳಾದ ಅರ್ಥಗಳೇನಿವೆಯೋ ಅವನ್ನಷ್ಟು ನೋಡಬೇಕಾಗಿದೆ;—(೧) ನಿಯಮ, (೨) ಬಳಕೆಯಲ್ಲಿರುವ ನಿಯಮ, (೩) ನೀತಿನಿಯಮ, ಸದ್ಗುಣ, ಆಕುಟಿಲವ್ಯವಹಾರ; (೪) ಕರ್ತವ್ಯಕರ್ಮ, ಪ್ರಾಪ್ತವಾದ ಕರ್ತವ್ಯ; (೫) ನ್ಯಾಯ್ಯತ್ವ, ಪಕ್ಷಪಾತರಾಹಿತ್ಯವು; (೬) ಸದಾಚಾರ, ಶುದ್ಧವಾದ ನಡತೆ, ನಿರ್ಮಲ ವೃತ್ತಿ; (೭) ಸ್ವಭಾವ, ಶೀಲ, ಸಚ್ಛೀಲ; (೮) ವಿಶೇಷಗುಣ, (೯) ಸ್ವಾರ್ಥತ್ಯಾಗ, (೧೦) ಈಶ್ವರ ಭಕ್ತಿಯು, ಎಂಬೀ ಧರ್ಮಶಬ್ದದ ರೂಢವಾದ ಅರ್ಥಗಳನ್ನೂ ಮೇಲೆ ಹೇಳಿದ ಮೂಲಧಾತುವಿನ ಅರ್ಥಗಳನ್ನೂ ಪರಿಭಾವಿಸಿದರೆ ಎರಡೂ ಅರ್ಥಗಳಲ್ಲಿಯ ಸಂಬಂಧವು ಕೂಡಲೇ ಮನವರಿಕೆಯಾಗದಿರದು. '**ಧೃ**' ಎಂಬ ಧಾತುವಿನ ಅರ್ಥಗಳಲ್ಲಿ ಆವಾವುದು ಸಂಶಯಾಸ್ಪದವಾಗಿದ್ದಿತೋ ಅದೆಲ್ಲವೂ ಈ ರೂಢವಾದ ಅರ್ಥಗಳಲ್ಲಿ ಬಹುಸ್ಪಷ್ಟವಾಗಿ ತಿಳಿಯಲ್ಪಡುವುದು. ಮೇಲಿನ ಎರಡೂ ಅರ್ಥಗಳನ್ನು ಒಟ್ಟುಗೂಡಿಸಿದರೆ ಕೊನೆಗೆ ತಿಳಿಯಬರುವುದಿಷ್ಟೆ! ಪ್ರತಿಯೊಬ್ಬ ಮನುಷ್ಯನು ಆದಿಭೌತಿಕ ಸುಖ (ಅಭ್ಯುದಯ) ವನ್ನೂ ಆಧ್ಯಾತ್ಮಿಕ ಸುಖ (ನಿಃಶ್ರೇಯಸ) ವನ್ನೂ ಪಡೆವುದಕ್ಕಾಗಿ ಆಚರಿಸಬೇಕಾದ ನೀತಿನಿಯಮ, ಸದಾಚಾರ, ಈಶ್ವರಭಕ್ತಿ ಎಂಬಿವುಗಳೇ ಧರ್ಮಾಚರಣಗಳೆನಿಸುವುವು. ಈ ಅರ್ಥವನ್ನು ಅನುಲಕ್ಷಿಸಿಯೇ ಕಣಾದ ಮಹರ್ಷಿಯು ಧರ್ಮಲಕ್ಷಣವನ್ನು ಹೀಗೆ ನಿರೂಪಿಸಿದ್ದಾನೆ:

ಯತೋಽಭ್ಯುದಯ ನಿಃಶ್ರೇಯಸಸಿದ್ಧಿಃಸಧರ್ಮಃ

(ವೈಶೇಷಿಕ ದರ್ಶನ ೧—೨)

ಅವುದರಿಂದ ಅಭ್ಯುದಯ ನಿಃಶ್ರೇಯಸ್ಸುಗಳು ಸಿದ್ಧಿಸುವುವೋ ಅದು ಧರ್ಮವೆನಿಸುವುದು. ಅಭ್ಯುದಯವೆಂದರೆ, ಈ ಜಗತ್ತಿನಲ್ಲಿಯ ಉತ್ಕರ್ಷವು. ಅಂದರೆ ಮನುಷ್ಯನಿಗೆ ಶಕ್ಯವಾದಮಟ್ಟಿಗೆ ಸಾಮಾಜಿಕ, ರಾಷ್ಟ್ರೀಯ, ಔದ್ಯೋಗಿಕ ಮುಂತಾದುದರ ಸಂಬಂಧವಾದ ಸಾರ್ವಭೌತಿಕಪ್ರಗತಿಯು; ನಿಃಶ್ರೇಯಸ್ಸು ಎಂದರೆ ಆತ್ಮಿಕ ಉನ್ನತಿಯು; ಹೀಗೆ ಸೂತ್ರದ ಅರ್ಥಾನುಸಾರವಾಗಿ ಧರ್ಮದಲ್ಲಿ ಆದಿಭೌತಿಕಸುಖವನ್ನು ಪ್ರಾಪ್ತಿಮಾಡಿಕೊಳ್ಳುವ ಮಾರ್ಗವೂ ಅದರೊಂದಿಗೆ ಆಧ್ಯಾತ್ಮಿಕಾನಂದವನ್ನು ಪಡೆವ ಸಾಧನವೂ ಎಂಬೆರಡರ ಸಮಾವೇಶವಾಗುವುದು. ಒಟ್ಟಿನಮೇಲೆ, ಧರ್ಮವೆಂಬ ಶಬ್ದದ ಎದೆಯೊಳಗಣ ತಿರುಳು ಹೀಗಿದೆ:—ಮನುಷ್ಯನು ನಿಜವಾದ ಧರ್ಮನಿಯಮದಂತೆ ನಡೆದರೆ, ಹಾಗೂ ರಾಷ್ಟ್ರದಲ್ಲಿಯ ಎಲ್ಲ ಜನವು ಈ ಸತ್ಯಧರ್ಮದಂತೆ ತಮ್ಮ ನಡತೆಯುಳ್ಳದ್ದಾದರೆ, ಆ ಮನುಷ್ಯನಾಗಲಿ ಆ ರಾಷ್ಟ್ರವಾಗಲಿ ಆದಿಭೌತಿಕೋನ್ನತಿಯನ್ನೂ ಆಧ್ಯಾತ್ಮಿಕೋನ್ನತಿಯನ್ನೂ ನಿಶ್ಚಯವಾಗಿ ಪಡೆಯಬಹುದು. ಎಂದರೆ ಧರ್ಮದಂತೆ ನಡೆವ ರಾಷ್ಟ್ರವೂ ಧರ್ಮಕ್ಕೆ ಸರಿಯಾಗಿ (ಧರ್ಮವನ್ನು ಅತಿಕ್ರಮಣಮಾಡದೆ) ತನ್ನ ಆಚರಣೆಯನ್ನಿಟ್ಟುಕೊಂಡಿರುವ ಮನುಷ್ಯನು ಐಹಿಕ ಪಾರಮಾರ್ಥಿಕೋನ್ನತಿಮಾರ್ಗಕ್ಕೆ ದೂರವಾಗಿರುವದು ಶಕ್ಯವಿಲ್ಲ.

ಕೆಲಬರು ತಾವು ಮಾಡುತ್ತಿರುವ ಎಂತಹದಾದರೂ ಆಚರಣವನ್ನು ತಪ್ಪು ತಿಳುವಳಿಕೆಯಿಂದ 'ಧರ್ಮ'ವೆಂದು ನಂಬಿ, ನಿಜವಾದ ಧರ್ಮದ ಹೆಸರಿನಿಂದ ಆಚರಿಸುತ್ತಿರುವ ಅವರ ನಡವಳಿಕೆಯು ಅವನತಿಗೆ ಕಾರಣವಾಗುವುದು; ಇದಾದರೂ ನಿಜವಾದ ಧರ್ಮದ ದೋಷವಲ್ಲ; ಮತ್ತೇನೆಂದರೆ ಆ ಮನುಷ್ಯರ ಅಜ್ಞಾನ ದೋಷವು; ಆದ್ದರಿಂದ ಧರ್ಮವನ್ನು ಆಚರಿಸಬೇಕೆನ್ನುವವರೂ ಧರ್ಮಕ್ಕೆ ಥಟ್ಟನೆ ಏನಾದರೊಂದು ಹೆಸರಿಟ್ಟು ಮೂಗುಮುರಿವವರೂ ನಿಜವಾದ ಧರ್ಮವೆಂದರೆ ಆವುದು? ಹಾಗೂ ಧರ್ಮದ ಆಭಾಸವೆಂದರೆ ಆವುದು? ಎಂಬೀ ಬಗ್ಗೆ ಮೊದಲೇ ವಿಚಾರಿಸುವುದು ಅತ್ಯಂತಾವಶ್ಯಕವಾದುದು.

ನಿಜವಾದ ಧರ್ಮದ ಮೈಮೆಯನ್ನು ಉಪನಿಷತ್ತುಗಳು ಹೀಗೆ ಕೊಂಡಾಡುವುವು:—

ಧರ್ಮಾತ್ಪರಂ ನಾಸ್ತಿ | ಬೃಹದಾರಣ್ಯಕ ೧-೪-೧೪ ಧರ್ಮಕ್ಕಿಂತಲೂ ಅಧಿಕವಾದುದು ಬೇರೊಂದಿಲ್ಲ.

ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ | ಮಹಾನಾರಾಯಣ ೨-೬ ಶುದ್ಧಜ್ಞಾನ ಕ್ರಿಯಾತ್ಮಕ ಧರ್ಮವೇ ವಿಶ್ವಪ್ರಪಂಚಕ್ಕೆ ಆಧಾರವಾಗಿದೆ.

ಧರ್ಮಾನ್ನಪ್ರಮದಿತವ್ಯಮ್ | ತೈತ್ತಿರೀಯ ೧-೧೧-೧ ಧರ್ಮಾಚರಣೆಯ ವಿಷಯದಲ್ಲಿ ಪ್ರಮಾದವು ಸಲ್ಲದು; ಎಂದರೆ ನಿಜವಾದ ಧರ್ಮಾಚರಣೆಯನ್ನು ಎಂದೂ ಬಿಡಲಾಗದು.

X ನಿಜವಾದ ಧರ್ಮವು ಸರ್ವಕ್ಕೂ ಆಧಾರವಾಗಿರುವುದರಿಂದಲೂ ಎಲ್ಲ ಬಗೆಯ ಉನ್ನತಿಯು ನಿಜವಾದ ಧರ್ಮದಿಂದೇ ಸಮನಿಸುವುದರಿಂದಲೂ ಮೇಲೆ ನಿರ್ದಿಷ್ಟಗಳಾದ ಉಪನಿಷದ್ವಚನಗಳ ಹೊಗಳಿಕೆಯು ಅಕ್ಷರಶಃ ನಿಜವಿದೆ.

ಯಾವ ಮನುಷ್ಯನು ನಿಜವಾದ ಧರ್ಮದಂತೆ ನಡೆವನೋ ಅವನಿಗೆ ಮೇಲಿನ ಸಂಗತಿಯು ಅನುಭವವಾಗಿ ಕೂಡಲೆ ಅವನ ಮುಖದಿಂದ—

ಧರ್ಮ ಏವಹತೋ ಹನ್ತಿ
ಧರ್ಮೋರಕ್ಷತಿ ರಕ್ಷಿತಃ | (ಮನು. ೮-೧೫)

ಧರ್ಮದ ಕಟ್ಟಳೆಯನ್ನು ಮೀರಿ ಸ್ವೇಚ್ಛಾನುಸಾರವಾಗಿ ನಡೆಯುವವನಿಂದ ಧರ್ಮವೆಂಬುದು ನಾಶವಾಗದು; ಆದರೆ ಆ ಧರ್ಮದ್ರೋಹಿಯು ತಾನೇ ಹಾಳಾಗಿಹೋಗುತ್ತಾನೆ; ಇನ್ನು ಧರ್ಮವನ್ನು ಪಾಲಿಸಿದರೆ ಅದರಿಂದ ತನ್ನ ರಕ್ಷಣೆಯಾಗುವುದೆಂಬುದು ಸ್ಪಷ್ಟವೇ! ಎಂಬ ವಾಕ್ಯವು ಹೊರಹೊರಡುವುದು.

ಈ ರೀತಿಯಾಗಿ ಮನುಷ್ಯನ ಐಹಿಕಪಾರಮಾರ್ಥಿಕ ಉನ್ನತಿಸಾಧನವಾದ ಸದ್ಧರ್ಮವು ಪ್ರತಿಯೊಬ್ಬನಿಗೂ ಉಪಾದೇಯವಾದುದರಿಂದ, ಅದರ ವಿಶೇಷ ಸ್ವರೂಪವನ್ನು ಅರಿತುಕೊಳ್ಳುವುದು ಮೊದಲನೆಯ ಕೆಲಸವು; ಅದಾದರೋ ಪರಮ ಆಪ್ತನೆನಿಸುವಾತನ ಸಹಾಯದಿಂದೇ ಕೈಗೂಡುವುದು. ಯಾವಾಗಲೂ ಎಲ್ಲ ಜೀವರ ಹಿತೈಷಿಯಾದ ಈಶ್ವರನ ಹೊರತು ಪರಮ ಆಪ್ತನೆಂಬುವವನು ಬೇರೊಬ್ಬನು ಇಲ್ಲವೇ ಇಲ್ಲ. ಆ ಈಶ್ವರನ ಉಪದೇಶವೇ '**ಶ್ರುತಿ**' ಯೆಂಬ ಹೆಸರಿನಿಂದ ಲೋಕಪ್ರಸಿದ್ಧವಾಗಿರುವುದು. ಶ್ರುತಿಯು ನಿಜವಾದ ಧರ್ಮಕ್ಕೆ ಮೂಲಭೂತವಾದುದರಿಂದ ಅದು ಸದ್ಧರ್ಮದ ಸ್ವರೂಪವನ್ನು ಅರಿತುಕೊಳ್ಳಲು ಮುಖ್ಯಸಾಧನವಾಗಿದೆ. ಇದೇ ಅರ್ಥವನ್ನು ಅನುಲಕ್ಷಿಸಿ ಮನು ಮೊದಲಾದವರು:—

ವೇದೋಽಖಿಲೋ ಧರ್ಮಮೂಲಮ್ |
(ಮನು. ೨-೬)

ವೇದೋ ಧರ್ಮಮೂಲಮ್ | (ಗೌತಮ ಧರ್ಮಸೂತ್ರ. ೧)

ಉಪದಿಷ್ಟೋಧರ್ಮಃ ಪ್ರತಿವೇದಮ್ |
(ಬೋಧಾಯನ ಧರ್ಮಸೂತ್ರ. ೧)

ಎಂಬುದಾಗಿ ಹೇಳುತ್ತಾರೆ; ಇದರಿಂದ ನಿಜವಾದ ಧರ್ಮದ ಯಥಾರ್ಥಜ್ಞಾನಕ್ಕೆ ಕರಣ (ಸಾಧನ) ವೆನಿಸುವ ಶ್ರುತಿಯು ಸರ್ವರಿಗೂ ಮುಖ್ಯ ಪ್ರಮಾಣವಾಗಿರುವುದೆಂಬ ಸಂಗತಿಯು ಸಿದ್ಧಿಸುವುದು.

X [ಸಶೇಷ]

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"**ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು**"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, '**ಕೊಡಗಿನ ಗುಡುಗುಡು!**' (ಛಳಿ) '**ಸುಡುಸುಡು!**' (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಗುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [14]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಛೆರಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಮಹಾನಾರಾಯಣೋಪನಿಷತ್

(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು. **ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಅಪಾಯಗಳು.

ಈಗ ಎಲ್ಲಿ ನೋಡಿದರೂ ಅಪಾಯಗಳು ಹೆಚ್ಚುತ್ತಿವೆ. ಅಂತಹ ಎಲ್ಲಾ ಕಡೆಯೂ ವೈದ್ಯರ ಸಹಾಯವು ದೊರೆಯುವುದು ದುರ್ಲಭವು. ಆದುದರಿಂದ ಗಾಯಪಟ್ಟವರಿಗೆ ಇನ್ನೂ ಹೆಚ್ಚು ಅಪಾಯಕ್ಕೆ ದಾರಿಕೊಡದಂತೆ ಶಾಸ್ತ್ರೀಯವಾದ ರೀತಿಯಲ್ಲಿ ತಾತ್ಕಾಲಿಕವಾದ ಚಿಕಿತ್ಸೆ ಮಾಡುವ ಕ್ರಮವನ್ನು ಆಬಾಲವೃದ್ಧರು ಮೊದಲುಗೊಂಡು ಸ್ತ್ರೀಪುರುಷರಲ್ಲಿ ಪ್ರತಿಯೊಬ್ಬರೂ ತಿಳಿದಿರಬೇಕಾದುದು ಅತ್ಯವಶ್ಯವಾಗಿದೆ. ಇಂತಹ ತಾತ್ಕಾಲಿಕ ಚಿಕಿತ್ಸೆಯಲ್ಲಿ ತಿಳುವಳಿಕೆ ಹೊಂದಿ, ಒಳ್ಳೇ ಸುಶಿಕ್ಷಿತರಾದವರು ಸಮೀಪದಲ್ಲಿದ್ದರೆ ಅವರು ರಕ್ತಸ್ರಾವ, ಅಸಿಭಂಗ, ಜಲಗಂಡ, ಅಗ್ನಿಗಂಡ, ಜೇಳು ಹಾವುಗಳ ಕಡಿತ, ವಿಷಭಕ್ಷಣ, ಮೂರ್ಛೆ, ಆಕಸ್ಮಾತ, ಪ್ರಜ್ಞೆತಪ್ಪುವುದು, ಉಸಿರುಕಟ್ಟುವುದು, ಸೆಳವು, ಕಣ್ಣು, ಮೂಗು, ಕಿವಿ, ಗಂಟಲು ಮೊದಲಾದ ಕಡೆಗಳಲ್ಲಿ ಹೊರಗಿನ ಪದಾರ್ಥಗಳೇನಾದರೂ ಸೇರಿಕೊಳ್ಳುವುದು, ಇತ್ಯಾದಿ ಮಹಾಪಾಯಗಳಲ್ಲಿ ಡಾಕ್ಟರುಗಳು ಬಂದು ಸೇರುವಷ್ಟರಲ್ಲಿ ಕೈಕ್ಕೆಟುಕುವ ಉಪಕರಣಗಳನ್ನೇ ಸಾಧನವಾಗಿಟ್ಟುಕೊಂಡು, ಪ್ರಾಣಾಪಾಯಕ್ಕೆ ಅವಕಾಶ ಕೊಡದಂತೆ ಸಹಾಯಮಾಡಬಲ್ಲರು. ಅಂತಹ ತಿಳುವಳಿಕೆಯನ್ನು ಜನಸಾಮಾನ್ಯದಲ್ಲಿ ಪ್ರಚಾರಗೊಳಿಸುವುದಕ್ಕಾಗಿಯೇ ಆನರಬಲ್ ಡಾಕ್ಟರ್ ಯು. ರಾಮರಾಯರಿಂದ "**ಅಪಾಯ ಸಂಭವಗಳಲ್ಲಿ ಪ್ರಥಮಚಿಕಿತ್ಸೆ**" ಯೆಂಬ ಪುಸ್ತಕವು ರಚಿತವಾಗಿದೆ. ಅಪಾಯಕ್ಕೆ ಸಿಕ್ಕಿಬಿದ್ದವನನ್ನು ಕಂಡಾಗ, ಅವನನ್ನು ಹೇಗಾದರೂ ಅದರಿಂದ ತಪ್ಪಿಸಬೇಕೆಂಬ ಕಳಕಳಿಯೇನೋ ಎಲ್ಲರಿಗೂ ಹುಟ್ಟುವುದು ಸಹಜವೇ! ಆದರೆ ಹೇಗೆ ಮಾಡಬೇಕೆಂಬುದನ್ನು ತಿಳಿಯದೆ ಅನೇಕರು ಹಿಂಜರಿಯುವರು. ಕೆಲವರು ತಿಳಿಯದೆ ಕೈಹಾಕಿ ಅದರಿಂದ ಇನ್ನೂ ಅಧಿಕವಾದ ಅಪಾಯಕ್ಕೆ ಗುರಿಮಾಡುವರು. ಹೀಗೆ ಪ್ರತಿವರ್ಷಕ್ಕೆ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಪ್ರಥಮಚಿಕಿತ್ಸಾಕ್ರಮದಲ್ಲಿ ಸ್ವಲ್ಪಮಟ್ಟಿಗಾದರೂ ತಿಳುವಳಿಕೆಯಿದ್ದು ಕೆಲಸಮಾಡಿದ್ದರೆ, ಅಂತಹ ಪ್ರಾಣಾಪಾಯಗಳಿಗೆ ಅವಕಾಶವಿರುತ್ತಿರಲಿಲ್ಲ. ಆದುದರಿಂದ ಮೇಲ್ಕಂಡ ಪುಸ್ತಕವನ್ನೋದಿ ತಿಳಿದುಕೊಂಡಿದ್ದರೆ, ಮಹಾವಿಪತ್ತುಗಳನ್ನು ತಪ್ಪಿಸಿ, ಪ್ರಾಣಗಳನ್ನೇ ಉಳಿಸಬಹುದು. ಅನೇಕ ಚಿತ್ರಪಟಗಳೊಡನೆ ಬಹು ಸುಲಭವಾದ ಕನ್ನಡದಲ್ಲಿ ಬರೆದಿರುವ ಈ ಪುಸ್ತಕದ ಸಾವಿರಾರು ಪ್ರತಿಗಳು ಈಗಾಗಲೇ ಖರ್ಚಾಗಿ, ನಾಲ್ಕನೆಯದು ಪುನರ್ಮುದ್ರಣಗಳೂ ಆಗಿವೆ. ಸರಕಾರೀ ಆಫೀಸುಗಳು, ರೈಲ್ವೆಗಳು, ಗಣಿಗಳು, ಕಾರಖಾನೆಗಳು, ಯಂತ್ರಶಾಲೆಗಳು, ಪಾಠಶಾಲೆಗಳು ಮುಂತಾಗಿ ಎಲ್ಲಾ ಕಡೆಗಳಲ್ಲಿಯೂ ಈ ಪುಸ್ತಕದ ಪ್ರಚಾರವಿದೆ. ಅನೇಕ ಡಾಕ್ಟರುಗಳು ಇದನ್ನು ಕುರಿತು ಬಹಳ ಪ್ರಶಂಸೆಮಾಡುವರು. ಬೆಲೆ 12 ಆಣೆಗಳು ಮಾತ್ರ. [4]

ಶ್ರೀ ಕೃಷ್ಣನ್ ಬ್ರದರ್ಸ್, 323, ತಂಬುಚೆಟ್ಟಿಬೀದಿ, ಮದ್ರಾಸ್.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ತ್ವರಾಗಿ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧೀಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಘನವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮನಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಶಪುಷ್ಪ, ಶಾಲಿಮಕಂದ, ಮಧುಕಂದ, ಜವಾಕಂಧ, ಶಾಲೀಮಲೀಕಂದ, ಅಶ್ವಕಂದ ಶ್ವೇತಕಂದ, ಮುಸಳೀಕಂದ, ವಿದಾರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಪಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸವಳೀಬೀಜ, ಚಿಕಣದಪಂಚಾಂಗ, ಆಡವೀ ಎಳ್ಳಿನಪಂಚಾಂಗ, ಜಮಪತ್ರಿ, ವಿಕಾಪತ್ರಿ, ಮದನಮಸ್ತ, ರಸನಪುರುಷ, ಆಮರಕ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಶಾಲೀನಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀದಾಣೆ, ಮರ್ದಾಣೀಕಟ್ಟಿಗೆ, ಶತಾವರಿ, ಸಕೇಂಮಗಜ, ಆಲದಹಾಲು, ವಾಳೇರಿಭಾತಾ, ಗೋಖುರು, ಅಡವೀಬೆಂಡಿಬೇರು, ಅಮೃತ [illegible], ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ಪರಧಾರಾ, ಕೇಸರಿ, [illegible]ಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು [illegible]ಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸುಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. [illegible]ವಿಲ್ಲ. ಸ್ತ್ರೀವರ್ಜ್ಯಬಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. [illegible] ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಚೀಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿಕ್ಕು, ರಕ್ತ, ಕೀವು, ಹುಣ್ಣು, ಮಗ್ಗಂ [illegible], ನಾಶಬಾರದರೋಗ, ಪಟ್ಟಸೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [18]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ಮಹಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೨ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ. ಸ್ತ್ರೀ. ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[31] (೮೬೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅತಿಮಹತ್ವದ ನೂತನ ಫೋಟೋ

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[11] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಉಪಯೋಗದಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪಿನಿಸ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ನಾಶಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚಿಸುತ್ತದೆ. ಮೂಗುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[20] ಪೋ. ಬಾ. ೫೧೦. ಮದರಾಸ್

ಮೈಸೂರು ಸಮ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ರದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ ನೇ ನವಂಬರ್ ೧೯೨೯ [ಸಂಚಿಕೆ ೨೮.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಶೈವ ಸಂಸ್ಕೃತ ಪಾಠಶಾಲಾ, ಬಿದರಕೋಟಿ.

ಈ ಜಿಲ್ಲೆಯಲ್ಲಿ ವೈದಿಕಾಭಾವದ ಸ್ಥಿತಿಯನ್ನು ಕಂಡು ಅತೀವ ಕಳಕಳಿಯಿಂದ ಇದನ್ನು ಸುಧಾರಿಸಲು ಗಲ್ಲಿ ಶಾಲಿವಾಹನಶಕ ೧೮೪೩ನೇ ರೌದ್ರಿನಾಮಸಂವತ್ಸರದಲ್ಲಿ ಸದರಿ ಶಾಲೆಯು ಸ್ಥಾಪಿಸಲ್ಪಟ್ಟಿತು. ಕೆಲವು ಕಾರಣಗಳಿಂದ ಮಧ್ಯದಲ್ಲಿ ತಟಸ್ಥವಾಗುತ್ತ ಕೆಲವುಕಾಲ ನಡೆಯುತ್ತ ಬಂದಿತು. ಹೀಗಾಗೋಣದರಿಂದ ವಿದ್ಯಾರ್ಥಿಗಳಿಗೇ ಆಗಲಿ ಭಕ್ತರಿಗೇ ಆಗಲಿ ಸರಿಯಾದ ವೈದಿಕಧರ್ಮವು ತಿಳಿಯದೆಹೋಗಿ ವೀರಶೈವಾಚಾರಪದ್ಧತಿಗೆ ಅವನತಿಯು ಪ್ರಾಪ್ತವಾಗುವಸ್ವರದಲ್ಲಿಯೇ ಮೊದಲು ಈ ಶಾಲೆಯ ಅಧ್ಯಕ್ಷರಾಗಿದ್ದ ವೇ|| ಬಸವರಾಜಶಾಸ್ತ್ರೀ ಯಲೇರಿ ಇವರು ಅಕಸ್ಮಾತ್ ಇಲ್ಲಿಗೆ ಬರಲಾಗಿ ಅವರುಗಳನ್ನು ಕಂಡಮಾತ್ರದಲ್ಲಿಯೇ ಈ ಶಾಲೆಯನ್ನು ಪುನಃ ಸ್ಥಾಪಿಸಬೇಕೆಂಬ ಬಲವಿಕೆಯು ಹುಟ್ಟಿ ೧೮೫೧ ನೇ ಶುಕ್ಲನಾಮ ಸಂ|| ಆಷಾಢ ಶು|| ೨ ತಿಥಿಯಲ್ಲಿ ಪುನಃ ಸ್ಥಾಪಿಸಲ್ಪಟ್ಟಿತು. ಮುಂದೆ ಶ್ರವಣಾನುಕೂಲ ಶ್ರಾವಣಮಾಸವು ಬರಲಾಗಿ ಸರ್ವಸದ್ಭಕ್ತರ ಹೃದಯದಲ್ಲಿ ಯಾವದಾದರೊಂದು ಮಹಗ್ರಂಥವನ್ನು ಶ್ರವಣಮಾಡಬೇಕೆಂಬ ಸದಿಚ್ಛೆಯು ಹುಟ್ಟಿ ಸದರಿ ಶಾಸ್ತ್ರಿಗಳಿಗೆ ಅರಿಕೆಮಾಡಿಕೊಳ್ಳಲು ಅವರಾದರೂ ಸಿದ್ಧಾಂತಪ್ರಚಾರಕ್ಕೆ ಇದು ಸುಸಮಯವೆಂದು ತಿಳಿದು ವೀರಶೈವಮತಕ್ಕೆ ರಕ್ಷಪ್ರಾಯವಾದ ಸಿದ್ಧಾಂತಶಿಖಾಮಣಿಯನ್ನು ಪ್ರಾರಂಭಮಾಡಿ ತಮ್ಮ ಗಂಭೀರವಾದ ವಾಣಿಯಿಂದ ಸುಗಮವಾಗಿಯೂ ಸುಶ್ರಾವ್ಯವಾಗಿಯೂ ಬೋಧಿಸುತ್ತ ಬಂದು ಆಶ್ವಯುಜ ಬ|| ೬ ಗುರುವಾರದಲ್ಲಿ ಸಮಾಪ್ತಿಮಂಗಲಮಹಾರಾಧನೆಯನ್ನು ನೆರವೇರಿಸಬೇಕೆಂದು ಸೂಚಿಸಿದ ಮೇರೆಗೆ ಸರ್ವ ಸದ್ಭಕ್ತಮಹಾಶಯರು ಸೇರಿ ಬಹು ವಿಜೃಂಭಣೆಯಿಂದ ಸಾವಿರಾರು ಜಂಗಮಶ್ರೇಣಿಗೆ ಮೃಷ್ಟಾನ್ನಪ್ರಸಾದವನ್ನು ಬೂರಿದಕ್ಷಿಣೆಯನ್ನ ನೀಡಿದರು. ಈ ಧರ್ಮಗ್ರಂಥದ ಶ್ರವಣಪ್ರಭಾವದಿಂದಲೋ ಅಥವಾ ಈ ಗ್ರಂಥನಾಯಕರಾದ ಶ್ರೀ ಜಗದ್ಗುರು ರೇವಣಾರಾಧ್ಯರ ಆಶೀರ್ವಾದ ಬಲದಿಂದಲೋ ಇಲ್ಲಿಯ ಸರ್ವಸ್ತ್ರೀಪುರುಷರಲ್ಲಿ ಶ್ರೀಭಿಂದ್ರಧಾರಣದ ವಿಷಯವು ಸದ್ಯಃ ತಲೆದೋರಹತ್ತಿರುವದೆಂದು ತಿಳಿಸಲು ಬಹು ಸಂತೋಷವೆನಿಸುತ್ತದೆ. ಇಲ್ಲಿಯ ಶ್ರೀಯುತ ಬಸವಪ್ಪ ಕಟಿಕಾರ, ಶ್ರೀಯುತ ಅಣ್ಣಪ್ಪ ಶ್ಯಾಸಾ, ಶ್ರೀಯುತ ನಾಗಶೆಟ್ಟೆಪ್ಪ ಕಟಿಕಾರ, ಶ್ರೀಯುತ ಧರ್ಮಣ್ಣ ಗಾಣಿಗ, ಶ್ರೀಯುತ ಲಿಂಗಪ್ಪ ಇಂಜನಿಯರಿಂಗ ಇವರೇ ಮೊದಲಾದ ಗ್ರಾಮದ ಸದ್ಭಕ್ತಮಹಾಶಯರು ಬಂದೆರಡು ತಿಂಗಳಲ್ಲಿಯೇ ಶಿವದೀಕ್ಷಾಸಂಸ್ಕಾರವನ್ನು ಕುಟುಂಬಪರಿವಾರದೊಡನೆ ಹೊಂದುತ್ತೇವೆಂದು ವಾಗ್ದಾನವನ್ನು ಮಾಡಿರುವರೆಂದು ತಿಳಿಸಲು ಅತೀವ ಸಂತೋಷವೆನಿಸುತ್ತದೆ. ಶ್ರೀಯುತ ಶಿವರುದ್ರಪ್ಪ ಪಟೇಲ ಹಾಲಹಳ್ಳಿ ಇವರು ಮೊದಲೇ ದೀಕ್ಷಾಸಂಸ್ಕಾರವನ್ನು ಹೊಂದಿದೋಣದರಿಂದ ತಮಗೆ ಶೇಷವಾದ ಶಿವಿಯನ್ನು ಮಾ|| ಶು|| ೩ ಬುಧವಾರದಲ್ಲಿ ಇಡಲು ವಾಗ್ದಾನವನ್ನು ಮಾಡಿರುವರು ಇದು ಆಶಾಸ್ತ್ರೀಯಮೋಳದಲೆಯುವರಿಗೆ ಒಜ್ಜೆಯುಮ್ಮಂಟುಮಾಡುತ್ತದೆಂದು ಹೇಳಬಹುದು.

ಓರ್ವ ಮಹಾಭವಾಂ

ಬರೋಡಾದಲ್ಲಿ ಎಲ್ಲ ಆಫೀಸರರ ಸಂಬಳವನ್ನು ತಿಂಗಳಿಗೆ 130 ರುಪಾಯಿಗಳಂತೆ ಕಡಿಮೆಮಾಡಬೇಕೆಂದು ಅಲ್ಲಿಯ ಪ್ರಧಾನಮಂತ್ರಿಗಳು ಯೋಚಿಸುತ್ತಿರುವರು. ಇದರಿಂದ ಸೈನ್ಯದ ಇಲಾಖೆಯಲ್ಲಿ 1,85,000 ರೂಪಾಯಿಗಳೂ, ನೌಕರಿ ಇಲಾಖೆಯಲ್ಲಿ 1,70,000 ರುಪಾಯಿಗಳೂ ಉಳಿಯುವವಂತೆ!

ವೈಸ್ರಾಯರವರ ಸಂಚಾರ.

ಮೈಸೂರು ಸಂಸ್ಥಾನಕ್ಕೆ ದಯಮಾಡುವ ಪ್ರೋಗ್ರಾಂ.

ಘನವನ್ತೈದಿದ ಹಿಂದುಸ್ಥಾನದ ವೈಸ್ರಾಯ್ ಲಾರ್ಡ್ ಅರ್ವಿನ್‌ರವರು ಇದೇ ನವಂಬರ್ ತಾ|| 21 ನೇ ಗುರುವಾರ ಬೆಳಿಗ್ಗೆ 7 ಗಂಟೆಗೆ ಶಿವನೆ ಸ್ಟೇಷನ್ ತಲುಪಿ ಫಲಹಾರತೀರಿಸಿಕೊಂಡು 7-20 ಕ್ಕೆ ಪ್ರಯಾಣಮಾಡಿ 8-10 ಕ್ಕೆ ಬೀರೂರನ್ನು ತಲುಪಿ ಡೈನಿಂಗ್ ಕಾರಿನಲ್ಲಿ ಬೆಳಗಿನ ಭೋಜನವನ್ನು ತೀರಿಸಿಕೊಂಡು 8-25 ಕ್ಕೆ ಅಲ್ಲಿಂದ ರೈಲು ಹತ್ತಿ 9-17 ಕ್ಕೆ ತರೀಕೆರೆ ಸ್ಟೇಷನ್ ತಲುಪುವರು. ಅಲ್ಲಿಂದ 9-22 ಕ್ಕೆ ಪ್ರಯಾಣ ಬೆಳಸಿ 11 ಗಂಟೆಗೆ ಶಿವಮೊಗ್ಗಾ ಟೌನ್‌ನಲ್ಲಿ ಇಳಿದು, ಅಲ್ಲಿ ಕಾದಿರುವ ಮೋಟಾರ್ ಕಾರಿನಲ್ಲಿ ಚಿತ್ತೈಸಿ 65 ಮೈಲಿ ದೂರದಲ್ಲಿರುವ ಗೆರುಸೊಪ್ಪ ಜಲಪಾತವನ್ನು ಕುರಿತು ಪ್ರಯಾಣಮಾಡುತ್ತಾರೆ.

ತಾ|| 22 ನೇ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಗೆರುಸೊಪ್ಪೆಯಿಂದ ಮೋಟಾರಿನಲ್ಲಿ ಹಿಂತಿರುಗಿ ವೈಸ್ರಾಯರವರು ಸಾಯಂಕಾಲ 6 ಗಂಟೆಗೆ ಭದ್ರಾವತಿಗೆ ದಯಮಾಡಿ ಅಲ್ಲಿಂದ ರಾತ್ರಿ 10-30 ಗಂಟೆಗೆ ಸ್ಪೆಷಲ್ ರೈಲು ಹತ್ತಿ ಮೈಸೂರಿನ ಕಡೆಗೆ ದಯಮಾಡುವರು.

ತಾ|| 23 ನೇ ಶನಿವಾರ ಬೆಳಗಿನ 6-35 ಗಂಟೆಗೆ ವೈಸ್ರಾಯರವರು ಯಡತೊರೆ ಸ್ಟೇಷನ್ ತಲುಪಿ ಅಲ್ಲಿಂದ 6-52 ಕ್ಕೆ ಹೊರಟು 8 ಗಂಟೆಗೆ ರಾಜಧಾನಿಗೆ ದಯಮಾಡುತ್ತಾರೆ. ಆದಿನ ರಾಜಧಾನಿಯಲ್ಲಿ ಭೋಜನವನ್ನು ತೀರಿಸಿಕೊಂಡು ಬೆಳಗಿನ 11 ಗಂಟೆಗೆ ಇಲ್ಲಿಂದ 44 ಮೈಲು ದೂರದಲ್ಲಿರುವ ಶಿಕಾರಿ ಕ್ಯಾಂಪಿಗೆ ಮೋಟಾರ್ ಕಾರಿನಲ್ಲಿ ಚಿತ್ತೈಸುತ್ತಾರೆ.

ತಾ|| 24 ನೇ ಭಾನುವಾರದಿಂದ ತಾ|| 26 ನೇ ಮಂಗಳವಾರದ ವರೆಗೆ ಮೂರು ದಿನ ಕಾರಾಪುರ ಶಿಕಾರಿಕ್ಯಾಂಪಿನಲ್ಲಿ ವಾಸವಾಗಿದ್ದು ವೈಸ್ರಾಯರವರು ಶಿಕಾರಿ ಮತ್ತು ಆನೆಗಳ ಖೆಡ್ಡಾ ಪರಾಮರ್ಶಿಸುವರು.

ತಾ|| 27 ನೇ ಬುಧವಾರ ಮಧ್ಯಾಹ್ನ 3-30 ಗಂಟೆಗೆ ಅವರು ಮೋಟಾರಿನಲ್ಲಿ ಹೊರಟು ರಾಜಧಾನಿಗೆ ದಯಮಾಡಿ ಆ ರಾತ್ರಿ ಭೋಜನಮಾಡಿ ಮಲಗಿದ್ದು, ತಾ|| 27 ನೇ ಗುರುವಾರ ಬೆಳಗ್ಗೆ 9 ಗಂಟೆಗೆ ಮೋಟಾರಿನಲ್ಲಿ ಕುಳಿತು ಹೊರಟು 75 ಮೈಲು ದೂರದಲ್ಲಿರುವ (ಫ್ರೆಜರ್‌ಪೇಟೆ ಮಾರ್ಗವಾಗಿ) ಮಡಿಕೇರಿಗೆ ಚಿತ್ತೈಸುತ್ತಾರೆಂದು ತಿಳಿದುಬರುತ್ತದೆ.

ಪ್ಯಾರಿಸ್ಸಿನಲ್ಲಿ ಸ್ಮಿತ್ ಎಂಬುವನು ಮಿತ್ರನೊಬ್ಬನನ್ನು ತನ್ನ ಮನೆಗೆ ಊಟಕ್ಕೆ ಬರಹೇಳಿದ್ದನು. ಆ ಮಿತ್ರನು ಏನೋ ಅನಿವಾರ್ಯದಿಂದ ಊಟಕ್ಕೆ ಬರಲಿಲ್ಲವಾಗಿ ಸ್ಮಿತ್ತನು ಕುಪಿತನಾಗಿ ಮಿತ್ರನ ಮೇಲೆ ದಾವೆಯನ್ನು ಮಾಡಿ ಡಿಕ್ರಿಯನ್ನು ಪಡೆದಿರುವನು! ಒಳ್ಳೆ ಊಟ!

ಸ್ವೀಕಾರ.

ಬಳ್ಳಾರಿ ಡಿ|| ಹೂವಿನಹಡಗಲಿ ತಾಲೂಕು ಹೊಳಗುಂದಿ ಗ್ರಾಮದಲ್ಲಿ ನೆರವೇರಿದ ದೀಪಾವಳಿ ಅಂಗಡಿ ಪೂಜಾಮಹೋತ್ಸವ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ವೇ|| ಅರಳೆಲೆಮಠದ ಗುರುಸಿದ್ಧಪ್ಪಯ್ಯನವರು ತೆಗೆಯಿಸಿದ 1 ರೂ. ಮ|| ರಾ|| ಶ್ರೀಮಂತ ಹಲಗಪ್ಪನವರ ಮಹಾದೇವಪ್ಪನವರು ತೆಗೆಯಿಸಿದ 1 ರೂ. ಹಾಗೂ ಕದರುಮಂಡಿಗಿ ಪರಮೇಶ್ವರಪ್ಪನವರು, ಎಲಿಗಾರ ಬಸಪ್ಪನವರು ತೆಗೆಯಿಸಿದ 2 ರೂ. ಒಟ್ಟು 4 ರೂಪಾಯಿಗಳು ಮ|| ರಾ|| ಎಸ್. ಬಿ. ಸಣ್ಣತೋಟಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಪಟ್ಟಣ ನಿವಾಸಿಗಳಾದ ಮ|| ರಾ|| ಹಂಚಿನಾಳ ಮುರಿಗೆಪ್ಪನವರು, ತಮ್ಮ ಅಣ್ಣಂದಿರಾದ ಮ|| ರಾ|| ವಿರೂಪಾಕ್ಷಪ್ಪನವರ ಪುತ್ರಿ ಸೌ|| ಗುರುಸಿದ್ಧವ್ವನನ್ನು ರೋಣ ತಾ|| ಬೇವಿನಕಟ್ಟಿಯಲ್ಲಿರುವ ಮ|| ರಾ|| ಕೆರೂರು ಕತ್ತಿ ಶಾಂತವೀರಪ್ಪನವರಿಗೆ ಕೊಟ್ಟು ನಿಶ್ಚಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ|| ಷ|| ಬ್ರ|| ಸೊಡಿಬುಕ್ತ ಹಿರೇಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ 2 ರೂಪಾಯಿಗಳನ್ನೂ ಹಾಗೂ ವಧುವಿನ ಕಡೆಯಿಂದ 1 ರೂಪಾಯಿಯನ್ನೂ ತೆಗೆಯಿಸಿ ಕಳುಹಿಸಿರುತ್ತಾರೆ.

ಬಿಜಾಪುರ ಡಿ|| ಗುಳೇದಗುಡ್ಡ ನಿವಾಸಿಗಳಾದ ಮ|| ರಾ|| ಒಣರೊಟ್ಟಿ ಸಿದ್ಧಪ್ಪನವರ ಹಾಗೂ ಕರಸಂದಿ ಗುರುಶಾಂತಪ್ಪನವರ ಧರ್ಮಪತ್ನಿಯವರಿಗೆ 8 ನೆಯ ತಿಂಗಳಲ್ಲಿ ಗರ್ಭದೀಕ್ಷಾ ಲಿಂಗಧಾರಣ ಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ|| ಷ|| ಬ್ರ|| ಸುಂಗಳೂರು ಅರಳೆಲೆಮಠದ ಪಟ್ಟದಸ್ವಾಮಿಗಳವರ ಅಪ್ಪಣೆ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಅರಳೆಲೆಮಠದ ಶಿವಸಂಗಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಟೌನ್ ನಿವಾಸಿಗಳಾದ ವೇ|| ಗಂಜೀಗಟ್ಟಿ ಹಿರಿಯಮಠದ ಚನ್ನಬಸವಯ್ಯನವರು ಕಾರ್ತಿಕ ಶುದ್ಧ ೧ ದಿವಸ "ಪಂಚಾಚಾರ್ಯ ಸ್ತೋತ್ರ" ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಹನ್ನೆರಡು ಮಠದ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಬೋರ್ಡಿಂಗ್.

(ಹೈದ್ರಾಬಾದ)

ನಿಜಾಮು ಇಲಾಖೆಯ ಉಚ್ಚ ಶಿಕ್ಷಣದ ವೀರಶೈವ ವಿದ್ಯಾರ್ಥಿಗಳಿಗೆ ಬೋರ್ಡಿಂಗಿನ ಅವಶ್ಯಕತೆಯನ್ನು ಹೇಳುವುದಕ್ಕಿಂತ ಮೊದಲು ಬೋರ್ಡಿಂಗ್ ಅಂದರೇನು? ಇದು ವಿದ್ಯಾಭಿವೃದ್ಧಿಗೆ ಎಷ್ಟರಮಟ್ಟಿಗೆ ಅನುಕೂಲವು? ಎಂಬುವದನ್ನು ಸ್ವಲ್ಪ ವಿಚಾರಿಸುವ.

ಪ್ರತಿಯೊಂದು ಕಾರ್ಯವು ಕೊನೆಗಾಣಬೇಕಾದರೆ ತಕ್ಕ ಸಾಮಗ್ರಿಗಳು ಬೇಕಾಗುತ್ತವೆ. ವಿದ್ಯಾಭ್ಯಾಸವೆಂಬ ದೊಡ್ಡ ಕಾರ್ಯವು ನಡೆಯಬೇಕಾದರೆ ತಕ್ಕ ಸಾಮಗ್ರಿಗಳು ಸಿದ್ಧಗಳಾಗಿರಬೇಕೆನ್ನುವದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆಧುನಿಕ ಕಾಲದಲ್ಲಿ ವಿದ್ಯೆಯನ್ನು ಕಲಿಯಲು ಬಹಳ ಸೌಕರ್ಯಗಳುಂಟಾಗಿರುವುದೇನೋ ನಿಜ. ಆದರೆ ವಿದ್ಯಾಭ್ಯಾಸವನ್ನು ಮುಗಿಸುವುದರೊಳಗಾಗಿ ಎಷ್ಟು ದ್ರವ್ಯವು ಖರ್ಚಾಗುವುದೆಂಬುದನ್ನು ವಹಿಸ್ತ ಯಾರೂ ವಿಚಾರಿಸುವದಿಲ್ಲ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವು ನಿರಾತಂಕವಾಗಿ ನಡೆಯಬೇಕಾದರೆ ಮೊಟ್ಟಮೊದಲು ಅವರ ಊಟದ ವ್ಯವಸ್ಥೆಯು ಚೆನ್ನಾಗಿರಬೇಕಾಗುತ್ತದೆ. ಊಟ ನೆಟ್ಟಗಿದ್ದರೆ ಪಾಠವೂ ನೆಟ್ಟಗೆ. ಇಲ್ಲಿ ಊಟವೆಂದರೆ ಮೃಷ್ಟಾನ್ನಭೋಜನವೆಂದಲ್ಲ. ಶುದ್ಧ ಸಾತ್ವಿಕ ಆಹಾರವೆಂದರ್ಥವು. ತಾಮಸರಜೋಗುಣಗಳನ್ನಳಿದು ಸತ್ವಗುಣವನ್ನು ಹೆಚ್ಚಿಸುವದಕ್ಕೆ ಈ ಸಾತ್ವಿಕ ಆಹಾರವೊಂದೇ ಸಾಲದು. ಸತ್ಸಹವಾಸ, ವ್ಯಾಯಾಮ, ದೈವಭಕ್ತಿ, ದುಷ್ಟಸಂಗರಾಹಿತ್ಯ, ಸದ್ವಿಷಯಶ್ರವಣ ಮೊದಲಾದವುಗಳು ಸಹಕಾರಿಗಳಾಗಿವೆ. ಖಾನಾವಳಿಯಲ್ಲಿ ಊಟಮಾಡಿ ವಿದ್ಯಾರ್ಥಿಗಳು ಏಕೆ ವಿದ್ಯಾಭ್ಯಾಸವನ್ನು ಮಾಡಬಾರದು? ಧನಿಕರು ಬೇಕಾದರೆ ಮನೆಮಾಡಿ ತಮ್ಮ ಹುಡುಗರಿಗೆ ವಿದ್ಯಾಭ್ಯಾಸವನ್ನು ಮಾಡಿಸಬಹುದು. ಇಷ್ಟಕ್ಕೇಕೆ ಬೋರ್ಡಿಂಗನ್ನು ಸ್ಥಾಪಿಸಬೇಕು? ಎಂದು ಕೆಲವರು ಪ್ರಶ್ನೆಗಳನ್ನು ಮಾಡಬಹುದು. ಆದರೆ ಆ ಖಾನಾವಳಿಯಲ್ಲಿಯ ಆಹಾರವು ವಿದ್ಯಾರ್ಥಿಗಳಿಗೆ ಆರೋಗ್ಯಕರವೂ ಮತ್ತು ಮೇಧಾಶಕ್ತಿವರ್ಧಕವೂ ಆಗಿರುವುದಿಲ್ಲ. ಖಾನಾವಳಿಯವರು ಆಶೆಯೆಂಬ ಪಾಶದಿಂದ ಬಿಗಿಯಲ್ಪಟ್ಟಿರುವರಾದ್ದರಿಂದ ಅವರಿಗೆ ಧನಾಕರ್ಷಣವೇ ಮುಖ್ಯಧ್ಯೇಯವಾಗಿರುವುದಲ್ಲದೆ ಹುಡುಗರ ಆರೋಗ್ಯವನ್ನೂ ಸತ್ಸಂಗವನ್ನೂ ಅಪೇಕ್ಷಿಸುವವರಲ್ಲ. ಅವರು ದುಡ್ಡಿನಾಶೆಗಾಗಿ ಹೆಮ್ಮಾರಿಯ ರೂಪವನ್ನು ತಾಳಿ ನವವಯಸ್ಸಿನ ಹುಡುಗರ ರಕ್ತಮಾಂಸಗಳನ್ನು ಸೆಳೆಯಲು ಸಹ ಹಿಂಜರಿಯುವುದಿಲ್ಲ. ಅವರು ಪರಹಿಂಸೆಯೊಂದನ್ನೇ ತಿಳಿದಿರುವರಲ್ಲದೆ ಪರೋಪಕಾರದ ಮಹತ್ವವನ್ನೇ ಕಾಣರು. ಹುಟ್ಟಿದಂದಿನಿಂದಲೂ ಆ ಸಹವಾಸವೂ ಅವರಿಗಿಲ್ಲ. ಅಲ್ಲದೆ ಖಾನಾವಳಿಯಲ್ಲಿ ಆ ಕರ್ಕಶಭೋಜನವನ್ನು ಮಾಡಿ ಸ್ವೇಚ್ಛಾಚಾರಿಗಳಾಗಿ ಅಲೆಯುತ್ತ ಬಂದರೆ ವಿದ್ಯಾರ್ಥಿಗಳ ಬ್ರಹ್ಮಚರ್ಯವು ಭಂಗವಾಗುತ್ತದೆ. ಇದೂ ಅಲ್ಲದೆ ವಿದ್ಯಾರ್ಥಿಗಳ ಅಮೂಲ್ಯವಾದ ವೇಳೆಯ ಅರಿವಂತೂ ಅವರಿಗಿರುವದೇ ಇಲ್ಲ. ಹಬ್ಬ ಹುಣ್ಣಿವೆಗಳಲ್ಲಿ ವಿದ್ಯಾರ್ಥಿಗಳಿಗೆ ವೇಳೆಗೆ ಸರಿಯಾಗಿ ಅಶನವನ್ನು ಕೊಡುವದರ ಬದಲಾಗಿ ಅತಿ ವ್ಯಸನವನ್ನು ಕೊಡುತ್ತಾರೆ. ಇದೂ ಅಲ್ಲದೆ ಸಾಮಾನ್ಯವಾಗಿ ಖಾನಾವಳಿಗಳು ಸ್ವಚ್ಛತೆಗೆ ಬಹಿಷ್ಕಾರವನ್ನೇ ಹಾಕಿಬಿಟ್ಟಿರುತ್ತವೆ. ಅಂದ ಮೇಲೆ ಆರೋಗ್ಯವೆಲ್ಲಿ? ಬ್ರಹ್ಮಚರ್ಯಪಾಲನವೆಲ್ಲಿ? ವಿದ್ಯಾಭ್ಯಾಸವೆಲ್ಲಿ? ಅಭಿವೃದ್ಧಿಯೆಲ್ಲಿ? ಸ್ವಂತಮನೆಮಾಡಿ ಓದುವ ವಿದ್ಯಾರ್ಥಿಗಳ ಅಭ್ಯಾಸವಾದರೂ ಚೆನ್ನಾಗಿ ಸಾಗುತ್ತದೆನ್ನಬೇಕೇ? ಅದೂ ಇಲ್ಲ. ಮನೆಯು ವಿದ್ಯಾರ್ಥಿಗಳ ಏಕಾಂತಕ್ಕೆ ಆತಂಕವನ್ನುಂಟುಮಾಡುತ್ತದೆ. ಮನೆಯೆಂದಮೇಲೆ ಅಲ್ಪಸ್ವಲ್ಪ ಕೆಲಸವಿರುವದುಂಟು. ಅಂದಮೇಲೆ ಅಭ್ಯಾಸವು ನಿರ್ವಿಘ್ನವಾಗಿ ಸಾಗುವ ಬಗೆಯೆಂತು? ಇದು ಒತ್ತಟ್ಟಿಗಿರಲಿ. ವಿದ್ಯಾರ್ಥಿಗಳಿಗೆ ವಿವಾಹವಾಗಿದ್ದರಂತೂ ತೀರಿತು. ಕಾಯವು ಕಾಲೇಜಿನಲ್ಲಿ; ಮನಸ್ಸು ಮನೆಯಲ್ಲಿ; ಸತಿಯ ಸಹವಾಸಕ್ಕೆ ಮೆಚ್ಚಿ ಅವನು ಕಲಿಯೆಂಬ ಕಾಲ್ಕಡಗವನ್ನು ಕಡಿದೊಗೆಯಲು ಕಾತರಿಸುವನು. ಇವೆಲ್ಲವನ್ನೂ ವಿಚಾರಮಾಡಿ ನೋಡಿದರೆ ಬೋರ್ಡಿಂಗ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೆ ಅತ್ಯುತ್ತಮಸ್ಥಾನವೆಂದು ಕಂಡುಬರದಿರಲಾರದು. ಬೋರ್ಡಿಂಗ್ ಎಂಬುವದು ವಿದ್ಯಾರ್ಥಿಗಳ ಯೋಗ್ಯ ಊಟಪಾಟದ ಆಲಯವಾಗಿರುವುದಲ್ಲದೆ ವಿದ್ಯಾರ್ಥಿಗಳ ಸತ್ಸಹವಾಸಕ್ಕೆ ಅವಕಾಶಕೊಡುವುದಿಲ್ಲ ಮತ್ತು ಏಕಾಂತಕ್ಕೂ ಏಕಾಗ್ರಚಿತ್ತಕ್ಕೂ ಅವಕಾಶವನ್ನು ಕೊಡುತ್ತದೆ. ಅವರ ಆಯುರಾರೋಗ್ಯವನ್ನು ವೈದ್ಯನಂತೆ ಕಾಪಾಡುತ್ತದೆ.

ಜಗತ್ತಿನ ಭಿನ್ನ ಭಿನ್ನ ಸಮಾಜದವರು ಉಚ್ಚ ಶಿಕ್ಷಣಾಪೇಕ್ಷೆಯುಳ್ಳ ತಮ್ಮ ತಮ್ಮ ತರುಣರ ವಿದ್ಯಾವ್ಯಾಸಂಗವು ನಿರ್ವಿಘ್ನವಾಗಿ ನೆರವೇರಲು ಈ ತರದ ಬೋರ್ಡಿಂಗುಗಳನ್ನು ಅಲ್ಲಲ್ಲಿ ಸ್ಥಾಪಿಸಿದ್ದಾರೆ. ವೀರಶೈವಸಮಾಜವು ಈ ಬಾಬಿನಲ್ಲಿ ಇತರ ಸಮಾಜಗಳಿಗಿಂತ ಹಿಂದುಳಿದಿದೆ ಏನು? ಹಾಗೆನ್ನಲಿಕ್ಕೆ ಬರುವಹಾಗಿಲ್ಲ. ಈ ಸಮಾಜಕ್ಕೆ ಧರ್ಮವೀರರ ಅಥವಾ ಕೊಡಗೈದೊರೆಗಳ ಅಭಾವವಿರುವದಿಲ್ಲ. ಇತರ ಸಮಾಜಗಳಲ್ಲಿ ನೂರು ಅಥವಾ ಸಾವಿರ ರೂಪಾಯಿಗಳಗಟ್ಟಲೆ ದಾನಕೊಡುವ ತ್ಯಾಗಿಗಳಿದ್ದಾರೆ. ಈ ಸಮಾಜದಲ್ಲಿ ಲಕ್ಷಗಟ್ಟಲೆ ದಾನಕೊಡುವ ಪುಣ್ಯಪುರುಷರು ಗಗನದಲ್ಲಿ ತಾರೆಗಳು ಥಳಥಳಿಸುವಂತೆ ಅಲ್ಲಲ್ಲಿ ಮಿನುಗುತ್ತಿರುವರು. ಇದಕ್ಕೆ ಉತ್ತಮ ಉದಾಹರಣೆಯು ಯಾದಗಿರಿಯಾಗಿರುತ್ತದೆ. ಸಮಾಜೋನ್ನತಿಗೆ ಸಾಧನವಾದ ಬೋರ್ಡಿಂಗಿನ ಸ್ಥಾಪನೆಯ ಗುಟ್ಟು ಇಂಥ ಪುಣ್ಯಪುರುಷರ ಮನಸ್ಸಿಗೆ ಗೋಚರಿಸದೆ ಹೋಗುವದಾದರೂ ಎಂತು?

ಅಲ್ಲಲ್ಲಿ ಅನಂತವಿದ್ಯಾವರ್ಧಕ ಫಂಡುಗಳು ಅಂದರೆ ಶಂಕರ ಫಂಡ (ಯಾದಗಿರಿ) ಶಿರಸಂಗಿಫಂಡ, ವೀರಶೈವಬಂಧುಫಂಡ, (ಕಲಬುರ್ಗಿ) ವಿದ್ಯಾವರ್ಧಕಫಂಡ (ಯಾದಗಿರಿ) ಇತ್ಯಾದಿ ಇನ್ನೂ ಅನೇಕ ಫಂಡುಗಳು ಸ್ಥಾಪಿಸಲ್ಪಟ್ಟಿವೆ. ಇದು ಅಲ್ಲದೆ ಪಂಚಪೀಠಾಧ್ಯಕ್ಷರು ಈ ಕೊರತೆಯನ್ನು ಕುಗ್ಗಿಸಲು ಅಲ್ಲಲ್ಲಿ ಸಂಚರಿಸುತ್ತಿರುವರು. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಈ ಸಮಾಜಕ್ಕಿದ್ದ ವಿದ್ಯೆಯ ಅಭಾವವೂ ಹೋಗಿ ಪ್ರಭಾವವು ನೆಲೆಗೊಳ್ಳುವದೆಂದು ಎದೆ ತಟ್ಟಿ ಹೇಳಬಹುದು.

ಇನ್ನು ನಿಜಾಮುಇಲಾಖೆಯ ವೀರಶೈವರ ವಿದ್ಯಾವಿಷಯದ ಕಡೆಗೆ ದೃಷ್ಟಿಯನ್ನು ಹೊರಳಿಸೋಣ. ಮುನ್ನಿನಂತೆ ಇವರೂ ನಿದ್ರಾವಸ್ಥೆಯಲ್ಲಿರದೆ ಮೆಲ್ಲಮೆಲ್ಲನೆ ವಿದ್ಯಾರಂಗದಲ್ಲಿ ಕಾಲಿಡಲು ಪ್ರಾರಂಭಿಸಿದ್ದಾರೆ. ವಿದ್ಯಾದೇವಿಯು ಪ್ರಸನ್ನಳಾಗುತ್ತ ಕೃಪೆ ಬಡಿಸಹತ್ತಿದ್ದಾಳೆ. ತಾಲೂಕು ಮತ್ತು ಜಿಲ್ಹೆಗಳಲ್ಲಿರುವ ಮಿಡಲ್ ಸ್ಕೂಲು ಮತ್ತು ಹೈಸ್ಕೂಲುಗಳಲ್ಲಿ ವೀರಶೈವ ವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೇ ಹೆಚ್ಚಾಗುತ್ತ ನಡೆದಿದೆ. ಹೈದ್ರಾಬಾದ ಪಟ್ಟಣದಲ್ಲಿ ಬರೆ ಕಾಯಿದೆಯನ್ನು ಅಭ್ಯಾಸಿಸುವ ವೀರಶೈವ ವಿದ್ಯಾರ್ಥಿಗಳ ಸಂಖ್ಯೆಯು ವಿಶೇಷವಾಗಿದೆ. ವುಸ್ಮಾನಿಯಾ ಮತ್ತು ನೈಜಾಮು ಕಾಲೇಜುಗಳಲ್ಲಿ ಹತ್ತುಮಟ್ಟಿಗೆ ವೀರಶೈವ ವಿದ್ಯಾರ್ಥಿಗಳಿದ್ದಾರೆ. ಮೇಲೆ ವಿವರಿಸಿದ ಈ ಎಲ್ಲಾ ವೀರಶೈವ ವಿದ್ಯಾರ್ಥಿಗಳು ಹೋಟೆಲುಗಳಲ್ಲಿ ಊಟಮಾಡಿ ವಿದ್ಯಾವ್ಯಾಸಂಗವನ್ನು ಮಾಡುತ್ತಿರುವರು. ಒಂದೇ ಸಮಾಜದ ತರುಣರು ಹೀಗೆ ಭಿನ್ನಭಿನ್ನ ಹೋಟೆಲುಗಳಲ್ಲಿ ಊಟಮಾಡಿ, ಸ್ಕೂಲು ಮತ್ತು ಕಾಲೇಜುಗಳಲ್ಲಿ ಅಭ್ಯಾಸಿಸಿ, ವಿದ್ಯೆಯ ಮುಖ್ಯ ಉದ್ದೇಶವನ್ನು ಸಾಧಿಸುವದೆಂದರೆ ಅಸಾಧ್ಯವಾದ ಮಾತೇ ಸರಿ! ಯಾವದೇ ಒಂದು ಸಮಾಜದ ತರುಣರ ಏಳಿಗೆಗೆ ಸ್ಕೂಲು ಮತ್ತು ಕಾಲೇಜಿನ ವಿದ್ಯೆಯೇ ಸಾಲದು. ಹೀಗೆ ಇವರ ಊಟ ಮತ್ತು ವಾಸಸ್ಥಾನಗಳು ಅಲ್ಲಲ್ಲಿ ಇರುತ್ತ ಹೋದರೆ ಇವರಲ್ಲಿ ಪರಸ್ಪರ ಪ್ರೇಮವು ಹುಟ್ಟುವ ಬಗೆ ಹೇಗೆ? ಇವರ ಐಕ್ಯಕ್ಕೆ ಆಸ್ಪದವನ್ನು ಉಂಟುಮಾಡುವ ಬಗೆ ಹೇಗೆ? ಇವರ ಮತಾಭಿಮಾನ, ದೇಶಾಭಿಮಾನ, ಭಾಷಾಭಿಮಾನದ ಜಾಗ್ರತೆಗೆ ಜಾಗವಿಲ್ಲದಂತಾಯಿತು. ಈ ಯಾವತ್ತು ಸದ್ಗುಣಗಳು ತಾರುಣ್ಯದಲ್ಲೇ ತರುಣರಲ್ಲಿ ತಲೆದೋರದೆ ಹೋದರೆ, ಅವರ ಸ್ಕೂಲ ಮತ್ತು ಕಾಲೇಜಿನ ಓದನ್ನು ಗಿಳಿ ಓದಿನಲ್ಲಿ ಗಣಿಸಬೇಕಾಗುವದು. ಈ ಎಲ್ಲ ದೃಷ್ಟಿಯಿಂದ ತಿಳಿದುನೋಡಿದರೆ ಬೋರ್ಡಿಂಗಿನ ಅವಶ್ಯಕತೆಯು ಬಹಳವಾಗಿರುವದು. ಇದು ಇಲ್ಲದ್ದರಿಂದ ವಿದ್ಯಾರ್ಥಿಗಳು ನಾನಾ ತರದ ಬಳಲಿಕೆಗೆ ಬಲಿಯಾಗುತ್ತಿರುವರು. ಪ್ಲೇಗಿನ ಕಾಲದಲ್ಲಂತೂ ಇವರು ಹೇಳಲಸಾಧ್ಯವಾದ ತೊಂದರೆಗಳನ್ನನುಭವಿಸಬೇಕಾಗುವದು. ಆದ್ದರಿಂದ ಹೈದ್ರಾಬಾದಪ್ರಾಂತದ ವೀರಶೈವಸಮಾಜದಲ್ಲಿಯ ಮನ್ನಿಸುವ ಕೊಡುಗೈದೊರೆಗಳು ಇತ್ತ ಕಡೆಗೆ ತಮ್ಮ ದಿವ್ಯದೃಷ್ಟಿಯನ್ನು ಹಳ್ಳಿ ಈ ಕಾರ್ಯವನ್ನಿಷ್ಟು ಮಾಡಿ ಕೀರ್ತಿಭಾಗಿಗಳಾಗಲು ಇದು ಒಳ್ಳೇ ಸುಸಮಯ.

ರೇವಣ್ಣ ವಿದ್ಯಾರ್ಥಿ ಬಿ.ಎ.,
ಉಪಕಾರ್ಯದರ್ಶಿ
ವೀರಶೈವ ತರುಣಸಂಘ ಹೈದ್ರಾಬಾದ (ದಕ್ಖನ್)

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಅಡ್ಡಪಲ್ಲಕ್ಕಿಮಹೋತ್ಸವ.

ಮೆದಕಿನಹಾಳ

ರಾಯಚೂರುಜಿಲ್ಲಾ ಲಿಂಗಸುಗೂರು ತಾಲೂಕು ಪೈಕಿ ಸಂಸ್ಥಾನ ಮೆದಕಿನಹಾಳ ಗ್ರಾಮದಲ್ಲಿ ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಜಗದ್ಗುರು ಪಟ್ಟಾಧ್ಯಕ್ಷ ಶ್ರೀ ೧೦೮ ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ತಿರ್ಯಗಾಂದೋಲಿಕಾ ಮಹೋತ್ಸವವು ತಾ|| ೪-೧೧-೨೯ ನೆಯ ಸೋಮವಾರ ದಿವಸ ಬಹು ಅಟ್ಟಹಾಸದಿಂದ ನಡೆಯಿತು. ಕನಕಗಿರಿ ಗಂಗಾವತಿ ಕಂಪಲಿ ಬಳ್ಳಾರಿ ಚಂದೆನಹಳ್ಳಿ ಮಸಿಗಿ ಲಿಂಗಸುಗೂರು ಕುಷ್ಟಗಿ ಮುಂತಾದ ಅನೇಕ ಪ್ರಾಂತದ ಸಣ್ಣದೊಡ್ಡ ಗ್ರಾಮಗಳಿಂದ ಅಂದಾಜು ೧೦-೧೨ ಸಾವಿರದ ವರೆಗೆ ಭಕ್ತಾದಿಗಳು ಆಗಮಿಸಿದ್ದರು. ಉದಯ ೬|| ಗಂಟೆಗೆ ಶ್ರೀ ಜಗದ್ಗುರುಗಳು ಈ ನಗರದ ಮುಂಭಾಗದಲ್ಲಿರುವ ಶ್ರೀಮಂತ ರಾಜಾಸಾಹೇಬರ ಉದ್ಯಾನದಲ್ಲಿ ವಾಸವಾಗಿರಲು, ಶ್ರೀಮಂತ ರಾಜಾ ಅಮರೇಶ್ವರರಾವ ಬಹದ್ದೂರ ಸಂಸ್ಥಾನ ಮೆದಕಿನಹಾಳ ಪ್ರಭುಗಳು ತಮ್ಮ ಸಂಸ್ಥಾನ ಇಲಾಖೆಯ ಯಾವತ್ತು ಗ್ರಾಮಗಳ ಗೌಡರು ಮುಂತಾದ ಪ್ರಮುಖಜನರೊಡನೆಯೂ, ಶ್ರೀಮಂತ ರಾಜಾ ಶಿವಶಂಕರರಾವ ಸಾಹೇಬ ಬಹದ್ದೂರ ಸಂಸ್ಥಾನ ಉಮಲೂಟಿ ಪ್ರಭುಗಳು ಮುಂತಾದ ರಾಜಮಂಡಲಿಯೊಡನೆಯೂ ಸಬ್ ಇನ್‌ಸ್ಪೆಕ್ಟರ್ ಸಾಹೇಬ ಪೋಲೀಸ್ ಸ್ಟೇಷನ್ ಹೌಸ್ ಮಸಿಗಿ ಮುಂತಾದ ಸರ್ಕಾರಿ ಅಧಿಕಾರಿಮಂಡಲಿಯೊಡನೆಯೂ ಇನ್ನುಳಿದ ಅಸಂಖ್ಯಾತವಾದ ಸ್ವಕೀಯ ಪರಕೀಯ ದೈವಮಂಡಲಿಯೊಡನೆಯೂ ಕೂಡಿಕೊಂಡು ಚತುರಂಗಸೇನಾಸಮೇತವಾಗಿ ಕಹಳೆ ಭೇರಿ ಬ್ಯಾಂಡು ಮುಂತಾದ ಅನಂತಾನಂತ ಭೋರ್ಗರೆಯುವ ವಾದ್ಯವೈಭವದೊಡನೆ ಶ್ರೀ ಜಗದ್ಗುರುಗಳ ಸನ್ನಿಧಿಗೆ ಆಗಮಿಸಿ, ಸನ್ನಿಧಿಗೆ ಪ್ರಾರ್ಥನೆಯನ್ನು ಮಾಡಿಕೊಂಡರು. ಬಳಿಕ ಶೃಂಗರಿಸಲ್ಪಟ್ಟ ಸುವರ್ಣಮಯ ಪಂಚಕಲಶಯುಕ್ತ ತಿರ್ಯಗಾಂದೋಲಿಕೆಯಲ್ಲಿ ಶ್ರೀ ಭಗವತ್ಪಾದರು ಮೂರ್ತಮಾಡಲು ನಂದಿಧ್ವಜ ವ್ಯಾಸಭುಜ ಶ್ವೇತಚ್ಛತ್ರ ಮಕರತೋರಣ ಹಗಲುದೀವಟಿಗೆ ಮುಂತಾದ ೭೨ ಬಿರುದಾವಳಿ ಸಮೇತವಾಗಿ ಮಹೋತ್ಸವವು ಹೊರಟಿತು. ಮಂಗಲಮಯವಾದ ಪುರರಾಜಧಾನಿಯ ಪೂರ್ವಮಹಾದ್ವಾರದ ಮಾರ್ಗವಾಗಿ ತಳಿರುತೋರಣಗಳಿಂದ ಗಗನಚುಂಬಿತ ಜಯಪತಾಕಾ ಪಂಕ್ತಿಗಳಿಂದಲೂ ಸುಗಂಧಮಯ ಕಾರಣೀಕಾರನೆಗಳಿಂದಲೂ ಅತಿ ಸಂಭ್ರಮ ಸೂಚಕ ರಂಭಾಸ್ತಂಭಾದಿಗಳಿಂದಲೂ ಪಂಡಿತಮಂಡಲಿಯ ವೇದಘೋಷದಿಂದಲೂ ಭಜನಾಸಂಘದವರ ಮಂಜುಲ ಗಾನಾಲಾಪಗಳಿಂದಲೂ ಸ್ತುತಿಪಾಠಕರಿಂದಲೂ ಭೋರ್ಗರೆಯುವ ಕಹಳೆ ತಮ್ಮಟೆ ಭೇರಿ ಬ್ಯಾಂಡು ಮುಂತಾದ ಸುನಾದಗಳಿಂದಲೂ ಹಾಲುಮತದವರ ವೀರವಾದ್ಯಗಳಿಂದಲೂ ನೋಡಿದತ್ತ ಕಿಕ್ಕಿರಿದು ಕೂಡಿರುವ ಜನಸ್ತೋಮದಿಂದಲೂ ಉತ್ಸವವು ಅಪೂರ್ವವಾಗಿದ್ದಿತು. ಉತ್ಸವದ ಹೆಜ್ಜೆ ಹೆಜ್ಜೆಗೂ ನೂರಾರು ಕಾಯಿಗಳು ಕರ್ಪೂರಮಂಗಳಾರತಿಗಳೂ ಆಚಾರ್ಯರ ಜಯಘೋಷದೊಡನೆ ಎಡೆಬಿಡದೆ ಅರ್ಪಿತವಾಗುತ್ತಿರುವದನ್ನು ನೋಡಿದರೆ ಕೂಡಿದ ಜನಕ್ಕಿರುವ ಅದ್ಭುತ ಗುರುಭಕ್ತಿಯು ವ್ಯಕ್ತವಾಗುತ್ತಲಿತ್ತು. ಉತ್ಸವದ ಮಧ್ಯಮಧ್ಯದಲ್ಲಿ ಪೂಜ್ಯವಾದ ಗುರುಸಾರ್ವಭೌಮರಿಗೆ ಜರತಾರಿಯ ಕಲಾಬತ್ತಿನಿಂದಲೂ ಮಣಿಕನಕಭೂಷಣಗಳಿಂದಲೂ ಅಲಂಕೃತವಾದ ಭವ್ಯತರ ಪಟ್ಟದಾನೆಯು ಮುಜರೆಯ ಮಾಡುವದೂ ಕನಕಚಾಮರವನ್ನು ಬೀಸುವದೂ ಮುಂತಾದ ಸಾಹಸವು ದಿಟ್ಟವಾದ ಜನಸ್ತೋಮಕ್ಕೆ ಆಶ್ಚರ್ಯವನ್ನುಂಟುಮಾಡುವದಾಗಿತ್ತು. ಇಂತಿದದೆ ನಗರದ ತುಂಬಲೂ ದಟ್ಟವಾದ ಅಸಂಖ್ಯಾತ ಜನಸಮೂಹವುಳ್ಳ ಈ ಮಹೋತ್ಸವದಲ್ಲಿ ಏನೊಂದೂ ಗೊಂದಲವೇಳದಂತೆಯೂ ಯಾವ ವಿಷಯದಲ್ಲೂ ಕೊರತೆಯುಂಟಾಗದಂತೆಯೂ ಅತಿ ಜಾಗರೂಕತೆಯಿಂದ ಪೋಲೀಸ್ ಸಿಬ್ಬಂದಿಯೊಡನೆ ಸನ್ನದ್ಧತೆಯುಳ್ಳ ಸಬ್ ಇನಸ್ಪೇಕ್ಟರ್ ಸಾಹೇಬ ಪೋಲೀಸ ಸ್ಟೇಷನ್ ಹೌಸ್ ಮಸಿಗಿ ಇವರ ಮತ್ತು ಶ್ರೀಮಂತ ರಾಜಾಅಮರೇಶ್ವರ ರಾವ ಸಾಹೇಬ ಬಹದ್ದೂರ ಸಂಸ್ಥಾನ ಮೆದಿಕಿನಹಾಳ ಶ್ರೀಮಂತ ರಾಜಾಶಿವಶಂಕರರಾವ ಸಾಹೇಬ ಬಹದ್ದೂರ ಸಂಸ್ಥಾನವುಮಲೂಟಿ ರಾಜಶೇಖರರಾವ ನಾಡಗೌಡರು ಕೊರುಡಿಗಿ ಮೆದಿಕಿನಾಳ ಸಂಸ್ಥಾನ ಏಜಂಟರಾದ ವೇ|| ಗುರುಕಾಂತಾರ್ಯ ಹಿರೇಮಠ ನೀರಲಕೇರಿ ಮಸಿಗಿ, ವಿರೂಪಾಕ್ಷಪ್ಪ ಗುಮಾಸ್ತರು, ಶ್ರೀ ಜಗದ್ಗುರು ಕೇದಾರಸಂಸ್ಥಾನ ಏಜಂಟರಾದ ವೇ|| ಪುರಗಿರಿ ಹಿರೇಮಠದ ಸಿದ್ಧಲಿಂಗಯ್ಯ ವಕೀಲ ಸಾಹೇಬರು ಶ್ರೀ|| ಷ|| ಬ್ರಹ್ಮ ಸಂಸ್ಥಾನ ಅಧಿಕಾರಿಗಳೂ ಸಂಸ್ಥಾನ ಮುನಸಿಯವರಾದ ಕೆ. ಯಂ. ವೀರಾನಂದಶರ್ಮರೂ ಇವರ ಕಾರ್ಯದಕ್ಷತೆ ಸುವ್ಯವಸ್ಥಿತಿ ಮುಂತಾದ ಸಾಹಸ ಗುಣಗಳು ಪ್ರಶಂಸನೀಯಗಳಾಗಿದ್ದವು. ಹೀಗೆ ಉತ್ಸವವು ನಿರಾತಂಕವಾಗಿ ನಡೆದು ೧೨|| ಗಂಟೆಗೆ ಶ್ರೀಮಂತ ರಾಜಾ ಅಮರೇಶ್ವರ ರಾವ್ ಬಹದ್ದೂರರವರ ರಾಜಮಂದಿರಕ್ಕೆ ತಲ್ಪಿತು. ಅಲಂಕೃತವಾಗಿದ್ದ ಸಿಂಹಾಸನವನ್ನು ಶ್ರೀ ಜಗದ್ಗುರುಗಳವರು ಮಂಡಿಸಿದರು. ರಾಜಮರ್ಯಾದೋಚಿತವಾದ ಗುಂಡುಗಳು ಹಾರಿಸಲ್ಪಟ್ಟವು. ಆಸ್ಥಾನ ಪಂ|| ವೇ|| ಅಮರನಾಥಶಾಸ್ತ್ರಿಗಳು ಹಿರೇಮಠಬನ್ನಿಗೋಳ ಇವರು ಶ್ರೀ ಜಗದ್ಗುರು ಕೇದಾರಪೀಠದ ಮಹತ್ವದ ವಿಷಯವಾಗಿಯೂ ವೇ|| ಪಂಡಿತ ಬಸವಪ್ಪಶಾಸ್ತ್ರಿಗಳು ಮಸಿಗಿ ಇವರು ಅಡ್ಡಪಲ್ಲಕ್ಕಿಯ ಉತ್ಕರ್ಷದ ಬಗ್ಗೆಯೂ ಸರಸವಾದ ಭಾಷಣಮಾಡಿದರು. ಅನಂತರಸಮಾಜೋದ್ಧಾರಕ ಶ್ರೀ|| ಷ|| ಬ್ರಹ್ಮಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದ ಮಹಾಸ್ವಾಮಿಗಳು ಹಿರೇಮಠ ಚಿಕ್ಕಮಂಗೂರು ಇವರು ಶ್ರೀ ಜಗದ್ಗುರು ಪೀಠದಿಂದ ಜರುಗಿದ ಜರುಗುತ್ತಲಿರುವ ಸಮಾಜಸುಧಾರಣೆಯ ವಿಷಯವನ್ನು ಸೂಚಿಸಿದರು. ವೇ|| ಚೆನ್ನಬಸವಶರ್ಮ ಹಗರಿದಿನ್ನಿ ಇವರು ಗುರುಮಹತ್ವದ ಬಗ್ಗೆ ಭಾಷಣಮಾಡಿ ಮಹಾಸನ್ನಿಧಿಗೆ ಪಂಚರತ್ನವೆಂಬ ತಮ್ಮ ಕವಿತೆಯನ್ನು ಸಮರ್ಪಿಸಿದರು. ವೇ|| ಸಿದ್ಧಮಲ್ಲಶರ್ಮ ಅಜ್ಜೇಶ್ವ ಹಿರೇಮಠ ಇವರು ಭಕ್ತಿಯ ಬಗ್ಗೆ ಭಾಷಣಮಾಡಿ ತಮ್ಮ ಕವಿತ್ವವನ್ನು ಸಮರ್ಪಿಸಿದರು. ಅನಂತರ ಶ್ರೀ ಜಗದ್ಗುರು ಮಹಾಸನ್ನಿಧಿಯವರು ಸನಾತನ ಧರ್ಮದ ಮಹತ್ವವನ್ನು ಸುಗಮವಾಗಿ ಬೋಧಿಸಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಹೋತ್ಸವಕಾರ್ಯವನ್ನು ಅವಿಶ್ರಾಂತಶ್ರಮಪೂರ್ವಕವಾಗಿ ನೆರವೇರಿಸಿ ದರ್ಶನಕ್ಕಾಗಿ ಬಂದಿರುವ ಅಸಂಖ್ಯ ಜನ ಸಮುದಾಯಕ್ಕೆ ಮೆದಿಕಿನಾಳ ಸಂಸ್ಥಾನ ಶ್ರೀಮಂತ ರಾಜಾಸಾಹೇಬರ ಅಪ್ಪಣೆಯಮೇರೆಗೆ ಅನ್ನೋದಕಾದಿ ಯಾವದ್ವಿಷಯಕ್ಕೂ ಕೊರತೆಬಾರದಂತೆ ದಾಸೋಹ ಮುಂತಾಗಿ ಆದರಾತಿಥ್ಯ ಪೂರ್ವಕ ಯೋಗ್ಯಮರ್ಯಾದೆಯಿಂದುಪಚರಿಸಿ ಸಂಪೂರ್ಣ ಸಹಾಯವನ್ನು ಮಾಡಿದ ಪೋ|| ಪಾ|| ರುದ್ರಗೌಡರು ಮಾ|| ಪಾ|| ಸಂಗನಗೌಡರು ಸುಂಕದ ಬಸಪ್ಪನವರು ಅಳ್ಳಿ ನಾಗಪ್ಪನವರು ಸರಾಫ ರಾಜಪ್ಪನವರು ಮರಕಲದಿನ್ನಿ ಸಿದ್ಧಲಿಂಗಪ್ಪನವರು ಪಟ್ಟಣಶೆಟ್ಟಿ ಸೂಗಪ್ಪನವರು ಪೌಲಿ ಸಿದ್ಧಲಿಂಗಪ್ಪನವರು ಅಳ್ಳಿ ಮಲ್ಲಪ್ಪನವರು ಪೋಗಶಿವಪ್ಪನವರು ಸುಂಕದ ಸಣ್ಣ ಬಸವಪ್ಪನವರು ಗಿರಾಣಿ ವೀರಪ್ಪನವರು ಜವಳಗೇರಿ ಮಾಟಪ್ಪನವರು ಗುಂಡಳ್ಳಿ ಮಲ್ಲಿಕಾರ್ಜುನಪ್ಪನವರು ಮುಂತಾದ ಸಾಹುಕಾರರು ನೊಹತಪರ್ ಪ್ರಜೆಗಳು ಅತಿಶಯಕಾರ್ಯದಕ್ಷರಿದ್ದು ಇವರಲ್ಲಿರುವ ವೀರಶೈವಾಚಾರನಿಷ್ಠೆ ಸ್ವಾಮಿಭಕ್ತಿ ಔದಾರ್ಯ ಶಾಂತತಾ ಮುಂತಾದ ಸದ್ಗುಣಗಳು ವರ್ಣನೀಯಗಳಾಗಿರುವವು. ಈ ಸಂಸ್ಥಾನದ ರಾಜಾ ಅಮರೇಶ್ವರ ರಾವ್

ಸಾಹೇಬ ಬಹದ್ದೂರರವರಾದರೂ ವೀರಶೈವ ಧರ್ಮಧುರಂಧರರೂ ದೃಢಪ್ರಜಾನುರಾಗಿಗಳೂ ರಾಜನೀತಿ ಗುರುಜಂಗಮಭಕ್ತಿ ಸತ್ಪಾತ್ರದಾನ ಮುಂತಾದ ಸದ್ಗುಣಮಂಡಿತರೂ ಇರುವರು. ಇಂತಹ ವೀರಶೈವ ಪ್ರಜಾಮಯವಾದ ಸಂಸ್ಥಾನ ಗ್ರಾಮದಲ್ಲಿ ವೀರಶೈವರೇ ರಾಜರಾಗಿದ್ದು ಪರಸ್ಪರ ರಾಜಭಕ್ತಿ ಪ್ರಜಾಪ್ರೇಮಪೂರಿತರಾದ ಈ ಪ್ರಜಾಪ್ರಭುಗಳು ಏಕಮತ್ಯದಿಂದಿರುವದರಿಂದ ಅನೇಕ ವೀರಶೈವ ಧರ್ಮಕಾರ್ಯಗಳಿಗೂ ವೀರಶೈವ ಜಂಗಮಗಳಿಗೂ ಎಷ್ಟೋ ಅನುಕೂಲತೆಯುಂಟಾಗಿದೆ. “ಹೇಮ್ಮಾ! ಪರಮಾವೋದು” ಎನ್ನುವಂತೆ ವೀರಶೈವ ರಾಜರಾದ ಶ್ರೀಮಂತ ರಾಜಾ ಅಮರೇಶ್ವರ ರಾವ ಸಾಹೇಬ ಬಹದ್ದೂರ ಮೆದಿಕಿನಹಾಳ ಮಹಾಸಂಸ್ಥಾನ ಪ್ರಭುಗಳ ಧರ್ಮಪತ್ನಿಯವರಾದ ಮಹಾರಾಜಾ ಸದಾಶಿವರಾಜೇಂದ್ರ ಒಡೆಯರ್ ಬಹದ್ದೂರ ಎಚ್. ಎಚ್. ಸೊಂಡಾ ಇವರ ಸುಪುತ್ರಿಯವರಾದ ರಾಣಿ ರಾಜೇಶ್ವರೀದೇವಿಯವರು ಕನ್ನಡ ಮರಾಠಿ ಇಂಗ್ಲೀಷ ವಗೈರೆ ಐದಾರು ಭಾಷೆಯ ವಿದ್ಯೆಗಳನ್ನು ಚನ್ನಾಗಿ ಅರಿತವರೂ ಸದ್ಗುಣಶಾಲಿಗಳೂ ವಿಶಾಲಮತಿಗಳೂ ದೂರದರ್ಶಿಗಳೂ ಕಾರ್ಯಚತುರರೂ ಪತೀಂಗಿತಜ್ಞರೂ ಸುಶೀಲನಿಷ್ಠರೂ ಇದ್ದಾರೆ. ಇವರು ಶ್ರೀ ಜಗದ್ಗುರುಗಳವರ ಸೇವಾವಿಷಯದಲ್ಲಿ ಕಂಕಣಬದ್ಧರಾಗಿ ಇಂತು ಮಹತ್ವದ ಪೂಜೋತ್ಸವಕಾರ್ಯವನ್ನು ಭಕ್ತಿಪೂರ್ವಕವಾಗಿ ನೆರವೇರಿಸಿ ತಮ್ಮ ಮನೋರಥವನ್ನು ಶ್ರೀ ಜಗದ್ಗುರು ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಬಿನ್ನೈಸಿಕೊಳ್ಳಲು ಶ್ರೀ ಜಗದ್ಗುರುಗಳು ನಿಮ್ಮಗಳ ಇಷ್ಟಾರ್ಥವು ಸಿದ್ಧಿಸಲೆಂದು ವರಪ್ರದಾನಮಾಡಿದ್ದರಿಂದ ಈ ರಾಜದಂಪತಿಗಳು ಆನಂದತುಂದಿಲರಾಗಿ ಮಹಾಸನ್ನಿಧಿಯಲ್ಲಿ ಗಜದಾನವನ್ನು ಗುರುಕಾಣಿಕೆಯಾಗಿ ಅರ್ಪಿಸುತ್ತೇವೆಂದು ವಾಗ್ದಾನವನ್ನು ಮಾಡಿದರು. ನೋಡಿರಿ? ದಾನವನ್ನು ಮಾಡತಕ್ಕಂಥವರು ಮತ್ತು ದಾನವನ್ನು ಸ್ವೀಕರಿಸತಕ್ಕಂಥವರು ಯೋಗ್ಯರಿರಬೇಕೆಂಬ ಧರ್ಮಶಾಸ್ತ್ರಪದ್ಧತಿಗನುಸಾರವಾಗಿ ಈ ರಾಜದಂಪತಿಗಳು ಮಾಡಿದ ದಾನವು ಸಾಧಾರಣವಾದದ್ದೇ? ಇಂಥ ದಾನವನ್ನು ಸ್ವೀಕರಿಸುವದಾದರೂ ಇಂತಹ ಜಗದ್ಗುರುಗಳಿಗಲ್ಲದೆ ಸಾಧಾರಣರಿಗೆ ಸಲ್ಲುವದೆ?' ದಾನಕೊಡತಕ್ಕವರು ದಾನ ತೆಗೆದುಕೊಳ್ಳುವರು ದಾನಕೊಡುವ ವಸ್ತುವೂ ಸಹ ಅಸಾಧಾರಣವಾದಂಥವುಗಳಾಗಿರುತ್ತವೆ. ಇಂತಹ ದಾನವನ್ನು ಮಾಡಿದ ಈ ಸುಶೀಲರಾಜದಂಪತಿಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಚಿರಾಯುರಾರೋಗ್ಯ ಸಂತಾನಾಭಿವೃದ್ಧಿಯನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ

ಉತ್ಸವಭಾಗಿ.
ಲೋಕಲ ಬೋರ್ಡ ಸ್ಕೂಲು ಹೆಡ್‌ಮಾಸ್ತರ
ಪಂಚಾಕ್ಷರಶರ್ಮ ಸಂಸ್ಥಾನ ಮೆದಕಿನಹಾಳ

ಶ್ರೀ ಗಣೇಶಾಯ ನಮಃ.

ಅಖಿಲಭಾರತ ಸನಾತನ ಧರ್ಮ ಮಹಾಸಭೆ ಮತ್ತು ನಿಖಿಲ ಕರ್ನಾಟಕ ಸನಾತನಧರ್ಮಪ್ರಮುಖರ ಮಹಾಸಭೆ.

ಬಾಲ್ಯವಿವಾಹ ಶಾಸನದ ವಿಮರ್ಶೆ.

ಆಲ್ ಇಂಡಿಯಾ ಸನಾತನಧರ್ಮಮಹಾಸಭೆಯು ಮದ್ರಾಸಿನಲ್ಲಿ ಈ ನವಂಬರ್ 30 ಡಿಸೆಂಬರ್ 1-2 ನೇ ದಿನಗಳಲ್ಲಿ ಕಲ್ಕತ್ತಾ ಸುಪ್ರಸಿದ್ಧರಾದ ಶ್ರೀಮಾನ್ ಬಾಬು ಶ್ಯಾಮಸುಂದರ ಚಕ್ರವರ್ತಿಗಳವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಈ ಮಹಾಸಭೆಗೆ ಇಂಡಿಯಾದೇಶದ ಎಲ್ಲಾ ಪ್ರಾಂತಗಳಿಂದಲೂ ಪ್ರತಿನಿಧಿಗಳು ಸೇರುವವರಾಗಿದ್ದಾರೆ. ಇದಕ್ಕನುಗುಣವಾಗಿ ತಿರುಚನಾಪಳ್ಳಿಯಲ್ಲಿ ಮ|| ರಾ|| ಶ್ರೀಮಾನ್ ದಿವಾನ್ ಬಹದ್ದೂರ್ ಟಿ. ಆರ್. ರಾಮಚಂದ್ರಯ್ಯರ್ ಹೈಕೋರ್ಟ್ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಸನಾತನಧರ್ಮಮಹಾಸಭೆಯು ನಡೆದಿರುವುದಲ್ಲದೆ ಬೆಜವಾಡದಲ್ಲಿ ನವಂಬರ್ 9-10 ನೇ ದಿನಗಳಲ್ಲಿ ನೈಜಾಂ ಗೌರ್ನಮೆಂಟ್ ಲೀಗಲ್ ಅಡ್ವೈಜರೂ ಪ್ರೀವಿ ಕೌನ್ಸಿಲ್ ಎಕ್ಸ್ ಪ್ರಸಿಡೆಂಟರೂ ಆದ ರಾಜಬಹದ್ದೂರ್ ಬಿ. ಕೃಷ್ಣಮಾಚಾರ್ಯರ ಅಧ್ಯಕ್ಷತೆಯಲ್ಲಿ ಆಂಧ್ರ ಸನಾತನ ಧರ್ಮಪ್ರಮುಖರ ಮಹಾಸಭೆಯೂ ಸ್ತ್ರೀ ಮಹಾಸಭೆಯೂ ನಡೆದು ಶಾರದಾ ವಿವಾಹ ಬಿಲ್ಲಿನ ಅಸಮ್ಮತಿಯನ್ನು ವ್ಯಕ್ತಮಾಡಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಿ ಮದ್ರಾಸ್ ಮಹಾಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಿದ್ದಾಗಿದೆ.

ಕರ್ನಾಟಕದಲ್ಲಿಯೂ ಸಹ ಕಳೆದ ಜುಲೈ ತಿಂಗಳಿನಿಂದಲೂ ವಿವಾಹ ಶಾಸನ ನಿರೋಧಾರ್ಥವಾಗಿ ವರ್ಣಾಶ್ರಮಧರ್ಮ ಸಭೆಗಳು ಶಿವಮೊಗ್ಗ, ಹಾಸನ, ಚಿತ್ರದುರ್ಗ, ಗದಗ, ಹುಬ್ಬಳ್ಳಿ, ಧಾರವಾಡ, ಹೊಸಪೇಟೆ, ಚಿಕ್ಕಬಳ್ಳಾಪುರ ಮುಂತಾದ ಸ್ಥಳಗಳಲ್ಲಿ ನಡೆದಿವೆ. ಇದಕ್ಕೆ ಮೊದಲಾಗಿ ಶ್ರೀ ದ್ವಾರಕಾಧೀಶ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಕೃಷ್ಣಾನಂದತೀರ್ಥ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಭಾರತ ಸನಾತನ ಧರ್ಮಮಂಡಲವು ಏರ್ಪಟ್ಟು ಈಗ ಎರಡುವರ್ಷಗಳಿಂದ ಕಾರ್ಯವನ್ನು ನಡೆಯಿಸಿರುತ್ತದೆ.

ಮೈಸೂರು ರಾಜಧಾನಿಯಲ್ಲಿ 34 ಮಹಾಸಭೆಗಳು ನಡೆದು ವಿವಾಹಶಾಸನದ ವಿರುದ್ಧವಾಗಿ ತೀರ್ಮಾನಗಳಾಗಿ ಸನಾತನ ಧರ್ಮಸಂಜೀವಿನೀ ಸಭೆಯು ಏರ್ಪಡಿಸಲ್ಪಟ್ಟಿರುತ್ತದೆ. ಈ ಸಭೆಯವರು ಮದ್ರಾಸಿನಲ್ಲಿ ನಡೆಯುವ ಮಹಾಸಭೆಯ ಪೂರ್ವಭಾವಿಯಾಗಿ ಮೈಸೂರಿನಲ್ಲಿ ನವಂಬರ್ ತಾ|| 24 ನೇ ಭಾನುವಾರ ಅಖಿಲಕರ್ನಾಟಕ ಸನಾತನ ಧರ್ಮಪ್ರಮುಖರ ಮಹಾಸಭೆಯನ್ನು ನಡೆಯಿಸಲು ತೀರ್ಮಾನಿಸಿ ಸ್ವಾಗತಸಮಿತಿಯನ್ನು ಏರ್ಪಡಿಸಿರುತ್ತಾರೆ.

ಈ ವಿಷಯವನ್ನು ಪ್ರಕಟಿಸುವಾಗ ಜನಸಾಮಾನ್ಯದವರ ತಿಳುವಳಿಕೆಗಾಗಿ ಕೆಲವು ವಿಷಯಗಳನ್ನು ಬರೆಯುವುದು ಅಗತ್ಯವಾಗಿದೆ. ಇದನ್ನು ನಮ್ಮ ಕರ್ನಾಟಕದೇಶದ ಸನಾತನ ಧರ್ಮಾವಲಂಬಿಗಳು ಅವಶ್ಯವಾಗಿ ವಿಚಾರಮಾಡಬೇಕು. ಅದೇನೆಂದರೆ—

ಶ್ರೀ|| ರಾವ್ ಸಾಹೇಬ್ ಹರವಿಲಾಸ ಶಾರದರೆಂಬ ಅಸೆಂಬ್ಲಿ ಮೆಂಬರರು ಇಂಡಿಯಾ ಶಾಸನಸಭೆಯಲ್ಲಿ ಬಾಲ್ಯವಿವಾಹ ನಿಷೇಧ ಶಾಸನವನ್ನು ತಂದರು. ಇದು ಇಂಡಿಯಾ ಅಸೆಂಬ್ಲಿಯಲ್ಲಿ 1929 ನೇ ಸೆಪ್ಟಂಬರಿನಲ್ಲಿ ಪಾಸಾಗಿ 1930 ನೇ ಏಪ್ರಿಲಿನಿಂದ ಜಾರಿಗೆ ಬರುವುದಾಗಿದೆ. 14 ವರ್ಷದೊಳಗಿನ ಕನ್ನಿಕೆಯರಿಗೂ 18 ವರ್ಷದೊಳಗಿನ ಬಾಲಕರಿಗೂ ವಿವಾಹವಾದಲ್ಲಿ ಈ ಶಾಸನದಂತೆ ತಂದೆ ತಾಯಿ ಅಥವಾ ಪೋಷಕರು ಮತ್ತು ಸಹಾಯಕರು ಇವರೆಲ್ಲರಿಗೂ ಒಂದು ತಿಂಗಳು ಸಾದಾ ಶಿಕ್ಷೆಯೂ 1000 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಡುವುವು. ಈ ಕಾನೂನು ಜಾರಿಗೆ ಬಂದರೆ ಎಲ್ಲಾ ಜಾತಿಯವರೂ ತಮ್ಮ ಧರ್ಮಮಾರ್ಗವನ್ನು ಬಿಟ್ಟು ತಮ್ಮ ಬಾಲಿಕೆಯರಿಗೆ ಋತುಮತಿಯಾದನಂತರವೇ ವಿವಾಹವನ್ನು ಆಚರಿಸಬೇಕಾಗಿ ಬರುವುದು. ಇಲ್ಲವಾದರೆ ಜೈಲಿಗೆ ಹೋಗುವುದಕ್ಕೂ ಜುಲ್ಮಾನೆಯನ್ನು ಕೊಡುವುದಕ್ಕೂ ಸಿದ್ಧರಾಗಬೇಕಾಗುವುದು. ಇದುವರೆಗೆ ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ತಮ್ಮ ತಮ್ಮ ಬಾಲಿಕೆಯರಿಗೆ ಋತ್ವನಂತರ ವಿವಾಹವನ್ನು ಮಾಡುತ್ತಿದ್ದವರಿಗೆ ಈ ಶಾಸನವಾಗಿರುವುದು ಲಾಭವಾದರೂ ತಮ್ಮ ತಮ್ಮ ಮತಾಚಾರ ಧರ್ಮವನ್ನು ನಡೆಯಿಸಿಕೊಂಡು ಬರುತ್ತಿದ್ದ ಸನಾತನಧರ್ಮಾವಲಂಬಿಗಳಿಗೆ ಈ ಕಾನೂನು ಬಾಧೋಪದ್ರವಕರವಾಗಿದೆ. ನಮ್ಮ ಶಾಸ್ತ್ರ ಮತ್ತು ಶಿಷ್ಟಾಚಾರಪದ್ಧತಿಯಂತೆ ಋತುಮತಿಯಾದನಂತರ ವಿವಾಹ ನಡೆಯಿಸಿದರೆ ಮಹತ್ಪಾಪವೂ ನರಕವೂ ಸಂಘಟಿಸುವುದು ಸಿದ್ಧವು. ಷರಿಯತ್ ಎಂಬ ಶಾಸ್ತ್ರದಂತೆ ಮುಸಲ್ಮಾನರಿಗೂ ಈ ಶಾಸನವು ಮತವಿರೋಧಕರವಾಗಿದೆ. ಎಂದು ತಿಳಿಯಬರುತ್ತದೆ.

ಈ ಶಾಸನದ ವಿಷಯವು ಈಗಲೂ ನೂರಕ್ಕೆ 90 ಜನರಿಗೆ ತಿಳಿಯದೇ ತಿಳಿಯದು. ಶ್ರೀ ವಿಕ್ಟೋರಿಯಾ ಮಹಾರಾಜ್ಞಿಯವರೂ ತದನಂತರ ಪ್ರಭುಗಳಾದ ಎಡ್ವರ್ಡ್ ಚಕ್ರವರ್ತಿಯವರೂ ಈಗಿನ ಶ್ರೀ ಜಾರ್ಜ್ ಸಾರ್ವಭೌಮರೂ 1858 ನೇ ವರ್ಷದ ಪ್ರೋಕ್ಲೇಮೇಷನ್ನನ್ನು ಜಾಹೀರಮಾಡಿ ನಡೆಯಿಸಿಕೊಂಡು ಬಂದಿರುವುದರಿಂದಲೂ, ಹಿಂದೆ ವೈಸ್ರಾಯರಾಗಿದ್ದ ಲಾರ್ಡ್ ರೀಡಿಂಗ್ ಮೊದಲಾದವರು ಇಂಡಿಯಾದೇಶದ ಶಾಂತತೆಗೆ ಸರ್ಕಾರದವರು ಮತಾಚಾರದಲ್ಲಿ ಕೈಹಾಕದಿರುವುದೇ ರಾಜನೀತಿಯೆಂದು ಸಾರಿದ್ದರಿಂದಲೂ ಸನಾತನ ಧರ್ಮಾವಲಂಬಿಗಳು ಮತಾಚಾರಕ್ಕೆ ಎಂದೂ ಭಂಗಬರಲಾರದೆಂದು ಧೈರ್ಯದಿಂದ ಇದ್ದರು. ಈಗಣ ಶಾಸನಸಭೆಯ ಮೆಂಬರರ ಚಳವಳಿಯಿಂದ ಇಂಡಿಯಾ ಸರ್ಕಾರದವರು ಸಾಂಘಿಕ ವಿಚಾರವೆಂಬ ಭಾವನೆಯಿಂದ ಇದಕ್ಕೆ ಕೈಹಾಕಿರುವರು. ಆದರೆ ನಮ್ಮವರೇ ಇದಕ್ಕೆ ಮೂಲಕಾರರು. ಸ್ವರಾಜ್ಯವನ್ನು ಅಂಗೈಯಲ್ಲಿ ತಂದುಕೊಡುತ್ತೇವೆಂದು ಮನೆಮನೆಗೂ ತಿರುಗಿ ಪೀಡಿಸಿ ಓಟು ತೆಗೆದುಕೊಂಡು ಮೆಂಬರರಾದ ಆರ್ಯಸಮಾಜ ಮೊದಲಾದ ಸಮಾಜಗಳಿಗೆ ಸೇರಿದ ಅಸೆಂಬ್ಲಿ ಮೆಂಬರರೂ ಸರಕಾರಕ್ಕೂ ಪ್ರಜೆಗಳಿಗೂ ಇರುವ ಕಷ್ಟನಷ್ಟಗಳನ್ನು ತೊಲಗಿಸಿ ಸರ್ಕಾರದವರನ್ನು ಸಾಮ ದಾನ ಭೇದ ದಂಡೋಪಾಯಗಳಿಂದ ಅನುಕೂಲಮಾಡಿಕೊಡುತ್ತೇವೆಂದು ಹೇಳಿ ಓಟ್ನು ತೆಗೆದುಕೊಂಡು ಮೆಂಬರರಾದ ಕಾಂಗ್ರೆಸ್ ನಾಯಕರೂ ಸಭೆಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಮಾಡಿದ ಅಲ್ಲೋಲಕಲ್ಲೋಲದ ಫಲವಾಗಿ ಸ್ವರಾಜ್ಯವನ್ನು ತರುವುದಂತೂ ಎಂದೂ ಆಗದೆ ಜನಗಳ ಮನೆಯಲ್ಲಿದ್ದ ಪ್ರಕೃತ ವಿವಾಹ ಧರ್ಮರೂಪವಾದ ಸ್ವತಂತ್ರಕ್ಕೂ ಭಂಗಬರುವಂತೆ ಸರ್ಕಾರವನ್ನು ಮಾಡಿದ್ದಾರೆ. ಶ್ರೀ|| ಗಾಂಧಿ ನೆಹ್ರು ಮೊದಲಾದ ಕಾಂಗ್ರೆಸ್ ನಾಯಕರು ನಮಗೆ ಮೊದಲು ತಂದುಕೊಟ್ಟ ಸ್ವರಾಜ್ಯವು ಇದೇ ಆಗಿದೆ.

ಈಗಾಗಲೇ ಭಾರತಧರ್ಮವನ್ನೇ ನಿರ್ಮೂಲಮಾಡುವ ಸ್ವರಾಜ್ಯವು ಬೇಡವೆಂದೂ ಶ್ರೀ ಗಾಂಧಿ ನೆಹ್ರು ಮೊದಲಾದವರಿಗೆ ಸ್ವರಾಜ್ಯಕ್ಕಾಗಿ ಒಂದು ಕಾಸನ್ನು ಸಹ ಕೊಡಬೇಡಿರೆಂದೂ ಈಗ ಸ್ವರಾಜ್ಯಕ್ಕೆ ಕೊಟ್ಟ ದುಡ್ಡಿನ ಫಲಿತಾಂಶವು ನಮ್ಮ ಧರ್ಮನಾಶಕ್ಕೆ ನಾವೇ ದಾರಿಮಾಡಿಕೊಂಡಂತಾಯಿತೆಂದೂ ಇನ್ನು ಮುಂದೆ ಸನಾತನ ಧರ್ಮವಿರುದ್ಧಕಾರ್ಯವನ್ನು ಮಾಡುವವರಿಗೆ ಸಹಾಯ ಮಾಡಬೇಡಿರೆಂದೂ ಇಂಥವರಿಗೆ ಶಾಸನ ಸಭೆಗಳಿಗೆ ಓಟ್ನು ಕೊಡಬೇಡಿರೆಂದೂ ಕಾಶೀಪಟ್ಟಣದ ಪ್ರಮುಖ ವಿದ್ವನ್ಮಂಡಲಿಯವರು ಬಹಿರಂಗ ಪ್ರಕಟಣೆಗಳನ್ನು ಮಾಡಿ ಹರತಾಳವನ್ನು ನಡೆಯಿಸಿರುವರು.

ಈಗ ಈ ಕಾಂಗ್ರೆಸ್ಸಿನಲ್ಲಿ ಲೋಕಮಾನ್ಯತಿಲಕರಂತಹ ರಾಜಕೀಯ ತಂತ್ರವಿಶಾರದರು ಇಲ್ಲವಾದರು. ಲೋಕಮಾನ್ಯರು ಹಿಂದೆ ಒಂದುಸಾರೆ ಬಂದ ಈ ಬಿಲ್ಲನ್ನು ನಿರೋಧಿಸಿ ಮತಾಚಾರಧರ್ಮವು ಆಯಾ ಜಾತಿ ಸಂಗಡದವರ ಅಜನ್ಮಸಿದ್ಧ ಸ್ವತಂತ್ರಹಕ್ಕೆಂದು ಸಾರಿದ್ದರು. ಮಿ|| ಗಾಂಧಿಯವರಾದರೂ ಹಿಂದೆ ಒಂದು ವೇಳೆ ಇಂಡಿಯಾ ದೇಶದಲ್ಲಿ ಬಾಲ್ಯವಿವಾಹವು ಯಾವಜ್ಜೀವವೂ ಅನ್ಯೋನ್ಯವಾದ ದಾಂಪತ್ಯಪ್ರೇಮಕ್ಕೂ ಸ್ತ್ರೀಪಾತಿವ್ರತ್ಯಕ್ಕೂ ಕಾರಣವೆಂದು ಹೇಳಿದ್ದರು. ಈಗ ಇವರು ಬಾಲಿಕೆಯರಿಗೆ ಹದಿನೆಂಟು ವರ್ಷಕ್ಕೆ ವಿವಾಹವನ್ನು ಶಾಸನದಿಂದ ಸ್ಥಿರ ಮಾಡಿರೆಂದು ತಂತಿ ಕೊಟ್ಟರು. (ನೂರಕ್ಕೆ 90 ರಂತಿರುವ) ಸನಾತನ ಧರ್ಮಾವಲಂಬಿಗಳು ಈ ಗಣಶಾಸನ ಸಭಾಸದರಿಗೆ ಎಷ್ಟೊಂದು ಪ್ರಾರ್ಥಿಸಿಕೊಂಡರೂ ಜನಸಾಮಾನ್ಯದ ಅಭಿಪ್ರಾಯವನ್ನು ಕೇಳದೆ, ಇಂಡಿಯಾ ಸರ್ಕಾರವನ್ನು ನಿರಂಕುಶವೆಂದು ಹೇಳುತ್ತಿದ್ದ ಇವರು ಸ್ವಯಂ ಮಿತಿಮೀರಿ ನಿರಂಕುಶ ಪ್ರವರ್ತಕರಾದರು. ಮುಂದೆ ಸ್ವರಾಜ್ಯ ಬಂದಾಗ ಈ ಲಾಭವೇ ಆಗುವುದೆಂದು ಅನೇಕರು ಭಯಪಡುತ್ತಿದ್ದಾರೆ.

ಸ್ವಧರ್ಮರಕ್ಷಣೆಯಿಂದ ಸ್ವರಾಜ್ಯವು ಬರಬೇಕಲ್ಲದೆ ಸ್ವಧರ್ಮ ನಿರ್ಮೂಲದಿಂದ ಎಂದೂ ಬರಲಾರದು. ಈ ವಿಚಾರದಲ್ಲಿ ಸುಧಾರಕರು ಋತುಮತಿ ವಿವಾಹವು ಶಾಸ್ತ್ರಸಮ್ಮತವೆಂಬುದಾಗಲಿ ಇವರು ಹೇಳುವ ಅನರ್ಥಗಳ ಪ್ರಕಟಣೆಗಳಾಗಲಿ ಎಳ್ಳಷ್ಟು ಸತ್ಯವಿರುವುದಿಲ್ಲ. ನಮ್ಮ ಕರ್ನಾಟಕದಲ್ಲಿ ಆರ್ಯಸಮಾಜ ಮೊದಲಾದ ಸಮಾಜಗಳ ಸುಧಾರಕರೊಡನೆ ಸನಾತನ ಧರ್ಮಪರಾಯಣರಿಗೆ ವಾದವಿವಾದಗಳು ನಡೆಯದಿದ್ದರೂ ಉತ್ತರ ದೇಶದಲ್ಲಿ ವಿಶೇಷ ವಿವಾದಗಳು ನಡೆದು ಸುಧಾರಕವಾದಗಳು ನಿರಾಧಾರಗಳೆಂದು ಗೊತ್ತಾಗಿದೆ. ಕಾಶಿಯಲ್ಲಿ ಇಪ್ಪತ್ತುಸಾವಿರ ವಿದ್ವಾಂಸರು ಶ್ರೀ ದರ್ಭಂಗಾ ಮಹಾರಾಜರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಾಕ್ಯಾರ್ಥಗಳನ್ನು ನಡೆಯಿಸಿ ಶಾಸ್ತ್ರೋಕ್ತವಾದ ಬಾಲ್ಯವಿವಾಹಗಳು ಆಯುರಾರೋಗ್ಯಾಭ್ಯುದಯಕ್ಕೂ ದೇಶಾಭ್ಯುದಯಕ್ಕೂ ಸಾಧನಗಳೆಂದು ನಿರ್ಧರಿಸಿರುತ್ತಾರೆ. ಸುಧಾರಕಜನರು ತಿಳಿಯದ ಜನಗಳಲ್ಲಿ ಪೂರ್ವಾಪರ ವಿರುದ್ಧವಚನಗಳನ್ನು ಹೇಳಿ ಭ್ರಮೆಗೊಳಿಸುತ್ತಿರುವರು. ಸನಾತನಧರ್ಮದಲ್ಲಿ ನಂಬಿಕೆಯುಳ್ಳವರು ಇವರ ಮಾತಿಗೆ ಎಂದೂ ಕಿವಿಗೊಡಬಾರದು.

ಋತುಮತೀವಿವಾಹವು ನಡೆಯುತ್ತಿರುವ ಅಮೆರಿಕಾ ಮೊದಲಾದ ದೇಶಗಳಲ್ಲಿ ಬಾಲ್ಯವಿವಾಹವಿಲ್ಲದುದರಿಂದ ನಾನಾ ದುರಾಚಾರಗಳೂ ವ್ಯಾಧಿಗಳೂ ಪ್ರಬಲಿಸಿವೆ

[6 ನೇ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ

೧೯೨೯ನೇ ನವಂಬರ್ ತಾ|| ೧೮ನೇ ಸೋಮವಾರ

ವೈಸ್‌ರಾಯರ ಪ್ರಸಿದ್ಧ ಪತ್ರಿಕೆ.

ಈಗಿನ ವೈಸ್ರಾಯರಾದ ಲಾರ್ಡ್ ಅರ್ವಿನ್ನರು ಭರತಖಂಡಕ್ಕೆ ಬಂದಕೂಡಲೆ ದೇಶನಾಯಕರು ಮೊದಲೇ ಊಹಿಸಿದ್ದಂತೆ ಅಕ್ಟೋಬರ್ 31ನೆಯ ತಾರೀಖಿನ ದಿವಸ ಒಂದು ಮಹತ್ವದ ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿರುವರು. ಆ ಪ್ರಸಿದ್ಧಪತ್ರಿಕೆಯಲ್ಲಿ ವೈಸ್‌ರಾಯರವರು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ದಯೆಪಾಲಿಸುವ ವಿಷಯದಲ್ಲಿ ತಾವು ಬ್ರಿಟಿಷ್ ಸರಕಾರದವರೊಡನೆ ಬಹಳ ಚರ್ಚೆಮಾಡಿದೆವೆಂದೂ, ಪಾರ್ಲಿಮೆಂಟಿನ ಕೂಲಿಕಾರರ ಪಕ್ಷದವರು ಲಿಬರಲ್ (ಉದಾರವಾದಿ) ಪಕ್ಷದವರು ಮತ್ತು ಕನ್ಸರ್ವೆಟಿವ್ (ಪುರಾಣಮತವಾದಿ) ಪಕ್ಷದವರು ಇವರೆಲ್ಲರೂ ಹಿಂದುಸ್ಥಾನಕ್ಕೆ ಸ್ವರಾಜ್ಯಕೊಡುವ ವಿಷಯದಲ್ಲಿ ಕುತೂಹಲವುಳ್ಳವರಾಗಿರುವರೆಂದೂ, ಈ ಸಂದರ್ಭದಲ್ಲಿ ಬ್ರಿಟಿಷ್ ಹಿಂದುಸ್ಥಾನದ ಹಾಗೂ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳ ಒಂದು ಸಭೆಯು ಸೇರಿಸಲ್ಪಡುವದೆಂದೂ, 1917 ನೆಯ ಇಸವಿಯಲ್ಲಿ ಜಾರ್ಜ ಸಾರ್ವಭೌಮರವರು ಹೊರಡಿಸಿದ ಜಾಹೀರ್‌ನಾಮೆಯಲ್ಲಿ ಇದೇ ಅರ್ಥವು ಸೂಚಿಸಲ್ಪಟ್ಟಿರುವದೆಂದೂ, ಹಿಂದುಸ್ಥಾನಕ್ಕೆ "ಡೊಮಿನಿಯನ್ ಸ್ಟೇಟ್ಸ್" ಎಂದರೆ "ಸಂಪೂರ್ಣಸ್ವರಾಜ್ಯ"ವನ್ನು ಕೊಡುವ ವಿಷಯವು ಸೈಮನ್ ವರದಿಯು ಒಪ್ಪಿಸಲ್ಪಟ್ಟ ಕೂಡಲೆ ಎಲ್ಲರಿಗೂ ಸಮ್ಮತವಾಗಿರುವಂತೆ ತೀರ್ಮಾನಿಸಲ್ಪಡುವದೆಂದೂ, ನಾನು ಹೊರಡಿಸಿರುವ ಈ ಪ್ರಕಟನೆಗೆ ಸಾರ್ವಭೌಮ [illegible]ವರು ಒಪ್ಪಿಗೆಯನ್ನಿತ್ತಿರುವರೆಂದೂ ಹೇ[illegible] ನೋಡಿದರೆ ಯಾವ ಭಾರತೀಯನಿಗೆ ಸಂತೋ[illegible]ಲಿಕ್ಕಿಲ್ಲ? ಈ ಸಂದರ್ಭದಲ್ಲಿ ಭರತಖಂಡದ ಪ್ರತಿನಿಧಿಗಳ ಪರಿಷತ್ತು ನೆರವೇರುವದು ಅತಿಮಹತ್ವದ್ದಾಗಿರುವದು. ಈ ಪರಿಷತ್ತನ್ನು ಕೂಡಿಸುವದೆಂದರೆ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವ ವಿಷಯದಲ್ಲಿ ಮುಖ್ಯವಾದ ಒಂದು ಭಾಗವು ನೆರವೇರಿದಂತೆಯೇ ಆಗುವದು. ಈ ಪರಿಷತ್ತನ್ನು ಮುಖ್ಯಮಂತ್ರಿಗಳೇ ಕೂಡಿಸುವರು. ಇದು ಪಾರ್ಲಿಮೆಂಟಿನ ಮೆಂಬರುಗಳ ಮುಂದೆ ನಡೆಯುವ ಚರ್ಚೆಯಲ್ಲ. ಈ ಪರಿಷತ್ತು ಸಾರ್ವಭೌಮಸರಕಾರಕ್ಕೂ, ಹಿಂದುಸ್ಥಾನದ ಪ್ರತಿನಿಧಿಗಳಿಗೂ ನಡೆಯುವ ಸರಿಸಮಾನವಾದ ಗೌರವ, ಅಧಿಕಾರಗಳಿಂದ ಕೂಡಿದ ಸಂತೋಷಕೂಟವಾಗಿರುವದು. ಈ ಪರಿಷತ್ತಿನಲ್ಲಿ ಭಾರತಪ್ರತಿನಿಧಿಗಳು ತಮ್ಮ ಉದ್ದೇಶವು ನೆರವೇರುವದರ ಸಲುವಾಗಿ, ಸಾಕ್ಷಿಗಳಂತೆ ತಮ್ಮ ಪಕ್ಷವನ್ನು ಹಿಡಿದು ವಾದಿಸುವದಿಲ್ಲ. ಯಾವುದಾದರೊಂದು ಕಾರ್ಯಸಾಧನದಲ್ಲಿ ಸಮಾನಾಭಿಮಾನವುಳ್ಳ ಎರಡು ಪಕ್ಷದವರು ಸಭೆಗೂಡಿ ವಿಷಯವನ್ನು ಚರ್ಚಿಸಿ ತೀರ್ಮಾನಿಸುವಂತೆ, ಈ ಪರಿಷತ್ತಿನಲ್ಲಿ ಸ್ವರಾಜ್ಯವಿಷಯವು ಚರ್ಚಿಸಲ್ಪಡುವುದು. ಲಾರ್ಡ್ ಅರ್ವಿನ್ನರ ಪ್ರಸಿದ್ಧಪತ್ರಿಕೆಯಲ್ಲಿ ಇವೆರಡು ವಿಷಯಗಳೂ ಬಹುಮುಖ್ಯಗಳಾಗಿವೆ. ಪ್ರಾರಂಭದಲ್ಲಿ ಲಾರ್ಡ್ ಅರ್ವಿನ್ನರು ಹಿಂದುಸ್ಥಾನದ ವಿಷಯವನ್ನು ಕೂಲಿಕಾರರ ಸರಕಾರದವರ ಹಾಗೂ ಲಿಬರಲ್ ಮತ್ತು ಕನ್ಸರ್ವೆಟಿವ್ ಪಕ್ಷದವರ ಪ್ರತಿನಿಧಿಗಳೆಲ್ಲರೊಡನೆ ಪ್ರಸ್ತಾಪಮಾಡಿ ಅವರೆಲ್ಲರ ಒಪ್ಪಿಗೆಯನ್ನು ಪಡೆದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿರುವರೆಂದು ಭಾವಿಸಲ್ಪಟ್ಟಿದ್ದಿತು. ಆದರೆ ಈಚೆಗೆ ಬಾಲ್ಡ್ವಿನ್‌ರವರು ಲಾಯಿಡ್ ಜಾರ್ಜರವರು ಮತ್ತು ಲಾರ್ಡ್ ರೀಡಿಂಗ್‌ರವರೇ ಮೊದಲಾದ ಕನ್ಸರ್ವೆಟಿವ್ ಮತ್ತು ಲಿಬರಲ್ ಪಕ್ಷಗಳ ಮುಖಂಡರು ವೈಸ್‌ರಾಯರವರ ಪ್ರಸಿದ್ಧಪತ್ರಿಕೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿರುವದು ಕಂಡುಬರುತ್ತಿರುವದು.

ವೈಸ್‌ರಾಯರವರ ಪ್ರಸಿದ್ಧಪತ್ರಿಕೆಯ ವಿಷಯವಾಗಿ ಚರ್ಚೆಮಾಡಲು ಮಹಾತ್ಮಾಗಾಂಧಿ, ಪಂ|| ಜವಾಹರಲಾಲ್ ನೆಹರು ಮೊದಲಾದ ದೇಶಭಕ್ತರೆಲ್ಲರೂ 1 ಮತ್ತು 2 ನೆಯ ತಾರೀಖಿನ ದಿವಸ ದಿಲ್ಲಿಯಲ್ಲಿ ಸಭೆಸೇರಿದ್ದರು. ಆ ಸಭೆಯಲ್ಲಿ ಪಂ|| ಜವಾಹರಲಾಲ್ ನೆಹರು ಇವರ ಹೊರತು ಇತರ ಪ್ರಮುಖರೆಲ್ಲರೂ ಏಕಾಭಿಪ್ರಾಯದಿಂದ ವೈಸ್‌ರಾಯರವರ ಉದ್ದೇಶವನ್ನು ಅನುಮೋದಿಸಿ, ಅವರ ಪ್ರಕಟಣೆಯಂತೆ ಕಾರ್ಯಕ್ರಮಗಳನ್ನು ನೆರವೇರಿಸುವದರಲ್ಲಿ ತಾವು ಪೂರ್ಣ ಸಹಕರಿಸುವೆವೆಂದೂ, ಜನರಿಗೆ ಸರಕಾರದವರಲ್ಲಿ ನಂಬಿಗೆ ಹುಟ್ಟಬೇಕಾದರೆ ಅತ್ಯವಶ್ಯಕಗಳಾದ ಕೆಲವು ಕಾರ್ಯಗಳನ್ನು ಕೈಕೊಳ್ಳಬೇಕಾಗಿರುವದೆಂದೂ ಮೊದಲು ದೇಶದಲ್ಲಿ ಶಾಂತಿಯುಂಟಾಗಬೇಕಾದರೆ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆಮಾಡಬೇಕೆಂದೂ, ಹಿಂದುಸ್ಥಾನದಲ್ಲಿ ಅತ್ಯಂತ ದೊಡ್ಡ ರಾಜಕೀಯ ಸಂಸ್ಥೆಯಾದ ಅಖಿಲಭಾರತರಾಷ್ಟ್ರೀಯಮಹಾಸಭೆ (ನ್ಯಾಷನಲ್ ಕಾಂಗ್ರೆಸ್) ಯಿಂದ ಹೆಚ್ಚು ಪ್ರತಿನಿಧಿಗಳನ್ನು ಚುನಾಯಿಸಬೇಕೆಂದೂ, ಪ್ರತಿನಿಧಿಗಳ ಕಾನ್ಫರೆನ್ಸಿನಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಯಾವಾಗ ಕೊಡಬೇಕೆಂಬುದನ್ನು ಚರ್ಚಿಸದೆ ಕೂಡಲೆ ಸ್ವರಾಜ್ಯವನ್ನು ಕೊಡುವ ಬಗ್ಗೆ ಒಂದು ಬಿಲ್ಲನ್ನು ಸಿದ್ಧಮಾಡಬೇಕೆಂದೂ, ಮತ್ತು ಕಾನ್ಫರೆನ್ಸನ್ನು ಆದಷ್ಟು ತೀವ್ರ ಕೂಡಿಸಬೇಕೆಂದೂ ತೀರ್ಮಾನಗಳನ್ನು ಮಾಡಿ, ಅದಕ್ಕೆ ಮುಖಂಡರೆಲ್ಲರ ರುಜುಗಳನ್ನು ಹಾಕಿಸುತ್ತಿರುವರು. ಕೆಲವರು ಮೇಲ್ಕಂಡ ತೀರ್ಮಾನಗಳನ್ನು ಒಪ್ಪದೆ ತಮ್ಮ ಅಭಿಪ್ರಾಯಗಳನ್ನು ಪ್ರತ್ಯೇಕವಾಗಿ ಪ್ರಕಟಿಸುತ್ತಲಿರುವರು.

ಈ ಮಧ್ಯೆ ವೈಸರಾಯರ ಪ್ರಕಟಣೆಯ ವಿಷಯದಲ್ಲಿ ಇಗ್ಲಂಡಿನ ಪಾರ್ಲಿಮೆಂಟಿನಲ್ಲಿಯೂ ವಿಶೇಷ ಚರ್ಚೆಗಳು ನಡೆದುವು. ಹಿಂದೆ ವೈಸರಾಯರಾಗಿದ್ದ ಲಾರ್ಡ್ ರೀಡಿಂಗ್‌ರವರು ಲಾರ್ಡ್ಸ್ ಸಭೆಯಲ್ಲಿ ಮೊದಲು ಆಕ್ಷೇಪಣೆಗೆ ಪ್ರಾರಂಭಿಸಿದರು. ಹಿಂದಿನ ವಿದ್ಯಮಾನಗಳನ್ನೆಲ್ಲ ಮರೆತು ವೈಸ್‌ರಾಯರವರು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದ್ದು ಸೈಮನ್ ಸಮಿತಿಗೆ ಅಪಮಾನ ಮಾಡಿದಂತಾಯಿತೆಂದೂ, ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವ ಕಾಲವು ಇನ್ನೂ ಬಂದಿಲ್ಲವೆಂದೂ ವಾದಿಸಿದರು. ಇದರಂತೆಯೇ ಮಿ|| ಲಾಯಿಡ್ ಜಾರ್ಜರು ಕಾಮನ್ಸ್ ಸಭೆಯಲ್ಲಿ ವೈಸ್‌ರಾಯರವರ ವರ್ತನವನ್ನು ಖಂಡಿಸಿದರು. ಆದರೆ ಮಂತ್ರಿಶ್ರೇಷ್ಠರಾದ ಮಿ|| ರಾಮ್ಸೆ ಮ್ಯಾಕ್ಡೊನಾಲ್ಡರು ಎಲ್ಲರ ಆಕ್ಷೇಪಗಳಿಗೂ ಸಮಂಜಸವಾದ ಉತ್ತರವನ್ನು ಕೊಡುತ್ತ 1917 ನೆಯ ಇಸವಿಯಲ್ಲಿ ಚಕ್ರವರ್ತಿಯವರು ಹೊರಡಿಸಿರುವ ಪ್ರಕಟಣೆಗೆ ವಿರೋಧವಾದ ಯಾವಕಾರ್ಯವನ್ನೂ ವೈಸ್ರಾಯರವರು ಮಾಡಿಲ್ಲವೆಂದು ಉತ್ತರವಿತ್ತಿರುವರು. ಬ್ರಿಟಿಷ್‌ರಾಜ್ಯದ ಎಲ್ಲ ರಾಜಕೀಯ ಮುಖಂಡರ ಸಹಾಯದಿಂದ ಹಿಂದುಸ್ಥಾನದಲ್ಲಿ ಉಂಟಾಗಿರುವ ಅಶಾಂತತೆಯನ್ನು ಹೇಗಾದರೂ ತಪ್ಪಿಸಬೇಕೆಂದೂ, ಭಾರತೀಯರ ಅಭಿಲಾಷವನ್ನು ಸಂಪೂರ್ಣವಾಗಿ ಪೂರೈಸಿಕೊಡುವುದು ಅಸಾಧ್ಯವಾಗಬಹುದಾದರೂ ಸಾಧ್ಯವಾದಷ್ಟಾದರೂ ಅವರ ಆಶೆಯನ್ನು ಪೂರ್ಣಮಾಡಬೇಕೆಂಬುದೇ ಕೂಲಿಕಾರರಧ್ಯೇಯವಾಗಿರುವದೆಂದೂ ಈ ಯಾವತ್ತು ವಿದ್ಯಮಾನಗಳಿಂದ ಚೆನ್ನಾಗಿ ಕಂಡುಬರುವುದು. ಪುರಾಣಮತದ ಮಿ|| ಬಾಲ್ಡ್ವಿನ್ನರು, ಉದಾರಪಕ್ಷದ ಮಿ|| ಲಾಯಿಡ್‌ಜಾರ್ಜರು, ಹಾಗೂ ಲಾರ್ಡ್‌ಬರ್ಕನ್‌ಹೆಡ್, ಲಾರ್ಡ್ ಸಿಡೆನ್‌ಹ್ಯಾಂರವರೇ ಮೊದಲಾದ ಭಾರತಸ್ವಾತಂತ್ರ್ಯವಿರೋಧಿಗಳು ಭರತಖಂಡವನ್ನು ಪ್ರಭುತ್ವಸೂತ್ರಬಂಧನದಿಂದ ಬಿಡಿಸುವದಾದರೆ ದೊಡ್ಡ ಪ್ರಮಾದವೇ ಸಂಭವಿಸಿ, ಸಾಮ್ರಾಜ್ಯವೇ ಹಾಳಾಗುವ ಸಮಯವು ಪ್ರಾಪ್ತವಾಗುವದೆಂದು ಆರ್ಭಟಿಸಿ, ವೃತ್ತಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತ ಚಳವಳಿಯನ್ನೆಬ್ಬಿಸಿರುವರು. ಆದರೆ ಕೂಲಿಕಾರ ಸರಕಾರದವರು ಬಹು ನಿಪುಣತೆಯಿಂದ ತಮ್ಮ ಪ್ರಭುತ್ವಬಲವನ್ನು ಪ್ರಕಾಶಗೊಳಿಸಿ, ಪ್ರಮುಖ ರಾಜಕೀಯಪಕ್ಷನವರೊಡನೆ ವಿರೋಧವನ್ನು ಬೆಳೆಯಿಸದೆ ಭಾರತ ಸಮಸ್ಯೆಯನ್ನು ಪೂರ್ಣಮಾಡಲು ಉದ್ಯುಕ್ತರಾಗಿರುವರು. ಭಾರತೀಯರಿಗೆ ಅನುಕೂಲವಾಗಿ ಇಷ್ಟೆಲ್ಲ ಕಾರ್ಯಕ್ರಮಗಳು ಜರುಗುತ್ತಿರುವವಾದರೂ ಮುಂದೆ ಭಾರತಪ್ರತಿನಿಧಿಗಳ ಪರಿಷತ್ತಿನಿಂದ ಹೊರಡಬಹುದಾದ "ಇಂಡಿಯಾ ಬಿಲ್ಲು" ಕಾಮನ್ಸ್ ಸಭೆಯಲ್ಲಿ ಅಂಗೀಕರಿಸಲ್ಪಡದಿದ್ದರೆ ಆಗ ಕೂಲಿಕಾರರ ಸರಕಾರವೂ, ಲಾರ್ಡ್ ಅರ್ವಿನ್ನರೂ ಸಹ ಎಲ್ಲರ ಹಾಸ್ಯಕ್ಕೆ ಗುರಿಯಾಗಬೇಕಾಗುವದು. ಸದ್ಯಃ ಕೂಲಿಕಾರ ಸರಕಾರದವರು ಭರತಖಂಡದ ಸಮಸ್ಯೆಯನ್ನು ಭಾರತೀಯರಿಗೆ ಪ್ರಿಯವಾಗುವಂತೆ ಪೂರೈಸಬೇಕೆಂದು ಮಾಡಿರುವ ಪ್ರಯತ್ನವು ಸಫಲವಾಗಿ, ಭರತಖಂಡವು ಸ್ವರಾಜ್ಯವನ್ನು ಸಂಪಾದಿಸುವದರ ಮೂಲಕ ದೇಶಹಿತೈಷಿಗಳ ಉದ್ದೇಶವು ಜಾಗ್ರತೆಯಾಗಿ ನೆರವೇರುವಂತೆ ಕರುಣಿಸಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಯಾವತ್ತು ಡಿಸ್ಟ್ರಿಕ್ಟುಗಳಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ ಸದಸ್ಯತನದ ಅವಧಿಯನ್ನು ಮುಂದೆ ನಾಲ್ಕು ತಿಂಗಳುಗಳವರೆಗೆ ಹೆಚ್ಚಿಸಿರುವದಾಗಿ ಸರ್ಕಾರದವರು ಹುಕುಂ ಮಾಡಿರುತ್ತಾರೆ.

ಬೌರಿಂಗ್‌ಪೇಟೆಯಲ್ಲಿ ಹೊಗೆಸೊಪ್ಪಿನ ಕಾರ್ಖಾನೆಯಲ್ಲಿ ಕಳೆದವಾರ ಪುನಃ ಕೆಲಸವನ್ನು ಪ್ರಾರಂಭಿಸಿದಾಗ ಯಂತ್ರವು ಒಡೆದು ಇಬ್ಬರಿಗೆ ಬಹಳ ಗಾಯಗಳಾದವು. ಒಬ್ಬನು ಕೂಡಲೆ ಮೃತಪಟ್ಟನು. ಇನ್ನೊಬ್ಬನು ಆಸ್ಪತ್ರೆಯಲ್ಲಿ ಮೃತಿಹೊಂದಿದನು.

ನಾಗಮಂಗಲ ತಾ|| ನೆಲ್ಲಿಗೆರೆಯ ವೀರವೈಷ್ಣವ ಹೊಳೆಗೆ ಅಣೆಕಟ್ಟೆಯನ್ನು ಕಟ್ಟಿ ದೊಡ್ಡ ನೀರಾವರಿ ಕೆರೆಯನ್ನಾಗಿ ಮಾಡಬೇಕೆಂದು ಸರ್ಕಾರದವರು ತೀರ್ಮಾನಮಾಡಿರುತ್ತಾರೆ. ಇಂಜನಿಯರ್ ಇಲಾಖೆಯವರು ಇಷ್ಟರಲ್ಲೇ ಕಾಮಗಾರಿಯನ್ನು ಪ್ರಾರಂಭಿಸುವರು.

ಬೆಂಗಳೂರು ರಾಜದ್ರೋಹದ ಮೊಖದ್ದಮೆಯು ಚೀಫ್‌ಕೋರ್ಟಿನಲ್ಲಿ ಅಪೀಲಾಗಿದ್ದು, ಕಳೆದವಾರ ಅವರ ತೀರ್ಮಾನವನ್ನು ಹೇಳಿದರು. ಸೀತಾರಾಮಶಾಸ್ತ್ರಿಗಳಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಧಿಸಿದ ಸಜಾ ಮತ್ತು ಜುಲ್ಮಾನೆಯನ್ನು ಕಾಯಂಮಾಡಿ, ಅಶ್ವತ್ಥನಾರಾಯಣರಾಯರಿಗೆ ವಿಧಿಸಿದ್ದ ಸಜೆಯನ್ನು 3 ತಿಂಗಳಿಗೆ ಇಳಿಸಿರುತ್ತಾರೆ.

ಸಿವಿಲ್‌ಕೋರ್ಟುಗಳಲ್ಲಿಯ ನಾಜರುಗಳಿಗೆ 35-3-50 ರೂಪಾಯಿಗಳಂತೆಯೂ, ಅಮೀನರಿಗೆ 20-1-26 ರಂತೆಯೂ, ಸಮನ್ ಜವಾನರಿಗೆ 11-½-18 ರಂತೆಯೂ ಸಂಬಳವನ್ನು ಗೊತ್ತುಮಾಡಿ, ನಾಜರರಿಂದ 250 ರೂ. ಅಮೀನರಿಂದ 120 ರೂ. ಸಮನ್‌ಜವಾನರಿಂದ 75 ರೂ. ಈ ಪ್ರಕಾರ ಜಾಮೀನ್ ಪಡೆಯಬೇಕೆಂದು ಚೀಫ್‌ಕೋರ್ಟಿನವರು ಹುಕುಂಕೊಟ್ಟಿರುತ್ತಾರೆ.

ರಾಮನಾಥಪುರದ ಹತ್ತಿರ ಕಾವೇರಿನದಿಗೆ ಸೇತುವೆಯನ್ನು ಕಟ್ಟುವದಕ್ಕೆ 3,68,000 ರೂಪಾಯಿಗಳು ವೆಚ್ಚವಾಗುವದಾಗಿ ಅಂದಾಜು ಮಾಡಲ್ಪಟ್ಟಿದೆ. ಹಾಸನದ ಡಿಸ್ಟ್ರಿಕ್ಟ್‌ಬೋರ್ಡಿನವರು ಅದಕ್ಕಾಗಿ ಶೇಖರಿಸಿರುವ ಒಂದುಲಕ್ಷ ರೂಪಾಯಿಗಳನ್ನು ಕೂಡಲೇ ಪಾವತಿಮಾಡುವೆವೆಂದೂ, ಕಾಮಗಾರಿಯನ್ನು ಬೇಗನೆ ಪ್ರಾರಂಭಿಸಬೇಕೆಂದೂ ಸರಕಾರದಲ್ಲಿ ವಿಜ್ಞಾಪಿಸಿಕೊಂಡಿರುತ್ತಾರೆ.

ರಾಜಧಾನಿಯ ಚಾಮರಾಜಮೊಹಲ್ಲಾ ವಾಣೀವಿಲಾಸ ತೋಪಿನಲ್ಲಿರುವ ಮಿ|| ಎಂ. ಎನ್. ಬಾಳರಾಜಅರಸಿನವರ ಬಂಗಲೆಗೆ ಕಳೆದ ಅಕ್ಟೋಬರ್ 31 ನೆಯ ತಾರೀಖಿನ ರಾತ್ರಿ ಕಳ್ಳರು ಕನ್ನವನ್ನು ಹಾಕಿ ಸುಮಾರು 1,500 ರೂ. ಗಳು ಬಾಳುವ ನಗನಾಣ್ಯಗಳನ್ನು ಕದ್ದುಕೊಂಡು ಹೋದರು. ಆ ಬಂಗಲೆಯ ಆಳುಗಳಲ್ಲದೆ ಬಂಗಲೆಯ ಬಾಗಿಲಿನಲ್ಲಿ ಶಿಪಾಯಿ ಪಹರೆಯು ಯಾವಾಗಲೂ ಇರುತ್ತದೆ. ಕಳ್ಳರು ಬಂಗಲೆಯ ಬೊಕ್ಕಸದ ಕೊಠಡಿಗೆ ಒಬ್ಬ ಮನುಷ್ಯನು ನುಗ್ಗುವಂತೆ ಕನ್ನವನ್ನು ಕೊರೆದು, ಅದರ ಮೂಲಕ ಒಳಗೆ ನುಗ್ಗಿ ಕಳುವುಮಾಡಿರುತ್ತಾರೆ. ಆ ಕೊಠಡಿಯ ಪಕ್ಕದ ಕೊಠಡಿಯಲ್ಲಿಯೇ ಜನಾನಿಯವರು ನಿದ್ರಿಸುತ್ತಿದ್ದರು. ಕನ್ನವನ್ನು ಹಾಕಿದ ಕೊಠಡಿಯಲ್ಲಿ ಸಾವಿರಾರು ರೂಪಾಯಿಗಳ ಒಡವೆಗಳೂ, ಕಲಾಪತ್ತಿನ ಉಡುಪುಗಳೂ, ಶೀರೆಗಳೂ ಇದ್ದವು. ಕಳ್ಳರು ಅವುಗಳಲ್ಲಿ ಯಾವುದನ್ನೂ ತೆಗೆದುಕೊಂಡುಹೋಗಿಲ್ಲ. ಆಗಿನಿಂದಲೂ ಪೋಲೀಸರು ಕಳ್ಳರನ್ನು ಪತ್ತೆಮಾಡಲು ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರು.

ಬೆಂಗಳೂರು ದಂಡಿನ ಪೋಲೀಸರು ಅನುಮಾನದ ಮೇಲೆ ಮದ್ರಾಸಿನ ರತ್ನಪಡಿ ವ್ಯಾಪಾರಸ್ಥರಾದ ಮುರುಗೇಶ ಮೊದಲಿಯಾರ್ರನ್ನೂ, ಶಿವಗಂಗಾ ಜಮೀನ್ದಾರಿಯ ವಾರಸದಾರರ ಪೈಕಿ ಒಬ್ಬ ಏಜಂಟರಾದ ಮುತ್ತಯ್ಯಪಿಳ್ಳೆಯವರನ್ನೂ, ಇನ್ನೂ ಕೆಲವರನ್ನೂ ದಸ್ತಗಿರಿಮಾಡಿ ಅವರ ಸ್ವಾಧೀನದಲ್ಲಿದ್ದ ನಗದು 10,800 ರೂಪಾಯಿಗಳನ್ನೂ ಸುಮಾರು 30,000 ರೂ. ಬೆಲೆಯುಳ್ಳ ರತ್ನಪಡಿಗಳನ್ನೂ ತಮ್ಮ ಸ್ವಾಧೀನಮಾಡಿಕೊಂಡು ಒಂದು ಮೊಖದ್ದಮೆಯನ್ನು ಮಾಡಿದ್ದರು. ಈ ಮೊಖದ್ದಮೆಯು ಕಳೆದ 11 ನೆಯ ತಾರೀಖಿನ ದಿವಸ ದಂಡಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯಿತು. ಅಪರಾಧಿಗಳ ಪರವಾಗಿ ಅಡ್ವೊಕೇಟ್ ಮಿ|| ಬೇಲೂರು ಶ್ರೀನಿವಾಸಯ್ಯಂಗಾರ್ರವರು ಅಪರಾಧಿಗಳ ಮೇಲೆ ಮೊಖದ್ದಮೆ ಮಾಡುವದಕ್ಕೆ ಯಾವ ಕಾರಣಗಳೂ ಇಲ್ಲವೆಂದೂ ಪೋಲೀಸರ ನಡವಳಿಕೆಯಿಂದ ಅಪರಾಧಿಗಳಿಗೆ ತುಂಬಾ ನಷ್ಟವೂ ಗೌರವಹಾನಿಯೂ ಆಯಿತೆಂದೂ ವಾದಿಸಿದರು. ಮ್ಯಾಜಿಸ್ಟ್ರೇಟರು ರಿಕಾರ್ಡುಗಳನ್ನೆಲ್ಲ ಚೆನ್ನಾಗಿ ಪರಿಶೀಲಿಸಿ ಅಪರಾಧಿಗಳನ್ನು ಬಿಡುಗಡೆಮಾಡಿ ಅವರ ಹಣವನ್ನೂ ರತ್ನಪಡಿಯನ್ನೂ ಕೂಡಲೆ ಹಿಂತಿರುಗಿ ಕೊಡಿಸಿದರು.

ವರ್ತಮಾನಸಂಗ್ರಹ.

ನೀರಗಾಂವದಲ್ಲಿ 25 ಅಂಗಡಿಗಳಿಗೆ ಬೆಂಕಿಬಿದ್ದು 2 ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿತು.

ಆಫ್ರಿಕಾದಲ್ಲಿ ಜ್ವಾಲಾಮುಖಿಯ ಸ್ಫೋಟವಾಗಿ ಅದರ ಸಮೀಪದಲ್ಲಿದ್ದ ಗ್ವೆಟೆಮಾಲವೆಂಬ ಪಟ್ಟಣದ 300 ಜನರು ಮೃತಪಟ್ಟರು. 200 ಜನರಿಗೆ ಗಾಯಗಳಾಗಿರುವುವು.

ಅಮೇರಿಕೆಯ 2 ವರ್ಷ 2 ತಿಂಗಳು ವಯಸ್ಸಿನ ಮಾರ್ಜೋರಿ ಎಂಬ ಮಗುವು 65 ಅಡಿಗಳ ದೂರದವರೆಗೆ ಈಜುವದಂತೆ! ಆ ಮಗುವನ್ನು ಈಗ ಇಂಗ್ಲಂಡಕ್ಕೆ ಕರೆತಂದಿರುವರು.

ಅಲಹಾಬಾದಿನ ರವೀನ್ ಚಟರ್ಜಿ ಎಂಬ ಹಿಂದೂ ಯುವಕನು ಕೈಕಾಲುಗಳನ್ನು ಕಟ್ಟಿಕೊಂಡು ಇಂಗ್ಲೀಷ್ ಕಾಲುವೆಯನ್ನು ಈಜಿ ದಾಟಬೇಕೆಂದಿರುವನು. ಈ ಅದ್ಭುತಸಾಹಸವು ಮುಂದಿನ ಜುಲೈ ತಿಂಗಳಲ್ಲಿ ನಡೆಯುವುದು.

ಅಮೇರಿಕೆಯ ಬ್ರೈನ್‌ಸ್ಟರ್ ಎಂಬಲ್ಲಿ ಕೋಟ್ಯಾಧೀಶ್ವರನಾದ ಬ್ರೆನ್ನಲ್ ಎಂಬ ಚರ್ಮವ್ಯಾಪಾರಿಯನ್ನು ಕಳ್ಳರು ಹಿಡಿದುಕೊಂಡು ಹೋಗಿ 20 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಬಿಡುವದಾಗಿ ಹೇಳುತ್ತಿರುವರಂತೆ!

ಜಿ.ಐ.ಪಿ. ರೈಲ್ವೆ ಕಂಪನಿಯವರು ಇದೇ ತಿಂಗಳು [illegible]ನೇ ತಾರೀಖಿನಿಂದ ಮುಂಬಯಿಯಿಂದ ಪುಣೆಯವರೆಗೆ ವಿದ್ಯುಚ್ಛಕ್ತಿಯಿಂದ ಗಾಡಿಗಳು ಹೋಗುವಂತೆ ಮಾಡಿರುವರು. ಇದರ ಪ್ರಾರಂಭೋತ್ಸವವನ್ನು [illegible]ರ್ ಸಾಹೇಬರವರು ನೆರವೇರಿಸಿದರು.

ಕಲ್ಕತ್ತೆಯ ಜ್ಞಾನೇಂದ್ರನಾಥ ಬೋಸನೆಂಬ 30 ವರ್ಷವಯಸ್ಸಿನ ತರುಣನೂ, ಆತನ 20 ವರ್ಷವಯಸ್ಸಿನ ಸ್ನೇಹಲತಾ ಎಂಬ ಪತ್ನಿಯೂ, ದಾರಿದ್ರ್ಯ ಕಷ್ಟವನ್ನನುಭವಿಸಲಾರದೆ ಇಬ್ಬರೂ ಒಟ್ಟಿಗೆ ವಿಷಪಾನಮಾಡಿ ಮೃತರಾದರು. ಭರತಖಂಡದ ದೀನಾವಸ್ಥೆ!

ಭೂಪಾಲನವಾಬರಿಗೆ ಮೋಟಾರಿನಲ್ಲಿಯೂ ಸಹ ವೈಭೋಗ್ಯವಸ್ತುಗಳಿರಬೇಕೆಂಬ ಬಯಕೆಯಾಗಿರುವದರಿಂದ ಸ್ನಾನಗೃಹ, ಭೋಜನಗೃಹ, ಶಯನಗೃಹ ಮತ್ತು ವಿಶ್ರಾಂತಿಗೃಹ ಸಮ್ಮೇತವಾಗಿರುವ ಒಂದು ಮೋಟಾರನ್ನು ರಚಿಸಲಿಕ್ಕೆ ಆರ್ಡರ್ ಕೊಟ್ಟಿರುವರು!

[illegible]ಜಾನಾ ಸಂಸ್ಥಾನಾಧಿಪತಿಗಳು ಒಬ್ಬ ವಿವಾಹಿತಸ್ತ್ರೀ ತರುಣಿಯನ್ನು ಮೋಹಿಸಿ, ದೊಡ್ಡಕೆಲಸದ ಆಶೆಯನ್ನು ತೋರಿಸಿ ಆಕೆಯ ಪತಿಯನ್ನು ತಮ್ಮ ಬಳಿಗೆ [illegible]ಕೊಂಡರು. ಆದರೆ ಆ ತರುಣಿಯು ಮಹಾರಾಜರ ಮೋಹದ ಮಾತುಗಳಿಗೆ ಕಿವಿಕೊಡದಿರಲು ಅವರು [illegible]ರಾಗಿ, ಆಕೆಯ ಪತಿಯಮೇಲೆ ಕಳ್ಳತನದ ಆರೋಪವನ್ನು ಹೊರಿಸಿರುವರು. ಮುಂಬಯಿಯಲ್ಲಿ ವಿಚಾರಣೆಯು ನಡೆಯುತ್ತಿದೆ.

ರಷ್ಯಾಕ್ಕೂ ಚೀನಾದೇಶಕ್ಕೂ ಕದನವು ನಡೆದಂತೆ ಹಿಂದೆ ಪ್ರಕಟಿಸಿದ್ದೆವಷ್ಟೆ! ಆದರೆ ಈಚೆಗೆ ಅದರ ಪರಿಣಾಮವೇನಾಯಿತೆಂಬುವ ವರ್ತಮಾನವೇ ಬರಲಿಲ್ಲವಾದುದರಿಂದ ಅವರಿವರಲ್ಲಿದ್ದ ವೈಷಮ್ಯಗಳು ಪರಿಹಾರವಾಗಿರಬಹುದೆಂದು ಊಹಿಸಲಾಗಿತ್ತು. ಆದರೆ ಕಳೆದವಾರ ಅವರಿಬ್ಬರ ಸೈನ್ಯಗಳಿಗೂ ಘೋರಯುದ್ಧವಾಗಿ ರಷ್ಯಾದವರು ಗೆದ್ದರೆಂದೂ ಚೀನಾದವರು 50-60 ಮೈಲುಗಳವರೆಗೆ ಹಿಮ್ಮೆಟ್ಟಿರುವರೆಂದೂ ವರ್ತಮಾನ ಬಂದಿರುತ್ತದೆ.

ಲಂಡನ್ನಿನಲ್ಲಿ 1930 ನೆಯ ಜುಲೈ ತಿಂಗಳಲ್ಲಿ ನಡೆಯುವ ಐ. ಸಿ. ಎಸ್. ಪರೀಕ್ಷೆಗೆ ಕೂಡತಕ್ಕವರು ಮೇ 8 ನೆಯ ತಾರೀಖಿನೊಳಗಾಗಿ ತಮ್ಮ ಅರ್ಜಿಗಳನ್ನು "ಸೆಕ್ರೆಟರಿ ಸಿವಿಲ್ ಸರ್ವಿಸ್ ಕಮಿಷನ್, ಬರ್ಲಿಂಗ್‌ಟನ್ ಗಾರ್ಡನ್ಸ್, ಲಂಡನ್" ಇವರ ಕಡೆಗೆ ಕಳುಹಿಸಬೇಕೆಂದೂ, ಅರ್ಜಿಯ ಫಾರಂಗಳು ಮುಂಬೈ ಸರಕಾರದ ಚೀಫ್ ಸೆಕ್ರೆಟರಿಯವರಲ್ಲಿ ದೊರೆಯುವವೆಂದೂ, ಮುಂಬೈ ಗವರ್ನಮೆಂಟ್ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿರುವರು.

ಭಾರತ ರಾಷ್ಟ್ರಸಭೆಯ ಶಾಖೆಯೊಂದು ನ್ಯೂಯಾರ್ಕಿನಲ್ಲಿದೆ. ಬಂಗಾಳದಿಂದ ಅಲ್ಲಿಹೋಗಿ ನೆಲಸಿರುವ ಶ್ರೀ|| ಶೈಲೇಂದ್ರನಾಥ ಘೋಷರವರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಈ ಸಲ ಸೇರುವ ರಾಷ್ಟ್ರಸಭೆಗೆ ಅವರನ್ನು ಪ್ರತಿನಿಧಿಯನ್ನಾಗಿ ಚುನಾಯಿಸಿ ಹಿಂದುಸ್ಥಾನಕ್ಕೆ ಕಳುಹಿಸಲು ರಹದಾರಿ (ಪಾಸ್‌ಪೋರ್ಟ್) ಯನ್ನು ಕೊಡಬೇಕೆಂದು ಇಂಡಿಯಾ ಆಫೀಸಿಗೆ ಬರೆದುಕೊಂಡರು. ಆದರೆ ಇಂಡಿಯಾ ಆಫೀಸಿನವರು ಅವರು ಹಿಂದುಸ್ಥಾನಕ್ಕೆ ಹೋಗಲು ಅಪ್ಪಣೆ ಕೊಡಲಾಗದೆಂದು ತಿಳಿಸಿದ್ದಾರೆ.

ಮುಂಬಯಿಯ ಪ್ರಸಿದ್ಧ ವ್ಯಾಪಾರಿಗಳಾದ ಶೇಟ್ ನರೋತ್ತಮ ಮುರಾರ್ಜಿಯವರು ಕಳೆದ 5 ನೆಯ ತಾರೀಖು ಮಂಗಳವಾರ ದಿವಸ ಲೋನಾವಳದ ಸಮೀಪದ ಗುಡ್ಡದ ಮೇಲಿಂದ ಕೆಳಕ್ಕೆ ಬಿದ್ದು ಮೃತರಾದರು. ಇವರು ಒಳ್ಳೇ ಪ್ರಸಿದ್ಧ ಮನೆತನದವರಾಗಿದ್ದು ಅನೇಕ ಕಾರ್ಖಾನೆಗಳ ಮಾಲಕರೂ, ಪಾಲುದಾರರೂ ಆಗಿದ್ದರಲ್ಲದೆ ಸಿಂಧ್ ನ್ಯಾವಿಗೇಷನ್ ಕಂಪೆನಿಯ ಸ್ಥಾಪಕರಲ್ಲೊಬ್ಬರಾಗಿದ್ದರು. ಇಂಥವರು ಹೀಗೆ ಅಪಮೃತ್ಯುವಿಗೆ ಗುರಿಯಾದದ್ದು ನಿಜವಾಗಿಯೂ ಶೋಚನೀಯವಾದ ಸಂಗತಿಯಾಗಿರುವದು.

ಚೀಣಾರಾಜ್ಯದ ಸಮುದ್ರತೀರದಿಂದಾಚೆಗೆ ಬ್ರಿಟಿಷರಿಗೆ ಸೇರಿದ ಹಾಂಕಾಂಗ್ ಎಂಬ ದ್ವೀಪವಿರುವದು. ಆದ್ವೀಪದಲ್ಲಿ 4ರಿಂದ 14 ವರ್ಷ ವಯಸ್ಸಿನ ಹೆಣ್ಣು ಮಕ್ಕಳನ್ನು ಕೂಲಿಗಾಗಿ ವಿಕ್ರಯಮಾಡುವ ನೀಚಪದ್ಧತಿಯು ರೂಢಿಯಲ್ಲಿರುವದು. ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ಅಲ್ಲಿಯ ಬ್ರಿಟಿಷ್ ಅಧಿಕಾರಿಗಳು ಕಾನೂನು ಮಾಡಿದ್ದರೂ ಸಹ ಚೀನಾದವರು ಅದನ್ನು ಲಕ್ಷಿಸದೆ ಮಕ್ಕಳನ್ನು ಈಗಲೂ ಮಾರುತ್ತಲೇ ಇರುತ್ತಾರೆ. ಈಗ ಬ್ರಿಟಿಷ್ ಗವರ್ನಮೆಂಟಿನವರು ಈ ದುಷ್ಟಪದ್ಧತಿಯನ್ನು ಖಂಡಿತವಾಗಿ ನಿಲ್ಲಿಸಿಬಿಡಬೇಕೆಂದು ಅಲ್ಲಿಯ ಗವರ್ನರವರಿಗೆ ಹುಕುಂ ಕೊಟ್ಟಿರುತ್ತಾರೆ.

ಫಿಜಿ ದ್ವೀಪಗಳಲ್ಲಿ ನೆಲೆಸಿರುವ ಭಾರತೀಯರಿಗೆಲ್ಲ ಇತರ ಪ್ರಜೆಗಳಿಗಿರುವಂತೆ ಚುನಾವಣೆಯ ಹಕ್ಕುಬಾಧ್ಯತೆಗಳಿರಬೇಕೆಂದು ಬಹಳ ದಿವಸಗಳಿಂದಲೂ ಹೋರಾಟವು ನಡೆಯುತ್ತಿತ್ತು. ಮೊನ್ನೆ ಅಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದು ಸೂಚನೆಯು ಬಿದ್ದುಹೋಯಿತು. ಆದ್ದರಿಂದ ಸದಸ್ಯರಾಗಿದ್ದ 3 ಜನ ಭಾರತೀಯರು ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಅಲ್ಲಿಯ ಕಾಂಗ್ರೆಸ್ ಸೆಕ್ರೆಟರಿಯವರು ಭಾರತ ರಾಷ್ಟ್ರಸಭೆಯ ಜನರಲ್ ಸೆಕ್ರೆಟರಿಯವರಾದ ಪಂಡಿತ ಜವಹರಲಾಲ್ ನೆಹರೂರವರಿಗೆ ತಂತಿಯನ್ನು ಕಳುಹಿಸಿದ್ದಾರೆ.

ಪಾಶ್ಚಾತ್ಯದೇಶಗಳಲ್ಲಿ ಮೋಟಾರುಗಳ ಸಂಖ್ಯೆಯೂ ಅವುಗಳ ಸಂಚಾರವೂ ಮಿತಿಮೀರಿ ಹೆಚ್ಚುತ್ತಿರುವದರಿಂದ ಜನರಿಗೆ ನಾನಾಕಷ್ಟಗಳು ಪ್ರಾಪ್ತವಾಗುತ್ತಿವೆ. ರಸ್ತೆಗಳಲ್ಲೆಲ್ಲಾ ಎಲ್ಲಿನೋಡಿದರೂ ಮೋಟಾರುಗಳೇ ಕಾಣಿಸುವವು. ಇದರಿಂದ ಅವುಗಳು ವೇಗವಾಗಿಹೋಗಿಬರಲು ಅವಕಾಶವು ತಪ್ಪಿಹೋಗಿದೆ. ಪ್ಯಾರಿಸ್ ನಗರದ ಮುನಿಸಿಪಾಲಿಟಿಯವರು ಜನಸಂಚಾರವು ಹೆಚ್ಚಾಗಿರುವ ಕಡೆಗಳಲ್ಲಿ ಭೂಮಿಯ ಒಳಭಾಗದಲ್ಲಿ ಮಾರ್ಗಗಳನ್ನು ಮಾಡಬೇಕೆಂದು ತೀರ್ಮಾನಮಾಡಿರುತ್ತಾರೆ. ರಸ್ತೆಗಳಲ್ಲಿರುವ ಜನರ ಮನೆಗಳನ್ನು ಆಕ್ರಮಿಸಿಕೊಂಡು ರಸ್ತೆಯನ್ನು ಅಗಲಮಾಡುವದಕ್ಕಿಂತಲೂ ಭೂಮಿಯಲ್ಲಿಯೇ ರಸ್ತೆಗಳನ್ನು ಮಾಡುವದು ಸುಲಭವೂ ಅಗ್ಗವೂ ಆಗಿದೆಯೆಂದು ಗೊತ್ತಾಗಿರುವದು. ಇನ್ನುಮುಂದೆ ಈ ಏರ್ಪಾಡುಗಳು ಪಾಶ್ಚಾತ್ಯದೇಶಗಳಲ್ಲಿ ನಡೆಯುವವು.

ಕಳೆದ 6ನೆಯ ತಾರೀಖು ಬುಧವಾರ ಲಂಡನ್ ಪಟ್ಟಣದ ಹತ್ತಿರವಿರುವ ಕ್ರಾಯಿಡನ್‌ನಿಂದ ಒಂದು ದೊಡ್ಡ ವಿಮಾನಯಂತ್ರವು ಜರ್ಮನಿಗೆ ಹೊರಟಿತು. ಮಧ್ಯದಲ್ಲಿ ಅದು ಮಂಜಿನಲ್ಲಿ ಸಿಕ್ಕು ದಾರಿಕಾಣದೆ ಕೆಳಕ್ಕೆ ಬಿದ್ದುಹೋಯಿತು. ಅದರಲ್ಲಿದ್ದ ಪೆಟ್ರೋಲ್ ಎಣ್ಣೆಯು ಹತ್ತಿಕೊಂಡು ವಿಮಾನವು ಹಾಳಾದುದಲ್ಲದೆ ಅದರಲ್ಲಿದ್ದ ಎಂಟುಜನರಲ್ಲಿ ಆರುಜನರು ಕೂಡಲೆ ಮೃತಹೊಂದಿದರು. ಏಳನೆಯವನು ಸ್ವಲ್ಪಹೊತ್ತಾದಮೇಲೆ ಪ್ರಾಣಬಿಟ್ಟನು. ಒಬ್ಬನುಮಾತ್ರ ಬದುಕಿರುವನು. ಮೃತರಾದವರಲ್ಲಿ ಒಬ್ಬನು ಕಲ್ಕತ್ತೆಯ ದೊಡ್ಡ ವರ್ತಕನಾಗಿದ್ದನು. ಇದಾದ ಎರಡು ದಿನಗಳನಂತರ ಆದೇಶದಿಂದ ಕೆಲವು ಮೈಲುಗಳ ದೂರದಲ್ಲಿ ಎರಡು ವಿಮಾನಯಂತ್ರಗಳು ಒಂದಕ್ಕೊಂದು ಢಿಕ್ಕಿಹೊಡೆದು ನಾಶಹೊಂದಿದುವು. ಆವೆರಡುವಿಮಾನಗಳಲ್ಲೂ ಒಬ್ಬೊಬ್ಬರೇ ಇದ್ದು ಅದೃಷ್ಟವಶಾತ್ ಅವರಿಬ್ಬರೂ ಬದುಕಿಕೊಂಡರು.

ಮಾಜಿ ಇಂದೂರ್ ಮಹಾರಾಜರಾದ ಸರ್ ತುಕ್ಕೋಜಿ ರಾವ್ ಹೋಳ್ಕರವರು ಅಮೇರಿಕೆಯ ಮಿಸ್ ನ್ಯಾನ್ಸಿಮಿಲ್ಲರ್ (ಈಗ ಶ್ರೀ|| ಮಹಾರಾಣಿ ಶರ್ಮಿಷ್ಠಾದೇವಿ ಹೋಳ್ಕರ್) ರವರನ್ನು ವಿವಾಹಮಾಡಿಕೊಂಡು ಫ್ರಾನ್ಸ್‌ದೇಶದಲ್ಲಿ ವಾಸವಾಗಿದ್ದರಷ್ಟೆ! ಈಗ ಅವರು ಸಪತ್ನೀಕರಾಗಿ ಸ್ವದೇಶಕ್ಕೆ ವಾಪಸು ಬರುವವರಾಗಿದ್ದಾರೆ. ಮಹಾರಾಣಿ ಶರ್ಮಿಷ್ಠಾದೇವಿ ಹೋಳ್ಕರವರು ಯೂರೋಪ್ ಖಂಡದಲ್ಲಿ ಕೊಂಡುಕೊಂಡಿರುವ ಸಾಮಾನುಗಳನ್ನು ನೂರಾರು ಪೆಟ್ಟಿಗೆಗಳಲ್ಲಿ ತುಂಬಿರುವರಂತೆ! ಶರ್ಮಿಷ್ಠಾದೇವಿಯವರು ಈಗ ಪೂರ್ಣ ಭಾರತೀಯ ಸ್ತ್ರೀಯರಂತೆ ಉಡುಪನ್ನು ಧರಿಸಿಕೊಳ್ಳುತ್ತಿರುವರು. ಇದುವರೆಗೆ ಅವರು ಫ್ರಾನ್ಸ್‌ದೇಶದಲ್ಲಿ ವಾಸವಾಗಿದ್ದ ಭವನದಲ್ಲಿ ದಿವ್ಯವಾದ ಅನೇಕ ಕೂಟಗಳನ್ನು ನಡೆಯಿಸಿ, ತಮ್ಮ ಮಿತ್ರರನ್ನೆಲ್ಲ ಕರೆಯಿಸಿಕೊಂಡು, ಅವರೆಲ್ಲರಿಗೂ ತಾವು ಹೋಗಿಬರುವುದಾಗಿ ತಿಳುಹಿಸಿರುವರು.

ಅತ್ಯಂತ ದೂರದಲ್ಲಿರುವ ಜನರನ್ನೂ ಪದಾರ್ಥಗಳನ್ನೂ ಸ್ಪಷ್ಟವಾಗಿ ಕಾಣಿಸುವಂತೆ "ಟೆಲಿವಿಜನ್" ಎಂಬ ದೂರದರ್ಶಕ ಯಂತ್ರಶೋಧಕರಾದ ಅಮೇರಿಕೆಯ ಮಿ|| ಬೇರ್ಡ್ ಎಂಬ ವಿಜ್ಞಾನ ಶಾಸ್ತ್ರಜ್ಞರು ಕತ್ತಲಲ್ಲಿಯೂ, ಮಂಜುಮುಸುಕಿದಾಗಲೂ ಪದಾರ್ಥಗಳು ಚೆನ್ನಾಗಿ ಕಾಣಿಸುವಂತೆ ಹೊಸ ಶೋಧವನ್ನು ಮಾಡಿರುವರು! ಇದರಿಂದ ಮಂಜುಕವಿದಾಗ ಸ್ಟೀಮರು ಮತ್ತು ಮೋಟಾರುಗಳಿಗೆ ಸಂಭವಿಸುವ ಅಪಾಯಗಳನ್ನು ನಿವಾರಿಸಲನುಕೂಲವಾಗುವದಲ್ಲದೆ ಸಾವಿರಾರು ಜನರ ಪ್ರಾಣಾಪಾಯವೂ ಸಹ ತಪ್ಪುವದು. ಸೂರ್ಯಕಿರಣಗಳು ಅನೇಕ ಬಣ್ಣಗಳಿಂದ ಕೂಡಿ ಆಗಿರುತ್ತವೆ. ಆ ಬಣ್ಣಗಳಲ್ಲಿ ಸಾಧಾರಣವಾಗಿ ನಮ್ಮ ಕಣ್ಣಿಗೆ ಕಾಣಿಸುವ ಬಣ್ಣಗಳಲ್ಲದೆ, ಅಗೋಚರವಾದ ಕೆಲವು ಬಣ್ಣಗಳಿರುವುವು. ಇವುಗಳಲ್ಲಿ "ಇನ್‌ಫ್ರಾರೆಡ್" ಎಂಬ ಪ್ರಕಾಶವಾದ ಕಿರಣವೊಂದಿರುವದು. ಈ ಕಿರಣಗಳಿಗೆ ಉಬೇನೈಟ ಮೊದಲಾದ ಅನೇಕ ಅಪಾರದರ್ಶಕವಸ್ತುಗಳನ್ನು ಭೇದಿಸಿ ಹೋಗುವ ಶಕ್ತಿಯಿರುವದು. ಎಲೆಕ್ಟ್ರಿಕ್ ಬಲ್ಪುಗಳನ್ನು ಎಬೋನೈಟ ಎಂಬ ಪದಾರ್ಥದಿಂದ ಮುಚ್ಚಿಬಿಟ್ಟರೆ ಆಗ ಎಲ್ಲವೂ ಕತ್ತಲೆಯಾಗುವದು. ಆದರೆ ಆ ಬಲ್ಪನ್ನು "ಇನ್‌ಫ್ರಾರೆಡ್" ಕಿರಣಗಳಿಂದ ತುಂಬಿದರೆ ಅದು ಎಬೋನೈಟನ್ನು ಭೇದಿಸಿ ಹೊರಗೆ ಬೆಳಕನ್ನುಂಟುಮಾಡುವದು.

[3 ನೇ ಪುಟದಿಂದ ಮುಂದೆ ಸಾಗಿದುದು.]

ಯೆಂದು ಆ ದೇಶದ ಸುಪ್ರಸಿದ್ಧ ನ್ಯಾಯಾಧಿಪತಿಗಳೇ ತಿಳಿಸುತ್ತಿದ್ದಾರೆ. ಪಾಶ್ಚಾತ್ಯದೇಶದಲ್ಲಿ ಸುಪ್ರಸಿದ್ಧರಾದ ಅನೇಕ ಗ್ರಂಥಕರ್ತರು ವಿದ್ಯೆಘು ಶಾಸ್ತ್ರಗಳ ಆಧಾರದಿಂದ ಬಾಲ್ಯವಿವಾಹವು ಶ್ರೇಷ್ಠವೆಂದು ನಿರೂಪಿಸಿರುವರು. ಬಾಲ್ಯವಿವಾಹದ ಪ್ರಯೋಜನವನ್ನೂ ಹಾಗೂ ಋತುಮತೀ ವಿವಾಹದಿಂದಾಗುವ ಅನರ್ಥಗಳನ್ನೂ ಪಾಶ್ಚಾತ್ಯ ಶಾಸ್ತ್ರಜ್ಞರ ಸಪ್ರಮಾಣವಚನಗಳನ್ನೂ ಉದಾಹರಿಸಿ ಇಷ್ಟರಲ್ಲಿಯೇ ಒಂದು ಗ್ರಂಥವನ್ನು ಪ್ರಕಟಿಸುತ್ತೇವೆ. 13-14 ವರ್ಷಗಳಲ್ಲಿ ಗರ್ಭಾಧಾನ ನಡೆದರೂ ತಾಯಿಯಾಗಲಿ ಮಕ್ಕಳಾಗಲಿ ದುರ್ಬಲರಾಗುವುದಿಲ್ಲವೆಂಬ ಬಗ್ಗೆ ಇಂಗ್ಲೀಷ್ ವಿದ್ವೇಷರ ಆಧಾರಗಳನ್ನು ಪ್ರಕಟಿಸುತ್ತೇವೆ. ಮುಖ್ಯವಾಗಿ ಸುಧಾರಕರ ಶಾಸ್ತ್ರಾಧಾರವು ಎಷ್ಟು ಅಪ್ರಮಾಣವೋ ಹೇತುವಾದವೂ ಅಷ್ಟೇ ನಿರಾಧಾರವಾಗಿದೆ. ಈ ವಿಷಯವಾಗಿ ಉತ್ತರ ದಕ್ಷಿಣ ಭಾಗದ ಅನೇಕ ಪತ್ರಿಕೆಗಳಲ್ಲಿ ವಿದ್ವಾಂಸರ ಲೇಖಗಳು ಬಂದಿರುತ್ತವೆ.

ಇಂತಹ ವಿಷಯದಲ್ಲಿ ಮಠಾಚಾರ್ಯರು ತಟಸ್ಥರಾಗಿದ್ದಾರೆಂದು ಕೆಲವರು ಆಕ್ಷೇಪಿಸುತ್ತಿರುವರು ಇದು ನಿಜವಲ್ಲ. ಈ ವಿವಾಹ ಮಸೂದೆಯ ಪ್ರಾರಂಭದಿಂದಲೂ ಶ್ರೀ ಜಗದ್ಗುರು ಕಾಮಕೋಟಿ ಪೀಠಾಧಿಪತಿಗಳು (ಕುಂಭಕೋಣಂ) ವಿಶೇಷಕಾರ್ಯವನ್ನು ನಡೆಯಿಸಿದ್ದಾರೆ. ಶ್ರೀ ಶೃಂಗೇರಿ ಶ್ರೀ ಜಗದ್ಗುರು ಸಂಸ್ಥಾನದವರು ಮೆ|| ವೈಸ್ರಾಯರವರಲ್ಲಿಗೆ ತಮ್ಮ ಪ್ರತಿನಿಧಿಗಳನ್ನು ಡೆಪ್ಯುಟೇಷನ್ ಮೂಲಕ ಕಳುಹಿಸಿದ್ದಲ್ಲದೆ ಇದನ್ನು ಪ್ರಚಾರಮಾಡಲು ಪ್ರೋತ್ಸಾಹಿಸಿದ್ದಾರೆ. ಶ್ರೀ ಜಗದ್ಗುರುಗಳಾದ ಕೂಡಲಿ, ಕಾಶೀ, ಕೇದಾರ, ರಂಭಾಪುರೀ, ಪುಷ್ಪಗಿರಿ, [illegible] ಪ್ರತಿವಾದಿ ಭಯಂಕರ ಅಹೋಬಿಲ[illegible] ಉಡುಪಿ ಮೊದಲಾದ ಶ್ರೀಮಠದವರೂ ಸು[illegible] ವೈಷ್ಣವರೂ ಮಠಾಚಾರದಲ್ಲಿ ಕೈಹಾಕಬಾರದೆಂದು ಘನಸರ್ಕಾರದವರಲ್ಲಿ ಪ್ರಾರ್ಥಿಸಿ ಈಗ ತಮ್ಮ ಶಿಷ್ಯರಿಗೂ ಧರ್ಮರಕ್ಷಣೆಗೆ ಪ್ರಯತ್ನಪಡಬೇಕೆಂದು ಆಜ್ಞಾಪಿಸುತ್ತಿದ್ದಾರೆ.

ಪ್ರಕೃತ ಶ್ರೀಮಠಗಳವರ ಅನುಜ್ಞೆಯನ್ನು ಎಲ್ಲರೂ ಪಾಲಿಸಬೇಕಾಗಿದೆ. ಈಗಾಗಲೇ ಕಾಶಿ, ಡೆಲ್ಲಿ, ನಾಗಪುರ, ಹರದ್ವಾರ, ಪೂನಾ, ಕಲ್ಕತ್ತಾ ಮೊದಲಾದ ಸ್ಥಳಗಳಲ್ಲಿ ಸನಾತನಧರ್ಮಪರಾಯಣರಾದ ಹಿಂದುಗಳೂ ಹಾಗೂ ಮುಸಲ್ಮಾನರೂ ಸಭೆಗಳನ್ನು ನಡೆಯಿಸಿ ಶ್ರೀ ಸಾರ್ವಭೌಮರಲ್ಲಿಗೂ ಪಾರ್ಲಿಮೆಂಟಿಗೂ ವೈಸ್ರಾಯರವರಲ್ಲಿಗೂ ಪ್ರಾರ್ಥಿಸಿಕೊಂಡಿರುವರು. ನಾವಾದರೂ 1858 ನೇ ಪ್ರೊಕ್ಲೇಮೇಷನ್ ಭರವಸೆಯನ್ನವಲಂಬಿಸಿ ಕೇಳಿಕೊಳ್ಳಬೇಕಾಗಿದೆ.

ಈ ಸಮಯದಲ್ಲಿ ಕರ್ನಾಟಕದೇಶದಲ್ಲಿ ಸನಾತನಧರ್ಮಪರಾಯಣರೆಲ್ಲರೂ ಜಾಗ್ರತರಾಗಿ ತಮ್ಮ ತಮ್ಮ ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಸಭೆಗಳನ್ನು ನಡೆಯಿಸಿ ಸಂಘಗಳನ್ನು ಮಾಡಿಕೊಳ್ಳಬೇಕು. ಶಾರದಾ ವಿವಾಹ ಶಾಸನವು ಸನಾತನಧರ್ಮಕ್ಕೆ ವಿರುದ್ಧವಾದುದರಿಂದ 1858ನೇ ಪ್ರೋಕ್ಲಮೇಷನ್ ಅನುಸರಿಸಿ ರದ್ದುಮಾಡಬೇಕೆಂದು ಕೇಳಿಕೊಳ್ಳಬೇಕು. ಭಾರತಶಾಸನಸಭೆಯು ನಾನಾಜಾತಿ ಮತ ಪಂಗಡದವರಿಂದ ಕೂಡಿರುವುದರಿಂದಲೂ ಅಲ್ಲಿ ಮತವಿಭಾಗದ ಇಲಾಖೆಯಾಗಲಿ ಮತಾಚಾರಕ್ಕೆ ಸಂಬಂಧಿಸಿದ ಮಂತ್ರಿಗಳಾಗಲಿ ಇಂಗ್ಲೆಂಡಿನಂತೆ ಮತಾಚಾರ್ಯರಾಗಲಿ ಅವರ ಪ್ರತಿನಿಧಿಗಳಾಗಲಿ ಇಲ್ಲದಿರುವುದರಿಂದಲೂ ಈಗಣ ಶಾಸನಸಭೆಯು ಈ ನಿಯಮವನ್ನು ಮಾಡಲು ಅಧಿಕಾರವಿಲ್ಲವೆಂದು ಸ್ಪಷ್ಟವಾಗಿ ತಿಳಿಸಬೇಕು. ಮುಂದಿನ ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ಮತಾಚಾರಕ್ಕೆ ಸ್ಥಾನ ಕೊಡುವಂತೆ ನಿರ್ಧರಿಸಬೇಕು. ಮುಂದೆ ಮತಾಚಾರದಲ್ಲಿ ಕೈಹಾಕುವುದಿಲ್ಲವೆಂದು ಪ್ರಮಾಣಪತ್ರವನ್ನು ಕೊಟ್ಟವರಿಗೆ ಶಾಸನಸಭೆಗಳಿಗೆ ಓಟ್ಸು ಕೊಡಬೇಕೆಂದು ಎಲ್ಲಾ ಓಟರುಗಳಲ್ಲಿಯೂ ಪ್ರಚುರಪಡಿಸಬೇಕು. ಸಾಧ್ಯವಾದಮಟ್ಟಿಗೂ ಗ್ರಾಮಗಳಲ್ಲಿ ಪ್ರಚುರಪಡಿಸಲು ತಕ್ಕ ಸ್ವಯಂಸೇವಕರನ್ನು ಏರ್ಪಡಿಸುವುದಲ್ಲದೆ ಸನಾತನ ಧರ್ಮ ವಿಷಯಗಳನ್ನು ದಯೆಯಿಟ್ಟು ಪ್ರಕಟಿಸಬೇಕೆಂದು ವರ್ತಮಾನ ಪತ್ರಿಕೆಯವರನ್ನು ಪ್ರಾರ್ಥಿಸಬೇಕು.

ಗ್ರಾಮಗಳಲ್ಲಿ ನಡೆಯಿಸಿದ ತೀರ್ಮಾನಗಳನ್ನು ಸಾರ್ವಭೌಮರಿಗೂ, ಪಾರ್ಲಿಮೆಂಟಿಗೂ ಪ್ರೈಮಿನಿಸ್ಟರಿಗೂ, ಸ್ಟೇಟ್ ಸೆಕ್ರೆಟರಿಯವರಿಗೂ ಮೆ|| ವೈಸ್ರಾಯರವರಿಗೂ ಇಂಡಿಯಾ ಸರ್ಕಾರಕ್ಕೂ ರಾಜಭಕ್ತಿ ವಿಶ್ವಾಸ ಪುರಸ್ಸರವಾಗಿ ಕಳುಹಿಸಿ ಧರ್ಮಸಂರಕ್ಷಣಮಾಡುವಂತೆ ಅವಕಾಶ ಹೊಂದುವ ಕಾರ್ಯವನ್ನು ಎಲ್ಲಾ ಕರ್ನಾಟದೇಶೀಯರು ಮಾಡಲು ಪ್ರಾರ್ಥಿಸುತ್ತೇವೆ.

ತಾ|| 24 ರಲ್ಲಿ ಮಹಾಮಹೋಪಾಧ್ಯಾಯ ವಿದ್ಯಾನಿಧಿ ಧರ್ಮಾಧಿಕಾರಿ ವೇ|| ಬ್ರ|| ಶ್ರೀ|| ವಿರೂಪಾಕ್ಷಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಡೆಯುವ ಸನಾ[illegible]ರ್ಮಪ್ರಮುಖರ ಮಹಾಸಭೆಗೂ ನವಂಬರ 30 ರಿಂದ ಮದ್ರಾಸಿನಲ್ಲಿ ನಡೆಯುವ ಮಹಾಸಭೆಗೂ ಕರ್ನಾಟಕದೇಶದ ಸನಾತನ ಧರ್ಮರಕ್ಷಣೆಯಲ್ಲಿ ಆಸಕ್ತರಾದ ಪ್ರಮುಖರು ಪ್ರತಿನಿಧಿಗಳನ್ನು ಅಧಿಕಸಂಖ್ಯೆಯಿಂದ ಕಳುಹಿಸಿ ಈ ಮಹಾಸಭೆಯವರು ನಡೆಯಿಸುವ ಧರ್ಮಕಾರ್ಯದ ಜಯವನ್ನು ತನುಮನಧನಗಳಿಂದ ಆಶಿಸುವರೆಂದು ಪ್ರಾರ್ಥಿಸುತ್ತೇವೆ.

ತಮ್ಮ ಪ್ರೀತಿಪಾತ್ರ

ತಾ|| 15-11-29. ವಿದ್ವಾನ್ ಕೆ. ಶೇಷಶಾಸ್ತ್ರಿ

ಪ್ರಧಾನಮಂತ್ರಿ

ಭಾರತಸನಾತನ ಧರ್ಮಮಂಡಲ, ಶೃಂಗೇರಿ,

ಹಿಂದುಸ್ಥಾನದ ಬಾಲ್ಯವಿವಾಹಗಳ ನಿರೋಧಕ ಕಾನೂನು.

ಅದರ ಸೆಕ್ಷನ್‌ಗಳು.

1. ಈ ಶಾಸನವು 1929 ನೇ ಸಂವತ್ಸರದ ಬಾಲ್ಯವಿವಾಹ ನಿಷೇಧದ ಬಿಲ್ಲೆಂದು ಕರೆಯಲ್ಪಡುವುದು. ಈ ಬಿಲ್ಲು ಬ್ರಿಟಿಷ್ ಇಂಡಿಯಾ, ಬ್ರಿಟಿಷ್ ಬೆಲೂಚಿಸ್ಥಾನ, ಸೆಂಟ್ರಲ್ ಪರಗಣ, ಈ ಪ್ರಾಂತ್ಯಗಳಿಗೆ ಅನ್ವಯಿಸುವುದು. ಈ ಬಿಲ್ಲು 1930 ನೇ ಏಪ್ರಿಲ್ ತಾ|| 30 ರಿಂದ ಆಚರಣೆಗೆ ಬರುತ್ತದೆ.

2. ಈ ಬಿಲ್ಲಿನಲ್ಲಿ ಬಾಲಕನೆಂದರೆ 18 ವರ್ಷ ವಯಸ್ಸಿನೊಳಗಿರುವವನೆಂದೂ, ಬಾಲಿಕೆ ಎಂದರೆ 14 ವರ್ಷ ವಯಸ್ಸಿನೊಳಗಾಗಿರುವ ಹುಡುಗಿ ಎಂದೂ ಅರ್ಥವು. ಬಾಲ್ಯವಿವಾಹವೆಂದರೆ ಮೇಲೆ ಹೇಳಿದ ವಯಸ್ಸು ಆಗದ ಬಾಲಿಕೆಗಾಗಲಿ, ಬಾಲಕನಿಗಾಗಲಿ ಜರುಗುವ ವಿವಾಹವೆಂದರ್ಥ. ಮೈನರ್ ಅಂದರೆ 18 ವರ್ಷ ವಯಸ್ಸಿನೊಳಗಿರುವ ಬಾಲಕ, ಬಾಲಿಕೆ ಎಂದರ್ಥ.

3. 18 ವರ್ಷದ ಮೇಲೆ 21 ವರ್ಷದೊಳಗೆ ಇರುವ ಯಾವ ಮನುಷ್ಯನಾಗಲಿ ಬಾಲ್ಯವಿವಾಹ ಮಾಡಿಕೊಂಡಲ್ಲಿ ಅವನಿಗೆ ಒಂದು ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯಾಗಲಿ, 1,000 ರೂಪಾಯಿಗಳ ವರೆಗೆ ದಂಡವಾಗಲಿ, ಈ ಎರಡು ಶಿಕ್ಷೆಗಳೂ ಒಟ್ಟಿಗಾಗಲಿ ವಿಧಿಸಲ್ಪಡುವವು.

4. 21 ವರ್ಷದ ಮೇಲಿರುವ ಯಾವ ಮನುಷ್ಯನಾಗಲಿ ಬಾಲ್ಯವಿವಾಹ ಮಾಡಿಕೊಂಡಲ್ಲಿ ಅವನಿಗೆ ಒಂದು ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯಾಗಲಿ, 1,000 ರೂಪಾಯಿಗಳ ವರೆಗೆ ದಂಡವಾಗಲಿ, ಈ ಎರಡು ಶಿಕ್ಷೆಗಳೂ ಒಟ್ಟಿಗಾಗಲಿ ವಿಧಿಸಲ್ಪಡುವವು.

5. ಯಾರಾದರೂ ಬಾಲ್ಯವಿವಾಹವನ್ನು ಮಾಡಿಸಿದಲ್ಲಿ ಮತ್ತು ಮಾಡಿದಲ್ಲಿ ಅವರಿಗೆ ಒಂದು ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯಾಗಲಿ, 1,000 ರೂಪಾಯಿಗಳ ವರೆಗೆ ದಂಡವಾಗಲಿ, ಈ ಎರಡು ಶಿಕ್ಷೆಗಳೂ ಒಟ್ಟಿಗಾಗಲಿ ವಿಧಿಸಲ್ಪಡುವವು. ಇವರು ಜರುಗಿಸಿದ ವಿವಾಹವು ಬಾಲ್ಯವಿವಾಹವಲ್ಲವೆಂದು ನಿರೂಪಿಸಿದರೆ ಶಿಕ್ಷಾರ್ಹವಾಗುವುದಿಲ್ಲ.

6. ಯಾವ ಮೈನರಾದರೂ ಬಾಲ್ಯವಿವಾಹ ಮಾಡಿಕೊಳ್ಳುವುದಾದರೆ ಆ ಮೈನರು ಯಾರ ವಶದಲ್ಲಿರುತ್ತಾನೋ ಅಂತಹ ತಂದೆತಾಯಿಗಳೂ, ಪೋಷಕರುಗಳೂ ಆ ವಿವಾಹವು ಜರುಗದಂತೆ ಆಟಂಕಪಡಿಸಬೇಕು. ಅವರು ಹಾಗೆ ಮಾಡದೆಹೋದಲ್ಲಿ ವಿವಾಹ ನಡೆಯಲು ಪ್ರೋತ್ಸಾಹಿಸಿದವರಾಗುವರು. ಈ ಶಾಸನಕ್ಕೆ ವಿರೋಧವಾಗಿ ನಡೆದವರಿಗೆ ಒಂದು ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯಾಗಲಿ, 1,000 ರೂ. ಗಳ ವರೆಗೆ ದಂಡವಾಗಲಿ, ಈ ಎರಡು ಶಿಕ್ಷೆಗಳು ಒಟ್ಟಿಗಾಗಲಿ ವಿಧಿಸಲ್ಪಡುವವು. ಸ್ತ್ರೀಯರಿಗೆ ಮಾತ್ರ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಡುವುದಿಲ್ಲ.

7. ಈ ಶಾಸನದ ಪ್ರಕಾರ ದಯಾರ್ಫ್ತಮಾಡಲ್ಪಡುವ ವಿವಾದವನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮಾತ್ರ ವಿಚಾರಣೆ ಮಾಡಲು ಅಧಿಕಾರವನ್ನು ಹೊಂದಿರುವರು.

8. ಈ ಶಾಸನದ ಪ್ರಕಾರ ಅಪರಾಧವು ನಡೆದ ಒಂದು ವರ್ಷದೊಳಗೆ ಈ ಅಪರಾಧ ನಡೆದ ಸಂಗತಿಯನ್ನು ಕೋರ್ಟಿನವರಿಗೆ ತಿಳಿಸಿದ ಹೊರತು ಕೋರ್ಟಿನವರು ತಾವಾಗಿ ವಿಚಾರಣೆಮಾಡಕೂಡದು.

9. ಈ ಶಾಸನದ ಪ್ರಕಾರ ನಡೆಯುವ ಅಪರಾಧವನ್ನು ವಿಚಾರಣೆಮಾಡಲು ಅಧಿಕಾರವಿರುವ ಕೋರ್ಟು ಕ್ರಿಮಿನಲ್ ಪ್ರೊಸೀಜರು ಕೋಡು (1894) ಸೆಕ್ಷನ್ 203 ನ್ನು ಅನುಸರಿಸಿ ಆ ಕೇಸನ್ನು ತಾವೇ ನಡಿಸಬಹುದು; ಅಥವಾ ಯಾವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ನಡಿಸುವಂತಾದರೂ ಆಜ್ಞಾಪಿಸಬಹುದು.

10. ಫಿರ್ಯಾದನ್ನು ವಿಚಾರಣೆ ಮಾಡಿದ ಮೇಲೆ ಯಾವಾಗಲಾದರೂ ಅಪರಾಧಿಗೆ ಸಮನ್ನು ಕಳುಹಿಸುವುದಕ್ಕೆ ಮೊದಲೇ ಕೋರ್ಟಿನವರು ಫಿರ್ಯಾದಿಯಿಂದ 100 ರೂಪಾಯಿಗಳನ್ನಾಗಲಿ, ಅದಕ್ಕೆ ತಕ್ಕ ಜಾಮೀನು ಪತ್ರವನ್ನಾಗಲಿ ತೆಗೆದುಕೊಂಡು ಫಿರ್ಯಾದನ್ನು ವಜಾ ಮಾಡಬಹುದು.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

“ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು”—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **‘ಕೊಡಗಿನ ಗುಡುಗುಡು!’** (ಅ) **‘ಸುಡುಸುಡು!’** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವವು

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಳ್ಳಿ ಡು: ಕುಡಿಯಿರಿ. [15]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟಿ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ.

ಅಪೂರ್ವಗ್ರಂಥ! **ಅಪೂರ್ವಗ್ರಂಥ!!**

ಮಹಾನಾರಾಯಣೋಪನಿಷತ್

(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು “ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ” ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲ್ಪಡುವದು. **ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ASTHMA SPECIFIC

ಉಬ್ಬಸವು ಬಹಳ ಕಠಿಣವಾದ ವ್ಯಾಧಿ. ಇದು ಹೆಚ್ಚಾಗಿ ತಂದೆತಾಯಿಗಳಿಂದ ಮಕ್ಕಳಿಗೆ ಬರುವದು ಸಹಜ. ಶ್ವಾಸ ಸರಿಯಾಗಿ ಬಿಡಲಿಕ್ಕೆ ಆಗದೆ ಗಂಟಲು ಹಿಡಿದಂತೆ ಆಗಿ, ಈಗಲೋ, ಇನ್ನೊಂದು ಕ್ಷಣಕ್ಕೋ ಪ್ರಾಣಹೋಗುವಂತೆ ಕಾಣಿಸುವುದು. ಎದೆಯಲ್ಲಿ ಬೆಕ್ಕು ಕೂಗಿದಂತೆ ಗೊಯಿಗೊಯಿ ಎಂಬ ಶಬ್ದವು ಕೇಳಿಸುವುದು. ಹಾಸಿಗೆಯ ಮೇಲೆ ವೈಚಾಚಿ ಮಲಗಲಾಗದು. ಸಾಧಾರಣದ ಚಿಕಿತ್ಸೆಗೆ ಕೇಳದು. ಇಂಥಾ ಹಿಂಸೆಗಳನ್ನು ಕೊಡುವ ವ್ಯಾಧಿಯು ನಮ್ಮ **‘ಉಬ್ಬಸಸಂಹಾರಿ’** ಯೆಂಬ ಔಷಧಿಯಿಂದ ಸೂರ್ಯನು ಉದಯಿಸುವಾಗಲೇ ಮಂಜುಗಳು ಅದೃಶ್ಯವಾಗುತ್ತಾ ಬರುವಹಾಗೆ ಶೀಘ್ರದಲ್ಲಿಯೇ ಗುಣವಾಗುವುದು. [5]

ಬಾಟ್ಲಿ 1ಕ್ಕೆ ರೂ. 2—8—0. ವಿ. ಪಿ. ಖರ್ಚು ಪ್ರತ್ಯೇಕ.

ಶ್ರೀ ಕೃಷ್ಣ ಬ್ರದರ್ಸ್, 323 ತಂಬುಚೆಟ್ಟಿಬೀದಿ, ಮದ್ರಾಸ್.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆವಸು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಳಪುಷ್ಪ, ಕಾಲಿಮಕಂದ, ಮಧುಕಂದ, ಜವಾಕಂಧ, ಕಾಲೀಮೂಸಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಏವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಖಾನಾ, ಬೀಜಬಂದ, ಹರಣಜೋರಿ, ಮುಂಗಲೀ ಬೀದಾಣಿ, ಮರ್ದಸೀಕಟ್ಟಿಗೆ, ಶತಾವರಿ, ಸರಿಗೀಮಗಜ, ಆಲದಹಾಲು, ವಾಕೇರಿಭಾಕಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮ[illegible], ವಂಶಲೋಚನ, ವರಘಾರ, ಕೇಸರಿ, ಯಾಲಕ್ಕಿ, ಕಲ್ಲುಸಕ್ಕರೆ. ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿದ್ದೊಂದು ಮತ್ತು 50 ಜಿನಸು ಹಾಕಿದ್ದೊಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಹಿಕ್ಕು, ರಕ್ತ, ಕೀವು ಹುಣ್ಣು, ದುರ್ಗಂಧ, ಕ್ರಿಮಿ, ವಾತಬಾರದಿರೋಣ, ಡಬ್ಬಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [19]

ಪತ್ತೆ—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ “ಜಡೀಬೂಟೀ” ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಶೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ನಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯನ್ ಅಷ್ಟವರ್ಗ ಔಷಧಾಲಯ

[32] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮರ್ಶಾಂಸಾ	೨ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅತಿಮಹತ್ವದ ನೂತನ ಫೋಟೋ

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

[12] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಸ್ತ್ರೀಯರುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[21] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ ನೇ ನವಂಬರ್ ೧೯೨೯ [ಸಂಚಿಕೆ ೨೯.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪಂಚಾಚಾರ್ಯ ಭಜನಾಸಂಘ.

ರಾಮದುರ್ಗಂ.

ಬಳ್ಳಾರಿಜಿಲ್ಲಾ ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದಲ್ಲಿರುವ ಹರಪುರಿ ಗುರುಪಾದದೇವರ ಮಠದಲ್ಲಿ ಶ್ರಾವಣ ಶು|| ೧ ದಿಂದ ಪ್ರತಿದಿವಸ ಉದಯ ೮ ಘಂಟೆವರೆಗೆ ಶ್ರೀ ಪಂಚಾಚಾರ್ಯರ ಪಾರಾಯಣ ಹಾಗೂ ಸಾಯಂಕಾಲ ೭ ಘಂಟೆಯಿಂದ ೧೦ ಘಂಟೆಯವರೆಗೆ ಶ್ರೀಪಂಚಾಚಾರ್ಯರ ಮಂಗಲ ಸ್ತೋತ್ರಾವಳಿಗಳಿಂದ ಭಜನೆಯನ್ನು ನಡೆಯಿಸುತ್ತ ಇದರ ಪರಿಸಮಾಪ್ತಿಯನ್ನು ಇದೇ ಕಾರ್ತಿಕ ಶು|| ೧೨ ದಿವಸ ಶ್ರೀ ಪಂಚಾಚಾರ್ಯರ ಭಾವಚಿತ್ರಗಳನ್ನು ಶೃಂಗರಿಸಿದ ಆಂದೋಲಿಕೆಯಲ್ಲಿ ಮೂರ್ತಗೊಳಿಸಿ ಸಮಸ್ತ ಬಿರುದಾವಳಿಗಳಿಂದ ನೆರವೇರಿಸುವದರಲ್ಲಿ ಬಂದಿತು. ಆ ಸಮಯಕ್ಕೆ ಬೊಮ್ಮಗಟ್ಟಿಮಠದ ಚಂದ್ರಮೌಳಿಶಾಸ್ತ್ರಿಗಳೂ, ಬೊಮ್ಮಗಟ್ಟಿ ಬಾಲಕ ಭಜನಾಸಂಘದವರೂ ಹಾಗೂ ಮೇನೇಜರ್ ಗುಳೇನಹಳ್ಳಿ ಶೆಟ್ರು ಗುರುಸಿದ್ಧಪ್ಪನವರು ಬಂದಿದ್ದರು. ಉತ್ಸವವು ಮಠದಿಂದ ಬಹು ವಿಜೃಂಭಣೆಯಿಂದ ಹೊರಟು ಮಠಕ್ಕೆ ಬಂದು ತಲ್ಪಿತು. ಆ ಮೇಲೆ ಗಣಾರಾಧನೆಯು ನೆರವೇರಿತು. ಅನಂತರ ಬಣಕಾರ ಚನ್ನಬಸಪ್ಪನ ಮಂದಿರದ ಮುಂಗಡೆಯ ಚಾವಡಿಯಲ್ಲಿ ಸಭೆಯು ಸೇರಿತು. ಸುಮಾರು 200-250 ಜನಗಳು ಸೇರಿದ್ದರು. ಕೂಡ್ಲಿಗಿ ಜಗಿನಹಳ್ಳಿ ಆರಾಧ್ಯಮಠದ ವೇ|| ಬ್ರ|| ಶ್ರೀ|| ಸಿದ್ಧಾಂತಿ ಗುರುಪಾದಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಗುರುಪಾದದೇವರ ಮಠದ ಜಿ. ಯಂ. ಚೆರಂತಯ್ಯ ಬೋರ್ಡು ಹೈಸ್ಕೂಲು ಹರಪನಹಳ್ಳಿ ಇವರು ಸೂಚಿಸಿದ ಪ್ರಕಾರ ಗುರುಪಾದಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ವಹಿಸಿದರು. ವೇ|| ಹೆಚ್. ಜಿ. ಯಂ. ಸಿದ್ಧಾಂತಿ ಕೊಟ್ರಪ್ಪಯ್ಯಶಾಸ್ತ್ರಿಗಳು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಸದರಿ ಶಾಸ್ತ್ರಿಗಳು ಅಷ್ಟಾವರಣವೆಂದರೇನು? ಅವುಗಳ ಮಹಿಮೆಯು ಎಂಥದು? ಎಂಬ ಬಗ್ಗೆ ಸಭಿಕರ ಮನವಪ್ಪುವಂತೆ ಹೇಳಿದರು. ವೈದಿಕಧರ್ಮವನ್ನರಿಯದ ಮಠಾಧಿಕಾರಿಗಳ ನಡವಳಿಕೆಗಳನ್ನೂ ಇವರು ಸುಧಾರಿಸತಕ್ಕ ವಿಷಯಗಳನ್ನೂ ಪಂಡಿತಪಾಮರರಿಗೆಲ್ಲ ಮನನವಾಗುವಂತೆ ಭಾಷಣಮಾಡಿ ಕುಳಿತರು. ಅನಂತರ ಬೊಮ್ಮಗಟ್ಟಮಠದ ವೇ|| ವೀರಭದ್ರಪ್ಪಯ್ಯನವರು ಶ್ರೀ ಪಂಚಾಚಾರ್ಯರ ಉತ್ಪತ್ತಿಕ್ರಮವು ನಮ್ಮಗಳಿಗೆ ತಿಳಿದಿಲ್ಲವೆಂದೂ ಇದಕ್ಕಾಗಿ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಶ್ರೀ|| ಪಂ|| ಕಾಶೀನಾಥಶಾಸ್ತ್ರಿಗಳು ನಮ್ಮ ಪುಣ್ಯೋದಯದಿಂದ ಉದಯಿಸಿ ಈ ಭರತಖಂಡಕ್ಕೆಲ್ಲ ತಿಳಿಯುವಂತೆ ಮಾಡಿದರೆಂದೂ ಭಾಷಣಮಾಡಿದರು. ಅಧ್ಯಕ್ಷರು ಅಷ್ಟಾವರಣಗಳ ಸ್ವರೂಪವನ್ನು ಬೋಧಿಸಿದರು. ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕಾರ್ತಿಕ ದೀಪದಾನೋತ್ಸವವು.

ಕಾರ್ತಿಕ ಮಾಸವು ಮನೋಹರವಾದ ಮಾಸವು: ಈ ಮಾಸದಲ್ಲಿ [illegible] ಸೋಡಿದಲ್ಲಿ ಆನಂದವೂ ಉಲ್ಲಾಸವೂ ಕಂಡುಬರುವದು. ಅದರಲ್ಲಿ ವೀರಶೈವರಂತೂ ಈ ಕಾಲದಲ್ಲಿ ದಾನಧರ್ಮ ಪರೋಪಕಾರ ನೋದಲಾದ ಕರ್ತವ್ಯಗಳಲ್ಲಿ ತೊಡಗಿರುತ್ತಾರೆ. ಈ ಶುದ್ಧ ೫ ದಿವಸ ಇಲ್ಲಿಯ ಶ್ರೀ ಸಾರಂಗದೇವರ ಬೃಹನ್ಮಠದಲ್ಲಿ ಮೂಲಕರ್ತೃಗಳ ಬಗ್ಗೆ ಅನ್ನದಾನ ಸಂತರ್ಪಣವೂ ದೀಪೋತ್ಸವವೂ ನೆರವೇರಿತು. ಈ ಮಠದ ಮೂಲ ಕರ್ತೃಗಳ ಐತಿಹಾಸಿಕ ಸಂಗತಿಯು ಶ್ರವಣಾರ್ಹವಾಗಿದೆ. ಈ ಮಠದ ಮೂಲ ಕರ್ತೃಗಳು ಸಾರಂಗದೇವರೆಂಬವರು. ಇವರು ಸುಮಾರು ೮೦೦-೯೦೦ ವರುಷಗಳ ಹಿಂದೆ ಇದ್ದರು. ಇವರು ಸತ್ಯಶಾಲಿಗಳೂ ಶಾಪಾನುಗ್ರಹ ಸಮರ್ಥರೂ ಆಗಿದ್ದರು. ಇವರು ಹಿಂದುಸ್ಥಾನದಲ್ಲಿ ಸಂಚರಿಸುತ್ತ ತಂಜಾವರ ಮಧುರೆ ಮುಂತಾದ ರಾಜರಿಗೂ ಮಂಡಲಾಧೀಶರಿಗೂ ವೀರಶೈವ ಧರ್ಮೋಪದೇಶವನ್ನು ಮಾಡಿದ್ದಲ್ಲದೆ ಆ ಕಾಲದಲ್ಲಿದ್ದ ನಾಸ್ತಿಕ ಮತಗಳನ್ನು ವಿಧ್ವಂಸಮಾಡುತ್ತ ಜಗತ್ತಿನಲ್ಲಿ ವೀರಶೈವ ಮತವೇ ವೇದಸಮ್ಮತವೂ ಅನಾದಿ ಸಂಸಿದ್ಧವೂ ಆದ ಮತವೆಂಬುದನ್ನು ತೋರಿಸಿಕೊಟ್ಟರು. ಈ ಮಹಿಮಾಶಾಲಿಗಳ ಪ್ರಭಾವದಿಂದಲೇ ರಾಜಾಧಿರಾಜರು ಇವರಿಗೆ ಶಿಷ್ಯರಾಗಿ ಅನೇಕ ಭೂದಾನಗಳನ್ನು ಮಾಡಿದ್ದಾರೆ. ಅಸ್ತು! ಇಲ್ಲಿ ಪ್ರತಿವರ್ಷದಂತೆ ಮಂಗಲಕಾರ್ಯಗಳು ಈಗಲೂ ವೈಭವದಿಂದ ಜರಗಿದವು. ಈ ಕಾರ್ಯವನ್ನು ವೇ|| ಶಿವಸಂಗಪ್ಪಯ್ಯನವರು ಅಂಕಲೆ ಕಟ್ಟಿಮನಿ ಬೃಹನ್ಮಠಾಧೀಶ ಇವರು ನೆರವೇರಿಸಿದರು.

ಓರ್ವ ವೀರಶೈವ ಸದ್ಭಕ್ತ,

ಗುಳೇದಗುಡ್ಡ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗರ್ಭಲಿಂಗಧಾರಣ.

ಗುಳೇದಗುಡ್ಡದಲ್ಲಿರುವ ಮ|| ಗವಿಸಿದ್ಧಪ್ಪನವರು ಒಣರೊಟ್ಟಿ ಮತ್ತು ಗುರುಶಾಂತಪ್ಪನವರು ಕರನಂದಿ ಈ ಭಕ್ತಶಿಖಾಮಣಿಗಳು ಆಶ್ವಯುಜ ಶು|| ೯ ತಾ|| 12-10-29 ದಿವಸ ವಿಧ್ಯುಕ್ತವಾಗಿ ತಮ್ಮ ತಮ್ಮ ಧರ್ಮಪತ್ನಿಯರಿಗೆ ಅಷ್ಟಮಮಾಸದಲ್ಲಿ ಪರಮಪೂಜ್ಯರಾದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಆರಳೆಲೆ ಹಿರೇಮಠ ಮಂಗಳೂರು ಇವರ ಅಧ್ಯಕ್ಷತೆಯಿಂದಲೂ ಗುರುನಾದಶರ್ಮಾ ಹಂಜಗಿಮಠ ಇವರ ಪೌರೋಹಿತ್ಯದಿಂದಲೂ ಲಿಂಗಧಾರಣವನ್ನು ಮಾಡಿಸಿದರು. ವೀರಶೈವರಲ್ಲಿ ಹಲಕೆಲವರು ತಮ್ಮ ಧರ್ಮಪತ್ನಿಯರ ಗರ್ಭದಿಂದಾವಿರ್ಭವಿಸುವ ಶಿಶುಗಳಿಗೆ ಉಕ್ತಕಾಲದಲ್ಲಿ ಸಕ್ರಮವಾಗಿ ಗುರುಮುಖದಿಂದ ಗರ್ಭದೀಕ್ಷೆ ಮಾಡಿಸುವದನ್ನು ಬಿಟ್ಟು ಹುಟ್ಟಿದ ಮೂರನೆಯ ಅಥವಾ ಐದನೆಯ ದಿವಸದಲ್ಲಿ ಇಲ್ಲವೆ ನಾಮಕರಣಕಾಲದಲ್ಲಿ ಇನ್ನು ಕೆಲವರು ಕನ್ನೆಯರಿಗೆ ಲಗ್ನವಾಗುವಕಾಲದಲ್ಲಿ ಲಿಂಗವನ್ನು ಧರಿಸುವ ಪ್ರಯತ್ನವನ್ನು ಮಾಡುವದನ್ನು ನೋಡಿದರೆ ಶುದ್ಧ ಸಂಪ್ರದಾಯದ ವೀರಶೈವರಿಗೆ ಎಷ್ಟು ವ್ಯಥೆಯೆನಿಸಲಿಕ್ಕಿಲ್ಲ! ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರು ತಾಯಿಯ ಗರ್ಭದಲ್ಲಿರುವ ಶಿಶುವಿಗೆ ೮ ನೆಯ ತಿಂಗಳಲ್ಲಿ ಲಿಂಗವನ್ನು ಧರಿಸಬೇಕೆಂದೂ, ಹೊಟ್ಟೆಯಲ್ಲಿರುವ ಶಿಶುವು ಯಾವಾಗ ಪ್ರಾಣಧಾರಣವನ್ನು ಮಾಡುತ್ತದೆಯೋ ಅದೇ ಕಾಲಕ್ಕೆ ಪಂಚಸೂತ್ರಘಟಿತವಾದ ಶಿವಲಿಂಗವನ್ನು ಸಂಸ್ಕಾರಗಳ ದ್ವಾರಾ ಪೂಜಿಸಿ ಗರ್ಭಿಣಿಯ ವಶಕ್ಕೆ ಕೊಟ್ಟು ಶಿಶುವು ಹುಟ್ಟಿದೊಡನೆಯೇ ಆ ಶಿವಲಿಂಗವನ್ನು ಧರಿಸಬೇಕೆಂದೂ ಬೋಧಿಸಿದ್ದಾರೆ. "ವೀರಶೈವಸ್ಥಿತಾನಾಂಚ ಸ್ತ್ರೀಣಾಂಗರ್ಭಾಷ್ಟಮೇಗುರುಃ ಅಥೋರ್ದಯೇವಾ ಸ್ಯಥವಾ ಪತನೇಜ್ಜೈವದೇಶಿಕಃ || ಪೂರ್ವಸಂಸ್ಕಾರಿತಂ ಲಿಂಗಂ ಶಿಶೋಃಕಂಠೇಚ ಧಾರಯೇತ್ |" ಈ ಪ್ರಕಾರ ಸ್ವಯಂಭುವಾಗಮದಲ್ಲಿ ಹೇಳಲ್ಪಟ್ಟಿದ್ದರೂ ಈಗ ಗರ್ಭದೀಕ್ಷೆಯನ್ನು ಹೊಂದುವವರ ಸಂಖ್ಯೆಯೇ ಕಡಿಮೆಯಾಗಿದೆ. ಕೆಲವರು ಯಂತ್ರಗಳನ್ನು ಮಕ್ಕಳ ಕೊರಳಿಗೆ ಕಟ್ಟುವರಲ್ಲದೆ ಈ ಭವಪಾಶವಿಮೋಚಕವಾದ ಶಿವಲಿಂಗ ಯಂತ್ರವನ್ನು ಕಟ್ಟುವವರು ಅತಿ ವಿರಳರಾಗಿದ್ದಾರೆ. ಈ ಮಹಾಯಂತ್ರದಲ್ಲಿರುವ ಶಕ್ತಿಯು ಸಾವಿರದಲ್ಲಿ ಒಂದು ಭಾಗದಷ್ಟಾದರೂ ಕ್ಷುದ್ರಯಂತ್ರದಲ್ಲಿರುವದುಂಟೇ? ಮಂತ್ರಾಧಿಷ್ಠಿತವಾದ ಶಿವಲಿಂಗಯಂತ್ರವು ಯಾವ ಮಕ್ಕಳ ಕೊರಳಿನಲ್ಲಿರುವದೋ ಅಂತಹ ಮಕ್ಕಳನ್ನು ಪಿಶಾಚಾದಿ ದುಷ್ಟಗ್ರಹಗಳು ಸೂರ್ಯನನ್ನು ನೋಡಿ ಅಂಧಕಾರವು ಓಡಿಹೋಗುವಂತೆ ಓಡಿಹೋಗುವವು. ಅದ್ದರಿಂದ ವೀರಶೈವಾಭಿಮಾನಿಗಳು ತಮ್ಮ ತಮ್ಮ ಮಕ್ಕಳಿಗೆ ಭವಿತ್ವದೋಷ ನಿವಾರಣಾರ್ಥವಾಗಿ ಗರ್ಭದೀಕ್ಷೆಯನ್ನು ಮಾಡಿಸುವದಲ್ಲದೆ ಶಿಶುವಿಗೆ ಜ್ಞಾನೋದಯವಾದ ನಂತರ ೮ ನೇ ವರ್ಷದಲ್ಲಿ ಮಹಾದೀಕ್ಷೆಯನ್ನು ಅವಶ್ಯವಾಗಿ ಮಾಡಿಸಬೇಕೆಂಬ ಬುದ್ಧಿಯನ್ನು ವೀರಶೈವರಲ್ಲಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಉಂಟುಮಾಡಲೆಂದು ಹಾರೈಸುವ.

ಓರ್ವಮತಾಭಿಮಾನಿ.

ಇಂದೂರಿನ ಮಹಾರಾಜರವರು ತಮ್ಮ ಸಹೋದರಿಯರೊಡನೆ ನಾಲ್ಕು ವರ್ಷಗಳಿಂದ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಕಳೆದವಾರ ಬೊಂಬಾಯಿಗೆ ಬಂದು ಅಲ್ಲಿಂದ ತಮ್ಮ ರಾಜಧಾನಿಗೆ ದಯಮಾಡಿಸಿದರು. ಪ್ರಜೆಗಳು ಅತ್ಯಂತ ವೈಭವದಿಂದಲೂ ಸಂತೋಷದಿಂದಲೂ ಅವರನ್ನು ಎದುರುಗೊಂಡರು. ಮಹಾರಾಜರವರು ಪ್ರಾಪ್ತವಯಸ್ಕರಾಗಿರುವದರಿಂದ ಇಂಡಿಯಾ ಗೌವರ್ನಮೆಂಟಿನವರು ರಾಜ್ಯಭಾರವನ್ನು ಇಷ್ಟರಲ್ಲಿಯೇ ಅವರಿಗೆ ವಹಿಸುವರಾಗಿರುತ್ತಾರೆ.

ಬೆಲ್ಜಿಯಮ್ಮಿನ ರತ್ ರಾಕ್‌ವೆಲ್ ಎಂಬ 18 ವರ್ಷ ವಯಸ್ಸಿನ ತರುಣಿಯು ನ್ಯೂಯಾರ್ಕ ಪಟ್ಟಣದಲ್ಲಿ ಒಂದು ಬಾಡಿಗೆಯ ವಿಮಾನದಲ್ಲಿ ಕುಳಿತು, ವಿಮಾನವು 2000 ಅಡಿಗಳ ಎತ್ತರದಲ್ಲಿದ್ದಾಗ ಕೆಳಕ್ಕೆ ಧುಮುಕಿ ಪ್ರಾಣತ್ಯಾಗಮಾಡಿರುವಳು. ಹಾರುವದಕ್ಕೆ ಮುಂಚೆ ಅವಳು ಕ್ಷಣಕಾಲ ಧ್ಯಾನಾಸಕ್ತಳಾಗಿದ್ದಳಂತೆ! ಅವಳ ಹತ್ತಿರ "ನಾನು ನಿತ್ಯಾನಂದಕರವೂ, ಶಾಶ್ವತವೂ ಆದ ಸಂಗೀತವನ್ನು ಅಪೇಕ್ಷಿಸಿರುವೆನು. ಭಗವಂತನು ಅದನ್ನು ನನಗೆ ಕರುಣಿಸಲಿ" ಎಂದು ಬರೆದಿದ್ದ ಪತ್ರವು ದೊರಕಿರುವದಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ರೇಣುಕಜಯಂತಿ ರಜಾ (ದೀಪಾವಳಿ) ಮಹೋತ್ಸವ

ದಿಗ್ಗಾವಿ.

ದೀಪಾವಳಿ ಮಹೋತ್ಸವವು ಪ್ರತಿವರ್ಷಕ್ಕಿಂತಲೂ ಈ ವರ್ಷ ಅತ್ಯಂತ ಆನಂದದಿಂದ ಜರುಗಿಸಿದೆವು. ಏಕೆಂದರೆ? ಕಳೆದ ವರ್ಷದಲ್ಲಿ ನಮ್ಮ ಬಂಧುಗಳಾದ ಮೈಸೂರು ದೇಶದ ವೀರಶೈವರು ಅನ್ಯಮತೀಯರು ಮತಭೇದವಿಲ್ಲದೆ ಶ್ರೀ ಜಗದ್ಗುರು ರೇಣುಕರ ಜಯಂತಿ ವಿಷಯಕ್ಕಾಗಿ ಅರಿಕೆಮಾಡಿಕೊಂಡ ಪ್ರಕಾರ ಈ ವರ್ಷದ ದಸರಾಮಹೋತ್ಸವದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟು ಬಹುಮತದಿಂದ ಪಾಸಾದ ವರ್ತಮಾನವೇ ಈ ಆನಂದಕ್ಕೆ ಕಾರಣವಾಗಿದೆ. ಇಂಥಾ ಆನಂದದಾಯಕವಾದ ವರ್ತಮಾನವು ಸರ್ವರಿಗೆ ತಿಳಿಯುವುದಕ್ಕೋಸ್ಕರ ಸಭೆಯನ್ನು ಜರುಗಿಸಬೇಕೆಂದು ಭಕ್ತಾದಿಗಳು ಸದರಿ ಗ್ರಾಮದ ಬೃಹನ್ಮಠಾಧ್ಯಕ್ಷರಲ್ಲಿ ವಿಚಾರಿಸಲು ಅವರು ನಮ್ಮ ಪ್ರಾರ್ಥನೆಯನ್ನು ಅತ್ಯಾನಂದದಿಂದ ಒಪ್ಪಿಕೊಂಡರು. ಆಗ್ಗೆ ಶ್ರೀಯುತ ಶಿವಪ್ಪ ನುಂಕದ ವ ಶಂಭುಲಿಂಗಪ್ಪ ಫಕಾರ ಈ ಉಭಯರು ನಮ್ಮ ಜವಳಿಯಂಗಡಿಯಲ್ಲಿ ಜರಗುವ ಲಕ್ಷ್ಮೀಪೂಜಾ ಸಮಾರಂಭದಲ್ಲಿ ಈ ಸಂತೋಷಕೂಟವು ಜರಗುವಂತೆ ಅಭಿಪ್ರಾಯ ಪಟ್ಟ ಪ್ರಕಾರ ತಾ|| ೩೧-೧೦-೨೯ ನೇ ಗುರುವಾರ ಸಾಯಂಕಾಲ ೮|| ಘಂಟೆಗೆ ಶಾಲೆಯ ವಿದ್ಯಾರ್ಥಿಗಳು ಸರ್ವ ಭಕ್ತಾದಿಗಳೊಂದಿಗೆ ಶ್ರೀಗಳು ಸಭಾಮಂದಿರವನ್ನು ಪ್ರವೇಶಮಾಡಿದರು. ಭಜನಾ ಸಮ್ಮೇಲದ ಮಂಜುಲಗಾನವು ವಾದ್ಯಗಳ ಜಯಧ್ವನಿಯು ಪಂಚಾಚಾರ್ಯರ ಜಯಘೋಷದ ಪ್ರತಿಧ್ವನಿಯು ಎಲ್ಲರಿಗೂ ಆನಂದವನ್ನುಂಟುಮಾಡುತ್ತಿತ್ತು. ಸದರಿಯವರ ಮಂದಿರದಲ್ಲಿ ಅಲಂಕರಿಸಿದ್ದ ಉನ್ನತಾಸನವನ್ನು ಶ್ರೀಗಳವರು ಆರೋಹಣ ಮಾಡಿದರು. ಆಮೇಲೆ ಸೊಪ್ಪಿಮಠದ ವೇ|| ರೇವಣಸಿದ್ಧಶರ್ಮರವರು ಮಹಾಲಕ್ಷ್ಮೀ ಶಾರದೆಯರ ಪೂಜೆಯನ್ನು ವಿಧ್ಯುಕ್ತವಾಗಿ ಮಾಡಿಸಿದರು. ನಕ್ಷತ್ರಗಳ ಮಧ್ಯದಲ್ಲಿ ಚಂದ್ರನು ಶೋಭಾಯಮಾನವಾಗಿರುವಂತೆ ಶ್ರೀ ಜಗದಾಚಾರ್ಯರ ಬಿಂಬವು ಲಕ್ಷ್ಮೀ ಶಾರದೆಯರ ಮಧ್ಯದಲ್ಲಿ ಕಂಗೊಳಿಸುತ್ತಲಿತ್ತು. ಆಮೇಲೆ ಯಾವತ್ತರಿಗೂ ಫಲಾಹಾರ ತಾಂಬೂಲ ಸುಗಂಧಾದಿದ್ರವ್ಯಗಳು ಹಂಚಲ್ಪಟ್ಟನಂತರ ಹಿಂದೆ ದಾವಣಗೇರಿ ಮುಕ್ಕಾಮದಲ್ಲಿ ಜಗದ್ಗುರು ಶಿವಾನಂದ ರಾಜೇಂದ್ರ ಮಹಾಸ್ವಾಮಿಗಳು ಎರಡು ಚವರಾಸಿ ಬೆಳ್ಳಿಗಳ ಹುಕುಮನ್ನು ದಯಪಾಲಿಸಿದ ಪ್ರಕಾರ ಶ್ರೀಯುತ ಶರಣಪ್ಪನವರು ಶ್ರೀಗಳವರಿಗೆ ೩೬ ತೊಲೆ ತೂಕದ ಬೆಳ್ಳಿಯ ಎರಡು ಬೆಳ್ಳಿಗಳನ್ನು ಮಾಡಿಸಿ ಕಾಣಿಕೆರೂಪವಾಗಿ ಅರ್ಪಿಸಿದ ತರುವಾಯ ಸಭಾಕಾರ್ಯವು ಪ್ರಾರಂಭವಾಯಿತು. ಮಲಬೀದಶಾಲೆಯ ಅ|| ಮಾಸ್ತರಾದ ಶರಭಂಣನವರು ಶಿಕ್ಷಣದ ಅವಶ್ಯಕತೆಯ ವಿಷಯವಾಗಿ ಭಾಷಣಮಾಡಿದರು. ಆಮೇಲೆ ಆರ್. ಎಸ್. ಹೆಚ್. ಸೊಪ್ಪಿಮಠ ಇವರು ಸದ್ಯಃ ನಮ್ಮ ಮೈಸೂರು ಇಲಾಖೆಯ ವೀರಶೈವ ಬಂಧುಗಳು ಇಂಥ ಬಿಕ್ಕಟ್ಟಿನ ಕಾಲದಲ್ಲೂ ಸಾಹಸ ಮಾಡಿ ಶ್ರೀ ಜಗದ್ಗುರು ರೇಣುಕರ ಜಯಂತಿಯ ರಜಾ ಮಂಜೂರಮಾಡಿಕೊಂಡ ಪ್ರಕಾರ ನಾವಾದರೂ ನೈಜಾಂ ಪ್ರಾಂತದಲ್ಲಿ ನಮ್ಮನ್ನಾಳುವ ಮೀರ್ ಉಸ್ಮಾನಲಿ ಬಹಾದ್ದೂರ ಸರಕಾರಕ್ಕೆ ಪ್ರತಿಯೊಂದು ಹಳ್ಳಿಯಲ್ಲಿ ಅಥವಾ ದೊಡ್ಡ ದೊಡ್ಡ ಗ್ರಾಮಗಳಲ್ಲಿಯಾಗಲಿ ಸಭೆಯನ್ನು ಸೇರಿಸಿ ಅರಿಕೆ ಮಾಡಿದ್ದಾದರೆ ನಮ್ಮ ಸಂಕಲ್ಪವು ಸಾಫಲ್ಯಹೊಂದುವದೆಂದು ಮಾತನಾಡಿದರು. ಇದಕ್ಕೆ ನಮ್ಮ ಬಂಧುಗಳಾದ, ಮ|| ರಾ|| ಗಣಪತರಾವ್ ಕೇಶಕರ್ ಮತ್ತು ಹನುಮಂತರಾವ ಕುಲಕರ್ಣಿ ಈ ಉಭಯರು ಪ್ರತಿಯೊಂದು ಪ್ರಾಂತದಲ್ಲಿ ಶ್ರೀ ಶಂಕರಾಚಾರ್ಯ ಮಧ್ವಾಚಾರ್ಯ ಮತ್ತು ಮಹಮ್ಮದ ಪೈಗಂಬರ ಮೊದಲಾದವರಂತೆ ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರ ಜಯಂತಿ ಬಗ್ಗೆ ನೀವು ಪ್ರಯತ್ನಿಸಿದ್ದಾದರೆ ನಮ್ಮ ಸಮಾಜವು ಕೂಡಾ ಸಹಕರಿಸಿ ನಿಮಗೆ ಬೆಂಬಲವಾಗುವಂತೆ ಸಾಹಸಮಾಡುತ್ತೇವೆಂದು ತಮ್ಮ ಉದಾರ ತತ್ವವನ್ನು ಹೊರಗೆಡವಿದರು. ಅನ್ಯಮತೀಯರೂ ಕೂಡ ಈ ವೀರಶೈವ ಮತದ ತತ್ವಕ್ಕೆ ಸಂತೋಷಪಡುವಲ್ಲಿ ಅದೇ ವೀರಶೈವ ಮತದಲ್ಲಿ ಜನಿಸಿದ ನಮ್ಮಗಳಿಗೆ ನಮ್ಮ ಮತಾಚಾರ್ಯರಲ್ಲಿ ಎಷ್ಟು ಭಕ್ತಿಯು ಇರಬೇಕೆಂಬುದು ಸ್ಪಷ್ಟವಾಗುತ್ತದೆ. ಆಮೇಲೆ ಅಧ್ಯಕ್ಷ ಮಹಾಶಯರು, ರೇಣುಕರ ಜಯಂತಿಯ ರಜಾ ವಿಷಯಕ್ಕೆ ಒಂದೆರಡು ವರ್ಷಗಳಿಂದ ಪ್ರಯತ್ನಮಾಡಿದಕ್ಕೆ ಮೈಸೂರು ದೇಶದ ಮತೀಯರಿಗೂ ಮತ್ತು ಕರ್ನಾಟಕ ರಾಜ್ಯಾಧೀಶರೂ ಪ್ರಜಾಸಮುಪಕ್ಷಪಾತಿಗಳೂ ಆದ ಶ್ರೀ ಕೃಷ್ಣಭೂಪಾಲರವರಿಗೂ ಶ್ರೀ ಜಗದಾಚಾರ್ಯರು ಸನ್ಮಂಗಲಗಳನ್ನೀಯಲೆಂದು ಆಶೀರ್ವಾದಗಳನ್ನಿತ್ತರು. ಅನಂತರ ಮ|| ರಾ|| ಮಲ್ಲಪ್ಪಣ್ಣಾ ಸಾಂಗನೂರ ಇವರು ಮೈಸೂರು ಗೌರ್ನಮೆಂಟಿನವರು ರೇಣುಕ ಜಯಂತಿಯ ರಜವು ಪಾಸಾದ ವಿಷಯವನ್ನು ಮಂಜೂರ್ಮಾಡಿ ಬೇಗನೆ ಗೆಜಟ್ಟಿನಲ್ಲಿ ಪ್ರಸಿದ್ಧಿಸುವಂತೆ ಪ್ರಾರ್ಥಿಸಿಕೊಳ್ಳಬೇಕೆಂದು ಸೂಚಿಸಿದರು. ಸಭಿಕರು ಅನುಮೋದವನ್ನು ಕೊಟ್ಟರು. ಅದರಂತೆ ಠರಾವು ಪಾಸಮಾಡಲ್ಪಟ್ಟ ನಂತರ ಸದರಿ ಯಜಮಾನರು ಪ್ರಭಾಪೋಷಣಕ್ಕೋಸ್ಕರ ೧ ರೂಪಾಯಿ ಅರ್ಪಿಸಲು ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಪೇಟೆಯ ಮುಖ್ಯ ಪುಢಾರಿಗಳಾದ ಶರಣಸಿದ್ಧಪ್ಪನವರು ಪೋಲೀಸ್ ಪಾಟೀಲ ಶಿವಪ್ಪಗೌಡರು ರಾಚಪ್ಪಾ ನಂದ್ಯಾಳ ಶರಣಪ್ಪ ಮತ್ತು ಗುತ್ತಪ್ಪಾ ಸಂಗಪ್ಪಾ ಶಿವಪ್ಪಾ ಗಾಣಿಗೇರ ಇವರುಗಳು ತಮ್ಮ ದುಕಾನಗಳಿಗೆ ಶ್ರೀಗಳನ್ನು ಬರಮಾಡಿಕೊಂಡು ಆಶೀರ್ವಾದವಂ ಪಡೆದರು.

ಓರ್ವ ಉತ್ಸವಭಾಗಿ.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂತು.

ಸಂಸ್ಕೃತ ವೈದಿಕಪಾಠಶಾಲಾ ಸ್ಥಾಪನೆ.

ಬಳ್ಳಾರಿ ಡಿ|| ಹುವ್ವಿನ ಹಡಗಲಿ ತಾಲೂಕು (ಹಿರೇಹಡಗಲಿ ಬಗತು) ಮಾಸಹಳ್ಳಿ ಪುರವರ್ಗಮಠದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಮಳೇಸ್ವಾಮಿಗಳವರು ಈ ಪ್ರಾಂತದ ಮಾಹೇಶ್ವರವಟುಗಳು ವಿದ್ಯಾವಂತರಾಗಿ ಸಮಾಜ ಸುಧಾರಣ ಕಾರ್ಯಸಮರ್ಥರಾಗಲೆಂಬ ಸದುದ್ದೇಶದಿಂದ ಒಂದುಪಾಠಶಾಲೆಯನ್ನು ಸ್ಥಾಪಿಸಬೇಕೆಂದಾಲೋಚಿಸಿ, ಈ ವಿಷಯದಲ್ಲಿ ಜನರಲ್ ಕಮಿಟಿಯನ್ನು ಕೂಡಿಸಲು ಗ್ರಾಮಾನುಗ್ರಾಮಗಳ ಪ್ರಮುಖರಿಗೂ ಪ್ರಮುಖರಿಗೂ ಹಾಗೂ ಸಭ್ಯ ಗೃಹಸ್ಥರಿಗೂ ಸೂಚನಾಪತ್ರಿಕೆಗಳು ಕಳುಹಿಸಲ್ಪಟ್ಟವು. ಜನರಲ್ ಕಮಿಟಿ ಮೆಂಬರುಗಳ ಹೆಸರುಗಳನ್ನು ಜಾಹೀರಾತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಆ ಪ್ರಕಾರ ಈ ಶುಕ್ಲನಾಮ ಸಂ|| ರದ ಕಾರ್ತಿಕ ಶು|| ನವಮಿ (ತಾ|| 10-11-1929) ಉದಯ ಶುಭಮುಹೂರ್ತದಲ್ಲಿ ತಮ್ಮ ಮಠದಲ್ಲಿ ಕೂಡಿದ ಮೆಂಬರುಗಳ ಸಮ್ಮತಿಯಿಂದ ಪಾಠಶಾಲಾ ಸ್ಥಾಪನಮಾಡಿ, ಗಜಾನನ ಶಾರದಾ ಪೂಜಾದಿಗಳಾದನಂತರ "ಶ್ರೀ ಪಂಚಾಚಾರ್ಯ ಸಂಸ್ಕೃತ ವೈದಿಕ ಪಾಠಶಾಲಾ" ಎಂಬ ನಾಮಕರಣವು ಮಾಡಲ್ಪಟ್ಟಿತು. ತರುವಾಯ ಈ ಪಾಠಶಾಲಾಭಿವೃದ್ಧಿಯ ಕಾರ್ಯದಲ್ಲಿ ಸದರಿ ಶ್ರೀ ಪಟ್ಟದ ಮಳೇಸ್ವಾಮಿಗಳವರು ಪಾಠಶಾಲಾಧ್ಯಕ್ಷರಾಗಿರುವದೆಂತಲೂ, ಪಾಠಶಾಲಾಧ್ಯಾಪಕತ್ವಕ್ಕೆ ವೇ|| ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳವರು ಇರತಕ್ಕದ್ದೆಂತಲೂ ಮತ್ತು ಈ ಕೆಳಗೆ ಕಾಣಿಸಿದವರು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿರತಕ್ಕದ್ದೆಂತಲೂ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪ್ರೆಸಿಡೆಂಟರು—ಗುರುಪಾದದೇವರ ಮಠದ ಶ್ರೀ ಹಾಲಸ್ವಾಮಿಗಳು.

ವೈಸ್‌ಪ್ರೆಸಿಡೆಂಟರು—ಮೈಲಾರದ ಕೋಟಿ ಭರಮಲಿಂಗಪ್ಪನವರು.

ಸೆಕ್ರೆಟರಿ—ಮಾ|| ಪುರವರ್ಗಮಠದ ಪಾ|| ಶಿವರುದ್ರಗೌಡರು.

ಮೆಂಬರುಗಳು—1. ಮಾಸಹಳ್ಳಿ ಪಾ|| ಗುರುಸಿದ್ಧಗೌಡ್ರು, 2. ಹಡಗಲಿ ಗುಗ್ರಿ ಹುಚ್ಚಪ್ಪನವರು. 3. ಅಲೂರು ಚೆನ್ನಪ್ಪ 4. ಮಾಗಳದ ಪಾ|| ವಿರುಪನಗೌಡ್ರು. 5. ಬೂದನೂರು ಪಾ|| ವೀರಭದ್ರಗೌಡ್ರು. 6. ಮೇಕಲವಾಡದ ಗಡಗಿನ ಶಾಂತವೀರಪ್ಪನವರು. 7. ಶಕ್ತಿಬೆನ್ನೂರು ನೀಲಗುಂದ ಕೇಳಪ್ಪ.

ಈ ಪ್ರಕಾರ ಚುನಾವಣೆಯಾಗಿ ನಿರ್ಣಯ ಮಾಡಲ್ಪಟ್ಟ ಬಳಿಕ ಈ ಪಾಠಶಾಲೆಯಲ್ಲಿ ಅಭ್ಯಾಸಮಾಡಲು ಬರುವ ವಿದ್ಯಾರ್ಥಿಗಳ ಬಗ್ಗೆ ನಿಬಂಧನೆಗಳನ್ನು ಮತ್ತು ಕಾರ್ಯನಿರ್ವಾಹಕ ಮಂಡಲಿಯ ಹಾಗೂ ಪಾಠಶಾಲಾ ವಿಷಯದಲ್ಲಿ ರೂಲುಗಳನ್ನು ನಿರ್ಣಯಿಸಿ ಈ ಪಾಠಶಾಲೆಯು ಚಿರಕಾಲ ಅವಿಚ್ಛಿನ್ನವಾಗಿ ಜರಗುವದಕ್ಕೆ ಪ್ರತಿಯೊಬ್ಬ ವೀರಶೈವನೂ ಮೆಂಬರುಗಳೂ ಧನಧಾನ್ಯಗಳನ್ನು ಸಹಾಯಮಾಡುತ್ತಾ ಉತ್ತರೋತ್ತರಾಭಿವೃದ್ಧಿಯನ್ನು ಹೊಂದುವಂತೆ ಪ್ರಯತ್ನ ಮಾಡತಕ್ಕದ್ದೆಂತಲೂ, ಇಂಥ ಮಾಹೇಶ್ವರ ವಟುಗಳ ಸುಧಾರಣೆಯ ಕಾರ್ಯಕ್ಕೆ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ಅತ್ಯಗತ್ಯವಾಗಿ ಪ್ರೋತ್ಸಾಹಕೊಟ್ಟು ಸಮಾಜಸುಧಾರಣೆ ಮತ್ತು ಅಭಿವೃದ್ಧಿಗೆ ತರುವದಕ್ಕೆ ಸದರಿ ಶ್ರೀಗಳವರ ಸನ್ನಿಧಿಗೆ (ರಿಪೋರ್ಟುದ್ವಾರಾ) ಬಿನ್ನೈಸಿಕೊಳ್ಳತಕ್ಕದ್ದೆಂತಲೂ ತೀರ್ಮಾನಿಸಿ ಮಂಗಲ ಫಲಾಶೀರ್ವಾದಗಳು ಜರಗಿದನಂತರ ಜಯಜಯಧ್ವನಿಯಿಂದ ಸಭಾಮುಕ್ತಾಯವಾಯಿತು.

(ಪ್ರತ್ಯಕ್ಷದರ್ಶಿ)
ಪರಜ್ಜಿ ಸಕ್ರಪ್ಪ, ಹಿರೇಹಡಗಲಿ.

ನೂತನ ಸ್ಕೂಲ್ ಕಟ್ಟಡದ ಪ್ರವೇಶೋತ್ಸವ

ಅರಸೀಕೆರೆ, ಪಾವಗಡ ತಾಲೂಕು.

ಈ ಗ್ರಾಮದಲ್ಲಿ ಅನೇಕವರ್ಷಗಳಿಂದಲೂ ಸ್ಕೂಲ್ ಇದ್ದರೂ ಅದಕ್ಕಾಗಿ ಪ್ರತ್ಯೇಕವಾದ ಕಟ್ಟಡವಿಲ್ಲದೆ ಗುಡಿಗೋಪುರ ಮತ್ತು ಹಳೇ ಮಂಟಪಗಳಲ್ಲಿ ಸ್ಕೂಲನ್ನು ಮಾಡುತ್ತಾ ಬಾಲಕಬಾಲಕಿಯರು, ಮತ್ತು ಉಪಾಧ್ಯಾಯರುಗಳು, ಬಹು ತೊಂದರೆಯನ್ನನುಭವಿಸುತ್ತಿದ್ದರು. ಈ ಗ್ರಾಮದ ಪ್ರಜೆಗಳ ಅದೃಷ್ಟವಶಾತ್ ಈಗ ಎರಡೂವರೆ ವರ್ಷಗಳ ಹಿಂದೆ, ಇಲ್ಲಿಗೆ ಹೆಡ್ಮಾಸ್ಟರಾಗಿ ಬಂದು, ವಿದ್ಯಾಭಿವೃದ್ಧಿಗಾಗಿಯೇ ತಮ್ಮ ತನು ಮನ ಧನಗಳನ್ನು ಸಮರ್ಪಿಸಿ ಶ್ರದ್ಧೆಯಿಂದ ಕೆಲಸಮಾಡುತ್ತಿರುವ ಮ|| ರಾ|| ಕೆ. ಭೀಮರಾಯರು ಸಕಲ ಜನಗಳನ್ನು ಪ್ರೋತ್ಸಾಹಿಸಿ ಧನಸಹಕಾರದವರಲ್ಲಿ ಹಾಗೂ ವಿದ್ಯಾಭ್ಯಾಸದ ಇಲಾಖೆಯವರಲ್ಲಿ

...ಳದೇಶದ ವೃತ್ತಾಂತಗಳು.

...ಮೈಸೂರು ನ್ಯಾಯವಿಧಾಯಕಸಭೆಯ ಅಧಿವೇಶ... ಬೆಂಗಳೂರು ಅಠಾರಾಕಛೇರಿಯ ಸಭಾಮಂದಿರ... ಡಿಸೆಂಬರ್ 18 ನೆಯ ತಾರೀಖು ಬುಧವಾರ ...ಹ್ನ 12 ಘಂಟೆಗೆ ಪ್ರಾರಂಭವಾಗುವದು.

...ಮಂಗಲಾವನಗರದ ಮೈಸರ್ ಮಹಾರಾಜರವರು ಅವ... ಮ|| ರ್ವಾರಾದ ಸರ್ ಪ್ರಭುಶಂಕರ ಪಟ್ಟಣಿಯವ... ರವರೊಳ್ಳನೆ ಮೈಸೂರು ಸಂಸ್ಥಾನದಲ್ಲಿ ಸಂಚಾರಮಾಡಿ... ...ಡು ಹೋಗುವದಕ್ಕೋಸ್ಕರ ಇಷ್ಟರಲ್ಲಿಯೇ ದಯ... ...ಸುವರೆಂದು ವರ್ತಮಾನವಿದೆ.

...ಕೀಯಾರಾವುರದ ಕೆಡ್ಡಾ ಕ್ಯಾಂಪಿಗೆ ದಯಮಾಡಿಸಿ... ಹಿಂದುಸ್ಥಾನದ ಸರ್ವಸೇನಾಧಿಪತಿಯಾದ ಸರ್ ...ಯಂ ಬರ್ಡ್‌ವುಡ್‌ರವರು ನಾಳೆಯ ದಿನ ಅಲ್ಲಿಂದ ...ರುಗಿ ರಾಜಧಾನಿಗೆ ಬಂದು ಮಧ್ಯಾಹ್ನ ಇಲ್ಲಿಂದ ...ಗಾಡಿಯಲ್ಲಿ ಮದರಾಸಿಗೆ ಪ್ರಯಾಣಮಾಡು... ...ನು ತಿಳಿದುಬರುತ್ತದೆ.

...ಸ್‌ರಾಯರವರ ಆಗಮನಾರ್ಥವಾಗಿ ಕಾರಾ... ...ಲ್ಲಿ ನಡೆಯುತ್ತಿರುವ ಆನೆಗಳ ಶಿಕಾರಿಯನ್ನು ...ತುವದಕ್ಕೋಸ್ಕರ ಜೋಧಪುರದ ಮಹಾರಾಜ... ...ವರ ಸಹೋದರರೂ ಹಾಗೂ ಕಾಶೀ ಮಹಾ... ...ವರ ಪುತ್ರರೂ ಸಹ ನಮ್ಮ ಮಹಾರಾಜರವರ ...ನಗಳಾಗಿ ದಯಮಾಡಿಸಿರುವರೆಂದು ಕೇಳುತ್ತೇವೆ.

...ಟೂರಿನಲ್ಲಿರುವ ಮ|| ರಾ|| ಜಿ. ತಮ್ಮಯ್ಯನವರ ...ಪಿ. ಸಿದ್ಧಲಿಂಗದೇವರು ಹಾಗೂ ಬೀರೂರು ...ಸ್ಸರಿಗ ಮರುಳಪ್ಪನವರು ಈ ಉಭಯರು ಕಳೆದ ...ಬರ್ ತಿಂಗಳಲ್ಲಿ ನೆರವೇರಿದ ಮದ್ರಾಸ್ ವಿಶ್ವವಿ... ...ದ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂ... ...ರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ.

...ಳ್ಳೇಗಾಲ ತಾಲೂಕಿಗೆ ಸೇರಿದ ಪರ್ವತಶ್ರೇಣಿ ...ಪ್ರಕಾಶಿಸುತ್ತಿರುವ ಶ್ರೀಮಾದೇಶ್ವರಸ್ವಾಮಿಯ... ...ಗಿ ಶ್ರೀಮನ್ ಮಹಾರಾಜರವರು 22,000 ...ಲೆ ಬಾಳುವ ಅತ್ಯಂತ ಸುಂದರವಾದ ಸುವರ್ಣ... ...ಂದನ್ನು ಸಮರ್ಪಿಸಿರುವರು. ಆ ವಿಗ್ರಹದ ...ಗಳು ರಾಜಧಾನಿಯ ಸಯ್ಯಾಜಿರಾವ್ ರೋ... ...ನ (ಬಾಂಬೆ ಆರ್ಟ್ ಸ್ಟುಡಿಯೊ) ಫೋಟೋ... ಮ|| ಎಂ. ವೀರಪ್ಪನವರಲ್ಲಿ ದೊರೆಯುತ್ತವೆ.

...ಸೂರು ಮುನಿಸಿಪಲ್ ಪ್ರೆಸಿಡೆಂಟರ ಸ್ಥಾನಕ್ಕೆ ...ಡ್ಡುರ್ ಅಬ್ಬಾಸ್‌ಖಾನರವರು ರಾಜೀ... ...ನ್ನು ಕೊಟ್ಟ ಮೇಲೆ, ಗೌರ್ನಮೆಂಟಿನವರು ...ಸಿಡೆಂಟರನ್ನು ತಾವೇ ಚುನಾಯಿಸಿದ್ದರು. ...ಮಹಾಜನರು ಸರಕಾರಕ್ಕೆ ಅನೇಕಸಾರೆ ...ಕೊಂಡ ಮೇಲೆ ಮೊದಲಿನಂತೆ ತಮ್ಮಲ್ಲಿಯೇ ...ಡೆಂಟರನ್ನು ಚುನಾಯಿಸಿಕೊಳ್ಳಬಹುದೆಂದು ...ರು ಅಪ್ಪಣೆಮಾಡಿರುತ್ತಾರೆ.

...ರಿನಲ್ಲಿ ನಡೆದ ಎರಡನೆಯ ಗಲಭೆಯು ಸಂ... ...ರಕಾರದವರು ದರೋಡೆ, ಸುಲಿಗೆ ಮೊದ... ...ದನೆಯನ್ನು ಮಾಡಿ 94 ಜನರ ಮೇಲೆ ...ಮೊಕದ್ದಮೆಯು ನ್ಯಾಯವಾದುದಲ್ಲವೆಂ... ವಜಾಮಾಡಬೇಕೆಂದೂ ಆಪಾದಿತರ ...ಕೀಲರು ಚೀಫ್‌ಕೋರ್ಟಿನಲ್ಲಿ ಅಪೀಲ್ ಚೀಫ್ ಜಡ್ಜಿಯವರಾದ ಮ|| ಶ್ರೀನಿ... ...ನರು ವಿಚಾರಣೆ ನಡೆಯಿಸಿ ಮೊಕದ್ದಮೆ ...ರ್ಣವಾಗಿ ವಜಾಮಾಡಲು ಕಾರಣ ...ಮೊಕದ್ದಮೆಯಲ್ಲಿ ಕಂಡುಬರುವ ಕೆಲವು ...ಗಳನ್ನು ಮಾತ್ರ ಸರಿಪಡಿಸಬಹುದೆಂದೂ ...ಹೇಳಿರುವರು.

...ಥಪುರದ ಹತ್ತಿರ ಒಂದು ಜಮೀನಿನ ...ಯ್ಯುವ ವಿಷಯದಲ್ಲಿ ಕೆಲವು ದಿವಸಗಳ ...ಜನರಿಗೆ ಹೊಡೆದಾಟವಾಗಿ, ಪೋಲೀ... 27 ಜನರನ್ನು ದಸ್ತಗಿರಿಮಾಡಿ ಮೈಸೂ... ...ಮ್ಯಾಜಿಸ್ಟ್ರೇಟರಾದ ಮಿ|| ಎಂ. ಶೇಷಾ... ...ಕೋರ್ಟಿನಲ್ಲಿ ಮೊಕದ್ದಮೆಯನ್ನು ಮಾಡಿ ...ಮ್ಯಾಜಿಸ್ಟ್ರೇಟರು 3-4 ವಾರಗಳ ವರೆಗೆ ನಡೆಯಿಸಿ, ಕಳೆದ ಸೋಮವಾರ

ಅಪರಾಧಿಗಳ ಪೈಕಿ 15 ಜನರನ್ನು ಬಿಡುಗಡೆಮಾಡಿ, ಇತರ 12 ಜನರಿಗೆ ಆರಾರು ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು. ಈಚೆಗೆ ಅಪರಾಧಿಗಳು ಅಪೀಲ್‌ಮಾಡಿದ್ದರಿಂದ ಡಿಸ್ಟ್ರಿಕ್ಟ್ ಜಡ್ಜರು ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

ಪ್ರೋಗ್ರಾಂ ನಿಶ್ಚಯವಾಗಿದ್ದಂತೆ ವೈಸ್ರಾಯರು ಮೊನ್ನೆ 23 ನೇ ಶನಿವಾರ ಪ್ರಾತಃಕಾಲ 8. 20ಕ್ಕೆ ಸ್ಪೆಷಲ್ ಟ್ರೈನಿನಿಂದ ಮೈಸೂರನ್ನು ತಲಪಿದರು. ಶ್ರೀಮನ್ಮಹಾರಾಜರವರು ಯುವರಾಜರು ಮತ್ತು ಇತರ ಬಂಧುಗಳೊಡನೆ ಸ್ಟೇಷನ್ನಿಗೆ ದಯಮಾಡಿಸಿದ್ದು, ವೈಸ್ರಾಯರನ್ನು ಎದುಗೊಂಡನಂತರ 8-30 ಕ್ಕೆ ಎಲ್ಲರೂ ಸ್ಟೇಷನ್ನಿನಿಂದ ಹೊರಟರು. ಈ ಸಾರೆ ವೈಸ್ರಾಯರವರು ಪ್ರೈವೇಟಾಗಿ ಬಂದಿರುವದರಿಂದ ಚತುರಂಗಬಲವು ಅವರನ್ನು ಎದುರ್ಗೊಳ್ಳಲು ಹೋಗಿರಲಿಲ್ಲ. ಮಹಾರಾಜರವರು ಹಾಗೂ ವೈಸ್ರಾಯರವರು ಒಂದೇ ಮೋಟಾರಿನಲ್ಲಿ ಹೊರಟರು. ಮಾರ್ಗದ ಎರಡು ಪಕ್ಕಗಳಲ್ಲಿಯೂ ಜನರು ಕಿಕ್ಕಿರಿದು ನಿಂತು ಜಯಘೋಷವನ್ನು ಮಾಡುತ್ತಿದ್ದರು. ವೈಸ್ರಾಯರು ಸ್ವಲ್ಪಹೊತ್ತು ನ್ಯೂಗೆಸ್ಟ್ ಮ್ಯಾನ್ಷನ್ನಿನಲ್ಲಿ ವಿಶ್ರಮಿಸಿ ಭೋಜನಾದಿಗಳನ್ನು ತೀರಿಸಿಕೊಂಡು 11-30 ಕ್ಕೆ ಶ್ರೀಮನ್ಮಹಾರಾಜರು ಮತ್ತು ತಮ್ಮ ಇತರ ಪರಿವಾರದೊಡನೆ ಕಾರಾಪುರಕ್ಕೆ ತೆರಳಿದರು. ವೈಸ್ರಾಯರೊಡನೆ ಅವರ ಪತ್ನಿಯವರು, ಪ್ರೈವೆಟ್ ಸೆಕ್ರೆಟರಿಗಳು, ಹಿಂದುಸ್ಥಾನದ ಸರ್ವಸೇನಾಧೀಶರು ಇನ್ನೂ ಕೆಲವು ಅಧಿಕಾರಿಗಳು ದಯಮಾಡಿಸಿರುತ್ತಾರೆ.

ವರ್ತಮಾನಸಂಗ್ರಹ.

ಇರಾಣದ ಮಂತ್ರಿಶ್ರೇಷ್ಠರಾದ ಸರ್. ಅಬ್ದುಲ್ ಮುಸ್ಲಿಸರು ಆತ್ಮಹತ್ಯಮಾಡಿಕೊಂಡಿರುವರಂತೆ!

ರಸ್ತೆಯಲ್ಲಿಯ ಮತ್ತು ಹೊರಗಿನ ಯಾವ ಶಬ್ದವೂ ಒಳಗೆ ಕೇಳದೆ ಇರುವ ಹೋಟೆಲ್ಲು ಲಂಡನ್ನಿನಲ್ಲಿ ಸ್ಥಾಪಿಸಲ್ಪಡತಕ್ಕದ್ದಿದೆ.

ಈ ಸಲದ ಐ. ಸಿ. ಎಸ್. ಪರೀಕ್ಷೆಗೆ 175 ಜನ ಭಾರತೀಯರು ಹೋಗಿದ್ದು ಅವರಲ್ಲಿ 12 ಜನರು ಮಾತ್ರ ಉತ್ತೀರ್ಣರಾಗಿರುತ್ತಾರೆ.

ಮುಂಬಾಯಿ ಪ್ರಾಂತದಲ್ಲಿ ಪ್ಲೇಗಿನ ಹಾವಳಿಯು ಪ್ರಬಲವಾಗಿರುವುದು. ಅಕ್ಟೋಬರ ಕೊನೆಯವಾರದಲ್ಲಿ 800 ಕ್ಕಿಂತಲೂ ಹೆಚ್ಚು ಜನರು ಮೃತಪಟ್ಟಿರುವರು.

ಪ್ರಪಂಚದಲ್ಲೆಲ್ಲ ಅತಿ ಎತ್ತರವಾದ ಗೋಪುರವು ಫ್ರಾನ್ಸಿನಲ್ಲಿರುವ ಈಫಿಲ್‌ಟವರ್ ಎಂಬುದು. ಇದು ೯೮೪ ಅಡಿ ಎತ್ತರವಾಗಿದೆ. ಅಂದರೆ ಹಿಂದುಸ್ಥಾನದಲ್ಲಿರುವ ಕುತುಬ್ ಮಿನಾರಿನ ನಾಲ್ಕರಷ್ಟು ಎತ್ತರವಾಗಿದೆ.

ಅಮೇರಿಕೆಯಲ್ಲಿ ಎಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್ ಎಂಬ ಒಂದು ದೊಡ್ಡ ಉದ್ಯಾನವಿದೆ. ಇದು 3350 ಚದರ ಮೈಲು ವಿಸ್ತಾರವುಳ್ಳದ್ದಾಗಿರುತ್ತದೆ. ಪ್ರಪಂಚದಲ್ಲಿರುವ ಉದ್ಯಾನವನಗಳಲ್ಲೆಲ್ಲ ಇದೇ ದೊಡ್ಡದು.

ಮದರಾಸಿನ ಟ್ರಿಪ್ಲಿಕೇನಿನಲ್ಲಿ ವಾಸಮಾಡುತ್ತಿದ್ದ ಅಂಬಿಗರ ಜೋಪಡಿಗಳಿಗೆ ಕಳೆದವಾರ ಬೆಂಕಿಹತ್ತಿ ಮಹಾನರ್ಥವನ್ನುಂಟುಮಾಡಿತು. ಪ್ರಾಣನಷ್ಟವೇನೂ ಆಗಲಿಲ್ಲವಾದರೂ ನೂರಾರು ಜೋಪಡಿಗಳು ಉರಿದುಹೋದವು.

ಕಳೆದ ಒಂದು ವರ್ಷದಲ್ಲೇ ಹಿಂದೂದೇಶದಿಂದ 4,00,00,000 ರೂ. ಗಳನ್ನು ಇಂಗ್ಲೆಂಡಿಗೆ ಪೆನ್ಷನ್ ರೂಪದಲ್ಲಿ ತೆರಲಾಗಿದೆಯೆಂದೂ, ಇದರಲ್ಲಿ ಶೇಕಡ 60 ರಷ್ಟು ನಿವೃತ್ತ ಸೇನಾಧಿಕಾರಿಗಳ ಪೆನ್ಸನ್ನಾಗಿರುವುದೆಂದೂ ತಿಳಿದುಬರುತ್ತದೆ.

ವೈಸರಾಯರು ಮಡಕೇರಿಗೆ ಬಂದಾಗ ಮಂಗಳೂರು ಡಿ|| ಬೋರ್ಡಿನವರು ಅವರನ್ನು ಕಂಡು ಮುಂಬಯಿಯಿಂದ ಮಲಬಾರಿಗೆ ಸಮುದ್ರತೀರದಲ್ಲಿ ರಸ್ತೆಯನ್ನೂ, ಹಾಸನದಿಂದ ಮಂಗಳೂರಿಗೆ ರೈಲನ್ನೂ ಬೇಗ ಹಾಕಿಸಬೇಕೆಂದು ಪ್ರಾರ್ಥಿಸುವವರಿದ್ದಾರೆ.

ತಿರುವಾಂಕೂರಿನ ಒಂದು ಶಾಲೆಯ ಅಧ್ಯಾಪಕರಿಗೆ ಒಬ್ಬ ವಿದ್ಯಾರ್ಥಿಯು ಎದುರು ಮಾತನಾಡಿದನೆಂದು, ಆ ಅಧ್ಯಾಪಕರು ಇತರ ಹುಡುಗರು ಯಾರೂ ಇಲ್ಲದಿರುವಾಗ ಆ ವಿದ್ಯಾರ್ಥಿಯ ಕೊಠಡಿಗೆ ಹೋಗಿ ಜಗಳವಾಡಿ ಅವನನ್ನು ತಿವಿದು ಕೊಂದಿರುವರು.

ಅಮೇರಿಕೆಯ ಹೆನ್ರಿಫೋರ್ಡ್ ಮೋಟಾರ್ ಕಾರ್ಖಾನೆಯಲ್ಲಿ ಅಕ್ಟೋಬರ ತಿಂಗಳಲ್ಲಿ 175,000 ಪ್ಯಾಸೆಂಜರ್ ಕಾರುಗಳು ತಯಾರಾಗಿವೆ. ಫೋರ್ಡರು ತಮ್ಮ ಕಾರ್ಖಾನೆಯ ಕೂಲಿಗಾರರ ಸಂಬಳವನ್ನು ತಗ್ಗಿಸದೆ ವಾರಕ್ಕೆ 5 ದಿವಸ ಮಾತ್ರ ಕೆಲಸಮಾಡಿಸುವರು.

ಹಿಂದುಸ್ಥಾನದ ಮುಂದಾಳುಗಳು ವೈಸ್ರಾಯರವರ ಪ್ರಸಿದ್ಧಪತ್ರಿಕೆಗೆ ತಮ್ಮ ಸಮ್ಮತಿಯನ್ನಿತ್ತು ಅದರಂತೆ ಕಾರ್ಯಕ್ರಮಗಳನ್ನು ನಡೆಯಿಸಲು ಸಹಕರಿಸುವದಾಗಿ ಒಪ್ಪಬಾರದಾಗಿತ್ತೆಂದು ಲಂಡನ್ ಕಾಂಗ್ರೆಸ್ ಬ್ರಾಂಚಿನ ಮೆಂಬರರು ಸಭೆಸೇರಿ ತೀರ್ಮಾನಿಸಿರುವರು.

ಹೌರಾ ಜಿಲ್ಲೆಯ ಶಾಂಪುರಹಳ್ಳಿಯಲ್ಲಿ ಕೃತಕ ನಾಣ್ಯಗಳನ್ನೂ ನೋಟುಗಳನ್ನೂ ಮಾಡಿ ಚಲಾವಣೆಮಾಡುತ್ತಿದ್ದ ಪರೀಕ್ಷಕಮಹಾಪಾತ್ರನೆಂಬುವನನ್ನೂ ಅವನ ನಾಲ್ವರು ಅನುಯಾಯಿಗಳನ್ನೂ ಸೆರೆಹಿಡಿದಿರುವರು. ಕೆಲವು ಪಡಿಯಚ್ಚುಗಳೂ ಬ್ಲಾಕುಗಳೂ ದೊರಕಿರುವವು.

ಬ್ರಿಟಿಷ್ ಗವರ್ನಮೆಂಟಿನ ಪರರಾಜ್ಯಗಳ ಸೆಕ್ರೆಟರಿಯವರಾದ ಮಿ|| ಆರ್ಥರ್‌ಹೆಂಡರ್‌ಸನ್‌ರವರು ನಾದಿರ್ ಖಾನರನ್ನು ಅಫ್ಘಾನಿಸ್ಥಾನದ ಅಮೀರರನ್ನಾಗಿ ಅಂಗೀಕರಿಸಿ ಅದರಂತೆ ಅವರಿಗೆ ತಂತೀವರ್ತಮಾನವನ್ನು ಕೊಟ್ಟಿರುತ್ತಾರೆ. ಹಿಂದಿನಂತೆ ಇನ್ನು ಮುಂದೆಯೂ ಅಫ್ಘಾನಿಸ್ಥಾನಕ್ಕೂ ಗ್ರೇಟಬ್ರಿಟನ್ನಿಗೂ ಅನ್ಯೋನ್ಯ ಸ್ನೇಹಭಾವವು ನಡೆಯಲೆಂದು ಹಾರೈಸಿರುವರು.

ಜರ್ಮನಿಯ ರೈಲ್ವೆ ಇಂಜಿನ್ ಡ್ರೈವರನೊಬ್ಬನು ಸಂಜ್ಞೆಯ ಬಾವುಟವನ್ನು ಸರಿಯಾಗಿ ನೋಡದೆ ಗಾಡಿಯನ್ನು ಮುಂದಕ್ಕೆ ಬಿಟ್ಟಿದ್ದರಿಂದ ರೈಲು ಕಂಬಿಯಿಂದ ಕೆಳಕ್ಕುರುಳಿ ಕೆಲವರಿಗೆ ತುಂಬಾ ಗಾಯಗಳಾದುವು. ನಾಲ್ಕು ಜನರು ಮೃತಪಟ್ಟರು. ಡ್ರೈವರನು ತನ್ನ ಅಪರಾಧದ ಪ್ರಾಯಶ್ಚಿತ್ತಕ್ಕೆಂದು ಕೂಡಲೆ ಹತ್ತಿರದಲ್ಲಿದ್ದ ಒಂದು ಮರಕ್ಕೆ ನೇಣುಹಾಕಿಕೊಂಡು ಪ್ರಾಣಬಿಟ್ಟನು.

ಹುಬ್ಬಳ್ಳಿಯಲ್ಲಿ ಒಬ್ಬನು ಅರಳೆಯನ್ನೂ ಚಿಂದಿಯ ಬಟ್ಟೆಯನ್ನೂ ಮೈಗೆ ಸುತ್ತಿ ಬಾಲವನ್ನು ಕಟ್ಟಿಕೊಂಡು ಹನುಮಂತನ ವೇಷವನ್ನು ಧರಿಸಿ ಕುಣಿಯುತ್ತ ಲಂಕಾದಹನದ ರೀತಿಯನ್ನು ತೋರಿಸಬೇಕೆಂದೆಣಿಸಿ ಬಾಲಕ್ಕೆ ಬೆಂಕಿಯನ್ನು ಹತ್ತಿಸಿಕೊಂಡನು. ಅಕಸ್ಮಾತ್ ಬೆಂಕಿಯು ಮೈಗೆ ತಗುಲಿ ಅದನ್ನು ನೊಂದಿಸಲಾಗದೆ ಲಂಕಾದಹನದ ಬದಲು ಶರೀರದಹನಮಾಡಿಕೊಂಡನಂತೆ! ವಿಚಿತ್ರವೇಷ!

ಇಂಗ್ಲೆಂಡಿನ ಬಟ್ಟೆಯ ವ್ಯಾಪಾರಸ್ಥಿತಿಯು ತೀರ ವಿಷಮಾವಸ್ಥೆಗೆ ಬಂದಿರುವದು. 1913 ರಲ್ಲಿ 707 ಕೋಟಿ ಗಜ ಬಟ್ಟೆಯು ಪರದೇಶಗಳಿಗೆ ರವಾನೆಯಾಗಿರುತ್ತದೆ. 1926 ರಲ್ಲಿ 392 ಕೋಟಿ ಗಜ ಮಾತ್ರ ರವಾನೆಯಾಗಿದೆ. 1927 ರಲ್ಲಿ 418 ಕೋಟಿ ಗಜ ಬಟ್ಟೆಯು ರವಾನೆಯಾಗಿ, 1928 ರಲ್ಲಿ 316 ಕೋಟಿಗೆ ಇಳಿದುಹೋಗಿದೆ; ಪ್ರಪಂಚದಲ್ಲಿ ಎಲ್ಲರೂ ಬತ್ತಲೆ ತಿರುಗುತ್ತಿರುವರೋ ಹೇಗೆ? ಎಂದು ಇಂಗ್ಲೆಂಡಿನವರು ಆಶ್ಚರ್ಯಪಡುವರಂತೆ!

ಮಲಬಾರಿನ ದಾಮೋದರಕೇಟರ್ ಎಂಬ ಹತ್ತು ವರ್ಷದ ಹುಡುಗನ ನಡತೆಯು ಅತ್ಯಂತ ವಿಚಿತ್ರವೂ ಆಶ್ಚರ್ಯಕರವೂ ಆಗಿರುವದು. ಕೈಯಲ್ಲಿರುವ ಆಟದ ಮತ್ತು ತಿಂಡಿಯ ಪದಾರ್ಥಗಳು ಇದ್ದಕ್ಕಿದ್ದ ಹಾಗೆಯೇ ಮಾಯವಾಗುವದು, ಯಾರೆಷ್ಟು ಸಾಹಸಪಟ್ಟು ತಡೆದರೂ ಬಿಡದೆ. ಯಾರೋ ಅಗೋಚರರು ಬಲಾತ್ಕಾರವಾಗಿ ಅವನ ಕೈಯಿಂದ ಸಾಮಾನುಗಳನ್ನು ಎಳೆದುಕೊಂಡು ಹೋಗುವದು. ಒಡೆದ ಕನ್ನಡಿಗಳು ಮತ್ತು ಸೀಸೆಗಳು ಹೆತ್ತಲಿನ ಬಂದು ಬೀಳುವದು. ಇವೇ ಮೊದಲಾಗಿ ಅವನ ವಿಷಯದಲ್ಲಿ ಅನೇಕ ವಿಚಿತ್ರ ವರ್ತಮಾನಗಳು ಪ್ರಕಟವಾಗುತ್ತಿರುವವು. ಕೊಠಡಿಯಿಂದ ಕೊಠಡಿಗೆ ಹೋದರೆ ಕಲ್ಲಿನ ಏಟು ಬೀಳುವದಂತೆ! ಆದರೆ ಅವನಿಗೆ ಏನೂ ಅಪಾಯವಾಗಿಲ್ಲವಂತೆ! ಕಳೆದ ಜೂನ್ ತಿಂಗಳಲ್ಲಿ ಒಂದು ದಿನ ಹುಡುಗನ ಮನೆಯಲ್ಲಿದ್ದ ಪದಾರ್ಥಗಳೆಲ್ಲವೂ ಸಿಕ್ಕಿದಕಡೆ ಬಿಸಾಡುತ್ತಿರುವದನ್ನು ಕಂಡು ಮನೆಯವರು ಬಹಳ ಹೆದರಿ ಮನೆಯನ್ನೇ ಬಿಟ್ಟು ಓಡಿಹೋದರೆಂದೂ, ಒಂದು ದಿನ ತೋಟದಲ್ಲಿ ಕುಳಿತಿದ್ದಾಗ, ಎತ್ತಿಕೊಂಡು ಹೋಗಿ ಹೊರಗಡೆ ಮೋಟಾರಿನಲ್ಲಿ ಕುಳ್ಳಿರಿಸಲ್ಪಟ್ಟನೆಂದೂ, ಮನೆಯಲ್ಲಿರುವಾಗ ಅವನೆದುರಿಗೆ ಹಣಕಾಸುಗಳೂ ಮತ್ತು ನೋಟುಗಳೂ ರಾಶಿಯಾಗಿ ಬೀಳುವವೆಂದೂ ಪ್ರಕಟವಾಗಿರುತ್ತದೆ. ಇದು ಭೂತಚೇಷ್ಟೆಯೆಂದು ಎಲ್ಲರೂ ಅಭಿಪ್ರಾಯಪಡುತ್ತಾರೆ. ಆದರೆ ಇದರ ನಿಜಾಂಶವನ್ನು ಪರೀಶೀಲಿಸಲು ಲಂಡನ್ನಿನಲ್ಲಿ ಕೆಲವು ಡಾಕ್ಟರುಗಳ ಒಂದು ಸಮಿತಿಯು ನೇಮಕವಾಗಿರುವದಂತೆ!

ಸ್ವೀಕಾರ.

ಧಾರವಾಡ ಡಿ|| ಗದಗ ತಾಲೂಕು ಗುಮ್ಮಗೋಳ ಗ್ರಾಮದ ವಾಲ್ಮೀಕಿ ಜಾತಿಯ ಮ|| ರಾ|| ಸಕ್ರಪ್ಪಾ ಹೊಸ್ಮನಿ ಈತನು ಕಳವಿನಿಂದ ಹೋದ ತನ್ನ ಮಾಲು ಸರಕಾರದವರಿಂದ ತಪಾಸಾಗಿ ತಿರುಗಿ ತನ್ನ ಸ್ವಾಧೀನಕ್ಕೆ ಬಂದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಗುರುಭಕ್ತಕೇಸರಿ ಹಮ್ಮಿಗಿ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬಂಕಾಪೂರಗ್ರಾಮದಲ್ಲಿ ಕಾರ್ತಿಕ ಶುದ್ಧ ೧ ದಿವಸ ಮಹಾಲಕ್ಷ್ಮೀ ಸರಸ್ವತೀ ಪೂಜಾಸಮಯದಲ್ಲಿ ಶ್ರೀ|| ಷ|| ಬ್ರ|| ಅರಳೆ ಮಠದ ಪಟ್ಟದ ಸ್ವಾಮಿಗಳ ಅಪ್ಪಣೆಯ ಮೇರೆಗೆ ಮ|| ರಾ|| ಬಸನಣ್ಣಪ್ಪಾ ಕೋತಂಬ್ರಿ, ಮ|| ರಾ|| ಫಕೀರಪ್ಪಾ ಕೂಲಿ, ಮ|| ರಾ|| ಚನ್ನಪ್ಪಾ ನಾರಾಯಣಪುರ ಇವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂಪಾಯಿಗಳು ಮಹಾದೇವಪ್ಪಾ ಕುಂಬಾರ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೂಡ್ಲಿಗಿ ತಾ|| ಬೊಮ್ಮಗಟ್ಟೆಯಲ್ಲಿರುವ ಮ|| ರಾ|| ಬಿ. ಬಂಡೆಪ್ಪನವರು ತಮ್ಮ ಪುತ್ರನಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಹಾಗೂ ಸದರಿ ಗ್ರಾಮದ ಸಾದರಮುನಿಯಪ್ಪನ ಪತ್ನಿ ಬಸಮ್ಮನಿಗೆ ಪ್ರಾಪ್ತವಾದ ನೇತ್ರಬಾಧೆಯು ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಒಟ್ಟು 2 ರೂಪಾಯಿಗಳು ಮ|| ರಾ|| ಬಂಡೆಪ್ಪನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ತಾಲೂಕು ತಿರುಮಲಕೊಪ್ಪದಲ್ಲಿ ನೆರವೇರಿದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾ ಮಹೋತ್ಸವವು ನಿರ್ವಿಘ್ನವಾಗಿ ಪೂರ್ತಿಗೊಂಡ ಸಂತೋಷಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಪಾಲೀಕೊಪ್ಪದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಕೆ. ಎಂ. ಗುರುಪಾದಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಕರಡಿಗುಡ್ಡದಲ್ಲಿ ನೆರವೇರಿದ ಜಗದಾಚಾರ್ಯರ ಭಜನಾಸಪ್ತಾಹ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ[illegible]ಯು ವೇ|| ನಾಗಯ್ಯ ಬೃಹನ್ಮಠ ಇವರ ದ್ವಾರಾ ತಲ್ಪಿರುತ್ತದೆ.

ಗುಲ್ಬುರ್ಗಾ ಡಿ|| ಸಂದೂರು ಮಠದ ವೇ|| ವೀರಭದ್ರಯ್ಯನವರು. ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ಪ್ರಸೀದಂತು.

(ಇರು ಇಲ್ಲ ಪದ್ಧತಿ.)

ಲೇಖಕರು—ನಾಗೀಶಶಿವಾಚಾರ್ಯರು, ಬೃಹನ್ಮಠ, ಮುದೇನೂರು. ಶ್ರೀ ವಿಶ್ವಾರಾಧ್ಯ ಗುರುಕುಲ, ಕಾಶೀ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕಂ|| ವಾ (ದ) ದೊಳಭಿರುಚಿದೋರ |
ಲ್ಕಾದುದನತಿಮುದದಿ ಸಾಧಿಸದ ನರರುಂಟೆ ||
ಓದುತಲಿದ್ಯಾದಿಗುಣಮಂ |
ಸಾದರದಿಂಪೊಂದಿ ಸುಖದಿ ಬಾಳ್ವರಿಲ್ಲಂ ||೭||

ಹಿ (ಮ) ಕಂಜಡಗುವ ಗ್ರಹಗ |
ಳ್ಗಮಿತ ಪ್ರಭೆಯಾಜ್ಞೆಯೆಂಬ ಮಸುವರಿಪ್ಪರ್ ||
ತಮತತಿಯಳಿಯುವ (ಗುರುವಿಂ) |
ಹಿಮಕರ ರವಿಗಳ್ಗೆ ಸಾಮ್ಯವಾಂತುದನರಿಯರ್ ||೮||

ಅ (ನು) ಮತವಾಗಿಹವಸ್ತುವ |
ನನುಮಾನದಿ ಸಾಧಿಸಲ್ಕೆ ಬುಧವರರುಂಟೈ ||
ಅನುಮಿತಿಗಳುಕದ (ಗುರುವಿನ) |
ತನುಮಹಿಮೆಯನಾದರಾರು ಬಲ್ಲರಿಲ್ಲಂ ||೯||

ಅ (ಜ) ನೇ ಲೋಕದಸೃಷ್ಟ್ಯಾವ |
ನಜನೆಂಬುದನರಿಯೆ ಜ್ಞಾನಿಜನರುಂಟೆಳೆಯೊಳ್ ||
ಅಜನತಿ ಸರಸತಿಯುಮುದೆಸ |
ಲಜಸಿರಸಜಾತ ವೇದವಿದರುಂ ತಿಳಿಯರ್ ||೧೦||

ನಾ (ನೇ) ಲೋಕದೊಳೋರ್ವಂ |
ಜ್ಞಾನಾಂಬುಧಿಯೆಂಬಭಾವ ಬಲವಾಗಿರ್ಪಂ ||
ನಾನಾವಿದಿಗಳು ಕಡೆಗ |
ಲ್ಪ್ರಾನಾದುದನರಿವಭಾವ ಭವದೊಳಗಿಲ್ಲಂ ||೧೧||

ಎ (ಕೀ) ಜನರಿದನರಿಯದು |
ಪಾಳನಗೈವಧಿಕಕಷ್ಟವೊಂದುವರಯ್ಯ ||
ವಳೋತ್ತರಕಸ್ಥಳಗಳ |
ನೇಕಾಗ್ರದಮನದಿ ಪೇಳ್ವ (ಗುರುವಂ) ತೊರೆದು ||೧೨||

ಮೂ (ತಿರ್) ಮಯರ್ಕಾವಾಗುತ |
ಕೀರ್ತಿಯನುಂ ಪಿರಿಗೆಟ್ಟಪವಗೈಯ್ವರುಂಟೈ ||
ಕಊರ್ತರು ಗರ್ವದಿ ಮಹಿಮರ |
ವಾರ್ತೆಯನುಂ ಪಳಿಯದಿರ್ಪನವರಿಲ್ಲಂ ||೧೩||

ಲೊ (ಕಾ) ನುಗವಂಬಲ್ಲೆವೊ |
ದೇಕಾಗದು ಬಲ್ಲಬಂಧುಜನರಿಂದೈಕ್ಯಂ ||
ಕಾಕುಮನೋಗತಮಿರಲಿಬು |
ಶೋಕವನೆಂತಳಿದು ಮುಳಿದುಬದುಕನರಿಲೆಯು ||೧೪||
(ಸಶೇಷ)

ಸನ್ಮಾನಸಮಾರಂಭ.

ಹೆಗ್ಗಡದೇವನಕೋಟೆ ತಾಲೂಕು ಹಂಪಾಪುರದಲ್ಲಿ ತಾ|| 28-10-29 ರ ಮಧ್ಯಾಹ್ನ 4 ಘಂಟೆ ಸಮಯದಲ್ಲಿ ಆಸ್ಪತ್ರೆಯಿಂದ ಮ|| ರಾ|| ಡಾಕ್ಟರ್ ಜಿ. ಎಸ್. ಶೆಟ್ಟಿಯವರನ್ನೂ ಹೊಸದಾಗಿ ದಯಮಾಡಿರುವ ಮ|| ರಾ|| ಡಾ|| ಟಿ. ಕೃಷ್ಣಪ್ಪನವರನ್ನೂ ಸಹ ಛೇರ್‌ಮನ್ ಆರ್. ಕುಮಾರಾರಾಧ್ಯರು, ಎಚ್. ಎಸ್. ಮುತ್ತಣ್ಣನವರು, ಕೆ. ನಂಜುಂಡಸ್ವಾಮಿಯವರು, ಬಿ. ಮಲ್ಲಾರಾಧ್ಯರು ಲೈಸೆನ್ಸ್ ವೆಂಡರ್ ಬಸಪ್ಪನವರು ಮುಂತಾದ ಮುಖಂಡ ಮನುಷ್ಯರುಗಳು ಮರ್ಯಾದೆಯಿಂದ ಛತ್ರಕ್ಕೆ ಕರೆದುಕೊಂಡು ಬರಲು ಅಷ್ಟರಲ್ಲಿ ಅಲ್ಲಿ ನೆರೆದಿದ್ದ ಗ್ರಾಮಸ್ಥರ ಮುಖಂಡ ಮನುಷ್ಯರುಗಳೂ ಇತರ ಸರ್ಕಾರಿ ಅಧಿಕಾರಿಗಳು ಸ್ಕೂಲುಮಾಷ್ಟರುಗಳು ಸಹ ಸೇರಿ ಕಲ್ಯಾಣ್ಯವಟ್ಟಣಕ್ಕೆ ಪ್ರಯಾಣಬೆಳಸುವ ಮೇಲ್ಕಂಡ ಮ|| ರಾ|| ಡಾಕ್ಟರ್ ಜಿ. ಎಸ್. ಶೆಟ್ಟಿ ಸಾ|| ರ ಸಂತೋಷಕ್ಕಾಗಿ ಸಂಗೀತಕಛೇರಿ ಮಾಡಿಸಿ ಎಚ್. ಎಸ್. ಮುತ್ತಣ್ಣನವರು, ಛೇರ್‌ಮನ್ ಆರ್. ಕುಮಾರಾಧ್ಯರೂ ಸಹ ಭಾಷಣಮಾಡಿದರು. ಇವಾದಮೇಲೆ ಮ|| ರಾ|| ಡಾಕ್ಟರ್ ಜಿ. ಎಸ್. ಶೆಟ್ಟಿ ಸಾಹೇಬರು ಮ|| ರಾ|| ಡಾ|| ಟಿ. ಕೃಷ್ಣಪ್ಪನವರೂ ಸಹ ಗಂಭೀರವಾದ ಭಾಷಣಮಾಡಿ ತಮ್ಮಗಳ ಸಂತೋಷವನ್ನು ತೋರ್ಪಡಿಸಿದರು. ಆಗ್ಗೆ ಮ|| ರಾ|| ಲೈಸೆನ್ಸ್‌ವೆಂಡರ್ ಬಸಪ್ಪನವರು ಹಾರ ತುರಾಯಿಗಳನ್ನು ಡಾಕ್ಟರುಗಳಿಗೆ ಅರ್ಪಿಸಿ ತಮ್ಮಗಳ ಪ್ರೀತಿವಾತ್ಸಲ್ಯವನ್ನು ತೋರ್ಪಡಿಸಿದ ಕೂಡಲೆ ಸೇರಿದ್ದ ಸಭಿಕರಿಗೆಲ್ಲಾ ತಿಂಡಿ ಫಲಹಾರದಿಂದ ತೃಪ್ತಿಪಡಿಸಿ ಮೈಸೂರು ಮೋಟಾರುಬಸ್ಸಿನಲ್ಲಿ ಮ|| ರಾ|| ಯವರನ್ನು ಕಳುಹಿಸಿದೆವು. ಇವರ ಸ್ಥಾನಕ್ಕೆ ದಯಮಾಡಿಸಿರುವ ಮ|| ರಾ|| ಡಾಕ್ಟರ್ ಟಿ. ಕೃಷ್ಣಪ್ಪನವರು ಸಹ ಮ|| ರಾ|| ಡಾ|| ಜೆ. ಎಸ್. ಶೆಟ್ಟಿಯವರಂತೆ ಪ್ರಜಾನುರಾಗಿಗಳಾಗಬೇಕಾಗಿ ಕೋರುತ್ತೇನೆ.

ಪ|| ಬಸಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಭೂಗತವಾದ ಏಕೋರಾಮನಾಥಮಂದಿರ.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕ ಪೈಕಿ ಶ್ರೀ ಮದುಜ್ಜಯಿನಿಯಲ್ಲಿ ವೀರಶೈವ ಧರ್ಮಪೀಠವಿರುವದು ಸರ್ವಶ್ರುತವಷ್ಟೆ ! ಸದರಿ ಪೀಠವನ್ನಲಂಕರಿಸಿರುವ ಯತಿಕುಲಚಕ್ರವರ್ತಿ ಶ್ರೀಮಜ್ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು ಸಂಸ್ಥಾನದೊಳಗಿನ ರಿಕಾರ್ಡುಗಳನ್ನು ಶೋಧಮಾಡುವ ಸಮಯದಲ್ಲಿ ಸಿದ್ಧೇಶ್ವರ ದೇವಸ್ಥಾನದ ಅಗ್ನಿದಿಕ್ಕಿನಲ್ಲಿ ಶ್ರೀಮಜ್ಜಗದ್ಗುರು ವೈರಾಗ್ಯಸಿಂಹಾಸನಾಧೀಶ್ವರ ಏಕೋರಾಮಶಿವಾಚಾರ್ಯರ ಮಂದಿರವಿದೆ ಎಂದು ತೋರಬಿದ್ದರಿಂದ ಮಹಾಸ್ವಾಮಿಗಳವರು ಅಗ್ನಿದಿಕ್ಕಿನಲ್ಲಿ ತಮ್ಮ ದಿವ್ಯಚಿತ್ತಕ್ಕೆ ಸಮಂಜಸವಾಗಿ ತೋರಿದ ಸ್ಥಳದಲ್ಲಿ ಅಗೆಯಿಸಿ ನೋಡಲಾಗಿ ಮೇಲ್ಕಂಡ ದೇವಸ್ಥಾನವು ಹೊರಟಿತು. ಸದರಿ ದೇವಸ್ಥಾನದಲ್ಲಿ ಒಂದು ಶಿಲಾಲಿಪಿಯಿರುವದು. ಅದರಲ್ಲಿ "ಏಕೋರಾಮನಾಥ" ಎಂದು ಬರೆದಿದ್ದು ಉಳಿದ ಲೇಖವು ಸರಿಯಾಗಿ ತಿಳಿಯುವದಿಲ್ಲ. ಶಿಲಾಲೇಖಜ್ಞರು ಓದಿ ತಿಳಿಯಬಹುದು. ಇದರ ಮೇಲಿಂದ ಪ್ರತಿಯೊಂದು ಪೀಠದಲ್ಲಿ ಪ್ರತಿಯೊಬ್ಬ ಪೀಠಾಚಾರ್ಯರು ಪೂರ್ವದಲ್ಲಿ ಒರುಹೋಗುವ ಸಾಂಪ್ರದಾಯವಿತ್ತೆಂದು ಕಂಡುಬರುತ್ತದೆ. ಇಂಥ ಅಗಾಧಮಹತ್ವದ ಸಂಗತಿಗಳು ಮಹಾಮಹಿಮರಾದ ಉಜ್ಜಯಿನೀ ಮಹಾಸ್ವಾಮಿಗಳವರಿಂದ ಅನೇಕ ನಡೆದಿರುತ್ತವೆ. ಸದರಿ ದೇವಸ್ಥಾನವು ಬಹು ಪುರಾತನ ಕಟ್ಟಡವೆಂದು ಕಂಡುಬರುತ್ತದೆ. ದರ್ಶನೇಚ್ಛುಗಳು ಹೋಗಿ ನೋಡಬಹುದು. ಧರ್ಮಗ್ಲಾನಿಯಾದ ಸಮಯದಲ್ಲಿ ಭಗವದವತಾರವಾಗುತ್ತದೆಂಬ ಗೀತೋಕ್ತಿಯಂತೆ ಪೀಠಾಚಾರ್ಯರಿಂದ ಅನಂತ ಮಹಿಮೆಗಳು ನಮ್ಮ ಸಮಾಜದಲ್ಲಿ ತಲೆದೋರಲಿಕ್ಕೆ ಹತ್ತಿವೆ. ಜಗದ್ಗುರು ಪಂಚಾಚಾರ್ಯರು ಸರ್ವತ್ರ ಸಂಚರಿಸಿ ದಿಗ್ವಿಜಯವನ್ನು ಮಾಡಿ ಜೀರ್ಣವಾದ ವೀರಶೈವಮತವನ್ನು ಉದ್ಧರಿಸಲೆಂದು ಹಾರೈಸುವ,

ಕೊಟ್ಟೂರಾರಾಧ್ಯ ಹಿರೇಮಠ ನೆಲ್ಲುಕುದುರಿ.

ಕುಮಾರವ್ಯಾಸ ಜಯಂತಿ.

ಕವಿಸ್ತವನ ಸ್ಪರ್ಧೆ.

ಮೈಸೂರು ಮಹಾರಾಜರ ಕಾಲೇಜಿನ ಕರ್ಣಾಟಕದ ಸಂಘದವರು ಈ ಸಲ ನೆರವೇರಿಸಬೇಕೆಂದು ಸಂಕಲ್ಪಿಸಿರುವ ಕುಮಾರವ್ಯಾಸಕವಿ ಜಯಂತ್ಯುತ್ಸವಕ್ಕೆ ಅಂಗವಾಗಿ ಸ್ಪರ್ಧೆಯೊಂದನ್ನು ಇಟ್ಟಿದ್ದಾರೆ. ಕುಮಾರವ್ಯಾಸಕವಿಯು (ಗದುಗಿನ ನಾರಣಪ್ಪನ)ನ್ನು ಕುರಿತು ಸುಂದರವೂ ಸರಸವೂ ಆದ ಚಿಕ್ಕ ಕವನವೊಂದನ್ನು ಯಾರಾದರೂ ರಚಿಸಿ ಕೆಳಗಿನ ವಿಳಾಸಕ್ಕೆ ಈ ವರ್ಷದ ಡಿಸೆಂಬರ್ ತಿಂಗಳು 31 ನೆಯ ತಾರೀಖಿನೊಳಗಾಗಿ ಕಳುಹಿಸಬಹುದು. ವಿದ್ಯಾರ್ಥಿಗಳು ಬರೆದು ಕಳುಹಿಸಿದ ಕವನಗಳಲ್ಲಿ ಉತ್ತಮವಾದುದಕ್ಕೆ ಉತ್ಸವಕಾಲದಲ್ಲಿ ಬಹುಮಾನವು ದೊರೆಯುವುದು. ಇತರರು ಕಳುಹಿಸಿದ ಕವನಗಳಲ್ಲಿ ಉತ್ಕೃಷ್ಟವಾದುವುಗಳನ್ನು "ಕುಮಾರವ್ಯಾಸಕವಿಯು ಸ್ಮಾರಕಸಂಪುಟ" ದಲ್ಲಿ ಪ್ರಕಟಿಸಲಾಗುವುದು. ಕರ್ಣಾಟಕದ ಕವಿಗಳೆಲ್ಲರೂ ಈ ಉದ್ದೇಶವು ನೆರವೇರುವಂತೆ ತಮ್ಮ ಕವನಗಳನ್ನು ಕ್ಷಿಪ್ರದಲ್ಲಿ ನಮಗೆ ಕಳುಹಿಸಬೇಕೆಂದು ಕೋರುತ್ತೇವೆ.

ಮಹಾರಾಜರವರ ಕಾಲೇಜು, ಮೈಸೂರು. ತಾ|| 14-11-1929.

ಬಿ. ಎಂ. ಶ್ರೀಕಂಠಯ್ಯ, ಅಧ್ಯಕ್ಷರು, ಕರ್ಣಾಟಕ ಸಂಘ.

ಕರ್ಣಾಟಕ ಸಂಘ
ಮಹಾರಾಜರವರ ಕಾಲೇಜು, ಮೈಸೂರು.

ಕುಮಾರವ್ಯಾಸ ಜಯಂತಿ.

ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದವರು 'ಕನ್ನಡ ಭಾರತ' ವನ್ನು ಬರೆದ ಕುಮಾರವ್ಯಾಸಕವಿಯ (ಗದುಗಿನ ನಾರಣಪ್ಪನ) ಜಯಂತ್ಯುತ್ಸವವನ್ನು ಈಸಲ ನೆರವೇರಿಸಬೇಕೆಂದು ಸಂಕಲ್ಪಿಸಿದ್ದಾರೆ. 'ಗದುಗಿನ ಭಾರತ' ದ ಓಲೆಯ ಪ್ರತಿಗಳನ್ನೂ ಅಚ್ಚಿನ ಪ್ರತಿಗಳನ್ನೂ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಸಂಗ್ರಹಿಸಿ ಉತ್ಸವಕಾಲದಲ್ಲಿ ಅವುಗಳ ಪ್ರದರ್ಶನವನ್ನು ಜರುಗಿಸಬೇಕೆಂಬ ಉದ್ದೇಶವಿದೆ. ಪ್ರದರ್ಶನಕ್ಕೆ ಯೋಗ್ಯವಾದ ಪ್ರತಿಗಳು, ಮುಖ್ಯವಾಗಿ ಹಳೆಯ ಓಲೆಯ ಪ್ರತಿಗಳು, ಇರುವ ಸ್ಥಳಗಳನ್ನು ಬಲ್ಲವರಾಗಲಿ, ಅವುಗಳನ್ನುಳ್ಳವರಾಗಲಿ ಆ ವಿಚಾರವನ್ನೂ ಆ ಪ್ರತಿಗಳು ಎಂತಹವು ಎಂಬುದನ್ನೂ ಕುರಿತು ವಿಶದವಾಗಿ ನಮ್ಮ ಮೇಲೆ ದಯವಿಟ್ಟು ಕಾಗದವನ್ನು ಬರೆದರೆ ಆ ಪ್ರತಿಗಳನ್ನು ಪ್ರದರ್ಶನಕ್ಕಾಗಿ ನಾವು ತರಿಸಿಕೊಳ್ಳಲು ಬಹಳ ಸಹಾಯಮಾಡಿದಂತಾಗುತ್ತದೆ. ಪ್ರದರ್ಶನವು ಮುಗಿದ ಬಳಿಕ, ತರಿಸಿಕೊಂಡಿದ್ದ ಪ್ರತಿಗಳನ್ನು ಹಿಂದಕ್ಕೆ ಕಳುಹಿಸಿಕೊಡಲು ನಾವು ಬದ್ಧರಾಗಿದ್ದೇವೆ. ಕರ್ಣಾಟಕದ ಎಲ್ಲಾ ಭಾಗಗಳಿಂದಲೂ ಭಾಷಾಭಿಮಾನಿಗಳು ನಮ್ಮ ಈ ಪ್ರಯತ್ನಕ್ಕೆ ಉತ್ತೇಜನ ಕೊಡಬೇಕೆಂದು ಪ್ರಾರ್ಥನೆ.

ಮೈಸೂರು, ತಾ|| 14-11-1929.

ಟಿ. ಎಸ್. ವೆಂಕಣ್ಣಯ್ಯ, ಉಪಾಧ್ಯಕ್ಷರು.

ಅಣ್ಣಗಳಿರಾ! ಅಕ್ಕಗಳಿರಾ!!
ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,
ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.
ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದಂಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ !
ಮಲೇರಿಯಾನ ಸರ್ವಜ್ವರಸಂಹಾರಿಣಿ
ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, 'ಕೊಡಗಿನ ಗುಡುಗುಡು!' (ಛಳಿ) 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಹಿಂದಿರುಗಿಯೂ ಸಂಪೂರ್ಣ ಬಿಟ್ಟೋಡುವುವು.
ಇಂದೇ ವ್ಯಥಸಂಬುಗೆಯಿಂದ
ಮಲೇರಿಯಾನ ಕಂಪನಿಯವರ ಮಲೇರಿಯಾನ
ತರಿಸಿಕೊಂಡು ಕುಡಿಯಿರಿ. [15]
ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.
ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!
ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)
ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.
ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು. ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಪಾಯಗಳು.

ಈಗ ಎಲ್ಲಿ ನೋಡಿದರೂ ಅಪಾಯಗಳು ಹೆಚ್ಚುತ್ತಿವೆ. ಅಂತಹ ಎಲ್ಲಾ ಕಡೆಯೂ ವೈದ್ಯರ ಸಹಾಯವು ದೊರೆಯುವುದು ದುರ್ಲಭವು. ಆದುದರಿಂದ ಗಾಯವು ವಾಸಿಯಾಗುವ ವರೆಗೆ ಇನ್ನೂ ಹೆಚ್ಚು ಅಪಾಯಕ್ಕೆ ದಾರಿಕೊಡದಂತೆ ಶಾಸ್ತ್ರೀಯವಾದ ರೀತಿಯಲ್ಲಿ ತಾತ್ಕಾಲಿಕವಾದ ಚಿಕಿತ್ಸೆ ಮಾಡುವ ಕ್ರಮವನ್ನು ಅಬಾಲವೃದ್ಧರು ಮೊದಲುಗೊಂಡು ಸ್ತ್ರೀಪುರುಷರಲ್ಲಿ ಪ್ರತಿಯೊಬ್ಬರೂ ತಿಳಿದಿರಬೇಕಾದುದು ಅತ್ಯವಶ್ಯವಾಗಿದೆ. ಇಂತಹ ತಾತ್ಕಾಲಿಕ ಚಿಕಿತ್ಸೆಯಲ್ಲಿ ತಿಳುವಳಿಕೆ ಹೊಂದಿ, ಒಳ್ಳೇ ಸುಶಿಕ್ಷಿತರಾದವರು ಸಮೀಪದಲ್ಲಿದ್ದರೆ ಅವರು ರಕ್ತಸ್ರಾವ, ಅಸ್ಥಿಭಂಗ, ಜಲಗಂಡ, ಅಗ್ನಿಗಂಡ, ಚೇಳು ಹಾವುಗಳ ಕಡಿತ, ವಿಷಭಕ್ಷಣ, ಮೂರ್ಛೆ, ಆತಪಘಾತ, ಪ್ರಜ್ಞೆತಪ್ಪುವುದು, ಉಸಿರುಕಟ್ಟುವುದು, ಸೆಳವು, ಕಣ್ಣು, ಮೂಗು, ಕಿವಿ, ಗಂಟಲು ಮೊದಲಾದ ಕಡೆಗಳಲ್ಲಿ ಹೊರಗಿನ ಪದಾರ್ಥಗಳೇನಾದರೂ ಸೇರಿಕೊಳ್ಳುವುದು, ಇತ್ಯಾದಿ ಮಹಾಪಾಯಗಳಲ್ಲಿ ಡಾಕ್ಟರುಗಳು ಬಂದು ಸೇರುವಷ್ಟರಲ್ಲಿ ತತ್ಕಾಲಕ್ಕೊದಗಿದ ಉಪಕರಣಗಳನ್ನೇ ಸಾಧನವಾಗಿಟ್ಟುಕೊಂಡು, ಪ್ರಾಣಾಪಾಯಕ್ಕೆ ಅವಕಾಶ ಕೊಡದಂತೆ ಸಹಾಯಮಾಡಬಲ್ಲರು. ಅಂತಹ ತಿಳುವಳಿಕೆಯನ್ನು ಜನಸಾಮಾನ್ಯದಲ್ಲಿ ಪ್ರಚಾರಗೊಳಿಸುವುದಕ್ಕಾಗಿಯೇ ಅನುಭವಿ ಡಾಕ್ಟರ್ ಯು. ರಾಮರಾಯರಿಂದ "ಅಪಾಯಸಂಭವನಗಳಲ್ಲಿ ಪ್ರಥಮಚಿಕಿತ್ಸೆ" ಯೆಂಬ ಪುಸ್ತಕವು ರಚಿತವಾಗಿದೆ. ಅಪಾಯಕ್ಕೆ ಸಿಕ್ಕಿಬಿದ್ದವನನ್ನು ಕಂಡಾಗ, ಅವನನ್ನು ಹೇಗಾದರೂ ಅದರಿಂದ ತಪ್ಪಿಸಬೇಕೆಂಬ ಕನಿಕರವೇನೋ ಎಲ್ಲರಿಗೂ ಹುಟ್ಟುವುದು ಸಹಜವೇ ! ಆದರೆ ಹೇಗೆ ಮಾಡಬೇಕೆಂಬುದನ್ನು ತಿಳಿಯದೆ ಅನೇಕರು ಹಿಂಜರಿಯುವರು. ಕೆಲವರು ತಿಳಿಯದೆ ಕೈಹಾಕಿ ಅದರಿಂದ ಇನ್ನೂ ಅಧಿಕವಾದ ಅಪಾಯಕ್ಕೆ ಗುರಿಮಾಡುವರು. ಹೀಗೆ ಪ್ರತಿವರ್ಷಕ್ಕೆ ಎಷ್ಟೋ ಪ್ರಾಣಗಳು ನಷ್ಟವಾಗುತ್ತಿವೆ. ಪ್ರಥಮಚಿಕಿತ್ಸಾಕ್ರಮದಲ್ಲಿ ಸ್ವಲ್ಪಮಟ್ಟಿಗಾದರೂ ತಿಳುವಳಿಕೆಯಿದ್ದು ಕೆಲಸಮಾಡಿದ್ದರೆ, ಅಂತಹ ಪ್ರಾಣಾಪಾಯಗಳಿಗೆ ಅವಕಾಶವಿರುತ್ತಿರಲಿಲ್ಲ. ಆದುದರಿಂದ ಮೇಲ್ಕಂಡ ಪುಸ್ತಕವನ್ನು ಓದಿ ತಿಳಿದುಕೊಂಡಿದ್ದರೆ, ಮಹಾವಿಪತ್ತುಗಳನ್ನು ತಪ್ಪಿಸಿ, ಪ್ರಾಣಗಳನ್ನೇ ಉಳಿಸಬಹುದು. ಅನೇಕ ಚಿತ್ರಪಟಗಳೊಡನೆ ಬಹು ಸುಬೋಧವಾದ ಕನ್ನಡದಲ್ಲಿ ಬರೆದಿರುವ ಈ ಪುಸ್ತಕದ ಸಾವಿರಾರು ಪ್ರತಿಗಳು ಈಗಾಗಲೇ ಖರ್ಚಾಗಿ, ನಾಲ್ಕನೆಯ ದುರಾವೃತ್ತಿ ಪುನರ್ಮುದ್ರಣಗಳೂ ಆಗಿವೆ. ಸರಕಾರೀ ಆಫೀಸುಗಳು, ರೈಲ್ವೆಗಳು, ಗಣಿಗಳು, ಕಾರ್ಖಾನೆಗಳು, ಮಂತ್ರಶಾಲೆಗಳು, ಪಾಠಶಾಲೆಗಳು ಮುಂತಾಗಿ ಎಲ್ಲಾ ಕಡೆಗಳಲ್ಲಿಯೂ ಈ ಪುಸ್ತಕದ ಪ್ರಚಾರವಿದೆ. ಅನೇಕ ಡಾಕ್ಟರುಗಳು ಇದನ್ನು ಕುರಿತು ಬಹಳ ಪ್ರಶಂಸೆಮಾಡುವರು. ಬೆಲೆ 12 ಆಣೆಗಳು ಮಾತ್ರ. [6]
ಶ್ರೀಕೃಷ್ಣನ್ ಬ್ರದರ್ಸ್, 323, ತಂಬುಚೆಟ್ಟಿಬೀದಿ, ಮದ್ರಾಸ್.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆಂತು ನೋಡೋಣ!
ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.
ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ
ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.
ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಸಾಧ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವ ಹೆಚ್ಚುತ್ತದೆ. ವೀರ್ಯಸ್ತಂಭನವಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಷ್ಟಪುಷ್ಪ, ಶಾಲಿಮಕಂದ, ಮಧುಕಂದ, ಜಟಾಕಂಧ, ಕಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಶಿವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಷದಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಪಿವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಕಾಪತ್ರಿ, ಮದನಮಸ್ತ, ರತನಪುರುಷ, ಕಮರಗಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಳಾ, ಬೀಜಬಂದ, ಹರಣಮೋರಿ, ಮುಂಗಲೀಬೇದಾಣೆ, ಮರ್ದಾಣೀಕಟ್ಟಿಗೆ, ಶತಾವರಿ, ಸಕೇಮಗಜ, ಆಲದಹಾಲು, ವಾಕೇರಿಭಾಜಾ, ಗೋಖುರು, ಅದವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಗಾಜೀಕಾರು, ರೂಮಾಮಸ್ತಕಿ, ವಂಶಲೋಚನ, ವರಖಾರಿ, ಕೇಸರಿ, ಮಿಲಾಚೆ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಆಕಳ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.
ಕೇವಲ ಸ್ವಪ್ನಾವಸ್ಥೆ—ಈ ನಿವಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.
ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.
ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಡಾಳಿ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾತಬಾರದಿರೋಣ, ದಮ್ಮುರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಭರಣಿಗೆ 3 ರೂಪಾಯಿಗಳು. [20]
ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.
ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗ ಔಷಧಗಳು) ಎಂಬ "ಜೀವನೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.
ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧವಿದು, ೧ ತೊಲೆಗೆ ೧ ರೂ. ೮ ಆಣೆ.
ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.
ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.
ಗೃಹಮಾತೆಯು ೧ ತೊಲೆಯ ಶೀಸೆ ೧ ಕ್ಕೆ ೧೨ ಆಣೆ. ಸ್ತ್ರೀ. ರೋಗಗಳನ್ನು ಪರಿಹರಿಸುವುದು.
ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.
ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.
ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.
ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.
ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಜಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[33] (ಧಾರವಾಡ) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.
ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರಣಿಮಂಡಲದಲ್ಲಿಂತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.
ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಪದ್ಮಾಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅತಿಮಹತ್ವದ ನೂತನ ಫೋಟೋ

ಶ್ರೀ ಜಗದ್ಗುರು ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಪಂಚಾಚಾರ್ಯರಿಂದ ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ದೂರ್ವಾಸ ಈ ಪಂಚ ಮಹರ್ಷಿಗಳು ಶಿವಸಿದ್ಧಾಂತೋಪದೇಶವನ್ನು ಪಡೆದ ವಿಷಯವು ಶಾಸ್ತ್ರಪ್ರಸಿದ್ಧವಿರುವದಷ್ಟೆ! ಈ ವಿಷಯವನ್ನೇ ಚಿತ್ರರೂಪವಾಗಿ ಐದು ಜನ ಆಚಾರ್ಯರು ಈ ಐದು ಜನ ಮಹರ್ಷಿಗಳಿಗೆ ಉಪದೇಶಿಸುವಂತೆ ಬರೆಯಿಸಿ ಅಂದವಾಗಿ ಮುದ್ರಿಸಿರುತ್ತೇವೆ. ಭಾವಚಿತ್ರವು ಬಹು ಮನೋಹರವಾಗಿದೆ. ಸೈಜು ೧೪×೧೦ ಬೆಲೆ ೧ ಕ್ಕೆ ೨ ಆಣೆ ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಾಗುವದಿಲ್ಲ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ,

[13] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[22] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಕ್ಷ್ಯಾನನಸಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪುವೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ ನೇ ಡಿಶಂಬರ್ ೧೯೨೯ [ಸಂಚಿಕೆ ೩೦.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೦ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಜಗದಾಚಾರ್ಯರ ಮನೋಹರವಾದ ಬ್ಲಾಕಿನೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಶಿವಾಧಿಕ್ಯರತ್ನಾವಳಿ.

ಉಭಯ ಕವಿತಾವಿಶಾರದನೆಂದು ಕೀರ್ತಿಪತ್ತಿರುವ ಶ್ರೀಪದಕ್ಷರಕವಿಯು ಮೇಲ್ಕಂಡ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಕನ್ನಡಕವಿತೆಯಲ್ಲಿ ಈ ಕವಿಯು ಪಾಂಡಿತ್ಯವು ಎಷ್ಟು ಮಹತ್ವದ್ದಿರುವದೋ, ಅಷ್ಟೇ ಪಾಂಡಿತ್ಯವು ಸಂಸ್ಕೃತ ಕವಿತೆಯಲ್ಲಿಯೂ ಸಹ ಇರುವದೆಂಬ ವಿಷಯವು ಈ ಮೇಲ್ಕಂಡ ಗ್ರಂಥರಚನಾ ಸರಣಿಯಿಂದಲೇ ವೇದ್ಯವಾಗುವದು. ಈ ಅಮೂಲ್ಯವಾದ ಗ್ರಂಥಕ್ಕೆ ಮೈಸೂರು ರಾಜಧಾನಿಯ ನಿವಾಸಿಗಳಾದ ಹೊಸಮಠದ ಶ್ರೀ ಬಸವಲಿಂಗಸ್ವಾಮಿಗಳವರು ಸುಗಮವಾದ ಕನ್ನಡಟಿಪ್ಪಣಿಯನ್ನು ರಚಿಸಿ ಮುದ್ರಿಸಿದ್ದಾರೆ. ಈ ಗ್ರಂಥದಲ್ಲಿ ಶಿವಸರ್ವೋತ್ತಮತ್ವ ವಿಷಯವು ಸಪ್ರಮಾಣವಾಗಿಯೂ, ಸುಲಲಿತವಾಗಿಯೂ, ಗಂಭೀರವಾಗಿಯೂ ಪ್ರತಿಪಾದಿಸಲ್ಪಟ್ಟಿರುತ್ತದೆ. ಟಿಪ್ಪಣಿಕಾರರು ಕವಿಯ ಆಶಯಕ್ಕನುಸಾರವಾಗಿ ಪುರಾಣಪ್ರಸಿದ್ಧಗಳಾದ ಅನೇಕ ಕಥೆಗಳನ್ನೂ, ಶ್ರುತಿವಾಕ್ಯಗಳನ್ನೂ ಪ್ರಮಾಣತ್ವೇನ ಉದಾಹರಿಸಿ ಗ್ರಂಥದ ಗೌರವವನ್ನು ವಿಶೇಷವಾಗಿ ಹೆಚ್ಚಿಸಿರುತ್ತಾರೆ. ಈ ಗ್ರಂಥವು ಪಂಡಿತಪಾಮರಾದಿಯಾಗಿ ಸರ್ವರಿಗೂ ಸಂಗ್ರಹಿಸಲು ಯೋಗ್ಯವಾಗಿದೆ. ಕನ್ನಡಭಾಷಾಭಿಮಾನಿಗಳೆಲ್ಲರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ 0—8—0 ಸದರಿ ಗ್ರಂಥವು ಪಂಚಾಚಾರ್ಯ ಪ್ರಭಾ ಆಫೀಸಿನಲ್ಲಿಯೂ ಹಾಗೂ, ಶ್ರೀ ಬಸವಲಿಂಗಸ್ವಾಮಿಗಳು, ಹೊಸಮಠ, ಹಳೇಅಗ್ರಹಾರ, ಮೈಸೂರು. ಇವರಲ್ಲಿಯೂ ದೊರೆಯುವದು.

ಮದ್ರಾಸು ವೀರಶೈವ ಯುವಕರಸಂಘ.

ಈ ಸಂಘದ ಕಾರ್ಯನಿರ್ವಾಹಕರ ಚುನಾವಣೆಯು ಸಭೆಯು ತಾ|| 24-11-29 ರಲ್ಲಿ ಮ|| ರಾ|| ಯಜ. ಸಿ. ನಾಗಶೆಟ್ಟರವರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಈ ಸಮಯದಲ್ಲಿ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮ|| ರಾ|| ಸದರಿ ನಾಗಶೆಟ್ಟರವರನ್ನೇ ಸಂಘದ ಪ್ರೆಸಿಡೆಂಟರನ್ನಾಗಿಯೂ, ಮ|| ರಾ|| ಬಿ. ಬಸಲಿಂಗಯ್ಯನವರನ್ನು ವೈಸ್‌ಪ್ರೆಸಿಡೆಂಟರನ್ನಾಗಿಯೂ, ಮ|| ರಾ|| ಹೆಚ್. ಕೆ. ಗುರುಬಸವರಾಜರವರನ್ನು ಸೆಕ್ರೆಟರಿಯವರನ್ನಾಗಿಯೂ, ಮ|| ರಾ|| ಎ. ಯಂ. ಕೊಟ್ರಯ್ಯನವರನ್ನು ವೈಸ್‌ಸೆಕ್ರೆಟರಿಯವರನ್ನಾಗಿಯೂ ಮತ್ತು ಮ|| ರಾ|| ಆರ್. ವೀರನಗೌಡರನ್ನೂ, ಮ|| ರಾ|| ಸಿದ್ಧಲಿಂಗಪ್ಪನವರನ್ನೂ, ಮ|| ರಾ|| ಕೋಟೆವೀರಲಿಂಗಯ್ಯನವರನ್ನೂ ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳನ್ನಾಗಿಯೂ ಚುನಾಯಿಸಲಾಯಿತು. ತರುವಾಯ ಸಂಘದ ಮುಖ್ಯೋದ್ದೇಶವು ವೀರಶೈವ ಯುವಕರನ್ನು ವಾಕ್ಚಾತುರ್ಯವುಳ್ಳವರನ್ನಾಗಿ ಮಾಡುವುದಕ್ಕಾಗಿ ದೆಂದು ನಿರ್ಧರಿಸಿ, ಅಧ್ಯಕ್ಷರಿಗೂ ಮತ್ತು ಸಭಿಕರಿಗೂ ವಂದನೆಗಳನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಎ. ಯಂ. ಕೊಟ್ರಯ್ಯ, ಅ|| ಸೆಕ್ರೆಟರಿ

Y.M.V.A. Madras.

ಸ್ವೀಕಾರ.

ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನದ ಏಜೆಂಟ ಹಿರೇಹಾಳುಮಠದ ವೇ|| ರಾಘವಾಂಕಯ್ಯನವರ ಪುತ್ರಿ ಹ|| ಕುಂ|| ಸೌ|| ಗೌರಮ್ಮನನ್ನು ನಂದಿಕೊಟ್ಟೂರುಮಠದ ವೇ|| ನೀಲಕಂಠಶಾಸ್ತ್ರಿಗಳವರ ಪುತ್ರ ಚಿ|| ಸಾ|| ರುದ್ರಶಾಸ್ತ್ರಿಗಳಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ **10** ರೂಪಾಯಿಗಳು ವೇ|| ರಾಘವಾಂಕಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹರಪನಹಳ್ಳಿಯಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣ ಸಮಾಪ್ತಿ ಸಮಯದಲ್ಲಿ ಮ|| ಬಂಕಾಪುರದ ಹನುಮಂತಪ್ಪನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ಮ|| ರಾ|| ಪೆದ್ದಪ್ಪನವರ ಕರಿಬಸವಪ್ಪನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಸೊರಬ ತಾಲೂಕು ಕೋಡೀಹಳ್ಳಿ ಗ್ರಾಮದ ಮ|| ರಾ|| ಕೆ. ಪಿ. ದೇವಪ್ಪಗೌಡರು ಶ್ರೀಮದುಜ್ಜಯಿನೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪವಿತ್ರನಾಮಧೇಯದಿಂದ ಕಸಿಮಾವಿನ ಗಿಡಗಳನ್ನು ಹಚ್ಚಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಹರಪನಹಳ್ಳಿ ತಾಲೂಕು ಮುಸುವನಕಲ್ಲಹಳ್ಳಿಯಲ್ಲಿರುವ ವೇ|| ಎಂ. ರಾಚಯ್ಯನವರು ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಸ್ನಾನದ ನಿಯಮಗಳು.

ಸ್ನಾನದ ವಿಷಯದಲ್ಲಿ ಈ ಕೆಳಗೆ ಕೊಟ್ಟಿರುವ ನಿಯಮಗಳನ್ನು ಜ್ಞಾಪಕದಲ್ಲಿಟ್ಟು, ಆಚರಣೆಗೆ ತಂದುಕೊಳ್ಳುವುದೇನೂ ಕಷ್ಟವಲ್ಲ. ಅವುಗಳನ್ನು ಬುದ್ಧಿವಂತಿಕೆಯಿಂದನುಸರಿಸುವವನಿಗೆ ಸ್ನಾನ, ಈಜಾಟ, ಮುಂತಾದುವುಗಳ ಸುಖಾನುಭವವುಂಟಾಗುವುದು.

ನೀರಿನಲ್ಲಿ ಬಹಳಕಾಲ ಆಲೆದಾಡಬೇಡಿರಿ. ಹಾಗಿಲ್ಲದೆ ಆಲೆದಾಡಿದರೆ ತಲೆನೋವು ಬರುವ ಸಂಭವವುಂಟು. ಇನ್ನೂ ಮೈ ಬೆಚ್ಚಗಿರುವಾಗಲೇ ಸ್ನಾನವನ್ನು ಬಿಟ್ಟುಬಿಡಬೇಕೇ ಹೊರತು, ಚಳಿಯು ಪ್ರಾರಂಭಿಸುವವರೆಗೂ ಆಲೆಯುತ್ತಿರಕೂಡದು.

ಊಟವಾದಮೇಲೆ ಎರಡು ಗಂಟೆಗಳ ಕಾಲವಾದರೂ ಕಳೆದಹೊರತು ಸ್ನಾನಮಾಡಬಾರದು.

ತಲೆಯನ್ನು ಬಿಸಿಲಿಗೆ ಬಹಳಕಾಲ ಒಡ್ಡಬೇಡಿರಿ ಏಕೆಂದರೆ, ನಡುಹೊದ್ದದ ನೀರಿನಲ್ಲಿ ನಿಂದಿರುವಾಗಲೂ ಸೂರ್ಯನ ಕಾಂತಿಯು ಬಾಧಿಸಬಹುದು.

ನೀರಿನಲ್ಲಿ ದೀರ್ಘಕಾಲ ನಿಲ್ಲಬೇಡಿರಿ. ಈ ನಿಯಮವನ್ನುಲ್ಲಂಘಿಸಿದರೆ ಸಡುಕ, ಆಯಾಸ ಮತ್ತು ತಲೆನೋವುಗಳಿಗೆ ಕಾರಣವಾಗುವುದರಿಂದ ಇದು ಮುಖ್ಯ ನಿಯಮವು.

ಯಾವಾಗ ಉಸಿರುಬಿಡಬೇಕು, ಯಾವಾಗ ಸೇದಬೇಕು ಎಂಬ ವಿಷಯಗಳನ್ನು ಚೆನ್ನಾಗಿ ತಿಳಿದಹೊರತು ಈಜುವುದಕ್ಕೆ ಪ್ರಾರಂಭಿಸಬೇಡಿರಿ. ಹಾಗಿಲ್ಲದೆ ಉಪ್ಪುನೀರನ್ನು ಹೆಚ್ಚಾಗಿ ಕುಡಿದರೆ ಹೊಟ್ಟೆಗೆ ಬಾಧೆಯಾಗಬಹುದು.

ಸ್ನಾನಮಾಡಿದೊಡನೆ ಮೈಯನ್ನು ಒರಸಿಕೊಳ್ಳದೆ ನಿಲ್ಲಬಾರದು. ಸ್ನಾನವು ಮುಗಿದೊಡನೆ ಒಂದು ಒಣಗಿದ ವಸ್ತ್ರದಲ್ಲಿ ಮೈಯನ್ನೊರಸಿಕೊಳ್ಳುವುದರಿಂದ, ಶೈತ್ಯಕ್ಕೂ ವಿಷಮಶೀತಜ್ವರಕ್ಕೂ ಅವಕಾಶವು ತಪ್ಪುವುದು.

ಆರೋಗ್ಯಚಂದ್ರಿಕೆ.

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು:—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಕಳೆದವಾರದ ಶೇಷ.)

ತಂತ್ರಶಾಸ್ತ್ರದಲ್ಲಿ ಮದ್ದು, ಮಾಟ ಮುಂತಾದ ಅಭಿಚಾರಕರ್ಮ ಬೋಧಕವಾಕ್ಯಗಳಿರುವುದರಿಂದ ಅದು ಶಿಷ್ಟಪರಿಗ್ರಾಹ್ಯವಲ್ಲ; ಎಂಬ ಆಕ್ಷೇಪದ ಸಮಾಧಾನವು ಹೀಗಿದೆ:—ವೇದರೂಪಶಾಸ್ತ್ರದಲ್ಲಿಯೂ ಅಭಿಚಾರ ಕರ್ಮಬೋಧಕವಾಕ್ಯಗಳು ವಿಪುಲವಾಗಿರುವುದರಿಂದ, ಅದಾದರೂ (ವೇದವಾದರೂ) ಶಿಷ್ಟ ಪರಿಗ್ರಾಹ್ಯವಲ್ಲವೆಂದು ಹೇಳುವ ಪ್ರಸಂಗವು ಒದಗುವುದು. ಅಭಿಚಾರ ಎಂದರೆ ತನ್ನೊಡನೆ ಹಗೆತನ ಬಗೆವ ಶತ್ರುವಿಗೆ ಪೀಡನೆಸಗುವಿಕೆಯು ಎಂದು ಸಾಮಾನ್ಯವಾದ ಅರ್ಥವಾಗುವದು. ವ್ಯವಹಾರದಲ್ಲಿ ಕಾರಣಾಂತರದ ದೆಸೆಯಿಂದ ಕೆಲಂಬರು ಅಭಿಚಾರಕೃತ್ಯವನ್ನು ಆಶ್ರಯಿಸಬೇಕಾಗುವದೆಂಬ ಭಾವವನ್ನು ಮನುಭಗವಾನನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾನೆ:—

ಶ್ರುತೀರಥರ್ವಾಂಗಿರಸೀಃ ಕುರ್ಯಾದಿತ್ಯ ವಿಚಾರಯನ್

ವಾಕ್ ಶಾಸ್ತ್ರಂ ವೈ ಬ್ರಾಹ್ಮಣಸ್ಯ ತೇನ ಹನ್ಯಾದರೀನ್ ದ್ವಿಜಃ (೧೧-೩೩).

ಕೆಲವು ವಿಶಿಷ್ಟ ಪ್ರಸಂಗಗಳಲ್ಲಿ ಬ್ರಾಹ್ಮಣನು ಅಥರ್ವವೇದವನ್ನು ನಿಃಶಂಕೆಯಿಂದ ಉಪಯೋಗಿಸಿ ಕೊಳ್ಳಬೇಕು; ಬ್ರಾಹ್ಮಣನ ಶಕ್ತಿಯು ವಾಕ್ಕೇ ಆಯು... ಅದು ಶತ್ರುವಿನ ನಾಶಕ್ಕೆ ಉಪಯೋಗವಾಗು...

ಇದರಿಂದ ಅಥರ್ವವೇದದಲ್ಲಿಯ ಅಭಿಚಾರಬೋಧಕವಾಕ್ಯಗಳು ಬ್ರಾಹ್ಮಣನ ಹಿತದ ಸಲುವಾಗಿಯೇ ಇರುವುವೆಂಬುದು ಸ್ಪಷ್ಟವಾಗುತ್ತದೆ. ಅಥರ್ವವೇದದಲ್ಲಿ ಮದ್ದು ಮಾಟ ಮುಂತಾದುದರ ಬಗ್ಗೆ ಬಹಳ ಕಡೆ ಹೇಳಲ್ಪಟ್ಟಿದೆ. ಹೇಗೆಂದರೆ:—೧ ನೆಯ ಕಾಂಡದ ೧೪-೧೬ ನೆಯ ಸೂಕ್ತಗಳನ್ನೂ, ೨ ನೆಯ ಕಾಂಡದ ೧೬-೩೧ ನೆಯ ಸೂಕ್ತಗಳನ್ನೂ, ೩ ನೆಯ ಕಾಂಡದ ೨೫-೩೦ ನೆಯ ಸೂಕ್ತಗಳನ್ನೂ, ೪ ನೆಯ ಕಾಂಡದ ೧೭-೧೮-೩೭ ನೆಯ ಸೂಕ್ತಗಳನ್ನೂ, ೫ ನೆಯ ಕಾಂಡದ ೧೪-೨೩-೨೭ ನೆಯ ಸೂಕ್ತಗಳನ್ನೂ, ೬ ನೆಯ ಕಾಂಡದ ೩೭-೧೦೫-೧೩೦ ನೆಯ ಸೂಕ್ತಗಳನ್ನೂ ಇಷ್ಟು ಮಾತ್ರ ನೋಡಿದರೆ ಸಾಕು. ಅದು ಹಾಗಿರಲಿ. ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಅಭಿಚಾರಕೃತ್ಯಬೋಧಕವಾಕ್ಯಗಳಿವೆ.

ಋಗ್ವೇದದ ೮ ನೆಯ ಅಷ್ಟಕದಲ್ಲಿ ಅಭಿಚಾರಕ ಕರ್ಮದ ಸಂಬಂಧವಾಗಿ ಒಂದು ಆಖ್ಯಾಯಿಕೆಯುಂಟು. ಅದು ಹೇಗೆಂದರೆ:—ಪೂರ್ವಕಾಲದಲ್ಲಿ **ಸನಾತಿ** ಎಂಬ ಒಬ್ಬ ರಾಜನಿದ್ದನು. ಅವನ ಬಳಿಯಲ್ಲಿ **ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು** ಎಂಬ ಹೆಸರಿನ ನಾಲ್ವರು ಅಣ್ಣ ತಮ್ಮಂದಿರು ಉಪಾಧ್ಯಾಯರಿದ್ದರು; ಅವರು ಅರಸನ ಹೇಳಿಕೆಯಮೇರೆಗೆ ಅವನ ಶತ್ರುಗಳನ್ನು ನಾಶಗೊಳಿಸುವುದಕ್ಕಾಗಿ ಅನೇಕ ಉಪಾಯಗಳನ್ನು ಯೋಚಿಸಿದರು. ಆದರೆ ವೈರಿಗಳನ್ನು ಕೊಲ್ಲತಕ್ಕ ಅಭಿಚಾರಕ ಕರ್ಮವನ್ನು ಮಾತ್ರ ಆ ಉಪಾಧ್ಯಾಯರು ಮಾಡಲಿಲ್ಲ; ಅದರಿಂದ ಅರಸನು ಸಿಟ್ಟಾಗಿ ಅವರನ್ನು ಬಹಿಷ್ಕರಿಸಿ ಬೇರೆ ಇಬ್ಬರು ಕಪಟ ಪಟುಗಳನ್ನು ಪುರೋಹಿತರನ್ನಾಗಿ ನಿಯಮಿಸಿಕೊಂಡನು. ಆ ಕಾರಣದಿಂದ ಬಂಧು ಮೊದಲಾದ ಆ ನಾಲ್ವರು ಪುರೋಹಿತರು ಕೃದ್ಧರಾಗಿ ಅರಸನನ್ನೇ ಕೊಲ್ಲುವ ಹಂಚಿಕೆಯಲ್ಲಿ ತೊಡಗಿದರು. ಈ ಸಂಗತಿಯು ಮಾಯಾವಿಗಳಾದ ಆ ಪುರೋಹಿತರೀರ್ವರಿಗೆ ಗೊತ್ತಾದಕೂಡಲೆ ಅವರು ಅಭಿಚಾರಕಕರ್ಮವನ್ನು ಮಾಡಿ ಆ ನಾಲ್ವರು ಉಪಾಧ್ಯಾಯರಲ್ಲಿಯ ಸುಬಂಧು ಎಂಬುವನನ್ನು ಕೊಂದರು; ಆಗ ಅವನ ಅಣ್ಣತಮ್ಮಂದಿರಾದ ಉಳಿದ ಮೂವರು ಸುಬಂಧುವನ್ನು ಮರಳಿ ಬದುಕಿಸುವುದಕ್ಕಾಗಿ "**ಯತ್ತೇ ಯಮಂ ವೈವಸ್ವತಂ ಮನೋಜಗಾಮ ದೂರಕಮ್| ತತ ಆವರ್ತಯಾಮಸೀಹಾಕ್ಷಯಾಯ ಜೀವಸೇ ||**" ಎಂಬ ಮಂತ್ರಪೂರ್ವಕ ಪ್ರಯತ್ನ ಮಾಡಿದರು. ಈ ಮಂತ್ರದ ಅರ್ಥವು ಹೀಗಿದೆ:—ಎಲೈ ಸುಬಂಧುವೇ? ಯಾವ ನಿನ್ನ ಮನಸ್ಸು ಸೂರ್ಯ ಪುತ್ರನಾದ ಯಮಧರ್ಮನ ಬಳಿಗೆ (ದೂರ) ಹೊರಟು ಹೋಗಿರುವುದೋ ಆ ನಿನ್ನ ಮನಸ್ಸನ್ನು ಈ ಲೋಕದಲ್ಲಿ ವಾಸಿಸುವುದಕ್ಕೂ, ವ್ಯವಹಾರಮಾಡುವುದಕ್ಕೂ ನಾವು ಮರಳಿ ತಿರುಗಿಸುತ್ತೇವೆ. ಎಂದು ಆ ಮೂವರು ಮಂತ್ರಮೂಲಕವಾದ ಉಪಾಯವನ್ನೆಸಗಲು ಕೂಡಲೆ ಆ ಸುಬಂಧುವಿನ ಲಿಂಗಶರೀರವು ಸ್ಥೂಲಶರೀರವನ್ನು ಸೇರಿತು. ಅವನು ಸಜೀವನಾಗಿ ನಿದ್ರೆಯಿಂದೆಚ್ಚತ್ತವನಂತೆ ಎದ್ದು ಕುಳಿತನು.

ಈ ಶ್ರೌತ ಕಥಾನಕವನ್ನು ಅನುಲಕ್ಷಿಸಿಯೇ ಋಗ್ವೇದದಲ್ಲಿಯೂ ಅಭಿಚಾರಕ ಕರ್ಮದ ಪ್ರಸಕ್ತಿಯಿರುವುದೆಂದು ನಾವು ಈ ಮೇಲೆ ಧೈರ್ಯದಿಂದ ಹೇಳಿದೆವು. ಸ್ಮಾರ್ತರಾದಿಗಳು ಕೆಲಪ್ರಸಂಗಗಳಲ್ಲಿ ಅಭಿಚಾರಕೃತ್ಯಗಳನ್ನು ಕೈಕೊಳ್ಳುವರೆಂಬ ಸಂಗತಿಯು ಅಪ್ರಾಮಾಣಿಕವಲ್ಲವೆಂಬುದು ಸ್ಪಷ್ಟವೇ! ಆದರೆ ವೀರಮಾಹೇಶ್ವರರು ಹಿಂಸಾಕರ್ಮ, ಮದ್ಯಪಾನ ಮೊದಲಾದುವುಗಳಂತೆ ಅಭಿಚಾರಕರ್ಮವನ್ನು ಯಾವಾಗಲೂ ನಿಷೇಧಿಸತಕ್ಕವರೆಂಬುದನ್ನು ಮಾತ್ರ ಮರೆಯಬಾರದು.

ಹಾಗೂ ಋಗ್ವೇದದ ೧೦ ನೆಯ ಮಂಡಲದಲ್ಲಿಯ ...ನೆಯ ಸೂಕ್ತದಲ್ಲಿ ಯಾವಳೋ ಒಬ್ಬ ಸ್ತ್ರೀಯಳು ತನ್ನ ಸವತಿಯರೊಡನೆ ಹಗೆತನವನ್ನು ಬೆಳೆಯಿಸಿದವಳಾಗಿ ಅವರಲ್ಲಿ ಗಂಡನ ಪ್ರೇಮವು ಕಡಿಮೆಯಾಗಿ ದ್ವೇಷವು ಹೆಚ್ಚಲೆಂಬ ಹೇತುವಿನಿಂದ ಅಭಿಚಾರಕ ಕರ್ಮದಲ್ಲಿ ತೊಡಗಿದುದು ತಿಳಿಯಬರುತ್ತದೆ. ೧೬ನೆಯ ಸೂಕ್ತವು ಅಪತ್ಯಘಾತಿಗಳಾದ ರಾಕ್ಷಸರ ಉಚ್ಚಾಟನಕ್ಕೋಸ್ಕರ ಪ್ರವೃತ್ತವಾಗಿದೆ. ೧೬೩ ನೆಯ ಸೂಕ್ತವು ಯಕ್ಷ್ಮವ್ಯಾಧಿಯ ಪ್ರತೀಕಾರಾರ್ಥವಾಗಿ ಮಂತ್ರಪ್ರಯೋಗವನ್ನು ಉಪದೇಶಿಸುವುದು. ೧೫೯-೬೦ ನೆಯ ಸೂಕ್ತಗಳು ಮರಣೋನ್ಮುಖನ ಪ್ರಾಣರಕ್ಷಣೆಗಾಗಿ ಪ್ರವೃತ್ತವಾಗಿವೆ.

ಯಜುರ್ವೇದದಲ್ಲಿಯೂ ಅಭಿಚಾರಕ ಕರ್ಮದ ಬಗ್ಗೆ ಉಲ್ಲೇಖವಿದೆ. ತೈತ್ತಿರೀಯ ಬ್ರಾಹ್ಮಣದಲ್ಲಿ (ಕಾ. ೨ ಪ್ರ. ೪ ಅನು. ೨) ಅಭಿಚಾರಕೃತ್ಯ ಬೋಧಕವಾಕ್ಯಗಳಿವೆ. ಇನ್ನು ತಂತ್ರಶಾಸ್ತ್ರವೆಂದರೆ ಕೇವಲ ಅಭಿಚಾರಕ ಕರ್ಮ ಪ್ರತಿಪಾದಕವಾದುದೆಂದು ಹೇಳುವುದಾದರೋ ಭ್ರಾಂತಿಮೂಲಕವಾದುದೇ ಸರಿ! ಕಾಮಿಕ ಮೊದಲಾಗಿ ವಾತುಲಕಡೆಯಾದ ೨೮ ದಿವ್ಯತಂತ್ರಗಳು ಸಿದ್ಧಾಂತ ರೂಪವಾದವುಗಳಿರುತ್ತವೆ. ಅವುಗಳಲ್ಲಿ ಜ್ಞಾನ, ಜ್ಞೇಯ, ಅನುಷ್ಠೇಯ, ಅಧಿಕಾರಿ, ಸಾಧನ, ಸಾಧ್ಯಗಳೆಂಬ ಷಟ್ಪದಾರ್ಥಗಳ ಬೋಧವೇ ಮುಖ್ಯವಾಗಿರುವುದು. ಈ ಮೇಲೆ ಹೇಳಿದಂತೆ ಋಗಾದಿ ಸಂಹಿತೆಗಳಲ್ಲಿ ಅಭಿಚಾರಕ ಕರ್ಮ ಪ್ರತಿಪಾದನೆಗೆ ಸ್ವಲ್ಪವಾದರೂ ಆಸ್ಪದವಿದ್ದುದಾಗಿ ತಿಳಿದು ಬರುವುದು. ಕಾಮಿಕಾದಿ ಸಿದ್ಧಾಂತ ಸಂಹಿತೆಗಳಾದರೋ ಮದ್ದು ಮಾಟ ಮುಂತಾದ ಕೃತಿಗಳ ಗಾಳಿಯನ್ನು ಸಹ ಸೋಂಕಿಸಿಕೊಳ್ಳುವುದಿಲ್ಲ. ಮಂತ್ರಗಳಿಂದಲೂ ಔಷಧಿಗಳಿಂದಲೂ ಚೇತನಾಚೇತನ ರೂಪಗಳಾದ ವಿಷಗಳ ಪ್ರತೀಕಾರ, ಭೂತಬಾಲಗ್ರಹಗಳ ನಿವಾರಣ, ಅಪಸ್ಮಾರೋನ್ಮಾದ ಚಿಕಿತ್ಸೆ, ಜ್ವರಾದಿ ನಾನಾವಿಧ ರೋಗಗಳ ಪ್ರತೀಕಾರ, ಸ್ತಂಭನ, ವಶೀಕರಣ, ಉಚ್ಚಾಟನ, ಮಾರಣಾದಿಗಳು ಎಂಬೀ ಕೃತ್ಯಗಳನ್ನು ಸ್ವತಂತ್ರವಾಗಿ ಪ್ರತಿಪಾದಿಸತಕ್ಕ ತಂತ್ರಗಳೇ ಬೇರೆಯಾಗಿವೆ. ಅವು ವಿಜ್ಞಾನ ಕೇವಲವೆಂಬ ಆತ್ಮವರ್ಗದಲ್ಲಿಯ ಆಯಾ ನಾಮಧೇಯವುಳ್ಳವರಿಂದುಕ್ತವಾದ ಗಾರುಡ ದಕ್ಷಿಣ ವಾಮ ಭೂತಗಳೆಂದು ಪ್ರಸಿದ್ಧವಾಗಿರುವವು.

ಅಥಾಭಿಚಾರಾಃ ಶತ್ರೂಣಾಂ ವೇದಧರ್ಮ ದ್ರುಹಾಂಸ್ಮೃತಾಃ |

ಎಂಬ ವಾಕ್ಯಾನುಸಾರವಾಗಿ ವಿಷಪ್ರತೀಕಾರ ರೋಗ ಚಿಕಿತ್ಸಾದಿಗಳು ಸರ್ವ ಜನೋಪಕಾರಕಗಳಾಗಿಯೂ, ವಶೀಕರಣಾದಿಗಳು ಸ್ತ್ರೀಪುರುಷರ, ಪತಿಪತ್ನಿಯರ ಅನ್ಯೋನ್ಯ ಪ್ರೇಮವನ್ನು ದೃಢಪಡಿಸುವುದೇ ಮುಂತಾದ ಲೋಕಹಿತದ ಸಲುವಾಗಿಯೂ, ಸ್ತಂಭನ ಉಚ್ಚಾಟನ ಮಾರಣಾದ್ಯಭಿಚಾರಕ ಕರ್ಮಗಳು ವೇದ ಧರ್ಮ ದ್ರೋಹಿಗಳಾದ ಕ್ಷುದ್ರಜನರ ಪ್ರತೀಕಾರ (ದುಷ್ಟನಿಗ್ರಹ) ಕ್ಕಾಗಿಯೂ ಉಪಯೋಗವಾಗಿವೆ. ಅದು ಕಾರಣವೇ ಋಗಾದಿ ಸಂಹಿತೆಗಳಲ್ಲಿ ಆ ಕೃತ್ಯಗಳ ಪ್ರತಿಪಾದನೆಗೆ ಸ್ವಲ್ಪ ಅವಕಾಶವು ದೊರೆತಿರುವುದು. ಈ ರೀತಿಯಾಗಿ ಆ ಮದ್ದುಮಾಟಗಳೆಂಬ ಅಭಿಚಾರಕ ಕೃತಿಗಳನ್ನು ನಿರೂಪಿಸುವ ಋಗಾದಿ ವೇದಗಳು ಶಿಷ್ಟಪರಿಗ್ರಾಹ್ಯಗಳಾಗಿರುವಲ್ಲಿ, ಆ ಅಭಿಚಾರಕ ಕರ್ಮದ ವಿಚಾರದ ಸೋಂಕಿಲ್ಲದೆ ಕೇವಲ ವಿಮಲ ಜ್ಞಾನ ಪ್ರತಿಪಾದಕಗಳಾದ ಕಾಮಿಕಾದಿ ಸಿದ್ಧಾಂತಾಗಮಗಳು ಸರ್ವೈವ ಶಿಷ್ಟಜನ ಶಿರಸಾ ಮಾನ್ಯಗಳಾಗಿರುವವೆಂಬುದು ಕೈಮುತಿಕ ನ್ಯಾಯಸಿದ್ಧವು.

ವೈದಿಕ ಹಾಗೂ ತಾಂತ್ರಿಕವೆಂಬ ಎರಡು ಹೆಸರುಗಳಿಂದ ಪ್ರಸಿದ್ಧವಾದ ಶ್ರುತಿವಾಙ್ಮಯದ ಉತ್ಪತ್ತಿಯು ಜಗದುತ್ಪತ್ತಿಯೊಡನೆ ಆಯಿತೆಂಬ ಸಂಗತಿಯು ಉಭಯ ಶ್ರುತಿಗಳಲ್ಲಿಯ ವಾಕ್ಯಗಳಿಂದೇ ಸಿದ್ಧವಾಗುವುದು. ವೈದಿಕಶ್ರುತಿಯ ಉತ್ಪತ್ತಿಯ ವಿಷಯವಾಗಿ "**ತಸ್ಮಾದ್ಯಜ್ಞಾತ್ಸರ್ವಹುತ ಋಚಃ ಸಾಮಾನಿ ಜಜ್ಞಿರೆ**" (ಋ. ೧೦-೯೦) ಎಂಬೀ ಪುರುಷಸೂಕ್ತದ ಹೊರತಾಗಿ ಋಗ್ವೇದದಲ್ಲಿ ಇತರತ್ರ ಎಲ್ಲಿಯೂ ಉಲ್ಲೇಖವಿದ್ದುದು ಕಂಡುಬರುವುದಿಲ್ಲ. ಅಥರ್ವವೇದದಲ್ಲಿ ಜಗದಾಧಾರಭೂತವಾದುದೊಂದು ಸ್ತಂಭ (ಸ್ಕಂಭ) ವಿದೆಯೆಂದೂ ಅದರಿಂದ ವೇದೋತ್ಪತ್ತಿಯಾಯಿತೆಂದೂ ಹೇಳಲ್ಪಟ್ಟಿದೆ.

ಯತ್ರ ಋಷಯಃ ಪ್ರಥಮಜಾ ಋಚಃ ಸಾಮಯಜುರ್ಮಹೀ ಏಕರ್ಷಿ ಯಸ್ಮಿನ್ನಾಪಿತಃ ಸ್ಕಂಭಂ ತಂ ಬ್ರೂಹಿ ಕತಮಃ ಸ್ವಿದೇವ ಸಃ ||

ಮೊದಲು ಜನಿಸಿದವರಾದ ಋಷಿಗಳೂ (ವೀರ-ಸ್ಕಂದ-ನಂದ್ಯಾದಿ ಪ್ರಮಥರೂ), ಋಚೆಗಳೂ, ಯಜುಃ ಸಾಮಗಳೂ ಯಾವುದರಲ್ಲಿ ಹುಟ್ಟುತ್ತಿರುವವೋ, ವಿಸ್ತೀರ್ಣವಾದ ಪೃಥ್ವಿಯು ಯಾವುದನ್ನು ಆಶ್ರಯಿಸಿರುವುದೋ, ಒಬ್ಬಾನೊಬ್ಬ ಋಷಿಯು ಯಾವುದಕ್ಕೆ ಸರ್ವಸ್ವವನ್ನೂ ಅರ್ಪಿಸಿರುವನೋ ಆ (ಆಶ್ರಯಭೂತ ಕಂಬವನ್ನು ಸ್ತುತಿಸು; ಆ ಕಂಬರೂಪನಾದ ದೇವರು ಯಾವನಿರಬಹುದು? (ಅಥರ್ವ, ಸಂ. ೧೦-೭-೧೪).

ಈ ಮಂತ್ರದಲ್ಲಿ ಸೂಚಿತವಾದ ಸಕಲ ಭುವನಭವನಾರಂಭಮೂಲಸ್ತಂಭಾಯಮಾನವಾದ ವಸ್ತುವು ಪರಶಿವಚೈತನ್ಯವೇ ಎಂಬುದಾಗಿ ವಿದ್ಯೇಶ್ವರ ಸಂಹಿತೆಯ ೯ ನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಅದು ಹೇಗೆಂದರೆ: ಪ್ರಥಮಕಲ್ಪದಲ್ಲಿ ಬ್ರಹ್ಮನು, ಮತ್ತು ವಿಷ್ಣುವು, ನಾನು ಹೆಚ್ಚು, ತಾನು ಹೆಚ್ಚು ಎಂಬ ಹೆಮ್ಮೆಯಿಂದ ಜಗಳವಾಡತೊಡಗಲು ಆಗ ಪರಶಿವನು—

ತಯೋರ್ಮಾನಂ ನಿರಾಕರ್ತುಂ ತನ್ಮಧ್ಯೇ ಪರಮೇಶ್ವರಃ

ನಿಷ್ಕಲಸ್ತಂಭರೂಪೇಣ ಸ್ವರೂಪಂ ಸಮದರ್ಶಯತ್ ||೨೮||

ಎಂಬಂತೆ ಅವರೀರ್ವರ ಹೆಮ್ಮೆಯನ್ನು ಹೋಗಲಾಡಿಸುವುದಕ್ಕೋಸ್ಕರ ಅವರಿಬ್ಬರ ನಡುವೆ ನಿಷ್ಕಲವಾದ ಸ್ತಂಭರೂಪದಿಂದ (ಕಂಬದಾಕಾರವಾಗಿ) ಆವಿರ್ಭವಿಸಿ ತನ್ನ ಸ್ವರೂಪವನ್ನು ತೋರಿಸಿದನು. ಅಲ್ಲದೆ ಅವರೀರ್ವರನ್ನು ಕುರಿತು ಹೀಗೆ ಬೋಧಿಸಿದ್ದಾನೆ.

ಯದಿದಂ ನಿಷ್ಕಲಂ ಸ್ತಂಭಂ ಮಮ ಬ್ರಹ್ಮತ್ವಬೋಧಕಮ್ ||೪೧||

ಲಿಂಗಲಕ್ಷಣಯುಕ್ತತ್ವಾನ್ಮಮಲಿಂಗಂ ಭವೇದಿದಮ್ |

ತದಿದಂ ನಿತ್ಯಮಭ್ಯರ್ಚ್ಯಂ ಯುವಾಭ್ಯಾಮತ್ರಪುತ್ರಕೌ ||೪೨||

ನನ್ನ ಪುತ್ರರಾದ ಎಲೈ ಬ್ರಹ್ಮವಿಷ್ಣುಗಳೇ? ಸೃಷ್ಟ್ಯಾದಿಪಂಚಕೃತ್ಯಗಳಿಗೆ ನಾನೇ ಈಶನಾಗಿದ್ದೇನೆ. ಈ ಕೃತ್ಯಪಂಚಕವು ನನ್ನ ಹೊರತು ಮತ್ತೊಬ್ಬನಿಂದ ಆಗುವುದಿಲ್ಲ. ಆದಿಯಲ್ಲಿ ಬ್ರಹ್ಮತ್ವದ ನಿಜವಾದ ಜ್ಞಾನವು ನಿಮಗುಂಟಾಗಲೆಂಬ ಕಾರಣದಿಂದ ನಿಷ್ಕಲ ಬ್ರಹ್ಮದ (ಸ್ತಂಭದ) ಪ್ರಾದುರ್ಭಾವವಾದುದು. ಸ್ತಂಭವಾದರೋ (ಕೇವಲ ಭೌತಿಕಸ್ತಂಭವೇ ಅಲ್ಲ;) ಅದು ಶಿವಶಕ್ತ್ಯಾತ್ಮಕವಾದುದರಿಂದ) ಲಿಂಗಲಕ್ಷಣೋಪೇತವಾಗಿದೆ. ನಿಮಗೆ ವ್ಯಕ್ತರೂಪವಾಗಿ ದರ್ಶನವನ್ನೀಯುವುದಕ್ಕಾಗಿ ಆ ನಿಷ್ಕಲಸ್ವರೂಪನಾದ ಪರಶಿವನಾದ ನಾನೀಗ ನಿಮ್ಮೆದುರಿಗೆ ಮೂರ್ತರೂಪನಾಗಿದ್ದೇನೆ. ಬ್ರಹ್ಮಬೋಧಕವಾದ ಸ್ತಂಭವು ಲಿಂಗವಾದುದರಿಂದ ಆ ಲಿಂಗರೂಪನಾದ ನನ್ನನ್ನು ನೀವು ಯಾವಾಗಲೂ ಪೂಜಿಸಿರಿ.

ಈ ರೀತಿಯಾಗಿ "**ಜ್ವಲಾಯನಮಃ ಜ್ವಲಲಿಂಗಾಯನಮಃ**" ಎಂಬ ಉಪನಿಷದ್ವಚನದಿಂದಲೂ "**ತವಾತ್ಮಾನಂ ಯತ್ನಾದ್ಧದುಪರಿವಿರಿಂಚೋಹರಿರಧಃ | ಪರಿಚ್ಛೇತ್ತುಂ ಯಾತಾವನಲಮನಲಸ್ತಂಭವಪುಷಃ**" ಎಂಬ ಪುಷ್ಪದಂತನ ನುಡಿಯಿಂದಲೂ ಅಥರ್ವವೇದದಲ್ಲಿ ನಿರ್ದಿಷ್ಟವಾದ ಕಂಬವೆಂದರೆ ಶಿವಶಕ್ತ್ಯಾತ್ಮಕಲಿಂಗವೆಂದೇ ಸಿದ್ಧವಾಗುವುದರಿಂದ ವೈದಿಕೀಶ್ರುತಿಯ ಕರ್ತನು ಶಿವನೆಂಬುದೇ ಸಿದ್ಧಾಂತವು. ಬಾದರಾಯಣನು "**ಶಾಸ್ತ್ರಯೋನಿತ್ವಾತ್**" ಎಂಬ ಸೂತ್ರದಿಂದ ಪರಬ್ರಹ್ಮನಾಮಕ ಪರಶಿವನು **ವೇದ** ಮತ್ತು **ಸಿದ್ಧಾಂತ** ಎಂಬೀ ಉಭಯರೂಪಶಾಸ್ತ್ರಕ್ಕೆ ಕಾರಣನಾಗಿದ್ದಾನೆಂದು ಪ್ರತಿಪಾದಿಸಿರುವನು. ಆಶ್ವಲಾಯನ ಮುನಿಪ್ರಣೀತ ಧರ್ಮಶಾಸ್ತ್ರದ ೭ ನೆಯ ಅಧ್ಯಾಯದಲ್ಲಿ

ತಾವಲ್ಲೋಕಾಸ್ತ್ರಯೋವೇದಾಸ್ತ್ರಯೋ ದೇವಾಸ್ತ್ರಯೋಽಗ್ನಯಃ | ಶಿವಸೃಷ್ಟಾಃ ||

ಎಂದು ಶಿವನಿಂದ ವೇದಗಳು ಹುಟ್ಟಿರುವವೆಂಬ ಅಭಿಪ್ರಾಯವು ತೋರಿಸಲ್ಪಟ್ಟಿದೆ.

(ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಮಾನವಧರ್ಮ.

"ಲಿಂಗಾಂಕಂಚ ಭಗಾಂಕಂಚ ಜಗದೇತಚ್ಚರಾಚರಂ" ಎಂಬ ಭಾರತವಚನದಂತೆ ಶಿವಶಕ್ತಿಗಳಿಂದ ಸಮುತ್ಪನ್ನವಾದ ಜಗತ್ತಿನಲ್ಲಿ ಪುಣ್ಯಾಧಿಕ್ಯದಿಂದ ಈ ಮಾನವಜನ್ಮವು ಪ್ರಾಪ್ತವಾಗುವದು. ಇಂಥ ಮಾನವಪ್ರಾಣಿಗೆ ಅನಂತ ತೆರನಾದ ಜಾತಿಮತಭೇದಗಳು ಆಯಾ ಧರ್ಮಾಚಾರ್ಯರಿಂದುಕ್ತಗಳಾದ ಧರ್ಮ ಗ್ರಂಥಗಳಲ್ಲಿ ವಿಶದವಾಗಿ ವರ್ಣಿತವಾಗಿರುವವು. ಮಾನವಪ್ರಾಣಿಯು ಬಹುಜನರ ಮೆಚ್ಚುಗೆಗೂ ಪರಮಾತ್ಮನ ಕೃಪೆಗೂ ಪಾತ್ರನಾಗಬೇಕಾದರೆ ತನ್ನ ಜಾತಿ ಮತಧರ್ಮಗಳ ಜೊತೆಗೆ ನೈತಿಕಾಚಾರ (ನೀತಿಧರ್ಮ) ವನ್ನು ಅತ್ಯವಶ್ಯಕವಾಗಿ ಪಾಲನಮಾಡಲಿಕ್ಕೇಬೇಕು. ನೈತಿಕಾಚಾರವು ಒಂದೊಂದು ಜಾತಿ ಮತ ಪಂಗಡಗಳಿಗೆ ಸಂಬಂಧಿಸದೆ ಇಡೀ ಮಾನವವರ್ಗಕ್ಕೆ ಉಪಯುಕ್ತವಾದುದಾಗಿದೆ. ಇಂಥ ನೈತಿಕಾಚಾರವನ್ನೇ ಪೂರ್ವೋಕ್ತ ಗ್ರಂಥಾಧಾರದಿಂದ ಅಲ್ಪಮತಿಗನುಸಾರವಾಗಿ ಉಲ್ಲೇಖಿಸುವದೇ ಈ ಲೇಖಕನ ಮುಖ್ಯೋದ್ದೇಶವಾಗಿದೆ "ಶರೀರಮಾದ್ಯಂಖಲುಧರ್ಮಸಾಧನಂ" ಎಂಬ ವಚನದಂತೆ ಮಾನವನ ನಿತ್ಯಾನಂದ ಸುಖಪ್ರಾಪ್ತಿಗೆ ಸಾಧನೀಭೂತವಾದ ಜ್ಞಾನಕ್ರಿಯೆಗಳ ಸಂಗ್ರಹಕ್ಕೆ ಈ ದೇಹವೇ ಮುಖ್ಯಸಾಧನವಾಗಿದೆ. ಆದುದರಿಂದ ನಾವು ಈ ಶರೀರಾರೋಗ್ಯಭಾಗವನ್ನು ಕಾಪಾಡಿಕೊಳ್ಳುವದೇ ಧರ್ಮಸಾಧನದ ಪ್ರಥಮಸೋಪಾನವಾಗಿದೆ. "ಚಕ್ರೇಚಲತಿಸಂಸಾರಃ" ಎಂಬಂತೆ ನಾವು ಅಹೋ ರಾತ್ರಿ ಕೇವಲ ಸಂಸಾರಸಂಬಂಧವಾದ ಚಿಂತಾದಿಗಳಿಗೆ ಅವಕಾಶಕೊಟ್ಟದುದಾದರೆ ಮನೋವೇಗವು ತಡೆಯಿಲ್ಲದಂತಾಗಿ ಕರ್ಮಮಾರ್ಗಕ್ಕೂ ಜ್ಞಾನಸಾಧನೆಗೂ ಕುಂಠಿತವಾಗುವದು. ಮಾನವನಿಗೆ ಕರ್ಮಜ್ಞಾನಗಳ ಸೋಂಕು ಇಲ್ಲದಂತಾದೊಡೆ "ಜಾತಾಮೃತಾಃ ಪುನರ್ಜಾತಾಃ ಪುನರ್ಮರಣಭಾಜಿನಃ || ಭ್ರಮಂತಿ ಘೋರಸಂಸಾರೆ ವಿಶ್ರಾಂತಿಕಥಯಾವಿನಾ" ಎಂಬ ಸಿದ್ಧಾಂತ ಶಿಖಾಮಣಿಯ ಪ್ರಮಾಣದಂತೆ ಪಾರಂಪರ್ಯವಾಗಿ ಜನನಮರಣವನ್ನು ಪಡೆಯುತ್ತ ನಿಲುಕಡೆಯಿಲ್ಲದೆ ಜನನಮರಣಾತ್ಮಕವಾದ ಈ ಸಂಸಾರ ಸಾಗರದಲ್ಲಿ ವಿಶ್ರಾಂತಿಯಿಲ್ಲದೆ ತೊಳಲಿ ಬಳಲಿ ಬೀಳಬೇಕಾಗುತ್ತದೆ. ಅದು ಕಾರಣ ನಮಗೆ ಸಂಸಾರ ತಾಪಗಳು ಎಷ್ಟೇ ಇದ್ದಾಗ್ಯೂ, ಒಂದು ದಿವಸದಲ್ಲಿ ನಮಗೆ ದೊರೆತಷ್ಟು ಅಲ್ಪವೇಳೆಯನ್ನಾದರೂ ಪರಬ್ರಹ್ಮ ಚಿಂತನೆಯಲ್ಲಿ ಕಳೆಯಲಿಕ್ಕೇಬೇಕು. ಅಂದರೆ ನಮಗೆ ಒಂದು ತೆರನಾದ ಸುಖಾನಂದವು ಪ್ರಾಪ್ತವಾಗುವದು. ಈ ಪ್ರಕಾರ ಪರಬ್ರಹ್ಮ ಚಿಂತನೆಯಲ್ಲಿ ಕಾಲಯಾಪನೆಯನ್ನು ಮಾಡುವ ಮಾನವನ ವಿಷಯದಲ್ಲಿ "ಕುಲಂಪವಿತ್ರಂಜನನೀಕೃತಾರ್ಥಾ | ವಿಶ್ವಂಭರಾಪುಣ್ಯವತೀಚ ತೇನ || ಅಪಾರಸಚ್ಚಿತ್ಸುಖಸಾಗರೇಸ್ಮಿನ್ ಲೀನಂಪರಬ್ರಹ್ಮಣಿಯಸ್ಯಚೇತಃ" ಅಂದರೆ ಯಾವನ ಮನಸ್ಸು ಸದಾ ಸಚ್ಚಿದಾನಂದಸ್ವರೂಪನಾದ ಪರಬ್ರಹ್ಮಮೂರ್ತಿಯಲ್ಲಿ ಲೀನವಾಗಿರುವದೋ ಅವನ ಕುಲವೇ ಪವಿತ್ರವು; ಅವನನ್ನು ಹಡೆದ ತಾಯಿಯೇ ಧನ್ಯಳು; ಅವನು ಜನ್ಮಿಸಿದ ಭೂಮಿಯೇ ಪುಣ್ಯಮಯವಾದುದು; ಅಲ್ಲದೆ ಅವನು ಅಪಾರವಾದ ನಿತ್ಯಾನಂದ ಸುಖವನ್ನು ಹೊಂದುವನೆಂದು ಸೂತಸಂಹಿತಾವಚನವು ಸಾರುತ್ತಿರುವದು. ಆದುದರಿಂದ ಮಾನವ ಪ್ರಾಣಿಯು ಸಂಸಾರಯುಕ್ತನಾಗಿದ್ದಾಗ್ಯೂ, ಪರಬ್ರಹ್ಮ ಚಿಂತನೆಯಲ್ಲಿಯೇ ಕಾಲಕ್ಷೇಪಮಾಡುತ್ತ "ಅಹಿಂಸಾಸತ್ಯಮಸ್ತೇಯಂ ಬ್ರಹ್ಮಚರ್ಯಂದಯಾಕ್ಷಮಾ | ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯಸಂಗ್ರಹಃ" ಎಂಬ ಸಿದ್ಧಾಂತಶಿಖಾಮಣಿಯ ವಚನದಂತೆ ಹಿಂಸೆಯನ್ನು ಮಾಡದೆ, ಅಸತ್ಯವನ್ನು ನುಡಿಯದೆ, ಕಳ್ಳತನವನ್ನು ಮಾಡದೆ, ಬ್ರಹ್ಮಚರ್ಯವ್ರತವನ್ನು ಪಾಲನ ಮಾಡುತ್ತ (ಇಲ್ಲಿ ಸಂಸಾರಿಗೆ ಬ್ರಹ್ಮಚರ್ಯವ್ರತವೆಂದರೆ ಸಪತ್ನೀವ್ರತವೆಂದೇ ಹೇಳಬೇಕಾಗುತ್ತದೆ.) ಪ್ರಾಣಿದಯೆ, ಕ್ಷಮೆ, ಸತ್ಪಾತ್ರದಾನ, ಶಿವಲಿಂಗಪೂಜಾ, ಶಿವಮಂತ್ರಜಪ, ಶಿವಧ್ಯಾನ ಈ ಹತ್ತು ಸದ್ಧರ್ಮಗಳನ್ನು ಪಾಲನಮಾಡುತ್ತ "ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿ ಲೋಷ್ಟವತ್ | ಆತ್ಮವತ್ಸರ್ವಭೂತಾನಿ ಯಃಪಶ್ಯತಿ ಸಧರ್ಮರಾಟ್" ಎಂಬಂತೆ ಪರಸ್ತ್ರೀಯರನ್ನು ತಾಯಿಯ ಸಮಾನವಾಗಿಯೂ, ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆಯೂ, ಸರ್ವಪ್ರಾಣಿಗಳನ್ನು ತನ್ನಂತೆಯೂ ಯಾವನು ತ್ರಿಕರಣಶುದ್ಧಿಯಿಂದ ತಿಳಿದು ವರ್ತಿಸುವನೋ ಅವನೇ ಸದ್ಧರ್ಮಿ ಎನಿಸಿಕೊಳ್ಳುವನು. ಈ ರೀತಿ ಬಹುಜನರಿಗೆ ಪ್ರಿಯಕರವೂ ಪರಮಾತ್ಮನ ಮೆಚ್ಚುಗೆಗೆ ಸಾಧಕವೂ ಆದ ಸದ್ಧರ್ಮರೂಪ ನೈತಿಕಾಚಾರವನ್ನೊಳಗೊಂಡು ತಮ್ಮ ತಮ್ಮ ಸಾಂಪ್ರದಾಯಾನುಸಾರವಾಗಿ ಜಾತಿಮತಧರ್ಮಗಳನ್ನು ಪಾಲಿಸಬೇಕು. ಇನ್ನು ಜಾತಿ ಮತಧರ್ಮಗಳಲ್ಲಿ "ನವೀರಶೈವ ಸದೃಶಂ ಮತಮಸ್ತಿಜಗತ್ರಯೆ" ಮತ್ತು "ಏಕೇನ ಜನ್ಮನಾ ಮುಕ್ತಿರ್ವೀರಶೈವಾಂತು ಮಹೇಶ್ವರಿ" ಹಾಗೂ "ಅಲ್ಪಕ್ರಿಯಂ ಬಹುಫಲಂ ವೀರಶೈವಂ ಮಹೇಶ್ವರಿ" ಅಂದರೆ ಈ ವೀರಶೈವ ಮತಕ್ಕೆ ಸಮಾನವಾದ ಮತವು ತ್ರಿಭುವನಗಳಲ್ಲಿಯೂ ಇಲ್ಲವೆಂತಲೂ, ವೀರಶೈವರಿಗೆ ಒಂದೇ ಒಂದು ಜನ್ಮದಲ್ಲಿ ಮುಕ್ತಿಯು ದೊರೆಯುವದೆಂತಲೂ, ವೀರಶೈವ ಧರ್ಮವು ಕ್ರಿಯಾಬಾಹುಳ್ಯವಿಲ್ಲದೆ ವಿಶೇಷ ಫಲಪ್ರದವಾಗಿದ್ದಾಗಿರುವದೆಂತಲೂ ಅನೇಕ ಶಿವಾಗಮವಾಕ್ಯಗಳು ಸಾರುತ್ತಿರುವವು. ಮತ್ತು ವ್ಯಾಸಮಹರ್ಷಿಗಳು ಅರ್ಥಹೀನಾಯಥಾವಾಣೀ ಧರ್ಮಹೀನಾಯಥಾತನುಃ | ಪತಿಹೀನಾಯಥಾನಾರೀ ಶಿವಹೀನಾ ತಥಾ ಕ್ರಿಯಾ 'ಅರ್ಥಜ್ಞಾನವಿಲ್ಲದ ವಿದ್ಯೆಯು, ಸದ್ಧರ್ಮಾಚರಣೆಯಿಲ್ಲದ ಶರೀರವು, ಪತಿರಹಿತಳಾದ ಸ್ತ್ರೀಯಳಜನ್ಮವು ಹೇಗೆ ವ್ಯರ್ಥವೋ ತದ್ವತ್ ಶಿವಭಕ್ತಿರಹಿತವಾದ ಕ್ರಿಯೆಯು ವ್ಯರ್ಥವೆಂದು ಹೇಳಿರುವರು. ಅತ್ಯುದಾತ್ತತತ್ವಗಳಿಂದೊಡಗೂಡಿದ ಪರಮಪವಿತ್ರವಾದ ವೀರಶೈವಮತದಲ್ಲಿ ಜನ್ಮಿಸಿದ ಮಾನವನೇ ಧನ್ಯನು. ಇಂಥ ಧರ್ಮವನ್ನು ಭೂಮಂಡಲದಲ್ಲಿ ನೆಲೆಗೊಳಿಸಿದ ಪರಬ್ರಹ್ಮಸ್ವರೂಪಿಗಳಾದ ಶ್ರೀಜಗದ್ಗುರು ಪಂಚಾಚಾರ್ಯರೇ ಮಾನ್ಯರು. ವೀರಶೈವನಾದವನು ಪೂರ್ವಾಚಾರ್ಯರಿಂದ ಸ್ಥಾಪಿತವಾದ ಷಟ್ಸ್ಥಲಾಚರಣೆಯಲ್ಲಿ ನಿರತನಾಗಿಯೂ ಅಷ್ಟಾವರಣಗಳಲ್ಲಿ ನಿಷ್ಠೆಯುಳ್ಳವನಾಗಿಯೂ "ಮದ್ಯಪಾಸೀಮಾಂಸಭಕ್ಷೀ ಚಾನ್ಯದೇವಸ್ಯಪೂಜಕಃ | ಅಲಿಂಗೀಚದುರಾಚಾರೀ ಸಂಸ್ಪೃಶ್ಯೇ ಭವಿನಸ್ಸ್ಮೃತಾಃ" ಎಂಬ ಆರ್ಯೋಕ್ತಿಯಂತೆ ಮದ್ಯಮಾಂಸಾಹಾರಿಗಳಲ್ಲಿಯೂ ಶಿವೇತರ ದೇವತೆಗಳನ್ನು ಪೂಜಿಸುವವರಲ್ಲಿಯೂ ಲಿಂಗಧಾರಿಗಳಲ್ಲದವರಲ್ಲಿಯೂ (ಲಿಂಗಧಾರಿಗಳಾಗಿ ಲಿಂಗಬಿಟ್ಟುತಿರುಗುವವರಲ್ಲಿಯೂ) ದುರಾಚಾರಿಗಳಲ್ಲಿಯೂ ಈ ಐದು ಪ್ರಕಾರದ ಭವಿಜನರ ಮನೆಗಳಲ್ಲಿ ಅನ್ನಪಾನಾದಿಗಳನ್ನು ಗ್ರಹಿಸದೆ ಪಂಚಾಚಾರಪರಾಯಣರಾಗಿ ವರ್ತಿಸಿ ಈ ಮಾನವಜನ್ಮದ ಸಾರ್ಥಕ್ಯವನ್ನು ಪಡೆಯಬೇಕೆಂದು ಸಮಸ್ತಮಾನವ ವರ್ಗಕ್ಕೂ ನನ್ನ ವಿನಯಪ್ರಾರ್ಥನೆ.

ಗುರುಭಕ್ತಕೇಸರಿ ಪಟ್ಟಣ.

ಶ್ರೀಜಗದ್ಗುರು ಪಂಚಾಚಾರ್ಯ ಪ್ರಸೀದತು

ಉಜ್ಜಯಿನೀಸಂಸ್ಥಾನದ ಪ್ರತಿನಿಧಿಗಳ ಆಗಮನ.

ಮೊದಲೇ ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ಸವಾರಿಯು ದಜಾಗಗಾ ಮಠದಿಂದ 8 ನೇ ತಾರೀಖಿಗೆ ಸರ್ವ ಸಿಬ್ಬಂದಿಯೊಡನೆ ದೇವದುರ್ಗ ತಾಲೂಕು ಪೈಕಿ ಅರಕೇರಿ ಗ್ರಾಮಕ್ಕೆ ದಯಮಾಡಿಸುವದರೊಳಗಾಗಿ ಸದರಿ ಗ್ರಾಮದ ಮಠಸ್ಥರು ವಕೀಲ ಮಲ್ಲಣ್ಣನಾಯ್ಕ ಇವರೇ ಮೊದಲಾದ ಸರ್ವ ಪ್ರಮುಖಜನಗಳು ಸರ್ಕಾರಿ ಪೋಲೀಸು ದಫೇದಾರ ಮೊದಲಾದ ಮಹಾಶಯರು ಮಾರ್ಗಪರೀಕ್ಷಣೆಯನ್ನು ಮಾಡುತ್ತಿರುವಷ್ಟರಲ್ಲಿ ಸವಾರಿಯು ದಯಮಾಡಿಸಿದ ಕೂಡಲೆ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕಿ ಜೈ ಎಂದು ಜಯಘೋಷಮಾಡಿದರು. ಅನಂತರ ಶ್ರೀಗಳವರ ಉತ್ಸವವು ಕಳಶ.ತೋರಣಾದಿಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟ ಪುರದಲ್ಲಿ ಸಕಲ ಬಿರುದಾವಳಿಗಳೊಡನೆ ಸಾಯಂಕಾಲ 7 ಘಂಟೆಗೆ ಹೊರಟು ಅಲ್ಲಿಯಹಿರೇಮಠಕ್ಕೆ 9 ಘಂಟೆಗೆ ತಲುಪಿತು. ಭಕ್ತರು ಅತಿ ಭಕ್ತಿಯಿಂದ ರಚಿಸಿದ ಸಿಂಹಾಸನದಲ್ಲಿ ಸವಾರಿಯು ಮೂರ್ತಮಾಡಿದ ಕೂಡಲೆ ಸರ್ವರೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಜಯಕಾರವನ್ನು ಮಾಡಿದರು. ಅನಂತರ ವೇ|| ಸಾ ವಿಟಂಟಗುರೂಜಿ ಹಿರೇಮಠ ಬೆಳವಣಿಕಿ ಇವರು ಸಂಸ್ಥಾನದ ಸಂಕ್ಷಿಪ್ತಚರಿತ್ರವನ್ನೂ ಮತ್ತು ಸವಾರಿಯು ದಯಮಾಡಿಸಿದ ಕಾರಣವನ್ನೂ ಸಕಲ ಭಕ್ತಮಂಡಲಿಗೆ ತಿಳಿಯುವಂತೆ ಉಪನ್ಯಾಸಮಾಡಿದರು. ಅನಂತರ ವೇ|| ಟಿ. ಹೆಚ್. ಎಂ. ಪಂಚಾಕ್ಷರಶರ್ಮ ಮುನಸಿ, ಉಜ್ಜಯಿನಿ ಇವರು ಉಪಸಂಹಾರಭಾಷಣವನ್ನು ಮಾಡಿ ಮಂಗಲವಾದನಂತರ ಸಮಸ್ತ ಭಕ್ತರು ಪಲಾಶೀರ್ವಾದವನ್ನು ಹೊಂದಿ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ನೈಜಾಂಪ್ರಾಂತದ ಭಕ್ತಶಿರೋಮಣಿಗಳಾದ ವೀರಶೈವ ಮಹಾಶಯರೇ? ಮಹಾಸವಾರಿಯು ಶಿಥಿಲವಾದ ಸಂಸ್ಥಾನದ ಕಟ್ಟಡದ ವಿಷಯವಾಗಿ ದಯಮಾಡಿಸಿದ್ದಾಗಿದೆ. ಆದಪ್ರಯುಕ್ತ ಸರ್ವಭಕ್ತಮಂಡಲಿಯವರು ಅರಕೇರಿ ಭಕ್ತರಂತೆ ಅತಿ ಭಕ್ತಿಯಿಂದ ಗುರುಸೇವೆಯನ್ನು ಮಾಡಿ ಸಂಸ್ಥಾನದ ಜೀರ್ಣೋದ್ಧಾರಕ್ಕಾಗಿ ಶಕ್ತಿಮೀರಿ ಸಹಾಯಮಾಡಿ ಮುಕ್ತಿಭಾಗಿಗಳಾಗಬೇಕೆಂದು ಕೋರುತ್ತೇನೆ.

R. S. Mallanna Naik
ಸಿದ್ಧಲಿಂಗಪ್ಪಾ ಪೋ|| ಪಾಟೀಲ.

ಪಂಚಾಚಾರ್ಯ ಪ್ರಭಾ

೧೯೨೯ನೇ ಡಿಸೆಂಬರ್ ತಾ|| ೨ನೇ ಸೋಮವಾರ

ಧರ್ಮ.

ತಸ್ಮಾದ್ಧರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ ।
ಧರ್ಮಸ್ಯ ಹಿ ಸಹಾಯೇನ ತಮಸ್ತರತಿ ದುಸ್ತರಂ ||

ವೇದಧರ್ಮಾವಲಂಬಿಯಾದ ಪ್ರತಿಯೊಬ್ಬ ಮನುಷ್ಯನೂ ಮೆಲ್ಲಮೆಲ್ಲಗೆ ಆದಷ್ಟುಮಟ್ಟಿಗೆ ಧರ್ಮವನ್ನು ಸಂಗ್ರಹಿಸಬೇಕು. ಮಾನವನು ಈ ಧರ್ಮ ಸಹಾಯದಿಂದ ದುಃಖದಿಂದ ದೂರನಾಗಿ ನಿರತಿಶಯವಾದ ಸೌಖ್ಯವನ್ನು ಪಡೆಯುವನು. ಯಾವನಿಗೆ ಧರ್ಮದಲ್ಲಿ ಶ್ರದ್ಧೆಯಿಲ್ಲವೋ ಅವನು ಮನುಷ್ಯಯೋನಿಯಲ್ಲಿ ಜನಿಸಿದ್ದರೂ ಸಹ ದ್ವಿಪಾದಪಶುಪ್ರಾಯನೆಂದೇ ಹೇಳಿಸಿಕೊಳ್ಳುವನು. ಮನುಷ್ಯನ ಉಚ್ಚನೀಚಗತಿಗಳಿಗೆ ಆವರವರ ಧರ್ಮಾಧರ್ಮಗಳೇ ಕಾರಣಗಳಾಗಿವೆ. ಧರ್ಮವು ಉಚ್ಚಗತಿಯನ್ನುಂಟುಮಾಡುವದು. ಅಧರ್ಮವು ನೀಚಗತಿಯನ್ನುಂಟುಮಾಡುವುದು. ಆದ್ದರಿಂದಲೇ ಮನುಷ್ಯನು ಅವಶ್ಯಸಂಗ್ರಹಿಸಬೇಕಾದ ಚತುರ್ವಿಧ ಪುರುಷಾರ್ಥಂಗಳೊಳಗೆ ಈ ಧರ್ಮವೂ ಕೂಡ ಒಂದು ಪುರುಷಾರ್ಥವಾಗಿ ಪರಿಗಣಿಸಲ್ಪಟ್ಟಿರುವದು. ಪ್ರಪಂಚದಲ್ಲಿ ಯಾವುದಾದರೂ ಅಲ್ಪಸ್ವಲ್ಪ ದ್ರವ್ಯವನ್ನು ದಾನ ಮಾಡಿದರೆ ಅದನ್ನೇ ಧರ್ಮವೆಂದು ಸಾಮಾನ್ಯವಾಗಿ ಹೇಳುವ ಸಂಪ್ರದಾಯವುಂಟು. ಶಾಸ್ತ್ರಕಾರರು ಇದನ್ನೊಂದನ್ನು ಮಾತ್ರ ಧರ್ಮವೆಂದು ಹೇಳಿರುವುದಿಲ್ಲ. ತನ್ನವರ್ಣಾಶ್ರಮಗಳಿಗನುಸಾರವಾಗಿ ತಾನು ಆಯಾ ಕಾಲಗಳಲ್ಲಿ ಆಚರಿಸಬೇಕಾದ ನಿತ್ಯನೈಮಿತ್ತಿಕಾದಿ ಕರ್ಮಗಳೆಲ್ಲವೂ ಧರ್ಮಗಳೆಂದೇ ಹೇಳಿಸಿಕೊಳ್ಳಲ್ಪಡುವವು. ಮಾನವನು ಮೊದಲು ಧರ್ಮಜಿಜ್ಞಾಸೆಯನ್ನು ಮಾಡಿದ ಬಳಿಕ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಯಾಗುವನು. "ಅಥಾತೋ ಧರ್ಮಜಿಜ್ಞಾಸಾ" ಎಂದು ಜೈಮಿನ್ಯಾಚಾರ್ಯರು ಸಹ ಇದೇ ಅಭಿಪ್ರಾಯವನ್ನು ತೋರಿಸಿರುವರು. ಸಾಮಾನ್ಯವಾಗಿ ಪ್ರಾಣಿವರ್ಗವು ಅನೇಕ ಜನ್ಮಗಳಲ್ಲಿ ಪುಣ್ಯಕರ್ಮಗಳನ್ನಾಚರಿಸಿ ಆ ಪುಣ್ಯಕರ್ಮಗಳ ವಾಸನಾನುಸಾರವಾಗಿ ಮಾನವ ಜನ್ಮವನ್ನು ಧರಿಸುತ್ತದೆ. ಇಂಥ ಮಾನವಜನ್ಮವನ್ನು ಧರಿಸಿದ ಮೇಲೆ ಈ ಧರ್ಮಾಧರ್ಮಗಳ ವಿಚಾರವಂತೂ ಅತ್ಯಾವಶ್ಯಕವಾಗಿದೆ. ಮಾನವಸ್ತ್ರೀ ಗರ್ಭದಲ್ಲಿ ಶಿಶುವು ಪಿಂಡರೂಪದಿಂದ ಎಂದು ಉದಯಿಸುತ್ತದೆಯೋ ಅಂದಿನಿಂದಲೂ ಆ ಪಿಂಡವು ನಿರ್ದುಷ್ಟವಾಗಿ ಬೆಳೆದು ಬೈಜಿಕದೋಷಪರಿಹಾರಾರ್ಥವಾಗಿ ಆಯಾಯ ಕಾಲಗಳಲ್ಲಿ ನಡೆಯಿಸಬೇಕಾದ ಸೀಮಂತ ಪುಂಸವನಾದಿ ಸಕಲ ವೈದಿಕ ಸಂಸ್ಕಾರಗಳೆಲ್ಲವೂ ನಡೆಯಲೇಬೇಕಾಗುತ್ತವೆ. ಇಂಥ ನಿತ್ಯನೈಮಿತ್ತಿಕಾದಿ ಕರ್ಮಗಳು ಸಹ ಧರ್ಮಗಳೆಂದು ಹೇಳಿಸಿಕೊಳ್ಳಲ್ಪಡುವುವು. ಇಂಥ ವೈದಿಕಧರ್ಮಗಳು ಯಾವನಿಗೆ ತಪ್ಪದೆ ಆಯಾಯ ಕಾಲದಲ್ಲಿ ವಿಧ್ಯುಕ್ತವಾಗಿ ನಡೆಯುವವೋ ಅಂಥವನ ಆತ್ಮವು ದಿನೇ ದಿನೇ ಪರಿಶುದ್ಧವಾಗಿ ಪರಮಾತ್ಮಾಭಿಮುಖವಾಗುತ್ತ ಬರುವದು. ಈ ವೈದಿಕಧರ್ಮಗಳಿಲ್ಲದವನು ಪರಶಿವಬ್ರಹ್ಮಾರಾಧನೆಗೆ ಯೋಗ್ಯನಾಗುವುದಿಲ್ಲವು. ಪರಮಾತ್ಮನಿಗೂ ವೈದಿಕ ಧರ್ಮಗಳಿಗೂ ಪರಸ್ಪರ ಸಂಬಂಧವಿರುತ್ತದೆ. ಧರ್ಮವಿಲ್ಲದೆ ಬ್ರಹ್ಮವಿಚಾರಕ್ಕೆ ಅರ್ಹನಾಗುವುದಿಲ್ಲ. ಆರಾಧ್ಯವಾದ ವಸ್ತುವು ಆರಾಧನೆಯ ಹೊರತು ಸಿದ್ಧಿಸುವುದಿಲ್ಲವು. ಇಲ್ಲಿ ಬ್ರಹ್ಮವೇ ಆರಾಧ್ಯವು: ಧರ್ಮವೇ ಆರಾಧನವು. ಭಾಷ್ಯಕಾರರು ಧರ್ಮ ಬ್ರಹ್ಮ ವಿಚಾರಗಳೆರಡಕ್ಕೂ ಏಕಶಾಸ್ತ್ರವೇ ಹೊರತು ಭಿನ್ನಶಾಸ್ತ್ರವಿಲ್ಲವೆಂದು ಪ್ರತಿಪಾದಿಸಿರುವದರಿಂದ ಧರ್ಮವಿಚಾರವನ್ನು ಬಿಟ್ಟು ಬ್ರಹ್ಮವಿಚಾರವು ಸಂಘಟಿಸುವುದಿಲ್ಲವಾದ ಪ್ರಯುಕ್ತ ಯಾರು ಶಿವನನ್ನು ತಿಳಿಯಲಪೇಕ್ಷಿಸುವರೋ ಅವರು ಧರ್ಮವಿಚಾರವನ್ನು ಮಾಡಲೇಬೇಕಾಗಿದೆ. ಆದ್ದರಿಂದ "ಧರ್ಮಬ್ರಹ್ಮಣೋಃ ರಾರಾಧನಾರಾಧ್ಯಭೂತಯೋಃ" ಎಂದು ಇದೇ ಅರ್ಥದಲ್ಲಿ ಭಾಷ್ಯಕಾರರ ಪಂಕ್ತಿ ಇರುವುದರಿಂದಲೂ ಶಿವಶಬ್ದವಾಚ್ಯವಾದ ಬ್ರಹ್ಮಕ್ಕೂ ಧರ್ಮಕ್ಕೂ ಅತ್ಯಂತ ಸವಿಸಾಪ ಸಂಬಂಧವಿರುವುದರಿಂದಲೂ ಶಿವನನ್ನು ಆರಾಧಿಸುವವರು ತಮ್ಮತಮ್ಮ ಮತಕ್ಕೆ ವಿರುದ್ಧಗಳಲ್ಲದ ನಿತ್ಯನೈಮಿತ್ತಿಕಾದಿ ವೈದಿಕಧರ್ಮಗಳನ್ನು ಆಚರಿಸುತ್ತಿರಬೇಕು. ಯಾರಿಗೆ ಸೀಮಂತಾದಿ ವೈದಿಕಧರ್ಮಗಳು ನಡೆಯುವುದಿಲ್ಲವೋ ಅವರ ಗರ್ಭದಿಂದುದಯಿಸುವ ಆ ಪಿಂಡವು ಜಾತಕರ್ಮಾದಿಗಳಿಗೆ ಯೋಗ್ಯವಾಗುವುದಿಲ್ಲವು. ಯಾವ ಶಿಶುವಿಗೆ ಜಾತಕರ್ಮಾದಿ ವೈದಿಕಧರ್ಮಗಳು ನಡೆದಿರುವುದಿಲ್ಲವೋ ಮುಂದೆ ಆ ಶಿಶುಗಳು ದೀಕ್ಷಾದಿಗಳಿಗೆ ಅರ್ಹಗಳಾಗುವುದಿಲ್ಲವು. ಯಾರು ದೀಕ್ಷಾರ್ಹರಲ್ಲವೋ ಅವರು ಬ್ರಹ್ಮವಿದ್ಯೆಗೆ ಅಧಿಕಾರಿಗಳಾಗುವುದಿಲ್ಲವು. ಯಾರು ಬ್ರಹ್ಮವಿದ್ಯೆಗೆ ಅಧಿಕಾರಿಗಳಲ್ಲವೋ ಅವರು ಶಿವಪೂಜಾಧಿಕಾರಿಗಳಾಗುವುದಿಲ್ಲವು. ಹೀಗೆ ಬ್ರಹ್ಮವಿದ್ಯೆಯೆಂಬುವದು ಗರ್ಭಾದಾನಾದಿ ವೈದಿಕ ಧರ್ಮಾಚರಣಗಳೆಂಬ ಆಧಾರದಲ್ಲಿಯೇ ಇರುವುದರಿಂದ ಈ ಧರ್ಮವನ್ನು ಬಿಟ್ಟು ಬ್ರಹ್ಮವಿದ್ಯೆಯನ್ನು ಪಡೆಯುತ್ತೇನೆಂಬುವನು ಅಕ್ಷರಾಭ್ಯಾಸವನ್ನು ಮಾಡದೆ ಗ್ರಂಥವನ್ನು ಓದುತ್ತೇನೆಂದು ಹೇಳುವವನಂತೆ ಹಾಸ್ಯಾಸ್ಪದನಾಗುವನು. ಪಾಠಶಾಲೆಗಳಲ್ಲಿ ಮುಂದುಮುಂದಣ ತರಗತಿಗಳಿಗೆ ಹಿಂದುಹಿಂದಣ ತರಗತಿಗಳ ಜ್ಞಾನವು ಹೇಗೆ ಆವಶ್ಯಕವೋ ಹಾಗೆ ಮುಂದುಮುಂದಣ ಪರಮಾತ್ಮವಿಚಾರ ಪರಶಿವಾರಾಧನ ಪರಶಿವಧಾರಣಾದಿಗಳಿಗೆ ಹಿಂದುಹಿಂದಣ ಗರ್ಭಾದಾನ ಸೀಮಂತ ಪುಂಸವನ ಜಾತಕರ್ಮಾದಿ ವೈದಿಕಧರ್ಮಗಳು ಕಾರಣಗಳಾಗಿರುತ್ತವೆ. ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಗುವದಿಲ್ಲವೆಂಬ ಲೋಕಾನುಭವದಿಂದಲೂ ಅಂಗಶಬ್ದವಾಚ್ಯನಾದ ಜೀವನಿಗೆ ಅನಂತ ಜನ್ಮಗಳಲ್ಲಿ ಆವರಿಸಿದ ಪಾಶಪಟಲವು ನಷ್ಟವಾಗಿ ಪರಿಶುದ್ಧಾತ್ಮನಾಗಿ ವೇದಾಂತಶಾಸ್ತ್ರಕ್ಕಧಿಕಾರಿಯಾಗಬೇಕಾದರೆ ಪೂರ್ವಭಾವಿಯಾದ ಧರ್ಮಸಂಸ್ಕಾರಗಳನ್ನು ಪಡೆಯಲೇಬೇಕು. ಹುಟ್ಟಿದಂದಿನಿಂದ ಯಾವುದೊಂದೂ ಸಂಸ್ಕಾರವಿಲ್ಲದೆ ಶಿವಲಿಂಗಪೂಜೆಯನ್ನು ಮಾಡುವದಾಗಲಿ, ಶಿವಲಿಂಗ ವಿಚಾರವಾಗಲಿ ಎಲ್ಲವೂ ವ್ಯರ್ಥವಾಗುವುದು. ಪ್ರಕೃತದಲ್ಲಿ ಪರಮವೈದಿಕಮತವೆನಿಸಿದ ವೀರಶೈವ ಮತದಲ್ಲಿ ಜನ್ಮವೆತ್ತಿದ್ದರೂ ಗರ್ಭನೊವಲುಮಾಡಿಕೊಂಡು ಯಾವಾಗಲೂ ಯಾವುದೊಂದೂ ವೈದಿಕಧರ್ಮಸಂಬಂಧವಾದ ಸಂಸ್ಕಾರವಿಲ್ಲದೆ ಬಾಯಲ್ಲಿ ಮಾತ್ರ ವೀರಶೈವರೆಂದು ಹೇಳಿಕೊಳ್ಳುತ್ತ ಬಂದರೆ ಅನ್ವರ್ಥಕವಾಗಲಾರದು "ಅತಪ್ತತನೂರ್ನತದಾಮೋ ಅಶ್ನುತೇ" ಸಂಸ್ಕಾರರೂಪಧರ್ಮಾಚರಣೆಯಿಲ್ಲದವನು ಪರಶಿವಲಿಂಗದ ಸ್ವರೂಪವನ್ನು ಎಂದಿಗೂ ತಿಳಿಯಲಾರನು ಎಂದು ಶ್ರುತಿಯೂ ಸಹ ಇದೇ ಅರ್ಥವನ್ನು ಹೇಳುತ್ತದೆ. ಆದ್ದರಿಂದ ಪ್ರತಿಯೊಬ್ಬ ವೀರಶೈವರೂ ತಮ್ಮ ತಮ್ಮ ಮಕ್ಕಳಿಗೆ ಆಯಾಯ ಕಾಲಗಳಲ್ಲಿ ಮಾಡಬೇಕಾದ ಬ್ರಹ್ಮವಿಚಾರ ಯೋಗ್ಯತೆಯನ್ನುಂಟುಮಾಡುವ ಗರ್ಭಾದಾನ ಪುಂಸವನ ಸೀಮಂತ ಗರ್ಭದೀಕ್ಷೆ ಜಾತಕರ್ಮ ನಾಮಕರಣ ಅನ್ನಪ್ರಾಶನ ಮೊದಲಾದ ಸಂಸ್ಕಾರರೂಪ ವೈದಿಕವಾದ ಧರ್ಮಾಚರಣೆಯನ್ನು ತಪ್ಪದೆ ನಡೆಯಿಸುತ್ತ ಎಂಟನೆಯ ವರ್ಷದಿಂದ ತಮ್ಮ ತಮ್ಮ ಗೋತ್ರಗುರುಗಳೆನಿಸಿದ ಪಟ್ಟಚರಾಧಿಪತಿಗಳನ್ನು ಬರಮಾಡಿಕೊಂಡು ವಟುಗಳಿಗೆ ವಿಧ್ಯುಕ್ತವಾಗಿ ಶಿವದೀಕ್ಷೆಯನ್ನು ಮಾಡಿಸಿ ಆಶ್ರಮಧರ್ಮಗಳನ್ನರುಹಿ ಧರ್ಮಾಚರಣೆಯಲ್ಲಿ ನಿರತರಾಗುವಂತೆ ಪಂಚಾಚಾರ್ಯರು ಸರ್ವರಿಗೂ ಸದ್ಬುದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ತುಮಕೂರಿನ ಸನಾತನ ಧರ್ಮಾವಲಂಬಿಗಳೆಲ್ಲರೂ ಕಳೆದ ತಿಂಗಳು 27ನೆಯ ಬುಧವಾರ ಸಭೆಸೇರಿ ಶಾರದಾ ಬಿಲ್ಲನ್ನು ಏಕವಾಕ್ಯದಿಂದ ನಿಷೇಧಿಸಿರುವರು.

ಶಿವಮೊಗ್ಗಾ ಡಿ|| ಚನ್ನಗಿರಿಯಲ್ಲಿ ಶ್ರೀ|| ಸಾವಿತ್ರಮ್ಮನೆಂಬ ಸಾಧ್ವೀಮಣಿಯ ಅಧ್ಯಕ್ಷತೆಯಲ್ಲಿ ಸ್ತ್ರೀಯರೆಲ್ಲರೂ ಸಭೆಸೇರಿ, ಶಾರದಾಬಿಲ್ಲನ್ನು ನಿಷೇಧಿಸಿರುವರು.

ಮೈಸೂರು ಸರ್ಕಾರದ ಗಂಧದೆಣ್ಣೆಯ ವ್ಯಾಪಾರ ಸಂಬಂಧವಾಗಿ ಇಂಗ್ಲೆಂಡಿಗೆ ಹೋಗಿರುವ ಮಿ|| ಎಸ್. ಮಾಧವರಾಯರು ನಾಳೆ ಮಂಗಳವಾರ ಬೆಂಗಳೂರಿಗೆ ಬರುವವರಾಗಿರುತ್ತಾರೆ.

ಹಾಸನ ಡಿ|| ಕೊರವಂಗಲ ಗ್ರಾಮದಲ್ಲಿರುವ ನಾಕೇಶ್ವರದೇವಸ್ಥಾನವನ್ನೂ ಗೋವಿಂದೇಶ್ವರದೇವಸ್ಥಾನವನ್ನೂ ಆದರ ಪ್ರಾಕಾರ ಮತ್ತು ಕೊಳಗಳನ್ನೂ ಪುರಾತನಕಾಲದ ಕಟ್ಟಡಗಳನ್ನಾಗಿ ಕಾಪಾಡತಕ್ಕದ್ದೆಂದು ಸರಕಾರದವರು ಅಪ್ಪಣೆಮಾಡಿರುತ್ತಾರೆ.

ರಾಜಧಾನಿಯ ಮೆಸ್ಸರ್ಸ್ ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್‌ರವರು ಕಳುಹಿಸಿರುವ 5 ತರಹದ ಕ್ಯಾಲೆಂಡರುಗಳನ್ನೂ, ಕೆ. ವಿ. ರಾಮಶೆಟ್ಟಿ ಅಂಡ್ ಕಂಪೆನಿಯವರು ಕಳುಹಿಸಿರುವ ಕ್ಯಾಲೆಂಡರನ್ನೂ ಹಾಗೂ ಬೆಂಗಳೂರು ಯಜಮಾನ್ ಅಂಡ್‌ಸನ್ಸ್‌ರವರು ಕಳುಹಿಸಿರುವ ಕ್ಯಾಲೆಂಡರನ್ನೂ ಆತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಕಳೆದ ತಿಂಗಳು 24-11-29 ನೆಯ ಭಾನುವಾರ ರಾಜಧಾನಿಯ ಶ್ರೀ ಸನಾತನ ಧರ್ಮಸಂಜೀವಿನೀಸಭೆಯವರು ಮಹಾಮಹೋಪಾಧ್ಯಾಯ ವಿದ್ಯಾನಿಧಿ ಧರ್ಮಾಧಿಕಾರಿ ವೇ|| ಬ್ರಂ|| ಶ್ರೀ ವಿರೂಪಾಕ್ಷಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಡೆಯಿಸಿದ ಅಖಿಲಕರ್ಣಾಟಕ ಸನಾತನ ಧರ್ಮಮಹಾಸಮ್ಮೇಲನದಲ್ಲಿ ಶಾರದಾರವರ ಬಾಲ್ಯವಿವಾಹ ನಿರೋಧಕ ಶಾಸನವನ್ನು ಅನೇಕ ಶಾಸ್ತ್ರಾಧಾರಗಳಿಂದ ಖಂಡಿಸಿ ತೀರ್ಮಾನಗಳನ್ನು ಮಾಡಿರುವರು.

ಧಾರವಾಡ ಡಿಸ್ಟ್ರಿಕ್ಟಿನಿಂದ ಆಗಮಿಸಿರುವ ಹಲಗೇರಿ ನಾಟಕ ಕಂಪೆನಿಯವರು ರಾಜಧಾನಿಯ ಟೌನ್‌ಹಾಲಿನಲ್ಲಿ ಈಗ್ಗೆ 1-2 ವಾರಗಳಿಂದ ತಮ್ಮ ನಾಟಕಗಳನ್ನು ಅಭಿನಯಿಸುತ್ತಿರುವರು. ಇವರು ಪ್ರಾರಂಭದಲ್ಲಿ ಅಭಿನಯಿಸಿದ "ರಾಜಭಕ್ತಿ" ಎಂಬ ನಾಟಕವನ್ನು ನೋಡಿ ಪ್ರೇಕ್ಷಕರು ಅಷ್ಟು ಮೆಚ್ಚಲಿಲ್ಲವಾದರೂ, ಇತ್ತೀಚೆಗೆ ಅಭಿನಯಿಸುತ್ತಿರುವ ನಾಟಕಗಳು ಪ್ರೇಕ್ಷಣೀಯಗಳಾಗಿವೆ. "ಬಿ. ಎ.," ಎಂಬ ನೀತಿಬೋಧಕವಾದ ನಾಟಕವನ್ನು ಬಹು ಮನೋಹರವಾಗಿ ಅಭಿನಯಿಸುತ್ತಿರುವರು. ಈ ನಾಟಕನೋಟದಿಂದ ಈಗಿನ ಕಾಲದಲ್ಲಿ ಇಂಗ್ಲೀಷ್ ಕಲಿತ ಜನರಲ್ಲಿ ಬೇರೂರುತ್ತಿರುವ ದುರಾಚಾರ ಪದ್ಧತಿಗಳು ಆದಷ್ಟು ಮಟ್ಟಿಗೆ ನಾಶವಾಗಬಹುದೆಂದು ಭಾವಿಸಬಹುದಾಗಿದೆ. ಇಂಥ ನೀತಿಪ್ರದವಾದ ನಾಟಕವನ್ನು ಅಭಿನಯಿಸುತ್ತ ದೇಶಸೇವೆಯನ್ನೂ, ಸಮಾಜಸೇವೆಯನ್ನೂ ಮಾಡುತ್ತಿರುವ ಸದರಿ ಕಂಪೆನಿಯವರಿಗೆ ಮಹಾಜನಗಳು ಪ್ರೋತ್ಸಾಹವನ್ನೀಯಬೇಕೆಂದು ಕೋರುತ್ತೇವೆ.

ವೈಸ್‌ರಾಯರಿಗಾಗಿ ಕಾರಾಪುರದಲ್ಲಿ ಏರ್ಪಡಿಸಲ್ಪಟ್ಟಿದ್ದ ಆನೆಗಳನ್ನು ಹಿಡಿಯುವ ಮತ್ತು ಹುಲಿಗಳನ್ನು ಶಿಕಾರಿಮಾಡುವ ಕಾರ್ಯವು ಈ ಸಾರೆ ಅಷ್ಟು ಸಮರ್ಪಕವಾಗಿ ನೆರವೇರಲಿಲ್ಲವೆಂದು ಕೇಳುತ್ತೇವೆ ಫಾರೆಸ್ಟ್ ಇಲಾಖೆಯವರು ಮೊದಲೇ ತಡೆದಿದ್ದ ಕಾಡಾನೆಗಳ ಒಂದು ಹಿಂಡನ್ನು ಹೊಳೆಯೊಳಗೆ ನುಗ್ಗಿಸಲು ಮಾಡಿದ್ದ ಎರಡು ದಿನಗಳ ಪ್ರಯತ್ನಗಳು ವ್ಯರ್ಥವಾಗಿ, ವೈಸ್‌ರಾಯರು ಕುತೂಹಲಪಡುತ್ತಿದ್ದ ನೋಟವು ದೊರೆಯದೆ ಹೋಯಿತೆಂದೂ, 3ನೆಯ ದಿವಸ ಮಾತ್ರ ಒಂದು ಚಿಕ್ಕ ಕಾಡಿನಲ್ಲಿ ಮೊದಲೇ ಸೇರಿಸಿದ್ದ ಆನೆಗಳಲ್ಲಿ ಒಂದೆರಡನ್ನು ಕಟ್ಟುವದನ್ನು ಪರಾಮರ್ಶಿಸಿ ಸಂತೋಷಿಸಿದರೆಂದೂ, ಮೊದಲನೆಯ ದಿವಸದ ಶಿಕಾರಿಯಲ್ಲಿ ಒಂದು ಹುಲಿಯು ದೃಷ್ಟಿಗೆ ಗೋಚರವಾದರೂ ಗುಂಡಿನೇಟನ್ನು

ತಪ್ಪಿಸಿಕೊಂಡು ಹೋಯಿತೆಂದೂ, ಎರಡನೆಯ ದಿವಸ ದೊರೆತ ಒಂದು ದೊಡ್ಡ ಹುಲಿಯನ್ನು ಕಾಶೀಯುವರಾಜರು ವೈಸ್ರಾಯರ ಅಪ್ಪಣೆಯ ಮೇರೆಗೆ ಹೊಡೆದುಕೊಂದರೆಂದೂ ತಿಳಿಯಬರುತ್ತದೆ. ವೈಸ್ರಾಯರವರು ತಾ|| 27ನೆಯ ಬುಧವಾರ ರಾಜಧಾನಿಗೆ ಹಿಂತಿರುಗಿ ಬಂದು 28ನೆಯ ಗುರುವಾರ ಪ್ರಾತಃಕಾಲ ಮಡಿಕೇರಿಗೆ ಪ್ರಯಾಣಮಾಡಿದರು.

ವರ್ತಮಾನಸಂಗ್ರಹ.

ಮಿಸ್. ಎಡಿತ್ ವಾಟ್ಸನ್ ಎಂಬ ಮ್ಯಾಂಚಸ್ಟರಿನ ಒಬ್ಬ ಶ್ರೀಮಂತನ ಕನ್ಯೆಯು ದಿಲ್ಲಿಯಲ್ಲಿ ಹಿಂದೂ ಧರ್ಮವನ್ನು ಸ್ವೀಕರಿಸಿರುವಳು.

ದರ್ಭಾಂಗಾ ಸಂಸ್ಥಾನದ ಮಹಾರಾಜರು ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸ್ತುತ್ಯ!

ನೂತನ ದೆಹಲಿಯಲ್ಲಿ ವೈಸ್‌ರಾಯರ ಭವ್ಯವಾದ ಭವನವು ಸಿದ್ಧವಾಗುತ್ತಿದೆ. ಬರುವ ವರ್ಷದ ಚಳಿಗಾಲದೊಳಗಾಗಿ ಕೆಲಸವು ಪೂರೈಸುವದು.

ಮದ್ರಾಸ್ ಇಲಾಖೆಗೆ ಸೇರಿದ ಪಾಲಘಾಟದಲ್ಲಿ 15,000 ಬ್ರಾಹ್ಮಣರು ಸೇರಿ ಮಹಾರುದ್ರಾಭಿಷೇಕವನ್ನು ಮಾಡಿ, ಶಾರದಾಬಿಲ್ಲನ್ನು ಪರಿಹರಿಸುವಂತೆ ದೇವರನ್ನು ಪ್ರಾರ್ಥಿಸಿದರಂತೆ!

-ಕೋತಿಯ ಶರೀರದ ಒಂದು ಭಾಗವನ್ನು ತೆಗೆದು ಮನುಷ್ಯರ ಶರೀರಕ್ಕೆ ಪ್ರಯೋಗಮಾಡಿ, ಎಂಥಹ ವೃದ್ಧರನ್ನಾದರೂ ಯೌವನವಂತರನ್ನಾಗಿ ಮಾಡುವ ಡಾ|| ವರನೊಫ್‌ರವರು ಕೊಲಂಬೋಕ್ಕೆ ಬಂದಿರುವರು.

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಪುಸ್ತಕವು ಲಂಡನ್ನಿನ ಸರ್ವವಸ್ತುಸಂಗ್ರಹಾಲಯ (ಬ್ರಿಟಿಷ್ ಮ್ಯೂಸಿಯಂ) ದಲ್ಲಿರುವದು. ಇದು 5½ ಅಡಿ ಎತ್ತರವಾಗಿಯೂ, ಅಷ್ಟೇ ದಪ್ಪವಾಗಿಯೂ ಇರುವದಂತೆ!

ಪೋಲೆಂಡ್ ದೇಶದ ಜಬಿಸ್ಕೋ ಎಂಬ ಜಟ್ಟಿಯನ್ನು ಹಿಂದೀಜಟ್ಟಿಯಾದ ಗಾಮನು ಗೆದ್ದು ಜಗಜಟ್ಟಿಯೆನಿಸಿರುವನಷ್ಟೇ! ಆ ಜಬಿಸ್ಕೋನು ಪುನಃ ಸಾಧನಮಾಡಿ ಗಾಮನನ್ನು ಎರಡನೇಸಾರೆ ಕಾಳಗಕ್ಕೆ ಕರೆದಿರುವನಂತೆ!

ಇಂಗ್ಲೆಂಡಿನಲ್ಲಿ ಇಟಲಿಯ ಕಾರ್ನೆರ್ ಎಂಬ ಪೈಲ್ವಾನನಿಗೂ, ಅಮೇರಿಕೆಯ ಸ್ಟ್ಯಾಂಬ್ಲಿಂಗ್ ಎಂಬ ಪೈಲ್ವಾನನಿಗೂ ಕುಸ್ತಿಯು ನಡೆದು ಕಾರ್ನೆರನು ಗೆದ್ದನು. ಇವನು 7 ಅಡಿ ಎತ್ತರವಿದ್ದು 10 ಮಣಗಳ ಭಾರವುಳ್ಳವನಾಗಿರುವನಂತೆ!

ಸುರ್ಗುಜದ ಮಹಾರಾಜರವರು ಹಿಂದೂದೇಶದಲ್ಲಿ ಇಲ್ಲಿಯವರೆಗೆ 600 ಹುಲಿಗಳನ್ನು ಕೊಂದಿರುವರಂತೆ! ಈಗ ಇವರು ಶಿಕಾರಿಗಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿರುವರು. ಅಲ್ಲಿ ಸಿಂಹಗಳನ್ನು ಸಜೀವವಾಗಿ ಹಿಡಿಯಬೇಕೆಂಬುದೇ ಇವರ ಅಪೇಕ್ಷೆಯಾಗಿರುವದು.

ಕಳೆದ ತಿಂಗಳು 13 ನೆಯ ತಾರೀಖಿನ ದಿವಸ ಹೈದರಾಬಾದಿನಲ್ಲಿ ಒಬ್ಬ ಮನುಷ್ಯನು ಜೇಬಿನಲ್ಲಿ ಒಂದು ಸಿಡಿಮದ್ದಿನ ಗುಂಡನ್ನು ಇಟ್ಟುಕೊಂಡುಹೋಗುತ್ತಿದ್ದಾಗ ಎದುರಿಗೆ ಬಂದ ಒಂದು ದನಕ್ಕೆ ತಿಕ್ಕಿಹೋದನು. ಗುಂಡು ಸಿಡಿದು ಕೂಡಲೆ ಮೃತನಾದನು.

ನ್ಯೂಯಾರ್ಕ್ ಪಟ್ಟಣದ ಭವ್ಯವಾದ ಏಳು ಕಟ್ಟಡಗಳಲ್ಲಿ 13 ನೆಯ ಉಪ್ಪರಿಗೆಯಾಗಲಿ, 13 ನೆಯ ಕೋಣೆಯಾಗಲಿ ಇರುವದಿಲ್ಲ. ಅನೇಕ ರಸ್ತೆಗಳಲ್ಲಿ 13 ನೆಯ ನಂಬರಿನ ಮನೆಯೇ ಇರುವುದಿಲ್ಲ. 13 ನೇ ಸಂಖ್ಯೆಯೆಂದರೆ ಆ ಜನರಿಗೆ ಬಹು ಭೀತಿಯಾಗುವದಂತೆ!

ಪ್ರಪಂಚವನ್ನೆಲ್ಲಾ ಬೈಸ್ಕಲ್ಲಿನ ಮೇಲೆಯೇ ಸುತ್ತಬೇಕೆಂದು 35 ವರ್ಷಗಳ ಹಿಂದೆ ಬಂಗಾಳದಿಂದ ಹೊರಟ ವಿಮಲಮುಕರ್ಜಿ ಎಂಬ ತರುಣನು ಬಲೂಚಿಸ್ಥಾನ, ಜರ್ಮನಿ, ಹಂಗೇರಿ, ಇಂಗ್ಲೆಂಡ್ ಮೊದಲಾದ ದೇಶಗಳನ್ನು ಸುತ್ತಿಕೊಂಡು ಈಗ ಲಂಡನ್ನಿಗೆ ತಲಪಿದನು.

ಜಿ. ಐ. ಪಿ. ರೈಲ್ವೆ ಕಂಪೆನಿಯವರು ಮುಂಬಯಿಯ ಮ್ಯುನಿಸಿಪಲ್ ಕಾರ್ಪೊರೇಷನ್ನಿಗೆ 14 ಲಕ್ಷ ರೂ. ಗಳನ್ನು ಕೊಡಬೇಕಾಗಿರುವದು. ಆ ಹಣವನ್ನು 3 ತಿಂಗಳೊಳಗೆ ಪಾವತಿಮಾಡದಿದ್ದರೆ ಅವರಿಗೆ ಒದಗಿಸುತ್ತಿರುವ ನೀರನ್ನು ನಿಲ್ಲಿಸಬೇಕೆಂದು ಕಾರ್ಪೊರೇಷನ್ ಸಭೆಯಲ್ಲಿ ತೀರ್ಮಾನವಾಗಿರುವುದು.

ವಿಜಾಪುರದಲ್ಲಿ ಈಗ 4-5 ವರ್ಷಗಳಿಂದಲೂ ಕಲೆಕ್ಟರರಾಗಿದ್ದ ಶ್ರೀ ವೆಂಕಣ್ಣನಾಯಕರು ಕಳೆದ ಶುಕ್ರವಾರ ಪರಲೋಕವಾಸಿಗಳಾದರೆಂಬುದನ್ನು ತಿಳುಹಿಸಲು ವಿಷಾದಿಸುತ್ತೇವೆ. ಇವರು ದಯಾಳುಗಳಾಗಿಯೂ ಶಾಂತರಾಗಿಯೂ ಪರೋಪಕಾರಿಗಳಾಗಿಯೂ ಇದ್ದರು ಜಗದೀಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಸ್ವಾನ್‌ಸೀ ಎಂಬಲ್ಲಿ ಎಡಿತ್‌ಮೇ ಎಂಬ 12 ವರ್ಷದ ಹುಡುಗಿಯು ಪಿಯಾನೊವನ್ನು ಬಾರಿಸಿದ ಕೂಡಲೇ ಮನೆಯ ಪಾತ್ರೆಗಳೆಲ್ಲಾ ವಿಚಿತ್ರರೀತಿಯಿಂದ ಒಡೆದು ಹಾಕಲ್ಪಡುವವಂತೆ! ಮನೆಯಲ್ಲಿ ನಾನಾತರಹದ ಕೂಗುಗಳು ಕೇಳಿಸುವವಂತೆ! ಈಗ ಆ ಹುಡುಗಿಯನ್ನು ಪಿಯಾನೊ ಬಾರಿಸದಂತೆ ನಿರ್ಬಂಧದಲ್ಲಿರಿಸಿರುವರಂತೆ!

ಪ್ರಪಂಚದಲ್ಲಿ ಅತ್ಯಂತ ದೊಡ್ಡದಾದ ಸಬ್‌ಮೆರಿನ್ (ನೀರಿನ ಒಳಗಡೆ ಹೋಗುವ ಹಡಗು) ಒಂದನ್ನು ಫ್ರಾನ್ಸಿನಲ್ಲಿ ತಯಾರಿಸಿರುವರು. ಈ ಜಹಜಿನಲ್ಲಿ 150 ಜನರಿಗೆ ಸ್ಥಳಾನುಕೂಲವಿರುವದಲ್ಲದೆ 5½ ಅಂಗುಲ ಅಗಲದ ಬಾಯಿಯುಳ್ಳ 4 ಫಿರಂಗಿಗಳೂ ಒಂದು ಸಣ್ಣ ವಿಮಾನವೂ ಇರುವುವು. ಇದು ನೀರಿನಲ್ಲಿ 420 ಅಡಿಗಳ ಕೆಳಭಾಗದಲ್ಲಿ ಹೋಗಬಲ್ಲುದಂತೆ!

ಅಳ್ವಾರ್ ಮಹಾರಾಜರವರು ಬೇಕಾದಾಗ ಬೇಕಾದಂತಹ ಹವಾಗುಣವನ್ನು ಹೊಂದಲು ಸಾಧ್ಯವಾಗುವಂತೆ ತಮ್ಮ ಎರಡು ಅರಮನೆಗಳನ್ನೂ "ಅಲ್ಟ್ರಾ ಎಕ್ಸ್‌ರೇ" ಎಂಬ ವಿದ್ಯುಚ್ಛಕ್ತಿ ವಿಶೇಷದಿಂದ ಅಲಂಕರಿಸಲು ಇಂಗ್ಲೆಂಡಿನ ಒಂದು ಕಂಪನಿಗೆ ಕಂಟ್ರಾಕ್ಟ ಕೊಟ್ಟಿರುವರಂತೆ! ಇದಕ್ಕಾಗಿ ಬ್ರಿಟಿಷ್ ಇಂಜನಿಯರೊಬ್ಬರು ಅಲ್ಲಿಂದ ಹೊರಟಿರುವರು.

ವಿಜಾಪುರ ಮುನಿಸಿಪಾಲಿಟಿಯ ಅಧ್ಯಕ್ಷರಾದ ಮಿ|| ಅಂದಾನಪ್ಪ ಅಂಗಡಿ ಎಲ್‌ಎಲ್.ಬಿ. ಹಾಗೂ ಇವರ ಕಾರಕೂನ ಗುರುಪಾದಪ್ಪ ತೊನಶ್ಯಾಳ ಇವರಿಬ್ಬರ ಮೇಲೂ ಇಂಡಿಯನ್ ಪೀನಲ್‌ಕೋಡ್ 409 ನೇ ಕಲಮಿನ ಪ್ರಕಾರ ಪೋಲೀಸರು ಫಿರ್ಯಾದುಮಾಡಿರುವರೆಂದೂ, 1000 ರೂ. ಗಳ ಜಾಮೀನಿನ ಮೇಲೆ ಆರೋಪಿಗಳನ್ನು ಬಿಟ್ಟಿರುವರೆಂದೂ ಕೇಳುತ್ತೇವೆ.

ಅಮೇರಿಕೆಯಲ್ಲಿ ನೂತನ ಕ್ಲಬ್ಬೊಂದು ಸ್ಥಾಪಿಸಲ್ಪಟ್ಟಿರುವದು. ಉದ್ದುದ್ದ ಗಡ್ಡವಿರುವ ಪುರುಷರು ಮಾತ್ರ ಅದಕ್ಕೆ ಮೆಂಬರಾಗಬಹುದಂತೆ! ಪುರುಷರು ಗಡ್ಡ ಮಿಸೆಗಳನ್ನು ಬೋಳಿಸುವುದರಿಂದ ಪುಂಸತ್ವವನ್ನು ಕಳೆದುಕೊಂಡು ಸ್ತ್ರೀತ್ವವನ್ನು ಕೈಕೊಂಡಂತಾಗುವದಂತೆ! ಹೀಗೆ ಪುರುಷರು ಪುಂಸತ್ವವನ್ನು ಕಳೆದುಕೊಳ್ಳುವದನ್ನು ವಿರೋಧಿಸುವದೇ ಈ ಕ್ಲಬ್ಬಿನ ಉದ್ದೇಶವಂತೆ!

ಮಧ್ಯಅಮೆರಿಕೆಯಲ್ಲಿರುವ ಮೆಕ್ಸಿಕೋ ಎಂಬ ಪ್ರಜಾಪ್ರಭುತ್ವವುಳ್ಳ ರಾಜ್ಯವು ರಾಜಕೀಯ ದಂಗೆಗಳಿಗೆ ಬಹಳ ಪ್ರಸಿದ್ಧಿಯನ್ನು ಪಡೆದಿರುವದು. ಆ ಪ್ರಭುತ್ವದ ಅನೇಕ ಪ್ರೆಸಿಡೆಂಟರನ್ನು ಬೇರೆ ಬೇರೆ ಕಾಲಗಳಲ್ಲಿ ಕೊಲೆಮಾಡಿರುತ್ತಾರೆ. ಈಚೆಗೆ ಒಬ್ಬ ಹೊಸ ಪ್ರೆಸಿಡೆಂಟರ ಚುನಾವಣೆಯ ಕಾಲದಲ್ಲಿ ದಂಗೆಯೆದ್ದು, 19 ಜನರು ಮೃತಪಟ್ಟಿರುವರು. ಸುಮಾರು 50 ಜನರಿಗೆ ವಿಶೇಷ ಗಾಯಗಳಾಗಿರುವವು.

ಅನೇಕ ವರ್ಷಗಳಿಂದ ಫ್ರಾನ್ಸಿನ ಪ್ರಮುಖರಾದ ರಾಜಕಾರ್ಯಧುರೀಣರಲ್ಲಿ ಒಬ್ಬರಾದ ಕ್ಲೇಮೆಂಸೋ ಎಂಬುವರು ಕಳೆದ ಭಾನುವಾರ ಮೃತರಾದರು. ಕಳೆದ ಘೋರಯುದ್ಧಕಾಲದಲ್ಲಿ ಇವರು ಫ್ರಾನ್ಸಿನ ಅಮಾತ್ಯರಾಗಿದ್ದರಲ್ಲದೆ ಯುದ್ಧವು ಮುಗಿದಮೇಲೆ ಬ್ರಿಟಿಷ್ ಮಂತ್ರಿಶ್ರೇಷ್ಠರು ಹಾಗೂ ಅಮೇರಿಕೆಯ ಪ್ರೆಸಿಡೆಂಟರು, ಜರ್ಮನಿಯವರೊಡನೆ ಕರಾರುಮಾಡಿಕೊಳ್ಳುವ ವಿಷಯದಲ್ಲಿ ಮುಖ್ಯ ಭಾಗವನ್ನು ವಹಿಸಿಕೊಂಡಿದ್ದರು.

ಸೈಬೀರಿಯಾ ದೇಶದ ಕಡೆಯ ಸಮುದ್ರದಲ್ಲಿ ಸುಮಾರು 35 ಲಕ್ಷ ರೂಪಾಯಿಗಳು ಬಾಳುವ ಉಣ್ಣೆಯನ್ನು ತರುತ್ತಿದ್ದ ಒಂದು ದೊಡ್ಡ ಜಹಜು ಮಂಜುಗಟ್ಟಿದ ಸಮುದ್ರ ಮಧ್ಯದಲ್ಲಿ ಸಿಕ್ಕು ನಾಶವಾಗುವಷ್ಟರಲ್ಲಿ ಅಮೇರಿಕೆಯ ವೈಮಾನಿಕನೊಬ್ಬನು ಅಲ್ಲಿಗೆ ಹೋಗಿ ಜಹಜಿನಲ್ಲಿದ್ದವರನ್ನು ಬಹು ಸಾಹಸದಿಂದ ಬದುಕಿಸಿರುವನು. ಜಹಜಿನಲ್ಲಿರುವ ಅಪಾರ ಬೆಲೆಯ ಉಣ್ಣೆಯನ್ನು ಅಲ್ಲಿಂದ ಸಾಗಿಸುವ ಪ್ರಯತ್ನಗಳು ನಡೆಯುತ್ತಿರುವವು.

ಇಂಡಿಯಾದಲ್ಲಿರುವ ಮಹಮ್ಮದೀಯ ಪ್ರಮುಖರಲ್ಲಿ ಒಬ್ಬರಾಗಿಯೂ, ಮಹಾಧನಾಢ್ಯರಾಗಿಯೂ ಇರುವ ಆಗಾಖಾನ್‌ರವರು ನಮ್ಮ ದೇಶೀಯರಲ್ಲಿ ಯಾರು ಮೊದಲು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ವಿಮಾನವನ್ನು ನಡೆಯಿಸಿಕೊಂಡು ಬರುವರೋ ಅವರಿಗೆ 7,500 ರೂಪಾಯಿಗಳ ಬಹುಮಾನವನ್ನು ಕೊಡುವದಾಗಿ ಪ್ರಕಟಿಸಿರುತ್ತಾರೆ. ಪ್ರಯಾಣವನ್ನು 6 ವಾರಗಳೊಳಗಾಗಿ ಪೂರೈಸಬೇಕು. ಈ ಶರತ್ತಿಗೆ 1930 ನೆಯ ಇಸವಿಯ ಅಂತ್ಯದವರೆಗ ಅವಕಾಶವಿರುವದು.

ಕೆಲವು ದಿನಗಳ ಕೆಳಗೆ ಅಫ್ಘಾನಿಸ್ಥಾನದ ಅಮೀರ್ ನಾದಿರ್‌ಖಾನರನ್ನು ಯಾರೋ ದ್ವೇಷಸಾಧಕರು ಕೊಲೆಮಾಡಿದರೆಂಬ ವಿಷಮವಾರ್ತೆಯು ಎಲ್ಲೆಲ್ಲಿಯೂ ಹರಡಿತ್ತು. ಆದರೆ ಅದು ನಿಜವಲ್ಲವೆಂದು ಪುನಃ ವರ್ತಮಾನ ಬಂದು ಎಲ್ಲರೂ ಸಂತೋಷಭರಿತರಾದರು. ಅಮೀರರು ಈಗ ಹೊಸಸೈನ್ಯವನ್ನು ಕೂಡಿಸುತ್ತಿರುವರು. ಅವರ ಸಹೋದರರಾದ ಸರದಾರ್ ಶಹಬಾಲೀಖಾನರನ್ನು ಅಫ್ಘಾನಿಸ್ಥಾನದ ಪರವಾದ ಮಂತ್ರಿಯನ್ನಾಗಿ ಲಂಡನ್ನಿಗೆ ಕಳುಹಿಸಿರುತ್ತಾರೆ. ಪಂಗಡಗಳ ಕಲಹಗಳು ಇನ್ನೂ ಶಾಂತವಾಗಿಲ್ಲ.

ಯೂರೋಪಿನ ಸರ್ವಿಯಾದೇಶದ ಬೆಲ್ಗ್ರೇಡ್‌ನಗರದಿಂದ ಬರುತ್ತಿದ್ದ ಓರಿಯಂಟಲ್ ಎಕ್ಸ್‌ಪ್ರೆಸ್ ಗಾಡಿಯನ್ನು ಯಾರೋ ದುಷ್ಟರು ಮಾರ್ಗಮಧ್ಯದಲ್ಲಿ ತಡೆದು ಬಾಂಬುಗಳನ್ನು ಹಾಕಿದರೆಂದೂ, ರೈಲ್ವೆ ಗಾರ್ಡನು ಧೈರ್ಯದಿಂದ ಆ ದುಷ್ಟರನ್ನು ಎದುರಿಸಿದುದರಿಂದ ಯಾವ ಅಪಾಯವೂ ಆಗಲಿಲ್ಲವೆಂದೂ ತಿಳಿಯಬರುತ್ತದೆ. ಬಾಂಬು ಸಿಡಿದು ಒಂದು ಸಾಮಾನಿನ ಗಾಡಿಗೆ ಮಾತ್ರ ಅಪಾಯವಾಯಿತು. ಬಾಂಬನ್ನೆಸೆದವರು ನಿಜವಾದ ಕಳ್ಳರಲ್ಲವೆಂದೂ, ರಾಜಕೀಯ ಕಾರಣಗಳಿಂದ ಈ ಕಾರ್ಯವು ನಡೆದಿರುವದೆಂದೂ ಊಹಿಸಲ್ಪಟ್ಟಿರುವದು.

ಉತ್ತರ ಅಮೇರಿಕೆಯ ಪೂರ್ವತೀರದಲ್ಲಿ ಕಳೆದ ತಿಂಗಳು 18 ನೆಯ ತಾರೀಖಿನ ದಿವಸ ಭಯಂಕರವಾದ ಭೂಕಂಪವಾಗಿ ನ್ಯೂಯಾರ್ಕ್ ನಗರದ ದೊಡ್ಡ ದೊಡ್ಡ ಕಟ್ಟಡಗಳು ಸಹ ನಡುಗಿದವು. ಈ ಭೂಕಂಪವು ಸಮುದ್ರದ ತಳಭಾಗದಲ್ಲಿ ವಿಶೇಷವಾಗಿತ್ತಂತೆ! ಯೂರೋಪಿಗೂ ಅಮೇರಿಕೆಗೂ ಹಾಕಿದ್ದ ತಂತೀ ಸಮಾಚಾರದ ಕೇಬಲ್ಲುಗಳು ಅರ್ಧಭಾಗದಷ್ಟು ಕಿತ್ತುಹೋಗಿರುವವು. ಇದರಿಂದ ಹುಟ್ಟಿದ ಒಂದು ದೊಡ್ಡ ಅಲೆಯು ಕೆನಡಾದ ನ್ಯೂಫೌಂಡ್‌ಲ್ಯಾಂಡಿನ ತೀರಕ್ಕೆ ಬಡಿದು 16 ಕಟ್ಟಡಗಳು ಹಾಳಾದವಲ್ಲದೆ 27 ಜನರು ಮೃತಪಟ್ಟಿರುವರು.

ಡಾ|| ಹೆಲ್ಸ್ ಜಾವ್ರೊಸಿಕ್ಕಿಯೆಂಬ ಫ್ರೆಂಚ್ ವೈದ್ಯರು ಒಬ್ಬರ ಶರೀರದ ರಕ್ತವನ್ನು ಮತ್ತೊಬ್ಬರ ಶರೀರಕ್ಕೆ ಸೇರಿಸಿ ವೃದ್ಧರನ್ನು ತರುಣರನ್ನಾಗಿ ಮಾಡಬಹುದೆಂದು ಹೊಸ ಶೋಧಮಾಡಿರುವರು. ಇವರು ಪ್ರಸಿದ್ಧ ಫ್ರೆಂಚ್ ನರ್ತಕಿಯಾದ ಕೊಲೆಟ್ಟೆ ವಿಲ್ಲಿ ಎಂಬುವಳಿಗೆ ಈ ಶೋಧದ ಪಥಮ ಪ್ರಯೋಗಮಾಡಿ, ಪ್ರಾಯಮೀರಿದ್ದವಳನ್ನು ನವಯೌವನ ತರುಣಿಯನ್ನಾಗಿ ಮಾಡಿರುವರಂತೆ! ಮನುಷ್ಯನು ಕಷ್ಟಪಟ್ಟು ಕೆಲಸಮಾಡಿ ಆಯಾಸ ಹೊಂದುವದರಿಂದ ಶರೀರದಲ್ಲಿ ಒಂದು ತೆರದ ವಿಷವು ಹುಟ್ಟಿ ಕ್ರಮೇಣ ಅದು ಹೆಚ್ಚಿ ವೃದ್ಧಾಪ್ಯ ಪ್ರಾಪ್ತವಾಗುವದೆಂದು ಈ ಡಾಕ್ಟರರ ಹೇಳಿಕೆಯಾಗಿರುವದು. ತರುಣ ಸ್ತ್ರೀಯರ ರಕ್ತವನ್ನು ಶೋಧಿಸಿ, ಅದರಿಂದ ಒಂದುಬಗೆಯ ರಸವನ್ನು ತಯಾರಿಸಿ ಅದನ್ನು ವೃದ್ಧಪುರುಷನಿಗೆ ಪ್ರಯೋಗಿಸುವದರಿಂದ ಶರೀರದಲ್ಲಿ ಸಂಗ್ರಹವಾಗುವ ವಿಷವನ್ನು ನಾಶಮಾಡಬಹುದೆಂದು ಕಂಡುಹಿಡಿದಿರುವರು.

ಶ್ರೀ ಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕರ ಪುರಾಣ ಸಮಾಪ್ತಿ. ಹರಪನಹಳ್ಳಿ.

ಬಳ್ಳಾರಿ ಜಿಲ್ಲಾ ತಾಲ್ಲೋಕು ಹರಪನಹಳ್ಳಿ ಪುರ ನಿವಾಸಿಗಳು ಬಳ್ಳಾರಿ ಪತ್ತಿನ ವಿರಾಜಮಾನ ಸತ್ಕಾರಣ ಸಕ್ರಿ ಕರಡಪ್ಪನವರ ಮೊಮ್ಮಕ್ಕಳಾದ ಶ್ರೀಮಂತ ಯಜಮಾನ ಸಕ್ರಿ ರಾಘವಾಂಕಪ್ಪನವರು, ಇದೇ ಗ್ರಾಮದ ಷ|| ಬ್ರ|| ಶ್ರೀ ತೆಗ್ಗಿನಮಠದ ಚಂದ್ರಶೇಖರಸ್ವಾಮಿಗಳವರಿಗೆ ಈ ಪಟ್ಟಣದ ಪಶ್ಚಿಮ ದಿಗ್ಭಾಗದಲ್ಲಿರುವ ಚೌಕಿಯನ್ನು ದಾಸೋಹೇತ್ಯಾದಿ ಸತ್ಕಾರ್ಯಗಳು ನಡೆಯಲೋಸುಗ ಭಕ್ತಿಯಿಂದ ಸಮರ್ಪಣಮಾಡಿ ಸಾಧಾರಣ 3-4 ವರ್ಷಗಳಾಗಬಹುದು. ಈ ಸಂವತ್ಸರ ಆಷಾಢ-ಶ್ರಾವಣಮಾಸಗಳಲ್ಲಿ ಮಳೆಯ ಅಭಾವದಿಂದ ಬಿತ್ತಿದ ಪೈರುಗಳೆಲ್ಲಾ ಸಂಪೂರ್ಣ ಒಣಗಹತ್ತಿದವು. ಆ ಸಮಯದಲ್ಲಿ ಕೆಲವು ಭಕ್ತರ ಪ್ರಾರ್ಥನೆಯ ಮೇರೆಗೆ ಸದರಿ ತೆಗ್ಗಿನಮಠದ ಚಂದ್ರಶೇಖರಸ್ವಾಮಿಗಳವರು ಧರ್ಮದತ್ತವಾದೀ ಚೌಕಿಯಲ್ಲಿ ಶೀಘ್ರಫಲಪ್ರದಾಯಕವಾದ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಮಹಾಪುರಾಣವನ್ನು ಈ ಶುಕ್ಲಸಂವತ್ಸರದ ಶ್ರಾವಣಮಾಸದಲ್ಲಿ ಪ್ರಾರಂಭಿಸಿದ 1-2 ದಿನಗಳಲ್ಲಿ ಶ್ರೀ ಜಗದ್ಗುರು ಕೃಪಾಬಲದಿಂದ ವೃಷ್ಟಿಗರೆದು ಭೂದೇವಿಯು ಶಾಂತಳಾಗಿ ಫಲವೃದ್ಧಿಗೆ ಕಾರಣವಾಯಿತು. ಅನಂತರ ಈ ಮಹಾಪುರಾಣಕ್ಕೆ ಒಂಭತ್ತು ದಿನಗಳಲ್ಲಿ ಪರಿಸಮಾಪ್ತಿ ಮಂಗಳಗಣಾರಾಧನೆಯನ್ನು ನಾಡಬೇಕೆನ್ನುವಷ್ಟರಲ್ಲಿ ಈ ಗ್ರಾಮದ ವೈಶ್ಯಭಕ್ತರಾದ ಮ|| ರಾ|| ಶ್ರೀಮಂತ ಬಂಕಾಪುರದ ಹನುಮಂತಪ್ಪನವರು, ಮುದುಗಲ್ಲು ಹನುಮಂತಪ್ಪನವರು, ಗೊಂಗಡಿ ಕೊಟ್ರಪ್ಪನವರು, ಯಳವಲಿ ಒಸವಪ್ಪನವರು ಈ ಮುಂತಾದ ಶೈವ ವೀರಶೈವಭಕ್ತರು ಈ ಜಗದಾಚಾರ್ಯರ ಮಹಾಪುರಾಣವನ್ನು ಅನುಕೂಲಾಗ್ರವಾಗಿ ಶ್ರವಣಮಾಡಿಕೊಳ್ಳಬೇಕೆಂಬ ಅತ್ಯಂತ ಭಕ್ತಿಯಿಂದ ಅರಿಕೆಮಾಡಿಕೊಂಡ ಪ್ರಕಾರ ನಡೆಯಲುಪಕ್ರಮವಾಯಿತು. ಈ ಮಹಾಪುರಾಣವನ್ನು ಇದೇ ಗ್ರಾಮದ ತೆಗ್ಗಿನಮಠದ ವೇ|| ರೇವಪ್ಪಶಾಸ್ತ್ರಿಗಳು ಅತ್ಯಂತ ರಸಭರಿತವಾಗಿ ಯುಕ್ತಿ ಯುಕ್ತವಾದ ತತ್ವಾಲೋಚಿತ ವಿಷಯಗಳನ್ನು ಕ್ರೋಡೀಕರಿಸಿ ಅಪ್ಪಣೆಕೊಡಿಸುತ್ತಿದ್ದರು. ಮ|| ರಾ|| ಸಿದ್ದಪ್ಪನವರ ಕರಿಬಸವಪ್ಪನೆಂಬ ಭಕ್ತಶಿಖಾಮಣಿಯು ಗಾನಮಯವಾದ ರಾಗ ತಾಳಗಳಿಂದ ಯುಕ್ತವಾಗಿ ಶ್ರೋತೃಜನಮನಾನಂದವಾಗುವರೀತಿ ಓದುತ್ತಿರುವುದು ಅತ್ಯಂತ ಶ್ಲಾಘನೀಯವಾಗಿರುತ್ತಿತ್ತು. ಅಷ್ಟರಲ್ಲಿ ನೈಜಾಂ ಇಲಾಖಾ ರಾಯಚೂರು ಜಿಲ್ಲಾ ಕಾಡ್ಲೂರು ಹಿರೇಮಠದ ಅರ್ಥಾತ್ ಇದೇ ಗ್ರಾಮದ ಹರಪನಹಳ್ಳಿ ಗುರುಪಾದದೇವರ ಮಠದ ಪಟ್ಟದ ಶ್ರೀ ಗುರುಪಾದಸ್ವಾಮಿಗಳವರು ಸೈಜಾಮದಿಂದ ಆಕಸ್ಮಾತ್ ದಯಮಾಡಿಸಿದರು. ಈ ಪುರಾಣವು ಇನ್ನೂ ಅತಿ ವಿಜೃಂಭಣೆಯಿಂದ ನಡೆಯಬೇಕೆಂಬ ಲವಲವಿಕೆಯಿಂದ ಕೆಲವು ಭಕ್ತರು ಸದರಿ ಗುರುಪಾದದೇವರ ಮಠದ ಪಟ್ಟದ ಶ್ರೀ ಗುರುಪಾದಸ್ವಾಮಿಗಳವರನ್ನು ಪ್ರಾರ್ಥಿಸಿಕೊಂಡ ಮೇರೆಗೆ ಒಪ್ಪಿ ಪುರಾಣ ಹೇಳಲುಪಕ್ರಮಿಸಿದರು. ಇವರ ಹೇಳುವಿಕೆಯು ಈ ನವನಾಗರೀಕತೆಯ ಕಾಲಕ್ಕೆ ತಕ್ಕಂತೆ ಅಸತ್ಯವಾದ ಪೊಳ್ಳುವಿಷಯಗಳನ್ನು ದೂರೀಕರಿಸಿ ಪ್ರಮಾಣಗಳಾದ ವೇದಾಗಮೋಪನಿಷತ್ಪುರಾಣಗಳಲ್ಲಿ ಪ್ರಸಿದ್ಧಗಳಾದ ಇತಿಹಾಸಗಳನ್ನೂ, ವೀರಶೈವಮತದ ಮಹಾತತ್ವಗಳನ್ನೂ, ತದಂಗರ್ತಗಳಾದ ಲಿಂಗಧಾರಣಾದ್ಯಷ್ಟಾವರಣ ವಿಷಯಗಳನ್ನೂ, ಶ್ರೋತೃಗಳಾದ ಆ ಬಾಲವೃದ್ಧರ ಹೃದಯಕ್ಕೆ ಚನ್ನಾಗಿ ಬಿಂಬಿಸುವಂತೆ ಹೇಳುತ್ತಿದ್ದರು. ಇವರು ಹೇಳುವ ಪೂರ್ವಿಕರ ಸಚ್ಚರಿತ್ರಗಳನ್ನು ಕೇಳಿ ಪಾಷಾಣಹೃದಯರಿಗೂ ಕೂಡ ಭಕ್ತಿಜ್ಞಾನಗಳುಂಟಾಗಿ ಅತ್ಯಂತ ವಿಶ್ವಾಸದಿಂದ ಪ್ರತಿದಿವಸ ಪುರಾಣಸೇವೆಯನ್ನು ಮಾಡುತ್ತಿದ್ದರು. ಪ್ರತಿದಿನವು ಪುರಾಣಕ್ಕೆ ಗಣನಾತೀತವಾಗಿ ಸ್ತ್ರೀ ಪುರುಷಸಂದಣಿಯು ನಾನಾ ವಿಧವಾದ ಆರತಿ, ಫಲ, ಪುಷ್ಪ ಕಾಣಿಕೆಗಳಾಗಿ ಆಗಮಿಸುತ್ತಿದ್ದಿತು. ಇದೇ ಗ್ರಾಮದ ಮ್ಯಾಗಳ ಪ್ಯಾಟಿ ಶ್ರೀ ಪಂಚಾಚಾರ್ಯರ ಭಜನಾಸಂಘವು ಸಂಗೀತ ಕಲೆಯಲ್ಲಿ ಪ್ರವೀಣರಾದ ಬಾಲಕರಿಂದೊಡಗೂಡಿ ಪ್ರತಿದಿನವು ಆಗಮಿಸುತ್ತ ಪುರಾಣಪರಿಸಮಾಪ್ತ್ಯನಂತರದಲ್ಲಿ ಸ್ವಸ್ಥಾನವನ್ನೈದುತ್ತಿತ್ತು. ಈ ರೀತಿ ಅತಿ ವೈಭವದಿಂದ ನಡೆದು ಇದೇ ಶುಕ್ಲಸಂವತ್ಸರದ ಆಶ್ವಯುಜ ಬಹುಳ 13 ದಿವಸ ಪರಿಸಮಾಪ್ತಿ ಮಂಗಳಗಣಾರಾಧನೆಯು 3-4 ಸಾವಿರ ಭಕ್ತಮಾಹೇಶ್ವರರವರೆಗೂ ಸಂತರ್ಪಣೆ ನಡೆದು ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಈ ಮಹಾಪುರಾಣದಲ್ಲಿ ವೈಶ್ಯಭಕ್ತಸಂದಣಿಯು ತ್ರಿಕರಣಪೂರ್ವಕವಾಗಿ ನಡೆಯಿಸಿದ ಭಕ್ತಿಸಾಹಸಗಳನ್ನು ಪ್ರತಿಯೊಬ್ಬ ವೀರಶೈವನು ಸಂತೋಷದಿಂದ ವರ್ಣಿಸದಿರಲಾರನು. ಇದೆಲ್ಲಾ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರ ಮಹಿಮಾಪ್ರಭಾವವಲ್ಲವೇ? ಪ್ರತಿವರ್ಷವೂ ಈ ರೀತಿ ಪುರಾಣವು ನಡಿಯುತ್ತಲಿದ್ದರೆ ಜನಗಳ ಹೃದಯಾಂಗಣದಲ್ಲಿ ನೀತಿಮಾರ್ಗ ಭಕ್ತಿಜ್ಞಾನಗಳಂಕುರಿಸಿ ಸದಾಚಾರ ಸದ್ಧರ್ಮಗಳು ವೃದ್ಧಿಯಾಗುವದರಲ್ಲಾವ ಸಂದೇಹವೂ ಇಲ್ಲ. ಪುರಾಣ ಪರಿಸಮಾಪ್ತಿ ಮಂಗಳಗಣಾರಾಧನೆಯ ಸಮಯದಲ್ಲಿ ಗುರುಪಾದದೇವರಮಠದ ಪಟ್ಟದ ಗುರುಪಾದಸ್ವಾಮಿಗಳವರಿಗೆ ಪುರಾಣವನ್ನು ಹೇಳಿದ್ದಕ್ಕಾಗಿ ಸಮಸ್ತದೈವದವರು ಉಚಿತಮರ್ಯಾದೆಯನ್ನು ಮಾಡಿದ್ದಲ್ಲದೆ ಮ|| ರಾ|| ಬಂಕಾಪುರದ ಕೊಟ್ರಪ್ಪನವರು 1 ಜರತಾರಿ ಶಲ್ಯವನ್ನು, ಅಂಗಡಿ ಕಾಶಪ್ಪನವರು 1 ಮಡಿಯನ್ನು, ಮುದುಗಲ್ಲು ಹನುಮಂತಪ್ಪನವರು 1 ಬೆಳ್ಳಿ ತಾಲಿಯನ್ನು, ಬಂಕಾಪುರದ ಹನುಮಂತಪ್ಪನವರು 1 ಬೆಳ್ಳಿತಾಲಿಯನ್ನು, ಬಂಕಾಪುರದ ಜೊಕ್ಕಪ್ಪನವರು 1 ಬೆಳ್ಳಿ ಬಟ್ಟಲನ್ನು ಒಪ್ಪಿಸಿದರು. ಶ್ರೀ ತೆಗ್ಗಿನಮಠದ ಚಂದ್ರಶೇಖರಸ್ವಾಮಿಗಳವರಿಗೆ ಮ|| ರಾ|| ಅಂಗಡಿ ಕಾಶಪ್ಪನವರು 1 ಮಡಿಯನ್ನು ಒಪ್ಪಿಸಿದರು. ಪುರಾಣವನ್ನು ಓದಿದ ಸಿದ್ದಪ್ಪನವರ ಕರಿಬಸವಪ್ಪನವರಿಗೆ ಉಚಿತಮರ್ಯಾದೆಯು ಮಾಡಲ್ಪಟ್ಟಿತು. ತಬಲ, ಪಿಯಾನುವಾದನಕಾರರಿಗೆ ಸರಿಯಾದ ಮರ್ಯಾದೆಗಳು ಮಾಡಲ್ಪಟ್ಟವು. ಆ ಕಾಲದಲ್ಲಿ ಪ್ರಭಾವೋಪಜೀವಿ ಬಂಕಾಪುರದ ಹನುಮಂತಪ್ಪನವರು ೭ ರೂಪಾಯಿಗಳನ್ನು ತೆಗೆಯಿಸಿದರು. ಕೆಲವು ಸರ್ಕಾರಿ ಉದ್ಯೋಗಸ್ಥರು ನಾಳೆ 1 ದಿವಸ ಪುರಾಣ ನಡೆಯಬೇಕೆಂದು ಅಪೇಕ್ಷಿಪಟ್ಟ ಕಾರಣ ಆ ಮರಿಗಣಾರಾಧನೆಯು ನಡೆದು ಆ ದಿವಸ ಸಾಯಂಕಾಲ ಪುರಾಣಕ್ಕೆ ಸರ್ಕಾರಿ ದೊಡ್ಡ ದೊಡ್ಡ ಉದ್ಯೋಗಸ್ಥರಾದ ಮ|| ರಾ|| ತಹಸೀಲುದಾರರು, ಸರ್ಕಲ್ ಇನ್ಸ್‌ಪೆಕ್ಟರು, ಸಬ್ ಇನ್ಸ್‌ಪೆಕ್ಟರು, ಸಬ್‌ರಿಜಿಸ್ಟ್ರಾರು, ಡಾಕ್ಟರು, ಸಬ್‌ಮೇಜಿಸ್ಟ್ರೇಟರು, ಮುಂತಾದವರೆಲ್ಲಾ ನೇರಿದ್ದರು. ಅವರಿಗೆಲ್ಲಾ ಬಂಕಾಪುರದ ತೋಟಪ್ಪನವರು ಉಂಮಣ್ಣನವರು ತತ್ಕಾಲೋಚಿತವಾದ ಟೀ ಪಾರ್ಟಿಯನ್ನು ನಡೆಯಿಸಿದರು. ಅನಂತರ ವೇದಮೂರ್ತಿ ಗುರುಪಾದದೇವರ ಮಠದ ನೀಲಕಂಠಶಾಸ್ತ್ರಿಗಳು ಪುರಾಣಶ್ರವಣದಿಂದುಂಟಾಗುವ ಫಲವಿಷಯವನ್ನು ಕುರಿತು ಉಪನ್ಯಾಸಮಾಡಿದ್ದಲ್ಲದೆ ಈ ಪುರಾಣವಿಷಯದಲ್ಲಿ ತನುಮನಧನಗಳಿಂದ ಸಹಾಯಮಾಡಿದ ಸರ್ವಮಹಜನರಿಗೂ ಶ್ರೀಜಗದ್ಗುರುವರ್ಯರು ಆಯುರಾರೋಗ್ಯ-ಐಶ್ವರ್ಯ-ಪುತ್ರಪೌತ್ರಾದಿ ಸಂಪತ್ಸಮೃದ್ಧಿ ಕಾಪಾಡಲೆಂದು ಉಪನ್ಯಾಸವನ್ನು ಮಾಡಿದರು. ಇದೆಲ್ಲಾ ಶ್ರೀತೆಗ್ಗಿನಮಠದ ಚಂದ್ರಶೇಖರಸ್ವಾಮಿಗಳವರ ಶಿವಪೂಜಾಪ್ರಭಾವವಲ್ಲವೇ! ಅನಂತರ ಸರ್ವಸಭಿಕರಿಗೂ ಗಂಧಪುಷ್ಪಾಹಾರತಾಂಬೂಲವನ್ನಿತ್ತು, ಶ್ರೀಜಗದ್ಗುರುಪಂಚಾಚಾರ್ಯ ಮಹಾರಾಜಕಿಜೈ ಎಂಬ ಜಯಘೋಷದೊಡನೆ ಸಭಾವಿಸರ್ಜನೆಯಾಯಿತು.

ಗೊಂಗಡಿ ಮಹಾದೇವಪ್ಪ.

ಶ್ರೀ ವಿಶ್ವನಾಥ ಪ್ರಸೀದ

ಶ್ರೀ ಭೂಕೈಲಾಸ ಮಹಾಕ್ಷೇತ್ರ ಕಾಶೀ

ಹಾಗೂ

ತೀರ್ಥರಾಜಪ್ರಯಾಗ

ಈ ಎರಡು ಪುಣ್ಯಸ್ಥಳಗಳಲ್ಲಿ ನೆರವೇರುವ ಪರ್ವಕಾಲಮಹೋತ್ಸವದ ಕಾರ್ಯಕ್ರಮ.

ಭರತಖಂಡದಲ್ಲಿ ವಾಸಿಸುವ ಸಮಸ್ತ ಸನಾ[tan] ಮತಾನುಯಾಯಿಗಳಿಗೆ ತಿಳಿಯಪಡಿಸುವದೇನಂದರೆ—

12 ವರ್ಷಗಳಿಗೊಮ್ಮೆ ಪ್ರಾಪ್ತವಾಗುವ ಅಸಾಧಾರಣ ಪುಣ್ಯಪ್ರದವಾದ ಪರ್ವಕಾಲವು ಈ ವ[...] **ಪ್ರಯಾಗಕ್ಷೇತ್ರ**ದಲ್ಲಿ ಪುಷ್ಯ ಶುದ್ಧ ಪೌರ್ಣ[...] ಮಂಗಳವಾರ (14-1-1930) ಬೆಳಗ್ಗೆ 4 ಗಂಟೆಯ[...] **ಪೂರ್ಣಕುಂಭಯೋಗವು** ಪ್ರಾಪ್ತವಾಗು[...] ಆ ಸಮಯದಲ್ಲಿ ಸ್ನಾನದಾನಾದಿಗಳನ್ನು ಮಾಡು[...]ಂದ ವಿಶೇಷವಾದ ಫಲಪ್ರಾಪ್ತಿಯಾಗುವದೆಂದು [...]ಸ್ತ್ರಗಳು ಉದ್ಘೋಷಿಸುತ್ತಿರುವವು. ಪುಷ್ಯ ಬಹು[...] ೧ ಬುಧವಾರದಿಂದ ಬಹುಳ ೩ ಶುಕ್ರವಾರದ ವ[...] ಪ್ರಯಾಗಕ್ಷೇತ್ರದ **ದಾರಾಗಂಜ ಜಂಗಮವಾ[ಡೀ]ಮಠ**ದಲ್ಲಿ ಧಾರ್ಮಿಕ ನೈತಿಕ ಸಾಮಾ[...] ಮೊದಲಾದ ವಿಷಯಗಳ ಮೇಲೆ ಉಪನ್ಯಾಸಗಳು [...]ಯುವವು. ತದನಂತರ ಶ್ರೀ ಕಾಶೀಕ್ಷೇತ್ರದಲ್ಲಿ[...] **ಶ್ರೀ ೧೦೮ ಜಗದ್ಗುರು ಶಿವಲಿಂಗಶಿವಾಚಾ[ರ್ಯ] ಮಹಾಸ್ವಾಮಿಗಳವರ** ಮಹಾಸಂಸ್ಥಾನ [...] ಮವಾಡೀ ಮಠದಲ್ಲಿ ಪುಷ್ಯ ಬಹುಳ ೭ (21-1-1930) ಮಂಗಳವಾರ ದಿವಸ ಶ್ರೀ ವೀರಭದ್ರಸ್ವಾಮಿ[...] ಪ್ರೀತ್ಯರ್ಥವಾಗಿ **ಅಗ್ನಿಕುಂಡ (ದಕ್ಷಯಜ್ಞಧ್ವಂಸ)** ಸಮಾರಂಭವು ಅತ್ಯಂತ ವೈಭವದಿಂದ ನೆರವೇ[ರು]ವದು. ಬಹುಳ ೮ ಬುಧವಾರದಿಂದ ಬಹುಳ ೧೧ [...]ವಾರದ ವರೆಗೆ ಶ್ರೀ ಕಾಶೀಕ್ಷೇತ್ರದಲ್ಲಿ ಸಭೆಯು [...]ವೇರಿ ಧಾರ್ಮಿಕ ವಿಷಯದ ಮೇಲೆ ವ್ಯಾಖ್ಯಾನಗ[ಳು] ಮಾಡಲ್ಪಡುವವು. ಅನಂತರ ಪುನಃ ಶ್ರೀ ಪ್ರಯಾ[ಗ]ಕ್ಷೇತ್ರದಲ್ಲಿ ಪುಷ್ಯ ಬಹುಳ ೩೦ (30-1-1930) ಬುಧವಾ[ರ] ದಿವಸ ಪೂರ್ಣಕುಂಭದ ದ್ವಿತೀಯ ಸ್ನಾನವೂ ಮಾ[ಘ] ಶುದ್ಧ ೫ (3-2-1930) ಸೋಮವಾರ ವಸಂತ ಪಂಚ[ಮೀ] ದಿವಸ ತೃತೀಯಸ್ನಾನವೂ ಆಚರಿಸಲ್ಪಡುವದು. ಮ[...]ದೆ ಮಾಘ ಬಹುಳ ೧೪ (12-2-1930) ಬುಧವಾ[ರ] ಶ್ರೀ ಕಾಶೀಕ್ಷೇತ್ರದಲ್ಲಿ ಅಸಾಧಾರಣ ಪುಣ್ಯಕಾ[...]ನಿಸಿದ ಶಿವರಾತ್ರಿ ಮಹಾಸಮಾರಂಭವು ನೆರವೇರುವ[ದ]ಲ್ಲದೆ ಪ್ರತಿ ವರ್ಷದಂತೆ **ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ** ಪೂಜ್ಯಪಾದರ ರಥೋತ್ಸವವು ಅತ್ಯಂತ ವೈ[ಭ]ವದಿಂದ ನೆರವೇರುವದು. ಆದುದರಿಂದ ಸಂಸಾರ[ಸಾಗ]ರದಲ್ಲಿ ಮುಳುಗಿ ದುಃಖಪಡುತ್ತಿರುವ ಮಾನವರ ಉದ್ಧಾ[ರ]ರಕ್ಕೋಸ್ಕರ ಪರಮಾತ್ಮನ ಅಪ್ಪಣೆಯಂತೆ [...] ಅಭೂತಪೂರ್ವ ಪರ್ವ (ಪೂರ್ಣಕುಂಭ) ಸಮಯ[...] ಗಂಗಾತ್ರಿವೇಣೀ ಮಣಿಕರ್ಣಿಕಾ ಮೊದಲಾದ ಪ[...] ತೀರ್ಥದಲ್ಲಿ ಸರ್ವರೂ ಸ್ನಾನಮಾಡಿ ಸಾಂಸಾರಿಕ [...] ತಾಪದಿಂದ ದೂರರಾಗಿ ಶ್ರೀ ವಿಶ್ವನಾಥನ ಕೃಪೆಯಿ[...] ಅಖಂಡ ಸುಖಸಾಮ್ರಾಜ್ಯಸೌಖ್ಯವನ್ನು ಅನುಭವಿಸ[ತಕ್]ಕಾಗಿದೆ. ಅದಕಾರಣ ಸಮಸ್ತ ಆಸ್ತಿಕ ಮತಾ[ನು]ಯಾಯಿಗಳು 12 ವರ್ಷಕ್ಕೊಮ್ಮೆ ಪ್ರಾಪ್ತವಾಗು[ವ] **ಪೂರ್ಣ ಕುಂಭಯೋಗ**ದಲ್ಲಿ ಭಾಗಿಗಳಾಗಿ ಪ[...] ಪುತ್ರಮಿತ್ರಾದಿಗಳೊಡನೆ ಆಗಮಿಸಿ, ಪುಣ್ಯತೀ[ರ್ಥ] ಸ್ನಾನ, ಶ್ರೀ ವಿಶ್ವನಾಥ, ಅನ್ನಪೂರ್ಣಾ ಕಾಲಭೈರವಾ[ದಿ] ದೇವತೆಗಳ ದರ್ಶನಾದಿಗಳನ್ನು ಮಾಡಿಕೊಂಡು ತ[ಮ್ಮ] ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಪ್ರಾ[ರ್ಥಿ]ಸುತ್ತೇನೆ.

ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಜಂಗಮವಾಡೀಮಠ. | ಏಜೆಂಟ್, ಶ್ರೀ ಜಂಗಮವಾಡೀಮ[ಠ], ಶ್ರೀ ಕ್ಷೇತ್ರ ಕಾಶೀ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರ[ಶೈವ]ಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದ[ೈವದಿಂದ] ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಆಂದ ಮೇಲೆ—ಮಲೇರಿಯಾಜ್ವರ ಪದೇ ಪದೇ ಹಿಡಿಯುವ ದಿವಸಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

[...]! ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, '**ಕೊಡಗಿನ ಗುಡುಗುಡು!**' (ಛೀ), '**ಸುಡುಸುಡು!**' (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [17]

[ಕ್ರ]ಯ 8 ಡ್ರಾಮ್ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

[ನ]ಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

[...] ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ [...]ದುಳ್ಳಾಗಿ [...]ಣರಾಗ [...]

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಿಕ್ಕರಿಸಿದರೆ ಕ್ರೀಡಣೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ [...]ಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಶರೀ ಜವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, [...]ಕಾರ ಹಿಡಿಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು [...]ವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು [...] ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. [...] ವನಸ್ಪತಿ-ತತಪುಷ್ಪ, ಶಾಲಿಮಕಂದ, ಮಧುಕಂದ, ಜರಾಕಂದ, ಶಾಲಿಮಲಿಕಂದ, ಅಶ್ವಕಂದ, ಕ್ರೌಂಚಕಂದ, ಮುಸಳೀಕಂದ [...]ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಡಬೀಜ, ನಾಗಬೀಜ, ಬಾಳಬೀಜ, ಭೋಕರೀ [...] ನವಲೀಬೀಜ, ಚಿಕಣಿದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಜಾಯಿಪತ್ರಿ, ವಿಸಾಪತ್ರಿ, ಮದನಮಸ್ತ, ರಸಪುರುಷ, ಕಮಲ [...] ಕಬಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಶಾಲೀಮಖಾನಾ, ಬೀಜಬಂದ, ಹರಣಜೋರಿ, ಮುಂಗಲೀ [...], ಮರ್ದಸೀಕೆಟ್ಟಿಗೆ, ಶತಾವರಿ, ಸಕೀವಮಗಜ, ಆಲದಹಾಲು, ವಾಕೇರಿಭಾಜಾ, ಗೋಖರು, ಅಡವಿಬೆಂಡಿಬೀಜ, ಅಮೃತ [...] ಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಪಾಮಸ್ತಕಿ, ವಂಶಲೋಚನ, ನರಧಾರಾ, ಕೇಸರಿ, [...], ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟ[ವರಿ]ಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು [...]ಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಾಳ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು [...] ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. [...] ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ....ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಪಿತ್ತ್ಯ, ರಕ್ತ, ಕೀವು, ಹುಣ್ಣು, ದುರ್ಗಂಧ [...] ಕ್ರಿಮಿ, ನಾಸಬಾರದಿರೋಣ, ದಬ್ಬಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು [...] ಕೊಳವೆಯು 1 ಪುಡಿಕೆಗೆ 3 ರೂಪಾಯಿಗಳು. [21]

ಪತ್ತೆ:—ನೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜು)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಶೈಲಾಸೇಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ಧರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಿಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ. ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[34] (೮೪೮) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೫ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೫ನೆಯ ಆವೃತ್ತಿ	೨ ಆಣೆ
ಪಂಚಪಂಕ್ತಿ ಪ್ರಶ್ನಪ್ರಕಾಶ ೫ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೫ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೫ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟೀಕಾ ಸಹಿತ	೮ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ಕೃಷ್ಟ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡ ಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿಯ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇನೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
[14] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಘಮದಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿ... ಒಂಟಿ ತಲೆಸೋಲು ತಲೆಯಲ್ಲಿನ ರೋಗ...

(Registered Trade Mark)

೫, ಕಣ್ಣುಗಳಲ್ಲಿ ಉಂಟಾಗತಕ್ಕ [ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ... ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪...
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ... ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[23] ಪೋ. ಬಾ. ೫೧೦, ಮದರಾಸ್

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ ನೇ ಡಿಶಂಬರ್ ೧೯೨೯ [ಸಂಚಿಕೆ ೩೧.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೦ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಜಗದಾಚಾರ್ಯರ ಮನೋಹರವಾದ ಬ್ಲಾಕಿನೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯ ಪ್ರಭಾ ಆಫೀಸ್.
ಮೈಸೂರು.

ಶಿವಾಧಿಕ್ಯರತ್ನಾವಳಿ.

ಉಭಯ ಕವಿತಾವಿಶಾರದನೆಂದು ಕೀರ್ತಿವೆತ್ತಿರುವ ಶ್ರೀ ಷಡಕ್ಷರಕವಿಯು ಮೇಲ್ಕಂಡ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಕನ್ನಡ ಕವಿತೆಯಲ್ಲಿ ಈ ಕವಿಯ ಪಾಂಡಿತ್ಯವು ಎಷ್ಟು ಮಹತ್ವದ್ದಿರುವದೋ, ಅಷ್ಟೇ ಪಾಂಡಿತ್ಯವು ಸಂಸ್ಕೃತ ಕವಿತೆಯಲ್ಲಿಯೂ ಸಹ ಇರುವದೆಂಬ ವಿಷಯವು ಈ ಮೇಲ್ಕಂಡ ಗ್ರಂಥ ರಚನಾ ಸರಣಿಯಿಂದಲೇ ವೇದ್ಯವಾಗುವುದು. ಈ ಅಮೂಲ್ಯವಾದ ಗ್ರಂಥಕ್ಕೆ ಮೈಸೂರು ರಾಜಧಾನಿಯ ನಿವಾಸಿಗಳಾದ ಹೊಸಮಠದ ಶ್ರೀ ಬಸವಲಿಂಗಸ್ವಾಮಿಗಳವರು ಸುಗಮವಾದ ಕನ್ನಡಟಿಪ್ಪಣಿಯನ್ನು ರಚಿಸಿ ಮುದ್ರಿಸಿದ್ದಾರೆ. ಈ ಗ್ರಂಥದಲ್ಲಿ ಶಿವಸರ್ವೋತ್ಕೃಷ್ಟತ್ವವಿಷಯವು ಸಪ್ರಮಾಣವಾಗಿಯೂ, ಸುಲಲಿತವಾಗಿಯೂ, ಗಂಭೀರವಾಗಿಯೂ ಪ್ರತಿಪಾದಿಸಲ್ಪಟ್ಟಿರುತ್ತದೆ. ಟಿಪ್ಪಣಿಕಾರರು ಕವಿಯ ಆಶಯಕ್ಕನುಸಾರವಾಗಿ ಪುರಾಣಪ್ರಸಿದ್ಧಗಳಾದ ಅನೇಕ ಕಥೆಗಳನ್ನೂ ಶ್ರುತಿವಾಕ್ಯಗಳನ್ನೂ ಪ್ರಮಾಣಕ್ಕೋಸ್ಕರ ಉದಾಹರಿಸಿ ಗ್ರಂಥದ ಗೌರವವನ್ನು ವಿಶೇಷವಾಗಿ ಹೆಚ್ಚಿಸಿರುತ್ತಾರೆ. ಈ ಗ್ರಂಥವು ಪಂಡಿತಪಾಮರಾದಿಗಳಾಗಿ ಸರ್ವರಿಗೂ ಸಂಗ್ರಹಿಸಲು ಯೋಗ್ಯವಾಗಿದೆ. ಕನ್ನಡಭಾಷಾಭಿಮಾನಿಗಳೆಲ್ಲರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇನೆ. ಬೆಲೆ ೦—೮—೦. ಸದರಿ ಗ್ರಂಥವು ಪಂಚಾಚಾರ್ಯಪ್ರಭಾ ಆಫೀಸಿನಲ್ಲಿಯೂ, ಹಾಗೂ ಶ್ರೀ ಬಸವಲಿಂಗಸ್ವಾಮಿಗಳು, ಹೊಸಮಠ, ಮೈಸೂರು ಇವರಲ್ಲಿಯೂ ದೊರೆಯುವದು.

ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿಯ ದೇವಾಲಯದಲ್ಲಿ ನಡೆದ ಕಮಿಟಿಯ ಕಾರ್ಯಕ್ರಮಗಳು.

(1) ಈ ಮೊದಲೇ ಪ್ರಸಿದ್ಧಿಸಿದ ಪ್ರಕಾರ ದೇವಸ್ಥಾನದ ದನಗಳು ಪ್ರಸಿದ್ಧ ಲಿಲಾವಿನಲ್ಲಿ ಮೂರುನೂರು ಮುವ್ವತ್ತು ರೂಪಾಯಿಗಳಿಗೆ ಶ್ರೀಮಂತ ಬಾಸಗೌಡ ಬಹದ್ದೂರ ದೇಶಾಯಿ ಹುಮ್ಮಿಗಿ ಇವರಿಗೆ ಮಾರಲ್ಪಟ್ಟವು. (2) ದೇವಸ್ಥಾನದ ತೇರು ಹೊಸದಾಗಿ ಗದಿಗಿನಲ್ಲಿ ತಯಾರಾಗಿರುವುದರಿಂದ ಈ ವರ್ಷ ಜಾತ್ರೆಯೊಳಗಾಗಿ ಇಲ್ಲಿಗೆ ಬರುವಂತೆ ಪ್ರಯತ್ನಿಸಬೇಕೆಂಬ ಆಲೋಚನೆಗಾಗಿಯೂ ತೇರನ್ನು ಇಡುವುದಕ್ಕೆ ದೇವಸ್ಥಾನದಲ್ಲಿ ಒಂದು ಹೊಸಮನೆಯನ್ನು ಕಟ್ಟಿಸಿಕೊಡುತ್ತೇನೆಂದು ಹಿಂದೆ ವಾಗ್ದಾನಮಾಡಿದ್ದ ಘಟ್ಟಿರಡ್ಡಿಹಾಳಗ್ರಾಮದ ಶ್ರೀಮಂತ ಸಂಗರಡ್ಡಿ ಇವರನ್ನು ಸಮಕ್ಷಮ ಕಂಡು ಜಾಗ್ರತೆ ಕಾರ್ಯಾರಂಭಮಾಡಲು ತಿಳುಹಿಸಿ ಬರುವದಕ್ಕಾಗಿಯೂ ಕಮಿಟಿಯುವತಿಯಿಂದ ಸರ್‌ಪಂಚರಾದ ಶ್ರೀ|| ವೇ|| ಫಕೀರಯ್ಯನವರನ್ನು ನಿಯಮಿತಮಾಡಲಾಯಿತು. (3) ವಾಗ್ದಾನದ ಪ್ರಕಾರ ಸಂಗರಡ್ಡಿಯವರು ಬೇಗನೆ ತೇರಿನ ಮನೆಯನ್ನು ಹಾಕಿಸುವದಕ್ಕೆ ಕಬೂಲಮಾಡದಿದ್ದಲ್ಲಿ ದನಗಳನ್ನು ಮಾರಾಟಮಾಡಿದ ರಕಮನ್ನೇ ತೇರು ಮನೆಗಾಗಿ ವಿನಿಯೋಗಿಸತಕ್ಕದ್ದೆಂತಲೂ ಒಂದುವೇಳೆ ಸಂಗರಡ್ಡಿಯವರು ವಾಗ್ದಾನದ ಪ್ರಕಾರ ಕಾರ್ಯಾರಂಭಮಾಡಲು ಒಪ್ಪಿದಲ್ಲಿ ಈ ಹಣವನ್ನು ಈ ದೇವಸ್ಥಾನದಲ್ಲಿ ಶಿಥಿಲವಾಗಿರುವ ಇಮಾರತಿಗಳಿಗಾಗಿ ವಿನಿಯೋಗಿಸತಕ್ಕದ್ದೆಂದೂ ನಿರ್ಣಯಿಸಲ್ಪಟ್ಟಿತು. (4) ಶಿಂಗ್ಟಾಲೂರಲ್ಲಿ ಈವಳಗಾಗಿ ದನಗಳಿಗೋಸ್ಕರ ಹಾಕಿಸಿದ ಚಪ್ಪರದ ಸಾಮಾನುಗಳನ್ನು ಲಿಲಾವು ಮಾಡಿ ಬಂದ ಹಣವನ್ನು ದೇವಸ್ಥಾನದ ಖಾತೆಗೆ ಜಮಾಮಾಡಲು ಸರ್‌ಪಂಚರಿಗೆ ವಹಿಸಲ್ಪಟ್ಟಿತು. (5) ಈ ದಿವಸ ಕೂಡಿದ ಮಹಾಜನಗಳಲ್ಲಿ ಈ ದೇವಸ್ಥಾನದಲ್ಲಿ ಶಿಥಿಲವಾಗಿರುವ ಇಮಾರತಿಗಳನ್ನು ತೆಗೆದುಹಾಕಿ ನೂತನವಾಗಿ ತಯಾರಿಸುವ ಬಗ್ಗೆ ಮ|| ರಾ|| ಹುಮ್ಮಿಗಿನವರ ಫಕೀರಪ್ಪನವರು ಸ್ವಸಂತೋಷದಿಂದ ಒಂದು ನೂರು ರೂಪಾಯಿಗಳನ್ನು ಕೊಡಲು ವಾಗ್ದಾನಮಾಡಿದರು. ಈ ರಕಮನ್ನು ದಾವಣಗೇರಿ ಶ್ರೀ ಜಯಲಕ್ಷ್ಮಿ ನಾಟಕ ಕಂಪನಿ ಮ್ಯಾನೇಜರ ಮ|| ರಾ|| ಕಂಚಿಕೇರಿ ಕೊಟ್ರಬಸಪ್ಪನವರು ವಾಗ್ದಾನಮಾಡಿದ ಸೈಕಿ ಕೊಟ್ಟಿರುವ ಒಂದುನೂರು ರೂಪಾಯಿಗಳನ್ನೂ ಅವರವರ ಅಪೇಕ್ಷೆಯಂತೆ ಈ ವರ್ಷ ಜಾತ್ರೆಯೊಳಗಾಗಿ ಇಮಾರತಿಗಳನ್ನು ತಯಾರಿಸುವಂತೆ ನಿರ್ಣಯಿಸಲ್ಪಟ್ಟನಂತರ ಕಮಿಟಿಯ ಕಾರ್ಯಕ್ರಮವು ಮುಕ್ತಾಯವಾಯಿತು.

ಪಂಚಕಮಿಟಿ ಪ್ರೆಸಿಡೆಂಟ
ಗುರುಭಕ್ತಕೇಸರಿ ಹುಮ್ಮಿಗಿ.

ಸ್ವೀಕಾರ.

ಗದಗ-ಬೆಟಗೇರಿ ವಾಸಿಗಳಾದ ಮ|| ರಾ|| ಯಲ್ಲಪ್ಪಾ ಮಣ್ಣೂರ ಇವರ ಮಗಳು ಸೌ|| ಗಂಗವ್ವನನ್ನು ಮ|| ರಾ|| ಶಿವಪ್ಪ ಇಟಗಿ ಇವರ ಪುತ್ರ ಚಿ|| ರಾ|| ದೊಡ್ಡಬಸಪ್ಪನಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ ವರನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ. ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ. ಒಟ್ಟು 3 ರೂಪಾಯಿಗಳು ಮ|| ರಾ|| ನೀಲಪ್ಪಗೌಡಾ ಶಿವನಗೌಡಾ ಹಿರೇಮನಿ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ತುಂಕೂರು ಪ್ಲೀಡರ್ ಮ|| ರಾ|| ಜಿ. ಕೆ. ಗುರುಸಂಗಾರ್ಯರು ಕೃತ್ತಿಕಾ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಹಾಗೂ ತುಂಕೂರು ವೀರಶೈವ ಮಹಾಜನಗಳು ಅರಳೇಪೇಟೆಯ ಶ್ರೀ ನಂದೀಶ್ವರಾಲಯದಲ್ಲಿ ನಡೆಯಿಸಿದ ಕಾರ್ತೀಕ ಪೂಜಾ ಸಮಾಪ್ತಿ ಕಾಲದಲ್ಲಿ ದೇಶದ ಯಜಮಾನ ಮ|| ರಾ|| ಭೋಜನವಾಡಪ್ಪನವರ ಮೂಲಕ ಸಮರ್ಪಿಸಿದ 1 ರೂ. ಒಟ್ಟು 3 ರೂಪಾಯಿಗಳು. ಮ|| ರಾ|| ಜಿ. ಕೆ. ಗುರುಸಂಗಾರ್ಯರ ದ್ವಾರಾ ತಲ್ಪಿರುತ್ತವೆ.

ನಂಜನಗೂಡಿನಲ್ಲಿರುವ ಹೊಂದಲಗೇರಿ ಮಠದ ವೇ|| ಶಿವಮೂರ್ತಿಸ್ವಾಮಿಗಳು ಕಾರ್ತೀಕ ಬಹುಳದಲ್ಲಿ ವೇ|| ಶಿವರುದ್ರಸ್ವಾಮಿಗಳಿಗೆ ಪಟ್ಟಾಭಿಷೇಕವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಹಿಂದುಸ್ಥಾನದಲ್ಲಿ ಫ್ರೆಂಚರಿಗೆ ಸೇರಿದ ಸ್ವಾಸ್ಥ್ಯಗಳಿಗೆ ಮಿ|| ಡೇಗೀಸ್ ಎಂಬುವರು ಗವರ್ನರಾಗಿದ್ದಾರೆ. ಫ್ರಾನ್ಸಿನಿಂದ ಇವರ ಮೇಲೆ ಬಹಳ ಕ್ರೂರವಾದ ಅಪರಾಧವು ಹೊರಿಸಲ್ಪಟ್ಟಿರುವಂತೆ ಸಮಾಚಾರ ಬಂದಿದೆ. ಹಿಂದೂಸ್ಥಾನದಲ್ಲಿರುವ ಫ್ರೆಂಚರ ಸ್ವಾಸ್ಥ್ಯಗಳ ಸರಕಾರಿ ನೌಕರರಿಗೆ ಮೊನ್ನೆ ನಡೆದ ಚುನಾವಣೆಗಳಲ್ಲಿ ಆ ಗವರ್ನರು ಯಾವ ರೀತಿ ಚುನಾವಣೆಮಾಡಬೇಕೋ ಅದನ್ನು ತಮ್ಮ ಅಧಿಕಾರ ಬಲದಿಂದ ತಿಳಿಸಿದರೆಂದೂ, ಸಾಮಾನ್ಯ ಪ್ರಜೆಗಳು ಕೂಡ ಅವರ ಅಭಿಮತಕ್ಕೆ ವಿರೋಧವಾಗಿ ಓಟು ಕೊಟ್ಟಪಕ್ಷದಲ್ಲಿ ಅಂಥವರನ್ನು ದಸ್ತಗಿರಿ ಮಾಡಿಸುವುದಾಗಿಯೂ ತಿಳಿಸಿ ಎಚ್ಚರಿಕೆಕೊಟ್ಟರೆಂದೂ, ಅವರ ಅಭಿಪ್ರಾಯಕ್ಕೆ ವಿರೋಧವಾಗಿ ಬ್ರಿಟಿಷ್ ಇಂಡಿಯಾದಲ್ಲಿ ಸಂಚರಿಸುತ್ತಿದ್ದವರನ್ನು ಚುನಾವಣೆಗಳು ಮುಗಿಯುವವರೆಗೆ ತಡೆದಿಟ್ಟುಕೊಂಡಿರುವಂತೆ ಮದ್ರಾಸ್ ಅಧಿಕಾರಿಗಳನ್ನು ಕೇಳಿಕೊಂಡಿದ್ದರೆಂದೂ ಆ ಗವರ್ನರ ಮೇಲೆ ದೊಡ್ಡ ಆಕ್ಷೇಪಣೆ ಹುಟ್ಟಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲವೂ ಶ್ರೀ ವೀರಶೈವ ಮತದಲ್ಲಿ ಸಂಸ್ಕೃತ ವಿದ್ಯೆಯ ಅವತರಣವೂ

ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಭಗವತ್ಪಾದ ಸಿಂಹಾಸನಮಠ (ಜಂಗಮವಾಡೀಮಠ) ವು ಉತ್ತರಖಂಡ ಆರ್ಯಾವರ್ತದಲ್ಲಿ ವಿರಾಜಿಸುತ್ತಿರುವದು ಅಶೇಷ ವೀರಶೈವರಿಗೆ ವಿದಿತವಾಗಿದೆಯಷ್ಟೆ! ಈ ಪೀಠದ ವಿಷಯವನ್ನು ಹಿಂದೆ ಮೈಸೂರು ಶ್ರೀ ಪಂಚಾಚಾರ್ಯ ಪ್ರಭೆಯಲ್ಲಿ "ಕಾಶೀಪೀಠದ ಸಂಕ್ಷಿಪ್ತಚರಿತ್ರ" ಎಂಬ ಅಭಿಧಾನದಿಂದ ಉಲ್ಲೇಖಿಸಿದ್ದೆವು. ಪ್ರಭಾ ಪಾಠಕರು ಸಿಂಹಾವಲೋಕನವನ್ನು ಮಾಡಬಹುದು. ಆದರೆ ಯಾವುದಾದರೊಂದು ಜನಾಂಗವೇ ಆಗಲಿ ರಾಜ್ಯವೇ ಆಗಲಿ ಮುಂದೊರೆಯಲು ಆಯಾಯ ವಿದ್ಯೆಗಳೇ ಮೂಲಭೂತಗಳೋ ಅಲ್ಲವೋ ಎಂಬುದು ಹಿಂದಿನ ಆಚಾರ್ಯ ಮಹಾಪುರುಷರ ಇತಿಹಾಸದಿಂದ ಸ್ಪಷ್ಟವಾಗಿ ತಿಳಿಯುವದು. ಇನ್ನು ಈ ಇಪ್ಪತ್ತನೆಯ ಶತಮಾನದಲ್ಲಿಯಾದರೂ ಆಯಾ ಮಹಾನುಭಾವರ ದ್ವಾರಾ ವಿದ್ಯಾಮೂಲಕವಾಗಿಯೇ ಧಾರ್ಮಿಕ ರಾಜಕೀಯ ವಿದ್ಯೆಗಳನ್ನು ಅಹಮಹಮಿಕಯಾ ಸಮಸ್ತ ಜಾ[illegible]ವರೆಲ್ಲರೂ ವಿಶ್ವತೋಮುಖವಾಗಿ ಅಭ್ಯಾಸ ಮಾ[illegible]ವದು ಸ್ಪಷ್ಟವೇ ಆಗಿದೆ. ಕೆಲವು ಉ[illegible]ದ್ಯೋಗವಿಹೀನರು ಕಲಿಯುಗ ಕಲಿಯುಗವೆಂದು ನೆರಳುತ್ತಿರುವರು. ಹಲಕೆಲವರು ಪರಮೋತ್ಸಾಹಶೀಲರಾಗಿ ಕರಯುಗಕರಯುಗವೆಂದತ್ಯುನ್ನತಿಯನ್ನೇ ಪಡೆಯುತ್ತಲಿರುವರು. ವಸ್ತುತಃ ಕಲಿಯುಗದ ಅರ್ಥವು ಹೇಗೇ ಇರಲಿ, ಕಲಿಯುಗವೆಂದು ಸುಮ್ಮನೇ ಕೂಡ್ರಲಾದೀತೇ ? ಅದು ಪುರುಷ ಲಕ್ಷಣವೇ ಅದ್ದರಿಂದಲೇ "ಅಜರಾಮರವತ್ಪ್ರಾಜ್ಞಃ ವಿದ್ಯಾಮರ್ಥಂಚ ಸಾಧಯೇತ್ । ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂಚಸಾಧಯೇತ್ ॥ ಎಂಬ ಅಭಿಯುಕ್ತ ವಚನಗಳಿರುವದರಿಂದ ವಿದ್ಯಾರ್ಜನೆಯನ್ನು ಧನಾರ್ಜನೆಯನ್ನು ಮಾಡುತ್ತಲೇ ಇರಬೇಕು. ಕಲಿಯುಗವೆಂದು ಭೀತಿಗೊಳ್ಳದೆ ಪುರುಷಾರ್ಥಗಳನ್ನು ಸಂಪಾದಿಸುವವನೇ ಪುಣ್ಯಶಾಲಿಯೆಂದು ಪೌರುಷೇಯ ಹೀನನಾಗಿರುವವನೇ ಪಾಪಿಯೆಂದೂ ಈಗಣ ನವಯುವಕರಿಗೆ ನಾವು ಬೋಧಿಸದೆ ಇರಲಾರೆವು, ಪ್ರಕೃತದಲ್ಲಿ ರಾಜಕೀಯ ವಿದ್ಯೆಯು ಎಷ್ಟು ಮುಂದುವರಿದದೆ ಅದಕ್ಕೆ ಎಷ್ಟು ಪ್ರಯತ್ನಗಳು ನಡೆಯುತ್ತಲಿವೆ ಎಂಬುದನ್ನು ಬೇರೆ ನಾವು ಹೇಳಬೇಕಾಗಿಲ್ಲವು. ಹಳ್ಳಿಹಳ್ಳಿಗಳಲ್ಲಿಯೂ ಕೂಡ ವಾಟರ್ ಬಾಕ್ಸ ಬಟನ್ ಇತ್ಯಾದಿ ಶಬ್ದಗಳ ಪ್ರಚಾರದಿಂದಲೇ ತಿಳಿಯಬಹುದಾಗಿದೆ. ಇನ್ನು ಸಂಸ್ಕೃತವಿದ್ಯೆಗೆ ಈ ಸಮಯದಲ್ಲಿ ಮೃತಭಾಷೆಯೆಂದು ಈಗಣ ಹಲಕೆಲ ಸುಧಾರಕರು ಹೇಳುತ್ತಿದ್ದರೂ ಅದು ತನ್ನ ಅಮರವಾಣೀರೂಪವಾಗಿ ಅನುರಾವಯೋವಿಧಿ (30) ವಯಸ್ಸಿನ ಯೌವ್ವನದ ಸೊಬಗನ್ನು ತೋರಿಸುತ್ತಲೇ ಇದೆ. ಮೊಟ್ಟಮೊದಲು ಯವನರೂ ಸಹ ಈ ಭಾಷೆಯನ್ನು ಉಪಾಸನೆಮಾಡಿಯೇ ಭಾರತೀಯ ಸರ್ವಸ್ವಾಪಹರಣಮಾಡಿರುವರು, ಯವನ (ಮ್ಲೇಚ್ಛ) ಭಾಷಾ ಉಪಾಸಕರಾದ ನಮ್ಮವರು ಮಾತ್ರ ತಮ್ಮ ಸತ್ವವನ್ನು ಕಳೆದುಕೊಂಡರು. ಇನ್ನು ಜರ್ಮನ್ ಮುಂತಾದ ದೇಶಗಳು ಸಂಸ್ಕೃತ ಸಾಹಿತ್ಯದಿಂದಲೇ ಮುಂದುವರಿದು ಸೌಖ್ಯವನ್ನು ಪಡೆಯುತ್ತಲಿವೆ. ಈಗಲೂ ಸಹ ನಮ್ಮ ಭರತಖಂಡದಲ್ಲಿ ಬಂಗಾಲದೇಶದ ನವದ್ವೀಪದಲ್ಲಿ ವಿಬುಧಜನನೀಸಭಾ ಢಾಕಾಸಭಾ ಕಲಕತ್ತಾಪಂಡಿತಸಭಾ ಮುಂತಾದ ಪ್ರಾಚೀನ ಸಂಸ್ಕೃತೋತ್ತೇಜಕ ಸಮಿತಿಗಳು ಸಮೃದ್ಧವಾಗಿರುವವು. ಮಿಥಿಲಾದೇಶದಲ್ಲಿ ಪಾಟ್ನಾ, ದರಭಾಂಗಾ ಮುಂತಾದ ಸ್ಥಳಗಳಲ್ಲಿ ಸಂಸ್ಕೃತ ಮಹಾವಿದ್ಯಾಲಯಗಳು ರಾಜಿಸುತ್ತಲಿರುವವು. ಕಾಂಚೀ, ಮೈಸೂರು, ಮದ್ರಾಸ್ ಮುಂತಾದ ದಕ್ಷಿಣದೇಶಗಳಲ್ಲೂ ಸಂಸ್ಕೃತ ಮಹಾವಿದ್ಯಾಲಯಗಳು ಇದ್ದೇ ಇರುತ್ತವೆ. ಇನ್ನು ಅಶೇಷ ಜಗತ್ತಿಗೂ ತುಲನಾತ್ಮಕನಾದ ಕಾಶಿಯಲ್ಲಂತೂ ಅನಂತ ಸಂಸ್ಕೃತ ವಿದ್ಯಾಲಯಗಳೂ, ಮಹಾವಿದ್ಯಾಲಯಗಳೂ ಗೌರ್ನಮೆಂಟ್ ಸಂಸ್ಕೃತ ಕಾಲೇಜು ಹಿಂದೂ ವಿಶ್ವವಿದ್ಯಾಲಯ ಮುಂತಾದ ಸಂಸ್ಕೃತ ವಿದ್ಯೆಯ ಉತ್ತೇಜಕ ಸಂಸ್ಥೆಗಳು ಇರುವವು. ಹೇಗೆ ಜಗತ್ತಿಗೆ ಸದ್ಯಃ ಕಾಶಿಯು ಸಂಸ್ಕೃತ ವಿದ್ಯಾಪೀಠವಾಗಿದೆಯೋ ಹಾಗೆಯೇ ಅಶೇಷ ವೀರಶೈವ ಸಮಾಜಕ್ಕೆ ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲವು ಸಂಸ್ಕೃತ ವಿದ್ಯಾಪೀಠವೆಂದು ಪ್ರಸಿದ್ಧಿ ಪಡೆದು ಇಂದಿಗೂ ಪ್ರಜ್ವಲಿತವಾಗಿದೆ. ಈ ಕಾಶೀ ವಿಶ್ವಾರಾಧ್ಯ ಗುರುಗಳಿಂದ ದೂರ್ವಾಸ ಗೌತಮ ಕಶ್ಯಪಾದಿ ಅನೇಕ ಪ್ರಸಿದ್ಧ ಮುನಿಗಳು ಸಹ ತತ್ವವಿದ್ಯೆಯನ್ನು ಪಡೆದಿರುವರು. ಐತಿಹಾಸಿಕದೃಷ್ಟಿಯಿಂದ ವಿಚಾರಿಸಿದರೂ ಸಹ ಕಾಶೀಮಠವು ವಿಶ್ವವಂದನೀಯವೆಂದೂ ಅತಿ ಪ್ರಾಚೀನವೆಂದೂ ಪ್ರಖ್ಯಾತಿಯನ್ನು ಹೊಂದಿರುತ್ತದೆ. ಇನ್ನು ಶ್ರೀ ಕಾಶೀಸ್ಥ ಜಗದ್ಗುರು ವಿಶ್ವಾರಾಧ್ಯ ಗುರುಕುಲವೂ ಶ್ರೀ ವೀರಶೈವಮತದಲ್ಲಿ ಸಂಸ್ಕೃತ ವಿದ್ಯೆಯ ಅವತರಣವೂ ಎಂಬ ಶಿರೋಲೇಖನದ ವಸ್ತುಸ್ಥಿತಿಯನ್ನುಲ್ಲೇಖಿಸುವೆವು.

ಮೊಟ್ಟಮೊದಲು ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯರಾದ ಶ್ರೀ ಕಾಶೀವಿಶ್ವನಾಥ ಲಿಂಗೋದ್ಭವ ಶ್ರೀ ವಿಶ್ವಕರ್ಣ ಶಿವಾಚಾರ್ಯರಿಂದ ದೂರ್ವಾಸಾದಿ ಮುನಿಗಳಿಗೆ ನಿಗಮಾಗಮಗಳು ಪ್ರಾಪ್ತಗಳಾದವು. ಈ ಬಗ್ಗೆ ಪಾಶುಪತಾಗಮದಲ್ಲಿ ಉಲ್ಲೇಖವಿದೆ. ಆ ಮುನಿಗಳು ಉಪದೇಶದ ಮಹಿಮೆಯಿಂದ ಅನೇಕ ಶಾಸ್ತ್ರಗಳನ್ನೂ ರಚಿಸಿದರು. ತರುವಾಯ ವಿಶ್ವಾರಾಧ್ಯ ಪೀಠಾಧಿಪತಿಗಳಾದ ಮಲ್ಲಿಕಾರ್ಜುನ ಶಿವಾಚಾರ್ಯರೇ ಮುಂತಾದ ಶಿವಯೋಗಿಗಳು ನಿಗಮಾಗಮಾರ್ಥ ಬೋಧಕರಾಗಿ ವಿಶ್ವವಂದ್ಯರಾಗಿದ್ದರಲ್ಲದೆ ಆಯಾ ಸಾಮಯಿಕ ರಾಜಾಧಿರಾಜರನ್ನು ತಮ್ಮ ವಿದ್ಯಾಬಲದಿಂದ ಶಿಷ್ಯರನ್ನಾಗಿಮಾಡಿಕೊಂಡಿದ್ದರು. ಈ ವಿಷಯವನ್ನು ನಾವು ಪ್ರಕಟಿಸಿರುವ "ಸಂಕ್ಷಿಪ್ತಚರಿತದಲ್ಲಿ" ನೋಡಬಹುದು. ಕೆಲಕಾಲದಿಂದೀಚೆಗೆ ಕರ್ನಾಟಕದಲ್ಲಿರುವ ವೀರಶೈವಮತವು ಅತ್ಯಂತ ಹೀನಸ್ಥಿತಿಯನ್ನು ಹೊಂದುತ್ತಬಂದಿತು. ಇದಕ್ಕೆಲ್ಲ ರಾಜ್ಯಕ್ರಾಂತಿಯೇ ಕಾರಣವೆನ್ನಬಹುದು. ಮತ್ತು ಕಲ್ಯಾಣದ ಬಿಜ್ಜಳನ ಕಾಲದಲ್ಲಿ ವೀರಶೈವ ಸಂಸ್ಕೃತಸಾಹಿತ್ಯವು ಬಹಳ ಹಿಂದಕ್ಕೆ ಬೀಳುತ್ತ ಕರ್ನಾಟಕವಾಙ್ಮಯವು ಮಾತ್ರ ಹೆಚ್ಚುತ್ತಬಂದಿತು. ಈರೀತಿಯಾಗಿ ಕರ್ನಾಟಕದಲ್ಲಿ ವೀರಶೈವರಲ್ಲಿ ಸಂಸ್ಕೃತವಿದ್ಯೆಯು ಲೋಪವಾಗುತ್ತ ನಡೆದು ಬಳಿಕ ಕೆಳದಿ ನೃಪಾಲರು ಕೇಮುಟ್ಟಿಗೆ ಸಂಸ್ಕೃತವಿದ್ಯೆಯನ್ನು ತಿಳಿದವರಾಗಿ ಅಭಿಮಾನದಿಂದ ಅನೇಕ ಸಂಸ್ಕೃತಗ್ರಂಥಗಳನ್ನು ಮುಂದುವರಿಸಿದರು. ಆದಾಗ್ಯೂ ಕರ್ನಾಟಕದಲ್ಲಿ ಸಂಸ್ಕೃತವಿದ್ಯೆಯಲ್ಲಿ ವೀರಶೈವ ಪಂಡಿತರು ವಿರಳರೇ ಆಗಿದ್ದು ಇತ್ತೀಚೆಗೆ ಬಳ್ಳಾರಿ ಸಕ್ಕರೀ ಕರಡೆಪ್ಪನವರೆಂಬ ಶಿವಭಕ್ತ ಶಿರೋಮಣಿಗಳು ಸ್ಮಾರ್ತ ಪಂಡಿತರನ್ನು ಇಟ್ಟು ಅಪರಿಮಿತದ್ರವ್ಯವನ್ನು ಖರ್ಚ ಮಾಡಿ ಕಂದಗಲ್ಲ ಶ್ರೀ ಅಮರಪ್ಪಶಾಸ್ತ್ರಿಗಳು ಶ್ರೀ ಪರ್ವತಶಾಸ್ತ್ರಿಗಳು ಶ್ರೀ ವಿರೂಪಾಕ್ಷಶಾಸ್ತ್ರಿಗಳು ಉಂತುಗಲ್ಲು ಮುಂತಾದವರನ್ನು ಸಂಸ್ಕೃತ ಸಾಹಿತ್ಯವಿದ್ವಾಂಸರನ್ನಾಗಿಮಾಡಿದರು. "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ಪರಿತ್ರಾಣಾಯ ಸಾಧೂನಾಂ ವಿನಾಶಾಯಚದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥ " ಎಂಬ ಉಕ್ತಿಗನುಸಾರವಾಗಿ ವಿದ್ಯೋದ್ಧಾರಣ ಪಟುಗಳಾದ ಶ್ರೀ ವಿಶ್ವಾರಾಧ್ಯಪೀಠಾಧಿಪತಿ ಶ್ರೀ ವಿಶ್ವಗುರು ಹರೀಶ್ವರ ಶಿವಾಚಾರ್ಯರೆಂಬ ಯೋಗಿ ಶಿರೋಮಣಿಗಳು ಕರ್ನಾಟಕ ರಾಜಧಾನಿಯಾದ ಮೈಸೂರು ನಗರಕ್ಕೆ ದಿಗ್ವಿಜಯಮಾಡಿ ಸಮಸ್ತ ಬಿರುದಾವಳಿಗಳೊಡನೆ ಮಹಾಪ್ರಭುಗಳಿಂದ ಸನ್ಮಾನವನ್ನು ಪಡೆದು ಕರ್ನಾಟಕ ವೀರಶೈವರ ಪರಿಸ್ಥಿತಿಯನ್ನು ನೋಡಿ ಅಲ್ಲಿಯ ವೀರಶೈವವಿದ್ಯಾರ್ಥಿಗಳನ್ನು ಕಾಶಿಗೆ ಕರೆದೊಯ್ದು ಸಂಸ್ಕೃತ ಶಾಸ್ತ್ರಾಭ್ಯಾಸವನ್ನು ಮಾಡಿಸಹತ್ತಿದರು. ಅಂದಿನಿಂದ ಕಾಶಿಗೆ ಕರ್ನಾಟಕದೇಶೀಯರು ಶಾಸ್ತ್ರಾಭ್ಯಾಸಕ್ಕೆ ಬರುವದಕ್ಕೆ ಪ್ರಾರಂಭಿಸಿದರು. ಆಗ್ಗೆ ಮೊಟ್ಟಮೊದಲು 1. ವಿಜಾಪುರಜಿಲ್ಲೆಯ ಶ್ರೀ ನೀಲಕಂಠಶಾಸ್ತ್ರಿ ಎಂಬುವರುಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲದಲ್ಲಿ ವಾಸಮಾಡಿ ವ್ಯಾಕರಣಶಾಸ್ತ್ರಕೋವಿದರೆನಿಸಿ ಗದಗಿನ ಪಾಠಶಾಲಾಧ್ಯಾಪಕರಾಗಿದ್ದರು. ತರುವಾಯ, 2. ಶ್ರೀ ನಂಜುಂಡಸ್ವಾಮಿಗಳು ವಿರಕ್ತಮಠ, ಬೆಂಗಳೂರು. 3. ಶ್ರೀ ಕೊಟ್ರಯ್ಯಶಾಸ್ತ್ರಿಗಳು, ಸೋಲಾಪುರ. 4. ಶ್ರೀ ನಾಗಲಿಂಗಸ್ವಾಮಿಗಳು ರಾಚೋಟೇಮಠ, ಸೋಲಾಪುರ. 5. ಶ್ರೀ ರಂಭಾಪುರೀ ಸಿಂಹಾಸನಾಧಿಪತಿಗಳಾದ ಶ್ರೀ ಕೊಟ್ಟೂರಶಾಸ್ತ್ರಿಗಳು ಗಜಾಪೂರ. 6. ಶ್ರೀ ವಿರೂಪಾಕ್ಷಶಾಸ್ತ್ರಿಗಳು, ತುಮರಗುದ್ದಿ. ಇವರು ಶ್ರೀ ಉಜ್ಜಯಿನೀ ಸಿಂಹಾಸನಾಧಿಪತಿಗಳಾಗಿದ್ದರು. 7. ಶ್ರೀ ವೀರಪ್ಪಶಾಸ್ತ್ರಿಗಳು ಮಂಗಳೂರು. ಇವರು ಹುಬ್ಬಳ್ಳಿ ಮೂರುಸಾವಿರ ಮಠದ ಅಧಿಪತಿಗಳಾಗಿದ್ದರು. 8. ಶ್ರೀ ಶಂಕರಶಾಸ್ತ್ರಿಗಳು, ಹುಬ್ಬಳ್ಳಿ. 9. ಶ್ರೀ ಕಾಶೀನಾಥಶಾಸ್ತ್ರಿಗಳು ಹಬ್ಬಿಗೇರಿ. ಇವರು ಅಬ್ಬಿಗೇರಿ ಪಾಠಶಾಲಾಧ್ಯಾಪಕರಾಗಿದ್ದರು. 10. ಶ್ರೀ ಗುರುಮೂರ್ತಿಶಾಸ್ತ್ರಿಗಳು, ಬೆನಕನಹಳ್ಳಿ, ಇವರು ದಾವಣಗೆರೆ. ಬಾಗಲಕೋಟೆ ಪಾಠಶಾಲಾಧ್ಯಾಪಕರಾಗಿದ್ದರು. 11. ಶ್ರೀ ಅಪ್ಪಯ್ಯಶಾಸ್ತ್ರಿಗಳು, ಖಾನಾಪೂರ, ಇವರು ಹಾವೇರಿ ಪಾಠಶಾಲಾಧ್ಯಾಪಕರಾಗಿದ್ದರು. 12. ಶ್ರೀ ಉಮಾಪತಿಶಾಸ್ತ್ರಿಗಳು, ಅಜ್ಜಂಪುರ. 13. ಶ್ರೀ ಚಿದಾನಂದಶಾಸ್ತ್ರಿಗಳು, ದಾವಣಗೆರೆ. 14. ಶ್ರೀ ಚಂದ್ರಶೇಖರಶಾಸ್ತ್ರಿಗಳು, ದಾವಣಗೆರೆ. ಇವರು ಮೈಸೂರು ಆಸ್ಥಾನವಿದ್ವಾಂಸರಾಗಿದ್ದರು. 15 ಶ್ರೀ ಜಗದೀಶಶಾಸ್ತ್ರಿಗಳು ಹೊಳಲು ಇವರು ತರ್ಕ ಸಾಂಖ್ಯ ಯೋಗತೀರ್ಥ ನ್ಯಾಯವೈಶೇಷಿಕ ಶಾಸ್ತ್ರೀ ಉಪಾಧಿಧರರಾಗಿ ಅಂತ್ಯದಲ್ಲಿ ಕಲಕತ್ತಾವಾಸಿಗಳಾಗಿದ್ದರು. 16 ಶ್ರೀ ನೀಲಕಂಠಶಾಸ್ತ್ರಿಗಳು (ಶ್ರೀ ಹುಚ್ಚಪ್ಪಯ್ಯನವರು) ಕಮತಿಗಿ ಇವರು ಸ್ವತಃ ಪಾಠಶಾಲಾಧ್ಯಾಪಕರಾಗಿದ್ದರು. 17 ಶ್ರೀ ಶಂಕರಶಾಸ್ತ್ರಿಗಳು ನರೇಗಲ್ಲು 18 ಶ್ರೀ ಕಾಶೀನಾಥಶಾಸ್ತ್ರಿಗಳು ಯಕ್ಕುಂಡಿ. 19 ಶ್ರೀ ವೀರಭದ್ರಶಾಸ್ತ್ರಿಗಳು ಕೋಳೂರು. 20 ಶ್ರೀ ಶಿದ್ಧರಾಮಶಾಸ್ತ್ರಿಗಳು ಆಲೀಕೂವ. 21 ಶ್ರೀಕಂಠಶಾಸ್ತ್ರಿಗಳು ಕಲ್ಲೂರು. 22 ಶ್ರೀ ಶಿದ್ಧರಾಮಸ್ವಾಮಿಗಳು ಇವರು ಸುಳ್ಳದ ಪಟ್ಟಾಧಿಕಾರಿಗಳಾಗಿದ್ದರು. 23 ಶ್ರೀ ಮೋದಗಿ ಪಟ್ಟದಸ್ವಾಮಿಗಳು. 24 ಶ್ರೀ ಭೀಮಾಶಂಕರ ಶಾಸ್ತ್ರಿಗಳು ಉಮರಾವತೀ ಇವರೆಲ್ಲರೂ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲವಾಸಿಗಳಾಗಿ ಬಳಿಕ ದೇಶದಲ್ಲಿ ಆಯಾ ಪಾಠಶಾಲಾಧ್ಯಾಪಕತ್ವವನ್ನೂ ಮಠಪೀಠಾಧಿಪತ್ಯವನ್ನೂ ವಹಿಸಿ ಮಠಸೇವೆಯಂಗೈದು ಶಿವೈಕ್ಯರಾದರು.

೧. ಶ್ರೀ ರೇವಣಸಿದ್ಧಶಾಸ್ತ್ರಿಗಳು ಇವರು ಪಡೇಕನೂರು, ಸದ್ಯಃ ಶಿವಯೋಗಮಂದಿರದಲ್ಲಿ ಅಧ್ಯಾಪಕರಾಗಿದ್ದಾರೆ. ೨. ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು ದಡ್ಡೀ, ಇವರು ಗದಗ ಪಾಠಶಾಲಾಧ್ಯಾಪಕರಾಗಿದ್ದಾರೆ. ೩. ಶ್ರೀ ಜಗದೀಶಶಾಸ್ತ್ರಿಗಳು ನಾಲವಾರ, ಇವರು ಸೋಲಾಪುರ ಪಾಠಶಾಲಾಧ್ಯಾಪಕರಾಗಿದ್ದಾರೆ. ೪. ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು ಮಣ್ಣೂರು, ಸೋಲಾಪುರ. ೫. ಶ್ರೀ ಶಂಕರಶಾಸ್ತ್ರಿಗಳು ಮರಿಗುದ್ದಿ, ೬. ಶ್ರೀ ಸೋಮನಾಥಶಾಸ್ತ್ರಿಗಳು ಇಟಗಿ, ಶಿವಯೋಗಮಂದಿರ. ೭. ಶ್ರೀ ಜಗನ್ನಾಥಶಾಸ್ತ್ರಿಗಳು ಮಗ್ಗಿ, ಕಂಪ್ಲಿ ಪಾಠಶಾಲಾ. ೮. ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು ಜೈನಾಪುರ, ದೇಶಿಕರಾಗಿದ್ದಾರೆ. ೯. ಶ್ರೀ ವೀರಭದ್ರಶಾಸ್ತ್ರಿಗಳು ಕೊಂಗವಾಡ, ಶ್ರೀ ಉಜ್ಜಯಿನೀ ಸಿಂಹಾಸನದ ಆಸ್ಥಾನವಿದ್ವಾನ್. ೧೦. ಶ್ರೀ ಶಂಕರಶಾಸ್ತ್ರಿಗಳು ಉಮಚಗಿ, ಶ್ರೀ ದಾರುಕಾಚಾರ್ಯ ಪಾಠಶಾಲಾ ಉಜ್ಜಯಿನೀ ಕೊಟ್ಟೂರು. ೧೧. ಶ್ರೀ ಬಸವರಾಜಶಾಸ್ತ್ರಿಗಳು ಕೋಡೀಕೊಪ್ಪ, ಶಿದ್ಧರಾಮೇಶ್ವರ ಹಾಯಸ್ಕೂಲ್ ವಿಜಾಪುರ. ೧೨. ಶ್ರೀ ನಾಗಭೂಷಣಶಾಸ್ತ್ರಿಗಳು ಕೊತಬಾಳ, ಕೀರ್ತನಕರ್ತೃಗಳು. ೧೩. ಶ್ರೀಕಂಠಶಾಸ್ತ್ರಿಗಳು ನಲವಡೀ, ಪ್ರಸಿದ್ಧನಾಟಕಕರ್ತೃಗಳು, ಕವಿಗಳು. ೧೪. ಶ್ರೀ ವಾಮದೇವಶಾಸ್ತ್ರಿಗಳು (ಶ್ರೀ ಕಲಿಗಣನಾಥಶಾಸ್ತ್ರಿಗಳು) ಪಗಡದಿನ್ನಿ, ಬಾಗಲಕೋಟ ಪಾಠಶಾಲಾಧ್ಯಾಪಕರು. ೧೫. ಶ್ರೀ ಗೌರಿಶಂಕರಶಾಸ್ತ್ರಿಗಳು, ಮೈಸೂರು. ೧೬. ಶ್ರೀ ನೀಲಕಂಠಶಾಸ್ತ್ರಿಗಳು ನಂದೀಕೊಟಗೂರು, ಶ್ರೀ ಶ್ರೀ ಸರ್ವ

ತಸಿಂಹಾಸನದ ಆಸ್ಥಾನವಿದ್ವಾಂಸರು. ೧೭. ಶ್ರೀ ವಿರೂಪಾಕ್ಷಶಾಸ್ತ್ರಿಗಳು ಮುದ್ದಾಬಳ್ಳಿ, ಪಾಠಶಾಲಾಧ್ಯಾಪಕರು. ೧೮. ಶ್ರೀ ರಾಜಶೇಖರಶಾಸ್ತ್ರಿಗಳು ಮಲ್ಲಾಪುರ, ಅಬ್ಬಿಗೇರಿ ಪಾಠಶಾಲಾ. ೧೯. ಶ್ರೀ ವೀರಭದ್ರಶಾಸ್ತ್ರಿಗಳು ಹುನಗುಂದ, ೨೦. ಶ್ರೀ ಅನ್ನದಾನಶಾಸ್ತ್ರಿಗಳು ಇಟಗಿ, ೨೧. ಶ್ರೀ ಜಗದೀಶಶಾಸ್ತ್ರಿಗಳು, ಅಬ್ಬಿಗೇರಿ. ೨೨. ಶ್ರೀ ಭಾಲಚಂದ್ರಶರ್ಮಾ, ಶಿವನಗಾಂವ. ೨೩. ಶ್ರೀ ಸೋಮಶೇಖರಶಾಸ್ತ್ರಿಗಳು, ಹುಬ್ಬಳ್ಳಿ ಪಾಠಶಾಲಾಧ್ಯಾಪಕರು. ೨೪. ಶ್ರೀ ಬಸವಲಿಂಗಶಾಸ್ತ್ರಿಗಳು ಗುಡಗೇರಿ, ಅಥಣೀ ಪಾಠಶಾಲಾಧ್ಯಾಪಕರು. ೨೫. ಶ್ರೀ ವಿರೂಪಾಕ್ಷಶಾಸ್ತ್ರಿಗಳು ಗಾರವಾಡ, ತಾಳೀಕೋಟ ಪಾಠಶಾಲಾ. ೨೬. ಶ್ರೀ ಚಂದ್ರಶೇಖರಶಾಸ್ತ್ರಿಗಳು ಹೊಳಲು, ಯಾದಗಿರಿ ಶ್ರೀ ಶಂಕರಕಾಲೇಜ. ೨೭. ಶ್ರೀ ಕಾಶೀನಾಥಶಾಸ್ತ್ರಿಗಳು, ನಾಗನೂರು. ೨೮. ಶ್ರೀ ವಿಶ್ವನಾಥಶಾಸ್ತ್ರಿಗಳು ಆಸ್ಪರಿ, ಬೆಂಗಳೂರು ಶ್ರೀ ರೇಣುಕಾಚಾರ್ಯ ಪಾಠಶಾಲಾ. ೨೯. ಶ್ರೀ ವಿಶ್ವೇಶ್ವರಶಾಸ್ತ್ರಿಗಳು, ಉಪ್ಪಿನಬೆಟಗೇರಿ. ೩೦. ಶ್ರೀ ಗೌರೀನಾಥಶಾಸ್ತ್ರಿಗಳು ಕಾಟಾಪೂರ, ಹಾಳಕೇರಿ ಪಾಠಶಾಲಾ. ೩೧. ಶ್ರೀ ಚನ್ನವೀರಶಾಸ್ತ್ರಿಗಳು ಕಮತಿಗಿ. ೩೨. ಮುರುಳಸಿದ್ಧಶಾಸ್ತ್ರಿಗಳು ರಾಮದುರ್ಗ, ವಿಜಾಪುರ ಪಾಠಶಾಲಾ. ೩೩. ಶ್ರೀ ಹರೀಶ್ವರಶಾಸ್ತ್ರಿಗಳು ಬಿದರಿ, ಶ್ರೀ ರಂಭಾಪುರೀ ಸಿಂಹಾಸನದ ಆಸ್ಥಾನವಿದ್ವಾನ್. ೩೪. ಶ್ರೀ ಇಂದುಧರಶಾಸ್ತ್ರಿಗಳು ಕರಡಿ, ಕೀರ್ತನಪುರಾಣಬೋಧಕರು. ೩೫. ಶ್ರೀ ವಿಶ್ವನಾಥಶಾಸ್ತ್ರಿಗಳು ಅಬ್ಬಿಗೇರಿ. ೩೬. ಶ್ರೀ ಗುರುದೇವಶಾಸ್ತ್ರಿಗಳು ಬೆಳವಣಿಕಿ. ೩೭. ಶ್ರೀ ಗುರುಮೂರ್ತಿಶಾಸ್ತ್ರಿಗಳು ಕಡೇನಂದೀಹಳ್ಳಿ. ೩೮. ಶ್ರೀ ಕಾಶೀನಾಥಶಾಸ್ತ್ರಿಗಳು ನರೇಗಲ್ಲು. ೩೯. ಶ್ರೀ ಸಿದ್ಧಲಿಂಗಶಾಸ್ತ್ರಿಗಳು ಹಡಗಲಿ. ೪೦. ಶ್ರೀ ರುದ್ರಮುನಿಶಾಸ್ತ್ರಿಗಳು ಮಣ್ಣೂರು. ೪೧. ಶ್ರೀ ಬಸವರಾಜಶಾಸ್ತ್ರಿಗಳು ಚಳಗೇರಿ. ೪೨. ಶ್ರೀ ಗುರುಸಂಗಶಾಸ್ತ್ರಿಗಳು ಗದಗ. ೪೩. ಶ್ರೀ ಸೋಮಶೇಖರಶಾಸ್ತ್ರಿಗಳು ಪರಳೀವೈದಿಕರು. ೪೪. ಶ್ರೀ ಸಂಗಮೇಶ್ವರಶರ್ಮಾ ಅಂಬೇಕರ. ೪೫. ಶ್ರೀ ಶಿವಶಂಕರಶರ್ಮಾ ಖೋಪೆ. ೪೬. ಶ್ರೀ ಶಿವಲಿಂಗಶಾಸ್ತ್ರಿಗಳು ಹಿವರಾ! ವೈದಿಕ ಅಧ್ಯಾಪಕರು ಇವರೇ ಮುಂತಾದವರು ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲವಾಸಿಗಳಾಗಿ ವಿದ್ಯಾಭ್ಯಾಸ ಮಾಡಿ ಆಯಾ ಪ್ರಾಂತಗಳಲ್ಲಿ ಅಧ್ಯಾಪಕರಾಗಿ ಸಂಸ್ಕೃತ ವಿದ್ಯೆಯನ್ನು ವೃದ್ಧಿಗೊಳಿಸುತ್ತಲಿದ್ದಾರೆ. ಮತ್ತು ಶ್ರೀಮಂತ ರಾವಸಾಹೇಬ ಮಲ್ಲಪ್ಪನವರು ವಾರದ ಇವರು ಸಂಸ್ಕೃತವಿದ್ಯೆಗೆ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಅನೇಕ ಸಂಸ್ಕೃತ ಧರ್ಮಗ್ರಂಥಗಳನ್ನು ದೇವನಾಗರೀ ಲಿಪಿಯಲ್ಲಿ ಮರಾಠೀಭಾಷಾಂತರಮಾಡಿಸಿರುವದು ಜಗತ್ಪ್ರಸಿದ್ಧವೇ ಅದೆ. ಆ ಕಾಲದಲ್ಲಿಯೂ ಶ್ರೀ ಗುರುಕುಲವಾಸಿಗಳಾದ ಪಂಡಿತರು ಧರ್ಮಗ್ರಂಥಶೋಧನವನ್ನು ಅಧ್ಯಾಪಕತ್ವವನ್ನೂ ಮಾಡಿಯೇ ಇರುವರು. ಈದಿನದವರೆಗೂ ಶ್ರೀ ವಾರದವರ ಪಾಠಶಾಲೆಯೂ ನಡೆಯುತ್ತಲೇ ಇದೆ. ಇದಕ್ಕೆ ಪಂ॥ ಜಗದೀಶಶಾಸ್ತ್ರಿಗಳು ಅಧ್ಯಾಪಕರಾಗಿದ್ದಾರೆ.

೧. ಶ್ರೀ ಜಯದೇವಶಾಸ್ತ್ರಿಗಳು (ಚನ್ನವೀರದೇವರು) ಗದಗ, ಇವರು ಅನ್ನ, ವಸ್ತ್ರ, ಪುಸ್ತಕ ಮುಂತಾದ ವಿಶಿಷ್ಟ ಖರ್ಚುವೆಚ್ಚಗಳನ್ನು ತೆಗೆದುಕೊಂಡು ಅನ್ಯಾಶ್ರಯವಿಲ್ಲದೆ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲಪತಿ ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯ ಮಹಾಸ್ವಾಮಿಗಳಿಂದ ನ್ಯಾಯಶಾಸ್ತ್ರಾಭ್ಯಾಸ ಮಾಡಿ ನ್ಯಾಯವೈಶೇಷಿಕ ಶಾಸ್ತ್ರಿಗಳಾಗಿ ಸದ್ಯಃ ಚಿತ್ರದುರ್ಗದ ಮುರಗೇಂದ್ರಸ್ವಾಮಿಗಳ ಮಠಾಧಿಪತಿಗಳಾಗಿದ್ದಾರೆ. ೨. ಶ್ರೀ ಚರಮೂರ್ತಿಸ್ವಾಮಿಗಳು ಗಲಗಲಿ, ವೈದಿಕ ಆಚಾರ್ಯವೃತ್ತಿಯಲ್ಲಿದ್ದಾರೆ. ೩. ಶ್ರೀ ಮಹಾಲಿಂಗಶಾಸ್ತ್ರಿಗಳು ಕಡೇನಂದೀಹಳ್ಳಿ, ಶ್ರೀ ಚರಮೂರ್ತಿಗಳಾಗಿದ್ದಾರೆ. ೪. ಶ್ರೀ ಗುರುಶಿದ್ಧಶಾಸ್ತ್ರಿಗಳು ವಾರಗಾಂವ, ಹತನೂರು ಮಠಾಧಿಕಾರಿಗಳಾಗಿದ್ದಾರೆ. ೫. ಶ್ರೀ ಗಂಗಾಧರಶಾಸ್ತ್ರಿಗಳು. ಇವರು ವಿಶಿಷ್ಟ ಖರ್ಚುವೆಚ್ಚಗಳನ್ನು ಮಹಾಸನ್ನಿಧಿಯಿಂದಲೇ ತೆಗೆದುಕೊಂಡು ವಿದ್ವಾಂಸರಾಗಿ ಸದ್ಯಃ ಶ್ರೀ ಕೇದಾರಪೀಠಾಧಿಪತಿಗಳಾಗಿದ್ದಾರೆ. ೬. ಶ್ರೀ ಸದಾಶಿವಶಾಸ್ತ್ರಿಗಳು ಅಬ್ಬಿಗೇರಿ, ಇವರು ವಿಶಿಷ್ಟಖರ್ಚುವೆಚ್ಚಗಳನ್ನು ಮಹಾಸನ್ನಿಧಿಯಿಂದ ಪಡೆದು ವಿದ್ವಾಂಸರಾಗಿ ಶ್ರೀ ರಂಭಾಪುರೀ ಪೀಠಾಧಿಪತಿಗಳಾಗಿದ್ದಾರೆ. ೭. ಶ್ರೀ ವೀರಭದ್ರಶಿವಾಚಾರ್ಯರು ಅಬ್ಬಿಗೇರಿ, ಶ್ರೀ ಅಬ್ಬಿಗೇರೀ ಹಿರೇಮಠಾಧಿಕಾರಿಗಳಾಗಿದ್ದಾರೆ. ೮. ಶ್ರೀ ಶಿವಮೂರ್ತಿಶಾಸ್ತ್ರಿಗಳು ತಿಮ್ಮಾಪೂರ, ಶ್ರೀ ಕೇದಾರಪೀಠದ ಚರಾಧಿಕಾರಿಗಳಾಗಿದ್ದಾರೆ. ೯. ಶ್ರೀ ಮಹೇಶ್ವರಶಾಸ್ತ್ರಿಗಳು [illegible]ಂಥಕರ, ಶ್ರೀ [illegible]ಂಥಮಠಾಧಿಕಾರಿಗಳಾಗಿದ್ದಾರೆ. ೧೦. ಶ್ರೀ [illegible]ಲಿಂಗದೇಶಿಕರು ಹಾವೇರಿ, ಶ್ರೀ ವಿಜಾಪುರ ಹಿರೇಮಠಾಧಿಕಾರಿಗಳಾಗಿದ್ದಾರೆ. ೧೧. ಶ್ರೀಕಂಠಶಾಸ್ತ್ರಿಗಳು [illegible] ಸೂಡಿ, ಶ್ರೀ ಕೊಪ್ಪಳ ಗವೀಮಠಾಧಿಕಾರಿಗಳಾಗಿದ್ದಾರೆ. ೧೨. ಶ್ರೀ ಉಮಾಪತಿಶಾಸ್ತ್ರಿಗಳು ಸೂಡಿ, ಶ್ರೀ ಸೂಡೀ ಜುಕ್ತಿ ಮಠಾಧಿಕಾರಿಗಳಾಗಿದ್ದಾರೆ. ೧೩. ಶ್ರೀ ನೀಲಕಂಠಶಿವಾಚಾರ್ಯರು ಹೂಲೀ, ಶ್ರೀ ಹೂಲಿ ಪಂಚವರ್ಣ ಬೃಹನ್ಮಠಾಧಿಕಾರಿಗಳಾಗಿದ್ದಾರೆ. ೧೪. ಶ್ರೀ ಮಹಾಂತದೇವರು ಹೂಲೀ ಶ್ರೀ ಹೂಲಿ ಪಂಚವರ್ಣಬೃಹನ್ಮಠಾಧಿಕಾರಿಗಳಾಗಿದ್ದಾರೆ. ೧೫. ಶ್ರೀ ಗುರುಲಿಂಗಶಿವಾಚಾರ್ಯರು ಹನಿಗೋಡ, ಹನಿಗೋಡಮಠದ ಅಧಿಕಾರಿಗಳಾಗಿದ್ದಾರೆ. ೧೬. ಶ್ರೀ ಪಟ್ಟದಸ್ವಾಮಿಗಳು ಲಕ್ಷ್ಮೇಶ್ವರ, ಬಟ್ಟೂರು ಬಾಳೇಹಳ್ಳಿ ಹಿರೇಮಠದ ಅಧ್ಯಕ್ಷರಾಗಿದ್ದಾರೆ. ೧೭. ಶ್ರೀ ವಿರೂಪಾಕ್ಷಸ್ವಾಮಿಗಳು ಕೋಡಂಗಲ್ಲು, ಕೋಡಂಗಲ್ಲು ಮಠಾಧಿಪತಿಗಳಾಗಿದ್ದಾರೆ. ೧೮. ಶ್ರೀ ರೇವಣಸಿದ್ಧಶಿವಾಚಾರ್ಯರು ಚಿಕ್ಕಮಣ್ಣೂರು, ಚಿಕ್ಕಮಣ್ಣೂರು ಹಿರೇಮಠಾಧಿಕಾರಿಗಳಾಗಿದ್ದಾರೆ. ೧೯. ಶ್ರೀ ಗುರುಪಾದಶಿವಾಚಾರ್ಯರು ಬೀಳಗಿ, ಬೀಳಗಿ ಮಠಾಧಿಪತಿಗಳಾಗಿದ್ದಾರೆ. ೨೦. ಶ್ರೀ ಮಹಾಲಿಂಗಸ್ವಾಮಿಗಳು ಜೈನಾಪೂರ, ಜೈನಾಪೂರ ಚರಮೂರ್ತಿಗಳಾಗಿದ್ದಾರೆ. ೨೧. ಶ್ರೀ ಸರ್ವನಾಥಶಾಸ್ತ್ರಿಗಳು ಉರೀಕೊಂಡಿ, ಮರಿದೇವರು. ೨೨. ಶ್ರೀ ಫಣಿಭೂಷಣಶಾಸ್ತ್ರಿಗಳು (ಶ್ರೀ ರಾಮಲಿಂಗಸ್ವಾಮಿ) ಕರಮಾಳ, ಸದ್ಯಃ ಪೂಣೆಯಲ್ಲಿ ಹೊರಡುವ ವೀರಶೈವ ಕೇಸರಿ ಸಂಪಾದಕರು. ೨೩. ಶ್ರೀ ಪಟ್ಟದಸ್ವಾಮಿಗಳು ಹನಗಂಡಿ. ೨೪. ಶ್ರೀ ಸಂಗನಬಸವ ಮರಿದೇವರು, ಸವದಿ. ೨೫. ಶ್ರೀ ನಂದಿಕೇಶ್ವರಶಿವಾಚಾರ್ಯರು, ಸವದತ್ತಿ. ೨೬. ಶ್ರೀ ಹಾಳಕೇರಿ ಪಟ್ಟದಸ್ವಾಮಿಗಳು, ಹಾಳಕೇರಿ ಮಠಾಧಿಕಾರಿಗಳಾಗಿದ್ದಾರೆ. ೨೭. ಶ್ರೀ ಶಿವಶಂಕರಶಿವಾಚಾರ್ಯರು ಕೊಂಡಕುಂದಿ, ಏಲಾಮಠಾಧಿಕಾರಿಗಳಾಗಿದ್ದಾರೆ. ಇವರೆಲ್ಲರು ಸದ್ಯಃ ಮಠಾಧಿಪತ್ಯವನ್ನು ವಹಿಸಿ ವೀರಶೈವಮತದಲ್ಲಿ ಸಂಸ್ಕೃತ ವಿದ್ಯಾಧರ್ಮೋಪದೇಶಗಳನ್ನು ಅಭಿವೃದ್ಧಿಪಡಿಸುತ್ತಲಿರುವರು. ಈ ಮಹನೀಯರು ಶ್ರೀ ಕಾಶೀಸ್ಥ ವಿಶ್ವಾರಾಧ್ಯಗುರುಕುಲದಲ್ಲಿ ವಾಸ ಮಾಡಿ ಶ್ರೀ ವಿಶ್ವಾರಾಧ್ಯ ಮಹಾಚಾರ್ಯಪಾದರ ಪೂರ್ಣಾನುಗ್ರಹದಿಂದ ಅಶನ ವಸನ, ವಿದ್ಯಾ, ವಿನಯ, ಸಂಪತ್ಸಂಪನ್ನರಾಗಿ ವೀರಶೈವಮತಕ್ಕೆ ಭೂಷಣಪ್ರಾಯರಾದದ್ದು ಯಾರಿಗೆತಾನೇ ಸಂತೋಷವೆನಿಸಲಿಕ್ಕಿಲ್ಲ. ಇದೆಲ್ಲ ಶ್ರೀ ಕಾಶೀವಿಶ್ವಾರಾಧ್ಯ ಗುರುಕುಲಪತಿ ಜಗದಾಚಾರ್ಯರ ಕೃಪೆಯೆಂದು ಘೋಷ ಮಾಡಿ ಶ್ರೀ ಶ್ರೀ ವಿ. ಗುರುಕುಲವೂ ವೀರಶೈವಮತದಲ್ಲಿ ಸಂಸ್ಕೃತವಿದ್ಯೆಯ ಅವತರಣವೂ ಎಂಬ ಲೇಖನವನ್ನು ವಿರಮಿಸುವೆವು. ಪ್ರಕೃತದಲ್ಲಿ ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲದಲ್ಲಿ ಅಭ್ಯಾಸ ಮಾಡುತ್ತ ಅನೇಕಾನೇಕರು ಪರೀಕ್ಷೋತ್ತೀರ್ಣರಾಯೂ ಆಗುತ್ತಲೂ ವಿರಾಜಿಸುತ್ತಲಿರುವವರ ಹೆಸರುಗಳನ್ನು ಸೂಚಿಸುತ್ತೇವೆ.

೧. ಶ್ರೀ ನೀಲಕಂಠಶಾಸ್ತ್ರಿಗಳು, ಖಾನಾಪೂರ. ೨. ಶ್ರೀ ಚಿದ್ಘನಲಿಂಗಶಿವಾಚಾರ್ಯರು, ಮೋಳಕಾಲ್ಮೂರು. ೩. ಶ್ರೀ ಚಿದ್ಘನಶಿವಾಚಾರ್ಯರು, ಪುರಗಿರಿ. ೪. ಶ್ರೀ ಮಲ್ಲಿಕಾರ್ಜುನಶಿವಾಚಾರ್ಯರು, ಚಿನ್ಮಲಿಗಿ. ೫. ಶ್ರೀ ವಾಮದೇವಶಾಸ್ತ್ರಿಗಳು, ಉಪ್ಪಿನಬೆಟಗೇರಿ. ೬. ಶ್ರೀ ಗುರುದೇವಶಿವಾಚಾರ್ಯರು, ಚಿಕ್ಕಮಣ್ಣೂರು. ೭. ಶ್ರೀ ವೃಷಭಲಿಂಗಶಿವಾಚಾರ್ಯರು, ಗಬ್ಬೂರು. ೮. ಶ್ರೀ ವೀರಭದ್ರಶಾಸ್ತ್ರಿಗಳು, ನಲೆಗೊಂಡ. ೯. ಶ್ರೀ ವಾಗೀಶಶಿವಾಚಾರ್ಯರು, ಮುಗೇನೂರು. ೧೦. ಶ್ರೀ ಅನ್ನದಾನಶಿವಾಚಾರ್ಯರು, ಜಮಖಂಡಿ. ೧೧. ಶ್ರೀ ಶಿತಿಕಂಠಶಾಸ್ತ್ರಿಗಳು, ಸಂಚಿನಹಾಳು. ೧೨. ಶ್ರೀ ಶಿವಶಂಕರಶಾಸ್ತ್ರಿಗಳು, ಒಟಕೂರು. ೧೩. ಶ್ರೀ ಶಿತಿಕಂಠಶಾಸ್ತ್ರಿಗಳು, ಭೈರಾಪುರ. ೧೪. ಶ್ರೀ ಕರವೀರಶರ್ಮಾ, ಇಟಗಿ. ೧೫. ಶ್ರೀ ಶಾಂತಬಸವಶಾಸ್ತ್ರಿಗಳು ಜಾಲೀಹಾಳು. ೧೬. ಶ್ರೀ ನೀಲಕಂಠಶರ್ಮಾ ಕಡಪಟ್ಟಿ. ೧೭. ಶ್ರೀ ಶಿವದೇವಶಾಸ್ತ್ರಿಗಳು ಸುಷ್ಮಗಿ. ೧೮. ಶ್ರೀ ಕಾಶೀನಾಥಶಾಸ್ತ್ರಿಗಳು ಖಾನಾಪುರ. ೧೯. ಶ್ರೀ ರುದ್ರಮುನಿಶರ್ಮಾ ಚಿಂಚನಗುಪ್ಪೆ. ೨೦. ಶ್ರೀ ಸೋಮಶೇಖರಶರ್ಮಾ ಹುಸ್ಸೂರು. ೨೧. ಶ್ರೀ ವಿರೂಪಾಕ್ಷಶರ್ಮಾ ಮೆಹಕರ.

ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲಛಾತ್ರ ನಿಯಮಗಳು.

೧. ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ಪ್ರವೇಶ ಮಾಡಲಿಚ್ಛೆಯುಳ್ಳವರನ್ನು ಜುಲೈಮಾಸದಲ್ಲಿಯೇ ಸೇರಿಸಿಕೊಳ್ಳಲಾಗುವದು. ೨. ಶ್ರೀ ಗುರುಕುಲಪ್ರವೇಶಾರ್ಥಿಯು ತನ್ನ ಕುಲಶೀಲಾದಿಗಳ ಬಗ್ಗೆ ಸ್ವಗ್ರಾಮದ ಮಠ ಮಹಂತಶೆಟ್ಟರು ಗೌಡರು ಮುಂತಾದ ಪ್ರಮುಖ ಜನರಿಂದ ಪರಿಚಯಪತ್ರಿಕೆಯನ್ನು ತರತಕ್ಕದ್ದು. ೩. ಕಲಕತ್ತಾ ಗೌರ್ನಮೆಂಟ್ ಪ್ರಥಮ ಮಧ್ಯಮ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಈ ಗುರುಕುಲದಲ್ಲಿ ಪ್ರವೇಶಾಧಿಕಾರವಿದೆ. (ಈ ನಿಯಮವು ಮಹಾರಾಷ್ಟ್ರ, ತೈಲಂಗದೇಶದ ಹೊರತಾಗಿ) ೪. ಪೂರ್ವದಲ್ಲಿ ಯಾವ ಪಾಠಶಾಲಾ ಅಥವಾ ಕಾಲೇಜುಗಳಲ್ಲಿ ಅಧ್ಯಯನಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವದಕ್ಕೂ ಸದಾಚಾರಾದಿ ನಡವಳಿಕೆಯ ವಿಷಯಕ್ಕೂ ಆಯಾ ಅಧ್ಯಾಪಕರ ಅಥವಾ ಅಧ್ಯಕ್ಷರ ಪ್ರಶಂಸಾಪತ್ರಿಕೆಯನ್ನು ಜರೂರು ತರತಕ್ಕದ್ದು. ೫ ಶ್ರೀ ವಿ. ಗುರುಕುಲದಲ್ಲಿ ವಿದ್ಯಾರ್ಥಿಗಳು ಯಾವತರದ ಭೇದಭಾವವನ್ನಿಟ್ಟುಕೊಳ್ಳದೆ ಪರಸ್ಪರ ಪ್ರೇಮಪೂರ್ವಕ ಸ್ವಧರ್ಮಾಭಿಮಾನ ಪುರಸ್ಸರ ಸದಾಚಾರಸಂಪನ್ನರಾಗಿ ಯಾವಾಗಲೂ ಸ್ವೀಯ ಅಭ್ಯಾಸದಲ್ಲಿಯೇ ನಿರತರಾಗಿರತಕ್ಕದ್ದು. ೬ ವಿದ್ಯಾರ್ಥಿಗಳು ವೇದ ವ್ಯಾಕರಣ ನ್ಯಾಯ ಮೀಮಾಂಸೆ ಮೊದಲಾದ ಯಾವ ಶಾಸ್ತ್ರದಲ್ಲಿಯಾದರೂ ಯೋಗ್ಯಪಾಂಡಿತ್ಯವನ್ನು ಪಡೆಯುವವರೆಗೂ ಗುರುಕುಲದಲ್ಲಿ ಇರಲೇಬೇಕು. ೭ ಸ್ವದೇಶಕ್ಕೆ ಹೋಗಿಬರಬೇಕಾದರೆ ವಿದ್ಯಾರ್ಥಿಯು ಯೋಗ್ಯಕಾರಣವನ್ನು ತೋರಿಸಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದುಕೊಳ್ಳಬೇಕು. ೮. ಸಾಯಂಸಂಧ್ಯಾ ೭ ಘಂಟೆಗೆ ಸರಿಯಾಗಿ ಕೈಲಾಸಮಂಟಪದಲ್ಲಿ ಶ್ರೀ ಜಗದಾಚಾರ್ಯ ಗಾದೀಶಸನ್ನಿಧಿಯಲ್ಲಿ ಸರ್ವರೂ ತಪ್ಪದೆ ಸನುಷ್ಠಿತರಾಗಿ ಪ್ರದೋಷ ಪ್ರಾರ್ಥನೆಯನ್ನು ಮಾಡತಕ್ಕದ್ದು. ೯. ವಿದ್ಯಾರ್ಥಿಯು ಪ್ರತಿವರುಷ ತಪ್ಪದೆ ಪರೀಕ್ಷೆಯನ್ನು ಕೊಡಬೇಕು. ೧೦. ಮೊದಲನೆ ವರ್ಷ ಫೇಲಾದ ವಿದ್ಯಾರ್ಥಿಯು ಯೋಗ್ಯಅಭ್ಯಾಸಿ ಎಂದು ಕಂಡುಬಂದರೆ ಪುನಃ ಆತನಿಗೆ ಒಂದು ವರ್ಷದವರೆಗೂ ಶ್ರೀ. ವಿ. ಗುರುಕುಲದಲ್ಲಿ ವಾಸವು ದೊರೆಯುತ್ತದೆ. ೧೧. ವಿದ್ಯಾರ್ಥಿಗಳ ವಕ್ತೃತ್ವಕಲೆಯು ಬೆಳೆಯಲೆಂಬುದ್ದೇಶದಿಂದ ಮಾಸಕ್ಕೊಂದುಸಾರೆ ಪ್ರತಿಪತ್ತಿಥಿಯಲ್ಲಿ ಸರ್ವವಿದ್ಯಾರ್ಥಿಗಳು ಸಮ್ಮಿಲಿತರಾಗಿ ಧಾರ್ಮಿಕ, ಸಾಮಾಜಿಕ, ನೈತಿಕ ಇತ್ಯಾದಿ ವಿಷಯಗಳಮೇಲೆ ಭಾಷಣ ಮಾಡತಕ್ಕದ್ದು. ೧೨. ಪ್ರತ್ಯೇಕ ವಿದ್ಯಾರ್ಥಿಗಳು ಶ್ರೀ. ವಿ. ಗುರುಕುಲಛಾತ್ರ ಸಮಿತಿ ವಾಚನಾಲಯದಲ್ಲಿ ವೃತ್ತಪತ್ರಿಕೆಗಳನ್ನೂ ಹಾಗೂ ಧಾರ್ಮಿಕಗ್ರಂಥಗಳನ್ನು ಓದಬೇಕು. ೧೩. ಶ್ರೀ. ವಿ. ಗುರುಕುಲದ ವ್ಯಾಯಾಮಶಾಲೆಯಲ್ಲಿ ನಿಯುಕ್ತ ಸಮಯದಲ್ಲಿ ವಿದ್ಯಾರ್ಥಿಗಳು ವ್ಯಾಯಾಮಮಾಡತಕ್ಕದ್ದು. ೧೪. ಶ್ರೀ. ವಿ. ಗುರುಕುಲದ ವಿದ್ಯಾರ್ಥಿಗಳು ಶಿವಾಗಮ ಹಾಗೂ ಶಿವಸಿದ್ಧಾಂತ ಗ್ರಂಥಗಳನ್ನು ಪರಿಶೀಲನಮಾಡತಕ್ಕದ್ದು. ಈ ವಿಷಯದಲ್ಲಿ ಉತ್ತೀರ್ಣರಾದವರಿಗೆ ಶ್ರೀ. ವಿ. ಗುರುಕುಲಪತಿಗಳಿಂದ ಯೋಗ್ಯಪಾರಿತೋಷಿಕಪ್ರದಾನ ಮಾಡಲ್ಪಡುವದು. ೧೫. ಪ್ರತಿಯೊಬ್ಬ ವಿದ್ಯಾರ್ಥಿಯು ರಾತ್ರಿ ೮ ಘಂಟೆಗೆ ಗುರುಕುಲದಲ್ಲಿ ಉಪಸ್ಥಿತನಾಗಿರಬೇಕು. ೧೬. ಶ್ರೀ. ವಿ. ಗುರುಕುಲ ಭೋಜನಾಲಯದಲ್ಲಿ ಪ್ರಾತಃಕಾಲ ೧೧॥ ಘಂಟೆಗೆ ಸರಿಯಾಗಿ ನಗಾರೀವಾದನವಾಗುವದು. ಆ ಕಾಲಕ್ಕೆ ಸರ್ವರೂ ಭೋಜನಮಾಡತಕ್ಕದ್ದು. ೧೭. ಶ್ರೀ. ವಿ. ಗುರುಕುಲ

[೬ನೇ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ

೧೯೨೯ನೇ ಡಿಸೆಂಬರ್ ತಾ|| ೯ನೇ ಸೋಮವಾರ

ಧರ್ಮ.

"ಚೋದನಾಲಕ್ಷಣಾರ್ಥೋಧರ್ಮಃ" ಲಿಂಗ್ ಲೋಟ್ ತವ್ಯಪ್ರತ್ಯಯಗಳಿಂದ ವಿಧಿರೂಪವಾದ ಅರ್ಥವನ್ನು ಬೋಧಿಸುವುದೇ ಧರ್ಮದ ಲಕ್ಷಣವು. ವೇದಗಳು ಇಂಥ ಕರ್ಮಗಳನ್ನೇ ಮಾಡಬೇಕು. ಇಂಥ ಕರ್ಮಗಳನ್ನು ಮಾಡಬಾರದೆಂದು ವಿಧಿಸುತ್ತವೆ. ವೇದದಲ್ಲಿ ಮಾಡಬಾರದೆಂದು ವಿಧಿಸುವ ನಿಷಿದ್ಧಕರ್ಮಗಳೇ ಅಧರ್ಮವೆಂದೂ ಮಾಡಬೇಕೆಂದು ವಿಧಿಸುವ ಕರ್ಮಗಳೇ ಧರ್ಮವೆಂದೂ ಹೇಳಿಸಿಕೊಳ್ಳಲ್ಪಡುವುವು. ಇಂಥ ವೇದನಿಷಿದ್ಧಗಳಾದ ದುಷ್ಕರ್ಮಾಚರಣೆಯಿಂದ ಆತ್ಮನು ಶಕ್ತಿಕುಂಠಿತನಾಗಿ ಕಲುಷಿತನಾಗುವುದರಿಂದ ಅಧಃಪತನವು ಸಂಭವಿಸಿ ಹೀನಜನ್ಮಗಳನ್ನು ಧರಿಸಲುದ್ಯುಕ್ತನಾಗುವನು. ವೇದವಿಹಿತಗಳಾದ ಸತ್ಕರ್ಮಗಳನ್ನು ಆಚರಿಸುವದರಿಂದ ಶೋಧಿತಗಳಾದ ಪಾತ್ರೆಗಳು ಪರಿಶುದ್ಧಗಳಾಗುವಂತೆ ಆತ್ಮರುಗಳು ಅನಾದಿಕಾಲದಿಂದಲೂ ತಗಲಿಕೊಂಡಿರುವ ಮಲಗಳಿಂದ ಬಿಡಲ್ಪಟ್ಟು ಶುದ್ಧರಾಗಿ ಊರ್ಧ್ವಗಮನೇಚ್ಛೆಯಿಂದ ಉತ್ತಮೋತ್ತಮಜನ್ಮಗಳನ್ನು ಪಡೆಯಲುದ್ಯುಕ್ತರಾಗುವರು. ಮುಖ್ಯವಾಗಿ ಆತ್ಮರಿಗೆ ಅಧೋಗತಿಯುಂಟಾಗಲು ಅವರವರು ಮಾಡಿದ ಅಧರ್ಮಗಳೇ ಕಾರಣಗಳು. ಸದ್ಗತಿಯುಂಟಾಗಲು ಧರ್ಮವೇ ಕಾರಣವು. ಧರ್ಮಾಧರ್ಮಗಳಾಶ್ರಯವಿಲ್ಲದಿದ್ದರೆ [illegible]ವಾದ ಜೀವಾತ್ಮರುಗಳಿಗೆ ನೀಚೋತ್ತಮಗತಿಗ[illegible] ಹೇಳುವುದಕ್ಕಾಗುವುದಿಲ್ಲ. ಧರ್ಮವೆಂಬುವುದು ಮಿತ್ರನಂತಿರುವುದು. ಅಧರ್ಮವೆಂಬುವುದು ಶತ್ರುವಿನಂತಿರುವುದು. ಮಿತ್ರನು ಹಿತವನ್ನುಪದೇಶಿಸುತ್ತ ತನ್ನವರಿಗೆ ಸೌಖ್ಯವುಂಟಾಗಲೆಂದು ಆಪೇಕ್ಷಿಸುತ್ತಾನೆ. ಶತ್ರುವು ಆಪಾತತಃ ಒಳ್ಳೆಯವನಂತೆ ನಟಿಸಿದರೂ ಪರಿಣಾಮದಲ್ಲಿ ದುಃಖಕ್ಕೀಡುಮಾಡುವನು. ಈ ಧರ್ಮವು ಜೀವಾತ್ಮರನ್ನು ಮಿತ್ರನಂತೆ ಹಿತಾಹಿತಗಳ ಸ್ವರೂಪಜ್ಞಾನವನ್ನುಂಟುಮಾಡಿ ಇಹದಲ್ಲಿ ಯಶಸ್ವಿಗಳನ್ನಾಗಿಯೂ ಪರದಲ್ಲಿ ಸೌಖ್ಯವನ್ನನುಭವಿಸುವವರನ್ನಾಗಿಯೂ ಮಾಡುವದು. ಅಧರ್ಮವು ಶತ್ರುವಿನೋಪಾದಿಯಲ್ಲಿ ಆಪಾತತಃ ಸೌಖ್ಯವನ್ನುಂಟುಮಾಡುವಂತೆ ತೋರಿ ಪರಿಣಾಮದಲ್ಲಿ ನರಕಯಾತನೆಯೆಂಬ ದುಃಖವನ್ನುಂಟುಮಾಡುವುದು. ಆದುದರಿಂದ ವೇದವಿಹಿತಧರ್ಮವನ್ನಾಶ್ರಯಿಸುವ ಮನುಷ್ಯನು ಧಾರ್ಮಿಕನೆನಿಸುವನು. ವೇದನಿಷಿದ್ಧಗಳಾದ ಅಧರ್ಮಗಳನ್ನಾಶ್ರಯಿಸುವ ಮನುಷ್ಯನು ಪಾಪಿಷ್ಠನೆನಿಸುವನು. ಧಾರ್ಮಿಕನು ದೋಷಮುಕ್ತನಾಗುವವನಾದುದರಿಂದ ಉತ್ತಮಲೋಕವನ್ನು ಹೊಂದುವನು. ಧರ್ಮಹೀನನು ದೋಷಭಾರದಿಂದ ಅಧೋಗತಿಯನ್ನು ಹೊಂದುವನು. ಧರ್ಮ ಎಂಬ ಈ ಶಬ್ದದಲ್ಲಿಯೂ ಇದೇ ಅರ್ಥವು ಸ್ಪಷ್ಟವಾಗಿರುತ್ತದೆ. ಅಂದರೆ "ಧರತಿ ಅನುಷ್ಠಿತಾರಂ ನಪಾತಯತೀತಿ ಧರ್ಮಃ" ಎಂಬ ವ್ಯುತ್ಪತ್ತಿಯಿಂದ ಯಾರು ವೇದವಿಹಿತಧರ್ಮವನ್ನು ಅನುಷ್ಠಿಸುತ್ತಾರೆಯೋ ಅವರನ್ನು ಕೆಳಕ್ಕೆ ಬೀಳದಂತೆ ಮೇಲಕ್ಕೆ ಎತ್ತುವುದರಿಂದ ಇದಕ್ಕೆ ಧರ್ಮವೆಂದು ಹೆಸರುಂಟಾಗಿರುವದು. ಯಾವ ಆತ್ಮನಿಗೆ ಪಾಪಸಂಬಂಧವಿರುವುದೋ ಆ ಆತ್ಮನು ಕೆಳಕ್ಕೆ ಬೀಳುವನು. ಯಾವ ಆತ್ಮನಿಗೆ ಪಾಪಸಂಬಂಧವಿಲ್ಲದೆ ಧರ್ಮಸಂಬಂಧವಿರುತ್ತದೆಯೋ ಆ ಆತ್ಮನು ಪರಿಶುದ್ಧನಾಗಿ ದೇವಸನ್ನಿಧಿಯನ್ನು ಪಡೆಯುವನು. ಇದೇ ಅರ್ಥವನ್ನು "ಧರ್ಮೇಣ ಪಾಪಮಪನುದತಿ" ಎಂಬ ಶ್ರುತಿಯು ಅನುವಾದವನ್ನು ಮಾಡುತ್ತದೆ. ಆದುದರಿಂದ ಧರ್ಮದ್ರವ್ಯವು ಸುಖಕ್ಕೆ ಸಾಧನವೂ ಅಧರ್ಮವು ದುಃಖಕ್ಕೆ ಸಾಧನವೂ ಆಗಿದೆ. ಲೋಕದಲ್ಲಿ ಯಾರು ಅಧರ್ಮಿಗಳಾಗಿರುತ್ತಾರೆಯೋ ಅವರ ಅಂತಃಕರಣವು ಸೂರ್ಯನನ್ನು ಆವರಿಸಿದ ಮೋಡದಂತೆ ಕಲುಷಿತವಾಗಿ ಹಳ್ಳಕ್ಕೆ ಹರಿಯುವ ನೀರಿನಂತೆ ಪಾಪಕಾರ್ಯದಲ್ಲಿಯೇ ಪ್ರವರ್ತಿಸುತ್ತ ನಾನಾವಿಧ ದುಃಖಗಳೆಂಬ ಪ್ರವಾಹದಲ್ಲಿ ಮುಳುಗೇಳುವುದು. ಇಂಥ ದುಸ್ಥಿತಿಯನ್ನು ಅನುಭವಿಸುವ ಆತ್ಮನನ್ನು ಧರ್ಮವು ತೆಪ್ಪದಂತೆ ಸದ್ಗತಿಯೆಂಬ ದಡವನ್ನು ಸೇರಿಸುವುದು. "ಯಥಾವೃಕ್ಷಸ್ಯ ಸಪುಷ್ಪಿತಸ್ಯ ದೂರಾದ್ಗಂಧೋವಾತ್ಯೇವಂ ಪುಣ್ಯಸ್ಯಕರ್ಮಣೋ ದೂರಾದ್ಗಂಧೋವಾತಿ" ವೃಕ್ಷವು ಪುಷ್ಪಿತವಾದರೆ ಆ ವೃಕ್ಷದಿಂದ ಗಂಧವು ಬಹುದೂರವಾಗಿ ಬೀಸುತ್ತ ಮಾನ್ಯವಾಗುವ ಹಾಗೆ ಆತ್ಮನು ಪುಣ್ಯಕರ್ಮ ಸಂಬಂಧದಿಂದ ಶುದ್ಧಾಂತಃಕರಣನಾಗಿ ಶಿವಜ್ಞಾನವನ್ನು ಹೊಂದಿ ಮಾನ್ಯನೆನಿಸುವನು. ಎಂದು ಉಪನಿಷತ್ತಿನಲ್ಲಿ ಹೇಳಲ್ಪಟ್ಟಿರುವುದು. ಆದ್ದರಿಂದ ಪರಮೇಶ್ವರನ ಉಚ್ಛ್ವಾಸರೂಪಗಳಾದ ವೇದಗಳಲ್ಲಿ ಹೇಳಲ್ಪಟ್ಟಿರುವುದಾಗಿಯೂ ಪರಲೋಕಸಾಧಕವಾಗಿಯೂ ಇರುವ ಧರ್ಮಗಳನ್ನಾಚರಿಸುವ ಆತ್ಮನು ದಿನೇ ದಿನೇ ಪರಿಶುದ್ಧನಾಗುತ್ತ ತನಗೆ ಪ್ರಾಪ್ತವಾಗಿದ್ದ ಅಲ್ಪಜ್ಞತ್ವಾದಿಗಳನ್ನು ಕಳೆದುಕೊಂಡು ಪರಮಾತ್ಮಸಾಯುಜ್ಯವನ್ನು ಹೊಂದುವನು. ಲೋಕದಲ್ಲಿ ಒಂದು ರತ್ನವು ಸ್ವಭಾವಸಿದ್ಧತೇಜಸ್ಸುಳ್ಳುದಾಗಿದ್ದರೂ ಸಾಣೆಯೆಂಬ ಸಂಸ್ಕಾರವಿಲ್ಲದುದರಿಂದ ಅದರ ಬೆಲೆಯು ಹೆಚ್ಚುವುದೇ ಇಲ್ಲವು. ಆ ರತ್ನವನ್ನು ಸಾಣೆಯಿಂದ ಸಂಸ್ಕರಿಸಿದರೆ ಮಾಲಿನ್ಯವು ನಷ್ಟವಾಗಿ ಅದರೊಳಗಿದ್ದ ತನ್ನ ಸಹಜಪ್ರಕಾಶವೆಲ್ಲಾ ಹೊರಗೆ ಬಂದು ಸರ್ವಮಾನ್ಯವಾಗುವದೆಂಬಂಶವು ಸರ್ವಾನುಭವಸಿದ್ಧವಾಗಿರುವುದು. ನಮ್ಮ ದೇಹದೊಳಗೆ ಇರುವ ಆತ್ಮನನ್ನು ಒಂದು ರತ್ನಕ್ಕೆ ಹೋಲಿಸಬಹುದಾಗಿದೆ. ರತ್ನದಲ್ಲಿ ಪ್ರಕಾಶಗುಣವು ಸ್ವಭಾವವಾಗಿರುವಂತೆ ಆತ್ಮನಲ್ಲಿಯೂ ಪರಮೇಶ್ವರನಿಷ್ಠ ಸರ್ವಜ್ಞತ್ವಾದಿ ಗುಣಗಳೆಲ್ಲವೂ ಪೂರ್ಣವಾಗಿರುವುವು. ಮಾಲಿನ್ಯದೋಷದಿಂದ ರತ್ನದಲ್ಲಿ ಪ್ರಕಾಶವು ಕಡಿಮೆಯಾಗುವಂತೆ ಅನಾದಿಯಾದ ಆಣವ, ಮಾಯಿಕ, ಕಾರ್ಮಿಕಗಳೆಂಬ ಮಲಗಳ ಆವರಣದಿಂದ ಆತ್ಮನ ಸ್ವಭಾವಗುಣಗಳು ಮರೆಯಾಗಿ ಕಿಂಚಿಜ್ಞತ್ವ ಮೊದಲಾದ ಅಲ್ಪ ಶಕ್ತಿಗಳೇ ತೋರುತ್ತಿರುವವು. ಈ ಅಲ್ಪಶಕ್ತಿಯು ನಷ್ಟವಾಗಿ ಸ್ವಭಾವಸಿದ್ಧವಾದ ಪರಮಾತ್ಮ ಗುಣಗಳು ಈ ಆತ್ಮಕ್ಕುಂಟಾಗಬೇಕಾದರೆ ಪ್ರತ್ಯುಕ್ತಧರ್ಮಾಚರಣೆಯೆಂಬ ಸಂಸ್ಕಾರವು ಆಗಲೇಬೇಕು. ಧರ್ಮದಿಂದ ಸಂಸ್ಕರಿಸಲ್ಪಡದ ಆತ್ಮರು ಸಾಣೆಯಿಲ್ಲದ ರತ್ನದಂತೆ ಆಗಿ ತಾವು ಪರಮಾತ್ಮನ ಸಂಪೂರ್ಣಗುಣಗಳನ್ನು ಹೊಂದಿದ್ದರೂ ಆ ಗುಣಗಳಿಂದ ಯಾವ ಪ್ರಯೋಜನವನ್ನೂ ಹೊಂದದೆ ಪಶುಪಕ್ಷಿಗಳಂತೆ ಆಹಾರ ನಿದ್ರಾಮೈಥುನಾದಿಗಳನ್ನು ಅನುಭವಿಸುವದೊಂದೇ ಅವರಿಗೆ ಪುರುಷಾರ್ಥವಾಗಿ ತೋರುವದು. ಮಾನವಜನ್ಮವನ್ನಾಶ್ರಯಿಸಿದ ಆತ್ಮನು ಅಂಥ ಸ್ಥಿತಿಯನ್ನು ತಂದುಕೊಂಡರೆ "ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ | ಪಶುಭ್ಯೋಪಿನರಾಶ್ಶ್ರೇಷ್ಠಾಃ" ಕ್ರಿಮಿಗಳಿಗಿಂತಲೂ ಕೀಟಗಳು, ಕೀಟಗಳಿಗಿಂತಲೂ ಪತಂಗಗಳೂ, ಪತಂಗಗಳಿಗಿಂತಲೂ ಪಶುಗಳು, ಪಶುಗಳಿಗಿಂತ ಮನುಷ್ಯರು ಪ್ರಜ್ಞಾಶಕ್ತಿಯಲ್ಲಿ ಶ್ರೇಷ್ಠರು ಎಂದು ಹೇಳುವ ಆದ್ಯೋಕ್ತಿಗೆ ವಿಷಯರಾಗರು. ಮುಖ್ಯವಾಗಿ ಮಾನವತ್ವವು ಕೇವಲ ಧರ್ಮದ ಆಧಾರದಲ್ಲಿರುವುದರಿಂದ ಇಂಥ ಧರ್ಮವನ್ನು ತ್ಯಜಿಸಿ ಅಧರ್ಮದಲ್ಲಿ ನಿರತನಾದವನು ತನ್ನ ಮಾನವ ಧರ್ಮದ ಎಲ್ಲೆಯನ್ನು ಮೀರಿದಂತಾಗುವನು. ಆದ್ದರಿಂದ ಮಾನವತ್ವವನ್ನು ಸಾಫಲ್ಯವನ್ನಾಗಿಮಾಡುವುದಕ್ಕೆ ಮುಖ್ಯಸಾಧನಗಳಾದ ಧರ್ಮಗಳ ಗೂಢಾರ್ಥವನ್ನು ಜಗತ್ತಿನಲ್ಲಿ ಬೋಧಿಸಿ ಆತ್ಮರನ್ನು ಉದ್ಧರಿಸುವುದಕ್ಕಾಗಿ ಈಶ್ವರಾಜ್ಞೆಯಿಂದ ಒಂದೊಂದು ಮತದಲ್ಲಿ ಒಂದೊಂದು ನಾಮದಿಂದ ಒಬ್ಬೊಬ್ಬ ಆಚಾರ್ಯ ಭಗವತ್ಪಾದರು ಅವತರಿಸಿ ಖಿಲವಾದ ಧರ್ಮಗಳನ್ನು ಪುನಃ ಸ್ಥಾಪಿಸಿದರು. ಪ್ರಾಯಶಃ ಧರ್ಮಶಬ್ದವೂ ಆಚಾರಶಬ್ದವೂ ಒಂದೇ ಅರ್ಥವುಳ್ಳದ್ದರಿಂದ ಧರ್ಮಸ್ಥಾಪನೆಯೆಂಬ ಪ್ರಬಲಕಾರಣದಿಂದಲೇ ಆಯಾಯ ಮತದಲ್ಲಿ ಅವತರಿಸಿದ ಮಹಾತ್ಮರಿಗೆಲ್ಲಾ ಆಚಾರ್ಯರೆಂದು ಹೆಸರುಬಂದಿರುವದು. ಈ ಅರ್ಥವು "ಆಚಿನೋತಿಚಶಾಸ್ತ್ರಾರ್ಥಾನ್ ಆಚಾರಾ ಸ್ಥಾಪಯತ್ಯಪಿ" ಎಂಬ ರೇಣುಕ ಭಗವತ್ಪಾದರ ಉಕ್ತಿಯಿಂದ ಸಿದ್ಧವಾಗುತ್ತದೆ. ಆದ್ದರಿಂದ ಆಯಾಯ ಮತಸ್ಥಾಪಕರಾದ ಆಚಾರ್ಯರಿಂದ ಸ್ಥಾಪಿತವಾದ ಸಕಲ ಧರ್ಮಗಳನ್ನು ಆಯಾಯ ಮತೀಯರು ತಪ್ಪದೆ ನಡೆಯಿಸುತ್ತ ಇಹದಲ್ಲಿ ಧಾರ್ಮಿಕರೆಂಬ ಹೆಸರನ್ನು ಪಡೆದು ಶಿವಕೃಪಾಪಾತ್ರರಾಗಿ ಪರದಲ್ಲಿ ಸದ್ಗತಿಯನ್ನು ಪಡೆಯಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ತುಮಕೂರಿನಲ್ಲಿ ಹಾಕಿರುವ ವಿದ್ಯುಚ್ಛಕ್ತಿಯ ದೀಪಗಳ ಪ್ರಾರಂಭ ಮಹೋತ್ಸವವು ನಾಳೆ 12 ನೆಯ ತಾ|| ಗುರುವಾರ ಶ್ರೀಮನ್ಮಹಾರಾಜರವರಿಂದ ನೆರವೇರಿಸಲ್ಪಡುವದು. ನಗರವನ್ನು ಅತ್ಯಂತ ಮನೋಹರವಾಗಿ ಅಲಂಕರಿಸುತ್ತಿದ್ದಾರೆ.

ಮೈಸೂರು ಬಾಯ್‌ಸ್ಕೌಟುಗಳ ಆಶ್ರಯದಲ್ಲಿ ಯುವಕರ ಕಾಯಪುಷ್ಟಿಯನ್ನು ವೃದ್ಧಿಮಾಡುವುದಕ್ಕೆ ಒಂದು ವ್ಯಾಯಾಮ ಸಂಘವನ್ನು ರಾಜಧಾನಿಯಲ್ಲಿ ಪ್ರಾರಂಭಿಸಬೇಕೆಂದು ತೀರ್ಮಾನವಾಗಿದೆ. ಅದರ ಪ್ರಾರಂಭೋತ್ಸವವು ನಿನ್ನೆ ಭಾನುವಾರ ಸಾಯಂಕಾಲ 5 ಗಂಟೆಯಮೇಲೆ ಶ್ರೀಮದ್ಯುವರಾಜರಿಂದಲೂ, ಶ್ರೀ ಜಯಚಾಮರಾಜ ಒಡೆಯರವರಿಂದಲೂ ನೆರವೇರಿಸಲ್ಪಟ್ಟಿತು.

ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನವು ಇದೇ ತಿಂಗಳು 18 ನೇ ತಾರೀಖು ಬುಧವಾರ 12 ಘಂಟೆಗೆ ಬೆಂಗಳೂರು ಅಠಾರಾ ಕಛೇರಿಯಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಸೇರುವದು. ಈ ಅಧಿವೇಶನವಾದಮೇಲೆ ಮುಂದಿನ ವರ್ಷದ ಮಾರ್ಚಿತಿಂಗಳಲ್ಲಿ ಈ ಸಭೆಗೆ ಹೊಸಮೆಂಬರುಗಳು ಚುನಾಯಿಸಲ್ಪಡುವುದರಿಂದ ಇದೇ ಈಗಿನ ನ್ಯಾಯವಿಧಾಯಕ ಸಭೆಯ ಕಡೆಯ ಅಧಿವೇಶನವಾಗಿರುತ್ತದೆ.

ಚನ್ನಪಟ್ಟಣದ ತಾ|| ಅನ್ವೇರಹಳ್ಳಿಗ್ರಾಮಸ್ಥರಿಗೂ ಕೆಂಪನಹಳ್ಳಿ ದೊಡ್ಡಿಯವರಿಗೂ ಕಾರಣಾಂತರದಿಂದ ಹೊಡೆದಾಟವಾಗಿ, ಎರಡುಕಡೆಯವರಲ್ಲೂ ಸುಮಾರು 5-6 ಜನರಿಗೆ ತುಂಬಾ ಏಟು ಬಿದ್ದು ಎಲ್ಲರೂ ಚನ್ನಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರೆಂದೂ ಘಾಯಪಟ್ಟವರಲ್ಲಿ ಒಬ್ಬರಾದ ಅನ್ವೇರಹಳ್ಳಿ ಚನ್ನೇಗೌಡರ ತಮ್ಮ ಮಾದೇಗೌಡರು ಮೃತಪಟ್ಟರೆಂದೂ, ವರ್ತಮಾನ ಕೇಳುತ್ತೇವೆ.

ಈ ತಿಂಗಳು ಅಂತ್ಯಭಾಗದಲ್ಲಿ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರು ಬೊಂಬಾಯಿಗೆ ದಯಮಾಡಿಸಿ, ಶಿವರಾತ್ರಿಯವರೆಗೆ ಅಲ್ಲಿಯೇ ಇದ್ದು ಅನಂತರ ಕಾಶಿಗೆ ಪ್ರಯಾಣಬೆಳೆಯಿಸಿ, ಶಿವರಾತ್ರಿಯಲ್ಲಿ ಶ್ರೀ ವಿಶ್ವೇಶ್ವರನ ದರ್ಶನವನ್ನು ಪೂರೈಸಿಕೊಂಡು ಹಿಂತಿರುಗುವರೆಂದು ವರ್ತಮಾನಕೇಳುತ್ತೇವೆ. ಮಹಾಮಾತೃಶ್ರೀಯವರ ಜೊತೆಯಲ್ಲಿ ಶ್ರೀಮನ್ಮಹಾರಾಜರವರೂ ಸಹ ದಯಮಾಡಿಸುವರು.

ನಮ್ಮ ದಿವಾನರಾದ ಮಿ|| ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರು ಕಳೆದ ಸೋಮವಾರ ಕೂಡೂರಿಗೆ ಪ್ರಯಾಣಮಾಡಿ ಅಲ್ಲಿನ ಸ್ಕೂಲಿನಲ್ಲಿ ಲೇಟ್ ಮಿ|| ಫ್ರಿಚ್ಲಿಯವರ ಹೆಸರಿನ ಮೇಲೆ ಇಟ್ಟಿರುವ ವಾಚಕಶಾಲೆಯ ಪ್ರಾರಂಭೋತ್ಸವವನ್ನು ನಡೆಯಿಸಿ ಮಿ|| ಫ್ರಿಚ್ಲಿಯವರಲ್ಲಿ ತಮಗಿದ್ದ ಪ್ರೀತಿಗೌರವಗಳನ್ನೂ ಅವರು ತಮ್ಮ ಸಂಪಾದನೆಯನ್ನು ಅನೇಕ ಧರ್ಮಕಾರ್ಯಗಳಿಗೆ ಧಾರಾಳವಾಗಿ ವಿನಿಯೋಗಪಡಿಸುತ್ತಿದ್ದುದನ್ನೂ ಪ್ರಶಂಸೆಮಾಡಿದರು.

ಆನೇಕಲ್ ತಾಲ್ಲೂಕು ಬಿಗಣೆ ಹೋಬಳಿ ರಾಗಿಹಳ್ಳಿ ಕಾಡಿನಲ್ಲಿ ಫಾರೆಸ್ಟರ್ ಮಿ|| ಹೊನ್ನೇಗೌಡರು ಸಂಚಾರಮಾಡುತ್ತಿರುವ ಸಮಯದಲ್ಲಿ ಒಂದು ದೊಡ್ಡ ಹುಲಿಯು ಆಕಸ್ಮಾತ್ತಾಗಿ ಪೊದೆಯಿಂದ ಹೊರಕ್ಕೆ ಬಂದು ಅವರಮೇಲೆ ಬೀಳುವುದಕ್ಕೆ ಪ್ರಯತ್ನಿಸಿತು. ಅದನ್ನು ಕಂಡು ಅವರಕೂಡ ಇದ್ದವರು ಹೆದರಿ ಓಡಿಹೋದರು. ಮಿ|| ಹೊನ್ನೇಗೌಡರು ಧೈರ್ಯಗುಂದದೆ ಕೈಲಿದ್ದ ಬಂದೂಕು ಬಾರ್ ಮಾಡಿ ಹುಲಿಗೆ ಹೊಡೆದರು. ಗುಂಡೇಟು ತಗಲಿದರೂ ಹುಲಿಯು ರೋಷದಿಂದ ಪುನಃ ಅವರ ಮೇಲೆ ನುಗ್ಗಿತು. ಅವರು ಅಷ್ಟರಲ್ಲೇ ಮತ್ತೆ ಗುಂಡು ಹೊಡೆದು ಆ ಕ್ರೂರ ಮೃಗವನ್ನು ಕೊಂದರು. ಅಷ್ಟರಲ್ಲಿ ಸುತ್ತುಮುತ್ತಿನ ಹಳ್ಳಿಯವರು ಹೋಗಿ ಮಿ|| ಗೌಡರ ಪರಾಕ್ರಮವನ್ನು ಕೊಂಡಾಡುತ್ತ ಸತ್ತಹುಲಿಯನ್ನು ಊರಿನಲ್ಲಿ ಮೆರವಣಿಗೆ ಮಾಡಿದರು. ಈ ಮೃಗವು 9 ಅಡಿ ಇದ್ದುದಲ್ಲದೆ ಅನೇಕ ರಾಸುಗಳನ್ನು ಕೊಂದು ರೈತರಿಗೆ ನಷ್ಟಪಡಿಸುತ್ತಾ ಇದ್ದಿತು.

ವರ್ತಮಾನಸಂಗ್ರಹ.

ಅಮೇರಿಕೆಯವರು ಸೂರ್ಯಕಿರಣಗಳಿಂದ ನಡೆಯುವ ಹೊಸತರದ ಮೋಟಾರು ಮಾಡಿರುವರಂತೆ!

ಲಂಡನ್ನಿನಲ್ಲಿ ಸಿಡುಬುರೋಗವು ತಲೆದೋರಿರುವದು. ಇದುವರೆಗೆ 300 ಜನರನ್ನು ಆಸ್ಪತ್ರೆಗೆ ಸಾಗಿಸಿರುವರು.

ಲಾಹೋರಿನ ಕಾಂಗ್ರೆಸ್ ಅಧಿವೇಶನವು ಇದೇ ಡಿಸೆಂಬರ ತಾ|| 26ರಿಂದ ಜನವರಿ ತಾ|| 1ರವರೆಗೆ ನಡೆಯುವುದು.

ಮಿಯಾನವಾಲಾ ಜೈಲಿನಲ್ಲಿ ಮೂವರು ಕರುಣಾರಾಜಕೀಯ ಕೈದಿಗಳು ಉಪವಾಸವ್ರತವನ್ನು ಕೈಕೊಂಡಿರುವರಂತೆ!

ಲಾಹೋರ್ ಕಾಂಗ್ರೆಸ್ಸಿನಲ್ಲಿ ಭಾರತದೇಶದ ಕೈಗಾರಿಕೆಗಳ ಪ್ರದರ್ಶನವನ್ನು ಸರ್ವೋತ್ತಮವಾಗಿ ಮಾಡಬೇಕೆಂದು ವಿಶೇಷಪ್ರಯತ್ನ ಮಾಡುತ್ತಿರುವರು.

ಜೇನಾದೇಶದ ವಿದ್ವಾಂಸರೊಬ್ಬರು ತಯಾರಿಸಿದ 1,665 ವಿಭಾಗಗಳುಳ್ಳ 8 ಲಕ್ಷ ಪುಟಗಳುಳ್ಳ ಭಾರಿ ಗ್ರಂಥವೊಂದರ ಕ್ರಯ 75,000 ರೂಪಾಯಿಗಳಾಗಿರುವದು.

ಅಮೇರಿಕೆಯ ಕಮ್ಯಾಂಡರ್ ಬಿಯರ್ಡ್ ಎಂಬುವರು 2800 ಮೈಲಿಗಳ ದೂರದಲ್ಲಿರುವ ದಕ್ಷಿಣಧ್ರುವವನ್ನು ಸಂಚರಿಸಿಬರಲು ವಿಮಾನದಲ್ಲಿ ಹೊರಟಿರುವರು.

ಹೈದರಾಬಾದಿನ ಶ್ರೀ|| ವಾಮನ ನಾಯಕ ಎಂಬುವರು ಕಾಶೀ ವಿಶ್ವವಿದ್ಯಾಲಯಕ್ಕೆ 10 ಸಾವಿರ ರೂ. ಗಳನ್ನು ದಾನಮಾಡಿರುವರೆಂದು ತಿಳಿದುಬರುತ್ತದೆ. ಸ್ತುತ್ಯ!

ಬಳ್ಳಾರಿಯ ಪಿಂಜಾರು ಓಣಿಯಲ್ಲಿರುವ ಮನ್ಸೂರು ಸಾಬರ ಮನೆಯಲ್ಲಿ ಇದೇ ತಿಂಗಳು 5 ನೇ ತಾರೀಖಿನ ದಿವಸ ಮಧ್ಯಾಹ್ನ 4 ಗಂಟೆಯಲ್ಲಿ ಮೇಕೆಯು ಮನುಷ್ಯರೂಪದ ಮರಿಯನ್ನು ಹಾಕಿರುವದಂತೆ! ವಿಚಿತ್ರ!

ಹಿಂದೂ ದೇಶದಲ್ಲಿ ಅಫೀಮನ್ನು ಹೆಚ್ಚಾಗಿ ಮಾರಿ ಲಾಭಪಡೆಯಬೇಕೆಂದು ಸ್ವಿಟ್ಝರ್‌ಲೆಂಡ್ ಮತ್ತು ಜರ್ಮನಿಯ ಕೆಲವು ಮಂದಿ ಅಫೀಮು ತಯಾರಿಸುವ ವ್ಯಾಪಾರಿಗಳು ಡಾಕ್ಟರರುಗಳೊಡನೆ ಸಂಚುನಡಿಸುತ್ತಿರುವರಂತೆ!

ಸಂಯುಕ್ತ ಪ್ರಾಂತದ ಸಂಚಾರದಲ್ಲಿ ಖಾದಿಯ ಕೆಲಸಕ್ಕಾಗಿ ಮಹಾತ್ಮರಿಗೆ 3 ಲಕ್ಷ ರೂಪಾಯಿಗಳು ದೊರೆತಿರುವವು. ಸಂಯುಕ್ತ ಪ್ರಾಂತದಲ್ಲಿಯ ಊರುಗಳಲ್ಲಿ ವಿಧಾರಕದವರೇ ಮಹಾತ್ಮರಿಗೆ ಹೆಚ್ಚು ದುಡ್ಡು ಕೊಟ್ಟರಂತೆ!

ಪಾರ್ಲಿಮೆಂಟಿನ ಮೆಂಬರೊಬ್ಬರು ಸರಿಯಾಗಿ ಊಟಮಾಡಲು ಅನುಕೂಲವಿಲ್ಲದೆ ಬರಿಹೊಟ್ಟೆಯಲ್ಲಿ ಸಭೆಗೆ ಬಂದುದರಿಂದ ಪಜ್ಞೆತಪ್ಪಿ ಬಿದ್ದರು. ಇದರಿಂದ ಪಾರ್ಲಿಮೆಂಟ್ ಮೆಂಬರರಿಗೆ ಆಹಾರದ ಖರ್ಚನ್ನು ಕೊಡಬೇಕೆಂದು ಮೆಂಬರರು ಆಲೋಚಿಸುತ್ತಿರುವರು.

ಉತ್ತರ ರಷ್ಯದಲ್ಲಿ ದನಗಳು ಘೋರ ಬಿರುಗಾಳಿಯಲ್ಲಿ ಕಂಗಾಣದಂತಾಗಿ ನೂರಾರು ದನಗಳು ಮೃತವಾಗುವುದರಿಂದ ಅವುಗಳಿಗೆ ಅಂಥ ಬಿರುಗಾಳಿಯಲ್ಲಿಯೂ ದಾರಿಕಾಣುವಂತೆ ಬಿರುಗಾಳಿ ಕನ್ನಡಕವೊಂದನ್ನು ತಯಾರಿಸುವುದೆಂದು ರಷ್ಯದ ಸರಕಾರವು ಅನುಮತಿಯಿತ್ತಿರುವನು.

ಪುಣೆಯ ಕಾವ್ರೆಯೆಂಬ ದೇವಸ್ಥಾನಕ್ಕೆ ಅಸ್ಪೃಶ್ಯರನ್ನು ಪ್ರವೇಶಿಸಲು ಅವಕಾಶಕೊಟ್ಟದರಿಂದ ಅದು ಅಪವಿತ್ರವಾಯಿತೆಂದು ಮೇಲ್ಜಾತಿಯ ಹಿಂದುಗಳು ದೇವಸ್ಥಾನಕ್ಕೆ ಹೋಗುವದನ್ನೇ ಬಿಟ್ಟಿರುವರು. ಇದರಿಂದ ಅಸ್ಪೃಶ್ಯರೂ ಅದರಗೊಡವೆಯನ್ನು ಬಿಟ್ಟಿದ್ದರಿಂದ ದೇವಸ್ಥಾನಕ್ಕೆ ಯಾರೂ ಹೋಗುವವರಿಲ್ಲವಂತೆ!

ಹಿಂದೂದೇಶದಲ್ಲಿ 25 ಲಕ್ಷ ರೂಪಾಯಿಗಳ ಬೆಲೆಯುಳ್ಳ ಕಿತ್ತಾನಾರನ್ನು ತೆಗೆದುಕೊಂಡುಹೋಗುತ್ತಿದ್ದ "ಸಿಟಿ ಆಫ್ ಮನಿಲಾ" ಎಂಬ ಹಡಗಿಗೆ ಸ್ಟೇಟ್ಮೆಂಟಿನ ಅಣೆ ಬೆಂಕಿಬಿದ್ದು ಬಹಳ ನಷ್ಟವಾಗಿರುವದು. ಅರ್ಧಭಾಗದಷ್ಟು ಹಾಳಾದಮೇಲೆ ಬೆಂಕಿಯು ಆರಿಸಲ್ಪಟ್ಟಿತು.

ಲಂಡನ್ನಿನ 'ರಾಯಲ್ ಕಾಲೇಜು ಆಫ್ ಸರ್ಜನ್ಸ್' ಸದಸ್ಯತನದ ಬಿರುದುಗಳು ಈ ಸಾರೆ 9 ಜನ ಭಾರತೀಯರಿಗೆ ದೊರೆತಿರುವವು. ಅವರಲ್ಲಿ ನಾಲ್ಕು ಜನರು ಕಲ್ಕತ್ತೆಯವರೂ ಮೂರು ಜನರು ಬೊಂಬಾಯಿಯವರೂ ಇಬ್ಬರು ಪಂಜಾಬಿನವರೂ ಮತ್ತೊಬ್ಬರು ಮದರಾಸಿನವರೂ ಆಗಿರುತ್ತಾರೆ.

ಜೋಹಾನ್ಸಬರ್ಗದ 30 ವಯಸ್ಸಿನ ವಿವಾಹ ಆಮ್ಸ್ಟಿಬಿ ಎಂಬ ಸ್ತ್ರೀಯೊರ್ವಳು, ಮುಂಬಾಯಿಯ ಚೌಪಾಟಿಯಲ್ಲಿ ಹಾವಭಾವವಿಲಾಸಗಳಿಂದ ಪುರುಷರ ಮನಸ್ಸನ್ನಾಕರ್ಷಿಸುತ್ತಿರುವ ಸಮಯದಲ್ಲಿ ಪೋಲೀಸರು ಸೆರೆಹಿಡಿದು, ವೇಶ್ಯಾಪ್ರತಿಬಂಧಕ ಕಾಯಿದೆಗನುಸಾರವಾಗಿ ಆಕೆಯನ್ನು ವಿಚಾರಣೆಗೊಳಪಡಿಸಿರುವರು.

ಶಾರದಾ ಮಸೂದೆಯು ಜಾರಿಗೆ ಬರುವ ಮೊದಲು ವಿವಾಹಮಾಡಿಬಿಡಬೇಕೆಂದು ಗುಜರಾತಿನಲ್ಲಿ ಎಲ್ಲೆಲ್ಲಿಯೂ ಮದುವೆಯ ಸಂಭ್ರಮವೇ ನಡೆದಿರುವದಂತೆ! ಸೂರತ್ ಪಟ್ಟಣ ಒಂದರಲ್ಲಿಯೇ 2,000 ವಿವಾಹಗಳು ನಡೆದಿವೆ. ತೊಟ್ಟಿಲ ಕೂಸುಗಳನ್ನೂ ಮದುವೆ ಮಾಡಲು ತೊಡಗಿರುವರು. ವರದಕ್ಷಿಣೆಯ ದರವಂತೂ ಬಹಳ ಏರಿದೆ.

ಶಾರದಾ ಬಾಲ್ಯವಿವಾಹ ನಿರೋಧ ಶಾಸನವನ್ನು ನಿಷೇಧಿಸಿ ಪೋಲೀಸರು ನೋಟೀಸು ಕೊಟ್ಟಿದ್ದರೂ ಲೈಸೆನ್ಸನ್ನು ತೆಗೆದುಕೊಳ್ಳದೆ, ಪೆಶಾವರದ ಖಿಲಾಫತ್ ಕಮಿಟಿಯವರು ಮೆರವಣಿಗೆ ಹೊರಡಿಸಲು ಪೋಲೀಸರು ತಡೆದು 44 ಜನ ಸ್ವಯಂ ಸೇವಕರನ್ನು ದಸ್ತಗಿರಿಮಾಡಿರುತ್ತಾರೆ. ಕೂಡಲೇ ಖಿಲಾಫತ್ ಕಮಿಟಿಯವರು ಸಭೆಗೂಡಿ ಕಾನೂನನ್ನು ಉಲ್ಲಂಘಿಸುವ ತೀರ್ಮಾನಮಾಡಿ ಪುನಃ ಮೆರವಣಿಗೆ ಹೊರಡಿಸಿದರು. ಎರಡನೆಯ ಮೆರವಣಿಗೆಯನ್ನು ಪೋಲೀಸರು ತಡೆಯಲಿಲ್ಲ.

ಹೈದರಾಬಾದಿನ ನೈಜಾಂ ಸಾಹೇಬರು ಡಿಲ್ಲಿಯಲ್ಲಿ 21 ಲಕ್ಷ ರೂ. ಗಳವೆಚ್ಚದಿಂದ ಒಂದು ಅರಮನೆಯನ್ನು ಕಟ್ಟಿಸಿರುವರೆಂದೂ, ಅದನ್ನು ರಾಜಯೋಗ್ಯಕ್ಕೆ ಒಪ್ಪುವ ಸಾಮಗ್ರಿಗಳಿಂದಲಂಕರಿಸಲು ಮತ್ತೂ 6½ ಲಕ್ಷ ರೂ. ಗಳು ಬೇಕಾಗುವದೆಂದೂ, ದೂರದಿಂದ ನೋಡುವವರಿಗೆ ರೆಕ್ಕೆಗಳನ್ನೆತ್ತಿ ಹಾರುವ ಪಕ್ಷಿಯಂತೆ ಇದರ ಆಕಾರವು ಕಾಣುವುದೆಂದೂ, 24 ದಿವಾನಖಾನೆಗಳೂ 101 ಕೊಠಡಿಗಳೂ ಇದ್ದರೂ ನಿಜಾಂ ಸಾಹೇಬರವರ ಪರಿವಾರಕ್ಕೆ ಇದು ಸಾಕಾಗುವಂತಿಲ್ಲವೆಂದೂ ತಿಳಿದುಬರುತ್ತದೆ.

ಮಲಬಾರಿನಲ್ಲಿ ಬ್ರಿಟಿಷ್ ಗವರ್ನಮೆಂಟು ಸ್ಥಾಪನೆಯಾಗುವುದಕ್ಕೆ ಮೊದಲು ಅಲ್ಲಿದ್ದ ಚರಮರೆಂಬ ಜನಗಳು ಮಾಪಿಳ್ಳೆಗಳಿಗೆ ಗುಲಾಮರಾಗಿದ್ದರು. ಆ ಪೂರ್ವಕಾಲದ ಪದ್ಧತಿಗೆ ಸಂಬಂಧಪಡುವ ಒಂದು ಮೊಕದ್ದಮೆಯನ್ನು ಮಲಬಾರ್ ಪೋಲೀಸಿನವರು ತನಿಖೆಮಾಡುತ್ತಿದ್ದಾರೆ. ಒಂದು ಕಡೆ ಚರಮರೀರ್ವರಿಗೆ ವಿವಾಹ ನಡೆಯಲು ಏರ್ಪಾಡಾಯಿತು. ಆದಕ್ಕೆ ಒಬ್ಬ ಮಾಪಿಳ್ಳೆಯು ಅಡ್ಡಹಾಕಿ ಮದುವೆಯಾಗುವ ಹೆಂಗಸು ತನ್ನ ಗುಲಾಮಳೆಂದೂ, ಅವಳಿಗೆ ಮದುವೆ ಆದರೆ ತನ್ನ ಜಮೀನು ಪಾಳುಬಿದ್ದು ತನಗೆ ನಷ್ಟವಾಗುವುದೆಂದೂ ಹೇಳಿದನು. ಚರಮರು ಆ ಮಾಪಿಳ್ಳೆಯ ಕಡೆಯನ್ನು ಲಕ್ಷ್ಯಮಾಡಲಿಲ್ಲ. ಮಾಪಿಳ್ಳೆಗಳು ಒಟ್ಟಾಗಿ ಮದುವೆ ಆಗುವ ಸಮಯದಲ್ಲಿ ನುಗ್ಗಿ ಮದುವೆಯ ಗಂಡನ್ನು ಹಿಡಿದು ಹೊಡೆದದ್ದಲ್ಲದೆ ಇನ್ನೂ ಕೆಲವು ಚರಮರನ್ನು ಗಾಯಪಡಿಸಿರುತ್ತಾರೆ.

ಕಳೆದವಾರ ನೇಪಾಳದ ಮಂತ್ರಿಶ್ರೇಷ್ಠರು ಕಾಲವಾದರು. ಆ ಸಂಸ್ಥಾನದಲ್ಲಿ ಮಂತ್ರಿಪದವಿಯು ಒಂದೇ ವಂಶದಲ್ಲಿ ತಂದೆಯಿಂದ ಮಗನಿಗೆ ಬರುವ ಪದ್ಧತಿಯಾಗಿದೆ. ಮಂತ್ರಿಯಾಗಿದ್ದರೂ ಆತನಿಗೆ ಮಹಾರಾಜಾ ಎಂಬ ಬಿರುದು ಇದ್ದು ದೊರೆಗಿಂತಲೂ ಹೆಚ್ಚಾದ ಅಧಿಕಾರವನ್ನು ಪಡೆದಿರುತ್ತಾನೆ. ಈಗ ತೀರಿಹೋದ ಮಂತ್ರಿಯು 1863 ರಲ್ಲಿ ಜನಿಸಿ 1901 ರಿಂದ ಮಂತ್ರಿ ಪದವಿಯಲ್ಲಿದ್ದರು. ಅವರಿಗೆ ಬ್ರಿಟಿಷ್ ಗವರ್ನಮೆಂಟಿನ ಮೇಲೆ ವಿಶೇಷವಾದ ಭಕ್ತಿ ಪ್ರೀತಿ ಭರವಸೆಗಳಿದ್ದು, ಕಳೆದ ಘೋರ ಯುದ್ಧಕಾಲದಲ್ಲಿ ಬ್ರಿಟಿಷರಿಗೆ ತುಂಬಾ ಸಹಾಯಮಾಡಿದರು. 1923 ರಲ್ಲಿ ಅವರು ಬ್ರಿಟಿಷ್ ಗೌರ್ನಮೆಂಟಿನವರೊಡನೆ ಒಂದು ಹೊಸ ತಹನಾಮೆಯನ್ನು ಮಾಡಿಕೊಂಡರು. 1924 ರಿಂದ 1926 ನೇ ಇಸವಿಯ ವರೆಗೆ ನೇಪಾಳದಲ್ಲಿದ್ದ ಗುಲಾಮರ ಶಿಸ್ತನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು, 60,000 ಗುಲಾಮರು ಸ್ವತಂತ್ರ ಪ್ರಜೆಗಳಾದರು. ಅದಕ್ಕಾಗಿ 35,00,000 ರೂಪಾಯಿಗಳು ಖರ್ಚಾದವು.

ಮಿರತದ ಆರೋಪಿಗಳ ಜವಾಬುಗಳು.

ಮಿರತದ ಆರೋಪಿಗಳ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮುಗಿದು, ಆರೋಪಿಗಳ ಜವಾಬು ನಡೆದಿದೆ, ಎಲ್ಲ ಆರೋಪಿಗಳು ಜವಾಬು ಕೊಟ್ಟಿಲ್ಲ. ಕೆಲವರು ಮಾತ್ರ ಕೊಟ್ಟಿದ್ದಾರೆ. ಉಳಿದವರು ಸೆಷನ್ಸ-ಕೋರ್ಟಿನಲ್ಲಿ ಜವಾಬು ಕೊಡುವರು. ಜವಾಬು ಕೊಟ್ಟವರಲ್ಲಿ ಕೆಲವರ ಜವಾಬುಗಳು ಮುಂದೆ ಕೊಟ್ಟಂತಿರುತ್ತವೆ.

ಮಿ|| ಸ್ಪ್ರ್ಯಾಟ—

ನಾನೊಬ್ಬ ಪುಸ್ತಕ ವ್ಯಾಪಾರಿಯು. ನನ್ನ ಪಾಸಪೋರ್ಟಿನಲ್ಲಿ ಹಾಗೇ ಬರೆದಿದೆ. ನನ್ನ ಬಂಗಾಲ ಬೆಂದಿಗೆ ಬಿಪ್ಪ ಮಾಡಿದ್ದರ ವಿಷಯವಾಗಿ ಅಥವಾ ನಾನು ಬೋಲ್ಶೆವಿಕನಿದ್ದೇನೆಂಬ ವಿಷಯವಾಗಿ ಈಗೇನೂ ಹೇಳುವದಿಲ್ಲ. ಬಾದಶಹರ ರಾಜ್ಯವನ್ನು ಬುಡಮೇಲು ಮಾಡಬೇಕೆಂದು ಎಂದೂ ನನ್ನ ಇಚ್ಛೆ ಇರಲಿಲ್ಲ.

ಕಿಶೋರಿಲಾಲ ಘೋಷ—

ನನ್ನ ಮೇಲೆ ತಂದ ಒಳಸಂಚಿನ ಆರೋಪವು ಪೂರಾ ಸುಳ್ಳು. ನಾನು ಬೋಲ್ಶೆವಿಕನಿರುವುದೇ ಇಲ್ಲ. ನಾನು ಟ್ರೇಡ ಯೂನಿಯನ್ನಿನ ಸಂಘದ ಸೆಕ್ರೆಟರಿ ಇದ್ದು, ಅದರ ತತ್ವಪ್ರಕಾರ ಚಳವಳಿ ಮಾಡುತ್ತೇನೆ.

ಮುಜಫರ ಅಹಮದ—

ನನಗೆ ಜಾತಿಯಿಲ್ಲ. ಯಾವಜಾತಿ ಎಂಬುದು ನನಗೆ ಗೊತ್ತಿಲ್ಲ. ನನಗೆ ಧರ್ಮದಲ್ಲಿ ನಂಬಿಗೆ ಇಲ್ಲ. ನಾನು ವರ್ತಮಾನ ಪತ್ರದ ಸಂಪಾದಕನಾಗಿದ್ದೇನೆ. ಇದಕ್ಕೂ ಹೆಚ್ಚಿಗೆ ಹೇಳಲಿಚ್ಛಿಸುವುದಿಲ್ಲ.

ಕಿಶೋರಿಲಾಲ ಘೋಷ—

ನಾನು ವಕೀಲನೂ, ಪತ್ರ ಸಂಪಾದಕನೂ ಆಗಿದ್ದೇನೆ. ನಾನೆಂದೂ ಬೋಲ್ಶೆವಿಕನಿರಲಿಲ್ಲ. ವರ್ತಮಾನಪತ್ರಕಾರನಾಗಿರುವದರಿಂದ ಬೋಲ್ಶೆವಿಕ ತತ್ವದ ಕಾಗದ ಪತ್ರಗಳು ನನ್ನಲ್ಲಿರಬಹುದು. ಇಂಥ ಲೇಖ ಮತ್ತು ಪತ್ರಗಳು ಸ್ಟೇಟ್ಸಮನ್ನದ ಕಚೇರಿಯಲ್ಲಿ ಕೂಡ ಹೊರಡಬಹುದು.

ಕೇದಾರನಾಥ ಸೈಗಾಲ—

ಸದ್ಯಃ ನಾನೊಬ್ಬ ಗುಲಾಮನು. ಸ್ವಾತಂತ್ರ್ಯ ದೊರತನಂತರ ಮನುಷ್ಯನಾಗುವೆನು. ಕುರಂಗವಾಸಿಯಾಗಿರುವದಕ್ಕೆ ಪೋಲೀಸರಿಂದ ದಸ್ತಗಿರೀ ಮಾಡಲ್ಪಡುವದೇ ನನ್ನ ಉದ್ಯೋಗ. ಸದ್ಯಃ ಬೋಲ್ಶೆವಿಕನಾಗಿಲ್ಲ. ಮುಂದೆ ಆಗ ಬೇಕೆಂಬ ವಿಚಾರದಲ್ಲಿರುವೆನು. ಈಗಿನ ವಿಚಾರಣೆಯು ನಾಟಕದೊಳಗಿನ ಫಾರ್ಸಿನಂತಿದ್ದು ಸಾರ್ವಜನಿಕದ್ರವ್ಯದ ದುರುಪಯೋಗಮಾತ್ರ ನಡೆದಿರುತ್ತದೆ. ಬಾಂಬು ರಾಯಫಲು, ತೋಫುಗಳಿಲ್ಲದೆ ಬಾದಶಹರ ರಾಜ್ಯವನ್ನು ಹೇಗೆ ನಾಶಪಡಿಸಬಹುದು?

ಕೋರ್ಟ—ನಿಮಗೆ ಪಶಾಹತಿನ ಸ್ವರಾಜ್ಯಬೇಕೆ?

ಉತ್ತರ—ಆ ವಿಚಾರವನ್ನು ಸದ್ಯ ಕಾದಿಡುವೆ—ಕೋರ್ಟಿನವರು ಸರಕಾರ ಪಕ್ಷದ ಪುರಾವೆಯನ್ನು ಗ್ರಹಿತಮಾಡಿದರೆ- ಬ್ರಿಟಿಷ ಸರಕಾರದ ವಿಷಯವಾಗಿದ್ದ ಅಲ್ಪಸ್ವಲ್ಪ ನಂಬಿಗೆಯೂ ಹಾರಿಹೋಗುವದು.

ಗೌರೀಶಂಕರ—

ನನ್ನ ಜಾತಿ ಹಿಂದುಸ್ಥಾನಿ, ನನ್ನ ವಾಸಸ್ಥಾನ ಹಿಂದೂಸ್ಥಾನ, ಉದ್ಯೋಗ ಗುಲಾಮಗಿರಿ; ಮತ್ತು ಪರದಾಸ್ಯದಲ್ಲಿರುವದು.

ಗೋಪೇಂದ್ರ ಚಕ್ರವರ್ತಿ, ರಾಧಾರಮಣ ಮಿತ್ರ, ಅಯೋಧ್ಯಾಪ್ರಸಾದ ಈ ಮೂವರೂ ಜಾತಿಗೋತ್ರದಲ್ಲಿ ತಮ್ಮ ನಂಬಿಗೆಯಿಲ್ಲೆಂದು ಜವಾಬು ಕೊಟ್ಟಿದ್ದಾರೆ.

(ಧಾರವಾಡದ ವಿಜಯ.)

[೩ನೇ ಫುಟದ ಶೇಷ.]

ದಲ್ಲಿದ್ದು ಪಂಡಿತರಾದವರು ದೇಶಕ್ಕೆ ಹೋದ ಬಳಿಕ ಗುರುಕುಲಕ್ಕೆ ತಜ್ಞತಾಪ್ರಕಾಶಕ್ಕಾಗಿಯೂ ಶ್ರೀ. ವಿ. ಗುರುಕುಲದ ಅಭಿವೃದ್ಧಿಗೋಸ್ಕರವಾಗಿಯೂ ಶಕ್ತ್ಯನುಸಾರ ಸಹಾಯ ಮಾಡತಕ್ಕದ್ದು. ೧೮. ಈ ನಿಯಮಗಳನ್ನು ಪರಿವರ್ತಿಸುವ ಹಾಗೂ ನಿಯಮಾಂತರಗಳನ್ನು ನಿಯಮಿಸುವ ಅಧಿಕಾರವು ಶ್ರೀ. ವಿ. ಗುರುಕುಲಪತಿಗಳಿಗೆ ಇರುವದು. ೧೯. ಈ ಮುಂಚೆ ಮಾಡಲ್ಪಟ್ಟಿರುವ ನಿಯಮಗಳು ಈಮೂಲಕ ಪರಿವರ್ತಿಸಲ್ಪಟ್ಟಿರುತ್ತವೆ. ೨೦ ಮೂರು ತಿಂಗಳಿಗೊಮ್ಮೆ ವ್ಯವಸ್ಥಾಪಕರ ಚುನಾವಣೆಯಾಗಬೇಕು. ವ್ಯವಸ್ಥಾಪಕರು ಈ ನಿಯಮಗಳನ್ನು ತಾವೂ ಪಾಲಿಸುತ್ತ ವಿದ್ಯಾರ್ಥಿಗಳು ಈ ನಿಯಮಗಳನ್ನು ಪಾಲಿಸುವಂತೆ ನಿರೀಕ್ಷಿಸತಕ್ಕದ್ದು.

ಶ್ರೀ ಕಾಶೀಸ್ಥ ವಿಶ್ವಾರಾಧ್ಯ ಗುರುಕುಲದ ವ್ಯವಸ್ಥಾಪಕರು, ಶ್ರೀ. ಪಂ. ಪುರಗಿರಿ ಚಿದ್ಘನ ಶಿವಾಚಾರ್ಯರು.

ನೂತನ ಸ್ಕೂಲ್ ಪ್ರವೇಶೋತ್ಸವ ಪ್ರೈಮರಿಸ್ಕೂಲ್.

ಹರವಿಗೊಂಡನಹಳ್ಳಿ ಚಳ್ಳಕೆರೆ ತಾಲ್ಲೂಕು.

ಈ ಗ್ರಾಮವು 140 ಮನೆಗಳುಳ್ಳದ್ದಾಗಿಯೂ ಸುಮಾರು 700 ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ. ವೇದಾವತಿ ನದಿಯ ಕಾಲುವೆಯು ಬಂದಲಾಗಾಯ್ತು ಈ ಗ್ರಾಮವು ಬಡಾವಣೆಸ್ಥಿತಿಗೆ ಬಂದಿದೆ. ಇಲ್ಲಿ ಸುಮಾರು 10-14 ವರ್ಷದ ಲಾಗಾಯಿತು ಒಂದು ಗ್ರಾಂಟ್-ಇನ್-ಏಡ್-ಸ್ಕೂಲ್ ಇದ್ದು 25-30 ಬಾಲಕರವರೆಗೆ ವ್ಯಾಸಂಗಮಾಡುತ್ತಿದ್ದರು. ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ತಾ|| 20-2-29 ರಲ್ಲಿ ಈ ಸ್ಕೂಲನ್ನು ಸರ್ಕಾರಕ್ಕೆ ವಹಿಸಿಕೊಂಡು 20 ರೂ. ತಲುಬುಳ್ಳ ಅಪ್ಪರ್‌ಸೆಕೆಂಡರಿ ಪಾಸಾಗಿರುವ ಬಿ. ಹನುಮಂತಯ್ಯನೆಂಬ ಸ್ಕೂಲ್ ಮಾಸ್ಟರನ್ನು ಕಳುಹಿಸಿಕೊಟ್ಟರು. ಇವರು ಬಂದಲಾಗಾಯಿತು ಗ್ರಾಮದವರ ವಿಶ್ವಾಸಕ್ಕೆ ಪಾತ್ರರಾಗಿದ್ದುದರಿಂದ ಪುಷ್ಪವಾಸನೆಯು ಎಲ್ಲಾ ಕಡೆ ವ್ಯಾಪಿಸುವಂತೆ ನಮ್ಮ ಸ್ಕೂಲಿನ ಕೀರ್ತಿಯು ಹರಡಿ ದಿನೇದಿನೇ ಬಾಲಕರ ಸಂಖ್ಯೆಯು ಹೆಚ್ಚುತ್ತಾ ಈಗ 81 ಜನ ಬಾಲಕರು ಬಾಲಕಿಯರು ವ್ಯಾಸಂಗಮಾಡುತ್ತಿರುವರು.

ಈ ಸ್ಕೂಲ್ ಈವರಿವಿಗೆ ಶ್ರೀ ತಿಪ್ಪೇಸ್ವಾಮಿದೇವಸ್ಥಾನದಲ್ಲಿ ನಡೆಯುತ್ತಿದ್ದಿತು. ಗ್ರಾಮದವರ ಮತ್ತು ಪಂಚಾಯಿತಿ ಹಣದ ಸಹಾಯದಿಂದ ಸುಮಾರು 1,000 ರೂಪಾಯಿ ಸ್ಕೂಲ್ ಕಟ್ಟಡವು ಪೂರ್ತಿಯಾಯಿತು. ಪ್ರವೇಶೋತ್ಸವಕ್ಕೆ ಹ|| ಚಿತ್ರದುರ್ಗ ಡಿ|| ಎಜುಕೇಷನಲ್ ಸಾಹೇಬರವರ ಸಮೇತ ತಾವು ದಯಮಾಡಿಸಬೇಕೆಂದು ಚಳ್ಳಕೆರೆ ರೇಂಜ್ ಅ. ಇ. ಸಾಹೇಬರವರಿಗೆ ಅರ್ಜಿ ಗುಜರಾಯಿಸಿಕೊಂಡಿದ್ದಕ್ಕೆ ತಾ|| 24-11-29 ಕ್ಕೆ ದಯಮಾಡಿಸುವುದಾಗಿ ವಿಶ್ವಾಸಪೂರ್ವಕವಾದ ಹುಕುಂ ಅಪ್ಪಣೆಕೊಟ್ಟಪ್ರಕಾರ ತಾ|| 23-11-29 ನೇ ಶನಿವಾರ ಸಾಯಂಕಾಲ 5 ಘಂಟೆಗೆ ಡಿ|| ಎಜ್ಯುಕೇಷನಲ್ ಆಫೀಸರವರು ಇವರ ಹೆಡ್‌ಕ್ಲಾರ್ಕರವರು ರೇಂಜ್ ಅ|| ಇ|| ಸಾ|| ಇವರು ಇವರ ಹೆಡ್‌ಕ್ಲಾರ್ಕ ನಾರಣಯ್ಯಂಗಾರ್‌ರವರೂ ಜಾಜೂರ್ ಮಾರ್ಗವಾಗಿ ದಯಮಾಡಿಸಿದರು. ಗ್ರಾಮವಾಸಿಗಳೂ ಈ ಪ್ರಾಂತದ ಎಲ್ಲಾ ಸ್ಕೂಲ್‌ಮಾಸ್ಟರುಗಳೂ ನಿರೀಕ್ಷಿಸಿಕೊಂಡಿದ್ದು ಮಂಗಲವಾದ್ಯಗಳೊಂದಿಗೆ ಎದುರುಗೊಂಡು ಸ್ವಸ್ಥಾನಕ್ಕೆ ಕರೆದುಕೊಂಡು ಬಂದರು.

ತಾ|| 24-11-29 ನೇ ಭಾನುವಾರ ಬೆಳಗಿನ 7½ ಘಂಟೆಗೆ ತಳಿರುತೋರಣಗಳಿಂದಲಂಕೃತವಾಗಿದ್ದ ಸ್ಕೂಲ್ ಕಟ್ಟಡದಲ್ಲಿ ಸಭೆಯು ಪ್ರಾರಂಭವಾಯಿತು. ಸಭಿಕರ ಕೋರಿಕೆ ಮೇರೆಗೆ ಹ|| ಚಿತ್ರದುರ್ಗ ಡಿ|| ಎಜ್ಯುಕೇಷನಲ್ ಆಫೀಸರವರಾದ ಮ|| ರಾ|| ಅನಂತಸುಬ್ಬರಾವ್ ಬಿ.ಎ., ಎಲ್.ಟಿ. ಯವರು ಅಗ್ರಾಸನಾಧಿಪತ್ಯವನ್ನು ವಹಿಸಿದರು. ವಿದ್ಯಾರ್ಥಿಗಳಿಂದ ದೇವತಾಸ್ತುತಿಯು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ಆಚರಿಸಲ್ಪಟ್ಟಿತು. ಬೊಮ್ಮಗೊಂಡನಕೆರೆ ಪ್ರೈಮರಿಸ್ಕೂಲ್ ಹೆ. ಮಾ. ಎಸ್. ತಿಮ್ಮಯ್ಯನವರಿಂದಲೂ ಇದೇ ಗ್ರಾಮದ ಅಕ್ಕಸಾಲಿ ಗಿರಿಯಪ್ಪನವರಿಂದಲೂ ಮಂಜುಲ ಗಾನಾಲಾಪವು ಮಾಡಲ್ಪಟ್ಟಿತು. ಈ ಸ್ಕೂಲ್ ಪ್ರವೇಶೋತ್ಸವಕ್ಕೆ ಪರಶುರಾಮಪುರದ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಮ|| ರಾ|| ರಾಮಸ್ವಾಮಯ್ಯನವರು ತಾ|| ಮೋಜಿನದಾರ್ ಕೃಷ್ಣಮೂರ್ತಿರಾಯರು ಪರಶುರಾಮಪುರದ ಇ. ಕಂ. ಮಿಡಲ್ ಸ್ಕೂಲ್ ಹೆ. ಮಾ. ಜಿ. ಕರಿಯನಗೌಡರು ಇವರ ಅ. ಮಾ. ಸಿ. ಹನುಮಂತರಾಯರು, ಎಸ್. ಹನುಮಂತರಾಯರು, ಜಿ. ಲಿಂಗಣ್ಣಯ್ಯನವರು, ಮಹದೇವಪುರದ ಹೆ. ಮಾ. ಚಿಕ್ಕವೀರಪ್ಪನವರು ಇವರ ಅ. ಮಾಸ್ಟರು ಸಿದ್ದೇಶ್ವರನ ದುರ್ಗದ ಸ್ಕೂಲ್ ಮಾಸ್ಟರ್ ಜಿ. ವೀರಭದ್ರಯ್ಯನವರು ಚನ್ನಮ್ಮನಾಗರೆಹಳ್ಳಿ ಹೆ. ಮಾ. ಛಾಯಾಪತಿಶಾಸ್ತ್ರಿಗಳು. ಜಾಜೂರ್ ಹೆ. ಮಾ. ಜೆ. ಕೃಷ್ಣಪ್ಪನವರು ಇವರ ಅ. ಮಾ. ಹನುಮಂತಪ್ಪ, ಸಿದ್ದಪ್ಪ, ಸಿದ್ದಯ್ಯನವರು, ಪಗಡಲಬಂಡೆ ಸ್ಕೂಲ್ ಮಾ. ಎಂ. ಶ್ಯಾಮರಾಯರು, ವೃಂದಾವನಹಳ್ಳಿ ಸ್ಕೂಲ್‌ಮಾಸ್ಟರ್ ಜಿ. ಬಸಪ್ಪನವರು, ಜೆ. ವೀರಯ್ಯ, ಜೆ. ಕಂಪಲ್ಲಯ್ಯ ವಗೈರೆ ಸ್ಕೂಲ್‌ಮಾಸ್ಟರ್‌ಗಳೂ, ಆಜುಬಾಜು ಗ್ರಾಮಗಳ ದೊಡ್ಡಮನುಷ್ಯರಾದ ಶಾ|| ಸಂಜೀವಪ್ಪ ಹನುಮಂತಪ್ಪನವರು, ಜ್ವಾಲನೃಸಿಂಹಶಾಸ್ತ್ರಿಗಳವರು, ಶರಭಣ್ಣನವರು, ಸಾಹುಕಾರ್ ಪಂಚಾಕ್ಷರಪ್ಪನವರು, ಗೊಂ|| ಎಂ. ಪ್ರಭಣ್ಣ ನರಸಪ್ಪನವರು ವಗೈರೆ 250 ಜನಗಳ ಮೇಲ್ಪಟ್ಟು ಸಭೆಯು ಸೇರಿತ್ತು.

ಸ್ಕೂಲಿನ ಪ್ರೋಗ್ರೆಸ್ ರಿಪೋರ್ಟನ್ನು ಈ ಗ್ರಾಮದ ಸ್ಕೂಲ್‌ಮಾಸ್ಟರ್ ಬಿ. ಹನುಮಂತಯ್ಯನವರು ಓದಿಹೇಳಿದರು. ಛಾಯಾಪತಿಶಾಸ್ತ್ರಿಗಳು ವಿದ್ಯಾಭ್ಯಾಸದ ವಿಷಯದಲ್ಲಿಯೂ ಸಿ. ಹನುಮಂತರಾಯರು ಮಾತೃಭಕ್ತಿ ವಿಷಯದಲ್ಲಿಯೂ, ಮಠದ ವೀರಭದ್ರಯ್ಯನವರು ಧರ್ಮದ ವಿಷಯದಲ್ಲಿಯೂ, ಶಾ|| ಐಯ್ಯಪ್ಪನವರು ಗ್ರಾಮಾಭಿವೃದ್ಧಿ ವಿಷಯದಲ್ಲಿಯೂ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಚಳ್ಳಕೆರೆ ರೇಂಜ್ ಅ. ಇ. ರವರಾದ ಮ. ರಾ. ಎ. ವೆಂಕಟರಾವ್, ಬಿ.ಎ., ಬಿ.ಟಿ. ಯವರು ಗ್ರಾಮದ ಉತ್ಸಾಹ ಇಲಾಖೆಯ ಪ್ರೋತ್ಸಾಹ ವಗೈರೆ ವ್ಯವಹಾರದ ವಿಷಯದಲ್ಲಿ ಗ್ರಾಮಸ್ಥರಿಗೂ, ಸ್ಕೂಲ್‌ಮಾಸ್ಟರುಗಳಿಗೂ ಬುದ್ಧಿವಾದವನ್ನು ಹೇಳಿದರು. ಅನಂತರ ಅಧ್ಯಕ್ಷರು ಇವರ ವಿಜ್ಞಾಪನಪತ್ರಿಕೆಗಳನ್ನೆಲ್ಲಾ ಸಾವಧಾನದಿಂದ ಆಲಿಸಿ ಉತ್ತರಗಳನ್ನು ಅಪ್ಪಣೆಕೊಡಿಸಿ ಈ ಸ್ಕೂಲ್ ಪುರೋವೃದ್ಧಿ ವಿಚಾರದಲ್ಲಿ ಗ್ರಾಮಸ್ಥರಿಗೂ ಸ್ಕೂಲ್ಮಾಸ್ಟರಿಗೂ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಒಂದು ವಾರದೊಳಗಾಗಿ ಮತ್ತೊಬ್ಬ ಮಾಸ್ಟರನ್ನು ಕಳುಹಿಸಿಕೊಡುವುದಾಗಿ ಉದಾರಮನಸ್ಸಿನಿಂದ ಅಪ್ಪಣೆಕೊಡಿಸಿ ಮುದ್ರಿಕವಾದ ಸ್ಕೂಲ್ ಬಾಗಿಲನ್ನು ಸ್ವಹಸ್ತದಿಂದ ತೆರೆದರು. ಚಿತ್ರಿಸಲ್ಪಟ್ಟ ಸ್ಕೂಲಿನ ಒಳಭಾಗವನ್ನು ನೆರೆದಿದ್ದ ಮಹಾಜನರೆಲ್ಲರೂ ನೋಡಿ ನೇತ್ರಾನಂದವನ್ನು ಹೊಂದಿದರು. ಆ ದಿನ ಸಾಯಂಕಾಲ ಫೋಟೋಗ್ರಾಫರ್ ಸಿ. ತಿಪ್ಪಯ್ಯನವರು ಸಾಹೇಬರವರ ಆಜ್ಞಾವರ್ತಿಗಳಾದ ಸ್ಕೂಲ್ಮಾಸ್ಟರುಗಳ ಮತ್ತು ಮ. ರಾ. ಪಟೇಲ್ ಭೀಮಣ್ಣನವರ ಎ. ವಿ. ಪುಟ್ಟರಂಗಾಚಾರ್ಯರ ಕಲ್ಗೋಡು ಲಿಂಗಪ್ಪ, ಗೌಡರ ಹನುಮಂತಪ್ಪ, ಅಕ್ಕಸಾಲಿ ಪೂರಣ್ಣನವರ ಸಮೇತ ಸಾಹೇಬರವರ ಛಾಯಾಚಿತ್ರವನ್ನು ತೆಗೆದರು. ಬಹುಕಾಲದಿಂದ ವಿದ್ಯೆಯಿಲ್ಲದ ಗ್ರಾಮಸ್ಥರಿಗೆ ವಿದ್ಯೆಯ ಮಹಿಮೆಯನ್ನು, ಐಕಮತ್ಯವನ್ನು ಉಂಟುಮಾಡಿ ಯಾವಾಗಲೂ ಗ್ರಾಮದ ಕೆಲಸಮಾಡುತ್ತ ಈ ಸ್ಕೂಲ್‌ಕಟ್ಟಡವನ್ನು ಕಟ್ಟಿಸಿದ ಗ್ರಾಮದ ಅಜ್ಞಾಧಾರಕನಾದ ಎ. ವಿ. ಪುಟ್ಟರಂಗಾಚಾರಿಯವರಿಗೂ ಇವರಿಗೆ ಸಹಾಯಮಾಡಿದ ಕಲ್ಗೋಡು ಲಿಂಗಪ್ಪ ವಗೈರೆಯರಿಗೂ ಆಯುರಾರೋಗ್ಯ ಐಶ್ವರ್ಯವನ್ನು ಕೊಡಲೆಂದು ಮತ್ತೊಮ್ಮೆ ಸಾ. ರವರು ಅಪ್ಪಣೆಮಾಡಿ ಬಡಕ್ಕೈತರ ಉತ್ಸಾಹಕ್ಕೆ ಪ್ರೋತ್ಸಾಹವನ್ನು ಕೊಟ್ಟ ಬಳಿಕ ಗಂಧತಾಂಬೂಲ ವಿನಿಯೋಗವಾಗಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಬರಖಾಸ್ತುಮಾಡಲ್ಪಟ್ಟಿತು.

ಮಠದ ವೀರಭದ್ರಯ್ಯನವರ ಮಗ ಗಂಗಾಧರಯ್ಯ.

ಪಂಚಾಚಾರ್ಯ ಬುಕ್ ಡಿಪೋ.

ಪ್ರಿಯ ಬಾಂಧವರೇ! ಪ್ರತಿಯೊಬ್ಬ ಮನುಷ್ಯನೂ ತಾನು ಯಾರು? ತನ್ನ ಧರ್ಮವಾವುದು? ಎಂಬುವದನ್ನು ವಿಚಾರಮಾಡಿ ತನ್ನ ಧರ್ಮದ ಏಳಿಗೆಯ ಸಲುವಾಗಿ ಸ್ವಲ್ಪಾದರೂ ಪ್ರಯತ್ನಿಸುವದು ಮನುಷ್ಯನ ಮುಖ್ಯಕರ್ತವ್ಯವು. ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ವೀರಶೈವಧರ್ಮದ ಸೇವೆಯನ್ನು ಅಲ್ಪಮಟ್ಟಿಗಾದರೂ ಮಾಡಬೇಕೆಂದು ಶ್ರೀ ಜಗದಾಚಾರ್ಯರ ಹೆಸರಿಂದ ಇದೇ ಶುಕ್ಲನಾಮ ಸುವತ್ಸರ ಕಾರ್ತಿಕ ಶುದ್ಧ ಪ್ರತಿಪತ್ ತಾ|| 2-11-29 ನೇ ದಿವಸ ಒಂದು ಬುಕ್‌ಡಿಪೋ ಸ್ಥಾಪಿಸಲ್ಪಟ್ಟಿತು. ವೀರಶೈವ ಮತಗ್ರಂಥಗಳನ್ನು ತರಿಸಿ ಪ್ರಚಾರಗೊಳಿಸುವದಲ್ಲದೆ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಪಟಗಳನ್ನೂ ಲಾಕೆಟ್ಸ್‌ಗಳನ್ನೂ ಕನ್ನಡ ಶಾಲೋಪಯೋಗಿಗ್ರಂಥಗಳನ್ನು ತರಿಸಿ ಮಾರುವದೂ ಇತ್ಯಾದಿ ಇದರ ಮುಖ್ಯೋದ್ದೇಶವಾಗಿದೆ. ಇದು ಧಾರವಾಡ ಡಿ|| ಕಲಘಟಗಿ ತಾ|| ಹಿರೇಹೊನ್ನಿಹಳ್ಳಿ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಇದಕ್ಕೆ ಶ್ರೀ ಪಟ್ಟಾಧಿಕಾರಿಗಳೂ, ಮಾಸ್ತರರೂ ಮುಂತಾದ ಸನುಸ್ತರೂ ಉದಾರಾಶ್ರಯವನ್ನು ಕೊಟ್ಟು ಈ ಬುಕ್‌ಡಿಪೋ ಊರ್ಜಿತಾವಸ್ಥೆಗೆ ಬರುವಂತೆ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಕರುಣಿಸಲಿ.

ತಮ್ಮ ವಿಧೇಯ,
ಉಳವಪ್ಪ, ಬಸವಪ್ಪ, ಎಲಿವಾಳ,
ಹಿರೇಹೊನ್ನಿಹಳ್ಳಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಕೃತ್ತಿಕೋತ್ಸವ ಶಿವಕೀರ್ತನ.

ಮಹಾಶಯರೇ:—ಮೈಸೂರು ಡಿ|| ಯಡತೊರೆ ತಾ|| ನೇಲೂರು ಗ್ರಾಮದಲ್ಲಿರುವ ಶ್ರೀ ಶಂಭುಲಿಂಗೇಶ್ವರನಿಗೆ ತಾ|| 18-11-19 ನೇ ಸೋಮವಾರ ಬೆಳಗ್ಗೆ ಶ್ರೀ ವೇ|| ಮಠದ ಬಸವಾರಾಧ್ಯಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮಹಾಭಿಷೇಕ, ಶಿವಸಹಸ್ರನಾಮ, ಬಿಲ್ವಾರಾಧನೆಗಳಿಂದ ಈ ಊರಿನ ಭಕ್ತಾದಿಗಳು ಪೂಜೆಯನ್ನು ನಡೆಯಿಸಿ ಭಕ್ತಮಾಹೇಶ್ವರರನ್ನು ಭೋಜನಾದಿಗಳಿಂದ ತೃಪ್ತಿಪಡಿಸಿದನಂತರ ಸಾಯಂಕಾಲ ಕೃತ್ತಿಕೋತ್ಸವವು ನಡೆದು ನೆರೆದಿದ್ದ ಮಹಾಜನಕ್ಕೆ ಗಂಧಪುಷ್ಪಾದಿಗಳು ಹಂಚಲ್ಪಟ್ಟವು.

ಅದೇ ರಾತ್ರಿ 9 ಘಂಟೆಯಿಂದ 12 ಘಂಟೆಯವರೆಗೆ ನಂಜನಗೂಡು ತಾ|| ಹುಲ್ಲಹಳ್ಳಿ ಮಠದ ಶ್ರೀ ವೇ|| ರಾಮಾರಾಧ್ಯಸ್ವಾಮಿಗಳವರಿಂದ ಶಶಿರೇಖಾಪರಿಣಯವೆಂಬ ಕಥೆಯನ್ನು ಮಾಡಿಸಿ ದೇವರ ಉತ್ಸವವನ್ನು ವಿಶೇಷವಾದ ಅಟ್ಟಹಾಸದಿಂದ ನಡೆಯಿಸಿದರು. ತಾ|| 19-11-29 ನೇ ರಾತ್ರಿ 9 ಘಂಟೆಯಿಂದ ಸಾನಂದಗಣಶನ ಕಥೆಯನ್ನು ತಾ|| 21-11-29 ನೇ ಗುರುವಾರ ಅನಸೂಯಾ ಕಥೆಯನ್ನೂ ಸಹ ಮಾಡಿಸಿದರು. ಇವರ ಕೀರ್ತನಗಳೆಲ್ಲವೂ ಸುಖಭೋಧೆಯಾಗುತ್ತಿದ್ದುದರಿಂದ ಪ್ರೋತೃಗಳ ಮನಸ್ಸನ್ನು ಆನಂದಗೊಳಿಸುತ್ತಿದ್ದವು. ಸ್ವಗ್ರಾಮ ಪರಗ್ರಾಮಗಳಿಂದ ಪ್ರತಿದಿವಸವೂ ನೂರಾರು ಜನ ಕೂಡುತ್ತಿದ್ದು ಕರತಾಡನಗಳಿಂದ ತಮ್ಮ ಸಂತೋಷವನ್ನು ಹೊರಸೂಸುತ್ತಿದ್ದರು. ಕೊನೆಯಲ್ಲಿ ಪಂಡಿತರಿಗೆ ಯೋಗ್ಯಮರ್ಯಾದೆಯು ಗ್ರಾ. ಪಂ. ಛೇರ್ಮನ್ ಬಸವಾರಾಧ್ಯರವರಿಂದ ಮಾಡಲ್ಪಟ್ಟು ನಮ್ಮನ್ನಾಳುವ ಶ್ರೀಮನ್ ಮಹಾರಾಜರವರಿಗೂ ಅವರ ಆಶೇಷ ಕುಟುಂಬಕ್ಕೂ ದೀರ್ಘಾಯುರಾರೋಗ್ಯಾಭಿವೃದ್ಧಿಯಾಗಲೆಂದು ಪ್ರಾರ್ಥಿಸಿ ಸಭೆಯು ಬರಖಾಸ್ತಾಯಿತು.

ಈಗ್ಗೆ ಸುಮಾರು 3 ವರ್ಷಗಳಿಂದಲೂ ಇವರು ಹರಿಕಥೆಗಳನ್ನೂ ಶಿವಕಥೆಗಳನ್ನೂ ಮಾಡಲುಪಕ್ರಮಿಸಿ ಸರ್ವರಿಗೂ ಧರ್ಮಸೂಕ್ಷ್ಮಗಳನ್ನರುಹುತ್ತ ಜನಗಳನ್ನು ಸುಧಾರಿಸುತ್ತಿರುವುದಲ್ಲದೆ ಆರಾಧ್ಯಮಂಡಲಿಗೆ ಕೀರ್ತಿಯನ್ನುಂಟುಮಾಡಿರುತ್ತಾರೆ. ಇವರು ವಯಸ್ಸಿನಲ್ಲಿ ಚಿಕ್ಕವರಾಗಿದ್ದಾಗ್ಯೂ ಗುಣದಲ್ಲೂ, ನಡತೆಯಲ್ಲೂ, ವಿದ್ಯೆಯಲ್ಲೂ ಗಣ್ಯರಾಗಿರುತ್ತಾರೆ. ಇವರು ಮಾಡುವ ಸಮಾಜಸೇವೆಯು ನಿರ್ವಿಘ್ನವಾಗಿ ನಡೆಯುವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲಿ,

ಬಸವಾರಾಧ್ಯ ಗ್ರಾ. ಪ. ಛೇರ್ಮನ್.

ಅಪೂರ್ವಗ್ರಂಥ! ಅಪೂರ್ವಗ್ರಂಥ !!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಸಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣೆ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ), **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [18]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗ್) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೆವಿನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿಗಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನವಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಶಾಲಿಮಕಂದ, ಮಧುಕಂದ, ಜವಾಕಂಧ, ಶಾಲೀಮಲೀಕಂದ, ಅಶ್ವಕಂದ ಕ್ರೌಷ್ಟಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಪೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಶಮಿಪತ್ರಿ, ವಿಕಾಪತ್ರಿ, ಗುದನಮುಸ್ತ, ರಕ್ತಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕಿರ್ಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅದವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶರೋಚನ, ವರಧಾರಾ, ಕೇಸರಿ ಮುಸಲ್ಕಿ, ತಲ್ಲು ಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1900 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯು ಒಂದು ವಾಕವನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಕಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [22]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬುಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೨ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೫೦ ರೂಪಾಯಿಗಳ ದರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[35] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೬ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದು ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
[15] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿತ್ತ, ಒಂಟಿ ತಲೆನೋವು,

(Registered Trade Mark)

ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುವರಿಸುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[24] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ ನೇ ಡಿಶಂಬರ್ ೧೯೨೯ [ಸಂಚಿಕೆ ೩೨.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೦ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಜಗದಾಚಾರ್ಯರ ಮನೋಹರವಾದ ಬ್ಲಾಕಿನೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಎಂ. ಅನ್ನಾಜಪ್ಪನವರು.

ರಾಜಧಾನಿಯ ಮೈಸೂರು ಮೆಡಿಕಲ್‌ಹಾಲಿನಲ್ಲಿ ಡಾಕ್ಟರಾಗಿರುವ ಮ|| ಎಂ. ಅನ್ನಾಜಪ್ಪನವರು ದಿನೇ ದಿನೇ ಹೆಚ್ಚು ಹೆಚ್ಚು ಜನಾದರಣೆಗೆ ಪಾತ್ರರಾಗುತ್ತಿರುವರು. ಶ್ರೈ|| ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ನೊಮ್ಮಗಳು ವಿಶೇಷವಾದ ಕಾಯಿಲೆಯಿಂದ ನರಳುತ್ತಿದ್ದಾಗ ಇವರು ವಿಶೇಷ ಶ್ರಮವಹಿಸಿ ಕಾಯಿಲೆಯನ್ನು ಗುಣಪಡಿಸಿದರು. ಆದಕಾರಣ ಮ|| ಕಬ್ಬಳ್ಳಿ ಸಾಹುಕಾರ್ ಸುಬ್ಬಣ್ಣನವರು ಡಾಕ್ಟರವರನ್ನು ತಮ್ಮೂರಿಗೆ ಬರಮಾಡಿಕೊಂಡು ದಿವ್ಯವಾದ ಔತಣದಿಂದ ಅವರನ್ನು ಸತ್ಕರಿಸಿದುದಲ್ಲದೆ ಭಂಗಾರದ ಕರಡಿಗೆಯೊಂದನ್ನು ಸನ್ಮಾನಮಾಡಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ವೈದ್ಯವೃತ್ತಿಗೆ ಅತ್ಯವಶ್ಯಕಗಳಾಗಿ ಇವರಲ್ಲಿ ನೆಲಸಿರುವ ವೈದ್ಯವಿದ್ಯಾ ಅನುಭವ, ಸರಳಸ್ವಭಾವ, ನಿರಹಂಕಾರ, ತಾಳ್ಮೆ ಮೊದಲಾದ ಸದ್ಗುಣಗಳೇ ಜನಾದರಣೆಗೆ ಕಾರಣಗಳಾಗಿವೆ. ಈ ತರುಣವೈದ್ಯರು ಇನ್ನೂ ಅತಿಶಯವಾದ ಕೀರ್ತಿಗೌರವಗಳನ್ನು ಪಡೆದು ದೇಶಕ್ಕೂ ಹಾಗೂ ಸಮಾಜಕ್ಕೂ ಭೂಷಣಪ್ರಾಯರೆನಿಸಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಎಂ. ವೀರಪ್ಪ ಜಿ.ಡಿ.ಎ., ಆರ್ಟಿಸ್ಟ್.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ವಿಜ್ಞಾಪನೆ.

ಯಾವತ್ತು ಸಮಾಜಬಾಂಧವರಿಗೆ ಪ್ರಕಟಪಡಿಸುವದೇನಂದರೆ— ಬಳ್ಳಾರಿ ಡಿ|| ಹೊಸಪೇಟೆಯ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ಅಭ್ಯಾಸಮಾಡುತ್ತಲಿದ್ದ ಮುಹಂತನಮಠದ ಗುರಯ್ಯನವರ ಪುತ್ರ ಶಿದ್ಧಯ್ಯನೆಂಬ 15-16 ವರ್ಷ ವಯಸ್ಸುಳ್ಳ ಯಂಡೆಗೆಂಪು ಬಣ್ಣವುಳ್ಳ ವಿದ್ಯಾರ್ಥಿಯು ಈಗ ಸುಮಾರು 3 ತಿಂಗಳ ಕೆಳಗೆ ತನ್ನ ಪಾಲಕರಿಗೆ ತಿಳುಹಿಸದೆ ಹೊರಟುಹೋಗಿದ್ದಾನೆ. ಯಾವ ಗ್ರಾಮಗಳ ಪಾಠಶಾಲೆಗಳಿಗಾಗಲಿ ಅಥವಾ ಗೃಹಗಳಿಗಾಗಲಿ ಬಂದಿದ್ದರೆ ದಯಮಾಡಿ ಈ ಕೆಳಗಿನ ಅಡ್ರೆಸ್ಸಿಗೆ ಅವಶ್ಯ ತಿಳುಹಿಸಬೇಕಾಗಿ ಬೇಡುವೆನು. ಈ ವಿಷಯವನ್ನು ತಿಳುಹಿಸಿದ ಮಹನೀಯರಿಗೆ ಸಕಲೈಶ್ವರ್ಯಭಾಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಆ ದಯಾಘನನಾದ ಪರಮಾತ್ಮನನ್ನು ಕುರಿತು ಅನನ್ಯಭಾವದಿಂದ ಬೇಡುವೆವು.

ತಮ್ಮ ಶ್ರೇಯಾಭಿಲಾಷಿಗಳು,
ಸಜ್ಜೀದ ಲಿಂಗಪ್ಪ, ಕೋರಿಶೆಟ್ಟಿ ಸಂಗಪ್ಪ ಇವರು.
ವ್ಯವಸ್ಥಾಪಕರು
ವೀರಶೈವ ಸಂಸ್ಕೃತ ಪಾಠಶಾಲಾ, ಹೊಸಪೇಟೆ.

ಸ್ವೀಕಾರ.

ಶಿವಮೊಗ್ಗಾ ತಾಲೂಕು ಗಾಜನೂರಲ್ಲಿನ ಮ|| ರಾ|| ಉಂಬಳೆಬೈಲ್ ನಂಜಪ್ಪಶೆಟ್ಟರ ಮಕ್ಕಳು ಮ|| ರಾ|| ಬಸಪ್ಪಶೆಟ್ಟರು ತಮ್ಮ ಧರ್ಮಪತ್ನೀ ಸಮೇತರಾಗಿ ಕುಟುಂಬದೀಕ್ಷೆಯನ್ನು ಹೊಂದಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಹಾಗೂ ಸದರೀ ಗ್ರಾಮದ ಮ|| ರಾ|| ರುದ್ರಪ್ಪಶೆಟ್ಟರವರು ಶಿವಮೊಗ್ಗಾ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ನಡೆಯುತ್ತಿದ್ದ ಕೇಸಿನಲ್ಲಿ ಜಯಹೊಂದಿದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಒಟ್ಟು 10 ರೂಪಾಯಿಗಳು ಮಳಲಿಮಠದ ಏಜಂಟ ವೇ|| ನಂಜುಂಡಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ ಗ್ರಾಮದ ಮ|| ರಾ|| ದೇಶಪಾಂಡೆ ಭದ್ರಪ್ಪನವರಿಗೆ ಲಕ್ಷ್ಮೇಶ್ವರದಲ್ಲಿರುವ ಶ್ರೀಮಂತ ದೇಸಾಯಿ ಬಾಪೂಸಾಹೇಬರವರ ಪುತ್ರಿ ಕುಂ|| ಸೌ|| ರಾಚವ್ವನನ್ನು ತಂದು ನೆರವೇರಿಸಿದ ವಿವಾಹ ಸಮಯದಲ್ಲಿ ಸಿಗ್ಗಾವಿ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರು ಹಾಗೂ ಲಕ್ಷ್ಮೇಶ್ವರದ ಹಿರೇಮಠದ ವೇ|| ಕಾಶಯ್ಯನವರು ಇವರ ಪ್ರೋತ್ಸಾಹದ ಮೇರೆಗೆ ವರನಕಡೆಯಿಂದ ತೆಗೆಯಿಸಿದ 4 ರೂ. ಗಳು ವಧುವಿನ ಕಡೆಯಿಂದ ತೆಗೆಯಿಸಿದ 2 ರೂ. ಗಳು ಒಟ್ಟು 6 ರೂಪಾಯಿಗಳು ಕುಂದಗೋಳ ಹಿರೇಮಠದ ಶ್ರೀ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿಯಲ್ಲಿ ಓರ್ವ ಭಕ್ತನಿಗೆ ಪುತ್ರೋತ್ಸವವಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ಹಾಗೂ ಹುಬ್ಬಳ್ಳಿಯಲ್ಲಿರುವ ವಳಸಂಗದ ನಾಗಪ್ಪನವರು ಶಿವಾಧೀನರಾದಾಗ್ಗೆ ತೆಗೆಯಿಸಿದ 2 ರೂ. ಗಳು ಒಟ್ಟು 4 ರೂಪಾಯಿಗಳು ಮ|| ರಾ|| ತೀರ್ಥಪ್ಪನವರು ಬಳ್ಳೊಳ್ಳಿ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಅರಸೀಕೆರೆ ತಾಲೂಕು ದೊಡ್ಡಬಾಣಾವಾರದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಕಾರ್ತೀಕಮಾಸದ ಕೃತ್ತಿಕೋತ್ಸವ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಸದರೀ ಭಜನಾಸಂಘದ ಪ್ರೆಸಿಡೆಂಟರಾದ ಮ|| ರಾ|| ಕೆ. ಎಂ. ಬಸವಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಕಲಘಟಗಿ ಪೋಸ್ಟ್ ಹಿರೇಹೊನ್ನಿಹಳ್ಳಿಯ ಮ|| ರಾ|| ಉಳವಪ್ಪ ಬಸವಪ್ಪ ಎಲಿವಾಳ ಇವರು "ಪಂಚಾಚಾರ್ಯ ಬುಕ್‌ಡಿಪ್ಪೋ" ವನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಬೆಳಗಾಂವ ಜಿಲ್ಲಾ ಬನ್ನಟ್ಟಿವಾಸಿಗಳಾದ ಮ|| ರಾ|| ಮಹಾಂತಪ್ಪಾ ಪರಪ್ಪಾ ಸಗರಿ ಇವರ ಪತ್ನಿಗೆ ಪ್ರಾಪ್ತವಾಗಿದ್ದ ಮೈಲಿಯ ರೋಗವು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶಿವರುದ್ರಯ್ಯಾ ವಿರೂಪಾಕ್ಷಯ್ಯಾ ಭಂಗಿ ಇವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿಯ ಮೇಗಳಪೇಟೆಯ ಭಜನಾಸಂಘದವರು ಸದರೀ ಭಜನಾಸಂಘದ ವಾರ್ಷಿಕೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯನ್ನು ಬೊಮ್ಮಗಟ್ಟೆ ಹಿರೇಮಠದ ವೇ|| ಹೆಚ್. ಯಂ. ಸಣ್ಣಯ್ಯನ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಳವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಗುರುತರ್ಪಣ ಮಹೋತ್ಸವ.

ವಾಚಕಮಹಾಶಯರೇ, ಅಪಾರವಾದ ಸಂಸಾರ ಸಾಗರದಲ್ಲಿ ಬಿದ್ದು ತೇಲುತ್ತ ಮುಳುಗುತ್ತ ಅನೇಕ ಯಾತನೆಗಳನ್ನು ಹೊಂದುತ್ತಲಿರುವ ಪ್ರಾಣಿಗಳಿಗೆ, ದಯಾಘನನೂ, ದೀನಬಂಧುವೂ, ಭಕ್ತವತ್ಸಲನೂ ಆದ ಈಶ್ವರನು ಅನೇಕ ಉಪಾಯಗಳನ್ನು ಕಲ್ಪಿಸಿರುವನು. ಅಂತಹ ಸುಲಭೋಪಾಯಗಳಿಂದಲೇ ಸರ್ವ ಪ್ರಾಣಿಗಳು ದುಃಖದ ವಿಯೋಗವನ್ನು ಇಲ್ಲವೆ ಸುಖದ ಸುಯೋಗವನ್ನು ಹೊಂದಬೇಕಾಗುವದು. ನಮ್ಮಗಳಿಗೆ ಸುಖವನ್ನು ಕೊಟ್ಟು ದುಃಖವನ್ನು ದೂರೀಕರಿಸಿ ಸಂಸಾರ ಸಮುದ್ರದ ದಡವನ್ನು ಅನಾಯಾಸವಾಗಿ ಹೊಂದಿಸುವದಕ್ಕೋಸ್ಕರ ಅನೇಕಾನೇಕ ಪಂಚಿಕೆಗಳು ಹಗಲಿರುಳು ನಮ್ಮನ್ನೇ ನೋಡುತ್ತಿರುವವು. ಆದರೆ ನಾವು ಮಾತ್ರ ಅವುಗಳ ಕಡೆಗೆ ನೋಡುವುದಿಲ್ಲ. ಈಶ್ವರನ ನಿಃಶ್ವಾಸರೂಪಗಳಾದ ವೇದಾಗಮಗಳು ನಮ್ಮ ಸುಖಸಾಧನೋಪಾಯಗಳ ಭಾಂಡಾರ ಇಲ್ಲವೆ ತವರುಮನೆಯಂತಿರುವವು. ಆದರೆ ಅವುಗಳೆಲ್ಲವೂ ಕುರುಡನ ಕೈಗೆ ಸಮಿಾಚೀನರತ್ನವು ಸಹ ಕಲ್ಲಿನಂತೆ, ನಮ್ಮ ಕಣ್ಣಿಗೆ ನಿರರ್ಥಕಗಳಾಗಿಯೇ ಕಾಣಿಸುವವು. ಭ್ರಾಮಕದೃಷ್ಟಿಯನ್ನು ದೂರಮಾಡಿ ಜ್ಞಾನದೃಷ್ಟಿಯಿಂದ ನೋಡಿದರೆ ಆ ವೇದಾಗಮ ವಾಕ್ಯಗಳ ಆಜ್ಞೆಯೇ ನಮ್ಮನ್ನು ಸುಖಿಗಳನ್ನಾಗಿ ಮಾಡುವವು. ವೇದಾಜ್ಞಾಪರಿಪಾಲನೆಯಿಂದ ನಮಗೆ ಸುಖವು ದೊರೆಯುವದೆಂದು ನಿಶ್ಚಯವಾಗಿ ಮನವರಿಕೆಯಾಗಿದ್ದರೂ ನೆರಳಿರುವ ಗಿಡವನ್ನು ಬಿಟ್ಟು ಎಲೆಯಿಲ್ಲದ ಬರಲು ಗಿಡದ ಬುಡದಲ್ಲಿ ಕುಳಿತು ತಾನು ಗಿಡದ ಬುಡದಲ್ಲಿ ಕೂತಿದ್ದರೂ ಬಿಸಿಲಿನ ತಾಪವು ಕಡಿಮೆಯಾಗಲೊಲ್ಲದೆನ್ನುವ ಮೂರ್ಖನಂತೆ ಅನಸಾನದಲ್ಲಿ ಅಮಿತದುಃಖವನ್ನುಂಟುಮಾಡುವ ಕೆಲವು ವಿಷಯಗಳಲ್ಲಿ ತೊಡಕಿ ತೊಳಲಿ ಬಳಲಿ ಬೆಂಡಾಗುತ್ತ ಸುಖವನ್ನು ಇಚ್ಛಿಸುವ ಮನುಷ್ಯನ ಸ್ಥಿತಿಯು ಕನ್ನಡಿಯ ಬೆನ್ನನ್ನು ನೋಡಿ ಮುಖವೇ ಕಾಣಲೊಲ್ಲದೆಂಬಂತೆಯೇ ಸರಿ. ತಾವು ಮಾಡುತ್ತಿರುವ ಕಾರ್ಯವು ಯಾತನಾದಾಯಕವೆಂದು ತಿಳಿದಿದ್ದರೂ ಅದರಿಂದ ಮುಕ್ತರಾಗಲು ಯತ್ನಿಸುವದಿಲ್ಲ. ಅಂದಮೇಲೆ ಇಂತಹ ಜ್ಞಾನಿಯಾದ ಮನುಷ್ಯಪ್ರಾಣಿಗೆ ಇದೊಂದು ಅಸಾಧಾರಣವಾದ ಅಪವಾದವಲ್ಲವೆ? "ಶ್ರುತಿಸ್ಮೃತ್ಯುಕ್ತಮಾಚಾರಂ ಸತ್ಯಜೇತ್ಸಾಧುಸೇವಿತಂ" ಎಂಬಂತೆ ಶ್ರುತಿಸ್ಮೃತಿಗಳಲ್ಲಿ ಉಕ್ತವಾದ ಆಚಾರಗಳನ್ನು ಸಾಧುಸತ್ಪುರುಷರು ನಡೆಯಿಸುತ್ತಲೂ, ಬೋಧಿಸುತ್ತಲೂ ಇದ್ದರೋ ಇರುವರೋ ಅಂತಹ ಸದಾಚಾರವನ್ನು ಸರ್ವರೂ ಎಂದೂ ಬಿಡಬಾರದೆಂಬ ಸೂಕ್ತಿಯನ್ನು ಮನಸ್ಸಿಗೆ ತಂದು ಅದರಂತೆ ನಡೆಯುವದು ಸಕಲ ಮಾನವರ ಕೆಲಸವಾಗಿದೆ. ಇದಕ್ಕೆ ಅಡ್ಡವಾಗಿ ನಡೆದರೆ ನಮಗೆ ದೇವರು ಶಾಸನವನ್ನು ಮಾಡುವನೆಂಬ ಭಾಗವನ್ನು ಸಕಲರೂ ಬಲ್ಲರಷ್ಟೇ? ಶಿವಾಗಮಗಳಲ್ಲಿ ಹೇಳಿದ ಮೋಕ್ಷೋಪಾಯಗಳಲ್ಲಿ "ಗುರುತರ್ಪಣ" ವೆಂಬ ವಿಷಯವೊಂದು ಶಿಖಾಮಣಿಪ್ರಾಯವಾಗಿರುವದು. ಗುರುವು ಸಕಲರುದ್ಧಾರಕನಾದ್ದರಿಂದ ಮುಮುಕ್ಷುವಿಗೆ ಗುರುಕೃಪೆಯು ಬೀಜಭೂತವಾಗಿರುವದು. ಯಾವ ಮನುಷ್ಯನು ಸದಾಚಾರಸಂಪನ್ನನಾಗಿ, ತನುಮನೋಧನಗಳಿಂದ, ಭಕ್ತಿಪೂರ್ವಕ, ಶುದ್ಧಹೃದಯದಿಂದ ಗುರುಸೇವೆಯನ್ನು ಮಾಡಿ ಗುರುವಿಗೆ ಸಂತೋಷವನ್ನೀಯುವನೋ, ಅವನೇ ಶಿವಕೃಪೆಗೆ ಪಾತ್ರನಾಗುವನಲ್ಲದೆ ಹಗುರಾದ ಬೆಂಡು, ನೀರಿನಲ್ಲಿ ಮುಳುಗದಂತೆ ಗುರುಭಕ್ತಿಹೀನನೂ ಸದಾಚಾರಬಹಿಷ್ಕೃತನೂ ನಿಸ್ಸಾರಹೃದಯನೂ ಆದ ಮನುಜನು ಶಿವಕೃಪೆಗೆ ಎಂದಿಗೂ ಪಾತ್ರನಾಗುವದಿಲ್ಲ. ಅಂದಮೇಲೆ ಎಲ್ಲರೂ ಗುರುಸೇವಾಸಕ್ತರಾಗಿರಬೇಕೆಂಬುದೇ ಮಥಿತಾರ್ಥವು. ಇದೇ ಉಚ್ಚತತ್ವವನ್ನನುಸರಿಸಿಯೇ ಜಿ|| ಧಾರವಾಡ, ಹುಬ್ಬಳ್ಳಿ ತಾಲೂಕು ಪೈಕಿ ತಿರುಮಲಕೊಪ್ಪ ಎಂಬ ಗ್ರಾಮದ ಜನರು ಪ್ರತಿನಿತ್ಯದಲ್ಲಿಯೂ ಜಗದಾಚಾರ್ಯರ ಭಜನಾಲೋಲುಪರಾಗಿದ್ದು ಭಜನಾ ನಿಮಿತ್ತ ಒಂದು ಮಹೋತ್ಸವವನ್ನು ಮಾಡಬೇಕೆಂದಾಲೋಚಿಸಿ ಆಶ್ವಯುಜ ಬಹುಳ 10, ತಾ|| 27-10-29ನೇ ಭಾನುವಾರ ದಿವಸ ಹುಬ್ಬಳ್ಳಿ ತಾ|| ಪೈಕಿ ಪಾಲೀಕೊಪ್ಪದ ಬೃಹನ್ಮಠಾಧ್ಯಕ್ಷರಾದ ಷ|| ಬ್ರ|| ಶ್ರೀ ಶಿವಯೋಗಿ ಗಂಗಾಧರ ಶಿವಾಚಾರ್ಯ ಸ್ವಾಮಿಗಳನ್ನು ಭಜನಾ ಮಹೋತ್ಸವ ಪೂರ್ವಕವಾಗಿ ಬರಮಾಡಿಕೊಂಡು, ಪ್ರಶಸ್ತವಾದ ಬಿಡಾರದಲ್ಲಿರಿಸಿ ಸಾಯಂಕಾಲಕ್ಕೆ ಸಭೆ ಸೇರಿ ಸ್ವಾಮಿಗಳು ಅಪ್ಪಣೆಕೊಡಿಸಿದ ವೀರಶೈವ ಮತಾಚಾರಗಳನ್ನು ಬಹುಭಕ್ತಿಯಿಂದ ಕೇಳಿ ಅಪ್ಪಣೆಯಮೇರೆಗೆ ನಡೆಯಿಸುತ್ತೇವೆಂದು ಅನುಮತಿಸಿದರು. ಮರುದಿವಸ ಬೆಳಗಿನ ಸಮಯದ ಬ್ರಾಹ್ಮೀಮುಹೂರ್ತದಲ್ಲಿ, ವೀರಬಸವಶರ್ಮಾ ಬೃಹನ್ಮಠ ಇವರ ವೈದಿಕತ್ವದಲ್ಲಿ ಶಿವಲಿಂಗಾಭಿಷೇಕವು ನಡೆದು ಸಹಸ್ರ ಬಿಲ್ವಾರ್ಪಣ, ಸಹಸ್ರ ನೀರಾಜನ ಮೊದಲಾದ ಕಾರ್ಯಗಳು ಜರುಗಿದವು. ಸದರೀ ಕಾರ್ಯವು ಗ್ರಾಮಕ್ಕೆ ಮುಖ್ಯವೆನಿಸಿದ ನಂದೀಶ್ವರ ದೇವಾಲಯದಲ್ಲಾದ್ದರಿಂದ ಗುಡಿಯನ್ನು ಬಹು ರಮಣೀಯವಾಗಿ ಶೃಂಗರಿಸಿದ್ದರು. ಅಭಿಷೇಕಸಮಯದಲ್ಲಿ ವೀರಶೈವಮತೀಯರು ಅಸಾಧಾರಣ ಭಕ್ತಿಯಿಂದ ಸಮಿಾಪದಲ್ಲಿರುವ ಕೆರೆಯಲ್ಲಿ ಸಚೇಲಸ್ನಾನವನ್ನು ಮಾಡಿ ಹಸ್ತಗಳಲ್ಲಿ ಆರತಿ, ಕಾಯಿ, ಕರ್ಪೂರ ಹಣ್ಣುಗಳನ್ನು ತೆಗೆದುಕೊಂಡು ದೇವಾಲಯವನ್ನೈದಿ ಗುರುಸನ್ನಿಧಿಯಲ್ಲಿ ಪೂಜಾದಿಗಳನ್ನು ತೀರಿಸಿಕೊಂಡು ಬರುವಾಗ್ಗೆ ಅವರ ಮೈಯಲ್ಲಿ ಎದ್ದು ಕಾಣುವ, ದುಷ್ಕೃತಧ್ವಂಸಕ, ಶಿವಭಕ್ತಿದಾಯಕಗಳಾದ ಭಸ್ಮತ್ರಿಪುಂಡ್ರಾದಿ ಶಿವಚಿಹ್ನಗಳನ್ನು ಅವರ ಆಗಿನ ಸಮಯದ ಮುಖದ ಸ್ವಲಕ್ಷಣವನ್ನು ನೋಡಿ, ಗಿಡವನ್ನೇರಿ ಹಣ್ಣು ತಿನ್ನುವವನನ್ನು ಕಂಡು ಗಿಡದ ಬುಡದಲ್ಲಿ ಕೂತಹೇಳವನಂತೆ ಇತರ [illegible] ಮನಸ್ಸಿನಲ್ಲಿ ಮರುಗುತ್ತ, ನಮಗೆ ಈ ಅ[illegible]ವು ಹೇಗೆ ದೊರೆಯಬೇಕು? ಎಷ್ಟು ಜನ್ಮಗಳ[illegible] ಎತ್ತಿದರೆ ಈ ಪೂಜಾಫಲಕ್ಕೆ ನಾವು ಪಾತ್ರರಾಗೇವೆಂದು ಹಿರಿಹಿರಿ ಹಿಗ್ಗಿ ದುಃಖೋಪಶಾಂತಿಯನ್ನು ಮಾಡಿಕೊಂಡು ಹೊರಗಿನಿಂದಲೇ ಫಲಾದಿಗಳನ್ನರ್ಪಿಸಿ ಆಶೀರ್ವಾದ ಪಡೆದು ಧನ್ಯತೆಯನ್ನು ಆತ್ಮಾನಂದವನ್ನು ಪ್ರಕಾಶಿಸುತ್ತಿದ್ದರು. ಅಭಿಷೇಕಸಮಯದಲ್ಲಿ ಭಜನಾಸಂಘದವರ ಆಚಾರ್ಯ ಮಹಿಮಾದರ್ಶಕ ಮಂಜುಲ ಪದ್ಯಗಳ ಭೇರಿ ಮೊದಲಾದ ವಾದ್ಯಗಳ ಧ್ವನಿಯು ಮನಸ್ಸಿಲ್ಲದ ಜನರನ್ನು ಸಹ ಪೂಜೆಗೆ ಬಲಾತ್ಕರಿಸುತ್ತದೆಯೋ ಎಂಬುವಂತೆ ಭೂಮ್ಯಂತರಿಕ್ಷವನ್ನು ವ್ಯಾಪಿಸಿತ್ತು. ಪೂಜೆಯು ಮುಗಿದು ಶಿವಪ್ರಸಾದಗ್ರಹಣಾನಂತರ ಸಕಲ ಮತೀಯರೂ ಸ್ವಾಮಿಗಳನ್ನು ಪುಷ್ಪಹಾರಾದಿಗಳಿಂದಲಂಕರಿಸಿ ಪಾಲಕಿಯಲ್ಲಿ ಮೂರ್ತಗೊಳಿಸಿ, ಆವೇಶಜನಕಗಳಾದ ದೊಳ್ಳು, ಮೊದಲಾದ ಮಹಾವಾದ್ಯಗಳಿಂದಲೂ ಇತರ ಅನೇಕ ವಾದ್ಯಗಳಿಂ[illegible] ಊರೆಲ್ಲ ದುಮುದುಮಿಸುತ್ತಿರಲು ಅದ್ಧವಾಲ[illegible] ಉತ್ಸವವು ಹೊರಟಿತು. ರಸ್ತೆಗಳನ್ನೆಲ್ಲ ನೀರಿನಿಂದ ತೊಳೆದು ಜಬ್ಬರೂ ಮೈಲಿಗೆಯಿಂದ ಉತ್ಸವದಲ್ಲಿ ಸಂಚರಿಸಕೂಡದೆಂದು ಪುರಪ್ರಮುಖರು ಪ್ರತಿಬಂಧವನ್ನಿಟ್ಟಿದ್ದರು. ಇವರ ಗುರುಭಕ್ತ್ಯುದ್ರೇಕವು ಮುಕ್ತಿಮಾರ್ಗದ ಸ್ವರ್ಸ್ವರೂಪ ಪ್ರಶಂಸನೀಯವೇ ಸರಿ. ಉತ್ಸವಕ್ಕೋಸ್ಕರ ಹೊಸಕಟ್ಟಿ, ರಾಮನಕೊಪ್ಪ, ಪಾಲೀಕೊಪ್ಪ, ಎಲಿವಾಳ ಮೊದಲಾದ ಊರಿನ ಭಜನಾಸಂಘವರು ಆಹ್ವಾನಿಸಲ್ಪಟ್ಟಿದ್ದರಲ್ಲದೆ ಇತರ ಪ್ರೇಕ್ಷಕವರ್ಗವಂತೂ ಅಗಣಿತವಾಗಿತ್ತು. ಹೀಗೆ ಬಲ್ಲೇ ವಿಜೃಂಭಣೆಯಿಂದ ಹೊರಟ ಉತ್ಸವವು ಗ್ರಾಮವನ್ನೆಲ್ಲ ಪವಿತ್ರೀಕರಿಸಿ ಸದರೀ ನಂದೀಶ್ವರಾಲಯವನ್ನು ಪ್ರವೇಶಮಾಡಿತು. ಅನಂತರ ಜಗದ್ಗುರು ಪಂಚಾಚಾರ್ಯರ ಭಾವಚಿತ್ರದ ಸನ್ನಿಧಿಯಲ್ಲಿ ರಚಿಸಿದ ಭದ್ರಪೀಠದಲ್ಲಿ ಶ್ರೀಗಳು ಉಪದೇಶಸಂಗ್ರೈಯು ಆಚಾರ್ಯಾವತರಣ, ವೀರಶೈವರ ಅಧುನಿಕಪರಿಸ್ಥಿತಿ, ಇವುಗಳ ಮೇಲೆ ಸಂ[illegible]ಭಾಷಣವನ್ನು ಮಾಡಿದರು. ಭಕ್ತರು ಕೇಳಿ ಆನಂದಸಂಪನ್ನರಾದರು. ಅಷ್ಟರೊಳಗಾಗಿ ಸೂರ್ಯನು ಅಸ್ತಂಗತನಾದನು. ಉತ್ಸವಕ್ಕೆ ಬಂದ ಸಕಲ ಭಕ್ತಮಾಹೇಶ್ವರರೂ ಮೃಷ್ಟಾನ್ನದಿಂದ ತೃಪ್ತಿಪಟ್ಟು ತಮ್ಮ ಸ್ಥಳಗಳಿಗೆ ತೆರಳಿದರು. ಮರುದಿವಸ ಪ್ರಾತಃಕಾಲಕ್ಕೆ ಶ್ರೀಗಳು ಸಕಲರನ್ನೂ ಬರಮಾಡಿಕೊಂಡು, ಸ್ವಾಭಿಮಾನ, ಸಹಾನುಭೂತಿ, ಇವುಗಳ ವಿಷಯವಾಗಿ ಸಕಲರಿಗೂ ಮನದಟ್ಟಾಗುವಂತೆ ಬೋಧಿಸಿ, ಮಧ್ಯಾಹ್ನ "ಸ್ವಕರ್ತವ್ಯ" ವನ್ನು ತಿಳಿಸಿ ಸ್ವಗ್ರಾಮಕ್ಕೆ ತೆರಳಿದರು. ವಾಚಕಮಹಾಶಯರೇ ಇಂಥ ನಿಸ್ವಾರ್ಥ ವ್ಯಕ್ತಿಗಳೆಂಬ ಮೇಘಗಳು ಉಪದೇಶೋದಕವನ್ನು ಸುರಿಸುತ್ತ ಭಕ್ತಹೃದಯಕ್ಷೇತ್ರದಲ್ಲಿಯ ಭಕ್ತಿಬೀಜವಂಕುರಿಸುವುದಾದರೆ ಮಾನವಪ್ರಪಂಚಕ್ಕೆ ಸುಭಿಕ್ಷವಾಗುವದರಲ್ಲಿ ಯಾವ ಅಭ್ಯಂತರವೂ ಇಲ್ಲವು.

ಓರ್ವ ಉತ್ಸವಭಾಗಿ, ತಿರುಮಲಕೊಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ದಸರಾಮಹೋತ್ಸವ ಮತ್ತು ಕಾರ್ತೀಕಮಾಸದ ಕೃತ್ತಿಕಾಮಹೋತ್ಸವ.

ದೊಡ್ಡಬಾಣಾವರ.

ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲೂಕು ದೊಡ್ಡಬಾಣಾವರದ ಹಿರೇಮಠದಲ್ಲಿ ಕಳೆದ ಮಾರ್ಚಿ ತಿಂಗಳಲ್ಲಿ ಶ್ರೀ ಜಗದ್ಗುರು ಶ್ರೀಶೈಲಪರ್ವತಸಂಸ್ಥಾನ ಸರ್ವಾಧಿಕಾರಿಗಳ ಅಧ್ಯಕ್ಷತೆಯಿಂದ ಶ್ರೀ ಜಗದ್ಗುರು ಭಜನಾಸಂಘವು ಸ್ಥಾಪಿಸಲ್ಪಟ್ಟಿರುವದು. ಆ ಸಂಬಂಧ ಪ್ರೊಸಿಡಿಂಗ್ಸ್ ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆಯಷ್ಟೆ.

ಹಿರೇಮಠದ ವೇ|| ವೀರಭದ್ರಸ್ವಾಮಿ ಬಿನ್ ಗುರುಪಾದದೇವರು ಭಜನಾಸಂಘದ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರುಗಳಾದ ವೇ|| ಕೊಂಡಜ್ಜಿಮಠದ ಎಂ. ಬಸವಾರಾಧ್ಯರು, ವೇ|| ಪಂ|| ಎಂ. ಕರಿಬಸವಶಾಸ್ತ್ರಿಗಳು, ಸೆಕ್ರಟರಿಗಳಾದ ಮ|| ರಾ|| ಎಂ. ಮಾದಯ್ಯಶೆಟ್ಟರು, ವೇ|| ಕೊಂಡಜ್ಜಿಮಠದ ಗಂಗಾಧರಯ್ಯನವರು, ಮೆಂಬರುಗಳಾದ ಪೇಟೆ ದ್ಯಾವಾಚಾರದಶೆಟ್ಟರು, ಯಜಮಾನರಾದ ಎ. ನಂಜುಂಡಶೆಟ್ಟರು, ಬಿ. ಪುಟ್ಟಯ್ಯಶೆಟ್ಟರು ಮತ್ತು ಗುರುಸೇವಾಧುರೀಣರಾದ ಪಟೇಲ ದೊಡ್ಡಲಿಂಗೇಗೌಡರು ಯಜಮಾನ್ ಕಾಡೀಬೀರೇಗೌಡರು, ಸಿದ್ದರಾಮೇಗೌಡರ ಮಗ ನಿಂಗೇಗೌಡರು, ಪ್ರೈವೆಟ್ ಸ್ಕೂಲ್‌ಮಾಸ್ಟರು ಮಿ|| ಜಿ. ಎಸ್. ಚಿನ್ನರಾಜರವರು, ಮಿ|| ಪ್ರೈವೆಟ್ ಡಾಕ್ಟರ್ ಪಿ. ಕೆ. ರಾಮರಾಯರವರು ಮುಂತಾದವರ ಕಾರ್ಯನಿರ್ವಾಹಶಕ್ತಿಯಿಂದ ಈ ಭಜನಾಸಂಘವು ಬಹಳವಟ್ಟಿಗೆ ಅಭಿವೃದ್ಧಿಸ್ಥಿತಿಗೆ ಬರುತ್ತಲಿದೆ. ಪ್ರತಿಸೋಮವಾರವೂ ಮತ್ತು ಕಾರ್ತೀಕಮಾಸ ಪ್ರಾರಂಭವಾದಲಾಗಾಯ್ತು ಪ್ರತಿನಿತ್ಯವೂ ಶ್ರೀ ಪಂ|| ಕಾಶೀನಾಥಶಾಸ್ತ್ರಿಗಳಿಂದ ಬಂದಿರುವ ರಜತಮಯವಾದ ಜಗದ್ಗುರು ವಿಗ್ರಹಮೂರ್ತಿಯನ್ನು ಹಿರೇಮಠದಲ್ಲಿ ಅಲಂಕರಿಸಿ ಅತ್ಯಂತ ಸಂಭ್ರಮದಿಂದ ಭಜನೆಯು ನಡೆಯುತ್ತಿತ್ತು. ಈ ಶುಕ್ಲನಾಮ ಸಂವತ್ಸರದ ಕಾರ್ತಿಕಮಾಸದ ಕೃತ್ತಿಕಾಮಹೋತ್ಸವದ ಸೇವಾಪನೂರಂಭದ ಆಮಂತ್ರಣ ಆಹ್ವಾನಪತ್ರಿಕೆಯಲ್ಲಿ ಕಂಡಂತೆ ತಾ|| 4-12-29 ನೇ ಇಸ್ವಿ ಬುಧವಾರದಿವಸ ಪ್ರಾತಃಕಾಲ ವಿಧ್ಯುಕ್ತವಾಗಿ ವೇ|| ಪಂ|| ಕರಿಬಸವಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಶ್ರೀ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನಾದಿಗಳು ವಿಜೃಂಭಣೆಯಿಂದ ನಡೆಯಿಸಲ್ಪಟ್ಟವು. ಅಜುಬಾಜುಗ್ರಾಮಗಳಿಂದ ಸಹಸ್ರಾರು ಕೋಮುವಾರು ಜನರು ಸೇರಿದ್ದರು. ಮ|| ರಾ|| ವಿರೂಪಾಕ್ಷಸ್ವಾಮಿ ಸಜ್ಜನಶೆಟ್ಟಿ ಇವರು ಸ್ವಾಗತಕಮಿಾಟಿಯ ಛೇರ್‌ಮನ್ನರಾಗಿದ್ದುದು. ಅತ್ಯಂತ ಭೂಷಣಾಸ್ಪದವಾಗಿತ್ತು. ಸಾಯಂಕಾಲ ಏಳೂವರೆ ಘಂಟೆಗೆ ಮಂಗಳಾರತಿಯು ನಡೆದು ಸಭೆಯು ಪ್ರಾರಂಭವಾಯಿತು. ಮ|| ರಾ|| ವೈಸ್‌ಪ್ರೆಸಿಡೆಂಟರಾದ ರಹಿಮಾನುಷರೀಫ ಸಾಹೇಬರವರು ಮ|| ರಾ|| ಪೋಲೀಸ್ ಸಬ್‌ಇನಸ್ಪೆಕ್ಟರ ಸಾಹೇಬರವರು ಮತ್ತು ಮ|| ರಾ|| ಡಾಕ್ಟರ್ ರಾಜರತ್ನಂರವರು ಮ|| ರಾ|| ಸಬ್ಓವರ್‌ಸಿಯರವರು, ಕಂಟ್ರಾಕ್ಟರ ಮ|| ರಾ|| ಆಳ್ವಾರಯ್ಯಂಗಾರ್‌ರವರು, ಮುನಿಸಿಪಾಲಟಿ ಕೌನ್ಸಿಲ್ಲಮೆಂಬರುಗಳವರು, ಸ್ಕೂಲ್ ಮಾಸ್ಟರುಗಳು, ಮ|| ರಾ|| ಯಜಮಾನರಾದ ರಾಯಸದ ಕೃಷ್ಣಪ್ಪನವರು, ಮ|| ರಾ|| ಶ್ಯಾನುಭೋಗ ಸಾರ್ಥವಳ್ಳಿ ಕೃಷ್ಣಪ್ಪನವರು, ಕಸಬಾ ಶ್ಯಾನುಭೋಗರಾದ ಮ|| ರಾ|| ಅನಂತರಾಮಯ್ಯನವರು, ಮ|| ರಾ|| ಕೊಂಡಿಗನಹಳ್ಳಿ ಶ್ಯಾನುಭೋಗ ಕೃಷ್ಣಪ್ಪನವರು,

ಪ್ರಾವಕವನ್ನು ಎರಚಿದನೆಂದು ಮೊಬದ್ದಮೆಯಾಗಿ ಸಿಟಿ ಮ್ಯಾಜಿಸ್ಟ್ರೇಟರು ಅವನ ಮೇಲೆ ಛಾರ್ಜುಮಾಡಿದ್ದಾರೆ. ಈ ತಿಂಗಳು 23 ಕ್ಕೆ ವಿಚಾರಣೆಯು ನಡೆಯುವದು.

ಹಿಂದೆ ತಿಳಿಸಿದ್ದಂತೆ ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರೊಂದಿಗೆ ಕಳೆದ 12 ನೆಯ ತಾರೀಖಿನ ದಿವಸ ತುಂಕೂರಿಗೆ ದಯಮಾಡಿಸಿದರು. ಶ್ರೀಮನ್ಮಹಾರಾಜರು ದಯಮಾಡಿಸುವ ವರ್ತಮಾನವನ್ನು ಕೇಳಿ ತುಂಕೂರು ಡಿಸ್ಟ್ರಿಕ್ಟಿನ ಮೂಲೆಮೂಲೆಗಳಿಂದ ಅನೇಕ ಸಹಸ್ರ ಜನರು ಬಂದಿದ್ದರು. ಜನರು ಅಭೂತಪೂರ್ವವಾದ ಉತ್ಸಾಹದಿಂದ ಮಹಾಪ್ರಭುಗಳಿಗೆ ಸ್ವಾಗತವನ್ನು ಬಯಸಿದರೆಂದೂ ನಗರದ ಬೀದಿಗಳಲ್ಲೆಲ್ಲಾ ಮೆರವಣಿಗೆಯಾದ ಮೇಲೆ, ಶ್ರೀಮನ್ಮಹಾರಾಜರವರು ಜಿಲ್ಲಾಬೋರ್ಡಿನವರೂ ಮತ್ತು ಸಾಹುಕಾರ ಸಂಘದವರು ಒಪ್ಪಿಸಿದ ಬಿನ್ನವತ್ತಳೆಗಳನ್ನು ಸ್ವೀಕರಿಸಿ ಅವುಗಳಿಗೆ ಉಚಿತವಾದ ಉತ್ತರವನ್ನು ಕೊಟ್ಟಮೇಲೆ ಜಿಲ್ಲಾಬೋರ್ಡಿನ ನೂತನ ಭವನದ ಶಂಕುಸ್ಥಾಪನೆಯನ್ನೂ, ಅನಂತರ ಸಹಕಾರಸಂಘದ ನೂತನ ಭವನದ ಸ್ಥಾಪನೆಯನ್ನೂ ಮಾಡಿದರು. ಸಾಯಂಕಾಲ ಮಹಾಪ್ರಭುಗಳು ಪೌರಸಭಾ ಮಂದಿರಕ್ಕೆ ದಯಮಾಡಿಸಿ ಅಲ್ಲಿನ ಬಿನ್ನಪತ್ರಗಳನ್ನು ಸ್ವೀಕರಿಸಿ ಪ್ರತ್ಯುತ್ತರವನ್ನಿತ್ತ ನಂತರ ನಗರಕ್ಕೆ ವಿದ್ಯುದ್ದೀಪಗಳನ್ನಿತ್ತು ಬೆಳಗಿಸಿದರು.

ರಾಜಧಾನಿಗೆ ಬಂದಿರುವ ಹುಲಗೇರಿಯ ಶ್ರೀ ಹಾಲಸಿದ್ಧೇಶ್ವರ ಪ್ರಾಸಾದಿಕ ಲೋಕಸೇವಕ ಸಂಗೀತ ನಾಟಕಮಂಡಳಿಯವರು ಜಗನ್ಮೋಹನ ಬಂಗಲೆಯಲ್ಲಿ ಶ್ರೀಮತ್ಕರ್ಣಾಟಕ ರತ್ನಸಿಂಹಾಸನಾಧೀಶ್ವರ ಶ್ರೀಮನ್ಮಹಾರಾಜ ಕರ್ನಲ್ ಸರ್ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ, ಜಿ.ಬಿ.ಇ. ಯವರು ಹಾಗೂ ಇತರ ರಾಜಬಂಧುಗಳೂ ರಾಣಿವಾಸದವರೂ ಆಸ್ಥಾನ ವಿದ್ವಾಂಸರೇ ಮೊದಲಾದವರ ಸಮ್ಮುಖದಲ್ಲಿ 7-12-21 ನೆಯ ದಿವಸ ಶ್ರೀಯುತ ತುಮ್ಮಿನಕಟ್ಟೆ ಐರಣಿ ಕೋಲಶಾಂತಪ್ಪನವರಿಂದ ವಿರಚಿತವಾದ ಬಿ. ಎ. ಎಂಬ ಸಾಮಾಜಿಕ ನಾಟಕವನ್ನೂ, 10-12-21 ನೆಯ ದಿವಸ "ಪಾರ್ವತೀಸತ್ವಪರೀಕ್ಷೆ" ಯೆಂಬ ನಾಟಕವನ್ನೂ, 13-12-29 ನೆಯ ದಿವಸ "ಛತ್ರಪತಿಜನ್ಮ" ಎಂಬ ನಾಟಕವನ್ನೂ ಅಭಿನಯಿಸಿದರು. ಶ್ರೀಮನ್ಮಹಾರಾಜರವರೇ ಮೊದಲಾಗಿ ಯಾವತ್ತರೂ ನಾಟಕಾವಲೋಕನದಿಂದ ಬಹಳವಾಗಿ ಸಂತೋಷಪಟ್ಟರು. ಈ ಮಂಡಳಿಯವರು ಇಲ್ಲಿಯ ಮಹಾಜನರ ಕೋರಿಕೆಯಂತೆ ಇನ್ನೂ ಒಂದೆರಡು ನಾಟಕಗಳನ್ನು ಮಾತ್ರ ಅಭಿನಯಿಸಿ ಮುಂದಕ್ಕೆ ಪ್ರಯಾಣ ಮಾಡತಕ್ಕವರಾಗಿರುತ್ತಾರೆ.

ವರ್ತಮಾನಸಂಗ್ರಹ.

ನಾದಿರ್‌ಶಹರು ಸರದಾರ್ ಶಹವಾಲೀಖಾನರನ್ನು ಅಫ್ಘನ್ ರಾಯಭಾರಿಯಾಗಿ ನೇಮಕಮಾಡಿ ಲಂಡನ್ನಿಗೆ ಕಳುಹಿಸಿರುವರು.

ಇಂಗ್ಲಂಡಿನಲ್ಲಿ ಇತ್ತೀಚೆಗೆ ಹುಡುಗಿಯರು ಮನೆಮನೆಗೆ ಹೋಗಿ ಕ್ಷೌರಮಾಡುವ ನೂತನ ಕ್ರಮವನ್ನು ಪ್ರಾರಂಭಿಸಿರುವರಂತೆ! ಸುಧಾರಣೆ!

ಜಪಾನಿನ ಡಾಕ್ಟರ್ ಯೂಕಾ ಎಂಬ ಶಾಸ್ತ್ರಜ್ಞರು ಕಪ್ಪುಜನರನ್ನು ಬೆಳ್ಳಗೆ ಮಾಡಿ ಶರೀರರಚನೆಯನ್ನೇ [illegible]ಮಾಡುವ ಪ್ರಯೋಗವೊಂದನ್ನು ಶೋಧಿಸಿರು[illegible]

ನೆಲಿಂಗಟನ್ನಿನಲ್ಲಿ ಒಂದು ಸಣ್ಣ ಜಹಜು ಸಿಡಿದು [illegible]ಚೂರಾಯಿತು. ನಾಲ್ಕು ಜನ ಕೂಲಿಯವರೂ ಹ[illegible] ಕ್ಯಾಪ್ಟನ್ನನೂ ಆ ಸಿಡಿತದಲ್ಲಿ ಸಿಕ್ಕಿ ಮೃತಪಟ್ಟರು.

ಲಾಹೋರಿನಲ್ಲಿ ಡಾಕ್ಟರ್ ಕಿಚಲುರವರ ಅಧ್ಯಕ್ಷತೆಯಲ್ಲಿ ಪ್ರತಿಷ್ಠಿಸಲ್ಪಟ್ಟಿದ್ದ ಶ್ರೀ|| ಲಾಲಾಲಜಪತರಾಯರ ಮೂರ್ತಿಯನ್ನು ಯಾರೋ ಇಬ್ಬರು ಮುಸಲ್ಮಾನರು ಒಡೆದುಹಾಕಿರುವರಂತೆ!

ಅಖಿಲ ಭಾರತ ಸನಾತನಧರ್ಮ ಪರಿಷತ್ತು ಮದರಾಸಿನಲ್ಲಿ ಸೇರಿ ಶಾರದಾಮಸೂದೆಯನ್ನು ಸಂಪೂರ್ಣ ನಿಷೇಧಿಸಿ ತೀರ್ಮಾನಗಳನ್ನು ಮಾಡಿರುತ್ತದೆ. ಈ ಸಂದರ್ಭದಲ್ಲಿ ಸ್ತ್ರೀಯರ ಸಮ್ಮೇಳನವೂ ಸಹ ಸೇರಿತ್ತು.

ಕಾನ್ಪುರದ ದಿವಾನ್‌ಚಂದರವರ ಹತ್ತಿ ಗಡಂಗಿಗೆ ಬೆಂಕಿಬಿದ್ದು 2 ಲಕ್ಷ ರೂಪಾಯಿನ ಹತ್ತಿಯು ಸುಟ್ಟುಹೋಯಿತು. ಬೆಂಕಿಯನ್ನು ಆರಿಸಲು ಮಾಡಿದ ಪ್ರಯತ್ನವು ವ್ಯರ್ಥವಾಗಿ ಹತ್ತಿಯು ಒಂದು ದಿನವೆಲ್ಲಾ ಉರಿಯಿತಂತೆ!

ಕಳೆದ ತಿಂಗಳು 18 ನೆಯ ತಾರೀಖಿನ ದಿವಸ ಜೂರಿ ಎಂಬ ದ್ವೀಪದಲ್ಲಿ ಭಯಂಕರವಾದ ಭೂಕಂಪವಾಗಿ ವಿಶೇಷನಷ್ಟವು ಸಂಭವಿಸಿರುವದು. ಒಂದು ಮನೆಯು 200 ಅಡಿಗಳ ಮುಂದಕ್ಕೆ ಸರಿದು ಸಮುದ್ರದ ಪಾಲಾಯಿತು. 22 ಜನರು ಮೃತಪಟ್ಟರು.

ಈ ಸಾರೆ ಲಾಹೋರಿನಲ್ಲಿ ನಡೆಯುವ ಕಾಂಗ್ರೆಸ್ ಕಾಲದಲ್ಲಿ ಹೊಂಚುಕಾಯುವದಕ್ಕಾಗಿ ಸರಕಾರದವರು ಒಂದು ನೂತನ ಪೋಲೀಸ್ ಪಡೆಯನ್ನು ತಯಾರುಮಾಡುತ್ತಿರುವರು. ಇದರ ಖರ್ಚಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿರುತ್ತಾರೆ.

ಪ್ರಸಿದ್ಧ ಭಾರತ ವೈಜ್ಞಾನಿಕಶಾಸ್ತ್ರಜ್ಞರಾದ ಸರ್ ಜಗದೀಶಚಂದ್ರಬೋಸರವರು ಪ್ರಾಣಿಗಳ ಮತ್ತು ವನಸ್ಪತಿಗಳ ಬೆಳವಣಿಗೆಯನ್ನು ತೋರಿಸುವ ಒಂದು ಯಂತ್ರವನ್ನು ನಿರ್ಮಿಸಿ, ಕಳೆದತಿಂಗಳು 30ನೇ ತಾರೀಖಿನ ದಿವಸ ನಡೆದ ಬೋಸ್ ಸಂಸ್ಥೆಯ 15 ನೆಯ ವಾರ್ಷಿಕೋತ್ಸವದಲ್ಲಿ ಅದರ ಉಪಯೋಗವನ್ನು ಪ್ರದರ್ಶಿಸಿದರು.

ಚೆಫೆಲೋ ಎಂಬ ಒಬ್ಬ ಮಂತ್ರವಾದಿಯು ಪ್ರಪಂಚದಲ್ಲೆಲ್ಲಾ ಅತ್ಯಂತ ಕುಳ್ಳನಾದ ಅಲೆಕ್ಸಾಂಡರ್ ಗ್ರೇಟಿಯೆಂಬುವನನ್ನೂ 8 ಅಡಿ ಎತ್ತರವಾದ ಲಿಯಟಿ ಎಂಬ 18 ವರ್ಷದ ತರುಣನನ್ನೂ ಪ್ರದರ್ಶಿಸುತ್ತಿರುವನಂತೆ! ಅಲೆಕ್ಸಾಂಡರ್‌ಗ್ರೇಟಿಗೆ 18 ವರ್ಷ ವಯಸ್ಸಾಗಿದ್ದು ಕೇವಲ 32 ಇಂಚು ಎತ್ತರವಾಗಿರುವನಂತೆ! ಸೃಷ್ಟಿವೈಚಿತ್ರ್ಯ!

ಇಸ್ಮಾಯಿಲ್ ಮುಸಲ್ಮಾನರ ಧಾರ್ಮಿಕಗುರುಗಳಾದ ಲೋಕಪ್ರಸಿದ್ಧ ಆಗಾಖಾನರು ಫ್ರಾನ್ಸಿನ ಸಿಂಡಿಕೇರೋನ್ ಕನ್ಯೆಯನ್ನು ಕಳೆದ 7 ನೆಯ ತಾರೀಖಿನ ದಿವಸ ಬಹು ವಿಜೃಂಭಣೆಯಿಂದ ಮದುವೆಯಾದರು. ಆಗಾಖಾನರು ವಧುವಿಗೆ 25 ಲಕ್ಷ ರೂಪಾಯಿಗಳ ವಧುದಕ್ಷಿಣೆಯನ್ನೂ 8 ಲಕ್ಷ ರೂಪಾಯಿಗಳ ಆಭರಣಾದಿಗಳನ್ನೂ ಕೊಟ್ಟಿರುವರಂತೆ!

ಹಿಂದೂಸ್ಥಾನಕ್ಕೆ ಟಪಾಲನ್ನು ತರುತ್ತಿದ್ದ ವಿಮಾನವು ಫ್ರಾಂಕ್‌ಫೋರ್ಟ್ ಎಂಬಲ್ಲಿ ಕೆಟ್ಟಹವೆಯ ದೆಸೆಯಿಂದ ಕೆಳಕ್ಕೆ ಇಳಿಯಬೇಕಾಯಿತು. ವಿಮಾನಕ್ಕೆ ಸ್ವಲ್ಪ ಅಪಾಯವೂ ಸಂಭವಿಸಿರುವುದಾಗಿ ವರ್ತಮಾನವಿದೆ. ಆ ವಿಮಾನದಲ್ಲಿದ್ದ 40,000 ಪತ್ರಗಳ ಸುಮಾರು 50 ಮಣ ಭಾರವುಳ್ಳ 38 ಚೀಲಗಳನ್ನು ಮುಂದೆ ಬುಡಾಪೆಸ್ಟ್ ಮಾರ್ಗದಲ್ಲಿ ರೈಲಿನಲ್ಲಿ ಸಾಗಿಸಿದರು.

ಲಂಡನ್ನಿನ ವಿಲಿಯಂಕೈಟರ್ ಎಂಬವರು 7 ವರ್ಷಗಳಿಂದಲೂ ಅಭ್ಯಾಸಮಾಡಿ, ಬಂದೂಕದಿಂದ ಹೊಡೆದು ಕ್ಷಣಮಾತ್ರದಲ್ಲಿ ಗೋಡೆಗಳ ಮೇಲೆ ಚಿತ್ರಗಳನ್ನು ಬರೆದು ಶೃಂಗರಿಸುವ ಒಂದು ವಿಚಿತ್ರವಿದ್ಯೆಯನ್ನು ಸಾಧಿಸಿಕೊಂಡಿರುವರು. ಹೀಗೆ ಬಂದೂಕದಿಂದ ಹೊಡೆದು ಒಂದು ಸಿನೆಮಾಮಂದಿರ ಮತ್ತು ಒಂದು ಕ್ರೈಸ್ತದೇವಾಲಯವನ್ನು ಸಂಪೂರ್ಣವಾಗಿ ಶೃಂಗರಿಸಿರುವರಂತೆ!

ಪ್ರಸಿದ್ಧ ಭಾರತ ಕವಿಶ್ರೇಷ್ಠರಾದ ರ[illegible] ಠಾಕೂರರು ಹೊಸದಾಗಿ ಬರೆದಿರುವ "[illegible] ವನ್ನು "ಬ್ರಿಟಿಷ್ ಡೊಮಿನಿಯನ್ ಫಿಲ್[illegible] ವರು ಸಿನಿಮಾ ಚಿತ್ರಪಟವನ್ನಾಗಿ ತಯ[illegible] ದ್ದೇಶಿಸಿರುವರು. ಚಿತ್ರಪಟವನ್ನು ಶ್ರೀ|| [illegible] ಶಾಂತಿನಿಕೇತನದಲ್ಲಿಯೇ ಫೋಟೋ ತೆಗೆಯುವರು. ಠಾಕೂರರೂ ಹಾಗೂ ಅವರ ಕೆಲವು ಶಿಷ್ಯರು ಅದರಲ್ಲಿ ಪಾತ್ರಗಳನ್ನು ವಹಿಸುವರು.

ಆಫ್ರಿಕೆಯ ಕೇಪ್ ಪ್ರಾಂತ್ಯದ ಮಲ್ಮೆಸ್‌ಬರಿ ಎಂಬಲ್ಲಿ ಯೂರೋಪಿಯನ್ ಸ್ತ್ರೀಯೋರ್ವಳು ಆರುಜನ ಮಕ್ಕಳನ್ನು ಹೆತ್ತಿರುವಳಂತೆ! ಅವುಗಳಲ್ಲಿ 3 ಮಕ್ಕಳು ಸತ್ತು 3 ಮಕ್ಕಳು ಸುಖವಾಗಿರುವವಂತೆ! ಪ್ರಪಂಚದ ಚರಿತ್ರೆಯಲ್ಲಿ ಏಕಕಾಲದಲ್ಲಿ 3 ಕ್ಕಿಂತಲೂ ಹೆಚ್ಚು ಮಕ್ಕಳನ್ನು ಹೆತ್ತ ಉದಾಹರಣೆಗಳಲ್ಲಿ ಇದು ಮೂರನೆಯದಾಗಿರುವದು. 1872 ನೇ ಇಸವಿಯಲ್ಲಿ ಒಹಿಯೋದಲ್ಲಿ ಒಬ್ಬ ಸ್ತ್ರೀಯಳು ಏಕಕಾಲದಲ್ಲಿ 8 ಮಕ್ಕಳನ್ನು ಹೆತ್ತಿದ್ದಳಂತೆ! ಹಾಗೆಯೇ 1899 ರಲ್ಲಿ ಟ್ರಾನ್ಸಿಲ್‌ವೇನಿಯಾದಲ್ಲಿ ಓರ್ವ ಸ್ತ್ರೀಯು 7 ಮಕ್ಕಳನ್ನು ಹೆತ್ತಿದ್ದಳಂತೆ!

ಕಳೆದ 6-7 ನೆಯ ತಾರೀಖುಗಳಲ್ಲಿ ಇಂಗ್ಲೆಂಡಿನಲ್ಲಿ ವಿಶೇಷವಾದ ಬಿರುಗಾಳಿ, ಮಿಂಚು, ಗುಡುಗು ಮತ್ತು ಮಳೆಯು ಬಂದು ಬಹಳ ನಷ್ಟಸಂಭವಿಸಿರುವದು. ಅನೇಕ ಜಹಜುಗಳು ಆ ಬಿರುಗಾಳಿಗೆ ಸಿಕ್ಕಿ ಅಪಾಯಕ್ಕೊಳಗಾದುವು. 21 ಜನ ನಾವಿಕರಿದ್ದ ರೇಡೀರ್ ಎಂಬ ಜಹಜು ಮುಳುಗಿಹೋಯಿತು. ಸಮುದ್ರದಲ್ಲಿ ಹುಟ್ಟಿದ ಪ್ರಚಂಡಅಲೆಗಳ ದೆಸೆಯಿಂದ ಅಪಾಯಕ್ಕೆ ಸಿಕ್ಕಿದ ಜಹಜುಗಳಿಗೆ ಹೊರಗಿನ ಸಹಾಯವು ದೊರೆಯುವದದುಸ್ತರವಾಯಿತು. ಸುಮಾರು 20 ಕೋಟಿ ರೂಪಾಯಿಗಳ ಬೆಲೆಯಾಗುವ ಕಲಾಸಾಮಗ್ರಿಗಳುಳ್ಳ ಇಟಲಿಯ ಲಿಯನಾರ್ಡೋ ಎಂಬ ಜಹಜು ಪತ್ತೆಯಿಲ್ಲದೇ ಹೋಗಿರುವದು.

ರಷ್ಯದ ಮಾಸ್ಕೋಪಟ್ಟಣದಲ್ಲಿ ಡುರೋಲ್ ಎಂಬ ಶಾಸ್ತ್ರಜ್ಞರು ಅನೇಕವರ್ಷಗಳಿಂದ ಪ್ರಾಣಿಗಳ ಮನೋವೃತ್ತಿಯನ್ನು ಶಾಸ್ತ್ರೀಯರೀತಿಯಲ್ಲಿ ಪರೀಕ್ಷಿಸುತ್ತಿರುವರು. ಪ್ರಾಣಿಗಳನ್ನು ಸರಿಯಾದ ರೀತಿಯಲ್ಲಿ ತರಪೇತು ಮಾಡಿದರೆ ಅವುಗಳ ಸ್ವಾಭಾವಿಕ ಧರ್ಮಗಳನ್ನೇ ಬದಲಾಯಿಸಬಹುದೆಂದು ಅವರು ಅಭಿಪ್ರಾಯಪಟ್ಟಿರುವರು. ಅವರು ಸ್ಥಾಪಿಸಿರುವ ಸಂಸ್ಥೆಯಲ್ಲಿ ಕಾಡುಬೆಕ್ಕು ಇಲಿಗೆ ಹಾಲುಣಿಸುವುದು, ಊರುಬೆಕ್ಕು ಇಲಿಗಳನ್ನು ಪೋಷಿಸುವುದು, ತೋಳವು ಎತ್ತಿನೊಡನೆ ಆಡುವುದು, ಕರಡಿಯು ನೀರಿನ ಪಂಪನ್ನು ನಡೆಯಿಸುವುದು, ನಾಯಿಗಳು ತಮ್ಮ ಯಜಮಾನರೊಡನೆ ಮಾತಾಡುವುದು, ಇವೇ ಮೊದಲಾದ ವಿಚಿತ್ರನೋಟಗಳನ್ನು ನೋಡಬಹುದಂತೆ. ಇಷ್ಟೇ ಅಲ್ಲ! ಅವರು ಸಾಕಿರುವ ತೋಳವು ಕುರಿಗೆ ಬೆದರುವದಂತೆ! ನಾರಿವಾಳವು ಬಹು ಕ್ರೂರ ಹಕ್ಕಿಯಂತೆ ವರ್ತಿಸುವದಂತೆ! ಮಂಗವು ಮನುಷ್ಯರಂತೆ ಬರೆಯುವದಂತೆ!"

ಅಫ್ಘಾನಿಸ್ಥಾನದ ಮಾಜಿ ಅಮೀರರಾದ ಅಮಾನುಲ್ಲರು ರಾಜ್ಯತ್ಯಾಗಮಾಡಿ ಹೋದಾಗ್ಗೆ ಬರಿಗೈಯಲ್ಲಿ ಹೋಗಿರುವರೆಂದೂ, ಇಟಲಿಯಲ್ಲಿ ಅವರು ಅತ್ಯಂತ ಬಡತನದಲ್ಲಿ ಕಾಲಕಳೆಯುತ್ತಿರುವರೆಂದೂ ಜನರು ಇದುವರೆಗೆ ನಂಬಿದ್ದರು. ಅದೇ ಕಾರಣದಿಂದಲೇ ಹಿಂದೂ ಮುಸಲ್ಮಾನರು ಅವರಮೇಲೆ ಸಹಾನುಭೂತಿಯಿಂದ ಹಣವನ್ನು ಶೇಖರಿಸಿ ಅವರಿಗೆ ಒಪ್ಪಿಸಿದ್ದರು. ಆದರೆ ಈಗ ಅವರು ಕೋಟ್ಯಾಧೀಶ್ವರರೆಂಬುದು ಬಹಿರಂಗವಾಗಿರುವದು. ಇಟಲಿಯಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಟ್ಟು "ಸೇಂಟ್ ರೇಮೋ" ಎಂಬ ಭವನವನ್ನು ಕೊಂಡುಕೊಂಡಿರುವರಂತೆ! ಇವರು ಪಾಶ್ಚಿಮಾತ್ಯದೇಶಗಳಲ್ಲಿ ಸಂಚಾರಕ್ಕೆ ಹೋದಾಗ ಜೊತೆಯಲ್ಲಿ 4 ಕೋಟಿ ರೂಪಾಯಿಗಳ ಬೆಲೆ ಬಾಳುವ ಆಭರಣಗಳನ್ನೂ, ನಗದು 7 ಕೋಟಿ ರೂಪಾಯಿಗಳನ್ನೂ ತೆಗೆದುಕೊಂಡುಹೋಗಿದ್ದರಂತೆ! ಸ್ವದೇಶಕ್ಕೆ ಹಿಂತಿರುಗುವಾಗ್ಗೆ ಆ ಅಪಾರ ಐಶ್ವರ್ಯವನ್ನೂ ಆಭರಣಗಳನ್ನೂ ಯೂರೋಪಿನ ಬ್ಯಾಂಕುಗಳಲ್ಲಿಟ್ಟು ಬಂದಿದ್ದರೆಂ[illegible] ಈಚಿಗೆ ತಿಳಿದುಬಂದಿರುವ ವರ್ತಮಾನಗಳಿಂದ ಗೊ[illegible]ತ್ತಾಗುತ್ತದೆ. ಅಮಾನುಲ್ಲರು ಇನ್ನೂ ಪ್ರವಾಸ ಮಾಡುತ್ತಿದ್ದಾಗಲೇ ಸೂರಿಯಾ ರಾಣಿಯು ಭೋಜನೆಯನ್ನು ತ್ಯಜಿಸಿದ ವಿಷಯದಲ್ಲಿ ಮುಲ್ಲರು ದಂಗೆಯೆಬ್ಬಿಸುವರೆಂಬ ಸಮಾಚಾರವು ಅವರಿಗೆ ತಿಳಿದು ಮುಂದೆ ತಮ್ಮ ರಕ್ಷಣಾರ್ಥವಾಗಿ ಹೀಗೆ ಎಚ್ಚರಿಕೆ ತೆಗೆದುಕೊಂಡಿದ್ದರಂತೆ!

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಅಭಿನಂದನ.

ಶ್ರೀ ಜಗದ್ಗುರು ಪಂಚಾಚಾರ್ಯ ಮುದ್ರಣಾಲಯದಲ್ಲಿ ಇದೇ ಸಂ|| ದಲ್ಲಿ ಮುದ್ರಿತವಾಗಿರುವ ಶ್ರೀ ಜಗದ್ಗುರು ಉಜ್ಜಯಿನಿ ಮರುಳಾರಾಧ್ಯರ ಸ್ತೋತ್ರವೆಂಬ ಚಿಕ್ಕ ಪುಸ್ತಕವನ್ನು ನಾನು ನೋಡಿದೆನು. ಗ್ರಂಥಕರ್ತರಾದ ಬಳ್ಳಾರಿ ಜಿಲ್ಲಾ ಹಿರೇಹಡಗಲಿ ಗ್ರಾಮದ ಪುರಾಣೀಕಮಠದ ವೇದಮೂರ್ತಿ ಪಂ|| ಶ್ರೀ ಫಕೀರಶಾಸ್ತ್ರಿಗಳು ಶಿವೈಕ್ಯರಾಗಿ ಅಂದಾಜು 30-40 ವರ್ಷಗಳಾಗಬಹುದು. ಇವರು ಆಗಿನಕಾಲದಲ್ಲಿ ಪ್ರಸಿದ್ಧಪಂಡಿತರಾಗಿದ್ದರು. ಇವರು ಮತಸಿದ್ಧಾಂತ ವಿಷಯದಲ್ಲಿಯೂ, ಹಾಗೂ ಗುರುವರ್ಗದವರ ಉನ್ನತೆಯ ವಿಷಯದಲ್ಲಿಯೂ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳಂತೆ ಬಹು ಶ್ರಮವಹಿಸಿ ಹೋರಾಡಿದರು. ಇವರು ರಚಿಸಿರುವ ಈ ಸ್ತೋತ್ರಗಳನ್ನು 1919-1920 ನೇ ಇಸ್ವಿ ಧರ್ಮತರಂಗಿಣಿ ಅಂಕಗಳಲ್ಲಿ ಮ|| ರಾ|| ಶ್ರೀ ಗುರುಭಕ್ತಕೇಸರಿ ಹಮ್ಮಿಗಿ ಕುಬುಸದ ಶಾಂತಪ್ಪನವರು ಪ್ರಕಟಮಾಡಿದ್ದರು. ಈಗ ಪ್ರತ್ಯೇಕ ಪುಸ್ತಕರೂಪವಾಗಿ ಪ್ರಕಟಿಸಿರುವದು ಶ್ರೀ ಗುರುಸ್ತೋತ್ರಾವಲಂಬಿಗಳಿಗೆ ಅನುಕೂಲವಾದಂತಾಯಿತು. ಇದೇ ಮಾದರಿಯ ಅಂದರೆ ಗುರುಭಜನೆ ಗುರುಸ್ತೋತ್ರ ಗುರುನಾಮಾವಳಿ ಗುರುಗಳ ಮಂಗಲಗಳನ್ನೂ ಶಾಸ್ತ್ರೋಕ್ತಪ್ರಕಾರವಾಗಿ ತಯಾರಿಸಿದ ಅನೇಕತರಹದ ಗುರುಗಳ ಭಾವಚಿತ್ರಗಳನ್ನು ಪ್ರಸಿದ್ಧಿಸಿ ವೀರಶೈವಮತದ ನಿಜತತ್ವವನ್ನೂ ಪ್ರಾಚೀನತೆಯನ್ನೂ ಶ್ರೇಷ್ಠತೆಯನ್ನೂ ಜಗತ್ತಿನಲ್ಲಿ ಹರಡಿ ಸಮಾಜದ ಘನತೆಯನ್ನು ಕಾಪಾಡಲು ಶ್ರಮಪಡುತ್ತಿರುವ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಗೂ ಮತ್ತು ಗ್ರಂಥಕರ್ತರಾದ ಫಕೀರಶಾಸ್ತ್ರಿಗಳವರಿಗೂ ನನ್ನ ಅನಂತಾನಂತ ಅಭಿನಂದನೆಯನ್ನು ಅರ್ಪಿಸುವೆನು.

ಹಾರ್ನಭಾವಿ ಹಿರೇಮಠದ
ಸಿದ್ಧಾಂತಿ ಬಸವರಾಜಶಾಸ್ತ್ರಿ.

ಜಯತು ಜಗದ್ಗುರು ಪಂಚಕಂ

ಕಾರ್ತಿಕ ಮಹೋತ್ಸವ.

ದಿಗ್ಗಾವಿ.

ಸದರಿ ಗ್ರಾಮದ ಹಿರೆಯಮಠದಲ್ಲಿ ವಾರ್ಷಿಕಪದ್ಧತಿ ಪ್ರಕಾರ ಕಾರ್ತಿಕಮಾಸದ ಆರಂಭದಿಂದ ಪ್ರತಿದಿವಸವೂ ಸಾಯಂಕಾಲ 8 ಘಂಟೆಗೆ ಭಜನೆಯು ನಡೆಯುತ್ತ ಗುರುಭಕ್ತರು ತಪ್ಪದೆ ಬಂದು ಮಾನಸಿಕ ರೂಪದ [illegible]ಸೇವೆಯನ್ನು ಮಾಡುತ್ತಿದ್ದರು. ಈ ತಿಂಗಳು [illegible]-12-29 ನೇ ಬುಧವಾರ ದಿವಸ ಮಾಹೇಶ್ವರರಿಗೂ ಭಕ್ತಾದಿಗಳಿಗೂ ಅನ್ನಸಂತರ್ಪಣೆ ನಡೆಯಿಸಲ್ಪಟ್ಟಿತು. ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರವರ ಆಜ್ಞಾನುಸಾರವಾಗಿ ವೇ|| ವಿರೂಪಾಕ್ಷಯ್ಯಾ ಹಿರೇಮಠ ಸಾಕಿನ ಇಂದ್ರಬಿಡಿ, ಇವರು ಸಮಸ್ತ ಮಾಹೇಶ್ವರರಿಗೆ ಜಗದಾಚಾರ್ಯರ ಭಾವಚಿತ್ರಗಳನ್ನೂ ಮತ್ತು ವೀರಶೈವ ಮತತತ್ವಬೋಧಕಗಳಾದ ಪುಸ್ತಕಗಳನ್ನೂ ಭಕ್ತಿಯಿಂದ ಅರ್ಪಿಸಿದರು. ಪುನಃ ರಾತ್ರಿ ಎಂಟುವರೆ ಘಂಟೆಗೆ ಶಾಲೆಯ ವಿದ್ಯಾರ್ಥಿಗಳನ್ನೊಡಗೂಡಿಕೊಂಡು ಭಜನಾ ಸಮ್ಮೇಲನದವರು ವಾದ್ಯವೈಭವಗಳಿಂದ ಗ್ರಾಮದ ಮುಖ್ಯ ಮುಖ್ಯ ಬೀದಿಗಳಲ್ಲಿ ಜಗದಾಚಾರ್ಯರ ಪ್ರತಿಬಿಂಬದ ಮೆರವಣಿಗೆಯು ಹೋಗಿ 10 ಘಂಟೆಗೆ ಬೃಹನ್ಮಠಕ್ಕೆ ತಲ್ಪಿತು. ಚಿತ್ತಾಪೂರದಿಂದ ಬಂದಿದ್ದ ವೇ|| ಶರಣಯ್ಯನವರು ಮನೋಹರವಾದ ತಮ್ಮ ಗಾನಾಲಾಪದಿಂದ ಸರ್ವರ ಮನಸ್ಸಿಗೆ ಆನಂದವನ್ನುಂಟುಮಾಡಿದರು. ಈ ಉತ್ಸವಕ್ಕೆ ಯಾದಗಿರಿ, ದಂಡೋತ್ತಿ, ಮೈಲ್ವಾರ, ಕೆರಳ್ಳಿ, ಚಿತ್ತಾಪೂರ ಮೊದಲಾದ ಗ್ರಾಮದಿಂದ ಅನೇಕ ಭಕ್ತಮಾಹೇಶ್ವರರು ಬಂದು ಕಾರ್ಯ ನೆರವೇರಿಸಿ ಆಶೀರ್ವಾದಪಡೆದನಂತರ ಜಗದಾಚಾರ್ಯರ ಜಯಘೋಷದೊಡನೆ ಉತ್ಸವವು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ದುಃಖವಾರ್ತೆ.

ಕಾರ್ಕಾಹಳ್ಳಿ ತಾಲೂಕು ಹಾರೋಹಳ್ಳಿ ಗ್ರಾಮ ನಿವಾಸಿಗಳಾದ ಮ|| ರಾ|| ಚಿಲ್ಲರೆ ಅಂಗಡಿ ರಾಮಯ್ಯನವರು ವ್ಯಾಧಿಗ್ರಸ್ತರಾಗಿ ತಾ|| 29-11-29 ನೆಯ ಶುಕ್ರವಾರ ದೈವಾಧೀನರಾದ ವಿಷಯವನ್ನು ತಿಳಿಸಲು ತುಂಬಾ ದುಃಖವಾಗುವದು. ಇವರು ಈ ಗ್ರಾಮದಲ್ಲಿ ಜೀರ್ಣವಾಗಿದ್ದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ ಪ್ರತಿವರ್ಷವೂ ಫಾಲ್ಗುಣ ಶುದ್ಧ ಪೌರ್ಣಮಿಯಲ್ಲಿ ರಥೋತ್ಸವವೂ ದನಗಳ ಪರಿಶೆಯೂ ಸಹ ನಡೆಯುವಂತೆ ಏರ್ಪಡಿಸಿ ಬಹಳ ಶ್ರದ್ಧೆಯಿಂದ ಅಭಿವೃದ್ಧಿಗೆ ತಂದು ಮುಜರಾಯಿ ಮ್ಯಾನೇಜ್‌ಮೆಂಟಿಗೆ ವಹಿಸಿರುತ್ತಾರೆ. ಆದಿಕರ್ನಾಟಕರ ಸ್ಕೂಲನ್ನು ಉಚಿತವಾಗಿ ಕಟ್ಟಿಸಿರುತ್ತಾರೆ. ಔಷಧಿಗಳನ್ನು ತಮ್ಮ ಸ್ವಂತ ಖರ್ಚಿನಿಂದ ತರಿಸಿ ಅನೇಕ ರೋಗಿಗಳಿಗೆ ಉಚಿತವಾಗಿ ಕೊಡುತ್ತಿದ್ದರು. ಅಲ್ಲದೆ ಅನೇಕ ಸಾರ್ವಜನಿಕ ಕಾರ್ಯಗಳನ್ನೂ ಗ್ರಾಮಾಭಿವೃದ್ಧಿ ಕಾರ್ಯಗಳನ್ನೂ ಕೈಕೊಂಡಿದ್ದರು. ಇವರು ತಾಲೂಕುಬೋರ್ಡು ಮೆಂಬರಾಗಿಯೂ ಗ್ರಾಮಸಂಚಾಯಿತಿಯ ಸದಸ್ಯರಾಗಿಯೂ ದೇವಸ್ಥಾನಗಳ ಧರ್ಮದರ್ಶಿಗಳಾಗಿಯೂ ಇದ್ದರು. ಗ್ರಾಮದಲ್ಲಿ ಉಂಟಾಗುವ ವ್ಯಾಜ್ಯಗಳನ್ನು ಸರ್ವಸಮ್ಮತವಾಗಿರುವಂತೆ ತೀರ್ಮಾನಮಾಡುತ್ತಿದ್ದರು. ಇವರ ವಿಯೋಗದಿಂದ ಈ ಗ್ರಾಮಕ್ಕೆ ಅಪಾರ ನಷ್ಟವುಂಟಾಗಿರುವದು. ಇವರು ಇನ್ನೂ ಅಲ್ಪವಯಸ್ಸಿನವರಾದಾಗ್ಯೂ ಮೇಧಾವಿಗ[illegible]ಯಾಪರರೂ ವಿದ್ಯಾಭಿಮಾನಿಗಳೂ ಆಗಿದ್ದ[illegible] ಅಕಾಲಮರಣದಿಂದ ಬಂಧು ಮಿತ್ರವರ್ಗಕ್ಕೆ [illegible] ದುಃಖವುಂಟಾಗಿರುವದು. ದಯಾಮಯರಾದ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಗ್ರಾಮವಾಸಿ.

ಬೆಂಗಳೂರಿನಲ್ಲಿ ಕೀರ್ತನಗಳು.

ಕರ್ನಾಟಕ ಸುಪ್ರಸಿದ್ಧರಾಷ್ಟ್ರೀಯಕೀರ್ತನಕಾರರಾದ ತುಮಕೂರು ಕೀರ್ತನಕೇಸರಿ ಕವಿರತ್ನ ಶಿವಮೂರ್ತಿಶಾಸ್ತ್ರಿಗಳು ಬೆಂಗಳೂರಿನಲ್ಲಿ ಈಗ ಕೀರ್ತನ ಮಾಡುತ್ತಿರುವರು. ಇಲ್ಲಿನ ವೀರಶೈವಸಮಾಜದವರು ಈ ಶಾಸ್ತ್ರಿಗಳಿಂದ ಶ್ರೀ ಮಹಾಂತಪುರದಲ್ಲಿ 'ಧನಂಜಯವಿಜಯ, ಈಶ್ವರಾನುಗ್ರಹ' ಎಂಬ ಸ್ವಾರಸ್ಯವಾದ ಕೀರ್ತನಗಳನ್ನು ನಡೆಯಿಸಿದರು. ಇಲ್ಲಿನ ಪ್ರಸಿದ್ಧ ಶ್ರೀಮಂತರಾದ ಶ್ರೀ ಗೌಡರ [illegible]ಭದ್ರಪ್ಪ ಅಂಡ್ ಸನ್ಸ್‌ರವರು ತಮ್ಮ ಧರ್ಮಛತ್ರದಲ್ಲಿ 'ಅದೃಷ್ಟಪರೀಕ್ಷೆ' ಎಂಬ ಕೀರ್ತನವನ್ನು ಹೇಳಿಸಿದರು. ಶ್ರೀ ಶಿವಮೂರ್ತಿಶಾಸ್ತ್ರಿಗಳು ಮಾಡುವ ಕೀರ್ತನಗಳು ನವೀನವೂ, ಅಪಲೋಕಪ್ರಿಯವೂ ಆಗಿರುವವು. ಇವರ ನವೀನ ವಿಷಯಪ್ರತಿಪಾದನನೈಪುಣ್ಯ, ಅಸದೃಶವಾದ ಭಾಷಾಶೈಲಿ, ಉದಾತ್ತವಾದ ರಾಷ್ಟ್ರೀಯಭಾವನೆ, ಸರ್ವಸಮತ್ವ, ಜಾತಿಪ್ರೇಮ, ಕರ್ನಾಟಕವಾತ್ಸಲ್ಯ, ಸಮಾಜಸುಧಾರಣಾಸಕ್ತಿ ಇತ್ಯಾದಿ ಶ್ರೇಷ್ಠತಮಗುಣಗಳಿಗೆ ಶ್ರೋತೃಗಳು ಮನಸೋಲುವದು ಆಶ್ಚರ್ಯವಲ್ಲ. ಇವರ ನವೀನಭಾವದ ಕೀರ್ತನಗಳು ಇತರರಿಗೆ ಅನುಕರಣೀಯವಾಗಿವೆ. ಬೆಂಗಳೂರಿನಲ್ಲಿ ಇನ್ನೂ ಹಲವು ಕೀರ್ತನಗಳಾಗಬೇಕೆಂದು ಜನರು ಕುತೂಹಲಪಡುತ್ತಿರುವರು.

ಸಮಾಜಪ್ರೇಮಿ.

ದರ್ಬಾರ್‌ಡೇ ಮಹೋತ್ಸವವು.

ಟಿ. ನರಸೀಪುರ.

ಟಿ. ನರಸೀಪುರದ ಗ[illegible]|| ಗರ್ಲ್ಸ್‌ಸ್ಕೂಲಿನಲ್ಲಿ 1929 ನೇ ವರ್ಷದ ದರ್ಬಾರ್‌ಡೇಮಹೋತ್ಸವವು ಅಮಲ್ದಾರ್ ಮ|| ರಾ|| ಬಿ. ಕೆ. ಸುಬ್ಬರಾವ್ ಬಿ.ಎ., ಎಲ್.ಎಲ್.ಬಿ., ಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಆ ಸ್ಕೂಲ್ ಹೆಡ್‌ಮಾಸ್ಟರ್ ಮ|| ರಾ|| ಡಿ. ಸುಬ್ಬರಾಯರವರಿಂದ ರಚಿಸಲ್ಪಟ್ಟ ಪತಿವ್ರತಾನಾಟಕವು ಬಾಲಕಿಯರಿಂದ ಬಹಳ ಸ್ವಾರಸ್ಯವಾಗಿ ಅಭಿನಯಿಸಲ್ಪಟ್ಟಿತು. ಅನೇಕ ದೊಡ್ಡಮನುಷ್ಯರು ಕಟ್ಟಡವು ಕಿಕ್ಕಿರಿಯುವಂತೆ ದಯಮಾಡಿಸಿ ಹೆಡ್‌ಮಾಸ್ಟರನ್ನು ತುಂಬಾ ಶ್ಲಾಘಿಸಿದರು. ಉಪಾಧ್ಯಾಯರೆಲ್ಲರೂ ಸೌಹಾರ್ದಹೃದಯದಿಂದ ಕೆಲಸಮಾಡುತ್ತಿರುವರು. ಅಧ್ಯಕ್ಷರ ಭಾಷಣವು ಮುಗಿದನಂತರ ರಾಜಾಶೀರ್ವಾದದೊಡನೆ ಸರ್ವರಿಗೆ ಗಂಧಪುಷ್ಪತಾಂಬೂಲಗಳು ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಪಂಚಾಚಾರ್ಯ ಪಂಚಾಂಗಂ.

ಓ ಪ್ರಿಯಬಾಂಧವರೇ ?

ನಾವುಗಳು ಮುಂದಿನ ಶ್ರೀ ಪ್ರಮೋದೂತನಾಮ ಸಂವತ್ಸರದ ಪಂಚಾಂಗವನ್ನು ಗುಣಿಸಿ ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಮುದ್ರಣಾಲಯದಲ್ಲಿ ಮುದ್ದಾದ ಅಕ್ಷರಗಳಿಂದ ಅಂದವಾಗಿ ಮುದ್ರಿಸಿ ಬಿಕರಿಗೆ ಸಿದ್ಧಮಾಡಿರುತ್ತೇವೆ. ಮತ್ತು ಈ ಪಂಚಾಂಗದ ಮೇಲ್ಭಾಗದಲ್ಲಿ ಶ್ರೀ ವೀರಶೈವ ಮಹಾಮತವನ್ನು ಸ್ಥಾಪಿಸಿದ ಲಿಂಗೋದ್ಭವರಾದ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಗಳನ್ನೂ ಒಳಭಾಗದಲ್ಲಿ ಈಗಿರುವ ರಂಭಾಪುರಿ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನೂ ಈಗಿರುವ ಉಜ್ಜಯಿನೀ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನೂ ವೇ|| ಪಂ|| ಕಾಶೀನಾಥಶಾಸ್ತ್ರಿಗಳವರ ಭಾವಚಿತ್ರವನ್ನೂ ಇಡಿಸಿರುತ್ತೇವೆ. ಅಲ್ಲದೆ ಈ ಪಂಚಾಂಗದಲ್ಲಿ ಮತಸ್ಥಾಪಕರ ಪುಣ್ಯದಿನಗಳನ್ನೂ ಸ್ಮಾರ್ತ ವೈಷ್ಣವಾದಿಗಳ ಏಕಾದಶಿ ನಿರ್ಣಯವನ್ನೂ ಪೌರ್ಣಿಮಾಮಾವಾಸ್ಯಾದಿ ನಿಯಮಗಳನ್ನೂ ದರ್ಶ ಪಿತೃಯಜ್ಞ ಮುಂತಾದ ಕರ್ಮಗಳ ಕಾಲವನ್ನೂ ಬರೆದಿರುತ್ತೇವೆ. ಇದೂ ಅಲ್ಲದೆ ಅಶ್ವಿನ್ಯಾದಿ ಅನೂರಾಧ ಮಳೆಯವರಿಗೆ ಪ್ರತಿಚರಣಗಳಿಗೂ ವಾಹನಗಳನ್ನು ತೆಗೆದು ಈ ಜಗದಾಧಾರವಾದ ಮಳೆಗಳು ಯಾವ ದೇಶಕ್ಕೆ ಎಷ್ಟು ಭಾಗ ಬೀಳುತ್ತವೆಂಬುವದನ್ನು ಬಹು ಶೋಧನದಿಂದ ಬರೆದಿರುವೆವಲ್ಲದೆ, ಆ ವರ್ಷ ದ್ವಾದಶರಾಶಿಯವರಿಗೆ ಜರುಗಬೇಕಾದ ಶುಭಾಶುಭ ಫಲಗಳನ್ನೂ ವಿವಾಹ ಉಪನಯನ ಗೃಹಪ್ರವೇಶಾದಿ ಮುಹೂರ್ತಗಳ ಕಾಲವನ್ನೂ ಪ್ರತಿ ತಿಂಗಳುಗಳಲ್ಲಿಯೂ ಚಂದ್ರಶೃಂಗೋನ್ನತಿಯಿಂದುಂಟಾಗುವ ಮಳೆಬೆಳೆಗಳ ಸ್ವಾರಸ್ಯವನ್ನೂ ಪ್ರತಿಪದಾರ್ಥಗಳ ತೇಜಿಮಂದಿ ಮುಂತಾದ ವ್ಯಾಪಾರಲಕ್ಷಣವನ್ನೂ ಸಹಾ ವಿಶದವಾಗಿ ಬರೆದಿರುತ್ತೇವೆ. ಹಾಗೂ ಅನೇಕ ಮುಹೂರ್ತ ಪ್ರಶ್ನೆ ಭಾಗಗಳಿಂದ ತುಂಬಿತುಳುಕುತ್ತಿರುವ ೬೪ ಪುಟಗಳಿಂದ ಕೂಡಿರುವ ಈ ನಮ್ಮ ಪಂಚಾಂಗಗಳನ್ನು ಪ್ರತಿಯೊಬ್ಬ ಮಹನೀಯರು ತರಿಸಿಕೊಂಡು ನಿತ್ಯವೂ ಜಗದ್ಗುರುಗಳವರ ದರ್ಶನದಿಂದ ಧನ್ಯರಾಗಿ ಮುಂದೆ ಪಂಚಾಂಗವನ್ನು ಜಾಗ್ರತೆ ತಯಾರಿಸಲು ಉತ್ತೇಜನ ಕೊಡಬೇಕಾಗಿ ಸವಿನಯ ಪ್ರಾರ್ಥನೆಯು. ಹೆಚ್ಚಾಗಿ ಬೇಡುವವರು ಪತ್ರವ್ಯವಹಾರದಿಂದ ತಿಳಿದುಕೊಳ್ಳತಕ್ಕದ್ದು.

ಪಂಚಾಂಗ ೧ ಕ್ಕೆ ೪ ಆಣೆ.

ಪಂಚಾಂಗಕರ್ತ,
ಬ್ರಹ್ಮಶ್ರೀ ಸಿದ್ಧಾಂತಿ ಓಂಕಾರಶಾಸ್ತ್ರಿಗಳು,
ಹಳ್ಳೂರು ಬೃಹನ್ಮಠ ಪೋಸ್ಟ್ ಕುಮ್ಸಿ ನಕಟ್ಟಿ,
ಜಿಲ್ಲಾ ಧಾರವಾಡ.

WANTED.

Candidates for Telegraph and Station Masters' Classes. Full particulars and Railway Fare Certificate on receipt of 2 annas Stamp.

Apply to:—

INPERIAL TELEGRAPH COLLEGE,
NAI SARAK, DELHI.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುಂಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ !!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನೆಸಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದಕ್ಕೆ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ), **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [19]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, [illegible] 1 ಮಂಗಳೂರು, ದ. ಕ.

ಸಕಲ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಸ್ತ್ರೀಗಿರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧೆ

ಧಿಕ್ಕರಿಸಿದರೆ ಸ್ತ್ರೀಗಳತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, [illegible]ವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು [illegible]ವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು [illegible] ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. ([illegible]) ವನಸ್ಪತಿ-ತಕಪುಷ್ಪ, ಕಾಲಿಮಕಂದ, ಮಧುಕಂದ, ಜರಾಕಂದ, ಕಾಲೀಮೂಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ [illegible]ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀ[illegible], ಎವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಕಮಿಪತ್ರಿ, ವಿಕಾಪತ್ರಿ, ಮದನಮಸ್ತ, ರಕ್ತಪುಂಸ, ಕಮರ[illegible] ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಬೋರಿ, ಮುಂಗಲೀ[illegible], ಮರ್ದಸೀಕಟ್ಟಿಗೆ, ಶತಾವರಿ, ಸಕೀಲಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವಿಬೇಂಡಿಬೀರು, ಅಮೃತ[illegible], ಇಸಬಗೋಳ ಧುತ್ರಾ, ಆವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ [illegible], ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟ[illegible] 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲೆಯು ಮತ್ತು ರಾತ್ರಿ ಭೋಜನಾನಂತರ 2 ತೊಲೆಯು ಒಂದು [illegible] ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು [illegible] ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. [illegible]ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿ.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಜಿಂಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಸಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ[illegible] ನಾಶಬಾರದಿರೋಣ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು [illegible]ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [23]

ಪತ್ತೆ :—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟಿ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಿಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯು ಶೀಶೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[36] (೮೪೮) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಧರಿಸುತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೂ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[16] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಷ್ಟು

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:— ... ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚಿಸುತ್ತದೆ. ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[25] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಸ್ವದೀಲೋಕವಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ ನೇ ಡಿಶಂಬರ್ ೧೯೨೯ [ಸಂಚಿಕೆ ೩೩.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೦ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಜಗದಾಚಾರ್ಯರ ಮನೋಹರವಾದ ಬ್ಲಾಕಿನೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಆಚಾರ್ಯರ ಮಹಿಮೆಯು ಅಗಾಧವಾದದ್ದು.

ಈಗಿನಕಾಲದ ವಿರಹತಾಪಗಳಿಂದಲೂ, ಕುಚೇಷ್ಟೆಯಿಂದಲೂ, ಕೂಡಿದ ನಾಟಕಗಳಿಗೆ ಹೋಗದ ಮತ್ತು ಮನಸ್ಸುಮಾಡದ ಜನರು ಹಿನ್ನಿನ ದಿವಸ ತಿಳಿದೋ ಅಥವಾ ತಿಳಿಯದೆಯೋ ಕಾಡು ಸಿದ್ಧೇಶ್ವರ ಕಂಪನಿಯವರು ಮಾಡಿದ ಭಕ್ತಿಸಾಮ್ರಾಜ್ಯ ನಾಟಕಕ್ಕೆ ಹೋಗಿತ್ತು. ಸೂಜಿಗಲ್ಲನ್ನು ಕಬ್ಬಿಣವು ಎಳೆಯುವಂತೆ ಕುಲಗುರುವಿನ ಅಂತರಾತ್ಮವು ಅಂತರ್ಭಾಗದಿಂದ ಎಳೆದು ಮನಸ್ಸನ್ನು ವಿಲಂಬನ ಮಾಡಿಸಿತು. ಮನುಷ್ಯನಿಗೆ ಸತ್ಕಾರ್ಯದಲ್ಲಿ ವಿಘ್ನವೊದಗುವಂತೆ ಈ ನನ್ನ ಪ್ರಥಮ ನಾಟಕಾವಲೋಕನಕ್ಕೆ ವಿಘ್ನಗಳು ಬಂದವು. ಆದರೂ ಇಂಥವೆಲ್ಲವನ್ನು ಶ್ರೀ ಜಗದ್ಗುರು ದಾರುಕಾಚಾರ್ಯರು ತಮ್ಮ ಪ್ರಭಾವದಿಂದ ದೂರೀಕರಿಸಿ ನಾಟಕವು ಒಳ್ಳೇ ಹರ್ಷಿತವಾಗಿ ಕಂಟಕಗಳಿಲ್ಲದೆ ನೆರವೇರಿತು. ಪ್ರಭೆಯು ತನ್ನ ಬರವಣಿಗೆಯಿಂದ ಆಚಾರ್ಯರ ಹಾಗೂ ಶಕ್ತಿವಿಶಿಷ್ಟಾದ್ವೈತ ಮತದ ಪ್ರಭಾವವನ್ನು ಹಬ್ಬಿಸುತ್ತದೆ. ಈ ನಾಟಕವು ಅದನ್ನು ತನ್ನ ಕೃತಿಯಿಂದ ಮಾಡಿ ತೋರಿ ಪ್ರಭಾವವನ್ನು ಹೆಚ್ಚಿಸುತ್ತದೆ. ಯಾವ ನಾಟಕದಲ್ಲಿ ನೋಡಿದರೂ ಸುಖದುಃಖಗಳು ಸಮವಾಗಿ ಬರುವದಿಲ್ಲ. ಆದರೆ ಈ ವ್ಯಾಖ್ಯಾನದಲ್ಲಿ ಪಂಡಿತ ಶ್ರೀಕಂಠಶಾಸ್ತ್ರಿಗಳು ಪಲವಡಿಯವರು ಸುಖದುಃಖಗಳನ್ನು ಸಮಾನವಾಗಿಯೂ ಒಯ್ದಿರುವರು. ಈ ಶಿವಾವತಾರ ನಾಟಕವು, ಗುರುಹಿರಿಯರ ಭಕ್ತಿಯನ್ನು ವೀರಶೈವ ಮತದ ವಿವಿಧ ವಿಷಯಗಳನ್ನೂ, ಕಟ್ಟಳೆಗಳನ್ನೂ, ಯಮನು ನೂಡುವ ಶಾಸನಗಳನ್ನೂ, ಅಲ್ಲದೆ ಯಮನು ಶಿವಶರಣರಮೇಲೆ ಕೈಯಿಕ್ಕಿದ ಪಶ್ಚಾತ್ತಾಪಹೊಂದಿದುದನ್ನೂ, ಶ್ರೀ ಜಗದ್ಗುರು ದಾರುಕಾಚಾರ್ಯರ ಮಹಿಮೆಯನ್ನೂ ಒಳ್ಳೇ ಭಕ್ತಿಪರ ಜನರಲ್ಲಿ ವ್ಯಸನ ಸುರಿಗಳಿಂದ ಕೂಡಿ ಜನರಿಗೆ ಗುರೋಪದೇಶವನ್ನು ಹೇಳುತ್ತದೆ. ಹಿಂದುಸ್ಥಾನದ ವೀರಶೈವರು ಈ ಪುಸ್ತಕವನ್ನು ತರಿಸಿ ಓದತಕ್ಕದ್ದು. ಅಲ್ಲದೆ ಆ ನಾಟಕವನ್ನಾದರೂ ಸಾಧ್ಯವಾದಮಟ್ಟಿಗೆ ನೋಡಬೇಕು. ಇನ್ನು ಜಗದಾಚಾರ್ಯರಿಗೂ ವೀರಶೈವ ಪಟ್ಟಾಧಿಕಾರಿಗಳಿಗೂ, ಭಕ್ತಮಹಾಶಯರಿಗೂ ವಿನಯಪೂರ್ವಕ ಬೇಡುವದೇನಂದರೆ, ಇಂಥ ನಾಟಕವು ಗುರುಭಕ್ತಿಯನ್ನು ಬೋಧಿಸುತ್ತ ಹೋಗಲಿಕ್ಕೆ ಆಶ್ರಯಕೊಡುವರೆಂದು ನಂಬಿದ ಮಾತಾಗಿದೆ. ಈ ನಾಟಕದಲ್ಲಿ ಸ್ತ್ರೀಯರು ಪುರುಷರು ಇರುವರು. ಈ ಕಂಪನಿಯವರು ಆಡುವ ನಾಟಕಗಳಲ್ಲಿ ಇದೇ ಮೊದಲನೆಯದಾಗಿರುತ್ತದೆ. ಮುಂದೆ ಆಗುವ ನಾಟಕಗಳಿಗಾದರೂ ಜಗದಾಚಾರ್ಯರು ತಮ್ಮ ಮಹಿಮೆಯನ್ನು ತೋರಿಸೇತೋರಿಸುವರು.

ಓರ್ವ ಪ್ರೇಕ್ಷಕ,
ಧಾರವಾಡ.

ಶ್ರೀಯುತ ತುಮ್ಮಿನಕಟ್ಟಿ ಐರಣಿ ಕೋಲ ಶಾಂತಪ್ಪನವರು. ದಾವಣಗೆರೆ.

ರಾಜಧಾನಿಗೆ ಬಂದಿರುವ ಶ್ರೀ ಹುಲಗೇರಿ ಹಾಲ ಸಿದ್ಧೇಶ್ವರ ಪ್ರಾಸಾದಿಕ ಲೋಕಸೇವಕ ಸಂಗೀತ ನಾಟಕಮಂಡಳಿಯವರು ನೂತನವಾಗಿ ಕೂಡಿಸಿ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿಯೂ ರಾಜಧಾನಿಯ ಮಹಾಜನಗಳಮುಂದೆಯೂ, ಅಭಿನಯಿಸಿ ಪ್ರಖ್ಯಾತಿಯನ್ನು ಪಡೆದ "ಬಿ. ಎ." ಎಂಬ ಸಾಮಾಜಿಕ ನಾಟಕವನ್ನು ರಚಿಸಿದವರೇ ಮೇಲ್ಕಂಡ ಶ್ರೀಯುತ ತುಮ್ಮಿನಕಟ್ಟಿ ಐರಣಿ ಕೋಲಶಾಂತಪ್ಪನವರು. ಪ್ರಾರಂಭದಲ್ಲಿ ಇವರನ್ನು ಒಬ್ಬ ನಾಟಕ ಕರ್ತರೆಂದು ವರ್ಣಿಸಬೇಕಾಗಿದ್ದರೂ, ನಮ್ಮ ಮೈಸೂರು ದೇಶದಲ್ಲಿ—ಅಷ್ಟೇಕೆ—ಇಡೀ ನಮ್ಮ ಕರ್ನಾಟಕದಲ್ಲಿ ಇವರೊಂದು ಅಮೂಲ್ಯ ರತ್ನದಂತೆ ಒಪ್ಪುತ್ತಿರುವರೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ. ಉಜ್ವಲ ರಾಷ್ಟ್ರಭಕ್ತರೆಷ್ಟರೋ! ದೇಶಭಕ್ತರೆಷ್ಟರೋ! ಧರ್ಮೋಜ್ಜೀವಿಗಳೆಷ್ಟರೋ! ಪರೋಪಕಾರಿಗಳೆಷ್ಟರೋ! ಸುಧಾರಕಶ್ರೇಷ್ಠರೆಷ್ಟರೋ! ಎಷ್ಟು ಕ್ಷೀಣಿಸಿದರೂ ಇನ್ನೂ ಹೇಳಬೇಕಾದ ಗುಣಗಳು ಉಳಿದೇ ಉಳಿಯುವುವು. ಮಹಾತ್ಮಾ ಗಾಂಧಿಯವರೇ ಮೊದಲಾದ ಜಗತ್ಪ್ರಸಿದ್ಧರಾಷ್ಟ್ರ ಮುಖಂಡರು ದೇಶದ ಉದ್ಧಾರಕ್ಕಾಗಿ ಹಗಲೂ ರಾತ್ರೆ ಅವಿಶ್ರಾಂತ ಶ್ರಮವಹಿಸಿ ಹೋರಾಡುತ್ತಿರುವಂತೆ, ಮೇಲ್ಕಂಡ ಶ್ರೀಯುತ ಕೋಲ ಶಾಂತಪ್ಪನವರಾದರೂ, ನಮ್ಮ ಕರ್ನಾಟಕದೇಶದಲ್ಲಿ ಆಗುತ್ತಿರುವ ಧರ್ಮ ನಾಶವನ್ನು ಹೋಗಲಾಡಿಸಬೇಕೆಂದು, ಸರ್ವೋತ್ತಮವಾದ "ಬಿ. ಎ." ಎಂಬ ಸಾಮಾಜಿಕ ನಾಟಕವನ್ನು ರಚಿಸಿದರು. ಈ ನಾಟಕದ ಸಮಸ್ತ ಪಾತ್ರವರ್ಗದವರು ತಮ್ಮ ಅಸಾಧಾರಣವಾದ ಅಭಿನಯಕೌಶಲ್ಯದಿಂದ ಪ್ರೇಕ್ಷಕರಿಗೆ ಹೃದಯಂಗಮವಾಗುವಂತೆ ತೋರಿಸುವ ಸನಾತನಧರ್ಮದ ನಿಜಸ್ವರೂಪ, ಮಾತಾಪಿತೃಭಕ್ತಿ, ಸ್ವಾಮಿಭಕ್ತಿ, ದೇಶಭಕ್ತಿ, ಇತ್ಯಾದಿ ವಿಷಯಗಳು ಎಂತಹ ಮೂರ್ಖನ ಮನಸ್ಸಿಗಾದರೂ ನಾಟಿ ಬಲವಾಗಿ ಬೇರೂರುವದರಲ್ಲಿ ಸಂದೇಹವೇ ಇಲ್ಲ. ಈ ನಾಟಕವನ್ನು ಪರಾಂಬರಿಸಿದ ಶ್ರೀಮನ್ಮಹಾರಾಜರವರು ಪರಮಸಂತುಷ್ಟರಾಗಿ ಕಂಪೆನಿಯ ಮಾಲಕರಾದ ಶ್ರೀ|| ಚೆಟ್ಟಿಯಪ್ಪನವರಿಗೆ ಯೋಗ್ಯಸನ್ಮಾನವನ್ನು ಮಾಡಿ ತಮ್ಮ ಕೃಪಾಶ್ರಯವನ್ನು ಪ್ರಕಟಿಸಲು ಅಪ್ಪಣೆಯನ್ನು ದಯಪಾಲಿಸಿರುವರು. ಅರಮನೆಯ ಲೀಟ್‌ಮುಜರ್‌ಬಕ್ಷಿ ರಾಜಕಬಿಭೂಷಣ ಶ್ರೀ ಚಿಕ್ಕಲಿಂಗರಾಜೇ ಅರಸಿನವರು, ದರ್ಬಾರ್ ಬಕ್ಷಿಯವರಾದ ಶ್ರೀ|| ಎ. ಲಿಂಗರಾಜೇ ಅರಸಿನವರು ಹಾಗೂ ರಾಜಧಾನಿಯ ಸನಾತನಧರ್ಮಸಂಜೀವಿನೀ ಸಭೆಯವರು ಮೇಲ್ಕಂಡ ನಾಟಕಾವಲೋಕನದಿಂದ ಪರಮಸಂತೋಷಭರಿತರಾಗಿ ಮಹತ್ವದ ಮಾನಪತ್ರಗಳನ್ನು ಕೊಟ್ಟಿರುವರು.

ಈ ನಾಟಕವನ್ನು ಅತ್ಯಂತ ಮನೋಹರವಾದ ರೀತಿಯಲ್ಲಿ ಅಭಿನಯಿಸಿ ನಾಟಕಕರ್ತರಿಗೂ ಹಾಗೂ ತಮಗೂ ವಿಶೇಷ ಕೀರ್ತಿಯನ್ನೂ ಪುಣ್ಯವನ್ನೂ ಗಳಿಸುತ್ತಿರುವ ಈ ಕಂಪೆನಿಯ ಮಾಲಕರಾದ ಶ್ರೀ|| ಚೆಟ್ಟಿಯಪ್ಪನವರಿಗೆ, ರಾಜಧಾನಿಯ ಸ್ಯಾಂಡಲ್ ಆಯಿಲ್‌ಫ್ಯಾಕ್ಟರಿಯ ಸೂಪರಿಂಟೆಂಡೆಂಟರೂ, ಕೀರ್ತಿಶೇಷರಾದ ನಾಟಕಶಿರೋಮಣಿ ಗಿಬ್ಬೆಡ್ ಅಕ್ಸರು ಎ. ವಿ. ವರದಾಚಾರ್ಯರ ಭಾವಂದಿರೂ ಆದ ಶ್ರೀಮಾನ್ ಆರ್. ರಾಮಾನುಜಯ್ಯಂಗಾರ್‌ರವರು ಕಳೆದ ಶನಿವಾರ ಮೇಲ್ಕಂಡ "ಬಿ. ಎ." ನಾಟಕಕ್ಕೆ ದಯಮಾಡಿಸಿ, ನಾಟಕಾವಲೋಕನದಿಂದ ಅತ್ಯಂತ ಆನಂದಭರಿತರಾಗಿ ಒಂದು ರತ್ನಖಚಿತವಾದ ಶೃಂಗಾರದ ಉಂಗುರವನ್ನೂ, ಒಂದು ಧನುಸ್ಸನ್ನೂ ಪಾರಿತೋಷಕವಾಗಿ ಕೊಟ್ಟರು. ನಿನ್ನೆ ಭಾನುವಾರದ ದಿವಸ ರಾಜಧಾನಿಯ ದೊಡ್ಡಮನುಷ್ಯರು ಹಾಗೂ ಮುಖ್ಯ ಮುಖ್ಯ ವರ್ತಕರೆಲ್ಲರೂ ಸೇರಿ ಪೂಜ್ಯವೃದ್ಧಪಿತಾಮಹರಾದ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಹಸ್ತದಿಂದ "ಬಿ. ಎ." ನಾಟಕದಲ್ಲಿ ವಿವೇಕಾನಂದನ ಪಾತ್ರವನ್ನು ಅಭಿನಯಿಸಿದ ಶ್ರೀ|| ಚೆಟ್ಟಿಯಪ್ಪನವರಿಗೆ (ಮಾಲಕರು) ಒಂದು ಬೆಳ್ಳಿಯ ಕಿರೀಟವನ್ನೂ, ಚಂದ್ರಕಾಂತ, ಬಸವಂತ ಮತ್ತು ಸುಶೀಲೆ ಎಂಬ ಪಾತ್ರಗಳನ್ನು ಅಭಿನಯಿಸಿದ ಶ್ರೀ|| ಗಳಾದ ತುಕಾರಾಮಪ್ಪನವರು, ಚಿಕ್ಕಚೆಟ್ಟಿಯಪ್ಪನವರು ಮತ್ತು ಮುದ್ದೀರಪ್ಪನವರು ಎಂಬ ಮೂವರು ನಟಶ್ರೇಷ್ಠರಿಗೆ ಮೂರು ಸುವರ್ಣಪದಕಗಳನ್ನೂ ಬಹುಮಾನವಾಗಿ ಕೊಡಿಸಿದರು. ಶ್ರೀಯುತಕೋಲ ಶಾಂತಪ್ಪನವರು ಇಂತಹ ಇನ್ನೂ ಅನೇಕ ಸಾಮಾಜಿಕ ನಾಟಕಗಳನ್ನು ಬರೆಯುವಂತೆಯೂ, ಶ್ರೀ|| ಚೆಟ್ಟಿಯಪ್ಪನವರು ಅವುಗಳನ್ನು ಇನ್ನೂ ಮನೋಹರವಾಗಿ ಅಭಿನಯಿಸಿ ವಿಶೇಷವಾದ ದೇಶ ಸೇವೆಯನ್ನು ಮಾಡಿ ಧನ್ಯರಾಗುವಂತೆಯೂ ಅನುಗ್ರಹಿಸಲೆಂದು ಆ ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಎಗ್. ಪ್ರಸನ್ನಯ್ಯ.

ಸ್ವೀಕಾರ.

ಚಿಕ್ಕಮಗಳೂರು ತಾಲೂಕು ಅಂಬಳೆ ಹೋಬಳಿ ಮುಗುಳವಳ್ಳಿ ಗ್ರಾಮವಾಸಿಗಳಾದ ವೇ|| ಮಠದ ಮುಪ್ಪಸಯ್ಯನವರು, ತಮಗೂ ತಮ್ಮ ಚಿರಂಜೀವಿಗಳಿಗೂ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 2¾ ರೂಪಾಯಿಗಳನ್ನು ರವಾನಿಸಿರುತ್ತಾರೆ.

ಈ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

(ಮಹಾತ್ಮಾ ಗಾಂಧಿಯವರ ಉಪದೇಶ)

ಹಳ್ಳಿಯ ದಾರಿದ್ರ್ಯಹರಣವು

೧೪ ನೆಯ ನವಂಬರ್ ಯಂಗ್‌ಇಂಡಿಯಾದಿಂದ ತೆಗೆದ ಅನುವಾದವು.

ಮಹಾತ್ಮಾಜಿಯವರು ತಾವು ಹೊರಡಿಸುತ್ತಿರುವ ಜಯಭಾರತಿ ಎಂಬ ಪತ್ರಿಕೆಯಲ್ಲಿ ಹಳ್ಳಿಯ ಸುಧಾರಿಸುವಿಕೆಯೆಂಬ ಲೇಖವನ್ನು ಇಂಗ್ಲಿಷಿನಿಂದ ಬರೆದಿರುವರು. ಅದು ಇಂಗ್ಲಿಷಿನಲ್ಲಿದ್ದು ನಮ್ಮ ಕನ್ನಡ ಬಲ್ಲವರು ಓದುವದರ ಸಲುವಾಗಿ ಶಕ್ತ್ಯಾನುಸಾರ ಅನುವಾದಮಾಡಿದ್ದಾಗಿದೆ. ಮಹಾತ್ಮಾಜಿಯವರು, ಮಿ|| ಬ್ರೈನ್, ಗರಗೊನ್ ಜಿಲ್ಲೆಯ ಕಮಿಶನರ ಡೆಪ್ಯೂಟಿಯವರು ಬರೆದ ಪುಸ್ತಕದಿಂದ ತಮ್ಮ ಲೇಖವನ್ನು ಸ್ಪಷ್ಟಪಡಿಸಿರುವರು. ಮಿ|| ಬ್ರೈನೆಯವರು ಸರಕಾರಿ ನೌಕರರಾದ್ದರಿಂದ ತಮ್ಮ ಬರವಣಿಗೆಯಿಂದ ಮಾಡಿದಷ್ಟು ಕೃತಿಯಿಂದ ಮಾಡಿಲ್ಲವೆಂದು ಮಹಾತ್ಮಾಜಿಯವರು ಬರೆದಿರುವರು. "ಅವರು ಬರೆದ ಪುಸ್ತಕವು ಶ್ರೇಷ್ಠತರವಾದದ್ದು ಪ್ರತಿಯೊಂದು ಪುಟವು ಅವರ ವಿಧೇಯತ್ವವನ್ನು ಸಿದ್ಧಪಡಿಸುವದು. ಗ್ರಂಥಕಾರರು ಅದನ್ನು ಬಹಳ ಹೊಗಳುವರು. ಪ್ರತಿಯೊಬ್ಬನು ಹಳ್ಳಿಗಳ ಮೇಲೆ ದಯವನ್ನು ತೋರಿಸಿ ತಿದ್ದುವ ಮನಸ್ಸುಳ್ಳವನಾಗಿದ್ದರೆ, ಅವರು ಬರೆದ ಪುಸ್ತಕವನ್ನು ತರಿಸಿ ಓದಬೇಕು" ಎಂದು ಮಹಾತ್ಮಾಜಿಯವರು ಬರೆದಿರುವರು. [illegible] ಬ್ರೈನೆ[illegible] ಪುಸ್ತಕದ ಆಧಾರದಿಂದ ಮಹಾತ್ಮಾಜಿಯವರು [illegible]ಯಲ್ಲಿ ಹಳ್ಳಿಯವನು ಮಾಡುವ ತಪ್ಪುಗಳನ್ನು ತಿಳಿಸಿರುವರು.

೧. ಬೇಸಾಯಗಾರನ ಉದ್ಯೋಗದ ರೀತಿಗಳು ಕೆಟ್ಟವು. ೨. ಹಳ್ಳಿಯು ಅಸ್ವಚ್ಛವಾದದ್ದು, ಅವನು ಮಲಿನವಾದ ಮನೆಯಲ್ಲಿದ್ದು ಬೇನೆಯಿಂದ ಬಳಲುತ್ತಿರುವನು. ೩. ಸಾಂಕ್ರಾಮಿಕ ರೋಗಗಳು ಅವನನ್ನು ಅಂಟಿಕೊಂಡೇ ಇರುತ್ತವೆ. ೪. ಹಣವನ್ನು ಮನಬಂದಂತೆ ಖರ್ಚುಮಾಡುವನು. ೫. ತನ್ನ ಹೆಂಗಸರನ್ನು ಹೀನಸ್ಥಿತಿಯಲ್ಲಿಯೂ, ಗುಲಾಮರ ಸ್ಥಿತಿಯಲ್ಲಿಯೂ ಇಟ್ಟಿರುತ್ತಾನೆ. ೬. ತನ್ನ ಮನೆಯ ಸಲುವಾಗಿಯೂ, ಹಳ್ಳಿಯ ಸಲುವಾಗಿಯೂ ಕಾಳಜೀ ತೆಗೆದುಕೊಳ್ಳುವದಿಲ್ಲ; ಮತ್ತು ತನ್ನ ಒಳಗಿನವರನ್ನು, ಓಣಿಯವರನ್ನು ತಿದ್ದಲಿಕ್ಕೆ ವೇಳೆಯನ್ನು ಕಳೆಯುವುದಿಲ್ಲ. ೭. ಅವನು ಎಲ್ಲಾ ಬದಲಾವಣೆಗಳನ್ನು ವಿರೋಧಿಸುವನು. ಅವನು ಅವಿದ್ಯಾವಂತನು; ಸುಧಾರಿಸಿದ ಹಳ್ಳಿಗಳಲ್ಲಿ, ಮತ್ತು ಪಟ್ಟಣಗಳಲ್ಲಿರುವ ಜನರ ನಡೆವಳಿಗಳನ್ನು ಅನುಸರಿಸುವದಕ್ಕೆ ಯತ್ನಿಸುವದಿಲ್ಲ.

ಮಹಾತ್ಮಾಜಿಯವರು ಮಿ|| ಬ್ರೈನೆಯವರು ಬರೆದ ಮೊದಲನೆಯತಪ್ಪಿಗೆ ತಮ್ಮ ಒಪ್ಪಿಗೆಯನ್ನಿತ್ತಿಲ್ಲ. ಎಷ್ಟೋ ಶಾಸ್ತ್ರಜ್ಞರು ಹಿಂದೂಸ್ಥಾನದ ಒಕ್ಕಲತನದ ಪದ್ಧತಿಗಳು ಯೋಗ್ಯವಿರುವವು" ಎಂದು ಬರೆದಿರುವರು. ಎರಡನೆಯ ಮೂರನೆಯ ತಪ್ಪುಗಳಿಗೆ ಸಮ್ಮತಿಯನ್ನು ಕೊಟ್ಟಿರುವರು. ನಾಲ್ಕನೆಯದು ವಿಶೇಷವಿದೆಯೆಂದು ಹೇಳುವರು; ಅಲ್ಲದೆ ಉಳಿಕೆಯವು ಹಳ್ಳಿಯವನಲ್ಲಿ ನೆಲಗೊಂಡಿರುವವೆಂದು ಬರೆದಿರುವರು. ಈ ಎಲ್ಲಾ ತಪ್ಪುಗಳನ್ನು ಹೋಗಲಾಡಿಸಲಿಕ್ಕೆ ಮಹಾತ್ಮಾಜಿಯವರು ಮಿ|| ಬ್ರೈನೆಯವರ ಪುಸ್ತಕದಿಂದ ಕೆಳಗೆ ತಮ್ಮ ಉಪದೇಶಗಳನ್ನು ಕಾಣಿಸಿರುವರು.

೧. ಉತ್ತಮ ದನಗಳನ್ನು ಕಟ್ಟು. ೨. ಹೊಸ ತರದ ಗಳೆಯದ ಸಾಮಾನುಗಳನ್ನು ಉಪಯೋಗಿಸು. ೩. ಉತ್ತಮ ಬೀಜಗಳನ್ನು ಹೊಲಗಳಿಗೆ ಉಪಯೋಗಿಸು. ೪. ಅರೆಬೇವುಗಿಡದ ಗಾಳಿಗಳನ್ನು ಹಾಕು. ೫. ತಿಪ್ಪೆಯಲ್ಲಿ ಧನಸಂಗ್ರಹದಂತೆ ಗೊಬ್ಬರವನ್ನು ಕಾಯ್ದಿಡು. ೬. ಕಗಣೆಯ ಕುಳ್ಳುಗಳನ್ನು ಮಾಡುವದನ್ನು ಬಿಡಿಸು. ೭. ಹಳ್ಳಿಗಳಲ್ಲಿ ಹಣದ ಸಂಗ್ರಹವಾಗುವಂತೆ ಮಾಡಿ, ಹುಂಡಿಶಾಲೆಗಳನ್ನು ಸ್ಥಾಪಿಸಿ ನಂಬಿಗೆಯವರನ್ನು ಗಳಿಸು. ೮. ನಿನ್ನ ಹೊಲಗಳಿಗೆ ಒಡ್ಡು ಹಾಕು. ಅವುಗಳನ್ನು ಅಲ್ಲಲ್ಲಿಗೆ ಭಾಗಮಾಡಿ ಹೊಲಗಳು ಸಪಾಟವಾಗುವಂತೆ ಮಾಡಬೇಡಾ ಹೊಲಗಳಲ್ಲಿಯೇ ಇಂಗಲಿ. ೯. ಮನದಲ್ಲಿದ್ದ ಹೊಲವನ್ನು ಮತ್ತಿ ಹಾಕಬೇಡಾ. ೧೦. ಹೊಲಗಳಲ್ಲಿ ಭಾವಿಗಳನ್ನು ಸಂಗ್ರಹಿಸಿ ಹೊಲಗಳಿಂದ ಪೂರ್ಣ ವರ್ಷದ ಬೆಳೆಯನ್ನು ತಕ್ಕೋ. ೧೧. ಒಡ್ಡುಬಾಂದುಗಳ ಮೇಲೆ ಹಣ್ಣು ಹಂಪಲದ ಅಥವಾ ಬೇಸಾಯ ಸಂಪಿಗೆಗಳಿಗೆ ಉಪಯೋಗವಾಗುವ ಗಿಡಗಳನ್ನು ಬೆಳಸು, ಮಾತ್ರ ಕಡಿಯಬೇಡಾ. ೧೨. ನಿನ್ನ ದನಕರುಗಳಿಗೆ ಬೇನೆಬಂದರೆ, ನೀನು ತೆಗೆದುಕೊಂಡಂತೆ ಅವಕ್ಕಾದರೂ ಪರಾಂಬರಿಕೆಯನ್ನು ಕೊಡು. ೧೩. ಹೊಲದಲ್ಲಿ ಬೆಳೆಗಳನ್ನು ನಾಶಮಾಡುವ ಪ್ರಾಣಿಗಳನ್ನು ಯುಕ್ತಿಯಿಂದ ನಾಶಮಾಡು. ೧೪. ದನಗಳಿಗೆ ಹುಲ್ಲುಭೂಮಿಗಳನ್ನು ಸಂಗ್ರಹಿಸು. ೧೫. ಅರ್ಧ ನಿನ್ನ ಹೊಲದ ಭಾಗವನ್ನು ಹಸನಮಾಡು ಉಳಿದದ್ದನ್ನು ದನಗಳಿಗೆ ಮೇಯಿಸಲಿಕ್ಕೆ ಬೇರೆ ಇಟ್ಟುಕೊ. ೧೬. ನೀನು ನಿನ್ನ ಹೊಲಗಳಿಗೆ ಭಾವಿಯ ನೀರನ್ನು ಉಪಯೋಗಿಸಬೇಕಾದರೆ ಕಪ್ಪಲೆಯ ನೀರನ್ನು ನಳಗಳಿಂದ ಬೇರೆಬೇರೆ ಭಾಗಗಳಿಗೆ ಭೂಮಿಯೊಳಗಿಂದ ಹಾಯಿಸಿ ನೀರನ್ನುಣಿಸು. ೧೭. ಉಸುಬು ದಿನ್ನೆಗಳನ್ನು ಹಾಗೆಯೇ ಬಿಡಬೇಡಾ ಅವುಗಳಲ್ಲಿ ಬೆಳೆಯುವಂಥ ಬೆಳೆಗಳನ್ನು ಬೆಳೆದುಕೊ. ೧೮. ಒಂದುವೇಳೆ ನೀನು ಎಲ್ಲಿಂದಾದರೂ ನೀರಿನ ಕಾಲುವೆಗಳನ್ನು ತರಬೇಕಾದರೆ, ಅವು ಸರಳರೇಖೆಯಲ್ಲಿ ಇರಲಿ.

ಮಹಾತ್ಮಾಜಿಯವರು ಮೇಲಿನ ಕಟ್ಟಳೆಗಳನ್ನು ಹೊಗಳುವರು. ಅವರು ಕೆಲವು ಆಶ್ರಮಗಳಲ್ಲಿ ನವೀನ ತರದ ಗಳೆಯದ ಸಾಮಾನುಗಳನ್ನು ಉಪಯೋಗಿಸಿ ನೋಡಿರುವರಂತೆ. ಆದರೆ ಅವರಿಗೆ ಫಲವು ತೀವ್ರವಾಗಿ ಬರಲಿಲ್ಲವೆಂದು ಬರೆದಿರುವರು. ಯಾಕೆಂದರೆ, "ಕಷ್ಟದಿಂದ ಫಲವು" ಎಂಬ ಗಾದೆಯಂತೆ ನಾವು ಕಷ್ಟಪಟ್ಟರೆ ಫಲವು ಸಿಕ್ಕೇಸಿಗುವದು ಆದರೆ ಫಲವು ದೊರೆಯಲಿಲ್ಲವೆಂದು ನಿರುತ್ಸಾಹಿಗಳಾಗಿ ಅದನ್ನು ಬಿಟ್ಟುಬಿಡಕೂಡದು. ಒಕ್ಕಲಿಗನು ಅನುಸರಿಸಲಿಕ್ಕೆ ತಕ್ಕವಾದ ಬೇರೆ ವಿಷಯಗಳನ್ನು ಕೆಳಗೆ ಕಾಣಿಸಿದಂತೆ ಅವರು ಬರೆಯುವರು.

ಒಕ್ಕಲಿಗನು ತನ್ನ ಗೊಬ್ಬರದ ಕುಣಿಗಳ ಕಡೆಗೆ ವಿಶೇಷ ಲಕ್ಷ್ಯವಿಡತಕ್ಕದ್ದು ಅವು ಅವನಿಗೆ ದುಡ್ಡಿನ ಚೀಲಗಳು ಇದ್ದಂತೆ. ಹಳ್ಳಿಯವರು ಕುಣಿಗಳನ್ನು ಊರ ಸುತ್ತಲೂ ತಮ್ಮ ಮನೆಯ ಸುತ್ತಲೂ ಹಾಕಿ ಬೇನೆಗಳನ್ನು ತಮ್ಮ ಊರಿಗೆ ತಂದುಕೊಳ್ಳುವರು ಆದುದರಿಂದ ಅವುಗಳನ್ನು ಆಳವಾಗಿ ಅಗಿದು ವಾಸನೆಯು ಬಾರದಂತೆ ಎಚ್ಚರದಿಂದ ನೋಡಿಕೊಳ್ಳಬೇಕು. ಒಕ್ಕಲಿಗನು ತನಗೆ ಬಡತನವು ತನ್ನ ಪೂರ್ವಜರಿಂದ ಬಂದದ್ದೆಂಬ ದುಷ್ಟಭಾವನೆಯನ್ನು ಮರೆಯಬೇಕು. ಹತ್ತುಸಾವಿರ ರೂಪಾಯಿಯ ಅಮಲದಾರನಿಗೂ ವಿರಹತ್ತಿನ ಒಕ್ಕಲಿಗನಿಗೂ ತುಲನಹಚ್ಚಿ ನೋಡಲಾಗಿ ಒಕ್ಕಲಿಗನು ತನ್ನಷ್ಟಕ್ಕೆ ಸ್ವಾತಂತ್ರ್ಯದಿಂದ ಇದ್ದು ಸುಖಿಯಾಗಿರುವನು. ಅದೇ ಆಳಿಸಿಕೊಂಡ ಅಮಲದಾರನು ತನ್ನ ಕೆಲಸವು ಯಾವಾಗ ಹೋಗುವದೋ ತಾನು ತಾನೆಂಬ ಭಾವನೆಯಿಲ್ಲದೆ ಕೊರಗುತ್ತಾನೆ. ಆದುದರಿಂದ ಒಬ್ಬ ಒಕ್ಕಲಿಗನ ಜೀವನವು ಶ್ರೇಷ್ಠವಾದದ್ದು. ಒಕ್ಕಲಿಗನು ತನ್ನ ಮನೆಗಳಿಗೆ ಕಿಡಿಕಿಗಳನ್ನು ಹಚ್ಚಿಸಿ ಹವೆಯಾಡುವಂತೆ ಮಾಡಿಸತಕ್ಕದ್ದು. ತಾನು ಕುಡಿಯುವ ನೀರಿನಭಾವಿಯ ಸುತ್ತಲೂ ಸ್ವಚ್ಛತೆಯನ್ನು ಇಡಬೇಕು. ಈ ಕಾಲದ ಹಳ್ಳಿಯವರು ನಿರಕ್ಷರಿಗಳಾಗಿ, ಆಲಸ್ಯವಂತರಾಗಿ, ಬಡವರಾಗಿ, ಶಿಕ್ಷಿತಜನರಿಂದ ಮೋಸಹೋಗುವವರಾಗಿದ್ದು ಬೇನೆಗಳಿಂದ ಬಳಲುತ್ತಿರುವರು. ತನಗೆ ಬಂದ ಹಣವನ್ನು ಖರ್ಚುಮಾಡಲಿಕ್ಕೆ ತಿಳಿಯದೆ ಒಮ್ಮೆಲೆ ಮದುವೆಗಾಗಲೀ, ನ್ಯಾಯಕ್ಕಾಗಲೀ, ಅಪಥ್ಯಕ್ಕಾಗಲೀ ಖರ್ಚುಮಾಡಿ ಕೈಯಲ್ಲಿ ಏನೂ ಇಲ್ಲದವನಾಗಿ ಕೊರಗುವನು. ಆದರೆ ಎಲ್ಲರೂ ಹೀಗೆಯೇ ವರ್ತಿಸುವದಿಲ್ಲ. ಹಿಂದೂಸ್ಥಾನದಲ್ಲಿ ಎಷ್ಟೋ ಹಳ್ಳಿಗಳು ಸುಧಾರಿಸಿದ ಸ್ಥಿತಿಯಲ್ಲಿ ಇರುವವು. ಅವುಗಳನ್ನು ಉಳಿದ ಹಳ್ಳಿಯವರಾದರೂ ಅನುಸರಿಸಬೇಕು.

ಹಳ್ಳಿಯವರಿಗೆ ಅವರ ಹೆಂಗಸರ ವಿಷಯವಾಗಿ ಮಹಾತ್ಮಾಜಿಯವರ ಉಪದೇಶ.

ಜೀವನಕ್ರಮದಲ್ಲಿ ಹೆಂಗಸು ಪುರುಷನ ಅರ್ಧಭಾಗಿನಿಯಾದ್ದರಿಂದ, ಮನುಷ್ಯನು ತಾನು ಅನುಭವಿಸುವ, ಶಿಕ್ಷಣ, ಸಂಪತ್ತು, ಸ್ವಾತಂತ್ರ್ಯಗಳನ್ನು ಅವಳಿಗಾದರೂ ಕೊಡಲಿಕ್ಕೆಬೇಕು. ಯೋಗ್ಯಶಿಕ್ಷಣ ಕೊಟ್ಟು ಉತ್ತಮ ವರನನ್ನು ತೆಗೆದು ಲಗ್ನಮಾಡಬೇಕು. ಹೆಂಗಸು ಹಡೆಯಬೇಕಾದರೆ, ಹಳ್ಳಿಯವನು ತನ್ನ ಹಳ್ಳಿಯಲ್ಲಿರುವ ಕೀಳಜಾತಿಯ ಸೂಲಗಿತ್ತಿಯನ್ನು ಕರಸಿ ಬಾಣಂತಿಯನ್ನು ಕತ್ತಲಕೋಣೆಯಲ್ಲಿರಿಸಿ ಅನವಶ್ಯಕವಾದ ಕಷ್ಟವನ್ನು ಕೊಡುವನು. ಕೀಳಜಾತಿಯ ಹೆಂಗಸರು ಸೂಲಗಿತ್ತಿಯರು ಏಕೆ ಆಗಬೇಕು? ನಿನ್ನ ಸಂಬಂಧಿಕರಲ್ಲಿ ಸೂಲಗಿತ್ತಿಯವರು ಏಕೆ ಆಗಬಾರದು? ನಿನ್ನ ಸಂಬಂಧಿಕರು ಆ ಕೆಲಸವನ್ನು ಮಾಡಿದರೆ ನಿನ್ನ ಮಾನಹೋಗುವುದೇನು? ಅದು ಯಾವಶಾಸ್ತ್ರದಲ್ಲಿ ಬರೆದಿದೆ? ಹೆಂಗಸು ಕೀಳಜಾತಿಯವಳೆಂದು ಬಗೆಯುವನು, ಕೀಳಜಾತಿಯೆಂಬ ಹೆಂಗಸಿನಿಂದಲೇ ಬಂದು ಅದೇ ಅವಳ ಸಮಾನಳಾದವಳ ಜಾತಿಗೆ ಅರ್ಧಾಂಗಿಯಾಗಿ ಅವಳಂತೆಯೇ ಮಗಳನ್ನಾದರೂ ಹಡೆಯುವನು. ಆದುದರಿಂದ ಈ ಮನುಷ್ಯನು ಕೀಳನಾಗಲಿಲ್ಲವೇನು?

ಹಳ್ಳಿಯವರಿಗೆ ಗೆಳೆಯನಾವನು?

ನಾಯಿಯು ಮನುಷ್ಯನ ಗೆಳೆಯನೆಂದು ಕರೆಯಲ್ಪಡುತ್ತದೆ. ಜಗತ್ತಿನಲ್ಲಿ ಮನುಷ್ಯನು ಮತ್ತು ನಾಯಿಯು ಕೂಡಿರುವಂತೆ ದೇವರು ಕಲ್ಪಿಸಿರುವನು. ಧರ್ಮರಾಯನು ತನ್ನ ತಮ್ಮಂದಿರನ್ನು ಕಳಕೊಂಡರೂ ಅವನ ಸಂಗತಿಯಾದ ಕೃಷ್ಣನು ನಾಯಿರೂಪಧಾರಣಮಾಡಿ ಅವನ ಸಹವಾಸವನ್ನು ಹೊಂದಿ ಮೋಕ್ಷದ ಹಾದಿಯನ್ನು ತೋರಿಸಿದನೆಂದು ಹೇಳಿದೆ. ಆದುದರಿಂದ ನಾಯಿಗಳನ್ನು ಹಳ್ಳಿಯವರು ಸಾಕಬೇಕು. ಅವಕ್ಕೆ ಹೆಸರನ್ನು ಕೊಟ್ಟು ಮಕ್ಕಳೋಪಾದಿಯಲ್ಲಿ ಜೋಪಾನಮಾಡಿದರೆ, ಜನ್ಮದಲ್ಲಿ ಮನುಷ್ಯನ ಜನ್ಮಗೆಳೆಯನಿಗಿಂತಲೂ ಹೆಚ್ಚಿನ ಸಹಾಯವನ್ನು ಮಾಡುವವು.

ಹಳ್ಳಿಯಲ್ಲಿ ಶಿಕ್ಷಣ.

ಜೀವನಕ್ರಮದಲ್ಲಿ ಉತ್ತಮರೀತಿಯಿಂದ ನಡೆಸಲಿಕ್ಕೆ ಶಿಕ್ಷಣವು ಅವಶ್ಯಬೇಕು. ಒಕ್ಕಲಿಗರು ತಮ್ಮ ಮಕ್ಕಳಿಗೆ ವಿದ್ಯ ಕಲಿಸುವದು ಅನವಶ್ಯಕವೆಂದು, ತಮ್ಮಂತೆಯೇ ಅವರನ್ನಾದರೂ ಮೂಢರನ್ನಾಗಿ ಮಾಡುವರು. ವಿದ್ಯೆಬಲ್ಲ ಒಕ್ಕಲಿಗನ ಮಗನಿಗೂ ವಿದ್ಯೆಯಿಲ್ಲದವನಿಗೂ ಭೂಮ್ಯಾಕಾಶದಷ್ಟು ಅಂತರವಾಗುತ್ತದೆ. ಮೊದಲನೆಯವನು ತನ್ನ ಬುದ್ಧಿ ಚಾತುರ್ಯದಿಂದ ಹೊಸ ಹೊಸ ಶೋಧನೆಗಳನ್ನು ಮಾಡುತ್ತ ತಂದೆಗಿಂತ ಕೆಲಸದಲ್ಲಿ ವಿಶಾರದನು. ಕಷ್ಟಗಳನ್ನು ತಕ್ಕ ಉಪಾಯಗಳಿಂದ ಅವನ್ನು ನಿವಾರಿಸಿಕೊಳ್ಳುವನು. ಅವನು ಯಾರಿಂದಲೂ ಮೋಸಹೋಗಲಾರನು.

ತನ್ನ ಮನೆತನವನ್ನು ಮುಂದೆ ತರುವನಲ್ಲದೆ ತನ್ನ ಊರನ್ನಾದರೂ ಸುಧಾರಿಸುವನು. ಹಳ್ಳಿಯವರು ತಮ್ಮ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ವಿದ್ಯವನ್ನು ಕೊಡಿಸಬೇಕು. ಹಾಗೂ ಈಗ ಇಂಗ್ಲಿಷ್ ಕಲಿತ ವಿದ್ಯಾರ್ಥಿಗಳಾದರೂ ತಮ್ಮ ತಂದೆಯವರ ಉದ್ಯೋಗಗಳನ್ನು ತಕ್ಕೊಂಡು ಸ್ವಾತಂತ್ರರಾಗಿ ಹಿಂದುಸ್ಥಾನವನ್ನು ಮುಂದಕ್ಕೆ ತರುವರೆಂದು ನಾನು ಹಿಂದುಮಾತೆಯನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ."

ಮಹಾತ್ಮಾಜಿ.

(ಕನ್ನಡದಲ್ಲಿ ಅನುವಾದಿಸಿದವರು)
ಎಚ್. ಎಮ್. ಮರುಳಾರ್ಯ,
ಬಟ್ಟೂರು ಹಿರೇಮಠ ಮೆಟ್ರಿಕ್ ವಿದ್ಯಾರ್ಥಿ,
ಧಾರವಾಡ ಹಾಯಸ್ಕೂಲ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ವರ್ಷಾಂತ್ಯದ ಪುಣ್ಯತಿಥಿಯೂ ಧರ್ಮಾರ್ಥ ಅಯ್ಯಾಚಾರಗಳೂ ವಿವಾಹಗಳೂ.

ವಾಚಕಮಹಾಶಯರೇ ಸೃಷ್ಟಿಯೊಳಗಣ ಪ್ರಾಣಿಸಾಮಾನ್ಯದಲ್ಲಿ ಮನುಷ್ಯಜನ್ಮವು ದುರ್ಲಭವು ಎಂಬ ವಾಕ್ಯವು ಸಿದ್ಧವಾದದ್ದು. ಒಂದು ವೇಳೆ ಮನುಷ್ಯ

ಜನ್ಮ ಹೊಂದಿದರೂ ಕೂಡ ಆ ಪ್ರಾಣಿಗೆ ಸತ್ಕುಲಜನನವೂ, ಸತ್ಶಿಕ್ಷಣ, ಸತ್ಸಂಗಗಳ ಯೋಗವೂ, ಸದಾ ಸತ್ಕಾರ್ಯದಲ್ಲಿಯೇ ನಿರತರಾಗಿ ಇಹದಲ್ಲಿ ಸತ್ಕೀರ್ತಿಯನ್ನು ಹೊಂದುವದೂ, ಪರಲೋಕಮಾರ್ಗಪ್ರವರ್ತಕತೆಯೂ ಪರಮದುರ್ಲಭವು. ಈ ಎಲ್ಲಾ ಚಿರಸುಖಸಾಧನಗಳು ಪುಣ್ಯಾಂಶಜನಿತರಾದ ಮಹಾತ್ಮರಿಗಲ್ಲದೆ ಅನ್ಯರಿಗೆ ದೊರೆಯಲಾರವು.

ಈ ಬಗೆಯ ಒಂದು ದೃಷ್ಟಾಂತವನ್ನು ಕಂಡಮಾತ್ರದಿಂದಲೇ ಅದನ್ನು ತಮ್ಮೆಲ್ಲರೆದುರಿಗೆ ಇಡಬೇಕೆಂದು ಇಚ್ಛೆಯುಂಟಾಗಿ ಆ ಮಹಾತ್ಮರ ಸದ್ಗುಣಗಳನ್ನು ಸಂಕ್ಷಿಪ್ತವಾಗಿ ಬರೆಯಲಾಯಿತು.

ಧಾರವಾಡ ಜಿ|| ಕಂಜಗಿ ತಾ|| ಪೈಕಿ ಹುಂದಿಗನೂರ ಸಂಸ್ಥಾನಾಧಿಕಾರಿಗಳಾದ ಶ್ರೀಮಂತ ಸರದಾರ ಬಳ್ಳಪ್ಪ ಉರ್ಫ ಬಾಬಾಸಾಹೇಬ ಬಸವಂತರಾವ ದೇಸಾಯಿ ವ ನಾಡಕರಣಿ ಮಾಮಲೆ ಬಂಕಾಪುರ ಸಂಸ್ಥಾನ ಹುಂದಿಗನೂರ ಇವರ ಧರ್ಮಪತ್ನಿಯಾದ ಶ್ರೀಮತಿ ನಾಗೂಬಾಯಿ ದೇಸಾಯಿಣಿಯವರು ಚಿಕ್ಕಂದಿನಲ್ಲಿಯೇ ಸುಶಿಕ್ಷಣವನ್ನು ಹೊಂದಿ ಸದಾ ಪತಿಭಕ್ತಿ ಪಾರಾಯಣರಾಗಿಯೂ, ಪತಿಸೇವಾ ಧುರೀಣರಾಗಿಯೂ ಇದ್ದದ್ದಲ್ಲದೆ ಗುರುಲಿಂಗಜಂಗಮರಲ್ಲಿ ಅತ್ಯಂತ ದೃಢಭಕ್ತಿಯುಳ್ಳವರಾಗಿಯೂ, ಆಶ್ರಮಧರ್ಮಕ್ಕನುಗುಣವಾಗಿ ಕರ್ತವ್ಯದಕ್ಷರಾಗಿಯೂ, ಅತಿಥಿ ಅಭ್ಯಾಗತ ಸೇವಾಶೀಲಶ್ರೇಷ್ಠರಾಗಿಯೂ ಪರೋಪಕಾರಶಾಲಿಗಳಾಗಿಯೂ ಇದ್ದರು.

ದೇವರು ದಯಪಾಲಿಸಿದಂಥ ಸದ್ಗುಣ, ಸುವಿಚಾರ, ಸುಶಿಕ್ಷಣ, ಸಂಪತ್ತುಗಳ ಸದ್ವಿನಿಯೋಗವನ್ನು ಮಾಡಿಕೊಂಡ ಮಹಾತ್ಮರಲ್ಲಿ ಇವರು (ಶ್ರೀಯವರು) ಒಬ್ಬರಾಗಿದ್ದಾರೆ. ಇವರಲ್ಲಿದ್ದ ಪರೋಪಕಾರ ಭೂತದಯೆ ಮೊದಲಾದ ಸದ್ಗುಣಗಳು ಮಾದರಿತೆಗೆದುಕೊಳ್ಳತಕ್ಕಂಥವು ಎಂದು ಸ್ಪಷ್ಟವಾಗುತ್ತಿತ್ತು. ಅಲ್ಲದೆ ಇವರು ಅಸಾಧಾರಣ ದಾನಶಾಲಿಗಳಿದ್ದರೆಂಬುದನ್ನು ಈ ಮಹನೀಯರಲ್ಲಿ ಬಂದು ತಮ್ಮ ತಮ್ಮ ಕಾರ್ಯಾನುಸಾರವಾಗಿಯೂ, ಯೋಗ್ಯತಾನುಸಾರವಾಗಿಯೂ ಉದಾರಾಶ್ರಯವನ್ನು ಹೊಂದಿ ಹೋಗುತ್ತಿದ್ದ ಸಂತೋಷಭರಿತ ಜನವೃಂದವೇ ಹೇಳುತ್ತಿತ್ತು.

ಈ ಮಹನೀಯರು ಆಶ್ರಯಾಪೇಕ್ಷೆಯಿಂದ ಬಂದ ಎಲ್ಲ ತರದ ಜನರಿಗೆ ದಾತೃತ್ವಶಾಲಿಗಳಾಗಿಯೂ ಹುಂದಿಗನೂರು ಮತ್ತು ಅದಕ್ಕೆ ಸಂಬಂಧಪಟ್ಟ ಊರುಗಳ ಪ್ರತಿಯೊಬ್ಬ ನಿವಾಸಿಗೆ ಜನನಿಸ್ವರೂಪರಾಗಿಯೂ ಆಶ್ರಿತವರ್ಗಕ್ಕೆ ಕಾಮಧೇನು ಸ್ವರೂಪರಾಗಿಯೂ ಇದ್ದು ಅನವರತ ಕುಂದುಕೊರತೆಗಳನ್ನು ಅಂತಃಕರಣದಿಂದ ಕೇಳುತ್ತಲೂ ಅವುಗಳನ್ನು ಹೋಗಲಾಡಿಸುತ್ತಲೂ ಇದ್ದರು. ಮತ್ತು ತಮ್ಮ ಅರಮನೆಯಲ್ಲಿ ಯಾವಾಗಲೂ ಪುಣ್ಯಾತ್ಮರಾದ ಮಂಗಲಕಾರ್ಯ ದೇವತಾಕಾರ್ಯಪ್ರಿಯರೂ ಪುರಾಣ ಮೊದಲಾದ ಸತ್ಕಥಾಶ್ರವಣ ತತ್ಪರರೂ ಆಗಿದ್ದುದರಿಂದಲೇ ಶ್ರೀಯವರು ಪರಮೇಶ್ವರನ ಅನುಗ್ರಹದಿಂದ ಶ್ರೀಮಂತ ಸಿದ್ಧಲಿಂಗಪ್ಪ ಉರ್ಫ ಬಾಪೂಸಾಹೇಬ ದೇಸಾಯಿ ವ ನಾಡಕರಣಿ ಮಾಮಲೆ ಬಂಕಾಪುರ ಸಂಸ್ಥಾನ ಹುಂದಿಗನೂರ ಇವರಿಂದೊಡಗೂಡಿ ಪುತ್ರರತ್ನದ್ವಯರನ್ನೂ ಕನ್ಯಾರತ್ನತ್ರಯರನ್ನೂ ಹೊಂದಿ ಈ ಪ್ರಪಂಚದಲ್ಲಿ ತಮ್ಮ ೪೫-೪೬ ವರುಷಗಳ ಆಯುಷ್ಯವನ್ನು ಕ್ಷಣರೂಪವಾಗಿ ಸುಖದಿಂದ ಕಳೆದರು.

"ಶರಣರ ಸಾವನ್ನು ಮರಣದಲ್ಲಿ ನೋಡು" ಎಂಬ ನಾಣ್ಣುಡಿಗನುಸಾರವಾಗಿಯೇ ಇವರು ಕಳೆದ ವಿಭವನಾಮಸಂವತ್ಸರ ಕಾರ್ತೀಕ ಶು|| ೧೫ (ಗೌರಿಹುಣ್ಣಿವೆಯ) ನೆಯ ದಿವಸ ಸ್ವರ್ಗವಾಸಿಗಳಾದರೆಂಬ ಸಂಗತಿಯು ಸರ್ವಶ್ರುತವಾಗಿರುತ್ತದೆ.

ಈ ಕಲ್ಯಾಣತರವಾದ ಗೌರಿಹುಣ್ಣಿವೆಯದಿನವನ್ನು ಈ ನಮ್ಮ ಭರತನಿವಾಸಿಗಳೆಲ್ಲರೂ ವಿಶೇಷವಾಗಿ ಸ್ತ್ರೀಯರು ಅತಿ ಮಹತ್ವವಾದದ್ದೆಂದು ತಿಳಿಯುತ್ತಾರೆ. ಯಾಕಂದರೆ ಗೌರೀಹುಣ್ಣಿವೆಯದಿನಸ ಕಲ್ಯಾಣಕರವಾದಂಥ (ಹೆಂಗಸರಿಗೆ) ಅಧ್ಯದೇವತೆಯಾದಂಥ ಸಾಕ್ಷಾತ್‌ಗೌರಿಯನ್ನು ಸ್ತ್ರೀಯರು ಆಕಾರರೂಪದಿಂದ ನಿರ್ಮಿಸಿ ಆ ಮೂರ್ತಿಯನ್ನು ಅಲಂಕಾರ ಪೂಜೆಗಳಿಂದ ಶೃಂಗರಿಸಿ, ನೈವೇದ್ಯ ಹಾಗೂ ನಾನಾವಿಧ ಸ್ತೋತ್ರಗಳಿಂದ (ಮೂರ್ತಿರೂಪಗೌರಿಯನ್ನು) ತೃಪ್ತಿಪಡಿಸುವರು. ಅನುತರ ಸ್ತ್ರೀಯರು ಗೌರಿಯನ್ನು ಕುರಿತು ತಮ್ಮ ತಮ್ಮ ಇಚ್ಛಿತ ಫಲಗಳನ್ನು ಬೇಡಿಕೊಳ್ಳುವರು ಈ ಧರ್ಮವು ಸರ್ವಸಮ್ಮತವಾಗಿರುತ್ತದೆ.

ಈ ಬಗೆಯಾಗಿ ವರಗಳನ್ನು ಇಚ್ಛಿಸುತ್ತಿರುವ ಭಕ್ತವೃಂದಕ್ಕೆ ವರಗಳನ್ನಿತ್ತು ಕಾಪಾಡಲೋಸುಗ ಸಾಕ್ಷಾತ್ ಗೌರೀಮಹಾದೇವಿಯೇ ಈ ನಮ್ಮ ಶ್ರೀಯವರ ರೂಪದಿಂದ ಅವತರಿಸಿರುವಳೋ ಏನೋ ಎನ್ನುವಂತೆ ೪೫, ೪೬. ವರುಷಗಳವರೆಗೆ ಭಕ್ತರನ್ನು ಇಚ್ಛಿತ ಫಲಗಳಿಂದ ತೃಪ್ತಿಪಡಿಸಿ ಆ ಜನರಿಂದ ಅದರ ಸತ್ಕಾರಗಳನ್ನು ಹೊಂದಿ ಅವರಿಗೆ ಆಶೀರ್ವಚನಗಳನ್ನಿತ್ತು ಕಾರ್ತೀಕ ಶು|| ೧೫ (ಗೌರಿಹುಣ್ಣಿವೆಯ) ದಿವಸ ಯಾವತ್ತರಿಂದಲೂ ಸಮರ್ಪಿಸಲ್ಪಟ್ಟ ಪೂಜೆಗಳಿಂದಲೂ ಅಲಂಕಾರಗಳಿಂದಲೂ ಭೂಷಿತಳಾಗಿ ಜಗತ್ಕರ್ತನಾಜ್ಞೆಯಿಂದ ಕಳುಹಲ್ಪಟ್ಟ ಪುಷ್ಪಕವಿಮಾನಾರೂಢಳಾಗಿ ಮಹಾ ವೈಭವದಿಂದ ಆಕಾಶಮಾರ್ಗವಾಗಿ ಪೋಗುವಳೋ ಏನೋ ಎನ್ನುವಂತೆ ಶ್ರೀಯವರು ಸ್ವರ್ಗವನ್ನೈದಿದರು.

ಈ ಮಹನೀಯರು ತಮ್ಮ ವರ್ಷಾಂತಕ ತಿಥಿಯೊಳಗಾಗಿ ಅತ್ಯಂತ ಪುಣ್ಯಪ್ರದವಾದ ಅಯ್ಯಾಚಾರಗಳನ್ನೂ ವಿವಾಹಗಳನ್ನೂ ಧರ್ಮಾರ್ಥವಾಗಿ ಮಾಡಬೇಕೆಂದು ಶ್ರೀ ಪುತ್ರರವರಿಗೆ ಆಜ್ಞೆಯನ್ನಿತ್ತರು.

ಆ ಮಹತ್ವವಾದಂಥ ಪುಣ್ಯಕರವಾದಂಥ ಶ್ರೀಯವರ ಆಜ್ಞಾನುಸಾರವಾಗಿ ಮಾತೃಆಜ್ಞಾಪರಿಪಾಲಕರೂ, ಮಾತೃಭಕ್ತರೂ ಆದ ಶ್ರೀ ಪುತ್ರರವರು ತಾ|| 14-11-29 ನೆಯ ದಿವಸ (೬) ಜನರ ಅಯ್ಯಾಚಾರಗಳನ್ನೂ (೧೨) ಜನರ ವಿವಾಹಗಳನ್ನೂ ಬಂಕಾಪುರ ತಾ|| ಸಿಗ್ಗಾಂವಿ ಹಿರೇಮಠದ ವೇ|| ಷ|| ಬ್ರ|| ಚರಮೂರ್ತಿಯವರ ಹಸ್ತದಿಂದ ಯಥಾವಿಧಿಯಿಂದಲೂ ಅತ್ಯಂತ ವೈಭವದಿಂದಲೂ ತಮ್ಮ ಅರಮನೆಯಲ್ಲಿಯೇ ಜರುಗಿಸಿದರು. ಆ ಕಾಲಕ್ಕೆ ದಾನಧರ್ಮಗಳು ವಿಶೇಷವಾಗಿ ಮಾಡಲ್ಪಟ್ಟವು ಅಯ್ಯಾಚಾರ, ವಿವಾಹಗಳನ್ನು ಹೊಂದಿದವರ ಹೆಸರುಗಳನ್ನು ಕೆಳಗೆ ಬರೆದಿದೆ.

ಅಯ್ಯಾಚಾರ ಹೊಂದಿದವರ ಹೆಸರು.

(೧) ವೇ|| ಮಹಲಿಂಗಯ್ಯ ಹಿರೇಮಠ ಸಾ|| ಹಿರೇಮೆಳೀಹಳ್ಳಿ ಇವರ ಪುತ್ರರು ೨. (೨) ಕಲವಾಳದ ಹಿರೇಮಠದ ಮರಿಗಳು. ೨ (೩) ವೇ|| ಕೊಟ್ರಯ್ಯ ಹಿರೇಮಠ ಸಾ|| ಇಚ್ಛಂಗಿ ಇವರ ಪುತ್ರರು ೨.

ಲಗ್ನವಾದ ವಧುವರರ ಹೆಸರುಗಳು.

೧. ವೇ|| ಅನ್ನದಾನಯ್ಯ ಹಿರೇಮಠ ಸಾ|| ಹುಂದಿಗನೂರ ಇವರ ಪುತ್ರ ಶಿವಬಸವಯ್ಯ ಇವರಿಗೆ—ವೇ|| ಗುಡ್ಡಯ್ಯ ಹಿರೇಮಠ ಸಾ|| ಇಚ್ಛಂಗಿ ಇವರ ಸು|| ಪು|| ಹ|| ಕುಂ|| ಸೌ|| ಬಸವ್ವ. ೨. ವೇ|| ಕೊಟ್ರಯ್ಯನವರು ಕೆಸರಳ್ಳಿ ಇವರ ಪುತ್ರ ಬಸವಣ್ಣಯ್ಯ ಇವರಿಗೆ—ವೇ|| ಸಿದ್ಧರಾಮಯ್ಯನವರು ಮಠದ ಸಾ|| ತೊಂಡೂರ ಇವರ ಸು|| ಪು|| ಹ|| ಕುಂ|| ಸೌ|| ಶಿವಲಿಂಗವ್ವ. ೩. ರಾ|| ವೀರಬಸಪ್ಪ ಕದರಮಂಡಲಗಿ ಸಾ|| ಕೋಣನತಂಬಿಗಿ ಇವರ ಸು|| ಪು|| ಹನುಮಂತಪ್ಪ ಇವರಿಗೆ—ರಾ|| ವೀರಪ್ಪ ಇಚ್ಛಂಗಿ ಸಾ|| ಕೋಣನತಂಬಿಗಿ ಇವರ ಸು|| ಪು|| ಹ|| ಕುಂ|| ಸೌ|| ಬಸವ್ವ. ೪. ರಾ|| ಚನ್ನಬಸಪ್ಪ ಹಳ್ಳಿ ಸಾ|| ಮೇಲ್ಮುರಿ ಇವರ ಸು|| ಪು|| ರುದ್ರಪ್ಪ ಇವರಿಗೆ—ರಾ|| ಮುರಿಗಪ್ಪ ಮನ್ನಂಗಿ ಸಾ|| ಹೊಸರಿತ್ತಿ ಇವರ ಸು|| ಪು|| ಹ|| ಕು|| ಸೌ|| ನಿಂಗವ್ವ. ೫. ಹುಚ್ಚಪ್ಪ ಕೋಟೆದ ಸಾ|| ಕಲಿವಾಳ ಇವರ ಸು|| ಪು|| ಮಲ್ಲಪ್ಪ ಇವರಿಗೆ—ರಾ|| ವೀರಪ್ಪ ಅಗಸನ ಸಾ|| ಮೇಲ್ಮುರಿ ಇವರ ಸು|| ಪು|| ಹ|| ಕುಂ|| ಸೌ|| ದೊಡ್ಡರುದ್ರವ್ವ. ೬. ರಾ|| ನಿಂಗಣ್ಣಪ್ಪ ಸಾ|| ಮಣ್ಣೂರ ಇವರ ಸು|| ಪು|| ಚನ್ನಬಸಪ್ಪ ಇವರಿಗೆ—ರಾ|| ಗುರಪ್ಪ ಸವಣೂರ ಸಾ|| ಮಣ್ಣೂರ ಇವರ ಸು|| ಪು|| ಹ|| ಕು|| ಸೌ|| ನೀಲವ್ವ. ೭. ರಾ|| ಗುರುಪಾದಪ್ಪ ವಿಭೂತಿ ಸಾ|| ಹೊಸರಿತ್ತಿ ಇವರ ಸು|| ಪು|| ನೀಲಪ್ಪ ಇವರಿಗೆ—ರಾ|| ಬಸಪ್ಪನವರು ಸಾ|| ಹೊಸರಿತ್ತಿ ಇವರ ಸು|| ಪು|| ಹ|| ಕುಂ|| ಸೌ|| ರುದ್ರವ್ವ. ೮. ರಾ|| ಶಿವಪ್ಪ ಮ್ಯಾನೇದಾಳ ಸಾ|| ಹೊಸರಿತ್ತಿ ಇವರ ಸು|| ಪು|| ಮಹದೇವಪ್ಪ ಇವರಿಗೆ—ರಾ|| ಪುಟ್ಟಪ್ಪ ಬೆಂಡಿಗೇರಿ ಸಾ|| ನೆಲ್ಲೀಕೊಪ್ಪ ಇವರ ಸು|| ಪು|| ಹ|| ಕುಂ|| ಸೌ|| ತಿರಕವ್ವ. ೯. ರಾ|| ಬಸಪ್ಪ ಅಂಗಡಿ ಸಾ|| ಅಗಸನಮಟ್ಟಿ ಇವರ ಸು|| ಪು|| ಮಹಲಿಂಗಪ್ಪ ಇವರಿಗೆ—ರಾ|| ಬಸಪ್ಪ ಶಿರನಳ್ಳಿ ಸಾ|| ಎಲಗಚ್ಚ ಇವರ ಸು|| ಪು|| ಹ|| ಕುಂ|| ಸೌ|| ವೀರವ್ವ. ೧೦. ರಾ|| ಅಜ್ಜನಗೌಡ ದಿಷ್ಟನಗೌಡ ಸಾ|| ಕೋಡಬಾಳ ಇವರ ಸು|| ಪು|| ರೇವಣಿಪ್ಪಗೌಡ ಇವರಿಗೆ—ರಾ|| ಮಲ್ಲಪ್ಪ ಪೂಜಾರ ಸಾ|| ಹುಲ್ಲತ್ತಿ ಇವರ ಸು|| ಪು|| ಹ|| ಕುಂ|| ಸೌ|| ಗುರವ್ವ. ೧೧. ರಾ|| ಕೆಂಚಪ್ಪ ಕೋಳೂರ ಇವರ ಸು|| ಪು|| ಮಲ್ಲಪ್ಪ ಇವರಿಗೆ—ರಾ|| ವೀರಪ್ಪ ಕಮಲವಾಡಿ ಡಿ|| ಮೈಸೂರ ಇವರ ಸು|| ಪು|| ಹ|| ಕು|| ಸೌ|| ಬಸವ್ವ. ೧೨. ರಾ|| ಪುರದಪ್ಪ ಇಂಗಳಹಳ್ಳಿ ಸಾ|| ಕುಂದಗೋಳ ಇವರ ಸು|| ಪು|| ವೀರಪ್ಪ ಇವರಿಗೆ—ರಾ|| ಚನ್ನಪ್ಪ ಬಾಳೀಕಾಯಿ ಸಾ|| ಕುಂದಗೋಳ ಇವರ ಸು|| ಪು|| ಹ|| ಕುಂ|| ಸೌ|| ದ್ಯಾಮವ್ವ.

ಈ ಪ್ರಕಾರವಾದ ಧರ್ಮಾರ್ಥ ಕಾರ್ಯಗಳನ್ನು ನೆರವೇರಿಸಿ ಮರುದಿವಸ ಅಂದರೆ ತಾ|| ೧೫-೧೧-೧೯೨೯ (ಶುಕ್ಲನಾಮಸಂವತ್ಸರ ಕಾರ್ತೀಕ ಶುದ್ಧ ೧೫ ಗೌರೀಹುಣ್ಣಿವೆಯ) ದಿವಸ ಶ್ರೀಯವರು ಬಂಧುಬಳಗದವರಿಂದಲೂ ಇಷ್ಟಮಿತ್ರರಿಂದಲೂ ಕೂಡಿ ಶ್ರೀ ಮಾ|| ಶ್ರೀಯವರ ಪುಣ್ಯ ತಿಥಿಯನ್ನು ಶಾಸ್ತ್ರೋಕ್ತವಾಗಿಯೂ ಅತ್ಯಂತ ಭಕ್ತಿಯಿಂದಲೂ ನೆರವೇರಿಸಿದರು. ಆ ಕಾಲಕ್ಕೆ ಆದ ನಾನಾವಿಧವಾದ ದಾನಧರ್ಮಗಳನ್ನು ವರ್ಣಿಸಲಳವಲ್ಲ. ಅದೇಕಾಲಕ್ಕೆ ವೇ|| ಷ|| ಬ್ರ|| ಸಿಗ್ಗಾವಿ ಹಿರೇಮಠದ ಚರಮೂರ್ತಿಯವರ ಸೂಚನೆಯ ಮೇರೆಗೆ ಶ್ರೀಯವರು ಪ್ರಭಾಪೋಷಣೆಗೆ ರೂ. ೧೫—೦—೦ ಗಳನ್ನು ಶ್ರೀ ಮಲ್ಲೇಶಪ್ಪನವರು ದೇಸಾಯಿ ಮಾಮಲೆ ಬಂಕಾಪುರ ಸಂಸ್ಥಾನ ಹುಂದಿಗನೂರ ಇವರ ಕಡೆಗೆ ಕೊಟ್ಟರು. ಇದು ಅತಿ ಸ್ತುತ್ಯವು. ಈ ದಿವಸವನ್ನು ಶ್ರೀಯವರು ಅತಿ ಪುಣ್ಯಕಾಲವೆಂದು ತಿಳಿದು ದಾನಧರ್ಮಕ್ರಿಯೆಗಳನ್ನು ತೀರಿಸಿ ಶಿವಭಜನೆ ಶಿವಕಥೆ ಶಿವಕೀರ್ತನೆಗಳಿಂದಲೇ ಕಳೆದರು. ಅದೇಕಾಲಕ್ಕೆ ಮಹನೀಯರ ಪುಣ್ಯತಿಥಿಗೋಸುಗ ಶಿಷ್ಯ ಸಮೇತ ದಯಮಾಡಿಸಿದ್ದ ವೇ|| ಜಗದೇವಯ್ಯಗವಾಯಿ ಸಾ|| ಹಾವೇರಿ ಇವರೂ ಇವರ ಪ್ರಿಯಶಿಷ್ಯ ವೇ|| ಗುರುಶಾಂತಯ್ಯ ("ಗಾಯನಪಟು" ಎಂಬ ಬಿರುದರಸಿದ) ಇವರೂ ತಮ್ಮ ಗಾಯನದಿಂದ ಎಲ್ಲಾ ಜನರನ್ನು ಅತ್ಯಾನಂದಗೊಳಿಸಿದರು. ಮತ್ತು ಶ್ರೀಯವರ ಚಿ|| ಸಮಾನ ರಾ|| ರಾ|| ಮಾ. ತೃ. ಕುಲಕರಣಿ ಹುಂದಿಗನೂರ (ಕ. ಶಾ. ಮಾಸ್ತರ) ಇವರು ಭಕ್ತಿರಸಪೂರ್ಣವಾದ ಕೀರ್ತನರೂಪದಿಂದ ಶ್ರೀಯವರಲ್ಲಿದ್ದ ತಮ್ಮ ಮಾತೃಭಕ್ತಿಯನ್ನು ಇದೇ ದಿವಸ ತೋರಿಸಿದರು. ವರ್ಣನೀಯವು! ಇಂಥ ಪರೋಪಕಾರಿಗಳಾದಂಥ ಮಹನೀಯರ ಆತ್ಮಕ್ಕೆ ಜಗದೀಶನು ಶಾಂತಿಯನ್ನೀಯಲೆಂದೂ ಇಂಥ ಮಾತೃಭಕ್ತರೂ ಲೋಕಹಿತಕಾರ್ಯಗಳಿಗೆ ಉದಾರಾಶ್ರಯಿಗಳೂ ಆದಂಥ ಶ್ರೀರವರಿಗೂ ಅವರ ಬಂಧುವರ್ಗಕ್ಕೂ ಜಗದೀಶನು ಆಯುರಾರೋಗ್ಯ ಸುಖಸಂಪದಾಭಿವೃದ್ಧಿಯನ್ನೀಯಲೆಂದು ಹಾರೈಸುವೆನು. ಇಂಥ ಮಹನೀಯರ ಜನ್ಮಸ್ಥಾನವಾದಂಥ ಹುಂದಿಗನೂರ ಸಂಸ್ಥಾನವೇ ಧನ್ಯ ಧನ್ಯ ನೀನೇ ಧನ್ಯ!

ಓರ್ವ ಪ್ರತ್ಯಕ್ಷದರ್ಶಿ.

ಸಂಸ್ಥಾನದ ಕೊರಚರ ಮಹಾಸಭೆ.

ಈ ಸಭೆಯು ತಾ|| 12-4-30 ನೆಯ ಶನಿವಾರ ಮತ್ತು 13-4-30 ನೆಯ ಭಾನುವಾರ ಹಾಸನದ ಡಿ|| ಡೆಪ್ಯೂಟಿ ಕಮಿಷನರ್ ಸಾಹೇಬರವರಾದ ಶ್ರೀಮಾನ್ ಎಸ್. ಅಬ್ದುಲ್‌ವಾಜೀದ ಬಿ.ಎ. ಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಈ ಸಭೆಯ ಜಯಪ್ರದವು ಎಲ್ಲಾ ಪೋಲೀಸ ಅಧಿಕಾರಿಗಳ ಕೈಯಲ್ಲಿರುತ್ತದೆ. ಸಮಸ್ತರೂ ಈ ನಮ್ಮ ಸಭೆಗೆ ಪ್ರೋತ್ಸಾಹಮಾಡಬೇಕಾಗಿ ಬೇಡುತ್ತೇನೆ. ಈ ಸಭೆಗೆ ಕೊರಮರೂ ಬರಬಹುದು.

ವಿಧೇಯ ಸೇವಕರು,
ಕೊರಚರ ವೆಂಕಟಯ್ಯ ಸೆಕ್ರೆಟರಿ,
„ ಮುನಿಯಪ್ಪ ಟ್ರೆಜರರ್.

ಪಂಚಾಚಾರ್ಯ ಪ್ರಭಾ

೧೯೨೫ನೇ ಡಿಶಂಬರ್ ತಾ|| ೨೩ನೇ ಸೋಮವಾರ

ಶಿವಯೋಗ.

ಈ ಶಿವಯೋಗವು ಸಾಧನರೂಪವೆಂತಲೂ ಸಾಧ್ಯರೂಪವೆಂತಲೂ ಎರಡು ಪ್ರಕಾರವಾಗಿರುವದು. ಸಾಧನರೂಪವಾದ ಶಿವಯೋಗವು ಐದು ತೆರನಾಗಿರುವದು. ಸಾಧ್ಯರೂಪ ಶಿವಯೋಗವು ಒಂದೆ ತರವಾಗಿರುವುದು ಇದೇ ಮೋಕ್ಷಫಲವೆಂಬ ಐಕ್ಯಸ್ಥಲವು ಇದಕ್ಕೆ ಲಿಂಗಾಂಗಸಾಮರಸ್ಯವೆಂತಲೂ ಹೆಸರುಂಟು. ಭಕ್ತಮಹೇಶ ಪ್ರಾಣಲಿಂಗಿ ಪ್ರಸಾದಿ ಶರಣ ಎಂಬ ಅಂಗಸ್ಥಲಗಳು ಸಾಧನರೂಪಗಳಾಗಿವೆ. ಈ ಸಾಧನಗಳಲ್ಲಿ ಮೊದಲನೆಯ ಭಕ್ತಸ್ಥಲವನ್ನು ವಿವರಿಸುತ್ತೇವೆ. ಭಕ್ತಸ್ಥಲವೆಂದರೆ ಫಲರೂಪವಾದ ಶಿವಯೋಗದ ಮೊದಲನೆಯ ಅಂಗವು ಈ ಸಾಧನಗಳಿಲ್ಲದಿದ್ದರೆ ಮೋಕ್ಷಫಲವು ಎಂದೆಂದಿಗೂ ಲಭಿಸದು. ಆದ್ದರಿಂದ ಭಕ್ತಾದಿ ಐದು ಸ್ಥಲದೊಳಗಿನ ಮೊದಲನೇ ಭಕ್ತಸ್ಥಲವನ್ನು ಅಭ್ಯಾಸಮಾಡಿಯೇ ತೀರಬೇಕು. ಅಂದರೆ ಲಿಂಗಧಾರಣದೀಕ್ಷಾಸಂಪನ್ನನಾಗಿ ಭಕ್ತಸ್ಥಲಾಂತರ್ಗತವಾಗಿರುವ ಯಮನಿಯಮಗಳನ್ನು ಸಾಧಿಸಬೇಕು. ಭಕ್ತಾದಿ ಐದು ಸ್ಥಲಗಳಲ್ಲಿ ಯಮನಿಯಮಾದಿ ಏಳು (ಪಾತಂಜಲದರ್ಶನದಲ್ಲಿ ಹೇಳಿದ) ಯೋಗಾಂಗಗಳು ಅಡಕವಾಗುವವೆಂದೂ ಆರನೇ ಐಕ್ಯಸ್ಥಲದಲ್ಲಿ ಸಮಾಧಿ ... ಪಾತಂಜಲ ಯೋಗಶಾಸ್ತ್ರದಲ್ಲಿ ಹೇಳಿದ ... ಅಂಗವು ಸೇರುತ್ತದೆಂದೂ ಶ್ರೀ ವ್ಯಾಸಮಹರ್ಷಿಗಳು ತಮ್ಮ ಲಿಂಗಪುರಾಣದ ಉತ್ತರಭಾಗ ೨೧ ನೇ ಅಧ್ಯಾಯದಲ್ಲಿ ಹೇಳಿದ್ದಾರೆ. ಭಕ್ತಸ್ಥಲದೊಳಗಿನ ಯಮನಿಯಮಗಳನ್ನು ಸಾಧಿಸದಿದ್ದಲ್ಲಿ ಬಹು ಚಂಚಲವಾದ ಚಿತ್ತವು ಶಿವಲಿಂಗದಲ್ಲಿ ಎಂದೆಂದಿಗೂ ನಿಲ್ಲಲಾರದು.

ಈ ಚಿತ್ತವೆಂಬ ಮರ್ಕಟವನ್ನು ಶಿವಲಿಂಗದಲ್ಲಿ ಬಂಧಿಸುವದಕ್ಕಾಗಿಯೇ ಭಕ್ತಾದಿ ಐದು ಸ್ಥಳಗಳು ಐದು ಹಗ್ಗಗಳಂತೆ ಇರುವವು. ಅದರಲ್ಲಿ ಮೊದಲನೆಯ ಭಕ್ತಸ್ಥಲವೇ ಮುಖ್ಯವಾದ ಹಗ್ಗವು. (ಉಪಾಯವು) ಆದ್ದರಿಂದಲೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಷಡಂಗಸ್ಥಳಗಳಲ್ಲಿ ಭಕ್ತಸ್ಥಲವನ್ನೇ ಮೊದಲು ಹೇಳಿರುವರು. ಚಿತ್ತದ ಚಾಂಚಲ್ಯವನ್ನು ಕಳೆಯುವದು ಸುಲಭಸಾಧ್ಯವಲ್ಲ. ಚಿತ್ತಕ್ಕೂ ಪಾದರಸಕ್ಕೂ ಚಂಚಲತನವು ಸ್ವಭಾವಸಿದ್ಧವಾಗಿದೆ. ಪಾದರಸದಲ್ಲಿರುವ ಚಾಂಚಲ್ಯವನ್ನು ಕಳೆಯುವದಕ್ಕೆ ಕಷ್ಟತರಗಳಾದ ಅನೇಕೋಪಾಯಗಳನ್ನು ಮಾಡಬೇಕಾಗುತ್ತದೆಂದಮೇಲೆ ಯಾವ ಇಂದ್ರಿಯಕ್ಕೂ ಗೋಚರಿಸದಿರುವ ಚಿತ್ತದ ಚಾಂಚಲ್ಯವನ್ನು ಕಳೆಯುವುದಕ್ಕೆ ಅನೇಕೋಪಾಯಗಳು ಬೇಕೇಬೇಕು. ಆ ಉಪಾಯಗಳೇ ಭಕ್ತಾದಿ ಐದುಸ್ಥಳಗಳಾಗಿರುವವು. ಪಾದರಸವು ಬದ್ಧನಾದರೆ (ಚಾಂಚಲ್ಯವನ್ನು ಬಿಟ್ಟು ಶುದ್ಧಿಯಾದರೆ) ಮಹಾಮಹಾಕುಷ್ಠಾದಿ ರೋಗಗಳನ್ನೂ ಕೂಡ ನಿವೃತ್ತಿಗೊಳಿಸುತ್ತದೆ. ಅದರಂತೆ ಚಿತ್ತವು ಮೇಲೆ ಹೇಳಿದ ಐದು ಉಪಾಯಗಳಿಂದ ವಿಷಯಾಭಿಲಾಷೆಯನ್ನು ಬಿಟ್ಟು ಅಂತರ್ಮುಖವಾಗಿ ಧ್ಯೇಯವಸ್ತುವೆನಿಸಿದ ತನ್ನ ಸ್ವರೂಪದಲ್ಲಿ ಬೆರತರೆ ಶುದ್ಧವಾಗುವದು (ವಿಕಾಸವನ್ನು ಹೊಂದುವದು) ಆಗ ಚಿತ್ತವೇ ಚಿಚ್ಛಕ್ತಿಯಾಗುವದೆಂದಮೇಲೆ ಯಾವುದು ತಾನೇ ಆದಕ್ಕೆ ಸಿದ್ಧಿಸಲಾರದು? ಸರ್ವಜ್ಞತ್ವಾದಿ ಎಲ್ಲ ಗುಣಗಳೂ ಸಿದ್ಧಿಸುತ್ತವೆ. ಇದೇ ಅಭಿಪ್ರಾಯದಿಂದಲೇ "ರಸೋಬದ್ಧೋ ಮನೋಬದ್ಧಂ ಕಿಂನಸಿಧ್ಯತಿ ಭೂತಲೆ" ಎಂದು ಹೇಳಲ್ಪಟ್ಟಿರುವುದು. ಯಮನಿಯಮಗಳುಳ್ಳ ಭಕ್ತಸ್ಥಲವು ಸಿದ್ಧಿಸದಿದ್ದರೆ ಮುಂದಿನ ಮಹೇಶಾದಿ ಸ್ಥಲಗಳು ಸಿದ್ಧಿಸುವದಿಲ್ಲ. ಆದ್ದರಿಂದ ಭಕ್ತಸ್ಥಲವು ಶಿವಯೋಗವೆಂಬ ಕಟ್ಟಡಕ್ಕೆ ಮುಖ್ಯ ತಳಹದಿಯಾಗಿದೆ. ಮೊದಲು ಭಕ್ತಸ್ಥಲದೊಳಗಿನ ಯಮನಿಯಮಗಳನ್ನು ಸಾಧಿಸಬೇಕು. ಯಮವೆಂಬುವ ಮೊದಲನೆ ಯೋಗಾಂಗವು ಅಹಿಂಸಾದಿ ಐದು ಭೇದಗಳುಳ್ಳದ್ದಾಗಿದೆ ತ್ರಿಕರಣಗಳಿಂದ ಪ್ರಾಣಿಗಳನ್ನು ಪೀಡಿಸದಿರುವದೇ ಅಹಿಂಸೆಯು ಮನೋವಾಕ್ಕಾಯಗಳಿಂದಲೂ ಪರರಿಗೆ ಹಿಂಸೆಮಾಡಬಾರದು. ಈ ಅಹಿಂಸೆಯನ್ನು ಸಾಧಿಸಬೇಕಾದರೆ ಮೊದಲು ಕಾಮಕ್ರೋಧಾದಿ ದುರ್ಗುಣಗಳನ್ನು ಕಳೆಯಬೇಕು. ಕಾಮೋದ್ರೇಕವನ್ನು ಹೊಂದಿದ ಮನುಷ್ಯನಿಗೆ ಇಚ್ಛಿತಸುಖವು ಲಭಿಸದಿದ್ದರೆ ಸುಲಭವಾಗಿ ಕೋಪವಶನಾಗುವನು. ಆ ಕೋಪದಿಂದಲೇ ಹಿಂಸಾದಿಕಾರ್ಯಗಳು ನಡೆಯುವವು. ಆದುದರಿಂದ ವಿಷಯಾಭಿಲಾಷೆಯನ್ನು ದೂರಮಾಡಿ ನಿತ್ಯಾನಂದಕರವಾದ ಮಾರ್ಗವನ್ನು ಹಿಡಿಯಬೇಕು. ಅಂಥ ಆನಂದರೂಪವಾದ ವಸ್ತುವೆಂದರೆ, ಇಷ್ಟಲಿಂಗವು. "ಆನಂದರೂಪಮನಯೋರಿಷ್ಟಲಿಂಗಮುದಾಹೃತಂ" ಎಂಬುಕ್ತಿಯಿರುವದು. ಈ ಲಿಂಗವು ಬಾಹ್ಯದಲ್ಲಿ ಇಷ್ಟಲಿಂಗವೆಂತಲೂ ಅಂತರ್ಲಕ್ಷ್ಯವಾದಾಗ ಪ್ರಾಣಲಿಂಗವೆಂತಲೂ ನಾಮಾಂತರವನ್ನು ಹೊಂದುತ್ತದೆ. ಈ ಲಿಂಗವು ಯಾರಿಗಿಲ್ಲವೋ ಇದ್ದರೂ ಅದರ ಪೂಜಾದಿಗಳನ್ನು ಯಾರು ಮಾಡರೋ ಅವರ ಚಿತ್ತವು ವಿಷಯಗಳನ್ನು ಬಿಟ್ಟು ಅಂತರ್ಮುಖವಾಗಲಾರದು. ಬಾಲಕನ ಅಸಹ್ಯಕರವಾದ ಮಣ್ಣುತಿನ್ನುವ ಚಟಿಯನ್ನು ಬಿಡಸಬೇಕಾದರೆ ಅವನಿಗೊಂದು ಹಣ್ಣನ್ನು ಕೊಡಬೇಕು. ಇಲ್ಲದಿದ್ದರೆ ಮಣ್ಣನ್ನು ತಿನ್ನುವದನ್ನು ಬಿಡಲಾರನು. ಹಾಗೆ ಚಿತ್ತಬಾಲಕನು ವಿಷಯವೆಂಬ ಮಣ್ಣನ್ನು ಬಿಡಬೇಕಾದರೆ ಲಿಂಗವೆಂಬ ಆನಂದರೂಪವಾದ ಹಣ್ಣು ಬೇಕು. ಗುರುಮೂರ್ತಿಯಿಂದ ಲಿಂಗವು ತನಗೆ ದೊರಕಿದ್ದರೂ ಶ್ರದ್ಧಾಭಕ್ತಿಯಿಂದ ಆ ಲಿಂಗದ ಪೂಜಾ ಧ್ಯಾನಾದಿಗಳನ್ನು ಮಾಡದಿದ್ದರೆ ಅದರ ಆನಂದಸ್ವರೂಪವು ತನಗೆ ಗೋಚರಿಸಲಾರದು. ಆದುದರಿಂದ ವಿಷಯಗಳಲ್ಲಿ ದೋಷದೃಷ್ಟಿಯನ್ನು ಬಲಿಸಿ ಅವುಗಳಲ್ಲಿರುವ ಅನುರಾಗವನ್ನು ತಿರುಗಿಸಿ ನಿತ್ಯಸುಖರೂಪವಾದ ಲಿಂಗದಲ್ಲಿರಿಸಿದರೆ ಅದೇ ಭಕ್ತಿಯು, ಆ ಭಕ್ತಿಯು ದೃಢವಾಗುತ್ತ ಹೋಗಲಾಗಿ ಅಹಿಂಸಾದಿಗಳು ಸಿದ್ಧಿಸುತ್ತವೆ. ಈ ಅಹಿಂಸಾ ಎಂಬ ಮೊದಲನೇ ಅಂಗವು ಯಾರಿಗೆ ಸಿದ್ಧಿಸುವದೋ ಅವರ ಸಮೀಪದಲ್ಲಿ ಪರಸ್ಪರ ವೈರವುಳ್ಳ ಅಹಿನಕುಲ (ಸರ್ಪಮುಂಗಲಿ) ಗೋವ್ಯಾಘ್ರಾದಿ ಪ್ರಾಣಿಗಳು ತಮ್ಮ ವೈರವನ್ನು ಬಿಟ್ಟು ಪರಸ್ಪರ ಪ್ರೀತಿಯಿಂದ ವರ್ತಿಸುತ್ತವೆಂದು ಪಾತಂಜಲಯೋಗದಲ್ಲಿ ಹೇಳಿದೆ. ಈ ವಿಷಯದಲ್ಲಿ ಅಗಸ್ತ್ಯ, ವಶಿಷ್ಠ, ಕಣ್ವಾದಿಗಳ ಚರಿತ್ರೆಗಳು ನಿದರ್ಶನಗಳಾಗಿವೆಯಲ್ಲದೇ ಈಗಲೂ ಕೆಲವು ಮಹನೀಯರಲ್ಲಿ ಕಾಣಬಹುದಾಗಿದೆ. ತಾನು ಪ್ರಾಣಿಗಳಿಗೆ ಹಿಂಸೆಯನ್ನು ಮಾಡಬಾರದು. ಪರರಿಂದ ಮಾಡಿಸಬಾರದು. ಮಾಡುವವರಿಗೆ ಅನುಮೋದಿಸಬಾರದು. ತಾನು ಮಾಡಿದರೂ ಮಾಡಿಸಿದರೂ ಅನುಮೋದಿಸಿದರೂ ಹಿಂಸೆಯೇ ಆಗುವದು. ಕೆಲವು ಅಜ್ಞರು ತಾವು ಹಿಂಸೆಮಾಡಿಸಿದಾಗ್ಯೂ ನಾವು ಪ್ರಾಣಿಹಿಂಸೆಯನ್ನು ಮಾಡಿಲ್ಲಾ. ಅವರು ಮಾಡಿದರು, ಅವರಿಗೆ ಆ ಪಾಪವು ನಮಗಿಲ್ಲವೆಂದು ತಿಳಿಯಬಹುದು. ಹಾಗೆ ತಿಳಿಯಬಾರದು. ಅನ್ಯರು ಮಾಡಿದರೂ ತಮಗೆ ಕಾರ್ಯತಃ ಹಿಂಸೆಮಾಡಿದ ಪಾಪವು ಬಂದು ಅದರಿಂದ ಮಹಾದುಃಖವನ್ನುಣ್ಣಬೇಕಾಗುತ್ತದೆ. ಯಾವ ತರಹ ಹಿಂಸೆಯನ್ನು ಮಾಡಿಲ್ಲವೆಂಬುವಲ್ಲಿ ವೈರವುಳ್ಳ ಪ್ರಾಣಿಗಳು ತಮ್ಮ ವೈರವನ್ನು ಬಿಟ್ಟು ಸ್ನೇಹದಿಂದ ವರ್ತಿಸುವದೇ ಹೆಗ್ಗುರುತು ಯಾವನ ಚಿತ್ತವು ಕಾಮವಶವಾಗುವುದೋ ಅವನಿಗೆ ಕ್ರೋಧವು ತಪ್ಪದು. ಕ್ರೋಧಪರವಶನಾದವನಿಗೆ ಕಾರ್ಯಾಕಾರ್ಯವಿವೇಕವು ತಪ್ಪಿ ಪ್ರಾಣಿಗಳನ್ನು ಹಿಂಸಿಸುವನು, ಪರರ ಸ್ವತ್ತನ್ನು ಅಪಹರಿಸುವನು, ಪರಸ್ತ್ರೀಗಮನಾದಿ ಪಾಪಕಾರ್ಯಗಳಲ್ಲಿ ತೊಡಗಿ ದುಃಖಿಯಾಗುವನು. ಆದುದರಿಂದ ಅಹಿಂಸೆಯನ್ನು ಸಾಧಿಸುವವನು ಮೊದಲು ಕಾಮವೆಂಬ ದುರ್ಗುಣವನ್ನು ಬಿಡಬೇಕು. (ಆಯಾಯ ಆಶ್ರಮಧರ್ಮಗಳಿಗೆ ಅವಿರುದ್ಧವಾಗಿ ಬಿಡಬೇಕು) ಜನಸಂಗದಿಂದ ಕಾಮವನ್ನು ಬಿಡುವದು ಕಷ್ಟಸಾಧ್ಯವು. ಆದುದರಿಂದಲೇ ಪ್ರಾಚೀನ ತಪಸ್ವಿಗಳು ಗಿರಿಗುಹಾದಿಗಳಲ್ಲಿ ವಾಸಮಾಡುತ್ತಿದ್ದರು. ಸಂಗದಿಂದ ಕಾಮವೂ, ಕಾಮದಿಂದ ಕ್ರೋಧವೂ, ಕ್ರೋಧದಿಂದ ಮೋಹಾದಿಗಳೂ ಹುಟ್ಟಿ ಕಡೆಗೆ ನಾಶವನ್ನೇ ಹೊಂದಬೇಕಾಗುತ್ತದೆ. ಯಜ್ಞಾದಿಗಳಲ್ಲಿಯಾದರೂ ಪಶುಹಿಂಸೆಯನ್ನು ಮಾಡುವದು ಅನಿತ್ಯವಾದ ಸ್ವರ್ಗಸುಖದ ಕಾಮದಿಂದಲ್ಲವೆ? ದುರ್ಗಮ್ಮ, ಕಾಳಮ್ಮ, ಕರೆಮ್ಮಗಳ ಮುಂದೆ ಪಶುಹಿಂಸೆಯನ್ನು ಮಾಡುವವಾದರೂ ಅಫಲ ಈ ಫಲ ಸಿಗುವದೆಂಬುವ ಭ್ರಾಂತಿಮೂಲಕವಾದ ಕಾಮದಿಂದಲ್ಲವೆ? ಒಟ್ಟಿನಮೇಲೆ ಪ್ರಾಣಿಹಿಂಸೆಯೆಂಬುದು ಮಾಂಸಭಕ್ಷಣಕಾಮದಿಂದಾಗಲಿ ಇದಕ್ಕಿಂತಲೂ ಹೆಚ್ಚಿನ ಫಲದ ಕಾಮದಿಂದಾಗಲಿ ಆಗುವುದುಂಟು. ಆದುದರಿಂದ ಹಿಂಸೆಗೆ ಕಾರಣವಾದ ಕಾಮವನ್ನೇ ಮೊದಲು ಬಿಡುವುದುಚಿತವು. ಪರಮಾತ್ಮನು ತನ್ನ ಪ್ರಾಣಧಾರಣಕ್ಕೆ ಧಾನ್ಯಾದಿ ಆಹಾರಗಳನ್ನು ನಿರ್ಮಿಸಿರಲು ತನ್ನಂತೆ ಒಂದು ಪ್ರಾಣಿಯೆನಿಸಿರುವ ಪಶುವನ್ನು ಹಿಂಸಿಸುವದೇಕೆ? ಹಿಂಸಿಸಿದರೆ ಇಹಲೋಕದ ರಾಜರು ಮನುಷ್ಯಹಿಂಸಕನಿಗೆ ಘೋರಶಿಕ್ಷೆಯನ್ನು ವಿಧಿಸುವಂತೆ ತ್ರಿಲೋಕದ ರಾಜನಾಗಿಯೂ ಎಲ್ಲಪ್ರಾಣಿಗಳಲ್ಲಿ ಸಮಾನವಾದ ಕೃಪೆಯುಳ್ಳವನಾಗಿಯೂ ಇರುವ ಪರಮಾತ್ಮನು ಘೋರನರಕಯಾತನೆಯೆಂಬ ಶಿಕ್ಷೆಯನ್ನು ವಿಧಿಸದೇ ಬಿಡುವನಂಟೆ? ಆದುದರಿಂದ ಪರಹಿಂಸೆಯು ಪಾಪಹೇತುವಾಗಿರುವುದು. ಇಂಥ ಹಿಂಸೆಯನ್ನು ಮಾಡದಿರುವದೇ ಅಹಿಂಸೆಯು. ಭಕ್ತಸ್ಥಲದೊಳಗಿನ ಯಮದ ಮೊದಲನೆಯ ಅಹಿಂಸೆಯ ಸ್ವರೂಪವನ್ನು ಸಂಕ್ಷೇಪತಃ ಹೇಳಿದಂತಾಯಿತು. ಇಂಥ ಅಹಿಂಸೆಯನ್ನು ಎಲ್ಲರೂ ಸಾಧಿಸಿ ಅದರ ಫಲಕ್ಕೆ ಬಾಗಿಗಳಾಗಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಹುಜೂರು ಸೆಕ್ರೆಟರಿಗಳಾದ ರಾಜಸಭಾಭೂಷಣ ಮಿ|| ತಂಬುಚೆಟ್ಟಿ, ಬಿ.ಎ., ಯವರಿಗೆ ಕೌನ್ಸಿಲರುಗಳ ಗ್ರೇಡನ್ನು ಅನುಗ್ರಹಿಸಿ ಸಂಬಳವನ್ನು ಹೆಚ್ಚಿಸಿರುವರು.

ಕಳೆದ ಭಾನುವಾರ ಬೆಳಿಗ್ಗೆ ಹಿಂದೂ ಮಹಾಸಭೆಯ ಮೊದಲನೇ ವಾರ್ಷಿಕೋತ್ಸವವು ಬೆಂಗಳೂರಿನ ಮೆಜೆಸ್ಟಿಕ್ ಥಿಯೇಟರಿನಲ್ಲಿ ರಾ|| ಸಿ. ಬಿ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಬೆಂಗಳೂರಿನ ವೆಲಿಂಗ್‌ಟನ್ನಿನಲ್ಲಿ ಮೂರುಮಂದಿ ಸೋಲ್ಜರುಗಳು ಒಂದು ಮೋಟಾರನ್ನು ಕಳ್ಳತನದಿಂದ ತೆಗೆದುಕೊಂಡು ಹೋಗಿದ್ದು ಮೂರುವಾರಗಳ ನಂತರ ಸಿಕ್ಕಿ ಎರಡುವರ್ಷ ಕಠಿನಸಜೆಗೆ ಗುರಿಯಾಗಿರುವರು.

ರಾಜಧಾನಿಯ ಮಹಾರಾಣೀ ಕಾಲೇಜಿನ ಸೂಪರಿಂಟೆಂಡೆಂಟರಾದ ಶ್ರೀಮತಿ ಕೆ. ಡಿ. ರುಕ್ಮಿಣಮ್ಮ, ಬಿ.ಎ., ಯವರು ಮೈಸೂರು ಯುನಿವರ್ಸಿಟಿಯವರ ಆಶ್ರಯದಲ್ಲಿ ತುಮಕೂರು, ಶಿವಮೊಗ್ಗೆ ಮೊದಲಾದ ಸ್ಥಳಗಳಲ್ಲಿ ಸಂಚಾರಮಾಡಿ ಅಲ್ಲಲ್ಲಿ ಮಹಿಳೆಯರ ಸಭೆಗಳಲ್ಲಿ ಉಪನ್ಯಾಸಗಳನ್ನು ಮಾಡುವವರಾಗಿದ್ದಾರೆ.

ಯಡತೊರೆಯ ಸಮೀಪದಲ್ಲಿರುವ ಒಡ್ಡರಕೊಪ್ಪಲು ಗ್ರಾಮದಲ್ಲಿ ಕಳೆದ ನವಂಬರ್ ತಾ|| 24 ನೇ ಬೆಳಿಗ್ಗೆ ಮದ್ದು ಸಿಡಿದು 4 ಮಂದಿ ದೊಡ್ಡವರಿಗೂ, 3 ಮಂದಿ ಮಕ್ಕಳಿಗೂ ಪೂರಾ ಗಾಯಗಳಾದವು. ಅವರಲ್ಲಿ ಕಾಳೇಗೌಡನೂ, ಯೆಲ್ಲಾಬೋಯಿಯೂ, ಅಪ್ಪಾಜಿಗೌಡನೆಂಬ ಹುಡುಗನೂ ತೀರಹೋದರು. ಉಳಿದವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ಗುಂಡ್ಲುಪೇಟೆಯಲ್ಲಿ ತಮ್ಮಯ್ಯಶೆಟ್ಟಿ ಎಂಬಾತನು ತನ್ನ 6½ ವರ್ಷ ವಯಸ್ಸಿನ ಹೆಣ್ಣುಮಗಳನ್ನು ಸಣ್ಣಪ್ಪಶೆಟ್ಟಿ ಎಂಬವನ ಮಗನಿಗೆ ಕೊಟ್ಟು ವಿವಾಹಮಾಡಿದ್ದು ಬಾಲ್ಯವಿವಾಹದ ಕಾನೂನಿಗೆ ವಿರೋಧವಾಗಿದೆಯೆಂದೂ ವೆಂಕಟಾಚಲಯ್ಯನೆಂಬವನು ಆ ಮದುವೆಯಲ್ಲಿ ಪುರೋಹಿತನಾಗಿದ್ದನೆಂದೂ ಮೊಖದ್ದಮೆಯಾಗಿ ಮೈಸೂರು ಡೆಪ್ಯುಟಿಕಮಿಷನರ ಕೋರ್ಟಿನಲ್ಲಿ ಬರುವ ಜನವರಿ ತಾ|| 4 ನೇ ಶನಿವಾರ ವಿಚಾರಣೆ ನಡೆಯುವುದಾಗಿದೆ. ಈ ಕೇಸಿನಲ್ಲಿ ಗಂಡುಹೆಣ್ಣಿನ ತಂದೆಗಳೂ ಪುರೋಹಿತನೂ ಅಪರಾಧಿಗಳಾಗಿ ಮಾಡಲ್ಪಟ್ಟಿದ್ದಾರೆ.

ಪೋಲೀಸು ಇನ್ಸ್‌ಪೆಕ್ಟರ್ ಜನರಲ್ಲರವರಾದ ಮಿ|| ಎಸ್. ಹಿರಿಯಣ್ಣಯ್ಯನವರು ಬರುವ ವರ್ಷದಿಂದ ಸೆನ್ಸಸ್ ಕಮಿಷನರಾಗಿಯೂ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾದ ಮಿ|| ಕೆ. ವಿ. ಅನಂತರಾಮರವರು ಪೋಲೀಸು ಐ. ಜಿ. ಯಾಗಿಯೂ, ರಾಜಧಾನಿಯ ಮುನಿಸಿಪಲ್ ಪ್ರೆಸಿಡೆಂಟರಾದ ಮಿ|| ಟಿ. ಜಿ. ರಾಮಯ್ಯರ್‌ರವರು ಮೈಸೂರು ಡಿ|| ಡೆಪ್ಯುಟಿಕಮಿಷನರಾಗಿಯೂ, ಗಂಧದೆಣ್ಣೆ ಕಾರ್ಯಾಲಯಗಳ ಡೈರೆಕ್ಟರಾಗಿರುವ ಮಿ|| ಜಿ. ಮೆಕ್ರಿಯರವರು ರಾಜಧಾನಿಯ ಮುನಿಸಿಪಲ್ ಪ್ರೆಸಿಡೆಂಟರಾಗಿಯೂ ನೇಮಿಸಲ್ಪಡುವರೆಂದು ವರ್ತಮಾನ ಕೇಳುತ್ತೇವೆ.

ಚಿತ್ರದುರ್ಗದ ಹೈಸ್ಕೂಲಿನ ಎಸ್. ಎಸ್. ಎಲ್. ಸಿ ತರಗತಿ ವಿದ್ಯಾರ್ಥಿ ಮಿ|| ಬಿ. ಶ್ರೀಕಂಠಯ್ಯರ್ ಎಂಬುವರಿಗೆ 'ಸೆಲೆಕ್ಷನ್' ಸಿಕ್ಕಲಿಲ್ಲವಾದ್ದರಿಂದ ತಮ್ಮ ಮನೆಯ ಪಕ್ಕದ ಮುರುಕಲು ಮಹಡಿಯಿಂದ ಕೆಳಕ್ಕೆ ನೇಣು ಹಾಕಿಕೊಂಡು ಮೃತನಾದನು. ದಾರಿಯಲ್ಲಿ ಹೋಗುತ್ತಿದ್ದವರು ಈ ವಿಚಾರವನ್ನು ಯಾರಿಗೋ ತಿಳಿಸಿ ಅವರು ವಿಚಾರಿಸುವುದರಲ್ಲಿ ಆ ವಿದ್ಯಾರ್ಥಿಯು ಹೈಸ್ಕೂಲಿನ ಡ್ರಾಯಿಂಗ್ ಉಪಾಧ್ಯಾಯರಾದ ಶ್ರೀ|| ಟಿ. ಸುಬ್ರಹ್ಮಣ್ಯಯ್ಯರ್‌ರವರ ಮಗನೆಂದು ತಿಳಿಯಬಂತು. ಹೈಸ್ಕೂಲಿನ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಬಂದು ಅವರ ತಂದೆತಾಯಿಗಳನ್ನು ಸಮಾಧಾನಪಡಿಸಿದರು.

ವರ್ತಮಾನಸಂಗ್ರಹ.

ಪುತ್ತೂರಲ್ಲಿ ಒಬ್ಬನು 27 ವರ್ಷಗಳವರೆಗೆ ಗಂಡಸಾಗಿದ್ದನು; ಮುಂದೆ ಅವನಲ್ಲಿ ಸ್ತ್ರೀ ಅವಯವಗಳು ಬೆಳೆದವೆಂದೂ ಅವನೀಗ ಗಂಡಸನ್ನು ಕಂಡೊಡನೆ ಮಾತನಾಡಲು ನಾಚುವನೆಂದೂ ಪ್ರಸಿದ್ಧವಾಗಿದೆ.

ಮಹಾರಾಷ್ಟ್ರ ಮುಖಂಡರಾದ ಶ್ರೀ|| ಎಂ. ಆರ್. ಜಯಕರ್‌ರವರು, ಕಾನೂನು ಮೂಲಕ ಅಸ್ಪೃಶ್ಯತೆಯನ್ನು ಕೂಡಲೆ ನಿವಾರಣೆಮಾಡಬೇಕೆಂಬ ಮಸೂದೆಯೊಂದನ್ನು ಭಾರತಶಾಸನಸಭೆಯಲ್ಲಿ ಚರ್ಚೆಗೆ ತರುವವರಾಗಿದ್ದಾರೆ.

ರಾಯಚೂರಿನಲ್ಲಿ ಪ್ಲೇಗಿನ ಹಾವಳಿಯಾದ್ದರಿಂದ ಜನರು ಊರ ಹೊರಗೆ ಗುಡಿಸಲುಗಳಲ್ಲಿದ್ದಾರೆ; ಅಲ್ಲಿಯೂ ಬೆಂಕಿಯ ಹಾವಳಿ, ಹೀಗಾಗಿ ಜನರು ಬಲು ಪೇಚಾಡುತ್ತಿರುವರಂತೆ. 2-3 ತಿಂಗಳಲ್ಲಿ 2 ಸಾರೆ ಬೆಂಕಿಯು ಅನಾಹುತವಾಗಿ 50-60 ಗುಡಿಸಲುಗಳು ಸುಟ್ಟಿರುವವು.

ಹಿಂದೂಸ್ಥಾನದ ವಿಚಾರದಲ್ಲಿ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳಿಂದ ಆಗಿರತಕ್ಕ ತಪ್ಪು ಅಭಿಪ್ರಾಯಗಳನ್ನು ದೂರಮಾಡಲು ಮಿ|| ವೆಡ್ಜ್‌ವುಡ್‌ಬೆನ್‌ರವರು ಕ್ರಿಸ್‌ಮಿಸ್ ಅವಧಿಯೊಳಗಾಗಿ ಮತ್ತೊಂದು ಪ್ರಸಿದ್ಧ ಪತ್ರಿಕೆಯನ್ನು ಪಾರ್ಲಿಮೆಂಟಿನಲ್ಲಿ ಹೊರಡಿಸುವರೆಂದು ತಿಳಿಯಬರುತ್ತದೆ.

ಅಮೇರಿಕೆಯ ಸಿನಿಮಾ ಆಕ್ಟರಾದ ಪಾಲ್ ವೈಟ್‌ಮನ್ ಎಂಬುವನು "ದಿ ಕಿಂಗ್ ಆಫ್ ಜಾಝ್" ಎಂಬ ಆಟದಲ್ಲಿ ಪಾತ್ರವನ್ನು ವಹಿಸುದುದಕ್ಕಾಗಿ 3 ಕೋಟಿ ರೂಪಾಯಿಗಳು ಸಂಬಳವಾಗಿ ಕೊಡಲ್ಪಟ್ಟುವಂತೆ! ಅಂದರೆ ಒಂದು ವಾರಕ್ಕೆ ಸುಮಾರು 1,60,000 ರೂಪಾಯಿಗಳಾದುವು. ಇಷ್ಟು ಹೆಚ್ಚು ಹಣವು ಇದುವರೆಗೆ ಯಾರಿಗೂ ಸಂಬಳದ ರೂಪವಾಗಿ ದೊರೆತಿರಲಿಲ್ಲ!

ಶ್ರೀಮಂತ ಸರ್. ತುಕೋಜಿರಾವ್ ಹೋಳ್ಕರ್ ಜಿ. ಸಿ. ಎಸ್. ಐ ಯವರು ಅವರ ಪತ್ನಿ ಲೇಡಿ ಶರ್ಮಿಷ್ಠಾದೇವಿ ಮತ್ತು ಅವರ ಮಗಳು ಪ್ಯಾರಿಸ್ ನಗರದಿಂದ ಬೊಂಬಾಯಿಗೆ ಈ ಮಾಹೆ 11 ನೆಯ ತಾರೀಖಿನಲ್ಲಿ ಬಂದಿಳಿದು ಇಂದೂರಿಗೆ ನಲವತ್ತು ಮೈಲಿ ದೂರದಲ್ಲಿ ಇರುವ ಭರವಾ ಎಂಬ ಪಟ್ಟಣಕ್ಕೆ ಹೋದರು. ಅಲ್ಲಿಂದ ಅನೇಕ ದೇಶಗಳಿಗೆ ಹೋಗುತ್ತಾರೆಂದೂ ವರ್ತಮಾನವಿದೆ. ರಾಜಕುಮಾರ್ ಯಶವಂತರಾವ್ ಹೋಳ್ಕರ್‌ರವರನ್ನು ಇಂದೂರು ಸಂಸ್ಥಾನಕ್ಕೆ ಸಿಂಹಾಸನಾಧಿಪತಿಯಾಗಿ ಮಾಡುತ್ತಾರೆಂಬ ವರ್ತಮಾನವಿದೆ. ಸದರಿ ರಾಜಕುಮಾರರಿಗೆ ಬ್ರಿಟಿಷ್ ಸಾಮ್ರಾಜ್ಯದ ಪ್ರಭುಗಳು ರಾಜಕೀಯ ವಿಚಾರದಲ್ಲಿ ಬಹಳ ಚೆನ್ನಾಗಿ ಶಿಕ್ಷಣಕೊಟ್ಟಿದ್ದಾರೆ.

ಸುರತಿನಲ್ಲಿ ಫಕೀರ್‌ಭಾಯಿಯೆಂಬ 55 ವರ್ಷದ ಮುದುಕನೊಬ್ಬನು 6 ವರ್ಷದ ಬಾಲಕಿಯನ್ನು ವಿವಾಹಮಾಡಿಕೊಳ್ಳಬೇಕೆಂದಿದ್ದನು. ಕಳೆದ ತಾ|| 11 ಕ್ಕೆ ವಿವಾಹದ ಸನ್ನಾಹವು ನಡೆದಿದ್ದಿತು. ಹುಡುಗಿಯ ತಂದೆಯು 8,000 ರೂಪಾಯಿಗಳನ್ನು ತೆಗೆದುಕೊಂಡು ಹುಡುಗಿಯನ್ನು ಮಾರಿಬಿಟ್ಟಿದ್ದನು. ಈ ವಿವಾಹವನ್ನು ಸೂರತ್ತಿನ ಕೆಲವು ಯುವಕರು ವಿವಾಹವಾಗದಂತೆ ಹುಕುಂ ಕೊಡಬೇಕೆಂದು ಹುಡುಗಿಯ ಮಾವನಿಂದ ಡಿಸ್ಟ್ರಿಕ್ಟ್ ಜಡ್ಜರಿಗೆ ಅರ್ಜಿಹಾಕಿಸಿದರು. ಡಿಸ್ಟ್ರಿಕ್ಟ್ ಜಡ್ಜರು ಅರ್ಜಿಯನ್ನು ಮನ್ನಿಸಿ ವಿವಾಹವನ್ನು ತಡೆಗಟ್ಟಿ 'ಇಂಜಂಕ್ಷನ್' ಕೊಟ್ಟರು. ಬಹುಜನರ ವಿರೋಧವಿದ್ದರೆ ಇಂತಹ ಅನ್ಯಾಯವು ನಡೆಯುವದು ಕಷ್ಟಸಾಧ್ಯವಾಗದಿರದು.

ಮದ್ರಾಸಿನಲ್ಲಿ ಕಣ್ಣಮ್ಮ ಎಂಬ ಒಬ್ಬ ವಿಧವೆಯು ಗಂಡತೀರಿದ ಮೇಲೆ ಒಂದು ಶಿಶುವನ್ನು ಹೆತ್ತಳೆಂದು ಅವಳ ಜಾತಿಯವರು ಬಹಿಷ್ಕಾರಹಾಕಿ ಅವಳನ್ನು ಜಾತಿಯಿಂದ ಹೊರಕ್ಕೆ ಹಾಕಿದ ಬಗ್ಗೆ ಒಂದು ಪ್ರಕಟನೆಯನ್ನು ಹೊರಡಿಸಿದರು. ಕಣ್ಣಮ್ಮನು ಹೇಳದೆ ಕೇಳದೆ, ನೋಟೀಸು ಕೊಡದೆ ನನಗೆ ಅವಮಾನಮಾಡಿದರೆಂದು ಅವರ ಮೇಲೆ 15,000 ರೂಪಾಯಿನ ಮಾನನಷ್ಟಕ್ಕೆ ದಾವಾಮಾಡಿದಳು. ಇದರ ಮೇಲೆ ವಿಚಾರಣೆಯಾಗಿ ಜಡ್ಜರು ಬಹಿಷ್ಕಾರಹಾಕಿದ್ದ ೪ ಜನರಿಗೆ 500 ರೂಪಾಯಿಗಳ ಮತ್ತು ಪ್ರಕಟನೆಯನ್ನು ಹೊರಡಿಸಿದ ಇಬ್ಬರಿಗೆ 2,000 ರೂಪಾಯಿಗಳ ದಂಡವನ್ನು ವಿಧಿಸಿರುವರು. ಜಡ್ಜರು ಅಂಗ್ಲೇಯ ಹೆಂಗಸರ ಮಾನರಕ್ಷಣೆಯ ಕಟ್ಟಳೆಯಂತೆ ಆ ತೀರ್ಪನ್ನು ಕೊಟ್ಟಿರುವರು.

ಈ ಸಾರೆಯ ರಾಷ್ಟ್ರೀಯ ಮಹಾಸಭೆಯ ಅಧಿವೇಶನಕ್ಕಾಗಿ ಲಾಹೋರಿನಲ್ಲಿ ಕಟ್ಟುತ್ತಿರುವ ಲಜಪತಿರಾಯ್ ನಗರವು ಮುಗಿದಿದೆ. ಹಿಂದೂಸ್ಥಾನದ ನಾನಾ ಪ್ರಾಂತ್ಯಗಳಿಂದ ಸುಮಾರು 3,000 ಪ್ರತಿನಿಧಿಗಳು ಬರುವರೆಂದು ನಿರೀಕ್ಷಣೆ. ಪ್ರೇಕ್ಷಕರಿಗೆ 100, 50, 25, 10, 5, ರೂಪಾಯಿಗಳ ಟಿಕೇಟು ಏರ್ಪಡಿಸಿದೆ. 60 ಅಡಿ ಎತ್ತರದ ಕಂಬದ ಮೇಲೆ ರಾಷ್ಟ್ರೀಯ ಪತಾಕೆಯು ಏರಿಸಲ್ಪಟ್ಟು 10 ಮೈಲಿ ಸುತ್ತಲೂ ಕಾಣುವಂತೆ ಪ್ರಕಾಶಮಾನವಾದ ದೀಪವನ್ನು ಅಲ್ಲಿ ಉರಿಸುವ ಏರ್ಪಾಟಾಗಿದೆ. ರಾಷ್ಟ್ರೀಯ ಧ್ವಜಾರೋಹಣಸಮಾರಂಭವು ವರ್ಷ ವರ್ಷ ಹೆಚ್ಚು ವಿಜೃಂಭಣೆಯಿಂದ ನಡೆಯುತ್ತಿದೆ. ಈ ಸಾರಿ ಕಾರ್ಯವು ಯಾರಿಂದ ಮಾಡಲ್ಪಡಬೇಕೆಂಬುದು ಇನ್ನೂ ನಿರ್ಧರವಾಗಿಲ್ಲ. 29 ನೆ ತಾ|| ಕಾಂಗ್ರೆಸ್ ಪ್ರಾರಂಭವಾಗುವದಕ್ಕೆ ಎರಡು ಗಂಟೆ ಮೊದಲು ಅಧ್ಯಕ್ಷರಾದ ಪಂಡಿತ ಜವಾಹರಲಾಲ್ ನೆಹರುಯವರ ಕೈಯಿಂದ ಈ ಧ್ವಜಾರೋಹಣ ಕಾರ್ಯವನ್ನು ಮಾಡಿಸಬೇಕೆಂದು ಯೋಚಿಸುತ್ತಿದ್ದಾರೆ.

ಇಂಗ್ಲೆಂಡಿಗೂ ಅಮೇರಿಕೆಗೂ ಹೋಗಿ ಬರುತ್ತಿರುವ ಎರಡು ದೊಡ್ಡ ಹಡಗುಗಳಲ್ಲಿ ಕೆಲವು ವಿಚಿತ್ರವಾದ ಯಂತ್ರಗಳನ್ನು ಜೋಡಿಸಿರುವರು. ಆ ಹಡಗುಗಳಲ್ಲಿ ಸಮುದ್ರದಮೇಲೆ ಪ್ರಯಾಣಮಾಡುತ್ತಿರುವಾಗ್ಗೆ ಪ್ರಯಾಣಿಕರು ಒಂದು ಕಡೆ ಇಂಗ್ಲೆಂಡಿನಲ್ಲೂ ಇನ್ನೊಂದು ಕಡೆ ಅಮೇರಿಕೆಯಲ್ಲೂ ಇರುವ ತಮ್ಮ ನೆಂಟರಿಷ್ಟರ ಮತ್ತು ಹಿತಮಿತ್ರರೊಡನೆ ಸಂಭಾಷಣೆ ಮಾಡುವುದಕ್ಕೆ ಆ ಯಂತ್ರಗಳು ಸಾಧಕವಾಗಿರುತ್ತವೆ. ಇದುವರೆಗೆ ಇಂಥಾ ತಂತಿಗಳ ಸಹಾಯವಿಲ್ಲದ ಸಾಧನಗಳನ್ನು ವಿಶೇಷ ದೂರವಿಲ್ಲದ ಸ್ಥಳದಿಂದ ಸ್ಥಳಕ್ಕೆ ಮಾತ್ರ ಪ್ರಯೋಗಿಸುವಂತಿದ್ದಿತು. ಈಚೆಗೆ ಅವುಗಳ ಸಹಾಯದಿಂದ ಯೂರೋಪ್ಪಿಗೂ ಅಮೇರಿಕಕ್ಕೂ ಸಮಾಚಾರ ಹೋಗಿ ಬರಲು ಏರ್ಪಾಟು ಮಾಡಲಾಗಿದೆ. ಈಗ ಹಡಗುಗಳಲ್ಲಿ ಅವುಗಳನ್ನು ಜೋಡಿಸುವದರಿಂದ ಪ್ರಯಾಣಿಕರು ಎಷ್ಟು ದೂರಪ್ರದೇಶಕ್ಕಾದರೂ ಸುದ್ದಿಯನ್ನು ಕಳುಹಿಸಿ ಜವಾಬು ಪಡೆಯಲು ಸೌಕರ್ಯ ಉಂಟಾಯಿತು. ಇದುವರೆಗೂ ಹಡಗುಗಳಲ್ಲಿ ಪ್ರಯಾಣಮಾಡುವವರಿಗೆ ಇಂಥಾ ಸೌಕರ್ಯವಿರಲಿಲ್ಲ.

ರೂಡಿಸೆಂಡರ್ ಎಂಬ ೨೧ ವರ್ಷದ ಆಸ್ಟ್ರಿಯನ್ ಯುವಕನು ತನ್ನ ಮೇಲೆ ಭೂತಗಳ ಆವೇಶ ಬರುವುದು ನಿಶ್ಚಯವೆಂಬುದನ್ನು ಪರೀಕ್ಷೆ ಕೊಡಲು ಲಂಡನ್ನಿಗೆ ಬಂದಿರುವನು. ಅಲ್ಲಿ ವಿಜ್ಞಾನ ಶಾಸ್ತ್ರಜ್ಞರು ಮೋಸಕ್ಕವಕಾಶವಿಲ್ಲದಂತೆ ಕಟ್ಟಲ್ಪಟ್ಟಿರುವ ಕೊಠಡಿಯಲ್ಲಿ ಆ ಯುವಕನನ್ನು ಪರೀಕ್ಷಿಸುವರು. ಆವೇಶವು ಬರಬೇಕಾದ ಕೊಠಡಿಯನ್ನು ಕತ್ತಲಾಗಿ ಮಾಡಿಸುವರು. ಆ ಸಮಯದಲ್ಲಿ ಆವೇಶ ಹೊಂದಿದವನಾಗಲಿ, ಕೊಠಡಿಯಲ್ಲಿರುವ ಇತರರಾಗಲಿ ಸ್ವಲ್ಪಮಟ್ಟಿಗೆ ಕೈಕಾಲುಗಳನ್ನಾಡಿಸಿದರೂ ತಿಳಿಸುವಂತಹ ಎಲೆಕ್ಟ್ರಿಕ್ ಯಂತ್ರಗಳು ಕೊಠಡಿಯ ಬೇರೆ ಬೇರೆ ಮೂಲೆಗಳಲ್ಲಿಡಲ್ಪಟ್ಟಿರುವವು. ಕೊಠಡಿಯಲ್ಲಿ ನಡೆಯುವ ಶಬ್ದವನ್ನು ಹಿಡಿಯಲು ಒಂದು ಡಿಕ್ಟೊಫೋನ್ ಎಂಬ ಯಂತ್ರವಿರುವುದು. ವಯೊಲೆಟ್ ರೇಮುಬಾಂತರ ಕತ್ತಲೆಯಲ್ಲಿ ಫೋಟೋ ತೆಗೆಯುವ ಕ್ಯಾಮರಾದಿಂದ ಕೊಠಡಿಯಲ್ಲಿ ನಡೆಯುವುದರ ಚಿತ್ರವನ್ನು ತೆಗೆಯಬಹುದು. ವಿಯೆನ್ನಾ, ಪ್ರೇಗ್, ಮ್ಯೂನಿಚ್, ಪ್ಯಾರಿಸ್ ಮುಂತಾದ ಕಡೆಗಳಲ್ಲಿ ರೂಡಿಯು ಈಗಾಗಲೆ ತನ್ನ ಶಕ್ತಿಯನ್ನು ಪ್ರದರ್ಶಿಸಿರುವನು.

ಘೋರಯುದ್ಧವು ಮುಕ್ತಾಯಗೊಂಡ ಬಳಿಕ ಜರ್ಮನಿಯವರು ಪುನಃ ಯುದ್ಧಮಾಡಲು ಸನ್ನದ್ಧರಾಗದಂತೆ ನೋಡಿಕೊಳ್ಳುವದಕ್ಕೋಸ್ಕರ ಬ್ರಿಟಿಷರೂ, ಫ್ರೆಂಚರೂ ತಮ್ಮ ತಮ್ಮ ಸೈನ್ಯಗಳನ್ನು ರೈನ್ ನದಿಯ ಉದ್ದಕ್ಕೂ ಇರುವ ಜರ್ಮನಿಯ ಕೋಟೆಗಳಲ್ಲಿ ಇಟ್ಟಿದ್ದರು. ಆ ಸೈನ್ಯಗಳು ಇದುವರೆಗೂ ಆಯಾ ಕೋಟೆಗಳಲ್ಲಿಯೇ ಇದ್ದುಕೊಂಡು ಬಂದವು. ಇನ್ನು ಮುಂದೆ ಅವರನ್ನು ಜರ್ಮನಿಯಲ್ಲಿ ಇಟ್ಟಿರಬೇಕಾದ ಅಗತ್ಯವಿಲ್ಲವೆಂದು ತೀರ್ಮಾನವಾದ ಕಾರಣ ಕಳೆದ ಗುರುವಾರ ಇಂಗ್ಲೀಷ್ ಸೈನಿಕರ್ಯಾರೂ ಅಲ್ಲಿಲ್ಲವೆಂಬ ಅರ್ಥವನ್ನು ಸೂಚಿಸುವುದಕ್ಕೆ ಆ ದಿನ ಮಧ್ಯಾಹ್ನ 2 ಘಂಟೆಯಲ್ಲಿ ವೀಸ್‌ಬಾಡೆನ್ ಎಂಬ ನಗರದಲ್ಲಿ ಎತ್ತಿ ಕಟ್ಟಿದ್ದ ಬ್ರಿಟಿಷ್ ಬಾವುಟವನ್ನು ಇಳಿಸಿಬಿಟ್ಟಿರುತ್ತಾರೆ. ಅಲ್ಲಿಂದ ಹೊರಡುವದಕ್ಕೆ ಮುಂಚೆ ಬ್ರಿಟಿಷ್ ಸೈನ್ಯಗಳ ಅಧಿಪತಿಯು ಆ ನಗರದಲ್ಲಿ ಒಂದು ಭಾಷಣವನ್ನು ಮಾಡಿ ಬ್ರಿಟಿಷ್ ಸೈನಿಕರ ವಿಷಯದಲ್ಲಿ ಜರ್ಮನಿಯವರು ಪ್ರೀತ್ಯಭಿಮಾನಗಳನ್ನು ತೋರಿಸುತ್ತಾ ಬಂದಿರುತ್ತಾರೆಂತಲೂ ಕಳೆದ ಹನ್ನೊಂದು ಸಂವತ್ಸರಗಳ ಅವಧಿಯಲ್ಲಿ ಜರ್ಮನಿಯವರೂ ಬ್ರಿಟಿಷರೂ ರೈನ್ ನದೀ ತೀರ ಪ್ರದೇಶಗಳಲ್ಲಿ ಸ್ನೇಹವನ್ನು ಬೆಳೆಯಿಸಿ ಪರಸ್ಪರ ಸೌಹಾರ್ದವನ್ನು ಹೆಚ್ಚಿಸಿಕೊಂಡಿರುತ್ತಾರೆಂತಲೂ ಹೇಳಿದರು.

ಕಳೆದ ತಾ|| 14 ರಲ್ಲಿ ಡಿಲ್ಲಿಯ ರೈಲ್ವೆ ಗಾರ್ಡನೊಬ್ಬನಿಗೆ 110 ರೂ. ಮಾಸಿಕ ಸಂಬಳ ದೊರೆಯಿತು. ಅವನು ಅದರಲ್ಲಿ 10 ರೂ. ಗಳಿಗೆ ವಸ್ತ್ರವನ್ನು ಕೊಂಡುಕೊಂಡು, ಒಂದು ಹೊಟೆಲಿಗೆ ಹೋಗಿ ಊಟತೀರಿಸಿ ಹೊರಬರುವಾಗ ಗೋಷ ಹಾಕಿರುವ ಓರ್ವ ಸುಂದರ ತರುಣಿಯು ಸಂಧಿಸಿದಳು. ಅವನನ್ನು ಮೊಣಕೈಯಿಂದ ದೂಡಿ ತನ್ನ ಗೋಷೆಯನ್ನು ಅರಿಕೆರೆದಳು. ತರುಣಿಯ ಲಾವಣ್ಯವು ಗಾರ್ಡಿನ ಮನಸ್ಸನ್ನಾಕರ್ಷಿಸಿತು. ಅವಳು "ತಮ್ಮನ್ನು ನಾನು ಬಹಳ ಹುಡುಕುತ್ತಿದ್ದೆನೆಂದು" ಮಧುರವಾಗಿ ಮಾತನಾಡಿದಳು. ಇಬ್ಬರೂ ಪ್ರಣಯಪ್ರಲಾಪಮಾಡುತ್ತಾ ಮುಂದುವರಿದರು. ಒಂದೆಡೆ ತರುಣಿಯು ಪಕ್ಕನೆ ಒಂದು ಪಾಳುಬಿದ್ದ ಮನೆಯ ಒಳಹೋಗಿ ಗೋಷೆ ತೆಗೆದು ಗಾರ್ಡನನ್ನು ಆಲಂಗಿಸಿಬಿಟ್ಟಳು. ಗಾರ್ಡನು ಸಂತೋಷದಿಂದುಬ್ಬಿದನು. ಇನ್ನೊಮ್ಮೆ ಸಮಾಗಮವಾಗಬೇಕೆಂದು ಹೇಳಿ ಇಬ್ಬರೂ ಅಗಲಿದರು. ಸ್ವಲ್ಪದೂರ ಹೋದಮೇಲೆ ಗಾರ್ಡನು ತನ್ನ ಕಿಸೆಗೆ ಕೈಹಾಕಿ ನೋಡಿದನು. 100 ರೂ ನೋಟುಗಳು ಇರಲಿಲ್ಲ. ತರುಣಿಯು ಅವುಗಳನ್ನು ಚತುರತೆಯಿಂದ ತೆಗೆದು ಬಿಟ್ಟಿದ್ದಳು. 18 ವರ್ಷ ಪ್ರಾಯದ ಈ ತರುಣಿಯು ಇಂತಹ ಮೋಸದ ವ್ಯಾಪಾರದಲ್ಲಿ ಬಲು ಚತುರಳಂತೆ. ಗಾರ್ಡನು ಪಾಪ, ಒಂದು ಚುಂಬನಕ್ಕಾಗಿ ಒಂದು ತಿಂಗಳ ಸಂಬಳವನ್ನೇ ಕಳೆದುಕೊಂಡನು.

ಪ್ರಥಮ ಕರ್ನಾಟಕ ನಾಟ್ಯ ಸಮ್ಮೇಲನ, ಧಾರವಾಡ.

ಮಹನೀಯರೇ,

ಇದೇ ತಿಂಗಳ ೨೬-೨೭ ನೆಯ ತಾರೀಕುಗಳಲ್ಲಿ ಪ್ರಥಮ ಕರ್ನಾಟಕ ನಾಟ್ಯ ಸಮ್ಮೇಲನವು ಬಳ್ಳಾರಿಯ ಸುಪ್ರಸಿದ್ಧ ಜಗನ್ಮಾನ್ಯ ನಟಶಿರೋಮಣಿ ಶ್ರೀ ಟಿ. ರಾಘವಾಚಾರ್ಯರು ಬಿ.ಎ., ಬಿ.ಎಲ್. ಅವರ ಅಧ್ಯಕ್ಷತೆಯಲ್ಲಿ ಅನ್ನಪೂರ್ಣಾ ನಾಟಕಗೃಹದಲ್ಲಿ ನೆರೆಯುವದು. ಅದೇ ಸಮಯದಲ್ಲಿ ನಾಟಕ ಗ್ರಂಥಗಳ ಪ್ರದರ್ಶನವನ್ನು ಅಧ್ಯಕ್ಷರಿಂದ ತೆರೆಯಿಸುವೆವು. ಆದುದರಿಂದ ನಾಟ್ಯಪ್ರೇಮಿಗಳಾದ ತಾವು ಅಗತ್ಯವಾಗಿ ಬಂದು ಸಮ್ಮೇಲನವನ್ನು ಯಶಸ್ವಿಯಾಗಿ ಮಾಡಬೇಕೆಂದು ಬಿನ್ನಹ.

ನಾಟ್ಯಸಮ್ಮೇಲನ ಕಾರ್ಯಾಲಯ ಧಾರವಾಡ, ೧೩—೧೨—೧೯೨೯.

ತಮ್ಮ ವಿಧೇಯ, ಮುದವೀಡು ಕೃಷ್ಣರಾಯ, ಸ್ವಾಗತಾಧ್ಯಕ್ಷ.

ಒಂದು ದುಃಖವಾರ್ತೆ.

ಇದೇ ತಿಂಗಳು ತಾ|| 12-12-1929 ನೇ ಗುರುವಾರ ಯಡಕೊರೆ ತಾಲ್ಲೋಕು ಕಾಮೇನಹಳ್ಳಿ ಮೇದೂರಯ್ಯನವರ ಮಕ್ಕಳು ಕೆ. ರಾಮಣ್ಣನವರು ಶಿವಾಧೀನರಾದರು. ಇವರು ಧರ್ಮನಿರತರಾಗಿಯೂ ವಿಲೇಜ್ ಪಂಚಾಯಿತಿಯ ಮೆಂಬರಾಗಿಯೂ ಜನಾನುರಾಗಿಯೂ ಆಗಿದ್ದರು. ಇವರು ತಮ್ಮ ಅಲ್ಪವಯಸ್ಸಿನಲ್ಲಿಯೇ ಹೀಗೆ ವಿಧಿವಶರಾದುದು ಈ ಪ್ರಾಂತದ ಜನಗಳಿಗೆಲ್ಲ ವ್ಯಸನವುಂಟಾಯಿತು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬಕ್ಕೆ ಸೌಖ್ಯವನ್ನೂ ಕೊಟ್ಟು ಕಾಪಾಡಲೆಂದು ಕೋರುವ,

ಬಿ. ಸಿ. ಆರಾಧ್ಯ, ಗ್ರಾಮಹಿತೈಷಿ.

ನಿಜಾಮರ 46 ನೇ ವರ್ಧಂತ್ಯೋತ್ಸವವು.

ತಾರೀಖು (೨೯—೩—೨೯) ರೋಜ ಮಂಗಳವಾರದಿವಸ ಕಸಬೆ ರಾಮದುರ್ಗ ಜಿಲ್ಹೆ ರಾಯಿಚೂರ ಶಾಲೆಯ ನೇತೃತ್ವದಲ್ಲಿ ನಮ್ಮ ರಾಜರಾದ ಆಲಾ ಹಜರತ್ ಮೀರ ಉಸಮಾನಲ್ಲಿಖಾನ ಬಹದ್ದೂರರವರ ವರ್ಧಂತ್ಯೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿತು. ಸಭೆಯಲ್ಲಿ ಸುಮಾರು 500 ಜನರು ಕೂಡಿದ್ದರು. ಸಭಾಕಾರ್ಯವು ಗಂಟೆ 3½ ಗೆ ಈಶಸ್ತವನದೊಂದಿಗೆ ಪ್ರಾರಂಭವಾಯಿತು. ಶಾಲೆಯ ಆರು ಜನ ಬಾಲಕರ ವಿವಿಧ ನೈತಿಕ ವ್ಯಾಖ್ಯಾನಗಳಾದವು. ಅನಂತರ ರಮಣಯ್ಯನೆಂಬ ವಿದ್ಯಾರ್ಥಿಯು ರಾಜರ ಜನ್ಮ ಚರಿತ್ರವನ್ನು ಪುಟ್ಟದಾಗಿ ಕನ್ನಡದಲ್ಲಿ ಹೇಳಿದನು. ಮಿ|| ಹನುಮಂತರಾವ ಲಿಂಗಸೂಗೂರಕರ ಹೆಡ್‌ಮಾಸ್ತರರು ಬಾದಶಹರ ಸವಿಸ್ತಾರ ಚರಿತ್ರೆಯನ್ನು ಹೇಳಿ ಸಭಿಕರನ್ನು ರಂಜಿಸಿದರು. ಫೈಯಾಜ ಉದ್ದೀನ ಸಾಹೇಬ ಮದದಗಾರ ಮಾಸ್ತರರು ರಾಜರ ಗುಣವರ್ಣನೆಯ ಕೆಲವು ಪದ್ಯಗಳನ್ನು ಓದಿದರು. ಆಮೇಲೆ ಬಾಲಕರ ವಿವಿಧ ಆಟಗಳಾದವು. ಸುಮಾರು 5 ಘಂಟೆಗೆ ಇಲ್ಲಿಯ ಅಮೀನ ಕಛೇರಿಯ ಪೋಲೀಸರು ತಮ್ಮ ಡ್ರೆಸ್ಸಿನಿಂದ ಬಂದು ಕವಾಯಿತನೊಡನೆ ಚೌಕಾದ ಎದುರಿಗೆ ನಿಂದು ಕಿರಚಿನಿಂದ ಫಾಹೀಸಲಾಮಿಯನ್ನು ಅರ್ಪಿಸಿದರು. ಅಗ್ಗಿಯಾಪತ್ರರೂ ರಾಜಭಕ್ತಿಯಿಂದ ತಲೆ ಬಾಗಿಸಿಕೊಂಡು ನಿಂತರು. ತರುವಾಯ ಬಾದಶಹರ ಕ್ಷೇಮಾರ್ಥ ಬಡಹುಡುಗರಲ್ಲಿಯೂ, ಅನಾಥರಲ್ಲಿಯೂ, ಬಟ್ಟೆಗಳು ಹಂಚಲಾಯಿತು. ಮತ್ತು ಶಾಲೆಯ ಬಾಲರಲ್ಲಿ ಪಾರಿತೋಷಕಗಳೂ, ಮಿಠಾಯಿಯೂ ಹಂಚಲ್ಪಟ್ಟವು. ಯಾವತ್ತು ದೇವಾಲಯ ಮಸೀದಿಗಳಲ್ಲಿ ದೀಪೋತ್ಸವಮಾಡಿ ಅಲ್ಲಿಯ ಬಾದಶಹರ ಆಯುರಾರೋಗ್ಯಗಳ ಏಳಿಗೆಗಾಗಿ ಪ್ರಾರ್ಥಿಸಲಾಯಿತು.

ವಿದ್ಯಾಭಿಮಾನಿಗಳಾದ ನಮ್ಮ ಬಾದಶಹರು, ಸದಾ ಸುಖದಿಂದ ಇರಲೆಂದು ಆ ಪರಶಿವನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಶಾಸ್ತ್ರಿ ವೀರಪ್ಪ, ರಾಮದುರ್ಗ.

ಶ್ರೀ ಶಿವಲಿಂಗ ಸಂಸ್ಕೃತ ಪಾಠಶಾಲಾ. ಬೃಹನ್ಮಠ, ಸಂಸ್ಥಾನ ಮುಧೋಳ.

ತಾ|| 19-2 ಸೋಮವಾರದ ದಿವಸ ನಿಜಾಮ್ ಪ್ರದಗಿರಿ ತಾಲೂಕು ಪೈಕಿ ಮುಧೋಳ ಬೃಹನ್ಮಠದಲ್ಲಿ ಸಭೆ ಸೇರಿ ನಮ್ಮ ನೈಜಾಮದಲ್ಲಿಯ ವೀರಶೈವ ವೈದಿಕ ಮಾಹೇಶ್ವರರು ವಿದ್ಯೆಯಲ್ಲಿ ಬಹಳವಾಗಿ ಹಿಂದುಳಿದ ಕಾರಣ ಮತಕ್ಕೆ ನ್ಯೂನತೆಯುಂಟಾಯಿತು. ಅದಕ್ಕೆ 'ಸರ್ವವಿದ್ಯಾಸುಮಾತಾ' ಸರ್ವವಿದ್ಯೆಗಳಿಗೂ ಜನ್ಮಸ್ಥಾನವೆನಿಸಿದ ಸಂಸ್ಕೃತವಿದ್ಯೆಯನ್ನು ನಮ್ಮ ನೈಜಾಮದಲ್ಲಿರುವ ಮಾಹೇಶ್ವರ ವಟುಗಳು ಅಭ್ಯಾಸಮಾಡಿ ತಮ್ಮ ಮತದ ಧರ್ಮಕರ್ಮಗಳನ್ನು ಅರಿತುಕೊಂಡು ಸಮಾಜಕ್ಕೆ ಉಪಕಾರಮಾಡಲೆಂಬ ಉದ್ದೇಶದಿಂದ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ತೀರ್ಮಾನಮಾಡಿ ಸದರಿ ಗ್ರಾಮದ ಮ|| ರಾ|| ಗುರುಬಸವಪ್ಪ ಬಸನಾಳೆ ಮ|| ರಾ|| ಅಂಣರಾಯಬೆಂಡೆ, ಮ|| ಗಂಗಪ್ಪ ರಾ ಗಾ| ಗುರಪ್ಪ ಗೂಧಪುರೆ ಮ|| ರಾ|| ವಿಶ್ವನಾಥ ಕಡಿಕೆ ಮ|| ಹಾವಪ್ಪ ಕಡಿಕೆ, ಮಹಾದಪ್ಪ ಕತ್ತಿ ಮ|| ರೇವಪ್ಪ ಕತ್ತಿ ಗುರಪ್ಪ ಹೊಸಕಂಡೆ ಗುಂಡಪ್ಪ ಬಿಸಕುಂಡೆ ಮ|| ಹನುಪ್ಪ ಬಿಸಕುಂದಿ ಮ|| ಸಂಗಪ್ಪ ವಟಿಗೆ ಮ|| ಮಾದಪ್ಪ ಹರಡಿಗಿ, ಮ|| ಗುರುಬಸಪ್ಪ ಬಿರೇಜದಾರ ಮತ್ತು ಮ|| ಬಸವಂತರಾವ ದೇಶಮುಖ ಡೋಣಗಾಂವ ಇವರೇ ಮೊದಲಾದ ಸದ್ಭಕ್ತರ ಪ್ರೋತ್ಸಾಹದಿಂದ ಷ|| ಬ್ರ|| ಶಿವಲಿಂಗಸ್ವಾಮಿಗಳ ಹೆಸರಿನಿಂದ ಸಂಸ್ಕೃತಶಾಲೆಯು ಸ್ಥಾಪಿಸಲ್ಪಟ್ಟಿತು. ಈ ಶಾಲೆಗೆ ವೇ|| ವಿರೂಪಾಕ್ಷಶಾಸ್ತ್ರಿ ವಂದಲಿ ದಾಸೋಹಮಠ ಇವರನ್ನು ಅಧ್ಯಾಪಕರನ್ನಾಗಿ ಮಾಡಿರುತ್ತಾರೆ. ಈ ಶಾಲೆಯು ಚಿರಕಾಲವಾಗಿ ನಡೆದು ತನ್ನ ಧ್ಯೇಯವನ್ನು ಬೇಗನೆ ಸಾಧಿಸುವಂತೆ ಶ್ರೀಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸಿ ಪಂಚಾಚಾರ್ಯ ಪ್ರಭೆಗೆ ಒಂದು ರೂಪಾಯಿ ಅರ್ಪಿಸಲ್ಪಟ್ಟಿತು. ಶ್ರೀ|| ಷ|| ಬ್ರ|| ಶಿವಲಿಂಗಶಿವಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀ|| ಷ|| ಬ್ರ|| ಮಹಾಂತಲಿಂಗ ಶಿವಾಚಾರ್ಯ, ಬೃಹನ್ಮಠ ಮುಧೋಳ.

ಶ್ರೀ ಹೊಳೆಲಿಂಗೇಶ್ವರ ರಥೋತ್ಸವ.

ಶಿವಮೊಗ್ಗಾ ಡಿ|| ಸೊರಬ ತಾಲೂಕು ಜಡೆಹೋಬಳಿ ಬಂಕಸ್ಸಾಣ ಗ್ರಾಮದ ಸಮೀಪದಲ್ಲಿ ವಂದಾ ಮತ್ತು ದಂಡಕ ನದಿಗಳ ಸಂಗಮದ ಮಧ್ಯದಲ್ಲಿ ಲಿಂಗವು ಉದ್ಭವಿಸಿದುದರಿಂದ ಈ ಸ್ಥಳವು ಅತ್ಯಂತ ಪುಣ್ಯಸ್ಥಳವೆನಿಸಿಕೊಂಡಿರುತ್ತದೆ. ಈಗ ಆರೇಳು ವರ್ಷಗಳಿಂದ (ಮಕರಸಂಕ್ರಮಣದಲ್ಲಿ) ಅಜುಬಾಜು ಗ್ರಾಮಗಳ ಸ್ವಾಮಿಗಳು ಸೇರಿ ಅತ್ಯಂತ ವಿಜೃಂಭಣೆಯಿಂದ ಈ ರಥೋತ್ಸವವನ್ನು ನಡೆಯಿಸುತ್ತಾ ಇದ್ದಾರೆ. ಇದೇ ಪದ್ಧತಿಯ ಪ್ರಕಾರ ೧೮೫೧ ನೇ ಶುಕ್ಲನಾಮ ಸಂವತ್ಸರದ ಪುಷ್ಯ ಶುದ್ಧ ೧೩ ಸೋಮವಾರ (ತಾ|| 13-1-1930) ಬೆಳಗಿನಿಂದ ಸಾಯಂಕಾಲದವರೆಗೆ ಪೂಜಾವೈಭವವು ನಡೆದು ರಾತ್ರಿ ೭ ಗಂಟೆಯಿಂದ ದೇವರ ಅಲಂಕಾರ, ದೀಪಾರಾಧನೆ, ಭಜನೆ, ಕೀರ್ತನ ಮೊದಲಾದವುಗಳು ನಡೆಯುವವು. ತರುವಾಯ ಬೆಳಗಿನ 5 ಗಂಟೆಗೆ ಶ್ರೀ ಹೊಳೆಲಿಂಗೇಶ್ವರನ ರಥೋತ್ಸವವು ನಡೆಯುತ್ತದೆ. ತಾ|| ೧೪-೧-೧೯೩೦ ರಿಂದ ತಾ|| ೨೦-೧-೩೦ ರ ವರೆಗೆ ಕುಸ್ತಿಗಳು ನಡೆದು ಬಹುಮಾನ ಕೊಡಲ್ಪಡುತ್ತದೆ. ಪ್ರತಿವರ್ಷ ದನಗಳ ವ್ಯಾಪಾರವು ವಿಶೇಷವಾಗಿ ನಡೆಯುತ್ತದೆ. ಹೊಸದಾಗಿ ಬರತಕ್ಕ ನಾಟಕದವರೂ, ಅಂಗಡಿಕಾರರೂ ತಮ್ಮ ಅನುಕೂಲತೆ ಬಗ್ಗೆ ಮ|| ರಾ|| ಶ್ರೀ|| ಶ್ಯಾನವಳ್ಳಿ ಮಾಳಗಿ ದೊಡ್ಡ ವೀರಪ್ಪಗೌಡರಿಗೆ ತಿಳಿಸತಕ್ಕದ್ದು.

ಈ ಸಂಗಮ ಸ್ಥಳವು ಆನವಟ್ಟಿಗೆ ೩ ಮೈಲಿ ದೂರದಲ್ಲಿಯೂ ಊರಿಗೆ ೧೦ ಮೈಲಿ ದೂರದಲ್ಲಿಯೂ ಬನವಾಸಿಗೆ ೭ ಮೈಲಿ ದೂರದಲ್ಲಿಯೂ ಇರುವದು. ಸದ್ಭಕ್ತರು ಎಂದಿನಂತೆ ಬಂದು ಮಕರಸಂಕ್ರಮಣದ ಸ್ನಾನಮಾಡಿ ಪುಣ್ಯಭಾಗಿಗಳಾಗಬೇಕಾಗಿ ಕೋರುತ್ತೇವೆ.

ಬಂಕಸ್ಸಾಣ ಗ್ರಾಮಸ್ಥರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಪಂಚಾಚಾರ್ಯ ಪಂಚಾಂಗಂ.

ಓ ಪ್ರಿಯಬಾಂಧವರೇ?

ನಾವುಗಳು ಮುಂದಿನ ಶ್ರೀ ಪ್ರಮೋದೂತನಾಮ ಸಂವತ್ಸರದ ಪಂಚಾಂಗವನ್ನು ಗುಣಿಸಿ ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಮುದ್ರಣಾಲಯದಲ್ಲಿ ಮುದ್ದಾದ ಅಕ್ಷರಗಳಿಂದ ಅಂದವಾಗಿ ಮುದ್ರಿಸಿ ಬಿಕರಿಗೆ ಸಿದ್ಧಮಾಡಿರುತ್ತೇವೆ. ಮತ್ತು ಈ ಪಂಚಾಂಗದ ಮೇಲ್ಭಾಗದಲ್ಲಿ ಶ್ರೀ ವೀರಶೈವ ಮಹಾಮತವನ್ನು ಸ್ಥಾಪಿಸಿದ ಲಿಂಗೋದ್ಭವರಾದ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಗಳನ್ನೂ ಒಳಭಾಗದಲ್ಲಿ ಈಗಿರುವ ರಂಭಾಪುರಿ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನೂ ಈಗಿರುವ ಉಜ್ಜಯಿನೀ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನೂ ವೇ|| ಪಂ|| ಕಾಶೀನಾಥಶಾಸ್ತ್ರಿಗಳವರ ಭಾವಚಿತ್ರವನ್ನೂ ಇಡಿಸಿರುತ್ತೇವೆ. ಅಲ್ಲದೆ ಈ ಪಂಚಾಂಗದಲ್ಲಿ ಮತಸ್ಥಾಪಕರ ಪುಣ್ಯದಿನಗಳನ್ನೂ ಸ್ಮಾರ್ತ ವೈಷ್ಣವಾದಿಗಳ ಏಕಾದಶಿ ನಿರ್ಣಯವನ್ನೂ ಪೌರ್ಣಮಾಮಾವಾಸ್ಯಾದಿ ನಿಯಮಗಳನ್ನೂ ದರ್ಶ ಪಿತೃಯಜ್ಞ ಮುಂತಾದ ಕರ್ಮಗಳ ಕಾಲವನ್ನೂ ಬರೆದಿರುತ್ತೇವೆ. ಇದೂ ಅಲ್ಲದೆ ಅಶ್ವಿನ್ಯಾದಿ ಅನೂರಾಧ ಮಳೆಯವರಿಗೆ ಪ್ರತಿಚರಣಗಳಿಗೂ ವಾಹನಗಳನ್ನು ತೆಗೆದು ಈ ಜಗದಾಧಾರವಾದ ಮಳೆಗಳು ಯಾವ ದೇಶಕ್ಕೆ ಎಷ್ಟು ಭಾಗ ಬೀಳುತ್ತವೆಂಬುವದನ್ನು ಬಹು ಶೋಧದಿಂದ ಬರೆದಿರುವೆನಲ್ಲದೆ, ಆ ವರ್ಷ ದ್ವಾದಶರಾಶಿಯವರಿಗೆ ಜರುಗಬೇಕಾದ ಶುಭಾಶುಭ ಫಲಗಳನ್ನು ವಿವಾಹ ಉಪನಯನ ಗೃಹಪ್ರವೇಶಾದಿ ಮುಹೂರ್ತಗಳ ಕಾಲವನ್ನೂ ಪ್ರತಿ ತಿಂಗಳುಗಳಲ್ಲಿಯೂ ಚಂದ್ರಶೃಂಗೋನ್ನತಿಯಿಂದುಂಟಾಗುವ ಮಳೆಬೆಳೆಗಳ ಸ್ವಾರಸ್ಯವನ್ನೂ ಪ್ರತಿಪದಾರ್ಥಗಳ ತೇಜಿ ಮಂದಿ ಮುಂತಾದ ವ್ಯಾಪಾರಲಕ್ಷಣವನ್ನೂ ಸಹಾ ವಿಷದವಾಗಿ ಬರೆದಿರುತ್ತೇವೆ. ಹಾಗೂ ಅನೇಕ ಮುಹೂರ್ತ ಪ್ರಶ್ನೆಭಾಗಗಳಿಂದ ತುಂಬಿತುಳುಕುತ್ತಿರುವ ೬೨ ಪುಟಗಳಿಂದ ಕೂಡಿರುವ ಈ ನಮ್ಮ ಪಂಚಾಂಗವನ್ನು ಪ್ರತಿಯೊಬ್ಬ ಮಹನೀಯರು ತರಿಸಿಕೊಂಡು ನಿತ್ಯವೂ ಜಗದ್ಗುರುಗಳವರ ದರ್ಶನದಿಂದ ಧನ್ಯರಾಗಿ ಮುಂದೆ ಪಂಚಾಂಗವನ್ನು ಜಾಗ್ರತೆ ತಯಾರಿಸಲು ಉತ್ತೇಜನ ಕೊಡಬೇಕಾಗಿ ವಿನಯ ಪ್ರಾರ್ಥನೆಯು. ಹೆಚ್ಚಾಗಿ ಬೇಡುವವರು ಪತ್ರವ್ಯವಹಾರದಿಂದ ತಿಳಿದುಕೊಳ್ಳತಕ್ಕದ್ದು.

ಪಂಚಾಂಗ ೧ ಕ್ಕೆ ४ ಆಣೆ.

ಪಂಚಾಂಗಕರ್ತಾ,

ಬ್ರಹ್ಮಶ್ರೀ ಸಿದ್ಧಾಂತಿ ಓಂಕಾರಶಾಸ್ತ್ರಿಗಳು, ಹಳ್ಳೂರು ಬೃಹನ್ಮಠ ಪೋಸ್ಟ್ ಕುಮ್ಮನಕಟ್ಟೆ, ಜಿಲ್ಲಾ ಧಾರವಾಡ.

WANTED.

Candidates for Telegraph and Station Masters' Classes. Full particulars and Railway Fare Certificate on receipt of 2 annas Stamp.

Apply to:—

IMPERIAL TELEGRAPH COLLEGE, NAI SARAK, DELHI (2)

ಅಪೂರ್ವಗ್ರಂಥ! ಅಪೂರ್ವಗ್ರಂಥ!!

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ४ ಆಣೆಯಂತೆ ಕಮಿಶನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, **'ಕೊಡಗಿನ ಗುಡುಗುಡು!'** (ಛಳಿ), **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [20]

ಕ್ರಯ 8 ಔನ್ಸಿನ ಬಿನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

[ಸಕಲ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಶೀಘ್ರದಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ## ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಿಕ್ಕರಿಸಿದರೆ ಶೀಘ್ರದಾತೆಯನ್ನು ರಾಯ್ತು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ...ವಿಕಾರ ನಿದ್ರೆಯು ಬಾರದೆ ಅರೋಚ ಮುಂತಾದ ರೋಗಗಳು ಹೋಗಿ ವಿಶೇಷ ಹಾಸಿಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ...ವಾಗಿ ಘಟ್ಟ ಆಗುವದಲ್ಲದೆ, ಪುರುಷತ್ವ ಬೆಳೆಯುತ್ತದೆ. ವೀರ್ಯಸ್ತಂಭನೆಯಾಗಿ ಕಾಮೋತ್ತೇಜನೆಯು ಹೆಚ್ಚುತ್ತದೆ. ಮತ್ತು ...ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ವಾಸ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (32) ವನಸ್ಪತಿ-ಶತಪುಷ್ಪ, ಕಾಲಿಮಕಂದ, ಮಧುಕಂದ, ಜರಾಕಂಧ, ಕಾಲೀಮುಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ...ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಸಬೀಜ, ನಾಗಬೀಜ, ಬಾಳಬೀಜ, ಭೋಕರೀ... ನವಳೀಬೀಜ, ಬಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಶಮಿಪತ್ರಿ, ವಿಜಾಪತ್ರಿ, ಮದನಮಸ್ತ, ರತನಪುರುಷ, ಕಮರ... ಕಪಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಖೋರಿ, ಮುಂಗಲೀ... ಮರ್ದಪಾಕಟ್ಟಿಗೆ, ಶತಾವರಿ, ಸತೇಲಮಗಜ, ಆಲದಹಾಲು, ನಾರೇರಿಧಾತಾ, ಗೋಕುರು, ಅಡವೀಬೆಂಡಿಬೇರು, ಅಮೃತ... ಇಸಬಗೋಳ ಭುಸ್ಸಾ, ಅನಳಕಾಶಿ, ಶಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರ... ಕಲ್ಲು ಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟ... 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ...ಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಹಾಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ...ವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14 ರೂ. ...ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟೂಳ, ಹಿಕ್ಕಿ, ರಕ್ತ, ಕೀವು, ಹುಣ್ಣು, ದುರ್ಗಂಧಿ, ನಾಶಬಾರದರೋಗ, ದಟ್ಟಸೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ...ಯ 1 ಪುಡಿಕೆಗೆ 3 ರೂಪಾಯಿಗಳು. [24]

ಪತ್ತೆ—ನೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬುಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ४ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ४೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೩ ಆಣೆ ಶಿ. ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[37] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ४ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪತ್ರವ್ಯವಹಾರ.

ಜಾತ್ಯತೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :— ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೇಸಾಗಿದುದು.)

ವೈದಿಕೀಶ್ರುತಿಯಂತೆ ಕಾಮಿಕಾದ್ಯಾಗಮವ್ಯಂಜಕರೂಪವಾದ ಶಾಂತ್ರಿಕೀಶ್ರುತಿಯಾದರೂ ಪರಶಿವನಿಂದೇ ಜಗದುತ್ಪತ್ತಿಯ ಸಮಯದಲ್ಲಿ ವ್ಯಕ್ತಗೊಳಿಸಲ್ಪಟ್ಟಿರುವದೆಂದು ಶಾಂತ್ರಿಕೀಶ್ರುತಿಯಲ್ಲಿಯೇ ಒಂದುಕಡೆ ಹೇಳಲ್ಪಟ್ಟಿರುವುದು. ಹೇಗೆಂದರೆ ವ್ಯಾಗೇಂದ್ರಾಗಮದ ವಿದ್ಯಾಪಾದದಲ್ಲಿ—

ಸೃಷ್ಟಿಕಾಲೇ ಮಹೇಶಾನಃ ಪುರುಷಾರ್ಥಪ್ರಸಿದ್ಧಯೇ ।
ವಿಧತ್ತೇವಿಮಲಂಜ್ಞಾನಂ ಪಂಚಸ್ರೋತೋಭಿಲಕ್ಷಿತಮ್ ॥೨೦॥

ಸೃಷ್ಟಿಯ ಆರಂಭದಲ್ಲಿ ಪರಮೇಶ್ವರನು ಭುಕ್ತಿ ಮುಕ್ತ್ಯಾತ್ಮಕ ಪುರುಷಾರ್ಥಸಂಪತ್ತಿಗೋಸ್ಕರ ತನ್ನ ಮುಖಗಳಾದ ಸದ್ಯೋಜಾತಾದಿ ಪಂಚಮಂತ್ರಪ್ರವಾಹಗಳಿಂದ ವಿಮಲವಿಜ್ಞಾನವನ್ನು ದಿವ್ಯಾಗಮರೂಪವಾದುದನ್ನಾಗಿ ಮಾಡುತ್ತಾನೆ.

ಇಲ್ಲಿ ಒಂದು ಶಂಕೆಯು ತಲೆದೋರುವದು : ಏನೆಂದರೆ— ಪರಮೇಶ್ವರನು ಅನಾದಿಯಾಗಿರುವನಾದ್ದರಿಂದ ಅವನ ಸ್ವರೂಪಭೂತ ವಿಮಲಜ್ಞಾನವಾದರೂ ಅನಾದಿಯಾಗಿರುವುದೆಂಬುದೇನೋ ನಿಜ; ಆದರೆ ಶ್ರೇಷ್ಠತಮವಾದ ಆ ಜ್ಞಾನವು ಪ್ರಶಾಂತಸ್ವರೂಪವೂ ನಿಶ್ಚಲವೂ ಆದ ಪರಶಿವನಿಂದ ಅದು ಹೇಗೆ ತಾನೇ ಹೊರಹೊಮ್ಮಿತು ? ಜ್ಞಾನವು ಅವಬೋಧರೂಪವೋ ಶಬ್ದರೂಪವೋ ಎಂದು ಏನು ಬಗೆಹರಿಯದೆಯಷ್ಟೇ ? ಅವಬೋಧರೂಪವಾದ ಜ್ಞಾನವಾದರೂ ಶಬ್ದರೂಪಾರೂಢವಾದುದಾಗಿಯೇ ಅರ್ಥಗಳಲ್ಲಿ ಪ್ರವರ್ತಿಸುತ್ತದೆ; ಎಂದ ಮೇಲೆ ಮೊದಲು ಪರಮೇಶ್ವರನಿಂದ ಅವಬೋಧರೂಪವಾದ ವಿಮಲಜ್ಞಾನವು ಆಯಾಯ ಶಬ್ದರೂಪವನ್ನು ಹೊಂದಿ ಹಲವು ಬಗೆಯಾಗಿ ಹಬ್ಬಿದುದು ಹೇಗೆ ? ಎಂಬ ಶಂಕೆಯ ಪರಿಹಾರವು ಹೀಗಿದೆ. ಪರಮೇಶ್ವರನು ಅವಬೋಧ (ಸ್ಫುರಣ) ರೂಪಜ್ಞಾನವನ್ನು ಸೃಷ್ಟಿಯ ಮೂಲಾರಂಭದಲ್ಲಿಯೇ ಭೋಗಮೋಕ್ಷಾತ್ಮಕವಾದ ಪುರುಷಾರ್ಥಸಿದ್ಧಿಗಾಗಿ ಮೊದಲು ನಾದರೂಪದಿಂದ ಪ್ರಕಾಶಗೊಳಿಸಿ ಬಳಿಕ ಅಧಿಕಾರಾವಸ್ಥೆಯನ್ನು ತಳೆದು ಎಂದರೆ ಸದಾಶಿವಾದಿರೂಪನಾಗಿ, ಶಬ್ದರೂಪವನ್ನು ಹೊಂದಿದ ಆ ಜ್ಞಾನವನ್ನು ವಿದ್ಯೇಶ್ವರಾದಿಗಳಿಗೆ ಉಪದೇಶಿಸಿದನು.

ಇಲ್ಲಿ ಹೇಳಬೇಕಾದ ಒಂದು ಸಂಗತಿಯುಂಟು : ಅದೇನೆಂದರೆ— ಶಮಕಾರಣವೂ ವ್ಯೋಮಾಕಾರವೂ ಆದ ಶಿವತತ್ವದೊಳಗೆ ಸರ್ವತತ್ವಗಳಿಗೂ ಕಾರಣವೆನಿಸಿ ಅತ್ಯಂತ ಸೂಕ್ಷ್ಮವಾದ ನಾದವು ಅವ್ಯಕ್ತವಾಗಿರುವುದು ; ಹೀಗೆ ಅಪ್ರಕಟವಾಗಿರುವುದರಿಂದೇ ಅದಕ್ಕೆ (ನಾದಕ್ಕೆ) **'ಪರ'** ಎಂಬ ಸಂಜ್ಞೆಯುಂಟು : ಎಂದರೆ ಪರನಾದವೆಂಬ ಹೆಸರಿದೆ. ಪರನಾದದ ವ್ಯಕ್ತತೆಯೇ ಸ್ಫೋಟವು (ವರ್ಣವು) ಶಿವತತ್ವದಿಂದ ಶಕ್ತಿತತ್ವದ ಆವಿರ್ಭಾವಕಾಲದಲ್ಲಿಯೇ **ಸ್ಫೋಟವು** ಮೈದೋರುವುದು ಎಂದರೆ ಮಯೂರಾಂಡರಸನ್ಯಾಯದಂತೆ ಸರ್ವಶಬ್ದಗಳನ್ನೊಳಗೊಂಡ (ಸಕಲ ಶಬ್ದಾತ್ಮಕವಾದ) ಸ್ಫೋಟದಿಂದಾಲಿಂಗಿಸಲ್ಪಟ್ಟುದಾಗಿ ಶಕ್ತಿತತ್ವವು ಹುಟ್ಟುವುದು. ಹೀಗೆ ಸ್ಫೋಟದೊಂದಿಗೆ ಆವಿರ್ಭವಿಸಿದ ಶಕ್ತಿತತ್ವವು **'ಪರಬಿಂದು'** ವೆಂಬ ಸಂಜ್ಞೆಯನ್ನು ಪಡೆವುದು. ತರುವಾಯ ಸ್ಫೋಟವು (ಮೂಲವರ್ಣವು) ಶಕ್ತಿತತ್ವದಿಂದ ಸಾದಾಖ್ಯ (ಸದಾಶಿವ) ತತ್ವದುತ್ಪತ್ತಿಯ ಸಮಯದಲ್ಲಿ ಅಭಿವ್ಯಕ್ತತೆಯನ್ನು ಹೊಂದುವುದು ಎಂದರೆ ಸ್ಥೂಲರೂಪವಾಗಿ ಅನುಭವಗಮ್ಯವಾಗುವುದು. ಈ ಅವಸ್ಥೆಯೇ **ಅಪರನಾದ**ವೆನಿಸುತ್ತದೆ; ಈ ತತ್ವದೊಂದಿಗೆ ಉದಯವಾದ ವರ್ಣಸಮುದಾಯಾತ್ಮಕವಾದ ಅಕ್ಷರಬಿಂದುವು **ಅಪರಬಿಂದು**ವೆನಿಸುವುದು. ಅದರಿಂದ ಈಶ್ವರತತ್ವಕ್ಕೆ ಆಶ್ರಯಗಳಾದ ಸೂಕ್ಷ್ಮವರ್ಣಗಳೂ ಅವುಗಳಿಂದ ಶುದ್ಧವಿದ್ಯಾತತ್ವಕ್ಕೆ ಆಶ್ರಯಗಳಾದ ಸ್ಥೂಲವರ್ಣಗಳೂ ಪರಿಪಡಿದು ಹುಟ್ಟಿದವು. ಈ ರೀತಿಯಾಗಿ **ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯೆ** ಎಂಬೀ ಕಾರ್ಯ... ಚತುಷ್ಟಯಕ್ಕಾಶ್ರಯಗಳಾದ ಈ ಚತುರ್ವಿಧ ಶಬ್ದಗಳೇ ... ವಾಗಿ **ಪರಾ—ಪಶ್ಯಂತೀ—ಮಧ್ಯಮಾ—ವೈಖರೀ** ಎಂಬ ವಾಗ್ವ್ಯಕ್ತಿಚತುಷ್ಟಯರೂಪದಿಂದ ಪ್ರತಿಯೊಬ್ಬನ ಶರೀರದಲ್ಲಿ ಕರ್ಮಾನುಸಾರವಾಗಿ ಅಭಿವ್ಯಕ್ತಗೊಳಿಸಲ್ಪಟ್ಟವುಗಳಾಗಿ ವಿಶ್ವ (ಸಮಸ್ತ) ಅರ್ಥವಾಚಕಗಳಾಗಿರುತ್ತವೆ.

ಈ ಮೇಲೆ ಸೂಚಿಸಿದ ನಾದದ ಅಭಿವ್ಯಕ್ತತೆಯರೂಪವಾದ ಸ್ಫೋಟವು ವರ್ಣಾತ್ಮಕವಾದುದು ಎಂದರೆ ವರ್ಣವ್ಯತಿರಿಕ್ತವಾಗಿ ಸ್ಫೋಟವೆಂಬುದಿಲ್ಲ. ಇಲ್ಲಿ ಈ ಆಶಯವಿದೆ: ಸ್ಫೋಟವು ಎಂದರೆ ಶಬ್ದವು ಅದು ವರ್ಣವ್ಯತಿರಿಕ್ತವಾದುದು ಎಂದು ವೈಯಾಕರಣರ ಹೇಳಿಕೆ ; ಆದರೆ ಸಿದ್ಧಾಂತ (ಆಗಮ)ದಲ್ಲಿ ಸ್ಫೋಟವು ಎಂದರೆ ವರ್ಣವು ಎಂಬರ್ಥವಿದೆ. ಇದನ್ನನುಸರಿಸಿಯೇ ಶ್ರೀಉಪವರ್ಷಾಚಾರ್ಯರು **'ವರ್ಣ ಏವತು ಶಬ್ದಃ'** ವರ್ಣವೇ ಶಬ್ದವು ಎಂದರೆ ವರ್ಣಕ್ಕಿಂತ ಬೇರೆ ಸ್ಫೋಟಾತ್ಮಕಶಬ್ದವು ಅನುಭವಕ್ಕೆ ಬರುವುದಿಲ್ಲ ; ಎಂಬುದಾಗಿ ನಿರೂಪಿಸಿದ ವಾಕ್ಯವನ್ನು ಶಂಕರಾಚಾರ್ಯರು ಶಾರೀರಕದಲ್ಲಿ (ಬ್ರ. ಸೂ. ೧-೩-೮-೨೮)ನಿರ್ದೇಶಮಾಡಿದ್ದಾರೆ. ಇದೇ ಅಭಿಪ್ರಾಯವನ್ನು ರಾಮಕಂಠಾಚಾರ್ಯರು ನಾದಕಾರಿಕೆಯ ವ್ಯಾಖ್ಯಾನದಲ್ಲಿ **'ಹಸ್ತ್ಯಾಕರ ಇತಿವತ್ ಸ್ಫೋಟೋ ವರ್ಣಃ'** ಎಂದು ಸ್ಪಷ್ಟಗೊಳಿಸಿದ್ದಾರೆ. ಆದಕಾರಣ ಪ್ರಕೃತದಲ್ಲಿ ಸ್ಫೋಟವೆಂದರೆ ಮೂಲಪ್ರಣವಾತ್ಮಕವರ್ಣವು. ಅದರ ಹುಟ್ಟುಗೆಯೇ **ಅಕಾರಾದಿ ಳಕಾರಾಂತವಾದ** ೫೦ ಅಕ್ಷರಗಳು ; ಅಕಾರಾದಿ ೫೦ ಅಕ್ಷರಗಳೇ ವರ್ಣಾರ್ಥವೆನಿಸುವುದು ; ಸೃಷ್ಟ್ಯುನ್ಮುಖನಾದ ಎಂದರೆ ಪ್ರಮಾತೃಪ್ರಮಾಣ ಪ್ರಮೇಯರೂಪವಾದ ವಿಶ್ವಪ್ರಪಂಚವಿಲಾಸವನ್ನು ಬಯಸಿ ಅದಕ್ಕಾಗಿ ಪ್ರವೃತ್ತನಾದ ಪರಶಿವನ ಇಚ್ಛಾಶಕ್ತಿಯಿಂದ ಕ್ಷೋಭಿತವಾದ ಬಿಂದುವೇ **ಪ್ರಣವ** (ಮೂಲವರ್ಣ) ವೆನಿಸುವುದು. ಪ್ರಣವದಿಂದೇ ಅಕಾರಾದಿ ೫೦ ಅಕ್ಷರ ಪ್ರಸರವು ; ಆ ಅಕ್ಷರಗಳಲ್ಲಿ ಕಕಾರಾದಿ ಳಕಾರಾಂತ ನಾದವುಗಳು ಜೀವವರ್ಣಗಳಾದ್ದರಿಂದ ಶರೀರಗಳೆನಿಸುವುವು : ಇವು ಜೀವರೂಪಗಳಾದ ಅಕಾರಾದಿ ಸ್ವರಯುಕ್ತಗಳಾಗಿ ಸಜೀವನೆನಿಸುತ್ತವೆ; ಹೀಗೆ ದೇಹರೂಪಗಳಾದ ಕಕಾರಾದಿಗಳೂ ಜೀವರೂಪಗಳಾದ ಅಕಾರಾದಿಗಳೂ ಒಂದೊಂದರೊಡನೆ ಕೂಡಿದ್ದನ್ನಾಗಿ ಮಾಡಿದರೆ ಪದೋತ್ಪತ್ತಿಯಾಗುವುದು. ಅಂತಹ ಪದಗಳಿಂದ ೧೧ ಮಂತ್ರಗಳು ಹುಟ್ಟಿದವು. ಆ ವರ್ಣಗಳಿಂದಲೂ ಆ ಪದಗಳಿಂದಲೂ ಆ ಮಂತ್ರಗಳಿಂದಲೂ ವೈದಿಕ ತಾಂತ್ರಿಕ ವಾಙ್ಮಯಗಳುದಿಸಿದವು- ಪ್ರಕೃತವನನುಸರಿಸುವಾ—

ನಾದರೂಪತಯಾಪೂರ್ವಂ ಶಿವೇನಾವಿಷ್ಕೃತಃ ಪುನಃ । ಸದಾಶಿವಾದಿರೂಪೇಣ ತೇನೈವಾಸೌ ಪೃಥಕ್ ಪೃಥಕ್ ॥ ಕಾಮಿಕಾದಿಪ್ರಭೇದೇನ ಶಿಷ್ಯೇಭ್ಯಃ ಸಂಪ್ರಕಾಶಿತಃ । ಅಷ್ಟಾವಿಂಶತಿಸಂಖ್ಯೋಽಸೌ ಸಿದ್ಧಾಂತ ಇತಿಸಂಜ್ಞಿತಃ ॥

ಎಂಬ ವಚನಾನುಸಾರವಾಗಿ, ಪರಶಿವನು ತನ್ನಲ್ಲಿ ನಿತ್ಯಸಿದ್ಧವಾದ ವಿಮಲ ಜ್ಞಾನವನ್ನು ಸೃಷ್ಟಿಯ ಮೂಲಾರಂಭದಲ್ಲಿ ನಾದರೂಪದಿಂದ ಪ್ರಕಾಶಗೊಳಿಸಿ ಅದನ್ನೇ ಸದಾಶಿವಾದಿ ರೂಪದಿಂದ ದಶಶಿವರನ್ನೂ ಅಷ್ಟಾದಶ ರುದ್ರರನ್ನೂ ಉದ್ದೇಶಿಸಿ ಬೇರೆ ಬೇರೆಯಾಗಿ ಬೋಧಿಸಿದುದರಿಂದ ಕಾಮಿಕಾದಿ ವಾತುಲಾಂತವಾದ ೨೮ ಸಂಹಿತೆಗಳೆಂದು ಪ್ರಸಿದ್ಧವಾದ ಆ ವಿಮಲಜ್ಞಾನವೇ **ಸಿದ್ಧಾಂತ**ವೆಂಬ ಸಂಜ್ಞೆಯುಳ್ಳದ್ದಾಗಿದೆ. ಈ ಮೇಲಿನ ಎಲ್ಲ ಮಾತುಗಳ ತಿರುಳು ಹೀಗಿದೆ—ಶಿವತತ್ವಕ್ಕೇ **ಪರಬ್ರಹ್ಮ, ಪರಶಿವ, ಚೈತನ್ಯ, ಲಿಂಗ, ಸ್ಥಲ,** ಎಂಬ ಈ ಮುಂತಾದ ಪರ್ಯಾಯನಾಮಗಳಿವೆ. ಆ ಶಿವತತ್ವದಲ್ಲಿ ಸ್ವಾತ್ಮೀಯ ಶಕ್ತಿಯು ಈ ಪತ್ರಲನೆಯುಂಟಾಗುವಿಕೆಯೇ ನಾದವೆನಿಸಿತು ಎಂದರೆ ಸೃಷ್ಟಿಯ ಮೂಲಾರಂಭದಲ್ಲಿ ಚಿಚ್ಛಕ್ತಿಯು ಸ್ಫುರಣದಿಂದ ಶುದ್ಧಮಾಯೆಗೆ (ಪರಬಿಂದುವಿಗೆ) ಕಾರ್ಯೋನ್ಮುಖತೆಯ ಚಲನೆಯುಂಟಾದುದೇ ನಾದವು ; ಈ ನಾದವೇ ಶಬ್ದತತ್ವಕ್ಕೆ ಮೂಲಭೂತವಾಗಿದೆ. ಇದೇ ಆಶಯವು ಶ್ರೀ ರಾಮಕಂಠಾಚಾರ್ಯರಿಂದ **ನಾದಕಾರಿಕೆ**ಯಲ್ಲಿ—

ಸ ಮಹಾಮಾಯಾಜನ್ಯೋ ನಾದಃ ಪರಮಾರ್ಥವಾಚಕೋಭವತಿ । ಯೇನ ಸ್ಥೂಲಂ ಶಬ್ದಂ ಮನ್ತ್ರಂ ತನ್ತ್ರಾತ್ಮಕಂ ಭವೇದ್ವಾಪಿ ॥

ಎಂದು ನಿರೂಪಿಸಲ್ಪಟ್ಟಿರುವುದರಿಂದ, ಶಿವತತ್ವದಲ್ಲಿ ತತ್ಸ್ವರೂಪಭೂತವೇ ಆದ ಅವಬೋಧರೂಪ ವಿಮಲಜ್ಞಾನವು ಮೊತ್ತಮೊದಲು ನಾದರೂಪದಿಂದ ಸೂಕ್ಷ್ಮವಾಗಿ ಆವಿರ್ಭವಿಸಿದುದಾಗಿ ಅದುವೇ ಮುಂದೆ ಸ್ಥೂಲಶಬ್ದರೂಪವನ್ನು ಹೊಂದಿ ಮಂತ್ರ (ವೇದ) ತಂತ್ರ (ಸಿದ್ಧಾಂತ) ವಾಙ್ಮಯರೂಪವಾಗಿ ಪರಿಣಮಿಸಿತೆಂದು ಸಿದ್ಧವಾಗುವುದು. ಮತ್ತು ಶಿವತತ್ವವು ಸದಾಶಿವಾದಿ ರೂಪದಿಂದ ಆ ವಿಮಲಜ್ಞಾನವನ್ನು ಅಭಿವ್ಯಕ್ತಗೊಳಿಸಿದುದರ ಭಾವವು ಹೀಗಿದೆ—ಶಿವತತ್ವವೊಂದೇ ಶಕ್ತಿ ಸದಾಶಿವ ಈಶ್ವರ ಶುದ್ಧವಿದ್ಯೆ ಮೊದಲಾದ ೩೬ ತತ್ವರೂಪವಾಗಿ ಪರಿಣಮಿಸಿದೆ. ಶಕ್ತಿ ಮೊದಲಾಗಿ ಭೂಮ್ಯಂತಗಳಾದ ಎಲ್ಲಾ ತತ್ವಗಳಿಗೂ ಪರಶಿವನು ಮೂಲಭೂತನಾದ್ದರಿಂದ ಅವನಿಗೆ ಎಂದರೆ ಆ ಶಿವನಿಗೆ **ಶಿವತತ್ವ**ವೆಂಬ ಸಂಜ್ಞೆಯುಂಟಾಗಿ ೩೬ ತತ್ವಗಳೆಂದು ಹೇಳಲ್ಪಡುವುದರಿಂದ ಶಿವನಾದರೂ ೩೬ ತತ್ವಗಳಲ್ಲಿ ಮೊದಲನೆಯವನಾಗಿ ಪರಿಗಣಿಸಲ್ಪಡುತ್ತಾನೆ; ಈ ಹೇಳಿಕೆಯಿಂದ ಶಿವತತ್ವವು ಸರ್ವಕಾರಣವಾದುದೆಂದೂ ಇತರ ತತ್ವಗಳೆಲ್ಲ ಅದರ ಕಾರ್ಯಗಳೆಂದೂ ಸ್ಪಷ್ಟವಾಗುವುದು. ಸರ್ವಕಾರಣವಸ್ತುವಾದ ಶಿವತತ್ವವು ಒಂದೆಯಾಗಿದೆ ; ತತ್ಕಾರ್ಯಭೂತವಾದ ಸದಾಶಿವತತ್ವವು **ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ**ವೆಂದು ೫ ತೆರನಾಗಿದೆ. ಹಾಗೆಯೇ ಈಶ್ವರ (ಮಹೇಶ್ವರ) ತತ್ವವು ಚಂದ್ರಶೇಖರಾದಿ ಭೇದದಿಂದ ೨೫ ಬಗೆಯಾಗಿದೆ ಎಂದರೆ ಮಹೇಶ್ವರನ ಲೀಲೆಯು ೨೫ ತೆರನಾಗಿರುವುದು.

ಶಿವತತ್ವವು ನಿಷ್ಕಲವಾಗಿದೆ ಎಂದರೆ ಅವ್ಯಕ್ತವಾಗಿದೆ. ಸದಾಶಿವತತ್ವವು ಸಕಲ ನಿಷ್ಕಲವಾಗಿದೆ ಎಂದರೆ ವ್ಯಕ್ತಾವ್ಯಕ್ತವಾಗಿದೆ : ಈಶ್ವರತತ್ವವು ಸಕಲ (ವ್ಯಕ್ತ)ವಾಗಿದೆ ; ಸಚ್ಚಿದಾನಂದಶುದ್ಧರೂಪವು ಅವ್ಯಕ್ತವು ಎಂದರೆ ನಾಮರೂಪರಹಿತವಾದುದೇ ...

... ಇಲ್ಲದಿ... ಸ್ಥಿತಿಯ... ಇದುವೆಲ್ಲ... ಪಂಚಶಾಖಸ... ತತ್ವರೂಪ... ಇವುಗಳಿಗೆ... ಇದರಿಂದ... ಕೂಡಿದ... ಸಾದಾಖ್ಯ... (ಶುದ್ಧಮಾ... ಒಪ್ಪಿದರೂ... ದಾದ್ದರಿಂದ... ಗವೂ ಒದಗ... ಟಿಂದೂ ಸದಿ... ತಿಳಿಯಬಾರ... ಷ್ಟ್ಯಾದಿ ಪ... ಗಳೇ ಶರೀರ... ವೆಂದು ... ದ್ವಾಗಮದ...

ತದ್ವಪುಃ ...

ಈಶತತ್ವ...

ಯಥಾಕ್ರ... ರಕ್ತ, ಉತ್ತ... ಬೋಧಕಯುಕ್ತ... ಮಸ್ತಕಾದಿ... **ಪುಷ್ಟಾತಿ ಧ...** ದ ಅನ್ವರ್ಥತೆ...

ನಾವು ಮ... ರಿಂದ ಯಾವಕಾ... ಬೇಕಾಗುತ್ತದೆ: ... ಗಾದರೋ ಸ್ವತಂ... ಕ ಬಿಂದು... ಅದೇ (ಮೃಗೇಂದ್ರ... ಸ್ವರೂಪ ... **ತ್ಮಾಭಾ"** ಎಂ... ಜಾಕಾರ ಶರೀರ... **ಕಾರಮಾಂಸ್ತ್ರ...** **ನಾಕಾರಮುಪೈ...** ಧ್ಯಾನಪೂಜಾದಿಗಳು... ಧ್ಯಾನಸೌಕರ್ಯ... ನೆಯು ನಿರೂಪಿಸ... ಒಂದು ದೇಹವೇ... ಸದಾಶಿವತತ್ವ... ಗಳಾದ ಈಶಾನಾದಿ...

ಇನ್ನು ಆ ಸದಾ... ಬೇರೆಬೇರೆ ಪ್ರವಹಿಸಿ...

ಕಾಮಿಕಾದ್ಯ...
ಬೋಧ್ಯವಾಃ ...
ವಾಮದೇವ ಮು...
ಸ್ತುವಿಂಶಾನ್ತಾಃ ...
ರೌರವಾದ್ಯಾಸು...
ಬೋಧ್ಯವಾಃ ॥ ...
ಚೈಶಾನಾನನಸಂ...

ಎಂಬುದಾಗಿ ಕಾಮಿ... ವೆಂಬೈದು ಆಗಮಗಳು... ಸೂಕ್ಷ್ಮ, ಸಹಸ್ರ, ಅಂ... ಗಳು ವಾಮದೇವಮುಖ... ಯಂಭುವ, ಅನಲ, ವೀ... ಖದಿಂದಲೂ, ರೌರವ, ಮ... ಎಂಬೈದು ಆಗಮಗಳು... ಲಲಿತ, ಸಿದ್ಧ, ಸಂತಾನ, ... ವಾತುಲ, ಎಂಬ ಎಂಟಾಗ... ಟವಾದುವು.

ಆ ಕಾಮಿಕಾದಿ ... ಮೊತ್ತಮೊದಲು ಸದಾಶಿವ... ದೀಪ್ತ ಮೊದಲಾದ ದಶ... ಅಷ್ಟಾದಶ ರುದ್ರರಿಗೂ ... ರವು ಹೀಗಿದೆ—ಕಾಮಿಕ... ಸಂಹಿತೆಗಳು ಪ್ರಣವನೇ ... ಟ್ಟವುಗಳಾದ್ದರಿಂದ ಆ ಪಂ... ವಿಜಯಾದಿ ವಾತುಲಾಂತ...

ನೋಡಿಕೊಳ್ಳತಕ್ಕದ್ದೆಂದು ಅಪ್ಪಣೆಮಾಡಿರು...

...ಕೋಲಾರದ ಚಿನ್ನದಗಣಿಗಳಿಗೆ ಸೇರಿದ ಊರಿ... ಓಕ್ಲೆಹಾಮ್ಸ್ ಎಂಬ ಗಣಿಯಲ್ಲಿ ಕಳೆದ 17 ತಾರೀಖು ಮಂಗಳವಾರ ಕಲ್ಲು ಸಿಡಿದು ಒಬ್ಬ ...ಮನು ಮೃತಪಟ್ಟನು. ಹದಿನೆಂಟು ಜನಗಳಿಗೆ ...ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂ...ದುವರು.

...ನದಲ್ಲಿ ಬರುವ ಜನವರಿ 2 ನೇ ತಾರೀಖಿನಿಂದ ...ರೀಖಿನವರೆಗೂ, ಹಾಸನ ತಾಲೂಕು ಗೂರೂ... ನೇ ತಾರೀಖಿನಿಂದ 7 ನೇ ತಾರೀಖಿನವರೆಗೂ ...ಪ್ರದರ್ಶನವು ನಡೆಯುವುದು. ಶ್ರೀಮದ್ಯುವ...ನ್ನು 5 ನೇ ತಾರೀಖಿನ ದಿವಸ ಹಾಸನಕ್ಕೆ ...ಸಿಕೊಂಡು ಹಾಸನದ ಪ್ರದರ್ಶನದಲ್ಲಿ ಉತ್ತ... ...ನಗಳಿಗೆ ಬಹುಮಾನಗಳನ್ನು ಹಂಚುವರು.

...ನಗರದಲ್ಲಿ ಕಳೆದ ತಿಂಗಳ ಅಂತ್ಯಭಾಗದಲ್ಲಿ ...ತ್ರಕಲಾಪ್ರದರ್ಶನಕ್ಕೆ ಚಕ್ರವರ್ತಿನಿಯವರು ...ಸಿ ಅಲ್ಲಿಯ ಚಿತ್ರಗಳನ್ನು ನೋಡಿ ಪರಮ ...ಭರಿತರಾದರಲ್ಲದೆ ನಮ್ಮ ಶ್ರೀಮನ್ಮಹಾರಾಜ... ...ನದಲ್ಲಿ ಸಂಗೀತ ವಿದ್ವಾಂಸರಾಗಿದ್ದು ...ಂದಿದ ವೈಣಿಕಶಿಖಾಮಣಿ ಶೇಷಣ್ಣನವರ ...ಯೊಂದನ್ನು ಕ್ರಯಕ್ಕೆ ತೆಗೆದುಕೊಂಡರಂತೆ!

...ನವರಿ 1 ನೆಯ ತಾರೀಖಿಗೆ ಪ್ರಾರಂಭವಾ...ಷ್ ವರ್ಷಾರಂಭದ ಸಮಯಕ್ಕೆ ಬ್ರಿಟಿ...ಭೌಮರು ಎಂದಿನಂತೆ ಈ ವರ್ಷವೂ ...ಪದುಗಳನ್ನು ದಯಪಾಲಿಸಿರುವರು. ಈ ...ದ ಪಡೆದಿರುವವರ ಸಂಖ್ಯೆಯು ಕಡಿಮೆ...ದೆಯಾದರೂ, ನಮ್ಮ ಮೈಸೂರು ದೇಶದವರ ...ಟ್ಟಿಯಲ್ಲಿ ಸೇರಿರುವರೆಂಬು ವರ್ತಮಾನ

...ದೇಶದಲ್ಲಿ ತಯಾರಾಗುವ ಗಂಧದ ...ನು, ರೇಶ್ಮೆ, ಗಂಧದ ಕಡ್ಡಿ ಮೊದಲಾ... ಪೂರ್ವದೇಶಗಳಲ್ಲೂ, ದಕ್ಷಿಣ ಆಫ್ರಿಕೆ...ಗಳು ವಿಶೇಷವಾಗಿ ಹೆಚ್ಚಿರುವದರಿಂದ ...ದಿದ ಸರಕಾರದವರು ಜಾಂಜಿಬಾರಿನ ...ಬಿಹಾರಿಲಾಲ್ ಅನಂತಣಿಯವರನ್ನು ...ರ್ಥಗಳಿಗೆ ಏಜಂಟರನ್ನಾಗಿ ನಿಯಮಿ...

...ರಾಜರವರ ಆಸ್ಥಾನ ಸಂಗೀತ ವಿ...|| ವಾಸುದೇವಾಚಾರ್ಯರು, ವೈಣಿಕ ...ಬ್ಬಣ್ಣನವರು, ಹಾಗೂ ಗಾಯನ ...ಯ್ಯ ಭಾಗವತರೂ ಹುಲಗೇರಿ ನಾಟ... "ಬಿ.ಎ.," ನಾಟಕದಲ್ಲಿ ಚಂದ್ರ...ನ್ನು ವಹಿಸುವ ಮಿ|| ತುಕಾರಾಮ ...ವರ ಗಾಯನವಿದ್ಯೆಯನ್ನು ಪರೀ...ಚತುರ" ನೆಂಬ ಬಿರುದನ್ನು ಕೊ...

...ರನರಾದ ಅಮೀರ್-ಉಲ್-ಮುಲ್ಕ ...ಹಮುದ್ ಇಸ್ಮಾಯಿಲ್ ಬಿ. ಎ. ...ಮೊನ್ನೆ 28 ನೇ ತಾರೀಖು ಶನಿ...ಗಳಲ್ಲಿ ಸಂಚಾರಮಾಡಲು ಬೆಂಗ...ಣಮಾಡಿರುತ್ತಾರೆ. ಇವರು ಕೊ...ರು ಮೊದಲಾದ ಸಂಸ್ಥಾನಗಳಲ್ಲಿ ...ದಿವಸಗಳಲ್ಲಿ ಬೆಂಗಳೂರಿಗೆ ಹಿಂತಿ... ...ನಿಧಿಯಲ್ಲಿ ಮಿ|| ಎಂ. ಎ. ಕೃಷ್ಣ...ರಿಯ ಛಾರ್ಜನ್ನು ವಹಿಸಿರುವರು.

...ರದ ಮಾರ್ಗಶಿರ ಶುದ್ಧ ಸಪ್ತಮಿ ...ಶ್ರೀ ರಂಭಾಪುರೀ ಜಗದ್ಗುರುಗಳ ...ವು ಈ ವರ್ಷ ತರೀಕೆರೆಯಲ್ಲಿ ...ಟ್ಟವನ್ನು ವಹಿಸಿದ ಆ ಶುಭದಿವಸ ...ಮಿಯವನಿಗೆ ಏಕಾದಶವಾರ ರುದ್ರಾಭಿಷೇ...ರ್ಚನೆಯು ನಡೆದು ಅನ್ನಸಂತರ್ಪ...ಣೆತು. ಪಟ್ಟಣವು ತಳಿರುತೋರಣ...ಗ ಅಲ್ಲಿಯ ಮಹಾಜನಗಳಿಂದ ...ಣೆಯಿಂದ ಜರುಗಿಸಲ್ಪಟ್ಟಿತು.

ಸುತ್ತಮುತ್ತಣ ಗ್ರಾಮಸ್ಥರು ವಿಶೇಷವಾಗಿ ಗುರುಸೇವೆಗೆ ಆಗಮಿಸಿದ್ದರು.

ಕಳೆದ ಡಿಸೆಂಬರ್ 23-12-29 ನೇ ಸೋಮವಾರ ಮಧ್ಯಾಹ್ನದಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳ ಸ್ವಾರಿಯು ಅಣ್ಣಿ ಮುಕ್ಕಾಮು ಬಿಟ್ಟು ಬುಕ್ಕಾಂಬುಧಿಗೆ ದಯಮಾಡಿಸಿತು. ಬುಕ್ಕಾಂಬುಧಿಯ ಪುರಸ್ಥರು ಎಲ್ಲರೂ ಒಟ್ಟುಗೂಡಿ ಪುರವನ್ನಲಂಕರಿಸಿ ಇಷ್ಟಿಕಪಾಲಸಹಿತ ಸನ್ನಿಧಿಯ ಆಶೀರ್ವಾದವನ್ನು ಪಡೆದು ಸಕಲ ಬಿರುದಾವಳಿ ಸಮೇತ ಮಹಾಸನ್ನಿಧಿಯ ಅಂದೋಳಿಕೋತ್ಸವವನ್ನು ಬಹಳ ಆಟ್ಟಹಾಸದಿಂದ ನೆರವೇರಿಸಿದರು. ಶ್ರೀ ರಂಭಾಪುರೀ ಜಗದ್ಗುರು ಮಹಾಸನ್ನಿಧಿಗೆ ಪತ್ರವ್ಯವಹಾರಮಾಡತಕ್ಕವರು. ಕಡೂರು ಸ್ವ್ರಿಕ್ಟ್ ಪೋಸ್ಟ್ ಬುಕ್ಕಾಂಬುಧಿ ಎಂದು ಬರೆಯಿಸಿಕೊಳ್ಳತಕ್ಕದ್ದು. ದರ್ಶನಕ್ಕಾಗಿ ಬರತಕ್ಕವರು ಶಿವನಿ ಸ್ಟೇಷನ್ನಿಗೆ ಇಳಿಯಬೇಕು. ಅಲ್ಲಿಂದ ಬುಕ್ಕಾಂಬುಧಿಯು 5 ಮೈಲು ಆಗುವುದು.

ವರ್ತಮಾನಸಂಗ್ರಹ.

ವೈಸ್‌ರಾಯರವರು ಜನವರಿ 15 ನೆಯ ತಾರೀಖಿನ ದಿವಸ ಬೊಂಬಾಯಿಯಲ್ಲಿ ದರ್ಬಾರು ನಡೆಯಿಸುವರಂತೆ!

ಇಂಗ್ಲೆಂಡಿನಿಂದ ಕರಾಚಿಗೆ ಟಪಾಲನ್ನು ತರುವ ವಿಮಾನಗಳು ಇನ್ನು ಮುಂದೆ ದೆಹಲಿಯವರೆಗೂ ಟಪಾಲುಗಳನ್ನು ತರುವಂತೆ ಏರ್ಪಾಡುಮಾಡಿರುತ್ತಾರೆ.

ಸಂಯುಕ್ತ ಸಂಸ್ಥಾನಗಳ ಎಲ್ಲಾ ಸರಕಾರೀ ಆಫೀಸುಗಳಲ್ಲೂ ಆಶ್ರಿತ ಸಂಸ್ಥೆಗಳಲ್ಲೂ ಎಲ್ಲರೂ ಖಾದಿಯನ್ನೇ ಧರಿಸಬೇಕೆಂದು ಅಲ್ಲಿನ ನ್ಯಾಯವಿಧಾಯಕ ಸಭೆಯಲ್ಲಿ ತೀರ್ಮಾನವಾಗಿರುತ್ತದೆ.

ಶ್ರೀ|| ಬಿ. ವಿ. ಬೇವೂರ್ ಐ. ಸಿ. ಯಸ್. ರವರು ಬೊಂಬಾಯಿಯ ಪೋಸ್ಟ್‌ಮಾಸ್ಟರ್ ಜನರಲರಾಗಿ ನೇಮಿಸಲ್ಪಟ್ಟಿರುವರು. ಕನ್ನಡಿಗರಿಗೆ ಈ ಅಧಿಕಾರವು ದೊರೆತದ್ದು ಇದೇ ಮೊದಲನೆಯ ಸಾರೆಯಾಗಿರುತ್ತದೆ.

ಅಫ್ಘಾನಿಸ್ಥಾನವು ರಷ್ಯಾದವರೊಡನೆ ವಿಶೇಷ ಸ್ನೇಹವನ್ನು ಬೆಳೆಯಿಸುತ್ತಿರುವದು. ರಷ್ಯಾದೇಶದ ರಾಯಭಾರಿಯು ಅಫ್ಘಾನಿಸ್ಥಾನಕ್ಕೆ ಹೊರಟಿರುವನು. ಎರಡು ವಿಮಾನಗಳು ರಷ್ಯಾದಿಂದ ಅಫ್ಘಾನಿಸ್ಥಾನಕ್ಕೂ ಎರಡು ವಿಮಾನಗಳು ಅಫ್ಘಾನಿಸ್ಥಾನದಿಂದ ರಷ್ಯಕ್ಕೂ ಹೋಗಿ ಬಂದಿರುವುವು.

ಧನಸೊಂದಿದ ವೈಸ್ರಾಯ್‌ದಂಪತಿಗಳು ಹೈದರಾಬಾದಿಗೆ ಹೋಗಿದ್ದ ಕಾಲದಲ್ಲಿ ನೈಜಾಂಸಾಹೇಬರು ದಾನಧರ್ಮಮಾಡುವದಕ್ಕೋಸ್ಕರ 25,000 ರೂಪಾಯಿ ಚಕ್ಕನ್ನು ಲೇಡಿ ಇರ್ವಿನರವರ ವಶಕ್ಕೆ ಕೊಟ್ಟಿರುವರು. ಲೇಡಿ ಇರ್ವಿನರವರು ಆ ಹಣವನ್ನು ಅಖಿಲಭಾರತ ಸ್ತ್ರೀಶಿಕ್ಷಣಫಂಡಿಗೆ ಕೊಡುವರೆಂದು ವರ್ತಮಾನವಿದೆ.

ಕಲ್ಕತ್ತಾ ಕಾಲೇಜಿನ ಪ್ರೊಫೆಸರಾದ ಶ್ರೀ|| ಕೆ. ...ನರ್ಜಿಯವರ ಪತ್ನಿ, ಮಗು ಮತ್ತು ದಾದಿ ಈ ಮೂವರು ಕಲ್ಕತ್ತೆಗೆ 15 ಮೈಲು ದೂರದಲ್ಲಿರುವ ...ರ್ಣಸ್ಟೇಷನ್ನಿನ ಒಂದು ಕೊಠಡಿಯಲ್ಲಿ ಒಲೆಯಿಂದ ಹೊಂಟ ಇಂಗಾಲಾಮ್ಲ ವಾಯುವಿನಿಂದ ಮೃತಿಯನ್ನು ಹೊಂದಿರುವರು. ಕೊಠಡಿಯ ಬಾಗಿಲು ಮುಚ್ಚಿಟ್ಟು ಗಾಳಿಯ ಸಂಚಾರಕ್ಕೆ ಮಾರ್ಗವಿಲ್ಲದ್ದೇ ಈ ಅನಾಹುತಕ್ಕೆ ಕಾರಣವಾಗಿದೆ.

ಇಂಗ್ಲೆಂಡಿನಲ್ಲಿ ತಯಾರಾಗುತ್ತಿದ್ದ ಪ್ರಪಂಚದಲ್ಲಿ ಅತ್ಯಂತ ದೊಡ್ಡದಾದ R.100 ಎಂಬ ವಿಮಾನದ ಕಾರ್ಯಗಳು ಪೂರೈಸಿ ಅದು ಕಳೆದವಾರ 44 ಜನ ಪ್ರಯಾಣಿಕರ ಸಮೇತ ಮೊದಲನೆಯಸಾರೆ ಅಂತರಿಕ್ಷದಲ್ಲಿ ಸಂಚಾರಮಾಡಿತು. ಈ ವಿಮಾನದಲ್ಲಿ 4,200 ಕುದುರೆಗಳ ಶಕ್ತಿಯುಳ್ಳ 6ರೋಲ್ಸ್ ರಾಯ್ಸ್ ಯಂತ್ರಗಳಿವೆ. ವಿಮಾನವು 706 ಅಡಿ ಉದ್ದವಾಗಿಯೂ 133 ಅಡಿ ಅಗಲವಾಗಿಯೂ, 133 ಅಡಿ ಎತ್ತರವಾಗಿಯೂ ಇರುತ್ತದೆ.

ಮಿ|| ಜೆ. ರೋಜರ್ಸ್ ಎಂಬ ಕ್ರೈಸ್ತ ಪಾದ್ರಿಯು "ಶ್ರೀ ಕೃಷ್ಣಲೀಲಾ" ಎಂಬ ಪುಸ್ತಕವನ್ನು ಪ್ರಕಟಿಸಿ ಅದರಲ್ಲಿ ಶ್ರೀಕೃಷ್ಣನು ಎಲ್ಲಾ ದೇವರುಗಳಲ್ಲಿ ಅತಿ ದುಷ್ಟನೆಂದು ಪ್ರತಿಪಾದಿಸಿರುವನು. ಇದರಿಂದ ಶ್ರೀಕೃಷ್ಣನಲ್ಲಿ ಅಚಲಭಕ್ತಿಯುಳ್ಳ ತಮ್ಮ ತಮ್ಮ ಹಿಂದೂ ಬಾಂಧವರ ಮನಸ್ಸಿಗೆ ತುಂಬಾ ಖೇದವುಂಟಾಗಿರುವದಾಗಿ ಮಿ|| ವಲ್ಲಭದಾಸ ಕಾಮಜಿ ಎಂಬುವರು ಮುಂಬಯಿಯ ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರಲ್ಲಿ ಫಿರ್ಯಾದು ಮಾಡಿರುವರು.

ಬೂಡಾಪೆಸ್ಟ್ ನಗರದ ಸಮೀಪದ ಒಂದು ಹಳ್ಳಿಯಲ್ಲಿ 31 ಜನ ಸ್ತ್ರೀಯರ ಮತ್ತು 3 ಜನ ಪುರುಷರ ಒಂದು ಗುಂಪು ಸುಮಾರು 20 ವರ್ಷಗಳಿಂದಲೂ ಸೇರಿಕೊಂಡಿದ್ದು ಇದುವರೆಗೆ 50 ಜನ ಶ್ರೀಮಂತರನ್ನು ವಿಷಪ್ರಯೋಗದಿಂದ ಕೊಲೆಮಾಡಿರುವದಂತೆ! ಪೋಲೀಸರು ಬಹಳ ಪ್ರಯಾಸದಿಂದ ಈ ನರರಾಕ್ಷಸರನ್ನೆಲ್ಲ ಹಿಡಿದು ವಿಚಾರಣೆ ನಡೆಯಿಸುತ್ತಿರುವರು. ಶ್ರೀಮಂತರ ಆಸ್ತಿಗಳ ಫಲವಾಗಿ ಈ ಗುಂಪಿನವರು ಅನರನ್ನೆಲ್ಲಾ ಯಮಸದನಕ್ಕೆ ಕಳುಹಿಸಿರುವರು. ಧನಾಶೆಯ ಪರಿಣಾಮವು !

ಕೆಲವು ದಿವಸಗಳ ಹಿಂದೆ ಬ್ರಿಟಿಷ್ ಆಫೀಸರಿಬ್ಬರು ಆಕಾಶವಿಮಾನದಲ್ಲಿ ಕುಳಿತು ಮಧ್ಯದಲ್ಲಿ ಎಲ್ಲಿಯೂ ಇಳಿಯದೆ ನೆಟ್ಟಗೆ ದಕ್ಷಿಣ ಆಫ್ರಿಕದಲ್ಲಿರುವ ಕೇಪ್‌ಟೌನ್ ನಗರಕ್ಕೆ ಹೋಗಬೇಕೆಂದು ಪ್ರಯಾಣಮಾಡಿದರು. ಕಾರಣಾಂತರದಿಂದ ಅವರು ಮೊದಲು ನಿಶ್ಚಯಿಸಿಕೊಂಡಿದ್ದ ಕಾಲವನ್ನು ಮೀರಿ ಹೊರಟರು. ಇದರಿಂದ ಅವರು ಆಫ್ರಿಕವನ್ನು ತಲಪುವದು ನಾಪತ್ತೆಯಾಯಿತು. ಕೇಪ್‌ಟೌನ್ ನಗರವು ಇನ್ನೂ ದೂರದಲ್ಲಿರುವಾಗಲೇ ಕತ್ತಲಾಗಿ ದಾರಿಕಾಣದೆ. ವಿಮಾನವು ಅಟ್ಲಾಸ್ ಪರ್ವತಕ್ಕೆ ಡಿಕ್ಕಿಹೊಡೆದು ಇಬ್ಬರು ಆಫೀಸರು ಕೂಡಲೇ ಮೃತರಾದರು.

ಕಳೆದ ಘೋರಯುದ್ಧವು ಸಮಾಪ್ತಿಯಾದನಂತರ ಬ್ರಿಟಿಷ್ ಸರಕಾರದವರು ಅಮೇರಿಕಾ ಸರಕಾರದಿಂದ ಅಪಾರ ದ್ರವ್ಯವನ್ನು ಸಾಲವಾಗಿ ತೆಗೆದುಕೊಂಡಿದ್ದರು. ಅಷ್ಟೊಂದು ಹಣವನ್ನು ಒಂದೇ ಗಂಟಿನಲ್ಲಿ ಹಿಂತಿರುಗಿ ಕೊಡುವದು ಸಾಧ್ಯವಲ್ಲದ್ದರಿಂದ ಅದನ್ನು ಕಂತುಗಳ ಮೂಲಕ ತೀರಿಸುವ ಒಪ್ಪಂದವು ನಡೆದಿರುವದು. ಅದರಂತೆ ಸ್ವಲ್ಪ ದಿನಗಳ ಕೆಳಗೆ ಬ್ರಿಟಿಷ್ ಸರಕಾರದವರು 3 ಕೋಟಿ ರೂಪಾಯಿಗಳನ್ನು ಅಮೇರಿಕೆಯವರಿಗೆ ಪಾವತಿಮಾಡಿದರು. ಇಲ್ಲಿಯವರೆಗೆ ಆ ಸಾಲಕ್ಕಾಗಿ ಬ್ರಿಟಿಷ್ ಸರಕಾರದವರು 33 ಕೋಟಿ ರೂಪಾಯಿಗಳನ್ನು ಪಾವತಿಮಾಡಿದ್ದರೂ ಇದಕ್ಕೆ 3ರಷ್ಟು ಸಾಲವು ಇನ್ನೂ ನಿಂತಿರುವದಂತೆ !

ಬರುವ ಕುಂಭಮೇಳದ ಸಮಯದಲ್ಲಿ ಅಲಹಾಬಾದ ನಗರದ ಗಂಗಾತೀರದಲ್ಲಿ ಜನವರಿ 25 ನೆಯ ತಾರೀಖಿನಿಂದ 30 ನೆಯ ತಾರೀಖಿನವರೆಗೆ ಅಖಿಲಭಾರತ ಸನಾತನ ಧರ್ಮ ಮಹಾಸಭೆಯನ್ನು ಕೂಡಿಸಲು ಪಂಡಿತ ಮದನಮೋಹನ ಮಾಲವೀಯರವರು ಪ್ರಯತ್ನಮಾಡುತ್ತಿರುವರು. ಭರತಖಂಡದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳನ್ನು ಆಹ್ವಾನಿಸುವರು. ಅದೇ ಕಾಲದಲ್ಲಿ ರುದ್ರಮಹಾಯಾಗವು ನಡೆಯಿಸಲ್ಪಡುವದು. ವಿದ್ವಾಂಸರು ಭಗವದ್ಗೀತೆಯನ್ನು 100 ಸಾರೆ ಪಾರಾಯಣಮಾಡುವರು. ಪುರಾತನವೂ ಅಪೂರ್ವವೂ ಆದ ಕೈಯಿಂದ ಬರೆಯಲ್ಪಟ್ಟ ಭಗವದ್ಗೀತೆಯು ಪ್ರದರ್ಶಿಸಲ್ಪಡುವದು. ಜನವರಿ 15 ನೆಯ ತಾರೀಖಿನಿಂದ ಒಂದು ತಿಂಗಳವರೆಗೆ ಧಾರ್ಮಿಕೋಪನ್ಯಾಸಗಳು ನಡೆಯುವವು.

ಪ್ರಾಯಶಃ ಪ್ರಪಂಚದೊಳಗೆಲ್ಲ ಮೈಯಲ್ಲಿ ಒಳ್ಳೇ ಬೊಜ್ಜು ಬೆಳೆದು ತಾವು ದಪ್ಪನಾಗಬೇಕೆಂಬುದೇ ಜನರ ಆಶೆ. ಆದರೆ ಅಂತಹ ಬೊಜ್ಜು ಮೈಯುಳ್ಳವರಿಗಿಂತಲೂ ಸಣ್ಣಮೈಯುಳ್ಳವರೇ ಅಧಿಕಕಾಲ ಬಾಳುವರೆಂದು ಸ್ಪಷ್ಟವಾಗಿ ತಿಳಿದುಬರುತ್ತಿದೆ. ಸುಮಾರು 500000 (ಐದುಲಕ್ಷ) ಇನ್ಷೂರೆನ್ಸ್ ಪಾಲಿಸಿಗಳನ್ನು ವಿಮರ್ಶೆಮಾಡಿ ನೋಡಿದುದರಲ್ಲಿ, 50 ಪೌಂಡು ಹೆಚ್ಚು ತೂಕವುಳ್ಳ ಮನುಷ್ಯರಲ್ಲಿ ನಡೆದ ಮರಣಸಂಖ್ಯೆಯು, ಅದಕ್ಕಿಂತಲೂ ಕಡಿಮೆಯ ತೂಕವುಳ್ಳವರಲ್ಲಿರುವುದಕ್ಕಿಂತ ಹೆಚ್ಚಾಗಿದೆ. ಸಾಮಾನ್ಯವಾಗಿ ಸ್ಥೂಲದೇಹಿಗಳಲ್ಲಿ ೪೦ ರಿಂದ ೬೦ ಪ್ರಾಯದೊಳಗಾಗಿಯೇ ಮರಣಗಳು ನಡೆದಿವೆ. ೬೦ ಕ್ಕೆ ಮೇಲೆ ಬದುಕಿದವರು ಕಡಿಮೆ. ಸ್ಥೂಲದೇಹಿಗಳಲ್ಲಿ ಬಹಳವಾಗಿ, ಮಧುಮೇಹ ಅಧಿಕವಾದ ರಕ್ತದ ಒತ್ತಾಟ, ಗಾಲ್‌ಸ್ಟೋನ್ಸ್, ಹೃದಯರೋಗ ಇವುಗಳಿಂದ ಸಾಯುವವರೇ ಹೆಚ್ಚು.

ಲಾಹೋರ ಕಾಂಗ್ರೆಸ್ಸಿನ ಸರ್ವಸಿದ್ಧತೆಯು ವಿಸೊಂದು ಗಲಾಟೆಯೂ ಇಲ್ಲದೆ ನಡೆದಿರುವದು. 1,200 ಜನ ಸ್ವಯಂಸೇವಕರು ಒಟ್ಟಾಗಿ ಸೇರಿರುವರು. ಇವರಲ್ಲಿ 113 ಜನ ಸ್ತ್ರೀಯರು 100 ಬಾಲಕರೂ ಇರುವರು. 500 ಜನ ಅಕಾಲಿಗಳು ತಾವೂ ಸ್ವಯಂಸೇವಕರಾಗುವೆನೆಂದು ಬಂದಿರುವರು. ಸ್ವದೇಶೀ ವಸ್ತುಗಳ ಪ್ರದರ್ಶನದ ಪ್ರಾರಂಭೋತ್ಸವವನ್ನು ಡಾ|| ಸರ್. ಪಿ. ಸಿ. ರೇಯವರು ನೆರವೇರಿಸುವರು. 150 ವರ್ಷಗಳ ಪೂರ್ವದ ಒಂದು ದಾಖಲೆಯನ್ನು ಡಾಕ್ಟರರು ಪ್ರದರ್ಶನಕ್ಕೆ ತಂದಿರುವರು. ಸಾಮಾಜಿಕ ಪರಿಷತ್ತಿಗೆ ಹರಿವಿಲಾಸ ಶಾರದಾರವರೂ ಆರ್ಯಮಹಿಳೆಯರ ಪರಿಷತ್ತಿಗೆ ಶ್ರೀಮತಿ ರುಕ್ಮಿಣಿಲಕ್ಷ್ಮೀಪತಿಯವರೂ ಅಧ್ಯಕ್ಷರಾಗಿರುವರು. ಒಟ್ಟು 40 ಪರಿಷತ್ತುಗಳು ಜರಗುವವು. 24 ನೆಯ ತಾರೀಖಿನ ದಿವಸ ಮಹಾತ್ಮಾಗಾಂಧಿಯವರು ಲಾಹೋರಿಗೆ ಬಂದರು. ರಾಷ್ಟ್ರಧ್ವಜವು ಅವರಿಂದಲೇ ಏರಿಸಲ್ಪಟ್ಟಿತು.

ಕಾಶಿಯ ಗಾಂಧಿಬಹಿಷ್ಕಾರ ಕಮಿಟಿಯ ಅಧ್ಯಕ್ಷರಾದ ಪಂಡಿತಶಾಸ್ತ್ರಿಗಳವರು "ಭಾರತರಾಷ್ಟ್ರೀಯ ಸಭೆಯವರು ಸ್ವರಾಜ್ಯ ಸಂಪಾದನೆಗಾಗಿ ಮಾಡುತ್ತಿರುವ ಚಳವಳಿಯಿಂದ ಸನಾತನ ಧರ್ಮಕ್ಕೆ ದೊಡ್ಡ ಸಂಕಟ ಒದಗಿರುವದೆಂದೂ, ಧರ್ಮವೇ ತಲೆಕೆಳಗಾಗುವ ಕಾಲವು ಬಂದಿರುವದೆಂದೂ, ಆದುದರಿಂದ ರಾಷ್ಟ್ರೀಯ ಸಭೆಯವರು ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಕೈಹಾಕದಂತೆ ಪ್ರಯತ್ನಿಸುವದಕ್ಕಾಗಿ ಕಾಶಿಯ 500 ಜನ ಸನಾತನ ಧರ್ಮದ ಪಂಡಿತರು ಲಾಹೋರಕ್ಕೆ ಹೊರಡುವರೆಂದೂ, ಸನಾತನ ಧರ್ಮರಕ್ಷಣೆಯ ಸಲುವಾಗಿ ಅವರೆಲ್ಲರೂ ತಮ್ಮ ಪ್ರಾಣಗಳನ್ನು ಸಹ ಒಪ್ಪಿಸಲು ಸಿದ್ಧರಿರುವರೆಂದೂ, ಈ ಮಹತ್ಕಾರ್ಯಕ್ಕೆ ಪೂರ್ಣ ಜಯಹೊಂದುವಂತೆ ಭರತಖಂಡದ ಎಲ್ಲಾ ಪ್ರಾಂತಗಳಲ್ಲಿರುವ ಸನಾತನ ಧರ್ಮಾಭಿಮಾನಿಗಳು ಕೂಡಲೇ ಲಾಹೋರಕ್ಕೆ ಬರಬೇಕೆಂದೂ ಪ್ರಕಟಿಸಿರುವದಾಗಿ ತಿಳಿದು ಬರುತ್ತದೆ.

ಕಳೆದ 23 ನೆಯ ತಾರೀಖು ಸೋಮವಾರ ದಿವಸ ವೈಸರಾಯದಂಪತಿಗಳು ತಮ್ಮ ಪರಿವಾರ ಸಮೇತರಾಗಿ ದೆಹಲಿಗೆ ಹತ್ತು ಮೈಲು ದೂರದಲ್ಲಿ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ ಯಾರೋ ದುರಾತ್ಮರು ಸಿಡಿಮದ್ದನ್ನು ಹಾರಿಸಿದರು. ಭೋಜನದಗಾಡಿಯ ಬಾಗಿಲು ಚೂರುಚೂರಾಯಿತು. ಒಬ್ಬನಿಗೆ ಮಾತ್ರ ಸಂಬಂಧ ಗಾಯಗಳಾಗಿವೆ. ಸಿಡಿಮದ್ದು ಹಾರಿದ ರಭಸಕ್ಕೆ ಅನೇಕ ರೈಲ್ ಕಂಬಿಗಳು ಮುರಿದುಹೋಗಿರುತ್ತವೆ. ಈ ನೀಚಕೃತ್ಯಕ್ಕೆ ಕಾರಣರಾದವರು ರೈಲ್‌ಬರುವದಕ್ಕೆ ಮುಂಚಿತವಾಗಿಯೇ ಕಂಬಿಯ ಕೆಳಗೆ ಸಿಡಿಮದ್ದನ್ನು ಹೂಳಿಟ್ಟಿದ್ದು ವಿದ್ಯುಚ್ಛಕ್ತಿಯಿಂದ ಅದನ್ನು ರೈಲ್ ಬರುವ ಸಮಯಕ್ಕೆ ಸರಿಯಾಗಿ ಹಾರಿಸಿದಂತೆ ತಿಳಿದು ಬಂದಿದೆ. ಪೋಲೀಸರು ಈ ಸಂಬಂಧವಾಗಿ ದಿಲ್ಲಿ ಮತ್ತು ಲಾಹೋರಿನಲ್ಲಿ ಝಡ್ತಿಮಾಡಿ ಕಾಂಗ್ರೆಸು ಕ್ಯಾಂಪಿನಲ್ಲಿ ಮೂವರನ್ನೂ ಲಾಹೋರ್‌ನಗರದಲ್ಲಿ ನಾಲ್ವರನ್ನೂ ಸೆರೆಹಿಡಿದಿರುತ್ತಾರೆ. "ನವಜವಾನ ಭಾರತ ಸಭೆ" ಯ ಅಧ್ಯಕ್ಷರಾದ ರಾಮಕೃಷ್ಣ "ಪ್ರತಾಪ" ಪತ್ರಿಕಾಕರ್ತರ ಮಗ ವೀರೇಂದ್ರ, ಲಾಹೋರದಲ್ಲಿ ಉಪವಾಸವ್ರತವನ್ನು ಸ್ವೀಕರಿಸಿ ಮೃತಿಹೊಂದಿದ ಜತೀಂದ್ರದಾಸರ ಬಂಧು ಕಿರಣಚಂದ್ರರೇ ಮೊದಲಾದವರು ಶೈಸೆರೆಸಿಕ್ಕಿದ್ದಾರೆ. ಇದರಿಂದ ಲಾಹೋರಿನಲ್ಲಿ ಭಯಂಕರ ಹಾಹಾಕಾರವೆದ್ದಿರುವದು. ಪೋಲೀಸರು ಇನ್ನೂ ಝಡ್ತಿಮಾಡುತ್ತಲೇ ಇರುವರು. ಮಹಾತ್ಮಾ ಗಾಂಧಿಯವರೇ ಮೊದಲಾದ ರಾಷ್ಟ್ರನಾಯಕರು ಈ ಅತ್ಯಾಚಾರವನ್ನು ಸಂಪೂರ್ಣ ನಿಷೇಧಿಸಿರುವರು. ಈಚೆಗೆ ತಿಳಿದಿರುವ ವರ್ತಮಾನದಿಂದ ಈ ಮೇಲ್ಕಂಡ 7 ಜನಗಳೂ ಇದಕ್ಕೆ ಸಂಬಂಧಪಟ್ಟವರಲ್ಲವೆಂದೂ ಬಾಂಬು ಹಾರಿಸಿದವರಾರೆಂದು ಇನ್ನೂ ಪತ್ತೆಯಾಗಿಲ್ಲವೆಂದೂ ಗೊತ್ತಾಗುತ್ತದೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಆಂದೋಲಿಕೋತ್ಸವವು.

ಶ್ರೀಗಳವರ ಸ್ವಾರಿಯು ತಾ. 23-12-1929 ನೇ ಸೋಮವಾರ ಮಧ್ಯಾಹ್ನ ಮೂರು ಘಂಟೆಗೆ ಸಕಲ ಬಿರುದಾವಳಿಗಳಿಂದ ತರೀಕೆರೆ ತಾಲ್ಲೂಕು ಬುಕ್ಕಾಂಬುಧಿಗೆ ದಯಮಾಡಿಸಿತು. ಗ್ರಾಮನಿವಾಸಿಗಳು ಸಕಲ ವಾದ್ಯವೈಭವದೊಡನೆ ಪಲ್ಲಕ್ಕಿಯಲ್ಲಿ ಶ್ರೀಗಳವರ ಭಾವಚಿತ್ರವೊಂದನ್ನಿರಿಸಿ ಅತಿಭಕ್ತಿಯಿಂದ ಶ್ರೀಗಳವರನ್ನಿದುಗೊಂಡು ಬಹಳ ವಿಜೃಂಭಣೆಯಿಂದ ಸಾಯಂಕಾಲ 7 ಘಂಟೆಯವರೆಗೂ ಗ್ರಾಮದಲ್ಲೆಲ್ಲಾ ಉತ್ಸವವನ್ನು ನಡೆಯಿಸಿದರು. ಉತ್ಸವಕಾಲದಲ್ಲಿ ಭಜನಾಸಂಘದವರು ಶ್ರೋತ್ರಾನಂದಕರವಾಗುವಂತೆ ಭಕ್ತಿರಸಯುಕ್ತವಾದ ದೇವನಾಮಗಳಿಂದಲೂ, ಶ್ರೀ ಪಂಚಾಚಾರ್ಯರ ಮಹಿಮಾತಿಶಯಗಳನ್ನು ಹೊಗಳುತ್ತಿದ್ದುದೂ, ಮುಂಭಾಗದಲ್ಲಿಯ ಬಗೆಬಗೆಯ ವಾದ್ಯನಾದಗಳೂ, ರಸ್ತೆಗಳ ಎರಡುಪಕ್ಕಗಳಲ್ಲಿಯೂ ಕಿಕ್ಕಿರಿದು ನಿಂತು ಶ್ರೀಗಳವರ ದರ್ಶನಾಶೀರ್ವಾದವನ್ನು ಪಡೆಯುತ್ತಲಿದ್ದ ಜನಗಳ ಸಂದಣಿಯೂ ಎಲ್ಲರ ಮನಸ್ಸಿಗೂ ಭಕ್ತಿಯನ್ನೂ ಸಂತೋಷವನ್ನೂ ಉಂಟುಮಾಡುತಕ್ಕದ್ದಾಗಿತ್ತು. ಉತ್ಸವವು ಪೂರೈಸಿದೊಡನೆಯೇ ಶ್ರೀಗಳವರು ಶ್ರೀ ವಿರೂಪಾಕ್ಷೇಶ್ವರ ದೇವಾಲಯದ ಆವರಣದಲ್ಲಿ ಕಟ್ಟಿಸಿದ ಚಪ್ಪರದ ದಿವ್ಯಪೀಠದಲ್ಲಿ ಮಂಡಿಸಿ ನೆರೆದ ಸಮಸ್ತಜನಗಳಿಗೂ ಭಕ್ತಿಯುತ್ಪನ್ನವಾಗುವಂತೆ ಉಪನ್ಯಾಸವೊಂದನ್ನು ಬಹು ಸ್ವಾರಸ್ಯವಾಗಿ ಅಪ್ಪಣೆಕೊಡಿಸಿದರು.

ಬಿ. ಗಂಗಾಧರಯ್ಯ,
ಬುಕ್ಕಾಂಬುಧಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ದ್ರಾವಿಡದೇಶದ ೧೦ ನೆಯ ವೀರಶೈವ ಸಿದ್ಧಾಂತ ಮಹಾಸಭೆ.

ಈ ಮಹಾಸಭೆಯು ಸೇಲಂ ಡಿ|| ಅತ್ತೂರು ತಾ|| ತಮ್ಮಂಪಟ್ಟಿ ಟವನ್ನಿನಲ್ಲಿ 23-12-29ನೆಯ ತಾರೀಖಿನ ದಿವಸ ಶ್ರೀ ವೀರಭದ್ರಾಲಯದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋತ್ಪತ್ತಿ ಭಾವಚಿತ್ರವನ್ನು ಪುಷ್ಪಹಾರಾದಿಗಳಿಂದಲಂಕರಿಸಿ ಪುಷ್ಪಮಯವಾದ ಪಲ್ಲಕ್ಕಿಯಲ್ಲಿ ಮೂರ್ತಮಾಡಿಸಿ ಪಟ್ಟಣದಲ್ಲೆಲ್ಲಾ ಅತ್ಯಂತ ವೈಭವದೊಡನೆ ಉತ್ಸವವು ನೆರವೇರಿಸಲ್ಪಟ್ಟಿತು. ಉತ್ಸವವು ಶ್ರೀ ವೀರಭದ್ರಾಲಯಕ್ಕೆ ತಲ್ಪಿದ ಮೇಲೆ ಭಾವಚಿತ್ರವನ್ನು ಉನ್ನತವಾದ ಪೀಠದಲ್ಲಿರಿಸಿ ಶಾಸ್ತ್ರೋಕ್ತಪ್ರಕಾರವಾಗಿ ಪೂಜೆಯು ನೆರವೇರಿಸಲ್ಪಟ್ಟಿತು. ಅನೇಕ ವೀರಮಾಹೇಶ್ವರರಿಗೆ ಅನ್ನಸಂತರ್ಪಣೆಯು ನೆರವೇರಿಸಲ್ಪಟ್ಟಿತು. ಆ ದಿವಸದ ಮಧ್ಯಾಹ್ನ 3 ಘಂಟೆಗೆ ಗರ್ಲ್ಸ್ ಸ್ಕೂಲ್ ಹೆಡ್ಮಾಸ್ಟರರಾದ ವೇ. ಎಂ. ಆರ್ಮುಕಾರ್ಯರ ವೀರಶೈವ ತತ್ವಪ್ರಚಾರಕ ಇವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕಿನ P.W.D. ಇಂಜನೀಯರ್ ಆಫೀಸಿನಲ್ಲಿರುವ ಮ. ರಾ. ಡಿ. ಕೆ. ಕೃಷ್ಣಮೂರ್ತಿ ಅಯ್ಯನವರು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ದಿವ್ಯಚರಿತ್ರೆಗಳನ್ನು ಮತ್ತು ಅವರುಗಳು ಮಾಡಿದ ಅದ್ಭುತವಿಷಯಗಳನ್ನು ಕುರಿತು ಬಹಳ ಸ್ವಾರಸ್ಯವಾಗಿಯೂ ಮತ್ತು ವೇದಾಗಮಾದಿಪ್ರಮಾಣಾನುಸಾರವಾಗಿಯೂ ಉಪನ್ಯಾಸವನ್ನು ಮಾಡಿದರು. ಮ. ಎಸ್. ಎಂ. ಕುಮಾರವೀರಯ್ಯನವರು ಲಿಂಗಧಾರಣ ವೈದಿಕತ್ವದ ವಿಷಯವಾಗಿ ಅನೇಕ ಉಪನಿಷತ್ ವಾಕ್ಯಗಳ ಆಧಾರದಿಂದ ಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷರು ವೀರಶೈವರ ಕರ್ಮಗಳ ವಿಷಯವಾಗಿ ಶ್ರುತಿಸ್ಮೃತಿ ಇತಿಹಾಸ ಪುರಾಣಾಗಮಾದಿ ಪ್ರಮಾಣಗಳಿಂದ ಅತ್ಯಂತ ಸ್ವಾರಸ್ಯವಾಗಿ ಉಪನ್ಯಾಸವನ್ನು ಮಾಡಿದರು. ಅನಂತರ ಮ. ರಾ. ಲಕ್ಷ್ಮಣರೆಡ್ಡಿಯಾರ್ಯವರು ಕಳೆದ ವರ್ಷ ತೀರ್ಮಾನಿಸಿದ್ದಂತೆ ಈ ಪ್ರಾಂತ್ಯದ ವೀರಶೈವಮತೀಯರು ಪ್ರಭಾಪತ್ರಿಕೆಗೆ ಚಂದಾದಾರರಾಗದೆಯೂ, ಶುಭಾಶುಭಕಾರ್ಯಗಳಲ್ಲಿ ಪ್ರಭಾಪೋಷಣೆಗಾಗಿ ಅಗ್ರತಾಂಬೂಲಾದಿಗಳನ್ನು ಕಳುಹಿಸಿಕೊಡದೆಯೂ ಇರತಕ್ಕ ವಿಷಯದಲ್ಲಿ ನಮ್ಮ ಮನಸ್ಸಿಗೆ ಬಹಳ ವ್ಯಸನಕ್ಕೆ ಕಾರಣವಾಗಿರುವದು. ಇನ್ನು ಮುಂದಾದರೂ ಈ ಪ್ರಾಂತದ ವೀರಶೈವರ ಮೇಲ್ಕಂಡ ವಿಜ್ಞಾಪನೆಗಳನ್ನು ಲಾಲಿಸಿ ಅದರಂತೆ ನಡೆಯಿಸಿ ನಮ್ಮಗಳ ಮನಸ್ಸಿಗೆ ಆನಂದವನ್ನುಂಟುಮಾಡುವರೆಂದು ನಂಬಿರುತ್ತೇವೆ. ಹಾಗೂ ಈ ದೇಶದಲ್ಲಿ ಕಳೆದ ಒಂದು ವರ್ಷದಿಂದಲೂ ನಡೆದುಬರುವ "ವೀರಶೈವ" ಎಂಬ ದ್ರಾವಿಡಪತ್ರಿಕೆಗೆ ಚಂದಾದಾರರಾಗಬೇಕೆಂಬುದಾಗಿ ವಿಜ್ಞಾಪಿಸುತ್ತೇನೆ. ಹಾಗೂ ಈ ವೀರಭದ್ರಾಲಯವನ್ನು ಜೀರ್ಣೋದ್ಧಾರಮಾಡುವ ವಿಷಯದಲ್ಲಿ ಸರ್ವರೂ ಸಹಾಯಮಾಡಬೇಕು" ಎಂದು ವಿಜ್ಞಾಪಿಸಿದರು. ಸಭೆಯಲ್ಲಿ ನೆರೆದಿದ್ದವರೆಲ್ಲರೂ ಅದನ್ನು ಅಂಗೀಕರಿಸಿದರು. ಕೆಲವರಿಂದ ದ್ರವ್ಯವನ್ನು ಸಹಾ ವಸೂಲಿಮಾಡಲಾಯಿತು. ಅನಂತರ ಮ. ರಾ. ಸೇಲಂ ಕೆ. ಎಸ್. ಅನಂತಪದ್ಮನಾಭಯ್ಯನವರ ಸಂಗೀತಕಛೇರಿಯು ನಡೆದು ಎಲ್ಲರೂ ಆನಂದಭರಿತರಾದರು. ಸಭಿಕರೆಲ್ಲರಿಗೂ ಗಂಧಪುಷ್ಪತಾಂಬೂಲಗಳನ್ನು ವಿನಿಯೋಗಿಸಿದನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಶ್ರೀ ಪಂಚಾಚಾರ್ಯೇಭ್ಯೋ ನಮಃ.

ದೀಕ್ಷಾಸಂಸ್ಕಾರದ ಸಭೆಯು.

ಬಸವಾಬಾದ ತಾಲೂಕು ನಿಡಗುಂದಿ ಗ್ರಾಮದಲ್ಲಿ ಪ್ರತಿದಿವಸವೂ ನಡೆಯುತ್ತಿದ್ದ ಶ್ರೀ. ಷ. ಬ್ರ. ಪಟ್ಟಾಧ್ಯಕ್ಷ ಬೃಹನ್ಮಠ ದಿಗ್ಗಾಂವಿ ಇವರ ಧರ್ಮೋಪದೇಶದ ವ್ಯಾಖ್ಯಾನಗಳನ್ನು ಕೇಳಿ ತಾ. 18-12-29ನೇ ಬುಧವಾರ ಸಭೆಯನ್ನು ಕೂಡಿಸಬೇಕೆಂದು ಠರಾವು ಮಾಡಿ ನಾಗಪ್ಪನವರು ಸಜ್ಜನ ಇವರ ವಿಶಾಲವಾದ ಮನೆಯಲ್ಲಿ ಪ್ರಾತಃಕಾಲ 8 ಘಂಟೆಗೆ ಸಭೆಯು ಸೇರಿತು. ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ಸದರಿ ಶ್ರೀಗಳಿಗೆ ಸಭಿಕರ ಅನುಮೋದನದಂತೆ ಬಸಪ್ಪನವರು ಗುಂಡಗುರಕೀ ಗುಲಬುರ್ಗಾ ಇವರು ತಿಳುಹಿಸಿದರು. ಶ್ರೀಗಳು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದನಂತರ ಇಂಗ್ಲೀಷ ವಿದ್ಯಾರ್ಥಿ ಶರಣಪ್ಪನವರು, ಶ್ರೀಯುತ ನಾಗಪ್ಪನವರು, ವಕೀಲ ಸೂಲೇಪೇಟೆ ತಿಪ್ಪಣ್ಣಪ್ಪಾ ಉಕ್ಕಲಿಕರ ಇವರುಗಳ ಭಾಷಣಗಳಾದವು. ಅನಂತರ ಅಧ್ಯಕ್ಷರು ಅಷ್ಟಾವರಣಗಳ ಅಧಿಕಾರ ಉಂಟಾಗಬೇಕಾದರೆ ದೀಕ್ಷಾಸಂಸ್ಕಾರವನ್ನು ಹೊಂದಲೇಬೇಕು. ದೀಕ್ಷೆ ಇಲ್ಲದವನು ಅಷ್ಟಾವರಣೋಪಾಸನೆಗಧಿಕಾರಿಯಾಗುವದಿಲ್ಲವೆಂದು ಪ್ರಮಾಣಗಳಿಂದ ಪ್ರತಿಪಾದಿಸಿದರು. ಸಭೆಗೆ ಸ್ಥಲಪರಸ್ಥಲದಿಂದ ಅನೇಕ ವೀರಶೈವರೂ ಅನ್ಯಮತೀಯರೂ ಸಹ ಬಂದು ಆನಂದಭಾಗಿಗಳಾಗಿ ಶ್ರೀಗಳ ದರ್ಶನಾಶೀರ್ವಾದವನ್ನು ಪಡೆದುಕೊಂಡು ಹೋದರು. ಅದೇ ದಿವಸ ಸದರಿ ಪಟ್ಟಾಧ್ಯಕ್ಷರ ಸನ್ನಿಧಿಯಲ್ಲಿ ಕುಟುಂಬಸಹಿತವಾಗಿ ದೀಕ್ಷೆಯನ್ನು ಪಡೆದವರೆಲ್ಲರಿಂದಲೂ ಶ್ರೀಗಳ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೆ 1 ರೂಪಾಯಿಯು ತೆಗೆಯಲ್ಪಟ್ಟಿತು. ಇನ್ನು ಮುಂದೆ ಎಲ್ಲಾ ವೀರಶೈವರೂ ತಮ್ಮ ತಮ್ಮ ಗೃಹಗಳಲ್ಲಿ ನೆರವೇರುವ ಮಂಗಲಕಾರ್ಯಗಳಲ್ಲಿ ಪ್ರಭಾಪೋಷಣದ್ರವ್ಯವನ್ನು ತೆಗೆಯಬೇಕೆಂದು ವಿಜ್ಞಾಪನೆಮಾಡಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ರುದ್ರಯ್ಯ ಮಠಪತಿ.

ನೂತನ ನಾಟಕಮಂದಿರಪ್ರವೇಶೋತ್ಸವ.

ಬೆಂಗಳೂರು ಪಟ್ಟಣದ ಸುಬೇದಾರ್ ಛತ್ರರೋಡಿನಲ್ಲಿ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾಪೋಷಿತ ನಾಟಕಸಂಘಗಳ ಪ್ರೊಪ್ರೈಟರಾದ ವರ್ಸಟೈಲ್ ಕಾಮೆಡಿಯನ್, ವಿನೋದರತ್ನಾಕರ ಬಿ. ಹೆಚ್. ವೀರಣ್ಣನವರು ಕಳೆದ 6 ತಿಂಗಳುಗಳಿಂದಲೂ ವಿಶಾಲವಾದ ಪ್ರದೇಶದಲ್ಲಿ ಒಂದು ನವೀನಪದ್ಧತಿಯನ್ನನುಸರಿಸಿದ ನಾಟಕಮಂದಿರವನ್ನು ಕಟ್ಟಿಸುತ್ತಿರುವುದು ಸರಿಯಷ್ಟೆ. ಬಹಳ ಬೆಲೆಯುಳ್ಳ ಈ ರಮ್ಯವಾದ ಮಂದಿರದ ಕಟ್ಟಿಗೆಯು ಪೂರೈಸಲಿಕ್ಕೆ ಬಂದು ಕಳೆದ ಬುಧವಾರ ತಾ. 25-12-29 ರಲ್ಲು ಪ್ರವೇಶೋತ್ಸವವು ಬಹಳ ವಿಜೃಂಭಣೆಯಿಂದ ಸಾಂಗವಾಗಿ ನೆರವೇರಿತು. ಈ ಮಹೋತ್ಸವಕ್ಕೆ ಪುರಪ್ರಮುಖರೂ, ಸರ್ಕಾರಿ ಉದ್ಯೋಗಸ್ಥರೂ, ಮತ್ತು ಇತರ ಖಾಸಗಿ ದೊಡ್ಡಮನುಷ್ಯರೂ, ಹಾಗೂ ಪ್ರೊಪ್ರೈಟರ್‌ರವರ ಬಂಧುಮಿತ್ರರೂ ಸಕಾಲಕ್ಕೆ ಆಗಮಿಸಿ ಸಂತೋಷಭಾಗಿಗಳಾಗಿದ್ದರು. ಮೇಲ್ಕಂಡ ಭವ್ಯವಾದ ನಾಟಕಮಂದಿರಕ್ಕೆ ವೀರಶೈವ ಮತಸ್ಥಾಪನಾಚಾರ್ಯ ಶ್ರೀ ಜಗದ್ಗುರು ರೇಣುಕಾಚಾರ್ಯ ಪೀಠಾಧಿಪತಿಗಳ ಹೆಸರಿನ ಮೇಲೆ **"ಶ್ರೀ ಶಿವಾನಂದ ಥಿಯೇಟರ್"** ಎಂಬ ನಾಮಕರಣವು ಮಾಡಲ್ಪಟ್ಟಿತು. ಮಂದಿರದ ಶಾಂತಿಸಮಾರಾಧನೆಯು ಮಧ್ಯಾಹ್ನ 12 ಘಂಟೆಗೆ ಶುಭಯೋಗ ಜರುಗಿ ಅನೇಕ ಜನ ಜಂಗಮರು ಸ್ವಾಮಿಗಳು ಭೂರಿದಕ್ಷಿಣೆಗಳಿಂದ ತೃಪ್ತಿಪಟ್ಟರು. ಅಲ್ಲಿಂದ ಆಗಮಿಸಿದ ವೀರಶೈವರು ಹಾಗೂ ಅನೇಕ ಜನ ಬಂಧುಗಳೂ ಸಹ ಅನ್ನಸಂತರ್ಪಣೆಯಿಂದ ತೃಪ್ತಿಪಟ್ಟರು. ಮುಖ್ಯವಾಗಿ ಮ|| ರಾ|| ವೀರಣ್ಣನವರು ನವೀನ ನಾಟಕಮಂದಿರಗಳನ್ನು ಕಟ್ಟಿಸಿ, ನೈತಿಕ, ಸಾಮಾಜಿಕ ಮತ್ತು ಧಾರ್ಮಿಕಕಥೆಗಳಿಂದ ಜನರಲ್ಲಿ ನಾಟಕಾಭಿರುಚಿಯನ್ನು ವಿಶೇಷವಾಗುಂಟುಮಾಡಿ ತನ್ಮೂಲಕ ಭಕ್ತಿಯನ್ನು ಹೆಚ್ಚಿಸಿ ಉತ್ತಮ ಮಾರ್ಗವನ್ನು ತೋರಿಸಿಕೊಡುತ್ತಿರುವರು. ಈ ಸಮಾರಂಭದ ಸುಸಮಯದಲ್ಲಿ ವೀರಶೈವರ ನಿತ್ಯಪಾರಾಯಣಕ್ಕೆ ಅನುಕೂಲವಾದ "ರೇಣುಕದಂಡಕಂ" ಎಂಬ ಗ್ರಂಥವನ್ನು ಸಭೆಯಲ್ಲಿ ನೆರೆದಿದ್ದ ಮಹನೀಯರೆಲ್ಲರಿಗೂ ಆದರಪೂರ್ವಕವಾಗಿ ಹಂಚಿದರು. ಶ್ರೀ ಜಗದ್ಗುರು ರೇಣುಕಾಚಾರ್ಯರು ನಮ್ಮ ತರುಣ ಪ್ರೊಪ್ರೈಟರ್‌ರವರಿಗೂ ಅವರ ಕುಟುಂಬವರ್ಗಕ್ಕೂ ಆಯುರಾರೋಗ್ಯ ಸಂಪತ್ಸಮೃದ್ಧಿಯನ್ನುಂಟುಮಾಡಿ, ಪುತ್ರಪೌತ್ರಾದಿಗಳನ್ನು ಕೊಟ್ಟು ಕಾಪಾಡಲೆಂದು ಕೋರುವ,

ಪ್ರೇಮಾಭಿಲಾಷಿ.

ನೂತನ ಗೃಹಪ್ರವೇಶ ಮಹೋತ್ಸವ.

ತೀರ್ಥಹಳ್ಳಿ ತಾಲೋಕು ದಾಸನ ಗದ್ದೆ ವಾಸಿಗಳಾದ ವೇ|| ಕೊಟ್ಟೂರಯ್ಯನವರು ನೂತನ ಗೃಹಪ್ರವೇಶ ಮಹೋತ್ಸವವನ್ನು ತಾ|| 11-12-1929 ರಲ್ಲಿ ಶ್ರೀ|| ಮಳಲಿ ಮಠದ ಸ್ಥಿರ ಪಟ್ಟಾಧ್ಯಕ್ಷ ಗುರುನಾಗಾರ್ಜುನಸ್ವಾಮಿಗಳವರು, ಕವಲೆದುರ್ಗದ ಮಹಂತಿನ ಮಠದ ಚರಪಟ್ಟಾಧ್ಯಕ್ಷ ಬಸವಲಿಂಗಸ್ವಾಮಿಗಳವರು ಹೊಸೂರು ಮಠದ ಸ್ಥಿರಪಟ್ಟಾಧ್ಯಕ್ಷ ಶ್ರೀಗಳವರು ಇವರುಗಳ ಮಹಾಸನ್ನಿಧಿಯಲ್ಲಿ ಹಾಗೂ ವೇ|| ತೊಗರ್ಸಿ ಮಠದ ಸಿದ್ದಪ್ಪಯ್ಯ ಶಾಸ್ತ್ರಿಗಳವರು ಮತ್ತು ಹುಂಚದ ಆರಾಧ್ಯಮಠದ ವೇ|| ರುದ್ರಾರಾಧ್ಯರು ಇವರುಗಳ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ನೆರವೇರಿಸಿದರು.

ಸದರಿ ಶ್ರೀಗಳವರ ಸನ್ನಿಧಿಯಲ್ಲಿ ಸಭೆಸೇರಿಸಲ್ಪಟ್ಟು ಮಲೆನಾಡಿನ ವಿದ್ಯಾಭ್ಯಾಸಕ್ಕೆ ಉಂಟಾಗಿರುವ ಸ್ಥಾನಾತಿರಿಕ್ತಗಳನ್ನು ಕುರಿತು ತೀರ್ಥಹಳ್ಳಿ ಹೈಸ್ಕೂಲ್ ವಿದ್ಯಾರ್ಥಿಯಾದ ಮ|| ಕೆ. ತೇಜಪ್ಪನವರು (ದಾವಣಗೆರೆ) ಬಹುಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅನಂತರ ಮ|| ಬಿ. ಎಸ್. ರುದ್ರಪ್ಪ ಬೀಸು ಎಂಬುವರು ಗುರುಭಕ್ತಿ ಎಂಬ ವಿಚಾರವಾಗಿ ಭಾಷಣಮಾಡಿದ್ದಲ್ಲದೆ ಲೋಕಮಾನ್ಯ ಪಂಡಿತ ಕಾಶೀನಾಥಶಾಸ್ತ್ರಿಗಳವರಿಂದಲೂ, ಪಂಚಾಚಾರ್ಯಪ್ರಭೆಯಿಂದಲೂ, ಈ ಸಮಾಜಕ್ಕೆ ಉಂಟಾದ ಮಹದುಪಕಾರವನ್ನು ಕುರಿತು ಸವಿಸ್ತಾರವಾಗಿ ಭಾಷಣಮಾಡಿದರು. ಇದೇ ಸಮಯದಲ್ಲಿ ವೇ|| ಕೊಟ್ಟೂರಯ್ಯನವರು ಪ್ರಭಾಪೋಷಣಕ್ಕಾಗಿ ಎರಡು ರೂಪಾಯಿಗಳನ್ನು ಸಮರ್ಪಿಸಿದರು. ಅನಂತರ ಸಂಗೀತ ಕಛೇರಿಯು ನಡೆಯಿಸಲ್ಪಟ್ಟಿತು. ವೇ|| ಕೊಟ್ಟೂರಯ್ಯನವರು ಆಗಮಿಸಿದ್ದ ಮಹಾಶಯರನ್ನು ಭೂರಿ ದಕ್ಷಿಣಫಲತಾಂಬೂಲಾದಿಗಳಿಂದಲೂ, ಭೋಜನಾದಿಗಳಿಂದಲೂ ಸತ್ಕರಿಸಿದರು. ಶ್ರೀ ಜಗದ್ಗುರುಪಂಚಾಚಾರ್ಯರು ಇವರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇನೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಷ್ಟಪಡುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಗಳಲ್ಲೆಲ್ಲಾ [illegible] ಮಣಿ !

ಮಲೇರಿಯಾನ ಸರ್ವಜ್ವರಸಂಹಾರಿಣಿ

[illegible] ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಆದೆಂತಹ ಜ್ವರಗಳಾಗಲಿ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟು [illegible] ವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [21]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 [illegible]ಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ [illegible] ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ರಜಿ] ವಜ್ರಾಂಗ ಸುಂದರಪಾಕ. [ಸ್ವದೇ

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ [illegible], ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, [illegible] ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು [illegible] ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು [illegible] ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (32) ವನಸ್ಪತಿ-ತಕಪುಷ್ಪ, ಕಾಲಿಮಕಂದ, ಮಧುಕಂದ, ಜವಾಕಂದ, ಕಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ [illegible]ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಪಬೀಜ, ಸಾಗಬೀಜ, ಬಾಳಬೀಜ, ಭೋಕರೀ [illegible], ಎವಲೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಪತ್ರಿ, ವಿಶಾಪತ್ರಿ, ಮದನಮಸ್ತ, ರತನಪುರುಷ, ಕಮರ [illegible], ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮುಶ್ರಿ, ಕಾಲೀಮುಸಾಳಾ, ಬೀಜಬಂದ, ಹರಣಪೋರಿ, ಮುಂಗಳೀ [illegible], ಮರ್ದನೀಕಟ್ಟಿಗೆ, ಶತಾವರಿ, ಸಕೀಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀಜ, ಅಮೃತ [illegible], ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಪಸಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ, [illegible], ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ [illegible] ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು [illegible]. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. [illegible] ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಚೀಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳೆ, ಸಿಂಬ್ಳ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಪಾತಬಾರದಿರೋಣ, ಪಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು [illegible] ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [25]

ಪತ್ತೆ—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಾಶಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧವಿದು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ४० ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ತೋರಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಸದುಪಯೋಗವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬಿಚ್ಛಿಸುವವರು ೧ ಆಣೆಯ ಸ್ಟ್ಯಾಂಪುಗಳು ಹಾಕಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯರ್ ಅಷ್ಟವರ್ಗ ಔಷಧಾಲಯ
[38] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲು ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[18] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ನೆಗಡಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪ್ರಗಪಟ್ಟಿ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೬-೦
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[27] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಸ್ತ್ವದೀಲೋಕನಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ ನೇ ಜನವರಿ ೧೯೩೯ [ಸಂಚಿಕೆ ೩೫.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೯ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಜಗದಾಚಾರ್ಯರ ಮನೋಹರವಾದ ಬ್ಲಾಕಿನೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಬಿಲ್ವವೃಕ್ಷದ ಮಹಿಮೆ.

ಈ ಗ್ರಂಥದಲ್ಲಿ ಸೃಷ್ಟಿನಿರ್ಮಾಣ ವಿಷಯವೂ ಪರಬ್ರಹ್ಮಸ್ವರೂಪ ವಿಷಯವೂ ಹೇಳಲ್ಪಟ್ಟದ್ದು ಬಿಲ್ವವೃಕ್ಷದ ಸ್ವರೂಪವು ವಿಶೇಷರೀತಿಯಿಂದ ವರ್ಣಿಸಲ್ಪಟ್ಟಿರುವದು. ಮಹಾ ಬಿಲ್ವವೃಕ್ಷದ ಸಮಗ್ರಸ್ವರೂಪವನ್ನು ಪ್ರತಿಪಾದಿಸುವ ಕನ್ನಡ ಗ್ರಂಥಗಳು ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲವೆಂಬ ವಿಷಯವನ್ನು ತಿಳಿದು ಪರಮಪೂಜ್ಯವಾದ ಈ ಮಹಾ ಬಿಲ್ವವೃಕ್ಷದ ಮಹಿಮೆಯನ್ನು ಸರ್ವರೂ ತಿಳಿದು ಧನ್ಯರಾಗಬೇಕೆಂಬ ಸದುದ್ದೇಶದಿಂದ ಅತ್ಯಂತ ಶ್ರಮವನ್ನು ವಹಿಸಿ ಸರಳವಾದ ಕನ್ನಡ ಭಾಷೆಯಲ್ಲಿ ಬಾಲಕರಿಗೂ ಸಹ ತಿಳಿಯುವಂತೆ ಈ ಪುಸ್ತಕವನ್ನು ರಚಿಸಿದ್ದಾಗಿದೆ. ಈ ಗ್ರಂಥದ ಅಂತ್ಯಭಾಗದಲ್ಲಿ ಬಿಲ್ವವೃಕ್ಷದ ಮಹಿಮಾಪರವಾದ ಅಷ್ಟೋತ್ತರಶತ (108) ಸಂಸ್ಕೃತ ಶ್ಲೋಕಗಳು ಮುದ್ರಿಸಲ್ಪಟ್ಟಿವೆ. ಈ ಅಷ್ಟೋತ್ತರ ಶತಶ್ಲೋಕಗಳು ಪ್ರತಿದಿನ ಪೂಜಾಕಾಲದ ಪಾರಾಯಣಕ್ಕೆ ಅತ್ಯಂತ ಯೋಗ್ಯಗಳಾಗಿವೆ. ಪ್ರತಿಯೊಬ್ಬರೂ ಈ ಪುಸ್ತಕವನ್ನು ಓದಿ ಧನ್ಯರಾಗಬೇಕೆಂದು ಪ್ರಾರ್ಥನೆ.

೫ ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಾಗುವುದಿಲ್ಲ. ಪ್ರತಿ 1 ಕ್ಕೆ 0-3-0 ಪೋಸ್ಟು ಮೂಲಕ 0-3-6 ಸ್ಟ್ಯಾಂಪನ್ನು ಕಳುಹಿಸುವುದು.

ವ್ಯಾಪಾರಸ್ಥರಿಗೆ ವಿಶೇಷವಾದ ಕಮಿಷನ್ ಕೊಡುತ್ತೇವೆ.

ವಿಳಾಸ:— ಎಂ. ಚನ್ನಬಸಪ್ಪ,
ಮಾರ್ತಾಂಡ ರಾಜವೈದ್ಯಶಾಲಾ, ಮಾರಲಿಂಗನಹಳ್ಳಿ,
ಶ್ರೀರಂಗಪಟ್ಟಣ ಪೋಸ್ಟ್, ಮೈಸೂರು ಜಿಲ್ಲಾ.

WANTED.

Candidates for Telegraph and Station Masters' Classes. Full particulars and Railway Fare Certificate on receipt of 2 annas Stamp.

Apply to—
IMPERIAL TELEGRAPH COLLEGE,
(4) NAI SARAK, DELHI.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶಿವಲೋಕಯಾತ್ರಾ.

ರಾಯಚೂರು ಜಿಲ್ಲಾ ಸಿಂಧನೂರು ತಾ|| ಪೈಕಿ ಸಂಸ್ಥಾನ ಜವಳಗೇರಿ ಮಠಾಧ್ಯಕ್ಷರೂ, ಪ್ರಾಚೀನ ಪಂಡಿತ ಮನೆತನದವರೂ ಆದ ವೇ|| ಪಂ|| ಶ್ರೀಕಂಠಶಾಸ್ತ್ರಿಗಳೆಂಬುವರು ಬಳ್ಳಾರಿ ಸರ್ಕಾರಿ ಕರಡೆಪ್ಪನವರ ಪಾಠಶಾಲೆಯಲ್ಲಿ ವೇ|| ಪಂ|| ಕಾಂತಗಲ್ಲ ವಿಷ್ಣು ಶಾಸ್ತ್ರಿಗಳ ಸಹಾಧ್ಯಾಯಿಗಳಾಗಿ ಅಧ್ಯಯನ ಮಾಡಿದವರಾಗಿದ್ದು ಶಿವಪೂಜಾನಿಷ್ಠರೂ, ಸಾತ್ವಿಕಗುಣವಿಶಿಷ್ಟರೂ, ಏಕಪತ್ನೀವ್ರತಸ್ಥರೂ ಆಗಿದ್ದರು. ಇವರಲ್ಲಿ ಅಧ್ಯಯನವನ್ನು ಮಾಡಿದವರ ಪೈಕಿ ಕೆಲವರು ಪಾಠಶಾಲೆಗಳಿಗೆ ಅಧ್ಯಾಪಕರಾಗಿಯೂ ಸದ್ಯಃ ಕೇದಾರ ಸಂಸ್ಥಾನದ ಆಸ್ಥಾನ ಪಂಡಿತರು ಮುಂತಾಗಿ ಧರ್ಮಬೋಧಕರಾಗಿಯೂ ಇರುವರು. ಹೀಗೆ ಇವರು ಯಾವಾಗಲೂ ತಮ್ಮ ಮನೆಯಲ್ಲಿಯೇ ಇದ್ದು ವಿದ್ಯಾಭಿವೃದ್ಧಿಕಾರ್ಯವಂ ಗೈಯುತ್ತಿದ್ದುದಲ್ಲದೆ ತಮ್ಮಲ್ಲಿರುವ ವೇದ, ಆಗಮ, ಭಾಷ್ಯಪುರಾಣಾದಿಯಾಗಿ, ಬಹು ಪ್ರಾಚೀನಗಳಾದ ತಾಳವಾಲೆಯ ಗ್ರಂಥಗಳನ್ನು ಪರಿಶೋಧಿಸಿ ಅನೇಕ ಪ್ರಮಾಣಪುರಸ್ಸರವಾಗಿ ವೀರಶೈವ ಸಿದ್ಧಾಂತ ಧರ್ಮಪ್ರಚಾರಣೆಯಂ ಮಾಡಲೋಸುಗ ಶಿವಾಧಾರ ಸಿದ್ಧಾಂತ ಪಾದೋದಕ ಚಂದ್ರಿಕಾ ಆಗಂತುಕ ವೀರಶೈವ ಪರ್ಯ ಮೊದಲಾದ ಅನೇಕ ಗ್ರಂಥಗಳನ್ನು ಬರೆದಿರುವರು. ೮೦ ವರ್ಷದ ಮುಪ್ಪಿನ ಮನುಷ್ಯರಾದಾಗ್ಯೂ ಬಾಲಕಾಲಿಗಳಾದ ಇವರ ಇಂದ್ರಿಯನಿಗ್ರಹಾದಿ ಗುಣಗಳು ಆಧುನಿಕರಿಗೆ ಮಾರ್ಗದರ್ಶಕಗಳಾಗಿದ್ದವು. ಬಾದಿಮುಟ್ಟಿದ ತೆಂಡದಂತೆ ಗೂಢತೇಜಸ್ವಿಗಳಾದ ಇವರು ಇದೇ ಶುಕ್ಲ ಸಂ|| ಕಾರ್ತೀಕ ಶು|| ೨ ಭಾನುವಾರದಲ್ಲಿ ಏನೊಂದು ಜ್ವರಾದಿ ರೋಗವಿಲ್ಲದೆ ಸರ್ವರೂ ನಮಗೆ ಶಿವಾಜ್ಞೆಯಾಗಿದೆಯೆಂದು ಹೇಳಿಕೇಳಿ ಹಗಲು ೧೧ ಘಂಟೆಗೆ ಶಿವನಾಮಸ್ಮರಣಪೂರ್ವಕವಾಗಿ ಪರಂಧಾಮವನ್ನು ಹೊಂದಿದರು. ಈ ಗ್ರಾಮದ ಸಂಸ್ಥಾನ ಮಹೀಪಾಲ ಶ್ರೀಮಂತ ಅನ್ನಸಾಹೇಬ ದೇಸಾಯಿಯವರು ಶಿವಭಕ್ತರು ಶಿವಪೂಜಾದಿಗಳಿಂದ ಮಹಾಗಣಾರಾಧನೆಯಂ ನಡೆಯಿಸಿ ಮಹೇಶ್ವರರಿಗೆ ಭೂರಿದಕ್ಷಿಣೆಯನ್ನಿತ್ತು ಬಹುವಿಧ ನಾದ್ಯಾದಿ ಸಂಭ್ರಮದೊಡನೆ ಉತ್ತರಕ್ರಿಯೆಗಳೆಲ್ಲಾ ವೈದಿಕರಿಂ ವಿಧ್ಯುಕ್ತವಾಗಿ ನಡೆಯಿಸಿ ರಾತ್ರಿ ೯ ಘಂಟೆಗೆ ಸಮಾಧಿಕಾರ್ಯವನ್ನು ತಮ್ಮ ಖರ್ಚಿನಿಂದಲೇ ಪೂರೈಸಿದರು. ಶಾಸ್ತ್ರಿಗಳ ಪತ್ನೀಪುತ್ರಾದಿಗಳಿಗೆ ಉಂಟಾದ ದುಃಖವು ಶಾಂತವಾಗಿ ಮೃತರ ಆತ್ಮಕ್ಕೆ ಶ್ರೀ ಪರಮಾತ್ಮನು ಕೈವಲ್ಯವನ್ನೀಯಲೆಂದು ಹಾರೈಸುವ

ವೆಂಕಟಾಗಿರಿ ಪೋ|| ಪಾಟೀಲ ಸಂಸ್ಥಾನ ಜವಳಗೇರಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಉಜ್ಜಯಿನೀ ಸಂಸ್ಥಾನಪ್ರತಿನಿಧಿಗಳ ಸಂಚಾರವು.

ರಾಯಚೂರು ಜಿಲ್ಲಾ ದೇವದುರ್ಗ ತಾಲೂಕು ಪೈಕಿ ಅರಕೇರಿ ಮುಕ್ಕಾಮಿನಲ್ಲಿ ಪ್ರತಿದಿನದಲ್ಲಿಯೂ ಆಗಮಿಸುತ್ತಿರುವ ಭಕ್ತಜನ ಸಮುದಾಯಕ್ಕೆ ಸತ್ಪಥಮಾರ್ಗವನ್ನು ಬೋಧಿಸುತ್ತ ಸಂಸ್ಥಾನದ ಪಟ್ಟಿಯ ಮೇರೆಗೆ ಆವರಿಂದ ಮಠಕ್ಕಾದ ಕಾಣಿಕೆಯನ್ನು ಸ್ವೀಕರಿಸುತ್ತ ಶ್ರೀ ಸನ್ನಿಧಿಯವರು ನಮ್ಮ ಪ್ರದೇಶದಲ್ಲಿ ಧರ್ಮಜಾಗ್ರತೆಯನ್ನುಂಟುಮಾಡುತ್ತಿರುವದು ನಮ್ಮ ಭಾಗ್ಯೋದಯವೇ ಸರಿ. ಸದರಿ ಅರಕೇರಿಗ್ರಾಮದ ಹಿರೇಮಠದ ಚನ್ನವೀರಯ್ಯನವರು ತಮ್ಮ ಪುತ್ರ ಬಸವಲಿಂಗಯ್ಯನಿಗೆ ಅಯ್ಯಾಚಾರವನ್ನು ಮಾಡಿಸುವ ಕ್ರಮಕ್ಕೆ ಇದೇ ಶುಕ್ಲ ಸಂ|| ಮಾರ್ಗಶಿರ ಶು|| ೧೨ ಬುಧವಾರ ಮುಹೂರ್ತವನ್ನು ನಿರ್ಧರಿಸಿ ಶ್ರೀಗಳ ಸನ್ನಿಧಿಗೆ ಬಿನ್ನಹವನ್ನು ಮಾಡಿಕೊಂಡಪ್ರಕಾರಕ್ಕೆ ನಿಟ್ಟುಂದಿನಮೇಣವಾಗಿ ಪೂಜ್ಯಾಂದೋಳಿಕೆಯಲ್ಲಿ ಶ್ರೀಗಳ ಸವಾರಿಯು ದಯಮಾಡಿಸಿ ಶಿವಾರ್ಚನೆಯನ್ನು ಪೂರೈಸಿಕೊಂಡು ದೀಕ್ಷಾಮಂಟಪದ ಪೀಠದಲ್ಲಿ ಮೂರ್ತಿಮಾಡಲು ಸದರಿ ಬಸವಲಿಂಗಯ್ಯ, ಅವಸ್ವಾಪುರ ದೇವದುರ್ಗಾಮಠದ ಶಿವಲಿಂಗಯ್ಯನವರ ಪುತ್ರ ಗುರುಬಸವಯ್ಯ ವಗೈರೆ 6 ಜನ ಮಾಹೇಶ್ವರ ವಟುಗಳಿಗೆ ವಿಧ್ಯುಕ್ತವಾಗಿ ವೇ|| ಜಿ. ಎಂ. ಪಂಚಾಕ್ಷರಶಾಸ್ತ್ರಿ ಇವರ ವೈದಿಕತ್ವದೊಡನೆ ದೀಕ್ಷಾಕಾರ್ಯವು ಸಾಂಗವಾಗಿ ಪೂರೈಸಲ್ಪಟ್ಟು ಅದೇ ದಿನ 11 ಘಂಟೆಗೆ ಶ್ರೀಗಳ ಪಾದಪೂಜಾಪೂರ್ವಕ ಘಣಾರಾಧನೆಯು ನಡೆಯಿಸಲ್ಪಟ್ಟಿತು. ಶ್ರೀಗಳ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ಸಮರ್ಪಿಸಿದರು. ಅನಂತರ ಶ್ರೀಗಳವರ ಸವಾರಿಯು ಈ ಗ್ರಾಮದ ಮೊಕ್ಕಾಮಿನಲ್ಲಿ ಯಾವತ್ತು ಕಾರ್ಯವನ್ನು ಪೂರೈಸಿಕೊಂಡು ಮೊದಲೇ ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ತಾ|| 15-12-38ಕ್ಕೆ ದೇವದುರ್ಗ ತಾಲೂಕು ಪೈಕಿ ಗಾಣದಾಳು ಗ್ರಾಮಕ್ಕೆ ದಯಮಾಡಿಸುವದರೊಳಗಾಗಿ ಸದರಿ ಗ್ರಾಮದ ಮುಖ್ಯರು ಶಾನಭೋಗರು ಶಾಲಾಮಾಸ್ತರರು ಪೋಲೀಸು ಮುಂತಾದ ಸರ್ಕಾರಿ ಅಧಿಕಾರಿಗಳು ಇತ್ಯಾದಿ ಸಕಲಸಮೇತ ಮಾರ್ಗಪ್ರತೀಕ್ಷೆಯನ್ನು ಮಾಡುತ್ತಿರಲು ಸವಾರಿಯು ದಯಮಾಡಿಸಿದ ಕೂಡಲೆ ಫಲ ತಾಂಬೂಲಾದಿ ಕಾಣಿಕೆಯನ್ನಿತ್ತು ಪಂಚಾಚಾರ್ಯರ ಜಯಘೋಷವನ್ನು ಮಾಡಿದರು. ಅನಂತರ ಶ್ರೀಗಳವರು ಪುಷ್ಪಾಂದೋಲಿಕೆಯಲ್ಲಿ ಮೂರ್ತಿಮಾಡಲು ಮುಂಭಾಗದಲ್ಲಿ ವೈದಿಕರ ವೇದಘೋಷವೂ ಭಜನಾಸಂಘದ ಮಂಜುಳಗಾನವೂ ವಾದ್ಯಗಳು ಮೊಳಗುತ್ತಿರಲು ಸಮಸ್ತ ಬಿರುದಾವಳಿಗಳೊಡನೆ ಉತ್ಸವವು ಕಳಶಕನ್ನಡಿ ಆರತಿಗಳಿಂದಲಂಕರಿಸಲ್ಪಟ್ಟ ಪುರವೀಧಿಯಲ್ಲಿ ಹೊರಟು ಸಾಯಂಕಾಲ 10 ಘಂಟೆಗೆ ಶ್ರೀ ಬಸವೇಶ್ವರದೇವಾಲಯಕ್ಕೆ ತಲುಪಿತು. ಕೂಡಲೇ ಸಿದ್ಧಗೊಳಿಸಲ್ಪಟ್ಟ ಪೀಠದಲ್ಲಿ ಶ್ರೀಗಳು ಮಂಡಿಸಲು ಗುರುದರ್ಶನಾರ್ಥಿಗಳಾದ ಜನರಿಗೆ ವೇ|| ಸಬ್ ಏಜಂಟ ಗುರೂಜಿ ಹಿರೇಮಠ ಚೆನ್ನವೀರ ಇವರು ಪಂಚಾಚಾರ್ಯರ ಮಹಿಮೆಯನ್ನು ಸರ್ವರಿಗೂ ತಿಳಿಯುವಂತೆ ಹೇಳಿದರು. ಅನಂತರ ಶ್ರೀ ಸನ್ನಿಧಿಯವರು ಭಕ್ತಿಯೇ ಮುಕ್ತಿಗೆ ಕಾರಣವೆಂಬ ಬಗ್ಗೆ ಸರ್ವರೂ ಭಕ್ತಿಪರವಶರಾಗುವಂತೆ ಅಪ್ಪಣೆ ಕೊಡಿಸಿದರು. ಅದ್ಯ ಸಮಾಗಮದಿಂದ ಆಶೀರ್ವಾದ ಸರ್ವರಿಗೂ ಫಲಾಶೀರ್ವಾದಗಳನ್ನು ಈಯಲು ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ವೇ|| ಸೂಗಯ್ಯನವರು, ಮಠದ, ಗಾಣದಾಳ.

ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾಗಿ 60-70 ಮಹಡಿಗಳುಳ್ಳ ಕಟ್ಟಡಗಳನ್ನು ಕಟ್ಟುವದರಲ್ಲಿ ಅಮೇರಿಕೆಯವರು ಬಹು ಪ್ರಸಿದ್ಧಿ ಪಡೆದಿರುವರು. ಆದರೆ ಜಪಾನಿನವರು ನೆಲದೊಳಗೆ ಅತ್ಯಂತ ಆಳವಾದ ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಸಿದ್ದಾರೆ. ಜಪಾನಿನ ಮುಖ್ಯಪಟ್ಟಣವಾದ ಟೋಕಿಯೋನಗರದಲ್ಲಿ ಇಂಥ ಕಟ್ಟಡವೊಂದನ್ನು ಈಗ ಕಟ್ಟುತ್ತಿರುವರು. ಅದಕ್ಕೆ 80 ಅಂತಸ್ತುಗಳಿರುವವು. ಮುಂದೆ ಆವಶ್ಯಕ ಬಿದ್ದರೆ ಇನ್ನೂ ಹೆಚ್ಚು ಅಂತಸ್ತುಗಳನ್ನು ಕಟ್ಟುವರಂತೆ! ಈ ಕಟ್ಟಡದ ಗೋಡೆಗಳೆಲ್ಲವೂ ಉಕ್ಕಿನಿಂದಲೂ ಇತರ ಭಾಗಗಳೆಲ್ಲವೂ ಗಾರೆ ಮತ್ತು ಕಲ್ಲಿನಿಂದಲೂ ಕಟ್ಟಲ್ಪಡುವುವು. ಕಟ್ಟಡದ ಆಕಾರವು ಒಂದು ದೊಡ್ಡ ಕೊಳವೆಯಂತಿರುವದು. ಕಟ್ಟಡವು ಭೂಮಿಯಲ್ಲಿ 1,100 ಅಡಿಗಳ ಒಳಗೆ ಹೋಗುವದು. ಗಾಳಿ ಬೆಳಕುಗಳಿಗಾಗಿ ಕಟ್ಟಡದ ಮಧ್ಯದಲ್ಲಿ 75 ಅಡಿ ಅಗಲದ ಒಂದು ಕೊಳವೆಯು ಇರುವದು. ವಿದ್ಯುದ್ದೀಪ, ಟೆಲಿಫೋನ್, ವೈರ್‌ಲೆಸ್, ಎಲೆಕ್ಟ್ರಿಕ್ ಲಿಫ್ಟ್‌ಗಳು ಮೊದಲಾದ ನೂತನ ಸಾಧನಗಳೆಲ್ಲವೂ ಈ ಕಟ್ಟಡಗಳಲ್ಲಿರುವವು. ಈ ಕಟ್ಟಡವನ್ನು ಕಟ್ಟಲು ಒಟ್ಟು 35 ಕೋಟಿ ರೂಪಾಯಿಗಳಾಗುವದೆಂದು ಅಂದಾಜು ಮಾಡಲ್ಪಟ್ಟಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ಉಪದೇಶಪರಂಪರೆಯಾದರೂ **ಮಹೌಘಕ್ರಮ** ವೆಂದೂ **ಪ್ರತಿಸಂಹಿತಾಕ್ರಮ**ವೆಂದೂ ಎರಡು ವಿಧವಾಗಿದೆ ಆ ಎರಡು ಬಗೆಯಲ್ಲಿ ಪರಮೇಶ್ವರನಿಂದ ಉಪದೇಶಿಸಲ್ಪಟ್ಟ ಕ್ರಮದಿಂದ ಮುಂದೆ ಒಂದೊಂದೇ ಸಂಹಿತೆಯನ್ನು ಬೇರೆ ಬೇರೆ ಶ್ರೋತೃಗಳು ಶ್ರವಣಮಾಡಿದುದರಮೂಲಕವಾಗಿ ಶ್ರೋತೃಗಳ ಬಾಹುಳ್ಯದಿಂದ ಪರಿಪರಿಯಾಗಿ ವಿಸ್ತರಿಸಿ ಬೋಧಿಸಲ್ಪಟ್ಟುದಾದ ಸಿದ್ಧಾಂತಶಾಸ್ತ್ರದ ಹುಟ್ಟುಗೆಯೇ **ಮಹೌಘಕ್ರಮ**ವು.

ಸದಾಶಿವನು ಸೃಷ್ಟಿಯ ಅನಂತರದಲ್ಲಿ ಶುದ್ಧಾಧ್ವವಾಸಿಗಳಾದ ಪ್ರಣವಾದಿ ದಶಶಿವರನ್ನೂ ಅನಾದಿರುದ್ರಾದ್ಯಷ್ಟಾದಶರುದ್ರರನ್ನೂ ತನ್ನ ಅನುಗ್ರಹಶಕ್ತಿಯ ಸಂಸ್ಪರ್ಶಮಾತ್ರದಿಂದೇ ಚಿಚ್ಛಕ್ತಿಯಗಳ ಉದ್ದೀಪನವುಳ್ಳವರನ್ನಾಗಿಮಾಡಿ, ನಾದರೂಪದಿಂದಾವಿರ್ಭವಿಸಿದುದೂ, ಜ್ಞಾನ, ಜ್ಞೇಯ, ಅನುಷ್ಠೇಯ, ಅಧಿಕಾರಿ, ಸಾಧನ, ಸಾಧ್ಯಗಳೆಂಬ ಷಟ್ಪದಾರ್ಥಮಯವಾದುದೂ ಅನೇಕಗ್ರಂಥಗಳುಳ್ಳುದೂ ಆದ ಕಾಮಿಕ ಮೊದಲಾದ ಒಂದೊಂದೇ ಸಂಹಿತೆಯನ್ನು ಆ ದಶಶಿವರಿಗೂ ಅಷ್ಟಾದಶರುದ್ರರಿಗೂ ಬೇರೆಬೇರೆಯಾಗಿ ಬೋಧಿಸಿದ ಪರಿಯು **ಪ್ರತಿಸಂಹಿತಾಕ್ರಮ**ವೆನಿಸುವುದು.

ಸದಾಶಿವನು ಜಗತ್ತಿನ ಸೃಷ್ಟಿ ಮೊದಲಾದುದನ್ನು ಹೇಗೆ ಸಂಕಲ್ಪಮಾತ್ರದಿಂದ ಮಾಡುವನೋ ಹಾಗೆ ವಿದ್ಯೇಶ್ವರಾದಿಗಳಿಗೆ ಕಾಮಿಕಾದ್ಯಾಗಮಗಳನ್ನು ಸಂಕಲ್ಪಮಾತ್ರದಿಂದೇ ಬೋಧಿಸುವನು. ಬೈಂದವಶರೀರವುಳ್ಳವರೂ (ಶುದ್ಧಮಾಯೆಯೇ ಉಪಾದಾನವಾಗಿ ಉಳ್ಳ ದೇಹವನ್ನು ಧರಿಸಿದವರು ಎನ್ನುವಿಕೆ) ಶುದ್ಧಾಧ್ವವರ್ತಿಗಳೂ ಆದ ಆ ವಿದ್ಯೇಶ್ವರಾದಿಗಳ ಹೃದಯದಲ್ಲಿ ಸದಾಶಿವನ ಸಂಕಲ್ಪಮಾತ್ರದಿಂದ ಆಗಮಸಂಹಿತೆಗಳು ಅರ್ಥವತ್ತಾಗಿ ಬೋಧವಾಗುವುವು.

ಈ ಮೇಲೆ ನಿರ್ದಿಷ್ಟಗಳಾದ ಕಾಮಿಕಾದಿ ಸಿದ್ಧಾಂತಶ್ರುತಿಗಳು ತಮ್ಮ ತಮ್ಮ ಶಾಖೋಪಶಾಖೆಗಳಿಂದ ಅನಂತವಾಗಿರುವುವು; ಆದರೂ ೨೦೮ ಭೇದಗಳಾಗಿರುತ್ತವೆ ಎಂಬುದಾಗಿ ಮುನಿಗಳ ಕಾಲೀನವಾದ ಆಗಮೋಪಾಗಮಗಳ ನಿಯತವಾದ ಸಂಖ್ಯೆಯೂ ಉಂಟು. ಎಲ್ಲ ಆಗಮಸಂಹಿತೆಗಳಾದರೂ ಪ್ರತ್ಯೇಕವಾಗಿ **ವಿದ್ಯಾಪಾದ ಯೋಗಪಾದ ಚರ್ಯಾಪಾದ ಕ್ರಿಯಾಪಾದ**ವೆಂದು ನಾಲ್ಕು ಪಾದ (ಭಾಗ)ವುಳ್ಳವುಗಳಾಗಿವೆ. ಈ ನಾಲ್ಕು ಪಾದಗಳಲ್ಲಿಯ ವಿಷಯಗಳನ್ನು ವಿವೇಚಿಸಬೇಕೆಂಬುದರ ಬಯಕೆಯು ಈಗ ಮಾತ್ರ ಹಿಂದಕ್ಕೆ ತಳ್ಳಲ್ಪಡುವುದು.

ಲೋಕದಲ್ಲಿ ಪ್ರತ್ಯಕ್ಷದಿಂದಲೂ ಅನುಮಾನದಿಂದಲೂ ಲೇಶಾಗಿ ಸನ್ನಿಕರ್ಷಸಂದರ್ಭವನ್ನು ನುಡಿಯುವಾತನು ಆಪ್ತನೆಂದು ಹೇಳಿಸಿಕೊಳ್ಳಲ್ಪಡುವನಷ್ಟೇ! ಕಿಂಚಿಜ್ಞನಾದ ಅಂತಹ ಆಪ್ತನಿಗಿಂತಲೂ ಶಿವನು ಪರಮಾಪ್ತನಾಗಿರುವನು; ಸರ್ವಜ್ಞನೂ, ಸರ್ವಗೋಚರನೂ, ಸುಪ್ರಸನ್ನೇಂದ್ರಿಯಗ್ರಾಮನೂ, ಸ್ವತಂತ್ರನೂ, ಯೋಗಯೋಗೀಶ್ವರನೂ, ಆತ್ಮರ ಪಾಶಗಳನ್ನು ಹೋಗಲಾಡಿಸತಕ್ಕವನೂ ಆದ ಅವನ ವಾಕ್ಯವು ಕಪಿಲಾದಿಪುರುಷ (ಜೀವ)ರಿಂದ ರಚಿತಗಳಾದ ಸನ್ನಿಬಲರೂಪಪ್ರಮಾಣಗಳಿಂದ ಎಂದೂ ಬಾಧಿಸಲ್ಪಡುವುದಿಲ್ಲವಾದುದರಿಂದ, ಶಿವವಚನಗಳಾದ ಕಾಮಿಕಾದಿ ದಿವ್ಯಾಗಮಗಳು ಸತ್ಯವಾದ ಪ್ರಮಾಣರೂಪಗಳಾಗಿವೆ. ಪರುಷಾರ್ಥಬೋಧಕಗಳೂ ಸ್ವರ್ಗಾದಿಭೋಗರೂಪಾಸ್ಥಿರಫಲಾಭಿರುಚಿಯನ್ನುಂಟುಮಾಡತಕ್ಕವುಗಳೂ '**ತ್ರೈಗುಣ್ಯವಿಷಯಾವೇದಾಃ**' ಎಂಬ ಭಗವದುಕ್ತಿಯಂತೆ, ವಿಶೇಷವಾಗಿ ಪ್ರಾಕೃತವಿಷಯಗಳನ್ನೇ ಮುಂದುವರಿಸುವವುಗಳೂ ಆದ ಶ್ರುತಿವಚನಗಳಿಗಿಂತಲೂ, ಪರರೂಪನಾದ ಪರಶಿವನ **ಭಕ್ತಿ, ಅರ್ಚನ, ವ್ರತ, ಧ್ಯಾನ, ಜ್ಞಾನ**ವೆಂಬ ಶಿವಯೋಗಸಾಧನಗಳನ್ನು ಬೋಧಿಸಿ ಆತ್ಮರಿಗೆ ಶಿವತ್ವಾಭಿವ್ಯಕ್ತಿಯೆಂಬ ಮೋಕ್ಷವನ್ನೊದಗಿಸಿಕೊಡತಕ್ಕ ಶಿವಾಗಮಗಳು ಮೋಕ್ಷಾರ್ಥಿಗಳಿಗೆ ಪರಮೋಪಾದೇಯಗಳಾಗಿರುವುದರಿಂದ ಮಿಗಿಲಾದ ಪವಣ (ಪ್ರಮಾಣ)ಗಳಾಗಿರುತ್ತವೆ.

ಓಕ್ಸೆಸಿಯ ವಚನಗಳಲ್ಲಿ ವಿಶ್ವಾಸವುಳ್ಳವನು ಸೌಖ್ಯವನ್ನು ಪಡೆವನೆಂಬ ನೀತಿಗನುಸಾರವಾಗಿ, ಸರ್ವರಿಗೂ ಪರಮಹಿತೈಷಿಯಾದ ಶಿವನ ವಚನಗಳೆಂಬ ಸಿದ್ಧಾಂತಾಗಮಗಳಲ್ಲಿ ಪೂರ್ಣವಿಶ್ವಾಸವುಳ್ಳ ಆತ್ಮರು ಇಹಪರಸೌಖ್ಯವನ್ನು ಪಡೆವರೆಂಬಲ್ಲಿ ಯಾವ ಸಂದೇಹವೂ ಇಲ್ಲ.

ದೂಷಯನ್ನಿ ಶಿವಜ್ಞಾನಂ ಯೇಸರ್ವಾರ್ಥಪ್ರಸಾಧಕಮ್ ।
ಸುಮಹತ್ಪಾತಕಂ ತೇಷಾಂ ನಿರಯಾರ್ಣವಗಾಮಿನಾಮ್ ॥

ಎಂಬೀ ಶ್ರೀ ಪೌಷ್ಕರೋಕ್ತಿಯಂತೆ ಪುರುಷಾರ್ಥ ಸಾಧಕೀಭೂತಗಳಾದ ದಿವ್ಯಾಗಮ ಸಮೂಹವನ್ನು ದೂಷಿಸುವ ಪಾಪಿಗಳು ಶಿವಜ್ಞಾನವನ್ನು ಪಡೆಯದೆ ನರಕಾರ್ಣವವನ್ನೈದುತ್ತಾರೆ.

ಶ್ರೀಕಂಠಸೂರಿಯು ರತ್ನತ್ರಯದಲ್ಲಿ—

ಆಪ್ತೋಕ್ತಿರತ್ರಸಿದ್ಧಾನ್ತಃ ಶಿವಏವಾಪ್ತಿ ಮಾನ್ಯತಃ ।
ನ ತಾಭ್ಯಾಂ ಸದೃಶಃ ಕಶ್ಚಿಚ್ಛ್ರೇಯ ಆಪ್ತಿ ವಿಧಾಯಕಃ ॥೧೦॥
ಸಿದ್ಧಾನ್ತ ಏವ ಸಿದ್ಧಾನ್ತಃ ಪೂರ್ವಪಕ್ಷಾಸ್ತತಃಪರೇ ।
ಆಪ್ತಸ್ತು ಶಿವಏವೈಕಃ ಶಿವಾನ್ಯೇ ತ್ವಶಿವಾ ಮತಾಃ ॥೧೧॥
ಸಿದ್ಧಾನ್ತಃ ಸೇವ್ಯತೇಸದ್ಭಿಃ ಶಕ್ತಿಪಾತಪವಿತ್ರಿತೈಃ ।
ಕಾಮುಕಾರಿತಯಾನ್ಯೈಸ್ತು ನಿಂದ್ಯತೇ ಪಶುಶಾಸ್ತ್ರವತ್ ॥೧೨॥

ಎಂದು ಹೇಳಿರುವಂತೆ ಈ ಶಿವಾಗಮವಚನವೊಂದವೇ ಸಿದ್ಧಾನ್ತವೆಂದು ಹೇಳಿಸಿಕೊಳ್ಳಲ್ಪಡುವುದು. ಸಿದ್ಧಾನ್ತಶಬ್ದವು ಪಂಕಜಾದಿಶಬ್ದಗಳಂತೆ ಯೋಗರೂಢಿಯಿಂದ ಶಿವಪ್ರಣೀತ ಕಾಮಿಕಾದಿ ದಿವ್ಯಾಗಮಸಮೂಹದಲ್ಲಿ ಪ್ರಸಿದ್ಧವಿದೆ. ಆದುಕಾರಣ ಸಿದ್ಧಾಂತವೇ ಅಬಾಧಿತರೂಪ ಪ್ರಮಾಣವೆನಿಸಿಕೊಳ್ಳುವುದು.

ಕಣಾದ, ಪತಂಜಲಿ ಕಪಿಲಾದಿಗಳಾದರೂ ಸ್ವವಿಷಯರೂಪವಸ್ತು ಪ್ರತಿಪಾದನದಲ್ಲಿ ಆಪ್ತರೇ ಆಗಿದ್ದಾರೆ. ಆದರೆ ಅವರು ಅಸರ್ವಜ್ಞರಾದ್ದರಿಂದಲೂ, ಅವರಿಂದ ರಚಿಸಲ್ಪಟ್ಟ ಶಾಸ್ತ್ರಗಳಿಗೆ ಬಿಂದು ಮೊದಲಾದ ವಸ್ತುಗಳು ವಿಷಯಗಳಲ್ಲವಾದುದರಿಂದಲೂ ಆ ಮುನಿಗಳು ಪರಮಾಪ್ತರೆನಿಸುವುದಿಲ್ಲ; ಇಷ್ಟೇ ಅಲ್ಲ; ಅವರಿಂದ ರಚಿಸಲ್ಪಟ್ಟ ಶಾಸ್ತ್ರಗಳಾದರೂ ದಿವ್ಯಾಗಮಗಳಂತೆ ಸಿದ್ಧಾಂತರೂಪವಾದವುಗಳಲ್ಲ. ಮತ್ತು

ಸುಗತೋ ಯದಿ ಸರ್ವಜ್ಞಃ ಕಪಿಲೋನೇತಿ ಕಾ ಪ್ರಮಾ । ಅಥೋಭಾವಪಿ ಸರ್ವಜ್ಞೌ ಮತಿಭೇದಃ ಕಥಂ ತಯೋಃ ॥

ಎಂಬಂತೆ ಕಣಾದನೂ ಸರ್ವಜ್ಞನೇ, ಕಪಿಲನೂ ಸರ್ವಜ್ಞನೇ, ಸುಗತನೂ ಸರ್ವಜ್ಞನೇ ಎಂದು ಹೇಳುವದಾದರೆ ಅವರಲ್ಲಿ ಪರಸ್ಪರ ವಿರುದ್ಧವಿಷಯಾವಬೋಧವೆಂಬ ಮತಿಭೇದವಿರುವುದು ಅನುಪಪನ್ನವಾದುದು. ಹೀಗೆ ಆ ಕಣಾದ ಕಪಿಲಾದಿಗಳಲ್ಲಿ ಸರ್ವಜ್ಞತ್ವವೇ ಸಿದ್ಧಿಸುವುದಿಲ್ಲವಾದ್ದರಿಂದ ಮತಿಭೇದವುಳ್ಳ ಕಿಂಚಿಜ್ಞರಾದ ಅವರಿಂದ ರಚಿತಗಳಾದ ಶಾಸ್ತ್ರಗಳಿಗೆ ಸರ್ವಜ್ಞನಾದೋರ್ವ ಶಿವನಿಂದಲೇ ಬೋಧಿಸಲ್ಪಟ್ಟ ಕಾಮಿಕಾದಿ ಶೈವಶಾಸ್ತ್ರಗಳಿಗಿರುವಂತೆ ಸಿದ್ಧಾನ್ತತ್ವವಿರುವುದಿಲ್ಲ. ಆದಕಾರಣವೇ, ಕಿಂಚಿಜ್ಞರೆನಿಸುವ ಕಪಿಲಾದಿಗಳಿಂದ ಪ್ರಣೀತಗಳಾದ ಶಾಸ್ತ್ರಗಳು ಪೂರ್ವಪಕ್ಷರೂಪವಾದವುಗಳೆಂತಲೂ, ಸರ್ವಜ್ಞತ್ವ ಸರ್ವಕರ್ತೃತ್ವವುಳ್ಳ ಶಿವಪ್ರಣೀತಾಗಮವೊಂದವೇ ಸಿದ್ಧಾನ್ತವೆಂತಲೂ ಸಿದ್ಧವಾಗುವುದು.

ಈ ಸಿದ್ಧಾನ್ತವಾದರೋ ಶಕ್ತಿಪಾತಾನಂತರಭಾವಿಯಾದ ದೀಕ್ಷೆಯಿಂದ ಪವಿತ್ರರಾದ ಸತ್ಪುರುಷರಿಂದೇ ಸೇವಿಸಲ್ಪಡುವುದಲ್ಲದೆ, ಪಶುಶಾಸ್ತ್ರ ಮೋಹಿತರಿಗೆ ಇದರಲ್ಲಿ ಶ್ರದ್ಧೆಯೇ ಹುಟ್ಟುವುದಿಲ್ಲ. ಹಾಗೂ, ಪಶು (ಪಾಶಬದ್ಧ) ಜನರಿಂದೆಯಿಂದ ಸಿದ್ಧಾಂತರೂಪ ಶಿವಾಗಮ ಸಮೂಹಕ್ಕೆ ಪ್ರಾಮಾಣ್ಯವ್ಯಾಹತಿಯಾದರೂ ಸಂಭವಿಸುವುದಿಲ್ಲ.

ಆಗಮದ ಪ್ರತಿಯೊಂದು ಪಾದದಲ್ಲಿಯೂ ಒಂದು ಪ್ರಕರಣವು ಮುಗಿದು ಮತ್ತೊಂದು ಪ್ರಕರಣವು ಪ್ರಾರಂಭವಾಗುವಲ್ಲಿ ೫ ತೆರದ ಸಂಬಂಧಗಳ ವಿಚಾರದ ಆವಶ್ಯಕತೆಯಿರುವುದು. ಶ್ರೀಮತ್ಪೌಷ್ಕರದಲ್ಲಿ—

ಅನನ್ತರಂ ಯತ್ಪಟಲಾತ್ಸೂತ್ರಂ ತನ್ತ್ರೇ ಪ್ರವರ್ತತೆ । ವಕ್ತ್ರನ್ಯಸ್ತಸ್ಯ ಸಮ್ಬನ್ಧಃ ಪಂಚಧಾ ಸಮವಸ್ಥಿತಃ ॥ ತನ್ತ್ರವಸ್ತುತ್ರಯಾತ್ಸೂತ್ರಾದ್ವಾಕ್ಯಾತ್ಪ್ರಕರಣಾತ್ತಥಾ । ಪಟಲಾಚ್ಚೇತಿ—

ಎಂದು ನಿರೂಪಿಸಲ್ಪಟ್ಟಿದೆ. (೧) ತಂತ್ರವಸ್ತುವಿನ ಸಂಬಂಧವು. (೨) ಸೂತ್ರಸಂಬಂಧವು (೩) ವಾಕ್ಯಸಂಬಂಧವು. (೪) ಪ್ರಕರಣಸಂಬಂಧವು. (೫) ಪಟಲಸಂಬಂಧವು ಎಂಬುದಾಗಿ ಪಂಚ ಸಂಬಂಧಗಳು. ಅವುಗಳಲ್ಲಿ—ತಂತ್ರ (ಆಗಮ) ಶಾಸ್ತ್ರಗಳಲ್ಲಿ ಅರಿಯಲ್ಪಡುವ ಪತಿ ಮೊದಲಾದ ಪದಾರ್ಥಗಳ ಲಕ್ಷಣ ವಿವೇಚನ ಸಂದರ್ಭವು ತಂತ್ರವಸ್ತುವೆಂದೂ, ಆ ಪದಾರ್ಥಗಳ ಸ್ವರೂಪವನ್ನು ಸೂತ್ರರೂಪವಾಗಿ ನಿರ್ದೇಶಮಾಡುವುದು ಸೂತ್ರವೆಂದೂ, ಅರ್ಥವತ್ತಾದ ವಾಕ್ಯಗಳಿಂದ ನಿರೂಪಿಸುವದು ವಾಕ್ಯಾತ್ಮಕವೆಂದೂ, ಆ ವಾಕ್ಯಗಳು ಆಯಾ ಪಾದಗಳಲ್ಲಿ ಪ್ರಾಸಂಗಿಕವಾಗಿರುವುದು ಪ್ರಾಕರಣಿಕವೆಂದೂ, ಹಿಂದಿನ ಪಟಲದಲ್ಲಿ ಸೂಚಿಸಲ್ಪಟ್ಟುದನ್ನು ಅನುಸರಿಸಿಯೇ ವಿಷಯವನ್ನು ಮುಂದುವರಿಸುವುದು ಪಾಟಲಿಕವೆಂದೂ ಸಂಬಂಧಪಂಚಕದ ಪರಿಯನ್ನು ಅರಿಯತಕ್ಕದ್ದು.

ಈ ಐದುಬಗೆಯ ಸಂಬಂಧಗಳ ಹೇಳಿಕೆಯಿಂದ ಆವ ಪ್ರಯೋಜನವು ಎಂದರೆ; ಪ್ರತಿಯೊಂದು ಆಗಮಶಾಖೆಯಲ್ಲಿರುವ ಪಟಲಗಳು ಪರಮೇಶ್ವರ ಪ್ರಣೀತವಾದವುಗಳೆಂಬುದನ್ನು ಅರಿತುಕೊಂಡು ಅವುಗಳಲ್ಲಿ ಶ್ರದ್ಧಾಪ್ರಾಮಾಣ್ಯಬುದ್ಧಿಯು ನೆಲೆಗೊಳ್ಳುವುದೇ ಪ್ರಯೋಜನವು.

ಶ್ರುತಿ ಸ್ಮೃತಿಗಳಲ್ಲಿ ಶ್ರುತಿಯು ಪ್ರಬಲಪ್ರಮಾಣವೆಂದೂ ಸ್ಮೃತಿಯು ದುರ್ಬಲ ಪ್ರಮಾಣವೆಂದೂ ಹೇಳುವುದುಂಟು. ಸ್ಮೃತಿಗಳು ಶ್ರುತ್ಯರ್ಥಪರೂಪಕಗಳೇ ಆಗಿದ್ದರೂ ಪುರುಷಪ್ರಣೀತಗಳಾದ ಅವುಗಳಲ್ಲಿ ಶ್ರುತಿಗಳಂತೆ ಸ್ವತಃ ಪ್ರಮಾಣತ್ವವಿರುವುದಿಲ್ಲ. ಸ್ಮೃತಿಕಾರರಾದ ಮನ್ವಾದಿಗಳು ಇತರ ಸಾಮಾನ್ಯಜೀವರ ದೃಷ್ಟಿಯಿಂದ ಸರ್ವಜ್ಞರೆನಿಸಿಕೊಂಡರೂ ಆ ಸರ್ವಜ್ಞತ್ವವು ಸರ್ವಾರ್ಥಪ್ರಕಾಶಕವಾದುದಲ್ಲ; ಏಕೆಂದರೆ—ಅವರ ಜ್ಞಾನವು ವ್ಯಂಜಕಸಾಪೇಕ್ಷತ್ವದಿಂದ ವಸ್ತುವಿನ ಏಕದೇಶವನ್ನು ವಿಷಯ ಮಾಡುವುದು; ಪರಮೇಶ್ವರನಾದರೋ ಅನಾದಿ ನಿತ್ಯ ಸರ್ವಜ್ಞನು; ಅವನಿಂದ ಸ್ವತಂತ್ರವಾಗಿ ನಿರೂಪಿಸಲ್ಪಟ್ಟ ಸಿದ್ಧಾಂತರೂಪ ಶ್ರುತಿಯಾದರೋ ಸ್ಮೃತಿಗಳಿಗಿಂತಲೂ ಪ್ರಬಲಪ್ರಮಾಣಭೂತವಾಗಿದೆ. ಈ ರೀತಿಯಾಗಿ ಅಶೇಷಾರ್ಥಗಳನ್ನು ವಿಶದವಾಗಿ ಪ್ರತಿಪಾದಿಸತಕ್ಕ ಅಪೌರುಷೇಯಗಳಾದ ಶಿವಶಾಸ್ತ್ರಗಳ ಶ್ರವಣಮನನಾದಿಗಳಲ್ಲಿ ಆಸಕ್ತರಾದ ಸಿದ್ಧಾಂತಿಗಳು ಸ್ಮೃತಿಶಾಸ್ತ್ರಗಳ ಮೇಲೆ ಕೈಯೂರಬೇಕಾದವರಲ್ಲವೆಂಬುದು ಸಾಹಜಿಕವೇ ಆದೆ.

ಶ್ರುತಿಗೆ ಸಿದ್ಧತ್ವವಿದ್ದಹಾಗೆ ಸ್ಮೃತ್ಯಾದಿಗಳಿಗಿರುವುದಿಲ್ಲವಾದರೂ, ವೈದಿಕೀಶ್ರುತಿಗೆ ಸರ್ವಾರ್ಥಾವಭಾಸಕತ್ವವು (ಸರ್ವ ವಿಷಯಗಳ ಗೋಚರತ್ವವು) ಸಹಜಸಿದ್ಧವಾಗಿರುತ್ತಿರಲು, ತಾಂತ್ರಿಕೀ (ಸಿದ್ಧಾಂತ) ಶ್ರುತಿಯು ಆವಶ್ಯಕತೆಯೇನು? ಎಂದರೆ ತಾಂತ್ರಿಕೀ ಶ್ರುತಿಯಂತೆ ವೈದಿಕೀ ಶ್ರುತಿಯಾದರೂ ಈಶ್ವರಪ್ರಣೀತವಾದುದರಿಂದೇ ಅದಕ್ಕೆ ಸರ್ವಾರ್ಥಾವಭಾಸಕತ್ವವು ಸಹಜಸಿದ್ಧವಾಗಿರುವುದೆಂಬುದು ಸರ್ವಸಮ್ಮತವು. ಆದರೆ ವೈದಿಕೀ ಶ್ರುತಿವಾಣಿಯು ಅತಿ ಗೂಢಾರ್ಥವುಳ್ಳದ್ದಾಗಿರುವುದರಿಂದ ಅದು ಕೆಲವೆಡೆ ನಾನಾ ವಾದಿಗಳ ಸಂಶಯಗಳಿಗಾಸ್ಪದವಾಗಿರುವುದು. ಸಿದ್ಧಾಂತಶ್ರುತಿಯಾದರೋ ವೈದಿಕೀಶ್ರುತಿಗೆ ವಿರೋಧವಲ್ಲದ ಅರ್ಥವನ್ನೇ ಸ್ವತಂತ್ರವಾಗಿ ವಿವರಿಸುವುದು.

ಹಾಗಾದರೆ ವೈದಿಕೀ ಶ್ರುತಿಗೂ ತಾಂತ್ರಿಕೀ ಶ್ರುತಿಗೂ ಪರಸ್ಪರ ಭೇದವೇನಿದೆ? ಎಂದರೆ ವೇದದಲ್ಲಿ ಯಾವ ವಸ್ತುವು ಶುದ್ಧಾಶುದ್ಧ ಜನಸಾಧಾರಣ್ಯದಿಂದ ವ್ಯಂಗ್ಯವಾಗಿ ಪ್ರತಿಪಾದಿಸಲ್ಪಡುತ್ತದೆಯೋ ಅದುವೇ ಶುದ್ಧೈಕವಿಷಯವಾದ ಸಿದ್ಧಾಂತದಲ್ಲಿ ಸ್ಪಷ್ಟವಾಗಿ ಉಪದೇಶಿಸಲ್ಪಡುತ್ತದೆ; ಇಷ್ಟೇ ಅವೆರಡರಲ್ಲಿರುವ ಭೇದವು.

ಸಿದ್ಧಾಂತಿಗಳಿಗೆ ತಾಂತ್ರಿಕೀ ಶ್ರುತಿಯಂತೆ ವೈದಿಕೀ ಶ್ರುತಿಯಾದರೂ ಸೇವ್ಯವಾಗಿರುವುದೇ? ಎಂದರೆ; ಓಹೋ! ಸಿದ್ಧಾಂತಿಗಳಿಂದ ವೈದಿಕೀ ಶ್ರುತಿಯು(ಋಗಾದಿ ವೇದವಾಙ್ಮಯವು) ಅವಶ್ಯವಾಗಿ ಪ್ರಮಾಣತ್ವೇನ ಪರಿಗ್ರಹಿಸಲ್ಪಡುತ್ತದೆ. **ಸಿದ್ಧಗುರುವಿನ** ಶಿಷ್ಯನಾದ **ಸೂರ್ಯಭಟ್ಟ**ನು **ಶೈವಸಿದ್ಧಾನ್ತಪರಿಭಾಷೆ**ಯ ಆರನೆಯ ಪರಿಚ್ಛೇದದಲ್ಲಿ—"**ನಹಿ ವೇದಾಗಮಯೋರತ್ಯಂತ ವಿರೋಧಃ । ಪರಕರ್ತೃಕತ್ವಾವಿಶೇಷಾತ್ ॥**" ಎಂದು ಹೇಳುವ ಮೇರೆಗೆ, ವೇದಾಗಮಗಳ ಕರ್ತೃವು ಒಬ್ಬನೇ ಆದ್ದರಿಂದ ಅವೆರಡರಲ್ಲಿ ಪರಸ್ಪರ ವಿರೋಧಭಾವವಿಲ್ಲ.

ಕೆಲವರು ಶಿವಾಗಮಗಳಲ್ಲಿ ವರ್ಣಾಶ್ರಮಗಳ ಆಚಾರಕ್ರಮವು ಬೋಧಿಸಲ್ಪಡುವುದಿಲ್ಲವೆಂದು ಹೇಳುವರು. ವೇದವಿಹಿತಗಳಾದ ವರ್ಣಾಶ್ರಮಗಳ ಆಚಾರಕ್ರಮವು ಶಿವಾಗಮಗಳಲ್ಲಿ ವಿಧಿಸಲ್ಪಡದಿದ್ದ ಪಕ್ಷದಲ್ಲಿ—

ತಥಾಃತಿಕ್ರಾನ್ತವೇದೋಕ್ತ ಮರ್ಯಾದವ್ಯವಹಾರಿಣಾಮ್ ।
ಸಂವಾದಿಷ್ವಪಿ ವಾಕ್ಯೇಷು ನೇಷ್ಯತೆ ಮಾನಹೇತುತಾ ॥

ಎಂದು ಭಟ್ಟನೂ,

ಯಾ ವೇದಬಾಹ್ಯಾಃ ಸ್ಮೃತಯೋಯಾಶ್ಚ ಕಾಶ್ಚಿತ್ಕುದೃಷ್ಟಯಃ ।
ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋಭೂತಾ ಹಿತಾಃ ಸ್ಮೃತಾಃ ॥

ಎಂದು ಮನುವೂ ಹೇಳುವಮೇರೆಗೆ ಶಿವಾಗಮಗಳಿಗೆ ಕುತಂತ್ರಗಳೆಂಬ ದೋಷಾರೋಪವು ಸಂಘಟಿಸುವ ಮೂಲಕ ಶಿಷ್ಟಜನೋಪಾದೇಯತ್ವವೇ ಸಿದ್ಧಿಸುವುದಿಲ್ಲ; ಎಂದರೆ, ಸಿದ್ಧಾಂತಾನುಯಾಯಿಗಳಲ್ಲಿ ವರ್ಣಾಶ್ರಮಾಚಾರಕ್ರಮವಿಲ್ಲವೆಂದು ಹೇಳುವಾತನು ವೇದಾಗಮಬಾಹ್ಯನಾದ ಪಾಷಂಡಿಯೇ ಸರಿ! ವೇದಗಳನ್ನೂ ಸದಾಗಮಗಳನ್ನೂ ಒಪ್ಪುವಾತನು ನತ್ಪ್ರತಿಪಾದ್ಯಗಳಾದ ವರ್ಣಾಶ್ರಮಾಚಾರಗಳನ್ನು ಎಂದೂ ಉಲ್ಲಂಘಿಸನು; ವೈದಿಕೀ ಶ್ರುತಿಯು ವರ್ಣಾಶ್ರಮಗಳ ಆಚಾರಕ್ರಮಗಳನ್ನು ವಿಧಿಸುವಂತೆ ತಾಂತ್ರಿಕೀ ಶ್ರುತಿಯೆನಿಸುವ ಸಿದ್ಧಾಂತಾಗಮವೊಂದವೂ ವಿಧಿಸುವುದು. ಶ್ರೀ ಮೃಗೇಂದ್ರಾಗಮದ ವಿದ್ಯಾಪಾದದ ಆರಂಭಶ್ಲೋಕದ ವೃತ್ತಿಯ ದೀಪಿಕೆಯಲ್ಲಿ **ಅಘೋರಶಿವಾಚಾರ್ಯ**ರಿಂದ ಉದ್ಧೃತವಾದ—

ಇತಿವರ್ಣಾಶ್ರಮಾಚಾರಾನ್ ಮನಸಾಪಿ ನಲಂಘಯೇತ್ । ಯೋ ಯಸ್ಮಿನ್ನಾಶ್ರಮೇತಿಷ್ಠನ್ ಪ್ರಾಪ್ತೋದೀಕ್ಷಾಂ ಶಿವಾತ್ಮಿಕಾಮ್ ॥ ಸ ತಸ್ಮಿನ್ನೇವ ಸನ್ತಿಷ್ಠೇತ್ ಶಿವಧರ್ಮಂ ಚ ಪಾಲಯೇತ್ ।

ಎಂಬ ಶ್ರೀಮದ್ಭಾರ್ಗವ (ಭಾರ್ಗಶಿಖೆಯೆಂಬ ಆಗಮಶಾಖೆಯ) ವಾಕ್ಯಾನುಸಾರವಾಗಿ ಶಿವಾಗಮಗಳಲ್ಲಿ ವರ್ಣಾಶ್ರಮವಾಚಾರಕ್ರಮವು ಬೋಧಿಸಲ್ಪಡುವುದೆಂದೇ ಸಿದ್ಧವಾಗುವುದು. ಹಾಗೂ ದಿವ್ಯಾಗಮರಹಸ್ಯಾರ್ಥಬೋಧಕರಲ್ಲಿ ಮುಂದಾಳುಗಳಾದ **ಶ್ರೀ ಸದ್ಯೋಜ್ಯೋತಿ ಶಿವಾಚಾರ್ಯ**ರು **ಮೋಕ್ಷಕಾರಿಕೆ**ಯಲ್ಲಿ—

ನ ಚ ಸ್ವಗೋಚರೇತಾಸಾಂ ಬಾಧಕೇತತ್ಪ್ರಮಾಣವತ್ । ತಾಸು ವರ್ಣಾಶ್ರಮಾಚಾರಾನಭ್ಯನುಜ್ಞಾತವಚ್ಚ ತತ್ ॥೧೪೫॥ ನ ಚಾನ್ಯೇನ ಪ್ರಮಾಣೇನ ಸಂರುದ್ಧಸ್ತಸ್ಯ ಗೋಚರಃ । ಶ್ರೋತ್ರಿಯೈರಪ್ಯತೋ ಗ್ರಾಹ್ಯಂ ತತ್ಫಲಾಧಿಕಸಾಧನಮ್ ॥೧೪೬॥

ಎಂಬೀ ವಾಕ್ಯಗಳಿಂದ ವೈದಿಕೀ ಶ್ರುತಿಗಳಲ್ಲಿ ವರ್ಣಾಶ್ರಮಾಚಾರಕ್ರಮವು ವಿಧಿಸಲ್ಪಡುವಂತೆ ತಾಂತ್ರಿಕೀ ಶ್ರುತಿಗಳಲ್ಲಿಯೂ ವರ್ಣಾಶ್ರಮಾಚಾರದ ಕಟ್ಟಲೆಯಿರುವುದಾದಕಾರಣ, ವೇದಗಳಂತೆ ಆಗಮಗಳಾದರೂ ಅಬಾಧಿತಪ್ರಮಾಣರೂಪಗಳಾಗಿರುವುದರಿಂದ ಶಿವಾಗಮ ಸಮುದಾಯರೂಪಸಿದ್ಧಾಂತಶಾಸ್ತ್ರವು ಶ್ರೋತ್ರಿಯರಿಂದ ಗ್ರಹಿಸಲ್ಪಡತಕ್ಕದ್ದಾಗಿರುವುದೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಕಣ್ಣುಗಳು ಎರಡಿದ್ದರೂ ನೋಟವು ಮಾತ್ರ ಒಂದೇ ಅಲ್ಲವೇ? ವೇದ ಮತ್ತು ಆಗಮ ಎಂಬ ವಾಙ್ಮಯಗಳೆರಡಿದ್ದರೂ ಅವುಗಳಲ್ಲಿಯ ಈಶ್ವರಪ್ರಣೀತಜ್ಞಾನವು ಒಂದೇ ಆಗಿರುವುದರಿಂದ ಶಿಷ್ಟರು ವೇದದಂತೆ ಆಗಮವನ್ನಾದರೂ ಪರಮಪ್ರಮಾಣತ್ವೇನ ಪರಿಗ್ರಹಿಸುವರು; ಆದು ಕಾರಣವೇ ಪ್ರಾಚೀನಾಚಾರ್ಯರು ಆಸ್ತಿಕರಿಗೆ ವೇದಗಳಲ್ಲಿಯೂ ದಿವ್ಯಾಗಮಗಳಲ್ಲಿಯೂ ಸಮಾನವಾದ ಪ್ರಮಾಣಬುದ್ಧಿಯನ್ನೂ ಆದರ ಭಾವವನ್ನೂ ನೆಲೆಗೊಳಿಸುವ ಉದ್ದೇಶದಿಂದ ಆ ವಿಷಯವಾಗಿ ತಾವು ಶಿಷ್ಯರಿಗೆ ಸಾಕ್ಷಾತ್ತಾಗಿ ಬೋಧಿಸುವ ಪ್ರಸಂಗದಲ್ಲಿಯೂ ತಮ್ಮಿಂದ ರಚಿತಗಳಾದ ಉದ್ಗ್ರಂಥಗಳಲ್ಲಿಯೂ ಘಂಟಾಘೋಷವಾಗಿ ಹೇಳಿದ್ದಾರೆ: ಶ್ರೀ ರೇಣುಕಭಗವತ್ಪಾದಾಚಾರ್ಯರು ಕಲಶಾಜ್ಜನನ್ನು ಕುರಿತು—

ವೇದಧರ್ಮಾಭಿಧಾಯಿತ್ವಾತ್ ಸಿದ್ಧಾನ್ತಾಖ್ಯಃ ಶಿವಾಗಮಃ ।
ವೇದಬಾಹ್ಯವಿರೋಧಿತ್ವಾದ್ವೇದ ಸಮ್ಮತ ಉಚ್ಯತೆ ॥

ಎಂದು ನಿರೂಪಿಸಿದ್ದಾರೆ. ಹರದತ್ತಾಚಾರ್ಯನು:—

ವೇದಃ ಪ್ರಮಾಣಮಿತಿ ಸಂಗಿರಮಾಣಏವ ।
ದಿವ್ಯಂ ತವಾಗಮಮುಪೈತಿಜನಃ ಪ್ರಮಾಣಮ್ ॥

ಎಲೈ ಪರಶಿವನೇ! ವೇದವು ಪ್ರಮಾಣವೆಂದು ಹೇಳುವವರು ನಿನ್ನಿಂದ ಸುಸ್ಪಷ್ಟವಾಗಿ ಬೋಧಿಸಲ್ಪಟ್ಟ ದಿವ್ಯಾಗಮವನ್ನಾದರೂ ವೇದದಂತೇ ಸ್ವತಃ ಪ್ರಮಾಣಭೂತವಾದುದನ್ನಾಗಿ ತಿಳಿಯುತ್ತಾರೆ. ಎಂದು ಹೇಳಿದ್ದಾನೆ.

ಶಿವತತ್ವವಿವೇಕದಲ್ಲಿ (ಪುಟ೧೦೯) :—**ವೇದಾರ್ಥಸಾರಸಂಗ್ರಹಾತ್ಮಕಾನಾಂ ಕ್ವಚಿದಪಿ ದೋಷ ಶಂಕಾಕಲಂಕರಹಿತಾನಾಂ ಶೈವಾಗಮಾನಾಮೇವ ಸರ್ವಾಗಮೇಭ್ಯೋ ಬಲವತ್ತ್ವಮವಸ್ಥಿತೇಃ**'—ವೇದಗಳಲ್ಲಿರುವ (ಮುಖ್ಯ) ವಾದ ಅರ್ಥವೆಂಬುದೇನುಂಟೋ ಅದನ್ನೇ ಸಂಕ್ಷೇಪವಾಗಿಯೂ ಸುಸ್ಪಷ್ಟವಾಗಿಯೂ ಹೇಳತಕ್ಕವುಗಳೂ, ಸ್ವಲ್ಪವಾದರೂ ದೋಷವಿಲ್ಲದವುಗಳೂ, ಯಾವ ವಿಧವಾದ ಸಂಶಯಕ್ಕೂ ಆಸ್ಪದವಲ್ಲದವುಗಳೂ, ಪವಿತ್ರಗಳೂ ಆದ ಶೈವಾಗಮಗಳಿಗೆ ಇತರಶಾಸ್ತ್ರಾದ್ಯಾಗಮಗಳಿಗಿಂತಲೂ ಬಲವತ್ತರವಾದ ಪ್ರಾಮಾಣ್ಯವಿದೆ ಎಂದು ಅಪ್ಪಯ್ಯದೀಕ್ಷಿತನು ಪ್ರಾಕೃತರನ್ನು ಕಣ್ತೆರೆವಂತೆ ಕೂಗಿ ಎಚ್ಚರಿಸಿದ್ದಾನೆ.

ಶಂಕರಾಚಾರ್ಯರು ಗಾಯತ್ರೀ ಪುರಶ್ಚರಣಪದ್ಧತಿಯೆಂಬ ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಪುರಶ್ಚರ್ಯೆಗೆ ಮುಖ್ಯವಾಗಿಬೇಕಾದ ಪಂಚಾಂಗಗಳನ್ನು ನಿರೂಪಿಸುವಾಗ :—

ಜಪಾರ್ಚಾ ಪೂರ್ವಕೋಹೋಮಸ್ತರ್ಪಣಂ ಚಾಭಿಷೇಚನಮ್ । ಭೂದೇವಭೋಜನಂ ಚೈವಂ ಪ್ರಕಾರೈಷಾ ಪುರಸ್ಕ್ರಿಯಾ ॥ ಇತಿ ಪಂಚಾಂಗತಃಸಿದ್ಧಿಂ ಮನ್ತ್ರೀ ಶೀಘ್ರಮವಾಪ್ನುಯಾತ್। ತೇಜಸ್ವೀ ಬ್ರಹ್ಮವರ್ಚಸ್ವೀ ನಿಗ್ರಹಾನುಗ್ರಹಕ್ಷಮಃ ॥ ಭವೇದಚಿರಕಾಲೇನ ಸತ್ಯಂ ಜಾನೀಹಿ ಪಾರ್ವತಿ ॥ ಇತೀಶ್ವರವಾಕ್ಯಾತ್ ॥

ಎಂದು ಶಿವಾಗಮವಾಕ್ಯವನ್ನು ಉಲ್ಲೇಖಿಸಿದ್ದಾರೆ. ಮತ್ತು ಗ್ರಂಥದ ಉಪಸಂಹಾರದಲ್ಲಿ—'**ಪತ್ಸರಾದರ್ವಾಕ್ ಸಿದ್ಧಿರ್ಜಾಯತೇ, ತದುಕ್ತಂ ಶಿವಶಾಸನೇ**' ಎಂದು ಮುಂದೆ ಶಿವಾಗಮವಚನಗಳನ್ನು ಎತ್ತಿ ಬರೆದಿದ್ದಾರೆ.

ಒಟ್ಟಿನಮೇಲೆ ಸಂಧ್ಯಾ-ಗಾಯತ್ರೀಜಪ-ಶಿವಲಿಂಗಪೂಜೆ ಮುಂತಾದ ವಿಧಿಗಳ ಅನುಷ್ಠಾನಕ್ರಮವು ಶಿವಾಗಮಗಳಿಂದೇ ಪೂರ್ತಿಯನ್ನು ಹೊಂದುವುದರಿಂದ ಪ್ರಾಕೃತ ಹಾಗೂ ಅಪ್ರಾಕೃತರೆಂಬ ಎಲ್ಲ ದ್ವಿಜರಿಗೂ ಶಿವಾಗಮಗಳು ಶಿರಸಾವಂದ್ಯಗಳಾಗಿವೆ.

ಕೇವಲ ಕ್ರಿಯೆ ಚರ್ಯೆಗಳ ಅಪೇಕ್ಷೆಯಿಂದೇ ಶಿವಾಗಮಗಳು ಗ್ರಾಹ್ಯಗಳಾಗಿವೆಯೆಂದಲ್ಲ; ಯೋಗ ಜ್ಞಾನಗಳ ತಿಳುವಳಿಕೆಗಾಗಿಯೂ ಅವುಗಳ ಪಠನ ಶ್ರವಣಾದಿಗಳ ಆವಶ್ಯಕತೆಯುಂಟು.

ಲಡ್ಡು ಜಲೇಬಿ ಮೊದಲಾದ ಬೇರೆಬೇರೆ ಭಕ್ಷ್ಯಪದಾರ್ಥಗಳು ಬಲು ರುಚಿಕಟ್ಟಾಗಿರುವುದರಿಂದ, ಅವುಗಳ ಹೆಸರು ಕೇಳಿದ ಮಾತ್ರದಿಂದೇ ಬಹುಜನರ ಬಾಯಲ್ಲಿ ಜುಳು ಜುಳು ನೀರು ಬರುವುದುಂಟು; ಆ ಪದಾರ್ಥಗಳಾದರೋ ಸಕ್ಕರೆಯ ಕಣಗಳಿಂದ ಕೂಡಿರುವುದರಿಂದೇ ಹಾಗೆ ಸಿಹಿಯಾಗಿರುವುವೆಂಬುದನ್ನು ಯಾರು ಅರಿಯರು? ಹಾಗೇ ಆತ್ಮರ ಅಭ್ಯುದಯ ನಿಃಶ್ರೇಯಸ್ಸುಗಳಿಗೆ ಮುಖ್ಯಸಾಧನಗಳಾದ ಧಾರ್ಮಿಕವಿಚಾರಗಳನ್ನೊಳಕೊಂಡ ಸ್ಮೃತಿಇತಿಹಾಸಾದಿಗ್ರಂಥಗಳೆಲ್ಲವೂ ಶಿವಾಗಮಗಳ ಅರ್ಥಾನುವಾದ ವಾಕ್ಯಗಳಿಂದ ತುಂಬಿರುವುದರಿಂದೇ ಅವು ಸರ್ವೋಪಾದೇಯಗಳಾಗಿರುವುವೆಂದು ಹೇಳುವುದೊಂದಚ್ಚರಿಯಲ್ಲ.

(ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪದವೀಪ್ರದಾನಸಮಾರಂಭ.

ರಾಯಚೂರು ಜಿಲ್ಲಾ ಲಿಂಗಸೂಗೂರು ತಾಲೂಕು ಮೈಕ್ ಸಂಸ್ಥಾನ ಮೊದಕಿನಹಾಳಿಗೆ ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಪರಿವಾರಸಮೇತವಾಗಿ ದಯಮಾಡಿಸಿರುವ ವಿಷಯವು ಸುಪ್ರಸಿದ್ಧವಷ್ಟೆ? ಮಹಾಸ್ವಾಮಿಗಳವರು ದಯಮಾಡಿಸಿದ ಬಳಿಕ-ಗ್ರಾಮದ ಪ್ರಮುಖರಾದ ರಾಜಾ ಅಮರೇಶ್ವರರಾವ್ ಬಹದ್ದೂರ್ ನಾಡಗೌಡರು ಇಮ್ಮಡಿ ಇವರ ಪ್ರಜೆಗಳು ಜಗದ್ಗುರುಗಳವರ ಸೇವೆಯಲ್ಲಿ ನಿರತರಾಗಿ ಸಾಹಸಪಟ್ಟು 72 ಬಗೆಯಾದವಳಿ ಸಮೇತವಾಗಿ ಅಷ್ಟದಲ್ಲಿ ಮಹೋತ್ಸವವನ್ನು ಮಾಡಿಸಿ ಸಮಾಜದಲ್ಲಿ ಕೀರ್ತಿಭಾಗಿಗಳಾಗಿರುವ ಸಂಗತಿ ಪ್ರತಿಯೊಬ್ಬರಿಗೆ ಗೊತ್ತಿರುವದಾಗಿದೆ. ರಾಜಾ ಅಮರೇಶ್ವರರಾವ್ ಬಹದ್ದೂರವರು ಜಗದ್ಗುರುಗಳ ದರ್ಶನಕ್ಕೆ ಬಾಂದೋಡಿ ಮಹಾರಾಜರನ್ನು ಬರಮಾಡಿಕೊಂಡರು. ತಾ|| 14-12-29 ನೆಯ ದಿವಸ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಭೆಯು ನೆರವೇರಿತು. ಸಭೆಗೆ ಬಾಂದೋಡಿ ಮಹಾರಾಜರು ಸಹ ಆಗಮಿಸಿದ್ದರು. ಆ ಸಮಯದಲ್ಲಿ ಸಂಸ್ಥಾನದ ಪಟ್ಟಶಿಷ್ಯರಾದ ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದಮಹಾಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರು ಮತ್ತು ವೇ|| ಗುರಪ್ಪಾಜಿ ಪುರಗಿರಿ ಹಿರೇಮಠ ಸಿದ್ಧಲಿಂಗಯ್ಯ ವಕೀಲ ಸಾಹೇಬರು ಗುರುಭಕ್ತಿಯ ವಿಷಯದಲ್ಲಿ ವ್ಯಾಖ್ಯಾನಮಾಡಿದರು. ಅನಂತರ ಚಿಕ್ಕಮಣ್ಣೂರು ಶ್ರೀಗಳು ಜಗದ್ಗುರುಗಳವರ ಅಪ್ಪಣೆಯ ಪ್ರಕಾರ ರಾಜಾ ಅಮರೇಶ್ವರರಾವ್ ಬಹದ್ದೂರವರಿಗೆ ಮಾನಪತ್ರವನ್ನೂ ಹಾಗೂ ಸುವರ್ಣಪದಕವನ್ನೂ ಗುಣಕಥನಪೂರ್ವಕವಾಗಿ ಅರ್ಪಿಸಿರುವರು. ಮಾನಪತ್ರದ ಸಾರಾಂಶವು ಈ ಕೆಳಗೆಕೊಟ್ಟಿದೆ.

ಗುಂಡಳ್ಳಿ ಮಲ್ಲಿಕಾರ್ಜುನಪ್ಪನವರು. ಸಂಸ್ಥಾನ ಮೊದಕಿನಹಾಳ.

ಶ್ರೀ ಹಿಮವತ್ಕೇದಾರೈಕೋರಾಮ ವೈರಾಗ್ಯಸಿಂಹಾಸನಾಧೀಶ್ವರ ತ್ರಿಸಹಸ್ರಜಂಗಮಾಧ್ಯಕ್ಷ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಪ್ರಾಚೀನಸಾರ್ವಭೌಮ ಪರಂಪರಾಗತ ರಾಮಲೇಶ್ವರಪಾಠಮಠ ಜಗದ್ಗುರು ಪಟ್ಟಾಧ್ಯಕ್ಷ ಶ್ರೀ ೧೦೮ ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿನಾಂ ಸನ್ನಿಧಾನೇನ

ಶ್ರೀಮಡಾಷ್ಪದೀಯ ಕೃಪಾಪಯಃಪಾರಾವಾರರಾಕಾಸುಧಾಕರರಾಯನೂಸ, ರಾಯಚೂರು ಜಿಲ್ಲಾ ಲಿಂಗಸೂಗೂರು ತಾಲೂಕು ಸಂಸ್ಥಾನ್ ಮೊದಕಿನಹಾಳ ಗ್ರಾಮನಿವಾಸಿಗಳಾದ ರಾಜಾ ಅಮರೇಶ್ವರರಾವ್ ಬಹದ್ದೂರ್ ನಾಡಗೌಡರು ಇವರಿಗೆ ಕೃತಾನೇಕ ಜಯಾಶೀರ್ವಾದ ಪೂರ್ವಕ ಅಪ್ಪಣೆಕೊಡಿಸುವದೇನಂದರೆ—ನಮ್ಮ ವೀರಶೈವಜನಾಂಗದಲ್ಲಿ ಅನೇಕ ಚಿಕ್ಕ ದೊಡ್ಡ ಸಂಸ್ಥಾನಿಕರು ಇದ್ದಾಗ್ಯೂ, ಅವರಲ್ಲಿ ಕೆಲವರು ಮಾತ್ರ ಧಾರ್ಮಿಕಕಾರ್ಯಗಳಲ್ಲಿ ತೊಡಗಿರುವರು. ಉಳಿದವರು ಮಾತ್ರ ಲೌಕಿಕಾನಂದದಲ್ಲಿ ಮಗ್ನರಾಗಿ ಧಾರ್ಮಿಕಕಾರ್ಯಗಳನ್ನು ತ್ಯಜಿಸಿರುವರು. ಆದರೆ ನೀವು ಸಂಸ್ಥಾನಿಕರಾಗಿದ್ದರೂ ಕೂಡ ಜಲದೊಳಗಿನ ಕಮಲದಂತೆ ಸಾಂಸಾರಿಕಸುಖವನ್ನು ಅನುಭವಿಸುತ್ತ ಧರ್ಮಕಾರ್ಯಗಳ ಕಡೆಗೆ ಇರುವ ನಿಮ್ಮ ಚಿತ್ತವೃತ್ತಿಯನ್ನು ನೋಡಿ ಸಂತೋಷಗೊಂಡು ಈ ದಿನ ಶ್ರೀ ಮಹಾಸನ್ನಿಧಿಯಿಂದ ನಿಮಗೆ **ಗುರುಭಕ್ತಿಧುರೀಣ** ಎಂಬ ಪದವಿಯೊಡಗೂಡಿತ ಸುವರ್ಣಪದಕವು ಅನುಗ್ರಹಿಸಲ್ಪಟ್ಟಿದೆ. ನೀವು ಮುಂದೆ ಇದರಂತೆ ಧರ್ಮಕಾರ್ಯಗಳಲ್ಲಿ ನಿರತರಾಗಿ ಇಹಪರಸುಖವನ್ನು ಅನುಭವಿಸಿರೆಂಬುದಾಗಿ ಆಶೀರ್ವದಿಸಿರುವದಾಗಿದೆ.

ಮುಕ್ಕಾಮ್—ಮೊದಕಿನಹಾಳ.
ತಾಲೂಕ—ಲಿಂಗಸೂಗೂರು.
ತಾರೀಖು ೧೪-೧೨-೨೯. ಇತ್ಯಾಶೀಃ.

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ದೀಕ್ಷಾಸಮಾರಂಭ.

ಮೂಕನಹಳ್ಳಿ ಗ್ರಾಮದಲ್ಲಿ ಬ್ಯಾಲದಕೆರೆ ಮಠದ ರಾಚಪ್ಪಯ್ಯ ಎಂಬುವರು ಧರ್ಮಾಭಿಮಾನಿಗಳಾದ ಈ ಪ್ರಾಂತದ ವೀರಶೈವ ಬಂಧುಗಳ ಧರ್ಮಸಹಾಯದಿಂದಲೂ ತಮ್ಮ ಸ್ವಂತದ್ರವ್ಯಸಹಾಯದಿಂದಲೂ 60—70 ಮಾಹೇಶ್ವರ ವಟುಗಳಿಗೆ ಶಿವದೀಕ್ಷೆಯನ್ನು ನೆರವೇರಿಸಲು, ಇದೇ ಶುಕ್ಲನಾಮ ಸಂವತ್ಸರದ ಮಾರ್ಗಶಿರ ಬಹುಳ ೩ ನೆ ಗುರುವಾರ (ತಾ|| 19-12-29) ನೆ ದಿವಸ ಸ್ವಂತ ಗೃಹದಲ್ಲಿ ಅಲಂಕರಿಸಲ್ಪಟ್ಟ ಮಂಟಪದಲ್ಲಿ ಶ್ರೀಮೂಕನಹಳ್ಳಿ ಮಠ ಮತ್ತು ಕಾವಡಿಕೆರೆ ಪಂಚೆ ಈ ಮಠದ ಶ್ರೀಗಳವರ ಸಂನಿಧಿಯಲ್ಲಿ ವೇದಮೂರ್ತಿಗಳು ಬಿ. ಯಮ್. ಮಹದೇವಶಾಸ್ತ್ರಿಗಳು ಮತ್ತು ಕೆಂಚಾಪುರದ ಆದಿವಪ್ಪಶಾಸ್ತ್ರಿಗಳವರಿಂದಲೂ ವೇದೋಕ್ತ ಪಂಚಕಲಶಸ್ಥಾಪನಾಪೂರ್ವಕ ವಟುಗಳಿಗೆ ವೀರಶೈವ ದೀಕ್ಷಾಸಂಸ್ಕಾರವು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕಾಲದಲ್ಲಿ ಬಂದ ಇಷ್ಟಮಿತ್ರರು ಮುಂತಾದ ಜನಗಳ ಯೋಗಕ್ಷೇಮ ಮತ್ತು ಸಮಾರಾಧನೆ ಮುಂತಾದ ಕೆಲಸಕಾರ್ಯಗಳನ್ನೆಲ್ಲಾ ಪಡೆಯಲು ಈ ಗ್ರಾಮದ ಮಾಜಿಪಟೇಲ್ ಶಿವಪ್ಪಗೌಡರು ಬೇಗೂರು ಮೂಡಲಗಿರಿಯಪ್ಪನವರು ಈ ಗ್ರಾಮದ ಶೆಟ್ಟರು ಇವರುಗಳು ಮುಂದೆ ನಿಂತು ವಿಚಾರಣೆಯಿಂದ ಮಾಡಿದ ಕಾರ್ಯವು ಸ್ತೋತ್ರಾರ್ಹವಾಗಿತ್ತು. ತಾ|| 21-12-29 ನೆ ದಿವಸ ಮಾಹೇಶ್ವರ ವಟುಗಳು ಮತ್ತು ಅವರ ಪೋಷಕರು ಸಹ ಶ್ರೀ ಸ್ವಾಮಿಗಳವರ ಆಶೀರ್ವಾದವನ್ನು ಹೊಂದಿ ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣಬೆಳೆಸಿದರು. ಈ ಸಮಯದಲ್ಲಿ ಪ್ರಭಾಫೋಟೋಬಗ್ಗೆ ಎರಡು ರೂಪಾಯಿಗಳು ತೆಗೆಯಲ್ಪಟ್ಟವು.

ಬುರಡೇಕಟ್ಟೆ ಶಿವಪ್ಪಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪುತ್ರಸ್ವೀಕಾರಮಹೋತ್ಸವ.

ಶಿವಮೊಗ್ಗ ಡಿ|| ಸೊರಬ ತಾಲೂಕು ಕೋಡಿಹಳ್ಳಿ ಪಟೇಲ್ ಶಿವರುದ್ರಪ್ಪಗೌಡರು ಇದೇ ಶುಕ್ಲನಾಮ ಸಂ|| ಮಾರ್ಗಶಿರ ಬಹುಳ ೧೧ ಗುರುವಾರ (ತಾ. ೨೬-೧೨-೨೯) ನೇ ದಿವಸ ತಮ್ಮ ಮನೆತನದ ವಂಶಾಭಿವೃದ್ಧಿಗೋಸ್ಕರ ಸೊರಬ ತಾಲೂಕು ಜಡೆ ಹೋಬಳಿ ವೀರಶೈವಕ್ಷತ್ರಿಯ ವಂಶೀಕರಾದ ಸಿ. ಎಚ್. ರುದ್ರಗೌಡ ಚೆನ್ನವೀರಪ್ಪಾಜಿ ಒಡೆಯ ಎಸ್. ಎಮ್. ಎಸ್. ಬ್ಯಾಂಡ್ ಹೋಲ್ಡರ್ ಚಗಟೂರುಕರ್ ಎಂಬವರನ್ನು ಅವರ ಮಾತೋಶ್ರೀಯವರಾದ ಲಿಂಗಮ್ಮಾಜಿಯವರು ಅವರ ಮನೆತನಕ್ಕೆ ಸಿ. ಎಚ್. ರುದ್ರಗೌಡರ ಚಿ|| ಸಿ. ಆರ್. ಪ್ರಭುಲಿಂಗ ಒಡೆಯನೆಂಬ ಬಾಲಕನಿರುವದರಿಂದ ಇವರನ್ನು ದತ್ತಕ್ಕೆಕೊಡಲು ಒಪ್ಪಿದ್ದರಿಂದ ಇವರನ್ನು ಕೆ. ಪಿ. ರುದ್ರರಾಜಗೌಡನೆಂಬ ನಾಮಾಂಕಿತದಿಂದ ವೇದೋಕ್ತ ಪಂಚಕಲಶಸ್ಥಾಪನಾಪೂರ್ವಕ ದತ್ತಸ್ವೀಕಾರಮಾಡಿ ಅನ್ನಸಂತರ್ಪಣೆಯನ್ನು ಜರುಗಿಸಿದರು. ಕೆ. ಪಿ. ರುದ್ರರಾಜಗೌಡರು ಈ ಮೊದಲು ಗೌ|| ಪ್ರೈ|| ಸ್ಕೂಲು ಮಾಸ್ತರರಾಗಿ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾರಮೇಲ ತೇರ್ಗಡೆಮಾಡಿಸಿದವರಾಗಿಯೂ ಇರುವದಲ್ಲದೆ ಕೆನಡಾಲ್ ಮೆಡಲ್ ಫೋಲ್ಡಿಂಗ್ ಡ್ರಾಯಿಂಗ್‌ಗಳಲ್ಲಿಯೂ ಹ್ಯಾಂಡ್‌ರೈಟಿಂಗ್‌ನಲ್ಲಿಯೂ ಕುಶಲತೆಯುಳ್ಳವರಾಗಿ ಸರ್ಟಿಫಿಕೇಟುಗಳನ್ನು ಪಡೆದಿರುತ್ತಾರಲ್ಲದೆ, ಪ್ರಜೋಪಕಾರಿಗಳಾಗಿಯೂ ಗುರುಭಕ್ತಿಯುತರಾಗಿಯೂ ಇರುತ್ತಾರೆ. ಇವರು ಪಂಚಾಚಾರ್ಯ ವಾಚನಾಲಯ ಪಂಚಾಚಾರ್ಯ ಭಜನಾಸಂಘಗಳನ್ನು ಸ್ಥಾಪಿಸಿ ಅನೇಕ ದೇಶದಿಗಳ ಅಭಿರುಚಿಯನ್ನು ಜನರಲ್ಲಿ ಹುಟ್ಟಿಸಿ ಸ್ವಮತದ ಗುರುಗಳ ಫೋಟೋಗಳನ್ನು ನಾಮಾವಳಿ ಸ್ತೋತ್ರಾವಳಿ ಮುಂತಾದ ಧರ್ಮಗ್ರಂಥಗಳನ್ನು ಪ್ರಚುರಮಾಡಿದವರಾಗಿರುತ್ತಾರೆ. ಇವರು ಉನ್ನತಸ್ಥಿತಿಗೆ ಬರಲು ಗುರುಕೃಪೆಯೇ ಮುಖ್ಯಕಾರಣವಾಗಿದೆ ಮುಂದಾದರೂ ಇವರು ಇದರಂತೆ ವರ್ತಿಸಿ ಯಶಸ್ವಿಗಳಾಗಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಭಜಿಸುತ್ತೇನಲ್ಲದೆ ಇವರ ಬಳಿಕ ಮನೆತನಕ್ಕೂ ದತ್ತಕನಮನೆತನಕ್ಕೂ ಉತ್ಕರ್ಷವಾಗಲೆಂದು ಆ ಪರಮಾತ್ಮನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಪಾಟೀಲ ಕೆ. ಪಿ. ದೇವಪ್ಪಗೌಡರು.
ಕೋಡಿಹಳ್ಳಿ.

ಪ್ರಸಿದ್ಧ ಪತ್ರಿಕೆ.

ಮಕರಸಂಕ್ರಮಣಪ್ರವೇಶಪುಣ್ಯಕಾಲ.

ಆಸ್ತಿಕಮಹಾಶಯರೇ? ಈ ವರ್ಷ ಮಕರಸಂಕ್ರಮಣ ಪ್ರವೇಶಕಾಲವು ಇದೇ ಪುಷ್ಯ ಶು|| ೧೪ ಚಂದ್ರವಾರ ರಾತ್ರಿ ಇದ್ದು ಮರುದಿವಸ ಅಂದರೆ ಶು|| ೧೫ (ತಾ|| ೧೪ ಜನವರಿ) ಮಂಗಳವಾರ ಉದಯಾದಿ ಸಾಯಂಕಾಲ ೪ ಘಂಟೆಯವರೆಗೆ ಪುಣ್ಯಕಾಲವು ಪ್ರಾಪ್ತವಾಗುವದು. ಈ ಸಮಯದಲ್ಲಿ ತಾವು ಸ್ನಾನಾದಿ ಕರ್ಮವನ್ನು ಆಚರಿಸಬೇಕೆಂದು ಸವಿನಯ ಸೂಚನೆಯು.

ಜ್ಯೋತಿಷ್ಯಾಲಂಕಾರ ವೇ|| ಬ್ರ|| ಶ್ರೀ|| ಸಿದ್ಧಾಂತಿಗಳು,
ಪಂಚವಣ್ಣಗಿ ಬೃಹನ್ಮಠ ಧರ್ಮಪಾಠಶಾಲೆ,
ಪೋ|| ಘಟಪ್ರಭ (ಹೂಲಿ), ಡಿ|| ಬೆಳಗಾವ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜನವರಿ ತಾ॥ ೬ ನೇ ಸೋಮವಾರ

ಧರ್ಮ.

ತಸ್ಮಾದ್ಧರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ |
ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಂ ||

ಪ್ರಪಂಚದಲ್ಲಿ ಮಾನವಜನ್ಮವನ್ನು ಧರಿಸಿದ ಜೀವಾತ್ಮರಿಗೆಲ್ಲ ಧರ್ಮವೇ ಪರಲೋಕಸಾಧನವಾಗಿರುತ್ತದೆಯಲ್ಲದೆ ದ್ರವ್ಯವಾಗಲಿ ಪತ್ನೀಪುತ್ರಾದಿ ಬಂಧುಗಳಾಗಲಿ ಮಿತ್ರರಾಗಲಿ ಯಾರೂ ಸಹಾಯಕರಾಗುವುದಿಲ್ಲ. ಆತ್ಮರು ಈ ದೇಹವನ್ನು ಬಿಟ್ಟುಹೋಗುವ ಸಮಯದಲ್ಲಿ ಯಾರೂ ತಡೆದು ನಿಲ್ಲಿಸಲಾರರು. ಅಲ್ಲದೆ ಜೊತೆಗೆ ಯಾರೂ ಹೋಗಲಾರರು. ಧರ್ಮವು ಹಾಗೂ ಅಧರ್ಮವು ಮಾತ್ರ ಹಿಂಬಾಲಿಸುತ್ತವೆ. ಆತ್ಮರಲ್ಲಿ ಧರ್ಮಸಂಬಂಧವೇ ವಿಶೇಷವಾಗಿದ್ದರೆ ಅದು ಆತ್ಮರನ್ನು ಅಮಾರ್ಗದಲ್ಲಿ ಪ್ರವೇಶಮಾಡದಂತೆ ಎಚ್ಚರವಾಗಿದ್ದು ದೇವರ ಸಾನ್ನಿಧ್ಯವನ್ನು ಹೊಂದುವವರೆಗೂ ಸಹಾಯಮಾಡುವದು. ಅಧರ್ಮವೇ ಹೆಚ್ಚಾಗಿದ್ದರೆ ಅದು ಆತ್ಮರನ್ನು ಪಿಶಾಚಿಯಂತೆ ದುರ್ಮಾರ್ಗದಿಂದ ತೆಗೆದುಕೊಂಡುಹೋಗಿ ನರಕಕೂಪಕ್ಕೆ ಬೀಳುವವರೆಗೂ ಹಿಂಬಾಲಿಸಿ ಬರಿಯಾಗುವದು. ಆದ್ದರಿಂದ ಜ್ಞಾನದಿಂದೊಡಗೂಡಿದ ಮಾನವರು ಅಧರ್ಮಕ್ಕೆ ಇಂಬುಗೊಡದೆ ಪ್ರತಿಕ್ಷಣದಲ್ಲಿಯೂ ಸ್ವಲ್ಪಸ್ವಲ್ಪವಾಗಿ ಧರ್ಮಸಂಗ್ರಹವನ್ನು ಮಾಡುತ್ತ ಅಧರ್ಮವನ್ನು ದೂರೀಕರಿಸುತ್ತಿರಬೇಕು. ಮಾನವನು ಧನಸಂಗ್ರಹದಿಂದ "ಧನಿಕ" ಎಂಬ ಹೆಸರನ್ನು ಪಡೆಯುವಂತೆ ಧರ್ಮಸಂಗ್ರಹದಿಂದ "ಧಾರ್ಮಿಕ" ಎಂಬ ಹೆಸರನ್ನು ಪಡೆಯುವನಲ್ಲದೆ ಅವನ ವಿಷಯದಲ್ಲಿ ಧರ್ಮಸ್ವರೂಪನಾದ ಪರಮೇಶ್ವರನೂ ಸಹ ಸಂತುಷ್ಟನಾಗಿ ಇಹಪರಸುಖಗಳನ್ನುಂಟುಮಾಡುವನು. ಈ ವಿಷಮವಾದ ಸಂಸಾರವೆಂಬ ಘೋರಾರಣ್ಯದಲ್ಲಿ ಅಲೆಯುತ್ತಿರುವ ಯಾವ ಜೀವಾತ್ಮರು ದಾರಿಯಲ್ಲಿ ಅಲ್ಪಸ್ವಲ್ಪ "ಧರ್ಮ" ಎಂಬ ಬುತ್ತಿಯನ್ನು ಇಟ್ಟುಕೊಂಡಿರುತ್ತಾರೆಯೋ ಅವರು ಮಾತ್ರ ಅನಾಯಾಸವಾಗಿ ಈತಿಬಾಧೆಗಳೆಂಬ ಪ್ರಕ್ಷುಬ್ಧ ಕ್ರೂರಮೃಗಗಳಿಂದೊಡಗೂಡಿದ ಈ ಭವಾರಣ್ಯವನ್ನು ಸುಖವಾಗಿ ದಾಂಟಿ ಸುಖಾನಂದವೆಂಬ ಅಮೃತಸರೋವರದಲ್ಲಿ ಮಿಂದು ಭವತಾಪದಿಂದ ದೂರರಾಗುವರು. ಇಂಥ ಉತ್ತಮ ಸಾಧನವಾದ ಧರ್ಮವನ್ನು ಬಿಟ್ಟು ಇನ್ನಾವ ಗುಣಗಳನ್ನು ಪಡೆದರೂ ಅವುಗಳಿಂದ ಯಾವ ಪ್ರಯೋಜನವೂ ಆಗುವದಿಲ್ಲವು. ಧರ್ಮದ ಸಂಗಡ ಎಷ್ಟು ಸದ್ಗುಣಗಳಿದ್ದರೂ ಬಂಗಾರಕ್ಕೆ ಕುಂದಣವನ್ನು ಹಾಕಿದಂತೆ ಮತ್ತಿಷ್ಟು ಪ್ರಕಾಶವಾಗುತ್ತದೆ. ಧರ್ಮವನ್ನು ಬಿಟ್ಟು ಮಿಕ್ಕ ಗುಣಗಳನ್ನು ಪಡೆದ ಮಾನವನು ಜೀವನಾಧಾರವಾದ ಆಹಾರಸಾಮಗ್ರಿಯನ್ನೇ ಬಿಟ್ಟು ಮಿಕ್ಕ ಕರಿತುರಂಗಾಯುಧಾದಿ ಸಮಸ್ತ ಪರಿವಾರದೊಡನೆ ಬೇಂಟೆಗಾಗಿ ಕಾಡನ್ನು ಹೊಕ್ಕು ಹಸಿವಿನಿಂದ ಬೆಂದು ಬೆಂಡಾಗಿ ದುಃಖಪಡುವ ಮಹಾರಾಜನಂತೆ ದುಃಖಕ್ಕೀಡಾಗುವನು. ಯಾರ ಆತ್ಮರಲ್ಲಿ ಧರ್ಮವೆಂಬ ಗುಣವು ಹುಟ್ಟುವುದೋ ಅವರು ಸುವಾಸನೆಯುಳ್ಳ ಪುಷ್ಪದಂತೆ ಜೀವಮಾನ್ಯರಾಗುವರು. ಧರ್ಮವು ಧೃತಿ, ಕ್ಷಮಾ, ದಮ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಧೀ, ವಿದ್ಯಾ, ಸತ್ಯ, ಅಕ್ರೋಧ ಎಂದು ಹತ್ತು ಬಗೆಯಾಗಿರುತ್ತದೆ. ಈ ಹತ್ತು ಬಗೆಯಾದ ಧರ್ಮದಲ್ಲಿ ಎಲ್ಲ ಗುಣಗಳು ಅಡಕವಾಗಿವೆ. ಯಾವಾಗಲೂ ಸಂತೋಷದಿಂದಿರುವದೇ ಧೃತಿಯೆನಿಸುತ್ತದೆ. ಯಾರು ಏನು ಕೆಡಕನ್ನು ಮಾಡಿದರೂ ತಾನು ಅದಕ್ಕೆ ಪ್ರತಿಯಾಗಿ ಕೆಡಕು ಮಾಡದೆ ಒಳ್ಳೆಯದನ್ನು ಮಾಡುವುದೇ ಕ್ಷಮೆಯೆನಿಸುತ್ತದೆ. ಮನೋವಿಕಾರವನ್ನುಂಟುಮಾಡುವ ಪರವನಿತಾದಿ ವಸ್ತುಗಳು ತನಗೆ ಅನುಕೂಲವಾಗಿದ್ದರೂ ಅದಕ್ಕೆ ಮನಸ್ಸುಗೊಡದೆ ವಿಕಾರಗೊಳ್ಳದಿರುವುದೇ ದಮವೆನಿಸುವದು. ಕಳ್ಳತನದಿಂದ ಧನಾರ್ಜನ ಮಾಡದೆ ಸುನೀತಿಯಿಂದ ಧನಾರ್ಜನ ಮಾಡುವುದೇ ಅಸ್ತೇಯವೆನಿಸುವುದು. ಶಾಸ್ತ್ರೀಯ ಮಾರ್ಗದಿಂದ ಆಯಾಯ ಕಾಲಂಗಳಲ್ಲಿ ಸ್ನಾನಾದಿಗಳಿಂದ ದೇಹವನ್ನು ಪರಿಶುದ್ಧಗೊಳಿಸಿಕೊಳ್ಳುವುದೇ ಶೌಚವೆನಿಸುತ್ತದೆ. ವಿಷಯಗಳಲ್ಲಿ ಹರಿದಾಡುವ ಕಣ್ಣು ಕಿವಿ ಮೊದಲಾದ ಇಂದ್ರಿಯಗಳನ್ನು ದುರ್ವಿಷಯಂಗಳಿಗೆರಗದಂತೆ ತಡೆಯುವುದೇ ಇಂದ್ರಿಯನಿಗ್ರಹವೆನಿಸುವುದು. ವೇದಶಾಸ್ತ್ರಪುರಾಣಗಳಿಂದ ತತ್ವಜ್ಞಾನವನ್ನು ಪಡೆಯುವದೇ ಧೀ ಯೆನಿಸುವುದು. ಪಾಪಹೇತುವಾದ ಅನೃತವನ್ನಾಡದೆ ನಿಜವನ್ನು ಆಡುತ್ತಿರುವುದೇ ಸತ್ಯವೆನಿಸುವುದು. ಕೋಪ ಹುಟ್ಟುವುದಕ್ಕೆ ತಕ್ಕ ಕಾರಣಸಾಮಗ್ರಿಯಿದ್ದರೂ ಕೋಪಕ್ಕೆ ಅವಕಾಶ ಕೊಡದಿರುವುದೇ ಅಕ್ರೋಧವೆನಿಸುವುದು. ಇಷ್ಟು ಗುಣಗಳು ಯಾವ ಮನುಷ್ಯನ ಹೃದಯಕ್ಷೇತ್ರದಲ್ಲಿ ನೆಲೆಗೊಂಡಿರುವವೋ ಆತನ ಪುಣ್ಯವನ್ನು ಸಹಸ್ರಮುಖವುಳ್ಳ ಆದಿಶೇಷನೂ ಸಹ ವರ್ಣಿಸಲಾರನೆಂದು ಹೇಳಿದರೂ ಅತಿಶಯೋಕ್ತಿಯೆನಿಸದು. ಹತ್ತು ಬಗೆಯಾದ ಧರ್ಮಗಳು ಯಾವ ಆತ್ಮರಿಂದ ಸಂಪಾದಿಸಲ್ಪಟ್ಟಿರುವವೋ ಆ ಆತ್ಮರು ಆಧ್ಯಾತ್ಮಿಕಾದಿ ಬಾಧೆಗಳೊಂದಕ್ಕೂ ಈಡಾಗದೆ ಜಲದಲ್ಲಿದ್ದ ಕಮಲದಂತೆ ನಿರ್ಲಿಪ್ತರಾಗಿದ್ದು ಮುಕ್ತಾತ್ಮರೆನಿಸಿಕೊಳ್ಳುತ್ತಾರೆ.

ಪ್ರಪಂಚದಲ್ಲಿ ಮಹಾರಾಜನು ಎಷ್ಟು ಬಲಶಾಲಿಯಾದರೂ ಆತನ ಆಳ್ವಿಕೆಯು ಸ್ಥಿರವಾಗಬೇಕಾದರೆ ರಾಜ್ಯಾಂಗಗಳೆನಿಸಿದ ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ, ಬಲ ಎಂಬ ಷಡಂಗಗಳು ಸಹಾಯಕ್ಕಾಗಿ ಬೇಕಾಗುವವು. ಹೀಗಿದ್ದರೆ ಶತ್ರುಗಳು ಅವನ ರಾಜ್ಯಕ್ಕೆ ಕಾಲಿಡಲು ಸ್ವಾಧ್ಯವಾಗದೆ ರಾಜ್ಯಭಾರವು ಸುವ್ಯವಸ್ಥೆಯಿಂದ ನಡೆಯುತ್ತ ರಾಜನು ಸುಖವಾಗಿ ಬಾಳುವನು. ಅದರಂತೆ ಈ ದೇಹಪ್ರಪಂಚವನ್ನು ಆಳುವ ಆತ್ಮರಾಜನನ್ನು ಆಕ್ರಮಿಸಲಿಚ್ಛಿಸುವ ಕಾಮಕ್ರೋಧಾದಿ ಅರಿಷಡ್ವರ್ಗವೆಂಬ ಅಂತಃಶತ್ರುಗಳನ್ನು ಹೊರಗಟ್ಟಿ ನಿತ್ಯಸಾಮ್ರಾಜ್ಯಾಧಿಪತ್ಯವನ್ನು ಪಡೆಯಬೇಕಾದರೆ ಧೃತಿ, ಕ್ಷಮಾ ಮೊದಲಾದ ಹತ್ತು ವಿಧ ಧರ್ಮಗಳೇ ಸಹಾಯಕಗಳಾಗಿವೆ. ಬೆಳಕು ಬಂದರೆ ಕತ್ತಲೆಯು ಓಡಿಹೋಗುವುದು ಸ್ವಭಾವವಾದಂತೆ ಆತ್ಮನಲ್ಲಿ ಈ ಹತ್ತು ಬಗೆಯಾದ ಧರ್ಮಗಳಲ್ಲಿ ಕೆಲವು ಧರ್ಮಗಳುದಯವಾದರೂ ಸಹ ಅಧರ್ಮದ ಅಂಕುರವೇ ನಾಶವಾಗುವುದು. ಆದ್ದರಿಂದಲೇ "ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೇ" ಎಂಬ ಸ್ಕಾಂದೋಕ್ತಿಯಂತೆ ಪ್ರಪಂಚದಲ್ಲಿ ಯಾವಾಗ್ಗೆ ಧರ್ಮವು ನಾಶವಾಗಲಿಕ್ಕೆ ಉಪಕ್ರಮವಾಗುವುದೋ ಆಗಲೇ ಪರಮಾತ್ಮನು ಒಂದೊಂದು ಗುರುರೂಪದಿಂದ ಅವತಾರವೆತ್ತಿ ಜನರಲ್ಲಿ ಆವರಿಸಿರುವ ಅಧರ್ಮಾಂಧಕಾರವನ್ನು ತೊಲಗಿಸಿ ಧರ್ಮಪ್ರಭೆಯನ್ನು ಹರಡುವನು. ಇದರಂತೆ ಎಲ್ಲಾ ಮತಗಳಲ್ಲಿ ಒಬ್ಬೊಬ್ಬ ಮೂಲಧರ್ಮಗುರುಗಳು ಅವತರಿಸಿದಂತೆ ವೀರಶೈವಮತದಲ್ಲಿಯೂ ಧರ್ಮಸಂಸ್ಥಾಪನೆಗಾಗಿ ಪ್ರತಿಯುಗದಲ್ಲಿಯೂ ಶಿವಸ್ವರೂಪಿಗಳಾದ ಶ್ರೀ ರೇಣುಕಾದಿಗಣವರ್ಯರು ಭೂಮಿಗವತರಿಸಿ ಸದ್ಧರ್ಮವನ್ನು ನೆಲೆಗೊಳಿಸಿದರು. ಆದ್ದರಿಂದ "ಸತ್ಯಂವದ-ಧರ್ಮಂಚರ" ಇತ್ಯಾದಿ ಮಹಾವಾಕ್ಯಗಳನ್ನು ಬೋಧಿಸುವ ಆಚಾರ್ಯರ ಬೋಧೆಯನ್ನು ಆಲಿಸಿ ಅಧರ್ಮಾಂಧಕಾರದಿಂದ ಬಿಡಲ್ಪಟ್ಟು ಮೆಲ್ಲಮೆಲ್ಲನೆ ಧರ್ಮಸಂಗ್ರಹವನ್ನು ಮಾಡುವಂತೆ ಪ್ರತಿಯೊಬ್ಬ ಆತ್ಮರಿಗೂ ಭಗವತ್ಪಾದರು ಪ್ರೇರಿಸಲಿ.

ಒಳದೇಶದ ವೃತ್ತಾಂತಗಳು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಮುಂದಿನ ಮೀಟಿಂಗನ್ನು ಶಾರದಾಪುರದಲ್ಲಿ ನಡೆಯಿಸಬೇಕೆಂದು ತೀರ್ಮಾನಿಸಿರುವರು.

ಶ್ರೀಮನ್ಮಹಾರಾಜರವರು ಕಳೆದ ವಾರ ಮೋಟರಿನಲ್ಲಿ ಕೊಡಗುಪ್ರಾಂತ ಸಂಚಾರಮಾಡಿ ಕುಟ್ಟ, ಪೊನ್ನಂಪೇಟೆ ಗೋಣೀಕೊಪ್ಪಲು, ತಿತ್ತಿಮತ್ತಿ ಮೊದಲಾದ ಗ್ರಾಮಗಳನ್ನು ಪರಾಮರ್ಶಿಸಿ ರಾಜಧಾನಿಗೆ ಹಿಂತಿರುಗಿ ದಯಮಾಡಿಸಿದರು.

ನಮ್ಮ ಸಂಸ್ಥಾನದ ದಿವಾನರಾದ ಅಮೀನ್ ಉಲ್ ಮುಲ್ಕ್ ಮಿರ್ಜಾ ಮಹಮದ್ [illegible]ರವರಿಗೆ ಬ್ರಿಟಿಷ್ ಸಾರ್ವಭೌಮರವರು ನೂತನವರ್ಷದ ಪದವೀಪ್ರದಾನ ಸಮಾರಂಭದಲ್ಲಿ "ಸರ್" ಎಂಬ ಘನತರವಾದ ಬಿರುದನ್ನು ದಯಪಾಲಿಸಿರುವ ವಿಷಯವನ್ನು ಕೇಳಿ ತುಂಬಾ ಸಂತೋಷಿಸುತ್ತೇವೆ.

ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ಪ್ರಸಿದ್ಧ ಗಂಧದ ವ್ಯಾಪಾರಿಗಳಾದ ಮ॥ ರಾ॥ ಟಿ. ವಿ. ಉಪಾಧ್ಯಾಯರು, ಶ್ರೀ ದತ್ತಾತ್ರೇಯ ಹಾಲಿನ ಮೆಸ್ಸರ್ಸ್ ಬಿ. ತುಳಜಾರಾವ್ ಅಂಡ್ ಬ್ರದರ್ಸ್‌ರವರು, ಹಾಗೂ [illegible] ಬಜಾರಿನಲ್ಲಿರುವ ಶ್ರೀನಿವಾಸ ಎಲೆಕ್ಟ್ರಿಕ್ ಪ್ರೆಸ್ಸಿನವರು ಕಳುಹಿಸಿದ ನೂತನವರ್ಷದ ಮನೋಹರವಾದ ಕ್ಯಾಲೆಂಡರುಗಳನ್ನು ಅತ್ಯಾದರಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಶ್ರೀಮನ್ಮಹಾರಾಜರವರ ಮಹಾಮಾತೃಶ್ರೀಯವರು ಕಳೆದವಾರ ಪರಿವಾರಸಮೇತ ಕಾನಕಾನಹಳ್ಳಿಯ ಸಮೀಪದಲ್ಲಿರುವ ಮೇಕೆದಾಟು ಎಂಬ ಸ್ಥಳವನ್ನೂ ಅಲ್ಲಿರುವ ಜಲಪಾತದ ವೈಚಿತ್ರ್ಯವನ್ನೂ ಪರಾಮರ್ಶಿಸಿ ರಾಜಧಾನಿಗೆ ಹಿಂತಿರುಗಿ ಬಂದು 1 ನೇ ತಾರೀಖಿನ ಮಧ್ಯಾಹ್ನ ಪುನಃ ಬೊಂಬಾಯಿಗೆ ಪ್ರಯಾಣ ಬೆಳೆಸಿದರು. ಬೊಂಬಾಯಿಯಲ್ಲಿ ಎಂಟುವಾರಗಳ ವರೆಗೆ ಇದ್ದು ಅನಂತರ ರಾಜಧಾನಿಗೆ ದಯಮಾಡಿಸುವರು.

ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ॥ ಎಸ್. ಹಿರಣ್ಣಯ್ಯನವರಿಗೆ ಜನವರಿ 20ನೆಯ ತಾರೀಖಿನವರೆಗೆ ಹಕ್ಕಿನ ರಜವು ಕೊಡಲ್ಪಟ್ಟಿರುವದರಿಂದ ಆ ಕಾಲದಲ್ಲಿ ಬೆಂಗಳೂರು ಡಿ॥ ಡೆಪ್ಯುಟಿ ಕಮಿಷನರಾದ ಮ॥ ಎಸ್. ತಾಜ್‌ಪೀರಾರವರು ಆಕ್ಟಿಂಗ್ ಪೋಲೀಸ್-ಇನ್ಸ್‌ಪೆಕ್ಟರ ಜನರಲ್‌ರಾಗಿಯೂ, ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮಿ॥ ಬಿ. ನಾರಾಯಣಸ್ವಾಮಯ್ಯಂಗಾರ್ಯರು ಆಕ್ಟಿಂಗ್ ಡಿ॥ ಡೆಪ್ಯುಟಿಕಮಿಷನರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕಳೆದ ಡಿಸೆಂಬರು 20 ನೆಯ ತಾರೀಖು ಶುಕ್ರವಾರ ಸಾಯಂಕಾಲ ಟಿ. ನರಸೀಪುರ ತಾಲ್ಲೂಕು ತಲಕಾಡು ಹೋಬಳಿ ಮಾರನಪುರದ ಹತ್ತಿರ ಕಾವೇರಿನದಿಯಲ್ಲಿ ಮೂವರು ಅಂಬಿಗರು 12 ಜನ ಪ್ರಯಾಣಿಕರನ್ನು ಭತ್ತದ ಚೀಲಗಳ ಸಮೇತ ದೋಣಿಯಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿದ್ದಾಗ ಮಧ್ಯನದಿಯಲ್ಲಿ ಭಾರ ಹೆಚ್ಚಾಗಿ ದೋಣಿಯು ಮುಳುಗಿಕೊಂಡಿತು. ಕತ್ತಲ್ಲಿ ಜನರು ನೀರಿನಲ್ಲಿ ಮುಳುಗಿ ಬಹಳ ಕಷ್ಟಪಟ್ಟರು. ದೋಣಿಯಲ್ಲಿದ್ದ 15 ಜನರಲ್ಲಿ 11 ಜನರು ಬದುಕಿಬಂದರು. 4 ಜನರು ನದಿಯಪಾಲಾಗಿರುವರು. ಅಮಲ್ದಾರರವರು ಈ ವಿಚಾರವಾಗಿ ಶೋಧಮಾಡುತ್ತಿರುವರು.

ಶ್ರೀಮನ್ಮಹಾರಾಜರವರ ರಜತ ಮಹೋತ್ಸವದ ಸ್ಮಾರಕಾರ್ಥವಾಗಿ ಸ್ಥಾಪಿಸಲ್ಪಡುವ ಶಿಲ್ಪಶಾಸ್ತ್ರ ಬೋಧಕಶಾಲೆಯ ಕಮಿಟಿಗೆ ತೃತೀಯ ಸಚಿವರಾದ ರಾಜಮಂತ್ರಪ್ರವೀಣ ಮಿ॥ ಕೆ. ಮ್ಯಾಥ್ಯೂರವರು ಅಧ್ಯಕ್ಷರಾಗಿಯೂ, ಸರ್॥ ಛಾರಲ್ಸ್ ಟಾಡ್‌ಹಂಟರವರು, ಸರ್॥ ಕೆ. ಪಿ. ಪುಟ್ಟಣ್ಣ ಶೆಟ್ಟರು, ವಾಣಿಜ್ಯ-ಕೈಗಾರಿಕೆಯ ಡೈರೆಕ್ಟರು, ವಿದ್ಯಾಭ್ಯಾಸದ ಡೈರೆಕ್ಟರು, ಡಿ. ಪಿ. ಡಬ್ಲ್ಯು. ಛೀಫ್ ಇಂಜನಿಯರು, ಅಭಿವೃದ್ಧಿ ಶಾಲೆಯ ಸೆಕ್ರೆಟರಿ, ಬೆಂಗಳೂರು ವೂಲನ್ ಅಂಡ್ ಕಾಟನ್ ಮಿಲ್ಸಿನ ಮಿ॥ ಬ್ಯಾಚೆಲರ್‌ರವರು, ಮ॥ ಬಿ. ಕೆ. ಗರುಡಾಚಾರ್ಯರು, ಮತ್ತು ಮ॥ ವಿ. ರಾಮಲಿಂಗಂರವರು ಈ ಹನ್ನೆರಡು ಜನರು ಕಮಿಟಿ ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮನೆಗಳಿಗೆ ಕಳ್ಳರು ನುಗ್ಗದಂತೆ [illegible]ಸಿನವರು ಒಂದು ಹೊಸಯಂತ್ರವನ್ನು ಶೋಧಿಸಿರುವರು. ಅದು ಸಣ್ಣ ಕೈಪೆಟ್ಟಿಗೆಯಂತಿರುವುದು. ಈ ಪೆಟ್ಟಿಗೆಗೆ 12 ಎಲೆಕ್ಟ್ರಿಕ್ ತಂತಿಗಳನ್ನು ಜೋಡಿಸಿರುವರು. ಆ ತಂತಿಗಳು ಮನೆಯ ಎಲ್ಲಾ ಕಡೆಯಲ್ಲೂ ಹರಡಿಕೊಂಡಿದ್ದು, ತಂತಿಯನ್ನು ಯಾರಾದರೂ ಮುಟ್ಟಿದ ಕೂಡಲೇ ದೊಡ್ಡ ಬಂದೂಕನ್ನು ಹಾರಿಸಿದ ಶಬ್ದವಾಗಿ, ಮನೆಯು ತುಂಬಾ ಹೊಗೆಯು ತುಂಬಿಕೊಂಡು, ಕೊಠಡಿಯೆಲ್ಲಾ ಪ್ರಕಾಶಮಾನವಾಗಿ, ಗಂಟೆಯು ಬಾರಿಸುವದಕ್ಕೆ ಪ್ರಾರಂಭಿಸುವದು. ಈ ಯಂತ್ರವು ಮಾಡುವ ಶಬ್ದದಿಂದ ಸುತ್ತಮುತ್ತಲಿನ ಮನೆಯವರು ಸಹ ಕೂಡಲೆ ಎಚ್ಚರ ಹೊಂದುವರಂತೆ!

ವರ್ತಮಾನಸಂಗ್ರಹ.

ಮುಂದಿನ ಫೆಬ್ರವರಿ ತಿಂಗಳಿಂದ ಗುಳೇದಗುಡ್ಡದಲ್ಲಿ "ಭಾಗ್ಯೋದಯ" ವೆಂಬ ವಾರಪತ್ರಿಕೆಯು ಪ್ರಕಟಿಸಲ್ಪಡುವದು.

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ 1000 ರೂಪಾಯಿಗಳ ವೇತನವನ್ನು ಒಬ್ಬ ಹುಟ್ಟುಕುರುಡಿಯು ಸಂಪಾದಿಸಿರುವಳು.

ಪ್ರಿನ್ಸ್ ಆಫ್ ವೇಲ್ಸ್‌ರವರು ದಕ್ಷಿಣ ಆಫ್ರಿಕೆಯಲ್ಲಿ ಸಂಚಾರಮಾಡಿ ಬರುವದಕ್ಕಾಗಿ ಇಷ್ಟರಲ್ಲೇ ಇಂಗ್ಲೆಂಡಿನಿಂದ ಪ್ರಯಾಣ ಮಾಡುವವರಾಗಿದ್ದಾರೆ.

ನಾಳೆ ಮಂಗಳವಾರ 7 ನೆಯ ತಾರೀಖಿನಿಂದ ಲಂಡನ್ನಿನಿಂದ ಬರ್ಲಿನ್ ನಗರಕ್ಕೆ ಫೋಟೋಗಳನ್ನು ಟೆಲಿಗ್ರಾಫ್ ಮೂಲಕ ಕಳುಹಿಸುವ ಏರ್ಪಾಡು ಮಾಡಲ್ಪಟ್ಟಿರುವದು.

ಕರಾಚಿಪುರದಲ್ಲಿ ಮಿ॥ ಅಬ್ದುಲ್ ಫಜ್ಲೆಯವರ ಅಧ್ಯಕ್ಷತೆಯಲ್ಲಿ ಇಸ್ಲಾಮಿಯಾ ಪರಿಷತ್ತು ಸೇರಿ ಶಾರದಾ ಬಾಲ್ಯವಿವಾಹ ನಿರೋಧಕ ಶಾಸನವು ಸಂಪೂರ್ಣವಾಗಿ ನಿರೋಧಿಸಲ್ಪಟ್ಟಿತು.

ಬೆಜವಾಡದ ಮೋಪಿದೇವಿ ವೇಣುಗೋಪಾಲರಾವ್ ಎಂಬುವರು "ವರ್ಣಾಶ್ರಮ" ಎಂಬ ಮಾಸಪತ್ರಿಕೆಯನ್ನು ನೂತನವಾಗಿ ಪ್ರಾರಂಭಿಸಿರುವರು. ವರ್ಣಾಶ್ರಮಧರ್ಮದ ತತ್ವಗಳನ್ನು ಪ್ರತಿಪಾದಿಸುವದೇ ಆ ಪತ್ರಿಕೆಯ ಮುಖ್ಯಧ್ಯೇಯವಾಗಿರುವದು.

ಕಳೆದ ಡಿಸೆಂಬರ್ 27 ನೇ ತಾರೀಖಿನ ದಿವಸ ರಾಜಮಹೇಂದ್ರಕ್ಕೆ ಸೇರಿದ ಅಮಲಾಪುರದಲ್ಲಿ ಒಂದು ಮದ್ದಿನ ಕೋಠಿಗೆ ಬೆಂಕಿ ಬಿದ್ದು ಕೋಠಿಯ ಯಜಮಾನನ 13 ವರ್ಷದ ಮಗನು ಸುಟ್ಟು ಭಸ್ಮವಾದನು. ಸುಮಾರು 1,500 ರೂ. ಗಳ ಮದ್ದು ಸುಟ್ಟುಹೋಯಿತು.

ಕುಷ್ಟಗಿ ತಾಲೂಕು ನವಲಕುಂಪಿ ಗ್ರಾಮದಲ್ಲಿ ಸುಮಾರು 7-8 ವರ್ಷದ ಒಂದು ಆಕಳು ಕರುಗಳನ್ನು ಈಯದೆ 3-4 ವರ್ಷಗಳಿಂದಲೂ, ದಿನಕ್ಕೆ 3 ತಂಬಿಗೆ ಹಾಲನ್ನು ತಪ್ಪದೆ ಕೊಡುತ್ತಿರುವದೆಂದು ಮ॥ ರಾ॥ ವಂಕಲಕುಂಟೆ ವಿರೂಪಾಕ್ಷಗೌಡರು ತಿಳುಹಿಸುತ್ತಾರೆ.

ಘನವೊಂದಿದ ವೈಸ್ರಾಯರ ಪತ್ನಿಯವರಾದ ಲೇಡಿ ಅರ್ವಿನ್‌ರವರು ಹೈದರಾಬಾದಿನ ಬ್ರಿಟಿಷ್ ರೆಸಿಡೆಂಟರ ಪತ್ನಿಯವರಾದ ಲೇಡಿ ಬಾರ್ಟನ್‌ರವರಿಗೆ 1,000 ರೂ. ಗಳನ್ನು ಕಳುಹಿಸಿ, ಅದನ್ನು ಹೈದರಾಬಾದಿನ ಶಿಶುಸಂರಕ್ಷಣಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ.

ಉತ್ತರ ಆಫ್ರಿಕೆಯ ಟಿಬ್ರೂಕ್ ಸಮೀಪದ [illegible] ಅಡಿ ಉದ್ದ ಮತ್ತು ಆರು ಅಡಿ ಅಗಲವುಳ್ಳ ದೊಡ್ಡ ಪ್ರಾಣಿಯ ಅಸ್ಥಿಯು ದೊರಕಿರುವದು. ಸುಮಾರು 3,00,000 ವರ್ಷಗಳ ಪೂರ್ವದಲ್ಲಿದ್ದುದೆಂದು ನಿಶ್ಚಯಿಸಲ್ಪಟ್ಟಿರುವದು. ವೈಜ್ಞಾನಿಕಶಾಸ್ತ್ರಜ್ಞರು ಈ ವಿಷಯವಾಗಿ ಶೋಧನೆ ನಡೆಯಿಸುತ್ತಿರುವರು.

ನೀಲಗಿರಿ ರೈಲ್ವೆ ಕಂಪನಿಯವರು ಕೂನೂರಿನಿಂದ ಉದಕಮಂಡಿಗೆ ಹೋಗುವ ರೈಲುಗಳನ್ನು ವಿದ್ಯುಚ್ಛಕ್ತಿಯಿಂದ ನಡೆಯಿಸುವ ಏರ್ಪಾಡು ಮಾಡುತ್ತಿದ್ದಾರೆ. ಹೀಗೆ ವಿದ್ಯುಚ್ಛಕ್ತಿಯಿಂದ [ರೈಲು]ಗಳನ್ನು ನಡೆಯಿಸಲು ಖರ್ಚು ಕಡಿಮೆ ಬೀಳುವದು. [...] ರೈಲ ಛಾರ್ಜಿನ ದರವನ್ನು ಕಡಿಮೆಮಾಡಬಹುದೆಂದು ಊಹಿಸಲ್ಪಟ್ಟಿದೆ.

ಕಳೆದ ಡಿಸೆಂಬರು ತಿಂಗಳ 5 ನೇ ತಾರೀಖಿನ ದಿವಸ ಅಮೇರಿಕೆಯ ಸಂಯುಕ್ತಸಂಸ್ಥಾನಗಳ ಪ್ರೆಸಿಡೆಂಟರ ಆಫೀಸುಗಳಿಗೆ ಬೆಂಕಿಹತ್ತಿ ಅನೇಕ ಮಹತ್ವದ ಕಾಗದ ಪತ್ರಗಳು ಸುಟ್ಟವು. ಮಹಾಪ್ರಯತ್ನದಿಂದ ಪ್ರೆಸಿಡೆಂಟರ ಸ್ವಂತದ ಕಾಗದಗಳನ್ನು ರಕ್ಷಿಸಿದರು. ಈ ಬೆಂಕಿಯಿಂದ ಸುಮಾರು 2 ಲಕ್ಷ ರೂಪಾಯಿಗಳ ನಷ್ಟವಾಗಿರುತ್ತದೆ.

ಈಜಿಪ್ಟಿನ ರಾಜಧಾನಿಯಾದ ಕೈರೋನಗರದಲ್ಲಿ ಪೋಲೀಸಿನವರು ಒಂದು ಮನೆಗೆ ನುಗ್ಗಿ ಒಬ್ಬ ಉಪಾಧ್ಯಾಯನನ್ನೂ 20 ಜನ ಹುಡುಗರನ್ನೂ ಸೆರೆಹಿಡಿದರು. ಈ ಉಪಾಧ್ಯಾಯನು ಆ ಹುಡುಗರಿಗೆ ಕಳ್ಳತನವನ್ನು ಕಲಿಸುತ್ತ, ಸಾಯಂಕಾಲಸಮಯದಲ್ಲಿ ಜನಗಳ ಗಲಾಟೆಯಿರುವ ಸ್ಥಳಗಳಲ್ಲಿ ಅವರಿಂದ ಕಳ್ಳತನಮಾಡಿಸುತ್ತಿದ್ದನಂತೆ!

ಕಳೆದ ಡಿಸೆಂಬರು ತಿಂಗಳ 23 ನೆಯ ತಾರೀಖಿನ ದಿವಸ ಮಹಾಬಲೇಶ್ವರದ ಸಮೀಪದಲ್ಲಿರುವ ಪ್ರತಾಪಗಡದ ಶ್ರೀಅಂಬಾಬಾಯಿ ದೇವಾಲಯಕ್ಕೆ 25-30 ಜನ ಕಳ್ಳರು ನುಗ್ಗಿ ಅಲ್ಲಿದ್ದ ಪೂಜಾರಿಯನ್ನೂ ಜನರನ್ನೂ ಹೊಡೆದು 2 ಲಕ್ಷ ರೂ. ಗಳ ಬೆಲೆಬಾಳುವ ಆಭರಣಗಳನ್ನೂ 5000 ರೂಪಾಯಿಗಳನ್ನೂ ಅಪಹರಿಸಿಕೊಂಡು ಹೋಗಿರುವರು.

ಗಂಟೆಗೆ 300 ಮೈಲುಗಳ ವೇಗದಿಂದ ಅಟ್ಲಾಂಟಿಕ್ ಮಹಾಸಾಗರವನ್ನು 12 ಗಂಟೆಗಳಲ್ಲಿ ದಾಟುವ ಮತ್ತು 80 ಗಂಟೆಗಳೊಳಗಾಗಿ ಭೂಮಂಡಲವನ್ನು ಸುತ್ತಿಬರುವಂಥ ಒಂದು ಅದ್ಭುತ ಜಹಜಿನ ಮಾದರಿಯನ್ನು ಒಬ್ಬ ಜರ್ಮನಿಯ ವೈಜ್ಞಾನಿಕನು ತಯಾರಿಸಿರುವನು. ಎಂತಹ ಬಿರುಗಾಳಿಯಲ್ಲಾದರೂ ಇದು ಅಪಾಯವಿಲ್ಲದೆ ಸಮುದ್ರದಲ್ಲಿ ಹೋಗಬಲ್ಲುದಂತೆ!

ಲಕ್ನೋನಗರದಲ್ಲಿ ಕಲಾವತೀದೇವಿಯೆಂಬ ಅತ್ಯಂತ ಸುಂದರಿಯಾದ ಸ್ತ್ರೀಯಳು ರಾಮಲಾಲನೆಂಬ ಅತ್ಯಂತ ಕುರೂಪಿಯಾದ ಪುರುಷನನ್ನು ಮದುವೆಯಾಗಿದ್ದಳು. ರಾಮಲಾಲನು ಮಹಾರೂಪವತಿಯಾದ ತನ್ನ ಹೆಂಡತಿಯ ವಿಷಯದಲ್ಲಿ ಅನುಮಾನದಿಂದ ಅವಳೆಲ್ಲಿಯೂ ಹೋಗದಂತೆ ಅವಳ ಕಾಲುಗಳನ್ನು ಕಡಿದುಬಿಡಲು ಕೋರ್ಟಿನಲ್ಲಿ ವಿಚಾರಣೆಯು ನಡೆದು, ರಾಮಲಾಲನು ಮರಣಾಂತ ಶಿಕ್ಷೆಗೆ ಗುರಿಯಾಗಿರುವನು.

ಹಿಂದೂದೇಶದ ಸಿಗರೇಟುವ್ಯಾಪಾರಿಗಳಲ್ಲಿ ಮುಖ್ಯವಾದ ಕತಿರಾಸ್ ಕಂಪೆನಿಯವರು ಕಳೆದ ವರ್ಷ ಸುಮಾರು 1½ ಕೋಟಿ ರೂಪಾಯಿಗಳ ನಫೆಯನ್ನು ಸಂಪಾದಿಸಿರುವರು. ಈ ನಫೆಯಿಂದ ಇವರು ಕಂಪೆನಿಯ ಷೇರುದಾರರಿಗೆ ಶೇಕಡಾ 50 ರಂತೆ ಡಿವಿಡೆಂಡ್ ಹಂಚುವರಂತೆ! ಕಳೆದ 7 ವರ್ಷಗಳಲ್ಲಿ ಈ ಕಂಪೆನಿಯವರು 100 ರೂ. ಗೆ 586 ರಂತೆ ನಫೆ ಹಂಚಿರುವರಂತೆ!

ಇಂಗ್ಲೆಂಡಿನ ಹಲ್ಲೆಂಬ ನಗರದಲ್ಲಿ 29 ಜನ ತರುಣಿಯರು ಎಂದೆಂದಿಗೂ ವಿವಾಹವಾಗುವದಿಲ್ಲವೆಂದು ನಿರ್ಧರಿಸಿ ಒಂದು ಸಂಘವನ್ನೇರ್ಪಡಿಸಿಕೊಂಡಿರುವರು. ಸಂಘಸ್ಥಾಪನ ಸಮಾರಂಭದಲ್ಲಿ ಸೆಕ್ರೆಟರಿಯಾದ ಮಿಸ್ ಗ್ರಿಡ್ಲೆಯೆಂಬ ತರುಣಿಯು, ಇಂಗ್ಲೆಂಡಿನಲ್ಲಿ ಪುರುಷರಿಗಿಂತ 20 ಲಕ್ಷ ಸ್ತ್ರೀಯರು ಹೆಚ್ಚಾಗಿರುವದರಿಂದ ವಿವಾಹವಾಗಲಿಚ್ಛಿಸುವ ತರುಣಿಯರ ಸಲುವಾಗಿ ತಾವು ವಿವಾಹವನ್ನು ಮಾಡಿಕೊಳ್ಳುವದಿಲ್ಲವೆಂದು ಹೇಳಿದಳು.

ಇಸ್ಲಾಂ ಧರ್ಮಗುರುಗಳಾದ ಆಗಾಖಾನರವರು 1930ನೆಯ ಇಸವಿಯಲ್ಲಿ ಇಂಗ್ಲೆಂಡಿನಿಂದ ಹಿಂದುಸ್ಥಾನಕ್ಕೆ ವಿಮಾನದಲ್ಲಿ ಬರುವ ಪ್ರಥಮಹಿಂದೂ ವೈಮಾನಿಕನಿಗೆ 6,500 ರೂ. ಗಳ ಬಹುಮಾನವನ್ನು ಕೊಡುವ[ದಾ]ಗಿ ಪ್ರಕಟಿಸಿರುವರಷ್ಟೇ! ಈ ಬಹುಮಾನವನ್ನು [ಪ]ಡೆಯಲು ಇಂಗ್ಲೆಂಡಿನಲ್ಲಿರುವ ಇಬ್ಬರು ಹಿಂದೀಯರು ಪ್ರಯತ್ನಪಟ್ಟಿರುವರು. ಇವರಲ್ಲಿ ಒಬ್ಬರಾದ ಇಂಗ್ಲೆಂಡಿನ ಬ್ರಿಸ್ಟಲ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿರುವ ಮನಮೋಹನಸಿಂಗರವರು ಮೊನ್ನೆ 4 ನೆಯ ತಾರೀಖು ಶನಿವಾರ ಇಂಗ್ಲೆಂಡಿನಿಂದ ವಿಮಾನದಲ್ಲಿ ಹೊರಡುವವರಾಗಿದ್ದರು.

ಕಳೆದ 22 ನೆಯ ತಾ॥ ಭಾನುವಾರ ಲಾಹೋರಿನಲ್ಲಿ ಶ್ರೀ॥ ಪ್ರಫುಲ್ಲಚಂದ್ರರಾಯ್‌ರವರು ಕಾಂಗ್ರೆಸ್ ವಸ್ತುಪ್ರದರ್ಶನಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಸಾರೆ ಸಂಪೂರ್ಣ ಸ್ವದೇಶೀವಸ್ತುಗಳೇ ಪ್ರದರ್ಶಿಸಲ್ಪಟ್ಟಿದ್ದುವು. ಗಿರಣಿಗಳ ಬಟ್ಟೆಗಳ ಪ್ರವೇಶಕ್ಕೇ ಅಲ್ಲಿ ಅವಕಾಶವಿರಲಿಲ್ಲ. ಸರಕಾರದವರು ಪ್ರದರ್ಶನಕ್ಕೆ ಯಾವ ಸಹಾಯವನ್ನು ಮಾಡದಿದ್ದರೂ, ಪ್ರದರ್ಶನವು ಅತ್ಯಂತ ತೃಪ್ತಿಕರವಾಗಿ ನೆರವೇರಿತು. ಈಗ್ಗೆ 150 ವರ್ಷಗಳಹಿಂದೆ ತಯಾರಿಸಲ್ಪಟ್ಟಿದ್ದ ಢಾಕಾಪಟ್ಟಣದ ಬಟ್ಟೆಯೊಂದನ್ನು ಸರ್. ಪಿ. ಸಿ. ರೇಯವರು ಪ್ರದರ್ಶಿಸಿದ್ದರು. ಅದನ್ನು ಹುಲ್ಲಿನಮೇಲೆ ಹಾಸಿ ಮಂಜು ಬಿದ್ದ ಮೇಲೆ ನೋಡಿದರೆ ಬಟ್ಟೆಯು ಕಣ್ಣಿಗೆ ಕಾಣಿಸುತ್ತಲೇ ಇರಲಿಲ್ಲವಂತೆ! ಈ ಸಂಬಂಧವಾಗಿ ಸರ್. ಪಿ. ಸಿ. ರೇಯವರು ಮಾಡಿದ ಭಾಷಣವನ್ನು ಕೇಳಲು 50 ಸಾವಿರ ಜನರು ನೆರೆದಿದ್ದರು.

ಸ್ವೀಕಾರ.

ಅನಂತಪುರ ಡಿ॥ ಕಲ್ಯಾಣದುರ್ಗ ತಾಲೂಕು ಶಿರ್ ಗ್ರಾಮದ ಉಜ್ಜಯಿನೀ ಮಠದ ಶ್ರೀ॥ ಷ॥ ಬ್ರ॥ ಚರಮೂರ್ತಿಸ್ವಾಮಿಗಳವರು ಪ್ರಭಾಕಾರ್ಯಾಲಯಕ್ಕೋಸ್ಕರ 300 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಧಾರವಾಡ ಡಿ॥ ಗದಗ ಪಟ್ಟಣದಲ್ಲಿರುವ ಶ್ರೀಮಂತರೂ ದೊಡ್ಡ ಅರಳೀವ್ಯಾಪಾರಿಗಳೂ ಪ್ರಮುಖರೂ ಆದ ಶ್ರೀಮಾನ್ ಮ॥ರಾ॥ ಮಣಿವಾಳಪ್ಪನವರು ಸೊಡಿಶೆಟ್ರು ಇವರಿಗೆ ಬ್ರಿಟಿಷ್ ಸಾರ್ವಭೌಮ ಸರಕಾರದವರು "ರಾವ್ ಸಾಹೇಬ್" ಪದವಿಯನ್ನು ದಯಪಾಲಿಸಿದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂಪಾಯಿಗಳು ವೇ॥ ಶಿವಲಿಂಗಾರ್ಯ ಸದಾಶಿವಾರ್ಯ ಗುರುಸ್ವಾಮಿಮಠ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ॥ ಹಡಗಲಿ ತಾಲೂಕು ಹಂಪಸಾಗರದ ಮ॥ ರಾ॥ ಬೆಲ್ಲದ ಕೊಟ್ರಪ್ಪನವರ ಪುತ್ರಿ ಸೌ॥ ಪಾರಮ್ಮನನ್ನು ಮ॥ ರಾ॥ ಕೋಡಗಲ್ ಗ್ರಾಮದ ಅಂಗಡಿ ಮರಿಯಣ್ಣನವರ ಪುತ್ರ ಚಿ॥ ರುದ್ರಪ್ಪನಿಗೆ ಕೊಟ್ಟು ನಿಶ್ಚಯಿಸಿದ ಕಾಲದಲ್ಲಿ ಮ॥ ರಾ॥ ಶೆಟ್ರು ಸರೂರು ಶರಣಪ್ಪನವರು ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 5 ರೂಪಾಯಿಗಳು ಮ॥ ರಾ॥ ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಗದಗ ತಾಲೂಕು ಹೊಂಬಳ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣ ಸಮಾಪ್ತಿ ಸಮಯದಲ್ಲಿ ಹಡಗಲಿ ಹಿರಿಯಮಠದ ಶ್ರೀ॥ ಷ॥ ಬ್ರ॥ ಸಂಗನೇಶ್ವರ ಪಟ್ಟದಸ್ವಾಮಿಗಳ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ॥ ರಾ॥ ಬಳಿಗೇರಿ ಚನ್ನಬಸಪ್ಪನವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾಲೂಕು ಕಸಬಾ ಮಾಗಣೆ ಶ್ರೀಗಂಧದಲ್ಲಿರುವ ಮ॥ ರಾ॥ ದೂಬಗೆರೆ ಪಟೇಲ್ ಬೋರೇಗೌಡರು ಮ॥ ರಾ॥ ಕಟ್ಟೆಗದ್ದೆ ಲಿಂಗೇಗೌಡರ ತೃತೀಯ ಪುತ್ರನನ್ನು ದತ್ತಕಪುತ್ರನನ್ನಾಗಿ ಮಾಡಿಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ॥ ಮುಗ್ರಹಳ್ಳಿ ಮಠದ ಸದಾನಂದ ಶ್ರೀ ಸಿದ್ಧಲಿಂಗಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಿಜಾಪುರ ಡಿ॥ ಗುಳೇದಗುಡ್ಡ ಗ್ರಾಮದ ಮ॥ ರಾ॥ ಹೊದಲೂರು ದೊಡ್ಡಪ್ಪನವರು ತಮ್ಮ ಪುತ್ರರ ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ॥ ರಾ॥ ವೀರಭದ್ರಪ್ಪನವರು ತಿಪ್ಪಾ ಇವರ ದ್ವಾರಾ ತಲ್ಪಿರುತ್ತವೆ.

ಅನಂತಪುರ ಡಿ॥ ಗುತ್ತಿ ತಾಲೂಕು, ರಾಮಲುಡಿಕಿ ಹಿರಿಯಮಠದ ವೇ॥ ಅಜಾತಯ್ಯನವರಿಗೆ ಪ್ರಾಪ್ತವಾದ ರೋಗವು ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣಪ್ರಭಾವದಿಂದ ಗುಣವಾದ ಸಂತೋಷಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ॥ ಆರ್. ಎಂ. ಸದಾಶಿವಯ್ಯ ವಾರದ ಪಾಠಶಾಲಾ ಸೋಲಾಪೂರ ಇವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಡಿ॥ ಸೊರಬ ತಾಲೂಕು ಕೋಡೀಹಳ್ಳಿ ಪಟೇಲ್ ಮ॥ ರಾ॥ ಶಿವರುದ್ರಪ್ಪಗೌಡರು ಮ॥ ರಾ॥ ಪಿ. ಹೆಚ್. ರುದ್ರಗೌಡರು ಚಗಲೂರಕರ್ ಎಂಬವರನ್ನು ದತ್ತಕಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಸದರಿ ದತ್ತಕಪುತ್ರರು ಪ್ರಭಾಪೋಷಣಕ್ಕೋಸ್ಕರ ಭಕ್ತಿಪೂರ್ವಕವಾಗಿ ಸಮರ್ಪಿಸಿದ 2 ರೂ. ಗಳು ಮ॥ ರಾ॥ ಕೆ. ಪಿ. ದೇವಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ.—

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಇರು ಇಲ್ಲ ಪದ್ಧತಿ.

ಲೇಖಕರು—ವಾಗೀಶ ಶಿವಾಚಾರ್ಯ [illegible] ಪನ್ನತ
ಮುದೇನೂರು ಶ್ರೀ ವಿಶ್ವಾರಾಧ್ಯ ಗುರುಕುಲ, ಕಾಶೀ.

(ತಾ|| 25-11-29 ನೇ ಸಂಚಿಕೆಯಿಂದ ಮುಂದುವರಿದುದು)

ಕಂ|| ಶಾ (ಯ) ವಿಶುದ್ಧತೆಯಿಂತಲ್ |
ದಾಯಿಯ ವಶವಾಗದಿಪ್ಪೆ ದಮ ಜಿಜನಮಾರ್ಗಂ ||
ಹೇಯಸುಖಂಗಳ ತೊರೆಯಲು |
ಪಾಯುಗಳಂ ಬಹಳಮುಂಟು ಧಾತ್ರೀ ತಳದೊಳ್ ||೧೫||

ವಾ (ನ) ವ ಪೊಂದುವೆನೆಂಬೊಡೆ |
ಜ್ಞಾನಿಯವದನಾಟಿಬೇಕು ಹಾನಿಯುಬಯಸಲ್ ||
ಹೀನನಸಂಗತಿಬೇಕೆ |
ಜ್ಞಾನವಕೆಣಕಲ್ಕ ಪೂಜ್ಯವಾಗುವತೆರದಿ ||೧೬||

ತ (ಪ್ಪ೧) ತೋರಲುವಾನವ |
ನೊಪ್ಪಂಪನಿಗೆವರಜನಪ್ಪ ತೋರುವತನಕಂ ||
ತುಪ್ಪಂಕಾಸುಕಕಾಸುತ |
ಲೊಪ್ಪಂಕಾನಬಿಲಜನಕೆ ತೋರುವತೆರದಿಂ ||೧೭||

ಕಂ|| ಇರುಇಲ್ಲೆಂಬುವ ಪದ್ಧತಿ |
ಯರಿಯಲುಸುಖಮುಕ್ತ್ಯ ಮರ್ತ್ಯಪರಲೋಕಗಳೊಳ್ ||
ಪರವಸ್ತುವ ಗಡಮುಂದದೆ |
ಗುರುಮುಖಮೆಂತಾದ್ಯ ನಾಗುತಿಹುದದರಂತೆ ||೧೮||

ವಾಸ|| ಈ ಪದ್ಧತಿಯು ಸವಧಿದೊರೆಯಂತೆ ರಚಿಸಿನಾ |
ವೀಪತ್ರಿಕಾಮುಖಕೆ ಪಾರುತಿರ್ಪೆವುಮುದದಿ |
ಶಾಪವಿದ್ಧಂಸಕಾಚಾರ್ಯವೃಂದವಿದೆಮ್ಮ ಕೃತಿಗೀ
ಯ್ಗೆ ಮಂಗಲವಾ ||
ಅಪರಾತ್ಪರಪಂಚಗುರುಗಳಮಲಪ್ರಭೋ |
ದ್ದೀಪನವನಾದೆ ಪಂಚಾಚಾರ್ಯಪ್ರಭೆಯುದಯ |
ದಿ ಪರಿಯೊಳಾಗಿರಲ್ಕ ದುವೆದುರಿತೌಘಮಂಪರಿಹರಿಸುತ
ಲಿಲ್ಪದವ ||೧೯||

(ಸಶೇಷ)

ಶ್ರೀ ಜಗದ್ಗುರು ದಾರುಕಾಚಾರ್ಯಪ್ರಸೀದ.

ಕಾರ್ತಿಕೋತ್ಸವವೂ ಉದಯದ ಅನುಷ್ಠಾನ ಸಮಾರಂಭವೂ.

ಜಿಲ್ಲಾ ವಿಜಾಪೂರ ತಾ|| ಬಾಗೇವಾಡಿ ಪೈಕಿ ಸುಪ್ರಸಿದ್ಧವೂ ಪುಣ್ಯಸ್ಥಳವೂ ಆದ ಸಿಡಗುಂದಿ ರುದ್ರಸ್ವಾಮಿ ಮಠದ ಕಾರ್ತಿಕೋತ್ಸವವು ಹಾಗೂ ಶ್ರೀಗಳವರ ಉದಯದ ಅನುಷ್ಠಾನಸಮಾರಂಭವು ಪ್ರತಿ ವರ್ಷದಂತೆ ಈ ವರ್ಷವಾದರೂ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ತಾ|| 16-12-1929 ಈ ಸುದಿವಸದಲ್ಲಿ ಉದಯದ ಅನುಷ್ಠಾನಸಮಾಪ್ತಿ ಗಣಾರಾಧನೆಯು ನಡೆಯಿಸಲ್ಪಟ್ಟಿತು. ಅನಂತರ ಸಾಯಂಕಾಲ ಪಲ್ಲಕ್ಕಿಯಲ್ಲಿ ಈ ಮಠದ ಶಿಷ್ಯರಾದ ರುದ್ರಸ್ವಾಮಿ ಕೆರೂರ ಸಾ|| ರಾಮದುರ್ಗ ಇವರು ರಚಿಸಿದ ಬೆಳ್ಳಿ ಮುಖವನ್ನು ಹಾಗೂ ಶ್ರೀ ರುದ್ರಪುಸ್ತಕವನ್ನು ಮೂರ್ತಮಾಡಿಸಿ ತಳಿರುತೋರಣಗಳಿಂದಲಂಕೃತವಾದ ಬೀದಿಗಳಲ್ಲಿ ಉತ್ಸವವು ಹೊರಟು ಇಲ್ಲಿಯ ವೀರಭದ್ರ ದೇವಾಲಯಕ್ಕೆ ತಲ್ಪಿ ಪುನಃ ಮಠಕ್ಕೆ ಸಮಸ್ತಬಿರುದಾವಳಿಗಳಿಂದ ತಲ್ಪಿತು. ಪುನಃ ಕಾರ್ತಿಕ ಇಳಿಸುವದು ನೆರವೇರಿಸಲ್ಪಟ್ಟಿತು. ಅನಂತರ ಇಲ್ಲಿಯ ಶ್ರೀಗಳು ಲಿಂಗಪೂಜಾಮಹತ್ವದ ವಿಷಯದಲ್ಲಿ "ಶಿವಾರ್ಚನವಿಹೀನೋಯಃ ಪಶುರೇವ ನ ಸಂಶಯಃ | ಪಶುಸಂಸಾರಚಕ್ರೇಸ್ಮಿನ್ನಜಸ್ರಂಪರಿವರ್ತತೇ" ಎಂಬ ಶ್ಲೋಕವನ್ನು ಉದಾಹರಿಸಿ ಯುಕ್ತಿಯುಕ್ತವಾಗಿ ಬೋಧಿಸಿದರು. ಅನಂತರ ಸರ್ವಗುರುಭಕ್ತರು ಕಾಣಿಕೆಯನ್ನರ್ಪಿಸಿ ಆಶೀರ್ವಾದಪಡೆಯಲು ಜಗದ್ಗುರು ದಾರುಕಾಚಾರ್ಯರ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು.

ರುದ್ರಸ್ವಾಮಿ ಕೆರೂರ ಸಾ|| ರಾಮದುರ್ಗ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪ್ರಸಿದ್ಧಲೇಖನವು.

ಧಾರವಾಡ ಜಿಲ್ಲಾ ರಾಣೆಬೆನ್ನೂರು, ಹಿರೇಕೆರೂರು ತಾಲೂಕುಗಳ ಮೈಸೂರು ಸ್ಟೇಟು ಶಿವಮೊಗ್ಗಾ ಡಿಸ್ಟ್ರಿಕ್ಟ ಹೊನ್ನಾಳಿ, ಚಿತ್ರದುರ್ಗದ ಡಿಸ್ಟ್ರಿಕ್ಟ ಹರಿಹರ ಈ ನಾಲ್ಕು ತಾಲೂಕುಗಳ ಸಮಸ್ತ ವೀರಶೈವಜನಾಂಗಕ್ಕೆ ಈ ಮೂಲಕ ಪ್ರಕಟಪಡಿಸುವದೇನಂದರೆ—

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದರಾಜದೇಶಿಕೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಮೇಲೆ ನಮೂದಿಸಿರುವ ರಾಣೆಬೆನ್ನೂರು, ಹಿರೇಕೆರೂರು, ಹೊನ್ನಾಳಿ, ಹರಿಹರ. ಈ ನಾಲ್ಕು ತಾಲ್ಲೂಕುಗಳಲ್ಲಿ ಸಮಸ್ತ ವೀರಶೈವಜನಾಂಗದಲ್ಲಿ ದೀಪಾರಾಧನೆಕಾಣಿಕೆಯನ್ನು ವಸೂಲುಮಾಡುವುದಕ್ಕೂ ಮಹತ್ವವಾದ ಆಚಾರಗಳನ್ನು ರಿಕಾರ್ಡುಮಾಡಿ ಮಹಾಸನ್ನಿಧಿಗೆ ಕಳುಹಿಸುವುದಕ್ಕೂ ಇನ್ನುಳಿದ ಆಚಾರಗಳನ್ನು ರಿಕಾರ್ಡುಮಾಡಿ ಮಹಾಸನ್ನಿಧಿಗೆ ಕಳುಹಿಸುವುದಕ್ಕೂ ಇನ್ನುಳಿದ ಆಚಾರಬಾಬುಗಳನ್ನು ನಾವೇ ಫೈಸಲ್ ಮಾಡಿ ಆ ತೀರ್ಮಾನವನ್ನು ಸಹಾ ಮಹಾಸನ್ನಿಧಿಗೆ ಅರಿಕೆಮಾಡಿಕೊಳ್ಳುವದಕ್ಕೂ ಇವೇ ಮೊದಲಾದಕಾರಣಗಳಿಂದ ನಮಗೆ ಜುಕ್ತಾಂಬುಧಿ ಮೊಕ್ಕಾಮಿನಲ್ಲಿ ತಾರೀಖು, 27-12-1929 ನೇ ದಿವಸ ಟಾಸಾ ಮಹಾಸನ್ನಿಧಿಯ ಮೊಹರಿನಿಂದಲೂ ಸಹಿಯಿಂದಲೂ ಮಂಗಲಕರವಾದ ಹುಕುಮನ್ನು ದಯಪಾಲಿಸಿರುವರಲ್ಲದೆ 2 ಧನರಾಸುಗಳನ್ನು 1 ಮೊಹರನ್ನು ಸಹ ಈ ಇಲಾಖಾದಾರರು ಇಟ್ಟುಕೊಳ್ಳಲು ಅಪ್ಪಣೆಕೊಡಿಸಿರುವದರಿಂದ ಸದರಿ ತಾಲೂಕಗಳ ಸಮಸ್ತ ವೀರಶೈವರು ಮಹಾಸನ್ನಿಧಿಯ ಹುಕುಮಿನಂತೆ ಈ ಇಲಾಖಾ ಮೂಲಕವಾಗಿಯೇ ಪ್ರತಿಯೊಂದು ಗ್ರಾಮದ ವೀರಶೈವರು ಮತಸಂಬಂಧವಾದ ಆಚಾರಬಾಬುಗಳನ್ನು ಪರಿಹರಿಸಿಕೊಳ್ಳುವದಾಗಿಯೂ ದೀಪಾರಾಧನೆ ಕಾಣಿಕೆಯನ್ನು ಸದರಿ ಇಲಾಖಾದಾರರಿಗೆ ಒಪ್ಪಿಸುವುದಾಗಿಯೂ ಸಹ ನಿಮ್ಮಗಳ ತಿಳುವಳಿಕೆಯ ಬಗ್ಗೆ ಈ ಪ್ರಸಿದ್ಧ ಲೇಖನವನ್ನು ಜಾಹೀರುಪಡಿಸೋಣವಾಗಿದೆ.

ಶ್ರೀ ಜಗದ್ಗುರು ರಂಭಾಪುರೀಸಂಸ್ಥಾನದ
ಇಲಾಖಾದಾರ
ಬ್ರಹ್ಮಶ್ರೀ ಸಿದ್ಧಾಂತಿ ಓಂಕಾರಶಾಸ್ತ್ರೀ, ಹಿರೇಮಠ
ಹಳ್ಳೂರು,
ಪೋಸ್ಟ—ಹುಮ್ಮಿನಕಟ್ಟಿ, ಜಿಲ್ಲಾ ಧಾರವಾಡ.

ಕುಷ್ಠರೋಗಕ್ಕೆ ನೆಲಗಡಲೆ.

ಕುಷ್ಠರೋಗ ಚಿಕಿತ್ಸೆಗೆ "ಚೌಲ್‌ಮುಗ್ರಾ" ಎಣ್ಣೆಯೂ, ಅದರಿಂದ ತಯಾರಾದ ಕೆಲವು ಔಷಧಗಳೂ ಬಹಳ ಗುಣಕಾರಿಯೆಂದು ಬಹುಕಾಲದಿಂದ ನಂಬಿಕೆಯಿದೆ. ಆದರೆ, ತಾತ್ಕಾಲಿಕವಾದ ಒಂದು ದೇಶಭಾಷಾಪತ್ರಿಕೆಯಲ್ಲಿ ಕಂಡುಬರುವ ವಿಷಯಗಳಿಂದ, ಒಬ್ಬ ಕುಷ್ಠರೋಗಿಗೆ ಕೆಲವು ದಿನಗಳವರೆಗೆ "ಕಾಜೂ" ಬೀಜದ ಹಣ್ಣನ್ನು ತಿನ್ನುತ್ತ ಬಂದುದರಲ್ಲಿ ಬಹಳ ಗುಣವು ಕಂಡು ಬಂದಿದೆಯೆಂದು ತಿಳಿದುಬಂದುದರಿಂದ, ವೈದ್ಯಶಾಸ್ತ್ರಜ್ಞರ ಮಂಡಲಿಯಲ್ಲಿ ಇದನ್ನು ಕುರಿತು ಬಹಳ ವಿಚಾರಗಳೂ, ಪರಿಶೋಧನೆಗಳೂ ನಡೆಯಲಾರಂಭಿಸಿದೆ.

ಕಳೆದ 1929 ನೇ ವರ್ಷದ ಜನವರೀ ತಿಂಗಳ "ತ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಷನ್ ಜರ್ನಲ್" ಎಂಬ ಪತ್ರಿಕೆಯಲ್ಲಿ, ಸಾತಾರಾವಿಗೆ ಸೇರಿದ ಇಸ್ಲಾಮ್‌ಪೂರ್ ಎಂಬ ಪಟ್ಟಣದ ಪ್ರಸಿದ್ಧ ಡಾಕ್ಟರರಾದ ಎಸ್. ಡಿ. ಎಲ್ಲಿಸ್ ಎಂಬುವರು, ಈ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಕುರಿತು ಮೊದಲನೆಯ ವರದಿಯೊಂದನ್ನು ಬರೆದು ಕಳುಹಿಸಿರುವರು. ಅದರಲ್ಲಿ ಅವರು, ಅತ್ಯಾಭ್ಯಾಸವಾದ ಈ ಮಹಾ[illegible]ಗೆ ನೆಲಗಡಲೆ ಎಣ್ಣೆಯು ಬಹಳ ಗುಣಕಾರಿ[illegible] ನಿರೂಪಿಸಿರುವರು. ಕುಷ್ಠರೋಗ ಚಿಕಿತ್ಸೆಗಾಗಿ ಏರ್ಪಟ್ಟ ಎಣ್ಣೆಯು ಮಾದರಿಯನ್ನು ಬೊಂಬಾಯಿಯಲ್ಲಿರುವ ಒಂದು ಷಾಪಿನಿಂದ ತರಿಸಿ, ಡಾ|| ಮ್ಯೂರ್ ಎಂಬವರಿಗೆ ಪರೀಕ್ಷೆಗಾಗಿ ಕಳುಹಿಸಲ್ಪಟ್ಟಿತು. ಅವರು ಅದನ್ನು ಪರಿಶೋಧಿಸಿ ನೋಡಿ, ಅದರಲ್ಲಿ ಚೌಲ್‌ಮುಗ್ರಾ ಸಂಬಂಧವೇನೂ ಇಲ್ಲವೇ ಇಲ್ಲವೆಂದೂ, ಇದೊಂದು ಮಿಶ್ರಣದ ಎಣ್ಣೆಯೆಂದೂ, ಬಹುಶಃ ಅದು ನೆಲಗಡಲೆ ಯೆಣ್ಣೆಯಾಗಿರಬೇಕೆಂದೂ ರಿಪೋರ್ಟು ಮಾಡಿರುವರು. ಅಲ್ಲದೆ ಆ ರಿಪೋರ್ಟಿನಲ್ಲಿ ಈ ಕೆಳಗೆ ಕಂಡ ವಿಷಯಗಳೂ ಸೂಚಿಸಲ್ಪಟ್ಟಿವೆ.

"ಈ ಎಣ್ಣೆಯನ್ನು ನಾವು ಹಲವು ತಿಂಗಳವರೆಗೆ ಮಲಿನ ರಕ್ತನಾಳಗಳು, ಸ್ನಾಯುಗಳು, ಚರ್ಮ, ಈ ಮೂಲಕವಾಗಿ ಬೇರೆಬೇರೆ ವಿಧದಿಂದ ದೇಹದಲ್ಲಿ ಪ್ರಯೋಗಿಸಿ ನೋಡಿರುವೆವು. ಬಹಳ ಗುಣವು ಕಂಡು ಬಂದಿದೆ. ಒಬ್ಬರೋಗಿಗೆ ಅನ್ನ ನಾಳದೊಳಗೆಲ್ಲಾ ಬಹಳ ವ್ರಣವಾಗಿ ಘನವಾದ ಯಾವ ಆಹಾರವನ್ನೂ ತೆಗೆದುಕೊಳ್ಳಲಾರದೆ ಬಹಳ ಹೀನಸ್ಥಿತಿಯಲ್ಲಿದ್ದಾಗ, ಅವನನ್ನು ಗಾಡಿಯಲ್ಲಿ ಹಾಕಿಕೊಂಡು ಚಿಕಿತ್ಸೆಗಾಗಿ ಕರೆತಂದರು. ಅವನಿಗೆ ನೆಲಗಡಲೆಯೆಣ್ಣೆಯನ್ನು ಇಂಜಕ್ಷನ್ ಮೂಲಕವಾಗಿ ಮೈಗೆ ಏರಿಸಿದುದರಲ್ಲಿ, ಅವನಿಗೆ ರೋಗವು ಗುಣವಾಗಿ, ತಿರುಗಿ ತನ್ನ ಬಡಗಿಕೆಲಸವನ್ನು ನಡೆಸಬಲ್ಲವನಾದನು. ಅದಲ್ಲದೆ ಸ್ವಲ್ಪವೂ ದಣಿವಿಲ್ಲದೆ ಎಷ್ಟು ದೂರದವರೆಗಾದರೂ ನಡೆಯುವದಕ್ಕೂ ಅವನಿಗೆ ಶಕ್ತಿಯುಂಟಾಯಿತು. ಘನವಾದ ಆಹಾರಪದಾರ್ಥಗಳನ್ನು ತಿನ್ನಲಾರಂಭಿಸಿದನು. ಕ್ರಮಕ್ರಮವಾಗಿ ಅವನಿಗೆ ಆ ಎಣ್ಣೆಯಲ್ಲಿ ಅರುಚಿಯಾಗಲಿ, ಅಸಹ್ಯವಾಗಲಿ ಓಕರಿಕೆಯಾಗಲಿ ಇಲ್ಲದೆ, ಅದನ್ನು ಧಾರಾಳವಾಗಿ ಕುಡಿಯುವ ಅಭ್ಯಾಸವಾಯಿತು. ಸಾಧಾರಣವಾಗಿ ಶುದ್ಧವಾದ ಆ ಎಣ್ಣೆಯನ್ನು ರೋಗಿಗಳಿಗೆ ಕೊಟ್ಟಾಗ ಈ ಮೇಲ್ಕಂಡ ತೊಂದರೆಗಳಿಲ್ಲವೂ ಕಾಣುವುದು ಸಹಜವಾಗಿತ್ತು. ಅಂತಹ ಬಾಧೆಗಳೇನೂ ಇವನಲ್ಲಿ ಕಾಣಲಿಲ್ಲ. ಆಮೇಲೆ ದಕ್ಷಿಣ ಇಂಡಿಯಾದ ಎನಾಕುಲಂ ಟ್ರೇಡಿಂಗ್ ಕಂಪೆನಿಯಲ್ಲಿ ತಯಾರಾದ ಈ ಎಣ್ಣೆಯನ್ನು ತರಿಸಿ ರೋಗಿಗಳಿಗೆ ಕೊಡುತ್ತ ಬಂದುದರಲ್ಲಿ, ಕುಷ್ಠರೋಗಿಗಳಿಗೆ ಮೊದಮೊದಲು ಅದರಿಂದ ಓಕರಿಕೆ, ವಾಂತಿ ಮೊದಲಾದ ತೊಂದರೆಗಳು ಕಾಡುಬಂದು, ಅವರು ತಮಗೆ ಹಳೇ ಎಣ್ಣೆಯನ್ನೇ ಕೊಡಬೇಕೆಂದು ಕೇಳಿಕೊಂಡರು. ಆದರೆ ಬೊಂಬಾಯಿ ಮುಂತಾಗಿ ಎಲ್ಲಿಯೂ ದೊರೆಯದಿರಲು ಆಗ ನಾವು ದಕ್ಷಿಣ ಇಂಡಿಯದ ಶುದ್ಧವಾದ ಎಣ್ಣೆಯೊಡನೆ ನೆಲಗಡಲೆ ಎಣ್ಣೆಯನ್ನು ಸಮಭಾಗವಾಗಿ ಸೇರಿಸಿ ಕೊಟ್ಟುದರಲ್ಲಿ ಅದು ಅನುಕೂಲಿಸಿತು. ಅದರಿಂದಾಚೆಗೆ ನಾವು ಬರೀ ಶುದ್ಧವಾದ ಆ ನೆಲಗಡಲೆಯೆಣ್ಣೆಯನ್ನೇ ಇಂಜಕ್ಷನ್ ಮಾಡಿ ಏರಿಸಿದುದರಲ್ಲೇ ಬಹಳ ತೃಪ್ತಿಕರವಾದ ಫಲವು ಕಂಡುಬಂದಿತು. ಕುಷ್ಠರೋಗಿಗಳಿಗೆ ನೂರಕ್ಕೆ ಅರ್ಧದಂತೆ ಅಯೋಡಿನ್ ಕಲೆತ ಚಾಲ್ಮುಗ್ರಾ ಎಣ್ಣೆಯನ್ನು ಇಂಜಕ್ಷನ್ ಮಾಡುತ್ತಿದ್ದುದನ್ನು ನಿಲ್ಲಿಸಿ, ಮೂರು ತಿಂಗಳ ಕಾಲದಿಂದ ಬರೀ ನೆಲಗಡಲೆಯೆಣ್ಣೆಯನ್ನೇ ಇಂಜಕ್ಷನ್ ಮಾಡಿದುದರಲ್ಲಿ ಬಹಳ ಗುಣವು ಕಾಣುತ್ತಿದೆ. ಕುಷ್ಠರೋಗಿಗಳಿಗಾಗಿ ಏರ್ಪಟ್ಟಿರುವ ಮೂರು ಚಿಕಿತ್ಸಾಶಾಲೆಗಳಲ್ಲಿ ಸೇರಿ ಒಟ್ಟು ಇನ್ನೂರು ಮಂದಿ ರೋಗಿಗಳು ಹೊರಗಿನಿಂದ ಚಿಕಿತ್ಸೆಗಾಗಿ ಬರುತ್ತಿರುವರು. ಪ್ರತಿದಿನವೂ ತಪ್ಪದೆ ಇಂಜಕ್ಷನ್ನಿಗಾಗಿ ಬರುತ್ತಿದ್ದ ಬ್ರಾಹ್ಮಣನೊಬ್ಬನಿಗೆ ನೆಲಗಡಲೆ ಎಣ್ಣೆಯಿಂದ ಬಹಳ ಗುಣಕಂಡುಬಂದಿತು. ಮಲಿನರಕ್ತನಾಳದ ಮೂಲಕವಾಗಿ ಇದನ್ನು ಪ್ರಯೋಗಿಸಿದಾಗಲೂ ಅದರಿಂದ ಬಾಧೆಯೇನೂ ತೋರಲಿಲ್ಲ. ಇದನ್ನು ಇಂಡಿಯಾದೇಶದ ಪಶ್ಚಿಮಭಾಗಗಳಲ್ಲಿ ವಿಶೇಷವಾಗಿ ಪೈರಿಡುವರು. ಈ ನೆಲಗಡಲೆಯ ತುಪ್ಪವನ್ನು ಅಡಿಗೆಗೂ ಉಪಯೋಗಿಸುವುದುಂಟು. ಬೆಲೆಯು ಕಡಿಮೆಯಾಗಿರುವುದಲ್ಲದೆ ಎಲ್ಲಾ ಕಡೆಯೂ ಸುಲಭವಾಗಿ ಸಿಕ್ಕುವುದು. ಈ ಎಣ್ಣೆಯ ಗುಣವನ್ನು ಇನ್ನೂ ಸೂಕ್ಷ್ಮವಾಗಿ ಪರಿಶೋಧಿಸುತ್ತಿರುವೆವು. ಕುಷ್ಠರೋಗಕ್ಕೆ ಚಿಕಿತ್ಸೆ ಮಾಡುವ ಡಾಕ್ಟರುಗಳೆಲ್ಲರೂ ಈ ಎಣ್ಣೆಯನ್ನು ಉಪಯೋಗಿಸಿ, ಅದರ ಗುಣವನ್ನು ಕುರಿತು ತಮಗೆ ತಿಳಿದು ಬಂದ ಅನುಭವಗಳನ್ನು ಪ್ರಚಾರಕ್ಕೆ ತರುವರೆಂದು ನಂಬುತ್ತೇನೆ.

"ಪ್ರಾಕ್ಟಿಕಲ್ ಮೆಡಿಸಿನ್"

ಆರೋಗ್ಯಚಂದ್ರಿಕ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ವೃಷಭ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ" ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇನೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಷ್ಟಪಡುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನೆಸಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ !

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅನೇಕ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ನಿಂತಿತವಾಗಿಯೂ ಸಂಪೂರ್ಣ ಬಿಡ್ಡೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [22]

ಕ್ರಯ 8 ಔನ್ಸಿನ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪ್ರಕಟಿ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು.] ## ೧೦೦೦ ರೂಪಾಯಿ ಇನಾಮು [ಆದೀತು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಸಿನಲ್ಲಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಟಿ] ## ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಿಕ್ಕರಿಸಿದರೆ ಶ್ರೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಿರ್ಬಲತೆ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸಹವಾಸದ ಕಡಿತೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ತಲೆ ಭಾರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಶಕ್ತಿ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ಪರೀಕ್ಷಿಸಿ ಅನುಭವಿಸಿರಿ. (52) ವನಸ್ಪತಿ-ಸಗಳಪು, ಶಾಲಿಮಕಂದ, ಮುಧುಕಂದ, ಜರಾಕಂದ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸಿವಲೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಶಾಚಕ್ರಿ, ಮದನಮಸ್ತ, ರಸಪುರುಷ, ಅಮರಸ, ಶಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮುಖಾನಾ, ಬೀಜಬಂದ, ಹರಡಜೋರಿ, ಮುಂಗಲೇ ಬೇದಾಣ, ಮರ್ದನಿಕೆಟ್ಟಿಗೆ, ಶತಾವರಿ, ಶರ್ಕರಮಂಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವಿಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸಾ, ಆವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ವಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ಸಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತಣ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ಸಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಪಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಗುಜಾರದರೋಗ, ಪಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [26]

ಪತ್ತೆ—ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಕಾಣದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಸಾಕ್ಷಾತ್ಶಿವನೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹವಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೨ ಆಣೆ. ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯರ್ ಅಷ್ಟವರ್ಗ ಔಷಧಾಲಯ
[39] (೮೪೮) ಗಂಜೀಪೇಟೆ, ಧಾರಾಶಿವ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಧನಸಂಪದರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ರಂಗದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಸೋಪಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ

ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ

ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ

ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ

ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ

ಮಾಹೇಶ್ವರ ದೀಕ್ಷಾವಿಧಿ .... ೧೨ ಆಣೆ

ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ

ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ

ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ .... ೪ ಆಣೆ

ಬಸವಧ್ವಾಂತ ದಿವಾಕರ .... ೮ ಆಣೆ

ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ

ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ

ವೀರಶೈವಾಚಾರವಿಧಿ .... ೩ ಆಣೆ

ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ

ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ

ವಿವಾಹವಿಧಿ .... ೩ ಆಣೆ

ಪಂಚಾಚಾರ್ಯ ಪ್ರಭಾಕರ .... ೨ ಆಣೆ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ

ವೀರಶೈವಮತವಿಮಾಂಸಾ .... ೨ ಆಣೆ

ವೈದಿಕವಾಙ್ಮಯರಹಸ್ಯ .... ೪ ಆಣೆ

ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ

ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ) .... ೫ ಆಣೆ

ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೨ ಆಣೆ ೬ ಪೈ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,

[19] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಶೀತ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೯ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[28] ಪೋ. ಬಾ. ೫೧೦. ಮದರಾಸು.

ಮೈಸೂರು ಕಮ್ಯಾಚಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||

ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ ನೇ ಜನವರಿ ೧೯೩೦ [ಸಂಚಿಕೆ ೩೬.

ಶ್ರೀ ಸೀತಾರಾಘವ ವೈದ್ಯಶಾಲೆಯ

ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[1] ದೊರೆಯುವ ಸ್ಥಳ— **ಸೀತಾರಾಘವ ವೈದ್ಯಶಾಲಾ, ಮೈಸೂರು.**

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನ... ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಸೂಚನೆ.

ಈ ವರ್ಷ ನಾವು ತಯಾರು ಮಾಡಿಸಿದ್ದ ಕ್ಯಾಲೆಂಡರುಗಳೆಲ್ಲವೂ ಮುಗಿದುಹೋಗಿರುವುದರಿಂದ ಇನ್ನು ಮುಂದೆ ಯಾರೂ ಕ್ಯಾಲೆಂಡರುಗಳನ್ನು ಕಳುಹಿಸಿರೆಂದು ಪತ್ರವನ್ನು ಬರೆಯಬಾರದು. ಹಾಗೂ ಕ್ಯಾಲೆಂಡರುಗಳಿಗಾಗಿ ಹಣವನ್ನು ಮುಂಗಡವಾಗಿ ಕಳುಹಿಸಬಾರದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಉದಾರ ಸಹಾಯ.

ಧಾರವಾಡ ಡಿ|| ಗದಗಶಹರ ನಿವಾಸಿಗಳಾದ ಶ್ರೀಯುತ ಮಡಿವಾಳಪ್ಪಂಣಸೊಡಿಶೆಟ್ರು ಇವರ ಸಾರ್ವಭೌಮ ಸರಕಾರದವರಿಂದ ತಮಗೆ "ರಾವ್ ಸಾಹೇಬ್" ಪದವಿಯು ದೊರೆತ ಸಂತೋಷಾರ್ಥವಾಗಿ ಗದುಗಿನ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಂಘ ಮತ್ತು ವಾಚನಾಲಯಕ್ಕೆ 25 ರೂಪಾಯಿಗಳನ್ನು ಕೊಟ್ಟು ತಮ್ಮ ಉದಾರಬುದ್ಧಿಯನ್ನು ವ್ಯಕ್ತಪಡಿಸಿರುವರು. ಇವರು ಗದುಗಿನಲ್ಲಿ ದೊಡ್ಡವ್ಯಾಪಾರಿಗಳಾಗಿದ್ದು ಸಮಾಜಹಿತೈಷಿಗಳೂ, ಪರೋಪಕಾರಿಗಳೂ ಆಗಿರುವರು. ಸದ್ಗುಣಶಾಲಿಗಳಾದ ಇವರಿಗೆ ಇನ್ನೂ ಹೆಚ್ಚಿನ ಪದವಿಗಳು ದೊರೆತು ಸಮಾಜಕ್ಕೆ ಗೌರವವನ್ನುಂಟುಮಾಡಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇವೆ. ಶ್ರೀ ಜಗದಾಚಾರ್ಯರು ಇವರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಿ ಕಾಪಾಡಲೆಂದು ಹಾರೈಸುವ,

ಕೊಟ್ರಪ್ಪಾ ಮರಿಯಪ್ಪಾ ಲಕ್ಕುಂಡಿ

ಚೇರ್‌ಮನ್ ಶ್ರೀ ಜಗದ್ಗುರು

ಪಂಚಾಚಾರ್ಯ ಸೇವಾಸಂಘ.

ಸ್ವೀಕಾರ.

ಮ|| ರಾ|| ರುದ್ರಪ್ಪಾ ಮಾರನಬಸರಿ. ಸೂಡಿ, ತಾ|| ರೋಣ ಇವರಿಗೆ ಶ್ರೀ ಜಗದ್ಗುರುಗಳವರ ಆಶೀರ್ವಾದಬಲದಿಂದ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ವೇ|| ರುದ್ರಯ್ಯಾ ಪಟದಯ್ಯಾ ಹಿರೇಮಠ ಯರೇಹಂಚಿನಾಳ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೂವಿನಹಡಗಲಿ ತಾ|| ಮೋರಿಗೇರಿ ಗ್ರಾಮದ ಮ|| ರಾ|| ಶಿವಲಾಯರ ಪುತ್ರಿ ಚಿ|| ಕುಂ|| ಸೌ|| ನಾಗೂಬಾಯಿಯನ್ನು ಹರಪನಹಳ್ಳಿ ರಿಟೈರ್ಡ ಹೆಡ್‌ಕ್ಲಾರ್ಕರಾದ ಮ|| ರಾ|| ಲಕ್ಷ್ಮಣರಾಯರ ಪುತ್ರ ಚಿ|| ಸೌ|| ರಾಮರಾಯರಿಗೆ ಕೊಟ್ಟು ಅತ್ಯಂತವೈಭವದಿಂದ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ಹೊಳಗುಂದಿ ಎಸ್. ಬಿ. ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಕಾಂಡೂರು ಯಂಗ್‌ಮೆನ್ಸ್ ಇಂಪ್ರೂವಿಂಗ್ ಸೊಸೈಟಿಯ ಸೆಕ್ರೆಟರಿಗಳಾದ ಮ|| ರಾ|| ರಾಚಪ್ಪ ಹೇರೂರು ಇವರು ತಮ್ಮ ಮೇಲೆ ಬಂದ ಅಪವಾದನೆಯು ನಿವಾರಣೆಯಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ರವಾನಿಸಿರುತ್ತಾರೆ.

ಧಾರವಾಡ ಡಿ|| ಗದಗಶಹರ ನಿವಾಸಿಗಳಾದ ಮ|| ರಾ|| ಶಿವಪ್ಪಾ ಬಸಪ್ಪಾ ನಾಯಕರ ಇವರಿಗೆ ಪುತ್ರೋತ್ಸವವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಕೊಟ್ರಪ್ಪಾ ಮರಿಯಪ್ಪಾ ಲಕ್ಕುಂಡಿ ಇವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾಲೂಕು ಮಸ್ಸಾರ್ವಾ ಪೋಸ್ಟ್ ಸೋಮವಾರಪೇಟೆ ವಾಸಿಗಳಾದ ಮ|| ರಾ|| ಎಸ್. ಕೆ. ಚನ್ನಬಸವ ಶೆಟ್ಟರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣಹೊಂದಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 1 ರೂ. ಕಳುಹಿಸಿರುತ್ತಾರೆ.

ಹುಬ್ಬಳ್ಳಿನಿವಾಸಿಗಳಾದ ವೇ|| ಚಂದ್ರಶೇಖರಯ್ಯ ವಿರೂಪಾಕ್ಷಯ್ಯ ನಂದಿಕೇಶ್ವರಮಠ ಹಾಗೂ ರಾಘವೇಂದ್ರ ಭಾಸ್ಕರಪ್ಪಾ ಜವಳಿ ಇವರು. ಹೊಸದಾಗಿ ಸರಾಫಅಂಗಡಿಯನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಕಳುಹಿಸಿರುತ್ತಾರೆ.

ಬೆಳಗಾಂ ಜಿಲ್ಲಾ ಮುನವಳ್ಳಿವಾಸಿಗಳಾದ ಶ್ರೀಯುತ ಗುರಲಿಂಗಪ್ಪ ಯುಕ್ಕುಂಡಿ ಇವರು ತಮ್ಮ ಪುತ್ರ ಚಿ|| ಅಪ್ಪಯ್ಯಪ್ಪನ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಹೂಲಿಗ್ರಾಮದ ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದ ಸೆಕ್ರೆಟರಿಗಳ ದ್ವಾರಾ ತಲ್ಪಿರುತ್ತದೆ.

ವಿಜಾಪುರ ಡಿ|| ನಿಡಗುಂದಿಗ್ರಾಮದ ಶ್ರೀ|| ಷ|| ಬ್ರ|| ರುದ್ರಸ್ವಾಮಿಮಠದ ಒಟ್ಟದಸ್ವಾಮಿಗಳು ಕಾರ್ತಿಕ ಪೂಜೋತ್ಸವ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ತೆಗೆದು ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಳವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಅಖಿಲಭಾರತ ವಿದ್ಯಾರ್ಥಿಗಳ ಪರಿಷತ್ತು ಲಾಹೋರಿನಲ್ಲಿ ಡಿಸೆಂಬರ್ ತಾ|| 30 ರಲ್ಲು ಪಂಡಿತ ಮಾಲವೀಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮಾತೃಭಾಷೆಯಲ್ಲಿ ಶಿಕ್ಷಣಕೊಡಬೇಕೆಂದೂ, ಹಿಂದಿಯನ್ನು ಸರ್ವರಿಗೂ ಕಲಿಸಬೇಕೆಂದೂ, ವರದಕ್ಷಿಣೆಯನ್ನು ತೆಗೆದುಕೊಳ್ಳಬಾರದೆಂದೂ, ಸೂಚನೆಗಳು ಮಂಜೂರಾದವು.

ಪ| ವಾ|| ದಿ|| ಬ|| ರೊದ್ದ ಇವರ ಸ್ಮಾರಕವೆಂದು ಕರ್ನಾಟಕ ಕಾಲೇಜಿನ ಬಿ. ಎ. ವರ್ಗದಲ್ಲಿ ಇಂಗ್ಲಿಷಿನಲ್ಲಿ ಮೊದಲನೆಯ ನಂಬರು ಪಡೆಯುವ ವಿದ್ಯಾರ್ಥಿಗೆ ಒಂದು ಭಂಗಾರದ ಪದಕವನ್ನು ಕೊಡುವದಕ್ಕೆ 1000 ರೂ. ಗಳನ್ನು ದಾನವಾಗಿ ಕೊಡಬೇಕೆಂದು ಮಿ|| ಎ. ಎ. ರೊದ್ದ ಇವರು ತನ್ನ ಮರಣಶಾಸನದಲ್ಲಿ ಬರೆದಿಟ್ಟಿದ್ದಾರೆ.

೪೪ ನೆಯ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್. ಲಾಹೋರ್.

ಪಂಡಿತ ಜವಾಹಿರಿಲಾಲರ ಮೆರವಣಿಗೆ.

ಈ ಸಾರಿ ಕಾಂಗ್ರೆಸ್ಸಿನ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುವ ಪಂಡಿತಜವಾಹಿರಿಲಾಲ್ ನೆಹರುರವರು ಡಿಸೆಂಬರ್ 25 ನೇ ತಾರೀಖಿನ ದಿವಸ ಲಾಹೋರಿಗೆ ಸ್ಪೆಸಲ್ ರೈಲಿನಲ್ಲಿ ಬಂದರು. ಅವರನ್ನು ಮೆರವಣಿಗೆ ಮಾಡಿಕೊಂಡು ಹೋಗುವದಕ್ಕಾಗಿ ಪಟ್ಟಣದ ಮುಖ್ಯ ಮುಖ್ಯ ಬೀದಿಗಳನ್ನೆಲ್ಲಾ ಬಹು ಮನೋಹರವಾಗಿ ಅಲಂಕರಿಸಿದುದಲ್ಲದೆ ಅವರು ಬರುವ ವೇಳೆಗೆ ಲಕ್ಷಾಂತರ ಪ್ರಜೆಗಳು ಅವರ ದರ್ಶನಾರ್ಥವಾಗಿ ಬೀದಿಗಳಲ್ಲಿ ನೆರೆದಿದ್ದರು. ರೈಲ್ವೆ ಸ್ಟೇಷನ್ನಿನಲ್ಲಿಯೂ ಸಹ ಜನರು ವಿಶೇಷವಾಗಿ ಕೂಡಿದ್ದು ಅವರು ರೈಲಿನಿಂದ ಇಳಿದ ಕೂಡಲೇ ಜನರು ಜಯಘೋಷಮಾಡುತ್ತಾ ಮುಂದುವರಿಯುವದಕ್ಕೂ ಸಹ ಅವಕಾಶವಿಲ್ಲದಂತೆ ಅವರನ್ನು ಮುತ್ತಿಬಿಟ್ಟರು. ಪಂಡಿತರು ಆ ಗುಂಪಿನಲ್ಲಿ ದಾರಿಯನ್ನು ಬಿಡಿಸಿಕೊಂಡು ಸ್ವಾಗತ ಕಮಿಟಿಯ ಅಧ್ಯಕ್ಷರಾದ ಡಾಕ್ಟರು ಕಿಚುಲು ರವರನ್ನು ಆಲಂಗಿಸಿ ಮೊದಲೇ ಸಿದ್ಧವಾಗಿದ್ದ ಬಿಳಿಯಕುದುರೆಯ ಮೇಲೆ ಕುಳಿತು ಅಶ್ವಾರೋಹಿಗಳಾದ ಸ್ವಯಂಸೇವಕರೊಡನೆ ರಾಜಬೀದಿಗಳಲ್ಲಿ ಮೆರವಣಿಗೆ ಹೊರಟರು. ಮುಂದುಗಡೆ ಢೋಳ ಗುತ್ತಿದ್ದ ವಾದ್ಯವಿಶೇಷವೂ, ಜನರ ಕೋಲಾಹಲವೂ, ಜಯಘೋಷವೂ, ಅಭೂತಪೂರ್ವವಾಗಿದ್ದುವು. ಮೆರವಣಿಗೆಯು ಪಟ್ಟಣವನ್ನೆಲ್ಲಾ ಸುತ್ತಲು ಮೂರು ಘಂಟೆಗಳಕಾಲ ಹಿಡಿಯಿತು. ಪಂಡಿತ ಜವಾಹಿರಿಲಾಲರು ಅನಾರ್ಕಲಿ ರಸ್ತೆಗೆ ಬಂದಾಗ ಜನರು ಅವರ ಮೇಲೆ ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳ ಮಳೆಯನ್ನೇ ಸುರಿಸಿದರು. ಆ ರಸ್ತೆಯಲ್ಲೇ ಒಂದು ಕಡೆ ಪಂಡಿತ ಮೋತೀಲಾಲರು ತಮ್ಮ ಪತ್ನೀಪುತ್ರರೊಡನೆಯೂ ಶ್ರೀಮತಿ ಸರೋಜಿನಿ ದೇವಿಯರೊಡನೆಯೂ ಮೆರವಣಿಗೆಯನ್ನು ನೋಡುತ್ತಾ ನಿಂತಿದ್ದರು. ಪಂಡಿತ ಜವಾಹಿರಿಲಾಲರು ತಂದೆತಾಯಿಗಳನ್ನು ಕಂಡೊಡನೆ ಅವರಿಗೆ ನಮಸ್ಕರಿಸಿ ಅವರ ಆಶೀರ್ವಾದಗಳನ್ನು ಸ್ವೀಕರಿಸಿ ಮುಂದೆ ನಡೆದರು. ದಾರಿಯುದ್ದಕ್ಕೂ ಜನರು ಪಂಡಿತರಿಗೆ ಫಲ ಪುಷ್ಪಗಳನ್ನು ಸಮರ್ಪಿಸುತ್ತಿದ್ದರು. ಪಂಡಿತರು ಅವೆಲ್ಲವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತ ಲಜಪತರಾಯ ನಗರ (ಕಾಂಗ್ರೆಸ್ ಮಂಟಪ) ವನ್ನು ತಲುಪಿದರು. ಮುಖ್ಯವಾಗಿ ಲಾಹೋರಿನಲ್ಲಿ ನಡೆದ ಅಂದಿನ ಮೆರವಣಿಗೆಯು ಅತ್ಯಂತ ಮಹತ್ವದ್ದಾಗಿತ್ತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ.

26 ನೆಯ ತಾರೀಖಿನ ದಿವಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಸೇರಿತು. ಪ್ರಥಮದಲ್ಲಿ ಮಹಾತ್ಮಾ ಗಾಂಧಿಯವರು ವೈಸ್‌ರಾಯರ ಮೇಲೆ ಬಾಂಬು ಹಾಕಲೆತ್ನಿಸಿದವರ ಅತ್ಯಾಚಾರವನ್ನು ಖಂಡಿಸಿ ಆ ವಿಪತ್ತಿನಿಂದ ಅವರು ಪಾರಾದುದಕ್ಕಾಗಿ ತಮಗುಂಟಾದ ಆನಂದವನ್ನು ವ್ಯಕ್ತಪಡಿಸಿದರು. ಅನಂತರ ವೈಸ್‌ರಾಯರ ಪ್ರಕಟಣೆ ಮತ್ತು ಅವರು ಹಿಂದೂಸ್ಥಾನಕ್ಕೆ ಸ್ವರಾಜ್ಯ ದೊರೆಯುವ ವಿಷಯದಲ್ಲಿ ತೋರಿಸಿದ ಸಹಾನುಭೂತಿ ಈ ವಿಷಯಗಳ ಸಂಬಂಧವಾಗಿ ಚರ್ಚೆಯು ನಡೆಯಿಸಲ್ಪಟ್ಟಿತು. ಮುಂದೆ ನಡೆಯಲಿರುವ ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಕಾಂಗ್ರೆಸ್ಸಿನವರಾರೂ ಭಾಗಿಗಳಾಗಬಾರದೆಂದೂ ಇನ್ನು ಮುಂದೆ ಸ್ವರಾಜ್ಯವೆಂದರೆ ಸಂಪೂರ್ಣ ಸ್ವಾತಂತ್ರ್ಯವೆಂಬ ಭಾವನೆಯಿಂದ ಕಾಯಿದೆ ಭಂಗಮಾಡಿ ಚಳವಳಿಯ ಕಾರ್ಯಗಳನ್ನು ಪ್ರಾರಂಭಮಾಡಬೇಕೆಂದೂ, ಕೌನ್ಸಿಲುಗಳನ್ನು ಸಂಪೂರ್ಣ ಬಹಿಷ್ಕರಿಸಿ, ಸಧ್ಯ ಮೆಂಬರು[illegible]ವರೂ ರಾಜೀನಾಮೆ ಕೊಡಬೇಕೆಂದೂ ತೀರ್ಮಾನಗಳು [illegible]ಲ್ಪಟ್ಟವು.

ಅಖಿಲಭಾರತ ಕಾಂಗ್ರೆಸ್ ಕಮಿಟಿ.

27 ನೆಯ ತಾರೀಖಿನ ದಿವಸ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಸೇರಿ ನಾಸಿಕ್ ವರದಿ, ಮತ್ತು ಖರ್ಚುವೆಚ್ಚದ ಪಟ್ಟಿಯು ಮಂಜೂರಾದಲ್ಪಟ್ಟಿತು. ಹೊಸ ಕಾಂಗ್ರೆಸ್ಸಿನ ವಿಷಯನಿಯಾಮಕ ಕಮಿಟಿಯು ಏರ್ಪಟ್ಟಿತು. ಅನಂತರ ಪಂಡಿತ ಮೋತೀಲಾಲರು ವಿನೋದಕರವಾದ ಭಾಷಣವನ್ನು ಮಾಡಿ ಅಧ್ಯಕ್ಷಸ್ಥಾನವನ್ನು ತಮ್ಮ ಮಗನಿಗೆ ಬಿಟ್ಟುಕೊಟ್ಟರು.

ಅಧ್ಯಕ್ಷರ ಭಾಷಣ.

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯು ಕಳೆದ ತಿಂಗಳು ೨೯ ನೆಯ ಭಾನುವಾರ ಲಾಹೋರ್ ಪಟ್ಟಣದಲ್ಲಿ ಉದ್ಘಾಟನವಾಯಿತು. ಹಲವು ದಿವಸಗಳ ಮುಂಚೆ ಸ್ವಾಗತ ಮಂಡಲಿಯವರೂ ಮತ್ತು ವಿಷಯ ಚರ್ಚಾಸಮಿತಿಯವರೂ ತಮ್ಮ ಕಾರ್ಯಕಲಾಪಗಳನ್ನು ಪ್ರಾರಂಭಿಸಿದರು. ಅವೆರಡರಲ್ಲಿಯೂ ಭರತಖಂಡವು ಆಂಗ್ಲೇಯ ಪ್ರಭುತ್ವಕ್ಕೆ ಒಳಪಡದೆ ಸ್ವಾತಂತ್ರರಾಜ್ಯವಾಗಿರಬೇಕು. ಮತ್ತು ಇದನ್ನು ಸಾಧಿಸುವುದಕ್ಕಾಗಿ ಕೇಂದ್ರ ಮತ್ತು ಪ್ರಾಂತಿಕ ನ್ಯಾಯಸಭೆಗಳ ಬಹಿಷ್ಕಾರವಾಗಬೇಕೆಂಬ ಮುಖ್ಯ ಅಂಶಗಳಿಂದ ಕೂಡಿದ ಠರಾವುಗಳು ಅನೇಕರಿಂದ ಅನುಮೋದಿಸಲ್ಪಟ್ಟು ರಾಷ್ಟ್ರೀಯ ಸಭೆಯ ಅಂಗೀಕಾರಕ್ಕಾಗಿ ಕಳುಹಿಸಲ್ಪಟ್ಟವು. ಅನಂತರ್ದ್ದೆ ರಾಷ್ಟ್ರೀಯ ಸಭೆಯ ಕಾರ್ಯಗಳು ಪ್ರಾರಂಭವಾದವು. ದೇಶದ ಎಲ್ಲಾ ಭಾಗಗಳಿಂದಲೂ ಸಂದೋಹ ಸಂದವಾಗಿ ಸದಸ್ಯರು ದಯಮಾಡಿದ್ದರು. ಮಹಾತ್ಮ ಗಾಂಧಿಯವರು ಮುಖ್ಯಸೂತ್ರಧಾರಿಗಳಾಗಿ ನಿಂತದ್ದು ಅನೇಕರಿಗೆ ಆಹ್ಲಾದವನ್ನುಂಟುಮಾಡಿತು. ವೀರಕರುಣರಾದ ಜವಾಹಿರಿಲಾಲ್ ನೆಹರುರವರೇ ಈ ಮಹಾಸಭೆಯ ಅಧ್ಯಕ್ಷರು. ಮೇಧಾಶಕ್ತಿಯಿಂದಲೂ, ಅಪರಮಿತ ತ್ಯಾಗದಿಂದಲೂ, ಉಜ್ವಲ ಸಾಹಸದಿಂದಲೂ ಆ ಸ್ಥಾನವನ್ನು ಪಡೆದಂಥಾ ವೀರನ ಅಂತಃಕರಣದಿಂದ ಹೊರಟಿರುವ ವಾಕ್ಯಗಳು ಎಂಥಾ ಜಡನ ಹೃದಯವನ್ನೂ ಭೇದಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅವುಗಳಲ್ಲಿ ಶಿಥಿಲಿನ ಆರ್ಭಟವಿಲ್ಲ. ಮಿಂಚಿನ ಕ್ಷಣಿಕತೆಯಿಲ್ಲ. ರಾಜಕೀಯ ತತ್ವಜ್ಞನ ಯುಕ್ತಿಗಳಿಲ್ಲ. ಮಂದಗಾಮಿಯಾದ ಭಿಕ್ಷುಕನ ಪ್ರಲಾಪವಾಗಲಿ ಪ್ರಾರ್ಥನೆಯಾಗಲಿ ಇಲ್ಲ. ಸ್ವಾವಲಂಬನೆ, ಸ್ವಸಾಮರ್ಥ್ಯಗಳಿಂದ ಮಿರುಗುವ ತೇಜೋರಾಶಿ! ಯುವಕರಿಗೆ ಮಾರ್ಗದರ್ಶಿ! ಇಂಥಾ ಭಾಷಣವದು.

ಆರಂಭದಲ್ಲಿ ರಾಷ್ಟ್ರೀಯ ಸಭೆಯ ಪೂರ್ವ ಇತಿಹಾಸವನ್ನು ಸೂಕ್ಷ್ಮವಾಗಿ ನಿರೂಪಿಸಿ, ಅದರ ಸೇವೆಯಲ್ಲಿ ಮಡಿದಿರುವ ದೇಶಭಕ್ತರಿಗೆ ತಮ್ಮ ಕಾಣಿಕೆಯನ್ನು ಅರ್ಪಿಸಿ, ನವಯುಗದ ಸ್ವರೂಪವನ್ನು ವರ್ಣಿಸಿರುವರು. ಎಲ್ಲಿ ನೋಡಿದರೂ ಸಂಶಯವೂ, ಚಳವಳಿಯೂ ತುಂಬಿದೆ. ಪೂರ್ವಾಚಾರಗಳೂ, ಭಾವಗಳೂ ಕೂಲಂಕಷವಾಗಿ ಚರ್ಚಿಸಲ್ಪಡುತ್ತಿರುವುವು. ಮುಂದೇನಾಗುವದೆಂದು ಹೇಳುವುದು ಸುಲಭ ಸಾಧ್ಯವಲ್ಲ. ಪ್ರಪಂಚವೇ ಪ್ರಸವವೇದನೆಯನ್ನನುಭವಿಸುವಂತೆ ಕಾಣುತ್ತದೆ. ಆಂಗ್ಲೇಯಾವಲಂಬನೆಯು ಕ್ಷೀಣಿಸುತ್ತಿರುವದು ಸ್ಪಷ್ಟವಾಗುತ್ತಿದೆ. ಇನ್ನು ಮುಂದೆ ಪ್ರಪಂಚದ ಕೇಂದ್ರಸ್ಥಾನಗಳು ಅಮೇರಿಕ ಮತ್ತು ಆಸಿಯಾಖಂಡ ಭರತಖಂಡವು ಇಂಥಾ ಪ್ರಗತಿಯಲ್ಲಿ ಭಾಗಿಯಾಗಲೇಬೇಕು ಎಂದು ಸೂಚಿಸಿ, ನಮ್ಮ ದೇಶದಲ್ಲಿರುವ ಭೇದಭಾವಗಳು ಮತ್ತು ಹಿಂದೂ ಮುಸಲ್ಮಾನರ ವೈಮನಸ್ಸುಗಳ ವಿಚಾರವಾಗಿ ಸಮಂಜಸವಾದ ಮಾತುಗಳನ್ನಾಡಿರುವರು. ಅನಂತರ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ವಿಷಯವಾಗಿ ಇಂಗ್ಲೆಂಡಿನ ಮಂತ್ರಿಗಳೂ ಮತ್ತು ವೈಸ್‌ರಾಯರೂ ಆಡಿರುವ ಮಾತುಗಳಿಗೆ ಟೀಕೆ ಮಾಡಿ ಭಾರತೀಯರ ಧ್ಯೇಯವನ್ನು ಈ ರೀತಿಯಾಗಿ ವಿಶದಪಡಿಸಿರುವರು.

ಕಲ್ಕತ್ತಾ ಸಮಾರಂಭದಲ್ಲಿ ಅದೇ ಠರಾವುಗಳನ್ನು ನಾವು ಅಂಗೀಕರಿಸಿದ್ದು ನಿಜವಾದರೆ ನಮಗೆ ಸಂಪೂರ್ಣ ಸ್ವಾತಂತ್ರ್ಯವೇ ಪರಮಾವಧಿ ಸ್ವಾತಂತ್ರ್ಯವೆಂಬ ಶಬ್ದವು ಅಷ್ಟು ಸಾಜೂಕಾಗಿ ಕಾಣುವುದಿಲ್ಲ. ಯಾಕೆಂದರೆ ಅದರ ಅರ್ಥವು ನಾವು ಸಂಸ್ಕೃತಿಗಳೊಂದಿಗೆ ಸಹವಾಸ ಬೆಳಸದೆ ಕೂಪಕೂರ್ಮ ನ್ಯಾಯವಾದಿಗಳಂತೆ ಕಂಡುಬರಬಹುದು. ಭಾರತೀಯ ಸ್ವಾತಂತ್ರ್ಯವೆಂದರೆ ಬ್ರಿಟಿಷರು ಆಧಿಪತ್ಯದಿಂದಲೂ ಅಧಿಕಾರದಿಂದಲೂ ನಿವೃತ್ತರಾಗುವದು. ಭರತಖಂಡವು ಪ್ರಪಂಚದ ಎಲ್ಲಾ ಜನಾಂಗಗಳೊಂದಿಗೂ ಸಹಕಾರಿಯಾಗಿರುವದರಲ್ಲಿ ಯಾವ ಸಂಶಯವೂ ಇಲ್ಲ. ಎಂದಿನವರೆಗೆ ಬ್ರಿಟಿಷರ ದಬ್ಬಾಳಿಕೆಯು ನಿವಾರಣೆಯಾಗುವುದಿಲ್ಲವೋ ಅಂದಿನವರೆಗೆ ಅವರ ಸಾಮ್ರಾಜ್ಯದಲ್ಲಿ ಸಮಭಾಗಿಗಳಾದ ಇತರ ರಾಜ್ಯಗಳ ಸ್ಥಾನವನ್ನು ನಮ್ಮಿಂದ ಪಡೆಯಲಸಾಧ್ಯ. ನಮಗೆ ಪರಾಧೀನತೆಯೂ ದ್ರವ್ಯನಷ್ಟವೂ ತಪ್ಪುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ನಮ್ಮನ್ನಾಲಂಗಿಸಿರುವದು ನಮ್ಮ ಕ್ಷೇಮಕ್ಕಲ್ಲ. ಪ್ರೀತಿಯಿಂದ ಕೂಡಿ ಪುಷ್ಟೀಕರಿಸುವ ಆಲಿಂಗನೆಯಲ್ಲವಿದು. ಹಾನಿಯನ್ನು ಸೂಚಿಸುವಂತಹುದಿದು. ಒಂದು ಜನಾಂಗವು ಮತ್ತೊಂದು ಜನಾಂಗವನ್ನು ಆಕ್ರಮಿಸಿಕೊಂಡು ಅದರಿಂದ ತನ್ನ ಬಿನ್ನತ್ಯಕ್ಕೆ ಹೋರಾಡುವದಾದರೆ, ಶಾಂತಿ ಸುಖಗಳು ಎಲ್ಲಿಂದ ಬಂದೀತು? ಲಾಭದಾಯಕವಾದ ಅಧಿಕಾರವನ್ನು ಬಿಡಲು ಯಾರಿಗೆತಾನೇ ಮನಸ್ಸಾದೀತು? ನಾವು ಸ್ವಾತಂತ್ರ್ಯದ ವಿಷಯವಾಗಿಯೂ ಡೊಮಿನಿಯನ್ ತರಗತಿಯ ವಿಚಾರವಾಗಿಯೂ ಬಹಳ ವಾಕ್ಯದವನ್ನು ನಡೆಸಿರುತ್ತೇವೆ. ಇವೆಲ್ಲಾ ನಿಷ್ಪ್ರಯೋಜನ ಅರ್ಥಾತ್ ನಮಗೆ ಬೇಕಾದದ್ದು ಪ್ರಜಾಯುತವಾದಂಥಾ ಅಧಿಕಾರ ಇದನ್ನು ಯಾವ ಹೆಸರಿನಲ್ಲಿ ಬೇಕಾದರೂ ಕರೆಯಬಹುದು.

ಮೇಲ್ಕಂಡಂತೆ ನಾವು ಸಂಪೂರ್ಣ ಸ್ವಾತಂತ್ರ್ಯಕ್ಕೆ ಬದ್ಧಕಂಕಣರಾಗಿರುವೆವು. ಬ್ರಿಟಿಷ್ ಪಾರ್ಲಿಮೆಂಟಿಗೆ ನಮ್ಮ ರಾಜಕೀಯ ವಿಚಾರದಲ್ಲಿ ಹಿಮ್ಮೆಟ್ಟುವದಿಲ್ಲ ಸ್ವೇಚ್ಛಾಧಿಕಾರವಿದೆ ಎಂಬುವದನ್ನು ನಮ್ಮ ರಾಷ್ಟ್ರೀಯ ಸಭೆಯು ಸರ್ವಥಾ ಒಪ್ಪುವದಿಲ್ಲ. ಅದನ್ನು ನಾವು ಬೇಡುವವರೂ ಅಲ್ಲ. ಇನ್ನು ಮುಂದೆ ಭರತಖಂಡವು ಯಾವ ವಿದೇಶದ ಆಳ್ವಿಕೆಗೂ ಒಳಪಡುವದಿಲ್ಲ. ನಮ್ಮ ಕೋರಿಕೆಯನ್ನು ಪುಷ್ಟೀಕರಿಸಲು ಈವತ್ತು ನಾಳೆ ನಮ್ಮಲ್ಲಿ ಶಕ್ತಿಯಿರಲಾರದು. ನಮ್ಮ ಕುಂದುಕೊರತೆಗಳು ನಮಗೆ ವೇದ್ಯವಾಗಿವೆ. ನಾವು ಶಕ್ತಿಯುತರೆಂಬ ಜ್ಞಾನದ ಹೆಮ್ಮೆ ನಮಗಿಲ್ಲ. ಯಾರೇ ಆಗಲಿ ಅದರಲ್ಲಿಯೂ ಬ್ರಿಟಿಷರು ನಮ್ಮ ಉಗ್ರಸಂಕಲ್ಪವನ್ನು ಸಾಧಾರಣವಾದುದೆಂದು ಭಾವಿಸದಿರಲಿ. ಮುಂದೆ ಬರುವದೆಲ್ಲವನ್ನೂ ಗಮನಿಸಿ ಮನಸ್ಸಾಕ್ಷಿಯಿಂದ ದೃಢಸಂಕಲ್ಪವನ್ನು ಮಾಡಿರುವೆವು. ಹಿಮ್ಮೆಟ್ಟುವುದಿಲ್ಲ. ಒಂದು ದೊಡ್ಡ ಜನಾಂಗದ ಧ್ಯೇಯವನ್ನು ಎಷ್ಟುಕಾಲ ಅಡಗಿಸಿಡುವದು ಸಾಧ್ಯ? ಈವತ್ತು ನಾಳೆ ಜಯವನ್ನು ಕಾಣದಿದ್ದರೂ ನಾಡಿದ್ದಾದರೂ ಕಂಡೇ ಕಾಣುವೆವು.

ನಾನು ಸಮಷ್ಟಿತತ್ವ ಮತ್ತು ಪ್ರಜಾಸತ್ತಾಧಿಕಾರವಾದಿ. ನನಗೆ ಚಕ್ರಾಧಿಪತಿಗಳಲ್ಲಾಗಲಿ ರಾಜರಲ್ಲಾಗಲಿ ಅಥವಾ ಕೈಗಾರಿಕೆಗಳ ಮುಖಂಡರಾದ ಧನಿಕರಲ್ಲಾಗಲಿ ನಂಬಿಕೆಯಿಲ್ಲ. ಆದರೆ ಇಂಥ ರಾಷ್ಟ್ರೀಯ ಸಭೆಗಳಿಂದ ಸಮಷ್ಟಿತತ್ವವು ದೇಶದಲ್ಲೆಲ್ಲಾ ಪ್ರಚಾರಕ್ಕೆ ತರುವುದು ಕಷ್ಟವಾಗಿ ಪರಿಣಮಿಸಬಹುದು. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಈ ಸಮಷ್ಟಿ ತತ್ವವು ಎಷ್ಟರಮಟ್ಟಿಗೆ ಬೇರೂರಿದೆಯೆಂದರೆ ಅದನ್ನು ತಡೆಯಲಸಾಧ್ಯ. ಪರಂತು ಯಾವ ಮಾರ್ಗದಿಂದ ಎಷ್ಟು ಕಾಲದಲ್ಲಿ ಅದನ್ನು ಕಾರ್ಯಕ್ರಮಕ್ಕೆ ತರಬಹುದೆಂಬುದೇ ಪ್ರಶ್ನೆ. ನಮ್ಮ ಭರತಖಂಡವೂ ಕೂಡ ಭೇದಭಾವಗಳನ್ನು ನಾಶಮಾಡಿ, ಬಡತನವನ್ನು ನಿವಾರಣೆಮಾಡಿ, ತನ್ನ ಸಂಸ್ಕೃತಿಗನುಸಾರವಾಗಿ ಮುಂದರಿಯಲು ಪ್ರಯತ್ನ ಪಡಬೇಕು.

ಇಂಡಿಯಾದೇಶದಲ್ಲಿಯೂ ಕೂಡ ದೇಶೀಯ ಸಂಸ್ಥಾನಗಳು ಪಾಳೆಯಗಾರನ ಕಾಲದ ಚಿಹ್ನೆಗಳು. ಅವುಗಳ ರಾಜರಲ್ಲನೇಕರಿಗೆ ತಾವು ದೇವಾಂಶ ಸಂಭೂತರೆಂಬ ಭಾವನೆಯು ಇನ್ನೂ ಇದೆ. ಮತ್ತು ರಾಜ್ಯವೆಲ್ಲಾ ತಮ್ಮದೆಂದು ಅರಿತು ಉತ್ಪತ್ತಿ ಧನವನ್ನೆಲ್ಲಾ ಸ್ವೇಚ್ಛೆಯಾಗಿ ವೆಚ್ಚಮಾಡುತ್ತಾರೆ. ಅವರಲ್ಲಿ ಕೆಲವರು ಪ್ರಜಾರಂಜಕವಾಗಿ ಆಳುತ್ತಾರೆ. ಆದರೆ ಅನೇಕರಿಗೆ ಇಂಥಾ ಜವಾಬ್ದಾರಿಯೇ ತಲೆಹೊಕ್ಕಿಲ್ಲ. ವಿಷಮವಾದೋ ದೋಷ ಅವರಲ್ಲಿಲ್ಲ. ಈಗಿರುವ ರಾಜ್ಯಾಂಗ ಪದ್ಧತಿಯಲ್ಲಿ ಬೆರತುಹೋಗಿದೆ. ಕೇಳಿ; ಒಬ್ಬ ದೇಶೀಯ ರಾಜರು ಹೇಳುವುದನ್ನು:—"ಅಕಸ್ಮಾತ್ತಾಗಿ ಇಂಗ್ಲೆಂಡಿಗೂ ಇಂಡಿಯಾಕ್ಕೂ ಒಂದುವೇಳೆ ಯುದ್ಧಪ್ರಾಪ್ತವಾದಲ್ಲಿ ನಾನು ಇಂಗ್ಲೆಂಡಿನವರ ಪರವಾಗಿ ಹೋರಾಡುತ್ತೇನೆ" ಇದೆಂಥಾ ಮನೋಭಾವ? ಆತನ ದೇಶವಾತ್ಸಲ್ಯಕ್ಕೆ ಇದೇ ಮಿತಿ. ಹೀಗಿರಲು "ಪ್ರಜೆಗಳ ನಿಜವಾದ ಪ್ರತಿನಿಧಿಗಳು ನಾವು" ಎಂದು ಅವರು ವಾದಿಸುವುದರಲ್ಲಿ ಏನಾಶ್ಚರ್ಯ? ಇಂಥಾ ಅಸಮಂಜಸವಾದ ವಿಚಾರವನ್ನು ಆಂಗ್ಲೇಯರೊಪ್ಪಿರುವದೂ ಆಶ್ಚರ್ಯವಲ್ಲ! ದೇಶೀಯ ಸಂಸ್ಥಾನಗಳು ತಾವೇ ಬೇರೆ ರಾಜಕೀಯ ಮಾರ್ಗಾವಲಂಬಿಗಳಾಗಲಾರವು ಯಾಕೆಂದರೆ ನೆರೆಹೊರೆಯ ಬ್ರಿಟಿಷ್ ಸಂಸ್ಥಾನಗಳಲ್ಲಿರುವ ಪ್ರಗತಿಯು ಸಂಸ್ಥಾನಗಳನ್ನೂ ಆವರಿಸದೇ ಇರದು. ಪ್ರಜಾಸತ್ತಾಮಯವಲ್ಲದ ರಾಜ್ಯತ್ವವು ಎಲ್ಲೆಲ್ಲಿಯೂ ಕೊನೆಗೊಂಡಿರುವುದು. ಸಂಸ್ಥಾನದ ಆಳ್ವಿಕೆಯ ಕ್ರಮವನ್ನು ತಿದ್ದುಪಾಟು ಮಾಡಬೇಕಾದವರು ಸಂಸ್ಥಾನದ ಪ್ರಜೆಗಳೂ ಮತ್ತು ಅವರ ರಾಜರು ರಾಷ್ಟ್ರೀಯ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ಸಂಪೂರ್ಣ ಜವಾಬ್ದಾರೀ ರಾಜ್ಯಪದ್ಧತಿಯು ದೇಶೀಯ ಸಂಸ್ಥಾನಗಳಿಗೆ ಅನ್ವಯಿಸಲಾಗದೇ ಹೋದೀತೆ? ಯಾವ ಯಾವ ರಾಜರು ಇಂಥಾ ಬದಲಾವಣೆಗೆ ಗಮನಕೊಡುತ್ತಾರೋ ಅಂಥವರೊಂದಿಗೆ ಸಹಕಾರವಾಡಲು ರಾಷ್ಟ್ರೀಯ ಸಭೆಯು ಸಿದ್ಧವಾಗಿದೆ. ಅರ್ಥಾತ್ ದೇಶೀಯ ಸಂಸ್ಥಾನದ ಪ್ರಜೆಗಳನ್ನು ನಿರಾಕರಿಸಲಾಗುವುದಿಲ್ಲ.

ಅನಂತರ ಕೆಲಸಗಾರರ ಸ್ಥಿತಿಗತಿಗಳನ್ನು ವಿಶಾಲವಾಗಿ ವಿವರಿಸಿ ಅವರ ಉನ್ನತಿಗೆ ಬೇಕಾದ ಮಾರ್ಗಗಳನ್ನೆಲ್ಲಾ ಗುರ್ತಿಸಿರುವರು.

ಸ್ವಾತಂತ್ರ್ಯಾರ್ಜನೆಗೆ ಹೋರಾಡಬೇಕಾದ ಪ್ರಯತ್ನಕ್ಕೆ ಜನಬಲಬೇಕು. ಮತ್ತು ಸಾಮ್ರಾಜ್ಯ ಜನರೂ ಅದರಲ್ಲಿ ಪಾಲುಗೊಳ್ಳಬೇಕು. ನಾವು ಹತ್ತು ವರುಷಗಳ ಹಿಂದಿನ ಅಸಹಕಾರ ಪಂಥವನ್ನು ಜಾರಿಗೆ ತರಲಿ ಅಥವಾ ಗಿರಣಿಗಳ ಬಹಿಷ್ಕಾರವನ್ನು ಅನುಮೋದಿಸಿದಲ್ಲಿ, ನಮ್ಮ ಕಾರ್ಯಕಲಾಪಗಳು ಶಾಂತಮಯವಾಗಿರಬೇಕು. ಕ್ರೂರಕೃತ್ಯಗಳನ್ನು ಇದರೊಂದಿಗೆ ಜೋಡಿಸಕೂಡದು. ಇವೆರಡೂ ಶತ್ರುಗಳು ಆದ್ದರಿಂದ ರಾಷ್ಟ್ರೀಯ ಸಭೆಯು ಶಾಂತಿಮಯವಾದ ಮಾರ್ಗವನ್ನವಲಂಬಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ನಮ್ಮ ಮೂಲತತ್ವವು ಅಸಹಕಾರವೆಂದಮೇಲೆ ಅದರ ಭೇದ ಪ್ರಭೇದಗಳನ್ನು ಕಾರ್ಯನಿರ್ವಾಹಕ ಸಮಿತಿಯವರು ಸೂಕ್ತವಾಗಿ ನಿರೂಪಿಸಬಹುದು. ಹಿಂದೆ ಮೂರು ವಿಧವಾದ ಬಹಿಷ್ಕಾರಗಳಿದ್ದವು. ೧ ಶಾಸನಸಭಾ ಬಹಿಷ್ಕಾರ. ೨ ನ್ಯಾಯಸ್ಥಾನ ಬಹಿಷ್ಕಾರ. ೩ ವಿದ್ಯಾಶಾಲೆಯ ಬಹಿಷ್ಕಾರ. ಅವುಗಳ ಪರಮಾವಧಿ ತೆರಿಗೆಗಳ ಬಹಿಷ್ಕಾರ. ರಾಷ್ಟ್ರೀಯ ಸಮರವು ಉಜ್ವಲವಾಗಿರುವಾಗ ಇವೆಲ್ಲವೂ ಅವಶ್ಯಕವು. ಆದರೆ ಪ್ರಸ್ತುತ ಶಾಸನ ಸಭೆಗಳ ಬಹಿಷ್ಕಾರ ಈಗ್ಗೆ ಸಾಕು. ಬಹಿಷ್ಕಾರವು ನಮ್ಮ ಧ್ಯೇಯವನ್ನು ಸಾಧಿಸಲು ಒಂದು ಉಪಾಯ. ಅದರಿಂದ ನಿವೃತ್ತರಾದವರೆಲ್ಲರೂ ತಮ್ಮ ಕಾಲವನ್ನೆಲ್ಲವನ್ನೂ ಮುಂದಿನ ಮಾರ್ಗಗಳನ್ನು ಸರಿಪಡಿಸಲು ಸಹಾಯಕರಾಗುತ್ತಾರೆ.

ನಮ್ಮ ದೇಶದ ಏಳಿಗೆಗಲ್ಲದೆ ದಬ್ಬಾಳಿಕೆಯ ಶೃಂಖಲೆಗಳನ್ನು ಬಿಗಿಸುವದಕ್ಕಾಗಿ ನಮ್ಮ ಮೇಲೆ ಹೊರಿಸಿರುವ ಸರ್ಕಾರದ ಸಾಲವನ್ನು ಒಪ್ಪಿಕೊಳ್ಳಕೂಡದೆಂಬುವದು ಜವಾಹಿರಿಲಾಲ್‌ರವರ ಮತ.

ನಮ್ಮ ಕದನಕ್ಕೆ ತಕ್ಕ ಸಿದ್ಧತೆ ಅವಶ್ಯಕ ರಾಷ್ಟ್ರೀಯ ಸಭೆಯು ಶಿಥಿಲವಾಗಿದೆ. ಅದಕ್ಕೆ ತೀವ್ರಗತಿಯಿಲ್ಲ. ಸಂಖ್ಯಾಬಲದ ಮರುಳಾಟದ ಕಾಲಹೋಯಿತು. ಯಾರು ರಾಷ್ಟ್ರೀಯ ಸಭೆಯ ಠರಾವುಗಳನ್ನು ಶ್ರದ್ಧೆಯಿಂದ ಪಾಲಿಸುವರೋ! ಅಂಥವರಿಂದ ಕೂಡಿರಬೇಕು ಸಭೆ. ನಮಗೆ ಅವಶ್ಯವಾದುದು ಐಕ್ಯತೆ ಮತ್ತು ಭಕ್ತಿಯುತವಾದ ಸೇವೆ. ಬರಿಯ ಸಂಖ್ಯೆಗಳಿಂದ ಪ್ರಯೋಜನವಿಲ್ಲ. ಸ್ವಲ್ಪ ಜನರು ಏಕಾಗ್ರತೆಯಿಂದ ಕೆಲಸಮಾಡಿ ಅತಿಶಯವಾದ ಜಯವನ್ನು ಪಡೆದಿರುವರು. ಆದರೆ ಜಯವು ನಮ್ಮ ಅಧೀನವಲ್ಲ. ಜಯವು ವೀರರಿಗೆ ಕಾರ್ಯೋದ್ಯುಕ್ತರಿಗೆ ಹೇಡಿಗಳಿಗಲ್ಲ! ನಮ್ಮ ಜಯಾಪಜಯಗಳು ನಮ್ಮನ್ನೇ ಕೂಡಿವೆ; ನಮ್ಮ ಚರಿತ್ರಕಾರರು ನಾವಾಗಿಯೇ ಇರುವೆವು. ನಮ್ಮ ಬಿಕ್ಕವನ್ನು ಪರದೇಶೀಯರ ಆಳ್ವಿಕೆಯಿಂದ ಪಾರುಮಾಡಬೇಕು. ಸಹೋದರ ಸಹೋದರಿಯರೆಲ್ಲರಿಗೂ ಈ ಮಹಾಪ್ರಯತ್ನದಲ್ಲಿ ಭಾಗಿಗಳಾಗಬೇಕೆಂದು ಸ್ವಾಗತವೀಯುವೆನು. ಇದರ ಪ್ರತಿಫಲವೇನು ಗೊತ್ತೇ? ಪರಂಪರೆಯಾದ ಕಷ್ಟ; ಬಂದೀಖಾನೆ! ಅಥವಾ ಮರಣ"

ಮಹಾಸಭೆಯಲ್ಲಿ ಅಂಗೀಕೃತವಾದ ಗೊತ್ತುವಳಿಗಳು.

(ಎರಡನೆಯ ದಿವಸ)

ಡಿಸೆಂಬರು ೨೧ ನೇ ತಾರೀಕು ತ್ರುಪ್ಪಕಾಲಕ್ಕೆ ರಾಷ್ಟ್ರ ಸಭೆಯ ಎರಡನೆಯ ದಿವಸದ ಕೆಲಸಗಳು ಪ್ರಾರಂಭವಾದವು. ಮಹಾತ್ಮಾ ಗಾಂಧಿಯವರು ಮೊದಲನೇ ಠರಾವನ್ನು ಸೂಚಿಸಿದನು.

"ಈ ರಾಷ್ಟ್ರಸಭೆಯು ವೈಸ್‌ರಾಯರವರ ಹೊಗೆಗಾಡಿಯ ಮೇಲೆ ಮಾಡಿದ ಕಿಡಿಮದ್ದಿನ ಘೋರಕೃತ್ಯಕ್ಕಾಗಿ ವಿಷಾದಿಸುತ್ತದೆ. ಅಲ್ಲದೆ ಇಂಥಾ ಕೃತ್ಯಗಳು ರಾಷ್ಟ್ರಸಭೆಯ ತತ್ವಗಳಿಗೆ ವಿರೋಧವೆಂತಲೂ ರಾಷ್ಟ್ರೀಯಶಕ್ತಿಗೆ ಹಾನಿಕರವೆಂತಲೂ ಪುನಃ ಒತ್ತಿ ಹೇಳುತ್ತದೆ. ಲಾರ್ಡ್ ಅರ್ವಿನ್ ದಂಪತಿಗಳು ಮತ್ತು ಅವರ ಸೇವಕರು ಅನಾಹುತದಿಂದ ರಕ್ಷಿತರಾದದ್ದಕ್ಕಾಗಿ ಸಂತೋಷಪಡುತ್ತದೆ."

ಮಹಾತ್ಮಜೀಯವರು ಈ ಠರಾವಿನ ಅಂಶಗಳನ್ನೆಲ್ಲಾ ಬಿಡಿಸಿ ಟೀಕೆ ಮಾಡಿ ಅದರ ಮಹತ್ವವನ್ನೂ ಉದಾರತತ್ವವನ್ನೂ ಸ್ಪಷ್ಟಪಡಿಸಿದರು. ಮುಖ್ಯ ಅವರು ಒತ್ತಿ ಹೇಳಿದ್ದೇನೆಂದರೆ—"ನಮಗೆ ವ್ಯಕ್ತಿದ್ವೇಷವಿಲ್ಲ. ನಮ್ಮ ಸಮರದಲ್ಲಿ ಪ್ರೀತಿಗೆ ಮಾತ್ರ ಪ್ರಧಾನ. ನಮ್ಮ ಶತ್ರುಗಳನ್ನೂ ಕೂಡ ದ್ವೇಷಿಸದೆ ಪ್ರೀತಿಸಿ ಅವರ ಮನೋಭಾವವನ್ನು ಬದಲಾಯಿಸಬೇಕು. ಅಹಿಂಸೆಯನ್ನು ತಳಹದಿಯಾಗಿಟ್ಟಿರುವಾಗ, ಹಿಂಸೆಗೆ ಆಸ್ಪದವೆಲ್ಲಿಯದು? ಕೆಲವರು ಇದಕ್ಕೆ ವಿರೋಧಿಸಿದರು. ಅವರ ವಾದವೇನೆಂದರೆ— ಹಿಂಸಾಪಕ್ಷದವರು ರಾಷ್ಟ್ರೀಯ ಸಭೆಗೆ ಸೇರಿಲ್ಲದಾದಕಾರಣ ಅವರ ವಿಚಾರದಲ್ಲಿ ನಾವು ಯಾತಕ್ಕೆ ಪ್ರವೇಶಿಸಬೇಕು. ಮತ್ತು ಎರಡು ಮಾರ್ಗಗಳೂ ಅವರವರ ಕೆಲಸವನ್ನು ಮಾಡಲಿ. ನೋಡೋಣ ಯಾವದು ಜಯವಾಗುವದು ಅಂತ್ಯದಲ್ಲಿ ಮಹಾತ್ಮಜೀಯವರ ಠರಾವು ಅನುಮೋದಿಸಲ್ಪಟ್ಟಿತು.

ಸಂಪೂರ್ಣ ಸ್ವಾತಂತ್ರ್ಯ

ಪುನಃ ಮಹಾತ್ಮಜೀಯವರು ಕೆಳಗೆ ಸೂಚಿಸಿದ ಸರ್ವ ಸ್ವಾತಂತ್ರ್ಯದ ಠರಾವನ್ನು ರಾಷ್ಟ್ರಸಭೆಯ ಮುಂದಿಟ್ಟರು. ಅದೇನೆಂದರೆ—

"ವಸಾಹತಿ ಸರ್ಕಾರದ ವಿಚಾರದಲ್ಲಿ ರಾಷ್ಟ್ರಸಭೆಯವರು ಇತರ ಪಕ್ಷದವರೊಂದಿಗೆ ಕಲೆತು ಪ್ರಕಟಿಸಿರುವ ಪ್ರಕಟನೆಯನ್ನು ಕಾರ್ಯಕಾರೀ ಸಮಿತಿಯವರು ಅನುಮೋದಿಸಿದ್ದು ಈ ರಾಷ್ಟ್ರಸಭೆಯು ಮಂಜೂರುಮಾಡಿ, ಮತ್ತು ನಮ್ಮ ಸ್ವರಾಜ್ಯಸ್ಥಾಪನೆಯ ವಿಚಾರವಾಗಿ ಶಾಂತಿಯಿಂದಲೇ ನಮ್ಮ ಕೆಲಸ ಕೈಗೂಡುವುದೆಂದು ವೈಸ್‌ರಾಯರವರು ಅವಸ್ಥೆಗೆ ಕೊಡಿಸಿರುವದನ್ನು ಶ್ಲಾಘಿಸಿ, ಮತ್ತು ವೈಸ್‌ರಾಯರಿಗೂ ಪಂಡಿತ ಮೋತೀಲಾಲ್ ನೆಹರು ಮುಂತಾದ ಮುಖಂಡರಿಗೂ ನಡೆದ ಸಂಭಾಷಣೆಯನ್ನು ಗಮನಿಸಿ, ರಾಷ್ಟ್ರಸಭೆಗೆ ಇಂಥಾ ಸಂದರ್ಭದಲ್ಲಿ ಕೋರುವದೇನೆಂದರೆ ಇಂಗ್ಲೆಂಡಿನಲ್ಲಿ ನಡಿಸಬೇಕೆಂದಿರುವ ಸರ್ವ ಪಕ್ಷೀಯ ಪರಿಷತ್ತಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಕಲ್ಕತ್ತಾ ಪಟ್ಟಣದಲ್ಲಿ ೧೯೨೮ ನೆಯ ವರ್ಷದಲ್ಲಿ ಅನುಮೋದಿಸಿದ ಠರಾವಿನ ಅನುಸಾರವಾಗಿ ಈ ರಾಷ್ಟ್ರಸಭೆಯು ಬಹಿರಂಗಪಡಿಸುವದೇನೆಂದರೆ— ರಾಷ್ಟ್ರಸಭೆಯ ಮೂಲನಿಬಂಧನೆಗಳಲ್ಲಿರುವ ಸ್ವರಾಜ್ಯ ಶಬ್ದಕ್ಕೆ ಸಂಪೂರ್ಣ ಸ್ವಾತಂತ್ರ್ಯವೆಂಬರ್ಥ. ಅರ್ಥಾತ್ ನೆಹರೂ ಸಮಿತಿಯ ವರದಿಯು ರದ್ದುಮಾಡಲ್ಪಟ್ಟಿದೆ. ಸಭಿಕರೆಲ್ಲರೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಬೇಕಾದ ಸಾಧಕಗಳಲ್ಲಿ ಏಕಾಗ್ರತೆಯಿಂದ ಕರ್ತವ್ಯಪರರಾಗಬೇಕು. ಕೋಮುಗಳ ಪ್ರಾತಿನಿಧ್ಯದ ವಿಚಾರವಾಗಿ ನೆಹರು ವರದಿಯಿಂದ ಯಾರ್ಯಾರಿಗೆ ಕ್ಲೇಶವುಂಟಾಗಿ ರಾಷ್ಟ್ರಸಭೆಯಿಂದ ದೂರವಾಗಿದ್ದರೋ ಅವರೆಲ್ಲಾ ಪುನಃ ಹಿಂತಿರುಗಿ ಬಂದು ಈ ಕಾರ್ಯದಲ್ಲಿ ಉದ್ಯುಕ್ತರಾಗಬೇಕು. ರಾಷ್ಟ್ರಸಭೆಯ ಘಟನೆಯು ಈ ರೀತಿ ಬದಲಾಯಿಸಲ್ಪಟ್ಟಿದ್ದರಿಂದ ಅದಕ್ಕನುಸಾರವಾಗಿ ಕೇಂದ್ರ ಮತ್ತು ಪ್ರಾಂತಿಕ ನ್ಯಾಯಸಭೆಯ ಸದಸ್ಯರೆಲ್ಲರೂ ತಮ್ಮ ಪದವಿಗೆ ರಾಜೀನಾಮೆ ಪತ್ರ ಕೊಡಬೇಕು. ಮತ್ತು ಮುಂದೆ ನಡೆಯುವ ಚುನಾವಣೆಗಳಲ್ಲಿ ಯಾವ ತರವಾದ ಸಹಾಯವನ್ನು, ಪ್ರತ್ಯಕ್ಷವಾಗಲಿ ಪರೋಕ್ಷವಾಗಲಿ ಮಾಡಕೂಡದು ಮತ್ತು ರಾಷ್ಟ್ರಸಭೆಯ ರಚನಾಕಾರ್ಯದಲ್ಲಿಯೇ ಮಗ್ನರಾಗಬೇಕು. ಸೂಕ್ತತೋರಿದಾಗ ಚುನಾಯಿಸಲ್ಪಟ್ಟ ಸ್ಥಳಗಳಲ್ಲಾಗಲಿ ಅಥವಾ ಬೇರೆಕಡೆಯಲ್ಲಾಗಲಿ ತಕ್ಕ ನಿಬಂಧನೆಗೂ ರಕ್ಷಣೆಗೂ ಒಳಪಡಬೇಕಾದರೆ, ಕಂದಾಯಗಳನ್ನು ಕೊಡದ ಅಸಹಕಾರ ಶಸ್ತ್ರವನ್ನು ಪ್ರಯೋಗಿಸಬೇಕು."

ಮಹಾತ್ಮಜೀಯವರು ಹಿಂದಿಯಲ್ಲಿ ಒಂದು ಸಣ್ಣ ಭಾಷಣವನ್ನು ಮಾಡಿ ಠರಾವನ್ನು ಸಭೆಯ ಮುಂದಿಟ್ಟರು. ಪಂಡಿತ ಮೋತೀಲಾಲ್ ನೆಹರು ಅವರು ಅನುಮೋದಿಸಿದರು ಇದಕ್ಕೆ ೧೪ ತಿದ್ದುಪಡಿ ಸೂಚನೆಗಳು ತರಲ್ಪಟ್ಟವು. ಮಾಳವೀಯ, ಕೇಲ್ಕರ್, ಸತ್ಯಮೂರ್ತಿ ಅನೆ ಮತ್ತು ಇತರರು ಠರಾವನ್ನು ಖಂಡಿಸಿ ಅಥವಾ ಇತರ ಬದಲಾವಣೆಗಳನ್ನು ಸೂಚಿಸಿ ಭಾಷಣಮಾಡಿದರು. 10 ಘಂಟೆಯಕಾಲ ವಿಷಯವು ಚರ್ಚಿಸಲ್ಪಟ್ಟಿತು. ಮಹಾತ್ಮಜೀಯವರು ಅಂತ್ಯದಲ್ಲಿ ಎಲ್ಲರ ವಾದಗಳನ್ನೂ ಪರೀಕ್ಷಿಸಿ ಅವುಗಳ ಟೊಳ್ಳನ್ನು ನಿರೂಪಿಸಿ ಹೃದಯಂಗಮವಾದ ಭಾಷಣವನ್ನು ಮಾಡಿದರು. ಚರ್ಚೆಯು ಮುಗಿಯಿತು. ಸಭಿಕರ ಸಮ್ಮತಿಯು ಅರಿಯುವಕಾಲ ಒದಗಿತು. ಪ್ರತಿವಾದಗಳೆಲ್ಲವೂ ಒಂದೊಂದಾಗಿಯು ಸಭಿಕರು ಅನುಮೋದಿಸಲಿಲ್ಲ. ಕೊನೆಗೆ ಮೊದಲಿನ ಠರಾವು ಸಭೆಯ ಮುಂದಿಡಲ್ಪಟ್ಟು, ಅನೇಕರಿಂದ ಅನುಮೋದಿಸಲ್ಪಟ್ಟಿತು. ಇಷ್ಟು ಹೊತ್ತಿಗೆ ಸರಿ ರಾತ್ರಿಯಾಯಿತು. ಮಹಾತ್ಮಜೀಯವರು ನಿರೂಪಿಸಿದಂತೆ 1930 ನೇ ವರುಷವು ಹುಟ್ಟಿತು. ಸಂಪೂರ್ಣ ಸ್ವಾತಂತ್ರ್ಯ ಸ್ವರಾಜ್ಯವೇ ಭಾರತೀಯರ ಧ್ಯೇಯವೆಂದು ರಾಷ್ಟ್ರೀಯ ಮಹಾಸಭೆಯು ಸಾರಿ ಹೇಳಿತು. ಸಭೆಯು ಎದ್ದಿತು. ರಾಷ್ಟ್ರಧ್ವಜಾರೋಹಣವಾಯಿತು.

ಮೂರನೆಯ ದಿವಸ

ಜನವರಿ 1 ರಲ್ಲಿ ರಾಷ್ಟ್ರೀಯ ಸಭೆಯು ಪುನಃ ಸೇರಿತು. ಮುಖ್ಯವಾದ ವಿಷಯವು ಅಂದರೆ ಸಂಪೂರ್ಣ ಸ್ವರಾಜ್ಯ, ಆಗಲೇ ತೀರ್ಮಾನಕ್ಕೆ ಬಂದಿದ್ದರಿಂದ ಈ ದಿವಸದ ಚರ್ಚೆಗಳು ಅಷ್ಟು ವಿಶಾಲವಾಗಿರಲಿಲ್ಲ. ಇನ್ನು ಮುಂದೆ ರಾಷ್ಟ್ರೀಯ ಸಭೆಯು ಎಂದಿನಂತೆ ಡಿಸೆಂಬರ್ ತಿಂಗಳಲ್ಲಿ ನಡೆಯುವದನ್ನು ತಪ್ಪಿಸಿ ಸ್ಥಳದ ಹವವನ್ನು ಲಕ್ಷ್ಯಿಸಿ ಫೆಬ್ರವರಿ ಅಥವಾ ಮಾರ್ಚಿಯಲ್ಲಿ ನಡೆಸಬೇಕೆಂಬುದೇ ಮೊದಲನೆಯ ವಿಷಯ ಇದು ಅನುಮೋದಿಸಲ್ಪಟ್ಟಿತು.

ಭರತಖಂಡದ ಸರ್ಕಾರಿ ಋಣ (Public Debt) ವನ್ನು ಕುರಿತು

"ಆಳುವ ಸಾಮ್ರಾಜ್ಯದವರು ಭರತಖಂಡದಮೇಲೆ ನೇರವಾಗಿಯೋ ಅಥವಾ ಗುಪ್ತವಾಗಿಯೋ ಹೊರಿಸಿರುವ ಋಣದ ಜವಾಬ್ದಾರಿಯು ಸಂಪೂರ್ಣ ಸ್ವಾತಂತ್ರ್ಯತೆಯನ್ನುಳ್ಳ ಭರತಖಂಡದಿಂದ ಸಹಿಸಲಾಗದು ಮತ್ತು ಸಹಿಸಲೂ ಕೂಡದು. 1922 ರಲ್ಲಿ ಗಯಾ ಸಭೆಯಲ್ಲಿ ಈ ವಿಚಾರದಲ್ಲಿ ಮಂಜೂರಾದ ಠರಾವನ್ನು ಪುನಃ ಪುಷ್ಟೀಕರಿಸುವದಲ್ಲದೆ ಸಮಸ್ತ ಜನರಿಗೂ ತಿಳಿಸುವದೇನೆಂದರೆ ಸ್ವತಂತ್ರ ಭರತಖಂಡದ ಅಧಿಕಾರಕ್ಕೆ ಬರತಕ್ಕಂಥಾ ಹಕ್ಕುಬಾಧ್ಯತೆಗಳೆಲ್ಲವೂ ಒಂದು ಸ್ವತಂತ್ರ ಪಂಚಾಯಿತಿಯಿಂದ ಪರಿಷ್ಕರಿಸಲ್ಪಡುವುವು ಅಲ್ಲದೆ ಅಂಥಾ ಪಂಚಾಯಿತಿಯಿಂದ ಯಾವ ಯಾವ ಹಕ್ಕುಬಾಧ್ಯತೆಗಳು ನ್ಯಾಯವೂ ನ್ಯಾಯಯುತವೂ ಅಲ್ಲವೆಂದು ತೋರುವವೋ ಅಂಥವುಗಳು ಯಾವ ರೀತಿಯಿಂದ ಹೊರಿಸಲ್ಪಟ್ಟಿದ್ದರೂ, ತಿರಸ್ಕರಿಸಲ್ಪಡುವವು" ಎಂಬ ಠರಾವು ಅಂಗೀಕೃತವಾಯಿತು.

ಅನಂತರ ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರೀ ಸರ್ಕಾರವು ಸ್ಥಾಪಿಸಲ್ಪಡಬೇಕೆಂದು ನಿಶ್ಚಿತವಾಯಿತು. ನಿರಂಕುಶಾಧಿಪತ್ಯದಿಂದೊಡಗೂಡಿದ ದೇಶೀಯ ಸಂಸ್ಥಾನಗಳ ಪ್ರಜೆಗಳ ವಿಚಾರದಲ್ಲಿ ರಾಷ್ಟ್ರೀಯ ಸಭೆಯು ತಕ್ಕ ಗಮನಕೊಟ್ಟಿದ್ದಕ್ಕಾಗಿ ತಮ್ಮ ಸಂತೋಷವನ್ನು ಸೂಚಿಸಿದರು.

ಮುಂದಿನ ರಾಷ್ಟ್ರೀಯ ಸಭೆಯು ಕರಾಚಿಯಲ್ಲಿ ನಡೆಯಬೇಕೆಂದು ನಿಶ್ಚಿತವಾಯಿತು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾಕ್ಟರ್ ಕಿಚಲೂ ಅವರು ಸ್ವಯಂಸೇವಕರಿಗೂ ಇತರರಿಗೂ ಅಭಿನಂದನಗಳನ್ನರ್ಪಿಸಿ ಮುಖಂಡರಲ್ಲಿ ತಮ್ಮ ವೈಮನಸ್ಯವನ್ನು ಮರೆತು ಎಲ್ಲರೂ ಕಲೆತು ಮುಂದಿನ ಕೆಲಸಗಳನ್ನು ನಡೆಸಬೇಕೆಂದು ವಿನಯದಿಂದ ಪ್ರಾರ್ಥಿಸಿದರು.

ಅಧ್ಯಕ್ಷರಾದ ಜವಾಹಿರಿಲಾಲ್ ನೆಹರು ಅವರು ಉಪಸಂಹಾರ ಭಾಷಣವನ್ನು ಹಿಂದಿಯಲ್ಲಿಯೇ ಮಾಡಿದರು. ಸಂಪೂರ್ಣ ಸ್ವತಂತ್ರ್ಯ ಸಾಧನವು ಪ್ರಪಂಚದಲ್ಲೆಲ್ಲಾ ಹರಡಿದೆ. ಮಾರ್ಗವು ಕಷ್ಟಪರಂಪರೆಗಳಿಂದೊಡಗೂಡಿದೆ ಇದಕ್ಕೋಸ್ಕರ ಹಿಮ್ಮೆಟ್ಟಬೇಕಾದ್ದಿಲ್ಲ. ಭದ್ರಗಳೇನೋ ಉಂಟಾಗಿದೆ. ಅನೇಕರಿಗೆ ಅಪ್ರಿಯವೂ ಆಗಿದೆ. ವಿಧವಿಧ ಉದ್ದೇಶಗಳಿಂದಲೂ ಧ್ಯೇಯಗಳಿಂದಲೂ ಕೂಡಿದ ಒಂದು ಸಭೆಯಿಂದಲೂ. ಕೆಲವರಿಂದ ಕೂಡಿದಾಗ್ಯೂ, ಒಂದು ಆಕಾಂಕ್ಷೆ ಎಲ್ಲರಿಗೂ ಇದ್ದಲ್ಲಿ ಬಹಳ ಫಲವನ್ನು ಪಡೆಯಬಹುದು. 'ವಂದೇಮಾತರಂ' ಜಯಘೋಷವು ಮಂದಿರವನ್ನೆಲ್ಲಾ ತಿಕ್ಕಿರಿಸಿತು. ಅಲ್ಲಿಗೆ ಸಭೆಯು ಮುಗಿಯಿತು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವಿವಾಹಮಹೋತ್ಸವವೂ, ಕೇಸರಿಯವರ ಕೀರ್ತನವೂ.

ವಿವಾಹವೆಂದರೆ ನಾಚು, ರಂಗು ಮುಂತಾದ ನಾನಾಪ್ರಕಾರದ ದುಂದುಗಾರಿಕೆಯ ಸಮಯವೆಂದೇ ಕೆಲವರ ಗಣನೆಯಾಗಿಹೋಗಿರುವದು. ಆದರೂ ಈಚೆಗೆ ಕೆಲವರು ವಿಧಿವತ್ತಾಗಿ ಸದ್ವ್ಯಯದಿಂದ ತಮ್ಮ ಕಾರ್ಯಭಾಗಗಳನ್ನು ನೆರವೇರಿಸುವುದನ್ನು ನೋಡಿ, ಯಾರಿಗೆತಾನೆ ಸಂತೋಷವೆನಿಸದು? ಇದೇ ತತ್ವಕ್ಕನುಸರಿಸಿ ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲೂಕು ನೋರಿಗೇರಿ ಗ್ರಾಮದ ಮ॥ ರಾ॥ ಕರಣಂತಿಪರಾಯರು 3-4 ಸಾವಿರ ರೂಪಾಯಿಗಳ ವೆಚ್ಚದಿಂದ ಸದ್ಗುಮತೀಯರ ಭೂರಿ ಅನ್ನ ಸಂತರ್ಪಣೆಯಿಂದ ಅನನ್ಯಯುಕ್ತ ಅಸ್ಪದವಿಲ್ಲದೆ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದ ವಿವಾಹಮಹೋತ್ಸವು ಬಹು ವರ್ಣನೀಯವಾಗಿದೆ. ಶ್ರೀ ಜಗದ್ಗುರುಪಂಚಾಚಾರ್ಯರಲ್ಲಿ ಇವರಿಗಿರುವ ನಿರಂತರವಾದ ಭಕ್ತಿಯು, ಅನುಕರಣೀಯವಾದದ್ದಾಗಿದೆ. ಆದಿ ಬಳಿಕ ವಿರಕ್ತವರೇ? ಇಂಥ ಸದ್ಭಕ್ತಶಿರೋಮಣಿಗಳ ಅನುಕರಣಾದಿಂದಲಾದರೂ ಗುರುಭಕ್ತಿಯಿಂದ ನಡೆದು ಪರಮುಕ್ತಿಯನ್ನು ಪಡೆದು ಪುನೀತರಾಗಿರಿ. ಈ ಮಹೋದಯದ ಲಗ್ನಕ್ಕೆ ಮ॥ ರಾ॥ ಮೈಸರ್ಗಾ ಹಡಗಲಿ ತಹಶೀಲ್‌ದಾರ್ರವರೇ ಮುಂತಾದ ಸರ್ಕಾರಿ ಅಧಿಕಾರಸ್ಥರೂ, ಅಜುಬಾಜು ಗ್ರಾಮಗಳ ಬಂಧುಮಿತ್ರಮಂಡಲಿಯೂ, ಆಗಮಿಸಿದ್ದರಿಂದಲೂ, ಕೀರ್ತನಕೇಸರಿ ಇತ್ಯಾದಿ ಬಿರುದಾಂಕಿತರಾದ ದೇಶಭಕ್ತ ಮ॥ ಕೊಪ್ಪಳ ಜಯದೇವಾಚಾರ್ಯರು ಆಗಮಿಸಿದ್ದುದರಿಂದಲೂ, ಅಪೂರ್ವಶೋಭೆಯುಂಟಾಗಿತ್ತು. ಸದ್ರಿ ಕೇಸರಿಯವರು ಪ್ರತಿದಿನವೂ ಅಭಿನಯಿಸುವ ಗುರುಭಕ್ತಿ, ಹರಿಹರಸಮಸಿ, ದೇಶಭಕ್ತಿ ಇವೇ ಮುಂತಾದವುಗಳು ಶ್ರೋತೃಗಳ ಚಿತ್ತಾಕರ್ಷಕವೂ, ಸನ್ಮಾರ್ಗಪ್ರದರ್ಶಕವೂ ಆಗಿದ್ದುವು. ಇವರು ತಮ್ಮ ಕೀರ್ತನದಲ್ಲಿ ಉದಾಹರಿಸುವ ಪ್ರಮಾಣಗಳಿಂದ ಶ್ರೀ ಜಗದಾಚಾರ್ಯರಲ್ಲಿ ಇವರಿಗಿರುವ ಅನುಪಮವಾದ ಭಕ್ತಿಯು ಒಡೆದು ಕಾಣಿಸುತ್ತಿತ್ತು. ಇಂಥ ವೈಭವದ ಶುಭಮುಹೂರ್ತವಾದ ಇದೇ ಶುಕ್ಲ ಸಂವತ್ಸರದ ಮಾರ್ಗಶೀರ್ಷ ಬ॥ ೧೦ ದಿವಸ ಪಾಣಿಗ್ರಹಣಮಾಡಿದ ಶಿವರಾಯರ ಪುತ್ರಿ ಚಿ॥ ಕುಂ॥ ಶೋ॥ ನಾಗೂಬಾಯಿಯೂ, ಹರಪನಹಳ್ಳಿ ಮ॥ ರಾ॥ ಲಕ್ಷ್ಮಣರಾಯರ ಪುತ್ರ ಚಿ॥ ರಾಮರಾಯರೂ ಧನ್ಯರೇ ಸರಿ! ಶ್ರೀ ಜಗದ್ಗುರು ಪಂಚಾಚಾರ್ಯರು ವಧೂವರರಿಗೂ, ಅವರ ಕುಟುಂಬದವರಿಗೂ, ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ಕಾಪಾಡಲೆಂದು ದಯಾಮಯರಾದ ಆ ಗುರುಸಾರ್ವಭೌಮರನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ವಿವಾಹ ಮಹೋತ್ಸವಕಾಲದಲ್ಲಿ ಮ॥ ರಾ॥ ಶಿವರಾಯರು ಭಕ್ತಿಪುರಸ್ಸರವಾಗಿ ಶ್ರೀಮದುಜ್ಜಯಿನಿ ಜಗದ್ಗುರುಗಳವರ ಮಹಾ॥ ॥ ಪೂಜಾರ್ಪಣೆಗೆ 5 ರೂ. ಗಳು ಪ್ರಭಾಪೋಷಣಕ್ಕೆ 5 ರೂಪಾಯಿಗಳು ಒಟ್ಟು 10 ರೂ. ಗಳನ್ನು ಹೊಳಗುಂದಿ ಶಾನುಭೋಗರ ಘ॥ ಸಿದ್ಧಲಿಂಗಪ್ಪನವರ ಕಡೆಗೆ ಕೊಟ್ಟರು. ಪ್ರತ್ಯಕ್ಷದರ್ಶಿ.

ವಯೋವೃದ್ಧೆಯ ನಿಧನ.

ನಂಜನಗೂಡು ತಾಲೂಕು ಹುಲ್ಲಹಳ್ಳಿ ಹೋಬಳಿ ಮಾದ್ಲಹಳ್ಳಿಮಠದಲ್ಲಿದ್ದ ಸುಮಾರು ಒಂದುನೂರು ಹತ್ತುವರ್ಷ ವಯಸ್ಸುಳ್ಳ ಗೌರಮ್ಮನೆಂಬುವರು ಹೆಬ್ಬಲಗುಪ್ಪೆ ಮಠದ ನಂಜುಂಡಾರಾಧ್ಯರ ಹೆಂಡತಿಯಾಗಿಯೂ ನಂಜನಗೂಡು ಫಸ್ಟ್‌ಗ್ರೇಡ್ ಪ್ಲೀಡರ್ ವೇ॥ ಬ್ರ॥ ನಂಜುಂಡಾರಾಧ್ಯರಿಗೆ ಪಾಲಕ ತಾಯಿಯಾಗಿಯೂ ಹಾಲಿ ಮಾದ್ಲಹಳ್ಳಿಯಲ್ಲಿರುವ ಬ್ರ॥ ಮಲ್ಲಾರಾಧ್ಯರ ಚಿಕ್ಕಮ್ಮನವರಾಗಿಯೂ ಇದ್ದ ಮೇಲ್ಕಂಡ ಮಾ॥ ಶ್ರೀಯವರು ಇದೇ ಶುಕ್ಲನಾಮಸಂವತ್ಸರದ ಮಾರ್ಗಶಿರ ಶುದ್ಧ ಸಂಚಮಿ ತಾ॥ (6-12-1929) ನೇ ಶುಕ್ರವಾರ ದಿವಸ ಶಿವಾಧೀನರಾದರು. ಇವರು ಬಹಳ ಆಚಾರವಂತರಾಗಿಯೂ, ಶಿವಪೂಜಾ ನಿಷ್ಠರಾಗಿಯೂ, ಸತ್ಯಸಂಧತೆಯುಳ್ಳವರಾಗಿಯೂ, ಇದ್ದುದರಿಂದ ಇವರ ಉತ್ತರಕ್ರಿಯೆಗೆ ಅನೇಕ ಆರಾಧ್ಯ ಮಾಹೇಶ್ವರರು ಭಕ್ತಾದಿಗಳು ಸೇರಿದ್ದರು. ಎಲ್ಲಾ ಕರ್ಮಗಳೂ ನಿರ್ವಿಘ್ನವಾಗಿ ನೆರವೇರಿಸಲ್ಪಟ್ಟವು. ಹನ್ನೆರಡನೆಯ ದಿವಸದಲ್ಲಿ ಸೇರಿದ್ದ ಆರಾಧ್ಯಮಾಹೇಶ್ವರರಿಗೆಲ್ಲಾ ಬ್ರ॥ ಮಲ್ಲಾರಾಧ್ಯರ ಮೂಲಕ ದಕ್ಷಿಣೆಗಳೂ ಆರಾಧನೆಯೂ ನಡೆದು ಹದಿಮೂರನೆಯ ದಿವಸ ದೀಪಾರಾಧನೆ ಸಂತರ್ಪಣೆಯೂ ಸಹ ನಡೆಯಿಸಿದ್ದಲ್ಲದೆ ವೇ॥ ತೋಂಟದಾರಾಧ್ಯರ ಮೂಲಕ ಶ್ರೀಶಭೂಪಾಲನ ಶಿವಕಥೆಯನ್ನು ಮಾಡಿಸಿ ಸದ್ಯರಾಜಪುರಾಣದಲ್ಲಿ ಗುರುವು ಶಿವಾರ್ಚನೆಯಂ ಮಾಡಿ ಸಡಿಪ್ಪೆಂಗೆ ನಡೆದಂಥ ವಿಚಾರವನ್ನು ಮರಳಿಮಠದ ವೇ॥ ಕುಮಾರಾರಾಧ್ಯಸ್ವಾಮಿಗಳವರಿಂದ ಓದಿಸಿ ಅರ್ಥಮಾಡಿಸಿ ಮೇಲ್ಕಂಡ ತೋಂಟದಾರಾಧ್ಯರಿಗೂ, ಇವರಿಗೂ ಮರ್ಯಾದೆಯನ್ನು ನಡೆಯಿಸಿದರು. ಆಗ್ಗೆ ಚಿನ್ನಹಳ್ಳಿಮಠದ ವೇ॥ ಆರ್. ಕುಮಾರಾರಾಧ್ಯರು ಪಂಚಾಚಾರ್ಯಪ್ರಭಾಪತ್ರಿಕೆಯ ಮಹಾತ್ವ ತಿಳಿಸಲು ಚಂದ್ರದಾಡಿಮಠದ ವೇ॥ ಚೆನ್ನವೀರರಾರಾಧ್ಯರು ತಾವು ಚಂದಾದಾರರಾಗಿ ಒಪ್ಪಿ ಪ್ರಭಾಪತ್ರಿಕೆಯ ಅಡ್ರೆಸ್ ಸಹ ತೆಗೆದುಕೊಂಡರು. ಅಲ್ಲದೆ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿ ಸಹ ವೇ॥ ಆರ್ ಕುಮಾರಾರಾಧ್ಯರ ಮೂಲಕ ಬ್ರ॥ ಮಲ್ಲಾರಾಧ್ಯರು ಕಳುಹಿಸಿರುತ್ತಾರೆ. ಮೃತರ ಆತ್ಮಕ್ಕೆ ಶ್ರೀಪರಮೇಶ್ವರನು ಸಾಯುಜ್ಯಪದವಿಯನ್ನು ಕೊಟ್ಟು ಇವರ ಮಕ್ಕಳು ಮೊಮ್ಮಕ್ಕಳು ಬಂಧುವರ್ಗದವರಿಗೆಲ್ಲಾ ಶ್ರೇಯಸ್ಸನ್ನುಂಟುಮಾಡಬೇಕೆಂದು ಶ್ರೀಗೌರೀಶಂಕರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಜೆ. ಸಿ. ಆರಾಧ್ಯ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜನವರಿ ತಾ|| ೧೩ ನೇ ಸೋಮವಾರ

ಸ್ತ್ರೀಧರ್ಮ.

ನಮ್ಮ ಭಾರತೀಯ ಸ್ತ್ರೀಯರುಗಳು ಸನಾತನಧರ್ಮಕ್ಕೆ ತಳಹದಿಯಾಗಿರುವುದರಿಂದ ಎಲ್ಲಿಯವರೆಗೆ ನಮ್ಮ ಭಾರತಸ್ತ್ರೀಯರು ಆರ್ಯಪದ್ಧತಿಯನ್ನು ಬಿಟ್ಟಿರುವುದಿಲ್ಲವೋ ಅಲ್ಲಿಯವರೆಗೂ ಸನಾತನಧರ್ಮವು ಪ್ರಾಣಧಾರಣೆಯನ್ನು ಮಾಡಿಕೊಂಡಿರುತ್ತದೆ. ನಮ್ಮ ಆರ್ಯಮಹಿಳೆಯರೂ ಸಹ ಎಂದು ವಿದೇಶೀಯ ಪದ್ಧತಿಗಳನ್ನು ಅನುಸರಿಸುವರೋ ಅಂದೇ ಸನಾತನಧರ್ಮವು ನಾಮಾವಶೇಷವಾಗುತ್ತದೆ. ಈವರಂವಿಗೂ ಅಖಿಲಭಾರತ ಮಹಿಳೆಯರ ಪ್ರತಿಯೊಂದು ರೋಮಕೂಪದಲ್ಲಿಯೂ ಸನಾತನಧರ್ಮವು ಮನೆಮಾಡಿಕೊಂಡಿದ್ದಿತು. ಈಗಣ ವಿದೇಶವಿದ್ಯಾಪ್ರಾಬಲ್ಯವು ಹೆಚ್ಚಿದ ಹಾಗೆಲ್ಲಾ ಸನಾತನಧರ್ಮಕ್ಕೆ ಕಾಲಿಡಲು ಸ್ಥಳವಿಲ್ಲದೆ, "ಧರ್ಮೋ ವನಾಂತರ್ಗತಃ" ಎಂಬ ನುಡಿಗನುಸಾರವಾಗಿ ಸನಾತನಧರ್ಮವು ಕಾಡಿಗೆ ಓಡಿಹೋಗುವ ಪ್ರಸಂಗವು ಬಂದೊದಗಿದೆ. ನಮ್ಮ ಆರ್ಯಮಹಿಳೆಯರು ಸನಾತನಧರ್ಮಾಂಕುರಕ್ಕೆ ಉತ್ತಮವಾದ ಕ್ಷೇತ್ರಪ್ರಾಯರಾದುದರಿಂದ ಕ್ಷೇತ್ರವು ಪರಿಶುದ್ಧವಾದಷ್ಟು ಪೈರುಪಚ್ಚೆಗಳು ಬೆಳೆದು ಪ್ರಜೆಗಳನ್ನು ಕಾಪಾಡುವಂತೆ ಮಹಿಳೆಯರು ಪರಿಶುದ್ಧವಾದಷ್ಟು ಆರ್ಯಧರ್ಮವು ವೃದ್ಧಿಹೊಂದುತ್ತ ಹೋಗುವುದು. ಆದ್ದರಿಂದಲೇ ಕ್ಷೇತ್ರಪಾಲಕನು ಕ್ಷೇತ್ರವನ್ನು ರಕ್ಷಿಸಿಕೊಳ್ಳುವಂತೆ ಆರ್ಯಧರ್ಮಕ್ಕೆ ಮೂಲಭೂತವಾದ ಮಹಿಳೆಯರನ್ನು ಆಯಾಯ ಪಾಲಕರು ರಕ್ಷಿಸುತ್ತಲೇ ಇರಬೇಕಾಗಿರುವುದರಿಂದ ನಮ್ಮ ಆರ್ಯಮಹಿಳೆಯರಿಗೆ ತಮ್ಮ ತಮ್ಮ ಪುರುಷಾಧೀನವಾದ ಸ್ವತಂತ್ರತೆಯೇ ಹೊರತು ಸರ್ವಸ್ವಾತಂತ್ರ್ಯವಿಲ್ಲವೆಂದು ಧರ್ಮಶಾಸ್ತ್ರಕಾರರು ಹೇಳಿರುವರು. ಇದ್ದರಿಂದಲೇ ಈಗಣ ವಾತಾವರಣದಲ್ಲಿ ಪ್ರವೇಶಮಾಡಿದ ಕೆಲವು ಮಹಿಳೆಯರು ಪುರುಷರು ತಮ್ಮ ತಮ್ಮ ಇಷ್ಟವಿದ್ದಂತೆ ಶಾಸ್ತ್ರಗಳನ್ನು ಬರೆದುಕೊಂಡು ಸ್ತ್ರೀಯರನ್ನು ಅಸ್ವಾತಂತ್ರ್ಯವೆಂಬ ಶೃಂಖಲೆಯಿಂದ ಬಂಧಿಸಿಬಿಟ್ಟಿರುತ್ತಾರೆ. ಈ ತತ್ವವನ್ನು ಅವಲಂಬಿಸುವವರೆಲ್ಲರೂ ಕರುಣಾಹೀನರೂ, ಪಕ್ಷಪಾತಿಗಳೂ ಆಗಿದ್ದಾರೆ. ಶಾಸ್ತ್ರವನ್ನು ಬರೆಯುವಸಮಯದಲ್ಲಿ ನಮ್ಮ ವಿದ್ವತ್ತುಳ್ಳ ಭಗಿನಿಯರ ಸಮಾವೇಶವಾಗಿರಲಿಲ್ಲ. ಹಾಗೆ ಸಮಾವೇಶವಾಗಿದ್ದರೆ ಪುರುಷನಿಗೆ ಎಷ್ಟು ಸ್ವಾತಂತ್ರ್ಯವು ಕೊಡಲ್ಪಟ್ಟಿದೆಯೋ ಅಷ್ಟು ಸ್ವಾತಂತ್ರ್ಯವು ನಮಗೂ ಕೊಡಲ್ಪಡುತ್ತಿತ್ತು ಎಂದು ಅಲ್ಲಲ್ಲಿಯೇ ಉದ್ಗಾರವನ್ನು ತೆಗೆಯಲು ಪ್ರಾರಂಭಿಸಿದ್ದಾರೆ. "ನಸ್ತ್ರೀಸ್ವಾತಂತ್ರ್ಯಮರ್ಹತಿ" ಎಂದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದ್ದರೂ ಸ್ತ್ರೀಸ್ವಾತಂತ್ರ್ಯವಿಲ್ಲವೆಂಬ ಮಾತಿಗೆ ಈಗಣ ಕೆಲ ಮಹಿಳೆಯರು ಬಹು ದೂರವಾಗಿ ಅರ್ಥಮಾಡುತ್ತಾರೆ. ಆ ವಾಕ್ಯಕ್ಕೆ ಅಷ್ಟು ದೂರವಾಗಿ ಅರ್ಥಮಾಡಲು ಆವಶ್ಯಕವಿಲ್ಲ. ತಮ್ಮ ತಮ್ಮ ಗೃಹಕೃತ್ಯದ ಸರ್ವಸ್ವಾತಂತ್ರ್ಯವೂ ಮಹಿಳೆಯರಿಗೇನೇ ಇರುವುದಲ್ಲದೆ ಮನೆಯ ಯಜಮಾನನು ಅರ್ಜಿಸಿದ ದ್ರವ್ಯವನ್ನು ತಮ್ಮ ತಮ್ಮ ಮಹಿಳೆಯರ ಕೈಗೆ ಕೊಟ್ಟು ಬೆಳಗು ಆಯಿತೆಂದರೆ ಮನೆಗೆ ಪದಾರ್ಥವನ್ನು ಒದಗಿಸುವದಕ್ಕಾಗಿ ತಮ್ಮ ತಮ್ಮ ಮಹಿಳೆಯರನ್ನು ಕೇಳಿಯೇ ತರುವ ಸಾಂಪ್ರದಾಯವು ಈಗಲೂ ಇದ್ದೇ ಇರುತ್ತದೆ. ಮನೆಗೆ ಯಾರಾದರೂ ಅತಿಥಿ ಅಭ್ಯಾಗತರು ಬಂದರೆ "ಭವತಿಭಿಕ್ಷಾಂದೇಹಿ" ಎಂದು ಆರ್ಯಮಹಿಳೆಯರನ್ನೇ ಸಂಬೋಧಿಸಿ ಭಿಕ್ಷೆಯನ್ನು ಬೇಡುವರು. ಅದರಂತೆ ಅವರೇ ನೀಡುವರು. ಯಜಮಾನನು ಯಾವ ಯಜ್ಞಯಾಗಾದಿ ಕರ್ಮಗಳನ್ನು ಮಾಡಿದರೂ ದಾನಧರ್ಮಗಳನ್ನು ಮಾಡಿದರೂ ಧರ್ಮಪತ್ನಿಯ ಸಂಗಡಲೇ ಮಾಡುತ್ತಾನಲ್ಲದೆ ತಾನೊಬ್ಬನೇ ಮಾಡುವುದಿಲ್ಲವು. ಮಾಡಿದರೂ ಫಲಿಸುವದಿಲ್ಲ. ಇದನ್ನೆಲ್ಲಾ ಪರಿಶೀಲಿಸಿದರೆ ಸನಾತನಧರ್ಮಕರ್ತರು ನಮ್ಮ ಆರ್ಯಮಹಿಳೆಯರನ್ನು ಬಹು ಪೂಜ್ಯಬುದ್ಧಿಯಿಂದ ಕಂಡಿರುತ್ತಾರಲ್ಲದೆ ಒಂದುಕಾಲದಲ್ಲೂ ಉದಾಸೀನತೆಯಿಂದ ಕಂಡಿರುವದಿಲ್ಲವು. ಪುರುಷನು ಮಹಿಳೆಯನ್ನು ವಿವಾಹಮಾಡಿಕೊಳ್ಳುವ ಸಮಯದಲ್ಲಿ ಧರ್ಮಶಾಸ್ತ್ರಪ್ರಕಾರವಾಗಿ ಧರ್ಮಪ್ರಜೆಗಳ ಅಭಿವೃದ್ಧಿಗಾಗಿಯೇ ಅಂಗೀಕರಿಸುತ್ತಾನೆ. ಮತ್ತು ಧರ್ಮದ ವಿಷಯದಲ್ಲಾಗಲಿ, ದ್ರವ್ಯವಿಷಯದಲ್ಲಾಗಲಿ, ಕಾಮವಿಷಯದಲ್ಲಾಗಲಿ ಅತಿಕ್ರಮಿಸಿ ನಡೆಯುವುದಿಲ್ಲವೆಂದು ದೃಢಪ್ರತಿಜ್ಞೆಯನ್ನು ಸಹ ಮಾಡಿರುತ್ತಾನೆ. ಹೀಗೆ ವಿಧ್ಯುಕ್ತವಾಗಿ ಸ್ವೀಕರಿಸಿದ ಪತ್ನಿಗೆ ಧರ್ಮಪತ್ನಿಯೆಂಬ ಅನ್ವರ್ಥಕವಾದ ಹೆಸರನ್ನೇ ಧರ್ಮಶಾಸ್ತ್ರಕಾರರು ಇಟ್ಟಿರುತ್ತಾರೆ. ಇಷ್ಟು ಸ್ತ್ರೀಪುರುಷರಲ್ಲಿ ಅಭೇದಬುದ್ಧಿಯನ್ನು ತೋರಿಸಿ, ನ ಸ್ತ್ರೀಸ್ವಾತಂತ್ರ್ಯಂ ಎಂಬ ಒಂದು ವಚನವನ್ನು ಹೇಳಬೇಕಾದರೆ ಆ ಮಾತಿಗೆ ಅರ್ಥಸಂಕೋಚವಿರಲೇಬೇಕಾಗುವದು. ಆ ಅರ್ಥಸಂಕೋಚವು ಆವುದೆಂದು ಸ್ವಲ್ಪವಿಚಾರಮಾಡಿ ನೋಡಿದರೆ ನಮ್ಮ ಸನಾತನಧರ್ಮಪದ್ಧತಿಗನುಸಾರವಾಗಿ ಆರ್ಯಸ್ತ್ರೀಪುರುಷರಲ್ಲಿ ಪುರುಷರು ಭೋಕ್ತೃವೆನಿಸಿಕೊಂಡಿರುತ್ತಾರೆ. ಸ್ತ್ರೀಯರು ಭೋಗ್ಯವಸ್ತುವೆನಿಸಿಕೊಂಡಿರುತ್ತಾರೆ. ಭೋಕ್ತೃವು ಭೋಗ್ಯವಸ್ತುವನ್ನು ಹುಡುಕುವುದು ಸ್ವಭಾವವಾಗಿರುವುದರಿಂದ ಪ್ರಪಂಚದಲ್ಲಿ ಭೋಗ್ಯವಸ್ತುವಿನ ವಿಷಯದಲ್ಲಿ ಪ್ರತಿಯೊಬ್ಬರ ಮನಸ್ಸು ಚಾಂಚಲ್ಯವೃತ್ತಿಯನ್ನು ಅವಲಂಬಿಸುತ್ತದೆ. ಹಾಗೆ ಈ ಭೋಗ್ಯವಸ್ತುವೆನಿಸಿದ ಮಹಿಳಾವರ್ಗಕ್ಕೆ ಸಂಪೂರ್ಣ ಸ್ವಾತಂತ್ರ್ಯವು ದೊರೆಕಿದ್ದಾದರೆ ಪವಿತ್ರ ಧರ್ಮಕ್ಷೇತ್ರವೆನಿಸಿದ ಸ್ತ್ರೀಯರ ಮನೋವೃತ್ತಿಯು ಯಾವರೀತಿಯಾಗಿ ಪರಿಣಮಿಸುವುದೋ ಹೇಳಲಾಗುವುದಿಲ್ಲವು. ಹಾಗೆ ಒಂದು ಪಕ್ಷ ರಜೋಗುಣದಿಂದ ಕೂಡಿದರೆ ಆರ್ಯಮಹಿಳೆಯರು ಅಪವಿತ್ರರಾಗುವರು. ಈ ದೋಷವನ್ನು ಹೋಗಲಾಡಿಸಲು ಪ್ರತೀಕಾರವೇ ಇಲ್ಲದಂತಾಗುವದು. "ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ" ಸ್ತ್ರೀಯರು ಯಾವಾಗ ದುಷ್ಪ್ರವೃತ್ತಿಯನ್ನು ಅವಲಂಬಿಸುತ್ತಾರೆಯೋ ಆಗ ವರ್ಣಾಶ್ರಮಧರ್ಮಗಳ ಸಾಂಕರ್ಯವಾಗಿ ಹಾಳುಬಿದ್ದ ಕ್ಷೇತ್ರದಂತೆ ಅವರ ಮಂಗಲಮಯವಾದ ಸೌಭಾಗ್ಯವೇ ನಷ್ಟವಾಗುವುದು. ಎಂದು ಗೀತಾಕಾರರು ಸಹ ಹೇಳಿದ್ದಾರೆ. ಹೀಗಾದರೆ ನಮ್ಮ ಭಾರತಧರ್ಮಕ್ಕೆ ತಿಲಾಂಜಲಿಯೇ ಕೊಡಲ್ಪಡಬೇಕಾಗುವುದು. ಆದ್ದರಿಂದ ನಮ್ಮ ಆರ್ಯಮಹಿಳೆಯರು ಪುರುಷರಂತೆ ಸರ್ವಸ್ವಾತಂತ್ರ್ಯದ ಹಕ್ಕನ್ನು ಅನುಭವಿಸಲು ಆಗುವುದಿಲ್ಲ. ಅಂದರೆ ತನ್ನ ಕಡೆಯವರ ಸಹಾಯವಿಲ್ಲದೆ ಏಕಾಂಗಿಗಳಾಗಿ ಪರಕೀಯ ಸ್ಥಾನಗಳಿಗೆ ಹೋಗುವುದನ್ನಾಗಲಿ, ಪರಕೀಯರಲ್ಲಿ ಸಂಭಾಷಣಾದಿಗಳನ್ನು ಮಾಡುವುದನ್ನಾಗಲಿ ಕೂಡದೆಂಬುದ್ದೇಶದಿಂದ ಧರ್ಮಶಾಸ್ತ್ರಕಾರರು ಪೈರುಪಚ್ಚೆ ಬೆಳೆಯುವ ಹೊಲಕ್ಕೆ ದೃಢವಾದ ಬೇಲಿಯನ್ನು ಕಟ್ಟಿ ರಕ್ಷಿಸಿಕೊಳ್ಳುವಂತೆ ಸ್ತ್ರೀಯರಿಗೆ ಅಸ್ವಾತಂತ್ರ್ಯತೆಯನ್ನು ಇಟ್ಟಿರುತ್ತಾರೆ. ಇದು ಕೆಲವರಿಗೆ ಸ್ಥೂಲದೃಷ್ಟಿಯಲ್ಲಿ ಅಷ್ಟು ಪ್ರಶಸ್ತವಾಗಿ ತೋರದಿದ್ದರೂ ಸೂಕ್ಷ್ಮದೃಷ್ಟಿಯಿಂದ ಇಹಲೋಕಸೌಖ್ಯಸಾಧನವೂ ಪರಲೋಕಸೌಖ್ಯಸಾಧನವೂ ಆಗಿರುತ್ತದೆಯೆಂಬುವಲ್ಲಿ ಏನೂ ಸಂಶಯವಿಲ್ಲ. ಈ ಉದಾತ್ತತತ್ವವನ್ನು ನಮ್ಮ ಪೌರ್ವಿಕರಾದ ಋಷಿಗಳು ಜ್ಞಾನದೃಷ್ಟಿಯಿಂದ ಯೋಚಿಸಿ ಮಹಿಳೆಯರು ಹುಟ್ಟಿದಂದಿನಿಂದಲೂ ಅಂತ್ಯಾವಸ್ಥೆಯವರೆಗೂ ಹೊರಗಣ ಸ್ವಾತಂತ್ರ್ಯವಿಲ್ಲವೆಂದು ಹೇಳಿರುವುದು ಯುಕ್ತವಾದುದು.

"ಬಾಲಯಾ ವಾ ಯುವತ್ಯಾ ವಾ ವೃದ್ಧಯಾ ವಾಪಿ ಯೋಷಿತಾ | ನಸ್ವಾತಂತ್ರ್ಯೇಣ ಕರ್ತವ್ಯಂ ಕಿಂಚಿತ್ಕಾರ್ಯಂ ಗೃಹೇಷ್ವಪಿ || ಬಾಲ್ಯೇಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯಯೌವನೇ | ಪುತ್ರಾಣಾಂ ಭರ್ತರಿ ಪ್ರೇತೇ ನಭಜೇತ್ ಸ್ತ್ರೀಸ್ವತಂತ್ರತಾಂ ||"

ಬಾಲ್ಯದಲ್ಲಿಯಾಗಲಿ ಪ್ರಾಯದಲ್ಲಿಯಾಗಲಿ ವಾರ್ಧಕದಲ್ಲೇಯಾಗಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವು. ಬಾಲಿಕಾವಸ್ಥೆಯಲ್ಲಿ ತಂದೆಯ ಅಧೀನದಲ್ಲಿಯೂ ಪ್ರಾಯದಲ್ಲಿ ಗಂಡನ ಅಧೀನದಲ್ಲಿಯೂ ದೈವಯೋಗದಿಂದ ಪತಿಯ ವಿಯೋಗವು ಸಂಭವಿಸಿದಲ್ಲಿ ಮಕ್ಕಳ ಅಧೀನದಲ್ಲಿಯೂ ಇರತಕ್ಕದ್ದು. ತನ್ನವರ ಸಹಾಯವಿಲ್ಲದೆ ಸ್ವತಂತ್ರಿಸಿ ಎಲ್ಲಿಯೂ ಹೋಗಲಾಗದು. ಎಂದು ಮನುವು ಸ್ತ್ರೀಧರ್ಮವನ್ನೇ ಬೋಧಿಸಿ ಮುಂದೆ" ಪತಿಂಯಾನಾಭಿಚರತಿ ಮನೋವಾಗ್ದೇಹಸಂಯುತಾ | ಸಾಭರ್ತೃಲೋಕಮಾಪ್ನೋತಿ ಸದ್ಭಿಸ್ಸಾಧ್ವೀತಿಚೋಚ್ಯತೇ || ಮನೋವಾಕ್ಕಾಯಗಳಿಂದಲೂ ಯಾವ ಮಹಿಳೆಯು ಪತಿಗೆ ಅನುಕೂಲಳಾಗಿ ವರ್ತಿಸುವಳೋ ಅವಳು ದೇಹವಿಯೋಗಾನಂತರ ಪತಿಲೋಕವನ್ನು ಹೊಂದುವಳಲ್ಲದೆ ಆಕೆಯನ್ನು ಸಾಧುಗಳು ಸಾಧ್ವೀಶಿರೋಮಣಿಯೆಂದು ಕರೆಯುವರೆಂದು ಹೇಳಿರುವನು. ಅನೇಕರಲ್ಲಿ ಈಗಣ ಶಿಕ್ಷಣಮಹಿಮೆಯಿಂದ ಇದಕ್ಕೆ ವಿರುದ್ಧವಾದ ಮನೋಭಾವಗಳು ಅಂಕುರಿಸುತ್ತಿರುವದನ್ನು ನೋಡಿದರೆ ಯಾರಿಗೆ ತಾನೆ ವ್ಯಸನವುಂಟಾಗಲಿಕ್ಕಿಲ್ಲ? ಭಾರತೀಯರನ್ನೇಕರಲ್ಲಿ ಪುರಾತನಕಾಲದಿಂದ ತಮ್ಮ ವಂಶಾನುಕ್ರಮವಾಗಿ ಹೃದಯಗೇಹದಲ್ಲಿ ವಾಸಮಾಡಿದ್ದ ಸನಾತನಧರ್ಮಗಳೆಂಬ ಪಕ್ಷಿಗಳು ಒಂದೊಂದೇ ಹಾರಿಹೋಗಲೆತ್ನಿಸುತ್ತವೆ. ಈ ಸಂಸರ್ಗದಿಂದ ಕೆಲವು ಮಹಿಳೆಯರುಸಹ ಆರ್ಯಧರ್ಮರಹಸ್ಯವನ್ನು ತಿಳಿಯದೆ ತಾವೂಕೂಡ ಅದೇ ಮಾರ್ಗವನ್ನನುಸರಿಸುತ್ತಿರುವದನ್ನು ನೋಡಿದರೆ ಭಾರತಮಾತೆಯು ಜೀವಿಸಿಕೊಂಡಿರುವುದೇ ಕಷ್ಟವಾಗಿದೆ. ಧರ್ಮಗಳು ನಷ್ಟವಾದಮೇಲೆ ಧರ್ಮಿಯು ಉಳಿಯುವ ಬಗೆಯೆಂತು? ಭಾರತಮಾತೃವಿನ ಗರ್ಭದಲ್ಲಿ ಹುಟ್ಟದಿದ್ದವರಿಗೇನೋ ಇಂಥ ಉದಾಸೀನಸ್ವಭಾವಗಳು ಯುಕ್ತವಾದರೂ ಭಾರತಮಾತೃವಿನ ಗರ್ಭದಲ್ಲಿ ಹುಟ್ಟಿದವರಿಗೂ ಇಂಥ ಭಾವಗಳು ಹುಟ್ಟಿದರೆ ಸನಾತನಧರ್ಮಕ್ಕೆ ಅವಕಾಶವೆಲ್ಲಿ? ಆದ್ದರಿಂದ ನಮ್ಮ ಆರ್ಯಮಹಿಳೆಯರಿಂದಲೇ ನಮ್ಮ ಸನಾತನಧರ್ಮವು ಉದ್ಧಾರವಾಗಬೇಕಾಗಿರುವುದರಿಂದ ಇವರಾದರೂ ತಮ್ಮ ಧರ್ಮಕ್ಕೆ ವಿರೋಧವಿಲ್ಲದಂತೆ ಹಿಂದೆ ಪತಿವ್ರತಾಸಾರ್ವಭೌಮೆಯರೆನಿಸಿದ್ದ ಸೀತಾ, ಅನುಸೂಯಾ ಮೊದಲಾದವರ ಮೇಲ್ಪಂಕ್ತಿಯನ್ನನುಸರಿಸಿ ಈಗಣ ವಿಧರ್ಮೀಯ ನಡವಳಿಕೆಯನ್ನು ಹೊಡೆದೋಡಿಸಿ ನಮ್ಮ ಆರ್ಯಮಹಿಳೆಯರು ಎಷ್ಟರಮಟ್ಟಿಗೆ ಕಲಾಕೌಶಲ್ಯಗಳನ್ನು ಕಲಿಯಬೇಕೋ ಅಷ್ಟು ಶಿಕ್ಷಣವನ್ನು ಕೊಟ್ಟು ಹಿಂದಿನಂತೆ ಸನಾತನಧರ್ಮದಲ್ಲಿ ಶ್ರದ್ಧೆಯು ಹೆಚ್ಚುವಂತೆ ಮಾಡಬೇಕಲ್ಲದೆ ಪುರುಷರಂತೆ ಸಂಪೂರ್ಣಸ್ವಾತಂತ್ರ್ಯಕ್ಕೆ ಕೈಹಾಕದೆ ತಮಗೆ ರೂಢಮೂಲವಾಗಿರುವ ಸ್ವಾತಂತ್ರ್ಯವನ್ನು ಬಿಡದೆ ಸನಾತನಧರ್ಮಪೋಷಕರಲ್ಲಿ ಅಗ್ರಗಣ್ಯರೆಂಬ ಪ್ರಶಸ್ತಿಗೆ ಪಾತ್ರರಾಗಿ ಭಗವಂತನ ಕರುಣೆಗೆ ಭಾಗಿಗಳಾಗಬೇಕಾಗಿ ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ನಮ್ಮ ದಿವಾನರವರು ಕಳೆದ ಗುರುವಾರ ತ್ರಿವೇಂದ್ರಂ ನಗರಕ್ಕೆ ಹೋಗಿ ತಿರುವಾಂಕೂರು ಸಂಸ್ಥಾನದ ರಾಜಾತಿಥಿಗಳಾಗಿದ್ದು ಶನಿವಾರ ಅಲ್ಲಿಂದ ಹಿಂತಿರುಗಿ ಬಂದರು.

ಬ್ರಿಟಿಷ್ ಸೈನ್ಯದಲ್ಲಿ ಸಾರ್ಜಂಟ್‌ಮೇಜರಾಗಿದ್ದು ನಿವೃತ್ತರಾಗಿರುವ ಮಿ|| ಎ. ಗ್ರಿಫಿತ್‌ರವರು ಸ್ಪೆಷಲ್ ರಿಜರ್ವ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರ ಮೀಟಿಂಗ್ ಶಿವರಾತ್ರಿಪುರದಲ್ಲಿ ನಡೆಯಬೇಕೆಂದಿದ್ದುದನ್ನು ತಪ್ಪಿಸಿ ಇದೇ ಜನವರಿ 16 ನೆಯ ತಾರೀಖಿನ ದಿವಸ ಎಡತೊರೆ ತಾಲೂಕು ಚುಂಚನಕಟ್ಟೆಯಲ್ಲಿ ನಡೆಯುವ ಜಾತ್ರೆಯ ಸಮಯದಲ್ಲಿ ನಡೆಯುವಂತೆ ಗೊತ್ತುಮಾಡಿರುತ್ತಾರೆ.

ಮೈಸೂರು ಯೂನಿವರ್ಸಿಟಿ ವೈಸ್‌ಛಾನ್ಸೆಲರ್ ಸರ್ ಬ್ರಜೇಂದ್ರನಾಥಸೀಲ್‌ರವರು ಕಾಯಿಲೆಯ ಜಿನಿಯಿಂದ ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದು ಈಗ ಸ್ವಲ್ಪಮಟ್ಟಿಗೆ ಗುಣವಾದ ಮೇಲೆ ಕಲ್ಕತ್ತೆಗೆ ಪ್ರಯಾಣಮಾಡಿರುತ್ತಾರೆ.

ನ್ಯಾಯವಿಧಾಯಕ ಸಭೆಯ ಮೆಂಬರುಗಳಾದ ಶ್ರೀ|| ಎಚ್. ಬಿ. ಗೂಡಪ್ಪಗೌಡರು, ಜಿ. ಚನ್ನಪ್ಪನವರು, ಡಿ. ಎಸ್. ಮಲ್ಲಪ್ಪನವರು ಮತ್ತು ಡಿ. ಎಚ್. ಚಂದ್ರಶೇಖರಯ್ಯನವರು ಈ ನಾಲ್ಕು ಜನರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುವರು.

ರಾಜಧಾನಿಯ ಕರ್ಜನ್‌ಪಾರ್ಕ್ ರೋಡಿನಲ್ಲಿರುವ ಫೋಟೋಗ್ರಾಫರಾದ "ಶಂಕರ್‌ಸ್ಟುಡಿಯೋ" ದವರೂ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನಲ್ಲಿರುವ ಶ್ರೀ ಕೃಷ್ಣಾ ಪವರ್ ಪ್ರೆಸ್ಸಿನವರು, ಹಾಗೂ ಸಯ್ಯಾಜಿರಾವ್ ರೋಡಿನಲ್ಲಿರುವ "ಅಂಬಿಕಾಸ್ಟೋರ್ಸ್" ನವರು ಕಳುಹಿಸಿರುವ ನೂತನ ವರ್ಷದ ಮನೋಹರವಾದ ಕ್ಯಾಲೆಂಡರುಗಳನ್ನು ಅತ್ಯಾದರಪೂರ್ವಕವಾಗಿ ಸ್ವೀಕರಿಸುತ್ತೇವೆ.

ನಮ್ಮ ಸಂಸ್ಥಾನದ ದಿವಾನರಾದ ಅಮೀನ್ ಉಲ್ ಮುಲ್ಕ್ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್, ಓ.ಬಿ.ಇ., ಸಿ.ಐ.ಇ., ಯವರಿಗೆ ಸಾರ್ವಭೌಮ ಸರಕಾರದವರು "ಸರ್" ಎಂಬ ಬಿರುದನ್ನು ದಯಪಾಲಿಸಿದ ಸಂತೋಷಾರ್ಥವಾಗಿ ಬೆಂಗಳೂರು ನಗರದ ಪ್ರಜೆಗಳು ಒಂದು ಸಂತೋಷಕೂಟವನ್ನು ನಡೆಯಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಬೇಕೆಂದಿರುವದಾಗಿ ವರ್ತಮಾನ ಕೇಳುತ್ತೇವೆ.

ರಾಜಧಾನಿಯ ಮಿ|| ನಂಜರಾಜೇಅರಸಿನವರ ಆಳಿಯದಲ್ಲಿ ಕೆಲಸಮಾಡಿಕೊಂಡಿರುವ ಮಿ|| ಎಂ. ಎಸ್. ಬಾಳರಾಜೇಅರಸಿನವರಿಗೆ ಸೇರಿದ ಮನೆಕಟ್ಟುವ ಸಾಮಾನುಗಳಲ್ಲಿ ಕೆಲವನ್ನು ಕಳುವುಮಾಡಿದರೆಂದು ಪೋಲೀಸಿನವರು ಶ್ರೀನಿವಾಸರಾವ್ ಎಂಬುವರನ್ನು ಅವರ ಮಗನನ್ನು ದಸ್ತಗಿರಿಮಾಡಿ ಅವರಿಬ್ಬರ ಮೇಲೂ ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಮೊಕದ್ದಮೆ ಮಾಡಿರುತ್ತಾರೆ. ಅದರ ಸಂಬಂಧವಾದ ವಿಚಾರಣೆಯು ಈ ದಿನ ನಡೆಯುವದು.

ರಾಜಧಾನಿಯ ಕರ್ಣಾಟಕಸಾಹಿತ್ಯ ಸೇವಾ ಸಂಘದ ಜನ್ಮೋತ್ಸವವು ನಿನ್ನೆಯದಿವಸ ಟೌನ್‌ಹಾಲಿನಲ್ಲಿ ಶ್ರೀಯುತ ಎಂ. ವೆಂಕಟಕೃಷ್ಣಯ್ಯನವರ ನೇತೃತ್ವದೊಡನೆ ರಾಜಕವಿಭೂಷಣ ಶ್ರೀಯುತ ಹೆಚ್. ಲಿಂಗರಾಜೇಅರಸಿನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಆಸ್ಥಾನ ಸಂಗೀತವಿದ್ವಾನ್ ಶ್ರೀ|| ಎಸ್. ರಾಮರಾಯರವರ ಸುಶ್ರಾವ್ಯವಾದ ಸಂಗೀತವೂ, ಶ್ರೀ|| ಎಂ. ವೆಂಕಟಕೃಷ್ಣಯ್ಯನವರ "ಕರ್ಣಾಟಕಭಾಷಾ ಪ್ರಾಶಸ್ತ್ಯ" ವೆಂಬ ಉಪನ್ಯಾಸವೂ, ಅಧ್ಯಕ್ಷರ ಭಾಷಣವೂ, ಸಭಿಕರನ್ನು ಅತ್ಯಾನಂದಗೊಳಿಸಿದುವು.

ಚಿಕ್ಕಮಗಳೂರು ಟೌನ್ ವೀರಶೈವ ಸಂಗಡದವರಲ್ಲಿ ಮಾನ್ಯರೂ, ಕಾಫೀಪ್ಲಾಂಟರೂ, ನ್ಯಾಯವಿಧಾಯಕ ಸಭೆಯ ಮೆಂಬರರೂ ಆದ ಮ|| ಸಿ. ಪಿ. ಬಸವೇಗೌಡರು ಇತರ ನಾಲ್ಕು ಜನರೊಡನೆ ರಾತ್ರಿಯವೇಳೆಯಲ್ಲಿ ಅರಸಿನಗುಪ್ಪೆ ಕಾಫೀತೋಟಕ್ಕೆ ಹೋಗಿ ಅಲ್ಲಿ ಮಲಗಿ ನಿದ್ರಿಸುತ್ತಿದ್ದ ಪಿಟ್ಯಾಲೆ ಕುಟುಂಬದ ಬಿ. ಸಿದ್ದಪ್ಪಶೆಟ್ಟರೇ ಮೊದಲಾದ 3 ಜನರಮೇಲೆ ಬಿದ್ದು ಅವರನ್ನೆಲ್ಲಾ ಹೊಡೆದು ಘಾಯಪಡಿಸಿದರೆಂಬ ಅಪಾದನೆಯಮೇಲೆ ಇಂಡಿಯನ್ ಪೀನಲ್‌ಕೋಡ್ 147 324, 325 ಮತ್ತು 109 ನೇ ಸೆಕ್ಷನ್ ಪ್ರಕಾರವಾಗಿ ದಸ್ತಗಿರಿಮಾಡಲ್ಪಟ್ಟು, ಚಿಕ್ಕಮಗಳೂರು ಸ್ಪೆಷಲ್ ಫಸ್ಟ್‌ಕ್ಲಾಸು ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುವದಾಗಿ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

ಈಗ್ಗೆ ಸುಮಾರು ಮೂರು ತಿಂಗಳ ಪೂರ್ವದಲ್ಲಿ ರಾಜಧಾನಿಯ ವಿಲಿಂಗ್ಡನ್ ಕ್ರೆಸೆಂಟ್ (ಕೃಷ್ಣಮೂರ್ತಿಪುರ) ಮತ್ತು ಚಾಮರಾಜಮೊಹಲ್ಲೆಗಳ ಮಧ್ಯದಲ್ಲಿ ಶ್ರೀಮತಿ ಲಕ್ಷ್ಮಮ್ಮಣ್ಣಿಯವರು ನಿಂಬಾಳೆಯು ಒಬ್ಬಳೇ ಹೋಗುತ್ತಿದ್ದಾಗ ರಾಮನೆಂಬುವನು ಆಕೆಯ ಕತ್ತಿನಲ್ಲಿದ್ದ ತಾಳಿ, ಗುಂಡು ಮತ್ತು ಚಿನ್ನದ ಕಾಸುಗಳ ಸರವನ್ನು ಬಲಾತ್ಕಾರದಿಂದ ಕಿತ್ತುಕೊಂಡು ಓಡಿಹೋಗುತ್ತಿರಲು ಆಕೆಯ ಕೂಗನ್ನು ಕೇಳಿ ಹತ್ತಿರದಲ್ಲಿದ್ದ ಜನರು ಓಡಿಬಂದು ಕಳ್ಳನನ್ನು ಬೆನ್ನಟ್ಟಿದರು. ರಾಮನು ಸರವನ್ನು ಎಲ್ಲಿಯೋ ಎಸೆದು ಓಡಿಹೋದರೂ, ಜನರು ಬಿಡದೆ ಅವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು. ಆ ಸರವು ಕರೀಂಖಾನ್ ಎಂಬುವನಿಗೆ ಸಿಕ್ಕಲು ಅವನು ಅದನ್ನು ಪೇಟೆಗೆ ತಂದು ಬಿಕರಿಮಾಡಿ ಪೋಲೀಸರ ಕೈಗೆ ಸಿಕ್ಕಿದನು. ಪೋಲೀಸಿನವರು ಈಗ ಅವರಿಬ್ಬರಮೇಲೂ ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಮಾಡಿದ್ದಾರೆ.

ವರ್ತಮಾನಸಂಗ್ರಹ.

ಹಿಂದುಮಹಾಸಭೆಯು ಲಾಹೋರಿನಲ್ಲಿ ಶ್ರೀ. ಎನ್. ಸಿ. ಕೇಳ್ಕರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಈಸಾರಿ 570 ಜನ ವಿದ್ಯಾರ್ಥಿಗಳು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಮಿಡುವರ್ಸ್ಟ್ ಎಂಬಲ್ಲಿ 80 ವರ್ಷದ ವಧುವೊಬ್ಬಳು 77 ವರ್ಷದ ವರನೋರ್ವನನ್ನು 4 ನೇ ಸಲ ವಿವಾಹ ಮಾಡಿಕೊಂಡಿರುವನು. ಕಲಿಮಹಿಮೆ!

ಫ್ರಾನ್ಸಿನಿಂದ ಪಾಂಡಿಚೆರಿಗೆ ವಿಮಾನ ಮೂಲಕ ಟಪಾಲ್ ಸರ್ವೀಸನ್ನು ಪ್ರಾರಂಭಿಸಬೇಕೆಂದು ಫ್ರೆಂಚ್ ಸರಕಾರದವರು ನಿರ್ಧರಿಸುತ್ತಿರುವರು.

ಹಾಕಾಂಗಿನ 'ಚೀನಾಮೇಲ್' ಪತ್ರಿಕೆಯ ಸಂಪಾದಕರಾದ ಮಿ|| ಬರ್ನೆಟ್ ಮತ್ತು ಅವರ ಪತ್ನಿಯನ್ನು ಯಾರೋ ದುರಾತ್ಮರು ಕೊಂದಿರುವರು.

ಹಿಂದೂದೇಶದಲ್ಲಿ ನಡೆಯುವ ಈ ವರ್ಷದ ಐ.ಸಿ. ಎಸ್. ಪರೀಕ್ಷೆಯಲ್ಲಿ 200 ಜನ ವಿದ್ಯಾರ್ಥಿಗಳು ಕೂಡ್ಡುವರು. ಅವರಲ್ಲಿ 12 ಜನರಿಗೆ ಮಾತ್ರ ಕೆಲಸ ದೊರೆಯುವದು.

ಆಸ್ಟ್ರೇಲಿಯಾದೇಶದಲ್ಲಿ 7 ವರ್ಷಗಳಿಂದಲೂ ಮಳೆಯಿಲ್ಲದೆ ಈಗ ವಿಪರೀತ ಮಳೆಬಿದ್ದು ಅದರಿಂದ ಉಂಟಾದ ಪ್ರವಾಹದಿಂದ ರೈಲ್ವೆಮಾರ್ಗಗಳೆಲ್ಲಾ ಹಾಳಾಗಿರುವವಂತೆ!

ಕೆಲವು ವರ್ಷಗಳ ಪೂರ್ವದಲ್ಲಿ ಇಂಗ್ಲೆಂಡಿನಲ್ಲಿ ಭಾರತಸಚಿವರಾಗಿದ್ದ ಲಾರ್ಡ್‌ಪೀಲರವರು ದೆಹಲಿಗೆ ಬಂದು ಹಿಂದೀ ಮುಖಂಡರೊಡನೆ ಅನೇಕ ಮುಖ್ಯವಿಷಯಗಳನ್ನು ಚರ್ಚೆಮಾಡಿದರು.

ಮದರಾಸ್ ಗೌರ್ನಮೆಂಟಿನವರು ಆ ಅಧಿಸತ್ಯದಲ್ಲಿ ಎಲ್ಲೆಲ್ಲಿಯೂ ಟೋಲ್‌ಗೇಟುಗಳು ಇರದಂತೆ ಮಾಡಬೇಕೆಂದು ಅಲ್ಲಿನ ನ್ಯಾಯವಿಧಾಯಕಸಭೆಯಲ್ಲಿ ಒಂದು ಸೂಚನೆಯನ್ನು ತರುವವರಾಗಿದ್ದಾರೆ.

ಅಮೇರಿಕೆಯ ಸಂಯುಕ್ತಸಂಸ್ಥಾನದ ಸರಕಾರದವರು ಹಿಂದೂ ದೇಶದ ಪೂರ್ಣ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳುವಂತೆ ಸೆನೆಟರ್ ಬ್ಲೈನೆ ಎಂಬುವರು ಸೆನೆಟ್ಟಿನಲ್ಲಿ ಒಂದು ಸೂಚನೆಯನ್ನು ತರಲಿರುವರು.

ದಾವಣಗೆರೆಯ ಲೋಕಪ್ರಿಯ ಶ್ರೀ ಶಿವಾಜಿ ಸಿನೇಮಾಕಂಪನಿಯವರು ತಮ್ಮ ಸಿನೇಮಾದ 3 ದಿವಸದ ಉತ್ಪನ್ನವನ್ನು ಅಂದರೆ, 150 ರೂಪಾಯಿ 8 ಆಣೆಗಳನ್ನು ಹರಿಹರದ ದಾರಿಗೆ ಇರುವ ಈಶ್ವರದೇವಾಲಯದ ಜೀರ್ಣೋದ್ಧಾರಕ್ಕೆ ಕೊಟ್ಟರು.

ನ್ಯೂಯಾರ್ಕ್‌ದಲ್ಲಿರುವ ಇಟಾಲಿಯನ್ ಗೃಹಸ್ಥನೊಬ್ಬನ ಮೂವರು ಮಕ್ಕಳಿಗೆ ಯಾರೋ ದುಷ್ಟರು ಕ್ರಿಸ್‌ಮಸ್ ಹಬ್ಬದ ಕಾಣಿಕೆಯೆಂದು ಬಾಂಬಿನ ಪಾರ್ಸೆಲ್ ಕಳಿಸಿರಲು, ಅದನ್ನು ಒಡೆಯುವಾಗ, ಬಾಂಬು ಹಾರಿ ಮೂರು ಮಕ್ಕಳೂ ಮೃತಿಹೊಂದಿದರು.

ಕಳೆದವಾರ, ಬ್ರಿಟನಿನಲ್ಲಿಯೂ ಫ್ರಾನ್ಸಿನಲ್ಲಿಯೂ ಬಿರುಗಾಳಿಯಿಂದ ವಿಶೇಷ ಹಾವಳಿಯಾಗಿದೆ. ಕೆಲವು ಕಡೆಗಳಲ್ಲಿ ಪ್ರವಾಹವು ಬಂದು, ತುಂಬ ದನಕರುಗಳು ನಾಶವಾಗಿವೆ. ಫ್ರಾನ್ಸಿನ ಉತ್ತರ ಪ್ರದೇಶದಲ್ಲಿ ಕೆಲವು ಧನ್ಯ ಕಟ್ಟಡಗಳೂ ಹಾಳಾಗಿರುವುವು.

ಶಾರದಾ ಕಾನೂನಿನ ಮುಖ್ಯ ನಿಯಮಗಳು ಜನರಿಗೆಲ್ಲ ತಿಳಿದು ಸಂಶಯನಿವಾರಣೆಯಾಗಲೆಂಬ ಉದ್ದೇಶದಿಂದ ದೊಡ್ಡ ದೊಡ್ಡ ಜಾಹೀರಾತುಗಳನ್ನು ಹಂದು ಹಳ್ಳಿಹಳ್ಳಿಗಳಲ್ಲೆಲ್ಲಾ ಪ್ರಚಾರಮಾಡಬೇಕೆಂದು ಬಂಗಾಲ ಪ್ರಾಂತಿಕ ಸರಕಾರವು ನಿಶ್ಚಯಿಸಿದೆ.

ಇಂಗ್ಲೆಂಡಿನಲ್ಲಿ ನೀರಿನಲ್ಲಿ ಹೋಗುವ ಮೋಟಾರುಗಳನ್ನು ಸಿದ್ಧಮಾಡುತ್ತಿರುವರು. ಇವುಗಳನ್ನು ಅಲ್ಲಿನ ನದಿಗಳಲ್ಲಿ ಉಪಯೋಗಿಸಲಿರುವರು. ಇವು ನೆಲದ ಮೇಲೆ ಹೋಗುವ ಮೋಟಾರುಗಳಿಗಿಂತಲೂ ವೇಗವಾಗಿಯೂ, ಸುರಕ್ಷಿತವಾಗಿಯೂ ಹೋಗುವವಂತೆ!

ಅಮೇರಿಕೆಯಲ್ಲಿ ಹುಟ್ಟುಮೂಕನಾಗಿದ್ದ ಹರ್ಮನ್ ಎಂಬುವನು ಮೂಕರು ಮಾತನಾಡುವಂತೆ ಒಂದು ವಿಚಿತ್ರಉಪಾಯವನ್ನು ಹುಡುಕಿ ಎಲ್ಲರನ್ನೂ ಆಶ್ಚರ್ಯಗೊಳಿಸುತ್ತಿರುವನು. ಕುತ್ತಿಗೆಯ ನರಗಳನ್ನು ಒತ್ತಿಹಿಡಿಯುವದರಿಂದ ಮೂಕರು ಮಾತನಾಡಬಹುದೆಂದು ಇವನ ಹೇಳಿಕೆ!

ಮಧುರೆಯಲ್ಲಿ 'ಯತೀಂದ್ರದಾಸ ಸ್ಮಾರಕ ನಿಧಿ' ಯ ಕಾರ್ಯದರ್ಶಿಯಾದ ರಂಗರಾಜನ್ ಬಿ.ಎ., ಎಂಬ ವಿದ್ಯಾರ್ಥಿಯ ಮನೆಯನ್ನು ಪೋಲೀಸ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರು ಪ್ರವೇಶಿಸಿ ಝಡ್ತಿ ನಡೆಸಿ, ಕೆಲ ಪುಸ್ತಕಗಳನ್ನೂ ಆ ಸ್ಮಾರಕನಿಧಿಯ ಲೆಕ್ಕದ ಪುಸ್ತಕಗಳನ್ನೂ ಒಯ್ದರು.

ಸಂಯುಕ್ತಪ್ರಾಂತ್ಯದಲ್ಲಿ ಹೆಚ್ಚಿನ ಶುದ್ಧಿಕಾರ್ಯ ನಡೆಸಿದ್ದ ಆರ್ಯಸಮಾಜದ ಮುಖಂಡರಲೊಬ್ಬರಾದ ಶ್ರೀ ಚೌಧರಿಜ್ಞಾನಸಿಂಧುರೆಂಬುವರು ತಮ್ಮ ಗ್ರಾಮವಾದ ಇಟಾವಾ ಎಂಬಲ್ಲಿಗೆ ಕುದುರೆಯಲ್ಲಿ ಕುಳಿತು ಹೋಗುತ್ತಿದ್ದಾಗ ಕೆಲವರು ಅವರನ್ನು ಗುಂಡು ಹೊಡೆದು ಕೊಂದಿರುವರು.

ಇದೇ ಜನವರಿ 26 ನೇ ತಾರೀಖು ಭಾನುವಾರವನ್ನು ಭರತಖಂಡದಲ್ಲಿ ಎಲ್ಲರೂ ಪೂರ್ಣ ಸ್ವಾತಂತ್ರ್ಯದ ದಿನದಂತೆ ಆಚರಿಸಿ, ಸಭೆ ಮೆರವಣಿಗೆಗಳನ್ನು ಮಾಡಿ, ಲಾಹೋರ್ ರಾಷ್ಟ್ರೀಯ ಸಭೆಯಲ್ಲಾದ ನಿರ್ಣಯವನ್ನು ಎಲ್ಲಾ ಕಡೆಯೂ ಪ್ರಚಾರಮಾಡಬೇಕೆಂದು ಪಂಡಿತ ಜವಾಹಿರಲಾಲರು ಪ್ರಕಟಮಾಡಿರುವರು.

ಅಮೇರಿಕೆಯ ಮೆಲ್ಡೆನ್ ಎಂಬಲ್ಲಿರುವ ಪಾದ್ರಿ ಪವರ್ ಎಂಬುವರ ಘೋರಿಗೆ ರೋಗಗಳನ್ನು ಗುಣಪಡಿಸುವ ವಿಚಿತ್ರಶಕ್ತಿಯಿರುವದಂತೆ! ಮಿಸ್. ಮೋರಾ ಮುಡಿ ಎಂಬ ತರುಣಿಗೆ ಕಾಲಿನಲ್ಲಿ ಏನೋ ರೋಗವಾಸ್ತವ್ಯವಾಗಿ ನಡೆಯುವದಕ್ಕಾಗದಿರಲು ಆಕೆಯು ಘೋರಿಗೆ ಹೋಗಿ ಪ್ರಾರ್ಥಿಸಿದ ಮೇಲೆ ಗುಣವಾಗಿರುವದಂತೆ! ಇದರಿಂದ ಅಮೇರಿಕೆಯ ಡಾಕ್ಟರರು ಆಶ್ಚರ್ಯಪಡುತ್ತಿರುವರು.

ಕಳೆದವಾರ ಅಮೇರಿಕೆಯ ಒಂದು ಸಿನೆಮಾ ಕಂಪೆನಿಯವರು ವಿಮಾನದಲ್ಲಿ ಕುಳಿತು, ಬೇರೆ ಎರಡು ವಿಮಾನಗಳ ಫೋಟೋ ತೆಗೆಯುತ್ತಿದ್ದಾಗ ಆ ಎರಡು ವಿಮಾನಗಳು ಒಟ್ಟಿಗೆ ಹಾರಿ ಒಂದೇ ಕಡೆಗೆ ಬಂದಾಗ್ಗ ಒಂದಕ್ಕೊಂದು ಢಿಕ್ಕಿಹೊಡೆದು ಆಕಾಶದಲ್ಲೇ ಹತ್ತಿಕೊಂಡವು. ಕೂಡಲೇ ಆವೆರಡು ವಿಮಾನಗಳೂ ಉರಿಯುತ್ತಾ ಸಮುದ್ರಕ್ಕೆ ಬಿದ್ದು ಒಳಗಿದ್ದವರೆಲ್ಲರೂ ಮೃತರಾದರು ಆವೆರಡು ವಿಮಾನಗಳಲ್ಲೂ ಹತ್ತು ಜನರಿದ್ದರಂತೆ!

ರಬ್ಬರು ಪದಾರ್ಥಗಳನ್ನು ತಯಾರುಮಾಡುವದರಲ್ಲಿ ಇಂಗ್ಲೆಂಡಿನ ಡನ್‌ಲಪ್ ಕಂಪೆನಿಯವರು ಪ್ರಪಂಚದಲ್ಲೆಲ್ಲಾ ವಿಶೇಷ ಹೆಸರು ಪಡೆದಿದ್ದಾರೆ. ಈ ಕಂಪೆನಿಯವರು ಈಚೆಗೆ ಮಲೆಯಾದೇಶದಲ್ಲಿ 16 ಮೈಲಿ ವಿಸ್ತಾರವಾಗಿರುವ ಒಂದು ದೊಡ್ಡ ತೋಟವನ್ನು ಕೊಂಡುಕೊಂಡು ಅದರಲ್ಲಿ 20,00,000 ರಬ್ಬರುಗಿಡಗಳನ್ನು ಬೆಳೆಯಿಸುತ್ತಿರುವರು. ದಕ್ಷಿಣಹಿಂದುಸ್ಥಾನದಿಂದ ಹೋಗಿರುವ ತಮಿಳರೇ ಆ ತೋಟದಲ್ಲಿ ವಿಶೇಷವಾಗಿ ಕೆಲಸ ಮಾಡುವರು.

ಅಮೇರಿಕೆಯಲ್ಲಿ ಒಂದು ನೂತನ ವಿಚಿತ್ರಯಂತ್ರವು ಸೃಷ್ಟಿಸಲ್ಪಟ್ಟಿರುವದು. ಈ ಯಂತ್ರವು ಜನಾಂಗದ ಖಾನೇಷುಮಾರಿ ಲೆಕ್ಕವನ್ನು ಅಂದರೆ ಪ್ರಜೆಗಳ ಜಾತಿ ವಯಸ್ಸು, ಉದ್ಯೋಗ, ಉತ್ಪತ್ತಿ, ಮೊದಲಾದ ಎಲ್ಲಾ ತಪಶೀಲುಗಳನ್ನೂ ತಪ್ಪಿಲ್ಲದೆ ಬರೆಯುವದು. ಒಟ್ಟಿನಲ್ಲಿ ಇದು ದಿನಕ್ಕೆ 1,25,000 ಜನರ ವಿಷಯವನ್ನು ಬರೆಯಬಲ್ಲದು. ಇದರಿಂದ ಒಂದುವರ್ಷದಲ್ಲಿ ಪೂರೈಸಬಹುದಾದ ಖಾನೇಷುಮಾರೀ ಲೆಕ್ಕವು ಒಂದು ತಿಂಗಳಲ್ಲಿ ಮುಗಿಯುವದಂತೆ!

ಲಾಹೋರಿನಲ್ಲಿ 30,000 ಜನಸ್ತೋಮವು ಸೇರಿದ್ದು ಅದರಲ್ಲಿ ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀಮಾನ್ ಪಟೇಲರು ದಿವಂಗತ ಲಾಲಾಜಿಯವರ ಪ್ರತಿಮೆಯ ಅನಾವರಣಮಾಡಿದರು. ಲಾಲಾಜಿಯವರು ಪಂಜಾಬಿನ ಅನಭಿಷಿಕ್ತ ಅರಸರೆಂದು ವಿವರಿಸುತ್ತ ಸರಕಾರದವರು ಪ್ರತಿಮೆಯನ್ನಿರಿಸಲು ಸ್ಥಳಕೊಡದಿದ್ದರೆ, ತಾನು ಇಲ್ಲಿಯ ಅಸೆಂಬ್ಲಿ ಗೃಹದಲ್ಲಿ ಅದನ್ನು ಪ್ರತಿಷ್ಠಿಸುವಂತೆ ಮಾಡುತಿದ್ದೆನಾಗಿ ನುಡಿದರು. ಲಾಹೋರಿನ ಪುರಮಂದಿರದ ಎದುರುಗಡೆಯಲ್ಲಿ ಪ್ರತಿಮಾಸ್ಥಾಪನೆಯಾಗಿದೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶಾಸ್ತ್ರವಿರುದ್ಧವರ್ತನ.

ಬಿಜಾಪುರ ಜಿಲ್ಲಾ ಪೈಕಿ ಹೆಗ್ಗಾಪುರ ಗ್ರಾಮದ ಬೃಹನ್ಮಠಾಧ್ಯಕ್ಷರಾದ ಶ್ರೀ ಸಂಗನಬಸವ ಪಟ್ಟಾಧಿಕಾರಿಗಳು ಇದೇ ಶುಕ್ಲನಾಮಸಂ|| ಶ್ರಾವಣಮಾಸ ಆಗಾಯಿತು ವಿರಕ್ತರನ್ನು ಬರಮಾಡಿಕೊಂಡು ಪುರಾಣವನ್ನು ಪ್ರಾರಂಭಮಾಡಿಸಿ ಇದುವರೆವಿಗೂ ನಡೆಯಿಸುತ್ತಾ ಇದೇ ಮಾರ್ಗ.ಶು|| ೧೫ ಸೋಮವಾರದಲ್ಲಿ ಓಹಿಲಯ್ಯನವರ ಗುಗ್ಗುಳದ ಹಸಮುಹೂರ್ತದ ಗಣಾರಾಧನೆಯನ್ನು ನೆರವೇರಿಸಿದ್ದರು. ಆದರೆ ಈ ಮೊದಲು ಹಾಳ್ಕಿ ಬೃಹನ್ಮಠಾಧ್ಯಕ್ಷ ಶ್ರೀ ಚನ್ನಬಸವಪಟ್ಟಾಧಿಕಾರಿಗಳು ಮುಧೋಳದಲ್ಲಿ ಕೆಲವು ಸದ್ಭಕ್ತರಿಗೆ ಸ್ವಮತಸಿದ್ಧಾಂತವನ್ನು ಅರುಪಿ ಅವರವರ ಮನೆತನದ ಗುರುವರ್ಯರಿಂದ ದೀಕ್ಷೆಯನ್ನು ಕೊಡಿಸಿ ತದಂಗನಾದ ಶಿಖೆಯನ್ನಿಡಿಸಿ ಶಿವಪೂಜಾಧಿಕಾರಾರ್ಹರನ್ನಾಗಿ ಮಾಡಿಸಿದ್ದರು. ಈ ಶಿಖಾಧಾರಣದ ವಿಷಯವು ಈ ದೇಶಸ್ಥರಿಗೆ ನವೀನವಾಗಿ ಕಂಡುಬರುವದೇನೋ ನಿಜ. ಏಕೆಂದರೆ, ಈ ದೇಶದಲ್ಲಿ ಬೋಳದಲೆಯ ಪರಿವಾರವೇ ಹೆಚ್ಚಾಗಿ ಬಂದಿರುವದು. ಆದರೂ ಅವರು ಶಾಸ್ತ್ರಭಯದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಯಾವದೂ ತಿಳಿಯದೆ ಸುಮ್ಮನೇ ಇರುತ್ತಿದ್ದರು. ಇಂಥಾ ಸ್ಥಿತಿಯಲ್ಲಿ ಈ ಮುಧೋಳದವರು ವಿಧಿಸುವ ಶಿಖಾಧಾರಣವಿಧಾನವು ಆ ವಿರಕ್ತರ ಹೃದಯಾಕಾಶದಲ್ಲಿ ಪ್ರವೇಶಿಸಿ ಅಗ್ನಿಯ ಶಿಖೆಯಾಗಿ ಪ್ರಜ್ವಲಿಸಹತ್ತಿತೋ ಏನೋ ತಿಳಿಯದು. ಪ್ರತಿನಿತ್ಯದಲ್ಲಿಯೂ ಶಿಖೆಯನ್ನು ಬಿಡಬಾರದೆಂತಲೇ ಪುರಾಣದಲ್ಲಿ ಬೋಧಿಸುತ್ತಾ ಪುರಾಣದ ಮುಖ್ಯಧ್ಯೇಯವಾದ ಭಕ್ತಿರಸವನ್ನು ಸಮುದ್ರಪಾಲುಮಾಡಿ ಇಲ್ಲದ ಸಲ್ಲದ ಮಾತುಗಳಿಂದೊಡಗೂಡಿದ ಶೃಂಗಾರಾದ್ಭುತಕಥೆಗಳನ್ನೇ ಹೇಳುತ್ತಾ ಪುರಾಣಮಂಟಪವನ್ನು ಶೃಂಗಾರದ ಆಗಾರವನ್ನಾಗಿ ಮಾಡುತ್ತಿದ್ದರು. ವಾಚಕರೇ! ಇವರ ಪುರಾಣದ ಬೋಧೆಯನ್ನು ವಿರತಿಯಲಕ್ಷಣವನ್ನೂ ನೋಡಿದಿರಾ? ಅಂದರೆ ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ ಕರತಲಭಿಕ್ಷಾ, ತರುತಲವಾಸ ಇತ್ಯಾದಿಗಳನ್ನು ಅಟ್ಟೀಪಾಲುಮಾಡಿ ಲೌಕಿಕರಂತೆ ವರ್ತಿಸುತ್ತಲಿರುವದು ಕಲಿಕಾಲದ ವೈಚಿತ್ರ್ಯವೋ ತಿಳಿಯದು. ಧನ್ಯಧನ್ಯ. ಇರಲಿ, ಇನ್ನು ಯದಲಾಪೂರು ಗುರುವರ್ಯರ ಬಹಿಷ್ಕಾರದ ಶಾಸನವನ್ನೆಂತು ಹೇಳಲಸದಳವಾಗಿದೆ. ಏಕೆಂದರೆ, ಇವರು ತಮ್ಮ ಗುರುತ್ವದ ಕಟ್ಟಳೆಗಳನ್ನರಿಯದೆ ಸುಮ್ಮಸುಮ್ಮನೆ ಧನದಾಶೆಗಾಗಿ ಅಲ್ಪಸ್ವಲ್ಪ ಕಾರ್ಯಕ್ಕೆ ಬಹಿಷ್ಕಾರಗಳನ್ನು ಹಾಕುತ್ತಾ ವಿಸರ್ಜಿಸುತ್ತಾ ಸಂಚರಿಸುತ್ತಿರುವರು. ಆದರೆ ಇಲ್ಲಿ ಇಂಥ ಒಂದೆರಡನ್ನು ಉದಾಹರಣೆಗಾಗಿ ಲಿಖಿಸಬೇಕಾಗಿತ್ತು. ಪರಂತು ವಿಷಯಾಧಿಕ್ಯದ ಭಯದಿಂದಲೂ ಈ ಲೇಖಕನಿಗೆ ಅವಿಷಯವಾಗುವದರಿಂದಲೂ ವಿರಮಿಸಲಾಗಿದೆ. ಇರಲಿ, ಮುಖ್ಯವಾಗಿ ವಿದ್ಯಾಭ್ಯಾಸವನ್ನು ಮಾಡಿ ಸಿದ್ಧಾಂತಶಾಸ್ತ್ರವನ್ನವಲೋಕನಮಾಡಿದ್ದರೆ ಇಂಥ ಅವಿಚಾರ ಸ್ಥಿತಿಯು ಪ್ರಾಪ್ತವಾಗುತ್ತಿದ್ದಿಲ್ಲ. ಸುಮ್ಮನೆ ಕಟ್ಟೀಮನೆಯವರ ಸಾವಿರದೇವರು ನಾವು ಎಂದು ಹೇಳಿಕೊಂಡಮಾತ್ರಕ್ಕೆ ಅವರ ಗುರುತ್ವವು ಸಿದ್ಧಿಸುವದಿಲ್ಲ. ಈ ಮಹಾನುಭಾವರೂ ಕೂಡಾ ಸದಾ ಗಣಾರಾಧನೆಗೆ ಆಗಮಿಸಿದ್ದರು. ಇನ್ನು ಈ ಪ್ರಾಂತದಲ್ಲಿ ಘನತೆಯನ್ನು ಹೊಂದಿದ ಸಾವಳಗಿಯ ಮಠಪತಿ ರ್ಯಾವಣ್ಣನವರು ಅನೇಕ ಜನರಿಗೆ ಉಪದೇಶವನ್ನು ಕೊಡುತ್ತಾ ಶಿಷ್ಯಕೋಟಿಯನ್ನು ಹೆಚ್ಚಿಸುತ್ತಾ ಇಪ್ಪತ್ತೊಂದು ಜನ ಮುಂದಿ ಜಂಗಮರನ್ನು ಐದುಮಂದಿ ಮುತ್ತೈದೆಯರನ್ನು ತೆಗೆದುಕೊಂಡು ನಿರಾಶೆಗಳ ಸಹಿತ ಸಕೀಲದಿಂದ ಈ ಪ್ರಾಂತ... ಸಂಚರಿಸುತ್ತಾ ಭಕ್ತಮಾಹೇಶ್ವರರಿಗೆ ದೀಕ್ಷಾ...ಲದಲ್ಲಿ ತಲೆಯಲ್ಲಿ ಕೂದಲು ಇರಕೂಡದೆಂದು ಬೋಧಿಸುತ್ತಾ ಅದರಂತೆ ಮಾಡಿಸುತ್ತಾ ಇಗೋ ನೋಡಿರಿ ನನ್ನಲ್ಲಿ ಅನೇಕ ದಿವ್ಯಾಗಮಗಳಿವೆ. ಇವುಗಳಲ್ಲಿ ಶಿಖೆಯು ಇರಕೂಡದೆಂದೇ ಹೇಳಿರುವದು ಎಂದು ಹೇಳುತ್ತಾ ತಾವು ಪೂರ್ಣಶಿಖೆಯುಳ್ಳವರಾಗಿ ತಿರುಗುತ್ತಿರುವರು. ವಾಚಕಮಹಾಶಯರೇ! ನೋಡಿದಿರಾ, ಇವರ ಶಿಷ್ಯೋದ್ಧಾರವನ್ನು. ಪ್ರತ್ಯೇಕ ಭಕ್ತಮಾಹೇಶ್ವರರಿಗೆ ಅವರವರ ಸೂತ್ರಗೋತ್ರದ ಗುರುಕುಲದವರೇ ಶಿಕ್ಷಾ ದೀಕ್ಷಾ ಮೋಕ್ಷಾಧಿಕಾರಿಗಳೆಂದು ಸಿದ್ಧಾಂತಶಾಸ್ತ್ರವು ಸಿಂಹಗರ್ಜನೆಯನ್ನು ಮಾಡುತ್ತಿರುವದು. ಈ ಗರ್ಜನೆಯು ಇವರ ಕರ್ಣಕುಹರದಲ್ಲಿ ಪ್ರವೇಶಿಸಿದಂತೆ ತೋರುವದಿಲ್ಲಾ. ಪ್ರವೇಶಿಸಿದ್ದರೆ ಹೀಗೆ ಶಿಷ್ಯಕೋಟಿಯನ್ನು ಹೆಚ್ಚಿಸುತ್ತಿದ್ದಿಲ್ಲಾ. ಅಲ್ಲದೆ ಈ ಮಹನೀಯರು ದೀಕ್ಷಾವಿಧಿಯನ್ನೂ ಕೂಡ ಅವಲೋಕನಮಾಡಿದಂತೆ ತೋರುವದಿಲ್ಲ. ನೋಡಿದ್ದರೆ ಶಿಖೆಯನ್ನು ಬಿಡಕೂಡದೆಂದು ಹೇಳುತ್ತಿದ್ದಿಲ್ಲ. ತಾವು ಸಂಸಾರಿಗಳಾಗಿ ಪೂರ್ಣಶಿಖೆಯನ್ನು ಬಿಡುತ್ತಿದ್ದಿಲ್ಲಾ. ಇರಲಿ, ಶಿಖೆಯ ಬಗ್ಗೆ ಅನೇಕ ಸಿದ್ಧಾಂತಗ್ರಂಥಗಳು ಘಂಟಾಘೋಷಮಾಡುತ್ತಲಿವೆ. ಮತ್ತು ನೆನ್ನೆ ಪರಶೀವಾಸ್ವಕ್ಷದ ನಿಮಿತ್ತ ಹೈದರಾಬಾದಿನಲ್ಲಿ ನಮ್ಮ ಪಂಡಿತವರ್ಯರಿಂದ ಶಿಖೆಯನ್ನು ವೀರಶೈವರಿಗೆ ಸಿದ್ಧಮಾಡಿದ್ದು ಗೋಚರವಾಗಿದೆಯೋ ಇಲ್ಲವೋ. ಮತ್ತು ಬಳ್ಳಾರಿಯ ಮಹಾಸಭೆಯ ರಿಕಾರ್ಡಿನಲ್ಲಿ ಸರ್ವಾನುಮತದಿಂದ ಶಿಖಾಧಾರಣವು ಸಿದ್ಧವಾದದ್ದು ಇವರ ದೃಷ್ಟಿಪಥಕ್ಕೆ ಬಿದ್ದಂತೆ ತೋರುವದಿಲ್ಲ. ಇವನ್ನು ನೋಡದೆ ಇವರು ಮನಸ್ಸಿಗೆ ಬಂದಂತೆ ನಡೆಯುವದಾದರೆ ಕಲಿಕಾಲದ ವೈಚಿತ್ರ್ಯವೇ ಎಂದು ಹೇಳಬಹುದಾಗಿದೆ. ಒಂದೊಂದು ವ್ಯಕ್ತಿಯೇ ಇಂಥಾ ಸಾಮರ್ಥ್ಯ ಉಳ್ಳದ್ದೆಂದಬಳಿಕ ತ್ರಿವರ್ಗವೂ ಒಂದೇಸ್ಥಲದಲ್ಲಿ ಕೂಡಿದರಂತೂ ಹೇಳುವದೇನು. ವಾಚಕರೇ! ಮುಂದೆ ಆಗುವ ಕಾರ್ಯವನ್ನು ನೀವೇ ಊಹಿಸಿರಿ. ಪ್ರಸ್ತುತ ಕಾರ್ಯವನ್ನು ವಿಚಾರಿಸೋಣ ಈ ತ್ರಿವರ್ಗವಂತೂ ಕೂಡಿತು. ಅಲ್ಲದೆ ಸುತ್ತಮುತ್ತಲಿರುವ ಹಳ್ಳಿಗಳಿಂದ ಸಾವಿರಾರು ಜನರು ಬಂದಿದ್ದವರೊಳಗೆ ಮುಧೋಳದ ಮೊಗಲಪ್ಪ ಪಾಟೀಲ ಎಂಬೋರ್ವನು ಶಿಖಾಸಹಿತನಾಗಿ ಬಂದಂತಾಗಿತ್ತು. ಪರಂತು ತತ್ಕಾಲದಲ್ಲಿ ಶಿಖಾಧಾರಣದ ಬೋಧನವು ಹತ್ತಿದ್ದರಿಂದಲೋ ಅಥವಾ ಅವರ ನೈಸರ್ಗಿಕ ಗುಣದಿಂದಲೋ ಶಿಖೆಯನ್ನು ಬಿಟ್ಟವರು ಈ ಮಠವನ್ನು ಪ್ರವೇಶಿಸಕೂಡದು ಎಂದು ಶಾಸನವನ್ನು ವಿಧಿಸುವಂತೆ ಪ್ರಯತ್ನಿಸಿಯೂ ಸ್ವತಃ ಹೇಳಿಯೂ ಸ್ವಸ್ಥಾನವನ್ನು ಆ ವಿರಕ್ತರು ಸೇರಿದ ಬಳಿಕ ಮೊದಲು ನೇಮಿಸಿದ್ದ ಪ್ರಕಾರ ಮಾರ್ಗ ಶು|| ೧೪ ತಿಥಿಯಲ್ಲಿ 300.400 ಜನರ ದೀಕ್ಷೆಯನ್ನು ಆ ದಿನ ರಾತ್ರಿ ಒಂದೆರಡು ತಾಸುಗಳಲ್ಲಿ ಪೂರೈಸಿದರು. ನೋಡಿದಿರಾ! ಇವರ ದೀಕ್ಷಾಕ್ರಮವನ್ನು ಮುಖ್ಯವಾಗಿ ದೀಕ್ಷಾವಿಧಾನವು ಇವರ ಭಯಕ್ಕೆ ಅಂಜಿ ಗುಹೆಯನ್ನು ಸೇರಿತು. ಬೆಳಿಗ್ಗೆ ಅಂದರೆ ಸೋಮವಾರ ಉದಯದಲ್ಲಿ ಮೊಗಲಪ್ಪನವರ ಶಿಖೆಯನ್ನು ಸರ್ವರ ದೃಷ್ಟಿಪಥವನ್ನೈದುವಂತೆ ಮಾಡಿ ಬಹಿಷ್ಕಾರವನ್ನಿಡಲು ಯದಲಾಪೂರದ ಗುರುವರ್ಯರಿಗೆ ಉಳಿದ ಈರ್ವರು ಸೂಚಿಸಿದರು: ಅವರಾದರೂ ಏನೊಂದೂ ವಿಚಾರಿಸದೆ ಬಹಿಷ್ಕಾರವನ್ನಿಡಲು ಸಿದ್ಧರಾಗಿ ಮಾಡಿದ ಪ್ರಶ್ನೋತ್ತರಗಳು—

ಗು—ಮೊಗಲಪ್ಪ? ನೀನು ನನಗೆ ಹುಟ್ಟಿದ್ದರೇ ಚಂಡಿಕೆಯನ್ನು ಬೋಳಿಸುತ್ತೀ, ಇಲ್ಲವಾದರೆ ಇಲ್ಲ.

ಮೊ—ಸ್ವಾಮಿ, ನೀವು ಹೀಗೆ ಮಾತಾಡಬಾರದು. ಶಿಖಾಧಾರಣವು ಶಾಸ್ತ್ರದಲ್ಲಿ ಇರುವುದರಿಂದ ಆದ್ದರಿಂದ ನಮ್ಮ ಗ್ರಾಮದಲ್ಲಿ ನೂರಾರು ಜನರು ಬಿಟ್ಟಿರುವರು.

ಗು—ಬೋಳೀಮಗನೆ! ಹೆಚ್ಚಿನ ಮಾತುಗಳನ್ನು ಏಕೆ ಆಡುವೆ, ನಿನ್ನ ಸಂಗತಿಯನ್ನು ನೀನು ಹೇಳು.

ಮೊ—ಸ್ವಾಮಿ, ಇಷ್ಟು ಕ್ರೋಧವೇಕೆ. ಯಾವಾಗಲಾದರೂ ನಮ್ಮ ಗ್ರಾಮಕ್ಕೆ ಬಂದು ಸರ್ವರಿಗೆ ನಿಮ್ಮ ಶಾಸನವನ್ನು ವಿಧಿಸಿರಿ. ನನಗೊಬ್ಬನಿಗೇಕೆ.

ಗು—ಛೀ ಮೂರ್ಖಾ ನಿನ್ನ ಗುಲಾಮಗುಣವನ್ನು ಬಿಡಲೊಲ್ಲೆಯಾ ಇಗೋ ನೋಡು ನಿನ್ನ ಶಕ್ತಿಯನ್ನು ತೋರಿಸು ಎಂದು ಹೇಳಿ ಮೊದಲೇ ಸಿದ್ಧಮಾಡಿಟ್ಟ ಕತ್ತರಿಯನ್ನು ತೆಗೆದುಕೊಂಡು ಹಾರಿ ಮೊಗಲಪ್ಪನ ಶಿಖೆಯನ್ನು ಮುಟ್ಟಿಸಿ ಕಡೆಗಾಣಿಸಿದರು. ವಾಚಕರೇ! ಅವರಂತೆ ಇನ್ನೆಲ್ಲಾ ಮಾಡಲು ಮೊಗಲಪ್ಪನಿಗೆ ಎದುತ್ತಿದ್ದಿಲ್ಲವೆ, ನೀವೇ ಹೇಳಿರಿ, ಪರಂತು ಈ ಗುರುವರ್ಯರ ಶಾಸನಕ್ಕೆ ಏನನ್ನಬೇಕು! ವಿರಕ್ತಮಹಾಶಯರೇ, ಗುರುವರ್ಯರೇ, ನಾನಿದಿಗ ರ್ಯಾವಪ್ಪನವರೇ ಈ ರೀತಿ ಮಾಡುವದು ನಿಮ್ಮ ಧರ್ಮವಲ್ಲ. ಇನ್ನು ಮೇಲಾದರೂ ಶಾಸ್ತ್ರವನ್ನು ನೋಡಿ ನಡೆಯಿರಿ ಎಂದು ಸೂಚಿಸುವ,

ಓರ್ವ ಮತಾಭಿಮಾನಿ.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಪಂಚಾಚಾರ್ಯ ವಾಚನಾಲಯ ಸ್ಥಾಪನ.

ಹಿರೇಹೊನ್ನೀಹಳ್ಳಿ.

ನಮ್ಮ ಗ್ರಾಮದಲ್ಲಿ ಎರಡು ವರ್ಷಗಳ ಪೂರ್ವದಲ್ಲಿ ಸ್ಥಾಪಿಸಲ್ಪಟ್ಟ "ಪಂಚಾಚಾರ್ಯಭಜನಾಸಂಘವು" ಊರ್ಜಿತಾವಸ್ಥೆಯಲ್ಲಿದ್ದು ಅದರ ಮುಖಾಂತರ ವಾಚನಾಲಯವನ್ನು ತೆರೆಯಬೇಕೆಂದು ಸಜ್ಜನರ ಅಭಿಪ್ರಾಯವಿತ್ತು. ಅದೇಮೇರೆಗೆ ತಾ|| 1-1-1930 ನೇ ತಾರೀಖಿನ ದಿವಸ "ಪಂಚಾಚಾರ್ಯ ವಾಚನಾಲಯವು" ಅಯಾಯ ವ್ಯವಸ್ಥಾಪಕರಿಂದೊಡಗೂಡಿ ಸ್ಥಾಪಿಸಲ್ಪಟ್ಟಿತು. ವೀರಶೈವಧರ್ಮಗ್ರಂಥಗಳನ್ನು ಸಂಗ್ರಹಿಸುವದೇ ಇದರ ಮೂಲೋದ್ದೇಶವು. ವಾಚನಾಲಯದಿಂದಲೇ ಧರ್ಮವು ಪ್ರಸರಿಸುವುದಲ್ಲದೆ ಮಾನವನ ಜ್ಞಾನಾರ್ಜನೆಗೆ ಹೆಚ್ಚು ಅನುಕೂಲವಾಗುತ್ತದೆ. ಇಂಥ ವಾಚನಾಲಯಗಳು ಎಲ್ಲ ಕಡೆಯಲ್ಲಿಯೂ ಸ್ಥಾಪಿಸಲ್ಪಟ್ಟು ವೀರಶೈವಮತಕ್ಕೆ ಭೂಷಣವನ್ನುಂಟುಮಾಡಲೆಂದು ನಮ್ಮ ಪ್ರಾರ್ಥನೆಯು.

ತಮ್ಮ ವಿಧೇಯ,
ಉಳವಪ್ಪ ಬಸವಪ್ಪ ಎಲಿವಾಳ,
ಪಂ|| ಭ|| ಸಂಘ, ಅ|| ಸೆಕ್ರೆಟರಿ
ಹಿರೇಹೊನ್ನೀಹಳ್ಳಿ, ಡಿ|| ಧಾರವಾಡ.

ಸಸ್ಯಾಹಾರದಲ್ಲಿರುವ ಗುಣವಿಶೇಷಗಳು.

ಆಹಾರದಿಂದಲೇ ಮನುಷ್ಯನ ನೀತಿ, ನಡತೆ, ಬುದ್ಧಿ, ಆಲೋಚನೆ, ಕೆಲಸ, ಸ್ವಭಾವ, ಕೋಪತಾಪಗಳು ಇವುಗಳೆಲ್ಲಾ ಮಾರ್ಪಡುವುವು. ಸಸ್ಯಾಹಾರವು ಮನುಷ್ಯನ ಕೋಪತಾಪಗಳು, ಸ್ವಭಾವ ಗುಣ ಮುಂತಾದುವುಗಳನ್ನು ಸಮಸ್ಥಿತಿಯಲ್ಲಿಡುವುದು. ಆದರೆ ಮಾಂಸಾಹಾರವು ಅದಕ್ಕೆ ಕೇವಲ ವಿರೋಧಗುಣವುಳ್ಳದು. ತರಕಾರಿಗಳೂ, ಹಣ್ಣುಗಳೂ, ಜೀವನಕಾಲವನ್ನೂ, ದೇಹಾರೋಗ್ಯವನ್ನೂ ಹೆಚ್ಚಿಸುವುದರಿಂದ, ಅವು ನಮ್ಮ ನಿತ್ಯಾಹಾರದಲ್ಲಿ ಅಧಿಕವಾಗಿ ಸೇರಿರಬೇಕು. ಕಾಡುಗಳಲ್ಲಿ ಏಕಾಕಿಗಳಾಗಿ ತಪಸ್ಸು ಮಾಡುತ್ತಿರುವ ಋಷಿಗಳ ದೇಹಾರೋಗ್ಯ, ರೋಗನಿರೋಧಕಶಕ್ತಿ, ಮನೋಬಲ, ಇಂದ್ರಿಯನಿಗ್ರಹ, ಅಮೋಘವಾದ ವೇದಾಂತ ತತ್ವಗಳ ವಿಷಯವಾದ ಜ್ಞಾನ, ಇವುಗಳೆಲ್ಲಕ್ಕೂ ಋಷಿಗಳು ಪ್ರತಿದಿನವೂ ಸೇವಿಸುವ ತರಕಾರಿಗಳು, ಹಣ್ಣುಗಳು, ಕಾಯಿಗಳು ಇವೇ ಕಾರಣವು. ದೀರ್ಘಕಾಲ ಬದುಕಿರುವವರಲ್ಲಿ ಸಸ್ಯಾಹಾರಿಗಳೇ ಹೆಚ್ಚು. ಮಾಂಸಾಹಾರಿಗಳಲ್ಲಿ ತಮ್ಮ ನೂರನೆಯ ವಯಸ್ಸಿನವರೆಗೂ ಬದುಕುವವರ ಸಂಖ್ಯೆಯು ಬಹಳ ಕಡಿಮೆ. ಸಸ್ಯಾಹಾರವು ಅಲ್ಬುಮೆನ್, ಪಿಷ್ಟಪದಾರ್ಥಗಳು, ಸಕ್ಕರೆ ಮತ್ತು ಕೊಬ್ಬು ಇವುಗಳನ್ನು ಒದಗಿಸುವುದರೊಡನೆ, ದೇಹದ ಬೆಳವಣಿಗೆಗೂ, ರಕ್ತನಾಳಗಳ ವೃದ್ಧಿಗೂ ಅವಶ್ಯವಾದ ಖನಿಜಸಂಬಂಧವಾದ ಉಪ್ಪುಗಳನ್ನೂ ಒದಗಿಸುವುದು. ಅದು ಹಲ್ಲುಗಳನ್ನು ಶುಚಿಯಾಗಿಟ್ಟು, ರಕ್ತವನ್ನು ಶುದ್ಧಪಡಿಸಿ, ರೋಗನಿರೋಧಕಶಕ್ತಿಯನ್ನು ಹುಟ್ಟಿಸಿ, ಆರೋಗ್ಯವನ್ನು ತರುವುದು. ಸಸ್ಯಾಹಾರದೊಡನೆ ಹಣ್ಣುಗಳೂ, ಕಾಯಿಗಳೂ ಸೇರಿದ್ದರೆ, ಅದು ಬುದ್ಧಿಶ್ರಮಪಡುವವರಿಗೆ ಅತ್ಯುತ್ತಮವಾದ ಆಹಾರವಾಗುವುದು. ಸಸ್ಯಾಹಾರಿಗಳಿಗೆ ಆಹಾರದ ಪ್ರಮಾಣವು ಹೆಚ್ಚಾಗಬೇಕಾಗುವುದರಿಂದ, ಅದು ಮಲವು ಧಾರಾಳವಾಗಿ ಹೊರಕ್ಕೆ ಹೊರಡುವಂತೆ ಕರುಳಿನಲ್ಲಿ ಒಂದು ಶಕ್ತಿಯನ್ನು ಹುಟ್ಟಿಸಿ, ಮಲಬದ್ಧತೆಯೆಂಬ ಅಪಾಯಕರವಾದ ವ್ಯಾಧಿಗೆ ಅವಕಾಶವೇ ಇಲ್ಲದಂತೆ ಮಾಡುವುದು. ಸಸ್ಯಾಹಾರದ ಸೇವನೆಯಿಂದ ಬುದ್ಧಿಯು ಚುರುಕಾಗುವುದು. ಮತ್ತು ಅಸ್ತವ್ಯಸ್ತವುಳ್ಳವರ ಮನಸ್ಸಿಗೆ ನೆಮ್ಮದಿಯನ್ನುಂಟುಮಾಡುವುದು. ಸಸ್ಯಾಹಾರಗಳಲ್ಲಿ ವಿಟಮಿನ್‌ಗಳೆಂಬ ಭಾಗಗಳು ವಿಶೇಷವಾಗಿರುವುದೇ ಅವುಗಳಲ್ಲಿ ಈ ಗುಣಭಾಗಗಳಿಗೆ ಕಾರಣವು. ಮನುಷ್ಯರು, ಮೃಗಪಕ್ಷಿಗಳು ಮುಂತಾದ ಎಲ್ಲಾ ಜೀವಿಗಳಿಗೂ ಮೇಲೆ ಹೇಳಿದ ಆಹಾರಭಾಗಗಳು ಅವಶ್ಯವು. ಅವು ಸಸ್ಯಾಹಾರಗಳಲ್ಲಿಯೇ ಮುಖ್ಯವಾಗಿ ದೊರೆಯುವುವು. ಆಹಾರದಲ್ಲಿ ಮಿಕ್ಕ ಪದಾರ್ಥಗಳೆಲ್ಲವೂ ಸೇರಿದ್ದರೂ, ವಿಟಮಿನ್ ಭಾಗವು ಕಡಿಮೆಯಾಗಿದ್ದರೆ, ಅದು ಆರೋಗ್ಯರಕ್ಷಣೆಗೆ ಸಹಕಾರಿಯಾಗಲಾರದು. ಆದುದರಿಂದ ವಿಟಮಿನ್‌ಗಳು ಸೇರಿದಾಗಲೇ ಆಹಾರದಲ್ಲಿ ಎಲ್ಲಾ ಭಾಗಗಳೂ ಸೇರುವಂತಾಗುವುದು. ಮತ್ತು ಸ್ಕರ್ವಿ, ಹೊಟ್ಟೆಯುಬ್ಬರ, ಮುಂತಾದ ಆಹಾರಪದಾರ್ಥಗಳ ನ್ಯೂನತೆಯಿಂದ ಪ್ರಾಪ್ತವಾಗುವ ವ್ಯಾಧಿಗಳಿಗೂ ಅವಕಾಶವು ತಪ್ಪುವುದು. ಕರೆಯುವ ಹಸುಗಳು ತಿನ್ನುವ ಹಸುರು ಹುಲ್ಲಿನಿಂದ, ಅವುಗಳ ದೇಹಕ್ಕೊದಗುವ ವಿಟಮಿನ್‌ಗಳಿಂದಲೇ ಅವುಗಳ ಹಾಲು ಅತ್ಯುತ್ತಮವಾದ ಆಹಾರವೆನಿಸಿರುವುದು. ಕಾಡ್‌ಲಿವರ್ ಎಣ್ಣೆ ಅಥವಾ ಮೀನೆಣ್ಣೆಯಲ್ಲಿರುವ ಪುಷ್ಟಿವರ್ಧಕ ಸ್ವಭಾವಕ್ಕೂ ಆ ಮೀನುಗಳು ತಿನ್ನುವ ಸಮುದ್ರದ ಪಾಚಿಯೇ ಕಾರಣವು. ಸೊಪ್ಪುಸೆದೆಗಳನ್ನು ತಿಂದು ಜೀವಿಸುತ್ತಿರುವ ಪ್ರಾಣಿಗಳ ದೇಹಶಕ್ತಿಗೂ, ದೀರ್ಘಕಾಲ ಜೀವನಕ್ಕೂ, ಹಣ್ಣುಕಾಯಿಗಳು, ಸೊಪ್ಪುಗಳು ಮುಂತಾದುವುಗಳಿಂದ ಅವುಗಳ ದೇಹಕ್ಕೊದಗುವ ವಿಟಮಿನ್‌ಗಳೇ ಕಾರಣವು. ಜೀವವಿರುವವರೆಗೂ ಮಾಂಸಾಹಾರವಿಲ್ಲದೆಯೇ ಆರೋಗ್ಯಶಾಲಿಗಳಾಗಿ ಬದುಕಬಹುದು. ಆದರೆ, ತರಕಾರಿಗಳೂ, ಹಣ್ಣುಗಳೂ ಸೇರಿಲ್ಲದ ಆಹಾರವನ್ನೇ ಸೇವಿಸುತ್ತಿದ್ದರೆ ಮಾತ್ರ, ಅನೇಕ ರೋಗಗಳಿಗೆ ಕಾರಣವಾಗುವುದು. ಕಾಯಿಗಳಲ್ಲಿ, ಹಾಲು, ಬೆಣ್ಣೆ, ಜೇನೆ ಇವುಗಳಲ್ಲಿರುವ ಆಹಾರಭಾಗಗಳೆಲ್ಲವೂ ಇರುವುವು. ಸಸ್ಯಾಹಾರವು ಮಾಂಸಾಹಾರದಂತೆ ದೇಹಕ್ಕೆ ಹೆಚ್ಚು ಆಯಾಸವನ್ನುಂಟುಮಾಡುವುದಿಲ್ಲ. ಶರೀರದ ಭಾಗಗಳು ಬೇಗನೆ ಕೆಟ್ಟು, ಅಕಾಲಮರಣಕ್ಕೆ ಗುರಿಯಾಗುವ ಸಂಭವವೂ ಕಡಿಮೆಯಾಗುವುದು. ಮಾಂಸಾಹಾರವು ಕೆಲವು ಸಮಯಗಳಲ್ಲಿ ಬಹಳ ಶೀಘ್ರವಾಗಿ ಕೊಳೆತು, ದೇಹದಲ್ಲಿ ವಿಷಗಳನ್ನು ಉತ್ಪತ್ತಿಮಾಡಿ, ದೇಹಕ್ಕೆ ಅಪಾಯಕಾರಿಯಾಗುವುದು. ಸಸ್ಯಾಹಾರದಲ್ಲಿ ಹಾಗೆ ಕೊಳೆಯುವ ಸ್ವಭಾವವು ಬಹಳ ಕಡಿಮೆ.

(ಆರೋಗ್ಯಚಂದ್ರಿಕೆ.)

ಅಪೂರ್ವಗ್ರಂಥ! ಅಪೂರ್ವಗ್ರಂಥ!!

ಮಹಾನಾರಾಯಣೋಪನಿಷತ್
(ವೀರಶೈವಭಾಷ್ಯ)

ಸುಪ್ರಸಿದ್ಧವಾದ ಈ ಉಪನಿಷತ್ತಿಗೆ ನೃಸಿಂಹ ಪಂಡಿತಾರಾಧ್ಯರೆಂಬ ಪೂರ್ವಾಚಾರ್ಯರು ವೀರಶೈವಮತಪರವಾಗಿ ಸಂಸ್ಕೃತಭಾಷೆಯಿಂದ ಅತ್ಯುತ್ಕೃಷ್ಟವಾದ ಭಾಷ್ಯವನ್ನು ರಚಿಸಿದ್ದಾರೆ. ವೀರಶೈವರ ಸುದೈವದಿಂದ ಈ ಭಾಷ್ಯವು ಉಪಲಬ್ಧವಾಗಿ, ಶ್ರೀ ಕಾಶೀಕ್ಷೇತ್ರದಲ್ಲಿ ದೇವನಾಗರೀ ಲಿಪಿಯಿಂದ ಬಹು ಮನೋಹರವಾಗಿ ಮುದ್ರಿಸಲ್ಪಟ್ಟಿದೆ. ಪುರಗಿರಿ ಬೃಹನ್ಮಠಾಧ್ಯಕ್ಷ ಶಿವಸಿದ್ಧಾಂತ ತತ್ವಜ್ಞ ಶ್ರೀ ಚಿದ್ಘನಲಿಂಗಶಿವಾಚಾರ್ಯರು ಈ ಭಾಷ್ಯವನ್ನು ಸಂಶೋಧಿಸಿದ್ದಾರೆ. ಈ ಗ್ರಂಥವು "ಶ್ರೀ ಕೇದಾರನಾಥ ಶಿವತತ್ವಗ್ರಂಥಮಾಲೆ"ಯ ಪ್ರಥಮ ಪುಷ್ಪವಾಗಿದೆ. ವೀರಶೈವಸಿದ್ಧಾಂತವನ್ನು ಅತ್ಯುತ್ತಮರೀತಿಯಿಂದ ಬೋಧಿಸುವ ಈ ಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ತರಿಸಿಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ರೂ. ೧—೦—೦.

ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೂ, ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋದೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [25]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪ್ರಕಟಿ (ಕೆಟಲಾಗ್) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆಡಿಸಿ ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಸಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಬಿಸ್ಸ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ವಭಾವಾದ ಕೂಡಿದ ವೀರ್ಯಸ್ಖಲನರೋಗ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿರೋಗ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಕಸ್ತೂರಿ, ಶಾಲಮಕಂದ, ಮಧುಕಂದ, ಜಟಾಕಂದ, ಕಾಲೀಮುಲೀಕಂದ, ಅಶ್ವಕಂದ, ಕ್ರೌಂಚಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ತಾಳಬೀಜ, ಭೋಕರೀಬೀಜ, ನವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಸ್ತಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂಡ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಫಾ, ಬೀಜಬಂದ, ಹರಣಬೋರಿ, ಮುಂಗಲೇ ಪೀದಾಣಿ, ಮರ್ದಾನೀಕಟ್ಟಿಗೆ, ಶತಾವರಿ, ಸಣ್ಣಮಂಗಜ, ಆಲದಹಾಲು, ವಾಕೇರಿಭಾಜಾ, ಗೋಖರು, ಆಡವೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಖಾರ, ಕೇಸರಿ, ಬಾಲಸ್ತ್ರೀ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಸಕ್ಕರೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14 ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಜೀಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಜಾಳ, ಹಿಕ್ಕಿ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಪಾಕಟಾರದರೋಗ, ಚಟ್ಟಿರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [27]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗಪರಿಹಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಶೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[40] (೮೪೮) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಗ್ರಾಹಕರಿಂದ ದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧತ್ರ ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ ಕ್ಕೆ	ರೂ. ಆ. ಪೈ. ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೨ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

**ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.**

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

**ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

[20]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦. ಮದರಾಸು.

[29]

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ ನೇ ಜನವರಿ ೧೯೩೦ [ಸಂಚಿಕೆ ೩೭.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳ ವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಆದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವ ಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೨ ಭಾವಚಿತ್ರಗಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಅಧಿಕಾರಿಗಳೂ, ವ್ಯಾಪಾರಿಗಳೂ, ಬಡವರೂ, ಭಿಕ್ಷುಕರೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ.

ಮ್ಯಾನೇಜರ್.
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಕಾರ್ತೀಕಮಹೋತ್ಸವ.

ಬಿಜಾಪುರ ಡಿ|| ಜಂಬಗಿಗ್ರಾಮದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವಾದರೂ ಕಾರ್ತೀಕಮಹೋತ್ಸವವು ಅತಿ ವೈಭವದಿಂದ ನೆರವೇರಿತು. ಕಾರ್ತೀಕ ಶು|| ೧ ದಿವಸ ಶ್ರೀ ಮಲ್ಲಿಕಾರ್ಜುನವಾಚನಾಲಯದ ಪ್ರಸಿಡೆಂಟರಾದ ಮ|| ರಾ|| ಶ್ರೀಮಂತ ಶಂಕರರಾವ್ ದೇಶಮುಖ ಇವರ ಅರಮನೆಯಿಂದ ಯಾವತ್ತು ದೇವಾಲಯಗಳಿಗೆ ದೀಪಹಚ್ಚುವ ಸಮಾರಂಭವು ಮತ್ತು ಅನ್ನಸಂತರ್ಪಣೆಯು ಪ್ರಾರಂಭಿಸಲ್ಪಟ್ಟಿತು. ಅನಂತರ ಶ್ರೀ ಮಠದ ಗುರುಬಸವಸ್ವಾಮಿಗಳು ವಿರಕ್ತಮಠದ ಗುರುಪಾದಯ್ಯನವರು ಇವರೇ ಮೊದಲಾದವರು ಅನುಕ್ರಮವಾಗಿ ಒಬ್ಬೊಬ್ಬರಂತೆ ಮಾರ್ಗಶಿರ ಶುದ್ಧ ಪೌರ್ಣಿಮೆಯವರೆಗೆ ದೀಪೋತ್ಸವವನ್ನು ನೆರವೇರಿಸಿದರು. ಕಡೇ ದಿವಸ ವೇ|| ಶರಣಯ್ಯನವರು ಅಲಗೋಡ ಮ|| ರಾ|| ಸಾತವೀರಪ್ಪ ಕಾಪಸಿ, ದೇವಣ್ಣ ಪತ್ತಾರ, ಗಾಸಬಾಳಪ್ಪ ಹತ್ತಿ, ವೇ|| ಸಂಗಯ್ಯನವರು ಮೊದಲಾದವರು ಮಿಲಿತರಾಗಿ ಮಹಾಗಣಾರಾಧನೆಯನ್ನು ನೆರವೇರಿಸಿದರು. ಶ್ರೀಮಂತ ದೇಶಮುಖರವರು ದಕ್ಷಿಣೆಯನ್ನು ಸಮರ್ಪಿಸಿದರು. ಪ್ರತಿದಿವಸವೂ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ತಮ್ಮ ಮಂಜುಲವಾದ ಗಾನದಿಂದ ಪಾಡುತ್ತಿದ್ದರು. ಶ್ರೀಮಂತ ದೇಶಮುಖರವರು ಮಾರ್ಗಶೀರ್ಷ ಬಹುಳ 12 ದಿವಸ ತಮ್ಮ ತೃತೀಯ ಪತ್ನಿಯವರಾದ ಸೌ|| ನೀಲಮ್ಮ ಬಾಯಿಯವರ ಗರ್ಭಕ್ಕೆ ಎಂಟನೇ ತಿಂಗಳಲ್ಲಿ ವೇ|| ಗುರುಲಿಂಗಯ್ಯನವರು ಪುರಾಣಿಕಮಠ ಇವರ ದ್ವಾರಾ ಲಿಂಗಧಾರಣವನ್ನು ಮಾಡಿಸಿದರು. ಆ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯು ಸಮರ್ಪಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಬಿಲ್ವವೃಕ್ಷದ ಮಹಿಮೆ.

ಈ ಗ್ರಂಥದಲ್ಲಿ ಸೃಷ್ಟಿನಿರ್ಮಾಣ ವಿಷಯವೂ ಪರಬ್ರಹ್ಮಸ್ವರೂಪ ವಿಷಯವು ಹೇಳಲ್ಪಟ್ಟಿದ್ದು ಬಿಲ್ವವೃಕ್ಷದ ಸ್ವರೂಪವು ವಿಶೇಷರೀತಿಯಿಂದ ವರ್ಣಿಸಲ್ಪಟ್ಟಿರುವದು. ಮಹಾ ಬಿಲ್ವವೃಕ್ಷದ ಸಮಗ್ರಸ್ವರೂಪವನ್ನು ಪ್ರತಿಪಾದಿಸುವ ಕನ್ನಡ ಗ್ರಂಥಗಳು ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲವೆಂಬ ವಿಷಯವನ್ನು ತಿಳಿದು ಪರಮಪೂಜ್ಯವಾದ ಈ ಮಹಾಬಿಲ್ವವೃಕ್ಷದ ಮಹಿಮೆಯನ್ನು ಸರ್ವರೂ ತಿಳಿದು ಧನ್ಯರಾಗಬೇಕೆಂಬ ಸದುದ್ದೇಶದಿಂದ ಅತ್ಯಂತ ಶ್ರಮವನ್ನು ವಹಿಸಿ ಸರಳವಾದ ಕನ್ನಡಭಾಷೆಯಲ್ಲಿ ಬಾಲಕರಿಗೂ ಸಹ ತಿಳಿಯುವಂತೆ ಈ ಪುಸ್ತಕವನ್ನು ರಚಿಸಿದ್ದಾಗಿದೆ. ಈ ಗ್ರಂಥದ ಅಂತ್ಯಭಾಗದಲ್ಲಿ ಬಿಲ್ವವೃಕ್ಷದ ಮಹಿಮಾಪರವಾದ ಅಷ್ಟೋತ್ತರಶತ (108) ಸಂಸ್ಕೃತ ಶ್ಲೋಕಗಳು ಮುದ್ರಿಸಲ್ಪಟ್ಟಿವೆ. ಈ ಅಷ್ಟೋತ್ತರ ಶತಶ್ಲೋಕಗಳು ಪ್ರತಿದಿವಸ ಪೂಜಾಕಾಲದ ಪಾರಾಯಣಕ್ಕೆ ಅತ್ಯಂತ ಯೋಗ್ಯಗಳಾಗಿವೆ. ಪ್ರತಿಯೊಬ್ಬರೂ ಈ ಪುಸ್ತಕವನ್ನು ಓದಿ ಧನ್ಯರಾಗಬೇಕೆಂದು ಪ್ರಾರ್ಥನೆ.

೫ ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವುದಿಲ್ಲ. ಪ್ರತಿ 1 ಕ್ಕೆ 0-3-0 ಪೋಸ್ಟು ಮೂಲಕ 0-3-6 ಸ್ಟಾಂಪನ್ನು ಕಳುಹಿಸುವುದು.

ವ್ಯಾಪಾರಸ್ಥರಿಗೆ ವಿಶೇಷವಾದ ಕಮಿಷನ್ ಕೊಡುತ್ತೇವೆ.

ವಿಳಾಸ:— **ಎಂ. ಚನ್ನಬಸಪ್ಪ,**
ಮಾರ್ತಂಡರಾವವೈದ್ಯಶಾಲಾ, ಮಾದಸಿಂಗನಹಳ್ಳಿ,
ಶ್ರೀರಂಗಪಟ್ಟಣ ಪೋಸ್ಟ್, ಮೈಸೂರು ಜಿಲ್ಲಾ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪುಣ್ಯತಿಥಿ.

ವಿಜಾಪುರ ಡಿ|| ಸಿಂದಗಿ ತಾಲೂಕ ದೇವರಹಿಪ್ಪರಗಿ ಪರದೇಶಿ ಹಿರೇಮಠದ ಶ್ರೀ|| ಷ|| ಬ್ರ|| ಸಿದ್ಧರಾಮಶಿವಾಚಾರ್ಯರು ಕಳೆದ ವರ್ಷ ಪೌಷಶುದ್ಧ ೧೩ ದಿವಸ ಶಿವೈಕ್ಯರಾದರು. ಆ ಪುಣ್ಯತಿಥಿಯನ್ನು ನೆರವೇರಿಸುವದಕ್ಕಾಗಿ ಇದೇ ಶುಕ್ಲನಾಮ ಸಂವತ್ಸರ ಪೌಷಶುದ್ಧ ೧೩ ಸೋಮವಾರ ಸದರಿ ಶ್ರೀಗಳಿಂದ ಅನುಗ್ರಹೀತರಾದ ಮುಳಘಾಣದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರು ಕಾಶಿಗೆ ಮುಂದಾಗಿ ಹೋಗಿ ಅಲ್ಲಿಂದ ತರಲ್ಪಟ್ಟ ಶಿವಲಿಂಗವನ್ನು ವಿಜಾಪುರ ಬೃಹನ್ಮಠದ ಪಟ್ಟಾಧ್ಯಕ್ಷ ಶ್ರೀ ಶಂಭುಲಿಂಗ ಶಿವಾಚಾರ್ಯರ ಸಮಕ್ಷದಲ್ಲಿ ಶ್ರೀ ಸಮಾಧಿಯ ಮೇಲೆ ಪ್ರತಿಷ್ಠಾಪನೆಗೊಳಿಸಿದರು. ಅದೇ ದಿವಸ ವಿಶೇಷವಾಗಿ ಅನ್ನಸಂತರ್ಪಣೆಯು ನಡೆಯಿತು. ಮರುದಿವಸ ಮಂಗಳವಾರ ಸದರಿ ಪರದೇಶಿ ಹಿರೇಮಠದಲ್ಲಿ ಸಾರ್ವಜನಿಕ ದೊಡ್ಡ ಸಭೆಯು ಶ್ರೀ ಶಂಭುಲಿಂಗಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ವಪರಮತದ ಅನೇಕಜನರು ನೆರೆದಿದ್ದರು. ಆಗ ಶ್ರೀ ಶಂಭುಲಿಂಗಶಿವಾಚಾರ್ಯರು ಪ್ರತಿಯೊಬ್ಬ ಮನುಷ್ಯನ ಅಭ್ಯುನ್ನತಿಗೆ ವೀರಶೈವಮತವು ಹೇಗೆ ಮುಖ್ಯಸಾಧನವಾಗಿರುವದೆಂಬ ವಿಷಯದ ಬಗ್ಗೆ ಸ್ವಾರಸ್ಯವಾಗಿ ೨ ಘಂಟೆಗಳಕಾಲ ಸಭಿಕರ ಮನಸ್ಸಿಗೆ ಬಹುಪರಿಣಾಮಕರವಾಗುವಂತೆ ಬೋಧಿಸಿದರು. ಮತ್ತು ಅವರ ಪ್ರೇರಣೆಯಿಂದ ಮುಳಘಾಣದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರು ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳನ್ನು ಕಳುಹಿಸಲು ಅನುಮೋದಿಸಿದರು. ಮೇಲ್ಕಂಡ ಈ ಎಲ್ಲ ಮಂಗಲಕಾರ್ಯವು ಸದರಿ ಮಠದ ಸಮಸ್ತ ಶಿಷ್ಯರ ಮತ್ತು ಭಕ್ತಾದಿಗಳ ಅನುಕೂಲತೆಯಿಂದ ನೆರವೇರಿಸಲ್ಪಟ್ಟಿತು.

ಗುರುಭಕ್ತ,
ದೇವರ ಹಿಪ್ಪರಗಿ.

ಬೆಂಗಳೂರು ನಗರದಲ್ಲಿ ನಡೆದ ಎರಡನೆಯ ಗಲ್ಲಿಯ ವಿಷಯದಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಪ್ರಕಟಿಸಿದ ಅಭಿಪ್ರಾಯದಿಂದ ತಮಗೆ ಅವಮಾನವಾಗಿರುವದರಿಂದ 400 ರೂ. ಗಳ ಪರಿಹಾರದ್ರವ್ಯವನ್ನು ಕೊಡಿಸಬೇಕೆಂದು ಅಡ್ವೊಕೇಟ್ ಮ|| ರಾ|| ಶ್ಯಾಮರಾಯರು ಬೆಂಗಳೂರು ಮುನಿಸಿಪಲ್ ಕೋರ್ಟಿನಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಮೇಲೆ ವಿವಾದವನ್ನು ಹೂಡಿದ್ದರಷ್ಟೆ! ಮ|| ರಾ|| ಶ್ಯಾಮರಾಯರು ಈಗ ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡರೆಂದು ತಿಳಿದು ಬರುತ್ತದೆ. ಸ್ವಸ್ತ್ಯ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ
ಅಥವಾ
ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ಇನ್ನು ವೇದಗಳಿಗೂ ಆಗಮಗಳಿಗೂ ಕರ್ತೃವು ಒಬ್ಬ ಈಶ್ವರನೇ. ಆದ್ದರಿಂದ ಇವೆರಡೂ ನಿಶ್ಚಪ್ರಮಾಣಗಳಾಗಿವೆ. ಪರಮೇಶ್ವರನು ತನ್ನಲ್ಲಿ ನಿತ್ಯಸಿದ್ಧವಾದ ಜ್ಞಾನವನ್ನು ಪರಾಪರ ಭೇದರೂಪವಾಗಿ ವ್ಯಕ್ತಗೊಳಿಸಿರುವನು. **ಪರ** ಹಾಗೂ **ಅಪರ** ಎಂಬೀ ಜ್ಞಾನದ್ವಯವೇ ಮುಂಡಕಶ್ರುತಿಯಲ್ಲಿ (೧—೧—೫) **ಪರಾ ವಿದ್ಯಾ—ಅಪರಾ ವಿದ್ಯಾ** ಎಂದು ಹೇಳಿಸಿಕೊಳ್ಳಲ್ಪಡುವುದು. ಸ್ವಾಯಂಭುವ ಶ್ರುತಿಯಾದರೂ—

ಅಥಾತ್ಮಮಲಸನ್ತಾನಪಶುತ್ವವಿನಿವೃತ್ತಯೇ । ವ್ಯಕ್ತಯೇಚ ಶಿವತ್ವಸ್ಯ ಶಿವಜ್ಞಾನಂ ಪ್ರವರ್ತತೇ ॥ ತದೇಕಮಪ್ಯನೇಕತ್ವಾಚ್ಛಿವವಕ್ತ್ರಾಮ್ಬುಜೋದ್ಭವಮ್ । ಪರಾಪರವಿಭೇದೇನ ಗಚ್ಛತ್ಯರ್ಥಪ್ರತಿಶ್ರಯಾತ್ ॥

ಆತ್ಮರ ಅನಾದಿಮಲತ್ರಯವು ತೊಲಗಿ, ಪಶುತ್ವ (ಜೀವಭಾವ) ನಿವೃತ್ತಿಯೂ ಶಿವತ್ವಾಭಿವ್ಯಕ್ತಿಯೂ ಸಿದ್ಧಿಸಲೋಸುಗವೇ ಶಿವಜ್ಞಾನದ ಪ್ರವರ್ತನವಿದೆ. ಅದು ಒಂದೆಯಾದರೂ ಧ್ಯೇಯದ (ಪ್ರಯೋಜನದ) ಭೇದ ಮೂಲಕವಾಗಿಯೇ ಶಿವನ ಮುಖಕಮಲಗಳಿಂದ ಪರಾಪರ ಭೇದರೂಪವಾಗಿ ಪ್ರವಹಿಸುವುದು. ಅದು ಹೇಗೆಂದರೆ—

ಪಶ್ವೈಃ ಶೈವಾದಿಭಿರ್ದಿವ್ಯೈರಾಗಮೈಃ ಪಾಶಮೋಚಕೈಃ । ವಿಶಿಷ್ಟಭೋಗನಿಭವಶಿವತ್ವಫಲದಾಯಿಭಿಃ ॥ ಅಪರೈರಪಿ ವೇದಾದ್ಯೈರಾಗಮೈಃ ಸ್ವಮುಖೋದ್ಗತೈಃ । ಸ್ವರ್ಗಾದಿ ಫಲಸಿದ್ಧ್ಯರ್ಥಂ ಪಶುಜ್ಞಾನಪ್ರಕಾಶಕೈಃ ॥

[illegible]

ಅಪಿಚಿತ್ರಂ ಚಿತ್ರಮಧ್ಯಸ್ಥಮಚಿನ್ತ್ಯಂ ಗುಹ್ಯಮುತ್ತಮಮ್ । ತತ್ರ ಚಿತ್ರಂ ನಿಧಾಯೇತ ತಚ್ಚ ಲಿಙ್ಗಂ ನಿರಾಶ್ರಯಮ್ ॥

[illegible]

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ । ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

[illegible]

ಸ ಶಿವಃ ಸ್ವಮುಖೋದ್ಭೂತೈರಾಗಮೈಸ್ತು ಪರಾಪರೈಃ । ಅನುಗೃಹ್ಣಾತಿ ಹಿ ಜಗದ್ಭೋಗಮೋಕ್ಷಪ್ರಸಿದ್ಧಯೇ ॥೯॥

[illegible]

ಅನಾದಿಃ ಸ ಶಿವೋ ಮುಖ್ಯೋ ಯಥಾನ್ಯೇ ಭ್ಯೋವಿಲಕ್ಷಣಃ । ತಥಾ ತದ್ವದನೋದೀರ್ಣವಾಙ್ಮಯೇಭ್ಯೋವಿಲಕ್ಷಣಃ ॥೯॥ ಶಿವಾಗಮಾಖ್ಯವೇದಾಖ್ಯ ಶಿಕ್ಷಾ ಏವ ಪ್ರಮಾಣತಃ । ಶಿಕ್ಷಾಃ ಶಿವಾಗಮಾ ವೇದ್ಯಾಃ ಶಿವೇನಾವಾನಭೇದತಃ ॥೧೦॥ ಶಿಕ್ಷಾಸ್ಸಿ ತಾಸ್ತ್ರುಭಿನ್ನಕಾಸ್ತ್ರಸ್ಮಿಂಶ್ಚೈತನ್ಯಾದಯೋ ಯತಃ ।

[illegible]

ವ್ಯಾಖ್ಯಾನೇನ ಹಿ ಪಕ್ಷಾಭ್ಯಾಂ ಯಥಾ ವೈ ಪಕ್ಷಿಣಾಂ ಗತಿಃ । ತಥೈವ ಜ್ಞಾನಕರ್ಮಾಭ್ಯಾಂ ಪ್ರಾಪ್ಯತೇ ಬ್ರಹ್ಮ ಶಾಶ್ವತಮ್ ॥೧೧॥

[illegible]

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ । ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಹ್ಯೇತಾಶ್ಚತುರ್ದಶ ॥

[illegible]

ಸ ಯೋನಿಃ ಸರ್ವವಿದ್ಯಾನಾಂ ಪುರುಷಃ ಕಾರಣಂ ಪರಃ । [illegible]

ವೇದಗಳ ಅರ್ಥವು ಜೀವಕೋಟಿಗೆ ಸರಿಯಾಗಿ ತಿಳಿಯದೆಂದೂ ಯೋಚಿಸಿ, ಶಿಕ್ಷೇಪಕ್ರಿಯಾಭಾಗವನ್ನು ತಿಳಿಸುವಂತಹದೂ, ಸಮಸ್ತ ವೇದಾರ್ಥದ ಉಪಬೃಂಹಣರೂಪವಾದುದೂ, ಏಕಾರ್ಥಬೋಧಕಗಳಾದ ಕಾಮಿಕಾದ್ಯನೇಕಸಂಹಿತೆಗಳನ್ನಿತ್ತುಕೊಂಡುದುದೂ ಆದ ಆಗಮಶಾಸ್ತ್ರವೆಂಬ ಧರ್ಮಶಾಸ್ತ್ರವನ್ನು ಬೋಧಿಸಿದನು. [illegible]

"ಶಾಸ್ತ್ರಯೋನಿತ್ವಾತ್" [illegible]

[illegible]

ಉಂಟುಮಾಡುವದಕ್ಕೋಸ್ಕರ ಒಂದು ವರ್ಷದಲ್ಲಿ ಬರುವ ಶುಭಾಶುಭತಿಥಿಗಳನ್ನು ವಿಂಗಡಿಸಿ ಇಂತಹ ತಿಥಿಯಲ್ಲಿ ಇಂತಹ ಕರ್ಮವನ್ನಾಚರಿಸಬೇಕೆಂದು ಅಜ್ಞಜನರಿಗೂ ಕೂಡ ತಿಳಿಯುವಂತೆ ಬರೆದು ಸ್ವಕೀಯ ಪ್ರಸಿದ್ಧಪಡಿಸಿ ಉಪಕಾರವನ್ನು ಮಾಡುತ್ತಲಿರುವರಷ್ಟೇ! [illegible] **"ರೇಣುಕಭಾಗ"** [illegible]

[illegible]

ವ್ಯವಸ್ಥಾಪಕಮಂಡಳಿ, ಬಾಳೆಹೊಳ್ಳ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಸೇವಾ ಸಂಘ ಮತ್ತು ವಾಚನಾಲಯ ಗದಗ.

ಈ ಸಂಘದ ಜನರಲ್ ಕಮಿಟಿಯು ತಾ|| 12-1-30 ನೇ ರವಿವಾರ ಸಂಘದ ಆಫೀಸಿನಲ್ಲಿ ಕೂಡಿ ಕೆಳಗೆ ಬರೆದ ವಿಷಯಗಳು ಸರ್ವಾನುಮತದಿಂದ ಮಂಜೂರವಾದವು.—ಸದರಿ ಸಂಘ ಸ್ಥಾಪನೆಯಾದ ಲಾಗಾಯತು ಅಂದರೆ ತಾ|| 23-10-28 ನೇ ಇಸ್ವಿಯಿಂದ ತಾ|| 9-1-30 ನೇ ವರೆಗೆ ನಡೆದ ಲೆಖ್ಖಪತ್ರಗಳ ಆಢಾವೆ ನೋಡಿ ಮಂಜೂರಮಾಡಲ್ಪಟ್ಟಿತು. ಚಾಲೂವರ್ಷದ ಬಗ್ಗೆ ಈ ಸಂಘದ ಕಾರ್ಯಕಾರಿಮಂಡಲಿಯು ನೇಮಿಸಲ್ಪಟ್ಟಿತು.

ಅಧ್ಯಕ್ಷರು—ಮಿ|| ಗುರಪ್ಪ ಚನವೀರಪ್ಪ ತೆಂಗಿನಕಾಯಿ ವಿ.ಚೇ. ಮುನಸೊಫ ಮತ್ತು ಮುನಸಿಪಲ್ ಕೌನ್ಸಿಲರ್ ಗದಗ ಬೆಟಗೇರಿ.

[illegible]

ಬರ ಗದಗ, ಮಿ|| [illegible] ಮಿ|| [illegible] ಗದಗ, ಮಿ|| [illegible] ಮಿ|| [illegible] ಗುರುಶಾಂತಪ್ಪ ಹಂಚಿನಾಳ.

[illegible]

|| ಓಂ ನಮಃಶಿವಾಭ್ಯಾಂ ||

ಮಕರಸಂಕ್ರಾಂತಿಮಹೋತ್ಸವ.

ಬಾಳೆಹೊಳ್ಳ.

[illegible]

K. M. Lakkundi,
ವ್ಯಾಯಾಮಶಿಕ್ಷಕರು.

ತಲೆಬೇನೆಗೆ ಬದಲು ಹೊಟ್ಟೆಬೇನೆ.

[illegible]

ವೀರಯ್ಯ ಹುಂಡೇಕಾರ,
ಯಾಳವಾರಕರ್ ಕೊಪ್ಪಳ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜನವರಿ ತಾ|| ೨೦ ನೇ ಸೋಮವಾರ

ಧರ್ಮ.

ಸ್ವಧರ್ಮೇನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ||

ಭರತಖಂಡದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಭಾರತೀಯನಿಗೆ ವೇದಾಗಮೋಪನಿಷತ್ಪುರಾಣಾದಿಗಳು ಪರಮ ಪ್ರಮಾಣಗಳಾಗಿವೆ. ಭಾರತೀಯರ ಉದ್ಧಾರಕ್ಕೋಸ್ಕರ ಅನೇಕಾನೇಕ ಜನಾಚಾರ್ಯರು ಹಾಗೂ ಮಹರ್ಷಿಗಳು ಪೂರ್ವಕಾಲದಲ್ಲಿ ಮಹಮಹಾ ಗ್ರಂಥಗಳನ್ನು ರಚಿಸಿದ್ದಾರೆ. ತ್ರಿಕಾಲಜ್ಞಾನಿಗಳೂ ಜಗತ್ಕಲ್ಯಾಣಾಪೇಕ್ಷಿಗಳೂ ಆದ ಆ ಮಹನೀಯರು ತಾವು ರಚಿಸಿದ ಪ್ರತಿಯೊಂದು ಗ್ರಂಥದಲ್ಲಿಯೂ ಧರ್ಮದ ಸ್ವರೂಪವನ್ನು ತೋರಿಸಿ ಸರ್ವರೂ ಧರ್ಮಪರಾಯಣರಾಗಿ ಇಹಪರ ಸುಖಭಾಗಿಗಳಾಗಬೇಕೆಂದು ಬೋಧಿಸಿದ್ದಾರೆ. ಮಾನವನ ಉದ್ಧಾರಕ್ಕೋಸ್ಕರ ಸ್ನಾನ, ಅರ್ಚನ, ಪ್ರಸಾದಗ್ರಹಣ, ದಾನ ಮೊದಲಾದ ಸತ್ಕ್ರಿಯೆಗಳು ಸಾಧನೀಭೂತಗಳಾಗಿರುವವೆಂದೂ, ಈ ಯಾವತ್ತು ಸತ್ಕ್ರಿಯೆಗಳನ್ನು ನಿರ್ಮಲಮನಸ್ಸಿನಿಂದಾಚರಿಸುವವರು ಧನ, ಧಾನ್ಯ, ರೂಪ, ಆರೋಗ್ಯ, ಆಯುಸ್ಸು ಮೊದಲಾದವುಗಳಿಂದ ಪರಿಪೂರ್ಣರಾಗುವರೆಂದೂ, ಸ್ವಧರ್ಮಪರಾಯಣರು ದೇವರ ಕೃಪೆಗೆ ಪಾತ್ರರಾಗುವರೆಂದೂ, ಆದುದರಿಂದ ಪ್ರತಿಯೊಬ್ಬ ವೇದಮಾರ್ಗಾವಲಂಬಿಗಳಾದ ಮಾನವರು ಮರಣಪರ್ಯಂತವಾಗಿ ಸ್ವಧರ್ಮಾಚರಣೆಯಲ್ಲಿಯೇ ಕಾಲವನ್ನು ಕಳೆದು ಪರಶಿವನ ಕೃಪೆಗೆ ಪಾತ್ರರಾಗಬೇಕೆಂದೂ ಶಾಸನ ಮಾಡಿದ್ದಾರೆ. ಆ ಮಹನೀಯರು ಮಾಡಿದ ಧರ್ಮದ ಕಟ್ಟಳೆಯು ಅನಾದಿಕಾಲದಿಂದ ಅವಿಚ್ಛಿನ್ನರೀತಿಯಾಗಿ ನಡೆಯುತ್ತ ಬಂದು ಭಾರತೀಯರನ್ನು ಅತ್ಯಂತ ಶ್ರೇಷ್ಠ ತಾವಸ್ಥೆಯಲ್ಲಿಟ್ಟಿತ್ತು. ಆದರೆ ಆ ಕಟ್ಟಳೆಯು ಕಲಿಕಾಲದಲ್ಲಿ ಅತ್ಯಂತ ಶಿಥಿಲವಾಗುತ್ತ ಬಂದು ಈ ಕಾಲದಲ್ಲಂತೂ ಹೇಳಲಿಕ್ಕೆ ಬಾರದಷ್ಟು ಶೈಥಿಲ್ಯವನ್ನು ಹೊಂದಿ ಹೋಗಿದೆ. ಪೂರ್ವಕಾಲದಲ್ಲಿ ವೈದಿಕಮಾರ್ಗಾವಲಂಬಿಯಾದ ಪ್ರತಿಯೊಬ್ಬ ಭಾರತೀಯನು ಸಂಸ್ಕೃತಾಭ್ಯಾಸವನ್ನು ಮಾಡಿ ಗುರುಸನ್ನಿಧಿಯಲ್ಲಿದ್ದುಕೊಂಡು ಗುರುಮುಖದಿಂದ ಸ್ವಧರ್ಮದ ಸಕಲ ನಿಯಮಗಳನ್ನು ತಿಳಿದುಕೊಂಡು ಅದರಂತೆ ಆಚರಿಸಿ ಪುಣ್ಯಮಾರ್ಗದಲ್ಲಿ ಮನಸ್ಸನ್ನಿಟ್ಟು ವರ್ತಿಸುತ್ತಿದ್ದನು. ಆದರೆ ಈ ಕಾಲದಲ್ಲಿಯ ಜನರು ಆ ಮಾರ್ಗಕ್ಕೆ ಬಹಿಷ್ಕಾರವನ್ನು ಹಾಕಿ ಗುರುವೆಲ್ಲಿ? ಶಿಷ್ಯನೆಲ್ಲಿ? ಧರ್ಮವೆಲ್ಲಿ? ಅಧರ್ಮವೆಲ್ಲಿ? ಪಾಪವೆಲ್ಲಿ? ಪುಣ್ಯವೆಲ್ಲಿ? ಎಂದು ನವೀನ ನಾಸ್ತಿಕರಂತೆ ನುಡಿಯುತ್ತ ವೇದಾಗಮಾದಿಗಳನ್ನೂ, ಮಹರ್ಷಿಗಳನ್ನೂ ಅಲ್ಲಗಳೆಯುತ್ತ ಸ್ವೇಚ್ಛಾಚಾರಿಗಳಾಗಿ ವರ್ತಿಸುವದನ್ನು ನೋಡಿದರೆ ಬಹು ವ್ಯಸನವೆನಿಸುತ್ತದೆ. ಪೂರ್ವಕಾಲದಲ್ಲಿ ಪ್ರತಿಯೊಬ್ಬ ಭಾರತೀಯನು ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಶೌಚಾದಿಕ್ರಿಯೆಗಳನ್ನೂ ಸ್ನಾನವನ್ನೂ ತೀರಿಸಿಕೊಂಡು ದೇವತಾರ್ಚನೆಯನ್ನು ಮಾಡಿಕೊಂಡು ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗುತ್ತಿದ್ದರು. ಆದರೆ ಈ ಕಾಲದ ಕೆಲಕೆಲ ಜನರು ಅದಕ್ಕೆ ಬದಲಾಗಿ ತಮ್ಮ ಧರ್ಮನಿಯಮಗಳನ್ನೇ ಬೇರೆಯಾಗಿ ನಿರ್ಮಾಡಿಸಿಕೊಂಡಿದ್ದಾರೆ. ಕೆಲವರು ಎದ್ದ ಕೂಡಲೆ ದೇವಾಲಯಗಳಿಗೆ ಭಕ್ತಿಯಿಂದ ಹೋಗುವಂತೆ ಕಾಫೀಕ್ಲಬ್ಬುಗಳಿಗೆ ಹೋಗುತ್ತಾರೆ. ಇವರಿಗೆ ಸ್ನಾನವೆಲ್ಲಿ? ದೇವಪೂಜೆಯೆಲ್ಲಿ? ಕಾಫೀ-ಟೀದೇವತೆಗಳ ಪೂಜೆಯೇ ಪೂಜೆಯು. ಇನ್ನು ಕೆಲಜನ ಧರ್ಮಲಂಡರು ಶೌಚಕ್ಕೆ ಹೋಗದೆ ಮುಖಪ್ರಕ್ಷಾಲನವನ್ನೂ ಸಹ ಮಾಡದೆ ಹಾಸಿಗೆಯಲ್ಲಿಯೇ ಟೀ-ಕಾಫಿಗಳನ್ನು ಕುಡಿಯುತ್ತಾರೆ. ಆಮೇಲೆ ಶೌಚಾದಿಗಳನ್ನು ತೀರಿಸಿಕೊಳ್ಳುತ್ತಾರೆ. ಕಾಫಿಕ್ಲಬ್ಬುಗಳು ಸ್ವಚ್ಛವಿದ್ದರಾಯಿತು? ಅವರು ಯಾವ ಜಾತಿಯವರಾದರೇನೆಂದು ಅನ್ಯಜಾತಿಕಾರಕನ್ನೂ ವಿಚಾರಿ ಅವರಲ್ಲಿ ಹೋಗಿ ಕುಡಿದು ತಿಂದು ತೇಗುತ್ತಾರೆ. ಈ ಧರ್ಮಭ್ರಷ್ಟರು ತಾವು ಕೆಡುವುದಲ್ಲದೆ ತಮ್ಮ ದುರುಪದೇಶದಿಂದ ಸದಾಚಾರಿಗಳನ್ನೂ ಸಹ ಧರ್ಮಭ್ರಷ್ಟರನ್ನು ಮಾಡಹತ್ತಿದ್ದಾರೆ. ಶೂದ್ರಾದಿಗಳು ಕುಡಿದಿಟ್ಟ ಪಾತ್ರೆಗಳಲ್ಲಿಯೇ ತಾವೂ ಕುಡಿಯುತ್ತಾರೆ. ಈ ತರದ ಸಾಂಸರ್ಗಿಕದೋಷದಿಂದ ಭರತಖಂಡದಲ್ಲಿ ಎಂದೂ ಕೇಳದ ಮತ್ತು ನೋಡದ ನಾನಾತರಹದ ನವೀನ ರೋಗಗಳು ತಲೆಯೆತ್ತಿ ಪ್ರತಿವರ್ಷ ಲಕ್ಷಾಂತರ ಪ್ರಜೆಗಳನ್ನು ಮರಣಕ್ಕೀಡು ಮಾಡಹತ್ತಿವೆ. ಈ ವಿಷಯವನ್ನಾದರೂ ಈ ಪುಣ್ಯಾತ್ಮರು ವಿಚಾರಮಾಡಿನೋಡಿ ಧರ್ಮಮಾರ್ಗದಿಂದ ವರ್ತಿಸಿದರೆ ಭರತಖಂಡವನ್ನುದ್ಧರಿಸಿದ ಅಸಾಧಾರಣ ಪುಣ್ಯಕ್ಕೆ ಭಾಗಿಗಳಾಗುವರೆಂದು ಧಾರಾಳವಾಗಿ ಹೇಳಬಹುದಾಗಿದೆ. ಇನ್ನು ಕೆಲಜನ ಲಂಡರು ಕಾಫೀ-ಟೀ ಮೊದಲಾದವುಗಳಿಗೆಲ್ಲ ಪ್ರಧಾನದೇವತೆಯೆನಿಸಿಕೊಂಡ ಬ್ರಾಂಡಿದೇವತೆಯನ್ನು ಸೇವಿಸಹತ್ತಿದ್ದಾರೆ. ಈ ಯಾವತ್ತು ಅಧರ್ಮಕೃತಿಗಳನ್ನು ಆಲೋಚಿಸಿದರೆ ಯಾವ ಭಾರತೀಯನಿಗೆ ವ್ಯಸನವೆನಿಸಲಿಕ್ಕಿಲ್ಲ? ಪಾಶ್ಚಾತ್ಯಶಿಕ್ಷಣಪ್ರಭಾವದಿಂದ ಪ್ರಾದುರ್ಭವಿಸಿದ ಈ ದುಶ್ಚಟಗಳ ಬಲೆಗೆ ಶಿಲುಕಿ ಭಾರತೀಯರು ಪ್ರತಿವರ್ಷ ಕೋಟ್ಯಂತರ ಧನವನ್ನು ಪರದೇಶದವರ ಬಾಯೊಳಗೆ ಚಲ್ಲಿ ಭರತಖಂಡವನ್ನು ಹಾಳುಮಾಡಿ ಪರದೇಶವನ್ನು ನಾನಾ ಸಂಪತ್ತುಗಳಿಗೆ ತವರುಮನೆಯನ್ನಾಗಿ ಮಾಡಹತ್ತಿದ್ದಾರೆ. ಇಂತಹ ಭಾರತಮಾತೃದ್ರೋಹಿಗಳಿಗೆ ಯಾವಗತಿಯಾಗುವದೋ ತಿಳಿಯದಾಗಿದೆ. ಈ ಕಾಲದ ಜನರು ತಮ್ಮ ತಮ್ಮ ಧರ್ಮದ ಕಟ್ಟುಗಳನ್ನು ದೂರೀಕರಿಸಿ ತಾವೂ ಪಾಶ್ಚಾತ್ಯರಂತೆ ಆಗಬೇಕೆಂದು ಕೋಟು, ಪಾಟ್ಲನ್, ನೆಕ್ಟಾಯಿ, ಬೂಟ್ಸ ಮೊದಲಾದವುಗಳಿಂದ ರಂಜಿತರಾಗುತ್ತಾರೆ. ಕೈಯಲ್ಲಿ ಒಂದುಕಾಸು ಸಹ ಇಲ್ಲದಿದ್ದರೂ ಎರಡನೆಯವರಲ್ಲಿ ಸಾಲ ಮಾಡಿಯಾದರೂ ತಮ್ಮ ಚಟವನ್ನು ತೀರಿಸಿಕೊಳ್ಳುತ್ತಾರೆ. ಮನೆಯಲ್ಲಿ ಹೆಂಡರುಮಕ್ಕಳುಗಳು ಕೂಳಿಲ್ಲದೆ ಸಾಯುತ್ತಿದ್ದರೂ ಸಹ ಅದನ್ನು ಲಕ್ಷ್ಯೀಕರಿಸದೆ ನಾಲ್ಕಾಣೆಗಳು ಶಿಕ್ಕರೆ ಸಾಕು, ಅವುಗಳನ್ನು ಕಾಫೀಕ್ಲಬ್ಬಿನವರ ಬಾಯಲ್ಲಿ ಚಲ್ಲಿ ತಮ್ಮ ಚಟವನ್ನು ತೀರಿಸಿಕೊಂಡು ಕಾಮಣ್ಣನಂತೆ ತಿರುಗಾಡುತ್ತಾರೆ. ಇವರ ಅನಾಚಾರಗಳನ್ನು ಕಂಡು ಸದಾಚಾರಿಗಳೇ ತಲೆಯನ್ನು ಬೊಗ್ಗಿಸಬೇಕಾಗಿದೆಯಲ್ಲದೆ ಇವರೇನೂ ಬೊಗ್ಗುವಂತಿಲ್ಲ. ಹೀಗಾದ ಮೇಲೆ ವೈದಿಕಧರ್ಮವು ಉದ್ಧಾರವಾಗುವ ಬಗೆ ಹೇಗೆನ್ನುವದನ್ನು ಹೇಳಲು ಬಾರದಾಗಿದೆ. ವೀರಶೈವರೂ ಸಹ ಇತ್ತೀಚೆಗೆ ನಿರ್ಭಯದಿಂದ ಈ ತರಹದ ಧರ್ಮವಿರುದ್ಧಕೃತಿಗಳನ್ನು ಮಾಡತೊಡಗಿದ್ದಾರೆ. ಭರತಖಂಡಕ್ಕೊದಗಿರುವ ಈ ದುಃಸ್ಥಿತಿಯನ್ನು ಜಗನ್ನಿಯಾಮಕನೇ ನಿವಾರಿಸಬೇಕಾಗಿದೆ. ಭಾರತೀಯನೆನಿಸಿದ ಪ್ರತಿಯೊಬ್ಬನು ಅಧರ್ಮಾಚರಣೆಯ ಕಡೆಗೆ ಲಕ್ಷ್ಯವನ್ನೀಯದೆ ಧರ್ಮದಲ್ಲಿಯೇ ಲಕ್ಷ್ಯವನ್ನಿಟ್ಟು ಪೂರ್ವಾಚಾರ್ಯರು ಹಾಕಿಕೊಟ್ಟ ಧರ್ಮನಿಯಮಗಳಂತೆ ನಡೆದು ಪರಶಿವನಕೃಪೆಗೆ ಪಾತ್ರರಾಗಿ ಇಹಪರಸುಖಭಾಗಿಗಳಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಇನ್ನು ಮುಂದೆ ಸ್ಯಾನಿಟರಿ ಇಲಾಖೆಯನ್ನು ಹೆಲ್ತ ಇಲಾಖೆಯೆಂದೂ, ಸ್ಯಾನಿಟರಿ ಕಮಿಶನರನ್ನು ಹೆಲ್ತ ಡೈರೆಕ್ಟರೆಂದೂ ಕರೆಯಬೇಕೆಂದು ಸರಕಾರದವರು ಆಜ್ಞೆ ಮಾಡಿರುತ್ತಾರೆ.

ಹೊಸಕೋಟೆ ತಾಲೂಕು ಸೂಲಿಬೆಲೆ ಮತ್ತು ಕಣೂರು ಡಿ|| ಶಿವನಿ ಇವೆರಡು ಗ್ರಾಮಗಳಲ್ಲಿರುವ ಮುನಿಸಿಪಾಲಿಟಿಗಳನ್ನು ವಜಾಮಾಡಬೇಕೆಂದು ಸರಕಾರದವರು ಯೋಚಿಸಿರುತ್ತಾರೆ.

ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟರಾಗಿದ್ದ ಮ|| ರಾ|| ಎಂ. ವೆಂಕಟೇಶಯ್ಯಂಗಾರ್ಯರವರು ಮೈಸೂರು ಸಂಸ್ಥಾನದ ರೆವಿನ್ಯೂ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ನಮ್ಮ ಸಂಸ್ಥಾನದ ದಿವಾನರವರಾದ ಸರ್ ಮಿರ್ಜಾಮಹಮದ್ ಇಸ್ಮಾಯಿಲ್‌ರವರು ಕಳೆದ ಮಂಗಳವಾರ ಬೆಂಗಳೂರಿನಿಂದ ಹೈದರಾಬಾದಿಗೆ ದಯಮಾಡಿಸಿದರು. ಅವರು ಒಂದು ವಾರದ ವರೆಗೆ ಅಲ್ಲಿಯ ಬ್ರಿಟಿಷ್ ರೆಸಿಡೆಂಟರವರ ಅತಿಥಿಗಳಾಗಿದ್ದು ಅನಂತರ ಹಿಂತಿರುಗಿ ಬರುವರೆಂದು ತಿಳಿದುಬರುತ್ತದೆ.

1882 ನೆಯ ಇಸವಿಯಿಂದ 1928 ನೆಯ ಇಸವಿಯ ಕಡೆಯವರೆಗೆ ಕೋಲಾರದ ಚಿನ್ನದ ಗಣಿಗಳಲ್ಲಿ ಒಟ್ಟು 2,58,99,279 ಔನ್ಸ್ (1 ಔನ್ಸಿಗೆ 2½ ತೊಲ) ಅಪರಂಜಿ (ಶುದ್ಧ) ಬಂಗಾರವು ಉತ್ಪತ್ತಿಯಾಗಿರುವದು. ಇದರ ಕಿಮ್ಮತ್ತು ಸುಮಾರು 90ಕೋಟಿ ರೂಪಾಯಿಗಳಿಗೆ ವಿಕ್ರಯವಾಗಿರುವದು. ಇದರಲ್ಲಿ ಸುಮಾರು 3ಕೋಟಿ ರೂಪಾಯಿಗಳು ಸಭೆಯ ರೂಪದಲ್ಲಿ ಹಂಚಲ್ಪಟ್ಟಿರುವದು. ಹಾಗೂ ಸುಮಾರು 5 ಕೋಟಿ ರೂಪಾಯಿಗಳ ರಾಜಾದಾಯವು ಮೈಸೂರು ಸರಕಾರಕ್ಕೆ ಪಾವತಿಮಾಡಲ್ಪಟ್ಟಿರುವದು.

ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗೆ ಉಮೇದವಾರರಾಗತಕ್ಕವರು 100 ರೂ. ಗಳನ್ನೂ, ಪ್ರಜಾಪ್ರತಿನಿಧಿಸಭೆಯ ಚುನಾವಣೆಗೆ ಉಮೇದುವಾರರಾಗತಕ್ಕವರು 150ರೂ. ಗಳನ್ನೂ, ನ್ಯಾಯವಿಧಾಯಕ ಸಭೆಯ ಚುನಾವಣೆಗೆ ಉಮೇದುವಾರರಾಗತಕ್ಕವರು 250 ರೂ. ಗಳನ್ನೂ ಸರಕಾರದಲ್ಲಿ ಡಿಪಾಜಿಟ್ಟಿಡಬೇಕೆಂದೂ, ಚುನಾವಣೆಯಲ್ಲಿ ಓಟುಕೊಡುವವರ ಒಟ್ಟು ಸಂಖ್ಯೆಯಲ್ಲಿ ಎಂಟನೇ ಒಂದು ಭಾಗದಷ್ಟಾದರೂ ಓಟುಗಳು ಬರದಿದ್ದವರ ಡಿಪಾಜಿಟ್ ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳಲಾಗುತ್ತದೆಂದೂ ಪ್ರಕಟಗೊಳಿಸಿರುತ್ತಾರೆ.

ಬೆಂಗಳೂರು ನಗರದ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಮರಿಯಪ್ಪನವರು ಮಿ|| ವಿ. ಎಸ್. ಸಂಜೀವರಾಯರ ಮೇಲೆ ಮಾಡಿದ್ದ ಕ್ರಿಮಿನಲ್ ವ್ಯವಹಾರದಲ್ಲಿ ಸಿಟಿಮ್ಯಾಜಿಸ್ಟ್ರೇಟರು ಸಂಜೀವರಾಯರಿಗೆ 400 ರೂ. ಗಳ ಜುಲ್ಮಾನೆಯನ್ನು ವಿಧಿಸಿರಲು, ಅಪೀಲ್ ಮಾಡಿದಾಗ್ಗೆ ಸೆಷನ್ಸಜಡ್ಜರು ಜುಲ್ಮಾನೆಯನ್ನು 20 ರೂ. ಗಳಿಗೆ ಕಡಿಮೆ ಮಾಡಿದರು. ಮಿ|| ಸಂಜೀವರಾಯರು ಪುನಃ ಚೀಫ್‌ಕೋರ್ಟಿನಲ್ಲಿ ಅಪೀಲ್ ಮಾಡಲು ಚೀಫ್‌ಜಡ್ಜರು ಮೊಕದ್ದಮೆಯ ವಿಷಯವು ಅಲ್ಪವಾದದ್ದೆಂದು ತೀರ್ಮಾನಮಾಡಿ ಜುಲ್ಮಾನೆಯನ್ನು ಸಂಪೂರ್ಣವಾಗಿ ವಜಾಮಾಡಿರುತ್ತಾರೆ.

ಬೊಂಬಾಯಿ ಹೈಕೋರ್ಟ್ ವಕೀಲರಾಗಿಯೂ ನಮ್ಮ ಸಂಸ್ಥಾನದ ಚೀಫ್‌ಕೋರ್ಟಿನ ಜಡ್ಜರಾಗಿಯೂ ಇದ್ದು ನಿವೃತ್ತಿಹೊಂದಿದ್ದ ಮಿ|| ಎಸ್.ಎಸ್. ಸೆಟ್ಲೂರ್‌ರವರು ಕೆಲವು ದಿವಸಗಳಿಂದ ಕಾಯಿಲೆಯಾಗಿದ್ದು ಕಳೆದ 9 ನೆಯ ತಾರೀಖು ಗುರುವಾರ ರಾತ್ರಿ ಬೆಂಗಳೂರಿನಲ್ಲಿ ಮೃತಪಟ್ಟರೆಂದು ತಿಳುಹಿಸಲು ವಿಷಾದಿಸುತ್ತೇವೆ. ರಾಜಕೀಯ ವಿಷಯಗಳಲ್ಲಿ ವಿಶೇಷವಾಗಿ ಜೆರೆತು ದೇಶಸೇವೆಯಲ್ಲಿಯೇ ನಿರತರಾಗಿದ್ದ ಇವರು ಸಂಸ್ಥಾನದಲ್ಲಿ ಮಾತ್ರವಲ್ಲದೆ ಸಂಸ್ಥಾನದ ಹೊರಗಡೆಯಲ್ಲೂ ವಿಶೇಷ ಪ್ರಸಿದ್ಧಿಯನ್ನು ಹೊಂದಿದ್ದರು. ದೊಡ್ಡ ಕುಟುಂಬಿಗಳೂ, ಗುಣಾಢ್ಯರೂ ಆಗಿದ್ದ ಇವರ ಮೃತಿಯಿಂದ ಇವರ ಬಂಧುಮಿತ್ರಾದಿಗಳು ವಿಶೇಷ ದುಃಖಕ್ಕೊಳಗಾಗಿರುವರು. ಜಗದೀಶ್ವರನು ಇವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ.

ಚೀನಾದಲ್ಲಿ ವಿಶೇಷ ಚಳಿಯು ಬಿದ್ದು 15 ಸಾವಿರ ಜನರು ಮೃತಪಟ್ಟಿರುವರು.

ನೂತನದೆಹಲಿನಗರವನ್ನು ಕಟ್ಟುವದಕ್ಕೆ ಇದುವರೆಗೆ 14 ಕೋಟಿ ರೂಪಾಯಿಗಳು ಖರ್ಚಾಗಿರುವವು.

ಪ್ರತಿವರ್ಷವೂ ಹಿಂದೂದೇಶದಿಂದ ಪರದೇಶದ ಇನ್ಷೂರೆನ್ಸ್ ಕಂಪನಿಗಳಿಗೆ 10 ಕೋಟಿ ರೂಪಾಯಿಗಳು ಹೋಗುವವಂತೆ!

ಅಖಿಲಭಾರತರಾಷ್ಟ್ರೀಯಸಭೆಯವರ ತೀರ್ಮಾನದಂತೆ ಇದುವರೆಗೆ 92 ಜನರು ತಮ್ಮ ಕೌನ್ಸಿಲ್ ಮೆಂಬರುತನಕ್ಕೆ ರಾಜೀನಾಮೆಕೊಟ್ಟಿರುವರು.

ಕಳೆದ ಅಖಿಲ ಭಾರತರಾಷ್ಟ್ರೀಯ ಸಭೆಯ ಸಮಯದಲ್ಲಿ ವರ್ತಮಾನಪತ್ರಿಕೆಗಳಿಗೆ 10 ಲಕ್ಷ ಶಬ್ದಗಳನ್ನು ತಂತೀಮೂಲಕ ಕಳುಹಿಸಿರುವರು.

ಚೀನಾರಾಜ್ಯದ ಹಾಂಕಾಂಗ್ ಪಟ್ಟಣಕ್ಕೆ ಹೋಗುತ್ತಿದ್ದ ಒಂದು ಜಹಜು ಸಮುದ್ರದಲ್ಲಿ ಮುಳುಗಿ ಅದರಲ್ಲಿದ್ದ ಸುಮಾರು 280 ಜನರು ಜಲಸಮಾಧಿಯನ್ನು ಹೊಂದಿದರು.

ಅಫ್ಘಾನಿಸ್ಥಾನದ ಸರಕಾರೀ ಖಜಾನೆಯಲ್ಲಿ ಹಣವಿಲ್ಲದಿರುವದರಿಂದ ಎಲ್ಲಾ ಸಿವಿಲ್‌ಅಧಿಕಾರಿಗಳು ೬ ತಿಂಗಳವರೆಗೆ ಸಂಬಳವಿಲ್ಲದೆ ನೌಕರಿಮಾಡಬೇಕೆಂದು ಅಮೀರ್ ನಾದಿರ್‌ಖಾನರು ಹುಕುಂಮಾಡಿರುವರು.

ಅಮೇರಿಕೆಯಲ್ಲಿ ಸತ್ತವರನ್ನು ಬದುಕಿಸುವ ಔಷಧವನ್ನು ಕಂಡುಹಿಡಿದಿರುವರಂತೆ! ಪರೀಕ್ಷಾರ್ಥವಾಗಿ ಒಂದು ಮೃತದೇಹಕ್ಕೆ ಔಷಧವನ್ನು ಪ್ರಯೋಗಮಾಡುವಲ್ಲಿ ಸತ್ತವನು ಪುನಃ ಬದುಕಿದನಂತೆ! ಆಶ್ಚರ್ಯ!

ರಷ್ಯಾದೇಶದಲ್ಲಿ ಕೃತಕನೋಟುಗಳನ್ನು ವಿಶೇಷವಾಗಿ ಚಲಾವಣೆಮಾಡಿ ಅಲ್ಲಿಯ ಸರಕಾರವನ್ನೇ ಬುಡಮೇಲುಮಾಡಬೇಕೆಂದು ಜರ್ಮನಿಯಲ್ಲಿ ಕೆಲವರು ನಡೆಯಿಸಿರುವ ಒಂದು ಗುಪ್ತಸಂಧಾನವು ಹೊರಬಿದ್ದಿರುವದು.

ಅಮೆರಿಕೆಯಲ್ಲಿ ಶಾರದಾಬಾಲ್ಯವಿವಾಹವಿರೋಧಕ ಶಾಸನವು ಜಾರಿಗೆ ಬರದೇ ಇರಲೆಂದು ದೇವರಿಗೆ 1 ಕೋಟಿ ತುಲಸೀ-ಪೂಜೆಯನ್ನೂ, ಎರಡು ಸಾವಿರ ಶಂಖು ಗೋಕ್ಷೀರಾಭಿಷೇಕವನ್ನೂ ಮಾಡುತ್ತಿರುವರಂತೆ! ಸ್ತುತ್ಯ!

ಬುಡಾಪೆಸ್ಟಿನಲ್ಲಿ ಒಬ್ಬ ಗೃಹಸ್ಥನು ತನ್ನ ಮಗಳನ್ನು ಕೊಂದನೆಂಬ ಅಪವಾದನೆಯಮೇಲೆ ಗಲ್ಲಿಗೇರಿಸಲ್ಪಟ್ಟನು. ಎಷ್ಟೋ ದಿನಗಳು ಕಳೆದಮೇಲೆ ಆತ್ಮಹತ್ಯೆ ಮಾಡಿಕೊಂಡೆನೆಂದು ಮಗಳು ಬರೆದಿಟ್ಟಿರುವ ಒಂದು ಪತ್ರವು ಸಿಕ್ಕಿರುವದು.

ಒಬ್ಬ ಮತೀಯನು ಮತಿಷ್ಟ್ಬ್ಬನ ಮತವನ್ನು ಅಥವಾ ಮತದ ನಿಯಮಗಳನ್ನು ಅಲ್ಲಗಳೆದು ಮಾತನಾಡಿದರೆ ಒಂದು ವರ್ಷ ಕಾರಾಗೃಹವಾಸವು ವಿಧಿಸಲ್ಪಡುವದಾಗಿ ಜೆರೂಸಲೇಮಿನಲ್ಲಿ ಒಂದು ಕಾನೂನು ಹೊಸದಾಗಿ ಜಾರಿಗೆ ತರಲ್ಪಟ್ಟಿರುವದು.

ಇಟಲೀರಾಜ್ಯದ ಯುವರಾಜರಿಗೂ ಬೆಲ್ಜಿಯಂ ರಾಜಪುತ್ರಿಗೂ ರೋಂಪಟ್ಟಣದಲ್ಲಿ ವಿವಾಹಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಈ ಉತ್ಸವ ಸಮಾರಂಭಕ್ಕೆ ಐದು ರಾಜ್ಯಗಳ ಮಹಾರಾಜರು ಪತ್ನೀಸಮೇತರಾಗಿ ಆಗಮಿಸಿದ್ದರು.

ಕಳೆದ ಸೋಮವಾರ ರಾತ್ರಿ ಮದ್ರಾಸಿಗೆ 255 ಮೈಲುಗಳ ದೂರದಲ್ಲಿ ಸೌತ್‌ಇಂಡಿಯನ್ ರೈಲ್ವೆಕಂಪೆನಿಯವರ ಪ್ಯಾಸೆಂಜರು ಗಾಡಿಯು ಒಂದು ಗೂಡ್ಸ ಗಾಡಿಗೆ ಢಿಕ್ಕಿಹೊಡೆದು ಅನೇಕರಿಗೆ ಅಪಾಯಕರವಾದ ಏಟುಗಳು ಬಿದ್ದವು. ಯಾರೂ ಮೃತಿಹೊಂದಲಿಲ್ಲ.

ಮೀರತ್ತಿನ ಮೊಕದ್ದಮೆಯಲ್ಲಿ ಅಪಾದಿತರಾಗಿದ್ದ 32 ಜನರಲ್ಲಿ ಧರ್ಮವೀರಸಿಂಗ್ ಎಂಬವರನ್ನು ಬಿಡುಗಡೆಮಾಡಿ ಮಿಕ್ಕ 31 ಜನರನ್ನು ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾರೆ. ಇವರಲ್ಲಿ 24 ಜನರು ಹಿಂದೂಗಳೂ, 4 ಜನರು ಮುಸಲ್ಮಾನರೂ, 3 ಜನರು ಯುರೋಪಿಯನ್ನರೂ ಆಗಿರುತ್ತಾರೆ.

ಪ್ಯಾರಿಸ್ಸಿನಲ್ಲಿ ರೈಲ್ವೆಗಾಡಿಗಳಲ್ಲಿ ಪ್ರಯಾಣಿಕರ ಸಾಮಾನುಗಳನ್ನು ಕದಿಯುತ್ತ, ಕಳ್ಳತನವು ಪತ್ತೆಯಾಗುವ ಸಮಯಬಂದರೆ ಕೂಡಲೆ ಬಹು ಚಮತ್ಕಾರದಿಂದ ಸ್ತ್ರೀವೇಷವನ್ನು ಧರಿಸಿಕೊಂಡು ತಲೆತಪ್ಪಿಸಿಕೊಳ್ಳುತ್ತಿದ್ದ ಒಬ್ಬ ಚೋರಾಗ್ರಣಿಯನ್ನು ಈಗ ಪೋಲೀಸರು ಪತ್ತೆಮಾಡಿ ಸೆರೆಹಿಡಿದಿರುವರು.

ಅಮೇರಿಕೆಯ ಫಿಲಡೆಲ್ಫಿಯಾದಲ್ಲಿ ವಿಲಿಯಂ ಎಂಬವನು ಓರ್ವ ಸ್ತ್ರೀಯೊಡನೆ ವಿಚಿತ್ರವಾದ ಕರಾರನ್ನು ಮಾಡಿಕೊಂಡು ವಿವಾಹವಾಗಿರುವನು. ಮದುವೆಯಾದ ಎರಡು ವರ್ಷಗಳೊಳಗಾಗಿ ಮಕ್ಕಳಾಗದಿದ್ದರೆ ತನ್ನ ವಿವಾಹಸಂಬಂಧವನ್ನು ಕಳೆದುಕೊಳ್ಳುವದಾಗಿ ಕರಾರಿನಲ್ಲಿ ಕಾಣಿಸಿರುವನಂತೆ! ವಿಚಿತ್ರ ವಿವಾಹಪದ್ಧತಿ!

ಉತ್ತರ ಆಫ್ರಿಕೆಯ ಟ್ಯೂನಿಸ್ ಪಟ್ಟಣದಲ್ಲಿ ಎಕ್ಸ್‌ಪ್ರೆಸ್ ರೈಲ್‌ಗಾಡಿಯು ಒಂದು ಸೇತುವೆಯಮೇಲೆ ಹೋಗುತ್ತಿದ್ದಾಗ ಸೇತುವೆಯು ಮುರಿದು ಇಂಜಿನೂ, ಭರ್ತಿಯಾಗಿದ್ದ ಎರಡು ವ್ಯಾಗನ್‌ಗಳೂ, ಒಂದು ಪ್ರಯಾಣಿಕರ ಗಾಡಿಯೂ ಕೆಳಕ್ಕೆ ಉರುಳಿ, 12 ಜನರು ಕೂಡಲೆ ಮೃತಪಟ್ಟರು. 20 ಜನರಿಗೆ ವಿಶೇಷ ಗಾಯಗಳಾಗಿವೆ.

ಕೊಳ್ಳೇಗಾಲ ತಾ|| ಮುಡಿಗುಂಡಗ್ರಾಮದಲ್ಲಿರುವ ಕುರುಬರ ಬಸವೇಗೌಡನ ಮನೆಯಲ್ಲಿ ಈ ತಿಂಗಳು ೬ ನೆಯ ತಾರೀಖಿನ ದಿವಸ ಒಂದು ಆಕಳು (ಹಸು) ವಿಲಕ್ಷಣವಾದ ಕರುವನ್ನು ಹಾಕಿದ್ದು, ಕೂಡಲೆ ಅದು ಸತ್ತಿತೆಂದೂ, ಅದಕ್ಕೆ ಹಣೆಯಲ್ಲಿ ಒಂದು ಕಣ್ಣು ಇದ್ದಿತೆಂದೂ, ತಲೆಯಲ್ಲಿ ಒಂದು ಕೋಡು ಇದ್ದಿತೆಂದೂ ಒಬ್ಬ ಬಾತ್ಮೀದಾರರು ತಿಳುಹಿಸುತ್ತಾರೆ. ದೈವಸೃಷ್ಟಿಯು ವಿಚಿತ್ರವಾದುದು.

ಕಲ್ಕತ್ತೆಯ ಬಜ್ಜಾ ಎಂಬ ಮೊಹಲ್ಲೆಯಲ್ಲಿ ಕೆಲವು ದರೋಡೆಖೋರರು ಒಂದು ಮನೆಗೆ ನುಗ್ಗಿ ಸಾವಿರಾರು ರೂಪಾಯಿಗಳ ಬೆಲೆ ಬಾಳುವ ಪದಾರ್ಥಗಳನ್ನು ಅಪಹರಿಸಿದ್ದಲ್ಲದೆ ಅವರನ್ನು ಎದುರಿಸಿದ ದೇವೇಂದ್ರನಾಥಬೋಸ್ ಎಂಬ ಉಪಾಧ್ಯಾಯನಿಗೆ ವಿಶೇಷ ಗಾಯಪಡಿಸಿರುವರು. ಉಪಾಧ್ಯಾಯನು ಪ್ರಾಣಾಪಾಯಸ್ಥಿತಿಯಲ್ಲಿದ್ದು ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನು.

ಅಫ್ಘಾನಿಸ್ಥಾನದ ನೂತನ ಅಮೀರರಾದ ನಾದಿರ್ ಖಾನರು ರಾಜ್ಯಾಡಳಿತವನ್ನು ನಿರ್ವಹಿಸಲು 20 ಜನರುಳ್ಳ ಒಂದು ಸಭೆಯನ್ನು ನಿರ್ಮಾಡಿಸಿರುವರು. ಪ್ರಜೆಗಳೆಲ್ಲರೂ ಇಸ್ಲಾಂಮತದ ನಿಯಮಗಳನ್ನು ತಪ್ಪದೆ ಅನುಸರಿಸಬೇಕೆಂದು ಪ್ರಕಟಿಸಿರುವರು. ಯಾವುದಾದರೊಂದು ಹೊಸ ಕಾನೂನನ್ನು ಮಾಡಬೇಕಾದರೆ ಮೊದಲು ಮೇಲ್ಕಂಡ ಸಭೆಯವರ ಅನುಮತಿಯನ್ನು ಪಡೆದು ಅನಂತರ ಅದನ್ನು ಜಾರಿಗೆ ತರುವರು.

ಇಂಗ್ಲೆಂಡಿನ ಸುಪ್ರಸಿದ್ಧ ಚಿತ್ರಕಾರನಾದ ಒಬ್ಬ ಯುವಕನಿಗೆ 5 ವರ್ಷಗಳ ಪೂರ್ವದಲ್ಲಿ ಅರ್ಧಾಂಗವಾಯುವು ಪ್ರಾಪ್ತವಾಗಿ ಬಲಗೈಯಿಂದ ಬರೆಯುವದು ಅಸಾಧ್ಯವಾಯಿತು. ಅನೇಕ ವೈದ್ಯರು ಮಾಡಿದ ಚಿಕಿತ್ಸೆಗಳೆಲ್ಲವೂ ನಿಷ್ಪ್ರಯೋಜನವಾದವು. ಆದರೂ ಯುವಕನು ಧೈರ್ಯಗೊಂಡದೆ ಎಡಗೈಯಿಂದ ಚಿತ್ರಿಸುವದನ್ನು ಅಭ್ಯಾಸಮಾಡಿ ಈಗ ಮೊದಲಿಗಿಂತಲೂ ಉತ್ತಮವಾಗಿ ಚಿತ್ರಗಳನ್ನು ಬರೆಯುವನಂತೆ!

ಯೂರೋಪು ಖಂಡಕ್ಕೂ ಆಫ್ರಿಕಾಖಂಡಕ್ಕೂ ಮಧ್ಯದಲ್ಲಿರುವ ಜಿಬ್ರಾಲ್ಟರ್ ಜಲಸಂಧಿಯ ಕೆಳಭಾಗದಲ್ಲಿ ಒಂದು ಸುರಂಗಮಾರ್ಗವನ್ನು ಕಲ್ಪಿಸಿ ಇವೆರಡೂ ದೇಶಗಳಿಗೆ ಇರುವ ಸಂಬಂಧವನ್ನು ಹೆಚ್ಚಿಸಬೇಕೆಂದು ಕರ್ನಲ್ ಜೆವೆನೋಯಿಸ್ ಎಂಬುವನು ಉದ್ದೇಶಿಸಿರುವನು. ಇದರ ಕಾಮಗಾರಿಗೆ ಬೇಕಾಗುವ ಹಣವನ್ನು ಸ್ಪೇನ್ ಗೌರ್ನಮೆಂಟಿನವರು ಒದಗಿಸುವರು. ಈ ಕಾರ್ಯವು ಕ್ಷಿಪ್ರದಲ್ಲಿಯೇ ಪ್ರಾರಂಭಿಸಲ್ಪಡುವದು.

ಲಂಡನ್ನಿನ ಗ್ರಾಫ್ಟನ್ ರಸ್ತೆಯಲ್ಲಿ ಒಂದು ಅಂಗಡಿಗೆ ನುಗ್ಗಿ ಸುಮಾರು 12,000 ರೂಪಾಯಿಗಳ ಬೆಲೆಯುಳ್ಳ ಆಭರಣಾದಿಗಳನ್ನು ಕದ್ದೊಯ್ದರೆಂಬ ಅಪವಾದನೆಯಮೇಲೆ ಪೋಲೀಸರು ವಸಂತರಾವ್ ಘಾಟಗೆ ಮತ್ತು ಇವನ ತಮ್ಮ ಯಶವಂತರಾವ್ ವಿಶ್ವಾಸರಾವ್ ಘಾಟಗೆ ಎಂಬ ಇಬ್ಬರು ವಿದ್ಯಾರ್ಥಿಗಳನ್ನು ಸೆರೆಹಿಡಿದಿರುವರು. ಕಳ್ಳತನಕ್ಕೆ ಬೇಕಾದ ಸಾಮಗ್ರಿಗಳೂ ಪಿಸ್ತೂಲೂ ಅವರ ಬಳಿಯಲ್ಲಿ ಸಿಕ್ಕಿರುವವು.

ನ್ಯೂಯಾರ್ಕ್ ಪಟ್ಟಣದ ಒಂದು ಗಗನಸೌಧದ 22 ನೆಯ ಮಹಡಿಯಮೇಲೆ 18 ಜನ ಕೆಲಸಗಾರರು ಜೂಜಾಡುತ್ತಿರಲು, ಇನ್ನೊಂದು ಗಗನಸೌಧದಿಂದ ಯಾರೋ ಅದನ್ನು ನೋಡಿ ಪೋಲೀಸರಿಗೆ ವರ್ತಮಾನಕೊಟ್ಟರು. ಪೋಲೀಸರು ಕೂಡಲೇ ಅಲ್ಲಿಗೆ ಬಂದು ಜೂಜಾಡುತ್ತಿರುವವರನ್ನು ಸೆರೆಹಿಡಿದು ವಿಚಾರಣೆಗೆ ಗುರಿಪಡಿಸಿದರು. ಆದರೆ ನ್ಯಾಯಾಧೀಶರು ಆಕಾಶದಲ್ಲಿ ಸೆರೆಹಿಡಿಯಲ್ಪಟ್ಟ ಅಪರಾಧಿಗಳ ಮೇಲೆ ತನಗೆ ಅಧಿಕಾರವಿಲ್ಲವೆಂದು ಹೇಳಿದರಂತೆ!

ಆಗಾಖಾನರ ಪ್ರಸಿದ್ಧಬಹುಮಾನವನ್ನು ಪಡೆಯಲು ಯತ್ನಿಸಿರುವ (ಇಂಗ್ಲೆಂಡಿನ) ಬ್ರಿಸ್ಟಲ್ ವಿಶ್ವವಿದ್ಯಾನಿಲಯದ ಹಿಂದೂವಿದ್ಯಾರ್ಥಿ ಮಿ|| ಮನಮೋಹನ ಸಿಂಗರು ತನ್ನ ಸ್ವಂತವಿಮಾನದಲ್ಲಿ ಕಳೆದ 11 ನೆಯ ತಾರೀಖು ಶನಿವಾರ ಇಂಗ್ಲೆಂಡಿನಿಂದ ಹೊರಟಿರುವರು. ಪ್ಯಾರಿಸ್ಸಿನಿಂದ ಸ್ವಲ್ಪಮುಂದೆ ಅವರ ವಿಮಾನವು ಕೆಟ್ಟು ಪ್ರಯಾಣಕ್ಕೆ ವಿಘ್ನವು ಪ್ರಾಪ್ತವಾಗಿರುವದು. ವಿಮಾನವನ್ನು ಕ್ರಮಪಡಿಸಿದನಂತರ ಅವರು ಮುಂದಕ್ಕೆ ಹೊರಡುವರು.

ಮಾಸ್ಕೋವೊಚ್ ಎಂಬಲ್ಲಿ ಒಬ್ಬ ಸ್ತ್ರೀಯಳು ಕೊಲೆ ಮಾಡಲ್ಪಡಲು ಪೋಲೀಸರು ಅನುಮಾನದ ಮೇಲೆ ಆಕೆಯ ಪತಿಯನ್ನು ಸೆರೆಹಿಡಿದರು. ಆದರೆ, ಮೃತಳ ಶವವನ್ನು ಪರೀಕ್ಷಿಸಿದಾಗ ಅವಳ ಒಂದು ಕಣ್ಣು ಚೆನ್ನಾಗಿ ತೆರೆಯಲ್ಪಟ್ಟಿದ್ದು ಅದರಲ್ಲಿ ಯಾರೋ ಮನುಷ್ಯರ ಚಿತ್ರವು ಕಾಣಿಸುವದನ್ನು ಕಂಡು, ಆ ಕಣ್ಣಿನ ಫೋಟೋ ತೆಗೆದು ಅದನ್ನು ದೊಡ್ಡದಾಗಿಮಾಡಿ ನೋಡುವಲ್ಲಿ ಚಿತ್ರವು ಮೃತಪಟ್ಟವಳ ಪತಿಯ ಉಪಪತ್ನಿಯದೆಂದು ತಿಳಿಯಬಂದಿತು. ಅನಂತರ ಆ ಉಪಪತ್ನಿಯನ್ನು ಹಿಡಿದುತಂದು ವಿಚಾರಿಸುವಲ್ಲಿ ಮತ್ಸರದಿಂದ ತಾನೇ ಅವಳನ್ನು ಕೊಲೆಮಾಡಿರುವದುಂಟೆಂದು ಒಪ್ಪಿಕೊಂಡಿರುವಳು.

ಫ್ರಾನ್ಸಿನಲ್ಲಿ ಫಿಲಿಪ್ ಎಂಬುವನು ಸ್ತ್ರೀಯರಿಗೆ ಪುರುಷರನ್ನು ವಶಪಡಿಸಿಕೊಳ್ಳುವ ವಿದ್ಯೆಯನ್ನು ಕಲಿಸುವ ಒಂದು ಏರ್ಪಾಡನ್ನು ಮಾಡಿದ್ದನು. ಇವನಲ್ಲಿ ಶಿಕ್ಷಣಹೊಂದಿದ ಸ್ತ್ರೀಯರು ಎಷ್ಟು ಕುರೂಪಿಗಳಾಗಿದ್ದರೂ ಎಷ್ಟು ವಯಸ್ಸಾಗಿದ್ದರೂ ತಮಗೆ ಬೇಕಾದ ಪುರುಷರನ್ನು ಸುಲಭವಾಗಿ ವಶಪಡಿಸಿಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಫಿಲಿಪ್ಪನು ಆ ಸ್ತ್ರೀಯರಿಗೆ ಒಂದು ಔಷಧವನ್ನು ಕೊಡುತ್ತಿದ್ದನು. ಇವನ ಶಿಕ್ಷಣಸಾಮರ್ಥ್ಯವು ಸ್ತ್ರೀಯರಲ್ಲಿ ಎಲ್ಲೆಲ್ಲಿಯೂ ಹರಡಿ ಎಲ್ಲಾ ದೇಶದ ಎಲ್ಲಾ ವಯಸ್ಸಿನ ಸ್ತ್ರೀಯರೂ ಫಿಲಿಪ್ಪನು ಕೇಳಿದಷ್ಟು ಹಣವನ್ನು ಕೊಟ್ಟು ಪುರುಷವಶೀಕರಣವಿದ್ಯೆಯನ್ನು ಕಲಿಯಲಾರಂಭಿಸಿದರು. ಇದುವರೆಗೆ ಸುಮಾರು 5000 ಸ್ತ್ರೀಯರು ಇವನಿಂದ ಶಿಕ್ಷಣಹೊಂದಿರುವರಂತೆ! ಪ್ರತಿಯೊಬ್ಬರೂ 80 ರೂ. ಗಳಿಂದ 1500 ರೂ. ಗಳ ವರೆಗೂ ಕೊಟ್ಟಿರುವರಂತೆ! ಫಿಲಿಪ್ಪನು ಇದರಂತೆಯೇ ಇಂಗ್ಲೆಂಡ್, ಜರ್ಮನಿ, ಬೆಲ್ಜಿಯಂ ಮೊದಲಾದ ಕಡೆಗಳಲ್ಲೂ ತನ್ನ ಶಿಕ್ಷಣಶಾಖೆಗಳನ್ನು ಏರ್ಪಡಿಸುವದರಲ್ಲಿದ್ದನು. ಆದರೆ ಅವನ ಶಿಕ್ಷಣದಿಂದ ಜನಾಂಗಕ್ಕೆ ಆಗುತ್ತಿದ್ದ ತೊಂದರೆಯನ್ನು ತಿಳಿದು ಪೋಲೀಸರು ಈಗ ಅವನನ್ನು ಕೈದುಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಸ್ವೀಕಾರ.

ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದಲ್ಲಿ ಶಂಕರಾನಂದಶರ್ಮಾ ಸೇರಲಿಕರ ಹಾಗೂ ಶಿವಲಿಂಗಶರ್ಮಾ ತಿಳುವಳ್ಳಿಮಠ ಈ ಉಭಯರ ಮಾಹೇಶ್ವರದೀಕ್ಷಾ ಸಮಾರಂಭವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಪುರಗಿರಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಚನ್ನಪಟ್ಟಣದ ಸಿಂಗರ್ ಕಂಪನಿ ಮ್ಯಾನೇಜರರಾದ ಮ|| ರಾ|| ಮಲ್ಲಪ್ಪನವರಿಗೂ ಹಾಗೂ ಅವರ ಚಿಕ್ಕರಾಮಯ್ಯನಿಗೂ ಪ್ರಾಪ್ತವಾದ ರೋಗವು ಶ್ರೀ ಜಗದ್ಗುರು ರೇವಣಸಿದ್ಧನ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ 1 ರೂಪಾಯಿಯನ್ನು ಕಳುಹಿಸಿದ್ದಾರೆ.

ವಿಜಾಪುರ ಡಿ|| ಜಂಬಗಿ ಗ್ರಾಮದ ಶ್ರೀಮಂತ ಶಂಕರರಾವ ದೇಶಮುಖ ಇವರ ಧರ್ಮಪತ್ನಿಯವರ ಅಷ್ಟಮವಾಸಗರ್ಭಲಿಂಗಧಾರಣಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೇ|| ಗುರುಲಿಂಗಯ್ಯನವರು ಪುರಾಣಿಕಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

VEERASHAIVA ASSOCIATION, MADRAS.

The President of the above Association Mr. S. C. Nagi Chettiar was at home to the distinguished guests who visited Madras during Christmas on the 31st. December 1929 at 5 p.m.

Mr. M. R. Shakkare, M.A., Principal G. A. High School, Belgaum.
Mr. G. K. Dewae, B.A.B.L., Advocate, Guntur.
Mr. G. Muddappa, B.A.B.L., Advocate, Tumkur.
Dr. Siddappa, L.M. & S. Mysore.
Mr. C. Murigeppa, Davangere.
Mr. V. Kumaraveera Aiyar, Tamil Pandit, Musri, Trichy.
Mr. Ganganna, Gubbi.
Mr. M. Veerayya, Bench Magistrate.
Mr. T. C. Sangappa, Bench clerk, High Court Madras and many other distinguished gentlemen attended the function. After lunch a meeting was held under the Presidency of Mr. S. C. Nagi Chettiar. The President in his introductory speech thanked the guests for having accepted his invitation. Mr. H. K. Gurubasavaraj, B.A., Secretary graphically described the troubles that Veerashaiva students have to face at Madras. He emphasised on the necessity of establishing a permanent inter-provincial Veerashaiva Hostel at Madras. He appealed for funds. Messrs M. R. Shakkare and G. K. Deware in the course of their lectures touched the various aspects of Veerashaiva religion which they said based on universal brotherhood and absolute equality between man and woman. They also spoke on the present backwordness of our community and advised the members to put an end to the internal differences and improve themselves and in the end they also promised to help this infant institution and make it a permanent one. After giving a hearty vote of tnanks to the chair and the guests the meeting terminated.

ಹೊಗೆಬತ್ತಿಗಳನ್ನು ಸೇದುವುದು ಎಂಜಲನ್ನುಗುಳುವುದು.

ಸಿಗರೇಟು, ಬೀಡಿ, ಚುಟ್ಟಾ ಮುಂತಾದ ಹೊಗೆಬತ್ತಿಗಳನ್ನು ಸೇದುವ ಅಭ್ಯಾಸವು, ಈಚೀಚೆಗೆ ಜನಗಳಲ್ಲಿ ಒಂದು ದೊಡ್ಡ ವ್ಯಸನವಾಗಿ ಅಧಿಕ ಪ್ರಚಾರಕ್ಕೆ ಬರುತ್ತಿದೆ. ಅಷ್ಟೇಕೆ? ಈ ನಮ್ಮ ಬಡದೇಶದಲ್ಲಿ, ಹೀಗೆ ಹೊಗೇಸೊಪ್ಪನ್ನು ಉಪಯೋಗಿಸದೆ ಇದ್ದಾತನಾರೆಂದು ನಿಶ್ಚಯಿಸುವುದೇ ದುರ್ಲಭವೆಂದು ಹೇಳಬಹುದು. ಹೊಗೆಸೊಪ್ಪನ್ನು ನಸ್ಯದ ರೂಪದಿಂದಾಗಲಿ, ತಾಂಬೂಲಕ್ಕೆ ಸೇರಿಸಿಯಾಗಲಿ, ಹೊಗೆಬತ್ತಿಗಳ ರೂಪದಿಂದಾಗಲಿ ಉಪಯೋಗಿಸುವುದು ಸರ್ವಸಾಮಾನ್ಯವಾಗಿದೆ. ಮೊದಮೊದಲು ಅಮೇರಿಕದ ಇಂಡಿಯನ್ ಜನರೇ ಹೊಗೆಸೊಪ್ಪಿನ ಕೃಷಿಯನ್ನು ಆರಂಭಿಸಿದವರಾದರೂ, ಈಗ ಅಲ್ಲಿಯ ಜನರು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅದನ್ನು ಒಂದು ಅಂಗವಾಗಿ ಉಪಯೋಗಿಸುತ್ತಿರುವರು. ಬೇರೆ ಸಂಗಡದವರಾದರೂ ತಮ್ಮಲ್ಲಿ ಕಾರ್ಯಾರ್ಥಿಗಳಾಗಿ ಅಥವಾ ಅಭ್ಯಾಗತರಾಗಿ ಬಂದಾಗ, ಬೆಂಕಿಯಮುಂದೆ ಎಲ್ಲರೂ ಸುತ್ತಿ ಕುಳಿತು ಮಾತಾಡುತ್ತ, ಒಬ್ಬೊಬ್ಬರು ಒಂದೆರಡಾವರ್ತಿ ಕುಡಿದ ಬೀಡಿ, ಚುಟ್ಟಾಗಳನ್ನು ತಮ್ಮ ಪಕ್ಕದಲ್ಲಿರುವವರಿಗೆ ಕೊಡುತ್ತ, ಹೀಗೆ ಎಲ್ಲರಿಗೂ ಅನ್ಯೋನ್ಯಸೂಚಕವಾದ ಸತ್ಕಾರಗಳನ್ನು ತೋರಿಸುವ ಪದ್ಧತಿಯುಂಟು. ವಿಶೇಷವಾದ ಕೂಟಗಳು ಕೂಡಿದಾಗಲೂ ಕಾರ್ಯಾರಂಭಕ್ಕೆ ಮೊದಲು ಇದೇ ರೀತಿಯಾಗಿ ಆಚರಿಸುವರು. ಹೊಗೆಸೊಪ್ಪಿನ ಪೂರ್ವಚರಿತ್ರೆಯೂ, ಅದರ ಉಪಯೋಗಕ್ರಮವೂ ಇಷ್ಟರಲ್ಲಿಯೇ ಪರ್ಯವಸಾನವಾಗಿತ್ತು. ಆದರೆ, ಈಚೀಚೆಗೆ ಈ ಹೊಗೆಸೊಪ್ಪಿನ ಮಹಿಮೆಯನ್ನು ಹೆಚ್ಚಿಸಿ, ಅದನ್ನು ವಿಶೇಷ ಪ್ರಚಾರಕ್ಕೆ ತಂದವರು ಬಿಳಿಜನರೆಂದೇ ಹೇಳಬೇಕು. ಅವರು ಪ್ರತಿದಿನವೂ ತಪ್ಪದೆ ಹೊಗೆ ಕುಡಿಯುವ ಅಭ್ಯಾಸವನ್ನು ತಮ್ಮಲ್ಲಿ ಆಚರಣೆಗೆ ತಂದುದು ಮಾತ್ರವಲ್ಲದೆ ಅವರೊಡನೆ ಈ ದುರಭ್ಯಾಸದ ಸೋಂಕು ಪ್ರಪಂಚದ ಎಲ್ಲಾ ಭಾಗಗಳಿಗೂ ಹರಡುವಂತಾಯಿತು.

ಹೊಗೆಸೊಪ್ಪೆಂಬುದು ಒಂದು ತರಹದ ವಿಷವಸ್ತುವಾದುದರಿಂದ ಅದನ್ನು ಯಾವ ರೂಪದಿಂದಲೇ ಆದರೂ ಬಿಡದೆ ಸೇವಿಸುತ್ತ ಬಂದರೆ, ದೇಹದಲ್ಲಿ ಆ ವಿಷವೇಗವು ಮೊದಮೊದಲು ಕೇವಲ ಸೂಕ್ಷ್ಮವಾದ ಮರ್ಮಾವಯವಗಳಲ್ಲಿ ವ್ಯಾಪಿಸಿ, ಮೊದಲೇ ದುರ್ಬಲವಾದ ಆ ಅವಯವಗಳನ್ನು ಮತ್ತಷ್ಟು ದುರ್ಬಲವಾಗಿ ಮಾಡುವುದು. ಹೊಗೇಸೊಪ್ಪಿನ ಅಭ್ಯಾಸವು ಹೆಚ್ಚುತ್ತಬಂದಷ್ಟೂ, ಮನೋಬಲವು ಕುಗ್ಗುತ್ತಬರುವುದು. ಹೃದಯದಲ್ಲಿ ಉದ್ರೇಕವು ತೋರಿ, ಎದೆಯ ಡುಡಿತವೇ ಮುಂತಾದ ಕೆಟ್ಟ ಬಾಧೆಗಳು ಅಂಕುರಿಸುವುವು. ಹೊಗೆಸೊಪ್ಪಿನಲ್ಲಿ ವಿಷಸಂಬಂಧವಿದೆಯೆಂಬುದಕ್ಕೆ ನಮಗೆ ನಿದರ್ಶನವೇ ಬೇಕಾಗುವುದಿಲ್ಲ. ಅಭ್ಯಾಸವಿಲ್ಲದವರ ಮೂಗಿಗೆ ಒಂದಿಷ್ಟು ನಸ್ಯವನ್ನು ಮೂಸಿಸಿದರೆ, ಆಗ ಅವರ ಅವಸ್ಥೆಯೇನೆಂಬುದನ್ನು ನೀವು ನೋಡಿರಬಹುದು. ಹಾಗೆಯೇ ಮೊದಲು ತಾಂಬೂಲದೊಡನೆ ಮೆಲ್ಲುವ ಅಭ್ಯಾಸವನ್ನು ಮಾಡುವವರಿಗೂ, ಹೊಗೆಬತ್ತಿಗಳನ್ನು ಮೊದಮೊದಲು ಸೇದುವವರಿಗೂ, ದುಸ್ಸಹವಾದ ಕಷ್ಟವಾಗುವುದು. ಇದಕ್ಕೆಲ್ಲ ವಿಷಸಂಬಂಧವೇ ಕಾರಣವು. ವಿಷಕ್ರಿಮಿಗಳಂತೆ ಕ್ರಮಕ್ರಮವಾಗಿ ಆ ವಿಷವೇ ಅವರ ಮೈಗೆ ಅಂಟಿಬಂದಮೇಲೆ, ಅಷ್ಟೇನೂ ಕಷ್ಟವು ತೋರದು. ಕೊನೆಕೊನೆಗೆ ಮದ್ಯಪಾನ ವ್ಯಸನದಂತೆ ಅದನ್ನು ಬಿಟ್ಟಿರುವುದೂ ಸಾಧ್ಯವಿಲ್ಲದಂತಾಗುವುದು. ಆದರೇನು? ಮೈಗೆ ಅದರಿಂದೇನೂ ಬಾಧೆಯಿಲ್ಲದೆ ಹಿತಕರವಾಗಿದ್ದಂತೆ ತೋರಿದರೂ, ಒಳಗೊಳಗೆ ಅದು ದೇಹವನ್ನು ಹಾಳುಮಾಡುವುದು ಅನೇಕ ವರ್ಷಗಳವರೆಗೆ ಹೊಗೆಸೊಪ್ಪನ್ನು ಉಪಯೋಗಿಸುತ್ತಿದ್ದರೂ, ತನ್ನ ಮೈಗೇನೂ ವಿರೋಧವಿಲ್ಲವೆಂದು ನೀವು ತಿಳಿಯಬಹುದು. ಆದರೆ, ಅದರ ವಿಷವು ಒಳಗೊಳಗೆ ನಿಮಗೆ ತಿಳಿಯದಂತೆ ಬಹು ನಿಧಾನವಾಗಿ ಕೆಲಸಮಾಡುತ್ತಿರುವುದು. ಬಹಳವಾಗಿ ಹೊಗೇಸೊಪ್ಪನ್ನು ಉಪಯೋಗಿಸುತ್ತಿದ್ದವನು, ಒಂದೆರಡು ದಿನಗಳವರೆಗೆ ಅದನ್ನು ನಿವೃತ್ತಿಮಾಡಿನೋಡಿದರೆ, ಅವನಿಗೆ ರಾತ್ರಿಯೆಲ್ಲವೂ ನಿದ್ರೆಯೇ ಬಾರದು. ಅವನ ಮೈಯಲ್ಲಿ ನರಗಳೆಲ್ಲ ಸೆಳೆದು ಕತ್ತರಿಸಿದಂತೆ ತೋರುವುದು. ತಿರುಗಿ ಅವನು ತನ್ನ ಮೊದಲಿನ ಅಭ್ಯಾಸವನ್ನು ಆರಂಭಿಸುವವರೆಗೆ ಮಂಕನಂತೆ ಮೃತಪ್ರಾಯನಾಗಿ ತೋರುವನು. ಆದರೆ, ಈ ಹೊಗೆಸೊಪ್ಪಿನ ಅಭ್ಯಾಸದ ಪರಿಣಾಮವೇನೆಂದು ನೋಡಿದರೆ, ಆ ದುರಭ್ಯಾಸವು ಹೆಚ್ಚಿದಷ್ಟೂ, ತನಗೆ ದೂರವಾಗಿರುವ ಮೃತ್ಯುದೇವತೆಯನ್ನು ಹತ್ತಿರ ಹತ್ತಿರಕ್ಕೆ ಬರಮಾಡಿಕೊಂಡಂತಾಗುವುದೇ ಹೊರತು ಬೇರೆಯಲ್ಲ. ಎಂದರೆ, ಅವನ ಆಯುಸ್ಸು ಕ್ಷೀಣಿಸುತ್ತ ಬರುವುದು. ಆತ್ಮಹತ್ಯೆಗಾಗಿ ಜನರು ಅವಲಂಬಿಸುವ ವಿವಿಧೋಪಾಯಗಳಲ್ಲಿ ಈ ದುರಭ್ಯಾಸವನ್ನೂ ಒಂದನ್ನಾಗಿ ಸೇರಿಸಬಹುದೆಂದರೆ ಅದು ಅತಿಶಯೋಕ್ತಿಯಾಗಲಾರದು.

ಈ ಮೇಲ್ಕಂಡ ದುರಭ್ಯಾಸವು ಆತ್ಮಘಾತಕ್ಕೆ ಕಾರಣವೆಂಬುದು ಮಾತ್ರವಲ್ಲ. "ಸ್ವಯಂ ನಷ್ಟಃ ಪರನ್ನಾಶಯತಿ" "ತಾನು ಕೆಟ್ಟ ಕೋತಿ ವನವನ್ನೆಲ್ಲ ಕೆಡಿಸಿತು" ಎಂಬ ಗಾದೆಮಾತುಗಳಂತೆ, ಜನಸಾಮಾನ್ಯಕ್ಕೂ ಅಂತಹವರಿಂದ ದೊಡ್ಡ ಅಪಾಯಗಳೂ, ತೊಂದರೆಗಳೂ, ಬಹಳವಾಗಿವೆ. ಸಿನೀಮಾ ಮತ್ತು ನಾಟಕ ಮಂದಿರ ಮುಂತಾದ ಪ್ರದರ್ಶನ ಸ್ಥಳಗಳಲ್ಲಿಯೂ, ಟ್ರಾಂ ಬಂಡಿ, ರೈಲು, ಬಸ್ಸುಗಳು ಮುಂತಾದ ಪ್ರಯಾಣಸಾಧನಗಳಲ್ಲಿಯೂ, ಈ ಹೊಗೆಬತ್ತಿಗಳನ್ನು ಸೇದುವುದರಿಂದ ಇತರರಿಗೆ ಉಂಟಾಗತಕ್ಕ ತೊಂದರೆಗಳನ್ನೂ, ಅಭ್ಯಾಸಗಳನ್ನೂ ಅನುಭವದಿಂದ ಅನೇಕರು ತಿಳಿದಿರಬಹುದು. ಯಾರಾದರೂ ಪಕ್ಕದಲ್ಲಿದ್ದವರು ಅವರಿಗೆ ಬೇಡವೆಂದು ಬುದ್ಧಿವಾದ ಹೇಳತೊಡಗಿದಾಗಲೇ ದೊಡ್ಡ ಜಗಳಕ್ಕೆ ಆರಂಭವಾಗುವುದು. ಪಕ್ಕದಲ್ಲಿರುವವರು ತಮ್ಮ ಕಣ್ಣು ಮೂಗಿಗೆಲ್ಲ ಹೊಗೆ ಸುತ್ತಿಕೊಂಡರೂ, ಆ ಹಿಂಸೆಯನ್ನು ಸಹಿಸಿಕೊಂಡು ಸುಮ್ಮನಿರಬೇಕಾಗಿದೆ. ಇದಿರಲಿ! ವೀಳ್ಯದೆಲೆಯೊಂದಿಗೆ ತಂಬಾಕನ್ನು ಮೆಲ್ಲುವುದರಿಂದಾಗತಕ್ಕ ಅಭ್ಯಾಸವಾದರೋ ಇನ್ನೂ ದುಸ್ಸಹವಾಗಿದೆ. ಅವರು ಯಾವಾಗಲೂ ಉಗುಳುತ್ತಲೇ ಇರಬೇಕಾಗುವುದು. ಮದರಾಸಿನಲ್ಲಿ ವಾಸನೆಯ ಹೊಗೆಸೊಪ್ಪನ್ನು ಮಾರುವವರ ಅಂಗಡಿಯ ಮುಂದೆ ನಿಂತು ಯಾವಕಡೆ ನೋಡಿದರೂ, ಎಲೆಅಡಿಕೆಯ ಉಗುಳೇ ಕಾಣಿಸುತ್ತಿರುವುದು. ದೊಡ್ಡ ದೊಡ್ಡ ಕೂಟಗಳಾಗಲಿ, ಸಭೆಗಳಾಗಲಿ, ಗಂಭೀರವಾಗಿ ನಡೆಯುತ್ತಿದ್ದಾಗಲೂ, ಹೊಗೇಬತ್ತಿಗಳನ್ನು ಸೇದುವವರು ಅಲ್ಲಿಯ ಸ್ಥಾನಗೌರವವನ್ನು ಎಣಿಸದೆ, ಸಿಗರೆಟ್ಟಿಗೆ ಬೆಂಕಿಯ ಕಡ್ಡಿಯನ್ನು ಹಚ್ಚಿ, ಅಕ್ಕಪಕ್ಕದವರ ಮುಖದಮೇಲೆಯೇ ಹೊಗೆಯನ್ನು ಹಾರಿಸುವರು. ಕೆಲವರು ತಾವು ಹಾಗೆ ಮಾಡುವುದರಲ್ಲಿಯೇ ತಮಗೊಂದು ಹೆಮ್ಮೆಯುಂಟೆಯೂ ಭಾವಿಸುವುದುಂಟು. ಇದರಿಂದ ಜನಗಳ ಕೂಟವಿದ್ದ ಕಡೆಯಲ್ಲಿ ವಾತಾವರಣವೆಲ್ಲ ಕೆಟ್ಟು, ಅದರ ಅಭ್ಯಾಸವಿಲ್ಲದವರಿಗೆ ಆ ದುರ್ಗಂಧವು ಬಹಳ ದುಸ್ಸಹವಾಗುವುದು. ಅದರಲ್ಲಿಯೂ ಸಿನೀಮಾಪ್ರದರ್ಶನ ಕಾಲದಲ್ಲಿ ಕತ್ತಲೆಗಾಗಿ ಬಾಗಿಲುಗಳನ್ನೆಲ್ಲ ಮುಚ್ಚಿಟ್ಟು, ಹೊರಗಿನಿಂದ ಶುದ್ಧವಾದ ಗಾಳಿಯು ಬರುವುದಕ್ಕೂ ಅವಕಾಶವಿಲ್ಲದಿದ್ದಾಗ ಇದು ಬಹಳ ಅನಾರೋಗ್ಯಕಾರಣವಾಗುವುದು.

ಅನೇಕ ವ್ಯಾಧಿಗಳ ಸೋಂಕು, ಮುಖ್ಯವಾಗಿ ಕ್ಷಯರೋಗದ ಸೋಂಕು, ಹೊಗೆಬತ್ತಿಗಳನ್ನು ಸೇವಿಸುವುದರಿಂದಲೇ ಸಾಮಾನ್ಯಜನಗಳಿಗೂ ವ್ಯಾಪಿಸಲು ಮೂಲಕಾರಣವಾಗುವುದು. ಅವರು ಬಾಯಿಂದ ಹಾರಿಸುವ ಹೊಗೆ, ಅವರು ಆಗಾಗ ಉಗುಳುವ ಎಂಜಲು, ಒಬ್ಬರು ಕಚ್ಚಿದ ಬತ್ತಿಯನ್ನು ಮತ್ತೊಬ್ಬರು ಬಾಯಲ್ಲಿಟ್ಟುಕೊಳ್ಳುವುದು, ಇವೆಲ್ಲ ವ್ಯಾಧಿಗಳು ಹರಡುವುದಕ್ಕೆ ಬಹಳ ಸಹಕಾರಿಗಳು.

ಪಾಶ್ಚಾತ್ಯದೇಶಗಳಲ್ಲಿ ಕೆಲವುಕಡೆ, ರೈಲ್ವೆ, ಟ್ರಾಂಬಂಡಿ, ಮುಂತಾದ ಕಡೆಗಳಲ್ಲಿ ಹೊಗೆ ಸೇದುವವರಿಗಾಗಿಯೇ ಬೇರೆ ಕಂಪಾರ್ಟುಮೆಂಟುಗಳನ್ನು ಪ್ರತ್ಯೇಕಿಸಿಬಿಟ್ಟಿರುವುದುಂಟು. ಈಗ್ಗೆ ಕೆಲವು ವರ್ಷಗಳ ಹಿಂದೆ ಅದೇ ಪದ್ಧತಿಯನ್ನು ಮದ್ರಾಸಿನಲ್ಲಿಯೂ, ಆಚರಣೆಗೆ ತರಬೇಕೆಂದು ಪ್ರಯತ್ನವು ನಡೆಯಿತು. ಕೆಲವು ದಿನಗಳವರೆಗೆ ನಡೆದು ಆ ಮೇಲೆ ಪದ್ಧತಿಯು ನಿಂತುಹೋಯಿತು. ಹೊಗೆ ಸೇದುವ ಅಭ್ಯಾಸವುಳ್ಳವರು ಬಲವಾಗಿ ಹೋರಾಡಿದ್ದರಿಂದಲೋ, ಇಲ್ಲವೇ, ಅಧಿಕಾರಿಗಳಿಗೆ ಅದು ಅಸಮ್ಮತವಾಗಿದ್ದುದರಿಂದಲೋ, ಆ ನಿಯಮವನ್ನು ನಿಲ್ಲಿಸಿಬಿಟ್ಟರು. ಅದು ಹೇಗಾದರೂ ಹೋಗಲಿ! ಈ ದುರಭ್ಯಾಸದಿಂದ ಜನಾರೋಗ್ಯಕ್ಕೆ ಬಹಳ ಹಾನಿಯುಂಟೆಂಬುದರಲ್ಲಿ ಸಂದೇಹವಿಲ್ಲ. ಮುಖ್ಯವಾಗಿ ಹೊಗೆಸೊಪ್ಪಿನ ಸೇವನೆಯಲ್ಲಿ ಪದೇ ಪದೇ ಬಾಯಿಯ ಎಂಜಲನ್ನುಗುಳುತ್ತಲೇ ಇರಬೇಕಾಗುವುದು. ಈ ಉಗುಳಿನಿಂದ ಉಂಟಾಗುವ ಕೆಡಕುಗಳಾದರೋ ಅಪಾರವಾಗಿವೆ. ಅನೇಕ ವ್ಯಾಧಿಗಳ ಸೋಂಕು ಇದರಿಂದಲೇ ಹರಡುವುದು. ಆದುದರಿಂದ ಸಿಕ್ಕಿದಕಡೆ ಉಗುಳುವ ದುರಭ್ಯಾಸವು ಜನಗಳಲ್ಲಿ ಕಡಿಮೆಯಾದಷ್ಟೂ, ಕ್ಷಯರೋಗದಿಂದ ಜನಗಳಲ್ಲಿ ಮರಣಸಂಖ್ಯೆಯೂ ಅಷ್ಟಷ್ಟು ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ.

(ಆರೋಗ್ಯಚಂದ್ರಿಕೆ.)

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.
5 ನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.
ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್ ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.
3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.
[2] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!
ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾ ವಿರಿ,
ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನೆಸಿರಿ.
ಅಂದ ಮೇಲೆ— ಮಲೇರಿಯಾಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.
ಇಂದೇ ದೃಢನಂಬುಗೆಯಿಂದ
ಮಲೇರಿಯಾನ ಕಂಪನಿಯವರ ಮಲೇರಿಯಾನ
ತರಿಸಿಕೊಂಡು ಕುಡಿಯಿರಿ. [24]
ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಛಿಟಿ (ಕೆಟಲಾಗ್) ಕ್ರಯದ ಪಟ್ಟಿಗೆ ಬರೆಯಿರಿ.
ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇವಿಸು ನೋಡೋಣ!
ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಭಿಕ್ಕರಿಸಬೇಡಿ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ಷಂಡತ್ವ, ಸ್ವಪ್ನದೋಷ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಪ್ರಸಂಗವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೇಹಕ್ಕೆ ಕಾಂತಿ ಆಗುತ್ತದೆ. ಧಾತು ಬದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನವಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕವಾಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (57) ವನಸ್ಪತಿ-ಶತಪುಷ್ಪ, ಕಾಲಿಮೆಕಂದ, ಮಧುಕಂದ, ಜರಾಕಂದ, ಕಾಲೀಮೂಲೀಕಂದ, ಅಶ್ವಕಂದ, ಶ್ರೇಷ್ಠಕಂದ, ಮುಸಳೀಕಂದ, ಶತಾವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ತಾಲೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಶಿವಲೀಬೀಜ, ಚಿಕಣಿಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಸಿತಾಪತ್ರಿ, ಮದನಮಸ್ತ, ರಸಪುಷ್ಪ, ಕಮರಕಸ, ಕಥಿಲ್ಯಗೊಂದ, ಪಂಚಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮೂಸಾ, ಬೀಜಬಂದ, ಹರಾಜೋರಿ, ಮುಂಗಲೀಬಿದಾರಿ, ಮರ್ದಾಸಿಕಟ್ಟಿಗೆ, ತತಾವರಿ, ಸರೀಯಮುಗಲ, ಅಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡೀಬೀಜ, ಅಮೃತ[illegible], ಇಸಬಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಪದಮಸ್ತಕಿ, ವಂಶಲೋಚನ, ವರಖಾರಾ, ಕೇಸರಿ, [illegible], ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನದೋಷ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ನ್ಯಾಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹುಣ್ಣು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದರೋಗ, ಡಬ್ಬಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 3 ತೊಲಿಯ 1 ಭರಣಿಗೆ 3 ರೂಪಾಯಿಗಳು. [78]
ಪತ್ತೆ—ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಶೈಲಾಸ್ರಿಯು ಮಹೌಷಧವಿದ್ದು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಖರೀದಿಸಿ ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಬಲಿಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಶ್ರೀಮದ್ಭಾರತೀಯಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೩ ಆಣೆ. ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ. ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದರೆ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[41] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯ: ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

05 13/39.40 Eu V. 6 F.P. 2.41

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತನಿರ್ಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆಪದ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[21] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[30] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ ನೇ ಜನವರಿ ೧೯೩೦ [ಸಂಚಿಕೆ ೩೮.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳ ವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಆದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವ ಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೨ ಭಾವಚಿತ್ರಗಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಧೀಮಂತರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವಿಸಾರತವ್ಯಾಜಿಸ್ಟ್ರೇಟರು ಅಪರಾಧಿಗಳಮೇಲೆ ಹೊರಿಸಿದ ಆರೋಪಗಳು.

ಆರೋಪಿಗಳನ್ನು ಸೆಶನ ಕಮಿಟಮಾಡಿದ ಮ್ಯಾಜಿಸ್ಟ್ರೇಟರು ಆರೋಪಿಗಳ ಮೇಲೆ ಹೊರಿಸಿದ ಆರೋಪಗಳ ವಿವರಣೆಯು ಮುಂದೆ ಕೊಟ್ಟಂತಿರುತ್ತದೆ—

1. ಅಂತರರಾಷ್ಟ್ರಗಳ ಬೋಲ್ಶೆವಿಕ ಸಂಘವು ಜಗತ್ತಿನ ಸಂಬ 1919 ನೆಯ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.

2. ಜಗತ್ತಿನ ತುಂಬ ಕೂಲಿಕಾರರ ಪ್ರಜಾಸತ್ತಾತ್ಮಕ ರಾಜ್ಯವನ್ನು ಸ್ಥಾಪಿಸುವದೇ ಇದರ ಮುಖ್ಯೋದ್ದೇಶವಾಗಿದೆ.

3. ಈ ಉದ್ದೇಶ ಸಾಧನೆಗಾಗಿ ಆಯಾ ದೇಶಗಳಲ್ಲಿ ಹಿಂಸಾತ್ಮಕ ರಾಜ್ಯಕ್ರಾಂತಿಯನ್ನೆಬ್ಬಿಸುವದಾಗಿರುತ್ತದೆ.

4. ಹಿಂದುಸ್ಥಾನದಲ್ಲಿಯೂ ಬೋಲ್ಶೆವಿಕ ಚಳವಳಿಯನ್ನು ಎಬ್ಬಿಸಿ, ಬಾದಶಹರ ಸಾಮ್ರಾಜ್ಯವನ್ನು ಬುಡಮೇಲು ಮಾಡುವಂತೆ ಇತ್ತಕಡೆಗೆ ಇದರ ನೋಟ ತಿರುಗಿತು.

5. ಈ ವಿಚಾರದಿಂದ ಹಿಂದುಸ್ಥಾನ ಯುರೋಪ ಮತ್ತು ಬೇರೆ ದೇಶಗಳಲ್ಲಿ ಒಳಸಂಚು ನಡೆಯಿತು. ಕೂಲಿಕಾರ ಮತ್ತು ರೈತರನ್ನು ಹುರಿದುಂಬಿಸುವದೇ ಉಪಾಯವಾಯಿತು.

6. ಕೂಲಿಕಾರ ಮತ್ತು ರೈತರ ಸಂಘವನ್ನು ಸ್ಥಾಪಿಸಿ, ಅವರನ್ನು ನಮ್ಮ ಹಿಡಿಯಲ್ಲಿ ತಕ್ಕೊಂಡು ಅವರಿಗೆ ಬೋಲ್ಶೆವಿಕ ತತ್ವಗಳನ್ನು ಕಲಿಸಿ, ಸಂಪು ಮತ್ತು ಸತ್ಯಾಗ್ರಹದ ಹೋಳಿಯನ್ನು ಎಬ್ಬಿಸುವದೂ ಬೇರೆ ರೀತಿಯಿಂದ ಶಕ್ಯವಾದ ಎಲ್ಲ ಚಳವಳಿಗಳನ್ನು ಮಾಡುವದೂ ಇವರ ಕರ್ತವ್ಯವಾಗಿರುತ್ತದೆ.

7. ಈ ಪ್ರಕಾರ ಕೂಲಿಕಾರರನ್ನು ಹುರಿದುಂಬಿಸಿದ ಬಳಿಕ ರಾಜ್ಯಕ್ರಾಂತಿ ಮಾಡುವದೇ ಇವರ ಎರಡನೆಯ ಮೆಟ್ಟು.

8. ಕೂಲಿಕಾರರಿಗೆ ಹಿಂಬಲವಾಗಿ ಮತ್ತು ರಾಜ್ಯಕ್ರಾಂತಿಯು ಪರಿಣಾಮಕಾರಕವಾಗುವಂತೆ ರೈತರನ್ನು ಎಬ್ಬಿಸುವದೂ ಇವರ ಉದ್ದೇಶವು.

9. ಈ ಧ್ಯೇಯಸಾಧನೆಗಾಗಿ ಮುಂಬಯಿ, ಬಂಗಾಲ, ಪಂಜಾಬು ಮತ್ತು ಸಂಯುಕ್ತಪ್ರಾಂತಗಳಲ್ಲಿ ನಾಲ್ಕು ಶಾಖೆಗಳು ಸ್ಥಾಪಿಸಲ್ಪಟ್ಟವು.

10. ಇವಕ್ಕೆ ಮಾಸ್ಕೋದಿಂದ ದ್ರವ್ಯಸಹಾಯ ದೊರೆಯುವದು. ಇಂಗ್ಲೆಂಡ ಮತ್ತು ಬೇರೆ ದೇಶಗಳ ಮುಖಾಂತರವಾಗಿ ಇವರ ಗುಪ್ತ ವ್ಯವಹಾರ ನಡೆಯಿತು.

11. ಈ ಗುಪ್ತಸಂಚು ಮತ್ತು ಕಾರಸ್ಥಾನದ ಹೊರ್ತು ಹಿಂದುಸ್ಥಾನದಲ್ಲಿ ಬಂಡಾಯಕ್ಕೆ ಉತ್ತೇಜನ ದೊರೆಯುವ ಹಾಗೆ ಪ್ರಯತ್ನಿಸಲು ಮತ್ತು ಸಹಾಯಮಾಡಲು ಮೆಸರ್ಸ್ ಹಚಿನ್ಸನ್, ಸ್ಪ್ರಾಟ ಮತ್ತು ಬ್ರಾಡಲೇ ಸಾಹೇಬರನ್ನು ಈ ದೇಶಕ್ಕೆ ಕಳಿಸಿದರು.

12. ಇವರು ತಮಗೆ ದೊರೆತ ದ್ರವ್ಯಸಹಾಯದಿಂದ ಈ ದೇಶದಲ್ಲಿ ಸಂಘಗಳನ್ನು ಸ್ಥಾಪಿಸಿದರು, ಸಾರ್ವಜನಿಕ ಮೆರವಣಿಗೆಗಳನ್ನು ಹೊರಡಿಸಿದರು. ವರ್ತಮಾನಪತ್ರಗಳನ್ನು ತೆಗೆದರು. ತರುಣರ ಸಂಸ್ಥೆಗಳನ್ನು ಸ್ಥಾಪಿಸಿದರು. ಸಂಪುಮಾಡಿಸಿ, ಅವುಗಳ ಪ್ರವರ್ತಕ ಮತ್ತು ವ್ಯವಸ್ಥಾಪಕರಾದರು.

13. ಬಾದಶಹರ ರಾಜ್ಯವನ್ನು ಡಬ್ಬಿ ಹಾಕಿ, ಅಂತರರಾಷ್ಟ್ರೀಯ ಸಂಸ್ಥೆಯ ಹೇಳಿಕೆಯಂತೆ ಕೂಲಿಕಾರ ಮತ್ತು ರೈತರ ರಾಜ್ಯಸ್ಥಾಪನೆ ಮಾಡುವದಕ್ಕೆ ಇನ್ನೆಲ್ಲ ಪೂರ್ವೋಪಾಯಗಳಾಗಿರುತ್ತವೆ.

14. ಧರ್ಮಶಿಂಗನ ಹೊರ್ತು ಉಳಿದ ಎಲ್ಲ (31) ಆರೋಪಿಗಳು ತಿಳಿದೂ ತಿಳಿದು ಈ ಕ್ರಾಂತಿಯಲ್ಲಿ ಭಾಗ ತೆಗೆದುಕೊಂಡಿರುತ್ತಾರೆ.

15. ಇವರು ಹಿಂದುಸ್ಥಾನದಿಂದ ಬ್ರಿಟಿಶಸತ್ತೆಯನ್ನು ಹೊರಗೆ ಹಾಕುವದಕ್ಕಾಗಿ ಸಂಚುಮಾಡಿರುವದರಿಂದ ಇವರ ಮೇಲೆ ಬಾದಶಹರ ವಿರುದ್ಧ ಬಂಡುಮಾಡುವ ಆರೋಪವಿಟ್ಟು ಇವರನ್ನು ಹೆಚ್ಚಿನ ವಿಚಾರಣೆಗಾಗಿ ಸೆಶನ ಕಮಿಟ ಮಾಡಿರುತ್ತೇನೆ.

ಈ ಪ್ರಕರಣದ ಪ್ರಾರಂಭವು ಹತ್ತು ತಿಂಗಳ ಹಿಂದೆಯಾಗಿ ಮೊದಲನೆಯ ಅಂಕು ಈ ವಾರದಲ್ಲಿ ಮುಗಿಯಿತು. ಸೆಶನದಲ್ಲಿ ಸರಕಾರ ಪಕ್ಷದ ನಾಲ್ಕು ನೂರು ಸಾಕ್ಷಿದಾರರ ಹೊರ್ತು ಆರೋಪಿಗಳ ಪಕ್ಷದಿಂದಲೂ ನಾಲ್ಕು ನೂರು ಸಾಕ್ಷಿದಾರರಿದ್ದಾರೆ. ಇಂಗ್ಲಂಡದ ಮುಖ್ಯಮಂತ್ರಿ ಮೊದಲುಮಾಡಿಕೊಂಡು ಅನೇಕ ದೊಡ್ಡದೊಡ್ಡ ಗೃಹಸ್ಥರು ಇವರ ಸಾಕ್ಷೀದಾರರಾಗಿದ್ದಾರೆ. ಜಡ್ಜರು ಇವರಲ್ಲಿ ಎಷ್ಟು ಜನರ ಸಾಕ್ಷಿಗೆ ಮಂಜೂರಿ ಕೊಡುವರೆಂಬುದನ್ನು ನೋಡಬೇಕು.

ಆರೋಪಿಗಳಲ್ಲಿ 23 ಹಿಂದು, 4 ಮುಸಲ್ಮಾನರು, ಮೂವರು ಇಂಗ್ಲೀಷರು ಮತ್ತು ಒಬ್ಬನು ಪಾರ್ಶಿಯಾಗಿದ್ದಾರೆ.

(ವಿಜಯ)

ಸ್ವೀಕಾರ.

ಬಿಜಾಪುರ ಡಿ|| ದೇವರ ಹಿಪ್ಪರಗಿ ಪರದೇಶೀ ಹಿರೇಮಠದ ಶ್ರೈ|| ಶ್ರೀ ಸಿದ್ಧರಾಮಶಿವಾಚಾರ್ಯರ ಗದ್ದುಗೆಯ ಮೇಲೆ ಶಿವಲಿಂಗಸ್ಥಾಪನ ಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ|| ಷ|| ಬ್ರ|| ಮುಲಥಾಣ ಪಟ್ಟಾಧ್ಯಕ್ಷರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಗದಗ ಶಹರ ನಿವಾಸಿಗಳಾದ ವೇ|| ಹಿಡಿಕಿಮಠದ ಚನ್ನವೀರಯ್ಯನವರ ಪುತ್ರ ಚಿ|| ಅಡಿವಯ್ಯನವರ ಪುತ್ರನಾದ ಗವಿಸಿದ್ಧಯ್ಯನಿಗೆ ಮಾರ್ಗಶೀರ್ಷ ಬ|| ೧೦ ದಿವಸ ಮಾಹೇಶ್ವರ ದೀಕ್ಷೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಮುಂಗಳೂರು ಅರಳೆಲೆ ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾ|| ಮಾವಿನಕೆರೆ ಗ್ರಾಮದ ಮ|| ರಾ|| ಪುಟ್ಟಣ್ಣಶೆಟ್ಟರ ಕಳೆದುಹೋದ ಕಿರಾಣಿ ಸಾಮಾನುಗಳನ್ನು ಬೇಲೂರು ಮ|| ರಾ|| ಮುಸ್ತಾಕ್ ಸಾಹೇಬರು ಪತ್ತೆಮಾಡಿಕೊಟ್ಟ ಸಂತೋಷಕ್ಕಾಗಿ ಸದರಿ ಶೆಟ್ರು ಸಮರ್ಪಿಸಿದ 1 ರೂಪಾಯಿಯು ಕುನ್ನಾಳು ಸ್ಕೂಲ್ ಮಾಸ್ಟರ್ ಎಂ. ಚಂದಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಹುಬ್ಬಳ್ಳಿ ತಾಲೂಕು ಪಾಲೀಕೊಪ್ಪದಲ್ಲಿರುವ "ರೇಣುಕಬಾಗ" ಎಂಬ ಪುಣ್ಯಾಶ್ರಮದಲ್ಲಿ ನೆರವೇರಿದ ಮಕರಸಂಕ್ರಾಂತಿ ಮಹೋತ್ಸವದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ವೇ|| ಸೋಮನಾಥಶರ್ಮಾ ಬೃಹನ್ಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಆಗಮ ಪರಿಜ್ಞಾನ
ಅಥವಾ
ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು,
ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ಮಹಾಭಾರತವು ಪಂಚಮವೇದವೆಂದು ಪ್ರಸಿದ್ಧವಾಗಿದೆ. ಅದು ಪಾಂಡವರಿಗೆ ಜಯವು ದೊರಕುದನ್ನೇ ಹೇಳುವ ಉದ್ದೇಶವಿಟ್ಟುಕೊಂಡು ಬೇರೆ ಐತಿಹಾಸಿಕಗ್ರಂಥಗಳಲ್ಲಿಯ ಉಪಾಖ್ಯಾನಗಳನ್ನು ಒಂದುಗೂಡಿಸಿ, ಇತಿಹಾಸವನ್ನೂ ಧರ್ಮಾಧರ್ಮ ವಿವೇಚನೆಯನ್ನೂ ನಿರೂಪಿಸುವುದು. ಅದನ್ನು ವ್ಯಾಸಮಹರ್ಷಿಯು ಬಿಡುವಿಲ್ಲದೆ ಮೂರು ವರುಷಗಳವರೆಗೆ ಬರೆದನೆಂದು ಮಹಾಭಾರತದಲ್ಲಿಯೇ (ಆದಿ ೬೨-೫೨) ಹೇಳಲ್ಪಟ್ಟಿರುವುದು. ಮಹಾಭಾರತಕ್ಕೆ ಸಂಹಿತೆಯೆಂಬ ಸಂಜ್ಞೆಯುಂಟು. ಸಂಹಿತೆಯೆಂದರೆ ಒಂದು ಕಡೆ ಒಟ್ಟುಗೂಡಿಸುವುದು. ಸನತ್ಸುಜಾತೀಯ, ವಿದುರನೀತಿ ಮುಂತಾದ ಪ್ರಕರಣಗಳು ಪ್ರಾಚೀನಗ್ರಂಥಗಳ ಆಧಾರದಿಂದೇ ರಚಿಸಲ್ಪಟ್ಟಿರುವವು. ಮಹಾಭಾರತದ ಅನೇಕ ಸ್ಥಳಗಳಲ್ಲಿ ದಿವ್ಯಾಗಮ ವಾಕ್ಯಗಳು ಇದ್ದಕ್ಕಿದ್ದ ಹಾಗೆಯೂ ಅರ್ಥಾನುವಾದರೂಪಗಳಾಗಿಯೂ ಸೇರಿಸಲ್ಪಟ್ಟಿವೆ. ಶಾಂತಿಪರ್ವದ ೨೩೬ ನೆಯ ಅಧ್ಯಾಯದಲ್ಲಿ ಉಲ್ಲೇಖಿಸಲ್ಪಟ್ಟ—

ದೇವೀಂ ಪ್ರತಿ ಪರಶಿವ ವಚನಂ :—

ಅರ್ಥೋಽಹಮರ್ಥಶಕ್ತಿಸ್ತ್ವಂ ಭೋಕ್ತಾಽಹಂ ಭೋಜ್ಯಮೇವಚ । ರೂಪಂ ವಿದ್ಧಿ ಮಹಾಭಾಗೇ ಪ್ರಕೃತಿಸ್ತ್ವಂ ಪರೋಽಹ್ಯಹಮ್ ||೩೮||

ಎಂಬೀ ಮುಂತಾದ ವಾಕ್ಯಗಳು ಶೈವಾಗಮಗಳೊಳಗಿನವೆಂ[illegible]ವೇ ; ಅನುಶಾಸನಪರ್ವದ ೪೫ ನೆಯ ಅಧ್ಯಾಯ[illegible]ಗಮ ಪ್ರವರ್ತಕರಲ್ಲಿ ಒಬ್ಬನಾದ ಉಪಮನ್ಯು[illegible]ಮುಖದಿಂದ ಹೊರಹೊರಟ

ಪಶುಪತಿವಚನಾದ್ಭವಾಮಿ ಸದ್ಯಃ ಕೃಮಿರಥವಾ ತರುರಪ್ಯನೇಕಶಾಖಃ । ಅಪಶುಪತಿವರಪ್ರಸಾದಜಾ ಮೇ ತ್ರಿಭುವನರಾಜ್ಯ ವಿಭೂತಿರಪ್ಯನಿಷ್ಟಾ ||೧೫|| ವಾಯ್ವಂಬುಭುಜೋಽಪಿ ಸತೋ ನರಸ್ಯ ದುಃಖಕ್ಷಯಃ ಕುತಸ್ತಸ್ಯ । ಭವತಿ ಹಿ ಸುರಾಸುರಗುರೌ ಯಸ್ಯ ನ ವಿಶ್ವೇಶ್ವರೇ ಭಕ್ತಿಃ || ಅಲಮನ್ಯಾಭಿಸ್ತೇಷಾಂ ಕಥಾಭಿರಪ್ಯನ್ಯ ಧರ್ಮಯುಕ್ತಾಭಿಃ । ಯೇಷಾಂ ನಕ್ಷಣಮಪಿ ರುಚಿತೋ ಹರಚರಣಸ್ಮರಣವಿಚ್ಛೇದಃ || ಧಿಕ್ತೇಷಾಂ ಧಿಕ್ತೇಷಾಂ ಪುನರಪಿಚ ಧಿಗಸ್ತು ಧಿಕ್ತೇಷಾಮ್ । ಯೇಷಾಂ ನ ವಸತಿ ಹೃದಯೇ ಕುಗತಿ ವಿಮೋಕ್ಷಕೋ ರುದ್ರಃ || ......। ಯತ್ ಪೂರ್ವಮಸೃಜದ್ದೇವಂ ಬ್ರಹ್ಮಾಣಂ ಲೋಕಭಾವನಮ್ ||೧೮೫|| ......। ಭಗವತ್ಯತ್ರನ್ಯೈಶ್ವರ್ಯಂ ಬ್ರಹ್ಮವಿಷ್ಣು ಪುರೋಗಮಮ್ । ವಿದ್ಯತೇ ವೈ ಮಹಾದೇವಾದ್ಬ್ರೂಹಿ ಕಃ ಪರಮೇಶ್ವರಾತ್ ||೧೮೯||......। ನ ಶುಶ್ರುಮ ಯದನ್ಯಸ್ಯ ಲಿಙ್ಗಮಭ್ಯರ್ಚಿತಂ ಸುರೈಃ || ಕಸ್ಯಾನ್ಯಸ್ಯ ಸುರೈಃ ಸರ್ವೈರ್ಲಿಙ್ಗಂ ಮುಕ್ತ್ವಾ ಮಹೇಶ್ವರಮ್ । ಅರ್ಚ್ಯತೇಽರ್ಚಿತಪೂರ್ವಂ ವಾ ಬ್ರೂಹಿ ಯದ್ಯಸ್ತಿ ಮೇಶ್ರುತಿಃ ||೨೧೫|| ಯಸ್ಯ ಬ್ರಹ್ಮಾ ಚ ವಿಷ್ಣುಶ್ಚ ತ್ವಂ ಚಾಪಿ ಸಹ ದೈವತೈಃ । ಅರ್ಚಯಧ್ವಂ ಸದಾ ಲಿಙ್ಗಂ ತಸ್ಮಾಚ್ಛ್ರೇಷ್ಠತಮೋ ಹಿ ಸಃ ||೨೧೬||

ಎಂಬೀ ಮುಂತಾದ ಶಿವಭಕ್ತಿಪ್ರಕಾಶಕ ವಚನಗಳು ಇಂದ್ರನು ಸಹ ಬುದ್ಧಿವಾದಾತ್ಮಕಗಳಾಗಿರಲು, ಇವರಿಗೆ ಮನನೀಯಗಳಾಗಿರುವವೆಂಬ ಬಗ್ಗೆ ಬೇರೆ ಹೇಳಬೇಕೆ? ಮುಂದಿನ ಅಧ್ಯಾಯಗಳಲ್ಲಿ ಉಪಮನ್ಯು ಮುನಿಯು ಕೃಷ್ಣನಿಗೆ ಶಿವದೀಕ್ಷೆಯನ್ನಿತ್ತು ಶೈವಾಗಮದೊಳಗಿನ ಶಿವಜ್ಞಾನದ ಸಾರವನ್ನು ಬೋಧಿಸಬಯಸುತ್ತಾಗಿ ತನಗಿಂತ ಪ್ರಾಚೀನರಾದ ಶಿವಜ್ಞಾನಿಗಳ ವಾಕ್ಯಗಳನ್ನು ಉದಾಹರಿಸುವ ಪ್ರಸಂಗದಲ್ಲಿ, **ತಂಡಿಯು** ಎಂಬ ಮಹರ್ಷಿಯಿಂದ ರಚಿಸಲ್ಪಟ್ಟ ಸ್ತುತಿಯನ್ನು ಅನುವಾದ ರೂಪದಿಂದ ತೋರಿಸಿದ್ದಾನೆ. (ಅಧ್ಯಾ. ೪೬); ಅದಾದರೋ ಶೈವಾಗಮಗಳ ತಿರುಳೇ ಆಗಿದೆ. ಅದೇ ಪರ್ವದ ಎಂದರೆ ಅನುಶಾಸನ ಪರ್ವದ ೧೬೮ ನೆಯ ಹಾಗೂ ೨೦೯ ನೆಯ ಅಧ್ಯಾಯಗಳಲ್ಲಿಯು

ಯಾನೀಹಾಗಮಶಾಸ್ತ್ರಾಣಿ ಯಾಶ್ಚಕಾಶ್ಚಿತ್ಪ್ರವೃತ್ತಯಃ । ತಾನಿ ವೇದಂ ಪುರಸ್ಕೃತ್ಯ ಪ್ರವೃತ್ತಾನಿ ಯಥಾಕ್ರಮಮ್ ||......। ತತ್ರ ಗತ್ವಾ ವಿಧಿಂ ಜ್ಞಾತ್ವಾ ದೀಕ್ಷಾಂ ಕುರ್ಯಾದ್ಯಥಾಗಮಮ್ ||

ಇತ್ಯಾದಿ ವಾಕ್ಯಗಳು ವೇದಾವಿರುದ್ಧಗಳಾದ ಶಿವಾಗಮಗಳ ಪ್ರಾಮಾಣ್ಯವನ್ನು ಸೂಚಿಸುತ್ತವೆ. ೨೮೮ ನೆಯ ಅಧ್ಯಾಯದಲ್ಲಿ ಪಾರ್ವತೀಂಪ್ರತೀಶ್ವರೋಕ್ತಿ :—

ಅಹಂ ಪಶುಪತಿರ್ನಾಮ ಮದ್ಭಕ್ತಾ ಯೇಚ ಮಾನವಾಃ । ಸರ್ವೇ ಪಾಶುಪತಾ ಜ್ಞೇಯಾ ಭಸ್ಮದಿಗ್ಧತನೂರುಹಾಃ ||೧೩|| ರಕ್ಷಾರ್ಥಂ ಮಂಗಲಾರ್ಥಂಚ ಪವಿತ್ರಾರ್ಥಂಚಭಾಮಿನಿ । ಲಿಂಗಾರ್ಥಂ ಚೈವ ಭಕ್ತಾನಾಂ ಭಸ್ಮ ದತ್ತಂ ಮಯಾ ಪುರಾ ||೧೪||......। ಅರ್ಚಯಾ ಶಿವಲಿಙ್ಗಸ್ಯ ಪರಿತುಷ್ಯಾಮ್ಯಹಂ ಪ್ರಿಯೇ ||೨೨||

ಎಂಬೀ ವಾಕ್ಯಗಳಾದರೋ ಇದ್ದಕ್ಕಿದ್ದಹಾಗೆ ಶೈವಾಗಮಗಳೊಳಗಿನವೇ ಇವೆ. ಈ ರೀತಿಯಾಗಿ ಸದ್ಧರ್ಮವನ್ನು ಪ್ರತಿಪಾದಿಸತಕ್ಕ ಬಹುಸ್ಥಳಗಳಲ್ಲಿ ಶೈವಾಗಮಗಳ ವಾಕ್ಯಗಳೇ ಇದ್ದಕ್ಕಿದ್ದಂತೆಯೂ ಅನುವಾದಾತ್ಮಕವಾಗಿಯೂ ಸೇರಿಸಲ್ಪಟ್ಟಿರುವುದರಿಂದಲೇ ಮೊದಲು '**ಪಾಂಡವ ಜಯ**' ಎಂಬ ಹೆಸರುಳ್ಳ ಗ್ರಂಥವು **ಮಹಾ ಭಾರತ** ವೆಂಬ ಹೆಸರಿನಿಂದ ಪ್ರಸಿದ್ಧವಾದುದಲ್ಲದೆ—

ಪುರಾ ಕಿಲ ಸುರೈಃ ಸರ್ವೈಃ ಸಮೇತ್ಯತುಲಯಾಧೃತಮ್ । ಚತುರ್ಭ್ಯಃ ಸರಹಸ್ಯೇಭ್ಯೋ ವೇದೇಭ್ಯೋಽಹ್ಯಧಿಕಂಯದಾ || ತದಾ ಪ್ರಭೃತಿ ಲೋಕೇಽಸ್ಮಿನ್ ಮಹಾಭಾರತಮುಚ್ಯತೇ ।

ಪೂರ್ವದಲ್ಲಿ ಸರ್ವದೇವತೆಗಳೂ ಒಂದು ಕಡೆ ಸೇರಿ ನಾಲ್ಕು ವೇದಗಳನ್ನೂ ಭಾರತವನ್ನೂ ತೂಗಿನೋಡಲು ವೇದಗಳಿಗಿಂತ ಭಾರತವೇ ಹೆಚ್ಚಿನದಾಯಿತು; ಅಂದಿನಿಂದ ಜಗತ್ತಿನಲ್ಲಿ ಭಾರತಕ್ಕೆ "**ಮಹಾಭಾರತ**" ವೆಂಬ ಹೆಸರು ದೊರಕಿತು. (ಮಹಾ ಭಾ. ಆದಿ ಪ. ೨೬೪) ಎಂಬಂತೆ ವೇದಕ್ಕಿಂತಲೂ ಮಿಗಿಲಾದುದೆಂಬ ಗೌರವಕ್ಕೆ ಪಾತ್ರವಾಯಿತು. ಮಹಾ ಭಾರತವೆಂಬ ಆಕಾಶದಲ್ಲಿ ಸದ್ಯಃ ಲಕ್ಷಾವಧಿ ಶ್ಲೋಕಗಳೆಂಬ ನಕ್ಷತ್ರಗಳು ಮಿನುಗುತ್ತಿದ್ದರೂ ಶ್ರೀ ಕೃಷ್ಣನ ಮುಖವೆಂಬ ಚಂದ್ರನಿಂದ ಪಸರಿಸಿದ ಗೀತೆಯೆಂಬ ಚಂದ್ರಿಕೆಯೊಂದೇ ಮುಮುಕ್ಷು ಜನರೆಂಬ ಚಕೋರ ಪಕ್ಷಿಗಳಿಗೆ ತೃಪ್ತಿಕರವಾಗಿದೆ. ಆ ಗೀತೆಯಾದರೋ ಉಪನಿಷತ್ತುಗಳ ಹಾಗೂ ಶೈವಾಗಮಗಳ ಪುನರುಕ್ತಿರೂಪವಾಗಿರುವುದು.

ಸೂತ್ರಗ್ರಂಥಗಳಾದರೂ ವೇದಾವಿರುದ್ಧಗಳಾದ ಶೈವಾಗಮಗಳನ್ನು ವೇದಗಳಂತೆಯೇ ಪ್ರಮಾಣರೂಪದಿಂದ ಪುರಸ್ಕರಿಸಿರುತ್ತವೆ. ಸಕಲ ವೇದಾರ್ಥ ಪರಿಜ್ಞಾನವುಳ್ಳ ಆಪಸ್ತಂಭನು ವಿಶಿಷ್ಟ ವೇದಾರ್ಥವನ್ನು ಅರಿತುಕೊಳ್ಳಲು ಸಮರ್ಥರಲ್ಲದವರಿಗೆ ಸಮಸ್ತ ಶ್ರೌತ ಸಿದ್ಧಾಂತದ ಪರಿಜ್ಞಾನವನ್ನುಂಟುಮಾಡಿಕೆಂದು ವೇದಕ್ಕಾಗಿ ಧರ್ಮಸೂತ್ರವನ್ನು ರಚಿಸಲು ತೊಡಗಿ, "**ಸ್ಪಷ್ಟಮಾಮ್ನಾಯಃ ಪ್ರಮಾಣಮ್**" ಎಂದು ಬರೆಯದೆ "**ಆಮ್ನಾಯೈರವಿರುದ್ಧಾಃ ಪ್ರಮಾಣಮ್**" ಎಂಬುದಾಗಿ ಸೂತ್ರಿಸುವಲ್ಲಿ "**ಅವಿರುದ್ಧಾಃ ಪ್ರಮಾಣಮ್**" ಎಂದಿರುವ "**ಅವಿರುದ್ಧ**" ಶಬ್ದಸ್ವಾರಸ್ಯದಿಂದ ವೇದಾವಿರುದ್ಧಗಳಾದ ಶೈವಾಗಮಗಳೂ ಸ್ಮೃತಿ ಮುಂತಾದವುಗಳೂ ಪ್ರಮಾಣರೂಪೇಣ ಅಭಿಪ್ರೇತಗಳಾಗಿವೆ.

ಇನ್ನು ಪುರಾಣಗಳಲ್ಲಿ ಶೈವಾಗಮಗಳ ಪ್ರಾಶಸ್ತ್ಯವು ಹೇಗಿರುವದೆಂಬುದನ್ನು ಪರಾಮರ್ಶಿಸುವಾ ! ಸ್ಕಂದಪುರಾಣಾಂತರ್ಗತವಾದ ಸೂತಸಂಹಿತೆಯ ಪ್ರಥಮಾಧ್ಯಾಯದಲ್ಲಿ—

ಅಷ್ಟಾದಶಪುರಾಣಾನಾಂ ಕರ್ತಾ ಸತ್ಯವತೀಸುತಃ । ಕಾಮಿಕಾದಿ ಪ್ರಭೇದಾನಾಂ ಯಥಾದೇವೋ ಮಹೇಶ್ವರಃ ||

"ಮಹೇಶ್ವರನು ಕಾಮಿಕಾದಿ ದಿವ್ಯಾಗಮಗಳಿಗೆ ಹೇಗೆ ಕರ್ತನಾಗಿದ್ದಾನೋ ಹಾಗೇ ಸತ್ಯವತೀ ಸುತನಾದ ಪಾರಾಶರನು (ವ್ಯಾಸಮುನಿಯು) ಹದಿನೆಂಟು ಪುರಾಣಗಳಿಗೂ ಕರ್ತನಾಗಿದ್ದಾನೆ. ಎಂಬ ವಚನದಿಂದ ಪುರಾಣಗಳಿಗೆ ಪ್ರಾಮಾಣ್ಯವನ್ನು ಹೇಳುವುದಕ್ಕಾಗಿ ಶೈವಾಗಮಗಳು ನಿರ್ದೇಶಿಸಲ್ಪಟ್ಟಿವೆ. ಸೂತಸಂಹಿತೆಗೆ ವ್ಯಾಖ್ಯಾನವನ್ನು ಬರೆದ ಮಾಧವಾಚಾರ್ಯನು ಈ ಮೇಲಿನ ಶ್ಲೋಕದ ಅರ್ಥವನ್ನು—"**ಕಾಮಿಕಾದೀನಾಮಾಗಮಸಂಹಿತಾನಾಂ ಶಿವೇನೈವ ಪ್ರಣಯನಾತ್ಪ್ರಾಮಾಣ್ಯಂಯಥಾವಿಸ್ಪಷ್ಟಃ, ಏವಂ ನಾರಾಯಣಾವತಾರೇಣ ವ್ಯಾಸೇನ ಪ್ರಣಯನಾತ್ಪುರಾಣೇಷ್ವವಿಶೇಷಃ**"—ಕಾಮಿಕಾದ್ಯಾಗಮಗಳಿಗೆ ಈಶ್ವರಪ್ರೋಕ್ತತ್ವ ಮೂಲಕ ಹೇಗೆ ಪ್ರಾಮಾಣ್ಯವು ಅಬಾಧಿತವಾಗಿರುವುದೋ ಹಾಗೆ ನಾರಾಯಣನ ಅವತಾರವೆಂದು ಹೇಳಿಸಿಕೊಳ್ಳಲ್ಪಡುವವನಾದ ವ್ಯಾಸಮುನಿಯಿಂದ ಬರೆಯಲ್ಪಟ್ಟ ಪುರಾಣಗಳಾದರೂ ಅಪ್ರಮಾಣಗಳಲ್ಲ ; ಎಂದು ಬರೆದಿರುವನು.

ಪುರಾಣಗಳು ಕಾದಂಬರೀ ಗ್ರಂಥಗಳಂತೆ ವ್ಯಾಸಮುನಿಯ ಕಪೋಲಕಲ್ಪಿತಗಳಲ್ಲ ; ಅವನು ತನ್ನ ಕಾಲದಲ್ಲಿ ಕಾಮಿಕಾದ್ಯಾಗಮ ಸಂಹಿತೆಗಳನ್ನೇ ಬೇರೆ ಬೇರೆ ಪುರಾಣಗಳ ಹೆಸರಿನಿಂದ ಪ್ರಸಿದ್ಧಗೊಳಿಸಿದನು. "**ಪುರಾಣಮ್**", ಎಂದರೆ ಪುರಾತನವಾದದ್ದು ; ಇದೇ ಅರ್ಥವು ಬೃಹದಾರಣ್ಯಕೋಪನಿಷತ್ತಿನಲ್ಲಿಯೂ (೨-೪-೧೦) ಶತಪಥ ಬ್ರಾಹ್ಮಣದಲ್ಲಿಯೂ (೧೪-೫-೪-೧೦) ಮೈತ್ರ್ಯುಪನಿಷತ್ತಿನಲ್ಲಿಯೂ (೬-೩೨) ನಿರ್ದೇಶಿಸಲ್ಪಟ್ಟಿದೆ. ಕಾಮಿಕಾದ್ಯಾಗಮಗಳು ವಿದ್ಯೇಶ್ವರರಿಗೂ ರುದ್ರರಿಗೂ ಈಶ್ವರನಿಂದ ಬೋಧಿಸಲ್ಪಟ್ಟಿರುವುವೆಂದು ಹಿಂದೆ ಹೇಳಿಯೇ ಇರುವೆವು. ಪುರಾಣಗಳಲ್ಲಿಯ ಸಂಹಿತೆಗಳಾದರೂ **ವಿದ್ಯೇಶ್ವರ, ಶತರುದ್ರ, ಶಂಕರ, ನಂದಿಕೇಶ್ವರ, ಸನತ್ಕುಮಾರ** ಎಂಬೀ ಮುಂತಾದ ಶೈವಾಗಮಗಳಲ್ಲಿಯ ಬೇರೆ ಬೇರೆ ಬೋಧ್ಯ ಬೋಧಕರ ಹೆಸರುಗಳನ್ನೇ ತಳೆದಿರುವುವು.

ದೊಡ್ಡ ಜವಳಿಯ ಅಂಗಡಿಯೊಳಗೆ ಬೇರೆ ಬೇರೆ ತೆರನಾದ ಬಟ್ಟೆಗಳು ಸಾಲುಸಾಲಾಗಿ ಒಟ್ಟಲ್ಪಟ್ಟಿರುತ್ತವೆ. ಆದರೆ ಅಂಗಡಿಕಾರನು ಅವುಗಳಲ್ಲಿ ಸರ್ವಸಾಮಾನ್ಯವಾಗಿ ಉಪಯುಕ್ತಗಳಾದ ಕೆಲವನ್ನೇ ಮಾತ್ರ ಗ್ರಾಹಕರ ದೃಷ್ಟಿಗೋಚರವಾಗುವಂತೆ ಹೊರಗಿರಿಸುವುದುಂಟು ; ಅದರಂತೆ ವ್ಯಾಸಮುನಿಯಾದರೂ ಶೈವಾಗಮಗಳೊಳಗಿನ ಕೆಲವು ವಾಕ್ಯಗಳನ್ನು ಮಾತ್ರ ಪುರಾಣಗಳಲ್ಲಿ ಆಯಾ ಸಂಹಿತೆಗಳ ಹೆಸರುಗಳಿಂದ ಬಯಲಿಗಿರಿಸಿದನು. ಶಿವಮಹಾಪುರಾಣಾಂತರ್ಗತವಾದ ವಿದ್ಯೇಶ್ವರ ಸಂಹಿತೆಯ ೨ ನೆಯ ಅಧ್ಯಾಯದಲ್ಲಿ—

ಶಿವೇ ಸಂಕಲ್ಪಿತಂ ಪೂರ್ವಂ ಪುರಾಣಂ ಗ್ರಂಥ ಸಂಖ್ಯಯಾ । ಶತಕೋಟಿ ಪ್ರಮಾಣಂ ಹಿ ಪುರಾ ಸೃಷ್ಟೌ ಸುವಿಸ್ತೃತಮ್ ||೫೭|| ವ್ಯಸ್ತೇಽಷ್ಟಾದಶಧಾ ಚೈವ ಪುರಾಣೇ ದ್ವಾಪರಾದಿಷು । ಚತುರ್ಲಕ್ಷೇಣ ಸಂಕ್ಷಿಪ್ತೇ ಕೃತೇ ದ್ವೈಪಾಯನಾದಿಭಿಃ ||೫೮||

"ಸೃಷ್ಟಿಯ ಪ್ರಾರಂಭದಲ್ಲಿ ಶಿವನು ತನ್ನಲ್ಲಿ ಸಂಕಲ್ಪರೂಪವಾಗಿದ್ದ ನೂರು ಕೋಟಿ ಸಂಖ್ಯಾತವಾದ ಪುರಾಣವನ್ನು ಮೊದಲು ಪ್ರಥಮರಿಗೆ ಬೋಧಿಸಿದನು. ಆದರೆ ಅಷ್ಟು ಶ್ಲೋಕಗಳೆಲ್ಲವೂ ಮುಂದೆ ಶಿಷ್ಯರುಗಳ ಪರಂಪರೆಯಲ್ಲಿ ಉಳಿಯದೆ ಎಷ್ಟೋ ಮರೆತುಹೋದವು. ದ್ವಾಪರಾದಿಯುಗಗಳಲ್ಲಿ ವ್ಯಾಸಾದಿಮುನಿಗಳು ತಮ್ಮ ಕಾಲದಲ್ಲಿ ಸರ್ವತ್ರ ಪ್ರಚಾರದಲ್ಲಿದ್ದವುಗಳನ್ನಷ್ಟೇ ೧೮ ವಿಭಾಗಮಾಡಿ ನಾಲ್ಕು ಲಕ್ಷ ಶ್ಲೋಕಗಳಲ್ಲಿ ಪುರಾಣವು ಸಂಕ್ಷಿಪ್ತಗೊಳಿಸಲ್ಪಟ್ಟಿತು." ಮುಂದೆ ೪ ನೆಯ ಅಧ್ಯಾಯದಲ್ಲಿ ಬ್ರಹ್ಮನು ಮುನಿಗಳಿಗೆ ಹೇಳುತ್ತಾನೆ—

ತತ್ಸಾಧನಂ ಬಹುವಿಧಂ ಸಾಕ್ಷಾದೀಶೇನ ಬೋಧಿತಮ್ । ಸಂಕ್ಷಿಪ್ಯ ತತ್ರ ವಃ ಸಾರಂ ಸಾಧನಂ ಪ್ರಬ್ರವೀಮ್ಯಹಮ್ ||

"ಶಿವಪ್ರಾಪ್ತಿಗೆ ಸಾಧನವಾದ ಶಿವಲಿಂಗಾರ್ಚನಾದಿಕವು ಬಹುವಿಧವಾಗಿರುವುದನ್ನು ಸಾಕ್ಷಾತ್ ಶಿವನೇ ಬೋಧಿಸಿದ್ದಾನೆ, ಆ ಶಿವಾರ್ಚನಾದಿ ಬಹುವಿಧ ಸಾಧನವೆಲ್ಲವನ್ನೂ ನಾನು ನಿಮಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ." ಎಂಬೀ ಮುಂತಾದ ವಾಕ್ಯಗಳನ್ನು ಪರ್ಯಾಲೋಚಿಸಿದರೆ ಪುರಾಣಗಳೆಂದರೆ ಶೈವಾಗಮಗಳ ಪ್ರತಿಬಿಂಬಗಳೆಂದು ಸಿದ್ಧವಾಗುವುದು. ಮತ್ತು ಕೊನೆಯ ವಾಯವೀಯಸಂಹಿತೆಯ ಪೂರ್ವಖಂಡದ ಪ್ರಥಮಾಧ್ಯಾಯದಲ್ಲಿ ಪ್ರಾರಂಭಕ್ಕೆ ನೈಮಿಷಾರಣ್ಯವಾಸಿಗಳಾದ ಮುನಿಗಳು ಸೂತಮುನಿಯನ್ನು ಕುರಿತು ಪುರಾಣಶ್ರವಣೋತ್ಸುಕತೆಯು ತಮಗೆ ವಿಶೇಷವಾಗಿರುವುದೆಂದು ಪ್ರಾರ್ಥಿಸಲು, ಆಗ ಸೂತಮುನಿಯು ಪುರಾಣಪ್ರವಚನಾರಂಭದಲ್ಲಿ—

ಅಭಿವಂದ್ಯ ಮಹಾದೇವಂ ದೇವೀಂ ಸ್ಕಂದಂ ವಿನಾಯಕಮ್ । ನಂದಿನಂ ಚ ತಥಾ ವ್ಯಾಸಂ ಸಾಕ್ಷಾತ್ಸತ್ಯವತೀಸುತಮ್ ||೨೧|| ವಕ್ಷ್ಯಾಮಿ ಪರಮಂಪುಣ್ಯಂ ಪುರಾಣಂ ವೇದಸಂಮಿತಮ್ । ಶಿವಜ್ಞಾನಾರ್ಣವಂ ಸಾಕ್ಷಾದ್ಭುಕ್ತಿಮುಕ್ತಿ ಫಲಪ್ರದಮ್ ||೨೨|| ಶಬ್ದಾರ್ಥನ್ಯಾಯಸಂಯುಕ್ತೈರಾಗಮಾರ್ಥವಿಭೂಷಿತಮ್ । ಶ್ವೇತ ಕಲ್ಪಪ್ರಸಂಗೇನ ವಾಯುನಾ ಕಥಿತಂ ಪುರಾ ||೨೩||

"ಮಹಾದೇವನನ್ನೂ, ಮಹಾದೇವಿಯನ್ನೂ, ಸ್ಕಂದನನ್ನೂ, ವಿಘ್ನೇಶನನ್ನೂ, ನಂದಿಕೇಶ್ವರನನ್ನೂ, ವ್ಯಾಸನನ್ನೂ, ಹೃದಯದಲ್ಲಿ ಭಕ್ತಿಪೂರ್ವಕವಾಗಿ ಅಭಿವಂದಿಸಿ, ಪರಮಪುಣ್ಯರೂಪವೂ, ವೇದಾವಿರುದ್ಧವೂ, ಶಿವಜ್ಞಾನಸಾಗರವೂ, ಭೋಗಮೋಕ್ಷಪ್ರದವೂ, ಶಬ್ದಾರ್ಥನ್ಯಾಯದಿಂದ ಕೂಡಿದುದೂ, ಕೇವಲ ಶೈವಾಗಮಗಳ ಅರ್ಥಗಳಿಂದ ಶೋಭಿಸುವುದೂ, ಮೊದಲು ವಾಯುವಿನಿಂದ ಶ್ವೇತಕಲ್ಪ ಪ್ರಸಂಗದಲ್ಲಿ ನಿರೂಪಿಸುದುದೂ ಆದ ವಾಯವೀಯ ಸಂಹಿತಾತ್ಮಕ ಪುರಾಣವನ್ನು ಹೇಳುವೆನು." ಎಂಬುದಾಗಿ ಶಿವನೂ, ದೇವಿಯೂ, ನಂದಿ, ಸ್ಕಂದಾದಿ ಪ್ರಮಥರೂ ಆಗಮಪ್ರವರ್ತಕರಾದ್ದರಿಂದ ಆಗಮಾರ್ಥಗಳಿಂದೇ ವಿಭೂಷಿತವಾದ ಪುರಾಣ[illegible] ವಚನಾರಂಭದಲ್ಲಿ ಸೂತನು ಅವರನ್ನು ಅಭಿವಂದಿಸಿ[illegible] ಬೇರೆ ಕೆಲ್ಲಗಳಲ್ಲಿಯೂ ಶಿವಜ್ಞಾನಿಗಳಾದ [illegible] ದೇವತೆಗಳಿಂದ ಆಗಮದ ಪ್ರತಿಬಿಂಬರೂಪವಾದ ಪುರಾ[illegible]ಯದ ಪಠನ ಶ್ರವಣ ಮನನಾದಿಗಳು ಅನುಷ್ಠಿಸಲ್ಪಡುತ್ತಿದ್ದುದನ್ನು ಸೂಚಿಸುವುದೂ ಈ ಮೇಲಿನ ನಮ್ಮ ಹೇಳಿಕೆಗೆ ಅನುಕೂಲವಾಗಿದೆ. "**ಯೋಬ್ರಹ್ಮಾಣಂ ವಿದಧಾತಿ ಪೂರ್ವಮ್**" (ಶ್ವೇತಾಶ್ವತರ) ಎಂಬ ವಾಕ್ಯದೊಳಗಿನ ಅಭಿಪ್ರಾಯದಂತೆ, ಸೃಷ್ಟಿಯ ಮೊದಲಾರಂಭದಲ್ಲಿ ಬ್ರಹ್ಮದೇವನು ಈಶ್ವರನಿಂದ ಮೊದಲು ವೇದಗಳನ್ನೇ ಪಡೆದನೆಂಬಲ್ಲಿ, ಮುಂದೆ ಬ್ರಹ್ಮದೇವನು ತನ್ನ ನಾಲ್ಕು ಮುಖಗಳಿಂದಲೂ ನಾಲ್ಕು ವೇ

ಗಳನ್ನು ಹೊರಗೆಡವಿದನೆಂಬ ಸಂಗತಿಯೇ ಪ್ರಸಿದ್ಧವಾಗಿರುವುದರಿಂದ, ಆಗಮಗಳಿಗೆ ವೇದಗಳಂತೆ ಆದ್ಯಪ್ರಾಮಾಣ್ಯವು ಸಿದ್ಧಿಸುವುದೇ ? ಎಂದರೆ, ಶ್ವೇತಾಶ್ವತರೋಪನಿಷತ್ತು ವೈದಿಕೀಶ್ರುತಿಯಾದ್ದರಿಂದ ಹಾಗೆ ಶಸ್ತ್ರ (ವೇದದ) ಉತ್ಪತ್ತಿವಿಷಯವಾಗಿ ಮಾತ್ರ ಹೇಳುವುದೇ. ಅದರ ಮುಖ್ಯೋದ್ದೇಶವಿರುತ್ತದಲಾಗಿ, ವೇದಗಳ ಆಗಮಗಳ ಹಿಂಚುಮುಂಚುಗಳನ್ನು ತೋರಿಸತಕ್ಕ ಕಲ್ಪನೆಯನ್ನು ನಾವು ಅದರಲ್ಲಿ ಆರೋಪಿಸುವುದೇಕೆ ? ಸೂಕ್ಷ್ಮವಾಗಿ ವಿಚಾರಿಸಿದರೆ ವೇದಗಳಲ್ಲಿ ಪ್ರವೃತ್ತಿಧರ್ಮಕ್ಕೆ ಸಂಬಂಧಿಸಿದ ವಿಚಾರವೇ ಹೆಚ್ಚಾಗಿರುವಂತೆ ಆಗಮಗಳಲ್ಲಿ ನಿವೃತ್ತಿ ಧರ್ಮವಿಚಾರವೇ ವಿಶೇಷವಾಗಿರುವುದು ; ಮೋಕ್ಷಕ್ಕೆ ನಿವೃತ್ತಿಧರ್ಮವು ಮುಖ್ಯಸಾಧನವಾಗಿಯೂ ಪ್ರವೃತ್ತಿಧರ್ಮವು ಪರಂಪರಾಸಾಧನವಾಗಿಯೂ ಇರುವುದರಿಂದ, ಮುಖ್ಯೋದ್ದೇಶವೇ ಮೊದಲು ಹೇಳಲ್ಪಡುವ ಪದ್ಧತಿಯು ಈಗಲೂ ಸರ್ವತ್ರ ಬಳಕೆಯಲ್ಲಿರುವದೇರೆಗೆ, ಈಶ್ವರನು ಮೊಟ್ಟಮೊದಲು ಅಕ್ಷರ ಅಂತಿಮಧ್ಯೇಯಕ್ಕೆ ಮುಖ್ಯಸಾಧನಗಳಾದ ನಿವೃತ್ತಿಧರ್ಮಬೋಧಕಗಳಾದ ಸಿದ್ಧಾಂತವಾಕ್ಯಗಳನ್ನೇ ಮುಂದುವರಿಸಿದನು ; ಈ ಕಾರ್ಯವನ್ನಾದರೋ ಈಶ್ವರನು ಸೃಷ್ಟಿಯ ಮೂಲಾರಂಭದಲ್ಲಿಯೇ ಮಾಡಿದನೆಂಬ ಸಂಗತಿಯನ್ನು ಹಿಂದೆ ನಾವು ಸಪ್ರಮಾಣವಾಗಿ ಹೇಳಿರುವೆವು. ಇನ್ನು, "**ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ**" ಎಂಬ ಮಂತ್ರದ ನಿಜವಾದ ಆಶಯವನ್ನಾದರೋ ಉಪಬೃಂಹಣ ವಾಕ್ಯಗಳಿಂದೇ ನಿಶ್ಚಯಿಸುವುದು ಯುಕ್ತವಾಗಿದೆ. ವಾಯವೀಯಸಂಹಿತೆಯ ಪೂರ್ವಖಂಡದ ಪ್ರಥಮಾಧ್ಯಾಯದಲ್ಲಿ—

ಲಬ್ಧ್ವಾವಿದ್ಯೇನ ವಿಧಿನಾ ಪ್ರಜಾಸೃಷ್ಟಿವಿತಸ್ತತಾ । ಪ್ರಥಮಂ ಸರ್ವಶಾಸ್ತ್ರಾಣಾಂ ಪುರಾಣಂ ಬ್ರಹ್ಮಣಾ ಸ್ಮೃತಮ್ ||೩೦|| ಅನಂತರಂ ತು ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿರ್ಗತಾಃ । ಪ್ರವೃತ್ತಿಃ ಸರ್ವಶಾಸ್ತ್ರಾಣಾಂ ತನ್ಮುಖಾದಭವತ್ತತಃ ||೩೧||

ಎಂದು ಹೇಳಲ್ಪಡುವ ವಾಕ್ಯಗಳು, ಪರಮೇಶ್ವರನಿಂದುಪದಿಷ್ಟನಾದ ಬ್ರಹ್ಮದೇವನು ಸರ್ವಶಾಸ್ತ್ರಗಳಿಗೂ ಮೊದಲನೆಯದಾದ ಪುರಾಣವನ್ನು ಸ್ಮರಿಸಿ, ಬಳಿಕ ತನ್ನ ಮುಖಗಳಿಂದ ವೇದಗಳನ್ನು ವ್ಯಕ್ತಗೊಳಿಸಿದನು ; ಎಂಬ ತಾತ್ಪರ್ಯವನ್ನು ಸೂಚಿಸುತ್ತವೆ. ಇದೇ ಅಭಿಪ್ರಾಯವು, ಮತ್ಸ್ಯಪುರಾಣದ ೩ ನೆಯ ಅಧ್ಯಾಯದಲ್ಲಿಯೂ ಹೇಳಲ್ಪಟ್ಟಿದೆ. ಪಶ್ವಾದಿಪದಾರ್ಥಗಳ ನಿರ್ದೇಶವೂ, ಶಾಂತ್ಯತೀತಾದಿಕಲಾದ್ವಾರಾ ಸೃಷ್ಟಿವರ್ಣನೆಯೂ, ಷಡಧ್ವಾದಿಗಳ ನಿರೂಪಣೆಯೂ, ಮಲದ ಪಶ್ವಾಪಶ್ವ ಸ್ವರೂಪವಿಚಾರವೂ, ಶಿವದೀಕ್ಷೆ, ಶಿವಭಕ್ತಿ, ಶಿವಪೂಜೆ, ಶಿವವ್ರತ, ಶಿವಧ್ಯಾನ, ಶಿವಜ್ಞಾನ ಎಂಬಿವು ಮುಂತಾದ ವಿಷಯಗಳನ್ನು ವಿಶೇಷವಾಗಿ ಆಗಮವಾಕ್ಯಗಳ ಮೂಲಕವೇ ಶೈಲಿಯಿಂದ ಪ್ರತಿಪಾದಿಸುವುದಾದ ಪುರಾಣವಾಙ್ಮಯವೇ ಬ್ರಹ್ಮನ ಹೃದಯದಲ್ಲಿ ಮೊದಲು ಮೂಡಿತೆನ್ನುವಾಗ, ಅಂತಹ ಪುರಾಣಕ್ಕೆ ಮೂಲವಾದ ಆಗಮವೃಂದವು ವೇದಗಳಂತೆ ಆದ್ಯಪ್ರಮಾಣವೆನಿಸುವುದೋ ಅಥವಾ ಆದ್ಯಪ್ರಾಮಾಣ್ಯವು ಮುಖ್ಯವಾಗಿ ಆಗಮವೃಂದಕ್ಕೇ ಅನ್ವಯಿಸುವುದೋ ಏನೆಂಬ ಬಗ್ಗೆ ವಿಶಾಲಹೃದಯರೇ ವಿಚಾರಿಸಲಿ. (ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂ.

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯರ ಆಗಮನವು.

ಶ್ರೀ ಜಗದ್ಗುರುಗಳವರು ಬುಕ್ಕಾಂಬುಧಿಯ ಭಕ್ತರ ಸೇವೆಯನ್ನು ಕೈಕೊಂಡು ತಾವರೆಕೆರೆಗೆ ಗುರುಭಕ್ತಶಿಖಾಮಣಿಯಾದ ಮ|| ರಾ|| ಸಣ್ಣವೀರಪ್ಪಗೌಡರು ಮುಂತಾದ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ತಾ|| 18-1-1930 ಶನಿವಾರ ಪ್ರಾತಃಕಾಲ ೯ ಘಂಟೆಗೆ ಸರಿಯಾಗಿ ತಮ್ಮ ಚತುರಂಗಬಲಸಮೇತ ಸಕಲ ಬಿರುದಾವಳಿಗಳೊಡನೆ ಆಗಮಿಸಿದರು. ಪುರವು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕೃತಗಳಾದ ಮಂಟಪಗಳಿಂದಲೂ ಅಲಂಕೃತವಾಗಿತ್ತು. ಪುರಸ್ಥರೂ ಮ|| ರಾ|| ಸಣ್ಣವೀರಪ್ಪಗೌಡರು ಮುಂತಾದ ಸಮಸ್ತ ಭಕ್ತಮಂಡಲಿಯೂ [illegible]ದೊಡನೆ ಜಗದ್ಗುರುಗಳನ್ನು [illegible] ಬಿಜಯಂಗೈಸಿಕೊಳ್ಳಲು ಸಿದ್ಧರಾಗಿದ್ದರು. [illegible] ಶಿವಾನಂದಾಶ್ರಮದ ಶ್ರೀ ಪಟ್ಟದಸ್ವಾಮಿಗಳವರೂ ಕುಂದಗೋಳ ಪಂಚಗ್ರಹ ಬೃಹನ್ಮಠದ ಚರಪಟ್ಟದಸ್ವಾಮಿಗಳವರೂ ಬೀರೂರು ಬುಕ್ಕಾಂಬುಧಿ ಮುಂತಾದ ಅನೇಕ ಸ್ಥಳಗಳ ಭಕ್ತಮಾಹೇಶ್ವರರೂ ಗುರುಚರಣಗಳ ಸೇವಾ[illegible] ಕಾಂಕ್ಷೆಯಿಂದ ಮುಂಚಿತವಾಗಿಯೇ ಆಗಮಿಸಿದ್ದರು. ಆ ಕಾಲಕ್ಕೆ ಆಗಮಿಸಿದ ಜನಸಮುದಾಯವು ಸುಮಾರು ಒಂದುಸಾವಿರದವರೆಗಿದ್ದಿತು. ಶ್ರೀ ಭಗವತ್ಪಾದರು ನಿಲ್ದಾಣದಲ್ಲಿ ಸಮಸ್ತರ ಪರಿಚಯವನ್ನು ತೆಗೆದುಕೊಂಡು ಅಲಂಕೃತವಾದ ಆಂದೋಳಿಕವನ್ನೇರಿದ ಕೂಡಲೆ ಸರ್ವರೂ ಜಯಘೋಷವನ್ನು ಮಾಡಿದರು. ವಾದ್ಯಗಳು ಭೋರ್ಗರೆದವು. ಬುಕ್ಕಾಂಬುಧಿಯ ಭಜನಾಸಂಘದವರ ಶಿವಗೀತಾದಿ ಸಂಗೀತದ ಸಾಮಗುಣ್ಯವಾದ ಜಗದ್ಗುರು ಪಂಚಾಚಾರ್ಯಸ್ತವ ಪಠಣಭಜನವೂ ತಮ್ಮ ತಾಳಮೇಳದೊಡನೆ ಪ್ರಾರಂಭವಾಯಿತು. ಈ ಸುಸಮಯದಲ್ಲಿ ಜಗದ್ಗುರುಗಳವರ ಆಂದೋಳಿಕೋತ್ಸವವು [illegible] ಹೊರಡಲು ಪ್ರತಿ ಗೃಹಾಂಗಣದಲ್ಲಿಯೂ ಸುವಾಸಿನಿಯರು ಜಗದ್ಗುರುಗಳವರಿಗೆ ಆರತಿಯನ್ನಿತ್ತು ಫಲಾಶೀರ್ವಾದವನ್ನು ಪಡೆಯುತ್ತಿದ್ದರು. ಮ|| ರಾ|| ಇಲ್ಲಿಯ ಪಟೇಲರ ಗೋವಿಂದರಾಯರ ಸುವ್ಯವಸ್ಥೆಯಿಂದ ಉತ್ಸವವು ಪ್ರತಿ ಬೀದಿಗಳಲ್ಲಿಯೂ ವಿರಾಜಿತವಾಗಿ ನಡೆದು ಶ್ರೀ ಜಗದ್ಗುರುಗಳು ಮ|| ರಾ|| ಸಣ್ಣವೀರಪ್ಪಗೌಡರ ಮನೆಯಲ್ಲಿ ರಚಿಸಲ್ಪಟ್ಟ ಸಿಂಹಾಸನವನ್ನಲಂಕರಿಸಿದ ಕೂಡಲೆ ಸದ್ಭಕ್ತರು ಆಚಾರ್ಯರ ಜಯಘೋಷದೊಡನೆ ಆರಾಧನವನ್ನು ಮಾಡಿದರು. ಗುರುಯಾತ್ರಿಕರ ಸಮುದಾಯವು ಸ್ವಸ್ವೋಚಿತಸ್ಥಾನಗಳಲ್ಲಿ ಮಂಡಿಸಿರಲು ಶ್ರೀ ಮಹಾಸಂಸ್ಥಾನದ ಧರ್ಮೋಪದೇಶಕ ಪೌರಾಣಿಕಶ್ರೀ[illegible] ಸುಣಕಲ್ಲು ಬಿದರೆ ಆರಾಧ್ಯಮಠದ ಬಸವಲಿಂಗಶಾಸ್ತ್ರಿಗಳು ಶ್ರೀಗಳವರ ಅಪ್ಪಣೆಯನ್ನು ಪಡೆದು ಪ್ರಸಂಗೋಚಿತ ಭಾಷಣದಿಂದ ಸಭಿಕರನ್ನಾನಂದಗೊಳಿಸಿ ಅನುಷ್ಠಾನಕ್ಕೆ ವೇಳೆಯಾದ್ದರಿಂದ ಸಭಾ ವಿಸರ್ಜನಕ್ಕೆ ಅಪ್ಪಣೆಯನ್ನು ಸೂಚಿಸಿದರು. ಮ|| ರಾ|| ಸಣ್ಣವೀರಪ್ಪಗೌಡರು ಗುರುಯಾತ್ರಿಕ ಸಮುದಾಯವೆಲ್ಲವನ್ನು ಆತ್ಮಾದರದಿಂದ ಭಕ್ಷ್ಯಭೋಜ್ಯಗಳಿಂದ ತೃಪ್ತಿಪಡಿಸಿ ವೀರಶೈವ ಜಗತ್ತಿನ ಧನ್ಯವಾದಕ್ಕೆ ಪಾತ್ರರಾದರು. ಇದೇ ಗುರುಭಕ್ತಿವಂತರ ಕರ್ತವ್ಯವು. ಸದರಿ ಗೌಡರು ಮಹೋದಾರಚಿತ್ತರೂ ಗುರುಭಕ್ತಿತತ್ಪರರೂ ಕರ್ತವ್ಯದಕ್ಷರೂ ಇರುವರು. ಈ ಮಹಾಶಯರು ಸುತ್ತಮುತ್ತಣ ಗ್ರಾಮದವರಿಗೆ ಸಹಜ ಪ್ರೇಮದಿಂದ ಗುರೂಪಾಸನಾಸಂಗವನ್ನು ಹಚ್ಚಿ ಸೇವಾ[illegible]ಗಳನ್ನು ಹಿಸಿ ಮಹಾಚಾರ್ಯರ ಅನುಗ್ರಹವನ್ನು ಪಡೆಯುವಂತೆ ಮಾಡುತ್ತಿರುವರು ಇವರ ಸಹಜಗುಣಕ್ಕೆ ಭೂಷಣವೇ ಸರಿ. ಶ್ರೀ ಜಗದ್ಗುರು ಸನ್ನಿಧಾನದಲ್ಲಿ ಪ್ರತಿದಿವಸವೂ ಪುರಾಣವು ಜರಗುತ್ತಿರುವದರಿಂದ ಸುತ್ತುಮುತ್ತಣ ಗ್ರಾಮದವರು ಬಂದು ಪುರಾಣಶ್ರವಣ ಶ್ರೀ ಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಹೊಂದಿ ಧನ್ಯರಾಗುತ್ತಿರುವರು. ಮ|| ರಾ|| ಸಣ್ಣವೀರಪ್ಪಗೌಡರು ಮುಕ್ಕಾಂ ಇರುವವರೆಗೂ ಮಹಾಸಂಸ್ಥಾನ ಪರಿವಾರದ ಆತಿಥ್ಯವನ್ನು ತಮ್ಮ ಧನವ್ಯಯದಿಂದಲೇ ಮಾಡುತ್ತ ತಮ್ಮ ಔದಾರ್ಯಗುಣವನ್ನು ಪೂರ್ಣವಾಗಿ ವ್ಯಕ್ತಗೊಳಿಸಿ ಕೀರ್ತಿವಂತರಾದರು. ಈ ಸಜ್ಜನಶಿರೋಮಣಿಗಳ ಸಪರ್ಯಾನಂದದಲ್ಲಿದ್ದ ಶ್ರೀ ಜಗದ್ಗುರುಗಳವರು ಬುಕ್ಕಾಂಬುಧಿ ಮಾರ್ಗವಾಗಿ ಶಿವನಿಗೆ ದಯಮಾಡಿಸತಕ್ಕವರಾಗಿದ್ದಾರೆ. ನೆಲ್ಲಹಂಕಲ ಕುರುಬರಹಳ್ಳಿ ಮುಂತಾದ ಗ್ರಾಮದ ಭಕ್ತರು ಅತ್ಯುತ್ಸುಕತೆಯಿಂದ ಶ್ರೀ ಜಗದ್ಗುರುಗಳವರನ್ನು ಉತ್ಸವದಿಂದ ತಮ್ಮಲ್ಲಿಗೆ ಚಿತ್ತೈಸಿಕೊಂಡು ಹೋಗಿ ತಮ್ಮ ಸೇವೆಯನ್ನು ಸಮರ್ಪಿಸಿ ಜನ್ಮಸಾಫಲ್ಯವನ್ನು ಪಡೆದರು. ಇದರಂತೆ ವೀರಶೈವ ಜಗತ್ತು ಎಲ್ಲಕ್ಕು ಗುರುಪೂಜಾಫಲವನ್ನು ಪಡೆಯಲೆಂತಲೂ ಈ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಾದಿ ಭಾಗ್ಯಗಳನ್ನೀಯಲೆಂತಲೂ ಬೇಡುತ್ತೇನೆ.

ಓರ್ವ ಉತ್ಸವಭಾಗಿ

ಶ್ರೀ ರಂಭಾಪುರೀ ಜಗದ್ಗುರುಗಳವರ ಆಗಮನ.
ಬುಕ್ಕಾಂಬುಧಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯರವರು ಪೀಠಾರೋಹಣ ಮಾಡಿದ ಲಾಗಾಯ್ತು ತರೀಕೆರೆ ತಾ|| ಬುಕ್ಕಾಂಬುಧಿ ಗ್ರಾಮದ ವೀರಶೈವ ಸಮಾಜದವರು ಜಗದ್ಗುರುಗಳವರ ಸವಾರಿಯನ್ನು ತಮ್ಮಲ್ಲಿಗೆ ದಯಮಾಡಿಸಿಕೊಂಡು ಬಂದು ಸೇವಾ ಮಾಡಿಕೊಳ್ಳಬೇಕೆಂಬ ಪೂರ್ಣಾಭಿಲಾಷೆಯು ಪೂರ್ಣವಾಗಿತ್ತು. ಅದರಂತೆ ಈ ಗ್ರಾಮದವರು ಇದೇ ಶುಕ್ಲ ಸಂವತ್ಸರದ ಮಾರ್ಗಶಿರ ಬಹುಳ ಸೋಮವಾರ (ತಾ|| 23-12-29) ನೆಯ ದಿವಸ ಈ ಗ್ರಾಮವನ್ನು ಅತ್ಯಂತ ಮನೋಹರವಾದ ಚಪ್ಪರ ತಳಿರು ತೋರಣ ನಾನಾ ಶಾಖೆಗಳಿಂದ ಶೃಂಗರಿಸಿ ಶ್ರೀ ಜಗದ್ಗುರುಗಳವರ ಸವಾರಿಯನ್ನು ಚತುರಂಗಬಲಸಮೇತವಾಗಿ ನಾನಾವಿಧವಾದ ವಾದ್ಯವೈಭವದಿಂದ ಉತ್ಸವಪೂರ್ವಕವಾಗಿ ಬಿಜಮಾಡಿಸಿಕೊಂಡು ಬಂದರು. ಮಾರ್ಗಶಿರ ಬ|| 10 ತಾ|| 25-12-29 ನೆಯ ಬುಧವಾರ ಸೂರ್ಯೋದಯಾದಿ ಘಟಿಕಾ ೮ಕ್ಕೆ ಸಲ್ಲುವ ಮಕರ ಲಗ್ನದಲ್ಲಿ ಇದೇ ಗ್ರಾಮದ ವಿರುಪಾಕ್ಷೇಶ್ವರಸ್ವಾಮಿಯ ದೇವಾಲಯದಲ್ಲಿ ಮಹಾಸನ್ನಿಧಿಯಲ್ಲಿ ಪಂಚಕಲಶ ಸ್ಥಾಪನಾಪೂರ್ವಕವಾಗಿ ಮಾಹೇಶ್ವರ ವಟುಗಳಿಗೂ ಭಕ್ತರಿಗೂ ದೀಕ್ಷಾ ಸಂಸ್ಕಾರವು ನೆರವೇರಿಸಿ ಅನ್ನ ಸಂತರ್ಪಣೆಯು ನಡಿಸಲ್ಪಟ್ಟಿತು. ಅನಂತರ ಸದರಿ ದೇವಸ್ಥಾನದಲ್ಲಿ ಆಸ್ಥಾನದ ಶಾಸ್ತ್ರಿಗಳವರು ಪುರಾಣಶ್ರವಣವನ್ನೂ ಹಾಗೂ ಮಹಾಸನ್ನಿಧಿಯವರು ಅಪ್ಪಣೆಕೊಡಿಸುವ ಸದ್ಬೋಧಾಮೃತವನ್ನೂ ಪಾನಮಾಡುತ್ತ ಭಕ್ತಿಪೂರ್ವಕವಾಗಿ ಅವರವರ ಶಕ್ತ್ಯನುಸಾರ ಮಹಾಪಾದಪೂಜೆಯನ್ನು ನಡೆಯಿಸಿ ಕಾಣಿಕೆಗಳನ್ನು ಅರ್ಪಿಸಿ ಆಶೀರ್ವಾದವನ್ನು ಪಡೆಯುತ್ತ ಬಂದದ್ದನ್ನು ನೋಡಿ ಮಹಾಪಾದಕ್ಕೆ ಚಿತ್ತೋಲ್ಲಾಸವುಂಟಾಗಿ ಈ ಗ್ರಾಮದ ಭಕ್ತರು ಕೇವಲ ಚಿಕ್ಕವಯಸ್ಸಿನವರಾಗಿದ್ದಾಗ್ಯೂ ಅತ್ಯಂತ ಭಕ್ತಿಯಿಂದ ಸವಾರಿಯು ದಯಮಾಡಿಸಿದಂದಿನಿಂದ ಸ್ವಕಾರ್ಯಗಳನ್ನೆಲ್ಲ ತೊರೆದು ವಿಶ್ವಾಸಪೂರ್ವಕವಾಗಿ ಮಾಡಿದ ಸೇವೆಗೂ ಮತ್ತು ಇವರು ಸ್ಥಾಪಿಸಿರುವ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಭಜನಾಸಂಘದ ಪಠನಶೈಲಿಗೂ, ಈ ಗ್ರಾಮದಲ್ಲಿ ಯಾವಾಗಲೂ ಸಾರೋದ್ಧಾರವಾಗಿ ಗ್ರಾಮದೇವರ ಪೂಜಾದೀಪಾರಾಧನಾದಿಗಳು ಕಾಲಕಾಲಕ್ಕೆ ಸರಿಯಾಗಿ ನಡೆಯಬೇಕಾದ ಉತ್ಸವಾದಿಗಳಿಗೆ ಯಾವ ನ್ಯೂನತೆಯು ಬಾರದಂತೆ ನಡೆಯಲು ಒಂದು ಚಿರಸ್ಥಾಯಿ ಫಂಡು ಮತ್ತು ಗ್ರಾಮಕ್ಕೆ ದಯಮಾಡಿಸುವ ಗುರುಗಳು ವಿದ್ಯಾರ್ಥಿ ವಗೈರೆ ಧರ್ಮಕಾರ್ಯಗಳು ನಡೆಯಲು ಒಂದು ಮುಷ್ಟೀಫಂಡು ಈ ರೀತಿಯಾಗಿ ಮಾಡಿಕೊಂಡು ನಡೆಯಿಸುತ್ತಿರುವ ಇವರ ಸದುದ್ದೇಶಕ್ಕೆ ಆನಂದಭರಿತರಾಗಿ ಚಿರಸ್ಥಾಯಿಫಂಡಿಗೆ ಸಂತೋಷಪೂರ್ವಕವಾಗಿ 25 ರೂಪಾಯಿಗಳನ್ನು ಭಜನಾಸಂಘಕ್ಕೆ ಒಂದು ಗಡಿಯಾರವನ್ನು ಆಶೀರ್ವದಿಸಿದರು. ಗುರುಕಟಾಕ್ಷಕ್ಕೆ ಪಾತ್ರರಾದ ಬುಕ್ಕಾಂಬುಧಿ ಗ್ರಾಮಸ್ಥರೇ ನೀವೇ ಧನ್ಯರು ! ನೀವೇ ನಿಜವಾದ ಗುರುಭಕ್ತಿ ಧುರೀಣರು ! ಇದು ಯಾವಾಗಲೂ ನಿಮ್ಮಗಳಲ್ಲಿ ಸ್ಥಿರವಾಗಿರಲಿ ; ಈ ಕಾರ್ಯದಲ್ಲಿ ಹಗಲೂ ರಾತ್ರಿಯೂ ಅತ್ಯಂತ ಶ್ರಮವಹಿಸಿ ಕೆಲಸ ಮಾಡಿದ ಹೆಚ್. ಎಂ. ಪರಪ್ಪ ಇವರ ಕಮಿಟಿಯವರಿಗೆ ಶ್ರೀ ಪಂಚಾಚಾರ್ಯರು ಅಭಿವೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಪ್ರೇಕ್ಷಕ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಆತ್ಮಾನಂದವಾರ್ತೆ.

ಸದ್ಗುಣಗಳಿಂದ ವಿಭೂಷಿತನಾದವನು ಪದವಿಗಳಿಗೆ ಅರ್ಹನಲ್ಲದೆ ಅನ್ಯನು ಅರ್ಹನಲ್ಲವು. ಪದವಿಗಳನ್ನು ರಾಜರು ಮತ್ತು ಗುರುಗಳು ಅನುಗ್ರಹಿಸುವರೆಂಬುದು ಲೋಕವಾಡಿಕೆಯಾಗಿದೆ. ಧಾರವಾಡ ಜಿಲ್ಲಾ ರೋಣ ತಾಲೂಕ ಸೂಡಿಗ್ರಾಮದ ಶ್ರೀ|| ರಾ|| ಶ್ರೀಮಂತ ಮ|| ರಾ|| ಅಡಿವಪ್ಪನವರುಶೆಟ್ರು ಇವರಿಗೆ ಬ್ರಿಟಿಷ್ ಸಾರ್ವಭೌಮ ಸರಕಾರದವರು (ರಾಜರು) "ರಾವ್ ಸಾಹೇಬ" ಬಿರುದನ್ನು ಅನುಗ್ರಹಿಸಿದ್ದರೆಂದೂ, ಈ ಯಜಮಾನರಲ್ಲಿ ರಾಜನಿಷ್ಠೆ, ದೇವನಿಷ್ಠೆ, ಗುರುನಿಷ್ಠೆಗಳು ತುಂಬಿದ್ದವೆಂದೂ, ಇವರು ಕೇವಲ ಜನಾನುರಾಗಿಗಳಾಗಿದ್ದರೆಂದೂ ಕೇಳುತ್ತ ಬಂದಿದ್ದೆವು. ಆದರೆ ಇವರ ವಂಶಜರಾದ ಶ್ರೀಮಂತ ಮ|| ರಾ|| ಮಡಿವಾಳಪ್ಪನವರು ಶೆಟ್ರು ಇವರಾದರೂ ಸಮಾಜಪ್ರೇಮಿಗಳೂ ಉದಾರ ಬುದ್ಧಿಯವರೂ ಆಗಿದ್ದಾರೆ. ಧಾರವಾಡ ಜಿಲ್ಲಾ ಗದಗ ಶಹರ ನಿವಾಸಿಗಳಾದ ಇವರು ದೊಡ್ಡ ಅರಳೀ ವ್ಯಾಪಾರಿಗಳೂ ಪ್ರಮುಖರೂ ಆಗಿರುವ ವಿಷಯವು ಸರ್ವರಿಗೂ ವೇದ್ಯವೇ ಅದೆ. ಈ ಮಹಾಶಯರಿಗೆ ಬ್ರಿಟಿಷ್ ಸಾರ್ವಭೌಮ ಸರ್ಕಾರದವರು "ರಾವ್‌ಸಾಹೇಬ" ಪದವಿಯನ್ನು ದಯಪಾಲಿಸುವರೆಂಬ ಸಮಾಚಾರವನ್ನು ಕೇಳಿ ಆತ್ಮಾನಂದವಾಗುತ್ತದೆ. ಇಂಥ ಪ್ರಮುಖ ಮಹಾಶಯರ ಉತ್ತರೋತ್ತರ ಅಭಿವೃದ್ಧಿಗೋಸ್ಕರ ಪರಮಾತ್ಮನ ಧ್ಯಾನ ಮಾಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾದ್ದರಿಂದ ಈ ಮಹೋದಯರಿಗೆ ಭಗವತ್ಪಾದ ಶ್ರೀ ೧೦೦೮ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇನೆ.

ವೇ|| ಶಿವಯ್ಯ ಹಿರೇಮಠ ಬನ್ನಿಕೊಪ್ಪ ಮುಂದರಗಿ
[illegible],
ಜಿ. ಕೊಪ್ಪಳ.

ಕಡೂರು ತಾಲ್ಲೂಕು ಪ್ರಜಾಪ್ರತಿನಿಧಿ ಸಭೆ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಓಟರುಗಳಲ್ಲಿ ವಿಜ್ಞಾಪನೆ.

ಮಹಾಶಯರೆ,

ಮುಂದಿನ ಮಾರ್ಚಿ ಮಾಹೆ ತಾರೀಖು 8 ನೆಯ ಶನಿವಾರ ಮತ್ತು ಏಪ್ರಿಲ್ ಮಾಹೆ 5 ನೆಯ ಶನಿವಾರ ಪ್ರಜಾಪ್ರತಿನಿಧಿ ಸಭೆ (ರೆಪ್ರಿಸೆಂಟೇಟಿವ್ ಅಸೆಂಬ್ಲಿ) ಮತ್ತು ಕಡೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ ಚುನಾವಣೆಯು ನಡೆಯುವುದು ಸರಿಯಷ್ಟೆ ! ಸದರಿ ಸಭೆಗಳ ಮೆಂಬರುಗಳ ಚುನಾವಣೆಯಲ್ಲಿ ನಾನು ಒಬ್ಬ ಉಮೇದುವಾರನಾಗಿ ನಿಲ್ಲಬೇಕಾಗಿ ಅನೇಕ ಜನ ನನ್ನ ಸ್ನೇಹಿತರುಗಳು ಪ್ರೋತ್ಸಾಹಿಸಿದ್ದರಿಂದ, ನಾನು ಮೇಲ್ಕಂಡ ಪ್ರಜಾಪ್ರತಿನಿಧಿಸಭೆ ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೂ ಸಹಾ ಮೆಂಬರಾಗಿ ಹೋಗಲು ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ನಾನು ಈ ಹಿಂದೆ ಅನೇಕ ವರ್ಷಗಳಿಂದಲೂ ಬೀರೂರು ಟವನ್ ಮುನಿಸಿಪಲ್ ಕೌನ್ಸಿಲರಾಗಿಯೂ ಈಗ ಹಾಲಿ ಬೀರೂರು ಟವನ್ ವೈಸ್‌ಪ್ರೆಸಿಡೆಂಟರಾಗಿಯೂ ಮತ್ತು ಕೋ-ಆಪರೇಟಿವ್ ಸೊಸೈಟಿ ಪ್ರೆಸಿಡೆಂಟರಾಗಿಯೂ ಪ್ರಜಾಸೇವೆಮಾಡುತ್ತ ಇರುವುದು ತಮ್ಮಗಳೆಲ್ಲರಿಗೂ ತಿಳಿದ ವಿಷಯವೇ ಆಗಿರುತ್ತದೆ. ಈಗಲೂ ಮೇಲ್ಕಂಡ ಸಭೆಗಳಿಗೆ ಮೆಂಬರಾಗಿ ಹೋಗಿ ತನೂ ಅಧಿಕವಾಗಿ ಪ್ರಜಾಸೇವೆ ಮತ್ತು ದೇಶಸೇವೆ ಮಾಡಬೇಕೆಂಬ ಕಾಂಕ್ಷೆಯಿಂದ ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ಆದ್ದರಿಂದ ತಾವುಗಳೆಲ್ಲರೂ ಆ ದಿವಸ ತಪ್ಪದೆ ಈ ತಾಲೂಕು ಸೆಂಟರು ಸ್ಥಳಗಳಾದ ಕಡೂರು, ಚಿಕ್ಕರಾಯಪಟ್ಟಣ, ಯಗಟಿ ಸೆಂಟರುಸ್ಥಳಗಳಿಗೆ ದಯಮಾಡಿಸಿ ತಮ್ಮಗಳ ಅಮೋಘವಾದ ಓಟನ್ನು ನನ್ನ ಹೆಸರಿಗೆ ಕೊಡುವುದರ ಮೂಲಕ ದೇಶಸೇವೆ ಮತ್ತು ಪ್ರಜಾಸೇವೆಮಾಡಲು ನನ್ನನ್ನು ಭಾಗಿಯಾಗಿಮಾಡಬೇಕಾಗಿ ಕೋರುತ್ತೇನೆ.

ತಮ್ಮ ವಿಧೇಯ
ದೊಡ್ಡಮನೆ ಹಾಲಪ್ಪ
ಬೀರೂರು ಟವನ್ ವೈಸ್‌ಪ್ರೆಸಿಡೆಂಟ್
ಮತ್ತು ಸಾಹುಕಾರ್.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜನವರಿ ತಾ॥ ೨೭ ನೇ ಸೋಮವಾರ

ಶಿವಲಿಂಗಲಕ್ಷಣ.

ವೀರಶೈವಮತವು ಶ್ರುತ್ಯಾಗಮಗಳಿಗೆ ಸಮ್ಮತವಾದುದರಿಂದ ಶ್ರೌತಮತವೆನಿಸುವದು. ಈ ಮತಕ್ಕೆ ಲಿಂಗಧಾರಣವೇ ಮುಖ್ಯ ಚಿಹ್ನವಾಗಿರುತ್ತದೆ. ಮಿಕ್ಕ ಭಸ್ಮ ರುದ್ರಾಕ್ಷ್ಯಾದಿ ಧಾರಣಗಳು ಸಾಮಾನ್ಯಚಿಹ್ನಗಳಾಗಿರುತ್ತವೆ. ಈ ಲಿಂಗಧಾರಣವು ಅಂತರ್ಧಾರಣ, ಬಹಿರ್ಧಾರಣವೆಂದು ಎರಡುಪ್ರಕಾರವಾಗಿರುವದು. ಹೃದಯಾಕಾಶದಲ್ಲಿ ಅಮೂರ್ತವಾದ ಆ ಪರಂಜ್ಯೋತಿಯನ್ನು ಶಿವಯೋಗಬಲದಿಂದ ಅವಿಚ್ಛಿನ್ನವಾಗಿ ಸ್ಮರಿಸುತ್ತಿರುವದೇ ಅಂತರ್ಧಾರಣವೆನಿಸುತ್ತದೆ. "ಉತ್ತಮಾಂಗೇ ಗಲೇ ಬಾಹೌ ಹೃದಿ ವಕ್ಷಸ್ಥಲೇಪಿವಾ | ಮತ್ಪ್ರಾಣಲಿಂಗಂಯೋಧತ್ತೇಸ್ಥಿತಸ್ತತ್ಸನ್ನಿಧಾವಹಂ" ಎಂದು ವಾತುಲಾಗಮದಲ್ಲಿ ಹೇಳಿರುವಂತೆ ಶಿರಸ್ಸಿನಲ್ಲಿಯಾಗಲಿ, ಕಂಠಪ್ರದೇಶದಲ್ಲಿಯಾಗಲಿ, ಬಾಹುಮೂಲದಲ್ಲಾಗಲಿ, ಹೃದಯಸ್ಥಾನದಲ್ಲಾಗಲಿ ಶ್ರೀ ಗುರುವಿನಿಂದ ಕೊಡಲ್ಪಟ್ಟ ಲಿಂಗವನ್ನು ಧರಿಸುತ್ತಲಿರುವದೇ ಬಹಿರ್ಧಾರಣವೆನಿಸುತ್ತದೆ. ಈ ಸ್ಥೂಲಾಂಗದಲ್ಲಿ ಧರಿಸಲ್ಪಟ್ಟ ಲಿಂಗವೇ ಇಷ್ಟಲಿಂಗವೆಂದು ಸಿದ್ಧಾಂತಿಸಲ್ಪಟ್ಟಿರುವದು. ಈ ಇಷ್ಟಲಿಂಗವು ಸ್ಫಟಿಕಶಿಲೆಯಿಂದಾಗಲಿ, ಚಂದ್ರಕಾಂತಶಿಲೆಯಿಂದಾಗಲಿ ಸೂರ್ಯಕಾಂತಶಿಲೆಯಿಂದಾಗಲಿ, ಶ್ರೀಶೈಲದ ಶಿಲೆಯಿಂದಾಗಲಿ ಮಾಡಲ್ಪಟ್ಟಿರಬೇಕೆಂದು ಶಿವಾಗಮಗಳು ಅಲ್ಲಲ್ಲಿಯೇ ಲಿಂಗದ ಲಕ್ಷಣವನ್ನು ಹೇಳಿ ಅದರಲ್ಲೂ "ಶ್ರೀಶೈಲಜಂ ಮಹಾದೇವಿ ಐಹಿಕಾಮುಷ್ಮಿಕಪ್ರದಂ | ಸರ್ವೋತ್ತಮೋತ್ತಮಂ ಲಿಂಗಂ ಸರ್ವಾಭೀಷ್ಟಫಲಪ್ರದಂ ‖ ಯದ್ದತ್ತಂ ಗುರುಣಾ ದೇವಿ ಲಿಂಗಂ ತದಪಮೇವಹಿ" ಎಂದು ಹೇಳಿರುವುದರಿಂದ ಶ್ರೀಶೈಲಪರ್ವತದಲ್ಲಿ ವಿಧ್ಯುಕ್ತಪ್ರಕಾರವಾಗಿ ತೆಗೆದ ಶಿಲೆಯಿಂದ ಮಾಡಿದ ಶಿವಲಿಂಗವನ್ನು ಧರಿಸುವದೇ ಉತ್ತಮವಾದುದು. ಮತ್ತು ಇಹಲೋಕದಲ್ಲೂ ಪರಲೋಕದಲ್ಲೂ ಸೌಖ್ಯವನ್ನುಂಟುಮಾಡುವದು. ಯಾವನು ಶ್ರೀಶೈಲದ ಲಿಂಗವನ್ನು ಗುರುವಿನಿಂದ ಪಡೆಯುತ್ತಾನೆಯೋ ಆ ಲಿಂಗಸ್ವರೂಪನು ನಾನು ಆಗಿರುತ್ತೇನೆಂದು ಈಶ್ವರನು ಪಾರ್ವತಿಗೆ ಉಪದೇಶ ಮಾಡಿರುವ ವಾಕ್ಯವನ್ನು ಪರಿಶೀಲಿಸಿದರೆ ಲಿಂಗಗಳಲ್ಲಿಯೂ ಶ್ರೀಶೈಲಜಲಿಂಗಧಾರಣವೇ ಪ್ರಶಸ್ತವೆಂದು ಕಂಡುಬರುತ್ತದೆ. ಮತ್ತು ಇಂಥ ಶಿವಲಿಂಗವು ಶ್ರೀಶೈಲಜ ಶಿಲೆಯಿಂದ ಮಾಡಲ್ಪಟ್ಟರೂ ಆಗಮಗಳಲ್ಲಿ ಹೇಳಿದ ಆಯಾ ಲಿಂಗಲಕ್ಷಣಗಳಿಲ್ಲದೆ ಹೋದರೆ ಆ ಲಿಂಗವನ್ನು ಧರಿಸುವುದರಿಂದ ಯಾವ ಪ್ರಯೋಜನವೂ ಆಗಲಾರದು. ಅದಕ್ಕೋಸ್ಕರವಾಗಿ "ಲಿಂಗವೃತ್ತಸಮಂ ಪೀಠಂದೈರ್ಘ್ಯಂವಿಸ್ತಾರಮೇವಚ | ತದರ್ಧಂಗೋಮುಖಂಚೈವಪ್ರೋಕ್ತಂ ಲಿಂಗಸ್ಯಲಕ್ಷಣಂ" ಎಂದು ಶಿವಾಗಮಗಳಲ್ಲಿ ಲಿಂಗಲಕ್ಷಣವು ಹೇಳಲ್ಪಟ್ಟಿರುತ್ತದೆ. ಅಂದರೆ ಬಾಣದ ಸುತ್ತಳತೆಯು ಎಷ್ಟಿರುತ್ತದೆಯೋ ಪೀಠದಳತೆಯು ಉದ್ದವೂ ಅಗಲವೂ ಅಷ್ಟೇ ಇರಬೇಕು. ಗೋಮುಖದ ಅಳತೆಯು ಅದರ ಅರ್ಧದಷ್ಟಿರತಕ್ಕದ್ದು. ಹೀಗೆ ವೃತ್ತ, ಪೀಠ, ದೈರ್ಘ್ಯ, ವಿಸ್ತಾರ, ಗೋಮುಖ, ಎಂಬ ಐದು ಲಕ್ಷಣಗಳುಳ್ಳದೇ ಲಿಂಗಲಕ್ಷಣವು. ಈ ಐದು ಲಕ್ಷಣಗಳಲ್ಲಿ ಒಂದು ಲಕ್ಷಣವಿಲ್ಲದೆ ಹೋದರೆ ಅನೇಕ ದೋಷಗಳು ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವವು. ಲಿಂಗಾಧಿಕ್ಯೇ ಭವೇನ್ಮೃತ್ಯುಃ ಪೀಠಾಧಿಕ್ಯೇ ಧನಕ್ಷಯಃ | ಲಿಂಗಪೀಠೇ ಸಮತ್ವಂಹಿ ಭೋಗಮೋಕ್ಷಫಲಪ್ರದಂ ‖ ಪೀಠದ ಮೇಲಿರುವ ಬಾಣವು ಅಳತೆಯನ್ನು ಮೀರಿದರೆ ಮೃತ್ಯುವು ಸಂಭವಿಸುವುದು. ಶಕ್ತಿರೂಪವಾದ ಪೀಠವು ಅಳತೆಯನ್ನು ಮೀರಿದರೆ ಧನವು ನಾಶವಾಗುವುದು. ಹೀಗೆ ಲಿಂಗಲಕ್ಷಣವನ್ನು ಮೀರಿ ಲಿಂಗವನ್ನು ಮಾಡುವವರಿಗೂ ಅಂಥ ಲಿಂಗವನ್ನು ಧರಿಸುವವರಿಗೂ ಅನೇಕ ದೋಷಗಳುಂಟಾಗುವುವಲ್ಲದೆ ಉತ್ತರೋತ್ತರ ಆ ಲಿಂಗದಿಂದುಂಟಾಗುವ ಮೋಕ್ಷರೂಪ ಮಹಾಪ್ರಯೋಜನವೂ ಆಗಲಾರದು. ಇತ್ತೀಚಿಗೆ ಅನೇಕ ಕಡೆಗಳಲ್ಲಿ ಇಂಥ ಪರಮಪವಿತ್ರವಾದ ಶಿವಲಿಂಗವನ್ನು ಮಾಡುವ ವಿಧಾನವನ್ನು ತಿಳಿಯದೆ ಕಂಡ ಕಂಡ ಶಿಲೆಗಳಿಂದ ಮನಸ್ಸಿಗೆಯಾಗಿ ಲಿಂಗವನ್ನು ಮಾಡಲೆತ್ನಿಸಿರುವದರಿಂದಲೂ ಕೆಲವು ಮೂಢಜನಗಳು ಅಗ್ಗವಾಗಿ ಸಿಗುವವೆಂದು ಅಂಥ ಲಿಂಗಗಳನ್ನೇ ಕೊಂಡುಕೊಳ್ಳಲು ಪ್ರಯತ್ನಿಸಿರುವುದರಿಂದಲೂ ನಾಮಮಾತ್ರದಿಂದ ಲಿಂಗಾಂಗಿಗಳಾಗಿರುತ್ತಾರೆ.

ಲೋಕದಲ್ಲಿ ರಾಜಪಟ್ಟವನ್ನು ಹೊಂದಿ ಸಕಲ ಪ್ರಜೆಗಳಿಂದ ಸನ್ಮಾನಿತವಾದ ದೊರೆತನವನ್ನು ಅನುಭವಿಸಬೇಕಾದರೆ ಪುರುಷನಾಗಲಿ, ರಾಜನ ಬಳಿಯಲ್ಲಿ ಪಟ್ಟದಾನೆಯೆನಿಸಬೇಕಾದ ಗಜವಾಗಲಿ, ಪಟ್ಟದಶ್ವವೆನಿಸಬೇಕಾದ ಅಶ್ವವಾಗಲಿ, ಗೋವಾಗಲಿ ಇವುಗಳ ಮುಖನಾಸಿಕಾದ್ಯಂಗಗಳೆಲ್ಲವೂ ವೈಕಲ್ಯವಿಲ್ಲದೆ ಆಯಾಯ ಶಾಸ್ತ್ರಗಳಲ್ಲಿ ಹೇಳಿದಂತೆ ಸರ್ವಾಂಗಪರಿಪೂರ್ಣವಾಗಿರಬೇಕು. ಅಂಥ ಅಂಗವೈಕಲ್ಯವುಳ್ಳ ಮಾನವರಾಗಲಿ, ಪಶುಗಳಾಗಲಿ, ಪಟ್ಟಗಟ್ಟುವುದಕ್ಕೆ ಯೋಗ್ಯಗಳಾಗುವದಿಲ್ಲವು. ಹೀಗೆ ಲೋಕದಲ್ಲಿಯೇ ಇಷ್ಟು ನಿಯಮಗಳಿರುವಾಗ ಇನ್ನು ವೀರಶೈವಮತಕ್ಕೆ ಮೂಲಾಧಾರವೂ, ವೇದಾಗಮಸ್ರುತಿವಾದ್ಯವೂ ಆದ ಶಿವಲಿಂಗವು ಯಾವ ಲಕ್ಷಣವುಳ್ಳದ್ದಾಗಿರಬೇಕೋ ಅಂಥ ಲಕ್ಷಣಗಳಿಲ್ಲದಿದ್ದರೆ ಆ ಲಿಂಗವು ಪ್ರೇತಲಿಂಗವೆನಿಸಿಕೊಳ್ಳುತ್ತದೆ. ಪ್ರೇತವನ್ನು ಎಷ್ಟು ಶೃಂಗರಿಸಿದರೂ ಎಷ್ಟು ಆರಾಧಿಸಿದರೂ ವ್ಯರ್ಥವಷ್ಟೆ! ಲಕ್ಷಣಹೀನವಾದ ಲಿಂಗದ ಸ್ಥಿತಿಯಾದರೂ ಅದರಂತೆಯೇ ಎಂದು ತಿಳಿಯಬೇಕು. ಈ ದುಸ್ಥಿತಿಗಳನ್ನು ಅಲ್ಲಲ್ಲಿಯೇ ಕೆಲವರು ಕಣ್ಣಿನಿಂದ ನೋಡಿ, ದುಡ್ಡಿಗೊಂದು ಲಿಂಗ, ಮುದ್ದಿಗೊಬ್ಬ ಜಂಗಮ ಎಂದು ಆಡಿಕೊಳ್ಳಲು ಅವಕಾಶವುಂಟಾಗಿದೆ. ಇಂತಹ ಪರಮಪವಿತ್ರವಾದ ವೀರಶೈವಮತದಲ್ಲಿ ತಾವು ಹುಟ್ಟಿದ್ದರೂ ಅರಿವಿಲ್ಲದೆ ಸರಿಯಾಗಿ ತಯಾರಾಗುವ ಸ್ಥಳಗಳಿಂದ ಲಕ್ಷಣಯುತವಾದ ಲಿಂಗಗಳನ್ನು ತರಿಸಿಕೊಳ್ಳದೆ, ಅಂಗಡಿಮುಂಗಟ್ಟುಗಳಲ್ಲಿ ಮಾರಾಟಕ್ಕೆ ಇಟ್ಟವುಗಳನ್ನು ತರಿಸಿ ಬಾಲ್ಯಾವಸ್ಥೆಯಲ್ಲಿ ಏನೊಂದೂ ತಿಳಿಯದಿರುವ ಸುಕುಮಾರ ಹೃದಯದ ಬಾಲಕರನ್ನು ಕರೆದುಕೊಂಡು ಬಂದು, ನಾವು ಧರ್ಮಾರ್ಥವಾಗಿ ನೂರುದೀಕ್ಷೆಗಳನ್ನು ಮಾಡಿಸಿದೆವು, ನಾವು ಇನ್ನೂರು ದೀಕ್ಷೆಗಳನ್ನು ಮಾಡಿಸಿದೆವೆಂದು ಪ್ರತಿಷ್ಠೆಗಾಗಿ ಅನಧಿಕಾರಿಗಳನೇಕರು ದೀಕ್ಷಾ ಕೂಟಗಳನ್ನೇರ್ಪಡಿಸಿ ಸಂಸ್ಕಾರಕ್ರಮವಿಲ್ಲದೆ ಶಿವಲಿಂಗಭೀತಿಯಿಲ್ಲದೆ ಯದ್ವಾತದ್ವಾ ಲಿಂಗಗಳನ್ನು ಧರಿಸಲು ಪ್ರಾರಂಭಿಸಿರುವದನ್ನು ನೋಡಿದರೆ ವೀರಶೈವಮತದ ಭಾಗ್ಯವನ್ನು ಏನೆಂದು ವರ್ಣಿಸೋಣ! ಸಿದ್ಧಾಂತದಲ್ಲಿ ಹೇಳಿರುವಂತೆ ಲಿಂಗಲಕ್ಷಣವನ್ನೂ, ಶಿಷ್ಯಲಕ್ಷಣವನ್ನೂ, ಸಂಸ್ಕಾರಕ್ರಮವನ್ನೂ, ಉಪದೇಶಕ್ರಮವನ್ನೂ ಬೋಧಿಸುವುದಕ್ಕಾಗಿಯೇ "ಆಚಾರ್ಯಕುಲಾದ್ವೇದ ಮಧೀತ್ಯ ಯಥಾವಿಧಾನಂ ಗುರೋಃ" ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವಂತೆ ಪೂರ್ವಾಚಾರ್ಯಕ್ರಮದಿಂದ ಬಂದ ಮಠಸ್ಥಲಾದ್ಯಾದಿ ಧರ್ಮಗಳುಳ್ಳ ಗುರುವರ್ಗವೆಂಬುದೊಂದು ವೀರಶೈವಜಗತ್ತಿನಲ್ಲಿ ಏರ್ಪಟ್ಟಿರುತ್ತದಲ್ಲದೆ, ಮೋಕ್ಷಕ್ಕೆ ಪ್ರತಿಬಂಧಕಗಳಾದ ಇಂಥ ಅಶಾಸ್ತ್ರೀಯ ವರ್ತನಗಳನ್ನು ಖಂಡಿಸಿ ಶಾಸ್ತ್ರೀಯವಾದ ಆಚಾರಬೀಜಗಳನ್ನು ಶಿಷ್ಯಹೃದಯಕ್ಷೇತ್ರದಲ್ಲಿ ಬಿತ್ತಿ ಆಗಾಗ್ಗೆ ನೋಡಿಕೊಳ್ಳುವ ವ್ಯವಸಾಯಗಾರನಂತೆ ಉಪದೇಶಕ್ರಮಗಳನ್ನು ತಿದ್ದುವುದಕ್ಕಾಗಿ ಅಲ್ಲಲ್ಲಿಯೇ ಪಟ್ಟಪರಮೂರ್ತಿಗಳನ್ನು ಪೂರ್ವಾಚಾರ್ಯರು ಏರ್ಪಾಡುಮಾಡಿರುತ್ತಾರೆ. ಕಲಿಯುಗದ ಮಹಿಮೆಯಿಂದ ಪೂರ್ವಾಚಾರ್ಯಸಂಪ್ರದಾಯವು ನಷ್ಟವಾಗುತ್ತ ಹೋದಹಾಗೆಲ್ಲ ಅನಧಿಕಾರಿವರ್ಗವೂ, ಲಕ್ಷಣಶೂನ್ಯವಾದ ಲಿಂಗಗಳೂ, ಅಶಾಸ್ತ್ರೀಯವಾದ ಸಂಸ್ಕಾರಗಳೂ ಹೆಚ್ಚಿ ಹೋಗಿವೆ. ಮುಳ್ಳುಗಳು ಹೆಚ್ಚಿದ ಮಾರ್ಗದಲ್ಲಿ ಜನರು ಕಾಲಿಡಲು ಕಷ್ಟಪಡುವಂತೆ ಸಜ್ಜನರು ಕಷ್ಟಪಡುವ ಪ್ರಸಂಗವು ಬಂದೊದಗಿದೆ. "ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ | ನಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ" ಯಾವನು ಶಾಸ್ತ್ರನಿಯಮವನ್ನು ಮೀರಿ ಸ್ವೇಚ್ಛೆಯಾಗಿ ನಡೆಯುತ್ತಾನೆಯೋ, ಅವನು ಸಿದ್ಧಿಯನ್ನಾಗಲಿ, ಸುಖವನ್ನಾಗಲಿ, ಮೋಕ್ಷವನ್ನಾಗಲಿ ಪಡೆಯದೆ ಬಹು ದುಃಖಕ್ಕೀಡಾಗುವನು ಎಂದು ಗೀತಾಕಾರರು ಹೇಳಿರುವಂತೆ ಪೂರ್ವಾಚಾರ್ಯರು ಹಾಕಿದ ಮೇಲ್ಪಂಕ್ತಿಯನ್ನು ಅತಿಕ್ರಮಿಸಿ ಸ್ವೇಚ್ಛೆಯಾಗಿ ನಡೆಯುವವರು ಇಹಪರಲೋಕಗಳಿಗೆ ದೂರರಾಗುವರು. ವೀರಶೈವಸಿದ್ಧಾಂತವನ್ನು ತಿಳಿದ ಅನೇಕ ಮಹನೀಯರು ವೇದವಿಹಿತವಾದ ತಮ್ಮ ಸನಾತನ ಧರ್ಮಕ್ಕೆ ವಿರೋಧವಾಗಿ ನಡೆಯುವುದೂ ಪ್ರಾಣಬಿಡುವುದೂ ಒಂದೇ ಎಂದು ತಿಳಿದು ಶಾಸ್ತ್ರಮಾರ್ಗದಲ್ಲಿ ಬಹು ಜಾಗರೂಕರಾಗಿರುತ್ತಾರೆ. ಇನ್ನು ಕೆಲವರು ಸ್ವಪ್ರತಿಷ್ಠೆಗಾಗಿ ಉನ್ಮಾರ್ಗಗಾಮಿಗಳಾಗಿರುತ್ತಾರೆ. ಈ ತತ್ತ್ವವನ್ನು ಪ್ರತಿಯೊಬ್ಬರೂ ವಿಚಾರಮಾಡಿ ವೀರಶೈವರ ಮುಕ್ತಿಗೆ ಮುಖ್ಯಲಕ್ಷಣವೆನಿಸಿದ ಲಿಂಗಲಕ್ಷಣವನ್ನು ಚನ್ನಾಗಿ ಪರಿಶೋಧಿಸಿ, ಆಚಾರ್ಯಕುಲವನ್ನಾಶ್ರಯಿಸಿ, ಶಿವದೀಕ್ಷಾಪೂರ್ವಕವಾಗಿ ಶಾಸ್ತ್ರೀಯಶಿವಲಿಂಗವನ್ನು ಪಡೆದು ವೀರಶೈವ ಎಂಬ ಹೆಸರನ್ನು ಸ್ಥಿರಪಡಿಸಿಕೊಳ್ಳುವಂತೆ ಭಗವತ್ಪಾದರಾದ ಮಹಾಚಾರ್ಯರು ಎಲ್ಲರನ್ನು ಅನುಗ್ರಹಿಸಲೆಂದು ಆ ಜಗನ್ನಿಯಾಮಕರನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಹೈದರಾಬಾದ ಬ್ರಿಟಿಷ್ ರೆಸಿಡೆಂಟರ ಅತಿಥಿಗಳಾಗಿ ದಯಮಾಡಿಸಿದ್ದ ನಮ್ಮ ದಿವಾನಸಾಹೇಬರವರು ಕಳೆದ 20 ನೆಯ ತಾರೀಖು ಸೋಮವಾರ ಸಾಯಂಕಾಲ ಬೆಂಗಳೂರಿಗೆ ಆಗಮಿಸಿದರು.

ರಾಜಧಾನಿಯ ಶ್ರೀಯುತ ಎಂ. ಎಸ್. ಬಾಳರಾಜೇಅರಸರವರ ಮನೆಕಟ್ಟುವ ಸಾಮಾನುಗಳನ್ನು ಕಳವು ಮಾಡಿದ್ದ ಶ್ರೀನಿವಾಸರಾವ್ ಮತ್ತು ಇವನ ಮಗ ಗೋಪಾಲರಾವ್ ಎಂಬವರಿಗೆ ಕಳೆದವಾರ ಸಿಟಿಮ್ಯಾಜಿಸ್ಟ್ರೇಟರು 8 ಮತ್ತು 4 ತಿಂಗಳುಗಳ ಕಠಿಣ ಸಜೆಯನ್ನು ವಿಧಿಸಿದರು.

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಇನ್ನು ಮುಂದೆ ಶಿವಾಗಮಶಿಕ್ಷಣವು ಪ್ರಾರಂಭಿಸಲ್ಪಡುವದೆಂದೂ, ಇದನ್ನು ಕಲಿಯಲಪೇಕ್ಷಿಸುವ ವಿದ್ಯಾರ್ಥಿಗಳು ಕೂಡಲೆ ಅರ್ಜಿಯನ್ನು ಹಾಕಬೇಕೆಂದೂ, ವಿದ್ಯಾರ್ಥಿಗಳಿಗೆ ಯೋಗ್ಯವೇತನವು ಕೊಡಲ್ಪಡುವದೆಂದೂ, ಸರಕಾರದವರು ಪ್ರಕಟಿಸಿರುತ್ತಾರೆ.

ತಿರುವಾಂಕೂರು ಸಂಸ್ಥಾನದ ಮಹಾರಾಜರವರು ಮುಂದಿನ ಏಪ್ರಿಲ್ ತಿಂಗಳಲ್ಲಿ ರಾಜಧಾನಿಗೆ ದಯಮಾಡಿಸಿ, ಆರು ತಿಂಗಳುಗಳ ವರೆಗೆ ಇಲ್ಲಿಯೇ ಇದ್ದು, ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾದ ಸರ್ ಛಾರಲ್ಸ್ ಟಾಡ್‌ಹಂಟರ್‌ರವರಲ್ಲಿ ರಾಜ್ಯಾಡಳಿತದ ಕ್ರಮದ ಶಿಕ್ಷಣವನ್ನು ಹೊಂದಿ ಹಿಂತಿರುಗುವರೆಂದು ತಿಳಿದುಬಂದಿದೆ.

ರಾಜಧಾನಿಯ ಶ್ರೀ ಸೀತಾರಾಘವವೈದ್ಯಶಾಲೆಯ ಮ॥ ರಾ॥ ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರು ಕಳುಹಿಸಿರುವ ಶ್ರೀಮತ್ಪ್ರಮೋದ ಸಂವತ್ಸರದ ಪಂಚಾಂಗವನ್ನೂ, ವಾಣೀವಿಲಾಸ ಮಾರ್ಕೆಟ್ ಚೌಕದಲ್ಲಿರುವ ಜನರಲ್ ಮರ್ಚೆಂಟ್ಸ್ ಮೆಸ್ಸರ್ಸ್ ಬಿ. ರುದ್ರಪ್ಪ ಅಂಡ್ ಸನ್ಸ್‌ರವರು ಕಳುಹಿಸಿರುವ ನೂತನ ವರ್ಷದ ಮನೋಹರವಾದ ಕ್ಯಾಲೆಂಡರನ್ನೂ ಆತ್ಮಾದರದಿಂದ ಸ್ವೀಕರಿಸಿರುತ್ತೇವೆ.

ಮೈಸೂರು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಈ ಸಾರೆ ಕಾರಾಪುರದ ಕೆಡ್ಡಾದಲ್ಲಿ ಹಿಡಿದ 54 ಆನೆಗಳನ್ನು ಕಲ್ಲೀಕೋಟೆಯ ಹತ್ತಿರವಿರುವ ತೊರವಕ್ಕಾಡಿನಲ್ಲಿ ಹರಾಜು ಮಾಡಲು ಒಟ್ಟು 82,000 ರೂ. ಗಳ ಉತ್ಪತ್ತಿಯಾಯಿತು. ಪೋಟಾಪೋಟಿಯು ವಿಶೇಷವಾಗಿದ್ದು ಎರಡು ಆನೆಯ ಮರಿಗಳನ್ನು ಒಂದೊಂದು ಸಾವಿರಕ್ಕೆ ಪಾಯಿಗಳಿಗೆ ಕೊಂಡುಕೊಂಡರಂತೆ! ಹರಾಜಿನ ... ಲಕ್ಕೆ ಸಿಲೋನ್, ಕಲ್ಕತ್ತಾ, ಲಾಹೋರು ಮೊದಲಾದ ಕಡೆಗಳಿಂದ ಅನೇಕ ಜನ ವರ್ತಕರು ಆಗಮಿಸಿದ್ದರು.

ರಾಜಧಾನಿಯ ಮುಂಡಿಮೊಹಲ್ಲಾದಲ್ಲಿ ಮುನಿಸಿಪಲ್ ಕೌನ್ಸಿಲರಾಗಿದ್ದ ಮಿ॥ ಎಂ. ರಾಮಚಂದ್ರ ... ರು, ಧಾರವಾಡ ಡಿಸ್ಟ್ರಿಕ್ಟ್ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರಾಗಿ ಹೊರಟುಹೋದುದರಿಂದ ಕಳೆದ ಶನಿವಾರ ... ಸ್ಥಾನಕ್ಕೆ ಕೌನ್ಸಿಲರನ್ನು ಓಟುಗಳ ಮೂಲಕ ಚುನಾಯಿಸಿದರು. ಚುನಾವಣೆಗೆ ನಿಂತಿದ್ದ ಮಿ॥ ಥಿಯೋಬಾಲ್ಡ್‌ರವರು, ಮ॥ ತಮ್ಮಯ್ಯನವರು, ಮ॥ ರಾ॥ ಶ್ರೀಕಂ... ಠಾಚಾರ್ಯರು, ಮ॥ ರಾ॥ ದಾಸಪ್ಪನವರು, ಈ ನಾಲ್ಕು ಜನರಲ್ಲಿ ಮಿ॥ ಥಿಯೋಬಾಲ್ಡ್‌ರವರಿಗೆ ಎಲ್ಲರಿಗಿಂತಲೂ ಹೆಚ್ಚು ಸಂಖ್ಯೆ ಅಂದರೆ 157 ಓಟುಗಳು ಬಂದು ಅವರೇ ಕೌನ್ಸಿಲರಾಗಿ ಚುನಾಯಿಸಲ್ಪಟ್ಟರು.

ಬೊಂಬಾಯಿ ಪೋರ್ಟ್ ಟ್ರಸ್ಟಿನ ಅಧಿಕಾರಿಗಳಾಗಿದ್ದು ನಿವೃತ್ತರಾಗಿರುವ ಮಿ॥ ಜೆ. ದ್ವಾರಕಾದಾಸರವರು ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಬಸವನಗುಡಿಯಲ್ಲಿರುವ ತಮ್ಮ "ಮಾಣಿಕ್ಯವಿಲ್ಲಾ" ಎಂಬ ಬಂಗಲೆಗೆ ನಮ್ಮ ಸಂಸ್ಥಾನದ ದಿವಾನರವರಾದ ಸರ್. ಮಿರ್ಜಾ ಇಸ್ಮಾಯಿಲ್‌ರವರನ್ನು ಬರಮಾಡಿಕೊಂಡು, ಬ್ರಿಟಿಷ್ ಸರಕಾರದವರಿಂದ ಅವರಿಗೆ "ಸರ್" ಎಂಬ ಬಿರುದು ದೊರೆತದ್ದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿ ಸತ್ಕರಿಸಿದರು. ಈ ಅಭಿನಂದನ ಕೂಟಕ್ಕೆ ಅನೇಕ ದೊಡ್ಡಮನುಷ್ಯರೂ ಅಧಿಕಾರಿಗಳೂ ಆಹ್ವಾನಿಸಲ್ಪಟ್ಟಿದ್ದರು.

ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿಯ ವೀರಶೈವಸಮಾಜದವರು ಶ್ರೀ॥ ಜೆ. ಮುರಿಗಾರಾಧ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಶ್ರೀಮದ್ರಂಭಾಪುರೀ ಸಂಸ್ಥಾನದ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳು ಅಲ್ಲಿಗೆ ದಯಮಾಡಿಸಿದಾಗ ಒಂದು ವೀರಶೈವ ವೈದಿಕ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿ, ಜಗದ್ಗುರುಗಳಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನು ಕಳುಹಿಸಿರುವರೆಂದೂ, ಈ ಕಾರ್ಯಕ್ಕಾಗಿ ಶ್ರೀ॥ ಜೆ. ಮುರಿಗಾರಾಧ್ಯರು 5,000 ರೂ. ಗಳನ್ನು ಕೊಡುವದಾಗಿ ವಾಗ್ದಾನಮಾಡಿರುವರೆಂದೂ ತಿಳಿದುಬರುತ್ತದೆ.

ಕಡೂರು ಡಿ॥ ಬೀರೂರು ಟೌನ್ ನಿವಾಸಿಗಳಾದ ಮ॥ರಾ॥ ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ದೊಡ್ಡಮನಿ ಹಾಲಪ್ಪನವರು ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ನೆರವೇರುವ ಪ್ರಜಾಪ್ರತಿನಿಧಿಸಭೆ ಹಾಗೂ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗಾಗಿ ಉಮೇದುವಾರರಾಗಿ ನಿಂತಿದ್ದಾರೆ. ಇವರು ಅಸಾಧಾರಣ ಗುರುಭಕ್ತಿಸಿಸ್ಥರೂ, ಧರ್ಮಪೀಠಾಭಿಮಾನಿಗಳೂ, ಸತ್ಯಶೀಲರೂ, ಕಾರ್ಯದಕ್ಷರೂ ಆಗಿರುವದರಿಂದ ಆ ಪ್ರಾಂತದ ವೀರಶೈವರು ಹಾಗೂ ಇತರ ಮತಾನುಯಾಯಿಗಳು ಇವರಿಗೆ ತಮ್ಮ ಘನವಾದ ಓಟನ್ನು ಕೊಟ್ಟು ಅವರಿಂದಾಗುವ ಪ್ರಜಾಸೇವೆಯ ಫಲವನ್ನು ಪಡೆಯಬೇಕೆಂದು ಆಶಿಸುತ್ತೇವೆ.

ರಾಜಧಾನಿಯಲ್ಲಿ ಹ್ಯಾಕ್ನಿ ಕ್ಯಾರೇಜು ಇನ್ಸ್‌ಪೆಕ್ಟರ್ ಕೆಲಸವನ್ನು ಮಾಡುತ್ತಿದ್ದ ತಿರುಮಲಾಚಾರ್ಯರೆಂಬವರು, ಕೆಲವು ತಿಂಗಳುಗಳ ಹಿಂದೆ ಸ್ವಲ್ಪ ಹಣವನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ದೂರೀಕೃತರಾಗಿರುವರಷ್ಟೆ! ಸದ್ಯಃ ಆ ಕೆಲಸವನ್ನು ಮ॥ ರಾ॥ ವೀರಭದ್ರಪ್ಪನವರು ನೋಡುತ್ತಿದ್ದರು. ಇತರ 34 ಜನರು ಈ ಕೆಲಸಕ್ಕಾಗಿ ಅರ್ಜಿಗಳನ್ನು ಹಾಕಿಕೊಂಡಿದ್ದರು. ಕಳೆದ ಶನಿವಾರ ಬೆಳಗ್ಗೆ ಮುನಿಸಿಪಲ್ ಆಫೀಸಿನಲ್ಲಿ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಈ ವಿಷಯವು ಚರ್ಚೆಗೆ ಬಂದು ಒಬ್ಬಿಬ್ಬರು ಸದ್ಯಃ ಕೆಲಸಮಾಡುತ್ತಿರುವ ಮ॥ ರಾ॥ ವೀರಭದ್ರಪ್ಪನವರ ವಿಷಯದಲ್ಲಿ ಅಸಮಾಧಾನವನ್ನು ತೋರ್ಪಡಿಸಿದರಂತೆ! ಆದಾಗ್ಯೂ ಸಾರಾಸಾರವಿಚಾರಶೀಲರಾದ ಪ್ರೆಸಿಡೆಂಟರವರು ಇವರೇ ಆ ಕೆಲಸಕ್ಕೆ ಸರ್ವರೀತಿಯಿಂದಲೂ ಯೋಗ್ಯರಿರುತ್ತಾರೆಂದು ಅಭಿಪ್ರಾಯಪಟ್ಟದ್ದರಿಂದ ಸರ್ವಾನುಮತದಿಂದ ಸದರಿ ವೀರಭದ್ರಪ್ಪನವರೇ ಆರಿಸಿಬಂದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ.

WANTED.

Sales Clerk for Channapatna, Mandya, Yedatore, and Chamarajnagar, on a monthly salary of Rupees 15 with [illegible] commission on the Sales for well [illegible]shed Mangalore pattern "STAN[illegible]ARD" Tile concern in Southern India. Cash security Rs. 250 essential.

Apply at once to:—

Mr. V. L. DHANARAM,
Theobald Road, MYSORE.

ವರ್ತಮಾನಸಂಗ್ರಹ.

ಸರ್ ತೇಜ್‌ಬಹದ್ದೂರ್ ಸಪ್ರೂರವರು ಪುಣೆಯಲ್ಲಿ ಗೋಖಲೆಸ್ಮಾರಕ ಭವನವನ್ನು ಕಟ್ಟಲು 2,000 ರೂ. ಗಳನ್ನು ಕೊಟ್ಟಿರುವರು.

ನೂತನ ದೆಹಲಿಯ ಪ್ರವೇಶೋತ್ಸವವು ಬಹಳ ಸಂಭ್ರಮದಿಂದ ನಡೆಸಬೇಕೆಂದು ಗೊತ್ತಾಗಿರುವದು. ಇದಕ್ಕೆ 2½ ಲಕ್ಷ ರೂ. ಗಳು ಖರ್ಚಾಗುವವಂತೆ!

ಕಳೆದ ವರ್ಷ ಭರತಖಂಡದಲ್ಲಿ 30 ಲಕ್ಷ ರೂ. ಗಳ ಬಾದಿಯು ಮಾರಲ್ಪಟ್ಟಿದ್ದು, ಈ ವರ್ಷ 50 ಲಕ್ಷ ರೂ. ಗಳ ಖಾದಿಯು ಮಾರಲ್ಪಟ್ಟಿರುವದು. ಸಂತೋಷ!

ಬಂಗಾಲ ಸರಕಾರದವರು ಮಿಡ್ನಾಪೂರ ಡಿಸ್ಟ್ರಿಕ್ಟಿಗೆ ಸೇರಿದ ಸಾಲ್ಬೋಣಿ ಎಂಬ ಸ್ಥಳದಲ್ಲಿ ಕುಷ್ಠರೋಗಿಗಳ ಆಸ್ಪತ್ರೆಯೊಂದನ್ನು ಸ್ಥಾಪಿಸಬೇಕೆಂದು ಏರ್ಪಾಡುಮಾಡುತ್ತಿರುವರು. ಸ್ತುತ್ಯ!

ಅಮೇರಿಕೆಯ ಪ್ರಸಿದ್ಧ ಫೋರ್ಡ್ ಮೋಟಾರು ಕಂಪೆನಿಯ ಮಾಲಿಕರಾದ ಹೆನ್ರಿಫೋರ್ಡ್‌ರವರು ಲಂಡನ್ ನಗರದಲ್ಲಿ ಹೆಚ್ಚಾಗಿ ಆಸ್ಪತ್ರೆಗಳನ್ನು ಸ್ಥಾಪಿಸುವದರ ಸಲುವಾಗಿ 1,35,000 ರೂ. ಗಳನ್ನು ಕೊಟ್ಟಿರುವರು.

ಆಗ್ರಾನಗರದ ಕಾಲೇಜ್ ಹಾಸ್ಟಲಿನ ಬಾಗಿಲ ಮೇಲೂ, ಕಾಲೇಜಿನ ನೋಟೀಸ್ ಬೋರ್ಡುಗಳ ಮೇಲೂ ಶಾಸನಸಭೆಯ ಸದಸ್ಯರಿಗೆ ಪ್ರಾಣಭೀತಿಯ ಹೆದರಿಕೆಯನ್ನು ತೋರಿಸುವ ಕೆಲವು ಕಾಗದಗಳು ಹಚ್ಚಲ್ಪಡುತ್ತಿರುವವಂತೆ!

ಇಂಗ್ಲೆಂಡಿನಲ್ಲಿ ವಿಶೇಷ ಬಿರುಗಾಳಿಯೆದ್ದು "ಸೆಂಟ್ ಗೆನ್ನಿ" ಎಂಬ ನಾವೆಯು ಸಮುದ್ರದಪಾಲಾಗಿ 23 ಜನರು ಪತ್ತೆಯಿಲ್ಲದೆ ಹೋಗಿರುವರು. 5 ಜನ ಸೈನಿಕರಿಗೆ ವಿಶೇಷಗಾಯಗಳಾಗಿ ಪ್ಲಿಮತ್ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರು.

ಚೀನಾದೇಶದಲ್ಲಿ ಮಹಾಕ್ಷಾಮವು ತಲೆದೋರಿ ಇದುವರೆಗೆ ಸುಮಾರು 20 ಲಕ್ಷ ಜನರು ಅನ್ನಾಹಾರಗಳಿಲ್ಲದೆ ಮೃತಪಟ್ಟಿರುವರೆಂದೂ, ಸದ್ಯಃ 20 ಲಕ್ಷ ಜನರು ಮರಣೋನ್ಮುಖರಾಗಿರುವರೆಂದೂ ಚೀಣೆಯ ಕ್ಷಾಮನಿವಾರಣೆಯ ಕಮಿಷನರವರು ಪ್ರಕಟಿಸಿರುವರು.

ಅಫ್ಘಾನಿಸ್ಥಾನದ ಮಾಜಿ ಅಮೀರ್ ಅಮಾನುಲ್ಲಾಖಾನರವರು ಈಗ ಸ್ವಿಟ್ಜರ್ಲೆಂಡಿನಲ್ಲಿರುವರು. ಇವರ ಬಳಿಯಲ್ಲಿದ್ದ ಹಣಕಾಸುಗಳೆಲ್ಲವೂ ಮುಗಿಯಿತೆಂದೂ, ಅದಕ್ಕಾಗಿ ತಮ್ಮಲ್ಲಿದ್ದ ಅಮೂಲ್ಯವಾದ ಆಭರಣಗಳನ್ನು ಬಹಳ ಅಲ್ಪಬೆಲೆಗೆ ವಿಕ್ರಯಿಸಿದರೆಂದೂ ತಿಳಿದುಬಂದಿದೆ.

ಚೀನಾದೇಶದ ಈಶಾನ್ಯದಿಕ್ಕಿನಲ್ಲಿರುವ ಕೋರಿಯಾದಲ್ಲಿ 1000 ಜನ ವಿದ್ಯಾರ್ಥಿಗಳು ಸರಕಾರದ ವರ್ತನೆಗೆ ಅಸಮಾಧಾನಪಟ್ಟವರಾಗಿ ಮುಷ್ಕರಹಿಡಿದು ಪರೀಕ್ಷೆಗೆ ಕುಳಿತುಕೊಳ್ಳದೆ ಹೋದುದರಿಂದ ಸರಕಾರದವರು ಅವರನ್ನೆಲ್ಲಾ ಸೆರೆಹಿಡಿದಿರುತ್ತಾರೆ. ಇವರಲ್ಲಿ 250 ಜನರು ಸ್ತ್ರೀಯರಾಗಿರುವರು.

ಲಂಡನ್ ನಗರದಲ್ಲಿ ಪ್ಯಾರಟ್ ಫೀವರ್ (ಗಿಣಿಯ ಜ್ವರ) ಎಂಬ ಅಪೂರ್ವರೋಗದಿಂದ ಆಸ್ಪತ್ರೆಯಲ್ಲಿ ಒಬ್ಬನು ಮೃತನಾದನು. ಇದರಿಂದ ಭೀತಿಹೊಂದಿದ ಪ್ರಜೆಗಳು ತಮ್ಮ ಮನೆಗಳಲ್ಲಿ ಸಾಕುತ್ತಿದ್ದ ಪ್ರೀತಿಯ ಗಿಣಿಗಳನ್ನೆಲ್ಲಾ ಕೊಲ್ಲುತ್ತಿರುವರು. ಕೆಲವರು ತಮ್ಮ ಗಿಣಿಗಳನ್ನು ಮೃಗಾಲಯಕ್ಕೆ ಕೊಡುತ್ತಿರುವರು.

ಒಬ್ಬ ವೀರಶೈವರು ಒಂದು ಶಿಲಾಶಾಸನದ ಆಧಾರದ ಮೇಲೆ ಸಾಂಗ್ಲಿ ಸಂಸ್ಥಾನದ ಮಾವಿಹಾಳನ ಗುಡ್ಡದಲ್ಲಿ ಅಪಾರ ದ್ರವ್ಯವಿರುವದೆಂದು ಹೇಳಲು, ಸಾಂಗಲಿ ಸರಕಾರದವರ ಮಂತ್ರಿಗಳು ಆ ಗುಡ್ಡಕ್ಕೆ ಹೋಗಿ ದ್ರವ್ಯವಿರುವ ಸ್ಥಳಗಳನ್ನು ಪರೀಕ್ಷಿಸಿ ಹೋಗಿರುವರು. ಆ ದ್ರವ್ಯವನ್ನು ತೆಗೆಯಬೇಕಾದರೆ ಮೂರು ಜನರನ್ನು ಬಲಿಕೊಡಬೇಕಂತೆ!

ಕಳೆದ 14 ನೆಯ ತಾರೀಖು ಮಂಗಳವಾರ ಕಲ್ಕತ್ತೆಗೆ ಸೇರಿದ ಕಾಸಿಪೂರ್ ಸ್ಟೇಟ್‌ಸ್ಮಾಟ ಪ್ರೆಸ್ ಎಂಬ ಸೆಣಬಿನಕಾರ್ಖಾನೆಗೆ ಬೆಂಕಿಬಿದ್ದು ಸುಮಾರು ಒಂದು ಲಕ್ಷ ರೂ. ನಷ್ಟವು ಸಂಭವಿಸಿತು. ಉರಿಯ ಜ್ವಾಲೆಯು ಎರಡು ಅಂತಸ್ತಿನ ಕಟ್ಟಡದಮೇಲೆ 40 ಅಡಿಯ ವರೆಗೆ ಏಳುತ್ತಿತ್ತು. 7 ಇಂಜಿನುಗಳು ಬಹು ಸಾಹಸಪಟ್ಟು ಬೆಂಕಿಯನ್ನು ಆರಿಸಿದುವು.

ಕಳೆದ ಡಿಸೆಂಬರಿನಲ್ಲಿ ಲಾಹೋರು ರಾಷ್ಟ್ರಸಭೆಯಲ್ಲಾದ ತೀರ್ಮಾನದಂತೆ ಕಾಯಿದೆ ಭಂಗದ ಚಳವಳಿಯು ಪ್ರಥಮತಃ ಬಂಗಾಳದ ಬಂದಮಿಲಾ ತಾಲೂಕಿನಲ್ಲಿ ಪ್ರಾರಂಭಿಸಲ್ಪಟ್ಟು, ಅಲ್ಲಿಯ ಗ್ರಾಮಸ್ಥರೆಲ್ಲರೂ ಕಂದಾಯವನ್ನು ಕೊಡದೆ ಮುಷ್ಕರ ಹಿಡಿದಿದ್ದಾರೆ. ಸರಕಾರದವರು ಅಲ್ಲಿಯ ಕಾಂಗ್ರೆಸ್ ಕಾರ್ಯದರ್ಶಿಗಳ ಮನೆಗಳನ್ನೆಲ್ಲಾ ಜಪ್ತ ಮಾಡಿ ಅವರನ್ನು ಸೆರೆಹಿಡಿದಿರುವರು. ಈ ಚಳವಳಿಯಿಂದ ಕಷ್ಟಕ್ಕೊಳಗಾಗುವವರ ಸಹಾಯಕ್ಕಾಗಿ ಎಲ್ಲರೂ ದ್ರವ್ಯಸಹಾಯ ಮಾಡಬೇಕೆಂದು ಸುಭಾಸ್ ಚಂದ್ರಬೋಸ್‌ರವರು ಒಂದು ವಿಜ್ಞಾಪನಾಪತ್ರಿಕೆಯನ್ನು ಹೊರಡಿಸಿರುವರು.

ಅಮೇರಿಕೆಯ ಪ್ರಸಿದ್ಧ ಕೋಟ್ಯಧೀಶರಲ್ಲೊಬ್ಬರಾದ ಮಿ॥ ರಾಕ್‌ಫೆಲ್ಲರ್‌ರವರು ಫ್ರಾನ್ಸಿನಲ್ಲಿ ಒಂದು ವೈದ್ಯವಿದ್ಯಾಶಾಲೆಯನ್ನು ಸ್ಥಾಪಿಸಲು 1,50,00,000 ರೂ. ಗಳನ್ನು ಕೊಡುವದಾಗಿ ವಾಗ್ದಾನಮಾಡಿರುವರು. ಆದರೆ ಫ್ರಾನ್ಸಿನ ಸರ್ಕಾರದವರಾಗಲಿ, ಪ್ಯಾರಿಸ್‌ನಗರದವರಾಗಲಿ ಆ ವೈದ್ಯವಿದ್ಯಾಶಾಲೆಯ ಸ್ಥಾಪನೆಗೆ ತಾವು ಕೊಡುವಷ್ಟು ಹಣವನ್ನು ಕೂಡಿಸಿಕೊಡಬೇಕೆಂದು ತಿಳಿಸಿರುವರು. ಇದು ಸ್ಥಾಪಿತವಾದರೆ ಯೂರೋಪ್ ಖಂಡದಲ್ಲಿ ಅತ್ಯುತ್ತಮವಾದ ವೈದ್ಯವಿದ್ಯಾಶಾಲೆಯೆನಿಸುವದಲ್ಲದೆ, 10,000 ವಿದ್ಯಾರ್ಥಿಗಳು ಶಿಕ್ಷಣಹೊಂದಲನುಕೂಲವಾಗುವದು.

ಚಂದಾದಾರರಲ್ಲಿ ವಿಜ್ಞಾಪನೆ.

ಯಾವನ ನಾಮಸ್ಮರಣಮಾತ್ರದಿಂದ ಸಕಲ ಮಾನವರು ಪಾಪದಿಂದ ವಿಮುಕ್ತರಾಗಿ ಮುಕ್ತಿಸಾಮ್ರಾಜ್ಯಸುಖವನ್ನನುಭವಿಸುವರೋ ಆ ಶ್ರೀ ಜಗದ್ಗುರು ರೇಣುಕಾಚಾರ್ಯನ ಅದ್ಭುತ ಲೀಲಾಪ್ರತಿಪಾದಕವಾದ **ರೇಣುಕವಿಜಯವು** ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿರುವ ವಿಷಯವು ನಮ್ಮಾ ಪತ್ರಿಕೆಯ ಕಳೆದ ವಾರದ ಸಂಚಿಕೆಯಿಂದ ಯಾವತ್ತು ಚಂದಾದಾರರಿಗೆ ವೇದ್ಯವಾಗಿರಬಹುದು. ಅನೇಕಾನೇಕಾಮೂಲ್ಯ ವಿಷಯಗಳಿಂದೊಡಗೂಡಿದ ಈ ಗುರುಚಕ್ರವರ್ತಿಯ ಪವಿತ್ರ ಚರಿತ್ರವು ಪ್ರತಿಯೊಬ್ಬರ ಮನೆಯಲ್ಲಿಯೂ ಪ್ರವೇಶಿಸಿ ಸರ್ವರನ್ನೂ ಉದ್ಧರಿಸಲೆಂಬ ಉದ್ದೇಶದಿಂದ ನಮ್ಮ ಚಂದಾದಾರರಿಗೆಲ್ಲ ವಿ. ಪಿ. ದ್ವಾರಾ ಕಳುಹಿಸಬೇಕೆಂದು ನಿರ್ಧರಿಸಿದ್ದೇವೆ. ಆದುದರಿಂದ ಪ್ರತಿಯೊಬ್ಬರು ವಿ. ಪಿ. ಯನ್ನು ಸ್ವೀಕರಿಸಿ ಆ ಗುರುಸಾರ್ವಭೌಮನ ಚರಿತ್ರವನ್ನು ಸಂಪೂರ್ಣವಾಗಿ ಓದಿ ಅದರಲ್ಲಿರತಕ್ಕ ಅತ್ಯಂತ ಮಹತ್ವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಆಶಿಸುತ್ತೇವೆ. ವಿ. ಪಿ. ಚಾರ್ಜು ಸೇರಿ ೧ ರೂ. ೬ ಆಣೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಬಿನ್ನವತ್ತಳೆ.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಮಹಾಸನ್ನಿಧಿಯಲ್ಲಿ ಬುಕ್ಕಾಂಬುಧಿ ಗ್ರಾಮದ ಶ್ರೀ ವಿರೂಪಾಕ್ಷಾಲಯದಲ್ಲಿ ಬುಕ್ಕಾಂಬುಧಿ ವೀರಶೈವ ಭಕ್ತಮಂಡಲಿಯವರ ಅರಿಕೆ—

1. ಮಹಾಸಂಸ್ಥಾನವು ಬೀರೂರಿಗೆ ದಯಮಾಡಿಸಿದಾಗ್ಯೆ ನಮ್ಮೀ ಬುಕ್ಕಾಂಬುಧಿ ವಾಸಿಗಳು ಮಹಾಸಂಸ್ಥಾನವನ್ನು ಕಾರ್ತಿಕ ಮಾಸಕ್ಕೆ ದಯಮಾಡಿಸಿಕೊಂಡು ಹೋಗುತ್ತೇವೆಂದು ಬಿನ್ನವತ್ತಳೆಯನ್ನು ಅರ್ಪಿಸಿದ್ದೆವು. 2. ನಮ್ಮ ಬಿನ್ನವತ್ತಳೆಯಂತೆ ಕಾರ್ಯವು ನಡೆಯದೆ ಮಾರ್ಗಶೀರ್ಷಮಾಸ ತಾ|| 23-12-29 ನೆಯ ಸೋಮವಾರ ದಯಮಾಡಿಸಿಕೊಂಡೆವು. ಮಠ್ಯಾಮಿನಲ್ಲಿ ಅರ್ಪಿಸಿದ ಬಿನ್ನವತ್ತಳೆಗೆ ವ್ಯತ್ಯಾಸಮಾಡಿದ ಮುಗ್ಧಭಕ್ತರಾದ ನಾವುಗಳು ಮಹಾಸನ್ನಿಧಿಯಲ್ಲಿ ಕ್ಷಮಾಶೀರ್ವಾದವನ್ನು ಬೇಡುತ್ತೇವೆ. 3. ನಿಜವಾಗಿಯೂ ಆದಿ ಪಂಚಾಚಾರ್ಯರೇ ಶಿಷ್ಯಗಳೆಂದು ಕೈ ಎತ್ತಿ ಹೇಳುವ ಈ ಬುಕ್ಕಾಂಬುಧಿ ವೀರಶೈವಮಂಡಲಿಯವರು ಬಿನ್ನವತ್ತಳೆಯನ್ನು ಮೊದಲಿನ ಅಪ್ಪಣೆಗೆ ಸ್ವಲ್ಪ ವ್ಯತ್ಯಾಸವನ್ನು ಮಾಡಿದ್ದರಿಂದ ಅನೇಕ ಗ್ರಾಮಗಳಲ್ಲಿ ನಡೆಯತಕ್ಕ ಆಳವಳಿ ಸಹಾಯಕರಿಗೆ ಇದೊಂದು ಗ್ರಾಮವು ಬೇರೆ ಗ್ರಾಮದ ರಿಜಿಸ್ಟರಿಗೆ ಸೇರಬಹುದೆಂಬ ಆಲೋಚನೆಯು ಅಂತರಂಗದಲ್ಲಿ ತ್ತಂಬ ವಿಷಯವು ಜನಗಳಲ್ಲಿ ಹರಿದಾಡುತ್ತಿತ್ತು. 4. ಗಂಡನನ್ನು ಬಿಟ್ಟು ಕಂಡವರನ್ನು ಕೈಹಾಕಿಕೊಂಡ ಭಂಡಸಂಸಾರ ಮಾಡುವ ಸ್ತ್ರೀಯಳಂತೆ ಈ ಗ್ರಾಮದ ವೀರಶೈವಮಂಡಲಿಯವರು ನಡೆಯದೆ ಪಾತಿವ್ರತ್ಯ ಧರ್ಮಾನುಸಾರವಾಗಿ ನಡೆಯುತ್ತಾರೆಂದು ಅಂತಃಶುದ್ಧಿಯಿಂದ ಸನ್ನಿಧಿಯಲ್ಲಿ ಕಾಯ ವಾಚ ಮನಃಪೂರ್ವಕವಾಗಿ ಹೇಳುತ್ತೇವೆ. 5. ಈ ಗ್ರಾಮವು ಸುಮಾರು 5-6 ವರ್ಷಗಳ ಹಿಂದೆ ಅನೇಕ ತೊಂದರೆಗಳಿಗೀಡಾಗಿ ಬಹಳ ಹೀನಸ್ಥಿತಿಗೆ ಬಂದು ಚೇತರಿಕೆ ಗಿಂತಲೂ ಕಡೆಯಾಗಿತ್ತು. ಈ ಯೋಚನೆಯಲ್ಲಿಯೇ ಮಗ್ನರಾಗಿದ್ದ ನಮ್ಮಗಳನ್ನು ಶ್ರೀ ಜಗದ್ಗುರು ಉಜ್ಜಯಿನೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಸುಮಾರು 3-4 ವರ್ಷಗಳ ಹಿಂದೆ ನಮ್ಮ ಗ್ರಾಮಕ್ಕೆ ದಯಮಾಡಿಸಿ ಕೈ ಎತ್ತಿ ಎಬ್ಬಿಸಿ ನೀವು ಇನ್ನು ಮುಂದೆ ಯಾವ ಅನುಮಾನವನ್ನು ಇಟ್ಟುಕೊಳ್ಳಬೇಡಿ ಜನಗಳಿಗೂ ಜಾನುವಾರುಗಳಿಗೂ ನಿಮ್ಮ ಸಂಪದಭಿವೃದ್ಧಿಗೂ ಆಚಾರ್ಯರು ಮಹಾಶೀರ್ವಾದವನ್ನು ದಯಪಾಲಿಸುತ್ತಾರೆಂದು ಅಪ್ಪಣೆಕೊಡಿಸಿದ್ದರು. ತಪೋನಿಧಿಗಳಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರಿಗೆ ತನುಮನೋಧನ ದ್ವಾರಾ ಸಹಸ್ರ ಬಿನ್ನವತ್ತಳೆಗಳನ್ನು ಅರ್ಪಿಸಿದರೂ ಸಾಲದಾಗಿರುತ್ತದೆ. 6. ಈ ಜಗದ್ಗುರುಗಳವರು ಆಶೀರ್ವಾದವನ್ನಿತ್ತು ಹೋದ ಮೇಲೆ ಕತ್ತಲೆ ಹೋಗಿ ಬೆಳಕು ಬಂದಂತೆ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸರ್ವರಿಗೂ ಮನಸ್ಸು ಮುಂದೆ ಸೆಳೆಯುತ್ತಿತ್ತು. 7. ಗ್ರಾಮದ ತರುಣರು ಸೇರಿಕೊಂಡು ಮುಂದೆ ಏನುಮಾಡಬೇಕೆಂದು ಕಮಿಟಿಯನ್ನು ಮಾಡಿದರು. ಆ ಕಮಿಟಿಯಲ್ಲಿ ಶ್ರೀ ವಿರೂಪಾಕ್ಷೇಶ್ವರಸ್ವಾಮಿಯವರು ಚಿರಸ್ಥಾಯಿ ಫಂಡನ್ನು ಸ್ಥಾಪಿಸಬೇಕೆಂದು ಕಮಿಟಿಯಲ್ಲಿ ಪಾಸಾಯಿತು. ಫಂಡಿನ ಉದ್ದೇಶವೇನೆಂದರೆ—ಅವರವರ ಅಡಿಕೆಫಸಲಿನ ಉತ್ಪತ್ತಿಯಲ್ಲಿ ರೂ. 1 ಕ್ಕೆ ಮೂರು ಪೈಯಂತೆ ಧರ್ಮಕಾರ್ಯಗಳಿಗೆ ಕೊಡಬೇಕೆಂದು ನಿರ್ಧರಿಸಿ 1928 ನೆಯ ಸಾಲಿನ ಸೆಪ್ಟಂಬರು ಮಾಹೆಯಲ್ಲಿ ಚಿರಸ್ಥಾಯಿಫಂಡು ಸ್ಥಾಪಿತವಾಯಿತು. 8. 1928 ನೆಯ ಅಕ್ಟೋಬರು ತಿಂಗಳಲ್ಲಿ ಚಿರಸ್ಥಾಯಿಫಂಡು ಕಮಿಟಿಯವರು ಪ್ರತಿ ಗೃಹಗಳಲ್ಲಿಯು ಮುಷ್ಟಿ ಅಕ್ಕಿಯನ್ನು ಹಾಕಬೇಕೆಂದು ನಿರ್ಧರಮಾಡಿದರು. ಅದು ಕಮಿಟಿಯಲ್ಲಿ ಚರ್ಚೆಯು ನಡೆದು ಸರ್ವಾನುಮತದಿಂದ ಪಾಸಾಯಿತು. 9. ಈ ಫಂಡಿಗೆ ನಮ್ಮ ಗ್ರಾಮದಿಂದ ಸುಮಾರು 250 ರೂ. ಜಮಾ ಆಯಿತು. ರಾಮಪುರದ ಹಾಲಸ್ವಾಮಿಗಳವರು ಈ ಫಂಡು ಸಾರೋದ್ಧಾರವಾಗಿ ನಡೆಯಲೆಂದು 1 ರೂ. ಆಶೀರ್ವದಿಸಿದರು. ದಾವಣಗೆರೆ ದಂಡಿವುಳದ ಪರಪ್ಪನವರಿಂದ 5 ರೂ. ಜುಮ್ಲಾ 256 ರೂ. ಗಳು ಅಜ್ಜಂಪುರದ ನಾಜಪ್ಪನವರು ದೇವರಿಗೋಸ್ಕರ ಕೊಟ್ಟ ತೋಟದ ಕೇಣಿ ಮೊಬಲಗು 100 ರೂ. ಗಳು ಜುಮ್ಲಾ 356 ರೂಪಾಯಿಗಳು. ಮುಷ್ಟಿಫಂಡಿನಲ್ಲಿ ವಾರಕ್ಕೆ 5-6 ಸೇರು ಅಕ್ಕಿ ಬರುತ್ತದೆ. ಇದು ವರ್ಷಕ್ಕೆ 60-70 ರೂ. ಆಗಬಹುದು. 10. ಈ ಫಂಡಿನ ಮೊಬಲಗು ಗ್ರಾಮಾಭಿವೃದ್ಧಿ ದೇವಕಾರ್ಯ ಪೂಜಾ ವಗೈರೆ ಕೆಲಸಗಳಿಗೆ ಮಾತ್ರ ವಿನಿಯೋಗಿಸಲ್ಪಡುವದು. 11. ಮುಷ್ಟಿಫಂಡಿನ ಮೊಬಲಗು ಮಾತ್ರ ಪರಸ್ಥಳದಿಂದ ಬರತಕ್ಕ ವಿದ್ಯಾರ್ಥಿಗಳಿಗೂ ದೀಕ್ಷಾಸಂಸ್ಕಾರ ಹೊಂದತಕ್ಕ ಮಾಹೇಶ್ವರರಿಗೂ ಜಂಗಮರಿಗೂ ವಿನಿಯೋಗಿಸಲ್ಪಡುವದು. ಆಪ್ರಕಾರ 25 ರೂ. ರಾಮಪುರದ ಹಾಲಸ್ವಾಮಿಗಳಿಗೆ ಅರ್ಪಿಸಿದ್ದು. 5 ರೂ. ಗುಬ್ಬಿ ತಾಲೂಕು ಹಾಗಲ್ವಾಡಿ ವಿರಕ್ತಸ್ವಾಮಿಗಳಿಗೆ ಅರ್ಪಿಸಿದ್ದು. 2 ರೂ. ಕಡೂರು ತಾಲೂಕು ಪಟ್ಟಣಗೆರೆ ಮಠದ ಸಿದ್ಧಯ್ಯನವರಿಗೆ ದೀಕ್ಷಾಸಂಸ್ಕಾರಕ್ಕೆ. 1 ರೂ. ಧಾರವಾಡ ಜಿಲ್ಲಾ ಹಳ್ಳಿಕಲ್ಲನಗೌಡರಿಗೆ ಸರ್ವ ವಿದ್ಯಾಭ್ಯಾಸ ಮಾಡುವುದಕ್ಕೋಸ್ಕರ ಕೊಟ್ಟದ್ದು. ಇದರಂತೆ ಜಮಾಖರ್ಚು ನಡೆಯುತ್ತಲಿದೆ. ಮಹಾಸನ್ನಿಧಿಯು ಈ ಫಂಡು ಸಾರೋದ್ಧಾರವಾಗಿ ನಡೆಯಲೆಂದು ಮಹಾಶೀರ್ವಾದದ ಅಪ್ಪಣೆಯನ್ನು ದಯಪಾಲಿಸಬೇಕಾಗಿ ಬೇಡಿಕೊಳ್ಳುತ್ತೇವೆ. ಹಿಂದೆ ಉಜ್ಜಯಿನೀ ಜಗದ್ಗುರುಗಳು ದಯಮಾಡಿಸಿದಾಗ್ಯೆ ೮ ಆಣೆ ಭಾಗ ನಮ್ಮ ಕಷ್ಟಗಳು ದೂರಾದವು. ಈಗ ನಮ್ಮ ನೇತ್ರಕ್ಕೆ ಎದುರಾದ ರೇಣುಕನು ದಯಮಾಡಿರುವುದರಿಂದ ಉಳಿದ ೮ ಆಣೆ ಭಾಗವು ಪೂರ್ಣವಾಗಿ ಹೋಯಿತೆಂದು ನಿರ್ಧಾರವಾಗಿ ಮಹಾಸನ್ನಿಧಿಯಲ್ಲಿ ಅರಿಕೆಮಾಡಿಕೊಳ್ಳುತ್ತೇವೆ. 12. ಮಹಾಸನ್ನಿಧಿಯ ಪ್ರತಿನಿಧಿಗಳಾಗಿ ಭಕ್ತಿಮಾರ್ಗವನ್ನು ನಮ್ಮಗಳಿಗೆ ಅರುಹಿದ ಶ್ರೀ ಬ್ರಹ್ಮಸಮುದ್ರದ ಪಟ್ಟದಸ್ವಾಮಿಗಳವರಿಗೆ ಫಂಡಿನ ಕಮಿಟಿಯವರು ಬಿನ್ನಹವನ್ನು ಅರ್ಪಿಸುತ್ತಾರೆ. ಮತ್ತು ನಮ್ಮ ಗ್ರಾಮಕ್ಕೆ ಮಹಾಸಂಸ್ಥಾನವನ್ನು ಮುಕ್ಕಾಂ ಮಾಡಿಸುವಂತೆ ಉತ್ತೇಜನವನ್ನು ಕೊಟ್ಟು ಮಹಾಸವಾರಿಯನ್ನು ಬಿಜಯ ಮಾಡಿಸಿ ನಮ್ಮ ಗ್ರಾಮವನ್ನು ಪವಿತ್ರಮಾಡಿಸಿದ ಮ್ಯಾನೇಜರು ರುದ್ರಮುನಿಯಪ್ಪನವರಿಗೆ ನಮ್ಮ ವಿಧೇಯತೆಯನ್ನು ಅರ್ಪಿಸಿದ್ದೇವೆ. ಇದರಲ್ಲಿ ಕಂಡುಬಂದ ನ್ಯೂನತೆಯನ್ನು ಮಹಾಸನ್ನಿಧಿಯು ಕ್ಷಮಿಸಬೇಕೆಂದು ಫಂಡು ಕಮಿಟಿಯವರು ಪ್ರಾರ್ಥಿಸುತ್ತಾರೆ.

ದ್ವಿತೀಯ ಹಿಂದೀಪಾರಿತೋಷಕ ಸಭಾ

ಮೊಳಕಾಲ್ಮುರು.

ತಾ|| 29-12-29 ಈ ಸುದಿವಸ ಈ ಊರಿನ ಟೌನ್ ಹಾಲಿನಲ್ಲಿ ದ್ವಿತೀಯಹಿಂದೀಪಾರಿತೋಷಕಸಭೆಯು ಮ|| ರಾ|| ನಿಜಲಿಂಗಪ್ಪ ಅಡ್ವೋಕೇಟ್ ಚಿತ್ರದುರ್ಗ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸಭೆಗೆ ಈ ಊರಿನ ಪುರಪ್ರಮುಖರೂ ಮುಖ್ಯ ಅಧಿಕಾರಿಗಳೂ ದಯಮಾಡಿಸಿದ್ದರು. ಸಾಧಾರಣವಾಗಿ ಒಂದುಸಾವಿರದವರೆಗೆ ಜನಸಂದಣಿಯು ಕೂಡಿದ್ದಿತು. ಸಾಯಂಕಾಲ ಆರುವರೆ ಘಂಟೆಗೆ ಸಭೆಯು ಆರಂಭವಾಯಿತು. ಅಧ್ಯಕ್ಷರ ಪ್ರಾರಂಭಭಾಷಣವಾದನಂತರ ಜಿಲ್ಲಾ ಬೋರ್ಡ್‌ಮೆಂಬರರಾದ ಮ|| ರಾ|| ನಾರಾಯಣರಾಯರು ಹಿಂದಿಯು ರಾಷ್ಟ್ರಭಾಷೆಯಾಗುವುದರ ಪ್ರಯೋಜನವನ್ನೂ ಅವಶ್ಯಕತೆಯನ್ನೂ ಕುರಿತು ಅರ್ಧಘಂಟೆಯಹೊತ್ತು ಸ್ವಾರಸ್ಯವಾಗಿ ಭಾಷಣಮಾಡಿದರು. ಅನಂತರ ಹಿಂದೀಪ್ರಚಾರಕರೂ ಸದರಿ ಸಭೆಯ ಮೂಲಕಾರಣಕರ್ತೃಗಳೂ ಆದ ಮ|| ರಾ|| ಟಿ. ಬಿ. ಕೇಶವರಾವ್ ಇವರು ಈ ವರ್ಷದ ಹಿಂದೀಪ್ರಚಾರದ ವರದಿಯನ್ನು ಓದಿದರು. ಅನಂತರ ಅಧ್ಯಕ್ಷರವರು ಹಿಂದೀ ಭಾಷೆಯ ಅವಶ್ಯಕತೆ ಮತ್ತು ಖಾದೀಮಹತ್ವ ಮೊದಲಾದ ವಿಷಯಗಳ ಮೇಲೆ ತಮ್ಮ ಅನೋಘವಾಣಿಯಿಂದ ಉಪನ್ಯಾಸಮಾಡಿದರು. ತರುವಾಯ ಹಿಂದೀಪ್ರಚಾರಕರಾದ ಕೇಶವರಾಯರು "ದುರ್ಗಾದಾಸ್" ಎನ್ನುವ ಹಿಂದೀನಾಟಕವನ್ನು ಬಾಲಕರಿಂದ ಆಡಿಸಿ ಸಭಿಕರಿಗೆ ಮನೋಲ್ಲಾಸವನ್ನುಂಟುಮಾಡಿದರು. ಅಧ್ಯಕ್ಷರವರು ಹಿಂದಿಯ ಪ್ರಾಥಮಿಕ ಮಾಧ್ಯಮಿಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಿಂದೀಪ್ರಚಾರಕಸಭಾ ಮದ್ರಾಸ್ ಇವರಿಂದ ಬಂದ ಸರ್ಟಿಫಿಕೇಟುಗಳನ್ನು ಹಂಚಿದರು. ತದನಂತರ ತಾಂಬೂಲ ವಿನಿಯೋಗವಾದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬಸವಣ್ಣ ಬಿಸಿನೀರು, ಕೋನಸಾಗರ.

ಆರೋಗ್ಯವಿಷಯದಲ್ಲಿ ಕೆಲವು ಉತ್ತಮ ನಿಯಮಗಳು.

ನಿಮ್ಮ ಆರೋಗ್ಯಭಾಗ್ಯವೆಲ್ಲ ನಿಮ್ಮ ಅನ್ನಪಾನಗಳ ರೀತಿಯನ್ನನುಸರಿಸಿದೆ. ಆ ವಿಷಯದಲ್ಲಿ ಪ್ರತಿಯೊಬ್ಬರೂ ಅನುಸರಿಸಬೇಕಾದ ಕೆಲವು ನಿಯಮಗಳನ್ನು ಈ ಕೆಳಗೆ ಕೊಟ್ಟಿದೆ.

1. ಮಿತವಾಗಿ ಭುಂಜಿಸಿರಿ.
2. ಹಸಿವಿದ್ದಾಗಮಾತ್ರ ಭೋಜನಮಾಡಿರಿ.
3. ಭೋಜನವಲ್ಲದ ಇತರ ಕಾಲಗಳಲ್ಲಿ ಸಿಕ್ಕಿದ ಭಕ್ಷ್ಯಗಳನ್ನು ತಿನ್ನಬೇಡಿರಿ.
4. ಭೋಜನಕಾಲದಲ್ಲಿ ನೀರನ್ನು ಕುಡಿಯಬೇಡಿರಿ.
5. ಭೋಜನದ ಹೊತ್ತನ್ನು ಬಿಟ್ಟು ಮಧ್ಯಕಾಲಗಳಲ್ಲಿ ಧಾರಾಳವಾಗಿ ನೀರನ್ನು ಕುಡಿಯಿರಿ. ಮುಖ್ಯವಾಗಿ ಬೆಳಿಗ್ಗೆ ಎದ್ದೊಡನೆ, ಮತ್ತು ರಾತ್ರಿ ಮಲಗುವದಕ್ಕೆ ಮೊದಲು ತಪ್ಪದೆ ನೀರನ್ನು ಧಾರಾಳವಾಗಿ ಕುಡಿಯಿರಿ.
6. ಟೀಯನ್ನು ಆಗಾಗ ಹೊಸದಾಗಿ ತಯಾರಿಸಿದೊಡನೆ ಕುಡಿಯಿರಿ. ಟೀ ಕಷಾಯವು ಬಹಳ ತಿಳುವಾಗಿರಲಿ. ಹಾಗಿಲ್ಲದೆ ಬಹಳ ಮಂದವಾಗಿ ಕಷಾಯಮಾಡಿ ಕುಡಿದರೆ, ಅದು ನರಗಳನ್ನು ದುರ್ಬಲಮಾಡಿ, ಜೀರ್ಣಶಕ್ತಿಯನ್ನು ಕೆಡಿಸುವುದು.
7. ಪಿಷ್ಟಸಂಬಂಧವಾದ (ಸ್ಟಾರ್ಚ್) ಆಹಾರವು ಗಟ್ಟಿಯಾಗಿರಬೇಕು. ಅಂತಹ ಪದಾರ್ಥವನ್ನು ಆದಷ್ಟು ಹೆಚ್ಚುಹೊತ್ತು ಬಾಯಿನೀರಿನಲ್ಲಿ ಊರುವಂತೆ ಇಟ್ಟಿದ್ದು ಆಮೇಲೆ ಅಗಿದು ನುಂಗಬೇಕು.
8. ಮೈಕಟ್ಟನ್ನು ಬಲಪಡಿಸುವದಕ್ಕೂ, ದೇಹದ ರಚನಾತಂತುಗಳನ್ನು ದೃಢಪಡಿಸುವುದಕ್ಕೂ ಆಹಾರವೇ ಮುಖ್ಯವಾದುದು. ಇದುಹಾಲಿನಕೆನೆ, ಹಾಲು, ಒಣಗಿಸಿಟ್ಟ ಹಾಲು, ಬೇಳೆಯಪದಾರ್ಥಗಳು (ಎಂದರೆ, ಬಟ್ಟಾಣಿ, ಅವರೆ, ಲೆಂಟಿಲ್ಸ್ ಪೀನಟ್ಸ್) ಫಿಸ್ಟನಟ್ಸುಗಳು ಹೊರತು ಬೇರೆ ಬೀಜಗಳೆಲ್ಲ ಇವುಗಳೊಳಗೆ ಅಡಗಿದೆ. ಧಾನ್ಯಜಾತಿಗಳಲ್ಲಿ ಮೈಕಟ್ಟನ್ನುಂಟುಮಾಡುವ ಪದಾರ್ಥಗಳು ಕಡಿಮೆ. ಗೋಧಿಹಿಟ್ಟು, ಅಕ್ಕಿ, ಓಟುಧಾನ್ಯ, ಬಾರ್ಲಿ, ಕಂಬು, ಜೋಳ ಮೊದಲಾದುವೆಲ್ಲ ಈ ಜಾತಿಗೆ ಸೇರುವುವು.
9. ಕಾಯಿಪಲ್ಯಗಳನ್ನು ಬೇಯಿಸುವಾಗ ನೀರನ್ನು ಮಿತವಾಗಿಡಬೇಕು. ಬಸಿದ ನೀರನ್ನು ಸಹ ಬೇರೆ ವಿಧವಾದ ಸಾರಿನ ರಸ ಮುಂತಾದುದಕ್ಕೆ ಉಪಯೋಗಿಸಬೇಕು.
10. ಉಪ್ಪು, ಮೆಣಸು, ಮೆಣಸಿನಕಾಯಿ, ಸಾಸುವೆ ಹುಳಿ ಮೊದಲಾದುವನ್ನು ಆಹಾರದಲ್ಲಿ ಮಿತವಾಗಿ ಉಪಯೋಗಿಸಬೇಕು.
11. ಬೇಯಿಸದೆ ಇರತಕ್ಕ ಕಾಯಿ, ಹಣ್ಣು ಮುಂತಾದುವುಗಳಲ್ಲಿ ಯಾವುದನ್ನಾದರೂ ತೆಗೆದುಕೊಳ್ಳದೆ ಒಂದು ದಿನವೂ ಇರಬಾರದು. ಸಾಧ್ಯವಾದರೆ ಬರೀ ಹಣ್ಣುಜಾತಿಗಳಿಗಿಂತಲೂ, ಸಾಲಾಡ್ ಎಂಬ ಫಲಪಾಕಗಳನ್ನು ಭುಂಜಿಸುವದೊಳ್ಳೆಯದು.
12. ಸಕ್ಕರೆ, ಬೆಲ್ಲ, ಚಾಕಲೇಟ್, ಜಾಮ್, ಮಾರ್ಮಲೇಡು, ಮುಂತಾದ ಸೀಪದಾರ್ಥಗಳಿಗಿಂತಲೂ, ಜೇನು, ಹಣ್ಣು ಮುಂತಾದುವನ್ನು ಸೇವಿಸುವುದೊಳ್ಳೆಯದು.
13. ಭೋಜನವಾದಕೂಡಲೆ, ಬಾಯನ್ನು ಶುದ್ಧಿಗೊಳಿಸುವುದಕ್ಕಾಗಿ, ಹಸೀಕಾಯಿ, ಹಣ್ಣಿನರಸ ಮುಂತಾದುವನ್ನು ತೆಗೆದುಕೊಳ್ಳಬೇಕು.

(ಆ. ಜಂ.)

ಬಿಲ್ವವೃಕ್ಷದ ಮಹಿಮೆ.

ಈ ಗ್ರಂಥದಲ್ಲಿ ಸೃಷ್ಟಿನಿರ್ಮಾಣ ವಿಷಯವೂ ಪರಬ್ರಹ್ಮಸ್ವರೂಪ ವಿಷಯವೂ ಹೇಳಲ್ಪಟ್ಟಿದ್ದು ಬಿಲ್ವವೃಕ್ಷದ ಸ್ವರೂಪವು ವಿಶೇಷರೀತಿಯಿಂದ ವರ್ಣಿಸಲ್ಪಟ್ಟಿರುವದು. ಮಹಾ ಬಿಲ್ವವೃಕ್ಷದ ಸಮಗ್ರಸ್ವರೂಪವನ್ನು ಪ್ರತಿಪಾದಿಸುವ ಕನ್ನಡ ಗ್ರಂಥಗಳು ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲವೆಂಬ ವಿಷಯವನ್ನು ತಿಳಿದು ಪರಮಪೂಜ್ಯವಾದ ಈ ಮಹಾಬಿಲ್ವವೃಕ್ಷದ ಮಹಿಮೆಯನ್ನು ಸರ್ವರೂ ತಿಳಿದು ಧನ್ಯರಾಗಬೇಕೆಂಬ ಸದುದ್ದೇಶದಿಂದ ಅತ್ಯಂತ ಶ್ರಮವನ್ನು ವಹಿಸಿ ಸರಳವಾದ ಕನ್ನಡಭಾಷೆಯಲ್ಲಿ ಬಾಲಕರಿಗೂ ಸಹ ತಿಳಿಯುವಂತೆ ಈ ಪುಸ್ತಕವನ್ನು ರಚಿಸಿದ್ದಾಗಿದೆ. ಈ ಗ್ರಂಥದ ಅಂತ್ಯಭಾಗದಲ್ಲಿ ಬಿಲ್ವವೃಕ್ಷದ ಮಹಿಮಾಪರವಾದ ಅಷ್ಟೋತ್ತರಶತ (108) ಸಂಸ್ಕೃತ ಶ್ಲೋಕಗಳು ಮುದ್ರಿಸಲ್ಪಟ್ಟಿವೆ. ಈ ಅಷ್ಟೋತ್ತರ ಶತಶ್ಲೋಕಗಳು ಪ್ರತಿದಿವಸ ಪೂಜಾಕಾಲದ ಪಾರಾಯಣಕ್ಕೆ ಅತ್ಯಂತ ಯೋಗ್ಯಗಳಾಗಿವೆ. ಪ್ರತಿಯೊಬ್ಬರೂ ಈ ಪುಸ್ತಕವನ್ನು ಓದಿ ಧನ್ಯರಾಗಬೇಕೆಂದು ಪ್ರಾರ್ಥನೆ.

೫ ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವುದಿಲ್ಲ. ಪ್ರತಿ 1 ಕ್ಕೆ 0-3-0 ಪೋಸ್ಟು ಮೂಲಕ 0-3-6 ಸ್ಟಾಂಪನ್ನು ಕಳುಹಿಸುವುದು.

ವ್ಯಾಪಾರಸ್ಥರಿಗೆ ವಿಶೇಷವಾದ ಕಮಿಷನ್ ಕೊಡುತ್ತೇವೆ.

ವಿಳಾಸ:— **ಎಂ. ಚನ್ನಬಸಪ್ಪ,**
ವಾಣಕಾಂಡರಾಜವೈದ್ಯಶಾಲಾ, ಮಾರಸಿಂಗನಹಳ್ಳಿ,
ಶ್ರೀರಂಗಪಟ್ಟಣ ಪೋಸ್ಟ್, ಮೈಸೂರು ಜಿಲ್ಲಾ.

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[3] ದೊರೆಯುವ ಸ್ಥಳ—**ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪಡೇ ಪಡೇ ಹಲವುಕ ದಿನಗಳ ಜ್ವರ, ಹಾಗೂ ಜ್ವರದ್ದೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ), **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಹಿಂದಿರುಗದಂತೆ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [25]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ದೀರ್ಘರೋಗದಿಂದ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಅಶಕ್ತತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಪಕಪೂಷ್ಟ, ಕಾಲಿಮಕಂದ, ಮಧುಕಂದ, ಜಬಾಕಂಧ, ಕಾಲೀಮುಲೀಕಂದ, ಅಶ್ವಕಂದ ಕ್ರೌಷ್ಟಕಂದ, ಮುಸಳೀಕಂದ ಶೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಪಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕವಂರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಖೋರಿ, ಮುಂಗಳೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀರಮುಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ಮಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14 ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ ೯ ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಪಿತ್ತ್ಯ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದರೋಗ, ದಮ್ಮುಗೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [29]

ಪತ್ತೆ:—**ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಕಾಶೀನಾಥ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗ ಔಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧವಿದು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಿಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ವಾಸಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ್ ಉಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ್ ಅಷ್ಟವರ್ಗ ಔಷಧಾಲಯ
[47] (ರಿಜಿ) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್— ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್— ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಕಳೆಗೆ ಸುಶೀಲಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[22] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :— ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[31] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಯದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ ನೇ ಫೆಬ್ರುವರಿ ೧೯೩೦ [ಸಂಚಿಕೆ ೩೯.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಆದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವ ಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೨ ಭಾವಚಿತ್ರಗಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಧೀಮಂತರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ. ಮುಂಗಡವಾಗಿ ಹಣಕಳುಹಿಸುವವರು ಪೋಸ್ಟು ಖರ್ಚಿಗಾಗಿ ೪ ಆಣೆ ಸೇರಿಸಿ ೧ ರೂ. ೪ ಆಣೆ ಕಳುಹಿಸಬೇಕು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪ್ರಸಿದ್ಧಪತ್ರಿಕೆ.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲೂಕು, ಹೆಗ್ಗಡಹಳ್ಳಿ ಮಠದ ಪಟ್ಟಾಧಿಕಾರಕ್ಕೆ ಯೋಗ್ಯವಟುವು ಬೇಕಾಗಿದೆ. ನಾವು ವಯೋವೃದ್ಧರಾದ್ದರಿಂದ ಈ ವರ್ಷದಲ್ಲಿ ಅಧಿಕಾರ ಕೊಡಲು ಸಿದ್ಧರಾಗಿರುತ್ತೇವೆ. ಸತ್ಕುಲಪ್ರಸೂತರೂ, ಸಂಸ್ಕೃತ ವಿದ್ಯಾಪಾರಂಗತರೂ, ಕಾರ್ಯದಕ್ಷರೂ ಆದ ಮಾಹೇಶ್ವರವಟುಗಳು ಅಧಿಕಾರಕ್ಕೋಸ್ಕರ ಬೇಕಾಗಿರುವುದರಿಂದ ಅಧಿಕಾರಾಪೇಕ್ಷಿಗಳು ತಮ್ಮ ಸದ್ವಂಶ ಮೊದಲಾದ ವಿಷಯಗಳನ್ನು ತಮ್ಮ ಗ್ರಾಮಪ್ರಮುಖರ ಸಮ್ಮತಿಪತ್ರದೊಡನೆ ಕಳುಹಿಸಬೇಕು. ಈ ವಟು ಚುನಾವಣೆ ವಿಷಯವು ಏಪ್ರೈಲ್ ತಿಂಗಳಲ್ಲಿ ನಮ್ಮ ಮಠದಲ್ಲಿ ನಡೆಯುವ ಮೀಟಿಂಗಿನಲ್ಲಿ ನಿರ್ಧರಿಸಲ್ಪಡುವುದು. ನಮ್ಮ ಈ ಮಠಕ್ಕೆ ವಾರ್ಷಿಕ ಉತ್ಪನ್ನವು 2,000 ರೂ. ಗಳವರೆಗಿರುವುದು. ಅಭಿಲಾಷಿಗಳು ಈ ಕೆಳಗಿನ ಅಡ್ರೆಸ್ಸಿಗೆ ಪತ್ರವ್ಯವಹಾರಮಾಡಬೇಕು.

ಪಟ್ಟದ ಸಿದ್ಧಲಿಂಗಸ್ವಾಮಿಗಳು,
ಹೆಗ್ಗಡಹಳ್ಳಿಮಠ,
ಎಸಳೂರು ಪೇಟೆ P. O.
ಹಾಸನ ಡಿಸ್ಟ್ರಿಕ್ಟ್.

ಬಿಲ್ವವೃಕ್ಷದ ಮಹಿಮೆ.

ಈ ಗ್ರಂಥದಲ್ಲಿ ಸೃಷ್ಟಿನಿರ್ಮಾಣ ವಿಷಯವೂ ಪರಬ್ರಹ್ಮಸ್ವರೂಪ ವಿಷಯವೂ ಹೇಳಲ್ಪಟ್ಟದ್ದು ಬಿಲ್ವವೃಕ್ಷದ ಸ್ವರೂಪವು ಬಹೀ ಪರೀತಿಯಿಂದ ವರ್ಣಿಸಲ್ಪಟ್ಟಿರುವದು. ಮಹಾ ಬಿಲ್ವವೃಕ್ಷದ ಸಮಗ್ರಸ್ವರೂಪವನ್ನು ಪ್ರತಿಪಾದಿಸುವ ಕನ್ನಡ ಗ್ರಂಥಗಳು ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲವೆಂಬ ವಿಷಯವನ್ನು ತಿಳಿದು ಪರಮಪೂಜ್ಯವಾದ ಈ ಮಹಾಬಿಲ್ವವೃಕ್ಷದ ಮಹಿಮೆಯನ್ನು ಸರ್ವರೂ ತಿಳಿದು ಧನ್ಯರಾಗಬೇಕೆಂಬ ಸದುದ್ದೇಶದಿಂದ ಅತ್ಯಂತ ಶ್ರಮವನ್ನು ವಹಿಸಿ ಸರಳವಾದ ಕನ್ನಡಭಾಷೆಯಲ್ಲಿ ಬಾಲಕರಿಗೂ ಸಹ ತಿಳಿಯುವಂತೆ ಈ ಪುಸ್ತಕವನ್ನು ರಚಿಸಿದ್ದಾರೆ. ಈ ಗ್ರಂಥದ ಅಂತ್ಯಭಾಗದಲ್ಲಿ ಬಿಲ್ವವೃಕ್ಷದ ಮಹಿಮಾಪರವಾದ ಅಷ್ಟೋತ್ತರಶತ (108) ಸಂಸ್ಕೃತ ಶ್ಲೋಕಗಳು ಮುದ್ರಿಸಲ್ಪಟ್ಟಿವೆ. ಈ ಅಷ್ಟೋತ್ತರ ಶತಶ್ಲೋಕಗಳು ಪ್ರತಿದಿವಸ ಪೂಜಾಕಾಲದ ಪಾರಾಯಣಕ್ಕೆ ಅತ್ಯಂತಯೋಗ್ಯಗಳಾಗಿವೆ. ಪ್ರತಿಯೊಬ್ಬರೂ ಈ ಪುಸ್ತಕವನ್ನು ಓದಿ ಧನ್ಯರಾಗಬೇಕೆಂದು ಪ್ರಾರ್ಥನೆ.

೫ ಪ್ರತಿಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಪ್ರತಿ 1 ಕ್ಕೆ 0-3-0 ಪೋಸ್ಟು ಮೂಲಕ 0-3-6 ಸ್ಟಾಂಪನ್ನು ಕಳುಹಿಸುವದು.

ವ್ಯಾಪಾರಸ್ಥರಿಗೆ ವಿಶೇಷವಾದ ಕಮಿಷನ್ ಕೊಡುತ್ತೇವೆ.

ವಿಳಾಸ:— ಎಂ. ಚನ್ನಬಸಪ್ಪ,
ಮಹಾಗಾಂಧರಾಜವೈದ್ಯಶಾಲಾ, ಮಹಾಲಿಂಗನಹಳ್ಳಿ,
ಶ್ರೀರಂಗಪಟ್ಟಣ ಪೋಸ್ಟ್, ಮೈಸೂರು ಜಿಲ್ಲಾ.

ಸ್ವೀಕಾರ.

ಧಾರವಾಡ ಡಿ|| ಕಜ್ಜೆಗಿ ತಾಲೂಕು ಹುಂದಿಗನೂರು ಸಂಸ್ಥಾನದ ಶ್ರೀಮಂತ ಸರದಾರ ಬುಳ್ಳಪ್ಪ ಉರ್ಫ ಬಾಬಾಸಾಹೇಬ ದೇಸಾಯಿ ವ ನಾಡಕರ್ಣಿ ಮಾಮಲೆ ಬಂಕಾಪೂರ ಇವರ ಪುತ್ರ ಮ|| ರಾ|| ಸಿದ್ಧಲಿಂಗಪ್ಪ ಉರ್ಫ ಬಾಪೂಸಾಹೇಬ ದೇಸಾಯಿ ಸಂಸ್ಥಾನ ಹುಂದಿಗನೂರು ಇವರು ತಮ್ಮ ಮಹಾಮಾತೃಶ್ರೀಯವರ ಅಪ್ಪಣೆಯ ಮೇರೆಗೆ ಧರ್ಮಾರ್ಥವಾಗಿ 12 ವಿವಾಹಗಳನ್ನೂ ಆರು ಮಾಹೇಶ್ವರದೀಕ್ಷೆಗಳನ್ನೂ ನೆರವೇರಿಸಿದ ಸಮಯದಲ್ಲಿ ಶ್ರೀ|| ಷ|| ಬ್ರ|| ಶಿಗ್ಗಾಂವಿ ಹಿರೇಮಠದ ಶ್ರೀ ಚರಮೂರ್ತಿಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 15 ರೂ. ಗಳು ಮ|| ರಾ|| ಮಲ್ಲಿಕಾರ್ಜುನಪ್ಪನವರು ಮಾಮಲೆ ದೇಸಾಯಿ ಬಂಕಾಪೂರ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬಂಕಾಪೂರ ನಿವಾಸಿಗಳಾದ ಮ|| ರಾ|| ಶ್ರೀಮಂತ ಮಲ್ಲಿಕಾರ್ಜುನಪ್ಪನವರು ಮಾಮಲೆ ದೇಸಾಯಿ ಇವರು ತಮ್ಮ ಅರಮನೆಯಲ್ಲಿ ಗುರುಸಾರ್ವಭೌಮನಾದ ಶ್ರೀ ರೇಣ[illegible]ಾರ್ಯನ ಪುರಾಣವನ್ನು ಪ್ರಾರಂಭಿಸಿ ಸಮಾಪ್ತಿ[illegible] ಅತ್ಯಂತ ವೈಭವದಿಂದ ಸಮಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ತಮ್ಮ ಕುಲಗುರುಗಳಾದ ಶ್ರೀ|| ಷ|| ಬ್ರ|| ಮಳಲೀಮಠದ ಪಟ್ಟದ ನಾಗಾರ್ಜುನಸ್ವಾಮಿಗಳ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ಸಿದ್ಧಲಿಂಗಪ್ಪ ಸಿದ್ಧರಾಮಪ್ಪ ರಾಮಣ್ಣನವರ ಮಾಸ್ತರ್ ಬಂಕಾಪೂರ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಡಪನಹಳ್ಳಿ ಟೌನ್ ನಿವಾಸಿಗಳಾದ ವೈಶ್ಯಮತದ ಮ|| ರಾ|| ಕೋಟಪ್ಪ ಬಂಕಾಪೂರ ಇವರು ಜೆನ್ನಿಂಗ್ ಫ್ಯಾಕ್ಟರಿಯನ್ನು ಸ್ಥಾಪಿಸಿ ಅತ್ಯಂತ ವೈಭವದಿಂದ ಮಾಹೇಶ್ವರಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಸೊ|| ಕೊಟ್ರಪ್ಪನವರ ದ್ವಾರಾ ತಲ್ಪಿರುತ್ತವೆ.

ಕಡೂರು ಡಿ|| ಮಾದಾಪುರ ಗ್ರಾಮದ ಹಾಲುಮತದ ಹಂಪೇಗೌಡರು ತಮ್ಮಲ್ಲಿಗೆ ಚಾಣಾವಾದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರನ್ನು ಕರೆಯಿಸಿಕೊಂಡು ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ ಜಗದ್ಗುರು ಪರ್ವತಸಂಸ್ಥಾನದ ಏಜಂಟರವರ ಪ್ರೋತ್ಸಾಹದ ಮೇರೆಗೆ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿಕೊಟ್ಟಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೇಸಾಗಿರುದು.)

ಪೌಷ್ಕರ, ಪರಾಖ್ಯ, ಮೃಗೇಂದ್ರ ಮೊದಲಾದ ಆಗಮಸಂಹಿತೆಗಳಲ್ಲಿ ಚಾರ್ವಾಕ, ಸಾಂಖ್ಯ ಮುಂತಾದ ಮತಗಳ ಪ್ರಕ್ರಿಯೆಗಳು ಪೂರ್ವಪಕ್ಷಗಳಾಗಿ ಗ್ರಹಿಸಲ್ಪಡುವುದರಿಂದ, ಆಯಾ ಮತ [illegible]

ಅಸುರಸಂಪತ್ತಿಯ ವರ್ಣನೆಯು ಈ ಮತದವರನ್ನೇ ಅವಲಕ್ಷಿಸಿರುವದು. ರಾಮಾಯಣದ ಅಯೋಧ್ಯಾಕಾಂಡದ ಉಪಸಂಹಾರದಲ್ಲಿ ಜಾಬಾಲಿಯೆಂಬಾತನು ರಾಮನಿಗೆ ಮಾಡಿದ ಕುಟಿಲಬೋಧೆಯೂ ಮಹಾಭಾರತದಲ್ಲಿಯ (ಅದಿ. ೧೯.೩) ಕಣಿಕನೀತಿಯೂ ಚಾರ್ವಾಕಮತಕ್ಕೇ ಹೊಂದಿರುವುವು.

ಪರಮೇಶ್ವರನು ಜಗತ್ತಿನಲ್ಲಿ ಜೀವರ ಬುದ್ಧಿತಾರತಮ್ಯವನ್ನು (ಯೋಗ್ಯತೆಯನ್ನು) ಅನುಸರಿಸಿ ಅವರು ಅರಿತುಕೊಳ್ಳಬೇಕಾದ ಅತೀಂದ್ರಿಯ ವಿಷಯಗಳ ಬಗ್ಗೆ ಬೇರೆ ಬೇರೆ ತರಗತಿಗಳನ್ನು ಕಲ್ಪಿಸಿದ್ದಾನೆ. ಆ ತರಗತಿಗಳಾದರೋ ಜೀವರ ಮಾನಸಿಕ ಪ್ರಗತಿಯನ್ನು ಅನುಲಕ್ಷಿಸಿವೆ; ಆ ಪ್ರಗತಿಯನ್ನು ಉದ್ದೇಶಿಸಿಯೇ ವೇದಾಗಮ ಪ್ರತಿಪಾದ್ಯವಾದ ಮುಖ್ಯ ಜ್ಞಾನವನ್ನು ಪಡೆವದಕ್ಕೆ ಸೋಪಾನಗಳಂತಿರುವ ಚಾರ್ವಾಕ, ನ್ಯಾಯ, ಸಾಂಖ್ಯಾದಿ ಮತ (ಅಭಿಪ್ರಾಯ) ವಿಚಾರಗಳನ್ನು ವೇದಾಗಮಗಳಲ್ಲಿ ಸೂಕ್ತರೂಪದಿಂದ ಸೂಚಿಸಿದ್ದಾನೆ; ಅವೇ ಆಗಮಪ್ರವರ್ತಕರಾದ ಮಹರ್ಷಿಗಳ ಕಾಲದಲ್ಲಿ ಪೂರ್ವಪಕ್ಷರೂಪವಾಗಿ ನಿರ್ದೇಶವಾದಲ್ಪಟ್ಟಿರುವದರಿಂದೇ ಈಗ ಉಪಲಬ್ಧವಾದ ಆಗಮವಾಙ್ಮಯದಲ್ಲಿ ಆ ಚಾರ್ವಾಕ, ನ್ಯಾಯ, ಸಾಂಖ್ಯ, ಮಿಮಾಂಸಾದಿ ಮತಗಳ ಉಲ್ಲೇಖವಿದ್ದುದು ತೋರಿಬರುವುದು.

ಪ್ರಾಥಮಿಕಶಾಲೆಗಳಲ್ಲಿ ಮೊದಲು ಪ್ರವೇಶಮಾಡತಕ್ಕ ಚಿಕ್ಕ [illegible]

ಬೇರೆ ದರ್ಶನ (ಶಾಸ್ತ್ರ) ಗಳನ್ನಾಗಿಮಾಡಿದ ಆಯಾ ಮತಪ್ರವರ್ತಕರಿಗಾದರೂ ಜೀವರ ಪ್ರಗತಿಯೇ ಲಕ್ಷ್ಯ (ಗುರಿಯು) ವಾಗಿದ್ದಿತು. ಒಟ್ಟಿನಮೇಲೆ ಪರಂಪರಾಸಿದ್ಧಗಳಾದ ಆಯಾ ಶಾಸ್ತ್ರಗಳ ಪ್ರಣಾಲಿಗಳಿಗೆ ಆಗಮಸ್ಥಾನವು ಪರಮೇಶ್ವರನೆಂದೇ ನಾವು ಹೇಳುತ್ತೇವೆ; ಅವುಗಳಲ್ಲಿ ಒಂದು ಶಾಸ್ತ್ರದ ವಿಚಾರವಾಗಿ ಈ ಕೆಳಗೆ ಉದಾಹರಿಸುವೆವು.

ದೇವರು ಇದ್ದಾನೆಂಬ ಈಶ್ವರಸದ್ಭಾವ ಮುಂತಾದ ಧಾರ್ಮಿಕವಿಚಾರದಲ್ಲಿ ಚಾರ್ವಾಕ ಬೌದ್ಧ ಮೊದಲಾದ ನಾಸ್ತಿಕ (ವೇದನಿಂದಕ)ರಿಂದ ಮಾಡಲ್ಪಡುವ ಕುತರ್ಕಗಳನ್ನು ಹೋಗಲಾಡಿಸಿ ವೇದಾಗಮಪ್ರತಿಪಾದ್ಯಗಳಾದ ಮುಖ್ಯ ವಿಷಯಗಳನ್ನು ಯುಕ್ತಿಯುಕ್ತವಾಗಿ ನಿರ್ಣಯಿಸುವಲ್ಲಿ, ಆ ವೇದಾಗಮಗಳಿಗೆ ಅನುಕೂಲವಾದ ತರ್ಕದ ಉಪಯೋಗವಿದೆ; ಅಂತಹ ತರ್ಕಕ್ಕೆ **ನ್ಯಾಯ**ವೆಂದು ಹೆಸರು; ಅದಕ್ಕೇ ಅನ್ವೀಕ್ಷಾ ಮನನವೆಂದೂ ಎನ್ನುವರು. ಆ ನ್ಯಾಯವು ಪ್ರಮಾಣ ಪ್ರಮೇಯಗಳ ಪಂಚ್ಯಾರವನ್ನು ಶಾಸನಗೊಳಿಸುವುದರಿಂದ ಶಾಸ್ತ್ರವೆನಿಸಿಕೊಳ್ಳುವುದು.

ಮೂಲಭೂತವಾದ ಆ ತರ್ಕಶಾಸ್ತ್ರವು ಪ್ರಾಚೀನನ್ಯಾಯ, ನವೀನನ್ಯಾಯವೆಂದು ಎರಡು ಬಗೆಯಾಗಿರುವುದು. ಪ್ರಾಚೀನನ್ಯಾಯದಲ್ಲಿಯೇ ವೈಶೇಷಿಕನ್ಯಾಯವೆಂಬ ಭೇದವೂ ಇದೆ. ಗೌತಮ ಮುನಿಯಿಂದ ರಚಿತವಾದ ತರ್ಕಶಾಸ್ತ್ರವು ನ್ಯಾಯದರ್ಶನವೆಂದೂ, ಕಣಾದಮುನಿಯು ರಚಿಸಿದ ತರ್ಕಶಾಸ್ತ್ರವು ವೈಶೇಷಿಕದರ್ಶನವೆಂದೂ [illegible]

ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ [illegible]

ಕಣಾದೇನ ತು ಸಂಪ್ರೋಕ್ತಂ ಶಾಸ್ತ್ರಂ ವೈಶೇಷಿಕಂ ಮಹತ್ ।

[illegible]

ಯೋಗಾಚಾರ ವಿಭೂತ್ಯಾ ಯಸ್ತೋಷಯಿತ್ವಾ ಮಹೇಶ್ವರಮ್ । ಚಕ್ರೇ ವೈಶೇಷಿಕಂ ಶಾಸ್ತ್ರಂ ತಸ್ಮೈ ಕಣಭುಜೇ ನಮಃ ॥

[illegible]

ಉಲೂಕಸ್ಯಾಪತ್ಯಮೌಲೂಕ್ಯಃ

[illegible]

ನ ವಯಂ ಷಟ್ಪದಾರ್ಥವಾದಿನೋ ವೈಶೇಷಿಕಾದಿವತ್

[illegible]

(ಸಶೇಷ.)

ಮುಂಟೂರು ಕನ್ನಡ ಗಂಡುಮಕ್ಕಳ ಶಾಲೆಯ ಪಾರಿತೋಷಿಕ ಸಮಾರಂಭವು.

ನಮ್ಮ ಶಾಲೆಯಲ್ಲಿ ತಾ|| 20-1-30 ನೆಯ ಸೋಮವಾರ ರಾವಬಹದ್ದೂರ ಎಸ್. ಬಿ. ಕಂಬಳಿ, ಎಂ.ಎಲ್.ಸಿ. ಮತ್ತು ಡಿ. ಎಲ್.ಬಿ. ಪ್ರೆಸಿಡೆಂಟ್ ಧಾರವಾಡ ಈ ಮಹೋದಯರ ಅಧ್ಯಕ್ಷತೆಯಲ್ಲಿ ವಾರ್ಷಿಕ ಪರೀಕ್ಷೆಯ ಪಾರಿತೋಷಿಕ ಸಮಾರಂಭವು ವಿಜೃಂಭಣೆಯಿಂದ ಜರುಗಿತು. ಶಾಲಾಗೃಹವು ತಳಿರುತೋರಣಗಳಿಂದಲೂ, ನೈತಿಕವಾಕ್ಯಗಳಿಂದಲೂ, ಶೋಭಾಯಮಾನವಾಗಿತ್ತು. ಈ ಸಮಾರಂಭಕ್ಕೆ ಮೆ|| ಬಿ. ಆರ್. ತಂಬಾಕದ ಚೇರಮನ್ ಸಾಹೇಬ ಡಿ. ಎಲ್. ಬಿ. ಧಾರವಾಡ ಇವರೂ, ಮೆ|| ಬಿ. ಪಿ. ತಂಬದ ಚೇರಮನ್ ಸಾಹೇಬ ಎಲ್. ಬಿ. ಮ್ಯು. ಪಾಲಿಟಿ ಹುಬಳಿ ಇವರೂ, ಹುಬ್ಬಳ್ಳಿ ತಾಲೂಕಿನೊಳಗಿನ ಪ್ರಸಿದ್ಧ ದೇಸಾಯಿ ಪಾಟೀಲರೂ, ಡಿ.ಎಲ್.ಬಿ. ಮತ್ತು ಡಿ.ಎಲ್.ಬಿ. ಮೆಂಬರರೂ ಆದ ಶ್ರೀ ಚೆನ್ನಪ್ಪಗೌಡರು ಉಣಕಲ್ಲ ಇವರೂ ಆಗಮಿಸಿದ್ದಲ್ಲದೆ, ಶಿರಗುಪ್ಪಿ, ಬ್ಯಾಹಟ್ಟಿ, ಕುಸುಗಲ್ಲ, ಧಂಡಿವಾಡ, ನಾಗರಹಳ್ಳಿಗಳಿಂದ ಶಿಕ್ಷಕರೂ, ಸಭ್ಯಗೃಹಸ್ಥರೂ ಆಗಮಿಸಿದ್ದರು. ಸುಮಾರು 3-4 ನೂರು ಜನರಿಂದಲೂ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದಲೂ [illegible]

ಅದೇ ಸುಕಾಲವೆಂದು ತಿಳಿಯುತ್ತೇನೆ. ಎಷ್ಟೋ ವಿದ್ಯಾರ್ಥಿಗಳು ತಮ್ಮ ಬಡತನದ ಮೂಲಕ ವಿದ್ಯಾಹೀನರಾಗುವದನ್ನು ನಾವು ನೋಡೇ ನೋಡುತ್ತೇವೆ. ಇಂಥ ಸ್ಥಿತಿಯು ದೂರಾಗಬೇಕಾದರೆ ಶ್ರೀಮಂತರು ಕೇವಲ ವಿಷಯ ಲೋಲುಪರಾದರೆ ತಮ್ಮ ಶ್ರೀಮಂತಿಕೆಯನ್ನು ಇಂಥ ಬಡವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ವಿನಿಯೋಗ ಮಾಡಿ, ತಮ್ಮ ಶ್ರೀಮಂತಿಕೆಯನ್ನು ಸಾರ್ಥಕಗೊಳಿಸಬೇಕೆಂದು ನಾನು ಇಲ್ಲಿ ಹೇಳಬಯಸುತ್ತೇನೆ. ಅದರಂತೆಯೇ ವಿದ್ಯಾರ್ಥಿಗಳ ಒಲವಿನ ಪ್ರಕಾರ ಆಯಾ ವಿದ್ಯಾರ್ಥಿಗಳ ಅಭ್ಯಾಸ ಸಾಗಿಸಬೇಕೆಂದು ಶಿಕ್ಷಕರಿಗೆ ಸೂಚಿಸಬಲ್ಲೆನು. ಶಿಕ್ಷಕರಿಗೆ ಈಗಿನ ೧೦ ವಿ. ಗಳ ಶಿಕ್ಷಣಕ್ರಮದಿಂದ ತೊಂದರೆಯುಂಟಾಗುತ್ತದೆಂದು ನಾನು ತಿಳಿದಿರುತ್ತೇನೆ. ಅದನ್ನು ಶಿಕ್ಷಕರಿಗೆ ಒದಗುವ ಬೇರೆ ಬೇರೆ ತೊಂದರೆಗಳನ್ನೂ ಹೋಗಲಾಡಿಸಲು ಪ್ರಯತ್ನ ಮಾಡುತ್ತೇನೆ. ಮಿ|| ತಂಬಾಕದ ಇವರು ಯೋಗ್ಯ ಚೇರ್ಮನ್ನರಾಗಿದ್ದಾರೆ ಇವರು ತರುಣರಿದ್ದು, ಒಳ್ಳೇ ಉತ್ಸಾಹದಿಂದ ಕೆಲಸಮಾಡುವವರಿದ್ದಾರೆ. ಇವರಿಂದ ಬೋರ್ಡು ಸಂಪೂರ್ಣ ಯಶಸ್ವಿಯಾಗುತ್ತದೆಂದು ಇವರ ೩-೪ ತಿಂಗಳ ಆಡಳಿತೆಯಿಂದ ಸ್ಪಷ್ಟವಾಗುತ್ತದೆ.

ಇಷ್ಟಾದ ಮೇಲೆ ಪಾಸಾದ ಯಾವತ್ತು ವಿದ್ಯಾರ್ಥಿನಿಗಳಿಗೂ, ಬ್ಯಾಹಟ್ಟಿ ಶಾಲೆಯಿಂದ [illegible]

ದಾತೃಗಳು ಶಿವಾರಾಧಕರಾಗಿದ್ದುದರಿಂದ ಬ್ರಾಹ್ಮಣರೆಂಬುವರಿಗೆ ಶಿವಾಯುಧ್ಧರೂ ಇಲ್ಲದಿದ್ದರೂ ದೋಷವಿಲ್ಲವೆಂದು ಹೇಳಿದರು. ಈ ಶ್ರುತಿಯಲ್ಲಿ ಇರುವ "ವಿಶಿಖಾಸು" ಎಂಬ ಪದದಲ್ಲಿರುವ ವಿ ಎಂಬ ಅಕ್ಷರಕ್ಕೆ ವಿಶೇಷವೆಂದಾಗುವದೋ ರಹಿತವೆಂದಾಗುವದೋ ಪಂಡಿತರೇ ಇದರ ವಿಚಾರಮಾಡಬೇಕು. ಭಟ್ಟಭಾಸ್ಕರಾಚಾರ್ಯರು ವಿ ಶಬ್ದಕ್ಕೆ ವಿಶೇಷ ಎಂಬ ಅರ್ಥವನ್ನೇ ಮಾಡಿದ್ದಾರೆ. "ವಿಶಿಖಾಸು ಕಪರ್ದಿನೇ" ಎಂಬುವ ವಾಕ್ಯದ ಅರ್ಥವನ್ನು ಸಹಜವಾಗಿ ನೋಡಬೇಕಾದರೆ ವಿವಿಧವಾದ ಶಿಖೆಯಿಂದ ಕೂಡಿದ ಜಟಾಜೂಟವುಳ್ಳವನೆಂದೇ ಅರ್ಥವಾಗುತ್ತದೆ. ಹೀಗೆ ಅಪಾರ್ಥಮಾಡಿ ಜನರಿಗೆ ಬೋಧಿಸುತ್ತ ಬಂದರೆ ಮತವು ಉರ್ಜಿತಾವಸ್ಥೆಗೆ ಬರುವ ಪರಿಯೆಂತು? ಈ ವಿಷಯವನ್ನು ಸಿಂಹಾಸನಾಧಿಪತಿಗಳು ಸಮ್ಯಕ್ ದೃಷ್ಟಿಯಿಂದ ನೋಡಿ ತಂದುಕೊಂಡು ಸರ್ವತ್ರ ಶುದ್ಧವಂಶದವರಲ್ಲಿ ಶಿವಾಧಾರಣ ಪದ್ಧತಿಯು ನೆರೆಗೊಳ್ಳುವಂತೆ ವ್ಯವಸ್ಥೆ ಮಾಡಬೇಕೆಂದು ಆಶಿಸುತ್ತೇನೆ.

ಶ್ರೀ ಪಟ್ಟದ ಚನ್ನಬಸವಸ್ವಾಮಿಗಳು
ಶಾಲಹಳ್ಳಿ ಹಿರೇಮಠ.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು. ಜೆನ್ಮಸ್ವಾಸನಮಹೋತ್ಸವಾರಾಧನೆ.

[illegible]

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ ಜಗದಾಚಾರ್ಯರಲ್ಲಿ ಪ್ರಾರ್ಥನೆ.

[illegible]

ಕಡೂರು ಡಿಸ್ಟ್ರಿಕ್ಟಿನ ಓಟರುಮಹಾಶಯರಲ್ಲಿ ವಿಜ್ಞಾಪನೆ.

[illegible]

ತಾ|| 24-1-30.

ಪಂಚಾಚಾರ್ಯ ಪ್ರಭಾ

೧೯೩೦ ನೇ ಫೆಬ್ರುವರಿ ತಾ|| ೩ ನೇ ಸೋಮವಾರ

ಇಂದ್ರಿಯಜಯ.

ಪರಾಂಚಿಖಾನಿವ್ಯತೃಣತ್ಸ್ವಯಂಭೂಃ ತಸ್ಮಾತ್ಪರಾಙ್ಪಶ್ಯತಿ ನಾಂತರಾತ್ಮನ್ |
ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷ ತ ಆವೃತ್ತಚಕ್ಷುರಮೃತತ್ವಮಿಚ್ಛನ್ ||

ಜಗಜ್ಜನ್ಮಾದಿಗಳಿಗೆ ಕಾರಣೀಭೂತನಾದ ಪರಮೇಶ್ವರನು ಕಣ್ಣು ಮೂಗು ಕಿವಿ ಮೊದಲಾದ ಐದು ಇಂದ್ರಿಯಗಳನ್ನು ಹೊರಗಿರುವ ಪದಾರ್ಥಗಳ ಮೇಲೆ ಹರಿಯುವ ಸ್ವಭಾವವುಳ್ಳವುಗಳನ್ನಾಗಿ ಮಾಡಿರುವುದರಿಂದ ಈ ಚಕ್ಷುರಾದಿ ಪಂಚಜ್ಞಾನೇಂದ್ರಿಯಗಳು ಒಳಗಿರುವ ನಿತ್ಯಸುಖಸ್ವರೂಪನಾದ ಪರಮಾತ್ಮನ ಕಡೆಗೆ ತಿರುಗಿನೋಡದೆ ಅನಿತ್ಯಸುಖದಾಯಕಗಳಾದ ಬಾಹ್ಯವಿಷಯಗಳಿಗೆರಗಿ ಬೇಸತ್ತು ಆತ್ಮನನ್ನು ದುಃಖಕ್ಕೀಡುಮಾಡಿವೆ. ಅದರೊಳಗೆ ಒಬ್ಬಾನೊಬ್ಬ ಧೀರನು ಮಾತ್ರ ಚಂಚಲಸ್ವಭಾವದ ಆ ಇಂದ್ರಿಯಗಳನ್ನು ಹೊರಗಣ ವಿಷಯಕ್ಕೆ ಎರಗದಂತೆ ತಡೆದು ಅಂತರಾತ್ಮನ ಕಡೆಗೆ ತಿರುಗಿಸಿ ಮುಕ್ತಿಸುಖವನ್ನು ಅನುಭವಿಸುವನೆಂದು ಶ್ರುತಿಯು ಬೋಧಿಸುವದರಿಂದ ಬಾಹ್ಯವಿಷಯಗಳಲ್ಲಿ ಆಶೆಯನ್ನು ಬಿಟ್ಟು ಮುಕ್ತಿಸಾಮ್ರಾಜ್ಯವೆಂಬ ಸ್ಥಿರಪದವಿಯನ್ನು ಅನುಭವಿಸುವದೇ ವಿವೇಕಿಗಳ ಕಾರ್ಯವಾಗಿದೆ. ಇವರೇ ವೀರರು; ಜಿತೇಂದ್ರಿಯರು; ಇಂತಹ ಪರಮಪವಿತ್ರಸ್ಥಿತಿಯನ್ನು ಹೊಂದಬೇಕಾದರೆ ಮಾನವನು ಮುಕ್ತಿಪ್ರತಿಬಂಧಕವಾದ ಆಸುರೀಸಂಪತ್ತನ್ನು ಘೋರವಿಷದಂತೆ ದೂರೀಕರಿಸಿ ಮುಕ್ತಿಸಾಧಕವಾದ ದೈವೀಸಂಪತ್ತನ್ನು ಸಂಗ್ರಹಿಸಬೇಕು. "ದೈವೀಸಂಪದ್ವಿಮೋಕ್ಷಾಯ ನಿಬಂಧಾಯಾಸುರೀಮತಾ" ದೈವೀಸಂಪತ್ತು ಮೋಕ್ಷಸೌಖ್ಯವನ್ನೂ, ಆಸುರೀಸಂಪತ್ತು ಬಂಧನವನ್ನೂ ಉಂಟುಮಾಡುವದು. ದೈವೀಸಂಪತ್ತೆಂಬುವದು ಪರಮೇಶ್ವರನ ಕೃಪಾಕಟಾಕ್ಷದ ಬಳಿಯಲ್ಲಿರುವದು. ಆಸುರೀಸಂಪತ್ತು ಆ ಪರಮೇಶ್ವರನನ್ನು ಬಿಟ್ಟು ಬಹು ದೂರವಾಗಿ ಇರುತ್ತದೆ. ಆಸುರೀಸಂಪತ್ತಿಗೂ ಪರಮೇಶ್ವರನ ಕೃಪೆಗೂ ಪರಸ್ಪರ ವೈಯ್ಯಧಿಕರಣ್ಯವೇ ಹೊರತು ಸಾಮಾನಾಧಿಕರಣ್ಯವಿರುವದಿಲ್ಲ. ಯಾರು ಆಸುರೀಸಂಪತ್ತನ್ನು ಅರ್ಜಿಸುವರೋ ಅವರನ್ನು ಆ ಪರಶಿವನು ಉದಾಸೀನ ದೃಷ್ಟಿಯಿಂದ ನೋಡುವನು. ಯಾರು ದೈವೀಸಂಪತ್ತಿನಲ್ಲಿ ಅಭಿಮುಖರಾಗುತ್ತಾರೆಯೋ ಅವರ ಯೋಗಕ್ಷೇಮಗಳನ್ನೆಲ್ಲಾ ಆ ಪರಮೇಶ್ವರನೇ ವಹಿಸಿರುತ್ತಾನೆ. ನಾವುಗಳು ಮಧುವಿಗೆರಗಿದ ನೊಣದಂತೆ ವಿಷಯಸುಖವನ್ನೇ ನಿಜಸುಖವೆಂದು ಭ್ರಮಿಸಿ ವಿಷಯಸಂಕಟದಲ್ಲಿ ಶಿಲುಕಿ ನರಳುತ್ತಲಿದ್ದೇವೆ. ಈ ವಿಷಯಸಂಕಟವನ್ನು ತಪ್ಪಿಸಿಕೊಳ್ಳುವವರೆಗೂ ದುಃಖನಿವೃತ್ತಿಯಾಗುವಂತೆ ಇಲ್ಲವು. ದೈವೀಸಂಪತ್ತೆಂಬ ಅವಲಂಬನೆಯನ್ನು ಕೊಟ್ಟು ಇಂತಹ ವಿಷಯವೆಂಬ ಕೆಸರಿನಿಂದ ಮಾನವರನ್ನು ದಾಟಿಸುವುದಕ್ಕಾಗಿಯೇ ಮಹಾತ್ಮರಾದ ಆಚಾರ್ಯರು ಭೂಲೋಕದಲ್ಲಿ ಅವತಾರಮಾಡಿದರು. ಗುರುನಿಂದೆ, ಅಜ್ಞಾನ, ಪ್ರಾಣಿಹಿಂಸೆ, ಅಶುಚಿತ್ವ, ಕಾಠಿಣ್ಯ, ಕ್ರೋಧ, ನಿರ್ದಯೆ, ಲೋಭ, ಮಾತ್ಸರ್ಯ, ದರ್ಪ, ದುರಾಚಾರ, ದೈವದ್ರೋಹ ಮೊದಲಾದವುಗಳೇ ಆಸುರೀಸಂಪತ್ತುಗಳು. ಗುರುಭಕ್ತಿ, ಅಂತಃಕರಣಶುದ್ಧಿ, ಆತ್ಮಜ್ಞಾನ, ಯೋಗ, ಧ್ಯಾನ, ಬಹಿರಂತರಿಂದ್ರಿಯನಿಗ್ರಹ, ಶಿವಪೂಜೆ, ಶಾಸ್ತ್ರಾಧ್ಯಯನ, ಋಜುತೆ, ಅಹಿಂಸೆ, ಸತ್ಯ, ಅಕ್ರೋಧ, ಶಾಂತಿ, ಭೂತದಯೆ, ಧೃತಿ, ಶೌಚ, ಅದ್ರೋಹ ಮೊದಲಾದವುಗಳೇ ದೈವೀಸಂಪತ್ತುಗಳೆನಿಸುವವು. ಪ್ರಪಂಚದಲ್ಲಿ ಆಯಾ ಮತಸ್ಥಾಪಕರಾದ ಆಚಾರ್ಯರು ಪರಮಾತ್ಮನ ಆರಾಧನೆಯನ್ನು ಮಾಡುವ ಒಂದೊಂದು ಮಾರ್ಗವನ್ನು ಪ್ರವೇಶಿಸಿ, ಸಕಲ ಮಾನವರ ಹೃದಯಕ್ಷೇತ್ರದಲ್ಲಿ ಮೋಕ್ಷಹೇತುವಾದ ದೈವೀಸಂಪತ್ತೆಂಬ ಅಮೃತಬೀಜವನ್ನು ಬಿತ್ತಿ, ಅವುಗಳಿಗನುಕೂಲವಾದ ಸಿದ್ಧಾಂತವೆಂಬ ಬೇಲಿಯನ್ನು ಕಟ್ಟಿ, ಈ ಆಸುರೀಸಂಪತ್ತುಗಳೆಂಬ ಪಶುಗಳಿಗೆ ಅವಕಾಶವಿಲ್ಲದಂತೆ ಮಾಡಿ, ಮತಸ್ಥಾಪನಾಚಾರ್ಯರೆಂಬ ಹೆಸರನ್ನು ಪಡೆದರು. ಅಂತಹ ಆಚಾರ್ಯರೊಳಗೆ ಶ್ರೀ ರೇಣುಕಾದಿ ಪಂಚಾಚಾರ್ಯರೆಂಬವರೇ ವೀರಶೈವಮತಸ್ಥಾಪಕರಾಗಿರುತ್ತಾರೆ. ದೈವೀಸಂಪತ್ತಿನ ಆಧಾರದಲ್ಲಿಯೇ ಈ ವೀರಶೈವಮತವು ನಿಂತಿರುತ್ತದೆ. ದೈವೀಸಂಪತ್ತನ್ನು ಎಂದು ಇವರು ಕಳೆದುಕೊಳ್ಳುತ್ತಾರೆಯೋ ಅಂದೇ ಈ ಮತದ ವೈಭವವು ನಷ್ಟವಾದಂತೆಯೇ ಸರಿ! ಮಾನವರು ಪಶುಗಳಂತೆ ಕೇವಲ ಬಾಹ್ಯವಿಷಯದಲ್ಲಿ ಮಾತ್ರ ವಿಶ್ರಾಂತರಾಗದೆ, ರಥದ ಕುದುರೆಗಳನ್ನು ಅಡ್ಡದಾರಿಗೆ ತೆಗೆದುಕೊಂಡು ಹೋಗದೆ ಉತ್ತಮಮಾರ್ಗದಲ್ಲಿ ತೆಗೆದುಕೊಂಡು ಹೋಗಿ ಸ್ವಸ್ಥಾನವನ್ನು ಸೇರಿ ಸುಖಪಡುವ ರಥಿಕನಂತೆ ಅನಿತ್ಯವಾದ ವಿಷಯಗಳ ಕಡೆಗೆ ಹೋಗದಂತೆ ಇಂದ್ರಿಯಗಳನ್ನು ನಿರೋಧಿಸಿ ಮುಕ್ತಿಸ್ಥಾನವನ್ನು ಹೊಂದಿ ನಿತ್ಯಸುಖಿಗಳೆನಿಸಿಕೊಳ್ಳತಕ್ಕದ್ದು. ಇಂತಹ ಮುಕ್ತಿಸುಖವನ್ನು ಹೊಂದಬೇಕಾದರೆ ಗುರುಭಕ್ತಿ ಮೊದಲಾದ ದೈವೀಸಂಪತ್ತೇ ಸಾಧನವಾಗಿದೆ. ಗುರುದ್ರೋಹ, ಅಸತ್ಯ, ಹಿಂಸೆ ಮುಂತಾದ ಆಸುರೀಸಂಪತ್ತೇ ಮುಕ್ತಿಗೆ ಪ್ರತಿಬಂಧಕವಾಗಿದೆ. ಶ್ರೀ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತವನ್ನು ಅವಲಂಬಿಸುವವರು ಗುರುನಿಂದೆ, ಹಿಂಸೆ, ನಿರ್ದಯೆ ಮೊದಲಾದ ಆಸುರೀಸಂಪತ್ತನ್ನು ವ್ಯಾಘ್ರಾದಿ ಕ್ರೂರಮೃಗಗಳಂತೆ ಬಹುದೂರವಾಗಿ ಅಟ್ಟಬೇಕು. ಗುರುಭಕ್ತಿ, ಅಹಿಂಸಾ, ಸತ್ಯ ಮೊದಲಾದ ದೈವಸಂಪತ್ತನ್ನು ಸೌಮ್ಯಸ್ವಭಾವದ ಗೋವುಗಳಂತೆ ಅರ್ಜಿಸುತ್ತಿರಬೇಕು. ಕೆಲಕಾಲದಿಂದೀಚೆಗೆ ಅನೇಕರು ತಮ್ಮ ಮೂಲಧನವಾದ ದೈವೀಸಂಪತ್ತಿಗೆ ತಿಲಾಂಜಲಿಯನ್ನು ಕೊಟ್ಟು ಆಸುರೀಸಂಪತ್ತನ್ನೇ ತಮ್ಮ ಮೂಲಧನವನ್ನಾಗಿ ಭಾವಿಸಿಕೊಂಡಿರುತ್ತಾರೆ. ತನ್ನ ಸುಖಸಾಧಕವಾದ ವಿಷಯಗಳನ್ನು ತಿಳಿದುಕೊಳ್ಳದೆ ನೀತಿದಪ್ಪಿ ಉಪಾಧ್ಯಾಯರನ್ನೇ ಟೀಕಿಸುವ ಉದ್ಧತನಾದ ವಿದ್ಯಾರ್ಥಿಯಂತೆ ವೀರಶೈವ ಸಮಾಜದಲ್ಲಿ ಕೆಲವರು ತಮ್ಮ ತಮ್ಮ ಸ್ವಭಾವವನ್ನು ತೋರಿಸುವುದಕ್ಕಾಗಿ ಗ್ರಂಥಗಳನ್ನು ನೋಡದೆ, ಶಾಲಮಾನಗಳನ್ನು ವಿಚಾರಿಸದೆ, ಆಚಾರ್ಯವಾದದಿಂದ ಅನುಗ್ರಹೀತವಾದ ತಮ್ಮ ಕೊರಳಿನಲ್ಲಿ ಧರಿಸಿರುವ ಶಿವಲಿಂಗದ ಅರಿವಿಲ್ಲದೆ, ಮೂಲಗುರುಗಳನ್ನೇ ಟೀಕಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಇಂಥವರನ್ನು ಅವಾಂತರ ವೀರಶೈವರೆನ್ನುವುದಕ್ಕೆ ಸಂದೇಹವಿಲ್ಲ. ವೀರಶೈವನಾದವನು ತನಗೆ ಅಷ್ಟಾವರಣಗಳನ್ನು ಅನುಗ್ರಹಿಸುವ ಗುರುವನ್ನು ನಿಂದಿಸುವನೇ? ಶ್ರೀ ಪಂಚಾಚಾರ್ಯರ ನಾಮಸ್ಮರಣ ಮಾಡದ ಮಾನವನು ವೀರಶೈವನಾಗಬಲ್ಲನೇ? ಇಂಥವರು ಹಿಂದೆ ಎಂದೂ ಹುಟ್ಟಿರಲಿಲ್ಲ. ಈಗ ಮಾತ್ರ ಅಲ್ಲಲ್ಲಿ ಹುತ್ತದಿಂದ ಹಾವು ತಲೆಹಾಕುವಂತೆ ತಲೆದೋರುವುದನ್ನು ನೋಡಿದರೆ ಕಲಿಯು ತನ್ನ ಸಾಮರ್ಥ್ಯವನ್ನು ಅಲ್ಪ ಸ್ವಲ್ಪ ತೋರಿಸಿದನೆಂದೇ ಹೇಳಬೇಕಾಗಿದೆ.

ಮಕ್ಕಳು ತಂದೆಗಳನ್ನು ದೂಷಿಸುವುದೂ, ಪ್ರಜೆಗಳು ಪ್ರಭುಗಳನ್ನು ದೂಷಿಸುವುದೂ, ಸತಿಯು ಪತಿಯನ್ನು ದೂಷಿಸುವುದೂ, ಶಿಷ್ಯರು ಗುರುಗಳನ್ನು ದೂಷಿಸುವುದೂ ಇಂತಹ ವಿಪರೀತ ಧರ್ಮಗಳು ಜನಾಂಗದಲ್ಲಿ ತೋರದಿದ್ದರೆ ಕಲಿಯ ಸಮಾವೇಶವಾಗಿದೆಯೆಂದು ಊಹಿಸುವ ಬಗೆಯೆಂತು? ಆದ್ದರಿಂದ ಇಂಥವರು ಸಾಧುಸಜ್ಜನರ ಮೇಲೆ ಯುದ್ಧಸನ್ನದ್ಧನಾದ ಕಲಿಮಹಾರಾಜನಸಡೆಯು ಭಟರೇ ಸರಿ! ಪ್ರಕೃತದಲ್ಲಿ ಇಂಥವರ ವಿಷಯದಲ್ಲಿ ಉದಾಸೀನತೆಯೇ ಶಾಂತಿಮಂತ್ರವಾಗಿದೆ. ಇನ್ನುಳಿದ ಆಸ್ತಿಕ ಶಿಖಾಮಣಿಗಳುಮಾತ್ರ, ತಮ್ಮ ರಾಜಮಾರ್ಗವನ್ನು ಬಿಟ್ಟು ಮುಳ್ಳುಳ್ಳ ಹಳ್ಳಕೊಳ್ಳಗಳಲ್ಲಿ ಕಾಲಿಡದೆ ಮಹಾಚಾರ್ಯರಿಂದ ಅನುಗ್ರಹೀತವಾದ ಅಷ್ಟಾವರಣ ಪಂಚಾಚಾರಗಳನ್ನು ಬಿಡದೆ, ತಮ್ಮ ಇಂದ್ರಿಯಗಳನ್ನು ಅನಿತ್ಯವಾದ ವಿಷಯಗಳಲ್ಲಿ ಪ್ರವೇಶಿಸದೆ ಇಂದ್ರಿಯಜಯವನ್ನು ಹೊಂದಿ ಆ ಇಂದ್ರಿಯಗಳನ್ನು ನಿತ್ಯನಾದ ಪರಮಾತ್ಮನ ಕಡೆಗೆ ಸಮ್ಮುಖಗೊಳಿಸಿ ತಮಗುಂಟಾಗಿರುವ ಅನರ್ಥಕಾರಿಯಾದ ಕಿಂಚಿಜ್ಞತ್ವಾದಿಗಳನ್ನು ಪರಿಹರಿಸಿಕೊಂಡು ಪರಮಾತ್ಮನ ಸರ್ವಜ್ಞತ್ವಾದಿ ಗುಣಗಳನ್ನು ಪಡೆದು ಶ್ರೀ ರೇಣುಕಾದಿ ಪಂಚಾಚಾರ್ಯರಿಂದುಕ್ತವಾದ ಲಿಂಗಾಂಗಸಾಮರಸ್ಯ ಜ್ಞಾನವನ್ನು ಹೊಂದಿ "ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ" ಎಂದು ಹಿಂದೆ ಹೇಳಿದ ಶ್ರುತ್ಯರ್ಥಕ್ಕನುಸಾರವಾಗಿ ತಮಗೆ ರೂಢಮೂಲವಾಗಿ ಬಂದಿರುವ "ವೀರಶೈವ" ಎಂಬ ಹೆಸರನ್ನು ಅನ್ವರ್ಥ ಮಾಡಿಕೊಂಡು, ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಗವಿಪುರದಲ್ಲಿ ವಾಸಮಾಡುತ್ತಿದ್ದ ಚನ್ನನೆಂಬವನು ತನ್ನ ಹೆಂಡತಿಯನ್ನು ಕೊಂದು ಎಲ್ಲಿಯೋ ಓಡಿಹೋಗಿರುವನು. ಪೋಲೀಸರು ಪತ್ತೆಮಾಡುತ್ತಿರುವರು.

ರಾಜಧಾನಿಯಲ್ಲಿ ಅರಮನೆಯ ಪಕ್ಕದಲ್ಲಿರುವ ಕೃಷ್ಣದೇವರ ದೇವಸ್ಥಾನವನ್ನು ಕೆಡವಿ ಬೇರೆಕಡೆಯಲ್ಲಿ ಹೊಸದೇವಸ್ಥಾನವನ್ನು ಕಟ್ಟುವಂತೆ ಏರ್ಪಾಡಾಗಿರುವದಾಗಿ ವದಂತಿಯಿದೆ.

ಶಿವಮೊಗ್ಗೆಯಲ್ಲಿ ನೂತನವಾಗಿ ಕಟ್ಟುವ ರಜತಮಹೋತ್ಸವದ ಆಸ್ಪತ್ರೆಯ ಶಂಕುಸ್ಥಾಪನಮಹೋತ್ಸವವು ಶ್ರೀಮನ್ಮಹಾರಾಜರವರಿಂದ ಇದೇ ಫೆಬ್ರುವರಿ ತಿಂಗಳಲ್ಲಿ ನೆರವೇರಿಸಲ್ಪಡುವದು.

ಕ್ಯಾಂಬೆ ನವಾಬರವರು ಪರಿವಾರ ಸಮೇತರಾಗಿ ಕಳೆದ ಗುರುವಾರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿರುವರು. ಮರುದಿವಸ ಪ್ರಾತಃಕಾಲ ಗೌರವಾರ್ಥವಾಗಿ 11 ತೋಪುಗಳು ಹಾರಿಸಲ್ಪಟ್ಟವು.

ಬೆಂಗಳೂರು ನಗರದ ಚಿಕ್ಕಪೇಟೆಯಲ್ಲಿರುವ ಪ್ರಸಿದ್ಧ ರಬ್ಬರುಮೊಹರುಗಳ ವ್ಯಾಪಾರಿಗಳಾದ ಮೆಸರ್ಸ್ ಯಜಮಾನ್ ಅಂಡ್ ಸನ್ ರವರ 1930 ನೆಯ ವರ್ಷದ ಸಚಿತ್ರಕ್ಯಾಲೆಂಡರನ್ನು ಈ ವಾರದ ಪತ್ರಿಕೆಯ ಸಂಗಡ ನಮ್ಮ ಚಂದಾದಾರರಿಗೆಲ್ಲಾ ಉಚಿತವಾಗಿ ಹಂಚಿರುತ್ತೇವೆ.

ರಾಜಧಾನಿಯಲ್ಲಿರುವ ಮುನಿಸಿಪಲ್ ಸೂಯಜ್ ಫಾರಮ್ಮಿನಲ್ಲಿ ಬೆಳೆಯುವ ತರಕಾರಿ ಮುಂತಾದ್ದನ್ನು ಅನೇಕರು ಬಹು ಪ್ರೀತಿಯಿಂದ ತಂದು ಉಪಯೋಗಿಸುವರಷ್ಟೆ! ಹೆಲ್ತ್ ಆಫೀಸರವರು ಅಲ್ಲಿ ಬೆಳೆಯುವ ಕಾಯಿಪಲ್ಯಗಳನ್ನೆಲ್ಲಾ ಪರೀಕ್ಷಿಸಿ ಅವುಗಳ ಸೇವನೆಯಿಂದ ವಿಷಜ್ವರವು ಪ್ರಾಪ್ತವಾಗುವದೆಂದು ತಿಳಿಯಪಡಿಸಿರುತ್ತಾರೆ.

ಶ್ರೀ ಮುಡುಕುತೊರೆಯ ಕ್ಷೇತ್ರದಲ್ಲಿ ಇದೇ ತಿಂಗಳು 10-11-12 ನೆಯ ತಾರೀಖಿನ ದಿವಸಗಳಲ್ಲಿ ವೀರಶೈವಮತಸಂವರ್ಧಿನೀ ಸಭೆಯು ನಡೆಯುವದು. 12 ನೆಯ ತಾರೀಖಿನ ದಿವಸ ನಡೆಯುವ ಬಹುಮಾನಸಭೆಯ ಅಧ್ಯಕ್ಷತೆಯನ್ನು ರಾಜಕವಿಭೂಷಣ ಶ್ರೀಯುತ ಎಚ್. ಲಿಂಗರಾಜಅರಸರವರು ವಹಿಸುವರೆಂದು ತಿಳಿದುಬರುತ್ತದೆ.

ಬೆಂಗಳೂರು ಎರಡನೆಯ ಗಲಾಟೆಯ ಸಂಬಂಧದಲ್ಲಿ ಪೋಲೀಸಿನವರು 92 ಜನರ ಮೇಲೆ ಮೊಖದ್ದಮೆಯನ್ನು ಹೂಡಿದ್ದರಷ್ಟೆ! ಸಿಟಿಮ್ಯಾಜಿಸ್ಟ್ರೇಟರು 30 ಜನರನ್ನು ಸಾಕಾದಷ್ಟು ಕಾರಣಗಳಿಲ್ಲವೆಂದು ಬಿಡುಗಡೆಮಾಡಿ, ಉಳಿದವರ ವಿಚಾರಣೆಯನ್ನು ಮಾಡುತ್ತಿರುವರು. ಪೋಲೀಸರ ಪರವಾಗಿ ಇದುವರೆಗೆ 47 ಜನರು ಸಾಕ್ಷಿ ಹೇಳಿರುವರು.

ಕಳೆದ ಜನವರಿ ತಿಂಗಳು 20 ನೆಯ ತಾರೀಖಿನ ದಿವಸ ಬೆಂಗಳೂರಿಗೆ ಹೋಗುತ್ತಿದ್ದ ಮೇಲ್ ಟ್ರೈನಿನಲ್ಲಿ ಸ್ಥಳಾಭಾವದಿಂದ 5-6 ಜನ ಪಂಜಾಬಿಗಳಲ್ಲಿ ಜಗಳವು ಹುಟ್ಟಿ ಕಡೆಗೆ ಅವರೆಲ್ಲರೂ ದೊಣ್ಣೆಗಳಿಂದ ಹೊಡೆದಾಡಿದರೆಂದೂ ಒಬ್ಬನ ತಲೆಗೆ ಪೂರಾ ಪೆಟ್ಟು ಬಿದ್ದು ಆಸ್ಪತ್ರೆಗೆ ಸಾಗಿಸಲ್ಪಟ್ಟನೆಂದೂ ಮಿಕ್ಕವರನ್ನು ದಸ್ತಗಿರಿಮಾಡಿರುವರೆಂದೂ ತಿಳಿದುಬಂದಿದೆ.

ಬೆಂಗಳೂರು ನಗರದಲ್ಲಿ ಮ|| ರಾ|| ಹೊಸಹಳ್ಳಿ ಕೆ. ವೀರಣ್ಣಗೌಡರು ನೂತನವಾಗಿ ಹೊರಡಿಸುತ್ತಿರುವ "ಚಿತ್ರಗುಪ್ತ" ವಾರಪತ್ರಿಕೆಯ ಪ್ರತಿಯೊಂದನ್ನು ನಮಗೆ ಕಳುಹಿಸಿರುತ್ತಾರೆ. ಇವರು ಇದೇ ಹೆಸರಿನಿಂದ ದಿನಪತ್ರಿಕೆಯೊಂದನ್ನು ಈಗ ಎರಡು ವರ್ಷಗಳಿಂದಲೂ ಹೊರಡಿಸುತ್ತಿರುವರು. ಕೇವಲ ದೇಶಸೇವೆಗಾಗಿಯೇ ಕೆಲಸಮಾಡುತ್ತಿರುವ ಈ ಪತ್ರಿಕೆಗೆ ಮಹಾಜನರ ಪ್ರೋತ್ಸಾಹವು ವಿಶೇಷವಾಗಿ ದೊರೆಯಲೆಂದು ಹಾರೈಸುತ್ತೇವೆ.

ಮುಂದಿನ ಮಾರ್ಚಿ ಎಂಟನೆಯತಾರೀಖಿನ ದಿವಸ ನಡೆಯುವ ನ್ಯಾಯವಿಧಾಯಕ ಸಭೆಯ ಚುನಾವಣೆಗೆ ಸದ್ಯಃ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿರುವ ಮ|| ರಾ|| ಬಿ. ಎಸ್. ಪುಟ್ಟಸ್ವಾಮಿ ಬಿ.ಎ., ಬಿ.ಎಲ್., ಅಡ್ವೋಕೇಟರವರು ಒಬ್ಬ ಉಮೇದುವಾರರಾಗಿ ನಿಂತಿರುತ್ತಾರೆ. ಕಾರ್ಯದಕ್ಷರೂ, ಪ್ರಜಾಹಿತೈಷಿಗಳೂ ಆದ ಇವರಿಗೆ ದೇಶಾಧಿಮಾನಿಗಳೆಲ್ಲರೂ ತಮ್ಮ ಘನವಾದ ಓಟನ್ನು ಕೊಟ್ಟು ಚುನಾಯಿಸಿ ಸದರಿಯವರಿಗೆ ದೇಶಸೇವೆಮಾಡಲವಕಾಶಕೊಡುವರೆಂದು ಆಶಿಸುತ್ತೇವೆ.

ರಾಜಧಾನಿಯ ವಾಸಸ್ಥನಾದ ಎಸ್. ಕೃಷ್ಣರಾವ್ ಎಂಬ 22 ವರ್ಷ ವಯಸ್ಸಿನ ಬ್ರಾಹ್ಮಣ ತರುಣನು ಕಳೆದ ಜನವರಿ 21 ನೆಯ ತಾರೀಖಿನ ದಿವಸ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ತಾನು ಮುಸಲ್ಮಾನ ಮತಕ್ಕೆ ಸೇರಿಕೊಳ್ಳಲು ಅಪ್ಪಣೆಯನ್ನು ಕೊಡುವಂತೆ ಅರ್ಜಿಯನ್ನು ಹಾಕಿದನೆಂದೂ, ಅದಕ್ಕೆ ಮ್ಯಾಜಿಸ್ಟ್ರೇಟರು ಇದಕ್ಕೆ ತಮ್ಮ ಒಪ್ಪಿಗೆಯು ಬೇಕಿಲ್ಲವೆಂದು ಹೇಳಿದರೆಂದೂ, ಅನಂತರ ಆ ತರುಣನು ಅದರಂತೆಯೇ ತನ್ನ ಅರ್ಜಿಯ ಮೇಲೆ ಬರೆದುಕೊಡಬೇಕೆಂದು ಮ್ಯಾಜಿಸ್ಟ್ರೇಟರಿಗೆ ಹೇಳಲು, ಮ್ಯಾಜಿಸ್ಟ್ರೇಟರು ಹಾಗೆ ಮಾಡದೆ ಅರ್ಜಿಯನ್ನು ಪೋಲೀಸರಿಗೆ ತನಿಖೆಯ ಬಗ್ಗೆ ಕಳುಹಿಸಿರುವರೆಂದೂ ತಿಳಿದುಬಂದಿದೆ.

ಕಲ್ಕತ್ತೆಯ ಪ್ರಸಿದ್ಧಗಾಯಕಿಯಾದ ಮಿಸ್. ಗೋಹರ್ ಜಾನಳು ಈಗ್ಗೆ ಒಂದು ವರುಷದಿಂದ ಮೈಸೂರು ಆಸ್ಥಾನ ಗಾಯಕಿಯಾಗಿ ನಿಯಮಿಸಲ್ಪಟ್ಟು ರಾಜಧಾನಿಯಲ್ಲೇ ವಾಸವಾಗಿರುತ್ತಿದ್ದಳು. ಈಕೆಯು ಕಳೆದ ಡಿಸೆಂಬರ್ 12 ನೆಯ ತಾರೀಖಿನ ದಿವಸ ಮಿ|| ಮಿರ್ಜಾಕಂಬರಲ್ಲಿ ಎಂಬುವನನ್ನು ಮದುವೆಯಾದಳು. ತಾರೀಖು 17ರಲ್ಲಿ ಯಾವುದೋ ಪ್ರಬಲರೋಗವು ಪ್ರಾಪ್ತವಾಗಲು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದು ಜನವರಿ 17 ನೆಯ ತಾರೀಖಿನ ದಿವಸ ಆಸ್ಪತ್ರೆಯಲ್ಲೇ ಮೃತಿಹೊಂದಿದಳು. ಈಕೆಯು ತನ್ನ ಹತ್ತುಲಕ್ಷ ರೂಪಾಯಿಗಳ ಮೇಲ್ಪಟ್ಟ ಆಸ್ತಿಯನ್ನೆಲ್ಲಾ ತನ್ನ ಗಂಡನಿಗೆ ಕೊಡಬೇಕೆಂದು ಉಯಿಲು ಬರೆದಿರುವಳಂತೆ!

ಮುಂದಿನ ಮಾರ್ಚಿ 8 ನೆಯ ತಾರೀಖಿನ ದಿವಸ ನಡೆಯುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗೆ ಮೈಸೂರುತಾಲೂಕಿನಿಂದ ಶ್ರೀಯುತ ಜೆ. ಮಲ್ಲಣ್ಣನವರು, ಶ್ರೀ|| ಯಸ್. ಕೃಷ್ಣಸ್ವಾಮಿರಾಯರು, ಬಿ.ಎ., ಎಲ್‌ಎಲ್.ಬಿ., ಮತ್ತು ಶ್ರೀ|| ಪಂ|| ಚಂದ್ರಭಾಸಿಂಗರವರು, ಟಿ. ನರಸೀಪುರ ತಾಲೂಕಿನಿಂದ ಶ್ರೀ|| ಬಿ. ಎಸ್. ಪುಟ್ಟಸ್ವಾಮಿ, ಬಿ.ಎ., ಬಿ.ಎಲ್., ಶ್ರೀ|| ಎಂ. ಎಸ್. ಮಹಾಂತದೇವರು, ಎಂ.ಎ., ಎಲ್‌ಎಲ್.ಬಿ., ಮತ್ತು ಶ್ರೀ|| ಪಟೇಲ್ ಸಿದ್ದೇಗೌಡರು, ನಂಜನಗೂಡು ತಾಲೂಕಿನಿಂದ ಶ್ರೀ|| ಸಿ. ಪಿ. ಪದ್ಮನಾಭಯ್ಯನವರು, ಬಿ.ಎ.,ಬಿ.ಎಲ್., ಶ್ರೀ|| ಸಾಹುಕಾರ್ ಬಿಡಯ್ಯನವರು, ಶ್ರೀ|| ಸಾಹುಕಾರ್ ನಾಗಣ್ಣನವರು, ಯಳಂದೂರು ತಾಲೂಕಿನಿಂದ ಶ್ರೀ|| ಮಾಂಬಳ್ಳಿ ಸಾಹುಕಾರ್ ಬಸವಣ್ಣದೇವರು, ರಾಜಧಾನಿಯ ಮೈಸೂರು ಬಾರ್-ಅಸೋಸಿಯೇಷನ್ನಿನ ಪರವಾಗಿ ಶ್ರೀ|| ಎಸ್. ಕೃಷ್ಣಸ್ವಾಮಿರಾಯರು, ಬಿ.ಎ., ಎಲ್‌ಎಲ್.ಬಿ., ಇವರುಗಳು ಉಮೇದುವಾರರಾಗಿ ನಿಂತಿದ್ದರು. ಮೇಲ್ಕಂಡ ತಾಲೂಕುಗಳಿಂದ ಚುನಾಯಿಸಲ್ಪಡುತ್ತಿದ್ದ ಮೆಂಬರುಗಳ ಸಂಖ್ಯೆಗಿಂತಲೂ ಹೆಚ್ಚು ಜನರು ಉಮೇದುವಾರರಾಗಿ ನಿಂತಿರಲಿಲ್ಲವಾಗಿ ಮೇಲ್ಕಂಡವರೆಲ್ಲರೂ ಚುನಾವಣೆಯಿಲ್ಲದೆ ಡಿ|| ಬೋರ್ಡ್‌ಮೆಂಬರರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ.

ಮುಂಬಯಿಯ ಗಿರಣಿ ಮಾಲೀಕರುಗಳಿಗೆ ಕಳೆದ 6 ವರ್ಷಗಳಲ್ಲಿ ಒಟ್ಟು 11 ಕೋಟಿ ರೂ. ಗಳ ನಷ್ಟ ಸಂಭವಿಸಿರುವದಂತೆ!

ಊನನಾಡರಾಜ್ಯದಲ್ಲಿ ನವರಾತ್ರಿಯ ಕಾಲದಲ್ಲಿ ಯಾರೂ ಪಶುಬಲಿಯನ್ನು ಕೊಡಕೂಡದೆಂದು ಆಜ್ಞೆಮಾಡಿರುವರು. ಸ್ತುತ್ಯ!

ಗ್ರೀಂಕೆಸೀ ಎಂಬಲ್ಲಿ ಒಬ್ಬ ಒಕ್ಕಲಿಗನ ಭೂಮಿಯ ಮೇಲೆ ಒಂದು ರಾತ್ರಿಯಲ್ಲಿ ಸಿಲ್ವರ್ ಫಿಷ್ ಎಂಬ ಒಂದು ಬಗೆಯ ಮೀನುಗಳ ಮಳೆಯೇ ಸುರಿಯಿತಂತೆ!

[illegible] ಕುಕ್ಕೋಬೊರಾಯರ ಮನೆತನಕ್ಕೆ ಸೇರಿದ 1[illegible] ವಯಸ್ಸಿನ ಸ್ತ್ರೀಯೊಬ್ಬಳು 45 ವರ್ಷದ ರಷೀದ [illegible]ಸಲ್ಮಾನ ಬ್ಯಾರಿಸ್ಟರನ್ನು ಮದುವೆಯಾಗಲಿರುವಳು.

ಲಾಹೋರ್ ಕಾಂಗ್ರೆಸ್ಸಿನ ತೀರ್ಮಾನದಂತೆ ಇದುವರೆಗೆ 110 ಜನರಿಗೆ ಮೇಲ್ಪಟ್ಟು ನ್ಯಾಯವಿಧಾಯಕ ಸಭೆಯ ಸದಸ್ಯರು ತಮ್ಮ ಮೆಂಬರುತನಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

ಅಮೇರಿಕೆಯಲ್ಲಿ 200 ಕೋಟಿ ಮೋಂಬತ್ತಿಯ ಪ್ರಕಾಶವುಳ್ಳ ಒಂದು ಎಲೆಕ್ಟ್ರಿಕ್ ದೀಪವನ್ನು ಹೊಸದಾಗಿ ತಯಾರಿಸಿರುವರು. ಇದರ ಪ್ರಕಾಶವು 1000 ಮೈಲುಗಳವರೆಗೆ ಬೀಳುವದಂತೆ!

ಅಫ್ಘಾನಿಸ್ಥಾನದ ನೂತನ ಅಮೀರ್ ನಾದಿರ್ ಖಾನರು ಅಮಾನುಲ್ಲರ ಸುಧಾರಣೆಗಳನ್ನೇ ಜಾರಿಗೆ ತರುತ್ತಿರುವರಂತೆ! ಅನೇಕ ಸ್ತ್ರೀಯರು ಘೋಷೆಯನ್ನು ತ್ಯಜಿಸಿರುವರು. ಕಾಬೂಲ ರಾಜಮನೆತನದ ಸ್ತ್ರೀಯರು ಘೋಷೆಯಿಲ್ಲದೆ ಮೋಟಾರಿನಲ್ಲಿ ಬಹಿರಂಗವಾಗಿ ಸಂಚರಿಸಲಾರಂಭಿಸಿರುವರು.

ಮಿ|| ಆಗಾಖಾನರವರ ಪ್ರಥಮಹಿಂದೀ ವೈಮಾನಿಕಸ್ಪರ್ಧೆಯ ಬಹುಮಾನವನ್ನು ಗೆಲ್ಲಲು ಇಂಗ್ಲೆಂಡಿನಿಂದ ಹೊರಟಿರುವ ಮನಮೋಹನಸಿಂಗರವರು ಕಳೆದ ಜನವರಿ 29 ನೆಯ ತಾರೀಖಿನ ದಿವಸ ಇಟಲಿಯಲ್ಲಿರುವ ಮಾರ್ಸೇಲ್ಸ್ ಪಟ್ಟಣವನ್ನು ತಲುಪಿ ಅದೇದಿನ ಮುಂದೆ ಸ್ಪೈನಿಯಾನಗರಕ್ಕೆ ತೆರಳಿದರು.

ಧಾರವಾಡ ಜಿಲ್ಲಾ ಬಂಕಾಪೂರ ತಾಲೂಕು ಮಂತ್ರವಾಡೀಗ್ರಾಮದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರೀ ರೇವಣಸಿದ್ಧೇಶ್ವರಸ್ವಾಮಿಯ ರಥೋತ್ಸವವು ಕಳೆದ ತಿಂಗಳು ತಾರೀಖು 13ರಿಂದ 22 ರವರೆಗೆ ಒಳ್ಳೇ ವೈಭವದಿಂದ ಜರುಗಿತೆಂದೂ ಮ|| ರಾ|| ಹುಬ್ಬಳ್ಳಿ ಸಿದ್ಧಲಿಂಗಪ್ಪನವರು 9 ದಿವಸಗಳವರೆಗೆ ದಾಸೋಹವನ್ನಿಟ್ಟು ಅನ್ನದಾನಮಾಡಿದರೆಂದೂ ಹಾಗೂ ದನಕರುಗಳ ಮಾರಾಟವು ಸಹ ನಡೆಯಿತೆಂದೂ ಒಬ್ಬ ಬಾತ್ಮೀದಾರರು ತಿಳುಹಿಸುತ್ತಾರೆ.

ಕಳೆದ ಘೋರಯುದ್ಧದಲ್ಲಿ 10,89,919 ಜನ ಬ್ರಿಟಿಷ್ ಸೈನಿಕರು ಮೃತಪಟ್ಟರೆಂದೂ, ಅವರಲ್ಲಿ 5,85,114 ಜನರನ್ನು ಮಾತ್ರ ಗುರ್ತಿಸಲಾಯಿತೆಂದೂ, ಇನ್ನುಳಿದ 5,04,805 ಜನರು ವಿನಾದರೆಂಬುದು ತಿಳಿಯದೆಂದು ಭಾವಿಸಲ್ಪಟ್ಟಿರುವರೆಂದೂ ಇಂಪೀರಿಯಲ್ ವಾರ್‌ಗ್ರೇವ್ಸ್ ಕಮಿಷನ್ನಿನವರ 10ನೆಯ ವಾರ್ಷಿಕವರದಿಯಿಂದ ತಿಳಿದುಬರುತ್ತದೆ. ಯುದ್ಧಭೂಮಿಗಳಲ್ಲಿ ಮೃತಶರೀರಗಳು ಇನ್ನೂ ದೊರೆಯುತ್ತಲೇ ಇರುವವೆಂದೂ, ಕಳೆದ ವರ್ಷ ಫ್ರಾನ್ಸ್ ಮತ್ತು ಬೆಲ್ಜಿಯಂನಲ್ಲಿ 234 ಮೃತಶರೀರಗಳು ಸಿಕ್ಕಿರುವವೆಂದೂ ಪ್ರಕಟಿಸಿರುತ್ತಾರೆ.

ಶ್ರೀ ಸುಭಾಷ್ ಚಂದ್ರಬೋಸ್ ಮೊದಲಾದವರ ಮೇಲೆ ನಡೆಯುತ್ತಿದ್ದ ರಾಜದ್ರೋಹದ ಮೊಖದ್ದಮೆಯು ಮುಗಿದು ಪ್ರತಿಯೊಬ್ಬರಿಗೂ ಒಂದು ವರ್ಷ ಕಠಿಣ ಕಾರಾಗೃಹವಾಸವು ವಿಧಿಸಲ್ಪಟ್ಟಿತು. ತಮ್ಮನ್ನು ಜಾಮೀನಿನ ಮೇಲೆ ಬಿಡಬೇಕೆಂದು ಹೈಕೋರ್ಟಿಗೆ ಅರ್ಜಿಹಾಕಲು, ಹೈಕೋರ್ಟ್ ಜಡ್ಜರು ವಿಚಾರಣೆಯು ಮುಗಿಯುವವರೆಗೆ ಯಾವ ರಾಜಕೀಯ ಚಳವಳಿಯಲ್ಲೂ ಪ್ರವೇಶಿಸುವದಿಲ್ಲವೆಂದು ಭರವಸೆಯನ್ನು ಕೊಡಬೇಕೆಂದು ಕೇಳಲು, ಶ್ರೀ ಸುಭಾಷ್ ಚಂದ್ರಬೋಸ್ ಮೊದಲಾದವರು ಅದಕ್ಕೆ ಒಪ್ಪದೆ ಸೆಟ್ಟಿಗೆ ಕಾರಾಗೃಹಕ್ಕೆ ತೆರಳಿದರು.

ಪ್ಯಾರಿಸ್ಸಿನಲ್ಲಿ ಬುಸ್ಸಿ ಎಂಬ 63 ವರ್ಷವುಳ್ಳ ಮುದುಕನ ವಿವಾಹವಿಮೋಚನೆಯ ವ್ಯವಹಾರವು ನಡೆಯಿತು. ಈ ವ್ಯವಹಾರದಲ್ಲಿ ಅನೇಕರು ಬುಸ್ಸಿಗೆ ವಿರುದ್ಧವಾಗಿ ಸಾಕ್ಷಿ ಹೇಳಲು, ಬುಸ್ಸಿಯು ಅವರನ್ನೆಲ್ಲಾ ಕೊಲ್ಲಬೇಕೆಂದು ನಿರ್ಧರಿಸಿ ಪ್ರತಿಯೊಬ್ಬ ಸಾಕ್ಷಿಗೂ ಒಂದೊಂದು ಕಾಗದವನ್ನು ಬರೆದು ಅದರಲ್ಲಿ ಬಾಂಬುಗಳನ್ನಿಟ್ಟು ಕಳುಹಿಸಿದನು. ಓರ್ವಸ್ತ್ರೀಯು ತನಗೆ ಬಂದ ಕಾಗದವನ್ನು ಒಡೆದುನೋಡುವಾಗ ಬಾಂಬು ಸಿಡಿದು ಅವಳ ಮೈಯೆಲ್ಲಾ ಸುಟ್ಟುಹೋಯಿತು. ಇನ್ನೊಂದು ಬಾಂಬು ಫೋಸ್ಟಾಫೀಸಿನಲ್ಲೇ ಪತ್ತೆಮಾಡಲ್ಪಟ್ಟಿತು. ಇನ್ನೊಂದು ಕಾಗದವನ್ನು ವಕೀಲನು ಒಡೆದು ಅದರಿಂದ ಅವನಿಗೂ ಅವನ ಕ್ಲಾರ್ಕನಿಗೂ ತುಂಬಾ ಗಾಯಗಳಾದವು. ಅನಂತರ ಇತರ ಕಾಗದಗಳೆಲ್ಲವೂ ಫೋಸ್ಟಾಫೀಸಿನಲ್ಲಿಯೇ ಕಂಡುಹಿಡಿಯಲ್ಪಟ್ಟು, ತಲೆತಪ್ಪಿಸಿಕೊಂಡಿದ್ದ ಬುಸ್ಸಿಯನ್ನು ದಸ್ತಗಿರಿಮಾಡಿರುವರು.

ಸಂಯುಕ್ತಸಂಸ್ಥಾನಕ್ಕೆ ಸೇರಿದ ಘೋರಕಪುರದ ಕೋರಾರ್ ಎಂಬಲ್ಲಿ ವಾಸವಾಗಿರುವ ರಾಮಚರಣನೆಂಬವನ 2 ವರ್ಷದ ಮಗನು ಹಿಂದಿನ ಜನ್ಮದಲ್ಲಿ 3 ಮೈಲು ದೂರದಲ್ಲಿರುವ ಥಾರಾ ಎಂಬ ಗ್ರಾಮದಲ್ಲಿ ಗೋಪಿಯೆಂಬ ವ್ಯಾಪಾರಿಯಾಗಿದ್ದು ಸರ್ಪದಷ್ಟನಾಗಿ ಮೃತನಾದೆನೆಂದೂ, ತನಗೊಬ್ಬ ಹೆಂಡತಿ ಮತ್ತು ಇಬ್ಬರು ಮಕ್ಕಳಿರುವರೆಂದೂ ಒಂದು ಸ್ಥಳದಲ್ಲಿ ಅಪಾರ ಹಣವನ್ನು ಹೂಳಿಟ್ಟಿರುವೆನೆಂದೂ ಇವೇ ಮೊದಲಾಗಿ ತನ್ನ ಪೂರ್ವಜನ್ಮದ ವೃತ್ತಾಂತವನ್ನೆಲ್ಲಾ ಹೇಳುವನಂತೆ! ಈ ವಿಷಯವನ್ನು ಪರಿಶೀಲಿಸಿದಾಗ್ಗೆ ಕೋರಾರಕ್ಕೆ 3 ಮೈಲು ದೂರದಲ್ಲಿರುವ ಥಾರಾ ಎಂಬ ಗ್ರಾಮದಲ್ಲಿ 3 ವರ್ಷಗಳ ಮುಂಚೆ ಗೋಪಿಯೆಂಬುವನು ನಿಜವಾಗಿಯೂ ಸರ್ಪದಷ್ಟನಾಗಿ ಮೃತನಾಗಿದ್ದನೆಂದೂ, ಅವನ ಹೆಂಡತಿ ಮಕ್ಕಳನ್ನು ಬಹು ಜನರ ಗುಂಪಿನಲ್ಲಿ ಈ ಹುಡುಗನು ಗುರ್ತಿಸಿದನೆಂದೂ, ಹಣವು ಹೂಳಲ್ಪಟ್ಟಿದ್ದ ಸ್ಥಳವು ರಾಮಸ್ವರೂಪನೆಂಬುವನಿಗೆ ಮಾರಲ್ಪಟ್ಟಿದ್ದುದರಿಂದ ಆ ವಿಷಯವಾಗಿ ಪರೀಕ್ಷಿಸಲು ಅವಕಾಶವಾಗದಿದ್ದರೂ, ತೀರ ಬಡವನಾಗಿದ್ದ ರಾಮಸ್ವರೂಪನು ಸ್ಥಳವನ್ನು ಕೊಂಡುಕೊಂಡ ಮೇಲೆ ಶ್ರೀಮಂತನಾಗಿರುವದರಿಂದ ಅಲ್ಲಿ ಹೂಳಿಟ್ಟಿದ್ದ ಹಣವು ಅವನಿಗೆ ದೊರೆತಿರುವದೆಂದು ಊಹಿಸಲಾಗಿದೆಯೆಂದೂ, ಹೀಗೆ ತನ್ನ ಪೂರ್ವಜನ್ಮದ ವೃತ್ತಾಂತವನ್ನು ಸ್ವಲ್ಪವೂ ಹೆಚ್ಚು ಕಡಿಮೆಯಿಲ್ಲದಂತೆ ಹೇಳುವ ಈ ವಿಚಿತ್ರಬಾಲಕನನ್ನು ಯಾರುಬೇಕಾದರೂ ಪರೀಕ್ಷಿಸಬಹುದೆಂದೂ ಘೋರಕಪುರದ ಡೆಪ್ಯುಟಿಕಲೆಕ್ಟರಾದ ಪಂಡಿತ ರಾಮಗೋಪಾಲಮಿಶ್ರರವರು ಪ್ರಕಟಿಸಿರುತ್ತಾರೆ. ಪುನರ್ಜನ್ಮವಿಲ್ಲವೆಂದು ಬಡಬಡಿಸುವ ನಾಸ್ತಿಕರು ಇತ್ತ ಗಮನ ಕೊಡಬೇಕು.

ಚಂದಾದಾರರಲ್ಲಿ ವಿಜ್ಞಾಪನೆ.

ಯಾವನ ನಾಮಸ್ಮರಣಮಾತ್ರದಿಂದ ಸಕಲ ಮಾನವರು ಪಾಪದಿಂದ ವಿಮುಕ್ತರಾಗಿ ಮುಕ್ತಿಸಾಮ್ರಾಜ್ಯಸುಖವನ್ನನುಭವಿಸುವರೋ ಆ ಶ್ರೀ ಜಗದ್ಗುರು ರೇಣುಕಾಚಾರ್ಯನ ಅದ್ಭುತ ಲೀಲಾಪ್ರತಿಪಾದಕವಾದ **ರೇಣುಕವಿಜಯವು** ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿರುವ ವಿಷಯವು ನಮ್ಮ ಪತ್ರಿಕೆಯ ಕಳೆದ ವಾರದ ಸಂಚಿಕೆಯಿಂದ ಯಾವತ್ತು ಚಂದಾದಾರರಿಗೆ ವೇದ್ಯವಾಗಿರಬಹುದು. ಅನೇಕಾನೇಕಾಮೂಲ್ಯ ವಿಷಯಗಳಿಂದೊಡಗೂಡಿದ ಈ ಗುರುಚಕ್ರವರ್ತಿಯ ಪವಿತ್ರ ಚರಿತ್ರವು ಪ್ರತಿಯೊಬ್ಬರ ಮನೆಯಲ್ಲಿಯೂ ಪ್ರವೇಶಿಸಿ ಸರ್ವರನ್ನೂ ಉದ್ಧರಿಸಲೆಂಬ ಉದ್ದೇಶದಿಂದ ನಮ್ಮ ಚಂದಾದಾರರಿಗೆಲ್ಲ ವಿ. ಪಿ. ದ್ವಾರಾ ಕಳುಹಿಸಬೇಕೆಂದು ನಿರ್ಧರಿಸಿದ್ದೇವೆ. ಆದುದರಿಂದ ಪ್ರತಿಯೊಬ್ಬರು ವಿ. ಪಿ. ಯನ್ನು ಸ್ವೀಕರಿಸಿ ಆ ಗುರುಸಾರ್ವಭೌಮನ ಚರಿತ್ರವನ್ನು ಸಂಪೂರ್ಣವಾಗಿ ಓದಿ ಅದರಲ್ಲಿರತಕ್ಕ ಅತ್ಯಂತ ಮಹತ್ವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಆಶಿಸುತ್ತೇವೆ. ವಿ. ಪಿ. ಚಾರ್ಜು ಸೇರಿ ೧ ರೂ. ೬ ಆಣೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ದ್ರಾವಿಡದೇಶದಲ್ಲಿ ಕೀರ್ತಿಶಾಲಿಗಳಾಗಿ ಹೋದ ಶ್ರೀ ಶಿವಪ್ರಕಾಶಸ್ವಾಮಿಗಳವರ ಚರಿತ್ರ.

ಸುಮಾರು 400 ವರ್ಷಗಳ ಪೂರ್ವದಲ್ಲಿ ಶ್ರೀ ಕಾಂಚೀಪುರದಲ್ಲಿ ವಾಸವಾಗಿದ್ದ ವೀರಮಾಹೇಶ್ವರರೂ, ಏಕವಿಂಶತಿ ದೀಕ್ಷಾಪ್ರಾವರಣ ಪಂಚಾಚಾರ ಸಂಪನ್ನರೂ, ಏಕಲಿಂಗನಿಷ್ಠಾಪರರೂ, ನಂದಿಗೋತ್ರ ಸಂಜಾತರೂ ಆದ ಕುಮಾರಸ್ವಾಮಿ ಅಯ್ಯರ್ ಎಂಬವರಿಗೆ ಪರಮೇಶ್ವರಾನುಗ್ರಹದಿಂದ ಶಿವಪ್ರಕಾಶಸ್ವಾಮಿ, ವೇಲಯ್ಯಸ್ವಾಮಿ, ಕರುಣಾಪ್ರಕಾಶಸ್ವಾಮಿ ಎಂಬ ಮೂವರು ಪುತ್ರರು ಜನಿಸಿದರು. ಇವರು ವಿದ್ಯಾಭ್ಯಾಸಮಾಡುವ ಕಾಲದಲ್ಲಿ ತಂದೆಯವರು ಪರಮಪದವನ್ನೈದಿದರು. ತರುವಾಯ ಶಿವಪ್ರಕಾಶಸ್ವಾಮಿಗಳವರು ತಮ್ಮ ಸಹೋದರರೊಂದಿಗೆ ತಿರುವಣ್ಣಾಮಲೆಗೆ ಹೋಗಿ ಗುರುದೇವರ ದರ್ಶನವನ್ನು ಪಡೆದು ಶೋಣಶೈಲಮಾಲಾ ಸ್ತೋತ್ರವನ್ನು ಮಾಡಿ ಆ ಸ್ಥಳವನ್ನು ಬಿಟ್ಟು ವಾಲಿಗಂಡಪುರಕ್ಕೆ ಸಮೀಪದಲ್ಲಿರುವ ತುರೈಮಂಗಲಂ ಎಂಬಲ್ಲಿ ಅಣ್ಣಾಮಲೆ ರೆಡ್ಡಿಯಾರ್ ಕಟ್ಟಿದ ಮಠದಲ್ಲಿ 3 ವರ್ಷಗಳ ಕಾಲವಿದ್ದು ತಾಮ್ರಪರ್ಣೀ ನದಿಯ ದಡದಲ್ಲಿರುವ ಸಿಂದುಪೂಂದುರೈವಳ್ಳಿ ಎಂಬಲ್ಲಿ ತುಂಬರಾಸ್ವೆಯ್ಯನವರನ್ನು ನೋಡಿ, ದ್ರಾವಿಡ ವ್ಯಾಕರಣವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಬಂದೆವೆಂದು ಹೇಳಲು, ಆಗ್ಗೆ ಅವರು ಪದವಾಕ್ಯಗಳನ್ನು ಪರೀಕ್ಷಿಸುವಲ್ಲಿ ಸ್ವಾಮಿಯವರು "ಕುಡರ್ ಕೋಡು" ಎಂಬ ಶ್ಲೋಕವನ್ನು ಹೇಳಿದ್ದನ್ನು ಕಂಡು ಬಹಳ ಸಂತೋಷಪಟ್ಟು ಅವರ ಸಹೋದರರಿಗೆ 5 ವ್ಯಾಕರಣ ಸೂತ್ರಗಳನ್ನು ಉಪದೇಶಿಸಿದರು. ತರುವಾಯ ಸ್ವಾಮಿಯವರು ತಿಂಚ್ಛೆಂದೂರಿಗೆ ಹೋಗಿ ಸುಬ್ರಹ್ಮಣ್ಯಸ್ವಾಮಿಯ ದರ್ಶನವನ್ನು ತೆಗೆದುಕೊಂಡು ತುಂಬರಾಸ್ವೆಯ್ಯನವರನ್ನು ದೂಷಿಸುತ್ತಿರುವ ದ್ರಾವಿಡ ವಿದ್ವಾಂಸನನ್ನು "ಯಮುಮವಂತಾದಿ" ಎಂಬ ಶ್ಲೋಕಗಳನ್ನು ಹೇಳಿ ಜಯಿಸಿದರು. ಆ ವಿದ್ವಾಂಸನನ್ನು ತಂಬಿರಾಸ್ವೆಯ್ಯನವರ ಸೇವಾವೃತ್ತಿಗೆ ನೇಮಿಸಿ ಮುಂದೆ ಅನೇಕ ಕ್ಷೇತ್ರಗಳನ್ನು ಪ್ರವೇಶಿಸಿ ವೆಂಗನೂರ್ ಎಂಬ ಸ್ಥಳಕ್ಕೆ ಬಂದರು. ಆ ಸ್ಥಳದಲ್ಲಿರುವ ಪರಮೇಶ್ವರನನ್ನು ಕುರಿತು 4 ಪ್ರಬಂಧಗಳನ್ನು ರಚಿಸಿದರು. ಒಂದು ದಿವ ವೆಂಗನೂರ್ ಅರಸನಾದ ಅಣ್ಣಾಮಲೆರೆಡ್ಡಿಯವರು ವಿವಾಹಮಾಡಿಕೊಳ್ಳಬೇಕೆಂದು ಸ್ವಾಮಿಯವರನ್ನು ಪ್ರಾರ್ಥಿಸಲು, ಇದನ್ನು ಇವರು ನಿರಾಕರಿಸಿ ತಮ್ಮ ಸಹೋದರರಿಗೆ ವಿವಾಹವನ್ನು ಮಾಡಿ ತಾವು ಚಿದಂಬರಕ್ಕೆ ಪ್ರಯಾಣಮಾಡಿದರು. ಸ್ವಾಮಿಯವರು ಚಿದಂಬರದಲ್ಲಿ ಕೆಲವು ದಿನಗಳಿದ್ದು ಅಲ್ಲಿ ಮಠವನ್ನು ಕಟ್ಟಿಸಿ, ತರ್ಕಪರಿಭಾಷಾ, ಶಿವಪ್ರಕಾಶವಿಕಾಶಂ, ಶತಮಣಿಮಾಲಾ, ಚತುರ್ಮಣಿಮಾಲಾ ಮೊದಲಾದ ಪ್ರಬಂಧಗಳನ್ನು ರಚಿಸಿದರು. ಪುಸ್ತುಪಟ್ಟಿ ಎಂಬ ಗ್ರಾಮದಲ್ಲಿರುವ ದೇವಾಲಯದಲ್ಲಿ ಆ ರಾತ್ರಿ ನಿಂತಿರುವ ಕಾಲದಲ್ಲಿ ಶಿವಪ್ರಕಾಶಸ್ವಾಮಿಯವರ ಸ್ವಪ್ನದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿಯು ಪ್ರಸನ್ನನಾಗಿ ಒಂದು ಕಮಲದಲ್ಲಿ ಬಿಡಿ ಹೂಗಳನ್ನು ಒಂದು ಮಾಲೆಯಾಗಿ ಮಾಡಿ ಬಾಲಸಿದ್ಧರಿಗೆ ಮಾಲೆಹಾಕಬೇಕೆಂದು ಹೇಳಿ ಅದೃಶ್ಯನಾದನು. ಶಿವಪ್ರಕಾಶಸ್ವಾಮಿಯವರು ತಾವು ಕಂಡ ಸ್ವಪ್ನವನ್ನು ತಮ್ಮ ಸಂಗಡವಿದ್ದ ಶಾಂತಲಿಂಗಸ್ವಾಮಿಯವರಿಗೆ ತಿಳುಹಿಸಲು ಅದಕ್ಕೆ ಅವರು ಸ್ವಾಮಿಯವರೇ? ಶ್ಲೋಕಮಾಲೆಯನ್ನು ಹಾಕಲಾರೆನೆಂದು ಹೇಳಿದಕಾರಣ ಶಿವಪ್ರಕಾಶಸ್ವಾಮಿಯವರು ಶಿವಜ್ಞಾನಸ್ವಾಮಿಯವರ ಮೇಲೆ ಸ್ತೋತ್ರಮಾಲೆಯನ್ನು ರಚಿಸಿದರು. ಬೊಂಮಯಪುರಿ ತಿರುಮಠಕ್ಕೆ ಬಂದು ಜ್ಞಾನಗುರುದೇವರನ್ನು ದರ್ಶನಮಾಡಿ ಆನಂದಪರವಶರಾಗಿದ್ದರು. ಅನಂತರ ಕಾಂಚೀಪುರಕ್ಕೆ ಬಂದು ನಿಜಗುಣಯೋಗಿಯವರಿಂದ ಗೀರ್ವಾಣ ಕನ್ನಡ ಭಾಷೆಗಳಲ್ಲಿ ಹೇಳದ ಪ್ರಕಾರ ದ್ರಾವಿಡಭಾಷೆಯಲ್ಲಿ ವೇದಾಂತಚೂಡಾಮಣಿ ಸಿದ್ಧಾಂತಶಿಖಾಮಣಿ ಮೊದಲಾದ ಉದ್ಗ್ರಂಥಗಳನ್ನು ರಚಿಸಿ ಶಿವಜ್ಞಾನಸ್ವಾಮಿಯವರಮೇಲೆ "ಪಿಳ್ಳೈತಮಿಳ್, ತಿರುಪಳ್ಳಿಯೆಳಚ್ಚಿ, ನೆಂಜುವಿಡುತೂದು ಇವುಗಳನ್ನು ರಚಿಸಿ ಜ್ಞಾನಗುರುವನ್ನು ನೋಡಿ ವೃದ್ಧಾಚಲಕ್ಕೆ ಬಂದು ಸ್ವಾಮಿಯವರ ತಿರುಮಠದಲ್ಲಿ ವಾಸಮಾಡಿದರು. ಅಲ್ಲಿ ಅನೇಕ ಸ್ತೋತ್ರಗ್ರಂಥಗಳನ್ನು ವೃದ್ಧಾಚಲೇಶ್ವರನ ಮೇಲೆಯೂ ಪಾರ್ವತಿಯ ಮೇಲೆಯೂ ಮಾಡಿದರು. ಶಿವಜ್ಞಾನಬಾಲೇಶ್ವರ ಸ್ವಾಮಿಯವರ ಅನುಮತಿಯನ್ನು ಪಡೆದು ಶಿವಪ್ರಕಾಶಸ್ವಾಮಿಯವರ ತಿರುವಕ್ಕರೈಸ್ಥಳಕ್ಕೆ ಉತ್ತರಭಾಗದಲ್ಲಿರುವ ಮಯೂರಾಚಲಕ್ಷೇತ್ರಕ್ಕೆ ಹೋಗಿ ಸುಬ್ರಹ್ಮಣ್ಯಸ್ವಾಮಿಯ ದರ್ಶನ ತೆಗೆದುಕೊಂಡು ನಲ್ಲಾತ್ತೂರ್ ತಿರುಮಠಕ್ಕೆ ಹೋಗಿದ್ದು ಶಿವನಾಮಮಹಿಮೆ, ಅಭಿಷೇಕಮಾಲಾ, ಕರತಲಮಾಲಾ, ಇಷ್ಟಲಿಂಗಸ್ತೋತ್ರ, ನಲ್ಲಾತ್ತೂರ್ ತಿರುಮಠಲಯದ ವಂಶಾವಳಿ ಮೊದಲಾದ ಗ್ರಂಥಗಳನ್ನು ಮಾಡಿ, ಅಲ್ಲಿಯೇ ವಾಸಮಾಡಿಕೊಂಡಿದ್ದರು. ತಮ್ಮ ಸಹೋದರರಾದ ಕರುಣಾಪ್ರಕಾಶಸ್ವಾಮಿಯವರು ತಿರುವೆಂಗನೂರ್ ಮಠದಲ್ಲಿದ್ದುಕೊಂಡು ಶ್ರೀ ಕಾಳಹಸ್ತಿ ಪುರಾಣವನ್ನು ಬರೆದು 18 ನೆಯ ವರ್ಷದಲ್ಲಿ ಪರಮಪದವನ್ನು ಹೊಂದಿದರು. ಅನಂತರ ಪ್ರಸಿದ್ಧರಾದ ಶಿವಪ್ರಕಾಶಸ್ವಾಮಿಯವರು ತಮ್ಮ 32 ನೆಯ ವರ್ಷದ ಭಾದ್ರಪದ ಪೌರ್ಣಮಿ ಪೂರ್ವಾಷಾಢ ನಕ್ಷತ್ರದಲ್ಲಿ ಪರಂಧಾಮವನ್ನೈದಿದರು. ವೇಲಯ್ಯಸ್ವಾಮಿಯವರು ದ್ರಾವಿಡಭಾಷೆಯಲ್ಲಿ ವೀರಸಿಂಹಾಸನ ಪುರಾಣ ಮುಂತಾದ ಅನೇಕ ಗ್ರಂಥಗಳನ್ನು ರಚಿಸಿ ನಲ್ಲಾತ್ತೂರ್ ಅಮ್ಮಶಿವಾಯ್ಯರಲ್ಲಿ ಸಮರ್ಪಣೆಮಾಡಿ ಓಲೈಪಾಡಿ ಪೆರುಮುಕ್ತೂರ್‌ನಲ್ಲಿ 22 ನೆಯ ವರ್ಷದಲ್ಲಿ ಐಕ್ಯರಾದರು. ಅನಂತರ ಅಮೃತಪಾಣಯ್ಯರು ಅನೇಕ ವೈಭವಗಳೊಡಗೂಡಿ ತರ್ಕಾದಿಶಾಸ್ತ್ರಗಳಲ್ಲಿ ಜಯವನ್ನು ಹೊಂದಿ ಶ್ರೀ ರೇಣುಕಗೀತಾ, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ, ಪರಮರಹಸ್ಯಾಕ್ಷಮಾಲಾ ದೀಪಿಕಾ ಮುಂತಾದ ಗ್ರಂಥಗಳನ್ನು ಮಾಡಿದರು. ಕಾಶೀ, ಶ್ರೀಶೈಲ, ಕೇದಾರ ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಿ ಅನೇಕ ಮಹಿಮೆಗಳನ್ನು ಮಾಡಿ ತಮ್ಮ ಗೋತ್ರಾಚಾರ್ಯರಾದ ಬಾಳೇಹಳ್ಳಿ ಶ್ರೀ ರೇಣುಕಶಿವಾಚಾರ್ಯರ ಪೀಠಕ್ಕೆ ಹೋಗಿ ಗ್ರಂಥಗಳನ್ನು ಅವರಿಗೆ ಸಮರ್ಪಣೆಮಾಡಿ ಅಲ್ಲೇ ಇದ್ದು ಚೈತ್ರ ಶು|| ೧೫ ದಿವಸ ಶಿವಲೋಕವನ್ನೈದಿದರು.

ಸ್ವಾಮಿಭಕ್ತ.

ವೀರಶೈವ ಹಾಸ್ಟಲ್ ಮದ್ರಾಸು.

ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್. ಕೆ. ಪಿ. ಪುಟ್ಟಣ್ಣಸೆಟ್ಟರು ಕೆಟಿ.ಸಿ.ಐ.ಇ. ರವರು ಮದ್ರಾಸುಪಟ್ಟಣದಲ್ಲಿದ್ದಾಗ್ಗೆ ವೀರಶೈವವಿದ್ಯಾರ್ಥಿನಿಲಯಕ್ಕೆ ದಯಮಾಡಿಸಿ ಇಲ್ಲಿಯ ಕಾರ್ಯಕ್ರಮಗಳನ್ನು ಮತ್ತು ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸಿ ಈ ರೀತಿ ಅಭಿಪ್ರಾಯಪಟ್ಟಿರುತ್ತಾರೆ—

ನಾನು ಈದಿನ ಪ್ರಾತಃಕಾಲ ಮದ್ರಾಸು ವೀರಶೈವನಿಲಯಕ್ಕೆ ಹೋಗಿ ಅಲ್ಲಿ ವಾಸಮಾಡುತ್ತಿರುವ ವಿದ್ಯಾರ್ಥಿಗಳನ್ನು ಕಂಡೆನು ಮ|| ರಾ|| ಎಸ್. ಸಿ. ನಾಗಯ್ಯಸೆಟ್ಟರವರ ಪ್ರೋತ್ಸಾಹದಿಂದ ಸುಮಾರು ಮೂರುತಿಂಗಳುಗಳಲ್ಲಿ ಸ್ಥಾಪಿಸಲ್ಪಟ್ಟಿರುವುದಾಗಿ ತೋರಿಬರುವ ಈ ವಿದ್ಯಾರ್ಥಿನಿಲಯವನ್ನು ನೋಡಲು ಬಹಳ ಸಂತೋಷವಾಯಿತು. ಈ ವಿದ್ಯಾರ್ಥಿನಿಲಯವು ಉತ್ತಮವಾದ ಪ್ರದೇಶದಲ್ಲಿದೆ. ಕಟ್ಟಡವು ಕೂಡ ಎಲ್ಲಾ ವಿಧದಲ್ಲಿಯೂ ಅನುಕೂಲವಾಗಿರುತ್ತದೆ. ಸದ್ಯದಲ್ಲಿ 17 ಮಂದಿ ವಿದ್ಯಾರ್ಥಿಗಳಿರುತ್ತಾರೆ. ಅಲ್ಲದೆ ಸಂಖ್ಯೆಯು ಇನ್ನು ಹೆಚ್ಚಬಹುದೆಂದು ಹೇಳಬಹುದು. ಮದ್ರಾಸಾಧಿಪತ್ಯದ ಕನ್ನಡ (ಮತ್ತು ಇತರ) ಪ್ರಾಂತಗಳಿಂದಲೂ ಮತ್ತು ಮೈಸೂರು ದೇಶದಿಂದಲೂ ಬರುವ ವಿದ್ಯಾರ್ಥಿಗಳಿಗೆ ಎಲ್ಲಾ ವಿಧವಾದ ಸೌಕರ್ಯಗಳು ಇಲ್ಲಿ ದೊರಕುತ್ತವೆ.

ಈ ಮುಖ್ಯಪಟ್ಟಣದಲ್ಲಿ ಈ ವಿದ್ಯಾರ್ಥಿನಿಲಯದ ಸ್ಥಾಪನೆಯಿಂದ ಬಹಳ ದಿನಗಳಿಂದಲೂ ಆಲೋಚನೆಯಲ್ಲಿದ್ದ ಅಪೇಕ್ಷೆಯು ನೆರವೇರಿದಂತಾಯಿತು. ಮತ್ತು ಎಲ್ಲಾ ಪ್ರಾಂತಗಳಿಂದ ವಿದ್ಯಾರ್ಥಿಗಳು ಬರುವರೆಂದೂ ಮತ್ತು ಅವರಿಗೆ ಬಹಳ ಪ್ರಯೋಜನಕರವಾಗಿರುವುದೆಂದೂ ನಾನು ನಂಬಿರುತ್ತೇನೆ. ಈ ಕಾರ್ಯವನ್ನು ಪ್ರಯತ್ನಿಸಿದ ಮುಂದಾಳುಗಳು ಗೌರವಾರ್ಹರಾಗಿರುತ್ತಾರೆ. ಮತ್ತು ಇದಕ್ಕೆಲ್ಲ ಪ್ರೋತ್ಸಾಹಕರೂ ಸಹಾಯಕರೂ ಮತ್ತು ಪ್ರಜಾವಾತ್ಸಲ್ಯರಾದ ಮ|| ರಾ|| ನಾಗಯ್ಯಸೆಟ್ಟರಿಗೆ ನನ್ನ ವಂದನೆಗಳು. ವೀರಶೈವ ಜನಾಂಗದವರಿಗೆ ಮಾರ್ಗದರ್ಶಕವಾಗಿರುವಂತೆ ಈ ವಿದ್ಯಾರ್ಥಿನಿಲಯವನ್ನು ಶಾಶ್ವತಗೊಳಿಸುವುದಕ್ಕೆ ಸರಿಯಾದ ಅಸ್ತಿಭಾರವನ್ನು ಇವರು ಹಾಕುವರೆಂದು ನಾನು ಭಾವಿಸುತ್ತೇನೆ. ಯಾವ ಯಾವ ಕಡೆಯಿಂದ ಪ್ರೌಢವಿದ್ಯಾಭ್ಯಾಸವನ್ನು ಮಾಡಲು ವಿದ್ಯಾರ್ಥಿಗಳು ಬರುವರೋ ಆಯಾ ಪ್ರಾಂತದ ವೀರಶೈವರು ಆ ಹಾಸ್ಟಲಿನ ಪುರೋಭಿವೃದ್ಧಿಗೆ ಧನಸಹಾಯವನ್ನು ಶೇಖರಿಸುವುದಕ್ಕೆ ಪ್ರಯತ್ನಮಾಡಬೇಕು.

ಕೆ. ಪಿ. ಪುಟ್ಟಣ್ಣಸೆಟ್ಟಿ.

Madras, 30-1-1930.

B. Basavalingiah,
Secretary of the Hostel.

ಜಾಹೀರ ವಿನಂತಿ.

ಧಾರವಾಡದ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್ನದ ಪರವಾಗಿ ಒಂದು ಮಧ್ಯವರ್ತಿ ಪುಸ್ತಕಾಲಯ (Central Library) ವನ್ನು ಸ್ಥಾಪಿಸಬೇಕೆಂದೂ ಅದರಲ್ಲಿ ವೀರಶೈವ ಧರ್ಮ, ಇತಿಹಾಸ, ವಾಙ್ಮಯ ಮೊದಲಾದ ವಿಷಯಗಳನ್ನೊಳಕೊಂಡ ಅಚ್ಚಾದ ಹಾಗೂ ಕೈಬರಹದ ಗ್ರಂಥಗಳನ್ನು ಶೇಖರಿಸಬೇಕೆಂದೂ ನಿರ್ಧಾರವಾಗಿದೆ. ಇಂತಹ ಪುಸ್ತಕಾಲಯದ ಅವಶ್ಯಕತೆಯು ಬಹಳವಾಗಿದ್ದು ವೀರಶೈವರ ಸಂಬಂಧವಾದ ಎಲ್ಲ ವಿಷಯಗಳ ಮೇಲೆ ಸಿಕ್ಕಬಹುದಾದ ಗ್ರಂಥಗಳನ್ನು ಒತ್ತಟ್ಟಿಗೆ ಕೂಡಿಸಿ ಸಂಶೋಧಕರಿಗೆ ಉಪಯೋಗವಾಗುವಂತೆ ಮಾಡುವದು ನಮ್ಮ ಉದ್ದೇಶವು. ಹಾಗೂ ಉಪಯೋಗಿಸಲ್ಪಡದೆ ನ... ಗುವ ಹಳೇಗ್ರಂಥಗಳನ್ನು ಯೋಗ್ಯರೀತಿಯಿಂದ ...ಮಾಡುವುದು ನಮ್ಮ ಮುಖ್ಯಕಾರ್ಯವು. ಬಹುಜನ ಸಹಾಯವಿಲ್ಲದೆ ಈ ಕಾರ್ಯವು ಪೂರೈಸಲಾರದು. ಆದಕಾರಣ ತಮಗೆ ಈ ಮೂಲಕ ಬಿನ್ನೈಸುವದೇನಂದರೆ—

(1) ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ತಮ್ಮಲ್ಲಿ ದೊರೆಯಬಹುದಾದ ಹೊಸ ಅಥವಾ ಹಳೇ ಗ್ರಂಥಗಳನ್ನು ಅಚ್ಚಾದವಿರಲಿ. ಕೈಬರಹದವಿರಲಿ ಅಥವಾ ತಾಡವಾಲೆಯವಿರಲಿ ಮತ್ತು ಯಾವದೇ ಭಾಷೆಯಲ್ಲಿರಲಿ ಅವುಗಳನ್ನು ದಯವಿಟ್ಟು ಅಸೋಸಿಯೇಶನ್ನಿಗೆ ಕಳಿಸುವದು.

(2) ಒಂದು ವೇಳೆ ಹಾಗೆ ಕಳುಹಿಸಲು ಬಾರದಂಥ ಗ್ರಂಥಗಳು ಯಾವಾದರೂ ಇದ್ದಲ್ಲಿ ಅವುಗಳ ಹೆಸರು, ಕರ್ತರ ಹೆಸರು, ಬರೆದಕಾಲ, ಅಚ್ಚಾದವೋ, ಕೈಬರಹದವೋ, ಮೊದಲಾದ ಮಾಹಿತಿಯನ್ನು ದಯವಿಟ್ಟು ತಿಳುಹಿಸುವುದು.

(3) ಬೇರೆಯವರಲ್ಲಿ ಗ್ರಂಥಗಳಿರುವದು ತಮಗೆ ಗೊತ್ತಿದ್ದಲ್ಲಿ ಆ ಗ್ರಂಥಗಳ ಹೆಸರನ್ನೂ ಮತ್ತು ಆ ಸದ್ಗೃಹಸ್ಥರ ಹೆಸರು ಮತ್ತು ವಿಳಾಸಗಳನ್ನೂ ದಯವಿಟ್ಟು ತಿಳುಹಿಸುವದಾಗಬೇಕು.

ಈ ಬಗ್ಗೆ ತಮ್ಮಿಂದಾದ ಸಹಾಯಕ್ಕಾಗಿ ಅಸೋಸಿಯೇಶನ್ನದವರು ತಮಗೆ ತುಂಬಾ ಋಣಿಯಾಗಿರುವರು.

ತಮ್ಮ,

ಧಾರವಾಡ — ಸಿದ್ಧೇಶ್ವರ ಮೇಳಿಮಠ,
ತಾ|| 24-1-30. — ಗೌರವಕಾರ್ಯದರ್ಶಿ.

ನಿದ್ರೆ.

ನಮಗೆ ಆಹಾರಕ್ಕಿಂತಲೂ ನಿದ್ರೆಯು ಹೆಚ್ಚು ಪ್ರಧಾನವಾಗಿದೆ. ಆಹಾರವಿಲ್ಲದೆ ಹಲವು ದಿನಗಳು ಬದುಕಿರಬಹುದು. ನಿದ್ರೆಯಿಲ್ಲದೆ ಆರೋಗ್ಯದಿಂದ ಬದುಕುವುದು ಸಾಧ್ಯವಿಲ್ಲ. ಒಳ್ಳೇ ಆರೋಗ್ಯದಿಂದಿರಬೇಕಾದರೆ ಒಳ್ಳೇ ನಿದ್ರೆಯು ಬೇಕು. ನಿದ್ರೆಯು ಬಾರದಿದ್ದರೆ ದೇಹದಲ್ಲಿ ಏನೋ ವ್ಯಾಧಿಯಿದ್ದೇ ಇರಬೇಕು. ನಿದ್ರಿಸುವ ಕಾಲದಲ್ಲಿ ದೇಹರಚನಾವಯವಗಳಿಗೆಲ್ಲ ಕಾರ್ಯಕ್ರಮವೂ, ಆ ಮೂಲಕವಾಗಿ ಅವುಗಳಲ್ಲಿ ಸಂಭವಿಸುವ ನಷ್ಟವೂ ಇಲ್ಲದೆ ಅವು ವಿಶ್ರಾಂತಿಯಲ್ಲಿರುವುವು. ಆಗ ದೇಹದಲ್ಲಿ ಉಷ್ಣೋತ್ಪತ್ತಿಯೂ ಹೆಚ್ಚಾಗಿರುವುದಿಲ್ಲ.

ನಿದ್ರೆಗೆ ಸಹಕಾರಿಗಳಾದ ಕೆಲವು ಸಂದರ್ಭಗಳು.

1. ದೇಹದ ಸ್ನಾಯುಗಳಿಗೆ ಅಧಿಕಶ್ರಮವಾಗುವುದು.

2. ಮನಸ್ಸಿಗೇನೂ ವ್ಯಾಕುಲವಿಲ್ಲದೆ ನೆಮ್ಮದಿಯಾಗಿರುವುದು.

3. ನಿದ್ರೆ ಬಂದಂತೆ ಮನಸ್ಸಿನ ಭಾವನೆಗೆ ತಂದುಕೊಳ್ಳುವುದು.

4. ಗದ್ದಲ, ಬೆಳಕು ಮುಂತಾದ ತೊಂದರೆಗಳೇನೂ ಇಲ್ಲದೆ ವಾತಾವರಣವು ಶಾಂತವಾಗಿರುವುದು.

5. ದೇಹದಲ್ಲಿ ಉಷ್ಣವು ಹುಟ್ಟದಿರುವುದಕ್ಕೆ ಭರ್ತಿ ಕೊಡುವುದಕ್ಕಾಗಿ ದೇಹವನ್ನು ಶಾಖದಿಂದ ಕಾಪಾಡಿಟ್ಟುಕೊಳ್ಳುವುದು.

(ನಿದ್ರೆಯಿಲ್ಲದೆ ರಾತ್ರಿಯಲ್ಲಿ ಬಹಳ ಹೊತ್ತು ಕಾಲಕಳೆಯುತ್ತಿರುವುದು ಈಗಿನ ನವಜೀವನದ ಹೊಸ ಪದ್ಧತಿಯಾಗಿದೆ. ಬುದ್ಧಿಯಿಂದ ಕೆಲಸಮಾಡತಕ್ಕವರಿಗೂ, ವ್ಯಾಧಿಗ್ರಸ್ತರಿಗೂ ಇದು ಸಹಜವಾದುದು).

ನಿದ್ರೆ ಬರಲಿಲ್ಲವೆಂಬುದಕ್ಕಾಗಿ ಬೇರೆಬೇರೆ ಔಷಧಿಗಳನ್ನು ಸೇವನೆ ಮಾಡಬಾರದು. ದಿನಚರ್ಯೆಗಳನ್ನೂ, ಕಾರ್ಯಪದ್ಧತಿಗಳನ್ನೂ ಬದಲಾಯಿಸಿಕೊಳ್ಳುವುದರಿಂದಲೇ ನಿದ್ರೆ ಬರುವಂತೆ ಮಾಡಿಕೊಳ್ಳಬಹುದು. ಅದಕ್ಕಾಗಿ ಈ ಕೆಳಗೆ ಕೆಲವು ಉಪಾಯಗಳನ್ನು ಕೊಟ್ಟಿದೆ.

1. ರಾತ್ರಿಯಲ್ಲಿ ಸಕಾಲಕ್ಕೆ ಬೇಗನೆ ಮಲಗಿಬಿಡಬೇಕು.

2. ಎಲ್ಲಾ ಸ್ನಾಯುಗಳಿಗೂ ತಕ್ಕ ಕೆಲಸವನ್ನು ಕೊಟ್ಟು, ಅವು ದಣಿಯುವಂತೆ ಮಾಡಬೇಕು.

3. ಮಿದುಳಿಗೆ ಹೆಚ್ಚು ರಕ್ತವು ವೇಗದಿಂದೋಡುವುದಕ್ಕೆ ಅವಕಾಶಕೊಡದಂತೆ ಒಂದು ಎತ್ತರವಾದ ತಲೆದಿಂಬಿನಮೇಲೆ ತಲೆಯಿಟ್ಟು ಮಲಗಬೇಕು.

4. ಮೈಯನ್ನೆಲ್ಲ, ಮುಖ್ಯವಾಗಿ, ಪಾದಗಳನ್ನು ಶಾಖವಾಗಿಟ್ಟುಕೊಳ್ಳಬೇಕು.

5. ಹೊರಗಿನ ಮೈದಾನಗಳಲ್ಲಿ ವ್ಯಾಯಾಮಗಳನ್ನು ಮಾಡಬೇಕು. ಕೇವಲ ಶ್ರಮಪಡುವುದರಿಂದ ಮಾತ್ರ ಫಲವಿಲ್ಲ.

ಚೆನ್ನಾಗಿ ದಣಿದಿದ್ದಾಗ ನಿದ್ರೆಯೂ, ಹಸಿದಿದ್ದಾಗ ಊಟವೂ ಆಗಬೇಕೆಂಬ ಅಮೆರಿಕಾದೇಶಸ್ಥರ ಕಟ್ಟಳೆಯು, ನಮ್ಮ ಅಭ್ಯಾಸಕ್ಕೆ ಹೊಂದಬಾರದು. ಅದಕ್ಕೆ ಸರಿಯಾದ ಆಧಾರವೂ ಕಂಡುಬರುವುದಿಲ್ಲ.

(ಆರೋಗ್ಯಚಂದ್ರಿಕೆ.)

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[4] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲಿಯ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ
ತರಿಸಿಕೊಂಡು ಕುಡಿಯಿರಿ.

[26]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪ್ರಕಟಿ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ... ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಘಟ್ಟವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ... ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (32) ವನಸ್ಪತಿ-ಶತಪುಷ್ಪ, ಕಾಲಿಮಕಂದ, ಮದುಕಂದ, ಜರಾಕಂಧ, ಕಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ... ಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಡಬೀಜ, ನಾಗಬೀಜ, ಬಾಳಬೀಜ, ಭೋಕರೀ ಬೀಜ, ಪವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಜಾಪತ್ರಿ, ಪಿಶಾಪತ್ರಿ, ಮುದಸಮುಸ್ತ, ರತನಪುರುಷ, ಕಮಲ ... ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀ ... ದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀ ಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅರಳೀಬೆಂಡಿಬೀರು, ಅಮೃತ ... ಇಸಬಗೋಳ ಭೂಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ... ಮಿಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲೆಯು ಮತ್ತು ರಾತ್ರಿ ಭೋಜನಾನಂತರ 2 ತೊಲೆಯು ಒಂದು ... ಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಆಕಳ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ... ಇಲ್ಲ. ಸ್ತ್ರೀವಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ... ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧಿ, ನಾಸಿಕಾರದರೋಗ, ದುಷ್ಟರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ... ಯ 1 ಪುಡಿಕೆಗೆ 3 ರೂಪಾಯಿಗಳು.

[30]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವವು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಸೆ ೧ ಕ್ಕೆ ೦-೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯೀ ಅಷ್ಟವರ್ಗ ಔಷಧಾಲಯ
[43] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವು ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಜರಿಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಅತ್ತ ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[23] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[32] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ ನೇ ಫೆಬ್ರುವರಿ ೧೯೩೦ [ಸಂಚಿಕೆ ೪೦.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೭೦ ವರ್ಷಗಳ ವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಆದೆ. ಈ ಮಹಹಿಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೩ ಭಾವಚಿತ್ರಗಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಧೀಮಂತರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ. ಮುಂಗಡವಾಗಿ ಹಣಕಳುಹಿಸುವವರು ಪೋಸ್ಟ್ ಖರ್ಚಿಗಾಗಿ ೪ ಆಣೆ ಸೇರಿಸಿ ೧ ರೂ. ೪ ಆಣೆ ಕಳುಹಿಸಬೇಕು.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪ್ರಸಿದ್ಧಪತ್ರಿಕೆ.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲೂಕು, ಹೆಗ್ಗಡಹಳ್ಳಿ ಮಠದ ಪಟ್ಟಾಧಿಕಾರಕ್ಕೆ ಯೋಗ್ಯವಟುವು ಬೇಕಾಗಿದೆ. ನಾವು ವಯೋವೃದ್ಧರಾದ್ದರಿಂದ ಈ ವರ್ಷದಲ್ಲಿ ಅಧಿಕಾರ ಕೊಡಲು ಸಿದ್ಧರಾಗಿರುತ್ತೇವೆ. ಸತ್ಕುಲಪ್ರಸೂತರೂ, ಸಂಸ್ಕೃತ ವಿದ್ಯಾಪಾರಂಗತರೂ, ಕಾರ್ಯದಕ್ಷರೂ ಆದ ಮಾಹೇಶ್ವರವಟುಗಳು ಅಧಿಕಾರಕ್ಕೋಸ್ಕರ ಬೇಕಾಗಿರುವುದರಿಂದ ಅಧಿಕಾರಾಪೇಕ್ಷಿಗಳು ತಮ್ಮ ಸದ್ವಂಶ ಮೊದಲಾದ ವಿಷಯಗಳನ್ನು ತಮ್ಮ ಗ್ರಾಮಸ್ಥರಮುಖಾಂತರ ಸಮ್ಮತಿಪತ್ರದೊಡನೆ ಕಳುಹಿಸಬೇಕು. ಈ ವಟು ಚುನಾವಣೆ ವಿಷಯವು ಏಪ್ರೈಲ್ ತಿಂಗಳಲ್ಲಿ ನಮ್ಮ ಮಠದಲ್ಲಿ ನಡೆಯುವ ಮೀಟಿಂಗಿನಲ್ಲಿ ನಿರ್ಧರಿಸಲ್ಪಡುವುದು. ನಮ್ಮ ಈ ಮಠಕ್ಕೆ ವಾರ್ಷಿಕ ಉತ್ಪನ್ನವು 2,000 ರೂ. ಗಳವರೆಗಿರುವುದು. ಅಭಿಲಾಷಿಗಳು ಈ ಕೆಳಗಿನ ಅಡ್ರೆಸ್ಸಿಗೆ ಪತ್ರವ್ಯವಹಾರಮಾಡಬೇಕು.

ಪಟ್ಟದ ಸಿದ್ಧಲಿಂಗಸ್ವಾಮಿಗಳು,
ಹೆಗ್ಗಡಹಳ್ಳಿಮಠ.
ಎಸಳೂರು ಪೇಟೆ P. O.
ಹಾಸನ ಡಿಸ್ಟ್ರಿಕ್ಟ್.

ಚಂದಾದಾರರಲ್ಲಿ ವಿಜ್ಞಾಪನೆ.

ಯಾವನ ನಾಮಸ್ಮರಣಮಾತ್ರದಿಂದ ಸಕಲ ಮಾನವರು ಪಾಪದಿಂದ ವಿಮುಕ್ತರಾಗಿ ಮುಕ್ತಿಸಾಮ್ರಾಜ್ಯಸುಖವನ್ನನುಭವಿಸುವರೋ ಆ ಶ್ರೀ ಜಗದ್ಗುರು ರೇಣುಕಾಚಾರ್ಯನ ಅದ್ಭುತ ಲೀಲಾಪ್ರತಿಪಾದಕವಾದ **ರೇಣುಕವಿಜಯವು** ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿರುವ ವಿಷಯವು ನಮ್ಮಾ ಪತ್ರಿಕೆಯ ಕಳೆದ ವಾರದ ಸಂಚಿಕೆಯಿಂದ ಯಾವತ್ತು ಚಂದಾದಾರರಿಗೆ ವೇದ್ಯವಾಗಿರಬಹುದು. ಅನೇಕಾನೇಕಾಮೂಲ್ಯ ವಿಷಯಗಳಿಂದೊಡಗೂಡಿದ ಈ ಗುರುಚಕ್ರವರ್ತಿಯ ಪವಿತ್ರ ಚರಿತ್ರವು ಪ್ರತಿಯೊಬ್ಬರ ಮನೆಯಲ್ಲಿಯೂ ಪ್ರವೇಶಿಸಿ ಸರ್ವರನ್ನೂ ಉದ್ಧರಿಸಲೆಂಬ ಉದ್ದೇಶದಿಂದ ನಮ್ಮ ಚಂದಾದಾರರಿಗೆಲ್ಲ ವಿ. ಪಿ. ದ್ವಾರಾ ಕಳುಹಿಸಬೇಕೆಂದು ನಿರ್ಧರಿಸಿದ್ದೇವೆ. ಆದುದರಿಂದ ಪ್ರತಿಯೊಬ್ಬರು ವಿ. ಪಿ. ಯನ್ನು ಸ್ವೀಕರಿಸಿ ಆ ಗುರುಸಾರ್ವಭೌಮನ ಚರಿತ್ರವನ್ನು ಸಂಪೂರ್ಣವಾಗಿ ಓದಿ ಅದರಲ್ಲಿರತಕ್ಕ ಅತ್ಯಂತ ಮಹತ್ವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಆಶಿಸುತ್ತೇವೆ. ವಿ. ಪಿ. ಚಾರ್ಜು ಸೇರಿ ೧ ರೂ. ೬ ಆಣೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸ್ವೀಕಾರ.

ಹೈದರಾಬಾದ್ ಸ್ಟೇಟಿಗೆ ಸೇರಿದ ಬೀದರ್ ಶಹರದಲ್ಲಿರುವ ಮ|| ರಾ|| ಗುರಪ್ಪಾ ಹುಗಾರ ಇವರು ತಮ್ಮ ಮೊಮ್ಮಗನ ಚೌಲಕರ್ಮ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳು ಹಾಗೂ ಮ|| ರಾ|| ನಾಗಶೆಟ್ಟೆಪ್ಪಾ ಘಂಟೆ ಇವರು ತಮ್ಮ ಪುತ್ರಿಯ ವಿವಾಹಸಮಾರಂಭದಲ್ಲಿ ತೆಗೆಯಿಸಿದ 1 ರೂ. ಒಟ್ಟು 3 ರೂಪಾಯಿಗಳು ವೇ|| ಪಾಠಶಾಲಾಧ್ಯಾಪಕ ಬಸವರಾಜಶಾಸ್ತ್ರಿಗಳು ಹಾಗೂ ಶಿವರುದ್ರಪ್ಪಾ ವಕೀಲ ಹಾಲಹಳ್ಳೀಕರ್ ಇವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ಡಿ|| ಎರೇಹಂಚಿನಾಳ ಗ್ರಾಮದ ಹಿರೇಮಠದ ವೇ|| ರುದ್ರಯ್ಯನವರು ತಮಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಕಳುಹಿಸಿರುತ್ತಾರೆ.

ಬಿಜಾಪುರ ಡಿ|| ಗುಳೇದಗುಡ್ಡ ಟೌನಿನ ಬೆಂಚ್ ಮ್ಯಾಜಿಸ್ಟ್ರೇಟರೂ ಮುನಿಸಿಪಲ್ ಕೌನ್ಸಿಲರೂ ಆದ ಮ|| ರಾ|| ಬಾಪು ವಿರೂಪಾಕ್ಷಪ್ಪನವರ ವೃದ್ಧ ಮಾತುಶ್ರೀಯವರು ಮಾಘ ಶುದ್ಧ 5 ದಿವಸ ಶಿವೈಕ್ಯರಾದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ವೇ|| ಪಂಚಗಿಮಠದ ಗುರುಪಾದಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಸಂ.—

4 ನೆಯ ಲಂಬಾಣಿ ಮಹಾಸಭೆ.

ಈ ಮಹಾಸಭೆಯು ಕಡೂರು ತಾಲೂಕು ಅಂತರಗಟ್ಟೆಯಲ್ಲಿ ತಾ|| 15-2-30 ನೆಯ ಶನಿವಾರ ಕಡೂರು ಡಿಸ್ಟ್ರಿಕ್ಟು ಡೆಪ್ಯುಟೀ ಕಮಿಷನರ್ ಶ್ರೀಮಾನ್ ಜೀ. ವಿ. ರಾಮಸ್ವಾಮಿ, ಎಮ್.ಎ., ಬಿ.ಎಲ್. ರವರ ಅಧ್ಯಕ್ಷತೆಯಲ್ಲಿ ನಡೆಯುವದು. ಈ ಸಭೆಗೆ ಲಂಬಾಣಿಯವರೆಲ್ಲರೂ ಬರಬೇಕಾಗಿ ಕೋರಿದೆ.

8-2-30 ಜೀ. ವಿ. ಕೋದಂಡರಾಮಯ್ಯ.
ಅಂತಗಟ್ಟೆ ಛೇರ್ಮನ್, ಸ್ವಾಗತಮಂಡಲಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ಸಾಂಖ್ಯಶಾಸ್ತ್ರದ ಪ್ರವರ್ತಕನು ಕಪಿಲಮುನಿಯು; ಇವನು ಸನಾಕಾದಿಗಳಂತೆ ಬ್ರಹ್ಮಮಾನಸಪುತ್ರನೆಂದು ಮಹಾಭಾರತದ ಶಾಂತಿಪರ್ವದಲ್ಲಿ (೩೪೦-೬೭) ಹೇಳಿದೆ. ಈಗ ದೊರೆವ ಆರು [illegible]

[illegible]

ವೇದಾಗಮಗಳಲ್ಲಿಯ ಮಹತ್ತರವಾದ ಧ್ಯೇಯವನ್ನು ವಿಚಾರಪೂರ್ವಕವಾಗಿ ಕಂಡುಕೊಳ್ಳುವುದಕ್ಕೆ ವೈಶೇಷಿಕ, ನ್ಯಾಯ, ಸಾಂಖ್ಯಾದಿಶಾಸ್ತ್ರಗಳು ಪರಂಪರಾ ಸಾಧನಗಳಾಗಿರುವುದರಿಂದ ಅಧಿಕಾರ ಕಾರಣವನ್ನನುಸರಿಸಿ ಉಪಾದೇಯಗಳೇ ಆಗಿವೆ ಮತ್ತು

ಯೇನಾಕ್ಷರ ಸಮಾಮ್ನಾಯಮಧಿಗಮ್ಯ ಮಹೇಶ್ವರಾತ್ । ಕೃತ್ಸ್ನಂ ವ್ಯಾಕರಣಂ ಪ್ರೋಕ್ತಂ ತಸ್ಮೈ ಪಾಣಿನಯೇ ನಮಃ ॥

ಎಂಬ ಬೃಹತ್ಕಥೆಯ ಪದ್ಯಾನುಸಾರವಾಗಿ, ಅ ಇ ಉಣ್ ಎಂಬೀ ಮೊದಲಾದ ಹದಿನಾಲ್ಕು ಸೂತ್ರಗಳು ಶಿವನ (ಮಹೇಶ್ವರನ) ಡಮರುವಿನಿಂದ ಹೊರಟವುಗಳಾದ್ದರಿಂದ, ಅವು ಶಿವಸೂತ್ರಗಳೆಂದೂ, ಮಾಹೇಶ್ವರ ಸೂತ್ರಗಳೆಂದೂ ಪ್ರಸಿದ್ಧವಾಗಿವೆ; ಹಾಗೂ, ಅವುಗಳಿಗೆ ಚತುರ್ದಶಸೂತ್ರೀ ಅಕ್ಷರಸಮಾಮ್ನಾಯ ಎಂಬ ಹೆಸರುಗಳೂ ಇವೆ; ಸಮಾಮ್ನಾಯವು ಎಂದರೆ ವೇದವು (ಈಶ್ವರನಿಂದ ಪ್ರಾಪ್ತವಾದ ಜ್ಞಾನವು). ಈ ಸೂತ್ರಗಳಾದರೂ ಈಶ್ವರನಿಂದ ಪ್ರಾಪ್ತವಾದವುಗಳಾದ್ದರಿಂದ ಇವುಗಳ ಯೋಗ್ಯತೆಯಾದರೂ ವೇದಗಳಂತೆಯೇ ಇರುವುದು; ಅದುಕಾರಣವೇ ಮಹೇಶ್ವರನಾದ ಪಾಣಿನಿಯಿಂದ ರಚಿತವಾದ ವ್ಯಾಕರಣಗ್ರಂಥವು ವೇದಾಂಗದಲ್ಲಿ ಗಣಿಸಲ್ಪಡುವುದು. ಈ ಮಾಹೇಶ್ವರ ಸೂತ್ರಗಳೇ ಶಿವಸಿದ್ಧಾಂತ ಪ್ರತಿಪಾದಕಗಳಾಗಿರುವುವೆಂದೂ

ನೃತ್ತಾವಸಾನೇನಟರಾಜರಾಜೋ ನನಾದಢಕ್ಕಾಂ ನವಪಂಚವಾರಮ್ । ಉದ್ಧರ್ತುಕಾಮಃ ಸನಕಾದಿಸಿದ್ಧಾನ್ ಏತದ್ವಿಮರ್ಶೇ ಶಿವಸೂತ್ರಜಾಲಮ್ ॥

ಎಂಬೀ ನಂದಿಕೇಶ್ವರ ಕಾಶಿಕಾದಿ ಗ್ರಂಥಗಳಿಂದ ತಿಳಿದುಬರುತ್ತದೆ.

ಇದೂ ಅಲ್ಲದೆ, ನಾಟ್ಯಾಲಂಕಾರ, ಸಾಹಿತ್ಯ, ಸಂಗೀತ, ಶಿಲ್ಪ, ವೈದ್ಯ, ಜ್ಯೋತಿಷ ಮುಂತಾದ ಶಾಸ್ತ್ರಗಳ ಪ್ರವರ್ತಕರಾದ ಭರತ [illegible]

[illegible]

ಅನುಷ್ಟುಪ್‌ಛಂದಸ್ಸನ್ನೇ ಅನುಸರಿಸಿ ಪ್ರಚಾರಗೊಳಿಸಿದರು; ಆದರೂ ಆ ವಾಕ್ಯಗಳೇ ಈಗ ನಮ್ಮ ಗ್ರಂಥವರಿಗೆ ಸೂತ್ರರೂಪಗಳಾಗಿವೆ. (ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀಮದ್ವೀರಶೈವಧರ್ಮಸುಧಾರಿಣೀಸಭಾ.

(ಬಾಳೆಕೊಪ್ಪ)

ಸಮಾಜಬಾಂಧವರೇ! "ಸಂಘೇಶಕ್ತಿಃಕಲೌಯುಗೇ" ಎಂಬಂತೆ ಯಾವದಾದರೊಂದು ಮಹತ್ತರವಾದ ಕಾರ್ಯವು ಪ್ರಚಾರಕ್ಕೆ ಬರಬೇಕಾದರೆ ಬಹು ಜನರು ಒಂದು ಕಡೆಕೂಡಿ ಸಾಧಕ [illegible]

[illegible]

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘದ ಸೆಕ್ರೆಟರಿಗಳು.

29-1-30, ಬಾಳೆಕೊಪ್ಪ. ಸಂದೀಕ ಕೆಂಚಪ್ಪ ಕೊಕ್ಕನೂರ ಗೌಡರ,

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಹಾಲುಮತದ ಭಕ್ತ ಗುರುಭಕ್ತಿ.

[illegible]

(6 ನೇ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ

೧೯೩೦ ನೇ ಫೆಬ್ರುವರಿ ತಾ॥ ೧೦ ನೇ ಸೋಮವಾರ

ಷಡಂಗಯೋಗ.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಈ ಆರು ಷಡಂಗಗಳೆನಿಸುವವು. ಇಲ್ಲಿ ಆರನೇ ಐಕ್ಯಸ್ಥಲವು ಸಾಧ್ಯರೂಪವಾಗಿದ್ದರೂ, ಅದಕ್ಕೆ ಅಂಗವೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವದು. ಹಿಂದಿನ ಐದಂಗಗಳಲ್ಲಿ ಮೊದಲು ಮೊದಲಿರುವ ಅಂಗಗಳು ಮುಂದು ಮುಂದಿರುವ ಅಂಗಗಳಿಗೆ ಸಾಧನಗಳಾಗಿವೆ. ಅದುದರಿಂದ ಭಕ್ತಾದಿ ಐದಂಗಗಳು ಸಾಧನರೂಪಗಳಾಗಿವೆ. ಇನ್ನು ಐಕ್ಯವೆಂಬ ಅಂಗವಾದರೋ, ಸಾಧ್ಯರೂಪವಾಗಿದೆ. ಹಾಗಾದರೆ ಅದಕ್ಕೆ ಅಂಗವೆಂದು ಹೇಳುವದೇಕೆ? ಅಂಗನೆಂದರೆ ಜೀವನಲ್ಲವೆ? ಸಾಕ್ಷಾತ್ ಶಿವೈಕ್ಯವನ್ನು ಹೊಂದಿ ಶಿವಸ್ವರೂಪನಾದವನು, ಜೀವನೆನಿಸುವದಿಲ್ಲವೆಂದಮೇಲೆ ವೀರಶೈವ ಶಾಸ್ತ್ರಕಾರರು ಅಂತಹ ಐಕ್ಯಸ್ಥಲಕ್ಕೆ ಅಂಗವೆಂದು ಹೇಳಿರುವದು ಸಂಗತವಾಗುವದಿಲ್ಲವೆಂದರೆ, ಪಾತಂಜಲಯೋಗದಲ್ಲಿಯೂ ಕೂಡ ಸಮಾಧಿಯು ಫಲರೂಪವಾಗಿದ್ದರೂ, ಅದಕ್ಕೆ ಎಂಟನೆಯ ಅಂಗವೆಂದು ಹೇಳಲ್ಪಟ್ಟಿದೆ. ಅದರಂತೆ ಶಿವಯೋಗಶಾಸ್ತ್ರದಲ್ಲಿ ಆರನೆಯ ಮುಕ್ತಿರೂಪವಾದ ಫಲಕ್ಕೆ ಅಂಗವೆಂದು ವ್ಯವಹಾರವುಂಟು. ಹಾಗಾದರೆ ಆ ಆರನೇ ಐಕ್ಯಸ್ಥಲಕ್ಕೆ ಪ್ರಯೋಜನವೇನು? ಹಿಂದಿನ ಐದು ಸ್ಥಲಗಳಿಗಂತೂ ಮುಂದು ಮುಂದಿನ ಸ್ಥಲಗಳ ಪ್ರಾಪ್ತಿಯೇ ಪ್ರಯೋಜನವಾಗಿರುವದು. ಅಂದರೆ ಮೇಲು ಮಹಡಿಯಂತಿರುವ ಶಿವೈಕ್ಯಪ್ರಾಪ್ತಿಯೆಂಬ ಮೋಕ್ಷಫಲಕ್ಕೆ ಭಕ್ತಾದಿ ಐದು ಸ್ಥಲಗಳು ಐದು ಸೋಪಾನಗಳಂತಿರುವವು. ಮೊದಲಿನ ಸೋಪಾನವನ್ನು (ಪಾವಟಿಗೆಯನ್ನು) ಹತ್ತಿದರೆ ಎರಡನೆಯ ಸೋಪಾನವು ಸಿಗುವದು. ಮೊದಲಿನ ಸೋಪಾನಕ್ಕೆ ಎರಡನೆಯ ಸೋಪಾನದ ಪ್ರಾಪ್ತಿಯೇ ಫಲವಾಗಿರುವದು. ಹೀಗೆ ಮುಂದಿನ ನಾಲ್ಕು ಸೋಪಾನಗಳನ್ನು ಹತ್ತಿ, ಐಕ್ಯಸ್ಥಲವೆಂಬ ಮಹಡಿಯು ದೊರೆತಮೇಲೆ ಸಾಧಕನ ಪ್ರಯತ್ನವು ಮುಗಿಯಿತು. ಆ ಮಹಡಿಯ ಪ್ರಾಪ್ತಿಯೇ ಕಡೆಯ ಪ್ರಯೋಜನವಾಗಿದೆ. ಈ ಪ್ರಾಪ್ತಿಗೆ ಮತ್ತೊಂದು ಫಲವೇನೂ ಇಲ್ಲ. ಅದ ಮೇಲೆ ಪ್ರಯೋಜನವಿಲ್ಲದಿರುವ ಆರನೆಯ ಸ್ಥಲವನ್ನು ಸ್ವೀಕರಿಸುವಲ್ಲಿ ಯುಕ್ತಿಯೇನಿರುವದೆಂಬ ಆಕ್ಷೇಪವುಂಟಾಗುವದು. ಈ ಆಕ್ಷೇಪಕ್ಕೆ ಸಮಾಧಾನವೇ ಇಲ್ಲ. ಅದುದರಿಂದಲೇ ಶಿವಾದ್ವೈತಕಲ್ಪಲತಿಕಾರರೂ ಕೂಡ ಆರನೆಯ ಸ್ಥಲವನ್ನು ಸ್ವೀಕರಿಸುವಲ್ಲಿ ಪ್ರಯೋಜನವಿಲ್ಲವೆಂದು ಐದೇ ಸ್ಥಲಗಳನ್ನು ಸ್ವೀಕರಿಸಿದ್ದಾರಾದರೂ ನಾವು ಮಾತ್ರ ಹಾಗೆ ಹೇಳುವದಿಲ್ಲ. ಏಕೆಂದರೆ ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬ ಎಂಟು ಅಂಗಗಳಲ್ಲಿ ಎಂಟನೆಯ ಸಮಾಧಿ ಎಂಬ ಅಂಗವೇ ಫಲರೂಪವಾಗಿರುವದು. ಅದೇ ಹಿಂದಿನ ಏಳು ಅಂಗಗಳಿಗೂ ಪ್ರಯೋಜನರೂಪವಾಗಿದೆ. ಅದಕ್ಕೆ ಮತ್ತೊಂದು ಬೇರೆ ಪ್ರಯೋಜನವೇನೂ ಇಲ್ಲ. ಆದರೂ, ಪಾತಂಜಲದರ್ಶನದಲ್ಲಿ ಅದಕ್ಕೆ ಎಂಟನೇ ಅಂಗವೆಂದು ಹೇಳಿ ಸ್ವೀಕರಿಸಲ್ಪಟ್ಟಿದೆ. ಅದರಂತೆ ಆರನೆಯ ಸ್ಥಲವನ್ನು ಸ್ವೀಕರಿಸುವಲ್ಲಿ ಅದಕ್ಕೆ ಬೇರೆಯಾದ ಮತ್ತೊಂದು ಪ್ರಯೋಜನವಿಲ್ಲದಿದ್ದರೂ, ತಾನೇ ಅಂತಿಮಫಲರೂಪವಾಗಿದ್ದರೂ, ಅದನ್ನು ಕೂಡ ಸೇರಿಸಿ ಆರು ಅಂಗಗಳು ಹೇಳಲ್ಪಟ್ಟಿರುವವೆಂದು ಹೇಳುತ್ತೇವೆ. ಜೀವನಿಗೂ ಶಿವನಿಗೂ "ಗುಹಾಂಪ್ರವಿಷ್ಟಾ" "ಗುಹಾಂಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್" ಎಂಬುವ ಶ್ರುತಿಸೂತ್ರಗಳಿಂದ ಗುಹೆಯೆನಿಸುವ ಶರೀರ ಅಥವಾ ಹೃದಯಗಳಲ್ಲಿ ಪ್ರವೇಶವೂ ಹೇಳಲ್ಪಡುತ್ತದೆ. ಆದುದರಿಂದ ಪ್ರತಿಯೊಂದು ಶರೀರದಲ್ಲಿ ಜೀವಾತ್ಮನೊಬ್ಬನೇ ಶರೀರದಲ್ಲಿಯ ಪೃಥಿವ್ಯಂಶದ ಅಭಿಮಾನದಿಂದ ಭಕ್ತನೆಂದೂ, ಅಂದರೆ ಆ ಪೃಥಿವೀಭಾಗಕ್ಕೆ ನಾನು ನನ್ನದೆಂದು ಅಭಿಮಾನಿಸಿ, ಭಕ್ತನೆಂಬುವ ಅಥವಾ ಬ್ರಹ್ಮನೆಂಬುವ ನಾಮವನ್ನು ಹೊಂದಿರುವನು. ಇದರಂತೆ ಆ ಜೀವನು ಜಲ, ತೇಜಸ್ಸು, ವಾಯು, ಆಕಾಶ ಇವುಗಳನ್ನು ನಾನು, ನನ್ನದೆಂದು ಅಭಿಮಾನಿಸಿಕೊಂಡು ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಅಥವಾ ವಿಷ್ಣು, ರುದ್ರ, ಈಶ್ವರ, ಸದಾಶಿವ, ಎಂಬುವ ನಾಮಗಳನ್ನು ಹೊಂದಿ, ಐದು ಅಂಗಸ್ಥಲಗಳ ಸ್ವರೂಪನಾಗಿದ್ದಾನೆ. ಏಕಂದರೆ ಸಿದ್ಧಾಂತಶಾಸ್ತ್ರದಲ್ಲಿ ಭಕ್ತನೆನಿಸುವ ಬ್ರಹ್ಮನಿಗೆ ಪೃಥ್ವಿಯೆಂಬ ಅಂಗವೂ, ಮಾಹೇಶನೆನಿಸುವ ವಿಷ್ಣುವಿಗೆ ಜಲವೆಂಬ ಅಂಗವೂ, ಇದರಂತೆ ಪ್ರಸಾದಿ, ಪ್ರಾಣಲಿಂಗಿ, ಶರಣರೆನಿಸುವ ರುದ್ರ, ಈಶ್ವರ, ಸದಾಶಿವರುಗಳಿಗೆ ತೇಜಸ್ಸು, ವಾಯು, ಆಕಾಶಗಳು ಅಂಗಗಳಾಗಿವೆಯೆಂದು ಹೇಳಲ್ಪಟ್ಟಿರುವದು, ಆದುದರಿಂದ ಜೀವಾತ್ಮನು ಈ ಮೂರುವರೆ ಮೊಳದ ಶರೀರವೇ ತಾನೆಂದೂ, ಆ ಶರೀರಕ್ಕೆ ಸಂಬಂಧಿಸಿದ ಪತ್ನೀಪುತ್ರಾದಿಗಳು ತನ್ನವರೆಂದೂ ಭ್ರಾಂತಿಗೊಂಡು, ಪತ್ನೀಪುತ್ರಾದಿಗಳಿಗೆ ರೋಗಾದಿಗಳಿಂದ ದುಃಖವಾಗಲು ತಾನೇ ದುಃಖಿಯಾಗಿ ನರಳುವನು. ಪರರ ದೇಹಾದಿಗಳಲ್ಲಿ ತಾನು ತನ್ನವರೆಂಬುವ ಅಭಿಮಾನವಿಲ್ಲದಿರುವದರಿಂದ ಅವರಿಗೇನಾದರೂ ಇವನಿಗೆ ದುಃಖವೆನಿಸುವದಿಲ್ಲ. ಇದರಂತೆ ಶರೀರದಲ್ಲಿರುವ ಪೃಥಿವ್ಯಾದಿ ಪಂಚಭೂತಗಳ ಅಭಿಮಾನದಿಂದ ಹಿಂದೆ ಹೇಳಿದ ಐದು ನಾಮಗಳನ್ನು ಹೊಂದಿ ಆ ಭೂತಗಳೇ ತಾನು ತನ್ನವೆಂದು ಅಭಿಮಾನಿಸಿ, ಆ ಅಭಿಮಾನವೆಂಬ (ಅಜ್ಞಾನ) ಪಾಶದಿಂದ ಬಿಗಿಯಲ್ಪಡುವನು. ಈ ಕಗ್ಗಂಟು ಸಾಧಾರಣವಾದುದಲ್ಲ. ಎಂದು ಸೃಷ್ಟಿಯಾಯಿತೋ, ಅಂದಿನಿಂದಲೂ ಜೀವಾತ್ಮನಿಗೆ ಪಾಶಗಳ ಗಂಟು ಯಾರಿಂದಲೂ ಬಿಚ್ಚಲಿಕ್ಕೆ ಬಾರದಂತೆ ಬಿದ್ದಿರುವದು. ಅಂದರೆ ಯಾವನಿಂದ ಈ ಪಾಶಬಂಧನವುಂಟಾಗಿರುವದೋ? ಅವನ ಹೊರತು ಆ ಬಂಧನವಿಮೋಚನೆಯನ್ನು ಯಾರೂ ಮಾಡಲಾರರು. ಲೋಕದಲ್ಲಿ ಒಂದು ಗಟ್ಟಿಯಾದ ಹಗ್ಗದಿಂದ ಯಾವನಾದರೊಬ್ಬನನ್ನು ಸರಿಯಾಗಿ ಬಂಧಿಸಿದರೆ ಅದನ್ನೇ ಬಿಚ್ಚುವದು ಅಸಾಧ್ಯವಾಗಿರುವಾಗ ಸರ್ವಜ್ಞನೂ ಅಘಟಿತಘಟನಾ ಸಮರ್ಥನೂ ಆದ ಆ ಪರಮೇಶ್ವರನು ಒಂದಲ್ಲ, ಎರಡಲ್ಲ, ಐದು ಹಗ್ಗಗಳಿಂದ ಜೀವನನ್ನು ಬಂಧಿಸಿರುವನೆಂದ ಮೇಲೆ ಆ ಪರಮೇಶ್ವರನನ್ನು ಬಿಟ್ಟು ಇತರ ಮಾನವರು ಆ ಬಂಧನವನ್ನು ಬಿಡಿಸುವದುಂಟೆ? ಎಂದೂ ಬಿಡಿಸಲಾರರು. ಆದುದರಿಂದ ಆ ಪರಮೇಶ್ವರನೇ ಜೀವಾತ್ಮನ ಬಂಧನವನ್ನು ಬಿಡಿಸಿ, ದುಃಖನಿವೃತ್ತಿಯನ್ನು ಮಾಡಿ, ಪರಮಸುಖವನ್ನುಂಟುಮಾಡಬೇಕಾಗಿದೆಯಾದುದರಿಂದ, ಆ ಪರಮೇಶ್ವರನು ತನ್ನನ್ನು ಪೂಜಿಸಿ, ಧ್ಯಾನಿಸಿ, ಧರಿಸಿ, ತನ್ನ ಬಂಧನವನ್ನು ಬಿಡಿಸಿಕೊಂಡು ನಿತ್ಯಸುಖವನ್ನು ಹೊಂದಲೆಂಬ ಉದ್ದೇಶದಿಂದ ಲಿಂಗರೂಪನಾದನು. ಅಂದರೆ ಆಧಾರಾದಿ ಐದು ಸ್ಥಾನಗಳಲ್ಲಿ ಆಚಾರಾದಿ ಐದು ಲಿಂಗಗಳ ಸ್ವರೂಪನಾಗಿರುವನು. ಯಾವ ಪರಮೇಶ್ವರನು ಐದುಪ್ರಕಾರನಾದನೋ, ಅವನೇ ಮಹಾಲಿಂಗವು. ಆಚಾರಲಿಂಗವೇ ಸದ್ಯೋಜಾತಬ್ರಹ್ಮವು. ಇದು ಪೃಥ್ವಿಗೂ ಪೃಥಿವೀ ತತ್ವಾಭಿಮಾನಿಯಾದ ಭಕ್ತ ಅಥವಾ ಬ್ರಹ್ಮನೆನಿಸುವ ಜೀವಾತ್ಮನಿಗೂ ಅಧಿಷ್ಠಾನವಾಗಿದೆ. ಇದಕ್ಕೆ ಪ್ರಣವವಾವುದು? ಶಕ್ತಿಯಾವದೆಂಬುದನ್ನು ಗುರುಮುಖದಿಂದ ತಿಳಿದು ಆ ಲಿಂಗವನ್ನು ಪೂಜಿಸಬೇಕು, ಧ್ಯಾನಿಸಬೇಕು ಮತ್ತು ಧಾರಣ ಮಾಡಬೇಕು. ಹೀಗೆ ಆಧಾರಚಕ್ರವೆಂಬ ಕಮಲದ ಮಧ್ಯಕರ್ಣಿಕೆಯಲ್ಲಿರುವ ಸದ್ಯೋಜಾತಬ್ರಹ್ಮವೆಂಬ ಮತ್ತೊಂದು ಹೆಸರುಳ್ಳ ಆಚಾರಲಿಂಗವನ್ನು ಪೂಜಿಸಿ, ಧ್ಯಾನಿಸಿ, ಧಾರಣಮಾಡಲು ಅಷ್ಟಾಂಗಯೋಗದಲ್ಲಿ ಹೇಳಿದ ಸಮಾಧಿಯೆಂಬ ಐಕ್ಯಸ್ಥಲವು ಸಿದ್ಧಿಸುವದು. ಆಗ ಭಕ್ತನು ಪೃಥ್ವಿಯೆಂಬ ತನ್ನಂಗದ ಅಭಿಮಾನವನ್ನು ಬಿಟ್ಟುಬಿಡುವನು. ಮೊದಲಿನ ಈ ಒಂದು ಲಿಂಗದಲ್ಲಿ ಸಮಾಧಿಸ್ಥಿತಿಯುಂಟಾಗಲು, ಮುಂದುಮುಂದಿರುವ ಗುರುಲಿಂಗಾದಿಗಳಲ್ಲಿ ಆ ಸ್ಥಿತಿಯು ಬರುವದು ಸುಲಭವೇ ಆಗುತ್ತದೆ. ಹಾಗೆ ಮುಂದಿನ ಲಿಂಗಗಳಲ್ಲಿ ಸಮಾಧಿಸ್ಥಿತಿಯೆಂದರೆ ಸಾಮರಸ್ಯವು ಉಂಟಾಗಲು ಭಕ್ತನೇ ಮಾಹೇಶನೂ, ಪ್ರಸಾದಿಯೂ, ಪ್ರಾಣಲಿಂಗಿಯೂ, ಶರಣನೂ ಆಗಿಬಿಡುತ್ತಾನೆ: ಅಥವಾ ಬ್ರಹ್ಮನೇ ವಿಷ್ಣು, ರುದ್ರ, ಈಶ್ವರ, ಸದಾಶಿವನೆನಿಸುವನು. ಆ ಮೇಲೆ ಜೀವಾತ್ಮನ ಸರ್ವೋಪಾಧಿಗಳೂ ಕಳೆದುಹೋಗಿ, ಶುದ್ಧಾತ್ಮನಾಗುವನು. ಅಂದರೆ ಪೃಥ್ವಿ ಮೊದಲಾದ ಐದು ಪಾಶಗಳು ಹರಿದುಹೋಗಿ ಶುದ್ಧಶಿವಾಂಶರೂಪನೇ ಆಗಿಬಿಡುವನು. ಇಂತಹ ಶುದ್ಧ ಶಿವಾಂಶವು ಮಹಾಲಿಂಗಕ್ಕೆ ಭಿನ್ನವಾಗಿರುವದಿಲ್ಲ. ಸೂರ್ಯನ ಕಿರಣಗಳು ಸೂರ್ಯನಿಗೆ ಭಿನ್ನವಲ್ಲ. ಆ ಕಿರಣಗಳು ಹಗಲುಹೊತ್ತಿನಲ್ಲಿ ಎಲ್ಲೆಲ್ಲಿಯೋ ಹರಡಿಕೊಂಡು ಸೂರ್ಯಕಾಂತಶಿಲೆಯಲ್ಲಿ ಪ್ರತಿಸ್ಫುರಿಸಿ ಅರಳೆ ಮುಂತಾದ ಉಪಾಧಿಗೆ ತಗಲಿ ಸ್ಥೂಲಾಕೃತಿಯನ್ನು ಹೊಂದುವವು ಅಂದರೆ ಬೆಂಕಿಯಾಗುವವು. ರಾತ್ರಿಯಲ್ಲಿ ಅವೆಲ್ಲವೂ ಸೂರ್ಯನಲ್ಲಿ ಸೇರಿ ಸೂರ್ಯಸ್ವರೂಪಗಳೇ ಆಗುವವು. ಅದರಂತೆ ಶಂಕರಭಾಸ್ಕರನ ಕಿರಣಗಳಂತಿರುವ ಜೀವಾತ್ಮರು ಆ ಶಿವನಿಂದ ವಿಭಕ್ತರಾಗಿ, ಮಾಯಾದಿ ಉಪಾಧಿಗಳಿಗೆ ಅಭಿಮಾನಿಸಿ, ಸ್ಥೂಲಾಕೃತಿಯನ್ನು ಹೊಂದಿ ತಮ್ಮ ಶಿವಸ್ವರೂಪವನ್ನೇ ಮರೆತುಬಿಟ್ಟು, ಬಂಧಿತರಾಗುವರು. ಆಮೇಲೆ ಪರಿಪಕ್ವದೆಶೆಯನ್ನು ಹೊಂದಿ ಆಧಾರಸ್ವಾಧಿಷ್ಠಾನಾದಿ ಸ್ಥಾನಗಳಲ್ಲಿರುವ ಆಚಾರಾದಿ ಲಿಂಗಗಳ ಸಾಮರಸ್ಯದಿಂದ ಪೃಥಿವ್ಯಾದಿ ಗ್ರಂಥಿಗಳಿಂದ ಮುಕ್ತರಾಗಲು ಸರ್ವೋಪಾಧಿಗಳೂ ಲಯವನ್ನು ಹೊಂದುವವು. ಆಗ ಜೀವಾತ್ಮನು ಶುದ್ಧ ಶಿವಾಂಶನಾಗುವನು. ಆಗ ಕ್ಷೀರದಲ್ಲಿ ಕ್ಷೀರವು ಬೆರತಂತೆ ಶಿವನೆಂಬ ಮಹಾಲಿಂಗದಲ್ಲಿ ಬೆರತು ಸುಖಿಯಾಗುವನು. ಇದೇ ಷಡಂಗಯೋಗವು. ಈ ಷಡಂಗಯೋಗವನ್ನು ತಿಳಿಯಬೇಕಾದರೆ ಸೂಕ್ಷ್ಮ ಪಂಚಾಕ್ಷರಮಂತ್ರವೆನಿಸುವ ಮೂಲಪ್ರಣವದಿಂದ ಸಹಿತವಾದ ನಕಾರಾದಿ ಯಕಾರಾಂತವಾದ ಪಂಚಾಕ್ಷರಮಂತ್ರವನ್ನೂ ಅದರ ಅರ್ಥವನ್ನೂ ಮೊದಲು ತಿಳಿಯಬೇಕು. ಈ ತಿಳುವಳಿಕೆಗಾಗಿ ಶ್ರೀ ಗುರುಮೂರ್ತಿಯನ್ನು ಆಶ್ರಯಿಸಬೇಕು. ಅವನಿಂದ ಶಿವದೀಕ್ಷೆಯನ್ನು ಪಡೆಯಬೇಕು. ಈ ದೀಕ್ಷೆಯಿಲ್ಲದಿದ್ದರೆ ಅಶುದ್ಧ ಭೂಮಿಯಲ್ಲಿ ಆ ಮಂತ್ರಬೀಜವು ಅಂಕುರಿಸಿ, ಪಲ್ಲವಿಸಿ, ಫಲಿಸಲಾರದು. ಅಂದರೆ ಆ ಮಂತ್ರದಿಂದಾಗುವ ಮುಕ್ತಿಫಲವು ದೊರೆಯಲಾರದು. ಆದುದರಿಂದ ಷಡಂಗಯೋಗವನ್ನು ಅಭ್ಯಾಸಮಾಡುವ ಇಚ್ಛೆಯುಳ್ಳವರು ಮೊದಲು ದೀಕ್ಷೆಯನ್ನು ಹೊಂದಿ, ಪ್ರಣವಸಹಿತವಾದ ಪಂಚಾಕ್ಷರಮಂತ್ರೋಪದೇಶವನ್ನು ಪಡೆದು, ಆ ಮೂಲಪ್ರಣವಾರ್ಥವಾದ ಮಹಾಲಿಂಗದ ಸ್ವರೂಪವನ್ನೂ, ನಕಾರಾದಿ ಯಕಾರಾಂತಗಳಾದ ಐದು ಪ್ರಣವಗಳ ಅರ್ಥಗಳೆನಿಸುವ ಆಚಾರಾದಿ ಐದು ಲಿಂಗಗಳನ್ನೂ ತಿಳಿದು, ಅವುಗಳಲ್ಲಿ ಮೇಲೆ ಹೇಳಿದ ಷಡಂಗಗಳ ಯೋಗವನ್ನು ಪಡೆದು ನಿತ್ಯಸುಖಿಗಳಾಗುವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲೆಂದು ಆಶಿಸುತ್ತೇನೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಬೆಂಚ್‌ಕೋರ್ಟ್ ಛೇರ್‌ಮನ್ನರಾದ ಮಿ॥ ಟಿಪ್ಪೂಸುಲ್ತಾನ್ ಅಲ್ಲಿಖಾನರವರು ಮೈಸೂರು ಬಂದೀಖಾನೆಯ ಸ್ಟ್ಯಾಂಡಿಂಗ್ ಅಡ್ವೈಜರಿ ಬೋರ್ಡಿನ ಮೆಂಬರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್ ಯಳಂದೂರು ತಾಲೂಕಿಗೆ ಸೇರಿದ ಅಗರ, ಮಾಂಬಳ್ಳಿ ಗ್ರಾಮಗಳನ್ನು ಸೇರಿಸಿ ಒಂದು ಮೈನರು ಮುನಿಸಿಪಾಲಿಟಿಯನ್ನು ಏರ್ಪಡಿಸಬೇಕೆಂದು ಸರಕಾರದವರು ನಿಶ್ಚಯಿಸಿರುತ್ತಾರೆ.

ಸರಕಾರದವರು ಲಾ ಇಲಾಖೆಯ ಅಸಿಸ್ಟೆಂಟ್ ಸೆಕ್ರೆಟರಿಯವರನ್ನು ಮಾರ್ಚಿ ತಿಂಗಳಲ್ಲಿ ನಡೆಯುವ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆಯ ಎಲೆಕ್ಷನ್ ಆಫೀಸರನ್ನಾಗಿ ನೇಮಿಸಿರುತ್ತಾರೆ.

ಶ್ರೀಮನ್ಮಹಾರಾಜರ ಅತಿಥಿಗಳಾಗಿ ದಯಮಾಡಿಸಿ ಲಲಿತಮಹಲಿನಲ್ಲಿದ್ದ ಭಾವನಗರದ ಮಹಾರಾಜರವರು ಕಳೆದ 6 ನೆಯ ತಾರೀಖು ಗುರುವಾರ ರಾಜಧಾನಿಯಿಂದ ತಮ್ಮ ರಾಜಧಾನಿಗೆ ಹಿಂತಿರುಗಿದರು. ಗೌರವಾರ್ಥವಾದ 13 ತೋಪುಗಳು ಹಾರಿಸಲ್ಪಟ್ಟವು.

ಕಳೆದ 5ನೆಯ ತಾರೀಖು ಬುಧವಾರ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ದಿವಸವಾದ್ದರಿಂದ ಪ್ರಾತಃಕಾಲ 7 ಘಂಟೆಗೆ ಸರಿಯಾಗಿ ಗೌರವಾರ್ಥವಾಗ ತೋಪುಗಳನ್ನು ಹಾರಿಸಿದುದಲ್ಲದೆ ಸಾಯಂಕಾಲ ಅರಮನೆಯ ಹೊರಭಾಗಕ್ಕೆ ಹಾಕಿರುವ ವಿದ್ಯುದ್ದೀಪಗಳೆಲ್ಲವೂ ಹತ್ತಿಸಲ್ಪಟ್ಟಿದ್ದುವು.

ಮೈಸೂರು ಸರಕಾರದ ಲೈಫ್‌ಇನ್‌ಷ್ಯೂರೆನ್ಸ್ ಇಲಾಖೆಯ ಕೆಲಸಕಾರ್ಯಗಳು ವಿಶೇಷವಾಗಿ ಹೆಚ್ಚಿರುವದರಿಂದಲೂ, ಈಗಿರುವ ಇನ್‌ಷ್ಯೂರೆನ್ಸ್ ಆಫೀಸಿನಲ್ಲಿ ಸ್ಥಳವು ಸಾಲದೇ ಇರುವದರಿಂದಲೂ, ಅದಕ್ಕಾಗಿ 1,31,000 ರೂಪಾಯಿಗಳನ್ನು ಖರ್ಚುಮಾಡಿ ಒಂದು ಅನುಕೂಲವಾದ ಕಟ್ಟಡವನ್ನು ಕಟ್ಟಿಸಬೇಕೆಂದು ಸರಕಾರದವರು ಆಜ್ಞೆ ಮಾಡಿರುತ್ತಾರೆ.

ಬೆಂಗಳೂರು ರಾಜದ್ರೋಹದ ಮೊಕದ್ದಮೆಯಲ್ಲಿ ಅಪಾದಿತರಾಗಿ ಕಾರಾಗೃಹವಾಸವನ್ನನುಭವಿಸುತ್ತಿದ್ದ ಶ್ರೀ ಸೀತಾರಾಮಶಾಸ್ತ್ರಿಗಳು ಕಳೆದ 7 ನೆಯ ತಾರೀಖು ಶುಕ್ರವಾರ ಬೆಳಿಗ್ಗೆ 5 ಘಂಟೆಗೆ ಕಾರಾಗೃಹದಿಂದ ಬಿಡುಗಡೆಯನ್ನು ಹೊಂದಿದರು. ಇವರು ಕೊಡಬೇಕಾಗಿದ್ದ 500 ರೂ. ಗಳ ಅರ್ಥದಂಡವು ಬೆಂಗಳೂರು ದೇಶಾಭಿಮಾನಿಗಳಿಂದ ಚಂದಾರೂಪವಾಗಿ ಶೇಖರಿಸಿ ಕೊಡಲ್ಪಟ್ಟಿತು.

ಬೆಂಗಳೂರು ಸಿಟಿ ಲಾಲ್‌ಬಾಗ್ ಉದ್ಯಾನವನದಲ್ಲಿ ಕಳೆದ ಶನಿವಾರ ಫಲಪುಷ್ಪಾದಿಗಳ ಪ್ರದರ್ಶನವು ನಡೆಯಿತು. ಭಾವನಗರದ ಮಹಾರಾಜರವರು ನಮ್ಮ ದಿವಾನರಾದ ಸರ್. ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರೊಡನೆ ದಯಮಾಡಿಸಿ ಪ್ರದರ್ಶನವನ್ನು ಅವಲೋಕಿಸಿ ಸಂತೋಷಪಟ್ಟಿರಲ್ಲದೆ ಮಿ॥ ಜಿ. ಎಚ್. ಕ್ರಂಬೀಗಲ್‌ರವರ ಕೋರಿಕೆಯಂತೆ ಪ್ರದರ್ಶಕರಿಗೆ ಬಹುಮಾನಗಳನ್ನೂ ಹಂಚಿದರು.

ರಾಜಧಾನಿಯ ಆಸ್ಥಾನ ಜ್ಯೋತಿಷವಿದ್ವಾನ್ ವೇ॥ ಯಜ್ಞಮನ್ ಸಂಪತ್ಕುಮಾರ ಜೋಯಿಸರು ಕಳುಹಿಸಿರುವ ಶ್ರೀಪ್ರಮೋದ ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯಪಂಚಾಂಗವನ್ನೂ, ಹಾಗೂ ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ಪ್ರಸಿದ್ಧ ಜವಳಿ ವ್ಯಾಪಾರಿಗಳಾದ ಶ್ರೀ ರಾಜರಾಜೇಶ್ವರೀಹಾಲ್‌ನವರು ಕಳುಹಿಸಿರುವ ನೂತನ ವರ್ಷದ ಮನೋಹರವಾದ ಕ್ಯಾಲೆಂಡರನ್ನೂ ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಮೈಸೂರು ತಾಲೂಕು ಖಜಾನೆಯಲ್ಲಿ 13,000 ರೂ. ಗಳನ್ನು ದುರುಪಯೋಗಪಡಿಸಿದರೆಂಬ ಕಾರಣದ ಮೇಲೆ ಮೈಸೂರು ಸೆಷನ್ಸ್ ಜಡ್ಜರವರು ತಾಲೂಕು ಶಿರಸ್ತೇದಾರ್, ನಗದಿ ಗುಮಾಸ್ತೆ ಮತ್ತು ಸರಾಫ್ ಈ ಮೂವರಿಗೂ ವಿಧಿಸಿದ್ದ ಶಿಕ್ಷೆಯನ್ನು ಚೀಫ್‌ಕೋರ್ಟಿನವರು ಸರಿಯಾದ ರುಜುವಾತು ದೊರೆಯಲಿಲ್ಲವೆಂದು ವಜಾಮಾಡಿದ್ದರು. ಈಚೆಗೆ ಸರಕಾರದವರು ಶಿರಸ್ತೇದಾರ್ ವೆಂಕಟರಾಮಯ್ಯಂಗಾರ್ ಮತ್ತು ಸರಾಫ್ ಹೊನ್ನಯ್ಯನವರ ಮೇಲೆ ಸರಕಾರದ ಲೆಖ್ಖಗಳನ್ನು ತಿದ್ದಿದರೆಂದು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮತ್ತೊಂದು ಮೊಕದ್ದಮೆಯನ್ನು ಹೂಡಿದ್ದಾರೆ. ಈ ತಿಂಗಳು 27 ನೆಯ ತಾರೀಖಿಗೆ ವಿಚಾರಣೆಯು ನಡೆಯುವದು.

ವರ್ತಮಾನಸಂಗ್ರಹ.

5 ರೂಪಾಯಿಯ ಕೃತಕನೋಟುಗಳನ್ನು ತಯಾರಿಸಿದರೆಂಬ ಅಪಾದನೆಯ ಮೇಲೆ ಕಾರವಾರದಲ್ಲಿ ಸಾಂಬಳಮತ್ತು ಅಲ್ಲಿ ಎಂಬುವರನ್ನು ದಸ್ತಗಿರಿ ಮಾಡಿರುವದಾಗಿ ತಿಳಿದುಬಂದಿದೆ.

ಕಳೆದ ಜನವರಿ 31ನೆಯ ಶುಕ್ರವಾರ ಮದರಾಸಿನಲ್ಲಿ ನಡೆದ ನ್ಯಾಯವಿಧಾಯಕ ಸಭೆಯಲ್ಲಿ ವ್ಯಭಿಚಾರಾದಿ ನೀಚಕೃತ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವ ಮಸೂದೆಯೊಂದನ್ನು ಚರ್ಚಿಸಿ ಅಂಗೀಕರಿಸಿದರು.

ಮುಂದಿನ ಏಪ್ರಿಲ್ ತಿಂಗಳ ಲಾಗಾಯತು ಕಾಶ್ಮೀರ ಸಂಸ್ಥಾನದ ಎಲ್ಲ ನಗರಗಳಲ್ಲಿಯೂ ಪ್ರಾಥಮಿಕಶಿಕ್ಷಣವನ್ನು ಬಲಾತ್ಕಾರವಾಗಿ ಕೊಡಬೇಕೆಂದು 50,000 ರೂಪಾಯಿಗಳನ್ನು ಹೆಚ್ಚಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಅಮೇರಿಕೆಯ ಐದಾನೊಂದು ರೈಲ್ವೇ ಕಂಪನಿಯವರು ಟ್ರೈನುಗಳಲ್ಲಿ ಸಿನೆಮಾ ಚಿತ್ರಪ್ರದರ್ಶನದ ಏರ್ಪಾಡುಗಳನ್ನು ಮಾಡಿರುವರಂತೆ! ಈ ಟ್ರೈನುಗಳು ಸಿನೆಮಾಗಳಿಲ್ಲದ ಹಳ್ಳಿಗಳಲ್ಲಿ ನಿಂತು ಉತ್ತಮವಾದ ಚಿತ್ರಪಟಗಳನ್ನೆಲ್ಲಾ ಪ್ರದರ್ಶಿಸುವವಂತೆ!

ಭರತಖಂಡದ ವೈಸ್ರಾಯರಾಗಿದ್ದ ಲಾರ್ಡ್ ರೀಡಿಂಗರ ಪತ್ನಿಯವರು ಕಳೆದ ಜನವರಿ 30 ನೆಯ ತಾರೀಖಿನ ದಿವಸ ಮೃತಪಟ್ಟರು. ಇವರು ವಿಶೇಷ ಪ್ರಯತ್ನಪಟ್ಟು ಸಿಮ್ಲಾದಲ್ಲಿರುವ ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆಗೆ 1 ಲಕ್ಷ ರೂಪಾಯಿಗಳನ್ನು ಶೇಖರಿಸಿದ್ದರು.

ಮುಂಬಯಿಯ ಬಾವ್ಲಾ ಕೊಲೆಯಲ್ಲಿ ಮುಖ್ಯನಾಯಕಿಯಾಗಿ ಇಂದೂರ್ ಮಹಾರಾಜರು ಪದಚ್ಯುತರಾಗಲು ಕಾರಣಳಾಗಿ ಪ್ರಸಿದ್ಧಳಾದ ಮುಮ್ತಾಜ್ ಬೇಗಮಳು "ಸ್ಲೇವ್‌ಗರ್ಲ್ ಆಫ್ ಆಗ್ರ" (ಆಗ್ರ ನಗರದ ದಾಸಿ) ಎಂಬ ಸಿನೆಮಾಚಿತ್ರದಲ್ಲಿ ಮುಖ್ಯಪಾತ್ರವನ್ನು ವಹಿಸಿರುವಳು.

ಕಲ್ಕತ್ತೆಯಲ್ಲಿ ಪೂರ್ಣಸ್ವಾತಂತ್ರ್ಯದಿನಾಚರಣೆಯ ದಿವಸ ಟೆಲಿಗ್ರಾಫ್ ಆಫೀಸಿನ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸಲವಕಾಶಕೊಟ್ಟರೆಂಬ ಅಪಾದನೆಯ ಮೇಲೆ ಸರಕಾರದವರು ಆಫೀಸ್ ಸೂಪರಿಂಟೆಂಡೆಂಟರನ್ನು ಕೆಲಸದಿಂದ ಸಸ್ಪೆಂಡ್‌ಮಾಡಿ ವಿಚಾರಣೆ ನಡೆಯಿಸುತ್ತಿರುವರು.

ಮೈಸೂರು ದೇಶದಲ್ಲಿ ತಯಾರಾಗುವ ಗಂಧದೆಣ್ಣೆಗೆ ಲಂಡನ್ನಿನಲ್ಲಿ ಏಜಂಟರಾಗಿದ್ದು, ಮೊನ್ನೆಮೊನ್ನೆ ಮೈಸೂರಿನ ಏಜಂಟರಾಗಿದ್ದ ಶ್ರೀ ಸೀತಾರಾಮಾಚಾರ್ಯರ ಮೇಲೆ ನಡೆದ ಮೊಕದ್ದಮೆಯಲ್ಲಿ ಸರಕಾರದ ಪರವಾಗಿ ಸಾಕ್ಷಿ ಹೇಳಿದ ಶ್ರೀ ಮೌಲಂಕರ್‌ರವರು ದೇಹಾಲಸ್ಯದಿಂದ ಮೃತಪಟ್ಟರೆಂದು ತಿಳಿದುಬಂದಿದೆ.

ಹಿಂದೂದೇಶದ ವೈಸ್ರಾಯರವರಾದ ಲಾರ್ಡ್ ಅರ್ವಿನ್‌ರವರ ವಿಷಯದಲ್ಲಿ ಇಂಗ್ಲೆಂಡಿನಲ್ಲಿ ಕೆಲವು ಮುಖ್ಯಸ್ಥರು ಬಹಳವಾಗಿ ಟೀಕಿಸಿದುದರಿಂದ ಲಾರ್ಡ್ ಅರ್ವಿನ್ನರು ತಮ್ಮ ವೈಸ್ರಾಯ್ ಪದವಿಗೆ ರಾಜೀನಾಮೆ ಕೊಡುವರೆಂದು ಕೆಲವು ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾಗಿರುವದಾಗಿ ತಿಳಿದುಬಂದಿದೆ.

ಗುಂಟೂರು ಡಿಸ್ಟ್ರಿಕ್ಟಿನಲ್ಲಿ ಕೃಷ್ಣಾನದಿಯ ತೀರದಲ್ಲಿ ಭೂಶೋಧನೆ ಮಾಡುತ್ತಿರುವ ಕಾಲದಲ್ಲಿ ಸುಮಾರು 1800 ವರ್ಷಗಳ ಪೂರ್ವದಲ್ಲಿದ್ದ ಒಂದು ಬೌದ್ಧರ ಪಟ್ಟಣವು ಕಂಡುಹಿಡಿಯಲ್ಪಟ್ಟಿರುವದು. ಅನೇಕ ಬೌದ್ಧರ ದೇವಾಲಯಗಳೂ, ಜೀರ್ಣವಾದ ಮಠಗಳೂ ಆಶ್ಚರ್ಯಕರಗಳಾದ ಅನೇಕ ಪದಾರ್ಥಗಳೂ ದೊರೆತಿರುವವು.

ಮಿಸ್. ಮೇಯೋಳು ಭರತಖಂಡದ ಪವಿತ್ರನಡೆನುಡಿಗಳನ್ನು ದೂಷಿಸಿ ಬರೆದಿರುವ "ಮದರ್ ಇಂಡಿಯಾ" ಎಂಬ ಗ್ರಂಥದ ವಿಷಯಗಳು, ಅಮೇರಿಕೆಯಲ್ಲಿ ಚಿತ್ರಪಟರೂಪವಾಗಿ ಪ್ರದರ್ಶಿಸಲ್ಪಡುತ್ತಿರುವವು. ಇದಕ್ಕೆ ಪ್ರತಿಯಾಗಿ ಭರತಖಂಡದಲ್ಲಿ "ಫಾದರ್‌ಇಂಡಿಯಾ" ಎಂಬ ಚಿತ್ರಪಟವು ಪ್ರದರ್ಶನಕ್ಕಾಗಿ ತಯಾರಿಸಲ್ಪಟ್ಟಿರುವದು.

ಮದರಾಸ್ ನಗರದ ಸಮೀಪದಲ್ಲಿ ಸೌತ್‌ಇಂಡಿಯನ್ ಪಟಾಲಂ ಸೈನಿಕರು ಮೆಷಿನ್‌ಗನ್ ಎಂಬ ದೊಡ್ಡದೊಡ್ಡ ಫಿರಂಗಿಗಳನ್ನು ಹಾರಿಸುವುದನ್ನು ಅಭ್ಯಾಸಮಾಡುತ್ತಿದ್ದಾಗ ಎರಡು ಗುಂಡುಗಳು ಎಲ್ಲಮ್ಮಾಳ್ ಎಂಬ ಎಂಟು ವರ್ಷದ ಆದಿದ್ರಾವಿಡ ಹುಡುಗಿಗೆ ತಗಲಿ ಕೂಡಲೇ ಮೃತಪಟ್ಟಳು. ಅವಳ ಜೊತೆಯಲ್ಲಿಯೇ ಕುಳಿತಿದ್ದ ತಂದೆಗೆ ಯಾವ ಅಪಾಯವೂ ಆಗಿರುವದಿಲ್ಲ.

ಮುಂಬಯಿಯ ಜಿ. ಐ. ಪಿ. ರೈಲ್ವೆಯ ಕೂಲಿಕಾರರೆಲ್ಲರೂ ಇದೇ ತಿಂಗಳು 4 ನೆಯ ತಾರೀಖಿನಿಂದ ಮುಷ್ಕರಕ್ಕೆ ಪ್ರಾರಂಭಿಸಿರುವರು. ಇದರಿಂದ ಟ್ರೈನುಗಳು ಕಾಲಕಾಲಕ್ಕೆ ಹೊರಡುವದು ನಿಂತು ಪ್ರಯಾಣಿಕರಿಗೆ ಬಹಳ ತೊಂದರೆಗಳಾಗಿರುವವು. ಕೆಲವು ಟ್ರೈನುಗಳು ಮುಂದುವರಿಯದಂತೆ ಕಲ್ಲಿನ ಮಳೆಯಾಯಿತು. ಆದರೂ ಪೋಲೀಸರು ವಿಶೇಷ ಅನರ್ಥಗಳು ಜರುಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರುವರು.

ಅಮೇರಿಕೆಯ ನ್ಯೂಫೌಂಡ್‌ಲೆಂಡ್ ದ್ವೀಪದ ಸಮೀಪದಲ್ಲಿ ಸುಮಾರು 100 ಅಡಿ ಆಳದಲ್ಲಿದ್ದ 75 ಮೈಲಿಗಳ ವಿಸ್ತಾರವಾದ ಸಮುದ್ರದ ತಳಭಾಗವು ಕುಸಿದುಹೋಗಿರುವದು. ಇದರಿಂದ ಇಂಗ್ಲೆಂಡಿನಿಂದ ಅಮೇರಿಕೆಯ ನ್ಯೂಯಾರ್ಕ್ ಪಟ್ಟಣಕ್ಕೆ ಸಮುದ್ರದೊಳಗೆ ಹಾಕಿದ್ದ ತಂತೀವರ್ತಮಾನದ ಕೇಬಲ್‌ಗಳು ಕಿತ್ತು, ಅವುಗಳನ್ನು ಪುನಃ ಕ್ರಮಪಡಿಸಲು ಒಂದೂವರೆ ಕೋಟಿ ರೂಪಾಯಿಗಳು ಖರ್ಚಾಗುವದಂತೆ!

ಅಲಹಾಬಾದಿನಲ್ಲಿ ನೆರವೇರಿದ ಕುಂಭಮೇಳದಲ್ಲಿ 700 ಜನ ಸಾಧುಗಳು ಊಟಕ್ಕೆ ಕುಳಿತಿದ್ದಾಗ ಒಬ್ಬನು ಮಂತ್ರವನ್ನು ಹೇಳದಿರಲು ಇನ್ನೊಬ್ಬ ಸಾಧುವು ಅವನನ್ನು ಠಕ್ಕನೆಂದು ಹೇಳಿದನು. ಇವರಿಬ್ಬರಿಗೂ ಜಗಳ ಹತ್ತಿ ಕಡೆಗೆ ಪೋಲೀಸರು ಬಂದು ವಿಚಾರಿಸುವಲ್ಲಿ ಮಂತ್ರವನ್ನು ಹೇಳದೇ ಹೋದವನು ಮುಸಲ್ಮಾನನೆಂದು ತಿಳಿಯಿತು. ಅದೇ ಸಂದರ್ಭದಲ್ಲಿ ಸಾಧುವೇಷಧಾರಿಯಾದ ಮತ್ತೊಬ್ಬ ಮುಸಲ್ಮಾನನನ್ನೂ ಕಂಡುಹಿಡಿದಿರುವರು.

ಅಫ್ಘಾನಿಸ್ಥಾನದ ನೂತನ ಅಮೀರರಾದ ನಾದಿರ್ ಖಾನರು ತಮ್ಮ ರಾಜ್ಯದಲ್ಲಿ ಯಾವ ನೌಕರನೂ ಪ್ರಜೆಗಳಿಂದ ಲಂಚವನ್ನು ತೆಗೆದುಕೊಳ್ಳದಿರುವಂತೆ ಒಂದು ಹೊಸ ಏರ್ಪಾಡನ್ನು ಮಾಡಿರುವರು. ಪ್ರತಿಯೊಂದು ಕಛೇರಿಯ ಹೊರಗಡೆಯಲ್ಲಿಯೂ ಒಂದೊಂದು ಪೆಟ್ಟಿಗೆಯನ್ನು ಇಡಿಸಿರುವರು. ಲಂಚವನ್ನು ಪಡೆದ ಅಧಿಕಾರಿಯ ಮೇಲೆ ಅರ್ಜಿಯನ್ನು ಬರೆದು ಆ ಪೆಟ್ಟಿಗೆಯಲ್ಲಿ ಹಾಕಬೇಕೆಂದೂ, ಆ ಅರ್ಜಿಗಳನ್ನು ಮುಖ್ಯಸೇನಾಧಿಪತಿಯು ತೆಗೆದು ನೋಡಿ ವಿಚಾರಣೆ ನಡೆಯಿಸುವರೆಂದೂ, ಅರ್ಜಿಯನ್ನು ಬರೆದವರ ಹೆಸರುಗಳನ್ನು ಯಾವ ಕಾರಣದಿಂದಲೂ ಯಾರಿಗೂ ತಿಳಿಸುವದಿಲ್ಲವೆಂದೂ ಪ್ರಕಟಗೊಳಿಸಿರುತ್ತಾರೆ.

ಕಳೆದ ಜನವರಿ 21 ನೆಯ ತಾರೀಖಿನ ದಿವಸ ಲಂಡನ್ನಿನಲ್ಲಿ ನೌಕಾಪರಿಷತ್ತು ಸೇರಿ ವಿಶೇಷವಾದ ಚರ್ಚೆಯು ನಡೆಯಿತು. ಪ್ರಾರಂಭೋತ್ಸವವನ್ನು ಜಾರ್ಜ್ ಚಕ್ರವರ್ತಿಗಳೇ ನಡೆಯಿಸಿದರು. ಅವರು ಕುಳಿತುಕೊಳ್ಳುವದಕ್ಕೆ ಒಂದು ಬಂಗಾರದ ಸಿಂಹಾಸನವೂ, ಅವರ ಎದುರಿಗೆ ಹಾಕಲು 1000 ಬಂಗಾರದ ಕುರ್ಚಿಗಳೂ, 2 ಚಿನ್ನದ ಪ್ರತಿಮೆಗಳೂ ತಯಾರಿಸಲ್ಪಟ್ಟಿದ್ದುವಂತೆ! ಈ ಪರಿಷತ್ತಿಗೆ 8 ರಾಷ್ಟ್ರಗಳ ಪ್ರತಿನಿಧಿಗಳೂ, 200 ಜನ ಪ್ರೇಕ್ಷಕರೂ ಆಗಮಿಸಿದ್ದರು. ಸಾರ್ವಭೌಮರವರು ಸ್ವಾಗತಭಾಷಣವನ್ನು ಮಾಡಿದ ನಂತರ ಮುಖ್ಯ ಮಂತ್ರಿಗಳಾದ ರಾಮ್ಸೆಮೆಕ್ಡೊನಾಲ್ಡ್ ಮೊದಲಾದವರ ಭಾಷಣಗಳಾದವು. ಅನಂತರ ಮೆಕ್ಡೊನಾಲ್ಡರವರೇ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟು ಪರಿಷತ್ತಿನ ಕಾರ್ಯಕ್ರಮಗಳು ಪ್ರಾರಂಭಿಸಲ್ಪಟ್ಟವು.

ಕಳೆದವಾರ ಕಲ್ಕತ್ತೆಯ ಸಮೀಪದಲ್ಲಿ ಅತ್ಯಂತ ವಿಷಾದಕರವಾದ ಒಂದು ಅನಾಹುತವು ನಡೆಯಿತು. ಕೆಲವು ದರೋಡೆಕೋರರು ಒಂದು ಗೊತ್ತಾದ ದಿವಸ ಸಮೀಪದ ಒಂದು ಹಳ್ಳಿಯಲ್ಲಿ ಕಳ್ಳತನಮಾಡುವರೆಂಬ ವರ್ತಮಾನವು ಬಂಡೇಲ್ ಮತ್ತು ಕಾಡಿಸಂಗ ಎಂಬ ಒಂದಕ್ಕೊಂದು ಹತ್ತಿರವಿದ್ದ ಎರಡು ಪೋಲೀಸ್ ಠಾಣ್ಯಗಳಿಗೆ ವರ್ತಮಾನಮುಟ್ಟಲು ಆವೆರಡು ಠಾಣ್ಯದ ಪೋಲೀಸರೂ ಕತ್ತಲಾಗುತ್ತಲೇ ತಮ್ಮ ತಮ್ಮ ಠಾಣ್ಯದಿಂದ ಒಂದು ಅರಣ್ಯದ ಮಾರ್ಗವಾಗಿ ನಿಶ್ಶಬ್ದವಾಗಿ ಹೊರಟು ಉಭಯರೂ ಬೇರೆ ಬೇರೆ ದಿಕ್ಕುಗಳಿಂದ ಹತ್ತಿರಕ್ಕೆ ಬಂದಾಗ್ಗೆ ಒಬ್ಬರನ್ನೊಬ್ಬರು ದರೋಡೆಕೋರರೆಂದು ಭಾವಿಸಿ ಪಿಸ್ತೂಲುಗಳಿಂದ ಹೊಡೆದಾಟಕ್ಕೆ ಪ್ರಾರಂಭಿಸಿದರು. ಉಭಯಪಕ್ಷಗಳಲ್ಲಿ ಒಟ್ಟು 4 ಜನರಿಗೆ ವಿಶೇಷ ಘಾಯಗಳಾಗುವವರೆಗೆ ನಿಜವಾದ ಸಂಗತಿಯು ಯಾರಿಗೂ ತಿಳಿಯಲಿಲ್ಲ. ಈ ಮಧ್ಯೆ ದರೋಡೆಕಾರರು ನಿರ್ವಿಘ್ನವಾಗಿ ಒಬ್ಬ ಚೆಟ್ಟಿಯರನ ಮನೆಗೆ ನುಗ್ಗಿ ಸಿಕ್ಕಿದುದನ್ನು ದೋಚಿಕೊಂಡು ಹೋದರು. ಈಚೆಗೆ ಅನುಮಾನದ ಮೇಲೆ ಮೂರು ಜನರನ್ನು ದಸ್ತಗಿರಿ ಮಾಡಿ ಕಳುವಾದ ಪದಾರ್ಥಗಳನ್ನೆಲ್ಲಾ ಪತ್ತೆಮಾಡಿರುತ್ತಾರೆ.

[3 ನೇ ಪುಟದ ಶೇಷ]

ವನು ಸುಪ್ರಸಿದ್ಧರಾಗಿರುತ್ತದೆ. ಈ ಭಜನಾಸಂಘವು ಸ್ಥಾಪಿತವಾದ ಲಾಗಾಯಿತು ಬಾಣಾವಾರದ ಸಮಾಜದವರು ಸಾಕ್ಷಾತ್ ಜಗದ್ಗುರುಗಳಲ್ಲಿ ಎಷ್ಟರಮಟ್ಟಿಗೆ ಶ್ರದ್ಧಾಭಕ್ತಿಯುತರಾಗಿರುವರೋ ಅದಕ್ಕಿಂತಲೂ ಅತಿಶಯಶ್ರದ್ಧಾಸ್ಪತರಾಗಿರುತ್ತಾರೆ. ವಾಂದಾಧಲಕ್ಕೆ ಪ್ರೆಸಿಡೆಂಟರು ವೇ|| ಕೆ. ಎಂ. ಬಸವಾರಾಧ್ಯರು ಚಿನ್ನಕಿದ ಜಿ. ವೀರಭದ್ರಸ್ವಾಮಿಯವರು ಚೀಫ ಸೆಕ್ರೆಟರಿ ವಿರೂಪಾಕ್ಷಪ್ಪಾ ಸಜ್ಜನಶೆಟ್ಟಿ ಮಂಡಿ ಮರ್ಚಂಟ ಜಾಯಿಂಟ ಸೆಕ್ರೆಟರಿಗಳು ವೇ|| ಕೆ. ಎಂ. ಗಂಗಾಧರಯ್ಯನವರು ಎಂ. ಮಾದಯ್ಯ ಶೆಟ್ಟರು ಎಂ. ಮಲ್ಲಯ್ಯಶೆಟ್ಟರು ವೇ|| ಕೆ. ಎಂ. ವಿರೂಪಾಕ್ಷಯ್ಯನವರು ಸೇಟನ್ ರಾ|| ಮ|| ರಾ|| ರಾಮರಾಯರು ಮತಿಗಟ್ಟದ ವರೇಲಯ್ಯನವರು ವಗೈರೆ ಸಂಘದ ಪ್ರಮುಖರೆಂಬರುಗಳೆಲ್ಲಾ ಆಗಮಿಸಿದ್ದರು. ಮಂಗಲವಾಗುವಾಗ್ಗೆ ಕಾಯಕದ ಶರಣ ಮರಿಯಪ್ಪನ ಭೃಂಗಿನಾಟ್ಯವು ನೇತ್ರಾನಂದಕರವಾಗಿತ್ತು. ಮಹಾಮಂಗಳಾರತಿಯು ನಡೆದು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದ ಸಭಾಬರಖಾಸ್ತಾಯಿತು. ಈ ಮಹತ್ಕಾರ್ಯ ನಡೆಯಲು ಸದ್ಯೋಧಾರರಾದ ಮ|| ರಾ|| ಗುರುಸೇವಾಧುರೀಣ "ವೈಶಮತಾವಲಂಬಿ" ಜಿನರಾಜು ಮಾಸ್ತರವರಿಗೆ ಜಗದೀಶನು ಸನ್ಮಂಗಲವನ್ನುಂಟುಮಾಡಲೆಂದು ಸಂಘದವರ ಪರವಾಗಿ ಪ್ರಾರ್ಥಿಸುತ್ತೇನೆ.

ಬಾಣಾವರದ ಶ್ರೀ ಜಗದ್ಗುರು ಪಂಚಾಚಾರ್ಯ
ಭಜನಾಸಂಘದ ಚೀಫ್ ಸೆಕ್ರೆಟರಿ
Virupakshappa.

ತಾಂಬೂಲಸಮರ್ಪಣ ಸಮಾರಂಭ.

ರೋಣ ತಾಲೂಕ ಸೂಡಿಗ್ರಾಮದಲ್ಲಿ ತಾ|| 2-1-30 ನೆಯ ದಿನ ಸೂಡಿಯ ಸದ್ಗೃಹಸ್ಥರು, ರಾವಸಾಹೇಬ ಮುಡಿವಾಳಪ್ಪ ಬಸಪ್ಪ ಸೆಟ್ಟರ ಸೂಡಿ ಮುಕ್ಕಾಂ ಗದಗ ಈ ಶ್ರೀಮಂತ ಗೃಹಸ್ಥರಿಗೆ ರಾವಸಾಹೇಬ ಪದವಿಯನ್ನು ಪಡೆದ ಅಭಿನಂದನಾರ್ಥವಾಗಿ ಹೂವೀಳೆಯನ್ನು ಸಮರ್ಪಿಸಿದರು. ಸಭೆಗೆ ಗದಗ, ನರೇಗಲ್ಲ, ಗಜೇಂದ್ರಗಡ ಮೊದಲಾದ ಊರುಗಳ ಶ್ರೀಮಂತ ಗೃಹಸ್ಥರೂ ಸೂಡಿಯ ಸುತ್ತುಮುತ್ತಲಿನ ಗ್ರಾಮಗಳ ಸದ್ಗೃಹಸ್ಥರೂ ರೋಣ ತಾಲೂಕಿನ ಕೆಲವು ಸರಕಾರಿ ಕಾಮದಾರರೂ ಆಗಮಿಸಿದ್ದರಿಂದ ಸಭೆಯು ವಿಶೇಷ ಶೋಭೆಯುಳ್ಳದ್ದಾಗಿತ್ತು. ಅಧ್ಯಕ್ಷಸ್ಥಾನವನ್ನು ಮೆ|| ಮಾಮಲೇದಾರಸಾಹೇಬ ತಾಲೂಕ ರೋಣ ಈ ಮಹನೀಯರು ಅಲಂಕರಿಸಿದ್ದರು. ಸಭೆಯಲ್ಲಿ, ರಾವಸಾಹೇಬ ಮುಡಿವಾಳಪ್ಪ ಸೆಟ್ಟರ ಇವರು 15-16 ವರ್ಷಗಳಿಂದ ಲೋಕಲಬೋರ್ಡಿನಲ್ಲಿ ಮೆಂಬರರಾಗಿ ಜನಸೇವೆಯನ್ನು ಮಾಡುತ್ತಲಿರುವರು. ಬಡಜನರ ಹಿತದ ಸಲುವಾಗಿ ವಿಶೇಷ ಶ್ರಮವಹಿಸುತ್ತಿರುವರು. ಸಾರ್ವಜನಿಕ ಹಿತದ ಕೆಲಸಕ್ಕೆ ಮುಕ್ತಹಸ್ತರಾಗಿ ಧನಸಹಾಯಮಾಡುತ್ತಲಿರುವರು. ಅದ್ದರಿಂದ ಇವರಿಗೆ ರಾವಸಾಹೇಬ ಪದವಿಯು ದೊರೆತದ್ದು ಯೋಗ್ಯವೆಂದೂ ಯೋಗ್ಯರಾದ ಇವರಿಗೆ ರಾ. ಸಾ. ಪದವಿಯನ್ನು ದಯಪಾಲಿಸಿದ್ದಕ್ಕಾಗಿ ದಯಾಳು ಸರಕಾರವು ಅಭಿನಂದಕ್ಕೆ ಪಾತ್ರವಾದೆಯೆಂದೂ ಭಾಷಣಗಳಾದವು. ಅಧ್ಯಕ್ಷರು— "ಲೋಕದಲ್ಲಿ ಯೋಗ್ಯತೆಯಿಲ್ಲದೆ ಯಾರಿಗೂ ಮಾನ-ಮರ್ಯಾದೆ, ದುಡ್ಡು, ಪದವಿ ಮೊದಲಾದವುಗಳು ದೊರೆಯುವದಿಲ್ಲ. ಇಂಥವುಗಳನ್ನು ಪಡೆಯುವ ಯೋಗ್ಯಜನರು ಬಹಳ ಕಡಿಮೆ. ಅದರಲ್ಲಿಯೂ ರಾವಸಾಹೇಬ ಮೊದಲಾದ ಬಹುಮಾನದ ಪದವಿಯನ್ನು ಹೊಂದಬೇಕಾದರೆ ಸಾರ್ವಜನಿಕಹಿತದ ಕೆಲಸಗಳನ್ನು ವಿಶೇಷವಾಗಿ ಮಾಡಬೇಕಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ 10-12 ಲಕ್ಷ ಜನರಿದ್ದು ಈ ಸಾರೆ ಶ್ರೀ ಮುಡಿವಾಳಪ್ಪನವರೊಬ್ಬರಿಗೇ ಈ ಪದವಿಯು ದೊರೆಯಬೇಕಾದರೆ ಸದರಿಯವರು ಈ ಪದವಿಗೆ ಅತ್ಯಂತ ಯೋಗ್ಯರಿದ್ದಾರೆಂಬುದು ಅತಿ ಅಭಿನಂದನೀಯವಾದ ಸಂಗತಿಯು ನಿಮ್ಮ ಸೂಡಿ ಊರಲ್ಲಿಯೇ ಇದೇ ಸೆಟ್ಟರ ತಮ್ಮಂದಿರೇ ಒಬ್ಬರು (ಶ್ರೀ ಗುರುಸಿದ್ದಪ್ಪನವರು) ರಾವಸಾಹೇಬರಿದ್ದಾರೆ. ಒಂದೇ ಮನೆತನದಲ್ಲಿ ಅಣ್ಣತಮ್ಮಂದಿರಿಬ್ಬರೂ ರಾ. ಸಾ. ಇರುವದು, ನಿಮ್ಮ ಸೂಡಿಗ್ರಾಮಕ್ಕೂ ರೋಣ ತಾಲೂಕಿನವರಿಗೂ ಭೂಷಣವಾದ ಸಂಗತಿಯೆಂದು ತಿಳಿಸಲಿಕ್ಕೆ ನನಗೆ ಅತ್ಯಾನಂದವೆನಿಸುತ್ತದೆ ಎಂದು ಭಾಷಣ ಮಾಡಿದರು. ರಾ. ಸಾ. ಮುಡಿವಾಳಪ್ಪನವರು ಶ್ರೀಮಂತರ ಸಂಪತ್ತೆಯೆಂದರೆ ಬಡವರ ಸೇವೆ: ಶ್ರೀಮಂತರ ದುಡ್ಡು ಜನಸೇವೆಗೆ ವೆಚ್ಚವಾದರೆ ಅದರ ಸಾರ್ಥಕತೆಯು. ದೇವರು ನಮಗೆ ನಮ್ಮ ಹೊಟ್ಟೆಬಟ್ಟೆಗಳಿಗೆ ದುಡಿಯುವದಕ್ಕೆ ಬೇಕಾಗುವಷ್ಟಕ್ಕಿಂತಲೂ ಹೆಚ್ಚಾದ ಶಕ್ತಿಸಾಧನಗಳನ್ನು ಕೊಟ್ಟಿರುವ ಕಾರಣ ನಾವು ಸಮಾಜದ ದೆಶೆಯಿಂದ ನಮ್ಮ ತನುಮನಧನಗಳನ್ನು ಖರ್ಚುಮಾಡಬೇಕೆಂಬುದೇ ಇರುತ್ತದೆ. ಅದ್ದರಿಂದ ನಾವು ಜನಸೇವೆಯನ್ನು ಮಾಡುವದೂ ಜನರ ಸಂರಕ್ಷಣೆಗೆ ಹಗಲಿರುಳು ದುಡಿಯುತ್ತಿರುವ ಸರಕಾರಕ್ಕೆ ಸಹಾಯಮಾಡುವದೂ ನಮ್ಮ ಕರ್ತವ್ಯವೇ ಆಗಿರುತ್ತದೆ. ನನಗೆ ರಾ. ಸಾ. ಪದವಿಯನ್ನು ಕೊಟ್ಟದ್ದು ದಯಾಳು ಸರಕಾರದ ಔದಾರ್ಯವು. ರಾ. ಸಾ. ಪದವಿಯೆಂದರೆ ಅದೊಂದು ಸಾರ್ವಜನಿಕ ಹಿತದ ಕೆಲಸಗಳನ್ನು ಮಾಡುವ ಸರ್ಟಿಫಿಕೇಟ್. ಸರ್ಟಿಫಿಕೇಟ್ ದೊರೆತ ಮೇಲೆಯೇ ಯಾರೊಬ್ಬರೂ ಏನಾದರೊಂದು ಕೆಲಸ ಕೈಕೊಳ್ಳುವದು ನಿಜವಷ್ಟೇ! ಆದೇಪ್ರಕಾರ ನಾನು ನನಗೆ ದೊರೆತ ಈ ಸರ್ಟಿಫಿಕೇಟಿನ ಮೇಲಿಂದ ಇನ್ನು ಮೇಲೆ ಜನಸೇವೆಯ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ನೀವು ಈ ಕೆಲಸಕ್ಕೆ ನನ್ನನ್ನು ಪ್ರೇರೇಪಿಸಬೇಕೆಂದೂ ಪರಮಾತ್ಮನು ಈ ಕಾರ್ಯವನ್ನು ಮಾಡಲು ಶಕ್ತಿಯನ್ನೀಯಲೆಂದೂ ಬೇಡಿಕೊಳ್ಳುತ್ತೇನೆ, ಎಂಬ ಸಾರಾಂಶದ ಭಾಷಣಗೈದರು. ಇದೇ ವೇಳೆಯಲ್ಲಿ ನಮ್ಮ ಶಾಲೆಗೆ ಇರುವ ಗಡಿಯಾರದ ಕೊರತೆಯನ್ನು ನಿವೇದಿಸಲು 30 ರೂಪಾಯಿ ಬೆಲೆಯ ಕ್ಲಾಕನ್ನು ತರಿಸಿ ನಮ್ಮ ಶಾಲೆಗೆ ಕೊಡುತ್ತೇನೆಂದು ರಾ. ಸಾ. ಮುಡಿವಾಳಪ್ಪನವರು ವಾಗ್ದಾನಮಾಡಿ ತಮ್ಮ ಔದಾರ್ಯವನ್ನು ಪ್ರಕಟಿಸಿದರು. ಬಳಿಕ ಹಾರತುರಾಯಿ ತಾಂಬೂಲ ಸಮರ್ಪಣಗಳಾದವು. ಶಾಲಾವಿದ್ಯಾರ್ಥಿಗಳು ರಾಷ್ಟ್ರೀಯ ಗೀತವನ್ನು ಹಾಡಿದ ಮೇಲೆ ಸಾರ್ವಭೌಮರವರ ಜಯಘೋಷದೊಡನೆ ಸಭಾವಿಸರ್ಜನವಾಯಿತು.

ಭೀಮಾಜಿ ಹನುಮಂತ ನಬನೀಸ,
ಅ|| ಮಾಸ್ತರ ಕ. ಗ. ಶಾಲಾ, ಸೂಡಿ.

ಶ್ರೀ ರೇಣುಕಾದಿಗುರುಭ್ಯೋ ನಮಃ

ಚಿಕ್ಕಮಗಳೂರು ತಾಲೂಕು ಓಟರುಮಹಾಶಯರಲ್ಲಿ ವಿಜ್ಞಾಪನೆ.

ಮಹನಿಯರೇ!

ಕಳೆದ ಪ್ರಜಾಪ್ರತಿನಿಧಿಸಭೆಯ ಚುನಾವಣೆಯಲ್ಲಿ, ತಾವುಗಳು ತಮ್ಮ ಘನವಾದ ಓಟನ್ನು ನನಗೆ ಕೊಟ್ಟು ಸನ್ನಿಂದ ಪ್ರಜಾಸೇವೆಯಾಗುವಂತೆ ಸಹಕರಿಸಿದುದಕ್ಕಾಗಿ ತಮ್ಮಗಳಲ್ಲಿ ನಾನು ಚಿರಕೃತಜ್ಞನಾಗಿರುತ್ತೇನೆ.

ಈ ನಮ್ಮ ಮಲೆನಾಡು ಪ್ರಾಂತವು, ಆರೋಗ್ಯ, ವಿದ್ಯೆ, ಸಹಕಾರ, ವ್ಯವಸಾಯ, ವ್ಯಾಪಾರ, ಕೈಗಾರಿಕೆಯೇ ಮೊದಲಾದ ವಿಷಯಗಳಲ್ಲಿ ಕೇವಲ ಹಿಂದುಳಿದಿರುವುದರಿಂದ ಮೇಲ್ಕಂಡ ಭಾಗಗಳಲ್ಲಿ ಸರ್ಕಾರದವರಿಗೆ, ಸಮಂಜಸವಾದ ಸಲಹೆಗಳನ್ನು ಕೊಡುವುದರ ಮೂಲಕ ನಮ್ಮ ತಾಯ್ನಾಡಿನ ಅಭಿವೃದ್ಧಿಯನ್ನು ಕಾಣ್ಬಯಸುವುದು, ದೇಶಾಭಿಮಾನಿಯಾದ ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆಂಬುದನ್ನು, ಪ್ರಾಜ್ಞರಾದ ತಮಗೆ ಒತ್ತಿ ಹೇಳಬೇಕಾದುದಿಲ್ಲವು.

ಈ ತಮ್ಮ ಉದಾತ್ತ ವಿಚಾರ ಪರಿಪೂರ್ಣವಾದ ಉದ್ದೇಶಗಳನ್ನು ಸಾರ್ಥಕಪಡಿಸಲು, ತಮ್ಮಗಳ ಒಡನಾಡಿಯಾದ ನಾನು ಸದಾ ಸಿದ್ಧನಾಗಿರಬೇಕೆಂಬ ಸದುದ್ದೇಶದಿಂದ ಬರುವ ಮಾರ್ಚಿ 8 ನೇ ತಾರೀಖಿನಲ್ಲಿ ನಡಿಯಲಿಕ್ಕಿರುವ ಪ್ರಜಾಪ್ರತಿನಿಧಿಸಭೆಯ ಸದಸ್ಯತನಕ್ಕೆ ಉಮೇದುವಾರನಾಗಿ ನಿಂತಿರುತ್ತೇನಾದ ಪ್ರಯುಕ್ತ, ತಾವುಗಳು ನನ್ನ ಲೋಕಸೇವಾ ಕಾರ್ಯದಲ್ಲಿ ಪೂರ್ಣ ಭರವಸೆಯಿಟ್ಟು, ಆಯಾಯ ಸೆಂಟರುಗಳಿಗೆ ದಯಮಾಡಿಸಿ, ತಮ್ಮ ಘನವಾದ ಓಟನ್ನು ಕೊಡುವುದರ ಮೂಲಕ, ಸ್ವಂತವಾದ ದೇಶಹಿತವನ್ನು ಹಾಗೂ ಮಲೆನಾಡಿನ ಏಳಿಗೆಯನ್ನು ಸಾಧಿಸುವಿರಾಗಿ ಸಂಪೂರ್ಣ ನಂಬಿರುವ—

ತಮ್ಮ ನಿರಂತರ ಶ್ರೇಯೋಭಿಲಾಷಿ
ಆಲಗಾರು ಕಾಫೀಪ್ಲಾಂಟರು ಬಿ. ಪುಟ್ಟಪ್ಪ
ಶೆಟ್ಟರ ಮಗ, ಬಿ. ಪಿ. ಬಸಪ್ಪಶೆಟ್ಟಿ,
ಪ್ರ. ಪ್ರ. ಮೆಂಬರು.

ಚಿಕ್ಕಮಗಳೂರು ತಾಲೂಕು ಓಟರುಮಹಾಶಯರಲ್ಲಿ ವಿಜ್ಞಾಪನೆ.

ತಾ|| 8-3-1930 ನೇ ಶನಿವಾರ ನಡೆಯುವ ಪ್ರಜಾಪ್ರತಿನಿಧಿಸಭೆಯ ಮೆಂಬರ ಚುನಾವಣೆಗೆ ಚಿಕ್ಕಮಗಳೂರು ತಾಲೂಕು ರೂರಲ್ ಕಾನ್ಸ್ಟಿಟ್ಯೂಯನ್ಸಿಯಿಂದ ನಾನು ಒಬ್ಬ ಕ್ಯಾಂಡಿಡೇಟ್ ಅಂದರೆ ಉಮೇದುವಾರನಾಗಿ ನಿಂತಿರುತ್ತೇನೆ. ನಾನು ಸುಮಾರು 3-4 ವರುಷಗಳಿಂದಾಗಾಯಿತು ಈ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿಯೂ ಸಂಚರಿಸುತ್ತ ಗ್ರಾಮಗಳ ಸ್ಥಿತಿಗತಿಗಳನ್ನು ತಕ್ಕಮಟ್ಟಿಗೂ ಅನುಭವಮಾಡಿಕೊಂಡಿರುವುದರಿಂದಲೂ, ಪ್ರಜಾಪ್ರತಿನಿಧಿಸಭೆಗೂ ಪ್ರಜೆಗಳಿಗೂ ಇರುವ ಸಂಬಂಧವೇನು? ಇದರಿಂದ ಪ್ರಜೆಗಳಿಗೆ ಎಷ್ಟರಮಟ್ಟಿಗೆ ಸ್ವಾತಂತ್ರ್ಯವಿದೆ, ಇದರಿಂದ ಘನಸರಕಾರದಿಂದ ಆಗತಕ್ಕ ಮಹದುಪಕಾರವೇ ಮುಂತಾದ ವಿಷಯಗಳನ್ನು ತಕ್ಕಮಟ್ಟಿಗೂ ತಿಳಿದುಕೊಂಡಿರುವುದರಿಂದಲೂ ಅನೇಕಮಹನೀಯರು ಉತ್ತೇಜನಕೊಟ್ಟುದರಿಂದಲೂ ಕೈಲಾದಮಟ್ಟಿಗೂ ನಿಷ್ಪಕ್ಷಪಾತದಿಂದಲೂ ನಿಷ್ಪಕ್ಷಪಾತತೆಯಿಂದಲೂ ಪ್ರಜಾಸೇವೆಮಾಡಬೇಕೆಂಬ ಉದ್ದೇಶವಿರುತ್ತಾದ್ದರಿಂದ ತಾವುಗಳು ಉದಾರಾಶ್ರಯವನ್ನಿತ್ತು ತಮ್ಮ ಘನವಾದ ಓಟು ಅಂದರೆ ಸಮ್ಮತಿಯನ್ನು ಕೊಟ್ಟು ಉತ್ತೀರ್ಣನನ್ನಾಗಿ ಮಾಡಬೇಕೆಂದು ಈ ಮೂಲಕ ತಮ್ಮಗಳೆಲ್ಲರಿಗೂ ತುಂಬಾ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ತಾ|| 7-2-1930. ತಮ್ಮ ವಿಧೇಯ,
ಚಿಕ್ಕಮಗಳೂರು. ಮಾವಿನಕೆರೆ ಪಿ. ಚಂದಯ್ಯ.

ಜಗಲೂರು ತಾಲೂಕು ಓಟರುಮಹಾಶಯರುಗಳಲ್ಲಿ ವಿಜ್ಞಾಪನೆಗಳು.

ಪ್ರಿಯಮಿತ್ರರೇ!

ಇದೇ 1930 ನೇ ಇಸವಿ ಮಾರ್ಚಿ ತಾ|| 8 ನೇ ಶನಿವಾರ ಪ್ರಜಾಪ್ರತಿನಿಧಿಸಭೆಗೂ ಮತ್ತು ಏಪ್ರಿಲ್ ತಾ|| 5 ನೇ ಶನಿವಾರ ಡಿಸ್ಟ್ರಿಕ್ಟು ಬೋರ್ಡಿಗೂ ಪ್ರಜಾಪಕ್ಷವಾದ ಮೆಂಬರುಗಳನ್ನು ಪ್ರಜೆಗಳಿಂದಲೇ ಚುನಾಯಿಸಬೇಕೆಂತಲೂ ಅದರಂತೆ ಈ ನಮ್ಮ ಜಗಲೂರು ತಾಲೂಕು ಪರವಾಗಿ ಪ್ರಜಾಪ್ರತಿನಿಧಿಸಭೆಗೆ ಎರಡು ಜನ ಡಿಸ್ಟ್ರಿಕ್ಟ್‌ಬೋರ್ಡಿಗೆ ಎರಡು ಜನ ಮೆಂಬರುಗಳನ್ನು ಚುನಾಯಿಸಬೇಕೆಂತಲೂ ನಮ್ಮ ಘನಸರಕಾರದವರು ವಿಧಾಯಕ ಮಾಡಿರುವ ವಿಷಯವು ತಮ್ಮಗಳಿಗೆಲ್ಲಾ ವೇದ್ಯವೇ ಇರುತ್ತೆ. ಪ್ರಯುಕ್ತ ಮೇಲ್ಕಂಡಂತೆ ನಮ್ಮ ತಾಲೂಕಿನಿಂದ ಎರಡು ಜನಗಳಲ್ಲಿ ಮೆಂಬರುಗಳನ್ನು ಚುನಾಯಿಸುವ ಭಾರವು ತಮ್ಮಗಳ ಕೈಯಲ್ಲಿರುತ್ತೆ. ಆದ್ದರಿಂದ ನಾನು ಈ ಮೊದಲು ತಮ್ಮಗಳಿಂದ ಚುನಾಯಿಸಲ್ಪಟ್ಟು 3 ವರುಷಗಳಿಂದಲೂ ಮೆಂಬರಾಗಿ ಪ್ರಜಾಹಿತಕರವಾದ ಕೆಲಸಗಳನ್ನು ಮಾಡುತ್ತಿರುವುದು ತಮ್ಮಗಳ ಅವಗಾಹನೆಗೆ ಬಂದೇ ಇರುತ್ತೆ. ಆದಪ್ರಯುಕ್ತ ಈಗಲೂ ಮೇಲ್ಕಂಡ ಎರಡು ಹೊಸ ಚುನಾವಣೆಗಳಿಗೂ ತಮ್ಮಗಳ ಭರವಸೆಯಿಂದ ನಾನೂ ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ಆದ್ದರಿಂದ ತಾವುಗಳು ದಯವಿಟ್ಟು ಹಿಂದಿನಂತೆಯೇ ಈಗಲೂ ದೇಶಸೇವಾಭಿಲಾಷೆಯಿಂದ ನನಗೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಉತ್ತೀರ್ಣನನ್ನಾಗಿ ಮಾಡಿ ತಮ್ಮಗಳ ಸೇವೆಗೆ ಉದಾರಾಶ್ರಯವನ್ನೀಯುವಿರೆಂದು ನಂಬಿರುತ್ತೇನೆ. ನಾನು ತಮ್ಮಗಳ ಪರವಾಗಿ ಪ್ರಜಾಭಿವೃದ್ಧಿಗೆ ಚಕ್ಕನಾದ ಅಂದರೆ ರೋಡುಗಳು ಕುಡಿಯುವ ನೀರಿನ ಭಾವಿಗಳೂ, ವೈದ್ಯ, ವಿದ್ಯಾಸಹಾಯ ವ್ಯವಸಾಯಕ್ಕೆ ತಕ್ಕ ಅನುಕೂಲ ಇವೇ ಮೊದಲಾದ ಪ್ರಜಾಹಿತಸಾಧನೆಗಳ ವಿಷಯವಾಗಿ ದಯಾಳುಗಳಾದ ನಮ್ಮ ಸರ್ಕಾರದವರೊಂದಿಗೆ ನನ್ನ ಕೈಲಾದಮಟ್ಟಿಗೂ ಚರ್ಚಿಸಿ ತಮ್ಮಮೂಲಕ ತಕ್ಕ ಅನುಕೂಲತೆಗಳು ದೊರಕುವಂತೆ ಮಾಡಬೇಕೆಂಬುದೇ ನನ್ನ ಮುಖ್ಯೋದ್ದೇಶವಾಗಿರುತ್ತದೆ. ಆದ್ದರಿಂದ ತಾವುಗಳೆಲ್ಲರೂ ಮೇಲ್ಕಂಡ ಎರಡು ಚುನಾವಣೆಗಳ ದಿವಸವೂ ದೇಶದ ಏಳಿಗೆಯ ಕಡೆಗೆ ಪೂರ್ಣದೃಷ್ಟಿಯಿಟ್ಟು ಚುನಾವಣೆ ಸ್ಥಾನವಾದ ಜಗಲೂರು ತಾಲೂಕು ಕಛೇರಿಯ ಹತ್ತಿರ ದಯಮಾಡಿ ನನ್ನ ಹೆಸರಿಗೆ ತಮ್ಮ ಅಮೂಲ್ಯವಾದ ಓಟುಗಳನ್ನು ಕೊಟ್ಟು ಉತ್ತೀರ್ಣನನ್ನಾಗಿ ಮಾಡಬೇಕೆಂದು ತಮ್ಮನ್ನು ವಿಜ್ಞಾಪನಾಪೂರ್ವಕ ಕೋರುತ್ತೇನೆ.

ಪ್ರಜಾಹಿತಕಾಂಕ್ಷಿಯಾದ ತಮ್ಮ ವಿಧೇಯ.
(Sd.) ಜೆ. ಎಸ್. ಮಹಲಿಂಗಪ್ಪ,
ಜಗಲೂರು.

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[5] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗನಿವಾರಕರಾದರೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, 'ಕೊಡಗಿನ ಗುಡುಗುಡು!' (೧೯), 'ಸುಡುಸುಡು!' (೮೦) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [27]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನಿತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇವಿಸ ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಕರಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ನಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದಿರಿ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನದೋಷ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಅಶಕ್ತತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಪೌಷ್ಟಿಕತೆಗೆ ಸಹಾಯ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮೋದ್ದೀಪನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ಸೇವಿಸಿ ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಕಾಲಿಮುಸಂಡ, ಮಧುಕಂದ, ಜಲಕಂದ, ತಾಲೀಮಖೀಕಂದ, ಅಶ್ವಗಂಧ, ಕ್ರೌಂಚಕಂದ, ಮುಸಳೀಕಂದ ಸೇಮರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕಬೀಜ, ಕಕಬೀಜ, ನಾಗಬೀಜ, ತಾಳಬೀಜ, ಭೋಕರೀ ಬೀಜ, ಪವಳಬೀಜ, ಚಿಕಣಪಂಚಾಂಗ, ಅರವೀ ಎಳ್ಳಿನಪಂಚಾಂಗ, ಜಾಯಿಪತ್ರಿ, ಸಿತಾಪತ್ರಿ, ಮುದಗಮುಸ್ತ, ರಸಪುರುಷ, ಕಮಲ ಕಸ, ಕಥಿಲ್ಯಾಗೊಂದ, ಸಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಲಾ, ಗೇಜುಂದ, ಹರಣಖೋರಿ, ಮುಂಗಲೀ ಬೇದಾಣೆ, ಮರ್ಗಾಂಕಟ್ಟಿಗೆ, ಕತಾವರಿ, ಸಕೀಗುಗಳು, ಆಲಮಖಾಲ, ವಾಕೇರಿಭಾಜಿ, ಗೋಖರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ನಿರಾಚಿಕ, ಜಾಜೀಕಾಯಿ, ರೂಮಿಮಸ್ತಕಿ, ವಂಶರೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯು ಒಂದು ವರಿಗೆ ... 20 ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ನಡಿಯುವ ಸಕ್ಕರೆಯು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವದಷ್ಟು ಈ ಪಾಕದ 64 ತೊಲಿ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ಸೇವಿಸಿದರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನದೋಷಕ್ಕೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವದಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವದಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಳ್ಳೆ, ಪಿತ್ತ, ರಕ್ತ, ಕೀವು, ಹುಣ್ಣು, ಮೂಗಿನ ದ, ಕ್ರಿಮಿ, ಪಾಳಿಜ್ವರದಿರೋಗ, ದಪ್ಪಿನೋವು ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವದಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [31]

ಪತ್ತೆ—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಕಾಶೀಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗ ಔಷಧಗಳು) ಎಂಬ "ಜೀವಿನೀ" ವನಮೂಲಿಕೆಗಳು ಇಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗಗಳಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಶೈಲಾಸೀಯ ಮಹೌಷಧರಸವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯ ಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಸಿಂಹಾಸನಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲಿಯ ಸೀಸೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[44] (೮೪೮) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕಷ್ಟೆ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕಷ್ಟೆ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕಷ್ಟೆ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರ್ಮಬಂಧದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೫ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬ್ರಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಸ್ವಮತದ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇನೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಚ್. ಹೊಸಮನೆ,

[24] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು.

ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೨. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[33] **ಪೋ. ಬಾ. ೫೧೦. ಮದರಾಸು**

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ ನೇ ಫೆಬ್ರವರಿ ೧೯೩೦ [ಸಂಚಿಕೆ ೪೧.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳ ವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಆದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವ ಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೨ ಭಾವಚಿತ್ರಗಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಧೀಮಂತರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ. ಮುಂಗಡವಾಗಿ ಹಣಕಳುಹಿಸುವವರು ಪೋಸ್ಟ್ ಖರ್ಚಿಗಾಗಿ ೪ ಆಣೆ ಸೇರಿಸಿ ೧ ರೂ. ೪ ಆಣೆ ಕಳುಹಿಸಬೇಕು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಚಂದಾದಾರರಲ್ಲಿ ವಿಜ್ಞಾಪನೆ.

ಯಾವನ ನಾಮಸ್ಮರಣಮಾತ್ರದಿಂದ ಸಕಲ ಮಾನವರು ಪಾಪದಿಂದ ವಿಮುಕ್ತರಾಗಿ ಮುಕ್ತಿಸಾಮ್ರಾಜ್ಯಸುಖವನ್ನನುಭವಿಸುವರೋ ಆ ಶ್ರೀ ಜಗದ್ಗುರು ರೇಣುಕಾಚಾರ್ಯನ ಅದ್ಭುತ ಲೀಲಾಪ್ರತಿಪಾದಕವಾದ **ರೇಣುಕವಿಜಯವು** ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿರುವ ವಿಷಯವು ನಮ್ಮ ಪತ್ರಿಕೆಯ ಕಳೆದ ವಾರದ ಸಂಚಿಕೆಯಿಂದ ಯಾವತ್ತು ಚಂದಾದಾರರಿಗೆ ವೇದ್ಯವಾಗಿರಬಹುದು. ಅನೇಕಾನೇಕಾಮೂಲ್ಯ ವಿಷಯಗಳಿಂದೊಡಗೂಡಿದ ಈ ಗುರುಚಕ್ರವರ್ತಿಯ ಪವಿತ್ರ ಚರಿತ್ರವು ಪ್ರತಿಯೊಬ್ಬರ ಮನೆಯಲ್ಲಿಯೂ ಪ್ರವೇಶಿಸಿ ಸರ್ವರನ್ನೂ ಉದ್ಧರಿಸಲೆಂಬ ಉದ್ದೇಶದಿಂದ ನಮ್ಮ ಚಂದಾದಾರರಿಗೆಲ್ಲ ವಿ. ಪಿ. ದ್ವಾರಾ ಕಳುಹಿಸಬೇಕೆಂದು ನಿರ್ಧರಿಸಿದ್ದೇವೆ. ಆದುದರಿಂದ ಪ್ರತಿಯೊಬ್ಬರು ವಿ. ಪಿ. ಯನ್ನು ಸ್ವೀಕರಿಸಿ ಆ ಗುರುಸಾರ್ವಭೌಮನ ಚರಿತ್ರವನ್ನು ಸಂಪೂರ್ಣವಾಗಿ ಓದಿ ಅದರಲ್ಲಿರತಕ್ಕ ಅತ್ಯಂತ ಮಹತ್ವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಆಶಿಸುತ್ತೇವೆ. ವಿ. ಪಿ. ಚಾರ್ಜು ಸೇರಿ **೧ ರೂ. ೬ ಆಣೆ.**

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಹಾರಾಣಿ ಟ್ರೈನಿಂಗ್ ಕಾಲೇಜ್, ಮೈಸೂರು.

ಮೊನ್ನೆ ಯಿನ ಸಾಯಂಕಾಲ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರ್ ಮ|| ರಾ|| ಎಚ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಒಂದು ಸಂತೋಷಸಮಾರಂಭವು ನಡೆಯಿತು. ಅನೇಕ ಅಧಿಕಾರಿಗಳೂ, ಪುರಪ್ರಮುಖರೂ ಮತ್ತು ಮಹಿಳೆಯರೂ ದಯಮಾಡಿಸಿದ್ದರು. ಈ ಟ್ರೈನಿಂಗ್‌ಕಾಲೇಜ್ ವಿದ್ಯಾರ್ಥಿನಿ ಉಪಾಧ್ಯಾಯಿನಿಯರು ಸಭಿಕರನ್ನು 'ಭೋಜ ಕಾಳಿದಾಸ' ಎಂಬ ನಾಟಕದಿಂದ ಸಂತೋಷಪಡಿಸಿದರು. ಮಧ್ಯೆ ಮಧ್ಯೆ ಅಭಿನಯಿಸಿದ ಸೋಜಿಗದೃಶ್ಯಗಳು ಚಿತ್ತಾಕರ್ಷವಾಗಿದ್ದವು. ಜಂಗಮ, ಪುರಂದರದಾಸರು, ಹಳ್ಳಿಗೌಡ, ಅಗಸ, ಹಕ್ಕಿ ಹುಡುಗ, ಇವು ಸ್ವಭಾವಚಿತ್ರಗಳಾಗಿದ್ದವು. ಇತರರೂ ತಮ್ಮ ತಮ್ಮ ಪಾತ್ರಗಳನ್ನು ಯೋಗ್ಯರೀತಿಯಿಂದ ಅಭಿನಯಿಸಿದರಾದರೂ ಡೆಪ್ಯುಟಿಕಮಿಷನರ್ ಪಾರ್ಟ್ ಮಾಡಿದ್ದವರು ಅಧಿಕಾರದರ್ಪ, ವಾಗ್ಮಿ ಆಸ್ಥಾನಕ್ಕೆ ತಕ್ಕಂತಿದ್ದವು. ಕಿಂಗ್‌ಜಾರ್ಜ್ 'ಆಡುವುದಕ್ಕಿಂತ ಮಾಡುವುದು ಲೇಸು' ಎಂಬ ಪ್ರಹಸನಗಳು ಮನ್ನಣೆಗೆ ಯೋಗ್ಯವಾದವುಗಳು. 'ಯಮುನಾತಟ್ಟ' ಗೋಪಿ ಹಾಲುಕರೆಯುವುದು' 'ಮಾಲತಿ' ಈ ದೃಶ್ಯಗಳನ್ನು ಮರೆಯುವಂತಿಲ್ಲ. ಕಾಲೇಜ್ ಸೂಪರಿಂಟೆಂಡೆಂಟ್ ಶ್ರೀಮತಿ|| ನಾಗಮ್ಮ ಎಂ. ಎ. ಎಲ್. ಟಿ. ಯವರ ಉತ್ಸಾಹ, ಕಾರ್ಯಶಕ್ತಿ, ವಿಚಕ್ಷಣತೆಗಳು ಅವರ ವಿದ್ಯಾರ್ಥಿನಿಯರಿಗೆ ಮಾರ್ಗದರ್ಶಕಗಳಾಗಿವೆ. ತಾಯಿಂದಿರ ಸ್ಥಾನವನ್ನು ಅಲಂಕರಿಸುವ ಮಹಿಳೆಯರು ಇಷ್ಟು ಅಭಿನಯ ಕೌಶಲ್ಯಗಳಿಂದ ಮಾಡಿದ ಈ ಸಂತೋಷಸಮಾರಂಭವು ಶ್ರೀಮತಿ|| ನಾಗಮ್ಮನವರ ಮಾತೃವಾತ್ಸಲ್ಯದ ಅಂಕುರವೆಂಬುದನ್ನು ಮರೆಯಲಾಗದು. ಕಡೆಯಲ್ಲಿ ರಾಷ್ಟ್ರಗೀತೆಯನ್ನು ಹಾಡಿ ಮುಗಿಸಿದರು. ಈ ಕಾಲೇಜ್ ಅಭಿವೃದ್ಧಿಯಾಗಲೆಂದು ಹಾರೈಸುವ.

ಗುಣಗಾನಪ್ರಿಯ

ಸ್ವೀಕಾರ.

ಚಿಕ್ಕಮಂಗಳೂರು ತಾಲೂಕು ಮುಗಳವಳ್ಳಿ ಗ್ರಾಮದ ಮ|| ರಾ|| ಮಲ್ಲೇಗೌಡರ ಮಕ್ಕಳು ಬಸವೇಗೌಡರು ಜಗದಾಚಾರ್ಯರ ಕೃಪೆಯಿಂದ ತಮ್ಮ ಮನಸಿನ ಕಲ್ಪವು ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 3 ರೂ. ಗಳು ಹಾಗೂ ಸದರಿ ಗ್ರಾಮದ ಸ್ಥಾನಿಕ ಮ|| ರಾ|| ಲಿಂಗಪ್ಪಶೆಟ್ಟರು ತಮ್ಮ ಪುತ್ರಿಗೆ ಪ್ರಾಪ್ತವಾದ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ಒಟ್ಟು 4 ರೂ. ಗಳು ವೇ|| ಮಠದ ಗುರುಸ್ವಾಮಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ತಾ|| ಮುಳುಗುಂದ ಗ್ರಾಮದ ಹಿರೇಮಠದ ಪಟ್ಟದಯ್ಯನವರ ಧರ್ಮಪತ್ನಿಯವರಾದ ಶ್ರೀಮತಿ ವೀರಮ್ಮನವರು ಶಿವಾಧೀನರಾದ ಸಮಯದಲ್ಲಿ ಸದರಿಯವರು 1 ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಳನನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಫ್ರಾನ್ಸ್ ದೇಶದ ನೂತನ ಮಂತ್ರಿಶ್ರೇಷ್ಠರಾದ ಟಾರ್ಡೋರವರು ಆ ದೇಶದ ಗ್ರಾಮಗಳ ಅಭಿವೃದ್ಧಿಗಾಗಿ 80 ಕೋಟಿ ರೂಪಾಯಿಗಳನ್ನು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಿರುವರಲ್ಲದೆ, ಜರ್ಮನಿಯಿಂದ ಇನ್ನೂ ಬರಬೇಕಾಗಿರುವ 400 ಕೋಟಿ ರೂಪಾಯಿಗಳ ಪರಿಹಾರ ದ್ರವ್ಯವನ್ನು ಇದೇಕಾರ್ಯಕ್ಕೆ ಉಪಯೋಗಿಸಬೇಕೆಂದು ತೀರ್ಮಾನ ಮಾಡಿರುವರು. ನಮ್ಮ ದೇಶೀಯ ಆಡಳಿತಗಾರರು ಇತ್ತ ಲಕ್ಷ್ಯಕೊಡುವರೇ?

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ಈಗ ದೊರೆವ ಋಗಾದಿಸಂಹಿತೆಗಳ, ಬ್ರಾಹ್ಮಣಗಳ, ಆರಣ್ಯಕೋಪನಿಷತ್ತುಗಳ ಮತ್ತು ಕಾಮಿಕಾದಿ ದಿವ್ಯಸಂಹಿತೆಗಳ ವಾಕ್ಯರಚನೆಯಲ್ಲಿ ಬಹುವಿಧತ್ವವು ಗೋಚರಿಸುವುದಷ್ಟೇ! ಅದಾದರೋ ಅನಾದಿಸಿದ್ಧಗಳಾದ ಆಯಾ ಶಾಸ್ತ್ರೀಕವಿಚಾರಗಳ ಪ್ರವರ್ತಕರ ಕಾಲೀನವಾದುದು; [illegible]

[illegible]

ಮನುನೇಕಾಗ್ರಮಾಸೀನಮಭಿಗಮ್ಯ ಮಹರ್ಷಯಃ । ಪ್ರತಿಪೂಜ್ಯ ಯಥಾ ನ್ಯಾಯಮಿದಂ ವಚನಮಬ್ರುವೀನ್ ॥೧॥

[illegible]

ಮನುರ್ವೈ ಯತ್ಕಿಂಚಿದವದತ್ತದ್ಭೇಷಜಂ ಭೇಷಜತಾಯಾಃ

[illegible]

ಇತ್ಯೇತನ್ಮಾನವಂ ಶಾಸ್ತ್ರಂ ಭೃಗುಪ್ರೋಕ್ತಂ ಸಠನ್ ದ್ವಿಜಃ

[illegible]

ಯಾಜ್ಞವಲ್ಕ್ಯ ಶಿಷ್ಯಃ ಕಶ್ಚಿತ್, ಪ್ರಶ್ನೋತ್ತರರೂಪಂ ಯಾಜ್ಞವಲ್ಕ್ಯಮುನಿಪ್ರಣೀತಂ ಧರ್ಮಶಾಸ್ತ್ರಂ ಸಂಕ್ಷಿಪ್ಯ ಕಥಯಾಮಾಸ. ಯಥಾ ಮನುಪ್ರಣೀತಂ ಭೃಗುಃ ।

[illegible]

ಪರಮೇಶಂ ನಮಸ್ಕೃತ್ಯ ಭರದ್ವಾಜನ್ಮುಷಿಂ ತತಃ । ಹರಾದಿಸ್ಸಿದ್ಧ ಕ್ರಮಾಯಾತಂ ಜ್ಞಾನಂ ಶೃಣುತ ಸುವ್ರತಾಃ ॥೧॥

ಎಂಬೀ ಶ್ಲೋಕವು ಮೃಗೇಂದ್ರಾಗಮದ ಪ್ರಾರಂಭದಲ್ಲಿದೆ. ಈ ಶ್ಲೋಕದ ಅರ್ಥವು ಹೀಗಿದೆ; ಶಾಸ್ತ್ರೀಯ ನಿಯಮಾನುಷ್ಠಾನ ಪರಾಯಣರಾದ ಮುನಿಗಳಿರಾ? ನೀವು ಮೊದಲು ಪರಮೇಶ್ವರನನ್ನೂ ಬಳಿಕ ತನ್ಮಾತ್ರವತಾಂಕನಾದ ಭರದ್ವಾಜ ಋಷಿಯೆಂಬ ಗುರುವನ್ನೂ [illegible]

[illegible]

ತತಃಪ್ರಸನ್ನೋ ಭಗವಾನುಮಯಾ ಸಹ ಶಂಕರಃ । ಶ್ರೀಮತ್ಕಾಮಿಕಸಂಜ್ಞಂಚ ಜ್ಞಾನಂ ತಸ್ಮೈ ಹ್ಯುಪಾದಿಶತ್ ॥ ಮೃಗೇನ್ದ್ರರೂಪೀ ಶೈನ್ಯೇನ ಕೃತತ್ರಾತ್ರದಭಿಖ್ಯಕಮ್ । ಭರದ್ವಾಜೋಽಪಿ ದೇವೇಶಾದಿದಂ ಜ್ಞಾನಮಾಗಮತ್ ॥ ಹಾರೀತನಾಮಾ ತಚ್ಛಿಷ್ಯಸ್ತಸ್ಮಾತ್ಸಪ್ರ ಮಹಾಮುನೀನ್ । ಸಚ ಸ್ವಶಿಷ್ಯವರ್ಗಾಯ ಪ್ರಾಹೇತಿ ಗುರುಸಂತತಿಃ ॥

"ಸಹಸ್ರವರ್ಷಗಳ ಕೊನೆಯಲ್ಲಿ ಉಮಾಸಹಿತನಾದ ಶಂಕರನು ಪ್ರಸನ್ನನಾಗಿ, ಸರ್ವಾಬಾಧನನ್ನೂ ಹೋಗಲಾಡಿಸಿಕೊಂಡು ಸಿದ್ಧಾಂತಶ್ರವಣಾಧಿಕಾರಿಯಾದ ಇಂದ್ರನಿಗೆ ಕಾಮಿಕವೆಂಬ ಸಂಜ್ಞೆಯುಳ್ಳ ಜ್ಞಾನಶಾಸ್ತ್ರವನ್ನು ಪದೇಶಿಸಿದನು; [illegible]

[illegible] (ಸಶೇಷ)

ಶ್ರೀಮದ್ವೀರಶೈವಮತಸಂವರ್ಧಿನೀಸಭಾ.

ಮುದುಕುತೊರೆ.

[illegible]

ಬರವರೂ, ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀಯುತ ಆರ್. ಪಿ. ಮಲ್ಲಪ್ಪನವರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ, ಸ್ವಮತ ಪರಮತದ ಅನೇಕ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. [illegible]

[illegible]

ಸಂದರ್ಶಕರುಗಳನ್ನು ಓದಿ ಅಧ್ಯಕ್ಷರಿಗೆ ಒಪ್ಪಿಸಿದ ಮೇಲೆ ಶ್ರೀಮನ್ಮಹಾರಾಜರವರ ಮತ್ತು ರಾಜಕುಟುಂಬದವರ ಶ್ರೇಯಸ್ಸನ್ನು ಕೋರಿ ಸಭಾಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು.

ಎಂ. ಡಿ. ಬಸಪ್ಪ.

ರಾಜಕವಿಭೂಷಣ ಎಚ್. ಲಿಂಗರಾಜ ಅರಸರವರಿಗೆ ಒಪ್ಪಿಸಿದ ಅಭಿನಂದನ ಪದ್ಯಮಾಲಿಕೆ.

ಮೃಡಗೆ ನೆಲೆವನೆಯಾಗಿ ರಾಜಿಪ |
ಮುಡುಕುತೊರೆ ಸುಕ್ಷೇತ್ರದೆಡೆಯೊಳು |
ನಡೆವ ಸಭೆಗೈತರಲು ಶಿರಿಲಿಸುತೆಮ್ಮ ಬಿನ್ನಪವ ||
ಪೊಡವಿಯಾಣ್ಮಂ ದೊರೆಯು ತಾನೇ |
ಸಡಗರದೆ ಬಂದಂತೆ ಭಾವಿಸು |
ತೊಡನೆ ಸ್ವಾಗತಿಸುವೆವು ನಿನ್ನಂ ಲಿಂಗರಾಜೇಂದ್ರ ||೧||
ಎಳೆಯಮಾಲರುಮರಿವನ್ನೊಲು ನೀಂ |
ಒಲಿತವಷ ಕನ್ನಡದ ನುಡಿಯೊಳು |
ಕಲುಷನಾಶಕರಾಮಕಥೆಯನು ಬರೆದು ರಾಮನನ್ನೊಲ್ ||
ಅಳಸದೊಳ್ ಸನೆಂಬ ಕಾಯವ |
ಗಳಿಸದತ್ಯಪ ಸೂರ್ಯಚಂದ್ರ |
ರೇಳಗು ನನ್ನಿಗಮದರಿಪೊಗಳೆ ಧನ್ಯ ನೀನಲ್ತೆ ||೨||
ರಾಜಕವಿಭೂಷಣನು ತಾನೆಂ |
ದೀಜಗದೆ ಬುಧಜನಮನೋವೃತಿ |
ರಾಜಿಸುವ ಶ್ರೀಕೃಷ್ಣಭೂಪನ ಮೆಚ್ಚಿಸುತೆ ನೀನು ||
ಸ್ಯೆಜಕವಿತಾಬಲದಿ ಮಾಗಳೆ |
ನಾಜಮೆನೆ ಚಿಕಲಿಂಗರಾಜನೆ |
ರಾಜಕವಿಭೂಷಣನು ನೀನಾದಲ್ತೆ ಮೆರೆತಿಸಲು ||೩||
ವೀರಶೈವರ ಮತವ ಕೃತಿಗಸು |
ಸಾರರನಹ ಮಾರ್ಗದೊಳು ನುತಿವಾ |
ಗಾರರೇಗುಣಕನುಮೆಂಪ್ಪ ಪಂಚಾಚಾರ್ಯರಂದೆನಗೆದು ||
ಸಾರಕರ ಕೃತಿಯಲ್ಲ ಸದಸಿಯ |
ಸ್ವಾರೆ ಸೂಸಕೆ ರಾಜಮಾರ್ಗವ |
ತೋರುತಿರ್ಪುದ ಬುಧರು ತಿಳಿವಸರಲ್ತೆ ನಿನ್ನನ್ನರ್ ||೪||
ಇಲ್ಲಿ ನೆರೆವಿಹ ವೀರಶೈವರ |
ಸ್ಲಿಲಿಕವುತನ್ನಿದ್ಧಿ ಸವುತಿಗೆ |
ನಿಲ್ಲದೀಗಳೆ ಬಿಜಯಮಾಡಿದ ನಿನಗೆ ಬುಧರಿಂಗೆ ||
ಮಲ್ಲಿಕಾರ್ಜುನದೇವನಂಬಾ |
ವಲ್ಲಭನು ನಿಖಿಲೇಷ್ಟಚಯಮಂ |
ಸಲ್ಲಿಸುತೆ ದೀರ್ಘಾಯುವೀಯಲಿ ಲಿಂಗರಾಜೇಂದ್ರ ||೫||

Composed, for the occasion by—

M. S. Basavalingayya, Esq.,

M.A., B.L., Mysore.

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ಶ್ರೀ ಜಗದ್ಗುರು ಪಂಡಿತಾರಾಧ್ಯ ಪೀಠಾರಾಧ್ಯ ಜಯಂತಿಮಹೋತ್ಸವದ ಪ್ರಸಿದ್ಧಪತ್ರಿಕೆಯು.

[illegible]

ರಾಜರನ್ನೂ ಸಹ ತಮ್ಮ ಶಿಷ್ಯಶ್ರೇಣಿಯಲ್ಲಿ ಸೇರಿಸಿಕೊಂಡು, [illegible]

[illegible]

ಧರ್ಮಸಂಘದ ಪಾಲಕರಿದ್ದ.

ತಾ|| ಹುಬ್ಬಳ್ಳಿ, ಜಿ|| ಧಾರವಾಡ.

ವಿನಂತಿ.

ಮಹಾಶಯರೇ! ಈವರೆಗೂ ಪ್ರಕಟವಾಗದೆ ಇದ್ದ ಅನುಭವಸಿದ್ಧಯೋಗಗ್ರಂಥಗಳಲ್ಲೊಂದಾದ ಒಂದು ಗ್ರಂಥವು ಸರ್ವರಿಗೂ ಉಪಯುಕ್ತವಾಗಿಯೂ ಸೂಕ್ತವಾಗಿಯೂ ರಚಿಸಲ್ಪಡುತ್ತಲಿದೆ. ಅದ್ದರಿಂದ ಯಾವ ದ್ವಾರಕನಿವಾಸಿಗಳಾದ ಶ್ರೀ ಪಟ್ಟಚರಾಧಿಕಾರಿಗಳೂ, ವಿರಕ್ತಮೂರ್ತಿಗಳೂ, ಆಗಮಿಕ, ವೈದಿಕ ಶಾಸ್ತ್ರಿಗಳೂ, ಪಂಡಿತರೂ, ವಿದ್ವಾಂಸರೂ, ಗವಾಯಿಗಳೂ, ಮತ್ತು ವಾಚನಾಲಯ, (ಲೈಬ್ರರಿ) ಕರ್ತರೂ, ವರ್ತಮಾನಪತ್ರಕರ್ತರೂ, ದಯಮಾಡಿ ತಮ್ಮ ತಮ್ಮ ಹೆಸರು, ಗ್ರಾಮ, ಮುಂತಾದವುಗಳನ್ನು ತಾನ್ನಾಗಿ ಬರೆದು ತಾರೀಖು 30-2-1930 ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ರವಾನೆ ಮಾಡಬೇಕಾಗಿ ಬೇಡುತ್ತೇನೆ. ಈ ವಿಷಯ ನಮ್ಮ ಗ್ರಂಥದಲ್ಲಿ ಸೇರಿಸಲ್ಪಡುವವು. ಇದರಿಂದ ಅನೇಕರ ಪರಿಚಯವೂ, ಸರ್ವರಿಗೂ ಪರಿಚಯವೂ, ಉಂಟಾಗುವುದು. ಅಲಕ್ಷ್ಯಮಾಡಿದರೆ ನಂತರ ಇಂಥ ಸಮಯವು ದೊರೆಯಲಾರದು.

ಶ್ರೀ ವಿರೂಪಾಕ್ಷ ಶಾಸ್ತ್ರಿಗಳು, ಪುರಾಣಿಕಮಠ,

ಪೋ|| ಹಿರೇಹಡಗಲಿ, ಡಿ|| ಬಳ್ಳಾರಿ.

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಮಹೋತ್ಸವವು.

(ಮಹಾಶಿವರಾತ್ರಿ)



ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯ ವೈಭವದೊಡನೆ ಮಹೋತ್ಸವಗಳನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು!

ಪಂಚಾಚಾರ್ಯ ಪ್ರಭಾ

೧೯೩೦ನೇ ಫೆಬ್ರುವರಿ ತಾ॥ ೧೭ನೇ ಸೋಮವಾರ

ವೀರಶೈವ ಪ್ರಾಚೀನಗ್ರಂಥಗಳ ಶೋಧ.

ಪ್ರಪಂಚದಲ್ಲಿರುವ ಮತಗಳೆಲ್ಲೆಲ್ಲ ಅತ್ಯಂತ ಪ್ರಾಚೀನವೂ ವೇದಾಗಮೋಪನಿಷತ್ಪ್ರತಿಪಾದ್ಯವೂ ಆದ ವೀರಶೈವ ಮತವು ಪೂರ್ವಕಾಲದಲ್ಲಿ ವಿಶೇಷ ವೈಭವದಿಂದ ಮೆರೆಯುತ್ತ ಇದ್ದುದಲ್ಲದೆ ಈ ಮತದಲ್ಲಿ ಅನೇಕ ಜನ ಮಹನೀಯರು ಜನ್ಮವೆತ್ತಿ ಸಾವಿರಾರು ಪ್ರೌಢಗ್ರಂಥಗಳನ್ನು ರಚಿಸಿರುತ್ತಾರೆ. ಆದರೆ ಕಾಲವೈಚಿತ್ರ್ಯದಿಂದ ಈ ಮತದಲ್ಲಿ ವಿದ್ಯಾಧಿಕರ ಸಂಖ್ಯೆಯು ಕಡಿಮೆಯಾಗುತ್ತ ಬಂದುದರಿಂದ ಈ ಮತದ ಅನೇಕ ಉದ್ದಾಮ ಗ್ರಂಥಗಳು ನಾಶವಾಗಿ ಈಗ ಈ ಮತೀಯರಲ್ಲಿ ಸರಿಯಾದ ಗ್ರಂಥಗಳು ದೊರೆಯುವದೇ ದುರ್ಲಭವಾಗಿದೆ. ಆದರೆ ಅನ್ಯಮತೀಯರ ಹಸ್ತಗತಗಳಾದ ಕೆಲವು ಗ್ರಂಥಗಳು ದಯಾಳುಗಳಾದ ಬ್ರಿಟಿಷ್ ಸರಕಾರದವರಿಂದಲೂ, ದೇಶೀಯ ಸಂಸ್ಥಾನಗಳ ಸರಕಾರದವರಿಂದಲೂ ಸಂಗ್ರಹಿಸಲ್ಪಟ್ಟು ಮದ್ರಾಸ್, ಬೊಂಬಾಯಿ, ಮೈಸೂರು, ತಂಜಾವೂರು, ಬರೋಡಾ ಮೊದಲಾದ ಸ್ಥಳಗಳಲ್ಲಿರುವ ಲೈಬ್ರರಿಗಳಲ್ಲಿ ಇಡಲ್ಪಟ್ಟಿರುವವಲ್ಲದೆ ಆಯಾ ಸರಕಾರದವರು ಕೆಲಕೆಲವು ಅಪೂರ್ವ ಗ್ರಂಥಗಳನ್ನು ಮುದ್ರಣಮಾಡಿಸುತ್ತಲೂ ಇರುವರು. ಈ ವೀರಶೈವ ಮತದಲ್ಲಿ ಸಂಸ್ಕೃತ ವಿದ್ವಾಂಸರೂ ಅಧಿಕಾರಿವರ್ಗಕ್ಕೆ ಸೇರಿದವರೂ ಹೇರಳವಾಗಿದ್ದರೂ, ಅವರು ಇಂತಹ ಪ್ರಾಚೀನಗ್ರಂಥಗಳ ಕಡೆಗೆ ಸ್ವಲ್ಪವೂ ಲಕ್ಷ್ಯಕೊಡದೆ ಇರುವದು ವಿಷಾದಜನಕವಾದ ವಿಷಯವಾಗಿದೆ. ಪರಮತೀಯ ವಿದ್ವಾಂಸರಲ್ಲನೇಕರು ಈ ಮತೀಯ ಗ್ರಂಥಗಳನ್ನು ಅವಲೋಕಿಸಿ ಅವುಗಳ ಮಹತ್ತ್ವವನ್ನರಿತವರಾಗಿ ಶಿವತತ್ತ್ವರತ್ನಾಕರವೇ ಮೊದಲಾದ ಕೆಲವು ಗ್ರಂಥಗಳನ್ನು ಮುದ್ರಣಮಾಡಿಸಿರುತ್ತಾರೆ. ಈ ಮತದ ಅಸಂಖ್ಯಾತ ಗ್ರಂಥಗಳು ಪ್ರಪಂಚದ ಅನೇಕ ಲೈಬ್ರರಿಗಳಲ್ಲಿ ನೋಡುವವರೇ ಇಲ್ಲದೆ ಕೊಳೆಯುತ್ತ ಬಿದ್ದುಹೋಗಿವೆ. ಈ ದುಃಸ್ಥಿತಿಯನ್ನು ನೋಡಿ ಈ ಮತದ ಉದ್ಧಾರಕಸ್ಕೋಸ್ಕರ ಅವಿಶ್ರಾಂತವಾಗಿ ಶ್ರಮಪಡುತ್ತಿರುವ ವೇ॥ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರು ಈ ಮತದ ಪ್ರಾಚೀನಗ್ರಂಥಗಳ ಮುದ್ರಣಕಾರ್ಯದಲ್ಲಿ ತೊಡಗಿ **"ಶ್ರೀ ಕಾಶೀನಾಥಗ್ರಂಥಮಾಲಾ"** ಎಂಬ ಹೆಸರಿನಿಂದ ಒಂದು ಗ್ರಂಥಮಾಲೆಯನ್ನು ಪ್ರಾರಂಭಿಸಿ ಸದ್ಯಃ ವೈದಿಕಸಾಮ್ರಾಜ್ಯರಹಸ್ಯ, ಸಿದ್ಧಾಂತಶಿಖೋಪನಿಷದ್ಭಾಷ್ಯ, ಸಿದ್ಧಾಂತಸಾರಾವಲಿ, ರೇಣುಕವಿಜಯವೇ ಮೊದಲಾದ 5-6 ಗ್ರಂಥಗಳನ್ನು ಮುದ್ರಣಮಾಡಿಸಿರುತ್ತಾರಲ್ಲದೆ ಇನ್ನು ಮುಂದೆ ಪ್ರತಿವರ್ಷವೂ ಹತ್ತಾರು ಪ್ರಾಚೀನಗ್ರಂಥಗಳನ್ನು ಮುದ್ರಣಮಾಡಿಸುತ್ತ ಬರಬೇಕೆಂದು ಸಂಕಲ್ಪಮಾಡಿರುತ್ತಾರೆ. ಲೋಕವಿಖ್ಯಾತರಾದ ಕೈ॥ ವಾರದಮಲ್ಲಪ್ಪನವರು ಶಿವಾಧೀನರಾದ ಮೇಲೆ ಈ ಮಹಾಕಾರ್ಯವನ್ನು ಯಾರೂ ಕೈಗೊಂಡಿದ್ದಿಲ್ಲ. ಅವರ ಕಾರ್ಯವನ್ನು ಸದ್ಯ ಪಂಡಿತರು ಕೈಕೊಂಡಿರುವದನ್ನು ನೋಡಿದರೆ ಯಾರಿಗೆ ತಾನೇ ಸಂತೋಷವೆನಿಸಲಿಕ್ಕಿಲ್ಲ? ಇರಲಿ; ಈ ಮತಕ್ಕೆ ಸಂಬಂಧಪಟ್ಟ ಗ್ರಂಥಗಳು ಇಂಗ್ಲೆಂಡ್, ಜರ್ಮನಿ, ಅಮೇರಿಕಾ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿಯೂ, ಭರತಖಂಡದ ಮುಖ್ಯ ಮುಖ್ಯ ಪಟ್ಟಣಗಳಲ್ಲಿರುವ ಲೈಬ್ರರಿಗಳಲ್ಲಿಯೂ ಅಸಂಖ್ಯಾತವಾಗಿ ದೊರೆಯುತ್ತಿರುವದರಿಂದ ಅವುಗಳನ್ನೆಲ್ಲಾ ತರಿಸುವದಾಗಲಿ ಮುದ್ರಣಮಾಡಿಸುವದಾಗಲಿ ಒಬ್ಬರಿಂದ ಆಗತಕ್ಕ ಕೆಲಸವಲ್ಲವು. ನಾವು ಮೊನ್ನೆ ಬೆಂಗಳೂರಿಗೆ ಹೋಗಿದ್ದ ಸಮಯದಲ್ಲಿ ಈ ಮತದ ಪ್ರಮುಖ ಮುಂದಾಳುಗಳೂ, ರಾಜಮಾನ್ಯರೂ ಆದ ದಿವಾನಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಈ ವಿಷಯವಾಗಿ ನಮ್ಮೊಡನೆ ಪ್ರಸ್ತಾಪಿಸಿ ಈ ಮತಸಂಬಂಧವಾಗಿ ಪ್ರಪಂಚದ ಅನೇಕ ಕಡೆಗಳಲ್ಲಿರುವ ಲೈಬ್ರರಿಗಳಲ್ಲಿ ದೊರೆಯುವ ಪ್ರಾಚೀನಗ್ರಂಥಗಳ ಲಿಸ್ಟನ್ನು ಪ್ರಭಾಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟಿಸುತ್ತ ಬಂದರೆ ಈ ಮತದ ವಿದ್ವಾಂಸರೂ ಅಧಿಕಾರಿಗಳೂ ಅವುಗಳನ್ನು ತರಿಸಿ ಮುದ್ರಣಮಾಡಿಸಲು ಅನುಕೂಲವಾಗುವದೆಂದು ಅತ್ಯಂತ ಸ್ತೋತ್ರಾರ್ಹವಾದ ವಿಷಯವನ್ನು ಸೂಚಿಸಿದರು. ಸರ್ ಶೆಟ್ಟರವರು ಸೂಚಿಸಿದ ವಿಷಯವು ಅತಿ ಸ್ತುತ್ಯವಾದದ್ದೆಂದು ಭಾವಿಸಿ ನಾವು ಈ ವಾರವೇ ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯುವ ಕೆಲವು ಪ್ರಾಚೀನ ಗ್ರಂಥಗಳ ಲಿಸ್ಟನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ. ಇನ್ನು ಮುಂದೆ ಪ್ರತಿವಾರವೂ ಒಂದು ಕಾಲಂನಿನಲ್ಲಿ ಪ್ರಾಚೀನಗ್ರಂಥಗಳ ಲಿಸ್ಟನ್ನು ಪ್ರಕಟಿಸುತ್ತ ಹೋಗುವೆವು. ಮೈಸೂರು ರಾಜಧಾನಿಯಲ್ಲಿರುವ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯ ಪಂಡಿತ ಕ್ಲಾರ್ಕ ಎಂ. ಡಿ. ಬಸಪ್ಪನವರು ಈ ಮತದ ಪ್ರಾಚೀನ ಗ್ರಂಥಗಳ ಶೋಧನಕಾರ್ಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿ ಕೆಲಸಮಾಡುತ್ತಿರುವುದು ಅತ್ಯಂತ ಸಂತೋಷಜನಕ ವಿಷಯವಾಗಿದೆ. ನಾವು ಪ್ರಕಟಿಸುವ ಲಿಸ್ಟನ್ನು ಈ ಮತದ ಸರ್ವರೂ ಅವಲೋಕಿಸಿ ಆ ಗ್ರಂಥಗಳನ್ನು ತರಿಸಿ ಮುದ್ರಣ ಮಾಡಿಸುವ ಕಾರ್ಯದಲ್ಲಿ ತೊಡಗಿ ಸನಾತನವಾದ ಈ ಮತದ ಉದಾತ್ತತತ್ತ್ವಗಳನ್ನು ಪ್ರಪಂಚದಲ್ಲಿ ಪ್ರಚಾರಗೊಳಿಸಿ ಈ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಕೃಪಾಶೀರ್ವಾದಗಳಿಗೆ ಪಾತ್ರರಾಗಿ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ವರ್ಷ ಖಾದಿಯ ವ್ಯಾಪಾರದಿಂದ ಮೈಸೂರು ಸರ್ಕಾರಕ್ಕೆ 1,353 ರೂಪಾಯಿಗಳ ಲಾಭವು ಬಂದಿರುತ್ತದೆ.

ಮುಂದಿನ ನ್ಯಾಯವಿಧಾಯಕ ಸಭೆಯ ಅಧಿವೇಶನವು ಮಾರ್ಚಿ 24 ನೆಯ ತಾರೀಖು ಸೋಮವಾರ ಮಧ್ಯಾಹ್ನ ಬೆಂಗಳೂರು ಅಠಾರಾಕಚೇರಿಯಲ್ಲಿ ಪ್ರಾರಂಭವಾಗುವದು.

ರಾಜಧಾನಿಯ ಮೆ॥ ವಿ. ಆರ್. ಅಂಡ್ ಬ್ರದರ್ಸ್ ಕಂಪನಿಯ ಡ್ರೈವರಾದ ಕೃಷ್ಣಮಾಚಾರ್ ಎಂಬವರು ಪೋಲೀಸರು ಕೇಳಿದಾಗ ಲೈಸೆನ್ಸ್ ತೋರಿಸಲು ನಿರಾಕರಿಸಿದರೆಂಬ ಅಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಪಡಿಸಲ್ಪಟ್ಟು 5 ರೂ. ಜುಲ್ಮಾನೆಗೆ ಗುರಿಯಾದರು.

ರಾಜಧಾನಿಯ ಚಾಮುಂಡಿಎಕ್ಸ್‌ಟೆನ್‌ಷನ್ನಿನಲ್ಲಿ ಆರನೆಯ ಸದ್ಯ ರಾಜಪಂಡಿತರವರ ವೈಮನಾಕ್ಷ್ಯಣ ಬೋರ್ಡಿಂಗ್ ಹೋಮಿನ ಪ್ರಾರಂಭೋತ್ಸವವು, ನಮ್ಮ ದಿವಾನರವರಾದ ಅಮೀರ್-ಉಲ್-ಮುಲ್ಕ್ ಸರ್ ಮಿರ್ಜಾಮಹಮದ್ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಬೆಂಗಳೂರು ಕಂಟೋನ್ಮೆಂಟಿನ ಟಪಾಲಾಫೀಸಿನ ಶ್ರೀನಿವಾಸಲುನಾಯ್ಡು ಎಂಬ ಪೋಸ್ಟ್ ಜವಾನನು, ಮಿ॥ ಬಿರಲ್ ಎಂಬ ಯುರೋಪಿಯನ್ ಗೃಹಸ್ಥರ ವಿಳಾಸಕ್ಕೆ ಲಂಡನ್ನಿನಿಂದ ಬಂದಿದ್ದ ಒಂದು ಸುಂದರವಾದ ನಾಕೆಟ್ ಡೈರಿಯ ಪಾರ್ಸಲನ್ನು ಸದರಿ ಗೃಹಸ್ಥರಿಗೆ ತಲುಪಿಸದೆ ತನ್ನ ಬಳಿಯಲ್ಲಿಯೇ ಇಟ್ಟುಕೊಂಡು ಬಿಟ್ಟಿದ್ದನೆಂಬ ಅಪರಾಧದ ಮೇಲೆ ವಿಚಾರಣೆಯು ನಡೆದು, 6 ತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಗೆ ಗುರಿಪಡಿಸಲ್ಪಟ್ಟನು.

ಬೆಳಗಾಂವ ಡಿಸ್ಟ್ರಿಕ್ಟ್ ಪೂನಲ್ಲಿ (ಹೂಲಿ) ಯಲ್ಲಿರುವ ಶ್ರೀ ಪಂಚವರ್ಣ ಬೃಹನ್ಮಠ ಧರ್ಮಾರ್ಥಪಾಠಶಾಲಾಧ್ಯಾಪಕರಾದ ವೇ॥ ಬ್ರಂ॥ ಶ್ರೀ॥ ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ಕಳುಹಿಸಿರುವ ಶ್ರೀಮುಕ್ತ್ಯಮಹೋ ದುಃತನಾಮಸಂವತ್ಸರದ ಸಿದ್ಧಾಂತ ಪಂಚಾಂಗವನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ಈ ಪಂಚಾಂಗವು ಉತ್ತಮವಾಗಿ ಗುಣಿಸಲ್ಪಟ್ಟಿದ್ದು ಅನೇಕ ಮಹತ್ವದ ಮತ್ತು ಉಪಯುಕ್ತ ವಿಷಯಗಳಿಂದ ಕೂಡಿರುವದರಿಂದ ಸರ್ವರೂ ಈ ಪಂಚಾಂಗವನ್ನು ತರಿಸಿ ಪ್ರೋತ್ಸಾಹಿಸಬೇಕೆಂದು ಆಶಿಸುತ್ತೇವೆ.

ವರ್ತಮಾನಸಂಗ್ರಹ.

ಅಹಮದಾಬಾದಿನ ಮುನಿಸಿಪಾಲಿಟಿಯವರು ಪಂಡಿತ ಜವಾಹಿರಲಾಲ್‌ರವರಿಗೆ ಒಂದು ಮಾನಪತ್ರವನ್ನು ಸಮರ್ಪಿಸಬೇಕೆಂದು ನಿರ್ಣಯಿಸಿದ್ದಾರೆ.

ರಷ್ಯಾದಲ್ಲಿ ನಾಸ್ತಿಕವಾದದ ಚಳವಳಿಯು ಭರದಿಂದ ಸಾಗುತ್ತಿರುವದು. ಕಳೆದವಾರ 10-20 ಜನ ಆಸ್ತಿಕ ಧರ್ಮೋಪದೇಶಕರು ಗಲ್ಲಿಗೇರಿಸಲ್ಪಟ್ಟರು.

ವೈಸರಾಯರವರ ಟ್ರೈನಿಗೆ ಸಿಡಿಮದ್ದನ್ನು ಹಾಕಿದವರನ್ನು ಪತ್ತೆಮಾಡಿ ಕೊಟ್ಟವರಿಗೆ 15,000 ರೂಪಾಯಿಗಳ ಬಹುಮಾನ ಕೊಡುವದಾಗಿ ಪೋಲೀಸ್ ಸೂಪರಿಂಟೆಂಡೆಂಟರವರು ಪ್ರಕಟಿಸಿರುತ್ತಾರೆ.

ಮುದುಕರನ್ನು ಯುವಕರನ್ನಾಗಿ ಮಾಡಬಲ್ಲ ಪ್ಯಾರಿಸಿನ ಡಾಕ್ಟರು ವೇರೋನಾಫ್‌ರವರು ಬೊಂಬಾಯಿಗೆ ಬಂದಿದ್ದು, ಕೆಲವು ದಿವಸಗಳ ಕೆಳಗೆ ಒಬ್ಬ ಹಿಂದೂ ರಾಯರಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿದರು.

ಸಿವಿಲ್‌ಸರ್ವಿಸ್ ಪರೀಕ್ಷೆಯಂತೆ ಇಂಗ್ಲೀಷ್ ವೈದ್ಯ ಪರೀಕ್ಷೆ (I. M. S.) ಯನ್ನೂ ಭರತಖಂಡದಲ್ಲಿಯೇ ನಡೆಯಿಸಬೇಕೆಂಬ ಶ್ರೀ॥ ಬ್ಯಾ. ಜಯಕರ್‌ರವರ ಸೂಚನೆಯನ್ನು ಸರಕಾರದವರು ಅನುಮೋದಿಸಿರುವರು.

ಗ್ವಾಲಿಯರಿನ ಸರದಾರರ ಶಾಲೆಯ ಮುಖ್ಯಾಧ್ಯಾಪಕರಾದ ಮಿ॥ ಪಿಯರ್ಸ ಎಂಬ ಐರೋಪ್ಯರು ಹಿಂದೂಸಭಾವಿಧಿಪ್ರಕಾರ ಹಿಂದೂ ಮತಕ್ಕೆ ಸೇರಿಕೊಂಡಿರುವರು. ಇವರು ದಿವಂಗತ ಎಚ್. ಜಿ. ಸರಾಂಜಪೆಯವರ ಕುಮಾರಿಯಾದ ಮಿಸ್ ಅನುಸೂಯಾಬಾಯಿಯನ್ನು ವಿವಾಹವಾಗುವರು.

ಲಾಹೋರು ನಗರದ ಮೃಗಾಲಯದಲ್ಲಿ ಪಕ್ಕಪಕ್ಕದ ಎರಡು ಬೋನುಗಳಲ್ಲಿ ಒಂದರಲ್ಲಿ ಎರಡು ಹುಲಿಗಳನ್ನೂ ಮತ್ತೊಂದರಲ್ಲಿ ಒಂದು ಸಿಂಹವನ್ನೂ ಹಾಕಿದ್ದರು. ಇವೆರಡು ಬೋನುಗಳ ಮಧ್ಯದಲ್ಲಿದ್ದ ಬಾಗಿಲನ್ನು ಕಾವಲುಗಾರನು ಭದ್ರವಾಗಿ ಹಾಕದಿದ್ದುದರಿಂದ ಆ ಹುಲಿಗಳು ಪಕ್ಕದ ಬೋನಿಗೆ ನುಗ್ಗಿ ಸಿಂಹದೊಡನೆ ಕಚ್ಚಾಡಿ ಅದನ್ನು ಕೊಂದುಹಾಕಿರುವವು.

ಬೊಂಬಾಯಿ ಪಟ್ಟಣದ ಹತ್ತಿಬಟ್ಟೆಗಳ ಕಾರ್ಖಾನೆಗಳ ಸದ್ಯದ ಸ್ಥಿತಿಯು ಬಹು ಶೋಚನೀಯವಾಗಿದೆ. ಬರುವ ಮಾರ್ಚಿ ತಿಂಗಳಿಂದ ನಾಲ್ಕು ಭಾರೀ ಮಿಲ್ಲುಗಳನ್ನು ಮುಚ್ಚಿ ಕೆಲಸವನ್ನು ನಿಲ್ಲಿಸುವದಾಗಿ ನೋಟೀಸು ಕೊಟ್ಟಿದಾರೆ. ಅದರಿಂದ 15,000 ಕೂಲಿಕಾರರಿಗೆ ಜೀವನೋಪಾಯವು ತಪ್ಪಿಹೋಗುತ್ತದೆ. ಅಲ್ಲದೆ ಇನ್ನೂ ಅನೇಕ ಮಿಲ್ಲುಗಳವರು ಇನ್ನು ಮುಂದೆ ಭಾನುವಾರದ ಜೊತೆಗೆ ಶನಿವಾರವೂ ಕೂಡ ತಮ್ಮ ಕಾರ್ಖಾನೆಗಳಲ್ಲಿ ಕೆಲಸ ನಡೆಸುವದಿಲ್ಲವೆಂದು ತಿಳಿಸಿದಾರೆ.

ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದ ವತಿಯಿಂದ ಈ ತಿಂಗಳು 11 ನೆಯ ತಾರೀಖಿನ ದಿವಸ ವೈಸ್ರಾಯರವರಿಗೆ, ಶಾರದಾ ಬಿಲ್ಲು ಸನಾತನಧರ್ಮಕ್ಕೆ ವಿಘಾತುಕವಾದುದರಿಂದ ಅದನ್ನು ರದ್ದುಪಡಿಸಬೇಕೆಂದು ಟೆಲಿಗ್ರಾಂ ಮಾಡಲ್ಪಟ್ಟಿರುವದಾಗಿ ತಿಳಿಯಬರುತ್ತದೆ. ಆದುದರಿಂದ ಭರತಖಂಡದ ಪ್ರತಿಯೊಂದು ನಗರ ಗ್ರಾಮಗಳಲ್ಲಿರತಕ್ಕ ವೀರಶೈವರು ಈ ಬಿಲ್ಲನ್ನು ನಿಷೇಧಿಸಿ ವೈಸ್ರಾಯರವರಿಗೆ ತಂತಿ ಮೂಲಕ ಪ್ರತಿಭಟಿಸಿ ಸನಾತನ ಧರ್ಮಕ್ಕೆ ಬಂದೊದಗಿರುವ ಘೋರ ವಿಪತ್ತನ್ನು ದೂರ ಮಾಡಬೇಕೆಂದು ಕೋರುತ್ತೇವೆ. ಈ ವಿಷಯದಲ್ಲಿ ಪ್ರತಿಯೊಬ್ಬರು ಕಟಿಬದ್ಧರಾಗಿ ಕಾರ್ಯವನ್ನು ನಡೆಯಿಸಬೇಕೆಂದು ಆಶಿಸುತ್ತೇವೆ.

ಮಧುರೆ ಡಿಸ್ಟ್ರಿಕ್ಟಿಗೆ ಸೇರಿದ ಉಸಿಲಾಂಪಟ್ಟಿಯ ಹೈಸ್ಕೂಲಿನಲ್ಲಿ ವೀರಭಾನನೆಂಬ ವಿದ್ಯಾರ್ಥಿಯು ಅವನ ತಂದೆಯನ್ನು ಸ್ಕೂಲು ಫೀ ಕೊಡೆಂದು ಕೇಳಿದಾಗ ಸ್ಕೂಲು ಫೀ ಕೊಡದೆ, ತಂದೆಯು ನಿನ್ನ ಹೆಂಡತಿಯನ್ನು ತ್ಯಜಿಸಿಬಿಟ್ಟು ಜಾತಿ ಪದ್ಧತಿಯಂತೆ ಬರುವ ಮದುವೆ ಬಹುಮಾನ ರೂ 41-8 ಯನ್ನು ತೆಗೆದುಕೊಂಡು ಫೀಜನ್ನು ಕಟ್ಟುವಂತೆ ಹೇಳಿದನು. ಆ ಹುಡುಗನು ಹೆಂಡತಿಯನ್ನು ತ್ಯಜಿಸುವುದಕ್ಕಾಗಲೀ ಸ್ಕೂಲನ್ನು ಬಿಡುವುದಕ್ಕಾಗಲೀ ಇಷ್ಟಪಡದೆ 14 ವಯಸ್ಸಿನ ಹೆಂಡತಿಯನ್ನು ಇರಿದು ಕೊಂದು ಆತ್ಮಹತ್ಯಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟನು. ನೆರೆಹೊರೆಯವರು ಗಾಯಪಟ್ಟಿದ್ದ ಗಂಡಹೆಂಡರಿಬ್ಬರನ್ನೂ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಅವನ ಹೆಂಡತಿಯು ಮೃತಪಟ್ಟಳು. ಅವನಿಗೆ ವಾಸಿಯಾದ ಮೇಲೆ ಮೊಕದ್ದಮೆ ನಡೆದು ಸೆಷನ್ಸ್ ಜಡ್ಜರು ಜನ್ಮಕೋಲ್ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಬೊಂಬಾಯಿಯ ತಾಜ್‌ಮಹಾಲ್ ಪೋಸ್ಟಾಫೀಸಿಗೆ ಕರ್ನಲ್ ಫೋರ್ಗ್ಸ್ ಎಂಬ ಐರೋಪ್ಯನ ಪತ್ನಿಯು ಹೋಗಿ ಅಲ್ಲಿದ್ದ ಅಕೋಲ್ಕರನೆಂಬ ರಜಿಸ್ಟ್ರೇಷನ್ ಕ್ಲಾರ್ಕನಿಗೆ ತನ್ನ ಕಾಗದಕ್ಕೆ ಸ್ಟ್ಯಾಂಪನ್ನು ಹಚ್ಚಹೇಳಲು, ಕ್ಲಾರ್ಕನು ಅದು ತನ್ನ ಕರ್ತವ್ಯವಲ್ಲವಿದ್ದರೂ ಐರೋಪ್ಯಸ್ತ್ರೀಯೆಂಬ ಗೌರವದಮೇಲೆ ಸ್ಟ್ಯಾಂಪನ್ನು ಹಚ್ಚಿದನೆಂದೂ, ಆ ಸ್ತ್ರೀಯಳು ಸ್ಟ್ಯಾಂಪನ್ನು ಸರಿಯಾಗಿ ಹಚ್ಚಿಲ್ಲವೆಂದು ಆಕ್ಷೇಪಿಸಿ, ಪುನಃ ಸರಿಯಾಗಿ ಹಚ್ಚುವಂತೆ ಹೇಳಲು, ಕ್ಲಾರ್ಕನು ನಿರಾಕರಿಸಿದನೆಂದೂ, ಇದರಿಂದ ಆ ಆಂಗ್ಲಸ್ತ್ರೀಯಳು ಕುಪಿತಳಾಗಿ ತನ್ನ ಮನೆಗೆ ಹೋಗಿ ತನ್ನ ಗಂಡನಿಗೆ ದೂರುಹೇಳಿದಳೆಂದೂ, ಅನಂತರ ಕರ್ನಲ್ ಫೋರ್ಗ್ಸನು ಪೋಸ್ಟಾಫೀಸಿಗೆ ಹೋಗಿ ಆ ಕ್ಲಾರ್ಕನನ್ನು ದುರ್ಭಾಷೆಗಳಿಂದ ಬೈದು ಕೆನ್ನೆಗೆ ಎರಡು ಏಟನ್ನು ಕೊಟ್ಟು, ಅನಂತರ ತಾನೇ ಟೆಲಿಫೋನಿನಲ್ಲಿ ಪೋಸ್ಟುಮಾಸ್ಟರ್ ಜನರಲರವರಿಗೆ ದೂರು ಹೇಳಿದನೆಂದೂ, ಈ ವಿಚಾರವಾಗಿ ಪೋಸ್ಟಲ್ ಇನ್ಸ್‌ಪೆಕ್ಟರವರು ವಿಚಾರಣೆ ಮಾಡಿದಾಗ, ಕರ್ನಲ್ಲನೇ ತಪ್ಪಿತಸ್ಥನೆಂದು ತಿಳಿದುಬಂದು ಕಾರಕೂನನು ಅವನ ಮೇಲೆ ಮೊಕದ್ದಮೆ ಮಾಡಿರುವನೆಂದೂ ತಿಳಿದುಬಂದಿದೆ.

ಪ್ರಯಾಗಕ್ಷೇತ್ರದ ಧಾರಾಗಂಜದಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಸಂಸ್ಥಾನ ಜಂಗಮವಾಡಿ ಮಠದಲ್ಲಿ ಪುಷ್ಯ ಶುದ್ಧ 15 ಮತ್ತು ಬ॥ 1 ಈ ಎರಡು ದಿವಸ ಕಾಶೀ ಶ್ರೀ ವಿಶ್ವಾರಾಧ್ಯ ಗುರುಕುಲವಾಸಿಗಳಾದ ವಿದ್ವಾಂಸರೂ ಮತ್ತು ವಿದ್ಯಾರ್ಥಿಗಳೂ ಸೇರಿ ಬಿಜಾಪುರ ಡಿ॥ ಗುಲಗಲಿ ಬೃಹನ್ಮಠಾಧೀಶ್ವರ ವೇದರತ್ನ ಶ್ರೀ॥ ಷ॥ ಬ್ರ॥ ರಾಚೋಟಿಲಿಂಗ ಶಿವಾಚಾರ್ಯ ಚರಪಟ್ಟಾಧ್ಯಕ್ಷಸ್ವಾಮಿಗಳವರ ಅಧ್ಯಕ್ಷತೆಯಲ್ಲಿಯೂ, ಹಾಗೂ ನ್ಯಾಯವಿಶಾರದ ಚೆನ್ನುಲಗಿ ಬೃಹನ್ಮಠಾಧೀಶ್ವರ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರ ಸ್ವಾಗತ ಸಂಘಾಧ್ಯಕ್ಷತೆಯಲ್ಲಿಯೂ ಸಭೆ ಸೇರಿ, ಬಹು ಜನ ವೀರಶೈವ ಸಮುದಾಯದಲ್ಲಿ ಧರ್ಮಬೋಧವನ್ನು ಮಾಡಿ ಸರ್ವರನ್ನು ಆನಂದತುಂದಿಲಹೃದಯರನ್ನಾಗಿ ಮಾಡಿದರೆಂದೂ, ಹಾಗೂ ಅಮಾವಾಸ್ಯೆ ಕುಂಭಮೇಳಾ ಸಮಯದಲ್ಲಿ ಮಹಾ ಮಹಾ ಪಂಡಿತರೂ, ಮಹಾ ಮಹೋಪಾಧ್ಯಾಯರೂ, ಆಚಾರ್ಯಪದವೀಧರರೂ ಮೊದಲಾದವರೆಲ್ಲರೂ ಸೇರಿ, ಸನಾತನ ಧರ್ಮಕ್ಕೆ ಅತ್ಯಂತ ವಿರೋಧವಾಗಿರುವ ಶಾರದಾಬಿಲ್ಲನ್ನು ತೀವ್ರವಾಗಿ ಖಂಡಿಸಿದರೆಂದೂ, ಅಲ್ಲದೆ ವರ್ಣಾಶ್ರಮ ಸ್ವರಾಜ್ಯಸಂಘವೆಂಬ ಸಂಸ್ಥೆಯು ಸ್ಥಾಪಿತವಾಗಿ ದ್ವಾರಕಾ ಮಠಾಧೀಶ ಶ್ರೀ ಶಂಕರಾಚಾರ್ಯರ ಹಾಗೂ ಗೋವರ್ಧನಪುರೀ ಜಗನ್ನಾಥ ಮಠಾಧೀಶ ಶ್ರೀ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಸನಾತನ ಧರ್ಮದ ವಿಷಯದಲ್ಲಿ ಅನೇಕ ಠರಾವುಗಳು ಪಾಸಾದವೆಂದೂ, ವೀರಶೈವರ ಪರವಾಗಿ ಶ್ರೀ ಫುರಗಾರಿ ಬೃಹನ್ಮಠದ ಸಂ॥ ಚಿದ್ಘನಶಿವಾಚಾರ್ಯಶರ್ಮರವರು ದಯಮಾಡಿಸಿದ್ದರೆಂದೂ, ಆ ಸಮಯದಲ್ಲಿ ಮಹಾಮಹೋಪಾಧ್ಯಾಯ ಲಕ್ಷ್ಮಣಶಾಸ್ತ್ರಿಗಳು ಗೌರವಿಸಿದರೆಂದೂ, ಪಂಜಾಬ ಪ್ರಾಂತದ ಪ್ರತಿನಿಧಿಗಳಾದ ಕೃಷ್ಣಾನಂದ ಶಾಸ್ತ್ರಿಗಳವರು ಶಾರದಾಬಿಲ್ಲನ್ನು ವಿರೋಧಿಸಿದುದರಿಂದ ಕಾರಾಗೃಹವಾಸಕ್ಕೆ ಗುರಿಯಾದರೆಂದೂ, ಅವರನ್ನು ಶಂಕರಾಚಾರ್ಯರೇ ಮೊದಲಾದ ಯಾವತ್ತು ಮಹಾ ಮಹಾ ಪಂಡಿತರು ಅಲಹಾಬಾದಿನ ಜೈಲಿನವರೆಗೆ ಹೋಗಿ ಕಳುಹಿಸಿ, ಅವರಿಗೆ ಸನ್ಮಾನಗಳನ್ನಿತ್ತರೆಂದೂ, ಶಾರದಾಬಿಲ್ಲಿನ ನಿಷೇಧ ವಿಷಯವು ಉತ್ತರದೇಶದಲ್ಲಿ ಬಹು ಕೋಲಾಹಲವನ್ನೆಬ್ಬಿಸಿರುವದೆಂದೂ, ಭರತಖಂಡನಿವಾಸಿಗಳಾದ ಸಕಲ ಸನಾತನ ಧರ್ಮದವರು ಈ ಶಾರದಾಬಿಲ್ಲಿನ ವಿಷಯದಲ್ಲಿ ಪೂರ್ಣ ಗಮನಕೊಟ್ಟು ಜಾರಿಯಲ್ಲಿ ಬರದಂತೆ ಪ್ರಯತ್ನ ನಡೆಸಬೇಕೆಂದೂ, ಈ ಪವಿತ್ರಕಾರ್ಯದಲ್ಲಿ ಶ್ರೀ ಪರಮೇಶ್ವರನ ಕೃಪೆಯು ಮುಖ್ಯವಾಗಿರಬೇಕೆಂದೂ ಓರ್ವ ಕಾಶೀಕ್ಷೇತ್ರ ನಿವಾಸಿಗಳು ತಿಳುಹಿಸುತ್ತಾರೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶಿಖಾಧಾರಣ.

ಈ ಪರಮಪವಿತ್ರವಾದ ಭರತಭೂಮಿಯಲ್ಲಿ ಮಾನವಕಾಯವನ್ನು ಧರಿಸಿ ಅಷ್ಟಾವರಣ ಪಂಚಾಚಾರಗಳನ್ನು ಲೌಕಿಕಾಚಾರಗಳಲ್ಲಿ ಕಲಿಯುವದು ಪ್ರತಿಯೊಬ್ಬ ಲಿಂಗಧಾರಿಗಳ ಕರ್ತವ್ಯವಾಗಿದೆ. ಪಂಚಭೂತಾತ್ಮಕವಾದ ದೇಹವನ್ನು ಶುದ್ಧಿಗೊಳಿಸುವದಕ್ಕೆ ಅಷ್ಟಾವರಣಾದಿಗಳು ಹೇಗೆ ಮುಖ್ಯವೋ ಹಾಗೆ ಇನ್ನೂ ಅನೇಕ ಧರ್ಮಗಳು ಮುಖ್ಯವಾಗಿವೆ. ಶುದ್ಧಸಾಂಪ್ರದಾಯದ ವೀರಶೈವರು ಶಿಖೆಯನ್ನು ಬಿಡಿಸಬೇಕೆಂದು ವೇದಾಗಮಾದಿಗಳು ಘಂಟಾಘೋಷವಾಗಿ ಸಿಂಹನಾದವನ್ನು ಮಾಡುತ್ತಿದ್ದರೂ ಸಹ ಇದನ್ನು ಲಕ್ಷ್ಯಕ್ಕೆ ತರದಿರುವದು ಶೋಚನೀಯವಾದ ವಿಷಯವಾಗಿದೆ. "ಸದಾಬದ್ಧಶಿಖೇನಚ" ಎನ್ನುವ ಭೃಗುಸ್ಮೃತಿಯಿಂದ ಯಾವಾಗಲೂ ಶಿಖೆಯನ್ನು ಧರಿಸಿಯೇ ಇರಬೇಕೆಂದು ಸದಾ ಕಟ್ಟಿದಂತ ನಿತ್ಯಕೃತ್ಯ ಶೀತಿಯಾಗುವದರಿಂದ ಅಕ್ಷವಸ್ತುವನ್ನು ಆಚರಿಸದಿದ್ದರೆ ಪ್ರತ್ಯವಾಯವು ಬರುವ ಪ್ರಸಂಗದಿರುತ್ತದೆ.

"ಶಿಖಾಂಛಿಂದಂತಿ ಯೇ ಮೋಹಾದ್ವೇಷಾದಜ್ಞಾನತೋಽಪಿವಾ | ತಪ್ತಕೃಚ್ಛ್ರೇಣಶುದ್ಧ್ಯಂತಿ ತ್ರಯೋ ವರ್ಣಾ ದ್ವಿಜಾತಯಃ ||"

ಅಂದರೆ ಯಾರು ಮೋಹದಿಂದಾಗಲಿ, ದ್ವೇಷದಿಂದಾಗಲಿ, ಅಜ್ಞಾನದಿಂದಾಗಲಿ ಶಿಖೆಯನ್ನು ಕತ್ತರಿಸುವರೋ ಅಂತಹ ದ್ವಿಜರು ತಪ್ತಕೃಚ್ಛ್ರವ್ರತದಿಂದ ಶುದ್ಧರಾಗುವರೆಂದು ಬೋಧಿಸುವರು. "ವಿಶಿಖೋಯತ್ಕರೋತಿಸತ್ಕೃತಂ" ಎಂಬ ಉಕ್ತಿಯಂತೆ ವೀರಶೈವರು ಶಿಖೆಯಿಲ್ಲದೆ ಯಾವ ಕರ್ಮವನ್ನು ಆಚರಿಸಿದರೂ ಅದು ಕರ್ಮವೆಂದು ಹೇಳಿಸಿಕೊಳ್ಳಲಾರದು. ಹಾರೀತನು ಶಿಖೆಯಿಲ್ಲದೆ ಮಾಡುವವನ ಕರ್ಮಕ್ಕೆ ವೈಫಲ್ಯವನ್ನು ಹೇಳಿರುವದರಿಂದ, ಶಿಖೆಯು ಸರ್ವ ಕರ್ಮಗಳಿಗೂ ಅಂಗವೆಂದು ಸಿದ್ಧವಾಗುವದು. ಇದು ಅಲ್ಲದೆ ಶ್ರೀಮತ್ಪಂಚಾಚಾರ್ಯರ ಸಾಂಪ್ರದಾಯಕರಾದ ಶ್ರೀಕರಭಾಷ್ಯಕಾರರು ಶ್ರೀಮದ್ರೇಣುಕಾರಾಮ ಜಗದ್ಗುರುಗಳ ಮಂಗಲಸಮಯದಲ್ಲಿ "ಶ್ರೀಮದ್ದಂಡಶಿಖೋಪವೀತವಿಲಸತ್ಕಂಥಾಜಿನಾಲಂಕೃತಃ" ಎಂದು ಸ್ತುತಿಗೈದಿರುವರು. "ಮುಖೇಮಂತ್ರೋಹೃದಿಧ್ಯಾನಂ ಮಸ್ತಕೇಲಿಂಗಧಾರಣಂ | ಶಿಖಾರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣಲಕ್ಷಣಂ" ಇತ್ಯಾದಿ ಗೌತಮಸ್ಮೃತಿ ಲಿಂಗಧಾರಣಚಂದ್ರಿಕಾದಿ ಗ್ರಂಥೋಕ್ತ ವಾಕ್ಯಗಳು ಲಿಂಗಧಾರಿ ಬ್ರಾಹ್ಮಣರು ಶಿಖಾಯುಕ್ತರಾಗಿರಬೇಕೆಂದು ಉದ್ಘೋಷಿಸುತ್ತವೆ. "ಶಿಖಾಸೂತ್ರಜಟಾಭಸ್ಮಶಿವಲಾಂಛನಲಾಂಛಿತಃ" ಎಂದು ಸಾತುರಶತಂತ್ರವು ಬೋಧಿಸುವದು. "ಬ್ರಾಹ್ಮಣಾವೀರಶೈವಸ್ತ್ಯಾಃಶಿಖಾಯಜ್ಞೋಪವೀತಿನಃ" ಎಂದು ಪಾರಮೇಶ್ವರಾಗಮದಲ್ಲಿ ವೀರಶೈವಬ್ರಾಹ್ಮಣರು ಶಿಖೆಯನ್ನು ಅವಶ್ಯವಾಗಿ ಬಿಡಿಸಬೇಕೆಂದು ಘೋಷಿಸಲ್ಪಟ್ಟಿರುವದು. ಈರೀತಿಯಾಗಿ ಅನೇಕ ಪ್ರಮಾಣಗಳು ಘಂಟಾಘೋಷವಾಗಿ ಕೂಗುತ್ತಿದ್ದರೂ ಸಹ ಈ ನಮ್ಮ ಬಳ್ಳಾರಿಗೆ ಬಂದಿರುವ ಶಿಷ್ಯಸಂಪ್ರದಾಯವಿಲ್ಲದ ಬಿಡಾಡಿ ಅಯ್ಯಗಳು ಶಿಖೆಯನ್ನು ಬಿಡಿಸಕೂಡದೆಂದು ಮಾಹೇಶ್ವರ ವಿದ್ಯಾರ್ಥಿಗಳಿಗೆ ಶಿವಾಚಾರ್ಯದಲ್ಲಿರುವ ಶಿಖೆಗಳಲೂ ಇದೀ ಹಿಂದೂ ದೇಶಕ್ಕೆ ವಿರುದ್ಧವಾಗಿರುವ ಕ್ರಾಪೇ ಉತ್ತಮವೆಂದು ಬೋಧೆಯನ್ನು ಮಾಡುತ್ತಲಿರುವದು ಈ ನವೀನ ಪಂಡಿತಂಮನ್ಯರ ಪಾಂಡಿತ್ಯದ ಲಕ್ಷಣವಾಗಿದೆ. ಶುದ್ಧಸಾಂಪ್ರದಾಯದ ವೀರಶೈವರು ಈ ಬಿಡಾಡಿಜಂಗಮರಾದ ವಿಕಟಪಂಡಿತರ ಮಾತುಗಳ ಕಡೆಗೆ ಗಮನಕೊಡದೆ ಶಾಸ್ತ್ರತತ್ತ್ವದಂತೆ ನಡೆದು ಶಿವನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಅಯ್ಯ! ನೂತನ ಪಂಡಿತರೇ? ಅನೇಕ ಶಾಸ್ತ್ರಾಧಾರಗಳು ಇದ್ದರೂ ಅವುಗಳೊಂದನ್ನೂ ಸ್ಮೃತಿಪಥಕ್ಕೆ ತಾರದೆ ಹೀಗೆ ದುರ್ಬೋಧಮಾಡುವದು ವಿಹಿತವಲ್ಲ. ನೀವಾದರೂ ಪತಿತರಾದ ಬೋಳಿಗಳಂತೆ ಇರುವದು ಪಂಡಿತರ ಲಕ್ಷಣವಲ್ಲ. ನೀವು ಶಾಸ್ತ್ರವಿರುದ್ಧವಾಗಿ ವರ್ತಿಸಿದರೆ ನಿಮಗೆ ಅಂತಹನು ಇಹಪರಜನ್ಮಗಳಲ್ಲಿ ಯಾವ ಶಾಸನವಿಲ್ಲೆಯುವನೋ! ತಿಳಿಯದಾಗಿದೆ. ಮಹತ್ಪಾವಕರಾದ ಶ್ರೀಮದ್ರೇಣುಕರಲ್ಲಿ ಪೂಜ್ಯಬುದ್ಧಿಯನ್ನಿಟ್ಟು ಧನ್ಯರಾಗಿರಿ.

ಬಸವಲಿಂಗಶರ್ಮಾ
ಮಸರಕಲ್ಲುಮಠ ಬಳ್ಳಾರಿ.

ಅರಸೀಕೆರೆ ತಾಲೂಕು ದಿಬ್ಬೂರು.

ಸ್ವಾಮಿ! ಈ ಗ್ರಾಮಕ್ಕೆ ಧರ್ಮಸರ್ಕಾರದವರು ದಯಪಾಲಿಸಿರುವ ಗ್ರಾಂಟುಸ್ಕೂಲಿನಲ್ಲಿ ಈಗ 2 ವರುಷಗಳಿಂದ ಕೆಲಸಮಾಡುತ್ತಿರುವ ಮಾಸ್ತರ್ ಚನ್ನಪ್ಪನವರು 30-35 ರ ವರೆಗೆ ಬಾಲಕರನ್ನು ಜಮಾಯಿಸಿಕೊಂಡು ತೃಪ್ತಿಯಿಂದ ಕೆಲಸಮಾಡುತ್ತಾರಲ್ಲದೆ ಬಾಲಕರಲ್ಲಿ ಏಕಮತ್ಯ, ರಾಜಭಕ್ತಿ, ದೈವಭಕ್ತಿಗಳುಂಟಾಗುವಂತೆ ನೂರಾರು ಕಾರ್ಡುಬೋರ್ಡುಗಳ ಮೇಲೆ ಅನೇಕಾನೇಕ ಧರ್ಮನೀತಿ ವಾಕ್ಯಗಳನ್ನು ಬರೆದಿಟ್ಟಿರುತ್ತಾರೆ. ಮಕ್ಕಳ ಏಡಕ್ಕೆ ತಕ್ಕ ಉಪಕರಣಗಳನ್ನು ಈ ಮಾಸ್ತರು ಸ್ವಂತ ವೆಚ್ಚದಿಂದಲೇ ಜತೆಗೂಳಿಸಿಕೊಂಡಿರುತ್ತಾರೆ. ಇವರು ಕೇವಲ ಲೌಕಿಕ ಪಾರಮಾರ್ಥಿಕ ಜ್ಞಾನಿಗಳೂ ಧರ್ಮಜ್ಞರೂ ಆಚಾರಶೀಲರೂ ಆದ್ದು ಸ್ಕೂಲಿನಲ್ಲಿ ಆಗಿಂದಾಗ್ಗೆ ನಡೆಯುವ ನವರಾತ್ರಿ ವಗೈರೆ ಉತ್ಸವಗಳಲ್ಲಿ ಗ್ರಾಮಸ್ಥರನ್ನು ಸ್ಕೂಲಿಗೆ ಬರಮಾಡಿಕೊಂಡು ನಮ್ಮಗಳಿಗೆಲ್ಲ ರಾಜನಿಷ್ಠೆಯನ್ನೂ ದೈವಭಕ್ತಿಯನ್ನೂ ಧರ್ಮಾಧರ್ಮಗಳ ಪರಿಶೀಲತೆಯನ್ನೂ ಬೋಧಿಸುತ್ತಿರುವದು ಸ್ತೋತ್ರಾರ್ಹವಾದ ವಿಷಯವಾಗಿರುತ್ತದೆ. ಇಂಥ ನ್ಯಾಯಧರ್ಮಪಾಲಕರೂ ಪರೋಪಕಾರಿಗಳೂ ಆದ ಮಾಸ್ತರು ನಮ್ಮ ಗ್ರಾಮಕ್ಕೆ ದೊರೆತದ್ದು ನಮ್ಮ ಮತ್ತು ನಮ್ಮ ಮಕ್ಕಳುಗಳ ಪುಣ್ಯೋದಯವೆಂದೇ ಹೇಳಬೇಕಾಗುತ್ತದೆ. ಇಷ್ಟೇ ಅಲ್ಲ! ಸದರಿ ಮಾಸ್ತರ್ ಚನ್ನಪ್ಪನವರು ಈ ಹಿಂದೆ ಕಡೂರು ತಾಲೂಕು ಮಲ್ಲಿದೇವಿಹಳ್ಳಿ ಬೆಳವಾಡಿ ಕಂಚನಾಡು ಈ ಗ್ರಾಮಗಳಲ್ಲಿ 7-8 ವರ್ಷಗಳಕಾಲ ಕೆಲಸಮಾಡಿ ಇಲಾಖಾ ಇನ್ಸ್‌ಪೆಕ್ಟರವರಿಂದಲೂ ಮತ್ತು ತಾಲ್ಲೋಕು ಡಿಸ್ಟ್ರಿಕ್ಟು ಆಫೀಸರ್‌ರವರಿಂದಲೂ ಪಡೆದುಕೊಂಡುಬಂದಿರುವ ಸರ್ಟಿಫಿಕೇಟುಗಳೇ ದೊಡ್ಡ ಸಾಕ್ಷಿಗಳಾಗಿರುತ್ತವೆ.

ಈ ರೀತಿ ಧರ್ಮಮಾರ್ಗನಿರತರಾದ ಮಾಸ್ತರ್ ಚನ್ನಪ್ಪನವರ ಮೇಲೆ ಈ ಗ್ರಾಮದ ಕೆಲವರು ಇಲ್ಲದ ಆರೋಪವನ್ನು ಕಲ್ಪಿಸಿ ಅರ್ಜಿ ವಗೈರೆ ಬರೆಯುತ್ತಿರುವದು ಕೇವಲ ಅನ್ಯಾಯವಾಗಿರುತ್ತದೆ. ಇಂಥವರಿಗೆ ದೇವರು ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಎಮ್. ರುದ್ರಪ್ಪ ಶೆಟ್ಟಿ.
ಜನರಲ್ ಮರ್ಚೆಂಟ್ ದಿಬ್ಬೂರು.

ಕೊಟ್ಟೂರೇಶನ ರಥೋತ್ಸವ ಕೊಟ್ಟೂರು.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ಕೊಟ್ಟೂರು ಪಟ್ಟಣದಲ್ಲಿ ಅಗಾಧಮಹಿಮಾಶೀಲನಾದ ಶ್ರೀ ಕೊಟ್ಟೂರೇಶನ ರಥೋತ್ಸವವು, ತಾ|| 22-2-30 ಮಾಘಬಹುಳ 9 ಶನಿವಾರ ಮೂಲಾನಕ್ಷತ್ರದಲ್ಲಿ ಪ್ರತಿವರ್ಷಕ್ಕಿಂತಲೂ ಈವರ್ಷ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಈ ಕೊಟ್ಟೂರೇಶನು ಭೂಮಂಡಲದಲ್ಲಿ ಅವತರಿಸಿ ಗುರುಸ್ಥಲಪಟ್ಟಾಧಿಕಾರಿಯಾಗಿ ಅನೇಕ ಮಹಿಮೆಗಳನ್ನು ತೋರಿಸುತ್ತ ಸಕಲರಿಗೂ ಮಾನವಜನ್ಮವನ್ನು ಸಾರ್ಥಕಗೊಳಿಸುವ ಸದ್ಬೋಧೆಯನ್ನು ಮಾಡುತ್ತ ಸಕಲದೇಶಗಳನ್ನು ಸಂಚರಿಸಿ ಭಕ್ತರನ್ನು ಉದ್ಧರಿಸಿದನೆನ್ನುವ ವಿಷಯವು ಲೋಕಪ್ರಸಿದ್ಧವೇ ಆದೆ. ಆದ್ದರಿಂದ ಶ್ರೀ ಕೊಟ್ಟೂರೇಶನ ಸ್ಥಲವು ಪುಣ್ಯಕ್ಷೇತ್ರವೆನಿಸಿರುವದು ಸರಿಯಷ್ಟೆ! ಈ ಪುಣ್ಯಕ್ಷೇತ್ರಕ್ಕೆ ಅನೇಕ ಪ್ರದೇಶಗಳಿಂದ ಭಕ್ತಮಾಹೇಶ್ವರರು ಬಂದು ಇಲ್ಲಿ ನಡೆಯುವ ಈ ಸ್ವಾಮಿಯ ರಥೋತ್ಸವಾದಿ ಸಮಾರಂಭವನ್ನು ನೋಡಿ ಕೃತಾರ್ಥರಾಗುತ್ತಿರುವರು. ಆದಕಾರಣ ಬರುವವರು ಸಕಾಲಕ್ಕೆ ಬಂದು ದರ್ಶನವನ್ನು ಪಡೆದು ಧನ್ಯರಾಗಬೇಕೆಂದು ಬಯಸುತ್ತೇನೆ.

ಓರ್ವ ಪ್ರಧಾನದೇಮಠದ ಗುರುಬಸಿದ್ದಯ್ಯ
ಕೊಟ್ಟೂರು.

ಶ್ರೀ ರೇಣುಕಾದಿಗುರುಭ್ಯೋ ನಮಃ

ಚಿಕ್ಕಮಗಳೂರು ತಾಲೂಕು ಓಟರುಮಹಾಶಯರಲ್ಲಿ ವಿಜ್ಞಾಪನೆ.

ಮಹನೀಯರೇ!

ಕಳೆದ ಪ್ರಜಾಪ್ರತಿನಿಧಿಸಭೆಯ ಚುನಾವಣೆಯಲ್ಲಿ, ತಾವುಗಳು ತಮ್ಮ ಘನವಾದ ಓಟನ್ನು ನನಗೆ ಕೊಟ್ಟು ನನ್ನಿಂದ ಪ್ರಜಾಸೇವೆಯಾಗುವಂತೆ ಸಹಕರಿಸಿದುದಕ್ಕಾಗಿ ತಮ್ಮಗಳಲ್ಲಿ ನಾನು ಚಿರಕೃತಜ್ಞನಾಗಿರುತ್ತೇನೆ.

ಈ ನಮ್ಮ ಮಲೆನಾಡು ಪ್ರಾಂತವು, ಆರೋಗ್ಯ, ವಿದ್ಯೆ, ಸಹಕಾರ, ವ್ಯವಸಾಯ, ವ್ಯಾಪಾರ, ಕೈಗಾರಿಕೆಯೇ ಮೊದಲಾದ ವಿಷಯಗಳಲ್ಲಿ ಕೇವಲ ಹಿಂದುಳಿದಿರುವುದರಿಂದ ಮೇಲ್ಕಂಡ ಭಾಗಗಳಲ್ಲಿ ಸರ್ಕಾರದವರಿಗೆ ಸಮಂಜಸವಾದ ಸಲಹೆಗಳನ್ನು ಕೊಡುವುದರ ಮೂಲಕ ನಮ್ಮ ತಾಯ್ನಾಡಿನ ಅಭಿವೃದ್ಧಿಯನ್ನು ಕಾರ್ಯತಃ ಬಯಸುವುದು ದೇಶಾಭಿಮಾನಿಯಾದ ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆಂಬುದನ್ನು ಪ್ರಾಜ್ಞರಾದ ತಮಗೆ ಒತ್ತಿ ಹೇಳಬೇಕಾದದ್ದಿಲ್ಲವು.

ಈ ತಮ್ಮ ಉದಾತ್ತ ವಿಚಾರ ಸಮುಚ್ಚಯವಾದ ಉದ್ದೇಶಗಳನ್ನು ಸಾರ್ಥಕಪಡಿಸಲು, ತಮ್ಮಗಳ ಒಡನಾಡಿಯಾದ ನಾನು ಸದಾ ಸಿದ್ಧನಾಗಿರಬೇಕೆಂಬ ಸದುದ್ದೇಶದಿಂದ ಬರುವ ಮಾರ್ಚಿ 8 ನೆಯ ತಾರೀಖಿನಲ್ಲಿ ನಡೆಯಲಿಕ್ಕಿರುವ ಪ್ರಜಾಪ್ರತಿನಿಧಿಸಭೆಯ ಸದಸ್ಯತನಕ್ಕೆ ಉಮೇದುವಾರನಾಗಿ ನಿಂತಿರುತ್ತೇನಾದ ಪ್ರಯುಕ್ತ ತಾವುಗಳು ನನ್ನ ಲೋಕಸೇವಾ ಕಾರ್ಯದಲ್ಲಿ ಪೂರ್ಣ ಭರವಸೆಯಿಟ್ಟು, ಆಯಾಯ ಸೆಂಟರುಗಳಿಗೆ ದಯಮಾಡಿಸಿ, ತಮ್ಮ ಘನವಾದ ಓಟನ್ನು ಕೊಡುವುದರ ಮೂಲಕ, ಸ್ವಜನವಾದ ದೇಶಹಿತವನ್ನೂ ಹಾಗೂ ಮಲೆನಾಡಿನ ಏಳಿಗೆಯನ್ನೂ ಸಾಧಿಸುವಿರಾಗಿ ಸಂಪೂರ್ಣ ನಂಬಿರುವ—

ತಮ್ಮ ನಿರಂತರ ಶ್ರೇಯೋಭಿಲಾಷಿ
ಆಲದೂರು ಕಾಫಿಪ್ಲಾಂಟರು ಬಿ. ಪುಟ್ಟಣ್ಣ
ಶೆಟ್ಟರ ಮಗ, ಬಿ. ಪಿ. ಬಸಪ್ಪಶೆಟ್ಟಿ,
ಪ್ರ. ಪ್ರ. ಮೆಂಬರು.

ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯುತಕ್ಕ ವೀರಶೈವಮತತತ್ತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

1. ಅಕ್ಷರವರ್ಣದೇವತಾನಿರ್ಣಯಃ (ಕರ್ನಾಟಕ ಟೀಕಾಸಹಿತಃ) ನಂ. 5415
2. ಅಂತ್ಯೇಷ್ಟಿವಿಧಿಪ್ರಕರಣಂ ಸಮಗ್ರಂ ನಂ. 5416
3. ಅಷ್ಟಾವರಣಮಹಿಮದರ್ಪಣಸಂಗ್ರಹಃ (ಕರ್ನಾಟಕ ಟೀಕಾ) 9 ಪ್ರಕರಣಾನಿ ನಂ. 5418
4. ಆಗಮಸಾರ ಶತಕತ್ರಯಮ್ (ಸಮಗ್ರಂ) ನಂ. 5426
5. ಕಾಲಹಸ್ತೀಶವಿಲಾಸಃ ನಂ. 5076
6. ಕ್ರಿಯಾಕ್ರಮದ್ಯೋತಿಕಾ ನಂ. 5434-5435
7. ದಧೀಚಿ ಸಂಹಿತಾ (30 ಅಧ್ಯಾಯಾಃ) ನಂ. 5446
8. ನಕ್ಷತ್ರವಾದಾವಲಿಃ ನಂ. 5079
9. ನವಕೋಟಿಃ ನಂ. 5081
10. ನಂಜರಸ್ವಾಮಿವ್ಯಾಖ್ಯಾ-ಶಿವತತ್ತ್ವಪ್ರಕಾಶಿಕಾ ನಂ. 5089
11. ಪೌಷ್ಕರಾಗಮಃ (8 ಪಟಲಾಃ) ನಂ. 5449
12. ಮಹಾನ್ಯಾಸಃ (ರುದ್ರಜಪ ಹೋಮಾದಿಃ) ನಂ. 5465
13. ವಾಮದೇವಸಂಹಿತಾ (102 ಅಧ್ಯಾಯಾಃ) 5481
14. ವಿಮಲಾಗಮಃ (94 ಪಟಲಾಃ) ನಂ. 5488
15. ವೀರಶೈವಸಿದ್ಧಾಂತಃ (ಶಿವಯೋಗೀಂದ್ರಕೃತಃ) ನಂ. 5103
16. ವೀರಶೈವಸಿದ್ಧಾಂತಃ ಸಕರ್ನಾಟಕ ಟೀಕಾ ನಂ. 5494
17. ವೀರಶೈವ ಸಂಧ್ಯಾವಂದನಪ್ರಯೋಗಃ 5492
18. ವೀರಶೈವಸಿದ್ಧಾಂತೋತ್ತರಕೌಮುದೀ 5495
19. ವೀರಶೈವಾಗಮಃ ನಂ. 5499
20. ವೀರಾಗಮಃ (ಉತ್ತರಭಾಗಃ) ನಂ. 5504
21. ವೈದಿಕಾಚಾರನಿರ್ಣಯಃ ನಂ. 5505
22. ಶಿವಾದ್ವೈತಮ್ ನಂ. 5113
23. ಶಿವಾದ್ವೈತ ಪ್ರಕಾಶಿಕಃ (ಕರ್ನಾಟಕಟೀಕಾ) ನಂ. 5114
24. ಶಿವಪ್ರಸಾದ ಚಿಂತಾಮಣಿಃ ನಂ. 5523
25. ಶೀಲಸಂಪಾದನಕ್ರಮಃ ನಂ. 5534
26. ಶೈವಶ್ರಾದ್ಧವಿಧಿಃ ನಂ. 5542
27. ಶೈವಸಂಜೀವನಮ್ (ಮರಿತೋಂಟದಾರ್ಯಕೃತಂ) ನಂ. 5117
28. ಸುಪ್ರಭೇದಾಗಮಃ (ಕ್ರಿಯಾ, ಚರ್ಯಾ, ಯೋಗ, ಜ್ಞಾನಪಾದಸಮೇತಃ) ನಂ. 5557
29. ಕಾಮಿಕಾಗಮಃ (136 ಪಟಲಾಃ) ನಂ. 5431
30. ಕಾಮಿಕಾಗಮಃ (ಉತ್ತರಭಾಗಃ) ನಂ. 5432

(ಸಶೇಷ)

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[6] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಾಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪಡೆ ಪಡೆ ಹಿಡಿಯುವ ದಿನಗಳ ಜ್ವರ, ಹಾಗೂ ಜ್ವರದ ಬಳಿಯೋಡುವ ಮೊದಲಾದ ರೋಗಪೀಡಿತರಾದವರಿಗೆ ಔಷಧಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

...ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ; 'ಕೊಡಗಿನ ಗುಡುಗುಡು!' (ಛಳಿ). 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಸಂಪೂರ್ಣವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [28]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

...ದ ಜಗತ್ತು.] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಕರಾಗಿ ...ರಾಗಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧೈರ್ಯಗೆಡದೆ ...ವನ್ನು ಕಾಯ್ದುಕೊಳ್ಳಿರಿ.

ರಜೆ] ವಜ್ರಾಂಗ ಸುಂದರಪಾಕ. [ಸ್ವರ್ಗ

ಧಾತುಪುಷ್ಟಿ ವಿಕಾರ, ಸಪ್ತಧಾತು, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗುವುದು, ಸ್ತ್ರೀ ಸ್ಪರ್ಶವಾದ ಕೂಡಲೆ ... ಅಗ್ನಿಮಾಂದ್ಯ, ಎದೆನೋವು, ಮೂಲವ್ಯಾಧಿ, ... ಕೈಕಾಲು, ಮೂತ್ರ ಉರಿಯೋಣ, ... ಮುಂತಾದ ರೋಗಗಳು ಹೋಗಿ ... ದೇಹಕ್ಕೆ ... ಧಾತು ... ಗಟ್ಟಿ ಆಗುವದಲ್ಲದೆ ಪುರುಷತ್ವ ಹೆಚ್ಚುತ್ತದೆ. ... ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ... ತಕ್ಕೊಂಡು ಅನುಭವಿಸಿರಿ.

... 50 ಜಿನಸು ಹಾಕಿದ್ದೆಂದು ಸಿದ್ಧಮಾಡಿಕೊಟ್ಟ ... 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ... ತಕ್ಕೊಂಡು. ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ... 21 ದಿವಸ ... 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ... 27 ರೂ. ವಿ. ಪಿ. ... 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ... ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ...ಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹುಣ್ಣು, ರಕ್ತ, ಕೀವು, ಹುಳ್ಳು, ದುರ್ಗಂಧಿ, ನಾಸಿಕಾರೋಗ, ಪಲ್ಲನೋವು ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ...ಯ 1 ಪುಡಿಕೆಗೆ 3 ರೂಪಾಯಿಗಳು. [32]

ಪತ್ತೆ:—ನೂಲಕವೈದ್ಯ ವಿ. ಎಸ್. ಕಾಪಸೆ, ಮು| ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತವೆ. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ವೃದ್ಧಿ, ಜೀವಕ, ಋಷಭಕ, ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗ [illegible]) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಶೈಲಾನೀಯ ಮಹೌಷಧವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧ ಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆಂಬುದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹವನಿತೆಯು ೧ ತೊಲಿಯ ಸೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ವಾಸಿಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[45]

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ವ್ಯಾನೇಜರು
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶಿಖಾಧಾರಣ.

ಈ ಪರಮಪವಿತ್ರವಾದ ಭರತಭೂಮಿಯಲ್ಲಿ ಮಾನವರಾಯುವನ್ನು ಧರಿಸಿ ಅಧ್ಯಾತ್ಮಿಕವ ಪದವಿಗಳನ್ನು ಲೌಕಿಕದೃಷ್ಟಿಯಲ್ಲಿ ಪಡೆವುದು ಪ್ರತಿಯೊಬ್ಬ ಲಿಂಗಧಾರಿಗಳ ಕರ್ತವ್ಯವಾಗಿದೆ. ಪಂಚಭೂತಾತ್ಮಕವಾದ ದೇಹವನ್ನು ಶುದ್ಧಿಗೊಳಿಸುವದಕ್ಕೆ ಅಷ್ಟಾವರಣಾದಿಗಳು ಹೇಗೆ ಮುಖ್ಯವೋ ಹಾಗೆ ಇನ್ನೂ ಅನೇಕ ಧರ್ಮಗಳು ಮುಖ್ಯವಾಗಿವೆ. ಶುದ್ಧಸಾಂಪ್ರದಾಯದ ವೀರಶೈವರು ಶಿಖೆಯನ್ನು ಬಿಡಿಸಬೇಕೆಂದು ವೇದಾಗಮಾದಿಗಳು ಘಂಟಾಘೋಷವಾಗಿ ಸಿಂಹನಾದವನ್ನು ಮಾಡುತ್ತಿದ್ದರೂ ಸಹ ಇದನ್ನು ಲಕ್ಷ್ಯಕ್ಕೆ ತರದಿರುವದು ಶೋಚನೀಯವಾದ ವಿಷಯವಾಗಿದೆ. "**ಸದಾಬದ್ಧ ಶಿಖೇನಚ**" ಎನ್ನುವ ಶ್ರುತಿಸ್ಮೃತಿಯಿಂದ ಯಾವಾಗಲೂ ಶಿಖೆಯನ್ನು ಧರಿಸಿಯೇ ಇರಬೇಕೆಂದು ಸದಾ ಶಬ್ದದಿಂದ ಸಿದ್ಧಸ್ವಪ್ರತೀತಿಯಾಗುವದರಿಂದ ಸರ್ವಮನ್ನು ಆಚರಿಸದಿದ್ದರೆ ಪ್ರತ್ಯವಾಯವು ಬರುವ ಪ್ರಸಂಗವಿರುತ್ತದೆ.

"ಶಿಖಾಂಛಿಂದಂತಿ ಯೇ ಮೋಹಾದ್ದ್ವೇಷಾದ ಜ್ಞಾನತೋಽಪಿವಾ | ತಪ್ತಕೃಚ್ಛ್ರೇಣಶುದ್ಧ್ಯಂತಿ ತ್ರಯೋ ವರ್ಣಾ ದ್ವಿಜಾತಯಃ ||"

ಅಂದರೆ ಯಾರು ಮೋಹದಿಂದಾಗಲಿ, ದ್ವೇಷದಿಂದಾಗಲಿ, ಅಜ್ಞಾನದಿಂದಾಗಲಿ ಶಿಖೆಯನ್ನು ಕತ್ತರಿಸುವರೋ ಅಂತಹ ದ್ವಿಜರು ತಪ್ತಕೃಚ್ಛ್ರವ್ರತದಿಂದ ಶುದ್ಧರಾಗುವರೆಂದು ಬೋಧಿಸುವರು. "**ವಿಶಿಖೋಯತ್ಕರೋತಿನತ್ಕೃತಂ**" ಎಂಬ ಉಕ್ತಿಯಂತೆ ವೀರಶೈವರು ಶಿಖೆಯಿಲ್ಲದೆ ಯಾವ ಕರ್ಮವನ್ನು ಆಚರಿಸಿದರೂ ಅದು ಕರ್ಮವೆಂದು ಹೇಳಿಸಿಕೊಳ್ಳಲಾರದು. ಹಾರೀತನು ಶಿಖೆಯಿಲ್ಲದೆ ಮಾಡುವವನ ಕರ್ಮಕ್ಕೆ ವೈಫಲ್ಯವನ್ನು ಹೇಳಿರುವದರಿಂದ ಶಿಖೆಯು ಸರ್ವ ಕರ್ಮಗಳಿಗೂ ಅಂಗವೆಂದು ಸಿದ್ಧವಾಗುವದು. ಇದು ಅಲ್ಲದೆ ಶ್ರೀಮತ್ಪಂಚಾಚಾರ್ಯರ ಸಾಂಪ್ರದಾಯಕರಾದ ಶ್ರೀಕರಭಾಷ್ಯಕಾರರು ಶ್ರೀಮದ್ರೇಣುಕಾರಾಧ್ಯ ಜಗದ್ಗುರುಗಳ ಮಂಗಳಸಮಯದಲ್ಲಿ "**ಶ್ರೀಮದ್ದಂಡಶಿಖೋಪವೀತವಿಲಸತ್ಕಂಥಾಜಿನಾಲಂಕೃತಃ**" ಎಂದು ಸ್ತುತಿಗೈದಿರುವರು. "**ಮುಖೇಮಂತ್ರೋಹೃದಿಧ್ಯಾನಂ ಮಸ್ತಕೇಲಿಂಗಧಾರಣಂ | ಶಿಖಾರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣಲಕ್ಷಣಂ**" ಇತ್ಯಾದಿ ಗೌತಮಸ್ಮೃತಿ ಲಿಂಗಧಾರಣಚಂದ್ರಿಕಾದಿ ಗ್ರಂಥೋಕ್ತ ವಾಕ್ಯಗಳು ಲಿಂಗಧಾರಿ ಬ್ರಾಹ್ಮಣರು ಶಿಖಾಯುಕ್ತರಾಗಿರಬೇಕೆಂದು ಉದ್ಘೋಷಿಸುತ್ತವೆ. "**ಶಿಖಾಸೂತ್ರಜಟಾಭಸ್ಮಶಿವಲಾಂಛನಲಾಂಛಿತಃ**" ಎಂದು ಪಾಶುಪತಸಂಕ್ರಮ ಬೋಧಿಸುವದು. "**ಬ್ರಾಹ್ಮಣಾ ವೀರಶೈವಸ್ಥಾಃ ಶಿಖಾಯಜ್ಞೋಪವೀತಿನಃ**" ಎಂದು ಪಾರಮೇಶ್ವರಾಗಮದಲ್ಲಿ ವೀರಶೈವಬ್ರಾಹ್ಮಣರು ಶಿಖೆಯನ್ನು ಅವಶ್ಯವಾಗಿ ಬಿಡಿಸಬೇಕೆಂದು ಘೋಷಿಸಲ್ಪಟ್ಟಿರುವದು. ಈರೀತಿಯಾಗಿ ಅನೇಕ ಪ್ರಮಾಣಗಳು ಘಂಟಾಘೋಷವಾಗಿ ಕೂಗುತ್ತಿದ್ದರೂ ಸಹ ಈ ನಮ್ಮ ಬಳ್ಳಾರಿಗೆ ಬಂದಿರುವ ಶಿಷ್ಯಸಂಪ್ರದಾಯದಲ್ಲದ ಬಿಡಾಡಿ ಅಯ್ಯಗಳು ಶಿಖೆಯನ್ನು ಬಿಡಿಸಕೂಡದೆಂದು ಮಹೇಶ್ವರ ವಿದ್ಯಾರ್ಥಿಗಳಿಗೆ ಶಿಖಾಚಕ್ರದಲ್ಲಿರುವ ಶಿಖೆಗಿಂತಲೂ ಇದೀಹಿಂದೂ ದೇಶಕ್ಕೆ ವಿರುದ್ಧವಾಗಿರುವ ಕ್ರಾಪೇ ಉತ್ತಮವೆಂದು ಬೋಧೆಯನ್ನು ಮಾಡುತ್ತಲಿರುವದು ಈ ನವೀನ ಪಂಡಿತಂಮನ್ಯರ ಪಾಂಡಿತ್ಯದ ಲಕ್ಷಣವಾಗಿದೆ. ಶುದ್ಧಸಾಂಪ್ರದಾಯದ ವೀರಶೈವರು ಈ ಬಿಡಾಡಿಜಂಗಮರಾದ ವಿಕಟಪಂಡಿತರ ಮಾತುಗಳ ಕಡೆಗೆ ಗಮನಕೊಡದೆ, ಶಾಸ್ತ್ರೋಕ್ತದಂತೆ ನಡೆದು ಪರಶಿವನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಅಯ್ಯೋ! ನೂತನ ಪಂಡಿತರೇ? ಅನೇಕ ಶಾಸ್ತ್ರಾಧಾರಗಳು ಇದ್ದರೂ ಅವುಗಳೊಂದನ್ನೂ ಸ್ವೀಕರಿಸದೆ ಹಾದಿ ಬೀಗೆ ದುರ್ಬೋಧ ಮಾಡುವದು ಏನಿದುವಲ್ಲ. ಸನಾದರೂ ಶತಿಹೀನರಾದ ಬೋಳಗಳಂತೆ ಇರುವದು ಪಂಡಿತರ ಲಕ್ಷಣವಲ್ಲ. ನೀವು ಶಾಸ್ತ್ರವಿರುದ್ಧವಾಗಿ ವರ್ತಿಸಿದರೆ ನಿಮಗೆ ಅಂತಹನು ಇಹಪರಜನ್ಮಗಳಲ್ಲಿ ಯಾವ ಶಾಸನವಪ್ಪಿಯುವನೋ! ತಿಳಿಯದಾಗಿದೆ. ಮುಕ್ತ್ಯಾಪಕರಾದ ಶ್ರೀಮದ್ರೇಣುಕರಲ್ಲಿ ಶುಭಬುದ್ಧಿಯನ್ನಿಟ್ಟು ಧನ್ಯರಾಗಿರಿ.

ಬಸವಲಿಂಗಶರ್ಮಾ

ಮುಸರಕಲ್ಲುಮಠ ಬಳ್ಳಾರಿ.

ಅರಸೀಕೆರೆ ತಾಲೂಕು ದಿಬ್ಬೂರು.

ಸ್ವಾಮಿ! ಈ ಗ್ರಾಮಕ್ಕೆ ಧರ್ಮಸರ್ಕಾರದವರು ದಯಪಾಲಿಸಿರುವ ಗ್ರಾಂಟ್ ಸ್ಕೂಲಿನಲ್ಲಿ ಈಗ 2 ವರುಷಗಳಿಂದ ಕೆಲಸಮಾಡುತ್ತಿರುವ ಮಾಸ್ಟರ್ ಚನ್ನಪ್ಪನವರು 30-35 ರ ವರೆಗೆ ಬಾಲಕರನ್ನು ಜಮಾಯಿಸಿಕೊಂಡು ಶ್ರದ್ಧೆಯಿಂದ ಕೆಲಸಮಾಡುತ್ತಾಇದ್ದದೆ ಬಾಲಕರಲ್ಲಿ ಏಕಮತ್ಯ, ರಾಜಭಕ್ತಿ, ದೈವಭಕ್ತಿಗಳುಂಟಾಗುವಂತೆ ನೂರಾರು ಕಾರ್ಡುಬೋರ್ಡುಗಳ ಮೇಲೆ ಅನೇಕಾನೇಕ ಧರ್ಮನೀತಿ ವಾಕ್ಯಗಳನ್ನು ಬರೆದಿಟ್ಟಿರುತ್ತಾರೆ. ಮಕ್ಕಳ ಪಾಠಕ್ಕೆ ತಕ್ಕ ಉಪಕರಣಗಳನ್ನು ಈ ಮಾಸ್ಟರು ಸ್ವಂತ ವೆಚ್ಚದಿಂದಲೇ ಒದಗಿಸಿಕೊಂಡಿರುತ್ತಾರೆ. ಇವರು ಕೇವಲ ಲೌಕಿಕ ಪಾರಮಾರ್ಥಿಕ ಜ್ಞಾನಿಗಳೂ ಧರ್ಮಜ್ಞರೂ ಆಚಾರಶೀಲರೂ ಆಗಿದ್ದು ಸ್ಕೂಲಿನಲ್ಲಿ ಆಗಿಂದಾಗ್ಗೆ ನಡೆಯುವ ಸರ್ಧಂತಿ ವಗೈರೆ ಉತ್ಸವಗಳಲ್ಲಿ ಗ್ರಾಮಸ್ಥರನ್ನು ಸ್ಕೂಲಿಗೆ ಬರಮಾಡಿಕೊಂಡು ನಮ್ಮಗಳಿಗೆಲ್ಲ ರಾಜನಿಷ್ಠೆಯನ್ನೂ ದೈವಭಕ್ತಿಯನ್ನೂ ಧರ್ಮಾಧರ್ಮಗಳ ಪರಿಶೀಲನೆಯನ್ನೂ ಬೋಧಿಸುತ್ತಿರುವದು ಸ್ತೋತ್ರಾರ್ಹವಾದ ವಿಷಯವಾಗಿರುತ್ತದೆ. ಇಂಥ ನ್ಯಾಯಧರ್ಮಪಾಲಕರೂ ಪರೋಪಕಾರಿಗಳೂ ಆದ ಮಾಸ್ಟರು ನಮ್ಮ ಗ್ರಾಮಕ್ಕೆ ದೊರೆತದ್ದು ನಮ್ಮ ಮತ್ತು ನಮ್ಮ ಮಕ್ಕಳುಗಳ ಪುಣ್ಯೋದಯವೆಂದೇ ಹೇಳಬೇಕಾಗುತ್ತದೆ. ಇಷ್ಟೇ ಅಲ್ಲ! ಸದರಿ ಮಾಸ್ಟರ್ ಚನ್ನಪ್ಪನವರು ಈ ಹಿಂದೆ ಕಡೂರು ತಾಲೂಕು ಮಲ್ಲಿದೇವಿಹಳ್ಳಿ ಬೆಳವಾಡಿ ಕುಂತನಾಡು ಈ ಗ್ರಾಮಗಳಲ್ಲಿ 7-8 ವರ್ಷಗಳಕಾಲ ಕೆಲಸಮಾಡಿ ಇಲಾಖಾ ಪ್ರೊಫೆಸರ್‌ರವರಿಂದಲೂ ಮತ್ತು ಡಾಲೊಕ್ರೀಕು ಡಿಸ್ಟ್ರಿಕ್ಟ್ ಆಫೀಸರ್‌ರವರಿಂದಲೂ ಪಡೆದುಕೊಂಡುಬಂದಿರುವ ಸರ್ಟಿಫಿಕೇಟುಗಳೇ ದೊಡ್ಡ ಸಾಕ್ಷಿಗಳಾಗಿರುತ್ತವೆ.

ಈ ರೀತಿ ಧರ್ಮಮಾರ್ಗನಿರತರಾದ ಮಾಸ್ಟರ್ ಚನ್ನಪ್ಪನವರ ಮೇಲೆ ಈ ಗ್ರಾಮದ ಕೆಲವರು ಇಲ್ಲದ ಆರೋಪವನ್ನು ಕಲ್ಪಿಸಿ ಅರ್ಜಿ ವಗೈರೆ ಬರೆಯುತ್ತಿರುವದು ಕೇವಲ ಅನ್ಯಾಯವಾಗಿರುತ್ತದೆ. ಇಂಥವರಿಗೆ ದೇವರು ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಎಮ್. ರುದ್ರಪ್ಪ ಶೆಟ್ಟಿ.

ಜನರಲ್ ಮರ್ಚೆಂಟ್ ದಿಬ್ಬೂರು.

ಕೊಟ್ಟೂರೇಶನ ರಥೋತ್ಸವ ಕೊಟ್ಟೂರು.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ಕೊಟ್ಟೂರು ಪಟ್ಟಣದಲ್ಲಿ ಅಗಾಧಮಹಿಮಾಶೀಲನಾದ ಶ್ರೀ ಕೊಟ್ಟೂರೇಶನ ರಥೋತ್ಸವವು, ತಾ|| 22-2-30 ಮಾಘ ಬಹುಳ 9 ಶನಿವಾರ ಮೂಲಾನಕ್ಷತ್ರದಲ್ಲಿ ಪ್ರತಿವರ್ಷಕ್ಕಿಂತಲೂ ಈವರ್ಷ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಈ ಕೊಟ್ಟೂರೇಶನು ಭೂಮಂಡಲದಲ್ಲಿ ಅವತರಿಸಿ ಗುರುಸ್ಥಲಪಟ್ಟಾಧಿಕಾರಿಯಾಗಿ ಅನೇಕ ಮಹಿಮೆಗಳನ್ನು ತೋರಿಸುತ್ತ ಸಕಲರಿಗೂ ಮಾನವಜನ್ಮವನ್ನು ಸಾರ್ಥಕಗೊಳಿಸುವ ಸದ್ಬೋಧೆಯನ್ನು ಮಾಡುತ್ತ ಸಕಲ ದೇಶಗಳನ್ನು ಸಂಚರಿಸಿ ಭಕ್ತರನ್ನು ಉದ್ಧರಿಸಿದನೆಂಬುವ ವಿಷಯವು ಲೋಕಪ್ರಸಿದ್ಧವೇ ಆದೆ. ತದ್ದರಿಂದ ಶ್ರೀ ಕೊಟ್ಟೂರೇಶನ ಸ್ಥಲವು ಪುಣ್ಯಕ್ಷೇತ್ರವೆನಿಸಿರುವದು ಸರಿಯಷ್ಟೆ! ಈ ಪುಣ್ಯಕ್ಷೇತ್ರಕ್ಕೆ ಅನೇಕ ಪ್ರದೇಶಗಳಿಂದ ಭಕ್ತಮಹೇಶ್ವರರು ಬಂದು ಇಲ್ಲಿ ನಡೆಯುವ ಈ ಸ್ವಾಮಿಯ ರಥೋತ್ಸವಾದಿ ಸಮಾರಂಭವನ್ನು ನೋಡಿ ಕೃತಾರ್ಥರಾಗುತ್ತಿರುವರು. ಆದಕಾರಣ ಬರುವವರು ಸಕಾಲಕ್ಕೆ ಬಂದು ದರ್ಶನವನ್ನು ಪಡೆದು ಧನ್ಯರಾಗಬೇಕೆಂದು ಆಶಿಸುತ್ತೇನೆ.

ಓರ್ವ ಸೃಥುವಡೇಮಠದ ಗುರುಬಸಿದ್ಧಯ್ಯ

ಕೊಟ್ಟೂರು.

ಶ್ರೀ ರೇಣುಕಾದಿಗುರುಭ್ಯೋ ನಮಃ

ಚಿಕ್ಕಮಗಳೂರು ತಾಲೂಕು ಓಟರುಮಹಾಶಯರಲ್ಲಿ ವಿಜ್ಞಾಪನೆ.

ಮಹನೀಯರೇ!

ಕಳೆದ ಪ್ರಜಾಪ್ರತಿನಿಧಿಸಭೆಯ ಚುನಾವಣೆಯಲ್ಲಿ, ತಾವುಗಳು ತಮ್ಮ ಘನವಾದ ಓಟನ್ನು ನನಗೆ ಕೊಟ್ಟುದರಿಂದ ಪ್ರಜಾಸೇವೆಯಾಗುವಂತೆ ಸಹಕರಿಸಿದುದಕ್ಕಾಗಿ ತಮ್ಮಗಳಲ್ಲಿ ನಾನು ಚಿರಕೃತಜ್ಞನಾಗಿರುತ್ತೇನೆ.

ಈ ನಮ್ಮ ಮಲೆನಾಡು ಪ್ರಾಂತವು, ಆರೋಗ್ಯ, ವಿದ್ಯೆ, ಸಹಕಾರ, ವ್ಯವಸಾಯ, ವಿದ್ಯಾಪ್ರಾದ, ಕೈಗಾರಿಕೆಯೇ ಮೊದಲಾದ ವಿಷಯಗಳಲ್ಲಿ ಕೇವಲ ಹಿಂದುಳಿದಿರುವುದರಿಂದ ಮೇಲ್ಕಂಡ ಭಾಗಗಳಲ್ಲಿ ಸರ್ಕಾರದವರಿಗೆ ಸಮಂಜಸವಾದ ಸಲಹೆಗಳನ್ನು ಕೊಡುವುದರ ಮೂಲಕ ನಮ್ಮ ತಾಲ್ಲೂಕಿನ ಅಭಿವೃದ್ಧಿಯನ್ನು ಕಾಂಕ್ಷಿಸಬಯಸುವುದು ದೇಶಾಭಿಮಾನಿಯಾದ ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆಂಬುದನ್ನು ಪ್ರಾಜ್ಞರಾದ ತಮಗೆ ಒತ್ತಿ ಹೇಳಬೇಕಾದುದಿಲ್ಲವು.

ಈ ತಮ್ಮ ಉದಾತ್ತ ವಿಚಾರ ಪರಿಪೂರ್ಣವಾದ ಉದ್ದೇಶಗಳನ್ನು ಸಾರ್ಥಕಪಡಿಸಲು, ತಮ್ಮಗಳ ಒಡನಾಡಿಯಾದ ನಾನು ಸದಾ ಸಿದ್ಧನಾಗಿರಬೇಕೆಂಬ ಸದುದ್ದೇಶದಿಂದ ಬರುವ ಮಾರ್ಚಿ 8 ನೆಯ ತಾರೀಖಿನಲ್ಲಿ ನಡೆಯಲಿಕ್ಕಿರುವ ಪ್ರಜಾಪ್ರತಿನಿಧಿಸಭೆಯ ಸದಸ್ಯತನಕ್ಕೆ ಉಮೇದುವಾರನಾಗಿ ನಿಂತಿರುತ್ತೇನಾದ ಪ್ರಯುಕ್ತ ತಾವುಗಳು ನನ್ನ ಲೋಕಸೇವಾ ಕಾರ್ಯದಲ್ಲಿ ಪೂರ್ಣ ಭರವಸೆಯಿಟ್ಟು, ಆಯಾಯ ಸೆಂಟರುಗಳಿಗೆ ದಯಮಾಡಿ, ತಮ್ಮ ಘನವಾದ ಓಟನ್ನು ಕೊಡುವುದರ ಮೂಲಕ, ನೈಜವಾದ ದೇಶಹಿತವನ್ನೂ ಹಾಗೂ ಮಲೆನಾಡಿನ ಏಳಿಗೆಯನ್ನೂ ಸಾಧಿಸುವರಾಗಿ ಸಂಪೂರ್ಣ ನಂಬಿರುವ—

ತಮ್ಮ ನಿರಂತರ ಶ್ರೇಯೋಭಿಲಾಷಿ

ಅಲದೂರು ಕಾಫಿಪ್ಲಾಂಟರು ಬಿ. ಪುಟ್ಟಪ್ಪಂಣಶೆಟ್ಟರ ಮಗ, ಬಿ. ಪಿ. ಬಸಪ್ಪಶೆಟ್ಟಿ,

ಪ್ರ. ಪ್ರ. ಮೆಂಬರು.

ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯತಕ್ಕ ವೀರಶೈವಮತ ತತ್ತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

1. ಅಕ್ಷರವರ್ಣದೇವತಾನಿರ್ಣಯಃ (ಕರ್ನಾಟಕ ಟೀಕಾಸಹಿತಃ) ನಂ. 5415
2. ಅಂತ್ಯೇಷ್ಟಿವಿಧಿಪ್ರಕರಣಂ ಸಮಗ್ರಂ ನಂ. 5416
3. ಅಷ್ಟಾವರಣಮಣಿದರ್ಪಣಸಂಗ್ರಹಃ (ಕರ್ನಾಟಕ ಟೀಕಾ) 9 ಪ್ರಕರಣಾನಿ ನಂ. 5418
4. ಆಗಮಸಾರ ಶತಕತ್ರಯಮ್ (ಸಮಗ್ರಂ) ನಂ. 5426
5. ಕಾಲಹಸ್ತೀಶವಿಲಾಸಃ ನಂ. 5076
6. ಕ್ರಿಯಾತ್ಮಮದ್ಯೋತಿಕಾ ನಂ. 5434-543
7. ದಧೀಚಿ ಸಂಹಿತಾ (30 ಅಧ್ಯಾಯಾಃ) ನಂ. 544
8. ನಕ್ಷತ್ರವಾದಾವಲಿಃ ನಂ. 5079
9. ನಮಕೋಟಿಃ ನಂ. 5081
10. ಪಂಚರತ್ನವ್ಯಾಖ್ಯಾ-ಶಿವತತ್ತ್ವಪ್ರಕಾಶಿಕಾ ನಂ. 5089
11. ಪೌಷ್ಕರಾಗಮಃ (8 ಪಟಲಾಃ) ನಂ. 5449
12. ಮಹಾನ್ಯಾಸಃ (ರುದ್ರಜಪ ಹೋಮಾದಿಃ) ನಂ. 5465
13. ವಾಮದೇವಸಂಹಿತಾ (102 ಅಧ್ಯಾಯಾಃ) 5481
14. ವಿಮಲಾಗಮಃ (94 ಪಟಲಾಃ) ನಂ. 5488
15. ವೀರಶೈವಸಿದ್ಧಾಂತಃ (ಶಿವಯೋಗೀಂದ್ರಕೃತಃ) ನಂ. 5163
16. ವೀರಶೈವಸಿದ್ಧಾಂತಃ ಸಕರ್ನಾಟಕ ಟೀಕಾ ನಂ. 5494
17. ವೀರಶೈವ ಸಂಧ್ಯಾವಂದನಪ್ರಯೋಗಃ 5492
18. ವೀರಶೈವಸಿದ್ಧಾಂತೋತ್ತರಕೌಮುದೀ 5495
19. ವೀರಶೈವಾಗಮಃ ನಂ. 5499
20. ವೀರಾಗಮಃ (ಉತ್ತರಭಾಗಃ) ನಂ. 5504
21. ವೈದಿಕಾಚಾರನಿರ್ಣಯಃ ನಂ. 5505
22. ಶಿವಾದ್ವೈತಮ್ ನಂ. 5113
23. ಶಿವಾದ್ವೈತ ಪ್ರಕಾಶಕಃ (ಕರ್ನಾಟಕಟೀಕಾ) ನಂ. 5114
24. ಶಿವಪ್ರಸಾದ ಚಿಂತಾಮಣಿಃ ನಂ. 5523
25. ಶೀಲಸಂಪಾದನಕ್ರಮಃ ನಂ. 5534
26. ಶೈವಶ್ರಾದ್ಧವಿಧಿಃ ನಂ. 5542
27. ಶೈವಸಂಜೀವನಮ್ (ಮರಿತೋಂಟದಾರ್ಯಕೃತಂ) ನಂ. 5117
28. ಸುಪ್ರಭೇದಾಗಮಃ (ಕ್ರಿಯಾ, ಚರ್ಯಾ, ಯೋಗ, ಜ್ಞಾನಪಾದಸಮೇತಃ) ನಂ. 5557
29. ಕಾಮಿಕಾಗಮಃ (136 ಪಟಲಾಃ) ನಂ. 5431
30. ಕಾಮಿಕಾಗಮಃ (ಉತ್ತರಭಾಗಃ) ನಂ. 5432

(ಸಶೇಷ)

ಶ್ರೀ ಸೀತಾರಾಘವ ವೈದ್ಯಶಾಲೆಯ

ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ವನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು

ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ಬರುವ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [28]

ಕ್ರಯ 8 ಡ್ರಾಮ್‌ಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನುಬ್ರ 1 ಮಂಗಳೂರು, ದ. ಕ.

ನೋಡಿದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಸಿನಲ್ಲಿ ಸ್ತ್ರೀಯರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ವರ್ಧ

ಧಿಕ್ಕರಿಸಿದರೆ ಸ್ತ್ರೀಶಕ್ತಿಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ಸಪ್ತಧಾತುಕ್ಷಯ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹುರುಪಿನಿಂದ ಕೆಲಸಕ್ಕೆ ಉತ್ಸಾಹ ಆಗುತ್ತದೆ. ಧಾತು ಘಟ್ಟಿಯಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಗರ್ಭ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. ... ವನಸ್ಪತಿ-ಶತಪುಷ್ಪ, ಶಾಲಮಕಂದ, ಮಧುಕಂದ, ಜಾತಕಂದ, ಕಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ... ಕಂದ, ದ್ವೀಪಾಂತರವಚಾಕಂದ, ಕಮಲಬೀಜ, ಸಮುದ್ರಶೋಕಬೀಜ, ಕವಚಬೀಜ, ನಾಗಬೀಜ, ಬಾಳಬೀಜ, ಭೋಕರೀ ... ಬೀಜ, ಚಿಕಣಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಪತ್ರಿ, ಸಿತಾಪತ್ರಿ, ಮದನಮಸ್ತ, ರಕ್ತಪುರುಷ, ಕಮರಕಸ್ತೂರಿ ... ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಳಾ, ಪೇಟಬಂದ, ಹರಣಮೋರಿ, ಮುಂಗರೇ ... ಮರ್ದಪಾಕಟ್ಟಿಗೆ, ಶತಾವರಿ, ಸಗೀಮಗಜ, ಆಲದಹಾಲು, ವಾಕೇರಿಭಾತಾ, ಗೋಕುರು, ಅಡವೀಬೆಂಡಿಬೀರು, ಅಮೃತ ... ಭಸ್ಮಾ, ಅವಳಕಾಟ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ಪಂಧಾರಾ, ಕೇಸರ ... ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯು ಒಂದು ವರ್ಷವನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ... ಸ್ತ್ರೀಸಂಗ ಮಾಡಲಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ... ಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿ.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧಿ, ನಾಕಬಾರದಿರೋಣ, ತಲೆಸೋಲು ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಔಷಧಿಯು 1 ಪುಡಿಕೆಗೆ 3 ರೂಪಾಯಿಗಳು. [32]

ಪತ್ರ—ಮೂಲಿಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಆನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಿಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯು ಸೀಸೆ ೧ ಕ್ಕೆ ೧೨ ಆಣೆ. ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯನ್ ಅಷ್ಟವರ್ಗ ಔಷಧಾಲಯ

[45] (೮೪೮) ಗಂಜಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ|| ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಕಲಿಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[25] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಜೊತೆ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರ ಮಾಡಿದರೆ ಎಲ್ಲವೂ ಪರಿಮಳವಾಗುವುದು. ಇನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾಗುವದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[34] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ: ಪಂಚಾಸ್ಯಪೀಠಾಧಿಪಾ: | ಪಂಚಕ್ಲೇಶವಿನಾಶಕಾ: ಪರತರಶ್ರೀಪಂಚಲಿಂಗೋದ್ಭವಾ: ||
ಪಂಚಾಚಾರನಿಯಾಮಕಾ: ಪರಿಲಸತ್ಪಂಚಾಕ್ಷರೀಬೋಧಕಾ: | ಪಂಚಾಚಾರ್ಯಜಗದ್ಗುರೂತ್ತಮವರಾ: ಪಾಲಿಪ್ಪುರೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩೬] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ ನೇ ಫೆಬ್ರವರಿ ೧೯೩೦ [ಸಂಚಿಕೆ ೪೨.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳ ವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಅದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೨ ಭಾವಚಿತ್ರಗಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ ಗ್ರಂಥದ ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಧೀಮಂತರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ. ಮುಂಗಡವಾಗಿ ಹಣಕಳುಹಿಸುವವರು ಪೋಸ್ಟ್ ಖರ್ಚಿಗಾಗಿ ೪ ಆಣೆ ಸೇರಿಸಿ ೧ ರೂ. ೪ ಆಣೆ ಕಳುಹಿಸಬೇಕು.

ಮ್ಯಾನೇಜರ್.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಚಂದಾದಾರರಲ್ಲಿ ವಿಜ್ಞಾಪನೆ.

ಯಾವನ ನಾಮಸ್ಮರಣಮಾತ್ರದಿಂದ ಸಕಲ ಮಾನವರು ಪಾಪದಿಂದ ವಿಮುಕ್ತರಾಗಿ ಮುಕ್ತಿಸಾಮ್ರಾಜ್ಯಸುಖವನ್ನನುಭವಿಸುವರೋ ಆ ಶ್ರೀ ಜಗದ್ಗುರು ರೇಣುಕಾಚಾರ್ಯನ ಅದ್ಭುತ ಲೀಲಾಪ್ರತಿಪಾದಕವಾದ ರೇಣುಕವಿಜಯವು ಕನ್ನಡ ಭಾಷೆಯಲ್ಲಿ ಮುದ್ರಿಸಲ್ಪಟ್ಟಿರುವ ವಿಷಯವು ನಮ್ಮ ಪತ್ರಿಕೆಯ ಕಳೆದ ವಾರದ ಸಂಚಿಕೆಯಿಂದ ಯಾವತ್ತು ಚಂದಾದಾರರಿಗೆ ವೇದ್ಯವಾಗಿರಬಹುದು. ಅನೇಕಾನೇಕಾಮೂಲ್ಯ ವಿಷಯಗಳಿಂದೊಡಗೂಡಿದ ಈ ಗುರುಚಕ್ರವರ್ತಿಯ ಪವಿತ್ರ ಚರಿತ್ರವು ಪ್ರತಿಯೊಬ್ಬರ ಮನೆಯಲ್ಲಿಯೂ ಪ್ರವೇಶಿಸಿ ಸರ್ವರನ್ನೂ ಉದ್ಧರಿಸಲೆಂಬ ಉದ್ದೇಶದಿಂದ ನಮ್ಮ ಚಂದಾದಾರರಿಗೆಲ್ಲ ವಿ. ಪಿ. ದ್ವಾರಾ ಕಳುಹಿಸಬೇಕೆಂದು ನಿರ್ಧರಿಸಿದ್ದೇವೆ. ಆದುದರಿಂದ ಪ್ರತಿಯೊಬ್ಬರು ವಿ. ಪಿ. ಯನ್ನು ಸ್ವೀಕರಿಸಿ ಆ ಗುರುಸಾರ್ವಭೌಮನ ಚರಿತ್ರವನ್ನು ಸಂಪೂರ್ಣವಾಗಿ ಓದಿ ಅದರಲ್ಲಿರತಕ್ಕ ಅತ್ಯಂತ ಮಹತ್ವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಆಶಿಸುತ್ತೇವೆ. ವಿ. ಪಿ. ಚಾರ್ಜು ಸೇರಿ ೧ ರೂ. ೬ ಆಣೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಸ್ವೀಕಾರ.

ಬೆಂಗಳೂರು ಚಾಮರಾಜಪೇಟೆ ಮಂಡಿ ವರ್ತಕರಾದ ಮ|| ರಾ|| ಮಣೇದ ಲಿಂಗಪ್ಪನವರು ತಮ್ಮ ಬಲಗೈಗೆ ಉಂಟಾಗಿದ್ದ ಬಾಧೆಯೂ ಹಾಗೂ ತಮ್ಮ ಹಸುವಿಗೆ ವ್ಯಾಸ್ಥವಾಗಿದ್ದ ಕಾಯಿಲೆಯೂ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ಪರಿಹಾರವಾದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಧಾರವಾಡ ಜಿಲ್ಲಾ ಗದಗ ಶಹರ ನಿವಾಸಿಗಳಾದ ವೇ|| ಶಿವಲಿಂಗಾರ್ಯಗುರುಸ್ವಾಮಿಮಠ ಇವರು ತಮ್ಮ ಪುತ್ರ ಚಿ|| ಶೇಖರನ ೩ನೆಯ ವರ್ಷದ ವರ್ಧಂತ್ಯುತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಮಂಗಳೂರು ಅರಳೆಲೆಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಇದೇ ಶುಕ್ಲನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೩ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಕಾರ್ಯವನ್ನು ಧಾರವಾಡ ಜಿಲ್ಲಾ ಸೈಕಿ ರಾಣೇಬೆನ್ನೂರು ಗ್ರಾಮದ ಕುರುಬಗೇರಿ ಚರಂತಿಮಠದಲ್ಲಿರುವ ಪಂಚಾಚಾರ್ಯರ ಭಜನಾಸಂಘದ ತರುಣರು ಕೈಕೊಂಡಿರುತ್ತಾರೆ.

೧. ಫಾಲ್ಗುಣ ಶುದ್ಧ ೯ ಮಂಗಳವಾರ ಬೆಳಗ್ಗೆ ಉತ್ಸವದೊಡನೆ ರುದ್ರಾಭಿಷೇಕ. ಹಾಗೂ ಸಹಸ್ರಬಿಲ್ವಾರ್ಚನೆ.

೨. ಶು|| ೫ ಬುಧವಾರ ಬೆಳಗಿನಿಂದ ಸಪ್ತಭಜನೆ (ಈ ಭಜನೆಗೆ ಬರತಕ್ಕ ಪರಸ್ಥಳದವರಿಗೆ ಊಟಕ್ಕಾಗಿ ಬೇರೆ ವ್ಯವಸ್ಥೆಯನ್ನು ಸಂಘದವರು ಮಾಡಿರುತ್ತಾರೆ.) ಈ ಸಪ್ತಭಜನೆಯು ಮುಗಿದನಂತರ ಬೆಳಗ್ಗೆ ಗಂಟೆ ೮ ಮಧ್ಯಾಹ್ನಕ್ಕೆ ಗಣಾರಾಧನೆ ಸಾಯಂಕಾಲಕ್ಕೆ ಶ್ರೀ ಜಗದ್ಗುರು ರೇಣುಕರ ಭಾವಚಿತ್ರದ ಅಂದೋಳಿಕೋತ್ಸವ.

೩. ಶು|| ೧೪ ಗುರುವಾರ ಸ್ವಾಮಿಗೆ ಕಾಣಿಕೆ ಸಮರ್ಪಿಸುವದು ಹಾಗೂ ಸಾಯಂಕಾಲಕ್ಕೆ ಶಿವಕೀರ್ತನೆ.

ಈ ಪ್ರಕಾರ ಸಂಘದ ತರುಣರೂ ಹಾಗೂ ಊರೊಳಗಿನ ಸದ್ಗೃಹಸ್ಥರೂ ಕೈಕೊಂಡಿರುತ್ತಾರೆ. ಆದುದರಿಂದ ಸರ್ವರೂ ಇಂಥ ಸುಸಮಯವನ್ನು ಕಳೆದುಕೊಳ್ಳದೆ ಇಷ್ಟಮಿತ್ರಬಂಧುಬಾಂಧವರೊಡಗೂಡಿ ಬಂದು ಸ್ವಾಮಿಕಾರ್ಯವನ್ನು ಶಾಂಗಗೊಳಿಸುವರೆಂದು ನಂಬಿರುವ.

ರಾಣೆಬೆನ್ನೂರು

ವ್ಯವಸ್ಥಾಪಕಮಂಡಳಿ.

ಮ|| ರಾ|| ಮಡಿವಾಳಪ್ಪ ಬಣಗಾರ

ಮ|| ರಾ|| ಭರಮಪ್ಪ ಗುಂಡಿ.

ಪಂಚಾಚಾರ್ಯರ ಭಜನಾಸಂಘದ ಪ್ರೆಸಿಡೆಂಟ

ಮ|| ರಾ|| ಗುಡ್ಡಪ್ಪ ಹಾಲೀಕಾರ.

ಚೇರಮನ್—ಚನ್ನಬಸಪ್ಪಗೌಡ್ರು ಫಕ್ಕೀರಗೌಡ್ರು ಪಾಟೀಲ.

ಸೆಕ್ರೆಟರಿ—ಬಸಪ್ಪ ಬಸಪ್ಪ ಬಣಕಾರ

ವೈ|| ಪ್ರ|| ಮ|| ಶಿವಯ್ಯಸ್ವಾಮಿ, ಕಂಬಳಿಮಠ.

ಮುಂಬಯಿಯ ಜಿ. ಐ. ಪಿ. ರೈಲ್ವೆಯ ಕೂಲಿಕಾರರ ಮುಷ್ಕರವು ಇನ್ನೂ ನಡೆಯುತ್ತಲೇ ಇರುವದು. ಕೆಲವರು ಮಾತ್ರ ಕೆಲಸಕ್ಕೆ ಹಿಂತಿರುಗಿ ಬಂದಿರುವರು. ಕೆಲವು ಹೊಸಬರು ಕೆಲಸಕ್ಕೆ ಸೇರಿರುವರು. ಆದರೆ ಇನ್ನೂ 50 ಸಾವಿರ ಕೂಲಿಕಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು. ಮುಂಬಯಿ ಕಚ್ಚೇರಿಯ ಮೇಲ್‌ಸ್ಟೇಷನು 8 ಗಂಟೆಗಳ ಕಾಲ ಸಾವಕಾಶವಾಗಿ ತಲಪಿರುವದು.

ಪತ್ರವ್ಯವಹಾರ.

ಚಾತ್ತೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿರುವುದು.)

ಇನ್ನು, ಶೈವಾಗಮ ವಾಕ್ಯಗಳು ಇಷ್ಟೇ ಇವೆಯೆಂದು ನಿರ್ಧರಿಸಿ ಹೇಳಲಾಗುವುದೇ ಎಂದರೆ, ಈಶ್ವರನಿಂದುಪದಿಷ್ಟರಾದ ವಿದ್ಯೇಶ್ವರರು ಮೊದಲಾಗಿ ಅಸಂಖ್ಯಾತರುದ್ರರೂ, ಬ್ರಹ್ಮ ವಿಷ್ಣ್ವಾದಿ ದೇವತೆಗಳೂ, ಸನಕಾದಿ ಮಹರ್ಷಿಗಳೂ ಎಂದು ...

ತಸ್ಮಾತ್ ಹ ತ್ರೀನ್ನಿರಿರೂಪಾನವಿಜ್ಞಾತಾನಿವ ದರ್ಶಯಾಂಚಕಾರ । ಕೇಶಾಗ್ರಂ ಪ್ರತ್ಯೇಕಶಾನ್ನುಷ್ಮಿಮಾದದೇ । ಸಹೋವಾಚ । ಭರದ್ವಾಜೇ ತ್ವಾಮನ್ತ್ಯ । ವೇದಾ ವಾ ಏತೇ ಅನಂತಾ ವೈ ವೇದಾಃ ।

ಚತುಷ್ಪಾದಮಿದಂ ಶಾಸ್ತ್ರಮಾಯಾತನುನ್ನು ತಾತ್ವಿಕಮ್ । ಧಾತುವಕ್ತ್ರಾಂಬುಜೋದ್ಭಾರಾದ್ವಿನುಲಾದ್ದುರು ಸನ್ನತಾ ॥೩೦॥ ಅನುಷ್ಟುಪ್ಛಂದಸಾ ಪೂರ್ವಂ ನಿಬದ್ಧಂಕೋಟಿಸಂಖ್ಯಯಾ । ಸದಾಶಿವೇನ ದೇವೇನ ತತೋಽನನ್ತೇನ ಧೀಮತಾ ॥೪೦॥ ಭಾಷಿತಂ ಲಕ್ಷಮಾತ್ರೇಣ ತದೇವಾಹಂ ತವಾಧುನಾ । ತಥಾ ಸಂಹೃತ್ಯ ಸಂಕ್ಷೇಪಾಚ್ಛಾಸ್ತ್ರಂ ವೈ ಪಾರಮೇಶ್ವರಮ್ ॥೪೧॥ ಸಹಸ್ರಾಣಾಂ ತ್ರಯೇಣಾಥ ಪಂಚಭಿಶ್ಚ ಶತೈಃ ಪರಮ್ । ಅತೋಽನ್ಯೋಯಃ ಸಮುದ್ಧಾರಃ ಸನ್ತು ಟಾರ್ಥಪ್ರಕಾಶಕಃ ॥೪೨॥ ನ ಭವತ್ಯತಿಸೂಕ್ಷ್ಮತ್ವಾತ್ ತತೋಽಯಂ ನಿಶ್ಚಯಃ ಸ್ಫುಟಃ ॥

"ಸದ್ಯೋಜಾತಂ ಪ್ರಪದ್ಯಾಮಿ" ಎಂದು ... **"ಈಶಾನಃ ಸರ್ವವಿದ್ಯಾನಾಮ್"** ...

ಸಂಹಿತೆ-ಬ್ರಾಹ್ಮಣ-ಆರಣ್ಯಕ ... **ಉಪನಿಷತ್ತು** ...

ಈಶಾನಸ್ಯ ಕಲಾಃಪಂಚ ಪುರುಷಸ್ಯ ಚತುಸ್ಕಲಾಃ । ಅಘೋರಸ್ಯ ಕಲಾಶ್ಚಾಷ್ಟೌ ವಾಮಸ್ಯ ತ್ರಯೋದಶ । ಸದ್ಯೋಜಾತಸ್ಯ ತು ಜ್ಞೇಯಾಹ್ಯಷ್ಟತ್ರಿಂಶತ್ಕಲಾಃ ಸ್ಮೃತಾಃ ।

"ಅಧ್ಯಾನಾಮಧ್ಯಪತೇ" ...

ಈಶಾನಃ ಪರಮಾಕಾಶಾ ಕೇಚರತ್ವೇನ ಲಕ್ಷಿತಾ । ಜಗತ್ಕಾರಣಹೇತುತ್ವಾದ್ಬಿನ್ದ್ವೋಙ್ಕಾರಾದಿ ವೃತ್ತಿಭಿಃ । ವಕ್ತ್ರೇಣ ಸಾಮ್ಯಮತಸ್ಸ ಪುರುಷಾರ್ತಮುದೀರ್ಯತೇ । ಘೋರಘೋರ ಮಲಾದಿಸಂಸಾರ ಪ್ರಪ್ಪಿ ರೋಧಿ ತಯಾ ವಿಭುಃ । ಅಘೋರ ಇತಿ ವಿಖ್ಯಾತಃ ಸದ್ಭಾವೋಽಯಂ ಸಲಕ್ಷಣಮ್ । ಹೃದಯಂ ಚಾ ಸದ್ಭಾವೋ ಯಸ್ಮಾತ್ಸಾತ್ತ್ವೈನ ಹಿ ವಾನೋಽಪ್ಯತು ರಹಸ್ಯತ್ವಾತ್ಪುತ್ರತ್ವಾತ್ ಕೃತ್ಯೋರ್ಥತಃ । ಕರ್ತಾ ವಿಶ್ವಸ್ಯ ಪುತ್ರಾ ಕಾರ್ಯೇಷು ಜನನಂಯತಃ । ವಾಮಗುಣ ಪ್ರತತ್ತ್ವಾಯಂ ಶಾಸ್ತ್ರೇಷ್ವಿನ್ತ್ರಮ್ಯತೋ ... ಧಾಃ । ಸರ್ಗೋಚ್ಛಾಮಾತ್ರತಸ್ಸ್ಯ ಸ್ವತ ...

ಪ್ರಸರಾತ್ಮಿಕಾಮ್ ॥ ಮೂರ್ತಿಮಾಸಾದಯೋದ್ಯಸ್ಮಾತ್ಸದ್ಯೋಮೂರ್ತಿಸ್ತತಃಸ್ಮೃತಃ । ಏವಂ ಮ್ಮನಾತ್ಸು ಪಂಚ್ಯೈತೇಃ ಶೈರ್ನಿಬದ್ಧತನುಃ ॥ ವಸ್ತುತಃ ಶಕ್ತಿಕೋಃ ಮನ್ತ್ರಾ ಏತೇ ನಾನ್ಯೇಃ ಸ್ವಶಕ್ತಿತಃ ॥

ಎಂದು ಪ್ರತಿಪಾದಿಸಲ್ಪಟ್ಟಿದೆ. ಇದೇ ಮೇರೆಗೆ, ಮತಂಗಪಾರಮೇಶ್ವರ ಸಂಹಿತೆಯ ವಿದ್ಯಾಪಾದದ ನಾಲ್ಕನೆಯ ಪಟಲದಲ್ಲಿಯೂ, ಮೃಗೇಂದ್ರಸಂಹಿತೆಯ ವಿದ್ಯಾಪಾದದ ಮೂರನೆಯ ಪಟಲದಲ್ಲಿಯೂ ಸದ್ಯೋಜಾತಾದಿ ಪಂಚಬ್ರಹ್ಮಸ್ವರೂಪದ ಅರ್ಥವಿವರಣೆಯನು ಕಾಣಬಹುದು.

(ಸಶೇಷ.)

ಶ್ರೀ ಗುರುಪ್ರಸನ್ನೋಽಸ್ತು

ಪಂಚಾಂಗಕರ್ತರ ಭಿನ್ನಾಭಿಪ್ರಾಯ.

ಕರ್ನಾಟಕದಲ್ಲಿ ಕೆಲವರು ಹೆಚ್ಚಿನ ಗಣಿತಶಾಸ್ತ್ರವನ್ನು ಓದದೆ ಅಲ್ಪಸ್ವಲ್ಪ ಗಣಿತಅಧ್ಯಯನದಿಂದ ಪಂಚಾಂಗಗಳನ್ನು ಗುಣಿಸಿ ತಮ್ಮ ಹೆಸರನ್ನು ಪ್ರಸಿದ್ಧಪಡಿಸಹತ್ತಿದ್ದಾರೆ. ...

ಗಳಿಂದ ಶೋಧಿತರಾದ ಪಂಚಾಂಗಕರ್ತರೇ ? ಈ ಕಾಲ ಪರಿಸ್ಥಿತಿಯನ್ನು ಪರಿಶೀಲಿಸಿ ಸಕಲ ಶಾಸ್ತ್ರಾಧಾರಗಳಿಂದ ಶಾಸ್ತ್ರಜ್ಞರಿಗಲ್ಲದೆ ವ್ಯವಹಾರಿಕಜನರಿಗೂ ಕೂಡ ತಿಳಿಯುವಂತೆ ಮುಂದಿನ ವಾರದ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಅತಿ ವಿನಯದಿಂದ ಕೋರುತ್ತೇನೆ. ಆದರೆ ಯಥಾರ್ಥವಾದ ನನ್ನೀಸಂಶಯವನ್ನು ತಮ್ಮ ಮುಂದೆ ಇಟ್ಟದ್ದಕ್ಕೆ ಸಿಟ್ಟಾಗದೆ ನಿಷ್ಪಕ್ಷಪಾತದೃಷ್ಟಿಯಿಂದ ನೋಡಿ ಪ್ರಕಟಿಸಬೇಕೆಂದು ಆಶಿಸುತ್ತೇನೆ.

ಜ್ಯೋತಿರ್ವಿದುಷಾಮನುಚರಃ

ಸಿದ್ಧಲಿಂಗಶರ್ಮಾ, ಹಿರೇಮಠ.

ಜಗದಾಚಾರ್ಯರ ಮಹತ್ವ.

ಶ್ರೀಮನ್ಮೈಸೂರು ಸೀಮೆಯ ಆ. ಪಿ. ಕರ್ತರು ಶ್ರೀ ಯತ್ತಗದ ಮಠದ ದೊಡ್ಡರಾಮಾರಾಧ್ಯಸ್ವಾಮಿಗಳವರಿಗೆ ವಾಯು ಉಪದ್ರವವು ಹತ್ತುದಿವಸಗಳ ಕಾಲಾಯ್ತು ಪ್ರಾಪ್ತವಾಗಿ ತುಂಬಾ ಅನಾರೋಗ್ಯ ಉಂಟಾಗಿತ್ತು. ಸದರಿ ಶ್ರೀಗಳವರ ಕಾಯಿಲೆವಿಚಾರವನ್ನು ಕೇಳಿ ಅನೇಕ ಸ್ಥಳದ ಭಕ್ತಮಾಹೇಶ್ವರರು ಬಂದು ಸೇರಿದ್ದರಲ್ಲದೆ ಸರಗೂರು ಡಾಕ್ಟರ್ ಮ॥ ಪಿ. ಎಸ್. ವೆಂಕಟರಾಯರವರು, ದಫೇದಾರ್ ಎಂ. ಸಿದ್ಧಲಿಂಗಪ್ಪನವರು, ಎಳಂದೂರು ಮಾದಪ್ಪನವರು ಇನ್ನೂ ಅನೇಕರು ಆಗಮಿಸಿದ್ದರು. ಡಾಕ್ಟರನರು ಅನೇಕತರಹ ಇಲಾಜುಗಳನ್ನು ಮಾಡಿದ್ದಲ್ಲದೆ ಇಂಜಕ್ಷನ್ ಸಹ ಮಾಡಿದರು. ಮ॥ ರಾ॥ ಡಾಕ್ಟರವರ ಸರಳತೆ, ಜನಾನುರಾಗತ್ವ, ಶಾಂತತೆ ಇವುಗಳು ಹೊಗಳತಕ್ಕವುಗಳಾಗಿವೆ. ಆಗ್ಗೆ ಬೆಕ್ಕರೆ ಮಠದ ವೇ॥ ಬಸವಾರಾಧ್ಯರು, ಚಿಕ್ಕಹಳ್ಳಿಮಠದ ವೇ॥ ರೇವಣಾರಾಧ್ಯರು ಸಹ ಈ ಕಾಯಿಲೆಯು ಜಗದಾಚಾರ್ಯರಾದ ಶ್ರೀಮದೇಕೋರಾಮರಿಂದ ಗುಣವಾಗಬೇಕಲ್ಲದೆ ಮತ್ತಾರೂ ಗುಣಪಡಿಸಲಾರರೆಂದು ಹೇಳಿದ್ದರ ಮೇಲೆ ಶ್ರೀಗಳವರು ತತ್ಕ್ಷಣವೇ ಅಂದರೆ ಪುಷ್ಯ ಬಹುಳ ೧೩ ಸೋಮವಾರದ ದಿವಸ ಶ್ರೀ ಜಗದ್ಗುರು ಏಕೋರಾಮರ ಭಾವಚಿತ್ರಕ್ಕೆ ವಿಧ್ಯುಕ್ತವಾಗಿ ಅಭಿಷೇಕಾದಿಗಳನ್ನೂ ಸಹಸ್ರ ಬಿಲ್ವಾರ್ಚನೆಯನ್ನೂ ಸಹ ಕೊಂಡವಾಡಿ ಕೊಟ್ಟೆಮಠದ ಪುರೋಹಿತ ವೇ॥ ಸಂಜುಂಡಾರಾಧ್ಯರಿಂದ ನಡೆಸಿದರು. ಮಾದನಹಳ್ಳಿಮಠದ ವೇ॥ ಎಂ. ಜಿ. ಆರಾಧ್ಯರು ಗುರುಮಠ್ಯವಿಚಾರನಾಗಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ...

ಗೌರಪ್ಪ, ಕೊಂಡವಾಡಿ.

ಶ್ರೀಮದ್ವೀರಶೈವ ಧರ್ಮಾರ್ಥ ಜ್ಯೋತಿಷ ಪಾಠಶಾಲಾ.

ಹರಪನಹಳ್ಳಿ ಶಿವಾಸಿಗಳವರಾದ ಮ॥ ರಾ॥ ... (14-3-1930) ...

ಬ್ರ॥ ಶ್ರೀ ಸಿದ್ಧಾಂತಿ ವಿರೂಪಾಕ್ಷ ಶಾಸ್ತ್ರಿಗಳು, ಪಾಠಶಾಲಾಧ್ಯಾಪಕರು ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಜಗಲೂರು ತಾಲೂಕು ಪ್ರಜಾಮಹಾಶಯರಲ್ಲಿ ವಂದನೆಗಳು.

ಮಹನೀಯರೆ !

ನಾನು ಪ್ರಜಾಪ್ರತಿನಿಧಿಸಭೆಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೂ ಹೊಸ ಮೆಂಬರುಗಳ ಚುನಾವಣೆಗೆ ತಮ್ಮಗಳ ಧನಸಹಾಯದಿಂದ ಉಮೇದುವಾರನಾಗಿ ನಿಂತಿದ್ದು ತಮ್ಮಗಳಿಗೆಲ್ಲಾ ವೇದ್ಯವೇ ಇರುತ್ತೆ.

ತಾವುಗಳು ನನ್ನ ಮೇಲೆ ಪೂರ್ಣ ಅಭಿಮಾನವಿಟ್ಟು ಈ ತಾಲೂಕಿನಿಂದ ಸದರಿ ಸಂಸ್ಥೆಗಳಿಗೆ ಚುನಾಯಿಸಬೇಕೆಂದಿರುವ ಎರಡು ಜನಗಳಿಗಿಂತಲೂ ಹೆಚ್ಚಾಗಿ ಉಮೇದವಾರರು ಇಲ್ಲದೆ ಇದ್ದುದರಿಂದ ಈ ತಾಲೂಕಿನ ಪ್ರಜಾಐಕಮತ್ಯವನ್ನು ನಮ್ಮ ಘನಸರ್ಕಾರದವರಲ್ಲಿ ಪ್ರದರ್ಶಿಸಿದಂತೆ ಆಗಿ ನಿಂತಿದ್ದ ನಮ್ಮನ್ನು ತಮ್ಮಗಳಿಂದ ಚುನಾಯಿಸಲ್ಪಟ್ಟಂತೆ ಭಾವಿಸಿ ಮುಂಬಿರಲ್ಲಾಡಿರುತ್ತಾರೆ. ಈ ವಿಚಾರದಲ್ಲಿ ತಮ್ಮಗಳಿಗೆ ನಾನು ತುಂಬಾ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಶ್ರೀ ಜಗದೀಶ್ವರನು ತಮ್ಮಗಳಿಗೆ ಸದಾ ಇದೇ ರೀತಿ ಸಹಾನುಭೂತಿಯುಳ್ಳ ಏಕಮತ್ಯಬುದ್ಧಿಯನ್ನೀಯಲೆಂದೂ ನಮ್ಮ ಘನದಯಾಳು ಸರ್ಕಾರದವರು ನಮ್ಮಗಳ ಕೋರಿಕೆಗಳೆಲ್ಲವನ್ನೂ ನಿರ್ವಿಘ್ನವಾಗಿ ನೆರವೇರಿಸಿಕೊಡುವಂತೆ ಅನುಗ್ರಹಿಸಲೆಂದೂ ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಪ್ರಜಾಹಿತಕಾಂಕ್ಷಿಯಾದ ತಮ್ಮ ವಿಧೇಯ,

ಜಗಲೂರು, ತಾ॥ 16-2-30. ಜಿ. ಎಸ್. ಮಹಲಿಂಗಪ್ಪ.

॥ ಶ್ರೀಃ ॥

ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಸ್ವಾಮಿನೋಃ ವಿಜಯಂತೇತಮಾಮ್.

ಶ್ರೀಮದ್ರಂಭಾಪುರವಂಮಧ್ಯೇ ವೀರಾಸನೋತ್ತಮಾಧೀಶಂ । ಅಷ್ಟೋತ್ತರಶತಪೂಜಿತಜಗದ್ಗುರುಃ ಕಲ್ಪಕೋಟಿಮಿಹ ಜಯತಾತ್ ॥೧॥

ಶಿವಾನಂದಾಧೀಶಾದಿಮಸದಶಿವಾಚಾರ್ಯ ಭವತಃ ...

ಗೌರ್ನಮೆಂಟ್ ಕೋಟೆ ಹೈಸ್ಕೂಲ್, ಬೆಂಗಳೂರು.

ಸೂಚನೆ.

☞ ಮಹಾಶಿವರಾತ್ರಿಯ ನಿಮಿತ್ತವಾಗಿ ಪ್ರತಿವರ್ಷದ ಪದ್ಧತಿಯಂತೆ ಮುಂದಿನ (3—3—30 ನೆಯ) ಸಂಚಿಕೆಯು ಹೊರಡುವದಿಲ್ಲ. ಸಂ.—

ಪಂಚಾಚಾರ್ಯ ಪ್ರಭಾ

೧೯೩೦ ನೇ ಫೆಬ್ರುವರಿ ತಾ|| ೨೪ ನೇ ಸೋಮವಾರ

ಧರ್ಮ.

ಧರ್ಮವೆಂದರೆ ಕೆಳಗೆ ಬಿದ್ದುಹೋಗುವ ಮನುಷ್ಯನನ್ನು ಎತ್ತಿಹಿಡಿದು ಅವನ ದುಃಖವನ್ನು ಪರಿಹರಿಸಿ ಸುಖವನ್ನುಂಟುಮಾಡತಕ್ಕದ್ದೆಂದರ್ಥವು. ಧರ್ಮವು ಮಿತ್ರನಂತೆ ಮೇಲಿರುವ ಲೋಕಗಳೆಂಬ ಉತ್ತಮಸ್ಥಾನಗಳಿಗೆ ಕರೆದುಕೊಂಡುಹೋಗಿ ಅಸದೃಶಸುಖವನ್ನುಂಟುಮಾಡುವುದು. ಅಧರ್ಮವಾದರೋ ಶತ್ರುವಿನಂತೆ ಕೆಳಕೆಳಗಿರುವ ದುಃಖಮಯ ಲೋಕಗಳೆಂಬ ಹೀನಸ್ಥಾನಗಳಿಗೆ ಕರೆದುಕೊಂಡು ಹೋಗಿ ಅಸಾಧಾರಣವಾದ ದುಃಖವನ್ನುಂಟುಮಾಡುವುದು. ಈ ವಿಷಯದಲ್ಲಿ "ಧರ್ಮೇಣ ಗಮನಮೂರ್ಧ್ವಂ" ಎಂಬ ವಾಕ್ಯವೇ ಪ್ರಮಾಣವಾಗಿದೆ. ಈ ಧರ್ಮವು ವೇದಾದಿಶಾಸ್ತ್ರಗಳಲ್ಲಿ ವಿಧಿವಾಕ್ಯಗಳಿಂದ ಹೇಳಲ್ಪಟ್ಟಿರುವುದು. ವಿಧಿವಾಕ್ಯಗಳೆಂದರೆ ಶಿವನ ಆಜ್ಞಾವಾಕ್ಯಗಳು. ಜ್ಯೋತಿಷ್ಟೋಮಾದಿಕರ್ಮಗಳನ್ನಾಚರಿಸಬೇಕೆಂಬ ವಿಧಿವಾಕ್ಯಗಳಿಂದ ಬೋಧಿಸಲ್ಪಡುವ ಅಗ್ನಿಷ್ಟೋಮಾದ್ಯಶ್ವಮೇಧಾಂತ ಧರ್ಮಗಳಿಂದ ಸ್ವರ್ಗಸ್ವಾರಾಜ್ಯಾದಿ ಪದವಿಗಳು ದೊರೆಯುವವು. ಪೂರ್ವಕಾಂಡಪಠಿತಗಳಾದ ಧರ್ಮಗಳಿಂದ ಸ್ವರ್ಗಾದಿಲೋಕಗಳ ಪ್ರಾಪ್ತಿಯಾಗುವುದು ಶಾಸ್ತ್ರಪ್ರಸಿದ್ಧವದೆ. ಉತ್ತರೋತ್ತರ ಲೋಕಗಳ ಪ್ರಾಪ್ತಿಗೆ ಧರ್ಮವು ಮುಖ್ಯಕಾರಣವಾಗಿದೆ. ಶಾಸ್ತ್ರಪ್ರಸಿದ್ಧಗಳಾದ ಯಾವತ್ತು ಲೋಕಗಳಿಗೆ ಮೇಲಿರುವ ಶಿವಲೋಕದ ಪ್ರಾಪ್ತಿಗೆ ಆ ಪೂರ್ವಕಾಂಡಪಠಿತಗಳಾದ ಪಶುಧರ್ಮಗಳು ಸಾಧನಗಳಾಗುವದಿಲ್ಲ. ಯಜ್ಞಾದಿಗಳು ನಾಶವನ್ನು ನಾಶಮಾಡದೆ ಅದನ್ನು ಮತ್ತಷ್ಟು ದೃಢಗೊಳಿಸುವದರಿಂದ ಅವುಗಳಿಗೆ ನಮ್ಮ ಶಿವಾಚಾರ್ಯರು ಪಶುಧರ್ಮಗಳೆಂದು ಹೇಳಿರುವರು. ಈ ಪಶುಧರ್ಮಗಳಿಗೂ ವೀರಶೈವರು ಆಚರಿಸುವ ಪತಿಧರ್ಮಗಳಿಗೂ ಏನೂ ಸಂಬಂಧವಿಲ್ಲ. ವೀರಶೈವರು ಆಚರಿಸುವ ಶಿವಲಿಂಗಾರ್ಚನ ಶಿವಲಿಂಗಧಾರಣ ಶಿವಮಂತ್ರಜಪಾದಿಧರ್ಮಗಳು ಪಶುಪತಿಯಾದ ಶಿವನ ಶಿವತ್ವವನ್ನು ಅಂದರೆ ಪಶುಪತಿತ್ವವನ್ನು ಹೊಂದಿಸತಕ್ಕವುಗಳಾಗಿರುವದರಿಂದ ಅವು ಪತಿಧರ್ಮಗಳೆಂದು ಹೇಳಿಸಿಕೊಳ್ಳಲ್ಪಡುವುವು. ಪಶುಧರ್ಮಗಳು ನಾಶವನ್ನೈದುವ ಸ್ವರ್ಗಾದಿಸುಖವನ್ನುಂಟುಮಾಡಿದರೆ ಪತಿಧರ್ಮಗಳು ಎಂದೂ ನಾಶವಾಗದಿರುವ ನಿತ್ಯಸುಖವನ್ನು (ಮುಕ್ತಿಯನ್ನು) ಉಂಟುಮಾಡುತ್ತವೆ. ಪಶುಧರ್ಮಗಳಿಗೂ ಜ್ಞಾನಕ್ಕೂ ಗೋವ್ಯಾಘ್ರಗಳಂತೆ ವಿರೋಧವಿರುವುದು. ಆದರೆ ಪತಿಧರ್ಮಗಳಿಗೂ ಜ್ಞಾನಕ್ಕೂ ಹಾಗೆ ವಿರೋಧವಿಲ್ಲಾದ್ದರಿಂದ ಶಿವಾದ್ವೈತಜ್ಞಾನದಿಂದ ಕೂಡಿಕೊಂಡಿರುವ ಪತಿಧರ್ಮಗಳಿಂದಲೇ ಮುಕ್ತಿಯು ದೊರೆಯುವುದು. ಪಶುಧರ್ಮಗಳಿಂದುಂಟಾದ ಸ್ವರ್ಗಾದಿ ಫಲಗಳಾದರೋ "ಯಥೇಹ ಕರ್ಮಚಿತೋ ಲೋಕಃ ಕ್ಷೀಯತೇ" ಇತ್ಯಾದಿ ಶ್ರುತಿವಾಕ್ಯಗಳಿಂದ ನಾಶವನ್ನು ಹೊಂದುವವೆಂದು ತಿಳಿದುಬರುತ್ತದೆ. ಆದುದರಿಂದ ಮರ್ತ್ಯಲೋಕಾದಿಯಾಗಿ ಸತ್ಯಲೋಕ ಕಡೆಯಾಗಿರುವ ಸಕಲ ಲೋಕಗಳಲ್ಲಿ ದೊರೆಯುವ ಸುಖಗಳೆಲ್ಲವೂ ನಶ್ವರಗಳಾಗಿರುವವಾದುದರಿಂದ ಅನ್ನೆಲ್ಲವೂ ವಿಷಯಗಳಿಂದಾಗುವ ಸುಖಗಳೆಂದೇ ಹೇಳಬೇಕಾಗುವದು. ವಿಷಯವೆಂದರೆ ತನ್ನನ್ನು ಬಂಧನಗೊಳಿಸುವದೆಂದರ್ಥವು. ಆ ವಿಷಯಸುಖಕ್ಕಾಗಿ ಬೇರೆ ವಿಷಯಗಳನ್ನು ಸಂಗ್ರಹಿಸಬೇಕಾಗುವುದು. ಸ್ರಕ್ಚಂದನವನಿತಾದಿ ವಿಷಯಗಳನ್ನು ಸಂಗ್ರಹಿಸಲು ಹೋದರೆ ಸಂಗ್ರಹಿಸುವವನನ್ನು ಬಂಧನಗೊಳಿಸುವದು ಅವುಗಳ ಸ್ವಭಾವವಾಗಿದೆ. ಮನುಷ್ಯನು ಅತಿ ಕೋಮಲವಾಗಿಯೂ ಸುಗಂಧವಾಗಿಯೂ ಇರುವ ಪುಷ್ಪಮಾಲಿಕೆಯನ್ನು ಬಹು ಪ್ರೀತಿಯಿಂದ ಕಂಠದಲ್ಲಿ ಧರಿಸಿಕೊಳ್ಳುವಂತೆಯೂ ಅದೇ ಸ್ವಲ್ಪಕಾಲದಲ್ಲಿ ಬಾಡಲು ಅದನ್ನು ಬಿಸಾಟಬಿಡುವಂತೆಯೂ ಹೀಗೆಯೇ ಯಾವತ್ತು ವಿಷಯಗಳ ಸ್ವಭಾವವಾಗಿದೆ. ಆದುದರಿಂದ ಮಾನವನು ಸ್ವರ್ಗಾದಿ ವಿಷಯಸುಖಕ್ಕೆ ಸಾಧನಗಳಾಗಿರುವ ಪಶುಧರ್ಮಗಳನ್ನು ಬಿಟ್ಟು ನಿತ್ಯಸುಖವನ್ನುಂಟುಮಾಡುವ ಪತಿಧರ್ಮಗಳಲ್ಲಿಯೇ ಮನಸ್ಸುಳ್ಳವನಾಗಿ ಅವುಗಳನ್ನಾಚರಿಸಬೇಕು. ಪತಿಧರ್ಮಗಳು ಬಾಹ್ಯಾಭ್ಯಂತರ ಲಿಂಗಾರ್ಚನ, ಬಾಹ್ಯಾಭ್ಯಂತರ ಲಿಂಗಧಾರಣ, ಭಸ್ಮರುದ್ರಾಕ್ಷಧಾರಣ, ಶಿವಪಂಚಾಕ್ಷರೀಮಂತ್ರಜಪ, ಮಂತ್ರಾರ್ಥಾನುಸಂಧಾನ, ಪಾದೋದಕಪ್ರಸಾದಗ್ರಹಣ ಮೊದಲಾಗಿ ಅನೇಕಗಳಾಗಿರುವವು. ಈ ಪತಿಧರ್ಮಾಚರಣೆಗೆ ಶಿವದೀಕ್ಷಾಸಂಪನ್ನನಾದವನೇ ಅಧಿಕಾರಿಯಾಗುವನು. ಆದುದರಿಂದ ಮೊದಲು ಶಿವದೀಕ್ಷೆಯನ್ನು ಹೊಂದಿ ದೀಕ್ಷಾಗುರುವಿನ ಅಪ್ಪಣೆಯ ಪ್ರಕಾರ ಧರ್ಮಾಚರಣೆಯನ್ನು ಮಾಡುತ್ತ ಹೋದರೆ ತನ್ನ ಪ್ರಾರಬ್ಧಕರ್ಮದ ಪರಿಪಾಕದ್ವಾರಾ ಶುದ್ಧಾತ್ಮನಾಗಿ ನೀರಿನಲ್ಲಿ ನೀರೂ, ಕ್ಷೀರದಲ್ಲಿ ಕ್ಷೀರವೂ ಬೆರೆತುಬಿಡುವಂತೆ ಮಹಾಲಿಂಗದಲ್ಲಿ ಬೆರೆತು ಸುಖಿಯಾಗುವನು. ಅಂದರೆ ಮುಕ್ತನಾಗುವನು. ಮುಕ್ತಿಯೆಂದರೆ ಶಿವನಿಗೆ ಬೇರೆಯಾಗಿದ್ದು ದುಃಖದಿಂದ ಬಿಡುಗಡೆಯೆಂದಿಷ್ಟೇ ಅಲ್ಲ. ಕಿಂತು ಶಿವನಲ್ಲಿ ಸಮರಸನಾಗಿ ಶಿವನೇ ಆಗಿಬಿಡುವದಕ್ಕೆ ಮುಕ್ತಿಯೆಂದು ತಿಳಿಯಬೇಕು. ಈ ಸಾಮರಸ್ಯಮುಕ್ತಿಯ [illegible]ವನ್ನು "ಯಥಾನದ್ಯಃ ಸ್ಯಂದಮಾನಾಃ [illegible] ಮೊದಲಾದ ಶ್ರುತಿಗಳು ಹೇಳುತ್ತವೆ. ತಾನು ಬೇರೆಯಾಗಿದ್ದು ದುಃಖಗಳಿಲ್ಲದಿರುವದು ಮುಕ್ತಿಯೆನಿಸುವದಿಲ್ಲ. "ಅಥಯೋನ್ಯಾಂ ದೇವತಾಮುಪಾಸ್ತೇ" ಎಂಬ ಶ್ರುತಿಯಿಂದ ಮುಕ್ತಿಯು ಅಭೇದರೂಪವಾಗಿರುವದೆಂದು ತಿಳಿದುಬರುವುದು. ತಾನು ಬೇರೆಯಾಗಿದ್ದರೆ ಮತ್ತೊಬ್ಬ ಸ್ವತಂತ್ರ ಪುರುಷನ ಭಯವು ಎಂದೂ ತಪ್ಪಲಾರದು. ಆದುದರಿಂದ ಶಿವಾಚಾರ್ಯರು ಸಾಮರಸ್ಯರೂಪವಾದುದೇ ಮುಕ್ತಿಯೆಂದು ಹೇಳಿರುವರು. ಈ ಸಾಮರಸ್ಯವನ್ನು ಶ್ರೀ ಗುರುಮೂರ್ತಿಯು ದೀಕ್ಷಾಕಾಲದಲ್ಲಿ ಶಿಷ್ಯನಿಗುಂಟುಮಾಡಿರುವದರಿಂದ ಭಸ್ಮಧಾರಣ ರುದ್ರಾಕ್ಷಧಾರಣ ಲಿಂಗಾರ್ಚನ ಲಿಂಗಾರ್ಪಣ ಲಿಂಗಾನುಸಂಧಾನ ಮೊದಲಾದ ಪತಿಧರ್ಮಾಚರಣೆಯು ಏತಕ್ಕೆ ಬೇಕೆಂದು ತಿಳಿದು ಅಧರ್ಮಾಚರಣೆಯನ್ನು ಯಾರೂ ಬಿಡಕೂಡದು. ಗುರುಮೂರ್ತಿಯು ಶಿಷ್ಯನಿಗೆ ದೀಕ್ಷಾಕಾಲದಲ್ಲಿ ಸಾಧನರೂಪವಾದ ಲಿಂಗಾಂಗಸಾಮರಸ್ಯವನ್ನುಂಟುಮಾಡಿರುವನಲ್ಲದೆ ಮುಕ್ತಿಯೆಂಬ ಫಲರೂಪ ಸಾಮರಸ್ಯವನ್ನುಂಟುಮಾಡಿಲ್ಲ. ಆದುದರಿಂದ ಪತಿಧರ್ಮಾಚರಣೆಯನ್ನು ಅವಶ್ಯವಾಗಿ ಮಾಡಲೇಬೇಕಾಗುವದು. ಈ ಸಾಮರಸ್ಯವು ಎರಡು ತೆರನಾಗಿರುವುದು. "ಪ್ರಥಮಂ ಸಾಧನಾವಸ್ಥಾ ಸಹಿತಂ ಗುರುಶಾಶ್ವತಂ। ದ್ವಿತೀಯಂ ತದ್ವಿನಿರ್ಮುಕ್ತಂ" ಅಂದರೆ ಸಾಧನಾವಸ್ಥಾ ಸಹಿತವಾದ ಸಾಮರಸ್ಯವೆಂತಲೂ, ಸಾಧನಾವಸ್ಥಾ ರಹಿತವಾದ ಸಾಮರಸ್ಯವೆಂತಲೂ ಎರಡು ಬಗೆಯಾದ ಸಾಮರಸ್ಯವು ಕ್ರಿಯಾಸಾರದಲ್ಲಿ ಹೇಳಲ್ಪಟ್ಟಿರುವುದು. ಅಲ್ಲದೆ ಮುಂದೆ "ದ್ವಿತೀಯಮಪಿ ಶಿಷ್ಯಸ್ಯ ಗುರುವಾಕ್ಯಸ್ಯ ಪಾಲನಾತ್" ಎಂದಿರುವದರಿಂದ ಫಲರೂಪವಾದ ಸಾಮರಸ್ಯವು ದೀಕ್ಷಾಗುರುವಿನ ಆಜ್ಞಾವಚನಪಾಲನದಿಂದ ಲಭಿಸುವುದೆಂದು ತಿಳಿಯಬೇಕು. ಈ ವಿಷಯವು ಆಚಾರ್ಯದೀಕ್ಷೆಯಲ್ಲಿ ಹೇಳಲ್ಪಡುವದು. ಶಿಷ್ಯನು ಆ ಗುರುವಾಕ್ಯಗಳನ್ನು ಮೀರದೆ ಪಾಲಿಸುತ್ತ ಹೋದರೆ ತಿರುಗಿ ಭವಕ್ಕೆ ಬರದೆ ಮುಕ್ತನಾಗುವನು. ಮುಂದೆ ಅದೇ ಕ್ರಿಯಾಸಾರದಲ್ಲಿ "ಫಲರೂಪಂ ಸಾಮರಸ್ಯಂ ತದನಾವೃತ್ತಿಲಕ್ಷಣಂ" ಎಂದು ಹೇಳಲ್ಪಟ್ಟಿರುವುದರಿಂದ ದೀಕ್ಷಾಕಾಲದಲ್ಲಿ ಶ್ರೀ ಗುರುಮೂರ್ತಿಯು ಮುಕ್ತಿಫಲವೆಂಬ ಸಾಮರಸ್ಯವನ್ನುಂಟುಮಾಡಿಲ್ಲವೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದುದರಿಂದಲೇ "ಶಿವೋ ಭೂತ್ವಾ ಶಿವಂ ಯಜೇತ್" "ನಾರುದ್ರೋ ರುದ್ರಮರ್ಚಯೇತ್" "ಶಿವಸ್ಯೈವ ಶಿವೋಪಾಸ್ತಿಃ" ಇತ್ಯಾದಿ ಶ್ರುತಿಗಳೂ ಅನುಭವಸೂತ್ರವೂ ಶಿವದೀಕ್ಷಾಸಂಪನ್ನನಾಗಿಯೇ ಶಿವೋಪಾಸನಾದಿಗಳನ್ನಾಚರಿಸಬೇಕೆಂದು ಅಭಿಪ್ರಾಯಪಡುತ್ತವೆ. ಈ ಅಭಿಪ್ರಾಯವನ್ನು ತಿಳಿಯದೆ ಲಿಂಗಾಯತರಲ್ಲಿ ಕೆಲ ಜನ ಧರ್ಮಲಂಡರು ನಾವು ಶಿವದೀಕ್ಷೆಯನ್ನು ಹೊಂದಿದ್ದೇವೆ; ನಮ್ಮ ಮಾಂಸಪಿಂಡವು ಕಳೆದುಹೋಗಿ ಮಂತ್ರಪಿಂಡವು ಬಂದಿರುವುದು; ನಾವು ಗುರುಗಳಾಗಬಲ್ಲೆವೆಂದು ಪ್ರಲಪಿಸುತ್ತಾರಲ್ಲದೆ ನಮ್ಮ ಪೂರ್ವಜಾತಿಯೇ ಕಳೆದುಹೋಯಿತೆಂದು ಶಿವೋಕ್ತವಾದ ಜಾತಿಮರ್ಯಾದೆಯನ್ನೂ ಕೂಡ ಲಕ್ಷಿಸದೆ ಮನಸ್ಸಿಗೆ ಬಂದಂತೆ ವರ್ತಿಸಹತ್ತಿರುವರು. ಹೀಗೆ ವರ್ತಿಸುವದು ಶಾಸ್ತ್ರವಿರೋಧವಾಗಿದ್ದು ನರಕಗಮನಮಾರ್ಗವಾಗಿದೆ. ಶಿವದೀಕ್ಷೆಯಿಂದ ಪತಿಧರ್ಮಾಚರಣೆಗೆ ಅಧಿಕಾರಿಯಾಗಿ ಸಾಧಕನಾಗುತ್ತಾನಲ್ಲದೆ ಸಿದ್ಧನಾಗುವದಿಲ್ಲ. ವಿದೇಹಮುಕ್ತನೇ ಸಿದ್ಧನಲ್ಲದೆ ಪ್ರಾರಬ್ಧಕರ್ಮವನ್ನು ಭೋಗಿಸುವ ಜ್ಞಾನಿಯೂ ಕೂಡ ಸಿದ್ಧನೆನಿಸಲಾರನು. ಪ್ರಾರಬ್ಧಪರಿಪಾಕವಾಗುವವರೆಗೂ ಪತಿಧರ್ಮಾಚರಣೆಯನ್ನು ಮಾಡುತ್ತಿರಬೇಕೆಂದು ಕ್ರಿಯಾಸಾರದ ವಾಕ್ಯವನ್ನು ಮೇಲೆ ಹೇಳಿದ್ದೇವೆ. ಎಲ್ಲಿಯವರೆಗೆ ಸಾಧನಗಳಾಚರಣವದೆಯೋ ಅಲ್ಲಿಯವರೆಗೆ ಅವನು ಸಾಧಕನಲ್ಲದೆ ಸಿದ್ಧನಾಗುವದೇ ಇಲ್ಲ. ಪ್ರಾರಬ್ಧಕರ್ಮವಿರುವವರೆಗಂತೂ ದೇಹವು ಇದ್ದೇ ಇರುವುದು. ದೇಹವಿರುವವರೆಗೂ ಪತಿಧರ್ಮಗಳೆಂಬ ಸಾಧನಗಳು ಬೇಕೇಬೇಕಾಗುವುವು. ಆ ಪತಿಧರ್ಮಗಳೆಂಬ ಸಾಧನಗಳನ್ನಾಚರಿಸತಕ್ಕವನು ಸಾಧಕನಲ್ಲದೆ ಸಿದ್ಧನಲ್ಲವು. ಅಂದ ಮೇಲೆ ಅವನಿಗೆ ಕೇವಲ ದೀಕ್ಷೆಯಿಂದ ಮುಕ್ತಿಯಾಗಿ ಮೊದಲಿನ ಜಾತಿಗಳೂ ಕೂಡ ನಷ್ಟಗಳಾದವೆಂದು ಹೇಳಲಿಕ್ಕಾದೀತೇ? ಎಂದೂ ಹೇಳಲಿಕ್ಕಾಗುವದಿಲ್ಲಾದ್ದರಿಂದ ದೀಕ್ಷೆಯಲ್ಲುಕ್ತಗಳಾದ ಗುರುವಿನ ಆಜ್ಞಾವಾಕ್ಯಗಳನ್ನು ಪಾಲಿಸುತ್ತ ಹೋಗಬೇಕು. ಎಲೈ ಶಿಷ್ಯನೇ? ಈ ನಿನ್ನ ವಾಮಹಸ್ತದಲ್ಲಿರುವ ಲಿಂಗವು ನಿನ್ನ ಪ್ರಾಣಲಿಂಗವೆಂದು ಭಾವಿಸು; ಎಂಬೀ ಮೊದಲಾದ ಅಪ್ಪಣೆಯಂತೆ ಪತಿಧರ್ಮಾಚರಣೆಯನ್ನು ನಿರ್ವಹಿಸುತ್ತ ಪತಿಧರ್ಮಾಚರಣೆಗೆ ಅಧಿಕಾರಿಯನ್ನಾಗಿ ಮಾಡಿದ ಶ್ರೀ ಗುರುಮೂರ್ತಿಯಲ್ಲಿ ಶ್ರದ್ಧಾಭಕ್ತಿಗಳನ್ನಿಟ್ಟು ಶ್ರೀ ಗುರುಕೃಪಾಕಟಾಕ್ಷಕ್ಕೆ ಪಾತ್ರರಾಗಿ ಎರಡನೆಯ ಫಲರೂಪವಾದ ಲಿಂಗಾಂಗಸಾಮರಸ್ಯರೂಪಮುಕ್ತಿಯನ್ನು ಪಡೆದು ಎಲ್ಲ ವೀರಶೈವರೂ ಧನ್ಯರಾಗುವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮಹಾಮಾತೃಶ್ರೀಯವರಾದ ವಾಣೀವಿಲಾಸ ಸನ್ನಿಧಾನ ಸಿ. ಐ. ರವರು ಪರಿವಾರ ಸಮೇತರಾಗಿ ಬೊಂಬಾಯಿಯಿಂದ ಕಳೆದ ಮಂಗಳವಾರ ಬೆಳಿಗ್ಗೆ ರಾಜಧಾನಿಗೆ ಚಿತ್ತೈಸಿದರು.

ತಿರುವಾಂಕೂರು ಮಹಾರಾಜರವರಿಗೆ ರಾಜ್ಯಾಡಳಿತದ ಅನುಭವವನ್ನುಂಟುಮಾಡಿಕೊಡುವದಕ್ಕಾಗಿ ಬೆಂಗಳೂರು ಆಠಾರಾಕಛೇರಿಯಲ್ಲಿ ತಕ್ಕವ್ಯವಸ್ಥೆಯು ಮಾಡಲ್ಪಡುತ್ತಿರುವದಾಗಿ ತಿಳಿದುಬರುತ್ತದೆ.

ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಈ ತಿಂಗಳು ಅಂತ್ಯಭಾಗದಲ್ಲಿ ದೆಹಲಿಗೆ ಪ್ರಯಾಣಮಾಡಿ, ವೈಸ್‌ರಾಯರವರಿಂದ "ಸರ್" ಬಿರುದನ್ನು ಪಡೆದುಕೊಂಡು ಬರುವರು.

ಕೀರ್ತಿಶೇಷರಾದ ಸರ್ ಕಾಂತರಾಜೇ ಅರಸಿನವರ ಅಳಿಯಂದಿರಾದ ಶ್ರೀ|| ಕೆ. ಬಸವರಾಜೇ ಅರಸರವರನ್ನು ಸರಕಾರದವರು ಜುಡಿಷಿಯಲ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವರ್ಗಮಾಡಿ ಮೈಸೂರು ಡೆಪ್ಯುಟಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಕಮಾಡಿರುವದಾಗಿ ತಿಳಿದುಬಂದಿದೆ.

ಕಾಲೇಜುಗಳಲ್ಲಿ ಸ್ಕೂಲ್ ಫೀದರಗಳನ್ನೂ ಹಾಗೂ ಪರೀಕ್ಷೆಗಳಿಗೆ ಕಟ್ಟಬೇಕಾದ ಮೊಬಲಗನ್ನೂ ಕಡಿಮೆ ಮಾಡಿಸಿಕೊಡುವ ವಿಷಯದಲ್ಲಿ ಕೆಲವು ವಿದ್ಯಾರ್ಥಿಗಳು ದಿವಾನರವರನ್ನು ಕಂಡು ಅರಿಕೆಮಾಡಿಕೊಂಡರೆಂದೂ, ಆದಕ್ಕೆ ದಿವಾನರವರು ಅನುಕೂಲವಾದ ಉತ್ತರವನ್ನು ದಯಪಾಲಿಸಿರುವರೆಂದೂ ತಿಳಿದುಬಂದಿದೆ.

ಹಿಂದಿನ ಬ್ರಿಟಿಷ್ ಸರಕಾರದ ಮಂತ್ರಿಮಂಡಲಿಯಲ್ಲಿ ಭರತಖಂಡದ ಸ್ಟೇಟ್ ಸೆಕ್ರೆಟರಿಯವರಾಗಿದ್ದ ಲಾರ್ಡ್ ಪೀಲ್‌ರವರು ಕಳೆದವಾರ ರಾಜಧಾನಿಗೆ ದಯಮಾಡಿಸಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಲಲಿತಾಮಹಾಲ್‌ನಲ್ಲಿದ್ದು ಕಳೆದ ಮಂಗಳವಾರ ಬೆಳಿಗ್ಗೆ ನಮ್ಮ ಸಂಸ್ಥಾನದ ದಿವಾನರವರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರೊಡನೆ ಬೆಂಗಳೂರಿಗೆ ಪ್ರಯಾಣಮಾಡಿದರು.

ಬೆಂಗಳೂರಿಂದ ರಾಜಧಾನಿಗೆ ಬಂದಿದ್ದ ಶ್ರೀ|| ಎಂ. ಸೀತಾರಾಮಶಾಸ್ತ್ರಿಗಳು ಮತ್ತು ಸಿ. ಅಶ್ವತ್ಥನಾರಾಯಣರಾಯರು ಕಳೆದವಾರ ರಾಜಧಾನಿಯ ಟೌನ್‌ಹಾಲಿನಲ್ಲಿ ಮೂರುದಿವಸ ರಾಜಕೀಯ ಸಂಬಂಧವಾದ ಉಪನ್ಯಾಸಗಳನ್ನು ಮಾಡಿದರು. ಕಳೆದವಾರ ಸಾಯಂಕಾಲ ಶ್ರೀ|| ಎಂ. ವೆಂಕಟಕೃಷ್ಣಯ್ಯನವರು ಅವರಿಗಾಗಿ ಮಾಡರ್ನ್ ಹಿಂದೂಹೋಟೆಲಿನಲ್ಲಿ ಒಂದು ಸಂತೋಷಕೂಟವನ್ನು ನಡೆಯಿಸಿದರು. ರಾಜಧಾನಿಯ ಅನೇಕಜನ ದೊಡ್ಡ ಮನುಷ್ಯರು ಸದರಿ ಕೂಟದಲ್ಲಿ ಭಾಗಿಗಳಾಗಿದ್ದರು.

ಶ್ರೀಯುತ ಎಲ್. ವಿ. ರಾಜಗೋಪಾಲಯ್ಯಂಗಾರ್ಯರು ಮತ್ತು ಅಗರಂ ರಂಗಯ್ಯನವರು ಸಿಟಿಮ್ಯಾಜಿಸ್ಟ್ರೇಟರವರ ಆಜ್ಞೋಲ್ಲಂಘನೆಮಾಡಿ ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ರಾಜಧಾನಿಯ ಸುಬ್ಬರಾಯನಕೆರೆ ಮೈದಾನದಲ್ಲಿ ರಾಷ್ಟ್ರೀಯಧ್ವಜವನ್ನು ಏರಿಸಿದರೆಂದು ಪೋಲೀಸರು ಸದರಿಯವರ ಮೇಲೆ ಒಂದು ಮೊಕದ್ದಮೆಯನ್ನು ಮಾಡಿದ್ದರು. ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಬಾವುಟವನ್ನು ಬಚ್ಚದೆ ಸುಮ್ಮನೆ ಕಂಕುಳಲ್ಲಿಟ್ಟುಕೊಂಡಿದ್ದರೆಂದು ತಿಳಿದುಬಂದುದರಿಂದ ಸರಿಯಾದ ಕಾರಣಗಳಿಲ್ಲವೆಂದು ಸದರಿ ಕೇಸನ್ನು ವಜಾಮಾಡಿದರು.

ಇದೇ ಫೆಬ್ರುವರಿ 26 ನೆಯ ತಾರೀಖು ಬುಧವಾರ (ಮಹಾಶಿವರಾತ್ರಿಯ) ದಿವಸ ರಾತ್ರಿ 9 ಘಂಟೆಗೆ ಮೈಸೂರು ದೊಡ್ಡಪೇಟೆ ಚಮಾರಮಠದ ಬೀದಿಯಲ್ಲಿರುವ ಶ್ರೀ ಕಪಿಲಮಲ್ಲಿಕಾರ್ಜುನ ಸ್ವಾಮಿಯ ಮಠದಲ್ಲಿ ಡಾಕ್ಟರ್ ಶ್ರೀ ಶಾರದಾಮೋಹನರವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಂತರ್ಗತವಾದ "ಶ್ರೀ ಗೋರಕ್ಷನಾಥ ಗರ್ವಹರಣ" ವೆಂಬ ಕಥೆಯನ್ನು ಹೇಳುವರು. ಆಸ್ತಿಕಮಹಾಶಯರೆಲ್ಲರೂ ಈ ಪವಿತ್ರ ಕೀರ್ತನಕ್ಕೆ ಆಗಮಿಸಿ ಕೀರ್ತನಶ್ರವಣದಿಂದ ಧನ್ಯರಾಗಿ ಗುರುಕೃಪೆಗೆ ಪಾತ್ರರಾಗಬೇಕೆಂದು ದೊಡ್ಡಪೇಟೆಯ ವೀರಶೈವಮಂಡಲಿಯವರು ಕೋರುತ್ತಾರೆ.

ವರ್ತಮಾನಸಂಗ್ರಹ.

ಕಲ್ಕತ್ತೆಯ ಜನರಲ್ ಪೋಸ್ಟಾಫೀಸಿಗೆ ಕಳ್ಳರು ನುಗ್ಗಿ ಕೆಲವು ಇನ್ಷೂರ್ ಪಾರ್ಸೆಲ್ಲುಗಳನ್ನು ಕದ್ದುಕೊಂಡು ಹೋಗಿರುವರು. ಪೋಲೀಸರು ಪತ್ತೆಮಾಡುತ್ತಿರುವರು.

ಹಂಗೇರಿ ದೇಶದ ಸರಕಾರಿ ನೌಕರನಾಗಿರುವ ಪೌಲ್‌ಕರ್ನ್ ಎಂಬವನು ಈಗ 15 ವರ್ಷಗಳಿಂದಲೂ ನಿದ್ರೆಯೇ ಇಲ್ಲದೆ ಯಾವಾಗಲೂ [illegible]ಮಾಡುತ್ತಲೇ ಇರುವನಂತೆ!

ಶಿವಯೋಗಮಂದಿರ ಸಂಸ್ಥೆಯ ಸ್ಥಾಪಕರಾಗಿದ್ದು ಸುಪ್ರಸಿದ್ಧರಾಗಿದ್ದ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರು ಈ ತಿಂಗಳ 19 ನೆಯ ತಾರೀಖಿನ ದಿವಸ ಶಿವೈಕ್ಯರಾದರೆಂದು ತಿಳಿದುಬರುತ್ತದೆ.

ಅಫ್ಘಾನಿಸ್ಥಾನದಲ್ಲಿ ಷಿನ್‌ವಾರಿ ಜನಗಳು ಪುನಃ ದಂಗೆ ಎದ್ದು, ನಾದಿರ್‌ಖಾನರಿಗೂ ಅವರಿಗೂ ಯುದ್ಧ ನಡೆಯುತ್ತಿರುವದೆಂದೂ, ನಾದಿರ್‌ಖಾನರೇ ಜಯಶಾಲಿಗಳಾಗುತ್ತಿರುವರೆಂದೂ ತಿಳಿದುಬಂದಿದೆ.

ಚೀನಾದೇಶದ ಪೀಕಿಂಗ್‌ನಗರದಲ್ಲಿ 22 ಜನ ರಾಜದ್ರೋಹಿಗಳನ್ನು ನಗರದಲ್ಲೆಲ್ಲಾ ಮೆರವಣಿಗೆ ಮಾಡಿ ಎಲ್ಲರನ್ನೂ ಒಂದು ಸೇತುವೆಯ ಮೇಲೆ ನಿಲ್ಲಿಸಿ ಸಾವಿರಾರು ಜನರ ಮುಂದೆ ಗುಂಡುಗಳಿಂದ ಹೊಡೆದು ಕೊಂದರು.

163 ದಿನಗಳ ಉಗ್ರ ಉಪವಾಸಮಾಡಿ ಪ್ರಾಣತ್ಯಾಗಮಾಡಿದ ಬರ್ಮಾದ ಫೊಂಗಿವಿಜಯನೆಂಬ ಬುದ್ಧಭಿಕ್ಷುವಿನ ಸ್ಮಾರಕವಾಗಿ ಒಂದು ಲೋಹದ ಪ್ರತಿಮೆಯನ್ನು ಮಾಡಿಸಬೇಕೆಂದು ರಂಗೂನಿನಲ್ಲಿ ಕೆಲವರು ಪ್ರಯತ್ನಮಾಡಿರುವರು.

ಅಮೇರಿಕೆಯಲ್ಲಿ ಪ್ರತಿ ಕೆಲಸಕ್ಕೂ ಹೊಸ ಹೊಸ ಯಂತ್ರಗಳು ಕಂಡುಹಿಡಿಯಲ್ಪಡುತ್ತಿರುವದರಿಂದ ಆ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಿರುವದು. ಸದ್ಯಃ 30 ಲಕ್ಷ ಜನರು ಯಾವ ಕೆಲಸವೂ ಇಲ್ಲದೆ ಪೇಚಾಡುತ್ತಿರುವರು.

ಭರತಖಂಡಕ್ಕೆ ವಿಮಾನದಲ್ಲಿ ಹೊರಟು ಮಧ್ಯಮಾರ್ಗದಲ್ಲಿ ಕೆಳಕ್ಕೆ ಬಿದ್ದು ಗಾಯಹೊಂದಿದ ಮನಮೋಹನ ಸಿಂಗರವರು ಈಗ ನೇಪಲ್ಸ್ ಪಟ್ಟಣಕ್ಕೆ ಹೋಗಿರುವರು. ಅಲ್ಲಿ ಹೊಸ ವಿಮಾನವೊಂದನ್ನು ಕೊಂಡುಕೊಂಡು ಪುನಃ ಹೊರಡುವದರಲ್ಲಿರುವರು.

ಛತ್ರಪತಿ ಶಿವಾಜಿಯ 303 ನೆಯ ಜನ್ಮದಿನಾಚರಣೆಯ ಸಂಬಂಧವಾದ ಮಹೋತ್ಸವವು ಮಾರ್ಚಿ 17 ನೆಯ ತಾರೀಖಿನ ದಿವಸ ಆವನ ಜನ್ಮಸ್ಥಳವಾದ ರಾಯಗಡದಲ್ಲಿ ಪ್ರಾರಂಭಿಸಲ್ಪಡುವದು. ಇದಕ್ಕಾಗಿ ಪುಣೆಯ ಪ್ರಾಂತದಲ್ಲಿ ವಿಶೇಷ ಸಿದ್ಧತೆಯು ನಡೆಯುತ್ತಿರುವುದು.

ಗ್ರೀಸ್‌ದೇಶದಲ್ಲಿ ಕಳೆದ 14 ನೆಯ ತಾ|| ದಿವಸ ಭಯಂಕರ ಭೂಕಂಪವಾಗಿ 8 ಗ್ರಾಮಗಳು ನಾಶವಾಗಿರುವವು. ಅನೇಕರಿಗೆ ತುಂಬಾ ಗಾಯಗಳಾಗಿರುವವು. ಜನರೆಲ್ಲರೂ ಪ್ರಾಣಭೀತಿಯಿಂದ ಮನೆಗಳಲ್ಲಿ ವಾಸಿಸುವುದನ್ನು ಬಿಟ್ಟು ಬಯಲುಪ್ರದೇಶದಲ್ಲಿ ಡೇರೆಗಳನ್ನು ಹಾಕಿಕೊಂಡು ವಾಸಮಾಡುತ್ತಿರುವರು.

ರಷ್ಯದ ಕಾಕಸಸ್ ಪರ್ವತದ ತಪ್ಪಲಲ್ಲಿ ಚಾಸಾಯ್ ಎಂಬ ಒಂದು ಜನಾಂಗವಿರುವದು. ಇವರಲ್ಲಿ ಪುರುಷರಿಗೆ ಬದಲಾಗಿ ಸ್ತ್ರೀಯರೇ ಎಲ್ಲಾ ಕಾರ್ಯಗಳನ್ನೂ ಮಾಡುವರಂತೆ! ಪುರುಷರು ಉಂಡು ತಿಂದು ಮಕ್ಕಳನ್ನು ಪೋಷಿಸುವದೇ ಮೊದಲಾದ ಕೆಲಸಗಳನ್ನು ಮಾಡುತ್ತ ಸ್ವಸ್ಥವಾಗಿ ಮನೆಯಲ್ಲಿಯೇ ಇರುವರಂತೆ!

ಪಂಜಾಬ ಸರಕಾರದವರು ಉತ್ತರ ಹಿಂದುಸ್ಥಾನದಲ್ಲೆಲ್ಲ ಅತ್ಯಂತ ದೊಡ್ಡದಾದ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯೊಂದನ್ನು ಲಾಹೋರಿನಲ್ಲಿ ಕಟ್ಟಿಸಬೇಕೆಂದು ನಿಶ್ಚಯಿಸಿರುವರು. ಕಟ್ಟಡಕ್ಕೆ ಸುಮಾರು 39,60,000 ರೂ. ಗಳು ಖರ್ಚಾಗುವವೆಂದೂ, ಆಸ್ಪತ್ರೆಯನ್ನು ನಡೆಯಿಸಲು 2,30,000 ರೂ. ಗಳು ಬೇಕಾಗುವವೆಂದೂ ಅಂದಾಜು ಹಾಕಿರುವರು.

ಕಳೆದ 5 ನೆಯ ತಾರೀಖು ಬುಧವಾರ ದಿವಸ ಸೊಂಡೂರು ಸಂಸ್ಥಾನದ ಮಹಾರಾಜರ ಪಟ್ಟಾಭಿಷೇಕಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಆ ಉತ್ಸವ ಸಮಯದಲ್ಲಿ ಮಹಾರಾಜರು ದರ್ಬಾರನ್ನು ನಡೆಯಿಸಿ, ಸಂಸ್ಥಾನದಲ್ಲೆಲ್ಲ ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡಿಸುವದಾಗಿ ವಾಗ್ದಾನಮಾಡಿದರು. ಸ್ತುತ್ಯ!

ಜರ್ಮನಿಯ ಮುಖ್ಯಪಟ್ಟಣವಾದ ಬರ್ಲಿನ್‌ನಗರದಲ್ಲಿ ಒಬ್ಬ ಸ್ತ್ರೀಯಳು ತನ್ನ 5 ತಿಂಗಳ ಮಗುವನ್ನು ಕೊಂದ ಅಪರಾಧಕ್ಕಾಗಿ ವಿಚಾರಣೆಯು ನಡೆಯಿತು. ಮಗುವು ಜೀವಾವಧಿ ಬಲಹೀನವಾಗಿಯೇ ಇರುವದೆಂದು ವೈದ್ಯರು ಹೇಳಿದುದರಿಂದ ನಿರಾಶಳಾಗಿ ಮಗುವನ್ನು ಕೊಂದೆನೆಂದು ಆಕೆಯು ಹೇಳಲು ಮ್ಯಾಜಿಸ್ಟ್ರೇಟರು ಅವಳನ್ನು ನಿರಪರಾಧಿಯೆಂದು ಬಿಟ್ಟುಬಿಟ್ಟರು.

ಪೆಸಿಫಿಕ್ ಸಾಗರದ ದಕ್ಷಿಣಭಾಗದಲ್ಲಿರುವ ಪಿರಾಸಿಬೊ ಎಂಬ ಒಂದು ಸಣ್ಣ ದ್ವೀಪವಿರುವದು. ಈ ದ್ವೀಪದಲ್ಲಿ ಕೇವಲ ಸ್ತ್ರೀಯರೇ ವಾಸಿಸುವರಂತೆ! ಇವರು ಮಹಾಕ್ರೂರಸ್ವಭಾವಿಗಳೆಂದೂ, ಪುರುಷರನ್ನು ಕಂಡಮಾತ್ರನೇ ಅವರನ್ನು ಕೊಂದು ತಿನ್ನುವರೆಂದೂ, ಈಚೆಗೆ ಕೆಲವು ಜನ ಬೋಧಕಿಯರಾದ ಸ್ತ್ರೀಯರು ಅಲ್ಲಿಗೆ ಹೋಗಿ ಅವರಿಗೆ ಅಹಿಂಸಾ ಹಾಗೂ ಮತತತ್ವಗಳನ್ನು ಬೋಧಿಸುತ್ತಿರುವರೆಂದೂ, ಆದಾಗ್ಯೂ ಆ ಸ್ತ್ರೀಯರು ಇನ್ನೂ ಪುರುಷರನ್ನು ತಮ್ಮ ದ್ವೀಪಕ್ಕೆ ಬರಗೊಟ್ಟಿಲ್ಲವೆಂದೂ, ಕೆಲವು ದಿವಸಗಳ ಮುಂಚೆ ಮೂವರು ಬೇಟೆಗಾರರು ಅಲ್ಲಿಗೆ ಹೋಗಲು ಆ ಸ್ತ್ರೀಯರು ಅವರನ್ನು ಕೊಂದು ತಿಂದರೆಂದೂ ಪ್ರಕಟವಾಗಿದೆ. ಇವರಲ್ಲವೇ ನಿಜವಾದ ನರರಾಕ್ಷಸಿಯರು?

ಅಮೇರಿಕೆಯ ಚಲನಚಿತ್ರಗಳನ್ನು ತಯಾರಿಸುವ ಕಂಪನಿಗಳೆಲ್ಲವೂ "ಹಾಲಿವುಡ್" ಎಂಬ ಪ್ರದೇಶದಲ್ಲಿರುವವು. ಅಲ್ಲಿರುವ ನಟನಟಿಯರಿಗೆ ದೊರೆಯುವ ವರಮಾನದಿಂದ ಒಂದು ದೊಡ್ಡ ರಾಜ್ಯಭಾರವನ್ನೇ ನಡೆಯಿಸಬಹುದು. ಹೆರಾಲ್ಡ್ ಲಾಯ್ಡ್, ಛರ್ಲೀಚಾಪ್ಲಿನ್ ಎಂಬೀವರು ಹಾಸ್ಯಗಾರರ ಹಾಗೂ ಗ್ಲೋರಿಯಾಸ್ವಾನ್ಸನ್ ಎಂಬ ಪ್ರಸಿದ್ಧ ನಟಿ, ಈ ಮೂವರ ಒಂದು ವರ್ಷದ ವರಮಾನವು ಸುಮಾರು 9 ಕೋಟಿ ರೂಪಾಯಿಗಳಾಗುವದಂತೆ! ಮೇರಿಪಿಕ್‌ಫರ್ಡ್ ಎಂಬ ಲೋಕಪ್ರಸಿದ್ಧ ನಟಿಯು ತಾನು ಸಂಪಾದಿಸಿರುವ ಅಪಾರದ್ರವ್ಯದಿಂದ ಈಗ ಹೊಸ ಕಂಪನಿಯೊಂದನ್ನು ಸ್ಥಾಪಿಸಿರುವಳು. 1919 ನೆಯ ವರ್ಷದಲ್ಲಿ ಇವಳಿಗೆ ಒಂದು ವರ್ಷಕ್ಕೆ ಸುಮಾರು 15 ಲಕ್ಷ ರೂಪಾಯಿಗಳು ದೊರೆಯುತ್ತಿದ್ದುವು. ಹೆರಾಲ್ಡ್ ಲಾಯ್ಡ್ ಎಂಬ ಪ್ರಸಿದ್ಧ ನಟನು ವರ್ಷಕ್ಕೆ 50 ಲಕ್ಷ ರೂ. ಗಳನ್ನು ಸಂಪಾದಿಸುವನು. ಛಾರ್ಲೀಚಾಪ್ಲಿನ್ನನು ವರ್ಷಕ್ಕೆ 25 ಲಕ್ಷ ರೂ. ಗಳನ್ನೂ, ಟಾಂ ಮಿಕ್ಸ್ ಎಂಬುವನು 30 ಲಕ್ಷ ರೂ. ಗಳನ್ನೂ ಸಂಪಾದಿಸುವರು. ಗ್ಲೋರಿಯಾ ಸ್ವಾನ್ಸನ್ ಎಂಬ ನಟಿಯು "ಮೇಡಂಸೇನ್ಸ್‌ಜೇನ್" ಎಂಬ ಚಿತ್ರಪಟದಲ್ಲಿ ಅಭಿನಯಿಸಿದ ಮೇಲೆ ಕಂಪನಿಯವರು ಒಂದು ವಾರಕ್ಕೆ 40,000 ರೂಪಾಯಿಗಳಂತೆ 35 ವರ್ಷಗಳವರೆಗೆ ಸಂಬಳಕೊಡುವುದಾಗಿ ಹೇಳಿದರೂ, ಅವಳು ಇದಕ್ಕೆ ಒಪ್ಪಲಿಲ್ಲವಂತೆ! ಜಾಕೀಕೂಗನ್ ಎಂಬ ಬಾಲಕನು ಒಂದು ವಾರಕ್ಕೆ 14,000 ರೂ. ಗಳಂತೆ ವರಮಾನವನ್ನು ಪಡೆಯುತ್ತಿದ್ದು ಇದುವರೆಗೆ 1 ಕೋಟಿ ರೂ. ಗಳಿಗಿಂತಲೂ ಹೆಚ್ಚಾಗಿಯೇ ಕೂಡಿಸಿರುವನು. ರಿನ್‌ಟಿನ್‌ಟಿನ್ ಎಂಬ ನಾಯಿಯು ತನ್ನ ಆಶ್ಚರ್ಯಕರವಾದ ಅಭಿನಯಕೌಶಲ್ಯದಿಂದ ವರ್ಷಕ್ಕೆ 3 ಲಕ್ಷ ರೂ. ಗಳನ್ನು ಸಂಪಾದಿಸುವದು.

ಎಪ್ರಿಲದಲ್ಲಿ ಕಾಯದೆ ಭಂಗ.

ಮಹಾತ್ಮರ ಕೊನೆಯ ಪ್ರಯತ್ನವು.

ಉಪ್ಪಿನ ಕರದ ಮೇಲೆ ಸಂಕ್ರಾಂತಿ!

ಮಹಾತ್ಮರು ಯಾವ ಬಗೆಯಿಂದ ಕಾಯದೆ ಭಂಗದ ಮಾರ್ಗವನ್ನು ತೋರಿಸುತ್ತಾರೆಂಬುದನ್ನು ಜಗತ್ತೇ ನಿರೀಕ್ಷಿಸುತ್ತಲಿದೆಯಷ್ಟೇ! ಈ ಮೊದಲು ಪ್ರಸಿದ್ಧವಾದಂತೆ ಅವರು ಉಪ್ಪಿನ ಬಗ್ಗೆ ಕಾಯದೆ ಭಂಗಮಾಡಲೆಸಿದ್ದಾರೆ. ಅದರ ವಿವರವು.

೧. ಕಾಯದೆ ಭಂಗದ ಸ್ಥಳ ಗೊತ್ತುಮಾಡುವದು.

೨. ಬಾರ್ಡೋಲಿಯಂತೆ ಯಾವದೊಂದು ಸ್ಥಳದಲ್ಲಿ ಕರ ಕೊಡುವದಿಲ್ಲೆಂದು ಸತ್ಯಾಗ್ರಹ ಮಾಡುವದು.

೩. ಸರಕಾರದ ಹುಕುಮನ್ನು ಅನಮಾನ್ಯ ಮಾಡಿ ಸಮುದ್ರ ಮತ್ತು ಬೇರೆ ಕ್ಷಾರ ನೀರಿನಿಂದ ಉಪ್ಪು ಮಾಡುವದು.

೪. ಕಲಕತ್ತೆಯಂಥ ದೊಡ್ಡ ಬಂದರದಲ್ಲಿ ಕೆಲಸ ಮಾಡುವಂಥ ಕೂಲಿಕಾರರ ಸಂಘಟನ [illegible] ಪರದೇಶದ ಉಪ್ಪನ್ನು ಹಡಗದಿಂದ [illegible] ಮಾಡುವದು.

೫. ಸಾಬರಮತಿಯ ಆಶ್ರಮದ ನೆರೆ[illegible]ವ ಹೊಲಗಳ ಹುಲ್ಲನ್ನು ಕೊಡದಂತೆ [illegible] ಭಂಗಮಾಡುವದು.

೬. ಕಾಂಗ್ರೆಸವು ಸ್ವತಃ ಕಾಯದೆಭಂಗದ ಜವಾಬದಾರಿ ಹೊರಬಾರದು. ಅದಕ್ಕೆ ಬೇರೆ ರೀತಿಯಿಂದ ಜನ ಸಹಾಯವನ್ನೊದಗಿಸಿಕೊಡತಕ್ಕದ್ದು.

೭. ಎಪ್ರಿಲ ತಿಂಗಳಲ್ಲಿ ಕಾಯದೆಭಂಗವನ್ನು ಪ್ರಾರಂಭಿಸತಕ್ಕದ್ದು. ಮತ್ತು ತತ್ಪೂರ್ವದಲ್ಲಿ ಸರಕಾರಕ್ಕೆ ಯೋಗ್ಯ ಎಚ್ಚರಿಕೆಯ ಸೂಚನೆ ಕೊಡತಕ್ಕದ್ದು.

೮. ಮಹಾತ್ಮರ ಹೇಳಿಕೆ—ನಾನು ಹುರಂಗಕ್ಕೆ ಹೆದರುವದಿಲ್ಲ. ನನಗೋಸ್ಕರ ರಕ್ತಪಾತವಾದರೆ ಅದರ ಜವಾಬುದಾರಿಯು ಸರಕಾರದ ಮೇಲೆ ಇರುವದು. ಇದು ನನ್ನ ಆಯುಷ್ಯದೊಳಗಿನ ಕೊನೆಯ ಪ್ರಯತ್ನವು. ದಕ್ಷಿಣ ಆಫ್ರಿಕೆಯ ಸತ್ಯಾಗ್ರಹದಂತೆ ಇಲ್ಲಿಯೂ ಖಂಡಿತವಾಗಿ ಯಶವನ್ನು ತರುವೆನು.

ಅಹಮದಾಬಾದಿನ ತುಂಬಾ ಸ್ವಾತಂತ್ರ್ಯದ ಧ್ವನಿಯೇ ಕೇಳಬರುತ್ತಿರುವದು.

(ವಿಜಯ)

ಶ್ರೀ ಗುರುಭ್ಯೋ ನಮಃ
ಹಿರಿಯೂರು ತಾಲ್ಲೂಕು ಮೇಟಿಕುರಿಕೆ
ಗ್ರಾಮದಲ್ಲಿ ನಡೆಯುವ

ಶ್ರೀ ಮಹಾ ರುದ್ರಾಭಿಷೇಕದ ಅಖಂಡ ಭಜನಾಹ್ವಾನ ಪತ್ರಿಕೆ.

ತಾರೀಖು 26-2-1930ನೇ ಬುಧವಾರ ಪ್ರಾತಃಕಾಲ 5 ಘಂಟೆಯಿಂದ 6ರ ವರೆಗೆ—ಪಕ್ವರಿಕೆ ಸೇವಾ. ಪ್ರಾತಃಕಾಲ 8 ರಿಂದ 9 ರ ವರೆಗೆ—ಅಖಂಡ ಭಜನಾ ಪ್ರಾರಂಭ. ಆಚಾರ್ಯರ ಆಗಮನದೊಂದಿಗೆ ಗಂಗಾ ಪೂಜಾಕ್ರಮ. ಪ್ರಾತಃಕಾಲ 9ರಿಂದ ಸಾಯಂಕಾಲ 7ರ ವರೆಗೆ—ಮಹಾ ರುದ್ರಾಭಿಷೇಕ ಪೂಜಾ. ರಾತ್ರಿ 7ರಿಂದ 11ರ ವರೆಗೆ—ಲಿಂಗಾರ್ಚನ ತೀರ್ಥಪ್ರಸಾದ ಸೇವಾಕ್ರಮ. ರಾತ್ರಿ 11ರಿಂದ (ತಾ|| 27-2-1930) ಬೆಳಗಿನ 4ರ ವರೆಗೆ—ಶ್ರೀ ಜಗದ್ಗುರು ಪಂಡಿತಾರಾಧ್ಯರ ಫೋಟೋ ಅಖಂಡ ಭಜನಾಸಂಘದವರ ಸಮೇತ ಗ್ರಾಮದಲ್ಲಿ ಉತ್ಸವ. ಬೆಳಿಗ್ಗೆ 4ರಿಂದ 6ರ ವರೆಗೆ—ಲಿಂಗಾರ್ಚನ ತೀರ್ಥಪ್ರಸಾದ ಸೇವಾ. ಅಖಂಡ ಭಜನಾಸಮಾಪ್ತಿ. ಮಹಾಮಂಗಳಾರತಿ. ಬೆಳಿಗ್ಗೆ 6 ರಿಂದ 10ರ ವರೆಗೆ—ಗಣಾರಾಧನೆ.

ಈ ಮೇಲ್ಕಂಡ ಪ್ರಕಾರ 24 ಘಂಟೆಯ ಹೊತ್ತು ಶಿವಕೀರ್ತನೆಯನ್ನು ಏಕಪ್ರಕಾರ ಜಪದ ಈ ಕೆಳಗೆ ಕಂಡ ಭಜನಾಸಂಘದವರಿಂದ ನಡೆಯಿಸಲ್ಪಡುತ್ತೆ.

ಅಖಂಡ ಭಜನಾಸಂಘದ ಕಾರ್ಯಕ್ರಮ.

1. ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘ. ಕಾರ್ಯ ನಿರ್ವಾಹಕರು—1. ಹರಿಯಬ್ಬೆ ಸ್ಕೂಲ್ ಮಾಸ್ಟರ್ ಎಲ್. ಮಲ್ಲಯ್ಯನವರು. 2. ಆದಿವಾ ಸ್ಕೂಲ್ ಮಾಸ್ಟರ್ ಬಿ. ಬಸಯ್ಯನವರು.

2. ಶಿವಲೀಲಾ ಭಜನಾ ಸಂಘ—1. ಮೇಟಿಕುರಿಕೆ ಸಿ. ಚಿಕ್ಕತಿಮ್ಮಯ್ಯನವರು. 2. ಮೇಟಿಕುರಿಕೆ ಕೋರಿ ಶೆಟ್ಟಿ ಮರಿಗೌಡ್ರಯ್ಯ.

3. ಶ್ರೀ ಮಲ್ಲಿಕಾರ್ಜುನ ಭಜನಾ ಸಂಘ—1. ಮಲ್ಲಪ್ಪನಹಳ್ಳಿ ಸ್ಕೂಲ್ ಮಾಸ್ಟರ್ ಕೆ. ವೀರಯ್ಯ. 2. ಮೇ|| ಸ್ಕೂಲ್ ಮಾಸ್ಟರ್ ಮರುಳಸಿದ್ಧಯ್ಯನವರು.

ಭಜನಾ ಸಂಘಗಳ ಗೌರವಕಾರ್ಯನಿರ್ವಾಹಕರು.
1. ಎಂ. ಹನುಮಯ್ಯನವರು, ಕೀರ್ತನಕಾರ್.

ಸ್ವಾಗತ ಸಂಘಾಧ್ಯಕ್ಷರು.
1. ಪಟೇಲ್ ಹನುಮಯ್ಯನವರು.
2. ಪಟೇಲ್ ಸಂಜೀವಯ್ಯನವರು.

ಈ ಕಾರ್ಯಕ್ಕೆ ಸರ್ವರೂ ಆಗಮಿಸಿ ನಮ್ಮ ಸೇವಾ ತಿಥ್ಯವನ್ನು ಸ್ವೀಕರಿಸಬೇಕಾಗಿ ಕೋರಿದೆ.

ಆರ್. ಸಿದ್ಧಯ್ಯನವರು, ಶ್ಯಾನುಭೋಗ [illegible]
ಪಟೇಲ್ ಎಲ್. ಚನ್ನಬಸಯ್ಯನವರು.

ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯತಕ್ಕ ವೀರಶೈವಮತ ತತ್ತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

(ಹಿಂದಿನಿಂದ ಮುಂದೆಸಾಗಿದುದು.)

31.	ಆಗಮಗ್ರಂಥಸಂಖ್ಯಾ	ನಂ. 5419
32.	ಆಗಮಪುರಾಣಾನುಕ್ರಮಣಿಕಾ	ನಂ. 5420
	ಪಿ (ಕರ್ಣಾಟಕ ಟೀಕಾಸಹಿತಾ)	ನಂ. 5421
33.	ಆಗಮವಚನಾನಿ	ನಂ. 5422-23
	ಪ್ರಸಾದಪಂಚಾಕ್ಷರೀಮಂತ್ರಶ್ಚ.	
34.	ಆಗಮಸಾರಃ (ಶಿವಲಿಂಗಸ್ಥಾಪನ, ಶಿವ ನಿರ್ಮಾಲ್ಯ ಸ್ವೀಕಾರಾದಯಃ)	ನಂ. 5424
35.	ಆಗಮಾಃ (ನೇತ್ರೋನ್ಮೀಲನವಿಧಿಃ)	ನಂ. 5427
36.	ಆವರಣ ಪೂಜಾ	ನಂ. 5428
37.	ಆಶೀರ್ವಾದಃ	ನಂ. 5429
38.	ಈಶ್ವರಪೂಜಾವಿಧಾನಮ್ (ಧೂಪದೀಪ ಪರ್ಯಂತಂ)	ನಂ. 5430
39.	ಕುಮಾರತಂತ್ರಮ್ (ಷಣ್ಮುಖಪೂಜಾ ವಿಧಾನಮ್)	ನಂ. 5433
40.	ಗಂಗಾಧರವಿಚಾರಃ	ನಂ. 5439
41.	ಗೌರೀಮಂಡಪಪೂಜಾವಿಧಿಃ	ನಂ. 5440
42.	ಚರಲಿಂಗಪ್ರತಿಷ್ಠಾವಿಧಿಃ (ಸುಪ್ರಭೇದಾಂತರ್ಗತಃ)	5441-42
43.	ಜಪಲಕ್ಷಣಂ	5443-44
44.	ದೀಕ್ಷಾಪ್ರಕರಣಮ್ (ಸಾಮಾನ್ಯ ಕ್ರಿಯೀಯಮ್)	5447
45.	ದೇವೀಕಾಲೋತ್ತರಮ್ (65 ತಮಪಟಲ ಮಾತ್ರಮ್, ನೈಷ್ಠಿಕ ಕ್ರಿಯಾನಾಂ ಜ್ಞಾನಾಚಾರ ವಿಚಾರಃ)	5418
46.	ಧ್ವಜಸ್ಥಾಪನ ಸಂಕಲ್ಪಃ	5449
47.	ಧ್ವಜಾರೋಹಣಭೇರೀತಾಡನವಿಷಯಃ	5450
48.	ಪಂಚವಿಂಶತಿಲೀಲಾವಿಗ್ರಹವಿವರಣಮ್ (ಕರ್ಣಾಟಕ ಟೀಕಾಸಹಿತಮ್)	5451
49.	ಪಂಚಾಕ್ಷರೀಕಲ್ಪಃ (13 ಅಧ್ಯಾಯಾಃ)	5452
50.	ಪರಮೇಶ್ವರಪೂಜಾ	5453
51.	ಪಾರ್ಥಿವಲಿಂಗಪೂಜಾವಿಧಿಃ	5455-56-57
52.	ಪಾರ್ಥಿವೇಶ್ವರಚಿಂತಾಮಣಿಪೂಜಾವಿಧಿಃ	5458
53.	ಪೌಷ್ಕರಾಗಮಃ	5469-60
54.	ಬ್ರಹ್ಮಾದಿಕಾಲವಿಧಾನಮ್	5461
55.	ಭೂತಶುದ್ಧಿಃ	5462-63
56.	ಮಕುಟಾಗಮಃ (ಅಸಮಗ್ರಃ)	5464
57.	ಮಾತಂಗಪಾರಮೇಶ್ವರಾಗಮಃ 18ಪಟಲಾಃ	5468
58.	ಮೃಗೇಂದ್ರಾಗಮಃ (ಉತ್ತರಭಾಗಃ) ಅಸಮಗ್ರಃ	5469
59.	ಮೃಗೇಂದ್ರಾಗಮವೃತ್ತಿಃ	5470
60.	ರುದ್ರಾಕ್ಷಧಾರಣಮ್	5471-72
61.	ಲಿಂಗಧಾರಣದೀಪಿಕಾ (ಅಸಮಗ್ರಾ)	5473
62.	ಲಿಂಗಧಾರಣಲಕ್ಷಣಮ್	5474
63.	ಪಾರ್ಥಿವ ಲಿಂಗಪೂಜಾವಿಧಾನಮ್ (ಲಿಂಗಪುರಾಣಾಂತರ್ಗತಂ)	5475
64.	ಲಿಂಗಪೂಜಾವಿಧಾನಮ್	5476

(ಸಶೇಷ)

ಕ್ಷಯರೋಗ

ಈಗೀಗ ಕ್ಷಯರೋಗದ ವಿಚಾರವು ಬಹಳ ದೊಡ್ಡ ಸಮಸ್ಯೆಯಾಗಿದೆ. ಸಂಯುಕ್ತಪ್ರಾಂತಗಳ ದೊಡ್ಡ ನಗರಗಳೊಳಗೆಲ್ಲ, ಈ ವ್ಯಾಧಿಯಿಂದಾಗುವಷ್ಟು ಅರ್ಥಹಾನಿಯೂ, ಪ್ರಾಣಹಾನಿಯೂ ಮತ್ತಾವ ವ್ಯಾಧಿಯಿಂದಲೂ ಆಗುತ್ತಿಲ್ಲ. ಮತ್ತು ಅಲಹಾಬಾದ್ ಪಟ್ಟಣದಲ್ಲಿಯೂ ಇದರ ಹಾವಳಿಯು ಬಹಳ ಹೆಚ್ಚಾಗಿರುವಂತೆ ತಿಳಿದುಬರುವುದು. ವ್ಯಾಧಿಯು ಹರಡುವುದಕ್ಕೆ ಸರ್ವಸಾಮಾನ್ಯವಾದ ಪ್ರಧಾನಕಾರಣಗಳಾವುವೆಂದರೆ—

1. ಆರೋಗ್ಯಶಾಸ್ತ್ರವಿಚಾರವಾದ ಸಾಮಾನ್ಯ ವಿಷಯಗಳಲ್ಲಿಯೂ ಜನಗಳಿಗೆ ತಿಳುವಳಿಕೆಯಿಲ್ಲದಿರುವುದು.

2. ಬಡತನದ ದೋಷದಿಂದ ಹೊಟ್ಟೆತುಂಬ ಆಹಾರವು ಸಿಕ್ಕದಿರುವುದು.

3. ಊಟಕ್ಕೆ ತಟ್ಟೆಗಳನ್ನು ಉಪಯೋಗಿಸುವುದು. ಮತ್ತು ಕಂಡಕಡೆಗಳಲ್ಲಿ ಉಗುಳುವುದು.

4. ಗಾಳಿಯ ಮೂಲಕವಾಗಿ ಮತ್ತು ಗಾಡಿಗಳ ಸಂಚಾರದಿಂದ ಧೂಳು ಹೆಚ್ಚುವುದು.

5. ಶರೀರದ ಶಕ್ತಿಯನ್ನು ತಗ್ಗಿಸುವ ವಾಯುಗುಣ (ಎಂದರೆ, ಎಂಟು ತಿಂಗಳುಗಳ ಕಾಲವೂ ಅತ್ಯುಷ್ಣವಾಗಿದ್ದು, ಅದರಮೇಲೆ ಮಳೆಗಾಲದಲ್ಲಿ ಮೂರು ತಿಂಗಳುಗಳ ಕಾಲವೂ ಅತ್ಯುಷ್ಣವಾಗಿದ್ದು, ಅದರಮೇಲೆ ಮಳೆಗಾಲದಲ್ಲಿ ಮೂರು ತಿಂಗಳು ಉಷ್ಣವು ಸ್ವಲ್ಪಕಡಿಮೆಯಾಗಿ, ತರುವಾಯ ಒಡನೆ ವಾಯುಗುಣದಲ್ಲಿ ಚಳಿಯು ಹೆಚ್ಚುವುದು.)

6. ಸಣ್ಣದೊಂದು ಮನೆಯಲ್ಲಿ ಜನಸಂದಣಿಯು ವಿಶೇಷವಾಗಿ ಹೆಚ್ಚಿರುವುದು. ಅಥವಾ ಮನೆಗಳಲ್ಲಿ ರೋಗಗಳ ಸೋಂಕು ಹರಡಿರುವುದು.

7. ಈ ಕೆಳಗೆ ಕೊಟ್ಟಿರುವ ಕೆಲವು ಕೆಟ್ಟ ಸಾಮಾಜಿಕ ಪದ್ಧತಿಗಳೂ ವ್ಯಾಧಿಕಾರಣಗಳಾಗಿವೆ.

(1) ಘೋಷಾಪದ್ಧತಿ (2) ದೊಡ್ಡದೊಡ್ಡ ಕುಟುಂಬಗಳು ಒಟ್ಟಿಗೆ ವಾಸಿಸುವುದು. ಹೀಗೆ ಒಟ್ಟಿಗೆ ವಾಸ ಮಾಡುವುದರಿಂದ, ಕ್ಷಯರೋಗದಿಂದ ನರಳುತ್ತಿರುವವರನ್ನು ಪ್ರತ್ಯೇಕವಾಗಿಟ್ಟು, ಅವರಿಂದ ಮನೆಯಲ್ಲಿರುವ ಇತರರಿಗೂ, ಮಕ್ಕಳಿಗೂ, ಆ ರೋಗದ ಸೋಂಕು ತಗುಲದಂತೆ ನೋಡಿಕೊಳ್ಳಲು ಅಸಾಧ್ಯವಾಗುವುದು. (3) ಒಂದೇ ತಟ್ಟೆಯಲ್ಲಿ ಅನೇಕರುಊಟಮಾಡುವುದೂ, ಮಹಮ್ಮದೀಯರ ಪದ್ಧತಿಯಂತೆ, ಒಂದೇ ಕೊಳವೆಯಲ್ಲಿ ಹಲವರು ಹುಕ್ಕಾ ಸೇದುವುದೂ (4) ಮಕ್ಕಳಿಗೆ ಬಾಲ್ಯವಯಸ್ಸಿನಲ್ಲಿಯೇ ವಿವಾಹಮಾಡುವುದೂ, ರೋಗಪ್ರಾಪ್ತಿಗೆ ಕಾರಣಗಳು.

ಮೇಲೆ ಹೇಳಿದ ಕಾರಣಗಳ ಜತೆಗೆ ಇನ್‌ಫ್ಲೂಯೆಂಜಾ, ಆಮಶಂಕೆ, ಮಲೇರಿಯಾ, ವಿಷಮಜ್ವರ, ಮುಂತಾದ ಉಷ್ಣದೇಶದ ಇನ್ನೂ ಅನೇಕ ವ್ಯಾಧಿಗಳು ಬರುವುದರಿಂದ ಅವು ಮೊದಲೇ ಬಲಹೀನರಾಗಿರುವವರ ಶಕ್ತಿಯನ್ನು ಇನ್ನೂ ತಗ್ಗಿಸಿ ಅವರನ್ನು ಕ್ಷಯರೋಗಕ್ಕೆ ಸುಲಭವಾಗಿ ಗುರಿಮಾಡುವುದು.

3. ನಮ್ಮ ದೇಶದಲ್ಲಿ ಮರಣ ಸಂಖ್ಯೆಯು ಹೆಚ್ಚಾಗಿರುವುದಕ್ಕೆ ಈ ಕೆಳಗೆ ಬರೆದಿರುವುವು ಮುಖ್ಯಕಾರಣಗಳು.

1. ವಾಯುಗುಣದಲ್ಲಿ ಉಷ್ಣವು ಹೆಚ್ಚಿರುವುದೊಂದು. ಈ ಕಾರಣದಿಂದ ಅನೇಕ ವ್ಯಾಧಿಗಳು ತಲೆದೋರಿ, ಜನಗಳಿಗೆ ಆ ರೋಗಗಳ ಬಾಧೆಗಳನ್ನು ತಡೆಯುವ ಶಕ್ತಿಯು ಕಡಮೆಯಾಗಿರುವದು.

2. ಹೆಂಗಸರಿಗೆ ಸ್ವಾಭಾವಿಕವಾದ ಲಜ್ಜಾಸ್ವಭಾವದಿಂದಲೂ, ಅವರ ಘೋಷಾಪದ್ಧತಿಯಿಂದಲೂ, ಅವರು ತಾವು ಬಾಧೆಪಡುತ್ತಿರುವ ವ್ಯಾಧಿಗಳ ಸೂಚನೆಗಳೆಲ್ಲವನ್ನೂ ತಮ್ಮಲ್ಲಿಯೇ ಮರೆಸಿಡುವರು.

(4) ಹಿಂದೂಗಳಾದರೂ ಕ್ಷಯರೋಗದಿಂದ ಬಾಧೆಪಡದಿರುವ ಮಹಮ್ಮದೀಯ ಕುಟುಂಬಗಳೇ ಕಡಿಮೆ. ಹಿಂದೂ ಜನಾಂಗದಲ್ಲಿ ಇದರ ಹಾವಳಿಯು ಹೆಚ್ಚಾಗಿದ್ದರೂ ಮಹಮ್ಮದೀಯರಲ್ಲಿರುವಷ್ಟು ಹೆಚ್ಚಿಲ್ಲ. ಹಿಂದೀಯರು ಉಡುಪುಗಳಲ್ಲಿಯೂ, ಆಚಾರವ್ಯವಹಾರಗಳಲ್ಲಿಯೂ ಮಹಮ್ಮದೀಯರಿಗಿಂತ ಹೆಚ್ಚು ಶುಚಿಯಾಗಿರುವರು. ದಿನಕ್ಕೊಂದು ಸಲವಾದರೂ ತಪ್ಪದೆ ಸ್ನಾನ ಮಾಡುವರು. ಘರ್ಷಾಪದ್ಧತಿಯಲ್ಲಿಯೂ ಅಷ್ಟು ಕಠಿನ ನಿಯಮವುಳ್ಳವರಾಗಿಲ್ಲ. ಒಟ್ಟಿನಲ್ಲಿ, ಹೆಚ್ಚು ಆರೋಗ್ಯಕರವಾದ ರೀತಿಯಲ್ಲಿ ಜೀವನಮಾಡುತ್ತಿರುವರು. ಆದುದರಿಂದಲೇ ಹಿಂದೂಸಮಾಜದಲ್ಲಿ ಇದರ ಹಾವಳಿಯು ಕಡಿಮೆಯಾಗಿದೆ. ಯುವಕರಿಗಿಂತ ಯುವತಿಯರಲ್ಲಿ ಈ ವ್ಯಾಧಿಯ ಪ್ರಾಬಲ್ಯವು ಹೆಚ್ಚು.

ಅಲಹಾಬಾದಿನಲ್ಲಿ ಅಚ್ಚುಮೊಳೆ ಜೋಡಿಸುವವರು, ದರ್ಜಿಗಳು, ಕಟುಕರು, ಮನೆಯಾಳುಗಳು ಮತ್ತು ಗುಮಾಸ್ತರು ಈ ಕಸಬಿನವರಲ್ಲಿಯೇ ಹೆಚ್ಚುಮಂದಿ ಈ ರೋಗಕ್ಕೆ ತುತ್ತಾಗಿರುವರು.

(5) ದನಕರುಗಳಿಂದ ಈ ಕ್ಷಯರೋಗವು ವಿಶೇಷವಾಗಿ ಹರಡದಿದ್ದರೂ, ಆದರಿಂದಲೂ ಸ್ವಲ್ಪ ಹಾನಿಯುಂಟು. ಸಾಮಾನ್ಯವಾಗಿ ಎಲ್ಲರೂ ಹಾಲನ್ನು ಕಾಯಿಸಿಯೇ ಕುಡಿಯುವುದರಿಂದ, ಹಾಲಿನಿಂದ ಈ ವ್ಯಾಧಿಯು ಹರಡುವ ಸಂಭವವು ಬಹಳ ಕಡಿಮೆ.

ಶಾಸ್ತ್ರೀಯವಾದ ರೋಗಲಕ್ಷಣವನ್ನು ಪರೀಕ್ಷಿಸಿ ನೋಡುವುದಾದರೆ ಈ ರೋಗವು ಪಾಶ್ಚಾತ್ಯದೇಶಗಳಲ್ಲಿರುವುದಕ್ಕೂ ಇಲ್ಲಿರುವುದಕ್ಕೂ ಬಹಳ ಭೇದವುಂಟೆಂದು ನನಗೆ ಚೆನ್ನಾಗಿ ನಿರೂಪಣಕ್ಕೆ ಬಂದಿದೆ. ಇಲ್ಲಿ ತೋರಿಸಿದ ಕಾರಣಗಳಿಂದ ದೇಹದಲ್ಲಿ ವ್ಯಾಪಿಸುವ ಮತ್ತು ಶ್ವಾಸಕೋಶಗಳಿಗೆ ಸಂಬಂಧಿಸಿ ಬಹು ಬೇಗನೆ ತೀವ್ರವಾದ ಅಪಾಯವನ್ನು ತರುವ ಕ್ಷಯರೋಗವು ಬಹು ಪ್ರಬಲವಾಗಿದೆ. ಪಾಶ್ಚಾತ್ಯ ದೇಶಗಳಲ್ಲಿಯಾದರೋ ದೇಹದಲ್ಲಿ ಒಂದೇಕಡೆ ಅಂಕುರಿಸಿ ದೀರ್ಘಕಾಲದ ವ್ಯಾಧಿಯಾಗಿ ಪರಿಣಮಿಸುವ ಕ್ಷಯಜಾತಿಯು ಹೆಚ್ಚಾಗಿದೆ. ಎರಡನೆಯದೇನೆಂದರೆ, ತರುಣವಯಸ್ಕರಲ್ಲಿ ಚಾರ ಸಂಬಂಧವಾದ ಕ್ಷಯವೂ ಹೆಚ್ಚಾಗಿವೆ.

(6) ಇಲ್ಲಿ ಅಂತಹ ರೋಗಿಗಳಿಗೆ ಶುದ್ಧವಾದ ಗಾಳಿಯ ಮೈದಾನದ ಚಿಕಿತ್ಸೆಗಾಗಿ ರೋಗಿಯನ್ನು ನದಿಯ ಮೇಲೆ ದೋಣಿಗಳಲ್ಲಿ ಕೂರಿಸಿಕೊಂಡು ಹೋಗುವುದು ಬಹಳ ಉತ್ತಮವಾದ ಚಿಕಿತ್ಸಾ ಕ್ರಮವು. ಇದಲ್ಲದೆ ಕ್ಷಯರೋಗವು ಹೇಗೆ ವೃದ್ಧಿಯಾಗುವುದು, ಅದರ ಲಕ್ಷಣಗಳೇನೆಂಬುದನ್ನೂ ಅದರ ನಿವಾರಣೋಪಾಯಗಳನ್ನೂ ಜನಗಳಿಗೆ ತಿಳಿಸುತ್ತಿದ್ದು ಅದು ವ್ಯಾಪಿಸದಂತೆ ತಡೆಯುವುದಕ್ಕೆ ತಕ್ಕ ನಿವಾರಣೋಪಾಯಗಳನ್ನು ನಡೆಯಿಸಬೇಕು. ಅಲ್ಲಲ್ಲಿ ಸಂಘಗಳ ಮೂಲಕವಾಗಿಯೂ ಇದಕ್ಕೆ ಸಹಾಯವನ್ನೊದಗಿಸಿಕೊಳ್ಳಬೇಕು. ಉ.ಚಂ.

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.
5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.
ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.
3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.
[7] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!
ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,
ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.
ಚಳಿ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ, **'ಕೊಡಗಿನ ಗುಡುಗುಡು!'** (ಛಳಿ). **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.
ಇಂದೇ ದೃಢನಂಬುಗೆಯಿಂದ
ಮಲೇರಿಯಾನ ಕಂಪನಿಯವರ ಮಲೇರಿಯಾನ
ತರಿಸಿಕೊಂಡು ಕುಡಿಯಿರಿ. [29]
ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.
ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!
ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.
ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜೆ] ವಜ್ರಾಂಗ ಸುಂದರಪಾಕ. [ಸ್ಪರ್ಧೆ
ಶೀಘ್ರ ಗುಣಪಡಿಸುವ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.
ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಪ್ರಸಂಗವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜರ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮೋತ್ಪಾದನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ಚಿಕಿತ್ಸೆಯು ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಶಾಲಿಮುಕಂದ, ಮಧುಕಂದ, ಜಟಾಕಂದ, ತಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಷದಬೀಜ, ತಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಪವೇಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಜಾಯಿಪತ್ರಿ, ಪಿಸಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಫಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದನಕಟ್ಟಿಗೆ, ತಜಾವರ, ಪಕೀಮುಗಜ, ಆಲದಹಾಲು, ನಾಕೇರಿಭಾತಾ, ಗೋಖುರು, ಅಡವಿಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಶಿರಾಜಿ, ಜಾಜೀಕಾಯಿ, ರೂಮಾಮುಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ. ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.
ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.
ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.
ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ತ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಸಾಕವಾರದರೋಗ, ಬಟ್ಟಸೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು.
[33]
ಪತ್ತೆ—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಪರೀಕ್ಷೆ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸಿಯ ಮಹೌಷಧವಿದು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆಂದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಿಶೋಧನವನ್ನು ನಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ಶ್ರೀಲಕ್ಷ್ಮೀಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಸೀಸೆ ೧ ಕ್ಕೆ ೧೨ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ವಾಸಿಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದರೆ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ ಅಷ್ಟವರ್ಗ ಔಷಧಾಲಯ
[46] (೮೪೮) ಗಂಜಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರ. ಆ. ಪೈ.
ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಪಿತಾಮಹರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣನಾದಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನು
ಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ) .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ .... ೨ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ) .... ೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
[26] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಶೀತ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಬಿಜದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಮವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[35] ಪೋ. ಬಾ. ೫೧೦. ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ ಪಾಲಿಷ್ಟ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ ನೇ ಮಾರ್ಚಿ ೧೯೩೦ [ಸಂಚಿಕೆ ೪೪.

ಪ್ರಕಟನೆ.

ಆಸ್ತಿಕ ಮತತತ್ತ್ವವನ್ನು ಪ್ರತಿಪಾದಿಸುವದರಲ್ಲಿ ಪೂರ್ಣದಕ್ಷತೆಯಂ ಪಡೆದಿರುವ ಸುಪ್ರಸಿದ್ಧರಾದ ನಾಗನೂರು ಬೃಹನ್ಮಠಾಧ್ಯಕ್ಷ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರು ರಾಜಸಭಾಭೂಷಣ ದಿವಾನ್ ಬಹದ್ದೂರ್. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೆ.ಟಿ.ಸಿ.ಐ.ಇ. ಇವರ ಅಧ್ಯಕ್ಷತೆಯಲ್ಲಿ, ತಾ|| 14-3-1930 ನೆಯ ಶುಕ್ರವಾರ ಸಾಯಂಕಾಲ 5-30 ಘಂಟೆಗೆ ಸರಿಯಾಗಿ ಚಿಕ್ಕಪೇಟೆ ಮಹಂತಿನ ಮಠದಲ್ಲಿ ವೀರಶೈವ ಸನಾತನತ್ವ ವಿಷಯದಮೇಲೆ ಭಾಷಣವನ್ನು ಮಾಡುವರು. ಆ ಕಾಲಕ್ಕೆ ಸರ್ವರೂ ದಯಮಾಡಿಸಬೇಕಾಗಿ ಕೋರುತ್ತೇವೆ.

ಬೆಂಗಳೂರು ಸಿಟಿ,
6—3—1930. } ದೇಶದಶೆಟ್ಟರು-ಯಜಮಾನರು.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ.

ನಾರಣಾಪುರ.

ಭಕ್ತರ ಪ್ರಾರ್ಥನೆಯ ಮೇರೆಗೆ ತಾ|| ೧೯-೨-೧೯೩೦ ಬುಧವಾರ ಮಧ್ಯಾಹ್ನ ನಾಲ್ಕು ಘಂಟೆಗೆ ಶ್ರೀ ಜಗದ್ಗುರುಗಳವರ ಸ್ವಾರಿಯು ಚತುರಂಗಬಲಸಮೇತ ಸಕಲ ಬಿರುದಾವಳಿಗಳೊಡನೆ ನಾರಣಾಪುರಕ್ಕೆ ದಯಮಾಡಿಸಿತು. ಈ ಉತ್ಸವಕ್ಕೆ ಬೀರೂರು, ದೊರನಾಳು, ಬುಳ್ಳಾಂಬುಧಿ, ಶಿವನಿ, ಚಿಕ್ಕಂಗಳ, ಹಿರೇಅಂಗಳ, ಯಗಟಿ, ಚಿಕ್ಕನಲ್ಲೂರು, ನೆಲ್ಲೀಹಂಕಲ ಮುಂತಾದ ಬಹುಭಾಗದ ಭಕ್ತಮಾಹೇಶ್ವರರು ಆಗಮಿಸಿದ್ದರು. ನಾರಣಾಪುರದ ಮಠದ ಗಂಗಾಧರಯ್ಯನವರು, ನಂಜುಂಡಯ್ಯನವರು, ಪಟೇಲ ಮಲ್ಲೇಗೌಡರು, ಬುದ್ಧಿವಂತ ರುದ್ರಪ್ಪನವರು, ಮೋಷ್ಠ ಕರಿಬಸವಪ್ಪನವರು ಮುಂತಾದ ಪ್ರಮುಖಮಹಾಶಯರು ಉತ್ಸವಾಲಂಕೃತ ಶ್ರೀ ಜಗದ್ಗುರುಗಳವರನ್ನು ಎದುರುಗೊಂಡರು. ತಳಿರುತೋರಣಾದಿಗಳಿಂದಲಂಕೃತವಾದ ಪುರವೀಧಿಯಲ್ಲಿ ಉಂದೋಲಿಕೋತ್ಸವವು ವಿಜೃಂಭಣೆಯಿಂದ ಜರಗಿತು. ಪ್ರತಿ ಗೃಹದಲ್ಲಿಯೂ ಸುಮಂಗಲಿಯರು ಮಂಗಲಾರತಿಯನ್ನೆತ್ತಿ ಮಹಾಸನ್ನಿಧಿಯ ಫಲಾಶೀರ್ವಾದವಂಪಡೆಯುತ್ತಿದ್ದರು. ಗುರುಭಕ್ತವೃಂದದಿಂದ ಪಟಾಕಿಗಳು ಉದ್ಘೋಷಿಸಲ್ಪಡುತ್ತಿದ್ದವು. ಎತ್ತನೋಡಿದರತ್ತ ಆಚಾರ್ಯ ಜಯಘೋಷವು ವ್ಯಾಪಕವಾಗಿದ್ದಿತು. ಶ್ರೀ ಜಗದ್ಗುರುಗಳವರು ಪಲ್ಲಕ್ಕಿಯಿಂದವತರಿಸಿ ಕಂನಾಗದ ಸ್ಟೇಟ್ ಶಿವಾನಂದಾಶ್ರಮ ಶ್ರೀ ಚನ್ನಬಸವಶಿವಾಚಾರ್ಯರ ಹಸ್ತಾವಲಂಬನದಿಂದ ಅಲಂಕೃತವಾದ ಸಿಂಹಾಸನವನ್ನಾರೋಹಣಂಗೈದ ಬಳಿಕ ಮಹಾಸಂಸ್ಥಾನದ ಸನ್ನಿಧಿಯಲ್ಲಿ ಧರ್ಮೋಪದೇಶಕರಾಗಿರುವ ವೇ|| ಬಿದರೆ ಬಸವಲಿಂಗಶಾಸ್ತ್ರಿಗಳವರು ಸಮಯೋಚಿತ ಭಾಷಣವನ್ನು ಮಾಡಿದರು. ಶ್ರೀ ಜಗದ್ಗುರುಗಳವರು ವೀರಶೈವಮತತತ್ತ್ವೋಪದೇಶವನ್ನು ಮಾಡಿದ ಬಳಿಕ ಮಾಸ್ಟರ್ ಕರಿಬಸವಪ್ಪನವರು ಶ್ರೀ ಜಗದ್ಗುರುಗಳ ವಿಷಯದಲ್ಲಿ ಮಾಡಿದ ಪದ್ಯಗಳನ್ನೋದಿದನಂತರ ಜಗದಾಚಾರ್ಯರ ಆಶೀರ್ವಾದವು ನಡೆದು ಸಭೆಯು ವಿಸರ್ಜಿಸಲ್ಪಟ್ಟಿತು. ಪೌರರು ವಿಶ್ವಾಸಪೂರ್ವಕವಾಗಿ ಬಂದ ಅತಿಥಿಗಳಿಗೆ ಅನ್ನಸಂತರ್ಪಣೆಯನ್ನು ಸಮರ್ಪಕವಾಗಿ ನಡೆಯಿಸಿ ಗುರುಕೃಪೆಗೆ ಪಾತ್ರರಾದರು. ಧುರಪ್ರಮುಖರಾದ ಮಠದ ನಂಜಯ್ಯನವರು, ಪಟೇಲ್ ಮಲ್ಲೇಗೌಡರು, ಬುದ್ಧಿವಂತ ರುದ್ರಪ್ಪನವರು ಕಾಯವಾಙ್ಮನಸ್ಸುಗಳಿಂದ ಜಗದ್ಗುರುಗಳವರ ಸೇವೆಯಲ್ಲಿ ಬದ್ಧಾದರರಾಗಿದ್ದುದು ಗುರುಭಕ್ತರಿಗೆ ಮಾರ್ಗದರ್ಶಕವಾಗಿದೆ.

ಓರ್ವ ಗುರುಭಕ್ತ.

ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯತಕ್ಕ ವೀರಶೈವಮತ ತತ್ತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

(ಹಿಂದಿನಿಂದ ಮುಂದೆಸಾಗಿದುದು.)

65. ಚತುರ್ವೇದ ತಾತ್ಪರ್ಯಸಂಗ್ರಹ (ಸವ್ಯಾಖ್ಯಾನ) (ಹರದತ್ತಾಚಾರ್ಯಕೃತ) ನಂ. 5078
66. ನಂದೀಶ್ವರ ಕಾರಿಕಾವ್ಯಾಖ್ಯಾ, ತತ್ತ್ವವಿಮರ್ಶಿನೀ ಉಪಮನ್ಯು ಶಿವಾಚಾರ್ಯಕೃತ ನಂ. 5080
67. ನ್ಯಾಯಸಾರ (ಶೈವವೇದಾಂತ) ಭಾವಜ್ಞ ಶಿವಾಚಾರ್ಯಕೃತ 5086
68. ಭಾರತಸಾರಸಂಗ್ರಹ (ಶಿವಾಧಿಕ್ಯ) ಅಪ್ಪಯ್ಯದೀಕ್ಷಿತಾಚಾರ್ಯಕೃತ 5095-96
69. ಭೂತಸೃಷ್ಟಿ ನಂ. 5097
70. ರತ್ನತ್ರಯ ಪರೀಕ್ಷಾ (ಅಪ್ಪಯದೀಕ್ಷಿತಾಚಾರ್ಯಕೃತ) ನಂ. 5098
71. ರಾಮಾಯಣ ತಾತ್ಪರ್ಯನಿರ್ಣಯಃ (ಶಿವಾಧಿಕ್ಯ) ಅಪ್ಪಯದೀಕ್ಷಿತಾಚಾರ್ಯಕೃತ ನಂ. 5099
72. ವಿಶೇಷಾರ್ಥಪ್ರಕಾಶಿಕಾ ನಂ. 5100
73. ವೀರಶೈವಸಿದ್ಧಾಂತ (17 ನಿರ್ಣಯ) ಶಿವಯೋಗೀಂದ್ರಕೃತ ನಂ. 5103
74. ಶಿಖರಿಣೀಮಾಲಾ-ಶಿವತತ್ತ್ವವಿವೇಕಸಹಿತಾ (ಅಪ್ಪಯ್ಯದೀಕ್ಷಿತಕೃತ) ನಂ. 5106
75. ಶಿವಜ್ಞಾನಸಾರಾವಳೀ (ಸೋಸಲೆವೀರಣಾರಾಧ್ಯಕೃತ) ನಂ. 5107
75. ಶಿವಜ್ಞಾನ ದೀಪಿಕಾ (ಆದಿನಾಥ ಮಹಾಯೋಗಿಕೃತ) ನಂ. 5108
77. ಶಿವಾದ್ವೈತ (184 pages) 7 ಪಟಲ 5113
78. ಶಿವಾದ್ವೈತ ಪ್ರಕಾಶಿಕಾ (281 pages) (ಕರ್ನಾಟಕ ಟೀಕಾ) ನಂ 5114
79. ಶಿವೋತ್ಕರ್ಷ ಪ್ರತಿಪಾದನ ಗ್ರಂಥ (ಉಪನಿಷತ್ಸಾರ) ನಂ. 5115
80. ಅನಾಪ್ತೋಪಾಯ ಸೂತ್ರಾಣಿ ನಂ. 2356(c)
81. ಬ್ರಹ್ಮಸೂತ್ರ ವಿವರಣ (ಶಿವದರ್ಪಣ) ಬ್ರಹ್ಮವಿದ್ಯಾಧ್ವರಿಕೃತ) ನಂ. 2545
82. ಚರಲಿಂಗಪ್ರತಿಷ್ಠಾ ನಂ. 2739(a)
83. ಲೀಲಾನತಿ (ಶೈವಾಗಮ) ನಂ. 2252
84. ಸಿದ್ಧಾಂತಸಾರಾವಳೀ (ತ್ರಿಲೋಚನ ಶಿವಾಚಾರ್ಯಕೃತ) ನಂ. 2085
85. ಶಿವಧರ್ಮ 2442(a) ಮತ್ತು 2322(b)
86. ಶಿವಧರ್ಮೋತ್ತರಖಂಡ ನಂ. 2442(b)
87. ಶಿವಲಿಂಗಪೂಜಾಮಹಿಮಾ ನಂ. 2574(b)
88. ಶಿವಲಿಂಗಸೂರ್ಯೋದಯ (ಮಲ್ಲಣಾರಾಧ್ಯಕೃತ ವೀರಶೈವಧರ್ಮಪ್ರತಿಪಾದಕನಾಟಕ) 2282
89. ವೈದಿಕಾಚಾರನಿರ್ಣಯ (ಸಚ್ಚಿದಾನಂದ ಸ್ವಾಮಿಕೃತ) ನಂ. 2220
90. ಕುಂಡದರ್ಪಣ (ಮಲ್ಲೇಶ್ವರಾರಾಧ್ಯಕೃತ) ನಂ. 2107(a)
91. ವೇದಾಂತಸಾರಸಂಗ್ರಹ (ಪಾಪಯಾರಾಧ್ಯಕೃತ) ನಂ. 2232
92. ವೇದಸಾರ ಶಿವಸಹಸ್ರನಾಮವ್ಯಾಖ್ಯಾ (ಪರಮಶಿವೇಂದ್ರ ಸರಸ್ವತಿಕೃತ) ನಂ. 2607(a)
93. ಪರಮ ಶಿವಾದ್ವೈತ ಕಲ್ಪಲತಿಕಾ ನಂ. 2943(d)
94. ಶೈವಸುಧಾಕರ (ಸದಾನಂದಸ್ವಾಮಿಕೃತ) 3822
95. ಶಿವತತ್ತ್ವ ಸಾರಸಂಗ್ರಹ ಚಂದ್ರಿಕಾ ನಂ. 3664
96. ವಾತುಲ ತಂತ್ರ ನಂ. 3875(d)
97. ವೇದಾರ್ಥ ತತ್ತ್ವ ನಿರ್ಣಯ ನಂ. 3903
98. ಶಿವತತ್ತ್ವಸಾರ ಸಂಗ್ರಹ ಚಂದ್ರಿಕಾ (ಗುರುಮೂರ್ತಿಕೃತ) ನಂ. 3664
99. ಲಿಂಗಧಾರಣ ಚಂದ್ರಿಕಾ (ನಂದಿಕೇಶ್ವರ ಶಿವಾಚಾರ್ಯಕೃತ) ನಂ. 3433
100. ಪ್ರಭಾಕರ ವಿಜಯ (ಪೂರ್ವಮೀಮಾಂಸಾ) ನಂದಿಕೇಶ್ವರ ಶಿವಾಚಾರ್ಯಕೃತ) ನಂ. 3229

(ಸಶೇಷ)

ಮುಂಬಯಿಯ ಜಿ. ಐ. ಪಿ. ರೈಲ್ವೆ ಕೂಲಿಗಾರರ ಮುಷ್ಕರವು ಕೊನೆಗೊಂಡು, ಎಲ್ಲರೂ ಪುನಃ ತಮ್ಮ ತಮ್ಮ ಕೆಲಸಗಳಿಗೆ ಬಂದಿರುವರು. ರೇಲ್ವೆ ಅಧಿಕಾರಿಗಳು ಕೂಲಿಕಾರರ ಅಪೇಕ್ಷೆಯಂತೆ ನಡೆಯಿಸಿಕೊಡುವದಕ್ಕಾಗಿ ಒಪ್ಪಿಕೊಂಡಿರುವರು.

ಭರತಖಂಡದಲ್ಲಿ ಉಪ್ಪಿನಮೇಲೆ ವಿಶೇಷವಾದ ತೆರಿಗೆ ಹಾಕಲ್ಪಟ್ಟಿರುವದಷ್ಟೆ! ಇದರಿಂದ ಬ್ರಿಟಿಷ್ ಸರ್ಕಾರಕ್ಕೆ ಪ್ರತಿವರ್ಷವೂ 7 ಕೋಟಿ ರೂಪಾಯಿಗಳ ಹುಟ್ಟುವಳಿಯಾಗುವದು. ಈ ತೆರಿಗೆಯು ಅನ್ಯಾಯವಾದ್ದೆಂದು ತಿಳಿದು ಮಹಾತ್ಮಾ ಗಾಂಧಿಯವರು ತೆರಿಗೆಯನ್ನು ಕೊಡದೆ ಉಪ್ಪನ್ನು ತಯಾರಿಸುವ ಚಳವಳಿಯನ್ನು ನಾಳೆ 12 ನೆಯ ತಾರೀಖಿನಿಂದ ಪ್ರಾರಂಭಿಸುವರು. ಸ್ವರಾಜ್ಯ ಸಂಪಾದನೆಯ ಸಲುವಾಗಿ ಅವರು ನಡೆಯಿಸಲಿರುವ ಸತ್ಯಾಗ್ರಹದಲ್ಲಿ ಈ ಉಪ್ಪಿನ ಸತ್ಯಾಗ್ರಹವೇ ಮುಖ್ಯವಾಗಿರುವುದು. ಕಾಂಗ್ರೆಸ್ ಮುಖಂಡರು ಎಲ್ಲೆಲ್ಲಿಯೂ ಉಪನ್ಯಾಸಮಾಡುತ್ತ ಸತ್ಯಾಗ್ರಹಕ್ಕೆ ಜನರನ್ನು ಕೂಡಿಸುತ್ತಿರುವರು. ಈ ಸಂಬಂಧವಾಗಿ ಮಹಾತ್ಮಾ ಗಾಂಧಿಯವರು ವೈಸ್ರಾಯ್ ಲಾರ್ಡ್ ಅರ್ವಿನ್ನರಿಗೆ ಬರೆದಿರುವ ಮಹತ್ವದ ಪತ್ರವೂ, ಅದಕ್ಕೆ ವೈಸ್ರಾಯರವರು ಕೊಟ್ಟಿರುವ ಪ್ರತ್ಯುತ್ತರವೂ ಮುಂದಿನವಾರ ಸಂಪೂರ್ಣವಾಗಿ ಪ್ರಕಟಿಸಲ್ಪಡುವವು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ನಮಃ ಶ್ರೀ ಮದಾಚಾರ್ಯ ಪಂಚಕಾಯ.

ಶ್ರೀಜಗದ್ಗುರು ವಿಶ್ವಾರಾಧ್ಯರ ಮತ್ತು ಪಂಡಿತಾರಾಧ್ಯರ ಜಯಂತಿಮಹೋತ್ಸವಗಳು.

ಬಾಣಾವರ.

ಮಹಾಶಯರೆ? ಯಾವ ಮಹಾತ್ಮರು ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ ಭೂಮಂಡಲದಲ್ಲಿ ಶಿವಸಿದ್ಧಾಂತವನ್ನು ನೆಲೆಗೊಳಿಸಿ ಶಿವಭಕ್ತಿಯ ವಿಜಯಪತಾಕೆಯನ್ನು ಸ್ಥಾಪಿಸಿದರೋ ಅಂಥ ವೀರಶೈವ ಮತಸ್ಥಾಪನಾಚಾರ್ಯರ ಜಯಂತಿ ಹಬ್ಬಗಳನ್ನು ಮಾಡುವದು ಗುರುಭಕ್ತಿಪರಾಯಣರಾದ ಪ್ರತಿಯೊಬ್ಬ ವೀರಶೈವರ ಕರ್ತವ್ಯವಾದುದರಿಂದ ಅರಸೀಕೆರೆ ತಾ|| ಬಾಣಾವರದಲ್ಲಿ ಇದೇ ಶುಕ್ಲನಾಮಸಂವತ್ಸರದ ಮಾಘ ಕೃಷ್ಣ ಪಕ್ಷ 13 ತಾ|| 26-1-1930 ನೇ ಬುಧವಾರ ದಿವಸ ಹಿರೇಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ವಿಗ್ರಹಕ್ಕೆ ವಿಧ್ಯುಕ್ತವಾಗಿ ಷೋಡಶೋಪಚಾರ ಪೂಜಾ ಸಮಾರಂಭವು ಜರುಗಿಸಲ್ಪಟ್ಟಿತು. ಅನಂತರ ಸಾಯಂಕಾಲ ೮ ಘಂಟೆಗೆ ಇಲ್ಲಿಯ ಶ್ರೀ ಜಗದ್ಗುರು ಪಂಚಾಚಾರ್ಯರ ಬಾಲಕರ ಭಜನಾಸಂಘದವರಿಂದ ಶೃಂಗರಿಸಿದ ಪುಷ್ಪಕಮಂಟಪದಲ್ಲಿ ಜಗದಾಚಾರ್ಯರ ಭಾವಚಿತ್ರಗಳನ್ನು ಬಿಜಯಂಗೈಸಿ ಬಿರುದಾವಳಿ ಸಮೇತ ಉತ್ಸವವು ಹಿರೇಮಠದಿಂದ ಹೊರಟಿತು. ಉತ್ಸವವು ಶ್ರೀ ಬಾಣೇಶ್ವರ ದೇವಸ್ಥಾನದ ಬಳಿಗೆ ಬಂದನಂತರ ಗುರುಸೇವಾಧುರೀಣ ಮ|| ರಾ|| ಟಿ. ಎಸ್. ಪಿ. ಜನರಾಜು ಮಾಸ್ತರವರಿಂದಲೂ ಬಾಲಕರಿಂದಲೂ ಉಪನ್ಯಾಸಗಳು ಮಾಡಲ್ಪಟ್ಟವು. ಎಸ್. ಹನುಮಂತಪ್ಪ ಮಾದಾಪುರ ಎಂಬ ೧೦ ವರ್ಷದ ಬಾಲಕನು ಜಗದ್ಗುರುಗಳ ಜಯಂತಿ ವಿಷಯವಾಗಿ ಅನೋಘವಾದ ಭಾಷಣವನ್ನು ಮಾಡಿದನು. ಶರಣ ಬೈರಪ್ಪನೆಂಬ ಬಾಲಕನು ಭಜನಾಸಂಘಗಳ ಅವಶ್ಯಕತೆ ಎಂಬ [illegible] ಬಿ. ಕೆ. ದೊಡ್ಡಲಿಂಗಪ್ಪನೆಂಬ ಬಾಲಕನು [illegible] ಮಾಡಿದನು. ಇನ್ನುಳಿದ ಚಿಕ್ಕ ಚಿಕ್ಕ [illegible] ದೇವರ ಖಡ್ಗದಂತೆ ಇರುವ ಶ್ರೀ ಜಗದ್ಗುರು [illegible] ರೋಮಾಂಚಕವಾದ ಖಡ್ಗಗಳನ್ನು ಹೇಳಿದರು. ಎಂ. ಎಂ. ನಾಗರಾಜ ಎಂಬ ಕೇವಲ ಐದು ವರ್ಷದ ಚಿಕ್ಕ ಬಾಲಕನ ಧರ್ಮೋಪದೇಶವು ಅಲ್ಲಿ ನೆರೆದಿದ್ದ ಸ್ವಪರ ಗ್ರಾಮದ ಸಕಲ ಭಕ್ತಾದಿಗಳ ಮನಸ್ಸನ್ನು ಸಂತೋಷಗೊಳಿಸುತ್ತಿದ್ದಿತು. ಅನಂತರ ಉತ್ಸವವು ಕೋಟೆ ಪೇಟೆಯೊಳಗಿನ ಬೀದಿಗಳಲ್ಲಿ ನಡೆದು ಪುನಃ ಹಿರೇಮಠಕ್ಕೆ ತಲ್ಪಿತು. ಈ ಚಿಕ್ಕ ಬಾಲಕರ ಭಜನೋಪನ್ಯಾಸಗಳನ್ನು ಪ್ರೀತಿಪೂರ್ವಕ ಮ|| ರಾ|| ಪೋಲೀಸ್ ಸಬ್ ಇನ್ಸ್‌ಪೆಕ್ಟರ ಗುರುಲಿಂ[illegible]ನವರು ಮತ್ತು ದಫೇದಾರ ಕೃಷ್ಣಮೂರ್ತಿಯವರು, ವೈಸ್‌ಪ್ರೆಸಿಡೆಂಟರು ವಗೈರೆ ಯವರು ನಿಂತು ನೋಡುತ್ತಿದ್ದರು. ಈ ಮೇರೆ ಉತ್ಸವವು ಮಠಕ್ಕೆ ತಲ್ಪಿದನಂತರ ಬಾಲಕರಿಗೆಲ್ಲಾ ಫಲಾಹಾರಾದಿಗಳು ಕೊಡಲ್ಪಟ್ಟವು. ಪುನಃ ಗುರುವಾರ ಪ್ರಾತಃಕಾಲಕ್ಕೆ ೮ ಘಂಟೆಗೆ ಶೃಂಗರಿಸಿದ ಅಂದೋಲಿಕೆಯಲ್ಲಿ ಶ್ರೀ ಜಗದಾಚಾರ್ಯರ ರಜತ ವಿಗ್ರಹೋತ್ಸವವು ಹೊರಟಿತು. ಭಕ್ತಾದಿಗಳು ತಮ್ಮ ತಮ್ಮ ಗೃಹಗಳನ್ನು ತಳಿರುತೋರಣಗಳಿಂದ ಅಲಂಕರಿಸಿದ್ದರು. ಉತ್ಸವಕ್ಕೆ ವೀರಶೈವ ಪ್ರಮುಖರು ಮತ್ತು ಹಾಲುಮತದ ಭಕ್ತಾದಿಗಳು ಸಹ ಭಾಗಿಗಳಾಗಿದ್ದರು. ಉತ್ಸವವು ಮಠವನ್ನು ತಲ್ಪಿದ ಮೇಲೆ ಹಿರೇಮಠದವರಿಂದ ಪಾನಕಫಲಾಹಾರಾದಿಗಳ ವಿನಿಯೋಗವು ಮಾಡಲ್ಪಟ್ಟಿತು. ಸಾಯಂಕಾಲ ೮ ಘಂಟೆಗೆ ಭಜನಾಸಂಘದವರಿಂದ ಸಂಕ್ಷಿಪ್ತ ಭಜನೆಯು, ವಾಲಗದ ಅಷ್ಟೋಪಚಾರ ಕೊಳಲುವಾದ್ಯವು ಹನುಮಂತಪ್ಪನ ತಬಲಾವಾದ್ಯವು ನಡೆದು ಮಹಾ ಮಂಗಳಾರತಿಯು ಮಾಡಲ್ಪಡುವಾಗ್ಗೆ ಹಿರೇಮಠದ ವೇ|| ಜಿ. ವೀರಭದ್ರಸ್ವಾಮಿಗಳು ಭಜನಾಸಂಘದ ಹಣ್ಣಿಗೆ ಒಂದು ರೂಪಾಯಿಯನ್ನು ಪ್ರಭಾಪೋಷಕಕ್ಕಾಗಿ ಒಂದು ರೂಪಾಯಿಯನ್ನು ಸಮರ್ಪಣಮಾಡಿದರು. ಅತ್ಯುತ್ಸಾಹದಿಂದ ಗುರುಗಳ ಜಯಂತಿಮಹೋತ್ಸವವನ್ನು ಸ್ವಂತ ಖರ್ಚಿನಿಂದ ನಡೆಯಿಸಿದ ವೇ|| ಜಿ. ವೀರಭದ್ರಸ್ವಾಮಿಗಳಿಗೂ ಉತ್ಸವಭಾಗಿಗಳಾದ ಪ್ರತಿಯೊಬ್ಬ ಭಕ್ತರಿಗೂ ಅವರವರ ಕುಟುಂಬವರ್ಗಕ್ಕೂ ಸಹ ಜಗದ್ಗುರು ಪಂಚಾಚಾರ್ಯರು ಐಶ್ವರ್ಯವನ್ನು ಕೊಡಲೆಂದು ಹಾರೈಸುವ,

ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾ
ಸೇವಾಸಂಘದ ಚೀಫ್ ಸೆಕ್ರೆಟರಿ,
Virupaxappa Sajjen Shetra.

ಅರಸೀಕೆರೆ ತಾ|| ರಾಮಪುರ.

ಇಲ್ಲಿ ವಾಮೂಲಿನಂತೆ ಈ ವರ್ಷವೂ ಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಜಯಂತ್ಯುತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಪೋಲೀಸ್ ಪಟೇಲ್ ಸಿದ್ಧರಾಮೇಗೌಡರು ರೆವಿನ್ಯೂಪಟೇಲ್ ರಾಮಜ್ಜೇಗೌಡರು ಈ ಉತ್ಸವದಲ್ಲಿ ತಮ್ಮ ನೈಜವಾದ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸಿದ್ದುದು ಇತರರಿಗೆ ಮೇಲ್ಪಂಕ್ತಿಯಾಗಿರುತ್ತದೆ. ಕಾರ್ಯನಿರ್ವಾಹಕರೂ, ಶೀಲಾಭಿಮಾನಿಗಳೂ, ಹಾಗೂ ರೇಣುಕಗೋತ್ರೋತ್ಪನ್ನರೂ, ತಾಲೂಕು ಎಕನಾಮಿಕ್ ಕಮಿಟಿ ಮೆಂಬರೂ ಮತ್ತು ಪಂಚಾಯ್ತಿ ಮೆಂಬರೂ ಹಾಗೂ ಮೇಲ್ಕಂಡ ವೇ|| ಜಿ. ಕೆ. ಸಿದ್ದಲಿಂಗಾರ್ಯರ ಪರಮ ಶಿಷ್ಯರೂ ಆದ ಹರಿಯಂಣನವರ ಮರುಳಪ್ಪನವರೂ ಸಹ ಶ್ರದ್ಧೆಯಿಂದಲೂ, ನಿಶ್ಚಲವಾದ ಗುರುಭಕ್ತಿಯಿಂದಲೂ ಜಗದಾಚಾರ್ಯರ ಭಾವಚಿತ್ರವನ್ನು ಮನೋಹರವಾಗಿ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಬಿಜಮಾಡಿಸಿ ಅನೇಕ ಬಿರುದಾವಳಿಗಳಿಂದಲೂ, ವಾದ್ಯವಿಶೇಷಗಳಿಂದಲೂ, ಅತ್ಯಂತ ವೈಭವದಿಂದ ಉತ್ಸವವನ್ನು ಮಾಡಿಸಿ ಸದರಿ ಉತ್ಸವಕ್ಕೆ ನೆರೆದಿದ್ದ ಸುಮಾರು 500-600 ವೀರಶೈವ ಮತ್ತು ಇತರ ಜನಾಂಗಕ್ಕೂ ನೇತ್ರಾನಂದವನ್ನುಂಟುಮಾಡಿದರಲ್ಲದೆ ಸರ್ವರನ್ನೂ ಪಾವನಮಾಡಿದರು. ಜಿ. ಕೆ. ಸಿದ್ದಲಿಂಗಾರ್ಯರ ಪರಮಮಿತ್ರರಾದ ಸಂಗೀತವಿದ್ವಾನ್ ವೇ|| ಕೋಟೆಮಠದ ಬಸವಲಿಂಗಯ್ಯನವರು ಇಂಪಾದ ಸ್ವರದಿಂದ ಜಗದಾಚಾರ್ಯರ ಸ್ತೋತ್ರವನ್ನು ಮಾಡುತ್ತ ಪಲ್ಲಕ್ಕಿಯ ಮುಂಭಾಗದಲ್ಲಿ ಬರುತ್ತಿದ್ದರು. ಸ್ಕೂಲು ಹೆ|| ಮಾ|| ಚಿಕ್ಕಹೊನ್ನಯ್ಯನವರು ಅ|| ಮಾ|| ಶಿವಬಸವಯ್ಯನವರು ಚಿಕ್ಕಮಕ್ಕಳಿಂದ ಶ್ರೀ ಜಗದ್ಗುರುಗಳ ನಾಮಸಂಕೀರ್ತನೆಯನ್ನೂ ಮಧ್ಯೆ ಮಧ್ಯೆ ಆ ಮಕ್ಕಳೊಂದಿಗೆ ಪಂಚಾಚಾರ್ಯಮಹಾರಾಜಕಿ ಜೈ ಎಂಬ ಜಯಘೋಷವನ್ನು ಮಾಡಿಸುತ್ತಲಿದ್ದರು. ಮ|| ರಾ|| ಶ್ರೀ|| ನಂಜೇಗೌಡರು, ಸೋ|| ಮರುಳಪ್ಪನವರು, ಹೊ|| ಹರಳಪ್ಪನವರು, ಲಿಂಗೇ|| ಹರಪ್ಪನವರು, ಬಾ|| ಸಂಣರಾಮೇಗೌಡರು, ಚೊಕ್ಕಲಿಂಗಣ್ಣನವರು, ಭಾವಿಮನೆ ಸಣ್ಣ ರಾಮೇಗೌಡರು, ಅರಿ|| ಸಿದ್ದಪ್ಪನವರು, ಲಕ್ಷ್ಮಣಸಿಂಗರವರು, ಅಕ್ಕಸಾಲೆ ರಾಮಸ್ವಾಮಿಯವರು, ಅ|| ತಿಮ್ಮಣ್ಣನವರು, ದೊಡ್ಡೀರಯ್ಯನವರು, ಭೈ|| ಲಿಂಗಪ್ಪನವರು ಬಸಯ್ಯನವರ ಮರುಳಯ್ಯನವರು, ಚನ್ನಬಸವಯ್ಯನವರು, ಗುಡಿ|| ದೊಡ್ಡರಾಮಯ್ಯನವರು ಮೊದಲಾದ ಮಹನೀಯರು ಪ್ರತಿಯೊಂದು ಜಯಂತ್ಯುತ್ಸವಕ್ಕೂ ತಮ್ಮ ಶಕ್ತ್ಯಾನುಸಾರ ಕಾಣಿಕೆಯನ್ನು ಕೊಟ್ಟು ಜಗದಾಚಾರ್ಯರ ಉತ್ಸವವನ್ನು ನಿರಾತಂಕವಾಗಿ ನಡೆಯಿಸಿಕೊಂಡು ಬಂದಿರುವಂತೆ ಇನ್ನು ಮುಂದೆಯೂ ಇದೇ ರೀತಿ ನಡೆಯಿಸಿಕೊಂಡುಬರುವದಾಗಿ ವಾಗ್ದಾನಮಾಡಿರುವದಲ್ಲದೆ ಇದೇ ಫಾಲ್ಗುಣ ಶುದ್ಧ ತ್ರಯೋದಶಿಯಲ್ಲಿ ನಡೆಯುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಉತ್ಸವಕ್ಕೆ ಈಗಿನಿಂದಲೂ ಕಾರ್ಯಕ್ರಮಗಳನ್ನು ಜರುಗಿಸುತ್ತಲಿರುವರು. ಇವರಲ್ಲವೇ ನಿಜವಾದ ಗುರುಭಕ್ತಿಶೀಲರು?

ಪ|| ರಾಮಜ್ಜೇಗೌಡ,
ರೆವಿನ್ಯೂಪಟೇಲ್ ರಾಂಪುರ.

ಶಿರೋಳ.

ಶ್ರೀ ಜಗದ್ಗುರು ರೇಣುಕಾಚಾರ್ಯ ಶಾಖಾನ್ವಿತ ಶಿರೋಳ ಹಿರೇಮಠದಲ್ಲಿ ಮಾಘ ಬ|| 13 ಬುಧವಾರ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ವಿಶ್ವಾರಾಧ್ಯರ ಜಯಂತಿಯು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲ ಶ್ರೀ ಜಗದ್ಗುರುಗಳವರ ಭಾವಪಟವನ್ನು ರಜತಸಿಂಹಾಸನದಲ್ಲಿ ಮಂಡಿಸಿ ಕೊಟ್ಟೂರು ಶ್ರೀ ದಾರುಕಾಚಾರ್ಯ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಾದ ವೇ|| ಷಡಕ್ಷರಶರ್ಮರವರಿಂದ ವೇದೋಕ್ತವಾಗಿ ಅಭಿಷೇಕಾದಿ ಉಪಚಾರಗಳು ಜರುಗಿಸಲ್ಪಟ್ಟವು. ಸಾಯಂಕಾಲಕ್ಕೆ ವೃಷಭೇಶ್ವರ ದೇವಾಲಯದಲ್ಲಿ ಶ್ರೀ ನಂದೀಶ್ವರನಿಗೆ ಶ್ರೀರುದ್ರಾಭಿಷೇಕವೂ "ಅಷ್ಟೋತ್ತರ ಶತಬಿಲ್ವ" ಸಮರ್ಪಣೆಯೂ ನಡೆಯಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ಭಕ್ತಸಮುದಾಯವು ವಿಶೇಷವಾಗಿ ಸೇರಿತ್ತು. ವೇ|| ಪಂಚಾಕ್ಷರಶಾಸ್ತ್ರಿಗಳು ಮಹಾಶಿವರಾತ್ರಿಯ ಪೌರಾಣಿಕ ಚರಿತ್ರೆಯನ್ನೂ ವೀರಶೈವ ಸಿದ್ಧಾಂತಾಂತರ್ಗತವಾದ "ಶಿವಯೋಗ"ವೆಂಬ ವಿಷಯವನ್ನೂ ಹೃದಯಂಗಮವಾಗಿ ಬೋಧಿಸಿದರು. ಅನಂತರ ಮಂಗಲ ನೀರಾಜನಗೈದು ಫಲಪ್ರಸಾದವು ಹಂಚಲ್ಪಟ್ಟಿತು. ಈ ವರ್ಷದ ಶಿವಯೋಗ ಸಮಾರಂಭವೂ ಶ್ರೀ ಜಗದ್ಗುರುಗಳ ಜಯಂತಿಯೂ ಬಹು ಮನೋಹರವಾಗಿದ್ದಿತು.

ಓರ್ವ ಗುರುಚರಣಕಿಂಕರ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ದಿಬ್ಬೂರು.

ಅರಸಿಕೆರೆ ತಾ|| ದಿಬ್ಬೂರು ಗ್ರಾಮದಲ್ಲಿ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ನಡೆಯಿಸುವಂತೆ ಸ್ಕೂಲ್ ಮಾಸ್ಟರ್ ಮ|| ಎ. ಚನ್ನಪ್ಪನವರು ಸೂಚಿಸಿದ ಮೇರೆಗೆ ಗ್ರಾಮದ ಪ್ರತಿಯೊಬ್ಬ ವೀರಶೈವರು ಸದರಿ ಉತ್ಸವದ ವಿಷಯದಲ್ಲಿ ಕಂಕಣಬದ್ಧರಾಗಿ ರುದ್ರಪ್ಪಶೆಟ್ಟರ ಶಿವಮಂದಿರದಲ್ಲಿ ತಳಿರುತೋರಣ ಕದಳೀಸ್ತಂಭ ಇತ್ಯಾದಿಗಳಿಂದ ಅಲಂಕೃತವಾದ ಮಂಟಪದಲ್ಲಿ ದಿವ್ಯವಾಗಿ ರಚಿಸಿದ್ದ ಪೀಠದಲ್ಲಿ ಶ್ರೀ ಜಗದಾಚಾರ್ಯರ ಭಾವಚಿತ್ರಪಟವನ್ನು ಇರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಂಗಲಗಳನ್ನು ಪಾಡಿ ಮಾಹೇಶ್ವರರಿಗೆಲ್ಲ ದಕ್ಷಿಣೆ, ಫಲದಾನ, ವಸ್ತ್ರದಾನ ಇತ್ಯಾದಿಗಳನ್ನು ಮಾಡಿದ ಮೇಲೆ ವೀರಶೈವಮಾರ್ಗಾನುಸರಣ ಶಿವಪೂಜಾನಿಷ್ಠರೂ ಆದ ಮಾಸ್ಟರ್ ಎ. ಚನ್ನಪ್ಪನವರು ಭಗವತ್ಪಾದರಾದ ಜಗದ್ಗುರು ಶ್ರೀ ರೇಣುಕಾದಿ ಪಂಚಾಚಾರ್ಯರು ಭೂಮಂಡಲದಲ್ಲಿ ಲಿಂಗೋದ್ಭವರಾಗಿ ಅವತರಿಸಿ ಮಹಾಮಹಿಮರೂ ತ್ರಿಕಾಲಜ್ಞಾನಿಗಳೂ ಆದ ಅನೇಕ ಮಹರ್ಷಿಗಳಿಗೂ ರಾಜಾಧಿರಾಜರಿಗೂ ಶಿವತತ್ವೋಪದೇಶವನ್ನು ಮಾಡುವುದರಮೂಲಕ ಶಿಷ್ಯರನ್ನಾಗಿ ಮಾಡಿಕೊಂಡ ಪರಮಪವಿತ್ರವಾದ ವೀರಶೈವ ಮತವನ್ನು ಸ್ಥಾಪಿಸಿ ಈ ಮತದ ಸಿದ್ಧಾಂತವನ್ನು ಭರತಖಂಡದಲ್ಲಿ ಪ್ರಚಾರಗೊಳಿಸಿದ ವಿಷಯವನ್ನು ಕುರಿತು ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನಂತರ ಎಲ್ಲರೂ ಶ್ರೀ ಜಗದಾಚಾರ್ಯರ ಜಯಘೋಷವನ್ನು ಮಾಡಿ ಗುರುಸಾರ್ವಭೌಮರ ಭಾವಚಿತ್ರ ಪಟವನ್ನು ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವದಿಂದಲೂ, ಸ್ಕೂಲ್ ವಿದ್ಯಾರ್ಥಿಗಳ ಜಯಧ್ವಜಗಳಿಂದಲೂ ಉತ್ಸವವು ನೇತ್ರಾನಂದಕರವಾಗಿ ನೆರವೇರಿಸಲ್ಪಟ್ಟಿತು. ಈ ಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದ ಗ್ರಾಮದ ಪಟೇಲ್ ಮ|| ರಾ|| ದಾಸೇಗೌಡರಿಗೂ ಎಸ್. ಎಂ. ವೀರಬಸವಯ್ಯನವರಿಗೂ ಕುರುಬಮತೀಯರಾದ ಜಮೀನ್‌ದಾರ್ ಎಂ. ರಂಗೇಗೌಡರಿಗೂ ಮೇಲ್ಕಂಡ ಶೆಟ್ಟರಿಗೂ ಮಾಸ್ತರಿಗೂ ವಿದ್ಯಾರ್ಥಿಗಳಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಮಂಗಲವನ್ನೀಯಲೆಂದು ಹಾರೈಸುವ.

ಓರ್ವ ಉತ್ಸವಭಾಗಿ.

ಲಕ್ಷ್ಮೇಶ್ವರ.

ಮಿಂಚಸಂಸ್ಥಾನಪಟ್ಟಿಕಿ ಲಕ್ಷ್ಮೇಶ್ವರ ಗ್ರಾಮದಲ್ಲಿ ಗುರುಭಕ್ತರೆಲ್ಲರೂ ಮಿಳಿತರಾಗಿ ಪದ್ಧತಿಯಪ್ರಕಾರ ಇದೇ ಶುಕ್ಲ ಸಂ|| ಮಾಘ ಬ|| ೧೩ ಬುಧವಾರ ದಿವಸ ಮುನಿಸಿಪಲ್ ಮೆಂಬರರಾದ ಗಾಂಜಿ ಮ|| ರಾ|| ಶ್ರೀ ಚನ್ನಪ್ಪನವರ ಮನೆಯಲ್ಲಿ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಲಿಂಗೋದ್ಭವ ವಿಗ್ರಹಗಳನ್ನು ಷೋಡಶೋಪಚಾರಗಳಿಂದ ಪೂಜಿಸಿ ಗಣಾರಾಧನೆಯನ್ನು ಪೂರೈಸಿ ಸಂಜೆಯ ೫ ಘಂಟೆಗೆ ಅಂದೋಲಿಕೆಯಲ್ಲಿ ಮೂರ್ತಗೊಳಿಸಿ ವಾದ್ಯಘೋಷದೊಡನೆ ಶೃಂಗರಿಸಿದ ಪೇಟೆ ಮೊದಲಾದ ಮುಖ್ಯ ಮುಖ್ಯ ಸ್ಥಳಗಳಲ್ಲಿ ಉತ್ಸವವು ಸಾಗಿ ಸ್ವಸ್ಥಾನವನ್ನು ಸೇರಿದ ಮೇಲೆ ವೇ|| ಹಿರೇಮಠದ ಶಾಂತಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಭಾಷಣಗಳಾದವು. ಅವುಗಳ ಸಾರಾಂಶವೇನೆಂದರೆ— ಪಂಚಕೃತ್ಯಗಳಿಗೆ ಕರ್ತನೂ, ಸರ್ವೋತ್ತಮನೂ, ಸರ್ವಸ್ವತಂತ್ರನೂ, ನಿತ್ಯನೂ ಸರ್ವಜ್ಞನೂ ಸರ್ವಶಕ್ತನೂ ವಿಶಿಷ್ಟಾದ್ವೈತನೂ ಆದ ಪರಶಿವನೇ ವೀರಶೈವಮತಸ್ಥಾಪನಾಚಾರ್ಯನೂ ಅಧಿದೈವನೂ ಗುರುರೂಪನೂ ಆಗಿರುವನು. ತನ್ನಿಂದನ್ಯರಾದ ಬ್ರಹ್ಮಾದಿ ಪಿಪೀಲಿಕಾಂತಪಾಶಬದ್ಧ ಜೀವಿಗಳಿಗೆ ಸ್ವಸ್ವರೂಪವನ್ನು ಬೋಧಿಸಿ ಕೃತಾರ್ಥರನ್ನಾಗಿ ಮಾಡಲು ಅನ್ಯರಿಂದ ಅಸಾಧ್ಯವೆಂದು ತಾನೇ ಅಷ್ಟಾವರಣಸ್ವರೂಪನಾದನು. ಆ ಸೇತುಹಿಮಾಚಲದೊಳಗಿನ ಶಿವಭಕ್ತರುಗಳಿಗೆ ಉಪಯುಕ್ತವಾಗುವಂತೆ ಒಂದೇ ದಿವಸ ಹಿಂದುಸ್ಥಾನದ ಉತ್ತರ ಭಾಗವಾದ ಕಾಶಿಯಲ್ಲಿ ವಿಶ್ವನಾಥಲಿಂಗದಿಂದಲೂ ದಕ್ಷಿಣ ದೇಶದಲ್ಲಿ ಶ್ರೀಶೈಲ ಮಲ್ಲಿಕಾರ್ಜುನಲಿಂಗದಿಂದಲೂ ಪಟಕುಟೀಭಾವನ್ಯಾಯದಂತೆ ಸಾಕ್ಷಾತ್ ಶಿವನೇ ಉಭಯ ಗುರುರೂಪದಿಂದ ಪ್ರಕಟನಾಗಿ ಮುಮುಕ್ಷುಜನರೆಲ್ಲರಿಗೂ ಷಟ್‌ಸ್ಥಲಸಿದ್ಧಾಂತವನ್ನು ಬೋಧಿಸಿ ಕೃತಾರ್ಥರನ್ನು ಮಾಡಿದ ವಿಷಯವು ಅವರವರ ಚರಿತ್ರೆಗಳಿಂದ ಪ್ರಸಿದ್ಧವೇ ಅದೆ. ಆದಕಾರಣ ಇಂಥ ಗುರುಸಾರ್ವಭೌಮರ ಪೂಜಾಸ್ತೋತ್ರನಾಮಸ್ಮರಣಾದಿಗಳನ್ನು ಮಾಡಿ ಆ ಗುರುರೂಪಶಿವನಲ್ಲಿ ಸಮರಸರೂಪ ಮೋಕ್ಷವನ್ನು ಹೊಂದಲು ಸೂಚಕವಾದ ಶಿವಯೋಗವೆಂಬ ಹೆಸರನ್ನು ತಾಳಿದ ಈ ಸುದಿನದಲ್ಲಿ ಗುರ್ವಾರಾಧನಪೂರ್ವಕ ಜಯಂತ್ಯುತ್ಸವಗಳನ್ನು ತ್ರಿಕರಣಪೂರ್ವಕ ಆಚರಿಸಿದ್ದಾದರೆ ನಮ್ಮ ಭವಬಂಧನಗಳೆಲ್ಲಾ ಅವರ ಕೃಪಾಕಟಾಕ್ಷಗಳಿಂದ ಕಡಿದುಹೋಗುವದರಲ್ಲಿ ಸಂದೇಹವೇ ಇರುವದಿಲ್ಲ. ಇದರಂತೆ ಉಳಿದ ಆಚಾರ್ಯರುಗಳ ಜಯಂತ್ಯುತ್ಸವಗಳನ್ನಾದರೂ ಇದೇ ಪ್ರಕಾರ ಆಚರಿಸಿ ವೀರಶೈವರೆಂಬ ನಾಮವನ್ನು ಸಾರ್ಥಕಗೊಳಿಸಬೇಕೆಂದು ಭಾಷಣಗಳಾದನಂತರ ಪ್ರಸಾದವು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಭಕ್ತ ಮರುಳಸಿದ್ದಪ್ಪ ಗಾಂಜಿ.

ಮೈಸೂರು.

ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಕಪಿಲ ಮಲ್ಲಿಕಾರ್ಜುನಸ್ವಾಮಿಯ ಮಠದಲ್ಲಿ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಅತಿ ವೈಭವದಿಂದ ನೆರವೇರಿಸಲ್ಪಟ್ಟಿತು. ರಾತ್ರಿ 11 ಘಂಟೆಗೆ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಕವಿರತ್ನ ಶ್ರೀ ಶಾರದಾಮೋಹನವರು ಸ್ವತಃ ರಚಿಸಿದ "ಗೋರಕ್ಷನಾಥಗರ್ವಹರಣ" ಎಂಬ ಗುರುಕೀರ್ತನವನ್ನು ಬಹು ಮನೋಹರವಾಗಿ ಮಾಡಿ ಸರ್ವ ಸಭಿಕರನ್ನು ಆನಂದಕುಂದಿಲಹೃದಯರನ್ನಾಗಿ ಮಾಡಿದರು. ಜಗದಾಚಾರ್ಯರ ಜಯಂತಿಮಹೋತ್ಸವಸಂಬಂಧವಾದ ಯಾವತ್ತು ಖರ್ಚನ್ನು ಪರಮಗುರುಭಕ್ತಿಧುರೀಣರಾದ ಮ|| ರಾ|| ಪೆನಗೊಂಡೆ ಮಲ್ಲಣ್ಣನವರು ವಹಿಸಿಕೊಂಡು ಅಸಾಧಾರಣ ಗುರುಭಕ್ತಿಯಿಂದ ಈ ಕಾರ್ಯವನ್ನು ನೆರವೇರಿಸಿದರು. ಜಗದಾಚಾರ್ಯರು ಸದರಿ ಗುರುಭಕ್ತರಿಗೆ ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುವ,

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತಿ, ನಾಮಗಿರಿಪೇಟೆ.

ಸೇಲಂ ಡಿಸ್ಟ್ರಿಕ್ಟ್ ರಾಶೀಪುರಂ ತಾಲೂಕು ನಾಮಗಿರಿಪೇಟೆಯಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಸಮಾಜದವರಿಂದ ಕಳೆದ 26-2-30 ನೆಯ ಬುಧವಾರ ಸಾಯಂಕಾಲ ಪಂಚಕಲಶ ಸ್ಥಾಪನೆಯೂ, ರುದ್ರಾಭಿಷೇಕಪೂರ್ವಕ ಷೋಡಶೋಪಚಾರ ಪೂಜೆಯೂ, ಮಾಡಲ್ಪಟ್ಟಿತು. ಮಾರನೆಯ ದಿವಸ ಗಣಾರಾಧನೆಯೂ, ಸಾಯಂಕಾಲ 4 ಘಂಟೆಯ ವರೆಗೆ ವೀರಶೈವ ಮತಸಂಬಂಧವಾದ ಉಪನ್ಯಾಸವೂ ಆ ದಿವಸ ಮತ್ತು ಮಾರನೆಯ ದಿವಸಗಳಲ್ಲಿ ಕೆಲವು ಭಕ್ತಮಾಹೇಶ್ವರ ವಟುಗಳ ದೀಕ್ಷಾ ಸಮಾರಂಭವೂ ಬಹುವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ಶುಕ್ರವಾರ ಪ್ರಾತಃಕಾಲ 9 ಘಂಟೆಯಿಂದ 12 ಘಂಟೆಯ ವರೆಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಮಹಿಮಾಪ್ರತಿಪಾದಕವಾದ ಉಪನ್ಯಾಸವು ನಡೆದು ಸಾಯಂಕಾಲ 7 ಘಂಟೆಗೆ ಅಲಂಕರಿಸಿದ ಪಲ್ಲಕ್ಕಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಉತ್ಸವವು ಗುರುಗಳ ಭಜನೆಯಿಂದಲೂ, ಅನೇಕ ವಾದ್ಯವಿಶೇಷಗಳಿಂದಲೂ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಗ್ರಾಮದಲ್ಲಿ ಉತ್ಸವವು ಬರುವಕಾಲಕ್ಕೆ ಸಮಸ್ತ ಮತೀಯರೂ ಜಗದ್ಗುರುಗಳಿಗೆ ಕಾಯಿಕರ್ಪೂರಗಳನ್ನು ಸಮರ್ಪಿಸಿ, ಗುರುಕೃಪೆಗೆ ಪಾತ್ರರಾಗುತ್ತಿದ್ದರು. ಉತ್ಸವವು ರಾತ್ರಿ 1 ಘಂಟೆಗೆ ಸೇವಾಸಮಾಜವನ್ನು ತಲ್ಪಿತು. ಮಹಾಮಂಗಳಾರತಿಯು ನೆರವೇರಿದ ಮೇಲೆ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಪ್ರತ್ಯಕ್ಷದರ್ಶಿ.

ಅಂಣಿಗೇರಿ.

ಇದೇ ಮಹಾಶಿವರಾತ್ರಿಯ ಪುಣ್ಯಕಾಲದಲ್ಲಿ ಅಂದರೆ ತಾ|| 26-2-30 ನೇ ದಿವಸ ಉಭಯ ಜಗದ್ಗುರುಗಳ ಜಯಂತಿ ಮಹೋತ್ಸವವು ಇಲ್ಲಿಯ ಪಂಚಾಚಾರ್ಯ ಭಜನಾಸಂಘದ ಮಹನೀಯರ ನಿರತಿಶಯವಾದ ಉತ್ಸಾಹ ಭಕ್ತಿವಿಶೇಷದಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸಾಯಂಕಾಲ 6 ಘಂಟೆಗೆ ಸಮಸ್ತ ವೀರಶೈವ ಗುರುಭಕ್ತವೃಂದವು ಶ್ರೀ ಮಲ್ಲಿಕಾರ್ಜುನ ಮಹಾ ಶಿವಾಲಯದಲ್ಲಿ ಸೇರಿ ಆಚಾರ್ಯದ್ವಯದ ಬಿಂಬಗಳಿಗೆ ದಿವ್ಯಾಭಿಷೇಕವನ್ನು ಸಲವಡಿಯ ಪಂ|| ಶ್ರೀಕಂಠಶಾಸ್ತ್ರೀ ಅನುರಾರ್ಯ ಹಿರೇಮಠ ಇವರಿಂದ ವಿಧಿವತ್ತಾಗಿ ಮಾಡಿಸಿ ಆನಂದ ಭರಿತರಾಗಿ ಸಮರ್ಚನಾಸಮಾಪ್ತಿಯ ಮಂಗಲನೀರಾಜನವನ್ನು ಮಾಡಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಮಹಾರಾಜಕೀ ಜಯ! ಶ್ರೀ ಪಂಡಿತಾಚಾರ್ಯ ಗುರುಸಾರ್ವಭೌಮಕೀ ಜಯ! ಎಂಬ ಉದ್ಘೋಷದಿಂದ ವೀರಶೈವ ಮಹಾಮತಸ್ಥಾಪಕರ ಜಯಂತಿಯ ಪುಣ್ಯಯೋಗದಿಂದ ಧನ್ಯರಾದೆನೆಂದು ಅನ್ನುತ್ತಿದ್ದರು. ಬಳಿಕ ಆಚಾರ್ಯದ್ವಯರ ಫೋಟೋಗಳನ್ನು ದಿವ್ಯಪುಷ್ಪಮಾಲಿಕೆಗಳಿಂದ ಲಂಕರಿಸಿ, ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಭಜನಾಸಂಘದವರ ಸ್ತೋತ್ರದೊಡನೆಯೂ ಬ್ಯಾಂಡುವಾದ್ಯವಿಶೇಷದಿಂದಲೂ ಹೊರಟು ಪುರಬೀದಿಗಳಲ್ಲಿ ಒಳ್ಳೇ ವೈಭವದ ಉತ್ಸವವನ್ನು ಮಾಡಿ, ಮಲ್ಲಿಕಾರ್ಜುನ ದೇವಾಲಯಕ್ಕೆ ಬಂದು, ಬೆಳಗಾಗುವವರೆಗೆ, ಆಚಾರ್ಯಸೇವಾಭಜನೆಯಲ್ಲಿ ಲೀನರಾಗಿ ಈ ಮಹಾಶಿವರಾತ್ರಿಯನ್ನು ಶಿವಯೋಗದಲ್ಲಿ ಪೂರ್ಣಗೊಳಿಸಿದ ಪ್ರಮುಖರಾದ ಮ|| ರಾ|| ನಿಜಲಿಂಗಪ್ಪನವರು ಹುಬ್ಬಳ್ಳಿ ಮ|| ರಾ|| ಸಿದ್ಧಲಿಂಗಪ್ಪನವರು, ಗಾಣಿಗರ ಮ|| ರಾ|| ಬಸಪ್ಪನವರು ಇಸರಿ, ಮ|| ರಾ|| ಶಿವಪ್ಪನವರು ಪಟ್ಟಣಶೆಟ್ಟಿ ಮತ್ತು ಪಕ್ಕೀರಪ್ಪನವರು ಪಲ್ಲೇದ, ಮೊದಲಾದ ಮಹಾಶಯರಿಗೆ ಶ್ರೀ ಜಗದ್ಗುರುಗಳು ನಿತ್ಯಮಂಗಲವನ್ನೀಯಲೆಂದು ಕೋರುವ

ಸೆಕ್ರೆಟರಿ ಶ್ರೀ ಲಿಂಗರಾಜ ಲಾಯಬ್ರರಿ,
ಅಂಣಿಗೇರಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸೂಚನಾಪತ್ರಿಕೆಗೆ ಉತ್ತರವು.

ತಾ|| 13-1-30ನೆಯ ಪಂಚಾಚಾರ್ಯ ಪ್ರಭೆಯಲ್ಲಿ ಹೆಡಗಾಪುರದಲ್ಲಿ ನಡೆದ ಗಣಾರಾಧನೆಯಲ್ಲಿ ಜಂಗಮರ ಪುಂಡಾಟದ ವಿಷಯವಾಗಿ "ಶಾಸ್ತ್ರವಿರುದ್ಧವರ್ತನ" ಎಂಬ ನಾಮದಿಂದೊಡಗೂಡಿದ ಒಂದು ಲೇಖನವು ಪ್ರಕಟಿಸಲ್ಪಟ್ಟಿರುವುದನ್ನೆ! ಈ ಪ್ರಕಟನೆಯ ಅರ್ಥವನ್ನು ಚೆನ್ನಾಗಿ ಓದಿ ತಿಳಿದುಕೊಳ್ಳದೆ ಸದಸದ್ವಿಚಾರಶೂನ್ಯರಾಗಿ ತಮ್ಮ ನಾಮೋಲ್ಲೇಖವನ್ನು ಮಾಡಲು ಶಕ್ತಿಗುಂದಿ ಸೂಚನಾಪತ್ರಿಕೆಯೆಂಬ ಹೆಸರಿಟ್ಟು ಹಸ್ತಪತ್ರಿಕೆಗಳನ್ನು ಪ್ರಕಟಿಸಿರುವರು. ಇವೆರಡು ಪ್ರಕಟನೆಗಳನ್ನು ನೋಡಿದವರಿಗೆಲ್ಲ ಆಯಾಯ ಪ್ರಕಟನೆಗಳೊಳಗಿರುವ ಅಸತ್ಯಗುಣಗಳಾವುವು ಎಂಬುದು ಗೋಚರವಾಗದಿರಲಾರದು. ಈ ಸೂಚನಾಪತ್ರಿಕೆಯು ಕಲ್ಬುರ್ಗಿ, ಬಿದರೆ, ಹುಮನಾಬಾದ್, ಕಲ್ಯಾಣ, ಈ ಪ್ರಾಂತದ ಸರ್ವವೀರಶೈವರ ಸಮ್ಮತಿಯಿಂದ ಪ್ರಕಟಿಸಲ್ಪಟ್ಟಿದೆಯೆಂದು ಹೇಳಿಕೊಂಡಿರುವುದನ್ನು ನೋಡಿದರೆ ಆಯಾಯ ಪ್ರಾಂತಗಳಲ್ಲಿರುವ ಪ್ರತಿಯೊಬ್ಬ ವೀರಶೈವನೂ ನಗದಿರಲಾರನು. ತನ್ನನ್ನು ಯಾರೂ ನೋಡಬಾರದೆಂದು ತನ್ನ ಕಣ್ಣನ್ನು ತಾನೇ ಮುಚ್ಚಿಕೊಂಡು ಹಾಲುಕುಡಿಯುತ್ತಿರುವ ಬೆಕ್ಕಿನಂತೆ ಈ ಲೇಖಕರು ತಮಗಿರುವ ಅಲ್ಪಸ್ವಲ್ಪವಾದ ಜ್ಞಾನಶಕ್ತಿಯನ್ನೂ ಕೂಡ ಮುಕುಲನಮಾಡಿಕೊಂಡು ನಾನು ಹ್ಯಾಗೆ ಬರೆದರೂ ನೋಡುವರಾರೆಂಬ ತಿಳುವಳಿಕೆಯಿಂದ ಮನಸ್ವಿಯಾಗಿ ಬರೆದಂತೆ ಕಾಣುತ್ತದೆ. ಹೀಗೆ ಬರೆದರೆ ನಮ್ಮನ್ನು ಬೆಕ್ಕಿಗೆ ಹೋಲಿಸಬಹುದೆಂದು ಇವರು ತಿಳಿದಿದ್ದರೆ ಹೀಗೆಂದೂ ಬರೆಯುತ್ತಿರಲಿಲ್ಲವು. ಒಂದುಪಕ್ಷ ಪ್ರತ್ಯೇಕ ಪ್ರಾಂತದ ಮುಖಂಡರ ಹೆಸರನ್ನಾದರೂ ಸೂಚಿಸಿ ಹಾಗೆ ಬರೆದರೂ ಬರೆಯಬಹುದಾಗಿತ್ತು. ಅಂತಹ ಹೆಸರುಗಳು ಈ ಸೂಚನಾಪತ್ರಿಕಾಕರ್ತರಿಗೆ ಸಿಗಲಿಲ್ಲವೆಂದು ತೋರುತ್ತದೆ. ಹಾಗೆ ಹೆಸರುಗಳನ್ನು ಸೂಚಿಸದೆ ಪ್ರಸಿದ್ಧಿಸಿರುವುದು. ನಿಮ್ಮ ಅಂಧತ್ವವನ್ನು ನೀವೇ ಮುಂದುವರಿಸಿದಂತೆ ಆಗುವದಿಲ್ಲವೇ? ವಾಚಕಮಹಾಶಯರೇ! ಪ್ರಮತ್ತರ ಮುಖದಿಂದ ಹೊರಡುವ ವಚನಗಳಂತಿರುವ ಈ ಲೇಖಕರ ವಚನವೈಖರಿಯನ್ನಿಷ್ಟು ನಿದರ್ಶನಮಾಡೋಣ. ತಮ್ಮ ಸೂಚನಾಪತ್ರಿಕೆಯಲ್ಲಿ ನಮ್ಮ ದೇಶದಲ್ಲಿ ದೊಡ್ಡಮಠಾಧಿಕಾರಿಗಳಲ್ಲಿ ಪಿತೃದೇವತಾರಾಧನೆ, ಪುಣ್ಯತಿಥಿ, ಶ್ರಾದ್ಧಕರ್ಮ, ಪ್ರೇತಸಂಸ್ಕಾರವೇ ಮೊದಲಾದ ಕರ್ಮದ ಪಂಚಗೋತ್ರವಿವರಗಳನ್ನು ತಾವೇ ಆಚರಿಸುತ್ತಲಿದ್ದಾರೆ. ಎಂದು ಬರೆದಿರುವುದನ್ನು ನೋಡಿದರೆ ಈ ಸೂಚನಾಪತ್ರಿಕಾಕರ್ತರಿಗೆ ದಶಕರ್ಮಗಳೆಂದರಾವುವು? ಇವುಗಳ ರಹಸ್ಯವೇನು? ಪಂಚಸೂತಕಗಳಾವುವು? ಇವುಗಳ ರಹಸ್ಯವೇನು? ಎಂಬುದೊಂದೂ ಗೊತ್ತಿಲ್ಲದಂತೆ ಕಾಣುತ್ತದೆ. ಇಂತಹ ವಿಚಾರವೆಲ್ಲ ಶಾಸ್ತ್ರನೈಪುಣ್ಯವನ್ನು ಪಡೆದವರಿಗೆ ಗೊತ್ತಲ್ಲದೆ ಇತರರಿಗೆ ಹೇಗೆ ತಿಳಿಯಬಲ್ಲದು? ಹೀಗಿದ್ದರೂ ತಮಗೆ ತಾವೇ ಪಂಡಿತಂಮನ್ಯರಾಗಿರುವ ಇವರಿಗೆ ತಿಳಿಸುವರಾರು? ತಿಳಿದೂ ತಿಳಿಯದ ಮೂಢರಿಗೆ ಲಿಂದ ಔಷಧವನ್ನು ಪರಬೇ(ಕು)? ಇಲಿಗಳ ಊರಲ್ಲಿ ಬೆಕ್ಕು ದೊರೆತನಮಾಡಿದಂತೆ ಈ ಲೇಖಕರು ಅಜ್ಞಜನರ ಸಮುದಾಯದಲ್ಲಿ ಇಂಥ ಅಶಾಸ್ತ್ರೀಯ ದುರ್ಬೋಧೆಗಳನ್ನು ಚೀರಿ ಚೀರಿ ಹೇಳಿ ದೇಶಾವನತಿಯನ್ನೂ ಹಾಗೂ ತಮ್ಮ ಅವನತಿಯನ್ನೂ ತಂದುಕೊಳ್ಳುವದು ಭೂಷಣವಲ್ಲ. ಇನ್ನು ಮೇಲಾದರೂ ದಶಕರ್ಮಗಳನ್ನೂ ಅವುಗಳ ಪದ್ಧತಿಯನ್ನೂ ಪಂಚಸೂತಕವಿಚಾರವನ್ನೂ ತಿಳಿದವರಲ್ಲಿ ತಿಳಿದುಕೊಂಡು ಆಚರಿಸಿ ಅನ್ಯರಿಗೂ ಹೇಳಿ ಧನ್ಯರಾಗಿರಿ. ನೀವು ಬರೆದ ಹೆಸರುಗಳು ದಶಕರ್ಮಗಳಲ್ಲೇ ಸೇರಿಲ್ಲ. ಅಸಲನ್ನೇ ಕಳೆದುಕೊಂಡು ಪೇಚಾಡುತ್ತೀರಿ, ಆ ದಶಕರ್ಮಗಳ ಹೆಸರನ್ನು ವಿವರಿಸುತ್ತೇನೆ. ಆ ಹೆಸರನ್ನಾದರೂ ಅಭ್ಯಾಸಮಾಡುವುದುಚಿತವೆಂದು ಕಾಣುತ್ತದೆ. ಗರ್ಭಾಧಾನ, ಪುಂಸವನ, ಸೀಮಂತ, ಜಾತಕರ್ಮ, (ಲಿಂಗಧಾರಣ) ನಾಮಕರಣ, ಅನ್ನಪ್ರಾಶನ, ಚೌಲ, ಅಕ್ಷರಾಭ್ಯಾಸ, ದೀಕ್ಷಾ, ವಿವಾಹ, ಇವೇ ದಶಕರ್ಮಗಳು. ಇವುಗಳನ್ನು ಪ್ರತಿಯೊಬ್ಬ ವೀರಶೈವನು ಆಚರಿಸಬೇಕೆಂದು ಸಿದ್ಧಾಂತಗ್ರಂಥಗಳು ಸಾರುತ್ತವೆ. ಅಲ್ಲದೆ ವಾರದವರು ಮುದ್ರಿಸಿದ ದಶಕರ್ಮ ಪದ್ಧತಿಯೆಂಬ ಗ್ರಂಥವು ಸುಪ್ರಸಿದ್ಧವದೆ. ಅದನ್ನು ತರಿಸಿ ನೋಡಿಕೊಳ್ಳಿರಿ; ಮತ್ತು ಪಂಚಸೂತಕನಾಮಗಳನ್ನೂ ಕೂಡ ಮುಂದೆ ಬರಿಯಲಾಗಿದೆ ತಿಳಿದುಕೊಳ್ಳಿರಿ. ನೀವು ಅಭಿಪ್ರಾಯಪಡುವ ಶ್ರಾದ್ಧಾದಿಕರ್ಮಗಳು ಪಂಚಸೂತಕಗಳಲ್ಲ! ಇಗೋ ನೋಡಿರಿ? 1. ಜಾತಿಸೂತಕ, 2. ಜನನಸೂತಕ, 3. ಉಚ್ಛಿಷ್ಟಸೂತಕ, 4. ರಜಸ್ಸೂತಕ, 5. ಪ್ರೇತಸೂತಕ ಇವೇ ಪಂಚಸೂತಕಗಳು. ಇವು ಶಿವಲಿಂಗಪೂಜೆಗೆ ವಿಘ್ನವನ್ನು ಮಾಡುವುದಿಲ್ಲ. ಲಿಂಗಪೂಜೆಯೆಂಬುವದು ನಿತ್ಯವ್ರತವು. ಈ ನಿತ್ಯವ್ರತವನ್ನು ಆಚರಿಸುವುದರಲ್ಲಿ ಮಾತ್ರ ಸೂತಕಗಳಿಲ್ಲವೇ ಹೊರತು ಇನ್ನುಳಿದ ಕಾರ್ಯಗಳಿಗೆಲ್ಲ ಉಂಟೆಂದು ಸಿದ್ಧಾಂತಶಾಸ್ತ್ರವು ಸಿಂಹಗರ್ಜನೆಯನ್ನು ಮಾಡುತ್ತಿದ್ದರೂ ಬಧಿರರಿಗೆಂತು ಕೇಳೀತು? ಶಾಗಿ ಕರ್ತೃಂದರೆ ಲಾಳಿಎತ್ತು ಬೆದರಿಬಿದ್ದಂತೆ ಅನ್ಯರು ಆಚರಿಸಿದರೆ ಬೆದರಿಬೀಳುವದು ನಿಮ್ಮ ಧರ್ಮವಲ್ಲ! ಸಿದ್ಧಾಂತವನ್ನು ತಿಳಿದವರಿಂದ ಈ ಸೂಕ್ಷ್ಮ ವಿಚಾರವನ್ನೆಲ್ಲಾ ಮನಸ್ಸಿಂದಾದರೂ ತಿಳಿದುಕೊಳ್ಳಿರಿ. ಆಚರಿಸದಿದ್ದರೂ ಅಡ್ಡಿ ಇಲ್ಲ ಅನ್ಯರನ್ನು ಅಧೋಗತಿಗೀಡುಮಾಡಬೇಡಿರಿ. ಮತ್ತು ನಿಮ್ಮ ಲೇಖನದಲ್ಲಿ ಈ ದುಸ್ಸಪ್ರವರ್ತಕರು (ಬಸವನಿಂದಾ, ವಿರಕ್ತನಿಂದಾ, ತನ್ನ ಪಾದೋದಕ ತಾನು ತೆಗೆದುಕೊಳ್ಳುವದಿಲ್ಲ ಎಂದು ಉಬ್ಬಿ ಉಬ್ಬಿ ಬರೆದಿರುವಿರಿ) ಶಾಸ್ತ್ರವಿರುದ್ಧವಾದದ್ದು ಯಾವುದಾದರೇನು? ಎಲ್ಲವೂ ಶಾಸ್ತ್ರವೇ ಹೌದು. ಶಾಸ್ತ್ರಕ್ಕೆ ಅವಿರುದ್ಧವಾದುದೆಲ್ಲ ನಮ್ಮವೇ ಹೌದು. ನೀವು ಶಾಸ್ತ್ರವಿರುದ್ಧವರ್ತನೆಯೆಂಬ ಲೇಖವನ್ನು ನೋಡಿದಂತೆ ತೋರುವದಿಲ್ಲ. ಇನ್ನಾದರೂ ಕಣ್ತೆರೆದು ನೋಡಿರಿ. ಅದರಲ್ಲಿ ನೀವು ಹೇಳುವ ಈ ನಿಂದೆಗಳ ಪೈಕಿ ನಾನು ನೋಡಿದ್ದರಲ್ಲಿ ಒಂದೂ ಕಂಡುಬರಲಿಲ್ಲ. ಹೀಗಿದ್ದರೂ ಕಳವನ್ನು ತಲೆಯಮೇಲೆ ಹಾಕಿಕೊಂಡು ಕುಣಿಯುವ ಮೂಢನಂತೆ ಹೀಗೆ ಬರೆಯುವುದು ಮೂರ್ಖತನವಲ್ಲವೇ? ಇದರ ಮೇಲಿಂದ ಈಗಿರುವ ಉಭಯಪಕ್ಷಗಳಲ್ಲಿ ಈ ಲೇಖಕರು ಒಂದು ಪಕ್ಷದ ಹಠವಾದಿಗಳು ಎಂಬುದಾಗಿ ಸಿದ್ಧವಾಗುವದು. ಆ ವಿಷಯವೇನೂ ಇಲ್ಲಿ ಧ್ಯೇಯವಲ್ಲ. ನೀವು ತಿಳಿದುಕೊಳ್ಳಬೇಕಾದರೆ ಮಾತ್ರ ಆ ವಿಷಯಕಗ್ರಂಥಗಳು ಅನೇಕಗಳಿರುತ್ತವೆ. ಅವುಗಳನ್ನು ನೋಡಿಕೊಂಡು ಪಠಿಸಿ ಸ್ತುತಿಸಿ, ಕೀರ್ತಿಸಿ ಧನ್ಯರಾಗಿರಿ. ಹಲಂತು ನಮಗೆ ಯಾವ ಪಕ್ಷಪಾತವೂ ಬೇಡ; ಯಥಾರ್ಥ ಸಿದ್ಧಾಂತಶಾಸ್ತ್ರದ ಪ್ರಚಾರವೇ ನಮ್ಮ ಮುಖ್ಯ ಧ್ಯೇಯವಾಗಿರುತ್ತದೆ. ಎಂಬಂಶವನ್ನು ನೆನಪಿನಲ್ಲಿಡತಕ್ಕದ್ದು. ಇನ್ನು (ಪಂಚಕಲಶಸ್ಥಾಪನವಾದಲ್ಲಿ 1 ಗುರುಕಲಶಕ್ಕೆ ಎರಡು ಬಗೆ ಗುರುಗಳು, ಎರಡು ಸೂತ್ರಗಳು, ಮತ್ತು ಎರಡು ಗದ್ದುಗೆಗಳನ್ನು ಮಾಡುತ್ತಾರೆ. ಇಂಥ ಕೈವಾಚಾರಗಳನ್ನು ನಟಿಸುತ್ತ ಉದರಪೋಷಣ ತೀರಿಸಿಕೊಳ್ಳುವರು ವೀರಶೈವರೇ ಅಲ್ಲವೆಂದು) ಬರೆದಿರುವಿರಿ; ಶಹಬಾಸ್! ಸೂಚನಾಪತ್ರಿಕಾಕರ್ತರೇ? ಶಹಬಾಸ್! ಈ ಪದ್ಧತಿಯು ನಿಮ್ಮ ವಿಚಿತ್ರಶಾಸ್ತ್ರದಲ್ಲಿದ್ದರೂ ಇರಬಹುದು, ಅದ್ದರಿಂದಲೇ ಅದು ನಿಮ್ಮ ವಿರೂಪವಾದ ದೃಷ್ಟಿಪಥಕ್ಕೆ ಬಿದ್ದರೂ ಬಿದ್ದಿರಬಹುದು. ಆದರೆ ಯಥಾರ್ಥವಾದ ಸಿದ್ಧಾಂತಶಾಸ್ತ್ರದಲ್ಲಿ ಹಾಗಿರುವದಿಲ್ಲ; ಪಂಚಕಲಶಸ್ಥಾಪನವಾದಲ್ಲಿ ಪಂಚಸೂತ್ರಗಳ ಮಾಹೇಶ್ವರರೇ ತತ್ ತತ್ಸೂತ್ರಾನುಸಾರವಾಗಿ ಪ್ರತಿಯೊಂದು ಕಲಶದಲ್ಲಿ ಐದು ಜನರು ಮುಕ್ತಿಜರಾಗಿ ಕೂರುತ್ತಾರೆ. ಅಲ್ಲಿ ಒಂದೇ ಗುರುಗದ್ದುಗೆಯುಂಟಲ್ಲದೆ ಮತ್ತೊಂದಿರುವದಿಲ್ಲ. ಪ್ರಾಯಶಃ ನಿಮ್ಮ ಅಕ್ಷಿಯದಲ್ಲಿದ್ದರೆ ಇರಬಹುದು. ಅದು ನಮಗೆ ತಿಳಿಯದು; ಈ ವಿಷ[illegible]ಲವನ್ನರಿಗೂ ಕೂಡ ಗೊತ್ತಿದ್ದ ಸಂಗತಿಯಾಗಿದೆ. ಹೀ[illegible] ಬರೆದು ಕೇಳುವದಾದರೂ ನಿಮ್ಮ ನೈಸರ್ಗಿಕ ಸ್ಥಿ[illegible] ತೋರುತ್ತದೆ. ಹೀಗೆ ಮಾಡಿದರೆ ಬೂಟಾಟಿಕರಲ್ಲಿ ಗಣನೆಯಾಗುವಿರಿ. ಆದಕಾರಣ ಸನ್ಮಾರ್ಗಗಾಮಿಗಳಾಗಿ ವರ್ತಿಸಿರಿ. ಇನ್ನು "ಶಿವಸೂತ್ರ ಮೊದಲಾದ ಕೈವಾಚಾರಗಳನ್ನು ಆಚರಿಸಿ ನರಕಭಾಗಿಗಳಾಗಬೇಡಿರಿ ಶಿವಸೂತ್ರಗಳು ವೀರಶೈವ ಮತದಲ್ಲಿ ಧರಿಸಬೇಕೆಂದು ಶಾಸ್ತ್ರಸಿದ್ಧಾಂತವಿಲ್ಲ; ಒಂದುಪಕ್ಷ ಆಚರಿಸಿದ್ದಾದರೆ ಉನ್ಮತ್ತಶೈವನಾಗುತ್ತಾನೆಂದು ಮನ್ವಾದಿ ಧರ್ಮಶಾಸ್ತ್ರಗಳು ಸಾರುತ್ತಿರುವವೆಂದು ಬರೆದಿರುವಿರಿ." ಇದರ ಮೇಲಿಂದ ಈ ಲೇಖಕರಿಗೆ ಸಿದ್ಧಾಂತಶಾಸ್ತ್ರಾವಲೋಕನವೇ ಆಗಿಲ್ಲವೆಂದು ಸಿದ್ಧವಾಗುವದು. ಆಗಿದ್ದರೆ ಶಾಸ್ತ್ರಾಧಾರಪೂರ್ವಕವಾದ ಉತ್ತರಗಳನ್ನು ತೋರಿಸುತ್ತಿದ್ದರಲ್ಲದೆ ಅವುಗಳರತಕ್ಕ ಪುಟಗಳ ಸಂಖ್ಯೆಯನ್ನು ಕೂಡ ಸೂಚಿಸುತ್ತಿದ್ದರು. ಹೀಗೆ ಸೂಚಿಸದೆ ತನ್ನ ಮನಬಂದಂತೆ ಬರೆಯುವದು ಪ್ರಾಜ್ಞರಿಗೆ ಸರಿಯಾಗದು. ಅದ್ದರಿಂದ ತಿಳಿಯದೆ ದುರಭಿಮಾನಕ್ಕೆ ಒಳಗಾಗಬೇಡಿರಿ; ಶಿವೆಯ ಬಗ್ಗೆ ಪ್ರಭೆಯಲ್ಲಿ ಪ್ರಕಟವಾದ "ಶಾಸ್ತ್ರವಿರುದ್ಧವರ್ತನ" ಎಂಬ ಲೇಖನದಲ್ಲಿದ್ದ ಪ್ರಮಾಣಗಳನ್ನು ನೋಡಿ ಅದರಂತೆ ಆಚರಿಸಿ ಮುಕ್ತಿಭಾಗಿಗಳಾಗಿರಿ; ಇನ್ನುಳಿದ ನಿಮ್ಮ ಪ್ರಶ್ನಗಳಿಗೆ ತಾ|| 13-1-30ನೆಯ ಪ್ರಭೆಯಲ್ಲಿ ಉತ್ತರಗಳಿರುವವು. ಅವುಗಳನ್ನು ನೋಡಿ ಸಂತುಷ್ಟರಾಗಿರಿ. ಹೆಡಗಾಪುರದಲ್ಲಿ ಹದಿನಾರು ಸಹಸ್ರಕ್ಕಿಂತ ಮೇಲ್ಪಟ್ಟು ಜನರು ಕೂಡಿದ್ದರೆಂದೂ ಆ ಸಮಯದಲ್ಲಿ ಅನೇಕ ವಿದ್ವಾಂಸರು ಅಮೃತವಾಣಿಯಿಂದ ಬೋಧಿಸಿದರೆಂದೂ ಬರೆದಿರುವಿರಿ. ಹದಿನಾರು ಸಹಸ್ರವೇಕೆ ಹದಿನಾರು ನೂರುಜನರು ಕೂಡಿದ್ದನ್ನು ಸಿದ್ಧಿಯಗೊಳಿಸುವಿರಾ? ಯಾವ ಯಾವ ವಿದ್ವಾಂಸರು ಯಾವ ಯಾವ ವಿಷಯಗಳ ಮೇಲೆ ವ್ಯಾಖ್ಯಾನಮಾಡಿದರೆನ್ನುವದನ್ನು ಹೇಳಬಲ್ಲಿರಾ? ಹೀಗೆ ಸುಳ್ಳುಹೇಳುತ್ತ ಉದರಂಭರಣವನ್ನು ಮಾಡಿಕೊಂಡರೆ ದೇವರು ಮೆಚ್ಚುವನೇ? ಉದರಂಭರಿಗಳೇ? ಸತ್ಯಸಿದ್ಧಾಂತಜ್ಞರು ನಿಮ್ಮ ಅಸತ್ಯದ ಬುರವೆಯನ್ನು ಕೇಳುವದೆಂತು? ಅದ್ದರಿಂದ ಸತ್ಯಸಂಧರಾಗಿರಿ; ಅಸತ್ಯದಿಂದ ಪ್ರಯೋಜನವಿಲ್ಲ. ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ವರ್ತಿಸಿ ಯಮಲೋಕದಾರಿಯನ್ನು ಹಿಡಿಯಬೇಡಿರೆಂದು ನಿಮ್ಮ ಮೇಲಿನ ಪ್ರೇಮಾತಿಶಯದಿಂದ ಸೂಚಿಸೋಣವಾಗಿದೆ.

ಓರ್ವ ಮತಾಭಿಮಾನಿ.

ಓಂ ನಮೋ ಭಗವತೇ ಜಗದ್ಗುರು ರೇಣುಕಾಚಾರ್ಯಾಯ.

ಶ್ರೀ ಮಹಾರಥೋತ್ಸವಾಹ್ವಾನಪತ್ರಿಕಾ.

ಶ್ರೀಮತ್ಸಕಲಶಾಸ್ತ್ರದ್ರಂಭಾಪುರೀ ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನದಲ್ಲಿ ಅನಾದಿಯಿಂದಲೂ ಪ್ರತಿಸಂವತ್ಸರದ ಫಾಲ್ಗುಣ ಶುದ್ಧ ೮ ಮಿತಿಯಿಂದ ಬಹುಳ ೮ ಮಿತಿವರೆಗೂ ನಡೆಯುತ್ತಿದ್ದಂತೆ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1851 ನೇ ಶುಕ್ಲನಾಮ ಸಂವತ್ಸರದ ಫಾಲ್ಗುಣ ಶುದ್ಧ ೮ ಮಿತಿಲಾಗಾಯ್ತು ಬಹುಳ ೮ ಮಿತಿಯವರೆಗೂ ಉಭಯ ದಿನಗಳಲ್ಲಿ ನಡೆಯುವ ವೃಷಭೋತ್ಸವ, ಅಶ್ವಾರೋಹಣೋತ್ಸವ ಆಂದೋಳಿಕೋತ್ಸವ, ಪುಷ್ಪಕೋತ್ಸವ, ಶಸುನೋತ್ಸವ, ಸುಪ್ರಭಾತೋತ್ಸವ, ಕುಂಕುಮೋತ್ಸವ, ವಸಂತೋತ್ಸವ, ಅವಭೃತಸ್ನಾನ, ಭದ್ರಾನದಿಯಲ್ಲಿ ತೆಪ್ಪೋತ್ಸವ ಮೊದಲಾದ ನಿತ್ಯಉತ್ಸವಗಳಿಗೂ ಫಾಲ್ಗುಣ ಶುದ್ಧ 14 (ತಾ|| 13-3-1930) ನೇ ಗುರುವಾರ ಮಘಾನಕ್ಷತ್ರದಲ್ಲಿ ನಡೆಯುವ ಶ್ರೀ ಮಹಾರಥೋತ್ಸವಕ್ಕೂ ಗುರುಚರಣಸೇವಾಧುರೀಣರಾದ ತಾವು ಪುತ್ರಮಿತ್ರಕಳತ್ರಾದಿಗಳೊಂದಿಗೆ ಆಗಮಿಸಿ ಉತ್ಸವಭಾಗಿಗಳಾಗಿ ಶ್ರೀಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಶ್ರೀ ಮಹಾ|| || ಕೃಪೆಗೆ ಪಾತ್ರರಾಬೇಕೆಂದು ಹಾರೈಸುವ,

ಮೊಕ್ಕಾಂ ಬಾಳೆಹೊನ್ನೂರು, ಶ್ರೀಜಗದ್ಗುರು ರಂಭಾಪುರಿ
ಮಹಾಸಂಸ್ಥಾನದ ಏಜಂಟರು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಫಾಲ್ಗುಣ ಶುದ್ಧ ಚತುರ್ದಶೀ (13-3-30) ಗುರುವಾರ.

ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ಚತುರ್ದಶಿ ಗುರುವಾರ (13-3-30) ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತ ಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಅಡ್ವೋಕೇಟ್ ಮಿ|| ಸಿ. ನರಸಿಂಹಯ್ಯನವರ ಬಂಗಲೆಯಲ್ಲಿ ನಂಜನೆಂಬವನು ಸುಮಾರು ಒಂದು ಸಾವಿರ ರೂಪಾಯಿಗಳ ಆಭರಣಾದಿಗಳನ್ನು ಕದ್ದನೆಂದು ಸಿಟಿಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು.

ಮೈಸೂರು ರಾಜಾಸ್ಥಾನದಲ್ಲಿ ವೈಣಿಕವಿದ್ವಾಂಸರಾಗಿರುವ ಶ್ರೀ|| ವೆಂಕಟಗಿರಿಯಪ್ಪನವರು ತಂಜಾವೂರು ಜಿಲ್ಲಾ ತಿರುವಾಡಿಯೊರೆ ಪಂಡಾರಸನ್ನಿಧಿಯಲ್ಲಿ ತಮ್ಮ ವೀಣಾಕಚೇರಿಯನ್ನು ನಡೆಯಿಸಿ ಅವರಿಂದ ವಿಶೇಷವಾಗಿ ಸನ್ಮಾನಿಸಲ್ಪಟ್ಟರೆಂದು ತಿಳಿದುಬಂದಿದೆ.

ಮೈಸೂರು ಸಂಸ್ಥಾನದ ಸೆಕೆಂಡರಿ ವಿದ್ಯಾಭ್ಯಾಸದ 5 ನೆಯ ವಾರ್ಷಿಕ ಸಮ್ಮೇಲನವು ಶಿವಮೊಗ್ಗೆಯಲ್ಲಿ ಈ ದಿವಸ ಪ್ರಾರಂಭವಾಗಿ 3 ದಿನಗಳವರೆಗೆ ನಡೆಯುವುದು. ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಾದ ಶ್ರೀ|| ಎನ್. ಎಸ್. ಸುಬ್ಬರಾಯರು ಸಮ್ಮೇಲನದ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಕಳೆದ ಭಾನುವಾರ ಶ್ರೀಮನ್ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದವರು ಕಾಲೇಜಿನ ಉಪನ್ಯಾಸಮಂದಿರದಲ್ಲಿ ಸಂಘದ ವಾರ್ಷಿಕೋತ್ಸವವನ್ನು ನೆರವೇರಿಸಿ, ಶ್ರೀಮನ್ ಆಸ್ಥಾನ ಮಹಾವಿದ್ವಾನ್ ಕರ್ಣಾಟಕ ಭಾಷಾರತ್ನ ಪಿ. ಆರ್. ಕರಿಬಸವಶಾಸ್ತ್ರಿಗಳಿಗೂ ಶ್ರೀಮನ್ ತಿ. ಗಳಗನಾಥರವರಿಗೂ ಸನ್ಮಾನಪತ್ರಿಕೆಗಳನ್ನು ಸಮರ್ಪಿಸಿದರು.

ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ತಾ|| 14-3-1930 ನೆಯ ಶುಕ್ರವಾರ ದಿವಸ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಕೆಟಿ. ಸಿ. ಐ. ಇ. ಇವರ ಅಧ್ಯಕ್ಷತೆಯ ಕೆಳಗೆ ಬೆಂಗಳೂರು ಸಿಟಿ ಚಿಕ್ಕಪೇಟೆ ಮಹಾಂತನ ಮಠದಲ್ಲಿ ಬೆಂಗಳೂರು ಮಹಾಜನರ ಕೋರಿಕೆಯಂತೆ ವೀರಶೈವಮತಸನಾತನತ್ವ ಮೊದಲಾದ ವಿಷಯಗಳ ಮೇಲೆ ಭಾಷಣಮಾಡಲು ಪ್ರಯಾಣಮಾಡುವವರಾಗಿದ್ದಾರೆ.

ಶ್ರೀ ಚಿತ್ರಕೂಟ ಮಹಾಂತರವರ ಪ್ರಸಿದ್ಧಿಯಾದ ಮುತ್ತಿನ ಔಷಧವನ್ನು ರಾಜಧಾನಿಯ ನಾಣೀವಿಲಾಸ ರೋಡಿನಲ್ಲಿರುವ ಡಾಕ್ಟರ್. ಟಿ. ಎಸ್. ಸಿದ್ದಪ್ಪನವರು ದತ್ತಿಯ ಮೇರೆ ಇದೇ ಫಾಲ್ಗುಣ ಶುದ್ಧ ಪೂರ್ಣಿಮಾ (ತಾರೀಖು 14 ನೆಯ ಶುಕ್ರವಾರ) ರಾತ್ರಿ ಮೈಸೂರು ಸಂತೇಪೇಟೆಯಲ್ಲಿರುವ ಸೀಮೆಯೆಣ್ಣೆ ಏಜಂಟರು ಶ್ರೀ|| ವಿಠಲರಾಯರ ಬಿಲ್ಡಿಂಗ್ ಮೇಲ್ಭಾಗದ ಬಿಸಲು ಮಚ್ಚಿನಲ್ಲಿ ಬೆಳದಿಂಗಳಲ್ಲಿ ಉಚಿತವಾಗಿ ಕೊಡತಕ್ಕವರಿರುವರು. ಔಷಧವನ್ನು ತೆಗೆದುಕೊಳ್ಳಬಿಚ್ಚಿಸುವವರು ಡಾಕ್ಟರ್ ಸಿದ್ದಪ್ಪನವರಿಗೆ ಮುಂಚಿತವಾಗಿ ಪತ್ರದಮೂಲಕ ತಿಳುಹಿಸಬೇಕು.

ಬೆಂಗಳೂರುನಗರದ ಸುಪ್ರಸಿದ್ಧ "ಕಲಾಮಂದಿರ" ಎಂಬ ಚಿತ್ರಶಾಲೆಯ ಪ್ರೊಪ್ರೈಟರಾದ ಶ್ರೀ|| ಎನ್. ಸುಬ್ಬರಾಯರು ನಮಗೆ ಕಳುಹಿಸಿರುವ 'ಕಲಾ' ಎಂಬ ಹೊಸ ಮಾಸಪತ್ರಿಕೆಯ ಮೊದಲನೆಯ ಸಂಚಿಕೆಯನ್ನು ಆದರಾದರದಿಂದ ಸ್ವೀಕರಿಸುತ್ತೇವೆ. ನಮ್ಮ ಕರ್ಣಾಟಕರಾಜ್ಯದಲ್ಲಿ ಚಿತ್ರಕಲಾಸಂಬಂಧವಾಗಿ ಇದೇ ಪ್ರಥಮಪತ್ರಿಕೆಯಾಗಿರುತ್ತದೆ. ಕನ್ನಡಭಾಷಾ ಪರಿಚಯವಿಲ್ಲದವರಿಗಾಗಿ ಇಂಗ್ಲೀಷಿನಲ್ಲಿ ಕೆಲವು ಲೇಖನಗಳು ಇದರಲ್ಲಿ ಸೇರಿರುವದರಿಂದ ಈ ಮಾಸಪತ್ರಿಕೆಯು ಹೆಚ್ಚಿನ ಮಹತ್ವವುಳ್ಳದ್ದಾಗಿದೆ. ಚಿತ್ರಕಲಾಭಿಜ್ಞರಿಗೆ ಅತ್ಯುಪಯುಕ್ತವಾದ ಈ ಮಾಸಪತ್ರಿಕೆಯು ಕಲಾಭಿಮಾನಿಗಳಿಂದ ವಿಶೇಷ ಪ್ರೋತ್ಸಾಹವನ್ನು ಹೊಂದಿ ಜೀವಿಸಲೆಂದು ಹಾರೈಸುತ್ತೇವೆ.

ರಾಜಧಾನಿಯಲ್ಲಿರುವ ಮಿ|| ಬಕ್ಷಿ ಭೀಮರಾವ್ ಬಿ. ಎ., ಯವರಿಗೆ ಪಾರ್ಶ್ವವಾಯು ಪ್ರಾಪ್ತವಾಗಿರುವದು. ಶ್ರೀಮನ್ಮಹಾರಾಜರವರು ಇದನ್ನು ಕೇಳಿ ಶ್ರೀ ಭೀಮರಾಯರನ್ನು ಅರಮನೆಯ ಆಸ್ಪತ್ರೆಗೆ ಕರೆಯಿಸಿಕೊಂಡು ಚಿಕಿತ್ಸೆಗೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿರುವದಲ್ಲದೆ ಒಂದೆರಡು ಸಾರೆ ಆಸ್ಪತ್ರೆಗೆ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದರು. ಶ್ರೀ ಭೀಮರಾಯರು ಚಿಕ್ಕಂದಿನಲ್ಲಿ ಶ್ರೀಮನ್ಮಹಾರಾಜರವರ ಉಪಾಧ್ಯಾಯರಾಗಿದ್ದು ಅವರು ಸಿಂಹಾಸನಾರೋಹಣಮಾಡಿದ ಮೇಲೆ ಅಸಿಸ್ಟೆಂಟ ಕಮಿಷನರಾಗಿದ್ದು ನಿವೃತ್ತಿಹೊಂದಿರುವರು. ಇಷ್ಟು ದಿನಗಳಾದರೂ ಮಹಾಪ್ರಭುಗಳು ತಮ್ಮ ಬಾಲ್ಯದ ಗುರುಗಳನ್ನು ಮರೆಯದೆ ಅವರಲ್ಲಿಟ್ಟಿರುವ ಭಕ್ತಿ, ವಿಶ್ವಾಸಗಳು ಸ್ತೋತ್ರಾರ್ಹವಾಗಿರುತ್ತವೆ.

ರಾಜಧಾನಿಯ ಪೂರ್ವಭಾಗದಲ್ಲಿರುವ ಆಲನಹಳ್ಳಿಯ ಸಮೀಪದಲ್ಲಿ ಸವಾರರ ವಾಸದ ಮನೆಗಳಿರುವವು. ಕಳೆದ ಶನಿವಾರ ರಾತ್ರಿ ಲ್ಯಾನ್ಸ್ ದಫೇದಾರನು ಮತ್ತು ಒಬ್ಬ ಸವಾರನು ಡ್ಯೂಟಿಗೆ ಹೋಗಿದ್ದಾಗ ಕಳ್ಳರು ಅವರಿಬ್ಬರ ಮನೆಗಳಿಗೂ ನುಗ್ಗಿ ಸುಮಾರು 300 ರೂಪಾಯಿಗಳ ಪದಾರ್ಥಗಳನ್ನು ಅಪಹರಿಸಿಕೊಂಡು ಹೋಗಿರುವರು. ಸಾಮಾನುಗಳನ್ನು ಇಟ್ಟಿದ್ದ ಪೆಟ್ಟಿಗೆಗಳು ಚೂರುಚೂರಾಗಿ ಸಮೀಪದ ಒಂದು ಹಳ್ಳದಲ್ಲಿ ಬಿಸಾಡಲ್ಪಟ್ಟಿದ್ದುವು. ಪೋಲೀಸರು ಕಳ್ಳರನ್ನು ಪತ್ತೆಮಾಡುತ್ತಿರುವರು. ಈ ಸವಾರ್ ಲೈನ್ ಊರಹೊರಗಿರುವದರಿಂದ ಅಲ್ಲಿ ಪೋಲೀಸರ ಗಸ್ತು ಇರುವದಿಲ್ಲ; ಆದರೂ ಅಲ್ಲಿನ ಸವಾರರೇ ರಾತ್ರಿಯ ವೇಳೆ ಕಾವಲಿರುವರು. ಹೀಗಿದ್ದು ಅಲ್ಲಿ ನಡೆದ ಈ ಕಳ್ಳತನವು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿರುವದು.

ವರ್ತಮಾನಸಂಗ್ರಹ.

ದೆಹಲಿಯ ಶಾಸನಸಭೆಗೆ ಒಬ್ಬ ಹೊಸ ಉಪಕಾರ್ಯದರ್ಶಿಗಳು ಬೇಕಾಗಿರುವರೆಂದು ಪ್ರಕಟಣೆಮಾಡಿರಲು ಸದರಿ ಕೆಲಸಕ್ಕೆ 1009 ಜನರು ಅರ್ಜಿಗಳನ್ನು ಬರೆದುಕೊಂಡಿದ್ದರಂತೆ!

ಭರತಖಂಡದ ಸರಕಾರಕ್ಕೆ ಒಟ್ಟು 1200 ಕೋಟಿ ರೂಪಾಯಿಗಳ ಸಾಲವಿರುವದು. ಈ ಸಾಲದ ಮೊಬಲಗನ್ನು ಭರತಖಂಡದ ನಿವಾಸಿಗಳೆಲ್ಲರಿಗೂ ಹಂಚಿದರೆ ಪ್ರತಿಯೊಬ್ಬರಿಗೆ 42 ರೂಪಾಯಿಗಳ ಸಾಲವಿದ್ದಂತಾಗುವದು.

ಕೀರ್ತಿಶೇಷರಾದ ಗೋಖಲೆಯವರ ಸ್ಮಾರಕ ಮಂದಿರವನ್ನು ಪುಣೆಯಲ್ಲಿ ಕಟ್ಟಿಸಲು ಅಮೇರಿಕೆಯ ಡಾ|| ಜಸ್ಟಿಸ್ ಇ. ಅಬ್ಬಟ ಎಂಬವರು 15,000 ರೂ. ಗಳನ್ನು ಕಳುಹಿಸಿರುವರು.

ಶಹಜಹಾನ್‌ಪುರದ ಜಮೀನ್‌ದಾರರು ಡಿಸ್ಟ್ರಿಕ್ಟ್ ಬೋರ್ಡಿಗೆ ತೆರಿಗೆಯನ್ನು ಕೊಡದೆ ನಿರಾಕರಿಸಿದಕಾರಣ ನಾಲ್ಕು ಜನರನ್ನು ದಸ್ತಗಿರಿ ಮಾಡಿರುವರು. ಊರಿನವರೆಲ್ಲರೂ ಆದಿನ ಹರತಾಳವನ್ನಾಚರಿಸಿದರು.

ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಶ್ರೀ ಕೆ. ಎಫ್. ನರಿಮನ್‌ರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಕೌನ್ಸಿಲ್ಲಿನ ಸದಸ್ಯತನಕ್ಕಿಂತಲೂ ಆ ಸ್ಥಾನವು ತಮಗೆ ಅತ್ಯಂತ ಗೌರವಾಸ್ಪದವಾದುದೆಂದು ಅವರು ಹೇಳಿರುವರು.

ಮಹಾತ್ಮಾ ಗಾಂಧಿಯವರ ನೂತನ ಸತ್ಯಾಗ್ರಹದಲ್ಲಿ ಅವರಿಗೆ ಬಲಗೈಯಂತಿದ್ದ ಶ್ರೀ ವಲ್ಲಭಭಾಯಿ ಪಟೇಲರವರು ಕಳೆದ 7 ನೆಯ ತಾರೀಖು ಶುಕ್ರವಾರ ದಸ್ತಗಿರಿ ಮಾಡಲ್ಪಟ್ಟು 3 ತಿಂಗಳ ಕಾರಾಗೃಹವಾಸ ಶಿಕ್ಷೆಗೆ ಗುರಿಯಾದರು. ಅಹಮದಾಬಾದಿನಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಧಾರವಾಡ ಟೌನ್ ನಿವಾಸಿಗಳಾದ ಮ|| ರಾ|| ರಾವ್ ಬಹದ್ದೂರ್ ಬಿ.ಎಲ್. ಪಾಟೀಲರವರು ದಿಲ್ಲಿಯ ಅಸೆಂಬ್ಲಿಗೆ ಮೆಂಬರಾಗಿ ಚುನಾಯಿಸಿಬಂದ ಸಂತೋಷಕ್ಕೋಸ್ಕರ ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಕರಿಬಸವಪ್ಪ ಹತ್ತೀಕಾಳ ಹಾಗೂ ವೀರಪ್ಪ ಪಟ್ಟಣಶೆಟ್ಟಿ ಮೊದಲಾದವರು ತಾ|| 19-2-30ನೆಯ ದಿವಸ ತಾಂಬೂಲಸಮಾರಂಭವನ್ನು ಅತ್ಯಂತ ವೈಭವದಿಂದ ನೆರವೇರಿಸಿದರೆಂದು ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿಯವರು ತಮ್ಮ "ನವಜೀವನ" ಪತ್ರಿಕೆಯಲ್ಲಿ ಉಪ್ಪಿನ ಸತ್ಯಾಗ್ರಹದ ಮೂಲಕ ಕಾಯಿದೆಭಂಗಕ್ಕೆ ಪ್ರಾರಂಭಿಸಿದಕೂಡಲೆ ಅದರಲ್ಲಿ ಮುಂದಾಳುತನವನ್ನು ವಹಿಸುವ ತಮ್ಮನ್ನು ಸರಕಾರದವರು ಸೆರೆಹಿಡಿಯುವರೆಂದೂ, ಇಷ್ಟಕ್ಕಾಗಿ ಯಾರೂ ಧೈರ್ಯಗುಂದದೆ ಉತ್ಸಾಹಪೂರ್ಣರಾಗಿ ಸತ್ಯಾಗ್ರಹವನ್ನು ಮುಂದುವರಿಸಬೇಕೆಂದೂ, ಎಂಥ ಕಷ್ಟಪರಂಪರೆಗೊಳಗಾದರೂ ಶಾಂತಿಭಂಗಮಾಡದೆ ತಮ್ಮ ಪ್ರಾಣಗಳನ್ನಾದರೂ ಒಪ್ಪಿಸಿ, ಸತ್ಯಾಗ್ರಹವು ಪೂರ್ಣಫಲಪ್ರದವಾಗುವಂತೆ ಮಾಡಬೇಕೆಂದೂ, ಎಲ್ಲ ದೇಶಭಕ್ತರೂ ಈ ಕಾರ್ಯದಲ್ಲಿ ಸಹಕರಿಸಬೇಕೆಂದೂ ಬರೆದಿರುವರು.

ಸ್ವೀಕಾರ.

ಬಳ್ಳಾರಿ ಡಿ|| ಹಡಗಲಿ ತಾ|| ಹೊಳಗುಂದಿ ಗ್ರಾಮದಲ್ಲಿರುವ ಮ|| ರಾ|| ಹಲಗಪ್ಪನವರ ಮಹಾದೇವಪ್ಪನವರು ತಮ್ಮ ಅಣ್ಣಂದಿರಾದ ಮ|| ರಾ|| ವೀರಭದ್ರಪ್ಪಗೌಡರ ಮಕ್ಕಳು ವೀರಪ್ಪನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **5** ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ರಾಜಧಾನಿಯ ದೊಡ್ಡಪೇಟೆ ಚಮನ ಮಠದ ಬೀದಿಯಲ್ಲಿರುವ ಶ್ರೀ ಕಪಿಲ ಮಲ್ಲಿಕಾರ್ಜುನಸ್ವಾಮಿಯ ಮಠದಲ್ಲಿ ನೆರವೇರಿಸಿದ ಶ್ರೀ ಜಗದಾಚಾರ್ಯರ ಜಯಂತಿ ಮಹೋತ್ಸವದ ಸಮಯದಲ್ಲಿ ಗುರುಭಕ್ತಿಧುರೀಣರಾದ ಮ|| ರಾ|| ಪಿ. ಮಲ್ಲಪ್ಪನವರು **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಬಳ್ಳಾರಿ ಡಿ|| ಸಿರಗುಪ್ಪಾ ತಾ|| ಅರಳಿಗನೂರಿನಲ್ಲಿರುವ ಮ|| ರಾ|| ಬಳೆಬಸಪ್ಪನವರು ತಮ್ಮ ಮನಸ್ಸಂಕಲ್ಪವು ಜಗದಾಚಾರ್ಯರ ಆಶೀರ್ವಾದದಿಂದ ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಅರಸೀಕೆರೆ ತಾ|| ದಿಬ್ಬೂರು ಗ್ರಾಮದಲ್ಲಿರುವ ಜನರಲ್ ಮರ್ಚಂಟ್ಸ್ ಮ|| ರಾ|| ಎಂ. ರುದ್ರಪ್ಪಶೆಟ್ಟರವರು ತಮ್ಮ ಶಿವಮಂದಿರದಲ್ಲಿ ಜಗದಾಚಾರ್ಯರ ಜಯಂತ್ಯುತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ಮ|| ರಾ|| ಸ್ಕೂಲ್‌ಮಾಸ್ಟರ್ ಎ. ಚನ್ನಪ್ಪನವರ ದ್ವಾರಾ ತಲ್ಪಿರುತ್ತವೆ.

ನಂಜನಗೂಡು ತಾ|| ಬಿಲ್ಲಿಗೆರೆ ಹೋಬಳಿ ಸರ್ವಮಾನ್ಯ ಆಳಗಂಚಿದಾಖಲೆ ಪುರದಗ್ರಾಮದಲ್ಲಿರುವ ದೊಡ್ಡಲಿಂಗಮ್ಮನು ಉದಾರವಾದ ಧರ್ಮಬುದ್ಧಿಯಿಂದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಒಂದು ನೂತನ ಸ್ಕೂಲನ್ನು ಕಟ್ಟಿಸಿಕೊಟ್ಟು ಆ ಸ್ಕೂಲಿನ ಆರಂಭೋತ್ಸವ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ಆಳಗಂಚಿಪುರ ಮಠದ ವೇ|| ಎನ್. ಬಸವಾರಾಧ್ಯರವರ ದ್ವಾರಾ ತಲ್ಪಿರುತ್ತವೆ.

ದಾವಣಗೆರೆ ಟೌನ್ ನಿವಾಸಿಗಳಾದ ಮ|| ರಾ|| ಮಾಗಾನಹಳ್ಳಿ ನಂಜುಂಡಪ್ಪನವರು ತಮ್ಮ ಜಮೀನಿನಲ್ಲಿ ನಂಜಕಲಶ ಸ್ಥಾಪನದ್ವಾರಾ ವಿಧಿವತ್ತಾಗಿ ಬಾಳೇಗಿಡಗಳನ್ನು ಹಚ್ಚಿ "ರಂಭಾವನ" ವೆಂಬ ಹೆಸರಿಟ್ಟು ಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಹೈದರಾಬಾದ ಸ್ಟೇಟಿಗೆ ಸೇರಿದ ಬಿದರಕೋಟೆ ಶಹರದಲ್ಲಿರುವ ಮ|| ರಾ|| ಇಂಜಿನಿಯರಿಂಗ್ ಲಿಂಗಪ್ಪನವರ ಧರ್ಮಪತ್ನಿಯವರು ಶಿವೈಕ್ಯರಾದ ಸಮಯದಲ್ಲಿ ಸದರಿಯವರ ಆತ್ಮಶಾಂತಿಗಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ವೇ|| ಬಸವರಾಜಶಾಸ್ತ್ರಿಗಳು ಹಾಗೂ ವಕೀಲ ಶಿವರುದ್ರಪ್ಪನವರು ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಿರೇಹಡಗಲಿಗ್ರಾಮದಲ್ಲಿರುವ ವೇ|| ಪುರಾಣಿಕಮಠದ ಗುರುಶಾಂತಾರ್ಯರು ಶಿವಾಧೀನರಾದಸಮಯದಲ್ಲಿ ಅವರ ಪುತ್ರರಾದ ವೇ|| ವಿರೂಪಾಕ್ಷಶಾಸ್ತ್ರಿಗಳು ಪ್ರಭಾಪೋಷಣಕ್ಕೋಸ್ಕರ **1** ರೂ. **4** ಆ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಅರ[illegible]ತಾಲೂಕು ಬಾಗಾವರದ ಹಿರೇಮಠದಲ್ಲಿ ನೆರವೇ[illegible]ಜಗದಾಚಾರ್ಯರ ಜಯಂತಿಮಹೋತ್ಸವದ [illegible]ದಲ್ಲಿ ವೇ|| ಜಿ. ವೀರಭದ್ರಸ್ವಾಮಿ ಹಿರೇಮಠ ಇವರು ಪ್ರಭಾಪೋಷಣಕ್ಕೋಸ್ಕರ **1** ರೂ. ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.——

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಗೆ ಧರ್ಮಸಹಾಯ ಬೆಂಗಳೂರು ಸಿಟಿ.

ಕಳೆದ ವರ್ಷ ಅಂದರೆ 26-5-28 ಮತ್ತು 28-5-28 ರಲ್ಲು ಶ್ರೀಮಜ್ಜಗದ್ಗುರು ಭಗವತ್ಪಾದ ರೇಣುಕಾಚಾರ್ಯರ ಜಯಂತ್ಯುತ್ಸವಕ್ಕೆ ಧನಸಹಾಯ ಮಾಡಲು ಒಪ್ಪಿ ಧರ್ಮದ ಉಂಡಿ ಪಟ್ಟಿಗಳನ್ನು ಕೈಗೊಂಡಿದ್ದ ಮಹನೀಯರುಗಳ ವಿವರ, ಮತ್ತು ಅವರುಗಳ ಧರ್ಮ—

ಮ|| ರಾ||

1. ಚಾಮರಾಜಪೇಟೆ ಅಕ್ಕಿಮಂಡಿ ಬಿ. ರುದ್ರಯ್ಯನವರು ರೂ. 43-15-0. 2. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಗುರುಸಿದ್ದಪ್ಪ ಅಂಡ್ ಸನ್ 43-0-0. 3. ದೊಡ್ಡಪೇಟೆ ಅಡಿಕೆಮಳಿಗೆ ಗುಡೇಮಾರನಹಳ್ಳಿ ಶಿವಪ್ಪ ಅಂಡ್ ಸನ್ ರೂ. 27-1-5. 4. ಮಾಮೂಲ್‌ಪೇಟೆ ಡಿ. ಬಿ. ಸಿದ್ದಪ್ಪ ಗುರುಸಿದ್ದಪ್ಪನವರು ರೂ. 20-0-0. 5. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಗಂಗಾಧರಪ್ಪ ಅಂಡ್ ಬ್ರದರ್ಸ್ ರೂ. 10-0-0. 6. ಚಿಕ್ಕಪೇಟೆ ಸರಾಫ್ ಬಿ. ಬಸಪ್ಪನವರು ರೂ. 10-8-0. 7. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಗಂಗಾಧರಮೊದಲಿಯಾರ್ ರೂ. 10-0-0. 8. ಚಾಮರಾಜಪೇಟೆ ಮಂಡಿ ಕೆ. ನಾಗಪ್ಪ ಚಂದ್ರಶೇಖರಪ್ಪ ರೂ. 10-0-0. 9. ಚಾಮರಾಜಪೇಟೆ ಮಂಡಿ ಸೂಲಗೆರೆ ಮುದ್ದೀರಪ್ಪ ಕೆ. ಯಸ್. ಅಮ್ಮಣ್ಣನವರು ರೂ. 10-0-0. 10. ತಾಳುಕುಂಟೆ ಅಪ್ಪಾಜಪ್ಪ ದೊಡ್ಡರಾಜಪ್ಪನವರು ರೂ. 10-0-0. 11. ಚಾಮರಾಜಪೇಟೆ ಹೆಂಚಿನ ಮಿಷನ್ ಬುಳ್ಳಪ್ಪನವರ ನಂಜುಂಡಪ್ಪನವರು ರೂ. 9-13-6. 12. ಚಿಕ್ಕಪೇಟೆ ಕಾಫಿಕ್ಲಬ್, ಎಂ. ಎಸ್. ಶಿವಪ್ಪ ರೂ. 6-14-0. 13. ಬಿಡದಿ ಬಿ. ಸಿ. ರೇವಣಶಾಸ್ತ್ರಿಗಳು ರೂ. 6-8-0. 14. ಬಿಡದಿ ಬಿ. ಸಿ. ರೇವಣ್ಣನವರು ಜವಳಿಅಂಗಡಿ ರೂ. 5-11-9. 15. ಮಾಮೂಲ್‌ಪೇಟೆ ಬಿ. ಎಸ್. ಬಸಪ್ಪನವರು ರೂ. 5-0-0. 16. ಅರಳೇಪೇಟೆ ಪಂಡಿತ ರೇವಣಾರಾಧ್ಯರವರು ರೂ. 5-0-0. 17. ಅಡಿಕೆ ಅಂಗಡಿ ಕೆ. ಚನ್ನಣ್ಣನವರು ರೂ. 5-0-0. 18. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಬುರುಡುಗುಂಟೆ ಬಸಪ್ಪ ಅಂಡ್ ಬ್ರದರ್ಸ್‌ರವರು ರೂ. 5-0-0. 19. ಚಿಕ್ಕಪೇಟೆ ಟ್ರಂಕ್ ಅಂಡ್ ಜನರಲ್ ಮರ್ಚಂಟ್ ರುದ್ರಪ್ಪನವರು ರೂ. 5-0-0. 20. ಕೆ. ಸಂಘುಲಿಂ... ಅಂಡ್ ಬ್ರದರ್ಸ್ ರವರು ರೂ. 5-0-0. 21. ಬಾಸೆಂದೂರ್ ...ಗಪ್ಪ ರೇವಣ್ಣನವರು ರೂ. 4-10-0. 22. ಬಿಡದಿ ದೊ|| ...ಪ್ಪನವರ ಸಂಗಪ್ಪ ರೂ. 3-9-0. 23. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಮೊ. ಶಾ. ಭದ್ರಪ್ಪ ಶಿದ್ದಪ್ಪನವರು ರೂ. 3-0-0. 24. ಗ್ರಂಧಿಕೆ ಅಂಗಡಿ ವೀರಪ್ಪನವರ ಗಂಗಪ್ಪ ರೂ. 3-0-0. 25. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಎಸ್. ನಂಜುಂಡಪ್ಪ ಅಂಡ್ ಬ್ರದರ್ಸ್ ರೂ. 2-11-9. 26. ದೊಡ್ಡಪೇಟೆ ಗ್ರಂಧಿಗೆ ಅಂಗಡಿ ಹುಸ್ಕೂರ್ ಚನ್ನಬಸಪ್ಪನವರು ರೂ. 3-0-0. 27. ಜಿ. ಕೆ. ಸೋಮಣ್ಣನವರು ರೂ. 2-0-0. 28. ಚಿಕ್ಕಪೇಟೆ ಸಾವಂದಶೆಟ್ಟಿ ರೂ. 2-0-0. 29. ಚಿಕ್ಕಪೇಟೆ ವಿ. ಪಿ. ಭದ್ರಪ್ಪನವರು ರೂ. 2-0-0. 30 ಮಾಮೂಲ್‌ಪೇಟೆ ಕಾಫಿಕ್ಲಬ್ ಮಲ್ಲೂರ್ ಬಸಪ್ಪ ರೂ. 1-7-6. 31. ಬಳ್ಳಾಪುರಪೇಟೆ ವೇ|| ಸಂಗಯ್ಯನವರ ವೀರಸಂಗಯ್ಯನವರು ರೂ. 1-0-0. ಜುಮ್ಲಾ ರೂ. 280-5-11.

ಹೀಗೆ ಇನ್ನೂರೆಂಬತ್ತು ರೂಪಾಯಿ ಐದಾಣೆ ಹನ್ನೊಂದು ಕಾಸುಗಳು ಚಾಮರಾಜಪೇಟೆ ಮ|| ರಾ|| ಅಕ್ಕಿಮಂಡಿ ಬಿ. ರುದ್ರಯ್ಯನವರ ವಶದಲ್ಲಿರುತ್ತವೆ. ಇದಲ್ಲದೆ ಇನ್ನೂ ಈ ಜಯಂತಿಗಾಗಿ ಅನೇಕ ಮಹನೀಯರು ಧನಸಹಾಯಮಾಡಿರುತ್ತಾರಾಗಿ ಅವರುಗಳ ಹೆಸರುಗಳನ್ನೂ ಜಯಂತಿಯ ಜಮಾಖರ್ಚನ್ನೂ ಕಟ್ಟಪದ್ಧತಿಯಂತೆ ಪುಸ್ತಕದಲ್ಲಿ ನಮೂದಿಸಿ ತಮ್ಮೆಲ್ಲರ ಅವಗಾಹನೆಗೆ ತರುವರಿರುತ್ತಾರೆ. ಆದಪ್ರಯುಕ್ತ ಮಹಾಶಯರೆಲ್ಲರೂ ಜಯಂತಿಯು ಸಮೀಪಿಸಿದ್ದರಿಂದ ಮೊದಲಿಗಿಂತಲೂ ಅತಿಶಯವಾಗಿ ಧನಸಹಾಯ ಮಾಡುವುದರ ಮೂಲಕ ಶ್ರೀ ಜಗದ್ಗುರು ಭಗವತ್ಪಾದ ರೇಣುಕಾಚಾರ್ಯರ ಕೃಪೆಗೆ ಪಾತ್ರರಾಗಲೆಂದೂ ಮತ್ತು ತಮ್ಮೆಲ್ಲರಿಗೂ ಜಗದಾಚಾರ್ಯರು ಸನ್ಮಂಗಳವನ್ನೀಯಲೆಂದೂ ಪ್ರಾರ್ಥಿಸುವ—

ಜಿ. ಆರ್. ಸಿದ್ದಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ

ಬೆಂಗಳೂರು.

೧೩-೩-೧೯೩೦ ಗುರುವಾರ.

ಶ್ರೀ ಗುರುಸೇವಾಧುರೀಣರಾದ ವೀರಶೈವ ಮಹಾಶಯರೇ !

ವೀರಶೈವ ಮಹಾ ಮತಸ್ಥಾಪನಾಚಾರ್ಯರಲ್ಲಿ ಒಬ್ಬರಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಜಯಂತಿ ಮಹೋತ್ಸವವನ್ನು ಭರತಖಂಡದ ನಾನಾಭಾಗಗಳಲ್ಲಿರುವ ಗುರುಭಕ್ತರಾದ ಸಕಲ ವೀರಶೈವರೂ ತಾ|| 13-3-1930 ನೆಯ ಗುರುವಾರ ದೊಡ್ಡ ಹಬ್ಬವನ್ನಾಗಿ ಆಚರಿಸುವರು. ಅದಿನ ಬಾಳೆಹೊನ್ನೂರಲ್ಲಿರುವ ಧರ್ಮಪೀಠದಲ್ಲಿ ಭಗವತ್ಪಾದರವರ ರಥೋತ್ಸವವೂ ಅಸಾಧಾರಣ ವೈಭವದಿಂದ ನಡೆಯುವದು. ಈ ಮಹಾಚಾರ್ಯರು ಸೋಮೇಶ್ವರಲಿಂಗದಿಂದವತರಿಸಿ ಭಾಷ್ಯಾದಿಗಳನ್ನು ರಚಿಸಿ ತಮ್ಮ ಮಹಿಮಾತಿಶಯಗಳಿಂದ ಅಗಸ್ತ್ಯಾದಿಮಹರ್ಷಿ ಪುಂಗವರಿಂದಲೂ, ವಿಭೀಷಣ ವಿಕ್ರಮಾರ್ಕಾದಿ ಸಾರ್ವಭೌಮರಿಂದಲೂ ಪೂಜಿಸಲ್ಪಟ್ಟು, ಜಗದ್ವಿಖ್ಯಾತರಾದ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನನುಗ್ರಹಿಸಿದ ಜಗನ್ಮಾನ್ಯರಾದ ಮಹಾಗುರುಗಳು. ಈ ಗುರುಸಾರ್ವಭೌಮರ ಜಯಂತಿ ಮಹೋತ್ಸವಕ್ಕಿಂತಲೂ ಶ್ರೇಷ್ಠವಾದ ಹಬ್ಬವು ಮತ್ತೊಂದಿಲ್ಲವೆಂದು ಉದ್ಘೋಷಿಸಬೇಕಾಗಿದೆ. ಪ್ರತಿದಿವಸದ ಇಷ್ಟಲಿಂಗಾರ್ಚನೆಯ ಕಾಲದಲ್ಲಿ ಶಿವಸಂಕಲ್ಪವನ್ನುಚ್ಚರಿಸುವಾಗ ಈ ಮಹಾಗುರುವಿನ ನಾಮೋಚ್ಚಾರಣೆ ಮಾಡುತ್ತಿರುವದು ಸರ್ವರಿಗೂ ತಿಳಿದ ಅಂಶವಾಗಿದೆ.

ಆದುದರಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರ ಪರಮಪವಿತ್ರವಾದ ಜಯಂತಿಮಹೋತ್ಸವವನ್ನು ಗುರುಭಕ್ತಾಗ್ರಗಣ್ಯರಾದ ಸಕಲ ವೀರಶೈವರು ನಿರತಿಶಯವಾದ ಭಕ್ತಿಯಿಂದ ಆಚರಿಸಬೇಕೆಂದು ತಮಗೆ ವೇದ್ಯವಿರುವದು ಸರಿಯಷ್ಟೆ ! ಆದರಂತೆ ತಾವುಗಳು ಆ ಶುಭದಿವಸದಲ್ಲಿ ತಮ್ಮ ಮನೆಯನ್ನೂ ಹಾಗೂ ಪಟ್ಟಣಗಳನ್ನೂ ಸಾರಣೆ ಸಾರಣೆ ರಂಗವಲ್ಲಿ ತಳಿರು ತೋರಣಗಳಿಂದಲಂಕರಿಸಿ ಮಂಗಲಸ್ನಾನದಿಂದ ಪರಿಪೂತರಾಗಿ ಗುರುಲಿಂಗಜಂಗಮಾರ್ಚನೆಯಿಂದ ಧನ್ಯರಾಗಿ ಆದಿನ ಪ್ರಾತಃಕಾಲ ಶ್ರೀಮಹಾಂತ ಮಠದಲ್ಲಿ ನಡೆಯುವ ರುದ್ರಾಭಿಷೇಕಕ್ಕೂ, ಸಾಯಂಕಾಲದಲ್ಲಿ ಸೇರುವ ಮಹಾಜನರ ಸಭೆಗೂ ಸಂಧ್ಯಾಸಮಯಕ್ಕೆ ಹೊರಡುವ ಶ್ರೀಮದಾಚಾರ್ಯರ ಮಹೋತ್ಸವಕ್ಕೂ ಆಗಮಿಸಿ ಫಲಪುಷ್ಪಾರತಿಗಳನ್ನು ಸಮರ್ಪಿಸಿ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗಿ ದೇವತಾಸಾರ್ವಭೌಮನಾದ ಶ್ರೀ ಸಾಂಬಮೂರ್ತಿಯ ಪ್ರೀತಿಗೂ, ಶ್ರೀ ಜಗದಾಚಾರ್ಯರ ಕೃಪಾಶೀರ್ವಾದಕ್ಕೂ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಬೆಂಗಳೂರು ಸಿಟಿ,
ತಾ|| 2-3-1930. ದೇಶದ ಶೆಟ್ಟರು ಯಜಮಾನರು.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಮಹೋತ್ಸವಾಹ್ವಾನ ಪತ್ರಿಕೆ.

ವೀರಶೈವ ಮಹಾಜನಗಳಲ್ಲಿ ವಿಜ್ಞಾಪನೆ—

ವೀರಶೈವ ಮಹಾ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಪದ್ಧತಿಯ ಪ್ರಕಾರ ಇದೇ ಶುಕ್ಲ ಸಂ|| ಫಾಲ್ಗುಣ ಶು|| ೧೪ ಗುರುವಾರ (ತಾ|| 13-3-30) ದಿವಸ ಈ ಕೆಳಗೆ ನಮೂದಿಸಿರುವ ಕಾರ್ಯಕ್ರಮದಂತೆ ಬೆಂಗಳೂರು ಪಟ್ಟಣದಲ್ಲಿ ನಡೆಯಿಸಲು ನಿರ್ಧರಿಸಿರುತ್ತದೆ.

ಕಾರ್ಯಕ್ರಮ.

1. ತಾ|| 13—3—1930 ರ ಗುರುವಾರ ಪ್ರಾತಃಕಾಲ ೭ ಘಂಟೆಯಿಂದ ೧೨ರ ವರೆಗೆ ಮಹಾಂತಿನ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ.

ಮಧ್ಯಾಹ್ನ ೧೨ ಘಂಟೆಗೆ.

2. ಮಹಾಂತಿನ ಮಠದಲ್ಲಿ ಭಕ್ತಮಾಹೇಶ್ವರ ಸಮಾರಾಧನೆ.

ಮಧ್ಯಾಹ್ನ ೨ ಘಂಟೆಯಿಂದ ೫ರ ವರೆಗೆ.

3. ಶ್ರೀ ರೇಣುಕಾಚಾರ್ಯರು ಪ್ರಪಂಚದಲ್ಲಿ ಮಾಡಿರುವ ಲೀಲೆಗಳ ಕಥಾಶ್ರವಣ.

ಸಾಯಂಕಾಲ ೫|| ಘಂಟೆಗೆ

4. ಶ್ರೀಮಾನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೆಟಿ.ಸಿ.ಐ.ಇ. ಇವರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆಯು.

(1) ಸ್ತೋತ್ರ ಮತ್ತು ವೇದಘೋಷ.

(2) ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಫಂಡಿನ ವಾರ್ಷಿಕ ವರದಿಯನ್ನೋದುವದು.

(2) ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾರದ ವಾರ್ಷಿಕವರದಿಯನ್ನೋದುವದು.

(4) ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲಾ ಶ್ರೀ ಬೋರ್ಡಿಂಗಿನ ವರದಿಯನ್ನೋದುವದು.

(5) ಮೇಲ್ಕಂಡ ಭಗವತ್ಪಾದರವರ ಲೀಲೆಯ ವಿಷಯವಾಗಿಯೂ ವೀರಶೈವಮತ ತತ್ವದ ವಿಷಯವಾಗಿಯೂ ಪಂಡಿತರುಗಳ ಭಾಷಣವು ಮತ್ತು ಪಂಡಿತರುಗಳಿಗೆ ಪಾರಿತೋಷಕವು ಕೊಡಲ್ಪಡುವುದು.

(6) ಅಧ್ಯಕ್ಷರ ಭಾಷಣ.

5. (1) ಸಾಯಂಕಾಲ ೭|| ಘಂಟೆಯಿಂದ ಮಹಾಂತಿನ ಮಠದಿಂದ ರಾಜಬೀದಿಗಳಲ್ಲಿ ನಂದೀಧ್ವಜಸಹಿತ ಪೂಜ್ಯರಾದ ಜಗದಾಚಾರ್ಯರ ಮೂರ್ತಿಯ ಪುಷ್ಪಕೋತ್ಸವವು.

(2) ಆಚಾರ್ಯರ ಉತ್ಸವ ಮೂರ್ತಿಯು ಮಠಕ್ಕೆ ಬಿಜಯಂಗೈಯಿಸಿದ ನಂತರ ಷೋಡಶೋಪಚಾರ ರಾಜೋಪಚಾರಪೂಜಾಪೂರ್ವಕ ಪ್ರಸಾದವಿನಿಯೋಗ.

(3; ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ.

ದೇಶದ ಶೆಟ್ಟರು ಯಜಮಾನರು.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದ್ವಿಮಲ ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಹಿಮವತ್ಕೇದಾರ ವಿಕೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಜಗದ್ಗುರು ಗುರುಪಟ್ಟಾಧ್ಯಕ್ಷ ಶ್ರೀ 108 ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಿಯಿಂದ—

ಕೃಪಾಪಾತ್ರರಾದ ಜಗದ್ಗುರು ಕೇದಾರ ಸಿಂಹಾಸನದ ಸರ್ವಾಧಿಕಾರಿಗಳಾದ ಶೀರ್ಷಿ ಉಜ್ಜಯಿನೀಮಠದ ಸಿದ್ಧರಾಮಪ್ಪನವರಿಗೆ ಬರೆಯಿಸಿದ ಹುಕುಂ.

ಸದ್ಯಃ ಅಪ್ಪಣೆಕೊಡಿಸುವದೇನಂದರೆ; ಸಂಸ್ಥಾನದ ಕಾರ್ಯದಿಂದ ಜೂನ 1929 ರಲ್ಲಿ ನಿಮ್ಮ ಹೆಸರಿನ ಆಮ್ ಮುಕ್ತಿಯಾರ್‌ನಾಮಾ ರದ್ದುಪಡಿಸಿದ್ದು ಪಂಚಾಚಾರ್ಯಪ್ರಭೆಯಲ್ಲಿ ತಿಳುಹಿಸಿತ್ತು. ಆದರೆ ನೀವು ಸಂಸ್ಥಾನಕಾರ್ಯದಿಂದ ದೂರಾಗಿದ್ದುದರಿಂದ ಸಂಸ್ಥಾನದ ಅನೇಕಕಾರ್ಯಗಳು ಶಿಥಿಲತೆಯನ್ನು ಹೊಂದುತ್ತಾಹೋದವು. ಮತ್ತು ನೀವು ಸದ್ಯದಲ್ಲಿ ಪೂನಾ ಮುಕ್ಕಾಮಿನಿಂದ ಅಪ್ಪಣೆಕೊಡಿಸಿದ ಪತ್ರಪ್ರಕಾರ ಸನ್ನಿಧಿಗೆ ಹಾಜರಾಗಿ ಪೂನಾ ಕೋರ್ಟಿನಲ್ಲಿ ನಡೆದ ಕೆಲವು ಮೊಕದ್ದಮೆಗಳನ್ನು ನಮ್ಮಂತೆ ತೀರ್ಗಡೆ ಮಾಡಿಸಿದ್ದನ್ನು ನೋಡಿ ನಮ್ಮಗೆ ಪೂರ್ಣಸಂತೋಷವುಂಟಾಯಿತು. ನೀವು ತಾರೀಖು ಅಂದರೆ ಜನವರಿ 1-1930 ರ ಲಾಗಾಯ್ತು ನಮ್ಮ ಸಂಸ್ಥಾನದ ಸರ್ವಾಧಿಕಾರ ಪವರ್-ಆಫ್-ಅಟಾರ್ನಿಯನ್ನು ವ ಪದವಿಯನ್ನು ಪೂರ್ವದಂತೆ ನಡೆಯಿಸಿಕೊಂಡು ಹೋಗತಕ್ಕದ್ದು. ನಿಮಗೆ ಪೂರ್ವದಲ್ಲಿ ನಮ್ಮ ಸಂಸ್ಥಾನದಿಂದ ಕೊಡತ್ತಿದ್ದ ರೂ. 150 ಅಕ್ಷರದಲ್ಲಿ ನೂರಾ ಐವತ್ತು ರೂಪಾಯಿಗಳ ವೇತನವನ್ನು ಪ್ರತಿತಿಂಗಳಿಗೆ ಕೊಡಲಾಗುವದು. ಸಂಸ್ಥಾನದ ಕಾರ್ಯಗಳು ಕೋರ್ಟು ಕಚೇರಿ ಮುಂತಾದವುಗಳಲ್ಲಿ ನಡೆಯುವ ವ್ಯಾಜ್ಯಗಳು ಯೋಗ್ಯರೀತಿಯಿಂದ ನಡೆಯಿಸಿಕೊಂಡುಹೋಗತಕ್ಕದ್ದು. ಸಂಸ್ಥಾನದಲ್ಲಿ ನಡೆಯುವ ಜಮಾ-ಖರ್ಚುಗಳನ್ನು ಚನ್ನಾಗಿಟ್ಟುಕೊಂಡು ಸಂಸ್ಥಾನಕ್ಕೆ ಯಾವ ಕೊರತೆಯು ಬಾರದಂತೆ ನಡೆಸಿಕೊಂಡು ಹೋಗಬೇಕು. ಪ್ರತಿತಿಂಗಳ ಲೆಕ್ಕಪತ್ರಗಳನ್ನು ನಮಗೆ ತಿಳಿಸುತ್ತಿರಬೇಕು. ನಿಮ್ಮ ಸರ್ವಾಧಿಕಾರವನ್ನು ನಿಮಗೆ ಕೊಟ್ಟಿರುತ್ತೇವೆ.

ಮುಕ್ಕಾಂ ಪೂನಾ ಶ್ರೀಗಳ ಸ...
9—1—30

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಗುರುಶಾಂತಾರ್ಯರ ನಿಧನ.

ಬಳ್ಳಾರಿ ಜಿ|| ಹಡಗಲಿ ತಾ|| ಹಿರೇಹಡಗಲಿಯಲ್ಲಿ ಪುರಾತನಕಾಲದಿಂದಲೂ ವಿದ್ವಾಂಸರ ಮನೆತನವೆನಿಸಿದ ಪುರಾಣಿಕಮಠದ ಕೈಲಾಸವಾಸಿ ಶ್ರೀ ಚನ್ನವೀರಪಂಡಿತರು 17 ನೇ ಶತಮಾನದ ಹರಪನಹಳ್ಳಿ ಸಂಸ್ಥಾನ ಸೋಮಶೇಖರನಾಯಕ ಬಹದ್ದೂರರ ರಾಜಾಸ್ಥಾನದಲ್ಲಿ ಆಸ್ಥಾನಪಂಡಿತರಾಗಿದ್ದು ಸ್ವಾಸ್ತಿ (...ಮು) ಭೂದಾನಗಳಂ ಪಡೆದು ಸನ್ಮಾನ್ಯರಾಗಿ ತಾಡವಾಲೆ... ಅನೇಕ ಗ್ರಂಥಗಳಂ ಬರೆಸುತ್ತಲೂ ಸಂಗ್ರಹಿಸುತ್ತಲೂ ಬ...ದ್ದರು.

ಅವರ ವಂಶಸ್ಥರಾದ ಕೈ|| ವಾ|| ಪಂಡಿತ ಫಕೀರಶಾಸ್ತ್ರಿಗಳು ಮತ್ತು ಸಿದ್ಧಾಂತಿ ಗುರುಬಸವಾರ್ಯರೂ ಹಿಂದಿನವರಂತೆ ...ಕಾಯುರಾಗಿದ್ದರು. ಸಿದ್ಧಾಂತಿ ಗುರುಬಸವಾರ್ಯರ ಜೇಷ್ಠ...ರಾದ ವೇ|| ಗುರುಶಾಂತಪ್ಪಯ್ಯನವರು ತಮ್ಮ (65) ನೇ ವಯಸ್ಸಿನಲ್ಲಿ ಪರಲೋಕವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಬಾಲ್ಯಾರಭ್ಯ ಸದಾಚಾರನಿಷ್ಠರೂ ಶಾಂತಿಯುತರೂ ಏಕಪತ್ನೀವ್ರತಸ್ಥರೂ ಆಗಿದ್ದರಲ್ಲದೆ ಪರನಿಂದೆ ಆತ್ಮಸ್ತುತಿಗಳಿಲ್ಲದೆ ಪ್ರಾಚೀನಗ್ರಂಥಗಳನ್ನು ಕಾಪಾಡುತ್ತಿದ್ದುದಲ್ಲದೆ ಸ್ವದೇಹಶ್ರಮದಿಂದ ಉದ್ಯಾನವನದಲ್ಲಿ ವೃಕ್ಷಗಳನ್ನು ಕಾಪಾಡುವುದರಲ್ಲಿಯೂ ಬಹಳ ಚತುರರಾಗಿದ್ದರು. ರಮ್ಮ ಪರಲೋಕಯಾತ್ರೆಯ ಮುಂಚಿತವಾಗಿಯೇ ತಿಳಿದುಕೊಂಡು ಪರಮೇಶ್ವರಯ್ಯ ವಿರೂಪಾಕ್ಷಶಾಸ್ತ್ರಿ ಎಂಬ ತಮ್ಮ ಪುತ್ರರೀರ್ವರನ್ನು ಕರೆದು ತಮ್ಮ ಸಂಕಲ್ಪವನ್ನೆಲ್ಲ ತಿಳುಹಿಸಿ ಬಂಧು ಬಾಂಧವ ಮಿತ್ರಾದಿಗಳನ್ನು ಬರಮಾಡಿಕೊಂಡು ತಮ್ಮ ತೋಟದಲ್ಲಿ ಕೆಂದಗಲ್ಲ ...ಧ್ಯಕ್ಷರವರ ಪಾದಪೂಜೆ ಅನ್ನಸಂತರ್ಪಣಾದಿಗಳಿಂದ ಭಕ್ತಮಹೇಶ್ವರರನ್ನು ಸಂತೈಸಿ ಗೋದಾನವಂಮಾಡಿ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರ ಸೇವೆಗಾಗಿ ಎರಡು ತೆಂಗಿನ ಗಿಡಗಳನ್ನು ಅವರ ಹೆಸರಿಗೆ ಅರ್ಪಿಸಿ ಇದೇ ಮಾಘ ಬ|| ೯ ಶುಕ್ರವಾರ ಉದಯ ೮ ಘಂಟೆಗೆ ಪಂಚಾಕ್ಷರೀಧ್ಯಾನೈಕಶೀಲರಾಗಿ ಶರೀರವನ್ನು ಬಿಟ್ಟರು. ಶ್ರೀ ಪರಮಾತ್ಮನು ಇವರ ಆತ್ಮಕ್ಕೆ ಶಾಂತಿ ಕಳೇಯನ್ನು ಉಂಟುಮಾಡಲೆಂದು ಪ್ರಾರ್ಥಿಸುವ—

(ಪ್ರಿಯಭಕ್ತರು)

೧ ಬಾಗಳಿಬಸವಪ್ಪ. ೨ ಪರಜೆ ಸಕ್ರಪ್ಪ. ೩ ತೆಂಬಾರಚನ್ನಬ...

ಶ್ರೀ ಸೀತಾರಾಘವ ವೈದ್ಯಶಾಲೆಯ

ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[9] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಾಗಳಿರಾ! ಅಕ್ಕಗಳಿರಾ!!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ, ಬೆಳೆಯೋಣವೇ ಮೊದಲಾದ ರೋಗಪೀಡಿತರಾದಂಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ !

ಮಲೇರಿಯಾನ ಸರ್ವಜ್ವರಸಂಹಾರಿಣಿ

...ನನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ). 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ.

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0. [31]

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

[...ಸ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಕರಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ## ವಜ್ರಾಂಗ ಸುಂದರಪಾಕ. [ಸ್ಪರ್ಧ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ (...)ಮರ್ಗಸ್ಖಲನವಾಗೋಣ, ಉಷ್ಣತ್ವ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ...ವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ದೇಹ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ...ವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ...ತಾ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. ...) ವನಸ್ಪತಿ-ತಪಪುಷ್ಪ, ಕಾಲಿಮುಕಂದ, ಮಧುಕಂದ, ಬಸಾಕಂಧ, ಕಾಲೀಮೂಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ...ಮೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಡಬೀಜ, ಸಾಗಬೀಜ, ಬಾಳಬೀಜ, ಭೋಕರೀ ...ಜ, ತವಳೀಬೀಜ. ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಿಪತ್ರಿ, ಸಿತಾಪತ್ರಿ, ಮದನಮಸ್ತ, ರತನಪುರುಷ, ಕಮಲ ...ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಖೋರಿ, ಮುಂಗಲೀ ...ರಾಣಿ, ಮರ್ದಾನಿಕಟ್ಟಿಗೆ, ಶತಾವರಿ, ಸಕೀನನುಗಜ, ಆಲದಹಾಲು, ನಾರೀಕೇರಿಭಾಕಾ, ಗೋಖರು, ಅಡವೀಬೆಂಡಿಬೇರು, ಅವ್ಯಕ ... ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ...ಭಕ್ತಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟ ...ಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯು ಮತ್ತು ರಾತ್ರಿ ಭೋಜನಾನಂತರ 2 ತೊಲಿಯು ಒಂದು ...ಮನ್ನು ತಕ್ಕೊಂಡು, ಆದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಾಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ...ವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ...ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧಿ, ನಾಸಿಕಾರದಿರೋಗ, ದಟ್ಟಿರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ...ಯ 1 ಪುಡಿಕೆಗೆ 3 ರೂಪಾಯಿಗಳು.

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ. [35]

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧವಸ್ತುವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೨ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೨ ಆಣೆ ೫೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ನಾಶರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[48] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦೦ ರ ಮೇಲ್ಪಟ್ಟು ತರಿಸುವವರಿಗೆ ೫ ಆಣೆಯಂತೆಯೂ, ೧೦೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನು
ಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ) .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ) .... ೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರಂಗ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆಯದೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
[28] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿತ್ಥ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು,

(Registered Trade Mark)

ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[37] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಯದೀಲೋಕಮುಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ ನೇ ಮಾರ್ಚಿ ೧೯೩೦ [ಸಂಚಿಕೆ ೪೫.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿತ್ಥ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು,

(Registered Trade Mark)

ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[38] ಪೋ. ಬಾ. ೫೧೦. ಮದರಾಸು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಬೆಂಗಳೂರು ಸಿಟಿ.

ಈ ಮೊದಲು ಪ್ರಸಿದ್ಧಪಡಿಸಿದ ಮೇರೆಗೆ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಫಾಲ್ಗುಣ ಶುದ್ಧ ೧೪ ಗುರುವಾರ ದಿವಸ ಪೇಟೆಯಲ್ಲಿರುವ ಮಹಾಂತಿನಮಠದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಪ್ರಾತಃಕಾಲ 6 ಘಂಟೆಯಿಂದ 12 ಘಂಟೆವರೆಗೆ ಪೂಜ್ಯರಾದ ಲಿಂಗೋದ್ಭವಮೂರ್ತಿಗೆ ಏಕಾದಶರುದ್ರಾಭಿಷೇಕ ಪೂಜೆಯೂ, ಸಹಸ್ರಬಿಲ್ವಾರ್ಚನ ಪೂಜೆಯೂ ಯಥೋಕ್ತವಾಗಿ ನೆರವೇರಿಸಲ್ಪಟ್ಟು, ಅನಂತರ 3 ಘಂಟೆಯವರೆಗೆ ಮಹೇಶ್ವರಾರಾಧನೆಯು ನೆರವೇರಿಸಲ್ಪಟ್ಟಿತು. ಸಾಯಂಕಾಲ . . . ಘಂಟೆಗೆ ಸರಿಯಾಗಿ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಆಗಮಿಸಿ ಕುಳಿತು ಮಹಾಜನಸಭೆಯಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿದರು. ವಿದ್ಯಾರ್ಥಿಗಳು ಆದಿಯಲ್ಲಿ ವೇದಘೋಷವನ್ನು ಹಾಗೂ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಪಾಡಿ ಸಭಾ ಶಾಂತಿಯನ್ನು ಕೋರಿದರು. ಅನಂತರ ವೇ|| ಯಜ್. ರುದ್ರಯ್ಯನವರು ಶ್ರೀ ರೇಣುಕಾಚಾರ್ಯರ ಜಯಂತಿ ಘಂಟಿನ, ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಕೃಪಾಪೋಷಿತ ಧರ್ಮಗ್ರಂಥಭಾಂಡಾರದ ಹಾಗೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಕೃಪಾಪೋಷಿತ ಸಂಸ್ಕೃತಪಾಠಶಾಲಾ ಶ್ರೀ ಚೌಡಿಂಗಿನ ವರದಿಯನ್ನು ಓದಿದರು. ಆ ಮೇಲೆ ಬಿಡದಿ ಮ|| ರಾ|| ಬಿ. ಸಿ. ರೇವಣ್ಣಶಾಸ್ತ್ರಿಗಳು ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಕಾವ್ಯತೀರ್ಥ ಶ್ರೀ ಕಾಶೀನಾಥಶಾಸ್ತ್ರಿಗಳವರ ಅಮೂಲ್ಯವಾದ ಭಾಷಣವನ್ನು 1½ ಘಂಟೆಗಳ ಕಾಲದವರೆಗೆ ಅವಿಚ್ಛಿನ್ನವಾಗಿ ಸರ್ವಜನಮನೋಲ್ಲಾಸಕರವಾಗುವಂತೆ ಓದಿ ಹೇಳಿದರು. ಸಭಿಕರು ಪಂಡಿತರ ಭಾಷಣಾಮೃತವನ್ನು ಪಾನಮಾಡಿ ಆನಂದತುಂದಿಲಹೃದಯರಾಗಿ ಇಂದಿನವರೆಗೆ ನಾವುಗಳೆಲ್ಲರೂ ಈ ತರದ ಭಾಷಣವನ್ನು ಎಂದೂ ಕೇಳಿದ್ದಿಲ್ಲವೆಂದೂ ಈ ಭಾಷಣವು ವೀರಶೈವಸವಾಜಪುರುಷನಿಗೆ ಕಿರೀಟಪ್ರಾಯವಾಗಿರುವದೆಂದೂ ಪ್ರತಿಯೊಂದು ಮಾತುಮಾತಿಗೂ ತಮ್ಮ ಆನಂದೋದ್ಗಾರವನ್ನು ವ್ಯಕ್ತಪಡಿಸುತ್ತಿದ್ದರು. ಈ ರೀತಿಯಾಗಿ ಪಂಡಿತರ ಭಾಷಣವಾದ ಮೇಲೆ ಶ್ರೀಮದುಜ್ಜಯಿನೀ ಸದ್ಧರ್ಮಪೀಠದ ಆಸ್ಥಾನಪಂಡಿತರಾದ ಶ್ರೀ ಧರ್ಮರತ್ನ ಪಂಡಿತ ಶಂಕರಶಾಸ್ತ್ರಿಗಳವರು "ಶಕ್ತಿವಿಶಿಷ್ಟಾದ್ವೈತ" ಸಿದ್ಧಾಂತವನ್ನು ಕುರಿತು ಅರ್ಧಘಂಟೆವರೆಗೆ ಬಹು ಮನೋಹರವಾದ ಭಾಷಣವನ್ನು ಮಾಡಿ ಸರ್ವಸಭಿಕರನ್ನೂ ಸಂತೋಷಸಾಗರದಲ್ಲಿ ಮುಳುಗಿಸಿದರು. ಆ ಮೇಲೆ ಮೈಸೂರಿಂದ ಆಗಮಿಸಿದ್ದ ಸುಶಾಸ್ತ್ರಿಗಳು ಶ್ರೀ ಶಾಂತವೀರಶಾಸ್ತ್ರಿಗಳವರು ಪಂಚಾಕ್ಷರಮಂತ್ರದ ವಿಷಯದಲ್ಲಿ ಹದಿನೈದುನಿಮಿಷಗಳವರೆಗೆ ಭಾಷಣವನ್ನು ಮಾಡಿದರು. ಅನಂತರ ಮ|| ರಾ|| ಗುಂಡೂರಾವ್ ಶಾಸ್ತ್ರಿಯವರು "ಅಹಿಂಸಾ ಪರಮೋಧರ್ಮಃ" ಎಂಬ ಶ್ರುತಿವಾಕ್ಯವನ್ನವಲಂಬಿಸಿ ಗೋವಧಾನಿರೋಧವನ್ನು ಕುರಿತು ಬಹು ಸ್ವಾರಸ್ಯವಾಗಿ ಭಾಷಣವನ್ನು ಮಾಡಿದರು. ಆಮೇಲೆ ಸಭಾಧ್ಯಕ್ಷರಾದ ಸರ್ ಶೆಟ್ಟರವರು ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣದಲ್ಲಿ ಎಂದೂ ನೋಡದ ಹಾಗೂ ಕೇಳದ ಅಮೂಲ್ಯವಿಷಯಗಳು ತುಂಬಿ ತುಳುಕುವವೆಂದೂ ಈ ಭಾಷಣವು ಪ್ರಿಂಟಾಗಿ ಜಗತ್ತಿನಲ್ಲೆಲ್ಲಾ ಹಬ್ಬಿದ್ದಾದರೆ ವೀರಶೈವಮತದ ಪ್ರಾಶಸ್ತ್ಯವು ಸರ್ವರ ಹೃದಯದಲ್ಲಿ ಬಿಂಬಿಸಿ ಈ ಮತೋನ್ನತಿಗೆ ಕಾರಣವಾಗುವುದೆಂದೂ ಪಂಡಿತ ಶಂಕರಶಾಸ್ತ್ರಿಗಳವರು ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸುಗಮವಾದ ಕನ್ನಡಭಾಷೆಯಿಂದ ಸರ್ವರಿಗೂ ತಿಳಿಯುವಂತೆ ಬೋಧಿಸಿ ಸರ್ವರನ್ನು ಆನಂದಪರಿತೃಪ್ತರನ್ನಾಗಿ ಮಾಡಿರುವುದು ಸಂತೋಷಪ್ರದವಾಗಿದೆಯೆಂದೂ ಇತ್ಯಾದಿ ವಿಷಯಗಳನ್ನು ಹೇಳಿ ತಮ್ಮ ಸಮಾರೋಪಭಾಷಣವನ್ನು ಪೂರೈಸಿದರು. ಅನಂತರ ಮ|| ರಾ|| ದೇಶದ ಸಿದ್ಧಬಸವಪ್ಪಶೆಟ್ಟರವರು ಸಭೆಗಾಗಮಿಸಿದ್ದ ಯಾವತ್ತು ಜನರ ಅಭಾರವನ್ನು ಮನ್ನಿಸಿದ ಮೇಲೆ ಜಗದಾಚಾರ್ಯರ ಜಯಘೋಷದೊಡನೆಯೂ ಶ್ರೀಮನ್ಮಹಾರಾಜರವರ ಜಯಘೋಷದೊಡನೆಯೂ ಸಭೆಯು ವಿಸರ್ಜಿಸಲ್ಪಟ್ಟಿತು. ರಾತ್ರಿ 9 ಘಂಟೆಗೆ ಸರಿಯಾಗಿ ಮಲ್ಲಿಕಾಪುಷ್ಪಗಳಿಂದಲೂ, ವಿದ್ಯುದ್ದೀಪಾವಳಿಗಳಿಂದಲೂ, ಬಹು ಭವ್ಯವಾಗಿ ಶೃಂಗರಿಸಲ್ಪಟ್ಟ ಪುಷ್ಪಕದಲ್ಲಿ ಜಗದಾಚಾರ್ಯರ ರಜತವಿಗ್ರಹವನ್ನು ಮೂರ್ತಗೊಳಿಸಲ್ಪಟ್ಟ ಮೇಲೆ ವೈದಿಕರ ವೇದಘೋಷದಿಂದಲೂ ನಾನಾತರಹ ವಾದ್ಯವೈಭವದಿಂದಲೂ ಮಹೋತ್ಸವವು ರಾಜವೀಧಿಗಳಲ್ಲಿ ಸಾವಿರಾರು ಜನಸ್ತೋಮದೊಡನೆ ಹೊರಟು ಸ್ತ್ರೀಮುಕಪರಮುತೀಯರೆಲ್ಲರು ಅತ್ಯಂತ ಭಕ್ತಿಯಿಂದ ಜಗದಾಚಾರ್ಯರ ಪಾದಕಮಲಗಳಲ್ಲಿ ಸಮರ್ಪಿಸುತ್ತಿರುವ ಫಲಪುಷ್ಪಾದಿಗಳನ್ನು ಸ್ವೀಕರಿಸುತ್ತ ರಾತ್ರಿ 2 ಘಂಟೆಗೆ ಸ್ವಸ್ಥಾನವನ್ನು ಬಂದು ಸೇರಿತು. ಆ ಮೇಲೆ ಜಗದಾಚಾರ್ಯಮೂರ್ತಿಗೆ ವಿಧ್ಯುಕ್ತವಾಗಿ ರಾಜೋಪಚಾರಾದಿಗಳು ನಡೆದು ಭಗವತ್ಪಾದರ ಜಯಘೋಷ ಶ್ರೀಮನ್ಮಹಾರಾಜರವರ [illegible] ಶ್ರೇಯಃಪ್ರಾರ್ಥನೆಗಳೊಡನೆ ಕಾರ್ಯಕ್ರಮವು ಪೂರೈಗೊಳಿಸಲ್ಪಟ್ಟಿತು.

ದೇಶದ ಸಿದ್ಧಬಸಪ್ಪಶೆಟ್ಟಿ, ಗ್ರಾಂ|| ಗುರುಸಿದ್ಧಪ್ಪನವರು.
ದೇಶದಯಜಮಾನ್ ಗಂಗಪ್ಪನವರು. ಜಿ. ಗಂಗಪ್ಪನವರು.
ಎಸ್. ರುದ್ರಯ್ಯನವರು. ಎಸ್. ಬುಳ್ಳಪ್ಪನವರು.
ಬಿ. ಸರಾಫ್ ಬಸಪ್ಪನವರು. ಮೊ. ಶಾ. ಭದ್ರಪ್ಪನವರು.
ಕಾಯಿ ಗುಬ್ಬಿಣ್ಣನವರು. ಬಿ. ಸಿ. ರೇವಣ್ಣಶಾಸ್ತ್ರಿಗಳು.
ಗ್ರಾಂ|| ಶಿದ್ವೀರಪ್ಪನವರು. ಬಿ. ಸಿ. ರೇವಣ್ಣನವರು.

ಸ್ವೀಕಾರ.

ಗುಲ್ಬುರ್ಗಾಶಹರನಿವಾಸಿಗಳಾದ ವೇ|| ಕಾಡಭಾಸಗಿ ಕಾಡಸಿದ್ಧೇಶ್ವರ ಮನೆತನದ ಹಿರೇಮಠದ ಸಿದ್ಧಬಸವಪ್ಪಯ್ಯನವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ತೆಗೆದು ಕಳುಹಿಸಿರುತ್ತಾರೆ.

ಕೊಪ್ಪಳ ಡಿ|| ಯಲಬುರಗಿ ತಾಲೂಕು ಆಡೂರು ಗ್ರಾಮದಲ್ಲಿರುವ ಮ|| ರಾ|| ವೀರಭದ್ರಪ್ಪ ಶಿರೂರ ಇವರಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಅನ್ನದಾನಪ್ಪ ಆಡೂರು ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ರಾಯದುರ್ಗ ತಾಲೂಕು ವಿಠಾನಿನಹಳ್ಳಿಗ್ರಾಮದ ವೇ|| ಶಂಭಿನಮಠದ ಬಸವಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ಕಣೇಕಲ್ಲು ಹಿರೇಮಠದ ಚನ್ನವೀರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ನರಗುಂದಪೇಟಾ ಚಿಕ್ಕನರಗುಂದದಲ್ಲಿರುವ ಮ|| ರಾ|| ಕುಲಕರ್ಣಿ ಬಸಪ್ಪನವರ ಧರ್ಮಪತ್ನಿ ಸೌ|| ನೀಲವ್ವನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ|| ಷ|| ಬ್ರ|| ಕೊಣ್ಣೂರು ಹಿರೇಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಬುಲುಸುಸಾಂಬಮೂರ್ತಿಯವರು ಸೆರೆಮನೆಯಿಂದ ಬಿಡುಗಡೆ ಹೊಂದಿದ ವಿಷಯದಲ್ಲಿ ಮಹಾತ್ಮಗಾಂಧಿಯವರು "ಸಾಂಬಮೂರ್ತಿಯವರಿಗೆ ಬಿಡುಗಡೆಯಾಗಿರುವದನ್ನು ವಿಚಾರಮಾಡಿದರೆ ಸ್ವಾತಂತ್ರ್ಯಸುಖವನ್ನು ಅನುಭವಿಸುತ್ತಿದ್ದವರು ಪುನಃ ಬಂಧನಕ್ಕೆ ಸಿಕ್ಕಿದಂತಾಯಿತು. ಆದರೆ ಸಾಂಬಮೂರ್ತಿಯವರು ಜಾಗ್ರತೆಯಾಗಿ ತಮ್ಮ ಸ್ವತಂತ್ರಸ್ಥಳಕ್ಕೆ ಹೆಚ್ಚಿನ ಉತ್ಸಾಹದಿಂದ ಸಾವಿರಾರು ಜನರೊಡನೆ ಕೂಡಿ ಹೋಗುವರೆಂದು ನಂಬುತ್ತೇನೆ." ಎಂದು ಹೇಳಿರುವರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

ವೈಸರಾಯರಿಗೆ ಮಹಾತ್ಮಾಗಾಂಧಿಯವರು ಬರೆದ ಪತ್ರ.

ಅಹಮದಾಬಾದ ಮಾರ್ಚ, 6-3-1930.

ಪ್ರಿಯಮಿತ್ರರೇ !

ನಾನು ಭಯಗೊಂಡು ಅನೇಕ ವರ್ಷಗಳಿಂದ ಕೈಕೊಳ್ಳದಿದ್ದ ಸತ್ಯಾಗ್ರಹವನ್ನು ಪ್ರಾರಂಭಿಸುವ ಪೂರ್ವದಲ್ಲಿ ತಮ್ಮನ್ನು ಸಂಧಿಸಿ ಉಭಯಪಕ್ಷಗಳಿಗೂ ಹಿತಕರವಾದುದೊಂದು ಮಾರ್ಗವನ್ನು ಹುಡುಕಲು ಅಪೇಕ್ಷಿಸುವೆನು. ಉದ್ದೇಶಪೂರ್ವಕವಾಗಿ ಯಾವ ಪ್ರಾಣಿಯನ್ನಾಗಲಿ, ಮನುಷ್ಯರನ್ನಾಗಲಿ, (ಅವರಿಂದ ನನಗೂ ನನ್ನವರಿಗೂ ಎಂಥ ಘೋರ ಅನ್ಯಾಯಗಳಾಗಿದ್ದರೂ) ನಾನು ತೊಂದರೆಪಡಿಸತಕ್ಕವನಲ್ಲ. ಆದುದರಿಂದ ಬ್ರಿಟಿಷರ ಆಳ್ವಿಕೆಯನ್ನು ಘೋರಶಾಪದಂತೆ ನಾನು ಭಾವಿಸುವೆನಾದರೂ ಯಾವನೊಬ್ಬ ಇಂಗ್ಲೀಷಿನವನನ್ನಾಗಲಿ ಅಥವಾ ಅವನಿಗೆ ಹಿಂದುಸ್ಥಾನದಲ್ಲಿ ದೊರಕುವ ನ್ಯಾಯವಾದ ಅಭಿಮಾನವನ್ನಾಗಲಿ ಕೆಡಿಸಬೇಕೆಂದು ಬಯಸುವವನಲ್ಲ. ನನ್ನ ವಾಕ್ಯಗಳಿಗೆ ಅನರ್ಥಮಾಡಿಕೊಳ್ಳಬಾರದು. ಬ್ರಿಟಿಷರ ಆಳ್ವಿಕೆಯನ್ನು ಘೋರಶಾಪದಂತೆ ಭಾವಿಸುವೆನಾದರೂ ಪ್ರಾಯಶಃ ನಾಗಿ ಆಂಗ್ಲೇಯರು ಪ್ರಪಂಚದ ಇತರ ಜನಾಂಗದವರಿಗಿಂತ ಜಘನ್ಯರೆಂದು ನಾನು ಭಾವಿಸುವವನಲ್ಲ. ಅನೇಕ ಆಂಗ್ಲೇಯರು ನನ್ನ ಪರಮಮಿತ್ರರಾಗಿರುತ್ತಾರೆ. ಇದ್ದದ್ದನ್ನು ಇದ್ದಹಾಗೆ ಧೈರ್ಯದಿಂದ ತಿಳುಹಿಸುವ ಕೆಲವು ಆಂಗ್ಲೇಯರಿಂದಲೇ ಈ ಆಳ್ವಿಕೆಯ ಕೆಡುಕನ್ನು ಅರಿತಿರುವೆನು.

ಬ್ರಿಟಿಷರ ಆಳ್ವಿಕೆಯನ್ನು ಶಾಪದಂತೆ ನಾನೇಕೆ ಭಾವಿಸುವೆನೆಂದರೆ ಬ್ರಿಟಿಷ್ ಸಾಮ್ರಾಜ್ಯವು ಈ ಭರತಖಂಡವು ಒದಗಿಸುವದಕ್ಕಿಂತಲೂ ಹೆಚ್ಚಿನ ಹಣವನ್ನು ಬಯಸುವ ಮಿಲಿಟರಿ ಮತ್ತು ಇತರ ಕೆಲವು ಸಿವಿಲ್ ಇಲಾಖೆಗಳನ್ನು ನೇಮಿಸಿ ಮೂಕರಂತೆ ದುಡಿಯುವ ಇಲ್ಲಿಯ ಕೋಟ್ಯನುಕೋಟಿ ಪ್ರಜೆಗಳ ಆರ್ಥಿಕಸಂಪತ್ತಿಯನ್ನು ಹಾಳುಮಾಡಿರುವುದಲ್ಲದೆ ಭಾರತೀಯರನ್ನು ರಾಜಕೀಯ ವಿಷಯಗಳಲ್ಲಿ ಸಂಪೂರ್ಣಪರಾಧೀನರನ್ನಾಗಿ ಮಾಡಿರುವದು. ನಮ್ಮ ಶಕ್ತಿಸಾಮರ್ಥ್ಯಗಳನ್ನೂ ಸಹ ಸಮೂಲವಾಗಿ ನಾಶಮಾಡಿರುವದು. ನಾವು ಆಯುಧರಹಿತರಾಗಿ ರಣಹೇಡಿಗಳೂ, ಸಹಾಯಹೀನರೂ ಆಗಿರುವೆವು. ನನ್ನ ದೇಶಬಾಂಧವರಲ್ಲಿ ಅನೇಕರಂತೆ ನಾನೂ ಸಹ ಮುಂದುಮಾಡಿನ ಪರಿಷತ್ತಿನಿಂದ ಭರತಖಂಡಕ್ಕೆ ಅನುಕೂಲಕಾಲವು ನಿಜವಾಗಿಯೂ ಒದಗುವದೆಂದು ನಂಬಿದ್ದೆನು. ಆದರೆ ಸಾಮಂತಸ್ವರಾಜ್ಯವನ್ನು ಕೊಡುವ ವಿಷಯದಲ್ಲಿ ನೀವಾಗಲಿ, ಬ್ರಿಟಿಷ್ ಮಂತ್ರಿಮಂಡಲದವರಾಗಲಿ ಈಗಲೇ ಯಾವ ಭರವಸೆಯನ್ನೂ ಕೊಡಲಾರೆವೆಂದು ಹೇಳಿದಮೇಲೆ ಆ ಪರಿಷತ್ತಿನಿಂದ ಭರತಖಂಡದ ಪ್ರಜೆಗಳ ಅಭಿಲಾಷೆಯು ಪೂರೈಸುವದಿಲ್ಲವೆಂಬುದು ಸಿದ್ಧವಾದಂತಾಯಿತು. ದಿಲ್ಲಿಯಲ್ಲಿ ನಾವು ಪರಸ್ಪರ ಕಲೆತು ಚರ್ಚಿಸಿದಾಗ ಸರ್ವಸಮ್ಮತವಾದ ಯಾವ ನಿರ್ಧಾರವೂ ಮಾಡಲ್ಪಡಲಿಲ್ಲವಾಗಿ ನಾನೂ ಪಂಡಿತ ಮೋತೀಲಾಲ್‌ನೆಹರೂರವರೂ ಸಹ ಬೇರೆ ಮಾರ್ಗವನ್ನು ಕಾಣದೆ 1923ನೆಯ ಕಲ್ಕತ್ತೆಯ ಕಾಂಗ್ರೆಸ್ಸಿನಲ್ಲಿ ತೀರ್ಮಾನಿಸಿದ್ದಂತೆ ವರ್ತಿಸಬೇಕಾಯಿತು. ಆದರೂ "ಡೊಮಿನಿಯನ್ ಸ್ಟೇಟಸ್" (Dominion Status) ಎಂಬ ಶಬ್ದವನ್ನು ಸರ್ವಜನರ ಅಭಿಪ್ರಾಯವಿದ್ದಂತೆಯೇ ನೀವೂ ಅಭಿಪ್ರಾಯಪಟ್ಟು ಉಪಯೋಗಿಸಿರುವದಾದರೆ ನಮ್ಮ ಸ್ವಾತಂತ್ರ್ಯದ ತೀರ್ಮಾನದಿಂದ ಯಾರೂ ಭಯಪಡುವ ಕಾರಣವಿಲ್ಲ. ಏಕೆಂದರೆ, ಪ್ರಸಿದ್ಧರಾದ ಅನೇಕ ಆಂಗ್ಲೇಯ ರಾಜಕೀಯನೇತೃಪ್ರವೀಣರೂ ಸಹ "ಡೊಮಿನಿಯನ್ ಸ್ಟೇಟಸ್" ಎಂದರೆ ಪ್ರತಿಯೊಬ್ಬನು ಜನ್ಮಸಿದ್ಧವಾದ ಸ್ವಾತಂತ್ರ್ಯವೆಂದು ಹೇಳಿರುವರಲ್ಲವೇ? ಆದರೇನು? ಬ್ರಿಟಿಷರು ನಮ್ಮ ಭರತಖಂಡಕ್ಕೆ ಸರ್ವಸ್ವತಂತ್ರವಾದ ಸ್ವಾತಂತ್ರ್ಯವನ್ನು ಕೊಡಬೇಕೆಂದು ಉದ್ದೇಶಿಸಿರಲಿಲ್ಲವೆಂದೇ ನಾನು ಭಾವಿಸುತ್ತೇನೆ.

ಇದೆಲ್ಲವೂ ಕಳೆದುಹೋದ ಚರಿತ್ರೆಯು. ಈಚೆಗೆ ನಡೆದಿರುವ ಅನೇಕ ವಿಷಯಗಳು ಬ್ರಿಟಿಷರ ತತ್ವವನ್ನು ಚೆನ್ನಾಗಿ ಸಾರುವವು. ಜವಾಬದಾರಿಯನ್ನು ವಹಿಸಿರುವ ಬ್ರಿಟಿಷ್ ಅಧಿಕಾರಿಗಳು ಆಳ್ವಿಕೆಯತತ್ವದಲ್ಲಿ ತಮ್ಮ ದೇಶದವ್ಯಾಪಾರಕ್ಕೆ ತೊಂದರೆಯನ್ನುಂಟುಮಾಡಬಹುದಾದ ಯಾವ ಬದಲಾವಣೆಯನ್ನೂ ಮಾಡಲಿಷ್ಟವುಳ್ಳವರಾಗಿಲ್ಲವೆಂಬುದೂ ಹಾಗೂ ಭರತಖಂಡದಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುವದಿಲ್ಲವೆಂಬುದೂ ನಮಗೆ ಬೆಳಕಿನಂತೆ ಚೆನ್ನಾಗಿ ಕಂಡುಬರುತ್ತಿರುವದು. ಈ ಆಳ್ವಿಕೆಯ ತತ್ವವನ್ನು ಯಾವದಾದರೊಂದು ಮಾರ್ಗದಿಂದ ಕೊನೆಗಾಣಿಸದಿದ್ದರೆ ಭರತಖಂಡವು ನನ್ನ ರಕ್ತವನ್ನು ಚೆಲ್ಲಬೇಕಾಗಿರುವದು. ಫೈನಾನ್ಸ್ ಮೆಂಬರರು ರೂಪಾಯಿಗೆ 18 ಪೆನ್ಸ್ ಎಂದು ಬದಲಾವಣೆಯ ಬೆಲೆ (Exchange Rates) ಯನ್ನು ತೀರ್ಮಾನಿಸಿರುವದರಿಂದ, ಭರತಖಂಡಕ್ಕೆ ಪ್ರತಿವರ್ಷವು ಕೆಲವು ಕೋಟಿ ರೂಪಾಯಿಗಳು ಹೆಚ್ಚಾಗಿ ನಷ್ಟವಾಗುತ್ತಿರುವವು. ಇದನ್ನು ತಪ್ಪಿಸಬೇಕೆಂದು ನಾವು ವಿಶೇಷ ಪ್ರಯತ್ನವನ್ನು ನಡೆಯಿಸುತ್ತಿರುವಲ್ಲಿ ನೀವೂ ಸಹ ಭರತಖಂಡವನ್ನು ನುಚ್ಚುನೂರಾಗಿ ಅರೆಯುತ್ತಿರುವ ಈ ಅನ್ಯಾಯದಿಂದ ತಪ್ಪಿಸಲು ಧನಾಢ್ಯವಂಗಡದವರ ಸಹಾಯವನ್ನು ಕೋರಿರುವಿರಿ.

ರಾಷ್ಟ್ರದ ಸಲುವಾಗಿ ಶ್ರಮಪಡುತ್ತಿರುವವರು ಸ್ವಾತಂತ್ರ್ಯ ಸಂಪಾದನೆಯ ಉದ್ದೇಶವನ್ನು ಸ್ವತಃ ಚೆನ್ನಾಗಿ ತಿಳಿದುಕೊಂಡು ಇತರರಿಗೂ ಅದನ್ನು ತಿಳಿಯಪಡಿಸದಿದ್ದರೆ ಸ್ವಾತಂತ್ರ್ಯಕ್ಕಾಗಿ ಕಷ್ಟಪಡುತ್ತಿರುವ ಕೋಟ್ಯವಧಿ ಪ್ರಜೆಗಳಿಗೆ ಯಾವದೊಂದು ಪ್ರಯೋಜನವೂ ಆಗದಂತಾಗುವದು. ಆದುದರಿಂದಲೇ ಸ್ವಾತಂತ್ರ್ಯವೆಂಬ ಶಬ್ದದ ನಿಜವಾದ ಅರ್ಥವನ್ನು ಜನಸಾಮಾನ್ಯಕ್ಕೆ ತಿಳಿಯಪಡಿಸುತ್ತಿರುವೆನು.

ಇನ್ನು ಮಹತ್ವದ ಕೆಲವು ವಿಷಯಗಳನ್ನು ತಿಳುಹಿಸುವೆನು. ಭರತಖಂಡದ ಸ್ವಾತಂತ್ರ್ಯವೆಂದರೆ ಉತ್ಪತ್ತಿಯ ಹೆಚ್ಚಿನಭಾಗವನ್ನು ಒದಗಿಸಿಕೊಡುವ ಕೇವಲಸಾಧ್ಯವಾದ ಭೂಗಂದಾಯವು ಬಹಳಮಟ್ಟಿಗೆ ಕಡಮೆಮಾಡಲ್ಪಡಬೇಕು. ಈಗ ರೈತರು ಪ್ರಥಮದಿಂದಲೂ ಸಹಾಯಶೂನ್ಯರಾಗಿಯೇ ಇರುವರು. ಇವರಿಗೆ ಯಾವ ಹಕ್ಕುಬಾಧ್ಯತೆಯೂ ಇಲ್ಲದೆ ಸಾವಿನಸ್ಥಾಪಿಗೆಯವರಂತಿರುವರು. ಆದುದರಿಂದ ಈಗಿನ ಭೂಕಂದಾಯವನ್ನು ಬಹುಮಟ್ಟಿಗೆ ತಗ್ಗಿಸಬೇಕಲ್ಲದೆ ರೈತರಿಗೆ ಅನುಕೂಲವಾಗುವಂತೆ ಈ ಭೂಕಂದಾಯದ ಪದ್ಧತಿಯನ್ನೇ ಸಂಪೂರ್ಣವಾಗಿ ಬದಲಾಯಿಸಬೇಕು. ಆದರೆ ಈಗಿರುವ ಬ್ರಿಟಿಷರ ಪದ್ಧತಿಯು ಪ್ರಾಣಾಂತ್ಯದವರೆಗೂ ಅವರನ್ನು ತುಳಿಯುವದಾಗಿದೆ. ಈ ಭಾರದ ಮೇಲೆ ಮತ್ತಿಷ್ಟು ಭಾರವು ಹೆಚ್ಚುವಂತೆ ಮಿತಿಮೀರಿದ ಉಪ್ಪಿನ ತೆರಿಗೆಯು ಹೇರಲ್ಪಟ್ಟಿರುವದು. ವಿಶ್ವಯರ್ವಂತರಿಗಿಂತಲೂ ಬಡವನೇ ಉಪ್ಪನ್ನು ಹೆಚ್ಚಾಗಿ ಉಪಯೋಗಿಸಬೇಕಾಗಿರುವದರಿಂದ ಈ ಭಾರವನ್ನು ತಡೆಯುವುದೆಂತು? ಮಾದಕಮತ್ತು ಔಷಧ ಪದಾರ್ಥಗಳ ಮೇಲಿನ ಉತ್ಪತ್ತಿಯಾದರೂ ಬಡವರಿಂದಲೇ ಬರತಕ್ಕದ್ದಾಗಿದೆ. ಅದು ಅವರ ಶಾರೀರಕ ಹಾಗೂ ನೈತಿಕಸ್ಥಿತಿಯನ್ನು ಸಮೂಲವಾಗಿ ನಾಶಮಾಡುತ್ತಿರುವದು. 1919ನೆಯಲ್ಲಿ ಆದ ಬದಲಾವಣೆಯ ಕಟ್ಟಳೆಗಳು ಅತ್ಯಂತ ಚತುರತೆಯಿಂದ ಈ ಉತ್ಪತ್ತಿಯು ಯಾವ ಉಪಯೋಗಕ್ಕೂ ಬಾರದಂತೆ ಮಾಡಿಬಿಟ್ಟಿರುವರು. ಯಾವನಾದರೊಬ್ಬ ಸಭಾಗೃಹ ಮಂತ್ರಿಯು ಈ ಉತ್ಪತ್ತಿಯನ್ನು ತಡೆಯುವದಾದರೆ, ಅದರಿಂದ ವಿದ್ಯಾಭ್ಯಾಸವೇ ಕ್ಷೀಣವಾಗುವದು. ಹಾಗೂ ಈಗಿನ ಸ್ಥಿತಿಯಲ್ಲಿ, ಈ ಉತ್ಪತ್ತಿಯನ್ನು ಬೇರೆ ಯಾವ ವಿಧದಿಂದಲೂ ಹೊಂದುವದು ಸಾಧ್ಯವಿಲ್ಲದಾಗಿರುವದು. ಹೀಗೆ ತೆರಿಗೆಯ ಭಾಗವು ಬಡವರನ್ನು ಸತ್ವಹೀನರನ್ನಾಗಿಮಾಡುತ್ತಿರುವಲ್ಲಿ, ಮುಖ್ಯವಾದ ನೂಲುವ ಕೈಗಾರಿಕೆಯು ನಾಶವು ಅವರ ದ್ರವ್ಯಸಂಪಾದನೆಯ ಶಕ್ತಿಯನ್ನೇ ನಾಶಮಾಡಿರುವದು.

ಈ ಭರತಮಾತೆಯ ಹೆಸರಿನಲ್ಲಿ ಆಗಿರುವ ಸಾಲಗಳನ್ನು ತಿಳುಹಿಸದೆ ಈಕೆಯ ನಾಶದ ಕಥೆಯು ಪೂರ್ತಿಯಾಗಲಾರದು. ಜನಸಾಮಾನ್ಯದಲ್ಲಿಯೂ ವೃತ್ತಪತ್ರಿಕೆಗಳಲ್ಲಿಯೂ ಈ ವಿಷಯವಾಗಿ ಸಾಕಾದಷ್ಟು ಹೇಳಲ್ಪಟ್ಟಿರುವದು. ಈ ಎಲ್ಲ ಸಾಲಗಳನ್ನೂ ಕೂಲಂಕಷವಾಗಿ ಪರೀಕ್ಷಿಸಿ, ನಿಷ್ಪಕ್ಷಪಾತವಾದ ನ್ಯಾಯಗಾಥವಲ್ಲಿ, ಅನ್ಯಾಯವಾದವುಗಳೆಂದು ತೀರ್ಮಾನಿಸಲ್ಪಡಬಹುದಾದ ಸಾಲಗಳನ್ನು ಹೊಡೆದುಹಾಕುವದೇ ಸ್ವತಂತ್ರ ಭರತಖಂಡದ ಪ್ರಥಮಕರ್ತವ್ಯವಾಗಿರಬೇಕು. ಮೇಲೆ ಹೇಳಿದ ಅನ್ಯಾಯಗಳೆಲ್ಲವೂ ಈ ಇಡೀ ಪ್ರಪಂಚದಲ್ಲಿ ಅತ್ಯಂತ ಹೆಚ್ಚು ವೆಚ್ಚಮಾಡುವ ಪಾಶ್ಚಿಮಾತ್ಯ ರಾಜ್ಯಭಾರದ ಶಿಸ್ತನ್ನು ನಡೆಯಿಸುವದಕ್ಕಾಗಿಯೇ ಆಗುತ್ತಿರುವವು.

ನಿಮ್ಮ ಸಂಬಳವನ್ನು ನೋಡಿರಿ. ಇತರ ನಾನಾ ಕಾರಣಗಳಿಂದ ಬರುವ ಉತ್ಪತ್ತಿಯಲ್ಲದೆ ನಿಮ್ಮ ಸಂಬಳವೇ ತಿಂಗಳಿಗೆ 21,000 ರೂ. ಗಳಿಗಿಂತಲೂ ಹೆಚ್ಚಾಗಿರುವದು. ಬ್ರಿಟಿಷರ ಮುಖ್ಯ ಮಂತ್ರಿಯು ವರ್ಷಕ್ಕೆ 5,000 ಪೌಂಡುಗಳನ್ನು ಅಂದರೆ ಈಗಿನ ಬದಲಾವಣೆಯ ಪ್ರಕಾರ ತಿಂಗಳು 1 ಕ್ಕೆ ಸುಮಾರು 5,400 ರೂಪಾಯಿಗಳನ್ನು ಹೊಂದುವನು. ಭರತಖಂಡದ ಸರಾಸರಿ ಪ್ರತಿಜನದ ಉತ್ಪತ್ತಿಯು 2 ಆಣೆಗಳು ಮಾತ್ರವೇ ಆಗಿದ್ದರೂ ನೀವು ಪ್ರತಿದಿನವೂ 700 ರೂ. ಗಳನ್ನು ಪಡೆಯುವಿರಿ. ಬ್ರಿಟಿಷ್ ದೇಶದ ಸರಾಸರಿ ಪ್ರತಿಜನದ ಉತ್ಪತ್ತಿಯು 2 ರೂ. ಗಳಾಗಿರುವಲ್ಲಿ ಬ್ರಿಟಿಷ್ ಮುಖ್ಯ ಮಂತ್ರಿಗಳು ದಿನ 1 ಕ್ಕೆ 180 ರೂ. ಗಳನ್ನು ಹೊಂದುವರು. ಅಂದರೆ ನೀವು ಭರತಖಂಡದ ಸರಾಸರಿ ಉತ್ಪತ್ತಿಯ 5000 ಪಾಲಿಗಿಂತಲೂ ಹೆಚ್ಚಿನ ಸಂಬಳವನ್ನು ಹೊಂದುತ್ತಿರುವಿರಿ. ಬ್ರಿಟಿಷರ ಮುಖ್ಯಮಂತ್ರಿಗಳು ಬ್ರಿಟನ್ನಿನ ಸರಾಸರಿ ಉತ್ಪತ್ತಿಯ 90 ಪಾಲಿನಷ್ಟು ಮಾತ್ರ ಹೊಂದುವರು. ಈ ವಿಚಿತ್ರಸ್ಥಿತಿಯನ್ನು ಕುರಿತು ಸ್ವಲ್ಪ ಆಲೋಚಿಸಬೇಕೆಂದು ನಾನು ಕರಮುಗಿದು ನಿಮ್ಮನ್ನು ಬೇಡುವೆನು. ಈ ದುಃಖಕರವಾದ ನಿಜಾಂಶವು ನಿಮ್ಮ ಮನಸ್ಸಿನಲ್ಲಿ ನಾಟಲೆಂದು ಈ ಉದಾಹರಣೆಗಳನ್ನು ಹೇಳಿರುವೆನು. ನಿಮ್ಮ ವಿಷಯದಲ್ಲಿ ನನಗೆ ವಿಶೇಷಗೌರವವಿರುವದರಿಂದ ನಿಮ್ಮ ಮನಸ್ಸಿಗೆ ವ್ಯಥೆಯನ್ನುಂಟುಮಾಡಬೇಕೆಂಬುದು ನನ್ನ ಅಭಿಮತವಲ್ಲ. ನೀವು ಪಡೆಯುವ ಸಂಬಳವು ನಿಮಗೆ ಅವಶ್ಯಕವಿಲ್ಲವೆಂಬುದನ್ನು ನಾನು ಬಲ್ಲೆನು. ಪ್ರಾಯಶಃ ನಿಮ್ಮ ಸಂಬಳವೆಲ್ಲವೂ ದಾನಧರ್ಮಗಳಿಗಾಗಿಯೇ ವಿನಿಯೋಗವಾಗಬಹುದು. ಆದರೆ ಈ ಪದ್ಧತಿಯನ್ನು ಮಾತ್ರ ಸಂಪೂರ್ಣವಾಗಿ ತೆಗೆಯಬೇಕಾಗಿರುವದು. ವೈಸರಾಯರ ಸಂಬಳದ ನಿಜತತ್ವವು ಸಂಪೂರ್ಣ ರಾಜ್ಯಾಡಳಿತದ ಸಿಸ್ತಿಗೆ ಅನ್ವಯಿಸತಕ್ಕುದಾಗಿರುವದು.

ಆದುದರಿಂದ ಉತ್ಪತ್ತಿಯನ್ನು ಕಡಿಮೆಮಾಡುವ ಕಾರ್ಯವು, ರಾಜ್ಯಾಡಳಿತದ ಖರ್ಚನ್ನು ಕಡಿಮೆಮಾಡುವದನ್ನೇ ಅವಲಂಬಿಸುವದು. ಅಂದರೆ ಈಗಿನ ಸರಕಾರದ ರೀತಿಯನ್ನೇ ಬದಲಾಯಿಸಬೇಕಾಗುವದು. ಸ್ವಾತಂತ್ರ್ಯವಿಲ್ಲದೆ ಈ ಬದಲಾವಣೆಯು ಆಗಲಾರದು. ಆದುದರಿಂದಲೇ ಜನವರಿ 26 ನೆಯ ತಾರೀಖಿನ, ನೂತನಪರೀಕ್ಷೆಯು ನಡೆದು ಅದರಲ್ಲಿ ಸಾವಿರಾರುಜನ ಹಳ್ಳಿಯಜನರು ಉತ್ಸಾಹದಿಂದ ಭಾಗಿಗಳಾಗಿದ್ದರು. ಅವರಿಗೆ ಸ್ವಾತಂತ್ರ್ಯವೆಂದರೆ ಪ್ರಾಣಾಪಹರಣಮಾಡುವ ಹೊರೆಯಿಂದ ಬಿಡುಗಡೆಯೆಂದರ್ಥ. ಭರತಖಂಡದವರು ಅನೇಕ ವೇಳೆ ಪ್ರತಿಭಟಿಸುತ್ತಿದ್ದರೂ ಲಕ್ಷಿಸದೆ ಇಲ್ಲಿಂದ ಅಪಹರಿಸುತ್ತಿರುವ ಸಂಪತ್ತನ್ನು ಬಿಟ್ಟುಕೊಡಲು ಯಾವ ಬ್ರಿಟಿಷರ ರಾಜಕೀಯ ಪಕ್ಷವೂ ಸಿದ್ಧವಾಗಿಲ್ಲವೆಂದೇ ನನಗೆ ತೋರುವದು. ಆದರೂ ಹಿಂದೂದೇಶವು ಇತರ ರಾಷ್ಟ್ರಗಳಂತೆ ತಾನೂ ಜೀವಿಸಬೇಕಾದರೆ, ಆಹಾರದ ಅಭಾವದಿಂದ ಸಾವಕಾಶವಾಗಿ ಬರುತ್ತಿರುವ ಮೃತ್ಯುವು ನಿಲ್ಲಬೇಕಾದರೆ, ಅತಿ ಶೀಘ್ರವಾಗಿ ನಾವು ಯಾವದಾದರೊಂದು ಉಪಾಯವನ್ನು

[...] ರ ಉದ್ದೇಶವು ಫಲಿಸುವಂತೆ ಮಾಡಲೆಂದೂ, [...]ಖಂಡವು ಕಳೆದುಕೊಂಡ ತನ್ನ ಸ್ವಾತಂತ್ರ್ಯ[...] ಪುನಃ ಸಂಪಾದಿಸಲೆಂದೂ, ಬ್ರಿಟಿಷರಿಗೂ ಭಾರ[...]ರಿಗೂ ಉತ್ಪನ್ನವಾಗಿರುವ ವೈಮನಸ್ಸು ಇಲ್ಲ[...]ಗಿ ದೇಶದಲ್ಲಿ ಶಾಂತಿಯೂ ಸೌಖ್ಯವೂ ನೆಲೆಗೊ[...]ಳಿತೆ ಕರುಣಿಸಲೆಂದೂ ಆ ಜಗನ್ನಿಯಾಮಕನನ್ನು [...]ರ್ಥಿಸುತ್ತೇನೆ.

[ಕ]ರ್ನಾಟಕಭಾಷಾರತ್ನ ಆಸ್ಥಾನಮಹಾ[...]ರ್ ಪಿ. ಆರ್. ಕರಿಬಸವಶಾಸ್ತ್ರಿಗಳು.

[ಮೈ]ಸೂರು ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾ[ಜ] ಕಾಲೇಜಿನ ಕರ್ನಾಟಕ ಸಂಘದವರು ಕಾಲೇ[ಜಿ]ನ ಸನ್ನ್ಯಾಸಮಂದಿರದಲ್ಲಿ ತಾ|| 2-3-1930 ನೆಯ [ಭಾನುವಾ]ರದ ದಿವಸ ಪದ್ಧತಿಪ್ರಕಾರವಾಗಿ ನೆರವೇರಿ[ದ ಕ]ರ್ನಾಟಕಸಂಘದ ವಾರ್ಷಿಕಮಹೋತ್ಸವ ಸಮ[ಯದಲ್ಲಿ ಈ ಶ]ಸ್ತ್ರಿಗಳವರನ್ನು ಬಹು ಗೌರವದಿಂದ ಬರ[ಮಾಡಿಕೊ]ಂಡು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನ[ವರೇ ಮೊ]ದಲಾದ ಸಂಘದ ಮಹಾಜನಗಳು ಶಾಸ್ತ್ರಿಗ[ಳಿಗೆ ಒಂ]ದು ಬಿನ್ನವತ್ತಳೆಯನ್ನು ಸಮರ್ಪಣಮಾಡಿದ[ರು. ಈ ಸಂಗತಿಯು] ಸರ್ವರಿಗೂ ಸಂತೋಷವನ್ನುಂಟುಮಾಡು[ವುದು. ಈ ಶ]ಾಸ್ತ್ರಿಗಳವರು ಜ್ಞಾನವೃದ್ಧರೂ ವಯೋವೃದ್ಧರೂ ಆಗಿರು[ವರು. ಈ] ಶಾಸ್ತ್ರಿಗಳು ಸಂಸ್ಕೃತಭಾಷಾಧುರೀಣರಾಗಿರು[ವುದಲ್ಲದೆ ಕ]ನ್ನಡಭಾಷೆಯಲ್ಲಂತೂ ಅದ್ವಿತೀಯ ಪಂಡಿ[ತರೆಂದು] ಸ್ವಮತಪರಮತ ಪಂಡಿತರೆಲ್ಲರಿಗೂ ಗೊ[ತ್ತಾಗಿರು]ತ್ತದೆ. ಈ ಮಹೋದಯರು ಶ್ರೀಮನ್ಮಹಾ[ರಾಜಾ ಕಾ]ಲೇಜಿನಲ್ಲಿ ಸುಮಾರು 27 ವರ್ಷಗಳ ಕಾಲ [...]ಪಂಡಿತರಾಗಿ ಕನ್ನಡಭಾಷೆಯ ನಿಜವೈಭವ[ವನ್ನು ವಿದ್]ಯಾರ್ಥಿಗಳ ಹೃದಯಭೂಮಿಯಲ್ಲಿ ಚನ್ನಾಗಿ [...], ಹತ್ತುಹದಿನೈದು ವರ್ಷಗಳಿಂದ ವಿಶ್ರಾಂ[ತಿಯ]ನ್ನು ಅನುಭವಿಸುತ್ತಿರುವರು. ಪ್ರಾಯಶಃ [ಈ] ಸೀಮೆಯಲ್ಲಿರುವ ಸರ್ಕಾರಿಯ ದೊಡ್ಡ [ಪ]ದವೀಧರರೆಲ್ಲರೂ ಈ ಮಹೋದಯರ ಶಿಷ್ಯ[ರು. ಅವರು] ಎಲ್ಲರೂ ಇವರ ವಿಷಯದಲ್ಲಿ ವಿಶೇಷ [...]ರಾಗಿರುತ್ತಾರೆಂಬುದು ಸರ್ವರಿಗೂ ತಿಳಿದ[ಂತೆ] ಆಗಿರುತ್ತದೆ. ಇದುವರೆಗೆ ಕನ್ನಡಭಾಷಾ[...] ಗ್ರಂಥಗಳನ್ನು ಯಾರು ಬರೆದರೂ ಅವರೆ[ಲ್ಲರೂ ಈ ಮಹ]ನೀಯರನ್ನಾಶ್ರಯಿಸಿ ಗ್ರಂಥಪರಿಶೋಧನವನ್ನು [...]ಖಿನ ಮೂಲಕವಾಗಿ ಇವರ ಅನುಮತಿ[ಯನ್ನು ಪ]ಡೆಯದಿದ್ದಲ್ಲಿ ಅಂತಹ ಗ್ರಂಥಗಳಿಗೆ ಪ್ರಾಶ[ಸ್ತ್ಯವಿ]ಲ್ಲವೆಂಬ ಬುದ್ಧಿಯು ಪ್ರತಿಯೊಬ್ಬ ಕರ್ನಾ[ಟಕಗ್ರಂಥ]ಕರ್ತರ ಮತ್ತು ಕವಿಗಳ ಹೃದಯದಲ್ಲಿ [ಬೇರೂ]ರುವದಲ್ಲದೆ ಪಿ. ಆರ್. ಕರಿಬಸವಪ್ಪ[ನವರು ಪರಿ]ಶೋಧನಮಾಡಿದ ಗ್ರಂಥಗಳಾವುವುಂಟೋ [ಅವೆಲ್ಲವೂ ನಿರ್ದೋಷ]ಗಳೇ ಜಗನ್ಮಾನ್ಯಗಳೆಂಬ ಪ್ರಸಿದ್ಧಿಯನ್ನೂ [ಈ ಮ]ಹೋದಯರು ಪಡೆದಿರುವರು. ಅಲ್ಲದೆ [...]ಾಸಗಳೆನಿಸಿದ ಜೈಮಿನಿ ಮಹಾಭಾರತ[...] ರಾಜಶೇಖರ ಮುಂತಾದ ಪ್ರಸಿದ್ಧ ಗ್ರಂ[ಥಗಳು ಅಜ್ಞ]ಾನಭಿಜ್ಞರ ಹಸ್ತಗಳಲ್ಲಿ ಶಿಲುಕಿ ವಿರೂಪ[ವಾಗಿದ್ದು] ಈ ಮಹೋದಯರಿಂದ ಪರಿಶೋಧಿತಗ[ಳಾಗಿ ಈ]ಚೆಗೆ ಎಂದಿನಂತೆ ಸರ್ವಾಂಗಸುಂದರವ[ಾಗಿ ...] ಪ್ರಪಂಚದಲ್ಲಿ ದೇದೀಪ್ಯಮಾನಗಳಾಗಿ[ರು]ವವು. ಇತ್ತೀಚೆಗೆ ಈ ಮಹೋದಯರ [ಶಿಷ್ಯರಲ್ಲಿ] ಅನೇಕರು ಕರ್ನಾಟಕಭಾಷಾಕೋವಿದ[ರಾಗಿ] ತೋರುವರು. ಈಗಲೂ ಅಂತಹ ಸುಪ್ರಸಿ[ದ್ಧ] ಮಹಾಪಂಡಿತಮಣಿಗಣಮಾಲೆಯೊಳಗೆ [ಶ್ರೇಷ್ಠ]ರಾದ ಈ ಮಹೋದಯರೇ ಅನರ್ಘ್ಯ[ರತ್ನವಾಗಿ ಶೋಭಿ]ಸುತ್ತಿರುವುದರಿಂದ ದೇಶಭಕ್ತರಾದ ಕರ್ನಾ[ಟಕ]ವಾಸಿಗಳೆಲ್ಲರೂ ಇವರಿಗೆ ಚಿರಋಣಿಗ[ಳಾಗಿರುವ] ವಿಷಯದಲ್ಲಿ ಸಂದೇಹವಿಲ್ಲ. ಇವರ [ಅಗಾಧ]ದ ಪಾಂಡಿತ್ಯವನ್ನು ನೋಡಿ ನಮ್ಮ [ಕರುಣಾ]ವತಾರಿಗಳಾದ ಶ್ರೀಮನ್ಮಹಾರಾಜ[ರು ಈ ಮಹ]ೋದಯರನ್ನು ಆಸ್ಥಾನಮಹಾಪಂಡಿ[ತರನ್ನಾಗಿ] ನೇರಿಸಿ "ಕರ್ನಾಟಕ ಭಾಷಾರತ್ನ" [ಎಂಬ ಉಚಿ]ತವಾದ ನವರತ್ನದ ಕೈಕಡಗವನ್ನು [ಅನೇಕ ವ]ಸ್ತ್ರಾಂಬರಗಳೊಂದಿಗೆ ದಯಪಾಲಿಸಿರು

ತ್ತಾರೆ. ಇವರು ತಾವು ಜನ್ಮವೆತ್ತಿದ ವೀರಶೈವಮತ ಸೇವೆಯನ್ನು ವಿಶೇಷವಾಗಿ ಮಾಡಿದ್ದಾರೆ. ಮಧ್ಯಕಾಲದಲ್ಲಿ ವೀರಶೈವಪಂಡಿತವರ್ಗವು ಕಡಿಮೆಯಾದುದರಿಂದ ವೀರಶೈವಸಿದ್ಧಾಂತಗ್ರಂಥಗಳು ಬಿಲವಾಗಿ ಸ್ವೇಚ್ಛಾಚಾರಗಳು ಸಮಾಜದಲ್ಲಿ ನೆಲೆಗೊಳ್ಳಲು ಪ್ರಾರಂಭವಾಗಿದ್ದುವು. ಅಷ್ಟರೊಳಗೆ ಈ ಮಹೋದಯರು ಮತಗ್ರಂಥಗಳನ್ನು ಮುದ್ರಣಮಾಡಿಸಿ ಮತದ ನಿಜತತ್ವವನ್ನು ಪ್ರಕಾಶಪಡಿಸಿದರು. ಹಗಲಿರುಳೂ ವೀರಶೈವಮತದ ವೈದಿಕಧರ್ಮಾಚರಣೆಗಳು ಜನಗಳಲ್ಲಿ ಪ್ರಚಾರವಾಗಬೇಕೆಂಬುದೊಂದೇ ಇವರಿಗೆ ಪರಮ ತಪಸ್ಸಾಗಿ ಪರಿಣಮಿಸಿದೆ. ವಯಃಪರಿಮಿತಿಯಿಂದ ಕೂಡಿದರೂ ಈಗಲೂ ಮನೆಗೆ ಹೋದ ವಿದ್ಯಾರ್ಥಿಗಳಿಗೆ ವೀರಶೈವಸಿದ್ಧಾಂತದ ಪ್ರಾಚೀನ ನಡವಳಿಕೆಗಳನ್ನು ತಿಳುಹಿಸುವುದರಲ್ಲಿಯೇ ನಿರತರಾಗಿರುತ್ತಾರೆ. ವೀರಶೈವಜನಾಂಗವು ಸರ್ವತೋಮುಖವಾಗಿ ಅಭಿವೃದ್ಧಿಗೆ ಬರಲೆಂಬ ಸದುದ್ದೇಶದಿಂದ ಈಗ್ಯೆ 28 ವರ್ಷಗಳ ಕೆಳಗೆ ಶ್ರೀ ಮುಡುಕುದೊರೆ ಕ್ಷೇತ್ರದಲ್ಲಿ "ವೀರಶೈವಮತಸಂವರ್ಧಿನೀಸಭೆ"ಯನ್ನು ಸ್ಥಾಪಿಸಿದ್ದು ಅದು ಈಗಲೂ ಅವಿಚ್ಛಿನ್ನವಾಗಿ ನಡೆಯುತ್ತ ತನ್ನ ಉದ್ದೇಶವನ್ನು ನೆರವೇರಿಸುತ್ತ ಬರುತ್ತದೆ. ಪ್ರಕೃತದಲ್ಲಿ ಈ ವಿದ್ವಾಂಸರಿಗೆ [8]8 ವರ್ಷಗಳಾಗುತ್ತ ಬಂದಿದ್ದರೂ ಇವರ ಇಂದ್ರಿಯಪಾ[ಟ]ವವೂ ಬುದ್ಧಿಶಕ್ತಿಯೂ ಒಂದೇ ರೀತಿಯಲ್ಲಿರುವುದನ್ನು ನೋಡಿದರೆ ಇವರ ಪುಣ್ಯೋದಯವು ಸರ್ವರಿಗೂ ಸ್ಪಷ್ಟವಾಗುತ್ತದೆ. ಪ್ರಕೃತ ಇಂತಹ ಮಹೋದಯರನ್ನು ಕರ್ನಾಟಕ ಸಂಘದವರು ಬರಮಾಡಿಕೊಂಡು ಬಿನ್ನವತ್ತಳೆಯನ್ನು ಸಮರ್ಪಣಮಾಡಿ ಇವರಲ್ಲಿರುವ ಮೃದುಸ್ವಭಾವಾದಿ ಗುಣಗಳನ್ನು ಕೊಂಡಾಡಿ ತಮ್ಮ ಶಿಷ್ಯಭಾವವನ್ನು ವ್ಯಕ್ತಗೊಳಿಸಿದರು. ಈ ಬಿನ್ನವತ್ತಳೆಯ ಸಮರ್ಪಣ ಕಾರ್ಯವು ಹೋದವರ್ಷದ ವಾರ್ಷಿಕಸಭೆಯ ಕಾಲದಲ್ಲಿಯೇ ನಡೆಯಬೇಕಾಗಿದ್ದರೂ ಆ ಸಮಯದಲ್ಲಿ ಶಾಸ್ತ್ರಿಗಳ ದೇಹದಲ್ಲಿ ವಿಶೇಷ ಅಸ್ವಸ್ಥತೆಯುಂಟಾದುದರಿಂದ ಚಿರಸ್ಮಾರಕವಾಗಿ ಬರೆಯಿಸಿದ [ಶಾ]ಸ್ತ್ರಿಗಳವರ ಚಿತ್ರಪಟದ ಅನಾವರಣಮಹೋತ್ಸವವನ್ನು ಮಾತ್ರ ಸೆಷನ್ ಜಡ್ಜ್ ಶ್ರೀಶಂಕರನಾರಾಯಣ[ರಾ]ಯರವರ ಹಸ್ತದಿಂದ ಮಾಡಿಸಿ ಬಿನ್ನವತ್ತಳೆಯ [ಸ]ಮರ್ಪಣಕಾರ್ಯವನ್ನು ಮಾತ್ರ ನಿಲ್ಲಿಸಿದ್ದರು. ಅದನ್ನೂ [ಈಗ] ಈ ವರ್ಷದ ವಾರ್ಷಿಕೋತ್ಸವದಲ್ಲಿ ನೆರವೇರಿಸಿ[ದರು. ಹ]ಣ್ಣುಹಣ್ಣು ಮುದುಕರಾಗಿರುವ ಈ ಪಂಡಿತೋತ್ತ[ಮರ]ಿಗೆ ಸಂಘದವರು ಕೃತಜ್ಞತೆಯನ್ನು ತೋರಿಸಿರು[ತ್ತಾ]ರೆ. ಆಸ್ತಿಕಶಿಖಾಮಣಿಗಳೂ, ಅನಿತರ ಸಾಧಾ[ರಣ] ಕರ್ನಾಟಕಪಂಡಿತರೂ, ಶೈವಸಿದ್ಧಾಂತಕೋವಿ[ದರ]ೂ ಆಗಿರುವ ಈ ವೃದ್ಧಪಂಡಿತರಿಗೆ ಜಗದಾಚಾ[ರ್ಯ]ರು ಆರೋಗ್ಯಭಾಗ್ಯವನ್ನು ಕೊಟ್ಟು ಕಾಪಾಡ[ಲೆಂದು] ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇನೆ.

ಒಳದೇಶದ ವೃತ್ತಾಂತಗಳು.

[ನ]ಂಜನಗೂಡು ಟೌನು ವತಿಯಿಂದ ಪ್ರಜಾಪ್ರತಿನಿಧಿ[...]ಗೆ ವೇ|| ಲಾಯರ್ ಬಿ. ನಂಜುಂಡಾರಾಧ್ಯರವರು [ಅವಿರೋಧ]ರಾಗಿ ಚುನಾಯಿಸಿ ಬಂದಿರುತ್ತಾರೆ.

[ಶಿ]ವಮೊಗ್ಗಾ ಡಿಸ್ಟ್ರಿಕ್ಟಿನಿಂದ ಮ|| ರಾ|| ಎಚ್. [...]ಯ್ಯನವರು ನ್ಯಾಯವಿಧಾಯಕ ಸಭೆಯ ಮೆಂಬರ[ರಾಗಿ] ಚುನಾಯಿಸಲ್ಪಟ್ಟರೆಂದು ತಿಳಿದುಬರುತ್ತದೆ.

[ಶ್ರ]ೀಮನ್ ಮಹಾರಾಜರವರೂ, ಮಹಾಮಾತೃಶ್ರೀ [...]ವಿಲಾಸ ಸನ್ನಿಧಾನ ಸಿ. ಐ. ಯವರೂ ಹಾಗೂ [...]ದ್ಯುವರಾಣಿಯವರೂ ಮಕ್ಕಳೊಡನೆ ಬೇಸಿಗೆಯ [...]ವಾಗಿ ನೀಲಗಿರಿಗೆ ದಯಮಾಡಿಸಿರುತ್ತಾರೆ.

[ಹು]ಬ್ಬಳ್ಳಿ ಶ್ರೀ ಚನ್ನಬಸವೇಶ್ವರಸ್ವಾಮಿ ಥಿಯೇಟ್ರಿ[ಕಲ್ ಕ]ಂಪೆನಿಯ ಪ್ರೊಪ್ರೈಟರಾದ ಶ್ರೀಯುತ ವಿನೋ[ದ]ಕರ ಜಿ ಎಚ್. ವೀರಣ್ಣನವರು ಕಳುಹಿಸಿರುವ [ಮನೋ]ಹರವಾದ ನೂತನ ವರ್ಷದ ಕ್ಯಾಲೆಂಡರನ್ನು [ಆದ]ರದಿಂದ ಸ್ವೀಕರಿಸಿರುತ್ತೇವೆ.

[ಬೆಂ]ಗಳೂರು ನಗರದ ದೊಡ್ಡ ವ್ಯಾಪಾರಿಗಳಾದ [ಮ||]ರಾ|| ವಿ. ತಿರುವೆಂಗಟಸ್ವಾಮಿ ಮೊದಲಿಯಾರ್, ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಂದು ಬಾಲಿ

ಕಾಪಾಠಶಾಲೆಯನ್ನು ಸ್ಥಾಪಿಸುವದಕ್ಕಾಗಿ 40,000 ರೂಪಾಯಿಗಳನ್ನು ಕೊಟ್ಟಿರುವರು. ಸ್ತುತ್ಯ !

ಮುಂದಿನ ಏಪ್ರಿಲ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ದೊಡ್ಡಬಳ್ಳಾಪುರಕ್ಕೆ ಹೋಗುವ ವೀರಶೈವ ವಿದ್ಯಾರ್ಥಿಗಳಿಗೆ ದೊಡ್ಡಬಳ್ಳಾಪುರದ ವೇ|| ಡಿ. ವಿ. ಬಸವಾರಾಧ್ಯ ಮಹಾಂತಪಾದರವರು. ಪರೀಕ್ಷಾದಿವಸಗಳಲ್ಲಿ ತಮ್ಮ ಮಠದಲ್ಲಿ ಭೋಜನಕ್ಕೆ ಅನುಕೂಲಪಡಿಸಿರುವದಾಗಿ ಒಬ್ಬಬಾತ್ಮೀದಾರರು ತಿಳುಹಿಸುತ್ತಾರೆ.

ಮೈಸೂರು ಸಂಸ್ಥಾನದ ಡಾಕ್ಟರುಗಳ ಎರಡನೆಯ ವಾರ್ಷಿಕಕೂಟವು ರಾಜಧಾನಿಯ ವಸ್ತುಪ್ರದರ್ಶನ ಶಾಲೆಯಲ್ಲಿ (Exhibition Buildings) 13 ನೆಯ ತಾರೀಖು ಗುರುವಾರ ಪ್ರಾರಂಭವಾಗಿ ಮೂರು ದಿನಗಳವರೆಗೆ ನಡೆಯಿತು. ತೃತೀಯ ಸಚಿವರಾದ ರಾಜಮಂತ್ರಪ್ರವೀಣ ಮಿ|| ಕೆ. ಮ್ಯಾಥ್ಯೂರವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ಈ ಸಾರೆ ನಡೆದ ಚುನಾವಣೆಗಳಲ್ಲಿ ನ್ಯಾಯವಿಧಾಯಕಸಭೆಗೆ ರಾಜಧಾನಿಯಿಂದ ಅಡ್ವೋಕೇಟ್ ಮಿ|| ಎಚ್. ಸಿ. ದಾಸಪ್ಪನವರು, ಪ್ರಜಾಪ್ರತಿನಿಧಿಸಭೆಗೆ ಶ್ರೀ|| ಲೋಕಹಿತೈಷಿ ಎಚ್. ನಂಜುಂಡರಾಜೇ ಅರಸರವರು, ಮ|| ರಾ|| ಎ.ಸಿ. ರಾಮಸ್ವಾಮಿಯವರು ಮ|| ರಾ|| ಪಿ. ಸೀತಾರಾಮಯ್ಯನವರು ಮತ್ತು ಧರ್ಮಪ್ರಕಾಶ ಡಿ. ಬನುಮಯ್ಯನವರು ಮೈಸೂರು ತಾಲ್ಲೂಕಿನಿಂದ ಮ|| ರಾ|| ಬಿ. ಮಲ್ಲಣ್ಣನವರು, ಮ|| ರಾ|| ಸಾವಂದಯ್ಯನವರು ಮತ್ತು ಮ|| ರಾ|| ಆರ್. ದೇವಯ್ಯನವರು ಹೆಚ್ಚು ಓಟುಗಳನ್ನು ಪಡೆದು ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಸಂಸ್ಥಾನದಲ್ಲಿ ಗೋವಧಾ ಕಾನೂನನ್ನು ಜಾರಿಗೆ ತರಬೇಕೆಂದು ಮಹಾಜನಗಳು ಪ್ರಾರ್ಥಿಸಿಕೊಂಡಿದ್ದ ಮೇರೆಗೆ ಗವರ್ನಮೆಂಟಿನವರು ಅದರ ಸಾಧಕಬಾಧಕಗಳನ್ನು ವಿಚಾರಿಸಿ ತಿಳುಹಿಸಬೇಕೆಂದು ಒಂದು ಕಮಿಟಿಯನ್ನು ನೇಮಿಸಿದ್ದರಷ್ಟೆ! ಈ ಕಮಿಟಿಯವರ ವರದಿಯನ್ನು ಸರಕಾರದವರು ಜನಗಳ ತಿಳುವಳಿಕೆಗಾಗಿ ಈಗ ಪ್ರಕಟಿಸಿರುತ್ತಾರೆ. ಕಮಿಟಿಯವರು ಸಂಸ್ಥಾನದಲ್ಲಿ ಹಾಲುಕೊಡುವಂಥ ದನಗಳನ್ನು ಯಾರೂ ಕೊಲ್ಲುವದಿಲ್ಲವೆಂದೂ, ಈಗ ಕೊಲ್ಲಲ್ಪಡುತ್ತಿರುವ ದನಗಳು ಕೇವಲ ನಿರುಪಯೋಗಿಗಳಾಗಿಯೂ, ಮುದಿಯಾಗಿಯೂ, ಹಾಲುಕೊಡದವುಗಳಾಗಿಯೂ, ಕರುಗಳನ್ನು ಹಾಕದವುಗಳಾಗಿಯೂ ಅವೆ. ಗೋವಧೆಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವುದಾದರೆ, ಅದರಿಂದಲೇ ಜೀವನ ನಡೆಯಿಸುತ್ತಿರುವ ಸಂಸ್ಥಾನದ ಸುಮಾರು 13 ಲಕ್ಷ ಪ್ರಜೆಗಳು ಹೊಟ್ಟೆಗಿಲ್ಲದೆ ತೊಂದರೆಪಡಬೇಕಾಗುವದೆಂದೂ, ಅವಶ್ಯಕವಿದ್ದರೆ ಹಾಲುಕೊಡುತ್ತಿರುವ ಹಾಗೂ ಗಟ್ಟಿಮುಟ್ಟಾದ ದನಗಳನ್ನು ಕೊಲ್ಲಬಾರದೆಂಬ ನಿರ್ಬಂಧಮಾಡಬಹುದೆಂದೂ ಶಿಫಾರಸು ಮಾಡಿರುವರು. ಹಿಂದೂಗಳು ಗೋವನ್ನು ದೇವರೆಂಬ ಭಾವನೆಯಿಂದ ಪೂಜಿಸುವರು. ದನಗಳು ಗಟ್ಟಿಮುಟ್ಟಾಗಿದ್ದಾಗ ಬೀದಿಯಲ್ಲಿ ಸಿಕ್ಕಿದ ಕಸಕಡ್ಡಿಗಳನ್ನೂ ಬೈಲುಗಳಲ್ಲಿ ಬೆಳೆಯುವ ಹುಲ್ಲನ್ನೂ ತಿಂದು, ಯಜಮಾನನಿಗೆ ಅಮೃತಸಮಾನವಾದ ಕ್ಷೀರವನ್ನು ಕೊಡುವುವು. ಆದುದರಿಂದಲೇ ಹಿಂದೂಗಳು ಗೋವನ್ನು "ಕಾಮಧೇನು" ವೆಂದು ಕರೆಯುವರು. ಅದು ಗಟ್ಟಿಮುಟ್ಟಾಗಿರುವವರೆಗೆ ಅದರ ಅಮೃತಸಮಾನವಾದ ಕ್ಷೀರದಿಂದ ತಮ್ಮ ದೇಹವನ್ನು ಬೆಳೆಯಿಸಿಕೊಂಡು, ಅದು ಮುದಿಯಾದಮಾತ್ರಕ್ಕೆ ಕೊಲ್ಲಬೇಕೆಂದು ಹೇಳುವದು ಯಾವಧರ್ಮ? ಕಮಿಟಿಯವರು ಈ ವಿಷಯವನ್ನು ಧರ್ಮದೃಷ್ಟಿಯಿಂದ ವಿಚಾರಿಸದೆ 60 ಲಕ್ಷ ಪ್ರಜಾಸಂಖ್ಯೆಯಲ್ಲಿ ಕೇವಲ 13 ಲಕ್ಷ ಜನರ ಸ್ವಾರ್ಥಬಯಕೆಯನ್ನು ಲಾಲಿಸಿ ವರದಿಯನ್ನೊಪ್ಪಿಸಿರುವದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ.

1930-31 ನೆಯ ಭರತಖಂಡದ ಆದಾಯ ಮತ್ತು ಖರ್ಚಿನ ಪಟ್ಟಿಯಲ್ಲಿ ಆದಾಯಕ್ಕಿಂತಲೂ ವ್ಯಯವೇ ಹೆಚ್ಚಾಗಿರುವದು. ಈ ಹೆಚ್ಚಿನ ಖರ್ಚಿಗೆ ಹಣವನ್ನು ಒದಗಿಸಲು ಸರ್ಕಾರದವರು ಸೀಮೆಯೆಣ್ಣೆ, ಸಕ್ಕರೆ, ಬೆಳ್ಳಿ ಮತ್ತು ವಿದೇಶೀ ಬಟ್ಟೆಗಳ ಮೇಲೆ ಸುಂಕವನ್ನು ಹೆಚ್ಚಿಸಬೇಕೆಂದಿರುವರು.

ವರ್ತಮಾನಸಂಗ್ರಹ.

ಹೋಳಿಹುಣ್ಣಿವೆಯ ದಿವಸ ಪಂಡಿತ|| ಜವಾಹಿರಲಾಲ್ ನೆಹರೂರವರು ಅಲಹಾಬಾದಿನಲ್ಲಿ ಪರದೇಶೀ ಬಟ್ಟೆಯ ದೊಡ್ಡ ದಹನವನ್ನು ಮಾಡಿದರು.

ಇಂಗ್ಲೆಂಡ್ ದೇಶದಲ್ಲಿ ಈಗ ಹತ್ತು ವರ್ಷದಹಿಂದೆ 50,00,000 ಜನರು ಕನ್ನಡಕಗಳನ್ನು ಹಾಕುತ್ತಿದ್ದರಂತೆ! ಈಗ ಈ ಸಂಖ್ಯೆಯು 90,00,000 ಕ್ಕೆ ಏರಿರುವದು.

ಹುಬ್ಬಳ್ಳಿಯ ಲಾಯರುಗಳು ಸಭೆಸೇರಿ ಇಲ್ಲಿಂದ ಒಂದು ವರ್ಷದ ವರೆಗೆ ಕೋರ್ಟಿನಲ್ಲಿಯೂ ಹೊರಗಡೆಯಲ್ಲಿಯೂ ತಾವೆಲ್ಲರೂ [ಖ]ಾದಿಯನ್ನೇ ಧರಿಸುವದಾಗಿ ತೀರ್ಮಾನಮಾಡಿರುವ[ರು].

ಭರತಖಂಡದ ರಾಜಕೀಯ ಚಳವಳಿಯ ಪ್ರಭಾವದಿಂದ ಲಾಂಕಾಷೈರಿನ 123 ಬಟ್ಟೆಯ ಗಿರಣಿಗಳು ಮುಚ್ಚಲ್ಪಟ್ಟವು. 56 ಗಿರಣಿಗಳು ದಿವಾಳಿಯ ಸ್ಥಿತಿಗೆ ಬಂದಿರುವವು. ಇನ್ನು ಕೆಲವು ಕಂಪೆನಿಗಳು ಸಾಲತೆಗೆಯುವದರಲ್ಲಿರುವವು.

ಶಿವೈಕ್ಯರಾದ ಹುಬ್ಬಳ್ಳಿಯ ಶ್ರೀಸಿದ್ಧಾರೂಢಸ್ವಾಮಿಗಳಮೇಲೆ ಮಾಡಿದ್ದ ವ್ಯವಹಾರದಲ್ಲಿ ಕೆಳದ ವಾಡಸಬ್-ಜಡ್ಜಿಯವರು ಮಠವ ಸ್ವತ್ತೆಲ್ಲವೂ ಸಾರ್ವಜನಿಕವಾದದ್ದೆಂದು ತೀರ್ಪು ಹೇಳಿ ಆಸ್ತಿಯಮೇಲಿನ ಅಡಳಿತವನ್ನು ಪಂಚಾಯಿತರ ಕಡೆಗೆ ವಹಿಸುವವರೆಗೂ ಅದು ಸರ್ಕಾರದ ವಶದಲ್ಲಿರಬೇಕೆಂದು ಆರ್ಡರ್‌ಮಾಡಿರುವರು.

ಕಲ್ಕತ್ತಾ ಮುನಸಿಪಾಲಟಿಯ ಪ್ರೆಸಿಡೆಂಟರಾದ ಗುಪ್ತರು ರಂಗೂನಿನಲ್ಲಿ ರಾಜದ್ರೋಹಕರವಾದ ಭಾಷಣಮಾಡಿದರೆಂದು ದಸ್ತಗಿರಿಮಾಡಲ್ಪಟ್ಟು ವಿಚಾರಣೆಗಾಗಿ ರಂಗೂನಿಗೆ ಒಯ್ಯಲ್ಪಟ್ಟಿರುವರು. ಇವರು ಹೋಗುವಾಗ ಮಹಾತ್ಮರ ಸತ್ಯಾಗ್ರಹಕ್ಕೆ 10,000 ಸ್ವಯಂಸೇವಕರು ಸೇರಬೇಕೆಂದೇ ತಮ್ಮ ಮುಖ್ಯ ಆಶಯವೆಂದು ಹೇಳಿದರು. ಆ ದಿನ ಕಲ್ಕತ್ತೆಯ ಮುಖ್ಯ ಭಾಗಗಳಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಫ್ರಾನ್ಸ್‌ದೇಶದ ನೈಋತ್ಯಭಾಗದಲ್ಲಿರುವ ಟೌರ್ನ ನದಿಯಲ್ಲಿ ವಿಶೇಷಪ್ರವಾಹವು ಬಂದು ಅನೇಕ ಮನೆಗಳೂ ಕಟ್ಟಡಗಳೂ ನಾಶವಾಗಿ ಕೋಟ್ಯಂತರ ರೂಪಾಯಿಗಳ ನಷ್ಟವು ಸಂಭವಿಸಿರುವದು. ಪ್ರವಾಹವು ಇದ್ದಕ್ಕಿದ್ದಹಾಗೆ ವಿಶೇಷವಾಗಿ ಹೆಚ್ಚಿ ನದೀತೀರದಲ್ಲಿದ್ದ ಮನೆಗಳೆಲ್ಲವೂ ಕೊಚ್ಚಿಕೊಂಡು ಹೋದದ್ದರಿಂದ ಅಲ್ಲಿ ವಾಸಿಸುತ್ತಿದ್ದ ಪ್ರಜೆಗಳಿಗೆ ಪ್ರಾಣರಕ್ಷಣೆ ಮಾಡಿಕೊಳ್ಳಲವಕಾಶವು ದೊರೆಯದೆ ಸುಮಾರು 400 ಜನರವರೆಗೆ ಮೃತಪಟ್ಟಿರುವರು.

ಚಟರ್ಜಿಯೆಂಬ ಪ್ರಸಿದ್ಧ ಮಂತ್ರಗಾರನೊಬ್ಬನು ಕಾನ್ಪುರದಲ್ಲಿ ಬೆಂಕಿಯ ಜ್ವಾಲೆಯಿಂದ ಯುಕ್ತಿಯ ಆಟವನ್ನಾಡುತ್ತಿದ್ದಾಗ ಅವನು ಹಾಕಿಕೊಂಡಿದ್ದ ಷರ್ಟಿಗೆ ಬೆಂಕಿಯು ತಗಲಿ ಉರಿಯಲಾರಂಭಿಸಿತು. ಜನರೆಲ್ಲರೂ ಅದನ್ನು ಅವನ ತಂತ್ರವೆಂದೇ ಭಾವಿಸಿ ಆಶ್ಚರ್ಯದಿಂದ ಸುಮ್ಮನೆ ನೋಡುತ್ತ ಕುಳಿತ್ತಿದ್ದರೇ ಹೊರತು ಅವನು ಕೂಗಿಕೊಂಡರೂ ಯಾರೂ ಅವನ ಸಹಾಯಕ್ಕೆ ಹೋಗಲಿಲ್ಲ. ಬೆಂಕಿಯ ತಾಪವನ್ನು ತಾಳಲಾರದೆ ಅವನು ಪ್ರಜ್ಞೆ ತಪ್ಪಿ ಬಿದ್ದಮೇಲೆ ಜನರು ಗಾಬರಿಯಾಗಿ ಅವನನ್ನು ಉಪಚರಿಸಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಿದರು.

ಮುಂಬಯಿನಗರದಿಂದ ಲಂಡ[ನ್‌ವರೆಗೆ ...]ಪರಾ, ಬಾಗ್ದಾದ್, ಕಿರ್ಕೂಕ್, ನೈಸಿಬಿನ್, [ಅ]ಲೆಪ್ಪೊ, ಕಾನ್‌ಸ್ಟ್ಯಾಂಟಿನೋಪಲ್, ವೆನಿಸ್, ಮಿಲಾನ್, ಶಾಸನ್, ಪ್ಯಾರಿಸ್ ನಗರಗಳ ಮಾರ್ಗವಾಗಿ, ಎಕ್ಸ್‌ಪ್ರೆಸ್ ರೈಲ್‌ಗಾಡಿಯನ್ನು ಬಿಡುವ ಏರ್ಪಾಡಾಗುತ್ತಿರುವದು. ಫ್ರಾನ್ಸಿನ "ಕ್ಯಾಲೇ" ತೀರಪಟ್ಟಣದಿಂದ ಲಂಡನ್ನಿನವರೆಗೆ ಸಮುದ್ರದಲ್ಲಿ ಪ್ರಯಾಣಮಾಡಬೇಕಾಗುವದು. ಉಳಿದ ಪ್ರಯಾಣವೆಲ್ಲವೂ ರೈಲ್‌ಮಾರ್ಗವಾಗಿಯೇ ಆಗುವದು. ಈ ಮಾರ್ಗದಲ್ಲಿ ಪ್ರಯಾಣಮಾಡಿದರೆ ಪ್ರಸಿದ್ಧವಾದ ಅನೇಕ ಸ್ಥಳಗಳನ್ನು ನೋಡಬಹುದಲ್ಲದೆ, ಸಮುದ್ರ ಪ್ರಯಾಣಕ್ಕಿಂತಲೂ ಜಾಗ್ರತೆಯಾಗಿ ಲಂಡನ್ನನ್ನು ತಲುಪಬಹುದೆಂದು ತಿಳಿಯಬರುವದಿದೆ. ಒಟ್ಟು ಪ್ರಯಾಣವು 16 ದಿನಗಳವರೆಗೆ ಆಗುವದಂತೆ!

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರು ಅಭಿನವರೇಣುಕ ಮಂದಿರ

ದಾವಣಗೆರೆ.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ದಾವಣಗೆರೆಗೆ ದಯಮಾಡಿಸಿದ ಸಮಯದಲ್ಲಿ ರೇಣುಕಮಂದಿರವನ್ನು ಸ್ಥಾಪಿಸಿ ಅದರಲ್ಲಿ ವಿದ್ಯಾರ್ಥಿಗಳಿಗೆ ಕೊಠಡಿಗಳನ್ನು ಕಟ್ಟಿಸಬೇಕೆಂದು ಅನೇಕ ಭಕ್ತರಿಂದ ವಾಗ್ದಾನವಾಗಿರುವುದು ಸರಿಯಷ್ಟೆ. ಸದರಿ ಮಂದಿರದಲ್ಲಿ ಹರಿಹರದ ಸಬ್ ತಾಲೂಕ ರೆಪ್ರೆಜೆಂಟೇಟಿವ್ ಅಸೆಂಬ್ಲಿಯ ಮೆಂಬರಾದ ಬೆಳಸನೂರಲ್ಲಿರುವ ಬೇತೂರು ಅಯ್ಯಪ್ಪರೆಡ್ಡಿಯವರ ಮಕ್ಕಳಾದ ಶ್ರೀಮಂತ ತಿಮ್ಮಪ್ಪರೆಡ್ಡಿಯವರು ಒಂದು ಕೊಠಡಿಯನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನಮಾಡಿರುತ್ತಾರೆ. ವೀರಶೈವರ ಹೊರತು ಈ ಕಾರ್ಯಕ್ಕೆ ಸಹಾಯ ಮಾಡಿದವರಲ್ಲಿ ಇವರೇ ಮೊದಲಿನವರಾಗಿರುತ್ತಾರೆ. ಇವರ ಮೇಲ್ಪಂಕ್ತಿಯನ್ನು ಅನೇಕರು ಅನುಸರಿಸಿ ಪುಣ್ಯಕ್ಕೆ ಭಾಗಿಗಳಾಗುವರೆಂದು ನಂಬಿರುತ್ತೇವೆ. ಶ್ರೀಮಂತ ತಿಮ್ಮಪ್ಪರೆಡ್ಡಿಯವರು ದೊಡ್ಡ ಸಂಸಾರಿಗಳಾಗಿರುತ್ತಾರೆ. ಅನೇಕ ಧರ್ಮಕಾರ್ಯಗಳನ್ನು ಮಾಡಿರುತ್ತಾರೆ. ಶ್ರೀ ಜಗದ್ಗುರು ಪಂಚಾಚಾರ್ಯರು ಇವರಿಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಕೋರುವ.

ಓರ್ವ ಗುರುಭಕ್ತ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜಗದಾಚಾರ್ಯರ ಭಜನಾಸಂಘ.

ಬಾಣಾವರ.

ಮಹನೀಯರೇ ! ತಾ|| 26-2-30 ನೆಯ ಇಸ್ವಿ ಬುಧವಾರ ದಿವಸ ಬಾಣಾವರದ ಹಿರೇಮಠದ ವೇ|| ಜ. ವೀರಭದ್ರಸ್ವಾಮಿಯವರು ನೆರವೇರಿಸಿದ ಶ್ರೀ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿಕಾಲದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಬಾಲಕರ ಭಜನಾಸೇವಾಸಂಘದ ಚಿಕ್ಕ ಚಿಕ್ಕ ಬಾಲಕರು ಬೋಧಿಸುವ ಗುರುಭಕ್ತಿ ವಿಷಯದಲ್ಲಿ ಮಾತಾಕ್ಷ ಕೀರ್ತನೆ ಧರ್ಮೋಪನ್ಯಾಸಗಳು ಜನರಲ್ಲಿ ಜಗದಾಚಾರ್ಯರಲ್ಲಿ ಭಕ್ತಿ ಪ್ರೇಮ ವಿಶ್ವಾಸಗಳು ನೆಲೆಗೊಳಿಸಿವೆಂಬುದನ್ನು ಪ್ರತ್ಯಕ್ಷ ತೋರಿಸುವದಕ್ಕಾಗಿಯೋ ಏನೋ ಎಂಬುವಂತೆ ತಾ|| 3-3-30 ನೆಯ ಸೋಮವಾರ ದಿವಸ ಬಾಣಾವರದ ಶ್ರೀ ಬಾಣೇಶ್ವರದೇವಸ್ಥಾನದಲ್ಲಿ ಮ|| ರಾ|| ವೈ. ರುದ್ರಶೆಟ್ಟರಿಂದ ನೂತನವಾಗಿ ಕಟ್ಟಿಸಲ್ಪಟ್ಟ ಶಿವಮಂದಿರಕ್ಕೆ ಸದರಿ ರುದ್ರಶೆಟ್ಟರು ಮೇಲ್ಕಂಡ ಬಾಲಕರ ಭಜನಾಸಂಘಕ್ಕೆ ಆಮಂತ್ರಣಕೊಟ್ಟು ಮ|| ಜನರಾಜಪ್ಪನವರಿಂದ ಕರೆಸಿಕೊಂಡ ಪ್ರಕಾರಕ್ಕೆ ವೇ|| ರುದ್ರಪಾಕ್ಷಯ್ಯನವರು, ಪ್ರೈವೇಟ್ ಸ್ಕೂಲ್ ಮಾಸ್ತರ ಮ|| ರಾ|| ಚನ್ನರಾಜಪ್ಪನವರು, ಮತ್ತು ಮ|| ರಾ|| ಎಂ. ಮಾದಶೆಟ್ಟರು, ಇವರುಗಳಿಂದ ಸುಶಿಕ್ಷಿತರಾದ ಪಂಚಾಚಾರ್ಯರ ಬಾಲಕರ ಭಜನಾಸಂಘದವರು, ಸದರಿ ರುದ್ರಶೆಟ್ಟರಿಂದ ಸೇವಾಸಂಪನ್ನರಾಗಿ ಶೃಂಗರಿಸಲ್ಪಟ್ಟ ಮೇಲ್ಕಂಡ ಭಜನಾಮಂದಿರಕ್ಕೆ ಸದರಿ ಭಜನಾಸಂಘದ [illegible] ಸಕ್ರೆಟರಿಯವರ ಆಜ್ಞಾ ಮೇರೆಗೆ ರಾತ್ರಿ 9 ಘಂಟೆಗೆ ಹೋಗಿ ಅಲ್ಲಿ ನೆರದಿರತಕ್ಕ ಭಕ್ತಾದಿಗಳ ಮನಸ್ಸು ಪ್ರಸನ್ನಗೊಳಿಸುವಂತೆ ಜಗದ್ಗುರುಗಳ ಕೀರ್ತನೆಯೂ, ರುದ್ರಾವತಾರದ ಜನ್ಮವರ್ಣನೆಯೂ, ಪಂಚಾಚಾರ್ಯರ ಅವತಾರವರ್ಣನೆಯೂ, ಧರ್ಮೋಪನ್ಯಾಸದ ಚರ್ಚೆಯೂ, ನಡೆದು ಮಧ್ಯೆಮಧ್ಯೆ "ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷದೊಡನೆ ಕೀರ್ತನೆ ನಡೆದು ಮಹಾಮಂಗಳಾರತಿಯಾದನಂತರ ವಿಸರ್ಜಿಸಲ್ಪಟ್ಟಿತು. ಈ ಭಜನಾಸಮಾರಂಭದ ಕಾಲಕ್ಕೆ ಮ|| ರಾ|| ಪೇಟೆ ಶೆಟ್ರ ರಂಗಪ್ಪನವರು ಮ|| ರಾ|| ಕಾಳಿಕಾಂ ಸಂಜಪ್ಪನವರು, ಮ|| ರಾ|| ಯಜಮಾನ ಪುಟ್ಟಸ್ವಾಮಯ್ಯಶೆಟ್ರು, ಮ|| ರಾ|| ಗುಂಡಾಭಕ್ತರ ಶಿವನಂಜೇಗೌಡರು, ವಗೈರೆ ಪ್ರಮುಖರು ಈ ಸಮಾರಂಭದಲ್ಲಿ ಸೇವಾಭಾಗಿಗಳಾಗಿದ್ದರು. ಈ ಮಹಾಶಯರುಗಳಿಗೆಲ್ಲಾ ಜಗದ್ಗುರು ಪಂಚಾಚಾರ್ಯರು ಸದ್ಗುಣಗಳನ್ನು ಉಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಗುರುಭಕ್ತಧುರೀಣ.
ಬಿ. ಚನ್ನವೀರಶೆಟ್ಟಿ.

ಸೊರಬ ತಾಲೂಕು ಹೊಳೆಲಿಂಗೇಶ್ವರಕ್ಷೇತ್ರ.

ತಾ|| 26-2-30 ನೆಯ ಬುಧವಾರ ದಿವ ನಾಲ್ಕು ಘಂಟೆಯ ಸಮಯಕ್ಕೆ ಬಂಕಸಾಣಗ್ರಾಮದ ಪಟೇಲ|| ಪ|| ಪುಟ್ಟಪ್ಪಗೌಡರು ಮ|| ರಾ|| ಕರಿಬಸಪ್ಪಗೌಡರು ಮೊದಲಾದ ಪ್ರಮುಖರೆಲ್ಲರೂ ಸೇರಿ ಪಲ್ಲಕ್ಕಿಯಲ್ಲಿ ಹೊಳೆಲಿಂಗೇಶ್ವರದೇವರ ಉತ್ಸವಮೂರ್ತಿಯನ್ನೂ ಶ್ರೀ ಜಗದ್ಗುರುಗಳವರ ಭಾವಚಿತ್ರಗಳನ್ನೂ ಮೆರವಣಿಗೆ ಮಾಡಿಸಿ ವಾದ್ಯಘೋಷದೊಡನೆಯೂ ಭಜನೆಯೊಡನೆಯೂ ಉತ್ಸವವು ಹೊರಟು ವರದಾನದಿಯ ಸಂಗಮಸ್ಥಳದಲ್ಲಿ ನಿರ್ಮಿಸಿದ ಭವ್ಯವಾದ ಪೀಠದಲ್ಲಿ ಮಂಡಿಸಿ ಶ್ರೀ ಜಗದ್ಗುರುಗಳವರ ಭಾವಚಿತ್ರಕ್ಕೆ ಉತ್ಸವಮೂರ್ತಿಯಾದ ಹೊಳೆಲಿಂಗೇಶ್ವರನಿಗೂ ಬಾವನಹಳ್ಳಿ ನಾಗರಗಡ್ಡಿ ಮಠದ ರಲ್ಲಪ್ಪಯ್ಯನವರಿಂದಲೂ ವೇ|| ನೇರಲಗಿ ಮಠದ ಕೊಟ್ರಯ್ಯನವರಿಂದಲೂ ಶ್ರೀ ರುದ್ರಾಭಿಷೇಕ ಷೋಡಶೋಪಚಾರಾದಿಗಳು ನಡೆದ ನಂತರ ಭಜನೆ

ಯನ್ನು ಮಾಡುತ್ತ ಜಾಗರಣೆಯು ಮಾಡಲ್ಪಟ್ಟಿತು. ಮಾರನೇ ದಿವಸ ಗಣಾರಾಧನೆಯೂ ಬಂದುಹೋದ ಜನಗಳ ಊಟಉಪಚಾರಗಳು ನಡೆದು ದ್ಯಾವನಹಳ್ಳಿ ಬಸಪ್ಪಗೌಡರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ಮೂರು ಘಂಟೆಗೆ ಭವ್ಯವಾದ ಚಪ್ಪರದಲ್ಲಿ ಸಭೆಯು ಸೇರಿತು ಅಕಸ್ಮಾತ್ ಶಿವಮೊಗ್ಗ ಅಡ್ವೋಕೇಟ್ ಸಿದ್ದಯ್ಯನವರೂ ಮಹಾಲಿಂಗಪ್ಪನವರೂ ಮೊದಲಾದವರು ಸಭೆಗೆ ಆಗಮಿಸಿದ್ದರು. ಜಡೆ ಗ್|| ಪ್ರೈ|| ಹೆ|| ಬಿ. ಎಸ್. ರಾಮಚಂದ್ರಯ್ಯನವರು ಮತ್ತು ಆ|| ಮಾಸ್ತರುಗಳು ಬಾಲಕರು ಸಹಿತ ಆಗಮಿಸಿದ್ದರು. ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಮಹತ್ವದ ವಿಷಯದಲ್ಲೂ ಜಯಂತಿಯ ವಿಷಯದಲ್ಲೂ ಸಭಿಕರ ಮನಸ್ಸಿನಲ್ಲಿ ಪರಿಣಾಮವಾಗುವಂತೆ ವೇ|| ಮೂ|| ಜಡೆವಾಸಿ ಗೊಗ್ಗಿಹಳ್ಳಿಮಠದ ಚನ್ನವೀರಯ್ಯನವರು ಉಪನ್ಯಾಸ ಮಾಡಿದ ಬಳಿಕ ಸೊರಬದ ಕಸಬಾ ಪ|| ಕೊಟ್ರಪ್ಪಶೆಟ್ಟರು ಸೊರಬ ಕಸಬಾ ಕೋಲಗುಣಸಿ ಹೋಳೆಯಪ್ಪಶೆಟ್ಟರು ಜಗದ್ಗುರುಗಳ ಜಯಂತಿಯನ್ನು ಪ್ರತಿವರ್ಷ ಮಹಾಶಿವರಾತ್ರಿ ದಿವಸ ಈ ಸಂಗಮಸ್ಥಳದಲ್ಲಿ ನಡೆಯಬೇಕೆಂದು ಸೂಚಿಸಿದಂತೆ ಮೇರೆಗೆ ಸರ್ವರೂ ಅನುಮೋದನೆಕೊಟ್ಟರು. ಜಡೆಮೇಟಿ ಗ್|| ಪ್ರೈ|| ಸೂ|| ಹೆ|| ಮಾ|| ಬಿ. ಎಸ್. ರಾಮಚಂದ್ರಯ್ಯನವರು ಹಬ್ಬಗಳ ಉದ್ದೇಶವನ್ನು ಧರ್ಮ ಪುಣ್ಯತೀರ್ಥಗಳ ವಿಚಾರವನ್ನು ಕುರಿತು ಭಾಷಣ ಮಾಡಿದರು. ಅನಂತರ ಶ್ರೀಮದಾಚಾರ್ಯರ ಜಯಘೋಷದೊಡನೆ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂ ಮಾಡಿ ಸಭೆಯು ಮುಕ್ತಾಯಗೊಂಡಿತು. ಈ ಉತ್ಸವಕಾರ್ಯವನ್ನು ಕೈಕೊಂಡ ಸ್ಥಳೀಯ ಮಹನೀಯರಾದ ಪ|| ಪುಟ್ಟಪ್ಪಗೌಡರು ಬಂಕಸಾಣ ಮ|| ರಾ|| ಕರಿಬಸಪ್ಪಗೌಡರು ಕುಬಟೂರು ಪ|| ವೀರಪ್ಪಯ್ಯನವರು ಸಮನವಳ್ಳಿ ದೇವಶೆಟ್ಟಿ ಪರಪ್ಪನವರು ಜಡೆವಾಸಿ ಗೊಗ್ಗಿಹಳ್ಳಿ ಮಠದ ಚನ್ನವೀರಯ್ಯನವರು ಕೋಡಿಕೊಪ್ಪದ ಗಿಂಡಿಸಿವಪ್ಪಗೌಡರು ಸೆಲ್ಲಿಕೊಪ್ಪದ ಮರಿಬಸಣ್ಣನವರು ಮೊದಲಾದವರೆಲ್ಲ ಸೇರಿ ಮುಸುವರ್ಜಿಯಿಂದ ಮಾಡಿದರು. ಈ ಜಯಂತ್ಯುತ್ಸವವನ್ನು ನಡೆಸಿದ್ದಕ್ಕಾಗಿ ಇವರುಗಳಿಗೆ ಶ್ರೀ ಜಗದ್ಗುರುಗಳವರೂ ಹಾಗೂ ಶ್ರೀ ಹೊಳೆಲಿಂಗೇಶ್ವರನೂ ಅನುಗ್ರಹಿಸಲಿ.

ಓರ್ವ ಭಕ್ತ.

ಚಿಕ್ಕಮಗಳೂರು ತಾಲೂಕು ಓಟರುಗಳಲ್ಲಿ ವಿಜ್ಞಾಪನೆ.

ಮಹಾಶಯರೆ,

ತಮ್ಮಗಳ ವಿಚಾರಪೂರಿತವಾದ ಓಟುಗಳ ಸಹಾಯದಿಂದ ಕಳೆದ ಮೂರು ವರ್ಷಗಳಿಂದಲೂ, ಕಡೂರು ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ತಮ್ಮ ಪರವಾಗಿ ಒಬ್ಬ ಸದಸ್ಯನಾಗಿದ್ದುಕೊಂಡು ನನಗೆ ಸಾಧ್ಯವಾದಮಟ್ಟಿಗೂ ತಮ್ಮಗಳ ಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡಿರುತ್ತೇನೆ. ಅನೇಕ ಜನ ದೊಡ್ಡಮನುಷ್ಯರುಗಳ ಪ್ರೋತ್ಸಾಹದಮೇರೆಗೆ ಪುನಃ ತಾರೀಖು 5-4-30 ನೆಯ ಶನಿವಾರ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್‌ಬೋರ್ಡು ಸದಸ್ಯರುಗಳ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಯುಕ್ತ, ನಮ್ಮ ಹಳ್ಳಿನಾಡಿನ ಪುನರುದ್ಧಾರದ ಅವಶ್ಯಕತೆಯನ್ನು ತಮ್ಮ ಚಿತ್ತದಲ್ಲಿ ತಂದು ಅದಿನ ತಾವುಗಳು ಚುನಾವಣೆಯ ಸ್ಥಾನಗಳಿಗೆ ತಪ್ಪದೆ ದಯಮಾಡಿಸಿ, ತಮಗೆ ಅಧಿಕಾರವಿರುವ ಮೂರು ಓಟುಗಳ ಪ್ರತಿ ನನಗೊಂದನ್ನು ಕರುಣಿಸಿ, ನಮ್ಮ ತಾಲ್ಲೂಕಿನ ಪ್ರಜಾಸೇವೆಯನ್ನು ಕೈಗೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ನನ್ನ ಹೆಸರಿನ ಪಕ್ಕದಲ್ಲಿ "ಗಂಟೆ" ಯ ಗುರ್ತು ಇರುತ್ತೆಂಬುದನ್ನು ಮರೆಯಲಾಗದು.

ತಾ|| 15-3-30 ಆಲದೂರು. ತಮ್ಮಗಳವಿಧೇಯ
ಎ. ವಿ. ದೇವಪ್ಪಗೌಡ

ನಿಧನ.

ಗುರುಲಿಂಗಜಂಗಮಪ್ರೇಮಿಗಳೂ, ಸೇವಾಸಕ್ತರೂ, ಅನ್ನದಾತರೂ ಆಚಾರಶೀಲರೂ ಜನಪ್ರಿಯರೂ ಆದ ಬಳ್ಳಾರಿ ಜಿಲ್ಲಾ ರಾಯದುರ್ಗದ ತಾಲ್ಲೂಕು ದಿನ್ನಹಳ್ಳಿಗ್ರಾಮದ ಕಂಬಿನಮಠದ ಬಸಯ್ಯನವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಸದರಿ ತಾಲ್ಲೂಕು ಹೊಸಹಳ್ಳಿ ಗ್ರಾಮದಲ್ಲಿರುವ ತಮ್ಮ ಮಠಕ್ಕೆ ದಯಮಾಡಿಸಿ ಇದೇ ಕಾರ್ತೀಕ ಶುದ್ಧ 10 ಸೋಮವಾರ ತಾ|| 11-11-29 ರಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಇವರು ಧರ್ಮಕಾರ್ಯದಲ್ಲೂ ಪರೋಪಕಾರದಲ್ಲಿಯೂ ತಮ್ಮ ಜೀವಮಾನವನ್ನೆಲ್ಲಾ ಕಳೆದುದಲ್ಲದೆ ವಾಕ್‌ಪಟುತ್ವ ಶಮ ದಮ ಶಾಂತಿ ಭೂಷಣರೂ, ಶಾಸ್ತ್ರಜ್ಞ ಮುಂತಾದ ಸಾತ್ವಿಕಗುಣಗಳು ಇವರಲ್ಲಿ ನೆಲೆಯಾಗಿದ್ದುವು. ಇವರು ಹಳ್ಳಿಯಲ್ಲಿ ಜನಿಸಿದ್ದರೂ ಕಷ್ಟಸುಖಗಳನ್ನ ಸಾಧಿಸಿದವರಾಗಿಯೂ, ಪ್ರಪಂಚಜ್ಞಾನಿಗಳಾಗಿಯೂ ಬೋಧಕರಾಗಿಯೂ ವ್ಯವಸಾಯ ರಹಸ್ಯವನ್ನು ತಿಳಿದವರಾಗಿಯೂ, ನೂತನ ಸುಧಾರಣೆಗಳಿಂದ ರೈತರನ್ನು ಮುಂದುವರಿಸುವುದರಲ್ಲಿ ಚತುರರಾಗಿಯೂ ಇದ್ದರು. ಅದಷ್ಟು ತಮ್ಮ ಅನುಭವಸಿದ್ಧವಾದ ಬೋಧೆಗಳಿಂದ ಜನರನ್ನು ನೀತಿವಂತರನ್ನಾಗಿ ಮಾಡುವುದೊಂದೇ ಇವರ ಧ್ಯೇಯವಾಗಿದ್ದಿತು. ಇಂತಹ ಮಹಾಶಯರ ಅಗಲುವಿಕೆಯು ನಮ್ಮ ಪ್ರಾಂತದ ವೀರಶೈವ ಜನಾಂಗದ ದುರ್ದೈವವೆಂದು ಭಾವಿಸಬೇಕಾಗಿದೆ. ಇವರ ತಮ್ಮಂದಿರು ಎಂ. ಶಾಂತವೀರಯ್ಯನವರೂ ಇವರ ಮಕ್ಕಳು ಎಂ. ಗುರುಬಸಯ್ಯನವರೂ ಮೃತರ ಉತ್ತರಕ್ರಿಯಾದಿಗಳನ್ನು ನೆರವೇರಿಸಿ ಆಗಮಿಸಿದ್ದ ಮಾಹೇಶ್ವರರನ್ನು ಆರಾಧನಾದಿಗಳಿಂದ ತೃಪ್ತಿಪಡಿಸಿ ಪ್ರಭಾವೋಪಜೀವ್ಯಕ್ಕಾಗಿ ವೇ|| ಶ್ರೀ|| ಕಣೇಕಲ್ ಹಿರೇಮಠಾಧ್ಯಕ್ಷರಾದ ಚನವೀರಶಾಸ್ತ್ರಿಗಳವರ ವಶಕ್ಕೆ 2 ರೂಪಾಯಿಗಳ ಸಮೇತ ಆಗ ತಾಂಬೂಲವನ್ನು ಕೊಟ್ಟರು. ಮೇಲ್ಕಂಡ ಮೃತರ ಆತ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬವರ್ಗಕ್ಕೆ ದುಃಖಶಮನವನ್ನೂ ಉಂಟುಮಾಡಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅನನ್ಯಭಾವದಿಂದ ಬೇಡುವ

ಶಿವರಬಂಧು

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಬೇಲೂರು ತಾಲ್ಲೋಕು ರಾಜನಶಿರಿಯೂರು ಗ್ರಾಮದಲ್ಲಿ ವೀರಶೈವ ಮಹಾಜನಗಳು ಮತ್ತು ಗ್ರಾಮಸ್ಥರನೇಕರು ಸೇರಿ ತಾ|| 26-2-30 ನೇ ಮಹಾಶಿವರಾತ್ರಿ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ವಿಜೃಂಭಣೆಯಿಂದ ನಡೆಯಿಸಿ ಶ್ರೀ ಮಲ್ಲಿಕಾರ್ಜುನಸ್ವಾಮಿಯ ದೇವಾಲಯದಲ್ಲಿ ಶ್ರೀಮದಾಚಾರ್ಯರ ವಿಗ್ರಹಕ್ಕೂ ಈಶ್ವರನಿಗೂ ವಿಧ್ಯುಕ್ತ ರುದ್ರಾಭಿಷೇಕ ಮುಂತಾದ ಕಾರ್ಯಗಳು ನಡೆದು ಭಕ್ತಿಪೂರ್ವಕವಾಗಿ ಜಗದ್ಗುರುಗಳ ಪ್ರಾರ್ಥನೆಯನ್ನು ಮಾಡುತ್ತ ಭಕ್ತವೃಂದವು ಆ ದಿವಸವೆಲ್ಲಾ ಆನಂದದಿಂದ ಕಾಲವನ್ನು ಕಳೆಯಿತು.

ಮಠದ ರುದ್ರಯ್ಯ.

ಹಿರಿಯೂರು ಲಂಬಾಣಿ ಹಾಸ್ಟೆಲ್

ಈ ವಿದ್ಯಾರ್ಥಿನಿಲಯವು 2-3-30 ನೆಯ ಭಾನುವಾರ ಸಾಯಂಕಾಲ ಚಿತ್ರದುರ್ಗದ ಡಿ|| ಡೆಪ್ಯುಟಿ ಕಮಿಷನರ್ ಶ್ರೀಮಾನ್ ಸಿ. ಎಸ್. ಕುಪ್ಪುಸ್ವಾಮಿಅಯ್ಯಂಗಾರ್ಯರವರ ದಿವ್ಯಹಸ್ತದಿಂದ ತೆರೆಯಲ್ಪಟ್ಟಿತು. ಹಾಲಿ 10 ವಿದ್ಯಾರ್ಥಿಗಳೂ 5 ವಿದ್ಯಾರ್ಥಿನಿಯರೂ ಇರುವರು. ಈ ಹಾಸ್ಟಲಿಗೆ ಸರ್ಕಾರದಿಂದ ಧಾರಾಳವಾಗಿ ದ್ರವ್ಯಸಹಾಯವು ದೊರೆಯುವುದಾಗಿದೆ. ಇದರಮೇಲೆ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ಕನಿಷ್ಠಪಕ್ಷ 2 ರೂಪಾಯಿ ಹೆಚ್ಚು ಖರ್ಚು ಬೀಳುತ್ತದೆ. ಇದನ್ನು ಆಯಾ ವಿದ್ಯಾರ್ಥಿಗಳ ಪೋಷಕರು ಹಣದ ಮೂಲಕವಾಗಿಯಾಗಲಿ ಧಾನ್ಯದಮೂಲಕವಾಗಿಯಾಗಲಿ ಕೊಡಬೇಕು. ಮುಂದಿನ ಬೇಸಗೆ ರಜಾಕಳೆದನಂತರ ಅಂದರೆ ಬರುವ ಮೇ ತಿಂಗಳು 22ನೆಯ ತಾರೀಖಿಗೆ ಮಿಡಲ್ ಸ್ಕೂಲ್ ತರಗತಿಗಳಿಗೆ ಸೇರಲು ಅರ್ಹರಾಗಿರುವ ವಿದ್ಯಾರ್ಥಿಗಳನ್ನು ಈ ಹಾಸ್ಟೆಲಿಗೆ ಸೇರಿಸಲು ಇಷ್ಟಪಡುವ ಪೋಷಕರು ಬರುವ ಏಪ್ರಿಲ್ ಮಾಹೆ 30ನೆಯ ತಾರೀಖಿನೊಳಗಾಗಿ ಹಿರಿಯೂರು ಮಿಡಲ್‌ಸ್ಕೂಲ್ ಹೆಡ್‌ಮಾಸ್ಟರಿಗೆ ದರಖಾಸ್ತು ಮಾಡಿಕೊಳ್ಳತಕ್ಕದ್ದು. ಹಾಸ್ಟಲಿನ ಅಭಿವೃದ್ಧಿಗಾಗಿ ಎಲ್ಲ ಲಂಬಾಣಿ ಸಹೋದರರೂ ಇತರ ಮಹನೀಯರೂ ಸ್ವಹಸ್ತ ಪರಹಸ್ತಗಳಿಂದ ಧನಧಾನ್ಯ ಸಹಾಯಮಾಡಬೇಕಾಗಿ ಪ್ರಾರ್ಥಿಸಿದೆ. ಅಲ್ಪಸ್ವಲ್ಪ ಸಹಾಯವಾದರೂ ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಲ್ಪಡುತ್ತದೆ.

ಎಚ್. ವಿ. ಕೋದಂಡರಾಮಯ್ಯ, ಲಂಬಾಣಿ ಹಾಸ್ಟೆಲ್
ಮತ್ತು ಎಜ್ಯುಕೇಷನ್ ಬೋರ್ಡು ಮೆಂಬರ್.

ಯಡತೊರೆ ತಾಲೂಕಿನ ಚುನಾವಣೆ.

ಈ ಮಾಹೆ 8 ನೆಯ ತಾರೀಖಿನ ದಿವಸ ಯಡತೊರೆ ತಾಲೂಕಿನಲ್ಲಿ ನಡೆದ ಪ್ರಜಾಪ್ರತಿನಿಧಿಸಭೆ ಮತ್ತು ಡಿಸ್ಟ್ರಿಕ್ಟ್ ಬೋರ್ಡುಸಭೆಗೆ ಸಹ ಈ ಕೆಳಗೆ ನಮೂದಿಸಿರುವವರು ಚುನಾಯಿಸಲ್ಪಟ್ಟರು—

1. ಪ್ರಜಾಪ್ರತಿನಿಧಿಸಭೆಗೆ ಮ||ರಾ|| ಬಳೆ ಶಿದ್ಧಲಿಂಗಶೆಟ್ಟರು, ಸಾಹುಕಾರ್ ಯಡತೊರೆ 556 ಓಟುಗಳು.

2. ಮ|| ರಾ|| ಪಟೇಲ್ ಚನ್ನಪ್ಪನವರು, ಜಹಗೀರ್‌ದಾರರು 446 ಓಟುಗಳು.

1. ಡಿಸ್ಟ್ರಿಕ್ಟುಬೋರ್ಡು ಸಭೆಗೆ ಮ|| ರಾ|| ಬಳೆ ಶಿದ್ಧಲಿಂಗಶೆಟ್ಟರು, ಸಾಹುಕಾರ್ ಯಡತೊರೆ 553 ಓಟುಗಳು.

2. ಮ|| ರಾ|| ಪಟೇಲ್ ಚನ್ನಪ್ಪನವರು ಜಹಗೀರ್‌ದಾರರು 500 ಓಟುಗಳು.

3. ಮ|| ರಾ|| ಚನ್ನೇಗೌಡರು ತಿಪ್ಪೂರು 442 ಓಟುಗಳು.

ಇದರಿಂದ ನಮಗೆಲ್ಲರಿಗೂ ತುಂಬಾ ಸಂತೋಷವುಂಟಾಗಿರುತ್ತದೆ. ಪ್ರಜಾಸೇವೆಯನ್ನು ನೆರವೇರಿಸಲು ತೊಡಗಿರುವ ಇವರೆಲ್ಲರಿಗೂ ದೇವರು ಬೇಕಾದ ಸಹಾಯವನ್ನೂ ಆಯುರಾರೋಗ್ಯಗಳನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ಯಡತೊರೆ ನಿವಾಸಿಗಳು.

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[10] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಾಗಳಿರಾ ! ಅಕ್ಕಗಳಿರಾ !!

ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ !

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, 'ಕೊಡಗಿನ ಗುಡುಗುಡು!' (ಛಳಿ), 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [32]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪಟ್ಟಿ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಬಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಚಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ದಾತುಜನ್ಯ ವಿಕಾರ, ಪಥಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯ ಸ್ಖಲನದಾರೋಗ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹುಸಿನೆವಾಗಿ ಕೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಶಾಲಿಮಕಂದ, ಮಧುಕಂದ, ಜರಾಕಂಧ, ತಾಲೀಮಲೀಕಂದ, ಅಶ್ವಕಂದ ಕ್ರೌಂಚ್ಯಕಂದ, ಮುಸಳೀಕಂದ ಸೀವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸಿವಳೀಬೀಜ, ಬಿಳಿಚದಪಂಚಾಂಗ, ಅದಮೀ ಎಳ್ಳಿನಪಂಚಾಂಗ, ಕಮಪತ್ರಿ, ಸಿತಾಪತ್ರಿ, ಮದನಮಸ್ತ, ರಕನಪುರುಷ, ಅಮರಕಸ, ಕಥಿಲ್ಯಾನೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಪರಹಬೋಲ, ಮುಂಗಲೇಬೀದಾಣೆ, ಮರ್ದಾನಾಚಟ್ಟಿಗೆ, ಶತಾವರಿ, ಸಕೀಮಗಜ, ಅಲದಹಾಲು, ನಾಳೀರಿಭಾತಾ, ಗೋಖರು, ಅದಮೀಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಾಗುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಜಾಳಿ, ಸಿಂಬಳ, ರಕ್ತ, ಕೀವು, ಮುಣ್ಣು, ದುರ್ಗಂಧ, ಕ್ರಿಮಿ, ವಾಸಬಾರದಿರೋಣ, ದಟ್ಟಿರೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಗೆ 3 ರೂಪಾಯಿಗಳು. [36]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಭೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಖರಗಳಲ್ಲಿ ಜನಿಸುವ ಶ್ರೇಷ್ಠವಾದ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹನಾಶಕೆಯು ೧ ತೊಲಿಯ ಶೀಶೆ ೧ ಕ್ಕೆ ೧೨ ಆಣೆ. ೫೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದರೆ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯನ್ ಅಷ್ಟವರ್ಗ ಔಷಧಾಲಯ
[49] (೨೪೮) ಗಂಜೀಪೇಟೆ, ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೩ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.
ಶ್ರೀ ಹಿಮವತ್ಕೇದಾರ್ವೈಕೋರಾಮ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠ ಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ

ಅಡ್ಡಪಲ್ಲಕ್ಕಿಮಹೋತ್ಸವ, ಮುದಗಲ್ಲು.

ಶ್ರೀ ಮಹಾಸ್ವಾಮಿಗಳವರ ಖಾಸಾ ಸವಾರಿಯು ಸಕಲ ಪರಿವಾರದೊಡನೆ ರಾಯಚೂರು ಜಿಲ್ಲಾ ಲಿಂಗಸೂಗೂರು ತಾಲೂಕು ವೈಕಿ ಮುದಗಲ್ಲುಗ್ರಾಮಕ್ಕೆ ದಯಮಾಡಿಸಿ ಎರಡು ತಿಂಗಳಿಂದಲೂ ಇಲ್ಲಿಯ ವೀರಶೈವರ ಸಹಜ ಸೇವೆಯನ್ನು ಕೈಕೊಳ್ಳುತ್ತಿದ್ದು ತಾ|| 9-3-30 ಶುಕ್ಲ ಸಂ|| ರದ ಫಾಲ್ಗುಣ ಶು|| ೯ ಭಾನುವಾರ ಶ್ರೀಗಳ ತಿಧ್ಯಗಾಂದೋಲನಮಹೋತ್ಸವವು ಜರುಗಿತೆಂದು ತಿಳುಹಿಸಲು ಪರಮಸಂತೋಷವಾಗುತ್ತದೆ. ಈ ಮುದಗಲ್ಲುಗ್ರಾಮವು ಚರಿತ್ರಪ್ರಸಿದ್ಧವಾಗಿ ದೊಡ್ಡದಾಗಿರುವದಲ್ಲದೆ ಮುಸಲ್ಮಾನ ಜನರ ಕೇಂದ್ರಸ್ಥಾನವಾಗಿರುವದು. ಇಲ್ಲಿಯ ವೀರಶೈವರು ಒಂದು ವಾರದಕ್ಕಿಂತ ಮೊದಲೇ ಉತ್ಸವದ ಸಂಗತಿಯನ್ನು ಜಾಹೀರಪತ್ರಿಕೆಗಳಿಂದ ಬಹುಕಡೆಗೆ ಪ್ರಸಿದ್ಧಪಡಿಸಿ ಸಕಲ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡಿದ್ದರು. ಇಪ್ಪತ್ತು ಮುವ್ವತ್ತು ಹರದಾರಿಗಳಿಂದಲೂ ಜನವು ಒಂದೇ ಸಮನೆ ಬಂದು ಬಂದು ನೆರೆದಿತ್ತು. ರಾಯಚೂರು, ಬಾಗಲಕೋಟೆ, ಗಂಗಾವತಿ, ಮಸಿಗಿ ಗ್ರಾಮಗಳಿಂದ ಬರುವ ಮೋಟರುಗಳಿಗೆ ಅವಕಾಶವೇ ಇದ್ದಿಲ್ಲ. ನಿಜಾಂ ಸರ್ಕಾರದವರು ಉತ್ಸವದ ಬಂದೋಬಸ್ತಿಗಾಗಿ ಪೋಲೀಸ ಸಿಬ್ಬಂದಿಯನ್ನು ಒಂದು ದಿನ ಮುಂಚಿತವಾಗಿಯೇ ಕಳುಹಿಸಿ ಸುವ್ಯವಸ್ಥೆಯನ್ನು ಇಟ್ಟಿದ್ದರು. ಗ್ರಾಮದ ದೊಡ್ಡ ಬಜಾರ ಬೀದಿಗಳು ಎತ್ತನೋಡಿದತ್ತ ತಳಿರುತೋರಣಗಳಿಂದಲೂ ಅಂದವಾದ ಕಮಾನುಗಳಿಂದಲೂ ನಾನಾವರ್ಣದ ಪತಾಕೆಗಳಿಂದಲೂ ಮನೋಹರವಾಗಿ ತೋರುತ್ತಿದ್ದವು. ಸಮಸ್ತ ವರ್ತಾಕ್ರಮದವರು ಫಲಕಪೂರಗಳನ್ನು ಹಿಡಿದು ಉತ್ಸವೋನ್ಮುಖರಾಗಿದ್ದರು. ತಾ|| 9-3-30 ರ ಉದಯ 9 ಗಂಟೆಗೆ ಹಳೇಪೇಟೆಯ ಪೂರ್ವದಿಕ್ಕಿನಲ್ಲಿರುವ ವೀರಭದ್ರ ದೇವಾಲಯದಿಂದ ಶ್ರೀ ಜಗದ್ಗುರು ಮಹಾಸ್ವಾಮಿಗಳಿಂದಲಂಕರಿಸಲ್ಪಟ್ಟ ಪಂಚಕಲಶಯುಕ್ತ ಅಡ್ಡಪಲ್ಲಕ್ಕಿಯು ಉತ್ಸವವು ಮುಂದೆ ವ್ಯಾಸಹಸ್ತಯುಕ್ತ ನಂದಿಧ್ವಜ ಮಕರತೋರಣ ಶ್ವೇತಛತ್ರ ಹಗಲುದೀವಟಿಗೆ ಮುಂತಾದ ಬಿರುದುಗಳೊಡನೆ ಹೊರಟಿತು. ವೈದಿಕರು ಶ್ರೀ ರುದ್ರಪುರುಷಸೂಕ್ತ ಮುಂತಾದ ವೇದಘೋಷವನ್ನು ಕ್ರಮವಾಗಿ ಮಾಡುತ್ತಿದ್ದರು. ಭಜನಕಾರರು ಪಂಚಾಚಾರ್ಯರ ಸ್ತೋತ್ರಗಳನ್ನು ಗಾನದೊಡನೆ ಇಂಪಾಗಿ ಹಾಡುತ್ತಿದ್ದರು. ನಗಾರಿ, ನೌಬತು, ಬ್ಯಾಂಡು, ಕಹಳೆ, ಸ್ವನಾಯಿ ಮುಂತಾದ ವಾದ್ಯಗಳು ಭೋರ್ಗರೆಯುತ್ತಿದ್ದವು. ಶೃಂಗರಿಸಲ್ಪಟ್ಟ ಆನೆಯು ಚಾಮರವನ್ನು ಬೀಸುತ್ತ ಮಹಾಸ್ವಾಮಿಗಳ ಇದುರಾಗಿ ನಡೆಯುತ್ತಿತ್ತು. ಜನರು ಎಡಬಲಪಾರ್ಶ್ವಗಳಲ್ಲಿ ಕಿಕ್ಕಿರಿದು ನಿಂತು ಕರತಾಡನದೊಡನೆ ಜಯಘೋಷಮಾಡುತ್ತ ಉತ್ಸಾಹದಿಂದ ಸಾಗುತ್ತಿದ್ದರು. ಪೋಲೀಸು ಅಧಿಕಾರಿಗಳು ಪಾಲ್ಗೊಂಡು ನಿಂತು ಉತ್ಸವವನ್ನು ಸಮಾಧಾನಕರವಾಗಿ ಸಾಗಿಸುತ್ತಿದ್ದರು. ಅಷ್ಟರಲ್ಲಿ ಉತ್ಸವವು ಹಳೇಪೇಟೆಯನ್ನು ದಾಟಿ ಕೆರೆಯ ಸಕ್ಕದಲ್ಲಿರುವ ರಸ್ತೆಗೆ ಬರಲು ಪರಶಿವನಂತೆ ಒಪ್ಪುತ್ತಿದ್ದ ಶ್ರೀ ಜಗದ್ಗುರುಗಳ ಭಾವಚಿತ್ರವು ತೆಗೆಯಲ್ಪಟ್ಟಿತು. ಪುನಃ ಅದೇ ಮಾರ್ಗದಲ್ಲಿ ಸಾಗುತ್ತ ನಡುವಿನಪೇಟೆಯ ದೊಡ್ಡ ಬಜಾರವನ್ನು ಪ್ರವೇಶಿಸಿದಾಗ ಉತ್ಸವವು ಅಭೂತಪೂರ್ವವಾಗಿ ತೋರುತ್ತಿದ್ದುದರಿಂದ ಮಧ್ಯಾಹ್ನ 12 ಗಂಟೆಯಾದರೂ ಜನರು ಎಡೆಬಿಡದೆ ತುಂಬಿತುಳುಕುತ್ತ ಆನಂದಮುಖಿಗಳಾಗಿ ನಡೆಯುತ್ತಿದ್ದರು. ಕೆಲವರು ಗುರುಭಕ್ತಿಯಿಂದ ಅಲ್ಲಲ್ಲಿ ವಂದನಾರತಿಗಳನ್ನು ಅರ್ಪಿಸುತ್ತಿದ್ದರು. ಈ ಪ್ರಕಾರವಾಗಿ ಕಿಲ್ಲೆಯ ಮುಂಭಾಗದ ರೋಡಿನಲ್ಲಿರುವ ಕಚೇರಿಯ ಮುಂದೆ ಹಾಯ್ದು ಅತ್ಯಂತ ಸಂಭ್ರಮದೊಡನೆ ಸಂಸ್ಥಾನದ ವಾಸಕ್ಕಾಗಿ ಸಿದ್ಧಪಡಿಸಿದ್ದ ಅರಮನೆಯ ಮುಂದಣ ಚಪ್ಪರಕ್ಕೆ ಬರಲು ಮಹಾಶ್ರೀಗಳು ಪಲ್ಲಕ್ಕಿಯನ್ನು ಇಳಿದು ಸುಮಂಗಲೆಯರ ಆರತ್ಯಕ್ಷತೆಗಳನ್ನು ಸ್ವೀಕರಿಸಿ ಸಂಸ್ಥಾನದ ಸರ್ವಾಧಿಕಾರಿಗಳಾದ ಶಿರ್ಪಿಯ ಶ್ರೀ ಚರವರ್ಯರ ಹಸ್ತಾವಲಂಬನದೊಡನೆ ಸಮಸ್ತರ ಜಯಘೋಷ ಕರತಾಡನಗಳಾಗುತ್ತಿರಲು ಸಭಾಮಂಟಪದ ಮಧ್ಯದಲ್ಲಿರುವ ದಿವ್ಯಸಿಂಹಾಸನದಲ್ಲಿ ಮಂಡಿಸಿದರು. ಆಗ ಸಕಲರೂ ಸಾಷ್ಟಾಂಗ ಪ್ರಣಾಮಗಳಿಂದ ಫಲ ತಾಂಬೂಲಗಳನ್ನು ಅರ್ಪಿಸಿ ಸಭೆಯಲ್ಲಿ ಕುಳಿತರು. ಸಿಂಹಾಸನದ ಬಲಭಾಗದಲ್ಲಿ ಸಂಸ್ಥಾನದ ಸರ್ವಾಧಿಕಾರಿಗಳಾದ ಶಿರ್ಪಿಯ ಶ್ರೀಗಳು ಸಂಸ್ಥಾನದ ಕಾರಭಾರಿಗಳಾದ ಯಲಬುರ್ಗಿ ಹುಲಿಕಂಥೆ ಮಠದ ಚರವರ್ಯರು ಕುಡತಿನಿ ನಯನಸ್ವಾಮಿ ಮಠದ ಪಟ್ಟಾಧ್ಯಕ್ಷರು ಚಿಕ್ಕಮಣ್ಣೂರು ಬೃಹನ್ಮಠದ ಪಟ್ಟಾಧ್ಯಕ್ಷ ಶ್ರೀ ರೇವಣಸಿದ್ಧ ಶಿವಾಚಾರ್ಯರು ಕುಷ್ಟಿಗಿ ಮುದ್ದಾನಮಠದ ಶ್ರೀ ಪಟ್ಟದಸ್ವಾಮಿಗಳು ಯಾದಗಿರ ತಾ|| ಎಲೇರಿ ಹಿರೇಮಠದ ಚರಮೂರ್ತಿಸ್ವಾಮಿಗಳು ಬಳಗಾನೂರು ಹಿರೇಮಠದ ಚರಮೂರ್ತಿಸ್ವಾಮಿಗಳು ಬಳಗಾನೂರು ಶಂಕರದೇವರಮಠದ ಪಟ್ಟದಸ್ವಾಮಿಗಳು ಬೆದವಟ್ಟಿ ಹಿರೇಮಠದ ಶ್ರೀ ಚರಮೂರ್ತಿಸ್ವಾಮಿಗಳು ಮ್ಯಾಗೇರಿ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳು ಗುಡಗುಂಟಿ ಮಠದ ಶ್ರೀಪಟ್ಟದಸ್ವಾಮಿಗಳು ದೋಟಿಹಾಳ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳು ಅಲಂಕರಿಸಿದ್ದರು. ಮತ್ತು ಸಂಸ್ಥಾನದ ಮುನ್ಷಿ ವೇ|| ಕೆ. ಎಂ. ವೀರಾನಂದಶರ್ಮ ಇವರು ಸಭೆಯ ವ್ಯವಸ್ಥೆಯನ್ನು ಸಮರ್ಪಕವಾಗಿ ನಡೆಯಿಸುತ್ತಿದ್ದರು. ಎಡಭಾಗದಲ್ಲಿ ಶ್ರೀ ಉಜ್ಜಯಿನೀ ಜಗದ್ಗುರು ಮಹಾಸಂಸ್ಥಾನದ ಆಸ್ಥಾನ ಪಂಡಿತ ವೇ|| ಕೊಂಗವಾಡ ಹಿರೇಮಠದ ವೀರಭದ್ರಶಾಸ್ತ್ರಿಗಳು ಹಾಗೂ ಗಂಗಾಧರಶಾಸ್ತ್ರಿಗಳು ವೇ|| ನಾಯಕಲ್ಲು ಬಸವರಾಜಶಾಸ್ತ್ರಿಗಳು ವೇ|| ಕರಡಿ ಇಂದುಧರಶಾಸ್ತ್ರಿಗಳು ವೇ|| ಮಸಿಗಿ ಕಾಲಾಮಠದ ಬಸವಪ್ಪಶಾಸ್ತ್ರಿಗಳು ವೇ|| ಕುಷ್ಟಿಗಿ ಶಾಲಾಧ್ಯಾಪಕ ಕಲ್ಯಾಣಶಾಸ್ತ್ರಿಗಳು ವೇ|| ಬೇಗವಾಟ ಹಿರೇಮಠದ ಸಿದ್ಧಾಂತಿ ಚೆನ್ನಬಸವಶಾಸ್ತ್ರಿಗಳು ವೇ|| ಕಂದಗಲ್ಲುಮಠದ ಚೆನ್ನವೀರಶಾಸ್ತ್ರಿಗಳು ವೇ|| ಆಲಂಪಲ್ಲಿಮಠದ ಕೀರ್ತನಕಾರ ಶಾಂತಮೂರ್ತಪ್ಪನವರು ಇವರೇ ಮುಂತಾದವರು ಮಂಡಿಸಿದ್ದರು. ಸನ್ನಿಧಿಯ ಸಮ್ಮುಖದಲ್ಲಿ ಮುದಗಲ್ಲು ಗ್ರಾಮದ ವೇ|| ಹಿರೇಮಠದ ಶಿವಲಿಂಗಯ್ಯನವರು ಓಣಿಮಠದ ಮಹಂತಯ್ಯನವರು ಗಡದಕಲ್ಲಯ್ಯನವರು ವಸ್ತ್ರದ ಪರ್ವತಯ್ಯನವರು ಮ|| ರಾ|| ದೇಸಾಯಿ ಅಮರಪ್ಪನವರು ಮ|| ರಾ|| ಮಾ|| ಪಾ|| ಟಾಕನಗೌಡರು ಮ|| ರಾ|| ಮಾ|| ಪಾ|| ಅಮರಪ್ಪಗೌಡರು ಮ|| ರಾ|| ಗದ್ಯರುದ್ರಪ್ಪನವರು ಮ|| ರಾ|| ಗಂಗಾವತಿ ನಾಗಪ್ಪನವರು ಮ|| ರಾ|| ನಾಗಲಾಪುರದ ಶರಣಪ್ಪನವರು ಮ|| ರಾ|| ಸಂಗನಹಾಳು ಆದಪ್ಪನವರು ಮ|| ರಾ|| ಸಂಗನಹಾಳು ಮಲೆಪ್ಪನವರು ಮ|| ರಾ|| ಬುಕ್ಕಸಟ್ಟಿ ನಾಗಪ್ಪನವರು ಮ|| ರಾ|| ಲಕ್ಯಾಳು ವೀರನಗೌಡರು ಮ|| ರಾ|| ವರದಾಳು ವೀರಭದ್ರಗೌಡರು ಮ|| ರಾ|| ಕನಕಗಿರಿ ಬುಡ್ಡನಗೌಡರು ಮ|| ರಾ|| ಕಾರಲಕುಂಟಿ ಅಮರಪ್ಪಗೌಡರು ಮ|| ರಾ|| ಸಿರಿವೈರ ನಾಡಗೌಡರು ಮ|| ರಾ|| ಕಂದಗಲ್ಲು ನಾಡಗೌಡರು ಮ|| ರಾ|| ಬಸ್ಸಿಗ್ಯಾಳು ಗುಡದಪ್ಪನವರು ಇವರೇ ಮುಂತಾದ ಪ್ರಮುಖರು ಕುಳಿತಿದ್ದರು. ಮಧ್ಯಾಹ್ನ 2 ಗಂಟೆಯಾಗುತ್ತ ಬಂದುದರಿಂದ ಮಹಾಗುರುವು ದಯಮಾಡಿಸಿದ ಬಗ್ಗೆ ಉಂಟಾದ ಆನಂದವನ್ನು ವ್ಯಕ್ತಪಡಿಸುವಂತಹ ಒಂದೆರಡು ಸಂಕ್ಷಿಪ್ತ ಭಾಷಣಗಳನ್ನು ವೇ|| ಪಂಡಿತ ವೀರಭದ್ರಶಾಸ್ತ್ರಿಗಳು ವೇ|| ಮಸಿಗಿಶಾಸ್ತ್ರಿಗಳು ಮಾಡಿದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ತರುವಾಯ ಸಮಸ್ತರ ಭೋಜನಾದ್ಯುಪಚಾರಗಳು ನೆರವೇರಿದ ಮೇಲೆ ಸನ್ನಿಧಿಯ ಅನುಜ್ಞೆಯಂತೆ 4 ಗಂಟೆಗೆ ಸಭೆಯು ನೆರೆಯಿತು. ಕೊಂಗವಾಡದ ವೀರಭದ್ರಶಾಸ್ತ್ರಿಗಳು ಧರ್ಮ ಮತ್ತು ಗುರುಭಕ್ತಿಗಳನ್ನು ಕುರಿತು ಭಾಷಣಮಾಡಿದರು. ಬಳಿಕ ಅದೇ ವಿಷಯವನ್ನು ಕುರಿತು ಕರಡಿಶಾಸ್ತ್ರಿಗಳು ಚನ್ನಾಗಿ ಭಾಷಣಮಾಡಿದರು. ಬಳಿಕ ದೀಪಾರಾಧನ ವಂದನಾದಿಗಳು ಜರುಗಿದವು. ಆಗ ಆಲಂಪಲ್ಲಿ ವೇ|| ಕೀರ್ತನಕಾರರು 1 ಗಂಟೆ ಸ್ವಾರಸ್ಯವಾಗಿ ಕೀರ್ತನಮಾಡಿದರು. ತರುವಾಯ ನಾಯಕಲ್ಲು ಬಸವರಾಜಶಾಸ್ತ್ರಿಗಳು ಲಿಂಗಧಾರಣ ಮಹಿಮೆಯನ್ನು ಹೇಳಿದರು. ಕುಷ್ಟಿಗಿ ಶಾಲಾಧ್ಯಾಪಕರು ರಚಿಸಿದ ಶ್ರೀ ಜಗದ್ಗುರು ಪಂಚಕವನ್ನು ಹೇಳಿದರು. ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳು ಸಮಾಜ ಜೀರ್ಣೋದ್ಧಾರವನ್ನೂ ಕನ್ಯಾಶುಲ್ಕ ನಿಷೇಧವನ್ನೂ ಕುರಿತು ಹೇಳಿದರು. ತರುವಾಯ ಮಹಾಸನ್ನಿಧಿಯಲ್ಲಿ ಮಂಗಲವನ್ನು ಮಾಡಿ ಸಕಲರಿಗೂ ವೇದೋಕ್ತಾಶೀರ್ವಾದಗಳನ್ನಿತ್ತು ಸಭೆಯ ಕಾರ್ಯವು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಪೂರೈಸಲ್ಪಟ್ಟಿತು. ಇಂತಹ ಗುರುಸೇವಾಕಾರ್ಯದಲ್ಲಿ ಕಂಕಣಬದ್ಧರಾಗಿ ನಡೆಯಿಸಿದ ಮುದಗಲ್ಲು ಹಾಗೂ ಆಜೂಬಾಜು ಗ್ರಾಮದ ಭಕ್ತಮಂಡಲಿಗೆ ಶ್ರೀಜಗದ್ಗುರುಗಳು ಆಯುರಾರೋಗ್ಯಭಾಗ್ಯಗಳನ್ನಿತ್ತು ರಕ್ಷಿಸಲಿ.

ಪ್ರತ್ಯಕ್ಷದರ್ಶಿ.

ಮಹಾತ್ಮಾಗಾಂಧಿಯವರ ಸಮಾಚಾರ.

ಮದ್ರಾಸ್, ಮುಂಬಯಿ, ಕಲ್ಕತ್ತಾ, ಆಗ್ರಾ, ಸಂಯುಕ್ತಸಂಸ್ಥಾನಗಳು ಬನಾರಸ್, ಬರ್ಮಾ, ಮೊದಲಾದ ಮುಖ್ಯ ಪಟ್ಟಣಗಳೆಲ್ಲೆಲ್ಲ ಕಾಂಗ್ರೆಸ್‌ಪಕ್ಷದವರು ದೊಡ್ಡ ದೊಡ್ಡ ಸಭೆಗಳನ್ನು ಸೇರಿಸಿ ಮಹಾತ್ಮರ ಸತ್ಯಾಗ್ರಹದ ಚಳವಳಿಯನ್ನು ಪ್ರಾರಂಭಿಸಲು ತಕ್ಕ ವ್ಯವಸ್ಥೆಗಳನ್ನು ಮಾಡುತ್ತಿರುವರು. ಸತ್ಯಾಗ್ರಹವು ಇಷ್ಟರಲ್ಲಿಯೇ ಭರತಖಂಡದ ಎಲ್ಲಾ ಕಡೆಗಳಲ್ಲಿಯೂ ಒಳ್ಳೇ ಭರದಿಂದ ಪ್ರಾರಂಭವಾಗುವಂತೆ ತೋರುವದು. ಕಳೆದ ಶುಕ್ರವಾರ 30 ಜನ ಸ್ವಯಂಸೇವಕರಿಂದ ಕೂಡಿದ ಎರಡನೆಯ ಸತ್ಯಾಗ್ರಹದ ಗುಂಪು ಅಹಮದಾಬಾದಿನಿಂದ ಮಹಾತ್ಮರನ್ನು ಹಿಂಬಾಲಿಸಿ ಹೊರಟಿರುವದು. ಮಹಾತ್ಮರು ಹಾಗೂ ಅವರ ಜೊತೆಯಲ್ಲಿರುವವರು ಸೆರೆಹಿಡಿಯಲ್ಪಟ್ಟರೆ ಈ ಎರಡನೆಯ ಗುಂಪಿನವರು ಅವರ ಸ್ಥಾನದಲ್ಲಿ ನಿಂತು ಸತ್ಯಾಗ್ರಹವನ್ನು ಮುಂದುವರಿಸುವರು.

ಮಹಾತ್ಮರು ತಮ್ಮ ಅನುಯಾಯಿಗಳೊಡನೆ ದಿನಕ್ಕೆ 10 ಮೈಲುಗಳಂತೆ ನಡೆಯುತ್ತ ಮುಂದುವರಿಯುತ್ತಿರುವರು. ದಾರಿಯಲ್ಲಿ ಸಿಕ್ಕುವ ಹಳ್ಳಿಗಳಲ್ಲಿ ಉಪನ್ಯಾಸ ಮಾಡುತ್ತ ಸ್ವಯಂಸೇವಕರಾಗಿ ಸತ್ಯಾಗ್ರಹವನ್ನು ನಡೆಯಿಸುವಂತೆ ಉಪದೇಶಿಸುವರು. ಇವರ ಉಪದೇಶದಿಂದ ಈವರೆಗೆ 20-25 ಜನ ಪಟೇಲರು ರಾಜೀನಾಮೆಯನ್ನು ಕೊಟ್ಟಿರುವರು.

ಮಹಾತ್ಮರ ಸತ್ಯಾಗ್ರಹವನ್ನು ಸಂಪೂರ್ಣವಾಗಿ ಚಲನಚಿತ್ರದಲ್ಲಿ ತೋರಿಸಬೇಕೆಂದು ಅನೇಕ ಸಿನೆಮಾ ಕಂಪೆನಿಯವರು ಅವರೊಡನೆ ಹೊರಟಿರುವರು. ಇದರಲ್ಲಿ ಜರ್ಮನಿಯ ಒಂದು ಕಂಪೆನಿಯೂ ಸೇರಿರುವದು.

ಕಳೆದ ಶುಕ್ರವಾರ ಪಂಡಿತ ಮೋತೀಲಾಲ್ ನೆಹರೂ ಹಾಗೂ ಶ್ರೀಮತಿ ಕಮಲಾ ನೆಹರೂರವರು ಮಹಾತ್ಮರ ಸತ್ಯಾಗ್ರಹದ ಚಳವಳಿಗೆ ಸ್ವಯಂಸೇವಕರಾಗಿ ಸೇರಿರುವರು.

ಮಹಾತ್ಮರ ಚಳವಳಿಯನ್ನು ಬ್ರಿಟಿಷ್ ಸರಕಾರದವರು ಯಾವ ರೀತಿಯಲ್ಲಿ ಪ್ರತಿಭಟಿಸುವರೋ ಎಂದು ಪ್ರಪಂಚವೆಲ್ಲವೂ ಕುತೂಹಲದಿಂದ ನಿರೀಕ್ಷಿಸುತ್ತಿರುವದು. ಈ ಮಧ್ಯೆ ಮಹಾತ್ಮರನ್ನು ಸೆರೆಹಿಡಿಯುವರೆಂದು ಕೆಲವರೂ, ಮಹಾತ್ಮರನ್ನು ಸೆರೆಹಿಡಿಯದೆ ನಡೆಯುವ ವಿದ್ಯಮಾನಗಳನ್ನು ಸುಮ್ಮನೆ ನಿರೀಕ್ಷಿಸುವರೆಂದು ಕೆಲವರೂ, ಮಹಾತ್ಮರನ್ನು ಬರ್ಮಾದೇಶದ ದಕ್ಷಿಣಪ್ರಾಂತ್ಯಕ್ಕೆ ಗಡೀಪಾರುಮಾಡುವರೆಂದು ಕೆಲವರೂ ಹೇಳುತ್ತಿರುವರು. ಒಬ್ಬ ಜ್ಯೋತಿಷ್ಕರು ಭರತಖಂಡದ ಹಾಗೂ ಇಂಗ್ಲೆಂಡ್ ದೇಶದ ಗ್ರಹಗಳ ಸ್ಥಿತಿಗಳನ್ನು ಕುರಿತು ಚರ್ಚಿಸಿ ಮಹಾತ್ಮರ ಸತ್ಯಾಗ್ರಹವು ಸಂಪೂರ್ಣ ಫಲಕಾರಿಯಾಗುವದೆಂದು ಪ್ರಸಿದ್ಧಪಡಿಸಿರುವರು.

ಸರಕಾರದವರು ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿಮಾಡಿದರೆ ಅಬ್ಬಾಸ್ ತಾಯಬ್ಜಿಯವರೂ ಅವರು ದಸ್ತಗಿರಿಯಾದರೆ ಜಗನಲಾಲ್ ಜೋಶಿಯವರು ಅನಂತರ, ಸುರೇಂದ್ರನಾಥರವರು, ವಾಲ್ಜೀ ದೇಸಾಯಿರು, ಪಂಡಿತ ನಾರಾಯಣ ಖೇರು, ರಘುನಾಥಲಾಲ್‌ಮೋದೀ ಈ ಏಳು ಜನರು ಒಬ್ಬರಾದನಂತರ ಮತ್ತೊಬ್ಬರು ಸತ್ಯಾಗ್ರಹದ ನಾಯಕತ್ವವನ್ನು ವಹಿಸುವರು. ಇವರೆಲ್ಲರೂ ಮಹಾತ್ಮರ ಜೊತೆಯಲ್ಲಿಯೇ ಇರುವರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ ನೇ ಮಾರ್ಚಿ ೧೯೩೦ [ಸಂಚಿಕೆ ೪೬.

ಶ್ರೀ ಕೊಟ್ಟೂರೇಶನ ರಥೋತ್ಸವ.

ಬಳ್ಳಾರಿ ಡಿ|| ಕೊಟ್ಟೂರುಗ್ರಾಮದಲ್ಲಿರುವ ಮಹಾಮಹಿಮಶಾಲಿಯಾದ ಕೊಟ್ಟೂರೇಶನ ರಥೋತ್ಸವವು ಈ ವರ್ಷ ಮಾರ್ಚ್ ತಾ|| ೯ ಶನಿವಾರ ದಿವಸ ಅತ್ಯಂತ ವೈಭವದಿಂದ ನೆರವೇರಿತು. ಪ್ರತಿ ವರ್ಷಕ್ಕಿಂತ ಈ ವರ್ಷ ವಿಶೇಷ ಜನರು ಕೂಡಿದ್ದರು. ವಿಘ್ನವಿಲ್ಲದೆ ಅರ್ಧದಾರಿಯವರೆಗೆ ರಥವು ಸಾಗಿ ಸ್ವಸ್ಥಾನಕ್ಕೆ ಬಂದು ತಲ್ಪಿತು. ಇದು ಮಹಿಮಶಾಲಿಯ ಮಹಿಮೆಯಲ್ಲದೆ ಬೇರೊಂದಲ್ಲವೆಂದು ಹೇಳಬೇಕಾಗುವದು.

ಹೆಗ್ಗಡಾಳ ಶೆಟ್ರು ಶಿಪ್ಪಜ್ಜ ವೀರಭದ್ರಪ್ಪ.

ನಿಜವಾದ ಗುರುಭಕ್ತರು.

ಅರಸೀಕೆರೆ ತಾಲೂಕು ದಿಬ್ಬೂರುಗ್ರಾಮದ ಸ್ಕೂಲ್ ಮಾಸ್ಟರ್ ಮ|| ರಾ|| ಎ. ಚನ್ನಪ್ಪನವರು ರೇಣುಕವಿಜಯ ಗ್ರಂಥವನ್ನು ಹಾಗೂ ಪಂಚಾಚಾರ್ಯಪ್ರಭಾ ಪತ್ರಿಕೆಯನ್ನು ಸರ್ವತ್ರ ಪ್ರಚಾರಪಡಿಸಬೇಕೆಂಬ ಸದುದ್ದೇಶದಿಂದ ಕಂಕಣಬದ್ಧರಾಗಿ ತಮಗೆ ದೊರೆಯುವ ರಜಾಕಾಲದಲ್ಲಿ ಅಂದರೆ ಏಪ್ರಿಲ್ ತಿಂಗಳ 1 ನೆಯ ತಾರೀಖಿನಿಂದ ಪ್ರಯಾಣ ಮಾಡುವರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ಸಂತೋಷವೆನಿಸುತ್ತದೆ. ಈ ಮನೋಧರ್ಮದಂತೆ ಪ್ರತಿಯೊಬ್ಬರೂ ಗುರುಕಾರ್ಯವನ್ನು ಕೈಕೊಂಡರೆ ವೀರಶೈವ ಸಮಾಜವು ಅತ್ಯಲ್ಪಕಾಲದಲ್ಲಿಯೇ ಸುಧಾರಣಾಶಿಖರವನ್ನೇರುವದೆಂದು ಸಾರಿಸಾರಿ ಹೇಳಬಹುದಾಗಿದೆ. ಅಸಾಧಾರಣ ಗುರುಭಕ್ತಿಶೀಲರಾದ ಸದರಿ ಮಾಸ್ಟರ್‌ರವರಿಗೆ ಶ್ರೀ ರೇಣುಕಾದಿ ಪಂಚಾಚಾರ್ಯರು ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ,

ಮಠಾಭಿಮಾನಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ.

ದಿಬ್ಬೂರು.

ಅರಸೀಕೆರೆ ತಾಲ್ಲೋಕು ದಿಬ್ಬೂರು ಗ್ರಾಮದ ವೀರಶೈವಮತದ ಎಸ್. ಎಂ. ವೀರಬಸವಯ್ಯ ಲ್ಯಾಂಡ್ ಹೋಲ್ಡರ್ ಇವರ ಗೃಹದಲ್ಲಿ ಮೇಲ್ಕಂಡ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ಅತ್ಯಂತ ಭಕ್ತಿಯಿಂದ ನೆರವೇರಿಸಿ ಸರ್ವರೂ ಆ ಭಗವತ್ಪಾದರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಸ್ಕೂಲ್‌ಮಾಸ್ಟರ್ ಮ|| ರಾ|| ಎ ಚನ್ನಪ್ಪನವರು ಪ್ರೋತ್ಸಾಹಿಸಿದ ಮೇರೆಗೆ ಗ್ರಾಮದ ಪಟೇಲ್ ಮ|| ದಾಸೇಗೌಡರು, ಮರ್ಚೆಂಟ್ ಎಂ. ರುದ್ರಪ್ಪಶೆಟ್ಟರು, ಮಾಡಾಳ್ ಚಿಕ್ಕೇಗೌಡರು, ಶಿವನಂಜಪ್ಪನವರು, ದೊಡ್ಡಿ ಯಜಮಾನ್ ಚೌಡಯ್ಯನವರು, ಸಿ. ಮರುಳಪ್ಪನವರು, ಗವೀ ರಂಗೇಗೌಡರು, ಎಸ್. ಮಂಜೇಗೌಡರು, ಯಜಮಾನ್ ರಂಗಪ್ಪನವರು, ಚೌಡಯ್ಯನವರೇ ಮೊದಲಾದವರು ಸೇರಿ ಶ್ರೀ ರೇಣುಕಾಚಾರ್ಯರ ಭಾವಚಿತ್ರಪಟವನ್ನು ಪುಷ್ಪಹಾರಗಳಿಂದಲಂಕರಿಸಿ ಗಂಧ ಅಕ್ಷತೆ ಧೂಪದೀಪ ಮಹಾಮಂಗಳಾರತಿ ನೈವೇದ್ಯಾದಿಗಳು ಆದನಂತರ ಮಾಸ್ಟರ್ ಎ ಚನ್ನಪ್ಪನವರು ಜಗತ್ಪೂಜ್ಯರಾದ ಶ್ರೀ ರೇಣುಕಾಚಾರ್ಯರು ಪರಮೇಶ್ವರನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಪ್ರಸಿದ್ಧವಾದ ಕೊಲ್ಲಿಪಾಕಿ ಶ್ರೀ ಸೋಮೇಶ್ವರಲಿಂಗದಿಂದ ಆವಿರ್ಭವಿಸಿ ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ಶಿವಸಿದ್ಧಾಂತವನ್ನು ಉಪದೇಶಮಾಡಿದ, ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ, ಲೋಕಚಕ್ರವರ್ತಿಯಾದ ವಿಭೀಷಣನ ಪ್ರಾರ್ಥನಾನುಸಾರವಾಗಿ ಲಂಕಾನಗರದಲ್ಲಿ ತ್ರಿಕೋಟಿಲಿಂಗಗಳನ್ನು ಸ್ಥಾಪಿಸಿದ, ಹಾಗೂ ಶಕಪುರುಷನಾದ ವಿಕ್ರಮಾದಿತ್ಯಭೂಪಾಲನಿಗೆ ಖಡ್ಗವನ್ನು ದಯಪಾಲಿಸಿದ ಇವೇ ಮೊದಲಾದ ಅನಂತ ಲೀಲೆಗಳನ್ನು ಮಾಡಿ ಈ ಭೂಮಂಡಲದಲ್ಲಿ (1400) ವರುಷಗಳು ಬದುಕಿದ್ದು ಅನಂತರ ತಾವು ಅವತರಿಸಿದ ಕೊಲ್ಲಿಪಾಕಿ ಶ್ರೀ ಸೋಮನಾಥಲಿಂಗದಲ್ಲೇ ಐಕ್ಯರಾದ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾದ ಭಾಷಣಮಾಡಿದಲ್ಲದೆ ಶ್ರೀ ಜಗದಾಚಾರ್ಯರ ಜಯಂತಿದಿನವನ್ನು ಸರ್ಕಾರಿ ರಜಾದಿನವನ್ನಾಗಿ ಮಂಜೂರ್ಮಾಡಿ ಇಡೀ ವೀರಶೈವಸಮಾಜಕ್ಕೆ ಮಹತ್ತರವಾದ ಆನಂದವನ್ನು ಉಂಟುಮಾಡಬೇಕೆಂದು ನಮ್ಮ ಶ್ರೀಮನ್ಮಹಾರಾಜಾಧಿರಾಜ ಸರ್. ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ.ರವರಿಗೂ ಮತ್ತು ಅವರ ಧರ್ಮಸರ್ಕಾರಕ್ಕೂ ಟೆಲಿಗ್ರಾಂಮೂಲಕ ಪ್ರಾರ್ಥಿಸಿಕೊಳ್ಳಬೇಕೆಂದು ಸೂಚಿಸಿದ ನಂತರ ಸರ್ವರು ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಪಟವನ್ನು ಮತ್ತು ಶ್ರೀ ರೇಣುಕವಿಜಯವನ್ನು ಸಹ ಪಲ್ಲಕ್ಕಿಯಲ್ಲಿರಿಸಿ ಛತ್ರ ಚಾಮರಧ್ವಜ ಮೊದಲಾದ ಬಿರುದಾವಳಿಗಳಿಂದಲೂ ವಾದ್ಯವೈಭವಗಳಿಂದಲೂ, ವೀರಶೈವಸ್ತ್ರೀಯರ ಆರತಿಗಳಿಂದಲೂ, ಸ್ಕೂಲ್ ವಿದ್ಯಾರ್ಥಿಗಳ ಜಯಧ್ವನಿಯಿಂದಲೂ ಪುರದ ಬೀದಿಗಳಲ್ಲಿ ಉತ್ಸವವು ಸೇವ್ಯಾನಂದಕರವಾಗಿ ನೆರವೇರಿಸಲ್ಪಟ್ಟಿತು.

ಓರ್ವ ಪ್ರೇಕ್ಷಕ.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪರಲೋಕಯಾತ್ರೆ.

ನಿಜಾಂ ಇಲಾಖಾ ರಾಯಚೂರು ಜಿಲ್ಲಾ ಕುಷ್ಟಗಿ ತಾಲ್ಲೂಕು ವೈಕಿ ಜಳಗೇರಿ ಅರಳೆಲೆ ಕಟ್ಟೀಮನೆ ಬೃಹನ್ಮಠದ ವೇ|| ವೀರಸಂಗಪ್ಪಯ್ಯನವರು ಇದೇ ಫಾಲ್ಗುಣ ಶು|| ೬ ಶುಕ್ರವಾರ ಪಂಚಾಕ್ಷರೀ ಧ್ಯಾನೈಕಲೋಲರಾಗಿ ತಮ್ಮ ಭೌತಿಕ ದೇಹಕ್ಕೆ ವಿಶ್ರಾಂತಿಯನ್ನು ಕೊಟ್ಟು ಪರಲೋಕವಾಸಿಗಳಾದರೆಂದು ತಿಳುಹಿಸಲು ವಿಷಾದವೆನಿಸುತ್ತದೆ. ಈ ಮಹನೀಯರಿಗೆ 75 ವರ್ಷಗಳಾದಾಗ್ಯೂ ಪರಾಧೀನರಾಗದೆ ಸ್ವಕೀಯ ಧರ್ಮಾಚರಣೆಗಳನ್ನು ಪೂರ್ಣತೆಯಿಂದ ಸಾಗಿಸುತ್ತಿದ್ದರು. ಇವರ ಉತ್ಸಾಹವೂ ಕರ್ತವ್ಯದಕ್ಷತೆಯೂ ಶರೀರಸಂಪತ್ತಿಯೂ ವರ್ಣನೀಯಗಳಾಗಿದ್ದವು. ಷಟ್‌ಸ್ಥಲೈಕನಿಷ್ಠಾ, ಅಷ್ಟಾವರಣ ವಿವೇಕ ಆಚಾರಾದಿಗಳು ಇವರಲ್ಲಿ ತುಂಬಿ ತುಳುಕುತ್ತಿದ್ದವು. ಇವರ ಆಕಸ್ಮಿಕ ಮರಣದಿಂದ ಶಿಷ್ಯವರ್ಗವೂ ಬಂಧುವರ್ಗವೂ ಗ್ರಾಮದ ಭಕ್ತವರ್ಗವೂ ಅಪಾರವಾದ ದುಃಖಾಂಬುಧಿಯಲ್ಲಿ ಮುಳುಗಿರುವದು. ಸದರಿ ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಮಹಾಸ್ವಾಮಿಗಳು ಇವರ ಸಮಾಧಿಕಾರ್ಯವನ್ನು ಶಾಸ್ತ್ರರೀತಿಯಂತೆ ಬಹು ವಿಜೃಂಭಣೆಯಿಂದ ನೆರವೇರಿಸಿದರು. ಶ್ರೀಜಗದಾಚಾರ್ಯರು ಬಂಧುವರ್ಗಕ್ಕೆ ದುಃಖಶಮನವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಉಂಟುಮಾಡಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ.

ಸ್ವೀಕಾರ.

ಧಾರವಾಡ ಡಿ|| ಸಿಗ್ಗಲಿಗ್ರಾಮದಲ್ಲಿರುವ ವೇ|| ಕೂಡಲಮಠದ ಸಿದ್ದಪ್ಪಯ್ಯನವರ ಆಳಿಯಂದರಿಗೆ ಪ್ರಾಪ್ತವಾದ ಪ್ಲೇಗ್ ರೋಗವು ಜಗದಾಚಾರ್ಯರ ಅತೀವಾರ್ದಬಲದಿಂದ ಗುಣವಾಗಲೆಂದು ನಂದಾದೀವಿಗೆಯನ್ನು ಹಚ್ಚಿ ಸಂಕಲ್ಪಮಾಡಿಕೊಂಡ 3 ದಿವಸಗಳಲ್ಲಿಯೇ ಗುಣವಾದ ಸಂತೋಷಕ್ಕಾಗಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಶ್ರೀ|| ಷ|| ಬ್ರ|| ಬಟ್ಟೂರು ಹಿರೇಮಠದ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಹಾವೇರಿ ತಾಲೂಕು ಹೆಸರೂರುಗ್ರಾಮದ ಮ|| ರಾ|| ಶ್ರೀಮಂತ ಮರಡೂರು ಬಸಪ್ಪನವರು ತಮ್ಮ ಅಣ್ಣಂದಿರ ಪುತ್ರ ಚಿ|| ವೀರಭದ್ರಪ್ಪನಿಗೆ ಮ|| ರಾ|| ಹಾರೋಗೇರಿ ಪಾಟೀಲ ಬಸವನಗೌಡರ ಪುತ್ರಿ ಪಾರ್ವತವ್ವನನ್ನು ತಂದು ಫಾಲ್ಗುಣ ಬಹುಳ ಪಂಚಮಿ ದಿವಸ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ವರನು ಸಮರ್ಪಿಸಿದ 2 ರೂ. ಕನ್ಯೆಯು ಸಮರ್ಪಿಸಿದ 1 ರೂ. ಒಟ್ಟು 3 ರೂಪಾಯಿಗಳು ಶ್ರೀ|| ಷ|| ಬ್ರ|| ಬಟ್ಟೂರು ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾವೇರಿ ಶಹರದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಯರೇಶೀಮೆ ರಾಚಪ್ಪನವರ ದ್ವಾರಾ ತಲ್ಪಿರುತ್ತವೆ.

ಬಿಜಾಪುರ ಡಿ|| ಹುನಗುಂದ ತಾಲೂಕು ಸಂದವಾಡಿಗಿಯಲ್ಲಿರುವ ಮುದೇನೂರು ಮಠದ ವೇ|| ಸಿದ್ಧಲಿಂಗಯ್ಯನವರು ಶ್ರೀ ಶರಣಬಸವೇಶ್ವರ ಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಧಾರವಾಡ ಡಿ|| ಲಕ್ಷ್ಮೇಶ್ವರಗ್ರಾಮದಲ್ಲಿ ನೆರವೇರಿಸಿದ ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಮ|| ರಾ|| ಸಿದ್ಧಬಸಪ್ಪನವರು ಸಜ್ಜನ ಇವರು ಸಮರ್ಪಿಸಿದ 1 ರೂಪಾಯಿಯು ವೇ|| ಹಿರೇಮಠದ ಕಾಶಯ್ಯನವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹಂಪಸಾಗರಗ್ರಾಮದಲ್ಲಿ ನೆರವೇರಿದ ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಮ|| ರಾ|| ವಾರ್ತಪ್ಪಾ ಮಲಗಾಂವ ಇವರು ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಶೆಟ್ಟರ ಶರಣಪ್ಪನವರ ದ್ವಾರಾ ತಲ್ಪಿರುತ್ತದೆ.

ಅರಸೀಕೆರೆ ತಾಲ್ಲೂಕು ದಿಬ್ಬೂರುಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸದರಿ ಗ್ರಾಮದ ಭಕ್ತರಿಂದ ಸಮರ್ಪಿಸಲ್ಪಟ್ಟ 1 ರೂಪಾಯಿಯು ಮ|| ರಾ|| ಎ. ಚನ್ನಪ್ಪನವರು ಸ್ಕೂಲ್‌ಮಾಸ್ಟರ್ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಸಿದ್ಧಯ್ಯನಹುಂಡಿ.

ಮಹಾಶಯರೇ!

[illegible]

ಬೀರೂರು.

[illegible]

ಲಕ್ಷ್ಮೇಶ್ವರ.

[illegible]

ಬಾಣಾವರ.

[illegible]

Sajjan Setty.

ದೊಡ್ಡಬಳ್ಳಾಪುರ.

[illegible]

ಶಿಂಗಟಾಲೂರು.

[illegible]

ಸೇಲಂ.

[illegible]

ಹುಬ್ಬಳ್ಳಿ.

[illegible]

ಪ್ರತ್ಯಕ್ಷದರ್ಶಿ.

ಹಾವೇರಿ.

[illegible]

ಗುರುಭಕ್ತಮಂಡಳಿ ಹಾವೇರಿ.

ಯಾದಗಿರಿ.

[illegible]

ಹಂಪಸಾಗರ.

[illegible]

ಪಂಚಾಚಾರ್ಯ ಪ್ರಭಾ

೧೯೩೦ ನೇ ಮಾರ್ಚಿ ತಾ|| ೨೪ ನೇ ಸೋಮವಾರ

ಮೋಕ್ಷಸಾಧನ.

ಶಿವಕ್ರಿಯಾ ಶಿವತಪಃ ಶಿವಮಂತ್ರಜಪಸ್ಸದಾ |
ಶಿವಜ್ಞಾನಂ ಶಿವಧ್ಯಾನಮುತ್ತರೋತ್ತರಮಭ್ಯಸೇತ್ ||

ಶಿವಲಿಂಗಕ್ರಿಯೆಯನ್ನೂ ಶಿವಲಿಂಗತಪಸ್ಸನ್ನೂ ಶಿವಮಂತ್ರಜಪವನ್ನೂ ಶಿವಜ್ಞಾನವನ್ನೂ ಶಿವಧ್ಯಾನವನ್ನೂ ಅಭ್ಯಾಸಮಾಡುತ್ತ ಬದುಕಿರುವವರೆಗೂ ಶಿವಚಿಂತನದಲ್ಲಿಯೇ ಕಾಲವನ್ನು ಕಳೆಯಬೇಕೆಂದು ಆಗಮಗಳು ಸಾರುವುದರಿಂದ ವೀರಶೈವಮತಾವಲಂಬಿಯು ಶಿವಾರ್ಚನಾದಿ ಕರ್ಮಗಳಿಂದಲೇ ಮುಕ್ತಿಯನ್ನು ಸಾಧಿಸಬೇಕಾಗಿರುವುದು. ವೇದಗಳಲ್ಲಿ ಪತಿಧರ್ಮವೆಂತಲೂ, ಪಶುಧರ್ಮವೆಂತಲೂ ಎರಡುಧರ್ಮಗಳು ಹೇಳಲ್ಪಟ್ಟಿವೆ. ಪೂರ್ವಕಾಂಡದಲ್ಲಿ ಹೇಳಲ್ಪಟ್ಟಿರುವ ಜ್ಯೋತಿಷ್ಟೋಮಾದಿ ಕರ್ಮಗಳೇ ಪಶುಕರ್ಮಗಳೆನಿಸುವುವು. ಉತ್ತರಕಾಂಡದಲ್ಲಿ ಹೇಳಲ್ಪಟ್ಟಿರುವ ಶಿವಲಿಂಗಧಾರಣ ಶಿವಲಿಂಗಾರ್ಚನ ಶಿವಲಿಂಗಧ್ಯಾನಾದಿ ಕರ್ಮಗಳೇ ಪತಿಕರ್ಮಗಳೆನಿಸುವುವು. ಪಶುಕರ್ಮಗಳ ಅನುಷ್ಠಾನದಿಂದ ಅನಿತ್ಯಗಳಾದ ಸ್ವರ್ಗಾದಿ ಫಲಗಳು ಸಿದ್ಧಿಸುವುವು. ಪತಿಕರ್ಮಗಳ ಅನುಷ್ಠಾನದಿಂದ ನಿತ್ಯವಾದ ಕೈವಲ್ಯಫಲವು ಸಿದ್ಧಿಸುವುದು. ಜ್ಞಾನಕಾಂಡೋಕ್ತಗಳಾದ ವೀರಶೈವ ಧರ್ಮಗಳು (ಪತಿಧರ್ಮಗಳು) ಬ್ರಹ್ಮವಿದ್ಯೆಗೆ ಉಪಯೋಗಿಗಳಾಗುವುವಲ್ಲದೆ ಸ್ವರ್ಗಾದ್ಯನಿತ್ಯಫಲವನ್ನುಂಟುಮಾಡುವ ಜ್ಯೋತಿಷ್ಟೋಮಾದಿ (ಪಶು) ಧರ್ಮಗಳು ಉಪಯೋಗಿಗಳಾಗುವುದಿಲ್ಲ. ಪಶುಧರ್ಮಗಳನ್ನು ಅನುಸರಿಸುವುದರಿಂದ "ನಾಸ್ತ್ಯಕೃತಃ ಕೃತೇನ" ಎಂಬುಕ್ತಿಯಂತೆ ಪುಣ್ಯವು ಪ್ರಾಪ್ತವಾದರೂ ಮುಕ್ತಿಯು ದೊರೆಯುವುದಿಲ್ಲವು. ಪತಿಧರ್ಮಗಳನ್ನು ಅನುಸರಿಸುವುದರಿಂದ "ಅಮೃತಸ್ಯದೇವಧಾರಣೋ ಭೂಯಾಸಂ" ಎಂಬುಕ್ತಿಯಂತೆ ಪುಣ್ಯವು ಪ್ರಾಪ್ತವಾಗುವುದಲ್ಲದೆ ಸಂಸಾರಬಂಧವೂ ಸಹ ಸಂಪೂರ್ಣವಾಗಿ ನಷ್ಟವಾಗುವುದು. ಸ್ವರ್ಗಾದಿ ಫಲಗಳನ್ನುಂಟುಮಾಡುವ ಪಶುಕರ್ಮಗಳೂ ಮುಕ್ತಿಫಲವನ್ನುಂಟುಮಾಡುವ ಪತಿಕರ್ಮಗಳೂ ಒಂದೇ ವೇದದಲ್ಲಿ ಹೇಳಲ್ಪಟ್ಟಿವೆ. ಯಾರಿಗೆ ಯಾವ ಫಲದಲ್ಲಿ ಅಪೇಕ್ಷೆಯಿರುತ್ತದೆಯೋ ಆ ಫಲಗಳಿಗೆ ಸಾಧನವಾದ ಅಂತಹ ಕೆಲಸವನ್ನು ಮಾಡುವುದು ಲೋಕದಲ್ಲಿ ಪ್ರತಿಯೊಬ್ಬನ ಕರ್ತವ್ಯವಾಗಿರುವುದು. ದವಸವನ್ನು ಬೆಳೆಯಬೇಕೆನ್ನುವವನು ವ್ಯವಸಾಯವನ್ನು ಮಾಡುವನು. ಪದವಿಗಳನ್ನು ಹೊಂದಬೇಕೆನ್ನುವವನು ವಿದ್ಯಾಭ್ಯಾಸವನ್ನು ಮಾಡುವನು. ಧನವನ್ನು ಆರ್ಜಿಸಬೇಕೆನ್ನುವವನು ವ್ಯಾಪಾರವನ್ನು ಮಾಡುವನು. ಅದರಂತೆ ಸ್ವರ್ಗಾದಿ ಲೋಕಗಳನ್ನು ಹೊಂದಬೇಕೆನ್ನುವವನು ಜ್ಯೋತಿಷ್ಟೋಮಾದಿ ಕರ್ಮಗಳನ್ನಾಚರಿಸುವನು. ಕೇವಲ ಮುಕ್ತಿಸೌಖ್ಯವನ್ನು ಹೊಂದಬೇಕೆನ್ನುವವನು ಶಿವಲಿಂಗಾರ್ಚನ, ಶಿವಧ್ಯಾನ, ಶಿವಜ್ಞಾನ, ಶಿವಜಪ ಮೊದಲಾದ ಧರ್ಮಗಳನ್ನಾಚರಿಸುವನು. ಅಂತಹ ಸ್ವರ್ಗಾದಿ ಸಾಧನಗಳಾದ ಕರ್ಮಗಳು ವೇದಗಳ ಪೂರ್ವಭಾಗದಲ್ಲಿ ಹೇಳಲ್ಪಟ್ಟಿರುತ್ತವೆ. ಮುಕ್ತಿಸಾಧಕವಾದ ಶಿವಲಿಂಗಾರ್ಚನಾದಿ ಕರ್ಮಗಳು ಉತ್ತರಭಾಗದಲ್ಲಿ ಹೇಳಲ್ಪಟ್ಟಿರುತ್ತವೆ. ಇವುಗಳಲ್ಲಿ ಪೂರ್ವಕಾಂಡವನ್ನು ಅನುಸರಿಸುವವರೇ ಪಶುಧರ್ಮಿಗಳು. ಉತ್ತರಕಾಂಡವನ್ನು ಅನುಸರಿಸುವವರೇ ಪತಿಧರ್ಮಿಗಳು. ಪಶುಧರ್ಮಾವಲಂಬಿಗಳೇ ಪ್ರವೃತ್ತರೆಂತಲೂ ಪತಿಧರ್ಮಾವಲಂಬಿಗಳೇ ನಿವೃತ್ತರೆಂತಲೂ ಹೇಳಿಸಿಕೊಳ್ಳಲ್ಪಡುವರು.

ಇಹಲೋಕದಲ್ಲಿ ಪುಣ್ಯಕರ್ಮಗಳನ್ನು ಮಾಡಿ ಪುಣ್ಯವನ್ನು ಸಂಪಾದಿಸಿ ಉತ್ತಮಲೋಕಗಳನ್ನು ಪಡೆದು ಆ ಪುಣ್ಯವು ತೀರುವವರೆಗೂ ಅಲ್ಲಿ ಸೌಖ್ಯವನ್ನನುಭವಿಸಿ ಎಂದಿನಂತೆ ಪಶು (ಜೀವ) ಭಾವದಿಂದ ಜನ್ಮಗಳನ್ನು ಪಡೆಯುವವರಿಗೆ ಪ್ರವೃತ್ತರೆಂದು ಹೆಸರು. ಇಂತಹ ಪ್ರವೃತ್ತರು "ಪ್ರವೃತ್ತಾನಾಂ ಪೀಠಪೂಜಾ........ಪೂಜಾಂತೇ ಸ್ಥಾಪಯೇಲ್ಲಿಂಗಂ ಪುಟೀಶುದ್ಧೇ ಪೃಥಗ್ಗೃಹೇ" ಎಂದು ನೀಲಕಂಠಶಿವಾಚಾರ್ಯರು ಕಾರಿಕೆಯಲ್ಲಿ ಹೇಳಿದಂತೆ ಶಿವಲಿಂಗವನ್ನು ಹಸ್ತದಲ್ಲಿಟ್ಟುಕೊಂಡು ಪೂಜಿಸದೆ ಪೀಠದ ಮೇಲಿಟ್ಟು ಪೂಜಿಸುವರು. ನಿವೃತ್ತರು "ನಿವೃತ್ತಾನಾಂ ಪರಂಸೂಕ್ಷ್ಮಂ ಲಿಂಗಮೇವವಿಶಿಷ್ಯತೇ | ಪೂಜಾಂಕೃತ್ವಾಥ ತಲ್ಲಿಂಗಂ ಶಿರಸಾ ಧಾರಯೇತ್ಸದಾ" ಎಂಬಂತೆ ಶಿವಲಿಂಗವನ್ನು ಯಾವಾಗಲೂ ದೇಹದಲ್ಲಿ ಧರಿಸಿಕೊಳ್ಳುತ್ತ ತಮ್ಮ ಕರಪೀಠದಲ್ಲಿಟ್ಟು ಅರ್ಚಿಸುತ್ತ ತಮ್ಮಲ್ಲಿದ್ದ ಪಶು (ಜೀವ) ಧರ್ಮವನ್ನು ಕಳೆದು ಪುನಃ ಹಿಂದಿರುಗದೆ ಪತಿ (ಶಿವ) ಧರ್ಮವನ್ನು ಪಡೆಯುವರು. "ವೀರಶೈವೋಕ್ತಧರ್ಮಾಸ್ತು ಬ್ರಹ್ಮವಿದ್ಯೋಪಯೋಗಿನಃ | ನೈವ ಸ್ಯುಃ ಪಶುಧರ್ಮಾಸ್ತೇ ಶ್ರುತಾಃ ಕಾಮಫಲಪ್ರದಾಃ" ಎಂದು ನೀಲಕಂಠಶಿವಾಚಾರ್ಯರು ಕಾರಿಕೆಯಲ್ಲಿ ಹೇಳಿರುವಂತೆ ವೀರಶೈವರು ವೇದದೊಳಗಿನ ಜ್ಞಾನಕಾಂಡದಲ್ಲಿ ಹೇಳಿದ ನಿವೃತ್ತಿಧರ್ಮವನ್ನು (ಪತಿಧರ್ಮವನ್ನು) ಆಚರಿಸಬೇಕಲ್ಲದೆ ಕರ್ಮಕಾಂಡದಲ್ಲಿ ಹೇಳಿದ ಪ್ರವೃತ್ತಿಧರ್ಮವನ್ನು (ಪಶುಧರ್ಮವನ್ನು) ಆಚರಿಸಲಾಗದು. ವೇದದೊಳಗಿರುವ ಸಮಸ್ತ ಕರ್ಮಗಳು ಒಬ್ಬನಿಂದ ಅನುಷ್ಠಿಸಲು ಸಾಧ್ಯವಿಲ್ಲವು. ವೇದೋಕ್ತಗಳಾದ ಆ ಧರ್ಮಗಳೊಳಗೆ ಯಾವ ಮತಕ್ಕೆ ಯಾವ ಯಾವ ಧರ್ಮಗಳು ಸಾಧನಗಳಾಗಿರುವುವೋ ಅಂತಹ ಧರ್ಮಗಳನ್ನು ಮಾತ್ರ ಆಯಾ ಮತಸ್ಥನು ತಪ್ಪದೆ ಆಚರಿಸಿ ಆ ಮತದ ಧ್ಯೇಯವನ್ನು ಸಾಧಿಸಿ ವೇದಕರ್ತನಾದ ಪರಮೇಶ್ವರನನ್ನು ತುಷ್ಟಿಪಡಿಸುತ್ತಾನೆ. ಒಂದೊಂದು ಮತದ ಧರ್ಮವು ಒಂದೊಂದು ವಿಧವಾಗಿರುತ್ತದೆ. ಆ ಸಕಲ ಧರ್ಮಗಳನ್ನೂ ವೇದವು ಪ್ರತಿಪಾದಿಸಿದ ಮಾತ್ರದಿಂದ ಆ ಧರ್ಮಗಳೆಲ್ಲವನ್ನೂ ಒಬ್ಬನು ಆಚರಿಸಬೇಕಾಗಿಲ್ಲವು. ಮಾನವವರ್ಗಕ್ಕೆ ಬೇಕಾದ ಧರ್ಮಗಳನ್ನೆಲ್ಲಾ ವೇದಗಳು ಸಾಮಾನ್ಯವಾಗಿ ಬೋಧಿಸಿದ್ದರೂ ಒಬ್ಬೊಬ್ಬ ಆಚಾರ್ಯಭಗವತ್ಪಾದರು ಆ ವೇದಗಳನ್ನೆಲ್ಲಾ ಪರಿಶೋಧಿಸಿ ತಮಗನುಕೂಲಗಳಾದ ಒಂದೊಂದು ಪ್ರಧಾನಧರ್ಮವನ್ನು ಅನುಷ್ಠಿಸಿ ಸಿದ್ಧಿಯನ್ನು ಪಡೆದು ಲೋಕೋದ್ಧಾರಕ್ಕಾಗಿ ತಾವು ಅನುಷ್ಠಿಸಿದ ಯಾವ ಧರ್ಮವನ್ನು ಗ್ರಂಥರೂಪದಲ್ಲಿ ಬರೆದಿಟ್ಟಿರುತ್ತಾರೆಯೋ ಅಂತಹ ವೇದಧರ್ಮಗಳನ್ನು ಆಚರಿಸುವುದರಿಂದ ವೇದೋಕ್ತಧರ್ಮಗಳೆಲ್ಲವನ್ನೂ ಆಚರಿಸಿದಂತೆಯೇ ಆಗುವದು. ಹಾಗಿಲ್ಲದೆ ವೇದದಲ್ಲಿ ಹೇಳಿದ ಎಲ್ಲಾ ಧರ್ಮಗಳನ್ನು ಅನುಷ್ಠಿಸಿ ವೈದಿಕನೆನಿಸಿಕೊಳ್ಳುತ್ತೇನೆಂದು ಬಯಸಿದರೆ ನಿಯತವಾದ ಒಂದು ಉದ್ಯೋಗವನ್ನು ಅವಲಂಬಿಸದೆ ಪ್ರಪಂಚದಲ್ಲಿರುವ ಎಲ್ಲಾ ಉದ್ಯೋಗಗಳನ್ನು ನಾನೊಬ್ಬನೇ ಗುತ್ತಿಗೆ ಹಿಡಿಯುತ್ತೇನೆಂದು ಹೊರಟವನಂತೆ ಹಾಸ್ಯಾಸ್ಪದನಾಗಿ ಒಂದರಲ್ಲೂ ಗತಿಯಿಲ್ಲದೆ ತ್ರಿಶಂಕುವಿನಂತಾಗುವಲ್ಲಿ ಸಂಶಯವಿಲ್ಲವು. "ಯಾವತಾಂ ಸಮನುಷ್ಠಾನಂ ಸಪ್ತಸಾಗರಶೋಷಣಂ" ವೇದದಲ್ಲಿ ಹೇಳಿರುವ ಎಲ್ಲಾ ಧರ್ಮಗಳನ್ನು ಅನುಷ್ಠಿಸುವೆನೆಂದು ಹೇಳಿಕೊಳ್ಳುವನಾವನುಂಟೋ ಅವನು ನಾನೊಬ್ಬನೇ ಏಳು ಸಮುದ್ರಗಳನ್ನು ಬಣಗಿಸಿಬಿಡುತ್ತೇನೆಂದು ಹೇಳುವವನಿಗೆ ಸಮಾನನಾಗುವನೆಂದು ನೀಲಕಂಠಶಿವಾಚಾರ್ಯರು ಸಹ ವೇದದಲ್ಲಿರುವ ಯಾವತ್ತು ಧರ್ಮಗಳನ್ನು ಆಚರಿಸಬೇಕಾಗಿಲ್ಲವೆಂಬ ಅರ್ಥವನ್ನು ಸ್ಪಷ್ಟಪಡಿಸಿರುತ್ತಾರೆ. ಚತುರ್ವಿಧ ಪುರುಷಾರ್ಥಂಗಳಲ್ಲಿ ಕೊನೆಯದಾದ ಮೋಕ್ಷರೂಪವಾದ ಪುರುಷಾರ್ಥವೇ ಶ್ರೇಷ್ಠವೆಂದು ವೇದಾವಲಂಬಿಗಳಾದ ಸಮಸ್ತ ಗ್ರಂಥಗಳೂ ಸಾರುತ್ತಿರುವುವು. ಇಂತಹ ಪರಮಪುರುಷಾರ್ಥವು ಸಿದ್ಧಿಸಬೇಕಾದರೆ ವೇದದ ಉತ್ತರಕಾಂಡದಲ್ಲಿ ಹೇಳಿದ ಲಿಂಗಧಾರಣ, ಲಿಂಗಾರ್ಚನ, ಲಿಂಗಧ್ಯಾನ, ಲಿಂಗಜ್ಞಾನ, ಲಿಂಗ ತಪಸ್ಸು ಮುಂತಾದ ಪತಿಧರ್ಮಗಳು ಬೇಕಾಗುವುವು. ಈ ಧರ್ಮಗಳು ಅಜ್ಞಾನಾವಸ್ಥೆಯಿಂದ ಪಶುವೆನಿಸಿಕೊಂಡಿರುವ ಜೀವರ ಅಜ್ಞತ್ವಾದಿಗಳೆಲ್ಲವನ್ನೂ ಪರಿಹರಿಸಿ "ಮಾನವಶ್ಶಿವಯೋಗೇನ ಶಿವೋಭವತಿ ನಿಶ್ಚಯಂ" ಕೀಡೆಯು ಭ್ರಮರಚಿಂತನದಿಂದ ತನ್ನ ಕೀಟಭಾವವನ್ನು ತೊಲಗಿಸಿಕೊಂಡು ಭ್ರಮರಾಕಾರವನ್ನು ಹೊಂದುವಂತೆ ಶಿವಾರ್ಚನರೂಪವಾದ ಶಿವಯೋಗದಿಂದ ಶಿವನೇ ಆಗುವನು. ಅಂತಹ ಮುಕ್ತಾತ್ಮನು ಭ್ರಮರಾಕಾರವನ್ನು ಹೊಂದಿದ ಕೀಟವು ಪುನಃ ಮೊದಲಿನ ಕೀಟಭಾವಕ್ಕೆ ಹಿಂದಿರುಗದಂತೆ ಮರಳಿ ಜೀವಭಾವವನ್ನು ಎಂದೂ ಹೊಂದುವುದಿಲ್ಲವು. ಇದೇ ಪತಿಧರ್ಮಾಚರಣೆಯ ಫಲವಾಗಿದೆ. ಜ್ಯೋತಿಷ್ಟೋಮಾದಿ (ಪಶು) ಧರ್ಮಗಳನ್ನು ಆಚರಿಸುವುದರಿಂದ ಯದ್ಯಪಿ ತಾತ್ಕಾಲಿಕವಾಗಿ ಪಾಪಗಳು ನಷ್ಟವಾಗಿ ಸ್ವರ್ಗಾದಿಸಿದ್ಧಿಗಳುಂಟಾದರೂ ಜೀವಭಾವವು ಮಾತ್ರ ತೊಲಗದಿರೋಣದಿಂದ ಪುಣ್ಯಬಲವಿರುವವರೆಗೂ ಸುಖಾನುಭವವನ್ನು ಮಾಡುತ್ತ ಪುಣ್ಯಬಲ ತೀರಿದೊಡನೆಯೇ ಮರಳಿ ಸಂಸಾರವೆಂಬ ಸುತ್ತುವಚಕ್ರವನ್ನು ಏರಬೇಕಾಗುವುದು. ಇದೇ ಪಶುಧರ್ಮಾಚರಣೆಯ ಫಲವಾಗಿರುತ್ತದೆ. ಆತ್ಯಂತಿಕನಿವೃತ್ತಿಯನ್ನುಂಟುಮಾಡದಿರೋಣದರಿಂದ ಇಂತಹ ಧರ್ಮಗಳು ಪಶು (ಜೀವ) ಧರ್ಮಗಳೆಂದೂ ಪ್ರವೃತ್ತಧರ್ಮಗಳೆಂದೂ ಹೇಳಿಸಿಕೊಳ್ಳಲ್ಪಡುತ್ತವೆ. ಲಿಂಗಾರ್ಚನಾದಿ ಧರ್ಮಗಳು ಜೀವಭಾವವನ್ನು ಆತ್ಯಂತಿಕವಾಗಿ ತೊಲಗಿಸುವ ಸಾಮರ್ಥ್ಯವುಳ್ಳವುಗಳಾದ್ದರಿಂದ ಪತಿಧರ್ಮಗಳೆನಿಸಿಕೊಳ್ಳುತ್ತವೆ. ವೀರಶೈವಧರ್ಮಾಸ್ತು.....ಎಂಬ ಪ್ರಮಾಣದಿಂದ ವೇದದ ಉತ್ತರಭಾಗದಲ್ಲಿ ಹೇಳಿದ ಮುಕ್ತಿಸಾಧಕವಾದ ಶಿವಲಿಂಗಾರ್ಚನಾದಿ ಪತಿಧರ್ಮಗಳನ್ನಾಚರಿಸಿ ಜೀವಭಾವವನ್ನು ಪರಿಹರಿಸಿಕೊಂಡು ಶಿವಸ್ವರೂಪವನ್ನು ಪಡೆಯುವದೇ ಪತಿಧರ್ಮಾಚರಣೆಯುಳ್ಳ ವೀರಶೈವಮತದ ಪರಮಧ್ಯೇಯವೆಂದು ವೀರಶೈವಮತವನ್ನು ಸ್ಥಾಪಿಸಿದ ಶಿವಪಂಚವ್ಯೂಹಸ್ವರೂಪರಾದ ಶ್ರೀ ರೇಣುಕಾದಿ ಪಂಚಾಚಾರ್ಯರ ಕಟ್ಟಳೆಯಾಗಿರುವುದರಿಂದ ಚರಮಶರೀರಿಯೆನಿಸಿಕೊಂಡ ವೀರಶೈವಮತಸ್ಥನು ಸ್ವರ್ಗಾದ್ಯನಿತ್ಯಫಲಪ್ರದಗಳಾದ ಪಶುಧರ್ಮಗಳನ್ನನುಸರಿಸದೆ "ಆಸುಪ್ತೇರಾಮೃತೇಃ ಕಾಲಂ ನಯೇದ್ವೈ ಶಿವಚಿಂತಯಾ" ಎಂಬ ವಾಕ್ಯಾನುಸಾರವಾಗಿ ಶಿವಲಿಂಗಧಾರಣ, ಶಿವಲಿಂಗಾರ್ಚನ, ಶಿವಲಿಂಗಧ್ಯಾನ, ಶಿವಲಿಂಗಪ್ರಸಾದಗ್ರಹಣ ಮುಂತಾದ ಪತಿಧರ್ಮಗಳನ್ನಾಚರಿಸಿ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಭಾರತಸ್ವಾತಂತ್ರ್ಯಕ್ಕೆ ಅಮೇರಿಕೆಯ ಪ್ರೋತ್ಸಾಹ.

(ಮಾರ್ಚಿ 19ನೆಯ ತಾರೀಖಿನ "ಹಿಂದೂ" ಪತ್ರಿಕೆಯಿಂದ)

ಭರತಖಂಡದಲ್ಲಿ "ಸ್ವಾತಂತ್ರ್ಯದಿನ"ವನ್ನು ಆಚರಿಸಿದ ವಿಷಯವಾಗಿ ಅಮೇರಿಕೆಯ ಸಂಯುಕ್ತಸಂಸ್ಥಾನಕ್ಕೆ ಸಂಪೂರ್ಣ ವಿಷಯಗಳು ತಿಳಿದುಬರಲಿಲ್ಲವಾದರೂ ದೊಡ್ಡದೊಡ್ಡ ಸಭೆಗಳನ್ನು ಸೇರಿಸಿ, ಮೆರವಣಿಗೆಯನ್ನು ಮಾಡಿ, ರಾಷ್ಟ್ರೀಯ ಧ್ವಜವನ್ನು ಹಾರಿಸಿದರೆಂಬ ವರ್ತಮಾನವು ಮಾತ್ರ ಅಲ್ಲಿಯವರಿಗೆ ತಿಳಿಯಿತು. ಆದರೂ ಅಮೇರಿಕೆಯ ಪತ್ರಿಕಾಕರ್ತರು ಭರತಖಂಡದ ವಿಷಯದಲ್ಲಿ ತಮಗಿರುವ ಸ್ವಾಭಾವಿಕವಾದ ಸಹಾನುಭೂತಿಯನ್ನು ಬಹು ಸ್ಪಷ್ಟವಾಗಿ ವ್ಯಕ್ತಗೊಳಿಸಿದ್ದಾರೆ. ಅಲ್ಲಿಯ "ಯೂನಿಟಿ" ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿದೆ. ನಾವು ಇದುವರೆಗೆ ತಿಳಿದಿರುವಮಟ್ಟಿಗೆ, ಒಂದು ದೊಡ್ಡ ಜನಾಂಗದವರು ರಕ್ತಪಾತ ಹಾಗೂ ಪ್ರಾಣಹಾನಿಗೆ ಅವಕಾಶ ಕೊಡದೆ, ಸ್ವಾತಂತ್ರ್ಯವನ್ನು ಪಡೆಯಲೆತ್ನಿಸಿರುವ ವಿಷಯವು ಪ್ರಪಂಚದ ಮಾನವರ ಚರಿತ್ರೆಯಲ್ಲಿ ಮೊದಲನೆಯ ಉದಾಹರಣೆಯಾಗಿರುತ್ತದೆ. ಇದರಿಂದ ಭಾರತೀಯರಿಗೆ ಸಹಿಸಲಸಾಧ್ಯವಾದ ಕಷ್ಟನಷ್ಟಗಳೂ, ಕಡೆಗೆ ಪ್ರಾಣನಾಶವೂ ಸಹ ಸಂಭವಿಸಬಹುದೆಂಬುದನ್ನು ಮಹಾತ್ಮಾ ಗಾಂಧಿಯವರಿಗಿಂತಲೂ ಚೆನ್ನಾಗಿ ಯಾರೂ ತಿಳಿದಿರಲಾರರು. ಆಂಗ್ಲೇಯರ ದಬ್ಬಾಳಿಕೆಯ ಮಾರ್ಗಕ್ಕೆ ಅಡ್ಡಬರಬಹುದಾದ ರಾಜ್ಯಕ್ರಾಂತಿಯನ್ನು ಅವರು ಚೆನ್ನಾಗಿ ಅರಿತಿರುವರು. ಆದರೆ ಮಹಾತ್ಮಾ ಗಾಂಧಿಯವರು ಈಗಿನ ರಾಜ್ಯಭಾರ ಹಾಗೂ ಭರತಖಂಡದಲ್ಲಿ ಆಗುತ್ತಿರುವ ಲೂಟಿಯಿಂದ ಪ್ರಾಪ್ತವಾಗಿರುವ ಕಷ್ಟಪರಂಪರೆಗಳನ್ನು ಕೊನೆಗಾಣಿಸಲು ಎಂಥ ರಾಜ್ಯಕ್ರಾಂತಿಯನ್ನಾಗಲಿ, ಅದಕ್ಕೂ ವಿಶಾರದ ಭಯಂಕರ ಸ್ಥಿತಿಯನ್ನಾಗಲಿ, ಸಂತೋಷದಿಂದ ಎದುರಿಸಲು ಸಿದ್ಧರಾಗಿರುವರೆಂದು ಹೇಳಿರುವರು. ಮಹಾತ್ಮರ ಶಕ್ತಿಯು ಇಂದು ಅತ್ಯುನ್ನತ ಸ್ಥಾನಕ್ಕೆ ಏರಿರುವದು. ಬ್ರಿಟನ್ನಿಗೆ ತಮ್ಮನ್ನು ತಾವೇ ಮಾರಿಕೊಂಡಿರುವ ಕೆಲವು ದೇಶಿಯ ರಾಜರ ಮತ್ತು ಅವರ ಅನುಯಾಯಿಗಳ ಹೊರತು ಇತರರೆಲ್ಲರೂ ಅವರನ್ನೇ ಹಿಂಬಾಲಿಸುವರು. ಈ ಮಹಾ ವೀರರನ್ನು ಮ್ಯಾಕ್‌ಡೊನಾಲ್ಡರವರು ಇನ್ನೆಷ್ಟುಕಾಲ ಉಪೇಕ್ಷಿಸಬಲ್ಲರು? ಸಂಪೂರ್ಣವೂ, ನಿರ್ಬಂಧರಹಿತವೂ ಆದ ಸಹಕಾರದಿಂದ ಮಾತ್ರವೇ ಭರತಖಂಡಕ್ಕೂ ಹಾಗೂ ಸಾಮ್ರಾಜ್ಯಕ್ಕೂ ಪ್ರಾಪ್ತವಾಗಿರುವ ಸರ್ವ ನಾಶವನ್ನೂ ತಪ್ಪಿಸಬೇಕಾಗಿರುವದೆಂಬುದನ್ನು ಅವರು ಗಮನಿಸಲೇ ಬೇಕಲ್ಲವೇ?

* * * *

"ದಿ ವರ್ಲ್ಡ್ ಟುಮಾರೋ" ಎಂಬ ಪತ್ರಿಕೆಯು ಭರತಖಂಡವನ್ನು ಪ್ರಪಂಚದ ಶಾಂತಿಯ ಪರೀಕ್ಷಾಸ್ಥಳವೆಂದು ಭಾವಿಸುವದು. ಅದರ ಸಂಪಾದಕೀಯ ಲೇಖದಲ್ಲಿ ನೌಕಾಪರಿಷತ್ತು ಬಹಳ ಮುಖ್ಯವಾದುದಾಗಿದೆಂದೂ, ಭರತಖಂಡದಲ್ಲಿ ಶಾಂತಿಯನ್ನು ಸ್ಥಾಪಿಸದೆ ಈ ನೌಕಾಪರಿಷತ್ತಿನಿಂದ ಮಾತ್ರವೇ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂದೂ, ಲೇಬರ್ ಸರಕಾರದವರು ಭರತಖಂಡದ ಸಮಸ್ಯೆಯನ್ನು ಹಿಂದುಮುಂದೆ ಎಳೆದಾಡುತ್ತ, ಗೊತ್ತಾದ ಅವಧಿಯಲ್ಲಿ ಸಂತೋಷಪೂರ್ವಕವಾಗಿ ಸಾಮಂತ ಸ್ವರಾಜ್ಯವನ್ನು ಕೊಡುವ ನಿರ್ಧರವನ್ನು ಮಾಡದಿದ್ದರೆ ತಮಗೆ ದೊರೆತಿದ್ದ ಒಳ್ಳೆಯ ಅವಕಾಶವನ್ನು ಕಳೆದುಕೊಂಡಂತಾಗುವದೆಂದೂ, ಸ್ವರಾಜ್ಯವನ್ನು ಸಂಪಾದಿಸುವ ವಿಷಯದಲ್ಲಿ ಭರತಖಂಡವು ಬದ್ಧಕಂಕಣವಾಗಿರುವದೆಂದೂ, ಬರೆಯಲ್ಪಟ್ಟಿರುವದು.

ಅಮೇರಿಕೆಯ ಪ್ರಸಿದ್ಧ ಮತಪ್ರಚಾರಕರಾದ ಮಿ|| ಕರ್ಬಿಪೇಜ್‌ರವರು "ಯೂನಿಟಿ" ಪತ್ರಿಕೆಯಲ್ಲಿ "ರವೋಲ್ಟಿಂಗ್ ಇಂಡಿಯಾ" (ಬಂಡಾಯದಭಾರತ) ವೆಂಬ ಶಿರೋನಾಮದಿಂದ ಒಂದು ಮನೋಹರವಾದ ಲೇಖನವನ್ನು ಬರೆದಿರುವರು. ಮಿ|| ಪೇಜ್‌ರವರು ಭರತಖಂಡಕ್ಕೆ ಬಂದು ಸಾಬರಮತಿ ಆಶ್ರಮದಲ್ಲಿ ಮೂರು ದಿನಗಳವರೆಗೆ ಮಹಾತ್ಮರ ಅತಿಥಿಗಳಾಗಿದ್ದರು. ಅವರು ಮಹಾತ್ಮರನ್ನು ಅದ್ವಿತೀಯ ಮಹಿಮಾಶಾಲಿಗಳೆಂದು ಭಾವಿಸಿರುವರು. ಇವರು ಮಹಾತ್ಮರನ್ನು ಅವಿಶ್ರಾಂತಶ್ರಮಸಹಿಷ್ಣುಗಳೆಂದೂ, ಕಾಲಕಾಲಕ್ಕೆ ನಿಯಮಿತಕಾರ್ಯಗಳನ್ನು ಮಾಡುವದರಲ್ಲಿ ಗಡಿಯಾರದಂತಿರುವರೆಂದೂ, ಅವರ ಬುದ್ಧಿಯು ಅತ್ಯಂತ ಹರಿತವಾದ ಕತ್ತಿಯಂತೆ ಬಹು ಸೂಕ್ಷ್ಮವಾದುದೆಂದೂ ಮನಸ್ಸು ಸರ್ವಸಂಗರಹಿತವಾದುದೆಂದೂ, ಆತ್ಮಾಭಿಮಾನವೆಂಬುದು ಅವರಲ್ಲಿ ಲೇಶವೂ ಇಲ್ಲವೆಂದೂ, ಜನಸಾಮಾನ್ಯಕ್ಕಾಗಿ ತನ್ನ ಪ್ರಾಣವನ್ನೂ, ಸಹ ಒಪ್ಪಿಸುವಂಥ ಪ್ರೇಮಮೂರ್ತಿಯೆಂದೂ, ಪ್ರಪಂಚದಲ್ಲಿ ಇದುವರೆಗೆ ಜನ್ಮವೆತ್ತಿದ ಯಾವ ಮಾನವನೂ ಇವರಂತೆ ಕೋಟ್ಯವಧಿ ಜನಗಳ ಅನುರಾಗವನ್ನು ಸಂಪಾದಿಸಿರಲಿಲ್ಲವೆಂದೂ ಬರೆದಿರುವರು.

ಮಿ|| ಪೇಜರವರು ಅಲಹಾಬಾದಿನಲ್ಲಿ ಪಂಡಿತ ಜವಾಹರಲಾಲ್ ನೆಹರೂರವರಿಂದ ಈ ನೊದಲು ಸತ್ಕರಿಸಲ್ಪಟ್ಟಿರುವರು. ಇವರು ನೆಹರೂರವರ ದುಃಖಪೂರಿತವಾದ ಮುಖಮುದ್ರೆಯೇ ತಮ್ಮ ಜನಾಂಗದವರು ಅನುಭವಿಸುತ್ತಿರುವ ಕಷ್ಟಪರಂಪರೆಗಳ ಸಲುವಾಗಿ ದುಃಖಿಸುತ್ತಿರುವರೆಂಬುದನ್ನು ವ್ಯಕ್ತಪಡಿಸುವದೆಂದೂ, ಅವರ ಅತ್ಯಂತ ಬದ್ಧದ್ವೇಷಿಗಳು ಸಹ ಅವರನ್ನು ಸತ್ಯಾತ್ಮನೆಂದೂ ತನ್ನ ದೇಶೀಯರ ಅಭ್ಯುದಯಕ್ಕಾಗಿ ನಿಜಮನಸ್ಸಿನಿಂದ ಹೋರಾಡುವನೆಂದು ಒಪ್ಪಿಕೊಂಡಿರುವರೆಂದೂ, ಬ್ರಿಟಿಷ್ ಸರಕಾರದವರು ಮಹಾತ್ಮರನ್ನು ಬಿಟ್ಟರೆ ಅವರಿಗಿಂತಲೂ ಹೆಚ್ಚಾಗಿ ಈ ಮನುಷ್ಯನೊಬ್ಬನಿಗೆ ಮಾತ್ರ ಹೆದರುವರೆಂದೂ, ಭರತಖಂಡದ ಮುಂದಿನ ಚರಿತ್ರೆಯಲ್ಲಿ ಪಂಡಿತ ಜವಾಹಿರಲಾಲ್ ನೆಹರೂರವರ ಹೆಸರು ಅಗ್ರಸ್ಥಾನವನ್ನು ಪಡೆಯುವದೆಂದೂ, ಅವರ ನಕ್ಷತ್ರವು ಉನ್ನತಸ್ಥಾನವನ್ನು ಏರುತ್ತಿರುವದೆಂದೂ, ಕ್ಷಿಪ್ರದಲ್ಲಿಯೇ ಎಲ್ಲ ನಕ್ಷತ್ರಗಳಿಗಿಂತಲೂ ಹೆಚ್ಚು ಪ್ರಕಾಶದಿಂದ ಪ್ರಜ್ವಲಿಸಲಾರಂಭಿಸುವದೆಂದೂ ಬರೆದಿರುವರು.

ಮಿ|| ಕರ್ಬಿಪೇಜ್‌ರವರು ಭರತಖಂಡದಲ್ಲೆಲ್ಲ ಸಂಚರಿಸಿ, ದಿನದಿನಕ್ಕೆ ಹೆಚ್ಚುತ್ತಿರುವ ಭಾರತೀಯರ ರಾಜಕೀಯ ಜಾಗ್ರತೆಯನ್ನು ಅರಿತಿರುವರು. ಎಲ್ಲೆಲ್ಲಿಯೂ ಸಂಶಯವೂ ದ್ವೇಷವೂ ಕಂಡುಬರುವದೆಂದು ಹೇಳಿರುವರು. ಅವರು ಭರತಖಂಡದಿಂದ ಬರೆದು ಕಳುಹಿಸಿದ ಲೇಖದಲ್ಲಿ ಈ ಕೆಳಗೆ ಕಂಡ ಮಹತ್ವದ ವಿಷಯಗಳನ್ನು ಕಾಣಿಸಿರುವರು.

ಬ್ರಿಟಿಷರು ನ್ಯಾಯಮಾರ್ಗಾವಲಂಬಿಗಳೆಂಬುದನ್ನು ಈಗ ಯಾರೂ ನಂಬುವದಿಲ್ಲ. ಭರತಖಂಡದಲ್ಲಿ ಅತ್ಯಂತ ಪ್ರೀತಿಯಿಂದ ಕೆಲಸಮಾಡಿದ ಆಂಗ್ಲೇಯರು ಸಹ ಜನರ ಆಕ್ಷೇಪಣೆಗೆ ಒಳಗಾಗುತ್ತಿರುವರು. ಬ್ರಿಟನ್ ದೇಶದ ಕೃತ್ರಿಮ ಮತ್ತು ದುರಾಶೆಯು ಜನಗಳಿಗೆ ಚೆನ್ನಾಗಿ ತಿಳಿದಂತಾಗಿ, ಅವರಿಂದ ಆಗಿರುವ ಉಪಕಾರಗಳನ್ನು ಸಹ ತಿರಸ್ಕರಿಸುವಂತೆ ಮಾಡಿರುವರು. ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುತ್ತಿರುವ ಜನಾಂಗದವರು ತಮ್ಮ ಮೇಲೆ ಅಧಿಕಾರ ನಡೆಸುತ್ತಿರುವವರ ಉಪಕಾರಗಳನ್ನು ಸ್ಮರಿಸುವದು ಚರಿತ್ರೆಯಲ್ಲಿ ಇದುವರೆಗೆ ಯಾರೂ ಓದದ ವಿಷಯವಾಗಿರುವದು. ಭರತಖಂಡಕ್ಕೆ ಸಂಪೂರ್ಣ ಜವಾಬ್ದಾರಿಯ ಸ್ವಾತಂತ್ರ್ಯವು ದೊರೆಯುವವರೆಗೆ ಭರತಖಂಡದಲ್ಲಿ ಬ್ರಿಟಿಷರನ್ನು ಯಾರೂ ನಂಬುವಂತಿಲ್ಲ. ಹಾಗೂ ಅವರಿಗೆ ಕೃತಜ್ಞತೆಯನ್ನೂ ತೋರ್ಪಡಿಸುವಂತಿಲ್ಲ. ಸ್ವಾತಂತ್ರ್ಯ ಸಂಪಾದನೆಗಾಗಿ ಇವರ ಅತ್ಯುತ್ಕಟವಾದ ಮನೋನಿರ್ಧಾರವೂ, ಬ್ರಿಟಿಷ್ ರಾಜ್ಯಭಾರದ ವಿಷಯದಲ್ಲಿ ಇವರ ಅತ್ಯುತ್ಕಟವಾದ ದ್ವೇಷವೂ ಬ್ರಿಟಿಷರ ಅಧಿಕಾರವನ್ನು ದಿನದಿನಕ್ಕೆ ಬಲಹೀನವನ್ನಾಗಿಮಾಡುತ್ತಿರುವದು. ಇನ್ನು ಮುಂದೆ ಬ್ರಿಟಿಷರು ಭರತಖಂಡದಲ್ಲಿ ತಮ್ಮ ಅಧಿಕಾರವನ್ನು ರಕ್ತಪಾತದಿಂದ ಮಾತ್ರವೇ ಮುಂದುವರಿಸಬೇಕಾಗಿರುವದು. ಆದುದರಿಂದ ಭರತಖಂಡವು ಅತ್ಯಲ್ಪಾವಕಾಶದಲ್ಲಿ ಸ್ವರಾಜ್ಯವನ್ನು ಸಂಪಾದಿಸಿಯೇ ಸಂಪಾದಿಸುವದೆಂಬುದು ಕಾಲತ್ರಯದಲ್ಲೂ ಸುಳ್ಳಾಗುವಂತಿಲ್ಲ. ಹಾಗೆ ಸ್ವರಾಜ್ಯವು ದೊರೆಯದಿದ್ದರೆ ಮುಂದಿನ ಘೋರ ಪರಿಣಾಮವನ್ನು ನೆನಸಲು ನನಗೆ ಭೀತಿಯೆನಿಸುವದು.

ಭರತಖಂಡದ ರಾಷ್ಟ್ರೀಯ ಮಹಾಸಭೆಯು ಅಖಿಲ ಭಾರತದ ಪ್ರತಿನಿಧಿಯಲ್ಲವೆಂದೂ, ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಕೊಡುವಂತೆ ಕಾದಾಡಲು ಅದಕ್ಕೆ ಯಾವ ಹಕ್ಕೂ ಇಲ್ಲವೆಂದೂ ಕೆಲವು ಸ್ವಾಭಿಮಾನಿಗಳು ಹೇಳುವರಷ್ಟೇ! ಈ ವಿಷಯದಲ್ಲಿ ಮಿ|| ಪೇಜ್‌ರವರು, ರಾಷ್ಟ್ರೀಯ ಸಭೆಯು ಭರತಖಂಡದ 33 ಕೋಟಿ ಪ್ರಜೆಗಳ ಪ್ರತಿನಿಧಿಯಲ್ಲವೆಂದೂ, ಭಾರತೀಯರ ಹೆಚ್ಚಿನ ಭಾಗವು ರಾಜಕೀಯ ವಿಷಯಗಳಲ್ಲಿ ಪ್ರವೇಶಿಸುವದಿಲ್ಲವೆಂದೂ, ಇಲ್ಲಿಯ ಆಂಗ್ಲೋ-ಸ್ಯಾಕ್ಸನ್ ಜನರು ಹೇಳುವರು. ಬ್ರಿಟಿಷರ ರಾಜ್ಯಭಾರವನ್ನು ಅಲ್ಪ ಸಂಖ್ಯೆಯ ಜನರು ಮಾತ್ರ ಪ್ರತಿಭಟಿಸುವರೆಂದು ಹೇಳುವದು ಶುದ್ಧ ತಪ್ಪಾಗಿರುವದು. ಮಾನವರ ಚರಿತ್ರೆಯಲ್ಲಿ ರಾಜಕೀಯ ಚಳವಳಿಗೆ ಸಂಪೂರ್ಣ ಜಯವು ದೊರೆಯುವ ವರೆಗೆ ಯಾವ ಜನಾಂಗವು ತಾನೇ ಸಂಪೂರ್ಣ ಸಹಕರಿಸುವದು? ಈಗ ನಾವು ಪುಸ್ತಕಗಳಲ್ಲಿ ಓದುವ ಗುಲಾಮರು ಸ್ವಾತಂತ್ರ್ಯವನ್ನು ಸರ್ವರ ಏಕಮತ್ಯದಿಂದಲೇ ಸಂಪಾದಿಸಲಿಲ್ಲ! ಈಗ ಸ್ವಾತಂತ್ರ್ಯ ಸಂಪಾದನೆಗಾಗಿ ಟೊಂಕಕಟ್ಟಿ ನಿಂತಿರುವ ಭಾರತೀಯರ ಸಂಖ್ಯೆಯು ಸ್ವರಾಜ್ಯವನ್ನು ಕೊಡದೆ ಬ್ರಿಟಿಷ್ ಅರಸರಿಗೆ ಗತ್ಯಂತರವಿಲ್ಲದಂತೆ ಮಾಡುವಷ್ಟು ದೊಡ್ಡದಾಗಿರುವದು.

"ನಾನೇ ಭರತಖಂಡದ ವೈಸರಾಯನಾಗಿದ್ದರೆ, ಪ್ರಚಂಡ ರಾಷ್ಟ್ರಸಭೆ, ತರಪೇತು ಹೊಂದಿದ ಕೂಲಿಕಾರರು, ವಿದ್ಯಾರ್ಥಿಗಳು......ಮೇಲಾಗಿ ಮಹಾತ್ಮಾಜಿಯವರು, ಈಚಕುರಂಗಬಲವನ್ನು ನಾನೆಂದೂ ಪ್ರತಿಭಟಿಸುತ್ತಿರಲಿಲ್ಲ. ಈ ಸಮಯದಲ್ಲಿ ಸಂಪೂರ್ಣ ಸಾಮಂತ ಸ್ವರಾಜ್ಯವನ್ನು ಕೊಡುವದು ಬಹಳ ಅಪಾಯಕರವಾದುದು: ಸ್ವರಾಜ್ಯವನ್ನು ಕೊಡದೆ ಸುಮ್ಮನಿರುವದು ಇನ್ನೂ ಹೆಚ್ಚಿನ ಅನರ್ಥಕಾರಿಯಾಗಿರುವದು." ಎಂದು ಬರೆದಿರುವರು.

ಮಹಾತ್ಮಾ ಗಾಂಧಿಯವರ ಸಮಾಚಾರ.

ಮಹಾತ್ಮಾ ಗಾಂಧಿಯವರು ತಮ್ಮ ಇತರ ಸತ್ಯಾಗ್ರಹಿಗಳೊಡನೆ ಸಾಬರಮತಿ ಆಶ್ರಮದಿಂದ ಅಸಲಾಲಿ, ನವಗಾಂ, ನಾಂಸ್ಕಾ, ವಾಸ್ನಾ, ದಾಭನ್, ನದಿಯಾದ, ಬೋರಿಯಾವಿ, ಆನಂದ, ನಾಪದ, ಬೊರ್ಸಾದ, ರಾಸ್, ಜಂಬುಸಾರ ಮೊದಲಾದ ಗ್ರಾಮಗಳ ಮಾರ್ಗವಾಗಿ ಬ್ರೋಚ್‌ಡಿಸ್ಟ್ರಿಕ್ಟಿಗೆ ಸೇರಿದ ಕರೇಲಿಗ್ರಾಮವನ್ನು ಮೊನ್ನೆ 21ನೆಯ ತಾರೀಖು ಶುಕ್ರವಾರ ತಲಪಿದರು. ಮಹಾತ್ಮರು ಜಲಾಲ್‌ಪುರವನ್ನು ತಲಪಿದನಂತರ ಅಲ್ಲಿ ಉಪ್ಪನ್ನು ತಯಾರಿಸಲು ಪ್ರಾರಂಭಿಸುವರು. ಮಧ್ಯಮಾರ್ಗದಲ್ಲಿ ಸಿಕ್ಕುವ ಪ್ರತಿಯೊಂದು ಗ್ರಾಮದಲ್ಲಿಯೂ ಜನರು ಸಾವಿರಾರು ಗಟ್ಟಲೆಯಾಗಿ ಸೇರಿ ಮಹಾತ್ಮರನ್ನೂ ಹಾಗೂ ಇತರ ಸತ್ಯಾಗ್ರಹಿಗಳನ್ನೂ ವಿಶೇಷವಾದ ಆದರಾತಿಥ್ಯಗಳಿಂದ ಉಪಚರಿಸುತ್ತಿರುವರು. ಸಾವಿರಾರುಜನರು ಸ್ವಯಂಸೇವಕರಾಗಿ ಸೇರಿಕೊಳ್ಳುತ್ತಿರುವರು. ಇದುವರೆಗೆ ನೂರಾರು ಜನ ಪಟೇಲರು ಮತ್ತು ಇತರ ಗ್ರಾಮಾಧಿಕಾರಿಗಳು ರಾಜೀನಾಮೆಯನ್ನು ಕೊಟ್ಟಿರುವರು.

ಉಪ್ಪಿನಕಾಯಿದೆಭಂಗ ವಿಷಯವಾಗಿ ಮಹಾತ್ಮಾ ಗಾಂಧಿಯವರು "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಪೋರ್ಚುಗೀಸ್ ಇಂಡಿಯಾದಲ್ಲಿ ಉಪ್ಪಿಗೆ ತೆರಿಗೆಯಿಲ್ಲವಾದುದರಿಂದ ಡಾಮನ್‌ನಗರದಿಂದ ಬೇಕಾದಷ್ಟು ಉಪ್ಪನ್ನು ಬ್ರಿಟಿಷ್ ಇಂಡಿಯಾಕ್ಕೆ ತರಬಹುದೆಂದೂ, ಹಾಗೆ ತಂದ ಉಪ್ಪಿಗೆ ಬ್ರಿಟಿಷ್ ಇಂಡಿಯಾದಲ್ಲಿ ತೆರಿಗೆಯನ್ನು ಕೊಡದೆ ಚಳವಳಿಮಾಡಬಹುದೆಂದೂ, ಕಾಠೇವಾಡ ಸಂಸ್ಥಾನದಲ್ಲಿ ಉಪ್ಪಿನ ಸರ್ವಾಧಿಕಾರವು ಸರ್ಕಾರಕ್ಕೆ ಸೇರಿದ್ದರೂ, ಅಲ್ಲಿಯೂ ಸಹ ತೆರಿಗೆಯಿಲ್ಲದಿರುವದರಿಂದ ಮೇಲ್ಕಂಡಂತೆ ಚಳವಳಿಮಾಡಬಹುದೆಂದೂ, ಅಂತೂ ಅದ್ಭುತಪ್ರಮಾಣದಲ್ಲಿ ಕಾಯಿದೆಭಂಗದ ಚಳವಳಿಯನ್ನು ಪ್ರಾರಂಭಿಸಿದಾಗ, ಉಪ್ಪಿನ ಕಾಯಿದೆಯನ್ನು ಬಹು ಸುಲಭವಾಗಿ ಭಂಗಪಡಿಸಬಹುದೆಂದೂ ಸರಕಾರದವರು ಹೀಗೆ ಕಾಯಿದೆ ಭಂಗಮಾಡಿದವರಿಗೆ ತಮ್ಮ ತತ್ವವನ್ನನುಸರಿಸಿ ತಕ್ಕ ಶಾಸನವನ್ನು ಮಾಡುವರೆಂದೂ, ಬೊಂಬಾಯಿ ಅಧಿಪತ್ಯದಲ್ಲಿ ಕಾನ್ಸ್‌ಟೇಬಲ್ಲರನ್ನು ಬಿಟ್ಟು ಇತರ ಎಲ್ಲ ಪೋಲೀಸ್ ಅಧಿಕಾರಿಗಳಿಗೂ ಉಪ್ಪಿನ ಕಾಯಿದೆಯನ್ನು ರಕ್ಷಿಸುವ ಅಧಿಕಾರವು ನೂತನವಾಗಿ ವಹಿಸಲ್ಪಟ್ಟಿರುವದರಿಂದ, ಈ ಅಧಿಕಾರಿಗಳು ಹೊಸ ಅಧಿಕಾರದ ಬಲದಿಂದ ಕೂಡಿ ಬಹು ಮುತುವರ್ಜಿಯನ್ನು ವಹಿಸಿ ಭರತಖಂಡದ ನಿರಪರಾಧಿಗಳ ರಕ್ತದಲ್ಲಿ ತಮ್ಮ ಕೈಗಳನ್ನು ತೊಳೆದನಂತರ, ಪದ್ಧತಿಯಮೇರೆಗೆ ಉಪ್ಪಿನಕಾಯಿದೆಯ ವಿಷಯದಲ್ಲಿ ವಿಚಾರಣೆಯು ನಡೆದು, ಸದರಿ ಕಾಯಿದೆಯು ರದ್ದುಮಾಡಲ್ಪಡುವದೆಂದೂ, ಸ್ವರಾಜ್ಯವನ್ನು ಸಂಪಾದಿಸುವದೇ ಈಗಿನ ಚಳವಳಿಯ ಮುಖ್ಯ ಉದ್ದೇಶವಾಗಿರುವದರಿಂದ ಉಪ್ಪಿನ ಕಾಯಿದೆಯನ್ನು ತಡೆದುಹಾಕಿದಮಾತ್ರಕ್ಕೆ ಸತ್ಯಾಗ್ರಹವು ನಿಲ್ಲುವಂತಿಲ್ಲವೆಂದೂ ಬರೆದಿರುವರು.

ಮಹಾತ್ಮರ ವಿಜಯಯಾತ್ರೆಯನ್ನು ಚಲನಚಿತ್ರಗಳ ಮೂಲಕ ಪ್ರದರ್ಶಿಸಲು ಶಾರದಾಫಿಲಂ ಕಂಪೆನಿಯವರು ಹಾಗೂ ಶ್ರೀರಣಜಿತ್ ಫಿಲಂ ಕಂಪೆನಿಯವರು "ಮಹಾತ್ಮಾ ಗಾಂಧಿಯವರ ಸ್ವಾತಂತ್ರ್ಯದ ಪ್ರಯಾಣ" "1930ನೆಯ ಮಾರ್ಚಿ 12ನೆಯ ತಾರೀಖಿನ ಮಹಾತ್ಮಾ ಗಾಂಧಿಯವರ ಚರಿತ್ರಾರ್ಹವಾದ ಪ್ರಯಾಣ" "ಅಹಮದಾಬಾದಿನಿಂದ ಮಾರ್ಚಿ 12 ನೆಯ ದಿನದ ಮಹಾತ್ಮಾ ಗಾಂಧಿಯವರ ಪ್ರಯಾಣ" ಎಂಬ ಮೂರು ಚಿತ್ರಪಟಗಳನ್ನು ತಯಾರಿಸಿರುವರು. ಮುಂಬಯಿಯ ಫಿಲಂ ಪರೀಕ್ಷಕ ಬೋರ್ಡಿನವರು (Board of Film Censors Bombay) ಸದರೀ ಚಿತ್ರಪಟಗಳನ್ನು ಪರೀಕ್ಷಿಸಿ, ಭರತಖಂಡದಲ್ಲಿ ಅವುಗಳನ್ನು ಪ್ರದರ್ಶಿಸಬಹುದೆಂದು ತಮ್ಮ ಸಮ್ಮತಿಯನ್ನು ಕೊಟ್ಟಿದ್ದರೂ ಸಹ ಮುಂಬಯಿ, ಸಂಯುಕ್ತಸಂಸ್ಥಾನಗಳು ಹಾಗೂ ಪಂಜಾಬಸರಕಾರದವರು ಮಾತ್ರ ಆ ಚಿತ್ರಪಟಗಳನ್ನು ತಮ್ಮ ಪ್ರಾಂತಗಳಲ್ಲಿ ಎಲ್ಲಿಯೂ ಪ್ರದರ್ಶಿಸಕೂಡದೆಂದು ಆಜ್ಞೆಯನ್ನು ಮಾಡಿರುವರು.

ಮೊನ್ನೆ 20 ನೆಯ ತಾರೀಖಿನಲ್ಲಿ ಅಹಮದಾಬಾದಿನಲ್ಲಿ ಸೇರಿದ್ದ ಅಖಿಲಭಾರತಕಾಂಗ್ರೆಸ್‌ಕಮಿಟಿ ಮೆಂಬರರು ಸಭೆಸೇರಿ ಮಹಾತ್ಮರ ಸತ್ಯಾಗ್ರಹದ ಚಳವಳಿಯಲ್ಲಿ ಕಾಂಗ್ರೆಸ್ಸಿನ ಕಮಿಟಿ ಮೆಂಬರುಗಳ ಪೈಕಿ ಯಾರಾದರೂ ದಸ್ತಗಿರಿ ಮಾಡಲ್ಪಟ್ಟರೆ, ಕಾಂಗ್ರೆಸ್ಸಿನ ಇತರ ಮೆಂಬರುಗಳು ಬೇರೆ ಕಮಿಟಿಮೆಂಬರುಗಳನ್ನು ಚುನಾಯಿಸಬೇಕೆಂದೂ, ಪ್ರೆಸಿಡೆಂಟರವರು ದಸ್ತಗಿರಿಮಾಡಲ್ಪಟ್ಟರೆ ಅವರು ಒಪ್ಪಿದವರನ್ನೇ ಮುಂದಿನ ಪ್ರೆಸಿಡೆಂಟರನ್ನಾಗಿ ಒಪ್ಪಿಕೊಳ್ಳಬೇಕೆಂದೂ, ಖಜಾನಚಿಯವರು ದಸ್ತಗಿರಿಮಾಡಲ್ಪಟ್ಟರೆ ಅವರು ಒಪ್ಪಿದವರನ್ನೇ ಮುಂದಿನ ಖಜಾನಚಿಯನ್ನಾಗಿ ಒಪ್ಪಿಕೊಳ್ಳಬೇಕೆಂದೂ ತೀರ್ಮಾನಿಸಿದರು.

ಹಲ್ಕೂರು.

ಅರಸೀಕೆರೆ ತಾಲೂಕು ಹುಲ್ಕೂರು ಗ್ರಾಮದಲ್ಲಿ ಧರ್ಮಧುರಂಧರ ಮ|| ರಾ|| ಸಾಹುಕಾರ್ ಮರುಳಸಿದ್ಧಪ್ಪನವರೇ ಮೊದಲಾದವರು ಸಮ್ಮಿಲಿತರಾಗಿ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ಶ್ರೀ|| ಷ|| ಬ್ರ|| ಹೊಳೆಹೊನ್ನೂರು ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಬಹು ವೈಭವದಿಂದ ನೆರವೇರಿಸಿದರು. ಆ ದಿವಸ ಇಲ್ಲಿಯ ವೀರಶೈವರೆಲ್ಲರೂ ಜಗದಾಚಾರ್ಯರ ಜಯಂತಿ ದಿನವನ್ನು ದೊಡ್ಡ ಹಬ್ಬದಂತೆ ನೆರವೇರಿಸಿದರು. ಜಗದಾಚಾರ್ಯರ ಮಹತ್ವದ ವಿಷಯದಲ್ಲಿ ಪ್ರವಚನಗಳು ನಡೆದವು. ಗುರುಭಕ್ತಿನಿರತರಾದ ಸಕಲರಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುವ,

ಓರ್ವ ಗುರುಭಕ್ತ.

ಬಿದುರುಕೋಟೆ.

ಹೈದರಾಬಾದ ರಾಜ್ಯಕ್ಕೆ ಸೇರಿದ ಬಿದುರುಕೋಟೆ ಶಹರದಲ್ಲಿ ಇರತಕ್ಕ ಗುರುಭಕ್ತಿಧುರೀಣರು ವೀರಶೈವಮತಸಂಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಫಾಲ್ಗುಣ ಶುದ್ಧ ೧೩ ಗುರುವಾರ ದಿವಸ ನೆರವೇರಿಸಿದರು. ಸಕಲ ಗುರುಭಕ್ತರೂ ಈ ದಿವಸವನ್ನು ಯುಗಾದಿ ಮೊದಲಾದ ದೊಡ್ಡ ಹಬ್ಬಗಳಂತೆ ಆಚರಿಸಿದರು. ಆ ದಿವಸ ಈ ಆಚಾರ್ಯ ಭಗವತ್ಪಾದರು ಮಾಡಿರುವ ಸಮಸ್ತ ಲೀಲೆಗಳ ವಿಷಯದಲ್ಲಿ ವೇ|| ಬಸವರಾಜಶಾಸ್ತ್ರಿಗಳವರು ಸರಸವಾದ ಪ್ರವಚನವನ್ನು ಹೇಳಿದರು. ಆ ಮೇಲೆ ಮಹಾ ಮಂಗಳಾರತಿಯೊಡನೆ ಪೂಜಾಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು.

ಆಚಾರ್ಯಸೇವಕ.

ಹುಮನಾಬಾದ.

ಪ್ರತಿವರ್ಷ ಪದ್ಧತಿಯಂತೆ ಇದೇ ಫಾಲ್ಗುಣ ಶುದ್ಧ ೧೩ ಗುರುವಾರದ ದಿವಸ ಈ ಪಟ್ಟಣದಲ್ಲಿ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಸಾಯಂಕಾಲ ಮ|| ರಾ|| ಸಾಹುಕಾರ್ ಉದಗಿ ರಾಮಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಈ ಸಭೆಗೆ ಮ|| ರಾ|| ಸಾ|| ದೇಶಟ್ಟಿ ದತ್ತಪ್ಪಣ್ಣನವರು ಸೆಕ್ರೆಟರಿಗಳಾಗಿದ್ದರು. ಸದರೀ ಸಭೆಯಲ್ಲಿ ವೇ|| ಭಂಗಿ ಸಿದ್ಧರಾಮಯ್ಯನವರು ರೇಣುಕಾಚಾರ್ಯರು ಭೂಲೋಕದಲ್ಲಿ ಅವತರಿಸಿ ಮಾಡಿದ ಅನಂತಾನಂತ ಅದ್ಭುತಲೀಲೆಗಳ ವಿಷಯಗಳನ್ನು ಕುರಿತು ಭಾಷಣಮಾಡಿದರು. ಆಮೇಲೆ ವೇ|| ಮುಚಳಂಬಿ ಬಸವರಾಜ ಶಾಸ್ತ್ರಿಗಳವರು ಗುರುಮಹಿಮೆಯ ವಿಷಯವನ್ನು ಹೇಳಿ ಸರ್ವರ ಮನಸ್ಸನ್ನು ಸಂತೋಷಗೊಳಿಸಿದರು. ಅಲ್ಲದೆ ಹೋಳಿ ಹುಣ್ಣಿಮೆಯಲ್ಲಿ ನಡೆಯತಕ್ಕ ಅನಾಚಾರ ಪದ್ಧತಿಗಳನ್ನು ಸರ್ವರೂ ಬಿಡಬೇಕೆಂದೂ ಆಚಾರಶೀಲರಾಗಿ ವರ್ತಿಸಬೇಕೆಂದೂ ಚೆನ್ನಾಗಿ ಬೋಧಿಸಿದರು. ಆಮೇಲೆ ಪ್ರಮೋದನಾಮ ಸಂವತ್ಸರ ಚೈತ್ರ ಶುದ್ಧ ಪ್ರತಿಪದೆಯ ದಿವಸ "ಗುರುತತ್ತ್ವಬೋಧವಾಚನಾಲಯ" ವನ್ನು ಸ್ಥಾಪಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟು ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪಂಚಾಚಾರ್ಯ ಭಜನಾಸಂಘದ ಮ್ಯಾನೇಜರ್
ಶಂಕರಲಾಲ್.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಸಮಾಜದ ಉತ್ಕಟೇಚ್ಛೆಯು.

ಭಲಾ! ಅತಿ ಚಿಕ್ಕ ಸಮಾಜವೇ! ರಾಜಕೀಯ ವಿಷಯಗಳಲ್ಲಿ ಬೆರೆಯಲು ನಿನಗೂ ಆಸೆಯು ... ದಿಂದ ಮಾಡಿ

...

ಲತೆ, ರಾಷ್ಟ್ರಸುಧಾರಣೆ, ಸರ್ವಸಮಭಾವ ಇವುಗಳಲ್ಲಿ ಸಂಧಿಸುವ ಪಶ್ಚಾತ್ತಾಪವೆಂಬ ಅಹಿಮಾಲಿಕೆಯನ್ನು ಬಿಸುಟು ನಿಸ್ಸತ್ತ್ವವೆಂಬ ರತ್ನಮಾಲಿಕೆಯನ್ನೇ ಧರಿಸಿ ಕೀರ್ತಿಯುತರಾಗುವರೆಂಬುದರಲ್ಲಿ ಲೇಶವೂ ಸಂಶಯವಿಲ್ಲವು.

ಭಲಾ, ಸಮಾಜವೇ? ನಿನ್ನ ಉತ್ಕಟೇಚ್ಛೆಯು ಯಶಸ್ಸಿಗೆ ಬರಲಿ. ಸರ್ವರೂ ಸಮಭಾವವುಳ್ಳವರಾಗಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾಗಲಿ. ನಿನ್ನ ಬೇಷ್ಟಕುವರಜಗುಂಟಾದ ಅಭ್ಯುದಯಕ್ಕಾಗಿ ಸರ್ವರೂ ಹಿಗ್ಗುವರಲ್ಲದೆ ಅದರಲ್ಲೂ ಮುಖ್ಯ "ನಿನ್ನ ಪ್ರೀತಿಪಾತ್ರನು" ಅತ್ಯಂತ ನಲಿಯುವನೆಂಬುದನು ಅತಿ ತೀವ್ರ ತಿಳುಹಿಸಿ ಸನ್ಮಾಲಕ ಉಂಟಾಗುವ ಆನಂದಸಾಗರದಲ್ಲಿ ಜಳಕಿಸಿ ತೀರ್ಥವೊಂದು.

ಪ್ರೀತಿಪಾತ್ರ ಎಂ. ಜಿ. ಆರಾಧ್ಯ.
ತಾ|| 14-3-1930. ಮಾದನಹಳ್ಳಿ ಮಠ.

ಶಾರದಾಬಿಲ್ಲಿನ ಮೇಲಾಟವೋ? ಸನಾತನಧರ್ಮಗಳ ಗೋಳಾಟವೋ?

(ಲೇಖಕ—ವೇ|| ಪಂಚಾಕ್ಷರಶಾಸ್ತ್ರೀ ಹಿರೇಮಠ ಶಿರೋಳ.)

ನಮ್ಮ ಭರತಖಂಡವು ವೇದಧರ್ಮದ ವಾಸಸ್ಥಾನವಾಗಿರುತ್ತದೆ. ನಮ್ಮ ಭಾರತಧರ್ಮದಲ್ಲಿ ಪರದೇಶೀಯರನ್ನೂ ಸಹ ಬೆರಗುಮಾಡಿಬಿಟ್ಟ ಉದಾಹರಣೆಗಳು ಬೇಕಾದಷ್ಟಿವೆ. ಅವುಗ...

...

ಗಾಗಿ ಸನಾತನ ಧರ್ಮಾವಲಂಬಿಗಳಾದ ಭಾರತೀಯರಲ್ಲಿ ಸದ್ಧರ್ಮವೆಂಬ ಖಡ್ಗದಿಂದ ಆ ರಾಕ್ಷಸನನ್ನು ಹಿಂದಕ್ಕೋಡಿಸುವಂತಹ ಸತ್ಯಾಗ್ರಹವನ್ನು ಹೂಡಿ ಸನಾತನಧರ್ಮವನ್ನು ಉದ್ಧಾರಗೊಳಿಸುವ ಕಲಿಭೀಮರುಂಟೆ? ಹಾಗಿದ್ದರೆ ವಿಳಂಬಮಾಡದೆ ಧರ್ಮಯುದ್ಧಕ್ಕೆ ಏಕೆ ಸಿದ್ಧರಾಗಬಾರದು.

ರಾಜಧಾನಿಯಲ್ಲಿ ವಿವಾಹಮಹೋತ್ಸವ.

(ಒಬ್ಬ ಬಾತ್ಮೀದಾರರಿಂದ)

ಈ ತಿಂಗಳ 17 ನೇ ತಾರೀಖಿನಲ್ಲಿ ಮೈಸೂರು ವೃದ್ಧಪಿತಾಮಹ ಮ|| ರಾ|| ಎಂ. ವೆಂಕಟಕೃಷ್ಣಯ್ಯನವರ ಮೊಮ್ಮಗ ಚಿ|| ರಾ|| ಸೋಮಸುಂದರರಾಯರಿಗೆ ದೊಡ್ಡಬಳ್ಳಾಪುರದ ಇನಾಂದಾರ್ ಮ|| ರಾ|| ಡಿ. ವೆಂಕಟೇಶಯ್ಯನವರ ಪುತ್ರಿ ಸೌ|| ಲಲಿತಮ್ಮನನ್ನು ಕೊಟ್ಟು ವಿವಾಹಮಹೋತ್ಸವವು ನಡೆಯಿತು. ಪ್ರಾತಃಕಾಲದಲ್ಲಿ ವೇದರತ್ನ ಅಯ್ಯಾ ಘನಪಾಠಿಗಳೇ ಮೊದಲಾದ ಕೆಲವು ಜನ ವೈದಿಕರು ದಯಮಾಡಿಸಿ ವಧೂವರರಿಗೆ ಆಶೀರ್ವಾದವನ್ನು ಮಾಡಿದರು. ಮಧ್ಯಾಹ್ನೋತ್ತರ ಧರ್ಮಾಧಿಕಾರಿ ಕಾರ್ಣಿಕ್ ರಾಮಶಾಸ್ತ್ರಿಗಳು ಮಹಾಮಹೋಪಾಧ್ಯಾಯ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಇವರೇ ಮೊದಲಾದ ಪಂಡಿತೋತ್ತಮರು ದಯಮಾಡಿಸಿ ವಧೂವರರಿಗೆ ಆಶೀರ್ವಾದವನ್ನು ಮಾಡಿದರು. ಈ ಭೂಷಣಾಂಗಗಳಲ್ಲಿ ಬಹು ...

...

ಗು ಇರುವುದರಿಂದ ವಿವಾಹಕ್ಕೆ ಬರುವುದು ಅಸಾಧ್ಯವಾಯಿತೆಂಬುದಾಗಿಯೂ ತಿಳಿಸಿ, ವಧೂವರರಿಗೆ ಸಕಲ ಮಂಗಳಗಳಾಗಲೆಂದು ಕೋರಿರುವರೆಂಬುದಾಗಿಯೂ ತಿಳಿಯಬರುತ್ತದೆ.

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :—ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ಈ ರೀತಿಯಾಗಿ, ವೈದಿಕೀಶ್ರುತಿಯ ಮಂತ್ರಭಾಗಕ್ಕೂ ತಾಂತ್ರಿಕೀಶ್ರುತಿಗೂ ಏಕವಾಕ್ಯತೆಯುಂಟು. ಇನ್ನು ವೈದಿಕೀಶ್ರುತಿಯ ಬ್ರಾಹ್ಮಣಭಾಗಕ್ಕೂ ತಾಂತ್ರಿಕೀಶ್ರುತಿಗೂ ಇರುವ ಏಕವಾಕ್ಯತ್ವವನ್ನು ತೋರಿಸುತ್ತೇನೆ.

ಅವಿದಿತ್ವಾ ಋಷಿಂ ಛಂದೋ ದೈವತಂ ಯೋಗಮೇವಚ । ಯೋಽಧ್ಯಾಪಯೇಜ್ಜಪೇದ್ವಾಪಿ ಪಾಪೀಯಾಂಜ್ಜಾಯತೇ ತು ಸಃ ॥

ಯಾವನು ತನ್ನ ಮಂತ್ರದ ಋಷಿ, ಛಂದ, ದೈವತ, ವಿನಿಯೋಗವೆಂಬಿವುಗಳನ್ನು ಅರಿತುಕೊಳ್ಳದೆ (ಆ ಮಂತ್ರವನ್ನು) ಯಾವನು ಕಲಿಸುವನೋ ಅಥವಾ ಜಪಿಸುವನೋ ಅವನು ಪಾಪಿಯೇ ...

...

ಸಂಬಂಧಸ್ತು ಸರೋಜನಾಥ ಶಿವಯೋರಾನಂದಸೌಖ್ಯೋ ಮಹಾ ...

...

ತಾಪಸವೇಷದಿಂದ ನೈಮಿಷಾರಣ್ಯವಾಸಿಗಳಾದ ಭರದ್ವಾಜಾದಿ ಪ್ರಸಿದ್ಧ ಮಹರ್ಷಿಗಳ ಬಳಿಗೆ ಬಂದು, ಅವರಾಶಿಷ್ಟ ಕುಶಲಪ್ರಶ್ನಾದಿ ಶಿಷ್ಟಾಚಾರಗಳು ಮುಗಿದ ತರುವಾಯ ಆ ಮುನಿಗಳನ್ನು ಕುರಿತು—

ಶ್ರೌತಾಚ ಚೋದನಾಧರ್ಮಃ ಕಿಮರ್ಥಂ ನಾನುವರ್ತ್ಯತೇ ॥೪॥

ನೀವು ಚೋದನಾಧರ್ಮ (ಕರ್ಮಪ್ರವರ್ತಕವಾದ ವೇದವಚನದಿಂದ ವಿಧಿಸಲ್ಪಡುವ ಧರ್ಮ) ವನ್ನು ಏಕೆ ಅನುಷ್ಠಿಸುತ್ತಿಲ್ಲ? ಎಂದು ಪ್ರಶ್ನೆಮಾಡಲು ಆಗ ಆ ಮಹರ್ಷಿಗಳು ಹೇಳುತ್ತಾರೆ—

ತ ಊಚುರ್ನನ್ವಯಂ ಧರ್ಮಶ್ಚೋದನಾ ವಿಹಿತೋ ಮುನೇ । ದೇವತಾರಾಧನೋಪಾಯಸ್ತ ಪಸಾಭೀಷ್ಟಸಿದ್ಧಯೇ ॥೫॥

ಎಲೈ ಮುನಿಯೇ? ಶಿವಾನುಗ್ರಹಪ್ರಾಪ್ತಿಗಾಗಿ (ಅಥವಾ ಶಿವಜ್ಞಾನ ಸಿದ್ಧಿಗಾಗಿ) ಈಗ ನಮ್ಮಿಂದ ಅನುಷ್ಠಿಸಲ್ಪಡುವ ಸಾತ್ವಿಕತಪಃಪೂರ್ವಕವಾದ ಶಿವಲಿಂಗಾರ್ಚನಾದಿ ಧರ್ಮಾಚರಣೆಯು ವೇದ (ಶ್ರುತಿ) ಚೋದಿತವಾದುದೇ (ಎಂದರೆ ಶಿವಲಿಂಗಾರ್ಚನಾದಿ ಸದ್ಧರ್ಮಾಚರಣೆಯೂ ತಾಂತ್ರಿಕೀಶ್ರುತಿಸಿದ್ಧವಾಗಿರುವಂತೆ ವೈದಿಕೀ ಶ್ರುತಿಯಲ್ಲಿಯು ವಿಧಿಸಲ್ಪಟ್ಟದ್ದಾಗಿದೆ;) ಅದು ಹೇಗೆಂದರೆ—

ವೇದೇಽಸ್ತಿ ಸಂಹಿತಾರೌದ್ರೀ ನಾಚ್ಯಾ ರುದ್ರಸ್ಯ ದೇವತಾ । ಸಾನ್ನಿಧ್ಯಕರಣೇಽಸ್ಯಾಸ್ತಿ ವಿಹಿತಃ ಕಾಲ್ಪಿಕೋ ವಿಧಿಃ ॥೬॥

ಋಗ್ಯಜುಃ ಸಾಮಾಥರ್ವಣವೆಂಬ ವೇದದಲ್ಲಿ ರುದ್ರದೇವತಾಕವಾದ ಸಂಹಿತೆಯುಂಟು (ಎಂದರೆ ಋಗಾದಿ ನಾಲ್ಕು ವೇದಗಳಲ್ಲಿಯೂ **"ತ್ರ್ಯಂಬಕಂ ಯಜಾಮಹೆ" "ನಮಸ್ತೇ ರುದ್ರಮನ್ಯವ"** ಇತ್ಯಾದಿ ಮಂತ್ರಗರ್ಭಿತಗಳಾದ ರುದ್ರದೇವತಾಕಸಂಹಿತೆಗಳಿರುವುವು;) ಇಷ್ಟೇ ಅಲ್ಲ. ಪರಶಿವನ ಸಾನ್ನಿಧ್ಯಕರಣದಲ್ಲಿ ಕಾಲ್ಪಿಕ (ವೇದಾಂಗವೆನಿಸುವ ಕಲ್ಪಸೂತ್ರ ಎಂದರೆ ಕಾತ್ಯಾಯನಸೂತ್ರ ಪರಿಶಿಷ್ಟದ ರುದ್ರಕಲ್ಪಪ್ರೋಕ್ತವಾದ) ವಿಧಿಯಾದರೂ ಇರುವುದು.

ಈ ರೀತಿಯಾಗಿ, ಭರದ್ವಾಜಮಹರ್ಷಿಯು ಮುಂದುವರಿದು ಇಂತ್ರನಲ್ಲಿ ಅಂಕಿತಮಾಡಿಕೊಂಡ ನುಡಿಗಳಿಂದ, ಆಗಮಸಂಹಿತೆಗಳಲ್ಲಿ ಕಂಡುಬರುವ ವೇದಸಂಹಿತೆಗಳ ಉಲ್ಲೇಖವಾದರೋ, ಆಗಮಗಳು ವೇದಾನುಸರಣಶೀಲವಾದುವೆಂಬ ಭಾವವನ್ನು ತೋರಿಸಬೇಕಾಗಿಲ್ಲ, ಮತ್ತೇನೆಂದರೆ ವೇದಗಳಲ್ಲಿಯೂ ಆಗಮಗಳಲ್ಲಿಯೂ ವಿಧಿಸಲ್ಪಡುವ ಶಿವಲಿಂಗಾರ್ಚನಾದಿ ಶಿವಧರ್ಮಾಚರಣೆಯು ಈಶ್ವರೋಪದಿಷ್ಟವೇ ಆದುದರಿಂದ ವೇದಾಗಮಗಳು ಪರಸ್ಪರ ವಿರೋಧವಿಲ್ಲದ ಸಮಾನವಾದ ಅರ್ಥವನ್ನು ಬೋಧಿಸುವುವೆಂಬ ವಿಚಾರಾಂಶವನ್ನು ತಿಳಿಸುವುದಕ್ಕಾಗಿಯೇ ಇರುವುದೆಂದು ಸ್ಪಷ್ಟವಾಗುವುದು.

(ಸಶೇಷ.)

ಕಡೂರು ತಾಲ್ಲೂಕು ಓಟರುಮಹಾಶಯರುಗಳಲ್ಲಿ ವಂದನೆಗಳು.

ಮಹಾಶಯರೇ! ಇದೇ ಮಾರ್ಚಿ ಮಾಹೆ 8 ರಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ಮೆಂಬರು ಚುನಾವಣೆಯಲ್ಲಿ ತಾವುಗಳೆಲ್ಲರೂ ತಮ್ಮಗಳ ಕಾರ್ಯಗೌರವವನ್ನೂ, ಶ್ರಮೆಯನ್ನೂ ಗಣಿಸದೆ ತಮ್ಮ ತಮ್ಮ ಸೆಂಟರು ಸ್ಥಳಗಳಿಗೆ ದಯಮಾಡಿ, ನನ್ನಲ್ಲಿ ಪ್ರೀತಿವಿಶ್ವಾಸಗಳನ್ನಿಟ್ಟು, ತಮ್ಮ ಅಮೋಘವಾದ ಓಟನ್ನು ನನಗೆ ಕೊಟ್ಟು ಉತ್ತೀರ್ಣನಾಗುವಂತೆ ಮಾಡಿ ಆ ಮೂಲಕ ತಮ್ಮ ಸೇವೆಯನ್ನು ನಾನು ಮಾಡಲು ಅವಕಾಶ ಕಲ್ಪಿಸಿಕೊಟ್ಟದ್ದಕ್ಕಾಗಿ, ತಮ್ಮಗಳೆಲ್ಲರಿಗೂ ನನ್ನ ಅನಂತ ವಂದನೆಗಳನ್ನು ಈ ಮೂಲಕ ಅರ್ಪಿಸುತ್ತೇನೆ.

ದೊ. ಬಿ. ಮಾಲಪ್ಪ,
ಬೀರೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಾಲರೋಗ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ನಾಶಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಅಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[39] ಪೋ. ಬಾ. ೫೧೦, ಮದರಾಸು.

(Registered Trade Mark)

ಶ್ರೀ ವೀರೇಶಾಯನಮಃ.

ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಾಲಯದ ಪಂಚಕಮಿಟಿಯಿಂದ.

ಜಾಹೀರವಿನಂತಿ.

ನಮ್ಮ ದೇವಾಲಯದಲ್ಲಿ ಪುರಾತನ ಪದ್ಧತಿಗನುಸರಿಸಿ ಪ್ರಮೋದೂತ ಸಂ|| ರದ ಚೈತ್ರ ಶು|| ೧ ಚಂದ್ರವಾರದಿಂದ ಶು|| ೮ ಗುರುವಾರದ ವರೆಗೆ ವಿಧ್ಯುಕ್ತಪ್ರಕಾರ ಪೂರ್ವೋಕ್ತ ಕಾರ್ಯಕ್ರಮಗಳು ನಡೆಯುತ್ತ ಶು|| ೫ ಶುಕ್ರವಾರ ತಾ|| 4-4-30 ದಿವಸ ರಥೋತ್ಸವವು ನಡೆದು ತಾ|| 5-4-30 ದಿವಸ ಬೆಳಿಗ್ಗೆ ಅಗ್ನಿಕಾರ್ಯವು ನಡೆದ ತರುವಾಯ ಸಾಯಂಕಾಲ ಅಥವಾ ಬೆಳಿಗ್ಗೆ ಅಂದರೆ ತಾ|| 6-4-30 ರವಿವಾರ ಜನರಲ್ ಕಮಿಟಿಯು ಕೂಡುವದೆಂದು ನಿರ್ಧರಿಸಲ್ಪಟ್ಟಿದೆ. ಸದರ ಕಮಿಟಿಯಲ್ಲಿ ಶ್ರೀ ದೇವಾಲಯದ ಈ ವರ್ಷದ ಆ[illegible] ವನ್ನು ಪರಾಮರ್ಶಿಸಿ ಮುಂದೆ ಇನ್ನೊಂದು ವರ್ಷ[illegible] ವರ ಕಾರ್ಯಕ್ರಮಗಳನ್ನು ಗೊತ್ತುಪ[illegible] ಪ್ರಯುಕ್ತ ಶ್ರೀ ಸ್ವಾಮಿಯ ಭಕ್ತರು [illegible] ಅಭಿವೃದ್ಧಿಯ ಹಿತಚಿಂತಕರು ಅವಶ್ಯವಾಗಿ ಬರ[illegible] ವಿನಂತಿ ಅದೆ. ಇಲ್ಲಿಯ ಹವಾಮಾನ ಚೆನ್ನಾಗಿರುತ್ತದೆ.

ಪ್ರೆಸಿಡೆಂಟ,
S. V. Kubasad.

ಮೈಸೂರು ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ ಲೈಬ್ರರಿಯಲ್ಲಿ ದೊರೆಯುತಕ್ಕ ವೀರಶೈವಮತ ತತ್ವಗಳನ್ನೂ ಹಾಗೂ ತದನು[illegible]ಗಳಾದ ಶೈವತತ್ವಗಳನ್ನೂ ಪ್ರತಿ[illegible]

ಪ್ರಾಚೀನಗ್ರಂಥಗಳ [illegible]ಸ್ತು.

(ಹಿಂದಿನಿಂದ ಮುಂದೆಸಾಗಿದುದು.)

1 ಕರ್ಮಪಾಕ [illegible]ಪಿಕಾ ರೇವಣಾರಾಧ್ಯ ವಿರಚಿತಾ ನಂ. 4167.
2 ಕಾಲಹಸ್ತೀಶವಿಲಾಸಃ ನಂ. 2887.
3 ಜೀವನ್ಮುಕ್ತಿಃ ಸೋಂದ್ರನಾಥಕೃತಾ ನಂ. (b) 819
4 ತತ್ವನಿರ್ಣಯಃ ವೃತ್ತಿಕಾರವಿರಚಿತಾ ಅಘೋರ ಶಿವಾಚಾರ್ಯಕೃತ ವ್ಯಾಖ್ಯಾ ಸಮೇತಃ ನಂ. 269.
5 ತತ್ವಪ್ರಕಾಶಃ ಭೋಜದೇವಕೃತಃ ಅಘೋರ ಶಿವಾಚಾರ್ಯ ಕೃತ ವ್ಯಾಖ್ಯಾಸಮೇತಃ ನಂ. 269.
6 ತತ್ವಸಂಗ್ರಹಃ ಅಘೋರ ಶಿವಾಚಾರ್ಯಕೃತ ವ್ಯಾಖ್ಯಾಸಮೇತಃ ನಂ. 259.
7 ತತ್ವೋಪದೇಶಃ (b) 767.
8 ತಾತ್ಪರ್ಯಸಂಗ್ರಹಃ ಶಿವಲಿಂಗಭೂಪತಿಕೃತ ವ್ಯಾಖ್ಯಾಸಮೇತಃ ನಂ. 257, 4089
9 ತ್ರಿಮೂರ್ತಿನಿದಾನಾವಧಾರಣಸುಜಿದ್ರೂಪ ಭಾರತೀಕೃತಮ್ ನಂ. 186.
10 ನಾಗಾನಂದಸೂತ್ರವೃತ್ತಿಃ ನಂ. (b) 370.
11 ನ್ಯಾಯಶತಕಮ್ ರಾಮೇಶ್ವರಮುಖಿಕೃತಮ್ ನಂ. (b) 772.
12 ಪರಮೋಕ್ಷನಿರಾಸಕಾರಿಕಾವಿವೃತ್ತಿಃ ಭಟ್ಟ ರಾಮಕಂಠಕೃತಾ ನಂ. 269.
13 ಪ್ರಯೋಗಸಾರಃ (b) 776.
14 ಪ್ರಾರಬ್ಧದೀಪಿಕಾ ರೇವಣಾರಾಧ್ಯಕೃತಾ ನಂ. 4167.
15 ಭೋಗಕಾರಿಕಾ ವೃತ್ತಿಕಾರವಿರಚಿತಾ ನಂ. 269
16 ಭೋಗಕಾರಿಕಾ ಅಘೋರ ಶಿವಾಚಾರ್ಯ ಕೃತಾ ನಂ. 269.
17 ಮುಕ್ತಿಸೋಪಾನಂ ಸೋಂದ್ರನಾಥೀಯಮ್ ನಂ. (b)817.
18 ಮೋಕ್ಷಕಾರಿಕಾ ಭಟ್ಟರಾಮಕಂಠ ವಿರಚಿತಾ ನಂ. 269.
19 ರತ್ನತ್ರಯೋದ್ಯೋತಃ ಅಘೋರ ಶಿವಾಚಾರ್ಯ ಕೃತಃ ನಂ. 269.
20 ತಾರಕಸೂತ್ರಸಂಗ್ರಹಃ ನಂ. (b) 776.
21 ವೇದಸಾರ [illegible]ಸಹಸ್ರ ನಾಮವ್ಯಾಖ್ಯಾ ಶಿವೇಂದ್ರವಿರಚಿತಾ ನಂ. (a) 454.
22 ವೈದಿಕಾಚಾರನಿರ್ಣಯಃ ರಾಮೇಂದ್ರಯೋಗಿ ವಿರಚಿತಃ ನಂ. 2849 c. 17.

(ಸಶೇಷ.)

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ **1** ರ ಬೆಲೆ **2** ಆಣೆ.

5 ದನ್ನು ಒಟ್ಟಿಗೆ ಕೊಂಡರೆ **1** ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[11] ದೊರೆಯುವ ಸ್ಥಳ—**ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

“ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು”—ಎಂಬುದನ್ನು ನೆನಪಿನಲ್ಲಿಡಿರಿ.

ಅಂಗ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ, ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂಥಹ ಜ್ವರಗಳಾಗಲೀ, **‘ಕೊಡಗಿನ ಗುಡುಗುಡು!’** (ಛಳಿ). **‘ಸುಡುಸುಡು!’** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [33]

ಕ್ರಯ 8 ಔನ್ಸಿಗೆ ರೂ. 1—8—0; $\frac{1}{2}$ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—3—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಕಾಲಿಮುಕಂದ, ಮಧುಕಂದ, ಜವಾಕಂಥ, ಕಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಜಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶತಬೀಜ, ನಾಗಬೀಜ, ಬಾಳಬೀಜ, ಭೋಕರೀ ಬೀಜ, ಪಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಪಮಿಪತ್ರಿ, ಪಿಸಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಖೋರಿ, ಮುಂಗಲೀ ಬೇದಾಣೆ, ಮರ್ದಾಣೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಿ, ಗೋಕುರು, ಅಡವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಪಾಮುಸ್ತಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ. ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. ೬ ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಕಬಾರದಿರೋಣ, ದಬ್ಬಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [37]

ಪತ್ತೆ :—ನೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ ನೇ ಮಾರ್ಚಿ ೧೯೩೦ [ಸಂಚಿಕೆ ೪೭.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[40] ಪೋ. ಬಾ. ೫೧೦. ಮದರಾಸು.

ನಮಃ ಪಂಚಜಗದ್ಗುರುಭ್ಯಃ.

ಭಾರತೀಯಬಿಲ್ಲಿನ ಪುರಸ್ಕಾರ.

ವೀರಶೈವಮಹನೀಯರೇ ? ನೀವು ಈಗೀಗ ನಿಮ್ಮ ವೀರವ್ರತ್ತಿಯನ್ನು ತಿಳಿದು ಅದರಂತೆ ನಡೆಯುವುದರಲ್ಲಿ ಆಸಕ್ತರಾಗಿರುತ್ತೀರಿ. ಈವರೆಗೂ ಅಜ್ಞಾನದಿಂದ ಮಾಡಬಾರದ ಕಾರ್ಯಗಳನ್ನು ಮಾಡಿ, ಕೇಳಬಾರದ ವಾಕ್ಯಗಳನ್ನು ಕೇಳಿ, ನುಡಿಯಬಾರದ ನುಡಿಗಳನ್ನು ನುಡಿದು ದ್ವಿಪಾದ ಪಶುಗಳಂತೆ ಆಚರಿಸುತ್ತಿದ್ದೆವೆಂದರೂ ಒಪ್ಪಬಹುದಾಗಿದೆ. ನಾವು ನಡೆಯುವ ವರ್ತನಗಳೆಲ್ಲವೂ ಮಧ್ಯದಲ್ಲಿ ನಮ್ಮನ್ನು ಬೆನ್ನಟ್ಟಿರುವವೇ ಹೊರತು ಪೂರ್ವದಿಂದ ಬಂದವುಗಳಲ್ಲವು. ನಾವು ನಮ್ಮನ್ನುದ್ಧರಿಸುವ ಗುರುಗಳೂ ಮಧ್ಯದಲ್ಲಿ ಬಂದ ಅಶಾಸ್ತ್ರೀಯ ವರ್ತನಗಳನ್ನು ಆಶ್ರಯಿಸಿದ್ದರಿಂದ ಇಷ್ಟು ಅವನತಸ್ಥಿತಿಯು ಪ್ರಾಪ್ತವಾಗಿರುವುದು. ಅಂತಹ ಅಶಾಸ್ತ್ರೀಯ ನಡತೆಗಳ ದೂರೀಕರಣಶೀಲರಾದ ಗುರುವರ್ಯ ಮಹನೀಯರು ಅಲ್ಲಲ್ಲಿ ಕಂಗೊಳಿಸುತ್ತಿರುವರು. ಇವರಲ್ಲಿ ಮೊದಲನೆಯವರೆಂದರೆ, ಪಾಲೀಕೊಪ್ಪದ ಶ್ರೀಗಳೇ ಎಂದು ಹೇಳಬಹುದು. ನಮ್ಮ ಅಜ್ಞಾನಾಂಧಕಾರಕ್ಕೆ ಸೂರ್ಯಪ್ರಾಯರಾದ ಇವರು ಊರಹೊರಗೆ ಒಂದು “ **ರೇಣುಕಬಾಗ** ”ಎಂಬ ಪುಣ್ಯಾಶ್ರಮವನ್ನು ಸ್ಥಾಪಿಸಿ ಅಲ್ಲಿಯೇ ನಿತ್ಯವಾಸಿಗಳಾಗಿದ್ದು ಸಮಾಜದಲ್ಲಿ ಬೇರೂರಿನಿಂತಿರುವ ದುಷ್ಟನಡತೆಗಳನ್ನು ದೂರೀಕರಿಸುವದಕ್ಕೋಸ್ಕರ ತಾ|| 28-2-30 ರಲ್ಲಿ ಸಭೆಗೂಡಿಸಿ ಆ ಸಭೆಗೆ “ಶ್ರೀಮದ್ವೀರಶೈವ ಧರ್ಮಸುಧಾರಣೀ ಸಭಾ” ಎಂಬ ಹೆಸರನ್ನಿಟ್ಟು ಹೋಳೀಹುಣ್ಣಿವೆಯಲ್ಲಿ ನಡೆಯುವ ದುಷ್ಟನಡತೆಗಳನ್ನು ದೂರೀಕರಿಸಿ ಪರಶಿವನಲ್ಲಿರುವ ನೈಜಭಕ್ತಿಯನ್ನುಂಟುಮಾಡುವದೆಂದು ತಿಳಿದು “ಭಾರತೀಯ ಬಿಲ್ಲು” ಎಂಬ ನವಿನಾಚೀನ ನಾಮವನ್ನಿಟ್ಟು ಆ ದಿವಸ ಪಾಸಾದ ಠರಾವುಗಳನ್ನು ಹಸ್ತಪತ್ರಿಕೆಗಳಿಂದಲೂ, ವೃತ್ತಪತ್ರಿಕೆಗಳಿಂದಲೂ ಪ್ರಸಿದ್ಧಪಡಿಸಿದ್ದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಈ ಕಾರ್ಯದಲ್ಲಿ ತೊಡಗಿರುವುದರಿಂದ ಶ್ರೀಗಳೇ ಗುರುವರ್ಗದವರಲ್ಲಿ ಮೊದಲನೆಯವರೆಂದು ಹೇಳಬೇಕಾಗಿದೆ. ಸ್ವಾಮಿಗಳ ಆಜ್ಞೆಯ ಮೇರೆಗೆ ಇಲ್ಲಿಯ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರು ತಾ|| 14-3-30 ಕ್ಕೆ ಮಧ್ಯಾಹ್ನ 2 ಘಂಟೆಗೆ ಸಭೆಗೂಡಿಸಿ ಪುಣ್ಯಾಶ್ರಮ ರೇಣುಕಬಾಗ ಪಾಲೀಕೊಪ್ಪದಲ್ಲಿ ಪಾಸಾದ ಠರಾವುಗಳನ್ನೆಲ್ಲ ಓದಿ ಪಂಚಾಕ್ಷರ ಮಂತ್ರವನ್ನುಚ್ಚರಿಸುವ ಮುಖದಿಂದ ಹೊಲಸು ಬೈಯ್ಗಳನ್ನೂ, ಬೊಬ್ಬೆಯನ್ನೂ, ಭಸ್ಮರುದ್ರಾಕ್ಷಾದಿಗಳಿಂದಲಂಕೃತವಾಗುವ ದೇಹದ ಮೇಲೆ ಹೊಲಸಿನ ರಾಡಿಯನ್ನೂ, ಇನ್ನೂ ಅನೇಕ ಹೇಳಬಾರದಂತಹ ವೇಷಗಳನ್ನೂ ಧರಿಸಿಕೊಂಡು ಗರ್ದಭವಾಹಿಗಳಾಗಿ ಮೆರೆಯುವದು ಎಂಥ ಮೂರ್ಖತನವು ? ಇತ್ಯಾದಿ ವಿಷಯಗಳನ್ನು ಮನೋಹರವಾಗಿ ಬೋಧಿಸಿದರು. ಅದಕ್ಕೆ ಸರ್ವರೂ ಒಪ್ಪಿಗೆಯನ್ನಿತ್ತು ಈ ದುಷ್ಟಕೃತ್ಯಗಳನ್ನು ಬಿಟ್ಟು ಲಿಂಗಾಭಿಷೇಕ ಭಜನಾದಿಗಳಲ್ಲಿಯೇ ಕಾಲಹರಣಮಾಡಿದುದನ್ನು ಆನಂದದಿಂದ ಹೇಳಬೇಕಾಗಿದೆ. ಇದರಂತೆ ಸರ್ವಪಟ್ಟಾಧಿಕಾರಿಗಳೂ ಬೋಧಿಸಿದರಾದರೆ ವೀರಶೈವಜನಾಂಗವು ಶೀಘ್ರದಲ್ಲಿಯೇ ಸುಧಾರಣಾಸೋಪಾನವನ್ನೇರುವರೆಂದು ಧಾರಾಳವಾಗಿ ಹೇಳಬಹುದಾಗಿದೆ.

ಮಲ್ಲಯ್ಯಾ ಬೃಹನ್ಮಠ ಕಿಂಕರ,
ಹೋಟಗಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ ಹೋಟಗಿ.

ಪ್ರತಿವರ್ಷ ಪದ್ಧತಿಯಂತೆ ಫಾಲ್ಗುಣ ಶುದ್ಧ ತ್ರಯೋದಶಿ ಗುರುವಾರದ ದಿವಸ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಮ|| ರಾ|| ಪಾಟೀಲ್ ಬಾಪೂರಾವರವರ ನೇತೃತ್ವದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಮೆರವಣಿಗೆಯು ಅನೇಕ ವಾದ್ಯವೈಭವದೊಡನೆ ಪುರದಲ್ಲಿ ಹೊರಟು ಸಾಯಂಕಾಲ 5 ಘಂಟೆಗೆ ಬೃಹನ್ಮಠವನ್ನು ಬಂದು ಸೇರಿತು. ಆ ಮೇಲೆ ಮ|| ರಾ|| ಸಿದ್ಧರಾಮಪ್ಪಾ ಕರಪೆ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಅಲ್ಲಿಯ ಶ್ರೀ ಪಟ್ಟಾಧ್ಯಕ್ಷರು ಸಭೆಯ ಉದ್ದೇಶವನ್ನು ಹೇಳಿ ರೇಣುಕರ ಅದ್ಭುತಲೀಲಾ ವಿಷಯವನ್ನು ಸರ್ವರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಬೋಧಿಸಿದರು. ಅನಂತರ ರಾವ್‌ಸಾಹೇಬ್ ಇನಸ್ಪೆಕ್ಟರರವರು ಗ್ರಾಮದ ಪರಿಸ್ಥಿತಿಯ ವಿಷಯದಲ್ಲಿ ಒಳ್ಳೇ ಕಳಕಳಿಯಿಂದ ಭಾಷಣಮಾಡಿದರು. ಆ ಮೇಲೆ ಮರಾಠಿ ಸ್ಕೂಲ್ ಹೆಡ್ಮಾಸ್ತರ್ ಮಾರುತಿ ಹಾಗೂ ಸಿಂಗಡಗಾಂವ್ ಕುಲಕರ್ಣಿ ಲೋಕಲ್‌ಬೋರ್ಡ್ ಮೆಂಬರು ಅನ್ನಪ್ಪಾ ಪಾಟೀಲ ಇವರು ಗ್ರಾಮದ ವಿಷಯದಲ್ಲಿಯೂ ಹಾಗೂ ಜಯಂತಿಯ ವಿಷಯದಲ್ಲಿಯೂ ಸರಸವಾಗಿ ಭಾಷಣ ಮಾಡಿದರು. ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಸಮಯದಲ್ಲಿ ಮ|| ರಾ|| ಬಾಪೂರಾವ್ ಪಾಟೀಲರವರು ಪ್ರಭಾಪೋಷಣಕ್ಕೋಸ್ಕರ 1 ರೂ. ಸಮರ್ಪಿಸಿದರು.

ಮಲ್ಲಯ್ಯ.

ಸ್ವೀಕಾರ.

ಬೆಳಗಾಂವ ಡಿ|| ಸತ್ತೀಗೇರಿಗ್ರಾಮದ ವೇ|| ಬಸಣ್ಣಯ್ಯಾ ಸುಬ್ಬಾಪುರಮಠ ಇವರ ವಿವಾಹಮಹೋತ್ಸವ ಸಮಯದಲ್ಲಿ ಸದರಿ ಗ್ರಾಮದ ಶ್ರೀ|| ಷ|| ಬ್ರ|| ಹಿರೇಮಠದ ಪಟ್ಟದಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂ. ಗಳು ಶಿವನಗೌಡ ಪಾಟೀಲ, ಮಾಸ್ತರ ಯರಗಟ್ಟಿ ಇವರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ಡಿ|| ಹೋಟಗಿಗ್ರಾಮದಲ್ಲಿರುವ ಮ|| ರಾ|| ಚಂದ್ರಯ್ಯಾ ಮಠಪತ್ತಿ ಇವರ ಪುತ್ರಿ ಸೌ|| ಭಾಗಾಬಾಯಿಯನ್ನು ಮ|| ರಾ|| ಚಿಂಗಿ ವೀರಭದ್ರಯ್ಯನವರ ಪುತ್ರ ಚಿ|| ನಾಗಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಹಾಗೂ ಸದರಿ ಹೋಟಗಿಗ್ರಾಮದ ಮಡಿವಾಳರ ಭೀಮಣ್ಣನ ತಂಗಿ ಕಾಶೀಬಾಯಿಯ ಪುತ್ರಿ ಸೌ|| ಮುಕ್ತಾಬಾಯಿಯನ್ನು ಸೊಲ್ಲಾಪುರದ ಕಲ್ಲಪ್ಪನ ಪುತ್ರ ಚಿ|| ಬಾಬೂರಾವನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಸದರಿ ಗ್ರಾಮದ ಹಿರೇಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಹೋಟಗಿಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಸಮಯದಲ್ಲಿ ಮ|| ರಾ|| ಬಾಪೂರಾವ ಪಾಟೀಲ ಇವರು ಪ್ರಭಾಪೋಷಣಕ್ಕೋಸ್ಕರ **1** ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಶಾರದಾಬಾಲ್ಯವಿವಾಹ ನಿರೋಧಕ ಶಾಸನವನ್ನು ಭರತಖಂಡದ ಧರ್ಮಪರಾಯಣರು ಎಲ್ಲೆಲ್ಲೂ ಬಹಿಷ್ಕರಿಸುತ್ತಿರುವದರಿಂದ, ಇಂಡಿಯಾ ಗೌರ್ನಮೆಂಟಿನವರು ಸದರಿ ಬಿಲ್ಲಿನಲ್ಲಿ ವಿವಾಹದ ವಯಸ್ಸನ್ನು 14 ರಿಂದ 12 ಕ್ಕೆ ಇಳಿಸಬೇಕೆಂಬ ಆಲೋಚನೆಯಿಂದ ಶಾಸನ ಸಭೆಯ ಮುಖ್ಯ ಮುಖ್ಯ ಮೆಂಬರುಗಳೊಡನೆ ಆಲೋಚಿಸುತ್ತಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಆಗಮ ಪರಿಜ್ಞಾನ

ಅಥವಾ

ಪ್ರಭಾ ತಿಲಕ.

ಲೇಖಕರು :— ಶ್ರೀ ಶಂಭುಲಿಂಗಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ವಿಜಾಪುರ.

(ಹಿಂದಿನಿಂದ ಮುಂದೆಸಾಗಿದುದು.)

ವೇದಗಳಲ್ಲಿ ಪುರಸ್ಕೃತಗಳಾದ ಜ್ಯೋತಿಷ್ಟೋಮಾದಿ ಕರ್ಮಗಳ ವಿಷಯವಾಗಿ ಆಗಮಗಳಲ್ಲಿ ಆದರ ಭಾವವಿದ್ದುದು ಕಂಡು ಬರುವುದಿಲ್ಲವಾದುದರಿಂದ ವೇದಾಗಮಗಳು ಅನ್ಯೋನ್ಯಾವಿರುದ್ಧಾರ್ಥಪ್ರತಿಪಾದಕಗಳಲ್ಲವೆಂದು ಶಂಕಿಸಲಾಗದು; ಏಕೆಂದರೆ ಪೂರ್ವಕಾಂಡ ಉತ್ತರಕಾಂಡವೆಂದು ಎರಡು ಭಾಗಗಳುಳ್ಳ ಒಂದೇ ವೇದದಲ್ಲಿ "**ಜ್ಯೋತಿಷ್ಟೋಮೇನ ಯಜೇತ ಸ್ವರ್ಗಕಾಮಃ**" ಸ್ವರ್ಗದ ಬಯಕೆಯುಳ್ಳವನು ಜ್ಯೋತಿಷ್ಟೋಮ ಯಾಗವನ್ನು ಮಾಡತಕ್ಕದ್ದು; "**ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ ನಾನ್ಯಚ್ಛ್ರೇಯೋ ವೇದಯನ್ತೇ ಪ್ರಮೂಢಾಃ**" ಯಾಗಾದಿ ಇಷ್ಟಕರ್ಮಗಳನ್ನೂ ವಾಪೀಕೂಪಾದಿ ನಿರ್ಮಾಣರೂಪವಾದ ಪೂರ್ತಕರ್ಮಗಳನ್ನೂ ಮಿಗಿಲಾದ ಶ್ರೇಯಸ್ಸಿಗೆ ಸಾಧನಗಳೆಂದು ನಂಬುವವರಾದ ಎಗ್ಗರು ಇಲ್ಲಿ ಮಾಡಿದ ಪುಣ್ಯವನ್ನೆಲ್ಲ ಸ್ವರ್ಗದಲ್ಲಿದ್ದು ತಿಂದು ಹಾಳು ಮಾಡಿಕೊಂಡು ಕೊನೆಗೆ ಬರಿಗೈಬಂಟರಾಗಿ ಹೀನತರವಾದ ಲೋಕ (ಭೂಲೋಕ) ವನ್ನು ಮರಳಿ ಬಂದು ಸೇರುವರು; ಎಂಬೀ ಮುಂತಾದ ಪರಸ್ಪರ ವಿರುದ್ಧಾರ್ಥಪ್ರತಿಪಾದಕ (ಎಂದರೆ ಒಂದೆಡೆಯಲ್ಲಿ ಜ್ಯೋತಿಷ್ಟೋಮಯಾಗವನ್ನು ಮಾಡಿ ಸ್ವರ್ಗವನ್ನು ಪಡೆಯತಕ್ಕದ್ದೆಂದು ವಿಧಿಸುವ ವೇದವೇ ಮತ್ತೊಂದೆಡೆಯಲ್ಲಿ ಸ್ವರ್ಗದಲ್ಲಿಯ ಅಲ್ಪಸುಖದ ಆಶೆಯಿಂದ ಜ್ಯೋತಿಷ್ಟೋಮಾದಿಕರ್ಮಗಳನ್ನು ಅನುಷ್ಠಿಸುವವರು ನಿಜವಾದ ಶ್ರೇಯೋರೂಪಮೋಕ್ಷಕ್ಕೆ ಎರವಾಗತಕ್ಕ ಎಗ್ಗರೇ ಸರಿ ಎಂದು ನಿರೂಪಿಸುವ) ವಾಕ್ಯಗಳಿರುವುವಲ್ಲವೇ ? ಆದರಿಂದ ವೇದದಲ್ಲಿ ಪ್ರಮಾಣದೋಷವನ್ನಾರೋಪಿಸಬಹುದೇ ? ಶ್ರೀ ಕೃಷ್ಣನು ಪಾರ್ಥನನ್ನು ಕುರಿತು

"**ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ** ||" ಎಲೈ ಅರ್ಜುನನೇ ? ವೇದಗಳು ತ್ರೈಗುಣ್ಯವಾದ (ಪ್ರಾಕೃತ) ವಿಷಯಗಳಿಂದ ತುಂಬಿಕೊಂಡಿವೆ; ಅದ್ದರಿಂದ, ನೀನು ನಿಸ್ತ್ರೈಗುಣ್ಯನಾಗು (ಅಪ್ರಾಕೃತಾತ್ಮನಾಗು) ಎಂದು ವೇದಾತೀತವಾದ ಧ್ಯೇಯವನ್ನು ಬೋಧಿಸುವಲ್ಲಿ, ಭಗವಂತನು ಅರ್ಜುನನಿಗೆ ವೇದಾತೀತವೆಂದರೆ ವೇದಬಾಹ್ಯ (ಶ್ರುತಿವಿರುದ್ಧ) ವಾದ ಅರ್ಥವನ್ನೇ ಹೇಳಿದನೆಂದು ಕಲ್ಪಿಸಬಹುದೇ ? ಹಾಗೆಯೇ ಆಗಮಗಳಾದರೂ ಯಾಗಾದಿಕ್ರಿಯೆಗಳಲ್ಲಿ ಪ್ರಾಕೃತಾತ್ಮರೇ ಅಧಿಕೃತರಾದವರೆಂದೂ, ಶಿವಶಕ್ತಿಪಾತಪವಿತ್ರಿತಾಂತಃಕರಣರಿಗೆ ಆ ಕರ್ಮಗಳು ರುಚಿಸವೆಂದೂ, ಅಧಿಕಾರತಾರತಮ್ಯಾನುಗುಣವಾದ ವಸ್ತುಸ್ಥಿತಿಯನ್ನೇ ವಿಧಿಸುತ್ತವೆ. ಈ ವಿಧಾನವು ವೈದಿಕೀಶ್ರುತಿಯನ್ನು ವಿರೋಧಿಸತಕ್ಕದ್ದಲ್ಲವಾದ್ದರಿಂದ, ವೇದಾಗಮಗಳು ಆವೆಡೆಯಲ್ಲಿಯೂ ಅನ್ಯೋನ್ಯ ವಿರುದ್ಧಾರ್ಥ ಪ್ರತಿಪಾದಕಗಳಲ್ಲ.

ಇಲ್ಲಿ ಒಂದು ಕಿವಿಮಾತನ್ನು ಹೇಳದಿರಲಾರೆವು; ಅದೇನೆಂದರೆ; ಋಗ್ವೇದದಲ್ಲಿ ಕೆಲ ಋಷಿಗಳು ಅಂಗಿರಸಗಣ, ಭೃಗುಗಣ, ಸಪ್ತರ್ಷಿಗಣ, ದಿವ್ಯಗಣ ಎಂಬುದಾಗಿ ಗಣರೂಪತ್ವದಿಂದ ಶ್ರವಣ ಮಾಡಲ್ಪಡುತ್ತಾರೆ; '**ಗಣ**' ಎಂದರೆ ಸಮೂಹ ಅಥವಾ ವರ್ಗವೆಂದರ್ಥವು; ದಿವ್ಯಗಣವೆಂದರೆ ಪ್ರಥಮಜ (ಪ್ರಮಥ) ವರ್ಗವು. ನಿಯತವಾದ ಸಂಖ್ಯೆಯಿಂದ ನಿರ್ದೇಶಿಸಲ್ಪಡುವ ಸಪ್ತರ್ಷಿಗಣದಂತೆ, ದಿವ್ಯಗಣವಾದರೂ ನಿಯತಸಂಖ್ಯಾಕವಾಗಿರುವುದು. ಸಪ್ತರ್ಷಿಗಣವು ವೇದದ ಬ್ರಾಹ್ಮಣ ಭಾಗಗಳಲ್ಲಿ ಸಪ್ತರ್ಷಿಮಂಡಲಾಂತರ್ಗತಗಳಾದ ಸಪ್ತತಾರಕಗಳೆಂದು ಹೇಳಲ್ಪಡುವಂತೆ, ದಿವ್ಯಗಣವು ವೇದದ ಉಪನಿಷದ್ಭಾಗಗಳಲ್ಲಿ ಪಂಚಬ್ರಹ್ಮಪುರುಷರೆಂದು ನಿರೂಪಿಸಲ್ಪಡುವುದು.

ಈ ಬೇರೆ ಬೇರೆ ಋಷಿಗಣಗಳಲ್ಲಿ ಕೆಲವರು ಮೊದಲಿನಿಂದ ಪಶುಧರ್ಮ (ಪ್ರಾಕೃತಾಚಾರ) ಪರಾಯಣರೂ ಕೆಲಂಬರು ಪತಿಧರ್ಮಾಸಕ್ತರೂ ಆಗಿದ್ದುದಾಗಿ ತಿಳಿಯಬರುತ್ತದೆ. ದಿವ್ಯಗಣವಾದರೋ, ಕೇವಲ ಪತಿಧರ್ಮನಿರತವಾದುದೆಂಬಲ್ಲಿ ಲೇಶವೂ ಸಂದೇಹವಿಲ್ಲ; ಈ ದಿವ್ಯಗಣವು ಕೇವಲ ಯಜ್ಞಯಾಗಾದಿ ಕರ್ಮಗಳಲ್ಲಿಯೇ ಆಸಕ್ತರಾದ ಆ ಕಾಲದ ಪ್ರಾಕೃತ ಋಷಿಗಣವನ್ನು ಆ ಪ್ರವೃತ್ತಿಮಾರ್ಗದಿಂದ ಪರಾವೃತ್ತರನ್ನಾಗಿ ಮಾಡಲೋಸುಗ ತನ್ನ ಬೋಧಪರ ವಾಕ್ಯಗಳನ್ನು ಪಂಥದಿಂದ ಹಬ್ಬಿಸಿದ್ದಾರೆಂಬುದಕ್ಕೆ ಋಗ್ವೇದದೊಳಗಣ ಮಂಡೂಕಸೂಕ್ತವೇ ಸಾಕ್ಷಿಯು. ಹಾಗೂ, ಆ ದಿವ್ಯಗಣದ ಉಪದೇಶ ವಚನಗಳನ್ನಾಲಿಸಿ ಪತಿಧರ್ಮನಿಷ್ಠೆಯುಳ್ಳವರಾದ ಕೆಲ ಋಷಿಗಳ ಉದಾಹರಣೆಗಳಾದರೂ ವೇದಗಳಲ್ಲಿ ಸಿಕ್ಕುತ್ತವೆ.

ಮಂಡೂಕಸೂಕ್ತವಾದರೋ ಋಗ್ವೇದದ ಏಳನೆಯ ಮಂಡಲದಲ್ಲಿ ೧೦೩ ನೆಯದು; ಇದು ಮಂಡೂಕಸ್ತುತಿಪರವಾದುದರಿಂದ ಈ ಹೆಸರುಳ್ಳದ್ದಾಗಿರುವುದೆಂದು ಹೇಳುವುದುಂಟು; ಆದರೆ ಮಂಡೂಕಗಳೆಂದರೆ ಕಪ್ಪೆಗಳು, ಅವನ್ನು ಹೊಗಳು (ಬಣ್ಣಿಸು) ವುದರಲ್ಲಿ ಮಂತ್ರಕಾರನಿಗೆ ಯಾವ ಪ್ರಯೋಜನವು ಉದ್ದಿಷ್ಟವಾಗಿರಬಹುದು? ಮಳೆಗಾಲವು ಸುರುವಾಗಿ ಸುರಿಸುರಿದು ಕೆರೆಕಟ್ಟೆಗಳು ತುಂಬಿ ಹಳ್ಳ ಹೊಳೆಗಳು ಹರಿವಾಗ ಅಲ್ಲಲ್ಲಿ ಕೇಳಬರುವ ಕಪ್ಪೆಗಳ ರಟನವು ಈ ಸೂಕ್ತದಲ್ಲಿ ವರ್ಣಿಸಲ್ಪಟ್ಟಿರುವುದೆಂಬ ಬಹು ಜನರ ಹೇಳಿಕೆಯನ್ನು ನಾವೂ ಒಪ್ಪಲೇಬೇಕು; ಆದರೆ ಆ ವರ್ಣನವು "ವಿಚಿತ್ರಯಾಭಂಗ್ಯಾ" ಇರುವುದೆಂಬ ನಮ್ಮ ಅಂತರ್ಯಸ್ಫುಟವಿಚಾರವನ್ನಿಲ್ಲಿ ವ್ಯಕ್ತಗೊಳಿಸದಿರಲಾರೆವು. ಸಮಸ್ತ ಜ್ಞಾನ ಪ್ರಪಂಚಕ್ಕೆ ಆಧಾರಭೂತವಾದ ಈಶ್ವರನ ಉಪದೇಶ (ವೇದ) ದಲ್ಲಿ ಹೊತ್ತುಗಳೆಯಲು ಸಾಧನವಾದ ವ್ಯರ್ಥವಚನವೇ ಇಲ್ಲ. ವೇದವಾಕ್ಯಗಳ ಸರಿಯಾದ ಅರ್ಥವಾವುದೆಂಬುದನ್ನು ಕಂಡುಕೊಳ್ಳಲಾರದೆ ಸಹಸಾ ಅವುಗಳಿಗೆ ಏನೇನೋ ಹೆಸರಿಡಲು ಹವಣಿಸುವ ಅನೂಚಾನ ಪದ್ಧತಿ ಬಾಹ್ಯರಾದ ಅಸಂಸ್ಕೃತಾತ್ಮರ ಮಾತು ಬೇರೆ; ಅದಂತಿರಲಿ; ಸುಸಂಸ್ಕಾರಸಂಪನ್ನರೂ ಸಹ ವೇದದಲ್ಲಿ ನಿರರ್ಥಕಗಳಾದ ಎಷ್ಟೋ ವಾಕ್ಯಗಳಿರುವುವೆಂದು ಗಳಹುತ್ತಿಹುದನ್ನು ಕೇಳಿ ಸಖೇದಾಶ್ಚರ್ಯವೆನಿಸುವುದು. ಅಸ್ತು ! ಪ್ರಕೃತವನನುಸರಿಸುವಾ; ಮಂಡೂಕಸೂಕ್ತದಲ್ಲಿ ಹತ್ತು ಮಂತ್ರಗಳಿವೆ. ಆ ಹತ್ತು ಋಕ್ಕುಗಳು ಕಪ್ಪೆಗಳ ಆರಾಧನೆಗಾಗಿ ಮೈದೋರಿದವುಗಳಲ್ಲ; ಆ ಮಂತ್ರದ್ರಷ್ಟೃವಿಗೆ ಕಪ್ಪೆಗಳು ದೇವತೆಗಳೆಂಬ ಭಾವನೆಯೂ ಇರಲಿಲ್ಲ. ಮಳೆಯಾಗಲೆಂದು ವಸಿಷ್ಠನು ಪರ್ಜನ್ಯವನ್ನು ಸ್ತುತಿಸಿದನೆಂದೂ, ಅದಕ್ಕೆ ಕಪ್ಪೆಗಳ ಅನುಮೋದನವು ದೊರಕಿತೆಂದೂ, ಅನುಮೋದನ ರೂಪವಾದ ಆ ಕಪ್ಪೆಗಳ ರಟನವನ್ನು ವಸಿಷ್ಠನು ಹೊಗಳಿದನೆಂದೂ ಒಪ್ಪಿಕೊಂಡರೂ ಕೂಡ ನಮ್ಮ ಅಭಿಪ್ರಾಯಕ್ಕೆ ನ್ಯೂನತೆಯುಂಟಾಗದು. ಏಕೆಂದರೆ; ಆ ಮಂತ್ರಗಳಲ್ಲಿ ಕಪ್ಪೆಗಳ ಸಲ್ಲು ಸೋಮಪಾಸೋನ್ಮತ್ತರಾದ ಪುರೋಹಿತರ ಗೀತಘೋಷಗಳಿಗೂ ಅಧ್ಯಯನ ಶಾಲೆಯಲ್ಲಿ ಅಧ್ಯಾಪಕರಿಂದ ಉಚ್ಚರಿಸಲ್ಪಟ್ಟಂತೆಯೇ ಪಠಿಸುವ ಅಧ್ಯೇತೃಗಳ ಕೇವಲ ಕರ್ಮಕಾಂಡಾಧ್ಯಯನ ಘೋಷಗಳಿಗೂ ಹೋಲಿಸಲ್ಪಟ್ಟಿರುವುದು. ಇದರಿಂದ ಯಾಗಾದಿ ಕರ್ಮಗಳನ್ನಾಚರಿಸುವುದರಲ್ಲಿಯೇ ಮಗ್ನರಾಗಿ ಕೇವಲ ಪೂರ್ವಭಾಗದ ಅಧ್ಯಯನ ಅಧ್ಯಾಪನಗಳಿಂದೇ ಕೃತಾರ್ಥಂಮನ್ಯರಾದ ಜನರನ್ನು ಅನ್ಯಾಪದೇಶ ವಾಕ್ಯಗಳಿಂದ ಎಚ್ಚರಗೊಳಿಸುವುದೇ ಆ ಸೂಕ್ತಪ್ರವರ್ತಕನ ಉದ್ದೇಶವಾಗಿರುವುದೆಂದು ಸಿದ್ಧವಾಗುವುದು. ಅದ್ದರಿಂದ ಅಸಕ್ತವು ಯಾಜ್ಞಿಕರ ಉಪಹಾಸಕ್ಕಾಗಿಯೂ ಕಪ್ಪೆಗಳನ್ನು ದೇವತೆಗಳೆಂಬ ಭಾವನೆಯಿಂದ ಹೊಗಳುವುದಕ್ಕಾಗಿಯೂ ಪ್ರಕಟವಾದುದಲ್ಲ. ಹಿಂದೆ ನಾವು ತೋರಿಸಿರುವ ವಿಚಾರಸರಣಿಗನುಸಾರವಾಗಿ, ಆ ಸೂಕ್ತದ ಆದ್ಯಪ್ರವರ್ತಕರು ಪ್ರಥಮಜರೇ ಎಂಬುದನ್ನು ಮರೆಯಲಾಗದು. ಆ ದಿವ್ಯಗಣವು ಹೀಗೆ ಅನೇಕ ಪ್ರಕಾರವಾದ ಉಪಾಯಗಳಿಂದ ಜಗತ್ತಿನಲ್ಲಿಯ ಜನರ ದೃಷ್ಟಿಯು ಅಪ್ರಾಕೃತ ಮಾರ್ಗದಕಡೆ ಹೊರಳುವಂತೆ ಮಾಡಿದುದರ ಬಗೆಯು ಶ್ರದ್ಧೇಯವಾದುದರಿಂದೇ ಅದನ್ನು ಉಳಿದ ಋಷಿಗಣವಾದರೂ (ವಸಿಷ್ಠ ಅಂಗಿರಸ ಭೃಗು ಮೊದಲಾದವರು) ಒಪ್ಪಿಕೊಂಡು ತಾವು ಅದರಂತೆ ಆಚರಿಸಿ ಕೃತಕೃತ್ಯರಾದುದಲ್ಲದೆ ಮುಂದೆಯೂ ಆ ಪತಿಧರ್ಮಾಚರಣೆಯು ತಮ್ಮ ಶಿಷ್ಯ ಪ್ರಶಿಷ್ಯಕೋಟಿಯಲ್ಲಿ ಶ್ರುತಿರೂಪವಾಗಿ ಬಳಕೆಯಲ್ಲಿ ಬರುವಹಾಗೆ ವ್ಯವಸ್ಥೆಗೊಳಿಸಿದರೆಂಬ ಸಂಗತಿಯು ವೈದಿಕವಾಙ್ಮಯಾವಲೋಕನದಿಂದ ತಿಳಿಯಬರುತ್ತದೆ. ಮಂಡೂಕಸೂಕ್ತದ ಉದಾಹರಣೆಯ ಫಲಿತಾಂಶವೇನೆಂದರೆ; ಆ ಸೂಕ್ತವು ಮಂತ್ರಭಾಗದಲ್ಲಿಯೇ ಇರುವುದಷ್ಟೇ! ಬ್ರಾಹ್ಮಣಭಾಗದಲ್ಲಿ ಶ್ರುತಿರೂಪವಾಗಿ ವಿಧಿಸಲ್ಪಡುವ ಯಾಗಾದಿ ಕ್ರಿಯೆಗಳಿಗೆ ಜೀವಾಳದಂತಿರುವ ಮಂತ್ರಭಾಗದಲ್ಲಿಯೇ ಮಂಡೂಕಸೂಕ್ತದಂತಹ ಕೆಲ ಸೂಕ್ತಗಳು ಪರ್ಯಾಯ ವಾಕ್ಯಗಳಿಂದ ಆ ಯಾಗಾದಿ ಕ್ರಿಯೆಗಳಲ್ಲಿ ಅರುಚಿಯನ್ನು ಹುಟ್ಟಿಸುವುವಾದರೂ ಅಂತಹ ಸೂಕ್ತಗಳಿಗೆ ಸಮೂಪ್ಯವೆಂಬುದು ಸಹಜಸಿದ್ಧವಾಗಿರುವಂತೆ ಪ್ರಾಕೃತಾತ್ಮರನ್ನು ಪ್ರವೃತ್ತಿಮಾರ್ಗದಿಂದ ಪರಾವೃತ್ತರನ್ನಾಗಿ ಮಾಡತಕ್ಕ ವಾಕ್ಯಗಳುಳ್ಳ ಶಾಂತ್ರೀತೀಶ್ರುತಿಯು ವೇದಬಾಹ್ಯಾರ್ಥ ನಿರೂಪಕವಲ್ಲವೆಂಬುದೇ ಫಲಿತಾಂಶವು.

ಪರಮೇಶ್ವರನ ಅನುಗ್ರಹಶಕ್ತಿಯಿಂದ ಪ್ರಕಟವಾದ ವಿಮಲಜ್ಞಾನವೇ ವೇದವೆಂದೂ ಆಗಮವೆಂದೂ ಪ್ರಸಿದ್ಧವಾಗಿರುವುದರಿಂದ ಆ ಜ್ಞಾನದ ಆವಿರ್ಭಾವವು ಜಗದುತ್ಪತ್ತಿಯೊಂದಿಗೆ ಆಗಿರುವುದೆಂಬ ಸಿದ್ಧಾಂತಸರಣಿಯನ್ನನುಸರಿಸಿಯೇ ಮನುಭಗವಾನನು

ನಾಮರೂಪಂಚ ಭೂತಾನಾಂ ಕರ್ಮಣಾಂಚ ಪ್ರವರ್ತನಮ್ । ವೇದಶಬ್ದೇಭ್ಯ ಏವಾದೌ ನಿರ್ಮಮೇ ಸ ಮಹೇಶ್ವರಃ ||

ಮಹೇಶ್ವರ (ಶಿವ) ನು ಸೃಷ್ಟಿಯ ಆರಂಭದಲ್ಲಿ ಸರ್ವಪ್ರಾಣಿಗಳ ಹಾಗೂ ಸರ್ವಪದಾರ್ಥಗಳ ಬೇರೆ ಬೇರೆ ನಾಮರೂಪಗಳನ್ನೂ ಬೇರೆ ಬೇರೆ ವರ್ಣಾಶ್ರಮೋಚಿತ ಕರ್ಮಾನುಷ್ಠಾನಗಳನ್ನೂ ವೇದಶಬ್ದಗಳಿಂದೇ ನಿರ್ಮಿಸಿದನು. (೧-೨೧) ಎಂಬುದಾಗಿ ವೇದ (ಜ್ಞಾನ) ಕ್ಕೂ ಆ ಜ್ಞಾನದಿಂದ ಸಿದ್ಧವಾಗುವ (ಅರಿಯಲ್ಪಡತಕ್ಕ) ವಿಶ್ವಪ್ರಪಂಚಕ್ಕೂ ಮಹೇಶ್ವರ (ಶಿವ) ನೇ ಕರ್ತೃ ಎಂಬ ಅರ್ಥವನ್ನು "**ಅನೇನಾವಗಮ್ಯತೇ ಸರ್ವಮಿತ್ಯಾಗಮಃ**" ಎಲ್ಲವನ್ನು ಬೆಳಗುವ ಶಿವನಲ್ಲಿ ನಿತ್ಯಸಿದ್ಧವಾದ ಜ್ಞಾನವೇ ಆಗಮವು ಎಂಬ ಆಶಯದೊಂದಿಗೆ ಸೂಚಿಸಿದ್ದಾನೆ. ಶಿವನ ಅವಬೋಧರೂಪವಾದ ವಿಮಲಜ್ಞಾನ (ವೇದ) ವು ಶಬ್ದಮಯವಾಗಿ ಪಸರಿಸಿ ಸರ್ವ ವಿಷಯಗಳ ಸ್ವರೂಪವನ್ನು ತಿಳುಹುವ ಮೂಲಕ ಸರ್ವ ಜೀವರಿಗೂ ಉಪಾದೇಯವಾಗಿರುವುದೆಂಬ ಮನುಭಗವಾನನ ಈ ಅಭಿಪ್ರಾಯವು, "**ಶಿವವಕ್ತ್ರೇಭ್ಯ ಆಗತ ಇತ್ಯಾಗಮಃ**" ಶಿವನ ಅವಬೋಧ (ಸ್ಫುರಣ) ರೂಪವಾದ ವಿಮಲಜ್ಞಾನವು ಪಂಚಸ್ರೋತೋ (ಪ್ರವಾಹ) ರೂಪದಿಂದ ಬಂದುದರಿಂದ ಆಗಮವು ಎಂಬ ಹೆಸರಿನಿಂದ ಸುಪ್ರಥಿತವಾಗಿರುವುದೆಂಬ ಮಾತನ್ನು ಗಟ್ಟಿಗೊಳಿಸುವುದು. ಈ ರೀತಿಯಾಗಿ ಎಲ್ಲರ ಅತ್ಯೋನ್ನತಿಗೆ (ಅಭ್ಯುದಯಕ್ಕೂ ನಿಃಶ್ರೇಯಸ್ಸಿಗೂ) ಸಾಧನಗಳಾದ ಮುಖ್ಯ ಧಾರ್ಮಿಕ ವಿಷಯಗಳ ನಿಶ್ಚಿತಸ್ವರೂಪವನ್ನು ತಿಳುಹುವ ಆಗಮ (ಸಿದ್ಧಾಂತ) ಶಾಸ್ತ್ರವು "**ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ**" ಎಂಬ ಭಗವದುಕ್ತಿಗನುಸಾರವಾಗಿ ಸ್ವತಃ ಪ್ರಮಾಣಭೂತವಾದುದರಿಂದ ಅದರ ಪರಿಜ್ಞಾನವು ಸರ್ವರಿಗೂ ಅವಶ್ಯವಾದುದು.

ವಿರಚಿತಮಿದಮಾಗಮಪರಿ
ಜ್ಞಾನಾಖ್ಯಂ ಶಮ್ಭುಲಿಙ್ಗಶಿವಗುರುಣಾ |
ರಾಜೀಯಾಲ್ಲೇಖನಮಾ
ಚನ್ದ್ರಾರ್ಕಂ **ಪ್ರಭಾತಿಲಕಮಿತಿ** ||

ಭದ್ರಂ ಭೂಯಾತ್.

ಮೆ|| ಅ|| ಕಲೆಕ್ಟರ್ ಸಾಹೇಬ ಬಹದ್ದೂರ್ ಜಿಲ್ಲಾ ಬೆಳಗಾಂವ ಇವರ ಆಗಮನವೂ ಕರ್ನಾಟಕ ಪ್ರಾಚೀನತ್ವ ಸಂಶೋಧನ ಇತಿಹಾಸದ ಮಹತ್ವವೂ

ಹೂಲಿ ಡಿ|| ಬೆಳಗಾಂವ.

ತಾ|| 18-2-30ನೆಯ ಇಸವಿ ಮಂಗಳವಾರ ಮೊದಲೇ ಪ್ರಸಿದ್ಧಪಡಿಸಿದಪ್ರಕಾರ ತಳಿರುತೋರಣಗಳಿಂದಲಂಕರಿಸಲ್ಪಟ್ಟ ನಮ್ಮಾ ಶ್ರೀ ದಕ್ಷಿಣ ಕಾಶೀಕ್ಷೇತ್ರ ಪೂವಲ್ಲಿ (ಹೂಲಿ) ಗೆ ಮೆ|| ಅ|| ಕಲೆಕ್ಟರಸಾಹೇಬರವರು 2 ಘಂಟೆಗೆ ಆಗಮಿಸಲು ಪುರಪ್ರಮುಖರಾದ ಸ್ವಾನಿಟರಿ ಮತ್ತು ಕೋ|| ಆ|| ಸೋಸೈಟಿ ಸಭಾಸದರೂ ಗೌಡ ಶಾನಭೋಗರೂ ರೈತರೂ ಮೊದಲಾದವರು ಮೆ|| ಸಾಹೇಬರವರನ್ನು ಇದಿರ್ಗೊಂಡು ಶ್ರೀ ಪಂಚಲಿಂಗೇಶ್ವರದೇವಸ್ಥಾನಕ್ಕೆ ಬರಮಾಡಿಕೊಂಡರು. ಅಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಹೊಂದಿದ ಬಳಿಕ ಸಾಹೇಬರವರು ತಾವು ಆಗಮಿಸಿದ್ದುದರ ಕಾರ್ಯವನ್ನು ತಿಳುಹಿಸಿದ್ದುದೇನಂದರೆ—

ಈ ಕ್ಷೇತ್ರದ ಪ್ರಾಚೀನತ್ವವನ್ನೂ ಇಲ್ಲಿ ಆಳಿದ ಹಿಂದಿನ ಅರಸರ ಇತಿಹಾಸವನ್ನೂ ಇಲ್ಲಿರುವ ಶಿಲಾಶಾಸನಗಳ ಅಭಿಪ್ರಾಯವನ್ನೂ ತಿಳಿದುಕೊಳ್ಳುವದೇ ನಮ್ಮ ಮುಖ್ಯ ಉದ್ದೇಶವಾಗಿರುವದೆಂದು ತಮ್ಮ ಅಪೇಕ್ಷೆಯನ್ನು ಮೆಹರ್ಬಾನರವರು ತಿಳುಹಿಸಿದ ಕೂಡಲೆ ಇಲ್ಲಿಯ ವೇ|| ಬ್ರ|| ಶ್ರೀ ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ಇಲ್ಲಿರುವ ಶಿಲಾಶಾಸನ ತಾಮ್ರಶಾಸನ ಅನೇಕ ರಾಜರು ಇಲ್ಲಿ ಕಟ್ಟಿಸಿದ ಶಿವಾಲಯ ಗುರುಮಠಗಳ ಕಾಲಗಳನ್ನೂ ಮತ್ತು ಇಲ್ಲಿಯ ಪಂಚವಣ್ಣಿಗೆ ಬೃಹನ್ಮಠಕ್ಕೆ ಹಿಂದಿನ ರಾಜಾಧಿರಾಜರು ಕೊಟ್ಟ ದಾನಶಾಸನ ಈ ಮಠದ ಹಿಂದಿನ ಸ್ವಾಮಿಗಳು ಬರೆದಿಟ್ಟ ಗ್ರಂಥಗಳು ಹಾಗೂ ಶ್ರೀ ಗುರುರಾಜಚರಿತ್ರೆ ಶ್ರೀ ಸಿದ್ಧನಂಜೇಶ್ವರ ಪುರಾಣ ಪಂಚವಣ್ಣಿಗೆಮಠದ ಪಟ್ಟಾವಲೀ ಚರಿತ್ರೆ ಶಿಷ್ಯರ ಧರ್ಮನ್ನಪಟ್ಟಿ ಇತ್ಯಾದಿ ಐತಿಹಾಸಿಕ ಪೌರಾಣಿಕಗಳ ಬಲವತ್ತರವಾದ ಆಧಾರಗಳಿಂದ ಈ ಕ್ಷೇತ್ರದ ಪ್ರಾಚೀನತ್ವವನ್ನು ಕನ್ನಡದಲ್ಲಿ ಹೇಳಿದ ವಿವರವನ್ನು ನೋ|| ಮಾಮಲೇದಾರಸಾಹೇಬ ಅಕ್ಕತಂಗೇರಹಳ್ಳಿ ತಾಲೂಕು ಸವದತ್ತಿ ಇವರು ಆಂಗ್ಲಭಾಷೆಯಲ್ಲಿ 2 ಘಂಟೆಗಳ ವರಿಗೆ ಸವಿಸ್ತಾರವಾಗಿ ಹೇಳಿದರು. ಇದರಸಾರಾಂಶವೇನಂದರೆ—

ಈಗ್ಗೆ ಹೂಲಿ ಎಂದು ಹೆಸರುಪಡೆದ ಈ ಕ್ಷೇತ್ರವು ಹಿಂದೆ ಕೆಲಕಾಲ ದಕ್ಷಿಣಕಾಶೀಕ್ಷೇತ್ರವೆಂದೂ ಕೆಲವು ರಾಜರ ಆಳ್ವಿಕೆಗೆ ಒಳಪಟ್ಟ ಸಮಯದಲ್ಲಿ ಪೂವಲ್ಲಿ, ಕುಸುಮವಲ್ಲಿ, ಪೂವಲಿ, ಪೂಲಿಯೆಂದು ನಾಮವನ್ನು ಧರಿಸಿ ಅತಿ ವೈಭವದಿಂದಿದ್ದು ತನ್ನ ಸತ್ಕೀರ್ತಿಸದಾಚಾರದ ಬೆಳಕನ್ನೂ ಇಲ್ಲಿರ್ಪ ಅರಸರ ಸೌಶೌರ್ಯ ಧೈರ್ಯ ಗಾಂಭೀರ್ಯಗಳಿಂದ ಕೂಡಿಕೊಂಡ ಪ್ರತಾಪವನ್ನೂ ಕರ್ನಾಟಕ ಪ್ರಾಂತಕ್ಕೆಲ್ಲ ಬೀರಿ ಯಾವತ್ತೂ ಮಾಂಡಲಿಕ ಅರಸರ ಮೇಲೆ ತನ್ನ ವರ್ಚಸ್ಸು ಕೆಡದ ಮುಖ್ಯವಾದ ರಾಜಧಾನಿಯಾಗಿತ್ತೆಂದು ಹೇಳಲಿಕ್ಕೆ ಏನೂ ಅಭ್ಯಂತರವಿಲ್ಲ. ಈ ಪ್ರಕಾರ ಕುರುಹುಗಳಾದ ಶಿವಾಲಯಗಳೂ, ಗುರುಮಠಗಳೂ, ದುರ್ಗ, ಕೋಟೆ, ಕೊತ್ತಳಗಳೂ, ತೀರ್ಥಗಳೂ ಈಗ್ಗೂ ಇಲ್ಲಿ ಕಂಡುಬರುತ್ತವೆ. ಇಂಥ ಪವಿತ್ರವಾದ ಪುಣ್ಯಕ್ಷೇತ್ರವು ಇಲ್ಲಿಯ ಪಂಚವಣ್ಣಿಗೆ ಬೃಹನ್ಮಠದ ಮಹಾಸ್ವಾಮಿಗಳವರ ಕೃಪಾಶೀರ್ವಾದಕ್ಕೆ ಪಾತ್ರರಾದ ಅನೇಕ ರಾಜರ ಆಳ್ವಿಕೆಗೆ ಆಶ್ರಯವಾಗಿತ್ತೆಂದೂ ಈ ರಾಜರಲ್ಲಿ ರಟ್ಟರಾಜರೂ ಮತ್ತು ಚಾಲುಕ್ಯರಾಜರೂ ಹಿಂದೆ ಆಗಿರುವರೆಂದೂ ಕಂಡುಬರುತ್ತದೆ. ಇಂದಿಗೆ ಹದಿನಾಲ್ಕು ನೂರು ವರ್ಷಗಳ ಹಿಂದೆ ಬಾದಾಮಿಯ ಸತ್ಯಾಶ್ರಯ ಪುಲಕೇಶಿ ವಲ್ಲಭರಾಯನು ಇಲ್ಲಿಯ ಶ್ರೀ ಸಿದ್ಧೇಶ್ವರಸ್ವಾಮಿಗಳಿಗೆ ಭೂದಾನವನ್ನು ಮಾಡಿದಂತೆ ಉಲ್ಲೇಖವಿರುತ್ತದೆ. ಈ ಕಾಲಕ್ಕೆ ಇಲ್ಲಿ ರಟ್ಟವಂಶದವರು ರಾಜರಾಗಿದ್ದು ಇವರ ವಂಶಜರು ಕೆಲವರು ಬೆಳಗಾಂವ ಬೆಳವಡಿ ಪ್ರಾಂತಗಳನ್ನು ತಮ್ಮ ಕೈವಶಮಾಡಿಕೊಂಡು ರಾಜರಾಗಿ ಆಳಿದಂತೆಯೂ ಮತ್ತು ಈ ರಟ್ಟಅರಸರು ಕ್ರಿಸ್ತಶಕದ 12 ನೇ ಶತಮಾನದವರೆಗೆ ಇಲ್ಲಿ ಅವಿಚ್ಛಿನ್ನವಾಗಿ ಆಳಿರುವಂತೆಯೂ ಮತ್ತು ಇವರು ವೀರಶೈವರಾಗಿದ್ದು ವೀರವರ್ಮ, ವೀರವಿಜಯ, ಕಲಿಕೇತಿಮಯ್ಯ, ಚಂದ್ರಶೇಖರ, ಸಿದ್ಧೇಶ್ವರ ಇತ್ಯಾದಿ ಹೆಸರಿನ ಅರಸರು ತಮ್ಮ ಗುರುಸ್ಥಾನವಾದ ಪಂಚವಣ್ಣಿಗೆ ಮಠವನ್ನು ಜೀರ್ಣೋದ್ಧಾರಮಾಡಿ ಇಲ್ಲಿಯ ಮಹಾಸ್ವಾಮಿಗಳವರ ಇಷ್ಟಲಿಂಗಪೂಜೋತ್ಸವಕ್ಕೂ ಅವರ ಗುರುಕುಲವಾಸಕ್ಕೂ ಗೋವುಗಳ ಸಂಸ್ಥೆಯ ರಕ್ಷಣಾರ್ಥಕ್ಕೂ ಭೂದಾನ ಸುವರ್ಣದಾನಗಳನ್ನೂ ಮಾಡಿದ್ದರಲ್ಲದೆ ಕೆಲವು ಗ್ರಾಮಗಳನ್ನೂ ಉಂಬಳಿಯಾಗಿ ಕೊಟ್ಟ ಬಗ್ಗೆ ಉಲ್ಲೇಖವಿರುವವು.

ಕ್ರಿ|| ಶ|| 7ನೆಯ ಶತಮಾನದಲ್ಲಿ ಈ ರಟ್ಟವಂಶದ 9ನೆಯ ತಲೆಯವನಾದ ಸುರೇಂದ್ರನೆಂಬುವನು ಇಲ್ಲಿಯ ರಾಜಪಟ್ಟಾಧಿಕಾರದ ದೆಶೆಯಿಂದ ತಮ್ಮ ವಂಶಜರೊಡನೆ ಬಡೆದಾಡಿ ಗುರುಭಕ್ತಿಯನ್ನು ಕಡಿಮೆಮಾಡಿಕೊಂಡು ಓರ್ವ ಜೈನರಾಜಕನ್ನಿಕೆಯನ್ನು ವಿವಾಹಮಾಡಿಕೊಂಡು ಜೈನಧರ್ಮವನ್ನು ಸ್ವೀಕರಿಸಿ ಸವದತ್ತಿಯಲ್ಲಿ ತನ್ನದೊಂದು ಸಿಂಹಾಸನವನ್ನು ಸ್ಥಾಪಿಸಿದನು. ಇವನಂತೆ ಮುಂದಿನ ಇವರ ವಂಶದವರು ಸವದತ್ತಿಯಲ್ಲಿಯೇ ಇದ್ದುಕೊಂಡು ಅಲ್ಲಿ ಕೆಲವು ಜೈನಬಸ್ತಿಗಳನ್ನು ಕಟ್ಟಿಸಿದರು. ಇವರ ವಂಶದೊಳಗೆ ಲಕ್ಷ್ಮೀಶನೆಂಬ ರಾಜನು ಹೂಲಿ ಬೆಳವಡಿ ಬೆಳಗಾಂವ ಇತ್ಯಾದಿ ರಟ್ಟರಾಜರ ಸಂಗಡ ಪ್ರೀತಿಯನ್ನು ಬೆಳಸಿ ಅತ್ಯಂತ ಪ್ರಬಲನಾಗಿ ಉತ್ತರ ಪಶ್ಚಿಮ ದಕ್ಷಿಣದಿಕ್ಕಿನ ಅನೇಕ ಪ್ರಾಂತಗಳನ್ನು ಕೈವಶಮಾಡಿಕೊಂಡು ಕೆಲವು ದಿವಸ ಅರಸುತನವನ್ನು ನಡಿಯಿಸಿದ ಮೇಲೆ ಇವನ ತರುವಾಯ ಇವನ ಮುಂದಿನ ವಂಶಜರು ತಮ್ಮ ಹಿಂದಿನ ಚರಿತ್ರೆಯನ್ನು ತಿಳಿದುಕೊಂಡು ಪುನಃ ಇಲ್ಲಿಯ ಪಂಚವಣ್ಣಿಗೆ ಮಠದ ಗುರುಗಳ ಆಶೀರ್ವಾದಕ್ಕೆ ಪಾತ್ರರಾಗಿ ಸವದತ್ತಿಯಲ್ಲಿಯೇ ವಾಸವಾಗಿದ್ದರು.

ಕ್ರಿ|| ಶ|| 11 ನೇ ಶತಮಾನದಲ್ಲಿ ಇಲ್ಲಿಯ ರಟ್ಟಅರಸರಿಗೂ ಬಾದಾಮಿಯ ಚಾಲುಕ್ಯಅರಸರಿಗೂ ಒಪ್ಪಂದವಾಗಿ ದಾಶರಾಜನೆಂಬ ಚಾಲುಕ್ಯವಂಶದ ಅರಸನು ಇಲ್ಲಿ ಒಡೆಯನಾದನು. ಇವನು ಸದಾಚಾರಸಂಪನ್ನನೂ ಪ್ರಜಾಪರಿಪಾಲನೆಯಲ್ಲಿ ನಿಷ್ಣಾತನೂ ಸತ್ಕೀರ್ತಿವಂತನೂ ಆಗಿದ್ದು ಇಲ್ಲಿಯ ಅನೇಕ ದೇವಾಲಯಗಳನ್ನೂ ತೀರ್ಥಗಳನ್ನೂ ಜೀರ್ಣೋದ್ಧಾರಮಾಡಿ ದೇವರ ಪೂಜಾ ದೀಪಾರಾಧನೆಗಳ ವ್ಯವಸ್ಥೆಯನ್ನು ಮಾಡಿದ್ದನು. ಮತ್ತು ಇಲ್ಲಿರ್ಪ (101) ಅಗ್ನಿಹೋತ್ರಿಗಳ ಸಂರಕ್ಷಣೆಗಾಗಿ ಬಹಳ ಹಣವನ್ನು ವೆಚ್ಚಮಾಡಿರುವನಲ್ಲದೆ ಇಲ್ಲಿಯ ಸ್ಥಾನಾಚಾರ್ಯರಾದ ಪಂಚವಣ್ಣಿಗೆ ಮಹಾಸ್ವಾಮಿಗಳ ಆಶೀರ್ವಾದಕ್ಕೆ ಪಾತ್ರನಾಗಿ ಸಾವಿರಜನ ಪಂಡಿತವರ್ಗಕ್ಕೆ ಆಶ್ರಯವನ್ನು ಕೊಟ್ಟಿದ್ದನೆಂದು ತಿಳಿಯುತ್ತದೆ. ಇವನ ಕಾಲದಲ್ಲಿ ಕಲ್ಯಾಣಪುರದ ಬಿಜ್ಜಳರಾಯನ ದಂಡಿನವರು ಇಲ್ಲಿಗೆ ಬಂದು ಈ ಪಟ್ಟಣವನ್ನು ತಮ್ಮ ವಶಮಾಡಿಕೊಳ್ಳಬೇಕೆಂದು ದಾಶರಾಜನ ಕೂಡ ಯುದ್ಧವನ್ನು ಹೂಡಲು ದಾಶರಾಜನು ಇವರ ಸಂಗಡ ಘೋರಯುದ್ಧವನ್ನು ಮಾಡಿ ಅವರನ್ನು ಜಯಿಸಿದ ವಿಷಯವು ಇಲ್ಲಿರ್ಪ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಮತ್ತು ಚಾಲುಕ್ಯರ ತ್ರಿಭುವನ ಮಲ್ಲನ ಅಣ್ಣನಾದ ಭುವನೈಕಮಲ್ಲ ಅರಸನೂ ಇವನ ದಂಡನಾಯಕನಾದ ಅನಂತಪಾಳನ ಅಳಿಯ ಲಕ್ಷ್ಮರಸನೂ ಇಲ್ಲಿಯೇ ಇದ್ದು ಬೆಳವಲನಾಡನ್ನು ಆಳುತ್ತಿದ್ದರಿಂದೂ ಇವರು ಇಲ್ಲಿಯ ಸ್ಥಾನಾಚಾರ್ಯರಾದ ಪಂಚವಣ್ಣಿಗೆ ಕಸ್ತುರಪ ಪಂಡಿತರ ಸಮಕ್ಷಮದಲ್ಲಿ ಶ್ರೀಮದಾಂದಾಸುರದೇವರ ಪೂಜಾದೀಪಾರಾಧನೆಗೋಸುಗವಾಗಿ ದಂಡದೋಷದೊಳಗೊಂದು ಭಾಗದ ಹಣವನ್ನು ದಾನವಾಗಿ ಕೊಟ್ಟಂತೆಯೂ ಮತ್ತೂ ಚಾಲುಕ್ಯರ ಭುವನೈಕಮಲ್ಲರಸನು ಇಲ್ಲಿಯ ಪಂಚವಣ್ಣಿಗೆಸ್ವಾಮಿಗಳ ಪಾದಪೂಜೆಯನ್ನು ಮಾಡಿ ಹೇರಳದ್ರವ್ಯವನ್ನು ಕೊಡಲು ಆ ದ್ರವ್ಯವನ್ನು ಮಹಾಸ್ವಾಮಿಗಳು ಇಲ್ಲಿಯ ಶಿವಾಲಯಗಳನ್ನು ಕಟ್ಟಿಸಲಿಕ್ಕೆ ಕೊಟ್ಟರೆಂದೂ ಉಲ್ಲೇಖವಿದೆ. ಕ್ರಿ|| ಶ|| ದ ೧೩ ನೇ ಶತಮಾನದವರೆಗೆ ಚಾಲುಕ್ಯರೂ ಮತ್ತು ರಟ್ಟರು ತಮ್ಮ ತಮ್ಮೊಳಗೆ ಐಕ್ಯತೆಯುಳ್ಳವರಾಗಿ ಇಲ್ಲಿಯೇ ಇದ್ದುಕೊಂಡು ಸುತ್ತಲಿನ ಪ್ರಾಂತವನ್ನು ತಮ್ಮ ವಶಮಾಡಿಕೊಂಡು ಆಳುತ್ತಿರುವಾಗ್ಗೆ ಚಾಲುಕ್ಯರವಂಶವು ಇಲ್ಲದಂತಾಯಿತು. ಮುಂದೆ ರಟ್ಟವಂಶದವರೇ ಇಲ್ಲಿಯ ಅರಸರಾಗಿ ಕೆಲವು ದಿವಸ ತಮ್ಮ ಅಧಿಕಾರವನ್ನು ಮಾಡುತ್ತಾ ಬರಲು ಮುಂದೆ ಮುಸಲ್ಮಾನರ ಆಳಿಕೆಯ ಭರದಲ್ಲಿ ದೇಸಾಯಿಗಳಾಗಿ ಕೆಲವುಕಾಲ ತಮ್ಮ ದೇಶಗತಿಯನ್ನು ನಡಿಸುತ್ತ ಬಂದರು, ಕ್ರಿ|| ಶ|| (19) ಶತಮಾನದಲ್ಲಿ ಆದ ಭಂಡಾಯದೊಳಗೆ ಇವರು ಇಲ್ಲಿ ಇರದೆ ಸಂವದತ್ತಿ ಮತ್ತು ಸಂಗೇಶೊಪ್ಪಗಳೆಂಬ ಊರುಗಳಲ್ಲಿ ತಮ್ಮ ವಸಹಾತಮಾಡಿಕೊಂಡರು. ಇವರು ಪೂರ್ವದ ಸಾಂಪ್ರದಾಯಕ್ಕೆ ಸರಿಯಾಗಿ ಇಲ್ಲಿಯ ಪಂಚವಣ್ಣಿಗೆ ಮಠದ ಸ್ವಾಮಿಗಳಿಗೆ ಶಿಷ್ಯರಾಗಿ ನಡೆಯುತ್ತಿರುವರು.

ಮತ್ತು ಇಲ್ಲಿಯ ರಟ್ಟರಾಜರ ವಂಶದ ಸೋಮರಾಜನೆಂಬವನು ಬೆಳಗಾಂವಿಯಲ್ಲಿ ಅರಸುತನವನ್ನು ಮಾಡುತ್ತಿರಲು ಆಗ್ಗೆ ಅಸದಖಾನನೆಂಬ ಮುಸಲ್ಮಾನ ಸರದಾರನೊಬ್ಬನು ಇವನನ್ನು ಕೊಂದು ಬೆಳಗಾಂವಿ ಪ್ರಾಂತವನ್ನು ತನ್ನ ಕೈವಶಮಾಡಿಕೊಂಡು ಹೂಲಿ, ಸಂವದತ್ತಿ, ಬೆಳವಾಡಿ ರಟ್ಟವಂಶದ ರಾಜರನ್ನು ಸೋಲಿಸಬೇಕೆಂದು ತನ್ನ ದಂಡನಾಯಕನಾದ ಮಕಟಖಾನನನ್ನು ಕೆಲವು ಸೈನ್ಯದೊಡನೆ ಇತ್ತಕಡೆ ಕಳುಹಿಸಲು ಇಲ್ಲಿಯ ರಟ್ಟಅರಸರು ಅವನನ್ನು ಶಿಗಿಹಳ್ಳಿಯ ಹತ್ತರ ಸೋಲಿಸಿ ದೇವರ ಹುಬ್ಬಳ್ಳಿಯಲ್ಲಿ ಅವನನ್ನು ಕೊಂದುಬಿಟ್ಟರು. ಈ ಮಕಟಖಾನನ ಗೋರಿಯು ಈ ಹುಬ್ಬಳ್ಳಿಯಲ್ಲಿಯೇ ಇದ್ದು ಆ ಹುಬ್ಬಳ್ಳಿಗೆ ಮಕಟಖಾನ ಹುಬ್ಬಳ್ಳಿಯೆಂದು ಕರೆಯುತ್ತಿರುವರು. ಮುಂದೆ ಬೆಳವಾಡಿ ರಟ್ಟವಂಶದ ಅರಸರು ಅವಿಚ್ಛಿನ್ನವಾಗಿ ಕೆಲವು ದಿವಸಗಳ ವರೆಗೆ ಒಡೆತನವನ್ನು ನಡೆಸುತ್ತಾ ಬರಲು ಮುಂದೆ ಕಿತ್ತೂರ ಸಂಸ್ಥಾನದ ದೇಸಾಯಿಯಾದ ಮಲ್ಲಸರ್ಜನು ಇವರ ಪ್ರಾಂತವನ್ನು ಕೈವಶಮಾಡಿಕೊಂಡನು.

ಹಿಂದೆ ಶಿವಾಜಿ ಮಹಾರಾಜನ ಸಂಗಡ 27 ದಿವಸಗಳವರೆಗೆ 1 ವರ್ಷದ ಬಾಲಕನ ಪ್ರೇಮವಿಲ್ಲದೆ "ಯುದ್ಧದಲ್ಲಿ ಮಡಿದ ತನ್ನ ಪತಿಯ ಖಡ್ಗವನ್ನು ಕೆಗೆದುಕೊಂಡು" ಘೋರಯುದ್ಧವನ್ನು ಮಾಡಿ ಜಯಶೀಲಳಾದ ಮಲ್ಲಿನಾಯ್ಕಗೆ ಎಂಬಾಕೆಯು ಈ ರಟ್ಟವಂಶಕ್ಕೆ ಸೇರಿದ ಬೆಳವಾಡಿ ಮಹಾರಾಣಿಯೇ ಆಗಿರುವಳು. ಈ ಹೂಲಿ ಬೆಳವಾಡಿ ಸಂವದತ್ತಿ ರಟ್ಟವಂಶದ ಅರಸರ ಮನೆತನದವರು ಈಗ್ಗೂ ಅಲ್ಲಲ್ಲಿ ಸರ್ ದೇಸಾಯಿ ನಾಯಕ ದೇಸಾಯಿ ಗೌಡದೇಸಾಯಿ ನಾಡಗೌಡ ಇತ್ಯಾದಿ ಹೆಸರಿನಿಂದ ವತನದಾರರಾಗಿ ಈ ಪ್ರಾಂತದಲ್ಲಿ ಇರುವರು.

ಇದೆಲ್ಲವನ್ನು ತಿಳಿದುಕೊಂಡು ಮೆ|| ಸಾಹೇಬರವರು ಆಶ್ಚರ್ಯಭರಿತರಾಗಿ ಅಂದದ್ದು ಹಿಂದಿನ ಇತಿಹಾಸಸಂಶೋಧಕರಾದ ಮೇ|| ಫ್ಲೀಟ್ ರೈಸ್ ಬ್ರೌನ್ ಸಾಹೇಬರವರು ಸಂಶೋಧಿಸಿ ಬರೆದ ಸರಕಾರೀ ಗ್ಯಾಝೆಟಿನಲ್ಲಿ ಇಂಥ ಮಹತ್ವವಾಗಿದ್ದು ಅತ್ಯಂತ ಪ್ರಾಚೀನತೆಯನ್ನು ತೋರಿಸುವ ಈ ಹೂಲಿಯಲ್ಲಿ ಮೂರೇ ಶಿಲಾಶಾಸನಗಳು ಇರುವವೆಂದು ಬರೆದಿರುವರು. ಆದರೆ ಈಗ್ಗೆ ಹತ್ತೆಂಟು ಶಿಲಾಶಾಸನಗಳೂ ಅನೇಕ ಆಧಾರಗಳೂ ಇರುತ್ತಿರುವದನ್ನು ನೋಡಿದರೆ ಹಿಂದಿನವರ ಸಂಶೋಧನೆಯು ಸರಿಯಾಗಿ ಆಗಿಲ್ಲವೆಂದು ಸತ್ಯವಾಗಿ ಕಂಡುಬರುತ್ತದೆ. ಇಲ್ಲಿಯ ಇತಿಹಾಸ ಸಂಶೋಧನೆಯು ಕರ್ನಾಟಕ ಇತಿಹಾಸಕ್ಕೆ ಅತ್ಯಂತ ಆಧಾರಭೂತವಾಗಿರುತ್ತದೆ. ಈ ಪ್ರಕಾರದ ಸಂಶೋಧನೆಯನ್ನು ಮಾಡಿದ ಇಲ್ಲಿಯ ವೇ|| ಬ್ರ|| ಶ್ರೀ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳ ಆಭಾರವನ್ನೂ ಇವರಿಗೆ ಸಹಾಯಕರಾಗಿ ಇಲ್ಲಿಯ ಧರ್ಮೋತ್ತೇಜಕ ಸಂಸ್ಥೆಗೆ ಉದಾರಾಶ್ರಯವನ್ನು ಕೊಟ್ಟವರ ಆಭಾರವನ್ನೂ ಅತ್ಯಂತ ಪ್ರೀತಿಯಿಂದ ಮನ್ನಿಸುತ್ತೇವೆಂದು ಹೇಳಿದ ಮೇಲೆ ಮೆ|| ಸಾಹೇಬರವರು ಪಂಚವಣ್ಣಿಗೆ ಬೃಹನ್ಮಠಕ್ಕೆ ಆಗಮಿಸಿ ಅಲ್ಲಿರ್ಪ ಶಿಲಾಶಾಸನಗಳನ್ನು ಅವಲೋಕನ ಮಾಡಿಕೊಂಡು ಆ ಶಿಲಾಶಾಸನಗಳಲ್ಲಿರ್ಪ "ಅಷ್ಟಾವರಣ" ಈ ಶಬ್ದದ ಮರ್ಮವನ್ನು ವೇ|| ಸಿದ್ಧಾಂತಿಗಳವರ ಮುಖದಿಂದ ತಿಳಿದುಕೊಂಡು ಆನಂದಭರಿತರಾಗಿ ಶ್ರೀ ಸಿದ್ಧನಂಜೇಶ್ವರ ಗದ್ದುಗೆಯ ದರ್ಶನಾಶೀರ್ವಾದವನ್ನು ಪಡೆದುಕೊಂಡು ಪುನಃ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಬಂದು ಅಲ್ಲಿ ಸ್ವಲ್ಪ ವಿಶ್ರಮಿಸಲು ಸಂಗೀತ ಸಾಹಿತ್ಯದೊಡನೆ ಇಂಪಾದ ಗಾನಭಜನೆಯ ಆನಂದದೊಡನೆ ಮೆ|| ಸಾಹೇಬರವರಿಗೆ ಹಾರತುರಾಯಿಗಳನ್ನರ್ಪಿಸಲು ಪಾರ್ವತೀಶನಾದ ಪರಮೇಶ್ವರನ ಜಯಘೋಷದೊಡನೆ ೬ ಗಂಟೆಯ ಸುಮಾರಕ್ಕೆ ಸಭೆಯ ವಿಸರ್ಜನೆಯಾಗಿ ಮೆ|| ಸಾಹೇಬರವರು ಮೆ|| ಮಾಮಲೆದಾರಸಾಹೇಬರೊಡನೆ ಕೂಡಿಕೊಂಡು ತಾ|| ಸಂವದತ್ತಿಗೆ ತೆರಳಿದರು.

ವಾಚಕಮಹಾಶಯರೆ! ಏಳುಸಮುದ್ರವನ್ನು ದಾಟಿ ನಮ್ಮ ಈ ದೇಶಕ್ಕೆ ಬಂದು ಸರಕಾರೀ ಅಧಿಕಾರಸ್ಥರಾಗಿ ವೇಳೆಯ ಮಹತ್ವವನ್ನು ತಿಳಿದುಕೊಂಡು ತಮ್ಮ ಅಧಿಕಾರವನ್ನು ನಡೆಸುತ್ತ ಇರುವ ಮೆ|| ಅ|| ಕಲೆಕ್ಟರ್ ಸಾಹೇಬರವರು ಇಲ್ಲಿಗೆ ಬಂದು ತಮ್ಮ ಅಮೂಲ್ಯವಾದ ವೇಳೆಯನ್ನು ಕಳೆದು ಇಲ್ಲಿಯ ಪ್ರಾಚೀನತ್ವದ ಮಹತ್ವವನ್ನು ತಿಳಿದು ಇಲ್ಲಿಯವರ ಪ್ರೀತಿಗೆ ಪಾತ್ರರಾಗಿರುವಂತೆ ನಮ್ಮ ಹಿಂದೂ ಅಧಿಕಾರಿಗಳೂ ಸಹ ಆಚರಿಸುವಂತೆ ಪ್ರೇರಿಸಲೆಂದು ಆ ಜಗದೀಶನನ್ನು ಪ್ರಾರ್ಥಿಸುತ್ತೇನೆ.

ಸೆಕ್ರೆಟರಿ,
ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯ,
ಪೋ|| ಹೂಲಿ ಡಿ|| ಬೆಳಗಾಂವ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗ್ರಂಥಪ್ರಚಾರ.

ಮಹಾಶಯರೆ! ಪುಣ್ಯಭೂಮಿಯೆನಿಸಿದ ಈ ಭಾರತಭೂಮಿಯಲ್ಲಿ ಅತ್ಯುತ್ಕೃಷ್ಟವೆನಿಸಿದ ವೈದಿಕಮತಗಳೊಳಗೆ ವೀರಶೈವಮತವೆಂಬುದೊಂದು ಪ್ರಧಾನಮತವಾಗಿರುತ್ತದೆ. ಈ ಮತವನ್ನವಲಂಬಿಸಿದ ಪ್ರತಿಯೊಬ್ಬ ಲಿಂಗಾಂಗಿಯೂ ತನ್ನ ಮತಾಚಾರಗಳನ್ನೂ ವೈದಿಕಕರ್ಮಗಳನ್ನೂ ನಡೆಯಿಸುತ್ತ ಪರಿಶುದ್ಧಾಂತಃಕರಣನಾಗಿ ಶಕ್ತಿವಿಶಿಷ್ಟ ಪರಶಿವಾದ್ವೈತಜ್ಞಾನವನ್ನು ಅರಿತು ಸಾಯುಜ್ಯವೆಂಬ ಮೋಕ್ಷಲಕ್ಷ್ಮಿಯನ್ನು ಹೊಂದಬೇಕಾದುದು ಕರ್ತವ್ಯವಾಗಿರುತ್ತದೆ. ಇಂತಹ ಮೋಕ್ಷವನ್ನು ಹೊಂದಲು ಮಾರ್ಗದರ್ಶಕವೆನಿಸಿದ ವೈದಿಕವಿದ್ಯೆಯನ್ನು ಮತದ ಮುಖ್ಯಧರ್ಮಗಳೆನಿಸಿದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮೊದಲಾದ ಧರ್ಮರಹಸ್ಯವನ್ನೂ ಸ್ಪಷ್ಟವಾಗಿ ತಿಳಿದು ತಾನೂ ಆಚರಿಸುವುದಲ್ಲದೆ ಇತರರಿಗೂ ಬೋಧಿಸುತ್ತ ಬರುವುದಾದರೆ ವೈದಿಕಧರ್ಮದಲ್ಲಿ ಹಿಂದುಳಿದ ನಮ್ಮ ಸಮಾಜವು ಬೇಗನೆ ಮುಂದುವರೆಯುವುದು, ಹೀಗಾದ ಹೊರತು ನಮ್ಮ ಮತಧ್ವಜವು ಹಿಲ್ಲುವಕಾಶವಿಲ್ಲವು. ಮುಖ್ಯವಾಗಿ ನಮ್ಮ ಮತಸ್ಥಾಪಕರೆನಿಸಿದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಪರಂಪರಾನುಗತರಾಗಿ ಬಂದಿರುವ ಗುರುಗಳೆಂಬ ಕಲ್ಪವೃಕ್ಷಗಳು ಸದ್ಧರ್ಮಗಳೇ ಮೂಲಗಳಾಗಿಯೂ, ಪುರಾಣೇತಿಹಾಸಗಳೇ ಸ್ಕಂಧಗಳಾಗಿಯೂ, ನಿಗಮಾಗಮಗಳೇ ಶಾಖೆಗಳಾಗಿಯೂ ಷಡಂಗಗಳೇ ಚಿಗುರುಗಳಾಗಿಯೂ ಸೂತ್ರಗಳೇ ಪುಷ್ಪಗಳಾಗಿಯೂ ಮಂತ್ರಗಳೇ ಕಾಯಿಗಳಾಗಿಯೂ ಇದ್ದು ಜ್ಞಾನವೆಂಬ ಪರಿಪಕ್ವಫಲಗಳನ್ನು ಬಿಡುತ್ತಬಂದರೆ ಹಿಂದುಳಿದಿರುವ ಈ ಮತದ ಲಕ್ಷ್ಮಿಯು ಅಲ್ಪಕಾಲದಲ್ಲಿಯೇ ಅಂಗಸೌಷ್ಠವವನ್ನು ಹೊಂದಿ ವಿಕಸಿತವದನೆಯಾಗುವಳೆಂಬ ವಿಷಯದಲ್ಲಿ ಸಂಶಯವಿಲ್ಲವು. ಸದ್ಯದಲ್ಲಿ ಇಂಥ ಗುರುಗಳೂ, ವೈದಿಕರೂ ಅಲ್ಪಸ್ವಲ್ಪವಾಗಿರುವದರಿಂದಲೇ ಈ ಮತದ ಪ್ರತಿಷ್ಠೆಯು ಸ್ವಲ್ಪಮಟ್ಟಿಗಾದರೂ ಹಬ್ಬಲು ಅವಕಾಶವಿರುವದು. ಸದ್ಯಃ ಕೆಲವೆಡೆಗಳಲ್ಲಿ ವಿದ್ಯಾಚಾರಗಳಿಲ್ಲದ ಗುರುಗಳು ತಮ್ಮ ಕರ್ತವ್ಯಕರ್ಮಗಳನ್ನು ತೊರೆದು ಲೌಕಿಕಮಾನವರಂತೆ ಬಹಿರಾಡಂಬರದಲ್ಲಿದ್ದು ತಮ್ಮ ಅಶಾಸ್ತ್ರೀಯ ನಡವಳಿಕೆಗೆ ಅನುಕೂಲಗಳಾದ ಕೆಲ ಭಾಷಾಗ್ರಂಥಗಳನ್ನು ಸ್ವಲ್ಪಸ್ವಲ್ಪವಾಗಿ ನೋಡಿ ಅವೇ ನಮ್ಮ ಗ್ರಂಥಗಳು, ಅಲ್ಲಿ ಹೇಳಿದವುಗಳೇ ನಮ್ಮ ನಿತ್ಯವಿಧಿಯೆಂದು ಮೂಢಜನಗಳನ್ನು ವಂಚಿಸಿ ತಾವು ಕೆಡುವದಲ್ಲದೆ ದುರುಪದೇಶದ ಬಲದಿಂದ ಶಿಷ್ಯಮಂಡಲಿಯನ್ನೂ ಬಲಹೀನವನ್ನಾಗಿ ಮಾಡುತ್ತಿರುವರು. ಈ ವೇಷಧಾರಿಗಳಿಗೆ "ಧಿಕ್ಕಾರ ಧಿಕ್ಕಾರ" ಇಂತಹ ದುಷ್ಟಾಚರಣಗಳೆಂಬ ಪಿಶಾಚಿಗಳು ಓಡಿಹೋಗಿ ಶಿಷ್ಟಾಚರಣೆಯು ಮುಂದೊರೆದು ನಮ್ಮ ವೈದಿಕಮತವು ಪೂರ್ವಾವಸ್ಥೆಯನ್ನು ಹೊಂದಲೆಂಬ ಉದಾರತತ್ವದಿಂದ ರಾಜಧಾನಿಯಲ್ಲಿ ಪಂಚಾಚಾರ್ಯಪ್ರಭಾ ಎಂಬ ಭಾಗ್ಯಲಕ್ಷ್ಮಿಯು ಕರುಬತನವನ್ನು ಹೊಂದಿರುವ ಮತವನ್ನು ಪ್ರವೇಶಿಸಿ ಸಿದ್ಧಾಂತಧನವನ್ನು ಎಲ್ಲೆಲ್ಲಿಯೂ ಬೀರುತ್ತಿರುವಳು. ಇದರಿಂದ ಈಗೀಗ ತಮ್ಮ ತಮ್ಮಗಳ ವೈಭವವನ್ನು ನೆನೆಸಿಕೊಂಡು ಸಮಾಜದಲ್ಲಿರುವ ಅಜ್ಞಾನವು ನೆಲ್ಲಮೆಲ್ಲನೆ ಹರಿಯುತ್ತಿರುವುದೊಂದು ನಮ್ಮ ಭಾಗ್ಯೋದಯವೇ ಸರಿ! ಮತಸೇವೆಯೇ ಈಶ್ವರಸೇವೆಯೆಂದರಿತು ತಮ್ಮ ದೇಶಕೋಶಗಳನ್ನು ತ್ಯಜಿಸಿ ತ್ರಿಕರಣಶುದ್ಧಿಯಿಂದ ಹಗಲಿರುಳು ಧರ್ಮೋದ್ಧಾರಕಾರ್ಯದಲ್ಲಿ ತೊಡಗಿರುವ ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಕಾಶೀನಾಥಶಾಸ್ತ್ರಿಗಳವರು ಅಸಮಸಾಹಸಪಡುತ್ತಿರುವದು ನಮ್ಮಗಳ ಭಾಗ್ಯೋದಯವೇ ಸರಿ. ಇದಲ್ಲದೆ ಮೈಸೂರು ಹೊಸಮಠಾಧ್ಯಕ್ಷ ಚರಮೂರ್ತಿ ಶ್ರೀ ಬಸವಲಿಂಗಸ್ವಾಮಿಗಳವರು ಶ್ರೀ ಪಿ. ಆರ್. ಕರಿಬಸವಶಾಸ್ತ್ರಿಗಳವರು ಉಮ್ಮಚಿಗಿ ಶ್ರೀ ಶಂಕರಶಾಸ್ತ್ರಿಗಳೇ ಮೊದಲಾದ ಅನೇಕ ಮಹನೀಯರು ಮತದ ಪವಿತ್ರತೆಯನ್ನು ಹೊರಗೆಡಹಬೇಕೆಂದು ಈವರೆಗೂ ಅನೇಕ ಸಿದ್ಧಾಂತಗ್ರಂಥಗಳನ್ನು ಶೋಧಿಸಿ ಮುದ್ರಣಮಾಡಿಸಿ ಪ್ರಚಾರಗೈಯುತ್ತಿರುವುದೇ ತಮ್ಮ ಜೀವಮಾನದ ಫಲವೆಂದು ತಿಳಿದು ಗ್ರಂಥಪ್ರಚಾರಕಾರ್ಯದಲ್ಲಿ ತೊಡಗಿರುವುದರಿಂದ ನಮ್ಮ ಸಮಾಜವೆಲ್ಲವೂ ಆ ಮಹನೀಯರಿಗೆ ಋಣಿಯಾಗಿರಬೇಕಾಗಿದೆ. ಹೀಗಿರುವಲ್ಲಿ ಯಾವ ನಿಜವಾದ ಪ್ರತಿಯೊಬ್ಬ ವೀರಶೈವನೂ ಮೇಲ್ಕಂಡ ಮಹನೀಯರ ಗ್ರಂಥಗಳನ್ನೂ ಪವಿತ್ರವಾದ ವಾರಪತ್ರಿಕೆಯನ್ನೂ ನೋಡಿ ಆನಂದಾಬ್ಧಿಯಲ್ಲಿ ಮುಳುಗದಿರಲಾರನು ? ಇದೂ ಅಲ್ಲದೆ ಈ ಮಹಾಶಯರು ನಮ್ಮ ಮತದಲ್ಲಿ ಪ್ರಕಾಶವಿಲ್ಲದಿರುವ ಇನ್ನು ಅನೇಕಾನೇಕ ಗ್ರಂಥಗಳನ್ನು ಪ್ರಚಾರಮಾಡಿ ಸಮಾಜಕ್ಕೆ ಇತೋಽಪ್ಯತಿಶಯವಾದ ಕಲ್ಯಾಣವನ್ನುಂಟುಮಾಡುವಂತೆ ಪ್ರೇರಿಸಲೆಂದು ಭಗವತ್ಪಾದರಾದ ಪಂಚಾಚಾರ್ಯರನ್ನು ಪ್ರಾರ್ಥಿಸುವ.

ಎಂ. ಮಹಾದೇವಯ್ಯ, ವರಕೂಡು.
ಶ್ರೀ ಶಂಕರವಿಲಾಸ ಪಾಠಶಾಲಾ ವಿದ್ಯಾರ್ಥಿ,
ಮೈಸೂರು.

ಶ್ರೀಶೈಲಯಾತ್ರಾ ಸಂಪೂರ್ಣ ಸಮಾರಾಧನೆ.

ಜಗಲೂರು ಸಾಹುಕಾರ್ ಸಣ್ಣ ತಮ್ಮಣ್ಣನವರು ಈ ವರ್ಷ ಶ್ರೀ ಮಹಾಶಿವರಾತ್ರಿಗೆ ಸರಿಯಾಗಿ ತಮ್ಮ ಮನೆಗುರುಗಳಾದ ವೇ|| ಪಲ್ಲಾಗಟ್ಟೆ ಬಿ. ಎಂ. ಮಹಾದೇವಯ್ಯನವರನ್ನು ಕರೆದುಕೊಂಡು ಕುಟುಂಬಪರಿವಾರ ಸಮೇತರಾಗಿ ಶ್ರೀಮಹಾಕ್ಷೇತ್ರ ಶ್ರೀಶೈಲಕ್ಕೆ ಹೋಗಿ ಶಾಸ್ತ್ರಪ್ರಕಾರ ಯಾತ್ರೆಯನ್ನು ಪೂರೈಸಿಕೊಂಡು ಶ್ರೀ ಕ್ಷೇತ್ರಾಧಿಪನಾದ ಮಲ್ಲಿಕಾರ್ಜುನಸ್ವಾಮಿಯ ಆಶೀರ್ವಾದದಿಂದ ಸುಖವಾಗಿ ಬಂದು ಕಲ್ಲೇದೇವರಪುರದಲ್ಲಿ ಇವರು ಸ್ವತಃ ಎಂಟು ಹತ್ತುಸಾವಿರ ರೂಪಾಯಿಗಳವರೆಗೂ ಖರ್ಚುಮಾಡಿ ಕಟ್ಟಿಸಿರುವ ಶ್ರೀ ಜ್ಯೋತಿರ್ಲಿಂಗ ದಕ್ಷಿಣಾಮೂರ್ತಿಯ ದೇವಸ್ಥಾನದಲ್ಲಿ ಇದೇ ಫಾಲ್ಗುಣ ಬ|| (ತಾ|| 15-3-30) ನೇ ಶನಿವಾರ ಶ್ರೀ ದಕ್ಷಿಣಾಮೂರ್ತಿಗೆ ವೇದೋಕ್ತ ಪ್ರಕಾರ ಪಂಚಾಮೃತಾಭಿಷೇಕ ಕುಂಭಾಭಿಷೇಕ ಶಿವಾಷ್ಟೋತ್ತರ ಬಿಲ್ವಾರ್ಚನಾದಿಸಮೇತ ಸಮಾರಾಧನೆಯನ್ನು ಮಾಡಿ ಮೃಷ್ಟಾನ್ನಭೋಜನದಿಂದ ಗಣತಿಂತಿಣಿಗೆ ಭೂರಿದಕ್ಷಿಣೆಯನ್ನಿತ್ತು ಸರ್ವರನ್ನೂ ತೃಪ್ತಿಪಡಿಸಿದರು. ಇವರಿಗೆ ಸುಮಾರು ಎಂಭತ್ತು ವರ್ಷ ವಯಸ್ಸಾಗಿರಬಹುದು. ಆದಾಗ್ಯೂ ಇವರಿಗೆ ಸ್ವಲ್ಪ ಕರ್ಣಮಾಂದ್ಯ ಒಂದು ವಿನಾ ಕೇವಲ ದೃಢಕಾಯರಾಗಿರುತ್ತಾರೆ. ಮತ್ತು ವ್ಯವಹಾರವೆಲ್ಲವನ್ನೂ ಸ್ವತಃ ನಿರ್ವಹಿಸುತ್ತಿರುವುದನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ. ಇದಕ್ಕೆಲ್ಲಾ ಇವರಲ್ಲಿರುವ ಗುರುದೈವಭಕ್ತಿಯೇ ಮೂಲಕಾರಣವಾಗಿರುತ್ತದೆ. ಇವರು ಕೇವಲ ಧರ್ಮನಿರತರೂ, ಗುರುಜಂಗಮಪ್ರೇಮಿಗಳೂ ಪರೋಪಕಾರಿಗಳೂ ಬಡವರಾಶ್ರಯದಾತರೂ ಆಗಿರುತ್ತಾರೆ. ಇವರನ್ನು ಪ್ರತ್ಯಕ್ಷ ನೋಡಿದರೆ ಇವರ ಸದ್ಗುಣಗಳು ಶ್ರೀಮಂತಿಕೆಯು ತಿಳಿಯುವುವೇ ವಿನಾ ಈಗಿನವರಂತೆ ಡಾಂಭಿಕಕ್ಕೆ ಎಂದಿಗೂ ಪ್ರವೇಶಿಸುವವರಲ್ಲ. ದಯಾಮಯನಾದ ಶ್ರೀ ಪರಮೇಶ್ವರನು ಇವರಿಗೂ ಇವರ ಕುಟುಂಬದವರಿಗೂ ಆಯುರಾರೋಗ್ಯೈಶ್ವರ್ಯವನ್ನಿತ್ತು ಕಾಪಾಡಲೆಂದು ಹಾರೈಸುತ್ತೇನೆ.

ಪ್ರತ್ಯಕ್ಷ ಸಾಕ್ಷಿ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಮಾರ್ಚಿ ತಾ|| ೩೧ನೇ ಸೋಮವಾರ

ನೂತನವರ್ಷದ ಶುಭಸಂದೇಶ.

ಸ್ವಸ್ತ್ಯಸ್ತುತೇ ಕುಶಲಮಸ್ತು ಚಿರಾಯುರಸ್ತು ಗೋಹಸ್ತಿವಾಜಿಧನಧಾನ್ಯಸಮೃದ್ಧಿರಸ್ತು | ಐಶ್ವರ್ಯಮಸ್ತು ವಿಜಯೋಸ್ತು ರಿಪುಕ್ಷಯೋಸ್ತು ಕಲ್ಯಾಣಮಸ್ತು ಸತತಂ ಶಿವಭಕ್ತಿರಸ್ತು ||

ಶ್ರೀ ಪ್ರಮೋದಸಂವತ್ಸರವೆಂಬ ಪ್ರಿಯಮಿತ್ರನು ಅನೇಕ ವರ್ಷಗಳಿಂದ ನಮ್ಮನ್ನಗಲಿದ್ದುದರಿಂದ ನಾವುಗಳು ಪ್ರಮೋದ (ಸಂತೋಷ) ಶೂನ್ಯರಾಗಿದ್ದೆವು. ನೀರಡಿಸಿದ ಚಾತಕಪಕ್ಷಿಯು ಮೇಘಮಂಡಲವನ್ನು ನಿರೀಕ್ಷಿಸುವಂತೆ ಈ ನೂತನವರ್ಷಾರಂಭವನ್ನು ಬಯಸುತ್ತಿರುವ ನಮ್ಮನ್ನು ಸಂತೋಷಪಡಿಸುವುದಕ್ಕಾಗಿ ಈ ದಿವಸ ನಮ್ಮೆದುರಿಗೆ ಬಂದು ನಿಂತಿರುವನು. ಬಹು ದಿವಸಗಳಿಂದ ನಮ್ಮನ್ನಗಲಿದ್ದ ಈ ಪ್ರಿಯಮಿತ್ರನಿಗೆ ಶುಭಾಗಮನವನ್ನು ಬಯಸಿ ನಮ್ಮ ನಮ್ಮ ಮನೆಮಠಗಳನ್ನೆಲ್ಲ ಸಾರಣೆಕಾರಣೆಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಿ ತೈಲಾಭ್ಯಂಜನವಂ ಮಾಡಿ ನೂತನಾಂಬರಗಳಂ ಧರಿಸಿಕೊಂಡು ಸಂತೋಷದಿಂದ ಈ ಪ್ರಿಯಮಿತ್ರನನ್ನು ಎದುರ್ಗೊಂಡು ಮನೆಗಳಿಗೆ ಕರೆತಂದು ಪ್ರಮೋದಸಂವತ್ಸರವೇ? ನೀನು ನಮ್ಮ ಪ್ರಿಯಮಿತ್ರನಾದುದರಿಂದ ನಿನ್ನ ಆಳ್ವಿಕೆಯಾದ ಇನ್ನು ಒಂದು ವರ್ಷದವರೆಗೆ ನಮ್ಮಗಳಿಗೆ ಯಾವುದೊಂದು ದುಃಖವನ್ನೂ ಉಂಟುಮಾಡದೆ ಸಂತೋಷದಿಂದ ಕಾಪಾಡುವಿಯೆಂದು ನಂಬುವೆವು. ಏಕಂದರೆ ನೀನು ಪ್ರಮೋದ (ಸಂತೋಷ) ಯುಕ್ತನಾಗಿರುವುದರಿಂದ ನಿನ್ನಂತೆ ನಮ್ಮನ್ನೂ ಕೂಡ ಪ್ರಮೋದಯುಕ್ತರನ್ನಾಗಿ ಮಾಡುವುದು ಮಿತ್ರನಾದ ನಿನ್ನ ಕರ್ತವ್ಯವಲ್ಲವೆ? ಕಮಲಗಳಿಗೆ ಮಿತ್ರನಾದ ಸೂರ್ಯನು ತನ್ನ ಅಭ್ಯುದಯದಲ್ಲಿ ಕಮಲಗಳಿಗೆ ತನ್ನಲ್ಲಿರುವ ಸಂಪತ್ತನ್ನು ಕೊಟ್ಟು ಅವುಗಳನ್ನು ವಿಕಸನಗೊಳಿಸುವಂತೆ ನಾನಾತರಹದ ಈತಿಬಾಧೆಗಳಿಂದ ನರಳುತ್ತ ನಿನ್ನ ಬರವನ್ನೇ ಬಯಸುತ್ತಲಿದ್ದ ನಮ್ಮಗಳ ಮನಃಕಮಲಗಳನ್ನು ವಿಕಸನಗೊಳಿಸದಿದ್ದರೆ ಮಿತ್ರನಾದ ನಿನಗೆ ಬಂದಿರುವ ಪ್ರಮೋದವೆಂಬ ಹೆಸರು ಹೇಗೆ ಸಾರ್ಥಕವಾದೀತು? ಎಂದು ವಿಜ್ಞಾಪನೆಯಂ ಮಾಡುತ್ತ ಪ್ರತಿಯೊಂದು ವರ್ಷಾರಂಭದಲ್ಲಿ ನೂತನ ಸಂವತ್ಸರವನ್ನು ಕುರಿತು ಸತ್ಕರಿಸುತ್ತಿರುವುದು ಭಾರತೀಯರಿಗೆ ಸೃಷ್ಟಿಕಾಲದಿಂದ ಬಂದ ಧರ್ಮವಾಗಿದೆಯಷ್ಟೆ! ಈ ಹೊಸದಿವಸವನ್ನು ಚೇತನಪ್ರಾಣಿಗಳಾದ ನಾವುಗಳು ಸತ್ಕರಿಸುವುದೊತ್ತಟ್ಟಿಗಿರಲಿ, ಅಚೇತನವಾದ ವನದೇವತೆಯು ಸಹ ತನ್ನ ಮಿತ್ರನಾದ ವಸಂತನು ಬರುತ್ತಾನೆಂಬ ಸಡಗರದಿಂದ ನವನವ ಪಲ್ಲವ ಫಲಾವಳಿಗಳಿಂದ ಅಲಂಕಾರಗೊಂಡು ಪ್ರಿಯಬಂಧುವಾದ ಪ್ರತಿ ಸಂವತ್ಸರವನ್ನು ಎದುರ್ಗೊಳ್ಳುವಳೆಂದಮೇಲೆ ಸಕಲ ಸನ್ಮಂಗಲಗಳನ್ನುಂಟುಮಾಡುವ ಈ ಪರಮಪ್ರಿಯಮಿತ್ರನನ್ನು ನಾವು ಎಷ್ಟು ಗೌರವಿಸಬೇಕೆಂಬುದು ಇದರಿಂದಲೇ ಸ್ಪಷ್ಟವಾಗುವುದು. ಧರ್ಮಶಾಸ್ತ್ರಕಾರರು ನೂತನ ವರ್ಷಾರಂಭವೆನಿಸಿದ ಈ ಚೈತ್ರ ಶುದ್ಧ ೧ ದಿವಸವನ್ನು ಯುಗಾದಿಯೆಂದು ಕರೆದಿರುವರು. ಭಾರತೀಯರು ಈ ಯುಗಾದಿಯ ಹಬ್ಬವನ್ನು ದೊಡ್ಡಹಬ್ಬವೆಂದು ತಿಳಿಯುತ್ತಾರೆ. ಈ ಹಬ್ಬವು ಬರುತ್ತಲೇ ಹಿರಿಯರೂ, ಕಿರಿಯರೂ, ವೃದ್ಧರೂ, ಸ್ತ್ರೀಯರೂ ಸಂತೋಷಸಾಗರದಲ್ಲಿ ಮುಳುಗೇಳುತ್ತಿರುವರು. ಗೋಪಾಲರಾದಿಯಾಗಿ ಭೂಪಾಲರವರೆಗೂ ಈ ಹಬ್ಬವನ್ನು ಮಾಡದ ಭಾರತೀಯರೇ ಇಲ್ಲ. ಭಾರತೀಯರು ಈ ದಿವಸವನ್ನು ಹೊಸದಿವಸವೆಂದು ತಿಳಿದಿದ್ದುದರಿಂದ ಈ ಶುಭದಿವಸದಲ್ಲಿ ನಾವುಗಳೇನು ಆಚರಿಸುತ್ತೇವೆಯೋ ಅದೇ ಆಚರಣೆಯು ಆ ವರ್ಷವೆಲ್ಲಾ ಇರುವುದೆಂಬ ದೃಢನಂಬಿಕೆಯು ಪ್ರಾಚೀನಕಾಲದಿಂದ ನೆಲೆಗೊಂಡಿರುವುದು. ಸರ್ವಜ್ಞತ್ವಾದಿ ಗುಣವಿಶಿಷ್ಟನೂ ಸೃಷ್ಟ್ಯಾದಿ ಪಂಚಕೃತ್ಯಾಧೀಶನೂ ಆಗಿರುವ ಪರಮೇಶ್ವರನು ತನ್ನಲ್ಲಿ ಅವಿಭಕ್ತವಾದ ಚರಾಚರಾತ್ಮಕವಾದೀ ಪ್ರಪಂಚವನ್ನು ಸೃಷ್ಟಿಮಾಡಿ ವರ್ಷ, ಮಾಸ, ಋತು, ಕಾಲ, ಗ್ರಹಾದಿಗಳನ್ನು ಅನುಕೂಲಿಸಿ ಜೀವರನ್ನುದ್ಧರಿಸುವುದಕ್ಕಾಗಿ ದೇವರ್ಷಿಗಳಿಗೆ ವೇದಾಗಮಗಳನ್ನನುಗ್ರಹಿಸಿ ಆಯಾಯ ದೇವತೆಗಳಿಗೆ ಪ್ರಪಂಚೋದ್ಧಾರಸಾಧಕವಾದ ಒಂದೊಂದು ಅಧಿಕಾರವನ್ನು ವಹಿಸಿದನು. ಅದರಂತೆ ಸಮಸ್ತ ದೇವತೆಗಳೂ ಶ್ರೀ ಪರಮೇಶ್ವರನಾಜ್ಞೆಯಂ ಶಿರಸಾವಹಿಸಿ ತಮ್ಮ ತಮ್ಮ ಕೆಲಸಗಳನ್ನು ಈ ಶುಭದಿವಸವೇ ಪ್ರಾರಂಭಮಾಡಿದುದರಿಂದ ಇದನ್ನು **ಯುಗಾದಿ**ಯೆಂದು ಕರೆಯುತ್ತಾರೆ. ಅಂದಿನಿಂದಲೂ ಈ ಹೊಸವರ್ಷ ಜ್ಞಾಪಕಾರ್ಥವಾಗಿ ಚೈತ್ರಶುದ್ಧ ಪ್ರತಿಪದ್ದಿವಸವನ್ನು ಭಾರತೀಯರು ಬಹಳ ದೊಡ್ಡ ಹಬ್ಬವನ್ನಾಗಿ ಆಚರಿಸುತ್ತಾರೆ. ಒಂದು ದಿವಸ ದೇವರ್ಷಿಗೆ ಪ್ರಪಂಚೇಚ್ಛೆಯುಂಟಾಗಿ ಸ್ತ್ರೀರೂಪವನ್ನು ಧರಿಸಲು ದೇವತೆಗಳು ಆ ಸ್ತ್ರೀಯಳಲ್ಲಿ ಅರವತ್ತು ಜನ ಮಕ್ಕಳನ್ನು ಪಡೆದರು. ಆ ಮಕ್ಕಳೇ ಪ್ರಭವ ಮೊದಲ್ಗೊಂಡು ಅರವತ್ತು ಸಂವತ್ಸರಗಳಾಗಿ ಪರಿಣಮಿಸಿದವೆಂದು ಹೇಳುತ್ತಾರೆ. ದೇವತೆಗಳೆಲ್ಲರೂ ಪರಶಿವನಾಜ್ಞೆಯಂತೆ ಸೃಷ್ಟಿದಿವಸವೆನಿಸಿದ ಪ್ರತಿಯೊಂದು ಸಂವತ್ಸರದ ಪ್ರಾರಂಭ ದಿವಸವನ್ನು ಹೊಸದಿವಸವೆಂದು ಭಾವಿಸಿ ಮಹೋತ್ಸವವನ್ನು ಮಾಡುವರೆಂದು ನಿಯಮವಿರುವುದರಿಂದ ಅನಾದಿಕಾಲದಿಂದ ಈ ಸಂಪ್ರದಾಯವು ಭರತಖಂಡ ನಿವಾಸಿಗಳಾದ ಜನಗಳಲ್ಲಿ ರೂಢಿಯಾಗಿ ಬಂದಿರುತ್ತದೆ. ಇದರಂತೆ ವಿದೇಶೀಯರಾದ ಐರೋಪ್ಯ ಮಹಮ್ಮದೀಯ ಮುಂತಾದ ಮತೀಯರಲ್ಲಿಯೂ ಅವರವರ ಶಾಸ್ತ್ರಾನುಗುಣವಾಗಿ ವರ್ಷಪ್ರಾರಂಭದ ದಿವಸವನ್ನು ದೇವರು ಜಗತ್ತನ್ನು ಸೃಷ್ಟಿಸಿದ ದಿವಸವೆಂದು ಅವರವರ ಪದ್ಧತಿಯಂತೆ ಕ್ರಿಸ್‌ಮಿಸ್ ಮುಂತಾದ ಹಬ್ಬಗಳನ್ನು ಬಹು ಸಡಗರದಿಂದ ಮಾಡುತ್ತಾರೆ. ನಮ್ಮ ಸನಾತನಧರ್ಮಶಾಸ್ತ್ರಾನುಸಾರವಾಗಿ ಈ ಚೈತ್ರಶುದ್ಧ ಪ್ರತಿಪದ್ದಿವಸವೇ ದೇವರು ಜಗತ್ತನ್ನು ಸೃಷ್ಟಿಸಿದ ದಿವಸವೆಂದು ಭಾವಿಸಿ ಪ್ರತಿಯೊಬ್ಬ ಭಾರತೀಯನು ಈ ಹಬ್ಬವನ್ನು ಆಚರಿಸತಕ್ಕದ್ದಾಗಿದೆ. ಈ ಹೊಸ ದಿವಸದಿಂದಲೇ ಮುಂದಣ ಪಕ್ಷಮಾಸದ ತಿಥಿಗಳ ಗಣನೆಯಾಗುವದರಿಂದ ಈ ದಿವಸವನ್ನು ಬಿಟ್ಟರೆ ಪಂಚಾಂಗರೀತಿಯಾಗಿ ಭಾರತೀಯರ ನಿತ್ಯನೈಮಿತ್ತಿಕಾದಿ ಕಾಲಗಳ ನಿರ್ಣಯವು ಆಗದೆ ಧರ್ಮವು ಹಾಳಾಗಿ, ಅದಕ್ಕೆ ಬದಲು ತಾರೀಖು ಸನ್ ಇಸ್ವಿ ಮುಂತಾದ ವಿದೇಶೀಯರ ಪದ್ಧತಿಗೆ ಶರಣಾಗತರಾಗಬೇಕಾಗುವುದು. ಆದ್ದರಿಂದ ಭಾರತೀಯರು ಈ ದಿವಸವೇ ದೇವರು ಸೃಷ್ಟಿಸಿದ ಹೊಸದಿವಸವೆಂದು ಮಹರ್ಷಿವಾಕ್ಯಗಳಿಗೆ ಪ್ರಾಮಾಣ್ಯವನ್ನು ಕೊಟ್ಟು ನಾವುಗಳು ಕಳೆದ ಶುಕ್ಲಸಂವತ್ಸರದಲ್ಲಿ ಬಂದೊದಗಿದ್ದ ಅನೇಕ ದುಃಖಾಮೋದಗಳನ್ನು ದಾಟಿ ದೈವಾನುಗ್ರಹದಿಂದ ಈ ಶುಭಾವಹವಾದ ಪ್ರಮೋದಸಂವತ್ಸರನೆಂಬ ಮಿತ್ರನ ಬಳಿಗೆ ಸೇರಿರುವೆವು. ಆದ್ದರಿಂದ ಈ ದಿವಸ ಧರ್ಮಶಾಸ್ತ್ರಪದ್ಧತಿಗನುಸರಿಸಿ ಪ್ರಾತಃಕಾಲ ಶಿವನಾಮಸ್ಮರಣದಿಂದೆದ್ದು ತನ್ನ ಶೌಚಾದಿ ನಿತ್ಯವಿಧಿಗಳನ್ನು ತೀರಿಸಿ ಗೃಹವನ್ನು ತಳಿರುತೋರಣಾದಿಗಳಿಂದಲಂಕರಿಸಿ ತೈಲಾಭ್ಯಂಜನಸ್ನಾನವನ್ನು ಮಾಡಿ ಭದ್ರಪೀಠದಲ್ಲಿ ಶಾಂತಮನಸ್ಸಿನಿಂದ ಕುಳಿತು ಆಚಮನ ಪ್ರಾಣಾಯಾಮಗಳನ್ನು ಮಾಡಿ ಪುಷ್ಪಾಕ್ಷತಗಳನ್ನು ಕೈಯಲ್ಲಿ ಹಿಡಿದುಕೊಂಡು ಪಂಚಾಂಗದಲ್ಲಿ ಹೇಳಿರುವಂತೆ ದೇಶಕಾಲಗಳನ್ನು ಕೀರ್ತಿಸಿ "ಮಮ ಸಕುಟುಂಬಸ್ಯ ಸಂವತ್ಸರೇಸ್ಮಿನ್ ವರ್ಷಾಂತ ನಿತ್ಯಮಂಗಲಾವಾಪ್ತ್ಯರ್ಥಂ ಆರೋಗ್ಯಪ್ರಾಪ್ತ್ಯರ್ಥಂಚ ಗುರುಪೂಜಾಂ ನಿಂಬಪತ್ರಭಕ್ಷಣಂಚ ಕರಿಷ್ಯೇ" ಎಂದು ಪುಷ್ಪೋದಕವನ್ನು ಬಿಟ್ಟು ಗಣಪತಿಪೂಜೆಯನ್ನು ಮಾಡಿ ವಿಧಿವತ್ತಾಗಿ ತನ್ನ ಕುಲಗುರುಗಳನ್ನು ಷೋಡಶೋಪಚಾರಗಳಿಂದ ಪೂಜಿಸಿ ಯಥಾಶಕ್ತಿ ದಾನದಿಂದ ಸಂತೋಷಗೊಳಿಸಿ ನಿಂಬಪತ್ರ (ಬೇವು)ವನ್ನು ಸೇವಿಸಿ ತರುವಾಯ ತನ್ನ ಇಷ್ಟಮಿತ್ರರೊಂದಿಗೆ ಸುಖಭೋಜನವಂ ಮಾಡಿ ನೂತನಾಂಬರಗಳನ್ನು ಹೊದ್ದು ಈ ವರ್ಷದ ಪಂಚಾಂಗಶ್ರವಣವನ್ನು ಮಾಡಿ ಗುರುದೇವತಾದಿಗಳ ದರ್ಶನವನ್ನು ಮಾಡಬೇಕು.

ಇದರಲ್ಲಿ ಚಾಂದ್ರಮಾನದವರು ಚೈತ್ರ ಶುದ್ಧ ಪ್ರತಿಪತ್ತನ್ನೇ ಯುಗಾದಿಯ ಹಬ್ಬವೆಂದು ತಿಳಿಯುವರು. ಸೌರಮಾನದವರು ಮೇಷಮಾಸದ ಪ್ರಥಮ ದಿವಸವನ್ನೇ ಯುಗಾದಿಯ ಹಬ್ಬವೆಂದು ತಿಳಿಯುವರು. ಈ ಯುಗಾದಿಯದಿವಸ ಕೆಲದೇಶಗಳಲ್ಲಿ ತೈಲಾಭ್ಯಂಜನ ನಿಂಬಪತ್ರಭಕ್ಷಣ ಧ್ವಜಪೂಜೆ ಈ ಮೂರು ವಿಧಿಗಳನ್ನು ಮಾಡುವ ಸಂಪ್ರದಾಯವಿರುತ್ತದೆ. ಕೆಲ ದೇಶಗಳಲ್ಲಿ ತೈಲಾಭ್ಯಂಜನ ನಿಂಬಪತ್ರಭಕ್ಷಣ ಈ ಎರಡು ಮಾತ್ರ ವ್ಯವಹಾರದಲ್ಲಿರುತ್ತವೆ. ಈಮಾಸದಕೊನೆಯವರೆಗೂ ಕೆಲವುಪ್ರದೇಶಗಳಲ್ಲಿ ದೋಲೋತ್ಸವ ಗೌರೀಮಹೋತ್ಸವಾದಿಗಳನ್ನು ಮಾಡುವ ಸಂಪ್ರದಾಯವಿರುತ್ತದೆ. ಧರ್ಮಶಾಸ್ತ್ರಕಾರರು ಈ ಹೊಸದಿವಸ ಗೌರೀಪ್ರಾರ್ಥನೆ, ಕಲಿಮಲನಾಶಶಾಂತಿ ಪ್ರತಿಪದ್ವ್ರತ ಸೌಭಾಗ್ಯ ಮುಂತಾದ ಅನೇಕ ವ್ರತಗಳನ್ನು ಆಚರಿಸಬೇಕೆಂದು ಹೇಳಿದ್ದರೂ ಅವುಗಳೆಲ್ಲಾ ಬಿಲವಾಗಿ ತೈಲಾಭ್ಯಂಜನ ನಿಂಬಪತ್ರಭಕ್ಷಣ ಎಂಬೆರಡು ವಿಧಿಗಳು ಮಾತ್ರ ಬಳಕೆಯಲ್ಲಿ ಬಂದಿರುತ್ತವೆ. ಈಶ್ವರನ ಸೃಷ್ಟಿದಿವಸವಾದೀ ಯುಗಾದಿಯಿಂದಲೂ ಮುಂದಣ ಯುಗಾದಿವರೆವಿಗೂ ನಮ್ಮ ಭಾರತೀಯರೆಲ್ಲರೂ ಪರಸ್ಪರ ಸೌಹಾರ್ದದಿಂದ ಧನಕನಕ ವಸ್ತುವಾಹನಾದಿಯುಕ್ತರಾಗಿ ಗುರುದೈವಭಕ್ತಿಯಿಂದ ಶೋಭಿಸಲೆಂದು ಶ್ರೀ ರೇಣುಕಾದಿ ಪೂಜ್ಯಪಾದರನ್ನು ಅನನ್ಯಭಾವದಿಂದ ಪ್ರಾರ್ಥಿಸುವೆವು.

ಭಾ|| ಷ|| ಸೋಮಶೇಖರನಾಜ್ಞೆಯಿಂದಲಿ |
ಭೂಮಿಯೊಳು ವರಶೈವ ಮತವನು |
ಪ್ರೇಮದಿಂ ಸ್ಥಾಪಿಸಿದ ಪಂಚಾಚಾರ್ಯರೊಳು ನಮಗೆ ||
ನೇಮದಿಂ ನೆಲಸಿರಲಿ ಭಕ್ತಿಯು |
ಪಾಮಹಿಮರವರೊಲಿದು ನಮ್ಮ ಜು |
ಕಾಮಿತಂಗಳನೆಲ್ಲ ಕರುಣಿಸಲೀ ಪ್ರಮೋದದಲಿ ||

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ಲಾಯರುಗಳ ಮಹಾಸಭೆಯು ಮುಂದಿನ ತಿಂಗಳು 12-13 ನೆಯ ತಾರೀಖುಗಳ ದಿವಸ ಚಿತ್ರದುರ್ಗದಲ್ಲಿ ನೆರವೇರುವದು.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೆಂಬರುಗಳ ಮೀಟಿಂಗು ಬರುವ ಏಪ್ರಿಲ್ 3 ನೆಯ ತಾರೀಖು ಗುರುವಾರ ಮಧ್ಯಾಹ್ನ 12 ಘಂಟೆಗೆ ರಾಜಧಾನಿಯಲ್ಲಿ ನೆರವೇರುವದು.

ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾಗಿದ್ದು ನಿವೃತ್ತಿಹೊಂದಿದ ಸರ್ ಬ್ರಜೇಂದ್ರನಾಥ ಸೀಲ್‌ರವರ ಸ್ಥಾನಕ್ಕೆ ಸರಕಾರದವರು ಡಾ|| ಇ. ಪಿ. ಮೆಟ್ಕಾಫ್‌ರವರನ್ನು ನೇಮಿಸಿರುತ್ತಾರೆ.

ಕಳೆದ 21 ನೆಯ ತಾರೀಖು ರಾತ್ರಿ 11-30 ಘಂಟೆಗೆ ಬೆಂಗಳೂರುನಗರದ ಹೊಸತರಗುಪೇಟೆಯಲ್ಲಿರುವ ಶ್ರೀ ರಾಮಕೃಷ್ಣ ಎಣ್ಣೆಯ ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು 2000 ರೂ. ಗಳ ನಷ್ಟಸಂಭವಿಸಿತು.

ಬೆಂಗಳೂರು ಚೀಫ್-ಕೋರ್ಟು ಜಡ್ಜರಾದ ಶ್ರೀ|| ಸಿ. ಎಸ್. ದೊರೆಸಾಮಿ ಅಯ್ಯರ್‌ರವರ ಅಧಿಕಾರದ ಅವಧಿಯು ಬರುವ ಅಕ್ಟೋಬರು ತಿಂಗಳಿಗೆ ಮುಗಿಯುವದಿದ್ದು ಆ ಅವಧಿಯು ಎರಡು ವರ್ಷಗಳವರೆಗೆ ಹೆಚ್ಚಿಸಲ್ಪಟ್ಟಿರುವದೆಂದು ತಿಳಿದುಬರುತ್ತದೆ.

ರಾಜಧಾನಿಯ ಜಗನ್ಮೋಹನ ಬಂಗಲೆಯ ಚೌಕದಲ್ಲಿರುವ ಪ್ರಸಿದ್ಧ ಪರಿಮಳದ್ರವ್ಯ ವ್ಯಾಪಾರಿಗಳಾದ ಮ|| ರಾ|| ಎಂ. ವಿ. ನಾರಾಯಣರಾಯರು ವಿಶ್ವಾಸಪೂರ್ವಕವಾಗಿ ಕಳುಹಿಸಿರುವ ಶ್ರೀ ಪ್ರಮೋದಯುಗಾದಿಯ ಶುಭವಾದನ ಪತ್ರಿಕೆಯನ್ನು ಅತ್ಯಾದರದಿಂದ ಸ್ವೀಕರಿಸಿರುವೆವು.

ಈ ಸಾರೆ ನಡೆದ ಪ್ರಜಾಪ್ರತಿನಿಧಿಸಭೆಯ ಚುನಾವಣೆಗಳಲ್ಲಿ ಕೆಲವು ಅನ್ಯಾಯಗಳು ನಡೆದಿರುವವೆಂದು ಹೆಗ್ಗಡದೇವನಕೋಟೆ, ಮಳವಳ್ಳಿ, ಎಡತೊರೆ, ಮತ್ತು ಕೃಷ್ಣರಾಜಪೇಟೆ, ತಾಲೂಕಿನ ಉಮೇದುವಾರರು ಮೈಸೂರು ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ 9 ಮೊಕದ್ದಮೆಗಳನ್ನು ಮಾಡಿರುತ್ತಾರೆ.

ಈ ತಿಂಗಳು 17 ನೆಯ ತಾರೀಖಿನ ಸಂಚಿಕೆಯಲ್ಲಿ ಬೆಂಗಳೂರಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹೋತ್ಸವದ ಲೇಖದ ಕೆಳಗೆ ಕೊಟ್ಟಿರುವ ಹನ್ನೆರಡು ಜನರ ಹೆಸರುಗಳ ಮುಂದೆ ಇರಬೇಕಾಗಿದ್ದ "ಪ್ರತ್ಯಕ್ಷದರ್ಶಿಗಳು" ಎಂಬ ಶಬ್ದವು ಬಿಟ್ಟುಹೋಗಿರುವದರಿಂದ ಅದನ್ನು ವಾಚಕರು ಸರಿಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಬೆಂಗಳೂರುನಗರದ ಶ್ರೀ ಸದ್ಗುರು ಮಹಾದೇವ ಜೀವರಕ್ಷಾ ಜ್ಞಾನಪ್ರಚಾರಕ ಗೋರಕ್ಷಣ ಸಂಘದ ಪ್ರೆಸಿಡೆಂಟರಾದ ಶ್ರೀ|| ಗೋರಾಮಯ್ಯನವರು ಅತ್ಯಂತ ಶ್ರದ್ಧೆಯಿಂದ ಗೋರಕ್ಷಣೆಯ ಕಾರ್ಯವನ್ನು ನೆರವೇರಿಸುತ್ತಿರುವರು. ಆಸ್ತಿಕರೆಲ್ಲರೂ ಇವರಿಗೆ ತಮ್ಮ ಕೈಲಾದನುಟ್ಟಿಗೆ ಧನಸಹಾಯವನ್ನು ಮಾಡಿ ಗೋಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಹಿಂದೂಸ್ಥಾನದಲ್ಲೆಲ್ಲ ಪ್ರಸಿದ್ಧ ಸಿತಾರ್ ವಾದ್ಯಗಾರರೆಂದು ಪ್ರಖ್ಯಾತಿಯನ್ನು ಹೊಂದಿ ಕೆಲವು ವರ್ಷಗಳಿಂದಲೂ ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನಸಂಗೀತವಿದ್ವಾಂಸರಾಗಿದ್ದ ಬರಕತ್ ಉಲ್ಲಾಖಾನರವರು ಕಳೆದವಾರ ಕಾಲವಾದರು. ಪ್ರಿನ್ಸ್‌ಆಫ್ ವೇಲ್ಸ್‌ರವರೂ, ವೈಸ್ರಾಯರವರೂ ರಾಜಧಾನಿಗೆ ದಯಮಾಡಿದ್ದಾಗ ಇವರ ಸಂಗೀತವನ್ನು ಕೇಳಿ ತುಂಬಾ ಸಂತೋಷಪಟ್ಟಿದ್ದರು.

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಾಪಕರಾಗಿರುವ ವ್ಯಾಕರಣವಿದ್ವಾನ್ ವೇ|| ಬ್ರಂ|| ಶ್ರೀ|| ಎಂ. ಕೆ. ಶ್ರೀನಿವಾಸರಾಘವಾಚಾರ್ಯರು "ಸನಾತನಧರ್ಮಸಂಜೀವಿನಿ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿರುವರು. ಇದರಲ್ಲಿ ಸನಾತನಧರ್ಮವಿಷಯಗಳು ಸಪ್ರಮಾಣವಾಗಿ ಪ್ರಕಟಿಸಲ್ಪಡುತ್ತಿರುವುವು. ಸನಾತನಧರ್ಮಿಗಳೆಲ್ಲರೂ ಈ ಮಾಸಪತ್ರಿಕೆಯನ್ನು ಅಗತ್ಯವಾಗಿ ತರಿಸಿಕೊಂಡು ಓದಬೇಕು. ವಾರ್ಷಿಕಚಂದಾ 2-4-0.

ಅರಸೀಕೆರೆ ತಾಲೂಕು ದಿಬ್ಬೂರು ಗ್ರಾಮದ ಸ್ಕೂಲ್‌ಮ್ಯಾಸ್ಟರ್ ಮ|| ರಾ|| ಎ. ಚನ್ನಪ್ಪನವರು ಏಪ್ರಿಲ್ ಒಂದನೆಯ ತಾರೀಖಿನಿಂದ ತಮ್ಮ ರಜಾ ಮುಗಿಯುವವರೆಗೆ ಪಂಚಾಚಾರ್ಯಪ್ರಭಾ ಪತ್ರಿಕೆಯ ಹಾಗೂ ರೇಣುಕವಿಜಯದ ಪ್ರಚಾರದ ಬಗ್ಗೆ ಅಲ್ಲಲ್ಲಿ ಸಂಚಾರ ಮಾಡುವದರಿಂದ ಸದ್ಭಕ್ತಮಾಹೇಶ್ವರರೆಲ್ಲರೂ ಅವರ ಶ್ರಮವನ್ನು ಸಾರ್ಥಕಮಾಡಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ವೀರಶೈವಮತದಲ್ಲಿರತಕ್ಕ ಸುಧಾರಕರೆಲ್ಲರೂ ಸದರಿ ಸ್ಕೂಲ್‌ಮ್ಯಾಸ್ಟರವರ ಅನುಕರಣವನ್ನು ಮಾಡಿದ್ದಾದರೆ ಈ ಸಮಾಜದ ಸೌಭಾಗ್ಯಕ್ಕೆ ಎಣೆಯೇ ಇಲ್ಲವೆಂದು ಹೇಳಬಹುದು.

ವರ್ತಮಾನಸಂಗ್ರಹ.

ಶಾರದಾ ಬಾಲ್ಯವಿವಾಹನಿರೋಧಕಶಾಸನದ ಭಯದಿಂದ, ವಿಶಾಖಪಟ್ಟಣ ಡಿಸ್ಟ್ರಿಕ್ಟಿನಲ್ಲಿ ಸುಮಾರು 10,000 ವಿವಾಹಗಳು ನೆರವೇರಿಸಲ್ಪಟ್ಟವು.

ಹಾರ್‌ವರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಹಾರ್ಲೋಶ್ಯಾಪ್ಲೆ ಎಂಬವರು ಭೂಮಿಗಿಂತಲೂ ದೊಡ್ಡದಾಗಿರುವ ಮತ್ತೊಂದು ಗ್ರಹವನ್ನು ಹೊಸದಾಗಿ ಶೋಧಿಸಿರುವರಂತೆ!

ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂಬ ಅಪವಾದನೆಯ ಮೇಲೆ ಕಲ್ಕತ್ತೆಯಲ್ಲಿ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗಾಗಿ ರಂಗೂನಿಗೆ ಒಯ್ಯಲ್ಪಟ್ಟಿದ್ದ ಶ್ರೀ ಸೇನಗುಪ್ತರವರಿಗೆ ಮ್ಯಾಜಿಸ್ಟ್ರೇಟರು ಹತ್ತುದಿನಗಳ ಶಾಬಾಸಜೆಯನ್ನು ವಿಧಿಸಿದರು.

ಇಂಗ್ಲೆಂಡಿಗೂ ಫ್ರಾನ್ಸಿಗೂ ಮಧ್ಯದಲ್ಲಿರುವ 60 ಮೈಲು ಉದ್ದವುಳ್ಳ ಇಂಗ್ಲಿಷ್ ಕಡಲಾಳುವೆಯ (ಸಮುದ್ರದ) ಕೆಳಗೆ ರಸ್ತೆಯನ್ನು ಮಾಡಿ ರೈಲ್ವೇಪ್ರಯಾಣಕ್ಕೆ ಅನುಕೂಲಪಡಿಸುವ ಪ್ರಯತ್ನಗಳು ನಡೆಯುತ್ತಿರುವುವು. ಇದಕ್ಕೆ ಸುಮಾರು 35,00,00,000 ರೂ. ಗಳು ಖರ್ಚಾಗುವವೆಂದು ಅಂದಾಜು ಮಾಡಲ್ಪಟ್ಟಿರುವದು.

ಲ್ಯಾಂಕಾಷೈರಿನ ಬಟ್ಟೆಯ ವ್ಯಾಪಾರವು ಬಹಳ ಹೀನಸ್ಥಿತಿಗೆ ಬಂದಿರುವದು. ಅದನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಅಲ್ಲಿಯ ಸ್ತ್ರೀಯರು ಬರುವ ಬೇಸಿಗೆಯಲ್ಲಿ ಪ್ರತಿಯೊಬ್ಬರೂ 3 ಉಡುಪುಗಳಿಗೆ ಕಡಿಮೆಯಿಲ್ಲದಂತೆ ಕೊಂಡುಕೊಳ್ಳಬೇಕೆಂದು ನಿರ್ಧರಿಸಿರುವರಲ್ಲದೆ ಇತರರೂ ಅದರಂತೆ ಮಾಡಬೇಕೆಂದು ಪ್ರಯತ್ನಪಡುತ್ತಿರುವರು.

ಕಳೆದ ವಾರ ಒಬ್ಬ ಕಳ್ಳನು ಹೈದರಾಬಾದ್ ಸಂಸ್ಥಾನದ ನೈಜಾಮರವರ ಅರಮನೆಯ ಉಪ್ಪರಿಗೆಗೆ ಹೇಗೋ ಪ್ರವೇಶಮಾಡಿ ಅಮೂಲ್ಯವಾದ ಕೆಲವು ಸೀರೆ ಮುಂತಾದುವುಗಳನ್ನು ಕಳುವು ಮಾಡಿಕೊಂಡು ಹೋಗುವಷ್ಟರಲ್ಲಿ ಅಕಸ್ಮಾತ್ ಆ ಕೊಠಡಿಗೆ ಬೆಂಕಿ ಹತ್ತಲು, ಕಾವಲುಗಾರರು ಬೆಂಕಿಯನ್ನು ಆರಿಸಲು ಓಡಿಬಂದು ಕಳ್ಳನನ್ನು ದಸ್ತಗಿರಿ ಮಾಡಿದರು.

ಚೌಲಾನೆಂಬ ಭಾರತೀಯ ತರುಣನು ಇಂಜನಿಯರೆಂಬ ಓರ್ವ ಪಾರ್ಸಿ ತರುಣನೊಡನೆ ಕರಾಚಿಯಿಂದ ವಿಮಾನದಲ್ಲಿ ಹೊರಟು ಸುರಕ್ಷಿತವಾಗಿ ಇಂಗ್ಲೆಂಡನ್ನು ತಲಪಿದನು. ಇಂಗ್ಲೆಂಡಿನಲ್ಲಿ ವಿಮಾನದಿಂದ ಇಳಿಯುವಾಗ್ಗೆ ಅನೇಕ ದೊಡ್ಡ ಅಧಿಕಾರಿಗಳೂ ಹಾಗೂ ಸಾವಿರಾರು ಜನರೂ ನೆರೆದಿದ್ದು ಸ್ವಾಗತವನ್ನು ಬಯಸಿದರು. ವೈಸರಾಯರವರು ತಂತಿ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದುದಲ್ಲದೆ ಚೌಲನಿಗೆ 7,500 ರೂ. ಗಳ ಬಹುಮಾನವನ್ನು ಕೊಟ್ಟರು.

ಮಹಾತ್ಮಾಗಾಂಧಿಯವರಿಗೆ "ಕರ್ನಲ್ ಬೆಡಿ" ಯವರ ಪತ್ರ.

ಅಹಿಂಸೆಯ ಪರೀಕ್ಷಾಕಾಲ.

(ಮಾರ್ಚಿ 23ನೆಯ ತಾರೀಖಿನ "ಸಂಡೆ ಟೈಂಸ್" ಪತ್ರಿಕೆಯಿಂದ)

ಅಹಿಂಸಾತ್ಮಕ ಅಸಹಕಾರ ಚಳವಳಿಯೇ ಸ್ವರಾಜ್ಯಪ್ರಾಪ್ತಿಗೆ ಸುಲಭದಾರಿಯೆಂದು ಮಹಾತ್ಮಾಗಾಂಧಿಯವರು ಹೇಳುವಂತೆ ಹಿಂಸೆಯೇ (ಯುದ್ಧ) ಸ್ವರಾಜ್ಯಪ್ರಾಪ್ತಿಗೆ ಮಾರ್ಗವೆಂದು ವಾದಿಸುವ ಪಕ್ಷವೂ ಒಂದಿರುವದು. ಇದಕ್ಕೆ "ರೆವಲ್ಯೂಷನರಿ ಪಾರ್ಟಿ" ಎಂದು ಕರೆಯುವರು. ಈ ಹಿಂಸಾಪಕ್ಷದವರ ಸೆಕ್ರೆಟರಿಯೆನಿಸಿದ ಕರ್ನಲ್ ಬೆಡಿ ಎಂಬವರು ಮಹಾತ್ಮಾಗಾಂಧಿಯವರಿಗೆ ಬರೆದ ಪತ್ರವೂ ಹಾಗೂ ಆ ಪತ್ರದ ವಿಷಯದಲ್ಲಿ ಮಹಾತ್ಮರ ಅಭಿಪ್ರಾಯವೂ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಲ್ಪಟ್ಟಿರುವದು. ಕರ್ನಲ್ ಬೆಡಿಯವರು ತಮ್ಮ ಪತ್ರದಲ್ಲಿ,

ಪರಮಪೂಜ್ಯಮಿತ್ರಗಾಂಧಿಯವರೇ!

ಅಹಿಂಸಾಮೂರ್ತಿಯೇ! ನಿಮ್ಮನ್ನು ಹೇಗೆ ಸಂಬೋಧಿಸಬೇಕೆಂಬುದೇ ನಮಗೆ ತಿಳಿಯದಾಗಿದೆ. ನಮ್ಮ ನಿಮ್ಮ ತತ್ತ್ವಗಳು ಬೇರೆಬೇರೆಯಾದರೂ ನೀವೂ ನಮ್ಮ ಮಿತ್ರರೇ ಆಗಿರುವಿರಿ. ಬಡವರ ಮಿತ್ರರೇ! ನೀವು ಘನತೆ ಹೊಂದಿದ ವೈಸ್ರಾಯ್ ಲಾರ್ಡ್ ಅರ್ವಿನರವರಿಗೆ ಬರೆದ ಪತ್ರದಲ್ಲಿ ಹಿಂಸಾತತ್ತ್ವದ ಹಾಗೂ ಹಿಂಸಾಪಕ್ಷದವರ ಬಲಹೀನತೆಯ ವಿಷಯವಾಗಿ ಬರೆದಿದ್ದುದನ್ನು ಅತ್ಯಂತ ಸಂತೋಷದಿಂದ ಓದಿದೆವು. ಶಾಂತಿಸೈನ್ಯಾಧಿಪತಿಗಳೇ? ನೀವು ಅಸಹಕಾರತತ್ತ್ವದಿಂದ ಎರಡನೆಯ ಸ್ವಾತಂತ್ರ್ಯಸಂಗ್ರಾಮವನ್ನು ಪ್ರಾರಂಭಿಸಿರುವ ಈ ಮಾರ್ಚಿ 12ನೆಯ ತಾರೀಖಿನ ಪವಿತ್ರದಿನದಲ್ಲಿ ನಾವು ನಮ್ಮ ತತ್ತ್ವವನ್ನು ಮರೆತು ಅತ್ಯಂತ ಸಂತೋಷದಿಂದ ನಿಮ್ಮ ಜಯಘೋಷನನ್ನು ಮಾಡುವೆವು.

ನಾವು ಈ (ಮಾರ್ಚಿ 12ನೆಯ ತಾರೀಖಿನ) ದಿವಸ ಭರತಖಂಡದಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿರುವ ಕೋಟ್ಯವಧಿ ಜನಗಳ ರಕ್ಷಣಭಾರವನ್ನು ನಿಮಗೆ ಒಪ್ಪಿಸಿ ರಣರಂಗದಿಂದ ಹಿಮ್ಮೆಟ್ಟುವೆವೆಂದು ನಿಮಗೆ ಭರವಸೆಯನ್ನು ಕೊಡುವೆವು. ಮತ್ತು ಇಲ್ಲಿಂದ ಸಂಪೂರ್ಣ ಮೂರುವರ್ಷಗಳವರೆಗೆ ನಾವು ದೇಶದಲ್ಲೆಲ್ಲ ನಮ್ಮ ಹಿಂಸಾತ್ಮಕ ತತ್ತ್ವವನ್ನು ಮಾತ್ರ ಪ್ರಚಾರಮಾಡುತ್ತ ನಮ್ಮ ಪಕ್ಷವನ್ನು ಬಲಪಡಿಸುತ್ತಿರುವೆವು. ಭರತಖಂಡದ ಸಾಧುವರೇಣ್ಯನೇ? ಈ ಅವಧಿಯಲ್ಲಿ ನಿಮ್ಮ ಅಹಿಂಸಾತ್ಮಕ ತತ್ತ್ವದ ಅಪಜಯವನ್ನು ಹೊಂದುವದಾದರೆ, ಆ ವೇಳೆಗೆ ನಮ್ಮ ಪ್ರಯತ್ನಗಳು ಸಹ ಸಮರ್ಪಕವಾಗಿ ತೋರುವದಾದರೆ 1933 ನೆಯ ಮಾರ್ಚಿ 12 ನೆಯ ತಾರೀಖಿನ ದಿವಸ ಸ್ವಾತಂತ್ರ್ಯದ ಸಲುವಾಗಿ ಹಿಂಸಾತ್ಮಕ ಸಮರವನ್ನು ಪ್ರಾರಂಭಿಸುವೆವು.

ಕೋಟ್ಯವಧಿ ಪ್ರಜೆಗಳನ್ನು ಪರರಾಜ್ಯವನ್ನು ಪಾರತಂತ್ರ್ಯದ ಬಂಧನದಿಂದ ತಪ್ಪಿಸಲು, ಹಿಂಸಾತ್ಮಕ ಚಳವಳಿಯೇ ಕಡೆಯ ಮಾರ್ಗವೆಂದು ನಿಮ್ಮ "ಯಂಗ್ ಇಂಡಿಯಾ" ಪತ್ರಿಕೆಯ ಮೂಲಕ ಪೌರ್ವಾತ್ಯದೇಶದ ಹಿಂಸಾತ್ಮಕಪಕ್ಷದ ತರುಣರಿಗೆ ಒತ್ತಿಹೇಳಬೇಕೆಂದು ಬಯಸುವೆವು. ನಿಮ್ಮ ಪ್ರಯತ್ನವು ಫಲಿಸುವ ಸಲುವಾಗಿಯೂ, ಹಾಗೂ ನಮ್ಮೆಲ್ಲರ ಸಮಾನೋದ್ದೇಶವಾದ ಸ್ವಾತಂತ್ರ್ಯಸಂಪಾದನೆಯ ಸಲುವಾಗಿಯೂ, ಈ ವಿಷಯಗಳನ್ನು ತಪ್ಪದೆ ಪ್ರಸಿದ್ಧಪಡಿಸುವಿರೆಂದು ನಂಬಿರುವೆವು.

ಈಗಿನ ಪ್ರಯತ್ನದ ಫಲವು ಎಷ್ಟೇ ಅನರ್ಥಕಾರಿಯಾಗಿ ಪರಿಣಮಿಸಿದರೂ ದೇಶದ ಹಿತದಲ್ಲಿ ದೃಷ್ಟಿಯಿಟ್ಟು ನಮ್ಮ ದೇಶದ ಕೋಟ್ಯವಧಿ ಬಡಪ್ರಜೆಗಳ ಅದೃಷ್ಟಪರೀಕ್ಷೆಯನ್ನು ಮೂರು ವರ್ಷಗಳವರೆಗೆ (1930 ನೆಯ ಮಾರ್ಚಿ 12ನೆಯ ತಾರೀಖಿನಿಂದ 1933 ನೆಯ ಮಾರ್ಚಿ 11 ನೆಯ ತಾರೀಖಿನವರೆಗೆ) ಓರ್ವ ಸಾಧುವರೇಣ್ಯನಿಗೆ ಒಪ್ಪಿಸಿ "ಗಾಂಧಿ ತತ್ತ್ವ"ದ ಪರೀಕ್ಷೆಗೆ ತಡೆಯಿಲ್ಲದ ಅವಕಾಶವನ್ನು ಕೊಟ್ಟು, ತಮ್ಮ ಪ್ರಯತ್ನಗಳೆಲ್ಲವನ್ನೂ ನಿಲ್ಲಿಸಿರಬೇಕೆಂದು ಹಿಂಸಾತ್ಮಕ ಚಳವಳಿಯಿಂದ ಸ್ವಾತಂತ್ರ್ಯಸಂಪಾದನೆಯಾಗುವದೆಂಬ ನಂಬುಗೆಯುಳ್ಳವರೆಲ್ಲರನ್ನೂ ಪ್ರಾರ್ಥಿಸುವೆವು. ಈ ಮೂರು ವರ್ಷಗಳ ಅವಧಿಯಲ್ಲಿ ನಾವು ಭರತಖಂಡದಲ್ಲೆಲ್ಲಾ ನಮ್ಮ ತತ್ತ್ವವನ್ನು ಪ್ರಚಾರಮಾಡಿ ಜನಗಳನ್ನೆಲ್ಲ ಯುಕ್ತಮಾರ್ಗದಲ್ಲಿ ತರಪೇತು ಮಾಡಿ, ಎಲ್ಲ ಗುಪ್ತಸಂಘಗಳೂ ಬಹಿರಂಗವಾಗಿ ಏಕಮತ್ಯದಿಂದ ಕಾರ್ಯಾರಂಭಮಾಡಲು ಸಿದ್ಧಪಡಿಸಿಕೊಳ್ಳುವೆವು.

1933 ನೆಯ ಮಾರ್ಚಿ 12 ನೆಯ ತಾರೀಖಿನ ದಿವಸ ಅಷ್ಟರಲ್ಲಿ ನಿಮ್ಮ ಅಹಿಂಸಾತ್ಮಕ ಸತ್ಯಾಗ್ರಹವು ಫಲರೂಪವಾಗಿರದಿದ್ದರೆ ಹಾಗೂ ನಮ್ಮ ಪ್ರಯತ್ನಗಳು ಸಹ ಅನುಕೂಲವಾಗಿದ್ದರೆ ಸ್ವಾತಂತ್ರ್ಯದ ಹಿಂಸಾತ್ಮಕ ಯುದ್ಧವನ್ನು ಬಹಿರಂಗವಾಗಿ ಪ್ರಾರಂಭಿಸುವೆವು. ಸ್ವಾತಂತ್ರ್ಯದ ಯುದ್ಧವನ್ನು ಪ್ರಾರಂಭಿಸುವದಕ್ಕೆ ಪೂರ್ವದಲ್ಲಿ ಆಳರಸರ ಸೈನ್ಯಕ್ಕೆ ಹೊಸಹೊಸ ಜನರು ಸೇರಿಕೊಳ್ಳದಂತೆ ನಾವು ತಕ್ಕ ಪ್ರಯತ್ನಗಳನ್ನು ಮಾಡಿಕೊಳ್ಳಬೇಕಾಗಿರುವದು. ಹಾಗೂ ನಮ್ಮ ಸ್ವಾರ್ಥತ್ಯಾಗ, ಆತ್ಮಯಜ್ಞ ಮತ್ತು ಸ್ವಾಭಿಮಾನಗಳಿಂದ, ನಾವು ಕೇವಲ ರಕ್ತಪಾನಾತುರರಾದ ಹಿಂಸಾತ್ಮಕ ಪ್ರಾಣಿಗಳಲ್ಲವೆಂಬುದನ್ನು ಪ್ರಪಂಚಕ್ಕೆಲ್ಲ ತಿಳಿಯಪಡಿಸಬೇಕಾಗಿರುವದು. ಏಕಮತ್ಯದ ಬಲದಿಂದ ಭಾರತಮಾತೆಗೆ ಶ್ರೇಯಸ್ಸನ್ನು ಬಯಸಿರಿ! ಆಚಂದ್ರಾರ್ಕ ಕೀರ್ತಿಯನ್ನು ನೀವು ಸೂರೆಮಾಡಬಲ್ಲಿರಿ!

ಇತಿ ನಿಮ್ಮ ಸಹಚರರಾದ,
ಆರ್. ಎಲ್. ಆರ್. ಎಗ್ಜಿಕ್ಯೂಟಿವ್ ಕೌನ್ಸಿಲ್ಲಿನ ಮೆಂಬರುಗಳ ಪರವಾಗಿ

ದೆಹಲಿ, ಕರ್ನಲ್ ಬೆಡಿ,
11-3-1930. ಸೆಕ್ರೆಟರಿ.

ಎಂದು ಬರೆದಿರುವರು.

ಈ ಪತ್ರವನ್ನು ಕುರಿತು ಮಹಾತ್ಮಾ ಗಾಂಧಿಯವರು "ಮೇಲಿನ ಪತ್ರವನ್ನು ಇದ್ದದ್ದು ಇದ್ದಹಾಗೆ ನಾನು ಪ್ರಸಿದ್ಧಪಡಿಸಿರುವೆನು. "ಕರ್ನಲ್ ಬೆಡಿ" ಯವರಾರೆಂಬುದನ್ನು ನಾನರಿಯೆನು. ಅವರ ಪತ್ರವು ಪರಿಹಾಸ್ಯಕ್ಕಾಗಿ ಬರೆಯಲ್ಪಡದೆ, ದೃಢವಾದ ಉದ್ದೇಶದಿಂದಲೇ ಬರೆಯಲ್ಪಟ್ಟಿರುವದಾದರೆ, ಹಿಂಸಾತ್ಮಕಪಕ್ಷದವರನ್ನು ಅವರ ಮಹತ್ವದ ತೀರ್ಮಾನಕ್ಕಾಗಿ ಅಭಿವಂದಿಸುವೆನು. ನನಗೆ ದೊರೆತಿರುವ ಮೂರುವರ್ಷದ ಅವಧಿಯು ಅಹಿಂಸಾತ್ಮಕ ಚಳವಳಿಯು ಫಲರೂಪವಾಗಿ ಪರಿಣಮಿಸಲು ಅವಶ್ಯಕವಿದ್ದ ಕಾಲಕ್ಕಿಂತಲೂ ಹೆಚ್ಚಾಗಿಯೇ ಇರುವದು. ಹಿಂಸಾತ್ಮಕ ಚಳವಳಿಯ ಪಕ್ಷದವರು ತಟಸ್ಥರಾಗಿರುವ ಈ ಮೂರುವರ್ಷಗಳ ಅವಧಿಯಲ್ಲಿ ನಾನು ಜಯ ಸಂಪಾದನೆಯನ್ನು ಮಾಡದಿದ್ದರೆ ಅಹಿಂಸಾತ್ಮಕ ಸತ್ಯಾಗ್ರಹದ ಚಳವಳಿಯ ಪ್ರತಿನಿಧಿಯೆನಿಸಲು ಅಯೋಗ್ಯನಾಗುವೆನು. ಆದುದರಿಂದ ಹಿಂಸಾತ್ಮಕಪಕ್ಷದವರು ಈ ಅವಧಿಯಲ್ಲಿ ತಮ್ಮ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ನಿಲ್ಲಿಸಿ, ಸತ್ಯಾಗ್ರಹಕಾಲದ ಮಧ್ಯದಲ್ಲಿ ಯಾವ ಅನಾಹುತವು ನಡೆಯದಂತೆ ನೋಡಿಕೊಳ್ಳುವರೆಂದು ಭಾವಿಸುತ್ತೇನೆ" ಎಂದು ಬರೆದಿರುವರು.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂತು

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ.

ಬಿಜಾಪುರ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಇಲ್ಲಿಯ ಹಿರೇಮಠದಲ್ಲಿ ರಾ. ಫ. ಗು. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿಯ ಶ್ರೀಗಳು ರೇಣುಕಭಗವತ್ಪಾದರ ಮಹಿಮಾತಿಶಯ ವಿಷಯವನ್ನು ಹೇಳುವಾಗ್ಗೆ ಸುಗ್ರೀವದಲ್ಲಿ, ಅಗಸ್ತ್ಯನ ನಾಮನಿರ್ದೇಶವಿದ್ದಂತೆ ಅವನ ಗುರುಗಳಾದ ಶ್ರೀಮದಾಚಾರ್ಯರ ಬಗ್ಗೆ ಉಲ್ಲೇಖವಿಲ್ಲದಿರುವ ಕಾರಣವೇನು? ಹಾಗೆ ರಾಮಾಯಣದಲ್ಲಿ ಅಗಸ್ತ್ಯ ವಿಭೀಷಣರ ಪ್ರಸ್ತಾಪವಿರುತ್ತಿರಲು ಆಚಾರ್ಯರ ಹೆಸರನ್ನೇಕೆ ಅಲ್ಲಿ ನಿರ್ದೇಶವಾಡಿರುವದಿಲ್ಲ? ಮುಂತಾದ ಐತಿಹಾಸಿಕ ಆಕ್ಷೇಪಗಳನ್ನು ಸಪ್ರಮಾಣವಾಗಿ ಖಂಡಿಸಿ ಶ್ರೀಮದಾಚಾರ್ಯರು ಬಹು ಪುರಾತನರೆಂಬುದನ್ನು ಸೋಪಪತ್ತಿಕವಾಗಿ ವಿಶದಪಡಿಸಿದರು. ಸಭಾಧ್ಯಕ್ಷರಾದ ರಾವಸಾಹೇಬರು ಶ್ರೀಗಳ ಹೇಳಿಕೆಯನ್ನು ಮನಸಾ ಒಪ್ಪಿಕೊಂಡದ್ದಲ್ಲದೆ ಶ್ರೀಗಳ ಉಪನ್ಯಾಸವು ಬಹು ಮಾರ್ಮಿಕವಾಗಿಯೂ ಈಗಿನ ಸುಶಿಕ್ಷಿತರ ಮನಸ್ಸಿಗೆ ಪರಿಣಾಮವಾಗುವಂತೆಯೂ ಇದೆ ಎಂದು ಹೇಳಿದರು. ಅಲ್ಲದೆ ಈಗಿನ ಕಾಲದಲ್ಲಿ ಇಂಥ ವಿಷಯಗಳನ್ನು ಶ್ರೀಗಳವರು ವಿವೇಚಿಸುವ ಪದ್ಧತಿಯನ್ನು ಅನುಸರಿಸಿಯೇ ಪ್ರತಿಪಾದಿಸುವದು ಉತ್ತಮವೆಂದು ಶ್ಲಾಘಿಸಿದರು. ಮತ್ತು ಅಧ್ಯಕ್ಷರಾದರೂ ಶ್ರೀಮದಾಚಾರ್ಯರಲ್ಲಿ ಪೂಜ್ಯಭಾವನೆಯು ಎಲ್ಲರಿಗೂ ಉಂಟಾಗುವಂತೆ ತಮ್ಮ ಭಾಷಣದಲ್ಲಿ ವ್ಯಕ್ತಗೊಳಿಸಿದರು. ಮತ್ತು ಬಿಜಾಪುರ ತಾಲೂಕ ಹೆಡ್‌ಮಾಸ್ತರ್ ಸಿದ್ಧಲಿಂಗಪ್ಪನವರು ಮಹಾಂತಣ್ಣನವರ ಹಾಗೂ ಶ್ರೀಯುತ ಲಕ್ಕಪ್ಪ ಮಾಸ್ತರರು ಈ ಉಭಯರು ತಾವು ರಚಿಸಿದ ಶ್ರೀಮದಾಚಾರ್ಯರ ಸ್ತುತಿಪದಗಳನ್ನು ಸಭೆಯಲ್ಲಿ ಓದಿದರು. ಆಮೇಲೆ ಶ್ರೀಮದಾಚಾರ್ಯರ ಭಾವಚಿತ್ರಕ್ಕೆ ಪೂಜಾಮಂಗಳಾರತಿ ಮೊದಲಾದವುಗಳು ನಡೆಯಿಸಲ್ಪಟ್ಟವು.

ಓರ್ವ ವೀರಶೈವ.

ಓಂ ನಮೋ ಭಗವತೇ ರೇಣುಕಾಚಾರ್ಯಾಯ.

ರೇಣುಕಪಂಚಕಂ.

ಪರಮಪುರುಷಸಾಧ್ಯಂ ಸರ್ವಲೋಕಪ್ರಸಿದ್ಧಂ |
ಪರಶರದನುಬದ್ಧಂ ತಾಪಸವ್ರಾತವೃದ್ಧಂ ||
ಶರಣಶರಣಮಾದ್ಯಂ ಬೌದ್ಧವಿದ್ಯಾವಿರುದ್ಧಂ |
ಪರಶರಗುರುದೇವಂ ರೇಣುಕಾಚಾರ್ಯಮೀಡೇ ||೧||

ವಿರತಕುಲಲಲಾಮಂ ಶೈವತತ್ತ್ವಾಭಿರಾಮಂ |
ಕರಣಗುಣವಿದೂರಂ ಕಾಮಸಂಹಾರಧೀರಂ ||
ಮರಣರಹಿತರೂಪಂ ಸಂಸ್ಮೃತಾಶೇಷತಾಪಂ |
ಪರಿವೃತವರಭೂಪಂ ರೇಣುಕಾಚಾರ್ಯಮೀಡೇ ||೨||

ಅಮಿತಶಿವಕಲಾಢ್ಯಂ ಲಿಂಗತೇಜೋಬಲಾಢ್ಯಂ |
ಪ್ರಮಥಗಣವರೇಣ್ಯಂ ಲಿಂಗಪೂಜಾಧುರೀಣಂ ||
ಸ್ವಮತರಚಿತಸೂತ್ರಂ ಕಾಂತಿಸಂವಿದ್ಧಗಾತ್ರಂ |
ಅಮರನಮನಪಾತ್ರಂ ರೇಣುಕಾಚಾರ್ಯಮೀಡೇ ||೩||

ವಿನಮಿತಜನಪಾಲಂ ವೀರಶೈವಾಲಿಲೋಲಂ |
ವಿನುತವಿಬುಧಪಕ್ಷಂ ವೇದತತ್ತ್ವಾರ್ಥದಕ್ಷಂ ||
ತನುಗುಣಗಣಶೂನ್ಯಂ ವಿಶ್ವವಿಶ್ವೈಕಮಾನ್ಯಂ |
ಘನತರಚರಮಾರ್ಯಂ ರೇಣುಕಾಚಾರ್ಯಮೀಡೇ ||೪||

ನಿಗಮನಿಕರವೇದ್ಯಂ ಪಟ್ಸ್ಥಲಾಚಾರಬೋಧ್ಯಂ |
ಸುಗುಣಿಹೃದಯಹೃದ್ಯಂ ಸಂಧೃತಾಶೇಷವಿದ್ಯಂ ||
ಜಗಗತಿಮನವದ್ಯಂ ಸರ್ವಲೋಕೈಕಸಿದ್ಧಂ |
ಅಗಣಿತಮಹಿಮಾನಂ ರೇಣುಕಾಚಾರ್ಯಮೀಡೇ ||೫||

ಗುರುಪದಾಬ್ಜಭೃಂಗ,
ಸಿದ್ಧಲಿಂಗಪ್ಪ ಮಹಾಂತಣ್ಣನವರ,
ಹೆಡ್‌ಮಾಸ್ತರ್, ವಿಜಾಪುರ ತಾ||

ಶ್ರೀ ಜಗದ್ಗುರು ರೇಣುಕಶಿವಾಚಾರ್ಯ ಸ್ತೋತ್ರ.

ಕಂದ ||
ಪಿರಿದಲ್ಲ, ಕಿರಿಯರಕಾ |
ಭರಣಮಿದಲ್ಲವುಲವಸ್ತ್ರಭೂಷಣಮಲ್ಲಂ ||
ಅರಿಯದ ಮುಗ್ಧನ ಬಗೆಯಿದು |
ಕಿರುಗಾಣಿಕೆ, ಗುಮಪೆ ಕೊಂಡುಕರುಣಿಪುದಯ್ಯಂ ||೧||

ತಿರಿದೆನ್ನ ಬಗೆಯ ವಿಸಿನದೊ |
ಳರದರಸಿದೆ ನೊಂದೆ ತಂದೆ ನೆಳೆಯೆಸಳಿಂದಂ ||
ಅರಿವಿಡಿದು ಮಿರುಗುವರಲವ |
ಪರಿಶೋಭಿಪ ನಿಮ್ಮ ಪಾದಕೀವೆಂ ಗುರುವೇ ||೨||

ರಸಿಕರ ಹೃದಯಮನರಳಿಪ |
ಪೊಸಗಂಪಿನ ಮೋಹದರಲಮಲ್ಲಿದು ಕಾಡೊಳ್ ||
ಸಸುನಗೆಯಿಂ ನಗುವೊಂದೇ |
ಕುಸುಮಂ ನಿನಗುಚಿತಮೆಂದು ನೀಡುವೆನಭವಾ ||೩||

ಕುಸುಮವಿದೊಂದನೆ ಕೊಂಡಿಂ |
ದಸವಾಕಾಶ್ಯಾನಸನೆಮುದ್ಧವನೆ ನೀನೆನ್ನೊಳ್ ||
ಲಸಿತಸುಗಂಧದ ಕುಸುಮಂ |
ಪ್ರಸರಮೆ ವಿಕಸಿಸುವ ವರದ ಕರುಣಿಪುದೊಲವಿಂ ||೪||

ಅತಿಮಹಿಮಾತ್ಮಂ ನೀನಾ |
ನತಿಮಂದನು ನಿನ್ನ ದಿವ್ಯಘನತೆಯನೆನ್ನೀ |
ಮತಿಯರಿಯಲೆಂತು ಸಾಧ್ಯವು? |
ಕ್ಷಿತಿಧರವರಮೆನಿಸಿತುತೋರುವುದು ಕನ್ನಡಿಯೊಳ್ ||೫||

ಅಳವೇಂ ಬುಧರುಂ ನಿನ್ನಂ |
ಸಲೆ ಪೊಗಳಲ್ಕಾಂ ಪೊಗಳ್ವೆನೆಂಬುದು ಮೌಢ್ಯಂ ||
ಜಲದಲಿ ತೋರುವ ಚಂದ್ರನ |
ಕಲೆಯಂ ಕೋರುವನು ಕಂದನೋ ಕೋವಿದನೋ ||೬||

ಬಸಿಯಿಸಿ ಕೊಲ್ಲಿಪಾಕೆಯ |
ಘನತರಲಿಂಗದೊಳಗಸ್ತ್ಯನಿಗೆ ತತ್ತ್ವಗಳಂ ||
ಮನಗಾಣಿಸಿದೈ ರೇಣುಕ |
ಗಣಕುಲಪತಿ, ನಿನ್ನ ಪಾದನೀರಜಕುರುಳ್ವೆಂ ||೭||

ಶಿವನಿಂದೈದಿದ ಲಿಂಗಿಯ |
ಶಿವನೊಳೆ ಬೆರೆಯುವ ವಿಶಿಷ್ಟತತ್ತ್ವಾದ ತಿರುಳಂ ||
ಭುವನಕೆ ತಿಳಿಸಲು ನೀನು |
ದ್ಭವಿಸಿದ ಲಿಂಗದಿ ಸಮಾಧಿಗೊಂಡೆಯೊ ಗುರುವೇ ||೮||

ಸೊಕ್ಕಿದ ಬೇಕೊಲ್ಲೆಂಬುವ |
ರಕ್ಕಸರಿಹರೆನ್ನೊಳಧಿಕ ಕಷ್ಟಂಗೊಳಿಸರ್ ||
ರಕ್ಕಸರೀರ್ವರನೆಂದುರಿ |
ಸಿಕ್ಕದ ನೀನಿವರ ಸುಟ್ಟು ರಕ್ಷಿಪುದೆನ್ನಂ ||೯||

ಮದದಿಂದೆನ್ನ ಮನಂ ತವ |
ಪದಮಂ ನೆನೆಯದಿದೆ ಛೇದಿಸಾಮದವಂ ನೀಂ ||
ಮದವೆರಸಿದ ಖರ್ಪರಮಂ |
ಸದೆದಿಕ್ಕಿದ ದಿವ್ಯಶಕ್ತಿ ನಿನಗಿಹುದಲ್ತೇ ||೧೦||

ಅರಸನ ಕೃಪೆಯಿರೆ ಬಡತನ |
ಮಿರಲೇಂ ವಾರಣವನೇರೆ ಸೊನಗನ ಭಯಮೇಂ? ||
ಧರಿಸಿರೆ ಗುರುವೇ ಗುರುಪದ |
ಸರೋಜಭಕ್ತಿಯನು ಮನದಿ ಭವದಂಜಿಕೆಯೇ ||೧೧||

ಪಶುವಾಂ ನಂಬೆಂದರಿಯದೆ |
ವಿಷಯಂಗಳನೊಂದಿ ನೊಂದೆನದರಿಂದುಣಿಸೈ ||
ಪಸಿವಾರೆ ಜ್ಞಾನರಸಮಂ |
ಪಶುಪತಿಯುಪರಾವತಾರ ಪೊರೆಯೈ ದಯೆಯಿಂ ||೧೨||

ಭುವನದ ತಮಮಂ ಕಳೆವಂ |
ರವಿ ನೀನೆನ್ನಂತರಂಗಮಂ ಬೆಳಗೆಯೊ ಪೇಳ್ ||
ತವಕೃಪೆಯಿನೊಗೆವ ಜ್ಞಾನವು |
ರವಿಕೋಟಿಯ ಬೆಳಗನಿರದೆ ಗೆಲೆದಪುದಲ್ತೇ? ||೧೩||

ಲ. ಅ. ಶಿರಹಟ್ಟಿ.

ಯತೋಧರ್ಮಸ್ತತೋಜಯಃ.

ತಾ|| 13-3-1930 ರಲ್ಲಿ ಬೆಂಗಳೂರು ನಗರದ ಮಹಾಂತಿನ ಮಠದಲ್ಲಿ ಶ್ರೀ ರೇಣುಕಾಚಾರ್ಯರವರ ಜಯಂತ್ಯುತ್ಸವದ ಸಲುವಾಗಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿದ ವೀರಶೈವ ಸಭೆಯಲ್ಲಿ "ಪ್ರಾಣಿದಯೆ" ಸಂಪಾದಕರಾದ ಶ್ರೀಯುತ ಗುಂಡೂರಾವ್ ಶಾಸ್ತ್ರಿಯವರು ಮಾಡಿದ ಭಾಷಣವು.

ಅಧ್ಯಕ್ಷ ಮಹಾಶಯರೇ ಮತ್ತು ಸದ್ಗೃಹಸ್ಥರೇ—

ನನಗೆ ಸಿಕ್ಕಿರುವ ಕೊಂಚಕಾಲದಲ್ಲಿ ಇತರ ವಿಷಯಗಳನ್ನು ಚರ್ಚಿಸಲಿಕ್ಕೆ ಅವಕಾಶವಿಲ್ಲ. ಅತಿಮುಖ್ಯವಾದ ಗಹನವಾದ ವಿಚಾರವನ್ನು ತಮ್ಮಗಳ ಮುಂದಿಡಲು ನಾನು ಬಂದಿದ್ದೇನೆ. ಸುಂದರವಾದ ಉದ್ಯಾನವನದಂತಿರುವ ಈ ನಮ್ಮ ಪವಿತ್ರ ಭರತಭೂಮಿಯಲ್ಲಿ ಅನೇಕ ಜನ ಆಚಾರ್ಯರು ವಿವಿಧ ಸಿದ್ಧಾಂತಗಳಿಂದೊಡಗೂಡಿದ ಮತತತ್ತ್ವಗಳನ್ನು ಹರಡಿರುವರು. ಅವುಗಳು ಉದ್ಯಾನವನದ ನಾನಾ ಪುಷ್ಪವೃಕ್ಷಗಳಂತೆ ಶೋಭಿಸುತ್ತಿರುವವು. ಈ ಮತಗಳ ಬಾಹುಳ್ಯವನ್ನು ನಾವುಗಳು ಇಂತಹ ಉದಾರದೃಷ್ಟಿಯಿಂದ ನೋಡಬೇಕು. ನಮ್ಮಲ್ಲಿ ಪ್ರಭೇದಗಳಿದ್ದ ಮಾತ್ರಕ್ಕೆ ನಾವೆಲ್ಲರೂ ಭಾರತೀಯರೆಂಬುದನ್ನು ಮರೆಯಬಾರದು. ಯಾವ ಸಮಾಜವೇ ಆಗಲಿ ಅದರ ಪ್ರಭೆಯು ಪ್ರಜ್ವಲಿಸಬೇಕಾದರೆ ಕೇವಲ ಪ್ರತಿಷ್ಠೆಯಿಂದಾಗಲಾರದು. ಆಯಾ ಮತಗಳ ಧರ್ಮಪಾಲನೆಯೇ ಮುಖ್ಯವಾದುದು. ಈ ವಿಚಾರದಲ್ಲಿ ಇಡೀ ಭರತಖಂಡವೇ ಅಧೋಗತಿಗೆ ಬಿದ್ದಿರುವುದು. ಈಹೊತ್ತಿನ ದಿವಸ ಬೇರೊಂದುಕಡೆ ಒಬ್ಬ ಜೈನಸನ್ಯಾಸಿಗಳ ವ್ಯಾಖ್ಯಾನವಾಯಿತು. ಅವರೂ ಸಹ ತಮ್ಮ ಸಮಾಜದ ಪರಿಸ್ಥಿತಿಯನ್ನು ನೋಡಿ ವಿಶೇಷವಾಗಿ ಪರಿತಪಿಸುತ್ತಿದ್ದರು. ನಮ್ಮ ಹಿಂದೂ ಸಮಾಜದಲ್ಲಿ ಅನೇಕ ಭಯಂಕರ ಸಂಪ್ರದಾಯಗಳು ಬೇರೂರಿರುತ್ತವೆ. ಅವುಗಳಲ್ಲಿ ಉತ್ತಮವರ್ಗದವರಿಂದ ಇಂದಿನ ವರೆಗೂ ಅಲ್ಲಲ್ಲಿ ನಡೆಯುತ್ತಿರುವ ಪಶುಯಜ್ಞಗಳು ಇಡೀ ಹಿಂದೂ ಸಮಾಜಕ್ಕೇ ಕಳಂಕವನ್ನು ತಂದೊಡ್ಡಿರುತ್ತವೆ. ಪರಮಾತ್ಮನ ಅನುಗ್ರಹದಿಂದ ನಿಮ್ಮ ಮಧ್ಯದಲ್ಲಿ ನಿಂತಿರುವ ನಾನು ಹಿಂಸಾತ್ಮಕಯಜ್ಞವನ್ನು ನಿರೋಧಿಸಿರುವ ದೈತಮತಾವಲಂಬಿಯಾಗಿರುತ್ತೇನೆಂದು ಗರ್ವದಿಂದ ಹೇಳುತ್ತೇನೆ. ಈ ನಾಗರಿಕ ಸಮಾಜದಲ್ಲಿ ನಿರ್ಭಯವಿಂದ ನಡೆಯುತ್ತಿರುವ ಪಶುಯಜ್ಞಗಳನ್ನು ಅಹಿಂಸಾಪ್ರೇಮಿಗಳೆಲ್ಲರೂ ಮಿಳಿತರಾಗಿ ಶಾಂತಿಪೂರ್ವಕವಾಗಿ ನಿರೋಧಿಸಬೇಕು. ಎಲ್ಲೆಲ್ಲಿಯೂ ನಿರಾತಂಕವಾಗಿ ನಡೆಯುತ್ತಿರುವ ಗೋವಧೆಯನ್ನೂ ಹಿಂಸಾತ್ಮಕ ಮಾರೀಪೂಜೆಯನ್ನೂ ನಿಲ್ಲಿಸಲು ಕಟಿಬದ್ಧರಾಗಬೇಕು. ಕೊಂಚದಿವಸಗಳ ಹಿಂದೆ ಹರಳೂರೆಂಬ ಗ್ರಾಮದಲ್ಲಿ ವೀರಭದ್ರದೇವಸ್ಥಾನದ ಬಳಿ ನೂರಾರು ಕುರಿಕೋಣಗಳನ್ನು ಬಲಿಗೊಡಬೇಕಾದ ಮಾರೀಪೂಜೆಗೆ ಅನೇಕ ವೀರಶೈವರೇ ಮುಂದಾಳುಗಳಾಗಿ ನಿಂತಿದ್ದರು. ಅಹಿಂಸಾಪಾಲಕರೇ ಈ ತೆರನಾಗಿ ಮಾಡಿದುದನ್ನು ನೋಡಿ ನನಗೂ ನನ್ನ ಜೊತೆಯಲ್ಲಿ ಬಂದಿದ್ದ ನನ್ನ ವೀರಶೈವ ಮಿತ್ರರಿಗೂ ಅತ್ಯಂತ ಖೇದವಾಯಿತು. ವಾದವಿವಾದಗಳಾಗಿ ಸಾಧಿಸಲು ಕೋರ್ಟಿಗೆ ಸಹ ಹೋಗಿರುವರು. ಇದಕ್ಕಿಂತಲೂ ಶೋಚನೀಯ ಪರಿಸ್ಥಿತಿಯು ಬೇಕೆ? ಸಮಾಜದ ವಿದ್ಯಾವಂತರು ಕಣ್ತೆರದು ನೋಡಬೇಕು. ಕೇವಲ ಪಂಡಿತರಾದೆವೆಂದು ಕುಳಿತರೆ ಸಾಲದು. ಪಾಂಡಿತ್ಯವನ್ನು ಕಾರ್ಯರಂಗಕ್ಕೆ ತಂದರೆ ರತ್ನಕ್ಕೆ ಕುಂದಣವನ್ನು ಕೊಟ್ಟಂತಾಗುವುದು. ಈಗಿನ ಸಮಾಜದ ಚಿತ್ರವು ಹೀಗಿರುವುದು. ಒಬ್ಬ ದರಿದ್ರನ ಮನೆಯಲ್ಲಿ ಒಂದು ಮರಣವಾಯಿತೆಂದು ಊಹಿಸಿರಿ. ಬಲ ಮನೆಯಲ್ಲಿ ಸಕಲ ಶಾಸ್ತ್ರವಿಶಾರದರಾದ ಶಾಸ್ತ್ರಿಗಳಿದ್ದರು. ರೋದನಧ್ವನಿಯನ್ನು ಕೇಳಿದರೂ ಅವರು ತಮ್ಮ ಗ್ರಂಥಗಳ ವಾಲೆಗಳನ್ನು ತಿರುಗಿಸುತ್ತಿದ್ದರಲ್ಲದೆ ಅವರ ಹೃದಯವು ಚಲಿಸಲಿಲ್ಲ. ಎಡ ಮನೆಯಲ್ಲಿ ಸದಾ ಜೂಜನ್ನಾಡುವ ಪೋಲಿಹುಡುಗರಿದ್ದರು. ಅವರೆಲ್ಲರೂ ಒಗ್ಗಟ್ಟಾಗಿ ಬಂದು ಕಷ್ಟಪಡುತ್ತಿದ್ದ ಬಡ ಸಂಸಾರಿಗಳನ್ನು ವಿಚಾರಿಸಿ ಅಭಯವನ್ನು ಕೊಟ್ಟು ಮುಂದಿನ ಕರ್ತವ್ಯವನ್ನು ನಡೆಯಿಸಿದರು. ಸಮಾಜದಲ್ಲಿ ಇವರುಗಳಿಗೆ ಮಾನ್ಯದೊರೆಯಿತೆಂದರೆ ಆಶ್ಚರ್ಯವಲ್ಲ. ಈ ತೆರನಾಗಿ ನಮ್ಮ ವಿದ್ಯಾವಂತರು ಹೆಮ್ಮೆಯಿಂದ ಕಾರ್ಯರಂಗಕ್ಕೆ ಬಾರದೆ ಹಿಮ್ಮೆಟ್ಟಿ ತಮ್ಮ ಬೆಲೆಯನ್ನು ಕಳೆದುಕೊಂಡರು. ದಯಾಪರರಾದ ಅನೇಕ ಮಹನೀಯರುಗಳು ಮೇಲಿಂದ ಮೇಲೆ ಈ ವಿಚಾರವಾಗಿ ನಿರ್ಭಯದಿಂದ ಎಚ್ಚರಿಸಿರುತ್ತಾರೆ. ಲಿಂಗಾಯತ ಸಮಾಜದ ಅನೇಕ ಉದಾತ್ತವಚನಗಳನ್ನು ನಾನು ಓದಿದ್ದೇನೆ ಅವರಂತೆಯೇ ವೈಷ್ಣವದಾಸೋತ್ತಮರಾದ ಶ್ರೀ ಪುರಂದರದಾಸರವರ ಕೃತಿಯೊಂದನ್ನು ಹೇಳಿ ತಮ್ಮಗಳ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

ರಾಗ, ಮಧ್ಯಮಾವತಿ—ಆದಿತಾಳ.

ಎಲ್ಲಾನುಬಲ್ಲೆನೆಂಬುವಿರಲ್ಲ ಅವಗುಣಬಿಡಲಿಲ್ಲ ||ಪ||
ಸೊಲ್ಲಿಗೆ ಶರಣರಕಥೆಗಳ ಕೇಳುತ |
ಅಲ್ಲದನುಡಿಯನು ನುಡಿಯುವಿರಲ್ಲ ||ಅ||

ಕಾವಿಯನುಟ್ಟು ತಿರುಗುವಿರಲ್ಲ ಕಾಮವಬಿಡಲಿಲ್ಲ
ಸೇಮುಸಿಸ್ತಿಗಳ ಮಾಡುವಿರಲ್ಲ ಕಾಮುಕಬಿಡಲಿಲ್ಲ
ತಾವೊಂದರಿಯದೆ ಪರರನು ತಿಳಿಯದೆ
ಶ್ವಾನನ ಕುಳಿಯಲಿ ಬೀಳುವಿರಲ್ಲ ||೧||

ಗುರುಗಳಸೇವೆಮಾಡಿದಿರಲ್ಲ ಗುರುತಾಗಲಿಲ್ಲ
ಪಂಪರಿದೇಶವ ತಿರುಗಿದಿಲ್ಲ ಪೊರೆಯುವರಿಲ್ಲ
ಅರಿವೊಂದರಿಯದೆ ಆಗಮತಿಳಿಯದೆ
ನರಕಕೂಪದಲಿಬೀಳುವಿರಲ್ಲ ||೨||

ಬ್ರಹ್ಮಜ್ಞಾನಿಗಳು ಎನಿಸುವಿರಲ್ಲ ಹಮ್ಮುಬಿಡಲಿಲ್ಲ
ಸುಮ್ಮನೆ ಯಾಗವಮಾಡುವಿರಲ್ಲ ಸುಳ್ಳನು ಬಿಡಲಿಲ್ಲ
ಗಮ್ಮನೆ ಪುರಂದರವಿಠಲನಪಾದಕೆ
ಹೆಮ್ಮೆಬಿಟ್ಟು ಸೇವೆಗಳೆ ಇಲ್ಲ ||೩||

ಶ್ರೀಮಜ್ಜಗದ್ಗುರು ಪಂಚಾಚಾರ್ಯಪ್ರಸಾದಂತು.

೨ನೆಯ ಶ್ರೀಮದ್ವೀರಶೈವ ಧರ್ಮಸುಧಾರಿಣೀಸಭಾ

ಬೇಗೂರು ತಾ|| ಕಲಘಟಗಿ.

ವೀರಶೈವ ಮತದ ಸುಧಾರಣೆಯ ಬಗ್ಗೆ ಕಲಘಟಗಿ ತಾ|| ವ್ಯಾಪ್ತಿ ಬೇಗೂರಗ್ರಾಮದಲ್ಲಿ 2 ನೆಯ ಶ್ರೀಮದ್ವೀರಶೈವ ಧರ್ಮಸುಧಾರಣೀಸಭೆಯು ಮಾಲಿಕೊಪ್ಪದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಏಪ್ರಿಲ್ 4 ಮತ್ತು 5 ನೆಯ ತಾರೀಖಿನ ದಿವಸ ನೆರವೇರುವುದು. ಆದುದರಿಂದ ವೀರಶೈವ ಮತಾಭಿಮಾನಿಗಳು ಸಭೆಗೆ ಆಗಮಿಸಿ ಮತತತ್ತ್ವಗಳನ್ನು ತಿಳಿದು ಧನ್ಯರಾಗಬೇಕೆಂದು ಆಶಿಸುತ್ತೇವೆ.

ಶಿವಪ್ಪ ಸಂಕಪ್ಪ ಮೇಟಿಯವರ, ಬಸವಣ್ಣೆಪ್ಪ
ಬಸಪ್ಪ ಚಳಮಟ್ಟಿ ಚಿಕ್ಕಪ್ಪ ಚನ್ನಮಲ್ಲಪ್ಪ ಲಂಗೊಟಿ

ಮನೆಗೊಂದು ಗೋವು.

ಬೆಂಗಳೂರು ಸಂಸ್ಥಾನಾಧಿಪತಿಗಳ ಸನ್ನಿಧಿಯಲ್ಲಿ ಭಿನ್ನಹ.

ಮೇಲ್ಕಂಡ ಮಹನೀಯರು ಗೋವಾತೆಯಲ್ಲಿ ತಮಗಿರುವ ಅಪ್ರತಿಮ ಪ್ರೀತಿಯನ್ನು ತಮ್ಮ ಸಂಸ್ಥಾನದಲ್ಲಿ ಕಾರ್ಯಕ್ಕೆ ತರುವ ಕುತೂಹಲದಿಂದ ಬೊಂಬಾಯಿ ಜೀವದಯಾಮಂಡಲಿಯ ಶ್ರೀ ಮಣಿಸ್ತರ್‌ರವರನ್ನು ಆಪ್ತಾಲೋಚನೆಯ ಬಗ್ಗೆ ಬರಮಾಡಿಕೊಂಡಿರುವುದು ಅತ್ಯಂತ ಆಹ್ಲಾದಕರವಾದ ಸಂಗತಿಯು. ಆವಾಗಲೇ ಪರೀಕ್ಷೆಗಾಗಿ ಸಂಸ್ಥಾನದ ಎರಡು ಗ್ರಾಮಗಳ ರೈತರುಗಳಿಗೆ ಮೂರು ವರುಷದ ಅವಧಿಯಲ್ಲಿ ಮನೆ ಮನೆಗೊಂದು ಗೋವನ್ನು ಕಾಪಾಡುವಂತೆಯೂ, ಉತ್ತೇಜನಕ್ಕಾಗಿ ಒಂದು ವರುಷದ ಭೂಕಂದಾಯವನ್ನು ಮಾಫಿಮಾಡುತ್ತೇವೆಂತಲೂ ಅಧಿಪತಿಯವರ ಹುಕುಂ ಮೇರೆಗೆ ಕಾರಭಾರಿಯವರು ಪ್ರಕಟಿಸಿರುವರಂತೆ! ಇದಲ್ಲವೇ ನುಡಿಗೆ ತಕ್ಕ ನಡೆ? ಈ ಮೇಲ್ಪಂಕ್ತಿಯನ್ನನುಸರಿಸಿ ಸಮಸ್ತ ದಯಾಳುಪ್ರಭುಗಳೂ ತಮ್ಮ ತಮ್ಮ ರಾಷ್ಟ್ರಗಳಲ್ಲಿ ಗೋರಕ್ಷಣೆಯ ಪವಿತ್ರಕಾರ್ಯವನ್ನು ಕೊಂಡಾಡಿದ್ದಾದರೆ ತಾವೂ ತಮ್ಮ ಪ್ರಜೆಗಳೂ ಪ್ರತ್ಯಕ್ಷ ಫಲರಾಶಿಯನ್ನು ಹೊಂದುವುದಲ್ಲದೆ ಸಾಮ್ರಾಜ್ಯಾಧಿಪತಿಗಳು ಕಣ್ತೆರೆದು ನೋಡುವ ಅವಶ್ಯಕತೆಯನ್ನು ಕಲ್ಪಿಸಿಕೊಟ್ಟಂತಾಗುವುದು. ಈ ಧರ್ಮಬೀಜವನ್ನು ಬಿತ್ತುವುದಕ್ಕೆ ನಮ್ಮ ಮೈಸೂರು ಕ್ಷೇತ್ರವು ಮೊದಲನೆಯದಾಗುವುದೆ?

ಗುಂಡೂರಾವ್ ಶಾಸ್ತ್ರಿ,
ಸಂಪಾದಕ—ಪ್ರಾಣಿದಯೆ.

ದ್ವಾದಶ ವಾರ್ಷಿಕಮಹೋತ್ಸವವೂ ಇನಾಮಿನ ಸಮಾರಂಭವೂ.

ಮಲಸಮುದ್ರ.

ಗದಗ ತಾಲೂಕು ಮಲಸಮುದ್ರ ಶಾಲೆಯ ದ್ವಾದಶ ವಾರ್ಷಿಕೋತ್ಸವವೂ ಪಾರಿತೋಷಿಕ ಸಮಾರಂಭವೂ ತಾ|| 25-2-30 ನೆಯ ದಿವಸ ವಿಜೃಂಭಣೆಯಿಂದ ನೆರವೇರಿದವು. ಶಾಲೆಯ ಆವಾರವು ಶ್ರೀ ಮಾರುತೀ ದೇವಾಲಯವು ತಳಿರುತೋರಣಗಳಿಂದಲೂ ಚಿತ್ರಪಟಗಳಿಂದಲೂ ಅಂದವಾಗಿ ಶೃಂಗರಿಸಲ್ಪಟ್ಟಿದ್ದಿತು. ನಾಲ್ಕು ಘಂಟೆಗೆ ಊರೊಳಗಿನ ಸದ್ಗೃಹಸ್ಥರಿಂದಲೂ ಬಾಲಬಾಲಕಿಯರಿಂದಲೂ ಪಾಠಶಾಲೆಯು ಕಿಕ್ಕಿರಿಸಲ್ಪಟ್ಟಿತು. ಪ್ರಾರಂಭದಲ್ಲಿ ಬಾಲಬಾಲಕಿಯರು ಮಂಜುಳಸ್ವರದಿಂದ ಈಶಸ್ತೋತ್ರವನ್ನು ಮಾಡಿ ಸ್ವಾಗತಪದ್ಯಗಳನ್ನು ಹಾಡಿದರು. ಆ ಮೇಲೆ ಸೂರ್ಯನಮಸ್ಕಾರವನ್ನಾಡುವ ಪದ್ಧತಿಯನ್ನು ಅನುಕರಣಮಾಡಿ ತೋರಿಸಿದರು. ಸ್ಕೂಲ ಕಮಿಟಿಯ ಚೇರ್‌ಮನರಾದ ಶ್ರೀಮಂತ ಪಾಟೀಲ ಇವರು ಸರ್ವಾನುಮತದಿಂದ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಬಳಿಕ ಹೆಡ್‌ಮಾಸ್ತರ ಶಂಕರಪ್ಪ ಹನುಮಪ್ಪ ಹಲಗಾಪೂರ ಇವರು ಸಮಾರಂಭದ ಮತ್ತು ಶಾಲೆಯ ವೃತ್ತಾಂತವನ್ನು ಸಂಕ್ಷೇಪವಾಗಿ ಹೇಳಿ ಶಾಲೆಯ ದ್ವಾದಶ ವಾರ್ಷಿಕ ರಿಪೋರ್ಟನ್ನು ಓದಿದರು. ಸಭಿಕರು ತಮಗಾದ ಆನಂದವನ್ನು ಚಪ್ಪಾಳೆಯಿಂದ ವ್ಯಕ್ತಪಡಿಸಿದರು. ರಿಪೋರ್ಟಿನ ಸಾರಾಂಶ:— ಶಾಲೆಯು ಸ್ಥಾಪನೆಯಾಗಿ ತಾ|| 18-2-30ಕ್ಕೆ 12 ವರ್ಷವಾಯಿತು. ಈ ಅವಧಿಯಲ್ಲಿ ವರ್ಷ ವರ್ಷಕ್ಕೆ ಹುಡುಗರ ಸಂಖ್ಯೆಯು ಬೆಳೆಯುತ್ತ ನಡೆದಿರುವದು. ಇಲ್ಲಿ ಕಲಿತ ಕೆಲವು ಹುಡುಗರು ಪರಸ್ಥಳದಲ್ಲಿ ಇಂಗ್ಲಿಷ್ ಕಲಿಯುತ್ತಿರುವರು. ಕೆಲವರು ಕೈಗಾರಿಕೆ ವ್ಯಾಪಾರಗಳಲ್ಲಿ ತೊಡಗಿರುವರು. ಕೆಲವರು ಒಕ್ಕಲತನದಲ್ಲಿ ಸುಧಾರಣೆ ನಡೆಸಿರುವರು. ಇಲ್ಲಿಯವರೆಗೆ ಒಬ್ಬರೇ ಮಾಸ್ತರರು ಇದ್ದ ಕಾರಣ, ವರದಿಂದ ಊರವರು ವರ್ಗಣಿಯಿಂದ ಒಬ್ಬ ಮದ್ದತಿಮಾಸ್ತರರನ್ನು ಕಾಯಂಮಾಡಬೇಕು. ಮತ್ತು ಇಲ್ಲಿಯ ಸಹಕಾರಿಸಂಘದವರು ಬಡವಿದ್ಯಾರ್ಥಿಗಳ ಸಲುವಾಗಿ ತಮ್ಮ ಲಾಭದಲ್ಲಿ 20 ರೂ. ಧರ್ಮಾರ್ಥವಾಗಿ ಕೊಟ್ಟು ಪ್ರೋತ್ಸಾಹಿಸಿದ್ದಕ್ಕಾಗಿ ಇವರನ್ನು ಅಭಿನಂದಿಸುವುದು. ಬಳಿಕ ಮೆಸರ್ಸ್ ಅದನಗೌಡ ಪೋಲೀಸ ಪಾಟೀಲ, ಶಂಕರಪ್ಪ ಹಲಗಾಪೂರ ಮೊದಲಾದವರು ಶಿಕ್ಷಣದ ಪ್ರಗತಿಯ ಬಗ್ಗೆ ಕಳಕಳಿಯಿಂದ ಭಾಷಣಮಾಡಿದರು. ಆಮೇಲೆ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಸಹಕಾರಿಸಂಘದವರ ಅಭಾರಮನ್ನಣೆಯು.
2. ವಿದ್ಯಾರ್ಥಿಗಳ ಸ್ಕೂಲ ಲಾಯಬ್ರರಿ ಹಾಗೂ ಸಹಕಾರಿ ಸಂಘವನ್ನು ಸ್ಥಾಪಿಸುವದು.
3. ಮ|| ಅಸಿ|| ಮಾಸ್ತರರನ್ನು ತೀವ್ರವಾಗಿ ಕಾಯಂ ಮಾಡುವ ಬಗ್ಗೆ ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನವರಿಗೆ ಆಗ್ರಹದ ವಿನಂತಿ.
4. ಸದರಿ ಠರಾವುಗಳನ್ನು ಎಲ್ಲಾ ಕಡೆಗೆ ಕಳಿಸಲಿಕ್ಕೆ ಅಧ್ಯಕ್ಷರಿಗೆ ಅಧಿಕಾರಕೊಡುವದು.

ಆ ಮೇಲೆ ಅಧ್ಯಕ್ಷರು ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿರುವ ಶಿಕ್ಷಣಪ್ರಗತಿಯ ಬಗ್ಗೆ ಭಾಷಣಮಾಡಿದರು. ಪಾಸಾದ ಬಾಲಬಾಲಕಿಯರಿಗೆ ಅಧ್ಯಕ್ಷರ ಹಸ್ತದಿಂದ ಇನಾಮು ಹಂಚಲಟ್ಟು ಸಭಿಕರಿಗೆಲ್ಲಾ ತಾಂಬೂಲಾದಿಗಳ ವಿನಿಯೋಗವು ನಡೆಯಿತು.

ಅದಪ್ಪಗೌಡ, ದೇವೇಂದ್ರಗೌಡ ಪೋಲೀಸ ಪಾಟೀಲ.

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.
5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.
ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.
3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.
[12] ದೊರೆಯುವ ಸ್ಥಳ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!!
ಕೊಡಗಿನ ಗುಡು ಗುಡು— ಸುಡು ಸುಡು ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,
ಮಲೇರಿಯಾನ ಕಂಪನಿಯವರ ಮಲೇರಿಯಾನವು
"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.
ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿವಸಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಎಂತಹ ಜ್ವರಗಳಾಗಲಿ. 'ಕೊಡಗಿನ ಗುಡುಗುಡು!' (ಛಳಿ). 'ಸುಡುಸುಡು!' (ಉರಿ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.
ಇಂದೇ ದೃಢನಂಬುಗೆಯಿಂದ
ಮಲೇರಿಯಾನ ಕಂಪನಿಯವರ ಮಲೇರಿಯಾನ
ತರಿಸಿಕೊಂಡು ಕುಡಿಯಿರಿ. [34]
ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.
ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.
ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!
ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.
ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ
ಧಿಕ್ಕರಿಸದಿರಿ. ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಲಾಭ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಳಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂದ, ಕಾಲೀಮಲೀಕಂದ, ಅಶ್ವಕಂದ ಶ್ರೀಪುಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸವೇಲಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಪಮಪತ್ರಿ, ಶಿಕಾಪತ್ರಿ, ಮದನಮಸ್ತ, ರಕಸಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಖೋರಿ, ಮುಂಗಲೀ ಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಾ ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಲ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಮ್ಮಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [38]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಮಹಾತ್ಮಾಗಾಂಧಿಯವರು ಬ್ರೋಚ್‌ನಗರದಲ್ಲಿ ಮಾಡಿದ ಮಹತ್ವದಭಾಷಣ.

ಈ ದಿವಸ ಒಬ್ಬ ಮಹಮ್ಮದೀಯ ತರುಣನು ನನ್ನನ್ನು ಸ್ವರಾಜ್ಯವು ನಮ್ಮೊಬ್ಬನಿಂದಲೇ ಸಂಪಾದಿಸಲ್ಪಡುವದೋ ಅಥವಾ ಹಿಂದುಗಳಿಂದ ಸಂಪಾದಿಸಲ್ಪಡುವದೋ ಎಂದು ಕೇಳಿದನು. ಹಿಂದುಗಳಾಗಲಿ, ಮಹಮ್ಮದೀಯರಾಗಲಿ, ಪಾರ್ಸಿಯವರಾಗಲಿ, ಕ್ರೈಸ್ತರಾಗಲಿ ಯಾರು ಜಗದೀಶ್ವರನಲ್ಲಿ ದೃಢವಾದ ನಂಬಿಕೆಯನ್ನು ಹೊಂದುವರೋ ಅಂಥವರ ಸಹಾಯದಿಂದಲೂ, ಮೇಲಾಗಿ ಜಗದೀಶ್ವರನ ಕೃಪೆಯಿಂದಲೂ ನಾನು ಸ್ವರಾಜ್ಯವನ್ನು ಸಂಪಾದಿಸುವೆನು. ಕಳೆದ ಹತ್ತು ವರ್ಷಗಳಿಂದಲೂ ಭರತಖಂಡವು ಅಹಿಂಸಾತ್ಮಕ ಕಾಯಿದೆಭಂಗದ ಚಳವಳಿಯನ್ನು ಪ್ರಾರಂಭಿಸಲು ಪ್ರಯತ್ನಿಸುತ್ತಿರುವದು. ಆದರೆ ಇದುವರೆಗೆ ನನ್ನಲ್ಲಿಯೇ ನನಗೆ ಸಾಕಾದಷ್ಟು ನಂಬಿಕೆಯಿರಲಿಲ್ಲ. ಉದ್ದೇಶಿಸಿದ ಕಾರ್ಯವನ್ನು ಪ್ರಾರಂಭಿಸಲು ಭರತಖಂಡದ ಯಾವ ಮೂಲೆಯಲ್ಲಿಯೂ ನನಗೆ ಅವಕಾಶವೇ ಕಂಡು ಬರುತ್ತಿರಲಿಲ್ಲ. ಆದರೆ ಅಹಿಂಸಾತ್ಮಕ ಕಾಯಿದೆಭಂಗದ ಚಳವಳಿಯನ್ನು ಪ್ರಾರಂಭಿಸುವಂತೆ ಜಗದೀಶ್ವರನೇ ಆಜ್ಞೆ ಮಾಡುತ್ತಿರುವಂತೆ ನನಗೆ ಭಾಸವಾಗುವದು. ಈ ಸಂದರ್ಭದಲ್ಲಿ ಸಂಪೂರ್ಣ ಭರತಖಂಡವೆಲ್ಲವೂ ಹಿಮ್ಮೆಟ್ಟಿದರೂ ನಾನು ಮಾತ್ರ ಹಿಮ್ಮೆಟ್ಟದೆ, ಒಬ್ಬನೇ ಜಗದೀಶ್ವರನಲ್ಲಿ ಹಾಗೂ ಆತನ ಮಹಿಮಾವಿಶೇಷದಲ್ಲಿ ಪೂರ್ಣ ಭರವಸೆಯನ್ನಿಟ್ಟು ಸತ್ಯಾಗ್ರಹವನ್ನು ಮುಂದುವರಿಸಬೇಕಾಗಿರುವದು. ಚಿಕ್ಕ ಚಿಕ್ಕ ಹುಡುಗಿಯರು ಸಹ ಈ ಸತ್ಯಾಗ್ರಹಕ್ಕೆ ತಮ್ಮನ್ನು ಸೇರಿಸಿಕೊಳ್ಳುವಂತೆ ನನಗೆ ಬರೆಯುವರು. ಈಗ ನನಗೆ, ವೃದ್ಧರು, ತರುಣರು, ಹಿಂದೂಗಳು, ಮುಸಲ್ಮಾನರು ಎಲ್ಲರ ಸಹಾಯವೂ ಬೇಕಾಗಿರುವದು. ಸತ್ಯಾಗ್ರಹವು ನಿರ್ವಿಘ್ನವಾಗಿ ಸಾಗಲು ಪ್ರಪಂಚದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಕನಿಕರವುಂಟಾಗಬೇಕು. ಕನಿಕರ ಉಂಟಾಗಬೇಕಾದರೆ ಆತ್ಮಯಜ್ಞವನ್ನು ಮಾಡಬೇಕು. ಆತ್ಮಯಜ್ಞ ಹಾಗೂ ಆತ್ಮಶುದ್ಧಿಯೇ ನಮ್ಮ ಚಳವಳಿಗೆ ಮುಖ್ಯವಾದ ತಳಹದಿಯ ಕಲ್ಲುಗಳಾಗಿರುವವು.

ಮಹಮ್ಮದೀಯರು ನಮ್ಮ ಮಿತ್ರರು. ನಮ್ಮೊಡನೆ ಸೇರಲು ಅವರು ಸಿದ್ಧರಾಗಿರುವರು. ಅವರನ್ನು ವೃಥಾ ದೂಷಿಸದಿರಿ. ಮೌಲಾನಾ ಶೌಕತ್ ಅಲಿಯವರು ಇನ್ನೂ ನನ್ನ ಮಿತ್ರರೇ ಆಗಿರುವರು. ಒಂದಲ್ಲ ಒಂದು ದಿನ ಅವರಾದರೂ ನನ್ನ ತತ್ತ್ವವೇ ನ್ಯಾಯವಾದುದೆಂದು ಒಪ್ಪಿಕೊಳ್ಳುವರು. ಆಂಗ್ಲೇಯರನ್ನು ಬಿಟ್ಟು ನಾನು ಏನೂ ಮಾಡುವಂತಿಲ್ಲ. ಆದುದರಿಂದಲೇ ನನ್ನ ಪತ್ರವನ್ನು ಓರ್ವ ಆಂಗ್ಲೇಯ ಮಿತ್ರನೊಡನೆ ಕಳುಹಿಸಿದೆನು. ಬ್ರಿಟಿಷರ ಅಧಿಕಾರವನ್ನು ನಾನು ದ್ವೇಷಿಸುವೆನಾದರೂ ಆಂಗ್ಲೇಯರನ್ನು ನಾನು ಪ್ರೀತಿಸುವೆನು. ಈ ಸರ್ಕಾರವನ್ನು ಮುರಿಯಲು ಯತ್ನಿಸುವೆನೇ ಹೊರತು ಆಂಗ್ಲೇಯರಿಗೆ ಕೆಡಕುಬಯಸುವದಿಲ್ಲ. ಅಂದ ಮೇಲೆ ಸರಕಾರವು ನನ್ನನ್ನು ಗಲ್ಲಿಗೆಹಾಕಲಿ ಅಥವಾ ಸಜೀವವಾಗಿ ಸುಟ್ಟುಬಿಡಲಿ! ನಾನೇ ವೈಸ್ರಾಯನಾಗಿದ್ದರೆ, ಮಹಮ್ಮದೀಯರಿಗೂ ಪಾರ್ಸಿಯವರಿಗೂ ಬೇಕಾಗಿದ್ದುದನ್ನೆಲ್ಲ ಕೊಡುತ್ತಿದ್ದೆನು. ರಾಷ್ಟ್ರೀಯಸಭೆಗೆ, ಹಿಂದೂ ಮುಸಲ್ಮಾನ ಅಥವಾ ಮತ್ತೊಂದು ಮತ ಈ ಭೇದಗಳಿಲ್ಲ. ಅದಕ್ಕೆ ಗೊತ್ತಿರುವದು ಭಾರತೀಯರ ದೊಡ್ಡ ಜನಾಂಗವೊಂದೇ!

ಕಡೆಯಲ್ಲಿ ಮಹಾತ್ಮಾ ಗಾಂಧಿಯವರು "ಉಪ್ಪಿಗೆ ತೆರಿಗೆಯನ್ನು ಕೊಡುವವರನ್ನು ನಾನು "ನಿಮಕ್ ಹರಾಂ" ಎಂದು ಕರೆಯುವೆನು. ಏಕೆಂದರೆ ಅವರು ಜನ್ಮಭೂಮಿಯ ಉಪ್ಪಿಗೆ ದ್ರೋಹಮಾಡುವರು. ಎಂದು ಹೇಳಿ ಪ್ರತಿಯೊಬ್ಬರೂ ಸತ್ಯಾಗ್ರಹಕ್ಕೆ ಸೇರಬೇಕೆಂದು ಹೇಳಿದರು.

ಮಹಾತ್ಮಾಗಾಂಧಿಯವರ ಸಮಾಚಾರ.

ಬೊಂಬಾಯಿ ಗವರ್ನರರವರು ಕಳೆದ 25 ನೆಯ ತಾರೀಖಿನ ದಿವಸ ಇದ್ದಕ್ಕಿದ್ದಹಾಗೆ ದೆಹಲಿಗೆ ವೈಸ್ರಾಯರವರನ್ನು ಸಂದರ್ಶಿಸಲು ಪ್ರಯಾಣಮಾಡಿದರು. ಮಹಾತ್ಮಾಗಾಂಧಿಯವರ ಪ್ರಚಂಡ ಸತ್ಯಾಗ್ರಹದ ವಿಷಯದಲ್ಲಿ ಯಾವರೀತಿ ವರ್ತಿಸಬೇಕೆಂದು ಕೇಳುವದೇ ಈ ಪ್ರಯಾಣದ ಉದ್ದೇಶವೆಂದೂ, ಮಹಾತ್ಮಾಗಾಂಧಿಯವರು ಸತ್ಯಾಗ್ರಹವನ್ನು ನಿಲ್ಲಿಸಿ, ದುಂಡುಮೇಜಿನ ಪರಿಷತ್ತಿಗೆ ಕೂಡುವಂತೆ ಪ್ರೇರಿಸಬೇಕೆಂಬುದು ಮತ್ತೊಂದು ಉದ್ದೇಶವೆಂದೂ ಹಾಗೂ ಈ ಸಂದರ್ಭದಲ್ಲಿ ವಿ|| ವಲ್ಲಭಭಾಯಿ ಪಟೇಲ್ ಮತ್ತು ಸುಭಾಷಚಂದ್ರಬೋಸರವರನ್ನು ಕಾರಾಗೃಹದಿಂದ ಬಿಟ್ಟುಬಿಡುವರೆಂದೂ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವದು.

ಬೊಂಬಾಯಿಯಲ್ಲಿ ಪೋಲೀಸರು ರಸ್ತೆಯಲ್ಲಿ ತಿರುಗಾಡುವ ಜನಗಳಿಗೆ ಅಟಂಕಪಡಿಸಿದರೆಂಬ ಅಪಾದನೆಯ ಮೇಲೆ ಆರು ಜನ ಸತ್ಯಾಗ್ರಹಿಗಳನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಪ್ರತಿಯೊಬ್ಬರಿಗೂ ಎರಡೆರಡು ರೂಪಾಯಿಗಳಂತೆ ಜುಲ್ಮಾನೆ, ತಪ್ಪಿದರೆ ಕೋರ್ಟುಮುಗಿಯುವವರೆಗೆ ಕಾರಾಗೃಹವಾಸವನ್ನು ವಿಧಿಸಿದರು. ಸತ್ಯಾಗ್ರಹಿಗಳು ಜುಲ್ಮಾನೆಯನ್ನು ಕೊಡದೆ ಶಿಕ್ಷೆಯನ್ನು ಅನುಭವಿಸಿದರು.

ರಾಜೀನಾಮೆಯನ್ನು ಕೊಡುತ್ತಿರುವ ಗ್ರಾಮಾಧಿಕಾರಿಗಳ ಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಿರುವದು. ಸರಕಾರದವರು ರಾಜೀನಾಮೆ ಕೊಟ್ಟವರಲ್ಲಿ ಅನೇಕರನ್ನು ಖುದ್ದಾಗಿ ಕರೆಯಿಸಿ ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳುವಂತೆ ಬಲಾತ್ಕಾರಪಡಿಸುತ್ತಿರುವರು. ಆದರೆ ಇದುವರೆಗೆ ಯಾರೂ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡಿರುವದಿಲ್ಲ.

ಜಪಾನಿನಲ್ಲಿರುವ ರಾಶ್‌ಬಿಹಾರಿಘೋಷ್ ನೊದಲಾದ ಹಿಂದೀಯರು ಕಾಮಕೂರ ಎಂಬಲ್ಲಿ ಸಭೆಸೇರಿ ರಾಷ್ಟ್ರೀಯ ಧ್ವಜವನ್ನೇರಿಸಿ ಮಹಾತ್ಮಾ ಗಾಂಧಿಯವರ ವಿಜಯಯಾತ್ರೆಯ ದಿವಸವನ್ನು ಬಹು ವಿಜೃಂಭಣೆಯಿಂದ ಆಚರಿಸಿದರು. ಭರತಖಂಡಕ್ಕೆ ಸ್ವರಾಜ್ಯಪ್ರಾಪ್ತಿಯಾಗುವವರೆಗೆ ಧ್ವಜವು ಅಲ್ಲಿ ಹಾಗೆಯೇ ಏರಿಸಲ್ಪಟ್ಟಿರುವದಂತೆ!

ಮಹಾತ್ಮಾ ಗಾಂಧಿಯವರೊಡನೆ ಸತ್ಯಾಗ್ರಹದ ಚಳವಳಿಯನ್ನು ಮುಂದುವರಿಸಲು ಬಾರ್ಡೋಲಿಯಿಂದ 1000 ಜನ ಸ್ವಯಂಸೇವಕರು ಹೊರಟಿರುವರು.

ಕಲ್ಕತ್ತೆಯ ಕಾಯಿದೆಭಂಗದ ಕೌನ್ಸಿಲ್ಲಿನ ಪ್ರೆಸಿಡೆಂಟರಾದ ಶ್ರೀ|| ಸತೀಶದಾಸ್‌ಗುಪ್ತರವರು ಏಪ್ರಿಲ್ 6 ನೆಯ ತಾರೀಖಿನ ದಿವಸ ಅಥವಾ ಮಹಾತ್ಮಾ ಗಾಂಧಿಯವರು ಅಪ್ಪಣೆಮಾಡುವ ದಿವಸ ಉಪ್ಪಿನ ಕಾಯಿದೆಯನ್ನು ಭಂಗಮಾಡಲು 6000 ಸ್ವಯಂಸೇವಕರನ್ನು ಕೂಡಿಸಲು ತಕ್ಕ ಪ್ರಯತ್ನಗಳನ್ನು ಮಾಡುತ್ತಿರುವರು.

ಮಹಾತ್ಮರು ಕಳೆದ 26 ನೆಯ ತಾರೀಖಿನ ದಿವಸ ಬ್ರೋಚ್‌ಪಟ್ಟಣವನ್ನು ತಲುಪಿದರು. ಅಲ್ಲಿ ಅವರು ಉಪನ್ಯಾಸಮಾಡುವ ಕಾಲಕ್ಕೆ ಸುಮಾರು 20,000 ಜನಗಳು ನೇರಿದ್ದರು. ಅದರಲ್ಲಿ ಸುಮಾರು 1,000 ಸ್ತ್ರೀಯರಿದ್ದರು. ಆ ಸಮಯದಲ್ಲಿ ಅವರು ಮಾಡಿದ ಮಹತ್ವದ ಭಾಷಣವು ಈ ಪತ್ರಿಕೆಯ ಬೇರೆ ಕಡೆಯಲ್ಲಿ ಪ್ರಸಿದ್ಧಪಡಿಸಿದೆ.

ಬೊಂಬಾಯಿ ಗೌರ್ನರರವರು ದೆಹಲಿಯನ್ನು ತಲಪಿ ವೈಸ್ರಾಯರವರೊಡನೆ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹದ ವಿಷಯವಾಗಿ ಚರ್ಚಿಸುತ್ತಿರುವರು. ಇದಕ್ಕಾಗಿ ಕಳೆದ 29 ನೆಯ ತಾರೀಖಿನ ದಿವಸ ದೆಹಲಿಯಲ್ಲಿ ಎಗ್ಜಿಕ್ಯೂಟಿವ್ ಕೌನ್ಸಿಲ್ ಮೀಟಿಂಗ್ ನೇರುವದಿತ್ತು. ಸರಕಾರದವರು ಮಹಾತ್ಮರನ್ನು ಏಪ್ರಿಲ್ 4 ಅಥವಾ 5 ನೆಯ ತಾರೀಖಿನ ದಿವಸ ದಸ್ತಗಿರಿಮಾಡಬಹುದೆಂದೂ, ಆ ಕಾರಣದಿಂದ ಪಂಡಿತ ಮದನಮೋಹನಮಾಳವೀಯವರೇ ಮೊದಲಾದ 10-11 ಜನ ಕೌನ್ಸಿಲ್‌ಮೆಂಬರರು ರಾಜೀನಾಮೆಯನ್ನು ಕೊಡುವರೆಂದೂ ವರ್ತಮಾನವು ಹಬ್ಬಿರುವದು.

ಮೈಸೂರು ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯತಕ್ಕ ವೀರಶೈವಮತ ತತ್ತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

23 ಶತರತ್ನಸಂಗ್ರಹಃ ಸರ್ವೇಶ್ವರವಿರಚಿತಃ (ವೇದಾಂತಶತಶ್ಲೋಕೀಸೂತ್ರ ಶತಕಮ್) ನಂ. 337.
24 ಶಿವಗೀತಾಭಾಷ್ಯಮ್ ಶಂಕರಾನಂದ ಭಾರತೀಕೃತಮ್ ನಂ. (c)487.
25 ಶಿವಗೀತಾವ್ಯಾಖ್ಯಾ ಪರಶಿವೇಂದ್ರ ಸಂಸ್ಕೃತಿವಿರಚಿತಾ ನಂ. 3402, (a)295, (a)450. (a)451, (a)538 & (c)1495.
26 ಶಿವಜ್ಞಾನಕಾರಿಕಾ ನಂ. 269
27 ಶಿವತತ್ತ್ವದರ್ಪಣಮ್ ಬ್ರಹ್ಮವಿದ್ಯಾಧ್ವರಿ ವಿರಚಿತಂ ನಂ. (a)499.
28 ಶಿವತತ್ತ್ವವಿವೇಕಃ ಅಪ್ಪಯ್ಯದೀಕ್ಷಿತ ವಿರಚಿತಃ ನಂ. 271, 488, 733, 718.
29 ಶಿವನಾಮಕಲ್ಪಲತಾಲವಾಲಸುಧಾಪೂರಃ ನಂ. (c)1327.
30 ಶಿವಪಾರಮ್ಯವಿಚಾರಃ ನಂ. 904, (b)266.
31 ಶಿವಮತಾಧಿಕ್ಯತಾರಾವಳೀ ರೇವಣಾರಾಧ್ಯ ಕೃತಾ ನಂ. 4167.
32 ಶಿವಸಹಸ್ರನಾಮಭಾಷ್ಯಮ್ ಅಲಂಕಾರ ದೀಕ್ಷಿತಕೃತಮ್ ನಂ. 998.
33 ಶಿವಸಹಸ್ರನಾಮ ರೇನಸಂಡಿತ ಪುತ್ರಸೋಪ ಪಂಡಿತಕೃತಮ್ (ಅಸಮಗ್ರಮ್) 1584.
34 ಶಿವಾದ್ವೈತಮಂಜರೀ ಸ್ವಪ್ರಭಾನಂದಕೃತಾ (b)751.
35 ಶಿವಾದ್ವೈತನಿರ್ಣಯಃ ಅಪ್ಪಯ್ಯದೀಕ್ಷಿತಕೃತಃ 3343. (c)1170
36 ಶಿವಾಧಿಕ್ಯಪ್ರಮಾಣಸಮರ್ಥನಮ್ ನಾಗದೇವ ಸೂರಿಕೃತಮ್ ನಂ. 2543.
37 ಶಿವಾಧಿಕ್ಯಪ್ರದೀಪಿಕಾ ರೇವಣಾರಾಧ್ಯಕೃತಾ ನಂ. 4167.
38 ಶಿವಾಧಿಕ್ಯಶಿಖಾಮಣಿಃ ರೇವಣಾರಾಧ್ಯಕೃತಃ ನಂ. 4166.
39 ಶಿವಾನಂದವೈಭವಃ ಚನಕೊಮ್ಮನಾಥವಿರಚಿತಃ ನಂ. 3310.
40 ಶಿವಾಷ್ಟೋತ್ತರ ಶತನಾಮಸ್ತೋತ್ರ ಭಾಷ್ಯಮ್ ನೀಲಕಂಠದೀಕ್ಷಿತಕೃತಮ್ (b)343 (c)525.
41 ಶೈವಪರಿಭಾಷಾ ಶಿವಾಗ್ರಯೋಗಿವಿರಚಿತಾ ನಂ. 3315.
42 ಸಾಧನತ್ರಯಕಾರಿಕಾ ನಂ. 269.
43 ಸಾಂಬಶಿವಾಧಿಕ್ಯಮ್ ರೇವಣಾರಾಧ್ಯ ಕೃತಮ್ ನಂ. 4167
44 ಸಿದ್ಧಾಂತದೀಪಿಕಾ ಸರ್ವಾತ್ಮ ಶಂಭುಕೃತಾ ನಂ. 269.

(ಸಶೇಷ)

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ಕೊಂಡುಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ ಪಾಲಿಷ್ಯದೀಲೋಕಸಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ ನೇ ಏಪ್ರಿಲ್ ೧೯೩೦ [ಸಂಚಿಕೆ ೪೮.

WANTED

Candidates for Telegraph and Station Masters' Clases. Full particulars and Railway Fare Certificate on 2 annas Stamp.

Apply to:—
IMPERIAL TELEGRAPH COLLEGE,
NAI SARAK, DELHI.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ,

ಮುಧೋಳ.

ನಿಜಾಂ ಇಲಾಖಾ ಮುದೋಳ ಬೃಹನ್ಮಠದಲ್ಲಿ ಫಾಲ್ಗುಣ ಶು|| ೧೩ ದಿವಸ ಶ್ರೀ ರೇಣುಕರ ಜಯಂತಿಮಹೋತ್ಸವವನ್ನು ಶ್ರೀ|| ಷ|| ಬ್ರ|| ಮಹಾಂತಸ್ವಾಮಿಗಳವರು ಅತಿ ವೈಭವದಿಂದ ನೆರವೇರಿಸಿದರು. ಆ ದಿವಸ ಸಭೆ ಸೇರಿತು. ಶ್ರೀ ಶಿವಲಿಂಗ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಮಂಟಲಿ ದಾಸೋಹ ಮಠದ ವೇ|| ವೀರೂಪಾಕ್ಷಶಾಸ್ತ್ರಿಗಳು ಭಗವತ್ಪಾದ ರೇಣುಕರ ಚರಿತ್ರವನ್ನು ಆದ್ಯಂತವಾಗಿ ಶ್ರೋತೃಗಳಿಗೆ ಆನಂದವಾಗುವ ಹಾಗೆ ಬೋಧಿಸಿದರು. ಆಮೇಲೆ ಇಂಗ್ಲಿಷ ಶಾಲಾಧ್ಯಾಪಕರಾದ ವೇ|| ರಾಚಯ್ಯಶರ್ಮ ಎಂಬವರು ರೇಣುಕರ ಬ್ರಹ್ಮಚರ್ಯದ ಬ್ರಹ್ಮಬೀಜವನ್ನು ಸ್ಥಾಯೀಭೂತವಾಗುವ ಹಾಗೆ ಬೋಧಿಸಿದರು. ಆಮೇಲೆ ವೀರಶೈವ ಸಮಾಜಾಭಿಮಾನಿಗಳಾದ ಮಿ|| ಶಂಕರರಾವ್ ಇವರು ಪಂಚಾಚಾರ್ಯರ ಸ್ವರೂಪವನ್ನು ಸಂಕ್ಷೇಪರೀತಿಯಿಂದ ಹೇಳಿದರು. ತದನಂತರ ಶ್ರೀ ರೇಣುಕರ ಜಯಂತಿಯನ್ನು ಪ್ರತಿವರ್ಷ ತಪ್ಪದೆ ಆಚರಿಸತಕ್ಕದೆಂದು ಶ್ರೀ|| ಷ|| ಬ್ರ|| ಶಾಲಹಳ್ಳಿ ಪಟ್ಟಾಧ್ಯಕ್ಷರು ಅಪ್ಪಣೆ ಕೊಡಿಸಲು ಮ|| ರಾ|| ಗುರುಬಸಪ್ಪ ಬಸನಾಳ, ಮ|| ರಾ|| ಗುಂಡಪ್ಪ ಬಿಚಗುಂಡಿ, ಮ|| ರಾ|| ಶಿಂಡೆ ಅಂಬಾರಾವ ಇವರೇ ಮೊದಲಾದ ಸಧ್ಯಗೃಹಸ್ಥರು ಸದಾ ಶ್ರೀ ರೇಣುಕರ ಜಯಂತಿಯನ್ನು ನೆರವೇರಿಸುತ್ತೇವೆಂದು ವಾಗ್ದಾನವನ್ನು ಮಾಡಿದರು. ಆಮೇಲೆ ಶ್ರೀ ಪಂಚಾಚಾರ್ಯ ಭಜನಾಸಂಘದ ಬಾಲಕರ ಮಂಜುಲಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ನೀಲಕಂಠರಾವ ಬಸನಾಳ,
ನಾಗಭೂಷಣ ಬಿಚಗುಂಡಿ ಮುಧೋಳ,

ಸ್ವೀಕಾರ.

ತುಂಕೂರು ಡಿ|| ಗುಬ್ಬಿ ತಾಲೂಕು ಹಾಗಲವಾಡಿ ಸಂಸ್ಥಾನದ ಪಾಳೇಗಾರ್ ಪುಟ್ಟಚನ್ನಬಸಪ್ಪನವರ ಮಕ್ಕಳು ಮ|| ರಾ|| ಅರಮನೆ ಚನ್ನಬಸಪ್ಪನವರು ತಮ್ಮ ಅಣ್ಣಂದಿರಾದ ಮ|| ರಾ|| ಪ್ರಸನ್ನಪ್ಪನವರ ಕುಮಾರಿ ಚಿ|| ಕುಂ|| ಸೌ|| ಚನ್ನಮ್ಮನನ್ನು ಧಾರವಾಡ ಡಿ|| ಹಂದಿಗನೂರು ಸಂಸ್ಥಾನದ ಶ್ರೀಮಂತ ಬಸವಂತರಾವ್ ಬುಳ್ಳಪ್ಪ ದೇಸಾಯಿ ಇವರ ಜ್ಯೇಷ್ಠಪುತ್ರರಾದ ಸರದಾರ್ ಬುಳ್ಳಪ್ಪಾ ಉರುಫ್ ಬಾಬಾಸಾಹೇಬ ಬಸವಂತರಾವ್ ಮಾಮಲೇ ದೇಸಾಯಿ ನಾಡಕರಣಿ ಇವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 10 ರೂ. ಗಳು ಮ|| ರಾ|| ನೀಲಪ್ಪನವರ ಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗಶಹರ ನಿವಾಸಿಗಳಾದ ಮ|| ರಾ|| ಹಂಚಿನಾಳ ಮುರಿಗಪ್ಪನವರು ತಮ್ಮ ಅಣ್ಣಂದಿರ ಪುತ್ರ ಚಿ|| ಸ|| ಗುರುಶಾಂತಪ್ಪನ ವಿವಾಹಮಹೋತ್ಸವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 4 ರೂ. ಹಾಗೂ ಹಾವೇರಿ ಮ|| ರಾ|| ಮಳಿಗಿಚನ್ನಮಲ್ಲಪ್ಪನವರ ಲಗ್ನದಲ್ಲಿ ಸಮರ್ಪಿಸಿದ 1 ರೂ. ಒಟ್ಟು 5 ರೂ. ಗಳು ಮ|| ರಾ|| ಹಂಚಿನಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪೂರ ಡಿ|| ಬೋರಾಮಣಿ ಹಿರೇಮಠದ ವೇ|| ಚನ್ನವೀರಯ್ಯನವರು ತಮ್ಮ ಮೊಮ್ಮಕ್ಕಳಾದ ಪಂಚಾಕ್ಷರಯ್ಯ, ರಾಚಯ್ಯ, ಮಲ್ಲಯ್ಯ ಈ ಮೂವರ ಅಯ್ಯಾಚಾರವನ್ನೂ, ಸಾತವ್ವ, ಗಿರಿಯವ್ವ, ರುದ್ರವ್ವಬಾಯಿ ಈ ಮೂವರ ಶಿವದೀಕ್ಷಾ ಸಂಸ್ಕಾರವನ್ನೂ ಶ್ರೀ ಷ|| ಬ್ರ|| ಹೊಟಗಿ ಬೃಹನ್ಮಠದ ಪಟ್ಟಾಧ್ಯಕ್ಷ ಸ್ವಾಮಿಗಳವರಿಂದ ವಿಧ್ಯುಕ್ತವಾಗಿ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 4 ರೂ. ಗಳು ವೇ|| ದುಂಡಯ್ಯಸ್ವಾಮಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಗದಗ ತಾಲೂಕು ಹುಮ್ಮಿಗಿ ಗ್ರಾಮದ ಶ್ರೀ ಓಲಿಗವಿಯಯ್ಯನವರ ಪುತ್ರಿ ಚಿ|| ಸೌ|| ಸರ್ವಮಂಗಳೆಯನ್ನು ಕನಕವಾಡ ಗ್ರಾಮದ ಶಿ|| ಹಿರೇಮಠದ ಪಟದಯ್ಯನವರ ಪುತ್ರ ಚಿ|| ಶೇಖರಯ್ಯನವರಿಗೂ, ಕವಲೂರು ಗ್ರಾಮದ ಗಣಾಚಾರಿ ಫಕೀರಯ್ಯನವರ ಪುತ್ರಿ ಸೌ|| ನೀಲಾಂಬಿಕೆಯನ್ನು ಗಣಾಚಾರಿ ರಾ|| ರುದ್ರಯ್ಯನವರ ಪುತ್ರ ಚಿ|| ರಾ|| ಕೊಟ್ರಯ್ಯನಿಗೂ ಹಾಗೂ ಕಲಿಕೇರಿ ಸಜ್ಜನರ ರಾ|| ರಾಚಪ್ಪನವರ ಪುತ್ರಿ ಚಿ|| ಸೌ|| ವೀರವ್ವನನ್ನು ಹರ್ಲಾಪುರದ ಸಜ್ಜನರ ರಾ|| ಶಿದ್ದಪ್ಪನವರ ಪುತ್ರ ಚಿ|| ರಾ|| ಪರಪ್ಪನಿಗೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಹುಮ್ಮಿಗಿ ಮಠಾಧಿಕಾರಿಗಳು ಪ್ರತಿಯೊಬ್ಬ ವರನಕಡೆಯಿಂದ ತೆಗೆಯಿಸಿದ 3 ರೂ. ಗಳು ಗುರುಭಕ್ತಿಕೇಸರಿಯವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ನರಗುಂದ ಪೇಠಾಪೈಕಿ ಚಿಕ್ಕನರಗುಂದದಲ್ಲಿರುವ ಮ|| ರಾ|| ಬಸಪ್ಪನವರು ಸಪ್ಪಡ್ಲ ಇವರು ತಮ್ಮ ಸುಪುತ್ರಿ ಸೌ|| ವೀರಬಸವ್ವನನ್ನು ಹೊಳೆ ಆಲೂರು ಗ್ರಾಮದ ಮ|| ರಾ|| ರುದ್ರಪ್ಪನರು ಬಾದಾಮಿ ಇವರ ಪುತ್ರ ಚಿ|| ಗುರಪ್ಪನಿಗೂ ತಮ್ಮ ಇನ್ನೊಬ್ಬ ಪುತ್ರಿ ಸೌ|| ಬಸವಣ್ಣವ್ವನನ್ನು ಸದರಿ ರುದ್ರಪ್ಪನವರ ಬೇರೊಬ್ಬ ಪುತ್ರ ಚಿ|| ಲಿಂಗಪ್ಪನಿಗೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ಕಂಬಾಳಯ್ಯನವರು ಹಿರೇಮಠ ಕೊಣ್ಣೂರು ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ನರಗುಂದ ಪೇಠಾಕಪ್ಪಲಿಗ್ರಾಮದ ಮ|| ರಾ|| ಶಿವಪ್ಪನವರು ಹುಣಸೀಮರ ಇವರ ಪುತ್ರ ಚಿ|| ರಾ|| ಸಂಗನಬಸಪ್ಪನಿಗೆ ಮ|| ರಾ|| ಚಂದ್ರಪ್ಪನವರು ಕೆಲವಡಿ ಇವರ ಪುತ್ರಿ ಚಿ|| ಸೌ|| ಶಿವವ್ವನನ್ನು ತಂದು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಗಳು ಶಿರೋಳದ ವೇ|| ಪಂಚಾಕ್ಷರಶಾಸ್ತ್ರಿಗಳು ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರ ಡಿ|| ಹೊಟಗಿಯ ಸಾಹುಕಾರ್ ಮ|| ರಾ|| ಗುರುಶಾಂತಪ್ಪನವರ ಪುತ್ರ ಚಿ|| ರಾ|| ಚನ್ನಬಸವಪ್ಪನ ಹಾಗೂ ಮ|| ರಾ|| ಮಲ್ಲಿಕಾರ್ಜುನಪ್ಪನವರ ಪುತ್ರ ಶಂಕರಪ್ಪನ ವಿವಾಹಸಮಯದಲ್ಲಿ ಮಾಹೇಶ್ವರ ವಟುಗಳಿಗೆ ದೀಕ್ಷೆಯನ್ನು ನೆರವೇರಿಸಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಶ್ರೀ ಷ|| ಬ್ರ|| ಹೊಟಗಿ ಬೃಹನ್ಮಠದ ಪಟ್ಟಾಧ್ಯಕ್ಷರ ದ್ವಾರಾ ತಲ್ಪಿರುತ್ತವೆ.

ಅರಸೀಕೆರೆ ತಾಲೂಕು ತುಂಬಾಪುರ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ದೊಡ್ಡನಂಜೇಗೌಡರ ಮಕ್ಕಳು ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ತುಂಕೂರು ಡಿ|| ಶಿರಾತಾಲೂಕು ಚಿಕ್ಕಹಳ್ಳಿ ಗ್ರಾಮದ ಮ|| ರಾ|| ಯಜಮಾನ ಹಂ|| ರುದ್ರಪ್ಪನವರ ತೋಟದಲ್ಲಿ ಹೆಜ್ಜೇನು ಹುಳಗಳ ಕಡಿತದಿಂದ ಪ್ರಾಣಾಪಾಯ ಸ್ಥಿತಿಯಲ್ಲಿದ್ದ ಹೋರಿಕರುವು ಶ್ರೀ ರೇಣುಕಾಚಾರ್ಯರ ಕೃಪಾಶೀರ್ವಾದದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಮಠದ ವೇ|| ಚನ್ನಬಸವಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಕಳೆದ ಮಾರ್ಚಿ 13 ನೆಯ ತಾರೀಖು ಗುರುವಾರ ಬೆಳಿಗ್ಗೆ ಕರಾಚಿಯಲ್ಲಿ ಕೆಲವು ಕ್ಷಣಗಳ ವರೆಗೆ ಭೂಕಂಪವಾಯಿತು. ಮನೆಮಠಗಳೆಲ್ಲವೂ ಅಲ್ಲಾಡಿದವು. ಮಲಗಿದ್ದವರು ಗುರುಳಾಡಿ ಗಾಬರಿಯಿಂದ ಎದ್ದರು. ಪದಾರ್ಥಗಳೆಲ್ಲವೂ ಹಾರಾಡಿದವು. ಆದರೆ ಯಾರಿಗೂ ಪ್ರಾಣಾಪಾಯವಾಗಲಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ.

ನಮ್ಮ ಭರತಖಂಡದಲ್ಲಿರುವ ವೈದಿಕಮತಗಳೊಳಗೆ ವೀರಶೈವ ಮತವೇ ಅಗ್ರಸ್ಥಾನವಂ ಪಡೆದಿರುವುದು. ಸನಾತನವಾದೀ ವೀರಶೈವಮತವು ಶೈವಮತದ ಒಂದು ಪ್ರಧಾನಶಾಖೆಯಾಗಿದ್ದರೂ ಕೆಲವು ಶತಮಾನಗಳಿಂದೀಚೆಗೆ ಈ ಮತೀಯರಲ್ಲಿ ವಿದ್ಯಾಧಿಕರ ಸಂಖ್ಯೆಯು ಕಡಿಮೆಯಾಗುತ್ತ ಬಂದುದರಿಂದ ಈ ಮತದ ಉದಾತ್ತತತ್ವಗಳನ್ನೂ ಸನಾತನತ್ವವನ್ನೂ ಪ್ರತಿಪಾದಿಸುವ ಗೀರ್ವಾಣಭಾಷಾಮಯಗಳಾದ ಗ್ರಂಥಗಳು ಕ್ರಿಮಿಕೀಟಗಳ ಪಾಲಾಗುತ್ತ ಬಂದವು. ಈ ಮತೀಯರಲ್ಲಿ ಕೆಲವು ಸ್ವಾರ್ಥಾಪೇಕ್ಷಿಗಳು ಅವಧಿಕಾರಿಗಳಿಗೆ ಲಿಂಗವನ್ನು ಧರಿಸಿ ಸದ್ವವಹಾರಗಳನ್ನು ಶಿಕ್ಷಿಸಿದುದರಿಂದ ನಾನಾಸಮಯಿಗಳೆಂತೆ ಸಂಕರವರ್ಣದವರ ಗುಂಪು ವೃದ್ಧಿಯಾಗುತ್ತ ಬಂದುದಲ್ಲದೆ. ಇಂಥವರ ಸ್ವೇಚ್ಛಾಚಾರಕ್ಕನುಕೂಲಗಳಾದ ಅನೇಕ ಕರ್ನಾಟಕ ಗ್ರಂಥಗಳು ಹಲದೋರಿದುದರಿಂದ 12ನೆಯ ಶತಮಾನದಿಂದೀಚೆಗೆ ಈ ಮತವು ಹುಟ್ಟಿತೆಂದೂ, ಈ ಮತಕ್ಕೆ ಬಸವಪುರಾಣ, ಚನ್ನಬಸವಪುರಾಣ, ಪ್ರಭುಲಿಂಗಲೀಲೆ ಇವುಗಳೇ ಆನುಷ್ಠೇಯ ಗ್ರಂಥಗಳೆಂದೂ ಅಪಖ್ಯಾತಿಯನ್ನು ಪಡೆಯಲು ಅವಕಾಶವಾಯಿತು. ಕೆಲ ಆಗಂತುಕ ಲಿಂಗಾಯತರಲ್ಲಿ ಈ ಮತದ ಸನಾತನತ್ವವು ಹೊರಬಿದ್ದರೆ ತಮ್ಮ ಗೌರವಪ್ರತಿಷ್ಠೆಗಳಿಗೆ ಕುಂದುಂಟಾಗುವದೆಂಬ ದುರ್ಭಾವನೆಯಿಂದ ಕೆಲ ಜನ ಕನ್ನಡಿಗರು (ಮಿತ್ರರು) ಈ ಮತವು ಇತ್ತೀಚಿನದು, ಈ ಮತದ ಧರ್ಮಗಳು ಯಾವ ಪ್ರಾಚೀನಗ್ರಂಥಗಳಲ್ಲಿಯೂ ಉಕ್ತಗಳಾಗಿಲ್ಲ; ಈ ಮತಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು ಬಸವನ ಸಮಕಾಲೀನರು, 12ನೆಯ ಶತಮಾನದಲ್ಲಿದ್ದ ಆಂಧ್ರದೇಶೀಯರಾದ ಮಲ್ಲಿಕಾರ್ಜುನಪಂಡಿತಾರಾಧ್ಯರೇ ಮತಸ್ಥಾಪನಾಚಾರ್ಯರಲ್ಲೊಬ್ಬರಾದ ಪಂಡಿತಾರಾಧ್ಯರು ಎಂದು ಹೇಳುತ್ತ ನಾನಾ ಜಾತಿಗಳ ಸಾಂಕರ್ಯದಿಂದುತ್ಪನ್ನವಾದ ಅವೈದಿಕಮತವೆಂದು ಸಿದ್ಧಗೊಳಿಸುವ ಕಾರ್ಯದಲ್ಲಿ ದ್ಯುಕ್ತರಾಗಿರುವರು. ಅವಿದ್ಯಾವಂತರಾದ ಶುದ್ಧಸಾಂಪ್ರದಾಯದ ವೀರಶೈವರಲ್ಲಿ ಕೆಲವರು ಇದನ್ನೇ ನಿಜವೆಂದು ನಂಬಿ ಆಗಂತುಕರ ಧರ್ಮಗಳನ್ನೇ ಅನುಸರಿಸುತ್ತಿರುವರು, ಆದುದರಿಂದ ಈ ಮತದ ಯಥಾರ್ಥತತ್ವವನ್ನು ಸಕಲರಿಗೂ ತಿಳುಹಿಸುವುದಕ್ಕೋಸ್ಕರ ಈ ಲೇಖನವನ್ನು ಪ್ರಾರಂಭಿಸಲಾಯಿತು. ಈ ಲೇಖನದಲ್ಲಿ ಈ ಮತದ ಮುಖ್ಯ ಧರ್ಮಗಳಾದ ಷಟ್ಸ್ಥಲಗಳು, ಗೋತ್ರಪುರುಷರಾದ ವೀರನಂದ್ಯಾದಿ ಮಹರ್ಷಿಗಳು, ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಮುಂತಾದ ವಿಷಯಗಳು ವೇದಾಗಮಪುರಾಣೇತಿಹಾಸಗಳ ಆಧಾರಗಳೊಡನೆ ಪ್ರತಿಪಾದಿಸಲ್ಪಡುವುವು.

ಭರತಖಂಡದ ಸಕಲ ವೈದಿಕಮತಗಳಿಗೂ ವೇದವೇ ಮೂಲವಾಗಿದ್ದರೂ ೬ ವೇದಗಳಲ್ಲಿ ಯಾವಮತವೂ ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಿಲ್ಲ. ವೇದಕ್ಕೆ ಶಿರಃಪ್ರಾಯಗಳಾದ ಉಪನಿಷತ್ತುಗಳಲ್ಲಿ ಕೆಲವು ಮತಗಳು ಪ್ರತಿಪಾದಿಸಲ್ಪಟ್ಟಿವೆ. ಶ್ವೇತಾಶ್ವತರ, ಅಥರ್ವಶಿಖಾ, ಜಾಬಾಲಾದಿ ಕೆಲವು ಉಪನಿಷತ್ತುಗಳಲ್ಲಿ ಶಕ್ತಿವಿಶಿಷ್ಟಾದ್ವೈತರೂಪವಾದ ಶೈವಮತವು ಪ್ರತಿಪಾದಿಸಲ್ಪಟ್ಟಿದ್ದರೂ ಈ ಮತದ ಮುಖ್ಯ ಧರ್ಮವೆನಿಸಿದ ಲಿಂಗಧಾರಣವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಡದಿದ್ದರೂ ಸಿದ್ಧಾಂತಶಿಖಾ, ಲಿಂಗ, ವೀರಶೈವಾಗ್ರ್ಯಾದ್ಯುಪನಿಷತ್ತುಗಳಲ್ಲಿ ವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವುದು. ಸಿದ್ಧಾಂತಶಿಖೋಪನಿಷತ್ತಿನಲ್ಲಿ —

" ಅತ್ಯಾಶ್ರಮಿತ್ವಾತ್ ಗಣಪಂಚಜಾನಾಂ ಲಿಂಗಾಂಗಸಂಗಿನಾಂ ಶಕ್ರಜನ್ಮಾಂತದೀಕ್ಷ್ಯಾ | ಗಚ್ಛಂಸ್ತಿಷ್ಠನ್ನಿಮಿಷನ್ನುನ್ಮಿಷನ್ಸ್ವಪನ್ಜಾಗ್ರನ್ ಲಿಂಗಧಾರೀ ಶುಚಿಃ ಸ್ಯಾತ್ || "

ಇತ್ಯಾದಿ ವಾಕ್ಯಗಳಿಂದ ಲಿಂಗಧಾರಣವೂ ಭಕ್ತ್ಯಾದಿ ಷಟ್ಸ್ಥಲಗಳೂ ನಿರೂಪಿಸಲ್ಪಟ್ಟಿರುತ್ತವೆ.

" ಲಿಂಗಾಜ್ಞಾನಂ ತಜ್ಞಾನಕಾಲೇಧಾರಣಮುಚ್ಯತೇ | ಸರ್ವಲಿಂಗಾಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಮ್ | ಅಯಂಮೇ ಹಸ್ತೋ ಭಗವನ್ನಿತಿಧಾರಯೇತ್......ಶ್ರೌತಾಶ್ರೌತೇಚಧಾರಣಮ್ | ವೇದೋಕ್ತವಿಧಿನಾ ಶ್ರೌತಮ್ | ತದ್ರಹಿತಮಶ್ರೌತಮ್ | ಸರ್ವವರ್ಣೇಷು ಧಾರಣಮ್ | "

ಇತ್ಯಾದಿ ವಾಕ್ಯಗಳಿಂದ ಬ್ರಾಹ್ಮಣಾದಿ ಸಕಲ ವರ್ಣದವರೂ ಲಿಂಗಧಾರಣಸಂಪನ್ನರಾಗಿ ಮುಕ್ತರಾಗಬೇಕೆಂಬ ವಿಷಯವು ವಿಸ್ತರಿಸಲ್ಪಟ್ಟಿರುತ್ತದೆ. ಇದಲ್ಲದೆ ವೇದಾಂತಸಾರ, ಭಕ್ತಿಯೋಗ, ನಿರ್ಲೇಪ, ಪ್ರಸಾದಜಾಬಾಲ, ಚಿದಂಬರ, ಪ್ರಣವಶರೀರ, ಸ್ಮೃತಿರಹಸ್ಯ ಮೊದಲಾದ ಉಪನಿಷತ್ತುಗಳಲ್ಲಿಯೂ ಸಹ ಈ ಧರ್ಮಗಳು ನಿರೂಪಿಸಲ್ಪಟ್ಟಿವೆ. ಲೇಖನವಿಸ್ತಾರಭಯದಿಂದ ಆ ಉಪನಿಷತ್ತುಗಳ ಕೆಲವು ವಾಕ್ಯಗಳನ್ನು ಮಾತ್ರ ಇಲ್ಲಿ ಉದಾಹರಿಸಿದ್ದೇವೆ.

" ಅಥಾಶ್ವಲಾಯನೋ ಭಗವಂತಂ ಪರಮೇಷ್ಠಿನಂ ಪರಿಸಮೇತ್ಯೋವಾಚ | ವಿಮುಕ್ತಿಂ ಸದ್ಯೋಮುಕ್ತಿಕರಂ ಬ್ರೂಹೀತಿ | ಸಹೋವಾಚ ಯಾಜ್ಞವಲ್ಕ್ಯಃ ಶ್ರೀಪರಮೇಷ್ಠೀ ಶಿವೋಽದ್ವೈತಶ್ಚತುರ್ಥ........| ಅತ್ಯಾಶ್ರಮಸ್ಥಾಃ ಪರಿಮುಚ್ಯಂತಿಧೀರಾಃ | ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ | ಏನೋ ವಿಹೀನಮೇಕಂ ಲಿಂಗಸ್ವರೂಪಂ ಧೃತಲಿಂಗಭಾವಮಂತರ್ಬಹಿಃ ಸ್ವಸ್ಯ ಚ ಸಾಮರಸ್ಯಂ ಜ್ಞಾತ್ವಾಹಿದೇವಂ ಶುದ್ಧಭಾವೈರುಪಾಸ್ಯಮ್........ಭೂರಾದಿಲೋಕಸ್ಥ ಜನಾನಪಾಸ್ಯೈತತ್ತತ್ಪಶ್ಯೇವವಿಲಗ್ನಭಾವಾನ್ | ಕಂಠಃ ಶಿರೋವಕ್ಷೋಭುಜೇಷುಲಿಂಗಂ........ತದೇವ ಶುಕ್ರಃ ಸರ್ವೇಚ ಬೃಹಸ್ಪತಿಮುಖಾಮರಾಃ | ಪ್ರಾಪ್ಯೋಪಾಸ್ಯ ಶಿವಂ ಸಾಂಬಂ ಬ್ರಹ್ಮಾ ಸ್ವಹೃದಯಾಂಬುಜೇ | ಲಿಂಗಾಂಗಸಾಮರಸ್ಯಾಚ್ಚ ಶರೀರೇ ಲಿಂಗಧಾರಣಂ | ನಿಯಮೇನೈವ ಧೃತ್ವಾ ತೇ ಮುಕ್ತಾಃ ಸಂಸಾರಸಾಗರಾತ್ || "

(ವೇದಾಂತಸಾರೋಪನಿಷತ್)

" ಅವಧೂತಾನಾಂ ಪರಮಹಂಸಾನಾಂ ಶೀತೋಷ್ಣ ಸುಖದುಃಖ ಮಾನಾವಮಾನಸಹನಂ ಬಹುಜನ್ಮಾಂತರೇಷು ಯೋಗಸಿದ್ಧಾನಾಂ | ಪರಮಶಿವಲಿಂಗಾಂಗಸಾಮರಸ್ಯವಿವಿಧಿಷೋರಿಂದ್ರಿಯಂ ವ್ಯವಸ್ಥಾ ಸರ್ವವೇದಾಂತಸಿದ್ಧಂ | ಮುಮುಕ್ಷೂಪಾಸ್ಯೋ ಜನ್ಮಾಂತರ ಸಂಸ್ಕೃತಾನಾಮೇವ ತದಧಿಕಾರಾತ್ತತ್ರ ಭಕ್ತಿಯೋಗಃ |........ಸೋಹಂಭಾವೋ ಧೃತಲಿಂಗಸ್ಯ ಚಿತ್ತೇ ಪರೋಪಕಾರಂ ಶಿವಕಾರ್ಯಂ |

(ಭಕ್ತಿಯೋಗೋಪನಿಷತ್)

" ಶಿವಸ್ಯ ತನವೋ ಜ್ಞೇಯಾ ಲಿಂಗಂ ಯತ್ಸಂಪುಟಂತಥಾ | ಗುಣೋ ದೋರಂ ತಥಾ ವಸ್ತ್ರಂ ಸರ್ವವೇದಾಂತನಿಶ್ಚಿತಮ್ | ಈಶಾನಮಾದ್ಯಂ ಲಿಂಗಮೇತತ್ತ್ವತೀಯಂ ಸದ್ಯೋಜಾತಃ ಸಂಪುಟಂ ಸಜ್ಜಮಾಸುಃ | ಗುಣೋ ದೋರಂ ಸದ್ಗುಣಾಢ್ಯಂ ಪ್ರಪೂಜ್ಯಃ ದೋರಮೇತತ್ತತ್ಪುರುಷಾಭಿಧಾನಃ | ವಸ್ತ್ರಮೇತದ್ವಾಮದೇವಃ ಶಿವಾತ್ಮಾ ಪಂಚಾತ್ಮಕೋ ಭಾಸತೇ ಸರ್ವವಂದ್ಯಃ |........| ಇತ್ಯಾಹ ಭಗವಾನ್ ಪಿಪ್ಪಲಾದೋ ಹೃದಿ ಲಿಂಗಂ ಧೃತ್ವಾ ಮೂಢೋಽಪಿ ಪರಂಜ್ಯೋತಿಃ ಪ್ರವಿಶತಿ ||

(ನಿರ್ಲೇಪೋಪನಿಷತ್)

" ಯಸ್ಯತ್ರಿಪುಂಡ್ರಂ ಲಸತೇ ಲಲಾಟೇ ತತ್ರತ್ರಿಲೋಕೇ ಲಸತೇ ಚ ಸರ್ವಮ್ | ವೃಷ್ಟಿಸ್ವರೂಪಃ ಪ್ರಣವಸ್ತದೇತತ್ಸಂಸೇವ್ಯಮಾನೋ ನ ಪುನರ್ಭವೇಸ್ಯಾತ್ | ಅಂತರ್ಲಿಂಗಂ ಜ್ಯೋತಿಷಾ ಸಂಪಿಭಾತಂ ಬಹಿರ್ಲಿಂಗಂ ಹೃದಯೇ ಸನ್ನಿವಿಷ್ಟಂ | ಶಂಭುಂಸಾಕ್ಷಾದದ್ವಯಾತ್ಮಾನಮೇವರಹಸ್ಯಮೇತನ್ನ ವಿದಂತಿ ಲೋಕಾಃ | ವೇದಶಾಸ್ತ್ರಪುರಾಣಾನಿ ಪಠ್ಯವಸನ್ತಿ ಶಂಕರೇ|| ತಾವತ್ತೇಷಾಂ ಸಮಭ್ಯಾಸೋ ಯಾವತ್ತದ್ಭಕ್ತಿಸಂಭವಃ | ಶರೀರಮೇತದ್ವಟವದ್ವಿದಿತ್ವಾ ಚಿದಂಬರಂ ನಿತ್ಯವಿಕಾಶಂ ವಿದಿತ್ವಾ ಮೃತ್ಯುಂ ತೀರ್ತ್ವಾ ಸರ್ವಪಾಪಂ ವಿಸೃಜ್ಯ ಶಿವೇ ಪರಬ್ರಹ್ಮಣಿ |

(ಚಿದಂಬರೋಪನಿಷತ್)

ಕಾಮಿಕಾದಿ ದಿವ್ಯಾಗಮಗಳಲ್ಲಂತೂ ಈ ಮತವು ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿದೆ. ಆದರೆ ಶಿವಾಗಮಗಳ ಪೂರ್ವಭಾಗಗಳಲ್ಲಿ ವೀರಶೈವ ಮತವು ಹೇಳಲ್ಪಟ್ಟಿಲ್ಲ. ಉತ್ತರ ಭಾಗಗಳಲ್ಲಿ ಮಾತ್ರ ಹೇಳಲ್ಪಟ್ಟಿದೆ. ಆದ್ದರಿಂದ ವೀರಶೈವ ಮತವು ಪ್ರಾಚೀನವಲ್ಲ ಎಂದು ಕೆಲ ನಾಸ್ತಿಕರು ಹೇಳುತ್ತಾರೆ. ಇದು ಅವರ ಅಜ್ಞಾನದೋಷವೆಂದೇ ಹೇಳಬೇಕಾಗುತ್ತದೆ.

ಯಾಕೆಂದರೆ ಪ್ರತಿಯೊಂದು ಶಿವಾಗಮವೂ ಕ್ರಿಯಾ, ಯೋಗ, ಚರ್ಯಾ, ಜ್ಞಾನ ಎಂಬ ನಾಲ್ಕು ಪಾದಗಳನ್ನೊಳಗೊಂಡಿದೆ. ಅದರಲ್ಲಿ ಮೊದಲನೆಯ ಕ್ರಿಯಾಪಾದದಲ್ಲಿ ಸಪ್ತವಿಧ ವೀರಶೈವರಿಗೂ ಸಾಮಾನ್ಯಗಳಾದ ಸಂಧ್ಯಾವಂದನಾದಿ ನಿತ್ಯಕರ್ಮಗಳು ಆ ಕರ್ಮಗಳ ಆಚರಣದಿಂದ ಜೀವನಿಗೆ ಪಶುತ್ವ ಕ್ಷಯದ್ವಾರಾ ಶಿವಾಭಿವ್ಯಕ್ತ್ಯಾದಿ ವಿಷಯಗಳು ಪ್ರತಿಪಾದಿತಗಳಾಗಿವೆ. ಯೋಗಪಾದದಲ್ಲಿ ಶ್ವೇತಾಚಾರ್ಯ, ದಾರುಕಾಚಾರ್ಯ ಮೊದಲಾದ 28 ಜನ ಯೋಗಾಚಾರ್ಯರ ಮತ್ತು ಅವರ ಚತುರ್ವಿಧ ಶಿಷ್ಯರ ವಿವರಣ, ಮಂತ್ರ, ಲಯ, ಹಠ, ರಾಜ, ಶಿವ ಎಂಬ ಪಂಚವಿಧಯೋಗಗಳು, ಪತ್ನಾಧಕಗಳಾದ ಯಮನಿಯಮಾದ್ಯಷ್ಟಾಂಗಗಳ ಸ್ವರೂಪ, ಶಿವಯೋಗಸಂಧಾನ, ಜಪಮಾಲಾಲಕ್ಷಣ, ವೀರಶೈವ ಮತದ ಗೋತ್ರಪುರುಷರಾದ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ರೆಂಬ ಪಂಚಮಹರ್ಷಿಗಳ ಮತ್ತು ಶ್ರೀ ರೇಣುಕಾದಿ ಪಂಚಾಚಾರ್ಯರ ಉತ್ಪತ್ತಿ ಇವುಗಳು ಪ್ರತಿಪಾದಿತಗಳಾಗಿವೆ. ಚರ್ಯಾಪಾದದಲ್ಲಿ ಪ್ರಾಯಶ್ಚಿತ್ತಾದಿ ಕರ್ಮಗಳು ಪ್ರತಿಪಾದಿತಗಳಾಗಿವೆ. ಜ್ಞಾನಪಾದದಲ್ಲಿ ಪಶು, ಪಾಶ, ಪತಿಗಳೆಂಬ ತ್ರಿಪದಾರ್ಥಗಳ ವಿವರಣ, ಷಟ್ತ್ರಿಂಶತ್ತತ್ವನಿರೂಪಣ ದೀಕ್ಷಾದಿಕಥನ, ಮೋಕ್ಷಸಾಧಕಗಳಾದ ಅಷ್ಟಾವರಣ ಪಂಚಾಚಾರಾತ್ಮಕಗಳಾದ ಷಟ್ಸ್ಥಲಗಳೆಂಬ ವೇದಾಂತತತ್ವಗಳ ವಿವರಣ ಇತ್ಯಾದಿ ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಅಲ್ಲದೆ ಯೋಗಜ, ಸ್ವಾಯಂಭುವ, ಪಾರಮೇಶ್ವರ, ವೀರ ಮೊದಲಾದ ಕೆಲವು ಆಗಮಗಳಲ್ಲಿ ಅದ್ಯಂತವಾಗಿ ಈ ಮತವೆ ಪ್ರತಿಪಾದಿಸಲ್ಪಟ್ಟಿದೆ. ಆದುದರಿಂದ ವೀರಾಗಮಕ್ಕೆ ವೀರಶೈವಾಗಮವೆಂಬುದಾಗಿ ಅನ್ವರ್ಥನಾಮ ಉಂಟಾಗಿದೆ. ಈ ಶಿವಾಗಮಗಳ ಸಾರವನ್ನೇ ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು ಸ್ಕಂದಾದಿ ಪುರಾಣಗಳ ರೂಪದಲ್ಲಿ ಸಂಗ್ರಹಿಸಿರುತ್ತಾರೆ. ಅನೇಕಾನೇಕ ಶಿವಾಗಮವಚನಗಳು ಸ್ಕಾಂದಾದಿ ಪುರಾಣಗಳಲ್ಲಿ ಆಗಮದಲ್ಲಿದ್ದಂತೆಯೇ ಪ್ರತಿಪಾದಿಸಲ್ಪಟ್ಟಿವೆ.

(ಸಶೇಷ)

M. D. Basavappa.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಭಾರತೀಯಶಾಸನದ ಪುರಸ್ಕಾರ.

ಸಮಾಜಬಂಧುಗಳೇ ? ಈಗಿನ ಸಮಯದಲ್ಲಿ ಯಾವ ಕಡೆಗೆ ನೋಡಿದರೂ ಸತ್ಯಾಗ್ರಹದ ಚಳವಳಿಯು ಬಹು ಜೋರಿನಿಂದ ನಡೆದಿರುವದಲ್ಲದೆ ಪ್ರತಿಯೊಬ್ಬರೂ ತಂತಮ್ಮ ಕರ್ತವ್ಯಾಕರ್ತವ್ಯಗಳನ್ನು ಪರ್ಯಾಲೋಚಿಸಿ ಪರರಿಗೆ ಬಾಧೆಯಾಗದಂತೆ ತಮ್ಮಲ್ಲಿಯ ಅಕೃತ್ಯಗಳನ್ನು ದೂರಮಾಡಿ ತಮ್ಮ ಆಚಾರ್ಯರು ಹಾಕಿಕೊಟ್ಟ ಕಟ್ಟುಗಳಂತೆ ನಡೆದು, ಕಲಿರಾಜನ ಅಧರ್ಮದಬ್ಬಾಳಿಕೆಯನ್ನು ದೂರೀಕರಿಸಿ ಸದ್ಧರ್ಮಕ್ಕೆ ವಿಜಯಪತಾಕೆಯನ್ನು ಸ್ಥಿರಗೊಳಿಸಬೇಕಾಗಿದೆ. ಈಗಿನ ಸಮಯದಲ್ಲಿ ಧರ್ಮಾಧಿಕಾರಿಗಳು ವಿಶೇಷ ಶ್ರಮವನ್ನು ವಹಿಸದಿದ್ದರೆ ಕಾರ್ಯವು ಸಾಂಗವಾಗುವಂತಿಲ್ಲ. ಈ ವಿಷಯವನ್ನು ತಿಳಿದು ಪಾಲೀಕೊಪ್ಪದ ಪುಣ್ಯಾಶ್ರಮ ಶ್ರೀ ರೇಣುಕಬಾಗ ನಿವಾಸಿಗಳಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳು ಸಮಾಜಸುಧಾರಣೆಗೆ ತ್ರಿಕರಣಪೂರ್ವಕವಾಗಿ ಪ್ರವರ್ತಿಸುವದನ್ನು ನೋಡಿದರೆ ಯಾರು ಸಂತೋಷಸಮುದ್ರದಲ್ಲಿ ಮುಳುಗದಿರಲಾರರು ? ಇವರು 28-1-30 ನೇ ದಿವಸ ತಮ್ಮ ಆಶ್ರಮದಲ್ಲಿ ಸಭೆಗೂಡಿಸಿ ಹೋಳೀಹುಣ್ಣಿಮೆಯಲ್ಲಿ ನಡೆಯುವ ನಿಷಿದ್ಧಪದ್ಧತಿಯನ್ನು ಕಳೆಯಲು ಸರ್ವಾನುಮತದಿಂದ ಪಾಸುಮಾಡಿದ " ಭಾರತೀಯ ಬಿಲ್ಲು " ಸರ್ವಮತೀಯರಿಂದಲೂ ಅವಶ್ಯವಾಗಿ ಅನುಸರಿಸಲು ಅರ್ಹವಾಗಿರುವದು.

ಕಾಮದಹನದ ಹಬ್ಬವು ಬಹು ಮಹತ್ವದ್ದಾಗಿದ್ದರೂ ತಿಪ್ಪೆಯಲ್ಲಿಯ ರನ್ನದಂತೆ ಮಲಿನವಾಗಿತ್ತು. ಇದರ ಸತ್ಯಸಂಸ್ಥಿತಿಯು ಇಲ್ಲಿಯವರೆಗೆ ಗುಪ್ತಾವಸ್ಥೆಯಲ್ಲಿಯೇ ಇತ್ತು. ಈ ದಿವಸವು ಪುಣ್ಯಪ್ರಾಪ್ತಿಯ ಹೆಬ್ಬಾಗಿಲದಂತಿದ್ದರೂ ಅದನ್ನು ತಿಳಿದು ಸಕಲರೂ ಸದರಿ ದಿವಸಗಳಲ್ಲಿ ಪುಣ್ಯಕರಗಳಾದ ಶಿವಗುರುಭಜನಾದಿಗಳನ್ನು ಬಿಟ್ಟು ಪಾಪಕರ್ಮಗಳನ್ನು ಮಾಡಿ ನೊದಲೇ ನರಕಕ್ಕೆ ಆರ್ಡರನ್ನು ಕೊಡಲು ಎಲ್ಲಿ ನೋಡಿದರೂ ರಾಕ್ಷಸೀಕೃತ್ಯಗಳ ಪ್ರಚಂಡತಾಂಡವಗಳೇ ನಡೆಯುವವು. ಇದರಿಂದ ಕೆಲವು ಹಿಂದೂಗಳ ಪವಿತ್ರಧರ್ಮವು ಮಣ್ಣುಪಾಲಾಗುವದಲ್ಲದೆ ಅನೇಕ ಕಲಹಗಳ ದ್ವಾರಾ ಸಮಾಜದಲ್ಲಿ ಅನೈಕ್ಯವುಂಟಾಗಿ ಆರ್ಥಿಕಸ್ಥಿತಿಯೂ ಸಹ ಬಹಳ ಶೋಚನೀಯಸ್ಥಿತಿಗಿಳಿದಿರುತ್ತದೆ. ಈ ವಿಷಯದ ಬಗ್ಗೆ ಸದರಿ ಶ್ರೀಗಳು ನೋಟೀಸುಗಳನ್ನು ಹಂಚುವದಲ್ಲದೆ ತಮಗೆ ಸಾಧ್ಯವಾದಮಟ್ಟಿಗೆ ಪ್ರತಿ ಗ್ರಾಮಗಳಿಗೂ ದಯಮಾಡಿಸಿ ಸಭೆಗೂಡಿಸಿ ಈ ಪವಿತ್ರದ ಬೋಧವನ್ನು ಮಾಡಿ ಜನರ ದುರ್ಗತಿಯನ್ನು ಕಳೆಯುವದನ್ನು ನೋಡಿದರೆ ಈ ಮಹಾತ್ಮರಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಅಲ್ಪವೇ ಆಗುವದು. ಪ್ರತಿಯೊಬ್ಬ ಗುರುವರ್ಗದವರೂ ಮಠಾಭಿಮಾನಿಗಳೂ ಇವರ ಅಲ್ಲಕ್ರಮಕ್ಕೆ ಆಶ್ರಯಕೊಡುವದೆಂದರೆ ಈ "ಭಾರತೀಯ ಬಿಲ್ಲನ್ನು" ತೀವ್ರ ಅಮಲಿನಲ್ಲಿ ತರುವದೆಂದು ತಿಳಿದೇ ತಿಳಿಯುವದು. ಸುಧಾರಣೆಯ ಬಗ್ಗೆ ಕಟಿಬದ್ಧರಾದ ಬಂಕಾಪುರನಿವಾಸಿಗಳಾದ ಮ|| ರಾ|| ಮಹಾದೇವಪ್ಪ ಕುಂಬಾರ ಇವರು ಈ ಸಾರ ಕುಂಬಾರ ಓಣಿಯಲ್ಲಿ, ಕಾಮದಹನದ ಹಬ್ಬದಲ್ಲಿ ಯಾವ ಅನಾಚಾರಗಳೂ ನಡೆಯಬಾರದೆಂದು 5 ದಿವಸ ಸತತವಾಗಿ ಶಿವನ ಮಹತ್ವವನ್ನು ಪ್ರಕಟಿಸುವ "ಭಾರತೀಯಶಾಸನದ" ಕರಾರುಗಳನ್ನು ಅಜ್ಞಸುಜ್ಞರಿಗೆ ತಿಳಿಯುವಂತೆ ಸ್ವಾರಸ್ಯವಾಗಿ ಬೋಧಿಸಿ ಜನರ ಮನಸ್ಸಿನಲ್ಲಿದ್ದ ತಪ್ಪು ತಿಳುವಳಿಕೆಯನ್ನು ದೂರಮಾಡಿದರು. ಕಾಮದಹನದ ದಿವಸ ಶಿವನು ತೃಪ್ತಿಪಡುವಂತೆ ಸದರಿ ಓಣಿಯ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಮತ್ತು ರಾ|| ಬಂಕಪ್ಪ ವಳಮಗ್ಗದ ಪರಪ್ಪ ವಳಮಗ್ಗದ ಗುರಪ್ಪ ಉಂಕಿ, ರಾಮಣ್ಣ ಶಿಂಗಾಪುರ, ಶಿದ್ದಪ್ಪ ಕುಂಭಾರ, ಕೊಟ್ರಪ್ಪ ಕೊಕ್ಕುಂಬರಿ ಈ ಮೊದಲಾದ ತರುಣರು ಹುಂಡರಿಂದೊಡಗೂಡಿ ಈ ಓಣಿಯ ಗೌರೀಮಠದಿಂದ ಹೊರಟು ಪಂಚಾಚಾರ್ಯರ ಮತ್ತು ಪರಶಿವನ ಮಹತ್ವದ್ಯೋತಕಗಳಾದ ಪದ್ಯಗಳನ್ನು ಮಂಜುಳವಾಣಿಯಿಂದ ಪಠಿಸುತ್ತ ಮಧ್ಯೆ "ಹರಹರ ಮಹಾದೇವ, ಪಂಚಾಚಾರ್ಯ ಮಹಾರಾಜಕೀ ಜೈ" ಎಂದು ಜಯಘೋಷವಂ ಗೈಯುತ್ತ ಓಣಿಯ ಯಾವತ್ತು ಭಾಗಗಳಲ್ಲಿ ಸಂಚರಿಸಿ ಕಡೆಗೆ ಇದೇ ಓಣಿಯ ವೀರಭದ್ರದೇವಸ್ಥಾನದಿಂದ ಉತ್ಸವಪೂರ್ವಕವಾಗಿ ಬೆಂಕಿಯನ್ನೊಯ್ದು ವೇ|| ಚಂದ್ರಶೇಖರಯ್ಯನವರು ಗೌರೀಮಠ ಇವರ ಹಸ್ತದಿಂದ ಕಾಮನಿಗೆ ಅಗ್ನಿಸಂಸ್ಕಾರವು ಮಾಡಿಸಲ್ಪಟ್ಟಿತು. ಈ ಸಮಯದಲ್ಲಿ ಅಮಂಗಲವಾದ್ಯಗಳ ಬದಲಾಗಿ ಜಯಘೋಷಗಳ ಮಳೆಯೇ ಸುರಿಯುತ್ತಿತ್ತು. ಹಲಿಗೆ ಮೊದಲಾದವುಗಳ ಸದ್ದು ಇರಲಿಲ್ಲ. ಮಂಗಲವಾದ್ಯಗಳೇ ಬಾರಿಸಲ್ಪಡುತ್ತಿದ್ದವು. ಸಮಾಜಬಂಧುಗಳೇ ಈ ವೇಳೆ ಕಾಣಿಸಿದ ಸದ್ಗೃಹಸ್ಥರಂತೆಯೇ ಎಲ್ಲರೂ ಮುಂದಿನ ವರ್ಷವಾದರೂ ಪ್ರಯತ್ನಪೂರ್ವಕವಾಗಿ ದುರಾಚಾರಗಳನ್ನು ದೂರಮಾಡಿ ಸಮಾಜವನ್ನು ನಿಷ್ಕಲ್ಮಷವನ್ನಾಗಿ ಮಾಡುವಿರೆಂದು ನಂಬಿರುತ್ತೇನೆ. ಈ ವಿಷಯಕವಾಗಿ ಪ್ರಯತ್ನಪಟ್ಟ ಬಂಕಾಪುರದ ಮಹಾದೇವಪ್ಪನೇ ಮೊದಲಾದ ಮಂಡಳಿಗೆ ಪರಶಿವನು ಇತೋಽಪ್ಯತಿಶಯಗಳಾದ ಆಯುರಾರೋಗ್ಯಭಾಗ್ಯಾದಿಗಳನ್ನು ಅನುಗ್ರಹಿಸಲೆಂದು ಜಗದಾಚಾರ್ಯರನ್ನು ಅನನ್ಯಭಾವದಿಂದ ಬೇಡುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ವಿವಾಹಮಹೋತ್ಸವ, ಹಾಗಲವಾಡಿ.

ತುಂಕೂರು ಡಿ|| ಗುಬ್ಬಿ ತಾಲೂಕು ಹಾಗಲವಾಡಿ ಸಂಸ್ಥಾನದ ಪಾಳೇಗಾರ್ ಪುಟ್ಟಚನ್ನಬಸಪ್ಪನಾಯ್ಕರ ಮಕ್ಕಳು ಮ|| ರಾ|| ಅರಮನೆ ಚನ್ನಬಸಪ್ಪನವರು ತಮ್ಮ ಅರಮನೆಯಲ್ಲಿ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ೧೮೫೧ನೇ ಶುಕ್ಲನಾಮಸಂವತ್ಸರದ ಫಾಲ್ಗುಣ ಬಹುಳ ದಶಮಿ ಸೋಮವಾರ ಸೂರ್ಯೋದಯಾದ ೧೦ ಗಳಿಗೆಗೆ ಸಲ್ಲುವ ವೃಷಭಲಗ್ನದಲ್ಲಿ ತಮ್ಮ ಅಣ್ಣಂದಿರಾದ ಮ|| ರಾ|| ಪ್ರಸನ್ನಪ್ಪನವರ ಕುಮಾರಿ ಚಿ|| ಸೌ|| ಚೆನ್ನಮ್ಮನನ್ನು ಧಾರವಾಡ ಡಿ|| ಹಾವೇರಿ ತಾಲೂಕು ಹಂದಿಗನೂರು ಸಂಸ್ಥಾನದ ಶ್ರೀಮಂತ ಬಸವಂತರಾವ್ ಬುಳ್ಳಪ್ಪಾದೇಸಾಯಿ ಇವರ ಜ್ಯೇಷ್ಠಪುತ್ರರಾದ ಸರದಾರ್ ಬುಳ್ಳಪ್ಪಾ ಉರುಫ್ ಬಾಬಾಸಾಹೇಬ ಬಸವಂತರಾವ್ ಪಾಮಲೀದೇಸಾಯಿ ಸಾಹೇಬರಿಗೆ ಇವರಿಗೆ ಕೊಟ್ಟು ಪಂಚಕಲಶಸ್ಥಾಪನಪೂರ್ವಕ ಪಾಣಿಗ್ರಹಣಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಲಗ್ನಾನಂತರ ವಧೂವರರ ಪಲ್ಲಕ್ಕಿಮಹೋತ್ಸವವು ಅಸಾಧಾರಣವಾದ ವೈಭವದಿಂದ ನೆರವೇರಿತು. ಇದನ್ನು ನೋಡುವದಕ್ಕೋಸ್ಕರ ಸಾವಿರಾರು ಜನರು ನೆರೆದಿದ್ದರು. ಈ ಮಹಾಸಮಾರಂಭಕ್ಕೆ ಮ|| ರಾ|| ಕುಂದಗೋಳ ದೇಶಪಾಂಡೆಯವರಾದ ಶ್ರೀಮಂತ ವೀರಭದ್ರಪ್ಪಾ ಉರ್ಫ್ ಅಪ್ಪಾಸಾಹೇಬರವರು ಹಾಗೂ ಶ್ರೀಮಂತ ದೇಶಪಾಂಡೆ ಭದ್ರಪ್ಪನವರು ಶ್ರೀಮಂತ ಅಣ್ಣಿಗೇರಿ ದೇಸಾಯಿಯವರಾದ ವೀರಬಸವಂತಪ್ಪನವರು, ದೇವಿಹೊಸೂರು ಬೃಹನ್ಮಠದ ವೇ|| ವೀರಬಸವಶಾಸ್ತ್ರಿಗಳು, ವೇ|| ಹಂದಿಗನೂರು ಬೃಹನ್ಮಠದ ರೇವಣಯ್ಯನವರು, ಮಲ್ಲಯ್ಯನಮಠದ ಮುರುಗಯ್ಯನವರು, ಮ|| ರಾ|| ಮೇಲ್ಮರಿಅರಳೀವೀರಪ್ಪನವರು ಧಂಗಿ ಮಲಕಪ್ಪನವರು, ಕುಲಕರ್ಣಿ ಮಾರ್ತಾಂಡಪ್ಪನವರು ಹಂದಿಗನೂರು ಕುಲಕರ್ಣಿ ಗಂಗಪ್ಪನವರು, ಭೈರಾಪುರದ ಅಕ್ಕಿಫಕೀರಪ್ಪನವರು, ಹಂದಿಗನೂರು ಚನ್ನಬಸಪ್ಪನವರು ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಗಿತ್ತು. ಈ ವಿವಾಹಮಹೋತ್ಸವಸಮಾರಂಭ ಸಮಯದಲ್ಲಿ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಾಚಾರ್ಯರ ಪಾದಕಮಲಗಳಲ್ಲಿ ವಧೂವರರಿಂದ 25 ರೂ. ಗಳು ಸಮರ್ಪಿಸಲ್ಪಟ್ಟವು. ಪ್ರಭಾಪೋಷಣಕ್ಕೋಸ್ಕರ 10 ರೂ. ಗಳು ಸಮರ್ಪಿಸಲ್ಪಟ್ಟವು. ಹಾಗಲವಾಡಿ ಸಂಸ್ಥಾನದ ಸ್ಥಿರಪಟ್ಟಾಧ್ಯಕ್ಷರಾದ ಮಹಂತಿನಮಠದ ಶ್ರೀ ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಕಟ್ರಸಿದ್ಧರಾಮಪ್ಪನವರು, ಯಜಮಾನ್ ವೀರಪ್ಪನವರು, ಪ್ರಭಯ್ಯನವರ ತೋಟಯ್ಯನವರು, ಹೂ|| ಮ|| ವೀರಯ್ಯನವರು, ಕೊ|| ಮ|| ಕರಿಬಸಯ್ಯನವರು, ಗಂ|| ಮ|| ಸಿದ್ಧಲಿಂಗಪ್ಪನವರು, ಹಂ|| ಮ|| ಬಸಪ್ಪನವರು, ಪಟೇಲ್ ಸಿದ್ಧಲಿಂಗಪ್ಪನವರು, ಪಟೇಲ್ ಕೆ. ಲಿಂಗಪ್ಪನವರು, ಶೀಲಪ್ಪನವರ ಲಿಂಗಪ್ಪನವರು, ಬಳೆಬಸಪ್ಪನವರು, ದಳವಾಯಿ ಸಿದ್ಧಪ್ಪನವರು, ತುಂಕೂರು ಹೊನ್ನಪ್ಪನವರು, ಮಹಂತಯ್ಯನವರು, ಶೀಲಪ್ಪನವರ ಹೊನ್ನಪ್ಪನವರು, ಬಳೆಚನ್ನವೀರಪ್ಪನವರು, ಬೆಳ್ಳಾವಿ ಸಿದ್ದಪ್ಪನವರು, ಶೀರ್ಷದ ಸಿದ್ಧರಾಮಣ್ಣನವರು, ದೊಡ್ಡಗುಣಿ ಚಿಕ್ಕರುದ್ರಪ್ಪನವರು, ಕ್ಯಾತಸಂದ್ರ ರೇವಣ್ಣನವರು, ಯಜಮಾನ್ ರಾಮೇಗೌಡರು, ಭಗವತ ಸಿದ್ಧರಾಮಯ್ಯನವರು, ಬಂಡೆಣ್ಣನವರ ಪುಟ್ಟಯ್ಯನವರು. ಗವಿರಂಗಯ್ಯನವರು; ಡಾ|| ಲಕ್ಷ್ಮೀನರಸಿಂಹಸ್ವಾಮಯ್ಯರವರು, ರೆವಿನ್ಯೂ ಇನ್ಸ್‌ಪೆಕ್ಟರ್ ಎ. ವಿ. ನರಸಿಂಹಯ್ಯನವರು, ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಟಿ. ಸೀತಾರಾಮಯ್ಯನವರು, ಸ್ಕೂಲ್ ಮಾಸ್ಟರ್ ವೆಂಕಟರಾಮಯ್ಯನವರು, ಪೋಲೀಸು ದಫೇದಾರ್ ಓಬಯ್ಯನವರು. ಶ್ಯಾ|| ಸುಬ್ಬರಾಯರು, ಶ್ಯಾ|| ಲಕ್ಷ್ಮೀನಾರಣಪ್ಪನವರು, ವೆಂಕಟಾರಾಯಣಭಟ್ಟರು, ಶ್ಯಾ|| ಸುಬ್ಬಣ್ಣನವರು, ಹಾಲುಮಠದ ಲಿಂಗೇಗೌಡರು, ಮಾಳಪ್ಪನವರ ಸಿದ್ದೇಗೌಡರು. ಮೊದಲಾದವರು ಈ ಕಾರ್ಯದಲ್ಲಿ ಭಾಗಿಗಳಾಗಿದ್ದರು.

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕಲ್ಬುರ್ಗಿ ಹಿರಿಯಮಠ.

ಅಷ್ಟಾವರಣವೇ ಅಂಗವಾಗಿ ಪಂಚಾಚಾರವೇ ಪ್ರಾಣವಾಗಿ ವರ್ತಿಸುವವರೇ ವೀರಶೈವರೆಂದು ವೇದಾಗಮಗಳು ಘಂಟಾಘೋಷವಾಗಿ ಸಾರುತ್ತಿವೆ. ವೀರಶೈವರಿಗೆ ಅಂಗವಾಗಿರುವ ಅಷ್ಟಾವರಣಗಳಲ್ಲಿ ಮೊದಲನೆಯದಾದ ಗುರುಭಕ್ತಿ ವಿಷಯದಲ್ಲಿ ತೋರುತ್ತಿರುವ ಯತ್ಕಿಂಚಿತ್ ಕೊರತೆಯನ್ನು ದೂರಮಾಡಬೇಕೆಂಬುದೇ ಈ ಲೇಖನದ ಮುಖ್ಯಾಭಿಪ್ರಾಯವು. ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದೀ ವೀರಶೈವಮತದವರಿಗೆ ಗೋತ್ರ ಸೂತ್ರಗಳು ಪ್ರಸಿದ್ಧವಾಗಿವೆ. ಯಾರಿಗೆ ಗೋತ್ರ ಸೂತ್ರಗಳಿಲ್ಲವೋ ಅವರು ಶ್ರೇಷ್ಠಕುಲದವರೂ ಗುರುಗಳೂ ಎನಿಸಲಾರರು. ವೀರಶೈವರ ಜನನಾದಿ ಮರಣಾಂತ್ಯದವರೆಗೂ ನಡೆಯುತ್ತಿರುವ ಸಮಸ್ತ ಕಾರ್ಯಗಳಿಗೆ ಮನೆಯ ಗುರುಗಳೂ ಗುರುಸ್ಥಲಮಠದ ಮಾಹೇಶ್ವರರೂ ಅವಶ್ಯವಾಗಿ ಬೇಕೇ ಬೇಕು. ಗುರುವರ್ಗದವರಿಲ್ಲದೆ ಯಾವ ಕಾರ್ಯಗಳೂ ನಡೆಯುವದಾಗಿಲ್ಲವಾದ್ದರಿಂದಲೇ ಪ್ರತಿಯೊಂದು ಹಳ್ಳಿಗಳಲ್ಲಿ ಸಹಿತ ಗುರುಸ್ಥಲದ ಮಠಗಳಿವೆ. ಗುರುಸ್ಥಲಮಠವಿಲ್ಲದ ಗ್ರಾಮಗಳು ಮಾಂಗಲ್ಯವಿಲ್ಲದಲಂಕಾರದಂತೆ ವ್ಯರ್ಥವಾಗಿವೆ. ಹೆಜ್ಜೆ ಹೆಜ್ಜೆಗೆ ಗುರುನಾಮವನ್ನುಚ್ಚರಿಸುತ್ತಿರುವ ಜನರೇ ಹೆಚ್ಚು. ತಾವು ಗಳಿಸಿದ ದುಡ್ಡನ್ನು ಜಂಗಮರಿಗೆ ಕೊಟ್ಟು ಇದು ಗುರುವಿನದೆಂದು ಗುರುಗಳ ನಾಮವನ್ನು ಹೇಳುವದು ನಮ ರೂಢಿಯಲ್ಲಿದೆ. ಲಿಂಗಧಾರಣ ದೀಕ್ಷಾ ವಿವಾಹ ಶೋಭನ ಮುಂತಾದ ಕಾರ್ಯಗಳನ್ನು ಗುರುಗಳನ್ನು ಬಿಟ್ಟು ಮಾಡಲು ಬರುವಂತಿಲ್ಲ. ಆದ್ದರಿಂದಲೇ ಗುರುಗಳಿಗೆ ಪತ್ರಿಕಾಮುಖದಿಂದಾಗಲಿ ಪ್ರತ್ಯಕ್ಷದಿಂದಾಗಲಿ ವಿಜ್ಞಾಪನೆಮಾಡಿ ಕರೆಯಿಸಿಕೊಳ್ಳುತ್ತಿರುವರು. ಗುರುಗಳು ಬಾರದಿದ್ದಲ್ಲಿ ಗುರುವರ್ಗದ ಮಠದವರಿಂದಲೇ ಈ ಕಾರ್ಯಗಳನ್ನು ನಡೆಸುತ್ತಿರುವರು. ಇತ್ಯಾದಿ ಅನುಭವಗಳನ್ನು ವಿಚಾರಿಸಿದರೆ ನಮ್ಮ ವೀರಶೈವರು "ನಗುರೋರಧಿಕಂ" ಎಂದು ಸಾರುತ್ತಿರುವ ಶ್ರುತಿವಾಕ್ಯವನ್ನು ನಂಬಿ ನಡೆಯುತ್ತಿರುವರೆಂದು ಸಿದ್ಧವಾಗುತ್ತದೆ. "ಗುರುಭಕ್ತಿವಿಹೀನೋ ಯಃ ಸಚಂಡಾಲ ಇತಿಸ್ಮೃತಃ" ಎಂದಾಗಮವು ಪ್ರಮಾಣವಿರುವದರಿಂದ ವೀರಶೈವರಲ್ಲಿ ಗುರುಗಳಿಲ್ಲದ ಮನೆಗಳೇ ಇಲ್ಲ. ಕನ್ಯೆಯನ್ನು ನೋಡಿ ನಿಶ್ಚೈಸಬೇಕಾದರೆ ಮೊದಲು ಗೋತ್ರ ಸೂತ್ರಗಳನ್ನು ವಿಚಾರಿಸಿ ಭಿನ್ನಗೋತ್ರವಾದರೆ ಶರೀರಸಂಬಂಧವನ್ನು ಮಾಡುತ್ತಿರುವರು. ಏಕಗೋತ್ರವಾದರೆ ಮಾಡುವದಿಲ್ಲ. ಈ ಗೋತ್ರಸೂತ್ರಾದಿಗಳಿಗೆ ಮುಖ್ಯಾಧಿಕಾರಿಗಳೇ ಜಗದ್ಗುರು ಪಂಚಾಚಾರ್ಯರು. ಈ ಜಗದ್ಗುರು ಪಂಚಾಚಾರ್ಯರ ಶಿಷ್ಯಸಾಂಪ್ರದಾಯದವರೇ ಇಡೀ ಜಗತ್ತಿನಲ್ಲಿರುವ ವೀರಶೈವ ಭಕ್ತಮಾಹೇಶ್ವರರು. ಇತ್ತೀಚೆಗೆ ಕೆಲಜನರು ನಿಸ್ಸೀಮ ವಿಚಾರದಿಂದ ಗೋತ್ರ ಸೂತ್ರಾದಿಗಳನ್ನು ನಿರಾಕರಿಸಿದವರನ್ನು ಗುರುಗಳೆಂದೂ ಧರ್ಮಾಧಿಕಾರಿಗಳೆಂದೂ ಅವರ ಕಡೆಯಿಂದಲೇ ದೀಕ್ಷಾ ಶಿಕ್ಷಾ ಲಗ್ನ ಶೋಭನಾದಿ ಕಾರ್ಯಕ್ರಮಗಳನ್ನು ನಡೆಯಿಸುತ್ತಿರುವರು. ಇದು ಅತ್ಯಂತ ಪಾಪದ ಕಾರ್ಯವಾಗಿದೆ. ಅಸ್ತು !

ಕಲ್ಬುರ್ಗಿಯ ಹಿರೇಮಠದ ಶಿಷ್ಯಸಾಂಪ್ರದಾಯದವರಿಗೆ ಈ ಮೂಲಕ ತಿಳುಹಿಸುವದೇನಂದರೆ—ಈ ಮಠವು ಇಲ್ಲಿಯ ರಾಜಾಹಸನಗಂಗೂ ಇವರ ಕಾಲದಲ್ಲಿ ಅಧಿಕಾರ ಗೌರವದಿಂದ ಸ್ಥಾಪಿತವಾಗಿದೆ. ಈ ಮಠದ ಮೂಲಪುರುಷರು ಶ್ರೀಶೈಲ ಘಂಟಾಕರ್ಣ ಸಿದ್ಧೇಶ್ವರ (ಘಂಟಾ) ಮಠದಿಂದ ಬಂದ ರೇವಣಸಿದ್ಧ ಸ್ವಾಮಿಗಳು. ಇವರು ಚರಸ್ಥಿರ ಪಟ್ಟಾಧ್ಯಕ್ಷರು, ಇವರ ತರುವಾಯ ಶಾಂತವೀರಸ್ವಾಮಿಗಳು. ಈ ಮಠದ ಅಧಿಕಾರಿಗಳಿಗೆ ಇದುವರೆಗೂ ಈ ಎರಡು ನಾಮಗಳೇ ಪರಂಪರೆಯಿಂದ ಪ್ರಸಿದ್ಧವಾಗಿ ನಡೆದು ಬಂದಿವೆ. ಈ ಮಠದ ಶಿಷ್ಯಸಾಂಪ್ರದಾಯದವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರಾದಿ ಪ್ರಾಂತಗಳಲ್ಲಿ ಅನೇಕಜನರಿದ್ದಾರೆ. ಈಗ್ಗೆ ಕೆಲವು ದಿವಸಗಳಿಂದ ಮಠದಲ್ಲಿ ಅಧಿಕಾರಿಗಳಿಲ್ಲದ ಕಾರಣ ಶಿಷ್ಯವರ್ಗದ ಕಾಗದಪತ್ರಗಳು ಗುಪ್ತವಾಗಿವೆ. ನಾವೀಗ ಪೂರ್ಣ ಹೊಸಬರಾಗಿರುವದರಿಂದ ಜಾತ್ಯಂಥವನ್ನು ಅರಣ್ಯದಲ್ಲಿ ಬಿಟ್ಟಂತಾಗಿದೆ. ಗುರುಭಕ್ತಿಶೀಲರಾದ ಈ ಕಲ್ಬುರ್ಗಿಯ ಹಿರೇಮಠದ ಶಿಷ್ಯರು ತಮ್ಮ ಹೆಸರು ವಿಳಾಸ ಸಹಿತ ತಿಳಿಸಿದಲ್ಲಿ ಉತ್ತರವನ್ನು ಬರೆಯುತ್ತೇವೆ. ದರ್ಶನಾಪೇಕ್ಷಿಗಳ ಬಳಿಗೆ ಪ್ರತ್ಯಕ್ಷ ಬರಲು ಸಿದ್ಧರಿದ್ದೇವೆ. ಗುರುಗಳಾದವರು ತಾವೇ ಬರುವರೆಂದು ಉದಾಸೀನಮಾಡಬೇಡಿರಿ. ಕೆಲವು ಮೋಸಗಾರರು ನಾವೇ ಕಲ್ಬುರ್ಗಿ ಹಿರೇಮಠದವರೆಂದು ಬರುತ್ತಿರುವರು. ನೀವು ಅವರನ್ನು ನಂಬಬೇಡಿರಿ. ಒಮ್ಮೆ ನಮ್ಮಲ್ಲಿ ಪರಿಚಯಮಾಡಿಕೊಟ್ಟು ಶ್ರೀ ಗುರುಗಳ ದರ್ಶನಾಶೀರ್ವಾದ ಲಾಭವನ್ನು ಪಡೆಯಬೇಕೆಂದು ಸೂಚಿಸುವ.

ಕಲ್ಬುರ್ಗಿ ಹಿರೇಮಠದ ಶ್ರೀಗಳು.

ಶ್ರೀಗುರುಪಂಚಾಚಾರ್ಯಾಃ ಪ್ರಸೀದಂತು.

ಅರಸೀಕೆರೆ ತಾ|| ಪಂಬಾಪುರ.

ಪರಮಪೂಜ್ಯ, ಗುರುಸಾರ್ವಭೌಮ ಶ್ರೀ ಜಗದ್ಗುರುವರೇಣ್ಯ ರೇಣುಕಾಚಾರ್ಯರವರ ಜಯಂತ್ಯುತ್ಸವವು ಪಪ್ಪತಿಶ್ರೀಕಾದ ಇದೇ ಫಾಲ್ಗುಣ ಶು|| ತ್ರಯೋದಶಿ ಗುರುವಾರ, ಶ್ರೀ ಶಾತುಂಗೆರೆ ಹಿರೇಮಠದ ಚರಮೂರ್ತಿ ಸ್ವಾಮಿ ಪೂಜ್ಯಪಾದರವರ ಮೇಲ್ವಿಚಾರಣೆಯಿಂದಲೂ ಕಾರ್ಯದಕ್ಷತೆಯಿಂದಲೂ ಈ ಕೆಳಗೆ ಕಂಡ ರೀತಿಯಲ್ಲಿ ಅತಿವಿಜೃಂಭಣೆಯಿಂದ ನೆರವೇರಿತು.

ಪೂಜ್ಯಪಾದರವರ ಭಾವಚಿತ್ರವನ್ನು ಶೃಂಗರಿಸಿದ್ದ ಪುಷ್ಪಪಲ್ಲಕ್ಕಿಯಲ್ಲಿ ಬಿಜಯಂಗೈಸಿ, ಸಮಸ್ತ ಬಿರುದಾವಳಿಗಳಿಂದಲೂ ನಾನಾವಾದ್ಯವಿಶೇಷದಿಂದಲೂ, ಸಂದಿಗ್ಧಜನಮೇಳವಾಗಿ ಮೊದಲೇ ಈ ಉತ್ಸವಕ್ಕಾಗಿ ಪ್ರತಿ ಬೀದಿಯಲ್ಲಿಯೂ ಅಲಂಕರಿಸಿದ್ದ ತಳಿರುತೋರಣಂಗಳ ಮಧ್ಯದಲ್ಲಿಯೂ, ಇಕ್ಕೆಡೆಯಲ್ಲಿಯೂ ಸುಮಂಗಲೆಯರಿಂದ ಬೆಳಗಿಸಿದಾರತಿಗಳಿಂದಲೂ ಕಾಪಡಿನಾರತಿಗಳಿಂದಲಂಕೃತವಾದ ಪ್ರತಿ ಬೀದಿಗಳಲ್ಲಿಯೂ, ಈ ಗ್ರಾಮದ ಭಜನಾಸಂಘದವರ ದಿವ್ಯವಾದ ಗುರುನಾಮಸಂಕೀರ್ತನೆಗಳೊಡನೆ ಉತ್ಸವವು ಹೊರಟಿತು. ಇಕ್ಕಡೆಗಳಲ್ಲೂ ಗ್ರಾಮಸ್ಥರು ಪರಗ್ರಾಮದವರು ಅವರ ಹೆಂಗಸರು ಮಕ್ಕಳು ಅತಿಭಕ್ತಿವಿಶ್ವಾಸದಿಂದ ಗುರುನಾಮವನ್ನು ಕೊಂಡಾಡುತ್ತ ಆನಂದಪಡುತ್ತಲಿದ್ದರು. ಉತ್ಸವವು ಪೂರೈಸಿ ಭಜನಾಮಂದಿರದಲ್ಲಿ ಮಂಗಳಾರತಿ ಮಾಡಿ ನಿಲ್ಲಿಸಲ್ಪಟ್ಟಿತು, ಶ್ರೀ ಶಾತುಂಗೆರೆ ಚರಮೂರ್ತಿ ಮಹಾಸ್ವಾಮಿಯವರು ಅಧ್ಯಕ್ಷತೆಯನ್ನಲಂಕರಿಸಿದರು. ವೇ|| ಕಾಮಸಮುದ್ರದ ಶಿವರುದ್ರಯ್ಯನವರು ಭಜನಾಸಂಘದ ಪರವಾಗಿ ಭಾಷಣಮಾಡಿದರು. ರಾಮಪುರದ ಸ್ಕೂಲು ಹೆ|| ಮಾ|| ವೇ|| ಚಿಕ್ಕಹೊನ್ನಯ್ಯನವರು ಗುರುಭಕ್ತಿಯ ಮೇಲೆ ಭಾಷಣಮಾಡಿದರು. ಅ|| ಮಾ|| ವೇ|| ಶಿವಬಸವಯ್ಯನವರು ವೀರಶೈವಮತದ ಉತ್ಕೃಷ್ಟತೆಯನ್ನು ಕುರಿತು ಉಪನ್ಯಾಸಮಾಡಿದರು. ರಾಮಪುರದ ವೇ|| ಜಿ. ಕೆ. ಸಿದ್ಧಲಿಂಗಾರಾಧ್ಯರು ಈ ಉತ್ಸವಕ್ಕೆ ಭಾಗಿಗಳಾಗಿ ವೀರಶೈವರ ಕರ್ತವ್ಯದ ಬಗ್ಗೆ ಚೆನ್ನಾಗಿ ಭಾಷಣಮಾಡಿ, ಸರ್ವರೂ ತಮ್ಮ ಮನೆಗಳಲ್ಲಿ ನಡೆಯುವ ಶುಭಕಾರ್ಯಗಳಲ್ಲಿ ಪಂಚಾಚಾರ್ಯಪ್ರಭಾ ಪತ್ರಿಕೆಗೆ ಸಹಾಯ ಮಾಡಬೇಕೆಂದು ಸೂಚಿಸಿದರು. ಸರ್ವರೂ ಸಮ್ಮತಿಸಿದರು. ಗ್ರಾಮದ ಮುಖಂಡರಾದ ಬಸಪ್ಪನ ಮರುಳೀಗೌಡರು, ನಂಜೇಗೌಡರ ಸಿದ್ಧಲಿಂಗಪ್ಪನವರು, ವೇ|| ಕೆ. ಬಿ. ಬಸವಲಿಂಗಯ್ಯನವರು, ನಂಜಯ್ಯನವರ ವೇ|| ಮರುಳಸಿದ್ಧಪ್ಪನವರು, ಮ|| ರಾ|| ಬೇಲೂರಪ್ಪನವರ ಮರುಳೀಗೌಡರು, ವೇ|| ಕರಿಬಸವಯ್ಯನವರ ಚೆನ್ನಬಸವದೇವರು, ಸಣ್ಣಮುದ್ದಶೆಟ್ಟರು, ಕಾಯಿಸುರಿ ಮರುಳಪ್ಪ, ಗುಬ್ಬಿ ಚನ್ನಬಸವಯ್ಯನವರು, ಕಂ. ಬಸಪ್ಪನವರು, ಅಕ್ಕಮ್ಮ, ಕೆ. ಮಲ್ಲೇಶಪ್ಪನವರು, ಗುಂಡಾಭಕ್ತ ಸಿದ್ದಪ್ಪಯ್ಯ, ಶಿವಪುರ ಮರುಳಪ್ಪ, ಬಿ. ಮರುಳಪ್ಪ, ಬ. ಬಸಪ್ಪನವರು, ಚೆನ್ನಮ್ಮನವರು, ದಾಸಪ್ಪನವರು, ಮ|| ರಾಮಯ್ಯ, ಇವರುಗಳು ಗುರುಸಾರ್ವಭೌಮನ ಉತ್ಸವಕ್ಕೆ ಧನಸಹಾಯಮಾಡಿ, ಶ್ರಮವನ್ನು ಲಕ್ಷಿಸದೆ, ಪರಸ್ಥಳದಿಂದ ಬಂದ ಮಹಾಜನಗಳಿಗೆ ಉಪಚಾರಮಾಡಿ ಮುಂದೆಯೂ ಇದೇ ರೀತಿ ನಡಸುತ್ತ ಬರುತ್ತೇವೆಂದು ಗುರುಸಾರ್ವಭೌಮನ ಎದುರಿನಲ್ಲಿ ವಚನವನ್ನಿತ್ತಿರುತ್ತಾರೆ. ಇವರಿಗೆ ಶ್ರೀ ರೇಣುಕನು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಬ|| ನಂಜೇಗೌಡರ ಸಿದ್ಧಲಿಂಗಪ್ಪ,
ಗುರುಭಕ್ತ.

ಗೃಹಕೃತ್ಯದ ನೋಟೀಸು.

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಳಲಕೆರೆ ತಾಲ್ಲೂಕು ಚಿಕ್ಕಜಾಜೂರು ವಾಸಿ ದೇವಾಂಗದ ಮೂಡ್ಲಪ್ಪನ ತಿಮ್ಮಪ್ಪ ಈತನು ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ನನ್ನ ಚಿಕ್ಕ ದೊಡ್ಡಪ್ಪನ ಮಗ ಬೊಮ್ಮಜ್ಜ ಎಂಬುವರಿಗೆ ದಾಸಪ್ಪ ಎಂಬ ಸುಮಾರು 20 ವರ್ಷದ ಮಗನಿರುತ್ತಾನೆ. ಇವನು ಮತ್ತು ಇವನ ಅಣ್ಣ ಹನುಮಂತಪ್ಪ ವಗೈರೇರು ನನ್ನ ಜೊತೆಯಲ್ಲಿದ್ದು ಅವಿಭಕ್ತರಾಗಿ ಒಂದೇ ಗೃಹಕೃತ್ಯದಲ್ಲಿ ವಾಸಮಾಡಿಕೊಂಡು ಇರುತ್ತೇವೆ. ಸದರಿ ದಾಸಪ್ಪನಿಗೆ ಸುಮಾರು 4-5 ವರ್ಷಗಳ ಲಾಗಾಯಿತು ಒಂದು ತರಹ ಪಿತ್ತಸಂಬಂಧವಾದ ಜಾಡ್ಯವಿದ್ದು ಈಚೆಗೆ ಆ ಜಾಡ್ಯವು ಈಗ 4-5 ತಿಂಗಳಿಂದಲೂ ಪ್ರಬಲವಾಗಿ ಕೆಲವು ವೇಳೆ ಬುದ್ಧಿ ಸ್ವಾಧೀನವಿಲ್ಲದಿರುವುದು ಕೆಲವು ವೇಳೆ ಮೈಮೇಲೆ ಎಚ್ಚರಿಕೆ ಇಲ್ಲದೆ ಇರುವುದು ವಗೈರೆ ಆಗುತ್ತಾ ಇದೆ. ಅಲ್ಲದೆ ಈತನು 4-5 ತಿಂಗಳಿಂದಲೂ ಮನೆಯಲ್ಲಿ ವಿಶೇಷವಾಗಿರದೆ ನನ್ನ ದ್ವೇಷಿಕರ ಸಹವಾಸಮಾಡಿಕೊಂಡು ಅವರಲ್ಲೇ ಹೆಚ್ಚುಕಾಲ ಕಳೆಯುತ್ತಾ ಕುಟುಂಬದ ಸ್ವತ್ತುಗಳನ್ನು ಪರಭಾರೆಮಾಡುವದಕ್ಕೂ ಅಂಗಡಿಗೆ ಬರಬೇಕಾದ ಬಾಕಿಸಾಕಿಗಳನ್ನು ವಸೂಲುಮಾಡಿಕೊಳ್ಳುವದಕ್ಕೂ ಅಂಗಡಿ ಹೆಸರಿನಲ್ಲಿ ಮಾಲುಗಳಿಗೆ ಆರ್ಡರುಕೊಟ್ಟು ಅವುಗಳನ್ನು ತರಿಸಿಕೊಂಡು ದುರುಪಯೋಗಮಾಡಿಕೊಳ್ಳುವದಕ್ಕೂ ಪ್ರತಿಫಲವಿಲ್ಲದೆ ಸಾಲ ವಗೈರೆ ಪತ್ರಗಳನ್ನು ಬರೆದುಕೊಡುವದಕ್ಕೂ ಪ್ರಯತ್ನಪಡುತ್ತಿರುವುದಾಗಿ ತಿಳಿದುಬಂದಿರುತ್ತೆ. ಆದ್ದರಿಂದ ನನ್ನ ಮತ್ತು ಸದರಿ ದಾಸಪ್ಪನ ಚಿಕ್ಕ ಅಣ್ಣ ಹನುಮಂತಪ್ಪನ ಬುದ್ದಿ ಬರಹ ಮತ್ತು ರುಜುಗಳಿಲ್ಲದೆ ದಾಸಪ್ಪನಿಂದ ಸ್ವತ್ತುಗಳನ್ನು ಯಾವ ವಿಧದಿಂದಲೂ ಖರಿಸಿಕೊಳ್ಳಕೂಡದು ಸಾಲ ವಗೈರೆ ಕೊಡಕೂಡದು ಬಾಕಿಸಾಕಿಗಳನ್ನು ಕೊಡಕೂಡದು ಮತ್ತು ಮಾಲುಗಳನ್ನು ಕಳುಹಿಸಬಾರದು ಇದಕ್ಕೆ ವಿರೋಧವಾಗಿ ಯಾರಾದರೂ ನಡೆದರೆ ನಾನು ನನ್ನ ಅವಿಭಕ್ತರು ಮತ್ತು ನನ್ನ ಕುಟುಂಬದ ಆಸ್ತಿ ಸಹ ಜವಾಬ್‌ದಾರರಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ದೇವಾಂಗದ ಮೂಡ್ಲಪ್ಪನ ರುಜು.

ಪಂಚಾಚಾರ್ಯ ಪ್ರಭಾ

೧೯೩೦ನೇ ಏಪ್ರಿಲ್ ತಾ|| ೭ನೇ ಸೋಮವಾರ

ಶ್ರೀ ರೇಣುಕಾಚಾರ್ಯರೂ ಹಾಗೂ ಶ್ರೀ ಶಂಕರಾಚಾರ್ಯರೂ.

(ಚಂದ್ರಮೌಳೀಶ್ವರಲಿಂಗ)

ಶ್ರೀ ಪರಮೇಶ್ವರನು ಈ ಜಗತ್ತಿನಲ್ಲಿರತಕ್ಕ ಸಮಸ್ತ ಪ್ರಾಣಿಗಳ ಉದ್ಧಾರಕ್ಕೋಸ್ಕರ ಒಂದೊಂದು ಕಾಲದಲ್ಲಿ ತನ್ನ ಅಂಶದಿಂದ ಕೂಡಿದ ಮಹಾತ್ಮರನ್ನು ಭೂಮಿಯಲ್ಲಿ ಅವತಾರಗೊಳಿಸಿ ಅವರಮುಖದಿಂದ ಜಗತ್ತನ್ನು ಪವಿತ್ರಗೊಳಿಸುವನೆಂಬ ವಿಷಯವು ಅನೇಕಾನೇಕ ಧರ್ಮಗ್ರಂಥಗಳಿಂದ ವೇದ್ಯವಾಗುವದಷ್ಟೆ! ಭಗವತ್ಸಂಕಲ್ಪಕ್ಕನುಸಾರವಾಗಿ ಈ ಭರತಖಂಡದಲ್ಲಿ ಅನೇಕ ಜನ ಮಹಾತ್ಮರು ಜನ್ಮ ತಾಳಿ ನಾಸ್ತಿಕಮತಗಳನ್ನೆಲ್ಲ ಖಂಡಿಸಿ ಆಸ್ತಿಕ ಮತಗಳನ್ನು ನೆಲೆಗೊಳಿಸಿ ತದ್ದ್ವಾರಾ ಜಗತ್ತಿಗೆ ಕಲ್ಯಾಣವನ್ನುಂಟುಮಾಡಿ ಶಾಶ್ವತ ಕೀರ್ತಿಶಾಲಿಗಳಾಗಿ ಹೋಗಿದ್ದಾರೆ. ಅವರಲ್ಲಿ ಶ್ರೀ ರೇಣುಕಾದಿ ಪಂಚಾಚಾರ್ಯರೂ, ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯಾದ್ಯಾಚಾರ್ಯರೂ ಸುಪ್ರಸಿದ್ಧರಾಗಿದ್ದಾರೆ. ಶ್ರೀರೇಣುಕಾದಿಪಂಚಾಚಾರ್ಯರು ಭಾಷ್ಯಾದಿಗಳ ದ್ವಾರಾ ಜಗತ್ತಿನಲ್ಲಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ನೆಲೆಗೊಳಿಸಿ ಲೋಕವಂದ್ಯರಾದರು. ಇವರಂತೆ ಶ್ರೀ ಶಂಕರಾಚಾರ್ಯ ರಾಮಾನುಜಾಚಾರ್ಯರು ಅದ್ವೈತ ಹಾಗೂ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ನೆಲೆಗೊಳಿಸಿ ಜಗನ್ಮಾನ್ಯರಾದರು. ಸಾಮಾನ್ಯವಾಗಿ ವಿಚಾರಮಾಡಿ ನೋಡಿದರೆ ಶ್ರೀ ಶಂಕರಾಚಾರ್ಯರ ಮತವು ಭರತಖಂಡದಲ್ಲಿ ಅತ್ಯಂತ ಪ್ರಚಾರದಲ್ಲಿರುವವಾಗಿ ಕಂಡುಬರುವದು. ಈ ಆಚಾರ್ಯರು ಕೇರಳದೇಶಕ್ಕೆ ಸೇರಿದ ಕಾಲಟಿ ಎಂಬ ಗ್ರಾಮದಲ್ಲಿ 'ಶಿವಗುರು' ಎಂಬ ದ್ವಿಜಪುಂಗವನ ಉದರದಿಂದ ಪರಮಾತ್ಮನ ಆಜ್ಞಾನುಸಾರವಾಗಿ ಜನ್ಮವೆತ್ತಿ ಬೌದ್ಧಾದಿ ನಾಸ್ತಿಕ ಮತಗಳನ್ನು ಖಂಡಿಸಿ ಅಸಾಧಾರಣವಾದ ಪ್ರಯತ್ನವಿಶೇಷದಿಂದ ನಾಸ್ತಿಕಮಯವಾಗಿದ್ದ ಜನರ ಭಾವವನ್ನು ಆಸ್ತಿಕಮಯವನ್ನಾಗಿ ಮಾಡಿ ಲೋಕೈಕವಿಶ್ರುತ ಕೀರ್ತಿಶಾಲಿಗಳಾದರು. ಇವರು ಕೇವಲ ಶಂಕರನ ಅಂಶಸಂಭೂತರಾದುದರಿಂದ ಶಂಕರಾಚಾರ್ಯರೆಂಬ ಪವಿತ್ರಾಭಿಧಾನದಿಂದ ಸುಪ್ರಸಿದ್ಧರಾದರು. ಇವರು ರಾಮಾನುಜಾಚಾರ್ಯ ಮಧ್ವಾಚಾರ್ಯ ಮೊದಲಾದವರಂತೆ ಈ ಲೋಕದಲ್ಲಿ ವಿಷ್ಣುಭಕ್ತಿಯನ್ನು ನೆಲೆಗೊಳಿಸದೆ ಕೇವಲ ಶಿವಭಕ್ತಿಯನ್ನೇ ನೆಲೆಗೊಳಿಸಿದರೆಂದು ಧಾರಾಳವಾಗಿ ಹೇಳಬಹುದಾಗಿದೆ. ಇವರು ತಮ್ಮ ಜೀವನ ಕಾಲದಲ್ಲಿ ಶಿವನ ವಿಷಯಕವಾಗಿಮಾಡಿದಷ್ಟು ಸ್ತುತಿಗಳನ್ನು ಇನ್ನಾವ ದೇವತಾವಿಷಯಕವಾಗಿಯೂ ಮಾಡಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಇವರು ತಮ್ಮ ಶರೀರದಲ್ಲಿ ಶಿವಚಿಹ್ನಗಳಾದ ಭಸ್ಮರುದ್ರಾಕ್ಷಾದಿಗಳನ್ನು ಧರಿಸಿಕೊಂಡು ಮೆರೆದರಲ್ಲದೆ ವಿಷ್ಣುವಿನ ಚಿಹ್ನಗಳಾದ ಶಂಖ, ಚಕ್ರ, ಊರ್ಧ್ವ ಪುಂಡ್ರ, ತುಲಸೀಮಾಲಾದಿಗಳನ್ನು ಧರಿಸಿಕೊಂಡು ಮೆರೆಯಲಿಲ್ಲ. ಇವರು ಸದಾ ಶಿವಪಂಚಾಕ್ಷರೀಮಂತ್ರವನ್ನು ಜಪಿಸುತ್ತಿದ್ದರಲ್ಲದೆ ಉಳಿದ ದೇವತೆಗಳ ಮಂತ್ರಗಳನ್ನು ಜಪಿಸುತ್ತಿರಲಿಲ್ಲ. ಒಟ್ಟಿಗೆ ವಿಚಾರಮಾಡಿನೋಡುತ್ತಿರಲು ಇವರಲ್ಲಿ ಶಿವಭಕ್ತಿಯೇ ತುಂಬಿತುಳುಕುತ್ತಿದ್ದಿತೆಂದು ಸಿದ್ಧವಾಗುವುದು. ಇವರು ತಮ್ಮಿಂದ ರಚಿತವಾದ ಶಿವಾನಂದಲಹರಿಯೆಂಬ ಶಿವಸ್ತೋತ್ರಾತ್ಮಕ ಗ್ರಂಥದಲ್ಲಿ ಶಿವನಸರ್ವೋತ್ತಮತ್ವವನ್ನು ನಿಸ್ಸೀಮಭಕ್ತಿಯಿಂದ ಕೊಂಡಾಡಿರುವದನ್ನು ನೋಡಿದರೆ ಅವರಲ್ಲಿದ್ದ ಶಿವಭಕ್ತಿಯ ಪಾರಮ್ಯವನ್ನು ಎಷ್ಟುವರ್ಣಿಸಿದರೂ ತೀರದಾಗಿದೆ. ಅದಾವುದೆಂದರೆ—

ಸಹಸ್ರಂ ವರ್ತಂತೇ ಜಗತಿ ವಿಬುಧಾಃ ಕ್ಷುದ್ರಫಲದಾಃ| ನಮನ್ಯೇ ಸ್ವಪ್ನೇವಾ ತದನುಸರಣಂ ತತ್ಕೃತಫಲಂ || ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ | ಚಿರಂ ಯಾಚೇ ಶಂಭೋ ಶಿವ ತವ ಪದಾಂಭೋಜಭಜನಂ ||

ಎಲೌ ಪರಮೇಶ್ವರನೇ! ಲೋಕದಲ್ಲಿ ಸಾವಿರಾರು ಜನ ದೇವತೆಗಳಿದ್ದಾರೆ. ಅವರು ಅಲ್ಪಫಲವನ್ನು ಕೊಡತಕ್ಕವರಾದುದರಿಂದ ನಾನು ಅವರ ಅನುಸರಣವನ್ನಾಗಲಿ ಅಥವಾ ಅವರಿಂದ ಪ್ರಾಪ್ತವಾಗುವ ಫಲವನ್ನಾಗಲಿ ಸ್ವಪ್ನದಲ್ಲಿಯೂ ಸಹ ಸ್ಮರಿಸುವದಿಲ್ಲ. ಆದರೆ ಒಂದಾನೊಂದು ಕಾಲದಲ್ಲಿ ವಿಷ್ಣುಬ್ರಹ್ಮರೀರ್ವರೂ ನಾನು ಹೆಚ್ಚು ತಾನು ಹೆಚ್ಚು ಎಂಬ ಹೆಮ್ಮೆಯಿಂದ ಕೂಡಿದವರಾಗಿ ಶಪಥಮಾಡಿಕೊಂಡು, ಸಮೀಪದಲ್ಲಿದ್ದ ನಿನ್ನ ಪಾದಕಮಲಗಳನ್ನು ಕಾಣುವದಕ್ಕೋಸ್ಕರ ವಿಷ್ಣುವು ವರಾಹರೂಪವನ್ನು ಧರಿಸಿ ಸಹಸ್ರಾರುವರ್ಷಗಳವರೆಗೆ ಪಾತಾಳಲೋಕವನ್ನಗಿಯುತ್ತ ಹುಡುಕಿದರೂ ಸಹ ದೊರೆಯಲಿಲ್ಲ. ಅದರಂತೆಯೇ ನಿನ್ನ ಪವಿತ್ರಮಸ್ತಕವನ್ನು ಸಂದರ್ಶಿಸುವದಕ್ಕೋಸ್ಕರ ಬ್ರಹ್ಮನು ಹಂಸಪಕ್ಷಿಯ ರೂಪವನ್ನು ಧರಿಸಿ, ಸಹಸ್ರಾರು ವರ್ಷಗಳವರೆಗೆ ಹಾರುತ್ತ ಹುಡುಕಿದರೂ ದೊರೆಯಲಿಲ್ಲ. ಈ ರೀತಿಯಾಗಿ ಹರಿಬ್ರಹ್ಮಾದಿಗಳಿಗೂ ಕೂಡ ದೊರೆಯದೆ ಇದ್ದ ಆ ನಿನ್ನ ಪಾದಕಮಲಗಳ ಸ್ತೋತ್ರವನ್ನೇ ನಾನು ಯಾವಾಗಲೂ ಬೇಡುತ್ತೇನೆಂದು ಕೊಂಡಾಡಿದ್ದಾರೆ. ದೇವತೆಗಳಲ್ಲಿ ಯಾವ ಭೇದಭಾವವನ್ನೆಣಿಸದೆ ಸರ್ವರನ್ನೂ ಸಮತ್ವದಿಂದ ಕಾಣಬೇಕೆಂದು ಸಿದ್ಧಾಂತಗೊಳಿಸಿರುವ ಶ್ರೀ ಶಂಕರಾಚಾರ್ಯರೇ ಈ ರೀತಿಯಾಗಿ ಅಸಾಧಾರಣವಾದ ಭಕ್ತಿಭಾವದಿಂದ ಶಿವನನ್ನು ಕೊಂಡಾಡಿರುವದನ್ನು ನೋಡಿದರೆ, ಇವರಲ್ಲಿ ಶಿವಭಕ್ತಿಯು ಎಷ್ಟರಮಟ್ಟಿಗೆ ನೆಲೆಗೊಂಡಿತ್ತೆಂಬ ವಿಷಯವನ್ನು ವಾಚಕರೇ ಯೋಚಿಸಬಹುದಾಗಿದೆ.

"ಆದಿತ್ಯಮಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಂ" ಸೂರ್ಯ, ಶಕ್ತಿ, ವಿಷ್ಣು, ಗಣಪತಿ, ಮಹೇಶ್ವರ ಈ [illegible]ದೇವತೆಗಳನ್ನು ಒಂದೇ ಭಾವನೆಯಿಂದ ಪೂಜಿಸಬೇಕೆಂದು ಶ್ರೀ ಶಂಕರಾಚಾರ್ಯರು ಕರ್ಮಠರಾದ ಸ್ಮಾರ್ತರಲ್ಲಿ ನಿಬಂಧನವನ್ನು ಮಾಡಿದ್ದರೂ ಸಹ, ತಮ್ಮ ಪೀಠದಲ್ಲಿ ಕೇವಲ **"ಚಂದ್ರಮೌಳೀಶ್ವರ"** ನಾಮಕವಾದ ಶಿವಲಿಂಗಮೂರ್ತಿಯ ಪೂಜೆಯನ್ನೇ ಪ್ರಾಧಾನ್ಯವನ್ನಾಗಿಟ್ಟುಕೊಂಡಿದ್ದಾರೆನ್ನುವ ವಿಷಯವು ಸರ್ವರಿಗೂ ವೇದ್ಯವೇ ಆದೆ. ಶಂಕರಾಚಾರ್ಯರ ಪೀಠದಲ್ಲಿ ಬಹುಕಾಲದಿಂದ ಈ ಹೊತ್ತಿನವರೆಗೂ ಚಂದ್ರಮೌಳೀಶ್ವರಲಿಂಗದ ಪೂಜೆಯು ಅವಿಚ್ಛಿನ್ನವಾಗಿ ನಡೆದುಬಂದಿರುವಂತೆ ವಿಷ್ಣುಮೂರ್ತಿಯ ಪೂಜೆಯು ನಡೆದುಬಂದಿರುವದಿಲ್ಲವೆಂಬ ವಿಷಯವು ಸುಪ್ರಸಿದ್ಧವೇ ಆದೆ. ಶ್ರೀ ಶಂಕರಾಚಾರ್ಯರು ಶ್ರೀ ರೇಣುಕಾಚಾರ್ಯರಿಂದ ಚಂದ್ರಮೌಳೀಶ್ವರ ಲಿಂಗವನ್ನು ಪಡೆದುಕೊಂಡ ಮೇಲೆ, ವಿಶೇಷವಾಗಿ ಶೈವತತ್ತ್ವವನ್ನವಲಂಬಿಸಿದರಲ್ಲದೆ ಇನ್ನಾವ ತತ್ತ್ವವನ್ನೂ ಅವಲಂಬಿಸಲಿಲ್ಲ. ಆ ಪೀಠದಲ್ಲಾಗಲಿ ಅಥವಾ ಆ ಮಠೀಯರಲ್ಲಾಗಲಿ ಈ ಹೊತ್ತಿನವರೆಗೂ ಭಸ್ಮರುದ್ರಾಕ್ಷಧಾರಣಾದಿ ಶಿವಚಿಹ್ನಗಳೇ ತೋರುತ್ತಿರುವವಲ್ಲದೆ ಇನ್ನಾವ ದೇವತೆಗಳ ಚಿಹ್ನಗಳೂ ತೋರುತ್ತಿರುವುದು ಕಂಡುಬರುವದಿಲ್ಲ. ಇದಕ್ಕೆಲ್ಲ ಶ್ರೀ ರೇಣುಕಾಚಾರ್ಯರು ಶ್ರೀ ಚಂದ್ರಮೌಳೀಶ್ವರಲಿಂಗವನ್ನನುಗ್ರಹಿಸಿ, ಆ ಶಿವಲಿಂಗಮೂರ್ತಿಯಲ್ಲಿ ಬಲವಾದ ಭಕ್ತಿಯು ನೆಲೆಗೊಳ್ಳುವಂತೆ ಉಪದೇಶಮಾಡಿರುವದೇ ಮೂಲಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಈ ವಿಷಯದಲ್ಲಿ ಕೆಲವರು ಶ್ರೀ ಶಂಕರಾಚಾರ್ಯರಿಗೂ ಹಾಗೂ ಶ್ರೀ ರೇಣುಕಾಚಾರ್ಯರಿಗೂ ಯಾವ ಸಂಬಂಧವೂ ಇಲ್ಲವೆಂದೂ, ಶ್ರೀ ಚಂದ್ರಮೌಳೀಶ್ವರಲಿಂಗವು ಶ್ರೀ ರೇಣುಕಾಚಾರ್ಯರಿಂದ ಕೊಡಲ್ಪಟ್ಟಿರುವದಿಲ್ಲವೆಂದೂ, ಇದು ನಂಬಲಿಕ್ಕೆ ಅರ್ಹವಾದುದಲ್ಲವೆಂದೂ ಅಂದುಕೊಳ್ಳುತ್ತಿರುವರು. ಇದು ಅವರ ಭ್ರಮೆಯಲ್ಲದೆ ಯಥಾರ್ಥವಲ್ಲ. ಯಾಕೆಂದರೆ;

ಸಿದ್ಧನಾಥಶಿವಾಚಾರ್ಯನಿಂದ ರಚಿಸಲ್ಪಟ್ಟ ರೇಣುಕವಿಜಯದಲ್ಲಿ ಚಂದ್ರಮೌಳೀಶ್ವರಲಿಂಗಪ್ರದಾನ ವಿಷಯವು ವಿಶದವಾಗಿ ಬರೆಯಲ್ಪಟ್ಟಿರುವದು. ಹಾಗೂ ಈ ವಿಷಯವು **ಶಿವತತ್ತ್ವರತ್ನಾಕರ, ವೇದಾಂತಸಾರವೀರಶೈವಚಿಂತಾಮಣಿ** ಮೊದಲಾದ ಗ್ರಂಥಗಳಲ್ಲಿಯೂ ಸಹ ಪ್ರತಿಪಾದಿಸಲ್ಪಟ್ಟಿರುವದು. ಅಲ್ಲದೆ ಈಗ್ಯೆ ನೂರಾರು ವರ್ಷಗಳ ಪೂರ್ವದಲ್ಲಿ **ಶ್ರೀ ಶೃಂಗೇರಿಮಠಕ್ಕೆ** ಅಧಿಪತಿಗಳಾಗಿದ್ದ **ಸಚ್ಚಿದಾನಂದಭಾರತೀಸ್ವಾಮಿಗಳೆಂಬ** ಮಹನೀಯರು ಆ ಕಾಲದಲ್ಲಿ ತಮ್ಮ ಸಂಸ್ಥಾನಾಸ್ಥಾನವಿದ್ವಾಂಸರಾಗಿದ್ದ **ಕಾಶೀ ಲಕ್ಷ್ಮಣಶಾಸ್ತ್ರಿಗಳೆಂಬ** ಕವಿಪುಂಗವರಿಂದ ಆದ್ಯಶಂಕರಾಚಾರ್ಯರಾದಿಯಾಗಿ ಸಕಲ ಸ್ವಾಮಿಗಳವರ ಚರಿತ್ರವನ್ನು **"ಗುರುವಂಶಕಾವ್ಯ"** ಎಂಬ ಹೆಸರಿನಿಂದ ಸಂಸ್ಕೃತಭಾಷೆಯಲ್ಲಿ ಪದ್ಯರೂಪವಾಗಿ ಬರೆಯಿಸಿದ್ದಾರೆ. ಈ ಗ್ರಂಥವು **ಶೃಂಗೇರಿಮಠದ ಲೈಬ್ರರಿಯಲ್ಲಿ** ದೊರೆತಿದ್ದು, ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ಧರ್ಮಾಧಿಕಾರಿಗಳಾದ ವಿದ್ಯಾವಿಶಾರದ ವೇ|| ಕುಣಿಗಲ್ ರಾಮಶಾಸ್ತ್ರಿಗಳವರಿಂದ ಪರಿಶೋಧಿತವಾಗಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ಶ್ರೀರಂಗದಲ್ಲಿರುವ ವಾಣೀವಿಲಾಸ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದ ಮೂರನೆಯ ಸರ್ಗದಲ್ಲಿ:—

ಶ್ರೀಶಂಕರಾಚಾರ್ಯರು ಭರತಖಂಡವನ್ನೆಲ್ಲ ಸಂಚರಿಸಿ ಕಾಶ್ಮೀರದೇಶಕ್ಕೆ ಹೋಗಿ, ಅಲ್ಲಿದ್ದ ಶಾರದಾದೇವಿಯನ್ನು ತಂದು ಶೃಂಗೇರಿಯಲ್ಲಿ ಸ್ಥಾಪಿಸಿದರೆಂದೂ, ಅನಂತರ ತಾವು ಕಾಂಚೀಕ್ಷೇತ್ರಕ್ಕೆ ಹೊರಡಲು ಸಿದ್ಧರಾಗಿ ಸುರೇಶ್ವರಾಚಾರ್ಯನೆಂಬ ತಮ್ಮ ಪ್ರಥಮಶಿಷ್ಯನಿಗೆ ಶೃಂಗೇರಿಮಠದ ಪಟ್ಟವನ್ನು ಕಟ್ಟಿದರೆಂದೂ, ಆ ಮೇಲೆ ಸುರೇಶ್ವರಾಚಾರ್ಯನಿಗೆ "ಎಲೌ ಸುರೇಶ್ವರಾಚಾರ್ಯನೇ! ನೀನು **ಶ್ರೀ ರೇಣುಕಾಚಾರ್ಯರು** ನನಗೆ ಈ ಮೊದಲು ಅನುಗ್ರಹಿಸಿರುವ **ಚಂದ್ರಮೌಳೀಶ್ವರಲಿಂಗವನ್ನೂ** ಹಾಗೂ **ರತ್ನಗರ್ಭಗಣಪತಿ**ಯನ್ನೂ ಪೂಜಿಸು" ಎಂದು ಆಜ್ಞೆಯನ್ನು ಮಾಡಿ ಕಾಂಚೀಕ್ಷೇತ್ರಕ್ಕೆ ತೆರಳಿದರೆಂದೂ ಇತ್ಯಾದಿ ವಿಷಯವು ಬರೆಯಲ್ಪಟ್ಟಿರುತ್ತದೆ. ಆ ಗ್ರಂಥದಲ್ಲಿದ್ದ ಶ್ಲೋಕಗಳು ಈ ಕೆಳಗೆ ಉದಾಹರಿಸಲ್ಪಟ್ಟಿವೆ.

ಶ್ರೀ ಚಂದ್ರಮೌಳೀಶ್ವರಲಿಂಗಮುಸ್ಮೈ
ಸದ್ರತ್ನಗರ್ಭಂ ಗಣನಾಯಕಂಚ |
ಸ ವಿಶ್ವರೂಪಾಯ ಸುಸಿದ್ಧದತ್ತಂ
ದತ್ವಾ ನ್ಯಗಾದೀಚ್ಚಿರಮರ್ಚಯೇತಿ ||೩೩||
ಸುರೇಶ್ವರಾಚಾರ್ಯ ಸರಸ್ವತೀಂ ತ್ವಂ
ಸಂಪೂಜಯನ್ನಾಸ್ಸ್ವ ಚಿರಾದಿಹೇತಿ |
ದತ್ವಾಭ್ಯನುಜ್ಞಾಂ ವಿನತಾಯ ತಸ್ಮೈ
ಶಿಷ್ಯೈಸ್ಸಮಸ್ತೈಸ್ಸಜಗಾಮ ಕಾಂಚೀಮ್||೩೪||

ಮೇಲಿನ ಪದ್ಯದಲ್ಲಿರತಕ್ಕ **"ಸುಸಿದ್ಧದತ್ತಂ"** ಎಂಬ ಪದಕ್ಕೆ **"ಸುಸಿದ್ಧೇನ ರೇವಣಸಿದ್ಧಮಹಾಯೋಗಿನಾ ದತ್ತಂ ಶ್ರೀ ಚಂದ್ರಮೌಳೀಶ್ವರಲಿಂಗಂ, ಸದ್ರತ್ನಗರ್ಭಂ ಸದ್ರತ್ನಂಮಾಣಿಕ್ಯಂ ಗರ್ಭೇಯಸ್ಯಸಃ ತಥೋಕ್ತಸ್ತಂ ಗಣನಾಯಕಂ ವಿಘ್ನೇಶರಂಚ"** ಎಂದು ಈ ಗ್ರಂಥವನ್ನು ರಚಿಸಿದ ಕವಿಗಳೇ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ. ಅಲ್ಲದೆ ಈ ಚಂದ್ರಮೌಳೀಶ್ವರಲಿಂಗದ ವಿಷಯವು ಇದೇ ಕಾವ್ಯದ ಆರನೆಯ ಸರ್ಗದಲ್ಲಿಯೂ ಸಹ ಬಂದಿರುವದು. ಈ ಗ್ರಂಥಕರ್ತರು ಗ್ರಂಥಾದಿಯಲ್ಲಿ—**"ಪ್ರಾಯೇಣಾನ್ವಯ ಮಾರ್ಗೇಣ ವ್ಯಾಖ್ಯಾಯತ ಇಯಂ ಕೃತಿಃ| ಪ್ರಾಚಾಮಸಮ್ಮತಂ ನೈವ ಲಿಖ್ಯತೇಽತ್ರ ನಚಾಧಿಕಮ್"** ಎಂದು ಪ್ರತಿಜ್ಞೆಯನ್ನು ಮಾಡಿ ಪ್ರಾಚೀನ ಗ್ರಂಥಗಳಿಗೆ ಸಮ್ಮತವಾದ ವಿಷಯವನ್ನೇ ಬರೆಯುತ್ತೇನೆಂದು ಅಂದುಕೊಂಡಿರುವದರಿಂದ ಶಂಕರಾಚಾರ್ಯರ ವಿಷಯಕಗಳಾಗಿದ್ದ ಪ್ರಾಚೀನಗ್ರಂಥಗಳಲ್ಲಿ ಚಂದ್ರಮೌಳೀಶ್ವರ ಲಿಂಗಪ್ರದಾನವಿಷಯವು ವಿಶದವಾಗಿ ಬರೆಯಲ್ಪಟ್ಟಿರಬಹುದೆಂದು ತೋರಿಬರುತ್ತದೆ. ಶಂಕರಾಚಾರ್ಯರ ವಿಷಯದಲ್ಲಿ **"ಬೃಹಚ್ಛಂಕರವಿಜಯ"**ವೆಂಬ ಗ್ರಂಥವು ಪ್ರಾಚೀನಪಂಡಿತರಿಂದ ಬರೆಯಲ್ಪಟ್ಟಿರುವದೆಂದೂ, ಆ ಗ್ರಂಥದಲ್ಲಿ ರೇವಣಸಿದ್ಧ ಹಾಗೂ ಶಂಕರಾಚಾರ್ಯರ ಸಂವಾದರೂಪವಾದ **"ಸಿದ್ಧಶಂಕರಸಂವಾದ"**ವೆಂಬುದೊಂದು ಭಾಗವುಂಟೆಂದೂ ವದಂತಿಯುಂಟು. ಇದಲ್ಲದೆ ಇನ್ನೂ ಅನೇಕಾನೇಕ ಗ್ರಂಥಗಳಲ್ಲಿ ಈ ವಿಷಯವು ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವದು. ಅದನ್ನು ಕ್ರಮೇಣ ಪ್ರಕಟಿಸುತ್ತ ಹೋಗುವೆವು.

ವರ್ತಮಾನಸಂಗ್ರಹ.

ಕಲ್ಕತ್ತೆಯ "ಚಟಕ್" ಎಂಬ ಹಿಂದೀ ವಾರಪತ್ರಿಕೆಯ ಎಡಿಟರರಾದ ಮಿ|| ಕೇಜನಾರಾಯಣಭಜಪಾಯಿಯವರು ರಾಜದ್ರೋಹಕರವಾದ ಲೇಖನನ್ನು ಬರೆದರೆಂದು ವಿಚಾರಣೆಯು ನಡೆದು ಒಂದು ವರುಷದ ಕಠಿಣಶಿಕ್ಷೆಗೆ ಗುರಿಯಾದರು,

ಹೈದರಬಾದ್ ಸಂಸ್ಥಾನದ ನೈಜಾಂರವರು ಅಲಿಗಢದ ವಿಶ್ವವಿದ್ಯಾನಿಲಯಕ್ಕೆ 10 ಲಕ್ಷ ರೂಪಾಯಿಗಳನ್ನು ಉಚಿತವಾಗಿ ದಯಪಾಲಿಸಿರುವರಲ್ಲದೆ, ಪ್ರತಿ ತಿಂಗಳು ಕೊಡುತ್ತಿದ್ದ ಗ್ರಾಂಟನ್ನು 3000 ರೂ. ಗಳಿಂದ 5000 ರೂ. ಗಳಿಗೆ ಹೆಚ್ಚಿಸಿರುತ್ತಾರೆ.

ಸಿಂಧದೇಶದಲ್ಲಿ ಎರಡು ಉಪ್ಪುನೀರಿನ ಸರೋವರಗಳಿರುವವು. ಅವುಗಳ ನೀರನ್ನೆಲ್ಲ ಉಪ್ಪು ಮಾಡಿದರೆ ಆ ಉಪ್ಪು ಇಡೀ ಭರತಖಂಡಕ್ಕೆ 1240 ವರ್ಷಗಳ ವರೆಗೆ ಪೂರೈಸುವದೆಂದೂ, ಇಡೀ ಪ್ರಪಂಚಕ್ಕೆ 200 ವರ್ಷಗಳ ವರೆಗೆ ಪೂರೈಸುವದೆಂದೂ ಪ್ರಕಟಿಸಲ್ಪಟ್ಟಿದೆ.

ಕಳೆದ ಮಾರ್ಚಿ 24 ನೆಯ ತಾರೀಖಿನ ದಿವಸ ಅಮೇರಿಕೆಯ ನ್ಯೂಯಾರ್ಕ್ ನ[illegible]ಸಮೀಪದಲ್ಲಿದ್ದ ಒಂದು ಮೋಟಾರ್ ಕಾರ್ಖಾನೆಗೆ [illegible]ಕಿಬಿದ್ದು 400 ಮೋಟಾರುಗಳು ಸುಟ್ಟುಹೋದವು. ಇದರಿಂದ ಒಟ್ಟು 1 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ನಷ್ಟವಾಗಿರುತ್ತದೆ.

ಪಂಡಿತ ಮೋತೀಲಾಲನೆಹರೂರವರು ಅಲಹಾಬಾದಿನಲ್ಲಿರುವ ಭವ್ಯವಾದ ತಮ್ಮ "ಆನಂದಭವನ" ಬಂಗಲೆಯನ್ನು ರಾಷ್ಟ್ರಸೇವೆಗಾಗಿ ಕಾಂಗ್ರೆಸ್ಸಿಗೆ ಅರ್ಪಣ ಮಾಡಿರುತ್ತಾರೆ. ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಕಮಿಟಿಯ ಕಚೇರಿಯು ಇನ್ನು ಮುಂದೆ ಈ ಬಂಗಲೆಯಲ್ಲಿಯೇ ಕಾಯಂ ಇರುವದು. ಈ ತಿಂಗಳು 13 ನೆಯ ತಾರೀಖಿನ ದಿವಸ ಇದರ ಪ್ರಾರಂಭೋತ್ಸವವು ನೆರವೇರುವದು.

ಹುಬ್ಬಳ್ಳಿಯ ಲೆಮಿಂಗ್‌ಟನ್ ಹೈಸ್ಕೂಲಿನಲ್ಲಿ ಈ ತಿಂಗಳು 2 ನೆಯ ತಾರೀಖಿನ ದಿವಸ ಅಲ್ಲಿಯ ಹನ್ನೆರಡು ಮಠದ ಚರಮೂರ್ತಿಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ "ವಿದ್ಯಾರ್ಥಿಗಳ ಕರ್ತವ್ಯ" ಎಂಬ ವಿಷಯದ ಮೇಲೆ ಪಾಲೀಕೊಪ್ಪದ ಶ್ರೀ ಸಟ್ಟಾಧ್ಯಕ್ಷರವರು ಮನೋಹರವಾದ ಭಾಷಣವನ್ನು ಮಾಡಿ ಸರ್ವ ವಿದ್ಯಾರ್ಥಿಗಳನ್ನೂ ಹಾಗೂ ಮಾಸ್ತರ್ ಜನರನ್ನೂ ಸಂತೋಷಪಡಿಸಿದರೆಂದು ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

ಸುಮಾರು ಎರಡುವರೆ ವರ್ಷಗಳ ಹಿಂದೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರುಗಳ ಚುನಾವಣೆಯಲ್ಲಿ ಮಿ|| ಎಂ. ಮುನಿಸ್ವಾಮಿಯವರು ಅಕ್ರಮವಾಗಿ ಚುನಾಯಿಸಲ್ಪಟ್ಟರೆಂದು ಅವರ ಎದುರು ಕಕ್ಷಿಯವರಾದ ಮಿ|| ಬಿ. ಎಲ್. ಬಯ್ಯಣ್ಣನವರು ಮೊಕದ್ದಮೆಯನ್ನು ಮಾಡಿದ್ದರು. ಕಳೆದ 29 ನೆಯ ತಾರೀಖಿನ ದಿವಸ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರು ಮಿ|| ಮುನಿಸ್ವಾಮಿಯವರ ಚುನಾವಣೆಯು ಅಕ್ರಮವಾದುದೆಂದೂ ಮಿ|| ಬಯ್ಯಣ್ಣನವರೇ ನ್ಯಾಯವಾದ ಕೌನ್ಸಿಲರೆಂದೂ ತೀರ್ಮಾನಮಾಡಿದರು.

ಬೆಂಗಳೂರಿಗೆ ಸಾಕಾದಷ್ಟು ಕುಡಿಯುವ ನೀರನ್ನು ಒದಗಿಸಲು ತಕ್ಕ ಸಲಹೆಗಳನ್ನು ಕೊಡುವಂತೆ ಸರಕಾರದವರು ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿದ್ದರು. ಈ ಕಮಿಟಿಯವರು ಬೆಂಗಳೂರು ಮಾಗಡಿ ರಸ್ತೆಯ 20 ನೆಯ ಮೈಲಿಯ ಹತ್ತಿರ ಅರ್ಕಾವತಿ ಕುಮುದ್ವತಿ ನದಿಗಳ ಸಂಗಮದ ಮುಂದೆ ಅಣೆಕಟ್ಟನ್ನು ಹಾಕಿದರೆ, ಸದ್ಯಃ ಬೆಂಗಳೂರಿಗೆ ಕುಡಿಯುವ ನೀರನ್ನು ಒದಗಿಸುತ್ತಿರುವ ಹೆಸರುಘಟ್ಟದ ಕೆರೆಯಲ್ಲಿ ನಿಲ್ಲುವನೀರಿಗಿಂತಲೂ 2½ ಯಷ್ಟು ಹೆಚ್ಚು ನೀರು ನಿಲ್ಲುವದೆಂದೂ, ಅದರಿಂದ ಕೊಳವೆಗಳ ಮೂಲಕ ಬೆಂಗಳೂರಿಗೆ ನೀರು ಸಾಗಿಸಲು ಒಟ್ಟು 50 ಲಕ್ಷ 30 ಸಾವಿರ ರೂ. ಗಳು ಖರ್ಚಾಗುವದೆಂದೂ ತಿಳಿಸಿರುವರು. ಸರಕಾರದವರು ಈ ಸಲಹೆಯನ್ನು ಅಂಗೀಕರಿಸಿ ಜಾಗ್ರತೆಯಾಗಿ ಕೆಲಸವನ್ನು ಪ್ರಾರಂಭಿಸಬೇಕೆಂದು ಗೊತ್ತುಮಾಡಿರುತ್ತಾರೆ.

ಸ್ವಾತಂತ್ರ್ಯಸಂಗ್ರಾಮದ ವಾರ್ತೆ.

ದೇಶಭಕ್ತ ಸಾಂಬಮೂರ್ತಿಗಳ ಮುಂದಾಳುತನದಲ್ಲಿ 50 ಜನ ಸತ್ಯಾಗ್ರಹಿಗಳು ಸೀತಾನಗರದಲ್ಲಿರುವ ಗೌತಮಿ ಆಶ್ರಮದಿಂದ ಹೊರಟಿರುವರು. ಇವರು 120 ಮೈಲು ದೂರ ನಡೆದು ಕಾಕಿನಾಡಿನಲ್ಲಿ ಉಪ್ಪಿನ ಕಾಯಿದೆಭಂಗಮಾಡುವರು.

ಬಂಗಾಲದಲ್ಲಿ 6 ಸಾವಿರಜನ ಸತ್ಯಾಗ್ರಹಿಗಳು ಸೇರಿರುವರು. ಡಾ|| ಬಾನರ್ಜಿಯವರು ಮುಂದಾಳುಗಳಾಗಿ ನಿಂತು ಸತ್ಯಾಗ್ರಹವನ್ನು ಪ್ರಾರಂಭಿಸುವರು. ನಿನ್ನೆ 6 ನೆಯ ತಾರೀಖಿನಿಂದ 250 ಜನರ ಒಂದೊಂದು ಗುಂಪು ಪ್ರತಿದಿನವೂ ಹೊರಡಬೇಕೆಂದು ತೀರ್ಮಾನಿಸಲ್ಪಟ್ಟಿರುವದು.

ಹುಬ್ಬಳ್ಳಿಯ ಕರ್ನಾಟಕ ಸತ್ಯಾಗ್ರಹ ಕಮಿಟಿಯವರು ಭರದಿಂದ ಕಾರ್ಯಕ್ರಮಗಳನ್ನು ನಡೆಯಿಸುತ್ತಿರುವರು. ಇದೇ ಏಪ್ರಿಲ್ 12 ನೆಯ ತಾರೀಖಿನ ದಿವಸ 22 ಜನರ ಮೊದಲನೆಯ ಸತ್ಯಾಗ್ರಹದ ಗುಂಪು ಹುಬ್ಬಳ್ಳಿಯಿಂದ ಹೊರಡುವದು. ಅದೇ ದಿವಸ ಬೆಳಗಾಂವದಿಂದಲೂ ಒಂದು ಗುಂಪು ಹೊರಡುವದು.

ಸಂಯುಕ್ತ ಪ್ರಾಂತಕ್ಕೆ ಸೇರಿದ ರಾಯಬರೇಲಿಯಲ್ಲಿ 300 ಜನ ಸತ್ಯಾಗ್ರಹಿಗಳು ಸತ್ಯಾಗ್ರಹವನ್ನು ಪ್ರಾರಂಭಿಸಿರುವರು. ಇದುವರೆಗೆ ಸರಕಾರದವರು 47 ಜನರನ್ನು ದಸ್ತಗಿರಿಮಾಡಿರುವರು.

ಪಂಡಿತ ಮೋತೀಲಾಲ್ ನೆಹರೂರವರು ತಮ್ಮ ಭವ್ಯವಾದ "ಆನಂದಭವನ"ವೆಂಬ ಬಂಗಲೆಯನ್ನು ರಾಷ್ಟ್ರೀಯ ಸಭೆಗೆ ಈ ದಿವಸ ಬೆಳಿಗ್ಗೆ ಅರ್ಪಣ ಮಾಡುವರು. 8-30 ಕ್ಕೆ ಹೋಮಾದಿಶಾಸ್ತ್ರೀಯಕರ್ಮಗಳು ನೆರವೇರಿದನಂತರ ಪಂಡಿತರ ಧರ್ಮಪತ್ನಿಯವರು ಆ ಬಂಗಲೆಗೆ "ಸ್ವರಾಜ್ಯಭವನ"ವೆಂಬ ನೂತನ ನಾಮಕರಣವನ್ನು ಮಾಡಿ, ಬಂಗಲೆಯಮೇಲೆ ರಾಷ್ಟ್ರೀಯ ಬಾವುಟವನ್ನು ಏರಿಸುವರು. 10-30 ಕ್ಕೆ ಚಿಕ್ಕಹುಡುಗರ ಊಟ ಉಪಚಾರವು ನಡೆದು, ಸಾಯಂಕಾಲ 5-30 ಕ್ಕೆ ಸಭೆ ಸೇರಿ ಅದರಲ್ಲಿ ಸ್ವರಾಜ್ಯಭವನವು ರಾಷ್ಟ್ರೀಯ ಸಭೆಯ ವಶಕ್ಕೆ ಒಪ್ಪಿಸಲ್ಪಡುವದು.

ಪಂಡಿತ ಮದನಮೋಹನ ಮಾಳವೀಯರವರೇ ಮೊದಲಾದ 8 ಜನ ಶಾಸನ ಸಭಾ ಸದಸ್ಯರು ತಮ್ಮ ಸದಸ್ಯತನಕ್ಕೆ ರಾಜೀನಾಮೆಯನ್ನು ಕೊಟ್ಟು ಸಂಪೂರ್ಣವಾಗಿ ರಾಷ್ಟ್ರೀಯಪಕ್ಷವನ್ನೇ ಹಿಡಿದರು. ಪಂಡಿತ ಮೋತಿಲಾಲ್ ನೆಹರೂರವರು [illegible]ಲ್ಲರನ್ನೂ ಅಭಿನಂದಿಸಿ ಟೆಲಿಗ್ರಾಂ ಕೊಟ್ಟಿರುವರು.

ದಿಲ್ಲಿಯ ತರುಣಮುಸಲ್ಮಾನರು ಶೌಕತಲ್ಲಿಯವರಿಗೆ "ಮೌಲಾನಾಶೌಕತ್ತಲ್ಲಿಯವರೇ! ನೀವು ಈ ಕ್ಷಣವೇ ಮಹಾತ್ಮಾ ಗಾಂಧಿಯವರನ್ನು ಕಂಡು ಅವರ ಸ್ವಾತಂತ್ರ್ಯದ ನಿಶಾನೆಯನ್ನು ಹಿಡಿಯಿರಿ. ಇಂಥ ಸಮಯವು ಮುಂದೆ ಸಿಗಲಾರದು. ಕಳೆದುಕೊಂಡ ಮುತ್ತು ಸಿಕ್ಕೀತು! ಆದರೆ ಹೊತ್ತು ಸಿಗಲಾರದು." ಎಂದು ತಾರುಕೊಟ್ಟಿರುವರು.

ಮಹಾತ್ಮಾ ಗಾಂಧಿಯವರು ತಮ್ಮ 84 ಜನ ಸತ್ಯಾಗ್ರಹಿಗಳೊಡನೆ ಕಳೆದ ಶನಿವಾರ ಬೆಳಿಗ್ಗೆ 7-37 ಕ್ಕೆ ದಂಡಿಗ್ರಾಮವನ್ನು ತಲ್ಪಿದರು. ಮಹಾತ್ಮರ ಪ್ರಯಾಣವು ಇಲ್ಲಿಗೆ ಮುಗಿಯಿತು. ಅವರು ಸಾಬರಮತಿ ಆಶ್ರಮವನ್ನು ಬಿಟ್ಟಮೇಲೆ ಇದುವರೆಗೆ 23[illegible] ಮೈಲುಗಳನ್ನು ನಡೆದಿರುವರು. ಮಧ್ಯಮಾರ್ಗದಲ್ಲಿ 4 ಜಿಲ್ಲೆಗಳನ್ನು ದಾಟಿದರು. 48 ಹಳ್ಳಿಗಳಲ್ಲಿ ನಿಂತಿದ್ದರು. ನಿನ್ನೆ ಬೆಳಿಗ್ಗೆ 6-30 ಘಂಟೆಗೆ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸುವವರಿದ್ದರು. ಈ ದೂರಪ್ರಯಾಣದಿಂದ ಮಹಾತ್ಮರು ಸ್ವಲ್ಪವೂ ಶಕ್ತಿಗುಂದದೆ ತೂಕದಲ್ಲಿ ಇನ್ನೂ 2 ಪೌಂಡಿನಷ್ಟು ಹೆಚ್ಚಿರುವರು.

ಮಹಾತ್ಮಾ ಗಾಂಧಿಯವರು ಹಾಗೂ ಅವರ ಅನುಯಾಯಿಗಳು ಸಂಚರಿಸುವ ಹಳ್ಳಿಗಳಲ್ಲೆಲ್ಲಾ ಅನೇಕ ಜನ ಪಟೇಲರೇ ಮೊದಲಾದ ಸರಕಾರೀ ನೌಕರರು ರಾಜೀನಾಮೆಯನ್ನು ಕೊಡುತ್ತಿರುವದರಿಂದ ಸರಕಾರದವರು ಗಾಬರಿಯಾಗಿ ಜನರಿಗೆ ಸಮಾಧಾನಮಾಡಬೇಕೆಂಬ ಉದ್ದೇಶದಿಂದ ಆಶ್ರಿತಸಂಸ್ಥಾನಗಳಿಗಿಂತ ಬ್ರಿಟಿಷ್ ಇಂಡಿಯಾದಲ್ಲಿ ಹಳ್ಳಿಯವರು ಸುಖವಾಗಿರುವರೆಂದೂ, ಕಂದಾಯವು ಕಡಿಮೆಯಾಗಿರುವದೆಂದೂ, ಸರಕಾರದವರಿಗೆ ಪ್ರಜೆಗಳ ವಿಷಯದಲ್ಲಿ ವಿಶೇಷ ಪ್ರೀತಿಯಿರುವದೆಂದೂ, ಈಗ್ಗೆ 13 ವರ್ಷಗಳ ಪೂರ್ವದಲ್ಲಿ ಗಾಂಧಿಯವರೇ ಈ ವಿಷಯದಲ್ಲಿ ಸರಕಾರದವರನ್ನು ಹೊಗಳಿರುವರೆಂದೂ, ಮಾತಾರ್ ಮತ್ತು ಮಹಮ್ಮದಾಬಾದ್ ತಾಲೂಕಿನ ಜನಗಳ ಕಷ್ಟನಿಷ್ಠುರಗಳನ್ನು ವಿಚಾರಿಸಿ ಅವರ ಅನುಕೂಲತೆಗೆ ಬೇಕಾದ ಸಲಹೆಗಳನ್ನು ಕೊಡಲು ಒಂದು ಕಮಿಟಿಯನ್ನು ಏರ್ಪಡಿಸಿರುವೆವೆಂದೂ, ಪ್ರಸಿದ್ಧಪಡಿಸುತ್ತಿರುವರಲ್ಲದೆ, ಪಟೇಲರುಗಳು ತಮ್ಮ ತಮ್ಮ ಗ್ರಾಮಗಳಲ್ಲಿ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಹೊಂದಿದ್ದು, ಗೌರವಸ್ಥರೂ ಆಗಿರುವದರಿಂದ ಸರಕಾರೀ ನೌಕರರೆಲ್ಲರೂ ಅವರನ್ನು ಗೌರವದಿಂದ ಕಾಣತಕ್ಕದ್ದೆಂದು ಅಪ್ಪಣೆಮಾಡಿರುವರು.

ನಮ್ಮನ್ನು ಯಾರು ಆಳುವರು?

ಬ್ರಿಟಿಷ ಸರಕಾರದ ಆಳಿಕೆಯು ಇಲ್ಲಿ ಹೇಗೆ, ಯಾವ ಪ್ರಕಾರವಾಗಿ, ಯಾರ ಬಲದಿಂದ ನಡೆದಿದೆ. ಇದನ್ನು ಚನ್ನಾಗಿ ನಿರೀಕ್ಷಿಸಿದರೆ ಒಂದು ಮಾತು ಸ್ಪಷ್ಟವಾಗುವದು. ಬ್ರಿಟಿಶರು ನಮ್ಮಲ್ಲಿಯ ರಾಜನಿಷ್ಠೆಯ ಜನರ ದ್ವಾರಾ ನಮ್ಮನ್ನಾಳುತ್ತಿರುವರು. ಮೇಲಧಿಕಾರಿಗಳು ಮಾತ್ರ ಬ್ರಿಟಿಶರು ಇರುವರೇ ಹೊರತು ಮಿಕ್ಕವರೆಲ್ಲರೂ ನಮ್ಮ ಜನರೇ ಇರುವರು.

ನಮ್ಮಲ್ಲಿ ಕೆಲವು ಜನರು ಹೊಟ್ಟೆಯ ಸಲುವಾಗಿ ಇಲ್ಲವೆ ಮಾನದ ಸಲುವಾಗಿ ಇಲ್ಲವೆ ಸರಕಾರದ ಭಯದಿಂದ ಸರಕಾರದವರು ಹೇಳಿದಂತೆ ನಮ್ಮನ್ನು ಆಳುತ್ತಿರುವರು. ತಾವು ಹೀಗೆ ಮಾಡುವುದರಿಂದ ದೇಶದ ಹಿತವಾಗುವದೋ ಅಹಿತವಾಗುವದೋ ಇದರ ವಿಚಾರವನ್ನೇ ಅವರು ಮಾಡುವದಿಲ್ಲ. ತಮ್ಮ ಹೊಟ್ಟೆಯೊಂದು ತುಂಬಿದರಾಯಿತು, ತಮಗೆ ರಾವಸಾಹೇಬ ರಾವಬಹದ್ದೂರ್ ಸಿಕ್ಕರಾಯಿತು ಎಂದು ಸರಕಾರದ ನವಕರೀ ಮಾಡುವವರೇ ಬಹಳ. ಆ ಜನರು ಈಗ ವಿಚಾರ ಮಾಡುವ ಪ್ರಸಂಗ ಬಂದಿದೆ.

ಈಗ ಮಹಾತ್ಮಾ ಗಾಂಧಿಯವರು ತಮ್ಮ ದಂಡಯಾತ್ರೆಯನ್ನು ಪ್ರಾರಂಭಮಾಡಿದಂದಿನಿಂದ ಗುಜರಾಥದಲ್ಲಿಯ ಮಂತೆದಾರರು, ಮುಖಿಗಳು, ಪಟೇಲರು ನೂರುಗಟ್ಲೆ ರಾಜೀನಾಮೆಗಳನ್ನು ಕಳಿಸಿರುವರು.

ಸರಕಾರಿ ನೌಕರಿಯನ್ನು ಬಿಟ್ಟರೆ ನಮ್ಮ ಹೊಟ್ಟೆ ಹೇಗೆ ತುಂಬಬೇಕು? ಎಂದು ಕೆಲವರು ಚಿಂತೆಮಾಡುತ್ತಿರುವರು. ಆದರೆ ಈ ಚಿಂತೆಯು ವ್ಯರ್ಥವಾದದ್ದು. ಯಾಕೆಂದರೆ, ಹಿಂದುಸ್ಥಾನದಲ್ಲಿಯ 31 ಕೋಟಿ ಜನಸಂಖ್ಯೆಯಲ್ಲಿ ಎಷ್ಟು ಜನರು ಸರಕಾರೀ ನೌಕರಿಯಲ್ಲಿರುವರು? ಇದನ್ನು ನೋಡಿದರೆ ಆ ಸಂಖ್ಯೆಯು 2-3 ಲಕ್ಷಕ್ಕಿಂತ ಹೆಚ್ಚು ಇಲ್ಲ! ಅಂದಮೇಲೆ ಅವರಿಗೆ ಬೇರೆ ರೀತಿಯಿಂದ ಹೊಟ್ಟೆತುಂಬಿಕೊಳ್ಳಲಿಕ್ಕೆ ಸಹಜವೇ ಬರುವದು. ಹೀಗೆ ಆದರೆ ಸತ್ಯಾಗ್ರಹ ಸಮರಕ್ಕೆ ಅತ್ಯಂತ ಸಹಾಯವಾಗಿ ಈ ಸ್ವಾತಂತ್ರ್ಯಯುದ್ಧವು ತೀವ್ರವೇ ಮುಗಿದು ಸತ್ಪಕ್ಷವಾದ ನಮ್ಮ ವಿಷಯಕ್ಕೆ ಜಯವಾಗುವದು.

ಇನ್ನು ಹಿಂದುಸ್ಥಾನದಲ್ಲಿ ಸರಕಾರೀ ನೌಕರಿಯಲ್ಲಿ ಎಷ್ಟು ಜನರು ತೊಡಗಿರುವರು ಮತ್ತು ಇಂಗ್ಲಂಡದಿಂದ ಬಂದು ಇಲ್ಲಿ ಆಳಬೇಕೆಂದಿರುವ ಸಾಹೇಬರು ಎಷ್ಟು ಜನರು ಇರುವರು. ಇದನ್ನು ನೋಡಿದರೆ ನಾವು ಮೇಲೆಹೇಳಿದ ಮಾತುಗಳ ಬಗ್ಗೆ ಮನವರಿಕೆಯಾಗುವುದು.

ಇಡೀ ಬ್ರಿಟಿಶ ಹಿಂದುಸ್ಥಾನದಲ್ಲಿ 3 ಲಕ್ಷ ಜನರು ಮಾತ್ರ ಸರಕಾರೀ ನೌಕರಿಯಲ್ಲಿರುವರು. ಆದರೆ ನೂರರಲ್ಲಿ ಒಬ್ಬನು ಮಾತ್ರ ಸರಕಾರೀ ನೌಕರಿಯಿಂದ ಹೊಟ್ಟೆ ಹೊರಕೊಳ್ಳುತ್ತಿರುವನು. ಅವನು ಸಹಜವಾಗಿ ಬೇರೆ 99 ಜನರಂತೆ ತಮ್ಮ ಹೊಟ್ಟೆ ತುಂಬಿಕೊಳ್ಳುತ್ತಿರುವರಂತೆ ಹೊಟ್ಟೆ ತುಂಬಿಕೊಳ್ಳಬಹುದು.

ಹಿಂದುಸ್ಥಾನದಲ್ಲಿದ್ದ ಸಾಹೇಬರ ಸಂಖ್ಯೆಯನ್ನು ನೋಡುವಾ! ಸೈನ್ಯದಲ್ಲಿ 63000 ಜನರು ಮಾತ್ರ ಇರುವರು.

ಮಿಕ್ಕ ಅಧಿಕಾರಗಳಲ್ಲಿ 27000 ಸಾಹೇಬರಷ್ಟು ಇರುವರೆಂದು ಕಲ್ಪಿಸಿದರೂ ಒಟ್ಟು ಒಂದು ಲಕ್ಷ ಸಾಹೇಬರು ಮಾತ್ರ ಇಲ್ಲಿರುವರೆಂದು ಲೆಕ್ಕವಾಯಿತು. ಅಂದರೆ 3000 ಕ್ಕೆ ಒಬ್ಬ ಸಾಹೇಬನಾದನು!

"ಕರ್ಮವೀರ"

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ.

ಹುಬ್ಬಳ್ಳಿ.

ಪ್ರತಿವರ್ಷ ಪದ್ಧತಿಯಂತೆ ಫಾಲ್ಗುಣ ಶುದ್ಧ ತ್ರಯೋದಶಿ ಗುರುವಾರದಿವಸ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಹೊಸಹುಬ್ಬಳ್ಳಿ ಹನ್ನೆರಡು ಮಠದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತೆಂದು ತಿಳುಹಿಸಲು ಬಹು ಸಂತೋಷವೆನಿಸುತ್ತದೆ. ಆ ದಿವಸ ಸಂದಿಕೇತ್ರದಮಠದ ವಿರೂಪಾಕ್ಷಯ್ಯನವರು ಆಚಾರ್ಯರ ರಜತವಿಗ್ರಹಕ್ಕೆ ರುದ್ರಾಭಿಷೇಕವನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಪ್ರಾತಃಕಾಲದ 9 ರಿಂದ 12ರ ವರೆಗೆ ಆಚಾರ್ಯರ ರಜತವಿಗ್ರಹವನ್ನು ಆಂದೋಲಿಕೆಯಲ್ಲಿರಿಸಿ ಪುರದ ಮುಖ್ಯ ಮುಖ್ಯ ಬೀದಿಗಳಲ್ಲಿ ಅಂದರೆ (ಹಿರೇಪೇಟೆ, ವ ಜವಳಸಾಲು ವ ದುರ್ಗದ ಬೈಲು) ಅನೇಕ ವಾದ್ಯಗಳೊಡನೆ ಮೆರವಣಿಗೆಯನ್ನು ಮಾಡಿದರು. ಈ ಸಮಯಕ್ಕೆ ಬಾಲಿಕೊಪ್ಪದ ಭಜನಾಸಂಘದವರು ಹಾಜರಿದ್ದರು. 12 ರಿಂದ 4 ರ ವರೆಗೆ ಗಣಾರಾಧನೆಯು ನಡೆಯಿತು. ಅನಂತರ ಸಂಜೆಯ 6 ಗಂಟೆಗೆ ಸದರಿ ಹನ್ನೆರಡು ಮಠದ ಚರಮೂರ್ತಿಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಬಾಲಿಕೊಪ್ಪದ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ರೇಣುಕರ ಚರಿತ್ರವನ್ನು ಎಲ್ಲರಿಗೂ ತಿಳಿಯುವಂತೆ ಬೋಧಿಸಿದರು. ಅನಂತರ ನಾಗಪ್ಪ ಕ್ಷೀರಸಾಗರ ಇವರು ತಮ್ಮ ಮಂಜುಳವಾದ ಸ್ವರದಿಂದ 1 ತಾಸಿನ ವರೆಗೆ ಗಾನಮಾಡಿದರು. ಬಾಲಿಕೊಪ್ಪದ ಭಜನಾಸಂಘದವರಿಗೆ ಬೆಳ್ಳಿಯ ರೇಣುಕರ ಲಾಕೇಟನ್ನು ಶ್ರೀ ಚರಮೂರ್ತಿಸ್ವಾಮಿಗಳವರು ಆಶೀರ್ವದಿಸಿದರು. ಆಮೇಲೆ ಆಚಾರ್ಯರ ಮಂಗಲವಾಗಿ ಪ್ರಸಾದವು ಹಂಚಲ್ಪಟ್ಟು ತ್ರಿವಾರ ಜಯಘೋಷದೊಡನೆ ಸಭೆಯು ಮುಕ್ತಾಯಗೊಂಡಿತು. ಸಮಸ್ತ ವೀರಶೈವರು ಇದೇ ಪ್ರಕಾರ ಗುರುಸೇವೆಯನ್ನು ಮಾಡಿ ಜಗದಾರ್ಯರ ಕೃಪೆಗೆ ಪಾತ್ರರಾಗಿ ಮುಕ್ತಿಭಾಜನರಾಗಬೇಕೆಂದು ಬೇಡುವ,

[illegible] ಬಸಯ್ಯ ಗಂಜಿಗಟ್ಟಿ,
ಹಿರೇಮಠ ಹುಬ್ಬಳ್ಳಿ.

ದೇವಿಯರ ಮುಂದೆ ಪ್ರಾಣಿಬಲಿ ನಿಷೇಧ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ.

ದ್ವಿತೀಯ ಸಚಿವರ ಉದ್ಗಾರ.

25-3-30 ರಲ್ಲಿ ನಡೆದ ನ್ಯಾಯವಿಧಾಯಕಸಭೆಯಲ್ಲಿ ಶ್ರೀಯುತ ಡಿ. ಹೆಚ್. ಚಂದ್ರಶೇಖರಯ್ಯನವರು ದೇವಿಯರ ಮುಂದೆ ನಡೆಯುತ್ತಿರುವ ಪ್ರಾಣಿಬಲಿಯನ್ನು ನಿಷೇಧಿಸುವ ಬಗ್ಗೆ ಠರಾವನ್ನು ತಂದರು. ದ್ವಿತೀಯ ಸಚಿವರಾದ ಶ್ರೀ ಬಾಲಸುಂದರಂ ಅಯ್ಯರವರು ಮಾಮೂಲಿನಿಂದ ಬಂದ ಸಂಪ್ರದಾಯವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ಮಾತ್ರ ಹೇಳಿದುದಲ್ಲದೆ ನಿಲ್ಲಿಸಿದರೆ ಮಾಂಸಾಹಾರಿಗಳ ಇಷ್ಟಪೂರ್ತಿಯನ್ನು ಭಗ್ನಮಾಡಿದಂತಾಗುತ್ತದೆಂದು ಉದ್ಗಾರಮಾಡಿದರು. ಮಾಂಸಾಹಾರಿಗಳ ಮೇಲೆ ಇವರಿಗಿರುವ ಅಪ್ರತಿಮ ಪ್ರೀತಿಯನ್ನು ನೋಡಿ ನಾವುಗಳು ಅಳಬೇಕೋ ನಗಬೇಕೋ ಗೊತ್ತಾಗವಲ್ಲದು. ಆಳುವ ಮಹಾಸ್ವಾಮಿಯವರ ರಜತಸಂದೇಶದಲ್ಲಿ ಕಂಠೋಕ್ತವಾಗಿ ಹೇಳಿಕೊಳ್ಳಲಾರದೆ ಪ್ರಾಣಿಗಳ ವಿಚಾರದಲ್ಲಿ ನಮ್ಮ ಅಭಿಮಾನವು ದಿನದಿನಕ್ಕೆ ಹೆಚ್ಚಬೇಕೆಂದು ಸೂಚಿಸಿರಲು ಮತ್ತು ಇತ್ತೀಚೆಗೆ ನಮ್ಮ ದಿವಾನ್ ಸಾಹೇಬರವರು ಕೆಲವು ಭಾಷಣಗಳಲ್ಲಿ ಮೂಕಪ್ರಾಣಿಗಳ ಮೇಲೆ ತಮಗಿರುವ ಪ್ರೀತಿಯನ್ನು ವ್ಯಕ್ತಪಡಿಸಲು ಅವರುಗಳ ಇಂಗಿತವನ್ನು ಸಹ ಲಕ್ಷಿಸದೆ ಮಾತನಾಡಿದ್ದು ತುಂಬಾ ಶೋಚನೀಯವಾದ ಸಂಗತಿಯಾಗಿದೆ. ಚನ್ನಪಟ್ಟಣದ ಶ್ರೀ ವೆಂಕಟಪ್ಪನವರು ಠರಾವನ್ನು ಸಮರ್ಥಿಸಿ ಮಾತನಾಡುತ್ತ ದ್ವಿತೀಯಸಚಿವರ ಪ್ರತಿಯೊಂದು ಮಾತನ್ನು ಖಂಡಿಸಿದರೂ ಸಮಂಜಸವಾದ ಜವಾಬೇ ದೊರೆಯಲಿಲ್ಲ. ಕ್ರಿಶ್ಚಿಯನ್ನರಾದ ಮಿ|| ಚಾಂಡೀ ಮತ್ತು ಮಿ|| ಡಿಸೋಜಾ ಇವರುಗಳು ಬಹಿರಂಗವಾಗಿ ನಡೆಯುವ ದುರಾಚಾರವನ್ನು ನಿಲ್ಲಿಸಲು ಸರ್ಕಾರದವರು ಕೈಹಾಕುವುದು ಅತ್ಯವಶ್ಯಕವೆಂದು ಹೇಳಿದರೂ ಅಯ್ಯರ್ರವರ ಮನಕರಗಲಿಲ್ಲ. ಇದರ ಮೇಲೆ ಮಿ|| ಅಬ್ದುಲ್ ಖಾದರ್ ಸಾಹೇಬರವರೂ, ಮ|| ರಾ|| ನೀಲಗಿರಿ ಸಂಜೀವಯ್ಯನವರೂ, ಮ|| ರಾ|| ದಾಸಪ್ಪನವರೂ, ಮ|| ರಾ|| ಲಿಂಗೇಗೌಡರೂ ಅಯ್ಯರವರ ಅಭಿಪ್ರಾಯವನ್ನು ಧಿಕ್ಕರಿಸಿದರೆಂದ ಮೇಲೆ ಕೇಳಬೇಕೆ? ನಾಮಮಾತ್ರಕ್ಕೆ ಹಿಂದೂಗಳಾದ ವಿದ್ಯಾವಂತರೇ ಇಂತಹ ಠರಾವಿಗೆ ಬೆಂಬಲ ಕೊಟ್ಟಮೇಲೆ ಹಿಂದುಳಿದವರು ಮುಂದು ಬರುವುದೆಂತು? ಗೋವಧಾನಿರೋಧಕ್ಕೇ ವಿರೋಧಿಸಿದ ಅಯ್ಯರವರಿಗೆ ಕುರಿಕೋಣಗಳ ಮೇಲೆ ಪ್ರೇಮವು ಹುಟ್ಟುವುದು ಕನಸಿನ ಮಾತು.

ಕೊನೆಗೆ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರು ಮಾತನಾಡಿದನಂತರ ಸರ್ಕಾರದವರು ಈ ದುರಾಚಾರವನ್ನು ದಿನದಿನಕ್ಕೆ ಕಡಿಮೆಯಾಗಲು ಬಂದೋಬಸ್ತು [illegible] ವೆಂಬುದಾಗಿ ಜವಾಬು ಸಿಕ್ಕಿರುತ್ತೆ. ಈ ಮಾತು ಎಷ್ಟ [illegible] ಗೆ ಕಾರ್ಯರಂಗಕ್ಕೆ ಬರುವುದೋ ಅಹಿಂಸಾಪ್ರೇಮಿಗಳು ನೋಡಬೇಕಾಗಿದೆ.

ಗುಂಡೂರಾವ್ ಶಾಸ್ತ್ರಿ.
ಸಂಪಾದಕ "ಪ್ರಾಣಿದಯೆ"

ಬಳ್ಳಾರಿ ವೀರಶೈವ ಮಿಡಲ್‌ಸ್ಕೂಲಿನ ದ್ವಿತೀಯ ವಾರ್ಷಿಕಸಮಾರಂಭವು.

ವಿದ್ಯಾಪ್ರಸಾರದ ಮಹತ್ತ್ವ ಧ್ಯೇಯವನ್ನಿಟ್ಟುಕೊಂಡು ಅವಿಶ್ರಾಂತವಾಗಿ ಪರಿಶ್ರಮಪಡುತ್ತಿರುವ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ ಮಹತ್ತ್ವ ಕಾರ್ಯಗಳಲ್ಲಿ ಬಳ್ಳಾರಿಯಲ್ಲಿ ವೀರಶೈವ ಮಿಡಲ್ ಸ್ಕೂಲನ್ನು ಸ್ಥಾಪಿಸಿರುವದು ಒಂದಾಗಿದೆ. ಸದರಿ ಶಾಲೆಯು ಆರು ವರ್ಷಗಳನ್ನು ದಾಟಿರುತ್ತದೆ. ಇಷ್ಟು ಸ್ವಲ್ಪ ಕಾಲದಲ್ಲಿ ಅದು ಹೊಂದಿರುವ ಅಭಿವೃದ್ಧಿಯನ್ನು ನೋಡಿ ಯಾರಾದರೂ ಅದರ ಚಾಲಕರನ್ನು ಅಭಿನಂದಿಸದೆ ಇರಲಾರರು. ತಾ|| 16-3-30 ರಲ್ಲಿ ಸದರಿ ವೀರಶೈವಸ್ಕೂಲಿನ ದ್ವಿತೀಯ ವಾರ್ಷಿಕೋತ್ಸವವು ಅತಿ ವೈಭವದಿಂದ ಜರಗಿಸಲ್ಪಟ್ಟಿತು. ಜಿಲ್ಲೆಯ ವಿದ್ಯಾಖಾತೆಯ ಅಧಿಕಾರಿಗಳಾದ ಮ|| ವಿ. ಬಿ. ಬ್ರಯರ್ಲಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಚಿಕ್ಕಮಕ್ಕಳ ಹಾಸ್ಯರಸಭರಿತ ಸಂಭಾಷಣಗಳನ್ನು ಕೇಳಿ ಸಭ್ಯರೆಲ್ಲರೂ ಆನಂದಪಟ್ಟರು. ಆ ಮೇಲೆ ಅಧ್ಯಕ್ಷರು ಆಟದ ಸ್ಪರ್ಧೆಗಳಲ್ಲಿ ಜಯಹೊಂದಿದವರಿಗೂ ಪರೀಕ್ಷೆಗಳಲ್ಲೂ ಮತ್ತು ಉಪನ್ಯಾಸ ರಚನೆಯಲ್ಲೂ ಉತ್ತೀರ್ಣತೆಯನ್ನು ವಹಿಸಿದವರಿಗೂ ಬಹುಮಾನಗಳನ್ನು ದಯಪಾಲಿಸಿದರು. ಹೀಗೆ ಬಹುಮಾನಗಳನ್ನು ಪಡೆದವರ ಪೈಕಿ ಬಾಲಿಕೆಯರು ಸಹ ಇದ್ದರು. ತದನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಮ|| ರಾ|| ನಾರಾಯಣರಾಯರು ಶಾಲೆಯ ವಾರ್ಷಿಕ ವರದಿಯನ್ನೋದಿದರು. ಈ ಸಂಸ್ಥೆಯ ಉತ್ತೇಜನದ ಬಗ್ಗೆ ಅತ್ಯುತ್ಸಾಹದಿಂದ ಸಹಾಯಮಾಡುತ್ತಿರುವ ಮ. ವೀ. ವ. ಸಂಘದವರಿಗೂ ಸಂಘದ ಪ್ರೆಸಿಡೆಂಟರಾದ ಮ|| ರಾ|| ವಿದ್ಯಾಪ್ರವರ್ಧಕ ತೋಗರಿ ವೀರಪ್ಪನವರಿಗೂ ಶಾಲೆಯ ಚಾಲಕರಾದ ಮ|| ರಾ|| ತೋಗರಿ ವೀರಮಲ್ಲಪ್ಪನವರಿಗೂ ಧನ್ಯವಾದಗಳನ್ನರ್ಪಿಸಿದರು. ಸಭಾಧ್ಯಕ್ಷರು ಶಾಲೆಯ ಅಭಿವೃದ್ಧಿಯ ವಿಷಯದಲ್ಲಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿ ಶಾಲೆಯ ಚಾಲಕರನ್ನು ಮತ್ತು ಉಪಾಧ್ಯಾಯ ಮಂಡಳಿಯನ್ನು ಅವರ ಕರ್ತವ್ಯದಕ್ಷತೆಗಾಗಿ ಅಭಿನಂದಿಸಿದರು. ತದನಂತರ ಮ|| ರಾ|| ಸದಾಶಿವಯ್ಯನವರು ವಿದ್ಯಾವರ್ಧಕಸಂಘದವರ ಪರವಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ಬಳ್ಳಾರಿಯಲ್ಲಿ ಕರ್ನಾಟಕ ಭಾವನೆಯನ್ನು ಬೆಳೆಸುವದಕ್ಕೂ ಮತ್ತು ಹಿಂದುಳಿದವರಲ್ಲಿ ಹೆಚ್ಚು ವಿದ್ಯಾಪ್ರಸಾರವಾಗಲೂ ಹೆಚ್ಚು ಅನುಕೂಲತೆಗಳನ್ನು ಒದಗಿಸಿಕೊಡಲಿಕ್ಕೂ ಈ ಶಾಲೆಯು ಎಷ್ಟು ಉಪಯೋಗಕಾರಕವಿರುತ್ತದೆಂಬುದನ್ನು ತಿಳಿಸಿ ನಿರ್ಬಂಧಪ್ರಾಥಮಿಕ ಶಿಕ್ಷಣದ ಸಮಸ್ಯೆವು ಮುಂದೆ ಇಂಥ ಶಾಲೆಗಳಿಂದಲೇ ಪೂರ್ಣಗೊಳಿಸಲ್ಪಡುವದರಿಂದ ಇಂಥ ಸಂಸ್ಥೆಗಳಿಗೆ ಸರ್ಕಾರದವರು ಉದಾರಾಶ್ರಯವನ್ನು ಕೊಡುವುದು ಪರಮಾವಶ್ಯಕವೆಂದು ಹೇಳಿದನಂತರ ಸಭಾಧ್ಯಕ್ಷರಿಗೆ ಹಾರತುರಾಯಿಗಳರ್ಪಿಸಲ್ಪಟ್ಟು ಸಭೆಯು ಮುಕ್ತಾಯಗೊಂಡಿತು.

ಓರ್ವ ಪ್ರತ್ಯಕ್ಷದರ್ಶಿ

ಶ್ರೀ ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಶೈಲಕ್ಷೇತ್ರಗಾಮಿಗಳಿಗೆ ಸೂಚನೆ.

ಶ್ರೀ ನಾಗಲೂಟಿ ವೀರಭದ್ರಸ್ವಾಮಿ ದೇವಾಲಯದಲ್ಲಿ ಅನ್ನಸತ್ರ.

ಶ್ರೀಶೈಲವು ಆಂಧ್ರದೇಶದಲ್ಲಿ ಪುರಾತನವಾದ ಪ್ರಸಿದ್ಧ ಶಿವಕ್ಷೇತ್ರವು. ಈ ಕ್ಷೇತ್ರಕ್ಕೆ ಬರತಕ್ಕ ಭಕ್ತರು ಈ ಅರಣ್ಯದಲ್ಲಿ ಅನ್ನಪಾನಾದಿಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದರು. ಆ ಕಷ್ಟನಿವೃತ್ತಿಗಾಗಿ ಶ್ರೀ ಶೈಲಕ್ಕೆ ಪಶ್ಚಿಮಭಾಗದಲ್ಲಿರುವ "ನಾಗಲೂಟಿ ವೀರಭದ್ರಸ್ವಾಮಿ ದೇವಾಲಯದಲ್ಲಿ" ಅನಂತಪುರ ಜಿಲ್ಲಾ, ಗುತ್ತಿ ತಾಲೂಕು ಗುಂತಕಲ್ಲುಗ್ರಾಮದಲ್ಲಿರುವ ಪರ್ವತಸಿಂಹಾಸನ ನಾಗಲೂಟಿ ಭಿಕ್ಷಾವೃತ್ತಿ ಮಹಾಸ್ವಾಮಿಗಳವರ ಪರವಾಗಿ ವೀರಬಿಕ್ಷಾವೃತ್ತಿ ಮಠದ ವೀರಭದ್ರಸ್ವಾಮಿಗಳು ಮ|| ರಾ|| ಶ್ರೀ ಬಳ್ಳಾರಿ ಜಿಲ್ಲಾ ಆಲೂರು ತಾಲೂಕು ಹೊಳಲಗುಂದಿಗ್ರಾಮದ ಲೇಟು ಶ್ರೀಮಂತ ಪಂಪನಗೌಡರ ಅಳಿಯಂದಿರು ಶ್ರೀಮಂತ ಬಸವನಗೌಡರು ಈ ವರ್ಷ ಶ್ರೀಶೈಲಯಾತ್ರಿಕರಿಗೆ ಅನ್ನಸತ್ರವನ್ನು ಪ್ರಾರಂಭಿಸುವದಕ್ಕಾಗಿ ದ್ರವ್ಯರೂಪವಾಗಿ 200 ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ. [illegible] ಭಕ್ತರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಸಹಾಯ ಮಾಡಿರುತ್ತಾರೆ. ಈ ಭಕ್ತಜನರ ಸಹಾಯದಿಂದಲೇ ಇದೇ ವರ್ಷ "ಸ್ವಾಮಿಗಳು" ಜನಕ್ಕಾಗಿ ಸತ್ರವನ್ನು ನಡಿಸಿರುವುದನ್ನು ನೋಡಿ ಬಂದಂಥ ಯಾತ್ರಿಕರು ಸರ್ಟಿಫಿಕೇಟುಗಳನ್ನು ಬರೆದಿರುತ್ತಾರೆ. ಇದೇ ರೀತಿಯಲ್ಲಿ ಪ್ರತಿ ವರ್ಷವು ಧರ್ಮಸತ್ರವನ್ನು ನಡೆಯಿಸುವದಕ್ಕೆ ಸ್ವಾಮಿಗಳವರು ನಿಮ್ಮ ಪ್ರಾಂತಕ್ಕೆ ಬಂದಕಾಲದಲ್ಲಿ ನಿಮ್ಮ ನಿಮ್ಮ ಶಕ್ತ್ಯನುಸಾರವಾಗಿಯೂ ವಸ್ತುರೂಪವಾಗಿಯೂ ಅನ್ನಸತ್ರವು ಶಾಶ್ವತವಾಗಿ ನಡೆಯುವಂತೆ ಸ್ವಾಮಿಗಳವರಿಗೆ ಉತ್ತೇಜನವನ್ನು ಕೊಟ್ಟು ತಾವೆಲ್ಲರೂ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಪ್ರಸಾದಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ, ಓರ್ವ ಯಾತ್ರಿಕ.

ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವ,

ಯಾಚಗೊಂಡನಹಳ್ಳಿ.

ಹೊನ್ನವಳ್ಳಿ ಶ್ರೀ ಕರಿಸಿದ್ಧೇಶ್ವರಸ್ವಾಮಿ ಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಅರಸೀಕೆರೆ ತಾಲೂಕು ಸೆನ್ಸ್ ತು ಯಾಚಗೊಂಡನಹಳ್ಳಿ ಗ್ರಾಮದ ಮ|| ರಾ|| ಬಸವಲಿಂಗೇಗೌಡರ ಮಕ್ಕಳು ಮರುಳೇಗೌಡರು ವೇ|| ಮಠದ ಮಲ್ಲಯ್ಯನವರ ಮಕ್ಕಳ ನಂಜಯ್ಯನವರು, ದೇವಯ್ಯನವರು ಹಾಗೂ ಸ|| ಮಹಾದೇವೇಗೌಡರು ಆಚಾರ್ಯರ ಜಯಂತಿಮಹೋತ್ಸವವನ್ನು ಮಾಘ ಶುದ್ಧ ಚತುರ್ದಶಿಯ ದಿವಸ ಅತ್ಯಂತ ವೈಭವದಿಂದ ನೆರವೇರಿಸಿದರು. ಆ ದಿವಸ ಶ್ರೀ ಹೊನ್ನವಳ್ಳಿ ಪಟ್ಟದಸ್ವಾಮಿಗಳವರ ಪಾದಪೂಜಾ ಸಮಾರಂಭವು ಗಣಾರಾಧನೆಯೂ ಬಹು ವೈಭವದಿಂದ ನೆರವೇರಿದುವು. ಗ್ರಾಮವು ತಳಿರುತೋರಣಗಳಿಂದ ಅಲಂಕೃತವಾಗಿತ್ತು. ಈ ಕಾರ್ಯದಲ್ಲಿ ಭಾಗಿಗಳಾದ ಮೇಲ್ಕಂಡ ಗುರುಭಕ್ತರಿಗೆ ಶ್ರೀ ಜಗದಾಚಾರ್ಯರು ಆರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುವ,

ಓರ್ವ ಗುರುಭಕ್ತ.

ಸಿದ್ಧಾಂತಶಿಖೋಪನಿಷತ್

ವೀರಶೈವಭಾಷ್ಯ

ಮೇಲ್ಕಂಡ ಸಿದ್ಧಾಂತಶಿಖೋಪನಿಷತ್ತು ಷಣ್ಮುಖ ಹಾಗೂ ಭರದ್ವಾಜರ ಸಂವಾದಾತ್ಮಕವಾಗಿದ್ದು, ಇದರಲ್ಲಿ ಲಿಂಗಾಂಗಸಾಮರಸ್ಯ ವಿಷಯವು ಅತ್ಯುತ್ತಮರೀತಿಯಿಂದ ಪ್ರತಿಪಾದಿಸಲ್ಪಟ್ಟಿರುತ್ತದೆ. ಈ ಉಪನಿಷತ್ತಿಗೆ ವೇ|| ಉಮಚಿಗಿ ಮಳೆಮಠದ ಧರ್ಮರತ್ನ ಪಂಡಿತ ಶ್ರೀ ಶಂಕರಶಾಸ್ತ್ರಿಗಳವರು ಅತ್ಯಂತ ಪ್ರೌಢವಾದ ಭಾಷ್ಯವನ್ನು ರಚಿಸಿದ್ದಾರೆ. ಇದರ ತತ್ತ್ವವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಲೆಂಬ ಸದುದ್ದೇಶದಿಂದ ಆಸ್ಥಾನವಿದ್ವಾನ್ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರು ಕನ್ನಡಭಾಷೆಯಿಂದ ಸರಳವಾಗಿ ಟೀಕೆಯನ್ನು ಬರೆದಿದ್ದಾರೆ. ಈ ಗ್ರಂಥದ ಯೋಗ್ಯತೆಯು ಬಹು ದೊಡ್ಡದಾಗಿದೆ. ಪ್ರತಿಯೊಬ್ಬ ವೀರಶೈವರೂ ಕನ್ನಡಭಾಷೆಯಿಂದ ರಚಿಸಲ್ಪಟ್ಟಿರುವ ಈ ಗ್ರಂಥವನ್ನು ತರಿಸಿಕೊಂಡು ಇದರಲ್ಲಿದ್ದ ಅನೇಕಾನೇಕ ಧರ್ಮರಹಸ್ಯಗಳನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧ ರೂಪಾಯಿ. **ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬುಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರಸವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅವೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾ[illegible] ಅಷ್ಟವರ್ಗ ಔಷಧಾಲಯ
[50] (೮೪೮) ಗಂಜೀಪೇಟೆ, ಧಾರವಾಡ

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
**ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.**

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ [illegible] ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗು[illegible].

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕ[illegible].

[13] ದೊರೆಯುವ ಸ್ಥಳ—**ಶ್ರೀ ಸೀತಾರಾಘವ ವೈದ್ಯಶಾಲಾ**, ಮೈಸೂರು.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊ[illegible].

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು—ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪಾಳೀ ಪಾಳೀ ಜಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಎಂತಹ ಜ್ವರಗಳಾಗಲಿ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [35]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇವನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣವಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸಿದರೆ ಕ್ಷೀಣತೆಯನ್ನು ಆಯಸ್ಸು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ ಹಳೇ ಪಮಿಣೀ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ದಣಿವೆಯಾಗಿ ದೇಹಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶಕಪುಷ್ಪ, ಕಾಲಿಮಕಂದ, ಮಧುಕಂದ, ಜಪಾಕಂಥ, ಕಾಲೀಮುಲೀಕಂದ, ಅಶ್ವಕಂದ ಕ್ಷೀರಕಂದ, ಮುಸಳೀಕಂದ ಸೇಮಲೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಷದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ಏಮಲೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಪತ್ರಿ, ವಿಶಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ನಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಾನಕಟ್ಟಿಗೆ, ಶತಾವರಿ, ಸಕೇದಮ[illegible], ಅಂದಹಾಲು, ವಾಳೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅದ್ಭುತಸತ್ವ, ಇಸಬಗೋಳ ಧುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಿಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿ[illegible]ಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 30 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವಂಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲೆಯ ಮತ್ತು ರಾತ್ರಿ ಭೋಜನಾನಂತರ 2 ತೊಲೆಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 1 ರೂಪಾಯಿಗಳು.

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಡಾಳ, ಸಿಂಬ್ಳ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಾಬಾರದಿರೋಣ, ದಟ್ಟರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲೆಯ 1 ಪುಡಿಗೆ 3 ರೂಪಾಯಿಗಳು. [39]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನು
ಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ) .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ರೇಣುಕಾಚಾರ್ಯಶತಕಂ .... ೨ ಆಣೆ
ವಿವಾಹವಿಧಿ .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ .... ೨ ಆಣೆ
ವೀರಶೈವಮತವಿಮರ್ಶಾ .... ೨ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ) .... ೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) .... ೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[29] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವನಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಕೇಳಿ ಪುಗಸಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ನೆಟ್ಟಗಾಗಿ ತಿಳಿಯುವಂತೆ ಬರೆಯಿರಿ—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[41] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೪ ನೇ ಏಪ್ರಿಲ್ ೧೯೩೦ [ಸಂಚಿಕೆ ೪೯.

ಮೈಸೂರು ಗವರ್ನಮೆಂಟಿನ ಕರ್ನಾಟಕ ಟೆಕ್ಸ್ಟುಬುಕ್ ಕಮಿಟಿ ಮೆಂಬರ ಮಹಾಶಯರಲ್ಲಿ ವಿಜ್ಞಾಪನೆ.

ಮ|| ರಾ|| ಆರ್. ನರಸಿಂಹಾಚಾರ್ಯ ಎಂ.ಎ., ಇವರು ತಮ್ಮ ಜೀವಿತಕಾಲದಲ್ಲಿ ಕರ್ನಾಟಕದೇಶಕ್ಕೆ ಕಲ್ಪವೃಕ್ಷಪ್ರಾಯವಾದ "**ಕರ್ನಾಟಕ ಕವಿಚರಿತೆ**" ಎಂಬ ಸರ್ವೋತ್ತಮವಾದ ಗ್ರಂಥವನ್ನು ರಚಿಸಿ ವಿಖ್ಯಾತಕೀರ್ತಿಶಾಲಿಗಳಾಗಿರುವದು ನಮ್ಮ ಕರ್ನಾಟಕದೇಶದ ಭಾಗ್ಯೋದಯವೆಂದೇ ಹೇಳಬೇಕಾಗಿದೆ. ಈ ಗ್ರಂಥವನ್ನು ಮೈಸೂರು ದೇಶದ ವಿದ್ಯಾರ್ಥಿಗಳ ಐತಿಹಾಸಿಕ ಜ್ಞಾನಾಭಿವೃದ್ಧಿಗಾಗಿ ಮೈಸೂರು ಗೌರ್ನಮೆಂಟಿನವರು ಪಠ್ಯಪುಸ್ತಕವನ್ನಾಗಿ ಏರ್ಪಡಿಸಲು ಯೋಚಿಸಿರುವದು ಆನಂದದಾಯಕವಾದ ಸಂಗತಿಯಾಗಿದೆ. ಈ ಗ್ರಂಥದಲ್ಲಿ ನನಗೆ ತೋರಿಬರುವ ಒಂದೆರಡು ಸಂದೇಹಗಳನ್ನು ತಮ್ಮ ಅವಗಾಹನೆಗೆ ತರಲು ಆಶಿಸುತ್ತೇನೆ. ಈ ಚರಿತೆಯ ಒಂದನೆಯ ಭಾಗದ 214 ನೆಯ ಪುಟದಲ್ಲಿ "**ವೀರಶೈವಾಚಾರ್ಯಪಂಚಕ**" ಎಂಬ ಹೆಡ್ಡಿಂಗಿನಿಂದ ವೀರಶೈವಮತಸ್ಥಾಪಕರಾದ ಐದು ಜನ ಆಚಾರ್ಯರ ವಿಷಯವು ಸಂಕ್ಷೇಪರೀತಿಯಾಗಿ ಬರೆಯಲ್ಪಟ್ಟಿರುವುದು. ಈ ಕರ್ನಾಟಕ ಕವಿಚರಿತೆಯ ಉದ್ದೇಶವು ಯಾರು ಕರ್ನಾಟಕಭಾಷೆಯಲ್ಲಿ ಗ್ರಂಥಗಳನ್ನು ರಚಿಸಿರುತ್ತಾರೋ ಅವರ ವಿಷಯವನ್ನು ಪ್ರಕಾಶಪಡಿಸತಕ್ಕದಾಗಿದೆಯಲ್ಲದೆ ಕರ್ನಾಟಕ ಗ್ರಂಥಗಳನ್ನು ರಚಿಸದಿದ್ದವರ ವಿಷಯವನ್ನು ಪ್ರಕಾಶಪಡಿಸತಕ್ಕದಾಗಿಲ್ಲ. ಗ್ರಂಥಕಾರರು ತಮ್ಮ ಗ್ರಂಥದ ಉದ್ದೇಶಕ್ಕನುಸಾರವಾಗಿ ಶ್ರೀಮತ್ಪಂಚಾಚಾರ್ಯರು ಯಾವ ಯಾವ ಕರ್ನಾಟಕಗ್ರಂಥಗಳನ್ನು ಬರೆದಿರುತ್ತಾರೆನ್ನುವದನ್ನು ಸಮರ್ಥನಗೊಳಿಸಿ ಅವರ ವಿಷಯವನ್ನು ಆ ಗ್ರಂಥದಲ್ಲಿ ಬರೆಯಬೇಕಾಗಿತ್ತು. ಹಾಗೆ ಮಾಡದೆ ಸುಮ್ಮನೆ ಕವಿಗಳ ಗುಂಪಿನಲ್ಲಿ ಸೇರಿಸಿರುವದು ಸಮಂಜಸವಾಗಿ ತೋರುವದಿಲ್ಲ. ವಸ್ತುತಃ ವಿಚಾರಮಾಡಿ ನೋಡಿದರೆ ಈ ಆಚಾರ್ಯರು ಯಾವ ಕನ್ನಡ ಗ್ರಂಥಗಳನ್ನೂ ಬರೆದಿರುವದಿಲ್ಲ. ಶ್ರೀ ಶಂಕರಾಚಾರ್ಯ ಮೊದಲಾದವರಂತೆ ಕೇವಲ ಸಂಸ್ಕೃತದಲ್ಲಿ ಭಾಷ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ ಹೀಗಿದ್ದು ಇದನ್ನು ಪೂರ್ಣವಾಗಿ ವಿಮರ್ಶಿಸದೆ ಕರ್ನಾಟಕ ಕವಿಗಳ ಗುಂಪಿನಲ್ಲಿ ಇವರ ವಿಷಯವನ್ನು ಸೇರಿಸಿದ್ದು ವೀರಶೈವಜನಾಂಗಕ್ಕೆಲ್ಲ ಖೇದವನ್ನೂ ಆಶ್ಚರ್ಯವನ್ನೂ ಉಂಟುಮಾಡಿದೆ. ಆದುದರಿಂದ ಆ ಮಹನೀಯರ ವಿಷಯವನ್ನು ತೆಗೆದುಹಾಕಿ ಪಠ್ಯಪುಸ್ತಕವನ್ನಾಗಿ ಏರ್ಪಡಿಸಿದರೆ ಸರ್ವಜನಮಾನ್ಯವಾಗುವದು. ಈ ಮಹನೀಯರ ಬಗ್ಗೆ ಇವರು ಬರೆದ ವಿಷಯಗಳಾದರೂ ಒಂದಕ್ಕೊಂದು ಸಂಬಂಧವಿರುವದಿಲ್ಲ. ಬಸವನ ಕಾಲದಲ್ಲಿದ್ದ ಯಾವನೋ ಒಬ್ಬ ಮಲ್ಲಿಕಾರ್ಜುನಪಂಡಿತಾರಾಧ್ಯನೆಂಬವನ ಹೆಸರನ್ನೆತ್ತಿಕೊಂಡು ಅವನನ್ನು ವೀರಶೈವಾಚಾರ್ಯ ಪಂಚಕದಲ್ಲಿ ಸೇರಿಸಿಬಿಟ್ಟಿರುತ್ತಾರೆ. ಇದಂತೂ ಕೇವಲ ವಿಷಾದಕರವಾದ ವಿಷಯವಾಗಿದೆ. ಹೀಗೆಯೇ ಪ್ರತಿಯೊಬ್ಬ ಆಚಾರ್ಯರ ವಿಷಯಗಳಾದರೂ ಒಂದಕ್ಕೊಂದು ಸಂಬಂಧವಿಲ್ಲದೆ ಪ್ರಾಚೀನಗ್ರಂಥಗಳಿಗೆ ವಿರುದ್ಧಾಭಿಪ್ರಾಯವನ್ನು ಕೊಡುತ್ತವೆ. ಈ ಐದು ಜನ ಆಚಾರ್ಯರು ಬಹು ಪ್ರಾಚೀನಕಾಲದವರಿರುತ್ತಾರೆ. ಹೀಗಿದ್ದರೂ ಕೆಲವರು ಬಸವನ ಸಮಕಾಲದಲ್ಲಿದ್ದರೆಂದು ಈ ಗ್ರಂಥಕಾರರು ಬರೆದಿರುತ್ತಾರೆ. ಇದು ಕೇವಲ ಅಸಮಂಜಸವಾದ ವಿಷಯವಾಗಿದೆ. **ಕಾಶೀ ವಿಶ್ವಾರಾಧ್ಯರಪೀಠದಲ್ಲಿಯೂ, ಹಿಮವತ್ಕೇದಾರದ ಏಕೋರಾಮಾರಾಧ್ಯರ ಪೀಠದಲ್ಲಿಯೂ** ಈಗ್ಗೆ ಎರಡು ಸಾವಿರ ವರ್ಷಗಳಿಂದ ಶಿಲಾಶಾಸನ ತಾಮ್ರಶಾಸನಾದಿಗಳು ದೊರೆಯುತ್ತವೆ. **ರೇವಣಸಿದ್ಧರು** (ರೇಣುಕಾಚಾರ್ಯರು) **ಶ್ರೀ ಶಂಕರಾಚಾರ್ಯ**ರಿಗೆ **ಚಂದ್ರಮೌಳೀಶ್ವರಲಿಂಗ**ವನ್ನು ಅನುಗ್ರಹಿಸಿದರೆಂಬ ವಿಷಯವು **ವೇದಾಂತಸಾರ ವೀರಶೈವ ಚಿಂತಾಮಣಿ, ಶಿವತತ್ವರತ್ನಾಕರ** ಮೊದಲಾದ ವೀರಶೈವಗ್ರಂಥಗಳಲ್ಲಿಯೂ **ಶೃಂಗೇರಿ**ಮಠಾಧಿಪತಿಗಳು ಬರೆಯಿಸಿದ **ಗುರುವಂಶಕಾವ್ಯ** ಮೊದಲಾದ ಗ್ರಂಥಗಳಲ್ಲಿಯೂ ಪ್ರತಿಪಾದಿತವಾಗಿದೆ. ಆದ ಮೇಲೆ ಇವರು ಕಾಲಮಾನವನ್ನು ಪೂರ್ಣವಿಮರ್ಶಿಸದೆ ಬರೆದಿರುವದು ಶೋಚನೀಯವಲ್ಲವೇ? ಅಸ್ತು! ಈ ಮತಾಚಾರ್ಯರು ಯಾವ ಕರ್ನಾಟಕ ಗ್ರಂಥಗಳನ್ನೂ ರಚಿಸದೆ ಇರುವದರಿಂದ ಆ ಮಹನೀಯರ ವಿಷಯವನ್ನು ಕರ್ನಾಟಕ ಕವಿಚರಿತೆಯಿಂದ ತೆಗೆದುಹಾಕಿ ಪಠ್ಯಪುಸ್ತಕವನ್ನಾಗಿ ಏರ್ಪಡಿಸಬೇಕೆಂದು ಕೋರಿಕೆ. ಹಾಗೆಯೇ ಬಿಟ್ಟಿದ್ದಾದರೆ ವಾಚಕರು ಅದರಂತೆ ಪಠನಮಾಡಿ ಅದನ್ನೇ ನಿಜವೆಂದು ನಂಬಲವಕಾಶವಾಗುವದು. ಆದುದರಿಂದ ಈ ಯಾವತ್ತು ವಿಷಯಗಳನ್ನು ಸಕಲ ಮೆಂಬರರೂ ಹಾಗೂ ಗ್ರಂಥಕರ್ತರೂ ಪೂರ್ಣವಾಗಿ ಆಲೋಚಿಸಿ ಅದನ್ನು ತೆಗೆದುಹಾಕುವಂತೆ ಏರ್ಪಡಿಸಿ "ಕರ್ನಾಟಕ ಕವಿಚರಿತೆ" ಯನ್ನು ಅನ್ವರ್ಥನಾಮವುಳ್ಳದ್ದನ್ನಾಗಿ ಮಾಡಿ ಪಠ್ಯಪುಸ್ತಕವನ್ನಾಗಿ ನಿಯಮಿಸಬೇಕೆಂದು ಕೋರುವ,

ಓರ್ವ
ಕರ್ನಾಟಕಕವಿ ಕಿಂಕರ.

ಸ್ವಾತಂತ್ರ್ಯಸಮರವಾರ್ತೆ.

ಈ ಮೊದಲು ಪ್ರಕಟಿಸಲ್ಪಟ್ಟಿದ್ದಂತೆ ಕಳೆದ 6 ನೆಯ ತಾರೀಖು ಭಾನುವಾರ ಬೆಳಿಗ್ಗೆ ಮಹಾತ್ಮರು ದಂಡಿಯಲ್ಲಿ ಉಪ್ಪಿನಕಾಯಿದೆಯ ಭಂಗವನ್ನು ಮಾಡಿದರು. ಮಹಾತ್ಮರ ಕಾಯಿದೆಭಂಗವನ್ನು ನೋಡಲು ಸುಮಾರು 500 ಜನರು ನೆರೆದಿದ್ದರು. ಮಹಾತ್ಮರಿಂದ ಮಾಡಲ್ಪಟ್ಟ 2 ತೊಲ ಉಪ್ಪು 525 ರೂ. ಗಳಿಗೆ ಹರಾಜು ಮಾಡಲ್ಪಟ್ಟಿತು. ಮಹಾತ್ಮರು ಪ್ರತಿದಿನವೂ ಬೇರೆ ಬೇರೆ ಕಡೆಗಳಲ್ಲಿ ಉಪ್ಪಿನ ಕಾಯಿದೆಭಂಗವನ್ನು ಮಾಡುತ್ತಲೂ ಶೇಖರಿಸಿದ ಉಪ್ಪನ್ನು ಹಳ್ಳಿಗಳಲ್ಲಿ ಮಾರುತ್ತಲೂ, ಹಂಚುತ್ತಲೂ ಇರುವರು.

ಮಹಾತ್ಮರ ಅಪ್ಪಣೆಯನ್ನೇ ನಿರೀಕ್ಷಿಸುತ್ತಿದ್ದ ಇತರ ಕಡೆಗಳ ಸತ್ಯಾಗ್ರಹಿಗಳೂ ಸಹ, ತಮ್ಮ ತಮ್ಮ ಪ್ರದೇಶಗಳಲ್ಲಿ ಕಾಯಿದೆಭಂಗವನ್ನು ಪ್ರಾರಂಭಿಸಿರುವರು. ಪೋಲೀಸರು ಕೆಲವು ಕಡೆಗಳಲ್ಲಿ ತಯಾರು ಮಾಡಿದ ಉಪ್ಪನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳುತ್ತಲೂ, ಮುಂದಾಳುಗಳನ್ನು ಒಬ್ಬೊಬ್ಬರನ್ನಾಗಿ ದಸ್ತಗಿರಿ ಮಾಡುತ್ತಲೂ ಇರುವರು. ಇದುವರೆಗೆ ನೂರಾರು ಜನ ಮುಂದಾಳುಗಳೂ, ಸ್ವಯಂಸೇವಕರೂ ಕಾರಾಗೃಹವಾಸಿಗಳಾಗಿರುವರು. ಮಹಾತ್ಮರ ಪುತ್ರರಾದ ರಾಮದಾಸಗಾಂಧಿ ಮತ್ತು ದೇವದಾಸಗಾಂಧಿ ಈ ಈರ್ವರೂ ದಸ್ತಗಿರಿ ಮಾಡಲ್ಪಟ್ಟು ಆರಾರು ತಿಂಗಳು ಕಠಿಣಶಿಕ್ಷೆಗೆ ಗುರಿಪಡಿಸಲ್ಪಟ್ಟಿರುವರು.

ಆಟ ಎಂಬ ಸ್ಥಳದಲ್ಲಿ ಸತ್ಯಾಗ್ರಹಿಗಳು ತಯಾರು ಮಾಡಿದ ಸುಮಾರು 50 ಮಣ ಉಪ್ಪನ್ನು ಪೋಲೀಸರು ಬಲಾತ್ಕಾರದಿಂದ ತಮ್ಮ ವಶಪಡಿಸಿಕೊಂಡು ಹೋದರು. ಅನಂತರ ಮಹಾತ್ಮಾಗಾಂಧಿಯವರು ಅಲ್ಲಿ ಹೋಗಿ ತಮ್ಮ ಸ್ವಂತ ಮುಂದಾಳುತನದಿಂದ ಕಾಯಿದೆಭಂಗವನ್ನು ಮುಂದುವರಿಸಿದರು. ಸತ್ಯಾಗ್ರಹಿಗಳು ಸುಮಾರು 1000 ಮಣ ಉಪ್ಪನ್ನು ಶೇಖರಿಸಿ, ಅದನ್ನು 450 ರೂ. ಗಳಿಗೆ ಮಾರಿದರು. ಇಲ್ಲಿ ಇಬ್ಬರು ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟಿರುವರು.

ಬೊಂಬಾಯಿಯು ಗುಜರಾಥ, ಕಚ್ಛ, ದೆಹಲಿ ಮತ್ತು ಅನ್ಯಕಸೆರದ ವರ್ತಕರೆಲ್ಲರೂ ಪರದೇಶೀ ಬಟ್ಟೆಯನ್ನು 3 ತಿಂಗಳ ವರೆಗೆ ಬಹಿಷ್ಕರಿಸಿ ಮಹಾತ್ಮರ ಸತ್ಯಾಗ್ರಹ ಕಾರ್ಯಕ್ಕೆ ಅನುಕೂಲಪಡಿಸಬೇಕೆಂದು ತೀರ್ಮಾನಿಸಿಕೊಂಡಿರುವರು.

ಲಾಹೋರಿನ ಸತ್ಯಾಗ್ರಹ ಕಾರ್ಯಕರ್ತರಿಗೆ ಪ್ರೆಸಿಡೆಂಟರಾದ ಮಿ|| ಜಾಫರ್ ಅಲಿಯವರಿಗೆ ಒಬ್ಬ ಸ್ತ್ರೀಯು ಒಂದು ಪೆಟ್ಟಿಗೆಯ ತುಂಬ ಬಳೆಗಳನ್ನು ಕಳುಹಿಸಿ, "ಭರತಖಂಡದ ದಾಸ್ಯವನ್ನು ನಿವೃತ್ತಿಗೊಳಿಸಲು ಪುರುಷರ ಕೈಲಾಗದಿದ್ದಾಗ ಬಳೆಗಳನ್ನು ತೊಟ್ಟುಕೊಳ್ಳಿರಿ" ಎಂದು ಒಂದು ಪತ್ರವನ್ನು ಬರೆದಿರುವಳಂತೆ!

12 ನೆಯ ತಾರೀಖಿನ ದಿವಸ 1000 ಜನ ಸ್ವಯಂಸೇವಕರು ಬೊಂಬಾಯಿನಲ್ಲಿ ಅಕ್ರಮವಾಗಿ ತಯಾರಿಸಿದ ಉಪ್ಪನ್ನು ಒಟ್ಟು 5,000 ರೂ. ಗಳಿಗೆ ಮಾರಿದರು. ಅದರಲ್ಲಿ ಸುಮಾರು 3,300 ರೂ. ಗಳ ಉಪ್ಪನ್ನು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಇತರ 5 ಜನ ಸ್ತ್ರೀಸತ್ಯಾಗ್ರಹಿಗಳೊಡನೆ ಮಾರಿದರು. 13ನೆಯ ತಾರೀಖಿನ ದಿವಸ ಮಧ್ಯಾಹ್ನ 3 ಗಂಟೆಗೆ 1,00,000 ಜನರ ದೊಡ್ಡ ಸಭೆಯು ಸಮುದ್ರತೀರದಲ್ಲಿ ಸೇರಿ ಎಲ್ಲರೂ ಒಟ್ಟಿಗೆ ಸಮುದ್ರದ ನೀರನ್ನು ತಂದು, ಉಪ್ಪಿನ ಕಾಯಿದೆಯ ಪ್ರತಿಯನ್ನು ಬಹಿರಂಗವಾಗಿ ದಹಿಸಿ, ವಾದ್ಯಗಳ ಸಮೇತ ಸಮುದ್ರದಲ್ಲಿ ಎಸೆಯುವುದಾಗಿ ಪ್ರಕಟಿಸಲ್ಪಟ್ಟಿರುವದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ.

(ಹಿಂದಿನಿಂದ ಮುಂದೆ ಸಾಗಿದುದು.)

ವೀರಶೈವಮತದ ಸನಾತನತ್ವವನ್ನು ಸಿದ್ಧಗೊಳಿಸಲು ಸ್ಕಾಂದಾದಿ ಶಿವಪುರಾಣಗಳಲ್ಲಿಯೇ ಬೇಕಾದಷ್ಟು ಆಧಾರಗಳು ದೊರೆಯುತ್ತವೆ. ಗೀರ್ವಾಣಭಾಷಾ ಪರಾಙ್ಮುಖರಾದ ವೀರಶೈವಂ...ಸೇಕರು ಈ ಪುರಾಣಗಳಲ್ಲಿ ಅಭಿಮಾನಶೂನ್ಯರಾದರೂ ಸಹ ವೈದಿಕ ಮತಾಭಿಮಾನಿಗಳಾದ ಸ್ಮಾರ್ತ ವೈಷ್ಣವಾದಿ ಮತೀಯ ವಿದ್ವಾಂಸರು ಅವುಗಳನ್ನು ಅತ್ಯಂತ ಜೋಪಾನವಾಗಿ ಕಾಪಾಡಿಕೊಂಡು ಬಂದುದಲ್ಲದೆ ಅವರೇ ಅವುಗಳನ್ನು ಮುದ್ರಣಮಾಡಿಸಿ ಭರತಖಂಡದ ಅಶೇಷ ಶೈವರ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಬೊಂಬಾಯಿಪಟ್ಟಣದ ವೆಂಕಟೇಶ್ವರ ಸ್ಟೀಮ್ ಪ್ರೆಸ್ಸಿನ ಮಾಲಿಕ...

ಶಿವಾಗಮಗಳಲ್ಲಿ ಶೈವಮತದ ಸಪ್ತಭೇದಗಳು ವಿಸ್ತಾರವಾಗಿ ವರ್ಣಿಸಲ್ಪಟ್ಟಿದ್ದು ಅಂತ್ಯದಲ್ಲಿ ವೀರಶೈವಮತದ ಪ್ರಾಶಸ್ತ್ಯವನ್ನು ಕುರಿತು "ಏಕೇನಜನ್ಮನಾ ಮುಕ್ತಿರ್ವೀರಶೈವಾ... ಇತರೇಷಾಂತು ಶೈವಾನಾಂ ಮುಕ್ತಿರ್ಜನ್ಮತ್ರಯೇ ಭವೇತ್ || ... ನೋವೀರಶೈವಸದೃಶಂ ಮತಮಸ್ತಿ ಜಗತ್ತ್ರಯೆ" ಇತ್ಯಾದಿ ವಿಧಿವಾಕ್ಯಗಳಿರುತ್ತವೆ.

ಚರಾಚರಾತ್ಮಕವಾದೀಪ್ರಪಂಚವೆಲ್ಲವೂ ... ಅವಿನಾಭಾವದಿಂದ ಸಂಬಂಧಿಸಿಕೊಂಡಿರುವ ಶಕ್ತಿ ... ವಾಗಿ ಶಿವಶಕ್ತಿಮಯವಾಗಿರುವುದರಿಂದಲೂ ... "ಏಕೈವ ಶಕ್ತಿಃ ಪರಮೇಶ್ವರಸ್ಯ ಭಿನ್ನಾ ..." ... ಬೋಧಿಸುತ್ತವೆ.

...

ಪೂಜಾಕ್ರಮ, ಭಸ್ಮರುದ್ರಾಕ್ಷಧಾರಣ, ಶಿವಭಕ್ತಿಮಾಹಾತ್ಮ್ಯ ಇತ್ಯಾದಿ ವಿಷಯಗಳು ವಿದ್ಯೇಶ್ವರಸಂಹಿತೆಯ 16, 17, 18, 19, 20, 21, 22, 23, 24, 25 ಈ ಅಧ್ಯಾಯಗಳಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ.

(ಸಶೇಷ)

M. D. Basavappa.

ಓಂನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ.

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯ ಜಯಂತಿಮಹೋತ್ಸವವು,

ಪಾಲಿಕೊಪ್ಪ.

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾ|| ಪಾಲಿಕೊಪ್ಪದ ಶ್ರೀ|| ಷ|| ಬ್ರ|| ಪಟ್ಟದ ಸ್ವಾಮಿಗಳವರ ನಿವಾಸಸ್ಥಾನವಾದ "ಪುಣ್ಯಾಶ್ರಮ ಶ್ರೀ ರೇಣುಕಬಾಗ" ಎಂಬಲ್ಲಿ ಉಭಯ ಜಗದ್ಗುರುಗಳವರ ಜಯಂತಿಮಹೋತ್ಸವವು ಅತ್ಯುತ್ಸಾಹದಿಂದ ನೆರವೇರಿಸಲ್ಪಟ್ಟಿತು. ಈ ಆಶ್ರಮವು ನಿರ್ಜನಪ್ರದೇಶದಲ್ಲಿದ್ದುದರಿಂದ ಬಹಳ ಶಾಂತವಾಗಿರುತ್ತದೆ. ಸುತ್ತಲೂ ಲತಾವೃಕ್ಷಗಳು ಕಂಗೊಳಿಸುತ್ತವೆ. ...

...ರುವುದು ಪ್ರತಿಯೊಬ್ಬ ವೀರಶೈವನ ಅವಶ್ಯಕರ್ತವ್ಯವಾಗಿದ್ದರೂ ಕೆಲವರು ನಿನ್ನೆ ಮೊನ್ನೆಯವರಾದ ಕೆಲವು ಲೌಕಿಕಗುರುಗಳನ್ನು ಮುಂದಿಟ್ಟುಕೊಂಡು ಕೊಳಬೇಕಷ್ಟೆಯಂತೆ ಏನೇನೋ ಮಾಡುತ್ತಿರುವರು. ಅಂದರೆ ಭಾವಿಯ ನೀರನ್ನು ಉಪಯೋಗಿಸುತ್ತಿದ್ದರೂ ಅದಕ್ಕೆ ಆಧಾರವಾದ ಮಹಾಸಮುದ್ರವನ್ನು ಮರೆಯಬಾರದೆಂಬುದೇ ಮಥಿತಾರ್ಥವು. ಈ ಮಹೋತ್ಸವದಲ್ಲಿ ಪಾಲಿಕೊಪ್ಪ, ತಿರುಮಲಕೊಪ್ಪ, ಹೊಸಕಟ್ಟಿ, ಯಲಿವಾಳ, ಅಗಡಿ, ವಿಠ್ಠಲಾಪುರ ಮೊದಲಾದ ಗ್ರಾಮದವರು ಬಹುಮಟ್ಟಿಗೆ ಕಾರ್ಯದಕ್ಷತೆಯನ್ನು ವಹಿಸಿದ್ದರು. ಗುರುಸೇವೆಯನ್ನು ಮಾಡಿದರಲ್ಲವೇ ಮುಕ್ತಿ ದೊರಕುವುದು? ಇದೇ ಪ್ರಕಾರವಾಗಿಯೇ ಸರ್ವರೂ ಗುರುಭಕ್ತಿಪರಾಯಣರಾಗಲೆಂದೂ, ಶೀಘ್ರದಲ್ಲಿಯೇ ಸಮಾಜವು ಎಚ್ಚರಿಕೆಯನ್ನು ...

...

ಸಮಾಜದ ಠರಾವುಗಳ ವಿವರ.

...

೧೦. ಧರ್ಮಗ್ರಂಥಗಳು ವಿಶೇಷತಃ ಸಂಸ್ಕೃತಭಾಷೆಯಲ್ಲಿರುವದರಿಂದ ಸಕಲ ಮಠೀಯರಿಗೂ ಸಂಸ್ಕೃತವಿದ್ಯೆಯು ಅವಶ್ಯವಾಗಿ ಬೇಕಾದ ಮೂಲಕ ತಪ್ಪ ಪಕ್ಷಕ್ಕೆ ಕಾಲೂರಿಗೊಂದರಂತೆಯಾದರೂ ಸಂಸ್ಕೃತಶಾಲೆಗಳಿರಬೇಕು.

೧೧. ಚಹಾ ಸಿಗರೇಟ ಮೊದಲಾದ ದುಶ್ಚಟಗಳಿಂದಾಗುವ ಅನಾಚಾರಗಳನ್ನೂ ಅಪಾಯವನ್ನೂ ವ್ಯರ್ಥವ್ಯಯವನ್ನೂ ಸಮಾಜಪ್ರಮುಖರು ಲಕ್ಷ್ಯಕ್ಕೆ ತಂದು ಅಂತಹ ವ್ಯಸನಗಳಿಗೆ ಬುದ್ಧಿಯನ್ನು ಹೇಳಿಯಾಗಲಿ ಬಹಿಷ್ಕಾರದಿಂದಾಗಲಿ ವ್ಯಸನಮುಕ್ತರನ್ನಾಗಿ ಮಾಡಿ ಸುಖದ ಮಾರ್ಗಕ್ಕೆ ಹಚ್ಚಬೇಕು.

೧೩. ನಮ್ಮ ದೇಶವು ಕೃಷಿ (ಒಕ್ಕಲತನ) ಪ್ರಧಾನವಾದ್ದರಿಂದ ಮೇಲೆ ಕಾಣಿಸಿದ ವ್ಯಸನಗಳಿಂದಲೂ ಲಗ್ನ ಮೊದಲಾದವುಗಳಲ್ಲಿಯ ...

...

೧೪. ಹೋಟಲುಗಳಲ್ಲಿ ಆಗುವ ಅತ್ಯಾಚಾರಗಳನ್ನು ಕಳೆಯಲು ಮಾಡಿದ ಭಾರತೀಯ ಬಿಲ್ಲನ್ನು ಜೋರಿನಿಂದ ಅಮಲಿನಲ್ಲಿ ತರಬೇಕು.

ಓರ್ವ ಸಮಾಜಹಿತೈಷಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಜಗದ್ಗುರು ಪಂಚಾಚಾರ್ಯ ಭಜನಾಸಂಘ,

ಹರಪನಹಳ್ಳಿ.

ಈ ಗ್ರಾಮದಲ್ಲಿ ಈಗ್ಗೆ ಎರಡುವರ್ಷಗಳಿಂದ ಪಂಚಾಚಾರ್ಯ ಭಜನಾಸಂಘವು ನಡೆಯುತ್ತಿರುವುದು ಸರ್ವಜನವೇದ್ಯವೇ ಅದೆ. ಆದರೆ ಸದರಿ ಭಜನಾಸಂಘವು ನಿರ್ವಿಘ್ನವಾಗಿ ನಡೆಯಬೇಕಾದ ಕೆಲವು ಏರ್ಪಾಟುಗಳನ್ನು ಮಾಡಿದ್ದಿಲ್ಲ. ಇದರ ಸಲುವಾಗಿ ಇದೇ ...

...

ವಿವಾಹಮಹೋತ್ಸವ ಮುಧೋಳ.

...

...ವಾಚಕರೆಲ್ಲರೂ ಪಂಚಾಚಾರ್ಯಪ್ರಭೆಯ ಪೋಷಕರೆನ್ನಿಸಿ ... ಬಸವರಾಜಶಾಸ್ತ್ರಿಗಳ ವಶಕ್ಕೆ ಕೊಟ್ಟರು.

ಮಳಲಿ ಮಹಾದೇವಶರ್ಮಾ, ಮುಧೋಳ.

ಶ್ರೀಮಜ್ಜಗದ್ಗುರು ಪಂಡಿತಾರಾಧ್ಯ ಪ್ರಸೀದತು.

ಷಡಕ್ಷರಮಂತ್ರಮಾಲೆಯು.

(ಲೇಖಕರು—ನಾಗೀಕಶಿವಾಚಾರ್ಯರು, ...)

...

ದನುಜವಮನುಜವಾಮರ ವ್ರಾತೇಂದ್ರರಿಂ ನಮಿತಂ ||
ಅನುದಿನದಿ ಕ್ತಯಿಮಿಲ್ಲಮದರಿಂ |
ದನುನಯದಿ ನಮಿಸುವೆನು ಮನದೊಳು |
ಚಿನುಮಯಾತ್ಮಕವಾಗಿ ತೋರ್ಪೆನಗೆ (ನ) ಪ್ರಣವಂ ||೨||

ಮಹಿಯೊಳಗಣಿತ ಮಹಿಮೆಯನು ತಾ |
ಮಹಿದೆನಲು ಬಹುರೂಪದೋರುತ |
ಬಹುವಿರುವವರು ಮಹೇಶನ ರೂಪವೇ ಸಹಜ ||
ಮಹಿಮರದರೋಳ್ ಸುಗವೆ ನುಡಿವರು |
ಬಹುವಿಧದಪಾಪಹರನೆನುತಂ |
ಬಹುವಿನಯದಿಂದಾನದನೆ ನಮಿಸುವೆನು (ಮ)ಪ್ರಣವಂ ||೩||

ಶಿವನೆ ಸರ್ವಗಧಿಕನೆನುತಂ |
ಭುವನದೊಳಗಖಿಳರ್ಗೆ ಬೋಧಿಸಿ |
ಭವದ ಬಾಧೆಯ ನೀಗಿಸಲ್ಕನುದಿದುವೆ ಸುಸಮರ್ಥಂ ||
ಜವನನವರಿಂದವನತಿಯುತ |
...

ಪಂಚಾಚಾರ್ಯ ಪ್ರಭಾ

೧೯೩೦ ನೇ ಏಪ್ರಿಲ್ ತಾ|| ೧೪ ನೇ ಸೋಮವಾರ

ಶ್ರೀ ರೇಣುಕಾಚಾರ್ಯರೂ ಹಾಗೂ ಶ್ರೀ ಶಂಕರಾಚಾರ್ಯರೂ.

(ಚಂದ್ರಮೌಳೀಶ್ವರಲಿಂಗ)

ಕಳೆದವಾರದ ನಮ್ಮ ಪತ್ರಿಕೆಯಲ್ಲಿ ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನನುಗ್ರಹಿಸಿದ ವಿಷಯದಲ್ಲಿ ಈಗ್ಯೆ ನಾಲ್ಕನೆಯ ತಲೆಯವರಾದ **ಶೃಂಗೇರಿ** ಪೀಠಾಧೀಶ **ಶ್ರೀ ಸಚ್ಚಿದಾನಂದಭಾರತೀಸ್ವಾಮಿಗಳವರು** ಬರೆಯಿಸಿದ **"ಗುರುವಂಶ"** ಕಾವ್ಯದ ಪ್ರಮಾಣಗಳನ್ನುದಾಹರಿಸಿ ಸಕಲ ಮತೀಯ ವಿದ್ವಾಂಸರು ಶಿರಸಾ ಮಾನ್ಯಮಾಡುವಂತೆ ಬರೆದಿರುವ ಸಂಗತಿಯು ಸಕಲ ವಾಚಕಮಹಾಶಯರಿಗೆ ತಿಳಿದದ್ದೇ ಆಗಿದೆ. ಈ ವಿಷಯವನ್ನು ಇನ್ನಾವ ಗ್ರಂಥಕಾರರು ತಮ್ಮ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆಂಬ ವಿಷಯವನ್ನು ವಿಮರ್ಶಿಸೋಣ! ಪೂರ್ವಕಾಲದಲ್ಲಿ ತುಮಕೂರು ಡಿ|| ನಿಟ್ಟೂರು ಗ್ರಾಮವನ್ನಲಂಕರಿಸಿದ್ದ ವೀರಮಾಹೇಶ್ವರವಂಶಸಂಭೂತರಾದ ಶ್ರೀಮನ್ನಂಜಣಾಚಾರ್ಯರು ತಾವು ರಚಿಸಿದ **"ವೇದಾಂತಸಾರ ವೀರಶೈವಚಿಂತಾಮಣಿ"** ಎಂಬ ಪ್ರೌಢಗ್ರಂಥದ ಆದಿಯಲ್ಲಿ ಈ ಕೆಳಗೆ ಬರೆದಂತೆ ಮಂಗಲವನ್ನಾಚರಿಸಿದ್ದಾರೆ.

ಪುರಾಣಗಸ್ತ್ಯಾಯ ಸಿದ್ಧಾಂತಶಿಖಾಮಣಿ ಸಮಾಹ್ವಯಂ। ವೀರಶೈವೋಚಿತಂ ಶಾಸ್ತ್ರಂ ಪ್ರೋಕ್ತವಾನ್‌ಯಃಕೃಪಾಬಲಾತ್ ||೧|| ಕಾಂಚ್ಯಾಂ ವರದರಾಜಸ್ಯ ಸಕಂಪಶಿರಸಿ ಸ್ವಕಂ । ಹಸ್ತಂ ನಿಧಾಯ ಚೋಲಾಗ್ರೇ ಸುಸ್ಥಿತಂ ಕೃತವಾಂಸ್ತದಾ ||೨|| ವಿಷ್ಣುಭಕ್ತಾಯ ತಚ್ಚೋಲಭೂಪಾಯ ಕರುಣಾಬಲಾತ್ । ಶಿವಾಧಿಕ್ಯಂ ಮಹಾಶಾಸ್ತ್ರಂ ಪ್ರೋಕ್ತವಾನ್ ಶಿವಯೋಗಿರಾಟ್ ||೩|| ಶಂಕರಾಚಾರ್ಯಸನ್ನಾಮ ಯೋಗೀಂದ್ರಾಯ ಮಹೋಜ್ಜ್ವಲಂ । ಚಂದ್ರಮೌಳೀಶ್ವರಂ ಲಿಂಗಂ ದತ್ತವಾನಿತಿ ವಿಶ್ರುತಃ ||೪|| ಶ್ರೀ ರೇಣುಕಗಣೇಶಾಖ್ಯಂ ರೇವಣಸಿದ್ಧದೇಶಿಕಂ । ವೀರಶೈವಮತಾಚಾರ್ಯಂ ವಂದೇಹಂ ತಂ ಜಗದ್ಗುರುಂ ||೫||

ಅಂದರೆ ಯಾವನು ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ವೀರಶೈವ ಸಿದ್ಧಾಂತವನ್ನುಪದೇಶಿಸಿದನೋ, ಯಾವನು ಕಾಂಚೀಕ್ಷೇತ್ರದಲ್ಲಿ ಸುಪ್ರಸಿದ್ಧವಾಗಿರುವ ವರದರಾಜ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕದ ಮೇಲೆ ಹಸ್ತವನ್ನಿಟ್ಟು ಆ ಚಲನವನ್ನು ನಿಲ್ಲಿಸಿ ವಿಷ್ಣುಭಕ್ತನಾದ ಚೋಳಭೂಪಾಲನಿಗೆ ಶಿವಸಿದ್ಧಾಂತವನ್ನುಪದೇಶಿಸಿ ಶಿಷ್ಯನನ್ನಾಗಿ ಮಾಡಿಕೊಂಡನೋ ಹಾಗೂ ಯಾವನು ಜಗದ್ವಿಖ್ಯಾತರಾದ ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನನುಗ್ರಹಿಸಿದನೋ ವೀರಶೈವಮತಾಚಾರ್ಯನಾದ ಆ ಜಗದ್ಗುರು ರೇವಣಸಿದ್ಧಶಿವಾಚಾರ್ಯನನ್ನು ನಮಸ್ಕರಿಸುತ್ತೇನೆಂದು ಮಂಗಲವನ್ನಾಚರಿಸಿರುವನು. ಅಸ್ತು! ಇದಲ್ಲದೆ ಮದ್ರಾಸ್ ಗೌರ್ನಮೆಂಟ್ ಸೀನಿಯರ್ ಟ್ರಾನ್ಸ್‌ಲೇಟರರಾದ ಮ|| ರಾ|| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಇವರು ಮತ್ತು ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯ ಅ|| ಲೈಬ್ರೆರಿಯನ್ನರಾದ ಮ|| ರಾ|| ವಿದ್ವಾನ್ ಪಿ. ಸುಂದರಶಾಸ್ತ್ರಿಯರ್ ಇವರು **"ಶಿವತತ್ತ್ವ ರತ್ನಾಕರ"** ವೆಂಬ ಉದ್ಗ್ರಂಥವನ್ನು ದೇವನಾಗರೀ ಲಿಪಿಯಲ್ಲಿ ಮುದ್ರಣ ಮಾಡಿಸಿ, ಮೈಸೂರು ಶ್ರೀಮನ್ಮಹಾರಾಜರವ ಸನ್ನಿಧಿಗೆ ಸಮರ್ಪಿಸಿದ್ದಾರೆ. ಈ ಗ್ರಂಥದ ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ವಿದ್ಯಾರಣ್ಯರ ವಿಷಯವನ್ನು ಬರೆಯುವಾಗ್ಯೆ—

ತತಃಸ ರೇವಣಾಸಿದ್ಧಸಂಪ್ರದಾಯ ಪ್ರವರ್ತಿನಾಂ । ಶಂಕರಾಚಾರ್ಯವರ್ಯಾಣಾಂ ಪಾರಂಪರ್ಯಕ್ರಮಾಗತಂ ||೯|| ಸನ್ಯಾಸಿನೆಮುಪಾಶ್ರಿತ್ಯ ವಿನಯಾವನತೋಧಿಕಮ್ । ವೃತ್ತಾಂತಮಖಿಲಂ ತಸ್ಮೈಯತಯೇ ಸ್ವಂ ನ್ಯವಿಜ್ಞಪತ್ ||೧೦|| ಎಂದೂ ರೇವಣಾಸಿದ್ಧಸಂಪ್ರಾಪ್ತಂ ಚಂದ್ರಮೌಲೀಶಮುಸ್ಯದಾತ್ || ಅಖ್ಯಚ್ಛಾನೇನ ಲಿಂಗೇನ ತವಾಭೀಷ್ಟಾಪ್ತಿರಿತ್ಯಪಿ ||

ಎಂದೂ ಬರೆಯಲ್ಪಟ್ಟಿದೆ. ಈ ೧೨ ನೆಯ ತರಂಗದಿಂದ ತಿಳಿದುಬರುವದೇನೆಂದರೆ; ಶಿವಧರ್ಮನೆಂಬ ಬ್ರಾಹ್ಮಣನು ಬಡತನದ ವ್ಯಸನದಿಂದ **ರೇವಣಸಿದ್ಧಸಂಪ್ರದಾಯಕರಾದ ಶ್ರೀ ಶಂಕರಾಚಾರ್ಯರ ಪೀಠಕ್ಕೆ** ಅಧಿಪತಿಗಳಾಗಿದ್ದ ವಿದ್ಯಾಶಂಕರತೀರ್ಥಸ್ವಾಮಿಗಳವರಲ್ಲಿ ಬಂದು ತನ್ನ ನಿಜಸ್ಥಿತಿಯನ್ನು ಹೇಳಿಕೊಂಡನೆಂದೂ, ಶ್ರೀ ಸ್ವಾಮಿಗಳವರು ಅವನಿಗೆ ಶ್ರೀ ಚಕ್ರವನ್ನಾಶೀರ್ವದಿಸಿ ಅದನ್ನು ಪೂಜಿಸಲು ಅಪ್ಪಣೆಯನ್ನು ಮಾಡಿದರೆಂದೂ, ಆ ಶ್ರೀ ಚಕ್ರಪೂಜೆಯ ಸಾಮರ್ಥ್ಯದಿಂದಲೇ ಅವನು ಮಹಾಜ್ಞಾನಿಯಾಗಿ ಸದರಿ ಸ್ವಾಮಿಗಳವರಿಂದ ಸನ್ಯಾಸದೀಕ್ಷೆಯನ್ನು ಪಡೆದುಕೊಂಡು **ವಿದ್ಯಾರಣ್ಯ** ನೆಂಬ ನಾಮಧೇಯದಿಂದ ಪ್ರಸಿದ್ಧನಾದನೆಂದೂ, ಶ್ರೀ ಸ್ವಾಮಿಗಳವರು ತಮ್ಮ ಶಿಷ್ಯರಾದ ಆ ವಿದ್ಯಾರಣ್ಯರಿಗೆ, ಆದಿಯಲ್ಲಿ ಶ್ರೀ ರೇಣುಕಾಚಾರ್ಯರಿಂದ ಶ್ರೀ ಶಂಕರಾಚಾರ್ಯರಿಗೆ ಪ್ರಾಪ್ತವಾಗಿದ್ದು ಗುರುಪರಂಪರೆಯಿಂದ ಬಂದ **ಶ್ರೀ ಚಂದ್ರಮೌಳೀಶ್ವರಲಿಂಗವನ್ನು** ಕೊಟ್ಟು, ನೀನು ಈ ಲಿಂಗವನ್ನು ಪೂಜಿಸು; ಇದರಿಂದ ನಿನ್ನ ಮನೋಭೀಷ್ಟವು ಪೂರ್ತಿಯಾಗುವದೆಂದು ಆಜ್ಞೆಯನ್ನಿತ್ತರೆಂದೂ ತಿಳಿದುಬರುತ್ತದೆ.

ಮೇಲ್ಕಂಡ ಶಿವತತ್ತ್ವರತ್ನಾಕರ ಗ್ರಂಥಕ್ಕೆ ಇಂಡಿಯಾ ಗೌರ್ನಮೆಂಟಿನ ಪ್ರಾಚೀನ ಶಾಸನ ಶೋಧಕರಾದ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಯರ್ ಬಿ.ಎ., ಎಂಬವರು ಆಂಗ್ಲಭಾಷೆಯಿಂದ ಬಹು ವಿಶಾಲವಾದ ಪ್ರಸ್ತಾವನೆಯನ್ನು ಬರೆದಿರುತ್ತಾರೆ. ಅವರು ತಮ್ಮ ಪ್ರಸ್ತಾವನೆಯ ಒಂದು ಕಡೆಯಲ್ಲಿ ಈ ರೀತಿಯಾಗಿ ಬರೆದಿದ್ದಾರೆ.

One very interesting point which must be particularly drawn attention to in the story of Vidyaranya as given in the 12th Taranga of the 4th Kallola, is the "ರೇವಣಸಿದ್ಧಸಂಪ್ರದಾಯ" which the Acharyas of the Sankaracharya line that initiated our ವಿದ್ಯಾರಣ್ಯ were then practising at Sringeri. The ಲಿಂಗ of ಚಂದ್ರಮೌಳೀಶ್ವರ which is still worshipped as the chief deity by the Acharyas of **ಶೃಂಗೇರಿಮಠ**, is also said to have been presented to **ವಿದ್ಯಾರಣ್ಯ** by his direct guru. **ರೇವಣಸಿದ್ಧ**, we know, is a well known Saiva teacher, whom the Veerasaivas still claim as one of their earliest Acharyas. The Keladi chiefs who were mostly followers of the Veerasaiva religion, were devout adherents of the **ಶೃಂಗೇರಿ ಶಂಕರಾಚಾರ್ಯ ಮಠ**, perhaps also for the same reason, viz., that the Shankarachryas were followers of the **ರೇವಣಸಿದ್ಧಸಂಪ್ರದಾಯ**. This explains perhaps why in the **ಅದ್ವೈತಮಠ** of **ಶೃಂಗೇರಿ** there is still a greater bias towards Saivism and Saiva worship than towards Vaishnavism and Krishna worship, though the founder, the great Shankaracharya, was no respector of creeds nor of any distinction between **ಶಿವ** and **ವಿಷ್ಣು**"

ಅಂದರೆ ಈ ಗ್ರಂಥದ 4 ನೆಯ ಕಲ್ಲೋಲದ 12 ನೆಯ ತರಂಗದಲ್ಲಿರುವ ವಿದ್ಯಾರಣ್ಯರ ಚರಿತ್ರದಲ್ಲಿ, ವಿದ್ಯಾರಣ್ಯರಿಗೆ ಸನ್ಯಾಸವನ್ನಿತ್ತ ಶಂಕರಾಚಾರ್ಯರ ಪೀಠಾಧಿಪತಿಗಳಾಗಿದ್ದ ಆಚಾರ್ಯರು ರೇವಣಸಿದ್ಧಸಂಪ್ರದಾಯವನ್ನು ಅನುಸರಿಸುತ್ತಿದ್ದರೆಂಬ ವಿಷಯವು ಸರ್ವರಿಂದಲೂ ಅತ್ಯವಶ್ಯಕವಾಗಿ ನೋಡಲ್ಪಡತಕ್ಕದ್ದಾಗಿದೆ. ಶೃಂಗೇರಿ ಮಠದಲ್ಲಿ ಇಂದಿನವರೆಗೂ ಆ ಪೀಠದ ಆಚಾರ್ಯರಿಂದ ಮುಖ್ಯೋಪಾಸ್ಯದೇವರಾಗಿ ಪೂಜಿಸಲ್ಪಡುತ್ತಿರುವ ಶ್ರೀ ಚಂದ್ರಮೌಳೀಶ್ವರಲಿಂಗವು ವಿದ್ಯಾರಣ್ಯರಿಗೆ ಅವರ ಗುರುಗಳಿಂದ ಕೊಡಲ್ಪಟ್ಟಿತೆಂದು ಹೇಳಿದೆ. ರೇವಣಸಿದ್ಧರು ಪ್ರಸಿದ್ಧರಾದ ಶೈವಸಿದ್ಧಾಂತಸ್ಥಾಪಕರಾಗಿದ್ದಾರೆ. ಅವರನ್ನು ವೀರಶೈವರು ತಮ್ಮ ಮತದ ಅತ್ಯಂತ ಪ್ರಾಚೀನಾಚಾರ್ಯರಲ್ಲೊಬ್ಬರನ್ನಾಗಿ ಹೇಳುತ್ತಾರೆ. ಶಂಕರಾಚಾರ್ಯರು ರೇವಣಸಿದ್ಧಸಂಪ್ರದಾಯಕ್ಕೆ ಸೇರಿದವರಾದುದರಿಂದಲೇ ವೀರಶೈವಮತಾನುಯಾಯಿಗಳಾದ ಕೆಳದಿ ರಾಜರು ಶೃಂಗೇರಿ ಶಂಕರಾಚಾರ್ಯರ ಮಠಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. ಶಂಕರಾಚಾರ್ಯರು ಶಿವವಿಷ್ಣುಗಳಲ್ಲಿ ಭೇದವನ್ನೆಣಿಸದಿದ್ದರೂ ಇಂದಿಗೂ ಸಹ ಅದ್ವೈತಮಠಕ್ಕೆ ಸೇರಿದ ಆ ಮಠದಲ್ಲಿ ವೈಷ್ಣವಮತ ಕೃಷ್ಣಪೂಜೆ ಇವುಗಳಿಗಿಂತ ಶೈವಮತ ಮತ್ತು ಶಿವಲಿಂಗಪೂಜೆ ಇವುಗಳಿಗೇ ಹೆಚ್ಚು ಆಧಿಕ್ಯವಿರುವದು ಈ ಕಾರಣದಿಂದಲೇ ಎಂದು ಕಂಡುಬರುತ್ತದೆ.

ಈ ಶಿವತತ್ತ್ವರತ್ನಾಕರದ ಪ್ರಾಶಸ್ತ್ಯವನ್ನು ಕುರಿತು **ಜರ್ಮ ದೇಶದ ಕೀಲ್ ಯೂನಿವರ್ಸಿಟಿ**ಯ ಸಂಸ್ಕೃತ ಪ್ರೊಫೆಸರರಾದ **ಡಾ|| ಎಫ್. ಓ. ಸ್ಕ್ರೇಡರ್** ಎಂಬ ಘನವಿದ್ವಾಂಸರು "This is undoubtedly an important work and would be the more interesting for me as I intend writing a book on "Veerasaiva Matam" ಅಂದರೆ "ಈ ಗ್ರಂಥವು ಅತ್ಯಂತ ಅಮೂಲ್ಯವಾದುದು; ನಾನು ವೀರಶೈವ ಮತವನ್ನು ಕುರಿತು ಬರೆಯಬೇಕೆಂದಿರುವ ಗ್ರಂಥಕ್ಕೆ ಇದರಿಂದ ಬಹಳ ಸಹಾಯವುಂಟಾಯಿತು" ಎಂದು ಬರೆದಿದ್ದಾರೆ.

ಈ ಶಿವತತ್ತ್ವರತ್ನಾಕರ ಗ್ರಂಥಕಾರನು ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನನುಗ್ರಹಿಸಿದ ವಿಷಯವನ್ನು **ವಿದ್ಯಾರಣ್ಯ**ರಿಂದ ವಿರಚಿತವಾದ **"ಪಿತಾಮಹಸಂಹಿತೆ"** ಮತ್ತು **ಭಾರತೀಕೃಷ್ಣಯತಿ**ಯಿಂದ ವಿರಚಿತವಾದ **"ವಿದ್ಯಾರಣ್ಯಕೃತಿ"** ಎಂಬೀ ಗ್ರಂಥಗಳ ಆಧಾರದ ಮೇಲಿಂದ ಬರೆದಿರುವೆನೆಂದು ಚತುರ್ಥಕಲ್ಲೋಲದ ಅಂತ್ಯದಲ್ಲಿ—

ವಿದ್ಯಾರಣ್ಯಕೃತಿಂ ಚೈವ ಪಿತಾಮಹಸುಸಂಹಿತಾಂ। ವಿಲೋಕ್ಯಾಯಂ ವಿರಚಿತಃ ಕಲ್ಲೋಲೋಽಭೂಚ್ಚತುರ್ಥಕಃ ||

ಎಂದು ಬರೆದಿದ್ದಾನೆ. ಇವರ ಮೇಲಿಂದ ವಿದ್ಯಾರಣ್ಯರು ಬರೆದ ಪಿತಾಮಹಸಂಹಿತೆಯಲ್ಲಿಯೂ ಹಾಗೂ ಭಾರತೀಕೃಷ್ಣಯತಿಯು ಬರೆದ ವಿದ್ಯಾರಣ್ಯಕೃತಿಯಲ್ಲಿಯೂ ಚಂದ್ರಮೌಳೀಶ್ವರಲಿಂಗಪ್ರದಾನ ವಿಷಯವು ವಿಶದವಾಗಿ ಬರೆಯಲ್ಪಟ್ಟಿರುವದೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಮೈಸೂರು ಗವರ್ನಮೆಂಟಿನವರಿಂದ ಮುದ್ರಿಸಲ್ಪಟ್ಟಿರುವ **"ಕೆಳದಿನೃಪವಿಜಯ"** ವೆಂಬ ಗ್ರಂಥದಲ್ಲಿಯೂ ಸಹ ಶ್ರೀಚಂದ್ರಮೌಳೀಶ್ವರ ಲಿಂಗಪ್ರದಾನ ವಿಷಯವು ಬರೆಯಲ್ಪಟ್ಟಿರುವದು. ಈ ವಿಷಯವನ್ನು ಮುಂದಿನ ವಾರದ ಪತ್ರಿಕೆಯಲ್ಲಿ ಪ್ರತಿಪಾದಿಸುವೆವು.

ಮಹಾತ್ಮಾಗಾಂಧಿಯವರ ಸಂದೇಶ.

ಪೋಲೀಸರು ಸ್ವಯಂಸೇವಕರ ಕೈಯಿಂದ ಉಪ್ಪನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳುವ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ, "ಸರಕಾರದವರು ಉಪ್ಪಿನ ಸತ್ಯಾಗ್ರಹಿಗಳನ್ನು ಭರದಿಂದ ದಸ್ತಗಿರಿ ಮಾಡುತ್ತಿರುವದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ಹೀಗೆ

ಮಾಡಲು ಸರಕಾರದವರಿಗೆ ಸಂಪೂರ್ಣ ಅಧಿಕಾರವುಂಟು. ಆದರೆ "ಆಟ" ಗ್ರಾಮದಲ್ಲಿ ಮಾಡಿದಂತೆ ಮಾಡಲು ಅವರಿಗೆ ಯಾವ ಅಧಿಕಾರವೂ ಇಲ್ಲ. ಪೋಲೀಸರು ಸತ್ಯಾಗ್ರಹಿಗಳ ಕೈಯಿಂದ ಉಪ್ಪನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ನಿಜವಾದ ನಾಗರಿಕ ಸರಕಾರವಾದರೆ ಅವರ ಈ ಬಲಾತ್ಕಾರವು ನ್ಯಾಯವಲ್ಲ. ಸತ್ಯಾಗ್ರಹಿಗಳು ಯಾವ ವಿರೋಧವನ್ನೂ ಮಾಡಿರುವದಿಲ್ಲ. ಅವರೇನೂ ಓಡಿಹೋಗುತ್ತಿರಲಿಲ್ಲ. ಸರಕಾರದವರು ಅವರ ಹೆಸರುಗಳನ್ನು ಬರೆದುಕೊಳ್ಳಬಹುದಾಗಿತ್ತು. ಸಾಕಾದಷ್ಟು ಕಾರಣವಿಲ್ಲದೆ ಮೈಮೇಲೆ ಕೈಎತ್ತಿದುದು ಇಡೀ ಜನಾಂಗಕ್ಕೇ ಅವಮಾನ ಮಾಡಿದಂತಾಯಿತು. ಲುಖಾಯ್‌ರಾಮನೆಂಬ ಸ್ವಯಂಸೇವಕನ ಕೈಗೆ ಸ್ವಲ್ಪ ಘಾಯವಾಗಿರುವದು. ಉಪ್ಪನ್ನು ವಶಪಡಿಸಿಕೊಳ್ಳಲು ಹೀಗೆ ಬಲವನ್ನು ಉಪಯೋಗಿಸುವದು ಇಂಗ್ಲೀಷರ ನ್ಯಾಯಕ್ಕೇ ವಿರೋಧವಾದುದು. ಕಟ್ಟಳೆಗನುಸಾರವಾಗಿಯೇ ವರ್ತಿಸುವದು ಸರಕಾರದವರಿಗೆ ಕಷ್ಟವಾಗಬಹುದು. ಆದರೆ ಸರಕಾರದವರು ಭಯವನ್ನು ಹುಟ್ಟಿಸುವ ಪ್ರಯತ್ನಗಳನ್ನೇ ಮಾಡುವದಾದರೆ, ಜನರು ಅದಕ್ಕೆ ಸಿದ್ಧರಾಗಿರುವರೆಂಬುದನ್ನು ಅವರು ತಿಳಿಯಬೇಕಾಗುವದು. ಸತ್ಯಾಗ್ರಹಿಗಳು ತಮ್ಮ ವಶದಲ್ಲಿರುವ ಉಪ್ಪನ್ನು ತಮ್ಮ ಕೈಲಾಗುವವರೆಗೂ ರಕ್ಷಿಸಿಕೊಳ್ಳಲಿ; ಆದರೆ ಅದಕ್ಕಾಗಿ ಕೋಪವನ್ನು ತೋರ್ಪಡಿಸಕೂಡದು; ದ್ವೇಷವನ್ನು ಸಾಧಿಸಕೂಡದು ಹಾಗೂ ದುಷ್ಟಶಬ್ದಗಳನ್ನು ಉಚ್ಚರಿಸಕೂಡದು. ಸತ್ಯಾಗ್ರಹಿಗಳ ವಶದಲ್ಲಿರುವ ಉಪ್ಪನ್ನು ವಶಪಡಿಸಿಕೊಳ್ಳಲು ಪೋಲೀಸರಿಗೆ ಅತ್ಯಂತ ಸುಲಭವಾದ ಮಾರ್ಗವೊಂದಿರುವದು. ಮೊದಲು ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿ ಅನಂತರ ಉಪ್ಪನ್ನು ತಮ್ಮ ವಶಪಡಿಸಿಕೊಳ್ಳಲಿ; ಆಗ ಅವರು ಶರೀರದ ಮೇಲೆ ಅಧಿಕಾರವನ್ನು ಹೊಂದಿರುವರು. ಶಿಕ್ಷೆಯನ್ನು ವಿಧಿಸಿದ ಮೇಲೆ ಅವರು ಉಪ್ಪನ್ನು ವಶಪಡಿಸಿಕೊಳ್ಳಬಹುದೇ ಹೊರತು, ಅದಕ್ಕಿಂತ ಮುಂಚಿತವಾಗಿ ಕೈಯಿಂದ ಕಿತ್ತುಕೊಳ್ಳಬಾರದು" ಎಂದು ಬರೆದಿರುವರು. ಇದೇ ವಿಷಯವಾಗಿ ಮಹಾತ್ಮಾಜಿಯವರು "ಆಟ" ಗ್ರಾಮದಲ್ಲಿ "ಸತ್ಯಾಗ್ರಹಿಗಳು ಶೇಖರಿಸುವ ಅಥವಾ ತಯಾರಿಸುವ ಉಪ್ಪು ಭರತಖಂಡದ ಗೌರವದ ಚಿಹ್ನವಾಗಿರುವದು. ದೇಶದ ಗೌರವರೂಪವಾದ ಆ ಉಪ್ಪನ್ನು ಪ್ರತಿಯೊಬ್ಬ ಸತ್ಯಾಗ್ರಹಿಯೂ ತನ್ನ ಪ್ರಾಣಗಳನ್ನಾದರೂ ಕೊಟ್ಟು ರಕ್ಷಿಸಬೇಕು. ಪೋಲೀಸರು ಬಲಾತ್ಕಾರವನ್ನುಪಯೋಗಿಸುವದಾದರೆ, ಸತ್ಯಾಗ್ರಹಿಯು ಅದಕ್ಕಾಗಿ ಹಿಂಜರಿಯದೆ ತನ್ನ ಶರೀರಕ್ಕೆ ಪೆಟ್ಟುಗಳು ಬಿದ್ದು ರಕ್ತವು ಸುರಿಯಲಾರಂಭಿಸಿದರೂ, ತನ್ನ ಕೈಲಾಗುವ ವರೆಗೂ ಸಂತೋಷದಿಂದ ಆ ಯಾತನೆಯನ್ನು ಸಹಿಸಿಕೊಂಡು ಉಪ್ಪನ್ನು ರಕ್ಷಿಸಬೇಕು. ಜನರು ತಮ್ಮ ಕೈಗಳನ್ನು ಮುಚ್ಚಿಕೊಂಡು ಹಿಡಿದುಕೊಳ್ಳಲು ಸಾಧ್ಯವಾದಷ್ಟು ಉಪ್ಪನ್ನು ಮಾತ್ರ ತೆಗೆದುಕೊಳ್ಳಬೇಕು. ಈ ಕಾಯಿದೆ ಭಂಗವನ್ನು ಧೈರ್ಯವುಳ್ಳ ಹೆಂಗಸರು ಮತ್ತು ಮಕ್ಕಳು ಸಹ ಮಾಡಬಹುದು. ಪೋಲೀಸರಿಗೆ ಧೈರ್ಯವೂ ಬಲವೂ ಇದ್ದರೆ ಆ ಹೆಂಗಸರ ಹಾಗೂ ಮಕ್ಕಳ ಕೈಯಿಂದ ಉಪ್ಪನ್ನು ವಶಪಡಿಸಿಕೊಳ್ಳಲಿ! ಹೆಂಗಸರ ಮತ್ತು ಮಕ್ಕಳ ಮೇಲೂ ಸರಕಾರವು ಬಲವನ್ನುಪಯೋಗಿಸುವದಾದರೆ ಆಗ ಇಡೀ ಭರತಖಂಡವೇ ಸಿಟ್ಟಿಗೆದ್ದು, ಎಲ್ಲರೂ ಈ ಚಳವಳಿಯಲ್ಲಿ ಭಾಗಿಗಳಾಗುವದರಲ್ಲಿ ಸಂದೇಹವಿಲ್ಲ. ಭಾರತೀಯರೆಲ್ಲರೂ ಈ ಚಳವಳಿಗೆ ಸೇರಬೇಕೆಂಬುದೇ ನನ್ನ ಆಶಯವಾಗಿರುವದು. ಸತ್ಯಾಗ್ರಹದ ಮಾರ್ಗಗಳು ಅನೇಕವಾಗಿರುವವು. ವಿದ್ಯಾರ್ಥಿಗಳು ಕಾಲೇಜುಗಳನ್ನೂ ಸರಕಾರೀ ನೌಕರರು ತಮ್ಮ ಉದ್ಯೋಗಗಳನ್ನೂ ಬಿಡಬೇಕು. ಈ ಅಹಿಂಸಾತ್ಮಕ ಸತ್ಯಾಗ್ರಹದಿಂದ ನಾನೆಂದೂ ಹಿಮ್ಮೆಟ್ಟುವವನಲ್ಲ! ಬಲಾತ್ಕಾರವಾಗಿ ಉಪ್ಪನ್ನು ವಶಪಡಿಸಿಕೊಂಡರೆ ಅದನ್ನು ನಾನು ಅತ್ಯಂತ ಕ್ರೂರವರ್ತನವೆಂದು ಭಾವಿಸುವೆನು. ಸರಕಾರವು ಈ ಕ್ರೂರವರ್ತನವನ್ನೇ ಮುಂದುವರಿಸುವದಾದರೆ ಆತ್ಮಯಜ್ಞಕ್ಕೆ ಜನರು ಹೆಚ್ಚಾಗಿ ಸೇರಬೇಕೆಂದು ನಾನು ಇಚ್ಛಿಸುವೆನು" ಎಂದು ಬರೆದಿರುವರು.

"ಕೇಸರಿ" ಪತ್ರಿಕೆಯ ಎಡಿಟರಾದ ಶ್ರೀ|| ನರಸಿಂಹಚಿಂತಾಮಣಿ ಕೇಳಕರ್‌ರವರು ತಮ್ಮ ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯತನಕ್ಕೆ ರಾಜೀನಾಮೆಯನ್ನು ಕೊಟ್ಟು ಮಹಾರಾಷ್ಟ್ರದಲ್ಲಿ ಉಪ್ಪಿನಕಾಯಿದೆ ಭಂಗವನ್ನು ಪ್ರಾರಂಭಿಸಲು ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಮಹಾತ್ಮಾ ಗಾಂಧಿಯವರು ಸತ್ಯಾಗ್ರಹದ ಸಂಬಂಧವಾಗಿ ಭರತಖಂಡದ ಸ್ತ್ರೀಯರನ್ನು ಕುರಿತು—

"ಅನೇಕ ಭಗಿನಿಯರು ಈ ಸತ್ಯದ ಯುದ್ಧದಲ್ಲಿ ಭಾಗವಹಿಸಲು ಆತುರಪಡುತ್ತಿರುವದು ಒಳ್ಳೇ ಶುಭಸೂಚನೆಯಾಗಿರುತ್ತದೆ. ಈ ಸ್ವಾತಂತ್ರ್ಯಸಂಗ್ರಾಮದಲ್ಲಿ ಸ್ತ್ರೀಯರು ಪುರುಷರಿಗಿಂತಲೂ ಹೆಚ್ಚು ಮಹತ್ವದ ಭಾಗವನ್ನು ವಹಿಸಬೇಕಾಗಿರುವದು. ಸ್ತ್ರೀಯರನ್ನು ಅಬಲೆಯರೆಂದು ಕರೆಯುವದು ತಪ್ಪು. ಆತ್ಮತ್ಯಾಗವು ಪುರುಷರಿಗಿಂತಲೂ ಸ್ತ್ರೀಯರಲ್ಲಿಯೇ ಹೆಚ್ಚಾಗಿರುವದು. ಸಹನಶಕ್ತಿಯೂ ಧೈರ್ಯವೂ ಸಹ ಸ್ತ್ರೀಯರಲ್ಲಿಯೇ ಹೆಚ್ಚಾಗಿರುವದು. ಸ್ತ್ರೀಯರಿಲ್ಲದೆ ಪುರುಷರು ಉಳಿಯುವಂತಿಲ್ಲ. ಅಹಿಂಸೆಯೇ ನಮ್ಮ ಮುಖ್ಯಧ್ಯೇಯವಾದರೂ ಪರಿಣಾಮವು ಸ್ತ್ರೀಯರನ್ನೇ ಅವಲಂಬಿಸಿರುವದು. ಅನೇಕ ವರ್ಷಗಳಿಂದಲೂ ಇದನ್ನು ನಾನು ಚೆನ್ನಾಗಿ ಅರಿತುಕೊಂಡಿರುವೆನು. ಆಶ್ರಮದ ಸ್ತ್ರೀಯರು ಸತ್ಯಾಗ್ರಹಕ್ಕೆ ಸೇರುವ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗ ಈ ಕಾಯಿದೆಭಂಗದ ಸಮಾರಂಭದಲ್ಲಿ ಸ್ತ್ರೀಯರು ಬಹು ಪ್ರಾಮುಖ್ಯವಾದ ಭಾಗವನ್ನು ವಹಿಸುವರೆಂದು ನನ್ನ ಮನಸ್ಸಿಗೆ ಭಾಸವಾಯಿತು. 1921 ನೇ ವರ್ಷದಲ್ಲಿ ಬಹಳಮಟ್ಟಿಗೆ ಫಲಕಾರಿಯಾಗಿದ್ದ ಮದ್ಯಪಾನ ಮತ್ತು ಪರದೇಶೀ ಬಟ್ಟೆಯ ಬಹಿಷ್ಕಾರ ಚಳುವಳಿಯು ಹಿಂಸೆಯ ದೆಸೆಯಿಂದ ಸಂಪೂರ್ಣ ಫಲಕಾರಿಯಾಗಲಿಲ್ಲ. ನಮ್ಮ ಉದ್ದೇಶವು ನೆರವೇರಬೇಕಾದರೆ ಈ ಬಹಿಷ್ಕಾರ ಕಾರ್ಯವನ್ನು ಪುನಃ ಪ್ರಾರಂಭಿಸಲೇಬೇಕು. ಈ ಚಳವಳಿಯು ಕಡೆಯವರೆಗೂ ಗಲಭೆಯಿಲ್ಲದೆ ಸಾಗುವದಾದರೆ ಇದು ಜನಸಾಮಾನ್ಯರನ್ನು ಬುದ್ಧಿವಂತರನ್ನಾಗಿ ಮಾಡಲು ಅತ್ಯಂತ ಸುಲಭವಾದ ಮಾರ್ಗವಾಗಿರುವದು. ಯಾವ ಕಾರಣದಿಂದಲೂ ಜನರನ್ನು ಬಲಾತ್ಕರಿಸದೆ ನೀತಿ ಹಾಗೂ ಪ್ರೀತಿಯಿಂದ ಕೂಡಿದ ಉಪದೇಶದಿಂದ ಅವರ ಮನಸ್ಸನ್ನು ತಿದ್ದಬೇಕು. ಇಂಥ ಉಪದೇಶವು ಫಲಕಾರಿಯಾಗುವಂತೆ ಮಾಡಲು ಹೆಂಗಸರಿಗಲ್ಲದೆ ಮತ್ತಾರಿಗೂ ಸಾಧ್ಯವಿಲ್ಲ. ಮಾದಕಪದಾರ್ಥಗಳ ಸೇವನನಿರ್ಬಂಧವೂ, ಪರದೇಶೀವಸ್ತ್ರಗಳ ಬಹಿಷ್ಕಾರವೂ ಕಾಯಿದೆಬದ್ಧವಾಗುವಂತೆ ಮಾಡಬೇಕಾಗಿದೆ. ನಾವು ಅಸಾಧಾರಣ ಪ್ರಯತ್ನವನ್ನು ಮಾಡದೆಹೋದರೆ ಹಾಗಾಗಲು ಸಾಧ್ಯವಿಲ್ಲ. ಇವೆರಡು ಬದಲಾವಣೆಗಳೂ ಜನಾಂಗಕ್ಕೆ ಅತ್ಯವಶ್ಯಕವಾಗಿರುವದೆಂಬುದನ್ನು ಎಲ್ಲರೂ ನಂಬುವರು. ಮದ್ಯಪಾನವು ಜನಾಂಗದ ಸದ್ಗುಣಗಳ ಬುಡವನ್ನೇ ಹಾಳುಮಾಡುವದು. ಪರದೇಶೀವಸ್ತ್ರವು ಜನಾಂಗದ ಆರ್ಥಿಕಸಂಪತ್ತನ್ನೇ ನಾಶನಮಾಡಿ, ಕೋಟ್ಯವಧಿ ಜನರಿಗೆ ಉದ್ಯೋಗವಿಲ್ಲದಂತೆ ಮಾಡುವದು. ಇದರ ಪರಿಣಾಮವು ಮನೆಗಳಲ್ಲಿ ಸ್ತ್ರೀಯರಿಗೆ ಚೆನ್ನಾಗಿ ಅನುಭವಕ್ಕೆ ಬಂದಿರುವದು. ಮದ್ಯಪಾನದಿಂದ ಆಗುವ ಅನರ್ಥಪರಂಪರೆ

[೩ನೇ ಪುಟವನ್ನು ನೋಡಿ]

ಸ್ವೀಕಾರ.

ಧಾರವಾಡ ಡಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಅಮರಪ್ಪಾ ಗೋಲಣ್ಣನವರ ಇವರ ಅಣ್ಣಂದಿರಾದ ಅಂದಾನಪ್ಪನವರ ಪುತ್ರ ಚಿ|| ಸಂಗಪ್ಪನಿಗೆ ರಾ|| ಸಕ್ರಪ್ಪ ನರೇಗಲ್ಲ ಇವರ ಪುತ್ರಿ ಕುಂ|| ಸೌ|| ಗದಿಗವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ. ಗಳು ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ. ಹಾಗೂ ಮ|| ರಾ|| ಪ್ರಭಣ್ಣ ಮಾನೇದ ಇವರ ಪುತ್ರ ಚಿ|| ಬಸಪ್ಪನಿಗೆ ಮ|| ರಾ|| ಗೂಳಪ್ಪಾ ಗೋಡಿ ಇವರ ಪುತ್ರಿ ಕುಂ|| ಸೌ|| ಸಿದ್ದವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವರನಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ. ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 1 ರೂ. ಒಟ್ಟು 6 ರೂ. ಗಳು ಮ|| ರಾ|| ನೀಲಪ್ಪಗೌಡ ಹಿರೇಮನಿ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬೆಟಗೇರಿ ನಿವಾಸಿಗಳಾದ ಮ|| ರಾ|| ಶಿವಪ್ಪಾ ಮೂಲಿಮನಿ ಇವರ ಪುತ್ರಿ ಕುಂ|| ಸೌ|| ಗಂಗವ್ವನನ್ನು ಹುಬ್ಬಳ್ಳಿ ಮ|| ರಾ|| ಅಲ್ಲಿ ರೇವಪ್ಪನವರ ಪುತ್ರ ಚಿ|| ಸಿದ್ಧರಾಮಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಶ್ರೀಮನ್ನಿರಂಜನ ದೇಶಿಕೇಂದ್ರ ಶಿವಲಿಂಗಸ್ವಾಮಿಗಳು ಮುದಗಲ್ಲ ಇವರ ಸಲಹೆಯಂತೆ ಸಮರ್ಪಿಸಲ್ಪಟ್ಟ 2 ರೂ. ಹಾಗೂ ಮ|| ರಾ|| ಗುರುಶಾಂತಪ್ಪಾ ಕರಸಂದಿ ಇವರ ಪುತ್ರ ಚಿ|| ರಾಚಪ್ಪನಿಗೆ ಪ್ರಾಪ್ತವಾಗಿದ್ದ ಜ್ವರವು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಲ್ಪಟ್ಟ 1 ರೂ. ಒಟ್ಟು 3 ರೂ. ಗಳು ವೇ|| ಶಿವಸಂಗಯ್ಯನವರು ಅರಳೆಲೆ ಬೃಹನ್ಮಠಾಧ್ಯಕ್ಷ ಗುಳೇದಗುಡ್ಡ ಇವರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವ್ ಡಿ|| ಯರಗಟ್ಟಿ ನಿವಾಸಿಗಳಾದ ಮ|| ರಾ|| ಸಿದ್ದಪ್ಪಾ ನಾವಲಗಿ ಇವರ ಮನೆಯಲ್ಲಿ ನೆರವೇರಿದ ವಿವಾಹಮಹೋತ್ಸವ ಸಮಯದಲ್ಲಿ ಶ್ರೀ ಪಟ್ಟದ ಸ್ವಾಮಿಗಳು ಸತ್ತೀಗೇರಿ ಇವರ ಸಲಹೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಶಿವನಗೌಡ ಅಯ್ಯನಗೌಡ ಪಾಟೀಲ ಮಾಸ್ತರ ಇವರ ದ್ವಾರಾ ತಲ್ಪಿರುತ್ತವೆ.

ಬಿಜಾಪುರ ಡಿ|| ಬದಾಮಿ ತಾಲೂಕು ಮುದಕವಿ ಗ್ರಾಮದ ಮ|| ರಾ|| ರೇವಣಪ್ಪನವರು ಸೋರಿಬಾನ ಇವರ ಪುತ್ರ ಚಿ|| ಬಸವಲಿಂಗಪ್ಪನಿಗೆ ಆಲೂರುಗ್ರಾಮದ ಮ|| ರಾ|| ರುದ್ರಪ್ಪನವರು ಬದಾಮಿ ಇವರ ಪುತ್ರಿ ಕುಂ|| ಸೌ|| ಗುರುಬಸವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವರನಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ. ಗಳು ವೇ|| ಪಂಚಾಕ್ಷರಶಾಸ್ತ್ರಿಗಳು ಹಿರೇಮಠ ಶಿರೋಳ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಶಹರನಿವಾಸಿಗಳಾದ ಮ|| ರಾ|| ಅತ್ತಿ ಮಲ್ಲಿಕಾರ್ಜುನಪ್ಪನವರ ಪುತ್ರನ ಲಿಂಗಧಾರಣಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ತ್ರಿಲೋಚನಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ.

ಹಳೆಹುಬ್ಬಳ್ಳಿ ನಿವಾಸಿಗಳಾದ ಹೂಲಿ ವಿರೂಪಾಕ್ಷಪ್ಪನವರ ಧರ್ಮಪತ್ನಿಯವರಾದ ಶ್ರೀಮತಿ ವೀರವ್ವನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ವೇ|| ರುದ್ರಯ್ಯನವರು ಹೊಸಮಠ ಇವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹರಪನಹಳ್ಳಿಯಲ್ಲಿ ನೆರವೇರಿದ ಶ್ರೀ ಜಗದ್ಗುರು ಪಂಚಾಚಾರ್ಯಭಜನಾಸಂಘದ ವಾರ್ಷಿಕೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ವೇ|| ಚರಂತಯ್ಯನವರು ಗುರುಪಾದದೇವರಮಠ ಇವರ ದ್ವಾರಾ ತಲ್ಪಿರುತ್ತದೆ.

ಕೊಪ್ಪಳ ಜಿಲ್ಲಾ ಕಾತರಕಿ ಗ್ರಾಮವಾಸಿಗಳಾದ ವೇ|| ಶಿವಯ್ಯನವರು ಹಿರೇಮಠ ಬನ್ನಿಕೊಪ್ಪ ಇವರು ಗೊಂಡಬಾಳಸಾಲೀಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಮ|| ರಾ|| ಬಸಪ್ಪ ಲಕ್ಕುಂಡಿ ಇವರ ದ್ವಾರಾ ತಲ್ಪಿರುತ್ತದೆ.

ಕೊಪ್ಪಳ ತಾಲೂಕು ಗೊಂಡಬಾಳ ಗ್ರಾಮದ ವೇ|| ಸಿದ್ಧರಾಮಯ್ಯ ಕಾರಜೋಳಮಠ ಇವರ ತಮ್ಮ ವೇ|| ಮರಿಸ್ವಾಮಿಗೆ ಶಿರಹಟ್ಟಿ ಸಂಸ್ಥಾನ ಬೂದಿಹಾಳಗ್ರಾಮದ ಮಹಾದೇವಯ್ಯ ಅಕ್ಕೂರುಮಠ ಇವರ ಪುತ್ರಿ ಕುಂ|| ಸೌ|| ಕಲ್ಯಾಣಮ್ಮನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ವೀರಭದ್ರಪ್ಪ ಶಿವತಿಂಪಿಗರ ಇವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ. ಸಂ.—

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವು.

ಆನೇಕಲ್.

ದೇಶದ ಪೇಟೆಯಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಫಾಲ್ಗುಣ ಶುದ್ಧ ತ್ರಯೋದಶಿ ಗುರುವಾರ ದಿವಸ ಬೆಳಗಿನ 6 ಘಂಟೆಯಿಂದ 8 ಘಂಟೆಯವರೆಗೆ ಆಚಾರ್ಯರ ಹಾಗೂ ದೇವರ ಪೂಜೆ ಮಹಾ ಅಭಿಷೇಕವೂ, 9 ರಿಂದ 12 ರ ವರೆಗೆ ನಂದಿಧ್ವಜ ಸಮೇತ ಕರಡಿಸಮ್ಮೇಳ ವಾದ್ಯದೊಡನೆ ಶ್ರೀ ವೀರಭದ್ರಸ್ವಾಮಿಯವರ ಮತ್ತು ಶ್ರೀ ಆಚಾರ್ಯರವರ ಉತ್ಸವವು ಪುರದ ಮುಖ್ಯ ಮುಖ್ಯ ಬೀದಿಗಳಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶ್ರೀಯವರಿಗೆ ಮಂಗಳಾರತಿಯಾದನಂತರ ಫಲಾಹಾರವು ನೆರವೇರಿತು. ಅನಂತರ ಮಹಾಜನಗಳು ಸರ್ವರು ಆನಂದಭರಿತರಾಗಿ ಆಚಾರ್ಯರ ಜಯಘೋಷದೊಡನೆ ತೆರಳಿದರು. ಇಲ್ಲಿರತಕ್ಕ ಸಮಸ್ತ ವೀರಶೈವರು ಪ್ರತಿವರ್ಷವೂ ಇದಕ್ಕಿಂತಲೂ ಅತಿ ವಿಜೃಂಭಣೆಯಿಂದ ಗುರುಸೇವೆಯನ್ನು ಶಿರಸಾವಹಿಸಿ ಮಾಡಿ ಶ್ರೀ ಜಗದಾಚಾರ್ಯರವರ ಕೃಪೆಗೆ ಪಾತ್ರರಾಗಿ ಮುಕ್ತಿಭಾಜನರಾಗಬೇಕೆಂದು ಬೇಡುವ.

ಹೆಬ್ಬೂರು ಹುಚ್ಚೀರಪ್ಪ,
ಸಕ್ಕದ ಅಂಗಡಿ, ಆನೇಕಲ್ ಟೌನ್.

ಭಕ್ತಿ.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲೂಕು ಕಸಬಾ ಹೋಬಳಿ ಶ್ರೀ ಸರ್ಪಭೂಷಣಸ್ವಾಮಿ ಮಠದಲ್ಲಿ ಪ್ರತಿವರ್ಷ ಯುಗಾದಿಹಬ್ಬದಲ್ಲಿ ರಥೋತ್ಸವ ನಡೆಯುವದು. ರಥೋತ್ಸವಕ್ಕೆ ದೂರ ದೇಶದಿಂದ 4-6 ಸಾವಿರ ಜನರು ಸೇರುತ್ತಾರೆ. ಬೇಸಿಗೆಕಾಲದಲ್ಲಿ ಇಲ್ಲಿ ನೀರಿಗೆ ಸ್ವಲ್ಪ ಅಭಾವವಾಗಿತ್ತು. ನೀರಿನ ಅಭಾವವನ್ನು ಇಲ್ಲಿಗೆ ದೇವರ ದರ್ಶನಕ್ಕೆಂದು ಬಂದಿದ್ದ ಚಿಕ್ಕಮಗಳೂರು ತಾಲೂಕು ಗೊಡ್ವಾಲ್ ಕಾಫಿಪ್ಲಾಂಟರ್ ಶ್ರೀಮತಿ ಗೌರಮ್ಮ ಹೆಗ್ಗಡೆಯವರು ನೋಡಿ ಪಂಪಿನ ಮೂಲಕ ಮಠಕ್ಕೆ ನೀರನ್ನು ಒದಗಿಸಿಕೊಡುವದಾಗಿ ಹೇಳಿದರು. ಅದರಂತೆ ಶ್ರೀಮತಿಯವರ ಮೊಮ್ಮಕ್ಕಳಾದ ಶ್ರೀ|| ಚನ್ನಬಸವಗೌಡರವರು ಮಠಕ್ಕೆ ಬಂದು ಸುತ್ತಲೂ ಪರಾಮರ್ಶಿಸಿ ಮಠದ ಮೇಲ್ಭಾಗದ ಸುಮಾರು ಮುಕ್ಕಾಲುಮೈಲು ದೂರ ಇರುವ ಹಳ್ಳಕ್ಕೆ ಅಣೆಕಟ್ಟು ಹಾಕಿ ನೀರನ್ನು ತರಬಹುದೆಂದು ಯೋಚಿಸಿ ಸುಮಾರು 4-5 ಸಾವಿರ ರೂಪಾಯಿ ಖರ್ಚುಮಾಡಿ 2 ಇಂಚು ಪೈಪಿನ ಮೂಲಕ ನುಠದಲ್ಲಿರುವ ಗಂಗೆಭಾವಿಗೆ ನೀರುತಂದುಬಿಟ್ಟು ತಾ|| 24-3-30 ನೆಯ ಸೋಮವಾರ ಪ್ರಾರಂಭೋತ್ಸವವನ್ನು ಅತಿ ವಿಜೃಂಭಣೆಯಿಂದ ನೆರವೇರಿಸಿ ಸಾವಿರಾರು ಜನರಿಗೆ ಅನ್ನಸಂತರ್ಪಣೆಮಾಡಿಸಿ ಶ್ರೀ ಮಠಕ್ಕೆ ಇದ್ದ ನೀರಿನ ಕೊರತೆಯನ್ನು ತಪ್ಪಿಸಿ ಶ್ರೀ ದೇವರಕೃಪೆಗೆ ಪಾತ್ರರಾಗಿರುತ್ತಾರೆ. ಇವರನ್ನು ಎಷ್ಟು ಹೊಗಳಿದರೂ ತೀರದು. ಇವರಿಗೆ ದೇವರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಅನುಗ್ರಹಿಸಲೆಂದು ಕೋರುತ್ತೇನೆ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

ಶ್ರೀ ಶರಣಬಸವೇಶ್ವರ ಯಾತ್ರಾಮಹೋತ್ಸವ ಗುಲಬರ್ಗಾ.

ಪ್ರತಿವರ್ಷ ಪದ್ಧತಿಯಂತೆ ಇದೇ ಶುಕ್ಲಸಂವತ್ಸರ ಫಾಲ್ಗುಣ ಬ|| ೫ ಬುಧವಾರ ಶ್ರೀ ಶರಣಬಸವೇಶ್ವರ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಇದೇ ದಿವಸ ಇಲ್ಲಿ ಬಂದೀಸವಾಜವಲಿ ಇವರ ಉರ್ಸಿನ ಗ್ಯಾಂದವು ಮೆರೆಯುವ ದಿವಸ ಬಂದದ್ದರಿಂದ ಸರಿದ ಜನರು ಯಾತ್ರೆಯ ಸಮಾರಂಭಕ್ಕೆ ಪ್ರತಿಬಂಧಕವಾಗುತ್ತಿದೆಯೋ ಏನೋ ಎಂದಾಲೋಚಿಸುತ್ತಿದ್ದರು. ಯಾವಾಗಲೂ ಪಂಚಮಿಯದಿತಿಗೆ ತಪ್ಪದೆ ನಡೆಯುತ್ತಿರುವ ರಥೋತ್ಸವದ ವಿಚಾರವನ್ನು ನಮ್ಮ ಧರ್ಮಪ್ರಭುಗಳಾದ ನೈಜಾಂ ಸರಕಾರದವರು ಮನಗಂಡು ಅದೇ ದಿವಸ ಹಗಲು ೫ ಘಂಟೆಯಿಂದ ರಾತ್ರಿ ೭|| ಘಂಟೆಯವರೆಗೂ ರಥೋತ್ಸವವು ನಡೆಯುವದಕ್ಕೆ ಪೋಲೀಸರ ಉತ್ತಮವ್ಯವಸ್ಥೆಯನ್ನಿಟ್ಟಿದ್ದರು. ರಥವು ಭಕ್ತರ ಸಹಿತ ಅಖಿಲವಾದ್ಯವೈಭವದೊಂದಿಗೆ ಅನೇಕ ದೀವಟಿಗೆಗಳಿಂದಲೂ ಜಯಘೋಷದೊಡನೆ ಮೆರೆದು ಸ್ವಸ್ಥಳಕ್ಕೆ ಬಂದು ಮುಟ್ಟಿತು. ಆ ಮೇಲೆ ರಾತ್ರಿಯಲ್ಲಿ ಗ್ಯಾಂದೆಯು ಮೆರೆಯಿತು. ಎಲ್ಲಾ ದೇಶಗಳಲ್ಲಿ ನಡೆಯುತ್ತಿರುವ ಜಾತ್ರೆಗಳಿಗೂ ಈ ಶ್ರೀಶರಣರ ಜಾತ್ರೆಗೂ ಒರೆಹಚ್ಚಿ ನೋಡಿದರೆ, ಪೂರ್ವಿಕರು ನೇಮಿಸಿದ ಜಾತ್ರೆಯ ಸಹಜಾಂಶವು ಇಲ್ಲಿ ಪ್ರತಿಯೊಬ್ಬರಿಗೆ ಪ್ರತ್ಯಕ್ಷ ಕಂಡುಬರುತ್ತದೆ. ಈ ವರ್ಷ ಪಂಡಿತ ಜನರು ವಿಶೇಷ ನೆರೆದಿದ್ದರು. ಸುಶ್ರಾವ್ಯವಾದ ಸಂಗೀತ, ಕೀರ್ತನ, ಶಾಸ್ತ್ರಶ್ರವಣವು ಕಾಲಕಾಲಕ್ಕೆ ಸರಿಯಾಗಿ ನಡೆಯುತ್ತಲಿತ್ತು. ನವೀನವಾಗಿ ಶೃಂಗರಿಸಿದ ಶಿವಾನುಭವ ಮಂಟಪದಲ್ಲಿ ಸದ್ಬೋಧೆಯನ್ನು ಮಾಡುತ್ತಿರುವ ವಿದ್ವಜ್ಜನರ ಮಧುರೋಕ್ತಿಗಳೆಂಬ ಬೀಜಗಳು ಧರ್ಮಲಾಂಛನಧಾರಿಗಳ ಕರ್ಣಕುಹರದಲ್ಲಿ ಬಿದ್ದು ಹೃದಯಕ್ಷೇತ್ರದಲ್ಲಿ ಫಲರೂಪವನ್ನು ಹೊಂದಿರಬಹುದು. ಇಲ್ಲಿಯ ಪ್ರತ್ಯಕ್ಷಮಹಿಮಾಶಾಲಿ ಶ್ರೀಶರಣಬಸವೇಶ್ವರ ಮತ್ತು ಮಹಾನುಭಾವ ಶಿವಯೋಗಿಗಳ ದರ್ಶನ, ಸದ್ಬೋಧೆ, ಸಂಗೀತ, ಸಾಹಿತ್ಯ, ಶ್ರವಣ ಇತ್ಯಾದ್ಯುತ್ತಮಫಲದಾಯಕವಾದೀ ಜಾತ್ರೆಯ ಸಮಾರಂಭವನ್ನು ನೋಡುವದಕ್ಕೆ ಎಷ್ಟೋ ದೂರದಿಂದ ಜನರು ಬರುತ್ತಿರುವರು. ಈ ವರ್ಷ ಇತ್ತಕಡೆಯ ಪ್ರಾಂತದಲ್ಲಿ ಬೆಳೆಯು ಸಾಧಾರಣ ಬಂದಿರುವದರಿಂದ ಜನಸಂದಣಿಯು ಕಡಿಮೆ ಇತ್ತು. ಆದರೂ ಕಾರ್ಯಕ್ರಮಗಳು ಮಾತ್ರ ಅತ್ಯಂತ ವೈಭವದಿಂದ ಜರುಗಿದವು. ಇಲ್ಲಿಯ ಪ್ರತಿಯೊಂದು ಕಾರ್ಯಗಳಿಗೆ ಸೂತ್ರಧಾರಿಗಳಂತಿರುವ ಈಗಿನ ಯಜಮಾನ್ ದೊಡ್ಡಪ್ಪ ಅಪ್ಪಾ ಉರ್ಫ್ ಶ್ರೀ ಶರಣಬಸವೇಶ್ವರ ಮಹಾರಾಜ ಇವರ ಶಾಂತಿ, ದಯಾ, ದಾಕ್ಷಿಣ್ಯ, ಧರ್ಮಶ್ರದ್ಧಾ, ಸದ್ಭಕ್ತಿ, ಸದಾಚಾರ, ಗುರುಲಿಂಗಜಂಗಮ ಪೂಜಾ, ದಾಸೋಹ ಮುಂತಾದವುಗಳೇ ಕಾರಣಗಳಾಗಿವೆಯೆಂದು ಸಂಪೂರ್ಣನಂಬುಗೆಯಿಂದ ಸೂಚಿಸುವ,

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಕಲ್ಲೇಶ್ವರಸ್ವಾಮಿಯ ರಥೋತ್ಸವದ ಸಮಾರಂಭ.

ಜಗಲೂರು ತಾ|| ಕಲ್ಲೇದೇವರಪುರದ ಶ್ರೀ ಕಲ್ಲೇಶ್ವರಸ್ವಾಮಿಯ ರಥೋತ್ಸವವು ಮಾಮೂಲು ಪದ್ಧತಿಪ್ರಕಾರ ಇದೇ ಪ್ರಮೋದೂತನಾಮಸಂವತ್ಸರದ ಚೈತ್ರ ಬ|| ೧ ಸೋಮವಾರ ಶ್ರೀ ಸ್ವಾಮಿಗೆ ಮಂಗಳಸ್ನಾನಪೂರ್ವಕ ಕಂಕಣಧಾರಣ, ಬ|| ೨ ಮಂಗಳವಾರ ಕುಂಭಾಭಿಷೇಕ ಪೂರ್ವಕ ಗಜೋತ್ಸವ, ಬ|| ೩ ಬುಧವಾರ ಅಶ್ವೋತ್ಸವ, ಬ|| ೪ ಗುರುವಾರ ಶ್ರೀ ಸ್ವಾಮಿಗೆ ವೇದೋಕ್ತ ಪ್ರಕಾರ ರುದ್ರಾಭಿಷೇಕಾನಂತರ ನಂದಿಯುತ್ಸವ ಬ|| ೫ ಶುಕ್ರವಾರ ತಾ|| 18-4-1930 ನೇ ಪ್ರಾತಃಕಾಲ ಸಹಸ್ರಬಿಲ್ವಾರ್ಚನೆ ಮಹಾನೈವೇದ್ಯಾನಂತರ ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಕನ್ಯಾಲಗ್ನದಲ್ಲಿ ಮಹಾರಥೋತ್ಸವ, ಬ|| ೬ ಶನಿವಾರ ಅವಭೃತೋತ್ಸವ, ಬ|| ೭ ಭಾನುವಾರ ಪ್ರಾತಃಕಾಲ ಗಂಗಾಸ್ನಾನಾನಂತರ ಶ್ರೀ ಸ್ವಾಮಿಯ ತಿರ್ಥ್ಯಗಾಂದೋಳಿಕೋತ್ಸವ ಈ ರೀತಿ ಪದ್ಧತಿಪ್ರಕಾರ ನಡೆಯುತ್ತೆ.

ಈ ಜಾತ್ರೆಯ ಕಾಲದಲ್ಲಿ 6-7 ವರ್ಷಗಳಿಂದಲೂ ನಡೆಯುತ್ತಿರುವಂತೆ ಈ ವರ್ಷವೂ ದನಗಳ ಪ್ರದರ್ಶನವು ನಡೆಯಿಸಲ್ಪಡುತ್ತದೆ. ಮತ್ತು ಈಗಿನ ಕಾಲಕ್ಕೆ ಅಂಗಸಾಧನೆಯು ಬಹಳ ಪ್ರಾಮುಖ್ಯವಾದ್ದೆಂದು ತಿಳಿದು ಗರಡಿ ಸಾಧಕರ ಪ್ರದರ್ಶನವನ್ನು ಕುಸ್ತಿಗಳ ಮೂಲಕ ನಡೆಸಬೇಕೆಂದು ಏರ್ಪಡಿಸಿರುತ್ತದೆ. ಪ್ರದರ್ಶನಕ್ಕೆ ಬರುವ ರಾಸುಗಳಿಗೆ ಹುಲ್ಲು ನೀರಿನ ಅನುಕೂಲವನ್ನು ಸಹ ಮಾಡಿರುತ್ತದೆ. ಉತ್ತಮವಾದ ರಾಸುಗಳಿಗೆ ಕ್ಯಾಟಲ್ ಶೋ ಕಮಿಟಿಯವರಿಂದ ಬಹುಮಾನಾರ್ಥವಾಗಿ ಸರ್ಟಿಫಿಕೇಟುಗಳೊಂದಿಗೆ ಬೆಳ್ಳಿ ಮೆಡಲ್ಲು, ಬಟ್ಟಲುಗಳನ್ನು ಅವುಗಳ ಯೋಗ್ಯತಾನುಸಾರ ಕೊಡಲಾಗುತ್ತೆ. ಮತ್ತು ಗರಡಿಯವರಲ್ಲಿ ಗೆದ್ದವರಿಗೆ ಬಹುಮಾನಾರ್ಥವಾಗಿ ಶಲ್ಯ ವಸ್ತ್ರಗಳ ಮೂಲಕ ಬೆಳ್ಳಿ ಬಂಗಾರದ ಕಡಗಗಳನ್ನು ಅವರವರ ಯೋಗ್ಯತಾನುಸಾರವಾಗಿ ಕೊಡಲಾಗುತ್ತದೆ. ಇವರಿಗೆಲ್ಲಾ ಊಟದ ಏರ್ಪಾಡು ಮಾಡಿರುತ್ತದೆ. ದೇಶಾಭಿಮಾನಿಗಳೆಲ್ಲರೂ ದಯವಿಟ್ಟು ಬಂದು ಈ ಮಹಾ ಉತ್ಸವದಲ್ಲಿ ಭಾಗಿಗಳಾಗಿ ಶ್ರೀದೇವರ ಕೃಪೆಗೆ ಪಾತ್ರರಾಗಿ ನಮ್ಮಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕೆಂದು ಸವಿನಯ ಪ್ರಾರ್ಥನೆ.

ತಾ|| 4-4-1930, ಕಲ್ಲೇದೇವರಪುರ. — ಕಾರ್ಯದರ್ಶಿ, ಚಿರಂತಿಮಠದ ಮರುಳಸಿದ್ದಪ್ಪಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಧರ್ಮಸುಧಾರಿಣೀಸಭಾ, ಕಂದಗಲ್ಲು.

ವಿಜಾಪೂರ ಜಿಲ್ಲಾ ಹುನಗುಂದ ತಾಲೂಕ ಪೈಕಿ ಕಂದಗಲ್ಲು ಗ್ರಾಮಕ್ಕೆ ಜಗದ್ಗುರು ಹಿಮವತ್ಕೇದಾರ ಮಹಾಸಂಸ್ಥಾನದ ಅಮಾತ್ಯರಾದ ಶ್ರೀ ಯಲಬುರ್ಗಿ ಚರಮೂರ್ತಿಸ್ವಾಮಿಗಳು ಸಿಬ್ಬಂದಿ ಸಮೇತವಾಗಿ ಆಗಮಿಸಿ ಸಂಸ್ಥಾನದ ಪದ್ಧತಿಯ ಮೇರೆಗೆ ಕಾಣಿಕಾ ವಸೂಲು ನಡೆಯಿಸಿರುವರು. ಗ್ರಾಮದ ಪ್ರಮುಖರಾದ ಹಾರ್ಮೋನಿಯಂ ಪಂಡಿತ ಮೂಲಿಮಠದ ಸಂಗನಬಸಯ್ಯನವರು ಸಿಂಗರಡ್ಡಿನಾಡಗೌಡರು, ಹಡಗಲಿ ಸಂಗನಗೌಡರು, ಆದಾಪೂರ ಅಯ್ಯನಗೌಡರು, ಜಾಲಿಹಾಳ ಗುಂಡಪ್ಪನವರು, ಕಡಿವಾಲ ಸಿದ್ದಪ್ಪನವರು ಇವರುಗಳು ಇದೇ ತಾರೀಖು 31-3-30 ನೇ ದಿವಸ ಸಮಾಜೋದ್ಧಾರಕ ಶ್ರೀ|| ಷ|| ಬ್ರ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರು ಕರಡಿ ವೇ|| ಪಂ|| ಇಂದುಧರಶಾಸ್ತ್ರಿಗಳವರನ್ನು ಬರಮಾಡಿಕೊಂಡು ಗ್ರಾಮದಲ್ಲಿರುವ ಶ್ರೀ ವೀರಭದ್ರದೇವರಿಗೆ ರುದ್ರಾಭಿಷೇಕ ಹಾಗೂ ಮಹಾಗಣಾರಾಧನೆಯನ್ನು ನಡೆಯಿಸಿದರು. ಮಧ್ಯಾಹ್ನ 4 ಘಂಟೆಗೆ ಯಲಬುರ್ಗಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಶಾಸ್ತ್ರಿಗಳವರ ಕೀರ್ತನವಾಯಿತು. ಇವರ ಕೀರ್ತನವನ್ನು ಕೇಳಿ ಸರ್ವರೂ ಆನಂದಪಟ್ಟರು. ಆಮೇಲೆ ಚಿಕ್ಕಮಣ್ಣೂರು ಮಹಾಸ್ವಾಮಿಗಳು ಸಮಾಜಸುಧಾರಣೆ ಮತ್ತು ಭಕ್ತಸ್ತ್ರೀಪುರುಷರು ಗುರುಗಳಿಂದ ಕೊಡಲ್ಪಟ್ಟ ಶಿವಲಿಂಗವನ್ನು ಬಿಡದೆ ಸದಾ ದೇಹದಲ್ಲಿ ಧರಿಸಿ ಭಗವತ್ಪಾದ ರೇಣುಕಾಚಾರ್ಯರು ಬೋಧಿಸಿದ ಪ್ರಕಾರ ಶಿವದೀಕ್ಷಾಸಂಸ್ಕಾರವನ್ನು ಹೊಂದಿ ಮೋಕ್ಷ ಪಡೆಯಬೇಕೆಂಬೀ ವಿಷಯಗಳ ಮೇಲೆ ಅನೇಕ ಶಾಸ್ತ್ರಾಧಾರಗಳನ್ನು ಕೊಟ್ಟು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಇವರ ಭಾಷಣವನ್ನು ಸ್ತ್ರೀಪುರುಷರು ಕೇಳಿ ಬಹಳ ಸಂತೋಷಪಟ್ಟರೆಂದು ಬರೆದರೆ ಅತಿಶಯೋಕ್ತಿಯಾಗಲಾರದು. ಚಿಕ್ಕಮಣ್ಣೂರು ಶ್ರೀಗಳವರಂತೆ ಧರ್ಮಗುರುಗಳಾದ ಪಟ್ಟಾಧಿಕಾರಿಗಳು ಅಲ್ಲಲ್ಲಿ ಸಭೆಗಳನ್ನು ಮಾಡಿಸಿದ್ದಾದರೆ ವೀರಶೈವಧರ್ಮವು ಉನ್ನತಶಿಖರವನ್ನೇರುವುದಕ್ಕೆ ಏನೂ ಸಂಶಯವಿಲ್ಲ. ಇವರ ಭಾಷಣವಾದನಂತರ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಜಾಲಿಹಾಳ ಗುಂಡಪ್ಪ, ಕಂದಗಲ್ಲು.

ಕಡೂರು ತಾಲೂಕು ಓಟರುಮಹಾಶಯರಲ್ಲಿ ವಿನಂತಿ.

ತಾವೆಲ್ಲರೂ ಅಭಿಮಾನವಿಟ್ಟು ತಾ|| 5-4-30 ನೆಯ ಶನಿವಾರ ನಡೆದ ಕಡೂರು ಡಿಸ್ಟ್ರಿಕ್ಟುಬೋರ್ಡು ಚುನಾವಣೆಯಲ್ಲಿ ತಮ್ಮ ಘನವಾದ ಓಟುಗಳನ್ನು ಕೊಡುವುದರ ಮೂಲಕ ನನ್ನನ್ನು ಉತ್ತೀರ್ಣನನ್ನಾಗಿ ಮಾಡಿರುವುದಕ್ಕಾಗಿ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ದಯಮಾಡಿ ಆಗಾಗ್ಗೆ ಆಯಾಯ ಪ್ರಾಂತ್ಯಗಳಲ್ಲಿ ಆಗಬೇಕಾದ ಕಾರ್ಯಗಳ ವಿಚಾರದಲ್ಲಿ ನನಗೆ ವಿಷಯಗಳನ್ನು ಒದಗಿಸುವುದರ ಮೂಲಕ ಸಹಾಯಮಾಡಿ ಯಥಾಶಕ್ತಿ ನನ್ನ ಸೇವೆಯನ್ನು ಕೈಕೊಳ್ಳಬೇಕಾಗಿ ಪ್ರಾರ್ಥನೆ.

ತಮ್ಮ ಸೇವಕ
ಕೆ. ಟಿ. ಸತ್ಯನಾರಾಯಣಶೆಟ್ಟಿ, ಬೀರೂರು.

ಅಭಿನಂದನ.

ಕೈ|| ರಾ|| ಬ|| ವಾರದಮಲ್ಲಪ್ಪನವರ ಪುಣ್ಯನಾಮಸ್ಮರಣಾರ್ಥವಾಗಿ ಶ್ರೀಮಂತ ಬಂಡೆಪ್ಪಾ ಅಣ್ಣಾ ಕಾಡಾದಿ ಮೊದಲಾದ ಸದ್ಗೃಹಸ್ಥರು ಅತ್ಯಂತಾದರಪೂರ್ವಕವಾಗಿ ಬಹುಕಾಲದಿಂದಲೂ ನಡೆಯಿಸುತ್ತ ಬಂದಿರುವ "ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಗೆ" ಗದಗಿನ ಶ್ರೀ|| ಎ-ಹಿ. ಮಾನ್ವಿ ಇವರು ತಮ್ಮ ಅಣ್ಣಂದಿರಾದ ಕೈ|| ಈಶ್ವರಪ್ಪಾ ವೀರಪ್ಪಾ ಮಾನ್ವಿ ಇವರ ಸ್ಮರಣಾರ್ಥವಾಗಿ 40-45 ರೂಪಾಯಿ ಬೆಲೆಬಾಳುವ ಉತ್ತಮ ಗಡಿಯಾರವನ್ನು ಕೊಟ್ಟದ್ದಕ್ಕಾಗಿ ಸದರಿ ಸಂಸ್ಥೆಯು ಅವರ ವಿನಯಕವಾಗಿ ಅತ್ಯಂತ ಋಣಿಯಾಗಿರುತ್ತದೆ. ಬಹುಕಾಲದಿಂದ ಇದ್ದ ಇದೊಂದು ಕೊರತೆಯನ್ನು ದೂರಮಾಡಿದ್ದಕ್ಕಾಗಿ ಯಾರು ತಾನೇ ಇವರ ಅಭಿನಂದನವನ್ನು ಮಾಡಲಿಕ್ಕಿಲ್ಲ?

ಓರ್ವ ಗುಣಗ್ರಾಹಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ,

ಉಪ್ಪಿನಬಟಗೇರಿ.

ನೈಜಾಮ ಇಲಾಖಾ ಕೊಪ್ಪಳ ಜಿಲ್ಹೆಗೆ ಸೇರಿದ ಉಪ್ಪಿನಬಟಗೇರಿಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ೪-೫ ವರ್ಷಗಳಿಂದ ಆಚರಣೆಯಲ್ಲಿ ಬಂದು ಈ ವರ್ಷವಾದರೂ ಮಾಡಲ್ಪಟ್ಟಿತು. ಡಂಗುರ ಮೂಲಕ ಮೊದಲೇ ಪ್ರಸಿದ್ಧಪಡಿಸಿದಂತೆ ಫಾಲ್ಗುಣ ಶು|| ೧೪ ಗುರುವಾರ ಪ್ರತಿಯೊಂದು ಮನೆಗಳಲ್ಲಿ ಜಗದಾಚಾರ್ಯರ ಅವತಾರ ದಿನದ ಹಬ್ಬವನ್ನು ಮಾಡಿ ಸಕಲ ಗುರುಭಕ್ತರು ಸಮ್ಮಿಲಿತರಾಗಿ ಜಗದಾಚಾರ್ಯರ ಭಾವಚಿತ್ರವನ್ನು ಅಂದೋಲಿಕೆಯಲ್ಲಿಟ್ಟು ಬೀದಿಬೀದಿಗಳಲ್ಲಿ ಉತ್ಸವವನ್ನು ಹೊರಡಿಸಿ ಪ್ರಭುಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿ ಪೂಜಾದಿಗಳನ್ನು ತೀರಿಸಿ ಕೃತಕೃತ್ಯರಾದರು. ಇಂಥ ಮಹತ್ಕಾರ್ಯಗಳು ಈ ಗ್ರಾಮದಲ್ಲಿ ಜರಗುವದಕ್ಕೆ ಶ್ರೀಮಂತ ಮಿರಾಳಘಟ್ಟದ ಮಠದ ಜಾಗಟಗೇರಿ ಬಸವಲಿಂಗಪ್ಪಯ್ಯನವರು ಶ್ರೀಮಂತ ಬಳ್ಳೊಳ್ಳಿ ಮಡಿವಾಳಪ್ಪನವರೇ ಮೊದಲಾದ ಈ ಗ್ರಾಮಪ್ರಮುಖರ ನಿರಾಳಮನಸ್ಸೇ ಕಾರಣವು. ವೇ|| ಕೊಟ್ರಯ್ಯನವರು ಸಾಲಿಮಠ, ವೇ|| ಕರಿಬಸವಾರ್ಯ ಹಿರೇಮಠ, ಬೇಲೇರಿ ವೇ|| ಕೊಟ್ರಯ್ಯನವರು ಹಿರೇಮಠ, ಹಡಗಲಿ ವೇ|| ಗರಬಸವಯ್ಯ, ಮಿರಾಳಘಟ್ಟ ಮಠ ಮ|| ರಾ|| ವೆಂಕನಗೌಡರು ಪೋ|| ಪಾಟೀಲ ಮೊದಲಾದವರು ಈ ಜಯಂತ್ಯುತ್ಸವದಲ್ಲಿ ಭಾಗಿಗಳಾಗಿ ಬಳ್ಳೇ ಮುತುವರ್ಜಿಯಿಂದ ಕೆಲಸ ಮಾಡಿದರು. ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಈ ಮಹಾಶಯರಿಗೆ ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಹಾರೈಸುವ,

ಓರ್ವ ಗುರುಭಕ್ತ.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು.

ಅನುಷ್ಠಾನಾರಂಭಮಹೋತ್ಸವವು.

ನಿಜಾಂ ಸ್ಟೇಟ ಉದಗಿರಿ ತಾಲೂಕ ಪೈಕಿ, ಮುಧೋಳ ಬೃಹನ್ಮಠಾಧೀಶ, ಸದ್ಗುರುಪದಮಾಲಾಲಂಕೃತ ಶ್ರೀ|| ಷ|| ಬ್ರ|| ಶಿವಲಿಂಗಶಿವಾಚಾರ್ಯರ ಕರಕಂಜಾತ ಸಂಜಾತರಾದ ಶ್ರೀ ಮಹಾಂತಸ್ವಾಮಿಗಳು ತಮ್ಮ ಉದ್ಯಾನವನದಲ್ಲಿ, ತಳಿರುತೋರಣಗಳಿಂದಲೂ ಪುಷ್ಪಲತೆಗಳಿಂದಲೂ ಕದಳಿಯ ಸ್ತಂಭಗಳಿಂದಲೂ ನಿರ್ಮಿಸಲ್ಪಟ್ಟ ಮಂಟಪದಲ್ಲಿ ಭಗವತ್ಪಾದ ರೇಣುಕರ ಕೃಪಾಬಲದಿಂದ ಅನುಷ್ಠಾನವನ್ನು ಪ್ರಾರಂಭಿಸಿದ್ದಾರೆ. ಈ ಕಾರ್ಯಕ್ಕೆ ಮ|| ರಾ|| ಹಾವಪ್ಪ ವೇ|| ಸಿದ್ಧಯ್ಯನವರು ಮ|| ರಾ|| ಗುರುಬಸಪ್ಪ ಬಸನಾಳೆ ಮ|| ರಾ|| ಗುಂಡಪ್ಪ ಬಿಜಗುಂಡೆ ಮ|| ಶೆಕ ಮಹಾದೇವಪ್ಪ ಮ|| ರಾ|| ಖಡಿಕೆ ವಿಶ್ವನಾಥಪ್ಪ ಮ|| ವಕ್ಕಾಣೆ ವೀರಪ್ಪ ಇವರೇ ಮೊದಲಾದ ಸದ್ಗೃಹಸ್ಥರು ಸಹಾಯಕಾರಿಗಳಾಗಿದ್ದಾರೆ. ಇವರಂತೆ ಪ್ರತಿಯೊಬ್ಬ ಗುರುಮೂರ್ತಿಗಳು ಆಚರಿಸಿದ್ದಾದರೆ ಕೆಲವರಲ್ಲಿ ನೆಲೆಗೊಂಡಿರುವ ದುರ್ಬೋಧವು ಕಾಣಾಗಿಯೇ ಅರಣ್ಯವನ್ನು ಸೇರಿ ಭಕ್ತರು ಸ್ವರ್ಗಗಾಮಿಗಳಾಗುವರೆಂದು ಕೋರುವ.

ಶ್ರೀ ಶಿವಲಿಂಗಸಂಸ್ಕೃತಪಾಠಶಾಲಾಧ್ಯಾಪಕ,
ವಿ. ಎಸ್. ವಂದಲಿ, ಮುಧೋಳ.

ಗೃಹಕೃತ್ಯದ ನೋಟೀಸು.

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಳಲಕೆರೆ ತಾಲ್ಲೂಕು ಚಿಕ್ಕಜಾಜೂರು ವಾಸಿ ದೇವಾಂಗದ ಮೂಡ್ಲಪ್ಪನ ಪುತ್ರ ತಿಮ್ಮಪ್ಪ ಈತನು ಸಮಸ್ತಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ನನ್ನ ಚಿಕ್ಕಪ್ಪ ದೊಡ್ಡಪ್ಪನ ಮಗ ಬೊಮ್ಮಜ್ಜ ಎಂಬುವರಿಗೆ ದಾಸಪ್ಪ ಎಂಬ ಸುಮಾರು 20 ವರ್ಷದ ಮಗನಿರುತ್ತಾನೆ. ಇವನು ಮತ್ತು ಇವನ ಅಣ್ಣ ಹನುಮಂತಪ್ಪ ವಗೈರೇರು ನನ್ನ ಜೊತೆಯಲ್ಲಿದ್ದು ಅವಿಭಕ್ತರಾಗಿ ಒಂದೇ ಗೃಹಕೃತ್ಯದಲ್ಲಿ ವಾಸಮಾಡಿಕೊಂಡು ಇರುತ್ತೇವೆ. ಸದರಿ ದಾಸಪ್ಪನಿಗೆ ಸುಮಾರು 4-5 ವರ್ಷಗಳ ಲಾಗಾಯಿತು ಒಂದು ತರಹ ಪಿತ್ತಸಂಬಂಧವಾದ ಬಾಧ್ಯವಿದ್ದು ಈಚೆಗೆ ಆ ಬಾಧ್ಯವು ಈಗ 4-5 ತಿಂಗಳಿಂದಲೂ ಪ್ರಬಲವಾಗಿ ಕೆಲವು ವೇಳೆ ಬುದ್ಧಿ ಸ್ವಾಧೀನವಿಲ್ಲದಿರುವುದು ಕೆಲವು ವೇಳೆ ಮೈಮೇಲೆ ಎಚ್ಚರಿಕೆ ಇಲ್ಲದೆ ಇರುವುದು ವಗೈರೆ ಆಗುತ್ತಾ ಇದೆ. ಅಲ್ಲದೆ ಈತನು 4-5 ತಿಂಗಳಿಂದಲೂ ಮನೆಯಲ್ಲಿ ವಿಶೇಷವಾಗಿರದೆ ನನ್ನ ದ್ವೇಷಿಕರ ಜೊತೆವಾಸಮಾಡಿಕೊಂಡು ಅವರಲ್ಲೇ ಹೆಚ್ಚುಕಾಲ ಕಳೆಯುತ್ತಾ ಕುಟುಂಬದ ಸ್ವತ್ತುಗಳನ್ನು ಪರಭಾರೆಮಾಡುವದಕ್ಕೂ ಅಂಗಡಿಗೆ ಬರಬೇಕಾದ ಬಾಕಿಸಾಕಿಗಳನ್ನು ವಸೂಲುಮಾಡಿಕೊಳ್ಳುವದಕ್ಕೂ ಅಂಗಡಿ ಹೆಸರಿನಲ್ಲಿ ಮಾಲುಗಳಿಗೆ ಆರ್ಡರುಕೊಟ್ಟು ಅವುಗಳನ್ನು ತರಿಸಿಕೊಂಡು ದುರುಪಯೋಗ ಮಾಡಿಕೊಳ್ಳುವದಕ್ಕೂ ಪ್ರತಿಫಲವಿಲ್ಲದೆ ಸಾಲ ವಗೈರೆ ಪತ್ರಗಳನ್ನು ಬರೆದುಕೊಡುವದಕ್ಕೂ ಪ್ರಯತ್ನಪಡುತ್ತಿರುವುದಾಗಿ ತಿಳಿದುಬಂದಿರುತ್ತೆ. ಆದ್ದರಿಂದ ನನ್ನ ಮತ್ತು ಸದರಿ ದಾಸಪ್ಪನ ಚಿಕ್ಕ ಅಣ್ಣ ಹನುಮಂತಪ್ಪನ ಬುದ್ಧಿ ಬರಹ ಮತ್ತು ರುಜುಗಳಿಲ್ಲದೆ ದಾಸಪ್ಪನಿಂದ ಸ್ವತ್ತುಗಳನ್ನು ಯಾವ ವಿಧದಿಂದಲೂ ಬರೆಸಿಕೊಳ್ಳಕೂಡದು ಸಾಲ ವಗೈರೆ ಕೊಡಕೂಡದು ಬಾಕಿ ಸಾಕಿಗಳನ್ನು ಕೊಡಕೂಡದು ಮತ್ತು ಮಾಲುಗಳನ್ನು ಕಳುಹಿಸಬಾರದು ಇದಕ್ಕೆ ವಿರೋಧವಾಗಿ ಯಾರಾದರೂ ನಡೆದರೆ ನಾನು ನನ್ನ ಅವಿಭಕ್ತರು ಮತ್ತು ನನ್ನ ಕುಟುಂಬದ ಆಸ್ತಿ ಸಹ ಜವಾಬ್‌ದಾರರಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ದೇವಾಂಗದ ಮೂಡ್ಲಪ್ಪನ ರುಜು.

WANTED

Candidates for Telegraph and Station Masters' Clases. Full particulars and Railway Fare Certificate on 2 annas Stamp.

Apply to:— (2)
IMPERIAL TELEGRAPH COLLEGE,
NAI SARAK, DELHI.

ಶ್ರೀ ಸೀತಾರಾಘವ ವೈದ್ಯಶಾಲೆಯ
ಶ್ರೀಮತ್ಪ್ರಮೋದೂತಸಂವತ್ಸರದ ಸಿದ್ಧಾಂತ, ವಾಕ್ಯ, ಆರ್ಯಭಟ್ಟಸಿದ್ಧಾಂತ, ದೃಗ್ಗಣಿತಸಹಿತವಾದ

ಪಂಚಾಂಗಗಳು ಸಿದ್ಧವಾಗಿವೆ.

ಪಂಚಾಂಗ 1 ರ ಬೆಲೆ 2 ಆಣೆ.

5 ದನ್ನು ಒಟ್ಟಿಗೆ ಕೊಂಡರೆ 1 ಪ್ರತಿ ಇನಾಮು.

ಪೋಸ್ಟು ಮತ್ತು ರೈಲಿನ ಮೂಲಕ ತರಿಸುವ ಪ್ರತಿಯೊಬ್ಬರೂ ಅಡ್ವಾನ್ಸಿನೊಡನೆ ಆರ್ಡರ್‌ಕೊಟ್ಟರೆ ಮಾತ್ರ ಉಳಿದ ಮೊಬಲಗಿಗೆ ವಿ. ಪಿ. ಕಳುಹಿಸಲಾಗುತ್ತದೆ.

3 ಆಣೆ ಸ್ಟಾಂಪನ್ನು ಕಳುಹಿಸಿದರೆ ಒಂದು ಪಂಚಾಂಗವನ್ನು ಕಳುಹಿಸುವೆವು.

[14] ದೊರೆಯುವ ಸ್ಥಳ—**ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ನಮ್ಮ ಬ್ರಾಂಚಾಫೀಸಿನಲ್ಲಿಯೂ ದೊರೆಯುತ್ತವೆ.

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [36]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗ್) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ್

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, [illegible] ಸ್ಪರ್ಶವಾದ **ಕೂಡಲೆ** ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪಮರ್, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಪಕಪುಷ್ಪ, ಕಾಲಿಮಕಂದ, ಮಧುಕಂದ, ಜಟಾಕಂದ, ತಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಕಬೀಜ, ನಾಗಬೀಜ, ಬಾಗಬೀಜ, ಭೋಕರೀಬೀಜ, ಪನೇರಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಕಾಪತ್ರಿ, ಮಂದಮಸ್ತ, ರಸಪುರುಷ, ಕಮರಕಸ, ಕಥಿಲ್ಯಾಗೊಂದ ಪಂಚಾಬಮಿಶ್ರಿ, ಸಾಗಾಮಿಶ್ರಿ, ಸಫೇದಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಜೋರಿ, ಮುಂಗಲೇಬೇದಾಣೆ, ಮರ್ದಸೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸಕ್ಕರೆ ಎಮ್ಮೆಯ ಅಥವಾ ಆಕಳ ಹಾಲು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವದು, ಈ ಪಾಕದ 84 ತೊಲೆ, ಡಬ್ಬಿಗೆ 5 [illegible] ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವದು, ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವದು, ಸೀಸೆ 1 ಕ್ಕೆ 4 ರೂಪಾಯಿಗಳು.

ಪಿನಸಿಗೆ ಪ್ರಾಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ಥ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ವಾಸಬಾರದಿರೋಣ, ದಪ್ಪಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವದು, 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. [40]

ಪತ್ತೆ—ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

[5ನೇ ಘಟದಿಂದ ಮುಂದುವರಿದುದು]

ಗಳು ಕುಡುಕರ ಪತ್ನಿಯರಿಗೆ ಚೆನ್ನಾಗಿ ತಿಳಿಯುವವು. ನಿರುದ್ಯೋಗದ ಪರಿಣಾಮವು ಕೋಟ್ಯವಧಿ ಸ್ತ್ರೀಯರಿಗೆ ಚೆನ್ನಾಗಿ ಬಂದಿರುವದು. ಚರಕಸಂಘದಲ್ಲಿ 1,00,000 ಸ್ತ್ರೀಯರೂ, 10,000 ಪುರುಷರೂ ಕೆಲಸಮಾಡುವರು. ಸ್ತ್ರೀಯರು ಈ ಕಾರ್ಯವನ್ನು ಕೈಕೊಳ್ಳುವದಾದರೆ ರಾಷ್ಟ್ರೋದ್ಧಾರ ಕಾರ್ಯವು ಬಹುಸುಲಭವಾಗುವದು. ಅವರಿಂದ ಯಾವ ಹಿಂಸೆಯೂ ಆಗುವಂತಿಲ್ಲ. ಸ್ತ್ರೀಯರ ಮುಖದಿಂದ ಹೊರಡುವ ಪ್ರಾರ್ಥನಾರೂಪವಾದ ಉಪದೇಶವು ವರ್ತಕರ ಹಾಗೂ ಮದ್ಯಪಾನಾತುರರ ಮನಸ್ಸನ್ನು ಕರಗಿಸದಿರದು. ಪುರುಷರು ಅವರಿಗೆ ಬೇಕಾದಷ್ಟು ಸಹಾಯವನ್ನು ಮಾಡುವರು. ಈ ಕಾರ್ಯವನ್ನು ಸಾವಿರಾರು ಜನ ಶಿಕ್ಷಿತ ಮತ್ತು ಅಶಿಕ್ಷಿತ ಸ್ತ್ರೀಯರು ಸಹ ಕೈಕೊಳ್ಳಬಹುದು. ಇದರಿಂದ ಆಗುವ ಮಹತ್ತ್ವದ ಫಲಗಳೆಂದರೆ—ಮದ್ಯಪಾನನಿಷೇಧದಿಂದ 75 ಕೋಟಿ ರೂಪಾಯಿಗಳೂ, ಪರದೇಶೀ ವಸ್ತ್ರಬಹಿಷ್ಕಾರದಿಂದ 60 ಕೋಟಿ ರೂಪಾಯಿಗಳೂ ಉಳಿಯುವವು. ಉಪ್ಪಿನ ತೆರಿಗೆಯ ಭಂಗಕ್ಕಿಂತಲೂ ಇವು ಹೆಚ್ಚಿನ ಪ್ರಯೋಜನಕಾರಿಗಳಾಗಿರುವವು. ಈ ಕಾರ್ಯವನ್ನು ಪೂರೈಸುವದರೊಳಗಾಗಿ, ಅನೇಕರು ಕಾರಾಗೃಹವಾಸಿಗಳಾಗಬಹುದು. ಅನೇಕರಿಗೆ ಅವಮಾನವೂ ಕಷ್ಟಪರಂಪರೆಗಳೂ ಪ್ರಾಪ್ತವಾಗಬಹುದು. ಈ ಕಷ್ಟನಿಷ್ಠುರಗಳನ್ನು ಅವರು ಅಭಿಮಾನದಿಂದ ಸಹಿಸಬೇಕು. ಒದಗುವ ಕಷ್ಟಪರಂಪರೆಗಳನ್ನು ಸ್ತ್ರೀಯರು ಧೈರ್ಯದಿಂದ ಸಹಿಸುವದಾದರೆ, ಈ ಚಳವಳಿಯ ಪರಿಸಮಾಪ್ತಿಯನ್ನು ನಾವು ಬಹು ಬೇಗನೆ ಕಾಣುವೆವು. ಇಡೀಭರತಖಂಡದ ಸ್ತ್ರೀಯರೆಲ್ಲರೂ ಈ ಕಾರ್ಯವನ್ನು ಕೈಕೊಳ್ಳದಿದ್ದರೂ ಸಹ ಕೆಲವರಾದರೂ ಕೈಕೊಂಡರೆ ಎಲ್ಲರೂ ಅವರನ್ನು ಹಿಂಬಾಲಿಸುವರು ಎಂದು ಬರೆದಿರುವರು.

ಕಲ್ಕತ್ತೆಯ ಕಾಲಿಕಪುರದ ಸತ್ಯಾಗ್ರಹದಳವು ಪೋಲೀಸರಿಂದ ಮುತ್ತಲ್ಪಟ್ಟು ಅನೇಕ ಸ್ವಯಂಸೇವಕರಿಗೆ ಘಾಯಗಳಾಗಿರುವವು. ಕಳೆದ 10 ನೆಯ ತಾ|| ಮಧ್ಯಾಹ್ನ ಕಲ್ಕತ್ತೆಯ 100 ಜನ ಪೋಲೀಸ್ ಕಾನ್‌ಸ್ಟೆಬಲರೂ, 50 ಜನ ಘೂರ್ಕರೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ, ಹಾಗೂ ಇನ್ನು ಕೆಲವು ಮುಖ್ಯಮುಖ್ಯ ಅಧಿಕಾರಿಗಳೂ ಕೂಡಿ ಸತ್ಯಾಗ್ರಹ ಕ್ಯಾಂಪಿಗೆ ನುಗ್ಗಿ, ಕಾಯಿದೆವಿರುದ್ಧವಾಗಿ ತಯಾರುಮಾಡಲ್ಪಟ್ಟಿದ್ದ ಉಪ್ಪನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಸ್ವಯಂಸೇವಕರು ಶಾಂತವಾಗಿಯೇ ಪ್ರತಿಭಟಿಸಿದರು. ಪೋಲೀಸರು ಸ್ವಯಂಸೇವಕರನ್ನು ಹಿಡಿಸಿಕೊಂಡು ಹೋಗಿ, ಒಂದು ಕಾಲುವೆಯ ನೀರಿನಲ್ಲಿ ಅವರನ್ನೆಲ್ಲಾ ಮುಳುಗಿಸಿ ಕೆಲವರಿಗೆ ಮೂರ್ಛೆಹೋಗುವಂತೆ ಮಾಡಿದರು. ಪೋಲೀಸರು 25 ಜನರನ್ನು ಅರೆಸ್ಟ ಮಾಡಿ, ಕಡೆಯಲ್ಲಿ ಮೂವರನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡುಹೋದರು. ಅನಂತರ ಉಳಿದ ಸತ್ಯಾಗ್ರಹಿಗಳು ತಾವು ತಯಾರುಮಾಡಿದ 2 ಮಣ ಉಪ್ಪನ್ನು ಕಲ್ಕತ್ತೆಗೆ ತೆಗೆದುಕೊಂಡುಹೋಗಿ ಮಾರಾಟಮಾಡಿದರು.

ಪಂಡಿತ ಮದನಮೋಹನ ಮಾಳವೀಯರವರು ಪರದೇಶೀ ವಸ್ತ್ರದ ಬಹಿಷ್ಕಾರಕಾರ್ಯವನ್ನು ಒಳ್ಳೇ ಉತ್ಸಾಹದಿಂದ ಮುಂದುವರಿಸಿರುವರು. ಲಾಹೋರಿನಲ್ಲಿ ಕಳೆದ 10 ನೆಯ ತಾರೀಖಿನ ದಿವಸ ಮಾಡಿದ ಭಾಷಣವನ್ನು ಕೇಳಲು 15,000 ಕ್ಕೆ ಮೇಲ್ಪಟ್ಟು ಮಹಮ್ಮದೀಯರು ಹಾಗೂ ಸಿಕ್ಕರು ನೆರೆದಿದ್ದರು.

ಅಹಮುದಾಬಾದಿನಲ್ಲಿ ಕಾಯಿದೆ ವಿರುದ್ಧವಾಗಿ ತಯಾರಿಸಿದ ಉಪ್ಪಿನ ಮಾರಾಟವು ಒಳ್ಳೇ ಭರದಿಂದ ಸಾಗಿರುವದು. ಇದುವರೆಗೆ 1,015 ಪೌಂಡ ಉಪ್ಪನ್ನು ಮಾರಿರುವರು. ಸರಕಾರದವರು ಕಾಯಿದೆ ವಿರುದ್ಧವಾಗಿ ತಯಾರಿಸಲ್ಪಟ್ಟ ಉಪ್ಪಿನ ಮೂಲಪ್ರದೇಶವನ್ನು ತಿಳುಹಿಸಿದವರಿಗೆ 250 ರೂ. ಗಳ ಬಹುಮಾನವನ್ನು ಕೊಡುವದಾಗಿ ಪ್ರಕಟಿಸಿರುವರು. 1000 ರೂ. ಗಳ ಬಹುಮಾನವನ್ನು ಕೊಡುವದಾದರೆ ಮ|| ಮಹದೇವ ದೇಸಾಯಿಯವರು ವರ್ತಮಾನವನ್ನು ತಾವು ಕೊಡುವರೆಂದೂ, ಒಂದು ಲಕ್ಷ ರೂ. ಗಳ ಬಹುಮಾನ ಕೊಡುವದಾದರೆ ಮಹಾತ್ಮಾ ಗಾಂಧಿಯವರು ಬೇಕಾದ ವಿಷಯವನ್ನು ತಾವು ತಿಳುಹಿಸುವರೆಂದೂ ಈ ಹಣವನ್ನು ಖಾದೀ ಪ್ರಚಾರಕ್ಕೆ ಉಪಯೋಗಿಸುವರೆಂದೂ ಪ್ರಕಟವಾಗಿದೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಗಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಯುರೀಲೋಕಮ್ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ ನೇ ಏಪ್ರಿಲ್ ೧೯೩೦ [ಸಂಚಿಕೆ ೫೦.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ, ವೈಶಾಖ ಶು|| ಪಂಚಮಿಗೆ ಮೂರುವರ್ಷಗಳಾಗುವುವು. ಕರ್ನಾಟಕ ರಾಜ್ಯದಲ್ಲಿರತಕ್ಕ ಅನೇಕಜನ ಸತ್ಪುರುಷರು ಈ ಪತ್ರಿಕೆಗೆ ನಾನಾರೀತಿಯಿಂದ ಸಹಾಯಮಾಡುತ್ತಿರುವದು ಸರ್ವರಿಗೂ ವೇದ್ಯವೇ ಅದೆ. ಈ ಪತ್ರಿಕೆಯಲ್ಲಿ ಪ್ರಕಟಿಸತಕ್ಕ ಅಮೂಲ್ಯಗಳಾದ ಧರ್ಮವಿಷಯಗಳನ್ನು ನೋಡಿ ಸಂತೋಷಪಟ್ಟು ಅನೇಕರು ಚಂದಾದಾರರಾಗುತ್ತಿರುವರು. ಚಂದಾದಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವದು. ಚಂದಾದಾರರೆಲ್ಲರೂ ಇದೇ ಪ್ರಕಾರ ನಿರಂತರವೂ ಈ ಪತ್ರಿಕೆಯ ವಿಷಯದಲ್ಲಿ ಪ್ರೇಮವನ್ನು ಬೆಳೆಯಿಸುತ್ತ ಹೋಗಬೇಕೆಂದು ಕೋರುತ್ತೇವೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ. ಪಿ.** ಮಾಡುವದರಿಂದ ನಮಗೂ ತೊಂದರೆಯಾಗುವದು. ಹಾಗೂ ಚಂದಾದಾರರಿಗೂ ೪ ಆಣೆ ಹೆಚ್ಚಿಗೆ ಬೀಳುವದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮಣಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ. ಪಿ.** ಮಾಡಿದರೆ ೨ರೂ. ೧೨ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮಣಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮಣಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೆ ಬರೆದು ತಿಳಿಸಬೇಕೆಂದು ಕೋರುತ್ತೇವೆ. ಸಂ.—

ಶೋಚನೀಯ ಮೃತ್ಯು.

ಕಳೆದ ಚೈತ್ರ ಶುದ್ಧ ೬ ಶನಿವಾರ (ತಾ|| 5-4-30) ದಿವಸ ಮ|| ರಾ|| ಹೂಲಿ ವಿರೂಪಾಕ್ಷಪ್ಪನವರ ಧರ್ಮಪತ್ನಿಯವರಾದ ಶ್ರೀ|| ವೀರವ್ವನವರು ಶಿವಧ್ಯಾನಾಸಕ್ತರಾಗಿ ಶಿವಸಾಯುಜ್ಯವನ್ನು ಹೊಂದಿದರು. ಇವರು ತಮ್ಮ ಆಯುಷ್ಯದಲ್ಲಿ ಅನೇಕ ದಾನಧರ್ಮಕಾರ್ಯಗಳನ್ನು ಮಾಡುತ್ತ ಸರ್ವರಿಂದಲೂ ಸ್ತುತ್ಯರಾಗಿದ್ದರು. ಇಲ್ಲಿಯ ಶ್ರೀ ಶಂಕರಭಜನಾ ಸಂಘದವರು ಶ್ರೀ ಜಗದಾಚಾರ್ಯರ ಭಜನೆಯನ್ನು ಮಾಡುತ್ತ ಶ್ರೀಮಠದವರಿಗೆ ಕಲ್ಯಾಣವನ್ನು ಕೋರಿದರು. ಈ ಸಮಯದಲ್ಲಿ ಅನೇಕ ಜನ ಪ್ರಮುಖರು ಆಗಮಿಸಿದ್ದರು. ಆ ಸಮಯದಲ್ಲಿ ಇವರ ಸಂಬಂಧಿಗಳು ಮಠಾಧಿಕಾರಿಗಳಿಗೂ ಅನಾಥರಿಗೂ ಅನ್ನದಾನ ವಸ್ತ್ರದಾನಾದಿಗಳನ್ನು ಮಾಡಿದರು. ಪಂಚಾಚಾರ್ಯ ಪ್ರಭಾಪೋಷಣಕ್ಕೋಸ್ಕರ 1 ರೂ. ಯು ಸಮರ್ಪಿಸಲ್ಪಟ್ಟಿತು. ಶ್ರೀ ಜಗದ್ಗುರು ಪಂಚಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುವ.

ಓರ್ವ ದುಃಖಭಾಗಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ.

ರಾಣೇಬೆನ್ನೂರು.

ಧಾರವಾಡ ಜಿ|| ರಾಣೇಬೆನ್ನೂರು ಶಹರದಲ್ಲಿರುವ ಶ್ರೀ ಚರಂತಿಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ತರುಣರು ಮೇಲ್ಕಂಡ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಫಾಲ್ಗುಣ ಶುದ್ಧ ಪಂಚಮಿಯ ದಿವಸ ಯಾವತ್ತು ಶಿವಲಿಂಗಮೂರ್ತಿಗಳಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನಾದಿಗಳು ನೆರವೇರಿದುವು. ಶುದ್ಧ ೬ ಬುಧವಾರದಿಂದ ೧೨ ಬುಧವಾರದ ವರೆಗೆ ಭಜನಾಸಪ್ತಕವು ನೆರವೇರಿತು. ೧೩ ಗುರುವಾರ ಜಗದಾಚಾರ್ಯರ ಭಾವಚಿತ್ರದ ಪೂಜೆ, ಗಣಾರಾಧನಾದಿ ಕಾರ್ಯಗಳು ನೆರವೇರಿದುವು. ಸಾಯಂಕಾಲ ಜನಸ್ತೋಮದೊಡನೆ ಉತ್ಸವವು ಬಹುವೈಭವದೊಡನೆ ನೆರವೇರಿ ಸ್ವಸ್ಥಳಕ್ಕೆ ಬಂದ ಮೇಲೆ ಮ|| ರಾ|| ಬಸವಪ್ಪ ಅಣ್ಣಾ, ಅಂಕಲಕೋಟೆ, ಸಿದ್ಧಪ್ಪಣ್ಣಾ ಬಣಗಾರ ಈ ಮಹಾಶಯರ ನೇತೃತ್ವದಲ್ಲಿ ಸಭೆಗೂಡಿ ಗುರುಗಳ ಜಯಂತಿ ಹಾಗೂ ಧರ್ಮ ಈ ಬಗ್ಗೆ ಶ್ರೀ|| ಪಟ್ಟಾಧ್ಯಕ್ಷಸ್ವಾಮಿಗಳವರ ಭಾಷಣವಾಯಿತು. ಈ ಮಹೋತ್ಸವಕ್ಕೆ ಧಾರವಾಡ, ಹುಬ್ಬಳ್ಳಿ, ಮಾಸೂರು, ಬ್ಯಾಡಗಿ ಮೊದಲಾದ ಗ್ರಾಮಗಳಿಂದ ಜನರು ಆಗಮಿಸಿದ್ದರು. ಈ ಯಾವತ್ತು ಜನರ ಭೋಜನಾದಿ ಸುವ್ಯವಸ್ಥೆಯನ್ನು ತರುಣಸಂಘದವರೇ ನೆರವೇರಿಸಿದರು. ಪ್ರತಿವರ್ಷವೂ ಜಗದಾಚಾರ್ಯರ ಜಯಂತಿ ಮಹೋತ್ಸವವನ್ನು ನಮ್ಮ ಗ್ರಾಮದ ವೀರಶೈವರು ಇದೇ ರೀತಿಯಾಗಿ ವೈಭವಪೂರ್ವಕವಾಗಿ ನೆರವೇರಿಸುತ್ತ ಹೋಗಬೇಕೆಂದು ಕೋರುವ.

ಸೋಮಯ್ಯ ಗದಗಿಮಠ.

ಸ್ವೀಕಾರ.

ಕೊಟ್ಟೂರು ನಿವಾಸಿಗಳಾದ ಮಿರಳಗಟ್ಟದ ಮಠದ ವೇ|| ಚಾಗಟಗೇರಿ ಸಣ್ಣವೀರಪ್ಪಯ್ಯನವರ ಪುತ್ರರಾದ ಚನ್ನಬಸವಪ್ಪಯ್ಯನವರಿಗೆ ಪುತ್ರಿಯು ಜನಿಸಿದ ಸಂತೋಷಕ್ಕಾಗಿ ಲಿಂಗಧಾರಣಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂಪಾಯಿಗಳನ್ನು ಸಮರ್ಪಿಸಿರುತ್ತಾರೆ.

ರಾಣೆಬೆನ್ನೂರು ಟವನ್ನಿನಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ. ಯು ವೇ|| ಸೋಮಯ್ಯನವರು ಗದಿಗಿಮಠ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

WANTED

Candidates for Telegraph and Station Masters' Clases. Full particulars and Railway Fare Certificate on 2 annas Stamp.

Apply to:— (3)

IMPERIAL TELEGRAPH COLLEGE,
NAI SARAK, DELHI.

ಸಾಬರಮತಿ ಆಶ್ರಮದ ಸ್ತ್ರೀಯರು ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು ಮುಂದಾಳುಗಳನ್ನಾಗಿಮಾಡಿಕೊಂಡು ಜಲಾಲ್‌ಪುರದಲ್ಲಿ ಮದ್ಯಪಾನನಿರೋಧಕಾರ್ಯವನ್ನು ಕೈಗೊಂಡಿರುವರು. ಕಳೆದ 18 ನೆಯ ತಾರೀಖಿನ ದಿವಸ ಜಲಾಲ್‌ಪುರದ ಮದ್ಯದ ಅಂಗಡಿಗಳಲ್ಲಿ ಯಾವ ವ್ಯಾಪಾರವೂ ಆಗಲಿಲ್ಲ. ಶ್ರೀಮತಿ ಕಸ್ತೂರಿಬಾಯಿಯವರು ಮನೆಮನೆಗೂ ಹೋಗಿ ಮದ್ಯಪಾನ ನಿಷೇಧದ ಬಗ್ಗೆ ಉಪದೇಶವನ್ನುಮಾಡುತ್ತಿರುವರು. ಇವರ ಸಹಾಯಕ್ಕಾಗಿ ಜೊತೆಯಲ್ಲಿ ಇಬ್ಬರು ಸ್ವಯಂ ಸೇವಕರಿರುವರು.

ಪಂಡಿತ ಜವಾಹಿರಲಾಲ್‌ನೆಹರೂರವರು ದಸ್ತಗಿರಿಮಾಡಲ್ಪಟ್ಟರೆಂಬ ವರ್ತಮಾನವು ತಿಳಿದಕೂಡಲೇ ಬೆಂಗಳೂರು ನಿವಾಸಿಗಳು (17 ನೇ ತಾರೀಖು ಗುರುವಾರ ಸಾಯಂಕಾಲ) ಗಾಂಧಿ ಮೈದಾನದಲ್ಲಿ ಸೇರಿ, ಪಂಡಿತ ಜವಾಹಿರಲಾಲ್‌ನೆಹರೂರವರ ದೇಶಸೇವಾ ಧುರೀಣತೆಯನ್ನು ಕೊಂಡಾಡಿದುದಲ್ಲದೆ, ಪರದೇಶೀ ವಸ್ತ್ರಗಳ ದಹನ ಕಾರ್ಯವನ್ನು ಬಹು ಉತ್ಸಾಹದಿಂದ ನೆರವೇರಿಸಿದರು.

ಮುಂಬಯಿ ಪ್ರಾಂತದ ಪ್ರಸಿದ್ಧ ಮುಂದಾಳುಗಳಾದ ಮಿ|| ಜಮನಾದಾಸ್ ಮೆಹತಾರವರು ದಸ್ತಗಿರಿ ಮಾಡಲ್ಪಟ್ಟು 6 ತಿಂಗಳ ಕಾರಾಗೃಹವಾಸಕ್ಕೆ ಗುರಿಯಾದರು.

ಗುಂಟೂರು ಮುನಿಸಿಪಾಲಿಟಿಯು ದೀವಟಿಗೆಯವರೂ ಹಾಗೂ ಜವಾನರೂ ಸೇರಿ ಯಾರೂ ಮದ್ಯಪಾನ ಮಾಡಕೂಡದೆಂದೂ, ಹಾಗೆ ಮಾಡಿದವರು ಸಭೆಗೆ 20 ರೂ. ಗಳ ದಂಡವನ್ನು ಕೊಡಬೇಕೆಂದೂ ತೀರ್ಮಾನಿಸಿಕೊಂಡಿರುವರು.

ಕೋಕನಾಡದಲ್ಲಿ ಸತ್ಯಾಗ್ರಹ ಮುಖಂಡರಾದ ಶ್ರೀ|| ಬುಲುಸುಸಾಂಬಮೂರ್ತಿ ವಿ. ಸತ್ಯನಾರಾಯಣ ಬಿ. ಸುಬ್ರಹ್ಮಣ್ಯಂ ಮತ್ತು ಕೆ. ವೆಂಕಟರಾವ ಈ ನಾಲ್ಕು ಜನರು ದಸ್ತಗಿರಿ ಮಾಡಲ್ಪಟ್ಟು ಒಂದೊಂದು ವರ್ಷ ಕಾರಾಗೃಹವಾಸಕ್ಕೆ ಗುರಿಯಾದರು.

ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡು ಸಭೆಗೆ ಕ್ಲೋಸ್‌ಪೇಟೆ ತಾಲೂಕಿನಿಂದ ಪಡವಟ್ಟದ ಪಟೇಲ್ ಮ|| ರಾ|| ಸೋಮಶೇಖರಯ್ಯನವರೂ ಬಿಡದಿಯಲ್ಲಿರುವ ಕಂಚನಗುಪ್ಪೆ ಪಟೇಲ್ ಬಿ. ಸಿ. ಸಿದ್ಧಲಿಂಗಪ್ಪನವರೂ ಸಹ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ.

(ಹಿಂದಿನಿಂದ ಮುಂದೆ ಸಾಗಿದುದು.)

ಪ್ರಾಚೀನಕಾಲದಲ್ಲಿ ಲಿಂಗಧಾರಣಾತ್ಮಕವಾದ ವೀರಶೈವ ಮತವು "ಏಕೇನ ಜನ್ಮನಾ ಮುಕ್ತಿರ್ವೀರಾಣಾಂತು ಮಹೇಶ್ವರಿ" ಎಂಬ ಆಗಮೋಕ್ತಿಯಿಂದ ಒಂದೇ ಜನ್ಮದಲ್ಲಿ ಮುಕ್ತಿಯನ್ನು ಕೊಡುವದೂ ಅತ್ಯಂತ ಪವಿತ್ರವಾದುದೂ ಎಂದು ಪರಿಗಣಿಸಲ್ಪಟ್ಟಿದ್ದುದರಿಂದ ಲೋಕಪ್ರಸಿದ್ಧರಾದ ಹರಿಬ್ರಹ್ಮಾದಿ ದೇವತೆಗಳೂ, ಗೌತಮಾದಿಮಹರ್ಷಿಪುಂಗವರೂ ಮತ್ತು ತಾರಕಾದಿದೈತ್ಯಶ್ರೇಷ್ಠರೂ ಲಿಂಗಧಾರಣಸಂಪನ್ನರಾಗಿ ಆ ಲಿಂಗಪೂಜೆಯಿಂದ ಮಹತ್ಪದವಿಗಳನ್ನು ಪಡೆದರೆಂದು ಸ್ಕಾಂದಲೈಂಗ್ಯಾದಿ ಪುರಾಣಗಳಿಂದ ತಿಳಿದು ಬರುತ್ತದೆ. ಅಷ್ಟಾದಶ ಮಹಾಪುರಾಣಗಳಲ್ಲೊಂದಾದ ಲಿಂಗಪುರಾಣದ ಉತ್ತರಭಾಗದ ದೀಕ್ಷಾದಿಕಥನ ನಾಮಕ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ,

"ವಿಷ್ಣುಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯಃ | ಧಾರಯಂತಿ ಸದಾಲಿಂಗಮುತ್ತಮಾಂಗೇ ವಿಶೇಷತಃ ||೯೬||

ಎಂದು ಉಕ್ತವಾಗಿದೆ.

ಲಿಂಗಪುರಾಣದ ಪೂರ್ವಭಾಗದ ಲಿಂಗಭೇದಾದಿ ಕಥನನಾಮಕ ೭೫ ನೆಯ ಅಧ್ಯಾಯದ ಪ್ರಾರಂಭದಲ್ಲಿ,

"ಇಂದ್ರನೀಲಮಯಂ ಲಿಂಗಂ ವಿಷ್ಣುನಾ ಪೂಜಿತಂ ಸದಾ | ಪದ್ಮರಾಗಮಯಂ ಶಕ್ರೋ ಹೈಮಂ ವಿಶ್ರವಸಃ ಸುತಃ ||೨||

ಇತ್ಯಾದಿ ಶ್ಲೋಕಗಳಿಂದ ವಿಷ್ಣುಬ್ರಹ್ಮಾದಿ ದೇವತೆಗಳು ಪೂಜಿಸುವ ಲಿಂಗಗಳ ಸ್ವರೂಪವು ವಿವರಿಸಲ್ಪಟ್ಟಿದೆ. ಸ್ಕಾಂದಪುರಾಣದ ಕೇದಾರಖಂಡದ ಎಳನೆಯ ಅಧ್ಯಾಯದಲ್ಲಿ,

"ಇಂದ್ರನೀಲಮಯಂ ಲಿಂಗಂ ವಿಷ್ಣುಃ ಪೂಜಯತೇ ಸದಾ || ಬ್ರಹ್ಮಾ ಮಣಿಮಯಂ ಲಿಂಗಂ ಪೂಜಯತ್ಯನಿಶಂ ಶುಭಮ್ | ಇಂದ್ರೋ ರತ್ನಮಯಂ ಲಿಂಗಂ ಚಂದ್ರೋ ಮುಕ್ತಾಮಯಂ ತಥಾ ||೨೨|| ಭಾನುಸ್ತಾಮ್ರಮಯಂ ಲಿಂಗಂ ಪೂಜಯತ್ಯನಿಶಂ ಶುಭಮ್ || ರೌಕ್ಮಂ ಲಿಂಗಂ ಕುಬೇರಸ್ತು ಪಾಶೀಚಾಲಕ್ತಮೇವಚ ||೨೩|| ಯಮೋ ನೀಲಮಯಂ ಲಿಂಗಂ ರಾಜತಂ ನೈಋತಸ್ತಥಾ | ಕಾಶ್ಮೀರಂ ಪವನೋ ಲಿಂಗಮರ್ಚಯತ್ಯನಿಶಂ ವಿಭೋಃ ||೨೪||

ಇತ್ಯಾದಿ ಶ್ಲೋಕಗಳಿಂದ ವಿಷ್ಣುವು ಇಂದ್ರನೀಲಮಯವಾದ ಲಿಂಗವನ್ನೂ, ಬ್ರಹ್ಮನು ಮಣಿಮಯಲಿಂಗವನ್ನೂ, ಇಂದ್ರನು ರತ್ನಮಯಲಿಂಗವನ್ನೂ, ಚಂದ್ರನು ಮುಕ್ತಾಮಯಲಿಂಗವನ್ನೂ, ಸೂರ್ಯನು ತಾಮ್ರಮಯಲಿಂಗವನ್ನೂ, ಕುಬೇರನು ಸುವರ್ಣಮಯಲಿಂಗವನ್ನೂ, ವರುಣನು ಅರಗಿನಲಿಂಗವನ್ನೂ, ಯಮನು ನೀಲಮಯಲಿಂಗವನ್ನೂ, ನೈಋತನು ರಾಜತಲಿಂಗವನ್ನೂ, ವಾಯುವು ಕುಂಕುಮಮಯಲಿಂಗವನ್ನೂ ಪೂಜಿಸುತ್ತಾರೆಂದು ಹೇಳಿ ಅಂತ್ಯದಲ್ಲಿ,

"ಏವಂತೇ ಲಿಂಗಿನಃ ಸರ್ವೇ ಲೋಕಪಾಲಾಸ್ಸವಾಸವಾಃ | ತಥಾ ಸರ್ವೇಽಪಿ ಗಂಧರ್ವಾಃ ಪಾತಾಳೇ ಕಿನ್ನರೈಸ್ಸಹ ||೨೫||

ವಿಷ್ಣುಬ್ರಹ್ಮೇಂದ್ರಾದಿ ದೇವತೆಗಳೆಲ್ಲರೂ ಶಿವಲಿಂಗಧಾರಣಸಂಪನ್ನರಾಗಿ ಆ ಶಿವಲಿಂಗವನ್ನು ಎಡಬಿಡದೆ ಪೂಜಿಸುತ್ತಿರುವರೆಂದು ಉಕ್ತವಾಗಿದೆ. ಈ ತತ್ವವನ್ನನುಸರಿಸಿಯೇ ಪ್ರಾಚೀನಕಾಲದಲ್ಲಿ ಆರ್ಯಮಹರ್ಷಿಗಳು ಲಿಂಗಧಾರಣ, ಲಿಂಗಪೂಜೆ ಇವುಗಳ ಮಹತ್ವವನ್ನು ಪ್ರಪಂಚಕ್ಕೆ ತಿಳುಹಿಸುವದಕ್ಕೋಸ್ಕರ ತಾವು ಸ್ಥಾಪಿಸಿದ ವಿಷ್ಣುಬ್ರಹ್ಮಾದಿ ದೇವತಾಮೂರ್ತಿಗಳ ಹಸ್ತಗಳಲ್ಲಾಗಲಿ ಮಸ್ತಕಗಳಲ್ಲಾಗಲಿ ಲಿಂಗವನ್ನು ಧರಿಸಿರುತ್ತಾರೆ. ಈ ವಿಷಯದಲ್ಲಿ ಅತ್ಯಂತ ಪ್ರಾಚೀನಗಳೆಂದು ಪ್ರಸಿದ್ಧಿಹೊಂದಿರುವ ಪಂಢರಪುರದ ವಿಠೋಬಸ್ವಾಮಿಯ ಮಸ್ತಕದಲ್ಲಿಯೂ, ಅನಂತಶಯನದ ಪದ್ಮನಾಭಸ್ವಾಮಿಯ ಹಸ್ತದಲ್ಲಿಯೂ ಇರುವ ಶಿವಲಿಂಗಧಾರಣೆಯೇ ಬಲವಾದ ಸಾಕ್ಷಿಯಾಗಿದೆ.

ರಾಕ್ಷಸರಲ್ಲಿ ಪ್ರಮುಖರಾದ ವಿಭೀಷಣ, ಬಲಿ, ಹಿರಣ್ಯಕಶಿಪು, ವೃಷಪರ್ವ, ಬಾಣ, ತಾರಕ ಮೊದಲಾದವರು ಪರಮಶಿವಭಕ್ತರಾಗಿದ್ದರಲ್ಲದೆ ತಮ್ಮ ಶಿವಪೂಜಾಬಲದಿಂದ ಪ್ರಪಂಚವನ್ನೆಲ್ಲಾ ಜಯಿಸಿ ಬಹುಕಾಲ ಏಕಚಕ್ರಾಧಿಪತ್ಯವನ್ನು ಅನುಭವಿಸಿದರೆಂಬ ವಿಷಯವು ಪುರಾಣಪ್ರಸಿದ್ಧವಾಗಿದೆ. ಪ್ರಾಚೀನಕಾಲದಲ್ಲಿ ಈಗಿನ ಕರ್ಣಾಟಕದೇಶದ ಒಂದು ಭಾಗವಾದ ಮಹಿಷಮಂಡಲವನ್ನಾಳುತ್ತಿದ್ದ ಮಹಿಷಾಸುರನೆಂಬ ರಾಕ್ಷಸನು ತನ್ನ ತಪೋಬಲದಿಂದ ಪರಶಿವನನ್ನು ಮೆಚ್ಚಿಸಿ ಅಜೇಯವಾದ ವರಗಳನ್ನು ಪಡೆದು ಇಂದ್ರಾದಿ ದೇವತೆಗಳನ್ನು ಜಯಿಸಿ ಲೋಕಕಂಟಕನಾಗಿರಲು ಬ್ರಹ್ಮಾದಿದೇವತೆಗಳೆಲ್ಲರೂ ಪರಮಾತ್ಮನ ಅಪ್ಪಣೆಯಂತೆ ಪಾರ್ವತೀದೇವಿಯನ್ನು ಮರೆಹೊಕ್ಕರು. ಆಗ ದೇವಿಯು ಮಹಿಷಾಸುರನೊಡನೆ ಘೋರವಾದ ಯುದ್ಧವನ್ನು ಮಾಡಿ ಅವನನ್ನು ಕೊಂದು ಪ್ರಪಂಚವನ್ನುದ್ಧರಿಸಿದ ವಿಷಯವು ಸ್ಕಾಂದಮಹಾಪುರಾಣದ ಅರುಣಾಚಲಮಾಹಾತ್ಮ್ಯಖಂಡದಲ್ಲಿ ವಿಸ್ತಾರವಾಗಿವರ್ಣಿಸಲ್ಪಟ್ಟಿದೆ. ದೇವಿಯು ಮಹಿಷನನ್ನು ಕೊಂದ ಮೇಲೆ ಸಜೀವನಸಮೇತಳಾಗಿ ಆ ರಾಕ್ಷಸನ ಕಂಠದಲ್ಲಿ ಪ್ರಕಾಶಿಸುತ್ತಿರುವ ಸ್ಫಟಿಕಮಯವಾದ ಶಿವಲಿಂಗವನ್ನು ನೋಡಿ ಆಶ್ಚರ್ಯಾನ್ವಿತಳಾಗಿ ಆ ಲಿಂಗವನ್ನು ಕೈಯಲ್ಲಿ ತೆಗೆದುಕೊಳ್ಳಲು ಆಗ್ಗೆ ಆ ಲಿಂಗವು ದೇವಿಯುಹಸ್ತಕ್ಕೆ ಅಂಟಿಕೊಂಡು ಎಷ್ಟು ಪ್ರಯತ್ನಿಸಿದರೂ ಬಾರದೆಹೋಯಿತು. ಆಗ ದೇವಿಯು ಶಿವಭಕ್ತನನ್ನು ಕೊಂದುದಕ್ಕೋಸ್ಕರ ವ್ಯಸನಾಕ್ರಾಂತಳಾಗಿ ಅರುಣಾಚಲಕ್ಷೇತ್ರದಲ್ಲಿ ವಾಸಿಸುತ್ತಿದ್ದ ಗೌತಮಮಹರ್ಷಿಗಳನ್ನು ಕಂಡು,

"ಭಗವನ್ ಸರ್ವಧರ್ಮಜ್ಞ ಗೌತಮಾರ್ಯ ಮುನೀಶ್ವರ ||೫೬|| ಮಾನ್ಯಯಾ ಧರ್ಮರೂಪೇಣ ಕೋಸ್ಯಧರ್ಮಃ ಪ್ರಕಲ್ಪಿತಃ | ದೇವಾನಾಂ ರಕ್ಷಣಂಕರ್ತುಮಭಯಂ ದಾತುಮುದ್ಯತಾ ||೫೭|| ಅಜ್ಞಾನಾನ್ಮಹಿಷಂ ದೈತ್ಯಂ ಶಿವಭಕ್ತಮಮರ್ದಯಮ್ | ರಜಸಾಕ್ರಾಂತಬುದ್ಧೀನಾಂ ನಭವೇದ್ಧರ್ಮಸಂಗ್ರಹಃ ||೫೮|| ಗುರುಪ್ರಸಾದಸುಲಭಃ ಸ್ಫುರದ್ವಿಘ್ನಶತಾಕುಲಃ | ಸುದುರ್ಧರ್ಷಾ ನಿರಾಚಾರದುರ್ಮಾಃ ಶಿವಸಂಶ್ರಯಾಃ ||೫೬|| ವಿಶೇಷತೋ ಲಿಂಗಧರಾಃ ಶಿವಸ್ಯಾತಿಬಹುಮನ್ಯತೇ | ಪುರಾ ಪುರತ್ರಯಾವಾಸಾ ದೈತೇಯಾ ಲಿಂಗಧಾರಕಾಃ ||೬೦|| ಅಜಿತಾಃ ಶಂಭುನಾ ಪೂರ್ವಂ ಮುಕ್ತಲಿಂಗಾನಿದೂಷಿತಾಃ | ಅಸ್ಯ ಕಂಠಸ್ಥಿತಂ ಲಿಂಗಂ ಮಮ ಪಾಣಿಂ ನ ಮುಂಚತಿ ||೬೧||

ಅ|| ಮಾ|| ಖಂ|| ೧೧ ನೇ ಅಧ್ಯಾಯ

ಷಡ್ಗುಣೈಶ್ವರ್ಯಸಂಪನ್ನನೂ, ಸರ್ವಧರ್ಮಗಳನ್ನರಿತವನೂ ಆದ ಮಹರ್ಷಿಪುಂಗವನೇ! ನಾನು ಧರ್ಮಬುದ್ಧಿಯಿಂದ ದೇವತೆಗಳ ರಕ್ಷಣವನ್ನು ಮಾಡಲುದ್ಯುಕ್ತಳಾಗಿ ಅಜ್ಞಾನವಶದಿಂದ ಶಿವಭಕ್ತನಾದ ಮಹಿಷನನ್ನು ಸಂಹರಿಸಿದೆನು. ಗುರುವಿನ ಅನುಗ್ರಹದಿಂದ ಹೊಂದಲರ್ಹವಾದರೂ ಅನೇಕ ವಿಘ್ನಗಳುಳ್ಳದಾದ ಧರ್ಮಸಂಗ್ರಹವು ರಜೋಗುಣದಿಂದ ಕೂಡಿರುವವರಿಗೆ ಉಂಟಾಗಲಾರದು. ಆಚಾರಸಂಪನ್ನರೂ ಸದಾ ಶಿವೈಕನಿಷ್ಠರೂ ಆದ ಲಿಂಗಧಾರಿಗಳನ್ನು ಪರಶಿವನು ಅತ್ಯಂತ ಗೌರವದಿಂದ ಕಾಣುತ್ತಾನೆ. ಪೂರ್ವದಲ್ಲಿ ತ್ರಿಪುರನಿವಾಸಿಗಳಾದ ತಾರಕಾಕ್ಷಾದಿ ದೈತ್ಯರು ಲಿಂಗಧಾರಿಗಳಾಗಿದ್ದುದರಿಂದ ಪರಮಾತ್ಮನಿಂದಲೂ ಅಜೇಯರಾಗಿದ್ದು ಕಡೆಗೆ ವಿಷ್ಣುವಿನ ತಂತ್ರದಿಂದ ಲಿಂಗವಿಹೀನರಾಗಿ ಹತರಾದರು. ಈ ಮಹಿಷನ ಕಂಠದಲ್ಲಿದ್ದ ಲಿಂಗವು ಪರಿಹಾರವಾಗುವ ವರೆಗೂ ತೀರ್ಥಯಾತ್ರೆಯನ್ನು ಮಾಡುತ್ತ ಶಿವಪೂಜೆಯಲ್ಲಿ ಕಾಲವನ್ನು ಕಳೆಯಬೇಕೆಂದು ನಿಶ್ಚಯಿಸಿರುತ್ತೇನೆಂದು ವಿಜ್ಞಾಪಿಸಿಕೊಂಡಳು. ಆಗ ವೀರಶೈವಮುನಿಶ್ರೇಷ್ಠನಾದ ಆ ಮಹರ್ಷಿಪುಂಗವನು ದೇವಿಯನ್ನು ಕುರಿತು:—

ಧರ್ಮಸೂಕ್ಷ್ಮಾರ್ಥವೇತ್ತಾರೋ ದುರ್ಲಭಾ ಗಿರಿಕನ್ಯಕೇ | ಸದಾಶಿವಸ್ಯ ವದನೈಃ ಸದ್ಯೋಜಾತಾದಿಸಂಜ್ಞಿತೈಃ ||೬೨|| ಆಗಮಾಃ ಪಂಚಭಿಃಪ್ರೋಕ್ತಾಃ ಅಷ್ಟಾವಿಂಶತಿಕೋಟಯಃ | ನಿರ್ಣೀಯಾಃ ಶಿವಭಕ್ತಾನಾಂ ಶಿವಮಾರ್ಗಸ್ಯ ಶೋಭನಾಃ ||೬೩|| ತೇಷುತೇಷು ಮುನೀಂದ್ರೈರ್ಲಕ್ಷಣತ್ವೈವ ಪ್ರತಿಪಾದ್ಯತೇ | ಕಾಲೋಮುಖಂಚ ಕಂಕಾಲಂ ಶೈವಂ ಪಾಶುಪತಂತಥಾ ||೬೪|| ಮಹಾವ್ರತಂಚ ಪಂಚೈತಾಃ ಶಿವಮಾರ್ಗಪ್ರವೃತ್ತಯಃ | ಭೇದಾಸ್ತು ಬಹವಸ್ತೇಷಾಮನ್ಯೋನ್ಯಸ್ಯ ಶಿವೇರತಾಃ ||

ಅ|| ಮಾ|| ಖಂ|| ೧೧ ನೆಯ ಅಧ್ಯಾಯ

ಇತ್ಯಾದಿ ಶ್ಲೋಕಗಳಿಂದ ಪರಮಾತ್ಮನ ಸದ್ಯೋಜಾತಾದಿ ಪಂಚವದನಗಳಿಂದ ಹೇಳಲ್ಪಟ್ಟವುಗಳೂ, ಶೈವಧರ್ಮಪ್ರತಿಪಾದಕಗಳೂ ಅಷ್ಟಾವಿಂಶತಿಕೋಟಿ ಸಂಖ್ಯಾಪರಿಮಿತಿಯುಳ್ಳವುಗಳೂ ಆದ ಕಾಮಿಕಾದಿ ದಿವ್ಯಾಗಮಗಳ ವಿಷಯಗಳನ್ನೂ, ಅವುಗಳಲ್ಲಿ ಪ್ರತಿಪಾದಿತಗಳಾದ ಕಾಲಮುಖ, ಕಂಕಾಲ, ಶೈವ, ಪಾಶುಪತ ಮತ್ತು ಮಹಾವ್ರತಗಳೆಂಬ ಐದು ಮತಗಳ ಸ್ವರೂಪಗಳನ್ನೂ, ಅವುಗಳಲ್ಲೆಲ್ಲ ಅತ್ಯಂತ ಪವಿತ್ರವೂ, ಒಂದೇ ಜನ್ಮದಲ್ಲಿ ಶಿವಸಾಯುಜ್ಯರೂಪವಾದ ಮುಕ್ತಿಯನ್ನು ಕೊಡತಕ್ಕದೂ ಜನ್ಮಾರಭ್ಯಮರಣಪರ್ಯಂತ ಲಿಂಗಧಾರಣ, ಲಿಂಗಪೂಜನರೂಪವಾದ ಶ್ರೇಷ್ಠವ್ರತವನ್ನು ಬೋಧಿಸತಕ್ಕದೂ ಆದ ಮಹಾವ್ರತವೆಂಬ ವೀರಶೈವಮತದ ಶ್ರೇಷ್ಠತೆಯನ್ನೂ ವಿಸ್ತಾರವಾಗಿ ಬೋಧಿಸಿ

"ಪೂರ್ವಜನ್ಮನಿ ಭಕ್ತೋಯಮರುಣಾದ್ರಿಪತೇಃ ಸ್ಫುಟಮ್ | ಮಹಿಷತ್ವೇಮದಾಕ್ರಾಂತಃ ಪರಂ ಲಿಂಗೇನಸಂಗತಃ || ಭಕ್ತ್ಯಾ ಲಿಂಗಧರಂ ಹಂತುಂ ಕಃ ಸಮರ್ಥೋ ಜಗತ್ತ್ರಯೇ ||೮೨|| ದೃಷ್ಟ್ವಾಃ ಪುರತ್ರಯೇ ಪೂರ್ವಂರುದ್ರೇಣಪೂಜಿತಾಸ್ತ್ರಯಃ | ತ್ವತ್ಖಡ್ಗಪರಿಕೃತ್ತೇನ ಕಂಠೇನಾಸ್ಯ ವರಾನನೇ ||೮೩|| ದೀಕ್ಷಾದಿರಹಿತಂ ಲಿಂಗಂ ದತ್ತಂ ಹಂತೀತಿಚೋದಿತಮ್ | ಕೃತಂ ಹಿಮಹಿಷೇಣಾಪಿ ಭಕ್ತಿತೋ ಲಿಂಗಧಾರಣಮ್ ||೮೪|| ಕದಾಚಿತ್ ಕ್ಷಪಣೋಕ್ತಾನಾಂ ವಿಭಾಷಾತ್ಕೃತ್ಯಯಂ ಗತಃ | ಪೂರ್ವಜನ್ಮತಪೋಯೋಗಾತ್ ಸ್ಮರಣೋ ಲಿಂಗಧಾರಣಾತ್ ||೮೫|| ತ್ವತ್ಪಾದಪದ್ಮಸಂಸ್ಪರ್ಶಾದಯಂ ಮುಕ್ತೋ ನಸಂಶಯಃ || ಇತ್ಯಾದಿ.

ಎಲೌ ದೇವಿಯೇ! ಪೂರ್ವಜನ್ಮದಲ್ಲಿ ಈ ಮಹಿಷನು ಅರುಣಾಚಲೇಶ್ವರನ ಪರಮಭಕ್ತನೂ ಸಾತ್ವಿಕಶಿಖಾಮಣಿಯೂ ಆದ ರಾಜನಾಗಿದ್ದನು. ಆದರೆ ಒಂದಾನೊಂದು ದಿವಸ ತನ್ನ ಅಜಾಗರೂಕತೆಯಿಂದ ಓರ್ವ ಶಿವಯೋಗಿಗೆ ಅಪಮಾನವನ್ನುಂಟುಮಾಡಿದುದರಿಂದ ಆ ಯೋಗೀಶ್ವರನು ಕುಪಿತನಾಗಿ ಮಹಿಷಾಕೃತಿಯ ರಾಕ್ಷಸನಾಗೆಂದು ಶಪಿಸಿದುದರಿಂದ ಆ ರಾಜನು ಅಂದಿನಿಂದ ಮಹಿಷಾಕೃತಿಯನ್ನು ಧರಿಸಿ ಲೋಕಕಂಟಕನಾಗಿದ್ದರೂ ಪೂರ್ವಜನ್ಮಸಂಸ್ಕಾರಬಲದಿಂದ ಲಿಂಗಧಾರಿಯಾಗಿದ್ದನೇ ಹೊರತು ವೀರಶೈವೋಚಿತವಾದ ಶಿವದೀಕ್ಷಾಪೂರ್ವಕವಾಗಿ ಲಿಂಗಧಾರಣವನ್ನು ಹೊಂದಿರಲಿಲ್ಲ. ಶಿವದೀಕ್ಷಾಸಂಸ್ಕಾರಪೂರ್ವಕವಾಗಿ ಲಿಂಗಧಾರಣಹೊಂದಿ ಲಿಂಗಪೂಜಾಪರಾಯಣನಾದ ಶಿವಭಕ್ತನನ್ನು ಕೊಲ್ಲಲು ಭುವನತ್ರಯದಲ್ಲಿ ಆರಿಂದಲೂ ಸಾಧ್ಯವಿಲ್ಲ. ಇದಕ್ಕೆ ಲಿಂಗಧಾರಕರೂ ಪರಮ ಶಿವಭಕ್ತರೂ ಆದ ತ್ರಿಪುರನಿವಾಸಿಗಳಾದ ದೈತ್ಯರ ಚರಿತ್ರವೇ ಸಾಕ್ಷಿಯಾಗಿದೆ. ಆದರೂ ಈ ಮಹಿಷನು ಪೂರ್ವಜನ್ಮದಲ್ಲಿ ಮಾಡಿದ ತಪೋಯೋಗದಿಂದಲೂ ಲಿಂಗಧಾರಣಮಹಿಮೆಯಿಂದಲೂ ನಿನ್ನಿಂದ ಹತನಾಗಿ ನಿನ್ನ ಪಾದಸ್ಪರ್ಶದಿಂದ ಮುಕ್ತನಾದನು. ಆದುದರಿಂದ ನಿನ್ನ ಹಸ್ತಗತವಾದ ಈ ಮಹಿಷನ ಲಿಂಗಕ್ಕೆ ಅವನನ್ನು ಕೊಂದ ಖಡ್ಗಧಾರೆಯಿಂದ ಅಭಿಷೇಕವನ್ನು ಮಾಡಿ ಪೂಜಿಸಿದರೆ ಶಿವಭಕ್ತಹತ್ಯಾದೋಷವು ಪರಿಹಾರವಾಗಿ ಲಿಂಗವು ನಿನ್ನ ಹಸ್ತದಿಂದ ಬೇರೆಯಾಗುವುದು. ಆಗ ಅದನ್ನು ಈ ಅರುಣಾಚಲಕ್ಷೇತ್ರದಲ್ಲಿ ಮಹಿಷನ ಹೆಸರಿನಿಂದ ಸ್ಥಾಪಿಸು ಎಂದು ಹೇಳಿ ದೇವಿಯನ್ನು ಸಮಾಧಾನಪಡಿಸಿದರೆಂದು ಹೇಳಲ್ಪಟ್ಟಿದೆ. ಈ ರೀತಿಯಾಗಿ ಗೌತಮಮಹರ್ಷಿಗಳು ಲಿಂಗಧಾರಣಮಹಿಮೆಯನ್ನು ವರ್ಣಿಸಿರುವದನ್ನು ನೋಡಿದರೆ ಆ ಕಾಲದಲ್ಲಿ ಲಿಂಗಧಾರಣ ಮತವು ಎಷ್ಟು ವೈಭವದಿಂದ ಮೆರೆಯುತ್ತಿದ್ದಿತೆಂಬುದನ್ನು ಆಸ್ತಿಕಶಿಖಾಮಣಿಗಳಾದ ವಾಚಕಮಹಾಶಯರೇ ಆಲೋಚಿಸಬೇಕಾಗಿದೆ. ಸಪ್ತರ್ಷಿಗಳಲ್ಲೊಬ್ಬರಾದ ಗೌತಮರು ಈ ಮತವನ್ನು ಇಷ್ಟು ಭಕ್ತಿಯಿಂದ ವರ್ಣಿಸಿರುವದನ್ನು ನೋಡಿದರೆ ಅವರೂ ಸಹ ಲಿಂಗಧಾರಣಸಂಪನ್ನರಾಗಿದ್ದರೆಂದು ಧಾರಾಳವಾಗಿ ಹೇಳಬಹುದು. ಅಲ್ಲದೆ ವ್ಯಾಸಮಹರ್ಷಿ ಪ್ರಣೀತವಾದ ಲಿಂಗಪುರಾಣದ ಉತ್ತರಭಾಗದ ದೀಕ್ಷಾದಿ ಕಥನನಾಮಕ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ಉಕ್ತವಾಗಿರುವ

ವಿಷ್ಣುಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯಃ | ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ||೯೬||

ಎಂಬ ಶ್ಲೋಕವು ಗೌತಮಾದಿ ಮಹರ್ಷಿಗಳು ಲಿಂಗಧಾರಣಸಂಪನ್ನರಾಗಿದ್ದರೆಂಬ ವಿಷಯವನ್ನು ದೃಢೀಕರಿಸುತ್ತದೆ. ಸಪ್ತರ್ಷಿಗಳಲ್ಲಿ ಅತ್ಯಂತ ಪ್ರಸಿದ್ಧರಾದ ಅಗಸ್ತ್ಯ, ದೂರ್ವಾಸ ಭರದ್ವಾಜಾದಿ ಮಹರ್ಷಿಗಳು ಮೊದಲು ಮೊದಲು ಅಲಿಂಗಿಪಾಶುಪತ ಮತಾವಲಂಬಿಗಳಾಗಿದ್ದು ಅಂತ್ಯದಲ್ಲಿ ರೇಣುಕ, ವಿಶ್ವಕರ್ಣಸ್ಕಂದಾದಿ ವೀರಶೈವಮಹರ್ಷಿಗಳಿಂದ ಉಪದಿಷ್ಟರಾಗಿ ಲಿಂಗಾಂಗಸಾಮರಸ್ಯ ಜ್ಞಾನದಿಂದ ಮುಕ್ತರಾದರೆಂಬ ವಿಷಯವು ಸಿದ್ಧಾಂತಶಿಖಾಮಣಿ, ಸಿದ್ಧಾಂತಶಿಖೋಪನಿಷತ್ತು, ರುದ್ರೋಪನಿಷತ್ತು ಮೊದಲಾದುವುಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಹೀಗೆ ವೀರಶೈವಮತದ ಸನಾತನತ್ವವನ್ನು ಪ್ರತಿಪಾದಿಸುವ ವಚನಗಳೂ ಗ್ರಂಥಗಳೂ ಅಸಂಖ್ಯಾತವಾಗಿ ದೊರೆಯುತ್ತಿದ್ದರೂ ಈ ಮತೀಯರು ವೈದಿಕವಿದ್ಯಾಪರಾಙ್ಮುಖರಾದುದರಿಂದ "ಜೋಳವು ಹುಳಿಯಲು ಜೇರಿಗೆಗೆ ಕಡೆಯಾಯಿತು" ಎಂಬ ಕರ್ಣಾಟಕ ಗಾಥಾವಾಕ್ಯದಂತೆ ಕೆಲಜನ ಮಿತ್ರರು ವೀರಶೈವಮತವು ವರ್ಣಾಶ್ರಮರಹಿತವಾದ ಸಂಕರಮತ, ವೀರಶೈವರಲ್ಲಿ ಬ್ರಾಹ್ಮಣ್ಯವಿಲ್ಲ, ಲಿಂಗಧಾರಣವು ೧೨ ನೆಯ ಶತಮಾನಕ್ಕಿಂತ ಮೊದಲು ಎಳದಾಗಿ ಪ್ರಾರಂಭಿಸಲ್ಪಟ್ಟಿತು ಎಂದು ಆಪಲಪಿಸುತ್ತಿರುವರು. ಆದುದರಿಂದ ಆಸ್ತಿಕಮಹಾಶಯರು ವ್ಯಾಸ, ಗೌತಮಾದಿಮಹರ್ಷಿಗಳಿಂದ ವರ್ಣಿತವಾದ ವೈದಿಕವೀರಶೈವಮತಕ್ಕೂ ಈ ಸಂಕರವರ್ಣೀಯರು ಪ್ರತಿಪಾದಿಸುತ್ತಿರುವ ಲಿಂಗಾಯತಮತಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿದುಕೊಂಡು ಸಂಕರವರ್ಣೀಯರ ದುರುಪದೇಶಕ್ಕೆ ಮರುಳಾಗದೆ ಆಚಾರ್ಯ ಭಕ್ತಿತತ್ಪರರಾಗಿ ಆಚರಿಸಬೇಕೆಂದು ಆಶಿಸುತ್ತೇನೆ.

(ಸಶೇಷ)

M. D. Basavappa.

ಶ್ರೀ ವೀರೇಶಾಯನಮಃ

ವಾರ್ಷಿಕ ಜನರಲ್ ಕಮಿಟಿಯು.

ಇದೇ ಪ್ರಮೋದೂತ ಸಂವತ್ಸರದ ಚೈತ್ರ ಶು|| ೫ ಮಿತಿಗೆ ಈ ಮೊದಲೇ ಪ್ರಸಿದ್ಧಪಡಿಸಿದ ಮೇರೆಗೆ ಫಲಾಶವ ಪದ್ಧತಿಯ ಪ್ರಕಾರ ಗದಗ ತಾಲೂಕ ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಾಲಯದ ರಥೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ತರುವಾಯ ಇದೇ ಶು|| ೭ ರವಿವಾರ ಉದಯ ೯ ಘಂಟೆಗೆ ದಾವಣಗೇರಿ ನಾಟಕ ಕಂಪನಿಯವರ ತಂಬೂದಲ್ಲಿ ಹರಪನಹಳ್ಳಿ ತಾಲೂಕ ಲೋಕಲ್‌ಬೋರ್ಡ ಪ್ರೆಸಿಡೆಂಟರಾದ ಹೂವಿನಹಡಗಲಿ ಮ|| ರಾ|| ಕೆ. ಶಾಂತಪ್ಪನವರ ಅಧ್ಯಕ್ಷತೆಯಲ್ಲಿ ಜನರಲ್ ಕಮಿಟಿಯು ಕೂಡಿತ್ತು. ಕಮಿಟಿಗೆ ಗದಗ, ಡಂಬಳ, ಮುಂಡರಗಿ, ಉಪ್ಪಿನ ಬಟಗೇರಿ, ಕೊಪ್ಪಳ, ಘಟ್ಟರಡ್ಡಿಹಾಳ, ಶಿಗ್ಗಲಿ, ಹಂಪಸಾಗರ, ಹೂವಿನಹಡಗಲಿ, ಹಿರೇಹಡಗಲಿ, ಹೊಳಗುಂದಿ, ವಗ್ಗೆರಿ ಗ್ರಾಮಗಳಿಂದ ಅನೇಕ ಮಹಾಜನರು ಆಗಮಿಸಿದ್ದರು. ಕಮಿಟಿಯಲ್ಲಿ ದೇವಾಲಯದ ಪಂಚಕಮಿಟಿಯ ಪ್ರೆಸಿಡೆಂಟರಾದ ಗುರುಭಕ್ತೇಶರ ಶಾಂತಪ್ಪನವರು ತಮ್ಮ ಕಮಿಟಿಯ ವಾರ್ಷಿಕ ಲೆಕ್ಕವನ್ನು ಮುಂದಿಟ್ಟು ಯಾವತ್ತೂ ಜನರಿಗೆ ತಿಳಿಯುವಂತೆ ಓದಿ ಹೇಳಿದರು. ಮತ್ತು ದೇವಸ್ಥಾನದಲ್ಲಿಯ ಇಮಾರತಿಯ ಬಗ್ಗೆ ಹಾಗೂ ತೇರುಮನೆಯ ಬಗ್ಗೆ ಉದಾರದೇಣಿಗೆಯನ್ನು ಕೊಟ್ಟವರ ಮತ್ತು ಕೊಡಲೊಪ್ಪಿದ ಮಹಾಜನರ ಆಭಾರವನ್ನಿಸಿ ದೇವಸ್ಥಾನದ ಅಭಿವೃದ್ಧಿಯ ವಿಷಯದಲ್ಲಿ ಅತಿ ಮಹತ್ವದ ಹಲಕೆಲವು ಸೂಚನೆಗಳನ್ನು ಸಭೆಯ ಮುಂದಿರಿಸಿದರು. ಕೂಡಲೆ ಕೂಡಿದ ಯಾವತ್ತು ಜನರು ಅತ್ಯಾದರದಿಂದ ಸ್ವೀಕರಿಸಿ ನಿಬಂಧನೆಗಳನ್ನು ಗೊತ್ತುಪಡಿಸಿದರು. ರಥೋತ್ಸವದ ಕಾಲಕ್ಕೆ ಅಂದರೆ ಚೈತ್ರ ಶು|| ೧ ರಿಂದ ಶು|| ೫ ರ ವರೆಗೆ ಶ್ರೀ ದೇವರಿಗೆ ರುದ್ರಾಭಿಷೇಕವು ನಡೆಯುವಂತೆ ಮಾಡಬೇಕೆಂದು ಸಭೆಯಲ್ಲಿ ಸೂಚನೆಯು ಬಂದೊಡನೆ ಸಭೆಯಲ್ಲಿದ್ದ ಮಹಾಜನರ ಪೈಕಿ ಹತ್ತು ಜನರು ಪ್ರತಿವರ್ಷ ಐದೈದು ರೂಪಾಯಿಗಳನ್ನು ಶ್ರೀ ರುದ್ರಾಭಿಷೇಕದ ಖರ್ಚಿಗಾಗಿ ಕೊಡುವದಾಗಿ ವಾಗ್ದಾನಮಾಡಿದರು. ಈ ಸಾರೆ ಪಂಚಕಮಿಟಿಯವರ ಸಹಾಯಕ್ಕಾಗಿ ನವಲಿಗ್ರಾಮದ ಮ|| ರಾ|| ಜಂತಲಿ ವೀರಪ್ಪ ಇವರನ್ನು ಜನರಲ್ ಸೆಕ್ರೆಟರಿಯನ್ನಾಗಿ ನಿಯಾಮಕಮಾಡಿದ್ದಾಯಿತು. ಈ ದೇವಾಲಯಕ್ಕೆ ಸಹಾಯ ಸಹಾನುಭೂತಿಯನ್ನು ಕೊಟ್ಟಿರುವರ ಹಾಗೂ ದೇವಸ್ಥಾನದ ಸಾದ್ಯಂತ ಸಂಗತಿಯು ಮುಂದಿನ ಸಾರೆ ಹೊರಡಿಸುವ ತ್ರೈವಾರ್ಷಿಕ ರಿಪೋರ್ಟಿನಲ್ಲಿ ಬರುವದು. ಒಟ್ಟಿನ ಮೇಲೆ ಪಂಚಕಮಿಟಿಯ ಪ್ರೆಸಿಡೆಂಟರಾದ ಗುರುಭಕ್ತೇಶರಿಯವರು ಕಾರ್ಯದಕ್ಷರಿರುವದರಿಂದ ದೇವಾಲಯದ ಹಾಗೂ ಜಾತ್ರೆಯ ವ್ಯವಸ್ಥೆಯಾಗಲಿ, ಕಮಿಟಿಯ ಕಾರ್ಯಕ್ರಮವಾಗಲಿ ದೇವಾಲಯದ ಹಾಗೂ ತೇರುಮನೆಯ ಕೆಲಸಗಳಿಗೆ ಧನಸಂಚಯವಾಗಲಿ ಅತ್ಯುತ್ತಮರೀತಿಯಿಂದ ನಡೆದಿದ್ದು ಮುಂದಾದರೂ ನಡೆಯುವದೆಂಬ ಭಾವನೆಯಿಂದ ಪಂಚಕಮಿಟಿಯ ಅವಧಿಯನ್ನು ಪುನಃ ಇನ್ನೊಂದು ವರ್ಷದವರೆಗೆ ಹೆಚ್ಚಿಸಲ್ಪಟ್ಟಿತು. ಅನಂತರ ಅಧ್ಯಕ್ಷರ ಆಭಾರಮನ್ನಿಸಿ ಸ್ಥಾನಾಧಿಪತಿಯಾದ ವೀರೇಶನ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಜನರಲ್ ಸೆಕ್ರೆಟರಿ,
ಜಂತ್ಲಿ ವೀರಪ್ಪ ನವಲಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೀರಶೈವಮಹಾಜನಗಳಲ್ಲಿ ವಿಜ್ಞಾಪನೆ.

ಸಮಸ್ತ ವೀರಶೈವರಿಗೆ ಈ ಜಾಹೀರ ಮೂಲಕ ತಿಳುಹಿಸುವದೇನಂದರೆ—ಬಳ್ಳಾರಿಯಲ್ಲಿ ಮದರಾಸು ವೀರಶೈವ ವಿದ್ಯಾವರ್ಧಕಸಂಘದ ಜಾಹೀರ ಪತ್ರಿಕೆ ನಂಬರು ೧ ಪ್ರಕಾರ ನಮ್ಮ ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಜಾಗ್ರತೆಗಾಗಿ ಒಂದು ಮಹಾಜನ ಸಂಘವು ಸ್ಥಾಪಿತವಾಗಿ ಸುಮಾರು ಒಂದು ವರ್ಷವಾಗುತ್ತ ಬಂದಿತು. ರಾಷ್ಟ್ರದಲ್ಲಿ ರಾಜಕೀಯ ವಾತಾವರಣವು ಪ್ರತಿ ವರುಷವೂ ಕ್ರಮವಾಗಿ ಹೆಚ್ಚುತ್ತಲಿದೆ ಪ್ರತಿಯೊಂದು ಹಿಂದುಳಿದ ಜನಾಂಗವು ತನ್ನ ಅಜ್ಞಾನ ನಿದ್ರೆಯನ್ನು ಬಿಟ್ಟು ಎದ್ದು ಸರಕಾರಕ್ಕೆ ತನ್ನ ಪರಿಸ್ಥಿತಿಯನ್ನು ವ್ಯಕ್ತಪಡಿಸುತ್ತ ತನ್ನ ಶ್ರೇಯೋಭಿವೃದ್ಧಿಗಾಗಿ ಕಾಯಾವಾಙ್ಮನಸ್ಸುಗಳಿಂದ ಉತ್ಸಾಹಪೂರ್ವಕವಾಗಿ ಹೋರಾಡುವ ತರುಣರನ್ನು ವರ್ಷವರ್ಷವೂ ಕಾಯದೆ ಕೌನ್ಸಿಲ್ಲುಗಳಿಗೆ ಕಳುಹಿಸುತ್ತಲಿರುವದು. ಅಂತಹ ಜನಾಂಗವಾದರೂ ಅಂತಹ ತರುಣರನ್ನು ಪ್ರೋತ್ಸಾಹಿಸಿ ಯಾವ ಯಾವ ಸಹಾಯವಾಗಬೇಕೋ ವ್ಯವಸ್ಥೆಯಾಗಬೇಕೋ ಅವುಗಳನ್ನೆಲ್ಲಾ ಮಾಡಿ ಉಮೇದುವಾರರನ್ನಾಗಿ ಚುನಾಯಿಸುವದು. ನಮ್ಮ ಸಮಾಜವು ಮದ್ರಾಸು ಇಲಾಖೆಯಲ್ಲಿ ರಾಜಕೀಯ ಪರಿಸ್ಥಿತಿಯಲ್ಲಿ ಅಜ್ಞಾನ ನಿದ್ರೆಯನ್ನು ಅನುಕರಿಸುವದು ಕಡು ಶೋಚನೀಯವು. ಯಾವ ಕರ್ಣಾಟಕರಾಷ್ಟ್ರದಲ್ಲಿ ವರ್ತಕತನ ವ್ಯವಸಾಯ ಸಾಂಪತ್ತಿಕಸ್ಥಿತಿಯಲ್ಲಿ ನಮ್ಮ ಜನಾಂಗವು ತಿಲಕಸ್ವರೂಪವಾಗಿರುತ್ತದೆಯೋ ಯಾವ ಕನ್ನಡನಾಡಿನಲ್ಲಿ ನಮ್ಮ ವೀರಶೈವತರುಣರು ಸರ್ಕಾರಿ ವಿದ್ಯೆಯಲ್ಲಿ ಮುಂದುವರಿದು ಸುಧಾರಣೆಯ ಸುಗ್ಗಿಯಲ್ಲಿ ನಲಿದಾಡುತ್ತಲಿರುವರೋ ಯಾವ ಪ್ರದೇಶದಲ್ಲಿ ಶಾಸ್ತ್ರವೇತ್ತರೂ ಜೀವಿಕೋಪಿದರೂ ಪಂಡಿತ ಶ್ರೇಷ್ಠರೂ ನಮ್ಮ ಜನಾಂಗದಲ್ಲಿ ಸಂದೋಹಶಃಣನಾಗಿ ಇರುವರೋ ಅಂತಹ ಘನಗಂಭೀರವಾದ ವೀರಶೈವಜನಾಂಗವು ಇದೇ ಕನ್ನಡನಾಡಿಗೆ ಮುಖ್ಯಕೇಂದ್ರವಾದ ನಮ್ಮ ಜಿಲ್ಲೆಯ ರಾಜಕೀಯ ಪರಿಸ್ಥಿತಿಯಲ್ಲಿ ಮೌನಧಾರಣವನ್ನು ವಹಿಸಿರುವದು ಶೋಚನೀಯವಾಗಿದೆ. ವೀರಶೈವರೇ! ನಮ್ಮ ಪರಿಸ್ಥಿತಿಯು ಕ್ರಮೇಣ ಹೀನಸ್ಥಿತಿಗೆ ಬರುತ್ತಿರುವದು. ನಮಗಿಂತಲೂ ಹಿಂದುಳಿದ ಸಹೋದರರಾದರೋ ರಾಜಕೀಯ ಸುಧಾರಣೆಯನ್ನರಿತು ಕೌನ್ಸಿಲುಗಳಿಗೆ ತಮ್ಮ ತರುಣರನ್ನು ಕಳುಹಿಸಿ ತಮ್ಮ ಕುಂದುಕೊರತೆಗಳನ್ನು ಮುಂದಿಟ್ಟು ತೀವ್ರ ಮುಂಪರಿದು ರಾಜಕೀಯ ಸ್ಥಿತಿಯಲ್ಲಿ ಅಣುಮಾತ್ರ ಸ್ಥಳವಿಲ್ಲದೆ ಪೇಚಾಡುತ್ತಲಿರುವ ನಮ್ಮ ಜನಾಂಗಕ್ಕೆ ಇದುವರೆಗೂ ಯಾವ ಸಹಾಯವನ್ನು ಮಾಡಿರುವದಿಲ್ಲ. ಅಜ್ಞಾನನಿದ್ರೆಯಿಂದ ಬೇಗನೆ ಏಳಿರಿ, ನಮ್ಮ ತರುಣರನ್ನು ಉತ್ಸಾಹಪೂರ್ವಕವಾಗಿ ಉಮೇದುವಾರರನ್ನಾಗಿ ನಿಲ್ಲಿಸಿರಿ. ಕೌನ್ಸಿಲ್ ಚುನಾವಣೆಯು ಸಮೀಪಿಸಿತು. ಈ ಸಮಯದಲ್ಲಿ ನಮ್ಮ ಇತರ ಸಮಾಜಗಳ ಸಹೋದರರು ನಮ್ಮ ಜಿಲ್ಲೆಯಲ್ಲಿ ಉಮೇದುವಾರರಾಗಿ ನಿಲ್ಲುವದಕ್ಕೆ ತಮ್ಮ ಕೆಲಸವನ್ನು ಪ್ರಾರಂಭಮಾಡಿರುವರು. ನಮ್ಮಲ್ಲಿ ಒಬ್ಬರನ್ನು ನಿಲ್ಲಿಸಲು ಪ್ರಯತ್ನಮಾಡಿ ನಿಂತವರಿಗೆ ಎಲ್ಲಾ ವಿಧದಿಂದ ತ್ರಿಕರಣಪೂರ್ವಕವಾಗಿ ಸಹಾಯಮಾಡಿರಿ. ನಮಗೆ ರಾಜಕೀಯ ಸಾಂಪತ್ತಿಕ ಸಾಮಾಜಿಕ ಸಾಧನ ಇಲ್ಲವೆಂದು ತಿಳಿದು ಎಚ್ಚತ್ತು ಈ ಸಾರೆಯಾದರೂ ನಮ್ಮ ತರುಣರನ್ನು ನಿಲ್ಲಿಸಿ ಎಲ್ಲಾ ಸಲಕರಣೆಗಳನ್ನಿತ್ತು ಈ ಕೌನ್ಸಿಲ್ ಚುನಾವಣೆಯಲ್ಲಿ ಸರ್ವರೂ ಒಕ್ಕಟ್ಟಾಗಿ ಯತ್ನಮಾಡಿದರೆ ಜಯವಾಗುವದೆಂದು ನಂಬುತ್ತೇನೆ.

ಇಷ್ಟರಲ್ಲೇ ಮಹಾಜನಸಭೆಯು ಬಳ್ಳಾರಿಯಲ್ಲಿ ನಡೆಯುವಂತೆ ನಿಶ್ಚಯಿಸಿರುತ್ತೇವೆ. ಮಹಾಜನಸಂಘದ ಸಭ್ಯರೆಲ್ಲರೂ ಮುಂದಿನ ಕಾರ್ಯಕ್ರಮಗಳನ್ನು ಕುರಿತು ಆಲೋಚನೆಮಾಡಲು ದಯಮಾಡಿ ಬರಬೇಕೆಂದು ವಿನಂತಿ. ಮಿಟಿಂಗಿನತೇದಿ ಹಾಗೂ ಚರ್ಚಿಸಲ್ಪಡುವ ವಿಷಯಗಳನ್ನು ಜಾಹೀರು ನೋಟೀಸುದ್ವಾರಾ ಮತ್ತು ವಾರ್ತಾಪತ್ರಿಕೆಗಳಲ್ಲಿಯೂ ತಿಳುಹಿಸುತ್ತೇವೆ.

ಶಿವಾಚಾರ್ಯ ಬಸಪ್ಪ, ಸೆಕ್ರೆಟರಿ
ವೀರಶೈವ ಮಹಾಜನಸಂಘ, ಬಳ್ಳಾರಿ.

ಬ್ರಿಟಿಷ್ ಇಂಡಿಯಾದಲ್ಲಿ ಬಾಲ್ಯವಿವಾಹ ನಿರ್ಬಂಧ.

ಸರ್ವತ್ರ ಡಂಗುರ ಸಾರಿಸಿದರು.

ಹಿಂದೆಯೇ ಪ್ರಕಟಿಸಲ್ಪಟ್ಟಿದ್ದಂತೆ ಇದೇ ಏಪ್ರೆಲ್ 1ನೆಯ ತಾರೀಖಿನಿಂದ ಶಾರದಾಬಾಲ್ಯವಿವಾಹನಿರೋಧ ಶಾಸನವು ಜಾರಿಗೆ ಬರುವದೆಂದೂ, 14 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಹುಡುಗಿಯರ ಹಾಗೂ 18 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಹುಡುಗರ ಲಗ್ನವನ್ನು ಮಾಡಕೂಡದೆಂದು ಇಂಡಿಯಾ ಸರಕಾರದವರು ಬ್ರಿಟಿಷ್ ಇಂಡಿಯಾದ ಪ್ರತಿಯೊಂದು ಹಳ್ಳಿಯಲ್ಲಿಯೂ ಗ್ರಾಮಾಧಿಕಾರಿಗಳ ಮೂಲಕ ಡಂಗುರವನ್ನು ಹೊಡೆಯಿಸುತ್ತಿರುವರು. ಸದರಿ ಶಾಸನದ ಮುಖ್ಯಭಾಗಗಳನ್ನು ಇದರಡಿ ಕೊಟ್ಟಿರುವೆವು. ಈ ಕಾಯಿದೆಯು ಬ್ರಿಟಿಷ್ ಇಂಡಿಯಾಕ್ಕೆ ಮಾತ್ರ ಅನ್ವಯಿಸುವದಲ್ಲದೆ ಮೈಸೂರು, ಹೈದರಾಬಾದ್, ಬರೋಡಾ ಮೊದಲಾದ ದೇಶೀಯ ರಾಜರಿಂದ ಆಳಲ್ಪಡುತ್ತಿರುವ ಸಂಸ್ಥಾನಗಳಿಗೆ ಅನ್ವಯಿಸುವದಿಲ್ಲವೆಂಬುದನ್ನು ಎಲ್ಲರೂ ತಿಳಿಯತಕ್ಕದ್ದು.

ಶಾಸನದ ವಿವರ.

ಏಪ್ರೆಲ್ 1 ನೆಯ ತಾರೀಖಿನ ದಿವಸ ಬಾಲ್ಯವಿವಾಹ ಪ್ರತಿಬಂಧಕ ಆಕ್ಟು ಅಮಲಿನಲ್ಲಿ ಬರುವದಿದೆ.

ಆ ತಾರೀಖಿನಿಂದ ಮುಂದೆ ಯಾವ ತರಹದ ಬಾಲ್ಯವಿವಾಹಕ್ಕೂ ಪರವಾನಗಿ ಇರುವದಿಲ್ಲ. ಇಂಥ ಮದುವೆಗಳಾದರೆ, ಕೈದು ಅಥವಾ ದಂಡದ ಶಿಕ್ಷೆಯಾಗುವದು.

ಬಾಲ್ಯವಿವಾಹವೆಂದರೆ—ಗಂಡನು 18 ಮತ್ತು ಹೆಂಡತಿಯು 14ವರ್ಷಕ್ಕಿಂತ ಕಡಿಮೆ ವಯಸ್ಸಿನವರಿದ್ದಂಥ, ಅಥವಾ ಹೆಂಡತಿಯು 14 ವರ್ಷಕ್ಕಿಂತ ಕಡಿಮೆ ಮತ್ತು ಗಂಡನು 18 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಿದ್ದಂಥ, ಅಥವಾ ಹೆಂಡತಿಯು 14 ವರ್ಷಕ್ಕಿಂತ ಹೆಚ್ಚು ಮತ್ತು ಗಂಡನು 18ವರ್ಷಕ್ಕಿಂತ ಕಡಿಮೆ ವಯಸ್ಸಿನವರಿದ್ದಂಥ ವಿವಾಹವು.

ಹೆಚ್ಚು ಮಾಹಿತಿಯ ಬಗ್ಗೆ ಯಾವದೇ ಸರಕಾರಿ ಕಚೇರಿಯಲ್ಲಿ ಪೋಸ್ಟ ಕಚೇರಿಯಲ್ಲಿ ಮುನಸಿಪಾಲಿಟಿಯಲ್ಲಿ ಅಥವಾ ಲೋಕಲ್‌ಬೋರ್ಡ್ ಕಚೇರಿಯಲ್ಲಿ ಫುಕ್ಕಟೆಯಾಗಿ ದೊರೆಯುವ ಚಿಕ್ಕ ಪುಸ್ತಕವನ್ನು ನೋಡಿರಿ.

1. ಬಾಲಿಕೆಯರನ್ನು ಮದುವೆಯಾಗುವ ವಯಸ್ಕರಾದ ಗಂಡಸರು,

2. ಬಾಲ್ಯವಿವಾಹವನ್ನು ಪ್ರತ್ಯಕ್ಷವಾಗಿ ಮಾಡುವ ನಡೆಯಿಸುವ ಅಥವಾ ನಿರ್ದೇಶಿಸುವ ಮನುಷ್ಯರು,

3. ಬಾಲ್ಯವಿವಾಹಕ್ಕೆ ಉತ್ತೇಜನಕೊಡುವ ಅಥವಾ ಪರವಾನಗಿ ಕೊಡುವ, ಅಥವಾ ಅದನ್ನು ನೆರವೇರಿಸುವದನ್ನು ಪ್ರತಿಬಂಧಿಸಲಿಕ್ಕೆ ತಾತ್ಸಾರಪೂರ್ವಕವಾಗಿ ತಪ್ಪುವ ತಾಯಿತಂದೆಗಳು ಮತ್ತು ಪಾಲಕರು ಶಿಕ್ಷೆಗೆ ಗುರಿಯಾಗುವರು.

1. 18 ಮತ್ತು 21 ವರ್ಷಗಳ ನಡುವಿನ ವಯಸ್ಸಿನ ಗಂಡಸರಿಗೆ ಕೈದು ಇಲ್ಲ. ಆದರೆ ಬಾಲ ಕನ್ನಿಕೆಯರನ್ನು ಅಂದರೆ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲೆಯರನ್ನು ಮದುವೆಯಾದ, ಬಗ್ಗೆ 1000 ರೂಪಾಯಿಯ ವರೆಗಿನ ದಂಡದ ಶಿಕ್ಷೆಯು ಮಾತ್ರ ಇರುತ್ತದೆ.

2. (ಅ) 21 ವರ್ಷ ವಯಸ್ಸಿನ ಮೇಲಿರುವ ಗಂಡಸರು ಬಾಲಕನ್ನಿಕೆಯರನ್ನು ಮದುವೆಯಾದ (ಬ) ಪುರೋಹಿತರು ಅಥವಾ ಇತರ ಮನುಷ್ಯರು ಬಾಲವಿವಾಹದ ಸಮಾರಂಭವನ್ನು ಪ್ರತ್ಯಕ್ಷವಾಗಿ ಮಾಡಿದ (ಕ) ತಂದೆ ಅಥವಾ ಪಾಲಕರು ಬಾಲವಿವಾಹಕ್ಕೆ ಉತ್ತೇಜನ ಕೊಟ್ಟ ಅಥವಾ ಪರವಾನಗಿ ಕೊಟ್ಟ ಬಾಬತುಗಳಲ್ಲಿ ಒಂದು ತಿಂಗಳವರೆಗಿನ ಸಾದಾ ಕೈದಿನ ಅಥವಾ 1000 ರೂಪಾಯಿಯ ವರೆಗಿನ ದಂಡದ ಅಥವಾ ಎರಡೂ ಪ್ರಕಾರದ ಶಿಕ್ಷೆಯು.

3. ತಾಯಿತಂದೆಗಳಿಗೆ ಮತ್ತು ಪಾಲಕರಿಗೆ ಕೈದಿನ ಶಿಕ್ಷೆ ಇಲ್ಲ. ಆದರೆ ಬಾಲವಿವಾಹಗಳಿಗೆ ಪರವಾನಗಿ ಕೊಟ್ಟ ಬಗ್ಗೆ 1000 ರೂಪಾಯಿಯ ವರೆಗಿನ ದಂಡದ ಶಿಕ್ಷೆ ಮಾತ್ರ ಇರುತ್ತದೆ.

4. ಬಾಲಹುಡುಗರನ್ನು ಅಂದರೆ 18 ವರ್ಷದ ಕೆಳಗಿನ ವಯಸ್ಸಿನ ಹುಡುಗರನ್ನು ವಯಸ್ಸಿಗೆ ಬಂದ ಹೆಂಗಸರು ಮದುವೆಮಾಡಿಕೊಂಡ ಬಗ್ಗೆ ಅವರಿಗೆ ಯಾವ ಶಿಕ್ಷೆಯೂ ಇಲ್ಲ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ನೂತನ ಶಿಲಾಮಠಪ್ರವೇಶೋತ್ಸವಾಹ್ವಾನ ಪತ್ರಿಕಾ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ.

ಕಲ್ಲುಹೊಳೆ.

ಬಳ್ಳಾರಿ ಜಿ|| ರಾಯದುರ್ಗ ತಾ|| ಕಲ್ಲುಹೊಳೆ ಗ್ರಾಮದ ಮಠಾಧಿಕಾರಿಗಳಾದ ವೇ|| ಕಲ್ಲುಹೊಳೆಯಪ್ಪಯ್ಯನವರು ಶಿಥಿಲವಾಗಿದ್ದ ಪ್ರಾಚೀನ ಮಠವನ್ನು ನೂತನವಾಗಿ ಶಿಲೆಯಿಂದ ನಿರ್ಮಿಸಿ ಸದರಿ ಮಠದ ಪ್ರತಿಷ್ಠಾದಿ ಕಾರ್ಯಗಳನ್ನು ತಮ್ಮ ಪಂಚಾಚಾರ್ಯರಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ನೆರವೇರಿಸುವದನ್ನು ನಿಶ್ಚಯಿಸಿದ್ದಾರೆ.

ಕಾರ್ಯಕ್ರಮಗಳು.

ಶ್ರೀ ಶಾಲಿವಾಹನಶಕ ೧೮೫೨ ನೆಯ ಪ್ರಮೋದನಾಮ ಸಂ|| ವೈಶಾಖ ಬಹುಳ ೩ ಗುರುವಾರ ೯-೫೦ ಗಳಿಗೆಯ ಮೇಲೆ ೧೨ ಗಳಿಗೆಯೊಳಗೆ ಸಲ್ಲುವ ಕುಂಭ ಕರ್ಣಾಟಕಲಗ್ನದಲ್ಲಿ ಗಣಪತಿಪೂಜಾ, ಪುಣ್ಯಾಹವಾಚನ, ನಾಂದೀಸಮಾರಾಧನ ಮತ್ತು ಮಠಪ್ರವೇಶ.

ಇದೇ ದಿವಸ ೪೮ ಗಳಿಗೆಯ ಮೇಲೆ ೫೧ ಗಳಿಗೆಯೊಳಗೆ ಸಲ್ಲುವ ಬ್ರಾಹ್ಮೀಮುಹೂರ್ತದ ಕುಂಭಲಗ್ನದಲ್ಲಿ ಮಾಹೇಶ್ವರವಟುಗಳ ದೀಕ್ಷಾ ಸಮಾರಂಭ, ಹಾಗೂ ನಂದೀಶ್ವರಪ್ರತಿಷ್ಠಾ.

ಬಹುಳ ೪ ಶುಕ್ರವಾರ ಸೂರ್ಯೋದಯವಾದ ೯-೩೦ ಗಳಿಗೆಯ ಮೇಲೆ ೧೨ ಗಳಿಗೆಯೊಳಗೆ ಸಲ್ಲುವ ಕರ್ಣಾಟಕಲಗ್ನದಲ್ಲಿ ಶ್ರೀ ಜಗದ್ಗುರುಗಳ ಪಾದಪೂಜೆ ಹಾಗೂ ಗಣಾರಾಧನೆ.

ಬಹುಳ ೫ ಶನಿವಾರ ಸೂರ್ಯೋದಯವಾದ ೧೨ ಗಳಿಗೆಯ ಮೇಲೆ ೧೬ ಗಳಿಗೆಯೊಳಗೆ ಸಲ್ಲುವ ಶಿವಲಿಖಿತಾನುಸಾರವಾದ ಅಮೃತಕಾಲದಲ್ಲಿ ಶ್ರೀ ಜಗದ್ಗುರುಗಳ ಪಾದಗಳಿಗೆ ಲಕ್ಷಬಿಲ್ವಾರ್ಚನೆ.

ಬಹುಳ ೬ ರವಿವಾರ ಸೂರ್ಯೋದಯವಾದ ೧೧-೩೦ ಗಳಿಗೆಗೆ ಸಲ್ಲುವ ಕರ್ಣಾಟಕಲಗ್ನದಲ್ಲಿ ಧರ್ಮ ವಿವಾಹಗಳು ಹಾಗೂ ಶ್ರೀ ಜಗದ್ಗುರುಗಳವರಿಗೆ ಗಜದಾನ.

ಈ ಪ್ರಕಾರವಾಗಿ ಯಾವತ್ತು ಕಾರ್ಯಕ್ರಮಗಳು ಅತ್ಯಂತ ವೈಭವದಿಂದ ನೆರವೇರುವವು. ದೀಕ್ಷೆಯಾಗತಕ್ಕ ಮಾಹೇಶ್ವರವಟುಗಳು ತಮ್ಮ ತಮ್ಮ ಮಠ, ಗೋತ್ರಸೂತ್ರ, ವಯಸ್ಸು ಮೊದಲಾದವುಗಳನ್ನು ಚೈತ್ರ ಬಹುಳ ೩೦ ಒಳಗಾಗಿ ಬರೆದು ತಿಳುಹಿಸಬೇಕು. ಧರ್ಮಾರ್ಥವಾಗಿ ಲಗ್ನವಾಗಲಿಚ್ಛಿಸುವವರೂ ಸಹ ತಮ್ಮ ತಮ್ಮ ಗ್ರಾಮ, ಪೋಸ್ಟು, ವಯಸ್ಸು, ಜಾತಿ ಮೊದಲಾದವುಗಳನ್ನು ಚೈತ್ರ ಬಹುಳ ೩೦ ಒಳಗಾಗಿ ತಿಳುಹಿಸಬೇಕು.

ಈ ಯಾವತ್ತೂ ಕಾರ್ಯಗಳು ಸಾಕ್ಷಾತ್ಪರಶಿವನ ಅವತಾರವಾಗಿರುವವರೆಂದು ಲೋಕವಿಖ್ಯಾತರಾಗಿರುವ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ನೆರವೇರುವದರಿಂದ ಇಂತಹ ಪುಣ್ಯಕಾಲವು ಮತ್ತೊಮ್ಮೆ ದೊರೆಯಲಾರದೆಂದು ಹೇಳಬಹುದಾಗಿದೆ. ಆದುದರಿಂದ ಈ ಮಹಾಸಮಾರಂಭಕ್ಕೆ ಸಕಲ ಭಕ್ತಮಾಹೇಶ್ವರರೂ ಆಗಮಿಸಿ ಕಾರ್ಯವನ್ನು ಸಾಂಗಗೊಳಿಸಿ ಶ್ರೀ ಜಗದ್ಗುರುವಿನ ಕೃಪೆಗೆ ಪಾತ್ರರಾಗಬೇಕೆಂದು ಕೋರುವ.

ಕಾರ್ಯದರ್ಶಿ.

N. B.—ಕಲ್ಲುಹೊಳೆ ಗ್ರಾಮಕ್ಕೆ ಬರತಕ್ಕವರು ಬಳ್ಳಾರಿ ಸ್ಟೇಷನಕ್ಕೆ ಇಳಿದು ಅಲ್ಲಿಂದ ಹನ್ನೆರಡು ಮೈಲು ದೂರದಲ್ಲಿರುವ ಬೊಮ್ಮನಹಾಳ ಗ್ರಾಮಕ್ಕೆ ಮೋಟಾರಿನಿಂದ ಬರಬೇಕು. ಬೊಮ್ಮನಹಾಳಿಂದ ಕಲ್ಲುಹೊಳೆಯು ೫ ಮೈಲು ಇರುತ್ತದೆ. ಬೊಮ್ಮನಹಾಳ ಗ್ರಾಮದಲ್ಲಿ ಭಾಡಿಗೆ ಬಂಡಿಗಳು ದೊರೆಯುವವು.

ತುಳಸೀ ಬಿಲ್ವಗಳು.

ಈ ಎರಡು ಗಿಡಗಳೂ ಪವಿತ್ರಗಳೆಂದೂ, ಪೂಜಾರ್ಹಗಳೆಂದೂ ಹೇಳಿಸಿಕೊಂಡುದೇಕೆ?

ನಮ್ಮ ಹಿಂದೂಶಾಸ್ತ್ರಾನುಸಾರವಾಗಿ, ಸೃಷ್ಟಿಸ್ಥಿತಿ ಲಯಕರ್ತರೆನಿಸಿದ ತ್ರಿಮೂರ್ತಿಗಳಲ್ಲಿ, ಸೃಷ್ಟಿಕರ್ತನಾದ ಬ್ರಹ್ಮನಿಗೆ ಮಾತ್ರ ದೇವಾಲಯವಿಲ್ಲ. ಅವನಿಗೆ ಪೂಜೆಯಿಲ್ಲ. ಅವನಿಗೆ ಪುಷ್ಪಫಲಾದಿ ಸಮರ್ಪಣೆಗಳೂ ಇಲ್ಲ. ಸ್ಥಿತಿಕರ್ತನಾದ ಮಹಾವಿಷ್ಣುವಿಗೂ, ಲಯಕರ್ತನಾದ ಪರಮಶಿವನಿಗೂ ಎಲ್ಲೆಲ್ಲಿಯೂ ದೇವಾಲಯಗಳುಂಟು. ಪೂಜಾಪುರಸ್ಕಾರಾದಿಗಳುಂಟು, ಬೇಕಾದಷ್ಟು ಹರಕೆಗಳುಂಟು. ಈ ದೇವತೆಗಳಿಬ್ಬರಿಗೂ ಕ್ರಮವಾಗಿ, ತುಳಸೀದಳಗಳೂ, ಬಿಲ್ವಪತ್ರಗಳೂ ಪ್ರಧಾನವಾದ ಪೂಜಾದ್ರವ್ಯಗಳೆನಿಸಿವೆ. ಬ್ರಹ್ಮನಿಗೆ ಪೂಜೆಯಿಲ್ಲದುದಕ್ಕೆ ಪುರಾಣೋಕ್ತಗಳಾದ ಹಲಕೆಲವು ಕಥೆಗಳುಂಟು. ಅವೆಲ್ಲವೂ ಈಗ ನಮಗೆ ಪ್ರಕೃತವಲ್ಲ. ಹರಿ ಹರರಿಬ್ಬರಿಗೂ ಕ್ರಮವಾಗಿ ತುಳಸೀಬಿಲ್ವಗಳೆರಡೂ ಪ್ರಧಾನ ಪೂಜಾದ್ರವ್ಯಗಳಾಗಿ ಏರ್ಪಟ್ಟುದೇಕೆಂಬುದನ್ನು ನಿರೂಪಿಸುವುದೇ ಈ ನಮ್ಮ ಲೇಖನದ ವಿಷಯವಾಗಿದೆ. ತುಳಸೀಬಿಲ್ವಗಳೆರಡೂ ಸಾಮಾನ್ಯವಾದ ಎರಡು ಕಾಡುಗಿಡಗಳು. ಅಂದದಲ್ಲಿಯೂ, ಆಕೃತಿಯಲ್ಲಿಯೂ, ಬಣ್ಣದಲ್ಲಿಯೂ, ಸುವಾಸನೆಯಲ್ಲಿಯೂ ಮೇಲೆನಿಸಿದ ಬೇರೆ ಎಷ್ಟೋ ಹೂಗಳೂ, ಎಲೆಗಳೂ ಇರುವಾಗ, ಇವೆರಡನ್ನು ಮಾತ್ರ ಹಿಂದುಗಳು ಬಹಳ ಪವಿತ್ರವೆಂದೂ, ದೇವತೆಗಳಿಗೆ ಅವು ಬಹಳ ಪ್ರಿಯವಾದುವೆಂದೂ ಆದರಿಸುತ್ತಿರುವುದೇಕೆಂಬ ಪ್ರಶ್ನೆಗೆ ಅವಕಾಶವುಂಟಲ್ಲವೆ? ಇದಕ್ಕೆ ಸಮಾಧಾನವನ್ನು ಬಹು ಸುಲಭವಾಗಿ ನಿರೂಪಿಸಿ ತೋರಿಸಬಹುದು. ಈ ಎರಡು ಮೂಲಿಕೆಗಳೂ, ಜೀವಾಧಾರಗಳೂ ಮತ್ತು ಜೀವರಕ್ಷಕಗಳೂ ಆದ ಮೂಲವಸ್ತುಗಳನ್ನೊಳಕೊಂಡಿವೆ. ಪ್ರತಿದಿನವೂ ದೇವತಾಪೂಜೆಯಾದ ಮೇಲೆ, ದಳಗಳ ಸಂಬಂಧವುಳ್ಳ ತೀರ್ಥವನ್ನು ಹೊಟ್ಟೆಗೆ ತೆಗೆದುಕೊಳ್ಳುವುದರಿಂದ, ಮನುಷ್ಯರಿಗೆ ಭಗವಂತನು ಆಯುರಾರೋಗ್ಯವನ್ನು ಹೆಚ್ಚಿಸುವನೆಂದು ಹಿರಿಯರು ಹೇಳುವುದುಂಟು. ಈ ಹೇಳಿಕೆಯು ಸುಳ್ಳಲ್ಲ. ಆ ಎಲೆಗಳಲ್ಲಿ ಅಂತಹ ಆರೋಗ್ಯಕರಗಳಾದ ಗುಣವಿಶೇಷಗಳುಂಟೆಂಬುದನ್ನು ಮುಂದಿನ ವಿಚಾರಗಳಿಂದ ವಾಚಕರೇ ತಿಳಿದುಕೊಳ್ಳಬಹುದು. ಆ ಗಿಡದ ಎಲೆಗಳಲ್ಲಿರುವ ಮೂಲವಸ್ತುಗಳೆಲ್ಲ ಮನುಷ್ಯನಿಗೆ ಆರೋಗ್ಯಕರಗಳೂ, ವ್ಯಾಧಿನಿವಾರಕಗಳೂ ಆಗಿವೆ.

ತುಳಸಿ.

ತುಳಸೀಗಿಡಕ್ಕೆ ಸಂಸ್ಕೃತದಲ್ಲಿ ವಿಷ್ಣುಪ್ರಿಯಾ, ದಿವ್ಯಾ, ಕೃಷ್ಣಮೂಲಾ, ಭಾರತೀ ಇತ್ಯಾದಿ ಪರ್ಯಾಯನಾಮಗಳು ಹೇಳಲ್ಪಟ್ಟಿವೆ. ಇಂಗ್ಲೀಷಿನಲ್ಲಿ ಇದಕ್ಕೆ "ಹೋಲಿ ಬೇಸಿಲ್" ಎಂಬ ಪವಿತ್ರವಾದ ಒಂದು ಮೂಲಿಕೆಯೆಂದೂ, ದಕ್ಷಿಣ ಆಫ್ರಿಕದಲ್ಲಿ ಇದಕ್ಕೆ ಸೊಳ್ಳೆಗಳನ್ನು ನಿವಾರಿಸತಕ್ಕ ಗಿಡವೆಂದೂ, ಹೇಳುವರು. ಫ್ರೆಂಚರು ಇದಕ್ಕೆ "ಬೇಸಲಿಕ್ ಸೆಯಿಂಟ್" ಎಂದು ಯೋಗಿನೀಶಬ್ದಾರ್ಥವನ್ನು ಕೊಡುವಂತೆ ಹೆಸರಿಟ್ಟಿರುವರು. ಹೀಗೆಯೇ ಹಿಂದಿ, ಬಂಗಾಳಿ, ಮರಾಠಿ, ಕೊಂಕಣಿ, ಈ ಭಾಷೆಗಳೊಳಗೆಲ್ಲ ಕಾಲತುಲಸಿ, ಕೃಷ್ಣತುಲಸಿ, ತುಲಸಿ, ಇತ್ಯಾದಿ ಹೆಸರುಗಳುಂಟು. ಕನ್ನಡದಲ್ಲಿ ಶ್ರೀ ತುಳಸಿಯೆಂದೂ, ಮಲಯಾಳದಲ್ಲಿ ಶಿವತುಳಸಿಯೆಂದೂ ಹೇಳುವರು. ಸಿಂಹಳದ್ವೀಪದವರು "ಮದೂರುತೆಲ್ಲಾ" ಎಂದು ವ್ಯವಹರಿಸುವರು.

ಈ ಗಿಡಗಳು ಬೆಳೆಯುವ ಸ್ಥಳ—ಇದು ಇಂಡಿಯಾದೇಶದ ಎಲ್ಲಾ ಭಾಗಗಳಲ್ಲಿಯೂ ಬೆಳೆಯುವುದು. ಇದು ಕಾಡುಗಳಲ್ಲಿ ತಾನಾಗಿ ಬೆಳೆಯುವ ಗಿಡವಾಗಿದ್ದರೂ, ಹಿಂದೂಜನರು ಮನೆಮನೆಗಳಲ್ಲಿಯೂ ಇದನ್ನು ಬಹಳ ಪ್ರೀತಿಯಿಂದ ಬೆಳೆಸುವರು. ಹಿಂದುಗಳು ಇದನ್ನು ಅತಿ ಪವಿತ್ರವಾದುದೆಂಬ ಒಂದು ಅಂಧ ವಿಶ್ವಾಸದಿಂದ ಪೂಜಿಸುವರೆಂದು ಮತಾಂತರದವರ ಅಭಿಪ್ರಾಯವಿರಬಹುದು. ಆರೋಗ್ಯದೃಷ್ಟಿಯಿಂದ ನೋಡುವಪಕ್ಷದಲ್ಲಿ, ಈ ಮೂಲಿಕೆಯು ಆವಶ್ಯಕವಾದ ಮೂಲವಸ್ತುಗಳಲ್ಲಿ ರಕ್ಷಕನಾಗಿರುವುದರೊಡನೆ, ತುಲಸೀ ಗಂಧ ವಿಶಿಷ್ಟವಾದ ಗಾಳಿ ಬೀಸಿದರೂ ಅದರಿಂದ ಆರೋಗ್ಯವುಂಟೆಂಬುದೇ ಈ ಪದ್ಧತಿಯ ಅಂತರೋದ್ದೇಶವಾಗಿರಬಹುದು.

ಈ ಗಿಡದಲ್ಲಿ ಉಪಯುಕ್ತಭಾಗಗಳು—ಇದರ ಎಲ್ಲಾ ಭಾಗಗಳೂ ಎಂದರೆ, ಎಲೆ, ಕಡ್ಡಿ ಮತ್ತು ಬೀಜ ಇವೆಲ್ಲ ಉಪಯೋಗವಾಗುವುವು.

ಇದರಲ್ಲಿರುವ ಗುಣಾಂಶಗಳು—ಇದು ದೇಹದಲ್ಲಿ ಕಫೋದ್ರೇಕಗಳಿಂದ ರಚನಾತಂತುಗಳಿಗೆ ಉಪಶಾಂತಿಯನ್ನು ಕೊಟ್ಟು ಶೀತದೋಷವನ್ನು ನಿವಾರಿಸುವುದು. ಮತ್ತು ವಿಷಹಾರಕ ಗುಣವುಳ್ಳದು.

ಇದರ ಉಪಯೋಗಕ್ರಮಗಳು—ಪವಿತ್ರವೆನಿಸಿದ ಈ ಗಿಡದ ದಳಗಳನ್ನು ವಿಷ್ಣುಪೂಜೆಗಾಗಿ ಉಪಯೋಗಿಸುವುದಲ್ಲದೆ, ಅನೇಕ ರೋಗಗಳಿಗೂ ಇದನ್ನು ಔಷಧಿಗಾಗಿ ಉಪಯೋಗಿಸುವರು. ಸೊಳ್ಳೆಗಳ ನಿವಾರಣೆಗೆ ಇದು ಬಹಳ ಅನುಕೂಲವಾದುದು. ಮಲೇಜ್ವರದಲ್ಲಿಯೂ ಮತ್ತು ಮಕ್ಕಳಿಗೆ ಅಜೀರ್ಣ, ಮಾಂದ್ಯ, ಗಡ್ಡೆ ಮೊದಲಾದ ವ್ಯಾಧಿಗಳಲ್ಲಿಯೂ ಇದರ ಎಲೆಯ ಕಷಾಯವನ್ನು ಉಪಯೋಗಿಸುವರು.

ಲೋಹಸಂಬಂಧವಾದ ಔಷಧಗಳನ್ನು ಎಂದರೆ ಭಸ್ಮಾದಿಗಳನ್ನು ತುಳಸೀರಸದಲ್ಲಿ ಕಲೆಸಿ ಕೊಡುವದುಂಟು.

ನಿಂಬೇ ರಸದಲ್ಲಿ ತುಳಸೀದಳವನ್ನರೆದು ಲೇಪಿಸುವದರಿಂದ, ಹುಳಕಡ್ಡಿಗಳು ನಿವಾರಣವಾಗುವುವು.

ಒಣಗಿದ ತುಳಸೀಗಿಡವನ್ನು ತಂದು, ಪತ್ರಕ್ಕೆ ಒಂದು ಭಾಗವಾಗಿ ಕಷಾಯವನ್ನಿಳಿಸಿ ಕೊಟ್ಟರೆ, ಉಬ್ಬಸ, ಕಫಬಾಧೆ, ಶೀತ, ಎದೆಛಳಿ, ಕೆಮ್ಮಲು ಮುಂತಾದ ಶ್ವಾಸಕೋಶಗಳಿಗೆ ಸಂಬಂಧಪಟ್ಟ ಬಾಧೆಗಳಿಗೆಲ್ಲ ಒಳ್ಳೇ ಔಷಧವಾಗುವುದು.

ತುಳಸೀ ಎಲೆಯನ್ನು ಕಷಾಯಹಾಕಿ, ಅದಕ್ಕೆ ಸ್ವಲ್ಪ ಏಲಕ್ಕಿಪುಡಿ ಮತ್ತು ಒಂದು ತೊಲೆಯಷ್ಟು ಸಾಲಾಮಿಶ್ರಿಪುಡಿಯನ್ನು ಸೇರಿಸಿ, ಕೆಲವು ವೇಳೆ ತೆಗೆದುಕೊಳ್ಳುವುದರಿಂದ, ಒಳ್ಳೇಪುಷ್ಟಿವರ್ಧಕವೂ, ಮತ್ತು ಧಾತುವರ್ಧಕವೂ ಆದ ಪಾನೀಯವೆನಿಸುವುದು.

ತುಳಸೀ ರಸವನ್ನು ಕಿವಿಗೆ ಹಿಂಡುವುದು ಕಿವಿಬೇನೆಗೆ ಒಳ್ಳೇ ಚಿಕಿತ್ಸೆಯಾಗಿದೆ.

ಒಂದು ತೊಲೆಯಷ್ಟು ತುಳಸೀರಸವನ್ನು ಪ್ರತಿದಿನದ ಬೆಳಗ್ಗೆ ಹೊಟ್ಟೆಗೆ ತೆಗೆದುಕೊಳ್ಳುವದರಿಂದ, ಬಹಳ ಹಳೇಜ್ವರಗಳೂ, ಆಮಶಂಕೆ, ಅಜೀರ್ಣ, ರಕ್ತಭೇದಿ, ಗುಲ್ಮ ಮುಂತಾದ ವ್ಯಾಧಿಗಳೂ ಗುಣವಾಗುವುವೆಂದು ಹೇಳುವರು.

ಶುಂಠಿಯ ರಸದೊಡನೆ ತುಳಸೀರಸವನ್ನು ಸೇರಿಸಿ ಮಕ್ಕಳಿಗೆ ಕೊಡುವುದರಿಂದ, ಅವುಗಳಿಗೆ ಅಜೀರ್ಣಸಂಬಂಧವಾದ ಜ್ವರವ್ಯಾಧಿಗಳು ನಿವೃತ್ತವಾಗುವುವು. ಮತ್ತು ಒಂದು ತೊಲೆಯಷ್ಟು ಮೆಣಸಿನ ಪುಡಿಯನ್ನು ತುಳಸೀರಸಕ್ಕೆ ಹಾಕಿಕೊಡುವುದರಿಂದ ಮಕ್ಕಳಿಗೆ ಶೀತಜ್ವರ, ಮಂದಜ್ವರ ಮುಂತಾದುವೆಲ್ಲ ನಿಲ್ಲುವುವು.

ಶುಂಠಿಯ ರಸ, ಜೇನು, ಈರುಳ್ಳಿಯರಸ, ಇವು ಮೂರನ್ನೂ ತುಳಸೀರಸಕ್ಕೆ ಸೇರಿಸಿ ಕೊಡುವುದರಿಂದ ಮಕ್ಕಳಿಗೆ ಕಫದೋಷಗಳೆಲ್ಲವೂ ಬಿಟ್ಟುಹೋಗುವುವು.

ಹಾವಿನ ಕಡಿತದಲ್ಲಿ ತುಳಸೀಎಲೆಯ ರಸ, ತುಳಸೀ ಹೂವಿನ ತುದಿಯ ರಸ, ಎಳೇ ತುಳಸೀ ಬೇರಿನ ರಸ ಇವು ಮೂರೂ ಒಳ್ಳೇ ವಿಷಹಾರಕದ್ರವ್ಯಗಳಾಗಿವೆ.

ತುಳಸೀಬೀಜವನ್ನು ಮೊಲೆಹಾಲಿನಲ್ಲಿ ಅರೆದು ಕೊಟ್ಟರೆ, ವಾಂತಿಯನ್ನೂ, ಅಜೀರ್ಣ ಶೂಲೆಯನ್ನೂ ನಿಲ್ಲಿಸುವುದೆಂದು ನಂಬಿಕೆಯಿದೆ. ಇದು ಮುಖ್ಯವಾಗಿ ಮಕ್ಕಳಿಗೆ ಬಹಳ ಒಳ್ಳೇ ಔಷಧಿ. ಒಂದು ವರ್ಷದ ಮಗುವಿಗೆ 2 ಅಥವಾ 3 ಗ್ರೇಯಿನಷ್ಟು ಬೀಜವು ಸಾಕಾಗುವುದು. ದಿನಕ್ಕೆ 3 ಅಥವಾ ನಾಲ್ಕಾವರ್ತಿ ಈ ಪ್ರಮಾಣಕ್ಕೆ ಕೊಡುತ್ತಾ ಬರಬೇಕು.

ಈ ವಿಧವಾಗಿ ನಮ್ಮ ಮನೆಗಳಲ್ಲಿ ನಾವೇ ಸ್ವತಃ ವೈದ್ಯ ಮಾಡಿಕೊಳ್ಳುವುದಕ್ಕೆ ಈ ತುಳಸಿಯು ಬಹಳ ವಿಧದಲ್ಲಿ ಪ್ರಯೋಜನಕಾರಿಯಾಗಿರುವುದರಿಂದಲೇ, ನಮ್ಮಲ್ಲಿ ಇದಕ್ಕೆ ಅಷ್ಟು ಪವಿತ್ರತೆಯೂ, ಪೂಜ್ಯಭಾವವೂ ಏರ್ಪಟ್ಟಿದೆ. ಅಲ್ಲದೆ, ತ್ರಿಮೂರ್ತಿಗಳಲ್ಲಿ, ಲೋಕರಕ್ಷಣಕಾರ್ಯವನ್ನು ವಹಿಸಿರುವ ಶ್ರೀ ವಿಷ್ಣುವಿಗೆ ಈ ಮೂಲಿಕೆಯು ಬಹಳ ಪ್ರಿಯವೆಂದೆನಿಸಿರುವುದೇನೋ ಆಶ್ಚರ್ಯವಲ್ಲ. ಆ ಓಷಧಿಯಲ್ಲಿ ಜೀವರಕ್ಷಕವಾದ ಮೂಲವಸ್ತುಗಳಿರುವುದರಿಂದಲೇ ಅದಕ್ಕೆ ಆ ವಿಧವಾದ ಪವಿತ್ರತೆಯುಂಟು.

ಬಿಲ್ವ.

ಇದಕ್ಕೂ ತುಳಸಿಯಂತೆಯೇ ಅಸಾಧಾರಣವಾದ ರೋಗನಿವಾರಕಶಕ್ತಿಯುಂಟೆಂಬುದನ್ನು ಮುಂದಿನ ವಿವರಗಳಿಂದ ತಿಳಿಯಬಹುದು.

ಬಿಲ್ವಕ್ಕೆ ಸಂಸ್ಕೃತದಲ್ಲಿ ಶ್ರೀಫಲವೆಂದು ಮತ್ತೊಂದು ಹೆಸರುಂಟು. ಮರಾಠಿ, ತೆಲುಗು, ತಮಿಳು, ಕನ್ನಡ, ಬಂಗಾಳಿ ಮುಂತಾದ ಎಲ್ಲಾ ಭಾಷೆಗಳಲ್ಲಿಯೂ ಸ್ವಲ್ಪ ಹೆಚ್ಚುಕಡಿಮೆಯಾಗಿ ಬಿಲ್ವವೆಂದಾಗಲಿ ಅದರ ಅಪಭ್ರಂಶರೂಪದಿಂದಲಾಗಲಿ ಇದನ್ನು ವ್ಯವಹರಿಸುವರು.

ಇದು ಬೆಳೆಯುವ ಸ್ಥಳ—ಇದೂ ಇಂಡಿಯಾದೇಶದ ಎಲ್ಲಾ ಕಡೆಗಳಲ್ಲಿಯೂ ಬೆಳೆಯುವುದು. ಅಲ್ಲದೆ, ಹಿಮಾಲಯದ ಬುಡಗಳಲ್ಲಿ ವಿಶೇಷವಾಗಿ ಬೆಳೆಯುವುದು.

ಇದರಲ್ಲಿ ಉಪಯುಕ್ತವಾದ ಭಾಗಗಳು—ಇದರಲ್ಲಿ ಕಾಯಿ, ಹಣ್ಣು, ಬೇರು, ಮರದ ಪಟ್ಟೆ, ಹೂಗಳು, ಎಲೆ, ಇವೆಲ್ಲ ಬೇರೆ ಬೇರೆ ಉಪಯೋಗಕ್ಕೆ ಬರುವುವು.

ಇದರಲ್ಲಿರುವ ಮೂಲವಸ್ತುಗಳು—ಇದರ ಕಾಯಿಯ ತಿರುಳಿನಲ್ಲಿ ಜಿಗಟು, ಸಕ್ಕರೆ, ಮುಂತಾಗಿ ಇನ್ನೂ ಹಲವು ದೇಹಾರೋಗ್ಯಕಾರಿಗಳಾದ ವಸ್ತುಗಳುಂಟು. ಇದರ ಮರವನ್ನು ಕರಕುಮಾಡಿದರೆ, ಅದರಲ್ಲಿ ಪೊಟಾಷಿಯಂ ಮತ್ತು ಸೋಡಿಯಂ ಮಿಶ್ರಣಗಳೂ, ಸುಣ್ಣ ಮತ್ತು ಕಬ್ಬಿಣದ ಸಂಬಂಧವಾದ ಫಾಸ್ಫೇಟುಗಳೂ- ಕಾಲ್ಷಿಯಂ ಕಾರ್ಬೋನೇಟ್, ಮೆಗ್ನೀಷಿಯಂ ಕಾರ್ಬೋನೇಟ್, ಸಿಲ್ಷಿಯಂ ಮುಂತಾದ ಮೂಲತತ್ವಗಳೆಲ್ಲ ಸೇರಿವೆ. ಇದರ ಹಸೀ ಎಲೆಗಳಿಂದ, ಬಟ್ಟಿಯಿಳಿಸಿ ಒಂದು ಬಗೆಯ ಎಣ್ಣೆಯನ್ನು ತೆಗೆಯುವರು. ಎಣ್ಣೆಯು ಒಂದು ವಿಜಾತೀಯ ವಾಸನೆಯುಳ್ಳುದಾಗಿ, ಬಣ್ಣದಲ್ಲಿ ಸ್ವಲ್ಪ ಹಳದಿ ಮಿಶ್ರವಾದ ಹಸುರಾಗಿದೆ.

ಇದರ ಗುಣಗಳು—ಇದರ ಹಣ್ಣಿನಲ್ಲಿ ಪುಷ್ಟಿಕರವಾದ ಮತ್ತು ಮಲವನ್ನು ಸಡಿಲಿಸುವ ಗುಣವಿದೆ. ಇದರ ಕಾಯಿಯಲ್ಲಿ ಸ್ತಂಭಕಗುಣವಿರುವುದರಿಂದ, ರಕ್ತಭೇದಿ ಮುಂತಾದುವನ್ನು ನಿಲ್ಲಿಸುವುದು. ಮತ್ತು ಕಾಯಿಯು ಜೀರ್ಣಕಾರಿಯಾಗಿದ್ದು, ಜಠರಬಾಧೆಗಳನ್ನು ನೀಗಿಸುವುದು. ಇದರ ತಿರುಳು ಜ್ವರದ ಉಷ್ಣಾಂಶವನ್ನು ತಗ್ಗಿಸುವುದಲ್ಲದೆ ಉತ್ತೇಜಕಗುಣವುಳ್ಳುದು.

ಇದರ ಉಪಯೋಗಗಳು—ಗುಲ್ಮ ವ್ಯಾಧಿಯುಳ್ಳವರಿಗೂ, ಸ್ವಭಾವತಃ ಮಲಬಂಧವುಳ್ಳವರಿಗೂ ಬಿಲ್ವದ ಹಣ್ಣು ಬಹಳ ಗುಣಕಾರಿ. ಇದರ ಹೀಚನ್ನಾಗಲಿ, ದೋರಗಾಯನ್ನಾಗಲಿ ಕತ್ತರಿಸಿ, ಬಿಸಿಲಲ್ಲಿ ಒಣಗಿಸಿಟ್ಟು, ಭೇದಿ ಮತ್ತು ಆಮಶಂಕೆಯಿದ್ದವರಿಗೆ ಕೊಡುವುದುಂಟು. ಮುಖ್ಯವಾಗಿ ಮಕ್ಕಳಿಗೆ ಭೇದಿಯಾಗುತ್ತಿದ್ದಾಗ ಇದರಿಂದ ಬಹಳ ಅನುಕೂಲವುಂಟು. ಪಕ್ವವಾದ ಹಣ್ಣು ಒಂದು ಬಗೆಯ ರುಚಿಯೂ, ಸುವಾಸನೆಯೂ ಉಳ್ಳುದಾಗಿದೆ. ಇದರ ಪಂಚಕ್ಕನ್ನು ಮಾಡಿ, ಪ್ರತಿದಿನ ಬೆಳಗ್ಗೆ ಸೇವನೆಮಾಡಿದರೆ, ಮೈಗೆ ಬಹಳ ತಂಪನ್ನು ಕೊಡುವುದು. ಸುಖವಾಗಿ ಮಲಪ್ರವೃತ್ತಿ ಮಾಡುವುದರೊಡನೆ, ದೀರ್ಘಕಾಲದ ಅಜೀರ್ಣವ್ಯಾಧಿಯನ್ನು ನೀಗಿಸುವುದು. ಈ ಬಿಲ್ವದ ಹಣ್ಣಿಗೆ ಸುವಾಸನೆಗಳನ್ನು ಸೇರಿಸಿ ಮೊರಬ್ಬಾ ಮಾಡಿ, ಆಮಶಂಕೆ, ಅಥವಾ ಭೇದಿರೋಗದಿಂದ ಚೇತರಿಸಿಕೊಳ್ಳತಕ್ಕವರಿಗೆ ಬೆಳಗಿನ ಹೊತ್ತು ಕೊಡುವುದರಿಂದ ಬಹಳ ಗುಣವುಂಟು. ಕಾಲರಾ ವ್ಯಾಧಿಯು ತಲೆದೋರಿದ್ದ ಕಡೆಗಳಲ್ಲಿ ಪ್ರತಿದಿನವೂ ಇದನ್ನು ಸೇವಿಸುವುದು, ಆ ಸೋಂಕು ತಗಲದಿರುವುದಕ್ಕೆ ಒಂದು ಒಳ್ಳೆಯ ನಿವಾರಣೋಪಾಯವು. ಇದು ಮೂಲವ್ಯಾಧಿಗೂ ಒಳ್ಳೆಯ ಔಷಧವೆನಿಸಿದೆ. ಇದರ ಹಣ್ಣಿನ ತಿರುಳನ್ನು ಹಾಲಿಗೆ ಹಾಕಿ ಬಾಲಮೆಣಸಿನ ಪುಡಿಯನ್ನು ಸೇರಿಸಿ ಸೇವನೆಮಾಡುವುದರಿಂದ, ಮೂತ್ರವರ್ಧಕವಾಗುವುದಲ್ಲದೆ, ಜನನಾಂಗಗಳಲ್ಲಿ ಸ್ತಂಭಕಗುಣವನ್ನು ಹೆಚ್ಚಿಸುವುದು. ಆದುದರಿಂದ ಇದು ದೀರ್ಘಕಾಲದ ಮೇಹರೋಗಿಗಳಿಗೆ ಅನುಕೂಲವಾದುದು. ಈ ಬಿಲ್ವದ ಹೀಚಿಗೆ ಸೋಂಪು, ಮತ್ತು ಶುಂಠಿ ಎರಡನ್ನೂ ಸೇರಿಸಿ ಕಷಾಯ ಹಾಕಿ ಕೊಡುವದರಿಂದ ಮೂಲವ್ಯಾಧಿಗಳಿಗೆ ಉಪಶಾಮಕವು. ಈ ಮರದ ಪಟ್ಟೆಯ ರಸವನ್ನು ಎರಡು ತೊಲೆಯಷ್ಟು ತೆಗೆದು, ಹಾಲಿನೊಡನೆ ಸೇರಿಸಿ, ಸ್ವಲ್ಪ ಜೀರಿಗೆಯ ಪುಡಿಯನ್ನೂ ಹಾಕಿ ತೆಗೆದುಕೊಂಡರೆ, ವೀರ್ಯವೃದ್ಧಿಕಾರಿಯು. ಈ ಮೇಲಿನ ಅಂಶಗಳೆಲ್ಲಾ "ಇಂಡಿಯನ್ ಮೆಟೀರಿಯಾ ಮೆಡಿಕಲ್" ಎಂಬ ಸಂಸ್ಥೆಯಿಂದ ಅಂಗೀಕರಿಸಲ್ಪಟ್ಟಿವೆ.

ಆರೋಗ್ಯಚಂದ್ರಿಕೆ.

ಮೈಸೂರು ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯುತಕ್ಕ ವೀರಶೈವಮತತತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

23 ಅನಾದಿವೀರಶೈವಸಂಗ್ರಹಃ ಸಿದ್ಧರೇವಣಾರ್ಯಕೃತಃ ಕರ್ಣಾಟ ಟೀಕಾಯುತಃ ನಂ. (A)332
24 ಏಕೋತ್ತರಶತಸ್ಥಲೀ ಸಕರ್ಣಾಟಕ ಟೀಕಾ ಗಿರಿನಾಥಸಂಗ್ರಹೀತಾ ನಂ. 185
25 ಲಿಂಗಧಾರಣದೀಪಿಕಾ ನಂ. (B)944
26 ವೀರಮಾಹೇಶ್ವರಾಚಾರಸಂಗ್ರಹಃ, ನೀಲಕಂಠನಾಗನಾಥಾರ್ಯಕೃತಃ ನಂ. (A)654
27 ವೀರಶೈವಧರ್ಮಶಿರೋಮಣಿಃ ಷಡಕ್ಷರಿಮಂತ್ರಿಕೃತಃ ನಂ. (A)321
28 ವೀರಶೈವಸಂಜೀವಿನೀ (ಪಂಚಶ್ಲೋಕೀವ್ಯಾಖ್ಯಾ) ಬಸವಭೂಪಾಲಕೃತಾ ನಂ. (B)703
29 ವೀರಶೈವಾಚಾರಕೌಸ್ತುಭಃ ಮೌನಪ್ಪವಿದ್ವತ್ಕೃತಃ ನಂ. (A)221, (B)736, (C)703
30 ವೀರಶೈವಾಚಾರಸಂಗ್ರಹಃ ಕ್ರಿಯಾಕಾಂಡಃ ನಂ. (A)577
31 ವೀರಶೈವಾನಂದಚಂದ್ರಿಕಾ ಮರಿತೋಂಟದಾರ್ಯಕೃತಾ ಕ್ರಿಯಾಕಾಂಡಃ ನಂ. (A)190
32 ಮರಿತೋಂಟದಾರ್ಯಕೃತಾ ವಾದಕಾಂಡಃ (A)423
33 ವೇದಾಂತಸಾರ ವೀರಶೈವಚಿಂತಾಮಣಿಃ ಉತ್ತರಖಂಡಃ ನಂ. (A)267
34 ಶಿವಪ್ರಸಂಗರತ್ನಾಕರಃ ಗೀತಾಶಾಸ್ತ್ರಸಾರಃ ನಂ. (A)390
35 ಶಿವಯೋಗಪ್ರದೀಪಿಕಾ ಶ್ರೀ ಚೆನ್ನ ಸದಾಶಿವಯೋಗಿವಿರಚಿತಾ, ಭಸವಾರಾಧ್ಯಕೃತ ಕರ್ಣಾಟಕ ಟೀಕಾ ಸಮೇತಾ ನಂ. (A)363
36 ಶಿವಾಧಿಕ್ಯಚಿಂತಾಮಣಿಃ (ರೇವಣಾರಾಧ್ಯಕೃತಃ) ಕರ್ಣಾಟಕ ಟೀಕಾಸಹಿತಃ ನಂ. (A)294
37 ಶಿವಾಧಿಕ್ಯಸುಧಾರ್ಣವಃ 6 ಉಪದೇಶಾಃ 2932
38 ಶೈವರತ್ನಾಕರಃ (ಜ್ಯೋತಿರ್ನಾಥಕೃತಃ) (A)402
39 ಶ್ರುತಿಸಾರಭಾಷ್ಯಮ್ ನಂ. (B)830
40 ಸಂಗಮೇಶ್ವರವಿಲಾಸಭಾಷ್ಯಮ್, ಸಂಗಮೇಶ್ವರಕೃತ ಶಿವಸಹಸ್ರನಾಮಭಾಷ್ಯಮ್ ನಂ. (A)375
41 ವಿರೂಪಾಕ್ಷಪಂಚಾಶಿಕಾಶಾಸ್ತ್ರ ತಾತ್ಪರ್ಯಾರ್ಥದೀಪಿಕಾ ನಂ. (B)169
42 ಡಿ.ವ್ಯಾ.ಬ್ರಾ.ಮಹಾಮಾಹೇಶ್ವರಾಚಾರ್ಯವಿದ್ಯಾಚಕ್ರವರ್ತಿಕೃತಾ ನಂ. (B)895
43 ಶಿವಾದ್ವೈತಸಿದ್ಧಾಂತಸ್ವರೂಪಪ್ರಕಾಶಿಕಾಖ್ಯಸೂತ್ರ ವಿವರಣಮ್ ನಂ. (B)168
44 ವೈದಿಕಾಚಾರನಿರ್ಣಯಃ ರಾಮೇಂದ್ರಯೋಗಿವಿರಚಿತಃ ನಂ. 2849

(ಸಶೇಷ)

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬುಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ವಾಸಿಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು

ಆಯುರ್ವೇದ ಮಹೌಷಧಾಲಯ
ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.
ಮತ್ತು
ಹಿಮಾಲಯ್ ಅಷ್ಟವರ್ಗ ಔಷಧಾಲಯ
[51] (೬೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋ[illegible] ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ [illegible]ದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ್ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕೆಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಿ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, [illegible] ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆತನಕ್ಕೂ ವೈದ್ಯರುಗಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[1] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿವಸಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಗುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [37]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪವರ್, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಳವುಷ್ಪ, ಶಾಲಿಮಕಂದ, ಮಧುಕಂದ, ಜಹಾಕಂಧ, ತಾಲೀಮಲೀಕಂದ, ಅಶ್ವಕಂದ ಕ್ರೌಷ್ಟಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಪಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮುಸತ್ರಿ, ಪಿಶಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಗಾಲಾಮಿಶ್ರಿ, ಸಫೇತಮುಶ್ರಿ, ಶಾಲೀಮಖಾನಾ, ಬೀಜಬಂದ, ಹರಣಸೋರಿ, ಮುಂಗಲೀಬೀದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀರಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಾಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [41]

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಟ್ಟನೋಣ ಇವೆ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 2 ರೂಪಾಯಿಗಳು. ಪತ್ತೆ—**ನಾಡಿಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮರ್ಶಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[30] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿವರವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[42] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ ಪಾಲಿಪ್ರವೀಲೋಕಯಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ ನೇ ಏಪ್ರಿಲ್ ೧೯೩೦ [ಸಂಚಿಕೆ ೫೧.

ಸ್ವೀಕಾರ.

ಕೊಪ್ಪಳ ಡಿ|| ಎಲಬುರ್ಗಾ ತಾಲೂಕು ಬೆದವಟ್ಟಿ ಗ್ರಾಮದಲ್ಲಿರುವ ವೇ|| ರಾಚಪ್ಪಯ್ಯ ವಾರೀಕಲ್ಲು ಹಿರೇಮಠ ಸಾ|| ಚಂದ್ರಗಿರಿ ಇವರಿಗೆ ರೋಣ ತಾಲೂಕು ಕೊತಬಾಳ ಹಿರೇಮಠದ ವೇ|| ದೊಡ್ಡಬಸವಯ್ಯನವರ ಪುತ್ರಿ ಸೌ|| ಶಿವವ್ವನನ್ನು ಕೊಟ್ಟು ವೇ|| ಮಾಲೀಪಾಟೀಲ ವೀರಪ್ಪಯ್ಯನವರ ಮಠದಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ|| ರಾ|| ಕಲ್ಲೂರು ಕೊಂಡದಕಟ್ಟಿ ಮಠದ ಪಾಟೀಲ ಕಲ್ಲನಗೌಡರ ದ್ವಾರಾ ತಲ್ಪಿರುತ್ತವೆ.

ಕರ್ಜಗಿ ತಾಲೂಕು ಇಜಾರಿಲಕಮಾಪುರದಲ್ಲಿ ನೆರವೇರಿದ ಶ್ರೀ ದುಂಡಿ ನಂದೀಶ್ವರಸ್ವಾಮಿಯ ರಥೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಹಾವೇರಿ ಎರೇಸೀಮೆ ಚಂದ್ರಶೇಖರಪ್ಪನವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಹುಲ್ಯೂರು ಗ್ರಾಮದಲ್ಲಿರುವ ಸಾಹುಕಾರ್ ಮ|| ರಾ|| ಗೊಡಚಪ್ಪನವರು ಶ್ರೀ|| ಹೊಳೇಹೊನ್ನೂರು ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ಲಕ್ಷಬಿಲ್ವಾರ್ಚನಾದಿ ಮಹಾ ಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಹುಣಸಗಟ್ಟದ ಕೀರ್ತನಾಲಂಕಾರ ನಂಜುಂಡಾರಾಧ್ಯಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಗದಗ ತಾಲೂಕು ಪಾಪನಾಶಿಗ್ರಾಮದಲ್ಲಿರುವ ಮೂಕಪ್ಪ ದಡೆನ್ನಾಡ ಇವರು ಶಿವಾಧೀನರಾದ ಸಮದಲ್ಲಿ ಸಮರ್ಪಿಸಿದ 1 ರೂಪಾಯಿಯು ವೇ|| ಅಯ್ಯಪ್ಪಯ್ಯನವರು ಕೊರಗಲ್ಲುಮಠ ಮುಳಗುಂದ ಇವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹುಂಪೀಗಾಗರ ಗ್ರಾಮದಲ್ಲಿರುವ ಲಿಂಗದಹಳ್ಳಿ ಬಸಮ್ಮನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಸರವೂರು ಶೆಟ್ಟರ ಶರಣಪ್ಪನವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ರಾಯದುರ್ಗ ತಾಲೂಕು ಸೋಮಲಾಪುರದ ಮಲ್ಲಪ್ಪಯ್ಯನು ಕನ್ಯಾಶುಲ್ಕ(ತೆರವು) ತೆಗೆದುಕೊಂಡ ಅಪರಾಧಕ್ಕಾಗಿ ಕೆಲವು ದೊಡ್ಡ ಜನರು ಅಪರಾಧ ರೂಪವಾಗಿ ತೆಗೆಯಿಸಿದ 1 ರೂಪಾಯಿಯು ಮ|| ರಾ|| ಬೊಮ್ಮಗಟ್ಟಿ ಬಿ. ಬಂಡೆಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಭಾರತಸ್ವಾತಂತ್ರ್ಯಸಂಗ್ರಾಮ.

ಉಪ್ಪಿನ ಸತ್ಯಾಗ್ರಹದ ಸಂಬಂಧವಾಗಿ ಈವರೆಗೆ ಕಾರಾಗೃಹವಾಸಿಗಳಾಗಿರುವ ಭರತಖಂಡದ ಮುಖಂಡರು.

ಶ್ರೀ|| ವಲ್ಲಭಭಾಯಿ ಪಟೇಲ್ 3 ತಿಂಗಳ ಸಜೆ 500 ರೂ. ದಂಡ.
ಶ್ರೀ|| ಮಣಿಲಾಲ್ ಕೊಠಾರಿ 6 ತಿಂಗಳ ಕಠಿಣಸಜೆ 500 ರೂ. ದಂಡ.
ಶ್ರೀ|| ದರ್ಬಾರ್ ಗೋಪಾಲ್‌ದಾಸ್ 2 ವರ್ಷ ಕಠಿಣ ಸಜೆ 500 ರೂ. ದಂಡ.
ಶ್ರೀ|| ಗೋಕುಲದಾಸ್ ದ್ವಾರಕದಾಸ್ 2 ವರ್ಷ ಕಠಿಣ ಸಜೆ 500 ರೂ. ದಂಡ.
ಶ್ರೀ|| ರಾವ್‌ಜೀಭಾಯಿ ಮಣಿಭಾಯಿ 2 ವರ್ಷ ಕಠಿಣ ಸಜೆ 500 ರೂ. ದಂಡ.
ಶ್ರೀ|| ರಾಮದಾಸ್ ಗಾಂಧಿ 6 ತಿಂಗಳ ಕಠಿಣಸಜೆ.
ಶ್ರೀ|| ಕಿಶೋರಭಾಯಿ ದೇಸಾಯಿ 15 ತಿಂಗಳ ಕಠಿಣ ಸಜೆ.
ಶ್ರೀ|| ಡಾ|| ನಾಯಕ್ 12 ತಿಂಗಳ ಕಠಿಣಸಜೆ.
ಶ್ರೀ|| ಡಾ|| ಚಂಡೂಲಾಲ್ ದೇಸಾಯಿ 2 ವರ್ಷ ಕಠಿಣ ಸಜೆ.
ಶ್ರೀ|| ಡಾ|| ಹರಿಪ್ರಸಾದ್ 2 ತಿಂಗಳ ಸಜೆ.
ಶ್ರೀ|| ರೋಹಿತ್ ಮೆಹತಾ 3 ತಿಂಗಳ ಸಜೆ 100 ರೂ. ದಂಡ.
ಶ್ರೀ|| ಶಾರಾಭಾಯಿ 3 ತಿಂಗಳ ಸಜೆ 100ರೂ. ದಂಡ.
ಶ್ರೀ|| ರವಿಶಂಕರವ್ಯಾಸ 2 ವರ್ಷ ಕಠಿಣಸಜೆ.
ಶ್ರೀ|| ಛೋಟಾಲಾಲ್‌ವ್ಯಾಸ 2 ವರ್ಷ ಕಠಿಣಸಜೆ.
ಶ್ರೀ|| ಅರ್ಜುನಲಾಲ್ ಭೋಗಿಲಾಲ್ 6 ತಿಂಗಳ ಕಠಿಣ ಸಜೆ 500 ರೂ. ದಂಡ.
ಶ್ರೀ|| ಡಾ|| ಫಿಯರಾ 16 ತಿಂಗಳ ಸಜೆ.

ಮುಂಬಯಿ.

ಶ್ರೀ|| ಕೆ. ಎಫ್. ನರಿಮನ್ 1 ತಿಂಗಳ ಸಜೆ.
„ ಅಲ್ಲಿ ಬಹದ್ದೂರ್ ಖಾನ್ 1 ತಿಂಗಳ ಸಜೆ.
„ ಸೇಟ್ ಜಮುನಾಲಾಲ್ ಬಜಜ್ 2 ವರ್ಷ ಕಠಿಣ ಸಜೆ.
ಶ್ರೀ|| ಮನ್ಮಥನಾಥ 2 ವರ್ಷ ಕಠಿಣಸಜೆ.
„ ಗೋಕುಲದಾಸ್ ಭಟ್ 2 ವರ್ಷ ಕಠಿಣಸಜೆ.
„ ಎಚ್. ಡಿ. ರಾಜಾ 6 ತಿಂಗಳ ಸಜೆ.
„ ಈಶ್ವರಲಾಲ್ 7 ತಿಂಗಳ ಕಠಿಣಸಜೆ.
„ ಮನುಭಾಯಿ ದೇಸಾಯಿ 15 ತಿಂಗಳ ಕಠಿಣಸಜೆ.
„ ಮೋಹನಲಾಲ್ ಪಾಂಡ್ಯ 1 ವರ್ಷ ಕಠಿಣಸಜೆ.
„ ಜಮುನಾದಾಸ್ ಮೆಹತಾ 8 ತಿಂಗಳ ಸಜೆ.
„ ಚಿಮನಲಾಲ್ ಷಹ 12 ತಿಂಗಳ ಕಠಿಣಸಜೆ.
„ ಬಸವಂತ್ರಿ ಮೆಹತಾ 12 ತಿಂಗಳ ಕಠಿಣಸಜೆ.
„ ಆರ್. ಫರ್ಫುರೆ 11 ತಿಂಗಳ ಸಜೆ.
„ ಜೆ. ಎಚ್. ದೇಸಾಯಿ 11 ತಿಂಗಳ ಸಜೆ.
„ ಎಸ್. ಕೆ. ಪಾಟೀಲ 11 ತಿಂಗಳ ಸಜೆ.
„ ಕನ್ಹಯ್ಯಾಲಾಲ್ ಮುನಷಿ 11 ತಿಂಗಳ ಸಜೆ.
„ ಸ್ವಾಮಿಆನಂದ 12 ತಿಂಗಳ ಸಜೆ.
„ ಬಿ. ಜಿ. ಖೇರ 8 ತಿಂಗಳ ಕಠಿಣಸಜೆ.
„ ವಾಂಡ್ರೇಕರ 12 ತಿಂಗಳ ಕಠಿಣಸಜೆ.
„ ಬೋಪಾ ಗೋವಿಂದ ನಾಟೋವಾ 19 ತಿಂಗಳ ಕಠಿಣಸಜೆ.
ಶ್ರೀ|| ಕಂಜಿನಾಸ್ತ್ರ 6 ತಿಂಗಳ ಸಜೆ.

ಬಂಗಾಳ.

ಶ್ರೀ|| ಚಿರಂಜಿಲಾಲ್ ಮತ್ತು 4 ಜನ ಕೆಲಸಗಾರರು 4 ದಿನಗಳು ಸಜೆ.
„ ಡಾ|| ಗಣೇಶಚಂದ್ರ ಬ್ಯಾನರ್ಜಿ 2½ ವರ್ಷ ಕಠಿಣ ಸಜೆ.
ಶ್ರೀ|| ಸೇಟ ಜೇಮರಾಂಜೀ ಕಲ್ಯಾಣಜಿ ಕೋಠಾರಿ 6 ತಿಂಗಳ ಕಠಿಣಸಜೆ.
ಶ್ರೀ|| ಸುರೇಂದ್ರನಾಥದಾಸ 6 ತಿಂಗಳ ಕಠಿಣಸಜೆ.
„ ಡಾ|| ಪ್ರಫುಲ್ಲಘೋಷ 2 ವರ್ಷ ಕಠಿಣಸಜೆ.
„ ಪರನುತ ಬ್ಯಾನರ್ಜಿ 2 ವರ್ಷ ಕಠಿಣಸಜೆ.
„ ಜೆ. ಎಂ. ಸೇನಗುಪ್ತ 6 ತಿಂಗಳ ಕಠಿಣಸಜೆ.
„ ವಿಶ್ವನಾಥಚಕ್ರವರ್ತಿ 1 ತಿಂಗಳ ಸಜೆ.
„ ರಾಯಚಂದ ದೂಗರ 6 ತಿಂಗಳ ಕಠಿಣಸಜೆ.
„ ಸಚ್ಚಿದಾನಂದ ಮಿತ್ರ 6 ತಿಂಗಳ ಕಠಿಣಸಜೆ.
„ ಶ್ರೀಪಾದನಾಜುಂದಾರ್ ಮತ್ತು 4 ಜನ ವಿದ್ಯಾರ್ಥಿಗಳು 6 ತಿಂಗಳ ಕಠಿಣಸಜೆ.
ಶ್ರೀ|| ಡಾ|| ಸಸಿಗುಹರಾಯ್ 18 ತಿಂಗಳ ಕಠಿಣಸಜೆ.
„ ಅಧೀರ ಬ್ಯಾನರ್ಜಿ 3 ತಿಂಗಳ ಕಠಿಣಸಜೆ.
„ ಭೂಪೇಂದ್ರಸೇನ 3 ತಿಂಗಳ ಕಠಿಣಸಜೆ.
„ ಶರತ್ಕುಮಾರಭಟ್ಟಾಚಾರ್ಜಿ 3 ತಿಂಗಳ ಕಠಿಣಸಜೆ.

ದೆಹಲಿ.

ಶ್ರೀ|| ಪ್ರೊಫೆಸರ್ ಇಂದ್ರ 9 ತಿಂಗಳ ಕಠಿಣಸಜೆ.
„ ಲಾಲಾ ರತನದಾಸ 3 ವರ್ಷ ಕಠಿಣಸಜೆ.
„ ದೇವದಾಸಗಾಂಧಿ 3 ತಿಂಗಳ ಸಜೆ.
„ 10 ಸ್ವಯಂಸೇವಕರು 3 ತಿಂಗಳ ಕಠಿಣಸಜೆ.
„ ನಾರಾಯಣದಾಸ್ ಗೇ 2 ವರ್ಷ ಕಠಿಣಸಜೆ.

ಸಂಯುಕ್ತ ಪ್ರಾಂತಗಳು.

ಶ್ರೀ|| ಕೃಷ್ಣದತ್ತ ಪಲ್ಲೀವಾಲ 6 ತಿಂಗಳ ಕಠಿಣಸಜೆ.
„ ಸತ್ಯನಾರಾಯಣ 6 ತಿಂಗಳ ಕಠಿಣಸಜೆ.
„ ರಾವತ 6 ತಿಂಗಳ ಕಠಿಣಸಜೆ.
„ ಪಂಡಿತ ಜವಾಹರಲಾಲ್‌ನೆಹರು 6 ತಿಂಗಳ ಸಜೆ.
„ ರಾಮಚಂದ್ರಶರ್ಮ 6 ತಿಂಗಳ ಸಜೆ.
„ ಬಾಲಮುಕುಂದಮುರಾಜಿ 6 ತಿಂಗಳ ಸಜೆ.
„ ಮೋತೀರಾಮ 6 ತಿಂಗಳ ಸಜೆ.
„ ಬಾಲಕೃಷ್ಣಶರ್ಮ 6 ತಿಂಗಳು ಕಠಿಣಸಜೆ.
„ ಬಾಬು ಮೋಹನಲಾಲ ಸಾಕ್ಸೇನಾ 18 ತಿಂಗಳ ಕಠಿಣಸಜೆ.
ಶ್ರೀ|| ಇಂತಿಯಾಜ್ ಅಹಮದ್ ಅಶರಾಫ 18 ತಿಂಗಳ ಕಠಿಣಸಜೆ.
ಶ್ರೀ|| ಸಿ. ಬಿ. ಗುಪ್ತ 18 ತಿಂಗಳ ಕಠಿಣಸಜೆ.

ಪತ್ರವ್ಯವಹಾರ.

ವಾರ್ತೆದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಆಗಮನ.

ಬೆಲಗೂರು.

ಶ್ರೀ ಪೂಜ್ಯಪಾದರು ಹಿರಿಯೂರು ಆಲಗಟ್ಟ ಕಂಕಾನಾಡು ಮುಕ್ಕಾಂ ಪೂರೈಸಿಕೊಂಡು ಹೊಸದುರ್ಗ ತಾಲೂಕು ಬೆಲಗೂರು ಭಕ್ತರ ಪ್ರಾರ್ಥನೆಯ ಮೇರೆಗೆ ತಾ|| ೧೪-೪-೧೯೩೦ ಭಾನುವಾರ ದಯಮಾಡಿಸಿದರು. ಸಕಲ ವರ್ಣದವರು ವರ್ಣಭೇದವಿಲ್ಲದೆ ಪುರವನ್ನಲಂಕರಿಸಿ ಸ್ವಾಮಿಯ ಸಂದರ್ಶನಕಾಂಕ್ಷೆಯಿಂದ ಇಸ್ತಕಪಾಲಸಹಿತ ಕಾದುಕೊಂಡಿದ್ದು ಮಹಾಸವಾರಿಯು ಚೆಲುರಂಗಬಲಸಮೇತ ಪುರದ ಪೂರಬಾಗಿಲವರೆಗೆ ಅಕ್ಷರಾಲಯಕ್ಕೆ ಆಗಮಿಸಿದ ಕೂಡಲೇ ಸಮಸ್ತರೂ ವಂದನೆಗಳನ್ನರ್ಪಿಸಿದರು. ಮ|| ರಾ|| ಯಜಮಾನ ಚನ್ನಬಸವಪ್ಪಶೆಟ್ಟರು ಶ್ರೀ ಸನ್ನಿಧಿಗೆ ಸರ್ವರ ಪರಿಚಯವನ್ನು ಮಾಡಿಕೊಟ್ಟರು. ಶ್ರೀ ಗುರುಸಾರ್ವಭೌಮರನ್ನು ಕಂಡು ಧನ್ಯರಾಗಬೇಕೆಂದು ಆಗಮಿಸಿದ ಜನಸಮು [illegible]

[illegible]

ನದ ಸೇವೆಯನ್ನು ಮಾಡುತ್ತಿರುವರು. ಈ ಪುಣ್ಯಜೀವಿಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಭೋಗಭಾಗ್ಯಗಳನ್ನು ಕೊಡಲೆಂದು ಬೇಡುತ್ತೇನೆ.

ಪ್ರತ್ಯಕ್ಷದರ್ಶಿ.

ಹೆಲ್ಕ್ಯಾರು ನವಿಮಾನ ಪುಟ್ಟಗವಿಯಲ್ಲಿ ಗುರುಗಳ ಅನುಷ್ಠಾನ ಲಕ್ಷ್ಯಬಿಲ್ವಾರ್ಚನೆ ಪಾದಪೂಜಾ ಮಾಹೇಶ್ವರ ಸಂತರ್ಪಣೆ.

ನೇಲ್ಲಂತ ಪುಟ್ಟಗವಿಯು ಶ್ರೀ ಪೂಜ್ಯಪಾದರಾದ ಶ್ರೀ ಸಿದ್ಧರಾಮಸ್ವಾಮಿಗಳೆಂಬುವರು ಪೂರ್ವದಲ್ಲಿ ಅನುಷ್ಠಾನ ಮಾಡಿದ ಸ್ಥಲವಾಗಿರುವುದು. ಈ ಪವಿತ್ರಸ್ಥಲವು ಅರಸೀಕೆರೆ ತಾಲೂಕು ಹುಲ್ಯಾರಿಗೆ ಒಂದು ಮೈಲಿಯಲ್ಲಿ ಪಶ್ಚಿಮ ದಿಕ್ಕಿಗೆ ಇರುವ [illegible]

[illegible]

ಮಹತ್ಕಾರ್ಯಗಳನ್ನು ಮಾಡುತ್ತಾ ನ್ಯಷ್ಟಾಷ್ಟಪಾಪಗಳಿಂದ ಗುರುಜಂಗಮರನ್ನು ಸತ್ಕರಿಸಿ (ಧನಿನ್ಯ ಗೃಹಸ್ಥಾಶ್ರಮಃ) ಎಂಬ ನೀತಿಯನ್ನು ಸಾರ್ಥಕಮಾಡುತ್ತಲಿರುವ ಈ ಮಹಾಶಯರಿಗೆ ಜಗದೀಶನು ಸತ್ಸಂತಾನಾಭಿವೃದ್ಧಿಯನ್ನೂ ಆರೋಗ್ಯವನ್ನೂ ಕೊಡಲೆಂದು ಪ್ರಾರ್ಥಿಸುವ,

ಹೆಚ್. ಚಂದ್ರಶೇಖರಪ್ಪ.

ತರೀಕೆರೆ ವೀರಶೈವ ತರುಣಸಂಘದ ಮೊದಲನೆಯ ವಾರ್ಷಿಕೋತ್ಸವವು.

ತಾ|| 16-4-30 ನೆಯ ಬುಧವಾರ ದಿವಸ ತರೀಕೆರೆ ವೀರಶೈವ ತರುಣಸಂಘದ ವಾರ್ಷಿಕೋತ್ಸವವು ದೇಶಭಿಮಾನಿಗಳೂ ಮೈಸೂರು ಪ್ರಜಾಪ್ರತಿನಿಧಿಗಳೂ ಆದ ಶ್ರೀಯುತ ಬಿ. ಎಸ್. ಮಲ್ಲಪ್ಪನ [illegible]

[illegible]

ಸಂತೆಯ ಪ್ರಾರಂಭೋತ್ಸವ.

ಹೆಗ್ಗಡದೇವನಕೋಟೆ ತಾಲೂಕು ಹಂಪಾಪುರದ ಗ್ರಾಮಕ್ಕೆ ಮಾದಾಪುರದ ಗ್ರಾಮದಲ್ಲಿ ಸಂತೆ ಕಟ್ಟುವಂತೆ ಸರ್ಕಾರದವರ ಅಪ್ಪಣೆಯಾಗಿರಲು ಈ ತಾಲೂಕು ಪಂಚಾಯಿತಿ ಗ್ರಾಮಾಂತರಗಳಲ್ಲಿ ಮಾದಾಪುರದ ಪಂಚಾಯಿತಿ ಛೇರ್ಮನ್ ಮ|| ರಾ|| ನಂಜೇಗೌಡರು, ಮ|| ಶೆಟ್ಟರು ಭೋಗಯ್ಯನವರು ಬಹಳ ಮುತುವರ್ಜಿಯಿಂದ ಪ್ರೋಗ್ರಾಂ ಮೇರೆ ತಾ|| 14-4-30ನೇ ಸೋಮವಾರ ಮಾದಾಪುರದ ಶ್ರೀ ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ಬುಡದ ಮೈದಾನದಲ್ಲಿ ಸೇರಿದ ಸಂತೆಗೆ ಮ|| ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಕೆ. ವಿ. ಅನಂತರಾಮನ್ ಬಿ.ಎ., ಸಾಹೇಬರವರನ್ನೂ, ಮ|| ಸಬ್ ಅಸಿಸ್ಟೆಂಟ್ ಕಮಿಷನರ್ ಮಹಮ್ಮದ್ ಇಸ್ಮಾಯಿಲ್ ಸರೀಫ್, ಬಿ.ಎ., ಸಾಹೇಬರನ್ನೂ, ತಾಲ್ಲೋಕ್ ಅಮಲ್ದಾರ್ ಮ|| ಎಚ್.ಎಂ. ಅಬ್ದುಲ್‌ರಹೀಂ ಸಾಹೇಬರನ್ನೂ, [illegible]

[illegible]

ಸಹ ಬರಮಾಡಿಕೊಂಡು ಬಹಳ ಅಟ್ಟಹಾಸದಿಂದಲೂ, ಸಂಭ್ರಮ ಸಂತೋಷದಿಂದಲೂ, ಸಹ ಸಂತೆ ಓಪನ್ ಮಾಡಿಸಿ ಸಂತರ್ಪಣೆ ಸಹ ನಡೆಯಿಸಿದರು. ಸೆಟ್ಟರು ಭೋಗಯ್ಯನವರು ಗ್ರಾಮಸ್ಥರ ಪರವಾಗಿ ಮ|| ದ|| ಕ|| ಸಾಹೇಬರವರ ಸನ್ನಿಧಿಯಲ್ಲಿ ಅಡ್ರೆಸ್ಸು ಒಪ್ಪಿಸಲು, ಮ|| ಸಾಹೇಬರವರು ಸಮಂಜಸವಾದ ಉತ್ತರವನ್ನು ದಯಪಾಲಿಸಿದರು. ತಾ|| 15-4-30 ರಲ್ಲು ಗ್ರಾಮದಲ್ಲಿ ಹಾಕಿದ್ದ ತಳಿರುತೋರಣಗಳಿಂದ ಅಲಂಕರಿಸಿದ್ದ ಚಪ್ಪರದಲ್ಲಿ ತಾಲೂಕು ಪಂಚಾಯ್ತಿ ಕಾನ್ಫರೆನ್ಸ್ ನಡೆಯಿತು. ತಾಲೂಕಿನ ವಸ್ತುಪ್ರದರ್ಶನಗಳ ಸಾಮಾನು ಮಠದಲ್ಲಿಟ್ಟಿತ್ತು, ನೋಡಿದ ಈ ವಸ್ತುಪ್ರದರ್ಶನ ಸಾಮಾನುಗಳು ಹೆ|| ತಾಲೂಕು ಮುಂದುವರಿಯುತ್ತಂಬ ಶುಭಸೂಚನೆ ಕೊಡುತ್ತಿದ್ದವು. ಕಾನ್ಫರೆನ್ಸ್ ಅಧ್ಯಕ್ಷಸ್ಥಾನ ಪದವಿಯನ್ನು ಮ|| ಕೆ. ವಿ. ಅನಂತರಾಮನ್ ಬಿ.ಎ., ಸಾಹೇಬರವರು ವಹಿಸಿದ್ದರು. ಮ. ಪರಸನಲ್ ಅ|| ಸಾ|| ಕೆ. ಬಸವರಾಜೇ ಅರಸಿನವರು ವೈಸ್‌ಪ್ರೆಸಿಡೆಂಟರು ಮ|| ಜ. ಮಲ್ಲನವರು ಮ|| ಸ|| ಅ|| ಕ|| ಸಾಹೇಬರು ಮ|| [illegible]

[illegible]

ಆನಂದವನ್ನುಂಟುಮಾಡಿತು. ಶ್ರೀಮನ್ಮಹಾರಾಜರವರ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು

ಪ. ಬಸಪ್ಪ.

ಶ್ರೀ ಪಂಚಾಚಾರ್ಯೇಭ್ಯೋ ನಮಃ.

ಆಶ್ಚರ್ಯದ ಸುದ್ದಿ ಅಥವಾ ಆನಂದದ ಬೆಳಕು.

ರಾಯಚೂರು ಜಿಲ್ಲಾ ಮುದಗಲ್ಲ ಗ್ರಾಮದಲ್ಲಿ ಗತಸಂವತ್ಸರ ಫಾ|| ಶು|| ೯ ರವಿವಾರ ದಿವಸ ಶ್ರೀ ಉಜ್ಜಯಿನೀ ದಾರುಕೋರಾಮ ವೈರಾಗ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ಶ್ರೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಶಿವಗಣಂದೋಲನ ಮಹೋತ್ಸವಕ್ಕಾಗಿ ನಾನು ಹೋಗಿದ್ದೆನು. ಮಹಾಸ್ವಾ [illegible]

[illegible]

ಪ್ರತ್ಯಕ್ಷದರ್ಶಿ.

ಶಿವಾಪುರದ ಶಿವಲಿಂಗಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ನೂತನ ಶಿಲಾಮಠಪ್ರವೇಶೋತ್ಸವಾಹ್ವಾನ ಪತ್ರಿಕಾ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ.

ಕಲ್ಲುಹೊಳೆ.

ಬಳ್ಳಾರಿ ಡಿ|| ರಾಯದುರ್ಗ ತಾ|| ಕಲ್ಲುಹೊಳೆ ಗ್ರಾಮದ ಮಠಾಧಿಕಾರಿಗಳಾದ ವೇ|| ಕಲ್ಲುಹೊಳೆಯಪ್ಪಯ್ಯನವರು ಶಿಥಿಲವಾಗಿದ್ದ ಪ್ರಾಚೀನ ಮಠವನ್ನು ನೂತನವಾಗಿ ಶಿಲೆಯಿಂದ ನಿರ್ಮಿಸಿ ನೂತನ ಮಠದ ಪ್ರತಿಷ್ಠಾದಿ ಕಾರ್ಯಗಳನ್ನು ತಮ್ಮ ಪಂಚಾಚಾರ್ಯರಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ನೆರವೇರಿಸುವದನ್ನು ನಿಶ್ಚಯಿಸಿದ್ದಾರೆ.

ಕಾರ್ಯಕ್ರಮಗಳು.

ಶ್ರೀ ಶಾಲಿವಾಹನಶಕ ೧೮೫೨ ನೆಯ ಪ್ರಮೋದನಾಮ ಸಂವತ್ಸರಾಷು ಬಹುಳ ೩ ಗುರುವಾರ ೯-೩೦ ಗಳಿಗೆಯ ಮೇಲೆ ೧೩ ಗಳಿಗೆಯೊಳಗೆ ಸಲ್ಲುವ ಶುಭ ಕರ್ಕಾಟಕಲಗ್ನದಲ್ಲಿ ಗಣಪತಿಪೂಜಾ. ಪುಣ್ಯಾಹವಾಚನ, ನಾಂದೀಸಮಾರಾಧನ ಮತ್ತು ಮಠಪ್ರವೇಶ.

ಅದೇ ದಿವಸ ೪೮ ಗಳಿಗೆಯ ಮೇಲೆ ೫೧ ಗಳಿಗೆಯೊಳಗೆ ಸಲ್ಲುವ ಬ್ರಾಹ್ಮೀಮುಹೂರ್ತದ ಕುಂಭಲಗ್ನದಲ್ಲಿ ಮಾಹೇಶ್ವರವಟುಗಳ ದೀಕ್ಷಾರಂಭ, ಹಾಗೂ ನಂದೀಶ್ವರಪ್ರತಿಷ್ಠಾ.

[illegible]

N. B.—[illegible]

ನಂದೀಶ್ವರ ರಥೋತ್ಸವ

ಇಜಾರಿ ಲಕ್ಕಾಪುರ.

[illegible]

ಅವು ನಡೆಯಿತು. ರಾತ್ರಿ 11 ಘಂಟೆಯಿಂದ ವಾದ್ಯವೈಭವಗಳೊಡನೆ ಪುಷ್ಪರಥೋತ್ಸವವು ನಡೆಯಿತು. ಬಹುಳ ೧ ಸೋಮವಾರ ರಾತ್ರಿ 9 ಘಂಟೆಗೆ ಇಲ್ಲಿಯ ಮತ್ತು ಹಾವೇರಿಯ ಪಂಚಾಚಾರ್ಯ ಭಜನಾಸಂಘದವರ ಭಜನಾ ಮೇಳದಿಂದಲೂ ಸಕಲ ವಾದ್ಯವೈಭವದಿಂದಲೂ ದೊಡ್ಡ ರಥೋತ್ಸವವು ದೀವಟ್ಟಿಗೆಯಿಂದ ಕಳಶತೋರಣ ರಂಭಾಸ್ತಂಭಗಳಿಂದಲಂಕೃತವಾದ ಪುರಬೀದಿಯಲ್ಲಿ ಹೊರಟು ಮಾರನೆಯ ದಿವಸ ಮುಂಜಾನೆ 8 ಘಂಟೆಗೆ ದೇವಸ್ಥಾನವನ್ನು ತಲ್ಪಿತು. ಈ ಉತ್ಸವಕ್ಕೆ ಗ್ರಾಮದ ಭಕ್ತರೂ ಮತ್ತು ಹಾವೇರಿ ಕೆಳಗಿನಪ್ಯಾಟೆ ಸಮಸ್ತ ಭಕ್ತರೂ ಸಂಪೂರ್ಣ ಸಹಾಯಕರಾದರು. ಮೇಲಿನಪ್ಯಾಟೆಯಲ್ಲಿ ಮ|| ರಾ|| ವಿರೂಪಾಕ್ಷಪ್ಪ ಕುಬಸದ ಇವರು ಸಹಾಯಕರಾಗಿರುತ್ತಾರೆ. ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಶಿಕ್ಷಮಂಗಳವನ್ನೀಯಲೆಂದು ಹಾರೈಸುತ್ತೇನೆ. ಈ ಸಮಯದಲ್ಲಿ ಈ ವರ್ಷ ಗ್ರಾಮದ ಮಠಾಧಿಕಾರಿಗಳಲ್ಲಿ ವೇ|| ಗದಿಗಯ್ಯನವರು ಮಠದ ವೇ|| ಕರಿಬಸವಯ್ಯನವರು ನಡುವಿನಮಠ ಇವರ ಹಕ್ಕು ಇದ್ದು ಪ್ರಭಾಪೋಷಣಕ್ಕೋಸ್ಕರ ಈ ಮಠಾಧಿಕಾರಿಗಳು ತೆಗೆಯಿಸಿದ ಎರಡು ರೂಪಾಯಿಗಳು ವೇ|| ಮಠದ ಸಾವಳಗಯ್ಯನವರ ವಶಕ್ಕೆ ಕೊಡಲ್ಪಟ್ಟವು. ಈ ಉತ್ಸವಕ್ಕೆ ಆಗಮಿಸಿದ ಸರ್ವರೂ ಮಠದ ಗದಿಗಯ್ಯನವರು ವ ಕರಿಬಸಯ್ಯನವರು ನಡುವಿನಮಠ ಇವರಿಂದ ಆಶೀರ್ವಾದ ಪಡೆದುಕೊಂಡು ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಸಾವಳಗಯ್ಯ, ಗುರುಲಿಂಗಯ್ಯ ಮಠದ ಲಕ್ಕಾಪುರ

S. G. Mathad.

ಅಭಿನಂದನ.

ಧಾರವಾಡ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಷನ್‌ನವರು ಒಂದು ಮಧ್ಯವರ್ತಿ ಪುಸ್ತಕಾಲಯವನ್ನು ಸ್ಥಾಪಿಸಿರುವರಷ್ಟೆ! ಈ ಪುಸ್ತಕಾಲಯಕ್ಕೆ ಸೊರಟೂರ ಗ್ರಾಮದ ಕೈ|| ವಾ|| ಮಲ್ಲಪ್ಪನವರು ವಾರದ ಇವರ ಸುಪುತ್ರರಾದ ಶ್ರೀಯುತ ಬಾಬಾಸಾಹೇಬ ವಾರದ ಇವರು ತಮ್ಮ ತಂದೆಯವರು ವೀರಶೈವ ಧರ್ಮದ ಬಗ್ಗೆ ಪ್ರಸಿದ್ಧಿಸಿದ ಯಾವತ್ತು ಪುಸ್ತಕಗಳನ್ನು ಕಾಣಿಕೆಯಾಗಿ ಅರ್ಪಿಸಿರುವರು. ಇವು ಸಣ್ಣವೂ ದೊಡ್ಡವೂ ಕೂಡಿ ೭೩ ಗ್ರಂಥಗಳಿರುತ್ತವೆ. ಇಂಥ ಉದಾರ ದೇಣಿಗೆಯು ವಾರದ ಮಲ್ಲಪ್ಪನವರ ಈ ಸತ್ಪುತ್ರರಿಗೆ ಅನುಗುಣವಾದದ್ದು. ಮಿಕ್ಕ ವೀರಶೈವ ಸತ್ಪುರುಷರೂ ಸಹ ಇದೇ ಮೇರೆಗೆ ತಮ್ಮ ಕೈಲಾದಷ್ಟು ಉದಾರ ಸಹಾಯಮಾಡಿ ಈ ಮಧ್ಯವರ್ತಿ ಪುಸ್ತಕಾಲಯವನ್ನು ಅಭಿವೃದ್ಧಿಗೊಳಿಸಬೇಕೆಂದು ಕೋರುತ್ತೇವೆ.

ಎಸ್. ಎಸ್. ಮಳೀಮಠ,
ಗೌರವಕಾರ್ಯದರ್ಶಿ.

೨೧ನೇ ಆಲ್ ಇಂಡಿಯಾ ಆಯುರ್ವೈದಿಕ ಕಾನ್ಫರೆನ್ಸ್.

21ನೇ ಆಲ್ ಇಂಡಿಯಾ ಆಯುರ್ವೇದಿಕ್ ಕಾನ್ಫರೆನ್ಸು ಮೈಸೂರು ರಾಜಧಾನಿಯಲ್ಲಿ ನಡೆಯಲು ನಿಶ್ಚಿತವಾದಂತೆ ತಾ|| 16-3-30 ರಲ್ಲಿ ಮಹಾಸಭೆಯು ಸೇರಿ ಈ ಮಹಾಸಮ್ಮೇಳನವನ್ನು ನಡೆಯಿಸಲು ಸ್ವಾಗತಸಮಿತಿಯು ಸ್ಥಾಪಿತವಾಗಿರುತ್ತದೆ. ಇದೇ ಕಾಲದಲ್ಲಿ ಆಲ್ ಇಂಡಿಯಾ ಆಯುರ್ವೇದ ವಿದ್ವದ್ವೈದ್ಯಪರಿಷತ್ತು 6 ನೆಯ ಕರ್ನಾಟಕಾಯುರ್ವೇದ ಸಮ್ಮೇಳನವೂ ನಡೆಯಿಸಲ್ಪಡಬೇಕೆಂದು ಗೊತ್ತಾಗಿದೆ. ಆಲ್ ಇಂಡಿಯಾ ಆಯುರ್ವೇದ ಮಹಾಮಂಡಲವು ಸ್ಥಾಪಿತವಾಗಿ 20 ವರ್ಷಗಳಾಗಿದ್ದರೂ ಕರ್ನಾಟಕದಲ್ಲಿ ಈ ಮಹಾಸಮ್ಮೇಳನವು ಇದೇ ಮೊದಲಾಗಿ ನಡೆಯತಕ್ಕದ್ದಾಗಿದೆ. ಇಂತಹ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಯಿಸುವುದು ಕರ್ನಾಟದೇಶದಲ್ಲಿರುವ ಪ್ರತಿಯೊಬ್ಬ ದೇಶೀಯ ವೈದ್ಯನ ಮತ್ತು ವೈದ್ಯಾಭಿಮಾನಿಯ ಅವಶ್ಯಕ ಕರ್ತವ್ಯವಾಗಿದೆ. ಈ ಸಮ್ಮೇಳನವನ್ನು ಜಯಪ್ರದವಾಗಿ ಮಾಡುವರಾಗಿ ಸರ್ವರೂ ಎಲ್ಲಾ ವಿಧದಿಂದಲೂ ಸಹಾಯ ಮಾಡುವರಾಗಿ ಪ್ರಾರ್ಥಿಸುತ್ತೇವೆ. ಇನ್ನು ಮುಂದೆ ಕ್ರಮವಾಗಿ ಈ ಸಮ್ಮೇಳನದ ವಿವರಣವು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು.

ವಿದ್ವಾನ್ ಕೆ. ಶೇಷಶಾಸ್ತ್ರೀ,
ಸೆಕ್ರೆಟರಿ,
ಕ. ಆಯುರ್ವೇದ ಮಂಡಲಿ, ಶೃಂಗೇರಿ.

ನಿವೇದನ.

ನಾವು ಕಳೆದವಾರದ ನಮ್ಮಾ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಶುದ್ಧಸಾಂಪ್ರದಾಯದ ಪ್ರತಿಯೊಬ್ಬ ಗುರುಭಕ್ತರು ವೈಶಾಖ ಶು|| ೩ (ತಾ|| 1-5-30) ಗುರುವಾರ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿ ಮಹೋತ್ಸವವನ್ನೂ ಹಾಗೂ ವೈಶಾಖ ಶು|| ೫ (ತಾ|| 3-5-30) ಶನಿವಾರ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವನ್ನೂ ನೆರವೇರಿಸಿ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಸಂ.—

ಪಂಚಾಚಾರ್ಯ ಪ್ರಭಾ

೧೯೩೦ ನೇ ಏಪ್ರಿಲ್ ತಾ|| ೨೮ ನೇ ಸೋಮವಾರ

ಶ್ರೀ ರೇಣುಕಾಚಾರ್ಯರೂ ಹಾಗೂ ಶ್ರೀ ಶಂಕರಾಚಾರ್ಯರೂ.
(ಚಂದ್ರಮೌಳೀಶ್ವರಲಿಂಗ)

ಮೈಸೂರು ಗವರ್ನಮೆಂಟಿನವರಿಂದ ಮುದ್ರಿಸಲ್ಪಟ್ಟಿರುವ "ಕೆಳದಿನೃಪವಿಜಯ" ಎಂಬ ಗ್ರಂಥದಲ್ಲಿ ಚಂದ್ರಮೌಳೀಶ್ವರಲಿಂಗ ಪ್ರದಾನ ವಿಷಯವು ಬರೆಯಲ್ಪಟ್ಟಿರುವುದೆಂದು ೧೪ ನೆಯ ತಾರೀಖಿನ ಸಂಚಿಕೆಯಲ್ಲಿ ಬರೆದಿದ್ದೆವಷ್ಟೆ! ಅದನ್ನೇ ಸದ್ಯಃ ವಿಮರ್ಶಿಸುತ್ತೇವೆ. ಈ "ಕೆಳದಿನೃಪವಿಜಯ" ಎಂಬ ಗ್ರಂಥವನ್ನು ಹರಿತಸಗೋತ್ರೋದ್ಭವನಾದ **ಲಿಂಗಣ್ಣ**ನೆಂಬ ಸ್ಮಾರ್ತಬ್ರಾಹ್ಮಣನು ಬರೆದಿರುವನು. ಆದರೆ ಇವನು ಈ ಗ್ರಂಥದಲ್ಲಿ ಶ್ರೀ ಚಂದ್ರಮೌಳೀಶ್ವರಲಿಂಗವನ್ನು ಶ್ರೀ ರೇವಣಸಿದ್ಧ ಶಿವಾಚಾರ್ಯರು ಆದ್ಯಶಂಕರಾಚಾರ್ಯರಿಗೆ ಅನುಗ್ರಹಿಸಿದರೆಂಬ ವಿಷಯವನ್ನು ಬರೆಯದೆ ವಿದ್ಯಾರಣ್ಯರಿಗೆ ಅನುಗ್ರಹಿಸಿದರೆಂದು ಬರೆದಿದ್ದಾನೆ. ಈ ವಿಷಯದಲ್ಲಿ ಕೆಳದಿನೃಪವಿಜಯದ ೧೬ನೆಯ ಪುಟದಲ್ಲಿ ಹೀಗೆ ಉಲ್ಲೇಖಿವಿದೆ. ಅದೇನೆಂದರೆ—

ಆ ವಿದ್ಯಾರಣ್ಯರ್ ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನಶಕ ೧೨೫೮ ನೆಯ ಸಂವತ್ಸರದಲ್ಲಿ ಆ ವಿದ್ಯಾನಗರೀ ರತ್ನಸಿಹ್ಮಾಸನದಲ್ಲಿ ಹರಿಹರರಾಯಂಗೆ ಪಟ್ಟವಂ ಕಟ್ಟಿ ನಿಲಿಸಿದರ್; ಹೀಗಿರಲಾಗಿ ಕೆಲವು ದಿನಸದಮೇಲೆ ರೇವಣಸಿದ್ಧನೆಂಬೊಬ್ಬ ಜಂಗಮಸ್ವರೂಪಗಣಾಧೀಶ್ವರಂ, ಒಂದು ದಿವ್ಯಲಿಂಗಮಂ ವಿದ್ಯಾರಣ್ಯರ ವಶಕ್ಕೆ ತಂದುಕೊಟ್ಟು, ಈ ಲಿಂಗಂ ಶ್ರೀ ಚಂದ್ರಮೌಳೀಶ್ವರಂ, ಈ ಲಿಂಗಮಂ ನಿತ್ಯಂ ಪೂಜೆಗೈವುದೆಂದುಸಿರ್ದಂತರ್ಧಾನನಾಗಿ ಪೋಗಲೊಡನಾ ವಿದ್ಯಾರಣ್ಯರ್ ಶೃಂಗಪುರಕ್ಕೆ ತಂದು ಶೃಂಗೇರಿ ಮೂಲ ಸಂಸ್ಥಾನದ ಮಠದಲ್ಲಿ ಆ ಚಂದ್ರಮೌಳೀಶ್ವರನ ಪೂಜೆಯಂ ಮಾಡಿಕೊಂಡಿರ್ದು, ಶಿಷ್ಯಪರಂಪರೆಯಲ್ಲಿಯುಂ ನಡೆಕೊಂಡು ಬಾಹಂತು ಕಟ್ಟಳೆಯಂ ಮಾಡಿಸಿದರ್ ||

ಈ ಕವಿಯು ಕಾಲ[illegible]ನ್ನೂ ಹಾಗೂ ನಿಜಸ್ಥಿತಿಯನ್ನೂ ವಿಮರ್ಶಿಸದ[illegible]ರೆದಿರುವವನ್ನು ನೋಡಿದರೆ ಆಶ್ಚರ್ಯವೆನಿಸು[illegible]ದರಂತೆಯೇ ಈ ಕವಿಯು ಸದರಿ ಗ್ರಂಥದ [illegible]ಮ ಪುಟದಲ್ಲಿ ಶೃಂಗೇರಿ ಮಠದ ಗುರುಪರಂಪರೆಯನ್ನು ಬರೆಯುವಾಗ, ಆದ್ಯ ಶಂಕರಾಚಾರ್ಯರಿಗೆ ವಿದ್ಯಾಶಂಕರಸ್ವಾಮಿಗಳು ಶಿಷ್ಯರಾದರೆಂದೂ, ಇವರಿಗೆ ವಿದ್ಯಾರಣ್ಯರು ಶಿಷ್ಯರಾದರೆಂದೂ ಬರೆದಿದ್ದಾನೆ. ಈತನ ಬರವಣಿಗೆಯನ್ನೇ ನಂಬಿದ್ದಾದರೆ ಆದ್ಯಶಂಕರಾಚಾರ್ಯರು ಈಗ್ಗೆ ಆರು ಅಥವಾ ಏಳುನೂರು ವರ್ಷಗಳ ಪೂರ್ವದಲ್ಲಿದ್ದರೆಂದು ಹೇಳಬೇಕಾಗುವ ಪ್ರಸಂಗವು ಪ್ರಾಪ್ತವಾಗುವದು. ಹೀಗೆ ಬರೆದಿರುವದು ಕೇವಲ ಹಾಸ್ಯಾಸ್ಪದವಾದ ವಿಷಯವಾಗಿದೆ. ಆದ್ಯ ಶಂಕರಾಚಾರ್ಯರ ಪೀಠಕ್ಕೆ ಅನುಕ್ರಮವಾಗಿ ಸುರೇಶ್ವರಾಚಾರ್ಯ, ನಿತ್ಯಬೋಧಘನಾಚಾರ್ಯ, ಜ್ಞಾನಘನಾಚಾರ್ಯ, ಜ್ಞಾನೋತ್ತಮಶಿವಾಚಾರ್ಯ, ಜ್ಞಾನಗಿರಿ ಆಚಾರ್ಯ, ಸಿಂಹಗಿರಿ ಆಚಾರ್ಯ, ಈಶ್ವರತೀರ್ಥ, ನರಸಿಂಹತೀರ್ಥ, ವಿದ್ಯಾಶಂಕರತೀರ್ಥ, ಭಾರತೀಕೃಷ್ಣತೀರ್ಥ ಇಷ್ಟು ಜನರು ಪೀಠಾಧಿಪತಿಗಳಾಗಿಹೋದ ಮೇಲೆ ವಿದ್ಯಾರಣ್ಯರು ಪೀಠಾಧಿಪತಿಗಳಾದರೆಂದೂ, ಸುರೇಶ್ವರಾಚಾರ್ಯರೆಂಬವರು ೮೦೦ ವರ್ಷಗಳವರೆಗೆ ಜೀವಿತರಾಗಿದ್ದರೆಂದೂ, ಆದ್ಯಶಂಕರಾಚಾರ್ಯರು ವಿಕ್ರಮಸಂವತ್ ೧೪ ಈಶ್ವರನಾಮಸಂವತ್ಸರ ವೈಶಾಖಶುದ್ಧ ೫ ದಿವಸ ಜನ್ಮತಾಳಿದರೆಂದೂ, ಪಾರ್ಥಿವನಾಮಸಂವತ್ಸರದ ವೈಶಾಖ ಶು|| ೩ ದಿವಸ ಸನ್ಯಾಸವನ್ನು ಸ್ವೀಕರಿಸಿದರೆಂದೂ, ವಿಜಯನಾಮಸಂವತ್ಸರ ಚೈತ್ರ ಶು|| ೧೫ ದಿವಸ ಸುರೇಶ್ವರಾಚಾರ್ಯರಿಗೆ ಶೃಂಗೇರಿಮಠದ ಪಟ್ಟವನ್ನು ಕಟ್ಟಿದರೆಂದೂ, ವಿಕ್ರಮಸಂವತ್ ೪೬ ಸೌಮ್ಯನಾಮಸಂವತ್ಸರ ಜ್ಯೇಷ್ಠ ಶು|| ೧೨ ದಿವಸ ಪರಲೋಕವಾಸಿಗಳಾದರೆಂದೂ ಮದ್ರಾಸ ನಿವಾಸಿಗಳಾದ ಮ|| ರಾ|| ಬಿ. ಸೂರ್ಯನಾರಾಯಣರಾಯರು, ಬಿ.ಎ., ಎಂ.ಆರ್.ಎ.ಎಸ್. ಇವರಿಂದ ವಿರಚಿತವಾದ ವಿಜಯನಗರಚರಿತ್ರದಲ್ಲಿ ಉಲ್ಲೇಖಿಸಿದ ಶೃಂಗೇರಿಮಠದ ವಂಶಾವಳಿಯಿಂದ ತಿಳಿದುಬರುತ್ತದೆ. ಇದರ ಮೇಲಿಂದ ನೋಡುತ್ತಿರಲಿಕ್ಕಾಗಿ ಶಂಕರಾಚಾರ್ಯರು ಈಗ್ಗೆ ೧೯೭೨ ವರ್ಷಗಳ ಪೂರ್ವದಲ್ಲಿ ಜನ್ಮವನ್ನು ತಾಳಿದರೆಂದು ಸ್ಪಷ್ಟವಾಗುತ್ತದೆ. ಹೀಗಿದ್ದು ಈ ಕವಿಯು ಆದ್ಯ[illegible]ಚಾರ್ಯರಿಗೂ ವಿದ್ಯಾರಣ್ಯರಿಗೂ ೪೦-೫೦ [illegible] ಅಂತರವನ್ನು ತೋರಿಸಿರುವುದನ್ನು ನೋಡಿದರೆ ಈತನು ಯಾವ ವಿಷಯಗಳನ್ನೂ ಸರಿಯಾಗಿ ವಿಮರ್ಶಿಸಿ ಬರೆದಿರುವದಿಲ್ಲವೆಂದು ಸ್ಪಷ್ಟವಾಗಿ ತೋರುತ್ತದೆ. ಇದರಂತೆಯೇ ಈತನು ಬರೆದ ಚಂದ್ರಮೌಳೀಶ್ವರ ಲಿಂಗಪ್ರದಾನದ ವಿಷಯವಾದರೂ ಕೇವಲ ಅಸಮಂಜಸವಾಗಿದೆ. ಅನೇಕಜನ ಸ್ಮಾರ್ತ ಹಾಗೂ ವೀರಶೈವ ಪ್ರಾಚೀನಪಂಡಿತರು, ಶ್ರೀ ರೇಣುಕಾಚಾರ್ಯರು ಚಂದ್ರಮೌಳೀಶ್ವರ ಲಿಂಗವನ್ನು ಆದ್ಯ ಶಂಕರಾಚಾರ್ಯರಿಗೆ ಅನುಗ್ರಹಿಸಿದರೆಂದು ಸ್ಪಷ್ಟವಾಗಿ ತಮ್ಮ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರಲು, ಈತನು ಅವರೆಲ್ಲರ ಅಭಿಪ್ರಾಯಕ್ಕೆ ವಿರುದ್ಧವಾಗಿ ಬರೆದಿರುವದು ಕೇವಲ ಅಪ್ರಮಾಣವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಈತನು ಶ್ರೀ ರೇಣುಕಾಚಾರ್ಯರು ವಿದ್ಯಾರಣ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನನುಗ್ರಹಿಸಿದರೆಂಬ ವಿಷಯವನ್ನು ಭ್ರಮೆಯಿಂದ ಬರೆದಿದ್ದಾನಲ್ಲದೆ ಬೇರೊಂದಿಲ್ಲ. ಇದರ ನಿಜಸ್ಥಿತಿಯೇನೆಂದರೆ :—

ಬಲ್ಲಾಳರಾಜನು ಯುದ್ಧದಲ್ಲಿ ಅಣ್ಣತಮ್ಮಂದಿರಾದ **ಹರಿಹರ** ಮತ್ತು ಬುಕ್ಕ ಇವರೀರ್ವರನ್ನು ಸೋಲಿಸಿದನೆಂದೂ, ಆಗ್ಗೆ ಅವರೀರ್ವರೂ ಚಿಂತಾಕ್ರಾಂತರಾಗಿ ಅರಣ್ಯವನ್ನು ಸೇರಿದರೆಂದೂ, ಚಿಂತಾವಿಶೇಷದಿಂದ ಹರಿಹರನು ಬುಕ್ಕನ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿದನೆಂದೂ, ಆ ಸಮಯದಲ್ಲಿ ಶ್ರೀ **ರೇವಣಸಿದ್ಧಶಿವಾಚಾರ್ಯರು** ಹರಿಹರನ ಸ್ವಪ್ನದಲ್ಲಿ ಬಂದು, ಎಲೈ ರಾಜನೇ! ವಿದ್ಯಾರಣ್ಯನ ದಯೆಯಿಂದ ನಿನಗೆ ರಾಜ್ಯಸಂಪತ್ತು ದೊರಕಿ ಕಲ್ಯಾಣವಾಗುವದೆಂದೂ, ಇದಕ್ಕಾಗಿ ನೀನು ಲೋಕವಿಖ್ಯಾತವಾದ **ಶ್ರೀ ಚಂದ್ರಮೌಳೀಶ್ವರಲಿಂಗದ** ದರ್ಶನವನ್ನು ಮಾಡಿಕೊಳ್ಳಬೇಕೆಂದೂ, ಆ ಮೇಲೆ ನಿನ್ನ ರಾಜಸಿಂಹಾಸನವನ್ನು ನಿನ್ನ ವಂಶದವರು ಆರೋಹಣಮಾಡಿ ಬಹುಕಾಲದವರೆಗೆ ಉತ್ತಮರೀತಿಯಿಂದ ರಾಜ್ಯಪರಿಪಾಲನ ಮಾಡುವರೆಂದೂ ಸ್ವಪ್ನದಲ್ಲಿ ಹೇಳಿ ಅಂತರ್ಧಾನನಾದನೆಂದು ಶೃಂಗೇರಿ ಪೀಠಾಧಿಪತಿಗಳು ಬರೆಯಿಸಿದ "**ಗುರುವಂಶಕಾವ್ಯ**" ದ ೫ ಮತ್ತು ೬ನೆಯ ಸರ್ಗದಲ್ಲಿರತಕ್ಕ ಪದ್ಯಗಳಿಂದ ವೇದ್ಯವಾಗುತ್ತದೆ. ಆ ಪದ್ಯಗಳಾವುವೆಂದರೆ :—

ಬಲ್ಲಾಳಕ್ಷಿತಿಪಾಲಕೇನ ವಿಜಿತೌ ಯುದ್ಧೇನ ಮಧ್ಯೇ ಮಹಾವಲ್ಲೀಭೃದ್ವಿಪಿನಸ್ಯ ಚಕ್ರತುರಿಮೌ ಶಾಂತ್ಯೋಪದೇಶಂ ಚಿರಂ ! ನಿದ್ರಾಣಃ ಸಹಜಾಂಕಗೋ ಹರಿಹರಕ್ಷ್ಮೋಣೀಭೃದೇಷ ಕ್ಷಣಂ ಭದ್ರಂ ರೇವಣಸಿದ್ಧಯೋಗ್ಯಧಿಗಮಃ ಸ್ವಪ್ನಂ ತದಾಪ್ನೋತ್ತರಾಂ ||೫೯||

ಗು. ಕಾ. ೫ ನೆಯ ಸರ್ಗ.

ಸ್ವಸ್ತಿ ಶ್ರೀಮನ್ನೃಪ ತವ ಭವೇದ್ವೀರಸಿಂಹಾಸನಶ್ರೀಃ ವಿದ್ಯಾರಣ್ಯಪ್ರಚುರಕೃಪಯಾ ಸರ್ವಸಂರಕ್ಷಣಾಯ । ವಿಶ್ವೋತ್ತುಂಗಂ ವಿಬುಧ ಕಲಯೇಶ್ಚಂದ್ರಮೌಳೀಶಲಿಂಗಂ ಭಾವಿಕ್ಷ್ಮೇಶಾಸ್ತ್ರಿಗುಣಗಣಿತೈಕಾದಶಾಥ ತ್ವದಾದ್ಯಾಃ ||೧|| ಅಗ್ರೇ ಭಾವೀ ತ್ರಿಭುವನನುತೋವೀರಪೂರ್ವೋ ವಸತಃ ಸರ್ವಾಮುರ್ವೀಂ ಸುಚಿರಮವಿತಾ ಧಾರ್ಮಿಕಃ ಸರ್ವಥೇತಿ । ಉಕ್ತ್ವಾ ಸ್ವಪ್ನೇ ಹರಿಹರನೃಪಂ ರೇವಣಾಸಿದ್ಧಯೋಗೀ ಡಂತರ್ಧಾನಂ ಸಮಭಜದಥ ಪ್ರಾಬುಧತ್ಸೋಽಪಿ ಭೂಪಃ ||೨||

ಗು. ಕಾ. ೬ ನೆಯ ಸರ್ಗ.

ಈ ಗುರುವಂಶಕಾವ್ಯದಲ್ಲಿ ಬರೆಯಲ್ಪಟ್ಟ ವಿಷಯವೇ ಸಾಧುವಿರುತ್ತದೆ. ಶ್ರೀ ರೇಣುಕಾಚಾರ್ಯರು ಚಿಂತಾಕ್ರಾಂತನಾಗಿದ್ದ ಪರಮಶಿವಭಕ್ತನಾದ ಹರಿಹರರಾಜನ ಸ್ವಪ್ನದಲ್ಲಿ ಬಂದು ಮುಂದೆ ಆಗುವ ಶುಭವಿಷಯಗಳನ್ನು ತಿಳುಹಿಸಿ ಅಂತರ್ಧಾನರಾದರೆಂಬ ವಿಷಯವು ಸರ್ವರಿಂದಲೂ ಒಪ್ಪಲ್ಪಡತಕ್ಕದ್ದಾಗಿದೆ. ಶಿವಲೋಕದಲ್ಲಿ ರಾರಾಜಿಸುತ್ತಿದ್ದ ಶ್ರೀ ರೇಣುಕಾಚಾರ್ಯರು ಹರಿಹರರಾಜನ ಉದ್ಧಾರಕ್ಕೋಸ್ಕರ ಸ್ವಪ್ನದಲ್ಲಿ ಬಂದು ಹೇಳಿದ ವಿಷಯವನ್ನೇ ಕೆಳದಿನೃಪವಿಜಯಕಾರನು ತಿಳಿಯದೆ, ಶ್ರೀ ರೇವಣಸಿದ್ಧರು ವಿದ್ಯಾರಣ್ಯರಿಗೆ ಸ್ವತಃ ಚಂದ್ರಮೌಳೀಶ್ವರ ಲಿಂಗವನ್ನನುಗ್ರಹಿಸಿದರೆಂಬ ವಿಷಯವನ್ನು ಭ್ರಮಾತ್ಮಕಬುದ್ಧಿಯಿಂದ ಬರೆದಿದ್ದಾನೆನ್ನುವದೇ ಸಿದ್ಧಾಂತವು. ಇರಲಿ;

ಇತ್ಯಾದಿ ವಿಷಯಗಳನ್ನು ಪರ್ಯಾಲೋಚಿಸುತ್ತಿರಲಿಕ್ಕಾಗಿ ಶ್ರೀ ಶಂಕರಾಚಾರ್ಯರಿಗೆ ಶ್ರೀ ರೇಣುಕಾಚಾರ್ಯರು ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿದರೆಂಬ ವಿಷಯವು ಸ್ಪಷ್ಟವಾಗಿ ತೋರಿಬರುತ್ತದೆ. ಶಂಕರಾಚಾರ್ಯರ ಕಾಲಮಾನದ ವಿಷಯದಲ್ಲಿ ಸದ್ಯಃ ಮತಭೇದವುಂಟಾಗಿದೆ. ಕೆಲವರು ಶಂಕರಾಚಾರ್ಯರು ಈಗ್ಗೆ 2,000 ವರ್ಷಗಳ ಪೂರ್ವದಲ್ಲಿದ್ದರೆಂದೂ, ಇನ್ನು ಕೆಲವರು ಈಗ್ಗೆ 1,400 ವರ್ಷಗಳ ಪೂರ್ವದಲ್ಲಿದ್ದರೆಂದೂ ಅಭಿಪ್ರಾಯಪಡುತ್ತಾರೆ. ಬಹುಕಾಲದಿಂದ ಗುರುಪರಂಪರಾದ್ವಾರಾ ಬಂದ ಶೃಂಗೇರಿ ಮಠದ ವಂಶಾವಳಿಯಿಂದಲೂ, ಕೆಲವು ಗ್ರಂಥಾಧಾರಗಳಿಂದಲೂ ಅವರು ಈಗ್ಗೆ 2,000 ವರ್ಷಗಳ ಪೂರ್ವದಲ್ಲಿ ಅವತರಿಸಿರಬಹುದೆಂದು ಸ್ಪಷ್ಟವಾಗಿ ತೋರಿಬರುತ್ತದೆ. ಈ ಕಾಲವು ಶ್ರೀ ರೇಣುಕಾಚಾರ್ಯರ ಅಸ್ತಿತ್ವದ ಕಾಲವಾಗಿರುತ್ತದೆ. ಶ್ರೀ ರೇಣುಕಾಚಾರ್ಯರು ಪರಶಿವನ ಅಪ್ಪಣೆಯಮೇರೆಗೆ ಈ ಭೂಮಂಡಲದಲ್ಲಿ 1,400 ವರ್ಷಗಳವರೆಗೆ ವಾಸವಾಗಿದ್ದರೆಂದು ಅವರ ವಿಷಯದಲ್ಲಿದ್ದ ಯಾವತ್ತು ಚರಿತ್ರಗ್ರಂಥಗಳು ಮುಕ್ತಕಂಠದಿಂದ ಸಾರುತ್ತವೆ. ಶ್ರೀ ರೇಣುಕಾಚಾರ್ಯರು ಈಗ್ಗೆ 3300 ವರ್ಷಗಳ ಪೂರ್ವದಲ್ಲಿ ಅವತರಿಸಿರಬಹುದೆಂದು ಸಾಧಕಬಾಧಕ ಪ್ರಮಾಣಗಳಿಂದ ಸಿದ್ಧವಾಗುತ್ತದೆ. ಆದುದರಿಂದ ಕಾಲಮಾನದ ವಿಷಯದಲ್ಲಿ ಯಾವರೀತಿಯಿಂದಲೂ ಶಂಕೆಯು ಬರಲು ಅವಕಾಶವಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಇಲ್ಲಿಯವರೆಗೆ ಶ್ರೀ ಶಂಕರಾಚಾರ್ಯರ ವಿಷಯವನ್ನು ಆಮೂಲಾಗ್ರವಾಗಿ ವಿಚಾರಮಾಡಿ ನೋಡಿದರೆ, ಇವರು ಶ್ರೀ ರೇಣುಕಾಚಾರ್ಯರಿಂದ ಶ್ರೀ ಚಂದ್ರಮೌಳೀಶ್ವರ ಲಿಂಗವನ್ನು ಪಡೆದುಕೊಂಡು ಅವರ ಸದುಪದೇಶದಂತೆ ಪರಮ ಶಿವೋಪಾಸಕರಾಗಿ ಮೆರೆದರೆಂದು ನಿಃಸಂಶಯವಾಗಿ ಹೇಳಬಹುದಾಗಿದೆ. ಈಗ್ಗೆ ಮೂರು ವಾರಗಳಿಂದ ಪ್ರತಿಪಾದಿಸಿದ ಶ್ರೀ ಚಂದ್ರಮೌಳೀಶ್ವರಲಿಂಗದ ಯಥಾರ್ಥ ವಿಷಯವನ್ನು ಸರ್ವರೂ ತಿಳಿದುಕೊಂಡು ವೀರಶೈವಮತಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಅರ್ಚಿಸಿ ಧನ್ಯರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಪರಳಿ ವೈದ್ಯನಾಥ ರುದ್ರಾಭಿಷೇಕ.

ವೀರಶೈವ ಸಮಾಜದ ವತಿಯಿಂದ ಅತ್ಯಂತ ವೈಭವಪೂರ್ವಕವಾಗಿ ನೆರವೇರುವ ಈ ರುದ್ರಾಭಿಷೇಕವು ವೈಶಾಖ ಶು|| ೧೫ ಸೋಮವಾರ ದಿವಸ ಪ್ರಾರಂಭವಾಗುವುದೆಂದು ಕಾರ್ಯಚಾಲಕರು ತಿಳಿಸುತ್ತಾರೆ.

[illegible] ಲ್ಪಟ್ಟಿಸಲ್ಪಟ್ಟಿತು.

ತೃತೀಯವರ್ಷ ಸಮಾಪ್ತಿ.

ಅರವತ್ತು ಸಂವತ್ಸರಗಳಲ್ಲಿ ಮೊದಲನೆಯದಾದ ಪ್ರಭವನಾಮಕ ಸಂವತ್ಸರದ ವೈಶಾಖ ಶುದ್ಧ ೫ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯ ಶುಭದಿವಸ ಧರ್ಮೋದ್ಧಾರಕ್ಕಾಗಿ ಜನ್ಮವೆತ್ತಿದ "**ಪಂಚಾಚಾರ್ಯಪ್ರಭಾ**" ನಾಮಕವಾದ ಈ ಪತ್ರಿಕೆಗೆ ಈ ಪ್ರಮೋದನಾಮಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ 3 ವರ್ಷಗಳು ತುಂಬಿ ನಾಲ್ಕನೆಯ ವರ್ಷವು ಪ್ರಾಪ್ತವಾಗುವದು. ಈ ಪತ್ರಿಕೆಯು ತನ್ನ ನಾಮಕ್ಕನುಗುಣವಾಗಿ ಈ 3 ವರ್ಷಗಳಲ್ಲಿ ನಾಮಶೇಷಮಾತ್ರವಾಗಿದ್ದ ಪಂಚಾಚಾರ್ಯರ ಸ್ವರೂಪವನ್ನು ದಶದಿಕ್ಕುಗಳಲ್ಲಿಯೂ ಹರಡಿ ಸರ್ವರ ಹೃದಯದಲ್ಲಿ ಆ ಭಗವತ್ಪಾದರ ದಿವ್ಯ ಪ್ರಭೆಯನ್ನು ನೆಲೆಗೊಳಿಸಿ ಸರ್ವಮಾನ್ಯವಾಗಿ "**ಪಂಚಾಚಾರ್ಯಪ್ರಭಾ**" ಎಂಬ ತನ್ನ ಪರಮ ಪವಿತ್ರವಾದ ನಾಮವನ್ನು ಸಾರ್ಥಕ ಮಾಡಿಕೊಂಡಿರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಪವಿತ್ರ ಪತ್ರಿಕೆಯು ತಾನು ಜನ್ಮವೆತ್ತಿದ ಮೇಲೆ ಅಜ್ಞಾನಾಂಧಕಾರದಲ್ಲಿ ಮುಳುಗಿ ತಮ್ಮ ಮತಸ್ವರೂಪವನ್ನು ಅರಿಯದೆ ಭ್ರಾಂತಮನಸ್ಕರಾಗಿದ್ದ ಲಕ್ಷೋಪಲಕ್ಷ ಜನ ವೀರಶೈವರಿಗೆ ಸ್ವಧರ್ಮದ ನಿಜತತ್ತ್ವವನ್ನು ತಿಳುಹಿಸಿ ಧನ್ಯರನ್ನಾಗಿ ಮಾಡಿ, ಗುರುಸ್ವರೂಪವನ್ನರಿಯದ ಮುಗ್ಧರ ಹೃದಯ ಭೂಮಿಯಲ್ಲಿ ಗುರುಭಕ್ತಿಬೀಜವನ್ನು ಬಿತ್ತಿ ಎತ್ತನೋಡಿದೊಡತ್ತ ಜನರ ಮುಖದಿಂದ ಆಚಾರ್ಯರ ಪರಮಪವಿತ್ರ ನಾಮಸ್ಮರಣವನ್ನು ಮಾಡುವ ಕಾರ್ಯದಲ್ಲಿ ತೊಡಗಿಸಿತು. ಎಲ್ಲಿ ನೋಡಿದೊಡಲ್ಲಿ ಈ ಭಗವತ್ಪಾದಾಚಾರ್ಯರ ಪವಿತ್ರ ನಾಮಧೇಯದಿಂದ ಅಸಂಖ್ಯಾತಭಜನಾ ಸಂಘಗಳನ್ನು ನಿರ್ಮಾಣಗೊಳಿಸಿ ತನ್ನಲ್ಲಿ ಪ್ರಕಾಶವಾಗತಕ್ಕ ಸರ್ವೋತ್ತಮ ಲೇಖಗಳಿಂದ ಸ್ವಮತಪರಮತೀಯ ಪಂಡಿತರನ್ನೂ ಸಹ ಚಕಿತರನ್ನಾಗಿ ಮಾಡಿ ಸರ್ವರಿಂದಲೂ ಸ್ತುತ್ಯವಾಯಿತು. ಈ ತರಹದ ಸರ್ವೋತ್ಕೃಷ್ಟ ಧಾರ್ಮಿಕ ಕಾರ್ಯಗಳು ಈ ಪತ್ರಿಕೆಯಿಂದ ಅವಿಚ್ಛಿನ್ನವಾಗಿ ನೆರವೇರುತ್ತಿರುವದನ್ನು ಕಂಡು ಭರತಖಂಡದಲ್ಲಿರತಕ್ಕ ಧರ್ಮಾತ್ಮರಾದ ಅನೇಕಜನ ಗುರುಭಕ್ತರು ಈ ಪತ್ರಿಕೆಯ ಅಭಿವೃದ್ಧಿಯ ವಿಷಯದಲ್ಲಿ ತಮ್ಮ ತನುಮನೋಧನಗಳನ್ನು ವೆಚ್ಚಮಾಡಿ ಕಾರ್ಯವನ್ನು ಮಾಡುತ್ತಿರುವರು. ಅನೇಕ ಜನ ಶುದ್ಧಾಂತಃಕರಣಗಳಾದ ಗುರುಭಕ್ತರು ಈ ಪತ್ರಿಕೆಯು ಚಿರಕಾಲ ಬಾಳಿ ವೀರಶೈವಸಮಾಜವನ್ನುದ್ಧರಿಸಲೆಂಬ ಸದುದ್ದೇಶದಿಂದ ಲಿಂಗಧಾರಣ, ದೀಕ್ಷಾ, ವಿವಾಹ, ಗಣಾರಾಧನಾ ಮೊದಲಾದ ಪ್ರತಿಯೊಂದು ಶುಭಕಾರ್ಯಗಳಲ್ಲಿ ಪ್ರಭಾಪೋಷಣಕ್ಕೋಸ್ಕರ ತ್ರಿಕರಣಶುದ್ಧಿಯಿಂದ ತಮ್ಮತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸಿಕಳುಹಿಸುತ್ತಿರುವ ವಿಷಯವು ಪ್ರತಿ ವಾರದಲ್ಲಿಯೂ ಪ್ರಕಟವಾಗುತ್ತಿರುವ ಸ್ವೀಕಾರದಿಂದಲೇ ಪ್ರತಿಯೊಬ್ಬರಿಗೂ ವೇದ್ಯವಾಗಬಹುದು. ಗುರುಭಕ್ತಮಹಾಶಯರಿಂದ ಸಮರ್ಪಿಸಲ್ಪಟ್ಟ ಈ ವರ್ಷದ ಸ್ವೀಕಾರದ್ರವ್ಯವು **1110-8-0** ರೂ. ಆಗುವದು. ಈ ವಿಷಯವನ್ನು ಪರ್ಯಾಲೋಚಿಸಿ ನೋಡಿದರೆ ಈ ಪತ್ರಿಕೆಯ ವಿಷಯದಲ್ಲಿ ಜನರ ಆದರಬುದ್ಧಿಯು ಎಷ್ಟರಮಟ್ಟಿಗಿರಬಹುದೆಂಬುದನ್ನು ಕುಶಲಮತಿಗಳಾದ ವಾಚಕರೇ ಊಹಿಸಬಹುದಾಗಿದೆ. ಈ ಪತ್ರಿಕೆಯಲ್ಲಿ ಈಗ್ಗೆ 3 ವರ್ಷಗಳಿಂದ ಎಂದೂ ಕೇಳದ ಹಾಗೂ ನೋಡದ ಅನೇಕಾನೇಕಾದ್ಭುತ ಧಾರ್ಮಿಕವಿಷಯಗಳು ಪ್ರತಿಪಾದಿಸಲ್ಪಟ್ಟಿರುವವೆಂಬ ವಿಷಯವನ್ನು ಇಡೀ ಜಗತ್ತೇ ಮುಕ್ತಕಂಠದಿಂದ ಕೊಂಡಾಡುತ್ತಿರುವದು. ಈ ಹಿಂದೆ ಅತ್ಯಂತ ಮಹತ್ವದಲೇಖಗಳು ಪ್ರಕಟವಾಗಿದ್ದಂತೆ ಇನ್ನುಮುಂದಾದರೂ ಪ್ರಕಟವಾಗುವವು. ಈರೀತಿಯಾಗಿ ವೀರಶೈವ ಧರ್ಮಧ್ವಜವನ್ನು ಸರ್ವತ್ರ ಮೆರೆಯಿಸುತ್ತ ಈ ಮತಕ್ಕೆ ವಿಶೇಷವಾದ ಗೌರವವನ್ನುಂಟುಮಾಡಿರುವ ಈ ಪತ್ರಿಕೆಗೆ ಪ್ರತಿಯೊಬ್ಬ ಗುರುಭಕ್ತರೂ, ಸರ್ವರೀತಿಯಿಂದಲೂ ಸಹಾಯಮಾಡಿ ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸುವ ಕಾರ್ಯವನ್ನು ಕೈಕೊಂಡು ಶ್ರೀ [illegible]ಚಾರ್ಯರ ಕೃಪೆಗೆ ಪಾತ್ರರಾಗಿ ಇಹಪರಸುಖಗ[illegible]ಸಬೇಕೆಂದು ಕೋರುತ್ತೇವೆ.

ಭಾರತ ಸ್ವಾತಂತ್ರ್ಯ ಸಂಗ್ರಾಮ.

ಉಪ್ಪಿನ ಸತ್ಯಾಗ್ರಹದ ಸಂಬಂಧವಾಗಿ ಈವರೆಗೆ ಕಾರಾಗೃಹವಾಸಿಗಳಾಗಿರುವ ಭರತ ಖಂಡದ ಮುಖಂಡರು.

ಶ್ರೀ ಹರಿಶ್ಚಂದ ಬಾಜಪಾಯಿ 18 ತಿಂಗಳ ಕಠಿಣಸಜೆ.
„ ಡಾ|| ಲಕ್ಷ್ಮೀಸಾಹಾಯ್ 18 ತಿಂಗಳ ಕಠಿಣಸಜೆ.
„ ಶ್ಯಾಮಸುಂದರ ಶ್ಯಾಯ್ಸುಲ್ 18ತಿಂಗಳಕಠಿಣಸಜೆ.
ಶ್ರೀ|| ಶ್ಯಾಮಸುಂದರ ನಿಗಮ 18 ತಿಂಗಳ ಕಠಿಣಸಜೆ.
„ ಜೈದಯಾಳ ಅವಸ್ಥಿ 18 ತಿಂಗಳ ಕಠಿಣಸಜೆ.
„ ರಾಮಸೂರತ್ ಮಿಶ್ರ 2 ವರ್ಷ ಕಠಿಣಸಜೆ.
„ ಚಂದ್ರಿಕಾ ಪಾಂಡೆ 2 ವರ್ಷ ಕಠಿಣಸಜೆ.
„ ಚೌಧರಿ ರಘುವೀರ ನಾರಾಯಣಸಿಂಗ್ 18 ತಿಂಗಳ ಕಠಿಣಸಜೆ.
ಶ್ರೀ|| ಅಲಗೂರಾಯ್ 18 ತಿಂಗಳ ಕಠಿಣಸಜೆ.
„ ಜ್ಯೋತಿಪ್ರಸಾದ 2 ವರ್ಷ ಕಠಿಣಸಜೆ.
„ ಜುಗಲಕಿಶೋರ 1 ವರ್ಷ ಕಠಿಣಸಜೆ.
„ ಸ್ವಾಮಿರಾಮಾನಂದ 6 ತಿಂಗಳ ಕಠಿಣಸಜೆ.
„ ಡಾ|| ಭಗವಾನದಯಾಳ 6 ತಿಂಗಳ ಕಠಿಣಸಜೆ.
„ ಶ್ಯಾಮಬಿಹಾರಿ 6 ತಿಂಗಳ ಕಠಿಣಸಜೆ.
„ ಶೀತಲಸಾಹಾಯ್ 6 ತಿಂಗಳ ಕಠಿಣಸಜೆ.
„ ವೇಶಮುಖ 6 ತಿಂಗಳು ಕಠಿಣಸಜೆ.
„ ಮೊಹೋಗೀರ 6 ತಿಂಗಳ ಕಠಿಣಸಜೆ.
„ ಗೋಪಾಲಕೃಷ್ಣ 6 ತಿಂಗಳ ಕಠಿಣಸಜೆ.
„ ರಘುರಾಜಸಿಂಗ 6 ತಿಂಗಳ ಕಠಿಣಸಜೆ.
„ ಮಾತಾಪ್ರಸಾದಮಿಶ್ರ 2 ವರ್ಷ ಕಠಿಣಸಜೆ.
„ ರಾಮಧರೋಟ್ 2 ವರ್ಷ ಕಠಿಣಸಜೆ.
„ ಅಜಿತಕುಮಾರಬೋಸ್ ಮತ್ತು 6 ಜನರು 4 ತಿಂಗಳು ಕಠಿಣಸಜೆ.
ಶ್ರೀ|| ಠಾಕೂರ ಬಜನಸಿಂಗ್ 16 ತಿಂಗಳ ಕಠಿಣಸಜೆ.
„ ಠಾಕೂರ ವಿಶ್ವನಾಥಸಿಂಗ್ 16 ತಿಂಗಳ ಕಠಿಣಸಜೆ.
ಶ್ರೀ|| ಸತ್ಯಾನಂದ 16 ತಿಂಗಳ ಕಠಿಣಸಜೆ.
„ ಸಂಪೂರ್ಣಾನಂದ 2 ವರ್ಷ ಕಠಿಣಸಜೆ.

ಬಿಹಾರ್ ಮತ್ತು ಒರಿಸ್ಸಾ.

ಶ್ರೀ|| ಸನ್ಯಾಸಿಭವಾನಿದಯಾಳ್ 2 ವರ್ಷ ಕಠಿಣಸಜೆ.
„ ರಾಮದಯಾಳಸಿಂಹ 2½ ವರ್ಷ ಕಠಿಣಸಜೆ.
„ ಠಾಕೂರ ರಾಮಾನಂದಸಿಂಗ್ ಮತ್ತು ಅವರ ತಂದೆ 2½ ವರ್ಷ ಕಠಿಣಸಜೆ.
ಶ್ರೀ|| ಪಂಡಿತ ಜಗತ್ನಾರಾಯಣಲಾಲ 6 ತಿಂಗಳಸಜೆ.
„ ಗೋಪಬಂಧು ಚೌಧುರಿ ಒಂದು ವಾರ ಸಜೆ.
„ ಬರ್ಜಿ ಬಿಹಾರಿ ವರ್ಮ 1 ವರ್ಷ ಸಜೆ.
„ ಸ್ವಾಮಿಸಹಜಾನಂದ ಸರಸ್ವತಿ 6 ತಿಂಗಳಸಜೆ.
„ ಅಂಬಿಕಾ ಕಾಂತಸಿಂಹ 6 ತಿಂಗಳ ಕಠಿಣಸಜೆ.
„ ಬಸ್ಸೀಲಾಲ 6 ತಿಂಗಳ ಕಠಿಣಸಜೆ.

ಕರ್ನಾಟಕ.

ಶ್ರೀ|| ಗಂಗಾಧರರಾವ್ ದೇಶಪಾಂಡೆ 4 ವಾರ ಸಜೆ.
„ ನಾರಾಯಣರಾವ್ ಜೋಶಿ, ಜೀವಣರಾವ್ ಮತ್ತು ಗಾಬಜೆ 2 ವಾರ ಸಜೆ.
„ ಕೆ. ಉಮೇಶರಾವ್, ಬಿ.ಎ., ಎಲ್‌ಎಲ್.ಬಿ., ವಕೀಲ 6 ತಿಂಗಳ ಸಜೆ.
„ ಸರಮೇಶ್ವರಯ್ಯ ಕೋರ್ಟು ಮುಗಿಯುವವರೆಗೆ [ಸಜೆ.
„ ಆರ್. ಕೆ. ಪೃಥು 6 ತಿಂಗಳ ಸಜೆ.
„ ಎಸ್. ಕೆ. ಕುಬ್ರಾಬೈಲ್, ಉಲ್ಲಾಳ ತುಕ್ರಾನವರ, ಹುಸೇನಸಾಹೇಬ, ಮತ್ತು ವಾಸುದೇವರಾವ್ 4 ತಿಂಗಳ ಸಜೆ.
„ ಕೇಶವರಾವ್ ಗೋಖಲೆ 1 ತಿಂಗಳ ಸಜೆ.
„ ಪಂಡಾಲಿಕಜಿ, ಬಲವಂತರಾವ್ ದಾತಾರ, ಮತ್ತು ಗೋವಿಂದರಾವ್ ಕನಾಡಕರ್ 7 ತಿಂಗಳ ಕಠಿಣಸಜೆ.
„ ದಿವಾಕರ 7 ತಿಂಗಳ ಸಜೆ.
„ ಹನುಮಂತನಾಯಕ 1 ವರ್ಷ ಸಜೆ.
„ ಧೂಂಡೋ ಎಲ್ಲೋ ಕುಲಕರ್ಣಿ 1 ವರ್ಷ ಕಠಿಣಸಜೆ.
„ ಸ್ವಾಮಿ ಶುದ್ಧಾನಂದ 8 ತಿಂಗಳ ಕಠಿಣ ಸಜೆ.
„ ಶೇರಸಿಂಗ 4 ತಿಂಗಳ ಕಠಿಣಸಜೆ.
„ ಪಿ. ನಾಡಕರಣಿ 1 ವರ್ಷ ಕಠಿಣ ಸಜೆ.
„ ರಾಮರಾಯಮಾಲ್ಯ 6 ತಿಂಗಳ ಸಜೆ.
„ ಖಂಡಿಗೆಕೃಷ್ಣಭಟ್, ಮಂಜುನಾಥನಾಯಕಪಂಗಲ್ ಮತ್ತು ಅಣ್ಣಪ್ಪಕಾಮತ್ 5 ತಿಂಗಳಸಜೆ.
„ ವೆಂಕಟರಾಯನಾಯಕ್ ಮತ್ತು ನಾರಾಯಣ[illegible] 4 ತಿಂಗಳ ಸಜೆ.
„ ಸ್ವಾಮಿ ವಿದ್ಯಾನಂದ 1 ವರ್ಷ ಕಠಿಣ ಸಜೆ.
„ ಮಲದೀಪೂರ ಮತ್ತು ಗಣುಮಾಸ್ತರ 1 ವರ್ಷ ಕಠಿಣಸಜೆ.
„ ಕೌಜಲಗಿ ಹನುಮಂತರಾವ್ 3 ತಿಂಗಳ ಸಜೆ.
„ ಗಲಗಲಿಸ್ವಾಮಿಗಳು 8 ತಿಂಗಳ ಕಠಿಣ ಸಜೆ.

ಆಂಧ್ರದೇಶ.

ಶ್ರೀ|| ಬಿ. ಶಾಂಬಮೂರ್ತಿ, ವಿ. ಸತ್ಯನಾರಾಯಣ, ಬಿ. ಸುಬ್ರಹ್ಮಣ್ಯಂ ಮತ್ತು ಕೆ. ವೆಂಕಟರಾವ್ 1 ವರ್ಷ ಸಜೆ.
„ ಸ್ವಾಮಿನಾರಾಯಣಜಿ 1 ವರ್ಷ ಸಜೆ.
„ ಡಾ|| ಬಿ. ಪಟ್ಟಾಭಿ ಸೀತಾರಾಮಯ್ಯ ಮತ್ತು ಕಾಳೇಶ್ವರರಾವ್ 1 ವರ್ಷ ಸಜೆ.
„ ಚೆರುಕುವಾಡ ನರಸಿಂಹಂ 1 ವರ್ಷ ಸಜೆ.
„ ಡಿ. ನಾರಾಯಣರಾಜು ಮತ್ತು ಎ. ಗೋವಿಂದಾಚಾರಿ 1 ವರ್ಷ ಸಜೆ.

ಸಿಂಧುದೇಶ.

ಶ್ರೀ|| ಡಾ|| ಚೊಯಿತ್ರಾಂ, ನಾರಾಯಣದಾಸ್ ಆನಂದಜಿ 2 ವರ್ಷ ಕಠಿಣ ಸಜೆ.
„ ಸ್ವಾಮಿ ಕೃಷ್ಣಾನಂದ ಮತ್ತು ವಿಷ್ಣುಶರ್ಮ 18 ತಿಂಗಳಕಠಿಣ ಸಜೆ.
„ ಮಣಿಲಾಲ್ ಜೆ. ವ್ಯಾಸ 1 ವರ್ಷ ಕಠಿಣ ಸಜೆ.
„ ಡಾ|| ತಾರಾಚಂದ 6 ತಿಂಗಳ ಕಠಿಣಸಜೆ,

ಮಹಾರಾಷ್ಟ್ರ.

ಶ್ರೀ|| ದಸ್ತಾನೆ 6 ತಿಂಗಳ ಕಠಿಣ ಸಜೆ.
„ ಸಾಮಂತ 3 ತಿಂಗಳ ಕಠಿಣ ಸಜೆ.

ಪಂಜಾಬ್.

"ಕರ್ತಾರ್" ಪತ್ರಿಕಾ ಸಂಪಾದಕರು 1 ವರ್ಷ ಕಠಿಣ ಸಜೆ.

ಮದರಾಸ್.

ಶ್ರೀ|| ಕೆ. ನಾಗೇಶ್ವರರಾವ್, ಜೆ. ರಂಗಯ್ಯನಾಯ್ಡು, ಮತ್ತು ಪಿ. ಎಸ್. ಭಾಷ್ಯಂಶೆಟ್ಟಿ 6 ತಿಂಗಳ [ಕಠಿಣಸಜೆ.
„ **ಟಿ.** ಪ್ರಕಾಶಂ 1 ವರ್ಷ ಸಜೆ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಮೂರುವರ್ಷಗಳಾಗುವವು. ಕರ್ನಾಟಕ ರಾಜ್ಯದಲ್ಲಿರತಕ್ಕ ಅನೇಕಜನ ಸತ್ಪುರುಷರು ಈ ಪತ್ರಿಕೆಗೆ ನಾನಾರೀತಿಯಿಂದ ಸಹಾಯಮಾಡುತ್ತಿರುವದು ಸರ್ವರಿಗೂ ವೇದ್ಯವೇ ಅದೆ. ಈ ಪತ್ರಿಕೆಯಲ್ಲಿ ಪ್ರಕಟಿಸತಕ್ಕ ಅಮೂಲ್ಯಗಳಾದ ಧರ್ಮವಿಷಯಗಳನ್ನು ನೋಡಿ ಸಂತೋಷಪಟ್ಟು ಅನೇಕರು ಚಂದಾದಾರರಾಗುತ್ತಿರುವರು. ಚಂದಾದಾರರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವದು. ಚಂದಾದಾರರೆಲ್ಲರೂ ಇದೇ ಪ್ರಕಾರ ನಿರಂತರವೂ ಈ ಪತ್ರಿಕೆಯ ವಿಷಯದಲ್ಲಿ ಪ್ರೇಮವನ್ನು ಬೆಳೆಯಿಸುತ್ತ ಹೋಗಬೇಕೆಂದು ಕೋರುತ್ತೇವೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ. ಪಿ.** ಮಾಡುವದರಿಂದ ನಮಗೂ ತೊಂದರೆಯಾಗುವದು. ಹಾಗೂ ಚಂದಾದಾರರಿಗೂ ೪ ಆಣೆ ಹೆಚ್ಚಿಗೆ ಬೀಳುವದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ. ೮ ಆಣೆಗಳನ್ನು ಮಣಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ. ಪಿ.** ಮಾಡಿದರೆ ೩ರೂ. ೧೨ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೆ ಮಣಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮಣಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೆ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ.—

ವೀರಶೈವ ಸನಾತನತ್ವ.

(ಹಿಂದಿನಿಂದ ಮುಂದೆ ಸಾಗಿದುದು.)

“ವೇದವ್ಯಾಸಂ ಸೂತ್ರಕಾರಂ ದೂರ್ವಾಸಂ ವೃತ್ತಿಕಾರಕಂ | ಭಾಷ್ಯಕೃತ್ಪಂಡಿತಾರಾಧ್ಯಂ ಪ್ರಪದ್ಯೇ ಪಾಶಮುಕ್ತಯೇ ||”

“ಸದಸದನುಗ್ರಹನಿಗ್ರಹ ವಿಗ್ರಹೋಭಗವಾನ್ | ಸರ್ವಾಸಾಮುಪನಿಷದಾಂ ದುರ್ವಾಸಾ ಜಯತಿ ದೇಶಿಕಃ ಪ್ರಥಮಃ ||”

“ವೀರಭದ್ರ ಇವ ಸ್ಮಿದ್ಯೇ ವೀರಶೈವಮುನಾ ತದಾ | ಇತಿ ಶರ್ವವ್ಯತಾಮುದ್ಧಮಿಂದ್ರವೈಕ್ಷಂತ ದೇವತಾಃ ||”

“ಅಹೋ ದುರ್ವಾಸಸೋಬ್ರಾಹ್ಮಣ್ಯಮಹೋ ನಿಗ್ರಹಾಗಮಪ್ರಾಮಾಣ್ಯಮ್........ಅಹೋ ಪಾಶುಪತೀ ಮಹಾಮಾಹಾತ್ಮ್ಯಮ್........||”

“ಉಬೇರಿಮಿಮಂ ಪಶುಪಾಶವಿಮೋಚಿನಾ ಪಾಶುಪತವ್ರತೇನ ನಿತ್ಯಸಮಾರಾಧ್ಯ ಪರಮಾತ್ಮಾನಂ ಸೇವಾಕಾಲಿ ಮಹೇಶ್ವರಮುಗ್ರ ಹೀತಃ”

“ಪಶುಪಾಶವಿಮೋಚಿನಾ ಪಾಶುಪತವ್ರತೇನ”

“ಪಶ್ಯಂತೀತಿಪಶವಃ ಪ್ರಾಣಿನಃ, ತೇಷಾಂ ಯಸ್ಸಂಸಾರಲಕ್ಷಣಃ ಪಾಶಃ, ತಸ್ಯಮೋಚಿನಾ ಮೋಚಕೇನ, ಪಶುಪತೇರಿದಂ ಪಾಶುಪತಂ, ತೇನೈವವ್ರತೇನ, ಕ್ಲೋಕ || ಲಿಂಗೇಪ್ರಾಣಂ ಸಮಾಧಾಯ ಪ್ರಾಣೇ ಲಿಂಗಂತು ಶಾಂಭವಮ್ | ಸಶರೀರೇ ಮನಂಕೃತ್ವಾ ನ ಕಿಂಚಿಚ್ಚಿಂತಯೇದ್ಬುಧಿಃ || ಸದಾಚಾರಸ್ಥಿ ಭಕ್ತಿ ಲಿಂಗೇಜಂಗಮವಿಕಥಿಃ | ಭಕ್ತಿ ಭಕ್ತಸ್ಯಲಮಿತಿಸ್ಯತರ್ವ್ | ಭಕ್ತಾದಿ ಪಟ್ಸ್ವಲಾಭ್ಯಾಸೇನೈತ್ಯರ್ಥಃ”

“ಪಾಶುಪತಾವಹೇಳನಮವಭ್ಯಿಕ್ತ ತಜಗತ್ರಯಂ”

“ಪಾಶುಪತಾಃ ಶಿವಭಕ್ತಾಃ, ಶಿವಭಕ್ತಸ್ಯಲಕ್ಷಣಂ ಸ್ಕಾಂದೇ || ಕ್ಲೋ|| ಯೋ ಹಸ್ತಪೀಠೇ ನಿವಲಿಂಗಮಿಷ್ಟಂ ನಿವೇಶ್ಯ ತಲ್ಲೀನಮನಃ ಪ್ರಚಾರಃ | ... ಯಾಸೋಪಸೌ ಪಾಶುಪತಾಃ ಸಂಭೋಜಯತ್ಯಂಗ ಸವೀರಶೈವಃ || ಇತಿ, ತೇಷಾಮವಹೇಳನಮವಜ್ಞೇನಿ.”

“ಶಿವಾರ್ಪಿತಪ್ರಾಣಾ ಶಿವನಾಮಕೀರ್ತನ ಪವಿತ್ರಿತಮುಖಾ ಶಿವಕಥಾಪಾರಾಯಣ ಪರಾಯಣಾ ಶಿವಾಹಂಭಾವಭಾವಿತಾ ಶಿವಾದ್ವೈತವಾದಕೋವಿದಾಃ ಭಸ್ಮದಿಗ್ಧತನೂರುಹಾ”

“ಶಿವೇ ಪರನೇಶ್ವರೇ, ಅರ್ಪಿತಾಃ ಸಮರ್ಪಿತಾಃ, ಪ್ರಾಣಾ ಯೈಸ್ತೇ ತಥಾಭೂತಾಃ || ಕ್ಲೋಕ || ಲಿಂಗೇಪ್ರಾಣಂಸಮಾಧಾಯ ಪ್ರಾಣೇಲಿಂಗಂತುಶಾಂಭವಂ ಸಶರೀರೇಮನಕೃತ್ವಾನಕಿಂಚಿದಪಿಚಿಂತಯೇತ್ || ಏತತ್ಪ್ರಾಣಾರ್ಪಣಂಪ್ರೋಕ್ತಮ್”

ಇತ್ಯಾದಿ ವಚನಗಳಿಂದ ಬಹು ಮನೋಹರನಾಗಿಯೂ, ವಿಸ್ತಾರವಾಗಿಯೂ ವರ್ಣಿಸಿರುತ್ತಾರೆ.

ಇವುಗಳನ್ನೆಲ್ಲಾ ಪರಿಶೀಲಿಸಿ ನೋಡಿದರೆ ಪಾಶುಪತರೆಂದರೆ ವೀರಶೈವರೆಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ... ವೀರಶೈವನಮುನಿ, ವೀರಮಾಹೇಶ್ವರ, ಬ್ರಾಹ್ಮಣ, ಪಾಶುಪತ ಇತ್ಯಾದಿ ... ವೀರಶೈವ ಬ್ರಾಹ್ಮಣರೆಂದು ...

(ಸಶೇಷ)

M. D. Basavappa.

ಅನೂನುಷವಾದ ಕರವು.

(ಯಂಗ ಇಂಡಿಯಾದಲ್ಲಿ ಮಹಾತ್ಮರು ಬರೆದುದು.)

ಉಪ್ಪಿನಕರದ ವಿಷಯವಾಗಿ ಬರುತ್ತಿರುವ ಹೊಸ ಅನುಭವದಿಂದ ಮೊದಲು ತೋರುತ್ತಿದ್ದ ದರಕ್ಕಿಂತಲೂ ಅದು ಹೆಚ್ಚು ಅನೂನುಷವಾಗಿರುವುದೆಂದು ಕಂಡುಬರುತ್ತದೆ. ...

(ಎಂ. ಕೆ. ಗಾಂಧಿ)

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿ ಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ... ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ... ಸೋಸಲೆ, ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

... 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ. ...

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[2] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಣ್ಣಗಳಿರಾ! ಅಕ್ಕಗಳಿರಾ,

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ಕಷ್ಟಪಡುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

“ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು”—ಎಂಬುದನ್ನು ನೆನಪಿನಲ್ಲಿಡಿರಿ.

... ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

... ‘ಕೊಡಗಿನ ಗುಡುಗುಡು!’ (ಅ) ‘ಸುಡುಸುಡು!’ (ಆ) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ...

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ.

ಕ್ರಯ 8 ಡ್ರಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ಮಲೇರಿಯಾನ ಕಂಪನಿ, ನಂ. 1 ಮಂಗಳವಾರ, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಸಸೆ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ.

... [42]

ಸಿಗರೇಟ್ ಪ್ರಾಣದಲ್ಲಿ ಧೂಮ್ರಪಾನ ... ವೈದ್ಯ ವಿ. ಎಸ್. ಕಾಸಸೆ, ಮು. ಪೋ. ಮಿರಜ.

ಭಾರತಸ್ವಾತಂತ್ರ್ಯಸಂಗ್ರಾಮ.

ಕರಾಚಿಯ ಸತ್ಯಾಗ್ರಹಿಗಳು ಎಂಟು ಅಂಗಡಿಗಳನ್ನು ಸ್ಥಾಪಿಸಿ ಮಾಡಿ ತಾವು ಕೂಡಿಸಿರುವ ಸಾವಿರಾರು ಮಣ ಸತ್ಯಾಗ್ರಹದ ಉಪ್ಪನ್ನು ಮೂರುಕಾಸಿಗೆ ಒಂದು ಸೇರಿನಂತೆ ಮಾರಾಟಮಾಡಲಾರಂಭಿಸಿರುವರು.

22 ನೆಯ ತಾರೀಖು ಮಂಗಳವಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕೆಲವು ಜನ ಸಶಸ್ತ್ರರಾದ ಘೂರ್ಕರು ಮತ್ತು ಪೋಲೀಸರೊಡನೆ ಮಾಹಿಮ್‌ಬರ್ತ ಸತ್ಯಾಗ್ರಹದ ಕ್ಯಾಂಪಿಗೆ ನುಗ್ಗಿ ಒಬ್ಬ ಸ್ವಯಂಸೇವಕನನ್ನು ಬಲಾತ್ಕಾರವಾಗಿ ಎಳೆದುಕೊಂಡು ಹೋದರು. ಬೂರಾಬಜಾರು ಕ್ಯಾಂಪಿನಲ್ಲಿ ಪೋಲೀಸರು ರಾಷ್ಟ್ರೀಯ ಬಾವುಟವನ್ನು ಹರಿದು ಸತ್ಯಾಗ್ರಹಿಗಳನ್ನು ಹೊಡೆದರು. ಕೆಲವರು ಮೂರ್ಛೆಹೋದರು. ಸುಮಾರು 30 ಜನರಿಗೆ ವಿಶೇಷ ಗಾಯವಾಗಿರುವದು.

25 ನೇ ತಾರೀಖು ಶುಕ್ರವಾರ ಮದ್ರಾಸಿನ ಸತ್ಯಾಗ್ರಹಿಗಳು ಶ್ರೀಮತಿ ದುರ್ಗಾಬಾಯಿ ಹಾಗೂ ಶ್ರೀಮತಿ ವರಾಹಲಕ್ಷ್ಮಮ್ಮನವರ ಮುಂದಾಳುತನದಲ್ಲಿ ಹೈಕೋರ್ಟ್ ಬೀಚಿನಲ್ಲಿ ಮೆರವಣಿಗೆ ಮಾಡಿಕೊಂಡು ಹೋಗುತ್ತಿರುವಾಗ್ಗೆ ಪೋಲೀಸ್ ಕಮಿಶನರ್ ಮಿ|| ಕನಿಂಗ್‌ಹ್ಯಾಂರವರು ಕೆಲವು ಜನ ಪೋಲೀಸ್ ಸಾರ್ಜಂಟರ ಮತ್ತು ಸವಾರರೊಡನೆ ಬಂದು, ಶಾಂತವಾಗಿದ್ದ ಜನ[illegible] ಮೇಲೆ ಅಮಾನುಷವಾದ ರೀತಿಯಲ್ಲಿ ನುಗ್ಗಿ [illegible]ಸೆದು ಬಡೆದು ಅನೇಕರನ್ನು ಗಾಯಪಡಿಸಿದರು. 6 ಜನರಿಗೆ ವಿಶೇಷ ಗಾಯಗಳಾಗಿರುವವು. ಅನೇಕ ಪ್ರಮುಖ ಲಾಯರುಗಳೂ ಹಾಗೂ ನಗರದ ಪ್ರಜೆಗಳೂ ಸಭೆ ಮಾಡಿ ಪೋಲೀಸರ ವರ್ತನನನ್ನು ಖಂಡಿಸುತ್ತಿರುವರು.

ಗುಂಟೂರು ಮುನಿಸಿಪಲ್ ಛೇರ್‌ಮನ್ನರಾದ ಶ್ರೀ|| [illegible] ಎಲ್ ನರಸಿಂಹರಾಯರು ಉಪ್ಪಿನ ಕಾಯಿ[illegible]ಡಿದರೆಂಬ ಅಪಾದನೆಯ ಮೇಲೆ ಒಂದು [illegible]ವಾಸಕ್ಕೆ ಗುರಿಯಾದರು.

[illegible]ರ್ಟ್ ಎಂಬ ಆಸ್ಟ್ರೇಲಿಯಾ [illegible] ಭಾರತಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಬೇಕೆಂಬ ಕುತೂಹಲದಿಂದ ಬೊಂಬಾಯಿಗೆ [illegible] ಸ್ವಯಂಸೇವಕನಾಗಿ ಸೇರಿರುವನು. ಈಗ ಈ[illegible] ತನ್ನ ದೇಶೀಯ ಉಡುಪುಗಳನ್ನು ತ್ಯಜಿಸಿ, [illegible]ಂಧಿಟೋಪಿಯನ್ನೂ ಹಾಗೂ ಖಾದಿಬಟ್ಟೆಯನ್ನೂ ಧರಿಸುತ್ತಿರುವನು.

ಬೊಂಬಾಯಿ ಸರಕಾರದವರು ತಮ್ಮ ಅಧಿಪತ್ಯದಲ್ಲಿರುವ ಕಾರಾಗೃಹಗಳನ್ನೆಲ್ಲಾ ದುರಸ್ತು ಮಾಡಿಸುವಂತೆ ಆಜ್ಞೆ ಮಾಡಿರುವರು. ಇದಕ್ಕಾಗಿ 25,000 ರೂ. ಗಳನ್ನು ಸ್ಯಾಂಕ್ಷನ್ ಮಾಡಿರುವರು.

ಕಳೆದ 23 ನೆಯ ತಾರೀಖು ಸಾಯಂಕಾಲ ಮಿ|| ಮಹಾದೇವದೇಸಾಯಿಯವರು ಒಂದು ಮೋಟಾರ್ ಲಾರಿಯಲ್ಲಿ ಅಹಮದಬಾದಿಗೆ ಕಾಯಿದೆ ವಿರುದ್ಧವಾಗಿ ತಯಾರಿಸಿದ್ದ 30 ಚೀಲ ಉಪ್ಪನ್ನು ತರುತ್ತಿರುವಾಗ್ಗೆ ಪೋಲೀಸರು ಊರ ಹೊರಭಾಗದಲ್ಲಿ ಅವರನ್ನು ತಡೆದು ಉಪ್ಪನ್ನು ವಶಪಡಿಸಿಕೊಳ್ಳಲೆತ್ನಿಸಿದರು. ಮಹಾದೇವದೇಸಾಯರು ಚೀಲಗಳ ಮೇಲೆ ಕುಳಿತು ಉಪ್ಪನ್ನು ರಕ್ಷಿಸುವದಾಗಿ ಧೈರ್ಯವಾಗಿ ಹೇಳಿದರು. ಅಷ್ಟರಲ್ಲಿ ಕೆಲವು ಸ್ವಯಂಸೇವಕರು ಮೋಟಾರನ್ನು ಸುತ್ತುಗಟ್ಟಿ ಪೋಲೀಸರನ್ನು ತಡೆದರು. ಪೋಲೀಸರು ಮಹಾದೇವದೇಸಾಯರನ್ನೂ ಮತ್ತು ಇತರ ಸ್ವಯಂಸೇವಕರನ್ನೂ ದಸ್ತಗಿರಿ ಮಾಡಿದರು.

ಖೈರಾ ಡಿಸ್ಟ್ರಿಕ್ಟಿಗೆ ಸೇರಿದ ರಾಸ್, ಪೊದರ್ಾ, ಸುನಾವ್, ಅಮೋದ, ಇಸ್ಮಾಪಿಸ್ಸಾವ್ ಮೊದಲಾದ ಗ್ರಾಮಗಳ ನಿವಾಸಿಗಳು ಸರದಾರ್ ವಲ್ಲಭಭಾಯಿ, ದರ್ಬಾರ್ ಗೋಪಾಲದಾಸ್ ದೇಸಾಯಿ ಮತ್ತು ಇತರ ಕೈರಾದೇಶದ ರಾಷ್ಟ್ರೀಯ ಮುಖಂಡರನ್ನು ಬಿಡುಗಡೆ ಮಾಡುವವರೆಗೆ ಭೂಕಂದಾಯವನ್ನು ಕೊಡುವದಿಲ್ಲವೆಂದು ತೀರ್ಮಾನಿಸಿಕೊಂಡಿರುವರು.

ಬೊಂಬಾಯಿ ಪೋಲೀಸರು ಇನ್ನು ಮುಂದೆ ಸತ್ಯಾಗ್ರಹಿಗಳ ಮೇಲೆ ಕೈಎತ್ತುವದಿಲ್ಲವೆಂದು ತೀರ್ಮಾನಿಸಿಕೊಂಡಿರುವರು. ಅದಕ್ಕಾಗಿ ಸರಕಾರದವರು ಹೊ[illegible]ದ ಬೇರೆ ಜನರನ್ನು ಕರೆಯಿಸಬೇಕೆಂದು ಆಲೋ[illegible]ಸಿಂದಿರುವರಂತೆ!

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಐಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ೮ ಸೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚಸಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. [illegible] ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿ[illegible] ಅದನ್ನು [illegible]

ಮ್ಯಾನೇಜರ್—ಪಂಚಾಚಾ[illegible]

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂ[illegible] [illegible]ಪ್ರಕಟಿಸಲ್ಪಟ್ಟಿತು.

8

ಗಳನ್ನು ಬಿಟ್ಟು ಮನುಷ್ಯನು ಯಾವರೀತಿಯಿಂದಲೂ ಸುಖಸದ್ಗತಿಗಳನ್ನು ಹೊಂದಲಾರನು. ಈ ಚತುರ್ವಿಧ ವರ್ಗಗಳ ಒಂದೊಂದೇ ಆಧಾರದ ಮೇಲಿಂದ ಸಾಂಖ್ಯಾದಿ ಷಡ್ದರ್ಶನಗಳೂ ಸ್ಕಾಂದಾದಿ ಮಹಾ ಪುರಾಣಗಳೂ ಅನಂತ ಮತಗಳೂ ಹುಟ್ಟಿರುವವು. ಆದರೆ ನಮ್ಮ ವೀರಶೈವ ಮತವು ಮಾತ್ರ ಈ ನಾಲ್ಕೂ ವರ್ಗಗಳಿಂದೊಡಗೂಡಿ ಶೋಭಿಸುತ್ತಿರುವದು. ಇಂಥ ಸರ್ವಾಂಗಸುಂದರವಾದ ಮತವು ಜಗತ್ತಿನಲ್ಲಿ ಬೇರೊಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅಸ್ಪೃದಾತ್ತ ತತ್ವಗಳಿಂದೊಡಗೂಡಿದ ಈ ವೀರಶೈವ ಮತದ ಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಮಾನವರ ಬಂಧವಿಮೋಚನೆಗಾಗಿ ತಮ್ಮ ಅಗಾಧವಾದ ತಪೋಜ್ಞಾನ, ಕ್ರಿಯಾಯೋಗ ಸಿದ್ಧಿಗಳ ಬಲದಿಂದ ಪರಮರಹಸ್ಯವಾದ ಅಧ್ಯಾತ್ಮಿಕ ತತ್ವಗಳನ್ನು ಭಾಷ್ಯಾದಿಗಳ ರೂಪವಾಗಿ ಗೀರ್ವಾಣ ಭಾಷೆಯಲ್ಲಿ ಬರೆದಿರುವರು. ಆ ಭಾಷ್ಯಾದಿ ಗ್ರಂಥಗಳು ಇದುವರೆಗೆ ನಮಗೆ ಉಪಲಬ್ಧವಿಲ್ಲ. ಇದು ನಮ್ಮ ಸಮಾಜದ ದುರ್ದೈವವೇ ಸರಿ! ಇಂಥ ಅಮೂಲ್ಯವಾದ ಧರ್ಮಗ್ರಂಥಗಳನ್ನು ಸಂಗ್ರಹಿಸುವದೇ ಧರ್ಮಪರಾಯಣರಾದ ಮುಂದಾಳುಗಳ ಕರ್ತವ್ಯವು. ಇನ್ನು ಹಳೆ ಕೆಲವು ಧರ್ಮಗ್ರಂಥಗಳು ನಮ್ಮವರ ಹಸ್ತಗತವಾಗಿ ಪ್ರಚಾರದಲ್ಲಿ ಬಂದಿದ್ದರೂ ಗೀರ್ವಾಣಭಾಷಾನಭಿಜ್ಞರಿಗೆ ಏನೂ ಪ್ರಯೋಜನವಿಲ್ಲದಂತಾಗಿರುವವು. ಅವುಗಳನ್ನು ಆಯಾ ದೇಶಭಾಷೆಗಳಲ್ಲಿ ಪರಿವರ್ತಿಸಿ ಸರ್ವರಿಗೂ ಸುಗಮವಾಗಿ ತಿಳಿಯುವಂತೆ ಮಾಡಿ ಪ್ರಸಿದ್ಧಿಸುವದು ವಿದ್ವಜ್ಜನರ ಕರ್ತವ್ಯವಾಗಿದೆ. ನಮ್ಮ ಸಮಾಜದಲ್ಲಿ ಧರ್ಮಗ್ರಂಥಗಳ ಅಭಾವ, ಗ್ರಂಥಾವಲೋಕನಶಕ್ತಿ, ಉತ್ಸುಕತೆ ಇಲ್ಲದಿರುವದರಿಂದ ಅನೈಕ್ಯವು ಹೆಚ್ಚುತ್ತ ನಡೆದು ಎತ್ತನೋಡಿದರತ್ತ ದ್ವೇಷಾಸೂಯೆಗಳೇ ತಲೆದೂಗುತ್ತಿರುವವು. ಇಂಥ ದುರ್ದಶೆಯನ್ನು ಹೋಗಲಾಡಿಸಬೇಕೆಂಬ ಸದುದ್ದೇಶದಿಂದ ಧರ್ಮಾಭಿಮಾನಿಗಳು ಸಂಸ್ಕೃತ ವಿದ್ಯಾಭಿಲಾಷಿಗಳಿಗೆ ಪಾಠಶಾಲಾ ಕಾಲೇಜುಗಳನ್ನು ಸ್ಥಾಪಿಸಿರುವರಲ್ಲದೆ ಪರಗ್ರಾಮಗಳಲ್ಲಿ ಓದುವವರಿಗೆ ವೇತನವನ್ನು ಸಹ ಕೊಡುತ್ತಿರುವರು. ಈ ತರದ ಸುಖಸೌಲಭ್ಯಗಳಿಂದ ವಿದ್ಯಾಭ್ಯಾಸಂಗ ಮಾಡಿದ ಪಂಡಿತೋತ್ತಮರು ಧರ್ಮಗ್ರಂಥಗಳನ್ನು ಪರಿಶೋಧಿಸಿ ಧರ್ಮದ ನಿಜತತ್ವವನ್ನು ಬೋಧಿಸಿ ಸರ್ವರಿಗೂ ಸಚ್ಚಿದಾನಂದಸುಖವನ್ನುಂಟುಮಾಡುವದೇ ತಮ್ಮ ಕರ್ತವ್ಯವೆಂದು ಭಾವಿಸದೆ ದಾಕ್ಷಿಣ್ಯದ ಬಲೆಗೆ ಬಿದ್ದು ಆರ್ಯೋಕ್ತಿಗಳಿಗೆ ಅಪಾರ್ಥಗಳನ್ನು ಕಲ್ಪಿಸುತ್ತ ಮನಬಂದಂತೆ ಟೀಕಾ ಟಿಪ್ಪಣಿಗಳನ್ನು ಬರೆಯುತ್ತ ಶಾಸ್ತ್ರದ ಭಯವಿಲ್ಲದೆ ಉದರಂಭರಣ ಮಾಡುತ್ತ ಕಾಲಕಳೆಯುತ್ತಿರುವದನ್ನು ನೋಡಿದರೆ ತಾನೊಂದು ಬಯಸಿದರೆ ಅದೊಂದು ತೆರನಾಯಿತೆಂಬಂತೆ ವಿದ್ಯಾವಂತರ ಸಂಖ್ಯೆಯು ಹೆಚ್ಚಿದಹಾಗೆಲ್ಲ ಏಕಮತ್ಯದ ಮಾರ್ಗವೇ ಶಿಥಿಲವಾಗುತ್ತಿರುವದು. ಇದು ಕಲಿಕಾಲ ಪ್ರಾಬಲ್ಯವಲ್ಲದೆ ಬೇರೊಂದಲ್ಲ. ಇರಲಿ; ಇನ್ನು ಒಬ್ಬಿಬ್ಬ ಪಂಡಿತರು ಮಠಮಾನ್ಯಗಳನ್ನು ಬಿಟ್ಟು ಪ್ರಾಪಂಚಿಕ ಸುಖಕ್ಕೆ ಸೀರೆರೆದು ಮಾನಾಪಮಾನಗಳನ್ನು ಸ್ವದೇಶಿಸಿ ಜೀವದ ಹಂಗುದೊರೆದು ಧರ್ಮಗ್ರಂಥಶೋಧನ ಧರ್ಮಗ್ರಂಥಾವಲೋಕನ ಧರ್ಮಗ್ರಂಥ ಮುದ್ರಣಾದಿ ಕಾರ್ಯಗಳಲ್ಲಿ ತೊಡಗಿ ತದ್ದ್ವಾರಾ ಧರ್ಮಗುರುಗಳನ್ನೂ ಧರ್ಮನಿಜತತ್ವಗಳನ್ನೂ ನಮ್ಮೆಲ್ಲರ ನಿದರ್ಶನಕ್ಕೆ ತಂದುಕೊಡಲು ಪ್ರಯತ್ನಿಸಿದರೆ ಹಲಕೆಲವು ಧರ್ಮವಿಮುಖರು ಒಂದಾನೊಂದು ಕಾಲದ ರಾಜಕೀಯ ವಾತಾವರಣದ ಪರಿಸ್ಥಿತಿಯಲ್ಲಿ ಅವಲಂಬಿಸಿದ ಅಶಾಸ್ತ್ರೀಯ ಪದ್ಧತಿಯನ್ನೇ ಪ್ರಗತಿಯಕಾಲದಲ್ಲಿ ಸಹ ಅವಲಂಬಿಸಬೇಕೆಂದು ಇಲ್ಲದ ಸಲ್ಲದ ಆಕ್ಷೇಪಣೆ ಮಾಡುತ್ತ ಅನೇಕ ವಿಘ್ನಗಳನ್ನು ತಂದೊಡ್ಡುತ್ತಿರುವರು. ಜಗತ್ತಿನ ಪರಿಸ್ಥಿತಿಯೇ ಬೇರೀತಿಯಾಗಿರುವಲ್ಲಿ ವ್ಯಥಾಲಾಪನೆ ಮಾಡುವದನುಚಿತವೇ ಸರಿ! ಲೌಕಿಕವ್ಯವಹಾರಗಳು ಆಯಿಯರುಗಳ ದ್ವಾರಾ ವಾದವಿವಾದದಿಂದ ನ್ಯಾಯಾಧಿಪತಿಗಳ ಸ್ಥಾನದಲ್ಲಿ ಯಾವ ಪ್ರಕಾರ ನಿರ್ಣಯಗಳಾಗುವವೋ ತದ್ವತ್ ಧಾರ್ಮಿಕ ಕಲಹವನ್ನು ಧರ್ಮಶಾಸ್ತ್ರ ಕೋವಿದರು "ವಿದ್ಯಾ ದದಾತಿ ವಿನಯಂ" ಎಂಬಂತೆ ಸೌಜನ್ಯದಿಂದ ಧರ್ಮಗುರುಗಳ ಸನ್ನಿಧಿಯಲ್ಲಿ ಸಪ್ರಮಾಣವಾದ ಚರ್ಚೆಯಿಂದ ನಿರ್ಣಯಿಸಿ ಸಮಾಜದಲ್ಲಿ ಸುಖಶಾಂತಿಯನ್ನು ನೆಲೆಗೊಳಿಸಿ ನೈಜವಾದ ಬೋಧೆಯಿಂದ ಸಮಾಜದವರನ್ನು ತೃಪ್ತಿಗೊಳಿಸಿ ವಿದ್ಯೆಯ ಸಾಫಲ್ಯವನ್ನು ಪಡೆದು ಲೋಕೋತ್ತರವಾದ ಕೀರ್ತಿಗೆ ಪಾತ್ರರಾಗಬೇಕಲ್ಲದೆ ಮನಬಂದಂತೆ ಬೇಜವಾಬ್ದಾರಿ ಕೊಡಬಾರದೆಂದು ಸಮಸ್ತ ವಿದ್ವಜ್ಜನರಿಗೂ ನನ್ನ ಅನಂತ ವಿಜ್ಞಾಪನೆಗಳು.

ವಿದ್ವಜ್ಜನರ ಕಿಂಕರ
ಗುರುಭಕ್ತೇಶ ಹಮ್ಮಿಗಿ.

ಗ್ರಂಥಸಂಗ್ರಹ.

ಹಾಲಿ

ನಮ್ಮ ಸ್ಥಳದಲ್ಲಿ ಸ್ಥಾಪಿಸಲ್ಪಟ್ಟ ಪಂಚವರ್ಣ ಬೃಹನ್ಮಠ ಧರ್ಮೋತ್ತೇಜಕದ ಸಂಘದ ವತಿಯಿಂದ ಅನೇಕ ಗ್ರಂಥಗಳು ಶಿಲಾಶಾಸನ ತಾಮ್ರಶಾಸನ ದಾನಶಾಸನಗಳೂ ಸಂಗ್ರಹಿಸಲ್ಪಟ್ಟವು. ಈ ವರ್ಷ ಎಂಟು ಮಾಸಗಳಲ್ಲಿ ವೇ|| ಬ್ರ|| ಶ್ರೀ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ತಮ್ಮ ಪ್ರವಾಸದಲ್ಲಿ ಸಂಗ್ರಹಿಸಿದ ತಾಳಪತ್ರಗ್ರಂಥಗಳ ವಿವರವು ಕೆಳಗಿನಂತೆ ಇರುವದು.

ವೀರಶೈವಾರಣ್ಯಸುಧೆ, ಕರಣಹಸಿಗೆ, ಹಠಯೋಗಪ್ರದೀಪಿಕೆ, ಶಿವಯೋಗಪ್ರದೀಪಿಕೆ, ರೇವಣಸಿದ್ಧೇಶ್ವರಚರಿತ್ರೆ, ಶೃಂಗಾರತಿಲಕ, ನೀತಿಶತಕ, ಚಿಕ್ಕ ನೀಲಮ್ಮನವರ ಸ್ತೋತ್ರ, ಶಿವಮಹಿಮಸ್ತೋತ್ರ, ಸೋಮನಾಥಕಾವ್ಯ, ರಾಘವಾಂಕಕಾವ್ಯ, ರಾಘವಾಂಕಕಾವ್ಯದೊಳಗಣ ಮುಂಡಗಿಕಾವ್ಯ, ಮಲ್ಲೇಶ್ವರಸಾಂದ್ಯ, ಲಿಂಗಪಟ್ಟದಿ (ಶಾಂತವೀರೇಶನಿರೂಪಿತ) ಭಕ್ತಾಟನಚರಿತ್ರೆ, ಶ್ರೀ ಭೈರವೇಶ್ವರ ಪುರಾಣ, ಅನುಭವಾಮೃತ, ಶಂಕರಸಂಹಿತೆ (ಕನ್ನಡ), ಮಂತ್ರಗೋಪ್ಯ, ಗುರುರಾಜಚರಿತ್ರೆ (ಪೂವಲ್ಲಿ ಸಿದ್ಧನಂಜೇಶ್ವರಕೃತ), ಸಿದ್ಧೇಶಭಾಮಿನೀಸಾಂದ್ಯ, ಶ್ರೀ ಮಹಾಂತಸ್ವಾಮಿಗಳು ನಿರೂಪಿಸಿದ ಸಾಂದ್ಯ, ಸೌಂದರಪುರಾಣದ ಸಾಂದ್ಯ, ಆದಯ್ಯನವರ ಸಾಂದ್ಯ, ನಂಬಿದೇವರು ಮಾಡಿದ ಸಾಂದ್ಯ, ಮುಕ್ತಿಸ್ವಾಮಿಗಳ ಸ್ತೋತ್ರ, ಶಿವಾಧಿಕ್ಯರತ್ನಾವಳಿ, ಭಕ್ತಾಧಿಕ್ಯರತ್ನಾವಳಿ, ತ್ರಿವಿಧದೀಕ್ಷಾ ವಿವರಣೆ, ಜ್ಯೋತಿಷ್ಯರತ್ನಮಾಲಾ, ಪಾಶುಪತಾಗಮ (೩ ಪಟಲ), ನವರತ್ನಚಿಂತಾಮಣಿ, ಭಾವಚಿಂತಾರತ್ನ (ಕೈಬರಹ ಕಾಗದಗಳು).

ಮೇಲ್ಕಂಡ ಗ್ರಂಥಗಳೆಲ್ಲ ತಾಳಪತ್ರದಲ್ಲಿ ಕನ್ನಡಲಿಪಿಯಿಂದ ಬರೆದವುಗಳಿರುವವು. ಮತ್ತು ಮ|| ರಾ|| ರಾವಬಹದ್ದೂರ ಮಲ್ಲನಾಯಕ ಲಿಂಗನಾಯಕ ಪಾಟೀಲ ಬೈಲಹೊಂಗಲ ಇವರು ಬೆಳವಾಡಿ ಮಲ್ಲಮ್ಮಮಹಾರಾಣಿಯ ಅನಂತರ ಆಗಿಹೋದ ಆಕೆಯ ವಂಶದ ಏಳುಮಂದಿ ದೇಶಾಯಿಗಳವರ ಭಕ್ಷನ್ನಪಟ್ಟಿ (ಭಕರ) ಯನ್ನು ಕಪಾಸವಮಾಡಿ ಕಳುಹಿಸಿರುವರು. ಇದಲ್ಲದೆ ಮೇಲ್ಕಂಡ ಗ್ರಂಥಸಂಗ್ರಹದ ಕಾರ್ಯಕ್ಕೆ ನಮಗೆ ಸಹಾಯ ಮಾಡಿದವರು ಮುನವಳ್ಳಿ ವಿರಕ್ತಮಠದ ಚಂದ್ರಶೇಖರಸ್ವಾಮಿಗಳು ಶ್ರೀಯುತ ಮ|| ರಾ|| ದುಂಡಪ್ಪನವರು ಬಾಳಿ ಸಿರಸಂಗಿ ಹಿರೇಮಠದ ರಾಚಯ್ಯನವರು ಇರುವರು. ಇದರಂತೆ ಪ್ರತಿಯೊಬ್ಬ ಗುರುವರ್ಗದವರೂ ಅಲ್ಲಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥೆಯ ಚಾಲಕರೂ ತಮ್ಮ ತಮ್ಮ ಪ್ರಾಂತದಲ್ಲಿ ದೊರೆಯುವ ಹಳೇ ಶಾಸನಗಳನ್ನೂ ಗ್ರಂಥಗಳನ್ನೂ ಸಂಗ್ರಹಿಸಿಟ್ಟು ಮುಂದಿನವರು ಕೈಕೊಳ್ಳುವ ಕರ್ನಾಟಕದ ಇತಿಹಾಸಸಂಶೋಧನೆಗೆ ಸಹಾಯಕರಾಗಬೇಕೆಂದು ಸವಿನಯ ವಿನಂತಿ ಆದೆ.

ಆನಂದದ ಸಂಗತಿ.

ಕೃಷ್ಣರಾಜಪೇಟೆ ತಾಲೂಕಿನಲ್ಲಿ ನಮ್ಮ ದಿವಾನ್ ಸಾಹೇಬರವರು ಸರ್ಕೀಟಿನಲ್ಲಿ ಕಾರ್ ಕಾರ್ ಹಳ್ಳಿಗೆ ದಯಮಾಡಿಸುವಾಗ್ಯೆ, ದಾರಿಯಲ್ಲಿ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಯವರ ಬೆಟ್ಟದ ಬಳಿ ಇರುವ ಅಷ್ಟೇರಹಳ್ಳಿ ಬಳಿಯಲ್ಲಿ ತಮ್ಮ ಕಾರ್ ನಿಲ್ಲಿಸಲು ಆ ಊರು ಪ್ರಮುಖರು ಫಲಪುಷ್ಪಾದಿಗಳನ್ನು ಒಪ್ಪಿಸಿ ಶ್ರೀ ರೇಣುಕರ ಜಾತ್ರೆಕಾಲದಲ್ಲಿ ಸೇರುವ ಸಹಸ್ರಾರು ಭಕ್ತರಿಗೆ ಕುಡಿಯುವದಕ್ಕೆ ನೀರು ಸಿಕ್ಕದೆ ಗಿರಿಯ ತಪ್ಪಲಲ್ಲಿರುವ ಕೆರೆಯು ಆಬಾದು ಇಲ್ಲದೆ ಒಣಗಿಹೋಗಿರುವದನ್ನು ಅರಿಕೆಮಾಡಿಕೊಂಡದ್ದಕ್ಕೆ, ದಯಾಳುಗಳಾದ ನಮ್ಮ ದಿವಾನ್ ಸಾಹೇಬರು ನೋಡೋಣವೆಂದು ತಮ್ಮ ಕಾರನ್ನು ಶ್ರೀ ಗಿರಿಯಕಡೆಗೆ ತಿರುಗಿ, ಅಷ್ಟೇರಹಳ್ಳಿಯವರೆಗೂ ದಯಮಾಡಿಸಿ ಮುಂದೆ ರಸ್ತೆಯು ಸರಿಯಾಗಿಲ್ಲದ ಪ್ರಯುಕ್ತ ಸಾಧ್ಯವಾಗದೆ ವಾಪಸ್ ದಯಮಾಡಿಸುವಾಗ್ಯೆ ಕೆರೆಯಿಷಯವನ್ನು ಮತ್ತು ಅಷ್ಟೇರಹಳ್ಳಿಯಿಂದ ಶ್ರೀ ಗಿರಿಯ ಬಳಿಗೆ ರಸ್ತೆಯನ್ನು ಶೀಘ್ರವಾಗಿಯೇ ಮಾಡಿಸಿಕೊಡುವದಾಗಿಯೂ ಮತ್ತು ಶ್ರೀ ಗಿರಿಯ ತಪ್ಪಲಲ್ಲಿಯೇ ಚನ್ನಪಟ್ಟಣಕ್ಕೆ ಹೋಗಿರುವ ಎಲೆಕ್ಟ್ರಿಕ್ ಲೈಟನ್ನು ಶ್ರೀ ಗಿರಿಗೂ ಹಾಕಿಸಿಕೊಡುವಂತೆ ವಾಗ್ದಾನಮಾಡಿ, ನೋಟ್ ಮಾಡಿಕೊಂಡು ದಯಮಾಡಿಸಿದರೆಂದು ವರ್ತಮಾನ ಪ್ರಜೆಗಳ ಸೌಖ್ಯವೇ ತಮ್ಮ ಸೌಖ್ಯವೆಂದು ಪ್ರತಿಯೊಂದು ಹಾಲ್ ಅಹವಾಲನ್ನು ಆದರದಿಂದ ಕೇಳಿ ತಿಳಿದುಕೊಳ್ಳುತ್ತಿರುವ ಇಂಥಾ ನಿಷ್ಪಕ್ಷಪಾತಿಗಳಾದ ನಮ್ಮ ದಿವಾನ್ ಸಾಹೇಬರನ್ನು ಈ ತಾಲೂಕಿನ ಪ್ರತಿಯೊಬ್ಬ ಪ್ರಜೆಗಳು ಕೊಂಡಾಡುತ್ತಿದ್ದಾರೆ. ಚನ್ನಪಟ್ಟಣದ ಬಳಿ ಇರುವ ಮಳೂರು ಶ್ರೀ ಅಪ್ರಮೇಯಸ್ವಾಮಿ ದೇವಸ್ಥಾನಕ್ಕೆ ನಮ್ಮ ದಿವಾನ್ ಸಾಹೇಬರು ಎಲೆಕ್ಟ್ರಿಕ್ ದೀಪಗಳನ್ನು ಬಿಡಿಸಿ, ಆಚಂದ್ರಾರ್ಕವಾದ ಕೀರ್ತಿಗೆ ಭಾಗಿಗಳಾದಂತೆ ಈ ಪರಮಪವಿತ್ರವಾದ ಶ್ರೀ ರೇವಣಸಿದ್ಧೇಶ್ವರಸ್ವಾಮಿಯವರ ಗಿರಿಗೂ ಎಲೆಕ್ಟ್ರಿಕ್ ದೀಪಗಳನ್ನು ಬಿಡಿಸಿ ಸಮಸ್ತ ವೀರಶೈವರನ್ನು ಆನಂದಪಡಿಸುವ ಪರಮೋಜ್ವಲ ಕೀರ್ತಿವಂತರಾಗಲೆಂದು ಶ್ರೀ ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯರು ನಮ್ಮ ದಿವಾನ್ ಸಾಹೇಬರಿಗೆ ಆಯುರಾರೋಗ್ಯ ಸುಖಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಕೆ. ಮಲ್ಲಪ್ಪ,
ಚನ್ನಪಟ್ಟಣ.

ಬೇಲೂರು ತಾಲೂಕು ಬೆಳ್ಳಾವಾರದ ಗ್ರೂಪ್ ಎಸ್ಟೇಟುಗಳ ಮ್ಯಾನೇಜರವರಿಗೆ ನಡೆದ ಸನ್ಮಾನ.

ಇದೇ ಮಾಹೆ 22-4-30 ರಲ್ಲಿ ಬೆಳ್ಳಾವಾರದ ಗ್ರೂಪ್‌ಎಸ್ಟೇಟುಗಳ ಪೈಕಿ ಬಿಳುಗವಳ್ಳಿ ಎಸ್ಟೇಟಿನಲ್ಲಿ ಮ|| ರಾ|| ಬಿ. ಎಂ. ದ್ಯಾವೇಗೌಡರ ಏರ್ಪಾಡಿನಂತೆ ಅನೇಕ ದೊಡ್ಡ ಮನುಷ್ಯರುಗಳು ಸೇರಿ ಗ್ರೂಪ್ ಎಸ್ಟೇಟುಗಳ ಮ್ಯಾನೇಜರಾದ ಮ|| ರಾ|| ವಿ. ಜಿ. ಕೆಂಬಾಸ್‌ರವರಿಗೆ ಸನ್ಮಾನವು ನಡೆಯಿಸಲ್ಪಟ್ಟಿತು. ಆಗಮಿಸಿದ್ದ ದೊಡ್ಡ ಮನುಷ್ಯರುಗಳನ್ನು ವಾದ್ಯಗಳೊಂದಿಗೆ ಮಂಟಪಕ್ಕೆ ಕರೆದುಕೊಂಡು ಬಂದ ನಂತರ ಕೋಮುವಾರ ಜನರಿಗೆಲ್ಲ ಅಲ್ಪಾಹಾರವು ಗ್ರಾಂಫೋನ್ ಸಂಗೀತವೂ ನಡೆದ ನಂತರ ಸಭಾಕಾರ್ಯವು ಪ್ರಾರಂಭವಾಯಿತು. ಸಭಿಕರ ಪ್ರಾರ್ಥನೆಯಂತೆ ಬೆಳ್ಳೂರು ಎಸ್ಟೇಟು ಕಾಫಿಪ್ಲಾಂಟರ್ ಮತ್ತು ಆರ್. ಎ. ಮೆಂಬರೂ ಆದ ಮ|| ರಾ|| ದ್ಯಾವಪ್ಪಗೌಡರು ಅಗ್ರಾಸನವನ್ನು ವಹಿಸಿದರು. ಅನಂತರ ಮೂಡಿಗೆರೆ ತಾಲೂಕು ಬಣಕಲ್ ಸ್ಕೂಲು ಮಾಸ್ಟರಾದ ಮ|| ರಾ|| ಪುಟ್ಟೇಗೌಡರು "ಏಕಮತ್ಯ" ವಿಷಯವಾಗಿ ಉಪನ್ಯಾಸ ಮಾಡಿದರು. ಇದಾದ ಮೇಲೆ ಬೇಲೂರು ತಾಲೂಕು ಹಳೇಬೀಡು ಸ್ಕೂಲು ಮಾಸ್ಟರಾದ ಮ|| ರಾ|| ದೇವೇಗೌಡರ ಸ್ನೇಹಿತರಾದ ಮ|| ರಾ|| ಯಂ. ಅನಂತರಾಮಯ್ಯನವರು ಮ್ಯಾನೇಜರವರು ದಕ್ಷತೆಯಿಂದ ನಿರ್ವಹಿಸಿರುವ ಕೆಲಸಗಳನ್ನೆಲ್ಲಾ ವಿವರಿಸಿ ಅವರ ಗುಣಕಥನವನ್ನು ಸ್ವಾರಸ್ಯವಾಗಿ ಮಾಡಿ ಪ್ರೇಕ್ಷಕರಿಗೆಲ್ಲಾ ಮ್ಯಾನೇಜರವರ ಗುಣಾತಿಶಯಗಳನ್ನು ಪ್ರಕಾಶಗೊಳಿಸಿದರು. ಮ|| ರಾ|| ಕಾಫಿಪ್ಲಾಂಟರು ದ್ಯಾವೇಗೌಡರವರು ತಮ್ಮ ಪ್ರೀತಿಯನ್ನು ಪ್ರಕಾಶಪಡಿಸುವುದಕ್ಕಾಗಿ ಮೊದಲೇ ಸಿದ್ಧಪಡಿಸಿದ್ದ, ಮಧ್ಯೆ ಮಧ್ಯೆ ಕೆಂಪುಗಳನ್ನೂ, ಮುತ್ತುಗಳನ್ನೂ ಸೇರಿಸಿ ತಯಾರು ಮಾಡಿಸಿದ್ದ ಭಂಗಾರದ ಪದಕವನ್ನೂ ಶಾಲನ್ನೂ ಅಧ್ಯಕ್ಷರಾದ ಮ|| ರಾ|| ದ್ಯಾವಪ್ಪಗೌಡರವರು ಸ್ವಹಸ್ತದಿಂದ ಮ್ಯಾನೇಜರವರಿಗೆ ದಯಪಾಲಿಸಿದರು. ಇದಾದನಂತರ ಮ|| ರಾ|| ವಿ. ಜಿ. ಕೆಂಬಾಸ್‌ರವರು ಸಮಯೋಚಿತವಾದ ಮಾತುಗಳಿಂದ ತಮಗಿರುವ ಸ್ವಾಮಿಭಕ್ತಿಯನ್ನು ಪ್ರಕಾಶಗೊಳಿಸಿದರು. ಇದನ್ನೆಲ್ಲ ನೋಡಿದವರು ಮ|| ರಾ|| ದೇವೇಗೌಡರವರಿಗೂ ಮತ್ತು ಮ್ಯಾನೇಜರವರಿಗೂ ಇರುವ ಪ್ರೀತಿವಿಶ್ವಾಸಗಳನ್ನು ತಮ್ಮತಮ್ಮೊಳಗೆ ಚರ್ಚಿಸುತ್ತ ಇಬ್ಬರಿಗೂ ದೇವರು ಆಯುರಾರೋಗ್ಯೈಶ್ವರ್ಯಾದಿಗಳನ್ನು ದಯಪಾಲಿಸಿ ಈ ಉಭಯರ ಪ್ರೀತಿವಿಶ್ವಾಸಗಳನ್ನು ಹೆಚ್ಚಿಸಲೆಂದು ಹಾರೈಸಿ ಜಯಘೋಷದೊಡನೆ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು. ಈ ಮಲನಾಡುಪ್ರಾಂತ್ಯ ಯಾರೂ ನಡೆಯಿಸದೆ ಇರುವ ಇಂತಹ ಸಂತೋಷಕೂಟವನ್ನು ನಡೆಯಿಸಿ ಮ|| ರಾ|| ಬಿ. ಎಂ. ದ್ಯಾವೇಗೌಡರವರು ಎಲ್ಲಾ ಪ್ಲಾಂಟರುಗಳಿಗೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಇಂತಹ ಕೂಟಗಳು ಆಗಾಗ್ಯೆ ನಡೆಯುತ್ತಿದ್ದಲ್ಲಿ ಮಲನಾಡು ಪ್ರಾಂತ್ಯವು ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ.

ಓರ್ವ ಪ್ರೇಕ್ಷಕ.

ಶ್ರೀ ಪರಳಿ ವೈದ್ಯನಾಥ.

ಅಖಿಲಭಾರತೀಯ ವೀರಶೈವಕಲ್ಯಾಣಕ್ಕೋಸ್ಕರವಾಗಿ ಇದೇ ಪ್ರಮೋದಸಂವತ್ಸರ ವೈಶಾಖ ಶು|| ಪೌರ್ಣಿಮೆ ಸೋಮವಾರ ಶ್ರೀ ಪರಳೀ ವೈದ್ಯನಾಥೇಶ್ವರ ಜ್ಯೋತಿರ್ಲಿಂಗಮೂರ್ತಿಗೆ ವೀರಶೈವಲಿಂಗಿಬ್ರಾಹ್ಮಣ ಪಂಡಿತರಿಂದ ಶಿವಕೋಟಿ ವೀರಭದ್ರಯ್ಯನವರು ಶುದ್ಧಭಾಗೀರಥೀ ಜಲಪೂರಿತ ಸಹಸ್ರಕುಂಭಾಭಿಷೇಕವನ್ನು ಮಾಡಿಸುವುದರಿಂದ ಯಾವ ಯಾವ ಸ್ಥಲದಲ್ಲಿ ವೇದಾಧ್ಯಯನವನ್ನು ಮಾಡಿ ಪ್ರಯೋಗವನ್ನು ತಿಳಿದ ವೈದಿಕಪಂಡಿತರಿರುವರೋ ಅವರು ಈ ಪವಿತ್ರಕಾರ್ಯಕ್ಕೆ ಭಕ್ತಿಯುಕ್ತ ಅಂತಃಕರಣದಿಂದ ದಯಮಾಡಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ವೀರಶೈವಭಕ್ತಮಹೇಶ್ವರರೂ ವಿದ್ವಾಂಸರೂ ಈ ಕಾರ್ಯಕ್ಕೆ ಆಗಮಿಸಿ ವೈದ್ಯನಾಥನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ

ಪರಳಿ ವೀರಶೈವಸಮಾಜ.

ಬಡರೈತರ ಗೋಳು.

ಸ್ವಾಮಿ! ಗ್ರಾಮಾಂತರದ ಹಿಡುವಳಿ ಜಮೀನುಗಳಲ್ಲಿರುವ ಕರಾಬಿಗೆ ಹಿಡುವಳಿದಾರರು ಗುಂಟೆ 1 ಕ್ಕೆ 5 ರೂಪಾಯಿನಂತೆ ಕಿಮ್ಮತ್ತು ಕೊಡಬೇಕೆಂದು ಸರ್ಕಾರದವರು ರೈತರಿಗೆ ನಿರ್ಬಂಧಪಡಿಸುತ್ತಾ ಇದ್ದಾರೆ. ಸದ್ರಿ ಕರಾಬು ನಮ್ಮ ಅಜ್ಜ ಮುತ್ತಜ್ಜರ ಕಾಲದಿಂದಲೂ ನಮ್ಮ ಹಿಡುವಳಿ ಜಮೀನುಗಳಲ್ಲಿರುತ್ತೆಂಬುದು ನಮಗೆ ಗೊತ್ತಿರುವುದಿಲ್ಲ. ಮಾಮೂಲಿನಂತೆ ನಮ್ಮ ನಮ್ಮ ಬಾಗಾಯ್ತು ಮತ್ತು ಕುಸ್ಕಿ ಜಮೀನುಗಳನ್ನು ನಾವುಗಳು ಸಾಗುವಳಿ ಕೊಂಡು ಸದರಿ ಫಲಕ್ಕೆ ಭಾಗಿಗಳಾಗುತ್ತಾ ಬರುತ್ತೇವೆ. ಈ ಮಧ್ಯೆ ಸದರಿ ಕರಾಬಿನ ವಿಚಾರದಲ್ಲಿ ಸರ್ವೇ ಇಲಾಖೆಯವರೇ ಆಗಲಿ ಅಥವಾ ರೆವಿನ್ಯೂ ಇಲಾಖೆಯವರೇ ಆಗಲಿ ಮತ್ತು ಗ್ರಾಮದ ಪಟೇಲ್ ಶ್ಯಾನುಭೋಗರೇ ಆಗಲಿ ಈ ಹೊತ್ತಿನವರೆಗೂ ಯಾವ ತಂಟೆ ತಗಾದೆ ಮಾಡಿರುವುದಿಲ್ಲ. ಕೆಲವು ಕಾಲದಿಂದ ಹಿಡುವಳಿ ಕರಾಬು ಜಮೀನಿಗೆ ಗುಂಟೆ 1 ಕ್ಕೆ 5 ರೂಪಾಯಿನಂತೆ ಹಿಡುವಳಿದಾರರಿಂದ ಕಿಮ್ಮತ್ತು ವಸೂಲುಮಾಡಬೇಕೆಂಬುದಾಗಿ ಸರ್ಕಾರದವರು ಹುಕುಂಮಾಡಿರುತ್ತಾರೆ. ಇದಕ್ಕೆ ರೈತರುಗಳಿಗಿರುವ ನಾನಾವಿಧವಾದ ತೆರಿಗೆಗಳೇ ಜಾಸ್ತಿಯಾಗಿರುತ್ತವೆ. ಇವುಗಳ ಜೊತೆಗೆ ಸರ್ಕಾರದವರು ಇದೊಂದು ಹೊರೆಯನ್ನು ಹೊರಿಸುವುದಾದರೆ ಕಷ್ಟವಾಗುತ್ತೆ. ಈ ವಿಚಾರದಲ್ಲಿ ಅನೇಕ ಗ್ರಾಮಗಳ ರೈತರು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ ಪ್ರಾರ್ಥಿಸಿಕೊಂಡಿರುತ್ತಾರೆ. ಈ ಎಲ್ಲಾ ವಿಚಾರವನ್ನೂ ಶ್ರೀಮನ್ಮಹಾರಾಜ ಸರ್ಕಾರದವರು ತಮ್ಮ ಕೃಪಾಚಿತ್ತದಲ್ಲಿ ಪರಾಮರ್ಶಿಸಿ ಹಿಡುವಳಿ ಕರಾಬು ಕಿಮ್ಮತ್ತನ್ನು ವಜಾಮಾಡಿ ಬಡಪ್ರಜೆಗಳಾದ ನಮ್ಮನ್ನು ಕಾಪಾಡಬೇಕೆಂದು ಧರ್ಮಸರ್ಕಾರದವರಲ್ಲಿ ಅತ್ಯಂತ ಭಕ್ತಿಯಿಂದ ಬೇಡಿಕೊಳ್ಳುತ್ತೇವೆ.

ಬಡರೈತ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಮೇ ತಾ|| ೫ ನೇ ಸೋಮವಾರ

ಶಾರದಾ ಬಾಲ್ಯವಿವಾಹನಿರೋಧಕಶಾಸನ

ಶಾರದಾಬಿಲ್ಲು ಬ್ರಿಟಿಷ್ ರಾಜ್ಯದಲ್ಲಿ ಜಾರಿಗೆ ಬಂದಿರುತ್ತದೆ. ಅಲ್ಲಲ್ಲಿಯೇ ಕೆಲ ಪ್ರದೇಶಗಳಲ್ಲಿ ಹದಿನಾಲ್ಕು ವರ್ಷದೊಳಗಿನ ಹೆಣ್ಣುಗಳಿಗೆ ವಿವಾಹವನ್ನು ಬೆಳಯಿಸಿದ್ದಾದರೆ ಶಾರದಾ ಆಕ್ಟ್ ಪ್ರಕಾರ ಶಿಕ್ಷಾರ್ಹರಾಗುವರೆಂದು ಡಂಗುರವನ್ನು ಸಹ ಸಾರಿಸಿದರೆಂದು ಕೆಲ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಮುಂಬೈ, ಕಲ್ಕತ್ತಾ ಮುಂತಾದ ಅನೇಕ ಸ್ಥಾನಗಳಲ್ಲಿ ಈ ಕರಾಳಶಾಸನವೆಂಬ ರಕ್ಕಸನ ಕೈಗೆ ಸಿಕ್ಕಿ ನರಳುವುದು ಉಚಿತವಲ್ಲವೆಂಬ ಭಯದಿಂದ ತಮ್ಮ ತಮ್ಮ ಮನೆಗಳಲ್ಲಿದ್ದ ಹೆಣ್ಣುಮಕ್ಕಳನ್ನೆಲ್ಲಾ ತಮಗೆ ಬೇಕಬೇಕಾದ ವರಗಳಿಗೆ ಕೊಟ್ಟು ಮದುವೆಯನ್ನು ಸಹ ಮಾಡಿಯೇ ಬಿಟ್ಟರು. ಭಾರತಧರ್ಮಂಗಳಿಗೆ ಮೂಲಸ್ಥಾನವೆನಿಸಿದ ಕಾಶೀ ಮುಂತಾದ ಅನೇಕ ಕಡೆಗಳಲ್ಲಿ ವೈದಿಕಮಹೋದಯರು ಈ ಕರಾಳಶಾಸನವೆಂಬ ರಕ್ಕಸನು ಭಾರತಭೂಮಿಯಲ್ಲಿ ಕಾಲಿಡುವುದರಿಂದ ಪವಿತ್ರವಾದ ಭಾರತಧರ್ಮವು ಕಲುಷಿತವಾಗುವುದೆಂಬ ಕಳವಳದಿಂದ ಅನೇಕ ಕೂಟಗಳನ್ನೇರ್ಪಡಿಸಿ ಈ ರಾಕ್ಷಸನ ಸಂಹಾರದಲ್ಲಿ ತವಕಪಟ್ಟರೂ ಅಕಾಶಕ್ಕೆಸೆದ ಮಣ್ಣಿನ ಹೆಂಟೆಯಂತೆ ಆ ಪ್ರಯತ್ನಗಳೆಲ್ಲವೂ ನಿರ್ನಾಮಗಳಾಗುತ್ತ ಬಂದವು. ಅಧರ್ಮವನ್ನು ಹೆಚ್ಚಿಸಿ ಧರ್ಮವನ್ನು ನಾಶಮಾಡುವುದೇ ಕಲಿಯ ಪ್ರಭಾವವಾದ್ದರಿಂದ ಅನೇಕಾನೇಕ ಪಂಡಿತಪ್ರಕಾಂಡರ ಮನೋರಥವು ಈಡೇರಿದಂತಾಗಲಿಲ್ಲವು. ಹದಿನಾಲ್ಕು ವರ್ಷದಿಂದ ಹನ್ನೆರಡು ವರ್ಷಕ್ಕೆ ಇಳಿಸುವರೆಂಬ ಒಂದು ವದಂತಿಮಾತ್ರ ಹಬ್ಬಿತಲ್ಲದೆ ಕಾರ್ಯದಲ್ಲಿ ಏನೂ ಪ್ರಯೋಜನವಾಗಲಿಲ್ಲ. ಇದಾದರೂ ಆಗಿದ್ದರೆ ಅಳುವವರ ಕಣ್ಣನ್ನು ಒರಸಿದಂತೆ ಸ್ವಲ್ಪ ಸಮಾಧಾನವಾಗುತ್ತಿತ್ತು. ಈಗಿನ ವಿದೇಶೀಯ ಸಂಸರ್ಗವೆಂಬ ಹುಚ್ಚುಹೊಳೆಯಲ್ಲಿ ವೈದಿಕ ಧರ್ಮಗಳು ಕಡ್ಡಿಕಸಗಳಂತೆ ಹೇಳುವುದಕ್ಕೆ ಹೆಸರಿಲ್ಲದಂತೆ ಕೊಚ್ಚಿಕೊಂಡುಹೋಗಲು ಉಪಕ್ರಮಿಸಿವೆ. "ಋಣಂಕೃತ್ವಾ ಘೃತಂಪಿಬೇತ್" ಎಂಬ ಗಾದೆಗನುಸಾರವಾಗಿ ಸಾಲವಾದರೂ ಆಗಲಿ ನರಕವಾದರೂ ಆಗಲಿ ಇರುವವರೆವಿಗೂ ಸೌಖ್ಯದಿಂದ ಇದ್ದರೆ ಅದೇ ಮನುಷ್ಯನ ಜೀವಮಾನದ ಫಲವೆಂಬ ನಾಸ್ತಿಕಬುದ್ಧಿಯು ಭಾರತಪುತ್ರವಲ್ಲನೇಕರಿಗೆ ಹುಟ್ಟಿದುದರಿಂದ ಪವಿತ್ರವಾದ ಭಾರತಧರ್ಮಾಚರಣೆಗಳಿಗೆಲ್ಲ ತಿಲಾಂಜಲಿಯು ಕೊಡುವ ಪ್ರಸಂಗವು ಬಂದೊದಗಿತು. ಇಂತಹ ವಿಧರ್ಮಿಗಳ ದೃಷ್ಟಿಯಲ್ಲಿ ಮಹರ್ಷಿಪ್ರಣೀತವಾದ ಶಾಸ್ತ್ರವು ಶಸ್ತ್ರವಾಗಿ ಪರಿಣಮಿಸಿತು. ಋತುಮತಿಯಾಗುವ ಪೂರ್ವದಲ್ಲಿಯೇ ವಿವಾಹವೆಂಬ ಸಂಸ್ಕಾರವು ಆಗಬೇಕೆಂದೂ, ಋತುಮತಿಯಾಗುವ ಪೂರ್ವದಲ್ಲಿಯೇ ಕನ್ಯಾತ್ವವು ಇರುವುದಲ್ಲದೆ ಆ ಮೇಲೆ ಕನ್ಯಾತ್ವವು ಇರುವುದಿಲ್ಲವೆಂದೂ, ಇಂತಹ ಕನ್ಯಾದಾನವೇ ಷೋಡಶಮಹಾದಾನಂಗಳಲ್ಲಿ ಸೇರಿದುದೆಂದೂ "ಪ್ರದಾನಂಪ್ರಾಕ್ ಋತೋಃ" ಎಂದು ಗೌತಮಸೂತ್ರ ಮುಂತಾದ ಶಾಸ್ತ್ರಗಳು ಡಂಗುರಾಘೋಷವನ್ನು ಮಾಡುತ್ತಲಿದ್ದರೂ ಅಂತಹ [illegible]ವಾಕ್ಯಗಳೆಲ್ಲವೂ ಬದಿರನ ಕಿವಿಯಲ್ಲಿ ಜಪಿಸಿದಂತೆ ವ್ಯರ್ಥವಾಗಿ ಪರಿಣಮಿಸುತ್ತ ಬಂದಿರುವುದನ್ನು ನೋಡಿದರೆ ಭಾರತಧರ್ಮಾಭಿಮಾನಿಯಾದ ಯಾವನಿಗೆ ತಾನೆ ವ್ಯಸನವುಂಟಾಗಲಿಕ್ಕಿಲ್ಲ? ಭಾರತೀಯರಿಗೆ ಆಗಬೇಕಾದ ಸಲವತ್ತು ಸಂಸ್ಕಾರಗಳಲ್ಲಿ ಈ ವಿವಾಹವೂ ಒಂದು ಪ್ರಧಾನಸಂಸ್ಕಾರವೆಂದು ಶಾಸ್ತ್ರವು ಸ್ಪಷ್ಟವಾಗಿ ಹೇಳಲ್ಪಟ್ಟಿದ್ದರೂ ಶಾಸ್ತ್ರಸಂಧವನ್ನರಿಯದ ಕೆಲ ಲೌಕಿಕರು ಈ ವಿವಾಹಗನ್ನು ಸಾಂಘಿಕವ್ಯವಹಾರವನ್ನಾಗಿ ಭಾವಿಸದ್ದರಿಂದಲೇ ಈ ತೆರವಾದ ವಿಷಮಾವಸ್ಥೆಯು ಪ್ರಾಪ್ತವಾಯಿತು. ನವನವೋನ್ಮೇಷಶಾಲಿಯಾದ ಈಗಿನ ನಾಗರೀಕತೆಯು ಇನ್ನೂ ಏನೇನು ದುರವಸ್ಥೆಯನ್ನು ತಂದೊಡ್ಡುವದೋ ನೋಡಬೇಕಾಗಿದೆ.

ಪ್ರಕೃತದಲ್ಲಿ ಕರ್ಣಾಟಕ ಭೂದೇವಿಯ ಮೊಗದಾವರೆಗೆ ತಿಲಕದಂತೊಪ್ಪುವ ಮೈಸೂರು ರಾಜ್ಯದಲ್ಲಿರುವ ಅಖಿಲವೈದಿಕಲೌಕಿಕಮಹಾಶಯರೆಲ್ಲಾ ಒಟ್ಟುಗೂಡಿ ಈ ಶಾರದಾಬಿಲ್ಲೆಂಬ ಕರಾಳರಾಕ್ಷಸನು ಬ್ರಿಟಿಷ್ ರಾಜ್ಯದಲ್ಲಿ ಹುಟ್ಟಿದರೂ ಕ್ರಮೇಣ ಈ ರಾಜ್ಯಕ್ಕೂ ಮೆಲ್ಲನೆ ಕಾಲಿಡಲು ಅವಕಾಶವಾಗುವುದರಿಂದ ಆ ರಾಕ್ಷಸನು ಜನ್ಮವೆತ್ತದಂತೆ, ಮಾಡಬೇಕೆಂದು ಅಸಮಸಾಹಸವನ್ನು ಮಾಡಿದರೂ ಈ ಕರಾಳಶಾಸನವೆಂಬ ರಾಕ್ಷಸನು ಬ್ರಿಟಿಷ್ ರಾಜ್ಯದಲ್ಲಿ ಜನ್ಮವನ್ನು ಧರಿಸಿಯೇ ಬಿಟ್ಟನು.

'ಸರ್ವನಾಶೇ ಸಮುತ್ಪನ್ನೇ ಅರ್ಧಂತ್ಯಜತಿಪಂಡಿತಃ' ಎಂಬ ನಾಣ್ನುಡಿಯಂತೆ ಬ್ರಿಟಿಷ್ ರಾಜ್ಯದಲ್ಲಿ ಆ ರಕ್ಕಸನು ಏನಾದರೂ ಮಾಡಿಕೊಳ್ಳಲಿ, ಭಾರತಾಂಗನೆಗೆ ತಿಲಕದಂತಿರುವ ಈ ರಾಜ್ಯದಲ್ಲಿ ಕಾಲಿಟ್ಟು ಪಟಾವರಸೆಯನ್ನು ಮಾಡದಂತೆ ದಿಗ್ಬಂಧವನ್ನಾದರೂ ಮಾಡಿ ತಡೆಕಟ್ಟುವುದು ಅತ್ಯವಶ್ಯಕವಾದುದಾಗಿದೆ. ಈ ದೇಶದಲ್ಲಿರುವ ಅಖಿಲ ವೈದಿಕ ಲೌಕಿಕ ಮಹಾಶಯರು ಇದುವರೆಗೂ ವೇದವಿರುದ್ಧಗಳಾದ ಚಳವಳಿಯುಳ್ಳವರಾಗಿಲ್ಲವು. ಸಾಕ್ಷಾದ್ಧರ್ಮಾವತಾರಿಗಳಾದ ನಮ್ಮ ಶ್ರೀಮನ್ಮಹಾರಾಜರವರು ಸಹ ವಂಶಾನುಕ್ರಮವಾಗಿ ಶ್ರುತಿಸ್ಮೃತ್ಯುಕ್ತ ಧರ್ಮಾನುಷ್ಠಾನತತ್ಪರರೂ ಆಸ್ತಿಕಶಿಖಾಮಣಿಗಳೂ ಶಾಸ್ತ್ರೋಲ್ಲಂಘನ ಭೀರುಗಳೂ ದೈವಭಕ್ತರೂ ಆಗಿರುವುದರಿಂದ "ಯಥಾರಾಜಾತಥಾಪ್ರಜಾಃ" ಎಂಬುಕ್ತಿಯಂತೆ ಇವರ ಆಳ್ವಿಕೆಯಲ್ಲಿರುವ ಪ್ರಜೆಗಳೂ ಸಹ ಭಾರತಧರ್ಮಾಚರಣೆಯಲ್ಲಿಯೇ ನಿರತರಾಗಿರುತ್ತಾರೆ. ಇನ್ನು ಮೇಲೆ ಈ ಕರಾಳಶಾಸನವೆಂಬ ರಾಕ್ಷಸನ ದೃಷ್ಟಿಯು ಈ ಪವಿತ್ರರಾಜ್ಯದಲ್ಲಯೂ ಸಹ ಎಲ್ಲಿ ಬೀಳುವುದೋ ಎಂದು ಪ್ರತಿಯೊಬ್ಬ ಧಾರ್ಮಿಕನೂ ಪರಿತಪಿಸುತ್ತಿರುವನು. ಗುರುದೈವಶಾಸ್ತ್ರಂಗಳೇ ತಮ್ಮ ಪಂಚಪ್ರಾಣಗಳಾಗುಳ್ಳ ನಮ್ಮ ಮಹಾಪ್ರಭುಗಳ ಆಳ್ವಿಕೆಯಲ್ಲಿ ಮಾತ್ರ ಇಂಥ ಘೋರಶಾಸನ ಎಂಬ ರಕ್ಕಸನಿಗೆ ಇಂಬು ಸಿಕ್ಕಲಾರದು. ಇಲ್ಲಿಯ ಪ್ರಜೆಗಳೂ ಸಹ ಶ್ರೀಮನ್ಮಹಾರಾಜರವರ ಅಸಾಧಾರಣವಾದ ಧರ್ಮಮಾರ್ಗವನ್ನು ಬಿಟ್ಟು ಅಚೆ ಈಚೆ ಚಲಿಸುವುದೇ ಇಲ್ಲವು. ನಮ್ಮ ಮಹಾರಾಜರವರ ಧರ್ಮಯುಕ್ತವಾದ ಪ್ರಜಾಪಾಲನೆಯನ್ನೂ ಪ್ರಜೆಗಳಿಗಿರುವ ಅವಿಚ್ಛಿನ್ನ ರಾಜಭಕ್ತಿಯನ್ನೂ ನೋಡಿ ಈ ದೇಶಕ್ಕೆ ಬಂದ ಅನೇಕ ಮಹೋದಯರು ಈ ರಾಜ್ಯವನ್ನು ರಾಮರಾಜ್ಯವನ್ನಾಗಿ ಸಂಬೋಧಿಸಿರುತ್ತಾರೆ. ಇದಲ್ಲದೆ ಶ್ರೀ ಮಹಾಪ್ರಭುಗಳಾದರೋ ಭಾರತಧರ್ಮದ ಮೂಲಸ್ಥಾನವೆನಿಸಿದ ಯದುವಂಶಾಬ್ಧಿಯಲ್ಲಿ ಜನಿಸಿದವರಾಗಿರುತ್ತಾರೆ. ಹಿಂದೆ ಇದೇ ವಂಶವನ್ನು ಅಲಂಕರಿಸಿದ ದೈತ್ಯಾರಿಯಾದ ಶ್ರೀ ಕೃಷ್ಣನು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪಾಲಿಸಿ ಭಾರತಧರ್ಮವನ್ನು ದೃಢಗೊಳಿಸಿದಂತೆ ಆ ಕೃಷ್ಣನ ಅಪರಾವತಾರಿಗಳಾದ ಮಹಾಪ್ರಭುಗಳು ಸಹ ಶ್ರುತಿಸ್ಮೃತಿಗಳಿಗೆ ವಿರುದ್ಧವೂ, ಪೂರ್ವಸಂಪ್ರದಾಯವಿರುದ್ಧವೂ, ವೈದಿಕ ಮಹಾಜನಗಳ ಹೃದಯತೋದಾವಹವೂ ಆಗಿರುವ ಈ ಶಾರದಾಬಿಲ್ಲೆಂಬ ಅಸುರನಿಗೆ ಈ ರಾಜ್ಯದಲ್ಲಿ ಕಾಲಿಡಲು ಅವಕಾಶವನ್ನು ಕೊಡುವವರಲ್ಲವು. ಮತ್ತು ಇಂಥ ಕಾನೂನುಗಳನ್ನು ನೂತನವಾಗಿ ನಿರ್ಮಿಸುವ ಪ್ರಜಾಪ್ರತಿನಿಧಿ ಮುಂತಾದ ಸಭೆಗಳಲ್ಲಿ ಮೆಂಬರರಾಗಿರುವವರು ಸಹ ನಾವುಗಳು ತ್ರಿಕರಣಶುದ್ಧವಾಗಿ ದೇಶಸೇವೆಯನ್ನು ಮಾಡುತ್ತೇವೆ. ಪ್ರಜೆಗಳಿಗೆ ವಿರುದ್ಧವಾದ ದಾರಿಯಲ್ಲಿ ಖಂಡಿತವಾಗಿಯೂ ಹೋಗುವುದಿಲ್ಲ. ದಯವಿಟ್ಟು ನನಗೊಂದು ಓಟುಕೊಡಿ ಎಂದು ಬಹಳವಾಗಿ ಪ್ರಜೆಗಳನ್ನು ಪ್ರಾರ್ಥಿಸಿ ಪ್ರಜೆಗಳ ಪರವಾಗಿಯೇ ನಿಂತಿರುವುದಲ್ಲದೆ ಪ್ರಜೆಗಳೂ ಸಹ ಅಂಥ ಧಾರ್ಮಿಕಬುದ್ಧಿಯುಳ್ಳವರಿಗೇನೇ ಓಟುಕೊಟ್ಟು ಮೆಂಬರುತನಕ್ಕೆ ಚುನಾಯಿಸಿಕೊಂಡಿರುವುದರಿಂದ ಪ್ರಜೆಗಳಿಗೆ ವ್ಯಥೆಯನ್ನುಂಟುಮಾಡುವ ಇಂಥ ಕಾನೂನುಗಳಿಗೆ ಎಂದಿಗೂ ಅವಕಾಶವನ್ನು ಕೊಡಲಾರರೆಂದು ಪ್ರತಿಯೊಬ್ಬನಿಗೂ ಭರವಸೆಯಾಗಿದೆ. ಆದರೆ ಮಲ್ಲೀವನದಲ್ಲಿ ಆಕಸ್ಮಿಕವಾಗಿ ಒಂದು ನಿಸಲತೆಯು ಹಬ್ಬಿದಂತೆ ಯಾರಾದರೂ ಒಬ್ಬಿಬ್ಬರು ಈ ಕರಾಳರಕ್ಕಸನ ಅಂತೇವಾಸಿಗಳಾಗಿದ್ದರೂ ಆಗಿರಬಹುದು. ಆದರೂ ಪ್ರಜೆಗಳಿಗೆ ನೆಮ್ಮದಿಯನ್ನುಂಟುಮಾಡುವವರೇ ಮೆಂಬರರಾಗಿ ದಿಕ್ಪಾಲಕರಂತೆ ಜಾಗರೂಕರಾಗಿ ನಿಂತಿರುವದರಿಂದ ದುಷ್ಟರಾಕ್ಷಸಾರಿಯಾದ ಈ ಕೃಷ್ಣರಾಜ್ಯದಲ್ಲಿ ಆ ಅಂತೇವಾಸಿಗಳ ಸಾಹಸವೊಂದೂ ನಡೆಯಲಾರದು. ಶ್ರೀ ಕೃಷ್ಣನು "ಪರಿತ್ರಾಣಾಯಸಾಧೂನಾಂ ವಿನಾಶಾಯ ಚದುಷ್ಕೃತಾಂ" ಎಂಬ ತನ್ನ ಪ್ರತಿಜ್ಞಾವಾಕ್ಯವನ್ನು ಎಂದೂ ಮರೆಯಲಾರನು. ಆದ್ದರಿಂದ ಇಂಥ ಧರ್ಮಪ್ರಭುಗಳ ಆಳ್ವಿಕೆಗೆ ಒಳಪಟ್ಟ ನಾವುಗಳು ಈ ಕರಾಳರಾಕ್ಷಸನು ಈ ದೇಶಕ್ಕೂ ಸಹ ಎಲ್ಲಿ ನುಗ್ಗುವನೋ ಎಂಬ ಭೀತಿಯನ್ನು ಪಡೆಯುವುದು ಸುಮ್ಮನೆ ಮನೋಭೀತಿಯಾಗಿದೆ. ಮತ್ತು "ಅಷ್ಟವರ್ಷಾಭವೇತ್ ಕನ್ಯಾ.....ತದೂರ್ಧ್ವಂತುರಜಸ್ವಲಾ" ಎಂಬ ಧರ್ಮಶಾಸ್ತ್ರಾನುಗುಣವಾಗಿ ೮-೧೦ ವರ್ಷಗಳು ಕಳೆಯುವವರೆಗೂ ಹೆಣ್ಣಿಗೆ ಕನ್ಯಾತ್ವವು ಬರುವುದಿಲ್ಲವೆಂದಮೇಲೆ ಅನ್ಯದೇಶದಲ್ಲಿ ಪಟಾವರಸೆಯನ್ನು ಮಾಡುತ್ತಿರುವ ಈ ಕರಾಳಶಾಸನವೆಂಬ ರಾಕ್ಷಸನಿಗೆ ಹೆದರಿಕೊಂಡು ಚಿಕ್ಕ ಚಿಕ್ಕ ಕೂಸುಗಳಿಗೆ ಮದುವೆಗಳನ್ನು ಮಾಡುವ ಪ್ರಯತ್ನಗಳನ್ನು ಮಾಡುವುದೇಕೆ? ಪ್ರಜಾಪ್ರತಿನಿಧಿ ಮುಂತಾದ ಸಭೆಗಳಿಗೆ ಸೇರಿದ ಮೆಂಬರುಗಳೆಲ್ಲರೂ ಭಾರತಧರ್ಮದಲ್ಲಿ ನಿಷ್ಠೆಯುಳ್ಳವರಾಗಿರುವದರಿಂದಲೂ ಪ್ರಭುಗಳು ಭಾರತಧರ್ಮೋದ್ಧಾರಕರಾಗಿರುವದರಿಂದಲೂ ಇಂಥ ಅನಾಹುತಗಳಿಗೆ ಎಳ್ಳಷ್ಟೂ ಅವಕಾಶವಿಲ್ಲದುದರಿಂದ ನಮ್ಮ ಮೈಸೂರು ದೇಶದ ಪ್ರಜೆಗಳು ಕನ್ಯಾತ್ವಬರುವದಕ್ಕಿಂತ ಮುನ್ನವೇ ಹೆದರಿಕೊಂಡು ಅನ್ಯದೇಶೀಯರಂತೆ ಚಿಕ್ಕಪುಟ್ಟಮಕ್ಕಳಿಗೆ ಮದುವೆಯನ್ನು ಮಾಡುವ ಸಂಭ್ರಮದಲ್ಲಿ ಆತುರರಾಗಬಾರದೆಂಬುದೇ ನಮ್ಮ ಕೋರಿಕೆಯಾಗಿದೆ.

ಒಳದೇಶದ ವೃತ್ತಾಂತಗಳು.

ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಕಳೆದ ಗುರುವಾರ ರಾತ್ರಿ ಬೆಂಗಳೂರಿನಿಂದ ಭದ್ರಾವತಿಗೆ ಪ್ರಯಾಣವನ್ನು ಬೆಳೆಯಿಸಿ ಅಲ್ಲಿ ಕಟ್ಟಿರುವ "ರಿಟಾರ್ಟ್" ಎಂಬ ಕಬ್ಬಿಣವನ್ನು ತಯಾರಿಸುವ ಕೊಳಾಯಿಯನ್ನು ಪ್ರತಿಷ್ಠೆಮಾಡಿ, ಶುಕ್ರವಾರ ರಾತ್ರಿ ಬೆಂಗಳೂರಿಗೆ ಹಿಂತಿರುಗಿದರು.

ಕೃಷ್ಣರಾಜಸಾಗರದ ಉತ್ತರದಿಕ್ಕಿನಲ್ಲಿರುವ ಕನ್ನಂಬಾಡಿಯಲ್ಲಿ ನೂತನವಾಗಿ ಸರ್ಕಾರದವರು ಕಟ್ಟಿಸಿರುವ ಶ್ರೀ ಕಣ್ವೇಶ್ವರಸ್ವಾಮಿಯ ಹಾಗೂ ಮಹಾಲಕ್ಷ್ಮೀದೇವಿಯ ದೇವಾಲಯಗಳಲ್ಲಿ ದೇವತಾಪ್ರತಿಷ್ಠೆಯು ಈ ದಿನ ನೆರವೇರುವದು. ಈ ಮಹಾಕಾರ್ಯಕ್ಕೆ ಪ್ರತಿಯೊಬ್ಬ ದೇವತಾಭಕ್ತರೂ ಆಗಮಿಸಿ ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಮ|| ರಾ|| ಅಧಿಕಾರಿ ಸುಬ್ಬಯ್ಯನವರು ಕೋರುತ್ತಾರೆ.

ಮೈಸೂರು ಡಿಸ್ಟ್ರಿಕ್ಟ್‌ಬೋರ್ಡಿಗೆ ಇದುವರೆಗೆ ಡಿಪ್ಯುಟಿ ಕಮೀಷನರೇ ಪ್ರೆಸಿಡೆಂಟರಾಗಿರುತ್ತಿದ್ದರು. ಘನತೊಂದಿದ ಸರಕಾರದವರು ಈ ವರ್ಷದಿಂದ ಬೋರ್ಡಿನ ಮೆಂಬರರು ತಮ್ಮಲ್ಲಿಯೇ ಒಬ್ಬ ಪ್ರೆಸಿಡೆಂಟರನ್ನು ಚುನಾಯಿಸಿಕೊಳ್ಳಬಹುದೆಂದು ಅಪ್ಪಣೆಮಾಡಿರುತ್ತಾರೆ. ಈ ಪ್ರೆಸಿಡೆಂಟರ ಸ್ಥಾನಕ್ಕೆ ಅಡ್ವೊಕೇಟರುಗಳಾದ ಶ್ರೀ|| ಬಿ. ಎಸ್. ಪುಟ್ಟಸ್ವಾಮಿಯವರು ಹಾಗೂ ಶ್ರೀ|| ಎಚ್. ಸಿ. ದಾಸಪ್ಪನವರು ಉಮೇದುವಾರರಾಗಿ ನಿಂತಿರುತ್ತಾರೆ.

ಕೋಲಾರದ ಚಿನ್ನದಗಣಿಗಳಲ್ಲಿ ಕೂಲಿಕಾರರು ಮುಷ್ಕರಹಿಡಿದು ಗಲಭೆ ನಡೆದಿತ್ತಷ್ಟೆ! ಈಚೆಗೆ ನಮ್ಮ ದಿವಾನ್ ಸಾಹೇಬರವರು ತಾವೇ ಅಲ್ಲಿಗೆ ಹೋಗಿ ಕೂಲಿಗಾರರನ್ನೂ ಹಾಗೂ ಬಂಡವಾಳಗಾರರನ್ನು ಕಂಡು ಮಾತನಾಡಿ ಇನ್ನು ಮುಂದೆ ಕೂಲಿಯವರಿಂದ ಹೆಬ್ಬೆಟ್ಟಿನ ಗುರುತುಗಳನ್ನು ಪಡೆಯುದಂತೆಯೂ, ಕೂಲಿಯವರನ್ನು ನೇಮಿಸುವ ಕಚೇರಿಗಳನ್ನು ತೆಗೆದುಹಾಕುವಂತೆಯೂ ಏರ್ಪಾಡುಮಾಡಿದರಿಂದೂ, ಕೂಲಿಕಾರರು ಮುಷ್ಕರವನ್ನು ಕೊನೆಗಾಣಿಸಿರುವರೆಂದ, ಮೈಸೂರು ಸರಕಾರದ ಪ್ರಕಟನ ಕಾರ್ಯಾಧಿಕಾರಿಗಳು ಪ್ರಸಿದ್ಧಪಡಿಸಿರುತ್ತಾರೆ.

ಕಳೆದವಾರ ರಾಜಧಾನಿಯ ದಕ್ಷಿಣದಿಕ್ಕಿನ ಕೋಟೆಯ ಬಾಗಿಲ ಎದುರು ಚೌಕದಲ್ಲಿ ಸರದಾರ್ ಗೋಪಾಲರಾಜೇ ಅರಸರವರ ಕುಮಾರರು ಮೋಟಾರಿನಲ್ಲಿ ಕುಳಿತುಕೊಂಡು ಹೋಗುತ್ತಿರುವಾಗ್ಗೆ ಎದುರುಕಡೆಯಿಂದ ಬರುತ್ತಿದ್ದ ಮತ್ತೊಂದು ಮೋಟಾರು ಢಿಕ್ಕಿಹೊಡೆದು ಅರಸರವರಿಗೆ ತುಂಬಾ ಘಾಯವಾಯಿತು. ಕೂಡಲೇ ಅವರನ್ನು ಮೋಟಾರಿನಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಮಾಡಿಸುತ್ತಿರುವರು. ಇದು ಅರಮನೆ ಆಫೀಸು ಚೌಕವಾಗಿದ್ದು ಅನೇಕ ಮೋಟಾರುಗಳು ತಿರುಗುತ್ತಿದ್ದರೂ ಇಲ್ಲಿ ಒಬ್ಬ ಪೋಲೀಸನೂ ಇಲ್ಲದಿರುವದು ವಿಷಾದಕರವಾಗಿದೆ.

ಮೈಸೂರು ದೇಶದಲ್ಲಿ ಬಾಡಿಗೆ ಮೋಟಾರುಗಳ ಗಲಾಟೆಯು ದಿನದಿನಕ್ಕೆ ಹೆಚ್ಚಾಗುತ್ತಿರುವುದರಿಂದ, ಅವುಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಉಂಟುಮಾಡುವ ದಕ್ಕೂ, ಪ್ರಯಾಣಿಕರ ಸೌಕರ್ಯಕ್ಕೂ ಆವಶ್ಯಕವಾಗಿ ಆಗಬೇಕಾಗಿರುವ ಏರ್ಪಾಡುಗಳನ್ನು ಮಾಡಿಕೊಡುವಂತೆ ಲಾ ಸೆಕ್ರೆಟರಿಯವರನ್ನು ಛೇರ್‌ಮನ್ನರಾಗಿಯೂ ಕೈಗಾರಿಕೆ ಮತ್ತು ವ್ಯಾಪಾರದ ಇಲಾಖಾ ಡೈರೆಕ್ಟರು ಶ್ರೀ ರಂಗನಾಥರಾವ್ ಸಾಹೇಬರವರು, ಮೈಸೂರು ಡಿ|| ಡೆಪ್ಯುಟಿ ಕಮೀಷನರ್ ಶ್ರೀ ಕೆ. ವಿ. ಅನಂತರಾಮರ್ರವರು, ಕೋಲಾರದ ಡಿ|| ಡೆಪ್ಯುಟಿಕಮೀಷನರ್ ಶ್ರೀ ಎ. ವಿ. ರಾಮನಾಥರ್ರವರು, ಕಡೂರು ಡಿ|| ಡೆಪ್ಯುಟಿ ಕಮೀಷನರ್ ಶ್ರೀ ಎಚ್. ವಿ. ರಾಮಸ್ವಾಮಿಯವರು, ಇಂಡಸ್ಟ್ರಿಯಲ್ ಇಂಜನಿಯರ್ ಶ್ರೀ ಬಿ. ಜೆ. ಅಪ್ಪಾದೊರೆ ಮೊದಲಿಯಾರ್ರು, ಅಡ್ವೊಕೆಟ್ ಶ್ರೀ ಎಚ್. ಸಿ. ದಾಸಪ್ಪನವರು, ಮೈಸೂರು ಡಿ|| ಮೋಟಾರ್ ಅಸೋಸಿಯೇಷನ್ ಪ್ರೆಸಿಡೆಂಟರು ಶ್ರೀ ಎಚ್. ಆರ್. ಕೃಷ್ಣಮೂರ್ತಿಯವರು ಈ ಏಳುಜನರನ್ನು ಮೆಂಬರರಾಗಿಯೂ ಉಳ್ಳ ಒಂದು ಕಮಿಟಿಯನ್ನು ನಿರ್ಮಾಡಿಸಿರುತ್ತಾರೆ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ದೇಹಲಿಯ ಶಾಸನಸಭೆಯ ಅಧ್ಯಕ್ಷರಾದ ಶ್ರೀ ವಿ. ಜೆ. ಪಟೇಲರು ವೈಸ್ರಾಯರಿಗೆ ಬ್ರಿಟಿಷರ ಆಳ್ವಿಕೆಯಲ್ಲಿ ಕಂಡುಬರುವ ನ್ಯೂನಾತಿರೇಕಗಳನ್ನು ಬಹು ಹೃದಯಂಗಮವಾಗಿ ವರ್ಣಿಸಿ ಒಂದು ಪತ್ರವನ್ನು ಬರೆದು ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು. ಅವರು ಪುನಃ ಎರಡನೆಯ ಪತ್ರವೊಂದನ್ನು ಬರೆದು ಭರತಖಂಡದ ಸದ್ಯದ ಸ್ಥಿತಿಗತಿಗಳನ್ನು ಕೂಲಂಕಷವಾಗಿ ವಿಮರ್ಶಿಸಿ ವೈಸ್ರಾಯರಿಗೆ ಭರತಖಂಡಕ್ಕೆ ಅನುಕೂಲವಾಗುವಂತೆ ವರ್ತಿಸಲಾಗದಿದ್ದರೆ ತಮ್ಮ ವೈಸ್ರಾಯರ ಪದವಿಗೆ ರಾಜೀನಾಮೆಯನ್ನು ಕೊಡಬೇಕೆಂದು ಸೂಚಿಸಿರುವರು.

ಲಂಡನ್ನಿನ "ಸ್ಟಾರು ಲೀಡರ್" ಎಂಬ ಜ್ಯೋತಿಷವಾರ್ತಾಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರ ಜಾತಕದಲ್ಲಿ ಗ್ರಹಗತಿಗಳು ಅನುಕೂಲವಾಗಿರುವದರಿಂದ ಅವರು ಕೈಗೊಂಡಿರುವ ಭಾರತಸ್ವಾತಂತ್ರ್ಯಸಂಪಾದನಾ ಪ್ರಯತ್ನವು ಫಲಕಾರಿಯಾಗುವದೆಂದೂ, ಮೇ ಜೂನ್ ತಿಂಗಳುಗಳಲ್ಲಿ ಸತ್ಯಾಗ್ರಹಿಗಳ ಚಳುವಳಿಯು ಹೆಚ್ಚಿ ರಾಜೀ ಪ್ರಯತ್ನಗಳು [illegible]ವುವೆಂದೂ, ಇದೇ ಸಮಯದಲ್ಲಿ ಸಾಕಷ್ಟು ದ್ರವ್ಯಸಹಾಯವಿಲ್ಲದೆ ಚಳುವಳಿಯು ಕಡಿಮೆಯಾಗುವದೆಂದೂ, ಇದೇ ಕಾರಣವಾಗಿ ದೇಶದ ಅನೇಕ ಕಡೆಗಳಲ್ಲಿ ಗಲಭೆಗಳಾಗುವವೆಂದೂ, ಇಂಪೀರಿಯಲ್ ಗವರ್ನಮೆಂಟಿನವರು ಈಗಿನ ವೈಸ್ರಾಯರವರನ್ನು ಹಿಂದಕ್ಕೆ ಕರೆಯಿಸಿಕೊಂಡು ಬೇರೆ ವೈಸ್ರಾಯರವರನ್ನು ನೇಮಿಸುವರೆಂದೂ, ಕಡೆಗೆ ಬ್ರಿಟಿಷ್ ಸರಕಾರದವರು ಮಹಾತ್ಮಾ ಗಾಂಧಿಯವರ ಷರತ್ತುಗಳಿಗೆ ಒಪ್ಪಿ ಭಾರತೀಯರ ಅಭಿಪ್ರಾಯಾನುಸಾರವಾಗಿ ರಾಜ್ಯಾಡಳಿತವನ್ನು ನಡೆಯಿಸುವರೆಂದೂ, ಇದೇ ಸಂದರ್ಭದಲ್ಲಿ ನೆಪ್ಚೂನ್ ಗ್ರಹವು ಭರತಖಂಡಕ್ಕೆ ವಿರೋಧವಾದ ಸ್ಥಾನದಲ್ಲಿರುವುದರಿಂದ ದೇಶದಲ್ಲಿ ಅನಾಯಕತ್ವವು ಹೆಚ್ಚಿ ಹೆಚ್ಚಿನ ಜನರು ಮರಣಹೊಂದುವರೆಂದೂ ಕೆಲವು ಪ್ರಾಂತಗಳೇ ಹಾಳಾಗುವ ಸಂಭವವಿರುವದೆಂದೂ ಪ್ರಕಟಿಸಲ್ಪಟ್ಟಿರುವುದು.

ಕೆಲವು ದಿನಗಳ ಹಿಂದೆ ಚಿಟಗಾಂಗಿನಲ್ಲಿ (ಕಲ್ಕತ್ತೆ) ನಡೆದ ಗಲಭೆಯ ಕಾರಣದ ಮೇಲೆ ಸರಕಾರದವರು ಸಂದೇಹಾಸ್ಪದರಾದವರನ್ನು ದಸ್ತಗಿರಿಮಾಡಿ ವಿಚಾರಣೆಯಿಲ್ಲದೆ ಸೆರೆಮನೆಗೆ ಕಳುಹಿಸಬಹುದಾದ "ಬಂಗಾಳ ಆರ್ಡಿನೆನ್ಸ್ ಕಾನೂನನ್ನು" ಪುನಃ ಜಾರಿಗೆ ತಂದಿರುವರು. ಈ ವಿಷಯದಲ್ಲಿ ಸರಕಾರದವರು ಒಂದು ವಿಶೇಷ ಗೆಜೆಟ್ಟನ್ನು ಪ್ರಕಟಿಸಿರುವರು.

ಆಂಧ್ರದೇಶದಲ್ಲಿ ಕೆಲವು ಜನ ಸತ್ಯಾಗ್ರಹಿಗಳೊಡನೆ ಉಪ್ಪಿನ ಕಾಯಿದೆಯನ್ನು ಭಂಗಮಾಡುವದಕ್ಕಾಗಿ ವೇದಾರಣ್ಯಕ್ಕೆ ಹೊರಟಿದ್ದ ಶ್ರೀ|| ಸಿ. ರಾಜಗೋಪಾಲಾಚಾರ್ಯರವರು ದಸ್ತಗಿರಿಮಾಡಲ್ಪಟ್ಟು 6 ತಿಂಗಳ ಕಾರಾಗೃಹವಾಸಕ್ಕೆ ಗುರಿಯಾದರು.

26 ನೇ ತಾರೀಖಿನ ದಿನ ಧರವಾಡಾ ಎಂಬಲ್ಲಿ ಮಹಾತ್ಮಾ ಗಾಂಧಿಯವರು ತಮ್ಮ ಮುಂದಿನ ಕಾರ್ಯಕ್ರಮವನ್ನು ಕುರಿತು ನಾವು ಇನ್ನು ಸ್ವಲ್ಪ ದಿನಗಳಲ್ಲೇ ಧರಾಸ್ನಾದಲ್ಲಿದ್ದ ಸರಕಾರೀ ಉಪ್ಪಿನ ಸಂಗ್ರಹಾಲಯಕ್ಕೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಳ್ಳುತ್ತೇವೆ ಆ ಪ್ರಸಂಗದಲ್ಲಿ ತಾವೆಲ್ಲರೂ ಸಿದ್ಧರಿರಬೇಕು. ಪ್ರಸಂಗವಶಾತ್ ಪ್ರಾಣ ಕೊಡುವ ಹೊತ್ತು ಬರಬಹುದು. ಅದಕ್ಕೆ ಹಿಂಜರಿಯಬಾರದು. ನನಗೆ ಮಹಾತ್ಮನೆನ್ನುವದರ ಬದಲು "ಉಪ್ಪಿನ ಕಳ್ಳ" ನೆಂಬ ಹೆಸರು ಬಹು ಮನೋಹರವಾಗಿ ಕಾಣುತ್ತದೆ. ಕಲಕತ್ತೆ, ಪೇಶಾವರದಲ್ಲಿಯ ದೊಂಬಿಗಳಿಂದ ಸ್ವರಾಜ್ಯವು ತೀವ್ರ ದೊರೆಯಲಾರದು. ದೊರೆತರೂ ಸೌಖ್ಯವಿಲ್ಲ. ಆದುದರಿಂದ ಶಾಂತಮಾರ್ಗವೇ ಶ್ರೇಯಸ್ಕರವು ಎಂದು ಹೇಳಿದರು.

ಶ್ರೀ ವಿ. ಜೆ. ಪಟೇಲರು ತಮ್ಮ ಪ್ರೆಸಿಡೆಂಟ ಪದವಿಗೆ ರಾಜಿನಾಮೆಯನ್ನು ಕೊಟ್ಟದಿವಸ ಸಿಮ್ಲಾ ಪಟ್ಟಣದಲ್ಲೆಲ್ಲ ಅತಿ ಸಂಭ್ರಮದಿಂದ ಅವರ ಮೆರವಣಿಗೆಯನ್ನು ಮಾಡಿದರು. ತಾ|| 28 ರಲ್ಲು 50 ಸಾವಿರ ಜನರ ಪ್ರಚಂಡ ಸಾರ್ವಜನಿಕ ಸಭೆಯು ನಡೆದು ಶ್ರೀ|| ಪಟೇಲರು ಪ್ರೆಸಿಡೆಂಟಪದವಿಗೆ ರಾಜಿನಾಮೆಯನ್ನು ಕೊಟ್ಟ ವಿಷಯವಾಗಿ ಸ್ಫೂರ್ತಿಯಿಂದ ಭಾಷಣ ಮಾಡಿದರು. ಶ್ರೀ|| ಪಟೇಲರು ಪಂಡಿತ ಮೋತಿಲಾಲರೊಡನೆ ಕೂಡಿ ನಾಗಪುರ ಕಲ್ಕತ್ತ, ಮದ್ರಾಸ್ ಮೊದಲಾದ ಪಟ್ಟಣದಲ್ಲೆಲ್ಲಾ ಸಂಚಾರಮಾಡುವರೆಂದೂ, ಗಾಂಧಿಯವರು ಕೈದುಮಾಡಲ್ಪಟ್ಟರೆ ಕೂಡಲೆ ಗುಜರಾಥಿಗೆ ಹೋಗಿ ಕಾರ್ಯ ವಹಿಸುವರೆಂದೂ ತಿಳಿದುಬರುತ್ತದೆ. ಪ್ರಕೃತದ ರಾಜಕೀಯ ಚಳವಳಿಯಲ್ಲಿ ಹಿಂದೀಯರು ಜಯಶೀಲರಾಗದಿದ್ದರೆ ಪರಿಣಾಮವು ಭಯಂಕರವಾಗುವದೆಂದೂ, ಆದುದರಿಂದ ಪ್ರತಿಯೊಬ್ಬ ಹಿಂದೀಯನೂ ಈ ಸಂದರ್ಭದಲ್ಲಿ ತನ್ನ ಕರ್ತವ್ಯವನ್ನು ಮಾಡಬೇಕೆಂದೂ ಪಟೇಲರ ಅಭಿಪ್ರಾಯವಾಗಿದೆ. ಪಟೇಲರ ಪತ್ರಕ್ಕೆ ವೈಸರಾಯರು, ಅವರು ಅನುಸರಿಸುವ ಮಾರ್ಗವು ಅಪಾಯಕರವಾದದ್ದೆಂದೂ, ಬಾರ್ದೋಲಿಯಲ್ಲಿ ಭೂಕಂದಾಯವನ್ನು ಕಡಿಮೆಮಾಡಿದುದು ಪಟೇಲರ ಹೇಳಿಕೆಯ ಮೇಲಲ್ಲವೆಂದೂ, ಉತ್ತರವಿತ್ತಿರುವರು.

ಕಲ್ಕತ್ತೆಯ ದಂತವೈದ್ಯರು ಬ್ರಿಟಿಷ್ ಸಾಮಗ್ರಿಗಳನ್ನೆಲ್ಲಾ ಬಹಿಷ್ಕರಿಸಬೇಕೆಂದು ನಿರ್ಧರಿಸಿರುವರು.

ಕಲ್ಕತ್ತೆಯ ಸಕ್ಕರೆ ವ್ಯಾಪಾರಿಗಳು ಇನ್ನು ಮುಂದೆ ವಿದೇಶಿ ಸಕ್ಕರೆಯನ್ನು ತರಿಸಕೂಡದೆಂದು ನಿರ್ಧರಿಸಿರುವರು.

ಸಿಂಧುದೇಶದಲ್ಲಿ ಖಾದಿ ವಸ್ತ್ರದ ಗಿರಾಕಿಯು ಬಹಳ ಹೆಚ್ಚಿರುವುದರಿಂದ ಸ್ವದೇಶಿ ಗಿರಣಿಯೊಂದನ್ನು ಸ್ಥಾಪಿಸುವ ಪ್ರಯತ್ನ ಮಾಡುತ್ತಿರುವರು.

ಪೇಶಾವರದಲ್ಲಿ ನಡೆದ ಗಲಾಟೆಯಿಂದ ಸುಮಾರು 65 ಜನರು ಕೊಲ್ಲಲ್ಪಟ್ಟಿರುವರೆಂದೂ, 150 ಜನರಿಗೆ ಪೆಟ್ಟುಬಿದ್ದಿರುವದೆಂದೂ ಅಲ್ಲಿಯ ಕಾಂಗ್ರೆಸ್ ಕಮಿಟಿಯವರು ಪ್ರಕಟಪಡಿಸಿರುತ್ತಾರೆ. ಈಗ ಪಟ್ಟಣದಿಂದ ಸೈನಿಕರನ್ನು ಹಿಂತೆಗೆದಿರುವರು. ವಿದೇಶಿವಸ್ತ್ರಬಹಿಷ್ಕಾರವು ಹೆಚ್ಚಿನ ಹುರುಪಿನಿಂದ ನಡೆಯುತ್ತಿರುವುದು.

ಢಾಕಾ ಮಲಮಲಿನ ನೇಗೆಯ ಉದ್ಯೋಗ.

ಢಾಕಾದ ನೇಕಾರರಾದರೂ ನೂಲುಗಾರರಂತೆ ಒಳ್ಳೇ ಕುಶಲರಾಗಿದ್ದರು. ಅವರಿಗೆ ಕನಿಷ್ಠಪಕ್ಷಕ್ಕೆ 126 ಪ್ರಕಾರದ ಭಿನ್ನ ಭಿನ್ನ ನೇಗೆಯ ಕಲೆಗಳು ಗೊತ್ತಿದ್ದವು. ವಿಶಿಷ್ಟರೀತಿಯಿಂದ ಉಂಕಿಯನ್ನೇರಿಸುವುದೂ, ಆ ಪ್ರಮಾಣವನ್ನಿಡುವದೂ, ತೊಳೆದು, ಅತ್ಯಂತ ಶುಭ್ರವಾಗರಿಸುವದೂ, ಈ ಮೊದಲಾದ ಸಂಗತಿಗಳು ಡಾ. ಫೋರ್ಬ್ಸ್‌ವಾಟ್ಸನ್ನನ ಗ್ರಂಥದಲ್ಲಿ ದೊರೆಯುತ್ತವೆ.

ಢಾಕಾದ ನೇಕಾರರೆಲ್ಲರೂ ಹಿಂದುಗಳೇ ಇದ್ದರು ಅವರು ಚಪಲರೂ, ಬಡಕವಾದ ಶರೀರವುಳ್ಳವರೂ ಸೂಕ್ಷ್ಮದೇಹ ರಚನೆಯುಳ್ಳವರೂ ಆಗಿದ್ದರು. ಅವರು ತಮ್ಮ ನಿರಂತರವಾದ ಪರಿಶ್ರಮದಿಂದ ಅಸಾಧಾರಣವಾದ ತಾಳ್ಮೆಯನ್ನು ವ್ಯಕ್ತಪಡಿಸುತ್ತಿದ್ದರು. ಅವರು ವಸ್ತ್ರವನ್ನು ಸ್ಪರ್ಶಮಾಡಿ ಅವುಗಳ ತೂಕವನ್ನೂ ನೇಗೆಯ ಗುಣಧರ್ಮಗಳನ್ನೂ ಬಹು ಸಮರ್ಪಕವಾಗಿ ಹೇಳುತ್ತಿದ್ದರು ತೂಕದಲ್ಲಿ ಒಂದು ಗುಂಜಿಸಹ ಕಡಿಮೆಯಾಗುತ್ತಿದ್ದಿಲ್ಲ. ಒಟ್ಟಿಗೆ ಹಚ್ಚಲಿಕ್ಕೆ ಅವರು ಹುರಿದ ಅಕ್ಕಿಯ ಗಂಜಿಯನ್ನು ಉಪಯೋಗಿಸುತ್ತಿದ್ದರು. ನೇಕಾರರು ಚಾಟಿಗೆ ತಮ್ಮ ಮಗ್ಗಗಳನ್ನೊಡ್ಡಿ ವಿಶೇಷವಾಗಿ ಮಳೆಗಾಲದಲ್ಲಿ ಅಂದರೆ ಆಷಾಡ, ಶ್ರಾವಣ, ಭಾದ್ರಪದ ಮಾಸಗಳಲ್ಲಿ ನೇಯುತ್ತಿದ್ದರು. ಮಳೆಗಾಲವೇ ಅವರಿಗೆ ನೇಯಲಿಕ್ಕೆ ಒಳ್ಳೇ ಅನುಕೂಲವಾದ ಸಮಯವಾಗಿದ್ದಿತು. ಇದಕ್ಕೆ ಕಾರಣವೇನೆಂದರೆ, ಮಳೆಗಾಲದ ಆರ್ದ್ರತೆಯಿಂದ ಎಳೆಗಳು ಹರಿಯುತ್ತಿದ್ದಿಲ್ಲ. ಬೇಸಿಗೆಯಕಾಲದಲ್ಲಿ ನೇಕಾರರು ತಮ್ಮ ಮಗ್ಗಗಳ ಬುಡದಲ್ಲಿ ನೀರು ತುಂಬಿದ ಹರಿವಾಣಗಳನ್ನಿಟ್ಟುಕೊಳ್ಳುತ್ತಿದ್ದರು. 1 ಮಲಮಲಿನ ಥಾನು 20 ಯಾರ್ಡ ಉದ್ದ 1 ಯಾರ್ಡ ಅಗಲವಾಗಿದ್ದಿತು. ಕನಿಷ್ಠ ಮಧ್ಯಮ ಉತ್ತಮ ತರಗತಿಯ ಮಲಮಲುಗಳನ್ನು ನೇಯುವದಕ್ಕೆ 50 ದಿವಸಗಳು ಹತ್ತುತ್ತಿದ್ದವು. 'ಮಲಮಲ ಖಾಸ' ಅಥವಾ 'ಸಿರಾಕರಲಿ' ಎಂಬ ಅತ್ಯುತ್ಕೃಷ್ಟವಾದ ಮಲಮಲನ್ನು ನೇಯುವದಕ್ಕೆ 5-6 ತಿಂಗಳುಗಳು ಬೇಕಾಗುತ್ತಿದ್ದವು. ಉತ್ಕೃಷ್ಟವಾದ ಚೀಟು, ಕಸೂತಿ, ಹಾಗೂ ಬಣ್ಣದ ಮಾದರಿಗಳನ್ನು ಮಾರಾಟಕ್ಕಾಗಿ ಪೇಟೆಯಲ್ಲಿರಿಸುತ್ತಿದ್ದರು. ಢಾಕಾ ಮಗ್ಗಗಳಲ್ಲುತ್ಪನ್ನವಾಗುವ ಮಲಮಲನ್ನಲ್ಲಿ 'ಜಾಮದಾನಿ' ಎಂಬುದು ಅತ್ಯಂತ ಕುಟ್ಟಿಯಾಗಿದ್ದಿತು. ಢಾಕಾದ ಜನರು ತಮ್ಮ ಹಸ್ತಕೌಶಲ್ಯದಿಂದ ಕೆಚ್ಚಿದ ಬಹು ವಿಧದ ಚಿತ್ರಗಳೂ ಸರ್ವೋತ್ಕೃಷ್ಟವಾದ ನಯುತ್ತವೂ ಬೆರಗುಗೊಳಿಸುವಂಥವಾಗಿದ್ದವು. ಭರತಖಂಡದ ಕಲಾಕೋವಿದರಲ್ಲಿ ಢಾಕಾದವರೇ ಅಗ್ರಗಣ್ಯರಾಗಿದ್ದರು. ಕೆಳಕುಲದ ಮುಸಲ್ಮಾನಸ್ತ್ರೀಯರೂ ಅಗಸಗಿತ್ತಿಯರೂ ಮಲಮಲಿಗೆ ಕಸೂತಿಯನ್ನು ಹಾಕುತ್ತಿದ್ದರು. ಕಸೂತಿಯ ಸೊಬಗನ್ನು ಎಷ್ಟೆಂದು ಬಣ್ಣಿಸಬೇಕು? ಒಂದಾದರೂ ಹೊಲಿಗೆಯು ಸಹ ಅದರಲ್ಲಿ ಕಾಣಬರುತ್ತಿದ್ದಿಲ್ಲ. ಮಲಮಲುಗಳು ಹರಿದರೆ ತುಂಬುವವರನ್ನು ಕೆಲಸಕ್ಕೆ ಹಚ್ಚುತ್ತಿದ್ದರು. ಅವರು ಮಳೆ ತುಂಬಿದರೆ ಮೂಲಬಟ್ಟೆಯಲ್ಲಿ ಏನೂ ವ್ಯತ್ಯಾಸ ತೋರದೆ ಅದು ಇದ್ದಕ್ಕಿದ್ದಹಾಗೆ ಕಾಣುತ್ತಿದ್ದಿತು. ಮಲಮಲನ್ನು ಪರದೇಶಕ್ಕೆ ಕಳುಹಿಸಬೇಕಾದರೆ ಪೋಳ್ಳಾದ ಬಿದುರಿನ ಒಳಬದಿಯಲ್ಲಿ 20 ಯಾರ್ಡಗಟ್ಟಲೆ ಮಲಮಲನ್ನಿರಿಸುತ್ತಿದ್ದರು. 'ಮಲಮಲಖಾಸ' ಎಂಬ ವಸ್ತ್ರವನ್ನು ಕೊಳವಿಯಾಕಾರದ ತಗಡಿನ ಪೆಟ್ಟಿಗೆಗಳಲ್ಲಿರಿಸಿ ಅವುಗಳಿಗೆ ಬಿರಡನ್ನು ಹಚ್ಚಿ ಗಿಲಾಯಿಮಾಡಿ ದಿಲ್ಲಿಗೆ ಕಳಿಸುತ್ತಿದ್ದರು. ಮಲಮಲಿನ ಒಂದು ಥಾನಿನ ಬೆಲೆಯು 100-400 ರೂ. ಗಳ ವರೆಗೂ ಇರುತ್ತಿದ್ದಿತು. ಮಲಮಲಿನ ಬಟ್ಟೆಯು ಉತ್ಕೃಷ್ಟವಾದುದೂ, ಪಾರದರ್ಶಕವಾದುದೂ ಸೊಬಗಿನದೂ ಇದ್ದುದರಿಂದ ಅದಕ್ಕೆ ಬಹುವಿಧವಾದ ಅಲಂಕಾರಿಕ ಹೆಸರುಗಳು ಕೊಡಲ್ಪಟ್ಟಿರುತ್ತವೆ. ಉದಾ, 'ಶಬನಮ್' (ಸಾಯಂಕಾಲದ ಮಂಜು) 'ಅಬ್ರವಾಸ' (ಹರಿಯುವ ಜಲ) ಮುಂತಾದವುಗಳು. ಮಲಮಲಿನ ವಿಷಯವಾಗಿ ಬಹು ವಿನೋದಪರವಾದ ಕಥೆಗಳನ್ನು ಹೇಳುತ್ತಾರೆ. ಒಬ್ಬ ಹಿಂದೂ ನೇಕಾರನು ಬಹು ಸೂಕ್ಷ್ಮವಾದ ಮಲಮಲನ್ನು ನಿಷ್ಕಾಳಜಿಯಿಂದ ನೆಲದ ಮೇಲೆ ಬಿಟ್ಟಿರಲು ಆತನ ಆಕಳು ಬಂದು ಅದು ಹುಲ್ಲೆಂದು ತಿಳಿದು ತಿಂದುಬಿಟ್ಟಿತಂತೆ. ಅದಕ್ಕಾಗಿ ನವಾಬ ಆಲಿವರ್ದಿಖಾನನು ಆ ನೇಕಾರನಿಗೆ ಶಿಕ್ಷೆಯನ್ನು ವಿಧಿಸಿದನಂತೆ. ಒಮ್ಮೆ ಔರಂಗಜೇಬ ಬಾದಶಹನು ಸೂಕ್ಷ್ಮವಾದ ಮಲಮಲಿನ ವಸ್ತ್ರವನ್ನುಟ್ಟುಕೊಂಡ ತನ್ನ ಮಗಳು ಇದುರಿಗೆ ಬಂದು ನಿಲ್ಲಲು ಆಕೆಯು ನಗ್ನವಾಗಿರುವಳೆಂದು ಆಶ್ಚರ್ಯವನ್ನು ವ್ಯಕ್ತಪಡಿಸಿದನಂತೆ. ಆಗ ಆತನ ಪುತ್ರಿಯು ತಾನು 7 ಪದರಿನ ಮಲಮಲಿನ ವಸ್ತ್ರವನ್ನು ಧಾರಣಮಾಡಿಕೊಂಡಿರುವೆನೆಂದು ತಂದೆಗೆ ಸಿಟ್ಟುಮಾಡಿ ಹೇಳಿದಳಂತೆ.

(ಸಂ. ಕ.)

ಇದೇನು ಬುದ್ಧಿಭ್ರಮಣೆಯೋ ?

ಮ|| ರಾ|| ಜೇರಿಗೆ ಬಸವಲಿಂಗಪ್ಪ ಎಂಬುವರು "ಬಸವೇಶ್ವರಜಯಂತಿ ಪತ್ರಿಕಾ" ಎಂಬ ಶಿರೋನಾಮೆಯಿಂದ ಒಂದು ಹಸ್ತಪತ್ರಿಕೆಯನ್ನು ಬೆಂಗಳೂರಿನ ವೀರಶೈವರಲ್ಲಿ ಹಂಚಿರುವರು. ಇದನ್ನು ಓದುವ ಪ್ರತಿಯೊಬ್ಬ ನಿಜವೀರಶೈವರಿಗೂ ಖೇದವಾಗದೆ ಇರದು. ಇವರು ಬಸವನೇ ವೀರಶೈವಮತಸ್ಥಾಪಕನೆಂದೂ ಬಸವನಿಗಿಂತಲೂ ಮೊದಲು ವೀರಶೈವಮತವಿತ್ತೆಂಬುದಕ್ಕೆ ಯಾವ ಸ್ವತಂತ್ರಗ್ರಂಥಗಳಿಲ್ಲವೆಂದೂ ಶ್ರೀ ಜಗದ್ಗುರು ಪಂಚಾಚಾರ್ಯರೂ ಸಹ ಬಸವನಿಂದಲೇ ಉಪದೇಶಿಸಲ್ಪಟ್ಟಿರುವರೆಂತಲೂ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವಮತಸ್ಥಾಪಕರಲ್ಲವೆಂತಲೂ ಮುಂತಾದ ವಿಷಯಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿ ತಮ್ಮ ಅಸಂಬದ್ಧ ಪ್ರಲಾಪವನ್ನು ಈ ಊರಿನ ವೀರಶೈವ ಜನತೆಯ ಮುಂದಿಟ್ಟಿರುವರು. ಸಹಸ್ರಾರುವರ್ಷಗಳ ಹಿಂದೆ ಈ ನಮ್ಮ ಭಾರತದೇಶದಲ್ಲಿ ಪ್ರಸಿದ್ಧ ಪಂಚಲಿಂಗಗಳಿಂದ ಉದ್ಭವಿಸಿ ಪವಿತ್ರವೂ ಅನಾದಿಯೂ ಆದ ಈ ವೀರಶೈವಮತವನ್ನು ಪ್ರಪಂಚದಲ್ಲಿ ಸ್ಥಾಪಿಸಿ ಅನೇಕ ಋಷಿಪುಂಗವರು, ರಾಜಾಧಿರಾಜರು ಮೊದಲಾದವರನ್ನು ಶೈವತತ್ವೋಪದೇಶದಿಂದ ಪುನೀತರನ್ನಾಗಿಮಾಡಿದ ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯವನ್ನು ಈಗ್ಗೂ ತಿಳಿಯದವನು ಸರಿಯಾದ ವೀರಶೈವನೇ ಅಲ್ಲ. ಶ್ರೀ ಆದಿಶಂಕರಾಚಾರ್ಯರಿಗೂ ಸಹ ಶ್ರೀ ಚಂದ್ರಮೌಳೀಶ್ವರಲಿಂಗವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ದಯಪಾಲಿಸಿದ ವಿಷಯವನ್ನು ವೀರಶೈವರಲ್ಲದೆ ಇತರ ಮತಸ್ಥರೂ ಸಹ ಒಪ್ಪುವರು. ಕಾಶೀ ಶ್ರೀ ಜಂಗಮವಾಡೀ ಮಠದಲ್ಲಿರುವ ಸಾವಿರಾರು ವರ್ಷಗಳ ಹಿಂದಿನ ತಾಮ್ರ, ಶಿಲಾಶಾಸನಗಳು ವೀರಶೈವಮತದ ಪ್ರಾಚೀನತ್ವವನ್ನು ವ್ಯಕ್ತಪಡಿಸುತ್ತಿರುವುದು ಇವರ ದೃಷ್ಟಿಪಥದಲ್ಲಿಲ್ಲವೋ? ಹಾಗಿದ್ದೂ ಇವರು "ಯೇನಕೇನಪ್ರಕಾರೇಣ ಪ್ರಸಿದ್ಧಃ ಪುರುಷೋ ಭವೇತ್" ಎಂಬಂತೆ ತಮ್ಮ ಕುಟಿಲಬುದ್ಧಿಯಿಂದ ಈ ಹಸ್ತಪತ್ರಿಕೆಯನ್ನು ಪ್ರಕಟಿಸಿರುವರೋ? ಬಸವನು ಜನ್ಮತಃ ಅನ್ಯಮತೀಯನಾಗಿ ತಾನು ಅದರಿಂದ ಸಂತುಷ್ಟನಾಗದೆ ಈ ಪವಿತ್ರವಾದ ವೀರಶೈವಮತವನ್ನವಲಂಬಿಸಿರುವವರಲ್ಲೊಬ್ಬನೆಂದು ಲೋಕಪ್ರಸಿದ್ಧವಾಗಿದೆ. ಹೀಗಿದ್ದೂ ಇವರು ಬಸವನೇ ವೀರಶೈವಮತಸ್ಥಾಪಕನೆಂದು ಸಾರುವುದು ಕೂಪಕೂರ್ಮನ್ಯಾಯದಂತಿರುವುದು. ಬಸವನಿಂದ [illegible] ವೀರಶೈವರಲ್ಲಿ ಅನೇಕ ಮಠಗಳು ಸ್ಥಾಪಿಸಲ್ಪಟ್ಟಿರುವ [illegible] ತಮ್ಮ ಪತ್ರಿಕೆಯಲ್ಲಿ ಉದ್ಘೋಷಿಸಿರುವರು. ಇದು [illegible] ಬದ್ಧವೇ ಸರಿ. ಸಾವಿರಾರು ವರ್ಷಗಳ ಹಿಂದಿನಿಂದಲೂ ಈ ನಮ್ಮ ಪವಿತ್ರವಾದ ವೀರಶೈವಮತದಲ್ಲಿ ಅನೇಕ ತಪಸ್ವಿಗಳು ಉದಯಿಸಿ ಭರತಖಂಡದ ನಾನಾಭಾಗಗಳಲ್ಲಿ ಮಠಗಳನ್ನು ಸ್ಥಾಪನೆಮಾಡಿರುತ್ತಾರೆ. ಅನಾದಿಕಾಲದಲ್ಲಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರರು ಸಂಚರಿಸಿ ತಪಸ್ಸುಮಾಡಿರುವ ಅನೇಕ ಸ್ಥಳಗಳು ಈಗಲೂ ಪ್ರಕಾಶಮಾನವಾಗಿರುವುವು. ಇವುಗಳ ಪೈಕಿ ಬೆಂಗಳೂರು ಡಿ|| ಕೊಸ್ಕೋಟೆ ತಾಲ್ಲೂಕು ಅವ್ವೇರಹಳ್ಳಿಯಬಳಿ ಶ್ರೀ ರೇವಣಸಿದ್ಧೇಶ್ವರಬೆಟ್ಟವೆಂಬುದು ಇದೆ. ಇದು ಮೈಸೂರು ಮಹಾರಾಜರ ಆಡಳಿತಕ್ಕೆ ಒಳಪಟ್ಟದ್ದು ಅತ್ಯಂತ ಪವಿತ್ರಕ್ಷೇತ್ರವಾಗಿಯೂ, ಅನೇಕಾನೇಕಮಹಾತ್ಮ್ಯೆಗಳುಳ್ಳದ್ದೂ ಆಗಿರುತ್ತದೆ. ಇಲ್ಲಿಗೆ ವೀರಶೈವರೂ ಅಲ್ಲದೆ ಇತರ ಮತಸ್ಥರೂ ದಯಮಾಡಿ ತಮ್ಮ ಕಾಣಿಕೆಗಳನ್ನು ಸಲ್ಲಿಸುತ್ತಿರುವರು. ಇಷ್ಟೆಲ್ಲಾ ಆಧಾರಗಳನ್ನು ತಮ್ಮ ಕಣ್ಣುಮುಂದೆ ಇಟ್ಟುಕೊಂಡಿದ್ದರೂ ಸಹ ಮ|| ರಾ|| ಜೇರಿಗೆಯುವರು ತಮ್ಮ ಅವಿವೇಕತನವನ್ನು ವ್ಯಕ್ತಪಡಿಸಿರುವುದನ್ನು ನೋಡಿದರೆ ಯಾರಿಗೆ ತಾನೇ ವ್ಯಸನವಾಗದಿರದು? ಇನ್ನಾದರೂ ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸದ್ಬುದ್ಧಿಯನ್ನು ದಯಪಾಲಿಸಿ ಸಮಸ್ತ ವೀರಶೈವರ ಆಶೀರ್ವಾದಕ್ಕೆ ಪಾತ್ರರಾಗಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅತಿ ನಮ್ರತೆಯಿಂದ ಪ್ರಾರ್ಥಿಸಿ ಈ ಸಣ್ಣ ಲೇಖನವನ್ನು ಮುಗಿಸುವೆನು.

ಅರಳೇಪೇಟೆ ಬೆಂಗಳೂರು ಸಿಟಿ. ಹಿತಚಿಂತಕ.

ಗೊಂದೀಮಠದ ಶ್ರೀ ಸಂಗಮನಾಥನ ಯಾತ್ರಾಮಹೋತ್ಸವ.

ಕಿತ್ತೂರು.

ಪ್ರತಿವರ್ಷ ಪದ್ಧತಿಪ್ರಕಾರ ಇದೇ ಪ್ರಮೋದೂತನಾಮ ಸಂವತ್ಸರದ ಚೈತ್ರ ಶುದ್ಧ ಪಂಚಮಿ ಶುಕ್ರವಾರ (ತಾ|| 4-4-30) ದಿವಸ ಶ್ರೀ ಸಂಗಮನಾಥನ ರಥೋತ್ಸವವು ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ಪುರಬೀದಿಗಳಲ್ಲಿ ಹೊರಟು ಸಂಜೆ 6 ಗಂಟೆಗೆ ವರದಾನದೀ ತೀರದ ಮೇಲಿರುವ ಗೊಂದೀಮಠದ ಬೈಲಿನಲ್ಲಿ ಉತ್ಸವ ಮೂರ್ತಿಯನ್ನು ರಥದಿಂದಿಳುಹಿಸಿ ಪುರವಂತರು ಭಕ್ತಮಾಹೇಶ್ವರಾದಿಗಳು ಭಜನಾವಾದ್ಯದೊಡನೆ ಮೂರ್ತಿ ಸಹಿತನಾಗಿ ಮಠಕ್ಕೆ ಬಂದು ಶ್ರೀ ಸಂಗಮೇಶ್ವರನ ಗುಡಿಗೆ ಪ್ರವೇಶಿಸಿ ಮಂಗಲ ಮಾಡಿದ ನಂತರ ಚನ್ನಬಸಯ್ಯ ಗುರುಶಿವಪ್ಪಸ್ವಾಮಿ ಕಸ್ಸಾಳ ಇವರು ಅನ್ನಸಂತರ್ಪಣೆಯನ್ನು ನಡೆಯಿಸಿದರು. ತಾರೀಖು ೫-೪-೩೦ ನೇ ಶನಿವಾರ ಬೆಳಗ್ಗೆ ಶ್ರೀ ಸಂಗಮನಾಥನ ರುದ್ರಾಭಿಷೇಕವು ವಾರ್ಷಿಕ ಪದ್ಧತಿಯ ಪ್ರಕಾರ ಈ ಗ್ರಾಮದ ದೈವದವರ ಪರಿಯಿಂದ ವೇ|| ವೀರಬಸವಶಾಸ್ತ್ರಿಗಳು ಹಿರೇಮಠ [illegible] ಇವರಿಂದ ನೆರವೇರಿಸಲ್ಪಟ್ಟಿತು. ಅವೇಳೆ ಗಣಾರಾಧನೆಯಾಗಿ ಓಕಳಿಬಂಡಿಗಳ ಮೆರವಣಿಗೆಯಾಯಿತು.

ತಾ|| ೬-೪-೩೦ ನೇ ರವಿವಾರ ಉದ್ಯೋಗಪ್ರಿಯರೂ ಒಕ್ಕಲಿಗರ ಹಿತಚಿಂತಕರೂ ಆದ ಡಿ. ಯಲ್. ಬಿ. ಟಿ. ಹಾಗೂ ತಾಲೂಕ್ ಡೆವಲಪ್‌ಮೆಂಟ ಅಸೋಸಿಯೇಷನ್ನಿನ ಪ್ರೆಸಿಡೆಂಟರಾದ ಶ್ರೀಯುತ ಚನ್ನಬಸಪ್ಪನವರು ಬಿ.ಎ., ಎಲ್‌ಎಲ್.ಬಿ. ವಕೀಲ ಹಾವೇರಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಸಂಗಮನಾಥನ ಗುಡಿಯ ಮುಂಭಾಗದಲ್ಲಿ ಹಾಕಿದ ಭವ್ಯವಾದ ಮಂಟಪದಲ್ಲಿ ಸಭೆಯು ನೆರವೇರಿಸಲ್ಪಟ್ಟಿತು. ಹಾವೇರಿ ತಾಲೂಕು ಡೆವಲಪ್‌ಮೆಂಟ ಅಸೋಸಿಯೇಷನ್ನಿನ ಪರಿಯಿಂದ ರಾ|| ರಾ|| ಕಟ್ಟಿಯವರು ಹಾವೇರಿ ಇಂಗ್ಲೀಷ ಶಾಲಾ ಹೆಡ್‌ಮಾಸ್ತರರು ಆಗಮಿಸಿದ್ದಲ್ಲದೆ ಫೀಲ್ಡವರ್ಕ ಬಸವಯ್ಯನವರು ಹಾಗೂ ಆಜೂಬಾಜು ರೈತಬಾಂಧವರು ತಾವು ಸ್ವಂತ ತಯಾರಿಸಿದ ಸಾಮಾನು ಸಹಿತವಾಗಿ ಬಂದಿದ್ದರು ಈ ಸಭೆಯಲ್ಲಿ ಒಕ್ಕಲುತನದ ಸಾಮಾನುಗಳನ್ನು ಸ್ವಂತ ತಯಾರಿಸಿಕೊಂಡು ಬಂದವರಿಗೂ ಆಕಳು ಹೋರಿಗಳನ್ನು ತೆಗೆದುಕೊಂಡು ಬಂದವರಿಗೂ ತಾಲೂಕು ಡೆವಲಪ್‌ಮೆಂಟ ಅಸೋಸಿಯೇಷನ್ನಿನವರಿಂದ ಮಂಜೂರಾದ ಬಹುಮಾನ ಈ ಸಭೆಯ ಅಧ್ಯಕ್ಷ ಮಹಾಶಯರ ಹಸ್ತದಿಂದ ಇನಾಮು ಕೊಡಿಸಲ್ಪಟ್ಟಿತು. ಆಮೇಲೆ ಸರ್ವರಿಗೂ ಆಹ್ಲಾದವಾಗುವಂತೆ ವೇ|| ಸಂಗೀತವಿದ್ವಾನ್ ಚನ್ನವೀರಯ್ಯನವರು ರಡ್ಡೂರ ಇವರ ಗಾನವೂ ವೇ|| ವೀರಬಸವಶಾಸ್ತ್ರಿಗಳ ಶಿವಕೀರ್ತನವೂ ನಡೆದು ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ.

ಕಳೆದ ಮಾಘ ಬಹುಳ ೧೩ ದಿವಸ ಧಾರವಾಡ ಜಿಲ್ಲಾ ಹಿರೇಕೇರೂರು ತಾಲೂಕ ಪೈಕಿ ಎಲ್ಲಾಪುರ ಗ್ರಾಮದಲ್ಲಿ ಎಲ್ಲಾಪುರದ ಮಠದ ವೀರಬಸವಸ್ವಾಮಿಗಳವರ ಮಠದಲ್ಲಿ ರೇಣುಕರ ಜಯಂತಿ ಮಹೋತ್ಸವವು ಆಚರಿಸಲ್ಪಟ್ಟಿತು. ಶ್ರೀ ಆಚಾರ್ಯಮೂರ್ತಿಗೆ ವಿಧ್ಯುಕ್ತಪೂಜಾದಿಗಳು ನಡೆದು ಶ್ರೀ ರೇಣುಕರು ಪ್ರಪಂಚದಲ್ಲಿ ತೋರಿಸಿದ ಅದ್ಭುತ ಲೀಲೆಗಳ ಉಪನ್ಯಾಸಗಳು ಮಾಡಲ್ಪಟ್ಟವು. ಈ ಗುರುಕಾರ್ಯಕ್ಕೆ ಗ್ರಾಮದ ಪ್ರಮುಖಜನರು ನೆರೆದಿದ್ದರು. ಮುರಿಗೆಪ್ಪ ಸೆಟ್ರು ಚಿಕ್ಕೇರೂರು, ವಿರುಪಾಕ್ಷಪ್ಪ ದಂಡೂರು, ವೀರಪ್ಪ ಸಜ್ಜನರ ಚನ್ನಪ್ಪನವರು ಕುಮಸಿ, ಸಂಗಮಪ್ಪ ವಾಲಿ, ಬಸವಣ್ಣೆಪ್ಪ ಕಟ್ರಿ ಮಾಲಿಂಗಪ್ಪ ಚಿಂಚಿ, ಸೋಮಯ್ಯನವರು ಹೀಡಿಕೊಂಡದ ಮತ್ತು ಎಲ್ಲಾಪುರು ಪೋಲೀಸ ಪಾಟೀಲರು ಬಣಕಾರರ ವೀರಪ್ಪನವರು, ಬಣಕಾರ ಚನ್ನಬಸಪ್ಪನವರು [illegible] ಬಸಪ್ಪನವರು, ಪ್ಯಾಟಿ ಗಿರಿಯಲ್ಲಪ್ಪನವರು ಚೌಟಿ ಬಸ [illegible] ರವಳ್ಳಿ ಗುರುಶಾಂತಪ್ಪ ಸೈಲಕೇಟು ಮೊದಲಾದ ಅನೇಕ ಮುಖಂಡರು ಸೇರಿದ್ದರು. ಈ ದಿವಸ ಈ ಮಹೋತ್ಸವವನ್ನು ಮಂಗಲವಾದ್ಯಗಳೊಡನೆ ಬಹು ವಿಜೃಂಭಣೆಯಿಂದ ಹೊರಡಿಸಿ ಬಸವಣ್ಣನವರ ದೇವಸ್ಥಾನಕ್ಕೆ ಹೋಗಿ ತಿರುಗಿ ಮಠಕ್ಕೆ ಬಂದು ಸರ್ವರಿಗೂ ಪ್ರಸಾದ ವಿನಿಯೋಗವಾಗಿ ಸರ್ವರೂ ಗುರುಕೃಪೆಗೆ ಪಾತ್ರರಾದರು.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಮಹಾ ರಥೋತ್ಸವಾಹ್ವಾನಪತ್ರಿಕಾ.

ಬೆಂಗಳೂರು ಡಿಸ್ಟ್ರಿಕ್ಟು ಕೊಸ್ಕೋಟೆ ತಾಲೂಕು ಶ್ರೀ ರೇಣುಕಗಿರಿಯಲ್ಲಿ ಪಾಮೂರ್ ಮೇರೆ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕೆ 1853 ಪ್ರಮೋದೂತನಾಮಸಂವತ್ಸರದ ವೈಶಾಖ ಶುದ್ಧ 13 ರ ಆರಾಭ್ಯ, ವೈಶಾಖ ಬಹುಳ 2 ವರೆಗೆ ಈ ಕೆಳಗೆ ಕಂಡಂತೆ ಶ್ರೀ ಜಗದಾಚಾರ್ಯರ ಉತ್ಸವಗಳು ನಡೆಯುತ್ತವೆ. ಸಕಲ ವೀರಶೈವರೂ ಮತ್ತು ಆಸ್ತಿಕರುಗಳೂ ಆಗಮಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಉತ್ಸವಗಳ ವಿವರ.

(ತಾ|| 10-5-30) ವೈಶಾಖ ಶುದ್ಧ 13 ತ್ರಯೋದಶಿ ಶನಿವಾರ, ಧ್ವಜಾರೋಹಣ ಮತ್ತು ಅಂಕುರಾರ್ಪಣ. (ತಾ|| 11-5-30) ವೈ|| ಶುದ್ಧ 14 ಚತುರ್ದಶಿ ಭಾನುವಾರ ಗಿರಿಜಾಕಲ್ಯಾಣ ಮತ್ತು ಶ್ರೀ ವೃಷಭೇಶ್ವರದೇವರ ಅಗ್ನಿಕುಂಡ, ತಾ|| 12-5-30) ವೈ|| ಶು|| 15 ಪೂರ್ಣಿಮಾ ಸೋಮವಾರ ರಥಾರೋಹಣ (ರಥೋತ್ಸವ). (ತಾ|| 13-5-30) ವೈ|| ಬಹುಳ, 1 ಮಂಗಳವಾರ ಶ್ರೀಗಿರಿ ಪ್ರದಕ್ಷಿಣೆ, ರಾತ್ರಿಗೆ ರಾವಣೇಶ್ವರೋತ್ಸವ, ನಂದಿಕೇಶ್ವರೋತ್ಸವ ವಗೈರೆ. (ತಾ|| 14-5-30) ವೈ|| ಬ|| 2 ಬುಧವಾರ ವಸಂತೋತ್ಸವ ಮತ್ತು ತೀರ್ಥಸ್ನಾನ. ಈ ಪ್ರಕಾರ ಉತ್ಸವಗಳು ನಡೆಯುತ್ತೆ.

ಎ|| ಸೂ|| ಶ್ರೀ ರೇಣುಕಗಿರಿಗೆ ಬೆಂಗಳೂರು ಕಡೆಯಿಂದ ಬರುವವರು ಮೈಸೂರಿಗೆ ಹೊರಡುವ ರೈಲಿನಲ್ಲಿ ಹತ್ತಿ, ಕೊಸ್ಕೋಟೆಯಲ್ಲಿ ಇಳಿದು ಅಲ್ಲಿಂದ 7 ಮೈಲಿ ಕಾರ್ಕಾನಹಳ್ಳಿಗೆ ಹೋಗುವ ಮೋಟಾರಿನಲ್ಲಿ ಕುಳಿತುಕೊಂಡರೆ ಶ್ರೀಗಿರಿಯಬಳಿ ಇರುವ ಅವ್ವೇರಹಳ್ಳಿಯಲ್ಲಿ ಇಳಿದು ಸೌಖ್ಯವಾಗಿ ತಲುಪಬಹುದು.

ಅರ್ಚಕ, ವೀರಭದ್ರಯ್ಯ,
ಅವ್ವೇರಹಳ್ಳಿ, ಕೊಸ್ಕೋಟೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ದೇವೀ ಜಾತ್ರೆಯು ಮತ್ತು ಕೋಣನ ಬಲಿಯು.

ಚನ್ನಪಟ್ಟಣದ ತಾಲೂಕು ಇಗ್ಗಲೂರು ಗ್ರಾಮದಲ್ಲಿ ನಡೆಯುವ ದೇವೀ ಜಾತ್ರೆಯಲ್ಲಿ ಸುಮಾರು 800 ಚಿಲ್ಲರೆ ಕೋಣಗಳ ಆಹುತಿ ನಡೆದು ಜಾತ್ರೆಯು ಮುಕ್ತಾಯವಾಗುತ್ತದೆಂಬ ವಾರ್ತೆಯನ್ನು ಕೇಳಿದರೆ, ಎಂಥ ಕಠಿಣಹೃದಯನ ಮನಸ್ಸು ಕೂಡ ಕರಗಿ ನೀರಾಗದಿರಲಾರದು. ಈ ವಿಷಯವನ್ನು ನಮ್ಮ ಚನ್ನಪಟ್ಟಣದ ತರುಣರ ಸಂಘದ ಅಧ್ಯಕ್ಷರಾದ, ವಿ. ವೆಂಕಟಪ್ಪನವರು ತಿಳಿದು ಪ್ರಾಣದಾನ ಮಾಡಿ ಈ ಘೋರಕೃತ್ಯವನ್ನು ನಿಲ್ಲಿಸಬೇಕೆಂದು ತಾ|| 7-4-30 ರಲ್ಲಿ ಈ ಊರಿಗೆ ನಮ್ಮ ದಿವಾನ್ ಸಾಹೇಬರು ದಯಮಾಡಿಸಿದ್ದಾಗ್ಯೆ, ಅವರ ಸನ್ನಿಧಿಯಲ್ಲಿ ಅರಿಕೆಮಾಡಲಾಗಿ, ದಯಾಳುಗಳಾದ ನಮ್ಮ ದಿವಾನ್ ಸಾಹೇಬರು ಕೇಳಿ ಕನಿಕರದಿಂದ ಅದನ್ನು ನಿಲ್ಲಿಸಲು, ಅಪ್ಪಣೆಕೊಟ್ಟರು. ಶ್ರೀ|| ವೆಂಕಟಪ್ಪನವರು, ಶ್ರೀ ಅಯ್ಯರ ಮೂರ್ತಿಯವರು ಮತ್ತು ದಾವಣಗೆರೆ, ಗದಗ, ಹುಬ್ಬಳ್ಳಿ ಈ ಪ್ರಾಂತದಿಂದ ಕೇವಲ ಪ್ರಾಣಿಗಳ ಪ್ರಾಣವನ್ನು ಕಾಯಲೋಸುಗ, ಭಗವಂತನೇ ಭೂಲೋಕಕ್ಕೆ ಕಳುಹಿಸಿಕೊಟ್ಟನೋ ಎಂಬಂತೆ ಸಂಚಾರವಮಾಡುತ್ತಿರುವ ಶ್ರೀ ಜೀವರಕ್ಷಾ ದಯಾಪ್ರಚಾರಕ ಮಂಡಲಿಯವರನ್ನು ಒಡಗೂಡಿ ತಾ|| 9 ರಲ್ಲಿ ಚನ್ನಪಟ್ಟಣಕ್ಕೆ 14 ಮೈಲುಗಳ ದೂರವಿರುವ ಇಗ್ಗಲೂರು ಗ್ರಾಮಕ್ಕೆ ದಯಮಾಡಿಸಿ ಅಲ್ಲಿ ಯಮಪುರಿಗೆ ಸಾಗಲಿಕ್ಕೆ ಕೂಡಿಹಾಕಿದ್ದ 856 ಕೋಣಗಳನ್ನು ಕೊಲ್ಲಬೇಡಿರೆಂದೂ, ಕೊಂದರೆ ಶ್ರೀ ದೇವಿಯ [illegible] ಕ್ಕೆ ಪಾತ್ರರಾಗಿ, ನಾವು ಪ್ರತ್ಯಕ್ಷ ಅನುಭವಿಸುವ ಕಷ್ಟಪರಂಪರೆಗಳನ್ನು ಅಜ್ಞರಿಗೆ ಬೋಧಿಸಲಾಗಿ ಅಲ್ಲಿಯ ಮುಖಂಡರು ಒಪ್ಪಿ, ಆ ಘೋರಕೃತ್ಯವನ್ನು ನಿಲ್ಲಿಸಿಬಿಟ್ಟಂತೆಯೂ ವರ್ತಮಾನ. ವೆಂಕಟಪ್ಪನವರು ತಮ್ಮ ಮಿತ್ರರೊಡನೆ ಯಾವಾಗ [illegible] ಪರೋಪಕಾರ, ವಿಷಯದಲ್ಲಿಯೇ ನಿರತರಾಗಿ [illegible] ದೇಹಶ್ರಮವನ್ನು ಲೆಕ್ಕಿಸದೆ, ಜನರ ಕಲ್ಯಾಣವೇ ತಮ್ಮ ಕಲ್ಯಾಣವೆಂದು ಕೆಲಸಮಾಡುತ್ತಿರುವದು ಸ್ತೋತ್ರಾರ್ಹವಾದದ್ದು. ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯರು ಇವರಿಗೂ ಮತ್ತು ತಮ್ಮ ದೇಹಶ್ರಮವನ್ನು ಲೆಕ್ಕಿಸದೆ ಧಾರವಾಡ ಸೀಮೆಯಿಂದ ದಯಮಾಡಿಸಿ, ನಮ್ಮ ಈ ಮೈಸೂರು ಸೀಮೆಯಲ್ಲಿ ನಡೆಯುವ ಪ್ರಾಣಹತ್ಯವನ್ನು ನಿಲ್ಲಿಸಲು ಪ್ರಯತ್ನಪಡುತ್ತಿರುವ ಶ್ರೀ ಜೀವರಕ್ಷಾ ದಯಾಪ್ರಸಾರಕ ಮಂಡಲಿಯವರಿಗೂ ಆಯುರಾರೋಗ್ಯ ಸುಖಸಂಪತ್ತನ್ನು ಈಯಲೆಂದು ಹಾರೈಸುತ್ತೇನೆ.

ಕೆ. ಮಲ್ಲಪ್ಪ ಚನ್ನಪಟ್ಟಣ.

ಸಿದ್ಧಾಂತಶಿಖೋಪನಿಷತ್
ವೀರಶೈವಭಾಷ್ಯ

ಮೇಲ್ಕಂಡ ಸಿದ್ಧಾಂತಶಿಖೋಪನಿಷತ್ತು, ಷಣ್ಮುಖ ಹಾಗೂ ಭರದ್ವಾಜರ ಸಂವಾದಾತ್ಮಕವಾಗಿದ್ದು, ಇದರಲ್ಲಿ ಲಿಂಗಾಂಗಸಾಮರಸ್ಯ ವಿಷಯವು ಅತ್ಯುತ್ತಮರೀತಿಯಿಂದ ಪ್ರತಿಪಾದಿಸಲ್ಪಟ್ಟಿರುತ್ತದೆ. ಈ ಉಪನಿಷತ್ತಿಗೆ ವೇ|| ಉಮಚಗಿ ಮಳೀಮಠದ ಧರ್ಮರತ್ನ ಪಂಡಿತ ಶ್ರೀ ಶಂಕರಶಾಸ್ತ್ರಿಗಳವರು ಅತ್ಯಂತ ಪ್ರೌಢವಾದ ಭಾಷ್ಯವನ್ನು ರಚಿಸಿದ್ದಾರೆ. ಇದರ ತತ್ತ್ವವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಲೆಂಬ ಸದುದ್ದೇಶದಿಂದ ಆಸ್ಥಾನವಿದ್ವಾನ್ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರು ಕನ್ನಡಭಾಷೆಯಿಂದ ಸರಳವಾಗಿ ಟೀಕೆಯನ್ನು ಬರೆದಿದ್ದಾರೆ. ಈ ಗ್ರಂಥದ ಯೋಗ್ಯತೆಯು ಬಹು ದೊಡ್ಡದಾಗಿದೆ. ಪ್ರತಿಯೊಬ್ಬ ವೀರಶೈವರೂ ಕನ್ನಡಭಾಷೆಯಿಂದ ರಚಿಸಲ್ಪಟ್ಟಿರುವ ಈ ಗ್ರಂಥವನ್ನು ತರಿಸಿಕೊಂಡು ಇದರಲ್ಲಿದ್ದ ಅನೇಕಾನೇಕ ಧರ್ಮರಹಸ್ಯಗಳನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧ ರೂಪಾಯಿ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ, ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೩ ಆಣೆ ಸ್ತ್ರೀ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ವಾಸಿಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬಿಚ್ಛಿಸುವವರು ೧ ಆಣೆಯ ಸ್ಟಾಂಪು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[53] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. [illegible] ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೩ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಧೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[3] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಾಗಳಿರಾ! ಅಕ್ಕಗಳಿರಾ!

ಕೊಡಗಿನ ಗುಡು ಗುಡು—ಸುಡು ಸುಡು ಜ್ವರದ ಪೀಡೆಗಳಿಂದ ನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಎಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛ) **'ಸುಡುಸುಡು!'** (ಉಂ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [39]

ಕ್ರಯ 8 ಔನ್ಸಿಗೆ ರೂ. 1—8—0; $\frac{1}{2}$ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸಕ್ಕದ ಬಗತ್ತು] **೧೦೦೦ ರೂಪಾಯಿ ಇನಾಮು** [ಆದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕರಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜೆ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಶಾಲಿಮಕಂದ, ಮಧುಕಂದ, ಬಾಹಕಂಧ, ಶಾಲೀಮಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೀಕಂದ ಸೇಮರೀಕಂದ, ದ್ವೀಪಾಂತರಮಣಿಕಾಕಂದ, ಕಮಲಬೀಜ, ಸಮುದ್ರಶೋಕದಬೀಜ, ಶತಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಕಮಪತ್ರಿ, ಪಿಕಾಪತ್ರಿ, ಮದನಮಸ್ತ, ರಕನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಲಾ, ಬೀಜಬಂದ, ಹರಣಪೋರಿ, ಮುಂಗಲೀಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸರೀಮುಗಜ, ಅಲದಹಾಲು, ನಾಕೇರಿಭಾತಾ, ಗೋಖರು, ಅಡವೀಬೆಂಡೀಬೀಜ, ಅಮೃತಸತ್ವ, ಇಸಬಗೋಲ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲೆ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [43]

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ರೂಗಿನೊಳಗಿನ ಗುಂಟಾಳ, ಹಿಕ್ಕ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಪಾತಚಾರದಿರೋಗ, ದಬ್ಬನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ:—**ನೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನು
ಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	....	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	....	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	....	೧ ಆಣೆ
ಪನ್ನಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	....	೧ ಆಣೆ
ಪನ್ನಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	....	೪ ಆಣೆ
ಬಸವಧ್ವಾಂತ ದಿವಾಕರ	....	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	....	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	....	೧ ಆಣೆ
ವೀರಶೈವಾಚಾರವಿಧಿ	....	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೨ನೆಯ ಆವೃತ್ತಿ	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	....	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	....	೨ ಆಣೆ
ವಿವಾಹವಿಧಿ	....	೩ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	....	೨ ಆಣೆ
ವೀರಶೈವಮತವಿಮಾಂಸಾ	....	೨ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	....	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	....	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	....	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	....	೧ ರೂ.
ಸಚಿತ್ರ ರೇಣುಕವಿಜಯ	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	....	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
[32] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಮನರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಿಂದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವುದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ...ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ
[44] ಪೋ. ಬಾ. ೫೧೦. ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ...

REGISTERED No. M. 2266

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂಚಾಚಾರ್ಯ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ...

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀ...
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮ...

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತ...

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳ...

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ ನೆ...

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ದಾರುಕಾಚಾರ್ಯರ ಜಯಂತಿಮಹೋತ್ಸವ.

ಬಾರ್ಶಿ

ವೈಶಾಖ ಶುದ್ಧ 3 ಗುರುವಾರ ದಿವಸ ಪ್ರಾತಃಕಾಲ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತ್ಯುತ್ಸವವು ಶ್ರೀ ಗುರುಮೂರ್ತಿ ಪರಂಡೆಕರ್ ಸ್ವಾಮಿಯವರ ಮಠದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಅಭಿಷೇಕವೂ, ಆಚಾರ್ಯ ಸ್ತೋತ್ರಪಠನವೂ, ಹಾಗೂ ಪೂಜೋಪಚಾರಗಳು ಅತಿ ವೈಭವದಿಂದ ನೆರವೇರಿದವು. ಮತ್ತು ಈ ಉತ್ಸವಕ್ಕೆ ಸ್ತ್ರೀಪುರುಷರಾದಿಯಾಗಿ ಅನೇಕ ಜನರು ಆಗಮಿಸಿದ್ದರು. ಈ ಉತ್ಸವಸಮಯದಲ್ಲಿ ಶ್ರೀ|| ಮಹಾದೇವ ಅಪ್ಪಾ ಮಾದೇಕರ ಹಾಗೂ ಶ್ರೀ|| ವಿಶ್ವನಾಥಸ್ವಾಮಿ ಮಸೇಕರ್ ಇವರು ಅತ್ಯಂತ ಶ್ರದ್ಧೆಯಿಂದ ಕೆಲಸಮಾಡಿರುತ್ತಾರೆ.

ವೈಶಾಖ ಶುದ್ಧ 5 ಶನಿವಾರ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಸಹ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಶುಭದಿವಸ ಪ್ರಾತಃಕಾಲದಲ್ಲಿ ಆಚಾರ್ಯಮೂರ್ತಿಗೆ ಅಭಿಷೇಕಕ್ರಿಯೆಗಳು ನಡೆದು ಮಂಗಲವಾದ್ಯಗಳಿಂದಲೂ ಸ್ತ್ರೀಯರ ಮಂಗಲಸ್ತೋತ್ರಗಳಿಂದಲೂ ಜಂಗಮಾರ್ಚನೆಯು ನಡೆದು ಅನ್ನಸಂತರ್ಪಣೆಯು ಮಾಡಲ್ಪಟ್ಟಿತು. ಸಾಯಂಕಾಲ ಬಾಪೂರಾವ್ ತಡಕೋಡೆ ಇವರು ಸುಶ್ರಾವ್ಯವಾಗಿ ಕೀರ್ತನವನ್ನು ಮಾಡಿದನಂತರ ಶ್ರೀ ಜಗದ್ಗುರುಗಳ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು.

ದೇಶೀಯ ಉಪಾಧ್ಯಾಯರ ಸಂಘದ ಸೆಕ್ರೆಟೆರಿಯವರ ಸನ್ನಿಧಿಗೆ.

ಸಂಸ್ಥಾನದ ಉಪಾಧ್ಯಾಯರ ಸಂಘವೊಂದನ್ನು ಏರ್ಪಡಿಸುವ ಬಗ್ಗೆ ಎಲ್ಲಾ ಉಪಾಧ್ಯಾಯರ ಅನುಮತಿಯನ್ನು ತಿಳಿಯಲು 9-7-30 ನೆಯ ತಾರೀಖಿನಲ್ಲಿ ಹಸ್ತಪತ್ರಿಕೆಯನ್ನು ಹಂಚಿರಲಾಗಿ ಬಹುಮಂದಿ ಉಪಾಧ್ಯಾಯರ ಅಪೇಕ್ಷೆಯಂತೆ ಇಲಾಖೆಯವರ ಅಪ್ಪಣೆಯನ್ನು ಪಡೆಯುವುದಕ್ಕಾಗಿ ಪ್ರಾರ್ಥಿಸಿದೆ. ಸದ್ಯದಲ್ಲಿಯೇ ಸದುತ್ತರವು ದೊರೆಯುವುದೆಂಬ ನಿರೀಕ್ಷಣೆಯುಳ್ಳದೆ. ಅನಂತರ ಮೀಟಿಂಗ್ ನಡೆಯುವ ಸ್ಥಳ ಮತ್ತು ಕಾಲವನ್ನು ಅಲಾಯಿದಾ ಅರಿಕೆಮಾಡಲ್ಪಡುವುದು. ಇಷ್ಟರೊಳಗಾಗಿ ಪ್ರತಿ ಸಂಘದವರೂ ಈ ಕೆಳಗಣ ಅಂಶಗಳಿಗೆ ದಯೆಯಿಟ್ಟು ಜವಾಬು ಬರೆಸಲೂ, ಸಂಘದಿಂದ ಬರುವ ಪ್ರತಿನಿಧಿಗಳ ಪ್ರಯಾಣದ ಮತ್ತು ಆಹಾರಾದಿಗಳ ಖರ್ಚನ್ನು ಆಯಾಯ ಸಂಘಗಳೇ ವಹಿಸಲೂ, ಕಾರ್ಯಕಲಾಪದ ಖರ್ಚಿಗಾಗಿ ಪ್ರತಿ ಸಂಘದವರೂ (3-0-0) ಮೂರು ರೂಪಾಯಿಗಳ ಸಹಾಯದ್ರವ್ಯವನ್ನು ಈ ವಿಳಾಸಕ್ಕೆ ರವಾನಿಸಲು ಕೋರಿರುತ್ತೆ.

1. ಸಂಘದ ಹೆಸರು. 2. ಸಂಘದಿಂದ ಬರತಕ್ಕ ಇಬ್ಬರು ಪ್ರತಿನಿಧಿಗಳ ಹೆಸರು. 3. ಚಂದಾದಾರಂಕಗಳು.

(Sd.) C. R. Madhava Rao,
President,
Assistant Inspector of Edn.

15-4-30
ಶಿ...

ಸ್ವೀಕಾರ.

ಧಾರವಾಡ ಡಿ|| ಗದಗ ಶಹರ ನಿವಾಸಿಗಳಾದ ಮುನಿಸಿಪಲ್ ಕೌನ್ಸಿಲರ್ ವೇ|| ಹಿರೇಮಠದ ಚನ್ನವೀರಯ್ಯನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ನರಗುಂದ ಬಂರಲಕಟ್ಟಿ ಹಿರೇಮಠದ ಕರಬಸವಯ್ಯನವರ ಪುತ್ರ ಚಿ|| ಶಂಕರಯ್ಯನಿಗೂ, ಮುತ್ತೊಬ್ಬ ಪುತ್ರಿ ಚಿ|| ಸೌ|| ಬಸವಣೆಮ್ಮನನ್ನು ಮುದೇನೂರು ಹಿರೇಮಠದ ಮಾದೇವಯ್ಯನವರ ಪುತ್ರ ಚಿ|| ಸದಾಶಿವಯ್ಯನಿಗೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವರನ ಕಡೆಯವರು ಪ್ರತಿಯೊಬ್ಬರಿಂದಲೂ 4 ರೂ. ಗಳಂತೆ ಸಮರ್ಪಿಸಲ್ಪಟ್ಟ 8 ರೂ. ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ. ಟು ಮ್ಮಾ 10 ರೂಪಾಯಿಗಳು ಮ|| ರಾ|| ಮುರಿಗೆಪ್ಪಾ ಹುಂಚಿನಾಳ ಇವರ ದ್ವಾರಾ ತಲ್ಪಿರುತ್ತವೆ.

ಗದಗ ತಾಲೂಕು ಪಾಪನಾಶಿ ನಿವಾಸಿಗಳಾದ ವೇ|| ಅಯ್ಯಪ್ಪಯ್ಯಾ ತೋರಗಲ್ಲು ಮಠ ಇವರ ಮನೆಯಲ್ಲಿ ಎಮ್ಮೆಯು ಈದಕಾಲದಲ್ಲಿ 1 ರೂ. ಹಾಗೂ ಇವರ ಧರ್ಮಪತ್ನಿ ಸೌ|| ಶಿದ್ಧಮ್ಮನವರು ಶಿವಾಧೀನವಾದಕಾಲದಲ್ಲಿ 1 ರೂ. ಟುಮ್ಮಾ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ನಿಜಾಮ ಇಲಾಖಾ ದಿಗ್ಗಾವಿ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯಸ್ವಾಮಿಗಳು ತಮ್ಮ ಮಠದಲ್ಲಿ ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಿಜಾಪುರ ಡಿ|| ಹುನಗುಂದ ತಾಲೂಕು ನಂದವಾಡಿಗಿ ನಿವಾಸಿಗಳಾದ ವೇ|| ಮಹಾಂತಯ್ಯಸ್ವಾಮಿ ಶಾಂತಯ್ಯಸ್ವಾಮಿ ಮುದೇನೂರ ಕಂದಗಲ್ಲ ನಂದವಾಡಿಗಿ ಮಠ ಇವರು ನೂತನ ಜಿನ್ನಿಂಗ್ ಫ್ಯಾಕ್ಟರಿಯನ್ನು ಸ್ಥಾಪಿಸಿ ಗಣಾರಾಧನೆಯನ್ನು ಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ 4 ರೂ. ಗಳನ್ನು ರವಾನಿಸಿರುತ್ತಾರೆ.

ಹುಬ್ಬಳ್ಳಿ ನಿವಾಸಿಗಳಾದ ವೇ|| ಅದರಗುಂಚಿ ಹಿರೇಮಠದ ಹುಚ್ಚಯ್ಯನವರು ತಮ್ಮ ಅಣ್ಣನ ಮಗನಾದ ಚಿ|| ಶಿವರುದ್ರಯ್ಯನನ್ನು ದತ್ತಸ್ವೀಕಾರ ಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಹಾಗೂ ಮ|| ರಾ|| ಮಹದೇವಪ್ಪ ಮುತ್ತಿಗಿ ಇವರ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ. ಟುಮ್ಮಾ 4 ರೂ. ಗಳು ವೇ|| ಶ್ರೀ|| ಚರಪಟ್ಟಾಧಿಕಾರಿಗಳು ಹನ್ನೆರಡು ಮಠ ಇವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ. ಸಂ.—

ರಲ್ಲೆಲ್ಲ ಉತ್ಸವಕ್ಕೆ ಬರಲು ಡಂಗುರವನ್ನು ಹೊಡಿಸಿದರು. ಮಧ್ಯಾಹ್ನದಲ್ಲಿ ಮಹಾಗಣಾರಾಧನೆಯು ಜರುಗಿತು. ಸಾಯಂಕಾಲ 5½ ಘಂಟೆಗೆ ಸರಿಯಾಗಿ ಜನಸ್ತೋಮವು ಭಯಭಕ್ತಿಯೊಡನೆ ಮಠಕ್ಕೆ ಆಗಮಿಸಿತು. ಅನಂತರ ಮಠದ ಶ್ರೀಗಳವರಿಂದ ಪುರಾಣಪ್ರವಚನವು ಸಾಂಗವಾಗಿ ಜರುಗಿಸಲ್ಪಟ್ಟಿತು. ನಲವಡಿ ಶ್ರೀಕಂಠಶಾಸ್ತ್ರಿಗಳು ಅಗಾಧಮಹಿಮಾಶಾಲಿಯಾದ ಶ್ರೀ ದಾರುಕಾಚಾರ್ಯರ ಲೀಲಾ ಕಥನಗಳನ್ನು ಬಹು ಮನೋಹರವಾಗಿ ಕೀರ್ತನೆ ಮಾಡಿ, ಶ್ರೋತೃಜನರ ಭಕ್ತಿವರ್ಧನಗೈಸಿದರು. ವೀರಶೈವಮತಸ್ಥಾಪಕರಾದ ಜಗದಾಚಾರ್ಯರ ಅವತಾರೋತ್ಸವಗಳು ಸರ್ವತೋಮುಖವಾಗಿ ನಡೆಯಬೇಕಾದುದು ಅತ್ಯವಶ್ಯಕವಾದುದೆಂಬ ಬಗ್ಗೆ ಶ್ರೀ|| ವೇ|| ಶಾಂತವೀರಾಚಾರ್ಯರು ಶಿಶಾವಿನಮಠ ದಾವಣಗೆರೆ ಇವರು ಭಾಷಣಮಾಡಿದರು. ಅನಂತರ ಸಕ್ಕರೆಗೇರಿ ಪಟ್ಟದ ಶ್ರೀಗಳು ತಾತ್ಕಾಲಿಕ ಭಾಷಣಮಾಡಿದರು. ಅನಂತರ ಪಂಚವಣ್ಣಿಗಿ ಮಠದ ವೇ|| ಚನ್ನಯ್ಯನವರು ಬಾದಿಪ್ರಸಾರದ ಮೇಲೆ ಪರಿಣಾಮಕರವಾದ ಭಾಷಣಮಾಡಿದರು. ಬಳಿಕ ಜಗದ್ಗುರು ಪಂಚಾಚಾರ್ಯರ ಅನೇಕ ಪದ್ಯಗಳನ್ನೂ ಮಂಗಲಾರತಿಗಳನ್ನೂ ರಚಿಸಿದ ಚೌಕಿಮಠದ ಅನ್ನದಾನಕವಿಗಳು ದಾರುಕಾಚಾರ್ಯರ ಮಂಗಲ ಪದ್ಯಗಳನ್ನು ಹೇಳಿದನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಲಕ್ಷ್ಮೇಶ್ವರ.

ಇದೇ ವೈಶಾಖ ಶು|| ೫ ಶನಿವಾರ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ದಾರುಕಾರಾಧ್ಯ ಶಿವಾಚಾರ್ಯರ ಜಯಂತಿಯ ನಿಮಿತ್ತವಾಗಿ ಮಧ್ಯಾಹ್ನ ರಾ|| ಗಂಗಪ್ಪಾ ಹೂಗಾರ ಇವರಿಂದ ಲಿಂಗೋದ್ಭವ ರಜತಮೂರ್ತಿಗೆ ಪಂಚಾಮೃತಸ್ನಾನ ಷೋಡಶೋಪಚಾರ ಪೂಜೆಯೂ ಗಣಾರಾಧನೆಯೂ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಅದೇ ದಿವಸ ಇದೇ ಶಾಖಾನುಯಾಯಿಗಳಾದ ಮ|| ರುದ್ರಪ್ಪನವರು ಉಪ್ಪಿನ ವೇ|| ಅಡಿವಯ್ಯನವರು ಲಿಂಬೆಯ್ಯಸ್ವಾಮಿಮಠ ಮುಂತಾದವರು ಈಗಿನ ಜಗದ್ಗುರು ಉಜ್ಜಯಿನೀ ಜಗದ್ಗುರುಗಳಾದ ಸಿದ್ಧಲಿಂಗಮಹಾಸ್ವಾಮಿಗಳ ಭಾವಪಟದ ಪೂಜೆ ಹಾಗೂ ಗಣಾರಾಧನೆಯನ್ನು ಒಳ್ಳೇ ಅಟ್ಟಹಾಸದಿಂದ ನಡೆಯಿಸಿದುದಲ್ಲದೆ ಆ ದಿವಸವೆಲ್ಲಾ ಎತ್ತನೋಡಿದರತ್ತ ಗುರುಮಹಾತ್ಮೆಯ ಕಥನವೇ ಕೇಳಬರುತ್ತಿತ್ತು. 2 ವರ್ಷಗಳಿಗಿಂತ ಈ ಸಾರೆ ಜನರಲ್ಲಿ ಗುರುಭಕ್ತಿಯು ಹೆಚ್ಚು ತಲೆದೋರಿದಂತಾಯಿತು. ಇದು ನಮ್ಮ ಮಠದ ಏಳಿಗೆಯ ಚಿಹ್ನವೇಸರಿ. ಅನಂತರ ಸಾಯಂಕಾಲ 7 ಘಂಟೆಯವರೆಗೆ ಅಂದೋಳಿಕೆಯಲ್ಲಿ ಪೂಜಿತ ಲಿಂಗೋದ್ಭವಮೂರ್ತಿಯನ್ನೂ ಕೃಪಾಕಟಾಕ್ಷ ಮಾತ್ರದಿಂದ ಉದ್ಧರಿಸುತ್ತಿರುವ ಸದ್ಯದ ಉಜ್ಜಯಿನೀ ಸಿಂಹಾಸನಾಧೀಶ್ವರರ ಭಾವಪಟಗಳನ್ನು ವಾದ್ಯವೈಭವದೊಡನೆ ಮೆರೆಯಿಸಿ ಹೊಸದಾಗಿ ಕಟ್ಟಿಸಿದ ಗದ್ದುಗೆಯ ಮಠದಲ್ಲಿ ಸ್ಥಾಪಿಸಿದ ದಿವ್ಯಸಿಂಹಾಸನದಲ್ಲಿ ಮೂರ್ತಿಗೊಳಿಸಿದ ಕೂಡಲೆ ಸದರಿ ಮಠದ ಷ|| ಬ್ರ|| ಶ್ರೀ|| ಚರಮೂರ್ತಿಗಳ ಅಧ್ಯಕ್ಷತೆಯ ಕೆಳಗೆ ಸಭೆಯು ಪ್ರಾರಂಭವಾಯಿತು. ಮುರಿಗೆಪ್ಪಾ ಗಾಂಜಿ ಇವರು ವೀರಶೈವಮತಕ್ಕೂ ಅದ್ವೈತಮತಕ್ಕೂ ಇರುವ ತಾರತಮ್ಯವನ್ನು ಪ್ರತಿಪಾದಿಸಿ, ಶಕ್ತಿವಿಶಿಷ್ಟಾದ್ವೈತಸಿದ್ಧಾಂತವೇ ಮುಕ್ತಿಗೆ ಸುಗಮಮಾರ್ಗವೆಂದು ಯುಕ್ತಿಯುಕ್ತವಾಗಿ ಪ್ರತಿಪಾದಿಸಿದರು. ಆಮೇಲೆ ಶಿದ್ದಯ್ಯ ಹಿರೇಮಠ ಇವರು ವೀರಶೈವಮತವು ವರ್ಣಾಶ್ರಮಯುಕ್ತವಾದದ್ದೇ ಹೊರತು ವರ್ಣಾಶ್ರಮರಹಿತವಾದದ್ದಲ್ಲ ಎಂದು ಸಪ್ರಮಾಣವಾಗಿ ಭಾಷಣಮಾಡಿದರು. ಅನಂತರ ವೀರಭೋಮಯ್ಯ ಹಿರೇಮಠ ಈ ವಿದ್ಯಾರ್ಥಿಯು ವೀರಶೈವಪ್ರಾಶಸ್ತ್ಯ ವಿಷಯಕ್ಕೆ ಹೇಳಿದ್ದೇನಂದರೆ ವೀರಾದಿ ಪ್ರಮಥರಿಂದಲೂ ಪಂಚಮಠಾಧೀಶ್ವರರಿಂದಲೂ ಜನಿಸಿದ ಶುದ್ಧಸಾಂಪ್ರದಾಯದ ಮಾಹೇಶ್ವರ ಭಕ್ತವರ್ಗವು ಅನಾದಿಕಾಲದಿಂದಲೂ ಅವಿಚ್ಛಿನ್ನವಾಗಿ ಬಂದಿದೆ. ಈ ವರ್ಗವು ಇಷ್ಟಲಿಂಗಾರಾಧನೆ ಮಾಡುವದರಿಂದಲೂ ಲಿಂಗಾಂಗಸಾಮರಸ್ಯ ಸಾಧಕ ಜ್ಞಾನಕ್ರಿಯಾತ್ಮಕರಾದ್ದರಿಂದಲೂ ಹಿಂಸಾದಿ ನಿಷಿದ್ಧಕರ್ಮಗಳನ್ನು ತ್ಯಜಿಸಿ ಶಿವಪ್ರೀತ್ಯರ್ಥ ಸತ್ಕರ್ಮಗಳನ್ನೇ ಅನುಷ್ಠಿಸುವುದರಿಂದಲೂ ಮುಕ್ತಿಯನ್ನು ಪಡೆಯಬೇಕಾಗಿರುವುದೆಂದು ಹೇಳಿ ಇಂಥಾ ಮತಸ್ಥಾಪನಮಾಡಿದ ಜಗದಾಚಾರ್ಯರ ಜಯಂತಿಗಳನ್ನು ಮಾಡುವದೇ ಪ್ರತಿಯೊಬ್ಬ ಭಕ್ತಮಾಹೇಶ್ವರರ ಕರ್ತವ್ಯವೆಂದು ಸೂಚಿಸಿದರು. ಅನಂತರ ವಿದ್ಯಾರ್ಥಿಯಾದ ಕೇಸಗಿರಿ ಬಸವಣ್ಣೆಪ್ಪನವರು ಈಗಿನ ಪದ್ಧತಿಶ್ರಕಾರ ಸಮಾಜಸೇವೆಯ ವಿಷಯಕ್ಕೆ ವೇ|| ಕಾಶಯ್ಯನವರು ಹಿರೇಮಠ ಇವರು ಗುರುಸ್ಥಳದವರ ತಮ್ಮ ಸ್ವಜಾತಿ ಕರ್ತವ್ಯತತ್ಪರತೆಯೇ ಗುರುಜಯಂತಿಗಳ ಅಭಿವೃದ್ಧಿಗೆ ಕಾರಣವೆಂಬ ವಿಷಯವನ್ನು ಹೇಳಿದನಂತರ ವೇ|| ಅಡಿವೆಯ್ಯನವರು ಲಿಂಬಯ್ಯಸ್ವಾಮಿಮಠ ಇವರು ತಮಗೆ ಒಂದು ತಿಂಗಳ ಹಿಂದೆ ಬಂದ ಅರ್ಧಾಂಗವಾಯು ಔಷಧೋಪಚಾರಗಳಿಲ್ಲದೆ ಗುರುನಾಮಸ್ಮರಣದಿಂದ ನಿವಾರಣವಾಗಿ ಆರೋಗ್ಯವಾಗಿದ್ದುದನ್ನು ಉದಾಹರಣೆಯಾಗಿಟ್ಟುಕೊಂಡು ಗುರುಮಹಾತ್ಮೆಯನ್ನು ಹೇಳಿದ ಬಳಿಕ ಮಂಗಳಾರತಿಯಾಗಿ ಪ್ರಸಾದವಿನಿ...

ರವರು ತಮ್ಮ ಕೌನ್ಸಿಲ್ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಐವತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚಸಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮ್ಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಶಾಸ್ತ್ರೀಯದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[32] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ಬಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ನೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೮-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[44] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ ನೇ ಮೇ ೧೯೩೦ [ಸಂಚಿಕೆ ೨.

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ದಾರುಕಾಚಾರ್ಯರ ಜಯಂತಿಮಹೋತ್ಸವ.

ಬಾಶಿ

ವೈಶಾಖ ಶುದ್ಧ 3 ಗುರುವಾರ ದಿವಸ ಪ್ರಾತಃಕಾಲ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತ್ಯುತ್ಸವವು ಶ್ರೀ ಗುರುಮೂರ್ತಿ ಪರಂಡೇಕರ್ ಸ್ವಾಮಿಯವರ ಮಠದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಅಭಿಷೇಕವೂ, ಆಚಾರ್ಯ ಸ್ತೋತ್ರಪಠನವೂ, ಹಾಗೂ ಪೂಜೋಪಚಾರಗಳು ಅತಿ ವೈಭವದಿಂದ ನೆರವೇರಿದವು. ಮತ್ತು ಈ ಉತ್ಸವಕ್ಕೆ ಸ್ತ್ರೀಪುರುಷರಾದಿಯಾಗಿ ಅನೇಕ ಜನರು ಆಗಮಿಸಿದ್ದರು. ಈ ಉತ್ಸವಸಮಯದಲ್ಲಿ ಶ್ರೀ|| ಮಹಾದೇವ ಅಪ್ಪಾ ಮಾದೇಶ್ವರ ಹಾಗೂ ಶ್ರೀ|| ವಿಶ್ವನಾಥಸ್ವಾಮಿ ಮನೇಕರ್ ಇವರು ಅತ್ಯಂತ ಶ್ರದ್ಧೆಯಿಂದ ಕೆಲಸಮಾಡಿರುತ್ತಾರೆ.

ವೈಶಾಖ ಶುದ್ಧ 5 ಶನಿವಾರ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು ಸಹ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಶುಭದಿವಸ ಪ್ರಾತಃಕಾಲದಲ್ಲಿ ಆಚಾರ್ಯಮೂರ್ತಿಗೆ ಅಭಿಷೇಕಕ್ರಿಯೆಗಳು ನಡೆದು ಮಂಗಲವಾದ್ಯಗಳಿಂದಲೂ ಸ್ತ್ರೀಯರ ಮಂಗಲಸ್ತೋತ್ರಗಳಿಂದಲೂ ಜಂಗಮಾರ್ಚನೆಯು ನಡೆದು ಅನ್ನಸಂತರ್ಪಣೆಯು ಮಾಡಲ್ಪಟ್ಟಿತು. ಸಾಯಂಕಾಲ ಬಾಪೂರಾವ್ ತಪಸೀರೆ ಇವರು ಸುಶ್ರಾವ್ಯವಾಗಿ ಕೀರ್ತನವನ್ನು ಮಾಡಿದನಂತರ ಶ್ರೀ ಜಗದ್ಗುರುಗಳ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು.

ದೇಶೀಯ ಉಪಾಧ್ಯಾಯರ ಸಂಘದ ಸೆಕ್ರೆಟೆರಿಯವರ ಸನ್ನಿಧಿಗೆ.

ಸಂಸ್ಥಾನದ ಉಪಾಧ್ಯಾಯರ ಸಂಘವೊಂದನ್ನು ಏರ್ಪಡಿಸುವ ಬಗ್ಗೆ ಎಲ್ಲಾ ಉಪಾಧ್ಯಾಯರ ಅನುಮತಿಯನ್ನು ತಿಳಿಯಲು 9-2-30 ನೆಯ ತಾರೀಖಿನಲ್ಲಿ ಹಸ್ತಪತ್ರಿಕೆಯನ್ನು ಹಂಚಿದಲಾಗಿ ಬಹುಮಂದಿ ಉಪಾಧ್ಯಾಯರ ಅಪೇಕ್ಷೆಯಂತೆ ಇಲಾಖೆಯವರ ಅಪ್ಪಣೆಯನ್ನು ಪಡೆಯುವುದಕ್ಕಾಗಿ ಪ್ರಾರ್ಥಿಸಿದೆ. ಸದ್ಯದಲ್ಲಿಯೇ ಸದುತ್ತರವು ದೊರೆಯುವುದೆಂಬ ನಿರೀಕ್ಷಣೆಯಲ್ಲಿದೆ. ಅನಂತರ ಮೀಟಿಂಗ್ ನಡೆಯುವ ಸ್ಥಳ ಮತ್ತು ಕಾಲವನ್ನು ಆಲಾಯಿದಾ ಅರಿಕೆಮಾಡಲ್ಪಡುವುದು. ಇಷ್ಟರೊಳಗಾಗಿ ಪ್ರತಿ ಸಂಘದವರೂ ಈ ಕೆಳಗಣ ಅಂಶಗಳಿಗೆ ದಯೆಯಿಟ್ಟು ಜವಾಬು ಬರೆಸಲೂ, ಸಂಘದಿಂದ ಬರುವ ಪ್ರತಿನಿಧಿಗಳ ಪ್ರಯಾಣದ ಮತ್ತು ಆಹಾರಾದಿಗಳ ಖರ್ಚನ್ನು ಆಯಾಯ ಸಂಘಗಳೇ ವಹಿಸಲೂ, ಕಾನ್ಫರೆನ್ಸಿನ ಖರ್ಚಿಗಾಗಿ ಪ್ರತಿ ಸಂಘದವರೂ (3-0-0) ಮೂರು ರೂಪಾಯಿಗಳ ಸಹಾಯದ್ರವ್ಯವನ್ನು ಈ ವಿಳಾಸಕ್ಕೆ ರವಾನಿಸಲು ಕೋರಿರುತ್ತೇವೆ.

1. ಸಂಘದ ಹೆಸರು. 2. ಸಂಘದಿಂದ ಬರತಕ್ಕ ಇಬ್ಬರು ಪ್ರತಿನಿಧಿಗಳ ಹೆಸರು. 3. ಚರ್ಚಾಂಶಗಳು.

(Sd.) C. R. Madhava Rao,
President,
15-4-30 Assistant Inspector of Edn.
ಶಿರಾ

ಸ್ವೀಕಾರ.

ಧಾರವಾಡ ಡಿ|| ಗದಗ ಶಹರ ನಿವಾಸಿಗಳಾದ ಮುನಿಸಿಪಲ್‌ಕೌನ್ಸಿಲರ್ ವೇ|| ಹಿರೇಮಠದ ಚನ್ನವೀರಯ್ಯನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ನರಗುಂದ ಬುರಲಕಟ್ಟಿ ಹಿರೇಮಠದ ಕರಬಸಯ್ಯನವರ ಪುತ್ರ ಚಿ|| ಶಂಕರಯ್ಯನಿಗೂ, ಮತ್ತೊಬ್ಬ ಪುತ್ರಿ ಚಿ|| ಸೌ|| ಬಸವಣೆಮ್ಮನನ್ನು ಮುದೇನೂರು ಹಿರೇಮಠದ ಮರಿದೇವಯ್ಯನವರ ಪುತ್ರ ಚಿ|| ಸದಾಶಿವಯ್ಯನಿಗೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವರನ ಕಡೆಯವರು ಪ್ರತಿಯೊಬ್ಬರಿಂದಲೂ 4 ರೂ. ಗಳಂತೆ ಸಮರ್ಪಿಸಲ್ಪಟ್ಟ 8 ರೂ. ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ. ಜುಮ್ಲಾ 10 ರೂಪಾಯಿಗಳು ಮ|| ರಾ|| ಮುರಿಗೆಪ್ಪಾ ಹುಂಚಿನಾಳ ಇವರ ದ್ವಾರಾ ತಲ್ಪಿರುತ್ತವೆ.

ಗದಗ ತಾಲೂಕು ನಾಗಸಾಶಿ ನಿವಾಸಿಗಳಾದ ವೇ|| ಅಯ್ಯಪ್ಪಯ್ಯಾ ಕೋರಗಲ್ಲು ಮಠ ಇವರ ಮನೆಯಲ್ಲಿ ಎಮ್ಮೆಯು ಈದಕಾಲದಲ್ಲಿ 1 ರೂ. ಹಾಗೂ ಇವರ ಧರ್ಮಪತ್ನಿ ಸೌ|| ಶಿದ್ದಮ್ಮನವರು ಶಿವಾಧೀನವಾದಕಾಲದಲ್ಲಿ 1 ರೂ. ಜುಮ್ಲಾ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ನಿಜಾಮ ಇಲಾಖಾ ದಿಗ್ಗಾವಿ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯಸ್ವಾಮಿಗಳು ತಮ್ಮ ಮಠದಲ್ಲಿ ಶ್ರೀ ಜಗದ್ಗುರು ಮರುಳಾರಾಧ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಿಜಾಪುರ ಡಿ|| ಹುನಗುಂದ ತಾಲೂಕು ನಂದವಾಡಿಗಿ ನಿವಾಸಿಗಳಾದ ವೇ|| ಮಹಾಂತಯ್ಯಸ್ವಾಮಿ ಶಾಂತಯ್ಯಸ್ವಾಮಿ ಮುದೇನೂರ ಕಂದಗಲ್ಲ ನಂದವಾಡಿಗಿ ಮಠ ಇವರು ನೂತನ ಜಿನ್ನಿಂಗ್ ಫ್ಯಾಕ್ಟರಿಯನ್ನು ಸ್ಥಾಪಿಸಿ ಗಣಾರಾಧನೆಯನ್ನು ಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ 4 ರೂ. ಗಳನ್ನು ರವಾನಿಸಿರುತ್ತಾರೆ.

ಹುಬ್ಬಳ್ಳಿ ನಿವಾಸಿಗಳಾದ ವೇ|| ಅದರಗುಂಚಿ ಹಿರೇಮಠದ ಹುಚ್ಚಯ್ಯನವರು ತಮ್ಮ ಅಣ್ಣನ ಮಗನಾದ ಚಿ|| ಶಿವರುದ್ರಯ್ಯನನ್ನು ದತ್ತಸ್ವೀಕಾರ ಮಾಡಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಹಾಗೂ ಮ|| ರಾ|| ಮಹದೇವಪ್ಪ ಮುತ್ತಣ್ಣ ಇವರ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ. ಜುಮ್ಲಾ 4 ರೂ. ಗಳು ವೇ|| ಶ್ರೀ|| ಚರಪಟ್ಟಾಧಿಕಾರಿಗಳು ಹನ್ನೆರಡು ಮಠ ಇವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಕಳೆದ 3 ನೆಯ ತಾರೀಖಿನ ದಿವಸ ಬೆಂಗಳೂರು ನಗರದ ಸುಪ್ರಸಿದ್ಧ ಅಡ್ವೋಕೇಟರೂ ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್‌ಕಮಿಟಿಯ ಪ್ರೆಸಿಡೆಂಟರೂ ಆದ ಮ|| ರಾ|| ಕೆ. ಟಿ. ಭಾಷ್ಯಂರವರು 15 ಜನ ಸ್ವಯಂಸೇವಕರೊಡನೆ ಸತ್ಯಾಗ್ರಹಕ್ಕಾಗಿ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದರು. ರೈಲ್ವೆಸ್ಟೇಷನ್ನಿನಲ್ಲಿ ನೂರಾರು ಜನರು ನೆರೆದಿದ್ದು ಸತ್ಯಾಗ್ರಹಿಗಳಿಗೆ ಜಯವನ್ನು ಕೋರಿ ಕಳುಹಿಸಿದರು.

ಲಾಹೋರಿನಲ್ಲಿ ಪರದೇಶೀ ವಸ್ತ್ರಗಳ ಅಂಗಡಿಗಳ ಮುಂದೆ ಯಾರೂ ಪರದೇಶೀ ವಸ್ತ್ರಗಳನ್ನು ಕೊಂಡುಕೊಳ್ಳಕೂಡದೆಂದು ಬಹಿಷ್ಕಾರಚಳುವಳಿಯನ್ನು ಮಾಡುತ್ತಿದ್ದ 18 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿ ಕೊತ್ವಾಲಿನಗರಕ್ಕೆ ಒಯ್ದಿರುವರು.

ಭರತಖಂಡದ ಸದ್ಯದ ಸ್ಥಿತಿಯನ್ನೂ ದುಂಡುಮೇಜಿನ ಪರಿಷತ್ತಿನ ವಿಚಾರವನ್ನೂ ಕುರಿತು ವೈಸ್ರಾಯರವರು ಸದ್ಯದಲ್ಲಿಯೇ ಮತ್ತೊಂದು ಪ್ರಕಟನಾಪತ್ರಿಕೆಯನ್ನು ಹೊರಡಿಸಬೇಕೆಂದಿರುವರು. ಇದರಿಂದ ಉದಾರಪಕ್ಷದವರಿಗೆ ಅಲ್ಪಸ್ವಲ್ಪ ಸಮಾಧಾನವಾಗುವದೆಂದು ಭಾವಿಸಲ್ಪಟ್ಟಿದೆ.

ಮಹಾತ್ಮಾಗಾಂಧಿಯವರನ್ನು ದಸ್ತಗಿರಿ ಮಾಡಿದರೆಂಬ ಅಸಮಾಧಾನದ ಮೇಲೆ ಇಂಡಿಯಾಗೌರ್ನಮೆಂಟಿನ ಸೊಲಿಸಿಟರ್‌ಜನರಲರಾದ ಮಿ|| ಬಿ. ಎಚ್. ದೇಸಾಯಿರವರೂ, ಸಂಯುಕ್ತಸಂಸ್ಥಾನಗಳ ಸೆಕ್ರೆಟೆರಿಯಟ್ಟಿನಲ್ಲಿ ನೌಕರರಾಗಿದ್ದ ಮಿ|| ಸೋಮನಾಥಪಂಡಿತರೂ ಹಾಗೂ ಮದ್ರಾಸ್ ಲೆಜಿಸ್ಲೆಟಿವ್‌ಕೌನ್ಸಿಲ್ ಮೆಂಬರರಾದ ಮಿ|| ಸನಾತನೇಶಿ ಭೂಷಯ್ಯ ಚೌಧರಿಯವರು ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ಕೊಟ್ಟಿರುವರು.

ಲಾಹೋರಿನ ದಿಸಾರಿ ಮಾರ್ಕೆಟ್ಟಿನ ಎಲ್ಲ ಬಟ್ಟೆ ವ್ಯಾಪಾರಿಗಳೂ ಪರದೇಶೀವಸ್ತ್ರವನ್ನು ಒಂದು ವರ್ಷದವರೆಗೂ ತರಿಸುವದಿಲ್ಲೆಂದು ಪ್ರತಿಜ್ಞಾಪತ್ರಿಕೆಗೆ ರುಜು ಹಾಕಿರುವದರಿಂದ ಸತ್ಯಾಗ್ರಹಿಗಳು ಅಲ್ಲಿ ಬಹಿಷ್ಕಾರ ಚಳುವಳಿಯನ್ನು ನಿಲ್ಲಿಸಿರುವರು.

ಶ್ರೀ|| ವಿ. ಜೆ. ಪಟೇಲರು ಕಲ್ಕತ್ತೆಗೆ ಹೋಗಿದ್ದ ಕಾಲದಲ್ಲಿ ಪೋಲೀಸರು ಜನರ ಗುಂಪನ್ನು ಚದುರಿಸಲು ದೊಣ್ಣೆಯನ್ನು ಪ್ರಯೋಗಿಸಿದರು. ಇದರಿಂದ ಶ್ರೀ|| ಪಂಡಿತ ಮದನಮೋಹನ ಮಾಲವೀಯರವರ ದ್ವಿತೀಯ ಪುತ್ರರಾದ ಶ್ರೀ|| ಗೋವಿಂದಕಾಂತಮಾಲವೀಯರವರಿಗೆ ಪೆಟ್ಟು ಬಿದ್ದಿರುವದು.

ಮಹಾತ್ಮರನ್ನು ದಸ್ತಗಿರಿಮಾಡಿದುದನ್ನು ನಿಷೇಧಿಸಿ ಧಾರವಾಡ ಪ್ರಸಿದ್ಧ ವಕೀಲರಾದ ಶ್ರೀ|| ಜೋಗರವರು ತಮ್ಮ ಕೌನ್ಸಿಲ್ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತಾರೆ.